...ಯದ ಕಾಂಗ್ರೆಸ್ಸಿನ ಠರಾವು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಯುಕ್ತಿಯಂತೆ ತೋರುತ್ತಿದೆಯೇ ವಿನಹ ಅದರ ...ನಾದ ತೀರ್ಮಾನವನ್ನು ಉದ್ದೇಶಿಸುವಂತೆ ತೋರುವುದಿಲ್ಲ.

...ರಾಷ್ಟ್ರೀಯ ಸಭೆಯು ಸ್ವಾಮಿ ಶ್ರದ್ಧಾನಂದಜಿಯವರ ...ಹರಣದ ವಾರ್ತೆಯೊಡನೆ ಆರಂಭವಾಯಿತು. ಇದಾ... ಈ ಎರಡು ಜಾತಿಗಳನ್ನು ಹತ್ತಿರ ತರುವುದೊ ಎಂದು ...ಸಲಾಗಿದ್ದಿತು. ಮುಸಲ್ಮಾನರೆಲ್ಲರೂ ಸ್ಪಷ್ಟವಾಗಿ ತಮ್ಮ ...ವನ್ನು ಪ್ರಕಟಿಸಿ ಈ ದಾನವಕಾರ್ಯವನ್ನು ಖಂಡಿಸಿದ್ದಾರೆ. ...ದ ಹಿಂದೂ-ಮುಸಲ್ಮಾನ ಅನ್ಯೋನ್ಯವು ಸುಲಭವಾಯಿ... ತಿಳಿಯುವುದು ತೀರಾ ತಪ್ಪು. ಖಂಡಿಸುವುದು ಮನು... ಕಾರ್ಯಯುಕ್ತಿಯಾಗಿದ್ದಿತು. ಹಾಗೆ ಖಂಡಿಸದಿದ್ದರೆ, ...ಯವಾಗಿ ಅಲ್ಲದಿದ್ದರೂ, ಇತರ ರೂಪದಿಂದಲೂ ಅವರಿಗೆ ...ವಿದ್ದಿತ್ತು.

ರಾಷ್ಟ್ರೀಯ ಸಭೆಯ ಠರಾವುಗಳು ಕೂಡ ಸ್ವಾಮಿಜಿ... ಜೀವದಾನಕ್ಕೆ ಸಾಕಷ್ಟು ಪುರಸ್ಕಾರವನ್ನುಂಟುಮಾಡು... ಕಾಂಗ್ರೆಸ್ಸು ಹಿಂದೂಹಿತವನ್ನು ಲಕ್ಷಿಸುವುದಿಲ್ಲ ...ತೀಯತೆಯ ಮಾತುಗಳು ಇಂತಹ ಘಟನೆಗಳಿಂದ ...ಸ್ಥಿರವೂ ಜನಜನಿತವೂ ಆಗಲು ಕಾರಣವಿದ್ದೆ.

...ಸ್ವಾಮಿಜಿಯವರು ಹಿಂದೂವಾಗಿದ್ದರು ನಿಜ; ಅವರು ...ರಕ್ಷಣೆಗಾಗಿ ಚಿಂತಿತರಿದ್ದರು ನಿಜ. ಆದರೆ ಅವ... ಕ್ಷುದ್ರವಿರಲಿಲ್ಲ. ಅವರು ತಮ್ಮ ಹಿಂದೂತ್ವದ ...ತಮ್ಮ ರಾಷ್ಟ್ರೀಯತ್ವವನ್ನು ಕ್ಷುದ್ರವಾಗಿಡಲಿಲ್ಲ ...ನ ಜಾತೀಯ ಧುರೀಣರಿಗೂ, ಸ್ವಾಮಿಶ್ರದ್ಧಾನಂದರ ...ಕ್ಕೂ ಈ ಸ್ಪಷ್ಟವಾದ ಪ್ರಭೇದವಿದೆ.

...ತಿಯು ಕಠಿಣವಿದೆ ಎಂಬುದು ಎಲ್ಲರಿಗೂ ತಿಳಿದಿರ... ...ವೇ ಆಗಿದೆ. ಆದರೆ ರಾಷ್ಟ್ರೀಯ ಸಭೆಯು ...ವರ ಕಡೆಗಿನ ತಮ್ಮ ಕರ್ತವ್ಯವನ್ನು ಪೂರೈಸಿ... ಇನ್ನೂ ಸಂದೇಹಕರವಾಗಿ ತೋರುತ್ತಿದೆ. ...ಟಿಗೆ ಹಿಂದೂ-ಮುಸಲ್ಮಾನ ಐಕ್ಯವನ್ನು ಬಿಟ್ಟು ...ಹಿತಕರವೆಂದು ನಮಗನ್ನಿಸುವುದಿಲ್ಲ.

...ವಿಷಯದಲ್ಲಿ ಕೆಲವು ಬಾಹ್ಯ ಚಿಹ್ನೆಗಳನ್ನೂ ನಾವು ...ನು. ಹಿಂದೂ ಮಹಾಸಭೆಯು ಕಾಂಗ್ರೆಸ್ಸಿನ ...ಯೇ ಗೌಹಾಟಿಯಲ್ಲಿ ತನ್ನ ಅಧಿವೇಶನವನ್ನು ನೆರೆ... ಮುಸ್ಲಿಮ್ ಲೀಗು ಇಂತಹ ಸ್ಥಾನ ಸೌಹಾರ್ದ... ತೋರಿಸಲು ಹಿಂಜರಿಯುತ್ತಿದೆ. ಇದು ಹಿಂದೂ ...ಐಕ್ಯಕ್ಕೆ ಹಿತವೆಂದು ತೋರುವುದಿಲ್ಲ.

...ಕೆಗೆ ಅಸಂಬದ್ಧವೆಂದು ಕಾಣಬಹುದಾದರೂ, ...ತ್ತಿನ ಮತ್ತು ಮುಸಲ್ಮಾನ ಪರಿಷತ್ತಿನ ಅಧಿವೇಶ... ...ಕಾಂಗ್ರೆಸ್ಸಿನ ಪಕ್ಕದಲ್ಲಿಯೇ ಮಾಡಿಸುವುದು ಐಕ್ಯ... ಮೆಟ್ಟಿಲು ಹತ್ತಿರವಾದಂತಾಗುತ್ತಿದ್ದಿತು. ಆದರೆ ...ಬಂಧುಗಳು ಹಿಂದೂ ಸೌಹಾರ್ದದ ಪ್ರತಿ ಹೆಜ್ಜೆ... ...ಯದಿಂದಲೇ ನೋಡಿಕೊಳ್ಳುವುದು ಈ ವರೆಗೆ ಈ ...ಗಳ ಅನ್ಯೋನ್ಯಕ್ಕೆ ಬದ್ಧ ವಿರೋಧವಾದ ವಿಷಯ ...ಮಿಸಿರುವುದು.

...ಮ್ ಲೀಗಿನಲ್ಲಿಯೂ ಹಿಂದೂ-ಮುಸಲ್ಮಾನ... ...ಕಾರಿಯಾದ ಠರಾವುಗಳು ಸೂಚಿಸಲ್ಪಟ್ಟಂತಾಗ... ...ಯವರ ಮೇಲೆ ನಡೆದ ಅತ್ಯಾಚಾರಗಳ ಪುನರಾವೃ... ...ತಾಗಲಿ ಪ್ರಯತ್ನಗಳು ನಡೆದಿಲ್ಲ. ಮುಸಲ್ಮಾ... ...ಮ್ ಮತ್ತು ತಾಬ್ಲೀಗಿನ ಕಡೆಗೆ ಹೆಚ್ಚು ... ...ಲದು. ಅದು ದುರುಪಯೋಗವಾದದಂತೆ ನೋ... ...ಯೂ ಅವರ ಕರ್ತವ್ಯವಿದೆ. ಹತ್ಯಾಕಾರಿಯಾದ ...ದನನ್ನು, ಆಂಗ್ಲ ಸಾಮ್ರಾಜ್ಯ ಸಂರಕ್ಷಕನೆಂದು ಆಂಗ್ಲೇಯರು ಡಾಯರನನ್ನು ಕಾಣುವಂತೆ, ಮುಸ... ಸಂರಕ್ಷಕನೆಂದು ಕಾಣುವ ಮಹಾತ್ಮರು ಕೆಲವು ...ನರು ಕಾಣುವರಾಗಿಯೂ ತೋರುತ್ತಿದೆ. ಇಂತಹ ...ದಿಂದ ಹಿಂದೂಸ್ಥಾನವು ಹಿಂದೂ-ಮುಸಲ್ಮಾನರ ಯುದ್ಧ... ...ವಾಗಿ ಮಾರ್ಪಾಡುಹೊಂದಿ ಇಬ್ಬರೂ ರಕ್ತವನ್ನು ...ಸಹಾಯರಾಗಿ ಆಂಗ್ಲೆಯರ ಕೈಯಲ್ಲಿ ಬೀಳಬಹುದೇ ...ತು, ಅದರಿಂದ ಮುಸಲ್ಮಾನ ತತ್ವವಾಗಲಿ ಹಿಂದೂ ತತ್ವವು ...ಲಾಭವನ್ನೂ ಮಾಡಿಕೊಳ್ಳುವುದಿಲ್ಲ, ಬದಲಿಗೆ ಮತ ...ನ್ನವೇ ಲಭಿಸುವುದು.

ರಾಜಕೀಯ ವಿಷಯಗಳಲ್ಲಿ, ಕಾಂಗ್ರೆಸ್ಸಿನ ಮುಂದೆ, ...ಡು ವಿಷಯಗಳು ಮುಖ್ಯವಾಗಿದ್ದುವು. ಅವುಗಳಲ್ಲಿ ...ಲೆ ಸೂಚಿಸಿದಂತೆ ಹಿಂದೂ-ಮುಸಲ್ಮಾನ ಐಕ್ಯವು ಒಂದು

ಗಿತ್ತು; ಆ ಮೇಲಿನ ಕೌನ್ಸಿಲ್ ಕಾರ್ಯಕ್ರಮದ ವಿವರವೂ ಸ್ಪಷ್ಟೀಕರಿಸಲ್ಪಡಲಾಗುವುದಿಲ್ಲ. ಕಾಂಗ್ರೆಸ್ಸು ರೆಸ್ಪಾನ್ಸಿವ್ ವಾದಿಗಳ ಕಾರ್ಯಕ್ರಮವನ್ನು ಸ್ವೀಕರಿಸದೆ ತನ್ನ ಗೌರವವನ್ನು ಕಾದುಕೊಂಡುದು, ಅಭಿನಂದನೀಯವಿದೆ. ಆದರೆ ಕಾರ್ಯಕ್ರಮದ ಸ್ಪಷ್ಟವಾದ ನಿರೂಪಣವಾಗಿಲ್ಲ. ಕೌನ್ಸಿಲ್ ಕಾರ್ಯಕ್ರಮಕ್ಕೆ ಪಂಡಿತ ನೆಹರೂರವರು ಸೂಚಿಸಿದಂತೆ, ಸ್ವರಾಜ್ಯಪಕ್ಷದ ನಿಶ್ಚಲತೆಯ ಮೇಲೆಯೇ ನಂಬಿಗೆ ಇಡಬೇಕಲ್ಲದೆ ಅದನ್ನು ಕ್ರಮ ಕಟ್ಟಳೆಗಳಿಂದ ಬಿಗಿಹಿಡಿದರೆ ಅದರ ಸರಿಯಾದ ನಿರ್ವಹನವು ಸಾಧ್ಯವಾಗುವುದಿಲ್ಲ. ಆದರೆ ಕೌನ್ಸಿಲು ಬರೇ ವಾಗಾಡಂಬರದ ಪ್ರದರ್ಶನಮಾತ್ರವಾಗುವುದಕ್ಕಿಂತ, ಕೆಲವು ಸೂಚನೆಗಳಾದರೂ ಸ್ವೀಕರಿಸಲ್ಪಟ್ಟಿದ್ದಾದರೆ ಉತ್ತಮವಿದ್ದಿತು.

ಬಂಗಾಳದ ಅಕಾರಣವಾಗಿ ಬಂಧಿಸಲ್ಪಟ್ಟ ಕೈದಿಗಳ ಸಂಬಂಧವಾಗಿ ಕಾಂಗ್ರೆಸ್ಸು ಸಾಕಷ್ಟು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿಯದೆ. ಬಂಗಾಳ ಕೈದಿಗಳ ವಿಚಾರಣೆಯಾಗಲಿ ಬಿಡುಗಡೆಯಾಗದೆ ಸ್ವರಾಜ್ಯಪಕ್ಷವು ಮಂತ್ರಿಪದವಿಯನ್ನು ಸ್ವೀಕರಿಸಲಾರದೆಂಬುದು ಸ್ವರಾಜ್ಯಪಕ್ಷಕ್ಕೆ ಆ ಕಾರಾವಾಸಿ ದೇಶಸೇವಕರ ಮೇಲಿದ್ದ ವಿಶ್ವಾಸವನ್ನು ಸಹಾನುಭೂತಿಯನ್ನೂ ವ್ಯಕ್ತಪಡಿಸುತ್ತಿದೆ. ಆದರೆ ಅವರು ಬಿಡುಗಡೆಯಾದರೂ ಮಂತ್ರಿಪದವಿಯು ಸ್ವೀಕಾರಾರ್ಹವೊ ಎಂಬದೊಂದು ಪ್ರಶ್ನೆಯಿದೆ. ಯಾವ ಕಾರಣದಿಂದ ಮಂತ್ರಿಪದವಿಯು ನಿರಾಕರಿಸಲ್ಪಟ್ಟಿತೊ, ಆ ಕಾರಣದಿಂದಲೇ ಕಾರವಾಸದ ಪರಿಣಾಮವು ಉಂಟಾಯಿತು. ಈಗ ಪರಿಣಾಮವನ್ನೇ ಕಾರಣವಾಗಿ ಮಾಡುವುದು ರಾಜಕೀಯ ದೃಷ್ಟ್ಯಾ ಸಮರ್ಥವಲ್ಲದ ಮಾತಾಗಿದೆ.

ಉಳಿದ ವಿಷಯಗಳ ಮೇಲೆ ಹೆಚ್ಚು ಹೇಳಬರುವುದಿಲ್ಲ. ಗ್ರಾಮ ಸಂಘಟನೆ, ಮಹಾಜನರೊಳಗೆ ಪ್ರಚಾರ ಕಾರ್ಯ ಮೊದಲಾದುವು ತಾತ್ವಿಕ ಕಾರ್ಯಕ್ರಮವಾಗುವುದಲ್ಲದೆ ಕಾರ್ಯತಃ ಅದನ್ನು ಜಾರಿಗೆ ತರುವುದು ಸುಲಭದ ವಿಷಯವಲ್ಲ. ಅದಕ್ಕೆ ಬೇಕಾದ ವಿಶಾಲ ಜನಸಹಾಯವೂ ಕಾಂಗ್ರೆಸ್ಸಿಗೆ ಸಂಗ್ರಹಿಸಲು ಅಸಾಧ್ಯವಾಗಿದೆ. ಧನಸಂಗ್ರಹವು ಸಾಧ್ಯವಿದ್ದುದಾದರೆ ಜನಸಂಗ್ರಹವು ಕಷ್ಟವಾಗುವುದಿಲ್ಲ. ಗ್ರಾಮ ಸಂಘಟನೆಯ ಸಂಪೂರ್ಣ ವ್ಯವಸ್ಥೆಯು ಧನಬಲದ ಮೇಲೆಯೇ ಆದರಿಸಿಕೊಂಡಿದೆ.

ಪ್ರಕೃತ ರಾಷ್ಟ್ರೀಯ ಸಭೆಯ ವಿಷಯವಾಗಿ ಹೆಚ್ಚಿನದೇನೂ ಟೀಕಿಸಲವಂತಹುದಿಲ್ಲ. ಮುಂದಿನ ರಾಜಕೀಯ ಪರಿವರ್ತನೆಗಳೇ ಕಾಂಗ್ರೆಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಬೇಕು.

ವಿದೇಶ ವರ್ತಮಾನ.

— ಜವಾದ್ವೀಪದಲ್ಲಿ ಬಟಾವಿಯದಲ್ಲಿ ದಂಗೆ ಎಬ್ಬಿಸಿದವರಲ್ಲಿ ೩ ಜನರಿಗೆ ಮರಣದಂಡನೆಯನ್ನೂ, ಒಬ್ಬನಿಗೆ ಮರಣಾಂತ ಶಿಕ್ಷೆಯನ್ನೂ, ಇನ್ನೊಬ್ಬನಿಗೆ ೨೦ ವರುಷಗಳ ಸಜೆಯನ್ನೂ ವಿಧಿಸಿರುವರು.

— ಕಾಬೂಲಿನಲ್ಲಿದ್ದ ಇಂಗ್ಲಿಷ ರಾಯಭಾರಿಯ ಹಳೆ ಆಫೀಸು ದಶಂಬರ ೨೨ನೇ ರಾತ್ರಿ ಸುಟ್ಟುಹೋದ್ದರಿಂದ ಅದರಲ್ಲಿದ್ದವರೆಲ್ಲರೂ ಹೊಸತಾಗಿ ಕಟ್ಟಲ್ಪಡುವ ಆಫೀಸಿಗೆ ಬರಬೇಕಾಯಿತು. ಯಾರೂ ಮರಣಹೊಂದಲಿಲ್ಲ.

— ಸಿಲೋನ್ ದ್ವೀಪದಲ್ಲಿ ಊರಿನ ಮದ್ದುಗಳನ್ನು ಪ್ರಚಾರಕ್ಕೆ ತರುವುದಕ್ಕಾಗಿ ಸಿಲೋನ ಸರಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರರ ಒಂದು ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯವರು ೧) ಒಂದು ಮೆಡಿಕಲ್ ಕಾಲೇಜನ್ನು, ೨) ಒಂದು ದೇಶೀಯ ಮೆಡಿಕಲ್ ಕಾಲೇಜನ್ನು ೩) ಅದಕ್ಕೆ ಸಮ್ಮಂಧಪಟ್ಟ ಒಂದು ಆಸ್ಪತ್ರೆಯನ್ನು ೪) ಸಿಲೋನಿನ ಯುವಕರಿಗೆ ಸ್ಕಾಲರಶಿಪ್ ಕೊಟ್ಟು ಇಂಡಿಯದ ಆಯುರ್ವೇದ ಕಾಲೇಜುಗಳಿಗೆ ಕಳುಹಿಸಿ ತರಬೇತು ಮಾಡಿಸಬೇಕೆಂದೂ ಶಿಫಾರಸು ... ಸಿಲೋನ್ ಸರಕಾರಕ್ಕೆ ಕಳುಹಿಸಿರುವರು.

— ಯೂನಿಯನ್ ಒಫ್ ಸೌತ್ ಆಫ್ರಿಕದ ಮಂತ್ರಿಗಳಾದ ಜನರಲ್ ಹರ್ಟ್ಜೋಗರಿಗೂ ಅವರ ಎದುರುವಾದಿಗಳಾದ ಜನರಲ್ ಸ್ಮಟ್ಸರಿಗೂ ರಾಜಿಯಾಗಿದೆ. ಈಗ ಅಲ್ಲಿ ನಡೆಯುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಅಂತರಾಷ್ಟ್ರೀಯ ಸಂಗತಿಗಳ ವಿಷಯ ಯಾರಿಗೂ ಬಾಧಕವಾಗದ ರೀತಿಯಲ್ಲಿ ತೀರಿಸಲ್ಪಡುವದೆಂದು ತೋರುತ್ತದೆ. ಯೂನಿಯನ್ ಒಫ್ ಸೌತ್ ಆಫ್ರಿಕಕ್ಕೆ ಸ್ವತಂತ್ರವು ಸಿಕ್ಕಿಯದೆ.

— ಮಧ್ಯ ಅಮೇರಿಕದ ನಿಕಾರಾಗುವಾ ಎಂಬ ರಾಜ್ಯದಲ್ಲಿ ಲಿಬರಲ್ ಮತ್ತು ಕನ್ಸರ್‌ವೇಟಿವ್ ಪಾರ್ಟಿಯವರಿಗೆ ಕಠಿಣ ತರದ ಯುದ್ಧವಾಗಿ ಅನೇಕರು ಮರಣಹೊಂದಿರುವರು. ಜಗಳವನ್ನು ಹುಗಿಯುವುದಕ್ಕಾಗಿ ಸ್ವಲ್ಪ ಶಾಂತತೆಯುಂಟಾಗಿದೆ.

— ರಷ್ಯಾದೇಶದಲ್ಲಿ ಕಠಿಣತರದ ಹಿಮದ ಬಿರುಗಾಳಿಯು ಬೀಸುತ್ತಿದೆ. ಈ ತರದ ಚಳಿಗಾಳಿಯು ಕಳೆದ ೬೦ ವರುಷಗಳಿಂದ ಬೀಸಲಿಲ್ಲವಂತೆ. ಒಡೆಸ್ಸ ಪಟ್ಟಣದಲ್ಲಿ ಕಠಿಣವಾಗಿದೆ. ಕ್ಷುಧಾಸಿಂದ ಅನೇಕ ಬಾಸುಹಿಡಿಯುವ ಗ್ರಾಮಗಳು ನಾಶವಾಗಿವೆ. ಅರು ಅಡಿ ದಪ್ಪವಾದ ಹಿಮದ ಗಡ್ಡೆಗಳು ತೀರದಲ್ಲಿ ಬಂದುಬಿದ್ದಿವೆ. ಅನೇಕರು ಮರಣಹೊಂದಿರುವರು.

— ಸ್ಪೈಯನ್‌ದೇಶದಲ್ಲಿಯೂ ಚಳಿಗಾಳಿಯು ಬೀಸುತ್ತಿದೆ. ರಾಜಧಾನಿಯಾದ ಮೆಡ್ರಿಡನಲ್ಲಿ ಹಿಮವು ರಾಶಿರಾಶಿಯಾಗಿ ಬಿದ್ದಿದೆ. ವ್ಯಾಪಾರವಹಿವಾಟುಗಳು ನಿಂತಿವೆ. ರೈಲು ಸರಿಯಾಗಿ ಚಲಾವಣೆಯಾಗುವುದಿಲ್ಲ. ಟೆಲಿಗ್ರಾಫ್ ಟೆಲಿಫೋನ್ ಸಂಗೆಗಳು ಕುಂದಾಗಿ ಬಿದ್ದಿವೆ. ಅನೇಕ ಮರಣಗಳಾಗಿವೆ.

— ಯುದ್ಧದ ನಂತರ ಎಲ್ಲಾ ರಾಜ್ಯಗಳವರೂ ತಮ್ಮ ಯುದ್ಧನಾವೆಗಳನ್ನು ಕಡಿಮೆಮಾಡಬೇಕೆಂದ ನಿಶ್ಚಯಿಸಿದ್ದರಿಂದ ಯುನೈಟೆಡ್ ಸ್ಟೇಟ್ಸಿನವರು ಯುದ್ಧದ ಹಡಗಗಳನ್ನು ಕಡಿಮೆಮಾಡಿದರು. ಆದರೆ ಇತರ ರಾಜ್ಯಗಳವರು ತಮ್ಮ ಹಡಗುಪಡೆಯನ್ನು ಹೆಚ್ಚಿಸುತ್ತಾ ಬಂದಿರುವರು. ಈಗ ಯುನೈಟೆಡ್ ಸ್ಟೇಟ್ಸ್ ಹಾಳ್ಕೆಸೆಯದಾಗಿದೆ. ಅಮದರಿಂದ ಎಲ್ಲರಂತೆ ಮುಂದಕ್ಕೆ ಬರಬೇಕೆಂದು ಸಾಧಿಸುವುದಕ್ಕೆ ಇನ್ನು ೫೦ ಹಡಗಗಳನ್ನು ಕಟ್ಟಬೇಕಂತೆ. ಇದಕ್ಕಾಗಿ ಹೊಸ ಯುದ್ಧ ಹಡಗಗಳನ್ನು ಕಟ್ಟಲಿಕ್ಕೆ ೪೦೦ ಮಿಲಿಯ ಡೋಲರ್ ಸಂಕ್ಷೆಪ್‌ಮಾಡಿರುವರು.

— ಇಂಗ್ಲೆಂಡಿನಲ್ಲಿರುವ ಲೀಡ್ಸ ಪಟ್ಟಣದಲ್ಲಿರುವ ಜೈಲಿನ ಇಗರ್ಜೆಯಲ್ಲಿ ಜೈಲಿನಲ್ಲಿರುವ ಐನೂರು ಕೈದಿಗಳಿಗಾಗಿ ಒಂದು ನಾಟಕವನ್ನು ಆಡಿತೋರಿಸಿದರು. ಇದರಲ್ಲಿ ಮರಣದಂಡನೆ ವಿಧಿಸಲ್ಪಟ್ಟ ಇಬ್ಬರು ಕೈದಿಗಳನ್ನು ಇತರ ಕೈದಿಗಳಿಗೆ ಕಾಣದ ರೀತಿಯಲ್ಲಿ ಕೂತುಕೊಳ್ಳಿಸಿದ್ದರು. ಸ್ಟೇಜಿನಲ್ಲಿ ಒಬ್ಬ ಯೌವನಸ್ಥನು ಪಿಟೀಲು ಬಾರಿಸಲಿಕ್ಕೆ ಸುರುಮಾಡಿದೊಡನೆ ಒಬ್ಬನು ಅಳಲಾರಂಭಿಸಿದನಂತೆ. ಕೈದಿಯು ಅವನ ಅಣ್ಣನಾಗಿದ್ದನು.

— ಚೀನಾದೇಶದ ಇಂಗ್ಲಿಷರು ತಮ್ಮ ರಾಜ್ಯದಾಡಳಿತೆಯಲ್ಲಿ ಕೈಹಚ್ಚಬಾರದೆಂದು ಅಲ್ಲಲ್ಲಿ ಸಭೆಗಳಾಗುತ್ತವೆ. ಇವರ ಅಂತಃಕಲಹಗಳು ಇನ್ನೂ ಶಾಂತವಾಗಲಿಲ್ಲ.

— ಲಂಡನಿಗೂ ಅಮೇರಿಕದ ನ್ಯೂಯೋರ್ಕ ಪಟ್ಟಣಕ್ಕೂ ವಾಯರ್‌ಲೆಸ್ ಟೆಲಿಫೋನಿಯು ಬೇಗನೆ ಸುರುವಾಗುವುದು. ಈ ಸಮಾರಂಭವನ್ನು ತೆರಿಯುವಾಗ ನಮ್ಮ ಜೋರ್ಜ ಮಹಾರಾಜರು ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರಾದ ಕೂಲಿಜರೊಡನೆ ಮಾತನಾಡುವರು. ಮಹಾರಾಜರು ಬಕಿಂಗಹಾಮ ಅರಮನೆಯಲ್ಲಿ ಕುಳಿತು ಮಾತನಾಡುವರು. ಪ್ರೆಸಿಡೆಂಟರು ವ್ಹಾಯ್ಟ್‌ಹೌಸಿನಲ್ಲಿ ಕುಳಿತು ಮಾತನಾಡುವರು.

— ಕೆನಿಯಾ ಕೊಲೊನಿಯ ಹೊಸ ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವ ಕೆಲಸಗಳು ಮುಂದರಿಸುತ್ತಲಿವೆ.

— ಸಿಂಗಾಪುರದಲ್ಲಿ ಚೀನಾದೇಶದಿಂದ ಕಳ್ಳಾಟಿಕೆಯಿಂದ ತುದು ಖಾಲಿಮನೆಯಲ್ಲಿ ಅಡಗಿಸಿಟ್ಟಿರುವ ೫೦೦೦ ಫಾಲಿ ಅಫೀಮನ್ನು ಸಿಂಗಾಪುರ ಸರಕಾರದವರು ಹಿಡಿದಿರುವರು.

— ಜಪಾನ ಚಕ್ರವರ್ತಿಯವರ ಶವವನ್ನು ಹೈಮದಿಂದ ಅರಮನೆಗೆ ತಂದಿರುವರು. ಬರುವಾಗ ದಾರಿಯಲ್ಲಿ ಪ್ರಜೆಗಳು ಮಲಿಯಕಟ್ಟೆಯಿಂದ ನಿಂತು ಶವವು ಬಂದೊಡನೆ ಮೊಣಕಾಲೂರಿ ಪ್ರಾರ್ಥನೆಮಾಡುತ್ತಿದ್ದರು. ಮಾರ್ಗದ ಎರಡೂ ಬದಿಗಳಲ್ಲಿಯೂ ೧೫೦೦೦ ಸೈನಿಕರು ಸಾಲಿನಿಂದ ನಿಂತಿದ್ದರು. ಪೋಲಿಸಿನವರು ಕೈಯಲ್ಲಿ ದೀಪಗಳನ್ನು ಹಿಡಿದುಕೊಂಡು ಎರಡೂ ಸಾಲಿನಲ್ಲಿ ನಡಿಯುತ್ತಿದ್ದರು.

— ಇಂಗ್ಲಿಷ ಡೊಮಿನಿಯನುಗಳ ಮಕ್ಕಳಿಗೆ ಇಟನ್ ಹೆರೊ ಮತ್ತು ರಗ್ಬಿ ಶಾಲೆಗಳ ನಮೂನೆಯ ವಿದ್ಯೆಗಳನ್ನು ಕೊಡಲಿಕ್ಕೆ ಒಂದು ಸಾಮ್ರಾಜ್ಯ ಶಾಲೆಯನ್ನು ಲೋರ್ಡ ಫೋರ್ಟಿಮೋನರ ಖಾಲಿ ಬೀಡಿನಲ್ಲಿ ತೆರಿಯುವದೆಂದು ಆಲೋಚನೆಯು ನಡಿಯುತ್ತದೆ. ಇದಕ್ಕೆ ಒಂದು ಲಕ್ಷಪೌಂಡು ಫಂಡ ಬೇಕಂತೆ.

— ಇಟಲಿಗೂ ಜರ್ಮನಿಗೂ ಸ್ನೇಹಾಚಾರದ ಒಂದು ಒಪ್ಪಂದವು ಆಯಿತು. ಇದರ ಪ್ರಕಾರ ಈ ಎರಡು ಜನಾಂಗಗಳೊಡನೆ ಏನಾದರೂ ಕಲಹಗಳುಂಟಾದರೆ ಒಬ್ಬ ಜರ್ಮನ ಒಬ್ಬ ಇಟೆಲಿಯನ ೩ ಮಂದಿ ಯಾರ ಕಡೆಗೂ ಸೇರದೆ ಇದ್ದವರ ಸಭೆಗೆ ಅದನ್ನು ಒಪ್ಪಿಸುವದು, ಇದಕ್ಕಾ ಒಪ್ಪಿಗೆ ಇಲ್ಲದಿದ್ದರೆ ಒಂದು ಜುಡಿಸಿಯಲ್ ಕಮಿಟಿಗೆ ಒಪ್ಪಿಸುವರು. ಇವರ ತೀರ್ಮಾನವು ಅಖೈರಿಯಾಗುವದು.

— ಸ್ವಲ್ಪ ಸಮಯಕ್ಕೆ ಬಿದ್ದುಹೋದ ಇಂಗ್ಲಿಷ ಕಲ್ಲಿದ್ದಲ ವ್ಯಾಪಾರವು ತಿರಿಗಿ ಜೀವಕಳೆ ಹೊಂದಿ ಕೆಲಸ ನಿಲ್ಲಿಸಿದ ಅನೇಕ ಕಲ್ಪಣೆ ಮತ್ತು ಉಕ್ಕಿನ ಕಾರ್ಖಾನೆಗಳು ಕೆಲಸ ಸುರುಮಾಡಿವೆ.

— ಮಿಸ್ ಗರಟ್ರುಡ ಎಂಬವರು ಇರಾಕಿನಲ್ಲಿ ಸ್ಥಾಪಿಸುವ ಆರ್ಕಿಯೊಲೊಜಿಕಲ್ ಶಾಲೆಗೆ ೬೦ ಸಾವಿರ ಪೌಂಡು ದಾನಮಾಡಿರುವರು.

— ಹೆರಾಲ್ಡಿನಲ್ಲಿ ಕಾಣುವ ವರ್ತಮಾನ ಪ್ರಕಾರ ಪಾರ್ಲಿಮೆಂಟ ಮೆಂಬರರಾದ ಪಾರ್ಸಿ ಮಹನೀಯರಾದ ಸಕಲತವಾಲರು ಲಂಡನಿನಿಂದ ದಶಂಬರ ೨೮ಕ್ಕೆ ಹೊರಟು ಜನವರಿ ೨೪ಕ್ಕೆ ಮುಂಬಾಯಿಗೆ ತಲುಪುವರೆಂದು ವರ್ತಮಾನವಿದೆ. ಅಲ್ಲಿ ಇವರ ಕಾರಬಾರು ಅಂತ್ಯವಾಯಿತೆಂದು ಕಾಣುತ್ತೆ.

— ಕಲ್ಕತ್ತದಲ್ಲಿರುವ ಜಗದೀಶ ಚಂದ್ರಭೋಸರ ಸಾಯನ್ಸ ಇನ್ಸಟಿಟ್ಯೂಟಿಗೆ ಹೆಚ್ಚಿನ ಹಣ ಸಹಾಯಮಾಡಬೇಕೆಂದು ಇಂಗ್ಲೆಂಡಿನ ರೋಯಲ್ ಏಶ್ಯಾಟಿಕ್ ಸೊಸ್ಯಾಟಿಯ ಮೆಂಬರರು ವ್ಯಾಸರೋಯರಿಗೆ ಇಂಗ್ಲೆಂಡಿನಿಂದ ಮನವಿಮಾಡಿರುವರು.

— ಕೆನಿಯದಲ್ಲಿ ಕೊಲೊನಿಯಲ್ಲಿರುವ ಯುರೋಪಿಯನರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ೩೧೦೦೦ ಪೌಂಡು ಬೇಕಾಗಿದೆಯೆಂದೂ ಏಶ್ಯಾಟಿಕ್ ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ೨೦ ಸಾವಿರ ಪೌಂಡು ಬೇಕಾಗಿದೆಯೆಂದೂ ಯುರೋಪಿಯನರೊಡನಿದ್ದ ಇಂಡಿಯನ್ ನೌಕರರಿಂದ ೬೦೦೦ ಪೌಂಡು ಟೇಕ್ಸ ಸಿಕ್ಕುತ್ತದೆಂದೂ ಏಶ್ಯಾಟಿಕ್ ಪ್ರಾಯಪೂರಿತರಾದವರ ತಲೆತೆರಿಗೆಯಿಂದ ೧೨ ಸಾವಿರ ಪೌಂಡು ಸಿಕ್ಕುತ್ತದೆಂದೂ ಇದು ಸಾಕಾಗದೆ ಇದ್ದುದರಿಂದ ವಿದ್ಯಾಭ್ಯಾಸದ ಖರ್ಚನ್ನು ಭರ್ತಿಮಾಡುವುದಕ್ಕಾಗಿ ಸುಂಕ ವಿಧಿಸಿದೆಂದೂ ಪಾರ್ಲಿಮೆಂಟಿನಲ್ಲಿ ಕೊಲೊನಿಯಲ್ ಸೆಕ್ರೆಟರಿಯವರು ಹೇಳಿದರು.

— ಜಿನೇವಾದಲ್ಲಿ ಕ್ಷಯರೋಗದ ನಾನಾ ನಮೂನೆಯ ಕ್ರಿಮಿಗಳನ್ನು ಪರೀಕ್ಷಿಸಿ ಅವುಗಳನ್ನು ಕೊಲ್ಲುವ ಮದ್ದುಗಳನ್ನು ಹುಡುಕುವುದಕ್ಕಾಗಿ ಅನೇಕ ಬಾಟ್ಲಿಗಳಲ್ಲಿ ಕ್ರಿಮಿಗಳನ್ನು ಸ್ಪೆಲಿಂಗರ್ ಎಂಬವರು ಹಾಕಿ ತನ್ನ ಲೆಬೊರೇಟರಿಯಲ್ಲಿ ಇಟ್ಟಿದ್ದರು. ಜನವರಿ ೧ರಲ್ಲಿ ಬಾಟ್ಲಿಗಳು ಒಡೆದು ಈ ಕ್ರಿಮಿಗಳು ಇವರ ಶರೀರದಲ್ಲಿ ಪ್ರವೇಶಿಸಿದವು. ಇದರಿಂದ ಇವರಿಗೆ ಅಪಾಯವಾಗುವದೊ ಎಂಬ ಸಂಶಯವು ಹುಟ್ಟಿಯದೆ.

— ವಾಯರ್‌ಲೆಸ್ ಟೆಲಿಫೋನಿನಲ್ಲಿ ಲಂಡನಿನಿಂದ ನ್ಯೂಯೋರ್ಕಿನಲ್ಲಿರುವವರ ಹತ್ತರ ೩ ಮಿನಿಟುಗಳ ವರೆಗೆ ಮಾತನಾಡಲಿಕ್ಕೆ ೧೫ಪೌಂಡು ಬಾಡಿಗೆಯೂ ನಂತರದ ಪ್ರತಿ ಒಂದು ಮಿನಿಟಿಗೆ ೫ ಪೌಂಡು ಬಾಡಿಗೆಯೆಂದೂ ಜನರಲ್ ಪೋಸ್ಟ್‌ಮಾಸ್ತರ ಆಫೀಸಿನವರು ತಿಳಿಸಿರುವರು.

— ಇಂಗ್ಲೆಂಡಿನ ಗಣಿಗಳ ಕೂಲಿಕಾರರ ಸಂಘದ ಸೆಕ್ರೆಟರಿಯವರು ಮೊಸ್ಕೊದಿಂದ ಲಂಡನಿಗೆ ಬಂದು ಕೂಲಿಕಾರರು ೮ ಗಂಟೆ ಕೆಲಸದೊಡಂಬಡಿಕೆ... ವುದು ಒಳ್ಳೇದೆಂದು ನಿರ್ಣಯಿಸಿರುವರು.

— ಇಂಗ್ಲೆಂಡಿನ ಮೃಗಾಲಯದಲ್ಲಿದ್ದ ಇಂಡಿಯಾರಾಣಿ ಎಂಬ ಹೆಸರಿನ ಆನೆಯು ಇತ್ತಲಾಗೆ ಸತ್ತದ್ದರಿಂದ ಅದರ ಬದಲಾಗಿ ಇನ್ನೊಂದು ಆನೆಯನ್ನು ಇಂಡಿಯದಿಂದ ಕೊಂಡುಹೋಗುವರಂತೆ.

— ಈಜಿಪ್ಟಿನ ನೆಶನಲಿಸ್ಟ ಪಾರ್ಟಿಯ ಮುಖ್ಯಸ್ಥರು ಭಾಷಣವನ್ನು ಕೊಡುವಾಗ ಥಕ್ಕನೆ ಬಿದ್ದು ಪ್ರಾಣಬಿಟ್ಟರು.

— ಪೋರ್ತುಗಲ ರಾಜ್ಯದವರು ಇಂಗ್ಲಿಷ ಸರಕಾರದಿಂದ ತೆಗೆದುಕೊಂಡ ೫॥ ಮಿಲಿಯ ಪೌಂಡುಗಳನ್ನು ೧೯೨೭ನೇ ಇಸವಿಯ ಅಂತ್ಯದೊಳಗೆ ಕೊಡಬೇಕಿತ್ತು. ಆದರೆ ಎರಡೂ ರಾಜ್ಯಗಳ ಮಂತ್ರಿಗಳೊಳಗೆ ಕರಾರಾಗಿ ೧೯೫೮ನೇ ಇಸವಿ ವರೆಗೆ ವಾಯಿದೆ ಕೊಡಲಾಯಿತು. ಪ್ರತಿ ವರುಷದಲ್ಲಿಯೂ ಸ್ವಲ್ಪ ಸ್ವಲ್ಪ ಕೊಡುತ್ತಾ ೬೨ ವರುಷಗಳಲ್ಲಿ ಸಂದಾಯ ಮಾಡುವವರಾಯಿತು.

— ಇಂಗ್ಲೆಂಡಿನ ಲಂಡನ್ ಪಟ್ಟಣದ ಲೀಸ್ಟರ್ ಸ್ಕ್ವೇರ್‌ನಲ್ಲಿದ್ದ ಎಂಪಾಯರ್ ಥಿಯೇಟರ ಎಂಬ ನಾಟಕ ಶಾಲೆಯನ್ನು ಮುರಿದು ತೆಗೆದು ಅದರ ಸಾಹಿತ್ಯ ಮುಸ್ತು ಮುಂತಾದವುಗಳನ್ನು ವಿಲಂಮಾಡಿ ಅದೇ ಸ್ಥಳದಲ್ಲಿ ಒಂದು ಸಿನಿಮಾ ಥಿಯೇಟರನ್ನು ಕಟ್ಟುತ್ತಲಿರುವರು. ಈ ಥಿಯೇಟರಿನಲ್ಲಿ ೩॥ ಸಾವಿರ ಜನರು ಕೂತುಕೊಳ್ಳುತ್ತಿದ್ದರು.

— ಮಲಯದಲ್ಲಿ ಕಠಿಣ ಮಳೆಬಂದು ವಿಶೇಷ ತರದ ನೆರೆಯು ಬಂದು ಅನೇಕ ಗ್ರಾಮಗಳು ಮುಳುಗಿದವು. ಅನೇಕ ಜಾಗೆಗಳು ರೈಲುವೆ ಸಂಚಾರಕ್ಕೆ ತಾಗಿಕೊಂಡಿದ್ದವು. ಸಾವಿರಾರು ಜನರು ನಿರಾಶ್ರಿತರಾಗಿರುವರು.

— ಮದರಾಸು ಪಟ್ಟಣವನ್ನು ಎಮ್‌ಡನ್ ಹಡಗವು ಬೊಂಬಾರ್ಡ ಮಾಡಿದರ ಸಿನಿಮಾ ಚಿತ್ರವನ್ನು ಬರ್ಲಿನ ಸಿನೇಮದಲ್ಲಿ ತೋರಿಸಿದರು.

— ಜಪಾನಿನ ಹೊಸ ಅರಸರು ತಾನು ರಾಜ್ಯಭಾರ ವಹಿಸಿಕೊಂಡದರೂ ಕೂಡಲೇ ಸೆರೆಯಲ್ಲಿದ್ದ ೫೦ ಸಾವಿರ ಜನರನ್ನೂ ಬಿಡಲು ಅಪ್ಪಣೆಕೊಟ್ಟರು.

— ಮರಣಹೊಂದಿದ ಜಪಾನ ಅರಸರೊಡನೆ ಸ್ವರ್ಗಕ್ಕೆ ಹೋಗಬೇಕೆಂದು ಬೆರೊನ್ ಮಸರೂಕಾ ಎಂಬವರು ಆತ್ಮಹತ್ಯಮಾಡಿಕೊಂಡಿರುವರು. ಈ ಸಂಗತಿಯನ್ನು ಬರೆದ ಪತ್ರವನ್ನು ಹತ್ತರ ಇಟ್ಟಿರುವರು.

— ಇಂಡಿಯದ ಸ್ಟೇಟ ಸೆಕ್ರೆಟರಿಯವರಾಗಿದ್ದ ಲೋರ್ಡ ಬರ್ಕನಹೆಡ್ಡರು ತನ್ನ ಕೆಲಸವನ್ನು ಬಿಟ್ಟು ಪತ್ರಿಕಾಕರ್ತರಾಗುವರೆಂದು ವಾರ್ತೆಇದೆ.

— ಲಂಡನಿನಲ್ಲಿ ಒಂದು ಚಿನಿವಾರ ಕಟ್ಟೆಯಿಂದ ಬಹಳ ಬಂದೋಬಸ್ತಿನಿಂದ ಇಟ್ಟಿರುವ ಕಬ್ಬಿಣ ಪೇಟಿನಿಂದ ಐನೂಸಾವಿರ ಬೆಲೆಬಾಳುವ ರತ್ನಾಭರಣಗಳನ್ನು ಕಳ್ಳರು ಕೊಂಡುಹೋಗಿರುವರು.

— ದಕ್ಷಿಣ ಅಮೇರಿಕದಲ್ಲಿ ಭೂಕಂಪವಾಗಿ ಅನೇಕ ಊರುಗಳು ಹಾಳಾದವು.

— ಒಬ್ಬ ಪಾರ್ಸಿ ಸ್ವಾಳ್ಳಿಸ್ಟನು ಸಹಾರಾ ಮರುಭೂಮಿಯನ್ನ ಸ್ವಾಕಲಿನಲ್ಲಿ ಕೂತು ದಾಟಿರುವನು.

ಒಳದೇಶ ವರ್ತಮಾನ.

— ಎಯರ್ ಸೆಕ್ರೆಟರಿಯವರು ವಿಮಾನದಲ್ಲಿ ಬರುವಾಗ ಎರಡನೇ ಡಿಸ್ಟ್ರೋಯರ ಹಡಗುಪಡೆಯ ೯ ಹಡಗುಗಳು ಕೊಮಸ್ ಮತ್ತು ಬೆಂಗಾಸಿಯಲ್ಲಿ ಕಾದುಕೊಂಡಿರುವರು.

— ದೈಲಾಹತ್ತಿ ಕಂಪೆನಿಯ ಡ್ಯಾರೆಕ್ಟರರು ತಮ್ಮ ಸಭೆಯ ಕಂಪೆನಿಯ ಭಂಡವಾಳವನ್ನು ಅರ್ಧ ಮಿಲಿಯ ಪೌಂಡಿನಿಂದ ಕಾಲು ಮಿಲಿಯ ಪೌಂಡಿಗೆ ತಗ್ಗಿಸಿರುವರು. ಅದಲ್ಲದೆ ಕಂಪೆನಿಯ ಹೆಸರನ್ನು ಲಟಿಫಿಯಾ (ಇರಾಕ್) ಎಸ್ಟೇಟ್ ಎಂದು ಬದಲಾಯಿಸಿರುವರು. ಇವರು ಇರಾಕಿನಲ್ಲಿ ಹತ್ತಿ ಬೆಳಸಲಿಕ್ಕೆ ೬೦ ಸಾವಿರ ಎಕ್ರೆ ಸ್ಥಳವನ್ನು ಎಕ್ರೆಗೆ ೫ ಶಿಲಿಂಗ ಶೀವೆ ಪ್ರಕಾರ ಲಟೀಫಿಯ (ಇರಾಕ)ದಲ್ಲಿ ಪಡೆಕೊಂಡಿರುವರು.

— ನೀಲಗಿರಿ ಡಿಸ್ಟ್ರಿಕ್ಟ ಬೋರ್ಡಿನ ಕೈ ಕೆಳಗಿರುವ ಶಾಲೆಗಳಲ್ಲಿ ಇನ್ನು ನೇಕಡಾ ೨೫ರಂತೆ ತರಬೇತಾಗದ ಉಪಾಧ್ಯಾಯರು ಇರುವರೆಂದೂ ಹೆಚ್ಚಿನ ಶಾಲೆಗಳು ಬಾಡಿಗೆ ಕಟ್ಟೋಣದಲ್ಲಿರುವುದರಿಂದ ಈ ಕೊರತೆಯನ್ನು ಹೋಗಲಾಡಿಸಬೇಕೆಂದೂ ಶಿಶು ಮರಣವನ್ನು ಕಡಿಮೆ ಮಾಡಬೇಕೆಂದೂ ಸರಕಾರದವರು ಬೋರ್ಡಿಗೆ ತಿಳಿಸಿರುವರು.

— ನೀಲಗಿರಿಯಲ್ಲಿ ಕುಡಿಕೆಶನವನ್ನು ನಿಲ್ಲಿಸುವುದಕ್ಕಾಗಿ ಯುರೋಪಿಯನರೂ ಹಿಂದಿಕ್ರೈಸ್ತರೂ ಬಹಳ ಸಾಧಿಸುತ್ತಿರುವರು. ಇವರ ಜಾಲಕರಿಪ್ಪರೂ ಮದರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾಗಿರುವರು.

— ನೆಲ್ಲೂರು ಜಿಲ್ಲೆಯ ವರಿಗಪೊರ್ ತಾಲೂಕಿನಲ್ಲಿ ಕಠಿಣ ತರದ ಬರಗಾಲವು ಬಂದಿದೆ. ಜನರಿಗೆ ಊಟಕ್ಕೆ ಬೇಕಾದ ಅಕ್ಕಿಯು ಸಿಕ್ಕುವದಿಲ್ಲ. ದನಗಳಿಗೆ ಬೇಕಾದ ಹುಲ್ಲು ಸಿಕ್ಕುವುದು ಕಷ್ಟವಾಗಿದೆ. ಒಂದು ಗಾಡಿ ಹುಲ್ಲಿಗೆ ೧೦ ರೂಪಾಯಿ ವಾಡಿಕೆಯ ಕ್ರಯವಾಗಿತ್ತು. ಈಗ ೧೫ ರೂಪಾಯಿ ಆಗಿದೆ.

— ಎಲಿಮೆಂಟರಿ ಶಾಲೆಗಳ ಕಟ್ಟಡಗಳಿಗೆ ಸರಕಾರದಿಂದ ರೂಪಾಯಿ ೧,೦೦೦ ಒಳಗೆ ಗ್ರೆಂಟ ಪಡೆದವರು ೨೦ ವರುಷಗಳ ವರೆಗೂ ರೂ. ೧೦೦೦ ಕ್ಕಿಂತ ಹೆಚ್ಚು ಗ್ರೆಂಟು ಪಡಿಯುವವರು ೪೦ ವರುಷಗಳ ವರೆಗೂ ಶಾಲೆಯನ್ನು ನಡಿಸಬೇಕೆಂದೂ ಹೀಗೆ ನಡಿಸಲು ತಪ್ಪಿದರೂ ಆಯಾ ಡಿಸ್ಟ್ರಿಕ್ಟ ಎಲಿಮೆಂಟರಿ ಎಜ್ಯುಕೇಶನ್ ಕೌನ್ಸಿಲಿನವರು ಕೂಡಲೇ ಹಣವನ್ನು ಶಾಲಾ ಮನೆಜರರಿಂದ ಪಡಿಯಬೇಕೆಂದೂ ಎಲಿಮೆಂಟರಿ ಎಜ್ಯುಕೇಶನ್ ಆಕ್ಟಿನಲ್ಲಿ ತಿದ್ದುಪಡಿ ಮಾಡಿರುವರು.

— ಸೆಂಟ್ರಲ್ ಪ್ರೊವಿನಸ್ಸಿನ ನ್ಯಾಯವಿಧಾಯಕ ಸಭೆಯು ಇದೇ ೭ನೇ ತಾರೀಕಿಗೆ ಕೂಡಿ ಬಂದು ಪ್ರೆಸಿಡೆಂಟರನ್ನು, ಡೆಪ್ಯುಟಿ ಪ್ರೆಸಿಡೆಂಟರನ್ನು, ಬೇರೆ ಬೇರೆ ಕಮಿಟಿ ಮೆಂಬರರನ್ನು ಚುನಾಯಿಸುವರು. ನಂತರ ಮುನಿಸಿಪಾಲಿಟಿ ಆಕ್ಟು, ಲೋಕಲ್ ಸೆಲ್ಫ ಗವರ್ನಮೆಂಟ ಆಕ್ಟು, ಲೆಂಡ ರೆವಿನ್ಯು ಆಕ್ಟು ತಿದ್ದುಪಡಿಯು ಸಭೆಯ ಮುಂದೆ ಬರುವುದು.

— ಮಹಾರಾಷ್ಟ್ರ ಕರೆನ್ಸಿ ಲೀಗಿನವರು ಅಹಮದ ನಗರದಲ್ಲಿ ನಡೆದ ಮೀಟಿಂಗಿನಲ್ಲಿ ಇಂಡಿಯಕ್ಕೆ ಒಂದು ಭಂಗಾರದ ನಾಣ್ಯ ಕೊಡಬೇಕೆಂದೂ ರೂಪಾಯಿಗೆ ೧೬ ಶಿಲಿಂಗ ಬೆಲೆಯನ್ನು ಇಡಬೇಕಲ್ಲದೆ ೧೮ ಶಿಲಿಂಗ ಬೆಲೆ ಇಡಕೂಡದೆಂದೂ ಠರಾವು ಪಾಸುಮಾಡಿ ಸರಕಾರಕ್ಕೆ ಕಳುಹಿಸಿರುವರು.

ಇನ್ನು ದ್ವಿದಳ ಸರಕಾರವನ್ನು ತೆಗೆದುಹಾಕಿದರೆ ಸಾಲದು. ಗವರ್ನರ ಅಧಿಕಾರಗಳನ್ನೂ ತೆಗಿಯಬೇಕು. ಗವರ್ನರರ ಅಧಿಕಾರಗಳನ್ನು ತೆಗೆದು ವರಿಷ್ಟ ಸರಕಾರದ ಅಧಿಕಾರವನ್ನು ಹಾಗೆಯೇ ಇಟ್ಟು ಪ್ರಯೋಜನವೇನು. ದ್ವಿದಳ ಸರಕಾರದ ಬುಡವು ಅಲ್ಲಿಯೇ ಉಳಿಯುವುದು. ಪ್ರಾಂತಿಕ ಮತ್ತು ವರಿಷ್ಟ ಸರಕಾರಗಳನ್ನು ಜವಾಬ್ದಾರಿ ಸರಕಾರಗಳಾಗಿ ಮಾಡಿದ ನೆಂದು ನೆನಸಬಾ. ಸಿವಿಲ್ ಸರ್ವಿಸಿನವರ ಅಧಿಕಾರವು ಅಲ್ಲಿಯೇ ಉಳಿಯಿತು. ಅವರ ಮೇಲಧಿಕಾರವೂ ನಮ್ಮ ಕೈಗೆ ಬರಬೇಕು. ಇಲ್ಲದಿದ್ದರೆ ಈಗಿರುವುದಕ್ಕಿಂತ ಹೆಚ್ಚು ಮಂತ್ರಿಗಳನ್ನು ನೇಮಿಸಿದರೂ ನಿಜವಾದ ಅಧಿಕಾರವು ಸಿವಿಲ್ ಸರ್ವಿಸಿನವರ ಕೈಯಲ್ಲಿಯೇ ಉಳಿಯುವುದು. ಆದುದರಿಂದ ಸೈನ್ಯದ ಮೇಲೂ ನೌಕಾಸೈನ್ಯದ ಮೇಲೂ ಆಶ್ರಿತ ರಾಜ್ಯಗಳ ಮೇಲಿರುವ ಮೇಲಧಿಕಾರದ ಮೇಲೂ ನಮಗೆ ಸಂಪೂರ್ಣ ಅಧಿಕಾರವಿರಬೇಕು. ಇತರ ಹೊರ ರಾಜ್ಯಗಳೊಡನೆ ವಹಿವಾಟ ನಡಿಸುವ ಅಧಿಕಾರವೂ ಸ್ವರಾಜ್ಯಸರಕಾರಕ್ಕೆ ಸಿಕ್ಕಬೇಕು. ಈ ಅಧಿಕಾರವು ಸಿಕ್ಕದೆ ಇದ್ದರೆ ಸ್ವರಾಜ್ಯ ಸರಕಾರಕ್ಕೆ ಕಂದಾಯದ ಮೇಲೂ ರಾಜ್ಯಭಾರ ಸಮ್ಬಂಧವೂ ...ದಳಿತೆಯ ಮೇಲೂ ಸರಿಯಾದ ಅಧಿಕಾರವು ಇಲ್ಲದೆ ಹೋಗುವುದು. ...ಲ್ಲದಿದ್ದರೆ ಸ್ವತಂತ್ರವಾಗಿ ಆಳಲ್ಪಡುವ ಇಂಡಿಯವೂ ಅನ್ಯದೇಶಿಯರ ...ಕ್ಕೆ ಒಳಗಾಗಿದ್ದು ಆಶ್ರಿತ ರಾಜರುಗಳ ಹಾವಳಿಯು ಹೆಚ್ಚಾಗಲಿಕ್ಕೆ ... ಇದೆ. ಆದುದರಿಂದ ಎಲ್ಲಾ ಇಲಾಖೆಗಳೂ ಆಶ್ರಿತ ರಾಜ್ಯಗಳೂ ...ರಾಜ್ಯ ಸರಕಾರದ ಕೈಕೆಳಗೆ ಬರಲೇ ಬೇಕು.

ಇಂಡಿಯದಲ್ಲಿ ಚೆನ್ನಾಗಿ ತರಬೇತು ಹೊಂದಿ ಭೂಲೋಕದ ಬೇರೆ ... ಪ್ರದೇಶಗಳಿಗೆ ಹೋಗಿ ಕೀರ್ತಿ ಪಡೆದು ಬಂದ ಸೈನ್ಯಗಳು ಇವೆ. ... ನೌಕಾ ಸೈನ್ಯಗಳನ್ನು ಬೇಗನೆ ತಯಾರಿಸಬೇಕು. ಜಪಾನ ಚೈನಾ ...ಗಳು ತಮ್ಮದೇ ಸೈನ್ಯವನ್ನೂ ನೌಕಾಸೈನ್ಯವನ್ನು ಇಡಲಿಲ್ಲವೇ ... ...ನ್ನು ಸೈನ್ಯದಲ್ಲಿಯೂ ನೌಕೆಯಲ್ಲಿಯೂ ತರಬೇತು ಮಾಡಬೇಕು ...ನ್ಸಿಲಿಗೆ ಹೋದರೆ ಸಂಬಳದ ಹುದ್ದೆಗಳನ್ನು ಪಡಿಯಬಾರದು. ... ವಿರೋಧವಾದ ಕಾನೂನುಗಳನ್ನು ಜಾರಿಗೆ ಬಾರದಂತೆ ಮಾಡ... ... ಗೇಣಿ ಒಕ್ಕಲುಗಳ ವಿಷಯವೂ ಕೈಗಾರಿಕೆ ವಿಷಯವೂ ಅಭಿವೃದ್ಧಿ... ...ಕಾನೂನು ತಯಾರಿಸಬೇಕು. ಎಲ್ಲಾ ಲೋಕಲ್ ಬೋರ್ಡುಗ... ... ಮುನಿಸಿಪಾಲಿಟಿಗಳಲ್ಲಿಯೂ ಆದಷ್ಟು ಮಂದಿ ಕೊಂಗ್ರೆ... ...ಮೆಂಬರರಾಗಿ ಹೋಗುವಂತೆ ಸಾಧಿಸಬೇಕು. ಎಲ್ಲರೂ ನೂ... ...ನ್ನು ಉಪಯೋಗಿಸಬೇಕು. ಕುಡಿಕತನವನ್ನು ನಿಲ್ಲಿಸಲು...

ಅಸ್ಪೃಶ್ಯತೆಯನ್ನು ತೆಗೆದುಹಾಕಲು ಎಲ್ಲಾ ವಿಧದಿಂದಲು... ಕೂಲಿಕಾರರ ಸಂಘಗಳನ್ನು ದೇಶದ ಎಲ್ಲಾ ಭಾಗಗಳಲ್ಲಿ... ...ದವರಿಗೆ ಕೆಲಸ ಒದಗಿಸುವಂತೆ ಮಾಡಿಸಬೇಕು. ಆಫ್ರಿ... ...ಲಿಯ ಜನರು ಇಂಡಿಯದವರೊಡನೆ ಪ್ರೀತಿಯಿಂದ ಇ... ...ಕು.

...ಖಂಡದ ಎಂಗೋರಾ, ಪರ್ಸಿಯಾ, ಅಫಗಾನಿಸ್ಥಾನ, ...ಗಳೊಡನೆ ಸೇರಿ ಏಶಿಯಾಟಿಕ್ ಫೆಡರೇಶನ್ ಎಂಬ ಸಂಸ್ಥೆ... ...ಕು. ಜಾತಿವಾರು ಮತವಾರು ಜಗಳಗಳನ್ನು ತೆಗೆ... ...ದು ಒಂದು ಜನಾಂಗವಾಗಿದೆ ಎಂದು ಹೇಳಿಸಿಕೊಳ್ಳ... ...ಸಲ್ಮಾನರು ಪ್ರೀತಿಯಿಂದಿರಬೇಕು.

...ದಿರಿ!   ತ್ವರೆಮಾಡಿ...

ಇನ್ನು ಕೆಲವೇ ಮಾತ್ರ ಉಳಿದಿವೆ. —

1927ನೇ ವರುಷದ

...ಕೆಟ್ ಡೈರಿ.

...ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿಗಳ...
...ಸಾದಾ ಡೈರಿ . . . ೧೦...
...ಂಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨...
...ಸ್ಮಾಜಿನ ಡೈರಿ . . . ೮...
...ಸಾದಾ ಡೈರಿ . . . ೭...
...ಫ್ ಬ್ಯಾಂಡಿನ ಡೈರಿ . . ೫...
...ಾರಸ್ಥರಿಗೆ ಧಾರಾಳ ಕಮಿಶನು ಕೊ...

...—   ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

...ನ್ನು ಕೊಳ್ಳಬೇಕಾದ್ದು ಸಹಜವಲ್ಲವೆ.

...ಪ್ ಫ್ಯಾಕ್ಟರಿಯಲ್ಲಿ —

... ಮಾಡಲ್ಪಡುತ್ತವೆ.

... :—

...ಶ್ರಿತವಾದ ಸಾಬೋನುಗಳು, ಸ್ಯಾಂಡಲ್ ... ಡಜನ್ ೧ಕ್ಕೆ ರೂ. ೩—೮—೦ ಮಾತ್ರ.

...) ರೂ. ೨೮.
...) ,, ೨೬.
...) ,, ೩೧.

... ೨—೪—೦. ಮೇಲೆ ಹೇಳಿದ ಕ್ರಯಗಳು ... ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬ... ...ಡಲ್ಪಡುತ್ತದೆ.

...ಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

[illegible]

ದ್ವಿದಳ ಸರಕಾರದ ಪ್ರಕಾರ ಕೆಲವು ಭಾರತೀಯರು ೬ ವರುಷಗಳ ವರೆಗೆ ಕೆಲಸ ನಡಸಿದರು. ಕಾಂಗ್ರೆಸು ದ್ವಿದಳ ಸರಕಾರವನ್ನು [illegible] ಜನರಿಗೆ ಸರಿಯಾದ ಅಧಿಕಾರವಿರುವ ಸ್ವರಾಜ್ಯವನ್ನು [illegible] ಬೇಕೆಂದು ಸೂಚಿಸಿದರು. ದ್ವಿದಳ ಪದ್ಧತಿಯ ಪ್ರಕಾರ ರಾಜ್ಯಭಾರ [illegible] ಬೇಕೆಂದು [illegible] ಹೇಳುತ್ತದೆ. ಆ ಆಕ್ಟಿನ ಪ್ರಕಾರ [illegible] ಸುಧಾರಣೆಗಳನ್ನು ಕೊಡಬಹುದೆಂದು ಸರಕಾರವು ಹೇಳುತ್ತದೆ. [illegible] ಮಾತ್ರ ಈ ಬಲ್ಲದಂಥ ವಿಷಯಗಳಿಗೆ [illegible] ಕೆಲಸ ನಡಸುವ [illegible] ನಾವು [illegible]. ದ್ವಿದಳ [illegible] ಪ್ರಯೋಜನವಿಲ್ಲವೆಂದು ಎಲ್ಲಾ ಕಡೆಗಳಿಂದಲೂ ಕೇಳುತ್ತಿದೆ. [illegible] ಪ್ರಕಾರ ರಾಜ್ಯಭಾರ ನಡಸುವುದು ಒಳ್ಳೆಯದೆಂದು [illegible] ಸರಕಾರದವರಲ್ಲಿ ದೋಷಗಳಿವೆ ಎಂದು ಇಂಡಿಯಾ [illegible] ಅನೇಕ ಸಾರಿ [illegible].

[illegible]

Registered: No. M. 498.

ಚಂದಾಸರ್ಣಾಯ:- ವರ್ಷಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ವಿಶ್ವೈರ್ನಿರ್ಯಾತುಮರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲುನುಪಮರತ್ನಗಳು ನಾ । ಗರವ ಮಥಿಸಲು ಸುರಂಗದರಂ । ಹರುಷನಾಯಿತೆ! ಮತ್ತೆ ವಿಷ್ಣವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಿ ಒಲ್ಲರೆ! ತೋರಿದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೬ನೇ ಶುಕ್ರವಾರ ಜನವರಿ ೧೯೨೮. ಸಂಚಿಕೆ ೧.

THE ARA BANKING CORPORATION, UDIPI, LIMITED.

ದಿ ಕೆನ್ರಾಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head o UDIPI.
ಹೆಡ್ ಆಫೀಸು ಉಡುಪಿ.

Branches:—COONDAPOOR.
„ Mangalore.
ಶಾಖೆ:— ಕುಂದಾಪುರ.
„ ಮಂಗಳೂರು.

ನಿಯಮಿತ ಮೂಲ 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

Stat of affairs as on the 30th November, 1927.

1. Capital	1,99,650-0-0	1. Premises, Furniture, Iron safe &c.	9,750-7-10
2. Reserve & Funds	83,000-0-0	2. Investment on G. P. Notes at cost	1,85,931-13-0
3. Deposits	10,60,368-8-0	3. Investments on Jewls & other approved securities	11,89,182-13-3
4. Sundry Pe a/c	6,382-2-0	4. Bills for collection	6,382-2-0
5. Overdraft Bankers	52,052-1-5	5. Cash in hand & with Bankers	43,437-2-3
6. Sundry i	1,04,421-11-10	6. Sundry items	71,190-0-11
	15,05,874—7—3.	Rs.	15,05,874—7—3

Office of the ration,
UDIPI, 1-27.

N. ANANDA RAO,
Secretary.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಯೂಲನ್ ಮಾರ್ಟ್,
ಮಂಗಳೂರು.

ಅಮೃತಾಂಜನ

ಶಿರಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಜ್ವರ, ಮೊದಲಾದ ಬೇನೆಗಳಿಗೂ ಬೇನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವುದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1. 0—6—0

ದಂತಮಂಜನ:— ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ ೩ ಆಣೆ.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಯೂಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

Ready for Sale.

THE

MADRAS HINDU RELIGIOUS ENDOWMENTS ACT

No. II of 1927.

Price 8 annas.
Postage Extra.

For copies apply to—

The M. T. A. Sharada Press,
Car-street, MANGALOR

...ತ್ತು ಪೌರಸ್ತ್ಯ ವೇದಾಂತಗಳ ತುಲ
...ಚಾರವ್ಯಸ್ಥಿಯಿಂದ ಗುಣಾವಗುಣಗಳನ್ನು ಪರಿ
... ಸಾಧುಕುವರೆ ಪ್ರಯತ್ನಪಡುವುದು. ೪)
...ಮಿತಿಯನ್ನು ಕಾರ್ಯರೂಪಕ್ಕೆ ತರುವರೆ ದೃಢ್ಯಾ
...ಮಾಡಿಂಬ ಠರಾವುಗಳು ಸರ್ವಸಮ್ಮತದಿಂದ
...ಯ ಉದ್ದೇಶಗಳನ್ನು ಕಾರ್ಯಾಂಗಣ
...ವರೆ ನಾಪ್ರಯತ್ನಪಡುವರೆ ಉತ್ಸಾಹಶಾಲಿಗಳಾದ
...ನೇಎಂಬ ಠರಾವು ಅಧ್ಯಕ್ಷ ಮಹಾಶಯ
...ಸಲ್ಪತರಿಂದ ಅಂಗೀಕಾರ ಮಾಡಲ್ಪಟ್ಟಿತು.
...ಹಾಸಭೆಗಳ ಕರ್ತವ್ಯ, ಉದ್ದೇಶ, ನಮ್ಮ
...ಯ ಅದ್ವೈತ ಮತಪ್ರಚಾರಕರು ಲೋಕದ
...ರಣರಾವರು, ಇದರಿಂದ ಲೋಕಕ್ಕೆ
...ವಿಷಯವಾಗಿ ಬೋಧಿಸಿ, ಸರ್ವರೂ ಸತ್ಯ
...ಳೆಂದು ಆಶೀರ್ವದಿಸಿ, ತನಗೆ ಈ
...ಸಾಟ್ಯದಕ್ಕಾಗಿ ಸಭೆಯವರನ್ನು ವಂದಿಸಿ,
...ಕಾರಿ ಮಂಡಳಿಯವರನ್ನೂ ಸಭೆಯು
... ಪ್ರಯತ್ನಪಟ್ಟದಕ್ಕಾಗಿ ಅಭಿನಂ
...ಉಪಾಸನವನ್ನು ಅಂತ್ಯಗೊಳಿಸಿ ವಿರಾಮ
...ಗತ ಸಮಿತಿಯ ಪರವಾಗಿ ಶ್ರೀಗಳಾದ
...ರೂ, ಎಮ್. ವಿ. ಶಾಸ್ತ್ರಿಗಳವರೂ,
...ರಿಯ ಸನ್ನ್ಯಹಸ್ತರಿಗೂ ಧನ್ಯವಾದಗಳನ್ನು
...ವೆಂಕಟರಾಯರು ಬರುವ ವರ್ಷ
...ನ್ನು ನಡಿಸಬೇಕೆಂಬ, ಮಂಗಳೂರ ನಿವಾ
...ಸ್ವಾನವು ಸರ್ವರಿಂದಲೂ ಮಾನ್ಯವಾಗಿ
... ಅನಂತರ ಸಭೆಯ ಭಾವಚಿತ್ರವು
...ರ ಅನುಮತಿ ಮೇರೆಗೆ ಮಹಾಸಭೆಯು
...ತು.

...ಷಯಗಳು.

...ಪಟ್ಟಣದಲ್ಲಿ ಕೂಲಿಕಾರರ ಮುಷ್ಕರವು
...ಗುವದು ಎಂದು ಕಳೆದ ಸಾರಿ ಇದ್ದ
...ಹಿಡಿಯಲಿಲ್ಲ. ಇವು ಮತ್ತು ಕಿಯು
...ರಾಗಿದೆ. ರಷ್ಯಾ ದೇಶದೊಡನೆ ವ್ಯಾಪಾರ
...ನೆನಕಿಂಗ್ ಸರಕಾರದವರು ಜನರಿಗೆ
...ನ್ಯನಿಷ್ಠರನ್ನು ಕೈದು ಮಾಡಿ ಕೊಲ್ಲುವ
...ರು ಯೌವನಸ್ಥರನ್ನು ಇಬ್ಬರು ಹುಡುಗಿ
... ಈ ರೀತಿ ಕೊಮ್ಯುನಿಷ್ಠರನ್ನು ಕೊಲ್ಲದೆ
... ಇದರಿಂದ ಬಾಧಕವಿದೆಯೆಂದು ಚೀನಾ
... ಉತ್ತರ ಭಾಗದಲ್ಲಿ ಅಲ್ಲಿಯ
... ಜಪಾನ ಸರಕಾರದವರು ಕಾನಟಿಂಗ್
...ದ ಹಡಗೆವನ್ನು ಕಳುಹಿಸಿರುವರು.
...ರುವ ತಮ್ಮ ಆಸ್ತಿಯನ್ನು ಜರ್ಮನರ
... ಚೀನದಲ್ಲಿರುವ ಸೋವಿಯಟ್
... ನೆಶನಲಿಸ್ಟ ಸರಕಾರದವರು ತಮ್ಮ
... ಚೀನಾ ದೇಶದ ಕೈಗಾರಿಗಳನ್ನು ಅಭಿ
... ಸರಕಾರದವರು ೫೦ ಮಿಲಿಯಯನ್ನನ್ನು
...ನರು.

§ § §

...ಷ್ ಎಂ. ಎ.
...ರಾಣಿ ಸ್ಕೂಲಿನ ವಿದ್ಯಾರ್ಥಿನಿಯಾದ
... ಎಂಬಾಕೆಯು ಅಮೇರಿಕದ ವೆಲ್ಲೆಸ್ಲಿ
...ಪದವಿಯನ್ನು ಪಡೆದಿರುವಳು. ಆಕೆಯ
...ವಿಜ್ಞಾನ ಮತ್ತು ಅರ್ಥಶಾಸ್ತ್ರ. ಇದಲ್ಲದೆ
... ಮೇಲ್ಮಂಡ ಕಾಲೇಜಿನಿಂದ ೧೦೦೦
...ಪಡಿಸಿರುವಳಂತೆ.

§ §

...ಸ್.
...ಮಂತ್ರಿಯಾಗಿದ್ದ ಶ್ರೀ. ಮದುಸೂದನದಾಸ್
... ಕುಮಾರಿ ಶೈಲಬಾಲಾದಾಸ್ ಎಂಬಾಕೆ
...ದ ಸಹಪಾಠಿಯಾಗಿ (fellow) ನಿಯ.ವಿ
...ಗಲೇ ಗೌರವ ಮೇಜಿಸ್ಟ್ರೇಟ್ ಮತ್ತು
...ವಿಯನ್ನಲಂಕರಿಸಿರುವಳು.

(ಸರಸ್ವತಿ)

ತ್ವರೆಮಾಡಿರಿ !!

...28ನೇ ವರುಷದ

...ಕ ಟ್ ಡೈರಿ

...ರುವ ದೊಡ್ಡ ಸೈಜಿನ ಡೈರಿ	೧೪ ಆಣೆ
...ಡೈರಿ	೧೦ ಆಣೆ
... ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
...ಡೈರಿ	೮ ಆಣೆ
...ಡೈರಿ	೭ ಆಣೆ
...ಟಿನ ಡೈರಿ	೬ ಆಣೆ

...ಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

...ನ:— ಶಾರದಾ ಛಾಪಖಾನೆ,

ಬೇಡವಾದ ಬೆಳಕು.

(ಲೇಖಕ:—ಜಗನ್ನಾಥ)

(ನೊವೆಲ್ಸರೀವ್ಯೂ ಪತ್ರಿಕೆಯಲ್ಲಿ ಒಂದು ಬಾರಿ ಓದಿದ The Veil of Light ಎಂಬುವದರ ನೆನಪಿನಿಂದ ಬರೆದುದು)

ಶಂಕರನು ಒಬ್ಬ ಪ್ರಯಾಣಿಕನನ್ನು ಕರಕೊಂಡು ಮನೆಯೊಳಗೆ ಬಂದು "ಪ್ರಭೆ" ಎಂದು ಕರೆದನು. ಪ್ರಯಾಣಿಕನ ಹೆಗಲ ಮೇಲೆ ಧೂಳಿಯಿಂದ ಮೈಲಿಗೆಯಾಗಿ ಹೋಗಿದ್ದ ವಸ್ತ್ರದ ಚೀಲವೊಂದು ಜೋಲು ಬಿದ್ದಿತ್ತು. ಹಿಂದೂಸ್ಥಾನೀ ಭಾಷೆಯವನಾಗಿದ್ದನು. ಉನ್ನತವಾದ ಶರೀರ; ಅಗಲವಾದ ಎದೆ; ಮನಸ್ಸಿನಲ್ಲಿ ಹೆದರಿಕೆಯನ್ನುಂಟುಮಾಡುವಂತಹ ಮುಖ. ಪಥಿಕನು ಪಂಜಾಬಿನವನಾಗಿದ್ದನು. 'ಅತ್ಯಾಶ್ಚರ್ಯಕರವಾಗಿ ಗುಣಕಾರಿಗಳಾದ ಹಿಮಾಲಯ ಪ್ರಾಂತ್ಯದ ಯೋಗೀಶ್ವರರಿಂದ ದತ್ತವಾದ' ಔಷಧಿಗಳೇ ಸಮಗ್ರ ಹಿಂದೂಸ್ಥಾನದ ಧೂಳಿಯನ್ನು ಒಟ್ಟು ಮಾಡಿದ ಆ ಚೀಲದೊಳಗೆ ಅಡಗಿದ್ದವು.

ಒಳಗಿನಿಂದ ಗಿಡ್ಡಾಗಿದ್ದ, ಕೃಷ್ಣಕಾಯೆ ತರುಣಿಯೊಬ್ಬಳು ಬಂದಳು. ಅವಳಲ್ಲಿ ಸೌಂದರ್ಯವೆಂಬುವಂತಹದುದೇನೂ ಕಾಣುತ್ತಿರಲಿಲ್ಲ. ಆದರೆ ಆ ಕಣ್ಣುಗಳೆರಡು ಮಾತ್ರ ಚಿರಚಂಚಲವೂ ಉಜ್ವಲವೂ ಆಗಿದ್ದವು. ಮುಖವು ಗಂಭೀರವಾಗಿ ಸ್ಥಿರಭಾವ ಉಳ್ಳದುದಾಗಿದ್ದಿತು. ಶಂಕರನ ತಮ್ಮನ ಹೆಂಡತಿಯು ಇವಳಾಗಿದ್ದಳು.

"ಪ್ರಭೆ, ನಿನ್ನ ಗಂಡನ ಕಣ್ಣನ್ನು ಗುಣ ಮಾಡಲಿಕ್ಕೆ ಒಬ್ಬ ವೈದ್ಯನನ್ನು ತಂದಿರುವೆನು" ಎಂದು ಈಷತ್ ನಗುವಿನೊಡನೆ ಹೇಳಿದನು.

ಆ ನಗುವಿನಲ್ಲಿ ಯಾವ ಅರ್ಥವಿದ್ದಿತೊ! ವೈದ್ಯನ ಆಗಮನವನ್ನು ಕೇಳಿ ಆಶೆಯಿಂದ ಕಾತರವಾದ ಮುಖವು ಒಮ್ಮಿಂದೊಮ್ಮೆ ತೀವ್ರವಾದ ಸಂತಾಪದ ಭಾವವನ್ನು ತೋರಿಸಿ ಪುನಃ ವಿರಕ್ತಿಭಾವವನ್ನು ತೋರಿತು. "ಇವನೊಡನೆ ಒಳ್ಳೆ ಔಷಧವಿದೆಯೋ!" ಎಂದಳು. ಶಂಕರನು ವೈದ್ಯನ ಗುಣಗಳ ಹೊಗಳಿಕೆ ಮಾಡಿ ಕಣ್ಣುಗುಣವಾದ ಹಲವು ಜನರ ಹೆಸರಿನ ಉದಾಹರಣೆಗಳನ್ನು ಕೊಟ್ಟನು.

"ಹಾಗಾದರೆ ಅವನನ್ನು ಅವರಿದ್ದಲ್ಲಿ ಕೊಂಡುಹೋಗಿರಿ" ಎಂದು ತರುಣಿಯು ಹೇಳಿದಳು.

• • • • •

ಒಂದು ದಿನ ಸಂಧ್ಯಾಕಾಲ. ಆಕಾಶವು ಸ್ವಚ್ಛವಾಗಿ ಶಾಂತವಾಗಿದ್ದಿತು, ಗಾಳಿಯು ಮೆಲ್ಲನೆ ಸುಗುಟ್ಟುತ್ತಿದ್ದಿತು. ಕೋಣೆಯೊಳಗೆ ರಾಘವನು ಮಂಚದ ಮೇಲೆ ಕುಳಿತು, ಕೈಯಲ್ಲಿದ್ದ ವೀಣೆಯ ತಂತಿಗಳ ಮೇಲೆ ಬೆರಳನ್ನಾಡಿಸಿ ಮನಸ್ಸಿನೊಳಗೇನೇ ಹಾಡುತ್ತಿದ್ದನು. ಪ್ರಭೆಯು ಕಿಟಕಿಯ ದ್ವಾರದಲ್ಲಿ ಬಗ್ಗಿ ನಿಂತು ಶೂನ್ಯವಾದ ಆಕಾಶದ ಕಡೆಗೆ ನೋಡುತ್ತಿದ್ದಳು. ರಾಘವನು ಮೆಲ್ಲನೆ "ಪ್ರಭಾ" ಎಂದನು. ಎಲ್ಲಿಯೊ ಮನಸ್ಸು ಹೋಗಿದ್ದ ಪ್ರಭೆಯು ಚಮಕಿತಳಾಗಿ ನೆಟ್ಟಗೆ ನಿಂತು ಪತಿಪಾರ್ಶ್ವದಲ್ಲಿ ಬಂದು ಕುಳಿತಳು. "ಉರಿ ಬರುತ್ತಿದೆಯೋ!" ಎಂದು ಕಾತರಕಂಠದಿಂದ ಕೇಳಿ ಹತ್ತಿರದಲ್ಲಿ ಇದ್ದ ಗುಲಾಬಿ ನೀರಿನಲ್ಲಿ ಒಂದು ವಸ್ತ್ರದ ತುಂಡನ್ನು ಅದ್ದಿ ಅವನ ಕಣ್ಣುಗಳನ್ನೊತ್ತಿದಳು. "ಇಲ್ಲ, ಪ್ರಭಾ; ಅದಕ್ಕಲ್ಲ, ಒಂದು ಗಾನ ಹಾಡೆಂದು ಹೇಳಲಿಕ್ಕೆ ಕರೆದೆ" ಎಂದನು.

ನಯನಾಂಧ ಪತಿಯ ಮಗ್ಗುಲಲ್ಲಿ ಕುಳಿತು ಆತನ ಮೃದುವಾದ ವೀಣಾರವಕ್ಕೆ ಮೆಲ್ಲನೆ ಹಾಡುವುದು ಪ್ರಭೆಯ ನಿತ್ಯದ ಕೆಲಸವಾಗಿದ್ದಿತು. ಪ್ರಭೆಗೆ ಸುಂದರವಾದ ರೂಪವಿದ್ದಿರಲಿಲ್ಲವಾದರೂ ಮಧುರವಾದ ಕಂಠವಿದ್ದಿತು. ರಾಘವನಿಗೆ ಆ ಕಂಠವನ್ನು ಕೇಳುವುದರಲ್ಲಿ ಬೇಸರವಿರಲಿಲ್ಲ. ಆದುದರಿಂದ ಪ್ರಭೆಯು ಮೆಲ್ಲನೆ ತಗ್ಗಿದ ಕಂಠದಿಂದ ಭಕ್ತಿಯ ಪದವೊಂದನ್ನು ಹಾಡಿದಳು. ವೀಣೆಯು ಸಮಾನ ಮಾಧುರ್ಯದಿಂದ ಆ ಕಂಠವನ್ನು ಪ್ರತಿಧ್ವನಿಸಿತು.

ಹಾಡು ನಿಂತಿತು; ವೀಣೆಯ ಸ್ವರವೂ ನಿಂತಿತು. ಒಮ್ಮಿಂದೊಮ್ಮೆ ರಾಘವನ ಮುಖಭಾವವೂ ನಿಶ್ಚಲವಾಯಿತು. "ಈ ಬಾರಿಯಾದರೂ ನನ್ನ ಕಣ್ಣು ಗುಣಹೊಂದೀತೇ!" ಎಂದು ರಾಘವನು ಕೇಳಿದನು. ಪ್ರಭೆಯು ಉತ್ಸುಕಳಾಗಿ "ಈ ಬಾರಿ ಖಂಡಿತ ಗುಣವಾಗುವುದಾಗಿ ನನಗೆ ಅನ್ನಿಸುತ್ತಿದೆ" ಎಂದು ಆಶೆಯನ್ನವನಲ್ಲಿ ಪ್ರೇರಿಸಲು ಯತ್ನಿಸಿದಳು, ಒಂದು ಗಳಿಗೆಯ ಮೇಲೆ ಪುನಃ—ನೀವು ಯೋಚನೆ ಪಡಬೇಡಿ, ದೇವರ ಕೃಪೆಯು ಖಂಡಿತವಾಗಿಯೂ ನಿಮ್ಮ ಮೇಲೆ ಇದೆ—ಎಂದು ಹೇಳಿದಳು.

"ನನಗೆ ಯೋಚನೆ ಮತ್ತೇನೂ ಇಲ್ಲ. ನಾನು ಕುರುಡಾಗಬೇಕಾದರೆ ಸರ್ವಸುಖವನ್ನು, ಸರ್ವಪ್ರೇಕ್ಷಣವನ್ನೂ ಅನುಭವಿಸಿರುವೆನು. ಈಶ್ವರನು ನನಗೆ ನೋಡಬೇಕಾದ ಎಲ್ಲವುಗಳ ಪ್ರೇಕ್ಷಣ ಸವಿಯನ್ನು ಕೊಟ್ಟ ಮೇಲೆಯೇ ಅಂಧತೆಯನ್ನು ಕೊಟ್ಟನು. ಈಗ ಯಾವುದನ್ನೂ ನೋಡಬೇಕಾಗಿ ನನಗೆ ಇಚ್ಛೆಯಿಲ್ಲ. ಈಶ್ವರನ ಆಶೀರ್ವಾದದ ಬಲದಿಂದ ನನಗೆ ಜೀವನಕ್ಕಾಗಿ ಶ್ರಮಿಸುವ ಅಗತ್ಯವಿಲ್ಲ. ಮನೆಯ ಸೌಕರ್ಯಗಳು ನಿನ್ನಂತಹ ಸಹಚರಿಯೂ ಶ್ರಮಿಸುವವಳೂ ಆದ ಪತ್ನಿಯಿಂದ ಅವೆಲ್ಲಾ ಸರಿಯಾಗಿ ಇವೆ. ಆದರೆ ಈ ವರೆಗೆ ನಿನ್ನನ್ನೊಬ್ಬಳನ್ನು ನೋಡಿಲ್ಲ; ನಿನಗೆ ದಾಂಪತ್ಯಸುಖವನ್ನು ಕೊಡಲಿಲ್ಲ; ನಿನ್ನ ಸಂಸಾರದ ಪ್ರಣಯಸುಖವು ನನಗೆ ಸಿಕ್ಕಿಲ್ಲ. ಅದಕ್ಕಾಗಿಯೇ ಯೋಚನೆ, ನಿನ್ನ ಸೌಂದರ್ಯವನ್ನು ನೋಡಿ ಸುಖಿಸಬೇಕೆಂಬುದೊಂದು ಮಾತ್ರವೇ ನನ್ನನ್ನು ಉತ್ಸುಕನನ್ನಾಗಿ ಮಾಡಿಯದೆ" ಎಂದು ರಾಘವನು ಹೇಳಿದನು.

ಪ್ರಭೆಯ ಹೃದಯದಿಂದ ಸಂತಾಪದ ತೀವ್ರ ಜ್ವಾಲೆಯೊಂದು ಹೊರ ಹೊಮ್ಮಿತು; ಅವಳೊಂದು ಬಾರಿ ಬೆಮರಿದಳು; ಕಣ್ಣಿನಲ್ಲಿ ನೀರು ಬಂದಿತು; ಕಂಠವು ಗದ್ಗದಿತವಾಯಿತು. ನಿಜಸ್ಥಿತಿಯನ್ನು ಹೇಳಲೇ ಎಂದು ಬಗೆದಳು. ಧೈರ್ಯವಾಗಲಿಲ್ಲ. ಕಟ್ಟಕಡೆಗೆ ಹೇಳಿದಳು. "ನನಗಾಗಿ ಕಾತರ ಪಡಬೇಡಿ; ನಾನಷ್ಟು ರೂಪವತಿಯಲ್ಲ"

• • • • •

ರಾಘವನೂ ಶಂಕರನೂ ಸಹೋದರರಾಗಿದ್ದರು. ಅವರಲ್ಲಿ ರಾಘವನು ಕಿರಿಯವನಾಗಿದ್ದು, ಅವರ ಚಿಕ್ಕಪ್ಪನಿಗೆ ದತ್ತ ಪುತ್ರನಾಗಿ ಕೊಡಲ್ಪಟ್ಟಿದ್ದನು; ಅವರ ತಂದೆಯು ತೀರಾ ಬಡವನಾಗಿದ್ದು, ಚಿಕ್ಕಪ್ಪನು ಬಹಳ ಐಶ್ವರ್ಯವಂತನಾಗಿದ್ದನು. ಚಿಕ್ಕಪ್ಪನು ತೀರಿ ಹೋದ ಮೇಲೆ ಆ ಐಶ್ವರ್ಯವೆಲ್ಲಾ ರಾಘವನ ಪಾಲಿಗೆ ಬಂದಿದ್ದಿತು.

ರಾಘವನು ಒಂದು ಸಮಯದಲ್ಲಿ ಅತ್ಯಂತ ಸುಂದರನಾಗಿದ್ದನು. ಆದುದರಿಂದ ತನಗೆ ಅತ್ಯಂತ ಸುಂದರಿಯಾದ ಪತ್ನಿಯೇ ಸಿಕ್ಕಬೇಕೆಂದು ಬಂದ ಹುಡುಗಿಯರನ್ನೆಲ್ಲಾ ನಿರಾಕರಿಸಿದನು. ಆದರೆ ದುರಾದೃಷ್ಟದಿಂದ ಅವನು ಸಿಡುಬಿಗೆ ತುತ್ತಾಗಿ ಅವನ ಸೌಂದರ್ಯವು ಕಳೆದುಹೋಯಿತು. ತನ್ನ ಈ ಕ್ರೌರ್ಯವನ್ನು ಅವನಿಂದ ಅಡಗಿಸಿಡಲೆಂಬಂತೆ ಅವನ ಕಣ್ಣುಗಳನ್ನೂ ಅದು ಅಪಹರಿಸಿ ಬಿಟ್ಟಿತು. ಆದುದರಿಂದ ಆ ಮೇಲೆ ಮನೆಯ ಮತ್ತು ಆಸ್ತಿಯ ಆಡಳಿತವನ್ನು ಶಂಕರನೇ ನೋಡಬೇಕಾಯಿತು.

ತನ್ನ ಹೆಂಡತಿಯ ತಂಗಿಯನ್ನೇ ರಾಘವನಿಗೆ ವಿವಾಹ ಮಾಡಿ ಕೊಡಬೇಕಾಗಿ ಶಂಕರನ ಉದ್ದೇಶವಾಗಿದ್ದಿತು. ಆದರೆ ರಾಘವನು ಇದಕ್ಕೊಪ್ಪಲಿಲ್ಲ. ಶಂಕರನಿಗೆ ಮನಸ್ಸಿನಲ್ಲಿಯೇ ಸಿಟ್ಟಾಯಿತು; ಮತ್ತು ಸಾಮಾನ್ಯ ಯಾರೊಬ್ಬ ಹುಡುಗಿಯನ್ನು ತಂದರೆ ಮನೆಯೊಳಗಿನ ತನ್ನ ಅಧಿಕಾರವು ಕಡಮೆಯಾಗಬಹುದೆಂದು ಬಡವರ ಮನೆಯ ರೂಪವತಿಯಾಗಿರದ ಹುಡುಗಿಯನ್ನು ರಾಘವನಿಗೆ ಮದುವೆ ಮಾಡಿದನು. ಆದರೆ ರಾಘವನು ಮಾತ್ರ ಹುಡುಗಿಯು ಅತ್ಯಂತ ಸುಂದರಿಯೆಂದು ತಿಳಿಯುವಂತೆ ಮಾಡಿಬಿಟ್ಟನು.

ರಾಘವನು ತನ್ನ ಹೆಂಡತಿಯು ಬಹಳ ಸುಂದರಿಯಾಗಿರಬೇಕೆಂದು ತಿಳಿದು, ತನ್ನ ಕಣ್ಣಿನ ಕತ್ತಲೆಗೆ ಬೆಳಕಾಗಿರಬೇಕೆಂದು, ಅನ್ವರ್ಥಕವಾಗಿ ಅವಳಿಗೆ ಪ್ರಭೆಯೆಂದು ಹೆಸರಿಟ್ಟನು. ಪ್ರಭೆಯು ಸೌಂದರ್ಯದ ಪಟ್ಟಿನಲ್ಲಿ ಅಲ್ಲವಾದರೂ ಇತರ ವಿಷಯದಲ್ಲಿ ಅವನಿಗೆ ಅನ್ವರ್ಥಕಳಾಗಿಯೇ ಉಳಿದಳು.

ಆದರೆ ಶಂಕರನು ಪ್ರಭೆಗೆ ಅವಳ ರೂಪದ ನೆನವರಿಕೆ ಮಾಡದೆ ಇರುತ್ತಿರಲಿಲ್ಲ. ಇದರಿಂದ ತನ್ನ ಅಧಿಕಾರವನ್ನು ಅವನು ನಿರಾತಂಕವಾಗಿ ನಡಿಸುತ್ತಲಿದ್ದನು. ಪ್ರಭೆಯು ತನ್ನ ನಿಜಸ್ಥಿತಿಯು ಪತಿಗೆ ತಿಳಿದೀತೆಂದು ಹೆದರಿ ಶಂಕರನ ಅವಹೇಳನವನ್ನು ಸಹಿಸುತ್ತಿದ್ದಳು.

ರಾಘವನ ಕಣ್ಣು ಗುಣವಾಗುವುದೆಂದು ಶಂಕರನು ನಂಬಿರಲಿಲ್ಲ. ಆದರೆ ತನ್ನ ಮೇಲೆ ಅವನ ವಿಶ್ವಾಸವು ಬೆಳೆಯುವಂತೆ ಇಂತಹ ಆದರ ಉಪಚಾರಗಳೆ ಅಗತ್ಯವಿವೆ ಎಂದು ಅವನು ತಿಳಿದುಕೊಂಡಿದ್ದನು.

• • • •

ಕೋಣೆಯೊಳಗೆ ಮಂಚದ ಮೇಲೆ ರಾಘವನು ಕುಳಿತಿದ್ದನು. ಅವನ ಮಗ್ಗುಲಲ್ಲಿ ಕುಳಿತು ಪ್ರಭೆಯು ಕಣ್ಣಿಗಾಗಿ ಉಪಚರಿಸುತ್ತಿದ್ದಳು. ಎದುರಿನಲ್ಲಿ ಆ ವೈದ್ಯನು ನಿಂತು, "ಈಗ ಹೇಗಿದೆ" ಎಂದು ಕೇಳಿದನು. ಶಂಕರನು ವೈದ್ಯನ ಪಾರ್ಶ್ವದಲ್ಲಿ ನಿಂತು ಸುಮ್ಮನೆ ನೋಡುತ್ತಿದ್ದನು.

"ಸ್ವಲ್ಪ ಒಳ್ಳೇದಿದೆ ಇನ್ನು ಗುಣವಾಗುವುದೆಂದು ನನಗೆ ಖಂಡಿತ ಕಾಣುವುದು. ಈಗ ವಸ್ತ್ರದ ಪರದೆಯಿಂದ ನೋಡಿದಂತೆ ಮಲಿನವಾದ ಬೆಳಕು ಕಾಣುತ್ತಿದೆ" ಎಂದನು.

ಪ್ರಭೆಯ ಕೈಯು ನಡುಗುತ್ತಿದ್ದಿತು.

"ಈ ದಿನ ಸಾಯಂಕಾಲ ನಿಮ್ಮ ಕಣ್ಣು ಪೂರ್ಣ ಗುಣವಾಗವುದು" ಎಂದು ವೈದ್ಯನು ಅಂದನು.

ರಾಘವನ ಮುಖವು ಪರಮಾನಂದದಿಂದ ಅರಳಿತು.

ಪ್ರಭೆಯು ಗದ್ಗದಿತ ಕಂಠದಿಂದ "ಇನ್ನು ಏನು ಮಾಡಬೇಕು" ಎಂದಳು.

"ಇನ್ನು ಕಣ್ಣಿಗೆ ವಸ್ತ್ರಕಟ್ಟಿ, ಆ ಮೇಲೆ ಅದನ್ನು ಮುಟ್ಟಬಾರದು. ಔಷಧವು ಕಣ್ಣಿನೊಳಗೆ ಚೆನ್ನಾಗಿ ಹೋಗಿಯದೆ. ಇನ್ನು ಎಂಟು ಗಂಟೆ ಕಾಲದ ವರೆಗೆ ಹಾಗೆಯೇ ಅದು ಇರಬೇಕು" ಎಂದು ವೈದ್ಯನು ಹೇಳಿದನು.

ಪ್ರಭೆಯು ಎದ್ದು, ಪತಿಯನ್ನುದ್ದೇಶಿಸಿ—"ನಾನು ಒಳಗೆ ಹೋಗಿ ಬರುತ್ತೇನೆ" ಎಂದಳು.

"ನೀನು ಹೋಗು, ನಾನು ಸುಮ್ಮನೆ ಮಲಗುತ್ತೇನೆ" ಎಂದು ರಾಘವನು ಹೇಳಿದನು.

ಪ್ರಭೆಯು ಮೆಲ್ಲನೆ ಮಂಚದ ಮೇಲೆ ಹಾಸಿ, ಪತಿಯನ್ನು ಮಲಗಿಸಿ, ಅಸಹನೀಯವಾದ ವೇದನೆಯಿಂದ ಪತಿಯನ್ನೊಂದು ಬಾರಿ ನೋಡಿ, ಬೇರೊಂದು ಕೋಣೆಗೆ ಹೋಗಿ ಅಳಲಾರಂಭಿಸಿದಳು.

• • • •

"ಪ್ರಭೆ"

ಪ್ರಭೆಯು ತಿರುಗಿ ನೋಡಿದಳು. ಶಂಕರನು ದ್ವಾರದಲ್ಲಿ ನಿಂತಿದ್ದನು. ಪುನಃ ಅದೇ ಆ ಅವಹೇಳನದ ಕ್ರೂರ ನಗುವನ್ನು ನಕ್ಕನು.

"ಈ ದಿನ ರಾಘವನಿಗೆ ನಿನ್ನ ಸೌಂದರ್ಯದ ಪ್ರದರ್ಶನವಾಗಬೇಕು" ಎಂದನು.

"ಕರುಣೆ ಇಲ್ಲವೇ, ಶಂಕರಾ; ನನ್ನನ್ನು ಯಾಕೆ ಪೀಡಿಸುತ್ತಿ? ನಾನು ಯಾವ ಅಪರಾಧ ಮಾಡಿದೆ?"

"ಅಪರಾಧ ದೇವರನ್ನು ಕೇಳು ಹಿರಿಯವನಾಗಿ ನಾನು ನನ್ನ ನಂತರ ಬಂದು, ನನ್ನೊಡನೆ ಪೆಟ್ಟುಗಳನ್ನು ತಿಂದು, ನನ್ನನ್ನು ಅಣ್ಣಾ ಎಂದು ಕೂಗಿದವನ ಅಡಿಯಾಳಾಗಬೇಕು. ಅದು ಅಪರಾಧವಲ್ಲವೇ?"

"ಅದಕ್ಕಾಗಿ ನನ್ನನ್ನು ಪೀಡಸುವೆಯೇಕೆ?"

"ನಿನ್ನನ್ನು ಪೀಡಿಸುವುದಿಲ್ಲ. ನೀನು ಅಳುವುದೇಕೆಂದು ನನಗೆ ಗೊತ್ತು. ನಿನಗೊಂದು ಸುಖದ ಮಾರ್ಗ ಹೇಳಿಕೊಡಲೇ?"

"ಅದೇನು"

"ನೀನು ಮಾಡುವುದಾದರೆ ಹೇಳುತ್ತೇನೆ. ಆಗ ನಿನಗೆ ಯಾವ ದುಃಖದ ಹೆದರಿಕೆಯೂ ಇಲ್ಲ"

"ಆಗುವುದಾದರೆ ಮಾಡುತ್ತೇನೆ."

ಶಂಕರನು ತನ್ನ ಚೀಲದಿಂದ ಒಂದು ಸಣ್ಣ ಶೀಸೆಯನ್ನು ತೆಗೆದನು. "ಇದರಿಂದ ಎರಡು ಬೊಟ್ಟುಗಳನ್ನು ಅವನ ಕಣ್ಣಿನಲ್ಲಿ ಹಾಕು ಆಗ ಅವನ ಕಣ್ಣು ಎಂದಿನಂತೆಯೇ ಕುರುಡಾಗಿ ಇರುವುದು.

ಒಂದು ಬಾರಿ ಆಶೆಯಾಯಿತು. ತನ್ನನ್ನು ನೋಡಿದರೆ ತನ್ನ ಗಂಡನು ತನ್ನನ್ನು ಖಂಡಿತವಾಗಿಯೂ ಪರಿಗ್ರಹಿಸಲಿಕ್ಕಿಲ್ಲವೆಂದು ಅವಳಿಗೆ ತಿಳಿದಿತ್ತು. ಗಂಡನಿಗೆ ಕಣ್ಣು ಬಂತೆಂದರೆ ತನ್ನ ಆಜೀವನ ಸುಖವು ನಿವಾರಿತವಾಗುವುದು. ತೂಗಿದಳು—ತನ್ನ ಆಜೀವನ ಸುಖ, ಪತಿಯ ಆಜೀವನ ಸುಖ. ಪತಿಗೆ ಕಣ್ಣು ಬಂತೆಂದರೆ ಅವನು ಬೇರೆಯವಳನ್ನಾದರೂ ಮದುವೆಯಾಗಿ ಸುಖಿಸಬಹುದು. ಅವನು ಕುರುಡಾಗಿದ್ದರೆ, ಅವನ ಭಾಗ್ಯದಲ್ಲಿ ತಾನು ಸಹಭಾಗಿಯಾಗಿರಬಹುದೇನೋ ನಿಜ. ಆದರೆ ಅವನ ದುಃಖದ ತಮಸ್ಸಿನಲ್ಲಿ ತಾನು ಸುಖಿಸಿ ಜೀವನ ಕಳೆಯ ಬೇಕು. ಮುಹೂರ್ತ ಮಾತ್ರ ಯೋಚಿಸಿದಳು. ಒಂದು ವೀರತೆಯ ಸ್ಪಂದನವಾಯಿತು "ದೂರ ಹೋಗು, ಅಖಂಡ ನರಕಕ್ಕೆ ನನ್ನನ್ನು ಪ್ರೇರಿಸಬೇಡ" ಎಂದು ತಿರಸ್ಕರಿಸಿ ಪತಿ ಶುಶ್ರೂಷೆಗೆ ಹೋದಳು.

ಒಂದು ತಿರಸ್ಕಾರದ ಮತ್ತು ಒಂದು ನಿರಾಶೆಯ ವಿಕಟ ನಗುವನ್ನು ನಕ್ಕು ಶಂಕರನು ಹೋದನು.

• • • •

ಸಾಯಂಕಾಲದ ಆ ತಂಪಾದ ಬೆಳಕಿನಲ್ಲಿ ರಾಘವನ ಕಣ್ಣಿನ ವಸ್ತ್ರವ ಬಿಚ್ಚುವುದಿತ್ತು. ಪ್ರಭೆಯು ಅವನ ಪಾರ್ಶ್ವದಲ್ಲಿಯೇ ಇದ್ದಳು; ವೈದ್ಯನೂ ಶಂಕರನೂ ಆರು ಘಂಟೆಗೆ ಸರಿಯಾಗಿ ಬಂದರು. ರಾಘವನ ಮುಖವು ಉತ್ಸಾಹದಿಂದ ಉಕ್ಕೇರುತ್ತಿದ್ದಿತು; ಪ್ರಭೆಯ ಸರ್ವಾಂಗವೂ ಕಂಪಾಯಮಾನವಾಗಿ ಮುಖವು ವಿವರ್ಣವಾಗಿ ಭಯವಿಹ್ವಲವಾಗಿದ್ದಿತು. ಶಂಕರನ ಮುಖದಲ್ಲಿ ದ್ವೇಷದ ಭಯಂಕರ ಭಾವವು ವ್ಯಕ್ತವಾಗುತ್ತಿದ್ದಿತು. ವೈದ್ಯನು "ಈಗ ಬಿಚ್ಚಬಹುದು. ನಾನೇ ಬಿಚ್ಚುತ್ತೇನೆ" ಎಂದು ಹತ್ತರ ಬಂದನು.

ಪ್ರಭೆಗೆ ಅಲ್ಲಿ ನಿಲ್ಲಲಾಗಲಿಲ್ಲ. ಅವಳೆದ್ದು, "ಈಗ ಬರುತ್ತೇನೆ" ಎಂದು ಮನೆಯೊಳಗೆ ಹೋಗಿ ಅಳಲಾರಂಭಿಸಿದಳು. ರಾಘವನ ಮುಖದಲ್ಲಿ ಅದೇ ಕ್ರೂರ ನಗುವು ಕಾಣಿಸಿತು.

ವೈದ್ಯನು ಕಣ್ಣು ಬಿಚ್ಚಿದನು. ರಾಘವನು ಪರಮಾನಂದ ಹೊಂದಿ ನೋಡಿದನು. ಎಲ್ಲವೂ ಕಾಣಲಾರಂಭಿಸಿಯದೆ!

"ಪ್ರಭೆಯೆಲ್ಲಿ?" ಎಂದನು.

ಶಂಕರನು ಪ್ರಭೆಯನ್ನು ಕರೆದನು.

• • • •

ಪ್ರಭೆಯು ಮನೆಯಿಂದ ಹೊರಡಿಸಲ್ಪಟ್ಟಳೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶಂಕರನು ತನ್ನ ಜವಾಬ್ದಾರಿಯನ್ನು ತಪ್ಪಿಸಲಿಕ್ಕೆ ತಕ್ಕುದಾದ ಕಟ್ಟುಕಥೆಯನ್ನು ರಚಿಸಿ ತಪ್ಪನ್ನು ಹೆಣ್ಣು ಕಡೆಯವರ ಮೇಲೆ ಹಾಕಿದನು. ತಾರುಣ್ಯದ ದರ್ಪದಿಂದಲೂ, ಸೌಂದರ್ಯದ ತೃಷೆಯಿಂದಲೂ ಅಂಧನಾಗಿ ಹೋದ ರಾಘವನು ಪ್ರೇಮಳ ಪ್ರಭೆಯನ್ನು ತಿಳಿಯದೆ ಅವಳನ್ನು ಆಗಲೇ ಕಳುಹಿಸಿಕೊಟ್ಟನು.

ಆದರೆ ರಾಘವನ ಕಣ್ಣು ಹೆಚ್ಚು ಹೊತ್ತು ನಿಲ್ಲಲಿಲ್ಲ. ವೈದ್ಯನು ಬಹಳವಾಗಿ ಬಹುಮಾನಿತನಾದನು. ಆದರೆ ಶಂಕರನ ಕಾಪಟ್ಯದಿಂದಲೋ, ಔಷಧದ ನ್ಯೂನ್ಯತೆಯಿಂದಲೋ, ರೋಗದ ಸ್ವಭಾವದಿಂದಲೋ, ಹೇಳಲಿಕ್ಕಾಗುವುದಿಲ್ಲ. ಎರಡೇ ದಿನಗಳೊಳಗೆ ಕಣ್ಣಿನಲ್ಲಿ ಬೇನೆ ಪ್ರಾರಂಭವಾಗಿ ರಾಘವನು ಹಾಸಿಗೆ ಹಿಡಿದನು. ಸರಿಯಾದ ಉಪಚಾರ ಕೊಡ ಆಗದೆ, ಕಟ್ಟಕಡೆಗೆ ಒಬ್ಬ ಡಾಕ್ಟರರ ಹೇಳಿಕೆಯಂತೆ ರಾಘವನನ್ನು ಒಂದು ಆಸ್ಪತ್ರೆಯಲ್ಲಿ ಕಳುಹಿಸಿದರು. ಕಣ್ಣು ಪುನಃ ಕುರುಡಾಯಿತು, ಬೇನೆಯು ಹೆಚ್ಚಾಯಿತು.

• • • • •

ಹಲವು ದಿನಗಳ ಮೇಲೆ ಕಣ್ಣಿನ ನೋವು ವಾಸಿಯಾಗುತ್ತಾ ಬಂತು. ಒಂದು ದಿನ ಸಾಯಂಕಾಲದ ಹೊತ್ತಿನಲ್ಲಿ ರಾಘವನು ಆಸ್ಪತ್ರೆಯ ಮಂಚದ ಮೇಲೆ ಕುಳಿತಿದ್ದನು. ಆಗ ಒಂದು ಕೋಗಿಲೆಯು ಹೊರಗಿನ ಒಂದು ಮರದಲ್ಲಿ ಕೂತು ಹಾಡುತ್ತಿದ್ದಿತು. ಆಗ ರಾಘವನಿಗೆ ವೀಣೆಯ ನೆನಪಾಯಿತು. ಆದರೆ ತಾನು ಆಸ್ಪತ್ರೆಯಲ್ಲಿರುವುದರಿಂದ ಅದನ್ನು ತರಿಸಿ ಬಾರಿಸಲು ಸಾಧ್ಯವಿಲ್ಲವೆಂದು ಕೊಂಡು, ಮೆಲ್ಲನೆ ಬಾಯಿಯಿಂದಲೇ ಹಾಡಲಾರಂಭಿಸಿದನು. ಆ ಹಾಡು ಅವನ ಪ್ರೀತಿಯ ಹಾಡಾಗಿದ್ದಿತು. ಅದನ್ನವನು ಪ್ರಭೆಯ ಎದುರಿಗೆ ಹಾಡಿ ಅವಳಿಂದ ಪುನಃ ಹಾಡಿಸುತ್ತಿದ್ದನು.

ಆಗ ಆಸ್ಪತ್ರೆಯ ದಾದಿಯು 'Nurse' ಅವನ ತಲೆದಿಂಬನ್ನು ಸರಿಪಡಿಸುತ್ತಿದ್ದಳು.

ಅದೇ ಹಾಡು, ಅದೊಂದು ಮಧುರವಾದ ಕಂಠದಿಂದ ಪ್ರತಿಧ್ವನಿಸಿತು.

ರಾಘವನಿಗೆ ರೋಮಾಂಚವಾಯಿತು. ಹಲವು ವರ್ಷಗಳ ನೆನಪು ಒಂದೇ ಬಾರಿ ಅವನ ಮನಸ್ಸಿನಲ್ಲಿ ಚಿತ್ರಿಸಲ್ಪಟ್ಟಿತು. ತಲೆದಿಂಬನ್ನು ಸರಿಪಡಿಸುತ್ತಿದ್ದ ಕೈಯನ್ನು ಒಮ್ಮಿಂದೊಮ್ಮೆ ಹಿಡಿದು ಉದ್ವಿಗ್ನ ಭಾವದಿಂದ ನೀನು ಯಾರು? ಎಂದು ಕೇಳಿದನು.

ವಿರಕ್ತವೂ, ಪ್ರೇಮಪೂರ್ಣವೂ ಆದ ಕಂಠದಿಂದ ಪ್ರಭೆಯು ಹೇಳಿದಳು. ಕ್ಷಮಿಸಿರಿ, ನಾನು ತಮ್ಮ ದಾಸಿ.

ಪಶ್ಚಾತ್ತಾಪದಿಂದಲೂ, ಪ್ರೇಮದಿಂದಲೂ, "ಪ್ರಭಾ!" ಎಂದು ಅವಳನ್ನೆಳೆದು "ಕ್ಷಮಿಸಬೇಕೆ? ಯಾರುಯಾರನ್ನು?" ಎಂದು ಅವಳನ್ನು ವಕ್ಷದಲ್ಲೆಳೆದನು. "ಸುಮ್ಮನಿರಿ ಯಾರಾದರೂ ನೋಡ್ಯಾರು" ಎಂದು ಪ್ರಭೆಯು ಹೇಳಿದಳು.

§ § § § §

ಪ್ರಭೆಯ ಕತೆಯು ಸಂಕ್ಷೇಪವಾಗಿದ್ದಿತು. ಅವಳನ್ನು ಹೊರ ಹಾಕಿದ ಮೇಲೆ ಅವಳು ತಂದೆಯ ಮನೆಗೆ ಹೋದಳು. ಆದರೆ ಶಂಕರನ ಮೇಲೆ ಸಂದೇಹ ವಿದ್ದುದರಿಂದ ಪತಿಗೇನೂ ಅಪಾಯ ಉಂಟಾದೀತೆಂದು ಯೋಚನೆಯಲ್ಲಿದ್ದು ಅಲ್ಲಿಯ ವರ್ತಮಾನವನ್ನು ತರಿಸುತ್ತಿದ್ದಳು. ಆ ಮೇಲಿನ ಕಣ್ಣಿನ ನೋವಿನ ವಿಷಯವನ್ನು ಆಸ್ಪತ್ರೆಗೆ ಕೊಂಡೊಯ್ದುದನ್ನು ಕೇಳಿ ದಾದಿಯ ಕೆಲಸದ ನೆವದಿಂದ ಈ ಆಸ್ಪತ್ರೆಯನ್ನು ಸೇರಿ ಅವನ ರೋಗಕ್ಕೆ ಶುಶ್ರೂಷೆ ಮಾಡಿದಳು. ಶ್ರೀಮಂತನಾದ ಪತಿಯು ತನ್ನ ಮೇಲಿನ ತಿರಸ್ಕಾರವನ್ನು ಬಿಟ್ಟಿರಲಿಕ್ಕಿಲ್ಲವೆಂದು ತನ್ನ ಪರಿಚಯವಾಗದಂತೆ ಎಚ್ಚರದಿಂದಿದ್ದಳು.

• • • • •

ರಾಘವನೂ ಪ್ರಭೆಯೂ ತಮ್ಮ ಮನೆಯ ಕೋಣೆಯಲ್ಲಿ ಕುಳಿತಿದ್ದರು. ರಾಘವನು ವೀಣೆಯನ್ನು ಬಾರಿಸುತ್ತಿದ್ದನು. ಪ್ರಭೆಯು ತನ್ನ ಕೋಮಲ ಕಂಠದಲ್ಲಿ ಹಾಡುತ್ತಿದ್ದಳು. ಆಗ ಟಪ್ಪಾಲಪೇದೆಯೊಂದು ಲಕೋಟೆಯನ್ನು ತಂದು ಕೊಟ್ಟನು. ಪ್ರಭೆಯು ಅದನ್ನೊಡನು ಓದಿದಳು.

ಮಹಾಶಯ!

ತಮ್ಮ ಕಣ್ಣಿನ ವಿಷಯವಾದ ಇತಿಹಾಸವನ್ನು ನಾನು ತಾವು ಚಿಕಿತ್ಸೆ ಹೊಂದಿದ ಆಸ್ಪತ್ರೆಯಿಂದ ತಿಳಿದು ಕೊಂಡಿರುವೆನು. ನಾನು ಈ ವರೆಗಿನ ನೂತನ ಶೋಧಗಳ ಶಸ್ತ್ರಚಿಕಿತ್ಸೆಯನ್ನು ಇಂಗ್ಲೆಂಡಿನಲ್ಲಿ ಕಲಿತು ಬಂದಿದ್ದೇನೆ. ನಿಮ್ಮ ಕಣ್ಣಿಗಿರುವಂತಹ ರೋಗವನ್ನು ಇನ್ನೊಬ್ಬನಿಗೆ ಪೂರ್ಣ ಗುಣಮಾಡಿ ಕೊಟ್ಟಿರುವೆನು. ನಿಮ್ಮ ರೋಗವನ್ನು ಗುಣಮಾಡ ಬಲ್ಲೆನೆಂದು ತಮಗೆ ಖಚಿತಮಾಡುತ್ತೇನೆ. ತಾವು ಶ್ರೀಮಂತರಿರುವುದರಿಂದ ಈ ಬಗ್ಗೆ ೧೦೦೦ ರೂಪಾಯಿ ಕೊಡಬೇಕು. ನಿಮ್ಮ ಕಣ್ಣು ಗುಣವಾಗದಿದ್ದಲ್ಲಿ ನನ್ನ ಚಿಕಿತ್ಸೆಯಿಂದೆ ನಿಮಗಾಗ ಬಲ್ಲ ಹಾನಿಯ ಬಗ್ಗೆ ನಷ್ಟದ್ರವ್ಯವನ್ನು ಕೊಡಬಲ್ಲೆನು. ಇತಿ,

....

"ಇವರ ಹೆಸರನ್ನು ನಾನು ಕೇಳಿದ್ದೇನೆ. ನೀವು ಹೋಗಬಹುದಲ್ಲ!" ಎಂದು ಪ್ರಭೆಯು ಅಂದಳು.

'ಹುಚ್ಚು, ನನಗಿನ್ನು ಕಣ್ಣೇ ಬೇಡ ಈ ಕುರುಡುತನವೂ ನಿನ್ನ ಸ್ನೇಹವೂ ಇರುವ ತನಕ ನನಗೆ ಈ ಲೋಕದಲ್ಲಿ ಬೇಕಾದುದೇನೂ ಬೇರೆ ಇಲ್ಲ. ಯಾವ ಬೆಳಕು ನನ್ನ–ನಿನ್ನ ಅಗಲುವಿಕೆಗೆ ಕಾರಣವಾಯಿತೋ ಅದನ್ನು ನಾನು ಆಶಿಸಲಾರೆನು.'

ಪ್ರಭೆಯ ವಕ್ತಾಯವು ವ್ಯರ್ಥವಾಯಿತು

ಸಂಪೂರ್ಣ.

ವೇಲೆ ರಬ್ಬರ ಟಾಯರು ಮುಂತಾದ
ಮಾಡಲಾರಂಭವಾಯಿತು. ಒಂದು ಪೈ
ದ ರಬ್ಬರಿಗೆ ಲಕ್ಷಾಂತರ ರೂಪಾಯಿ ಸಿಕ್ಕ

ರಿಕದ ಬ್ರೆಜಿಲ್‌ನಲ್ಲಿ ಎಲ್ಲಿಯಾದರೂ
ದೂರ ಒಂದೊಂದು ಮರವು ಸಿಕ್ಕು
ರಬ್ಬರಿನ ತೋಟಗಳನ್ನು ಮಾಡಲಾರಂಭಿಸಿ
ಸ್ಥಳದಲ್ಲಿ ೩೦೦ ಮರಗಳನ್ನು ನಡ
ಕಾಡಿನಲ್ಲಿ ರಬ್ಬರನ್ನು ಕೂಡಿಸುವದಾದರೆ
ಮಾತ್ರವೇ ರಬ್ಬರನ್ನು ಕೂಡಿಸಬಹುದು.
ಗಳಲ್ಲಿರುವ ಮರಗಳಿಂದ ಕೂಡಿಸುವ
ಮರಗಳಿಂದ ಕೂಡಿಸಬಹುದು.
ಮೋಟರು ಕಾರುಗಳೂ ಜನಪ್ರೀತಿಗೆ
ಜೋನ್ ನದಿ ತೀರದಲ್ಲಿ ಸಿಕ್ಕುವ

ಟಾಯರುಗಳನ್ನು ಉಪಯೋಗಿಸದೆ
ಟುಗಳು ಇಷ್ಟು ಅಭಿವೃದ್ಧಿಗೆ ಬರು
ಟಾಯರ್ ಉಪಯೋಗಿಸದೆ ಇದ್ದರೆ
ವೇಗದಲ್ಲಿ ಮೋಟಾರುಗಳನ್ನು ಓಡಿಸಲು
ಗಾಳಿ ತುಂಬಿಸಿದ ಟಾಯರುಗಳನ್ನು
ಮೋಟಾರು ಕೈಗಾರಿಕೆಯು ಅಭಿ

ಯಲ್ಲಿ ಸರ್ ಹೆನ್ರಿ ವಿಕ್‌ಹೆಮ್ ಎಂಬ
ರು ಷಾಹಾ ಅಥವಾ ರಬ್ಬರ ಮರದ
ಇಂಗ್ಲೆಂಡಿಗೆ ಕಳುಹಿಸಿದರು.
ಕೆನಸಿಂಗ ತೋಟದಲ್ಲಿ ಹಾಕಿ ಗಿಡ
ಮುಂತಾದ ಪೂರ್ವ ದೇಶಗಳಿಗೆ
ದೊಡ್ಡ ದೊಡ್ಡ ಕಾಡುಗಳನ್ನು ಕಡಿದು
ಈ ರಬ್ಬರಿನ ಸಸಿಗಳನ್ನು ನಟ್ಟು
ಬೆಳಸಿದರು. ಈ ಕೆಲಸವು ೨೦ನೇ
ನಡೆಯಿತು. ಈ ರಬ್ಬರು ತೋಟ
ಸಿಕ್ಕಲಾರಂಭಿಸಿ ತೋಟದ ಯಜ
ಸಿಕ್ಕಲಾರಂಭಿಸಿತು. ಈ ರೀತಿ
ಸಿಕ್ಕುವುದನ್ನು ನೋಡಿ ಸುಮಾತ್ರಾ,
ಇಂಡಿಯಾ, ಸ್ಟ್ರೈಟ್ ಸೆಟ್ಲಮೆಂಟ
ಜೆಚ್ಚೆಚ್ಚು ತೋಟಗಳನ್ನು ಬೆಳಸ
ಗಣನೇ ಇಸವಿಯ ಸುಮಾರಿಗೆ
ಲ್ಪಡುವ ರಬ್ಬರಿನಲ್ಲಿ ಮುಕ್ಕಾಲು
ಜಿಲ್ ಮತ್ತು ಆಫ್ರಿಕಾ ಖಂಡದಿಂದ

ಕಾಗುವಷ್ಟು ರಬ್ಬರು ಸಿಕ್ಕುತ್ತಿರ
ಲ್ಲಿಯೂ ಒಂದೇ ರೀತಿಯಲ್ಲಿ
ಕ್ರಯ ಏರುತ್ತಾ ಬಂತು. ರಬ್ಬ
ಕಲುಗಳಿಗೂ ಉಪಯೋಗಿಸು

ರಬ್ಬರನ್ನು ವದಗಿಸುವ ಕ್ರಮವು
ೀಕಡಾ ೮೦ರ ಪ್ರಕಾರ ರಬ್ಬರು
ತೋಟಗಳಿಂದ ಬರಲಾರಂಭಿಸಿತು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರೋಗ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ
ಬಹುಮಾನವನ್ನು ಹೊಂದಿರುತ್ತದೆ.
ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.
— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.
ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಶರೀರದಲ್ಲಿ ಉಂಟಾಗುವ ಎಲ್ಲಾ ತರದ
ಮಾರ್ಪಾಟುಗಳಿಗೂ,
ಬಲಹೀನತೆಗೂ, ಮಾನಸಿಕ ಚಿಂತೆಗಳಿಗೂ, ಮಲಬದ್ಧತೆಗೂ ಜಗತ್ಪ್ರಸಿದ್ಧವಾದ

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.
32 ಮಾತ್ರೆಗಳು ತುಂಬಿರುವ ಡಬ್ಬಿ 1ಕ್ಕೆ ರೂ. 1-0-0.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Branches: Karkal, Kasaragod, & Cochin.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds ,, 313,100-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore. 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರನ್ನಾಗಿರುಸುವ
ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ವಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅಕ್ಕಟ ಕರಟ್ ಬಂಗಾರದಿಂದ ತಯಾರಿಸಿದ ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟ ಶಾಣರಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಚೊಕ್ಕಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)



೧೯೨೭ನೇ ಇಸವಿ ದಶಂಬರ ತಾ. ೨೮ರಲ್ಲು ಬೆಳ್ತಂಗಡಿ ಬೋರ್ಡು ಗರ್ಲ್‌ಸ್ಕೂಲಿನಲ್ಲಿ ಕೂಡಿದ ಬೆಳ್ತಂಗಡಿ ಪ್ರಾಂತ್ಯದ ಜೈನರ ಮಹಾಸಭೆಯ ಪ್ರೊಸಿಡಿಂಗ್ಸ್.

೧. ಮ। ರಾ। ರಾ। ದೇವಯಾಜಿಯವರು ಅಧ್ಯಕ್ಷಸ್ಥಾನವನ್ನು ವಹಿಸಬೇಕಾಗಿ ಮ। ರಾ। ರಾ। ಕಲ್ಲೆ ಪೂವಣಿ ಹೆಗ್ಗಡೆಯವರು ಸೂಚಿಸಲ್ಪಟ್ಟ, ಮ। ರಾ। ರಾ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಅನುಮೋದಿಸಿದ ಪ್ರಕಾರ ಸರ್ವಸಮ್ಮತವಾದ ಅಗ್ರಸ್ಥಾನವನ್ನು ದೇವಯಾಜಿಯವರು ಸ್ವೀಕರಿಸಿಕೊಂಡರು.

೨. ಮದ್ರಾಸ ನ್ಯಾಯವಿಧಾಯಕ ಸಭೆಯ ಮೆಂಬರರಾದ ಮಾನ್ಯ ಕೆ. ಆರ್. ಕಾರಂತರವರು ಸದರಿ ಸಭೆಯಲ್ಲಿ ಇಟ್ಟ ಜೈನ ವಾರಿಸ ಹಕ್ಕಿನ ಮಸೂದೆಯ ಕುಲಾಂಕುಶವಾದ ಅಭಿಪ್ರಾಯವನ್ನೂ, ಅದರ ವಿವರವನ್ನೂ ರಾಜೇಶ್ರಿ ಕಲ್ಲೆ ಪೂವಣಿ ಹೆಗ್ಗಡೆಯವರು ಸಭೆಗೆ ವಿವರಿಸಿ ಹೇಳಿದರು. ಅನಂತರ ಆ ಕುರಿತು ಕೆಲವು ಅನುಭವಗಳನ್ನು ಸಭೆಯಲ್ಲಿ ಹಾಜರಿದ್ದವರ ಪೈಕಿ ಕೆಲವರು ಕೇಳಿ ತಿಳಕೊಂಡದ್ದಾಯಿತು. ತದನಂತರ ಹಾಜರಿದ್ದವರ ಪೈಕಿ ಪ್ರತ್ಯೇಕ ಪ್ರತ್ಯೇಕವಾಗಿ ಪ್ರತಿ ಒಬ್ಬರ ಅಭಿಪ್ರಾಯ ಕೇಳಿ ತಿಳಕೊಂಡಲ್ಲಿ ಸದರಿ ಮಸೂದೆಯ ಸರ್ವಸಮ್ಮತದಿಂದ ಎಲ್ಲರಿಗೂ ಒಪ್ಪಿಗೆ ಉಂಟು ಎಂಬುದಾಗಿ ಕಂಡು ಬಂತು.

೩. ಈ ರೀತಿ ಸಭೆಯವರ ಅಭಿಪ್ರಾಯವಿದ್ದ ಈ ಪ್ರೊಸಿಡಿಂಗ್ಸನ್ನು ಕೆಳಗೆ ಕಾಣಿಸಿದವರಿಗೆ ಕಳುಹಿಸಿಕೊಡಲಿಕ್ಕೆ ಕಲ್ಲೆ ಪೂವಣಿ ಹೆಗ್ಗಡೆಯವರಿಗೆ ಅಧಿಕಾರ ಕೊಡಲ್ಪಾತು.

(೧) ನ್ಯಾಯವಿಧಾಯಕ ಸಭೆಯ ಅಧ್ಯಕ್ಷರವರಿಗೆ, (೨) ದಕ್ಷಿಣ ಕನ್ನಡ ಜಿಲ್ಲಾ ಕಲ್ಲೆಕ್ಟರವರಿಗೆ, (೩) ಈ ಜಿಲ್ಲೆಯ ಎಲ್ಲಾ ಕನ್ನಡ ಪತ್ರಿಕೆಯವರಿಗೆ, (೪) ಶ್ರೀಯುತ ಕೆ. ಆರ್. ಕಾರಂತರವರಿಗೆ

೪. ಈ ದಿನ ಬರಲಿಕ್ಕೆ ಅನೇಕ ಜನರಿಗೆ ಅನುಕೂಲವಿಲ್ಲದೆ ಜನಸಂಖ್ಯೆಯು ಬಹಳ ಕಡಿಮೆಯಾಗಿ ತೋರಿದ್ದರಿಂದ ಈ ವಿಷಯದಲ್ಲಿ ಇನ್ನು ಹೆಚ್ಚಿನ ಮಂದಿಯ ಮತಗಳನ್ನು ಶೇಖರಿಸುವದ ಕ್ಕಾಗಿ ಬರುವ ೧೯೨೮ನೇ ಇಸವಿ ಜನವರಿ ತಾ. ೩ನೇ ಮಂಗಳವಾರ ೩ ಗಂಟೆಗೆ ಬಂಗ್ವಾಡಿ ಬಸದಿಯಲ್ಲಿ ಸೇರುವದೆಂತ ನಿಶ್ಚಯಿಸಿ ನಂತರ ಸಭೆಯು ಮುಕ್ತಾಯವಾಯಿತು.

೧೯೨೭ನೇ ಇಸವಿ ದಶಂಬರ ತಿಂಗಳ ತಾ. ೨೯ರಲ್ಲು ಬಂಗ್ವಾಡಿ ಜೈನ ಬೋರ್ಡಿನಲ್ಲಿ ಪುತ್ತೂರು ಪ್ರಾಂತ್ಯದ ಜೈನರ ಮಹಾಸಭೆಯು ಸೇರಿದ್ದಲ್ಲಿ ಮಾಡಿದ ಪ್ರೊಸಿಡಿಂಗ್ಸ್.

೧. ಈ ಸಭೆಗೆ ಮಹಾರಾಜೇಶ್ರೀ ಮರ್ದಾಳ ಬೀಡಿನ ತಿಮ್ಮಯ ಕೊಂಡೆಯವರು ಅಧ್ಯಕ್ಷರಾಗಿ ಆರಿಸಬೇಕಾಗಿ ಬಿಜಲ ಆದಿರಾಜ ಹೆಗ್ಗಡೆಯವರು ಸೂಚಿಸಿದ್ದಾಗಿ ಮ। ರಾ। ರಾ। ಕುದ್ಮಾರು ಕುಮಾರ ಕೈಗಳು ಅನುಮೋದಿಸಿದ ಪ್ರಕಾರ ಸರ್ವಸಮ್ಮತದಿಂದ ಆರಿಸಲಾಗಿ ತಿಮ್ಮಯ ಕೊಂಡೆಯವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

೨. ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಕೆ. ಆರ್. ಕಾರಂತರವರು ಸದರಿ ಸಭೆಯಲ್ಲಿಟ್ಟ ಜೈನ ವಾರಿಸು ಮಸೂದೆಯನ್ನು ಕುಲಾಂಕುಶವಾಗಿ ರಾಜೇಶ್ರಿ ಕಲ್ಲೆ ಪೂವಣಿ ಹೆಗ್ಗಡೆಯವರು ಸಭೆಗೆ ವಿವರಿಸಿ ಹೇಳಿದರು. ಅನಂತರ ಆ ಕುರಿತು ಅನುಭವಗಳನ್ನು ಸಭೆಯ ಪೈಕಿ ಕೆಲವರು ತಿಳಿದುಕೊಂಡರು, ಹಾಜರಿದ್ದವರ ಪೈಕಿ ಪ್ರತಿ ಒಬ್ಬರ ಕೂಡೆ ಅವರ ಅಭಿಪ್ರಾಯ ಕೇಳಲಾಗಿ ಸದರಿ ಮಸೂದೆಯು ಎಲ್ಲರಿಗೂ ಒಪ್ಪಿಗೆ ಉಂಟೆಂಬದಾಗಿ ಕಂಡು ಬಂತು.

೩. ಈ ರೀತಿ ಸಭೆಯ ವ ಅಭಿಪ್ರಾಯದ ಈ ಪ್ರೊಸಿಡಿಂಗ್ಸಿನ ಪ್ರತಿಗಳನ್ನು ಕೆಳಗಿನವರು ಕಾಣಿಸಿದವರಿಗೆ ಕಳುಹಿಸುವರೆ ಅಧ್ಯಕ್ಷರಾದ ತಿಮ್ಮಯ ಕೊಂಡೆಯವರಿಗೆ ಅಧಿಕಾರ ಕೊಡಲಾಯಿತು.

೧, ನ್ಯಾಯವಿಧಾಯಕ ಸಭೆಯ ಅಧ್ಯಕ್ಷರವರಿಗೆ, ೨, ದಕ್ಷಿಣ ಕನ್ನಡ ಜಿಲ್ಲಾ ಕಲ್ಲೆಕ್ಟರವರಿಗೆ, ೩, ಈ ಜಿಲ್ಲೆಯ ಎಲ್ಲಾ ಕನ್ನಡ ಪತ್ರಿಕಾ ಕರ್ತರಿಗೆ, ೪, ಶ್ರೀಯುತ ಕೆ, ಆರ್. ಕಾರಂತರವರಿಗೆ, ೫, ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಎ, ಬಿ, ಶೆಟ್ರಿಗೆ,

ನಂತರ ಸಭೆಯು ಮುಕ್ತಾಯವಾಯಿತು.

ಈ ರಬ್ಬರಿನಲ್ಲಿ ಹೆಚ್ಚು ನೀರು ಇರುವುದು. ಇದನ್ನು ಪರದೇಶಗಳಿಗೆ ಕಳುಹಿಸುವುದಕ್ಕಾಗಿ ಬೇರೆ ಬೇರೆ ರೀತಿಯಲ್ಲಿ ತಯಾರಿಸುವರು. ಸಾಧಾರಣವಾಗಿ ಉದ್ದ ತಗಡುಗಳಾಗಿ ಮಾಡಿ ಮಡಚಿ ಕಟ್ಟುಗಳನ್ನು ಮಾಡಿ ಹಡಗಗಳಲ್ಲಿ ಹಾಕಿ ಪರಪೂರುಗಳಿಗೆ ಕಳುಹಿಸುವರು.

ಕಂದು ಬಣ್ಣದ ಈ ಹಾಳೆಗಳನ್ನು ತಯಾರಿಸುವಾಗ ಇವುಗಳನ್ನು ಒಂದು ಯಂತ್ರದ ಎಡೆಗೆ ಶಿಕ್ಕಿಸಿದ ಕೂಡಲೇ ಈ ಹಾಳೆಯು ತೆಳ್ಳಗಾದ ಹಾಳೆಯಾಗಿ ಇನ್ನೊಂದು ಕಡೆಯಿಂದ ಬರುವುದು. ಈ ರೀತಿ ಯಂತ್ರದಿಂದ ದಾಟಿಸುವಾಗ ರಬ್ಬರಿನ ಹಾಳೆಯ ಮೇಲೆ ನೀರನ್ನು ಹೊಯ್ಯುವರು. ಇವರಲ್ಲಿರುವ ಕಲ್ಮಶಗಳು ತೊಳೆದುಹೋಗುವವು. ನಂತರ ಈ ಹಾಳೆಗಳನ್ನು ಕೋಲುಗಳ ಮೇಲೆ ಹಾಕಿ ಗಾಳಿ ಇರುವ ಕೋಣೆಗಳಲ್ಲಿ ನಾಲ್ಕು ದಿನಗಳ ವರೆಗೆ ತೂಗಾಡಿಸುವರು. ನಂತರ ಹಾಳೆಗಳನ್ನು ಮಡಚಿ ಒಂದು ಪೆಟ್ಟಿಗೆಯಲ್ಲಿ ಹಾಕುವದಾದರೆ ಗಟ್ಟಿ ಯಾಗಿ ತುಂಬಿಸುವರು. ಬೇಲಗಳಾಗಿ ಮಾಡುವದಾದರೆ ಅನೇಕ ರಬ್ಬರ ಹಾಳೆಗಳನ್ನು ಕಟ್ಟುವರು. ಒಂದೊಂದು ಹಾಳೆಯು ಒಂದೇ ಇಂಚು ದಪ್ಪವಾಗಿರುವುದು.

ಹೊಗೆಯಲ್ಲಿ ಒಣಗಿಸುವದಾದರೆ ಇವುಗಳಲ್ಲಿರುವ ನೀರನ್ನು ಹಿಂಡಿ ತೆಗೆದು ಕೋಲುಗಳ ಮೇಲೆ ಹಾಕಿ ಹೊಗೆ ತುಂಬಿರುವ ಕೋಣೆಯಲ್ಲಿ ತೂಗಾಡಿಸುವರು. ಈ ರೀತಿ ಒಣಗಿಸಿದರೆ ಆರೇ ದಿವಸಗಳಲ್ಲಿ ಒಣಗುವುದು. ನಂತರ ತೆಗೆದು ಬ್ರಶ್ಶಿನಿಂದ ಉಜ್ಜಿ ಕಟ್ಟುಗಳಾಗಿ ಮಾಡುವರು.

The Chickmagalur Public Conveyance Motor Service.
CHICKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.
ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್, Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮ್‌ಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ಯಾವ ತೊಂದರೆಯೂ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗೆಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ಈ ಮೋಟರ ಸರ್ವಿಸ್ಸಿನಲ್ಲಿ ಪ್ರಯಾಣಿಕರಿಗೆ ಇರತಕ್ಕ ಅನುಕೂಲತೆ.

(4) ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸ್ ನಡಿಸೋಣದರಿಂದ ಪ್ರಯಾಣಿಕರಿಗೆ ಯಾವತೊಂದೂ ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ಕಡೆಗಳಿಂದ ಹೊರಡುವ ಪ್ಯಾಸೆಂಜರುಗಳಿಗೆ ಮಾರ್ಗದಲ್ಲಿ ಬಂಟವಾಳ, ಬೆಳ್ತಂಗಡಿ, ಕೊಟ್ಟಿಗೆಹಾರ, ಮೂಡಗೆರೆ, ಚಿಕ್ಕಮಗಳೂರು, ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ಇತರರಿಗೂ ಅನುಕೂಲವಾದ ಹೊಟೆಲುಗಳಿವೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರ್ಯಾಟರರಿಗೂ ಬರೆದುಕೊಳ್ಳಬಹುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಬಳೆ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹನ್ನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

…ವರ್ತಮಾನ.

…ಅರಸರಿಗೆ ಅಫಘಾನ ಅರಸರು ಅಲ್ …ಅಫಘಾನ ಬಿರುದನ್ನು ಕೊಟ್ಟಿರುವರು. …ಕೆನಿಯಾ ಕೊಲೋನಿಯ ಮುಖ್ಯ ಪಟ್ಟಣ …ರುವ ಹಿಂದೀಯರ ಕೊಂಗ್ರೆಸಿನಲ್ಲಿ ಕೆನಿಯಾ …ಬೇಕಿಲ್ಲ ಎಂಬ ಠರಾವನ್ನು ಪಾಸುಮಾಡಿರು…

…ಬೋಲೀವಿಯಾ ದೇಶದ ಸರಕಾರದವರು …ನಂತರು ೫ ಮಿಲಿಯ ಡೋಲರುಗಳನ್ನು …ಸಹಾಯ ಪಡಿಸುತ್ತಿರುವರು. …ಳುವದು ಹೆಚ್ಚಾಗಿ ವಿಮಾನಚಲಾವಣೆಯೂ …ದೆ.

…ಬಾಯಿಹುಣ್ಣು ಕಾಲುಹುಣ್ಣುಗಳ ರೋಗವು …ದಿಂದ ಮಾಂಸವನ್ನು ಬಹಳ ಜಾಗ್ರತೆಯಿಂದ …ಬ್ರಿಟಿಷ ಬೇಸಾಯ ಮಂತ್ರಿಗಳು ಹುಕುಂ…

…ದಲ್ಲಿರುವ ಮೌಂಟ ಬ್ಲೇಂಕ್ ಎಂಬ ಪರ್ವ… …ಮೌಂಟ ಬೆನಿಟೋಮುಸ್ಸಲೋನಿ ಎಂಬ…

…ದಕ್ಷಿಣದಲ್ಲಿರುವ ಮರಮೋರಾ ಸಮುದ್ರ… …ಒಂದಕ್ಕೊಂದು ತಾಗಿ ಒಡದು ಹೋಗಿ …ಳುಗಿದರು.

…ಲಿಯಕ್ಕೆ ಪ್ರಯಾಣ ಮಾಡುವ ಎರಡು …ಗಳಲ್ಲಿ ಇಂಗ್ಲೆಂಡಿನಿಂದ ಹೊರಡುವವು. …ಮಾಡಿರುವರು. ಇದರಲ್ಲಿ ವಿಮಾನ ನಡಿಸು… …ಒಂದೊಂದರಲ್ಲಿ ೧೫ ಮಂದಿ ಪ್ರಯಾ… …ಮಾಡುವ ಒಂದು ಕೋಣೆ ಇದೆ. …ಗೆ ಮಾಡುವ ಸ್ಟವ್ ಇದೆ. ಇವುಗಳು …ಬರುವವು ಇಂಗ್ಲೆಂಡಿನಿಂದ ಒಸ್ಟ್ರೇಲಿ… …ಇಂಗ್ಲೆಂಡಿಗೆ ಹೋಗುವ ಪ್ರಯಾಣಿಕರಿಗಾಗಿ …ದೋಣಿಗಳಂತೆ ಇದ್ದು ನೀರಿನಲ್ಲಿ… …ಇಂಗ್ಲೆಂಡಿನಿಂದ ಒಸ್ಟ್ರೇಲಿಯಕ್ಕೆ ೧೦…

…ಪಾರ್ಕರ್ ಎಂಬವರ ಕೊಲೆಪಾತ… …ಸಿನವರೂ ಗುಪ್ತ ಪೋಲಿಸಿನವರೂ ಹುಡು… …ವರೆಗೆ ಯಾರೂ ಸಿಕ್ಕಲಿಲ್ಲ.

…ನಲ್ಲಿರುವ ಪಾರ್ಲಿಮೆಂಟ್ ಸಭೆಯಲ್ಲಿ …ಹೆಚ್ಚಿಗಿದ್ದರು. ಈ ದೆಚ್ಚರ ಸಂಖ್ಯೆ …ಹೆಚ್ಚಿಸಿರುವರು.

…ಗಳಿಂದ ಚಕ್ಕುಗಳ ಮೂಲಕ ಹಣ …ಶಿಕ್ಷೆಯು ವಿಧಿಸಲಾಯಿತ್ತು. ಈ…

…ದೇಶದ ಜನರು ಆ ಪ್ರದೇಶವು …ಬರಗಾಲದಿಂದ ಕಷ್ಟಪಡುತ್ತಿರು… …ಅಣೆಕಟ್ಟನ್ನು ಕಟ್ಟಿ ಅದರಿಂದ …ಪ್ರದೇಶವನ್ನು ಫಲಭರಿತವಾಗಿ ಮಾಡಿರು… …ದಲ್ಲಿ ಧಾನ್ಯವನ್ನು ಬೆಳಸಿರುವರು. …ಹತ್ತಿಯನ್ನು ಬೆಳಸಿರುವರು. ಬರುವ …ಹತ್ತಿಯನ್ನು ಬೆಳಸುವರು.

…ನದಿಯ ಮೇಲೆ ೨೫೫ ಅಡಿ …ವನ್ನು ಕಟ್ಟಲಿಕ್ಕೆ ಒಂದು ಮಿಲಿಯ …ನ್ಯಾಗೇರಿಯ ಬಂದರವಾದ ಹರ್ …ಗಣಿಗಳಿಗೆ ಹೋಗಲು ಈ ಸೇತುವೆ…

…ವಸ್ತು ಪ್ರದರ್ಶನಾಲಯದಲ್ಲಿರುವ ಹಳೇ …ಗಳು ಸಿಕ್ಕಿದವಂತೆ.

…ಜರಗಿದ ಆದಿ ಹಿಂದೂ ಮಹಾ ಸಭೆಯಲ್ಲಿ …ಸಂಸ್ಥೆಗಳಲ್ಲಿಯೂ ಸರಿಯಾದ ಪ್ರತಿ… …ವನ್ನು ಕೇಳಿಕೊಳ್ಳಬೇಕೆಂದು ನಿರ್…

…ವರ್ತಮಾನ.

…ರೆಲ್ಲರೂ ತಾವು ಇನ್ನು ಮುಂದೆ …ಇರಲಿಕ್ಕಿಲ್ಲವೆಂದೂ, ಬ್ರಿಟಿಷ್ ಮಹಾ… …ಅಧಿಕಾರವಿರಬೇಕೆಂದೂ ಬ್ರಿಟಿಷ …ತಮ್ಮ ಕಡೆಯಿಂದ ಒಬ್ಬ ಪ್ರತಿನಿಧಿ …ವರು. ಸರ್ ಲೆಸ್ಲಿಸ್ಕೋಟರು ಈ…

…ಒಂದು ಮಹಾ ಸಭೆಯು ಅಹ… …ದಲ್ಲಿ ಮುಂಬಾಯಿಯ ಗುಜರಾತಿ ಎಂಬ …ಮಾಡಲಾಲದೇಸಾಯಿಯವರ ಅಧ್ಯಕ್ಷತೆಯಲ್ಲಿ …ಜರಗಿತು. ಪತ್ರಿಕಾ ಕೆಲಸ ಮಾಡುವವರಿಗಾಗಿ …ಮಾಡಬೇಕೆಂದೂ, ಹೀನ ರೀತಿಯ ಮತ್ತು …ಮೆಂಟುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸ… …ಅಚ್ಚುಹಾಕಿಸುವ ವಿದ್ಯೆಯನ್ನು …ವಂತೆ ಮುಂಬಾಯಿ ಯುನಿವರ್ಸಿಟಿಯವ… …ಯುನಿವರ್ಸಿಟಿಯವರನ್ನು ಕೇಳಿಕೊಳ್ಳ… …ವಿಷಯದಲ್ಲಿ ಟಪಾಲು ಮತ್ತು ಟೆಲಿಗ್ರಾಫ… …ಮಾಡಬೇಕೆಂದು ಲೆಜಿಸ್ಲೇಟಿವ್ ಎಸೆಂಬ್ಲಿಯನ್ನು …ಠರಾವುಗಳು ಪಾಸಾದವು.

— ದಿಲ್ಲಿಯಲ್ಲಿ ಜರಗಿದ ಅಖಿಲ ಭಾರತ ಟಾಬ್ಲಿಗ್ ಮಹಾಸಭೆಯಲ್ಲಿ ಇಂಡಿಯಾ ಸರಕಾರದವರು ಮುಸಲ್ಮಾನ ಪ್ರಜೆಗಳ ಮತಸ್ವಾತಂತ್ರ್ಯಕ್ಕಾಗಿ ಸಹಾಯಮಾಡಬೇಕೆಂದೂ, ಅನ್ಯ ರಾಜ್ಯಗಳಲ್ಲಿರುವ ಮುಸಲ್ಮಾನರಿಗೆ ಬಂದ ಕಷ್ಟಗಳನ್ನು ಪರಿಹರಿಸುವದಕ್ಕಾಗಿ ಇಂಡಿಯಾ ಸರಕಾರದವರು ಒಂದು ಕಮಿಶನ್ ಮೊಕರೂರು ಮಾಡಬೇಕೆಂದೂ ಪ್ರತಿ ಒಬ್ಬ ಮುಸಲ್ಮಾನನು ಟಾಬ್ಲಿಗ್ ಮಹಾಸಭೆಗಾಗಿ ವರುಷ ಒಂದರ ೪ ಆಣೆಯಂತೆ ವಂತಿಗೆ ಕೊಡಬೇಕೆಂದೂ ಅಂಬಾಲಾ ಮುಸ್ಲಿಮ್ ಕೊಲೆಜಿಗೆ ಪ್ರತಿ ಒಬ್ಬ ಮುಸಲ್ಮಾನನು ಧನಸಹಾಯ ಮಾಡಬೇಕೆಂದೂ ಠರಾವುಗಳು ಪಾಸಾದವು.

— ಅಲ್ಲಹಾಬಾದಿನಲ್ಲಿ ಜರಗಿದ ಅಖಿಲ ಭಾರತ ಆದಿದ್ರಾವಿಡರ ಸಭೆಯಲ್ಲಿ ಈಗ ಬರಲಿಕ್ಕಿರುವ ಕಮಿಶನನ್ನು ಬಹಿಷ್ಕರಿಸಬಾರದೆಂದೂ ಇಂಡಿಯಕ್ಕೆ ಸ್ವರಾಜ್ಯ ಕೊಟ್ಟರೆ ಹಿಂದುಗಳು ಆದಿದ್ರಾವಿಡರಿಗೆ ನಾನಾ ತರದ ಉಪದ್ರಗಳನ್ನು ಕೊಟ್ಟಾರೆಂದೂ ಆದುದರಿಂದ ಇಂಡಿಯಕ್ಕೆ ಸ್ವರಾಜ್ಯ ಕೊಡಬಾರದೆಂದೂ ನ್ಯಾಯ ವಿಧಾಯಕ ಸಭೆಗಳಲ್ಲಿಯೂ ಲೋಕಲ್ ಬೋರ್ಡುಗಳಲ್ಲಿಯೂ ತಮ್ಮ ಜಾತಿಯ ಸಂಖ್ಯೆಗೆ ಅನುಸಾರವಾಗಿ ಮೆಂಬರಿಕೆಗಳನ್ನು ಕೊಡಬೇಕೆಂದು ಬರುವ ಕಮಿಶನಿನಲ್ಲಿ ಕೇಳಿಕೊಳ್ಳಬೇಕೆಂದೂ ನಿರ್ಣಯವಾಯಿತು.

— ಸೇವಾಸಮಿತಿ ಸ್ಕೌಟುಗಳ ಅಖಿಲ ಭಾರತ ಸಮ್ಮೇಳನವು ಅಮೃತಸರದಲ್ಲಿ ೨೭ರಲ್ಲಿ ಜರಗಿತು. ಈ ಸಮ್ಮೇಳನಕ್ಕೆ, ಈ ಸಂಘಕ್ಕೆ ಸೇರಿದ [illegible]೦೦೦ ಮಂದಿ ಸ್ಕೌಟುಗಳು ಬಂದಿದ್ದರು

— ಮದರಾಸಿನಲ್ಲಿ ಅಖಿಲಭಾರತ ಲೋಕಲ್ ಬೋರ್ಡುಗಳ ಸಭೆಯು ೨೭ರಲ್ಲಿ ಮದರಾಸು ಮಂತ್ರಿಗಳಾದ ಡೋಕ್ಟರ್ ಸುಬ್ಬರಾಯನರವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಸ್ವಾಮಿ ವೆಂಕಟಾಚಲಂ ಚೆಟ್ಟಿಯವರು ಸ್ವಾಗತ ಭಾಷಣವನ್ನು ಕೊಟ್ಟರು. ಈ ಸಮಯದಲ್ಲಿ ಗ್ರಾಮಗಳನ್ನು ಉದ್ಧರಿಸುವ ಸಂಗತಿಯನ್ನು ಮೊದಲನೇದಾಗಿ ಎಲ್ಲಾ ಲೋಕಲ್ ಬೋರ್ಡುಗಳು ಆಲೋಚಿಸಬೇಕೆಂದು ಹೇಳಿದರು. ಗ್ರಾಮ ಪಂಚಾಯತುಗಳನ್ನು ಪ್ರತಿಗ್ರಾಮದಲ್ಲಿಯೂ ಮಾಡಿದ ವಿನಹ ಗ್ರಾಮಗಳು ಉದ್ಧಾರವಾಗಲು ಸಾಧ್ಯವಿಲ್ಲವೆಂದು ಹೇಳಿದರು.

— ಕಲ್ಕತ್ತದ ಚಿತಪುರದ ಎಟ್ಲಾಸ ಸಣಬಿನ ನಾರಿನ ಕಾರ್ಖಾನೆಗೆ ಬೆಂಕಿಬಿದ್ದು ಒಂದು ಲಕ್ಷ ರೂಪಾಯಿ ನಷ್ಟವಾಯಿತು

— ಮಂಗಳೂರಿನಿಂದ ಹೊರಟ ೪ ವಿಮಾನಗಳು ೧೯೬ ಮೈಲು ದೂರವಿರುವ ಕೊಚ್ಚಿಗೆ ಬಂದು ತಲಪಿ ಅಲ್ಲಿಯ ಬಂದರದ ಅಧಿಕಾರಿಗಳಿಂದಲೂ ಇತರ ಯುರೋಪಿಯನರಿಂದಲೂ ಸತ್ಕಾರ ಪಡೆದು ಕೊಚ್ಚಿ ಊರನ್ನು ನೋಡಿ ಅಲ್ಲಿಂದ ಕ್ವಿಲನ್ ದಾರಿಯಾಗಿ ಕೊಲೊಂಬೊಕ್ಕೆ ಹಾರಿಹೋದವು

— ಹಕಿಮ್ ಅಜಮಲ್ ಖಾನರು ೨೯ನೇ ತಾರೀಕಿನ ದಿವಸ ರಾಮಪುರದಲ್ಲಿ ಬಿಲಿಯಾರ್ಡ್ ಆಡುವ ಸಮಯ ಫಕ್ಕನೆ ಬಿದ್ದು ಸತ್ತರು. ಇವರು ಹೆಸರುಗೊಂಡ ವೈದ್ಯರೂ ದೇಶಭಕ್ತರೂ ಆಗಿದ್ದರು. ಇವರ ಮರಣಪಟ್ಟದಕ್ಕಾಗಿ ಇಡೀ ಇಂಡಿಯವೇ ದುಃಖ ಪಡುತ್ತಿದೆ.

— ಮಹಾತ್ಮಾ ಗಾಂಧಿಯವರು ಸ್ವಲ್ಪ ಅಸೌಖ್ಯದಲ್ಲಿರುವುದರಿಂದ ಇವರು ಹೆಚ್ಚು ವಿಶ್ರಾಂತಿ ತೆಗೆದುಕೊಳ್ಳಬೇಕೆಂದೂ ಹೆಚ್ಚು ಸಮಯ ನಿದ್ರೆಮಾಡಬೇಕೆಂದೂ ಡಾಕ್ಟರ ಮುತ್ತುರವರು ಹೇಳಿರುವರು.

— ಕಲ್ಕತ್ತದಲ್ಲಿ ಜರಗಿದ ಅಖಿಲ ಭಾರತ ಉಪಾಧ್ಯಾಯರ ಸಂಘದಲ್ಲಿ ಉಪಾಧ್ಯಾಯರ ಸ್ಥಿತಿಗತಿಯನ್ನು ಉದ್ಧಾರ ಮಾಡುವುದರ ವಿಷಯ ಆಲೋಚನೆಗಳು ನಡೆದವು.

ದಕ್ಷಿಣ ಕನ್ನಡ

ಮಂಗಳೂರು: — "ಮುನ್ಸಿಪಲ್ ಆಯುರ್ವೇದ ಧರ್ಮಾಸ್ಪತ್ರೆ" ಮಂಗಳೂರು, ಈ ಆಸ್ಪತ್ರೆಯಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಿ ೪೩೩ ಹಿಂದೂ ೩೫೫ ಕ್ರಿಶ್ಚನ್ ಮತ್ತು ೬೬ ಮಹಮ್ಮದೀಯ ಹೊಸ ರೋಗಿಗಳೂ ಸೇರಿ ೮೫೪ ವ್ಯಾಧ್ಯಸ್ತರು ಚಿಕಿತ್ಸೆಹೊಂದಿದ್ದರು. ರೋಗಿಗಳ ಪ್ರತಿ ದಿನದ ಸರಾಸರಿ ಹಾಜರು ೧೮೬.೫ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ೨೫-೧೦-೨೭ರಲ್ಲು ಹೆಚ್ಚಾಗಿ ಹಾಜರಾದ ಸಂಖ್ಯೆಯು ೨೦೫ ಆಗಿರುತ್ತದೆ.

ಕಳೆದ ನವಂಬರ ೨೬ನೇ ತಾರೀಕಿನ ದಿನ ರಾ॥ ಯು. ಸಿ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರ ೨ನೇ ಸಭೆಯಲ್ಲಿ ಆದ ನಿರ್ಣಯಗಳು: —

(೧) ಒಂದನೇ ಮೀಟಿಂಗಿನಲ್ಲಾದ ನಿರ್ಣಯಗಳನ್ನು ಜ್ಯಾರಿಗೆ ತರುವರೆ ಪ್ರಯತ್ನಿಸುವದು. ಕಾಸರಗೋಡು ತಾಲೂಕನ್ನು ದಾಟಿ, ಇರುವ ಭೂಮಿಯನ್ನು ರಿಸರ್ವೆ ಮಾಡುವ ಅಗತ್ಯವಿಲ್ಲ ಅದರಿಂದ ಪ್ರಯೋಜನವೂ ಇಲ್ಲ. ಈ ಜಿಲ್ಲೆಯವರ ಮೇಲೆ ಹೊರಿಸಿದ ತೆರಿಗೆಯು ಬೇರೆ ಜಿಲ್ಲೆಯವರಿಗಿಂತ ಬಹಳ ಅಧಿಕವಾಗಿರುವದರಿಂದ ಅಂತಹ ತೆರಿಗೆಯನ್ನು ಜಿಲ್ಲೆಯವರು ಸಹಿಸಿಕೊಳ್ಳಲಾರರು ಹಿಂದೂಸ್ಥಾನದ ಸರಕಾರಕ್ಕೆ ಈಗ ೩॥ ಕೋಟಿ ರೂಪಾಯಿಗಳು ತೆರಿಗೆಯ ರೂಪದಲ್ಲಿ ಸಲ್ಲುತ್ತಿರುವುದರಿಂದ ಅದನ್ನು ತಗ್ಗಿಸಬೇಕು. ಮುಖ್ಯತಃ ಈ ಜಿಲ್ಲೆಯಲ್ಲಾದರೂ ಕಡಿಮೆಮಾಡಬೇಕು. ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯವರು ಶಿಫಾರಸು ಮಾಡಿದಂತೆ ಲೆಜಿಸ್ಲೇಟಿವ್ ಕೌನ್ಸಿಲಿನವರು ಒಂದು ಫೈನಾನ್ಸ್ ಬಿಲ್ಲನ್ನು ತಂದು ಪಾಸ್ ಮಾಡದೆ ತೆರಿಗೆಯನ್ನು ನಿರ್ಣಯಿಸಬಾರದು.

(೨) ರೈತರ ಪುರಾತನ ಹಕ್ಕುಗಳನ್ನು ಕಾಪಾಡಲು ಪ್ರಯತ್ನಿಸಬೇಕು.

(೩) ರಿಸರ್ವೇ, ಮತ್ತು ರಿಸೆಟ್ಲ್‌ಮೆಂಟಿನಿಂದಾದ ಅಸ್ತವ್ಯಸ್ತವನ್ನು, ತೊಂದರೆಯನ್ನು ವಿಚಾರಿಸಿ, ಕಾಡುಗಳನ್ನು ರಿಸರ್ವ ಮಾಡಿ ಇಟ್ಟಿರುವುದರಿಂದುಂಟಾದ ಬಾಧಕವನ್ನು ವಿಚಾರಿಸಬೇಕು.

(೪) ವ್ಯವಸಾಯದ ವಿಷಯದಲ್ಲಿದ್ದ ತೊಂದರೆಗಳನ್ನು ತಗ್ಗಿಸುವದಕ್ಕಾಗಿ ಸರಕಾರದವರಿಗೂ, ಲೆಜಿಸ್ಲೇಟಿವ್ ಕೌನ್ಸಿಲಿನವರಿಗೂ ಬಿನ್ನವಿಸಬೇಕು.

(೫) ವ್ಯವಸಾಯದ ಅಭಿವೃದ್ಧಿಯ ಸಾಧನೆಗಳನ್ನು ಕೈಕೊಳ್ಳಬೇಕು.

(೬) ಜಮೀನುದಾರರ, ರೈತರ ಮತ್ತು ಕೃಷಿಕರ, ರಕ್ಷಣೆಗೂ, ಅಭಿವೃದ್ಧಿಗೂ, ಯೋಗ್ಯವೆಂದು ತೋರಿಬರುವ ಸಾಧನಗಳನ್ನು ಕೈಕೊಳ್ಳುವಂತೆ ಪ್ರಾರ್ಥಿಸತಕ್ಕದ್ದು.

ಕಳೆದ ಸಭೆಯಲ್ಲಿಯೂ ಈ ಸಭೆಯಲ್ಲಿಯೂ ಹಾಜರಿದ್ದವರು ಒಂದು ಸಂಘವನ್ನು ಸ್ಥಾಪಿಸಬೇಕು. ಈ ಸಂಘಕ್ಕೆ ರಾ॥ ಎ. ಜೆ. ಲೊಬೊರು ಪ್ರೆಸಿಡೆಂಟರೂ, ರಾ॥ ಯು. ಸಿ. ಕೃಷ್ಣಭಟ್ಟರು ವೈಸ್ ಪ್ರೆಸಿಡೆಂಟರೂ, ರಾ॥ ಶಂಕರನಾರಾಯಣರಾಯರು ಸೆಕ್ರೆಟರಿಗಳೂ ಮಿ॥ ಜೆ. ಪಿ. ಲೊಬೊರು ಟ್ರೆಜರರರೂ ಆಗಿ ಆರಿಸಲ್ಪಟ್ಟರು. ಈ ಸಂಘಕ್ಕೆ ಬೇರೆ ಕಡೆಗಳಲ್ಲಿ ಇದ್ದ ಕ್ರೈಮು ಮೆಂಬರರ ಶಾಖೆಗಳನ್ನು ತೆರೆಯಬೇಕೆಂದೂ, ನಿರ್ಣಯವಾಯಿತು ರಿ-ಸರ್ವೆಯ ತೊಂದರೆಗಳನ್ನು ವಿಚಾರಿಸುವುದಕ್ಕಾಗಿ, ಶ್ರೀಯುತರುಗಳಾದ ಕೆ. ಆರ್. ಕಾರಂತ, ಶಂಕರನಾರಾಯಣರಾವ್, ಪಿ. ಜಿ. ಗೋವಿಂದಯ್ಯ, ಇವರ ಒಂದು ಸಬ್ ಕಮಿಟಿಯು ನೇಮಕವಾಯಿತು. ಈ ಸಂಘದ ಸದಸ್ಯರಾಗಲು, ಈ ವರುಷದ ಮೊದಲನೇ ಮೂರು ತಿಂಗಳುಗಳಲ್ಲಿ ಮಾತ್ರ ಪ್ರತಿಯೊಬ್ಬನು ಒಂದೊಂದು ರೂಪಾಯಿಯಂತೆ ಕೊಡತಕ್ಕದ್ದು.

ಕ್ರಿಸ್‌ಮಸ್ ಸಮಯದಲ್ಲಿ ಮುಕೂಫ್ ಮಾಡಲಾದ ಕೋರ್ಟು ಕಚೇರಿಗಳೂ, ಬ್ಯಾಂಕುಗಳೂ ಶಾಲೆಗಳೂ ಪುನಃ ತೆರೆಯಲ್ಪಟ್ಟವೆ.

೧೯೨೭-೨೮ರ ಕಾಫಿ ಉತ್ಪತ್ತಿಯು ಇಷ್ಟು ವರ್ಷಗಳಿಗಿಂತ ಬಹಳ ಅಧಿಕವಾಗುವುದರಿಂದಲೂ ಮತ್ತು ಕಾಫಿಯು ತುಂಬಾ ದಾಸ್ತಾನು ಉಳಿಯುವದರಿಂದಲೂ ಕಾಫಿಯ ಕ್ರಯವು ಕಡಿಮೆಯಾಗಿರುತ್ತದೆ. ಮುಂದಣ ಬೆಲೆಯು ಬರುವ ವರ್ಷದ ಉತ್ಪತ್ತಿಯ ಮೇಲೆ ಆಧರಿಸಿದೆ.

ಕಳೆದ ೩೧ ೧೨. '೨೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೩ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೧. ಶ್ವಾಸಕೋಶದ ರೋಗದಿಂದ ೧. ಸನ್ನಿಪಾತ ಜ್ವರದಿಂದ ೧ ಇತರ ಎಲ್ಲಾ ಕಾರಣಗಳಿಂದ ೧೦ ಜನನ ಸಂಖ್ಯೆಯು ಮಿಲೆಗೆ ಸರಾಸರಿ ೧೭-೫ರಂತೆ.

ಸ್ವಸ್ತಿವಚನ.

(ಚೌಪದಿ)

"ದೇಶಸೇವೆಯೆ ಈಶಸೇವೆ"ಯೆಂದಿರುವ ।
ದೇಶಬಂಧುಗಳ ಸತ್ಪಥದೊಳಡಿಯಿಡುವ ॥
ಭಾಷಾಭಿಮಾನಿ "ಸ್ವದೇಶಾಭಿಮಾನಿ" ।
ಶ್ರೀಶನೀಯುಲಿ ಜಯವ ನಿನಗೆ ಸುಜ್ಞಾನಿ ॥ ೧॥

"ಸ್ವಸ್ತಿ"

ಕಳೆದ ೩೧ನೇ ತಾರೀಕಿನ ದಿನ ಇಲ್ಲಿಯ ಲೇಡಿಸ್ ಕ್ಲಬ್ಬಿನ ಸಹಾಯಾರ್ಥವಾಗಿ, ಮ॥ ರಾ॥ ರಾ॥ ಜೆ. ಎ. ಸಾಲ್ಡಾನ, ಎಮ್. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ, ಹಿಂದುಗಳೂ, ಕ್ರಿಶ್ಚನರೂ ಕೂಡಿ, ವಿನೋದ, ಗಾಯನ, ಮೊದಲಾದವುಗಳಿಂದ ಕೂಡಿದ ಒಂದು ಅಭಿನಯವನ್ನು ಆಡಿತೋರಿಸಿದರು ಇದರಲ್ಲಿ, ಕೊಂಕಣಿ ಪದ, ಇಂಗ್ಲೀಷ ಪದ, ಹಾರ್ಮೋನಿಯಮ್ ಬಾರಿಸುವಿಕೆ ಮೊದಲಾದವುಗಳು, ಇಷ್ಟಲ್ಲದೆ "ದಿ ಓಲ್ಡ್ ಬ್ರೈಡ್ ಗ್ರೂಮ್" ಎಂಬ ಫಾರ್ಸ ಕೂಡ ಇದ್ದಿತು. ಹಿಂದೂಗಳೂ ಕ್ರೈಸ್ತರೂ ಜಾತಿಭೇದವನ್ನು ತ್ಯಜಿಸಿ ಹೀಗೆ ಒಟ್ಟು ಕೂಡಿರುವದು ಬಹಳ ಶ್ರೇಯಸ್ಕರ.

ಬ್ರಹ್ಮಾನಂದ ಕೇಶಬ್ ಚಂದ್ರಸೇನ ಇವರು ಮರಣಪಟ್ಟ ದಿನದ ಸ್ಮಾರಕಕ್ಕಾಗಿ ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ಬರುವ ೮ನೇ ತಾರೀಕಿನ ಆದಿತ್ಯವಾರ ಪ್ರಾತಃಕಾಲ ಘಂಟೆ ೭-೩೦ಕ್ಕೆ ಶ್ರೀಯುತ ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆ ನಡೆಸುವರು. ಅದೇ ದಿನ ಸಾಯಂಕಾಲ ಮಂದಿರದಲ್ಲಿ ಶ್ರೀಯುತ ಕಾರ್ನಾಡು ಸದಾಶಿವರಾಯರೂ, ಎಮ್. ಬಾಬು ಬಿ. ಎ. ಎಲ್. ಟಿ.ಯವರೂ ಭಾಷಣಗಳನ್ನು ಕೊಡುವರು. ಈ ಸಂದರ್ಭದಲ್ಲಿ ಶ್ರೀ ಗಂಗೊಳ್ಳಿ ಕೃಷ್ಣರಾಯರು ಅಧ್ಯಕ್ಷಸ್ಥಾನವನ್ನು ವಹಿಸುವರು. ಸರ್ವರಿಗೂ ಸುಸ್ವಾಗತವಿದೆ.

ಹೊಸದುರ್ಗ: — ಇಲ್ಲಿಯ ಅಮೃತೇಶ್ವರಿ ವೈದ್ಯಶಾಲೆಯಲ್ಲಿ ವೈದ್ಯರು ಹಪ್ತೆಯಲ್ಲಿ ಕಾಣಸಿಕ್ಕುವದು ಅತಿ ಪ್ರಯಾಸ. ಯಾವಾಗಲೂ ಪ್ರಯಾಣದಲ್ಲಿಯೇ ಇರುವರು. ಇವರ ಗೈರಾಜರು ಕಾಲದಲ್ಲಿ ಅವಶ್ಯವಿರುವ ಮದ್ದುಗಳು ದಗಿಸಿಕೊಡುವರೆ ಇವರ ವಿಲೆವಾರಿಯು ಬಹಳ ತೃಪ್ತಿಕರ. ಮಾಹೀತುವುಳ್ಳ ಒಬ್ಬ ನೌಕರರು ಇಲ್ಲಿ ಯಾವಾಗಲೂ ಇರುತ್ತಾರೆ.

ಹುಚ್ಚು ನಾಯಿಗಳ ಚಳವಳವು ಹೆಚ್ಚಾಗುತ್ತಾ ಬರುತ್ತದೆ. ಅನೇಕರಿಗೆ ಗಂಡಾಂತರಗಳು ಒದಗಿವೆ, ಇನ್ನಾದರೂ ಅವುಗಳ ನಾಶಕ್ಕೆ ಹುಕುಂ ಆಗಬಾರದೇ?

ನಮ್ಮ ಈ ಡಿವಿಜನ್ ಮತ್ತು ಕಾಸರಗೋಡ ತಾಲೂಕು ಈ ವರುಷದ ಜಮಾಬಂದಿಯು ಜಿಲ್ಲಾ ಕಲೆಕ್ಟರ ದೊರೆಗಳವರಿಂದ ಬರುವ ಮಾರ್ಚಿ ತಿಂಗಳಲ್ಲಿ ನಡಿಸೋಣಾಗುವದು.

ಕಳೆದ ಗುರುವಾರ ಸುಮಾರು ೧೧-೩೦ ಗಂಟೆ ಸಮಯ ದೂರದಿಂದ ಬಡಗು ದಿಕ್ಕಿನಲ್ಲಿ ವೀಣಾತಂತಿನಾದದೋಪಾದಿ ಕರ್ಕಶ ಸ್ವರ ಕೇಳಿಸುತ್ತಾ ಸಮೀಪಿಸಿದಂತೆ ಸವರಿ ಶಬ್ದದ ಭೂಂ ಭೂಂ ಕಾರವು ಜನರ ಕರ್ಣವನ್ನು ಕಠೋರಮಾಡಿತು. ಈ ಊಹನೆಯಂತ ಸೀಪ್ಲೆನ್ ವಿಮಾನದ ಚಲನೆಯಿಂತ ಖಂಡಿತವಾಗಿ ಜನಸ್ತೋಮವು ತಂಡ ತಂಡವಾಗಿ ಅಲ್ಲಲ್ಲಿ ಹಿಂಡುಕೂಡಿತ್ತು. ವಿಮಾನಗಳು ನಾಲ್ಕು ಗೋಚರವಾದವು. ಅವುಗಳ ಓಟದ ರಭಸವು ಕವಿಸ್ಮಯಾಗಿತ್ತು.

ಸುಬ್ರಹ್ಮಣ್ಯ: — ದಕ್ಷಿಣ ಕನ್ನಡ ಜಿಲ್ಲಾ ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆಯು ಇದೇ ಕಳೆದ ದಶಂಬರ ತಾ. ೩೧ಕ್ಕೆ ಶ್ರೀಯುತ ಪಾಲ್ತಾಡು ದುಗ್ಗಪ್ಪ ಗೌಡರ ಮನೆಯ ಮುಂದೆ ಜರಗಿತು. ಕಾಸರಗೋಡು ಬೋರ್ಡ್ ಹೈಸ್ಕೂಲ್ ಮುಖ್ಯೋಪಾಧ್ಯಾಯ ಮ॥ ರಾ॥ ಶ್ರೀ. ಯಮ್. ರಾಮನ್ ನಂಬಿಯಾರ್ ಬಿ ಎ. ಎಲ್. ಟಿ. ಇವರು ಸಭಾಧ್ಯಕ್ಷರಾಗಿದ್ದರು. ಸಭೆಯಲ್ಲಿ ಸುಮಾರು ನಾನ್ನೂರು ಮಂದಿ ಸದಸ್ಯರು ಹಾಜರಿದ್ದರು. ಅನೇಕ ಮಂದಿ ಸಂಘದ ಹಿತೈಷಿಗಳೂ, ದಯಮಾಡಿಸಿದ್ದರು. ಕಾರ್ಯಕ್ರಮಗಳು ಚೆನ್ನಾಗಿ ನಡೆದ ಮೇಲೆ ಕೃಷಿ ಇಲಾಖಾ ಅಧಿಕಾರಿಗಳು ಹೊಸ ನಮೂನೆಯ ಉಳುವ ಕ್ರಮವನ್ನೂ, ಆರೋಗ್ಯ ಶಾಖಾ ಇನ್ಸ್ಪೆಕ್ಟರರು ಆರೋಗ್ಯಸೂತ್ರಗಳನ್ನೂ ಮ್ಯಾಜಿಕ್ ಲಾಂಟರ್ನ ಮೂಲಕವೂ ಪ್ರದರ್ಶಿಸಿ ತೋರಿಸಿದರು ಸಂಘಕ್ಕೆ ಸುಮಾರು ರೂ. ೧೨೫೦ ವಸೂಲ್ ಬಂದುದಲ್ಲದೆ ಹರಿವಾಣವಿಟ್ಟು ರೂ ೩೨ ಬಡ ವಿದ್ಯಾರ್ಥಿ ಫಂಡಿಗೆ ಜಮೆಯಾಯಿತು. ಮುಂದೆಯೂ ಹೀಗೆ ಪ್ರೋತ್ಸಾಹಿಸುವಂತೆ ಸ್ವಜಾತಿಯ ಸರ್ವ ಮಹನೀಯರಲ್ಲೂ ಸಂಘವು ಕೋರುತ್ತೆ.

ಉಡುಪಿ: — ಇಲ್ಲಿಯ ಸಂಸ್ಕೃತ ಕೊಲೇಜಿನ ಶ್ರೀ ಬಿ. ಅನಂತಕೃಷ್ಣ ಉಪಾಧ್ಯಾಯ ಇವರಿಗೆ ಕಳೆದ ಶಿರೋಮಣಿ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ಉತ್ತೀರ್ಣರಾದುದಕ್ಕಾಗಿ ಮದ್ರಾಸ್ ಯುನಿವರ್ಸಿಟಿಯಿಂದ ಸುವರ್ಣ ಪದಕವೊಂದು ದೊರಕಿದೆಯೆನ್ನಲು ಸಂತೋಷವಾಗುತ್ತದೆ.

ಫರಂಗಿಪೇಟೆ: — ಇತ್ತಲಾಗಿ ಹೊಸದಾಗಿ ಪ್ರಾರಂಭಿಸಿರುವ 'ಶ್ರೀರಾಮ ಸ್ಕೌಟ್ ಟ್ರೂಪಿನವರು' ಇದೇ ಕಳೆದ ತಾ. ೧೮-೧೨-'೨೭ನೇ ಆದಿತ್ಯವಾರ ಮೊದಲುಗೊಂಡು ೨೦-೧೨-'೨೭ನೇ ಮಂಗಳವಾರದ ವರೆಗೆ ಶಾಲಾ ಸಮೀಪದಲ್ಲೇ ಒಂದು 'ಕ್ಯಾಂಪನ್ನು' ಮಾಡಿದ್ದರು. ಎರಡು ದಿವಸಗಳಲ್ಲಿಯೂ ರಾತ್ರೆ 'ಕ್ಯಾಂಪ್ ಫಯರ್' ಇತ್ತು. ಇದನ್ನು ನೋಡಲು ಊರಿನ ಅನೇಕ ಮಂದಿ ಸದ್ಗೃಹಸ್ಥರು ಬಂದಿದ್ದರು.

ಅಲ್ಲದೆ ತಾ. ೧೯-೧೨-'೨೭ರಲ್ಲು ಸಂಜೆಯ ಆಟಗಳಿಗೂ ರಾತ್ರೆಯ ಕ್ಯಾಂಪು ಫಯರಿಗೂ ಇಲ್ಲಿರುವ ಮೊಂಟೆಮ್ಯಾಕ್ಷೊ ಇಗರ್ಜಿಯಲ್ಲಿ ಮೊಕ್ಕಾಂ ಮಾಡಿಕೊಂಡಿದ್ದ ಜಸ್ವಿ ಸೆಮಿನರಿಯ ಬ್ರದರ್‌ರೂ, ಮತ್ತು ಫಾದರ್ಸ್‌ಗಳೂ ಚಿತ್ತೈಸಿದ್ದರು. ಸ್ಕೌಟುಗಳ ಆಟಪಾಠ ವಿನೋದಗಳನ್ನು ನೋಡಿ ಸಂತೋಷಗೊಂಡ ಈ ಮಹನೀಯರು ಈ ಸ್ಕೌಟುದಳದ ಶ್ರೇಯೋಭಿವೃದ್ಧಿಯನ್ನು ಬಯಸಿದರು.

ಈ ಸೆಂಟರಿನ ಉಪಾಧ್ಯಾಯ ಸಂಘದ ೬ನೇ ಸಭೆಯು ತಾ. ೧೭-೧೨ '೨೭ರಲ್ಲು ಮೇರಮಜಲು ಶಾಲಾ ಅಧ್ಯಾಪಕರಾದ ಮಿ। ತೋಮಸ್ ಬ್ರಾಗರವರ ಅಧ್ಯಕ್ಷತೆಯಲ್ಲಿ ಕಣ್ಣಿಗೆ ಬೋರ್ಡು ಶಾಲೆಯಲ್ಲಿ ಜರಗಿತು.

೨ನೇ ಕ್ಲಾಸಿಗೆ ಬಾಯಿಲೆಕ್ಕದಲ್ಲಿ ಒಂದು ಮಾದರಿ ಪಾಠವನ್ನು ಮೇರಮಜಲು ಶಾಲಾ ಅಧ್ಯಾಪಕರಾದ ಅಂತೋನ್ ಡಿಸೋಜರು ನಾಣ್ಯಗಳ ಸಹಾಯದಿಂದ ಕೊಟ್ಟರು. ತರುವಾಯ 'ಬಾಯಿಲೆಕ್ಕದ ಅವಶ್ಯಕತೆ' ಈ ಕುರಿತು ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲಾ ಅಧ್ಯಾಪಕ ಎ. ಗೋಪಾಲಕೃಷ್ಣ ಹೆಗ್ಡೆಯವರು ಒಂದು ಪ್ರಬಂಧವನ್ನು ಓದಿ, ಬಾಯಿಲೆಕ್ಕವೆಂಬುದು ಗಣಿತದ ಮಾತೃಸ್ಥಾನವೆಂಬುದನ್ನು ಖಚಿತಗೊಳಿಸಿದರು. ಈ ಕುರಿತು ಇತರ ಅನೇಕ ಮಂದಿ ಉಪಾಧ್ಯಾಯರು ಇದನ್ನು ಪುಷ್ಟೀಕರಿಸಿ ಮಾತನಾಡಿದರು.

ಬರುವ ಸಭೆಯನ್ನು ಕೈರಂಗಳ ಎೈಡೆಡ್ ಶಾಲಾ ಹೆಡ್‌ಮಾಸ್ಟರ್ ಎ. ಪರಮೇಶ್ವರಯ್ಯನವರ ಆಮಂತ್ರಣದಂತೆ ತಾ. ೧೯-೧-'೨೮ರಲ್ಲು ಸದರಿ ಕೈರಂಗಳ ಎೈಡೆಡ್ ಶಾಲೆಯಲ್ಲಿ ಗಂಟೆ ೧೨ಕ್ಕೆ ಜರಗಿಸಬೇಕಾಗಿ ನಿರ್ಣಯಿಸಲಾಯಿತು. ಬಂದ ಅತಿಥಿಗಳನ್ನು ಉಪಚಾರದಿಂದ ಸತ್ಕರಿಸಿದ ತರುವಾಯ ರಾಜಗೀತವನ್ನು ಹಾಡಿ ಸಭೆಯು ಮುಕ್ತಾಯಗೊಂಡಿತು.

ಸುಳ್ಯ: — ಇಲ್ಲಿಯ ವರ್ಷಾವಧಿ ಜಾತ್ರೆಯು ೯-೧-'೨೮ರಿಂದ ೧೫ ೧-'೨೮ರ ವರೆಗೆ ನಡಿಯುವದರಿಂದ ಜೀನ್ಸು, ಜವಳಿ ಮತ್ತು ಕಟ್ಲೇರಿ ವ್ಯಾಪಾರಸ್ಥರು ಕಳೆದ ವರುಷದಂತೆಯೇ ಈ ವರ್ಷ ಆ ಜಾತ್ರೆ ಸಮಾರಂಭ ಸಮಯಕ್ಕೆ ವ್ಯಾಪಾರ ತಂದರೆ ಜನರಿಗೆ ಹೆಚ್ಚಿನ ಅನುಕೂಲವು ವ್ಯಾಪಾರಸ್ಥರಿಗೆ ಹೆಚ್ಚಿನ ಆದಾಯವು ಸಿಕ್ಕುವದು.

ತಾ. ೧-೧-೨೮ನೇ ಆದಿತ್ಯವಾರ ಬೆಳಗ್ಗೆ ೯ ಘಂಟೆಗೆ ಊರ ನಿವಾಸಿಕರು ಇಲ್ಲಿಯ ರೆವಿನ್ಯೂ ಇನ್ಸ್ಪೆಕ್ಟರವರ ಆಫೀಸಿನಲ್ಲಿ ಕೂಡಿ ೯॥ ಘಂಟೆಗೆ ವಾದ್ಯಘೋಷದೊಡನೆ ನೂರಾರು ಜನರು ಕ್ಯಾಪಲ್ಯ ವಗೈರೆ ಹೊರೆಗಳ ಸಮೇತ ಹೊರಟು ಸುಳ್ಯ ಶ್ರೀ ಚೆನ್ನಕೇಶವ ದೇವಸ್ಥಾನಕ್ಕೆ ಹೋಗಿ ಅಲ್ಲಿ ಪೂಜೆ ವಗೈರೆ ಮಾಡಿಸಿ ಈ ದಿವಸ ತೆರಿಯುವ ಸಂತೆಯು ಶಾಶ್ವತವಾಗಿ ನಡಿಯುವಗೋಸ್ಕರ ಶ್ರೀ ದೇವರ ಮುಂದೆ ಪ್ರಾರ್ಥನೆ ಮಾಡಿ ಅಲ್ಲಿಂದ ಸೀದಾ ಸಂತೆಕಟ್ಟೆಗೆ ಬಂದು ಮ॥ ರಾ॥ ಯಂ. ವಿ. ರಾಜಾ ಇವರಿಂದ ಸಂತೆಯು ತೆರೆದು ಮ॥ ರಾ॥ ಕೆ. ವೆಂಕಟರಾಯರಿಂದ (ಡಾಕ್ಟರ) ಸಂತೆಯ ಉದ್ದೇಶ ಮತ್ತು ಅದರ ಪ್ರಯೋಜನವನ್ನು ಕೂಡಿದ ಸಭಿಕರಿಗೆ ಭಾಷಣ ಮಾಡಿದ್ದಲ್ಲದೆ ಬಾಲಕಿಯವರಿಂದ ಶ್ರೀ ದೇವರ ಪ್ರಾರ್ಥನೆ ಮಾಡಿಸಿ ಸಭೆಯು ಮುಕ್ತಾಯವಾಯಿತು

ವಿಧವಾ ವಿವಾಹ ಸಹಾಯಕ ಸಭಾ.

(ಕೊಳ್ಳೇಗಾಲ ಬ್ರಾಂಚ್)

ಆರ್ಯಾವರ್ತದಲ್ಲಿರುವ, ಪುನರ್ವಿವಾಹ ಮಾಡಿಕೊಳ್ಳಲು ಸಮ್ಮತಿ ಪಡುವ ವಿತಂತುಗಳು, ವಿಧವಾ ವಿವಾಹ ಪ್ರೇರಕರು, ಪ್ರೋತ್ಸಾಹಕರು, ಮತ್ತು ಸಹಾಯಕರು ಭಾರತೀಯ ಸಂಘಸಂಸ್ಕರಣದಲ್ಲಿ ಅತ್ಯಂತ ಕೀರ್ತಿಯುಕ್ತರಾದ ಮತ್ತು ಹಿಂದೂ ವಿತಂತುಗಳ ದೌರ್ಭಾಗ್ಯ ಮತ್ತು ಅನಾಥತ್ವವನ್ನು ತಪ್ಪಿಸಲು ಅತ್ಯಂತ ಸಾಹಸದಿಂದ ಎಡೆಬಿಡದೆ ಕೆಲಸಮಾಡುತ್ತಿರುವ, ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ, 'ವಿಧವಾ ವಿವಾಹ ಸಹಾಯಕ ಸಭೆ' ಗೌರವ ಕಾರ್ಯದರ್ಶಿಯವರಾದ ಹೆಗ್ಗೇರಿ ಜಮೀನ್‌ದಾರ್, ಮ॥ ವಿ ಆರ್. ಶ್ರೀನಿವಾಸಯ್ಯಂಗಾರ್, ಇವರಿಗೆ ತಿಳಿಸಬೇಕೆಂಬುದಾಗಿ ಅಪೇಕ್ಷಿಸುತ್ತಾರೆ. ಹಿಂದೂ ಸಂಘಪರಿಷ್ಕರಣಕಾರರೆಂದು ಪ್ರಖ್ಯಾತಿಗೊಂಡಿರುವ ಈ ಮಹನೀಯರು ಸ್ಥಾಪಿಸುತ್ತಿರುವ ತಿದ್ದುಪಾಟುಗಳಿಗೆ ಭಾರತೀಯರು ಎಷ್ಟು ಕೃತಜ್ಞರಾಗಿದ್ದರೂ ಅಲ್ಪವೇ! ವಿಧವಾ ವಿವಾಹವು ಶಾಸ್ತ್ರಸಮ್ಮತವಾದದ್ದೆಂದೂ ಮತ್ತು ಪುರಾತನ ಕಾಲದಲ್ಲಿಯೂ ಆಚರಣೆಯಲ್ಲಿತ್ತೆಂದೂ ವೇದಶಾಸ್ತ್ರಾಧಾರದಿಂದ ತೋರ್ಪಡಿಸಿರುತ್ತಾರೆ. ಭೂತದಯಾಪಕ್ಷಪಾತವುಳ್ಳ ನಮ್ಮ ಭಾರತೀಯರು, ತಮ್ಮ ಉದಾರಭಾವವನ್ನು ಪಾತಾಳಕ್ಕೆ ತುಳಿಯಲ್ಪಟ್ಟಿರುವ ವಿಕಾರಹೊಂದಿದ ಅಬಲೆಯರಾದ ನಮ್ಮ ವಿತಂತುಭಗಿನಿಯರ ವಿಷಯದಲ್ಲಿ ಈಗಲಾದರೂ ಕನಿಕರವುಳ್ಳವರಾಗಿ ತಮ್ಮ ಭ್ರಾತೃ ಮತ್ತು ಭಗಿನಿಯರು ಸಕಲ ಸುಖ ಸಂಪತ್ತುಗಳನ್ನು ಅನುಭವಿಸಲು ಸಹಾಯಕರಾಗುವರೆಂದು ನಂಬಲ್ಪಟ್ಟಿದೆ. ಸ್ತ್ರೀಯರಿಂದ ಬರುವ ಪತ್ರಗಳನ್ನು ಅತ್ಯಂತ ರಹಸ್ಯವಾಗಿಡಲು ತಕ್ಕ ಏರ್ಪಾಡು ಮಾಡಲ್ಪಟ್ಟಿದೆ. ಕಾರ್ಯದರ್ಶಿಗಳು ಪ್ರೋತ್ಸಾಹಕ್ಕೂ ಮತ್ತು ಸಲಹೆಗಳನ್ನು ಕೊಡುವುದಕ್ಕೂ ಪಾತ್ರರಾಗಿರುತ್ತಾರೆ.

ರಥಬೀದಿ, ಮಂಗಳೂರು.

...ಸ್ವಲಿನವರ ಹೊಸ ಪಾಠಪಟ್ಟಿಗನು
...ಗಳ್, ಇವರಿಂದ ರಚಿತವಾದ,
...ಪುಸ್ತಕಗಳು.

ಮೂರನೇ ದರ್ಜೆದ್ದು (ಸಚಿತ್ರ) 0—5—0
(ಐದನೇ, ಆರನೇ ಅಚ್ಚಿನಲ್ಲಿವೆ.)
ಮೂರನೇ ದರ್ಜೆದ್ದು 0—2—6,
ಐದನೇ „ 0—3—0,
...ತಾಸ್ತ್ರ 0—2—6,
...ಕ್ರಯ ರೂ. 1—12—0
IIನೇ ಭಾಗ 0—2—0.
...—0.

...ಯಾಯಿತು, ಅರ್ಗಣೆ ಮುದ್ದೆ, ಇಲಿಗಳ ಥಕ್ಕಥೈ, ...ಆಳಪ್ಪ, ಕಿಷಿ-ಕ್ಕಿ-ಕೋಳಿ, ಒಡ್ಡನ ಓಟ, ... ವ್ಯತಾವೇಕ, ಕೃಷ್ಣಜನ್ಮಾಷ್ಟಮಿ ಪೂಜಾ, ...ಗಳು I II III ರೈಂ ಮೊದಲಾದ ಅನೇಕ ..., ಮೊದಲಾದ, ಲೇಖನ ಪುಸ್ತಕಗಳೂ, ...ತ್ತವೆ.

...ವರೆ, ಪುತ್ತೂರು, ಮಡಿಕೇರಿ, ಕಾಸರಗೋಡು ...ರಿಗೆ ಧಾರಾಳ ಕಮಿಷನ್ ಕೊಡಲ್ಪಡುತ್ತೆ.

...ಗಿವೆ!

...ಖಾನೆ, ರಥಬೀದಿ, ಮಂಗಳೂರು.



ಪಂಪು ಮತ್ತು ಪೆಟ್ರೋಲ್ ಇಂಜನು.

... ಎಂಡ್ ಮೊನ್ಸ್ಕಿ

...ಪ್ಪುಗಳು.

...ಕಾರಖಾನೆಗಳಿಗೂ
...ಯೋಗಿಸುವ ಮೂರು
...ಕ್ರೂಡ್ ಆಯಿಲ್

VOLKART BROS. ENGINEERS

Armenian Street, P. Box 45,
MADRAS.

'ಅಂಬಾ ...'

ಶಿವರಾಮ ಭಟ್ಟ, ತಂಗಿನಮನೆ,

ಶಾಲಿವಾಹನಶಕ ೧೮೪೯ನೆಯ ಪ್ರಭವ ಸಂರದ ಮಾರ್ಗಶಿರ ಶು॥ ೧೫ ಶನಿವಾರದಿಂದ ಪ್ರಭವ ಸಂರದ ಪುಷ್ಯ ಬ॥ ೬ ಶುಕ್ರವಾರದ ವರೆಗಿನ ಪಂಚಾಂಗ

(೧೯೨೭ನೆಯ ಧನು (ಪೆಂಚರ್)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಅಸ್ತ.
7	ಶನಿ	○	೧೪ ೪೬	ಆರ್ದ್ರಾ	೧ ೫೮	೨೩	6.57	6 17
8	ರವಿ	೧	೧೨ ೧೪	ಪುನರ್ವಸೂ	೦.೫೦	೨೪	6 57	6 17
9	ಸೋಮ	೨	೧೧. ೦	ಪುಷ್ಯ	೦.೪೪	೨೫	6 57	6 18
10	ಮಂಗ	೩	೧೦ ೨	ಆಶ್ಲೇಷಾ	೦ ೫೫	೨೬	6 58	6.18
11	ಬುಧ	೪	೧೨.೧೩	ಮ.ಘಾ	೪ ೨೫	೨೭	6 58	6.19
12	ಗುರು	೫	೧೪.೪೨	ಹುಬ್ಬಾ	೮ ೧೪	೨೮	6 58	6.20
13	ಶುಕ್ರ	೬	೧೮.೧೬	ಉತ್ತರಾ	೧೨ ೫೮	೨೯	6.58	6.20

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಅಧಿಕವಾದ	Minimum ಅಲ್ಪವಾದ	Rainfall. ಮಳೆ ದಿನದ ಮಳೆ	ಜುಮಲಾ ಮಳೆ
30	91— 0	69— 0	—	—
31	90 5	73— 7	—	—
1	91— 8	69— 7	—	—
2	88— 3	69— 2	—	—
3	91— 9	70 – 0	—	—
4	87 – 3	71— 5	—	—
5	90— 2	75 – 1	—	—
				127-21

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮುಷ್ಟಿ	6—10	6—14
ಹೊಸ ಗುಡ್ಡು ...	6— 6	6—10
ಸ.ಗ್ಗಿ ...	6— 8	6—14
ಹೊಸ ರಾಶಿ ...	6— 0	6— 6
ಊರ ಅನ್ವಲ್ ಬೆಳ್ತಿಗೆ ...	7—10	8— 8
ರಂಗೂನು ಬೆಳ್ತಿಗೆ ಗೋಣಿ ೧ ...	14— 0	14— 6
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7— 2	7— 4
ಗೋಧಿ ಗೋಣಿ ೧ಕ್ಕೆ ...	18— 0	19 0
ಹುರುಳಿಗೋಣಿ ೧ಕ್ಕೆ ...	9 — 8	12 0
ಕಡಲೆಗೋಣಿ ೧ಕ್ಕೆ ...	13— 8	14 - 0
ತೊಗರಿಗೋಣಿ ೧ಕ್ಕೆ ...	17— 8	18 - 0
ತೊಗರಿಬೇಳೆ ಗೋಣಿ ೧ಕ್ಕೆ ...	20— 0	23 0
ಉದ್ದು ಗೋಣಿ ೧ಕ್ಕೆ ...	14— 0	14 8
ಹೆಸರುಗೋಣಿ ೧ಕ್ಕೆ ...	15— 0	15 8
ಊರು ಬೆಲ್ಲ ಖಂಡಿ ೧ಕ್ಕೆ ...	36— 4	40 — 0
ಉಪ್ಪು ಗೋಣಿ ೧ಕ್ಕೆ ...	3—14	4— 0
ಕೊಬ್ರಿ ಖಂಡಿ ೧ಕ್ಕೆ ...	130- 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	47— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ ...	50— 0	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8— 4	8— 6
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8 - 8
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8— 0	-
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	3— 15	4 0
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8— 0	8 4
ಸಾಸಿವೆ ಮುಡಿ ೧ಕ್ಕೆ ...	9— 0	-
ಕೊತ್ತಂಬರಿ ಮುಡಿ ೧ಕ್ಕೆ ...	7—12	8 0
ಕಾಫಿ ಖಂಡಿ ೧ಕ್ಕೆ ...	325— 0	360-- 0
ಬೀಳೆಗೋಟು ಅಡಿಕೆ ಖಂಡಿ ೧ಕ್ಕೆ ...	125— 0	130 - 0
ಕಾಳುಮೆಣಸು ಖಂಡಿ ೧ಕ್ಕೆ ...	40— 0	-
ಯಾಲಕ್ಕಿ ಮುಡಿ ೧ಕ್ಕೆ ...	50 — 0	54— 0
ಗೇರುಬೀಜ ಮುಡಿ ೧ಕ್ಕೆ ...	3—10	3 — 12
ಕಲ್ಬೀಜ ಖಂಡಿ ೧ಕ್ಕೆ ...	37— 8	40 0
ಹುಣಸೆ ಹಣ್ಣು ಮುಡಿ ೧ಕ್ಕೆ ...	15- 0	15 0
ಹುಣಸೆ ಬೀಜಗಳು ಮುಡಿ ೧ಕ್ಕೆ ...	21 — 0	—
ಚೀನಿ ಬೆಲ್ಲ ಸೇರು ೧ಕ್ಕೆ ...	15— 0	—
ಹಿಪ್ಪೆ ಕೊಬ್ಬರಿ ಮುಡಿ ೧ಕ್ಕೆ ...	15 — 0	—
ಪವನು	13— 7	—

ಕಾಶಿಯ ಅಪೂರ್ವ ಪದಾರ್ಥಗಳು.

ನಮ್ಮಲ್ಲಿಂದ ಕಾಶಿಯಲ್ಲಿ ಸಿಕ್ಕತಕ್ಕ ಜರತಾರಿ ಮ ಸಾದ, ರೇಶಿ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲಿವಸ್ತ್ರ, ಪೇಟಾ, ಕಾಶ್ಮೀರ್ ಮತ್ತು ಕಾನ್ಪುರ್ ಶಾಲು, ಧಾವೇ, ನಾಮಗಡಿ, ರುದ್ರಾಕ್ಷಿ, ಸ್ಫಟಿಕ ಸರ, ಶ್ರೀಚಕ್ರ, ಪಂಚಾಯತನ, ಸಾಲಿಗ್ರಾಮ, ಸುದರ್ಶನ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚೆಕರ್ಪೂರ, ಕೇಸರಿ, ಶಿಲಾಜಿತ್ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವುದು. ಇದಕ್ಕಿಂತ ಮೊದಲಿನ ಜಾಹೀರಾತುಗಳನ್ನು ನೋಡಿ ಇನ್ನು ಮೇಲೆ ವಿಳಾಸಗಳನ್ನು ಕಳುಹಿಸದರೆ ಸ್ವೀಕರಿಸಲಾರೆವು

ವಿಳಾಸ: — ವಿಶ್ವನಾಥ ಅಂಡ್ ಬ್ರದರ್ಸ್,
13—5—'27. ದುರ್ಗಾಘಾಟ್, ಬನಾರಸ್ ಸಿಟಿ, ಯು. ಪಿ,

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹೆಚ್ಚಾಗಿ ಅನುಕೂಲಿಸುವ 200ರ ಲಾಗ್ಯತು 500 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸ್ ಗಳು, ಪ್ರತಿ ಒಬ್ಬರ ಕೈಲಿ ಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ 300 ಕ್ಯಾಂಡಲ್ ಪವರಿನ ಗ್ಯಾಸ್ ಲ್ಯಾಂಟರ್ನಗಳು, ಸ್ಟೌಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪರಟು ಗುಂಡಿಗಳು, ರೋಜಾ ಹುವ್ವಿನ ತುರಾಯಿಗಳು, ಬ್ಯಾಟರಿಗಳು, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ಪಟ್ಟಿಗೆ ತಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
(18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

ಆಶ್ಚರ್ಯಕರವೂ, ಲೋಕೋತ್ತರವೂ, ಹಾಸ್ಯಕರವೂ ಆಗಿರುವ,

ಪೊಕೆಟ್ ಡಿಟೆಕ್ಟಿವ್.

೨೦ನೇ ಶತಮಾನದ ಅಮೇರಿಕನ್ ಶೋಧನೆ.

ಈ ಚಮತ್ಕಾರಿಕವಾದ ಮತ್ತು ವಿಶದವಾದ, ಹೊಸ ನಮೂನೆಯ ಪೊಕೆಟ್ ಲೈಟು ಪ್ರತಿಯೊಬ್ಬನಿಗೂ ಅಗತ್ಯವಿದೆ. ನಿಮ್ಮ ಹೆಚ್ಚಿನ ಪ್ರೀತಿಗೆ ಪಾತ್ರಳಾಗಿರುವ ಸುಂದರಿಯನ್ನೂ, ಅವಳ ಚರ್ಯೆಗಳನ್ನೂ, ಯಾರೂ ತಿಳಿಯದಂತೆ ನೀವು ಮಾತ್ರ ಸಂಪೂರ್ಣವಾಗಿ ಕಾಣಬಹುದು. ಯಾವಾಗಲೂ ಉಪಯೋಗಕ್ಕೆ ತಕ್ಕುದಾಗಿದೆ. ಇದನು ಕೊಂಡುಕೊಳ್ಳುವವರಿಗೆ 4 ಪೇರಿಸ್ ಬೆಡ್‌ರೂಮ್ ಫೋಟೋಗಳು ಉಚಿತವಾಗಿ ಕೊಡಲ್ಪಡುವವು. ಮಾಹಿತಿ ಪತ್ರವೂ ಕೊಡಲಾಗುವದು.

ಕ್ರಯ ರೂಪಾಯಿ 2/-ಮಾತ್ರ.

PARIS EMPORIUM,
George Town,
—12—'27. MADRAS

ಕನ್ನಡ ಮೂಲಾಕ್ಷರಗಳ ಸಚಿತ್ರ ನಕಾಶೆಯು.

ಇದರೊಳಗೆ ಅ ದಿಂದ ಜ್ಞದ ವರೆಗೆ ಆಯಾ ಅಕ್ಷರಗಳ ಸೂಚಕವಾದ ಚಿತ್ರಗಳು ಅವೆ. ಇವು ಬೇರೆ ಬೇರೆ ಬಣ್ಣದಲ್ಲಿ ಅಂದವಾಗಿ ಮತ್ತು ಮುದ್ದಾಗಿ ಮುದ್ರಿಸಲ್ಪಟ್ಟಿವೆ. ಈ ನಕಾಶೆಯ ಹಿಂಬದಿಗೆ ಅರಿವೆ ಹಚ್ಚಿರುವದಲ್ಲದೆ ವಾರ್ನಿಶ ಹಚ್ಚಿ ರೂಳಪಟ್ಟಿಯನ್ನೂ ಸಹ ಹಾಕಿರುತ್ತದೆ. ಬೆಲೆ: — ೧೪ ಆಣೆ.

ಒಂದೇ ಪ್ರಮಾಣದಿಂದ ತೆಗೆದ ಪ್ರಾಣಿಗಳ ಚಿತ್ರಪಟವು.

ಈ ಚಿತ್ರಪಟದೊಳಗೆ ೫೨ ಚಿತ್ರಗಳು ಇರುತ್ತವೆ; ಅವುಗಳ ಹೆಸರುಗಳು. ೧ ಆನೆ, ೨ ಕಾಡಾಮ್ಮೆಗ, ೩ ಮನುಷ್ಯ, ೪ ಜಿರಾಫೆ, ೫ ಒಂಟೆ, ೬ ನೀರು ಕುದುರೆ, ೭ ಸಾರಂಗ, ೮ ಹಸು, ೯ ಗಂಡಕ, ೧೦ ಕುದುರೆ, ೧೧ ಝಿಬ್ರಾ, ೧೨ ಚಿರ್ತೆ, ೧೩ ಆಕಳು, ೧೪ ಎತ್ತು, ೧೫ ಸಿಂಹ, ೧೬ ಹುಲಿ, ೧೭ ಕರಡಿ, ೧೮ ಕಿರಬ, ೧೯ ಕಾಡಹಂದಿ, ೨೦ ಕತ್ತೆ, ೨೧ ಹಂದಿ, ೨೨ ಚಿಗರಿ, ೨೩ ಕಾಡಾಕಳು, ೨೪ ಮೀನ, ೨೫ ಟಗರು, ೨೬ ಹೋತ, ೨೭ ಕ್ಯಾಂಗರು, ೨೮ ನರಿ, ೨೯ ಬೆಕ್ಕು, ೩೦ ಮೊಸಳೆ, ೩೧ ಮೊಲ ೩೨ ನಾಯಿ, ೩೩ ಬಕಪಕ್ಷಿ, ೩೪ ಮಂಗ, ೩೫ ನೀರುಗೋಳಿ, ೩೬ ಹುಂಜ, ೩೭ ಗರುಡಪಕ್ಷಿ, ೩೮ ಗೂಗೆ, ೩೯ ರಣಹದ್ದು, ೪೦ ಇಣಚಿ, ೪೧ ಕೋಳಿ, ೪೨ ಹಾವು, ೪೩ ಗಿಳಿ, ೪೪ ಕಾಗೆ, ೪೫ ಪಾರಿವಾಳ, ೪೬ ಚೇಳು, ೪೭ ಇಲಿ, ೪೮ ದೀಪದ ಹುಳ, ೪೯ ಮುಂಗಲಿ, ೫೦ ಗುಬ್ಬಿ, ೫೧ ಕಪ್ಪೆ, ೫೨ ನವಿಲು. ಬೆಲೆ ೧ ರೂಪಾಯಿ, . 18—11—'27

ವಿಳಾಸ— ಚಿತ್ರಶಾಲಾ ಪ್ರೆಸ್ ಪುಣೆ ಸಿಟಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರೀ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪ್ಯೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳ ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲಿಕಿನಲ್ಲಿ ತಯಾರು ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ಕಬರೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ,
ಪೋಸ್ಟ್ ಕಾಂಞಂಗಾಡ (ದ. ಕ.

ಬಿಳೀ ತೊನ್ನಿಗೆ ಖಂಡಿತವಾದ ಔಷಧ.

'ಲೂಕೊಡರ್ಮ ಸ್ಪೆಸಿಫಿಕ್' ಬಿಳೀ ತೊನ್ನಿಗೆ ಖಂಡಿತವಾದ ಔಷಧ. ಶರೀರದ ಮೇಲೆ ಯಾವ ಕಾರಣದಿಂದಾಗಲಿ ಬಿಳಿ, ನೀಲಿ, ಕೆಂಪು, ಮಚ್ಚೆಗಳು ಯಾವುದೇ ಕಾಣಿಸುತ್ತಿದ್ದಾಗ್ಯೂ ಈ ಔಷಧವನ್ನು ಹಾಕಿದರೆ ನಾಲ್ಕಾರು ದಿನಗಳಲ್ಲೇ ಸಂಪೂರ್ಣವಾಗಿ ಖಂಡಿತವಾಗಿಯೂ ತೊಡೆದುಹೋಗುತ್ತದೆ. ಕ್ರಯ ರೂ. 4—8—0. ಕಾಗದವನ್ನು ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

ವಿಳಾಸ:—DR. W. N. DIXIT,
23-12-'27] POONA CITY.

ನೋಟೀಸು.

೧೯೨೭ನೇ ಇಸವಿ ನವಂಬ್ರ ತಾರೀಕು ೨೫ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟನೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಆಸಾಮಿಯವರ ಬಾಬತು ಆಭರಣಗಳು ವಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳೆದು ಕಮ್ಮಿ ಬಿದ್ದ ಐವಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಆಸಾಮಿನವರು ಕಮ್ಮಿ ಬಿದ್ದ ಐವಜು ಈ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸದ ಪ್ರಕಾರ ನೋಟೀಸು ತಲಪಿದ ೧ ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ ಆ ವಿಷಯದಲ್ಲಿ ನಾನು. ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಆಸಾಮಿಯರು ಜವಾಬ್ದಾರರಾಗಿರುತ್ತಾರೆ.

ಮರೋಳಿಯಲ್ಲಿರುವ ಪಟೇಲ್ ಕೃಷ್ಣಭಟ್ಟರ ಮಗ ನಾರಾಯಣ ರಾವ್ ಐಟಮ್ ೩ರ ಅಸಲು ಬಡ್ಡಿ ಇತರ ಖರ್ಚು ೩೫೦-೪-೦ ಏಲಂನಿಂದ ಹುಟ್ಟಿ ಬಂದ ಮೊಬಲಗು ೩೩೮-೦-೦, ಬಾಕಿ ಬರತಕ್ಕ ಮೊಬಲಗು ೧೨-೪-೦.

ಬೈಲಮೊಗರೆ ಕಂದಾವರ ಗ್ರಾಮದಲ್ಲಿರುವ ಅಪ್ಪಕಿಟ್ಟಿ ಆಳಿಯ ಮಂಜಣ್ಣ ಬಂಡಾರಿಯ ಐಟಮ್ ೩ರ ಅಸ್ಲು ಬಡ್ಡಿ ಇತರ ಖರ್ಚು ೧೧೪-೦-೦, ಏಲಂನಿಂದ ಹುಟ್ಟಿ ಬಂದ ಮೊಬಲಗು ೧೧೦-೦-೦, ಬಾಕಿ ಬರತಕ್ಕ ಮೊಬಲಗು ೪-೦-೦.

ಮಳವೂರಿನಲ್ಲಿರುವ ಹಸನ್ನ ಬ್ಯಾರಿ ಮಗ ಹುಸನ ಬ್ಯಾರಿ ಅಸ್ಲು ಬಡ್ಡಿ ಇತರ ಖರ್ಚು ೪೬-೧೨-೦, ಏಲಂನಿಂದ ಹುಟ್ಟಿ ಬಂದ ಮೊಬಲಗು ೪೦-೦-೦, ಬಾಕಿ ಬರತಕ್ಕ ಮೊಬಲಗು ೬-೧೨-೦.

ಹಳೆ ಮಚ್ಚಿ ಬಜಾರ್ ಬುಬ್ಯಾರಿ ಪಳ್ಳಿಹತ್ತಿರ ಇರುವ ಆರಬಿಬ್ಯಾರಿ ಮಗ ಅಬ್ದುಲ್ ರಹಿಮಾನ್ ಬ್ಯಾರಿಯ ಐಟಮ್ ೨ರ ಅಸ್ಲು ಬಡ್ಡಿ ಇತರ ಖರ್ಚು ೫೧-೮-೦, ಏಲಂನಿಂದ ಹುಟ್ಟಿ ಬಂದ ಮೊಬಲಗು ೪೯-೦-೦, ಬಾಕಿಬರತಕ್ಕ ಮೊಬಲಗು ೨-೮-೦.

ಕೇರಬೀದಿ ಕೋಮಲ ವಿಲಾಸ ಬಳಿ ಇರುವ ಬಾಬುಬ್ಯಾರಿ ಮಗ ಬೆಯ್ಯಬ ಬ್ಯಾರಿಯ ಬೆಳ್ಳಿ ಐಟಮ್ ೨ರ ಅಸ್ಲು ಬಡ್ಡಿ ಇತರ ಖರ್ಚು ೪೮-೦-೦, ಏಲಂನಿಂದ ಹುಟ್ಟಿ ಬಂದ ಮೊಬಲಗು ೪೫-೦-೦, ಬಾಕಿಬರತಕ್ಕ ಮೊಬಲಗು ೩-೦-೦.

...MACY,

...ವು.

...ರೋಗಿಗಳು ವ್ಯಾಧಿಗಳನ್ನು
...ಪ್ರಖ್ಯಾತಿಪಟ್ಟ ಶಾಸ್ತ್ರ

...ಆಸವಗಳು, ಲೇಹಗಳು,

...ಕವು" ಸಾಪಿರಾಗು ಮಕ್ಕ
...ರಾಮಬಾಣದಂತೆ ಕೆಲಸ

...OPRIETOR,
...Ayurvedic Pharmacy,
...Street, MANGALORE.

...ನಿತ್ಯಾನಂದರವರ
...ಮಾರ್ಥ ಸಾಧನೆಗಳನ್ನು ಕುರಿತಾದ
...ಧಾಮೃತ ಸಂಗ್ರಹ.

...ಕಾಶ ಗೀತಾ
...ತ್ಮ ಪ್ರಭಾವ

...ಟಿನಲ್ಲಿ, ಶ್ರೀ ಸ್ವಾಮಿಯವರು 1924ರಿಂದ
...ಬೋಧಿಸಿದ ತತ್ವೋಪದೇಶಗಳನ್ನು
...ಸುಲಭ ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು
...ಸುಂದರ ಅಕ್ಷರಗಳಲ್ಲಿ, ಶ್ರೀ ಸ್ವಾಮಿ
...ಮತ್ತು ಏಕಾಗ್ರತೆ ಅಭ್ಯಾಸಕ್ಕಾಗಿ
...ಉತ್ತಮವಾಗಿ ಮುದ್ರಿಸಿ, ದಪ್ಪ
...ಅಕ್ಷರಗಳಲ್ಲಿ ಕೆತ್ತಿದ ಸಸರುಳ್ಳ
...ಸ್ವಾಮಿಯವರು ಈ ಜಿಲ್ಲೆಯಲ್ಲಿ
...ನದಿಂದ ಭಕ್ತಿ, ಜ್ಞಾನ, ವೈರಾಗ್ಯ,
...ಸಾಧನೆ, ಆತ್ಮ ಶಕ್ತಿ, ಪ್ರಾಣಾ
...ಸಾಧನೆ, ಸಾಕ್ಷಾತ್ಕಾರ ಇತ್ಯಾದಿ
...ಪದೇಶವನ್ನು ಓದಿಕೊಳ್ಳಬೇಕೆಂದಿರು
...ಯುಕ್ತವಾದ ಗ್ರಂಥ
...ಮಾತ್ರ.
...ವಿ. ಪಿ.ಯಿಂದ 1-4-0.
...ಬ್ರದರ್ಸ್ ಎಂಡ್ ಕೋ.
ರಥಬೀದಿ, ಮಂಗಳೂರು,

ADVERTISE IN OUR WEEKLY
To Reach the Hearths & Homes of
India's Masses.
For Particulars Apply to: Manager,
SWADESHABHIMANI,
MANGALORE.

ಕೊಂಗ್ರೆಸ್ ಸ್ವಾಗತ ಭಾಷಣ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಇಂಡಿಯದಲ್ಲಿ ಯುನಿಟರಿ ಸರಕಾರವಿರಬೇಕು.

ಫೆಡರಲ್ ಸರಕಾರವು ಬೇರೆಬೇರೆ ದೇಶಗಳಿಗೆ ಸರಿ ಎಂದು ಕಂಡು ಬಂದರೂ ಇಂಡಿಯಕ್ಕೆ ಆ ತರದ ಸರಕಾರವು ಸರಿಯಾಗಲಾರದು. ಭಾಷೆಗಳಿಗನುಸಾರವಾಗಿ ಸಂಸ್ಥಾನ ಸರಕಾರಗಳನ್ನು ಸ್ಥಾಪಿಸಿ ಒಂದು ಸೆಂಟ್ರಲ್ ಸರಕಾರವನ್ನು ಸ್ಥಾಪಿಸಿದರೆ ಸಾಕು. ಭಾಷೆಗಳಿಗನುಸಾರವಾಗಿ ಮಾಡಿದ ಪ್ರಾಂತಿಕ ಸರಕಾರದಲ್ಲಿ ಆಯಾ ಸಂಸ್ಥಾನದ ಜನರು ತಮಗೆ ಬೇಕಾದ ಆಶಯಗಳನ್ನು ಸಾಧಿಸಬಹುದು. ಸೆಂಟ್ರಲ್ ಗವರ್ನಮೆಂಟಿನಲ್ಲಿ ಇಂಡಿಯದ ಸ್ಥಿತಿಯನ್ನು ಭದ್ರವಾಗಿರಿಸಿ ಇತರ ಜನಾಂಗಗಳಂತೆಯೇ ಹಿಂದೀ ಜನಾಂಗವು ಮೇಲಕ್ಕೆ ಬರಲು ಸಾಧನೆಯಾಗುವುದು.

ಇನ್ನು ಕೌನ್ಸಿಲು ಮೆಂಬರಿಕೆಯ ವಿಷಯ ಜಾತಿ, ಮತ, ಬೇರೆಬೇರೆ ಸಂಸ್ಥೆಗಳಿಗೆ ಪ್ರತ್ಯೇಕ ಇಂತಿಷ್ಟೆ ಮೆಂಬರರಿರುವ ಸೂತ್ರವಿರಬಾರದು. ಆದಿದ್ರಾವಿಡರಿಗೆ ಮಾತ್ರವೇಸದ್ಯಕ್ಕೆ ಪ್ರತ್ಯೇಕ ಮೆಂಬರರನ್ನು ಚುನಾಯಿಸಬೇಕು. ಎಂಗ್ಲೋ ಇಂಡಿಯನ್ರಿಗೂ ಯುನಿವರ್ಸಿಟಿಗಳಿಗೂ, ಚೇಂಬರ ಒಫ್ ಕಮರ್ಸ್‌ಗಳಿಗೂ ಪ್ರತ್ಯೇಕ ಮೆಂಬರಿಕೆಗಳು ಇರಬಾರದು.

ದೇಶದ ಒಗ್ಗಟ್ಟು.

ಸ್ವರಾಜ್ಯ ಸ್ಥಾಪಿಸುವ ಮೊದಲು ನಾವು ಎಲ್ಲಾ ಪಾರ್ಟಿಗಳನ್ನು ಒಟ್ಟುಗೂಡಿಸಬೇಕು. ಆದುದರಿಂದ ರಾಷ್ಟ್ರೀಯ ಸಭೆಯವರು ಯಾವ ತರದ ಜಾತಿನ್ಯಾಯಗಳು ಇರದಂತೆ ಎಲ್ಲಾ ಜಾತಿಯವರು ಪರಸ್ಪರ ಪ್ರೀತಿಯಿಂದ ಇರುವಂತೆ ಕ್ರಮಪ್ರಕಾರ ಸಾಧಿಸಬೇಕು. ನಮ್ಮೊಳಗಿರುವ ಕೆಲವು ಜಾತಿಯವರ ಕಲಹಗಳನ್ನು ಆದಿದ್ರಾವಿಡರ ಹೀನಸ್ಥಿತಿಯನ್ನು ಮುಂದಕ್ಕೆ ತಂದು ನಿಲ್ಲಿಸಿ ನಾವು ಸ್ವರಾಜ್ಯಕ್ಕೆ ಅಯೋಗ್ಯರು ಎಂದು ಸಾಧಿಸುತ್ತಿರುವರು. ಮುಂಬಾಯಿಯಲ್ಲಿಯೂ ಕಲ್ಕತ್ತದಲ್ಲಿಯೂ ಜರಗಿದ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಸಭೆಯಲ್ಲಿ ಮಾಡಿದ ಠರಾವುಗಳೂ ಅದರ ಪ್ರಕಾರ ಹಲವು ತರದ ಸಾಧನೆಗಳನ್ನು ಮಾಡಿದ ಶ್ರೀಯುತ ಶ್ರೀನಿವಾಸ ಅಯ್ಯಂಗಾರರ ಸಾಹಸವೂ ಯೆಲ್ಲರಿಗೂ ತಿಳಿದೇ ಇದೆ. ಇದರಿಂದ ಎಲ್ಲಾ ಕಡೆಯಲ್ಲಿಯೂ ಶಾಂತತೆಯು ಉಂಟಾಗಿದೆ. ನಾವು ಇನ್ನು ಸಾಧನೆಮಾಡಿ ಈ ಕೆಲಸವನ್ನು ಮುಂದರಿಸಬೇಕು. ಬ್ರಾಹ್ಮಣ-ಬ್ರಾಹ್ಮಣೇತರರ ನ್ಯಾಯವನ್ನು ಗಯೆಯಲ್ಲಿರುವ ಬೌದ್ಧರ ನ್ಯಾಯಗಳನ್ನು ಹಿಂದೂ ಮುಸಲ್ಮಾನರ ನ್ಯಾಯಗಳನ್ನು ತೀರಿಸಿದ ರೀತಿಯಲ್ಲಿಯೇ ತೀರಿಸಬೇಕು. ಸಿಕ್ಕರೊಳಗೆ ಇರುವ ಒಳಕಲಹಗಳನ್ನು ತೆಗೆದುಹಾಕಲು ಸಾಧಿಸಬೇಕು. ಈ ರೀತಿಯಲ್ಲಿ ಹಲವು ಸಮಯದಿಂದ ಇಂಡಿಯದ ಶಾಂತತೆಗೆ ಬಾಧಕವಾದ ವಿಷಯಗಳನ್ನು ತೆಗೆದು ಹಾಕಿದ ಕೀರ್ತಿಯು ಕೊಂಗ್ರೆಸಿಗೆ ಬರುವುದು.

ಆರ್ಥಿಕ ವಿಷಯಸೂತ್ರಗಳ ಪ್ರಸರಣೆ

ದೇಶದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೆ ತರುವುದು ಮತ್ತೊಂದು ವಿಷಯವಾಗಿದೆ. ಕೊಂಗ್ರೆಸಿನವರು ಊರಿನ ರಹಿತರಿಗೆ ರಾಜಕೀಯ ವಿಷಯದಲ್ಲಿ ಮಾತ್ರವೇ ಬೋಧನೆ ಕೊಡುವದಲ್ಲದೆ ಆರ್ಥಿಕ ವಿಷಯದಲ್ಲಿಯೂ ಬೋಧನೆಯನ್ನು ಕೊಡಬೇಕು. ಬೇಸಾಯದ ವಿಷಯ ಹೊಸ ಕ್ರಮಗಳನ್ನು ಪರಸ್ಪರ ಸಹಾಯಕ ಸಂಘಗಳ ಪ್ರಯೋಜನವನ್ನು ಬೇಸಾಯಗಾರರಿಗೆ ತಿಳಿಸಬೇಕು. ಬೇಸಾಯ ಮಾಡದೆ ಖಾಲಿ ಬಿದ್ದಿರುವ ಸ್ಥಳಗಳು ಹಲವು ಇವೆ, ನಮ್ಮ ಬೇಸಾಯಗಾರರು ಬೇಸಾಯದ ಹೊಸ ಕ್ರಮಗಳನ್ನು ಕಲಿತುಕೊಂಡರೆ ದೇಶದ ಐಶ್ವರ್ಯವು ಹೆಚ್ಚಾಗುತ್ತಾ ಬರುವುದು. ಪ್ರತಿ ಒಬ್ಬ ಕೊಂಗ್ರೆಸ ಕೆಲಸಗಾರನು ಆರೋಗ್ಯಸೂತ್ರಗಳನ್ನು ಜನರಿಗೆ ಬೋಧಿಸಬೇಕು. ಕುಡಿಕತನವನ್ನು ಕಡಿಮೆ ಮಾಡಲು ಸಾಧಿಸಬೇಕು. ಸರಕಾರದವರು ಕುಡಿಕತನವನ್ನು ಕಡಿಮೆಮಾಡುವುದು ಕಂಡುಬರುವುದಿಲ್ಲ. ದೇಶವಾತ್ಸಲ್ಯವುಳ್ಳ ವಿದ್ಯಾವಂತರೂ ಐಶ್ವರ್ಯವಂತರೂ ಇಂಡಿಯದ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಸಾಧನೆಯನ್ನು ಮಾಡಬೇಕು. ದೇಶದ ಐಶ್ವರ್ಯವನ್ನು ಹೆಚ್ಚಿಸಿ ಕೆಲಸವಿಲ್ಲದವರಿಗೆ ಕೆಲಸವು ಸಿಕ್ಕುವಂತೆ ಮಾಡಬೇಕು. ಈ ಎಲ್ಲಾ ಕೆಲಸಗಳನ್ನು ಮಾಡುವುದಕ್ಕಾಗಿ ಕೊಂಗ್ರೆಸಿನವರು ಒಂದು ಬೋರ್ಡನ್ನು ಮಾಡಬೇಕು.

ವಿದೇಶ ವಸ್ತುಗಳ ಬಹಿಷ್ಕಾರ.

ದೇಶದ ಕೈಗಾರಿಕೆಗಳನ್ನೂ ಬೇಸಾಯದ ಸ್ಥಿತಿಯನ್ನೂ ಅಭಿವೃದ್ಧಿಪಡಿಸಿದರೆ ಸಾಲದು. ಇವುಗಳು ಅಭಿವೃದ್ಧಿಗೆ ಬರಬೇಕಾದರೆ ಇನ್ನೊಂದು ಅಗತ್ಯ ಕೆಲಸವಿದೆ. ಕೆಲವು ವರುಷಗಳಿಂದ ಬ್ರಿಟಿಶ ಮತ್ತು ವಿದೇಶಿಯ ವಸ್ತುಗಳ ಬಹಿಷ್ಕಾರದ ವಿಷಯವು ನಮಗೆ ತಿಳಿದಿದೆ. ಈಗಿನ ದೇಶದ ಸ್ಥಿತಿಯನ್ನು ನೋಡಿದರೆ ನಾವು ಎಲ್ಲಾ ತರದ ಬ್ರಿಟಿಶ್ ವಸ್ತುಗಳಿಗೆ ಬಹಿಷ್ಕಾರವನ್ನು ಹಾಕಬೇಕು. ಇಷ್ಟು ಮಾಡಿದರೆ ದೇಶದ ಆರ್ಥಿಕ ಅಭಿವೃದ್ಧಿಗೆ ಸಾಲದು. ಇಂಡಿಯವನ್ನು ಬಿಟ್ಟು ಉಳಿದ ಎಲ್ಲಾ ದೇಶಗಳ ವಸ್ತುಗಳಿಗೂ ಬಹಿಷ್ಕಾರ ಹಾಕಬೇಕು. ಬ್ರಿಟಿಶ ವಸ್ತುಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟುಬಿಟ್ಟು ಯುರೋಪ್ ಖಂಡದ ಮತ್ತು ಅಮೇರಿಕದ ವಸ್ತುಗಳನ್ನು ಕೊಂಡುಕೊಂಡರೆ ನಮಗೆ ಸಿಕ್ಕುವ ಪ್ರಯೋಜನವೇನೂ ಇಲ್ಲ. ನಾವು ಬ್ರಿಟಿಶ ವಸ್ತುಗಳಿಗೆ ಬಹಿಷ್ಕಾರ ಹಾಕಿದರೆ ನಮಗೆ ರಾಜಕೀಯ ವಿಷಯದಲ್ಲಿ ಪ್ರಯೋಜನವು ಸಿಕ್ಕುವುದು. ವಿದೇಶಿಯ ವಸ್ತುಗಳಿಗೆ ಬಹಿಷ್ಕಾರ ಹಾಕಿದರೆ ಆರ್ಥಿಕ ವಿಷಯಗಳಲ್ಲಿ ಪ್ರಯೋಜನವು ಸಿಕ್ಕುವುದು.

ಮಹಾತ್ಮಾ ಗಾಂಧಿಯವರ ಮತ್ತು ಅವರೊಡನೆ ಕೆಲಸ ಮಾಡುವವರ ಸಾಹಸದಿಂದ ಖಾದಿ ಕೆಲಸವು ಅಭಿವೃದ್ಧಿಯಾಗುತ್ತಾ ಬರುತ್ತಿದೆ. ಇಂಡಿಯದ ಜನರು ಮಹಾತ್ಮಾಜಿಯವರ ಸೂತ್ರವನ್ನು ಅನುಸರಿಸುತ್ತಲೇ ಇರುವರು. ಇವರು ಖಾದಿಯನ್ನು ಖರ್ಚುಮಾಡಲು ಮೊದಲು ಸಾಧಿಸುವುದು ಮಾತ್ರವಲ್ಲ ದೇಶದಲ್ಲಿ ಆಗುವ ಪ್ರತಿಒಂದು ಕೈಗಾರಿಕೆಯ ವಸ್ತುವು ಖರ್ಚಾಗುವಂತೆ ಸಾಧಿಸಬೇಕು. ಇದರಿಂದ ದೇಶದ ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಟ್ಟಂತಾಗುವುದು. ಈ ವಿಷಯ ಆಲೋಚಿಸಬೇಕಾಗಿ ಮಹಾತ್ಮಾಜಿಯವರನ್ನು ಬೇಡಿಕೊಳ್ಳುತ್ತೇನೆ.

ಕೂಲಿಕಾರರ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಿದೆ. ಆದುದರಿಂದ ಕೊಂಗ್ರೆಸ್ ಕಡೆಯಿಂದ ಕೂಲಿಕಾರರು, ಕೈಗಾರಿಕೆಯವರೂ, ಬೇಸಾಯಗಾರರು ಇವರ ಅಭಿವೃದ್ಧಿಯ ವಿಷಯ ಕೆಲಸ ನಡಿಸುವುದು ಅಗತ್ಯವಾಗಿದೆ. ರಾಷ್ಟ್ರೀಯ ಕೊಂಗ್ರೆಸಿನವರು ಓಲ್ ಇಂಡಿಯಾ ಟ್ರೇಡ್ ಯುನಿಯನ್ ಕೊಂಗ್ರೆಸಿನೊಡನೆ ಕೂಡಿ ಕೆಲಸ ನಡಿಸಬೇಕು. ಇದರಿಂದ ಸ್ವರಾಜ್ಯ ಸಾಧನೆಗೆ ಸಹಾಯವಾಗುವುದು.

ಕೊಂಗ್ರೆಸ್ ಸಂಸ್ಥೆ.

ನಮ್ಮ ಕೊಂಗ್ರೆಸ್ ಸಂಸ್ಥೆಯು ಈಗ ಮೊದಲಿನಷ್ಟು ಬಲವಾಗಿ ನಡಿಯುವದಿಲ್ಲ. ಕೊಂಗ್ರೆಸ್ ಕೆಲಸವನ್ನು ಇಂಡಿಯದ ಮೂಲೆ ಮೂಲೆಗಳಲ್ಲಿ ಬೆಳೆಯುವಂತೆ ರಾಜಕೀಯ ವಿಷಯಗಳನ್ನು ಚನ್ನಾಗಿ ಅರಿತು ತರಬೇತಾದವರನ್ನು ಹಳ್ಳಿಹಳ್ಳಿಗಳಿಗೂ ಕಳುಹಿಸಿ ಕೊಂಗ್ರೆಸ ಸೂತ್ರಗಳು ಪ್ರಸರಿಸುವಂತೆ ಮಾಡಬೇಕು. ಅಂಥವನನ್ನು ಸಂಬಳಕ್ಕಾದರೂ ನಿಯಮಿಸಬೇಕು. ಇವರು ಒಳ್ಳೆ ನಡತೆಯುಳ್ಳವರಾಗಿದ್ದು ದೇಶಾಭಿವೃದ್ಧಿಯ ವಿಷಯಗಳಲ್ಲಿ ಹಳ್ಳಿಯವರಿಗೆ ಅನುಭವವನ್ನು ಕೊಡಲಿಕ್ಕೆ ಯೋಗ್ಯರಾದವರಾಗಿರಬೇಕು.

ಈ ರೀತಿಯಲ್ಲಿ ಬ್ರಿಟಿಷ ವಸ್ತುಗಳಿಗೆ ಬಹಿಷ್ಕಾರವನ್ನು ಹಾಕಿ ದೇಶದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿ ಸ್ವರಾಜ್ಯ ಸ್ಥಾಪನೆಗೆ ಬುನಾದಿಕಲ್ಲನ್ನು ಹಾಕಬೇಕು. ಹೀಗೆ ನಮ್ಮ ಹಕ್ಕು ಸ್ವಾತಂತ್ರ್ಯಗಳ ವಿಷಯದಲ್ಲಿ ಜನರಲ್ಲಿ ನವಚೇತನವನ್ನು ಉಂಟುಮಾಡಿ, ಎಲ್ಲರೂ ಒಗ್ಗಟ್ಟಿನಿಂದ ಇದ್ದು, ಕಾರ್ಯಕ್ರಮಗಳನ್ನು ಪುನಃ ಸ್ಪಷ್ಟನೆಮಾಡಿ ಸ್ವತಂತ್ರ ಸ್ಥಾಪನೆಯಾಗುವಂತೆ ಸಾಧಿಸಬೇಕು.

ಈ ವರುಷ ಮುಂದಿನ ಕೆಲಸ ನಡಿಸಲಿಕ್ಕೆ ಯೋಗ್ಯರಾದ ಪ್ರೆಸಿಡೆಂಟರನ್ನು ನಾವು ಚುನಾಯಿಸಿರುವೆವು. ಇವರ ಆಡಳಿತೆಯಲ್ಲಿ ಬರುವ ವರುಷ ಸ್ವರಾಜ್ಯಕ್ಕಾಗಿ ಸಾಧನೆಯು ಬಲವಾಗಿ ನಡೆಯುವುದು. ಇವರ ಕೆಲಸದಲ್ಲಿ ನಾವು ಎಲ್ಲವರೂ ಸಮಭಾಗಿಗಳಾಗಿ ಸಹಾಯ ಮಾಡಬೇಕು. ಜನರ ಪ್ರೀತಿಗೆ ಪಾತ್ರರೂ ಮಹಾ ವಿದ್ವಾಂಸರೂ ಆದ ಡೋಕ್ಟರ ಅನ್ಸಾರಿಯವರ ಕಾಲದಲ್ಲಿ ಸ್ವರಾಜ್ಯ ಸ್ಥಾಪನೆಯಾಗುವದೆಂದು ನನ್ನ ನಂಬಿಕೆಯಾಗಿದೆ.

ಮದರಾಸಿನಲ್ಲಿ ರಾಷ್ಟ್ರೀಯ ಸಭೆಯ ಸಮಯದಲ್ಲಿ ಜರಗಿದ ಹಲವು ಕೊನ್ಫರೆನ್ಸುಗಳು.

ಪ್ರತಿ ವರ್ಷವೂ ರಾಷ್ಟ್ರೀಯ ಸಭೆಯು ಜರಗುವ ಊರಿನಲ್ಲಿಯೇ ಬೇರೆ ಬೇರೆ ಸೂತ್ರಗಳನ್ನು ಹಿಡಿದು ಕೆಲಸ ಮಾಡುವ ಸಂಘದವರು ಅವರವರ ಸಭೆಗಳನ್ನು ಜರಗಿಸುತ್ತಿರುವರು. ಇವುಗಳು ನಡೆದ ಸಂಗತಿಗಳ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

೧. ಅಖಿಲ ಭಾರತ ಆರ್ಯರ ಪರಿಷತ್ತು.

ಅಖಿಲ ಭಾರತ ಆರ್ಯರ ಪರಿಷತ್ತು ದಶಂಬರ ೨೭ನೇ ಮಧ್ಯಾಹ್ನ ಗೋಖಲೆ ಹೋಲಿನಲ್ಲಿ ಡೊಕ್ಟರ ಮುಂಜೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಉತ್ತರ ಹಿಂದೂದೇಶದಿಂದ ಹಲವು ಮಂದಿ ಸಾಧುಗಳೂ, ಮಾರ್ವಾಡಿ ಮಹಿಳೆಯರೂ ಬಂದಿದ್ದರು. ದಿಲ್ಲಿಯ ಶ್ರೀಯುತ ಕೆ. ಡಿ. ಶಾಸ್ತ್ರಿಯವರು ಪರಿಷತ್ತನ್ನು ತೆರೆಯುವ ಸಮಾರಂಭವನ್ನು ಮಾಡಿದರು. ಸಭಾಧ್ಯಕ್ಷರಾದ ಡೊ. ಮುಂಜೆಯವರು ತಾನು ಹಿಂದೂ ಸಭೆಯ ಸಂದೇಶಗಳ ವಿಷಯ ತಿಳಿಸುತ್ತೇನೆಂದೂ, ಆರ್ಯ ಸಮಾಜದಲ್ಲಿ ಜಾತಿಭೇದ ಇಲ್ಲವೆಂದೂ ಜಾತಿ ಒಳಜಾತಿಗಳನ್ನು ಖಂಡಿಸಿ ಮಾತನಾಡಿದರು. ಅನಂತರ ದಕ್ಷಿಣ ಹಿಂದೂಸ್ಥಾನದ ಹಿಂದುಗಳು ಹೆಚ್ಚು ಹೆಚ್ಚಾಗಿ ವೇದಗಳನ್ನು ಕಲಿಯಬೇಕು. ಅಸ್ಪೃಶ್ಯತೆಯನ್ನು ನಿವಾರಿಸಬೇಕು, ಶುದ್ಧಿ ಚಳವಳಿಕ್ಕೆ ಸಹಾಯ ಮಾಡಬೇಕು. ಇಡೀ ದಕ್ಷಿಣ ಹಿಂದೂಸ್ಥಾನಕ್ಕೊಂದು ಆರ್ಯ ಸಂಘವನ್ನು ಏರ್ಪಡಿಸಬೇಕು ಎಂಬ ಠರಾವುಗಳು ಪಾಸಾದವು.

(ಸಶೇಷ)

NOTE...S.
ನೋಟಗಳು.

'ಲಂಕೆಶಾಯರು ಜಾಪಾನನ್ನು ಅನುಕರಿಸಬೇಕು' ಎಂದು ಬ್ರಿಟಿಷರೊಬ್ಬರು ಬ್ರಿಟಿಷ ಹತ್ತಿ ಗಿರಣಿಗಳ ಮಂದಿಯ ವಿಷಯ ಚರ್ಚಿಸುವಾಗ ಹೇಳುವರು. ಪೌರ್ವಾತ್ಯರು ತಮ್ಮನ್ನು ಚೆನ್ನಾಗಿ ವ್ಯವಸ್ಥೆಗೊಳಿಸಿದರೆ ಪಾಶ್ಚಾತ್ಯರು ತಾವಾಗಿ ಅನುಕರಿಸುವರು.

• • • • •

ವ್ಯಾಪಾರಿ ಯುದ್ಧದ ಪರಿಣಾಮವೆಲ್ಲಿ? ಅದೇ ಈಗ ಬಹಳ ಯೋಚನೆಯ ವಿಷಯ. ಬ್ರಿಟಿಷರು ಬೇಡವೆಂದು ಬಿಟ್ಟ ಸೀಮೆಯೆಣ್ಣೆಯನ್ನು ರಶ್ಯಾದಿಂದ ಅತ್ಯಲ್ಪ ಬೆಲೆಗೆ ಪಡೆದು, ಅಮೇರಿಕದ ಸ್ಟೆಂಡಾರ್ಡ ಒಯಿಲ್ ಕಂಪೆನಿಯು ಬ್ರಿಟಿಷ ಕಂಪೆನಿಗಳೊಡನೆ ಮೇಲಾಟಕ್ಕೆ ಆರಂಭಿಸಿಯದೆ. ಬ್ರಿಟಿಷ ಎಣ್ಣೆಯ ಕಂಪೆನಿಗಳೆಲ್ಲಾ ಒಟ್ಟಾಗಿ ಈ ಅಮೇರಿಕ ಕಂಪೆನಿಯನ್ನು ಎದುರಾಡಲು ನಿಂತಿವೆ ಈ ಮೇಲಾಟವು ನಡೆಯಲು ಆರಂಭಿಸಿರುವಾಗಲೇ ಇನ್ನೊಂದು ಮೇಲಾಟದ ವಾರ್ತೆ. ಅಮೇರಿಕದ ಹಡಗು ಕಂಪೆನಿಗಳು ತಮ್ಮ ದರಗಳನ್ನು ಇಳಿಸಿ ಬ್ರಿಟಿಷರೊಡನೆ ಮೇಲಾಟವನ್ನಾರಂಭಿಸಿವೆ.

• • • •

ಅಮೇರಿಕವೂ, ಬ್ರಿಟಿಷರೂ ಒಂದೇ ತರದ ವ್ಯಾಪಾರಿಗಳು, ಇವರೊಳಗೆ ಮೇಲಾಟವು ಒಂದು ದಿನವಲ್ಲದಿದ್ದರೆ ಇನ್ನೊಂದು ದಿನ ಆಗಲೇ ಬೇಕು. ಆದರೆ ಈ ಮೇಲಾಟವು ಯುದ್ಧಕ್ಕೆ ಪರ್ಯವಸಾನ ಹೊಂದೀತೇ? ಎಂಬುದೊಂದು ಹೆದರಿಕೆ.

• • • •

ತೌಳವ ಯುನಿವರ್ಸಿಟಿಯ ಹೆಸರನ್ನು ಕೇಳಿ ನಮ್ಮ ಒಂದು ಬಂಧು ಪತ್ರಿಕೆಗೆ ಹೌಹಾರಿಹೋಗಿದ್ದಿತು. ಆದರೆ ಮಾತೃ ಭಾಷೆಯ ಉಪಾಸನೆಯ ಮಹತ್ವ ತಿಳಿದವರು ಭಾಷೆಯ ಪುತ್ರರಿಗಾಗಿ ಯಾವ ಭಾಷಾ ಪ್ರೇಮವನ್ನು ಪ್ರೇರಿಸುವರೊ!

• • • •

ಆದರೆ ನಮ್ಮಲ್ಲಿ ಭಾಷಾ ಪ್ರೇಮಿಗಳು ಕಡಿಮೆಯಿಲ್ಲ. ಒಂದು ಕಡೆ ತುಳು ತನಯರು ತೌಳವ ಪ್ರಾಂತ್ಯರಚನೆಯಾಗಬಾರದೇಕೆಂದು ಪ್ರಶ್ನಿಸುವಾಗ, ಇನ್ನೊಂದು ಕಡೆಗೆ ಕೊಂಕಣಕುವರರೊಬ್ಬರು ಕೊಂಕಣ ಪ್ರಾಂತವನ್ನೇಕೆ ಊರ್ಜಿತಕ್ಕೆ ತರಬಾರದೆನ್ನುವರು.

• • • •

ಅವರು ತಮ್ಮ ತರ್ಕವೇ ಅಖಂಡವೆನ್ನುವರು. ಏಕೆಂದರೆ ಕೊಂಕಣ ಹೆಸರಿನ ಪ್ರಾಂತವು ಪೂರ್ವಕಾಲದಲ್ಲಿತ್ತು. ಇದು ತುಳುನಾಡಿಗಿಂತಲೂ ವಿಶಾಲವಾದುದು. ಒಂದು ಕೊಂಕಣ ವಿಶ್ವವಿದ್ಯಾಲಯ ಸ್ಕೀಮನ್ನು ಈ ಕೊಂಕಣಕುವರರು ರಚಿಸಿದರೆ ನೋಡಬಹುದಾಗಿದ್ದಿತು.

• • • •

ಪ್ರಾಂತಿಕ ಅಭಿಮಾನವನ್ನು ಹುರಿಗೊಡುವಾಗ ಅದಕ್ಕೂ ಒಂದು ಮೇರೆಯಿದೆಯೆಂದು ತಿಳಿಯುವುದೊಳ್ಳೆಯದು.

• • • •

ಸ್ಪೆಯಿನ್‌ದೇಶದಲ್ಲಿ ಸುಂದರಿಗಳ ಪ್ರದರ್ಶನವು ನಡೆಯುವುದಾಗಿ ಸ್ಪೆಯಿನ್ ಸರಕಾರವು ನಿರ್ಧರಿಸಿಯದೆ. ಈ ಬಗ್ಗೆ ಪಾಶ್ಚಾತ್ಯ ಸುಂದರಿಗಳನ್ನು ಕರೆತರಲಿಕ್ಕೆ ಸ್ಪೆಯಿನ್ ದೇಶದ ಒಂದು ಹಡಗ ಪ್ರತಿದೇಶಕ್ಕೂ ಹೋಗುವುದು. ಇದು ವ್ಯಾಪಾರವನ್ನು ಸೌಂದರ್ಯದೊಡನೆ ಸಂಬಂಧಿಸುವುದಂತೆ. ಆದರೆ ಇದು ಸೌಂದರ್ಯ ವ್ಯಾಪಾರದ ಸಂಬಂಧವೆಂದು ನನಗನ್ನಿಸುತ್ತಿದೆ.

• • • •

ಮುಸ್ಲಿಮ್ ಲೀಗಿನಲ್ಲಿ ಒಳಭೇದ ಒಂತು. ಸರ್ ಮಹಮದ್ ಶಫಿಯವರು ತಮ್ಮ ಬಿರುದನ್ನು ಸಾರ್ಥಕವಾಡಿಕೊಂಡರು. ಆದರೆ ಅಳರಸರನ್ನು ಮೆಚ್ಚಿಸಿ ಲಾಭ ಮಾಡಿಕೊಂಡ ಪುಣ್ಯವು ತಮ್ಮ ಸಮಾಜವನ್ನು ವಿಭಾಜಿಸಿದ ಪಾಪದಷ್ಟಾದೀತೇ? ಎಂಬುದೊಂದು ಪ್ರಶ್ನೆ.

• • • •

ಕೊಂಗ್ರೆಸ್ಸು ಠರಾಯಿಸಿ ಬಿಟ್ಟಿತು. ಸ್ವರಾಜ್ಯ ಪಕ್ಷೀಯರು ಅನುಸರಿಸುವರೇ? ಶ್ರೀ ಸತ್ಯಮೂರ್ತಿಯವರು ಜೈನರ ಮಸೂದೆಯ ಕಮಿಟಿಯ ಅಧ್ಯಕ್ಷತನಕ್ಕೆ ರಾಜಿಕೊಟ್ಟಿರುವರು. ಶ್ರೀಯುತ ಶಾಂತರು ತಮ್ಮ ಈ ಹಸುಗೂಸನ್ನು ಏನು ಮಾಡುವರೋ, ನೋಡಲಿದೆ.

• • • •

ಮದ್ರಾಸಿನಲ್ಲಿ, ಸಾಧುಗಳ ದೊಡ್ಡದೊಂದು ಪರಿಷತ್ತು ನಡೆಯಿತು. ಕಾರ್ಯಕ್ರಮದಲ್ಲಿ ಭೋಜನವು ಪ್ರಮುಖವಾದ ವಿಷಯವಾಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ.

...ವ ಬಾಟ್ಲಿವಾಲಾ ಇವರ

...ಷಧಗಳು.

...ಂಗಾರದ ಪದಕಗಳು ದೊರೆತಿರುತ್ತವೆ.

...ಔಷಧ ಆಣೆ ೧೩.
...ತರ ರೋಗಗಳಿಗೂ ಒಳ್ಳೇ ಔಷಧ ಆಣೆ ೧೨.
...ತ್ಯುತ್ತಮವಾದ ಔಷಧ. ಆಣೆ ೧೩
...ಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
...೨—೦. ೧—೧೨—೦.

"AGENTS WANTED"
...LIBERAL DISCOUNT TO TRADE
...BOMBAY.

...ವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...Cadell Road, Bombay, No. 14.

...ಲೋದ್ರ

...ಔಷಧವು. ಈ ದಿವ್ಯೌಷಧವನ್ನು ಕೆಲವರು
...ಎಂದೂ, ಇನ್ನು ಕೆಲವರು 'ರತ್ನಖಚಿತವಾದ
...ತ್ತಿರುವರು.

...ತಯಾರಿಸಿ ಇರುತ್ತದೆ. ಇದು ಅತ್ಯಂತ

...ಮ್ಯವಾಗುವುದು, ಋತುವು ನಾನಾ ಬಣ್ಣ
...ತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ
...ಲಬದ್ಧತೆ, ಸೊಂಟನೋವು, ಕಾಲುಸೆಳೆತ,
...ವಾಗುವವು.

...ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

...ಕುಟೀರಂ,
...: 752. ಎಗ್ಮೋರು, ಮದರಾಸು.
18 ಬಳೆಪೇಟೆ, ಬೆಂಗಳೂರು.

...ಟೈಂಪೀಸ್ ಇನಾಂ.

...ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.



...ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್
...ಗಟ್ಟಿ ಸಾಮಾನುಗಳಿಂದ (ಸ್ಪ್ರಿಂಗ್
...ಇದರ ಬಣ್ಣವು ಭಂಗಾರಕ್ಕೆ ಸಂಸಮಾನ
...ಸರಿಯಾಗಿ ಗಂಟೆಯನ್ನೂ ತೋರಿಸುವವು.
...ಬಾತ್ರಿಯುಳ್ಳ 5 ವರುಷ ಗ್ಯಾರಂಟಿಕೊಡುವೆವು.
...ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ
...ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್
...ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳು
...ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.
...ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.
...ವಿ. ಎಸ್. ವಾಚ್ ಕಂಪೆನಿ.
...ಪೋ ಬಾಕ್ಸ್ ನಂ. 105, ಮದರಾಸು.

ವೈಜ್ಞಾನಿಕ ಶೋಧಗಳ ಮಹತ್ವ.

ಮೊನ್ನೆ ದಿನ ಮಂಗಳೂರಿಗೆ ವಿಮಾನವು ಬಂದಾಗ ಸಾವಿರಾರು ಜನರು ದೂರದೂರದಿಂದ ಬಂದು ನೋಡಿ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ನಮ್ಮ ಪುರಾಣಗಳಲ್ಲಿ ಇವುಗಳ ಉಲ್ಲೇಖವಿದೆ; ಇವುಗಳಲ್ಲಿ ಆಶ್ಚರ್ಯವಾಗುವಂತಹುದುದೇನೂ ಇಲ್ಲ ಎಂದು ಯಾರೂ ನೆನಸಲಿಲ್ಲ. ಆದರೆ ಪುರಾಣಗಳಲ್ಲಿ ಕೂಡ ದೇವತೆಗಳೂ ಸಾಧಕರೂ ಮಾತ್ರವೇ ಹೊಂದಬಲ್ಲರೆಂಬಂತಹ ವಿಮಾನಗಳು ಈಗ ಸಾಮಾನ್ಯ ಮನುಷ್ಯನಿಗೆ ಕೂಡ ಸಾಧ್ಯವಾಯಿತೆನ್ನುವಾಗ ಪಾಶ್ಚಾತ್ಯರ ಆ ವಿಜ್ಞಾನವು ಮಹತ್ವದ್ದಿದೆ ಎನ್ನಲೇ ಬೇಕು.

ಪುರಾಣಗಳಲ್ಲಿ ಮಹರ್ಷಿಗಳೂ, ತಪಸ್ವಿಗಳೂ ಮಾತ್ರವೇ ಜ್ಞಾನದೃಷ್ಟಿಯುಳ್ಳವರಾಗಿದ್ದರು. ಆರ್ಯಸಂಸ್ಕೃತಿಯು ಎಷ್ಟೆ ದೊಡ್ಡದಿದ್ದುದಾದರೂ, ಇಂತಹ ವಿಷಯಗಳು ಸಾಮಾನ್ಯನಿಗೆ ಸಾಧ್ಯವೆಂದು ಒಪ್ಪುತ್ತಿರಲಿಲ್ಲ. ಆದರೆ ಈಗಿನ ವೈಜ್ಞಾನಿಕರು ವೈರ್ಲೆಸ್ ವಾರ್ತಾಪ್ರಸಾರವನ್ನು ಮಾಡುವಾಗ ಒರೇ ತಪಸ್ವಿಗಿಂತ ಮಹತ್ವದ್ದಿದೆ ಎಂದು ಹೇಳಬೇಕಾಗುವುದು.

ಪಾಶ್ಚಾತ್ಯರು ನಡೆಸಿರುವ ಇಂತಹ ಶೋಧಗಳನ್ನು ನೋಡಿದ ಮನುಷ್ಯನು ಬರೇ ತನ್ನ ಆಲೋಚನಾ ಶಕ್ತಿಯನ್ನು ಬೆಳಸಿ ಎಷ್ಟು ಅಸಾಧ್ಯವೆನ್ನಬಹುದಾದ ಕೆಲಸಗಳನ್ನು ಮಾಡಬಹುದೆಂದು ತಿಳಿಯುವುದು. ನಿರ್ಜೀವ ವಸ್ತುವಿನಲ್ಲಿ ಚೇತನವನ್ನು ಮನುಷ್ಯನು ಉರುರುವನು, ಕಾಣದ್ದನ್ನು ತೋರಿಸಿ ಕೊಡುವುದು, ಸಾವಿರಾರು ಮೈಲು ದೂರವಿದ್ದುದನ್ನು ನೋಡುವದು ಮತ್ತು ಕೇಳುವದು, ಇವು ಕೆಲವು ವರ್ಷಗಳ ಹಿಂದಾದರೆ ನಾವು ಸುಳ್ಳೆನ್ನುತಿದ್ದೆವು.

ಹಿಂದೂಸ್ಥಾನಕ್ಕೆ ಪ್ರಥಮತಃ ರೈಲುಗಾಡಿಗಳು ಬಂದಾಗ, ಅದರೊಳಗೆ ಭೂತಗಳು ಕೆಲಸ ಮಾಡುತ್ತಿವೆಯೆಂದು ಹಲವರು ಕಲ್ಪಿಸಿದರು. ಹಿಂದೂಸ್ಥಾನವು ಇಂದಾದರೂ ಅಂತಹ ಮಾನಸಿಕತೆಯಿಂದ ಮೇಲೇಳಲಿಲ್ಲ. ಒಂದು ದಿನ ಹಿಂದೂಸ್ಥಾನವು ನೇಯಿಗೆಗೆ ಹೆಸರು ಹೊಂದಿದ್ದಿತು. ಅದೇ ನಮ್ಮ ಈಗಿನ ಗೌರವದ ವಿಷಯ. ಪಂಸರಕಾರವನ್ನು ನಾವು ಎಷ್ಟೇ ದೂರಬಹುದು. ಆದರೆ ನಾವು ಹಿಂದಿನ ಗೌರವಗಳನ್ನೆಣಿಸಿಯೇ ಕುಳಿತುಕೊಂಡಿರುವೆವು ಹೊರತು ನಮ್ಮಲ್ಲಿ ಆ ನೂತನತೆಯನ್ನು ಕಂಡು ಹಿಡಿಯುವ ಅಭಿಲಾಷೆಯೂ ಉದ್ವೇಗವೂ ಉಂಟಾಗಲಿಲ್ಲ. ಶತಮಾನಗಳಷ್ಟು ಹಳತಾದ ಅದೇ ರಾಟೆ, ಅಷ್ಟೇ ಹಳತಾದ ಆ ಕಾಲುನೇಯಿಗೆ ಇವುಗಳೇ ಹಿಂದೂಸ್ಥಾನದಲ್ಲಿ ಯುಗಾಂತರದ ವರೆಗೆ ಒಂದಿಷ್ಟಾದರೂ ರೂಪವನ್ನು ಬದಲಾಯಿಸದೆ ಕೆಲಸಮಾಡಿದವು. ಅಂತಹ ಕಠಿಣವಾದ ಜಡತೆಯೂ, ಆತ್ಮತೃಪ್ತಿಯೂ ನಮ್ಮನ್ನು ನಿಶ್ಚೇತನರಾಗಿ ಮಾಡಿರುವಾಗ ಮೆದುಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತ ಬಂದ ಪಾಶ್ಚಾತ್ಯರಿಗೆ ನಾವು ತಲೆತಗ್ಗಿಸಬೇಕಾಗಿ ಬಂದುದರಲ್ಲಿ ಆಶ್ಚರ್ಯವಿಲ್ಲ.

ವಿಜ್ಞಾನದಲ್ಲಿ ಯಾವ ಆಶ್ಚರ್ಯಗಳಾಗಿಲ್ಲ? ವೈಮಾನಿಕ ಶೋಧನೆಗಳು ಸಾಮಾನ್ಯವೇ! ಕೋಟೆಯಂತಹ ವಿಸ್ತಾರವಾದ ವಸ್ತುವೊಂದು, ಖಂಡಿಗಟ್ಟಲೆಯಲ್ಲಿ ಸಾಮಾನನ್ನು ಹೇರಿಕೊಂಡು ಆಕಾಶದಲ್ಲಿ ಹಾರಬಲ್ಲುದೆಂಬುದೊಂದು; ಎಲ್ಲಿದ್ದರೂ ತನ್ನ ಸಮಾಚಾರವನ್ನು ಎಲ್ಲಾ ಕಡೆಗೂ ಕೊಡಬಲ್ಲುದೆಂಬುದೊಂದು; ಮುಂದು ಬಿದ್ದಾಗ ಪ್ರಾಣರಕ್ಷಣೆಗೆ ಬೆಲ್ಲೂನ್ ಎಂಬ ಉಪಕರಣದಿಂದ ಪ್ರಾಣರಕ್ಷಣೆ ಮಾಡಿಕೊಳ್ಳಬಹುದೆಂಬುದಿನ್ನೊಂದು.

ಅಷ್ಟೇನೆ? ಒಂದು ಖಂಡದಲ್ಲಿ ಕುಳಿತು ಸಪ್ತಸಾಗರ ದೂರವಿರುವ ಇನ್ನೊಂದು ಖಂಡದೊಡನೆ ಸಂಭಾಷಣೆ ನಡಿಸಬಹುದು. ಸಾವಿರಾರು ಮೈಲು ದೂರದ ಸಂಗೀತ ಭಾಷಣಗಳನ್ನು ಕೇಳಬಹುದು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಭಾವಚಿತ್ರಗಳನ್ನು ಕ್ಷಣಾರ್ಧದಲ್ಲಿ ಕಳುಹಬಹುದು.

ಮಾತ್ರವಲ್ಲದೆ, ಕಾಲು ಅಂಗುಲ ತೋರದ ತಂತಿಯೊಂದು ದೊಡ್ಡ ಗಿರಣಿಗಳನ್ನು ನಡಿಸಬಲ್ಲುದಾಗುವುದು. ಇದು ಏನೂ ಸಾಮಾನ್ಯವಾದುದಲ್ಲ. ವಿದ್ಯುಚ್ಛಕ್ತಿಯು ಯಾವ ಅಖಂಡ ಆಶ್ಚರ್ಯಗಳನ್ನು ತೋರಿಸ ಬಲ್ಲುದೆಂದು ವರ್ಣಿಸಲು ಸಾಧ್ಯವಲ್ಲ. ಅದು ಬೆಳಕನ್ನು ಕೊಡುವುದು. ಉಷ್ಣವನ್ನು ಕೊಡುವುದು. ವೇಗವನ್ನು ಕೊಡುವುದು. ಪ್ರಚಂಡ ಜಲಪ್ರಪಾತಗಳ ಅನಿರುದ್ಧ ಶಕ್ತಿಯು ವಿದ್ಯುಚ್ಛಕ್ತಿಗೆ ಪರಿವರ್ತಿಸಲ್ಪಟ್ಟು, ಅದರ ನೀರು ಜಮೀನುಗಳ ಉಪಯೋಗಕ್ಕೆ ಕೊಡಲ್ಪಡುತ್ತಿರುವುದು.

ಯಾವ ವೈದ್ಯಶಾಸ್ತ್ರವು ಆಯುರ್ವೇದವನ್ನೂ ಯುನಾನಿಯನ್ನೂ ಮೆಲ್ಲನೆ ಹಿಂದೂಸ್ಥಾನದೊಳಗಿನ ಅವುಗಳ ಪ್ರಾಬಲ್ಯದಿಂದ ದೂರ ಮಾಡುತ್ತಿರುವುದೊ ಅದು ಸುಮ್ಮನೆ ಇಲ್ಲ. ನಮ್ಮ ಜನರು ಆಯುರ್ವೇದವು ಏಕೆ ಮಹತ್ವದ್ದಾಗಿದೆ? ಎಂಬದನ್ನು ರುಜುಪಡಿಸುವುದರಲ್ಲಿಯೇ ನಿರತರಾಗಿರುವರು ಹೊರತು, ಅದರೊಳಗಿನ ದೋಷಗಳನ್ನು ತಿದ್ದಿಗೆದು ಅದರ ಅಭಿವೃದ್ಧಿ ಮಾಡುವುದರಲ್ಲಿ ಚಿಂತಿತರಾಗಿಲ್ಲ. ನೆನಪಾದಾಗ ಧನ್ವಂತರಿಯ ಪೂಜೆಯೂ, ಅಗತ್ಯಬಿದ್ದಾಗ ಆಯುರ್ವೇದದ ಸಮರ್ಥನವೂ, ಕೊಚ್ಚುವಾಗ ಆಯುರ್ವೇದದಲ್ಲಿ ಪಾಶ್ಚಾತ್ಯ ವೈದ್ಯಕ್ರಿಯೆಗಳೆಲ್ಲವೂ ಇವೆ ಎಂಬ ಅಂಬೋಣವೂ ಈ ಆಯುರ್ವೇದೀಯರಿಂದ ತೋರಿಸಲ್ಪಡುತ್ತಿದೆಯೇ ಹೊರತು, ರೋಗಗಳ ಲಕ್ಷಣಗಳ ನೂತನ ಅಭ್ಯಾಸವನ್ನಾಗಲಿ, ಮೂಲಿಕೆಗಳ ನೂತನಶೋಧಗಳನ್ನಾಗಲೀ, ರೋಗಚಿಕಿತ್ಸೆಯ ಹೊಸ ತತ್ವಗಳನ್ನಾಗಲೀ, ಯಾರೊಬ್ಬರೂ ಕಂಡುಹಿಡಿಯುವುದಿಲ್ಲ. ಆದರೆ ಪಾಶ್ಚಾತ್ಯರ ರಾಸಾಯನಿಕ ಶೋಧ ಮಂದಿರಗಳಲ್ಲಿ (Laboratories) ನೂತನ ಆವಿಷ್ಕಾರಗಳ ಬಗ್ಗೆ ನಿರಂತರವೂ ಪರಿಶ್ರಮವು ನಡೆಯುತ್ತಲೇ ಇದೆ. ನಾವು ಒಂದು ಕ್ರಮದಲ್ಲಿ ವಿಶ್ವಾಸಹೊಂದಿದರೆ ಇನ್ನೊಂದು ಕ್ರಮವನ್ನು ಹುಡುಕುವುದಿಲ್ಲ; ಮಾತ್ರವಲ್ಲದೆ, ಯಾರಾದರೂ ಒಂದು ಬಾರಿ ಹುಡುಕಿದರೆ ಅದನ್ನು ನಿರೋಧಿಸುವೆವು. ಪಾಶ್ಚಾತ್ಯರಲ್ಲಿ ಹಾಗಲ್ಲ; ನೂತನ ನೂತನ ಚಿಕಿತ್ಸಾ ಕ್ರಮಗಳು ಒಂದೇ ವಿಶಾಲ ದೃಷ್ಟಿಯಿಂದ ಕಂಡುಹಿಡಿಯಲ್ಪಟ್ಟಿವೆ. ವೈದ್ಯಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಗಳು ಸಾಮಾನ್ಯವಾಗಿ ಒಟ್ಟೊಟ್ಟಾಗಿ ಬೆಳೆದುವು. ಆ ಮೇಲೆ ಈಗ ಇಂಜಕ್ಷನ್ ಮತ್ತು ಗ್ಲೆಂಡ್ (Gland) ಚಿಕಿತ್ಸೆಗಳು ಆರಂಭವಾಗಿ ಅವುಗಳೊಡನೆಯೇ ಪ್ರಯೋಗಿಸಲ್ಪಡುತ್ತಿವೆ.

ಇಂತಹ ಆವಿಷ್ಕಾರಗಳು ಸುಮ್ಮನೆ ಆಗಲಿಲ್ಲ. ಇವುಗಳಲ್ಲಿ ಸಾಹಸವೂ ಇದೆ. ಪಾಶ್ಚಾತ್ಯ ವೈದ್ಯನು ತನ್ನ ಶೋಧದ ಪರೀಕ್ಷೆಗಾಗಿ ತನ್ನ ಮೇಲೆಯೇ ಪ್ರಯೋಗಗಳನ್ನು ಮಾಡಿ ಆತ್ಮಯಜ್ಞವನ್ನು ಮಾಡಲು ಹಿಂದೆಗೆಯಲಿಲ್ಲ; ರಾಸಾಯನಿಕನು ಕಠಿಣ ವಿಷಗಳೊಡನೆ ಆಡಿ ಪ್ರಾಣನಷ್ಟ ಮಾಡಿಕೊಳ್ಳದೆ ಇಲ್ಲ; ವೈಮಾನಿಕರು ಒಬ್ಬರ ಹಿಂದೊಬ್ಬರಾಗಿ ಬಂದು ಬಿದ್ದು ನಾಶಹೊಂದುತ್ತಿರುತ್ತಾರೆ; ವ್ಯಾಪಾರಿಗಳು ತಮ್ಮ ಸರ್ವಸ್ವವನ್ನೂ ಭಂಡವಾಳಕ್ಕೆ ಹಾಕಿ ನಷ್ಟಹೊಂದಿ ಬಡವರಾಗುತ್ತಾರೆ; ಹೀಗೆ ಪ್ರತಿ ಒಬ್ಬನೂ ಈ ವಿಶಾಲ ಅಭಿವೃದ್ಧಿಯಲ್ಲಿ ತನ್ನ ತನ್ನ ಭಾಗದ ಬಲಿಯನ್ನಿತ್ತು ಸಮಸ್ತರ ಹಿತವನ್ನು ಕಟ್ಟಿದ್ದಾನೆ.

ನಮ್ಮಲ್ಲಿ ಅಂತಹ ಆ ಉದಾರ ಮಾನಸಿಕತೆಯು ಇರುವುದಿಲ್ಲ. ಆದುದರಿಂದಲೇ ನಮ್ಮಲ್ಲಿ ಯಾರೊಬ್ಬರಿಗೂ ಒಳ್ಳೆಯದಾಗುವುದಿಲ್ಲ. ನಾವು ನಾಗರಿಕತೆಯನ್ನು ಖಂಡಿಸುತ್ತೇವೆ. ನೂತನ ಆವಿಷ್ಕಾರಗಳು ಮುಂದಿನ ಯುದ್ಧದ ಸೂಚನೆಯೆನ್ನುತ್ತೇವೆ. ಆದರೆ ಯುದ್ಧಕ್ಕೆ ಮತ್ತು ನಾಶವನ್ನು ಸಾಧಿಸಲಿಕ್ಕೆ ವಿಜ್ಞಾನವು ಅಗತ್ಯವಿಲ್ಲ. ತೈಮೂರಲೇನನು ಹಿಂದೂಸ್ಥಾನಕ್ಕೆ ಬಂದಾಗ, ಅವನೊಡನೆ ಮದ್ದು ಗುಂಡುಗಳಿರಲಿಲ್ಲ. ಒಂದು ಅನುಕೂಲ ಬೆಂಕಿಪೆಟ್ಟಿಗೆ ಕೂಡ ಇದ್ದಿತೊ ಸಂದೇಹ; ಆದರೂ ಇಡೀ ಉತ್ತರ ಹಿಂದೂಸ್ಥಾನವನ್ನು ಅವನು ಉರಿಯಬಲ್ಲನಾದನು; ಮಹಮ್ಮದ ಘಜ್ನಿಯೊಡನೆ ವಿಮಾನಗಳಿರಲಿಲ್ಲ. ಆದರೂ ದೇಶದ ಮಧ್ಯದಲ್ಲಿ ಹೋಗಲು ಕಠಿಣವಾದ ಸ್ಥಳದಲ್ಲಿ ದೇವಸ್ಥಾನಗಳನ್ನು ಅವನು ಕೆಡಹಬಲ್ಲನಾದನು; ವಾಯರ್ಲೆಸ್ ವಾರ್ತಾ ಪ್ರಚಾರವಿಲ್ಲದಿದ್ದರೂ ಅಲೆಕ್ಸಾಂಡರನು ವಿಜಯಭೇರಿಯನ್ನು ಹೊಡೆಯುತ್ತ ಹಿಂದೂಸ್ಥಾನದ ವರೆಗೆ ಬಂದು ಹಿಂದೆ ಹೋಗಬಲ್ಲನಾದನು. ವೈಜ್ಞಾನಿಕ ಶೋಧಗಳ ಕೆಡುಕಿನ ವಿಷಯವು ಮಹತ್ವದ್ದಲ್ಲ. ಆದರೆ ಅವು ಲೋಕಜೀವನದ ಮೇಲೆ ಉಂಟುಮಾಡಿರುವ ಪರಿಣಾಮವು ಮಹತ್ವದ್ದು.

ವಿಜ್ಞಾನ ಚಿಟಿಕೆಗಳು

ಮನುಷ್ಯನ ರಕ್ತಕ್ಕೂ ಏರಿಳಿತಗಳಿವೆ-ಇವುಗಳನ್ನು ಗ್ರಹಗಳು ಉಂಟುಮಾಡುತ್ತವೆ.

ಸಮುದ್ರದ ನೀರಿಗೆ ಹೇಗೆ ಏರಿಳಿತಗಳಿವೆಯೋ ಹಾಗೆಯೇ ಮನುಷ್ಯನ ರಕ್ತಕ್ಕೂ ಏರಿಳಿತಗಳಿವೆಯೆಂದೂ, ಸಮುದ್ರದ ನೀರಿನ ಏರಿಳಿತಗಳನ್ನು ಚಂದ್ರನು ಉಂಟುಮಾಡುವಂತೆ ಮನುಷ್ಯನ ರಕ್ತದ ಏರಿಳಿತಗಳನ್ನು ಯಾವವೋ ಗ್ರಹಗಳು ಉಂಟುಮಾಡುತ್ತವೆಯೆಂದೂ ವಿಜ್ಞಾನ ಶಾಸ್ತ್ರಜ್ಞಾನಿಗಳಾದ ಡಾ|| ಪಿ. ಇ. ಮೊರ್‌ಹಾರ್ಟ್ (Dr P. E. Morhardt) ಎಂಬೊಬ್ಬ ಫ್ರೆಂಚರ ಹೊಸಶೋಧವಾಗಿದೆ. ಮನುಷ್ಯನ ಶರೀರದ ಶಾಖವು ಮಧ್ಯಾಹ್ನದ ಮೇಲೆ ಮೆಲ್ಲಮೆಲ್ಲಗೆ ಸ್ವಲ್ಪಸ್ವಲ್ಪವಾಗಿ ಏರುತ್ತ ಸಾಯಂಕಾಲ ನಾಲ್ಕೈದು ಗಂಟೆಗೆ ತನ್ನ ಉಚ್ಚತ್ವವನ್ನು ತಲಪಿ, ನಂತರ ಕ್ರಮಕ್ರಮವಾಗಿ ಇಳಿಯುತ್ತ ಪ್ರಾತಃಕಾಲದಲ್ಲಿ ಮೊದಲಿನ ಇಳಿತವನ್ನು ತಲಪುತ್ತದೆ. ಇದೇ ರೀತಿಯಿಂದ ಏರಿಳಿತಗಳು ನಾಡಿಯ ಬಡಿತಗಳ ಸಂಖ್ಯೆಗೂ, ಉಸಿರಾಡುವ ವಾಯುವಿನಲ್ಲಿ ಆಮ್ಲಜನಕ ವಾಯುವನ್ನು ಹೀರುವ ಪರಿಮಾಣಕ್ಕೂ, ರಕ್ತವು ಚಲನೆಯಾಗುವ ಜೋರಿಗೂ (Blood-pressure) ಇವೆ. (ಲೋ. ರ.)

ಒಂದಿಷ್ಟು ನಗು.

(ಸಂಗ್ರಹಿತವಾದುದು)

ಉಪಾಧ್ಯಾಯನು ಹುಡುಗನಿಗೆ ಮೋಟಾರ್‌ಕಾರನ್ನು ವಿವರಿಸುತ್ತಿದ್ದನು. ಎಲ್ಲವನ್ನೂ ವಿವರಿಸಿದ ಮೇಲೆ ಒಬ್ಬ ಹುಡುಗನನ್ನು ಕುರಿತು—'ವೆಂಕಟ,-ಈಗ ಹೇಳು,-ಮೋಟರ್ ಕಾರಿನಲ್ಲಿ ಎಲ್ಲದಕ್ಕಿಂತಲೂ ಹೆಚ್ಚಿನ ಅಪಾಯಕರವಾದುದು ಯಾವುದು?' ಎಂದನು.

ವೆಂಕಟ—ಡ್ರೈವರ್, ಸಾರ್.

§ § § § §

ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಚರ್ಮವನ್ನು ಹದಮಾಡುವ ಕೈಗಾರಿಕೆಯ ತರಬೇತನ್ನು ಕೊಡಬೇಕೆಂದು ಗೊತ್ತಾಗಿದೆ

ಶಾಲಾ ಹುಡುಗರಿಗೆ ದಿಗಿಲು ಬಿದ್ದಿದೆ!

§ § § § §

ಹೊಸದಾಗಿ ಮೋಟಾರಕಾರು ಪಡಕೊಂಡವನು:—ಮೋಟಾರಕಾರನ್ನು ಡ್ರೈವ್ ಮಾಡಲಿಕ್ಕೆ ಕಲಿಯುವಾಗ ಮೊದಲು ನಾನು ಏನು ಮಾಡಬೇಕು?

ಅನುಭವಸ್ಥ:-ಕಾರನ್ನು ಇನ್ಶೂರ್ ಮಾಡಿಕೊಳ್ಳಬೇಕು,

§ § § § §

ಇಂಗ್ಲೀಷ್ ಉಪಾಧ್ಯಾಯ (ಡ್ಯಾರೆಕ್ಟ್‌ಮೆಥಡ'):-ಎರಡು ಕಾರ್ಯಗಳು ಒಂದೇ ಸಮಯದಲ್ಲಿ ನಡೆದರೆ co-incidence ಅನ್ನುತ್ತಾರೆ. ರಂಗಾ, ಒಂದು ಉದಾಹರಣೆ ಕೊಡು.

ರಂಗ:—ನನ್ನ ಅಪ್ಪನ ಮದುವೆ ಮತ್ತು ಅಮ್ಮನ ಮದುವೆ ಒಂದೇ ಸಮಯದಲ್ಲಿ ಆಯಿತು.

§ § § § §

ಡಾಕ್ಟರ್ (ರೋಗಿಯ ಹೆಂಡತಿಯನ್ನು ಕುರಿತು):—ಸ್ವಚ್ಛವಾದ ವಾಯುವು ಬರುವುದಕ್ಕಾಗಿ ನಾನು ಹೇಳಿದ ಪ್ರಕಾರ ಕೋಣೆಯ ಎರಡೂ ಕಿಟಕಿಗಳನ್ನು ತೆರೆದರೇ?

ರೋಗಿಯ ಹೆಂಡತಿ—ಹೂಂ, ಅಂದರೆ ಇಲ್ಲ. ಕೋಣೆಗೆ ಒಂದೇ ಕಿಟಕಿ ಇದೆ. ಆದರೆ ಅದನ್ನು ಎರಡು ಸಲ ತೆರೆದೆ.

§ § § § §

ಭಾಷಣಕಾರರ ವಿಷಯವು "ಇನ್ ಸೋಮಿನಿಯಾ" (ಅಂದರೆ ನಿದ್ರೆಬಾರದಿರುವ ರೋಗ). ಭಾಷಣವು ಅರ್ಧ ಮುಗಿಯುವ ಮೊದಲೇ ಸಭಿಕರೆಲ್ಲರಿಗೆ ಗುಣವಾಯಿತು

§ § § § §

"ಕುರುಡನಿಗೆ ಒಂದಾಣೆ ಧರ್ಮ ಮಾಡಿರಿ, ಸ್ವಾಮಿಗಳಾ"
"ಆದರೆ ನಿನ್ನ ಒಂದು ಕಣ್ಣು ಮಾತ್ರವೇ ಕುರುಡು!"
"ಹಾಗಾದರೆ ಅರ್ಧಾಣೆ ಕೊಡಿ, ಸ್ವಾಮಿಗಳಾ"

§ § § § §

ಹೊಟೇಲಿನ ಆಳು (ಯಜಮಾನನಿಗೆ)—ಈ ಅನ್ನವು ನಾಯಿಗೆ ಸಹ ಅಯೋಗ್ಯವೆಂದು ಅವರು ಹೇಳುತ್ತಾರೆ ಸ್ವಾಮಿ.

ಯಜಮಾನ— ಹಾಗಾದರೆ ಅದನ್ನು ಒಳಗಿಟ್ಟು ನಾಯಿಗೆ ಯೋಗ್ಯವಾದ್ದನ್ನು ಬಡಿಸೋ, ಹುಚ್ಚ!

§ § § § §

ಡಾಕ್ಟರರು:—ನನಗೆ, ಡಾಕ್ಟರರಿಗೆ, ಈ ಲೋಕದಲ್ಲಿ ಬಹಳ ಶತ್ರುಗಳಿದ್ದಾರೆ.

ಹತ್ತಿರದವನು:—ಮತ್ತು ಪರಲೋಕದಲ್ಲಿ ಮತ್ತೂ ಹೆಚ್ಚು ಇದ್ದಾರೆ.

§ § § §

ಒಬ್ಬಳು—ನಿನ್ನ ಮಗಳು ಬಹಳ ಲಜ್ಜಾಶೀಲಳಾಗಿದ್ದಾಳೆ. ಯಾವಾಗಲೂ ತಲೆಬಗ್ಗಿಸಿ ಕೆಳಗೆ ನೋಡುತ್ತಿದ್ದಾಳೆ.

ಮತ್ತೊಬ್ಬಳು—ಹೌದು; ಯಾಕಂದರೆ ಒಂದು ಸಾರಿ ಅವಳಿಗೆ ಒಂದು ರೂಪಾಯಿ ಸಿಕ್ಕಿಯದೆ.

§ § § §

ಅತ್ತೆ— ಈಗ ನನ್ನ ಮಗಳನ್ನು ಮದುವೆಯಾದಿ. ಇನ್ನು ಹಿಂದಿನ ಹಾಗೆ ಹೆಚ್ಚು ಕೆಲಸಗಳನ್ನು ಮಾಡಬಾರದು.

ಅಳಿಯ—ಇಲ್ಲ; ಇದೇ ನನ್ನ ಕೊನೆಯದಾಗಿದೆ.

§ § § §

ಉಪನ್ಯಾಸಕ (ಒಂದು ಹಳ್ಳಿಯ ಶಾಲೆಯಲ್ಲಿ):—ನಮ್ಮ ಆಹಾರದಲ್ಲಿ ಇನ್ನೊಂದು ಮುಖ್ಯ ವಿಷಯವಿದೆ. ಇದಕ್ಕೆ ಇಂಗ್ಲಿಷಿನಲ್ಲಿ "ವೈಟಮಿನ್ ಸಿ" ಎಂದು ಹೇಳುತ್ತಾರೆ. ಈ 'ವೈಟ್‌ಮಿನ್ ಸಿ'ಗೆ ಯಾವ ಸ್ಥಳ ಕೊಡೋಣ?......

ಬೋರೇ ಗೌಡ (ಬೇಸರದಿಂದ ಎದ್ದು):—ಬುದ್ಧೀ, ನನ್ನ ಸ್ಥಳ ಕೊಡ್ತೇನೆ. ನಾನು ಮನೆಗೆ ಹೋಗುತ್ತೇನೆ.

§ § § §

ಹೆಂಡತಿ:—ನಾನು ಹಾಡುವಾಗ ನೀವೇಕೆ ಹೊರಗೆ ಹೋಗುತ್ತೀರಿ?

ಗಂಡ:—ನಾನು ನಿನ್ನನ್ನು ಹೊಡೆಯುತ್ತೇನೆಂದು ಜನರು ತಿಳಿದಾರೆಂದು.

...ಕೊಟ್ಟು ನಿಯೋಗಿಗಳನ್ನು ತಮ್ಮಂದಿಯರಿದ್ದಲ್ಲಿಗೆ ಕಳು
...ತಮ್ಮಂದಿಯರು ಈ ಸಂಗತಿಯನ್ನು ಕೈಲಾಸ ಪರ್ವ
...ತಂದೆಯಾದ ವೃಷಭ ಸ್ವಾಮಿಯವರಿಗೆ ತಿಳಿಸಿ
...ಸ್ವಾಮಿಯವರು, "ನಿಮಗೆ ಈ ರಾಜ್ಯವೂ ಬೇಡ,
...ನಿಗೆ ಅಡ್ಡಬೀಳುವುದೂ ಬೇಡ" ಎಂದು ಹೇಳಿ
...ತಂದೆಯ ಆಜ್ಞೆಯನ್ನು ಶಿರಸಾವಹಿಸಿ
...ಭರತೇಶ್ವರನಿಗೆ ಬಿಟ್ಟು ಕೊಟ್ಟು ಸನ್ಯಾಸಿಗಳಾದರು.

...ಮೇಲೆ ಭರತೇಶ್ವರನು ಭುಜಬಲಿಯವರು ಆಳಿ
...ನಪುರಕ್ಕೆ ತನ್ನ ಮಂತ್ರಿಯಾದ ವಚೋಹರ
...ನು. ಆ ಮಂತ್ರಿಯು ಭುಜಬಲಿಯವರು
...ಗಿ ಅಣ್ಣನಿಗೆ ಕಪ್ಪಕೊಟ್ಟು ಆಳಬೇಕೆಂದು
...ದನು. ಭುಜಬಲಿಯವರು ಇದಕ್ಕೆ ಒಪ
...ಕಡೆಯವರು ಯುದ್ಧಕ್ಕೆ ಸಿದ್ಧರಾದರು
...ಎರಡು ಕಡೆಯ ಮಂತ್ರಿಗಳು, "ಯುದ್ಧವನ್ನು
...ಕಡೆಯ ಪ್ರಜೆಗಳಲ್ಲಿ ಅನೇಕರು ಮರಣ
...ಆಗುದರಿಂದ. ದೃಷ್ಟಿಯುದ್ಧ, ಜಲಯುದ್ಧ,
...ಮೂರು ಬಗೆಯ ಯುದ್ಧಗಳನ್ನು ಮಾಡು
...ಇವರಲ್ಲಿ ಯಾರು ಜಯಿಸುವರೋ ಅವರೇ
...ಎಂದು ಈ ಸಹೋದರರಿಗೆ ಹೇಳಿದರು.

...ಭರತೇಶ್ವರನೂ ಭುಜಬಲಿಯವರೂ ಚತು
...ನ್ನು ನಿಲ್ಲಿಸಿದರು. ಇಬ್ಬರೂ ಮೊದಲು
...ಮಾಡಲಾರಂಭಿಸಿದರು. (ದೃಷ್ಟಿಯುದ್ಧ
...ದೆ ಒಬ್ಬನು ಇನ್ನೊಬ್ಬನನ್ನು ನೋಡುವುದು)
...ಮುಚ್ಚುವನೊ ಅವನು ಸೋತನೆಂದಾ
...ದಲ್ಲಿ ಭರತೇಶ್ವರನು ಸೋತುಹೋದನು.

...ಯುದ್ಧ ಮಾಡುವುದಕ್ಕಾಗಿ ಇಬ್ಬರೂ
...ಭುಜಬಲಿಯವರು ದೀರ್ಘಕಾಯರಾಗಿಯೂ
...ಇದ್ದರು. ಭರತೇಶ್ವರನು ಗಿಡ್ಡಗಾ
...ಯೂ ಇದ್ದನು. ಇಬ್ಬರೂ ಕೆರೆಯಲ್ಲಿ
...ನೀರಿನಿಂದ ಹೊಡೆದುಕೊಳ್ಳಲಾರಂಭಿ
...ನು ಹೊಡೆದ ನೀರು ಭುಜಬಲಿಯವರ
...ಭುಜಬಲಿಯವರು ಹೊಡೆದ ನೀರಿ
...ಗೆ ಕಣ್ಣುಬಿಟ್ಟು ನೋಡಲಿಕ್ಕಾಗಲಿಲ್ಲ.
...ಯುದ್ಧದಲ್ಲಿಯೂ ಗೆದ್ದರು. ಆ ಮೇಲೆ
...ಕ್ಕೆ ನಿಂತರು. ಬಹಳ ಸಮಯದ
...ಭುಜಬಲಿಯವರು ಭರತೇಶ್ವರನ ಕಾಲಿಗೆ
...ತಿರುಗಿಸಿದರು. ಆದರೆ ಅಣ್ಣನಾದ್ದರಿಂದ
...ಉರುಳಿಸಬಿಡದೆ ಹೆಗಲ ಮೇಲೇರಿಸಿ
...ಯುದ್ಧದಲ್ಲಿಯೂ ಭುಜಬಲಿಯವರು ಜಯಿ

...ರೂ ಭುಜಬಲಿಯವರಿಗೆ ರಾಜ್ಯವಾಳುವ
...ರಾಜ್ಯಭೋಗಗಳಲ್ಲಿಯೂ ಸಂಸಾರದ
...ದುಃಖವೇ ಇದೆ ಎಂದು ತಿಳಿದು ತನ್ನ
...ಗೆ ಪಟ್ಟಗಟ್ಟಿದರು. ಅನಂತರ ಅಣ್ಣ
...ಭುಜಬಲಿಯವರು ಸನ್ಯಾಸಿಯಾದರು.
...ರಾಗದೆ ಆಹಾರವನ್ನು ಬಿಟ್ಟು ಬಿಟ್ಟು
...ಯೋಗಸಾಧನೆಯನ್ನು ಮಾಡಿದರು.
...ಸಾಧನೆಗೆ ಪ್ರತಿಮಾಯೋಗವೆಂದು ಹೇಳು

...ನಿಂತುಕೊಂಡು ಯೋಗಸಾಧನೆಯಲ್ಲಿ
...ಸ್ಥಳದಲ್ಲಿರುವ ಬಳ್ಳಿಗಳು ಅವರ
...ಸಿಕೊಂಡಿತು. ಕಾಲಡಿಯಲ್ಲಿ ಗೆದ್ದಲು
...ಲಾರಂಭಿಸಿದವು. ಹುತ್ತಗಳಲ್ಲಿರುವ ಹಾವಿನ
...ಕಾಲುಗಳನ್ನು ಸುತ್ತಿಕೊಂಡವು. ತಲೆಯ
...ಹೆಗಲ ಮೇಲೆ ಬೀಳಲಾರಂಭಿಸಿತು.
...ಬೆಳೆಯುತ್ತಲೇ ಇತ್ತು. ಆ ಕಾಲದಲ್ಲಿ
...ಪೂಜಿಸುತ್ತಾ ಇದ್ದನು. ಪ್ರತಿಮಾ
...ಬಲಿಯವರು ಕೈಲಾಸದಲ್ಲಿರುವ ಮೊದ
...ಸನ್ನಿಧಿಯಲ್ಲಿ ಸೇರಿಕೊಂಡರು.

...ಭುಜಬಲಿಯವರ ಪ್ರತಿಮೆಗಳನ್ನು ತಯಾರಿಸಿ
...ಬೆಟ್ಟಗಳ ಮೇಲೆ ಪ್ರತಿಷ್ಠಿಸಿರುತ್ತಾರೆ.
...ಅಡಿ ಉದ್ದವಾದ ಒಂದು ಪ್ರತಿಮೆಯು
...ದೇಶದಲ್ಲಿರುವ ಶ್ರವಣಬೆಳುಗುಳದಲ್ಲಿದೆ. ಇನ್ನೊಂದು
...ಇದು ೪೫ ಅಡಿ ಉದ್ದವಿದೆ, ವೇಣೂರಿ
...ಅಡಿ ಎತ್ತರವಾಗಿದೆ. ೨೦ ಅಡಿ ಎತ್ತರವಾದ
...ಪ್ರತಿಮೆಯನ್ನು ಮೈಸೂರು ಮಲೆನಾಡಿನಲ್ಲಿರುವ
...ಒಂದು ಬೆಟ್ಟದ ಮೇಲೆ ಇದ್ದುದನ್ನು
...ಯಲ್ಲಿ ಕುಡುಕಿ ತೆಗೆದಿರುವರು.

(ಮುಂದುವರಿಯುವುದು)

ಎಲ್ಲೆಲ್ಲಿಯೂ ಸಂಗೀತ.

(ಲೇಖಕರ:—ಶ್ರೀ ಎಮ್.)

ನಡುರಾತ್ರಿ; ನಾನು ಗಾಢ ನಿದ್ರೆಯಲ್ಲಿದ್ದಾಗ ಮೂಗು ಬಾಯಿಗಳಿಂದ ಹೊರಸೂಸುವ ಆ ಸಂಗೀತವೇ ಸಂಗೀತ. ನನ್ನ ಗಾನದೊಡನೆ ತಾನವಿಡಲು ಸೊಳ್ಳೆಗಳು ಮೂಗಿನ ರೋಮಗಳನ್ನೇರಿದು ಬಾಯಲ್ಲೇ ಇಳಿದು ಅಲ್ಲೇ ಗಾಯನಕಚೇರಿಯನ್ನು ಜರಗಿಸುವುವು. ನನ್ನ ಗೊರಕೆಯು ರಭಸದಲ್ಲಿ ಅವರ ಜಲಸಾ ಕೇಳಿಸದು. ಅಂತೂ ಅವು ನನ್ನಲ್ಲಿ ಗುರುಭಕ್ತಿಯನ್ನಿರಿಸಿ ಶಿಷ್ಯಸ್ವಭಾವ ನಮ್ರತೆಯಿಂದ ನನ್ನ ಕಿವಿಯ ಹೆಬ್ಬಾಗಿಲನ್ನು ತಟ್ಟಿ ಸ್ವಾಮಿ ಎಂದು ಸವಿನಯವಾಗಿ ನಮಸ್ಕಾರವನ್ನರ್ಪಿಸುವುವು. ಇದರಿಂದ ನಿದ್ರಾಭಂಗವಾಗಿ ನಾನು ಎದ್ದು ಕೋಪದಿಂದ ಕೈ ಬೀಸಿದೊಡನೆಯೇ ಅವೆತ್ತಲೋ ಓಡಿಹೋಗಿ ಕೈಯು ಕೆನ್ನೆಗೆ ಬಡೆದು ನೋವು ಉಂಟಾಗುವುದು. ಸಾಲದುದಕ್ಕೆ ಆಚೇ ಮನೆಯಲ್ಲಿ ಇನ್ನೂ ಮದುವೆಯಾಗದ ೧೬ನೇ ಹದ್ದು ಮೀರಿದ ಹುಡುಗಿಯೊಬ್ಬಳು ನವಯುವಕರ ಪಿತರುಗಳ ಮನಸ್ಸನ್ನು ಆಹ್ಲಾದಗೊಳಿಸಲು ಸಾಂಗ್ಲೇಕಾರ ಕಂಪೆನಿಯು ಕಾಲದ ಹಾರ್ಮೋನಿಯಮಿನ ಸಪ್ತಸ್ವರಗಳನ್ನೆಬ್ಬಿಸಿ 'ನಿಲ್ಲೆಲೋ ನಿಲ್ಲೆಲೊ ನೀಚನೇ' ಎಂದು ಪದ ಬಾರಿಸುವಳು. ಈ ತಂಟೆಯನ್ನು ಯಾರೊಡನೆ ದೂರಲಿ. ಏಕಾದಶೀ ಭಜನೆಗಾಗಿ ತಾಲಮದ್ದಳೆಗಳನ್ನು ಬಾರಿಸಿ ಹತ್ತಿಪ್ಪತ್ತು ಭಕ್ತರು 'ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಂ' ಎಂದು ಬೊಬ್ಬಿಟ್ಟು ಉಪವಾಸ ಮಾಡದಿದ್ದರೂ ರಾತ್ರಿಯೆಲ್ಲಾ ಜಾಗರಣೆ ಮಾಡಿದ ಪುಣ್ಯವನ್ನು ದೊರಕಿಸಿಕೊಳ್ಳುವ ಹಾಗೆ ಸಾಧಿಸುತ್ತಾರೆ.

೧೨ ತಿಂಗಳುಗಳಲ್ಲಿ ೧೩ ಸಲ ಹುಲಿ ಕರಡಿ ಚಟ್ಟಿ ವೇಷಗಳನ್ನು ಹಾಕಿ ಓಣಿಯಿಂದೋಣಿಗೆ ಓಡುತ್ತ ಡೋಲು ದೀವಿಟಿಗೆಗಳಿಂದ ದಾಳಿಯಿಡುವ ಅವರ ಮಾತೇ ಬೇರೆ. ಹಾಗೂ ವೇಷಗಳು ಮಿಂದ ಕೆಲವು ಹಪ್ತೆಗಳ ತನಕ ಅಲ್ಲಲ್ಲಿ ಏನೂ ಕೆಲಸವಿಲ್ಲದ ಸಣ್ಣ ಪೋರರು ಹಳೇ ದಬ್ಬಿಗಳನ್ನು ಬಾರಿಸಿ ಅದರ ಧ್ವನಿಸಾಲದುದಕ್ಕೆ ಡಡ್ಡರ ಡಡ್ಡರ ಎಂದು ಕಿರಿಚಿ ನಿದ್ದೆ ಹತ್ತಲಿಕ್ಕೆ ಬಿಡುವುದೇ ಇಲ್ಲ. ಇದರಿಂದ ನಿದ್ರಾಭಂಗವಾಯಿತೆಂದು ದೂರಿದರೆ ಅವರ ತಾಯಂದಿರು ಓಡಿ ಬಂದು "ಮಕ್ಕಳ ಮೊಗನೋಡದವ, ಬಂಜೆಮಗಾ, ಭಾರೀ ಸಾಧು" ಎಂಬಿತ್ಯಾದಿಯಾಗಿ ಹೊಗಳಲು ಪ್ರಾರಂಭಿಸುವರು.

ಬೆಳಗಾಗುತ್ತಲೇ ಮಕ್ಕಳು ತಮ್ಮ ಪಾಠಪುಸ್ತಕಗಳನ್ನು ತೆರೆದು ವಿದಿಶಾಪುರದೊಳಗೆ ಬಾಲಕನಿಗೊಬ್ಬಗೆ ಮರಣವಾಗಲು ಬಂಧುಗಳು ಪಿತೃವನಕೆ ಕೊಂಡೊಯಿದೂ ಎಂದು ಬೆಳಗಾತ—ಉದಯರಾಗಕ್ಕಾರಂಭಿಸುವುವು. ಹೇಗೂ ಬಾಗಿಲು ತೆರೆದು ಹೊರಗೆ ನೋಡಿದರೆ—ಅಲ್ಲಿ ಶಿಂಗಾರಿ ಪಾಟಿನ ಮಹಾಮಾಯೆಗಳು ನಾನಾ ಹಾವಭಾವಗಳಿಂದ 'ಗಂಗಮ್ಮಾ ಇದ್ದಾರೇ ಸುಬ್ಬಮ್ಮಾ ಬರುತ್ತಾರೇ' ಎಂದು ಕುಲದಲ್ಲಿ ಅಳಿದು ಹೋದ ಹಳೇ ಪತಿವ್ರತೆಯರ ಪ್ರಾತಃಸ್ಮರಣೆಗೈಯ್ಯುವರು. ಇದತ್ತ ಬಿದ್ದಿರಲಿ ಎಂದು ಹಿತ್ತಿಲಿನ ಕಡೆಗೆ ಧಾವಿಸಿದರೆ ಸುತ್ತಲಿನ ವರಾಹವೃಂದವು ಕೆಣಕುತ್ತಿರುವುದರಿಂದ ಮನಶ್ಶಾಂತಿಗಾಗಿ ಯಾರೋ ಒಬ್ಬನು 'ಎನಿತಾಂ ಬಣ್ಣಿಪೇ ಹರಿಮಂದಿರದಾ ಮಹಾವಿಭವವಾ' ಎಂದು ಹಾಡುತ್ತಾನೆ. ಅಯ್ಯೋ ತನ್ನ ಸಂಕಟವನ್ನು ಲೆಕ್ಕಿಸದೇ ಅಲ್ಲಿಂದಲೂ ಗಾನವೇ ಹೊರಡಬೇಕೇ?

ಹೇಗೂ ಕಾಫೀ ಕುಡಿದು ವೀಳ್ಯ ಸೇವಿಸಿ ಆಫೀಸಿಗೆ ಹೋಗಲು ಬಾಗಿಲಕಡೆ ಬರಲು ಅದಾವ ಭಾವೆಯೋ ಬಹುಶಃ ಹಿಂದೀ ಪ್ರಕಾರದ ನವೀನ ವಿಧವೋ ಏನೋ—ಗಂಡ, ಹೆಂಡತಿ ಮಕ್ಕಳು ಕೂಡಿ 'ಸಂಯ್ಯಾಕಾ ಭಂಯ್ಯಾ ಮೇರೇ, ಭಂಯ್ಯಾಕಾ ಸಂಯ್ಯಾ ತೇರೇ' ಎಂದು ಕಾಲಡಿಯಲ್ಲೇ ಸಾಷ್ಟಾಂಗವೆರಗಿದರೆ ಏನು ಮಾಡಬೇಕು? ಅಂತೂ ಇಂತೂ ಆಫೀಸಿಗೆ ಹೋದದ್ದಾಯಿತು; ಅಲ್ಲಿಯೂ ಸುತ್ತಲೂ ಗುಮಾಸ್ತರು ೨೨, ೨೪, ೩೩ ಎಂದು ಸಂಖ್ಯಾವಳಿಯನ್ನು ಪಂತುರಾವಳೀ ರಾಗದಲ್ಲಿ ಜುಮ್ಲಾ ಮಾಡಲು ತೊಡಗಿದರೆ ಇದಕ್ಕೇನು ನಿವಾರಣೆ? ದಣಿದ ತಲೆ ಕಾಫಿಯಿಂದಲಾದರೂ ಕಳೆ ಏರಲಿ ಎಂದು ಹೋಟೇಲಿಗೆ ಹೋಗಿ—ನಾನು ತೀರಾ ಬಡವಾ ಆದರೂ ತನ್ನ ಪಾಲನ್ನು ಅವನಿಗೆ ಅವನ ತಿಂಡಿಪಾನಗಳಿಗಾಗಿ ಕೊಡಲು ಮೇಜಿನ ಹತ್ತಿರ ನಡೆಯುವಾಗ—ಆ ಮುಸ್ರಿ ತೊಳೆಯುವ ಆಳು—'ಕೆಂಪು ಟೊಪ್ಪಿ ಕಪ್ಪು ಅಂಗೀ ಏಳು ಮುಚ್ಚಾಲ್' ಎಂದು ರಾಗದಲ್ಲಿಯೇ ಹಾಡಬೇಕೇ? ಏನು ಉಪದ್ರ!

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ದ. ಕ. ಜಿಲ್ಲಾ ಟೀಚರ್ ಮೆನೇಜರರ ಸಂಘದವರಲ್ಲೊಂದು ವಿಜ್ಞಾಪನೆ.

ಮೇಲ್ಕಂಡ ಸಂಘದ ವಾರ್ಷಿಕ ಸಮ್ಮೇಳನವು ಇದೇ ಬರುವ ತಾ. ೯—೧—'೨೮ರಲ್ಲಿ ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ, ಮಂಗಳೂರಲ್ಲಿ ಜರಗುವುದಾಗಿ ತಿಳಿಯುತ್ತೇನೆ. ಆ ವೇಳೆ ನನ್ನೀ ಕೆಳಗಿನ ಸೂಚನೆಗಳನ್ನು ಸಾಂಘಿಕರು ಸ್ವೀಕರಿಸಿಕೊಂಡು ಮನ್ನಗೊಳಿಸುವರಾಗಿ ನಂಬಿಕೆ.

೧. ಪ್ರಾಥಮಿಕ ಶಾಲೆಗಳಲ್ಲೆಲ್ಲಾ 'ಮೆಡಿಕಲ್' ಪರೀಕ್ಷಾ ಕ್ರಮವನ್ನು ಜ್ಯಾರಿಗೆ ತರುವಂತೆ ಸರಕಾರವನ್ನು ಪ್ರಾರ್ಥಿಸಿಕೊಳ್ಳುವುದು.

೨. ಹಳ್ಳೀ ಉಪಾಧ್ಯಾಯರ ಮೂಲಕ ಪ್ರತಿ ಹಳ್ಳಿಯಲ್ಲಿ ಔಷಧವನ್ನು ಕೊಡಿಸುವುದು.

೩. ವೇಕ್ಸಿನೇಟರುಗಳ ಕೆಲಸದ ಅನುಭವವನ್ನು ಯೋಗ್ಯರಾದ ಹಳ್ಳೀ ಉಪಾಧ್ಯಾಯರಿಗೆ ಕೊಡಿಸಿ ಆ ಕೆಲಸವನ್ನು ಅವರಿಂದಲೇ ಮಾಡಿಸುವುದು.

೪. ಟೀಚರ ಮೆನೇಜರರಿಗೂ ಎಲ್ಲಾ ಉಪಾಧ್ಯಾಯರಿಗೂ ಕಡವಿನ ಫೀಸಿನ ರಿಯಾಯತಿ.

೫. ಲೇಜಿಸ್ಲೇಟಿವ್ ಕೌನ್ಸಿಲಿಗೆ ಸಹ ಮತಕೊಡುವ ಅಧಿಕಾರವನ್ನು ಉಪಾಧ್ಯಾಯರಿಗೆ ಕೊಡಿಸುವುದು.

೬. ಪ್ರತಿ ಶಾಲೆಗಳಲ್ಲಿಯೂ ಒಂದೊಂದು 'ಸ್ಕೌಟ್ ಟ್ರೂಪ'ನ್ನು ಏರ್ಪಡಿಸುವುದು.

೭. ಹೈಸ್ಕೂಲಿನ S. S. L. C. ಕ್ಲಾಸುಗಳಿಗೆ ಸರಕಾರವೆ ಪ್ರಶ್ನೆಗಳನ್ನು ತಯಾರಿಸಿ ಪರೀಕ್ಷೆ ಮಾಡುವಂತೆ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳ VIIIನೇ ಇಯತ್ತೆಗಳಿಗೆ ಸರಕಾರವೆ ಪ್ರಶ್ನಾಪತ್ರವನ್ನು ತಯಾರಿಸಿ ಒಂದೇ ಸಮಯದಲ್ಲಿ ಪರೀಕ್ಷಿಸುವುದು.

೮. ಸಂಗೀತ ವಿದ್ಯೆಯನ್ನು ಶಾಲೆಗಳಲ್ಲಿ ಕಲಿಸುವ ಏರ್ಪಾಟು ಮಾಡುವುದು.

೯. ಪತ್ರಿಕೆಯೊಂದನ್ನು ಹೊರಡಿಸುವ ಯೋಜನೆಯನ್ನು ಕೈಕೊಳ್ಳುವುದು.

೧೦. ಖಾಸಗಿ ಶಾಲಾ ಉಪಾಧ್ಯಾಯರಿಗೆ ಗ್ರೇಂಟಿನೊಂದಿಗೆ ಅವರ ಅರ್ಧಾಂಶಕ್ಕೆ ಕಡಿಮೆಯಾಗದಂತೆ ಆದರೂ ಕೊಡಿಸಿಕೊಡುವ ಸಂಬಳದ ಸ್ಕೇಲೊಂದನ್ನು ಜ್ಯಾರಿಗೆ ತರುವುದು.

ಟಿಪ್ಪಣಿ:—ಕೊನೆಯ ಸೂಚನೆಯಂತೆ 'ಮಿನಿಮಮ್' ಮತ್ತು ಮೆಕ್ಸಿಮಮ್ ಸಂಬಳವನ್ನೂ 'ಇನ್‌ಕ್ರೀಸ್‌ಮೆಂಟ'ನ್ನು ನಿರ್ಣಯಗೊಳಿಸುವುದು.

ಈ ಸೂಚನೆಯನ್ನು ಆಯಾಯ ತಾಲೂಕಿನ, ಮತ್ತು ಜಿಲ್ಲೆಯ ಟೀಚರ್ ಮೆನೇಜರರ ಸಂಘದವರೂ ಆಯಾಯ ಸಂಘಂಟ ಅಧ್ಯಾಪಕ ಸಂಘದವರೂ ಅವುಗಳ ಯುಕ್ತಾಯುಕ್ತತೆಗಳನ್ನು ಮನಗಂಡು ಮಾನ್ಯಗೊಳಿಸುವುದು ಶ್ರೇಯಸ್ಕರವಿದೆ.

'ಒಬ್ಬ ಅಧ್ಯಾಪಕ.'

ಇಡೀ ದಿವಸ ಕೆಲಸ ಮಾಡಿ ದಣಿದುದರಿಂದ ಒಂದು ಜಟ್ಕಾ ಹತ್ತಿದೆನು. ಮುದಿ ಕುದುರೆಗಳನ್ನು ಚಪ್ಪರಿಸಿ ಹೊಡೆಯುವಾಗ 'ಪೋಗಿ ನಾವೀಗ ಯದುಕುವರನ ಪರಿಕಿಸುತ ಬರುವಾ' ಎಂದು ಗೊಲ್ಲತಿಯರ ಹಾಡನ್ನು ಆ ಜಟ್ಕ ಓಡಿಸುವವ......! ಅವನನ್ನು ಹೇಗೂ ಗದರಿಸಿ ಸುಮ್ಮನಿರಿಸಿದರೂ ಕಾಲಚಕ್ರವು ಉರುಳುತ್ತದೆ ಎಂದು ಜನರಿಗೆಲ್ಲಾ ತಿಳಿಸುವ ಹಾಗೆ ಮೋಟರಿನ ಚಕ್ರಗಳು ಉರುಳುತ್ತಿರುವಾಗ 'ಪೊಂಕ್ ಪೊಂಕ್' ಎಂದು ಹೊರ್ನಿನ ವಿಕಾರ ಧ್ವನಿಗಳನ್ನು ಕೇಳಿ, ಹೆಂಗಸಾಗಿ ಗರ್ಭಿಣಿಯಾಗಿದ್ದರೆ ಪ್ರಾಣಾಪಾಯವಿತ್ತೆಂದು ಗಂಡಾಗಿ ಹುಟ್ಟಿ ಬೆಳೆದುದಕ್ಕೆ ದೇವರಿಗೆ ಪ್ರಾರ್ಥನೆ ಮಾಡಲೇ ಬೇಕಾಯಿತು.

ಸಿನೆಮದಲ್ಲಿ ಕೊಂಚ ಸಂತೋಷವಿದೆಯೆಂದು ಅತ್ತ ನಡೆದರೆ ಅಪಸ್ವರಗಳೇ ಮೊದಲಾಗಿ ಬಾರಿಸಿ ತೊಟ್ಟಿಲ ಕೂಸುಗಳನ್ನೂ ನೋಟೀಸಿನ ಗಾಡಿ ಹಿಂದೆ ಓಡಿಸುವ ಬೇಂಡಿನ ಮಂಗಳವಾದ್ಯದ ಗಡಿಬಿಡಿಯಲ್ಲಿ ಟಿಕೇಟು ಪಡೆದು ಒಳಗೆ ಹೋಗಿ ಕೂತರೆ ಗೋಡೆಯಲ್ಲಿ ಚಿತ್ರಪಟದ ಸೀನುಗಳು ಕಾಣುತ್ತಲೆ ಇತ್ತ ಹಾರ್ಮೋನಿಯಮಿನ ಸೀನುಗಳೂ ಪ್ರಾರಂಭಿಸುವುವು.

ಎಲ್ಲಿ ಹೋದರೂ ಸಂಗೀತ. 'ಸರ್ವಂ ಗಾನಮಯಂ ಜಗತ್' ಈ ಸಂಗೀತದ ಕಾಟದಿಂದ ಸುಖವಾಗಿ ಬದುಕಲಿಕ್ಕೂ ಇಲ್ಲ. ಇನ್ನು ಸಾಯುವುದೇ. ಆದರೆ ಸತ್ತರೇನು? ಬಂಧುಗಳ ರೋದನ ಧ್ವನಿಯು ಹೊರಡುವಾಗ, ಮೂಗಿನಿಂದ ಸಿಂಬಳ ಸುರಿಯುತ್ತಿರುವಾಗ, ಊದುಬತ್ತಿ ಪರಿಮಳವು ಎಲ್ಲೆಲ್ಲಿಯೂ ಪಸರುತ್ತಿರುವಾಗ, 'ಹಿಂದಿಲ್ಲಾ ಸ್ವಾಮಿ ಮುಂದಿಲ್ಲಾ' ಎಂದು ಭಜನೆಯಾಗದೇ ಸ್ಮಶಾನ ಯಾತ್ರೆಯಾಗುವುದೇ? ಹೀಗಾಗಿ ಸತ್ತೂ ಕೇಳಬೇಕಾದ ಗಾಯನವನ್ನು, ಇದ್ದೇ ಕೇಳುವುದುತ್ತಮವೆಂದು ಬದುಕಲು ಇಚ್ಛಿಸಿದ್ದೇನೆ.

ವಿಚಿತ್ರಕರವಾದ ತಾಲೂಕು ವಿಭಜನೆ.

ಕಾರ್ಕಳ ತಾಲೂಕಿಗೆ ಸೇರಿದ ನಾಲ್ಕೂರು, ಬಳಂಜ, ತೆಂಕಕಾರಂದೂರು, ಬಡಗ ಕಾರಂದೂರು, ಕರಂಬಾರು, ಶಿರ್ಲಾಲು, ಈ ಆರು ಗ್ರಾಮಗಳನ್ನು ಪುತ್ತೂರು ತಾಲೂಕಿಗೆ ಸೇರಿಸಿರುವದಾಗಿಯೂ, ಈ ಗ್ರಾಮಗಳ ರೇವನ್ಯು ಕ್ರಿಮಿನಾಲ್ ವಗೈರೆ ಎಲ್ಲಾ ಕೆಲಸಗಳು ಇದೇ ಜನವರಿ ೧ರ ಲಾಗಾಯ್ತು ಪುತ್ತೂರು ತಾಲೂಕು ಮೂಲಕ ನಡಿಯಬೇಕಾಗಿಯೂ ರೇವನ್ಯು ಗವರ್ನಮೆಂಟು ಜಿ. ಒ. ನಂಬ್ರ 2295/15-11-1927ನೇ ಹುಕುಂ ಪ್ರಕಾರ ಎಲ್ಲಾ ಬದಲಾವಣೆಗಳಿಗೆ ಆರಂಭವಾಗಿಯದೆ. ಇದನ್ನು ಪ್ರಕಟಿಸಬೇಕಾಗಿ ಒಂದು ಹುಕುಂ ಮಾತ್ರ ವೇಣೂರು ಡಿ. ರೇವನ್ಯೂ ಇನ್ಸಪೆಕ್ಟರರ ಮುಖಾಂತರ ಕಳದ ದಶಂಬರ ತಿಂಗಳಲ್ಲಿ ಗ್ರಾಮಗಳಲ್ಲಿ ಅಲ್ಲಲ್ಲಿ ಸಂಚರಿಸಿ ಹೋಯಿತು; ಆದರಂತೆ ಈ ಗ್ರಾಮಗಳ ರೇವನ್ಯೂ ರಿಕಾರ್ಡುಗಳೂ ಕಾರ್ಕಳ ತಾಲೂಕು ಆಫೀಸಿನಿಂದ ಪುತ್ತೂರು ತಾಲೂಕು ಆಫೀಸಿಗೆ ಜರೂರು ಹೋಗುತ್ತಿರುವದಾಗಿ ವಾರ್ತೆಯಾಯಿತು; ಈ ಗ್ರಾಮಗಳ ಜಮಾಬಂದಿ ಕೂಡ ಈ ಫಸಲಿನ್ನು ಪುತ್ತೂರು ತಾಲೂಕಿನಲ್ಲೇ ಆಗುವದೆಂಬ ವದಂತಿ ಬಂತು; ಅಂತೂ ಇದರಿಂದ ಈ ಗ್ರಾಮಗಳ ರಹಿತರ, ಮುಖ್ಯವಾಗಿ ಗ್ರಾಮ ಉದ್ಯೋಗಸ್ತರ ಮನಸ್ಸು ಅತಿ ಸಂತಾಪಕ್ಕೆ ಒಳಗಾಗುವಂತಾಯಿತು. ಅಲ್ಲದೆ ಈ ವಿಲೆವಾರಿ ಪ್ರಕಾರ ಶಿರ್ಲಾಲು ಫಿರ್ಕಾ ಸ್ಥಾನಭಾಗರು ತನ್ನ ಫಿರ್ಕೆಯ ಬಾಬತು ಈಗ ಪುತ್ತೂರಿಗೆ ಸೇರಿಸಲ್ಪಟ್ಟ ಶಿರ್ಲಾಲು ಗ್ರಾಮದ ರೇವನ್ಯು ಕೆಲಸ ಜಮಾ ಬಂದಿ ಲೆಖ್ಖ ವಗೈರೆ ಪುತ್ತೂರು ತಾಲೂಕು ತಹಶೀಲ್‌ದಾರ ವ ಬೆಳ್ತಂಗಡಿ ಡಿಪ್ಯುಟಿ ತಹಶಿಲ್ದಾರರ ತಾಬೆಯಲ್ಲಿಯೂ ಮಾಡುವವನಲ್ಲದೆ, ಕಾರ್ಕಳ ತಾಲೂಕಿನಲ್ಲೇ ಉಳಿಯುವ, ನಾವರ, ಸುಳ್ಕೇರಿ ಮೊಗರು, ಗ್ರಾಮಗಳ ಕೆಲಸ ವಗೈರೆ ಕಾರ್ಕಳ ತಾಲೂಕು ತಹಶಿಲ್ದಾರರ ತಾಬೆಯಲ್ಲಿಯೂ ಮಾಡಬೇಕು; ಬೆಳ್ತಂಗಡಿ ಮತ್ತು ವೇಣೂರು ಡಿವಿಜನುಗಳ ರೇವನ್ಯು ಇನ್ಸಪೆಕ್ಟರುಗಳ ಕೈಕೆಳಗಿರಬೇಕು. ಇದಕ್ಕೆ ಮೋಟರ್ ಸರ್ವಿಸು ಸಾಧ್ಯವಲ್ಲ. ವಾಯು ವಿಮಾನ ಸರ್ವಿಸ್ಸುಗಳು ಇರುವದಿಲ್ಲ. ಇದು ಹೇಗೆ ಸಾಧ್ಯವೋ ದೇವರೇ ಬಲ್ಲ. ಇದು ಒಂದು ಸ್ಥಿರವಾದ ಗಡಿಯನ್ನನುಸರಿಸಿ ವಿಂಗಡಿಸಿದ್ದು ಅಲ್ಲ; ಒಂದು ಫಿರ್ಕೆಯನ್ನು ವಿಭಜಿಸುವರೆ ನ್ಯಾಯವೂ ಇರುವದಿಲ್ಲ. ಇದರ ಮುಂಚೆ ವಿಭಜಿಸುವ ವಿಷಯದಲ್ಲಿ ಗ್ರಾಮಸ್ತರಿಗೆ ತಿಳಿಯುವಂತೆ ಸರಕಾರೀ ಉದ್ಯೋಗಸ್ತರ ತನಖಿಗಳ್ಯಾವದೂ ನಡೆದದ್ದಿಲ್ಲ; ಇದು ಬಹುಶಃ ಮಂಗಳೂರು ತಾಲೂಕಿನ ಬಂಟ್ವಾಳ ಮೆಜಿಸ್ಟ್ರೇಟರ ಚರ್ಬಂದಿಗೆ ಸೇರಿದ ಈ ಗ್ರಾಮಗಳನ್ನು ಸಮೀಪವಗೋಸ್ಕರ ಪುತ್ತೂರು ತಾಲೂಕಿನ ಬೆಳ್ತಂಗಡಿ ಮೆಜಿಸ್ಟ್ರೇಟರ ಚರ್ಬಂದಿಗೆ ಸೇರಿಸಬೇಕಾಗಿ ನಡದ ಪೋಲೀಸ್ ಇಲಾಖೆಯವರ ರಿಪೋರ್ಟಿಗೆ ಈ ಗ್ರಾಮಗಳನ್ನೇ ತೆಗದು ಪುತ್ತೂರು ತಾಲೂಕಿಗೆ ಸೇರಿಸಿಬಿಟ್ಟದ್ದಾಗಿರಬಹುದೋ ಹಾಗಿದ್ದರೆ ಒಂದು ರೋಗ ಶಮನಕ್ಕೆ ಮಾಡಿದ ಔಷಧಿಯಿಂದ ಎರಡು ರೋಗವುಂಟುಮಾಡಿದಂತಾಯಿತು. ಗ್ರಾಮಸ್ತರಿಗೆ ಇದರಿಂದ 'ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ' ಎಂಬ ಗಾದೆಯಂತಾಯಿತು. ಹೇಗೂ ಜಿಲ್ಲೆಯ ತಾಲೂಕುಗಳಲ್ಲಿ ದೊಡ್ಡದಾದ ಪುತ್ತೂರು ತಾಲೂಕಿಗೆ ಅತಿ ಸಣ್ಣದಾದ ಕಾರ್ಕಳ ತಾಲೂಕಿನ ಗ್ರಾಮಗಳನ್ನು ಸೇರಿಸಿದ್ದು ಸರಿಯಲ್ಲವೆಂಬದು ಈ ಕೆಳಗಿನ ವಿವರದಿಂದ ವ್ಯಕ್ತವಾಗುವದು. (೧೯೨೧ನೇ ಇಸವಿ ಅನುಭವ ಪ್ರಕಾರ)

ತಾಲೂಕಿನ ಹೆಸರು	ಗ್ರಾಮಗಳ ಸಂಖ್ಯೆ	ಏಸ್ತೀರ್ಣ	ತೀರ್ವೆ	ಜನ ಸಂಖ್ಯೆ
ಪುತ್ತೂರು	೧೮೨	೧೨೪೯ ಚ. ಮೈ.	೩,೬೧,೯೭೬	೧,೮೩,೧೧೦.
ಕಾರ್ಕಳ	೧೦೫	೬೦೨		೩,೩೮,೫೯೬	೧,೦೫೪೯೧

ಈ ಮೇರೆಗೆ ಇರುವದರಿಂದಲೂ, ಈ ಗ್ರಾಮಗಳು ಕಾರ್ಕಳ ತಾಲೂಕಿಗೇನೆ ಸಮೀಪವಿರುವದರಿಂದಲೂ, ಪುತ್ತೂರು ತಾಲೂಕು ದೂರವಲ್ಲದೆ ನೇತ್ರಾವತಿ ಕುಮಾರಧಾರೀ ಸಂಗಮಸ್ಥಾನದ ಅಡಚಣೆ ಮಳೆಗಾಲ ಅತಿರೇಕವಿರುವದರಿಂದಲೂ, ಗ್ರಾಮಸ್ತರಿಗಾಗಲಿ ಗವರ್ನಮೆಂಟಿನವರಿಗಾಗಲಿ ಏನೊಂದು ಪ್ರಯೋಜನವಿಲ್ಲದೆ ಉಪದ್ರವೇ ಇದರಿಂದ ಹೆಚ್ಚಾಗುವದರಿಂದಲೂ,—ಪ್ರಕೃತ ಫಸಲಿ ಆಖೈರು ವರೆಗೆ ಈ ಹುಕುಂ ಜಾರಿಯನ್ನು ನಿಲ್ಲಿಸುವಂತೆ ಮಾಡುವವನಲ್ಲದೆ, ಈ ರೀತಿಯು ತಾಲೂಕು ವಿಭಜನೆ ಕ್ರಮವನ್ನೇ ರದ್ದುಪಡಿಸಿ, ಅವಶ್ಯವಿದ್ದರೆ ಈ ಗ್ರಾಮಗಳ ಮೆಜಿಸ್ಟ್ರೇಟ್ ಚರ್ಬಂದಿಯನ್ನು ಮಾತ್ರ ಬಂಟ್ವಾಳದಿಂದ ಬೆಳ್ತಂಗಡಿಗೆ ತಬದೀಲ್ ಮಾಡುವಂತೆ ಮಾತ್ರ ಗವರ್ನಮೆಂಟು ಹುಕುಂ ಬದಲಾಯಿಸುವಂತೆ ಈ ಜಿಲ್ಲೆಯ ಸರಕಾರಿ ಉದ್ಯೋಗಸ್ತರೂ, ಪ್ರಜಾ ಪ್ರತಿನಿಧಿಗಳೂ ತಕ್ಕ ರೀತಿಯಲ್ಲಿ ಸಾಧಿಸಿ ಸಫಲ ಮಾಡಬೇಕಾಗಿ ಅತಿ ಆತುರ ಪಡುವ—ಈಗ ಸಂಕಷ್ಟಗಳಿಗೊಳಗಾದ ಷಡ್ ಗ್ರಾಮಗಳ

ಹಿತೈಷಿಯ ವಿನಂತಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 132/1927.

ಕೊಸೆಸ್ ಪ್ಯಾಸ್ ಬ್ಯಾ, ರುಜಾರಿಯೊ ರುದ್ರಿಗ್ಸರ ಹೆಂಡತಿ; ಮಂಗಳೂರು ತಾಲೂಕು ಬೋಳೂರು ಗ್ರಾಮದಲ್ಲಿರುವವಳು—ಅರ್ಜಿದಾರಳು.

ತಾ. 17—10—1918ರಲ್ಲು ಸದರಿ ಬೋಳೂರು ಗ್ರಾಮದಲ್ಲಿ ಮೃತಪಟ್ಟ ಪೆದ್ರುಪ್ಯಾಸರ ಸೊತ್ತುಗಳ ಬಾಬತು ಅರ್ಜಿದಾರಳಿಗೆ ಲೆಟ್ಟರ್ಸ್ ಒಫ್ ಯೆಡ್ಮಿನಿಸ್ಟ್ರೇಶನ್ ಕೊಡಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಸದರಿ ಅರ್ಜಿಯು ಮೇಲಿನ ಕೋರ್ಟಿನಲ್ಲಿ ತಾ. 16—1—1928ಕ್ಕೆ ಪೂರ್ವಾಹ್ನ 11 ಘಂಟೆಗೆ ತನಿಕೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವುಳ್ಳ ಮೃತನ ಸಮ್ಬಂಧಿಕರು ಅವರ ಹೇಳಿಕೆಗಳನ್ನು ಸದರಿ ತಾರೀಕು 16—1—1928ರ ವಳಗೆ ಮೇಲಿನ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳಬಹುದು.

ಮಂಗಳೂರು, 10-12-1927.

B. VAIKUNTA BALIGA,
ಅರ್ಜಿದಾರಳ ಕಡೆ ವಕೀಲ್.

fit Dunlop
and be satisfied

Edited, Printed & Published by V. S. Kamath at the M. T. A. Sharada Press, Mangalore

Registered: No. M. 498.

ಚಂದಾನಿರ್ಣಯ:– ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-18

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೩ನೇ ಶುಕ್ರವಾರ ಜನವರಿ ೧೯೨೮. ಸಂಚಿಕೆ ೨.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:– ಉಡುಪಿ.

Branches:—COONDAPOOR.
„ Mangalore.
ಶಾಖೆ:– ಕುಂದಾಪುರ.
„ ಮಂಗಳೂರು.

ನಿಯಮಿತ ಮೂಲಧನ ರೂ. 3,50,000.
ಚಂದಾ ಪಾಳಲಿಕ್ಕೆ ಅರ್ಪಿಸಿದ ಮತ್ತು ವಸೂಲಾದ ಮೂಲಧನ ರೂ. 2,25,000.

Statement of affairs as on the 30th November, 1927.

Liabilities		Assets	
1. Capital	1,99,650-0-0	1. Premises, Furniture, Iron safe &c.	9,750-7-10
2. Reserve & other Funds	83,000-0-0	2. Investment on G. P. Notes at cost	1,85,931-13-0
3. Deposits	10,60,368-8-0	3. Investments on Jewls & other approved securities	11,89,182-13-3
4. Sundry Persons a/c	6,382-2-0	4. Bills for collection	6,382-2-0
5. Overdrafts with Bankers	52,052-1-5	5. Cash in hand & with Bankers	43,437-2-3
6. Sundry items	1,04,421-11-10	6. Sundry items	71,190-0-11
Rs.	15,05,874—7—3	Rs.	15,05,874—7—3

Office of the Corporation,
UDIPI, 1-12-'27.

N. ANANDA RAO,
Secretary.

ಮಕ್ಕಳ ಸಲುವಾಗಿ,

ಡೋಂಗರ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರುಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು– ದಿ ಊಲನ್ ಮಾರ್ಟ್,
ಮಂಗಳೂರು.

ಅಮೃತಾಂಜನ

ತಲೆಶಿಡಿತ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಅಂಗಡಿಯಲ್ಲಿಯೂ – ಅಮೃತಾಂಜನವು – ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಳ್ಳ ಕೂಡ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

349 ಠಾಕುರ್ದ್ವಾರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Cart-street, MANGALO

... ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

...ಪ್ರಸಿದ್ಧ ಔಷಧಗಳು.

... ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

... ಮಲೇರಿಯಾ ಜ್ವರ ನಿವಾರಣ. ರೂ. ೧.
... ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
... ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ರೂ. ೧—೨—೦. ರೂ. ೧—೪—೦. ೧—೧೨—೦.
ರೂ. ೦—೬—೦ "AGENTS WANTED"
ರೂ. ೦—೬—೦. LIBERAL DISCOUNT TO TRADE
...-CAWASHAPUR, BOMBAY.
... ಡಾ. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

...ವರ ಲೋಧ್ರ

...ಶಯ ರೋಗನಿವಾರಿಣಿ.

...ಗಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹಲವು ಬಗೆಯಾಗಿ ಹೊಗಳುತ್ತಿರುವರು.

...ಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

...ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ...ವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ಗುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಊ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,
...ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಶ್ರೀ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನಶಕ ೧೮೪೯ನೆಯ ಪ್ರಭವ ಸಂ॥ದ ಮಾರ್ಗಶಿರ ಶು॥ ೧೪ ಶನಿವಾರದಿಂದ ಪ್ರಭವ ಸಂ॥ದ ಪುಷ್ಯ ಬ॥ ೫೦ ಶುಕ್ರವಾರದ ವರೆಗಿನ ಪಂಚಾಂಗ

(೧೯೨೮ನೆಯ ಧನು (ಪೆಂಡ್ರ್))

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
14	ಶನಿ	೭	೨೩ ೨	ಹಸ್ತಾ	೧೮ ೩೨	೩೦	6 59	6 21
15	ರವಿ	೮	೨೮. ೦	ಚಿತ್ರಾ	೨೪.೪೬	೧	6 59	6 21
16	ಸೋಮ	೯	೩೩.೧೨	ಸ್ವಾತಿ	೩೧.೦೪	೨	6 59	6 21
17	ಮಂಗಳ	೧೦	೩೮.೨೦	ವಿಶಾಖಾ	೩೭.೪೦	೩	6 59	6.21
18	ಬುಧ	೧೧	೪೩. ೧	ಅನುರಾಧಾ	೪೩.೧೪	೪	7 0	6 23
19	ಗುರು	೧೨	೪೭.೪೪	ಜ್ಯೇಷ್ಠಾ	೪೮ ೧	೫	7. 0	6.23
20	ಶುಕ್ರ	೧೩	೪೯.೦೪	ಮೂಲಾ	೫೧ ೪೪	೬	7. 0	6.24

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
6	91— 0	69— 0	—	—
7	90 5	73— 7	—	—
8	91— 8	69— 7	—	—
9	88— 3	69 — 2	—	—
10	91— 9	70— 0	—	—
11	87— 3	71— 5	—	—
12	90— 2	75 — 1	—	—
				127-21

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮಸ್ಕಾಟಿ		6— 4	6— 8
ಹೊಸ ಗುಡ್ಡೆ	...	6— 0	6— 4
ಸುಗ್ಗಿ	...	6— 0	6— 4
ಹೊಸ ರಾಶಿ	...	6— 0	6— 6
ಊರ ಅಪ್ಪಲ್ ಬೆಲ್ಲಗೆ	...	7— 4	8— 0
ರಂಗೂನು ಬೆಳ್ತಿಗೆ ಗೋಣಿ ೧	...	13— 8	14— 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	8— 0	8— 4
ಗೋಧಿ ಗೋಣಿ ೧ಕ್ಕೆ	...	18— 0	19 0
ಹುರುಳಿಗೋಣಿ ೧ಕ್ಕೆ	...	9— 0	10 0
ಕಡಲೆಗೋಣಿ ೧ಕ್ಕೆ	...	13— 8	14 0
ತೊಗರಿಗೋಣಿ ೧ಕ್ಕೆ	...	17— 0	18— 0
ತೊಗರಿಬೇಳೆ ಗೋಣಿ ೧ಕ್ಕೆ	...	20— 0	23 0
ಉದ್ದುಗೋಣಿ ೧ಕ್ಕೆ	...	14— 0	14 8
ಹೆಸರುಗೋಣಿ ೧ಕ್ಕೆ	...	15 0	15— 8
ಊರು ಬೆಲ್ಲ ಖಂಡಿ ೧ಕ್ಕೆ	...	36— 4	45 0
ಉಪ್ಪು ಗೋಣಿ ೧ಕ್ಕೆ	...	3—14	4— 0
ಕೊಬ್ರಿ ಖಂಡಿ ೧ಕ್ಕೆ	...	130— 0	—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	48— 0	49— 0
ಎಳ್ಳಿಂಡಿ ಖಂಡಿ ೧ಕ್ಕೆ	...	50— 0	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8— 4	8— 6
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 0	8— 0
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ		8— 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	3— 10	3—12
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	8— 0	8— 4
ಸಾಸಿವೆ ಮುಡಿ ೧ಕ್ಕೆ	...	9— 0	—
ಕೊತ್ತಂಬರಿ ಮುಡಿ ೧ಕ್ಕೆ	...	7—12	8— 0
ಕಾಫಿ ಖಂಡಿ ೧ಕ್ಕೆ	...	325— 0	400— 0
ಕೊಳೆಗೋಟು ಅಡಿಕೆ ಖಂಡಿ ೧ಕ್ಕೆ	...	125— 0	130— 0
ಕಾಳುಮೆಣಸು ಖಂಡಿ ೧ಕ್ಕೆ	...	40— 0	450—
ಯಾಲಕ್ಕಿ ಮಣ ೧ಕ್ಕೆ	...	50— 0	54— 0
ಗೇರುಬೀಜ ಮುಡಿ ೧ಕ್ಕೆ	...	3—10	3—12
ಶುಂಠಿ ಖಂಡಿ ೧ಕ್ಕೆ	...	37— 8	40— 0
ಹುಂಣಸೆ ಹಣ್ಣು ಮುಡಿ ೧ಕ್ಕೆ	...	15— 0	15— 0
ಹುಂಣಸೆ ಬೀಜಗಳು ಮುಡಿ ೧ಕ್ಕೆ		21— 0	—
ಜೇನ ಬೆಳ್ಳ ಸೇರು ೧ಕ್ಕೆ	...	15— 0	—
ಹಿಪ್ಪಾಲ ಹಣ್ಣು ಮುಡಿ ೧ಕ್ಕೆ	...	15— 0	—
ಬವಸು		13— 7	—

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರೀ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಭೃಷ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಶ್ಯಪ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೇಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹ್ಯಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ,
ಪೋಸ್ಟ್ ಕಾಂಞಂಗಾಡ (ದ. ಕ.

ಬಿಳೀ ತೊನ್ನಿಗೆ ಖಂಡಿತವಾದ ಔಷಧ.

'ಲೂಕೊಡರ್ಮ ಸ್ಪೆಸಿಫಿಕ್' ಬಿಳೀ ತೊನ್ನಿಗೆ ಖಂಡಿತವಾದ ಔಷಧ. ಶರೀರದ ಮೇಲೆ ಯಾವ ಕಾರಣದಿಂದಾಗಲಿ ಬಿಳಿ, ನೀಲಿ, ಕೆಂಪು, ಮಚ್ಚೆಗಳು ಯಾವುದೇ ಕಾಣಿಸುತ್ತಿದ್ದಾಗ್ಯೂ ಈ ಔಷಧವನ್ನು ಹಾಕಿದರೆ ನಾಲ್ಕಾರು ದಿನಗಳಲ್ಲೇ ಸಂಪೂರ್ಣವಾಗಿ ಖಂಡಿತವಾಗಿಯೂ ತೊಡೆದುಹೋಗುತ್ತದೆ. ಕ್ರಯ ರೂ. 4—8—0. ಕಾಗದವನ್ನು ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

ವಿಳಾಸ:—Dr. W. N. Dixit,
23-12-'27 Poona City.

೩೬ ಹುಂಜ, ೩೭ ಗರುಡಪಕ್ಷಿ, ೩೮ ಗೂಗೆ, ೩೯ ರಣಹದ್ದು, ೪೦ ಇಣಚಿ, ೪೧ ತೋಳ, ೪೨ ಹಾವು, ೪೩ ಗಿಳಿ, ೪೪ ಕಾಗೆ, ೪೫ ಬಾರಿವಾಳ, ೪೬ ಚೇಳು, ೪೭ ಇಲಿ, ೪೮ ದೀಪದ ಹುಳ, ೪೯ ಮುಂಗಲಿ, ೫೦ ಗುಬ್ಬಿ, ೫೧ ಕಪ್ಪೆ, ೫೨ ನವಿಲು. ಬೆಲೆ ೧ ರೂಪಾಯಿ, 18-11-'27

ವಿಳಾಸ—ಚಿತ್ರಶಾಳಾ ಪ್ರೆಸ್ ಪುಣೆ ಸಿಟಿ.

ನೋಟೀಸುಗಳು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ.

O. P. No. 59/1927.

U. B. ರಘುನಾಥ ರಾವ್ B. ನರಶಿಂಗ ರಾಯರ ಮಗ, ಉಡುಪಿ ತಾಲೂಕು ಶಿವಳ್ಳಿ ಗ್ರಾಮದಲ್ಲಿರುವವ—ಅರ್ಜಿದಾರ.

ಮತ್ತು

1. ಲಲಿತಮ್ಮ, B. ನರಶಿಂಗ ರಾಯರ ವಿಧವೆ. 2. ಪ್ರಭಾಕರ ರಾವ್, 3. ಕೃಷ್ಣರಾವ್—ಮ್ಯಾನರರು—ಸದರಿ B. ನರಶಿಂಗ ರಾಯರ ಮಕ್ಕಳು, ಉಡುಪಿ ತಾಲೂಕು ಶಿವಳ್ಳಿ ಗ್ರಾಮದಲ್ಲಿರುವವರು—ಯೆದ್ರಿರು.

ಮ್ಯಾನರರು 2-3ನೆ ಯೆದ್ರಿರ ಗಾರ್ಡಿಯನ್ 1ನೆ ಯೆದ್ರಿಳು— ಇವರೊಳಗೆ

ಅರ್ಜಿದಾರನ ವ. 2-3ನೇ ಯೆದ್ರಿರ ತಂದೆ ವ. 1ನೇ ಯೆದ್ರಿಳ ಗಂಡ B. ನರಶಿಂಗ ರಾಯರು ಮೃತರಾಗಿರುವದರಿಂದಲೂ ಸದರಿ B. ನರಶಿಂಗ ರಾಯರು ಅರ್ಜಿದಾರನ ವ ಯೆದ್ರಿರ ಕುಟುಂಬದ ಮೆನೇಜರನಾಗಿದ್ದು, ಈಗ ಅರ್ಜಿದಾರನು ಸದರಿ ಕುಟುಂಬದ ಮೆನೇಜರನಾಗಿರುತ್ತಾನೆ.

ಸದರಿ B. ನರಶಿಂಗ ರಾಯರಿಗೆ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)ಇದರಲ್ಲಿರುವ ನಂಬ್ರ 13599ನೇ ಪೊಲಿಸಿಯ ಬಾಬತು ಬರತಕ್ಕದ್ದಿರುವ ರೂಪಾಯಿ 6075—0—0ನ್ನು ಅರ್ಜಿದಾರನ ವ ಯೆದ್ರಿರ ಕುಟುಂಬದ ಬಗ್ಯೆ ಪಡಿಯುವರೆ ಅರ್ಜಿದಾರನು ಹಿಂದೂ ಲೋ ಪ್ರಕಾರ ಕೂಡಾ ಹಕ್ಕುದಾರನಾದುದರಿಂದ ಆ ಪ್ರಕಾರ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಸದರಿ ಕೋರ್ಟಿನಲ್ಲಿ ಅರ್ಜಿದಾರನು ದಾಖಲು ಮಾಡಿದ ಸದರಿ ಅರ್ಜಿಯು ತಾ. 11—2—28ಕ್ಕೆ ತನ್ನಿಗೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪವುಳ್ಳವರು ಸದರಿ ತಾರೀಕಿಗೆ ಸದರಿ ಕೋರ್ಟು ಮುಂದೆ ಜಾಹೀರು ಮಾಡಬೇಕಾಗಿರುತ್ತದೆ.

B. ಭುಜಂಗರಾವ್,
ಅರ್ಜಿದಾರನ ಕಡೆ ವಕೀಲ್.

ಕನ್ನಡ ಮೂಲಾಕ್ಷರಗಳ ಸಚಿತ್ರ ನಕಾಶೆಯು.

ಇದರೊಳಗೆ ಅ ದಿಂದ ಜ್ಞ ದ ವರೆಗೆ ಆಯಾ ಅಕ್ಷರಗಳ ಸೂಚಕವಾದ ಚಿತ್ರಗಳು ಅವೆ. ಇವು ಬೇರೆ ಬೇರೆ ಬಣ್ಣದಲ್ಲಿ ಅಂದವಾಗಿ ಮತ್ತು ಮುದ್ದಾಗಿ ಮುದ್ರಿಸಲ್ಪಟ್ಟಿವೆ. ಈ ನಕಾಶೆಯು ಹಿಂಬದಿಗೆ ಅರಿವೆ ಹಚ್ಚಿರುವದಲ್ಲದೆ ವಾರ್ನಿಸ ಹಚ್ಚಿ ರೂಳಪಟ್ಟಿಯನ್ನೂ ಸಹ ಹಾಕಿರುತ್ತದೆ. ಬೆಲೆ:—೧೪ ಆಣೆ.

ಒಂದೇ ಪ್ರಮಾಣದಿಂದ ತೆಗೆದ ಪ್ರಾಣಿಗಳ ಚಿತ್ರಪಟವು.

ಈ ಚಿತ್ರಪಟದೊಳಗೆ ೫೨ ಚಿತ್ರಗಳು ಇರುತ್ತವೆ; ಅವುಗಳ ಹೆಸರುಗಳು. ೧ ಆನೆ, ೨ ಶಾರ್ದೂಲವ್ಯಾಘ್ರ, ೩ ಮನುಷ್ಯ, ೪ ಜಿರಾಫೆ, ೫ ಒಂಟೆ, ೬ ನೀರು ಕುದುರೆ, ೭ ಸಾರಂಗ, ೮ ಹದ್ದು, ೯ ಗಂಡಕ, ೧೦ ಕುದುರೆ, ೧೧ ಝಿಬ್ರಾ, ೧೨ ಚಿರ್ತೆ, ೧೩ ಆಕಳು, ೧೪ ಎಮ್ಮೆ, ೧೫ ಸಿಂಹ, ೧೬ ಹುಲಿ, ೧೭ ಕರಡಿ, ೧೮ ಕಿರುಬ, ೧೯ ಕಾಡಹಂದಿ, ೨೦ ಕತ್ತೆ, ೨೧ ಹಂದಿ, ೨೨ ಜಿಗರಿ, ೨೩ ಕಾಡಾಕಳು, ೨೪ ಮೀನ, ೨೫ ಟಗರು, ೨೬ ಹೋತು, ೨೭ ಕ್ಯಾಂಗರು, ೨೮ ನರಿ, ೨೯ ಬೆಕ್ಕು, ೩೦ ಮೊಸಳೆ, ೩೧ ಮೊಲ ೩೨ ನಾಯಿ, ೩೩ ಬಕಪಕ್ಷಿ, ೩೪ ಮಂಗ, ೩೫ ನೀರುಗೋಳಿ,

VOLKART BROS ENGINEERS

ಕೂಲಿಯವರ
ಅಕ್ಕಿ ತಯಾರು ಮಾಡುವ
ಯಂತ್ರಗಳು.

ಅಕ್ಕಿಯಾಗುವ ವರೆಗೆ ಎಲ್ಲಾ ಕೆಲಸಗಳೂ ತನ್ನಷ್ಟಕ್ಕೆನೆ ಆಗುವ
ಸಣ್ಣ ಯಂತ್ರಗಳು
ಮತ್ತು
ಸಂಪೂರ್ಣವಾದ ದೊಡ್ಡ ಯಂತ್ರದ ಆಯೋಜನೆಗಳು
ಭತ್ತ ಒಡೆಯಲಿಕ್ಕೆ, ಹೊಟ್ಟು ಪ್ರತ್ಯೇಕಿಸಲಿಕ್ಕೆ, ಅಕ್ಕಿ ಸ್ವಚ್ಛಮಾಡಲಿಕ್ಕೆ ಯಂತ್ರಗಳು, ಬೀಸುಕಲ್ಲುಗಳು, ಎಲಿವೇಟರುಗಳು ಕೂಡಾ.

Box G. 45
Armenian Street, MADRAS.

[illegible]

[illegible] ಶಾಲೆಗಳೂ ೧ ಗ್ರೇಂಟು ತೆಗೆದುಕೊಳ್ಳದೆ ಇರುವ ಶಾಲೆಯೂ ಇದ್ದವು. ಇವುಗಳಲ್ಲಿಯೂ ಇನ್ನು ಇತರ ಶಾಲೆಗಳಲ್ಲಿಯೂ ಕೂಡಿ ೩೩೨೦ ಮಂದಿ ಮುಸಲ್ಮಾನ ಹುಡುಗರು ಸೆಕೆಂಡರಿ ವಿದ್ಯಾಭ್ಯಾಸವನ್ನು ಪಡಿಯುತ್ತಿದ್ದರು. ಯೂನಿವರ್ಸಿಟಿ ಪರೀಕ್ಷೆಗೆ ಹೋದವರು ೨೦೦ ಮಂದಿ ಮಾತ್ರ. ಈ ಸೆಕೆಂಡರಿ ಶಾಲೆಗಳಲ್ಲಿ ಹೆಚ್ಚಿನವು III ಫೋರ್ಮ್ ವರೆಗೆ ಕಲಿಸುವವುಗಳಾಗಿವೆ. ಸೆಕೆಂಡರಿ ಶಾಲೆಗಳಲ್ಲಿ ಸಂಬಳವು ಹೆಚ್ಚಾದ್ದುದರಿಂದಲೂ ಸರಕಾರದವರು ಕೊಡುವ ಗ್ರೇಂಟು ಕಡಿಮೆಯಾದ್ದರಿಂದಲೂ ಉದ್ಯೋಗಮುನಿಶಿಗಳು ಸರಿಯಾಗಿ ಸಿಕ್ಕದೆ ಇದ್ದುದರಿಂದ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ತೊಡಕು ಬಂದದೆ.

ಕೊಲೆಜ್ ವಿದ್ಯಾಭ್ಯಾಸದ ವಿಷಯದಲ್ಲಿ ವಿನಿಯಂಬಾಡಿ ಇಸ್ಲಾಮಿಯಾ ಕೊಲೆಜಿನಲ್ಲಿಯೂ ಮದರಾಸಿನ ಮಹಮ್ಮದನ್ ಕೊಲೆಜಿನಲ್ಲಿಯೂ ೧೯೨೫-೨೬ನೇ ಇಸವಿಗಳಲ್ಲಿ ೫೯೭ ಮಂದಿ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಮುಸಲ್ಮಾನರಲ್ಲಿ ೧೮ ಮಂದಿ ಒನರ್ಸ ಬಿ. ಎ. ಗಳೂ ೧೪ ಮಂದಿ ಎಮ್. ಎ. ಗಳೂ ೨೨ ಮಂದಿ ಎಲ್. ಟಿ. ಗಳೂ, ೭೩ ಮಂದಿ ಬಿ. ಎಲ್. ಗಳೂ, ೧೦ ಮಂದಿ ಎಲ್. ಎಮ್. ಎಸ್. ಗಳೂ, ೫ ಮಂದಿ ಎಮ್. ಬಿ. ಸಿ. ಎಮ್. ಗಳೂ, ೧ ಬಿ. ಸಿ. ಇ. ಗಳೂ ಇದ್ದರು. ಎಗ್ರಿಕಲ್ಚರಲ್ ಗ್ರೆಜುವೇಟುಗಳೂ ಒಬ್ಬರೂ ಇರಲಿಲ್ಲ.

ಸ್ಪೆಶಿಯಲ್ ಶಾಲೆಗಳು.

೫೮೫ ಮಂದಿ ಮುಸಲ್ಮಾನ ಉಪಾಧ್ಯಾಯರು ಟ್ರೈನಿಂಗ್ ಶಾಲೆಗಳಲ್ಲಿಯೂ ೬೧ ಮಂದಿ ಉಪಾಧ್ಯಾಯಿನಿಯರು ಟ್ರೈನಿಂಗ್ ಶಾಲೆಗಳಲ್ಲಿಯೂ ಕಲಿಯುತ್ತಿರುವರು. ಕಮರ್ಶಿಯಲ್ ಶಾಲೆಗಳಲ್ಲಿ ೫೭ ಮಂದಿ ವಿದ್ಯಾರ್ಥಿಗಳು ಮಾತ್ರವೇ ಕಲಿಯುತ್ತಿದ್ದರು. ಮೆಡಿಕಲ್ ಸ್ಕೂಲ್‌ಗಳಲ್ಲಿ ೧೦ ಮಂದಿಯೂ ಇಂಡಸ್ಟ್ರಿಯಲ್ ಶಾಲೆಗಳಲ್ಲಿ ೩೩೪ ಮಂದಿಯೂ ಕಲಿಯುತ್ತಿದ್ದರು.

ಅನಾಥಾಲಯಗಳು.

ಅಂಜುಮಾನ್ ಹೈಮಯಾತಿ ಇಸ್ಲಾಮಿನವರು ನಡಿಸುವ ಒಂದು ಅನಾಥಾಲಯವು ಮದರಾಸಿನಲ್ಲಿಯೂ ಕಲ್ಲಿಕೋಟೆಯಿಂದ ೫ ಮೈಲು ದೂರದಲ್ಲಿ ಪೂನಾ ಮುಸ್ಲಿಮ ಮಿಶನರಿ ಅಸೋಸಿಯೇಶನಿನವರು ನಡಿಸುವ ಅನಾಥಾಲಯ ಹೀಗೆ ಎರಡು ಅನಾಥಾಲಯಗಳು ಮಾತ್ರವೇ ಇದ್ದವು. ಹುಡುಗಿಯರಿಗಾಗಿ ಪ್ರತ್ಯೇಕ ಅನಾಥಾಲಯಗಳು ಇರಲಿಲ್ಲ.

ಖಾಸಗಿ ಶಾಲೆಗಳು.

೧೮೮ ಅರಬಿ ಕಲಿಸುವ ಮದರ್ಸುಗಳು ೫೮೦ ಕುರಾನ್ ಶಾಲೆಗಳೂ ಇದ್ದವು, ಅರಬಿ ಮದರ್ಸುಗಳಲ್ಲಿ ೭೦೦೦ ಮಂದಿಯೂ ಕುರಾನ್ ಶಾಲೆಗಳಲ್ಲಿ ೨೭೦೦೦ ಮಂದಿಯೂ ಕಲಿಯುತ್ತಿದ್ದರು. ಪೆರಂಬೂರು, ವೆಲ್ಲೂರು ಮತ್ತು ವಿನಿಯಂಬಾಡಿಯ ಮದರ್ಸುಗಳಲ್ಲಿ ಊಟ ಕೊಡುವ ಹೊಟೆಲು ಇವೆ.

ಸ್ತ್ರೀ ವಿದ್ಯಾಭ್ಯಾಸ.

ಮುಸಲ್ಮಾನ ಹುಡುಗಿಯರಿಗಾಗಿ ಪ್ರತ್ಯೇಕ ಇಟ್ಟ ೩೦೪ ಹುಡುಗಿಯರ ಶಾಲೆಗಳಲ್ಲಿ ೧೭೦೦೦ ಹುಡುಗಿಯರೂ ಇತರ ಹುಡುಗರ ಶಾಲೆಗಳಲ್ಲಿ ೩೪೦೦೦ ಹುಡುಗಿಯರೂ ಕಲಿಯುತ್ತಿದ್ದರು. ಆರ್ಟ್ಸ್ ಕೊಲೆಜುಗಳಲ್ಲಿ ೪ ಮಂದಿ ಹುಡುಗಿಯರೂ ಸೆಕೆಂಡರಿ ಶಾಲೆಗಳಲ್ಲಿ ೩೦೦ ಮಂದಿ ಹುಡುಗಿಯರೂ ಕಲಿಯುತ್ತಿದ್ದರು.

ಮಾಪಿಳ್ಳಾ ವಿದ್ಯಾಭ್ಯಾಸ.

ಮದರಾಸು ಸಂಸ್ಥಾನದಲ್ಲಿರುವ ಮುಸಲ್ಮಾನರಲ್ಲಿ ೩ನೇ [illegible] ಪಾಲು ಮಾಪಿಳ್ಳೆಯವರಾಗಿರುತ್ತಾರೆ. ೧೯೨೫-೨೬ರಲ್ಲಿ ಮಾಪಿಳ್ಳೆಯವರಿಗಾಗಿ ೧೦೭೭ ಪ್ರತ್ಯೇಕ ಶಾಲೆಗಳು ಇದ್ದವು. ಇವುಗಳಲ್ಲಿ ೭೭೭೭ ಮಂದಿ ಮಾಪಿಳ್ಳಾ ಮಕ್ಕಳು ಕಲಿಯುತ್ತಿದ್ದರು. ಮಾಪಿಳ್ಳಾ ಹುಡುಗಿಯರಿಗಾಗಿ ೨೭ ಪ್ರತ್ಯೇಕ ಶಾಲೆಗಳು ಇದ್ದವು. ಇವುಗಳಲ್ಲಿ ೧೯೧೨ ಮಂದಿ ಹುಡುಗಿಯರು ಮಾತ್ರವೇ ಕಲಿಯುತ್ತಿದ್ದರು. ಮಾಪಿಳ್ಳೆಯರಿಗಾಗಿ VI ಫೋರ್ಮ್ ವರೆಗೆ ಕಲಿಸುವ ಇಮಯತುಲ್ಲಾ ಇಸ್ಲಾಮ ಹೈಸ್ಕೂಲ್ ಮತ್ತು III ಫೋರ್ಮ್ ವರೆಗೆ ಕಲಿಸುವ ಮದರ ಸತುಲ್ಲಾ ಮಹಮ್ಮದೀಯ ಮಿಡ್ಲಸ್ಕೂಲು ಎಂಬ ಎರಡು ಸೆಕೆಂಡರಿ ಶಾಲೆಗಳು ಮಾತ್ರವೇ ಇದ್ದವು. ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೊಲೆಜುಗಳಲ್ಲಿ ೧೮ ಮಂದಿ ಮಾಪಿಳ್ಳಾ ವಿದ್ಯಾರ್ಥಿಗಳು ಮಾತ್ರವೇ ಕಲಿಯುತ್ತಿದ್ದರು.

ಸ್ಫುಟವಿಚಾರಗಳು.

ಮುಂಬಾಯಿಯ ಗಿರಣಿ ಕೂಲಿಕಾರರ ಮುಷ್ಕರ.

ಹಿಂದೂಸ್ಥಾನದ ಗಿರಣಿ ಕೈಗಾರಿಕೆಯು ಬಹಳ ಕಷ್ಟ ಸ್ಥಿತಿಯಲ್ಲಿರುವ ಸಮಯದಲ್ಲಿಯೇ ಮುಂಬಾಯಿಯ ಗಿರಣಿ ಕೂಲಿಗಳು ಮುಷ್ಕರ ಹಿಡಿದುದು ವಿವೇಕವಾಗಲಿಲ್ಲವೆಂದು ತೋರುತ್ತಿದೆ. ಜಪಾನಿನ ಮೇಲಾಟದ ಮುಂದೆ ಹಿಂದೀ ಗಿರಣಿಗಳು ಕೆಲಸಮಾಡಲಾರದೆ ನಷ್ಟದಲ್ಲಿಯೇ ಇವೆ. ಹತ್ತಿ ಸುಂಕವನ್ನು ತೆಗೆದುಹಾಕಿದರೂ, ಸರಕಾರವು ರೂಪಾಯಿಯ ಬೆಲೆಯನ್ನು ಹದಿನೆಂಟು ಪೆನ್ನಿಗಳಿಗೆ ಏರಿಸಿದುದರಿಂದ ಈ ಗಿರಣಿ ಕೈಗಾರಿಕೆಗೆ ಎಡಗೈಯಿಂದ ಕೊಟ್ಟು ಬಲಗೈಯಿಂದ ಹಿಸಕೊಂಡಂತಾಗಿದೆ. ಆದುದರಿಂದ ಪರದೇಶೀಯ ಮೇಲಾಟದೊಡನೆ ಕಾದಾಡಲು ನಮ್ಮ ಗಿರಣಿಗಳು ಇನ್ನೂ ಶಕ್ತಿಯುಳ್ಳವುಗಳಾಗಿಲ್ಲ. ಆದುದರಿಂದ ಗಿರಣಿಗಳೊಳಗೆ ನೂತನ ಕ್ರಮಗಳನ್ನೇರ್ಪಡಿಸಿ ಅದನ್ನು ಪುನಃ ಬಲಶಾಲಿಯಾಗಿ ಮಾಡುವುದು ಗಿರಣಿಕಾರರ ಕರ್ತವ್ಯವಿದೆ. ಗಿರಣಿಗಳ ಅಸ್ತಿತ್ವವೇ ಸಂದೇಹದ ಸ್ಥಿತಿಯಲ್ಲಿರುವಾಗ್ಯೆ, ಅವುಗಳ ಬಾಳುವಿಕೆ ಬಗ್ಯೆ ಸರ್ವತರದ ಉಪಾಯಗಳನ್ನು ಸಾಧಿಸಬೇಕಾಗುತ್ತದೆ. ಅಂಥಾ ಉಪಾಯಗಳಿಂದ ಕೂಲಿಕಾರರಿಗೆ ಕಿಂಚಿತ್ ಬಾಧೆ ಬರುವುದಾದರೆ, ಅದನ್ನವರು ಸಹಿಸಬೇಕಾಗುತ್ತದೆ. ಯಾಕೆಂದರೆ ಗಿರಣಿಗಳ ಬಾಳುವಿಕೆಯಿಂದ ಗಿರಣಿಗಳ ಮ್ಯಾನೇಜರಿಗೆ ಎಷ್ಟು ಲಾಭವಿದೆಯೊ ಕೂಲಿಕಾರರಿಗೆ ಅಷ್ಟೇ ಲಾಭವಿದೆ. ಗಿರಣಿಗಳು ಪರದೇಶದಿಂದ ಬರುವ ವಸ್ತ್ರಗಳನ್ನು ಕಡಿಮೆಮಾಡಿ, ಪರದೇಶದ ಕೂಲಿಗಳಿಗೆ ನಾವು ತೆರುವ ಮಜೂರಿಗೆ ತಡೆಹಾಕಿ, ಅದನ್ನು ಸ್ವದೇಶದ ಕೂಲಿಗಳಿಗೇನೇ ಸಿಕ್ಕುವಂತೆ ಮಾಡುತ್ತವೆ. ಸರಿಯಾದ ವೃತ್ತಿಯನ್ನು ಹೊಂದುವುದೇ ಕಷ್ಟವಾಗಿರುವ ಈ ದಿನಗಳಲ್ಲಿ ಹಲವು ಗಿರಣಿಗಳು ನಿಂತುಹೋದವೆಂದರೆ ಸಾವಿರಾರು ಜನರು ವೃತ್ತಿಯಿಲ್ಲದೆಯಾಗಲಿ, ಊಟಕ್ಕಿಲ್ಲದೆ ಬಳಲಬೇಕಾಗುವುದು. ಆದುದರಿಂದ ಕೂಲಿಗಳು ತಮ್ಮ ಹಿತವನ್ನು ಲಕ್ಷಿಸುವಾಗ, ಗಿರಣಿಗಳು ಬಾಳಬೇಕೆಂಬುದನ್ನು ಮರೆಯಬಾರದು. ಗಿರಣಿಗಳ ಬೆಳವಣಿಗೆ ಬಗ್ಯೆ ಅವರೇ ಸಹಕಾರಿಯಾಗಬೇಕು. ಬದಲಿಗೆ ಅವರೇ ವಿರೋಧಿಗಳಾದರೆ, ದೇಶಕ್ಕೇನೇ ಅದರಿಂದ ಬಾಧಕವಿದೆ. ಗಿರಣಿ ಕೂಲಿಗಳ ಧುರೀಣರು ಈ ವಿಷಯದಲ್ಲಿ ತಮ್ಮ ಲಕ್ಷ್ಯವಿಟ್ಟು ಕೂಲಿಕಾರರ ಸುಖಜೀವನದ ಉದ್ದೇಶದಿಂದಲೂ, ಗಿರಣಿಗಳ ಅಭಿವೃದ್ಧಿ ದೃಷ್ಟಿಯಿಂದಲೂ ಈ ಮುಷ್ಕರವು ಬೇಗನೇ ಅಂತ್ಯವಾಗುವಂತೆ ನೋಡುವುದೇ ಶ್ರೇಯಸ್ಕರವಾಗಿದೆ.

ಪುನಃ ಇಂದೂರಿನ ಮಾಜಿ ಮಹಾರಾಜರು.

ಒಮ್ಮೆ ಹೆಸರು ಹೋದುದು ಸಾಕಾಗಲಿಲ್ಲ. ವಿಶೃಂಖಲ ವೃತ್ತಿಯವರಾಗಿದ್ದು ಭೋಗವೇ ಜೀವನದ ಉದ್ದೇಶ ಮತ್ತು ವೃತ್ತಿಯಾಗಿ ಮಾಡಿಕೊಂಡಿದ್ದ ಈ ಮಹಾರಾಜರು ಗದ್ದಿಗೆಯಿಂದ ಇಳಿಸಲ್ಪಟ್ಟು, ಮುಮ್ತಾಜಳೆಂಬ ವೇಶ್ಯೆಯ ಹೆಸರಿನೊಡನೆ ಬಹಳವಾಗಿ ಅಪಯಶಸ್ಸನ್ನು ಪಡೆದಿರುವರಾದರೂ, ತಮ್ಮ ಸ್ವಭಾವವನ್ನು ಇನ್ನಾದರೂ ತಿದ್ದಿಕೊಳ್ಳುವ ಬದಲಿಗೆ, ಇವರು ತಮ್ಮ ಭೋಗಾಭಿಲಾಷೆಯ ಚರಿತ್ರೆಯನ್ನು ಮತ್ತೂ ಮುಂದರಿಸುತ್ತಿರುವರು. ಇವರಿಗೆ ಈಗಿರುವ ಹಲವು ರಾಣಿಯರು ಸಾಕಾಗದೆ ಈಗ ಮತ್ತೊಂದು ವಿವಾಹವನ್ನು ಇವರು ಮಾಡಿಕೊಳ್ಳಲಿರುವ ಇವರ ಈ ಮಾನಸಿಕತೆಯ ವಿಪರೀತತೆಯೇ ಮುಂಬಾಯಿಯ ದೈನಿಕ ಪತ್ರಿಕೆಗಳ ದಿನನಿತ್ಯದ ತಿರಸ್ಕಾರ ಸಹಿತವಾದ ಪ್ರಕಟಣೆಗಳಿಗೆ ಕಾರಣವಾಗಿಯದೆ. ಈ ಹಲವು ಹೆಂಡತಿಗಳುಳ್ಳ ಮಾಜಿರಾಜನು ಈಗ ಅಮೇರಿಕೆಯ ಒಬ್ಬ ಹುಡುಗಿಯನ್ನು ಮದುವೆಮಾಡಿಕೊಳ್ಳಲಿರುವನು. ಹಲವು ಹೆಂಡರೂ, ಹಲವು ವೇಶ್ಯೆಗಳು ಈ ಭೋಗಾಸಕ್ತ ರಾಜರ ಉನ್ಮಾದನೆಗೆ ಸಾಕಾಗದೆ ಈ ಹೊಸ ಪ್ರಣಯಕಾಹಿನಿಯ್ಕೆ ಆರಂಭವಾಗಿಯದೆ. ರಾಜ್ಯ, ಅಧಿಕಾರ, ಯಶಸ್ಸು ಎಲ್ಲ ಹೋದರೂ ಇವರಿಗೆ ಇನ್ನೂ ಪಾಠವಾಗಿಲ್ಲ. ಈ ತರದ ಮಾನಸಿಕತೆಯು ಇಂದೋರಿನ ಮಾಜಿರಾಜರದು ಮಾತ್ರವೇ ಆಗಿಯದೆಂದು ತಿಳಿಯಬಾರದು. ಹಿಂದೂಸ್ಥಾನದ ಸ್ವೇಚ್ಛಾ ಪ್ರವರ್ತಕರೂ ಅಧಿಕಾರಹೀನರೂ ಆದ ರಾಜರ ಹಲವು ಮನೆತನಗಳ ಒಳಗಿನ ಕಥೆಗಳನ್ನು ಕೇಳಿದರೆ ಯಾರೊಬ್ಬರಿಗೂ ಅಸಹ್ಯವಾಗದಿರದು. ಹಿಂದುಸ್ಥಾನದ ಮಿಲಿಯ ಗಟ್ಟಲೆ ಜನರ ಜೀವನಪ್ರಗತಿಗಳ ಸೂತ್ರಸಂಚಾಲಕರಾದ ಈ ಅಧಿಕಾರ ವರ್ಗವು ಇಷ್ಟು ರೀತಿಯಲ್ಲಿ ಜವಾಬ್ದಾರಿಯಿಲ್ಲದೆ, ಸಾರ್ವಜನಿಕ ಹಿತದ ಒಂದಿಷ್ಟಾದರೂ ಚಿಂತನೆಯಿಲ್ಲದೆ ಪತನೋನ್ಮುಖಜೀವನದಲ್ಲಿ ಕಾಲವನ್ನು ವ್ಯರ್ಥ ಮಾಡುವುದು ಹಿಂದುಸ್ಥಾನದ ದೌರ್ಭಾಗ್ಯ.

ಮಹಾತ್ಮಾಜೀಯವರೂ ಕಾಂಗ್ರೆಸ್ಸೂ.

ಕಳೆದ ಬಾರಿಯ ಕಾಂಗ್ರೆಸ್ಸು ಮಹಾತ್ಮಾಜೀಯವರಿಗೆ ರುಚಿಸಲಿಲ್ಲವೆಂಬುವುದು ಸಹಜವಾಗಿದೆ. ಯಾವ ತಪ್ಪುಗಳಿಂದ ಮಹಾತ್ಮಾಜೀಯವರು ೧೯೩೦ನೇ ಇಸವಿಯ ಅಧಿವೇಶನ ಮೊದಲ್ಗೊಂಡು ಕಾಂಗ್ರೆಸ್ಸನ್ನು ಅಧಿಕರಿಸಿದರೊ ಅವೆಲ್ಲಾ ಈಗ ಕಾಂಗ್ರೆಸ್ಸು ಆವರಣದೊಳಗಿಲ್ಲ; ಇದ್ದರೂ ಬರೇ ಕ್ಷೀಣ ಪ್ರಥೆಯೊಂದು ಮಾತ್ರ ಇದೆ. ಈಗ ಈ ಪರಿವರ್ತನೆಕ್ಕಾಗಿ, ಮಹಾತ್ಮಾಜೀಯವರು ಕಾಂಗ್ರೆಸ್ಸಿನ ಖಂಡನವನ್ನು ಮಾಡುವರಾದರೆ ಅದರ ಒಂದಿಷ್ಟು ಅಂಶವಾದರೂ ಮಹಾತ್ಮಾಜೀಯವರಿಗೇ ಸೇರಬೇಕಾಗುವುದು. ನಾಗಪುರ ಕಾಂಗ್ರೆಸ್ಸಿನಲ್ಲಿ ತೇಜಸ್ವೀ ಕಾರ್ಯಕ್ರಮವನ್ನು ಹಾಕಿ ಬೆಳೆದು ಬಂದ ಕಾಂಗ್ರೆಸ್ಸಿನ ಪ್ರಚಂಡ ಉತ್ಸಾಹವನ್ನು, ಮಹಾತ್ಮಾಜೀಯವರು ಬರ್ಡೋಲಿಯ ಒಂದೇ ಏಟಿನಿಂದ ಕಾಂಗ್ರೆಸ್ಸಿನ ಮೇಲೆ ಅದರ ದುಷ್ಪರಿಣಾಮವಾಗದಂತೆ ತಡೆದುಬಿಡುವರೆಂದು ಯೋಚಿಸಿದ್ದುದಾದರೆ ಆ ಯೋಚನೆಯು ತಪ್ಪಾಗಿರಬೇಕು. ಉತ್ಸಾಹ ಭಂಗದ ಪ್ರತಿಕ್ರಿಯೆಯು ಜಡತೆಯಾಗಿದೆ. ಮಹಾತ್ಮಾಜೀಯವರ ಹೇಳಿಕೆಯಂತೆ ವಿಧಾಯಕ ಕಾರ್ಯಕ್ರಮವನ್ನೇ ವರ್ಷವರ್ಷವೂ ಕಾಂಗ್ರೆಸ್ಸು ಮಂಜೂರು ಮಾಡುತ್ತಾ ಹೋದದ್ದಾದರೆ ಕಾಂಗ್ರೆಸ್ಸಿನಲ್ಲಿ ಎಷ್ಟು ಕೆಲಸವಾಗಬಹುದಿತ್ತೆಂದು ಹೇಳಲಾಗುವುದಿಲ್ಲ. ಗಯಾ ಕಾಂಗ್ರೆಸ್ಸ ವರೆಗಿನ ಕಾಂಗ್ರೆಸ್ ಜಡತೆಯೇ ಇದಕ್ಕೆ ತಕ್ಕುದಾದ ಉತ್ತರವಾಗಿರಬೇಕು.

ಮಹಾತ್ಮಾಜೀಯವರ ಖಂಡನೆ.

ಖಂಡಿಸುವ ಮೊದಲು ಹೊಗಳುವುದು ಮಹಾತ್ಮಾಜೀಯವರ ಲೇಖದ ಒಂದು ಮುಖ್ಯ ಗುಣವಿರುತ್ತದೆ. ಮುಂದೆ ಕೊಡಲಿರುವ ನಿರ್ದಾಕ್ಷಿಣ್ಯ ಖಂಡನೆಯ ಕಾಠಿಣ್ಯವನ್ನು ಕಡಿಮೆ ಮಾಡಲೆಂದೇನೊ! ಹಾಗೆಯೇ ಗಾಂಧಿಜೀಯವರು ತಮ್ಮ ಟೀಕೆಯನ್ನು ಧುರೀಣರ ಪ್ರಶಂಸೆಯಿಂದಲೇ ಆರಂಭಿಸಿರುವರು. ಐಕ್ಯದ ಠರಾವು ಅವರನ್ನು ತೃಪ್ತಿಪಡಿಸಿಲ್ಲವೆಂದು ತೋರುತ್ತಿದೆ, ಆದರೆ ಈಗಿನ ಸಂದರ್ಭದಲ್ಲಿ ಅನ್ಯ ಉಪಾಯವಿಲ್ಲವೆಂಬುದನ್ನೂ ಒಪ್ಪಿಕೊಳ್ಳುವರು. ಆದರೆ ಅವರ ನಿಜವಾದ ಖಂಡನವು ಇತರ ಠರಾವುಗಳ ಮೇಲೆ ಇದೆ. “ಜವಾಬ್ದಾರಿ ಇಲ್ಲದ ಮಾತೂ ಕೆಲಸವೂ ದಿನ ನಿತ್ಯದ ಸೂತ್ರವಾಗಿ ಹೋಗಿದ್ದವು. ಶಿಸ್ತಿನ ಅಭಾವವು ಕಡಿಮೆಯಾಗಿರಲಿಲ್ಲ. ಬಹಳ ಪರಿಣಾಮವನ್ನುಂಟು ಮಾಡುವ ಠರಾವುಗಳು ಒಮ್ಮಿಂದೊಮ್ಮೆ ವಿಷಯ ನಿಯಾಮಕ ಕಮಿಟಿಯಲ್ಲಿ ತರಲ್ಪಟ್ಟವು; ಮತ್ತು ಆ ಗೌರವಾತ್ಮಕ ಸಂಸ್ಥೆಯು ಹೆಚ್ಚು ಆಲೋಚನೆಯಾಗಲಿ ತರ್ಕವಾಗಲಿ ಇಲ್ಲದೆ ಸ್ವೀಕರಿಸಿಬಿಟ್ಟಿತು” ಎಂದು ಈಗ ಮಹಾತ್ಮಾಜೀಯವರ ಬಾಯಿಯಿಂದ ಬರುವ ಮಾತುಗಳು, ಅಸಹಕಾರದ ಸಮಯದಲ್ಲಿ ಮೊಡರೇಟರಿಂದಲೂ, ಆ ಮೇಲೆ ರಿಸ್ಪೊನ್ಸಿವ್ ವಾದಿಗಳಿಂದಲೂ ಬಂದ ಮಾತುಗಳ ಪ್ರತಿ ಧ್ವನಿಯಂತೆ ತೋರುತ್ತಿದೆ. ಬ್ರಿಟಿಷ ವಸ್ತು ಬಹಿಷ್ಕಾರದಂತಹ ಠರಾವನ್ನು ಮಂಜೂರು ಮಾಡಿ ನಾವು ನಮ್ಮ ನಿರ್ವೀರ್ಯತೆಯನ್ನು ಪ್ರದರ್ಶಿಸಿ ಟೀಕಾಕಾರರ ಅಪಹಾಸ್ಯಕ್ಕೆ ಗುರಿಯಾಗಿ ಪ್ರತಿರೋಧಿಗಳ ತಿರಸ್ಕಾರವನ್ನು ತರಿಸಿಕೊಳ್ಳುವೆವು” ಎಂದು ಮಹಾತ್ಮಾಜೀಯವರು ಮಾಡಿದ ಖಂಡನೆಯ ಶೈಲಿಯು ಅಗತ್ಯವಿದ್ದುದಕ್ಕಿಂತಲೂ ಕಠಿನವಿದೆ. ಮಹಾತ್ಮಾಜೀಯವರು ಖಂಡಿಸುವ ಠರಾವುಗಳಿಗೆ ಮದನಮೋಹನ ಮಾಲವೀಯ, ಡಾ| ಎನ್ನಿಬಿಸೆಂಟ, ಶ್ರೀ. ಶ್ರೀನಿವಾಸ ಅಯ್ಯಂಗಾರ ಮೊದಲಾದ ಸುಪ್ರಸಿದ್ಧರೂ ರಾಜತಂತ್ರಜ್ಞರೂ ಆದ ಧುರೀಣರ ಒಪ್ಪಿಗೆಯೇ ಇದೆ.

ಖಾದಿಯ ಅವಹೇಳನೆ.

ಪ್ರಾಯಶಃ ಕಾಂಗ್ರೆಸ್ ಕ್ಷೇತ್ರದಲ್ಲಿ ತೋರಿದ ಖಾದಿ ಪರವಾದ ಪ್ರಕಟಣೆಗಳು ಮಹಾತ್ಮಾಜೀಯವರನ್ನು ಬಹಳ ನೋಯಿಸಿದ್ದಿರಬೇಕು. ಪ್ರಥಮತಃ ಪ್ರಕಟಣೆಯ ಇಂಗ್ಲೀಷ ಭಾಷೆಯನ್ನು ಮಹಾತ್ಮಾಜಿಯವರು ಖಂಡಿಸಿರುವರು. ಆದರೆ ಅಖಿಲಭಾರತ ಸಮ್ಮೇಲನದಲ್ಲಿ ಸರ್ವರಿಗೂ ಸಾಮಾನ್ಯವಾದ ಭಾಷೆಯೊಂದು ಆಗುವ ವರೆಗೆ ನಾವು ಇಂಗ್ಲೀಷನ್ನೇ ಆಡಬೇಕಾಗುವುದು. ನಮ್ಮ ಅನುಭೂತಿ (sentiment) ಹೇಗಿದ್ದರೂ, ಕಾರ್ಯದ ಆವಶ್ಯಕತೆಯು ಹೀಗಿರುತ್ತದೆ. ಪ್ರಕಟಣೆಯಲ್ಲಿ ಚರಕವು ಅದ್ದ ನೂಲನ್ನೂ ಗಿರಣಿಯು ಉದ್ದ ನೂಲನ್ನೂ ತಯಾರಿಸಲೆಂದು ಸೂಚಿಸೋಣಾಗಿತ್ತು. ಒಂದು ದೊಡ್ಡ ಪ್ರಕಟಣೆಯಲ್ಲಿ:—ನೇಕಾರನು ಉದ್ದಕ್ಕೆ ಕೈನೂಲನ್ನುಪಯೋಗಿಸುವಂತೆ ಮಾಡುವುದೆಂದರೆ, ಅವನು ಒಂದು ಯುದ್ಧನಾವೆಯೊಡನೆ ಚೂರಿಯಿಂದ ಕಾದಾಡಲು ಪತ್ರಾಯಪಡಿಸಿದಂತೆ ಆಗಿದೆ.’ ಎಂದು ಬರೆಯೋಣಾಗಿದೆ. ಖಾದಿಯ ಕಾರ್ಯಕ್ಷೇತ್ರದ ಕಷ್ಟಗಳನ್ನು ಈ ಪ್ರಕಟಣೆಯು ಪ್ರದರ್ಶಿಸುತ್ತಿತ್ತು ಮಾತ್ರ. ಆದರೆ ಮಹಾತ್ಮಾಜೀಯವರು ಇದರಲ್ಲಿ ವಿಪತ್ಕಾರಕ ವಿರೋಧವನ್ನು ಕಂಡುದು ಬಹಳ ದುಃಖದ ವಿಷಯ. ಮಹಾತ್ಮಾಜೀಯವರ ಮಧುರೆಯ ಪ್ರವಾಸದಲ್ಲಿ ಇದರ ಚರ್ಚೆಯು ಬಂದು, ಮಹಾತ್ಮಾಜೀಯವರು ಅಲ್ಲಿಯ ನೇಕಾರರನ್ನು ಸಮಾಧಾನ ಪಡಿಸಲಾರದೆ ಹೋಗಿದ್ದಾರೆ.

ನೋಟಗಳು.
NOTE...S.

ಇಂದೂರಿನ ಮಾಜಿ ಮಹಾರಾಜರ ಪ್ರಣಯ ಸರಣಿಯು ಇನ್ನೂ ಮುಗಿದಿಲ್ಲ. ಉದ್ದಕ್ಕೆ ಬೆಳೆಯುತ್ತಾ ಉಂಟು. ಈ ಬಾರಿ ಮುಮ್ತಾಜಳಲ್ಲ. ವಿುಸ್ ಮೇರಿಯೋಳ ದೇಶದ ಮಿಸ್ ಮಿಲ್ಲರ್ ಎಂಬಾಕೆಯು.

• • • •

ಅಮೇರಿಕವು ಶಾಂತಿಸ್ಥಾಪನೆಯ ಉದ್ದೇಶದಿಂದ ಈಗ ಹೊಸ ಸೂಚನೆಗಳನ್ನು ಫ್ರೆಂಚರಿಗೆ ಕೊಟ್ಟಿದೆ. ಈ ಮೂಲಕ ಅಮೇರಿಕವು ಹೊಸ ಒಪ್ಪಂದಗಳನ್ನು ಮಾಡಲಿಚ್ಛಿಸುವುದು. ಆದರೆ ಈ ಶಾಂತಿಸ್ಥಾಪನೆಯ ಪ್ರಯತ್ನಗಳೇ ಯುದ್ಧಕ್ಕೆ ಅವಸಾನ ಹೊಂದುವುದೇ ಎಂಬ ಹೆದರಿಕೆಯಿದೆ.

• • • •

ಮದ್ಯಪಾನ ನಿಷೇಧದ ಕಾನೂನು ಜ್ಯಾರಿಯಲ್ಲಿದ್ದ ಅಮೇರಿಕದಲ್ಲಿ ಒಬ್ಬ ಮದ್ಯ ಮಾರುವವನು ವಿಚಾರಣೆಗೆ ಗುರಿಯಾದನು. ಮಾರಿದ ದ್ರಾವಕವು ಮದ್ಯವಾಗಿದೆಯೊ ಅಲ್ಲವೊ ಎಂದು ತಿಳಿಯಲು ಜ್ಯೂರಿಗಳು ಅದನ್ನು ಕುಡಿದು ಸಂತುಷ್ಟಚಿತ್ತರಾಗಿ ಅಪರಾಧಿಯನ್ನು ಖುಲಾಸುಮಾಡಿದರು! ಜಡ್ಜರು ಜ್ಯೂರಿಗಳನ್ನು ಹೊರತಳ್ಳಿದರು.

• • • •

ಪೋಪ್ ಗುರುಗಳವರು ತಮ್ಮ ಮಂದೆ (ರೋಮನ್ ಕೆಥೋಲಿಕ್ ಜನರು)ಗಳನ್ನು ಎಚ್ಚರಿಸಲು ಕೆಥೋಲಿಕ್ ಬಿಶೊಪರ ಲಕ್ಷ್ಯವನ್ನೆಳೆದಿದ್ದಾರೆ. ಇತ್ತೀಚೆಗೆ ಕ್ರಿಸ್ತೀಯ ಐಕ್ಯಕ್ಕಾಗಿ ಹೊರಟ ಚಳವಳಿಯೇ ಇದರ ಕಾರಣವಾಗಿದೆ. “ರೋಮಿನ ಇಗರ್ಜಿಯೇ ಕ್ರಿಸ್ತನ ನಿಜವಾದ ಏಕ ಮಾತ್ರ ಇಗರ್ಜಿ ಆಗಿದೆ.” ಎಂದು ಪೋಪರುಗಳ ಕಟ್ಟಪ್ಪಣೆ!

• • • •

ಲೊರ್ಡ ಗ್ಲಾನುಸ್ಕ ಎಂಬ ಇಂಗ್ಲೀಷ ಶ್ರೀಮಂತನು ಯುದ್ಧದ ಸ್ಮಾರಕವಾದ ಒಂದು ಹೊಸ ಆಸ್ಪತ್ರೆಗಾಗಿ ಬಹಳ ಶ್ರಮಿಸಿ, ಸ್ಥಾಪಿಸಿ, ಅದನ್ನು ತೆರೆದು “ಈ ದಿನವನ್ನು ನೋಡಲಿಕ್ಕೆ ದೇವರು ನನ್ನನ್ನು ಉಳಿಸಿದುದಕ್ಕೆ ನಾನು ದೇವರನ್ನು ವಂದಿಸುತ್ತೇನೆ” ಎಂದು, ಬಿದ್ದು ಕೂಡಲೇ ಮೃತ್ಯುವಶನಾದನು. ಮೃತ್ಯು ಸಮಯದ ಸ್ಥಳ, ಕಾರ್ಯ ಮತ್ತು ಮಾತುಗಳಿಗೂ, ಮರಣಕ್ಕೂ ಒಂದು ದೈವೀ ಸಂಬಂಧವಿದ್ದಂತೆ ತೋರುತ್ತಿದೆ. ಲೊರ್ಡ ಗ್ಲಾನುಸ್ಕನು ಧನ್ಯನೆಂದು ನಮಗನ್ನಿಸುತ್ತಿದೆ.

• • • •

ಅಮೇರಿಕದ ನ್ಯೂಯೋರ್ಕ ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿ, ಕಾಲುನಡೆಯಲ್ಲಿ ಹೋಗುವವರು ತಮ್ಮ ಹಿಂದೂ, ಮುಂದೂ ದೀಪಗಳನ್ನಿಟ್ಟುಕೊಳ್ಳಬೇಕೆಂಬ ಮಸೂದೆಯು ಒಂದು ತರಲ್ಪಟ್ಟದೆ. ಒಂದು ಹೊರ್ನ ಕೂಡ ಇಟ್ಟುಕೊಳ್ಳಬೇಕೆಂದು ಮಾಡಿದರೆ ಉತ್ತಮವಿತ್ತು. ಒಬ್ಬ ಪೋಲೀಸಿನವನನ್ನೂ ಹತ್ತಿರ ಇಟ್ಟುಕೊಳ್ಳಬೇಕೆಂದು ಮಾಡಿದರೆ ಮತ್ತೂ ಲಾಭವಾದೀತು. ಅಗತ್ಯಬಿದ್ದಾಗ ಸುಳ್ಳು ಸಾಕ್ಷಿಗಳನ್ನಾದರೂ ತಯಾರಿಸಬಹುದು.

• • • •

ಮಂಗಳೂರಿನಲ್ಲಿ ಕಳೆದ ಎರಡು ವಾರಗಳು ಬಹಳ ವಿಶೇಷದ್ದು. ಎರಡು ನಾಟಕ ಕಂಪೆನಿ ಮತ್ತು ಒಂದು ಸರ್ಕಸ್ ಕಂಪೆನಿ. ಸರ್ಕಸ್ ಕಂಪೆನಿಯವರಿಗೆ ಮಂಗಳೂರಿನವರು ತಕ್ಕ ಪ್ರೋತ್ಸಾಹವನ್ನು ಕೊಟ್ಟಿಲ್ಲವಾದ್ದರಿಂದ ಸರ್ಕಸಿನವರು ನಿನ್ನೆಯ ದಿವಸ ಪರ್ಯಾಯ ನೋಡಲಿಕ್ಕೆ ಹೋಗಿರುವರು.

• • • •

ಇತ್ತಲಾಗೆ ಪೋಲೀಸಿನವರಿಗೆ ಬಸ್ಸುಗಳ ಬಹಳ ಜಾಗ್ರತೆ ಬಸ್ಸು ಓಡುವಾಗಲೆ ತಕ್ಸೀರು ಇಲ್ಲದೆ ಒವರ್ ಲೋಡಿಂಗ ಚಾರ್ಜು ಮಾಡುವದು. ಬಸ್ಸಿನ ಮಾಡಿನಲ್ಲಿ ಮಳೆಯುಗೋಸ್ಕರ ಹಾಕಿದ ತರ್ಪಲಿನ ಒಳಗಡೆ ಜನ ಉಂಟೆಂದು ಚಾರ್ಜು ಮಾಡುವದು ರೂಢಿಗೆ ತರುತ್ತಿದ್ದಾರೆ.

• • • • • •

ಬಸ್ಸು ಕಂಪೆನಿಗಳಿಗೆ ತಮ್ಮ ಬಸ್ಸುಗಳನ್ನು ನಡಿಸುವುದಕೆ ಸ್ಪೀಡ್ ಲಿಮಿಟ್, ಆದರೆ ನಮ್ಮ ಪೋಲೀಸರು ಮುನಿಸಿಪಾಲಿಟಿಯ ಸುಗಂಧ ದ್ರವ್ಯವನ್ನು ಒಯ್ಯುವ ಬಸ್ಸುಗಳಿಗೆ ಸ್ಪೀಡಿನ ಲಿಮಿಟೇ ಗೊತ್ತುಮಾಡಲಿಲ್ಲ. ಇವಕ್ಕೆ ಬೇರೆ ಪೋಲಿಸು ಡಿಪಾರ್ಟುಮೆಂಟಿನವರು ಇದ್ದಾರೋ ಏನೊ?

• • • •

ಗದ್ದೆಯಲ್ಲಿ ಸವುತೆಕಾಯಿಯನ್ನು ನರಿ ತಿನ್ನುತ್ತದೆ ಎಂದು ಬೇಲಿ ಹಾಕಿಸಿತು. ಆದರೂ ಬೇಲಿಯೇ ಸವುತೆ ಕಾಯಿಯನು ತಿನ್ನಲು ಆರಂಭಿಸಿದೆ, ಇದೀಗ ನಮ್ಮ ಮಂಗಳೂರು ದಫೆದಾರರ ಅವಸ್ಥೆ.

...ದೇಶ ವರ್ತಮಾನ.

...ಅಮೀರರು ನೇಪಲಿನಲ್ಲಿ ಇಳಿದು ಅಲ್ಲಿಂದ ಇಟಲಿ ...ರೋಮು ಪಟ್ಟಣಕ್ಕೆ ಹೋದರು. ರಾಣಿಯವರು ಮುಕುಟು ...ರೋಮುಪಟ್ಟಣವನ್ನು ಬಹಳ ಅಂದವಾಗಿ ಅಲಂಕರಿಸಿ ...ಔತಣಗಳಾದವು.

...ನಗರದಲ್ಲಿ ಇಬ್ಬರು ಕೆಮಿಕಲ್ ವಿದ್ವಾಂಸರು ತಮ್ಮ ...ಶೋಧನೆಯನ್ನು ಮಾಡುವಾಗ ಆ ವಸ್ತುವಿಗೆ ಬೆಂಕಿ ...ಹೋಗಿ ಮನೆಯು ಪುಡಿಪುಡಿಯಾಯಿತು. ಇಬ್ಬರು ಸತ್ತರು. ...ಸತ್ತರು.

...ಯಕ್ಕೆ ಬರುವ ರೋಯಲ್ ಕಮಿಶನಿನ ಅಧ್ಯಕ್ಷರಾದ ...ಸರು ೯ನೇ ತಾರೀಕಿನಲ್ಲಿ ಸ್ವೀಜರ್‌ಲೆಂಡಿನಿಂದ ಲಂಡ... ಇವರು ೧೯ನೇ ತಾರೀಕಿನಲ್ಲಿ ಇಂಡಿಯಕ್ಕೆ...

...ಇಸವಿಯಲ್ಲಿ ಜಪಾನಿನಿಂದ ೧೯೯೩ ಮಿಲ್ಲಿಯ ...ಪರದೇಶಗಳಿಗೆ ಹೋಗಿಯವೆ. ೨೧೭೭ ಮಿಲ್ಲಿಯ ...ಜಪಾನ ದೇಶಕ್ಕೆ ತಂದಿರುವರು.

...ಈಗಿನ ಅರಸರ ಅನುಜನು ಜಪಾನಿನ ಕಡೆಯಿಂದ ...ವ್ಯಾಪಾರಿಯಾಗಿರುವ ಒಬ್ಬ ಸಾಧಾರಣ ಮನುಷ್ಯನ ...ಮಾಡಿಕೊಳ್ಳಲು ನಿರ್ಣಯಿಸಿರುವರು. ಆದರೆ ಜಪಾ... ರಾಜ ಕುಟುಂಬವವರು ರಾಜ ವಂಶದ ಕನ್ನೆಯನ್ನೇ ...ರುವುದರಿಂದ ಈ ಕುಮಾರಿಯನ್ನು ಒಬ್ಬ ಜಪಾನ...

[illegible]

ಒಳದೇಶ ವರ್ತಮಾನ.

— ಬಿಹಾರ ಮತ್ತು ಒರಿಸ್ಸಾ ದೇಶಗಳಲ್ಲಿರುವ ಮುಸಲ್ಮಾನ ಮತ ಸಮ್ಬಂಧವಾದ ಸಂಸ್ಥೆಗಳ ಆಡಳಿತೆಯನ್ನು ಸರಿಪಡಿಸಿ ಅವುಗಳ ಸ್ಥಿತಿಯನ್ನು ಊರ್ಜಿತಕ್ಕೆ ತರುವುದಕ್ಕಾಗಿ ಒಂದು ಕಾನೂನು ಮಾಡುವುದಕ್ಕೆ ಆ ಸಂಸ್ಥಾನದ ಸರಕಾರದವರು ಒಂದು ಕಮಿಟಿಯನ್ನು ನೇಮಿಸಿರುವರು.

— ಡೆರಾಡೂನಿನ ರೊಯಲ್ ಇಂಡಿಯನ್ ಮಿಲಿಟೆರಿ ಕೊಲೆಜಿನಲ್ಲಿ ತರಪೇತು ಮಾಡುವುದಕ್ಕಾಗಿ ಇಂಡಿಯದ ಎಲ್ಲಾ ಸಂಸ್ಥಾನಗಳಿಂದ ಕಳುಹಿಸಿದ ಅರ್ಜಿಗಳಲ್ಲಿ ೧೦ ಮಂದಿ ಹುಡುಗರನ್ನು ಸರ್ವಸೇನಾಧಿಪತಿಗಳು ಚುನಾಯಿಸಿರುವರು.

— ಲಂಡನಿನಲ್ಲಿ ಜರಗುವ ಚಿತ್ರಕಲೆಯ ವಸ್ತುಗಳ ೨ನೇ ವಸ್ತು ಪ್ರದರ್ಶನಕ್ಕೆ ೨೦೦ ಚಿತ್ರಕಲೆಯ ವಸ್ತುಗಳನ್ನು ಪ್ರದರ್ಶಿಸುವರು. ಇವುಗಳಲ್ಲಿ ಅರ್ಧ ವಸ್ತುಗಳು ಇಂಗ್ಲೆಂಡಿನಿಂದಲೂ ಅರ್ಧ ವಸ್ತುಗಳು ಬ್ರಿಟಿಷ ಡೊಮಿನಿಯನುಗಳಿಂದಲೂ ಬರುವಂತೆ ಮಾಡುವರು. ಇಂಡಿಯದಿಂದ ೧೭ ವಸ್ತುಗಳನ್ನು ಕಳುಹಿಸಲಿಕ್ಕೆ ಚುನಾಯಿಸಿರುವರು. ೮ ಎಣ್ಣೆಯ ಬಣ್ಣದ ಚಿತ್ರಗಳು. ೮ ಕೆತ್ತನೆ ಕೆಲಸಗಳು, ಆವರೆ ಶಿಲ್ಪಕಲೆಯ ಕೆಲಸಗಳು ಬೇಡವಂತೆ. ಇದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿರುವರು. ಈ ಕಮಿಟಿಯವರು ಎಲ್ಲಾ ಪ್ರಾಂತೀಕ ಸರಕಾರಗಳ ಸಹಾಯದಿಂದ ಚಿತ್ರಕರ ಹೆಸರುಗಳ ಪಟ್ಟಿಯನ್ನು ತಯಾರಿಸಿ ಪ್ರತಿ ಒಬ್ಬ ಚಿತ್ರಕಾರನು ಎರಡೆರಡು ಚಿತ್ರಗಳನ್ನು ಕಳುಹಿಸಬೇಕೆಂದು ತಿಳಿಸಿರುವರು. ಇವುಗಳಲ್ಲಿ ಯೋಗ್ಯವಾದವುಗಳನ್ನು ಫೆಬ್ರುವರಿಯ ಮೊದಲನೆಯ ವಾರ ಚುನಾಯಿಸುವರು. ಈ ವಸ್ತುಪ್ರದರ್ಶನವು ಬರುವ ಎಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಜರಗುವದು.

— ಮುಂಬಾಯಿಯಲ್ಲಿ ಒಂಭತ್ತು ಗಿರಣಿಗಳ ೧೮ ಸಾವಿರ ಮಂದಿ ಕೂಲಿಯಾಳುಗಳು ಮುಷ್ಕರಹಿಡಿದಿರುವರು.

— ರಂಗೂನಿನಲ್ಲಿರುವ ಎಂಗ್ಲೊ ಬರ್ಮಾ ಕಂಪೆನಿಯ ಅಕ್ಕಿಯ ಮಿಲ್ಲುಗಳಲ್ಲಿ ಒಂದಕ್ಕೆ ಬೆಂಕಿ ಹಿಡಿದು ಸುಟ್ಟುಹೋಯಿತು. ಇದರಿಂದ ೭ ಲಕ್ಷ ರೂಪಾಯಿ ನಷ್ಟವಾಯಿತು.

— ಬರುವ ನ್ಯಾಯವಿಧಾಯಕ ಸಭೆಯಲ್ಲಿ ೧೮ನೇ ತಾರೀಕಿನಲ್ಲಿ ನೊನ್ ಒಫಿಶಿಯಲ್ ಬಿಲ್ಲುಗಳೂ, ರಿಜೊಲ್ಯುಶನುಗಳೂ ಚರ್ಚೆಗೆ ಬರುವವು. ೧೨ನೇ ತಾರೀಕು ವರೆಗೆ ಕಳುಹಿಸಿದ ಪ್ರತಿ ಒಂದು ರಿಜೊಲ್ಯುಶನ್ ಮತ್ತು ಬಿಲ್ಲುಗಳು ಇದರಲ್ಲಿ ಚರ್ಚೆಗೆ ಬರುವವು.

— ಅನಂತಪುರದಲ್ಲಿ ಜರಗಿದ ಭಾರತ ಮಹಿಳಾ ಶಾರದಾ ಸಂಘದವರು ಅನಂತಪುರದಲ್ಲಿ ಹೆಂಗಸರಿಗಾಗಿ ಒಂದು ಕೊಲೆಜನ್ನು ಸ್ಥಾಪಿಸಬೇಕೆಂದು ಅಂಧ್ರಾ ಯುನಿವರ್ಸಿಟಿಗೂ ಮದರಾಸು ಸರಕಾರಕ್ಕೂ ಮನವಿಯನ್ನು ಕಳುಹಿಸಿರುವರು.

— ಜನವರಿ ೧ನೇ ತಾರೀಕಿನಿಂದ ರೈಲುವೇ ಮೈಲು ವಾನಿನಲ್ಲಿ ಹಾಕುವ ಪ್ರತಿ ಒಂದು ಕಾಗದಕ್ಕೆ ॥ ಆಣೆ ಲೇಟ್ ಫಿ ತೆಗೆದುಕೊಳ್ಳಲಾಗುವದೆಂದು ಟಪ್ಪಾಲು ಇಲಾಖೆಯವರ ಹೊಸ ಹುಕುಂ ಹೊರಟಿದೆ.

— ಕೊಚ್ಚಿ ರಾಜ್ಯದಲ್ಲಿರುವ ಪುಲಿಯರು ಮುಂತಾದ ಹಿಂದುಳಿದ ಜಾತಿಯವರಿಗೆ ಹಿಂದೂ ದೇವಸ್ಥಾನಗಳಿಗೆ ಹೋಗಲಿಕ್ಕೆ ಅಪ್ಪಣೆಯು ಇಲ್ಲದ್ದರಿಂದ ತಮಗೇನಾದರೂ ಒಂದು ದಾರಿ ತೋರಿಸಬೇಕೆಂದು ಕೊಚ್ಚಿ ಸರಕಾರಕ್ಕೆ ತಿಳಿಸುತ್ತಲೇ ಇದ್ದರು. ಈಗ ಕೊಚ್ಚಿಯ ದಿವಾನರಾದ ರಾವ್ ಬಹದೂರ ಟಿ. ನಾರಾಯಣ ಅಯ್ಯರರು ಎರಣಾಕೊಳದಿನ ಹತ್ತಿರವಿರುವ ಪಣಂಬುಕಾಡ್ ಎಂಬಲ್ಲಿ ಈ ಪುಲಯ ಮತ್ತು ಇತರ ಅಸ್ಪೃಶ್ಯ ಜಾತಿಯವರಿಗಾಗಿ ಒಂದು ಭಜನೆ ಮಂದಿರವನ್ನು ಕಟ್ಟಿಸಲು ಸೆಂಕ್ಷನ್ ಮಾಡಿದ್ದರು. ಇದರ ಪ್ರತಿಷ್ಠೆಯ ದಿವಸ ೧೦೦೦ ಮಂದಿ ಪುಲಿಯರು ಮತ್ತು ಇತರ ಅಸ್ಪೃಶ್ಯರು ಮಿಂದು ಸ್ವಚ್ಛವಾದ ವಸ್ತ್ರಗಳನ್ನು ಉಟ್ಟುಕೊಂಡು ಬಂದರೂ ಪೂಜೆಯು ನಡಿಯಿತು. ಇತರ ಜಾತಿ ಹಿಂದೂಗಳಲ್ಲಿ ಅನೇಕರು ಪ್ರತಿಷ್ಠೆಗೆ ಬಂದಿದ್ದರು. ಇನ್ನು ಪುಲಿಯರು ಹೆಚ್ಚು ಮಂದಿ ಇರುವ ಊರುಗಳಲ್ಲಿ ಇದೇ ತರದ ಭಜನ ಮಂದಿರಗಳನ್ನು ಕಟ್ಟಿಸುವ ಆಲೋಚನೆ ಇದೆ.

— ಪಾಲಗಾಟಿನಿಂದ ಪೊಳ್ಳಾಚಿಗೆ ಸಂಕ್ಷೇಪದ ೩೧ ಮೈಲು ರೈಲು ಮಾರ್ಗದ ಕೆಲಸವು ಬೇಗನೇ ಶುರುವಾಗುವುದು. ಇದಕ್ಕಾಗಿ ಪಾಲ್ಘಾಟು ರೈಲುವೇ ಸ್ಟೇಶನನ್ನು ದೊಡ್ಡದಾಗಿ ಕಟ್ಟಿಸುವುದಕ್ಕಾಗಿ ಸೌತ್ ಇಂಡಿಯನ್ ರೈಲುವೇ ಕಂಪೆನಿಯ ಡ್ಯಾರೆಕ್ಟರರೂ ಏಜೆಂಟರೂ ಇಂಜಿನಿಯರರೂ ಪಾಲ್ಘಾಟಿಗೆ ಬಂದಿದ್ದರು.

— ತಿರುವಾಂಕೂರು ರಾಜ್ಯದ ದೇವಿಕೊಳಂ ಎಂಬ ಊರಿನಲ್ಲಿ ಪ್ಲೇಗು ರೋಗವು ಪ್ರಾರಂಭವಾಗಿದೆ.

— ತಿನ್ನವಲ್ಲಿಯಲ್ಲಿ ಜರಗಿದ ತಿನ್ನವಲ್ಲಿ ಜಿಲ್ಲೆಯ ಉಪಾಧ್ಯಾಯರ ಸಂಘದ ಸಭೆಯಲ್ಲಿ (೧) ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಹೊಸ ಬದಲಾವಣೆಗಳನ್ನು ಸರಕಾರದವರು ಮಾಡುವದಿದ್ದರೆ ಪ್ರತಿ ಒಂದು ಉಪಾಧ್ಯಾಯರ ಸಂಘದವರೊಡನೆ ಅನುಭವವನ್ನು ಕೇಳಬೇಕೆಂದೂ (೨) ಎಲ್ಲಾ ವಸ್ತುಗಳ ಕ್ರಯವು ಹೆಚ್ಚಾಗಿರುವುದರಿಂದ ಎಲಿಮೆಂಟರಿ ಲೋವರ್ ಗ್ರೇಡಿನವರಿಗೆ ೨೫, ಹಾಯರ್ ಎಲಿಮೆಂಟರಿ ಗ್ರೇಡಿನವರಿಗೆ ರೂ. ೩೫ ಸೆಕೆಂಡರಿ ಗ್ರೇಡಿನವರಿಗೆ ೪೦ ರೂಪಾಯಿಗಿಂತ ಕಡಿಮೆ ಸಂಬಳ ಇರಬಾರದೆಂದೂ ಪ್ರತಿ ವರುಷವೂ ಇದಕ್ಕೆ ಕೂಡಿಸಿ ಸ್ವಲ್ಪ ಬಡತಿಕೊಡಬೇಕೆಂದೂ, ಖಾಸಗಿ ಶಾಲೆಗಳಿಗೆ ಕೊಡುವ ಗ್ರೆಂಟು ಈ ಸಂಬಳದ ಸ್ಕೇಲಿನ ಮುಕ್ಕಾಲು ಪಾಲಷ್ಟು ಇರಬೇಕೆಂದೂ ಈ ಗ್ರೆಂಟನ್ನು ೩ ತಿಂಗಳಿಗೊಮ್ಮೆ ಬಟ್ವಾಡೆ ಮಾಡಬೇಕೆಂದೂ, (೩) III ಫೋರ್ಮ್ ಅಥವಾ ೬ನೆ ಸ್ಟೆಂಡಾರ್ಡ ಪಾಸಾದವರನ್ನೆ ಎಲಿಮೆಂಟರಿ ಶಾಲಾ ಉಪಾಧ್ಯಾಯರಾಗಿ ನೇಮಿಸಬೇಕೆಂದು ಈಗ ೫ ವರುಷ ಸರ್ವಿಸಿರುವ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ ಟ್ರೈನಿಂಗ್ ಶಾಲೆಗೆ ಹೋಗದೆ ಖಾಸಗಿಯಿಂದಲೇ ಹಾಯರ್ ಎಲಿಮೆಂಟರಿ ಪರೀಕ್ಷೆಗೆ ಹೋಗಲಿಕ್ಕೆ ಕ್ರಮ ಏರ್ಪಡಿಸಬೇಕೆಂದೂ (೪) ಪ್ರತಿ ಒಂದು ಹ್ಯಾಸ್ಕೂಲಿನಲ್ಲಿ ಒಂದೊಂದು ಟ್ರೈನಿಂಗ್ ಕ್ಲಾಸನ್ನು ತೆರೆಯಬೇಕೆಂದೂ, ಒಂದು ವರುಷದ ಟ್ರೈನಿಂಗ್ ಮಾತ್ರವೇ ಸಾಕೆಂದೂ, ಟ್ರೈನಿಂಗ್ ಹೊಂದುವ ಸಮಯ ತಿಂಗಳಿಗೆ ೧೫ ರೂಪಾಯಿ ಸ್ಟ್ಯಾಪೆಂಡ್ ಕೊಡಬೇಕೆಂದೂ, (೫) ಉಪಾಧ್ಯಾಯರ ಮಕ್ಕಳಿಗೆ ಎಸ್. ಎಸ್. ಎಲ್ ಸಿ ವರೆಗೆ ಧರ್ಮಾರ್ಥವಾಗಿ ಕಲಿಸುವಂತೆ ಮಾಡಬೇಕೆಂದೂ, (೬) ಪ್ರಾಥಮಿಕ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿ ಕೊಡಬೇಕೆಂದೂ (೭) ಸರಕಾರದವರು ಪ್ರಾಥಮಿಕ ವಿದ್ಯೆಗಾಗಿ ಹೆಚ್ಚು ಹಣ ಖರ್ಚ ಮಾಡಬೇಕೆಂದೂ ಮುಂತಾಗಿ ಠರಾವುಗಳನ್ನು ಪಾಸು ಮಾಡಿ ಸರಕಾರಕ್ಕೆ ಕಳುಹಿಸಿರುವರು.

— ಪಾಲಘಾಟಿನಿಂದ ೧೫ ಮೈಲು ದೂರವಿರುವ ಅಲತ್ತೂರು ಎಂಬ ಊರಿನಲ್ಲಿ ಮುನಸೀಫರ ಕುರ್ಚಿಯ ಮೇಲಿರುವ ದಿಂಬಿನ ಕೆಳಗಡೆ ೨ ಬೊಂಬುಗಳನ್ನು ಯಾರೋ ಇಟ್ಟಿದ್ದರು. ಮುಸಾಲ್ಚಿಯು ಕಸ ಗುಡಿಸುವಾಗ ಅವನು ಇವುಗಳನ್ನು ತೆಗೆದುದರಿಂದ ಮುನಸೀಫರ ಜೀವ ಉಳಿಯಿತು. ಈದರ ವಿಷಯ ತನಖಿ ಮಾಡುವುದಕ್ಕಾಗಿ ಕಲ್ಲಿಕೋಟೆಯಿಂದ ಜಡ್ಜರು ಹೋಗಿರುವರು.

— ಒಲವಕೋಟಿನ ಹತ್ತಿರವಿರುವ ಒಂದು ಪ್ರಸಿದ್ಧಿಪಡೆದ ಶಿವಾಲಯವನ್ನು ರಾತ್ರಿಯಲ್ಲಿ ಬೆಂಕಿಕೊಟ್ಟು ಸುಟ್ಟುಹಾಕಿರುವರು. ಗರ್ಭಗ್ರಹ ಮಾತ್ರ ಉಳಿದಿದೆ. ಈ ದೇವಸ್ಥಾನವು ಪಾಲಗಾಟು ಅರಸರ ಆಡಳಿತೆಯಲ್ಲಿರುತ್ತದೆ.

— ಇದೇ ತಿಂಗಳ ೨ನೇ ತಾರೀಕು ಸೋಮವಾರ ಮದರಾಸಿನ ತಂಬುಚೆಟ್ಟಿ ಬೀದಿಯಲ್ಲಿರುವ ಕಾಳಿಕಾಂಬಾ ದೇವಸ್ಥಾನದಲ್ಲಿ ಜರಗಿದ ವಿಶ್ವಕರ್ಮ ಬ್ರಾಹ್ಮಣರ ಸಭೆಯಲ್ಲಿ ಬರುವ ಮೇ ತಿಂಗಳಲ್ಲಿ ಮದರಾಸಿನಲ್ಲಿ ದಕ್ಷಿಣ ಇಂಡಿಯದಲ್ಲಿರುವ ಎಲ್ಲಾ ಜಿಲ್ಲೆಗಳ ವಿಶ್ವಕರ್ಮ ಮಹಾಜನರ ಒಂದು ಸಭೆಯನ್ನು ಜರಗಿಸಬೇಕೆಂದು ನಿರ್ಣಯಿಸಲಾಯಿತು.

— ಮಧುರೆಯಲ್ಲಿ ಸೌರಾಷ್ಟ್ರ ಬ್ರಾಹ್ಮಣರು ನಡಿಸಿಕೊಂಡು ಬರುವ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನವು ತಮ್ಮ ಜಾತಿಯವರೇ ನಡಿಸಿಕೊಂಡು ಬರುವ ದೇವಸ್ಥಾನವಾದುದರಿಂದ ಅದನ್ನು ಸಾರ್ವಜನಿಕ ದೇವಸ್ಥಾನವೆಂದು ಹಿಂದೂ ರಿಲಿಜಿಯಸ್ ಎಂಡೌಮೆಂಟ್ ಬೋರ್ಡಿನವರು ನಿರ್ಣಯಿಸಿದ್ದು ಸರಿಯಲ್ಲವೆಂದೂ ಆದುದರಿಂದ ಈ ದೇವಸ್ಥಾನದ ಕಮಿಟಿಗೆ ಮೆಂಬರರಾಗಿ ಆ ಜಾತಿಯ ಇಬ್ಬರಿಗಿಂತ ಕಡಿಮೆ ಮೆಂಬರರನ್ನು ನೇಮಿಸಬಾರದೆಂದೂ ತಿಳಿಸಿರುವರು.

— ಲೋಕದಲ್ಲಿ ೧೮೫೯ನೇ ಇಸವಿಯಲ್ಲಿ ಪ್ರತಿ ೫೩೫ ತಲೆ ಸರಿ ಇರುವ ಮನುಷ್ಯರಿಗೆ ಒಬ್ಬನ ಪ್ರಕಾರ ಹುಚ್ಚರು ಇದ್ದರೆಂದು ಲೋರ್ಡ ಮೆಕೊಲೆಯವರು ಕಂಡುಹಿಡಿದಿದ್ದರು. ವಿಕ್ಟೋರಿಯಾ ಚಕ್ರವರ್ತಿನಿಯವರ ಡ್ಯಾಮಂಡ ಜುಬಿಲಿಯು ೧೮೯೭ರಲ್ಲಿ ಆದಾಗ ೩೧೨ ತಲೆ ಸಮ ಇದ್ದವರಿಗೆ ಒಬ್ಬ ಹುಚ್ಚನ ಪ್ರಕಾರ ಇದ್ದರು. ೧೯೨೬ನೇ ಇಸವಿಯಲ್ಲಿ ೧೫೦ಕ್ಕೆ ಒಬ್ಬನ ಪ್ರಕಾರ ಹುಚ್ಚರಿದ್ದರು. ಇದೇ ರೀತಿಯಲ್ಲಿ ಗಣನೆ ಮಾಡಿದರೆ ೧೯೨೭ನೇ ಇಸವಿಯಲ್ಲಿ ೧೦೦ಕ್ಕೆ ಒಬ್ಬನ ಪ್ರಕಾರ ಹುಚ್ಚರಿದ್ದಾರೆಂದು ಭಾವಿಸಬಹುದು. ೧೯೩೯ನೇ ಇಸವಿಯಲ್ಲಿ ತಲೆ ಸಮ ಇದ್ದವರ ಮತ್ತು ಇಲ್ಲದವರ ಸಂಖ್ಯೆಯು ಸರಿಸಮಾನವಾಗುವುದು. ಅಂದರೆ ೮೦೦ ಮಿಲಿಯ ಹುಚ್ಚರು, ೮೦೦ ಮಿಲಿಯ ತಲೆ ಸರಿ ಇದ್ದವರು ಇರುವರು.

— ಮುಂಬಾಯಿಯ ಸ್ಪಿಂಗ್‌ಮಿಲ್, ಜೆಕೊಬ ಸೆಸ್ಸೂನ್‌ಮಿಲ್, ಅಲೆಕ್ಸಾಂಡ್ರಿಯಾ ಮಿಲ್ ಈ ಮೂರು ಗಿರಣಿಗಳ ೧೦,೦೦೦ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವರು. ಮಿಲ್ಲುಗಳಿಗೆ ಕಲ್ಲು ಹೊಡಿಯಲು ಆರಂಭವಾಗಿರುವುದರಿಂದ ಪೋಲೀಸಿನವರು ಮಿಲ್ಲುಗಳನ್ನು ಕಾಯುತ್ತಿರುವರು.

— ಮದರಾಸಿನಲ್ಲಿ ಜರಗಿದ ಕೊಂಗ್ರೆಸಿನ ವಿಷಯ ಮಹಾತ್ಮಾಜಿಯವರು ತನ್ನ ಅನುಭವವನ್ನು ಕೊಟ್ಟಿರುವರು. ಇದರ ಪ್ರಕಾರ ಕೊಂಗ್ರೆಸಿನಲ್ಲಿ ಪಾಸಾದ ಠರಾವುಗಳನ್ನು ಜನಸಾಮಾನ್ಯರು ಜಾರಿಗೆ ತರುವಂತೆ ಹಳ್ಳಿ ಹಳ್ಳಿಗಳಿಗೂ ಬೋಧಕರನ್ನು ಕಳುಹಿಸಬೇಕು. ಬ್ರಿಟಿಷ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಪಾಸುಮಾಡಿದ ಠರಾವನ್ನು ಜ್ಯಾರಿಗೆ ತರಲು ಸಾಧ್ಯವಿಲ್ಲದ್ದರಿಂದ ಆ ಠರಾವನ್ನು ಪಾಸುಮಾಡಿ ಕೊಂಗ್ರೆಸಿನ ಎದುರುವಾದಿಗಳ ಹಾಸ್ಯಕ್ಕೆ ಗುರಿಮಾಡಿದ ಪ್ರಯೋಜನವು ಮಾತ್ರವೇ ಸಿಕ್ಕಿತು. ವಸ್ತುಪ್ರದರ್ಶನದಲ್ಲಿ ಅನ್ಯದೇಶಿಯ ವಸ್ತುಗಳೇ ಹೆಚ್ಚಾಗಿದ್ದವು. ಕೊಂಗ್ರೆಸಿನಂಥಾ ಮಹತ್ವದ ಸಂಸ್ಥೆಗೆ ತನ್ನ ಸೂತ್ರಕ್ಕೆ ವಿರೋಧವಾದ ರೀತಿಯಲ್ಲಿ ಈ ವಸ್ತುಪ್ರದರ್ಶನ ಮಾಡುವುದು ಸರಿಯಲ್ಲವೆಂದು ಇನ್ನು ಮುಂದಿನ ಸ್ವಾಗತ ಕಮಿಟಿಯವರಾದರೂ ತಿಳಕೊಳ್ಳಲಿ ಎಂದು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದಿರುವರು.

— ಸೈಮನ್ ಕಮಿಶನ್ ಇಂಡಿಯಕ್ಕೆ ಬರುವಾಗ ಅವರಿಗೆ ಯಾವ ತರದ ಅನುಭವವನ್ನು ಕೊಡಬೇಕು ಎಂಬುವದರ ಕುರಿತು ಆಲೋಚಿಸುವುದಕ್ಕಾಗಿ ದಿಲ್ಲಿಯಲ್ಲಿ ಪ್ರತಿ ಸಂಸ್ಥಾನದ ಸರಕಾರದ ಪ್ರತಿನಿಧಿಗಳು ಒಟ್ಟು ಕೂಡಿರುವರು. ಮದರಾಸಿನಿಂದ ಹೋದ ಜಿ. ಟಿ. ಬೊಯೆಗ್ ಮತ್ತು ಎಸ್. ವಿ. ರಾಮಮೂರ್ತಿಯವರು ೧೫ಕ್ಕೆ ಮದರಾಸಿನಿಂದ ಹಿಂತಿರುಗಿ ಬರುವರು.

— ಜೈನ ವಾರಿಸಿ ಹಕ್ಕಿನ ಬಿಲ್ಲಿನ ಕಮಿಟಿಯ ಅಧ್ಯಕ್ಷಪದವಿಗೆ ಶ್ರೀಯುತ ಸತ್ಯಮೂರ್ತಿಯವರು ರಾಜಿನಾಮೆ ಕೊಟ್ಟಿರುವರು. ಆದುದರಿಂದ ಈ ಬಿಲ್ಲನ್ನು ಕೌನ್ಸಿಲು ಮುಂದೆ ತರುವವರಾದ ಶ್ರೀಯುತ ಕಾರಾಂತರು ಈ ಸರ್ತಿ ಈ ಬಿಲ್ಲನ್ನು ಕೌನ್ಸಿಲಿನ ಮುಂದೆ ತರುವುದಿಲ್ಲವೆಂದು ನಿರ್ಣಯಿಸಿದುದರಿಂದ ಮಂಗಳೂರಲ್ಲಿ ೯ನೇ ತಾರೀಕಿನಲ್ಲಿ ಜರಗಬೇಕೆಂದಿದ್ದ ಜೈನರ ಮಹಾಸಭೆಯನ್ನು ಮುಂದರಿಸಿಡಲಾಯಿತು.

— ದಕ್ಷಿಣ ಇಂಡಿಯದ ಉಪಾಧ್ಯಾಯರ ಸಂಘದವರು "ದಕ್ಷಿಣ ಇಂಡಿಯದ ಉಪಾಧ್ಯಾಯ ಪತ್ರಿಕೆ" ಎಂಬ ಪತ್ರಿಕೆಯನ್ನು ಹೊರಡಿಸುವರು.

— ಲಾಹೋರಿನಲ್ಲಿ ಜರಗಿದ ಮುಸ್ಲಿಮ್ ಲೀಗಿನ ಸಭೆಯಲ್ಲಿ ಹೆಚ್ಚು ಕಲಹಗಳು ಉಂಟಾಗಿ ಖಿಲಾಫತ್ ಕಮಿಟಿಗೆ ಸೇರಿದವರು ಸಭೆಯಿಂದ ಎದ್ದುಹೋದರು. ಈ ಸಭೆಯಲ್ಲಿ ವಾಯುವ್ಯ ಗಡಿಪ್ರಾಂತ್ಯ, ಬಲುಚಿಸ್ಥಾನದ ರಾಜ್ಯಭಾರದಲ್ಲಿ ಹೊಸ ಬದಲಾವಣೆಗಳನ್ನು ಮಾಡಬೇಕೆಂದೂ ಸಿಂಧೂದೇಶವನ್ನು ಪ್ರತ್ಯೇಕ ಸಂಸ್ಥಾನವಾಗಿ ಮಾಡಬೇಕೆಂದೂ ಠರಾವುಗಳು ಪಾಸಾದವು.

— ಇಂಡಿಯದ ಹೆಂಗಸರಷ್ಟು ಒಳ್ಳೇ ರೀತಿಯಲ್ಲಿ ಮನೆಯನ್ನು ನಡಿಸುವಷ್ಟು ಶ್ರೇಷ್ಠರಾದ ಹೆಂಗಸರು ಭೂಲೋಕದ ಯಾವ ರಾಜ್ಯದಲ್ಲಿಯೂ ಇಲ್ಲವೆಂದು ಇಂಡಿಯದ ಹ್ಯಾಕಮಿಶನರಾದ ಸರ್ ಅತುಲ ಚಂದ್ರ ಚಟರ್ಜಿಯವರು ಹೆಡ್‌ಮಿಸ್ಟ್ರೆಸುಗಳ ಒಂದು ಸಭೆಯಲ್ಲಿ ಹೇಳಿದರು. ಇಂಡಿಯದ ಹೆಂಗಸರು ಹೊರಗಿನ ರಾಜಕೀಯ ಕೆಲಸಗಳಲ್ಲಿ ಕೈಹಾಕದೆ ಇದ್ದರೂ ಇಂಡಿಯದಲ್ಲಿರುವ ಎಂಥಾ ರಾಜತಂತ್ರ ಪ್ರವೀಣನಾದರೂ, ದೇಶಾಧಿಪತಿಯಾದರೂ, ಅಥವಾ ಯಾವ ತರದ ಉದ್ಯೋಗಸ್ಥನೆ ಆಗಲಿ, ಮನೆಯ ಯಜಮಾನಿಯ ಮಾತನ್ನು ಮೀರಿದರೆ ಅವನಿಂದ ಯಾವ ಕೆಲಸವನ್ನು ಮಾಡಲಿಕ್ಕೂ ಸಾಧ್ಯವಿಲ್ಲ. ಇಂಡಿಯದ ಹೆಂಗಸರಿಗೆ ಸ್ವಲ್ಪ ವಿದ್ಯೆಯನ್ನು ಮಾತ್ರವೇ ಕೊಡಬೇಕು. ವಿಧವೆಯರಿಗೆ ಏನಾದರೂ ವೃತ್ತಿಯನ್ನು ಮಾಡಿಕೊಡಬೇಕೆಂದೂ ಈ ಮಹನೀಯರು ಹೇಳಿದರು.

ದಕ್ಷಿಣ ಕನ್ನಡ

ತಿದ್ದುಪಡಿ: — ಕಳದ ಸಂಚಿಕೆಯ ೧೩ನೇ ಪುಟದ ೩ನೇ ಕಲಮಿನಲ್ಲಿ ಪ್ರಕಟಿಸಿದ ನೋಟೀಸಿನ ಅಡಿಯಲ್ಲಿನ, ಮಿಜಾರ ತಿಮ್ಮಪ್ಪೈ ಎಂಬ ಹೆಸರು ತಪ್ಪಿಹೋಗಿದ್ದರಿಂದ ಅದನ್ನು ಸೇರಿಸಿಕೊಂಡು ಓದತಕ್ಕದ್ದು.

ಮಂಗಳೂರು: — ದಕ್ಷಿಣ ಕನ್ನಡ ಜಿಲ್ಲಾ ಜಮೀನುದಾರರ ಕಾರ್ಯನಿರ್ವಾಹಕ ಸಂಘದ ೩ನೇ ಸಭೆಯು, ಶ್ರೀ ಕೆ. ಆರ್. ಕಾರಂತ್, M. L. C. ಯವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ಸಭಾಸದನದಲ್ಲಿ ತಾ. ೭ನೇ ಶನಿವಾರ ಸಾಯಂಕಾಲ ಘಂಟೆ ೪ಕ್ಕೆ ಜರಗಿತು. ಈ ಸಭೆಗೆ ರಾ। ಕಾರ್ನಾಡ್ ಸದಾಶಿವರಾವ್, ಗಂಗೊಳ್ಳಿ ಕೃಷ್ಣರಾವ್, ಯಂ. ಶಂಕರನಾರಾಯಣರಾವ್, ಕೆ. ಆರ್. ಆಚಾರ್, ಕೆ. ನಾಗರಾಜಯ್ಯ, ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ, ಭುವನೇಂದ್ರರಾವು ವರ್ಮರಾಜ, ಖಂಡಿಗೆ ಈಶ್ವರ ಭಟ್ಟ, ಪಾಂಡಿಲ ಪದ್ಮನಾಭಯ್ಯ, ನರಸಿಂಹ ಭಟ್ಟ, ಪಿ. ಗೋವಿಂದಯ್ಯ ಹೊಸಹಿತ್ಲು ಶ್ರೀನಿವಾಸಯ್ಯ, ಮೊದಲಾದ ಪ್ರತಿನಿಧಿಗಳು ಹಾಜರಿದ್ದರು. (೧) ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ವರ್ಗದಾರ ಸಂಘಗಳನ್ನು ಏರ್ಪಡಿಸಬೇಕೆಂದು ನಿರ್ಧಾರವಾಯಿತು. ಈ ಕೆಳಗಿನ ಸಂಘಗಳನ್ನು ಕಾರ್ಯವನ್ನು ಸಾಗಿಸಲಿಕ್ಕೆ ಜನರನ್ನು ನಿಶ್ಚಯಿಸಲಾಯಿತು. (೧) ಮೂಡುಬಿದ್ರೆ ಶ್ರೀ ಕರಂಜೆ ಶ್ಯಾಮರಾಯರು, (೨) ಸಿದ್ಧೆ ಶ್ರೀ ಪಾಂಡಿಲ್ ಪದ್ಮನಾಭಯ್ಯ ಮತ್ತು ಹೊಸಹಿತ್ಲು ಶ್ರೀನಿವಾಸಯ್ಯನವರು, (೩) ಪೆರಡಾಲು (ಬದಿಯಡ್ಕ) ಶ್ರೀ ಖಂಡಿಗೆ ಈಶ್ವರ ಭಟ್ಟ, ಮತು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು, (೪) ವೇಣೂರು ವಕೀಲ್, ಶ್ರೀ ಕೆ. ನಾಗರಾಜಯ್ಯನವರು, (೫) ಮೂಡಪೂರು ಶ್ರೀ ಭುವನೇಂದ್ರ ರಾಮವರ್ಮರಾಜರು, ಇತರ ಮಹನೀಯರೂ ಈ ಕಾರ್ಯಗಳನ್ನು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ನೆರವೇರಿಸುವರೇ ಸಂಘಗಳನ್ನು ಏರ್ಪಡಿಸುವಂತೆ ಈ ಸಭೆಯು ಪ್ರಯತ್ನಿಸಬೇಕೆಂದು ನಿರ್ಧರಿಸಲಾಯಿತು. II ಬರುವ ತಾರೀಕು ೧೫ನೇ ಫೆಬ್ರುವರಿ ಮೊದಲು ಈ ಸಂಘದ ನಿಬಂಧನೆಗಳ ಮಸೂದೆಯನ್ನು ತಯಾರಿಸಿ, ಕಾರ್ಯದರ್ಶಿ ವಕೀಲ್, ಎಮ್. ಶಂಕರ ನಾರಾಯಣ ರಾಯರು ಮುಂದಿನ ಸಭೆಯ ಮುಂದಿರಿಸಬೇಕೆಂದು ನಿರ್ಧರಿಸಲಾಯಿತು. III ಪುತ್ತೂರು ತಾಲೂಕು ಸಂಘದವರು, ಈ ಜಿಲ್ಲಾ ಸಂಘದವರೊಡನೆ ಸಹಕರಿಸುವಂತೆ ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಗೆ ಗವರ್ನರರು ಬಂದಾಗ ಅವರ ಸಂಚಾರ ಸಮಯ ವ್ಯಾಪಾರ ವಹಿವಾಟಗಳಿಗೆ ತಡೆ ಕಟ್ಟಿದುದಕ್ಕಾಗಿ ನ್ಯಾಯವಿಧಾಯಕ ಸಭೆಯ ಮೆಂಬರರಾದ ಸಾಲ್ದಾನರು ಮದರಾಸು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿಯವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಅದಕ್ಕೆ ಉತ್ತರವು ಈಗ ಬಂದಿರುವುದು. ೨ನೇ ದಶಂಬರ ೧೯೨೭. (೧) ಮೆಂಬರರು ಬರದಂತೆ ವ್ಯಾಪಾರ ವಹಿವಾಟಗಳಿಗೆ ತಡೆಗಟ್ಟಿದ ಸಂಗತಿಗೆ ಅಧಿಕಾರವೇನೂ ಕಂಡುಬರುವುದಿಲ್ಲ. ಅಕ್ಟೋಬರ ೧೦ನೇ ತಾರೀಕಿನಲ್ಲಿ ಗವರ್ನರರು ಪ್ರಯಾಣ ಮಾಡಿದ ಮೈಲು ೭೨. ಈ ಮಾರ್ಗದಲ್ಲಿ ಬಂದೋಬಸ್ತಿಗಾಗಿ ಮಂಗಳೂರು ಪಟ್ಟಣದ ಹೊರಗೆ ೫ ಮಂದಿ ಇನ್ಸಪೆಕ್ಟರರು, ೧೨ ಮಂದಿ ಸಬ್ ಇನ್ಸಪೆಕ್ಟರರು, ೨೩ ಮಂದಿ ಹೆಡ್‌ಕೊನ್ಸಟೇಬಲರು, ೧೬೭ ಮಂದಿ ಕೊನ್ಸಟೇಬಲರು ಮಂಗಳೂರು ಪಟ್ಟಣದಲ್ಲಿ ಒಬ್ಬ ಇನ್ಸಪೆಕ್ಟರರು, ೪ ಮಂದಿ ಸಬ್ ಇನ್ಸಪೆಕ್ಟರರು, ೭ ಮಂದಿ ಹೆಡ್‌ಕೊನ್ಸಟೇಬಲರು, ೩೭ ಮಂದಿ ಕೊನ್ಸಟೇಬಲರು. ಉಳಿದ ದಿವಸಗಳಲ್ಲಿ ೬ ಮಂದಿ ಇನ್ಸಪೆಕ್ಟರರು, ೨೧ ಮಂದಿ ಸಬ್ ಇನ್ಸಪೆಕ್ಟರರು ೨೩ ಮಂದಿ ಹೆಡ್‌ಕೊನಸ್ಟೇಬಲರು ೧೫೩ ಮಂದಿ ಕೊನ್ಸಟೇಬಲರು; ಇಷ್ಟು ಮಂದಿಯನ್ನು ನೇಮಿಸಿದ್ದರು. ಇದಕ್ಕಾಗಿ ಆದ ಹೆಚ್ಚಿನ ಖರ್ಚು ೧೪೬೫ ರೂಪಾಯಿ ೫ ಆಣೆ ಮಾತ್ರ.

ಮಂಗಳೂರು ತಾಲೂಕು ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು ಇದೇ ಜನವರಿ ತಾ. ೧೭ನೇ ಮಂಗಳವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವದು.

ತಾ. ೭-೧-೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೬ ಮರಣಗಳಾದವು. ಈ ಪೈಕಿ ಸನ್ನಿಪಾತಜ್ವರದಿಂದ ೧ ಉದರರೋಗದಿಂದ ೫, ಶ್ವಾಸಕೋಶದ ರೋಗದಿಂದ ೩, ಇತರ ಎಲ್ಲಾ ಕಾರಣಗಳಿಂದ ೧೭, ಜನನ ಸಂಖ್ಯೆಯು ಮಿಲೆಗೆ ಸರಾಸರಿ ೫೮.೭ರಂತೆ.

ಪುದುಕೋಟೆಯಿಂದ ಶ್ರೀ ಬ್ರಹದಂಬಲ್ ನಾಟಕಮಂಡಳಿಯವರು ಇಲ್ಲಿಗೆ ಬಂದು ಹಿಂದೂಸ್ಥಾನ ಸಿನೆಮಾ ಮಂದಿರದಲ್ಲಿ ತಮ್ಮ ಅಮೋಘವಾದ ನಾಟಕಗಳನ್ನು ಪ್ರದರ್ಶಿಸತೊಡಗಿರುವರು. ಇವರು ತಮಿಳು ಭಾಷೆಯಲ್ಲಿ ನಾಟಕಗಳನ್ನಾಡುವವರಾದರೂ, ಇವರ ದೃಶ್ಯಾವಳಿಗಳು ಪ್ರೇಕ್ಷಣೀಯವಾದ್ದರಿಂದ ಇವರಿಗೆ ತುಂಬಾ ಪ್ರೋತ್ಸಾಹವು ದೊರಕುತ್ತಿದೆ.

ಇದೇ ಜನವರಿ ತಿಂಗಳಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಗೇಸ್‌ದೀಪಗಳು, ಉರಿಯಲ್ಪಡುವ ದಿವಸಗಳಲ್ಲಿ ಸಾಯಂಕಾಲ ಘಂಟೆ ೬ರಿಂದ ಮಧ್ಯರಾತ್ರಿ ೧೨ ಘಂಟೆಯವರೆಗೂ, ಬೇಂಕ್ ದೀಪಗಳೂ, ಸ್ಮಶಾನ ದೀಪಗಳೂ ಅಪಾಯಸೂಚಕದೀಪಗಳೂ ಇಡೀ ತಿಂಗಳಲ್ಲಿ ಸಾಯಂಕಾಲ ೬ ಘಂಟೆಯಿಂದ ಬೆಳಗ್ಗೆ ೬ ಗಂಟೆಯ ವರೆಗೂ, ಸಾಧಾರಣ ದೀಪಗಳು ತಾ. ೨೦, ೨೧, ೨೨, ೨೩, ೨೪ ಈ ದಿನಗಳಲ್ಲಿ ಇಡೀ ರಾತ್ರಿಯೂ, ಉಳಿದ ದಿನಗಳಲ್ಲಿ ಸಮಯಾನುಸಾರವೂ ಉರಿಸಲ್ಪಡುವವು.

೧೯೨೭ನೇ ಇಸವಿ ಮೇ ತಿಂಗಳಲ್ಲಿ ನೆರೆದ ಜಾಹೀರ ಸಭೆಯ ಠರಾವಿನಂತೆ ತಾ. ೧೨-೧-೧೯೨೮ನೆಗೆ ಕೂಡಿದ ಅಖಿಲ ತರಗತಿಯ ವೈದ್ಯಸಿದ್ಧಾಂತವನ್ನು ಆಶ್ರಯಿಸಿರುವ ಚಿಕಿತ್ಸಕ ಮಹಾಶಯರುಗಳ ವಿಶೇಷ ಸಭೆಯಲ್ಲಿ ಚತುರ್ಥ ಕರ್ನಾಟಕ ಆಯುರ್ವೇದ ಸಮ್ಮೇಳನವು ಮಂಗಳೂರಿನಲ್ಲಿ ನೆರೆಯಿಸುವದು ನಿಶ್ಚಯಿಸಿರುತ್ತದೆ. ಮಂಗಳೂರು ಕೆನರಾ ಹ್ಯಾಸ್ಕೂಲ ಭುವನೇಂದ್ರ ಹೋಲಿನಲ್ಲಿ ತಾ. ೨೨-೧-೨೮ನೇಗೆ ಸಂಧ್ಯಾಕಾಲ ೫ ಘಂಟೆಗೆ ಸಮ್ಮೇಳನ ಸಾಂಗಗೊಳಿಸುವ ಬಗ್ಗೆ ಸ್ವಾಗತ ಕಮಿಟಿಯನ್ನು ಆರಿಸಿ ತೆಗೆಯಲು ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ಸಾಧಾರಣ ಸಭೆಯು ಕೂಡುವದು. ಯಾವತ್ತು ಜನರು ದಯಮಾಡಿ ಸಭೆಗೆ ಚಿತ್ತೈಸಬೇಕಾಗಿ ರಾ। ಗಳಾದ ಎಲ್. ಪಿ. ಫರ್ನಾಂಡಿಸ್, ಬಿ. ಎ. ಎಲ್. ಎಮ್. ಎಂಡ್ ಎಸ್, ಎಮ್. ವಿ. ಶಾಸ್ತ್ರಿ, ಎನ್. ಎಮ್. ಶೆಟ್ಟಿ, ಬಿ. ಆರ್. ಹರಿದಾಸ್, ಕೆ. ಆರ್. ಶೆಣೈ, ಎಮ್. ಬಿ. ಬಿ ಎಸ್. ಇವರುಗಳು ತಿಳಿಸುತ್ತಾರೆ.

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು

[illegible] Tel: Conveyance.

ಕಡೂರು. ಚಿಕ್ಕಮಗಳೂರು. ಮಂಗಳೂರು.

(1) [illegible] (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, [illegible] ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ [illegible] ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ [illegible] ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು [illegible] ಬಸ್ಸುಗಳನ್ನು ಏರ್ಪಡಿಸಿರುತ್ತೆ.

[illegible] ಬಸ್ಸುಗಳು [illegible] ಪ್ರಯಾಣಗಳ ವಿವರ.

(2) [illegible] ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ [illegible] 11-45 ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, [illegible] 12-30ಕ್ಕೆ [illegible] ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ [illegible] 4-30ಕ್ಕೆ [illegible] ಮಲಬಾರು, ಕನ್ನನೂರು ಪ್ರಾಂತಗಳಿಗೂ ಅಯಾ ದಿನವೇ [illegible]

(3) [illegible] ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ [illegible] 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ [illegible] ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ [illegible] 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ [illegible] ಹುಬ್ಬಳ್ಳಿಗೂ, ಗದಗ್, ಪಂಢರ್ಪೂರ್, ಗೋವಾ, ಲೋಂಡ, ಪೂನಾ, ಮತ್ತು [illegible]

ಚಿಕ್ಕಮಗಳೂರಿನಿಂದ [illegible] ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ [illegible] ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ [illegible]

ಈ ಮೋಟರ ಸರ್ವಿಸಿನಿಂದ [illegible] ಇರತಕ್ಕ ಅನುಕೂಲತೆ.

(4) [illegible] ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ [illegible] ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ಇತರರಿಗೂ ಅನುಕೂಲವಾದ [illegible]

ವಿಶೇಷ ಮಾಹಿತಿಗೆ [illegible] ಬರೆದುಕೊಳ್ಳಬಹುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರು [illegible] ಕಾರ್ಕಳ ಮಾರ್ಗವಾಗಿಯೂ

ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಒಂದೇ ಶಿಲೆಕಲ್ಲಿನಿಂದ

ರಚಿತವಾಗಿ, 37 ಫೀಟು ಉದ್ದವಾಗಿ [illegible]

[illegible] ಗೊಮ್ಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible] ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ [illegible] ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

— ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ [illegible] ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ [illegible] ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ಸುರತ್ಕಲ್:— ಮಂಗಳೂರು ತಾಲೂಕು ಬೋರ್ಡಿಗೆ ಪ್ರತಿ ಸರ್ಕಲಿನಿಂದ ಇಬ್ಬಿಬ್ಬರು ಸದಸ್ಯರನ್ನು ಆರಿಸತಕ್ಕದ್ದೆಂದೂ, ಆ ವೇಳೆ ಸುರತ್ಕಲ್ ಸರ್ಕಲಿನಿಂದ ಭರ್ತಿಮಾಡಿಕೊಳ್ಳುವದು ಎಂದೂ ನಿರ್ಣಯಿಸಿರುವದು ತಿಳಿದಿದೆಯಷ್ಟೆ. ಪ್ರಕೃತ ಸುರತ್ಕಲ್ ಸರ್ಕಲಿನಿಂದ ಮ। ರಾ। ರಾ। ಕಳುವಾರು ಗುತ್ತು ಅಪ್ಪಯ ಶೆಟ್ರು ಒಬ್ಬರೇ ಸದಸ್ಯರಾಗಿದ್ದಾರೆ. ಈ ಹೊಸತಾಗಿ ಮಂಜೂರಾಯಿಸಲ್ಪಟ್ಟ ಸ್ಥಾನಕ್ಕೆ ನೇಮಕವು ಇದೇ ಫೆಬ್ರವರಿಯಲ್ಲಿ ಆಗುವದು ಎಂದು ತಿಳಿದು ಅದಕ್ಕೆ ಉಮೇದ್ವಾರರಾಗಿ ಇದ್ಯ ವಿದ್ಯಾದಾಯಿನೀ ಶಾಲಾ ಮುಖ್ಯ ಉಪಾಧ್ಯಾಯರಾದ ಮ। ರಾ। ರಾ। ಯಚ್. ದಾಮೋದರರಾಯರು ನಿಲ್ಲುವರೆ ಒಪ್ಪಿರುವರೆಂದು ವದಂತಿಯಿದೆ. ಇವರ ಮೇಲ್ವಿಚಾರದಲ್ಲಿ ನಡೆಯುತ್ತಲಿರುವ ಉತ್ಕೃಷ್ಟ ಶಿಕ್ಷಣ ಕ್ರಮವೂ ಶಾಲಾ ಉಪಾಧ್ಯಾಯ ವೃಂದದೊಳಗಿನ ಒಕ್ಕಟ್ಟೂ, ಮಕ್ಕಳ ಪ್ರಸನ್ನತೆಯೂ ಕುತೂಹಲವೂ, ತೋಟಗಳ ಚೆಲೊವ್ಯವಸ್ಥೆಯೂ, ದಾಮೋದರರಾಯರ ಹೆಚ್ಚಿನ ಪ್ರೇಮವನ್ನೂ ಆರೋಗ್ಯಸೂಕ್ಷ್ಮಾನುಭಾವವನ್ನೂ ವ್ಯಕ್ತಗೊಳಿಸುತ್ತವೆ. ಶಾಲಾ ವಠಾರದೊಳಗೂ ಇದ್ಯ ಗೋವರ್ಧನ ಸಂಘಕ್ಕೂ, ಸುರತ್ಕಲ್ ಸೆಂಟರಿನ ಉಪಾಧ್ಯಾಯರ ಸಮ್ಮೇಳನಕ್ಕೂ ಇವರು ಕಾರ್ಯದರ್ಶಿಯಾಗಿರುವದೂ, ಹೊಸಬೆಟ್ಟು ಆಂಜನೇಯ ಪರಸ್ಪರ ಸಹಾಯಕ ಸಂಘಕ್ಕೆ ಅಧ್ಯಕ್ಷರಾಗಿರುವದೂ, ಅವರ ಕಾರ್ಯಶಕ್ತತೆಯನ್ನೂ, ಚಟುವಟಿಕೆಯನ್ನೂ ಪ್ರಕಾಶಗೊಳಿಸುತ್ತ ಇರುವದು. ಅದೂ ಅಲ್ಲದೆ ಈ ಶಾಲಾ ಹಿತಕ್ಕಾಗಿ ಏರ್ಪಡಿಸಲ್ಪಟ್ಟ ಎರಡು ಲೋಟರಿಗಳಿಗೂ, ಮೊನ್ನೆ ತಾನೇ ನಡೆದ ದ್ರಾ. ಬ್ರಾಹ್ಮಣರ ಪರಿಷತ್ತಿನ ಸ್ವಾಗತ ಮಂಡಲಿಗೂ ಇವರೇ ಕಾರ್ಯದರ್ಶಿಯೂಗಿದ್ದು ಅವರ ಭಾಗದ ಕಾರ್ಯಕ್ರಮಗಳು ಏನೊಂದೂ ಕುಂದು ಇಲ್ಲದೆ ಸುವ್ಯವಸ್ಥಿತರೀತಿಯಲ್ಲಿ ನಡೆದಿವೆ. ಆದ್ದರಿಂದ ಮಂಗಳೂರು ತಾಲೂಕು ಬೋರ್ಡಿಗೆ ಸುರತ್ಕಲ್ ಸರ್ಕಲಿನಿಂದಾಗುವ ಹೊಸ ಚುನಾವಣೆಗೆ ಇವರು ತಕ್ಕ ಪಾತ್ರರೆಂಬುದನ್ನು ಸರ್ವ ವೋಟರರೂ ನಿಷ್ಪಕ್ಷಪಾತವಾದ ಮತ್ತು ಯಥೋಚಿತವಾದ ಸೂಚನೆಯೆಂದೇ ಅನುಮೋದಿಸಿಯಾರಾಗಿ ಭರವಸೆಯಿದೆ.

ಹೊಸದುರ್ಗ:— ಅತಿಸಾರ ಮತ್ತು ಜ್ವರಗಳು ಅಲ್ಲಲ್ಲಿ ತಲೆದೋರುತ್ತವೆ.

ಇಲ್ಲಿ ಟೌನಿನಲ್ಲಿ ದೀಪಸ್ತಂಭಗಳು ತಾಲೂಕು ಬೋರ್ಡಿನವರು ಇಡಿಸುವದಾಗಿ ಈ ಮೊದಲು ವಾರ್ತೆ ಹಬ್ಬಿತ್ತು. ಆದರೆ ಈ ವರೆಗೂ ಅವುಗಳ ವ್ಯವಸ್ಥೆ ಮಾಡಿದ್ದು ಕಾಣುವದಿಲ್ಲ. ತಾಲೂಕು ಬೋರ್ಡು ಕೆಳಗೆ ಅನೇಕ ಹೊಸ ಶಾಲೆಗಳು ತೆರೆಯಲ್ಪಟ್ಟಿರುವವು. ಹಳೇ ಶಾಲೆಗಳ ಉಪಾಧ್ಯಾಯರ ವೇತನವು ಮಾತ್ರ ಸರಿಯಾಗಿ ಕೊಡಲ್ಪಡುವದಿಲ್ಲ. ಹಳೇ ಉಪಾಧ್ಯಾಯರೆಲ್ಲಾ ಒಂದೇ ಸಮುದಾಯದ ವ್ಯಕ್ತಿಗಳಾಗಿರುವರು.

ಇಲ್ಲಿಯ ವರದರಾಜ ಶ್ರೀ ವೆಂಕಟರಮಣ ದೇವಳದ ವಿನಿಯೋಗ ವಗೈರೆ ಕ್ರಮವಾಗಿ ಇನ್ನು ಮುಂದೆ ನಡೆಯುವಂತೆ ಪ್ರಕೃತದ ಕುಂದುಗಳು ಇದ್ದರೆ ಹೋಗಲಾಡಿಸುವ ಬಗ್ಗೆ ಜೋತಿಷ್ಯ ಭಾಗದ ದ್ವಾದಶರಾಶಿಯ ಪ್ರಶ್ನೆ ಇಡಲ್ಪಟ್ಟಿಯದೆ. ದೇವಳದ ಆಡಳಿತೆ ಗೃಹಸ್ಥರು ಕಂಡು ಬರಬಹುದಾದ ನ್ಯೂನತೆಗಳನ್ನು ದೂರಪಡಿಸಿ ದೇವಳದ ಸಾನಿಧ್ಯ ಅಂಶದಲ್ಲಿ ಸಹಭಾಗಿಯಾಗಿರಬೇಕಾಗಿ ನಮ್ಮ ಹೃತ್ಪೂರ್ವಕ ಕೋರಿಕೆಯಾಗಿರುತ್ತದೆ.

ಅಜೆಕಾರು:— ಇಲ್ಲಿ ತೆರೆಯಲ್ಪಟ್ಟ 'ದಿ ಡಿಸ್ಟ್ರಿಕ್ಟ್ ಬೆಡ್ಮಿಂಟನ್ ಟೋರ್ನಮೆಂಟ್'ನಲ್ಲಿ ಸುವರ್ಣ ಪದಕಗಳನ್ನು 'ಕಾಸರಗೋಡು' ಟೀಮಿನವರಿಗೂ ರಜತಪದಕಗಳನ್ನು 'ಮುಡಾವೀರ' ಟೀಮಿನವರಿಗೂ ಕೊಡಲ್ಪಟ್ಟಿವೆ.

ಉರಿಬೇಸಿಗೆಯ ಮಟಮಟ ಮಧ್ಯಾಹ್ನ ಕಾಲದಲ್ಲಿ ಬಾಯಾರಿಕೆ ಬಳಲುವ ಪ್ರಯಾಣಿಕರ ಸೌಕರ್ಯಕ್ಕೂ ಊರಲ್ಲಿ ಉದಕವೇ ಲಭಿಸದಿರುವಾಗ ಪೇಚಾಡುವ ನಿವಾಸಿಕರ ಸೌಕರ್ಯಕ್ಕೂ ಯೋಗ್ಯವಾಗುವಂತೆ ಇಲ್ಲೊಂದು ಧರ್ಮಬಾವಿ 'Public well'ಯನ್ನು ತೋಡುವರೆಂದು ವದಂತಿ ಇದೆ.

ಇಲ್ಲಿ ಹೊಸತಾಗಿ ಏರ್ಪಡಿಸಿದ ಸಂತೆಯು ಪ್ರತಿ ಆದಿತ್ಯವಾರವೂ ಕೂಡುವುದು. ವ್ಯಾಪಾರಸ್ಥರು ಎಲ್ಲಾ ಕಡೆಗಳಿಂದಲೂ ಬರುವರು. ಗಿರಾಕಿಗಳಂತೂ ತಂಡತಂಡವಾಗಿ ಬಂದು ಅಗಲುವರು. ಒಟ್ಟಾರೆ ಸಂತೆಯು ಪ್ರಬಲಿಸುತ್ತ ಬರುವುದೆಂದು ನಾವು ಹಾರೈಸುವೆವು.

ಮಣಿನಾಲ್ಕೂರು:— ಬಂಟವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಮಣಿನಾಲ್ಕೂರು ಬೋರ್ಡು ಶಾಲೆಯಲ್ಲಿ ಮುಖ್ಯೋಪಾಧ್ಯಾಯರ ಆಮಂತ್ರಣದ ಮೇರೆಗೆ ಪಟೇಲರಾದ ಅನಂತರಾಜರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಬಂದವರೆಲ್ಲರನ್ನು ಅಲ್ಲಿಯ ದೊಡ್ಡ ಮನೆತನದ ಚೆಂದಯ್ಯ ಅಜಿಲರು ಊಟೋಪಚಾರಾದಿಗಳಿಂದ ಸತ್ಕರಿಸಿದರು. ದೇವಪ್ರಾರ್ಥನೆ, ಅಧ್ಯಕ್ಷರ ಆರಿಸುವಿಕೆ ನಡೆದ ಮೇಲೆ ಶಾಲಾ ಸಹಾಯಕೋಪಾಧ್ಯಾಯರಾದ ಕೆ. ಸುಬ್ಬಪ್ಪ ಮಾಸ್ಟರರು ನಾಲ್ಕನೆ ದರ್ಜೆಗೆ ಒಂದು ಚರಿತ್ರೆ ಪಾಠವನ್ನೂ, ಬಿಗಳ ಗಣಪತಿರಾಯರು ಗ್ರಾಮಾಭಿವೃದ್ಧಿಯ ವಿಷಯ ಒಂದು ಭಾಷಣವನ್ನು ಕೊಟ್ಟರು. ಶಾಲಾ ಉಪಾಧ್ಯಾಯರು ಮಾದರಿ ತೋಟಗಳನ್ನು ಬೆಳಸಬೇಕೆಂದೂ ಗ್ರಾಮಸ್ಥರ ಸಹಾಯಾರ್ಥವಾಗಿ ಔಷಧ ಸಂಗ್ರಹ ಮಾಡಬೇಕೆಂದೂ ರಾ। ಗಣಪತಿರಾಯರು ಹೇಳಿದರು.

ಅನಂತರ ಭಾಷಣದಲ್ಲಿ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರು ಹಾಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಾಗಲಿಕ್ಕೆ ಈ ಸಂಘಕ್ಕೆ ಸೇರಿದ ಲೋವರ್ ಎಲಿಮೆಂಟರಿ ಗ್ರೇಡಿನ ಪ್ರತಿ ಒಬ್ಬ ಉಪಾಧ್ಯಾಯರು ಡಿಪ್ಯುಟಿ ಇನ್ಸ್‌ಪೆಕ್ಟರವರಿಗೆ ಮನವಿಮಾಡಬೇಕೆಂದೂ, (೨) ಉಪಾಧ್ಯಾಯರು ಟ್ರೈನ ಆಗಿ ೧೮ ತಿಂಗಳ ಸರ್ವಿಸ್ ಆದ ಕೂಡಲೇ ಅಂಥಾ ಉಪಾಧ್ಯಾಯರಿಗೆ ಕೂಡಲೇ ಅದೇ ಶಾಲೆಯಲ್ಲಿಯೂಗಲೀ ಅಥವಾ ಅವರನ್ನು ಬೇರೆ ಶಾಲೆಗೆ ಕಳಿಸಿಯಾಗಲಿ ಕೂಡಲೇ ಪ್ರೆಕ್ಟಿಕಲ್ ಪರೀಕ್ಷೆಯನ್ನು ಮಾಡಿ ಅವರ ಸರ್ಟಿಫಿಕೇಟ್ ಕಂಪ್ಲೀಟ್ ಮಾಡಬೇಕೆಂದೂ (೩) ಈ ಸಂಘವನ್ನು ಸೌತ ಇಂಡಿಯನ್ ಟಿಚರ್ಸ್ ಯುನಿಯನ್ನಿಗೆ ಸೇರಿಸಬೇಕೆಂದೂ ಹೀಗೆ ಠರಾವುಗಳು ಪಾಸಾದವು.

ನಂತರ ಮುಂದಿನ ಸಭೆಯನ್ನು ಪಂಜಿಕಲ್ ಶಾಲೆಯ ಮುಖ್ಯ ಉಪಾಧ್ಯಾಯರ ಆಮಂತ್ರಣದ ಮೇರೆಗೆ ಆ ಶಾಲೆಯಲ್ಲಿ ಫೆಬ್ರವರಿ ೧೧ನೇ ತಾರೀಖು ಶನಿವಾರ ಮಧ್ಯಾಹ್ನ ೨ ಗಂಟೆಗೆ ಜರಗಿಸಬೇಕೆಂದು ನಿರ್ಣಯವಾಯಿತು.

ಅನಂತರ ಅಧ್ಯಕ್ಷರ ಭಾಷಣ, ರಾಜಗೀತ ಹಾಡಿದ ಮೇಲೆ ಮಣಿನಾಲ್ಕೂರು ಗ್ರಾಮದ ಮಹನೀಯರಿಗೂ ರಾಜಶ್ರೀ ಚೆಂದಯ್ಯ ಅಜಿಲರಿಗೂ ಪಟೇಲರಿಗೂ ಜಿ ಮಾಸ್ಟರ್ ನಾರಾಯಣನವರಿಗೂ ಧನ್ಯವಾದಗಳು ಕೊಡಲಾದವು.

ವಿವಿಧವಿಷಯಗಳು.

ಲಂಡನ್ ಪಟ್ಟಣದಲ್ಲಿ ನೆರೆ!

ಜನವರಿ ೬ನೇ ತಾರೀಕಿನ ರಾತ್ರೆ ಪೂರ್ಣಿಮೆಯ ಚಂದ್ರನು ಪ್ರಕಾಶಿಸುತ್ತಲಿದ್ದನು. ವಸಂತ ಕಾಲದ ಆಕಾಶದಂತೆ ಆಕಾಶವು ಶುಭ್ರವಾಗಿತ್ತು. ಪಟ್ಟಣಿಗರೆಲ್ಲರೂ ನಾನಾ ತರದ ವಿನೋದಗಳಲ್ಲಿ ಮಗ್ನರಾಗಿದ್ದರು. ಮಧ್ಯ ರಾತ್ರೆಯ ಸಮಯ ತೇಮ್ಸ್ ನದಿಯಲ್ಲಿ ನೀರು ತುಂಬಿತು. ಸಮುದ್ರದ ಕಡೆಯಿಂದ ೬ ಅಡಿ ೧ ಇಂಚು ಎತ್ತರಕ್ಕೆ ಭರತದ ನೀರು ಏರಿತು. ಕಠಿಣ ತರದ ಬಿರುಗಾಳಿಯು ೮ ಗಂಟೆಗೆ ೮೫ ಮೈಲು ವೇಗದಿಂದ ಬೀಸಲಾರಂಭಿಸಿತು. ತೇಮ್ಸ್ ನದಿಯಲ್ಲಿ ಈ ತರದ ನೆರೆಯು ೧೨೩೬ನೇ ಇಸವಿಯಲ್ಲಿ ಬಂದದೆಂದು ಚರಿತ್ರಕಾರರು ಹೇಳುತ್ತಿರುವರು.

ರಾತ್ರೆ ೧॥ ಘಂಟೆಗೆ ಭರತವು ಬರುವ ಸಮಯವಾಗಿತ್ತು. ಇದರ ಒಂದು ಗಂಟೆ ಮುಂಚೆಯೇ ತೇಮ್ಸ್‌ನದಿಯಲ್ಲಿ ನೆರೆಯು ತುಂಬಿತ್ತು. ಲಂಡನಿನ ಭಾಗಗಳಾದ ವೆಸ್ಟಮಿನಿಸ್ಟರ್, ಸೌತ್‌ಆರ್ಕ ಮತ್ತು ಡೆಪ್ಟಫೋರ್ಡ ಈ ಮೂರು ಭಾಗಗಳು ನೆರೆಯಿಂದ ತುಂಬಿದವು. ಪಾರ್ಲಿಮೆಂಟ ಮಂದಿರದೊಳಗೂ, ಅರಮನೆಯ ಅಂಗಳದೊಳಗೂ, ಪಾರ್ಲಿಮೆಂಟ ಸ್ಕ್ವೇರಿನೊಳಗೂ ನೀರು ತುಂಬಿತ್ತು. ಟವರ್ ಒಫ್ ಲಂಡನ್, ಚಿತ್ರಗಳಿರುವ ಟೇಟಗೆಲರಿ, ವೋಟರ್‌ಲೂ ಹೊಸ್‌ಪಿಟಲ್, ಬ್ಲೇಕ್‌ವೊಲ್ ಟನೆಲ್, ಚೆಲಸೀ ಪವರ್ ಹೌಸ್, ವೂಲ್‌ವಿಚ್ ಆರ್ಸನಲ್, ಸೈಂಟ್ ಥೋಮಸ್ ಹೊಸ್‌ಪಿಟಲ್ ಇವುಗಳಲ್ಲಿ ನೀರು ತುಂಬಿತು. ಒಟ್ಟಾರೆ ಲಂಡನಿನ ಜಿಲ್ಲೆಗಳಾದ ಹೆಮರ್‌ಸ್ಮಿತ್‌ನಿಂದ ಸೌತ್ ಎಂಡ್ ವರೆಗೆ ನೆರೆಯು ತುಂಬಿತ್ತು.

ರೂಟರರ ಆಫೀಸಿನ ಮುಂದುಗಡೆ ತೇಮ್ಸ್‌ನದಿಯಲ್ಲಿ ಲಂಗರು ಹಾಕಿ ನಿಲ್ಲಿಸಿದ ಪ್ರೆಸಿಡೆಂಟ್ ಎಂಬ ಯುದ್ಧದ ಹಡಗವು ಮಾರ್ಗದ ಸಮಸಮಕ್ಕೆ ತೇಲಾಡಿಕೊಂಡು ಬಂತು. ಗ್ರೋಸ್‌ವೇನರ್ ಹೆಡ್ ಎಂಬಲ್ಲಿದ್ದ ಅಣೆಕಟ್ಟು ಕಡಿದುಹೋಯಿತು. ವೆಸ್ಟ್‌ಮಿನಿಸ್ಟರಿನ ಮಾರ್ಗಗಳಲ್ಲಿ ನೀರು ತುಂಬಿ ದೋಣಿಗಳು ಸಂಚರಿಸಲಾರಂಭಿಸಿದವು. ಸಾವಿರಾರು ಜನರು ಒಂದೇ ವಸ್ತ್ರದಲ್ಲಿ ನೀರಿನಲ್ಲಿ ದಾಟಿಕೊಂಡು ಎತ್ತರವಾದ ಸ್ಥಳಗಳಿಗೆ ಹೋಗಲಾರಂಭಿಸಿದರು. ರಿಜಂಟ್ಸ ಕೆನಲಿನಲ್ಲಿ ಮರಗಳ ಅಡ್ಡಗಳು ರಾಶಿ ರಾಶಿಯಾಗಿ ತೇಲಾಡಿಕೊಂಡು ಬಂದು ಬಿದ್ದವು. ರಾತ್ರೆ ಎರಡು ಗಂಟೆಗೆ ನೆರೆಯು ಬಹಳ ಹೆಚ್ಚಾಯಿತು. ಮರಣಪಟ್ಟವರ ಸಂಖ್ಯೆ ೨೦ ಮಾತ್ರ. ಲೆಂಬೆತ್ತ ಎಂಬ ಭಾಗದಲ್ಲಿ ಪೋಲೀಸಿನವರು ಜನರನ್ನು ಎಬ್ಬಿಸದೆ ಇದ್ದರೆ ಜನರು ಮಲಗಿದಲ್ಲಿಯೇ ಸತ್ತುಹೋಗುತ್ತಿದ್ದರು. ಮಾರ್ಗಗಳಲ್ಲಿ ಬೇರುಸಹಿತ ಕಿತ್ತುಬಿದ್ದ ಮರಗಳೂ, ಕುಸಿದು ಬಿದ್ದ ಮನೆಗಳ ಕಲ್ಲುಗಳೂ ಇಟ್ಟಿಗೆಗಳೂ ಬಿದ್ದು ಜನಸಂಚಾರಕ್ಕೆ ಕಷ್ಟವಾಯಿತು

ಇಂಗ್ಲೆಂಡಿನ ಈಶಾನ್ಯ ದಿಕ್ಕಿನಲ್ಲಿ ಗಾಳಿಯು ೮೫ ಮೈಲು ವೇಗದಿಂದ ಬೀಸುತಿತ್ತು. ಲೀಡ್ಸ್ ಎಂಬ ಪಟ್ಟಣದಲ್ಲಿ ಬಹಳ ದೊಡ್ಡದಾದ ಒಂದು ಕಾರಖಾನೆಯು ಕುಸಿದು ಬಿತ್ತು. ಇಟನಿನಲ್ಲಿದ್ದ ೧೦೦ ವರುಷ ಪ್ರಾಯದ ಒಂದು ಎಲ್ಮ ಮರವು ಬೇರುಸಹಿತ ಕಿತ್ತುಬಿದ್ದು ವೋಲ್‌ಗೇಮ ಎಂಬ ಆಟಕ್ಕೆ ಉಪಯೋಗಿಸುತಿದ್ದ ಗೋಡೆಯು ಬಿತ್ತು.

§ § § §

ಲಂಡನಿನ ನೆರೆಗೆ ಕಾರಣಭೂತರು ಯಾರು?

ಈ ತರದ ಪ್ರಶ್ನೆಗಳನ್ನು ಇಂಗ್ಲಿಷ ಪತ್ರಿಕೆಗಳು ಕೇಳುತ್ತಿರುವವು. ಬರುವ ಪಾರ್ಲಿಮೆಂಟ ಸಭೆಯಲ್ಲಿ ಇದರ ವಿಷಯ ಪ್ರಶ್ನೆಗಳು ಕೇಳಲ್ಪಡುವವು. ಇದು ದೇವರ ಕೆಲಸವಲ್ಲದೆ ಮತ್ಯಾರ ಕೆಲಸವೂ ಅಲ್ಲವೆಂದು ಇನ್ಶುರೆನ್ಸ ಕಂಪೆನಿಗಳು ಹೇಳುತ್ತಿರುವವು. ನೆರೆಯು ಏರುತ್ತಾ ಬರುವಾಗಲೂ ಭರತದ ನೀರು ಏರುತ್ತಾ ಇರುವಾಗಲೂ ಈ ವಾರ್ತೆಯನ್ನು ಜನರಿಗೆ ತಿಳಿಯುವಂತೆ ಬ್ರೋಡ್ ಕಾಸ್ಟ ಮಾಡದೆ ಇದ್ದುದು ತಪ್ಪೆಂದು ಹೇಳುತ್ತಿರುವರು. ಲಂಡನಿನಲ್ಲಿ ನೀರು ಹರಿದು ಹೋಗುವ ಚರಂಡಿಗಳು ಸರಿಯಿಲ್ಲದೆ ಇರುವುದೂ ಇದಕ್ಕೆ ಕಾರಣವಂತೆ

§ § § §

ತರುಣಿಯೋರ್ವಳು ಸುಟ್ಟುಹೋದಳು!

ಕಳೆದ ಆದಿತ್ಯವಾರ ದಿನ ಬೆಳಿಗ್ಗೆ ಮನ್ನಾಡಿಯ ಪೋಸ್ಟಮಾಸ್ಟರನ ಹೆಂಡತಿಯು ಪೋಸ್ಟ ಆಫೀಸಿನ ಸಮೀಪದಲ್ಲಿಯೇ ಬೆಂಕಿ ಹಿಡಿದು ಸುಟ್ಟು ಮೃತಳಾದಳು. ಪೋಸ್ಟ್ ಮಾಸ್ತರನಾದ ಜೀವರತ್ನಮ್ ಎಂಬವನ ಹೆಂಡತಿಯಾದ ಪಟ್ಟಮ್ಮಾಳ್, ಇವಳು ೨೪ ವರ್ಷ ಪ್ರಾಯದವಳು. ಒಲೆಯ ಬಳಿ ಕುಳಿತು ಬೆಂಕಿಯನ್ನು ಮಾಡುತ್ತಿರುವಾಗ ಹತ್ತಿರದ ದೀಪದ ಜ್ಯೋತಿಯು ಇವಳ ಸೀರೆಗೆ ತಾಗಿತು. ಬೆಂಕಿಯು ಇಡೀ ಸೀರೆಗೆ ಹಿಡಿದು ಉರಿಯುವ ವರೆಗೆ ಅವಳಿಗೆ ಈ ಸಂಗತಿಯೇ ಗೊತ್ತಾಗಲಿಲ್ಲ. ಮನೆಯವರು ಅವಳ ಸಹಾಯಕ್ಕಾಗಿ ಹೋಗುವ ಮೊದಲೇ ಅವಳು ಬಹಳ ಸುಟ್ಟುಹೋಗಿದ್ದಳು ಅವಳನ್ನು ಆಸ್ಪತ್ರೆಗೆ ಕೊಂಡೊಯ್ಯಲು ಕೆಲವೇ ನಿಮಿಷಗಳಲ್ಲಿ ಮೃತಳಾದಳು

§ § § §

ನೇಪಾಳ ಯುವರಾಜನ ಕಾಣೆ,

ನೇಪಾಳದ ರಾಜನ ಅಳಿಯನಾದ ರಾಜಾಜಯ ಪೃಥ್ವಿ ಬಹದೂರ್ ಸಿಂಗ್, ಇವರು ಕಲಕತ್ತದಲ್ಲಿ ಒಬ್ಬಂಟಿಗನಾಗಿ ಯಾವದೋ ಅಂಗಡಿಗೆಂದು ಹೋದವರು, ಮರಳಿ ಬರಲೇ ಇಲ್ಲವಂತೆ. ಅವರು ಇಲ್ಲದಿರುವುದನ್ನು ಪೋಲೀಸರಿಗೆ ತಿಳಿಸಿದೊಡನೆ ಪೋಲೀಸರು ಹುಡುಕಿದರು. ರೈಲ್ವೇ ಸ್ಟೇಶನಿನಲ್ಲಿ ಯಾರೊಡನೆ ಕೇಳಿದರೂ ಯಾವ ಸಮುತ್ತರವೂ ದೊರೆಯಲಿಲ್ಲ. ರಾಜನೊಡನೆ ಬಹಳ ಪರಿಚಿತರಾದವರೂ ಕೂಡ ಯುವರಾಜನ ಅಗಲುವಿಕೆಗೆ ಕಾರಣವನ್ನು ಕಂಡುಹಿಡಿಯದವರಾದರು. ಯಾರೋ ಒಳಸಂಚುಮಾಡಿ ಯುವರಾಜರನ್ನು ಕದ್ದೊಯ್ದರೆಂದು ನಂಬಲಾಯಿತು. ಕೊನೆಗೆ ವಿಚಾರಮಾಡಿ ನೋಡಲಾಗಿ ಈ ಯುವರಾಜರು ಮುಂಬಾಯಿಯಲ್ಲಿದ್ದಾರಂತೆ.

ಅದೇ ಮನೆತನದವರ ಲೆಕ್ಕಕ್ಕೆ ತಿರಿಗೊಂದು ಕಾಫಿಫಲಾಹಾರವಾಯಿತು. ತಾಂಬೂಲಾದಿ ಸತ್ಕಾರಗಳಾದ ಮೇಲೆ ಸಭೆಯು ಮುಕ್ತಾಯವಾಯಿತು.

ಬ್ರಹ್ಮರಕೂಟ್ಲು:— ಇಲ್ಲಿಯ ಕದಿಪಾಡಿ ದೈವಕ್ಕೆ ನೇಮವಾಗದೆ ಇದ್ದುದರಿಂದ ಇಲ್ಲಿಯ ಪೆರೋಡಿ ಕಂಬಳವು ನಿಲ್ಲಿಸಲ್ಪಟ್ಟಿದೆ. ಮೊನ್ನೆ ಬ್ರಹ್ಮರಕೂಟಲು ಕೋಡಿನಲ್ಲಿ ಕಂಬಳವು ಬಹಳ ವಿಶೇಷ ರೀತಿಯಲ್ಲಿ ನಡೆಯಿತು. ಹಲವು ಸಾವಿರ ಜನರು ಕೂಡಿದ್ದರು. ಕೋಣಗಳನ್ನು ಓಡಿಸುವಾಗ ಮೂವರಿಗೆ ಕಠಿಣ ತರದ ಜಖಂ ಆಗಿಯದೆ.

ಸಿಲೋನಿನಲ್ಲಿ ಮಲೆಯಾಳಿಗಳು,

ರಾ। ಸತ್ಯವಾಗೀಶ್ವರ ಅಯ್ಯರರ ಅಧ್ಯಕ್ಷತೆಯಲ್ಲಿ ಸಿಲೋನಿನಲ್ಲಿರುವ ಮಲಯಾಳಿಗಳ ಒಂದು ಸಭೆಯು ಜರಗಿತು. ಕೊಲೊಂಬೋದಲ್ಲಿಯೂ ಸಿಲೋನಿನಲ್ಲಿಯೂ, ಮಲಯಾಳಿಗಳು ಅಪರಿಮಿತ ಸಂಖ್ಯೆಯಲ್ಲಿ ಇರುವರಾದರೂ, ಮಲಯಾಳವು ಉತ್ತಮ ಭಾಷೆಯಲ್ಲವೆಂದು ಹೇಳಿ, ಮಲಯಾಳಿಗಳಿಗೆ ಶ್ರೇಷ್ಠತೆಯನ್ನು ಕೊಡುವದಿಲ್ಲ. ಹಾಗೆ ಮಾಡಬಾರದು. ಕೋರ್ಟುಗಳಲ್ಲಿ ಮಲಯಾಳಿಗಳಿಗೆ ಸಂಬಂಧಿಸಿದ ಅನೇಕ ಸಿವಿಲ್, ಕ್ರಿಮಿನಲ್ ನಂಬ್ರಗಳು ನಡೆಯುತ್ತಿವೆಯಾದರೂ ಮಲಯಾಳದಲ್ಲಿ ಸಂಭಾಷಣೆ ಮೊದಲಾದವುಗಳು ನಡೆಯದ ಕಾರಣ ನಡೆಯುವಂತಾಗಬೇಕು ಎಂದು ಠರಾವುಗಳು ಮಂಜೂರಾದವು. ಕೊಲೊಂಬೋದಲ್ಲಿ ಸುಮಾರು ೧೦,೦೦೦ ಮಲಯಾಳಿಗಳಿರುವರು. ಲಂಡನಿನ ಯುನಿವರ್ಸಿಟಿಯವರು ಮಂಜೂರು ಮಾಡಿದ ಮಲಯಾಳಿ ಭಾಷೆಯಲ್ಲಿ ಓದಲಿಕ್ಕೂ ಬರೆಯಲಿಕ್ಕೂ ಇವರಲ್ಲಿ ಹೆಚ್ಚಿನವರಿಗೆ ಗೊತ್ತಿದೆ. ಆದಕಾರಣ ಸಿಲೋನಿನವರು ಮಲಯಾಳಿಗಳಿಗೆ ಈ ತರದ ಸ್ವಾತಂತ್ರ್ಯವನ್ನು ಕೊಡಬೇಕು ಎಂದಾಯಿತು. ಈ ಸಭೆಯ ಪ್ರೊಸಿಡಿಂಗ್ಸನ್ನು ರಿಫೋರ್ಮ್ಸ ಕಮಿಶನಿನವರಿಗೆ ಹಾಜರು ಮಾಡಬೇಕೆಂದಾಯಿತು.

§ § § §

ಇಂದೋರದ ಮಹಾರಾಜರ ವಿವಾಹ!

ಮಮ್ತಾಜ್ ಬೇಗಮಳೊಂದಿಗೆ ಕೂಡಲು ಪ್ರಯತ್ನಿಸಿ, ಕೊನೆಗೆ ರಾಜ್ಯವನ್ನು ಕಳಕೊಂಡು ಹೋಗಿದ್ದ ಇಂದೋರಿನ ಎಕ್ಸ್ ಮಹಾರಾಜರು ಈಗ ಮಿಸ್. ಮಿಲ್ಲರ್ ಎಂಬೊಬ್ಬ ಅಮೇರಿಕನ್‌ಹುಡುಗಿಯನ್ನು ಮದುವೆಯಾಗುವರಂತೆ. ಎಕ್ಸ್ ಮಹಾರಾಜರ ಮಿತ್ರನಾದ ಅಬ್ದುಲ್ ರಶೀದನೊಂದಿಗೆ ಈ ವಧುವು ಕಳೆದ ವಾರದಲ್ಲಿ ಹಿಂದೂಸ್ಥಾನಕ್ಕೆ ಬಂದಿರುವಳು. ಮುಂದಿನ ವಾರದಲ್ಲಿ ಇಂದೋರಿನಲ್ಲಿಯೇ ಮದುವೆಯು ನಡೆಯಲಿಕ್ಕಿದೆ. ಈ ವಧುವು ಕೆಲಿಫೋರ್ನಿಯಾದಲ್ಲಿ ವಾಸಿಸುವ ಒಂದು ಶ್ರೀಮಂತ ಕುಟುಂಬಕ್ಕೆ ಸೇರಿದವಳು. ವೋಶಿಂಗ್‌ಟನ್ ಯುನಿವರ್ಸಿಟಿ ಕೊಲೇಜಿನಲ್ಲಿ ವಿದ್ಯಾಭ್ಯಾಸವನ್ನು ಹೊಂದಿದವಳು. ಅವಳ ಪೂರ್ಣ ಹೆಸರು ನೇನ್ಸಿಏನ್ ಮಿಲ್ಲರ್ ಎಂದು. ಅವಳು ಇಲ್ಲಿಗೆ ಬಂದೊಡನೆ ಮದುವೆಯ ಆಲೋಚನೆಯನ್ನೇ ಅವಳಿಂದ ದೂರಮಾಡಬೇಕೆಂದು ಎಷ್ಟೋ ಪ್ರಯತ್ನಿಸಿದರು. ಆದರೆ ಅವಳು ದೃಢನಿಶ್ಚಯ ಮಾಡಿಕೊಂಡಿರುವುದರಿಂದ, ಅದು ಸಾಧ್ಯವಾಗಲಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಕನ್ನಡ ಪ್ರತಿ ಶಬ್ದಗಳು.

ಈಗೆರಡು ತಿಂಗಳ ಹಿಂದೆ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಲೇಖಕರೆಂಬವರು ನಾನು 'ಜಯ ಕರ್ನಾಟಕ'ದಲ್ಲಿ ಕೊಡುತ್ತಿರುವ ಕನ್ನಡ ಪ್ರತಿ ಶಬ್ದಗಳ ಬಗ್ಗೆ ಟೀಕಾತ್ಮಕ ಲೇಖವನ್ನು ಬರೆದುದನ್ನು ನೋಡಿ ಆನಂದವಾಯಿತು. ನಾನು ಬರೆದ ೨೫೦೦ ಶಬ್ದಗಳ ಕೋಶವು ಕೇವಲ ಪ್ರಯೋಗಾರ್ಥವಾಗಿ, ಅದು ಟೀಕೆ ಪ್ರತಿಟೀಕೆಗಳ ಆಘಾತದಿಂದ ಕೊನೆಗೆ ಒಳ್ಳೇ ರೂಪವನ್ನು ಹೊಂದಬೇಕೆಂಬುದೇ ನನ್ನ ಉದ್ದೇಶವು ಎಂಬುವನ್ನು ನಾನು ಮೊದಲೇ ಪ್ರಕಟಮಾಡಿದ್ದೇನೆ. ಇಂಥ ಟೀಕೆಯನ್ನು ಮಾಡುವ ಉದ್ಯೋಗವನ್ನು ಮಾಡುವವರು ಸಹ ನಮ್ಮಲ್ಲಿ ಕಡಿಮೆ ಇದ್ದುದನ್ನು ನೋಡಿ ದುಃಖವಾಗುತ್ತಿದೆ. ಎಲ್ಲ ವೃತ್ತಪತ್ರಿಕಾ ಕರ್ತರಾದವರೂ ಅದನ್ನು ನೋಡಿ ಟೀಕಿಸಬೇಕು. ಅದರಲ್ಲಿದ್ದ ಊನತೆಗಳನ್ನು ಕಳೆದು ಒಳ್ಳೆ ಶಬ್ದಗಳನ್ನು ಸೂಚಿಸಬೇಕೆಂದು ಈಗಲಾದರೂ ನಾನು ಬೇಡಿಕೊಳ್ಳುತ್ತೇನೆ. ಯಾಕಂದರೆ ಈ ಶಬ್ದಗಳು ಬಹುಶಃ ಪತ್ರಿಕಾಕರ್ತರಿಗಾಗಿಯೇ ಹೆಚ್ಚು ಉಪಯುಕ್ತವಾಗಿರುವವು. ಭಾಷೆಯ ಕಡೆಗೆ ಲಕ್ಷ್ಯ ಕೊಟ್ಟು ಅದನ್ನು ಬುದ್ಧಿಪೂರ್ವಕವಾಗಿ ಸುಧಾರಿಸಲಿಕ್ಕೆ ಯತ್ನಿಸದೆ ಅದು ಎಂದಿಗೂ ಸುಧಾರಿಸಲಾರದು.

ರಂಗನಾಥ ದಿವಾಕರ.

ಮಿತವಾದ ಬೆಲೆಗೆ ಅಮಿತವಾದ ಬೆಳಕು,

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ಯತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸ್‌ಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ಪಚಂದ್ರಕಾಂತಿ 300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಷರಟು ಗುಂಡಿಗಳು, ರೋಜಾ ಹುವ್ವುಗಳ ಹಾರಾಯಿಗಳು, ಬ್ಯಾಟರಿಗಳು, ಬೆಂಕಿಕಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ಪಗೈರೆ ತಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

(18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಹೊಲಸನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.
ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.
— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.
ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಶರೀರದಲ್ಲಿ ಉಂಟಾಗುವ ಎಲ್ಲಾ ತರದ ಮಾರ್ಪಾಟುಗಳಿಗೂ,
ಬಲಹೀನತೆಗೂ, ಮಾನಸಿಕ ಚಿಂತೆಗಳಿಗೂ, ಮಲಬದ್ಧತೆಗೂ ಜಗತ್ಪ್ರಸಿದ್ಧವಾದ

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳು ತುಂಬಿರುವ ಡಬ್ಬಿ 1ಕ್ಕೆ ರೂ. 1-0-0.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Branches: Karkal, Kasaragod, & Cochin.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 313,100—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ತಡಕೊಳ್ಳಲಾಗುತ್ತವೆ
For further particulars apply to the Secretary.
☞ ವಿಶೇಷ ವರ್ತಮಾನ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore, 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಪ್ರಿಯವಾಗಲಿ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರಿಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ, ಮಂಗಳೂರು ಟವರಿಗೆ ಮಾತ್ರ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪಡಿ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅಪ್ಪಟ ಸವರನ್ ಬಂಗಾರದಿಂದ ತಯಾರಿಸಿದ ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟು ಜಾಜೂಕಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಬೆಳ್ಳಿಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)



fit Dunlop and be satisfied

ಚಂದಾನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-18-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ‖
ಗರಲಕವರಂಜಿದರೆ? ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. ಮಂಗಳೂರು, ತಾ. ೨೦ನೇ ಶುಕ್ರವಾರ ಜನವರಿ ೧೯೨೮. ಸಂಚಿಕೆ ೩.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:— ಉಡುಪಿ

Branches:—COONDAPOOR.
" Mangalore.
ಶಾಖೆ:— ಕುಂದಾಪುರ.
" ಮಂಗಳೂರು.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

Statement of affairs as on the 30th November, 1927.

1. Capital	1,99,650-0-0	1. Premises, Furniture, Iron safe &c.,	9,750-7-10
2. Reserve & other Funds	88,000-0-0	2. Investment on G. P. Notes at cost	1,85,931-13-0
3. Deposits	10,60,368-8-0	3. Investments on Jewls & other approved securities	11,89,182-13-3
4. Sundry Persons a/c	6,382-2-0	4. Bills for collection	6,382-2-0
5. Overdrafts with Bankers	52,052-1-5	5. Cash in hand & with Bankers	43,437-2-3
6. Sundry items	1,04,421-11-10	6. Sundry items	71,190-0-11
Rs.	15,05,874—7—3.	Rs.	15,05,874—7—3

Office of the Corporation,
Udipi, 1-12-'27.

N. ANANDA RAO,
Secretary.

ಅಮೃತಾಂಜನ

ತಲೆಶಿಡಿತ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಳ್ಳ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Cart-street, MANGALORE.

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:—ತಬಲೆ, ಢಕ್ಕೆ ವಗೈರೆ.

ಗೋಪಾಳ ನಮುರಾಮ ಮತ್ತು ಕಂಪೆನಿ,

ಕಾಶಿಯ ಅಪೂರ್ವ ಪದಾರ್ಥಗಳು.

13—9—'27.

ಖಾತ್ರಿಯಾದ

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ)

ಟಿ. ಸಿ. ನಾಗಲಿಂಗಸ್ವಾಮಿ ಅಂಡ್ ಕೋ.,

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು.—ಧರಿಸಿದ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

೩೦—೯—'೨೭ ಸಲ್ಪೆಟ್ಟಿಲ್ ಪೋಸ್ಟ ಕರೂರ್ ಡಿಸ್ಟ್ರಿಕ್ಟ್.

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲಾ ಅವರ ... ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.

ಬಾಟ್ಲಿವಾಲಾ ... —ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲಾ ... —ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

... —ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

... —ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

... —ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಕೇಸರಿಯ ಪ್ರದರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

... ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ... ಯೋಗ್ಯವಾಗಿದೆ.

... ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ... ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—"KESARI" ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

... ನಕ್ಕೆಯುಳ್ಳ ... ಫೌಂಟನ್‌ಪೆನ್ನಾವು ... ತಯಾರಿಸಿದ್ದೇವೆ. ಇದಕ್ಕೆ 14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವವರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೆನ್ನನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುತ್ತೇವೆ.

ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ:— ಸೀಟಿರ್ ವಾಚ್ ಕಂಪನಿ,

ಪೋ ಬಾಕ್ಸ್ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ ಬಾಕ್ಸ್ ನಂ. 105, ಮದರಾಸು.

Shroff Shri Vallabha Shivappa Shet & Co.

Shroff & Jewellers,

Head Office:—DONGERKERY. Branch:—GOLIKATTA BAZAAR.

ESTABLISHED 1918 ಸ್ಥಾಪಿತವಾದದ್ದು ೧೯೧೮.

ಖಾತ್ರಿಯಾದ ವಸ್ತುಗಳು! ನ್ಯಾಯವಾದ ಖರೀದಿ!!



ನಮ್ಮಲ್ಲಿ ಇದರಲ್ಲಿ ತೋರುವ ನಮೂನೆಯ ಭಂಗಾರದ ಒಡವೆಗಳಲ್ಲದೆ ಅನೇಕ ನಮೂನೆಯ ಗೆಜ್ಜೆಟಿಕೆಗಳೂ ಚಕ್ರಸರ, ಅಡ್ಡಿಗೆ ಸರಪಳಿ, ಬಳೆಗಳು, ಯಸ್ ಕ್ಲಾವರ್, ಮಲ್ಲಿಗೆ ಮೊಗ್ಗು ನಾನಾ ತರದ ಗುಲಾಬಿ ಹೂ, ಅಲ್ಲದೆ ನವಯೌವನದ ಸ್ತ್ರೀಯರಿಗೆ ಬೇಕಾದ ನವೀನ ರೀತಿಯ ಆಭರಣಗಳನ್ನು ನಾವು ಕ್ಲುಪ್ತಕಾಲಕ್ಕೆ ತಯಾರಿಸಿಕೊಡುವೆವು.

ಕೆಂಪಿನ ಬೆಂಡೋಲೆಗಳು, ಸ್ಕ್ರೂಗಳು, ಟಿಕಿಗಳು, ಯಾವಾಗಲೂ ಮಾರಾಟಕ್ಕೆ ಸಿಗುತ್ತವೆ.

ನಮ್ಮ ಸಂಸ್ಥೆಯ ಕಟ್ಟೆಯಲ್ಲಿ ತಯಾರಿಸಿದ ಯಾವತ್ತು ಆಭರಣಗಳಿಗೆ ಒಂದು ವರುಷದೊಳಗೆ ಯಾವದೊಂದು ತರದ ಊನವು ನಮ್ಮ ಕಾರಣದಿಂದ ಉಂಟಾದರೆ ಅಂಥವುಗಳನ್ನು ಮಜೂರಿ ಬಿಟ್ಟು ಪರತು ತೆಗೆದುಕೊಳ್ಳುತ್ತೇವೆ.

ನಮ್ಮಲ್ಲಿ ಬಂಗಾರದಿಂದ ತಯಾರಿಸಿದ ಎಲ್ಲಾ ವಿಧದ ನಗಗಳೂ, ಬೆಳ್ಳಿ, ಚಿನ್ನ, ವಜ್ರ, ವೈಡೂರ್ಯ, ಕೆಂಪು, ನೀಲ ಮೊದಲಾದ ಬೆಲೆಯುಳ್ಳ ರತ್ನಾದಿಗಳೂ ಯಾವಾಗಲೂ, ಬಿಕರಿಗೆ ಇವೆ.

ಆರ್ಡರುಗಳನ್ನು ಕ್ಲುಪ್ತಕಾಲಕ್ಕೆ ಯಾವ ಊರಿಗೂ ತಯಾರಿಸಿಕೊಡುತ್ತೇವೆ.

ಆರ್ಡರ ಕೊಡುವಾಗ ಸೇಕಡಾ 25ರ ಪ್ರಕಾರ ಹಣವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಶ್ರೀ ಸ್ವಾಮಿ ನಿತ್ಯಾನಂದರವರ

ಪುರುಷಾರ್ಥ ಪರಮಾರ್ಥ ಸಾಧನೆಗಳನ್ನು ಕುರಿತಾದ ಬೋಧಾಮೃತ ಸಂಗ್ರಹ.

ಚಿದಾಕಾಶ ಗೀತಾ ಆತ್ಮಪ್ರಭಾವ

ಇದು 178 ಪುಟಗಳಲ್ಲಿ, ಶ್ರೀ ಸ್ವಾಮಿಯವರು 1924ರಿಂದ 1927ರ ವರೆಗೆ ಆಗಾಗ್ಗೆ ಬೋಧಿಸಿದ ತತ್ವೋಪದೇಶಗಳನ್ನು ಅವರು ಅಂದಂತೆಯೇ ಸುಲಭ ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ದಪ್ಪ ಗ್ಲೇಜ್ ಕಾಗದದಲ್ಲಿ ಸುಂದರ ಅಕ್ಷರಗಳಲ್ಲಿ, ಶ್ರೀ ಸ್ವಾಮಿಯವರ ಫೋಟೋ ಚಿತ್ರ ಮತ್ತು ಏಕಾಗ್ರತೆ ಅಧ್ಯಾಸಕ್ಕಾಗಿ ಓಂಕಾರ ಚಿತ್ರಗಳೊಡನೆ, ಉತ್ತಮವಾಗಿ ಮುದ್ರಿಸಿ, ದಪ್ಪ ಕೆಲಿಕೋ ಬೈಂಡಿನಲ್ಲಿ ಚಿನ್ನದ ಅಕ್ಷರಗಳಲ್ಲಿ ಕೆತ್ತಿದ ಹೆಸರುಳ್ಳ ಅಮೂಲ್ಯ ಗ್ರಂಥವು. ಶ್ರೀ ಸ್ವಾಮಿಯವರು ಈ ಜಿಲ್ಲೆಯಲ್ಲಿ ತುಂಬಾ ಪರಿಚಿತರು. ಇವರಿಂದ ಭಕ್ತಿ, ಜ್ಞಾನ, ವೈರಾಗ್ಯ, ಕರ್ಮನಿಷ್ಠೆ, ಪುರುಷಾರ್ಥ ಸಾಧನೆ, ಆತ್ಮ ಶಕ್ತಿ, ಪ್ರಾಣಾಯಾಮ, ಷಟ್ಚಕ್ರ, ಯೋಗಸಾಧನೆ, ಸಾಕ್ಷಾತ್ಕಾರ ಇತ್ಯಾದಿ ವಿಷಯಗಳಲ್ಲಿ ಯೋಗ್ಯ ಉಪದೇಶವನ್ನು ಓದಿಕೊಳ್ಳಬೇಕೆಂದಿರುವವರಿಗೆ ಸಂಗ್ರಹಕ್ಕೆ ಅತ್ಯುಪಯುಕ್ತವಾದ ಗ್ರಂಥ.

ಬೆಲೆ ಒಂದು ರೂಪಾಯಿ ಮಾತ್ರ.

ವಿ. ಪಿ.ಯಿಂದ 1—4—0.

ಸಿಕ್ಕುವ ವಿಳಾಸ.— ಶೆಣೈ ಬ್ರದರ್ಸ್ ಎಂಡ್ ಕೋ.

ರಥಬೀದಿ, ಮಂಗಳೂರು,

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

ಕನ್ನಡ ಮೂಲಾಕ್ಷರಗಳ ಸಚಿತ್ರ ನಕಾಶೆಯು.

ಇದರೊಳಗೆ ಅ ದಿಂದ ಕ್ಷದ ವರೆಗೆ ಆಯಾ ಅಕ್ಷರಗಳ ಸೂಚಕವಾದ ಚಿತ್ರಗಳು ಅವೆ. ಇವು ಬೇರೆ ಬೇರೆ ಬಣ್ಣದಲ್ಲಿ ಅಂದವಾಗಿ ಮತ್ತು ಮುದ್ದಾಗಿ ಮುದ್ರಿಸಲ್ಪಟ್ಟಿವೆ. ಈ ನಕಾಶೆಯು ಹಿಂಬದಿಗೆ ಅರಿವೆ ಹಚ್ಚಿರುವದಲ್ಲದೆ ವಾರ್ನೀಸ ಹಚ್ಚಿ ರೂಳುಪಟ್ಟಿಯನ್ನೂ ಸಹ ಹಾಕಿರುತ್ತದೆ. ಬೆಲೆ:—೧೪ ಆಣೆ.

ಒಂದೇ ಪ್ರಮಾಣದಿಂದ ತೆಗೆದ ಪ್ರಾಣಿಗಳ ಚಿತ್ರಪಟವು.

ಈ ಚಿತ್ರಪಟದೊಳಗೆ ೫೨ ಚಿತ್ರಗಳು ಇರುತ್ತವೆ; ಅವುಗಳ ಹೆಸರುಗಳು. ೧ ಆನೆ, ೨ ಕಾಂಗರೂ, ೩ ಮನುಷ್ಯ, ೪ ಜಿರಾಫೆ, ೫ ಒಂಟೆ, ೬ ನೀರು ಕುದುರೆ, ೭ ಸಾರಂಗ, ೮ ಹಸ್ಸು, ೯ ಗಂಡಕ, ೧೦ ಕುದುರೆ, ೧೧ ಝಿಬ್ರಾ, ೧೨ ಚಿರ್ತೆ, ೧೩ ಆಕಳು, ೧೪ ಎಮ್ಮೆ, ೧೫ ಸಿಂಹ, ೧೬ ಹುಲಿ, ೧೭ ಕರಡಿ, ೧೮ ಕಿರುಬ, ೧೯ ಕಾಡಹಂದಿ, ೨೦ ಕತ್ತೆ, ೨೧ ಹಂದಿ, ೨೨ ಚಿಗರಿ, ೨೩ ಕಾಡಾಕಳು, ೨೪ ಮೀನ, ೨೫ ಟಗರು, ೨೬ ಹೋತು, ೨೭ ಕ್ಯಾಂಗರು, ೨೮ ನರಿ, ೨೯ ಬೆಕ್ಕು, ೩೦ ಮೊಸಳೆ, ೩೧ ಮೊಲ, ೩೨ ನಾಯಿ, ೩೩ ಬಕಪಕ್ಷಿ, ೩೪ ಮಂಗ, ೩೫ ನೀರುಗೋಳಿ, ೩೬ ಹುಂಜ, ೩೭ ಗರುಡಪಕ್ಷಿ, ೩೮ ಗೂಗೆ, ೩೯ ರಣಹದ್ದು, ೪೦ ಇಣಚಿ, ೪೧ ಕೋಳಿ, ೪೨ ಹಾವು, ೪೩ ಗಿಳಿ, ೪೪ ಕಾಗೆ, ೪೫ ಪಾರಿವಾಳ, ೪೬ ಜೇಳು, ೪೭ ಇಲಿ, ೪೮ ದೀಪದ ಹುಳ, ೪೯ ಮುಂಗಲಿ, ೫೦ ಗುಬ್ಬಿ, ೫೧ ಕಪ್ಪೆ, ೫೨ ನವಿಲು. ಬೆಲೆ ೧ ರೂಪಾಯಿ, 18-11-'27

ವಿಳಾಸ—ಚಿತ್ರಶಾಲಾ ಪ್ರೆಸ್ ಪುಣೆ ಸಿಟಿ.

ಬಿಳೀ ತೊನ್ನಿಗೆ ಖಂಡಿತವಾದ ಔಷಧ.

'ಲೂಕೊಡರ್ಮ ಸ್ಪೆಸಿಫಿಕ್' ಬಿಳೀ ತೊನ್ನಿಗೆ ಖಂಡಿತವಾದ ಔಷಧ. ಶರೀರದ ಮೇಲೆ ಯಾವ ಕಾರಣದಿಂದಾಗಲಿ ಬಿಳಿ, ನೀಲಿ, ಕೆಂಪು, ಮಚ್ಚೆಗಳು ಯಾವುದೇ ಕಾಣಿಸುತ್ತಿದ್ದಾಗ್ಯೂ ಈ ಔಷಧವನ್ನು ಹಾಕಿದರೆ ನಾಲ್ಕಾರು ದಿನಗಳಲ್ಲೇ ಸಂಪೂರ್ಣವಾಗಿ ಖಂಡಿತವಾಗಿಯೂ ತೊಡೆದುಹೋಗುತ್ತದೆ. ಕ್ರಯ ರೂ. 4—8—0. ಕಾಗದವನ್ನು ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

ವಿಳಾಸ:—DR. W. N. DIXIT.

23-12-'27] POONA CITY.

ಆಶ್ಚರ್ಯಕರವೂ, ಲೋಕೋತ್ತರವೂ, ಹಾಸ್ಯಕರವೂ ಆಗಿರುವ,

ಪೊಕೆಟ್ ಡಿಟೆಕ್ಟಿವ್.

೨೦ನೇ ಶತಮಾನದ ಅಮೇರಿಕನ್ ಶೋಧನೆ.



ಈ ಚಮತ್ಕಾರಿಕವಾದ ಮತ್ತು ವಿಚಿತ್ರವಾದ, ಹೊಸ ನಮೂನೆಯ ಪೊಕೆಟ್ ಸೈಟು ಪ್ರತಿಯೊಬ್ಬನಿಗೂ ಅಗತ್ಯವಿದೆ. ನಿಮ್ಮ ಹೆಚ್ಚಿನ ಪ್ರೀತಿಗೆ ಪಾತ್ರಳಾಗಿರುವ ಸುಂದರಿಯನ್ನು, ಅವಳ ಚರ್ಯೆಗಳನ್ನು, ಯಾರೂ ತಿಳಿಯದಂತೆ ನೀವು ಮಾತ್ರ ಸಂಪೂರ್ಣವಾಗಿ ಕಾಣಬಹುದು. ಯಾವಾಗಲೂ ಉಪಯೋಗಕ್ಕೆ ತಕ್ಕುದಾಗಿದೆ. ಇದನ್ನು ಕೊಂಡುಕೊಳ್ಳುವವರಿಗೆ 4 ಪೇರಿಸ್ ಬೆಡ್‌ರೂಮ್ ಫೋಟೋಗಳು ಉಚಿತವಾಗಿ ಕೊಡಲ್ಪಡುವವು. ಮಾಹಿತಿ ಪತ್ರವೂ ಕೊಡಲಾಗುವದು.

ಕ್ರಯ ರೂಪಾಯಿ 2/-ಮಾತ್ರ.

PARIS EMPORIUM,

George Town,

—12—'27. MADRAS.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರೀ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಚಿಕಿತ್ಸಕ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೂ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ,

ಪೋಸ್ಟ್ ಕಾಂಞಂಗಾಡ (ದ. ಕ.

ತ್ವರೆಮಾಡಿರಿ ! ತ್ವರೆಮಾಡಿರಿ !!

1928ನೇ ವರುಷದ

ಪೊಕೆಟ್ ಡೈರಿ

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ	೧೪ ಆಣೆ
ದೊಡ್ಡ ಸೈಜಿನ ಸಾದಾ ಡೈರಿ	೧೦ ಆಣೆ
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
ಮಿಡಿಯಮ್ ಸೈಜಿನ ಡೈರಿ	೮ ಆಣೆ
ಸಣ್ಣ ಸೈಜಿನ ಸಾದಾ ಡೈರಿ.	೭ ಆಣೆ
" " ಸ್ಟಿಫ್ ಬ್ಯಾಂಡಿನ ಡೈರಿ	೬ ಆಣೆ

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ರಾಗ್ಯಾಯಿತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ಪಚಂದ್ರಕಾಂತಿ 300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪಂಪು ಗುಂಡಿಗಳು, ರೋಜಾ ಹುವ್ವಿನ ಕುರಾಯಿಗಳು, ಬ್ಯಾಟರಿಗಳು, ಬೆಂಕಿಇಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.



ಕ್ರಯ ಪಟ್ಟಿಗೆ ಪಡೆಯಲಿಕ್ಕೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,

ಬೈಸಿಕಲ್; ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

(18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

ಧರ್ಮ.

'ಧರ್ಮವು ನಾನಾ ಸಮುದಾಯವನ್ನು ಹೋಗಲಾಡಿಸುತ್ತದೆ' ಎಂದು ಆಂಗ್ಲ ಭಾಷೆಯಲ್ಲಿ ಒಂದು ಗಾದೆಯುಂಟಾದರೂ ಜನರು ಅದರ ಅರ್ಥವನ್ನು ಸರಿಯಾಗಿ ವಿಚಾರಿಸಿ ತಿಳಿಯುವದಿಲ್ಲ. ಧರ್ಮವೆಂದರೆ ಭಿಕ್ಷುಕರಿಗೆ ಹಣ ಕೊಡುವದು ಎಂದು ಅನೇಕರು ತಿಳಿಯುತ್ತಾರೆ. ಇಂಥ ಧರ್ಮವನ್ನು ಮಾಡುವವನು ತಾನು ಮಾಡಿದ ತಪ್ಪುಗಳ ಪಾಪವೆಲ್ಲವನ್ನೂ ತನ್ನ ಈ ಧರ್ಮವೆಂಬ ಕೃತ್ಯದಿಂದ ತೊಳೆದು ಬಿಡುವನೆಂಬುದು ಜನರಲ್ಲಿ ನೆಲಸಿರುವ ನಂಬಿಗೆ. ಇನ್ನು ಅನೇಕರು ಧರ್ಮವು ಪುಣ್ಯ [illegible] ಆಚರಿಸುತ್ತಾ [illegible] ಧರ್ಮ ಮಾಡುವುದರಲ್ಲಿ [illegible] ಹಿಂದುಗಳನ್ನು [illegible] ಯಾವ ಉದ್ದೇಶದಿಂದ [illegible] ದೊರಕಬೇಕೆಂದು [illegible] ಎಲ್ಲರೂ ಧರ್ಮವನ್ನು [illegible] ಎಂದು ಕೇವಲ [illegible] ಮಾಡಿದರೆ [illegible] ಹೇಳಲಾಗುವುದಿಲ್ಲ.

[illegible]

ಬಡವನನ್ನು ಪ್ರೀತಿಸುವದೇ ಧರ್ಮ [illegible]

[illegible] ದೊರಕುವನು. [illegible] ಸಂತೋಷವಾಗುವನು. [illegible] ವಂತನೂ ಸಂತೋಷಪಡುವನು.

ಭಿಕ್ಷುಕರಿಗೆ ಎಷ್ಟು ಸಿಕ್ಕಿದರೂ ಸಂತೋಷವಾಗುವದಿಲ್ಲ. ಆಹಾರಕ್ಕಾಗಿ ಅವರು ಭಿಕ್ಷೆ ಬೇಡುವದನ್ನು ಬಿಟ್ಟು ಅದನ್ನು ತಮ್ಮ ವೃತ್ತಿಯನ್ನಾಗಿ ಇಟ್ಟುಕೊಳ್ಳುವದರಿಂದ ಎಷ್ಟು ಸಿಕ್ಕಿದರೂ ಅವರಿಗೆ ತೃಪ್ತಿಯಾಗುವದಿಲ್ಲ. ಕೃಪಣನು ಎಷ್ಟು ಧನವನ್ನು ಕಸ್ತರೂ, ಇನ್ನೂ ಬೇಕೆಂದು ಹಂಬಲಿಸುವನು. ಅಂತೆಯೇ ಭಿಕ್ಷುಕನಿಗೆ ಎಷ್ಟು ಹಣ ಸಿಕ್ಕಿದರೂ ಆತನು ಇನ್ನೂ ದೊರಕಬೇಕೆಂದು ಪ್ರಯತ್ನಿಸುವನು. ಹಣ ಕೊಟ್ಟು ಆತನಿಗೆ ತೃಪ್ತಿಯನ್ನುಂಟುಮಾಡುವದು ಸಾಧ್ಯವಿಲ್ಲದಿದ್ದರೂ, ಮೃದುವಾದ ಮಾತುಗಳಿಂದ ಖಂಡಿತವಾಗಿಯೂ ಆತನಿಗೆ ಸಂತೋಷವನ್ನುಂಟುಮಾಡಬಹುದು.

ಬಡವರ ಅಥವಾ ಭಿಕ್ಷುಕರ ಸ್ಥಿತಿಯನ್ನು ನಾವು ಪೂರ್ಣವಾಗಿ ಅರಿತುಕೊಳ್ಳಬೇಕು. ಅವರು ಎಷ್ಟು ದುಃಖಪಡುವರು, ಅವರಿಗೆ ಶರೀರದಲ್ಲಿ ಎಷ್ಟು ಸಂಕಟವಾಗುವದು, ಉಪವಾಸ ಬಿದ್ದು ಎಷ್ಟು ಬಳಲುವರು, ತಮ್ಮ ವೃತ್ತಿಗಾಗಿ ಎಷ್ಟು ನಾಚಿಕೆಪಡುವರು, ಜನರು ಅವರನ್ನು ಆದರಿಸದೆ ಇದ್ದೊಡನೆ ಅವರಿಗೆ ಎಷ್ಟು ಆಶಾಭಂಗವಾಗುವದು, ಮೃದು ವಚನಗಳಿಗಾಗಿ ಅವರು ಎಷ್ಟು ಕುತೂಹಲಿಗಳಾಗಿರುವರು ಎಂಬೀ ವಿಷಯಗಳನ್ನು ನಾವು ತಿಳಿಯಬೇಕು. ನಮಗೆ ಭಿಕ್ಷುಕರು ಹೇಗೊ ಹಾಗೆಯೇ ನಾವು ಭಗವಂತನ ಎದುರಿನಲ್ಲಿ ಭಿಕ್ಷುಕರು. ನಾವು ಭಿಕ್ಷುಕರಿಗೆ ದಯೆ ತೋರಿಸಿದರೆ ಮಾತ್ರ ಭಗವಂತನು ನಮ್ಮ ಮೇಲೆ ದಯೆ ತೋರಿಸುವನು. ಅವರ ಉನ್ನತಿಯನ್ನು ಸಾಧಿಸಿದರೆ ಮಾತ್ರ ಭಗವಂತನು ನಮ್ಮನ್ನೂ ಅಭಿವೃದ್ಧಿಗೆ ತರುವನು. ಅದುಕಾರಣ ಭಿಕ್ಷುಕರಿಗೆ ಸುಖವನ್ನುಂಟುಮಾಡಬೇಕು. ಅವರಿಗೆ ಆಶ್ರಯವನ್ನೊದಗಿಸಬೇಕು. ಒಟ್ಟಾರೆ ಭಿಕ್ಷುಕರ ಮೇಲೆ ದಯೆ ತೋರಿಸಿ ಅವರ ಉದ್ಧಾರವನ್ನು ಮಾಡಬೇಕು.

[illegible] ಪ್ರೀತಿಯಿಂದ [illegible] ಕಠಿಣವಾದ ಶಿಕ್ಷೆಗೆ [illegible] ಮೃಗಗಳಿಗೆ ಸಮಾನರೆಂದು ಭಾವಿಸಿ [illegible] ಸ್ವಾತಂತ್ರ್ಯವನ್ನು ಕೊಡದಿರುವನು. ಅವರು ಯಾವ [illegible] ಪಡೆಯಲಿಕ್ಕೂ [illegible] ಸ್ವಾತಂತ್ರ್ಯವಿಲ್ಲ. ಅವರಿಗೆ [illegible] ಯಜಮಾನನಿಗೆ [illegible] ಸಂತೋಷಪಟ್ಟು ಇರಲು [illegible] ಅವರಿಗೆ ತುಂಬಾ ಸ್ವಾತಂತ್ರ್ಯವನ್ನು [illegible] ಪೂರ್ಣ ಸ್ವಾತಂತ್ರ್ಯವನ್ನು [illegible] ಯಜಮಾನನನ್ನು [illegible] ಅವರಿಗೆ [illegible] ಬೇಕು [illegible] ಮಾತ್ರ ಸೇವ [illegible] ಮನಃಪೂರ್ವಕವಾಗಿ [illegible] ಮಾಡುವರು. [illegible] ಯಜಮಾನನನ್ನು [illegible] ತನ್ನಂತೆಯೇ [illegible] ಮನುಷ್ಯ ಜಾತಿ [illegible] ಭಾವಿಸಿ ಅವರನ್ನು [illegible] ಯಜಮಾನನು ಅವರನ್ನು [illegible] ವಿಚಾರ [illegible] ಭಗವಂತನ [illegible] ನಾವು [illegible] ಭಗ [illegible] ಭಗವಂತನ [illegible]

[illegible] ರೋಗಿಗಳನ್ನು [illegible] ಇಂತ [illegible] ಸುಖ [illegible] ಅನೇಕ ಕಾರ [illegible] ದುಃಖ [illegible] ಕಷ್ಟ [illegible] ದುಃಖ [illegible] ದುಃಖವು [illegible] ಆತನ ಧರ್ಮ [illegible] ಸಂತೋಷವನ್ನುಂಟುಮಾಡುವದೇ [illegible] ಆತನು [illegible] ಸಂತೋಷ [illegible]

[illegible] ಪ್ರಯತ್ನಿಸುವ [illegible] ಸಂತೋಷ [illegible] ಸಂತೋಷ [illegible] ಮಾತ್ರ [illegible] ಭಗ [illegible] ಸಂತೋಷಪಡಿಸುವಂತೆಯೇ ಪ್ರಯತ್ನಿಸಬೇಕು.

ಒಟ್ಟಾರೆ ಹೇಳುವದಾದರೆ, ಇತರರಿಗೆ ಸುಖವನ್ನುಂಟುಮಾಡುವದು ಅಥವಾ [illegible] ಭಿಕ್ಷುಕರನ್ನು ಪ್ರೀತಿಸುವದು, ಪರರನ್ನು ಪ್ರೀತಿಯಿಂದ ಕಾಣುವದು, ಅವರಿಗೆ ಸಂತೋಷವನ್ನುಂಟುಮಾಡುವದು, ಅವರ ಕಷ್ಟಗಳನ್ನು ತೊಲಗಿಸುವದು ಇವೆಲ್ಲ ಧರ್ಮಕಾರ್ಯಗಳು. ಧರ್ಮವೆಂಬ ಶಬ್ದವು ವಿಸ್ತಾರಾರ್ಥವುಳ್ಳದ್ದಾಗಿದ್ದುದರಿಂದ ಕೇವಲ ಭಿಕ್ಷುಕರಿಗೆ ಹಣಕೊಡುವದೆಂದು ಮಾತ್ರ ಅದರಿಂದ ಅರ್ಥವಾಗುವುದಿಲ್ಲ.....

ಮೊಗಲರ ಕಾಲದಲ್ಲಿದ್ದ ಪ್ರಯಾಣದ ಸೌಕರ್ಯಗಳು.

ಈಗಿನ ಕಾಲದಲ್ಲಿ ಭೂಸಂಚಾರಮಾಡುವದು ಬಹಳ ಸುಲಭವಾದುದೆಂದು ಕಂಡು ಬಂದರೂ ಮೊಗಲರ ಕಾಲದಲ್ಲಿ ಭೂಸಂಚಾರಮಾಡಬೇಕಾದರೆ ಬಹಳ ಕಷ್ಟವಿರಲಿಲ್ಲ. ೩೦೦ ವರ್ಷಗಳ ಹಿಂದೆ ಇಲ್ಲಿ ಆಳಿಕೊಂಡಿದ್ದ ಮೊಗಲ ರಾಜರು ಪ್ರಯಾಣದ ಮೇಲೆ ಹೊರಡುವದಾದರೆ ಮೊದಲೇ ತಯಾರಿಗಳನ್ನು ಮಾಡುತ್ತಿದ್ದರು. ಡಿಲ್ಲಿಯಿಂದ ಸುರತ್ತಿಗೆ ಹೋಗಬೇಕೆಂದಿದ್ದರೆ ಜ್ಯೋತಿಷ್ಯರು ಸರಿಯಾದ ಮುಹೂರ್ತವನ್ನು ತಿಳಿದು ಹೇಳಬೇಕಿತ್ತು. ಹಾದಿಯಲ್ಲಿ ತಂಗುವದಕ್ಕಾಗಿ ಡೇರೆಗಳನ್ನೂ ತಿನ್ನುವದಕ್ಕಾಗಿ ಆಹಾರವನ್ನೂ ಮೊದಲೇ ಒದಗಿಸುತ್ತಿದ್ದರು. ಹಾದಿಯನ್ನು ನಿಶ್ಚಯಿಸುವದು, ಸಂಗಡಿಗರನ್ನು ಆರಿಸಿ ತೆಗೆಯುವದು ಈ ವಿಷಯದಲ್ಲಿ ತುಂಬಾ ಜಾಗ್ರತೆಯನ್ನು ತೆಗೆದುಕೊಳ್ಳುತ್ತಿದ್ದರು. ಪ್ರಯಾಣದ ಮೇಲೆ ಹೊರಡುವವನಾದರೂ ಧನಿಕನಾಗಿದ್ದರಲ್ಲದೆ ಬಡವನಾಗಿರಲಿಲ್ಲ.

ಪ್ರಯಾಣ ಹೊರಡಬೇಕಾದರೆ ತಯಾರಿಸುವಂತಹ ಸನ್ನಾಹಗಳು ಪ್ರಯಾಣದ ಉದ್ದೇಶದ ಮೇಲೆ ಹೊಂದಿಕೊಂಡಿದ್ದವು. ಸನ್ಯಾಸಿಯು ಯಾತ್ರೆಗಾಗಿ ಹೊರಡುವಾಗ ಅನೇಕ ಜನರನ್ನು ಒಟ್ಟುಗೂಡಿಸಿ, ದೊಡ್ಡ ಪ್ರಯಾಣವನ್ನು ಮಾಡುತ್ತಿದ್ದನಾದರೂ ಅವನು ಅಷ್ಟೊಂದು ಪೂರ್ವ ತಯಾರಿಯನ್ನು ಮಾಡುತ್ತಿದ್ದಿಲ್ಲ. ಅವನ ಕೂಡೆ ಹೆಚ್ಚಿನ ಸಾಮಗ್ರಿಗಳೂ ಇರುತ್ತಿರಲಿಲ್ಲ. ಕುತೂಹಲಿಗಾಗಿಯೂ, ಊರುಗಳನ್ನು ನೋಡುವದಕ್ಕಾಗಿಯೂ ನಡುತರಗತಿಯ ಮನುಷ್ಯರು ಹೊರಡುತ್ತಿರಲಿಲ್ಲ. ಈ ಉದ್ದೇಶದಿಂದ ಬಹಳ ಧನಿಕರಾಗಿದ್ದವರು ಮಾತ್ರ ಪ್ರಯಾಣಮಾಡುತ್ತಿದ್ದರು. ನಡುತರಗತಿಯವರು ಹೊಂದುವದಾದರೆ ಯಾತ್ರೆಯನ್ನು ಮಾಡುವ ಉದ್ದೇಶದಿಂದ ಮಾತ್ರವಾಗಿತ್ತು. ಔರಂಗಜೇಬನೂ, ಜಹಾಂಗೀರನೂ ಆರೋಗ್ಯದ ಸಲುವಾಗಿ ಪರದೇಶಗಳಿಗೆ ಪ್ರಯಾಣವನ್ನು ಬೆಳಸುತ್ತಿದ್ದರು. ಔರಂಗಜೇಬನು ಒಮ್ಮೆ ಕಠಿಣವಾದ ಅಸ್ವಸ್ಥದಲ್ಲಿ ಬಿದ್ದುದರಿಂದ ಅಸ್ವಸ್ಥವು ನಿಂತ ತರುವಾಯ ಆತನು ಕಾಶ್ಮೀರಕ್ಕೆ ಹೋಗಿದ್ದನೆಂದು ತಿಳಿದುಬರುತ್ತದೆ. ಹೀಗೆ ಆರೋಗ್ಯದ ಸಲುವಾಗಿಯೂ ನಡುತರಗತಿಯ ಜನರು ಪ್ರಯಾಣಮಾಡುತ್ತಿರಲಿಲ್ಲ. ಇನ್ನು ವ್ಯಾಪಾರದ ಸಲುವಾಗಿ ಅನೇಕರು ಊರಿಂದೂರಿಗೆ ಪ್ರಯಾಣಮಾಡುತ್ತಿದ್ದರು. ಸ್ವದೇಶದಿಂದ ವ್ಯಾಪಾರ ಸಾಮಗ್ರಿಗಳನ್ನು ಒಂಟೆಯ ಮೇಲಾಗಲೀ ಇತರ ಪ್ರಾಣಿಗಳ ಮೇಲಾಗಲೀ ಹೊರಿಸಿ ಊರಿಂದೂರಿಗೆ ನಡೆದು ಹೆಚ್ಚು ಕ್ರಯಬರುವಲ್ಲಿ ಸಾಮಗ್ರಿಗಳನ್ನು ಮಾರಿ ಜೀವನವನ್ನು ಸಾಗಿಸುವ ವ್ಯಾಪಾರಿಗಳು ಬಹಳ ಜನರಿದ್ದರು. ವ್ಯಾಪಾರಿಯು ಪ್ರಯಾಣದ ಸೌಕರ್ಯಕ್ಕಾಗಿ ತನ್ನೊಡನೆ ಹಿಡಕೊಳ್ಳುತ್ತಿದ್ದ ಸನ್ನಾಹಗಳು, ಅವನು ಮಾಡುವಂತಹ ವ್ಯಾಪಾರ, ಅವನ ಪ್ರಯಾಣದ ಉದ್ದ ಇವುಗಳ ಮೇಲೆ ಹೊಂದಿಕೊಂಡಿದ್ದವು. ಹಾದಿಯು ಅಪಾಯವಿಲ್ಲದುದಾದರೆ, ಪ್ರಯಾಣಿಕರು ಯುದ್ಧ ಸನ್ನಾಹಗಳನ್ನು ಹಿಡಿಯದೆ ಹೊರಡುತ್ತಿದ್ದರು. ಹಾದಿಯಲ್ಲಿ ಕಳ್ಳಕಾಕರ ಭಯವಿರುತಿತ್ತಾದರೆ, ಬರ್ಚಿ, ಡಾಲು, ಕತ್ತಿ ಮೊದಲಾದವುಗಳನ್ನು ಹಿಡಿದುಕೊಂಡೇ ಹೊರಡುತ್ತಿದ್ದರು.

ಇನ್ನು ಯುದ್ಧದ ಸಲುವಾಗಿ ಪ್ರಯಾಣಗಳು ಆಗಾಗ ನಡೆಯುತ್ತಿದ್ದವು. ಅದರಲ್ಲಿ ಧನಿಕನೂ ಬಡವನೂ ಏಕಪ್ರಕಾರವಾಗಿ ಕಷ್ಟಗಳನ್ನು ಅನುಭವಿಸಬೇಕಾಗಿತ್ತು. ಬಡವರ ಪ್ರಯಾಣದ ವಾಹನಗಳು ಆಗಿರುವಂತೆಯೇ ಈಗಲೂ ಇರುವವು. ರೈಲುಗಾಡಿಯೊಂದನ್ನು ಬಿಟ್ಟು ಎತ್ತಿನ ಗಾಡಿಗಳು, ನದಿಗಳನ್ನು ದಾಟುವದಕ್ಕಾಗಿ ದೋಣಿಗಳೂ, ಕುದುರೆಗಾಡಿಗಳೂ ಎಲ್ಲವೂ ಆಗಲೂ ಇದ್ದವು. ಈಗಿನಂತೆ ಇಕ್ಕಟ್ಟಾದ ಎತ್ತಿನ ಗಾಡಿಗಳು ಅಕ್ಬರ, ಔರಂಗಜೇಬ ಇವರ ಕಾಲದಲ್ಲಿಯೂ ಇದ್ದವು. ಕತ್ತೆಗಳನ್ನೂ ಕುದುರೆಗಳನ್ನೂ ಗಾಡಿ ಎಳೆಯುವದಕ್ಕಾಗಿ ಉಪಯೋಗಿಸುತ್ತಿದ್ದರು. ಆದರೆ ಅವುಗಳ ಸಂಖ್ಯೆಯು ಮಾತ್ರ ಆಗಿದ್ದಷ್ಟು ಈಗಿರುವುದಿಲ್ಲ. ಒಬ್ಬೊಬ್ಬನು ಪ್ರಯಾಣ ಮಾಡುವದಾದರೆ ಇಂತಹ ಗಾಡಿಗಳಾದರೂ ಸುಖಕರವಾಗಿದ್ದವು. ಅರಸರಿಗೂ ನವಾಬರೇ ಮೊದಲಾದವರಿಗೂ ಪ್ರಯಾಣಕ್ಕೆ ಬೇರೆ ಹಾದಿಗಳಿದ್ದವು. ಅವರು ಆನೆಗಳ ಮೇಲೆಯೂ, ಪಾಲಕಿಗಳಲ್ಲಿಯೂ ಕುಳಿತು ಪ್ರಯಾಣಮಾಡುತ್ತಿದ್ದರು. ಇಂತಹ ಆನೆಗಳನ್ನೂ ಪಾಲಕಿಗಳನ್ನೂ ಅಂದವಾಗಿ ಶೃಂಗರಿಸುತ್ತಿದ್ದರು. ಆದರೆ ಅರಸರು ಯಾವದರ ಮೇಲೆ ಕುಳಿತು ಪ್ರಯಾಣಮಾಡುತ್ತಿದ್ದರೆಂದು ಖಂಡಿತವಾಗಿಯೂ ಹೇಳಲಾಗುವದಿಲ್ಲ. ಉದ್ದವಾದ ಪ್ರಯಾಣದ ಮೇಲೆ ಹೊರಡುವದಾದರೆ ಆನೆಗಳನ್ನು ಉಪಯೋಗಿಸುತ್ತಿದ್ದರು. ಮರುಭೂಮಿಗಳಲ್ಲಿ ಒಂಟೆಗಳನ್ನು ಉಪಯೋಗಿಸುತ್ತಿದ್ದರು. ಸಣ್ಣ ಸಣ್ಣ ಪ್ರಯಾಣಗಳಲ್ಲಿ ಆಳುಗಳು ಹೊತ್ತುಕೊಂಡು ಹೋಗುವ ಪಾಲಕಿಗಳನ್ನು ಉಪಯೋಗಿಸುತ್ತಿದ್ದರು.

ಸತೀಶ.

ಸ್ಫುಟ ವಿಚಾರಗಳು.

ಹಿಂದೀಯ ಸ್ತ್ರೀಯರ ಹಿತವನ್ನು ಬಯಸುವವರು.

ಹಿಂದೀಯ ಸ್ತ್ರೀಯರ ಅವಸ್ಥೆಯ ಬಗ್ಗೆ ಸಹಾನುಭೂತಿಯನ್ನು ತೋರಿಸುವ ಪಾಶ್ಚಾತ್ಯ ಮಹಿಳೆಯರ ಸಂಖ್ಯೆಯು ಬೆಳೆಯುತ್ತ ಬರುವಂತೆ ತೋರುತ್ತಿದೆ. ಮಿಸ್. ಮೇಯೊಳು ಕೇವಲ ಸುಳ್ಳುಗಳಿಂದ ಕೂಡಿದ ಪುಸ್ತಕವೊಂದನ್ನು ಬರೆದ ಮೇಲೆ ಪುನಃ ತಾನು ಬರೆದುದು ಹಿಂದೀ ಸ್ತ್ರೀಯರ ಉದ್ಧರಣೆಗಾಗಿ ಎಂದು ತನ್ನ ಔದಾರ್ಯವನ್ನು ತೋರಿಸಲು ಆರಂಭಿಸಿರುವಳು. ಆದರೆ ತನ್ನದೇ ದೇಶವಾದ ಅಮೇರಿಕದಲ್ಲಿ, ವಿವಾಹವೆಂಬುದೊಂದು ಬರೇ ಶುಷ್ಯವಸ್ತುತ ವ್ಯಭಿಚಾರವಾಗಿ ಪರಿಗಣಿಸಿ, ಹೆಂಗಸರು ತಮ್ಮ ಸ್ವಾಭಾವಿಕ ಕರ್ತವ್ಯಗಳನ್ನು ಮರೆತು ಬರೇ ಕೃತ್ರಿಮ ವಾತಾವರಣದಲ್ಲಿ ಸಮಾನತೆಯ ಮೋಹದಲ್ಲಿ ಅಲೆದು ಪಶುಜೀವನವನ್ನು ನಡಿಸುತ್ತಿರುವುದೇ ಮಹತ್ವವಾದ ಆದರ್ಶವೆಂದು ನೆನಸಿಕೊಳ್ಳುತ್ತಿರುವ ಮಿಸ್. ಮೇಯೊಳು ಹಿಂದೀಯ ಸತೀತ್ವದಲ್ಲಿ ಕಲಂಕವನ್ನು ಕಾಣುವುದು ಆಶ್ಚರ್ಯವಲ್ಲ. ಆದರೆ ಇಂತಹದೇ ಆದರ್ಶವಿದ್ದು, ಸತೀತ್ವವಾಗಲೀ, ಸಂಸಾರದ ಪಾವಿತ್ರ್ಯವಾಗಲೀ ಸ್ವಗೃಹದ ಮಹತ್ವವಾಗಲೀ ತಿಳಿಯದಿರುವ ಬಿಳಿಯ ರಮಣಿಯರು, ಹಿಂದೀಯರ ಗೋಜಿಗೆ ಬಾರದಿದ್ದರೆ ಬಹಳ ಉಪಕಾರವಿತ್ತು. ವರ್ಷವರ್ಷವೂ ಬೆಳೆದು ಬರುವ ವಿವಾಹತ್ಯಾಗದ ಅಭ್ಯಾಸ, ದಿನದಿನವೂ ಹೆಚ್ಚಾಗಿ ಪ್ರಸರಿಸಿ ಬರುವ ಮಿತಸಂತತಿಯ ಚಳವಳ, ಅದರೊಂದಿಗೇನೇ ಆಚರಿಸಲ್ಪಡುವ ಅತ್ಯಂತ ಘೃಣೀತ ಅಭ್ಯಾಸಗಳ ಸ್ತ್ರೀರೋಗ ನಿವಾರಣಾ ಕ್ರಮಗಳ ಪ್ರಸಾರ, ಇವೆಲ್ಲವೂ ಪಾಶ್ಚಾತ್ಯ ಮಾನಸಿಕತೆಯ ವಿಷಯದಲ್ಲಿ ಸದಭಿಪ್ರಾಯಗಳನ್ನು ಕೊಡುವುದಿಲ್ಲ. ಆದರೂ ಈಗ ಪುನಃ ಇನ್ನೊಬ್ಬ "ಮಿಸ್" ಳು, ಆಸ್ಟ್ರೇಯ ಮೊದಲಾದ ದೇಶಗಳ ಪತ್ರಿಕೆಗಳ ಕಡೆಯಿಂದ ಹಿಂದೂ ದೇಶಕ್ಕೆ ಹಿಂದೀಯ ಸ್ತ್ರೀಯರ ಹಿತವನ್ನು ಬಯಸಿ ಹಿಂದೀ ಪರಿಸ್ಥಿತಿಯನ್ನು ಪರಿಶೀಲಿಸಲು ಬಂದಿರುವಳು. "ಈ ಹಿಂದೀಯ ಮಿತ್ರರಿಂದ ದೇಶವನ್ನು ಉಳಿಸು" ಎಂದು ನಮ್ಮ ಈಗಿನ ಪ್ರಾರ್ಥನೆ ಇದೆ.

ಹರತಾಳ.

ಫೆಬ್ರುವರಿ ತಾ. ೩ಕ್ಕೆ ಸ್ಯಾಮನ್ ಕಮಿಶನ್ನು ಹಿಂದೂಸ್ಥಾನಕ್ಕೆ ಬರುವದಿದೆ. ಅಖಿಲ ಹಿಂದೂಸ್ಥಾನದ ಧುರೀಣರು ಕೂಡಿ ಸ್ಯಾಮನ್ ಕಮಿಶನನ್ನು ಬಹಿಷ್ಕರಿಸಲು ನಿರ್ಣಯಿಸಿರುವರು. ಐಗುಪ್ತ್ಯದ ಸ್ವಾತಂತ್ರ್ಯದ ಅರ್ಹತೆಯನ್ನು ನಿರ್ಣಯಿಸಲಿಕ್ಕೂ ಹೀಗೆಯೇ. ಮಿಲ್ನರ ಕಮಿಶನೊಂದು ಕೆಲವು ವರ್ಷಗಳ ಹಿಂದೆ ನೇಮಿಸಲ್ಪಟ್ಟಿದ್ದಿತು. ಆ ಕಮಿಶನ್ನು ಐಗುಪ್ತ್ಯದೇಶದಲ್ಲಿ ಕಾಲಿಡುವಾಗ ಯಾರೂ ಅವರೊಡನೆ ಸಹಕರಿಸದೆ, ಕಮಿಶನ್ನು ತನ್ನಷ್ಟಕ್ಕೆ ಹಿಂದೆ ಹೋಯಿತು; ಮತ್ತು ಐಗುಪ್ತ್ಯ ದೇಶದ ಆ ಐಕ್ಯವನ್ನೂ ದೃಢಚಿತ್ತವನ್ನೂ ಕಂಡು ಅದು ಸ್ವಾತಂತ್ರ್ಯಕ್ಕೆ ಯೋಗ್ಯವಿದೆಯೆಂದು ನಿರ್ಧರಿಸಿತು. ಈ ಬಾರಿ ಹಿಂದೂಸ್ಥಾನಕ್ಕೆ ಬರುವ ಕಮಿಶನ್ನಿನೊಡನೆ ನಾವು ಸಹಕರಿಸುವುದಾದರೆ ಖಂಡಿತವಾಗಿಯೂ ನಾವು ನಿರ್ಬಲರೆಂದಾಗುವೆವು. ಸ್ವಾತಂತ್ರ್ಯವು ಸಿಕ್ಕಲಿ, ಸಿಕ್ಕದಿರಲಿ. ಆದರೆ ಹಿಂದೂಸ್ಥಾನವು ದುರ್ಬಲ ಮನಸ್ಸಿನವರ ದೇಶವೆಂದು ನಾವು ತೋರಿಸಬಾರದು. ಬ್ರಿಟಿಷರು ಕಮಿಶನ್ನಿನ ವಿಜಯವನ್ನು ನಮ್ಮ ದೌರ್ಬಲ್ಯದ ಮೇಲೆ ಹೊಂದಿಸಿಕೊಂಡಿರುವರು. ಬಹಿಷ್ಕಾರವು ಬರೇ ಬಾಯಿಯ ಮಾತಿನದು; ಅದು ಮೆಲ್ಲನೆ ಕಡಿಮೆಯಾಗುತ್ತ ಬರುತ್ತಿದೆ ಎಂದು ಹೇಳುತ್ತಿರುವರು. ಹಿಂದುಸ್ಥಾನವು "ಜೀಹುಕುಮ್" ವಾಲಾರವರ ದೇಶವೆಂದು ತಿಳಿದುಕೊಂಡು, ಇಂದಲ್ಲದಿದ್ದರೆ ನಾಳೆಯಾದರೂ ಶರಣುಬರುವರಾಗಿ ಹಳ್ಳಿಸಿರುವರು. ದೇಶವು ಅಂಥ ಹೀನ ಗುಣ ಕಥನವನ್ನು ಒಪ್ಪಿಕೊಳ್ಳಲಾರದೆಂದು ತೋರಿಸುವುದು ಅವಶ್ಯವಿದೆ. ಕಮಿಶನ್ನು ಹಿಂದೂ ದೇಶದಲ್ಲಿ ಕಾಲಿಡುವ ದಿನವೇ ಹಿಂದೂಸ್ಥಾನದಲ್ಲಿ ಹರತಾಳವನ್ನು ಆಚರಿಸಬೇಕಾಗಿ ಚಳವಳವು ನಡಿಯುತ್ತಿದೆ. ಇದು ದೇಶದ ಮನಸ್ಸಿನ ಉತ್ತಮ ತರದ ಬಾಹ್ಯ ಪ್ರದರ್ಶನವಾದುದರಿಂದ ಕಮಿಶನ್ನಿನ ಸದಸ್ಯರು ಹಿಂದೂಸ್ಥಾನದ ನಿರೋಧವನ್ನು ಚೆನ್ನಾಗಿ ತಿಳಿಯುವ ಬಗ್ಗೆ ಈ ಹರತಾಳವು ಸರಿಯಾಗಿ ಆಚರಿಸಲ್ಪಡುವುದು ಉತ್ತಮವಿದೆ.

ಅಫಘಾನ ಅಮೀರರ ಪ್ರವಾಸ.

ಅಫಘಾನ ಅಮೀರರು ಈಗ ಇಟೇಲಿಯಲ್ಲಿ ಸಂಚರಿಸಿ ಅಲ್ಲಿಯ ಪ್ರಮುಖ ಸ್ಥಳಗಳನ್ನು ಸಂದರ್ಶಿಸುತ್ತಿರುವರು. ಅಫಘಾನಿಸ್ಥಾನದಿಂದ ಹೊರಟವರು, ಪ್ರಥಮತಃ ಬ್ರಿಟಿಷ ಅತಿಥ್ಯವನ್ನು ಸ್ವೀಕರಿಸಿದರು. ಆದರೆ ಈ ಅತಿಥ್ಯದಿಂದ ಅವರು ಎಷ್ಟು ತೃಪ್ತರಾದರೆಂದು ಹೇಳಬರುವುದಿಲ್ಲ. ಹಿಂದೂದೇಶದ ಗಡಿಯೊಳಗೆ ಅವರ ಸ್ವಾಗತವು ಬಹಳ ಸಂಭ್ರಮದಿಂದ ನಡೆಯಿತಾದರೂ, ಮುಂಬಾಯಿಗೆ ಬಂದ ಮೇಲೆ ಬ್ರಿಟಿಷ ಸಾಮ್ರಾಜ್ಯದ ದರ್ಪಕ್ಕೂ ಅಫಘಾನಿಸ್ಥಾನದ ಸ್ವಾತಂತ್ರ್ಯದ ಸ್ವಾಭಿಮಾನಕ್ಕೂ ಸ್ವಲ್ಪ ಮಟ್ಟಿಗೆ ಭಿನ್ನತೆಯೊದಗಿವಂತೆ ಕಾಣುತ್ತಿದೆ. ಅಮೀರರನ್ನು ಕಾಣಲು ಬಂದ ವ್ಯಾಕರಾಯರಿಗೆ ಕಾಣುವ ದಿವಸವೇ ಜ್ವರ ಪ್ರಾರಂಭವಾಗಿ ಅವರು ಹಾಸಿಗೆ ಹಿಡಿದರು. ಆದುದರಿಂದ ಸ್ವಾಗತದ ಕೆಲಸವನ್ನು ಮುಂಬಯಿ ಗವರ್ನರರು ಮಾಡಬೇಕಾಯಿತು. ಮುಂಬಯಿ ಕೊರ್ಪೊರೇಶನಿನವರು ಅಮೀರರಿಗೆ ಕೊಡಬೇಕೆಂದಿದ್ದ ಮಾನಪತ್ರವನ್ನು ವ್ಯಾಕರಾಯರು ಬ್ರಿಟಿಷ ಗೌರವಗಳ ಕಾರಣದಿಂದ ಪ್ರವೇಶ ಮುಹೂರ್ತದಲ್ಲಿಯೇ ಕೊಡಲು ಬಿಡಲಿಲ್ಲ. ಸ್ವಾಗತ ಮತ್ತು ಅತಿಥ್ಯದ ಸಮಯಗಳಲ್ಲಿಯೂ ಅಫಘಾನ ಮನೆತನದ ಗೌರವಕ್ಕೆ ಸರಿಯಾದ ಅನುಕರಣೆಗೆ ಆಗಾಗ ಭಂಗ ಬರುತ್ತಿದ್ದಿತೆಂದೂ, ಅಮೀರರೇ ಆಗಾಗ ಬ್ರಿಟಿಷ ಆಫೀಸರರನ್ನು ತಿದ್ದುವ ಪ್ರಸಂಗಗಳಿದ್ದುವೆಂದೂ ತಿಳಿದು ಬರುತ್ತಿದೆ. ಆದುದರಿಂದ ಅಮೀರರ ಹಿಂದೂಸ್ಥಾನದ ಬೇಟಿಯು ಬ್ರಿಟಿಷ—ಅಫಘಾನ ಸೌಹಾರ್ದಕ್ಕೆ ಹಿತಕರವಾಗಿರುವ ಬದಲು ಅಹಿತಕರವಾಗಬಹುದು. ಬದಲಿಗೆ ಇಟೇಲಿಯಲ್ಲಿ ಅವರಿಗೆ ಸಿಕ್ಕುತ್ತಿರುವ ಆದರಾತಿಥ್ಯವನ್ನು ಕಂಡರೆ, ಮತ್ತು ಅವರು ಅಲ್ಲಿ ಹೆಚ್ಚುಕಾಲ ಪ್ರವಾಸ ಬೆಳೆಸುವುದನ್ನು ನೋಡಿದರೆ, ಇಟಲಿ—ಅಫಘಾನ ಸೌಹಾರ್ದವು ಚೆನ್ನಾಗಿ ನೆಲಸಬಹುದೆಂದು ಕಾಣುವುದು. ಆದರೆ ಸರ್ವಾಧಿಕಾರವುಳ್ಳ ಈ ಪೌರ್ವಾತ್ಯ ರಾಜರು, ಪಾಶ್ಚಾತ್ಯ ಮುಸ್ಸೋಲೀನಿಯನ್ನು ನೋಡಿ ಭ್ರಾಂತರಾಗದಿರಲೆಂದು ನಮ್ಮ ಆಶಯವಿದೆ. ಈ ಸಂದರ್ಶನಗಳಿಂದ ಅಫಘಾನಿಸ್ಥಾನದ ವಿದೇಶ ಧೋರಣವು ಬದಲಾಯಿಸುವುದೆಂದು ನೆನಸಲು ಕಾರಣವಿದೆ. ಹೀಗೆ ಬದಲಾಯಿಸಿದರೆ ಅದು ಬ್ರಿಟಿಷರಿಗೆ ಹಿತಕರವಾಗುವುದು ಸಂದೇಹವಿದೆ.

ಸಾಮ್ರಾಜ್ಯ ವಾದ.

ಇಂಪೀರಿಯಲ್ ಪ್ರೆಫರೆನ್ಸ ಎಂಬ ದೊಡ್ಡ ದೊಡ್ಡ ತತ್ವಗಳಿಂದ ಇಂಗ್ಲೆಂಡು ತನ್ನ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಯತ್ನಿಸುತ್ತಿದೆ. ಇಂಗ್ಲೆಂಡಿನ ವ್ಯಾಪಾರಕ್ಕೆ ಸಾಮ್ರಾಜ್ಯವನ್ನು ಘಟ್ಟಿಯಾದ ಗಿರಾಕಿಯಾಗಿ ಮಾಡಿಕೊಳ್ಳುವುದೇ ಈ ಸಾಮ್ರಾಜ್ಯವಾದದ ಅಂತರ್ಯದ ಉದ್ದೇಶ. ಆದರೆ ಈ ತತ್ವಗಳಿಂದ ಹಿಂದೂಸ್ಥಾನವಲ್ಲದೆ ಬೇರೆ ಯಾವ ಸಾಮ್ರಾಜ್ಯದ ವಿಭಾಗವೂ ಮಂಕುಗೊಳಿಸಲ್ಪಡುವುದಿಲ್ಲ. ಹಿಂದೂಸ್ಥಾನವು ಇಂಗ್ಲೆಂಡಿನಿಂದ ಸಾಲ ಕೊಳ್ಳಬೇಕು; ಮತ್ತು ಸಾಲದ ಶರ್ತವೇ ಆ ಸಾಲದ ಹಣವನ್ನು ಅಲ್ಲಿಯೇ ಖರ್ಚುಮಾಡಬೇಕೆಂದಿದೆ. ಸಾಲವಲ್ಲದ ಹಣದಿಂದ ಏನಾದರೂ ಕೊಳ್ಳಲಿದ್ದರೆ ಇಂಪೀರಿಯಲ್ ಪ್ರೆಫರೆನ್ಸಿನ ತತ್ವ ಬರುತ್ತಿದೆ. ಹೀಗಾಗಿ ಹಿಂದೂಸ್ಥಾನಕ್ಕೆ ಬೇಕಾಗುವ ಉತ್ತಮ ತರಗತಿಯ ರೈಲ್ವೆ ಇಂಜನುಗಳಾಗಲಿ, ಬೇರೆ ಯಂತ್ರ ಸಾಮುಗ್ರಿಗಳಾಗಲಿ ಶೇಕಡಾ ೩೦ರಷ್ಟು ಕಡಿಮೆ ಬೆಲೆಗೆ ಜರ್ಮನಿಯಲ್ಲಿ ಸಿಕ್ಕುವುದಾದರೂ ಹಿಂದೂಸ್ಥಾನವು ಹೆಚ್ಚಿನ ಬೆಲೆಗೆ ಇಂಗ್ಲೆಂಡಿನಲ್ಲಿಯೇ ಕೊಳ್ಳಬೇಕು. ಆದರೆ ಸ್ವತಂತ್ರವಾಗಿದ್ದ ಸಾಮ್ರಾಜ್ಯದ ಇತರ ಭಾಗಗಳು ಈ ತತ್ವವನ್ನು ಅನುಕರಿಸುವುದಿಲ್ಲ. ಇತ್ತೀಚೆಗೆ ದಕ್ಷಿಣ ಆಫ್ರಿಕದ ರೈಲ್ವೆ ಬೋರ್ಡಿನವರು ೩೦ ರೈಲು ಇಂಜನುಗಳನ್ನು ಜರ್ಮನಿಯಿಂದ ತರಿಸಲು ನಿಶ್ಚಯಿಸಿರುವರು. ಬ್ರಿಟಿಷ ಕಂಪೆನಿಗಳು ತಮಗೆ ಆ ಆರ್ಡರು ಸಿಕ್ಕುವಂತೆ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ವ್ಯಾಪಾರದಲ್ಲಿ ಕ್ರಯ ಮತ್ತು ಬಾಳುವಿಕೆಯ ಹೊರತು ಇತರ ಉಪಕಾರದ ತತ್ವಗಳು ಮಾನಿಸಲ್ಪಡುವುದಿಲ್ಲ. ಅಂತಹ ತತ್ವಗಳನ್ನು ಬ್ರಿಟಿಷನು ಹೇಳುವುದಾದರೆ ಅದರ ಉದ್ದೇಶವು ಬರೇ ಸ್ವಾರ್ಥ ಸಾಧನೆಯಲ್ಲದೆ ಬೇರೆಯಲ್ಲ. ಪರತಂತ್ರವಾದ ಹಿಂದೂದೇಶ ಮಾತ್ರವೇ ತನ್ನ ಖರ್ಚಿನಿಂದ ಇತರರ ಹೇಳಿಕೆಯಂತೆ ಈ ಸಾಮ್ರಾಜ್ಯ ಹಿತದ ಭಾರವನ್ನು ಹೊರಬೇಕಾಗಿದೆ. ಇಲ್ಲವಾದರೆ ಮರುದಿನವೇ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನವು ಇತರ ದೇಶಗಳಿಂದ ಯಾಕೆ ಸಾಮಾನುಗಳನ್ನು ಕ್ರಯಕ್ಕೆ ಕೊಂಡುಕೊಂಡಿತೆಂಬ ಪ್ರಶ್ನೆಗಳು ಬರುತ್ತಿವೆ.

ಸನ್ಯಾಸಿಗಳ ಸಂಸಾರ.

ಸಂಸಾರವು ವಿವಾಹಿತರಿಗೆ ಮಾತ್ರವಲ್ಲ. ಸನ್ಯಾಸಿಗಳಿಗೂ ಇದೆ. ಅದರಲ್ಲೂ, ಮಠಗಳಿದ್ದು, ದೊಡ್ಡ ಶಿಷ್ಯವೃಂದವನ್ನು ಆಳಲಿಕ್ಕಿದ್ದು, ಹಿಂದಿನವರು ಬಿಟ್ಟುಕೊಟ್ಟ ಸಂಪತ್ತೂ ಇದ್ದು, ಇಂದಿನವರ ಮೂಢ ಭಕ್ತಿಯ ಮೂಲಕ ಅವರಿಂದ ಪುಣ್ಯ ವಿಕ್ರಯವೆಂದು ಹಣ ಪಡೆಕೊಳ್ಳಲು ಸಾಧ್ಯವಿದ್ದು, ಕಷ್ಟವಿಲ್ಲದೆ ಕೈಯಲ್ಲಿ ಕಾಸು ಕೊಡುವಾಗ ಆ ಸಂಸಾರವು ವಿವಾಹಿತನ ಸಂಸಾರಕ್ಕಿಂತಲೂ ಎಷ್ಟೋ ಪಾಲು ಮಹತ್ವದ್ದಾಗಿರುವುದು. ಹಿಂದೂ ಶಾಸ್ತ್ರ ಪುರಾಣಗಳ ಸನ್ಯಾಸಿಗಳ ಜೀವನವು ಅತೀ ಕಠಿಣತರದ್ದಾಗಿದ್ದು, ಯಾರೂ ಇಚ್ಛಿಸುವಂತಹುದಾಗಿರಲಿಲ್ಲ. ಆದರೆ ನಮ್ಮ ಈಗಿನ ಸನ್ಯಾಸಿಗಳೆಂದರೆ ಬಹಳವಾಗಿ ಬಯಸತಕ್ಕ ಜೀವನ. ಒಬ್ಬ ಹುಡುಗನಿಗೆ ಆಶ್ರಮ ಸಿಕ್ಕಲಿಕ್ಕೆಂದು ಅವನ ತಂದೆಯು ಸಾವಿರಾರು ರೂಪಾಯಿಗಳನ್ನು ಆಶ್ರಮ ಕೊಡುವ ಸನ್ಯಾಸಿಗೆ ಲಂಚಕೊಡುವುದು ಸುಮ್ಮನಲ್ಲ. ಅದರಿಂದ ಬಹಳ ಲಾಭವಿದೆಯೆಂದೇ ಆ ರೂಪಾಯಿ ಕೊಡೋಣಾಗುತ್ತದೆ. ಹುಡುಗನಿಗಾದರೂ ಕಷ್ಟವೇನೂ ಇಲ್ಲ. ಬೇಕಾದ ತರದ ವಿದ್ಯಾಭ್ಯಾಸದ ರಗಳೆಯಿಲ್ಲದೆ ಸಾವಿರಾರು ರೂಪಾಯಿಯ ಮಠವು ಕೈಯಲ್ಲಿ ಸಿಕ್ಕಿದ ಮೇಲೆ ಮತ್ತೆ ಹೇಳಬೇಕೆಂದೇ ಇಲ್ಲ. ವಿವಾಹಿತರ ಆರ್ಜನೆಯ, ಗೃಹ ಸಂಕಷ್ಟಗಳ ಯೋಚನೆಯು ಸನ್ಯಾಸಿಗಳಿಗೆ ಇರುವುದಿಲ್ಲ. ಸಂಸಾರದ ತಾಪತ್ರಯಗಳೂ ಇರುವುದಿಲ್ಲ. ಆದರೆ ಸರ್ವತರದ ಭೋಗಗಳ ಭಾಗ್ಯವು ಭಾಗ್ಯವಂತ ಸಂಸಾರಿಕನಿಗಿಂತಲೂ ಹೆಚ್ಚಾಗಿ ಇವರಿಗಿದೆ. ಹಿಂದೂಮತದ ಸಂಸ್ಥೆಗಳು ಈ ರೀತಿಯ ಬರೇ ಮೂಢ ಸಾಂಪ್ರದಾಯಗಳಿಗೆ ಪರಿವರ್ತಿತವಾಗಿ ಅದರೊಳಗಿನ ಯಾವತ್ತೂ ಹಿತದ ವಿಷಯಗಳು ಸಂಪೂರ್ಣವಾಗಿ ಕಳೆದು ಹೋದುದು ವಿಷಾದಕರ.

ನೋಟಗಳು.

NOTE...S.

ಉಡುಪಿಯ ಪರ್ಯಾಯ ಈ ವರುಷ ಬಹಳ ಕ್ಷೀಣಾವಸ್ಥೆಯಲ್ಲಿ ಜರಗಿತು. ಸ್ವಾಮಿಯವರ ಜಗಳ ಇನ್ನೂ ಮುಗಿದಿಲ್ಲ. ಉತ್ಸವ ಹೊರಡಲಿಕ್ಕೆ ಒಂದು ಸಾವಿರ ಸರ್ತಿ ಮುಹೂರ್ತಗಳನ್ನು ನೋಡಿದಲ್ಲಿ ಸ್ವಾಮಿಯವರು ಹೊರಡುವ ಮುಹೂರ್ತವೇ ಬರಲಿಲ್ಲ.

• • • •

ಪರವೂರುಗಳಿಂದ ಬಂದ ಜನರಿಗೆ ಇಂಥಾ ಸ್ವಾಮಿಯವರ ಜಗಳದ ಉತ್ಸವವನ್ನು ನೋಡಲಿಕ್ಕೆ ಹೆಚ್ಚು ಪುಣ್ಯಬೇಕು.

• • • •

ಪರ್ಯಾಯ ದಿವಸ ದಂಡತೀರ್ಥಕ್ಕೆ ಹೋದ ಸ್ವಾಮಿಯವರು ಸಾಧಾರಣ ಬೆಳಗ್ಗೆ ೮ ಘಂಟೆಗೆ ತಾಲೂಕು ಕಚೇರಿಯ ಹತ್ತಿರ ಕೂತವರು, ಅಲ್ಲಿಯೇ ದೂಪದ ಮರದ ಎಲ್ಲಾ ಎಲೆಗಳನ್ನು ಲೆಖ್ಖ ಹಾಕಿದರು. ಘಂಟೆ ಹನ್ನೊಂದಾಯಿತು. ಮತ್ತೂ ಎದುರು ಕಡೆಯಿಂದ ಬಂದು ಸ್ವಾಗತೀಕರಿಸುವ ಸ್ವಾಮಿಗಳ ಪತ್ತೆಇಲ್ಲ. ಆಚೆ ಈಚೆ ಹೋಗುವ ಜನರನ್ನು ಲೆಖ್ಖ ಹಾಕಲು ಪ್ರಾರಂಭ ಮಾಡಲು, ಬೇಂಡ್‌ವಾದ್ಯದಿಂದ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ೪ ಜನ ಸ್ವಾಮಿಯವರ ಸವಾರಿ ಎದುರುಗೊಳ್ಳಲಿಕ್ಕೆ ಬಂದರು.

• • • •

ಹಾಗೂ ಹೀಗೂ ನಿದ್ರೆಯಿಂದ ಕೂರುವ ಸ್ವಾಮಿಗಳ ಉತ್ಸವ ಮಧ್ಯಾಹ್ನ ೧೨ ಘಂಟೆಗೆ ಹೊರಟು ಬಂತು.

• • • •

ಜಗಳ ಸಮ್ಮಂಧ ಉತ್ಸವಕ್ಕೆ ಆನೆಗಳನ್ನು ಹಲವು ವರ್ಷಗಳಿಂದ ಎಲ್ಲಾ ಮಠದವರು ಶೃಂಗರಿಸಿ ಹೊರಡುವ ಉತ್ಸವಗಳನ್ನು ನೋಡಲಿಕ್ಕೆ ಜನಸ್ತೋಮವು ಹೆಚ್ಚಾಗಿ ಕೂಡುತಿತ್ತು. ಆದರೆ ಈ ವರ್ಷ ಆನೆಗಳಿಲ್ಲದೆ, ಬರೇ ಬೇಂಡು ವಾದ್ಯದ ಉತ್ಸವ ನೋಡಲಿಕ್ಕೆ ಬಂದ ಜನಸ್ತೋಮ ಲೆಖ್ಖ ಹಾಕಲು ಸಾಧ್ಯವಿಲ್ಲ.

• • • •

ಸ್ವಾಮಿಯವರ ಜಗಳದ ಸಮ್ಮಂಧ ಭೋಜನಶಾಲೆಯ ಪ್ರವೇಶದ ಹತ್ತಿರದ ಮಾಡಿನ ಗ್ರಹಚಾರ, ಹಂಚು, ಪಕ್ಕಾಸು, ಹುಡಿ, ಜನರೊಳಗೆ ಹೊಡದಾಟ, ಅಷ್ಟರಲ್ಲಿ ಪೋಲೀಸ್ ಸಾಹೇಬರು ಬಂದು ಸಮಾಧಾನ ಪಡಿಸಿದರು.

• • • •

ಅಂತೂ, ಇಂತೂ, ಹೆಚ್ಚಿನ ಜಗಳ ಗಲಾಟೆಯಿಂದ ಪರ್ಯಾಯವು ಮುಗಿಯಿತು.

ಉಡುಪಿ ಪರ್ಯಾಯ ಮಹೋತ್ಸವ.

ನಡೆಯಿತು. ಸಾಂಗವಾಗಿ ನಡೆಯಿತೋ ಎಂಬುದು ಗೊತ್ತಾಗಿಲ್ಲ. ಆದರೆ ಮಠಮಠಗಳೊಳಗಿನ ವೈಷಮ್ಯಗಳ ಪ್ರದರ್ಶನವು ಹತ್ತೂರುಗಳಿಂದ ಪರ್ಯಾಯವನ್ನು ನೋಡಲಿಕ್ಕೆಂದು ಭಕ್ತಿಪೂರ್ವಕ ಬಂದ ಜನತೆಯ ಮುಂದು ಚೆನ್ನಾಗಿ ಸಾಗಿತು. ನಮ್ಮ ಅಷ್ಟಮಠಗಳದೂ ಒಂದು ಚಿಕ್ಕ ಸಂಸಾರ. ವರ್ಷವರ್ಷವೂ ಏನೊಂದೂ ವಾದವಿರದೆ ಇರುವುದಿಲ್ಲ. ಏನೊಂದು ಸ್ವಾರ್ಥವಿರದೆ ತ್ಯಾಗಿಗಳಾಗಿರಬೇಕಾದವರೊಳಗೇನೇ ಇಷ್ಟು ಭೇದವೂ, ಇಷ್ಟು ತೀಕ್ಷ್ಣ ವೈಷಮ್ಯವೂ ನೆಲಸುವದಾದರೆ ಹಿಂದೂ ಉದ್ಧರಣೆಯ ವಿಷಯದ ಆಶೆಯನ್ನೇ ಬಿಡಬೇಕಾಗುವುದು. ಉಡುಪಿ ಪರ್ಯಾಯ ಮಹೋತ್ಸವವೆಂದರೆ, ಅಖಿಲ ಕರ್ಣಾಟಕದ ಜನತೆಯ ಯಾತ್ರೆಯ ಸಮಯ. ಶ್ರೀ ಮನ್ಮಧ್ವಾಚಾರ್ಯರು ಅದಕ್ಕೆ ಶ್ರೇಷ್ಠತೆಯನ್ನು ಕೊಟ್ಟರು. ಎಂಟು ಮಠಗಳನ್ನು ಏರ್ಪಡಿಸಿ ಪೂಜೆಗೆ ಭಂಗಬಾರದಂತೆ ಏರ್ಪಡಿಸಿದರು. ಆದರೆ ಯಾವುದರಿಂದ ಪೂಜೆಯ ಗೌರವವನ್ನು ಸ್ಥಾಪಿಸಲು ಅವರು ಕಲ್ಪಿಸಿದರೊ ಅದೇ ಈಗ ಪೂಜೆಯ ಭಂಗಕ್ಕೆ ಕಾರಣವಾಗಲು ಪರಿಣಾಮ ಹೊಂದುವಂತೆ ತೋರುತ್ತಿದೆ. ಮಠಗಳೊಳಗಿನ ದ್ವೇಷಾಸೂಯೆಗಳು ಬಹು ಕಾಲದಿಂದ ಬಂದವುಗಳು. ಈಗ ಪ್ರಾಯಶಃ ಸಾಂಪ್ರದಾಯವಾಗಿ ಬೆಳೆದುದರಿಂದ ಮಾಧ್ವ ಸೂತ್ರದಂತೆ ಇದು ಪೂಜನೀಯವಾದ ಸಾಂಪ್ರದಾಯವೆಂದು ತಿಳಿದಿರುವರೇನೊ! ಆದರೆ ಇದು ಅಖಿಲ ಕರ್ಣಾಟಕದ ಮುಂದೆ ಉಡುಪಿಯ ಯಾತ್ರೆಯ ಪಾವಿತ್ರ್ಯವನ್ನು ಕಡಿಮೆಮಾಡುತ್ತಾ ಬಂದಿದೆ ಎಂದೂ, ಹೀಗೆಯೇ ಮುಂದರಿದರೆ ಮಠಗಳು ಬರೇ ಸಾಮಾನ್ಯತೆಗೆ ಇಳಿಯಬಹುದೆಂದೂ ಯಾವ ಮಠಾಧೀಶ್ವರರೂ ಯೋಚಿಸಿದಂತೆ ಕಾಣುವುದಿಲ್ಲ. ನಿರಂಕುಶವೂ ಸ್ವೇಚ್ಛಾಪ್ರವರ್ತಕವೂ ಆದ ವರ್ತನದಿಂದ ಸಾಮಾನ್ಯ ಗೃಹಸ್ಥನಾದರೂ ಮಾನಹಾನಿಯನ್ನು ಪಡೆಯುವನು. ಅದರಲ್ಲೂ ನಿಸ್ಸಂಗಿಗಳಾಗಿರಬೇಕೆಂದು ಆಶಿಸಲ್ಪಡುವ ಸನ್ಯಾಸಿಯವರೇ ಇಂತಹ ದೋಷಗಳನ್ನು ತೋರಿಸಿದರೆ ಅವರಿಂದ ಹಿಂದೂ ಸಮಾಜಕ್ಕೆ ಆಗಬೇಕಾದ ಮಹತ್ವದ ಕೆಲಸಗಳು ಎಂದೂ ಆಗಲಾರವು.

... ಕಾಲದಲ್ಲಿದ್ದ ಪ್ರಯಾಣದ ಸೌಕರ್ಯಗಳು.

ಸ್ಫುಟ ವಿಚಾರಗಳು.

ಹಿಂದೀಯ ಸ್ತ್ರೀಯರ ಹಿತವನ್ನು ಬಯಸುವವರು.

ಹಿಂದೀಯ ಸ್ತ್ರೀಯರ ಅವಸ್ಥೆಯ ಬಗ್ಗೆ ಸಹಾನುಭೂತಿಯನ್ನು ತೋರಿಸುವ ಪಾಶ್ಚಾತ್ಯ ಮಹಿಳೆಯರ ಸಂಖ್ಯೆಯು ಬೆಳೆಯುತ್ತ ಬರುವಂತೆ ತೋರುತ್ತಿದೆ. ಮಿಸ್. ಮೇಯೊಳು ಕೇವಲ ಸುಳ್ಳುಗಳಿಂದ ಕೂಡಿದ ಪುಸ್ತಕವೊಂದನ್ನು ಬರೆದ ಮೇಲೆ ಪುನಃ ತಾನು ಬರೆದುದು ಹಿಂದೀ ಸ್ತ್ರೀಯರ ಉದ್ಧರಣೆಗಾಗಿ ಎಂದು ತನ್ನ ಔದಾರ್ಯವನ್ನು ತೋರಿಸಲು ಆರಂಭಿಸಿರುವಳು. ಆದರೆ ತನ್ನದೇ ದೇಶವಾದ ಅಮೇರಿಕದಲ್ಲಿ, ವಿವಾಹವೆಂಬುದೊಂದು ಬರೇ ಸುವ್ಯವಸ್ಥಿತ ವ್ಯಭಿಚಾರವಾಗಿ ಪರಿಗಣಿಸಿ, ಹೆಂಗಸರು ತಮ್ಮ ಸ್ವಭಾವಿಕ ಕರ್ತವ್ಯಗಳನ್ನು ಮರೆತು ಬರೇ ಕೃತ್ರಿಮ ವಾತಾವರಣದಲ್ಲಿ ಸಮಾನತೆಯ ಮೋಹದಲ್ಲಿ ಅಲೆದು ಪಶುಜೀವನವನ್ನು ನಡಿಸುತ್ತಿರುವುದೇ ಮಹತ್ವವಾದ ಆದರ್ಶವೆಂದು ನೆನಸಿಕೊಳ್ಳುತ್ತಿರುವ ಮಿಸ್. ಮೇಯೊಳು ಹಿಂದೀಯ ಸತೀತ್ವದಲ್ಲಿ ಕಲಂಕವನ್ನು ಕಾಣುವುದು ಆಶ್ಚರ್ಯವಲ್ಲ. ಆದರೆ ಇಂತಹದೇ ಆದರ್ಶವಿದ್ದು, ಸತೀತ್ವವಾಗಲೀ, ಸಂಸಾರದ ಪಾವಿತ್ರ್ಯವಾಗಲೀ ಸ್ವಗೃಹದ ಮಹತ್ವವಾಗಲೀ ತಿಳಿಯದಿರುವ ಬಿಳಿಯ ರಮಣಿಯರು, ಹಿಂದೀಯರ ಗೋಜಿಗೆ ಬಾರದಿದ್ದರೆ ಬಹಳ ಉಪಕಾರವಿತ್ತು. ವರ್ಷ ವರ್ಷವೂ ಬೆಳೆದು ಬರುವ ವಿವಾಹತ್ಯಾಗದ ಅಭ್ಯಾಸ, ದಿನ ದಿನವೂ ಹೆಚ್ಚಾಗಿ ಪ್ರಸರಿಸಿ ಬರುವ ಮಿತಸಂತತಿಯ ಚಳವಳ, ಅದರೊಂದಿಗೇನೇ ಆಚರಿಸಲ್ಪಡುವ ಅತ್ಯಂತ ಘೃಣಿತ ಅಭ್ಯಾಸಗಳ ಸ್ತ್ರೀರೋಗ ನಿವಾರಣಾ ಕ್ರಮಗಳ ಪ್ರಸಾರ, ಇವೆಲ್ಲವೂ ಪಾಶ್ಚಾತ್ಯ ಮಾನಸಿಕತೆಯ ವಿಷಯದಲ್ಲಿ ಸದಭಿಪ್ರಾಯಗಳನ್ನು ಕೊಡುವುದಿಲ್ಲ. ಆದರೂ ಈಗ ಪುನಃ ಇನ್ನೊಬ್ಬ "ಮಿಸ್"ಳು, ಆಸ್ಟ್ರಿಯ ಮೊದಲಾದ ದೇಶಗಳ ಪತ್ರಿಕೆಗಳ ಕಡೆಯಿಂದ ಹಿಂದೂ ದೇಶಕ್ಕೆ ಹಿಂದೀಯ ಸ್ತ್ರೀಯರ ಹಿತವನ್ನು ಬಯಸಿ ಹಿಂದೀ ಪರಿಸ್ಥಿತಿಯನ್ನು ಪರಿಶೀಲಿಸಲು ಬಂದಿರುವಳು. "ಈ ಹಿಂದೀಯ ಮಿತ್ರರಿಂದ ದೇಶವನ್ನು ಉಳಿಸು" ಎಂದು ನಮ್ಮ ಈಗಿನ ಪ್ರಾರ್ಥನೆ ಇದೆ.

ಹರತಾಳ.

ಫೆಬ್ರುವರಿ ತಾ. ೩ಕ್ಕೆ ಸೈಮನ್ ಕಮಿಶನ್ನು ಹಿಂದೂಸ್ಥಾನಕ್ಕೆ ಬರುವದಿದೆ. ಅಖಿಲ ಹಿಂದೂಸ್ಥಾನದ ಧುರೀಣರು ಕೂಡಿ ಸೈಮನ್ ಕಮಿಶನನ್ನು ಬಹಿಷ್ಕರಿಸಲು ನಿರ್ಣಯಿಸಿರುವರು. ಐಗುಪ್ತ್ಯದ ಸ್ವಾತಂತ್ರ್ಯದ ಅರ್ಹತೆಯನ್ನು ನಿರ್ಣಯಿಸಲಿಕ್ಕೂ ಹೀಗೆಯೇ. ಮಿಲ್ನರ ಕಮಿಶನೊಂದು ಕೆಲವು ವರ್ಷಗಳ ಹಿಂದೆ ನೇಮಿಸಲ್ಪಟ್ಟಿದ್ದಿತು. ಆ ಕಮಿಶನ್ನು ಐಗುಪ್ತ್ಯದೇಶದಲ್ಲಿ ಕಾಲಿಡುವಾಗ ಯಾರೂ ಅವರೊಡನೆ ಸಹಕರಿಸದೆ, ಕಮಿಶನ್ನು ತನ್ನಷ್ಟಕ್ಕೆ ಹಿಂದೆ ಹೋಯಿತು; ಮತ್ತು ಐಗುಪ್ತ್ಯ ದೇಶದ ಆ ಐಕ್ಯವನ್ನೂ ದೃಢಚಿತ್ತವನ್ನೂ ಕಂಡು ಅದು ಸ್ವಾತಂತ್ರ್ಯಕ್ಕೆ ಯೋಗ್ಯವಿದೆಯೆಂದು ನಿರ್ಧರಿಸಿತು. ಈ ಬಾರಿ ಹಿಂದೂಸ್ಥಾನಕ್ಕೆ ಬರುವ ಕಮಿಶನ್ನಿನೊಡನೆ ನಾವು ಸಹಕರಿಸುವುದಾದರೆ ಖಂಡಿತವಾಗಿಯೂ ನಾವು ನಿರ್ಬಲರೆಂದಾಗುವೆವು. ಸ್ವಾತಂತ್ರ್ಯವು ಸಿಕ್ಕಲಿ, ಸಿಕ್ಕದಿರಲಿ. ಆದರೆ ಹಿಂದೂಸ್ಥಾನವು ದುರ್ಬಲ ಮನಸ್ಸಿನವರ ದೇಶವೆಂದು ನಾವು ತೋರಿಸಬಾರದು. ಬ್ರಿಟಿಷರು ಕಮಿಶನ್ನಿನ ವಿಜಯವನ್ನು ನಮ್ಮ ದೌರ್ಬಲ್ಯದ ಮೇಲೆ ಹೊಂದಿಸಿಕೊಂಡಿರುವರು. ಬಹಿಷ್ಕಾರವು ಬರೇ ಬಾಯಿಯ ಮಾತಿನದು; ಅದು ಮೆಲ್ಲನೆ ಕಡಿಮೆಯಾಗುತ್ತ ಬರುತ್ತಿದೆ ಎಂದು ಹೇಳುತ್ತಿರುವರು. ಹಿಂದುಸ್ಥಾನವು "ಜೋಹುಕುಮ್" ವಾಲಾರವರ ದೇಶವೆಂದು ತಿಳಿದುಕೊಂಡು, ಇಂದಲ್ಲದಿದ್ದರೆ ನಾಳೆಯಾದರೂ ಶರಣುಬರುವರಾಗಿ ಕಲ್ಪಿಸಿರುವರು. ದೇಶವು ಅಂಥ ಹೀನ ಗುಣ ಕಥನವನ್ನು ಒಪ್ಪಿಕೊಳ್ಳಲಾರದೆಂದು ತೋರಿಸುವುದು ಅವಶ್ಯವಿದೆ. ಕಮಿಶನ್ನು ಹಿಂದೂ ದೇಶದಲ್ಲಿ ಕಾಲಿಡುವ ದಿನವೇ ಹಿಂದೂಸ್ಥಾನದಲ್ಲಿ ಹರತಾಳವನ್ನು ಆಚರಿಸಬೇಕಾಗಿ ಚಳವಳವು ನಡಿಯುತ್ತಿದೆ. ಇದು ದೇಶದ ಮನಸ್ಸಿನ ಉತ್ತಮ ತರದ ಬಾಹ್ಯ ಪ್ರದರ್ಶನವಾದುದರಿಂದ ಕಮಿಶನ್ನಿನ ಸದಸ್ಯರು ಹಿಂದೂಸ್ಥಾನದ ವಿರೋಧವನ್ನು ಚೆನ್ನಾಗಿ ತಿಳಿಯುವ ಬಗ್ಗೆ ಈ ಹರತಾಳವು ಸರಿಯಾಗಿ ಆಚರಿಸಲ್ಪಡುವುದು ಉತ್ತಮವಿದೆ.

ಅಫಘಾನ ಅಮೀರರ ಪ್ರವಾಸ.

ಅಫಘಾನ ಅಮೀರರು ಈಗ ಇಟೇಲಿಯಲ್ಲಿ ಸಂಚರಿಸಿ ಅಲ್ಲಿಯ ಪ್ರಮುಖ ಸ್ಥಳಗಳನ್ನು ಸಂದರ್ಶಿಸುತ್ತಿರುವರು. ಅಫಘಾನಿಸ್ಥಾನದಿಂದ ಹೊರಟವರು, ಪ್ರಥಮತಃ ಬ್ರಿಟಿಷ ಆತಿಥ್ಯವನ್ನು ಸ್ವೀಕರಿಸಿದರು. ಆದರೆ ಈ ಆತಿಥ್ಯದಿಂದ ಅವರು ಎಷ್ಟು ತೃಪ್ತರಾದರೆಂದು ಹೇಳಬರುವುದಿಲ್ಲ. ಹಿಂದೂದೇಶದ ಗಡಿಯೊಳಗೆ ಅವರ ಸ್ವಾಗತವು ಬಹಳ ಸಂಭ್ರಮದಿಂದ ನಡೆಯಿತಾದರೂ, ಮುಂಬಾಯಿಗೆ ಬಂದ ಮೇಲೆ ಬ್ರಿಟಿಷ ಸಾಮ್ರಾಜ್ಯದ ದರ್ಪಕ್ಕೂ ಅಫಘಾನಿಸ್ಥಾನದ ಸ್ವಾತಂತ್ರ್ಯದ ಸ್ವಾಭಿಮಾನಕ್ಕೂ ಸ್ವಲ್ಪ ಮಟ್ಟಿಗೆ ಭಿನ್ನತೆಯೊದಗಿದಂತೆ ಕಾಣುತ್ತಿದೆ. ಅಮೀರರನ್ನು ಕಾಣಲು ಬಂದ ವ್ಯಾಸರಾಯರಿಗೆ ಕಾಣುವ ದಿವಸವೇ ಜ್ವರ ಪ್ರಾರಂಭವಾಗಿ ಅವರು ಹಾಸಿಗೆ ಹಿಡಿದರು. ಆದುದರಿಂದ ಸ್ವಾಗತದ ಕೆಲಸವನ್ನು ಮುಂಬಯಿ ಗವರ್ನರರು ಮಾಡಬೇಕಾಯಿತು. ಮುಂಬಯಿ ಕೊರ್ಪೋರೇಶನಿನವರು ಅಮೀರರಿಗೆ ಕೊಡಬೇಕೆಂದಿದ್ದ ಮಾನಪತ್ರವನ್ನು ವ್ಯಾಸರಾಯರು ಬ್ರಿಟಿಷ ಗೌರವಗಳ ಕಾರಣದಿಂದ ಪ್ರವೇಶ ಮುಹೂರ್ತದಲ್ಲಿಯೇ ಕೊಡಲು ಬಿಡಲಿಲ್ಲ. ಸ್ವಾಗತ ಮತ್ತು ಆತಿಥ್ಯದ ಸಮಯಗಳಲ್ಲಿಯೂ ಅಫಘಾನ ಮನೆತನದ ಗೌರವಕ್ಕೆ ಸರಿಯಾದ ಅನುಕರಣೆಗೆ ಆಗಾಗ ಭಂಗ ಬರುತ್ತಿದ್ದಿತೆಂದೂ, ಅಮೀರರೇ ಆಗಾಗ ಬ್ರಿಟಿಷ ಆಫೀಸರರನ್ನು ತಿದ್ದುವ ಪ್ರಸಂಗಗಳಿದ್ದುವೆಂದೂ ತಿಳಿದು ಬರುತ್ತಿದೆ. ಆದುದರಿಂದ ಅಮೀರರ ಹಿಂದೂಸ್ಥಾನದ ಭೇಟಿಯು ಬ್ರಿಟಿಷ—ಅಫಘಾನ ಸೌಹಾರ್ದಕ್ಕೆ ಹಿತಕರವಾಗಿರುವ ಬದಲು ಅಹಿತಕರವಾಗಬಹುದು. ಬದಲಿಗೆ ಇಟೇಲಿಯಲ್ಲಿ ಅವರಿಗೆ ಸಿಕ್ಕುತ್ತಿರುವ ಆದರಾತಿಥ್ಯವನ್ನು ಕಂಡರೆ, ಮತ್ತು ಅವರು ಅಲ್ಲಿ ಹೆಚ್ಚು ಕಾಲ ಪ್ರವಾಸ ಬೆಳೆಸುವುದನ್ನು ನೋಡಿದರೆ, ಇಟಲಿ—ಅಫಘಾನ ಸೌಹಾರ್ದವು ಚೆನ್ನಾಗಿ ನೆಲಸಬಹುದೆಂದು ಕಾಣುವುದು. ಆದರೆ ಸರ್ವಾಧಿಕಾರವುಳ್ಳ ಈ ಪೌರ್ವಾತ್ಯ ರಾಜರು, ಪಾಶ್ಚಾತ್ಯ ಮುಸ್ಸೋಲೀನಿಯನ್ನು ನೋಡಿ ಭ್ರಾಂತರಾಗದಿರಲೆಂದು ನಮ್ಮ ಆಶಯವಿದೆ. ಈ ಸಂದರ್ಶನಗಳಿಂದ ಅಫಘಾನಿಸ್ಥಾನದ ವಿದೇಶ ಧೋರಣವು ಬದಲಾಯಿಸುವುದೆಂದು ನೆನಸಲು ಕಾರಣವಿದೆ. ಹೀಗೆ ಬದಲಾಯಿಸಿದರೆ ಅದು ಬ್ರಿಟಿಷರಿಗೆ ಹಿತಕರವಾಗುವುದು ಸಂದೇಹವಿದೆ.

ಸಾಮ್ರಾಜ್ಯ ವಾದ.

ಇಂಪೀರಿಯಲ್ ಪ್ರೆಫರೆನ್ಸ ಎಂಬ ದೊಡ್ಡ ದೊಡ್ಡ ತತ್ವಗಳಿಂದ ಇಂಗ್ಲೆಂಡು ತನ್ನ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಯತ್ನಿಸುತ್ತಿದೆ. ಇಂಗ್ಲೆಂಡಿನ ವ್ಯಾಪಾರಕ್ಕೆ ಸಾಮ್ರಾಜ್ಯವನ್ನು ಖಟ್ಟಿಯಾದ ಗಿರಾಕಿಯಾಗಿ ಮಾಡಿಕೊಳ್ಳುವುದೇ ಈ ಸಾಮ್ರಾಜ್ಯವಾದದ ಅಂತರ್ಯದ ಉದ್ದೇಶ. ಆದರೆ ಈ ತತ್ವಗಳಿಂದ ಹಿಂದೂಸ್ಥಾನವಲ್ಲದೆ ಬೇರೆ ಯಾವ ಸಾಮ್ರಾಜ್ಯದ ವಿಭಾಗವೂ ಮಂಕುಗೊಳಿಸಲ್ಪಡುವುದಿಲ್ಲ. ಹಿಂದೂಸ್ಥಾನವು ಇಂಗ್ಲೆಂಡಿನಿಂದ ಸಾಲ ಕೊಳ್ಳಬೇಕು; ಮತ್ತು ಸಾಲದ ಶರ್ತವೇ ಆ ಸಾಲದ ಹಣವನ್ನು ಅಲ್ಲಿಯೇ ಖರ್ಚುಮಾಡಬೇಕೆಂದಿದೆ. ಸಾಲವಲ್ಲದ ಹಣದಿಂದ ಏನಾದರೂ ಕೊಳ್ಳಲಿದ್ದರೆ ಇಂಪೀರಿಯಲ್ ಪ್ರೆಫರೆನ್ಸಿನ ತತ್ವ ಬರುತ್ತಿದೆ. ಹೀಗಾಗಿ ಹಿಂದೂಸ್ಥಾನಕ್ಕೆ ಬೇಕಾಗುವ ಉತ್ತಮ ತರಗತಿಯ ರೈಲ್ವೆ ಇಂಜನುಗಳಾಗಲಿ, ಬೇರೆ ಯಂತ್ರ ಸಾಮಗ್ರಿಗಳಾಗಲಿ ಶೇಕಡಾ ೩೦ ರಷ್ಟು ಕಡಿಮೆ ಬೆಲೆಗೆ ಜರ್ಮನಿಯಲ್ಲಿ ಸಿಕ್ಕುವುದಾದರೂ ಹಿಂದೂಸ್ಥಾನವು ಹೆಚ್ಚಿನ ಬೆಲೆಗೆ ಇಂಗ್ಲೆಂಡಿನಲ್ಲಿಯೇ ಕೊಳ್ಳಬೇಕು. ಆದರೆ ಸ್ವತಂತ್ರವಾಗಿದ್ದ ಸಾಮ್ರಾಜ್ಯದ ಇತರ ಭಾಗಗಳು ಈ ತತ್ವವನ್ನು ಅನುಕರಿಸುವುದಿಲ್ಲ. ಇತ್ತೀಚೆಗೆ ದಕ್ಷಿಣ ಆಫ್ರಿಕದ ರೈಲ್ವೆ ಬೋರ್ಡಿನವರು ೩೦ ರೈಲು ಇಂಜನುಗಳನ್ನು ಜರ್ಮನಿಯಿಂದ ತರಿಸಲು ನಿಶ್ಚಯಿಸಿರುವರು. ಬ್ರಿಟಿಷ ಕಂಪೆನಿಗಳು ತಮಗೆ ಆ ಆರ್ಡರು ಸಿಕ್ಕುವಂತೆ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ವ್ಯಾಪಾರದಲ್ಲಿ ಕ್ರಯ ಮತ್ತು ಬಾಳುವಿಕೆಯ ಹೊರತು ಇತರ ಉಪಕಾರದ ತತ್ವಗಳು ಮಾನಿಸಲ್ಪಡುವುದಿಲ್ಲ. ಅಂತಹ ತತ್ವಗಳನ್ನು ಬ್ರಿಟಿಷನು ಹೇಳುವುದಾದರೆ ಅದರ ಉದ್ದೇಶವು ಬರೇ ಸ್ವಾರ್ಥ ಸಾಧನೆಯಲ್ಲದೆ ಬೇರೆಯಲ್ಲ. ಪರತಂತ್ರವಾದ ಹಿಂದೂದೇಶ ಮಾತ್ರವೇ ತನ್ನ ಖರ್ಚಿನಿಂದ ಇತರರ ಹೇಳಿಕೆಯಂತೆ ಈ ಸಾಮ್ರಾಜ್ಯ ಹಿತದ ಭಾರವನ್ನು ಹೊರಬೇಕಾಗಿದೆ. ಇಲ್ಲವಾದರೆ ಮರುದಿನವೇ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನವು ಇತರ ದೇಶಗಳಿಂದ ಯಾಕೆ ಸಾಮಾನುಗಳನ್ನು ಕ್ರಯಕ್ಕೆ ಕೊಂಡುಕೊಂಡಿತೆಂಬ ಪ್ರಶ್ನೆಗಳು ಬರುತ್ತಿವೆ.

ಸನ್ಯಾಸಿಗಳ ಸಂಸಾರ.

ಸಂಸಾರವು ವಿವಾಹಿತರಿಗೆ ಮಾತ್ರವಲ್ಲ. ಸನ್ಯಾಸಿಗಳಿಗೂ ಇದೆ. ಅದರಲ್ಲೂ, ಮಠಗಳಿದ್ದು, ದೊಡ್ಡ ಶಿಷ್ಯವೃಂದವನ್ನು ಆಳಲಿಕ್ಕಿದ್ದು, ಹಿಂದಿನವರು ಬಿಟ್ಟುಕೊಟ್ಟ ಸಂಪತ್ತೂ ಇದ್ದು, ಇಂದಿನವರ ಮೂಢ ಭಕ್ತಿಯ ಮೂಲಕ ಅವರಿಂದ ಪುಣ್ಯ ವಿಕ್ರಯವೆಂದು ಹಣ ಪಡೆಕೊಳ್ಳಲು ಸಾಧ್ಯವಿದ್ದು, ಕಷ್ಟವಿಲ್ಲದೆ ಕೈಯಲ್ಲಿ ಕಾಸು ಕೊಡುವಾಗ ಆ ಸಂಸಾರವು ವಿವಾಹಿತನ ಸಂಸಾರಕ್ಕಿಂತಲೂ ಎಷ್ಟೋ ಪಾಲು ಮಹತ್ವದ್ದಾಗಿರುವುದು. ಹಿಂದೂ ಶಾಸ್ತ್ರ ಪುರಾಣಗಳ ಸನ್ಯಾಸಿಗಳ ಜೀವನವು ಅತೀ ಕಠಿಣತರದ್ದಾಗಿದ್ದು, ಯಾರೂ ಇಚ್ಛಿಸುವಂತಹುದುವಾಗಿರಲಿಲ್ಲ. ಆದರೆ ನಮ್ಮ ಈಗಿನ ಸನ್ಯಾಸಿಗಳೆಂದರೆ ಬಹಳವಾಗಿ ಬಯಸತಕ್ಕ ಜೀವನ. ಒಬ್ಬ ಹುಡುಗನಿಗೆ ಆಶ್ರಮ ಸಿಕ್ಕಲಿಕ್ಕೆಂದು ಅವನ ತಂದೆಯು ಸಾವಿರಾರು ರೂಪಾಯಿಗಳನ್ನು ಆಶ್ರಮ ಕೊಡುವ ಸನ್ಯಾಸಿಗೆ ಲಂಚಕೊಡುವುದು ಸುಮ್ಮನಲ್ಲ. ಅದರಿಂದ ಬಹಳ ಲಾಭವಿದೆಯೆಂದೇ ಆ ರೂಪಾಯಿ ಕೊಡೋಣಾಗುತ್ತದೆ. ಹುಡುಗನಿಗಾದರೂ ಕಷ್ಟವೇನೂ ಇಲ್ಲ. ಬೇಕಾದ ತರದ ವಿದ್ಯಾಭ್ಯಾಸದ ರಗಳೆಯಿಲ್ಲದೆ ಸಾವಿರಾರು ರೂಪಾಯಿಯ ಮಠವು ಕೈಯಲ್ಲಿ ಸಿಕ್ಕಿದ ಮೇಲೆ ಮತ್ತೆ ಹೇಳಬೇಕೆಂದೇ ಇಲ್ಲ. ವಿವಾಹಿತರ ಆರ್ಜನೆಯ, ಗೃಹ ಸಂಕಷ್ಟಗಳ ಯೋಚನೆಯು ಸನ್ಯಾಸಿಗಳಿಗೆ ಇರುವುದಿಲ್ಲ. ಸಂಸಾರದ ತಾಪತ್ರಯಗಳೂ ಇರುವುದಿಲ್ಲ. ಆದರೆ ಸರ್ವತರದ ಭೋಗಗಳ ಭಾಗ್ಯವು ಭಾಗ್ಯವಂತ ಸಂಸಾರಿಕನಿಗಿಂತಲೂ ಹೆಚ್ಚಾಗಿ ಇವರಿಗಿದೆ. ಹಿಂದೂಮತದ ಸಂಸ್ಥೆಗಳು ಈ ರೀತಿಯ ಬರೇ ಮೂಢ ಸಾಂಪ್ರದಾಯಗಳಿಗೆ ಪರಿವರ್ತಿತವಾಗಿ ಅದರೊಳಗಿನ ಯಾವತ್ತೂ ಹಿತದ ವಿಷಯಗಳು ಸಂಪೂರ್ಣವಾಗಿ ಕಳೆದು ಹೋದುದು ವಿಷಾದಕರ.

ನೋಟಗಳು.
NOTE...S.

ಉಡುಪಿಯ ಪರ್ಯಾಯ ಈ ವರುಷ ಬಹಳ ಕ್ಷೀಣಾವಸ್ಥೆಯಲ್ಲಿ ಜರಗಿತು. ಸ್ವಾಮಿಯವರ ಜಗಳ ಇನ್ನೂ ಮುಗಿದಿಲ್ಲ. ಉತ್ಸವ ಹೊರಡಲಿಕ್ಕೆ ಒಂದು ಸಾವಿರ ಸರ್ತಿ ಮುಹೂರ್ತಗಳನ್ನು ನೋಡಿದಲ್ಲಿ ಸ್ವಾಮಿಯವರು ಹೊರಡುವ ಮುಹೂರ್ತವೇ ಬರಲಿಲ್ಲ.

• • • •

ಪರವೂರುಗಳಿಂದ ಬಂದ ಜನರಿಗೆ ಇಂಥಾ ಸ್ವಾಮಿಯವರ ಜಗಳದ ಉತ್ಸವವನ್ನು ನೋಡಲಿಕ್ಕೆ ಹೆಚ್ಚು ಪುಣ್ಯಬೇಕು.

• • • •

ಪರ್ಯಾಯ ದಿವಸ ದಂಡತೀರ್ಥಕ್ಕೆ ಹೋದ ಸ್ವಾಮಿಯವರು ಸಾಧಾರಣ ಬೆಳಗ್ಗೆ ೮ ಘಂಟೆಗೆ ತಾಲೂಕು ಕಚೇರಿಯ ಹತ್ತಿರ ಕೂತವರು, ಅಲ್ಲಿಯೇ ದೂಪದ ಮರದ ಎಲ್ಲಾ ಎಲೆಗಳನ್ನು ಲೆಖ್ಖ ಹಾಕಿದರು. ಘಂಟೆ ಹನ್ನೊಂದಾಯಿತು. ಮತ್ತೂ ಎದುರು ಕಡೆಯಿಂದ ಬಂದು ಸ್ವಾಗತೀಕರಿಸುವ ಸ್ವಾಮಿಗಳ ಪತ್ತೆಇಲ್ಲ. ಆಚೆ ಈಚೆ ಹೋಗುವ ಜನರನ್ನು ಲೆಖ್ಖ ಹಾಕಲು ಪ್ರಾರಂಭ ಮಾಡಲು, ಬೇಂಡ್‌ವಾದ್ಯದಿಂದ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ೪ ಜನ ಸ್ವಾಮಿಯವರ ಸವಾರಿ ಎದುರುಗೊಳ್ಳಲಿಕ್ಕೆ ಬಂದರು.

• • • •

ಹಾಗೂ ಹೀಗೂ ನಿತ್ರಾಣಿಯಿಂದ ಕೂರುವ ಸ್ವಾಮಿಗಳ ಉತ್ಸವ ಮಧ್ಯಾಹ್ನ ೧೨ ಘಂಟೆಗೆ ಹೊರಟು ಬಂತು.

• • • •

ಜಗಳ ಸಮ್ಬಂಧ ಉತ್ಸವಕ್ಕೆ ಆನೆಗಳನ್ನು ಹಲವು ವರ್ಷಗಳಿಂದ ಎಲ್ಲಾ ಮಠದವರು ಶೃಂಗರಿಸಿ ಹೊರಡುವ ಉತ್ಸವಗಳನ್ನು ನೋಡಲಿಕ್ಕೆ ಜನಸ್ತೋಮವು ಹೆಚ್ಚಾಗಿ ಕೂಡುತಿತ್ತು. ಆದರೆ ಈ ವರ್ಷ ಆನೆಗಳಿಲ್ಲದೆ, ಬರೇ ಬೇಂಡುವಾದ್ಯದ ಉತ್ಸವ ನೋಡಲಿಕ್ಕೆ ಬಂದ ಜನಸ್ತೋಮ ಲೆಖ್ಖ ಹಾಕಲು ಸಾಧ್ಯವಿಲ್ಲ.

• • • •

ಸ್ವಾಮಿಯವರ ಜಗಳದ ಸಮ್ಬಂಧ ಭೋಜನಶಾಲೆಯ ಪ್ರವೇಶದ ಹತ್ತಿರದ ಮಾಡಿನ ಗ್ರಹಚಾರ, ಹಂಚು, ಪಕ್ಕಾಸು, ಹುಡಿ, ಜನರೊಳಗೆ ಹೊಡದಾಟ, ಅಷ್ಟರಲ್ಲಿ ಪೋಲೀಸ್ ಸಾಹೇಬರು ಬಂದು ಸಮಾಧಾನ ಪಡಿಸಿದರು.

• • • •

ಅಂತೂ, ಇಂತೂ, ಹೆಚ್ಚಿನ ಜಗಳ ಗಲಾಟೆಯಿಂದ ಪರ್ಯಾಯವು ಮುಗಿಯಿತು.

ಉಡುಪಿ ಪರ್ಯಾಯ ಮಹೋತ್ಸವ.

ನಡೆಯಿತು. ಸಾಂಗವಾಗಿ ನಡೆಯಿತೋ ಎಂಬುದು ಗೊತ್ತಾಗಿಲ್ಲ. ಆದರೆ ಮಠಮಠಗಳೊಳಗಿನ ವೈಷಮ್ಯಗಳ ಪ್ರದರ್ಶನವು ಹತ್ತೂರುಗಳಿಂದ ಪರ್ಯಾಯವನ್ನು ನೋಡಲಿಕ್ಕೆಂದು ಭಕ್ತಿಪೂರ್ವಕ ಬಂದ ಜನತೆಯ ಮುಂದು ಚೆನ್ನಾಗಿ ಸಾಗಿತು. ನಮ್ಮ ಅಷ್ಟಮಠಗಳದೂ ಒಂದು ಚಿಕ್ಕ ಸಂಸಾರ. ವರ್ಷವರ್ಷವೂ ಏನೊಂದೂ ವಾದವಿರದೆ ಇರುವುದಿಲ್ಲ. ಏನೊಂದು ಸ್ವಾರ್ಥವಿರದೆ ತ್ಯಾಗಿಗಳಾಗಿರಬೇಕಾದವರೊಳಗೇನೇ ಇಷ್ಟು ಭೇದವೂ, ಇಷ್ಟು ತೀಕ್ಷ್ಣ ವೈಷಮ್ಯವೂ ನೆಲಸುವದಾದರೆ ಹಿಂದೂ ಉದ್ಧರಣೆಯ ವಿಷಯದ ಆಶೆಯನ್ನೇ ಬಿಡಬೇಕಾಗುವುದು. ಉಡುಪಿ ಪರ್ಯಾಯ ಮಹೋತ್ಸವವೆಂದರೆ, ಅಖಿಲ ಕರ್ಣಾಟಕದ ಜನತೆಯ ಯಾತ್ರೆಯ ಸಮಯ. ಶ್ರೀ ಮನ್ಮಧ್ವಾಚಾರ್ಯರು ಅದಕ್ಕೆ ಶ್ರೇಷ್ಠತೆಯನ್ನು ಕೊಟ್ಟರು. ಎಂಟು ಮಠಗಳನ್ನು ಏರ್ಪಡಿಸಿ ಪೂಜೆಗೆ ಭಂಗಬಾರದಂತೆ ಏರ್ಪಡಿಸಿದರು. ಆದರೆ ಯಾವುದರಿಂದ ಪೂಜೆಯ ಗೌರವವನ್ನು ಸ್ಥಾಪಿಸಲು ಅವರು ಕಲ್ಪಿಸಿದರೊ ಅದೇ ಈಗ ಪೂಜೆಯ ಭಂಗಕ್ಕೆ ಕಾರಣವಾಗಲು ಪರಿಣಾಮ ಹೊಂದುವಂತೆ ತೋರುತ್ತಿದೆ. ಮಠಗಳೊಳಗಿನ ದ್ವೇಷಾಸೂಯೆಗಳು ಬಹು ಕಾಲದಿಂದ ಬಂದವುಗಳು. ಈಗ ಪ್ರಾಯಶಃ ಸಾಂಪ್ರದಾಯವಾಗಿ ಬೆಳೆದುದರಿಂದ ಕಾದ್ಯ ಸೂತ್ರದಂತೆ ಇದು ಪೂಜನೀಯವಾದ ಸಾಂಪ್ರದಾಯವೆಂದು ತಿಳಿದಿರುವರೇನೊ! ಆದರೆ ಇದು ಅಖಿಲ ಕರ್ಣಾಟಕದ ಮುಂದೆ ಉಡುಪಿಯ ಯಾತ್ರೆಯ ಪಾವಿತ್ರ್ಯವನ್ನು ಕಡಿಮೆಮಾಡುತ್ತಾ ಬಂದಿದೆ ಎಂದೂ, ಹೀಗೆಯೇ ಮುಂದರಿದರೆ ಮಠಗಳು ಬರೇ ಸಾಮಾನ್ಯತೆಗೆ ಇಳಿಯಬಹುದೆಂದೂ ಯಾವ ಮಠಾಧೀಶ್ವರರೂ ಯೋಚಿಸಿದಂತೆ ಕಾಣುವುದಿಲ್ಲ. ನಿರಂಕುಶವೂ ಸ್ವೇಚ್ಛಾಪ್ರವರ್ತಕವೂ ಆದ ವರ್ತನೆಯಿಂದ ಸಾಮಾನ್ಯ ಗೃಹಸ್ಥನಾದರೂ ಮಾನಹಾನಿಯನ್ನು ಪಡೆಯುವನು. ಅದರಲ್ಲೂ ನಿಸ್ಸಂಗಿಗಳಾಗಿರಬೆಂಕೆಂದು ಆಶಿಸಲ್ಪಡುವ ಸನ್ಯಾಸಿಯವರೇ ಇಂತಹ ದೋಷಗಳನ್ನು ತೋರಿಸಿದರೆ ಅವರಿಂದ ಹಿಂದೂ ಸಮಾಜಕ್ಕೆ ಆಗಬೇಕಾದ ಮಹತ್ವದ ಕೆಲಸಗಳು ಎಂದೂ ಆಗಲಾರವು.

ಅನುಕ್ರಮಣಿಕೆ.

ಅಗ್ರಲೇಖ,
ಮಂಗಳೂರು ಆಯುರ್ವೇದ ಸಮ್ಮೇಳನ
ಪರದೇಶ ವರ್ತಮಾನ
ಸ್ಫುಟಟಿಪ್ಪಣಿಗಳು
ನೋಟೀಸು
ವರ್ತಮಾನ ಸಂಗ್ರಹಗಳು
ಒಳದೇಶ
ದಕ್ಷಿಣ ಕನ್ನಡ – ಮಂಗಳೂರು, ಹರಿಕೆಳ, ಹೊಸದುರ್ಗ
ಕಾರ್ಕಳ
[illegible]
[illegible]
[illegible]

ಸ್ವದೇಶಾಭಿಮಾನಿ.

[illegible] ಶುಕ್ರವಾರ.

ಮಂಗಳೂರು ಆಯುರ್ವೇದ ಸಮ್ಮೇಳನ.

[illegible]

ಪರದೇಶ ವರ್ತಮಾನ.

[illegible]

ನಂತರ ಪೆಲಸ್ಟೈನ್ ದೇಶಕ್ಕೆ ಹೋಗಿ ಅಲ್ಲಿಯ ಯಹೂದ್ಯರ ಅಭಿವೃದ್ಧಿಗಾಗಿ ಏನೇನು ಮಾಡಬೇಕೆಂದು ಆಲೋಚಿಸಿ ಮಾರ್ಚ ತಿಂಗಳಲ್ಲಿ ಇಂಗ್ಲೆಂಡಿಗೆ ಹೊರಟು ಹೋಗುವರು.

ಅಮೇರಿಕದ ಕ್ಯೂಬಾದ್ವೀಪದಲ್ಲಿ ಅಮೇರಿಕದ ೨೧ ರಿಪಬ್ಲಿಕುಗಳ ಪ್ರತಿನಿಧಿಗಳ ಒಂದು ಸಭೆಯು ಜರಗುವದು. ಈ ಸಭೆಗೆ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರಾದ ಕೊಲ್ಲಿಜರೂ ಬರುವರು.

— ಲಂಡನಿನಲ್ಲಿ ಬಂದ ನೆರೆಯ ಹಾವಳಿಯಿಂದ ಕಷ್ಟಪಡುತ್ತಿರುವವರ ಸಹಾಯಕ್ಕಾಗಿ ಬ್ರಿಟಿಷ ಲಿಜಿಯನ್ ಸಂಘದವರು ೧೧,೦೦೦ ಪೌಂಡುಗಳನ್ನು ಕೊಟ್ಟಿರುವರು. ಲಂಡನಿನ ಲೋರ್ಡ ಮೆಯೊರರು ೧೬,೦೦೦ ಪೌಂಡ ಕೊಡಿಸಿರುವರು. ವೆಸ್ಟಮಿನಿಸ್ಟರಿನ ಮೆಯೊರರು ೧೮೦೦೦ ಪೌಂಡ ಕೊಡಿಸಿರುವರು.

— ಇರಾಕಿನಲ್ಲಿ ಚಿಮಿಣಿ ಎಣ್ಣೆಯ ಗಣಿಗಳನ್ನು ಬ್ರಿಟಿಷ, ಅಮೇರಿಕಾ ಮತ್ತು ಫ್ರಾನ್ಸಿನವರು ಕೂಡಿ ಎಣ್ಣೆ ತೆಗೆದು ಮಾರುವ ಆಲೋಚನೆ ಮಾಡಿರುವರು.

— ಅಫಗಾನ ಅಮೀರರು ರೋಮ ಪಟ್ಟಣದಲ್ಲಿ ಸಂಚರಿಸಿ ಅಲ್ಲಿಯ ವಿಚಿತ್ರಗಳನ್ನು ನೋಡುತ್ತಿರುವರು.

— ಅಫಗಾನಿಸ್ಥಾನಕ್ಕೂ ರಶ್ಯಾ ದೇಶಕ್ಕೂ ಟಸ್ಕಾಂಡಿನಿಂದ ಕಾಬೂಲಿಗೆ ಮೈಲು ಮತ್ತು ಪ್ರಯಾಣಿಕರ ರೈಲು ಗಾಡಿಗಳು ನಡಿಯಲಾರಂಭಿಸಿಯವೆ.

— ಟರ್ಕಿಯ ಕೆಮಲ್‌ಪಾಶರಿಗಾಗಿ ಮಾಡುತ್ತಿರುವ ಶಿಲಾ ಪ್ರತಿಮೆಯ ವಿಷಯದಲ್ಲಿ ಒಂದು ಪತ್ರಿಕಾಕರ್ತರು ತಮಾಷೆ ಮಾಡಿ ಬರೆದುದಕ್ಕಾಗಿ ೨೦ ತಿಂಗಳ ಶಿಕ್ಷೆ ವಿಧಿಸಿರುವರು.

— ಸಮುದ್ರದ ಅಡಿಯಲ್ಲಿ ಹಾಕಿದ ಕೇಬಲುಗಳ ಮೂಲಕ ವಾರ್ತೆಯು ಮೊದಲು ಮುಟ್ಟುತ್ತದೊ, ವಾಯರ್‌ಲೆಸ್ಸಿನಿಂದ ಮೊದಲು ಮುಟ್ಟುತ್ತದೊ ಎಂದು ಪರೀಕ್ಷಿಸುವುದಕ್ಕಾಗಿ ಲಂಡನಿನಲ್ಲಿ ಬ್ರಿಟಿಷ ಸಾಮ್ರಾಜ್ಯದ ಪ್ರತಿನಿಧಿಗಳ ಸಭೆಯು ೧೬ನೇ ತಾರೀಕಿನಲ್ಲಿ ನಡಿಯಿತು.

— ಇರಾಕ್ ದೇಶದಲ್ಲಿ ಬಾಧಿಸುತ್ತಿರುವ ದಾಹಾಬಿಗಳನ್ನು ಹುಡುಕುವುದಕ್ಕಾಗಿ ಆಸ್ಕದ ಹತ್ತಿರವಿರುವ ಆರ್ ಚಾಲ್ಸ್ ಎಂಬಲ್ಲಿ ಹಲವು ಯುದ್ಧದ ವಿಮಾನಗಳು ಸಿದ್ಧವಾಗಿರುವವು. ಇವರು ದಿನಾಲು ಬೆಳಿಗ್ಗಿನಿಂದ ಸಾಯಂಕಾಲದ ವರೆಗೆ ಆಕಾಶದಲ್ಲಿ ಸಂಚರಿಸ್ಸಿ ಈ ದಂಗೆಗಾರರು ಇರುವ ಸ್ಥಳಗಳನ್ನು ಹುಡುಕುತ್ತಿರುವರು.

ಒಳದೇಶ ವರ್ತಮಾನ.

ದಿ ವಿದ್ಯಾದಾಯಿನಿ ಸಭಾ, ಮುಂಬಾಯಿ ಈ ಸಭೆಯವರು ಕಳೆದ ಎರಡು ವರುಷಗಳಿಂದ 'ಕೋಟಿಚೆನ್ನಯ'ರ ಜನ್ಮದಿನವನ್ನು ಆಚರಿಸಿಕೊಂಡಿರುವಂತೆಯೇ ಈ ವರುಷದಲ್ಲಿಯೂ, ಸದರಿಯವರ ಜನ್ಮದಿನವನ್ನು ಇದೇ ಕಳೆದ ತಾ. ೧ನೇ ರವಿವಾರ ಘಂಟೆ ೩ಕ್ಕೆ ಆಚರಿಸಿದರು. ಅಂದಿನ ಅಧ್ಯಕ್ಷಸ್ಥಾನವನ್ನು ಈ ವರುಷದ ಸಭಾಧ್ಯಕ್ಷರಾದ ಶ್ರೀಯುತ ಯನ್. ಸದಾಶಿವ ಬಂಗೇರರು ಸ್ವೀಕರಿಸಿದರು. ಕಾರ್ಯದರ್ಶಿಯವರಾದ ಶ್ರೀಯುತ ಯನ್. ಟಿ. ಸುವರ್ಣರವರು ಅಪೇಕ್ಷಿಸಿಕೊಂಡ ಮೇರೆಗೆ, ಸಭೆಯವರಿಂದ ಶ್ರೀಯುತರಾದ ಯಮ್. ಪೋಂಕ್ರ ಅಮೀನರು ಕೋಟಿಚೆನ್ನಯರ ಜನ್ಮ ಚರಿತ್ರೆಯನ್ನು ಸವಿಸ್ತಾರವಾಗಿ ಸಭಿಕರಿಗೆ ಕಥಾರೂಪದಿಂದ ಭಾಷಿಸಿ ಸಂತೋಷಗೊಳಿಸಿದರು. ಆ ಮೇಲೆ ಅಧ್ಯಕ್ಷರು ತನ್ನ ಭಾಷಣದಲ್ಲಿ ಅವರ ವಿಷಯವಾಗಿ ವಿವರಿಸಿದ್ದಲ್ಲದೆ, ಪ್ರತಿ ಒಬ್ಬ ಬಿಲ್ಲ ಯುವಕನೂ, ಕೋಟಿಚೆನ್ನಯರಂತೆ, ಪ್ರಖ್ಯಾತಿಯನ್ನು ಪಡೆದು ಬಿಲ್ಲವ ಸಮಾಜದಲ್ಲಿ ಅಂಥವರ ಕೀರ್ತಿ ಪತಾಕೆಯು ಮೆರೆಯುವಂತೆ ಜಗದೀಶ್ವರನು ಅವರಿಗೆ ಚೈತನ್ಯವನ್ನು ಕೊಡಲೆಂದು ಅಪೇಕ್ಷಿಸಿದರು. ಕಡೆಗೆ ಅಧ್ಯಕ್ಷರಿಗೂ, ಕೋಟಿಚೆನ್ನಯರ ಚರಿತ್ರೆಯನ್ನು ವಿವರಿಸಿದ ಶ್ರೀಯುತ ಯಮ್. ಪೋಂಕ್ರ ಅಮೀನರಿಗೂ ಸಭೆಯು ಕಡೆಯಿಂದ ಧನ್ಯವಾದಗಳಾಗಿ, ಕೊಂಚ ಫಲಹಾರಗಳೊಂದಿಗೆ ಸಭೆಯು ಕೊನೆಗೊಂಡಿತು.

— ಬನಾರಸ ಮಹಾರಾಜರು ಮದರಾಸಿಗೆ ಬಂದಿರುವರು.

— ವಿಧವಾವಿವಾಹ ಸಮ್ಬಂಧ ಒಂದು ಸಭೆಯು ಮದರಾಸಿನ ಗೊಖಲೆ ಹೋಲಿನಲ್ಲಿ ಜರಗಿತು.

— ತಲಚೇರಿ ಮುನಿಸಿಪಾಲಿಟಿಯವರು ತಮ್ಮ ಚಯರ್‌ಮೇನರ ಮೇಲೆ ನಂಬಿಕೆಯಿಲ್ಲ ಎಂಬ ಠರಾವನ್ನು ಪಾಸು ಮಾಡಿರುವರು.

— ಇಂಡಿಯದ ಕರಾವಳಿ ಸಂಚರಿಸಲಿಕ್ಕೆ ಬಂದ ರೋಯಲ್ ಎರ್ ಫೋರ್ಸಿನ ವಿಮಾನಗಳು ಸಿಲೋನಿನ ಟ್ರಿಂಕೊಮಾಲೆಯಲ್ಲಿದ್ದು ೧೯ನೇ ತಾರೀಕಿನ ಬೆಳಿಗ್ಗೆ ಅಲ್ಲಿಂದ ಹೊರಟು ೭ ಗಂಟೆಗೆ ಪುಲಿಕಾಟಿಗೆ ಬಂದು ಮದರಾಸಿಗೆ ಮಧ್ಯಾಹ್ನ ೧೨॥ ಗಂಟೆಗೆ ಬಂದು ತಲಪುವವು ಎಂದು ಅವುಗಳ ಕಮಾಂಡಿಂಗ್ ಆಫೀಸರರಿಂದ ಮದರಾಸು ಪೋರ್ಟು ಆಫೀಸರರಿಗೆ ಟೆಲಿಗ್ರಾಮು ಬಂದದೆ.

— ಮಲಬಾರು ಒಕ್ಕಲುಗಳ ಸಮ್ಬಂಧಪಟ್ಟ ಕೆಲವು ಸಂಗತಿಗಳ ವಿಷಯ ತನಿಖೆ ಮಾಡಲಿಕ್ಕೆ ಸರಕಾರದವರು ನೇಮಿಸಿದ ಕಮಿಟಿಯವರು ತನಿಖೆಯನ್ನು ಮುಗಿಸಿ ಮದರಾಸಿನಲ್ಲಿ ಕೂಡಿ ಒಂದು ರಿಪೋರ್ಟನ್ನೂ, ಬಿಲ್ಲನ್ನೂ ತಯಾರಿಸುತ್ತಿರುವರು. ಇವರು ಫೆಬ್ರವರಿ ತಿಂಗಳಲ್ಲಿ ಪೂರ್ಣ ಬಿಲ್ಲನ್ನೂ ರಿಪೋರ್ಟನ್ನೂ ತಯಾರಿಸಿ ಮದರಾಸು ಸರಕಾರಕ್ಕೆ ಕಳುಹಿಸುವರು.

— ಅಂಬಾಲದಲ್ಲಿ ಒಂದು ಕಾಡು ದಾರಿಯಾಗಿ ರೈಲುವೇ ಟ್ರೈನ್ ಹೋಗುವಾಗ ಒಂದು ಪಟ್ಟೆ ಹುಲಿಯು ಒಂದು ಹೆಂಗಸನ್ನು ಹಿಡಿಕೊಂಡು ಓಡುವುದನ್ನು ರೈಲುವೇ ಗಾರ್ಡನು ನೋಡಿ ರೈಲನ್ನು ನಿಲ್ಲಿಸಿ ಕೆಲವು ಜನರನ್ನು ತೆಗೆದುಕೊಂಡು ಕಾಡಿನೊಳಗೆ ಪ್ರವೇಶಿಸಿ ಆ ಹುಲಿಯನ್ನು ಕೊಂದನು. ಹೆಂಗಸಿಗೆ ಅರ್ಧ ಜೀವವಿತ್ತು. ಅವಳು ಆಸ್ಪತ್ರೆಯಲ್ಲಿ ಸತ್ತಳು. ಈ ಹುಲಿಯು ಪತಿಯಾಲಾ ರಾಜ್ಯದಲ್ಲಿ ಹೆಚ್ಚು ಹಾವಳಿಯನ್ನು ಮಾಡುತ್ತಿದ್ದುದರಿಂದ ಪತಿಯಾಲಾ ಮಹಾರಾಜರು ಈ ಗಾರ್ಡನಿಗೆ ೧೨೫ ರೂಪಾಯಿ ಇನಾಮು ಕೊಟ್ಟಿರುವರು.

— ಹೊಸತಾಗಿ ಶ್ರೀಮತಿ ಮಿಲ್ಲರಳನ್ನು ಮದುವೆಯಾಗಲಿಕ್ಕಿರುವ ಇಂದೋರ ಮಹಾರಾಜರು ಅಸೌಖ್ಯದಲ್ಲಿರುವುದರಿಂದ ಅವರು ಅವಳೊಡನೆ ಬಂದು ಸಿಲೋನಿನಲ್ಲಿರುವ ನಿವಾರಾ ಎಲಿಯ ಎಂಬ ಪರ್ವತ ಪ್ರದೇಶದಲ್ಲಿರುವರು. ಈ ಮಿಲ್ಲರಳು ಸೀರೆ ಉಡುತ್ತಾಳಂತೆ. ಇಂಡಿಯಕ್ಕೆ ಬಂದೊಡನೆ ಇವಳನ್ನು ಹಿಂದು ಮತಕ್ಕೆ ಸೇರಿಸುತ್ತಾರಂತೆ. ಅಷ್ಟು ಆಗದೆ ಮದುವೆಯಾಗಲಿಕ್ಕೆ ಉಪಾಯವಿಲ್ಲ.

— ಅಲ್ಲಹಾಬಾದಿನಲ್ಲಿ ಜರಗಲಿಕ್ಕಿರುವ ಸನಾತನ ಧರ್ಮ ಮಹಾಸಭೆಯಲ್ಲಿ ಅದರ ಶಾಖೆಗಳನ್ನು ಇಂಡಿಯದ ಎಲ್ಲಾ ಭಾಗಗಳಲ್ಲಿಯೂ ಸ್ಥಾಪಿಸಬೇಕೆಂಬ ಪಂಡಿತ ಮದನಮೋಹನ ಮಾಲವಿಯರು ಠರಾವು ತರುವರು.

— ಇಂಡಿಯದ ಟೆರಿಫ್ ಬೋರ್ಡಿನವರ ಶಿಫಾರಸು ಪ್ರಕಾರ ಇಂಡಿಯದಲ್ಲಿ ತಯಾರಾದ ವಸ್ತ್ರವನ್ನು ಆಸ್ಯಾ ಖಂಡದ ಪಶ್ಚಿಮ ದೇಶಗಳಲ್ಲಿಯೂ ಆಫ್ರಿಕಾ ಖಂಡದಲ್ಲಿಯೂ ಮಾರಲಿಕ್ಕೆ ಅನುಕೂಲವಾಗುವಂತೆ ಒಂದು ಕಮಿಶನನ್ನು ಇಂಡಿಯಾ ಸರಕಾರದವರು ಇದೇ ಜನವರಿ ೨೭ ತಾರೀಕಿಗೆ ಕಳುಹಿಸುವರು. ಇದರಲ್ಲಿ ಮೂವರು ಮೆಂಬರರು ಇರುವರು. ಇವರಲ್ಲಿ ಒಬ್ಬರು ಇಂಡಿಯಾ ಸರಕಾರದ ಪ್ರತಿನಿಧಿಗಳು ಒಬ್ಬರು ಮಿಲ್ಲುಗಳ ಪ್ರತಿನಿಧಿಗಳು ಒಬ್ಬರು ಮಿಲ್ಲುಗಳ ಕಡೆಯ ವಕೀಲರು.

— ನೇಪಾಳ ರಾಜ್ಯದ ಮುಖ್ಯ ಮಂತ್ರಿಗಳ ಅಳಿಯನು ಮುಂಬಾಯಿಗೆ ತಪ್ಪಿಸಿಕೊಂಡು ಹೋದವನು ಯುರೋಪಿಗೆ ಹಡಗ ಹತ್ತಿ ಹೋದನೆಂಬ ವಾರ್ತೆಯು ನಿಜವಲ್ಲವೆಂದು ತಿಳಿದುಬಂದದೆ.

— ಇಂಡಿಯದ ಎಲ್ಲಾ ಸಂಸ್ಥಾನಗಳ ನ್ಯಾಯವಿಧಾಯಕ ಸಭೆಗಳ ಪ್ರೆಸಿಡೆಂಟರ ಮಹಾಸಭೆಯು ಡಿಲ್ಲಿಯಲ್ಲಿ ಜರಗಿತು. ಎಸೆಂಬ್ಲಿಯ ಪ್ರೆಸಿಡೆಂಟರಾದ ವಿ. ಜೆ. ಪಟೇಲರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

— ಭಾರತ ಯುವಕ ಸಂಘದ ಒಂದು ಶಾಖೆಯನ್ನು ಮದರಾಸಿನಲ್ಲಿ ಸ್ಥಾಪಿಸಿರುವರು.

— ಗೊರಖಪುರದಲ್ಲಿ ಗುರ್ಕಾ ಸೈನಿಕರ ಒಂದು ವೋರ್ ಮೆಮೊರಿಯನ್ನು ಇಂಡಿಯದ ಸರ್ವಸೇನಾಧಿಪತಿಗಳು ತೆರೆದರು.

— ನಾಸಿಕ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಸ್ವಲ್ಪ ಗಲಾಟೆಯುಂಟಾದುದರಿಂದ ಅದರ ವಿಷಯ ಮುಂಬಾಯಿ ಸರಕಾರದವರು ತನಿಖೆ ನಡಿಸುತ್ತಿರುವರು.

— ಬನಾರಸಿನಲ್ಲಿ ಸಿ. ಪಿ. ಡಿ. ಡಿಪ್ಯುಟಿ ಸುಪ್ರಿಂಟೆಂಡರಾದ ಜತೀಂದ್ರನಾಥ ಬೆನರ್ಜಿಯವರಿಗೆ ಯಾರೋ ಕಾಲಿಗೆ ಎರಡು ಗುಂಡುಗಳನ್ನು ಹೊಡೆದರು. ಒಬ್ಬ ಹುಡುಗನನ್ನು ಕೈದು ಮಾಡಿರುವರು.

— ಬನಾರಸ ಮುನಿಸಿಪಾಲಿಟಿಯವರು ಕೊಂಗ್ರೆಸ್ ಪ್ರೆಸಿಡೆಂಟರಾದ ಡೊಕ್ಟರ್ ಅನ್ಸಾರಿಯವರಿಗೆ ಒಂದು ಮಾನಪತ್ರವನ್ನು ಒಪ್ಪಿಸಬೇಕೆಂದು ತೀರ್ಮಾನಿಸಿರುವರು.

— ಮುಂಬಾಯಿಯಲ್ಲಿ ಮುಷ್ಕರ ಹಿಡಿದ ಕೂಲಿಯವರಲ್ಲಿ ಸ್ಪ್ರಿಂಗ್ ಮಿಲ್ಲಿನ ೫೦೦ ಮಂದಿ ಕೂಲಿಕಾರರು ಕೆಲಸಕ್ಕೆ ಹಾಜರಾಗಿರುವರು.

— ಇಂಡಿಯಕ್ಕೆ ಒಂದು ರಿಜರ್ವ ಬೇಂಕನ್ನು ಇಡುವ ವಿಷಯದಲ್ಲಿ ಒಂದು ಬಿಲ್ಲು ಇಂಡಿಯಾ ಗಜೇಟಿನಲ್ಲಿ ಪ್ರಕಟವಾಗಿದೆ.

— ಮದರಾಸು ಸಂಸ್ಥಾನದಲ್ಲಿರುವ ಪರಸ್ಪರ ಸಹಾಯಕ ಸಂಘಗಳ ಸ್ಥಿತಿಯನ್ನು ವಿಚಾರಿಸುವುದಕ್ಕಾಗಿ ನೇಮಿಸಿದ ಕಮಿಟಿಯು ೧೯ರಲ್ಲಿ ತನ್ನ ರಿಪೋರ್ಟನ್ನು ಸರಕಾರಕ್ಕೆ ಕಳುಹಿಸಿಯದೆ. ಇದರಿಗೆ ವಿಶೇಷ ತರದ ಕೊರತೆಗಳೇನು ಕಂಡು ಬರಲಿಲ್ಲ. ಮುಖ್ಯವಾಗಿ ಸುಪರ್ ವಿಜನ್ ಸ್ವಲ್ಪ ಹೆಚ್ಚಿಸಬೇಕೆಂದೂ, ಸಾಲ ಕೊಟ್ಟ ಹಣವು ತಾರೀಕಿನಲ್ಲಿಯೇ ಬರುವಂತೆ ಸಾಧಿಸಬೇಕೆಂದೂ, ಸುಪರವಿಜನ್ ಫೀಸನ್ನು ಸರಿಯಾಗಿ ಸಂಘಗಳಿಂದ ವಸೂಲು ಮಾಡಬೇಕೆಂದು ಪ್ರತಿ ಒಂದು ಜಿಲ್ಲೆಗೆ ಒಬ್ಬ ಡಿಪ್ಯುಟಿ ರಿಜಿಸ್ಟ್ರಾರನೂ ಅವರಿಗೊಬ್ಬ ಪರ್ಸನಲ್ ಅಸಿಸ್ಟಾಂಟನೂ ಮೂವರು ಇನ್ಸಪೆಕ್ಟರರನ್ನೂ ನೇಮಿಸಬೇಕೆಂದು ಮುಂತಾಗಿ ರಿಪೋರ್ಟಿನಲ್ಲಿ ಬರೆದಿರುವರು.

— ಇಂಡಿಯಾ ಸರಕಾರಕ್ಕಾಗಿ ಇಂಗ್ಲೆಂಡಿನಲ್ಲಿ ಶೇಕಡಾ ೪॥ ದರದ ಬಡ್ಡಿಯಿಂದ ೭॥ ಮಿಲಿಯ ಪೌಂಡನ್ನು ಸಾಲ ಎತ್ತುವದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ತಿಳಿಸುತ್ತಾರೆ. ಈ ಸಾಲವನ್ನು ತಿರಿಗಿ ಸಲಾಯಿಸುವ ವಾಯಿದೆಯು ೧೯೫೮ನೇ ಇಸವಿಯಿಂದ ೧೯೬೮ನೇ ಇಸವಿಯ ವರೆಗೆ ಇರುವುದು. ಇದೇ ಜನವರಿ ೧೮ನೇ ತಾರೀಕಿನಿಂದ ಈ ಸಾಲವನ್ನು ಎತ್ತಲು ಪ್ರಾರಂಭವಾಗುವುದು. ಇದರಲ್ಲಿ ೨॥ ಮಿಲಿಯ ಪೌಂಡುಗಳನ್ನು ಹೊಸ ರೈಲುವೆಗಳಿಗಾಗಿಯೂ ಉಳಿದ ೫ ಮಿಲಿಯ ಪೌಂಡುಗಳನ್ನು ಇದೇ ಜನವರಿ ೨೯ನೇ ತಾರೀಕಿಗೆ ಸಲಾಯಿಸಬೇಕಾದ ಸಾಲ ತೀರಿಸಲಿಕ್ಕೂ ಉಪಯೋಗಿಸಲ್ಪಡುವುದು.

— ಗುಂಟೂರು ಜಿಲ್ಲೆಯಲ್ಲಿ ಬರಗಾಲವು ಬಾರದಂತೆ ಮಾಡುವುದಕ್ಕಾಗಿ ಮದರಾಸು ಸರಕಾರದವರು ಆ ಜಿಲ್ಲೆಯಲ್ಲಿರುವ ಗುಂಡಲ್ಕಾಮಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿ ಅದರಿಂದ ಕಾಲುವೆಗಳನ್ನು ಮಾಡುವುದಕ್ಕಾಗಿ ತನಿಖೆ ನಡಿಸುತ್ತಿರುವರು. ೧೯೧೬ರಲ್ಲಿ ಈ ಆಲೋಚನೆಯನ್ನು ನಿಶ್ಚಯಿಸಿ ಬಿಟ್ಟುಬಿಟ್ಟಿದ್ದರು.

— ಇಂಡಿಯಕ್ಕೆ ಬರುವ ರೋಯಲ್ ಕಮಿಶನಿನ ಪ್ರೆಸಿಡೆಂಟರಾದ ಸರ್ ಜೋನ್ ಸ್ಯಾಮನ್ನರು ಇಂಡಿಯದ ಮುಂದಾಳುಗಳ ಮನಸ್ಸನ್ನೊಂಟು ಮಾಡಿ ತನಿಖೆ ನಡಿಸಲಿಕ್ಕಿರುವರಂತೆ. ಆದರೆ ಇಂಡಿಯದಲ್ಲಿ ಇದನ್ನು ಬಹಿಷ್ಕರಿಸಬೇಕೆಂದು ಠರಾವುಗಳು ಪಾಸಾಗುತ್ತಲೇ ಇವೆ. ಈ ಕಮಿಶನು ಮುಂಬಾಯಿಯಲ್ಲಿ ಇಳಿದ ದಿವಸ ಮುಂಬಾಯಿ ಪಟ್ಟಣದಲ್ಲಿ ಹರತಾಳವನ್ನು ಆಚರಿಸಬೇಕೆಂದು ನಿರ್ಣಯಿಸಿರುವರು.

— ಇಂಡಿಯದ ಆಶ್ರಿತ ರಾಜ್ಯಗಳಲ್ಲಿ ಯಾವ ತರದ ಬದಲಾವಣೆಗಳನ್ನು ಮಾಡಬೇಕೆಂಬ ಸಂಗತಿಯನ್ನು ವಿಚಾರಿಸಲಿಕ್ಕೆ ನೇಮಿಸಲ್ಪಟ್ಟ ಕಮಿಶನಿನ ಮೆಂಬರರಾದ ಕರ್ನಲ್ ಸಿಡ್ನೀ ಪೀಲ್ ಮತ್ತು ಪ್ರೊಫೆಸರ್ ಹೊಲ್ಡ್ಸ್‌ವರ್ತ್ ಎಂಬವರಿಬ್ಬರೂ ೧೩ನೇ ತಾರೀಕಿನಲ್ಲಿ ಮುಂಬಾಯಿಗೆ ಬಂದಿಳಿದಿರುವರು.

— ಇಂಡಿಯದ ರೋಡ್ ಡೆವೆಲೋಪ್‌ಮೆಂಟ್ ಕಮಿಟಿಯವರ ಸಭೆಯು ೧೮ನೇ ತಾರೀಕು ೧೧ ಘಂಟೆಗೆ ಡಿಲ್ಲಿಯ ಲೆಜಿಸ್ಲೇಟಿವ್ ಎಸೆಂಬ್ಲಿ ಹೋಲಿನಲ್ಲಿ ಜರಗುವುದು.

— ಪಂಡಿತ ಮದನಮೋಹನ ಮಾಲವೀಯರು ಬನಾರಸಿನ ಹಿಂದೂ ಯುನಿವರ್ಸಿಟಿಗಾಗಿ ರಜಪುತಾನದಲ್ಲಿ ೧೧ ಲಕ್ಷ ರೂಪಾಯಿ ವಂತಿಗೆಯಿಂದ ಕೂಡಿಸಿರುವರು.

— ಸಂಯುಕ್ತ ಸಂಸ್ಥಾನದ ಮುಖ್ಯ ಪಟ್ಟಣವು ಇಷ್ಟರ ವರೆಗೆ ಅಲ್ಲಹಾಬಾದ ಆಗಿತ್ತು. ಈಗ ಲಕ್‌ನೌ ಪಟ್ಟಣವನ್ನು ಅದರ ಮುಖ್ಯ ಪಟ್ಟಣವಾಗಿ ಮಾಡುವದೆಂದು ನಿರ್ಣಯಿಸಿರುತ್ತಾರೆ. ಆ ಸಂಸ್ಥಾನದ ನ್ಯಾಯ ವಿಧಾಯಕ ಸಭೆಯ ಕಟ್ಟಡವನ್ನು ಲಕ್‌ನೌನಲ್ಲಿ ಕಟ್ಟಿ ಆಗದೆ ಇದ್ದುದರಿಂದ ಈ ಸರ್ತಿಯ ನ್ಯಾಯವಿಧಾಯಕ ಸಭೆಯ ಅಧಿವೇಶನವನ್ನು ಕೂಡಲು ಸಾಧ್ಯವಾಗಲಿಲ್ಲ.

— ಮದರಾಸು ಸರಕಾರದವರು, ಆರೋಗ್ಯ ಮತ್ತು ಮಕ್ಕಳ ವಿಚಾರವನ್ನು ವಿಶೇಷ ರೀತಿಯಲ್ಲಿ ಕಲಿತು ಬರುವುದಕ್ಕಾಗಿ ಇಬ್ಬರು ದಾಕ್ತಾರರನ್ನು ಇಂಗ್ಲೆಂಡಿಗೆ ಕಳುಹಿಸಬೇಕೆಂದು ನಿರ್ಣಯಿಸಿರುವರು. ಇಬ್ಬರಲ್ಲಿ ಒಬ್ಬರು ಲೇಡಿ ಡೋಕ್ಟರ್.

— ಇದೇ ೧೯ನೇ ತಾರೀಕಿನಿಂದ ಬೊಂಬೆ ಕ್ರೋನಿಕಲ್ ಎಂಬ ಪತ್ರಿಕೆಯು ಒಂದೇ ದಿನ ಡಿಲ್ಲಿಯಿಂದಲೂ, ಮುಂಬಾಯಿಯಿಂದಲೂ ಹೊರಡುವುದು.

— ಇಂಗ್ಲೆಂಡಿನಿಂದ ಗುಜರಾತಿ ಮತ್ತು ಒರಿಸ್ಸಾ ನೆರೆಯ ಹಾವಳಿಯ ನಿವಾರಣೆಗಾಗಿ ಇಂಗ್ಲೆಂಡಿನಿಂದ ವಂತಿಗೆಯಾದ ಹಣವನ್ನು, ಮಹಾರಾಜರು ಮುಂಬಾಯಿ ಸರಕಾರಕ್ಕೆ ಕಳುಹಿಸಿರುವರು. ಇದರಲ್ಲಿ ೯೬,೦೦೦ ರೂಪಾಯಿ ಮುಂಬಾಯಿ ಫಂಡಿಗೆ, ಬಿಹಾರ ಒರಿಸ್ಸಾ ಫಂಡಿಗೆ ೪,೮೦೦ ರೂಪಾಯಿ.

— ಈಗ ಬರಲಿಕ್ಕಿರುವ ರೋಯಲ್ ಕಮಿಶನಿನ ಅಧ್ಯಕ್ಷರಾದ ಸರ್ ಜೋನ್ ಸ್ಯಾಮನ್ನರು ಇಂಡಿಯದ ವ್ಯೈಸ್‌ರೋಯರಾಗುವರೆಂದು ವಾರ್ತೆಯಿದೆ.

— ಒರಿಸ್ಸಾ ದೇಶದ ಕರಾವಳಿಯನ್ನು ಸರ್ವೆ ಮಾಡುವುದಕ್ಕಾಗಿ ಒಂದು ವಿಮಾನವನ್ನು ತರಿಸಿರುವರು. ಈ ವಿಮಾನವು ೨೫೦ ಮೈಲು ಸಂಚರಿಸಿ ಕಟಕ್ ಪಟ್ಟಣದಲ್ಲಿ ಇಳಿಯುವಾಗ ಅದರ ಯಂತ್ರವು ಹಾಳಾಗಿ ಕೆಳಗೆ ಬಿತ್ತು.

— ಇಂಡಿಯವನ್ನು ಸಂಚರಿಸಿ ನೋಡಲಿಕ್ಕೆ ಒಸ್ಟ್ರೇಲಿಯದ ಮೆಲ್‌ಬೋರ್ನ ಪಟ್ಟಣದ ಗ್ರಾಮರ್ ಶಾಲೆಯ ೨೦ ಮಂದಿ ಹುಡುಗರು ಬಂದಿರುವರು. ಇವರು ಡಿಲ್ಲಿಗೆ ಬಂದಾಗ ಇಂಡಿಯದ ಸರ್ವಸೇನಾಧಿಪತಿಗಳು ಇವರಿಗೆ ಔತಣವನ್ನು ಕೊಟ್ಟರು.

ದಕ್ಷಿಣ ಕನ್ನಡ

ಮಂಗಳೂರು: — ಈ ವರುಷ ತಾಲೂಕು ಬೋರ್ಡ ಮೆಂಬರಿಕೆಗೆ ಮಂಗಳೂರು ಸರ್ಕಲಿನಿಂದ ಒಬ್ಬರು, ಬಂಟವಾಳ ಸರ್ಕಲಿನಿಂದ ಒಬ್ಬರು, ಪಾಣೆಮಂಗಳೂರು ಸರ್ಕಲಿನಿಂದ ಒಬ್ಬರು, ಗುರುಪುರ ಸರ್ಕಲಿನಿಂದ ಇಬ್ಬರು, ಸುರತಕಲ್ ಸರ್ಕಲಿನಿಂದ ಒಬ್ಬರು ಮುಲ್ಕಿ ಸರ್ಕಲಿನಿಂದ ಇಬ್ಬರು ಸದಸ್ಯರು ಬೇಕಾಗಿರುವರು. ಉಮೇದ್ವಾರರು ನೋಮಿನೇಶನ್ ಪತ್ರಗಳನ್ನು ತಾ. ೬-೨-'೨೮ನೇ ದಿನ ಮಧ್ಯಾಹ್ನ ಘಂಟೆ ೧೧ರಿಂದ ೪ರ ವಳಗೆ ಹಾಜರುಮಾಡತಕ್ಕದೆಂದೂ, ಚುನಾವಣೆಯ ದಿನಗಳು ಈ ಕೆಳಗಿನಂತೆ ಆಗಿರುವವೆಂದೂ ತಿಳಿಯುತ್ತೇವೆ. ಬಂಟವಾಳ ಮತ್ತು ಪಾಣೆಮಂಗಳೂರು ಸರ್ಕಲ್‌ಗಳಿಗೆ ಮಾರ್ಚ ೫. ಮಂಗಳೂರು ಮತ್ತು ಗುರುಪುರ ಸರ್ಕಲ್‌ಗಳಿಗೆ ಫೆಬ್ರವರಿ ೨೭. ಮುಲ್ಕಿ ಮತ್ತು ಸುರತಕಲ್ ಸರ್ಕಲುಗಳಿಗೆ ಮಾರ್ಚ ೧೨. ಆಯಾಯ ಸರ್ಕಲುಗಳಿಗೆ ಈ ಕೆಳಗಿನವರು ಉಮೇದ್ವಾರರು ಎದುರ್ಬ ಬರುವರೆಂದು ವದಂತಿಯಿದೆ. ಮಂಗಳೂರು ಸರ್ಕಲಿಗೆ ಶ್ರೀಯುತ ರಾವ್‌ಬಹದೂರ್ ನೆಲ್ಲಿಕ್ಕಾ ವೆಂಕಟರಾವ್, ಬಂಟವಾಳ ಸರ್ಕಲಿಗೆ, ಶ್ರೀಯುತರಾದ ಬಿ. ಎಲ್. ಹಾಮದ್, ದೇವಸ್ಥಾನದ ಆಡಳ್ತೆದಾರರಾದ ಬಾಬು ಕಾಮತ್, ಪಾಣೆಮಂಗಳೂರು ಸರ್ಕಲಿಗೆ ಶ್ರೀಯುತರಾದ ನರಿಕೊಂಬು ರಾಮರಾವ್, ಶಿವವಿಠಲ, ಸದಾಶಿವ ಅಡಿಗ, ಸಿದ್ದಣ್ಣ ಶೆಟ್ಟಿ, ಬಿ. ಎಲ್. ಹಾಮದ್, ಪಾಣೆಮಂಗಳೂರು ಶ್ರೀನಿವಾಸಪೈ, ಗುರುಪುರ ಸರ್ಕಲಿಗೆ ಶ್ರೀಯುತರಾದ ಕರಿಯಂಗಳ್ ಮುತ್ತಯ ಸೆಟ್ಟಿ, ಕಟ್ಟೆಮಾರು ರಘುಚಂದ್ರ ಬಲ್ಲಾಳ್, ಸುರತಕಲ್ ಸೆಂಟರಿಗೆ, ಬಂಟವಾಳ ಟೆಂಪಲ್ ಸೆಕೆಂಡರಿ ಸ್ಕೂಲಿನ ಹೆಡ್ ಮಾಸ್ಟರ್ ರಾ॥ ರಾಮಕಾಮತ್ B. A. L. T. ಮತ್ತು ವಿದ್ಯಾದಾಯಿನೀ ಶಾಲಾ ಹೆಡ್ ಮಾಸ್ತರ್ ರಾ॥ ಎಚ್. ದಾಮೋದರರಾವ್, ಮುಲ್ಕಿ ಸರ್ಕಲಿಗೆ ಶ್ರೀಯುತರಾದ ರಾಮಕೃಷ್ಣ ಪೂಂಜ, ಬೋಳ ಮಾಧವರಾವ್ ಮತ್ತು ಕೋಟಿ ಸೆಟ್ಟಿ, ಇವರು ನಿಲ್ಲುವರಾಗಿ ತಿಳಿದುಬರುತ್ತದೆ.

ತಾರೀಕು ೧೪—೧—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೬ ಮರಣಗಳಾದವು. ಈ ಪೈಕಿ ಮಲೇರಿಯಾ ಜ್ವರದಿಂದ ೧, ಉದರ ರೋಗದಿಂದ ೬, ಶ್ವಾಸಕೋಶ ರೋಗದಿಂದ ೩, ಶಿಶು ಮರಣ ೧, ಇತರ ಎಲ್ಲಾ ಕಾರಣಗಳಿಂದ ೧೫ ಮರಣಗಳು ಆಗಿವೆ. ಜನನಸಂಖ್ಯೆಯು ಮಿಲೆಗೆ ಸರಾಸರಿ ೪೭-೧ರಂತೆ. ತಿರುಪತಿಯಿಂದ ಮರಳುವ ಒಬ್ಬ ಯಾತ್ರಿಕಳಿಗೆ ಕಣ್ಣಾನೂರಿನಲ್ಲಿ ಕೊಲೆರಾ ರೋಗವು ತಟ್ಟಿತು. ಅವಳು ಇಲ್ಲಿಗೆ ತಲಪಿದೊಡನೆ ವೆನ್‌ಲೋಕ್ ಆಸ್ಪತ್ರೆಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಲಗಿಸಿ ರೋಗಶಮನವನ್ನು ಮಾಡುವುದಕ್ಕಾಗಿ ಚಿಕಿತ್ಸೆಯು ನಡೆಯುತ್ತಿದೆ.

ಇದೇ ತಿಂಗಳ ತಾರೀಕು ೨೨ನೇ ಆದಿತ್ಯವಾರ ಬೆಳಿಗ್ಗೆ ೭॥ ಘಂಟೆಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಎನ್. ಟಿ. ವೆಂಕಪ್ಪನವರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘದ ಸಾಧಾರಣ ಸಭೆಯು ಕಳೆದ ೭ನೇ ತಾರೀಕಿನ ದಿನ ಮಂಗಳೂರು ಹಾಯರ್ ಎಲಿಮೆಂಟ್ರಿ ಟ್ರೈನಿಂಗ್ ಶಾಲೆಯಲ್ಲಿ ಜರಗಿತು. ಕುಂದಾಪುರ ತಾಲೂಕು ಹೊರತು ಇತರ ತಾಲೂಕುಗಳ ಸಂಘದವರು ಹಾಜರಿದ್ದರು. ಬೆಳಿಗ್ಗೆ ಕುರ್ಕಾಲು ಶಾಲಾ ಹೆಡ್ಮಾಸ್ತರ್ ಗಣಪತಿಸೆಟ್ಟರ ಅಧ್ಯಕ್ಷತೆಯಲ್ಲಿ ವಿಷಯನಿಯಾಮಕ ಮಂಡಳಿಯ ಸಭೆ ಜರಗಿತು. ಸಾಯಂಕಾಲ ರಾ॥ ಅತ್ತಾವರ ಬಾಲಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪ್ರಾಥಮಿಕ ವಿದ್ಯಾಭ್ಯಾಸದ ಅವಶ್ಯಕತೆಯ ಕುರಿತು ರಾ॥ ಸೆಟ್ಟರು ಚೆನ್ನಾಗಿ ಭಾಷಣ ಮಾಡಿದರು. ಮುಖ್ಯವಾಗಿ ಈ ಕೆಳಗಿನ ಠರಾವುಗಳು ಪಾಸಾದವು.

ಟ್ರೈನಾಗದ ಲೋವರ್ ಗ್ರೇಡಿನವರಿಗೆ ೯೬-೦-೦, ಹಾಯರ್ ಗ್ರೇಡಿನವರಿಗೆ ೧೨೦—೦—೦, ಸೆಕೆಂಡರಿ ಗ್ರೇಡಿನವರಿಗೆ ೧೮೦-೦-೦, ಟ್ರೈನಾದವರಿಗೆ ೧೪೪—೦—೦, ೧೮೦—೦—೦, ೨೪೦—೦—೦, ಗ್ರೇಂಟ್ ಸಿಕ್ಕಬೇಕು.

ಟ್ರೈನಿಂಗ್ ಶಾಲೆಗಳಲ್ಲಿ ಹೋರ್ಟಿಕಲ್ಚರ್ ಮತ್ತು ನೈಗೆಯನ್ನು ಕಲಿಸಬೇಕು. ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿಗೆ ತಾಲೂಕು ಸಂಘಗಳಿಂದ ಕಡಿಮೆ ಪಕ್ಷ ಇಬ್ಬರು ರಿಪ್ರೆಸೆಂಟಟಿವ್‌ಗಳನ್ನು ಕಳುಹಿಸಬೇಕು.

ಕಡವಿನ ಹಡದೆ ರಿಯಾಯಿತಿಯನ್ನು ಉಪಾಧ್ಯಾಯರಿಗೆ ತೋರಿಸಬೇಕು. ಸಾಧಾರಣ ರೋಗಗಳನ್ನು ಗುಣಪಡಿಸುವ ಉಪಾಯಗಳನ್ನು ಉಪಾಧ್ಯಾಯರಿಗೆ ಕಲಿಸಬೇಕು. ಟೀಚರ್ ಮೆನೇಜರರನ್ನು ವೋಟರ್ಸ್ ಪಟ್ಟಿಗೆ ದಾಖಲು ಮಾಡಬೇಕು. ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಸ್ಕೌಟ್ ದಳವನ್ನು ತೆರೆಯಲು ಸಹಾಯ ಮಾಡಬೇಕು. ಇವೇ ಮೊದಲಾದ ಅನೇಕ ಠರಾವುಗಳು ಸರ್ವಾನುಮತದಿಂದ ಮಂಜೂರಾಗಿ ಸರಕಾರದವರ ಮುಂದೆ ಇಡಬೇಕೆಂದಾಯಿತು.

ಮಂಗಳೂರು ಶಹರು ಪೈಕಿ ಸೆಂಟ್‌ಲೆಂಡ್ ಪೇಟೆಯಲ್ಲಿ ಶ್ರೀ. ಗೋಕರ್ಣನಾಥ ವೆಂಕಟೇಶ ಸೇವಾಸಮಿತಿಯವರು ಇತ್ತಲಾಗೆ ನೂತನವಾಗಿ ಕಟ್ಟಿಸಿದ ಸೂಟರ್ ವಿದ್ಯಾರ್ಥಿ ಭವನವನ್ನು ತಾ. ೫—೨—೨೮ರಲ್ಲಿ ಶ್ಯಾಮ ಘಂಟೆ ೪ಕ್ಕೆ ದಕ್ಷಿಣ ಕನ್ನಡಾ ಜಿಲ್ಲಾ ಸಬ್‌ಬೋರ್ಡಿನೆಟ್ ಜಡ್ಜ್ ಮ॥ ರಾ. ರಾ. ಎ. ವರ್ಗಿಸ್, ಬಿ. ಎ. ಬಿ. ಯಲ್, ಅವರ್ಗಳವರ ಅಧ್ಯಕ್ಷತೆಯಲ್ಲಿ ತೆರೆಯೋಣಾಗುವದು. ಮತ್ತು ಸದರಿ ಸಮಿತಿಯ ನಾಲ್ಕನೇ ವರ್ಷಾವಧಿ ಉತ್ಸವವು ಸದರಿಯವರ ಅಧ್ಯಕ್ಷತೆಯಲ್ಲಿಯೇ ಜರಗುವದು. ಈ ಶುಭಕಾರ್ಯಗಳಿಗೆ ಮಹಾಜನರು ದಯವಿಟ್ಟು ಕ್ಲಪ್ತ ಸಮಯಕ್ಕೆ ಬಂದು ನೆರವೇರಿಸಿ ಕೊಡುವರೆ ಸಮಿತಿಯವರ ಪ್ರಾರ್ಥನೆ.

ಮುಸಲ್ಮಾನ ಮತಸ್ಥರಾದ ಕಾರ್ಕಳದ ಸಯ್ಯದನೂರುಲ್ಲಾ ಸಾಹೇಬರೆಂಬವರು ಬೇರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಂಗ್ಲೆಂಡಿನಿಂದ ಹೊರಟು ನಿನ್ನೆ ಇಲ್ಲಿಗೆ ಬಂದು ತಲಪಿದರು. ಅವರನ್ನು ಎದುರುಗೊಳ್ಳಲು ರೈಲ್ವೇ ಸ್ಟೇಶನಿನಲ್ಲಿ ಅನೇಕ ಮುಸಲ್ಮಾನರು ಕಿಕ್ಕಿರಿದಿದ್ದು ಅವರು ಬಂದೊಡನೆ ಅವರಿಗೆ ಪುಷ್ಪ ಮಾಲಿಕೆಯನ್ನು ಹಾಕಿ ಕರೆದೊಯ್ದರು.

ಮಂಗಳೂರು - ಮಲ್ಪೆ ರೈಲುವೇ ಲೈನಿನ ಮಾರ್ಗವನ್ನು ಸರ್ವೇ ಮಾಡುವ ಜನರು ಈಗ ಬಪ್ಪೆಯಲ್ಲಿರುವರು.

ತೀರ್ಥ ಹಳ್ಳಿಯ ಪ್ರತಿಷ್ಠಿತ ಗೃಹಸ್ಥರಾದ ಶ್ರೀಯುತ ಜೋನ್ ಡಿಸೋಜರವರು (ಈಗ ಜ್ಞಾನೇಂದ್ರ ಪ್ರಭುಗಳು) ಕಳೆದ ನವೆಂಬರ ತಿಂಗಳಲ್ಲಿ ಮಂಗಳೂರು ಆರ್ಯಸಮಾಜದ ಮೂಲಕ ಹಿಂದೂ ಧರ್ಮದೀಕ್ಷೆಯನ್ನು ಹೊಂದಿದ್ದರಷ್ಟೇ ಇದಕ್ಕಾಗಿ ಸಂತೋಷ ಪಟ್ಟ ತೀರ್ಥ ಹಳ್ಳಿಯ ಹಿಂದೂ ಮಹಾಜನಗಳೇ ಕಳೆದ ೨೬ – ೧೨ – ೨೭ರಲ್ಲಿ ಅಲ್ಲಿಯ ಅಂಬಾ ಪ್ರಸಾದಿಕ ನಾಟಕ ಶಾಲೆಯಲ್ಲಿ ಶ್ರೀಮಾನ್ ತೆಂಗಿನ ಕೆರೆ ಸುಬ್ರಹ್ಮಣ್ಯ ಭಟ್ಟರವರ ಅಧ್ಯಕ್ಷತೆಯಲ್ಲಿ ಮಹಾಸಭೆ ನೆರೆದು ಬಂದು ಕೆಲವು ಮಹನೀಯರ ಭಾಷಣಗಳೊಂದಿಗೆ ಶ್ರೀಯುತ ಜ್ಞಾನೇಂದ್ರ ಪ್ರಭುಗಳ ಧೈರ್ಯ ಮತ್ತು ಸ್ವಧರ್ಮ ಪ್ರೇಮವನ್ನು ಕೊಂಡಾಡಿ ಅಭಿವಂದನೆಯನ್ನು ಮಾಡಿದರು.

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬಂದಾಗ ಕೆನರಾ ಹ್ಯಾಸ್ಕೂಲನ್ನು ಸಂದರ್ಶಿಸಿದ ಸ್ಮಾರಕವಾಗಿ, ಅವರ ಹೆಸರನ್ನು ಶಾಲೆಯಲ್ಲಿ ಚಿರಸ್ಥಾಯಿಯಾಗಿರಿಸುವಂತೆ, ನೈಸರ್ಗಿಕ ವಿಜ್ಞಾನಶಾಸ್ತ್ರ (Natural Science) ವನ್ನು ಕಲಿಸುವ ಏರ್ಪಾಡನ್ನು ಮಾಡುವದಕ್ಕಾಗಿ ಅವರ ಹೆಸರಿನಲ್ಲಿ ಒಂದು ಫಂಡನ್ನು ಸ್ಥಾಪಿಸಿರುವರಷ್ಟೆ! ಈ ಫಂಡಿಗೆ ಮ॥ ರಾ॥ ರಾ॥ ಅಮ್ಮೆಂಬಳ ಉಪೇಂದ್ರ ಪೈ. ಅವರ್ಗಳ್ ಬಿ. ಎ. ಕಡಲೂರ್ ಜಿಲ್ಲೆಯ ಕಲೆಕ್ಟರ್ ಇವರು ೧೦೦೦ ರೂಪಾಯಿಗಳನ್ನು ದಾನಮಾಡಿರುವರು. ಇವರಿಗೆ ಕೆನರಾ ಹ್ಯಾಸ್ಕೂಲಿನವರು ಚಿರಋಣಿಯಾಗಿರುವರು.

ಇಲ್ಲಿಯ ಗವರ್ನ್ಮೆಂಟ್ ಕೊಲೇಜಿನ ವಾರ್ಷಿಕ ವರ್ಧಂತಿ ಉತ್ಸವವು ಜನವರಿ ೨೮ನೇ ಶನಿವಾರ ದಿನ ಆಚರಿಸಲ್ಪಡುವದು. ಪ್ರಾತಃಕಾಲ ೭-೩೦ಕ್ಕೆ ಪ್ರಾರಂಭಿಸಿ ಆಟಗಳು, ಫಲಹಾರ, ವಿಷಯ ನಿಯಾಮಕ ಸಭೆ, ಸಾಯಂಕಾಲ ಇನಾಮು ಹಂಚೋಣ, ಕನ್ನಡ ಮತ್ತು ಇಂಗ್ಲಿಷ್ ನಾಟಕಗಳ ಅಭಿನಯ ಇವೆಲ್ಲ ನಡೆಯುವವು. ಬಾಸೆಲ್ ಮಿಶ್ಯನಿನ ಚೆಯರ್‌ಮೇನರಾದ ರೆವರೆಂಡ್ ಎ. ಶ್ಲೋಸರರು ಅಧ್ಯಕ್ಷಸ್ಥಾನವನ್ನು ವಹಿಸುವರು.

ಹರಿಕೆಳ: — ಇಲ್ಲಿಯ ಪ್ರಸಿದ್ಧ ಕತ್ತಿ ಮೊಗ್ರು ಕೋಳಿಕಟ್ಟವೂ ಭೂತಗಳ ಕೋಲವೂ ಕಳೆದವಾರ ಬಹುಗದ್ದಲದಿಂದ ಜರಗಿತು. ಸಾವಿರಾರು ಕೋಳಿಗಳು ಸಂಕಟಕರವಾದ ಹಿಂಸೆಗಳಿಂದ ಜೂಜುಗಾರರ ವಿನೋದಕ್ಕಾಗಿ ಹತವಾಗುವುದೂ ವಿವಿಧ ಜುಗಾರಿ ಆಟಗಳು ಬಹಿರಂಗವಾಗಿ ನಡಿಯುತ್ತಿರುವುದೂ ಈ ಜಾತ್ರೆಯಲ್ಲಿಯ ವಿಶೇಷತೆಗಳು! ಅನೇಕ ಸಭ್ಯಗೃಹಸ್ಥರೆಂದೆನ್ನಿಸುವವರೂ ಈ ಕೆಟ್ಟ ಕಾರ್ಯಗಳಲ್ಲಿ ಭಾಗಿಗಳಾಗಿದ್ದುದು ಬಹಳ ದುಃಖಕರ!!

ತಾರೀಕು ೧೨ನೇ ಗುರುವಾರ ಮಂಗಳೂರಿನ ಶ್ರೀ ಜ್ಞಾನೋದಯ ಸಮಾಜದ ವೈದಿಕ ಭಜನೆ ಮಂಡಳಿಯವರು ಈ ಗದ್ದಲದ ಮಧ್ಯಕ್ಕೆ ಬಂದು ಭಕ್ತಿರಸಪೂರ್ಣವಾದ ಭಜನೆ ಕೀರ್ತನೆಗಳನ್ನು ಹಾಡಿ ಜನರನ್ನು ಧರ್ಮಪರಾಯಣರಾಗುವಂತೆ ಆಕರ್ಷಿಸುತ್ತಿದ್ದರು. ನಡು ನಡುವೆ ಶ್ರೀಯುತ ಮೋಹನಪ್ಪ ತಿಂಗಳಾಯರು ಜೂಜು, ಪಶುಬಲಿ. ವಿಗ್ರಹಾರಾಧನೆ, ಭೂತ, ಪ್ರೇತ, ಮಾಟಗಳ ವಿಷಯವಾಗಿ ಹೃದಯಂಗಮವಾದ ಭಾಷಣಗಳನ್ನು ಮಾಡಿ, ಜನರಲ್ಲಿ ಒಂದಿಷ್ಟು ಜಾಗ್ರತೆಯುಂಟಾಗುವಂತೆ ಮಾಡಿದರು. ಸಮಾಜದವರ ಈ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವಂತೆ ಮಹಾರಾಜೇಶ್ರಿ ಮಣಿಪಟ್ಣ ಸುಬ್ಬಯ ಸೆಟ್ಟಿಯವರು ಅಗತ್ಯವುಳ್ಳ ಸಹಾಯವನ್ನು ಒದಗಿಸಿದ್ದಲ್ಲದೆ ಸಮಾಜದವರನ್ನು ಭೋಜನಫಲಹಾರಗಳಿಂದ ಸತ್ಕರಿಸಿದರು.

ಹೊಸದುರ್ಗ: — ಇಲ್ಲಿಯ ಗೌಡಸಾರಸ್ವತ ತರುಣರ ಕೀರ್ತನಾ ಮಂಡಳಿಯವರ ಒಂದು ಕೂಟವು ವಕೀಲ ಶ್ರೀಯುತ ನರಸಿಂಹ ಕಮ್ತಿರ ಅಧ್ಯಕ್ಷತೆಯಲ್ಲಿ ಇಲ್ಲಿಯ ಶ್ರೀ ವರದರಾಜ ವೆಂಕಟರಮಣ ಸ್ವಾಮಿ ದೇವಳದಲ್ಲಿ ಕೂಡೋಣಾಗಿ ವರ್ಷಂಪ್ರತಿ ನಡಿಯುವಂಥಾ ಕೀರ್ತನಾ ಸಪ್ತಾಹವನ್ನು ಇದೇ ತಿಂಗಳ ತಾರೀಕು ೨೭ರಲ್ಲಿ ಪ್ರಾತಃಕಾಲ ೭ ಗಂಟೆಗೆ ಪ್ರಾರಂಭಿಸಬೇಕಾಗಿ ಸರ್ವಮತದಿಂದ ನಿರ್ಣಯಿಸಲಾಯಿತು.

ಇಲ್ಲಿ ಸಮೀಪದ ಕೋಟಚೇರಿಯ ಪೇಟೆಯಲ್ಲಿ ಜೂಜಿನ ಸಂಘವೇ ಸ್ಥಾಪಿಸೋಣಾಗಿಯದೆಂತ ವಾರ್ತೆ. ಗುಮಾನಪಟ್ಟ ವ್ಯಕ್ತಿಗಳ ಚಹರೆಯಿಂದಲೂ ಪಾಲಿ ವರ್ತಮಾನದಿಂದಲೂ ಮೇಲಿನ ಸಂಗತಿಯನ್ನು ಪುಷ್ಟೀಕರಿಸುತ್ತವೆ. ಪೋಲಿಸಿನವರದೊಂದು ಕಣ್ಣು ಈ ಪ್ರಾಂತ್ಯದಲ್ಲಿ ಇದ್ದರೆ ಉತ್ತಮವೆಂದು ಕಾಣುತ್ತದೆ.

ಕಾರ್ಕಳ: — ಈ ತಾಲೂಕಿನ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಮಹಾಸಭೆಯು ಕಾರ್ಕಳ ಬೋರ್ಡ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾ. ೨೮ನೇ ಶನಿವಾರ ಅಪರಾಹ್ನ ೧ ಘಂಟೆಗೆ ಸರಿಯಾಗಿ, ಮ॥ ರಾ. ರಾ. ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಹೆಡ್ ಮಾಸ್ತರ್ ಯು. ಮಂಗೇಶರಾವ್ ಬಿ.-ಎ., ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗುವದು.

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್ Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ [illegible] ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕುಳಿತು ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, [illegible] ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರು ಬಸ್ಸುಗಳು ಹೊರಡುವ ಟೈಮ್‌ಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ [illegible] ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, [illegible] 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, [illegible] 12-30ಕ್ಕೆ [illegible] ಮೋಟಾರ್ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅಯಾ ದಿನವೇ [illegible]

(3) [illegible] ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೆ 11 ಘಂಟೆಗೆ [illegible] 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ [illegible] ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು [illegible] ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ [illegible] 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ [illegible]

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ [illegible] ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು [illegible] ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ಈ ಮೋಟರು ಸರ್ವಿಸ್ಸಿನಲ್ಲಿ ಪ್ರಯಾಣಿಕರಿಗೆ ಇರತಕ್ಕ ಅನುಕೂಲತೆ.

(4) ಚಾರ್ಮಾಡಿ ಘಾಟಿಯಲ್ಲಿ [illegible] ಯಾತರದೊಂದೂ ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ಕಡೆಗಳಿಂದ ಹೊರಡುವ ಪ್ಯಾಸೆಂಜರುಗಳಿಗೆ ಮಾರ್ಗದಲ್ಲಿ ಬಂಟವಾಳ, ಬೆಳ್ತಂಗಡಿ, [illegible] ಮೂಡಿಗೆರೆ, ಚಿಕ್ಕಮಗಳೂರು, ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ಇತರರಿಗೂ ಅನುಕೂಲವಾದ ಹೊಟೆಲುಗಳಿವೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮ್ಯನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. [illegible] ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ [illegible] ಕಾರ್ಕಳ ಮಾರ್ಗವಾಗಿಯೂ

ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ

ರಚಿತವಾಗಿ, 37 ಫೀಟು ಉನ್ನತವಾಗಿ [illegible] ಮೇಲೆ ನೆಲಸಿರುವ,

ಶ್ರೀ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible] ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ [illegible] ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ [illegible] ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ತಂಕಿರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ಹಿಂದುಸ್ಥಾನೀ ಸೇವಾದಲದ ವ್ಯಾಯಾಮ ಮಂದಿರ ಬಾಗಲಕೋಟೆ.

ಕರ್ನಾಟಕದ ಮಹಾಜನರೊಡನೆ ವಿಜ್ಞಾಪನೆ.

ಪ್ರಕಟನೆ—೧.

ಹಿಂದುಸ್ಥಾನವು ಕೈಕೊಂಡಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಕೆಲಸವನ್ನು ಅತ್ಯಂತದಕ್ಷತೆಯಿಂದಲೂ ಶಿಸ್ತಿನಿಂದಲೂ ನೆರವೇರಿಸಲು ತಕ್ಕ ಶಿಕ್ಷಣವನ್ನು ಹೊಂದಿರುವ ರಾಷ್ಟ್ರಸೇವಕರ ಆವಶ್ಯಕತೆಯು ಸರ್ವಾನುಮೋದಿತವಾಗಿರುವುದು. ಹಿಂದುಸ್ಥಾನೀ ಸೇವಾದಲದವರಾದರೊ ತಮ್ಮ ಧ್ಯೇಯಕ್ಕನುಸಾರವಾಗಿ ಈ ಶಿಕ್ಷಣದ ಕಡೆಗೆ ಇತ್ತೀಚೆಗೆ ಹೆಚ್ಚು ನಿಗಾ ಕೊಡಬೇಕೆಂದು ನಿಶ್ಚೈಸಿರುವರು. ದೇಶದಲ್ಲಿಯ ಪ್ರಜಾವರ್ಗದ ದೇಹದಾರ್ಢ್ಯತೆಯು ದಿನದಿಂದ ದಿನಕ್ಕೆ ಕ್ಷೀಣಾವಸ್ಥೆಹೊಂದುತ್ತಿವೆ ಎಂಬುದೂ ದೇಶದ ತರುಣರ ಆರೋಗ್ಯ ಮತ್ತು ಶರೀರ ವ್ಯಾಯಾಮಗಳ ಕಡೆಗೆ ಯೋಗ್ಯ ಗಮನಕೊಡುವುದು ಅತ್ಯಾವಶ್ಯಕವೆಂಬುದೂ ನಿರ್ವಿವಾದವಿರುತ್ತದೆ. ಮದ್ರಾಸ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಡಾಕ್ಟರ್ ಅನ್ಸಾರಿಯವರು ತಮ್ಮ ಅಧ್ಯಕ್ಷ ಪದವಿಯ ಭಾಷಣದಲ್ಲಿ ಕೂಡ ಈ ಪ್ರಶ್ನೆಯ ಮಹತ್ವದ ಕಡೆಗೆ ಜನಾಂಗದ ಲಕ್ಷ್ಯವನ್ನೆಳೆಯಲೆತ್ನಿಸಿರುವುದು ಶುಭ ಚಿಹ್ನೆಯೇ ಇರುತ್ತದೆ. ಶಕ್ತಿಹೀನರೂ ನಿಸ್ತೇಜರೂ ನಿರ್ವೀರ್ಯರೂ ಇರುವ ಯುವಕರಿಗೆ ಬರೀ ಮಾನಸಿಕ ಶಿಕ್ಷಣದಿಂದ ಮಾತ್ರವೇ ಅಷ್ಟು ಉಪಯೋಗವಾಗುವಂತಿಲ್ಲ. ಆದುದರಿಂದ ಎಲ್ಲಾ ತರುಣರಿಗೆ ಮಾನಸಿಕ ಶಿಕ್ಷಣದ ಜೊತೆಗೆ ಶಾರೀರಿಕ ಶಿಕ್ಷಣವನ್ನು ಕೊಡುವುದು ತಮ್ಮ ಪ್ರಥಮ ಕರ್ತವ್ಯವೆಂದು ಹಿಂದೂಸ್ಥಾನೀ ಸೇವಾದಲದವರು ನಿಶ್ಚೈಸಿ ಕರ್ನಾಟಕದಲ್ಲಿ ಒಂದು ಮಧ್ಯವರ್ತಿ ವ್ಯಾಯಾಮ ಸಂಸ್ಥೆಯನ್ನು ತೆರೆಯಲು ಸಂಕಲ್ಪಿಸಿರುವರು. ಬಾಗಲಕೋಟೆಯಲ್ಲಿ ಅಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಲು ಅವಶ್ಯಕವಾದ ಏರ್ಪಾಡುಗಳನ್ನು ಕೈಕೊಂಡಿರುವರು. ಈ ಸಂಸ್ಥೆಯಲ್ಲಿ ಕೆಲವು ಮಂದಿ ಯುವಕರಿಗೆ ಇಂಥ ಶಿಕ್ಷಣಕೊಡುವುದು ಮಾತ್ರವಲ್ಲ, ಇಂಥ ಶಿಕ್ಷಣವನ್ನು ಇತರ ಕಡೆಗಳಲ್ಲಿಯೂ ಪ್ರಚಾರಕ್ಕೆ ತರಲು ಸಾಧ್ಯವಾಗುವಂತೆ ಸಮರ್ಥ ಶಿಕ್ಷಕರನ್ನು ತರಬೇತು ಮಾಡಬೇಕೆಂಬುದು ಕೂಡ ಈ ಸಂಸ್ಥೆಯ ಉದ್ದೇಶಗಳಲ್ಲೊಂದಾಗಿರುತ್ತದೆ. ಈ ಸಂಸ್ಥೆಯಲ್ಲಿ ಶಿಕ್ಷಣ ಹೊಂದುವ ಯುವಕರ ಸೇವೆಯನ್ನು ಕರ್ನಾಟಕದಲ್ಲಿಯೇ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಇದನ್ನು ಇಡೀ ಹಿಂದೂಸ್ಥಾನಕ್ಕೆ ಮಾದರಿಯಾಗುವಂತೆ ಮಾಡಬೇಕೆಂಬುದೇ ಕರ್ನಾಟಕ ದಲದ ಉದ್ದೇಶವಾಗಿದೆ.

ದಲದವರ ಈ ಉದ್ದೇಶವು ಈಗಾಗಲೇ ಕಾರ್ಯಕ್ಷೇತ್ರದಲ್ಲಿ ರೂಪುಗೊಳ್ಳುವದರಲ್ಲಿ ಬಂದಿದೆ. ಬಾಗಲಕೋಟೆಯಲ್ಲಿ ದಾನವಾಗಿ ದೊರೆತ ಸ್ಥಳದಲ್ಲಿ ದಲದವರು ಈ ಸಂಸ್ಥೆಯ ಕಟ್ಟಡವನ್ನು ಕಟ್ಟಬೇಕೆಂದು ನಿಶ್ಚಯಿಸಿ ಈಗಾಗಲೇ ಶಂಕುಸ್ಥಾಪನೆಯ ಸಮಾರಂಭವನ್ನು ನೆರವೇರಿಸಿ ಕಟ್ಟಡದ ಕೆಲಸಕ್ಕೆ ಪ್ರಾರಂಭಿಸಿರುವರು. ಇಡೀ ಕಟ್ಟಡದ ಖರ್ಚು ರೂಪಾಯಿ ೧೫,೦೦೦ ಆಗಬಹುದೆಂದು ಅಂದಾಜು ಮಾಡಲ್ಪಟ್ಟಿರುವದು. ಕಟ್ಟಡದ ಕೆಲಸವು ಜೋರಿನಿಂದ ನಡೆಯುತ್ತಿದ್ದು ಸಂಸ್ಥೆಯ ಪ್ರಾರಂಭ ಮಹೋತ್ಸವವನ್ನು ನೂತನ ಕಟ್ಟೋಣದಲ್ಲಿ ಇದೇ ಬರುವ ಜುಲೈ ತಿಂಗಳ ನಾಲ್ಕನೇ ತಾರೀಕಿನ ದಿವಸ ಜರಗಿಸಬೇಕೆಂದು ಸಹ ಗೊತ್ತಾಗಿರುವುದು. ಅಖಿಲ ಕರ್ನಾಟಕದ ಮಹನೀಯರು ಈ ಮಹತ್ವದ ಕೆಲಸಕ್ಕೆ ತಮ್ಮ ಬೆಂಬಲವನ್ನು ಕೊಟ್ಟು ನಮ್ಮ ಸದುದ್ದೇಶವನ್ನು ಪೂರ್ತಿಗೊಳಿಸಲು ಧನ ಸಹಾಯಮಾಡಬೇಕೆಂದು ನಾವೆಲ್ಲರೂ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ಕರ್ನಾಟಕಸ್ಥರೇ! ದಲದವರಾದ ನಾವು ನಿಮ್ಮ ಕೆಲಸಗಾರರು; ಧನಿಕರಾದ ನಿಮ್ಮ ಸಹಾಯವಿಲ್ಲದೆ ನಮ್ಮ ಉದ್ದೇಶವನ್ನು ಪೂರ್ತಿಮಾಡಿಕೊಳ್ಳಲಾರೆವು. ನಾವು ಕೆಲಸಮಾಡಬಲ್ಲೆವು; ಶ್ರಮವನ್ನು ಗುಣಿಸದೆ ದೇಶದಲ್ಲೆಲ್ಲ ತಿರುಗಿ ಭಿಕ್ಷೆಬೇಡಬಲ್ಲೆವು. ನಿಮ್ಮ ಸೂಕ್ತಸಲಹೆಗಳನ್ನು ತೆಗೆದುಕೊಂಡು ನಮ್ಮ ನಿಶ್ಚಿತ ಕಾರ್ಯದಲ್ಲಿ ಸಾಹಸದಿಂದ ಕೆಲಸಮಾಡಬಲ್ಲೆವು. ನಿಮ್ಮನ್ನು ನಂಬಿ ನಾವು ಕೈಕೊಂಡಿರುವ ಈ ಕಾರ್ಯದಲ್ಲಿ ನಮ್ಮನ್ನು ಮಧ್ಯೆ ಕೈಬಿಡದೆ ನಮ್ಮ ಸಂಕಲ್ಪವನ್ನು ನೆರವೇರಿಸಿ ಕೊಡಿರಿ. ಈ ಸಂಸ್ಥೆಯ ಮುಂದಿನ ಪರಿಣಾಮವು ಅತಿ ಮಹತ್ವದ್ದಿರುವುದೆಂದು ತಮಗೆ ಹೇಳಬೇಕಾಗಿಲ್ಲ.

ನೀವು ದಯಮಾಡಿ ಕೊಡುವ ಹಣವನ್ನು ನಮ್ಮ ಕೈಯಲ್ಲಿ ಈಗಲೇ ಕೊಡಿರಿ. ಸಮಕ್ಷಮ ಭೆಟ್ಟಿಯಾಗದಿರುವವರು—ಹಿಂದೂಸ್ಥಾನೀ ಸೇವಾದಲದ ಪ್ರಮುಖಕಾರ್ಯದರ್ಶಿಗಳಾದ ನಾ. ಸು. ಹರ್ಡೀಕರ, ಹುಬ್ಬಳ್ಳಿ ಇವರಿಗೆ ತಮ್ಮ ಕಾಣಿಕೆಯನ್ನು ಮಣಿಯಾರ್ಡರ ಮೂಲಕ ಕಳುಹಿಸಿ ಕೊಡಿರಿ.

೧. ಶ್ರೀನಿವಾಸರಾವ್ ಕೌಜಲಗಿ.	೬. ಕೆ. ರಂಗ ಅಯ್ಯಂಗಾರ
೨. ಹೊಸಕೊಪ್ಪ ಕೃಷ್ಣರಾವ್.	೭. ಟಿ. ಖುಶಾಲಪ್ಪಾ.
೩. ರಂಗರಾವ್ ದಿವಾಕರ.	೮. ಐ. ವಕುಪಾಲಪ್ಪಾ.
೪. ಹಿ. ನಾರಾಯಣ ರಾವ್.	೯. ದಾ. ಮ. ಲೇಂಗಡೆ.
೫. ವಾಮನರಾವ್ ನಾಯಕ.	೧೦. ನಾ. ಸು. ಹರ್ಡೀಕರ.

ಫರಂಗಿಪೇಟೆ ವಿದ್ಯಾವರ್ಧಕ ಸಂಘಕ್ಕೆ ಸಂಘದ ಸೆಕ್ರೆಟರಿಯವರ ಹಸ್ತ ಶಾಲಾ ಫಂಡಿನ ಬಗ್ಗೆ ಧನಸಹಾಯ ಮಾಡಿದ ಬೊಂಬಾಯಿ ಗ್ರಹಸ್ಥರ ಪಟ್ಟಿ:—

ಶ್ರೀಯುತ—ಡಾಕ್ಟರ್ ಎ. ಎಸ್. ಪೈ. ರೂ. ೫೦—೦—೦. ಎಳ್ಳಿಮಾರು ಕೃಷ್ಣಯ್ಯಶ್ಯಾನುಭೋಗ ರೂ. ೨೫—೦—೦, ಕೊಳೂರು ವೆಂಕಪ್ಪ ಶೇರಿಗಾರಿ ನಾಯಕ ರೂ. ೨೦—೦—೦. ಲಾರ್ಡ್ಸ್ ತೇಭಾರ್ಲ್ಲಕೊ ರೂ. ೨೦—೦—೦. ಬೈಲ ರಾಯಚಂದ್ರಲ್ಲಕೊ ರೂ. ೧೫—೦—೦.

ರೂ. ೧೦—೪—೦ರಂತೆ ಕೊಟ್ಟಿರುವವರು. ರಾಮನಂದನ್, ಬೆಂಗಲ್, ಜೋರೆ ಬಾಟೊ. ಬ್ರಾ. ದಿನ್ ಮಹಮ್ಮದ್, ಶಾಟವಾಕ್ ಸಾರ್ಲಿ ಎಂಡ್ ಕೊ; ಮುರಾರ್ಜೀ ಗೋಕುಲ್ದಾಸ್ ಎಂಡ್ ಕೊ.

ರೂ. ೧೦—೦—೦ರಂತೆ ಕೊಟ್ಟವರು- ಆರ್. ಕೆ. ಪ್ರಭು ಹರಿ ಚಂದ್ರ ಮೇಹಾ ಬ್ರಾ ದೀಕರ್ಡ ಗಾಲ್ಡಾ. ಬೋಳ್ ಮಂಗೇಶರಾವ್; ಗಫರ್ ನೈಜಾಮ್; ಎ ದಾಮೋದರ ವೆಂಕಟ್ರಾಯ ಶ್ಯಾನುಭೋಗ್ ರೂ. ೮—೦—೦; ಎ. ವಿಠಲ್ ನಾರಾಯಣ ಶ್ಯಾನುಭೋಗ ರೂ. ೫—೦—೦.

ರೂ. ೫—೪—೦ರಂತೆ ೯ ಜನರೂ, ರೂ. ೫—೦—೦ ೨೭ ಜನರೂ, ರೂ. ೩—೦—೦ರಂತೆ ೪ ಜನರೂ, ರೂ. ೨—೦—೦ರಂತೆ ೧೬ ಜನರೂ, ರೂ. ೧—೦—೦ರಂತೆ ೩ ಜನರು. ಸಂಘದ ಮೆಂಬರರಾದ ಗೃಹಸ್ಥರು:—ಡಾಕ್ಟರ್ ಎಸ್. ಎಸ್. ರಾವ್; ರೂ. ೧೨—೦—೦; ಸುಬ್ಬಯ್ಯ ಸೆಟ್ಟಿ ರೂ. ೧೨—೦—೦. ಜುಮ್ಲಾ ರೂಪಾಯಿ ೫೦೧—೦—೦.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಪಂಚಾಯಿತ ಕೋರ್ಟಿನಲ್ಲಿ ಸಾಕ್ಷಿ.

ಅಯ್ಯಾ ಪತ್ರಿಕಾಕರ್ತರೇ!

ದಯಾಳು ಸರಕಾರದವರಿಂದ ಮಂಜೂರು ಮಾಡಲ್ಪಟ್ಟು ತಿದ್ದುಪಡಿ ಮಾಡೋಣಾದ ಗ್ರಾಮಪಂಚಾಯಿತ ಕೋರ್ಟ ಮ್ಯನುವೇಲಿನಲ್ಲಿ ಸಕಲ ತರದ ಕಾನೂನುಗಳು ಏರ್ಪಾಡ ಮಾಡೋಣಾಗಿಯದೆ ಆದರೆ ಇತರ ಕೋರ್ಟುಗಳಲ್ಲಿ ಇರುವ ಕ್ರಮಪ್ರಕಾರ ಸಾಕ್ಷಿಗಾರರ ಭತ್ತೆ ವಿಷಯ ಯಾವ ಕಾನೂನು ಜ್ಯಾರಿಯಲ್ಲಿ ಕಾಣುವದಿಲ್ಲ.

ಐದು ಮೈಲು ಫಾಸಿಲೆಯೊಳಗಿನ ಸಾಕ್ಷಿಗಾರರಿಗೆ ರೂಲು ಮೇರೆಗೆ ಪ್ರಯಾಣ ಭತ್ತೆಯು ಇತರ ಕೋರ್ಟಿನಲ್ಲಿ ಸಿಕ್ಕುವದಿಲ್ಲವಾದರೂ ಹಾಜೂರು ಆಗುವ ಸಾಕ್ಷಿಯವನಿಗೆ ಸಮನ್ಸು ಮಾಡಿದ ದಿವಸದ ಅಶನದ ಖರ್ಚು ಆದರೂ ಕೋರ್ಟಿನಿಂದ ಸಿಕ್ಕುವದು. ಅದೇ ಕಾನೂನು ಪಂಚಾಯಿತ ಕೋರ್ಟಿನಲ್ಲಿ ಸಹಾ ಜ್ಯಾರಿಗೆ ತರಬೇಕಾದದ್ದು ಅತೀ ಅಗತ್ಯ. ಪಂಚಾಯಿತ ಕೋರ್ಟಿನ ಹುಕುಂ ಮರ್ಯಾದಿಸುವ ಬಗ್ಗೆ ಸಾಕ್ಷಿಗಾರನು ಆತನ ವೃತ್ತಿ ಬಿಟ್ಟು ಕೋರ್ಟ ಜಗಲಿ ಕಾವಲು ಮಾಡಿದರೆ ಉದರಪೋಷಣೆಯಾಗುವದೇ! ನ್ಯಾಯವಿಧಾಯಕ ಸಭೆಯ ಮಾನ್ಯ ಮೆಂಬರರ ದಿವ್ಯ ದೃಷ್ಟಿಯು ಈ ನ್ಯೂನತೆಯನ್ನು ಎದುರುಗೊಂಡು ತಕ್ಕ ವ್ಯವಸ್ಥೆ ಮಾಡಿಸುವರಾಗಿ ಅಖಂಡಿತವಾದ ಭರವಸದಿಂದ ನಂಬುವ,

"ಹಿತವಾದಿ"

ಅವನೆ ಇವನೊ?

ಅಯ್ಯಾ,

ಕಳೆದ ವಾರದ "ನವಯುಗ" ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ "ಮೂರ್ತಿ ಪೂಜೆ" ಎಂಬ ಲೇಖದಲ್ಲಿ ಬರೆದಿರುವ ವಿಷಯಗಳನ್ನು ನೋಡಿದೆನು. ಇದೆ ವಿಷಯವನ್ನು ನಾನು ಈ ಮೊದಲು ಒಬ್ಬ ನನ್ನ ಸಂಗಾತಿಯ ಬಾಯಿಯಿಂದಲೆ ಕೇಳಿದ್ದರಿಂದಲೂ, ಅವನೂ ನಾನೂ ಒಂದೇ ಸಂಸ್ಥೆಯಲ್ಲಿ ಕೆಲಸಮಾಡುವವರು ಕೂಡಾ ಆದುದರಿಂದಲೂ ನನಗೆ ತೋರುವ ಕೆಲವು ವಿಷಯಗಳನ್ನು ಬರೆಯುವದು ಅಗತ್ಯವಾಗಿದೆ.

ಆ ಲೇಖದ ಉದ್ದೇಶವು ಸಮಾಜ ಸುಧಾರಣೆಯಲ್ಲ, ದೇವಸ್ಥಾನದಲ್ಲಿಯ ಕುಂದುಕೊರತೆಗಳನ್ನು ತಿದ್ದಿ ಸರಿಪಡಿಸಬೇಕೆಂದಲ್ಲ, ಎಂಬುವದು ಲೇಖದಲ್ಲಿಯ ವಿಷಯಗಳನ್ನು ನೋಡಿದರೆ ತಿಳಿಯಬಹುದು. ಒಂದುವೇಳೆ ಪರೋಪಕಾರ ನಿಮಿತ್ತವಾಗಿ ಬರೆಯಲ್ಪಟ್ಟಿದ್ದರೆ, ತನ್ನ ನಿಜವಾದ ಹೆಸರನ್ನು ಯಾಕೆ ಪ್ರಕಟಮಾಡಕೂಡದಿತ್ತು? ಸಮಾಜದಲ್ಲಿರುವ ದೋಷಗಳನ್ನು ಎದುರಿಗೆ ತಂದು, ಸುಧಾರಣೆ ತರಬೇಕೆಂದು ಇರುವ ಮಹನೀಯರು ತಮ್ಮ ಹೆಸರುಗಳನ್ನು ತಿಳಿಯಪಡಿಸುವರು; ಹೆಸರು ತಿಳಿಯೋಣದರಿಂದ ವ್ಯಕ್ತಿಯ ಯೋಗ್ಯತೆ ಗೊತ್ತಾಗುವದು. ಅವನ ಯೋಗ್ಯತೆಯಿಂದ ಬರೆದ ಲೇಖಕ್ಕೆ ಬೆಲೆ ಬರುವುದು. ಒಂದು ನೀತಿಬೋಧೆಯ ಮಾತು, ಉಪದೇಶಕನ ಬುದ್ಧಿಶಕ್ತಿ, ನಡತೆ, ವಿದ್ಯೆ ಇವುಗಳ ಮೇಲೆ ಹೊಂದಿರುತ್ತದೆ. ಉದಾ—ಅಹಿಂಸಾ ತತ್ವವನ್ನು ಅಥವಾ ಬ್ರಹ್ಮಚರ್ಯ ತತ್ವವನ್ನು, ಮಹಾತ್ಮಾ ಗಾಂಧಿಯವರಂಥ ಪುರುಷರು ವಿವರಿಸಿದರೆ ಮಹತ್ವವು ಇದೆ. ಅದೆ ವಿಷಯದಲ್ಲಿ ಸಂತಾಪಕ, ನಂದನರಂಥ ಕಪಟಿಗಳು ಎಷ್ಟು ಚೆನ್ನಾಗಿ ಬೋಧಿಸಿದರೂ ಯಾರು ಕೇಳುವರು? ಇದರಂತೆಯೆ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಜವಾಬ್ದಾರಿ ಇಲ್ಲದ ಲೇಖಗಳು ಕೂಡಾ ಎಂದು ತಿಳಿಯಬಹುದು. ಲೇಖವನ್ನು ಪತ್ರಿಕೆಯಲ್ಲಿ ಬರೆಯುವಾಗ ತನ್ನ ಹೆಸರನ್ನು ಇದ್ದ ಹಾಗೆ ಕೊಡದಿರುವ ಕಾರಣ—ಆ ಮನುಷ್ಯನು ತನ್ನ ಯೋಗ್ಯತೆಯ ಪರಿಚಯ ಉಳ್ಳವರಿಗೆ ತಿಳಿದರೆ, ಹಾಸ್ಯಕ್ಕೆ ಅಥವಾ ಬೇರೆ ತೊಂದರೆಗಳಿಗೆ ತುತ್ತಾಗಬಹುದೆಂಬ ಬೆದರಿಕೆ ಇದ್ದಿರಬೇಕೆಂದು ಊಹಿಸತಕ್ಕದ್ದು.

ನನ್ನ ಸಂಗಾತಿಯು ಲೇಖವನ್ನು ಬರೆದ "ಯಾತ್ರಿಕನಂತೆ" ಮೂರ್ತಿ ಪೂಜೆಯನ್ನು ಖಂಡಿಸುತ್ತಾನೆ. ಆದರೆ ಖಂಡನೆಯನ್ನು ಸಕಾರಣವಾಗಿ ತೋರಿಸಲಿಲ್ಲ. 'ಮೂರ್ತಿ ನೈವೇದ್ಯ ತಿನ್ನುತ್ತದೋ? ಪೂಜಾರಿ, ತಂತ್ರಿ, ಉಪಾಧಿಯ ಕೆಲಸದವರು ಭಕ್ತಿಯಿಂದ ನಿತ್ಯದಲ್ಲಿ ಸಂಬಳ ಇಲ್ಲದೆ ಯಾಕೆ ಕೆಲಸಮಾಡಬಾರದು? ಮೊಕ್ತೇಸರರು ಪೂಜೆ, ಉತ್ಸವ ಅಲಂಕಾರಗಳನ್ನೆಲ್ಲಾ ಮಾಡುವದು ಜನರನ್ನು ಮೋಹಿಸಿ ದುಡ್ಡು ಸುಲಿಗೆ ಮಾಡುವುದಕ್ಕಲ್ಲವೊ? ಮೊದಲಾದ ವಿಷಯಗಳು ಮೂರ್ತಿ ಪೂಜೆಯು ಅನಾವಶ್ಯಕವೆಂದು ತೋರಿಸುವುದಿಲ್ಲ. ನೇಮಕವುಳ್ಳ ಜನರು, ಮನಃಪೂರ್ವಕ ನಡೆಯದೆ, ಜನರನ್ನು ಮೋಸಗೊಳಿಸಿದರೆ ಅಂಥವರನ್ನೇ ಸರಿಪಡಿಸುವದು ಅಗತ್ಯವೆಂದ ಹೇಳಬಹುದು, ಅಲ್ಲದೆ ಮೂರ್ತಿ ಪೂಜೆ ಬೇಡವೆಂದ ಹೇಳಲು ಬರುವುದಿಲ್ಲ. ಶಾಸ್ತ್ರರೀತಿ ಮೂರ್ತಿಪೂಜೆಯ ಆವಶ್ಯಕತೆ ಕುರಿತು ಸ್ಪರ್ಧೆಯ ಮೂಲಕ ಬರೆಯಿಸಿ ಬಹುಮಾನ ಮೊದಲಾದವುಗಳನ್ನು ಕೊಡುವದು ಸುಜ್ಞಾನಿಗಳನ್ನು ಒಲಿಸಲಿಕ್ಕೆ ಎಂಬ ಮಾತು ಪಾಮರರಿಗೆ ಸಂತೋಷಬಹುದು. ಇಂಥ ಬಹುಮಾನ, ಉಚಿತ ಉಡುಗೆರೆಗೆ ಸೋಲುವವರು ಸುಜ್ಞಾನಿಗಳೆಂದು ಹೇಗೆ ಅನ್ನಿಸಿಕೊಂಡಾರು? ದೇವಸ್ಥಾನವನ್ನು ನಡೆಸತಕ್ಕವರು ಮೂರ್ತಿ ಪೂಜೆಯನ್ನು ಒಪ್ಪತಕ್ಕವರೆ. ಅವರ ಕೃತ್ಯವನ್ನು ಪ್ರಬಂಧಗಳ ಮೂಲಕವಾಗಲಿ, ಉಪನ್ಯಾಸಗಳ ಮುಖಾಂತರವಾಗಲಿ, ಜನರಿಗೆ ಬೋಧಿಸುವದು ಅವರ ಕರ್ತವ್ಯವೆ ಆಗಿದೆ. ಮತ್ತು ಮೊಕ್ತೇಸರರು ತಮ್ಮ ಆಡಳಿತೆಯ ದೇವಸ್ಥಾನಗಳಲ್ಲಿ ಸ್ಥಳದ, ವಿದ್ಯಮಾನಕ್ಕೆ ಸರಿಯಾಗಿ ಅಗತ್ಯ ಇರುವ ಏರ್ಪಾಡುಗಳನ್ನು ಮಾಡುವದು ಯುಕ್ತವಾದದ್ದು. ಒಂದು ವೇಳೆ, ದಗೆ, ಮೋಸ, ವಗೈರೆ ಅಕೃತ್ಯಗಳು ನಡೆದರೆ ಅಂಥ ದೇವಸ್ಥಾನಗಳಿಗೆ ಯಾತ್ರಿಕರು ಏಕೆ ಹೋಗಬೇಕು? ಯಾರ ವಶಾತ್ತು ಉತ್ತಮ ರೀತಿಯಲ್ಲಿರುವ ದೇವಾಲಯಗಳು ಬೇರೆ ಇಲ್ಲವೇ? ಅಂಥ ಸ್ಥಳಗಳಲ್ಲಿ ದೇವರು ಇಲ್ಲವೆ? ಇಂಥ ಹರಿಕೆಗೆ, ಇಷ್ಟು ಕಾಣಿಕೆ ಎಂತ ವಿಧಿಸುವದು ಸಂಬಂಧಪಟ್ಟ ಮೊಕ್ತೇಸರರಲ್ಲದೆ ಬೇರೆ ಯಾರು?

ಮೂರ್ತಿಪೂಜೆಯನ್ನೆ ನಿಂದೆಮಾಡುವ ದೇವರ ಅಸ್ತಿತ್ವವನ್ನೆ ಅಲಗಳೆದು ಕುತರ್ಕಮಾಡುವ ನನ್ನ ಸಂಗಾತಿಯು ನವರಾತ್ರಿ ದಿವಸದಲ್ಲಿ ತಾನೆ ಮಾರಿ ಅಮ್ಮನ ಪಟ ಒಂದನ್ನು ಬರೆದು, ಪಾಪದ, ಬಡ ಸಣ್ಣ ಶಾಲೆ ಮಕ್ಕಳಿಂದೆಲ್ಲಾ ೮ ಆಣೆ, ೧ ರೂಪಾಯಿ ವಂತಿಗೆ ಬೆದರಿಸಿಯೋ, ಅಥವಾ ಬೇಡಿಯೋ ವಸೂಲುಪಡೆದು ರಾತ್ರೆಯೆಲ್ಲಾ ಪೂಜೆ ಮಾಡುವುದರ ಅರ್ಥವೇನು? ದೇವಸ್ಥಾನದ ಮೊಕ್ತೇಸರರು ಜನರಿಂದ ಕಾಣಿಕೆ ಎತ್ತಿ ಪೂಜೆ, ಉತ್ಸವ ಮೊದಲಾದವುಗಳನ್ನು ಮಾಡುವಂತೆ ತಾನು ಕೂಡ ಏನೂ ಅರಿಯದ ಮಕ್ಕಳಿಂದ ಹಣ ಸುಲಿಗೆ ಮಾಡಿ, ಲೋಲುಮಾಡುವುದೋ ಅಥವಾ ಅಮ್ಮನವರ ಮೇಲಣ ತನ್ನ ಭಕ್ತಿಯನ್ನು ವ್ಯಕ್ತಗೊಳಿಸುವುದೊ? ಬರೆ ಹೊಟ್ಟೆ ತುಂಬಿಸಿ, ಲೋಲುಮಾಡುವುದಕ್ಕೆಂದು ಹೇಳುವುದಾದರೆ, ಮತ್ತೊಬ್ಬ ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಅನಾವಶ್ಯಕವಾಗಿ ದೂಷಿಸುವದು ಯಾವ ನ್ಯಾಯ? ಬರೆ ಭಕ್ತಿಪೂರ್ವಕವಾದರೆ, ಸಿಕ್ಕಿದವರ ಕೂಡೆ ಮೂರ್ತಿ ಪೂಜೆಯನ್ನು ನಿಂದೆಮಾಡುವುದು, ದೇವರಿಲ್ಲವೆನ್ನುವುದು ಯಾಕೆ? ಭ್ರಾಂತು—

ಕಳೆದ ಸ್ಪರ್ಧೆಯಲ್ಲಿ ತಾನು ಕೂಡ ಮೂರ್ತಿಪೂಜೆಯ ಆವಶ್ಯಕತೆಯ ಪ್ರಬಂಧವನ್ನು ಬರೆದುದು ಯಾಕೆ? ಊರಿನವನಾದುದರಿಂದಲೂ, ನೌಕರನಾದುದರಿಂದಲೂ ೨ ಬಹುಮಾನಗಳ ಪೈಕಿ ಒಂದನ್ನಾದರೂ ಕೊಡುವರೆಂಬ ಅಲ್ಪ ಆಸೆಯಿಂದಲೊ? ಅಥವಾ ಮೂರ್ತಿಪೂಜೆಯಲ್ಲಿರುವ ನಿಜವಾದ ಶ್ರದ್ಧೆಯಿಂದಲೊ?

ಇನ್ನು ದೇವದಾಸಿಯರ ಪರವಾಗಿ ಒಂದೆರಡು ಮಾತು. ದೇವಸ್ಥಾನಗಳಲ್ಲಿ ಬ್ರಾಹ್ಮಣರು ಜಾತಿ ಕೆಟ್ಟುಹೋದರೆ ಬೇರೆ ವೃತ್ತಿ ಇಲ್ಲದೆ ಭಕ್ತಿ ಮೂಲಕ ದೇವರ ಸೇವೆ ಮಾಡಿಕೊಂಡು ದೇವಸ್ಥಾನದಾಶ್ರಯದಲ್ಲಿಯೇ ಇರುತ್ತಿದ್ದರು, ಇವರು ಮಾಲೆಯವರೆಂದು ಅನ್ನಿಸಿಕೊಳ್ಳುವರು. ಇವರು ಬ್ರಾಹ್ಮಣರಂತೆ ವರ್ತಿಸುವವರು ಈಗಲೂ ಇರುವರು. ಕೆಲವು ಕಡೆಗಳಲ್ಲಿ ಕೆಲವು ದೇವದಾಸಿಯರು ಮೊಕ್ತೇಸರರ ಅಥವಾ ಇತರ ದೇವಸ್ಥಾನದ ಜನರ ಕಾಮಾತುರಕ್ಕೆ ಸಿಲುಕಿ ಹೀನವೃತ್ತಿಯನ್ನು ಅವಲಂಬಿಸಿದ್ದೂ ಇರಬಹುದು. ಕೆಲವು ಕಡೆಗಳಲ್ಲಿ ದೇವದಾಸಿಯ ಸ್ನೇಹಕ್ಕೆ ಸಿಕ್ಕಿ ಭಂಡಾರ ಸೂರೆ ಮಾಡಿದ್ದೂ ಇರಬಹುದು. ಇಂಥ ಸಂಗತಿಗಳಲ್ಲಿ ಆ ಕಾಮಾತುರರಾದ ಮೊಕ್ತೇಸರರನ್ನು ಯಾರು ತಾನೆ ದೂಷಿಸದೆ ಇರುವರು? ಒಂದು ಕಡೆಯಲ್ಲಿ ಮೊಕ್ತೇಸರನ ಪ್ರೀತಿಗೆ ಪಾತ್ರರಾದ ಕುಲಗೆಟ್ಟ ಶೂದ್ರಜಾತಿಯ ಸ್ತ್ರೀಯರು ದೇವದಾಸಿಯರೆಂದು ಹೇಳಿಸಿಕೊಂಡದ್ದೂ ಇದೆ. ಇವರು ದೇವಸ್ಥಾನದಲ್ಲಿ ಕೆಲಸಮಾಡಿದ್ದೆ ಸರಿ, ಇವರ ಕೀಳು ಕುಲ, ಮೇಲೆ ಆಯಿತು. ಹೆಚ್ಚೇನು? ಮಾಲೆಯವರೆಂದೆ ಅನ್ನಿಸಿ ಕುತ್ತಿಗೆಗೆ ಜನಿವಾರ ಸುತ್ತಿಕೊಂಡೆ ಬಿಟ್ಟರು, ಕಡೆಗೆ ದೊಡ್ಡ ಹೈಮಾಲೆ. ಇಂಥ ದೇವದಾಸಿಯರು ಮೊಕ್ತೇಸರರ ಪ್ರೀತಿಗೆ ಪಾತ್ರರಾಗಿದ್ದಾಗ ದಾಸಿಪುತ್ರರುಗಳಿಗೆ ಏನು ಕಡಮೆ? ದೇವಸ್ಥಾನವೆ ಇವರದು. ಆಗ ಇವರು ಕೂಡ, ಇದು ನಮ್ಮ ದೇವಸ್ಥಾನ, ನಮ್ಮ ಕುಸಿ ಎಂದು ಹೇಳಲು ಹಿಂಜರಿಯುತ್ತಿಲ್ಲ. ಆದರೆ ಈಗ ಸಮಯವು ಬದಲಾಯಿತು. ದೇವದಾಸಿಯರಿಗೆ, ಪೂರ್ವ ಪದ್ಧತಿಯಂತೆ ದೇವಸ್ಥಾನದಲ್ಲಿ ಕೆಲಸ ಮಾಡಿದರೆ ಮಾತ್ರ ಅನ್ನ, ಇಲ್ಲವಾದರೆ ಉಪವಾಸವೆ ಸರಿ. ಇನ್ನು ಅವರಲ್ಲಿಯ ಇತರರ ಪಾಡು ಏನು? ಬಹಳ ಕಷ್ಟ. ಈ ವಿಷಯಗಳೆಲ್ಲಾ ನಮ್ಮ ಸಂಗಾತಿಗೆ ತಿಳಿಯದೆ ಇರತಕ್ಕದ್ದಲ್ಲವಷ್ಟೆ? ಇನ್ನು ಇತರ ಜನರು ದೇವಸ್ಥಾನದಲ್ಲಿ ಕೆಲಸಕ್ಕೆ ಬಂದರೆ, ನಮ್ಮಂತೆ ಇವರೊ? ಎಂಬ ಮತ್ಸರ, ಕೋಪ ಯಾಕೆ?

ನನ್ನ ಸಂಗಾತಿಯು, ನನ್ನಂತೆ ದೇವಸ್ಥಾನದ ನೌಕರನಾದಾಗ್ಯೂ, ತನ್ನ ಹಿರಿಯರಾರಥ್ಯ ದೇವಸ್ಥಾನದ ಕೆಲಸದಿಂದ ಜೀವಿಸಿದಾಗ್ಯೂ ಈಗ ತಾನು ಕೂಡ ದೇವಸ್ಥಾನದ ಮೊಕ್ತೇಸರರ ಸಹಾಯದಿಂದ ವಿದ್ಯೆ ಕಲಿತು, ತಿಂಗಳಿಗೆ ೧೯ ರೂಪ್ಯಾ ತಲಬು ಪಡೆಯುವುದಾಗ್ಯೂ, ದೇವಸ್ಥಾನದಲ್ಲಿ ನಡೆಯುವ ಪೂಜೆ, ಉತ್ಸವಗಳಿಗೆ ನಿಂದೆ, ಮೊಕ್ತೇಸರರಿಗೆ ದಿರುಕು ಮಾಡುವುದೇಕೆ? ತಾನು ಕುಟುಂಬ ವಗೈರೆ ಇಲ್ಲದೆ ಮರದಂತೆ ಏಕಾಕಿಯಾದಾಗ್ಯೂ, ಸಂಸಾರವನ್ನು ಇಟ್ಟುಕೊಂಡು ೧೦-೧೫ ರೂಪ್ಯಾ ಸಂಬಳ ಪಡೆಯುವ ನಮ್ಮಿಂದಲೂ ಹೆಚ್ಚು ತಲಬು ತಿನ್ನುವ ಈ ನನ್ನ ಸಂಗಾತಿಗೆ "ಅರೆ ಹೊಟ್ಟೆಯಂತೆ"! ಈ ಮೊದಲು ತಲಬು ಜಾಸ್ತಿ ಮಾಡಬೇಕೆಂದು ಮೊಕ್ತೇಸರರನ್ನು ಕೇಳಿದ್ದಾಯಿತು, ಅರ್ಜಿ ಮಾಡಿದ್ದಾಯಿತು, ಕಡೆಗೆ ಕೆಲಸ ಬಿಟ್ಟು ಊರೂರು ತಿರುಗಿದ್ದಾಯಿತು, ಕಡೆಗೆ ತನ್ನ ಕೆಲಸಕ್ಕೆ ಸೇರುತ್ತೇನೆಂದು ಅರ್ಜಿಮಾಡಿದ್ದಾಯಿತು. ಪಾಪ, ಊರಿನಲ್ಲಿದ್ದವನೆಂದು ಪುನಃ ರಿಯಾತಿಯಿಂದ ಕೆಲಸ ಕೊಟ್ಟಾಗ್ಯೂ, ಇನ್ನೂ ಹೊಟ್ಟೆ ತುಂಬಲಿಲ್ಲವೊ? ಅದರ ಉರಿ ಜಾಸ್ತಿ ಆದುದರಿಂದಲೆ ಭ್ರಾಂತನಂತೆ ಮಾತನಾಡುವುದೊ ಏನೋ! ಒಂದು ವೇಳೆ 'ನವಯುಗದ' ಲೇಖನ ಬರೆದ 'ಯಾತ್ರಿಕ'ನೆಂಬ ವ್ಯಕ್ತಿಯು, ಅವನೆ—ಇವನೊ?

ದಿ. ಕೊರಗನ್ನಾಯ್ಕ.

ನೋಟೀಸು.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ—ಮಂಗಳೂರು ತಾಲೂಕು ಉಳ್ಳಾಲ ಮಾಗಣೆ ಕೋಟೆಕಾರು ಗ್ರಾಮದ ಅಡ್ಕದ ಭಂಡಾರ ಮನೆಯ ಮತ್ತು ಹಿತ್ಲು ಯಾವತ್ತೂ ಚರಜೆಂದಿಗೆಯ ಆಡಳಿತೆಯನ್ನು ಕೆಲವು ವರ್ಷಗಳಿಂದ ನಾನು ನೋಡುತ್ತಾ ಬರುವ ಕಾರಣವೂ ಮನೆ ಹಿತ್ಲಿನ ಅಲ್ಲದೆ ತಾಯಿಯ ಪೋಷಣೆಯ ಖರ್ಚುಯಾವತ್ತನ್ನೂ ನನ್ನ ವಿನಹ ಬೇರೆ ನನ್ನ ಒಡ ಹುಟ್ಟಿದವರು ಸಹಾ ನೋಡದಿರುವದರಿಂದ ನನ್ನ ಆಡಳಿತೆಯಲ್ಲಿರುವ ಭಂಡಾರ ಮನೆಯ ಆಸ್ತಿಯಲ್ಲಿ ನನ್ನ ವಿನಹ ಬೇರೆ ಯಾರಿಗೂ ಹಕ್ಕು ಇರುವುದಿಲ್ಲವೆಂದು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುತ್ತೇನೆ.

ಜಾಮ ಪೂಜಾರಿ ಮೊಮ್ಮಗ ಐತ್ತಪ್ಪನ ರುಜು.

ಶಾಲಿವಾಹನ ಶಕ ೧೮೪೯ನೇ ಪ್ರಭವ ಸಂವತ್ಸರ ಪುಷ್ಯ

ಬ. ೧೮ ಶನಿವಾರದಿಂದ ಪ್ರಭವ ಸಂವತ್ಸರ ಮಾಘ

ಶು. ೫ ಶುಕ್ರವಾರದ ವರೆಗಿನ ಪಂಚಾಂಗ.

(ಗಣಿತರೀತಿಯ ಘ. ಪ.) (ಸೌರಮಾನ)

21	[illegible]					7	0	6.24
22	[illegible]					7	0	6.25
23	[illegible]					7	0	6.25
24	[illegible]					7	0	6.26
25	[illegible]					7	0	6.26
26	[illegible]					7	0	[illegible]
27	[illegible]					7	0	[illegible]

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಹೆಚ್ಚು	Minimum ಕಡಿಮೆ	Rainfall ಮಳೆ ಇಂದಿನ ಮಳೆ	ಒಟ್ಟು ಮಳೆ
13.	93—3	72—2	—	—
14	90—3	72—3	—	—
15	91—3	71—8	—	—
16	93—3	70—5	—	—
17	92—0	68—[illegible]	—	—
18	92—9	71—4	—	—
19	92—5	69—3	—	—
				127—21

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ.	ವರೆಗೆ ರೂ.	ಆ.
ಹೊಸ ಮುಸ್ಟು	6—	1	7—	2
ಹೊಸ ಗುಡ್ಡು	8—	0	8—	0
ಸಾಗಿ	6—	8	6—	10
ಹೊಸ ರಾಸಿ	6—	2	6—	8
ಊರ ಅಕ್ಕಲು ಬೆಲ್ಲ	7—	4	8—	0
ರಂಗೂನು ಬೆಲ್ಲಗೆ ಗೋಣಿ	13—	8	14—	0
ಎಲ್ಲಿಗಲು ಬೆಲ್ಲಗೆ ಮುಡಿ ಗಳ್ಸೆ	7—	0	7—	4
ಗೋಧಿ ಗೋಣಿ ಗಳ್ಸೆ	18—	0	19—	0
ಹುರುಳಿಗೋಣಿ ಗಳ್ಸೆ	9—	0	10—	0
ಕಡಲೆಗೋಣಿ ಗಳ್ಸೆ	13—	8	14—	0
ಕೆಸಗಗೋಣಿ ಗಳ್ಸೆ	17—	0	18—	0
ಕೆಸಗಂಬೇಳೆ ಗೋಣಿ ಗಳ್ಸೆ	20—	0	23—	0
ಉದ್ದುಗೋಣಿ ಗಳ್ಸೆ	14—	0	14	8
ಹೆಸರುಗೋಣಿ ಗಳ್ಸೆ	15—	0	15—	8
ಊರು ಬೆಲ್ಲ ಖಂಡಿ ಗಳ್ಸೆ	36—	4	40—	0
ಉಪ್ಪು ಗೋಣಿ ಗಳ್ಸೆ	3—	14	4—	0
ಜೊಬ್ಬ ಖಂಡಿ ಗಳ್ಸೆ	130—	0	—	
ಜೊಬ್ಬ ಹಿಂಡಿ ಖಂಡಿ ಗಳ್ಸೆ	49—	0	50—	0
ಎಳ್ಳೆಂಡಿ ಖಂಡಿ ಗಳ್ಸೆ	50—	0	55—	0
ಜೊಬ್ಬ ಎಣ್ಣೆ ಮುಡಿ ಗಳ್ಸೆ	8—	4	8	6
ಎಳ್ಳೆಣ್ಣೆ ಮುಡಿ ಗಳ್ಸೆ	7—	0	8—	0
ಹವಿನ ಎಣ್ಣೆ ಪೆಟ್ಟಿಗೆ ಗಳ್ಸೆ	8—	0	—	
ಮೋರಿಸ ಸಕ್ಕರೆ ಮುಡಿ ಗಳ್ಸೆ	3—	10	3	12
ಊರ ಮೆಣಸಿನಕಾಯಿ ಮುಡಿ ಗಳ್ಸೆ	8—	0	8	4
ಸಾಸಿವೆ ಮುಡಿ ಗಳ್ಸೆ	9—	0	—	
ಕೊತ್ತುಂಬರಿ ಮುಡಿ ಗಳ್ಸೆ	7—	12	8	0
ಕಾಫಿ ಖಂಡಿ ಗಳ್ಸೆ	325—	0	400—	0
ಬೆಳಗೋಲು ಅಡಿಕೆ ಖಂಡಿ ಗಳ್ಸೆ	125—	[illegible]	130—	[illegible]
ಕಾಳುಮೆಣಸು ಖಂಡಿ ಗಳ್ಸೆ	440—	5	450—	
ಯಾಲಕ್ಕಿ ತುಲಾ ಗಳ್ಸೆ	50—	0	54—	0
ಗೇರುಬೀಜ ಮುಡಿ ಗಳ್ಸೆ	3—	10	3—	12
ಕಬ್ಬಿಣ ಖಂಡಿ ಗಳ್ಸೆ	37—	8	40—	0
ಕಾಂಪ್ರು ತಗಡು ಮುಡಿ ಗಳ್ಸೆ	15—	0	15—	0
ಕಾಂಪ್ರು ದಾಸ್ತಿಗಳು ಮುಡಿ ಗಳ್ಸೆ	21—	0	—	
ಚೀನಿ ಬೆಳ್ಳಿ ಸೇರು ಗಳ್ಸೆ	15—	0	—	
ಹಿತ್ತಾಳೆ ತಗಡು ಮುಡಿ ಗಳ್ಸೆ	15—	0	—	
ಪವನು	13—	7	—	

ಪಂಪುಗಳು



ಪ್ರ ಜಿ ರ್ — ಪಂ ಪು ಗ ಳು

ಡಿಸೆಲ್ಸ್ — ಸ್ಟೀಮ್ — ಪಂಪುಗಳು

3 ಹಾರ್ಸ್ ಪವರಿಗೆ ಮೀರಿದ ಕ್ರೂಡ್ಆಯಿಲ್ ಇಂಜಿನುಗಳು.

ಮುಖ್ಯ ಏಜಂಟರು:—

VOLKART BROS ENGINEERS

Box G. 45
Armenian Street, MADRAS.

ನೋಟೀಸು.

THE
Canara Bank Ltd., Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Notice is hereby given that under Section 37 of the Indian Companies Act No. VII of 1913 the Directors have resolved that the Register of Members be closed from Monday 30th January 1928 to Sunday 19th February 1928 (both days inclusive).

1913ನೇ ಇಸವಿಯ ನಂ. VIIನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಬ್ಯಾಂಕಿನ ಪಾಲುದಾರರ ರಿಜಿಸ್ಟರು (Register of Members) ಇದೇ ಜನವರಿ ತಾರೀಖು 30ನೇ ಸೋಮವಾರ ಆರಭ್ಯ ಫೆಬ್ರುವರಿ 19ನೇ ಆದಿತ್ಯವಾರದ ವರೆಗೆ [illegible] (closed) [illegible] ತಿಳಿಸಲ್ಪಡುತ್ತದೆ.

(By Order)

The Canara Bank Ltd.
MANGALORE.
13th January 1928.

K. Venkat Rao,
Secretary.

Canara Bank, Ltd., Kasaragod,
ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ [illegible] ಬಡ್ಡಿಯನ್ನಾಗಲಿ ವಗೈರೆಗೆ ಕೊಡದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಒಂದನೇ ಮತ್ತು ಎರಡನೇಯವರು ಇನ್ನಾರು ಮನಾಯಿಸ್ಸದಿಂದಲೂ, ಮೂರನೇಯವರು [illegible] [illegible] ಬಂದಿರುವುದರಿಂದ ಸದರಿ ಸಾಲಗಾರರು ಅವರಿಂದ ಬ್ಯಾಂಕಿಗೆ [illegible] ಅಸಲು ಬಡ್ಡಿ ವಗೈರೆಗಳನ್ನು ಇದೇ ತಿಂಗಳ ತಾ. 26ನೇ ಗುರುವಾರ ದಿವಸದ ಒಳಗೆ ಬ್ಯಾಂಕಿಗೆ ಸಲ್ಲಿಸಿ ಅಡವಿಟ್ಟ ಆಭರಣಗಳನ್ನು ಪಡಕೊಳ್ಳದಿದ್ದರೆ ಸದರಿ ಆಭರಣಗಳನ್ನು ಇದೇ 1928ನೇ ಇಸವಿ ಜನವರಿ 30ನೇ ಸೋಮವಾರ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಹೆಸರು.	ಸಾಲಪತ್ರದ ತಾರೀಖು	ಸಾಲದ ಮೊಬಲಗು	ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ವಗೈರೆ
ಮಮ್ಮದೆ ಬ್ಯಾರಿ (ಅಬ್ದುಲ್ಲ ಬ್ಯಾರಿ ಮಗ)	17-5-'27	35-0-0	37-15-7
ಮಮ್ಮದೆ ಬ್ಯಾರಿ (ಮೊಯಿದಿನ್ ಕುಂಞ ಬ್ಯಾರಿ ಮಗ)	15-1-'27	70-0-0	73-14-10
ಕೊಂಬ ನಾಯ್ಕ	28-3-'27	40-0-0	42-14-3

Canara Bank Ltd.
KASARAGOD.
18—1—'28.

H. S BHAT
Agent.

ವಿವಿಧ ವಿಷಯಗಳು.

ಲಾಹೋರಿನಲ್ಲೊಂದು ಮೋಟರ್ ಅಪಘಾತ.

ಲಾಹೋರು ಪಟ್ಟಣದಿಂದ ೩ ಮೈಲು ದೂರವಿರುವ ರಾವಿ ಬ್ರಿಜ್ಜಿ ಎಂಬ ಸಂಕದ ಮೇಲೆ ಒಂದು ಮೋಟಾರು ಕಾರು ಗಾಡಿಗೆ ಬಡಿದು ಒಬ್ಬನು ಮೃತಪಟ್ಟನು, ನಾಲ್ಕು ಜನರಿಗೆ ಗಾಯವಾಯಿತು. ಮೋಟಾರು ಲಾಹೋರಿನಿಂದ ಹೊರಟು ಸಂಕವನ್ನು ದಾಟಿ ಮುಂದೆ ಹೋಗುತಿತ್ತು. ಎತ್ತಿನ ಗಾಡಿಯೊಂದು ಮುಂದಿನಿಂದ ಎದುರಿಗೆ ಬರುತಿತ್ತು. ಕಾರನ್ನು ಕಂಡು ಎತ್ತು ಹೆದರಿದುದರಿಂದ ಗಾಡಿ ಓಡಿಸುವವನು ಗಾಡಿಯನ್ನು ತಿರುಗಿಸಲು ಪ್ರಯತ್ನಿಸಿದನು. ಕಾರನ್ನು ಕಂಡು ಎತ್ತು ಹೆದರಿದ್ದೆಂದು ತಿಳಿದು ಕಾರಿನ ಡ್ರೈವರನು ತನ್ನ ಕಾರನ್ನೂ ತಿರುಗಿಸಿದನು. ಕೊನೆಗೆ ಅವೆರಡೂ ಒಂದಕ್ಕೊಂದು ತಗಲಿ ದೊಡ್ಡ ಅಪಘಾತವಾಯಿತು. ಮೋಟರ್ ಕಾರು ಸಂಕದ ದಳಿಗಳಿಗೆ ಬಡೆಯಿತು. ದಳಿಗಳು ಮುರಿದು ಹೋದುದರಿಂದ ಕಾರು ೩೦ ಅಡಿ ಕೆಳಗಿರುವ ನದಿಗೆ ಉರುಳಿತು. ೨೨ ವರ್ಷ ಪ್ರಾಯದವನಾಗಿದ್ದು ಕಳೆದ ತಿಂಗಳಲ್ಲಿ ಹಿಂದೂದೇಶಕ್ಕೆ ಬಂದಿದ್ದ ಲೆಫ್ಟಿನೆಂಟ್ ಲೋಗಾನನೆಂಬವನು ಆ ಕಾರಿನಲ್ಲಿ ಇದ್ದವನು. ಪಾಪ, ಪೆಟ್ಟು ತಾಗಿ ಸತ್ತುಹೋದನು. ಈ ಅಪಘಾತದ ವಿಚಾರಣೆಯು ನಡಿಯುವುದಂತೆ. ವಿಚಾರಣೆಯು ನಡೆದ ಮೇಲೆಯಾದರೂ ಲೆಫ್ಟಿನೆಂಟನು ಜೀವಂತನಾಗಲಾರನೆಂಬುದು ಖಂಡಿತ.

§ § § §

ಅಖಿಳ ಭಾರತೀಯ ಖಾದೀ ಪ್ರದರ್ಶನ.

ಈ ಪ್ರದರ್ಶನವು ಮದರಾಸಿನಲ್ಲಿ ಹತ್ತೇ ದಿನಗಳ ತನಕ ನಡೆಯಿತು. ಪ್ರದರ್ಶನಕ್ಕೆ ಬಂದಿದ್ದ ವಸ್ತುಗಳಲ್ಲಿ ಶೇಕಡಾ ೬೦ರಷ್ಟು ಮಾರಿಹೋದ್ದರಿಂದಲೂ, ಉಳಿದವುಗಳನ್ನು ಅವುಗಳ ಮಾಲಿಕರಿಗೆ ಕೊಡದೆ ನಿರ್ವಾಹ ಇಲ್ಲದ್ದರಿಂದಲೂ, ಪ್ರದರ್ಶನವನ್ನು ಅವಶ್ಯ ಬೇಗನೆ ಕೊನೆಗಾಣಿಸಬೇಕಾಯಿತು. ಸ್ವಲ್ಪ ಮಾತ್ರ ವಸ್ತುಗಳು ಉಳಿದುದರಿಂದ ಗಿರಾಕಿಗಳಿಗೆ ಆಶಾಭಂಗವನ್ನುಂಟುಮಾಡಿದಂತಾಗುವದೆಂದೂ, ಹೆಚ್ಚಿನ ಸಾಮಾನನ್ನು ಬೊಂಬಾಯಿ, ಬಂಗಾಳ, ಬಿಹಾರ, ಬೆಳಗಾಂವ ಮೊದಲಾದ ಪ್ರದೇಶಗಳಿಂದ ತರಿಸುವದು ಅಸಾಧ್ಯವಾದುದರಿಂದಲೂ ಪ್ರದರ್ಶನವು ಬೇಗನೆ ಮುಚ್ಚಲ್ಪಟ್ಟಿತು. ಒಟ್ಟಾರೆ ಹೇಳುವದಾದರೆ ಪ್ರದರ್ಶನವು ಕೀರ್ತಿಶಾಲಿಯಾಗಿಯೂ, ಜಯಪ್ರದವಾಗಿಯೂ ನೆರವೇರಿತು. ಇದರಿಂದ ಸಂಸ್ಥಾನಕ್ಕೇ ಒಂದು ತರದ ಯಶಸ್ಸುಂಟಾಯಿತು. ಸಾಮಾನು ಮಾರಿ ಹುಟ್ಟಿ ಬಂದ ರೂ. ೬೦,೯೪೪ — ೨—೨, ಒಟ್ಟಾರೆ ದಿನಕ್ಕೆ ರೂಪಾಯಿ ೬೬,೧೧೭—೧೫—೮ರ ಖಾದಿಯು ವಿಕ್ರಯವಾಯಿತು. ಸರಾಸರಿ ೬೬೬೦ ರೂಪಾಯಿ ಖಾದಿಯು ಮಾರಿಹೋದಂತಾಯಿತು. ಇದು ಸಾಧಾರಣ ತರದ ಸಂಗತಿಯಾಗಿರದೆ ವಿಶೇಷ ತರಗತಿದ್ದಾಗಿದೆ. ಪ್ರೇಕ್ಷಕರಿಗಾಗಿ ಒಟ್ಟು ೩೯೮೬೧ ಟಿಕೇಟುಗಳು ಮಾರಿಹೋದವು. ಮೊದಲಿನ ದಿನವೇ ಸಾಧಾರಣ ೪೦೦೦ಕ್ಕೆ ಮಿಕ್ಕಿದ ಜನರು ಪ್ರದರ್ಶನವನ್ನು ನೋಡಲು ಬಂದಿದ್ದರು.

§ § § §

ಬನಾರಸಿನ ಮಹಾರಾಜರು.

ಬನಾರಸಿನ ಮಹಾರಾಜರು, ಸೆಕ್ರೆಟರಿ ಮೊದಲಾದವರೊಂದಿಗೆ ಕೂಡಿ ಕಳೆದ ಶನಿವಾರ ಮದರಾಸಿಗೆ ತಲಪಿದರು. ಪ್ರಸಿದ್ಧ ಪಟ್ಟೆ ಸದ್ಗೃಹಸ್ಥರೇ ಇವರನ್ನು ಎದುರುಗೊಂಡರು. ಅವರ ಆಗಮನದ ಸೂಚಕವಾಗಿ ೨೧ ಗುಂಡುಗಳು ಹಾರಿಸಲ್ಪಟ್ಟವು. ಕೊಲ್ಲಂಗೋಡಿನ ಮಹಾರಾಜರು ಇವರಿಗೂ ಮದರಾಸು ಗವರ್ನರ್ ದಂಪತಿಗಳಿಗೂ ಒಂದು ಇವಿನ್ನಿಂಗ್ ಪಾರ್ಟಿಯನ್ನು ಕೊಟ್ಟರು. ಈ ಸಮಾರಂಭಕ್ಕೆ ಸುಮಾರು ೨೦೦ ಅತಿಥಿಗಳು ಹಾಜರಿದ್ದರು. ಪಚ್ಚೆಯಪ್ಪ ಕಾಲೇಜಿನ ವಿದ್ಯಾರ್ಥಿಗಳು ಸಂಸ್ಕೃತದಲ್ಲಿ 'ಉತ್ತರರಾಮ ಚರಿತ್ರೆ'ಯ ಕೆಲವು ದೃಶ್ಯಗಳನ್ನು ಅಭಿನಯಿಸಿ ತೋರಿಸಿದರು. ಉದ್ಯಾವನವನ್ನು ಬಣ್ಣ ಬಣ್ಣಗಳ ದೀಪಗಳಿಂದ ಅಲಂಕರಿಸಿದ್ದುದರಿಂದ ಬಹಳ ರಮಣೀಯವಾಗಿ ತೋರುತ್ತಿತ್ತು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
" 2ನೆ " " ರೂ: 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —

ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಪ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds " 313,100—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore, 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪದವಿ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!



ಬಹುತರದ ಕೆಲಸಲು ಯೋಗ್ಯವಾದ ಕಲ್ಲುಗಳು, ಮುತ್ತುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಆಕ್ಸಿಡ್ ಕವರ್ ಟಿಂಗಾಗಿನಂತ ತಯಾರಿಸಿದ ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟ ತಾಜಾವಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘುವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವೆನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)

DUNLOP

ಬೇಟ್ಸ್ ಕೋರ್ಡ್ಸ್ ಸೈಕಲ್ ಟಾಯರು.

ಈ ಟಾಯರು ಶಾಸ್ತ್ರೀಯವಾದ ಮತ್ತು ಸಮಂಜಸವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ. ಉತ್ತಮ ತರಗತಿಯ ಮತ್ತು ಬೇಗನೆ ಸವೆದುಹೋಗದಿರುವಿಕೆಯಲ್ಲಿ ಪ್ರಸಿದ್ಧಿಪಟ್ಟ ಗಟ್ಟಿ ರಬ್ಬರ್ ಉಪಯೋಗಿಸಿದ

ಶ್ರೇಷ್ಠತಮ ಟಾಯರು.

fit Dunlop and be satisfied

ದಿ. ಡನ್ಲೋಪ್ ರಬ್ಬರ್ ಕಂಪೆನಿ. (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೋಹತ್, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೭ನೇ ಶುಕ್ರವಾರ ಜನವರಿ ೧೯೨೮. ಸಂಚಿಕೆ ೪

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000
Subscribed "	2,25,000
Paid up "	1,99,650
Reserve and other Funds as on 31—12—1927	83,000
Investment on G. P. Notes.	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928.

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21-1-'28.

N. ANANDA RAO,
Secretary.

ಅಮೃತಾಂಜನ

ತಲೆಶಿಖ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ-ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:— ತಬಲೆ, ಡಕ್ಕೆ ವಗೈರೆ.



[illegible]

ಗೋಪಾಳ ಸಖಾರಾಮ ಮತ್ತು ಕಂಪೆನಿ,

[illegible]

ಕಾಶಿಯ ಅಪೂರ್ವ ಪದಾರ್ಥಗಳು.

[illegible]

ವಿಶ್ವನಾಥ ಅಂಡ್ ಬ್ರದರ್ಸ್,

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್

(ನೀಲಗಿರಿ ಎಣ್ಣೆ)

[illegible]

ಟಿ. ಪಿ. ನಾಗಲಿಂಗಪ್ಪಾ ಅಂಡ್ ಕೋ,

'ಅಂಬಾ ತಾಯಿತ್'

[illegible]

ಶಿವರಾಮ ಭಟ್ಟ ತೆಂಗಿನಮನೆ,

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜ್ವರ ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೦.

ಬಾಟ್ಲಿವಾಲರ ಕ್ಲೋರೋಡಿನ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೀನ ಟಿಕ್ಕಿಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟಿಕ್ಕಿಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಹತ್ತಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ತಾರಿನವಿಳಾಸ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಅಮೃತ'ವೆಂದೂ, 'ಸಂಜೀವಿನಿ'ಯೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ [illegible] ಸೇವಿಸಲು ಯೋಗ್ಯವಾಗಿದೆ.

[illegible] ಋತುಸ್ರಾವವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಬಿಳಿ) ರೋಗ, [illegible], ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಕೋಶದ ರೋಗಗಳೂ, [illegible] ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳತ, [illegible] ಮುಂತಾದ ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವವು.

ಈ ಲೋಕಪ್ರಸಿದ್ಧ ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—KESARI. ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟ್ಯಾಂಪೀಸ್ ಇನಾಂ.



[illegible]

ಟೈಂಪೀಸ್ ಸಹಿತ ಪೇಟಿ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪೆನಿ, ಪೋ ಬಾಕ್ಸ್ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು [illegible] ತಯಾರಿಸಿದವು. [illegible]

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್ 1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ, ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕೆ ೧೮೪೯ನೆಯ ಪ್ರಭವ ಸಂ|ದ ಮಾಘ ಶು| ೬ ಶನಿವಾರದಿಂದ ಪ್ರಭವ ಸಂ|ರದ ಮಾಘ ಶು| ೧೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೭ನೆಯ ಧನು (ಬೆಂಡರ್)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಚಂದ್ರಮಾನ	ಸೂರ್ಯ ಉ.	ಅಸ್ತ
28	ಶನಿ	೬	೨೮.೧೬	ರೇವತೀ	೪೨.೨೮	೧೪	6.59	6.28
29	ರವಿ	೭	೨೨.೩೨	ಅಶ್ವಿನೀ	೩೮.೩೦	೧೫	6 59	6 28
30	ಸೋಮ	೮	೧೬.೯೬	ಭರಣೀ	೩೪.೩೨	೧೬	6.59	6 29
31	ಮಂಗ	೯	೧೦.೫೯	ಕೃತ್ತಿಕಾ	೩೦.೪೨	೧೭	6 59	6.29
1	ಬುಧ	೧೦	೫. ೩೨	ರೋಹಿಣೀ	೨೭. ೨	೧೮	1 59	6.30
2	ಗುರು	೧೧	೦. ೩೧	ಮೃಗಶಿರಾ	೨೪. ೧	೧೯	2.59	6 30
3	ಶುಕ್ರ	೧೩	೫೩. ೨	ಆರ್ದ್ರಾ	೨೨. ೩	೨೦	3.59	6.30

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಒಟ್ಟು ಮಳೆ.
20	94— 2	67— 5	—	—
21	92 5	68— 5	—	—
22	92— 7	69— 7	—	—
23	88— 8	73 - 1	—	—
24	88— 7	71— 4	—	—
25	90— 6	70 — 9	—	—
26	89— 9	72— 4	—	—
				127-21

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ	6- 10	7— 4
ಹೊಸ ಗುಡ್ಡು ...	6— 0	6— 8
ಸುಗ್ಗಿ ...	6— 0	6- 10
ಹೊಸ ರಾಶಿ ...	6 — 2	6 — 9
ಊರ ಅಮ್ಮರ್ ಬೆಳ್ತಿಗೆ ...	7-- 4	8 — 0
ರಂಗೂನ ಬೆಳ್ತಿಗೆ ಗೋಣಿ ೧ ...	13— 8	14 — 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7— 0	7— 4
ಗೋಧಿ ಗೋಣಿ ೧ಕ್ಕೆ ...	18— 0	19 0
ಹುರುಳಿಗೋಣಿ ೧ಕ್ಕೆ ...	8— 8	10 0
ಕಡಲೆಗೋಣಿ ೧ಕ್ಕೆ ...	13— 8	14 — 0
ತೊಗರಿಗೋಣಿ ೧ಕ್ಕೆ ...	17 — 0	18 — 0
ತೊಗರಿಬೇಳೆ ಗೋಣಿ ೧ಕ್ಕೆ ...	20 — 0	23 — 0
ಉದ್ದು ಗೋಣಿ ೧ಕ್ಕೆ ...	14 — 0	14 _ 8
ಹೆಸರುಗೋಣಿ ೧ಕ್ಕೆ ...	15 0	15 — 8
ಊರು ಬೆಲ್ಲ ಖಂಡಿ ೧ಕ್ಕೆ ...	36 — 4	45 — 0
ಉಪ್ಪು ಗೋಣಿ ೧ಕ್ಕೆ ...	3 —14	4 — 0
ಕೊಬ್ರಿ ಖಂಡಿ ೧ಕ್ಕೆ ...	130 - 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	49 — 0	50 — 0
ಎಳ್ಳಿಂಡಿ ಖಂಡಿ ೧ಕ್ಕೆ ...	50 — 0	55 — 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8 — 4	8 6
ಎಳ್ಳೆಣ್ಣೆ ಮುಡಿ ೧ಕ್ಕೆ ...	7 — 0	8 0
[illegible] ಎಣ್ಣೆ [illegible] ೧ಕ್ಕೆ	8 — 0	—
ದೋಣಿನ ಸಕ್ಕರೆ ಮುಡಿ ೧ಕ್ಕೆ ...	3 — 10	3 12
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8 — 0	8 4
[illegible] ಮುಡಿ ೧ಕ್ಕೆ ...	9 — 0	—
ಕೊತ್ತಂಬರಿ ಮುಡಿ ೧ಕ್ಕೆ ...	7 —12	8 — 0
ಕಾಫಿ ಖಂಡಿ ೧ಕ್ಕೆ ...	325 — 0	400 -- 0
[illegible] ಖಂಡಿ ೧ಕ್ಕೆ ...	125 - 0	130 -- 0
[illegible] ಖಂಡಿ ೧ಕ್ಕೆ ...	420 - 0	430-
[illegible] ೧ಕ್ಕೆ ...	50 — 0	54 — 0
[illegible] ೧ಕ್ಕೆ ...	3 —10	3 — 12
[illegible] ಖಂಡಿ ೧ಕ್ಕೆ ...	37 — 8	40 - 0
[illegible] ಮುಡಿ ೧ಕ್ಕೆ ...	15 - 0	15 — 0
[illegible] ಮುಡಿ ೧ಕ್ಕೆ	21 — 0	—
[illegible] ೧ಕ್ಕೆ ...	15 — 0	—
[illegible] ಮುಡಿ ೧ಕ್ಕೆ ...	15 — 0	—
[illegible]	13 — 7	—



ಮೈಸ ಸನ್ಸ್ ಪ್ಲಂಜರ್ ಪಂಪುಗಳು.

ಪಂಪುಗಳು

ವೈಸ್ ಎಂಡ್ ಮೋನ್ಸ್ಕಿ ಡೂಪ್ಲೇ ಸ್ಟೀಮ್ ಪಂಪುಗಳು.

ನೀರು ಸೇದುವ ಉಪಕರಣಗಳಿಗೂ, ಕಾರಖಾನೆಗಳಿಗೂ, ಪವರ್ ಸ್ಟೇಶನುಗಳಿಗೂ ಉಪಯೋಗಿಸುವ 3 ಹಾರ್ಸ್ ಪವರಿಗೆ ಮಿಗಿಲಾದ ಕ್ರೂಡ್ ಆಯಿಲ್ ಇಂಜಿನುಗಳು.

ಮುಖ್ಯ ಏಜಂಟರು—

VOLKART BROS ENGINEERS

Box G. 45
Armenian Street, MADRAS.

The Canara Bank, Ltd., Karkala,

ದಿ. ಕೆನರಾ ಬೇಂಕ್ ಲಿಮಿಟೆಡ್ ಕಾರ್ಕಳ

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಬಡ್ಡಿಯನ್ನಾಗಲಿ ವ್ಯಾದೆಗೆ ಕೊಡದೆ ಇದ್ದುದರಿಂದ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಅವರು ಕಾಣಸಿಕ್ಕಿಲ್ಲವಾಗಿಯೂ ವಾಪಾಸು ಬಂದಿರುವುದರಿಂದ ಕೂಡ ಸದರಿಯವರು ಇದೇ ಬರುವ ತಿಂಗಳ ತಾ. 6—2—'28ನೇ ಸೋಮವಾರದ ಒಳಗೆ ಬ್ಯಾಂಕಿಗೆ ಬಹಾ ಅಸಲು ಬಡ್ಡಿ ಐವೇಜುಗಳನ್ನು ತಂದು ಕೊಟ್ಟು ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಅವುಗಳನ್ನು ಇದೇ ಬರುವ ತಾ. 13—2—'28ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲ ಪಡಕೊಂಡವರ ಹೆಸರು	ಸಾಲಪಡಕೊಂಡ ತಾರೀಕು	ಸಾಲದ ಮೊಬಲಗು	ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ
ಸಾಣೂರು ಬೆಟ್ಟ ಅನಂತರಾಮ ಉಪಾಧ್ಯಾ	11-10-'26	80-0-0	10-14-4
ಕೌಡೂರು ಅಂತಯ್ಯ ಮಾಡಾ	17-7-'26	60-0-0	8- 4-6

ಮತ್ತು ಈ ನೋಟೀಸಿನ ಖರ್ಚು ಸಹಾ.

Canara Bank Ltd., KARKALA. 18—1—'28. } C. Manjunath Kamath, Agent.

ಇಷ್ಟು ನಿಮಗೆ ದುಬಾರಿ ಹೊರೆ ಹೊರಿಸಲ್ಪಟ್ಟಿದೆ. ಇಡೀ ಹಿಂದೂಸ್ಥಾನದಲ್ಲಿಯೂ ಕೂಡ ಇಷ್ಟು ಕನಿಷ್ಠ ಉತ್ಪತ್ತಿ ಇರುವ ಜಿಲ್ಲೆಗೆ ಅತ್ಯಧಿಕ ಕಂದಾಯ ಹೊರಿಸಿದ ಪ್ರಸಂಗ ಎಲ್ಲಿಯೂ ಕಂಡುಬರುವುದಿಲ್ಲ. ಬರುವ ಸೆಟ್ಲಮೆಂಟಿನಲ್ಲಿ ನಂಜ ಪುಂಜ ಗದ್ದೆಗಳಿಗೆ ಇನ್ನೂ ರೂಪಾಯಿಗೆ ೩ ಆಣೆ ಹೊರಿಸುವರು. [illegible]

ಮೂಡಬಿದ್ರಿ, ಶಂಕರನಾರಾಯಣರಾವ್, ವಕೀಲ್, [illegible] ಮಂಗಳೂರು.

ಕನ್ನಡ ಜಿಲ್ಲೆಯ ಭೂಮಾಲಿಕರಿಗೆ ಭೂ-ಹಕ್ಕುಗಳ ಬಾಬ್ತು ವಿನಂತಿ.

ಸ್ವದೇಶಾಭಿಮಾನಿ, ನವಯುಗದಲ್ಲಿ ಕಳೆದ ಜುಲೈ ತಿಂಗಳ ತಾರೀಕು ೮-೨೧ರಲ್ಲಿ ಮತ್ತು ನವಂಬರ, ದಶಂಬರ ತಿಂಗಳಲ್ಲಿ ಬರೆದ ಲೇಖನಗಳಲ್ಲಿಯೂ, ಸಮಾಚಾರಗಳಿಂದಲೂ ಮಂಗಳೂರಲ್ಲಿ ಈ ಸಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರ ಸಂಘ ಸ್ಥಾಪಿಸಲ್ಪಟ್ಟಿದೆ ಎಂಬುದು ಅನೇಕರಿಗೆ ತಿಳಿದಿರುವುದು. ಈ ಸಂಘದ ಉದ್ದೇಶವು ಮತ್ತು ನಂತರ ಮಾಡತಕ್ಕ ಕೆಲಸವು ಯಾವುದು ಎಂಬದಾಗಿ ರೈತರು ತಿಳಿಯಬೇಕಾದ ಸಂಗತಿಯಾಗಿದೆ. ಈ ಸಂಘದ ಅವಶ್ಯಕತೆಯ ವಿಷಯ ಈ ಕೆಳಗೆ ಸಂಕ್ಷೇಪವಾಗಿ ಬರೆಯುವೆನು. ರೈತರೆಲ್ಲರೂ ಏಕಮನಸ್ಸಿನಿಂದ ಈ ವಿಷಯ ಪರ್ಯಾಲೋಚಿಸುವದು ಎಂಬದಾಗಿ ವಿನಂತಿ—

ಕಾಸರಗೋಡು ತಾಲೂಕಿಗೆ ಹೊಸ ಸರ್ವೆ ಇಷ್ಟರ ವರೆಗೆ ಸಂಪೂರ್ಣ ಆಗಿಯದೆ ಎಂಬದಾಗಿಯೂ, ಹೊಸ ಸೆಟ್ಲಮೆಂಟು ಕೆಲಸದ ಪ್ರಿಲಿಮಿನರಿ ದುರಸ್ತಿ ಬಗ್ಗೆ ಸಿಬಂದಿಗಳು ಕೂಡಾ ಕೆಲಸವನ್ನು ಸುರುಮಾಡಿದ್ದಾರೆ. ಈಗ ಹೊಸ ರೀಸರ್ವೆಯಲ್ಲಿಯೂ ಬರುವ ಸೆಟ್ಲಮೆಂಟಿನಲ್ಲಿಯೂ, ತಮ್ಮ ಹಕ್ಕುಗಳಾಗಿ ಆದ ಬಾಧಕಗಳನ್ನು ಸ್ವಲ್ಪ ಮಟ್ಟಿಗೆ ಮುಂಚಿನ ಲೇಖನದಲ್ಲಿ ಬರೆದಿದ್ದೆ. ಇನ್ನು ಮುಂದೆ ನಿಮ್ಮ ಹಕ್ಕುಗಳು ಹ್ಯಾಗೆ ನಿಲ್ಲುವದು ಎಂಬ ಸಂಗತಿ ಈ ಸಂದರ್ಭದಲ್ಲಿ ತಿಳಿಯಬೇಕಾಗಿದೆ. ಹಿಂದೂ ರಾಜರ ನಂತರ ಮೈಸೂರು ಸುಲ್ತಾನರವರ ಕಂಪೆನಿಯ ಆಡಳಿತೆಯಲ್ಲಿ ಕೂಡ ಈ ಜಿಲ್ಲೆಯ ಭೂಮಾಲಿಕರಿಗೂ ಮಲಬಾರಿನ ಜನ್ಮಿಗಳಿಗೂ ಮಾತ್ರ ಸಮಾನವಾಗಿ ಸಂಪೂರ್ಣ ಮಾಲಿಕರ ಹಕ್ಕು ಇರುವುದಾಗಿಯೂ, ಇಷ್ಟು ಸಂಪೂರ್ಣ ಹಕ್ಕುಗಳು ಇಡೀ ಹಿಂದುಸ್ಥಾನದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಕೂಡ ಇರುವುದಿಲ್ಲವಾಗಿಯೂ, ಇತಿಹಾಸದಲ್ಲಿಯೂ ಕಂಪೆನಿಯ [illegible]

[illegible]

ಮೊಗಲರ ಕಾಲದಲ್ಲಿದ್ದ ಕ್ರಯಾದಾಯ ಸೌಕರ್ಯಗಳು.

(ಕಳೆದ ಸಂಚಿಕೆಯಿಂದ ಮುಂದುವರಿಸಲಾಗಿದೆ)

ಅಲ್ಲ, ವಾಹನಗಳ ಮಟ್ಟಿಗೆ ಹೇಳಿದಂತಾಯಿತು. ... ಪ್ರಯಾಣ ಮಾಡುವಾಗ ತಿನ್ನುವದಕ್ಕಾಗಿ ... ಆಹಾರ ಸಾಮಗ್ರಿಗಳನ್ನು ತಂಗುವದಕ್ಕಾಗಿ ಡೇರೆಗಳ... [illegible]

ಜಪಾನಿನ ವಿದ್ಯಾಭ್ಯಾಸದ ಕ್ರಮ.

[illegible]

ಪ್ರತಿಯೊಬ್ಬನೂ ಏಕಪ್ರಕಾರವಾಗಿ ವಿದ್ಯಾವಂತನಾಗಬೇಕೆಂದು ಉತ್ತಮ ಪ್ರಯತ್ನಗಳು ನಡೆಯುತ್ತಿದ್ದವು. ಇಲ್ಲಿನಂತೆ ಅಲ್ಲಿ ಖುಸಿ ಬಂದ ಪಾಠಗಳನ್ನು ಕಲಿಯಲು ಒಪ್ಪುವ ಪದ್ಧತಿ ಇಲ್ಲದುದರಿಂದ ಒಬ್ಬೊಬ್ಬ ವಿದ್ಯಾರ್ಥಿಯು ಒಂದೊಂದು ಪಾಠದಲ್ಲಿ ಪ್ರವೀಣತೆಯನ್ನು ತೋರಿಸಲಾಗುತ್ತಿರಲಿಲ್ಲ. ಶಿಕ್ಷಣವನ್ನು ಹೊಂದುವ ಹದಿನೆರಡು ಹದಿಮೂರು ವರ್ಷಗಳ ಕಾಲದಲ್ಲಿ ಕ್ರಮಪ್ರಕಾರವಾಗಿ ಬೇರೆ ಬೇರೆ ಪಾಠಗಳನ್ನು ಮೊದಲಿನಿಂದ ಕಡೆಯ ವರೆಗೂ ಕಲಿಯಬೇಕಿತ್ತು. ಇಂಗ್ಲೀಷ್ ಮತ್ತು ಜಪಾನಿ ಭಾಷೆಗಾಗಿ ಶೇಕಡಾ ೪೦ರಷ್ಟು ಸಮಯವು ವಿನಿಯೋಗಿಸಲ್ಪಡುತ್ತಿತ್ತು. ದೇಹಶಾಸ್ತ್ರ, ಸಸ್ಯಶಾಸ್ತ್ರ ಮೊದಲಾದವುಗಳಿಗೆ ಅಲ್ಪಸ್ವಲ್ಪ ಸಮಯವು ಮಾತ್ರ ಉಪಯೋಗಿಸಲ್ಪಡುತ್ತಿದ್ದುದರಿಂದ, ಈ ಸಣ್ಣ ಪಾಠಗಳಲ್ಲಿ ತುಂಬಾ ಅಭಿರುಚಿ ಇರುವ ವಿದ್ಯಾರ್ಥಿಗೆ ಅಭಿವೃದ್ಧಿಯನ್ನು ಮಾಡಿಕೊಳ್ಳಲು ಎಡೆಯಿರಲಿಲ್ಲ. ಮಿಡ್ಲ್‌ಸ್ಕೂಲ್‌ಗಳಲ್ಲಿದ್ದ ದೋಷಗಳಲ್ಲಿ ಇದೊಂದು ಮುಖ್ಯವಾಗಿತ್ತು. ಹೀಗೆ ಮಾಡದೆ ಒಬ್ಬನಿಗೆ ಅಭಿರುಚಿ ಇರುವ ಪಾಠವನ್ನು ಆತನಿಗೆ ಚೆನ್ನಾಗಿ ಕಲಿಸಿದರೆ ಮಾತ್ರ ಆತನ ಅಭಿವೃದ್ಧಿಯಾಗುವದು. ಪ್ರತಿಯೊಬ್ಬನ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾಗುವದು.

ಜಪಾನ ದೇಶವು ಪಾಶ್ಚಿಮಾತ್ಯರ ನಾಗರಿಕತೆಯ ಅಂಶವನ್ನು ಸೆಳೆದು ಇದೆಯಾದರೂ ಇನ್ನು ಕೂಡ ಅಲ್ಲಿ ಹೆಚ್ಚಿನ ಅಭಿವೃದ್ಧಿಯಾಗಲಿದೆ. ಇಂದಿನ ವರೆಗೆ ಅಭಿವೃದ್ಧಿಯಾಗಿ ಬಂದಂತೆ ಇನ್ನೂ ಅಭಿವೃದ್ಧಿಯಾಗಿ ಬಂದರೆ ಜಪಾನ ದೇಶವು ನಿಜವಾಗಿಯೂ ಶ್ರೇಷ್ಠ ದೇಶವಾಗುವದು. ಹಿಂದೂ ದೇಶವೇ ಮೊದಲಾದ ದೇಶಗಳ ಅಭಿವೃದ್ಧಿಗೆ ಜಪಾನ್ ದೇಶವೇ ಮಾರ್ಗವನ್ನು ತೋರಿಸಿದಂತಾಗುವದು.

ಫೆಬ್ರವರಿ ತಾ. ೩ನೇ ದಿನ ಸಂಪೂರ್ಣ

ಹರತಾಳವನ್ನಾಚರಿಸಿರಿ!

ದಕ್ಷಿಣ ಕನ್ನಡದ ಮಹಾಜನರಲ್ಲಿ ಸವಿನಯ ವಿಜ್ಞಪ್ತಿ.

ಬಂಧುಗಳೇ,

ಸೈಮನ್ ಕಮಿಶನು ಬರುವ ತಾ. ೩ಕ್ಕೆ ಮುಂಬಾಯಿ ಬಂದರಲ್ಲಿ ಬಂದಿಳಿಯುವುದು. ಅಂದು ಹಿಂದೀಯರ ಸ್ವಾಭಿಮಾನ ಪರೀಕ್ಷೆಯಾಗುವುದು. ಕಮಿಶನನ್ನು ಸಂಪೂರ್ಣ ಬಹಿಷ್ಕರಿಸುವುದರಿಂದಲೇ ಹಿಂದೀಯರು ಸ್ವಾಭಿಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು.

ಲೋಕಮತವನ್ನು ಧಿಕ್ಕರಿಸಿ ನೇಮಿಸಿದ ಕಮಿಶನಿನಲ್ಲಿ ಆಶೆಯನ್ನು ಪಾಲ್ಗೊಳ್ಳುವುದು ಅವಿಚಾರವೇ ಸರಿ. ಆದಕಾರಣದಿಂದಲೇ ಹಿಂದೀ ರಾಷ್ಟ್ರೀಯ ಮಹಾ ಸಭೆಯು ಮಾತ್ರವಲ್ಲ, ಯಾವತ್ತು ಭಾರತೀಯ ಸಂಸ್ಥೆಗಳು ಏಕಕಂಠದಿಂದ ಬಹಿಷ್ಕಾರವನ್ನು ಸಾರುತ್ತಿವೆ. ಈ ಬಹಿಷ್ಕಾರವನ್ನು ಯಶಸ್ವಿಗೊಳಿಸುವ ಭಾರವು ಪ್ರತಿಯೊಬ್ಬ ಹಿಂದೀಯನದಾಗಿರುತ್ತದೆ.

ಬಂಧುಗಳೇ, ದಕ್ಷಿಣ ಕನ್ನಡವು ಸಂದರ್ಭವರಿತು ಕಾರ್ಯವನ್ನು ಕೈಕೊಳ್ಳುವುದರಲ್ಲಿ ಹಿಂದೆ ಬೀಳದೆಂಬುವನ್ನು ವ್ಯಕ್ತಪಡಿಸಿರಿ. ಆದಕಾರಣ ಬನಾರಸದಲ್ಲಿ ಜನವರಿ ತಾ. ೧೫ಕ್ಕೆ ಜರಗಿದ ಸರ್ವ ಪಕ್ಷೀಯ ಮುಖಂಡರ ಪರಿಷತ್ತಿನ ಮತ್ತು ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿ ಮಂಡಲಿಯವರ ಏಕಮತ್ಯ ನಿರ್ಣಯದಂತೆ ಪ್ರತಿಯೊಂದು ಪೇಟೆ ಪಟ್ಟಣಗಳಲ್ಲಿಯೂ, ಹಳ್ಳಿಪಳ್ಳಿಗಳಲ್ಲಿಯೂ ಬರುವ ಫೆಬ್ರವರಿ ತಾ. ೩ನೇ ಸಾಯಂಕಾಲ ಗಂಟೆ ೪-೩೦ಕ್ಕೆ ನಿಷೇಧ ಸಭೆಗಳನ್ನು ಜರಗಿಸಿ ಆ ದಿನ ಮುಂಜಾನೆಯಿಂದ ಸಭೆಗೂಡುವ ತನಕ ಹರತಾಳವನ್ನಾಚರಿಸಿರಿ! ಈ ಕೆಳಗಿನ ಠರಾವನ್ನು ಸದರಿ ಸಭೆಯಲ್ಲಿ ಮಂಜೂರಾತಿಗಿಟ್ಟು ಪ್ರಚಂಡ ಬಹಿಷ್ಕಾರವನ್ನು ಸಾರಿರಿ! ಈಜಿಪ್ತದಲ್ಲಿ ಮಿಲ್ನರ್ ಕಮಿಶನಿಗೆ ಯಾವ ರೀತಿ ಬಹಿಷ್ಕಾರ ಹಾಕಿದರೆಂಬುವನ್ನು ನೆನಸಿ ವಕೀಲರು, ಡಾಕ್ಟರರು, ಉಪಾಧ್ಯಾಯರು, ನೌಕರರು, ವಿದ್ಯಾರ್ಥಿಗಳು ಎಂಬೀ ಭೇದವಿಲ್ಲದೆ ಸಮಸ್ತರೂ ಈ ಸ್ವಾಭಿಮಾನ ಪರೀಕ್ಷೆಯ ಕಾಲ ರಾಷ್ಟ್ರೀಯ ಧ್ವಜದಡಿಯಲ್ಲಿ ಒಟ್ಟುಗೂಡಿ ಕಮಿಶನಿಗೆ ತಮ್ಮ ತೀವ್ರ ನಿಷೇಧವನ್ನು ಪ್ರದರ್ಶಿಸಿರಿ!!! ನಮ್ಮಲ್ಲಿ ದೇಶಪ್ರೇಮವು ಕುಗ್ಗಿಲ್ಲವೆಂಬುವನ್ನು ಬಹಿಷ್ಕಾರ ಘೋಷದಿಂದ ಜಗತ್ತಿಗೆ ಜಾಹೀರುಪಡಿಸಿರಿ!!!!

ಠರಾವು.

"ಹಿಂದೀಯ ಮತವನ್ನು ಪೂರ್ಣ ನಿರ್ಲಕ್ಷಿಸಿ ನೇಮಿಸಿದ ಸೈಮನ್ ಕಮಿಶನಿನ ಕುರಿತು . . . . (ಸ್ಥಳದ ಹೆಸರನ್ನು ನಮೂದಿಸತಕ್ಕದ್ದು) ಪುರನಿವಾಸಿಕರ ಈ ಸಭೆಯು ತನ್ನ ತೀವ್ರ ನಿಷೇಧವನ್ನು ಪ್ರದರ್ಶಿಸುವುದಲ್ಲದೆ, ಕಮಿಶನಿನ ಕಾರ್ಯದ ಯಾವ ರೂಪಾಂತರದಲ್ಲೂ ಯಾವ ಭಾಗದಲ್ಲೂ ತನ್ನ ಸಂಬಂಧವಿಲ್ಲವೆಂಬ ದೃಢನಿಶ್ಚಯವನ್ನು ವ್ಯಕ್ತಪಡಿಸುತ್ತದೆ. ಕಮಿಶನಿನ ಸಂಬಂಧ ನ್ಯಾಯವಿಧಾಯಕ ಸಭಾಸದರ ಮಂಡಲಿಯ ರಚನೆಯನ್ನು ವಿರೋಧಿಸಿ, ಅದು ಆಗದ ಹಾಗೆ ತಮ್ಮ ಕೈಲಾದ ಪ್ರಯತ್ನವನ್ನು ಮಾಡಬೇಕೆಂದು ಕೌನ್ಸಿಲ್ ಒಫ್ ಸ್ಟೇಟ್ ಎಸ್ಸೆಂಬ್ಲಿ ಹಾಗೂ ಪ್ರಾಂತಿಕ ಕೌನ್ಸಿಲುಗಳ ಚುನಾಯಿಸಲ್ಪಟ್ಟ ಸಭಾಸದರನ್ನು ಮುಖ್ಯತಃ ಈ ಪೌರ ಸಭಾಸದರನ್ನು ಈ ಸಭೆಯು ಕೇಳಿಕೊಳ್ಳುತ್ತದೆ. ಹಿಂದೀ ರಾಜ್ಯ ಘಟನೆಯು ಹಿಂದೀಯರಿಂದಲೇ ತಯಾರಿಸಲ್ಪಡಬೇಕೆಂದು ಈ ಸಭೆಯು ಅಭಿಪ್ರಾಯಪಡುವುದಲ್ಲದೆ ಅಂತಹ ರಾಜ್ಯ ಘಟನೆಯ ರಚನೆ ಬಗ್ಗೆ ಒಂದು ಜಾದಾ ಸಭೆಯನ್ನು ಜರಗಿಸುವ ಸೂಚನೆಗಳನ್ನು ಬಲವಾಗಿ ಪುಷ್ಟೀಕರಿಸುತ್ತದೆ.

ಇತಿ,
ತಮ್ಮ ವಿಧೇಯ ಸೇವಕ,

ಕೆ. ಆರ್. ಕಾರಂತ,
ಅ. ಭೋಜರಾಯ,
ಜತೆಕಾರ್ಯದರ್ಶಿಗಳು,

ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿ,
ಕೊಡಿಯಾಲಬೈಲು, ತಾ॥ 26 – I – '28

ಸ್ಫುಟ ವಿಚಾರಗಳು.

ಸ್ಯಾಮನ್ ಕಮಿಶನ್ನಿನ ಬಹಿಷ್ಕಾರ.

ಸ್ಯಾಮನ್ ಕಮಿಶನ್ನಿನ ಬಹಿಷ್ಕಾರದ ಪ್ರತ್ಯಕ್ಷ ಪ್ರಮಾಣವಾಗಿ, ಆ ಕಮಿಶನ್ನು ಹಿಂದೂಸ್ಥಾನಕ್ಕೆ ಕಾಲಿಡುವ ದಿವಸ ಸಮಗ್ರ ಹಿಂದೂಸ್ಥಾನವು ಹರತಾಳವನ್ನು ಆಚರಿಸಬೇಕಾಗಿ ನಿಶ್ಚಯಿಸಲಾಗಿಯದೆ. ಮಂಗಳೂರಿನಲ್ಲಿಯೂ ಈ ಹರತಾಳವನ್ನು ಕಾರ್ಯಕಾರಿಯಾಗಿ ಆಚರಿಸಲಿಕ್ಕೆಂದು ಮಂಗಳೂರು ಕಾಂಗ್ರೆಸ್ ಕಮಿಟಿಯು ಕೊಟ್ಟ ವಿನಂತಿ ಪತ್ರವನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರುತ್ತೇವೆ. ಸ್ಯಾಮನ್ ಕಮಿಶನ್ನಿನ ಪ್ರತಿನಿರೋಧವು ದಿನದಿನವೂ ತೀಕ್ಷ್ಣವಾಗುತ್ತಾ ಬರುತ್ತಿದೆಯೆಂಬುದು ಸ್ಪಷ್ಟವಾಗುತ್ತಿದೆ. ಮಧ್ಯಪ್ರಾಂತ್ಯದಲ್ಲಿಯೂ, ಮದ್ರಾಸಿನಲ್ಲಿಯೂ ಪ್ರಾಂತಿಕ ಕೌನ್ಸಿಲುಗಳು ತಮ್ಮ ನಿಷೇಧವನ್ನು ಠರಾವಿನ ಮೂಲಕ ವ್ಯಕ್ತಪಡಿಸಿದ್ದಾರೆ. ಢಿಲ್ಲಿಯ ಸಮಸ್ತ ಪಕ್ಷಗಳ ಧುರೀಣರ ಪರಿಷತ್ತು ಈ ಬಹಿಷ್ಕಾರಕ್ಕಾಗಿ ಮತ್ತು ಹರತಾಳಕ್ಕಾಗಿ ನಿರ್ಧರಿಸಿಯದೆ. ಹಿಂದೀ ಸರಕಾರವು ಈ ಬಹಿಷ್ಕಾರ ಚಳವಳಿಂದ ಬಹಳವಾಗಿ ಕಂಗೆಟ್ಟಿದಂತೆಯೂ ತೋರುತ್ತಿದೆ; ಮತ್ತು ಬಹಿಷ್ಕಾರವನ್ನು ಮುರಿಯುವ ಬಗೆ ಸರ್ವತರದ ಪ್ರಯತ್ನಗಳನ್ನು ನಡಿಸಲು ಸರಕಾರದ ಅಂತರಂಗದಲ್ಲಿ ಉಪಾಯಗಳು ಯೋಚಿಸಲ್ಪಡುತ್ತಿವೆ. ಹಿಂದೀಯ ಹಲವು ಪಕ್ಷಗಳ ಧುರೀಣರೊಳಗೆ ಸಾಮಾನ್ಯವಾಗಿ ಇರುವ ಭೇದಗಳನ್ನು ಸರಕಾರವು ತನ್ನ ಉಪಯೋಗಕ್ಕೆ ಬೀಳುವಂತೆ ಮಾಡುವ ಪ್ರಯತ್ನಗಳೂ ನಡಿಯುತ್ತಿವೆ. ಇಂತಹ ಸಂದರ್ಭದಲ್ಲಿ ಹಿಂದೀಯರು ಸರಕಾರದ ಬಲೆಗೆ ಬೀಳದಂತೆ ಬಹಳ ಎಚರಿಕೆಯಿಂದ ಇರಬೇಕಾಗುತ್ತದೆ. ಪ್ರಾಯಶಃ ಈ ಬಾರಿಯ ಹಿಂದೀಯ ಐಕ್ಯವೇ ಮುಂದಿನ ಹಿಂದೀ ಸ್ವಾತಂತ್ರ್ಯಕ್ಕೆ ಒರೆಗಲ್ಲಾಗಿ ನಿಲ್ಲುವುದು. ಹರತಾಳದಿಂದ ದೃಶ್ಯತಃ ಯಾವ ಪ್ರಯೋಜನವೂ ಇಲ್ಲದಿರಬಹುದಾದರೂ, ಅದು ಜನಾಂಗಕ್ಕೆ ಐಕ್ಯದ ಶಿಸ್ತನ್ನು ಕೊಡುವುದಲ್ಲದೆ, ದೇಶವು ಸ್ವಾತಂತ್ರ್ಯದ ಮಟ್ಟಿಗೆ ಎಷ್ಟು ತೀವ್ರವಾಗಿ ಒಮ್ಮತ ಉಳ್ಳದಾಗಿದೆಯೆಂಬುದನ್ನು ತೋರಿಸುವುದು. ಜನತೆಯಲ್ಲಿಯೂ ಸ್ವಾಭಿಮಾನದ ಸ್ವಭಾವವು ಬೆಳೆದು ಜನಾಂಗ ರಚನೆಯು ಬಹಳ ಚೆನ್ನಾಗಿ ಸಾಗುವುದು. ಆದುದರಿಂದ ಧುರೀಣರ ಅಪೇಕ್ಷೆಯಂತೆ ಈ ಹರತಾಳವು ಪೂರ್ಣವಾಗಿ ಕಾರ್ಯಕಾರಿಯಾಗಿ ಮಾಡುವುದು ನಮ್ಮ ಕರ್ತವ್ಯವಿದೆ. ಮಂಗಳೂರಿನ ಮಹಾ ಜನರೂ ಇದನ್ನು ಅತ್ಯುತ್ಸಾಹದಿಂದ ಆಚರಿಸುವಂತಾಗಿ ಆಶಿಸಲಾಗಿದೆ.

ಎಣ್ಣೆಯೂ ರಾಜತಂತ್ರವೂ.

ಖನಿಜಗಳಲ್ಲಿ ಎಣ್ಣೆಯು ಈಗಿನ ಎಲ್ಲಾ ಪಾಶ್ಚಾತ್ಯ ರಾಷ್ಟ್ರಗಳ ರಾಜತಂತ್ರದಲ್ಲಿ ಎಷ್ಟು ಪ್ರಾಮುಖ್ಯವಾಗಿ ಬೆಳೆದಿದೆಯೆಂಬುದನ್ನು ಪಾಶ್ಚಾತ್ಯ ರಾಜತಂತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದವರಿಗೆ ಗೊತ್ತು. ಒಂದು ಬಾರಿ ಕಲ್ಲಿದ್ದಲು ಕೈಗಾರಿಕೆಗಳಲ್ಲಿ ಅತ್ಯಂತ ಶ್ರೇಷ್ಠವಾಗಿ ಬೆಳೆದಿತ್ತು. ಆದರೆ ಒಯಿಲ್ ಇಂಜಿನುಗಳ ರಚನೆಯು ಆದ ಮೇಲೆ ಆ ಪ್ರಾಮುಖ್ಯತೆಯು ಎಣ್ಣೆಗೆ ಬಂದದೆ. ಈಗ ಎಣ್ಣೆಯು ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕ ಜೀವನದ ಸೂತ್ರವಾಗಿ ಪರಿಣಮಿಸಿಯದೆ. ಎಣ್ಣೆಯ ಗಣಿಗಳಿಂದ ಅಪಾರ ಸಂಪತ್ತಿನ ಲಾಭವಾಗುವುದು ಮಾತ್ರವಲ್ಲ; ಆ ಎಣ್ಣೆಯ ಉಪಯೋಗದಿಂದ ಸಾವಿರಾರು ಇತರ ಕೈಗಾರಿಕೆಗಳು ಪುಷ್ಟಿಹೊಂದಿ ಬೆಳೆದಿವೆ. ಈ ಕಾರಣದಿಂದ ಪ್ರತಿ ರಾಜ್ಯದ ಆರ್ಥಿಕ ಜೀವನವು ಸ್ವತಂತ್ರವಿರಬೇಕಾದರೆ ಆ ರಾಜ್ಯಕ್ಕೆ ಸ್ವಂತದ ಎಣ್ಣೆಯ ಗಣಿಗಳ ಆವಶ್ಯಕತೆಯು ಇದೆ. ಎಣ್ಣೆಗೆ ಈ ಪ್ರಾಮುಖ್ಯತೆಯಲ್ಲದೆ ಇನ್ನೊಂದು ತರದ, ಎಲ್ಲದಕ್ಕಿಂತಲೂ ಮೇಲಾದ ಪ್ರಾಮುಖ್ಯತೆಯಿದೆ. ಆಧುನಿಕ ಯುದ್ಧೋಪಕರಣಗಳಿಗಾಗಿ ಎಣ್ಣೆಯ ಉಪಯೋಗವೇ ಆಧಾರವಾಗಿದೆ. ಎಣ್ಣೆಯಿಲ್ಲದಿದ್ದರೆ ಯಾವ ರಾಷ್ಟ್ರವೂ ಇನ್ನೊಂದು ರಾಷ್ಟ್ರದೊಡನೆ ಯುದ್ಧಮಾಡಲಾರದು. ಈಗಿನ ಯುದ್ಧದ ಹಡಗುಗಳಿಗೆ ಎಣ್ಣೆಯ ಇಂಜಿನುಗಳಿವೆ; ಅವಿಯಿಂದ ನಡೆಯುವ ಹಡಗುಗಳಲ್ಲಿ ಕೂಡ ಕಲ್ಲಿದ್ದಲಿನ ಬದಲಿಗೆ ಎಣ್ಣೆಯನ್ನು ಸುಡುತ್ತಾರೆ. ಸಬ್‌ಮೇರಿನು, ಕ್ರ್ಯೂಜರ್ ಮೊದಲಾದ ಯಾವತ್ತೂ ನೌಕಾ ಸನ್ನಾಹಕ್ಕೆ ಎಣ್ಣೆ ಬೇಕೇ ಬೇಕು; ನೆಲದಲ್ಲಿ ಮೋಟಾರುಗಳು, ಆರ್ಮರ್ಡ್ ಕಾರುಗಳು, ದೊಡ್ಡ ದೊಡ್ಡ ತೋಪಿನ ಯಂತ್ರಗಳು ಇವಕ್ಕೆಲ್ಲಾ ಪೆಟ್ರೋಲ್ ಮತ್ತು ಎಣ್ಣೆ ಬೇಕಾಗುತ್ತದೆ; ವಾಯುವಿಮಾನಗಳಿಗೆ ಪೆಟ್ರೋಲ್ ಇಲ್ಲದೆ ಇಂಜನೇ ನಡೆಯುವುದಿಲ್ಲ. ಆದುದರಿಂದ ತಮ್ಮ ತಮ್ಮ ಸಂರಕ್ಷಣೆಗಾಗಿ, ಯುದ್ಧದ ಹೆದರಿಕೆ ತಪ್ಪದಿರಬೇಕಾದರೆ ಪ್ರತಿ ರಾಷ್ಟ್ರಕ್ಕೂ ಎಣ್ಣೆ ಬೇಕಾಗುತ್ತದೆ. ಎಣ್ಣೆಯನ್ನು ಉಪಯೋಗಿಸುವವರು ಇಂಜಿನಿಯರರಾದರೂ ಅದನ್ನು ಹೊಂದುವ ಮತ್ತು ಸ್ಥಿರವಾಗಿ ರಾಷ್ಟ್ರಕ್ಕಾಗಿ ಇಟ್ಟುಕೊಳ್ಳುವ ಯೋಚನೆಯು ರಾಜತಂತ್ರಜ್ಞರಿಗಿದೆ. ಇದು ರಾಷ್ಟ್ರರಾಷ್ಟ್ರಗಳೊಳಗೆ ಎಷ್ಟು ಮನಃಕ್ಲೇಶವನ್ನು ತಂದುಹಾಕುತ್ತಿದೆ.

ಎಣ್ಣೆಯ ಮೇಲಾಟ.

ಯುದ್ಧಸಮಯದಲ್ಲಿ ಬಹಳವಾಗಿ ಖರ್ಚಾಗುತ್ತಿದ್ದ ಎಣ್ಣೆಯು ಈಗ ಶಾಂತಿಸಮಯದಲ್ಲಿ ಖರ್ಚು ಕಡಿಮೆಯಾಗಿ ಬಂದಿದೆ. ಈ ವಹಿವಾಟಿನ ಮಂದತ್ವವು ತೀಕ್ಷ್ಣವಾದ ಮೇಲಾಟಕ್ಕೆ ಪರಿವರ್ತನವನ್ನು ಹೊಂದಿದೆ. ಹಿಂದೂಸ್ಥಾನದಲ್ಲಿ ಬರ್ಮಾ ಒಯಿಲ್ ಕಂಪೆನಿಯೂ, ಏಸ್ಯಾಟಿಕ್ ಪೆಟ್ರೋಲಿಯಮ್ ಕಂಪೆನಿಯೂ, ಸ್ಟೇಂಡಾರ್ಡ್ ಒಯಿಲ್ ಕಂಪೆನಿಯೂ ಮುಖ್ಯವಾಗಿವೆ. ಇವುಗಳಲ್ಲಿ ಬರ್ಮಾ ಕಂಪೆನಿಯು ಬ್ರಿಟಿಷರದ್ದಾಗಿದ್ದು, ಏಸ್ಯಾಟಿಕ್ ಕಂಪೆನಿಯು ಡಚ್ಚ ಕಂಪೆನಿಯಾಗಿದೆ. ಇವುಗಳು ಒಟ್ಟುಕೂಡಿ ಅಮೇರಿಕ ದೇಶದ್ದಾಗಿರುವ ಸ್ಟೇಂಡಾರ್ಡ ಕಂಪನಿಯನ್ನು ಎದುರಿಸಲು ಪ್ರಯತ್ನಿಸುತ್ತಿವೆ. ಸ್ಟೇಂಡಾರ್ಡ ಕಂಪೆನಿಯು ರಶ್ಯದ ಎಣ್ಣೆಯನ್ನು ಕೊಂಡದ್ದೇ ಅದರ ಪಾಪವಾಗಿ ಈ ಬ್ರಿಟಿಷ ಸಂಬಂಧದ ಕಂಪೆನಿಗಳ ನಿಷೇಧವಾಗಿದೆ. ಸ್ಟೇಂಡಾರ್ಡ ಕಂಪೆನಿಯು ರಶ್ಯಾ ಎಣ್ಣೆಯನ್ನು ಕೊಳ್ಳುವುದರಲ್ಲಿ ಅಂತಹ ಪಾಪವೇನೂ ತಮಗೆ ತೋರುವುದಿಲ್ಲವೆಂದೂ, ಡಚ್ಚ ಕಂಪೆನಿಯೂ ಈ ಮೊದಲು ಅಲ್ಲಿಂದ ಕೊಂಡುಕೊಳ್ಳುತಿತ್ತೆಂದೂ, ಮೇಲಾಟಕ್ಕೆ ತಾವು ಇಳಿದವರಲ್ಲವೆಂದೂ, ಈ ಬ್ರಿಟಿಷ ಡಚ್ಚ ಕಂಪೆನಿಗಳು ಮೇಲಾಟಕ್ಕೆ ಇಳಿಯುವ ಅವಶ್ಯಕತೆ ಇರಲಿಲ್ಲವೆಂದೂ ಸ್ಟೇಂಡಾರ್ಡ ಕಂಪೆನಿಯ ಹೇಳಿಕೆಯಾಗಿದೆ. ಇದಕ್ಕೆ ಎ. ಪಿ. ಸಿ. ಬಿ. ಒ. ಸಿ. ಯವರ ಪ್ರತ್ಯುತ್ತರಗಳೂ ಬಂದಿವೆ. ಇವುಗಳ ವಿಶೇಷವೇನೆಂದರೆ, ಈ ಡಚ್ಚ ಬ್ರಿಟಿಷ ಕಂಪೆನಿಗಳಿಗೆ ಒಮ್ಮೆಂದೊಮ್ಮೆ ಸ್ಥಳೀಯ ಕೈಗಾರಿಕೆಗಳ ಮೇಲೆ ಪ್ರೀತಿ ಹುಟ್ಟಿದುದು. ಯಾವ ರೀತಿಯಲ್ಲಿ ಇವುಗಳನ್ನು ಸ್ಥಳೀಯ ಕೈಗಾರಿಕೆಗಳಾಗಿ ಪರಿಗಣಿಸಬಹುದು ಎಂದು ಹೇಳಲಾಗುವುದಿಲ್ಲ. ಈ ಕಂಪೆನಿಗಳು ವರ್ಷ ವರ್ಷವೂ ಹೊಂದುವ ಲಾಭ, ಇವುಗಳ ವಿಲಾಯತಿಯ ಜನರ ನೌಕರಿಯ ಸಂಬಳವಾಗಿ ಸಲ್ಲುವ ಹಣ, ಇವುಗಳು ವರ್ಷ ವರ್ಷವೂ ಕಟ್ಟಿಡುವ ಹಣ, ಮತ್ತು ಯಂತ್ರ ಸಾಮಗ್ರಿಗಳಿಗಾಗಿ ಕೊಡುವ ಹಣ, ಇವೆಲ್ಲವನ್ನು ಒಟ್ಟು ಕೂಡಿಸಿ, ಈ ಮಧ್ಯದಲ್ಲಿ ಇರಬಹುದಾದ ಕೆಲವೇ ಹಿಂದೀ ಕೂಲಿಗಳ ಮಜೂರಿಯ ಏವೇಜಿನೊಡನೆ ಹೋಲಿಸಿದ್ದಲ್ಲಿ, ಈ ಕಂಪೆನಿಗಳ ಸ್ವದೇಶೀ ಪ್ರೇಮವು ಕಾಣುವುದು. ಇಂಗ್ಲೆಂಡಿನಲ್ಲಿ ಗಣಿಗಳಿಲ್ಲದೆ ಇದೇ ಪೆಟ್ರೋಲು ೧೨-೧೪ ಆಣೆಯಂತೆ ಸಿಕ್ಕುವಾಗ ಹಿಂದುಸ್ಥಾನದಲ್ಲಿಯೇ ಉಂಟಾಗುವ ಪೆಟ್ರೋಲಿಗೆ ರೂ. ೧—೬—೦ ದರವಿದೆ. ಆದುದರಿಂದ ಹಿಂದೀಯ ನೌಕರರಿಗೆ ಈ ಕಂಪೆನಿಗಳ ಮೂಲಕ ಸಿಕ್ಕಬಹುದಾದ ಹಣವು ಈ ಏರಿಸಿದ ದರದಿಂದಲೇ ಕೊಡಲ್ಪಡುತ್ತಿದೆ; ಮತ್ತು ಕಾರ್ಯತಃ ಈ ಕೈಗಾರಿಕೆಯು ರಾಷ್ಟ್ರೀಯ ಸಂಪತ್ತಿಗೆ ಯಾವ ಒಳ್ಳೆಯದನ್ನೂ ಮಾಡುವುದಿಲ್ಲ. ಈ ಕೈಗಾರಿಕೆಯನ್ನು ಸ್ವದೇಶೀ ಎಂದು ಜನತೆಯ ಪ್ರೇಮವನ್ನು ತಮ್ಮ ಮೇಲಾಟದ ಸಾಧನೆಗಾಗಿ ಒಲಿಸುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲ. ಬರ್ಮಾದಲ್ಲಿ ಇಷ್ಟು ಗಣಿಗಳಿವೆ ಎಂದು, ಒಂದು ದೇಶೀ ಕಂಪೆನಿಗಾದರೂ ಈ ಕಂಪೆನಿಗಳು ಅಭಿವೃದ್ಧಿಗೆ ಬರಲಿಕ್ಕೆ ಬಿಡಲಿಲ್ಲ. ಆದುದರಿಂದ ಈ ಬ್ರಿಟಿಷ ಡಚ್ಚ ಕಂಪೆನಿಗಳ ದೇಶೀ ಕೈಗಾರಿಕೆಗಳ ಚಿಂತನದಲ್ಲಿ ಸ್ವಾರ್ಥ ಸಾಧನೆಯ ಹೊರತು ಯಾವ ಅರ್ಥವೂ ಇಲ್ಲವೆಂದು ನಾವು ಸೂಚಿಸದಿರಲಾರೆವು.

ಅಮೇರಿಕನರ ಕಾಂಗ್ರೆಸ್ಸು.

ಅಮೇರಿಕಾ ಖಂಡವು ಬಹಳ ವಿಶಾಲವಾದುದು. ಅದರಲ್ಲಿ ಕೆನಡಾ ಮತ್ತು ಯುನ್ಯಾಟೆಡ್ ಸ್ಟೇಟ್ಸ್‌ಗಳು ಪ್ರಬಲ ರಾಷ್ಟ್ರಗಳಾಗಿದ್ದು ಮೆಕ್ಸಿಕೊ, ಬ್ರೆಜಿಲ್ ಮೊದಲಾದ ಹಲವು ಇತರ ಸಣ್ಣ ರಾಷ್ಟ್ರಗಳಿರುವುವು. ಇವೆಲ್ಲವೂ ಸ್ವತಂತ್ರ್ಯ ರಾಷ್ಟ್ರಗಳಾಗಿದ್ದಾವೆ. ಇವುಗಳ ಒಂದು ಕಾಂಗ್ರೆಸ್ಸು ಪಾನ್ ಅಮೇರಿಕನ್ ಕಾಂಗ್ರೆಸ್ (Pan American Congress) ಎಂಬ ಹೆಸರಿನಿಂದ ಕೂಡಿದೆ. ಇದಕ್ಕೆ ಯುನ್ಯಾಟೆಡ್ ಸ್ಟೇಟ್ಸಿನ ಅಧ್ಯಕ್ಷರು ಸ್ವತಹಾ ಹೋಗಿ ಹಾಜರಾಗಿದ್ದಾರೆ. ಈ ಕಾಂಗ್ರೆಸ್ಸು ಹಲವು ವರ್ಷಗಳಿಂದ ವರ್ಷಕ್ಕೊಂದು ಬಾರಿಯಾಗಿ ಕೂಡಿಬರುತ್ತಿತ್ತು. ಅಮೇರಿಕವು ಪ್ರಬಲ ರಾಷ್ಟ್ರ ಎಂದುದರಿಂದ ಅಮೇರಿಕಕ್ಕೆ ಅಧ್ಯಕ್ಷಸ್ಥಾನ ಮೊದಲಾಗಿ ಪ್ರಥಮದ ಗೌರವವಿದ್ದಿತು. ಈಗ ಎಲ್ಲಾ ರಾಷ್ಟ್ರಗಳು ಸಮಾನವಾಗಿ ಗೌರವವನ್ನು ಹೊಂದಬೇಕಾಗಿ ಒಂದು ಠರಾವು ಬಂದಿರುತ್ತದೆ. ಅಲ್ಲದೆ ಅಮೇರಿಕವು ಇತ್ತೀಚೆಗೆ ಸಾಮ್ರಾಜ್ಯವಿಸ್ತಾರದ ಧೋರಣೆಯನ್ನು ಅನುಸರಿಸುವಂತೆ ತೋರುತ್ತಿದೆ. ಬ್ರಿಟಿಷರಂತಹ ಪರೋಪಕಾರ ಶಸ್ತ್ರ ಪ್ರದರ್ಶನದಿಂದ ಅವರು ಅಮೇರಿಕದ ಲಾಭದಾಯಕವಾದ ಇತರ ಸಣ್ಣ ರಾಷ್ಟ್ರಗಳೊಳಗೆ ಕೈಹಾಕಲಾರಂಭಿಸಿರುವರು. ಈ ಕಾಂಗ್ರೆಸ್ಸು ಅದನ್ನೂ ನಿಷೇಧಿಸಿಯದೆ. ಪ್ರೆಸಿಡೆಂಟ್ ವಿಲ್ಸನ್ನಿನಿಂದ ಆರಂಭವಾದ ಆ ಶಸ್ತ್ರ ಪ್ರದರ್ಶನವು ಎಷ್ಟು ಉಪಹಾಸ್ಯಕ್ಕೆ ಕಾರಣವಿದೆ ಎಂದು ಯುನ್ಯಾಟೆಡ್ ಸ್ಟೇಟ್ಸಿಗೆ ಈ ಪರಿಷತ್ತಿನಿಂದ ತಿಳಿಯಬಹುದು. ಆದರೂ ಈ ಕಾಂಗ್ರೆಸ್ಸು ಸಾಮಾನ್ಯವೆಂದು ತಿಳಿಯಲಾಗುವುದಿಲ್ಲ.

ನೋಟಗಳು.
NOTE....S.

ನ್ಯಾಯವಿಧಾಯಕ ಸಭೆಗಳು ಬೇವಾರಿ (vagabond) ಯಾಗಿರುವುವೇ ಎಂದು ಫ್ರೆಂಚ್ ಕೋರ್ಟಿನಲ್ಲಿ ತೀರ್ಮಾನವಾಗಲಿಕ್ಕಿದೆ. ಫ್ರೆಂಚ್ ಚೇಂಬರಿನ ಮೇಲೆ ಪರಿಹಾರ ದ್ರವ್ಯಕ್ಕಾಗಿ ಒಬ್ಬರು ನಂಬ್ರ ಹೂಡಿದಾಗ, ಚೇಂಬರಿಗೆ ಪ್ರತ್ಯೇಕ ಅಸ್ತಿತ್ವವಿಲ್ಲವೆಂದು ಅದನ್ನು ಕೋರ್ಟು ಒಪ್ಪಿಕೊಳ್ಳಲಿಲ್ಲ. ಈಗ ವಾಸ್ತವ್ಯವಾಗಲಿ ವಿಳಾಸವಿಲ್ಲದ ಬೇವಾರಿಯ ಮೇಲೆ ನಂಬ್ರ ಹೂಡುವ ಕಾನೂನಿಗೆ ಅನುಸಾರವಾಗಿ ಅವರು ತಮ್ಮ ನಂಬ್ರವನ್ನು ದಾಖಲುಮಾಡಿರುವರು. ಅದು ಒಪ್ಪಿಕೊಳ್ಳೋಣಾಗಿಯದೆ.

• • • •

ಬಾಯಿ ಮಾತು ಎಲ್ಲಿಗೆ ಪರಿಣಾಮ ಹೊಂದೀತು! ಎಂಬುದರ ವಿಷಯ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಒಂದು ಹೆದರಿಕೆ ಇದ್ದೇ ಇದೆ "ಹೇಳಿದ ಹಾಗೆ ಆಗುವುದು" ಎಂಬುದು ಹಲವು ಬಾರಿ ನಿಜಕ್ಕೆ ಬರುತ್ತದೆ. ಯುರೋಪಿನಲ್ಲಿ ಸಾಮುವೇಲ್ ಪ್ರೊಮ್ಮರ್ ಎಂಬಾತನು ೩೦ ವರ್ಷಗಳ ಹಿಂದೆ ಹೆಂಡತಿಯೊಡನೆ ಜಗಳವಾಡಿ "ನೀನು ಸುಟ್ಟು ಸಾಯಿ." ಎಂದು ಬೈದನು. ಮೂರು ದಿನಗಳ ಒಳಗೆ ಮನೆಯಲ್ಲಿ ಬೆಂಕಿ ಉಂಟಾಗಿ ಅವಳು ತನ್ನ ಇಬ್ಬರು ಮಕ್ಕಳೊಡನೆ ಸುಟ್ಟು ಹೋದಳು.

• • • •

ಮಾತನಾಡಿ ಮಾಡಿದ ಪಾಪವನ್ನು ಮೌನದಿಂದ ತೊಳೆಯಬೇಕು. ಇದೇ ಮನುಷ್ಯನು ಮೂವತ್ತು ವರ್ಷಗಳ ಹಿಂದೆ ತನ್ನ ಹೆಂಡತಿ ಮಕ್ಕಳು ಸುಟ್ಟ ಸಮಯದಿಂದ ಮೌನವ್ರತಧಾರಣೆ ಮಾಡಿದವನು ಕೆಲವು ದಿನಗಳ ಹಿಂದೆ ಮಡಿದನು. ಮೂವತ್ತು ವರ್ಷಗಳ ಈ ದೀರ್ಘವ್ರತವು ಅವನ ಮಹತ್ವವನ್ನೇ ಸೂಚಿಸುತ್ತದೆನ್ನಬೇಕು.

• • • •

ರಿಸ್ಪೊನ್ಸಿವ್ ಕೊ-ಒಪರೇಶನಿಸ್ಟರು ಸಾಧಾರಣ ಬುದ್ಧಿವಂತಿಕೆಯವರಲ್ಲ. ಮುಂದಾಳಿಗರು. ಸವ್ಯಾ ಅಂದರೆ ಕಾಲು ಪಾಲು ಹೆಚ್ಚು ಬುದ್ಧಿವಂತಿಕೆಯವರು. ಸ್ಯಾಮನ್ ಕಮಿಶನ್ನಿನ ಪರವಾಗಿ ಅವರು, ಜಯಕರರು ಮುಂದಾಗಿ, ಕೊಡುವ ಸಲಹೆಗಳು ಈ ಒಂದೂಕಾಲು ಬುದ್ಧಿವಂತಿಕೆಯ ಲಕ್ಷಣಗಳಾಗಿವೆ.

• • • •

ಮಂದ ಪಕ್ಷದವರು ರಾಷ್ಟ್ರೀಯ ಪಕ್ಷಕ್ಕೆ ಮೆಲ್ಲನೆ ಬರುವಾಗ, ರಾಷ್ಟ್ರೀಯ ಪಕ್ಷದಿಂದ ಮೆಲ್ಲನೆ ಮಂದ ಪಕ್ಷಕ್ಕೆ ಹೋಗುವವರು ಬೇಕಾಗಿದ್ದರು. ಈ ಕೆಲಸವನ್ನು ಈ ರಿಸ್ಪೊನ್ಸಿವ್ ಕೊ-ಒಪರೇಶನಿಸ್ಟರು ಸರಿಯಾಗಿ ಮಾಡುತ್ತಿರುವರು.

• • • •

ಹಿಂದೀ ವಿದ್ಯಾರ್ಥಿಗಳಿಗೆಂದು ಇಂಗ್ಲೆಂಡಿನಲ್ಲಿ ಒಂದು ಸರಕಾರೀ ವಿದ್ಯಾಭಿಮಾತೆಯೊಂದುಂಟು. ಆದರೆ ಇದರಿಂದ ಹಿಂದೀ ವಿದ್ಯಾರ್ಥಿಗಳಿಗೆ ಸಹಾಯವಾಗುವ ಬದಲು ತೊಂದರೆಯೇ ಆಗುವುದು ಹೆಚ್ಚಂತೆ.

• • • •

"ಯುವಕರು ಮನಸ್ಸಿನಲ್ಲಿ ಡಬೇಕಾದ ಮೂರು ವಿಷಯಗಳಿವೆ—ಒಂದು ದೇಶರಕ್ಷಣೆಗಾಗಿ ಖಡ್ಗ, ಎರಡನೇದು ದೇಶದ ಸಂಪತ್ತಿಗಾಗಿ ವ್ಯಾಪಾರ ಮತ್ತು ಕೈಗಾರಿಕೆ, ಮೂರನೇದು ಜ್ಞಾನ. ಇವು ಮೂರು ಯಾವುದೊಂದು ರಾಷ್ಟ್ರದ ಅಡಿಗಟ್ಟಾಗಿವೆ; ಮತ್ತು ಇವನ್ನು ಹೊಂದಲು ನೀವು ಯತ್ನಿಸುವಂತಾಗಿ ನಾನು ನೆನಸುತ್ತೇನೆ" ಎಂದು ಯುವಕ ಪರಿಷತ್ತಿನಲ್ಲಿ ಮಿ. ಜಿನ್ನಾರವರು ಹೇಳಿದರು.

§ § § §

"ಹರಹರ ಮಹಾದೇವ" ಎಂಬ ಮಹಾರಾಷ್ಟ್ರರ ಯುದ್ಧದ ಜಯ ಧ್ವನಿಯು ಫಿಲ್ಮ ಸೆನ್ಸರರಿಗೆ ಭಯಕಾರಕವಾಗಿ ಕಂಡದೆ. ಈ ಹೆಸರಿನಿಂದ ಐತಿಹಾಸಿಕ ಕಥೆಯ ಫಿಲ್ಮನ್ನು ತಯಾರಿಸಿದ್ದಲ್ಲಿ ಆ ಹೆಸರನ್ನು ನಿಷೇಧಿಸಿ ಅದಕ್ಕೆ ಸೆನ್ಸರರು ಪ್ರತ್ಯೇಕ ಹೆಸರನ್ನು ಹಾಕಿಸಿರುವರು. ಹಿಂದೂಸ್ಥಾನದ ಪರಸರಕಾರವು ಇರುವ ವರೆಗೆ ರಾಷ್ಟ್ರೀಯತ್ವಕ್ಕೆ ಯಾವ ಪ್ರೋತ್ಸಾಹವೂ ಸಿಕ್ಕಲಾರದು.

ಯುರೋಪ ಖಂಡದ ಲೀಗ್ ಒಫ್ ನೇಶನ್ಸಿನ ಪ್ರತಿಯಾಗಿ ಇದು ಎಂದು ಊಹಿಸಲಿಕ್ಕೂ ಆಗಿತ್ತು. ಇದರಂತೆಯೇ ಏಸ್ಯಾ ಖಂಡಕ್ಕೊಂದು ಕಾಂಗ್ರೆಸ್ ಸೇರಿಸಬೇಕಾಗಿ ದೇಶಬಂಧು ದಾಸರವರ ಕಲ್ಪನೆಯಿದ್ದಿತು. ಏಸ್ಯದೊಳಗಿನ ಕಠಿಣವಾದ ರಾಜಕೀಯ ಪರಿಸ್ಥಿತಿಯು ಇದನ್ನು ಸಾಧ್ಯವಾಗಿ ಮಾಡಲಿಲ್ಲ. ಜಪಾನು ಸ್ವಾತಂತ್ರ್ಯದ ಅಹಂಕಾರದಿಂದಿದ್ದಿತು; ಚೈನಾದೊಳಗೆ ಅಂತಹ ಕಲಹಗಳಿದ್ದುವು; ಹಿಂದೂಸ್ಥಾನವು ಅನ್ಯಾಧೀನವಾಗಿದೆ; ತುರ್ಕಿಯು ವಿಕಾಸ (evolution)ದಲ್ಲಿದ್ದಿತು; ಅಫಘಾನಿಸ್ಥಾನವು ಸ್ಥಿರತೆಯನ್ನು ಹೊಂದುತ್ತಿದ್ದಿತು; ಪರ್ಶಿಯಾವು ಹೊಸ ರಾಜನ ಸ್ಥಾಪನೆಯಲ್ಲಿದ್ದಿತು; ಇವೆಲ್ಲವುಗಳ ಕಾರಣದಿಂದ ಅಂತಹ ಸಮಗ್ರ ಏಸ್ಯದ ಕಾಂಗ್ರೆಸ್ಸು ಈ ವರೆಗೆ ಸಾಧ್ಯವಾಗಲಿಲ್ಲ. ಆದರೆ ಯುರೋಪವು ಲೀಗ್ ಒಫ್ ನೇಶನ್ಸ ಎಂದೂ, ಅಮೇರಿಕವು ಪಾನ್ ಅಮೇರಿಕನ್ ಕಾಂಗ್ರೆಸ್ ಎಂದೂ ಬಲಗಟ್ಟುತ್ತಾ ಬರುವಾಗ ಏಸ್ಯ ಖಂಡವು ಎಚ್ಚರವಾಗುವುದು ಅವಶ್ಯವಿದೆ.

ಅನುಕ್ರಮಣಿಕೆ.

[illegible]

ಸ್ವದೇಶಾಭಿಮಾನಿ.

[illegible]

ರಿಸರ್ವ್ ಬೇಂಕು ಮಸೂದೆ

[illegible]

ನಿಯಮಾವಳಿಯನೆಲ್ಲಾ ಸರಕಾರದ್ದೇ ಆಗಿರಬೇಕು. ಆದರೆ [illegible]

ವಿದೇಶ ವರ್ತಮಾನ.

— ಯುನ್ಯಾಟೆಡ್ ಸ್ಟೇಟ್ಸಿನ ಫ್ಲೋರಿಂಗ್ ಟನ್ ಪಟ್ಟಣದಲ್ಲಿ ಒಂದೇ ದಿನ ಮಧ್ಯ ರಾತ್ರೆ ಹಲವು ಕಡೆಗಳಲ್ಲಿ ಬೆಂಕಿ ಹಿಡಿದು ಅನೇಕ ಮನೆಗಳು ಸುಟ್ಟುಹೋದವು. ಈ ರೀತಿಯಾಗಲು ಕಾರಣವನ್ನು ಹುಡುಕುತ್ತಿರುವರು.

— ಜರ್ಮನಿಯ ಒಂದು ಕಬ್ಬಿಣದ ಕಾರ್ಖಾನೆಯಲ್ಲಿ ಕರಗಿದ ಕಬ್ಬಿಣದ ಒಂದು ಕುಲಿಮೆಯು ಒಡದುಹೋಗಿ ಅನೇಕ ಮಂದಿ ಕೂಲಿಕಾರರಿಗೆ ಕಠಿಣ ತರದ ಗಾಯಗಳಾಗಿವೆ.

ಅಮೇರಿಕದ ಕಿಪಟಿನ್ ಎಂಬಲ್ಲಿರುವ ಕಲ್ಲಿದ್ದಲ್ಲಿನ ಗಣಿಯಲ್ಲಿ ೪೦೦ ಅಡಿ ಕೆಳಗೆ ಕೆಲಸ ಮಾಡುತ್ತಿದ್ದ ಹಲವು ಮಂದಿ ಕೂಲಿಕಾರರು ಮೇಲಕ್ಕೆ ಬರುವ ದಾರಿಯ ಗೋಡೆಗಳು ಕುಸಿದು ಬಿದ್ದುದರಿಂದ ಮೇಲಕ್ಕೆ ಬರಲು ಸಾಧ್ಯವಿಲ್ಲದೆ ಕೆಳಗಡೆಯಲ್ಲಿ ಇರುವರು. ಕೆಲವರನ್ನು ಬಹಳ ಕಷ್ಟದಿಂದ ಮೇಲಕ್ಕೆ ತೆಗೆದಿರುವರು.

— ಕೆನಡಾ ದೇಶದ ೭ ಮಂದಿ ಬೇಸಾಯಗಾರರು ಇಂಗ್ಲೆಂಡಿನ ಬೇಸಾಯದ ಮತ್ತು ವ್ಯಾಪಾರದ ಸ್ಥಿತಿಯನ್ನು ತಿಳಕೊಳ್ಳುವದಕ್ಕಾಗಿ ಇಂಗ್ಲೆಂಡಿಗೆ ಬಂದಿರುವರು. ಈ ದೇಶ ಸಂಚಾರದ ನಂತರ ಇವರು ಡೆನ್‌ಮಾರ್ಕಿಗೆ ಹೋಗುವರು.

— ಆಯರ್‌ಲೆಂಡಿನ ಫ್ರಿಸ್ಟೇಟಿನಲ್ಲಿ ಕಾಯಂ ಸೈನ್ಯವನ್ನು ಕಡಿಮೆ ಮಾಡುವುದಕ್ಕಾಗಿ ಊರಿನ ಜನರನ್ನು ಸೈನ್ಯದ ವಿದ್ಯೆಯಲ್ಲಿ ತರಬೇತು ಮಾಡಬೇಕೆಂದು ಅಲ್ಲಿಯ ಸರಕಾರದವರು ನಿರ್ಣಯಿಸಿರುವರು. ಇದಕ್ಕಾಗಿ ೧೮ ವರುಷ ಪ್ರಾಯದಿಂದ ೩೪ ವರುಷ ಪ್ರಾಯದೊಳಗಿನ ಗಂಡಸರು ಸೈನ್ಯ ತರಬೇತು ಹೊಂದಲು ತಯಾರಿರಬೇಕೆಂದು ಹುಕುಂ ಹೊರಟಿದೆ. ಆಯರ್‌ಲಂಡಿನ ಸಿವಿಲ್ ಯುದ್ಧದ ಸಮಯ ಯುದ್ಧದ ಖರ್ಚಿಗಾಗಿ ೧೦ ಮಿಲಿಯ ಪೌಂಡು ಖರ್ಚಾಗಿತ್ತಂತೆ. ಹೊಸ ಕ್ರಮದ ಪ್ರಕಾರ ಸೈನ್ಯದ ಖರ್ಚು ೧॥ ಮಿಲಿಯ ಮಾತ್ರವೇ ಆಗುವುದು.

— ಕೆನಿಯಾ ಕೊಲೊನಿಯಲ್ಲಿರುವ ಕಾಫಿ ರಬ್ಬರ ತೋಟಗಾರರು ಪ್ರಯಾಣಕ್ಕಾಗಿ ಸಣ್ಣ ಸಣ್ಣ ಎರೋಪ್ಲೇನುಗಳನ್ನು ಕೊಂಡುಕೊಂಡಿರುವರು.

— ಲಂಡನಿನಲ್ಲಿ ಕಠಿಣ ತರದ ಭರತದ ನೀರಿನಿಂದ ಜನರಿಗೂ ಮನೆಗಳಿಗೂ ಅಪಾಯ ಬಾರದಂತೆ ಬರತ ಏರಿ ಬರುವ ಸಮಯವನ್ನು ಜನರಿಗೆ ತಿಳಿಸುವುದಕ್ಕಾಗಿ ಪೋಲೀಸ ಅಧಿಕಾರಿಗಳಿಗೆ ತಿಳಿಸಿರುವರು.

— ಎವರೆಸ್ಟ ಪರ್ವತವನ್ನು ಹತ್ತಲಿಕ್ಕೆ ಇಂಗ್ಲೆಂಡಿನಿಂದ ಕೆಲವರು ಹೊರಡುತ್ತಿರುವರು. ಆದರೆ ರಷ್ಯಾ ಚ್ಯಾನಾ, ಟಿಬೆಟ್ ದೇಶಗಳಲ್ಲಿ ಗಲಿಬಿಲಿಯು ಇರುವುದರಿಂದ ಶಾಂತತೆಯುಂಟಾಗುವ ವರೆಗೆ ಅದನ್ನು ಮುಂದರಿಸಿರುವರು.

— ರಷ್ಯಾ ಸರಕಾರದವರು ಇಜಿಪ್ಟ ಸರಕಾರದಿಂದ ಈ ವರುಷ ಹೆಚ್ಚು ಹತ್ತಿಯನ್ನು ಕೊಂಡುಕೊಳ್ಳಲು ಆಲೋಚಿಸಿರುವರು.

— ಇಂಗ್ಲಿಷ ಸೈನ್ಯದಲ್ಲಿ ಇನ್ನು ಮುಂದೆ ಬರ್ಚಿಯನ್ನು ಉಪಯೋಗಿಸುವುದು ಬೇಡವೆಂದು ಹುಕುಂ ಕೊಟ್ಟಿರುವರು. ಕಳೆದ ಯುದ್ಧದ ಸಮಯ ಬರ್ಚಿಯಿಂದ ಯಾವ ತರದ ಪ್ರಯೋಜನವೂ ಆಗಲಿಲ್ಲವಂತೆ.

— ಕೆನಿಯಾ ಕೊಲೊನಿಯಲ್ಲಿ ಮೊಂಬಾಸಾ ಬಂದರದಿಂದ ಸ್ವಲ್ಪ ದೂರದ ವರೆಗೆ ಮಾತ್ರವೇ ರೈಲು ಮಾರ್ಗವು ಇತ್ತು. ಈಗ ಇದೇ ಲ್ಯಾನನ್ನು ಉಗಾಂಡಾದ ವರೆಗೆ ಮುಂದರಿಸಿರುವರು.

— ಟೊರ್ಪೆಡೊ ಹೊಡಿಯುವ ಹೊಸ ರೀತಿಯ ವಿಮಾನವನ್ನು ತಯಾರಿಸಿರುವರು. ಮೊದಲು ಟೊರ್ಪೆಡೊ ಹೊಡಿಯುವ ವಿಮಾನದಲ್ಲಿ ಒಬ್ಬನು ಮಾತ್ರವೇ ಕೂತುಕೊಳ್ಳಲು ಸಾಧ್ಯವಿತ್ತು. ಹೊಸತಾಗಿ ಈಗ ತಯಾರಿಸಿದ ವಿಮಾನದಲ್ಲಿ ಇಬ್ಬರು ಕೂತುಕೊಳ್ಳಬಹುದು. ಈ ವಿಮಾನವನ್ನು ನೆಲದ ಮೇಲಿನಿಂದಲೂ, ನೀರಿನ ಮೇಲಿನಿಂದಲೂ, ಹಡಗದ ಮೇಲಿನಿಂದಲೂ ಹಾರಿಸಬಹುದು. ಇದು ಒಂದು ಮಿನಿಟಿಗೆ ೨ ಮೈಲು ಸಂಚರಿಸುವದು. ಒಬ್ಬನು ಯಂತ್ರ ನಡಿಸುವಾಗ ಇನ್ನೊಬ್ಬನು ಗುಂಡು ಹಾರಿಸಬಹುದು.

— ಇಟಲಿ ದೇಶದಲ್ಲಿ ಜನರನ್ನು ನಾನಾ ರೀತಿಯಲ್ಲಿ ಪೀಡಿಸುತ್ತಿರುವ ೧೪೭ ಮಂದಿ ಇರುವ ಒಂದು ಗುಟ್ಟಿನ ಸಂಘವಿತ್ತು. ಇಟಲಿ ಸರಕಾರದವರು ಇವರ ಎಲ್ಲಾ ಮೆಂಬರರನ್ನು ಹಿಡಿದು ಶಿಕ್ಷಿಸಿರುವರು.

— ದಕ್ಷಿಣ ಆಫ್ರಿಕದ ರೈಲುವೇಗಳಿಗೆ ಬೇಕಾದ ೩೦ ಎಂಜಿನುಗಳನ್ನು ಜರ್ಮನ್ ಕಂಪೆನಿಗಳಿಂದ ಕೊಂಡುಕೊಳ್ಳಲು ನಿರ್ಣಯಿಸಿರುವರು.

— ಇಜಿಪ್ಟ ದೇಶದಲ್ಲಿ ಮಿಡಿತೆಗಳ ಹಾವಳಿಯು ಹೆಚ್ಚಾಗಿರುವುದರಿಂದ ಬೇಸಾಯಗಾರರಿಗೆ ಬಹಳ ಕಷ್ಟಗಳು ಬಂದಿವೆ; ವಿಷದ ಗಾಳಿಯನ್ನು ಎರೋಪ್ಲೇನಿನ ಮುಖಾಂತರ ಬಿಟ್ಟು ಮಿಡಿತೆಗಳನ್ನು ಕೊಲ್ಲಲು ಸಾಧಿಸುತ್ತಿರುವರು.

— ಬ್ರಿಟಿಷ ನೆಲ, ಜಲ ಸೈನ್ಯಗಳಲ್ಲಿ ಸುಮಾರು ಒಂದು ಮಿಲಿಯ ಪೌಂಡಿನಷ್ಟು ಖರ್ಚು ಕಡಿಮೆ ಮಾಡುವರಂತೆ.

— ಇರಾಕ್ ದೇಶದ ಪಾರ್ಲಿಮೆಂಟ ಸಭೆಯ ಚುನಾವಣೆಯು ಹೊಸದಾಗಿ ನಡಿಯುವುದು.

— ವಿಕ್ಟೋರಿಯಾ ಚಕ್ರವರ್ತಿಯವರು ಬರೆದ ಕಾಗದ ಪತ್ರಗಳ ೩ನೇ ಸಂಚಿಕೆಯು ಪ್ರಕಟವಾಗಿದೆ.

— ಸರ್ ವಿಲಿಯಮ್ ಮೆರೂಸ ಎಂಬವರು ಬಂಗಾಳದಲ್ಲಿ ಮೇಲೇರಿಯದ ವಿಷಯ ತನಿಖಿ ನಡಿಸಲಿಕ್ಕೆ ಬರುತ್ತಿರುವರು.

— ನ್ಯುಯೊರ್ಕಿಗೂ ಲಂಡನಿಗೂ ಟೆಲಿವಿಷನಿನ ಮುಖಾಂತರ ಸಂಭಾಷಣೆ ನಡಿಯಲು ಆರಂಭವಾಗಿದೆ.

— ಡೊಕ್ಟರ್ ದೆರಿಲ್ ಎಂಬ ಫ್ರೆಂಚ ವೈದ್ಯರು ಕೋಲೆರಾ ರೋಗದ ದಾಳು ಹಾಕಲಿಕ್ಕೆ ಒಂದು ಮದ್ದನ್ನು ಹುಡುಕಿ ತೆಗೆದಿರುವರು. ಈ ಮದ್ದಿನಿಂದ ದಾಳು ಹಾಕಿ ಶೇಕಡಾ ೬೬ ಮಂದಿಗೆ ಕೋಲೆರಾ ರೋಗವು ಗುಣವಾಗಿಯದೆ.

— ಅಮೇರಿಕದಿಂದ ೮೦ ಮಿಲಿಯ ಡೊಲರ್ ಫ್ರೆಂಚ್ ಬೇಂಕಿಗೆ ಸಾಲವಾಗಿ ಕೊಟ್ಟಿರುವರು.

— ಯುನ್ಯಾಟಿಡ್ ಸ್ಟೇಟ್ಸ್, ಬ್ರಿಟನ್ ಬೆಲ್ಜಿಯಮ, ಹೋಲೆಂಡ್ ದೇಶಗಳಿಗೆ ವಾಯರ್‌ಲೆಸ್ ಟೆಲಿಫೋನಿಯು ಸುರುವಾಗಿಯದೆ.

ಒಳದೇಶ ವರ್ತಮಾನ.

— ಸಿಮ್ಲಾ ಪರ್ವತದ ಹತ್ತಿರ ಭಗತ್ ಎಂಬ ರಾಜ್ಯವಿದೆ. ಈ ರಾಜ್ಯದಲ್ಲಿರುವ ಕೆಲವು ಮಂದಿ ಅಸ್ಪೃಶ್ಯರನ್ನು ಆರ್ಯಸಮಾಜದವರು ಆರ್ಯಸಮಾಜಕ್ಕೆ ಸೇರಿಸಿ ಅವರಿಗೆ ಉಪನಯನ ಮಾಡಿ ಜನಿವಾರ ಹಾಕಿದ್ದರು. ಆ ಭಗತ್ ರಾಜ್ಯದ ಅರಸರು ಈ ಅಸ್ಪೃಶ್ಯರು ಜನಿವಾರ ಹಾಕಿಕೊಂಡುದಕ್ಕಾಗಿ ಅವರಿಗೆ ಜುಲುಮಾನೆ ವಿಧಿಸಿ ಶಿಕ್ಷೆ ವಿಧಿಸಿದರು. ಇದರ ವಿಷಯ ಆರ್ಯಸಮಾಜದವರು ತನಿಖಿ ನಡಿಸುತ್ತಿರುವರು.

— ಡಿಲ್ಲಿಯ ಹಿಂದೂ ಶುದ್ಧಿಯ ಸಭೆಯವರು ಸ್ವಾಮಿ ಶ್ರದ್ಧಾನಂದ ಫಂಡಿಗೆ ಒಂದು ಕೋಟಿ ರೂಪಾಯಿ ವಂತಿಗೆ ಮಾಡಲಿಕ್ಕೆ ನಿಶ್ಚಯಿಸಿರುವರು. ಇದಕ್ಕಾಗಿ ಹಣ ಕೂಡಿಸುವುದಕ್ಕೆ ಪ್ರತಿ ಹಳ್ಳಿ ಪಟ್ಟಣಗಳಲ್ಲಿಯೂ ಯೋಗ್ಯರಾದ ಏಜಂಟರನ್ನು ನೇಮಿಸಲು ಆಲೋಚಿಸಿರುವರು

ನ್ಯೂ ಡಿಲ್ಲಿಯಲ್ಲಿ ಕ್ರೈಸ್ತ ಯುವಕಿಯರ ಸಂಘದ ಹೊಸ್ಟೆಲಿನ ಕಟ್ಟಡದ ಬುನಾದಿಕಲ್ಲನ್ನು ೧೬ರಲ್ಲಿ ಲೇಡಿ ಅರ್ವಿನರು ಹಾಕಿದರು.

— ಗುರುದಾಸ ಪುರದಲ್ಲಿರುವ ಧರಿವಾಲ ಉಣ್ಣೆ ವಸ್ತ್ರದ ಮಿಲ್ಲುಗಳ ಕೂಲಿಕಾರರು ತಮಗೆ ಸಂಬಳ ಹೆಚ್ಚಿಸದೆ ಇದ್ದುದರಿಂದಲೂ ಕೆಲಸದ ಗಂಟೆಗಳನ್ನು ಕಡಿಮೆಮಾಡದೆ ಇದ್ದುದರಿಂದಲೂ ಮುಷ್ಕರ ಹಿಡಿದಿರುವರು.

— ಲಾಹೋರಿನ ಹತ್ತಿರದ ಜ್ಯೋ ಎಂಬಲ್ಲಿ ಪಂಜಾಬಿನ ಗವರ್ನರರು ಒಂದು ಜನಾನಾ ಆಸ್ಪತ್ರೆಯನ್ನು ತೆರೆಯುವ ಸಮಾರಂಭವನ್ನು ನಡಿಸಿದರು.

— ದಿವಾನ ರಾಜ್ಯದ ಯುವರಾಜರು ತನ್ನ ಮಾವನಾದ ಕೊಲ್ಲಾಪುರ ಮಹಾರಾಜರೊಡನೆ ಮುಂಬಾಯಿಯಲ್ಲಿ ಬಂದು ಉಳಕೊಂಡಿರುವರು.

— ಇಂದೋರ್ ಮಹಾರಾಜರು ಮಿಸ್ ಮಿಲ್ಲರಳೊಡನೆ ಸಿಲೋನಿನಲ್ಲಿಯೇ ಲಗ್ನವಾಗಿ ಹಿಂತಿರುಗಿ ಯುರೋಪಿಗೆ ಹೋಗುತ್ತಾರಂತೆ.

— ಮೈಸೂರು ಪ್ರಾಂತೀಕ ವಿದ್ಯಾಸಭೆಯವರು ಒಂದು ಮಾಸಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಣಯಿಸಿರುವರು. ಮಹಾರಾಜ ಕೊಲೆಜ್ ಹ್ಯಾಸ್ಕೂಲಿನ ಹೆಡ್ ಮಾಸ್ತರರಾದ ಆರ್. ಕಸ್ತೂರಿರಾಜ ಚೆಟ್ಟಿಯವರು ಮೆನೆಜಿಂಗ್ ಎಡಿಟರರಾಗಿರುವರು.

— ಯುರೋಪ್ ಖಂಡಕ್ಕೆ ಸಂಚಾರಕ್ಕೆ ಹೋಗಿದ್ದ ಬರೋಡಾ ಮಹಾರಾಜರು ಹಿಂತಿರುಗಿ ರಾಜಧಾನಿಗೆ ಬಂದಿರುವರು

— ಮೈಸೂರು ಸರಕಾರದವರು ಹಳ್ಳಿಗಳಲ್ಲಿ ಖಾದಿಯು ಹೆಚ್ಚಾಗಿ ತಯಾರಾಗಲು ಹಲವು ವಿಧಗಳಲ್ಲಿ ಕೆಲಸವಿಲ್ಲದವರಿಗೆ ಸಹಾಯ ಮಾಡುತ್ತಿರುವರು.

— ಸಿಲೋನ್ ರಿಫೋರ್ಮ ಕಮಿಶನಿನವರು ತನಿಖಿಯನ್ನು ಮುಗಿಸಿ ಇಂಗ್ಲೆಂಡಿಗೆ ಹಿಂತಿರುಗಿ ಹೋದರು.

— ರೋಡ್ ಡೆವಲೊಪ್‌ಮೆಂಟ್ ಕಮಿಟಿಯವರು ಡಿಲ್ಲಿಯಲ್ಲಿ ತನಿಖಿಯನ್ನು ಸುರುಮಾಡಿರುವರು. ಆದರೆ ಸ್ವರಾಜಿಸ್ಟ ಮೆಂಬರರು ಇದಕ್ಕೆ ಬರಲಿಲ್ಲ.

— ಚೆಂದನಪುರ ರೈಲುವೇ ಅವಘಡದಲ್ಲಿ ಸ್ಟೇಶನ್ ಮಾಸ್ತರರಿಗೆ ೨೦೦೦ ರೂಪಾಯಿ ಜುಲುಮಾನೆ ವಿಧಿಸಿರುವರು.

— ಮುಂಬಾಯಿಗೆ ಸ್ಯಾಮನ್ ಕಮಿಶನ್ ಬಂದ ದಿವಸ ಹರತಾಳವನ್ನು ಆಚರಿಸಬೇಕೆಂದು ತಯಾರಿಯು ನಡಿಯುತ್ತಲಿದೆ.

— ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳಲ್ಲಿ ರೀ ಸೆಟ್ಲಮೆಂಟ್ ಸುರುಮಾಡಿರುವರು.

— ಇಂಡಿಯಾ ಬೇಂಕಿನ ಸೆಕ್ರಿಟೇರಿಯವರಾದ ವಿದ್ಯಾಸಾಗರ ಪಾಂಡ್ಯ ಇವರು ಕೆಲಸದಿಂದ ನಿವೃತ್ತರಾದರು. ಇವರು ಬಹಳ ಸಾಹಸದಿಂದ ಈ ಬೇಂಕನ್ನು ಸ್ಥಾಪಿಸಿದವರಲ್ಲಿ ಒಬ್ಬರು.

— ಮದರಾಸು ಸರಕಾರದವರು ಮದರಾಸು ಸಂಸ್ಥಾನದಲ್ಲಿ ಪುಸ್ತಕ ಭಂಡಾರಗಳನ್ನು ಇಡುವುದಕ್ಕಾಗಿ ಹಣ ಸೆಂಕ್ಷನ್ ಮಾಡಿರುವರು. ಈ ಹಣವನ್ನು ಪುಸ್ತಕಗಳನ್ನೂ ಕಪಾಟುಗಳನ್ನೂ ತೆಗೆದುಕೊಳ್ಳುವದಕ್ಕಾಗಿ ಮಾತ್ರವೇ ಉಪಯೋಗಿಸಬೇಕಾಗುವುದು. ಯಾವ ತರದ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದು ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರ ಅನುಭವ ಪಡೆದು ತಾಲೂಕು ಯೂನಿಯನ್ ಬೋರ್ಡುಗಳು ಪುಸ್ತಕಗಳ ಪಟ್ಟಿ ತಯಾರಿಸಬೇಕು. ಜಿಲ್ಲಾ ಕಲೆಕ್ಟರರು ಈ ಪುಸ್ತಕ ಭಂಡಾರಗಳನ್ನು ವರುಷಕ್ಕೊಂದಾವರ್ತಿ ತನಿಖಿ ಮಾಡಿ ಆಕ್ಷೇಪಕರವಾದ ಪುಸ್ತಕಗಳಿವೆಯೋ ಎಂದು ನೋಡಿಕೊಳ್ಳಬೇಕು. ಈ ಪಟ್ಟಿಯನ್ನು ಇದೇ ಮೇ ತಿಂಗಳಲ್ಲಿ ಕಳುಹಿಸಬೇಕಾಗಿದೆ.

— ಡಿಲ್ಲಿಯ ಒಂದು ಚರ್ಮದ ಕಾರ್ಖಾನೆಯಲ್ಲಿ ಒಬ್ಬ ಹಿಂದುವಿನ ಹೆಣವು ಚರ್ಮದ ರಾಶಿಯಲ್ಲಿ ಸಿಕ್ಕಿಯದೆ.

— ಜೈನ ಗ್ರಂಥಗಳ ವಿಷಯ ರಾಜಮಂಡ್ರಿಯ ಟ್ರೈನಿಂಗ್ ಕೊಲೆಜಿನ ಜೂನಿಯರ್ ಪ್ರೊಫೆಸರರಾದ ಶ್ರೀಯುತ ಆರ್. ಶಾಮಾಚಾರ್ಯರು ಕನ್ನಡ ಭಾಷೆಯಲ್ಲಿ ಮದರಾಸು ಯುನಿವರ್ಸಿಟಿ ಸಿನೆಟ್ ಹೋಲಿನಲ್ಲಿ ೨೪ರಿಂದ ೨೬ರ ವರೆಗೆ ಭಾಷಣಗಳನ್ನು ಕೊಡುವರು.

— ಭರತಪುರ ರಾಜ್ಯದ ಆಡಳಿತೆಯು ಸರಿಯಿಲ್ಲದ್ದರಿಂದ ವೈಸರೋಯರು ತನಿಖಿ ಮಾಡುವುದಕ್ಕಾಗಿ ಒಂದು ಕಮಿಶನನ್ನು ನೇಮಿಸಿದ್ದರು. ಆದರೆ ಭರತಪುರ ಮಹಾರಾಜರು ವೈಸರೋಯರ ಅನುಭವವನ್ನು ಪಡೆದು ಎಲ್ಲವನ್ನು ಸರಿಪಡಿಸಿದ್ದರಿಂದ ತನಿಖಿಯು ರದ್ದಾಯಿತು. ಇನ್ನು ದಿವಾನರು ಯಾರಾಗುತ್ತಾರೋ ನೋಡಬೇಕು.

— ಅಲ್ಲಹಾಬಾದಿನಲ್ಲಿ ಸರ್. ತೇಜ್‌ಬಹದ್ದೂರ ಸಪ್ರುರವರ ಮನೆಯಲ್ಲಿ ಚಿನ್ನಾಭರಣ, ನಗದಿ ಸುಮಾರು ರೂ ೧೧,೦೦೦ ಬೆಲೆಬಾಳುವ ಮಾಲು ಕಳವಾಗಿ ಹೋಗಿಯದೆ.

— ಸುಮಾರು ೩೫ ವರುಷ ಪ್ರಾಯದ ಅಬ್ದುಲ್ ಖಾದರ್ ಎಂಬ ಹುಚ್ಚನು ಡಿಲ್ಲಿಯಲ್ಲಿರುವ ಶಹಜಹಾನನು ಕಟ್ಟಿಸಿದ ಕೋಟೆಯಲ್ಲಿರುವ ಅರಮನೆಯಲ್ಲಿರುವ ಮೊಗಲ ಸಿಂಹಾಸನದ ಮೇಲೆ ಕೂತು ತಾನು ಚಕ್ರವರ್ತಿ, ನೀವೆಲ್ಲರೂ ನನಗೆ ಅಧೀನರಾಗಿರಬೇಕೆಂದು ಕೋಟೆಯೊಳಗಿರುವ ಸೋಲ್ಜರರಿಗೆ ಹೇಳಿದನಂತೆ. ಇವನನ್ನು ಕೈದುಮಾಡಿ ಲೋಕ್ ಅಪ್ಪಿನಲ್ಲಿಟ್ಟಿರುವರು. ಇವನು ಒಬ್ಬ ಓವರ್‌ಸೀಯರನಂತೆ.

— ವಿಮಾನಗಳು ೨೦ನೇ ತಾರೀಕಿನ ಬೆಳಿಗ್ಗೆ ೭ ಗಂಟೆಗೆ ಕೋಕನಾಡಕ್ಕೆ ತಲಪಿರುವವು.

— ಬೇಸಾಯದ ಕಮಿಶನಿನವರು ಮಹಾಬಲೇಶ್ವರದಲ್ಲಿ ಇದ್ದು ರಿಪೋರ್ಟನ್ನು ತಯಾರಿಸುತ್ತಿರುವರು. ಈ ರಿಪೋರ್ಟು ಬಹುಶಃ ಎಪ್ರಿಲ್ ತಿಂಗಳಲ್ಲಿ ಹೊರಬೀಳುವದು.

— ತಿರುವಾಂಕೋಡು ರಾಜ್ಯದಲ್ಲಿ ಕಳೆದ ಯುದ್ಧದಲ್ಲಿ ಕೆಲಸ ಮಾಡಿದವರಿಗೆ ಸ್ಥಳಗಳನ್ನು ಕೊಡುವುದಕ್ಕಾಗಿ ಒಂದು ಸ್ಕೀಮು ತಯಾರಾಗುತ್ತಲಿದೆ.

ಮದರಾಸಿನ ಆರೋಗ್ಯ ವಾರದ ವಸ್ತುಪ್ರದರ್ಶನದಲ್ಲಿ ಒಂದು ಕೃತಕ ದನವನ್ನು ತಂದು ಕಟ್ಟಿಹಾಕಿರುವರು. ಈ ದನವು ವಿದ್ಯುಚ್ಛಕ್ತಿಯ ಬಲದಿಂದ ಬಾಲ ಅಲ್ಲಾಡಿಸುತ್ತದೆ, ತಲೆಯನ್ನೂ ಕಿವಿಯನ್ನೂ ಚಲಿಸುತ್ತದೆ ಕಣ್ಣು ತೆರೆಯುತ್ತದೆ ಮುಚ್ಚುತ್ತದೆ, ಕೂಗುತ್ತದೆ. ಇನ್ನು ಈ ಕೃತಕ ದನವು ಹಾಲುಕೊಡುವಂತೆ ಮಾಡುತಿದ್ದರೆ ಉತ್ತಮವಿದ್ದಿತು.

— ರಾಮೇಶ್ವರ ದೇವಸ್ಥಾನವು ಒಂದು 'ಎಕಸೆಪ್ಟೆಡ್ ಟೆಂಪಲ್' ಎಂದಾಗಿದೆ. ಅದುದರಿಂದ ಇದು ದೇವಸ್ಥಾನಗಳ ಕಮಿಟಿಯ ಆಡಳಿತೆಯೊಳಗೆ ಬರುವುದಿಲ್ಲವೆಂದು ನಿರ್ಣಯಿಸಲಾಯಿತು.

— ಮೈಸೂರು ಬೇಂಕಿಗೆ ಈ ವರುಷ ೪೩೫,೦೦೦ ರೂಪಾಯಿ ಮುನಾಫೆ ಸಿಕ್ಕಿದ್ದರಿಂದ ಸೇಕಡಾ ೧೨ರ ಪ್ರಕಾರ ಬೋನಸ್ ಕೊಟ್ಟಿರುವರು.

ದಕ್ಷಿಣ ಕನ್ನಡ

ಮಂಗಳೂರು: — ಕಳೆದ ತಾರೀಕು ೩ನೇ ಶುಕ್ರವಾರ ದಿನ ಇಲ್ಲಿಯ ಸೈಂಟ್ ಎಲೊಸಿಯಸ್ ಕೋಲೆಜಿನ ಹಿಸ್ಟೊರಿಕಲ್ ಸೆಕ್ಷನಿನ ಡಿಬೇಟಿಂಗ್ ಸೊಸ್ಯಾಟಿಯವರ ಆಶ್ರಯದಲ್ಲಿ ದಕ್ಷಿಣ ಕನ್ನಡದಲ್ಲಿ ಪ್ರಸಿದ್ಧ ಪುರುಷರಾದ ಮಂಜೇಶ್ವರ ಗೋವಿಂದ ಪೈ, ಇವರು 'ಕಾರ್ಕಳದ ಗೊಮಟೇಶ್ವರನ ಕುರಿತು ಶಿಲಾ ಲಿಪಿಗಳಿಂದಲೂ, ಶಾಸನಗಳಿಂದಲೂ ತಾನು ಸ್ವಂತವಾಗಿ ಶೋಧಿಸಿ ಸಂಪಾದಿಸಿರುವ ಅನುಭವವನ್ನೂ, ಇತರರಿಂದ ಸಿಕ್ಕಿದ ಅನುಭವವನ್ನೂ ಸರಿಯಾಗಿ ವಿವರಿಸಿ ಇಂಗ್ಲಿಷಿನಲ್ಲಿ ಭಾಷಣವನ್ನು ಮಾಡಿದರು. ಭಾಷಣವು ಬಹು ಮನೋರಂಜಕವಾಗಿತ್ತಲ್ಲದೆ, ಅದನ್ನು ಕೇಳಿದ ಪ್ರತಿಯೊಬ್ಬ ವಿದ್ಯಾರ್ಥಿಯು ಅದನ್ನು ಪ್ರಶಂಸಿಸದೆ ಇರಲಿಲ್ಲ.

ಮಂಗಳೂರಿನಲ್ಲಿ ನೆರವೇರಲಿಕ್ಕಿರುವ ಚತುರ್ಥ ಕರ್ನಾಟಕ ಪ್ರಾಂತಿಕ ಆಯುರ್ವೇದ ಪರಿಷತ್ತಿನ ಸ್ವಾಗತ ಮಂಡಳಿಯನ್ನು ಆರಿಸಿ ತೆಗೆಯುವ ಬಗ್ಗೆ, ಇದೇ ಕಳೆದ ತಾರೀಕು ೨೨ನೇ ಆದಿತ್ಯವಾರ ಇಲ್ಲಿನ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಮಹಾಜನರ ಸಾಧಾರಣ ಸಭೆಯೊಂದು ಮ॥ ರಾ॥ ರಾ॥ ಅಮ್ಮೆಂಬಳ ಶ್ರೀನಿವಾಸಪೈ. ಬಿ ಎ ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಘಂಟೆ ೫,೩೦ರಿಂದ ೭.೩೦ರ ವರೆಗೆ ಜರಗಿತು. ಸಭೆಗೆ ಅನೇಕ ವೈದ್ಯರೂ, ಇತರ ಸದ್ಗೃಹಸ್ಥರೂ ಹಾಜರಿದ್ದರು. ಮೊದಲಾಗಿ ಆಯುರ್ವೇದ ಭೂಷಣ ಶ್ರೀ॥ ಎಮ್. ವಿ. ಶಾಸ್ತ್ರಿಗಳು ಸಮ್ಮೇಲನವನ್ನೂ ವಸ್ತುಪ್ರದರ್ಶನವನ್ನೂ ಜರಗಿಸುವದರ ಆವಶ್ಯಕತೆಯನ್ನು ಸಕಾರಣವಾಗಿ ವಿವರಿಸಿದರು. ಸಮ್ಮೇಲನದಿಂದ ಒಬ್ಬರಲ್ಲಿ ಇರುವ ವೈದ್ಯಕೀಯ ವಿಚಾರಗಳು ಇನ್ನೊಬ್ಬರಲ್ಲಿ ಪಸರಿಸಲು ಅನುಕೂಲವಾಗುವದೆಂದೂ, ವಸ್ತು ಪ್ರದರ್ಶನದಿಂದ ಅನ್ಯದೇಶಗಳಲ್ಲಿ ಬೆಳೆಯುವ ಔಷಧಿಗಳ ಪರಿಚಯವು ನಮಗೆ ಚೆನ್ನಾಗಿ ಉಂಟಾಗುವದೆಂದೂ ಅವರ ಭಾಷಣದ ಮುಖ್ಯ ತಾತ್ಪರ್ಯವಿದ್ದಿತು. ನೆರೆದ ಮಹಾಶಯರಲ್ಲಿ ಹೆಚ್ಚಿನವರ ಪಟ್ಟಿಯೊಂದನ್ನು ತಯಾರಿಸಿ ಸ್ವಾಗತ ಕಮಿಟಿಗೆ ದಾಖಲು ಮಾಡಿದರು. ಈ ಸ್ವಾಗತ ಮಂಡಳಿಗೆ ರಾ॥ ಅತ್ತಾವರ ದೇವಪ್ಪ ಪೂಂಜರು ಪ್ರೆಸಿಡೆಂಟರಾಗಿಯೂ, ರಾ॥ ಎಮ್. ಗಣೇಶ ಶ್ರೀನಿವಾಸ ಪೈಯವರು ವೈಸ್ ಪ್ರೆಸಿಡೆಂಟರಾಗಿಯೂ, ರಾ॥ ಎಮ್. ವಿ. ಶಾಸ್ತ್ರಿಯವರು ಡಿರೆಕ್ಟರರಾಗಿಯೂ, ರಾ॥ಗಳಾದ ಡಾಕ್ಟರ್ ಪಿ. ಆನಂದರಾವ್. ಎನ್. ಮಹಾಬಲ ಶೆಟ್ಟಿ ಮತ್ತು ಬಿ. ಆರ್. ಹರಿದಾಸ್ ಇವರುಗಳು ಸೆಕ್ರಿಟೆರಿಗಳಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು. ಟ್ರೆಜರರ್ ಆಗಿ ಡಾಕ್ಟರ್ ಉಳ್ಳಾಲ ಪದ್ಮನಾಭ ಮಲ್ಯರು ಆರಿಸಲ್ಪಟ್ಟರು.

ಇನ್ನು ವರ್ಕಿಂಗ್ ಕಮಿಟಿಯ ಮೆಂಬರರಾಗಿ ಶ್ರೀಯುತರುಗಳಾದ ಎಮ್. ಕೆ. ವೈದ್ಯ. ಕವಿಭೂಷಣ ವೆಂಕಪ್ಪ ಸೆಟ್ಟಿ, ಡಾಕ್ಟರ್ ಎಲ್ ಪಿ. ಫೆರ್ನಾಂಡಿಸ್, ಪಿ. ರಾಮಕೃಷ್ಣಯ್ಯ, ಡಾಕ್ಟರ್ ಕೆ. ಆರ್. ಶೆಣೈ, ಉಳ್ಳಾಲ ನರಸಿಂಹ ನ್ಯಾಕ, ಸೈಕ್ ಫರೀದ್ ಸಾಹೆಬ್, ಪುರುಷೋತ್ತಮ ಭಟ್, ಎಮ್. ಶಿವರಾವ್, ಡಾಕ್ಟರ್ ವಿಟ್ಠಳ ಶೆಟ್ಟಿ, ಕಾರ್ನಾಡ ಸದಾಶಿವರಾವ್, ಎನ್ ಜಿ. ಸುವರ್ಣ. ಇವರು ಆರಿಸಲ್ಪಟ್ಟರು. ಸ್ವಾಗತ ಮಂಡಳದ ಮೆಂಬರನು ಕೊಡಬೇಕಾದ ವಂತಿಗೆಯು ರೂಪಾಯಿ ೫ಕ್ಕೆ ಕಡಿಮೆಯಾಗದೆ ಇಕ್ಕಿರಬಹುದೆಂದೂ ಈ ಸಮ್ಮೇಳನಕ್ಕೆ ಬಹು ಮಂದಿ ಅನ್ಯದೇಶೀಯರು ಬರಬಹುದಾದುದರಿಂದ ಕನಿಷ್ಠ ಪಕ್ಷ ೨೫೦೦ ರೂಪಾಯಿ ಖರ್ಚು ಆಗುವ ಸಂಭವವಿರುವ ಕಾರಣ ಅಷ್ಟು ಹಣವನ್ನು ವಂತಿಗೆಯ ಮೂಲಕ ಎತ್ತಬೇಕೆಂದೂ ನಿರ್ಣಯವಾಯಿತು. ಸ್ವಾಗತ ಮಂಡಳಿಯ ಅಧ್ಯಕ್ಷರಾದ ರಾ॥ ದೇವಪ್ಪ ಪೂಂಜರು ತಾನು ೫೧. ರೂಪಾಯಿಗಳನ್ನು ಕೊಡುವೆನೆಂದು ವಾಗ್ದಾನವಿತ್ತರು. ಸಮ್ಮೇಳನವು ನಡೆಯುವ ಸ್ಥಳ ಮತ್ತು ಕಾಲವನ್ನು ವರ್ಕಿಂಗ್ ಕಮಿಟಿಯವರು ಅನುಕೂಲವನ್ನು ನೋಡಿ ಮುಂದೆ ನಿಶ್ಚೈಸಬೇಕೆಂದಾಯಿತು. ಅನಂತರ ಸಭಿಕರಿಗೂ, ಅಧ್ಯಕ್ಷ ಮಹಾಶಯರಿಗೂ ರಾ॥ ಎನ್. ಎಮ್. ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಸಭೆಯು ಮುಕ್ತಾಯವಾಯಿತು.

ಕಳೆದ ತಾರೀಕು ೨೧ನೇ ಶನಿವಾರ ದಿನ ರಾತ್ರಿ, ಕೆನರಾ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದವರು (Old Boys' Association) ಭುವನೇಂದ್ರ ಹೋಲಿನಲ್ಲಿ, ಮೂರು ಅಂಕಗಳನ್ನೊಳಗೊಂಡ 'ಶ್ರೀ' ಎಂಬ ಮರಾಠಿ ನಾಟಕದ ಕನ್ನಡ ಭಾಷಾಂತರವನ್ನು ಅಭಿನಯಿಸಿ ತೋರಿಸಿದರು. ಸಂಗೀತವು ಸುಶ್ರಾವ್ಯವೂ ಅಭಿನಯವು ಆಕರ್ಷಣೀಯವೂ ಆಗಿದ್ದವು ಮಹಾಜನರು ಹೀಗೆ ನಾಟಕಕಲೆಗೆ ಪ್ರೋತ್ಸಾಹವನ್ನೀಯುವದು ದೇಶದ ಬೆಳವಣಿಗೆಗೆ ಒಂದು ಸಾಧನವಾಗಿರುವದೆಂದು ನಾವು ಸಂತೋಷಪಡುವೆವು.

ತಾರೀಕು ೨೧—೧—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೭ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೬, ಶ್ವಾಸಕೋಶದ ರೋಗದಿಂದ ೩, ಗಾಯಗಳಿಂದ ೩, ಇತರ ಎಲ್ಲಾ ಕಾರಣಗಳಿಂದ ೧೫, ಜನನ ಸಂಖ್ಯೆಯು ಮಿಲೆಗೆ ಸರಾಸರಿ ೫೨.೯ರಂತೆ.

ಒಬ್ಬನಿಗೆ ಮಾತ್ರ ಸಿಡುಬು ರೋಗವು ತಗಲಿರುವುದರಿಂದ ಅವರನ್ನು ಆಸ್ಪತ್ರೆಯಲ್ಲಿಟ್ಟಿರುವರು.

ಇದೇ ತಿಂಗಳ ತಾರೀಕು ೨೯ನೇ ಆದಿತ್ಯವಾರ ಬೆಳಿಗ್ಗೆ ೮ ಘಂಟೆಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ,

ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಈ ವರುಷ ಇದೇ ಜನವರಿ ತಾರೀಕು ೨೯ನೇ ರವಿವಾರ ನಡೆಯುವದರಿಂದ ಆ ಕುರಿತು ಕಳೆದ ಬುಧವಾರ ಧ್ವಜಾರೋಹಣವಾಗಿಯದೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡಿಪಿ. ಲಿಮಿಟೆಡ್, ಈ ಬೇಂಕಿನ ಬಾಬತು ವರ್ಷಾವಧಿಗೆ ಕೊಡಬೇಕಾದ ಎಲ್ಲಾ ಹಿಸೆದಾರರ ಯಾನೆ ಶೇರ್ ಹೋಲ್ಡರರ ಸಾಧಾರಣ ಸಭೆಯು (Ordinary General Meeting) ಇದೇ ೧೯೨೮ನೇ ಇಸವಿ ಫೆಬ್ರವರಿ ತಾರೀಕು ೧೨ನೇ ಆದಿತ್ಯವಾರ ಪೂರ್ವಾಹ್ನ ಘಂಟೆ ೮-೩೦ಕ್ಕೆ ಬ್ಯಾಂಕಿನ ಹೆಡ್ ಆಫೀಸಿನಲ್ಲಿ ಕೂಡುವದು.

ದಿ. ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು, ಈ ಬ್ಯಾಂಕಿನ ಬಾಬತು ವರುಷಾವಧಿ ಕೂಡಬೇಕಾದ ಎಲ್ಲಾ ಹಿಸೆದಾರರ ಯಾನೆ ಶೇರ್ ಹೋಲ್ಡರರ ಸಭೆಯು (General Meeting) ಇದೇ ೧೯೨೮ನೇ ಇಸವಿ ಫೆಬ್ರವರಿ ತಾರೀಕು ೧೨ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೨-೩೦ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಕೂಡುವದು.

ಇಲ್ಲಿಯ ಮದ್ರಸತ್ತುಲ್ ಬದರಿಯಾ ಶಾಲೆಯ ಮತ್ತು ಬದ್ರೀನ್ ಮಹಜೀದಿಯ ವಾರ್ಷಿಕೋತ್ಸವವು ಇದೇ ತಿಂಗಳ ತಾ. ೨೨ರಲ್ಲು ಮನ ಪಾಟ್ ಹಾಜಿ ಪಿ. ಕುಂಞ ಮಹಮ್ಮದ್ ಸಾಹೇಬ್ ಯಂ. ಯಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸಭೆಯು ದೇವರ ಪ್ರಾರ್ಥನೆಯಿಂದ ಆರಂಭವಾಗಿ ದಿವಂಗತ ಹಕೀಮ್ 'ಅಜ್ಮಲ್‌ಖಾನ್' ಸಾಹೇಬರವರ ಅಕಾಲಮರಣದ ಕುರಿತು ಈ ಸಭೆಯು ಶೋಕಿಸುತ್ತದೆಂದೂ ಈ ಕುರಿತು ರಿಕಾರ್ಡ್ ಮಾಡಬೇಕೆಂದೂ ಅಧ್ಯಕ್ಷರು ಸಭೆಯ ಮುಂದಿಟ್ಟ ಸೂಚನೆಯನ್ನು ಸಭೆಯು ಮನ್ನಿಸಿ ಮೃತರ ಆತ್ಮಕ್ಕೆ ಪರಲೋಕಶಾಂತಿಯನ್ನು ಬಯಸಿ ಪ್ರಾರ್ಥಿಸಲಾಯಿತು. ತರುವಾಯ ಶಾಲಾ ರಿಪೋರ್ಟ ಮಹಜೀದಿಯ ರಿಪೋರ್ಟ ವಗೈರೆ ಓದಲಾಯಿತು.

ಮ॥ ರಾ॥ ರಾ. ಕಾರ್ನಾಡು ಸದಾಶಿವರಾವ್ B. A. L. L. B. ಯವರು ಮುಸಲ್ಮಾನರ ಈಗಿನ ಪರಿಸ್ಥಿತಿ ಈ ಶಾಲೆಯಿಂದ ಜನಾಂಗಕ್ಕುಂಟಾಗುವ ಲಾಭವೆಂಬ ವಿಷಯವಾಗಿಯೂ, ಕೇರಳದಿಂದ ಬಂದಿರುವ ಜನಾಬ್ ಮಹಮ್ಮದ್ ಸಿಕಂದರ್ ಸಾಹೇಬರವರು ಮುಸ್ಲಿಂಜನಾಂಗವು ಮುಂದೆ ಬರುವ ಹಾದಿ ಎಂಬ ವಿಷಯವಾಗಿಯೂ, ಜನಾಬ್ ಅರಬಿ ಚೆಮ್ಮನಾಡರೂ, ಜನಾಬ್ ಜಿ. ಮಹಮ್ಮದ್ ಹಾರೂನ್ ಸಾಹೇಬರವರೂ, ವಿದ್ಯಾಭ್ಯಾಸದ ಫಲವೆಂಬ ವಿಷಯವಾಗಿಯೂ ಚಲೋ ಭಾಷಣಗಳನ್ನಿತ್ತು ಸಭಿಕರನ್ನು ಆನಂದಗೊಳಿಸಿದರು.

ತರುವಾಯ ಅಧ್ಯಕ್ಷರಿಂದ ಶಾಲಾ ಬಾಲಕರಿಗೆ ಇನಾಮು ಹಂಚಲಾಯಿತು. ವಿದ್ಯಾರ್ಥಿಗಳ ಕರ್ಣಾನಂದಕರವಾದ ಗಾಯನವಾಗಿ ಅಧ್ಯಕ್ಷರ ಭಾಷಣಕ್ಕಾರಂಭವಾಯಿತು. ಅರ್ಥಗರ್ಭಿತವಾಗಿಯೂ, ಕಾಲೋಚಿತವಾಗಿಯೂ ಇರುವ ಇವರ ಭಾಷಣವನ್ನು ಕೇಳಲು ಸಭೆಯು ಜನಸ್ತೋಮದಿಂದ ಕಿಕ್ಕಿರಿದಿತ್ತು. ಸುಮಾರು ೧ ಗಂಟೆಯ ವರೆಗೂ ಇವರ ಭಾಷಣವಾಗಿ, ಅಧ್ಯಕ್ಷರಿಗೂ, ಸಭಿಕರಿಗೂ, ಭಾಷಣಕರ್ತರಿಗೂ, ಶಾಲಾ ಹೆಡ್ಮಾಸ್ತರವರಿಂದ ಧನ್ಯವಾದಗಳನ್ನು ಅರ್ಪಿಸಿ ಸಭೆಯು ಕೊನೆಗಾಣಿಸಲಾಯಿತು.

ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿಯ ಈ ವರ್ಷದ ಪ್ರಥಮ ಮಹಾಸಭೆಯು ಬರುವ ಫೆಬ್ರವರಿ ತಿಂಗಳ ತಾ. ೧೨ನೇ ಆದಿತ್ಯವಾರ ಅಪರಾಹ್ನ ಗಂಟೆ ೩ಕ್ಕೆ ಮಂಗಳೂರಲ್ಲಿ ಜಿಲ್ಲಾ ಕೊಂಗ್ರೆಸು ಕಮಿಟಿಯ ಕಚೇರಿಯ ಮಾಳಿಗೆಯಲ್ಲಿರುವ ತಮ್ಮ ಕಚೇರಿಯಲ್ಲಿ ಜರಗುವುದೆಂದೂ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ ಇದೆ ಎಂದೂ ಕಾರ್ಯದರ್ಶಿಯವರು ಸೂಚಿಸುವರು. ವಿ. ಸು—ಕಾರ್ಯಕ್ರಮವನ್ನು ಕಚೇರಿಯಲ್ಲಿ ಪ್ರಕಟಿಸಿಯದೆ. ಅದನ್ನು ಹಿಂದಿನಿಂದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ಇದೇ ಬರುವ ತಾಲೂಕು ಬೋರ್ಡು ಚುನಾವಣೆಯಲ್ಲಿ ನಮ್ಮ ತಾಲೂಕಿನ ಮಟ್ಟಿಗೆ ಕೊಂಗ್ರೆಸು ಉಮೇದುವಾರರನ್ನು ಕಳುಹಿಸಬೇಕೋ ಎಂತ ನಿರ್ಣಯಿಸುವರೆ ಮತ್ತು ಕಳುಹಿಸುವದಾದರೆ ಉಮೇದುವಾರರನ್ನು ಗೊತ್ತುಮಾಡುವರೆ ಕೂಡಾ ನಮ್ಮ ತಾಲೂಕು ಕೊಂಗ್ರೆಸು ಕಮಿಟಿ ಕಾರ್ಯಕಾರಿ ಮಂಡಲಿಯ ಸಭೆಯು ತಾ. ೧—೨—'೨೮ನೇ ಬುಧವಾರ ಅಪರಾಹ್ನ ಗಂಟೆ ೫ಗೆ ಮಂಗಳೂರಲ್ಲಿ ಕೊಂಗ್ರೆಸು ಕಮಿಟಿಯ ಕಚೇರಿಯಲ್ಲಿ ಜರಗುವುದು. ಕೊಂಗ್ರೆಸು ಕಡೆಯಿಂದ ಉಮೇದುವಾರರಾಗಲಿಚ್ಛಿಸುವವರು ನಮ್ಮ ಕಚೇರಿಯಲ್ಲಿ ದೊರಕುವ ಅರ್ಜಿ ಫಾರ್ಮನ್ನು ಬರಾಯಿಸಿ ಈ ತಿಂಗಳ ಅಖೈರಿ ವಳಗೆ ಈ ಕೆಳಗೆ ಸಹಿಮಾಡಿದವರಿಗೆ ತಲ್ಪುವ ಹಾಗೆ ಕಳುಹಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಗಳನ್ನು ಅಂಗೀಕರಿಸುವುದು ನಮ್ಮ ಅನುಕೂಲತೆಯ ಮೇಲೆ ಹೊಂದಿರುವುದು. ಉಮೇದುವಾರರು ಕಳೆದ ವರ್ಷ ಕೊಂಗ್ರೆಸು ಮೆಂಬರರಾಗಿದ್ದಲ್ಲಿ ತಮ್ಮ ವರ್ಗಣಿಯನ್ನು ಈ ತಿಂಗಳ ಅಖೈರಿ ವಳಗೆ ಕೊಡಬೇಕಾಗಿಯೂ, ಅಲ್ಲದಿರುವವರು ಸದರಿ ಸಮಯದೊಳಗೆ ನಮ್ಮ ಕಚೇರಿಗೆ ಬಂದು ವಾರ್ಷಿಕ ವರ್ಗಣಿಯನ್ನು ಕೊಟ್ಟು ಸದಸ್ಯರಾಗಬೇಕಾಗಿಯೂ ತಿಳಿಸಲಾಗುತ್ತದೆ. ಅಲ್ಲದೆ ಅಂತಹವರು ಈಗಿನ ಕೊಂಗ್ರೆಸು ನಿಯಮ ಪ್ರಕಾರ ಕೈನೂಲಿನ ಹಾಗೂ ಕೈಮಗ್ಗದಿಂದ ಮಾಡಿದ ಖಾದಿಯನ್ನೆ ಖಾಯಂ ಆಗಿ ಧರಿಸುವವರಾಗಿರತಕ್ಕದ್ದು. ಕಾಂಗ್ರೆಸು ಉಮೇದುವಾರರನ್ನು ಕಳುಹಿಸಬೇಕೋ ಬೇಡವೋ ಎಂಬುದು ಹೆಚ್ಚಿನ ಮಟ್ಟಿಗೆ ಉಮೇದುವಾರರ ಸಂಖ್ಯೆ ಮತ್ತು ಸದರಿಯವರ ಯೋಗ್ಯತೆಯ ಮೇಲೆ ಹೊಂದಿರುವುದು. (ಕಾರ್ಯದರ್ಶಿ.)

ಇದೇ ಬರುವ ಫೆಬ್ರವರಿ ೫ನೇ ತಾರೀಕಿಗೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮ. ರಾ. ರಾ. ವಕೀಲ್ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಬೋರ್ಡ್ ಮಿಶನ್ ಎೈಡೆಡ್ ಶಾಲೆಗಳ ಮೆನೇಜರರ ಸಭೆಯು ಜರಗಲಿರುವದು. ಈ ಸಭೆಯಲ್ಲಿ, ಜಿಲ್ಲೆಯ ನೋನ್ ಮಿಶನ್ ಪ್ರಾಥಮಿಕ ಶಾಲೆಗಳ ಸಂಘದ ನಿಬಂಧನೆ ಮೊದಲಾದವುಗಳನ್ನು ಠರಾಯಿಸುವರು.

ದ. ಕ ದ್ರಾವಿಡ ಬ್ರಾಹ್ಮಣ ಪರಿಷತ್ತಿನಲ್ಲಾದ ನಿರ್ಣಯದ ಮೇರೆಗೆ ವಿಭವ ಸಂವತ್ಸರದಿಂದ "ಹಿತವಾದಿನೀ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಾರೆಂದು ಕೇಳುತ್ತೇವೆ. ಸಂಪಾದಕ ಮಂಡಳಿಯಲ್ಲಿ ಶ್ರೀ॥ ಎನ್. ರಾಜಗೋಪಾಲ ಕೃಷ್ಣರಾವ್, ಶ್ರೀ॥ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ, ಶ್ರೀ॥ ಉಡುಪಿ ಸೀತಾರಾಮಾಚಾರ್ಯ, ಶ್ರೀ॥ ಕೋಡ್ಯಾಡಿ ಶ್ರೀನಿವಾಸ ರಾವ್, ಶ್ರೀ॥ ಬಿ. ಶಿವರಾಮಯ್ಯ ಇವರು ಇರುವರು.

ಹಿಂದುಸ್ಥಾನದಲ್ಲೆಲ್ಲಾ ಪ್ರಸಿದ್ಧ ಪಟ್ಟಿ ಪ್ರೊಫೆಸರ್ ರಾಮ ಮೂರ್ತಿಯವರ ಸರ್ಕಸು ಇಲ್ಲಿಗೆ ಬಂದು ಆಟಗಳ ಪ್ರದರ್ಶನವಾಗುತ್ತಿದೆ. ಇವರು ಇಲ್ಲಿ ವಾಲ್ಕೈ ಆಟಗಳನ್ನಾಡುವರು.

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, [illegible] ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆ ಅಗಲಿ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, [illegible] ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮ್‌ಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 1 ಗಂಟೆಗೆ ಹೊರಟು [illegible] ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು [illegible] 9 ಗಂಟೆಗೆ, [illegible] 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ [illegible] ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಕಾಸರಗೋಡು, ಮಲಬಾರು, ಕನ್ನನ್ನೂರು, ಪ್ರಾಂತಗಳಿಗೂ ಆಯಾ ದಿನವೇ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ [illegible].

(3) [illegible] ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೆ 11 ಘಂಟೆಗೆ ಧರ್ಮಸ್ಥಳ [illegible] 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ [illegible] ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ದೊರೆಯುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ. [illegible] ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ [illegible] ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ್, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲವಾಗಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ [illegible] 1-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲವಾಗಿರುತ್ತೆ.

ಈ ಮೋಟರ ಸರ್ವಿಸ್ಸಿನಲ್ಲಿ ಪ್ರಯಾಣಿಕರಿಗೆ ಇರತಕ್ಕ ಅನುಕೂಲತೆ.

(4) ಚಾರ್ಮಾಡಿ ಘಾಟಿಯಲ್ಲಿ [illegible] ಯಾತರಿಂದಲೂ ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ಕಡೆಗಳಿಂದ ಹೊರಡುವ ಪ್ಯಾಸೆಂಜರುಗಳಿಗೆ [illegible] ಚಿಕ್ಕಮಗಳೂರು, ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ಇತರರಿಗೂ ಅನುಕೂಲವಾದ ಹೊಟೆಲುಗಳಿವೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ [illegible] ಎಡಪದವು ಕಾರ್ಕಳ ಮಾರ್ಗವಾಗಿಯೂ

ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ

ರಚಿಸಲಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ [illegible] ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

(೬ನೇ ಪೇಜಿನಿಂದ ಮುಂದರಿಸಿದ್ದು.)

ಸುರತ್ಕಲ್:—ಇಲ್ಲಿನ ಉತ್ಸಾಹಿಗಳಾದ ಹಲಕೆಲವು ಬ್ರಾಹ್ಮಣ ತರುಣರು, ಒಟ್ಟುಗೂಡಿ ಸುತ್ತಮುತ್ತಲಿನ ಬ್ರಾಹ್ಮಣ ವೃಂದದ ಯುವಕರ ಮಾನಸಿಕ, ಶಾರೀರಿಕ, ಅಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಮತ್ತು ರಾಷ್ಟ್ರೋನ್ನತಿಯ ಹಾಗೂ ಸಮಾಜೋದ್ಧಾರದ ಕಾರ್ಯಗಳಲ್ಲಿ ಸಹಾಯಕವಾಗಿರಬೇಕೆಂಬ ಈ ಎರಡು ಮುಖ್ಯೋದ್ದೇಶಗಳನ್ನಾಗಿಟ್ಟುಕೊಂಡು ಇದೇ ಕಳೆದ ೧೯೨೭ನೇ ಇಸವಿ ಜನವರಿ ತಾರೀಕು ೭ರಲ್ಲಿ ಸ್ಥಾಪಿಸಿರುವ 'ಸುರತ್ಕಲ್ ದ್ರಾವಿಡ ಬ್ರಾಹ್ಮಣ ತರುಣರ ಸಂಘ'ದ ಪ್ರಥಮ ವಾರ್ಷಿಕ ವರ್ಧಂತ್ಯುತ್ಸವವು ಇದೇ ಕಳೆದ ತಾ. ೮-೧-'೨೮ನೇ ಆದಿತ್ಯವಾರ ಸಾಯಂ. ಘಂಟೆ ೪ಕ್ಕೆ ಇಲ್ಲಿಯ ಇ. ಬಿ. ಶಾಲಾ ಮಂದಿರದಲ್ಲಿ ಬಹು ಸಂಭ್ರಮದಿಂದ ಜರಗಿತು. ಅದೇ ಶಾಲಾ ಅಧ್ಯಾಪಕವರ್ಗದವರಲ್ಲೊಬ್ಬರೂ, ಯುವಕರ ಅಭ್ಯುದಯದಲ್ಲಿ ವಿಶೇಷ ವಿಶ್ವಾಸಿಗಳೂ ಆದ ಮ॥ ರಾ॥ ಬಿ. ನಾರಾಯಣ ರಾಯರೇ ಇಂದಿನ ಸಭಾ ಅಧ್ಯಕ್ಷರು. ನೆರೆಕರೆಯ ಬ್ರಾಹ್ಮಣ ಬಂಧುಗಳನೇಕರು ಹಾಜರಿದ್ದರು. ಮೊದಲಾಗಿ ನಿಶ್ಚಯಿಸಿದ ಕಾರ್ಯಕ್ರಮ ಸೂಚಿಯಂತೆ ಬಾಲಕರಿಂದ ಪ್ರಾರ್ಥನಾ ಗೀತವೂ, ಕಾರ್ಯದರ್ಶಿಯರಿಂದ ಗತವರ್ಷದ ವರದಿ ಓದೋಣವೂ, ಕೆಲವು ಸಭ್ಯ ಮಹನೀಯರ ಭಾಷಣಗಳೂ ಸಾಂಗವಾಗಿ ನೆರವೇರಿದವು. ಆ ಬಳಿಕ ಸಭಾಧ್ಯಕ್ಷರು ತಮ್ಮ ರಸವತ್ತಾದ ಚಿಕ್ಕ ಭಾಷಣದಲ್ಲಿ ಸಂಘದ ಅಭ್ಯುದಯ ಪರವಾಗಿ ಕೆಲವು ಹಿತ ಸೂಚನೆಗಳನ್ನು ತಿಳಿಸಿ ಸಂಘದ ಶ್ರೇಯಸ್ಸನ್ನು ಬಯಸಿದರು. ಅನಂತರ ಈ ವರುಷದ ಬಗ್ಗೆ ಸಂಘದ ಅಧ್ಯಕ್ಷ ಕಾರ್ಯದರ್ಶಿಯರನ್ನು ಆರಿಸಲಾಯಿತು. ತರುವಾಯ ಸಂಘದ ಅಧ್ಯಕ್ಷರು ಸಭಾಗ್ರಪತಿಗಳಿಗೂ, ನೆರೆದ ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಲು ಮಂಗಳ ಗೀತವು ಹಾಡಲ್ಪಟ್ಟಿತು. ತಾಂಬೂಲಾದಿ ಸತ್ಕಾರಗಳೇ ಆ ಬಳಿಕದ ಕಾರ್ಯಕ್ರಮವಾಗಿ ಮಾರ್ಪಟ್ಟು ಸಭಾ ಮುಕ್ತಾಯವಾಯಿತು.

೧೯೨೮ನೇ ವರುಷದ ಬಗ್ಗೆ ರಾ॥ ಯಚ್. ದಾಮೋದರ ರಾಯರು ಸಂಘದ ಅಧ್ಯಕ್ಷರಾಗಿಯೂ ರಾ॥ ಬಿ. ರಾಮರಾಯರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಹೊಸದುರ್ಗ:—ಜಾನುವಾರುಗಳಿಗೆ ಹೊಸ ನಮೂನೆಯ ಕಾಯಿಲೆಯು ಅಲ್ಲಲ್ಲಿ ತಲೆದೋರುತ್ತದೆ. ಗೋ ಡಾಕ್ಟರರ ಮೊಕ್ಕಾಂ ಇತ್ತಕಡೆ ಮಾಡಿದ್ದಾದರೆ ಜನೋಪಕಾರವಾಗುತಿತ್ತು.

ಚಿತ್ತಾರಿ ಗ್ರಾಮದ ತಣ್ಣೋಟ ಎಂಬಲ್ಲಿ ಒಂದು ಕೋಣದ ವಿವಾದದಲ್ಲಿ ಬಿಲ್ಲವರ ಎರಡು ಪಕ್ಷವಾಗಿ ಮಾರಾಮಾರಿ ನಡೆದು ಮೂರು ಜನರು ಕಠಿಣ ಜಖಂ ಪಡೆದು ಇಲ್ಲಿಯ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೩-೧-೨೮ನೇ ಸೋಮವಾರ ಹಗಲು ೪॥ ಗಂಟೆ ಸಮಯ ಮ॥ ರಾ॥ ವಿ. ಸಿ. ಕಣ್ಣನಾಯರ್, ಮ॥ ರಾ॥ ವಿದ್ವಾನ್ ಪಿ. ಕೆ. ನಾಯರ್, ಮತ್ತು ಪಾಲ್ಘಾಟ ಶಬರಿ ಆಶ್ರಮದ ಉಪಾಧ್ಯಾಯರಾದ ಮ॥ ರಾ॥ ಟಿ. ವಿ. ಕೃಷ್ಣಯ್ಯ ಕಲ್ಲಿಕೋಟೆಯ ಮ॥ ರಾ॥ ಕೇಳಪ್ಪ ನಾಯರ್, ಮ॥ ರಾ॥ ಶಂಕರ ನಂಬಿಯಾರ್, ಮಂಗಳೂರು ಸಮೀಪವಿರುವ ಮ॥ ರಾ॥ ಎಸ್. ಕೆ. ಕೊಂಬ್ರೈಲ್ ಮತ್ತು ಅನೇಕ ಊರ ಮಹಾ ಜನರು ಸೇರಿ ಒಂದು ಕೊಂಗ್ರೆಸ ಸಭೆಯು ಜರಗಿತ್ತು. ಈ ದಿವಸದ ಸಭೆಗೆ ಮ॥ ರಾ॥ ವಿದ್ವಾನ್ ಪಿ. ಕೆ. ನಾಯರರನ್ನು ಅಧ್ಯಕ್ಷರನ್ನಾಗಿ ಸರ್ವಸಮ್ಮತದಿಂದ ಚುನಾಯಿಸಲ್ಪಟ್ಟಿತು. ಅಧ್ಯಕ್ಷರು ವ ಮೇಲಿನ ಸದ್ಗೃಹಸ್ಥರು ಕೂಡ ರೋಯಲ್ ಕಮಿಶನಿನ ಕುರಿತು ಭಾಷಣ ಮಾಡಿದರು. ನಂತರ ತಾ. ೩-೨-'೨೮ಕ್ಕೆ ಬೊಂಬಾಯಿಗೆ ರೋಯಲ್ ಕಮಿಶನಿನವರು ಬಂದಿಳಿಯುವ ದಿವಸ ಇಂಡಿಯದ ಎಲ್ಲಾ ಕಡೆಯಲ್ಲಿ ಆಚರಿಸುವಂತೆ ಇಲ್ಲಿ ಸಹಾ ಹರತಾಳವನ್ನು ಆಚರಿಸಬೇಕಾಗಿಯೂ, ಸದರಿ ದಿವಸ ಶಾಲೆಗಳಿಗೆ ರಜೆಕೊಡುವಂತೆ ಬೋರ್ಡಿನವರೊಂದಿಗೆ ಮನವಿಯನ್ನು ಮಾಡಬೇಕಾಗಿಯೂ, ಶಾಲೆಗಳಿಗೆ ರಜೆಕೊಡದಿದ್ದರೆ ತಮ್ಮ ತಮ್ಮ ಮಕ್ಕಳನ್ನು ಆ ದಿವಸ ಶಾಲೆಗೆ ಕಳುಹಿಸಬಾರದಾಗಿಯೂ, ಆ ದಿವಸ ೪ ಗಂಟೆಗೆ ಬಜಾರಿನಲ್ಲಿ ಒಂದು ಮಹಾಸಭೆಯನ್ನು ಜರಗಿಸಬೇಕಾಗಿಯೂ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು. ಸದರಿ ದಿವಸ ರೋಯಲ್ ಕಮಿಶನನ್ನು ಬಹಿಷ್ಕರಿಸಿ ಠರಾವು ಮಾಡಬೇಕಾಗಿಯೂ ನಿರ್ಣಯಿಸಿದರು.

ಕಲ್ಲಡ್ಕ:—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯೋತ್ಸವವು ಇದೇ ಫೆಬ್ರವರಿ ತಿಂಗಳ ೪ನೇ ಶನಿವಾರ ೪-೩೦ಕ್ಕೆ ಜರಗುವುದು.

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ೬ನೇ ಸಭೆಯು ತಾ. ೨೮ನೇ ಶನಿವಾರ ಜರಗಲಿಕ್ಕಿರುವುದು.

ಅಜೆಕಾರು:—ಇಲ್ಲಿಯ ಮಧುರಾ ಪಟ್ಟಣ ಶ್ರೀ ಚಂದ್ರನಾಥ ಸ್ವಾಮಿ ಚೈತ್ಯಾಲಯವನ್ನು ಜೀರ್ಣೋದ್ಧಾರ ಮಾಡಿದ ಶ್ರೀ ದೇವರಾಜ ಹೆಗ್ಡೆರು ಆ ಸಮ್ಬಂಧ ಪಂಚಕಲ್ಯಾಣ ಪೂಜಾ ಮಹೋತ್ಸವವನ್ನು ಇದೇ ಶ್ರೀ ಮಹಾವೀರ ಶಕ ೨೪೫೪ನೇ ಪ್ರಭವನಾಮ ಸಂವತ್ಸರದ ಫಾಲ್ಗುಣ ಶುದ್ಧ ೩ಯು ಶುಕ್ರವಾರ ತಾ. ೨೪-೨-'೨೮ರಿಂದ ತಾ. ೫-೩-'೨೮ರ ವರೆಗೆ ಜರಗಿಸುವರು. ತತ್ಸಮ್ಬಂಧ ಸರ್ವಜನ ಭಕ್ತರಿಗೂ ಸುಸ್ವಾಗತವಿದೆ.

ನಮ್ಮ ಅಜೆಕಾರು ಗ್ರಾಮ ಉದ್ಯೋಗಸ್ಥರ ವರ್ಷಾವಧಿ ಜಮಾಬಂದಿಯು ತಾ. ೨೫-೧-'೨೮ರಲ್ಲಿ ಕಾರ್ಕಳ ಜಮಾಬಂದಿ ಆಫೀಸರರ ಮುಂದೆ ಎಂದಿನಂತೆ ನಡೆಯಿತು.

ಕಾರ್ಕಳ ಸೈಂಟ್ ಲೋರೆನ್ಸ್ ಚರ್ಚಿನ ಗುರುಗಳಾದ ಫಾದರ್ ಎಸ್. ಡಿ. ಸೋಜರವರು ಅಜೆಕಾರಿನಲ್ಲಿ ಒಂದು ಸಣ್ಣ ಇಗರ್ಜಿಯನ್ನು ನೂತನವಾಗಿ ಕಟ್ಟಿಸಿರುವರು. ಈಗ ಇಗರ್ಜಿಯ ಘಂಟಾನಾದವು (Church bell) ಪ್ರತಿ ದಿವಸವೂ ಕೇಳುವುದಲ್ಲದೆ ಆದಿತ್ಯವಾರ ಎಂಬೀ ಶುಭದಿನಗಳಲ್ಲಿ ಕ್ರೈಸ್ತ ಭಕ್ತರು ಪೂಜೆಗಾಗಿ ನೆರೆದು ಬರುವರು. ಸನ್ನದಲ್ಲೆ ಈ ಇಗರ್ಜಿಯ ಮಹಿಮೆಯು ಎಲ್ಲಾ ಪ್ರಾಂತ್ಯಗಳಲ್ಲಿ ಬೀರುವುದೆಂದು ತುಂಬಾ ಭರವಸೆ ಇದೆ.

ಫರಂಗಿಪೇಟೆ:—ಈ ಸೆಂಟರಿನ ಉಪಾಧ್ಯಾಯರ ಸಂಘದ ೩ನೇ ಸಭೆಯು ಕುಪ್ಪೆಪದವು ಸಂಸ್ಕೃತ ಶಾಲಾ ಮೆನೇಜರ್ ಟಿ. ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ತಾ. ೨೧-೧-'೨೮ರಲ್ಲಿ ಕೈರಂಗಳ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ದೂರವನ್ನು ಲಕ್ಷಿಸದೆ ೩೦ ಮಂದಿ ಉಪಾಧ್ಯಾಯರು ಕೈರಂಗಳ ವ ನೆರೆಗ್ರಾಮದ ಹಲವು ಮಂದಿ ಗೃಹಸ್ಥರು ಸೇರಿದ್ದರು. ಹಿಂದಿನ ಸಭೆಯ ಪ್ರೊಸಿಡಿಂಗ್ಸುಗಳನ್ನು ಓದಿ ಹೇಳಿ ಮಂಜೂರು ಮಾಡಿದ ತರುವಾಯ ಸಂಘದ ಮೆಂಬರರು ಗೈರಾಜರು ಆಗದಂತೆ ಪ್ರಯತ್ನಿಸಬೇಕಾಗಿಯೂ ಹಾಗೆ ಗೈರಾಜರು ಆದವರ ಕುರಿತು ಆಯಾ ಶಾಲಾ ಅಧಿಕಾರಿಗಳಿಗೆ ತಿಳಿಸಬೇಕಾಗಿಯೂ ನಿರ್ಣಯಿಸಲಾಯಿತು.

ಸುಳ್ಯ:—ಇಲ್ಲಿಯ ಈಗಿನ ವೈದ್ಯ ಉದ್ಯೋಗಸ್ಥರಾದ ಡಾ॥ ಕೆ. ವೆಂಕಟರಾಯರು ಆರೋಗ್ಯ, ಶಿಶುಸಪ್ತಾಹ ಮತ್ತು ಶಾಲಾ ಸಮ್ಬಂಧವಾದ ವರ್ಧಂತಿ ಸಮಾರಂಭಗಳಲ್ಲಿ ಹೆಚ್ಚಿನ ತರದ ಚಟುವಟಿಕೆಯಿಂದ ಕೆಲಸಗಳನ್ನು ಮಾಡಿಕೊಂಡು ಬಂದದ್ದಲ್ಲದೆ ಶಾಲಾ ಕಮಿಟಿ ಅಧ್ಯಕ್ಷರಾಗಿ ಶಾಲೆಗೆ ಕೂಡ ಅನೇಕ ತರದ ಸಹಾಯವನ್ನು ಮಾಡಿರುತ್ತಾರೆ. ಇವರ ಕೆಲಸಗಳು ಬಹಳ ಶ್ಲಾಘನೀಯವೇ ಸರಿ. ಇವರ ಮುಖ್ಯ ವೃತ್ತಿಯಾದ ಡಾಕ್ಟರ್ ಕೆಲಸದಲ್ಲಿಯೂ ಕೂಡ ಹೆಚ್ಚಿನ ಉತ್ಸಾಹದಿಂದ ಕೂಡಿದವರಾಗಿದ್ದು ಇಲ್ಲಿಯ ಜನರ ಕೂಡ ಬಹಳ ಮೃದುನುಡಿಯಿಂದ ಮಾತಾಡಿಕೊಂಡು ಅವರಿಗೆ ಬೇಕಾದ ಹಾಗೆ ಕಾಲಾಕಾಲ ನಿಬಂಧನೆಗಳನ್ನು ಇಟ್ಟುಕೊಳ್ಳದೆ ಔಷಧಿ ಕೊಡುತ್ತಾ ಬರುವುದು ಬಹಳ ಸಂತೋಷವೇ ಸರಿ. ಈ ಡಾಕ್ಟರರು ಈಗ ಕೆಲಸದಿಂದ ನಿವೃತ್ತರಾಗಿ ಹೋಗುವದು ಬಹಳ ವ್ಯಸನವೆ ಸರಿ.

ಇಲ್ಲಿಯ ಆರೋಗ್ಯ ಮತ್ತು ಶಿಶು ಸಪ್ತಾಹದ ಆಡಳಿತೆ ಸಭೆಯು ಇದೇ ತಿಂಗಳ ತಾ. ೨೪-೧-೨೮ಕ್ಕೆ ಅಪರಾಹ್ನ ೪ ಘಂಟೆಗೆ ಸುಳ್ಯ ಆಸ್ಪತ್ರೆಯಲ್ಲಿ ಜರಗುವದು.

ವಿವಿಧ ವಿಷಯಗಳು.

ಸೇಲಮಿನಲ್ಲಿ ಹಿಂದೂ-ಮುಸಲ್ಮಾನರ ಪರಸ್ಪರ ಸ್ನೇಹ.

ಸೇಲಮಿನಲ್ಲಿ ಮುಸಲ್ಮಾನ ಮತದ ಒಂದು ಮಗುವು ಮೃತಪಟ್ಟಿತು. ಅದನ್ನು ಸ್ಮಶಾನ ಭೂಮಿಯಲ್ಲಿ ಹುಗಿಯುವದಕ್ಕಾಗಿ ಒಯ್ದರು. ಸ್ಮಶಾನ ಭೂಮಿಯಲ್ಲಿ ಕೆಲವು ಹಿಂದುಗಳು ಬಂದು ಹುಗಿಯುವದಕ್ಕಾಗಿ ಹೊಂಡವನ್ನು ತೋಡಲು ಪ್ರಾರಂಭಿಸಿದರು. ಹಿಂದುಗಳು ಈ ಪರಿಯಾಗಿ ಮುಸಲ್ಮಾನರಿಗೆ ಸಹಾಯ ಮಾಡುವುದನ್ನು ಕಾಣಲಾರದೆ ಕೆಲವು ಹಿಂದುಗಳು ಅಲ್ಲಿಗೆ ಓಡಿ ಬಂದು, ಅವರು ಈ ರೀತಿ ಮಾಡುವುದು ತೀರ ಅನ್ಯಾಯವೆಂದೂ, ಹಾಗೆ ಮಾಡಬಾರದೆಂದೂ ಬೋಧಿಸಲು ಪ್ರಾರಂಭಿಸಿದರು. ಅದೇ ಸಮಯದಲ್ಲಿ ಪೋಲಿಸ್ ಅಧಿಕಾರಿಗಳು ಅಲ್ಲಿಗೆ ಬಂದು ಇಬ್ಬರೊಳಗೂ ಸಮಾಧಾನವನ್ನು ಮಾಡಿ ಹಿಂದುಗಳು ಮುಸಲ್ಮಾನರಿಗೂ, ಮುಸಲ್ಮಾನರು ಹಿಂದೂಗಳಿಗೂ ಎಂದೆಂದೂ ಪರಸ್ಪರ ಸಹಾಯ ಮಾಡುತ್ತಿರಬೇಕೆಂದು ವಿವರವಾಗಿ ಬೋಧಿಸಿದ ತರುವಾಯ ಹಿಂದೂಗಳೂ ಮುಸಲ್ಮಾನರೂ ಸುಮ್ಮನಾದರು. ಮಗುವಿನ ದಫನ ಸಮಾರಂಭವು ಶಾಂತಿಯಿಂದ ನೆರವೇರಿತು.

§ § § §

ಇಂದೋರಿನ ಎಕ್ಸ್ ಮಹಾರಾಜರು.

ಮಿಸ್. ಮಿಲ್ಲರಳೆಂದು ಕರೆಯಲ್ಪಡುವ ಅಮೇರಿಕನ್ ವಧುವಿಗೆ ಈಗ 'ತುಕೋಜಿರಾವ್ ಮಿಲ್ಲರ'ಳೆಂದು ಹೆಸರಿಟ್ಟಿರುವರು. ಅವಳ ಮತ್ತು ಮಹಾರಾಜರ ಮದುವೆಯು ಥಕ್ಕನೆ ಆಗುವಂತಿಲ್ಲ. ವಿಘ್ನ ಪರಂಪರೆಗಳು ಬರುತ್ತಾ ಇವೆ. ರಾಣಿಯರು ಈ ಮದುವೆಗೆ ಒಪ್ಪುವದಿಲ್ಲ. ಅವರ ಒಪ್ಪಿಗೆ ಇಲ್ಲದೆ ಮದುವೆಯಾಗುವದಿಲ್ಲ. ರಾಣಿಯರ ಒಪ್ಪಿಗೆಯನ್ನು ಪಡೆಯಬೇಕೆಂದು ರಾಜನ ಸಂಗಡಿಗರಾದ ಅಬ್ದುಲ್ ರಶೀದನೇ ಮೊದಲಾದವರು ಬಹಳವಾಗಿ ಪ್ರಯತ್ನಿಸುತ್ತಿರುವರು. ಆದರೂ ಒಬ್ಬರೂ ಇಷ್ಟರ ವರೆಗೆ ಜಯಶಾಲಿಗಳಾಗಿಲ್ಲ. ಇಂದೋರಿನ ಮಂತ್ರಿಯ ಭೇಟಿಯನ್ನು ಪಡೆದೂ ಆಯಿತು. ಇವನ ಸಮ್ಮತಿಯೂ ಈ ವಿವಾಹಕ್ಕೆ ಇಲ್ಲವೆಂದೇ ತೋರುವುದು.—ಆದರೂ ಅವನು ತನ್ನ ಪ್ರೈವೇಟ್ ಸೆಕ್ರೆಟರಿಯನ್ನು ಮಹಾರಾಜನೊಡನೆ ಮಾತನಾಡುವುದಕ್ಕಾಗಿ ಕೊಲೊಂಬೊಕ್ಕೆ ಕಳುಹಿಸಿರುವನಂತೆ. ಯಾವುದರ ಕುರಿತು ಮಾತನಾಡುವದಕ್ಕೆಂದು ಸರಿಯಾಗಿ ತಿಳಿದಿಲ್ಲ.

§ § § §

ಮೈಸೂರಿನ ಮುನಿಸಿಪಾಲಿಟಿಗೆ ಸ್ತ್ರೀ ಕೌನ್ಸಿಲರಳು.

ಮೈಸೂರಿನ ಮುನಿಸಿಪಾಲಿಟಿಗೆ ಮೆಂಬರಳಾಗಿ ಮಿಸೆಸ್ ಡಬ್ಲ್ಯು. ಎಚ್. ಥಿಯೊಬಾಲ್ಡ್ ಎಂಬೊಬ್ಬಳು ನೇಮಿಸಲ್ಪಟ್ಟಿರುವಳು. ಆದರೆ ಮುನಿಸಿಪಾಲಿಟಿಯ ಸಭೆಗೆ ಹೋಗಬಾರದೆಂದು ಸರಕಾರದವರು ಅವಳಿಗೆ ಅಪ್ಪಣೆಯನ್ನು ವಿಧಿಸಿರುವರು. ಮುನಿಸಿಪಾಲಿಟಿಯವರು ಸ್ತ್ರೀ ಮೆಂಬರಳನ್ನು ನೇಮಿಸಿದುದು ದೊಡ್ಡ ತಪ್ಪೆಂದು ಸರಕಾರದವರು ಭಾವಿಸುವರು. ಮೈಸೂರು ಮುನಿಸಿಪಲ್ ರೆಗ್ಯುಲೇಶನಿನ ಹದಿನೈದನೇ ಸೆಕ್ಷನಿನಲ್ಲಿ ಸ್ತ್ರೀಯು ಮುನಿಸಿಪಾಲಿಟಿಯ ಮೆಂಬರಳಾಗಬಾರದೆಂಬ ಕಾನೂನಿದೆ. ಆದರೆ ಮೆಂಬರಳನ್ನು ನೇಮಿಸುವಾಗ ಈ ವಿಷಯವಾಗಿ ಮುನಿಸಿಪಾಲಿಟಿಯವರು ಯೋಚಿಸಲಿಲ್ಲವೆಂದು ತೋರುವುದು. ಈಗಿರುವ ಈ ಕಾನೂನನ್ನು ಸರಕಾರದವರು ತಿದ್ದಿ ಸರಿಪಡಿಸಿ, ಸ್ತ್ರೀಯು ಮುನಿಸಿಪಾಲಿಟಿಗೆ ಮೆಂಬರಳಾಗಬಹುದೆಂದು ಮಾಡುವರು. ಹಾಗೆ ಮಾಡದ ವಿನಹ ಮುನಿಸಿಪಾಲಿಟಿಯವರ ಮೇಲೆ ದೊಡ್ಡ ತಪ್ಪು ಸ್ಥಾಪನೆಯಾಗುವದು.

§ § § §

ಪಿಶಾಚಿ ರೂಪಿಯಾದ ಮಗುವು.

ಕಳೆದ ಸೋಮವಾರ ವಿರಗಾಮ್ ಎಂಬಲ್ಲಿ ಒಂದು ಭಯಂಕರ ರೂಪಿಯಾದ ಮಗುವು ಜನಿಸಿತು. ಮಗುವಿಗೆ ತಲೆ ಇರಲಿಲ್ಲ. ಕುತ್ತಿಗೆಯ ಮೇಲೆ ಕೂದಲುಗಳು ಇದ್ದವು. ಎರಡು ಕಾಲುಗಳು, ಒಂದು ಕೈ, ಗಂಡೋ, ಹೆಣ್ಣೋ ಎಂಬುದನ್ನು ಸರಿಯಾಗಿ ನಿಶ್ಚಯಿಸಲಾಗುತಿದ್ದಿಲ್ಲ. ಹೊಟ್ಟೆಯೂ ಎದೆಯೂ ಇದ್ದವು. ಇಂತಹ ಜನನಗಳು ಬಹು ಅಪರೂಪವೆಂದು ವೈದ್ಯರು ತಿಳಿಸುತ್ತಾರಾದರೂ ಆಗಾಗ ನಿದರ್ಶನಗಳು ಬರುತ್ತಲೇ ಇವೆ. ಮಗುವು ಹುಟ್ಟುವಾಗಲೆ ಅದಕ್ಕೆ ಜೀವವಿರಲಿಲ್ಲ. ವಿರಗಾಮಿನಿಂದ ೮ ಮೈಲು ದೂರವಿರುವ ಬೇಚಮಂಗಲವೆಂಬ ಊರಿನಲ್ಲಿ ಅದೇದಿನ ಎರಡು ತಲೆಗಳುಳ್ಳ ಒಂದು ಮಗುವು ಜನಿಸಿತು. ಇಂಥಹ ಭಯಂಕರ ಶಿಶುಗಳಿಗೆ ಜನ್ಮವನ್ನು ಕೊಡುವದು ಬಡತಾಯಂದಿರಿಗೆ ಎಷ್ಟು ಕಷ್ಟದಾಯಕವೆಂದು ಹೇಳಲಾಗುವುದಿಲ್ಲ. ಈ ಮಗುವನ್ನು ಪ್ರತಿಯೊಬ್ಬರೂ ನೋಡಿದ ತರುವಾಯ ಅದನ್ನು ಕೊಂದುಹಾಕಿದರು. ಮೊದಲು ಹೇಳಿದ ಅಂದರೆ ಜೀವವಿಲ್ಲದೆ ಹುಟ್ಟುವ ಮಕ್ಕಳಿಂದ ಯಾವದೊಂದೂ ತರದ ಕೆಡುಕುಂಟಾಗಲಾರದು. ಆದರೆ ಜೀವವಿದ್ದು ಎರಡೆರಡು ತಲೆಗಳ ಸಮೇತ ಹುಟ್ಟುವ ಪಿಶಾಚಿ ರೂಪಿ ಮಕ್ಕಳು ಬಹಳ ತೊಂದರೆಯನ್ನುಂಟುಮಾಡುವವು.

§ § § §

'ಸ್ಯಾಲೆಂಟ್ ಮೆನ್' ಎಂಬ ಸಾಕ್ಷಿ ಮಾತ್ಯನ ಮರಣ!

ಕಳೆದ ೩೦ ವರುಷಗಳಿಂದ ಮೌನವ್ರತವನ್ನಾಚರಿಸಿಕೊಂಡಿದ್ದ ಸೆಮುವೆಲ್ ಫ್ರಿಮರನೆಂಬವನು ತನ್ನ ಮನೆಯಲ್ಲಿ ಮೃತನಾದನು. ಮೂವತ್ತು ವರುಷಗಳ ಹಿಂದೆ ಸೆಮುವೇಲನು ತನ್ನ ವಿರಾಮ ಕಾಲದಲ್ಲಿ ದೇವಪ್ರಾರ್ಥನೆಯನ್ನು ಮಾಡುತ್ತಲೇ ಇದ್ದರು. ಒಂದು ದಿನ ತನ್ನ ಹೆಂಡತಿಯೊಡನೆ ಜಗಳವಾಡಿ ಅವಳನ್ನು ತಾನು ಜೀವವಿರುವಾಗಲೆ ಸುಟ್ಟುಬಿಡುವೆನೆಂದು ತನ್ನ ಮನೋನಿಶ್ಚಯವನ್ನು ವ್ಯಕ್ತಗೊಳಿಸಿದನು. ಎರಡೇ ದಿನಗಳಲ್ಲಿ ಮನೆಗೆ ಬೆಂಕಿ ತಗಲಿ ಹೆಂಡತಿಯೂ ಮಗುವೂ ಸುಟ್ಟು ಹೋದರು. ತಾನು ಹೇಳಿದ ಮಾತಿನಿಂದ ಈ ರೀತಿಯಾಗಿ ಸಂಭವಿಸಿತೆಂದು ಪಶ್ಚಾತ್ತಾಪಪಟ್ಟು ಸಾಮುವೇಲನು "ಇನ್ನು ಮುಂದೆ ಬಾಯಿಯಿಂದ ಎಂದೆಂದಿಗೂ ಮಾತನಾಡಲಾರೆನು ಎಂದು ಭೀಷ್ಮ ಪ್ರತಿಜ್ಞೆಯನ್ನು ಮಾಡಿದನು. ಈ ಪ್ರತಿಜ್ಞೆಯನ್ನು ಅವನು ಸಾಯುವ ತನಕ ಅಂದರೆ ಮೂವತ್ತು ವರುಷಗಳ ವರೆಗೆ ಕಾಪಾಡಿದನು. ಅವನ ದೃಢ ನಿಶ್ಚಯವು ನಿಜವಾಗಿಯೂ ಸ್ತುತ್ಯಾರ್ಹವು.

§ § § §

ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ.

ಮದರಾಸಿನ ರಾಮಕೃಷ್ಣ ಮಿಶ್ಯನಿನವರು ಸ್ವಾಮಿ ವಿವೇಕಾನಂದರ ೬೬ನೇ ಜನ್ಮ ದಿನಾಚರಣೆಯನ್ನು ಆಚರಿಸಿದರು. ಅನೇಕ ಬಡವರಿಗೆ ಅನ್ನಹಾಕಿದರು. ಭಜನೆಯೂ ಆಯಿತು. ಸ್ವಾಮಿಯವರ ಜೀವನ ಬೋಧನೆಗಳ ಕುರಿತು ಚರ್ಚೆಗಳೂ ನಡೆದವು. ಸಾಯಂಕಾಲ ಎ. ರಾಮಸ್ವಾಮಿ ಮುದಲಿಯಾರರು ಭಾಷಣವನ್ನು ಮಾಡಿದರು. ಅಧ್ಯಕ್ಷರಾದ ವಿ. ವಿ. ಶ್ರೀನಿವಾಸ ಅಯ್ಯಂಗಾರರು ಸ್ವಾಮಿಯವರು ವೇದಾಂತದ ಅವತಾರಿಕ ಪುರುಷರೆಂದೂ, ಹಿಂದೂಸ್ಥಾನದಲ್ಲಿ ಐಕ್ಯ ಉಂಟಾಗಲು ಸಾಧಿಸಿದ ಮೂಲಪುರುಷರೆಂದೂ ವಿವರಿಸಿದರು. ಅವರ ಜೀವನ ಚರಿತ್ರೆಯನ್ನು ಕಲಿಯುವದು ಬಹು ಲಾಭಕರವು. ಅವರ ಉದಾಹರಣೆಯನ್ನು ಪ್ರತಿಯೊಬ್ಬ ಭಾರತೀಯನೂ ಅನುಸರಿಸಬೇಕು. ಅವರ ಉದ್ದೇಶ ಸಾಧನೆಗೆ ಪ್ರಯತ್ನಿಸಬೇಕು ಎಂದು ಮೊದಲಾಗಿ ಅಧ್ಯಕ್ಷರು ವಿವರಿಸಿದ ತರುವಾಯ ಸಭೆಯು ಮುಕ್ತಾಯವಾಯಿತು. ಜನ್ಮದಿನಾಚರಣೆಯೂ ಸಂಭ್ರಮದಿಂದ ಮುಗಿಯಿತು.

ನೋಟೀಸು.

ದ. ಕ. ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

O. P. ನಂಬ್ರ 1/1928.

ಅಮ್ಮಣ್ಣಿ ಯಾನೆ ಪದ್ಮಾವತಿ—ವ್ಯಾನರ್—ಅರ್ಜಿದಾರಳು
ಮತ್ತು
ಪದ್ದು ಯಾನೆ ಪದ್ಮಾವತಿ ಕೂಡಾ—ರೆಸ್ಪೊಂಡೆಂಟರು

ಮಂಗಳೂರು ತಾಲೂಕು ತೆಂಕ ಎಡಪದವು ಗ್ರಾಮದ ಶ್ರೀನಿವಾಸ ಭಟ್ರ ವಿಧವೆ ಸೀತಮ್ಮನನ್ನು ಬುದ್ಧಿಸ್ವಾಧೀನತೆ ಇಲ್ಲದವಳೆಂದು ಸ್ಥಾಪಿಸುವರೆ ಮೇಲಿನ ಅರ್ಜಿದಾರಳು ಅರ್ಜಿ ದಾಖಲ್ಲು ಮಾಡಿರುತ್ತಾಳೆ. ಸದ್ರಿ ಅರ್ಜಿಯು ತಾ. 3-2-1928ಕ್ಕೆ ತನ್ನಿಗೆ ಇಟ್ಟದೆ. ಅದಕ್ಕೆ ಆಕ್ಷೇಪ ಹೇಳುವವರು ಆ ದಿವಸ ಕೋರ್ಟಿಗೆ ಹಾಜರಾಗಿ ಆಕ್ಷೇಪ ಹೇಳ ಬಹುದಾಗಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

ಮಂಗಳೂರು
ತಾ. 26-1-'28

(Sd) K. R. Achar.
Vakil for Petr.

ದಕ್ಷಿಣ ಕನ್ನಡಾ ಸಬೊರ್ಡಿನೇಟ ಕೋರ್ಟಿನಲ್ಲಿ

S. E. A. ನಂಬ್ರ 458/1925.

ಕಾಗಲ ವಾಮನ ವೆಂಕಟೇಶ ಪೈ, ಕಸ್ತೂರಿ ನಾಗೇಶ ಪೈ ಮತ್ತು ಕಂಪೆನಿ—ವಾದಿರು, ಅಮಲ್‌ಜಾರಿ ಅರ್ಜಿದಾರರು.
ಮತ್ತು

1. ಮಿಜಾರ ಎಡಪದವು ದಾಸ ಕಮ್ತಿ, 2. ಮಿಜಾರು ವಿಠಲ ಮಂಜುನಾಥ ಶೆಟ್ಟಿ—ಪ್ರತಿವಾದಿರು, ರೆಸ್ಪೊಂಡೆಂಟ್ರು

ವಾದಿರು—ಪ್ರತಿವಾದಿರ ಮೇಲೆ ಮೇಲಣ ಕೋರ್ಟಿನಲ್ಲಿ ಸ್ಮಾಲ್ ನಂಬ್ರ 797/1925ಕ್ಕೆ ತಾ. 2—11—1925ರಲ್ಲು ಪಡೆದ ಡಿಕ್ರಿಯನ್ನು ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿಗೆ ಟ್ರಿನ್ಸಫರ ಮಾಡಬೇಕಾಗಿ ಅಪೇಕ್ಷಿಸಿ ದಾಖಲ್ಲು ಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾ.9—2—1928ಕ್ಕೆ ತನಖಿಗೆ ಇಟ್ಟಿರುತ್ತದೆ.

ಮಂಗಳೂರು
ತಾ.25-1-'28

B. V. Baliga.
ಅರ್ಜಿದಾರನ ಕಡೆ ವಕೀಲ.

ಶ್ರೀ ಸ್ವಾಮಿ ನಿತ್ಯಾನಂದರವರ
...ರ್ಥ ಪರಮಾರ್ಥ ಸಾಧನೆಗಳನ್ನು ಕುರಿತಾದ
ಬೋಧಾಮೃತ ಸಂಗ್ರಹ.

...ಚಿದಾಕಾಶ ಗೀತಾ
ಆತ್ಮ ಪ್ರಭಾವ

...ಪುಟಗಳಲ್ಲಿ, ಶ್ರೀ ಸ್ವಾಮಿಯವರು 1924ರಿಂದ ... ಆಗಾಗ್ಯೆ ಬೋಧಿಸಿದ ತತ್ವೋಪದೇಶಗಳನ್ನು ...ತಿಯೋ ಸುಲಭ ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ...ಗದದಲ್ಲಿ ಸುಂದರ ಅಕ್ಷರಗಳಲ್ಲಿ, ಶ್ರೀ ಸ್ವಾಮಿ... ಚಿತ್ರ ಮತ್ತು ಏಕಾಗ್ರತೆ ಅಧ್ಯಾಸಕ್ಕಾಗಿ ...ಗೊಡನೆ, ಉತ್ತಮವಾಗಿ ಮುದ್ರಿಸಿ, ದಪ್ಪ ...ನಲ್ಲಿ ಚಿನ್ನದ ಅಕ್ಷರಗಳಲ್ಲಿ ಕೆತ್ತಿದ ಹೆಸರುಳ್ಳ ...ವು. ಶ್ರೀ ಸ್ವಾಮಿಯವರು ಈ ಜಿಲ್ಲೆಯಲ್ಲಿ ...ರು. ಇವರಿಂದ ಭಕ್ತಿ, ಜ್ಞಾನ, ವೈರಾಗ್ಯ, ...ರುಷಾರ್ಥ ಸಾಧನೆ, ಆತ್ಮ ಶಕ್ತಿ, ಪ್ರಾಣಾ...ತ್ರ, ಯೋಗಸಾಧನೆ, ಸಾಕ್ಷಾತ್ಕಾರ ಇತ್ಯಾದಿ ...ಯೋಗ್ಯ ಉಪದೇಶವನ್ನು ಓದಿಕೊಳ್ಳಬೇಕೆಂದಿರು...ಕ್ಕೆ ಅತ್ಯುಪಯುಕ್ತವಾದ ಗ್ರಂಥ

...ರೂಪಾಯಿ ಮಾತ್ರ.

ವಿ. ಪಿ.ಯಿಂದ 1—4—0.

ಶೆಣೈ ಬ್ರದರ್ಸ್ ಎಂಡ್ ಕೋ.
ರಥಬೀದಿ, ಮಂಗಳೂರು,

ತ್ವರೆಮಾಡಿರಿ !!

1928ನೇ ವರುಷದ

...ಕೆಟ್ ಡೈರಿ

...ಇರುವ ದೊಡ್ಡ ಸೈಜಿನ ಡೈರಿ	೧೪ ಆಣೆ
...ಡೈರಿ	೧೦ ಆಣೆ
...ಳ ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
...ಡೈರಿ	೮ ಆಣೆ
...ಡೈರಿ.	೬ ಆಣೆ
...ಬ್ಯಾಂಡಿನ ಡೈರಿ	೬ ಆಣೆ

...ರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

...ಳಾಸ:— ಶಾರದಾ ಛಾಪಖಾನೆ,

...ಬೆಲೆಗೆ ಅಮಿತವಾದ ಬೆಳಕು.
...ರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯು ವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ ಯಿತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸು ಗಳು, ಪ್ರತಿ ಒಬ್ಬರ ಕೈಲಿ ಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ ...ವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್...ಗಳು, ಎಲೆಕ್ಟ್ರಿಕ್ ...ಜಾ ಹುಮ್ಮಗಳ ...ಗಳು, ಬೆಂಕಿಕ ...ರೆಟ್ ಹಚ್ಚಿಸುವ ... ಮತ್ತು ಇವುಗಳೆಲ ...ಮಾನುಗಳು ಸಹ ...ನಮ್ಮಲ್ಲಿ ದೊರೆಯು ...ಕ್ಷಿಸಿ ತೃಪ್ತಿಪಡಿರಿ.

...ರ ಕಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,
...ಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
ನಗರ್ತಪೇಟೆ, ಬೆಂಗಳೂರು ಸಿಟಿ

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಭರ್ಗ ಕ... ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ...

...ಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
... 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
...ಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೆಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds ,, 313,100—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore, 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ॥ ಅಂಚೆಹಾಸಲು ಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರಿಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. 'ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವರಿಗೆ ಮಾತ್ರ.

ಶ್ರೀ ಸತ್ಯನಾರಾಯಣ ಜ್ಯೂಯಲರಿ ಹಾಲ್.

ನಿಖರವಾದ ವಹಿವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುತರದ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅತ್ಯಂತ ಸರಸ್ ಬಂಗಾರದಿಂದ ತಯಾರಿಸಿದ ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟು ಜಾಜೂಕಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)

DUNLOP

...ಟಾಯರು.

...ಜನವಾದ

...ಯು ಮತ್ತು

...ಪಟ್ಟ ಗಟ್ಟಿ

fit Dunlop and be satisfied

ದಿ ಡನ್ಲೊಪ್ ... ಲಿಮಿಟೆಡ್,

... ರಾವಲ್‌ಪಿಂಡಿ,

... ಮದ್ರಾಸು,

Edited Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 3—18—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೩ನೇ ಶುಕ್ರವಾರ ಫೆಬ್ರವರಿ ೧೯೨೮. ಸಂಚಿಕೆ ೫

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

... ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

...tions Cover All Your Needs.
...HAS MADE FAMOUS.
...ವಾದ ಬಾಟ್ಲಿವಾಲಾ ಇವರ
...ಔಷಧಗಳು.
...ಭಂಗಾರದ ಪದಕಗಳು ದೊರೆತಿರುತ್ತವೆ.
... ರೂ. ೧.
...ಕೊಡುವ ಔಷಧ ಅಣೆ ೧೩.
... ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಅಣೆ ೧೨.
...ಗೆ ಅತ್ಯುತ್ತಮವಾದ ಔಷಧ. ಅಣೆ ೧೩
... ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ರೂ. ೧—೪—೦. ೧—೧೨—೦.
LIBERAL DISCOUNT TO TRADE
...PUR, BOMBAY.
...ವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...Road. P. O. Cadell Road, Bombay. No. 14.

...ರ ಲೋಧ್ರ
...ನಿವಾರಿಣಿ.
...ಸಾನವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...ಗೆ ಹೊಗಳುತ್ತಿರುವರು.
...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ
... ಹೆಚ್ಚು ಕಮ್ಮಿಯಾಗುವುದು, ಮುಟ್ಟು ನಾನಾ ಬಣ್ಣ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಗುಣವಾಗುವವು.
...ವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು
...ಸರೀ ಕುಟೀರಂ,
... P. B. 752, ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
... ಹಂಪನಕಟ್ಟಾ, ಮಂಗಳೂರು.

...ಟೇಬಲ್ ಟೈಂಪೀಸ್ ಇನಾಂ.
...ರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

...ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ... ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ಪ್ರಿಂಗ್) ... ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನ ...ವವು. ಮತ್ತು ಖರಾರು ಗಂಟೆಯನ್ನೂ ತೋರಿಸುವವು. ...ಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ...ಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ...ವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ...ಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳು...ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.
...ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.
...ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ. ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕ ೧೮೪೯ನೆಯ ಪ್ರಭವ ಸಂವತ್ಸರದ ಮಾಘ ಶು|| ೧೪ ಶನಿವಾರದಿಂದ ಪ್ರಭವ ಸಂ||ರದ ಮಾಘ ಬ|| ೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಧನು (ಪೆಂಡರ್)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ. ಉ.	ಅಸ್ತ
4	ಶನಿ	೧೪	೫೦.೪೬	ಪುನರ್ವಸು	೨೦.೩೧	೨೧	6.59	6.31
5	ರವಿ	○	೪೯.೩೩	ಪುಷ್ಯ	೨೦.೧೮	೨೨	6.59	6.32
6	ಸೋಮ	೧	೪೯.೩೦	ಆಶ್ಲೇಷಾ	೨೧.೧೪	೨೩	6.58	6.32
7	ಮಂಗ	೨	೫೦.೫೮	ಮಘಾ	೨೩.೨೮	೨೪	6.58	6.32
8	ಬುಧ	೩	೫೩.೩೧	ಪುಬ್ಬಾ	೨೬.೦	೨೫	6.58	6.33
9	ಗುರು	೪	೫೬.೧೬	ಉತ್ತರಾ	೩೧.೨೮	೨೬	6.58	6.33
10	ಶುಕ್ರ	೫	೬೦.೦	ಹಸ್ತಾ	೩೬.೨	೨೭	6.57	6.33

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
20	94—2	67—5	—	—
21	92 5	68—5	—	—
22	92—7	69—7	—	—
23	88—8	73—1	—	—
24	88—7	71—4	—	—
25	90—6	70—9	—	—
26	89—9	72—4	—	—
				127-21

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಡಿ	6—12	7—4
ಹೊಸ ಗುಡ್ಡ ...	6—8	6—12
ಸ.ಗ್ಗ ...	6—4	6—10
ಹೊಸ ರಾಶಿ ...	6—2	6—9
ಊರ ಅತ್ತರ್ ಬೆಳ್ತಿಗೆ ...	7—4	8—0
ರಂಗೂನು ಬೆಳ್ತಿಗೆ ಗೋಣಿ ೧ ...	13—8	14—0
ಎಕ್ಸ್ಪ್ರೆಸ್ ಬೆಳ್ತಿಗೆ ಮುಡಿ ೧ಕ್ಕೆ ...	7—0	7—4
ಗೋಧಿ ಗೋಣಿ ೧ಕ್ಕೆ ...	17—8	18—0
ಕುರುಕಗೋಣಿ ೧ಕ್ಕೆ ...	8—8	10—0
ಉದ್ದಿನಗೋಣಿ ೧ಕ್ಕೆ ...	13—8	14—0
ತೊಗರಿಗೋಣಿ ೧ಕ್ಕೆ ...	21—0	23—0
ತೊಗರಿಬೇಳೆ ಗೋಣಿ ೧ಕ್ಕೆ ...	20—0	23—0
ಉಪ್ಪು ಗೋಣಿ ೧ಕ್ಕೆ ...	14—0	14—8
ಹೆಸರುಗೋಣಿ ೧ಕ್ಕೆ ...	15—0	15—8
ಊರು ಬೆಲ್ಲ ಖಂಡಿ ೧ಕ್ಕೆ ...	35—0	45—0
ಉಪ್ಪು ಗೋಣಿ ೧ಕ್ಕೆ ...	4—0	4—4
ಕೊಪ್ರ ಖಂಡಿ ೧ಕ್ಕೆ ...	130—0	—
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	49—0	54—0
ಎಳ್ಳಿಂಡಿ ಖಂಡಿ ೧ಕ್ಕೆ ...	50—0	55—0
ಕೊಪ್ರ ಎಣ್ಣೆ ಮುಡಿ ೧ಕ್ಕೆ ...	8—4	8—6
ಎಳ್ಳೆಣ್ಣೆ ಮುಡಿ ೧ಕ್ಕೆ ...	7—0	8—0
ಜಡಿಂದ ಎಣ್ಣೆ ಬುದ್ದಿಗೆ ೧ಕ್ಕೆ ...	6—8	7—0
ದೋರಿಸ ಸಕ್ಕರೆ ಮುಡಿ ೧ಕ್ಕೆ ...	3—10	3—12
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8—0	8—4
ಸಾಸಿವೆ ಮುಡಿ ೧ಕ್ಕೆ ...	9—0	—
ಕೊತ್ತುಂಬರಿ ಮುಡಿ ೧ಕ್ಕೆ ...	7—12	8—0
ಕಾಫಿ ಖಂಡಿ ೧ಕ್ಕೆ ...	335—0	400—0
ಅಡಿಗೋಟು ಅಡಿಕೆ ಖಂಡಿ ೧ಕ್ಕೆ ...	145—0	170—0
ಕಾಳುಮೆಣಸು ಖಂಡಿ ೧ಕ್ಕೆ ...	420—0	450—
ಯಾಲಕ್ಕಿ ಮುಡಿ ೧ಕ್ಕೆ ...	50—0	54—0
ಗೇರುಬೀಜ ಮುಡಿ ೧ಕ್ಕೆ ...	3—12	4—4
ಚಕ್ಕೆಯ ಖಂಡಿ ೧ಕ್ಕೆ ...	37—8	40—0
ಹುಂಪ್ಪು ಹಗುರು ಮುಡಿ ೧ಕ್ಕೆ ...	15—0	15—0
ಹುಂಪ್ಪು ಪಾತ್ರಗಳು ಮುಡಿ ೧ಕ್ಕೆ	21—0	—
ಬೀಡಿ ಬೆಳ್ಳಿ ಸೇರು ೧ಕ್ಕೆ ...	15—0	—
ಹಿತ್ತಾಳೆ ಹಗುರು ಮುಡಿ ೧ಕ್ಕೆ ...	15—0	—
ಪವನು	13—7	—

ಪಂಚಮರ ಪರಿಷತ್ತು.

ಕಳೆದ ಆದಿತ್ಯವಾರ ಮದರಾಸಿನಲ್ಲಿ ಪಚ್ಚೆಯಪ್ಪ ಕೊಲೇಜಿನಲ್ಲಿ ಪಂಚಮರ ಪರಿಷತ್ತು ಜರಗಿತು. ಪರಿಷತ್ತಿಗೆ ಪ್ರಮುಖ ಗೃಹಸ್ಥರು ಬಂದಿದ್ದರು. ಸ್ವಾಮಿ ಸಹಜಾನಂದರ ಪ್ರಾರ್ಥನೆಯಿಂದ ಪರಿಷತ್ತು ಪ್ರಾರಂಭಿಸಿತು. ಮೊದಲು ಎಮ್. ಸಿ ಮದುರೈ ಪಿಳ್ಳೇಯವರು ಪ್ರಾರಂಭ ಭಾಷಣದಲ್ಲಿ 'ನಮ್ಮ ಊರಿಗೆ ಫೆಬ್ರವರಿ ೩ನೇ ತಾರೀಖಿನ ದಿನ ಸ್ಯಾಮನ್ ಕಮಿಶನು ಬರುವುದು. ಹಿಂದೂಗಳ ರಾಜಕೀಯ ಸ್ಥಿತಿ ಮೊದಲಾದವುಗಳನ್ನು ವಿಚಾರಿಸಲು ಬರುವ ಈ ಕಮಿಶನಿಗೆ ನಾವು ಆತಿಥ್ಯವನ್ನು ಕೊಟ್ಟು ಸನ್ಮಾನಿಸಬೇಕು' ಎಂದು ಹೇಳಿದರು.

ಅನಂತರ ಸ್ವಾಗತ ಮಂಡಳದ ಅಧ್ಯಕ್ಷರಾದ ಎನ್. ಶಿವರಾಜರು 'ಸೈಮನ್ ಕಮಿಶನು ಹಿಂದೂದೇಶಕ್ಕೆ ಬಂದು ನೆಲಸಿದ ಮೇಲೆ ನಮಗೆ ಬೇಕಾದವುಗಳ ಕುರಿತು ಅವರೊಡನೆ ವಾದಾಡಿ ಅವುಗಳನ್ನು ಪಡೆಯಬಹುದು, ಸ್ಯಾಮನ್ ಕಮಿಶನಿನೊಂದಿಗೆ ಕೂಡದಿದ್ದರೆ ಹಿಂದುಸ್ಥಾನಕ್ಕೆ ಹಾನಿಯನ್ನೇ ಉಂಟುಮಾಡಿದಂತಾಗುವದು. ಇದು ವರೆಗೆ ಪಂಚಮರಿಗೆ ವಿದ್ಯಾಭ್ಯಾಸವನ್ನು ಕಲಿಸಿ ಉನ್ನತಿಗೇರಿಸಿದವರು ಬ್ರಿಟಿಷರು. ಬ್ರಿಟಿಷರ ಕಡೆಯಿಂದ ಬರುವ ಈ ಕಮಿಶನಿಗೆ ನಾವು ಆಮಂತ್ರಣವನ್ನು ಕೊಟ್ಟರೆ ಅವರೇ ಮುಂದೆ ಪತಿತರ ಉದ್ಧಾರಕ್ಕಾಗಿ ಸಾಹಸಪಡುವರು. ಕಮಿಶನಿನವರಿಂದ ಕೃಷಿಕ್ಷೇತ್ರಗಳನ್ನು ಪಡೆದು ಅವುಗಳನ್ನು ಕೃಷಿಮಾಡಿ ಜೀವಿಸಲಿಕ್ಕೆ ಕಲಿತುಕೊಳ್ಳಬೇಕು. ಈಗ ಪಂಚಮರಲ್ಲಿ ವಿದ್ಯಾಭ್ಯಾಸವು ಕಡಿಮೆಯಾದುದರಿಂದ ವಿದ್ಯಾಭ್ಯಾಸವು ಇನ್ನು ಮುಂದಾದರೂ ಹೆಚ್ಚುಹೆಚ್ಚಾಗಿ ದೊರೆಯುವಂತೆ ಮಾಡಬೇಕು' ಎಂದರು. ಡಿ. ಆರ್. ಶ್ರೀನಿವಾಸನ್ ಇವರು ಪರಿಷತ್ತಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ಅಧ್ಯಕ್ಷರು ಮಾಡಿದ ಭಾಷಣದ ಸಾರಾಂಶವು ಈ ರೀತಿಯಾಗಿತ್ತು. 'ಬಂಧು ಭಗಿನಿಯರೆ ಸ್ಯಾಮನ್ ಕಮಿಶನು ಹಿಂದೂ ದೇಶದ ಜನರ ರಾಜಕೀಯ, ಆರ್ಥಿಕ ಸ್ಥಿತಿ ಮೊದಲಾದವುಗಳನ್ನು ವಿಚಾರಿಸಿ ಅದನ್ನು ತಿಳಿಸುವದಕ್ಕಾಗಿ ಅರಸರಿಂದಲೇ ಕಳುಹಿಸಲ್ಪಡುವದು. ಅಂತಹ ಕಮಿಶನಿಗೆ ಬಹಿಷ್ಕಾರವನ್ನು ಹಾಕುವದು ಎಂದೆಂದಿಗೂ ನಮ್ಮ ಕರ್ತವ್ಯವಲ್ಲ. ನಮಗೆ ಬೇಕಾದುದನ್ನು ಕಮಿಶನಿನವರ ಕೂಡೆ ನಾವು ಹೇಳಿ ಪಡೆಯಲು ಮುಂದೆ ಸುಲಭವಾಗುವುದು. ನಾವು ಹಿಂದೂ ಜನಾಂಗದ ೫ನೇ ೧ ಅಂಶವಿರುವೆವಾದರೂ ಹಿಂದೂಗಳು ನಮ್ಮನ್ನು ಅಪಹಾಸ್ಯಕ್ಕೆ ಗುರಿಮಾಡುವುದು ಅಸಹನೀಯವು. ಹಿಂದುಗಳ ವರ್ತನೆಯು ಕಡೆಗೆ ನಮ್ಮ ಮನಸ್ಸು ಉರಿದೇಳುವುದು. ಆದಕಾರಣ ನಮ್ಮ ಜನರನ್ನು ಒಟ್ಟುಕೂಡಿಸಿ ಕಮಿಶನನ್ನು ಆಮಂತ್ರಿಸಿ ನಮ್ಮ ಕುಂದುಕೊರತೆಗಳನ್ನು ಅವರೊಡನೆ ತಿಳಿಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ನಮಗೆ ಅನೇಕ ಸಂಗತಿಗಳು ಬೇಕಾಗಿವೆ. ಮೊದಲಾಗಿ ನಮಗೆ ಪ್ರತ್ಯೇಕ ಒಂದು ಒಫಿಸಿಯಲ್ ಇಲಾಖೆಯು ಇರಬೇಕು. ಎರಡನೆಯದಾಗಿ ನಮಗೆ ವಿದ್ಯೆಯು ಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಲ್ಪಡಬೇಕು. ವಾಕ್ಶಕ್ತಿಯನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಅನುಕೂಲತೆಯನ್ನು ಒದಗಿಸಬೇಕು. ಪಂಚಮರಲ್ಲಿ ಹೆಚ್ಚಿನವರು ಕೃಷಿಯ ವೃತ್ತಿಯನ್ನವಲಂಬಿಸುವವರಾದುದರಿಂದ ಒಂದು ಕೃಷಿಯ ಶಾಲೆಯನ್ನು ತೆರೆದು ಒಕ್ಕಲತನವನ್ನು ಕಲಿಸಬೇಕು. ಕೂಲಿಯ ಕೆಲಸದಲ್ಲಿ ಕೂಡ ತಕ್ಕ ಸುಧಾರಣೆಯನ್ನು ಮಾಡಬೇಕು. ಹಿಂದೂ ಧನಿಗಳ ಅಡಿಯಾಳಾಗಿ ಅವರ ಆಸ್ತಿಗಳನ್ನು ಅನುಭೋಗಿಸುತ್ತಿರುವಾಗ ಧನಿಗಳು ಕಾನೂನಿಗನುಸಾರವಾಗಿ ವರ್ತಿಸುತ್ತಿರಬೇಕು. ಹಳ್ಳಿಗಳಲ್ಲಿರುವ ಪಂಚಾಯತರು ಪಂಚಮರ ಅಭಿವೃದ್ಧಿಗೆ ಅಡ್ಡನಿಲ್ಲುವರು. ಈ ಪಂಚಾಯತರಿಂದ ಪಂಚಮರಿಗೆ ಸರಿಯಾದ ನ್ಯಾಯವು ಸಿಕ್ಕುವದಿಲ್ಲ. ಅಂತಹ ಪಂಚಾಯತರನ್ನು ತೆಗೆಯಬೇಕು. ಪಂಚಮರಿಗೆ ಮತಕೊಡುವ ಹಕ್ಕನ್ನು ಕರುಣಿಸಬೇಕು.

ಕಡೆಯದಾಗಿ ಹಿಂದೂಸ್ಥಾನದಿಂದ ಬ್ರಿಟಿಷ ಸೈನಿಕರನ್ನೂ ಬ್ರಿಟಿಷ್ ಅಧಿಕಾರಿಗಳನ್ನೂ ಹಿಂದಕ್ಕೆ ಕರೆಯದಂತೆ ಅರಸರೊಡನೆ ಬಿನ್ನವಿಸಿಕೊಳ್ಳತಕ್ಕದ್ದು. ಹಿಂದುಗಳ ಅಧಿಕಾರಕ್ಕೆ ನಮ್ಮನ್ನು ಗುರಿಪಡಿಸಲಿಕ್ಕೆ ಎಂದೆಂದಿಗೂ ಆಗದು" ಎಂದು ಅಧ್ಯಕ್ಷರು ಭಾಷಣವನ್ನಿತ್ತರು.

ಕಡೆಗೆ ಈ ಠರಾವುಗಳು ಸರ್ವಾನುಮತದಿಂದ ಮಂಜೂರಾದವು. ಈ ಪರಿಷತ್ತು ಹಿಂದೂದೇಶಕ್ಕೆ ಬರುವ ರೋಯಲ್ ಕಮಿಶನಿಗೆ ರಾಜಮರ್ಯಾದೆಯನ್ನು ಕೊಡುವದು. ಅವರ ಮುಖಾಂತರ ಅರಸರೂ ರಾಣಿಯರೂ ದೀರ್ಘಾಯುಗಳಾಗಬೇಕೆಂಬ ತಮ್ಮ ಇಚ್ಛೆಯನ್ನು ಸೂಚಿಸುವದು. ಈಗ ಇರುವ "ಪತಿತ ಜನರು" ಎಂಬುದರ ಬದಲಾಗಿ ಇನ್ನು ಮುಂದೆ "ಆದಿ ಹಿಂದುಗಳು" ಎಂದು ಸಂಬೋಧಿಸಬೇಕೆಂದು ಸರಕಾರದವರ ಕೂಡೆ ನಿವೇದಿಸುವದು. ಇಡೀ ಹಿಂದೂಸ್ಥಾನದ ಪಂಚಮರನ್ನು ಅಭಿವೃದ್ಧಿಪಡಿಸಬೇಕಾದುದರಿಂದ ಅದಕ್ಕೊಂದು ಕಮಿಟಿಯನ್ನು ಸ್ಥಾಪಿಸಬೇಕೆಂದು ಕೇಳಿಕೊಳ್ಳುವದು. ಪಂಚಮರ ಧುರೀಣರು, ಕಮಿಶನಿನವರೊಂದಿಗೆ ತಮ್ಮ ನ್ಯೂನಗಳನ್ನು ನಿವೇದಿಸುವರೆಯೂ ಕಮಿಶನಿನವರು ಅವುಗಳನ್ನು ಪಾರ್ಲಿಮೆಂಟ್ ಸಭೆಯ ಮುಂದೆ ತರುವರೆಯೂ ಈ ಪರಿಷತ್ತು ನಿರ್ಣಯಿಸುವದು. ಪತಿತ ಜನರ ಪರವಾಗಿ ಕಮಿಶನಿನವರನ್ನು ಸಮೀಪಿಸಲು ಒಂದು ಕಮಿಟಿಯನ್ನು ನಿಶ್ಚಯಿಸಲಾಯಿತು. ಈಗಿನ ಮುನಿಸಿಪಾಲಿಟಿ ಡಿಸ್ಟ್ರಿಕ್ಟ ಬೋರ್ಡ, ಲೆಜಿಸ್ಲೇಟಿವ್ ಕೌನ್ಸಿಲ್, ಎಸೆಂಬ್ಲಿ ಯಾವುದರಲ್ಲಿಯೂ ಪಂಚಮರಿಗೆ ಮೆಂಬರಿಕೆಯಿಲ್ಲದಿರುವುದು ದುಃಖಾಸ್ಪದವಾದುದರಿಂದ ಇನ್ನು ಮುಂದೆಯಾದರೂ ಅವರಿಗೆ ಮೆಂಬರಿಕೆಯು ದೊರೆಯುವಂತೆ ಸರಕಾರದವರೊಡನೆ ಈ ಪರಿಷತ್ತು ನಿವೇದಿಸುವದು. ಸರಕಾರಿ ಹುದ್ದೆಗಳನ್ನು ಪಂಚಮರಿಗೆ ಕೊಡಬೇಕು. ಸೈನಿಕರನ್ನು ಪಂಚಮರಿಂದಲೆ ಆರಿಸಬೇಕು. ಪಂಚಮರಿಂದಲೆ ಗ್ರಾಮಮುನಸೀಫರನ್ನು ಆರಿಸಬೇಕು. ಪಂಚಮರಿಗೆ ಕೃಷಿಕ್ಷೇತ್ರಗಳನ್ನು ಕೊಟ್ಟು ಅವರು ಕೃಷಿಮಾಡುವಂತೆ ಸಹಾಯಮಾಡಬೇಕು.

ಶಾಲೆಗಳಲ್ಲಿ ಪಂಚಮ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಂತಾಗಬೇಕು. ಪಂಚಮ ವಿದ್ಯಾರ್ಥಿಗಳಿಗೆ ಈಗ ಕೊಡುತ್ತಿರುವ ವಿದ್ಯಾರ್ಥಿವೇತನವನ್ನು ಹೆಚ್ಚಿಸಬೇಕು. ತೆಂಗಿಯ ಒಂದು ಅಂಶವನ್ನು ಪಂಚಮರಿಗಾಗಿಯೇ ಎಂದು ಸರಕಾರವು ಪ್ರತ್ಯೇಕವಾಗಿರಿಸಬೇಕು. ಗೋದಾವರಿ ಜಿಲ್ಲಾವನ್ನು ಪಂಚಮರಿಗೆ ಕೊಡಿಸಬೇಕು. ಪಂಚಮ ವಿದ್ಯಾರ್ಥಿಗಳನ್ನು ಅಸ್ಪೃಶ್ಯರೆಂದು ದೂರಮಾಡುವ ಹಳ್ಳಿ ಪಂಚಾಯತುಗಳಿಗೆ ಅಧಿಕಾರವನ್ನು ಇಳಿಸಬೇಕು. ಕೋರ್ಟಿನಲ್ಲಿ ಜೂರಿಗಳಾಗಲು ಪಂಚಮರಿಂದಲೇ ಜನರನ್ನು ಆರಿಸಬೇಕು. ಈ ಠರಾವುಗಳು ಮಂಜೂರಾಗಿ ಪರಿಷತ್ತು ಸಾಯಂಕಾಲ ೬ ಘಂಟೆ ಹೊತ್ತಿಗೆ ಸಮಾಪ್ತಿಹೊಂದಿತು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. ನಂಬ್ರ 9/1928.

ಕೆ. ಕೃಷ್ಣರಾವ್—ಅರ್ಜಿದಾರ

ಮತ್ತು

ಕೆ. ಶ್ರೀಪಾದರಾವ್—ರೆಸ್ಪೊಂಡೆಂಟ್

ಮಂಗಳೂರು ತಾಲೂಕು ಬಂಟ್ವಾಳ ಕಸಬೆಯಲ್ಲಿ ಮೃತಪಟ್ಟ ಕೊಂಬ್ರಬೈಲ ಉಮಾನಾಥರಾಯರ ಮ್ಯಾನರ ಮಗ ರತ್ನಾಕರನ ದೇಹದ ವ ಆಸ್ತಿಯ ಗಾರ್ಡಿಯನನಾಗಿ ತನ್ನನ್ನು ನೇಮಿಸಬೇಕಾಗಿ ಮೇಲ್ಕಂಡ ಅರ್ಜಿದಾರನು ಅರ್ಜಿ ಕೊಟ್ಟಿರುತ್ತಾನೆ. ಸದರಿ ಅರ್ಜಿಯು ತಾ. 20—2—1928ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಸಮ್ಮಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ವಾಯಿದೆಗೆ ಹಾಜರುಪಡಿಸತಕ್ಕದ್ದೆಂತ ಈ ಮೂಲಕ ತಿಳಿಸಿರುತ್ತದೆ.

Mangalore, 1—2—'28. } K. BHAVANISHANKER RAO. *Vakil for Petr.*

ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ,

O. P. 1/1928.

ಗೌರಮ್ಮ ಯಾನೆ ಶ್ರೀದೇವಿ—ಅರ್ಜಿದಾರಳು

ಮತ್ತು

ನರಸಿಂಹ ಆಚಾರ್ಯ ಕೂಡ—ಎದ್ರಿರು

ಅರ್ಜಿದಾರಳು ತನ್ನ ಮೃತಪಟ್ಟ ಮಗ ತ್ರಿವಿಕ್ರಮ ಆಚಾರ್ಯನು ಪಡುಬಿದ್ರಿ, ನರಸಿಂಹ ಭಟ್ರ ಮೇಲೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಪಡೆದ ಕ್ರಮನಂಬ್ರ 357/27ನೇ ಡಿಕ್ರಿ ಸಾಲವನ್ನು ವಸೂಲುಮಾಡುವರೆ ತಾನು ಹಕ್ಕುದಾರಳೆಂತಲೂ ಆ ಕುರಿತು ತನಗೆ ಸಕ್ಸೇಶನ್ ಸರ್ಟಿಫಿಕೇಟನ್ನು ಕೊಡೋಣಾಗಬೇಕೆಂತಲೂ ಅಪೇಕ್ಷಿಸಿ ಮೇಲ್ಕಂಡ ಅರ್ಜಿಯನ್ನು ದಾಖಲುಮಾಡಿರುತ್ತಾಳೆ. ಸದರಿ ಅರ್ಜಿಯು ಇದೇ ಬರುವ ಮಾರ್ಚಿ ತಿಂಗಳ 8ಕ್ಕೆ (8—3—1928) ತನಿಖೆಗೆ ಇಟ್ಟಿರುವುದರಿಂದ ಆ ಬಾಬಿನಲ್ಲಿ ಆಕ್ಷೇಪವುಳ್ಳವರು ಮೇಲ್ಕಾಣಿಸಿದ ಕೋರ್ಟಿನಲ್ಲಿ ಸದರಿ ತಾರೀಕಿನಲ್ಲಿ ಪೂರ್ವಾಹ್ನ 11 ಘಂಟೆಗೆ ಹಾಜರಾಗತಕ್ಕದ್ದು ಎಂತ ಈ ಮೂಲಕ ಸರ್ವಜನರಿಗೆ ತಿಳಿಸೋಣಾಗುತ್ತದೆ.

Udipi, 31—1—'28. } K. VITTAL NAYAK, *Vakil for Petitioner.*

ನೋಟೀಸು.

ಕೆಳಗೆ ಹೆಸರು ಕಾಣಿಸಿದ ನಾವು ಮೂರು ಜನರು ಕೂಡಿ ಚರಕ್ಕಲ್ಲ ತಾಲೂಕು ಪಯ್ಯನ್ನೂರ ಒಳಗೆಪಟ್ಟ ಕೊರ್ಕ್ನಾನಚೇರಿ ಬಜಾರಿನಲ್ಲಿ ಪಾಲಾಗಿ ನಡಿಸಿ ಬಂದ ವ್ಯಾಪಾರದಲ್ಲಿ 1103ನೇ ಕೊಲ್ಲ ವೃಶ್ಚಿಕ ಮಾಸ 16ರಲ್ಲಿ ಸರಿಯಾದ 1927 ದಶಂಬರ ತಾ. 2ಕ್ಕೆ ನಾವು ಪಾಲು ಬಿಟ್ಟಿದ್ದಾರೆಂತಲೂ ಆ ವ್ಯಾಪಾರದ ಸಮ್ಮಂಧ ಯಾರಿಗೂ ನಾವು ಹೊರಗೆ ಸಾಲವನ್ನು ಕೊಡಲಿಕ್ಕೆ ಇಲ್ಲವೆಂತಲೂ ಮೇಲೆ ಬಂದ ವೃಶ್ಚಿಕ ತಾ. 16ನೇ ನಂತರ 2ನೇ ನಂಬ್ರದವರೂ 3ನೇ ನಂಬ್ರದವರೂ ಪ್ರತ್ಯೇಕ ಯಾ ಪಾಲಾಗಿ ನಡಿಸಿ ಬರುವ ಲೇವಾದೇವಿಗೆ 2.3 ನಂಬ್ರದವರು ಹೊರತು 1ನೇ ನಂಬ್ರದ ವಿ. ಶೇಷಪ್ರಭು ಜವಾಬದಾರಿ ಆಗುವದಿಲ್ಲವೆಂತಲೂ 1ನೇ ನಂಬ್ರದವರ ಜವಾಬದಾರಿಯಿಂದ 2-3 ನಂಬ್ರದವರಿಗೆ ಯಾವ ಲೇವಾದೇವಿಯೂ ನಡಿಸುವರೆ ಯಾವ ಅಧಿಕಾರವು ಇಲ್ಲವೆಂತಲೂ ಈ ಮೂಲಕ ಎಲ್ಲಾ ಜನರಿಗೆ ಪ್ರಸಿದ್ಧವಾಗಿ ಗಜೇಟಿನಿಂದ ತಿಳಿಸಿರುತ್ತದೆ.

1. ವಿ. ಶೇಷ ಪ್ರಭು,
2. ದಾಸಪ್ಪೈಗಳವರ ಮಗ ವಾಸ್ತೇವ ಪೈ ರುಜು,
3. ಸುಬ್ರಾಯ ಮಲ್ಯರ ಮಗ ಮಂಜುನಾಥ

ಪಯ್ಯನ್ನೂರು ಮಲ್ಯರ ರುಜು.

ADVERTISE IN OUR WEEKLY
To Reach the Hearths & Homes
of India's Masses
For Particulars Apply to:
The Manager,
SWADESHABHIMANI,
MANGALORE.

ಬಹಿಷ್ಕರಿಸುವುದಕ್ಕಾಗಿ ಯಾವ ರೀತಿಯ ಹರತಾಳವನ್ನು ಆಚರಿಸಿರುವರೊ ಅದೇ ರೀತಿಯ ಹರತಾಳವನ್ನು ಮುಸಲ್ಮಾನರೂ ಆಚರಿಸತಕ್ಕದ್ದು ಎಂದು ಮೊದಲಾಗಿ ಅವರು ಭಾಷಣವನ್ನು ಮಾಡಿದರು.

ತದನಂತರ ರಾ| ಎಸ್. ಶ್ರೀನಿವಾಸ ಅಯ್ಯಂಗಾರರು ಚಲೋದಾಗಿ ಮಾತನಾಡಿದರು: ಹಿಂದೂ ಮುಸಲ್ಮಾನರ ಐಕ್ಯಕ್ಕೆ ಇದು ಯೋಗ್ಯವಾದ ಸಮಯವು. ಅಪಾಯದಲ್ಲಿ ಬಿದ್ದಾಗ ಜಾತಿಭೇದವನ್ನು ತ್ಯಜಿಸಿ ಹೇಗೆ ಒಕ್ಕಟ್ಟಿನಿಂದ ಸಹೋದರಭಾವದಿಂದ ಪರಸ್ಪರರು ವರ್ತಿಸಬೇಕೊ ಹಾಗೆಯೇ ಈಗಲೂ ನಡೆಯಬೇಕಾಗಿದೆ. ಸ್ಯಾಮನ್ ಕಮಿಶನ್ ಹಿಂದುಗಳಿಗೆ ಎಷ್ಟು ಶಾಪರೂಪವಾಗಿಯದೊ ಅಷ್ಟೇ ಶಾಪರೂಪವಾಗಿ ಮುಸಲ್ಮಾನರಿಗೂ ಇದೆ. ಇಂತಹ ಸಂದರ್ಭದಲ್ಲಿ ಹಿಂದು ಮುಸಲ್ಮಾನರು ಐಕ್ಯವಾಗದೆ ಇದ್ದರೆ ನಿಜವಾಗಿಯೂ ಅದು ಹಿಂದುಗಳೊಳಗಿನ ಅಥವಾ ಮುಸಲ್ಮಾನರೊಳಗಿನಸ್ವಾರ್ಥಸಾಧನೆಯನ್ನು ಹೊರಗೆಡಹುವುದು. ಉತ್ತರ ಹಿಂದೂಸ್ಥಾನದ ಮುಸಲ್ಮಾನ ಧುರೀಣರನೇಕರು ಹಿಂದೂಗಳೊಂದಿಗೆ ಬೆರೆತು ಇದೇ ತಿಂಗಳ ೩ನೇ ತಾರೀಕಿನ ದಿನ ಅಖಂಡ ಹರತಾಳವನ್ನು ಮಾಡಬೇಕೆಂದು ಪ್ರತಿಜ್ಞೆ ಮಾಡಿರುವಾಗ ದಕ್ಷಿಣ ಹಿಂದೂಸ್ಥಾನದವರು ಅವರ ಪಥವನ್ನು ಅವಲಂಬಿಸದೆ ಇದ್ದರೆ ಅದು ನಮ್ಮವರ ಪುಕ್ಕತನವನ್ನು ಬಯಲಿಗೆ ತರುವುದು, ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮುಸಲ್ಮಾನರು ಹೆಚ್ಚೆಚ್ಚಾಗಿ ಒಟ್ಟಾಗಲು ಪ್ರಾರಂಭವಾದುದರಿಂದ ಅಲ್ಲಿ ಸ್ಯಾಮನ್ ಕಮಿಶನಿನ ಬಹಿಷ್ಕಾರದ ಚಳವಳವು ಬೆಳೆಯುತ್ತಾ ಬರುತ್ತಿದೆ. ಸ್ವರಾಜ್ಯವು ಹಿಂದೂಗಳಿಗೂ ಮುಸಲ್ಮಾನರಿಗೂ ಬೇಕಾಗಿದೆ. ಮುಸಲ್ಮಾನರು ಸ್ಯಾಮನ್ ಕಮಿಶನನ್ನು ಆಮಂತ್ರಿಸಿದರೆ ಸ್ವರಾಜ್ಯವು ಸಿಕ್ಕುವಂತಿಲ್ಲ. ಸ್ಯಾಮನ್ ಕಮಿಶನು ಸ್ವರಾಜ್ಯದ ವಿರುದ್ಧವಾಗಿ ನಿರ್ಮಿಸಲ್ಪಟ್ಟಿದೆ. ಅದರ ಅಧಿಕಾರವು ಬೆಳೆದರೆ ಹಿಂದೂ ಮುಸಲ್ಮಾನರು ಮತ್ತೆ ಸ್ವರಾಜ್ಯದ ವಿಷಯವಾಗಿ ಮಾತೆತ್ತಲು ಕೂಡ ಸಾಧ್ಯವಿಲ್ಲ. ಈಜಿಪ್ತದಲ್ಲಿ ಮಿಲ್ನರ್ ಕಮಿಶನು ಬಂದಾಗ ಅಲ್ಲಿಯ ಮುಸಲ್ಮಾನರು ಯಾವ ರೀತಿಯಲ್ಲಿ ಅದಕ್ಕೆ ಬಹಿಷ್ಕಾರವನ್ನು ಹಾಕಿದ್ದರೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಿರಿ. ಈಗ ಇಲ್ಲಿಯ ಮುಸಲ್ಮಾನರೂ ಕೂಡ ಈ ಸ್ಯಾಮನ್ ಕಮಿಶನ್ನಿಗೆ ಬಹಿಷ್ಕಾರವನ್ನು ಹಾಕಿದರೆ ಮಾತ್ರ ಅವರ ಶೂರತನವು ವ್ಯಕ್ತವಾಗುವುದು. ಹಿಂದೂ ದೇಶದ ಮುಸಲ್ಮಾನರು ಎಷ್ಟು ವೀರರಿರುವರೆಂದು ಇತರ ಮುಸಲ್ಮಾನಿ ರಾಜ್ಯಗಳಿಗೆ ಪ್ರದರ್ಶಿಸಿದಂತಾಗುವುದು. ಪರಸ್ಪರ ಜಾತಿ ವೈಷಮ್ಯವನ್ನು ಮನಸ್ಸಿನಲ್ಲಿಟ್ಟು ತೋರಿಕೆಗೆ ಮಾತ್ರ ಹರತಾಳವನ್ನು ಆಚರಿಸುವ ಮನುಷ್ಯನನ್ನು ನಂಬಬಾರದು. ಅಂತವನು ಒಳಗಿಂದೊಳಗೆ ಕುತ್ತಿಗೆ ಕೊಯ್ಯುವ ವ್ಯಾಪಾರವನ್ನು ಮಾಡಿ ಕೆಡುಕನ್ನು ಉಂಟುಮಾಡುವನು. ಸಮಾಜದ ಉದ್ಧಾರಕ್ಕೆ ಕೆಡುಕನ್ನು ಉಂಟುಮಾಡಿದ ಭಯಂಕರ ಪಾಪಕ್ಕೆ ಗುರಿಯಾಗುವನು. ಅದು ಕಾರಣ ಹಾಗೆಂದಿಗೂ ಮಾಡದಿರಿ. ತ್ರಿಕರಣಪೂರ್ವಕವಾಗಿ ಸ್ವರಾಜ್ಯ ಸಾಧನೆಗೆ ಸೊಂಟ ಕಟ್ಟಿರಿ. ಹಿಂದುಗಳು ನಿಮ್ಮ ಸಹೋದರರೆಂದು ಭಾವಿಸಿ ಅವರೊಡನೆ ಪ್ರೀತಿಯಿಂದ ವರ್ತಿಸಿರಿ ಎಂದು ಅವರು ಭಾಷಣವನ್ನು ಮಾಡಿದರು.

ತರುವಾಯ ಲಕ್ನೋವಿನ ಮೌಲಾನಾ ಮೌಲ್ವಿ ಹುಸೇನರು, ಸ್ಯಾಮನ್ ಕಮಿಶನು ಯಾವ ರೀತಿಯಲ್ಲಿಯೂ ನಮಗೆ ಹಿತಕರವಾಗಿಲ್ಲವು. ಸ್ವರಾಜ್ಯ ಸಾಧನೆಗೆ ನಾವು ಇದು ವರೆಗೆ ಪಟ್ಟ ಕಷ್ಟಗಳ ದ್ವಿಗುಣಿತವಾದ ಕಷ್ಟಗಳನ್ನು ಈ ಸ್ಯಾಮನ್ ಕಮಿಶನನ್ನು ಆಮಂತ್ರಿಸುವದರಿಂದ ಅನುಭವಿಸಬೇಕಾಗುವದು. ಯಾವ ಮುಸಲ್ಮಾನನು ಈ ಕಮಿಶನನ್ನು ತಿರಸ್ಕರಿಸಿ ಅದಕ್ಕೆ ಬಹಿಷ್ಕಾರವನ್ನು ಹಾಕದೆ ಅದಕ್ಕೆ ಆಮಂತ್ರಣವನ್ನು ಕೊಡುವನೊ ಅಂಥವನು ನಿಜವಾಗಿಯೂ ಸ್ವರಾಜ್ಯ ಸಾಧನೆಗೆ ಆತುರನಾದ ಮುಸಲ್ಮಾನನಲ್ಲ. ಅಂಥವನು ಒಬ್ಬ ಸಮಾಜ ದ್ರೋಹಿಯು. ಸಮಗ್ರ ಹಿಂದೂಸ್ಥಾನವು ಒಬ್ಬ ಮನುಷ್ಯನಂತಾಗಿ ಇಲ್ಲಿಗೆ ಬರಲಿಕ್ಕಿರುವ ಕಮಿಶನಿಗೆ ಏಕಕಂಠದಿಂದ ಬಹಿಷ್ಕಾರವನ್ನು ಸಾರಬೇಕು. ಆಗ ಮಾತ್ರವೇ ಹಿಂದೀಯರ ಸತ್ವ ಪರೀಕ್ಷೆಯಾಗುವದು ಎಂದರು.

ತರುವಾಯ ಬಾಶೀರ ಹಾಮದ್ ಸಯ್ಯಾದರು ತಮಿಳಿನಲ್ಲಿ ಭಾಷಣಮಾಡಿದರು. ಸ್ಯಾಮನ್ ಕಮಿಶನೆಂಬುದು ಹಿಂದು ರಾಜ್ಯಕ್ಕೆ ಒಂದು ವಿಘ್ನವು. ಬೇರೆ ಬೇರೆ ಸಮಾಜದವರು ಒಟ್ಟುಗೂಡಲು ಪ್ರಯತ್ನಿಸುವಾಗಲೇ ಈ ಕಮಿಶನು ಬಂದು ಅವರೊಳಗೆ ವಿರೋಧವನ್ನು ಬಿತ್ತಿ ತನ್ನ ಅಧಿಕಾರವನ್ನು ಬೆಳಸುವದು. ಕಮಿಶನನ್ನು ಆಮಂತ್ರಿಸಿ ಮತ್ತೆ ಯಾವ ರೀತಿಯಲ್ಲಿ ಬೊಬ್ಬೆಯಿಟ್ಟರೂ ಸರಕಾರದವರು ನಮ್ಮ ಕೂಗನ್ನು ಕೇಳುವಂತಿಲ್ಲ. ನಮ್ಮ ಅಭಿಲಾಷೆಯನ್ನು ಪೂರೈಸುವಂತಿಲ್ಲ. ಮತ್ತೆ

(೯ನೇ ಪೇಜಿಗೆ ಮುಂದರಿಸಿಯದೆ.)

ಸ್ಫುಟ ವಿಚಾರಗಳು.

ಸ್ವಾಮಿ ಈಶ್ವರಾನಂದರವರು.

ಶ್ರೀ ಕುದ್ಮುಲ್ ರಂಗರಾಯರು ತಮ್ಮ ಹಲವು ವರ್ಷಗಳ ಪರಿಶ್ರಮದ ಮೇಲೆ ಸನ್ಯಾಸವನ್ನು ಸ್ವೀಕರಿಸಿ ಸ್ವಾಮಿ ಈಶ್ವರಾನಂದರೆಂಬ ಹೆಸರಿನಿಂದ ಪಾರಮಾರ್ಥದಲ್ಲಿ ತತ್ಪರರಿದ್ದುದು ಎಲ್ಲರಿಗೂ ತಿಳಿದೇ ಇದೆ. ಅವರು ತಾ. ೩೦ನೇ ಸೋಮವಾರ ದಿನ ವಿಧಿವಶರಾಗಿ ಮಂಗಳೂರು ಒಬ್ಬ ಮಹಾನ್ ಸಮಾಜ ಸೇವಕನನ್ನು ಕಳಕೊಂಡಿತು. ಶ್ರೀ ಕುದ್ಮುಲ ರಂಗರಾಯರ ಸಮಾಜಸುಧಾರಣೆಗಳ ಕಡೆಗಿನ ಪ್ರಯತ್ನಗಳು ಸಾಮಾನ್ಯ ಇತರ ಸುಧಾರಕರ ಪ್ರಯತ್ನಗಳಂತಿರಲಿಲ್ಲ. ಆ ಪ್ರಯತ್ನಗಳು ಕೇವಲ ಬಾಯಿಮಾತಿಲ್ಲದ ಕಾರ್ಯಕಾರಿಯಾದ ಕೆಲಸದಿಂದಲೇ ನಡೆಯುತ್ತಿದ್ದವು. ಹಿಂದೂಸ್ಥಾನದಲ್ಲಿ ಅಂತ್ಯಜೋದ್ಧಾರದ ಚಳವಳವು ಮಹಾತ್ಮಾಜೀಯವರ ಅಸಹಕಾರದ ನಂತರ ಇತ್ತೀಚೆಗೆ ಮಾತ್ರವೇ ಜನಜನಿತವಾಗಿದೆ. ಆದರೆ ಈ ಚಳವಳದ ಮೊದಲೇ ಶ್ರೀಯುವರು ಪತಿತೋದ್ಧಾರಕ್ಕಾಗಿ ಕೈನೀಡಿ ಶತ ಪ್ರಯತ್ನಗಳಿಂದ ಅವರಿಗೆ ಸಹಾಯವನ್ನು ಕೊಟ್ಟು ಅವರಿಗೆ ವಿದ್ಯಾದಾನ ಮಾಡಿ, ಅವರ ಉನ್ನತಿಯ ಮಾರ್ಗವನ್ನು ಹಾಕಿಕೊಡುತಿದ್ದರು. ಆ ಸಮಯದಲ್ಲಿ ಯಾರೊಬ್ಬರೂ ಪತಿತೋದ್ಧಾರದ ಮಾತನ್ನೆತ್ತಲಿಕ್ಕೆ ಕೂಡ ಧೈರ್ಯಪಡುತ್ತಿರಲಿಲ್ಲವೆಂಬುದನ್ನು ನೆನಸಿದರೆ, ಇವರ ಆಗಿನ ಕಾರ್ಯದ ಮಹತ್ವವೂ ದೂರದರ್ಶಿತೆಯೂ ವ್ಯಕ್ತವಾಗುವುದು. ಸಮಾಜ ಸುಧಾರಣೆಯು ಇವರಿಗೆ ಬರೇ ಬಾಯಿ ಮಾತಾಗಿರಲಿಲ್ಲ. ವಕ್ತೃತೆಯ ಶೋಭೆಯಾಗಿರಲಿಲ್ಲ; ಸಭಾಸ್ಥಾನಗಳ ಅನುಭೂತಿಯಾಗಿರಲಿಲ್ಲ. ಅದು ಹೃದಯದ ಚಿರ ಆಕಾಂಕ್ಷೆಯಾಗಿದ್ದಿತು. ಈ ಸುಧಾರಣೆಗಾಗಿ ಅವರು ಉಪದೇಶಮಾಡುತ್ತಿದ್ದುದು ಮಾತ್ರವಲ್ಲದೆ, ಕಾರ್ಯದಲ್ಲಿ ಅವರು ಮಾಡಿಸಿಯೂ ತೋರುತ್ತಿದ್ದರು ಅವರ ಜೀವನ ಚರಿತ್ರೆಯು ಸುಧಾರಣೆಯ ದೊಡ್ಡ ಚಿತ್ರವಾಗಿದೆ. ಆ ಚರಿತ್ರೆಯನ್ನೋದಿದರೆ ಸುಧಾರಣೆಯ ಮೇಲಿನ ಉಪನ್ಯಾಸವನ್ನು ಓದಿದಂತೆಯೇ ಇದೆ. ಆದುದರಿಂದಲೇ ಇತರರು ದೊಡ್ಡ ಬೊಬ್ಬಾಟದಿಂದ ಸುಧಾರಣೆಯನ್ನು ಸಾರಿದರೂ ನಿಷ್ಫಲವಾಗುತ್ತಿದ್ದಾಗ ಇವರ ಪ್ರಯತ್ನಗಳು ಶಾಶ್ವತ ಚರಿತ್ರೆಯನ್ನು ಕಟ್ಟಿಬಿಟ್ಟಿರುವುವು. ಅವರ ನಿಧನಕ್ಕಾಗಿ ಇಡೀ ಜಿಲ್ಲೆಯು ಶೋಕಿಸುವುದು

ಎಸೆಂಬ್ಲಿ ಅಧ್ಯಕ್ಷರು

ಹೆಚ್ಚಾಗಿ ಕೌನ್ಸಿಲು ಮತ್ತು ಎಸೆಂಬ್ಲಿಗಳ ಅಧ್ಯಕ್ಷರು ಸರಕಾರ ಪಕ್ಷದವರಾಗಿರುತ್ತಾರೆ. ಕೌನ್ಸಿಲುಗಳ ಕಾರ್ಯನಿರ್ವಾಹದಲ್ಲಿ ಈ ಅಧ್ಯಕ್ಷರು ಸರಿಯಾದ ವ್ಯವಸ್ಥೆಯ ಜವಾಬ್ದಾರಿಯುಳ್ಳವರಾಗಿರುವುದರಿಂದ ಇವರು ಕೌನ್ಸಿಲು ಕಾರ್ಯಕ್ರಮಗಳಲ್ಲಿ ಹಿತ ಅಹಿತಗಳನ್ನು ಮಾಡಬಲ್ಲರು. ಹಲವು ಕಡೆಗಳಲ್ಲಿ ಅಧ್ಯಕ್ಷರು ಸರಕಾರೀ ಪಕ್ಷದವರಾಗಿರುವುದರಿಂದ ಪ್ರಜಾ ಪಕ್ಷದ ಹಲವು ಸಮಸ್ಯೆಗಳಿಗೆ ಸರಿಯಾದ ಪ್ರಾಮುಖ್ಯತೆಯು ದೊರಕುವುದಿಲ್ಲ. ಆದರೆ ಎಸೆಂಬ್ಲಿಗೆ ಶ್ರೀಯುತ ಪಟೇಲರು ಚುನಾಯಿಸಲ್ಪಟ್ಟಂದಿನಿಂದ ಇವರು ಆದರ್ಶಕರವಾದ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿರುವರು. ಶ್ರೀ. ಪಟೇಲರು ಸ್ವಭಾವತಃ ಸಮರ್ಥವಾದಿಗಳು. ಅದರಲ್ಲೂ ಅವರ ಅಸಹಕಾರದ ಪ್ರಾರಂಭದ ಮೊದಲಿನಿಂದಲೂ ರಾಷ್ಟ್ರೀಯ ತೀಕ್ಷ್ಣ ಪಕ್ಷವನ್ನು ಸೇರಿದವರಾಗಿದ್ದು, ಅವರು ಎಲ್ಲರ ಮತದಿಂದ ಪುನಃ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು; ಮತ್ತು ಸರಕಾರದ ದಾಕ್ಷಿಣ್ಯವಿಲ್ಲದೇನೇ ಅವರು ಈ ವರೆಗೆ ಸಂಪೂರ್ಣ ನಿಷ್ಪಕ್ಷಪಾತವಾಗಿ ತಮ್ಮ ಕರ್ತವ್ಯಗಳನು ನಡೆಸಿರುವರು. ಈ ಬಾರಿ ಸರಕಾರವು ರಿಸರ್ವ ಬ್ಯಾಂಕ ಬಿಲ್ಲನ್ನು ಎಸೆಂಬ್ಲಿ ಮುಂದೆ ತರುವದಾಗಿದ್ದಿತು. ಆದರೆ ಇದರ ಮೊದಲು ಕಳೆದ ಅಧಿವೇಶನದಲ್ಲಿ ಸರಕಾರವು ಇದೇ ವಿಷಯದಲ್ಲಿ ಪ್ರತ್ಯೇಕ ಬಿಲ್ಲನ್ನು ತಂದು ಅದು ಕಮಿಟಿ ಮೂಲಕ ರೂಪಾಂತರ ಪಟ್ಟು, ಆ ಮೇಲೆ ಪುನಃ ಎಸೆಂಬ್ಲಿಯಲ್ಲಿ ಚರ್ಚಿಸಲ್ಪಟ್ಟು ಬಿಮ್ಮಂದೊನ್ನು ಇಂಡಿಯಾ ಸೆಕ್ರೆಟರಿಗಳ ಅನುಜ್ಞೆಯಿಂದ ಹಾಗೆಯೇ ಅಮಾನತು ಇಡಲ್ಪಟ್ಟಿದ್ದಿತು. ಅದರ ಇತ್ಯರ್ಥವಾಗದೆ ಈ ಹೊಸಬಿಲ್ಲು ಎಸೆಂಬ್ಲಿಯೊಳಗೆ ತರುವುದು ಎಸೆಂಬ್ಲಿಗೆ ಅಪಮಾನಕರವೆಂದು ಎಲ್ಲರ ಅಭಿಪ್ರಾಯವಾಗಿತ್ತು. ಆದರೂ ಬಿಲ್ಲನ್ನು ಇಂಡಿಯಾ ಗಜೇಟಿನಲ್ಲಿ ಪ್ರಕಟಿಸಿ ಅದನ್ನು ಈ ಬಾರಿಯ ಎಸೆಂಬ್ಲಿಯ ಅಧಿವೇಶನದಲ್ಲಿ ತರಲು ಸರಕಾರವು ಎಲ್ಲಾ ತಯಾರಿಯನ್ನು ಮಾಡಿದ್ದಿತು. ಆದರೆ ಶ್ರೀಯುತ ಪಟೇಲರು ಎಸೆಂಬ್ಲಿಯ ಅಧ್ಯಕ್ಷರಾಗಿರುವುದರಿಂದ ಅದರ ಹೆಳ್ಳು ಸಾಧನೆಗಳ ಕೆಲಸವು ಅವರ ಭಾಗದ್ದಾಗಿದ್ದು, ಅವರು ಸರಕಾರದೆಂದು ಯಾವ ದಾಕ್ಷಿಣ್ಯವನ್ನೂ ಇಡದೆ ಈ ಹೊಸ ಬಿಲ್ಲನ್ನು ಎಸೆಂಬ್ಲಿ ಮುಂದೆ ತರಲು ಅಡ್ಡಿಮಾಡಿ ಬಿಟ್ಟಿರುವರು. ಸುಲಭವಾಗಿ ತನ್ನ ಕರಾವನ್ನು ಮಂಜೂರು ಮಾಡುವೆನೆಂದು ನೆನಸಿದ್ದ ಸರ್. ಬೇಸಿಲ್ ಬ್ಲೆಕೆಟ್ಟರಿಗೆ ಅತೀ ನಿರಾಶೆಯಾಗಿ ಹೋಗಿಯದೆ. ಎಸೆಂಬ್ಲಿ ಅಧ್ಯಕ್ಷರು ರಾಷ್ಟ್ರೀಯ ಪಕ್ಷದವರಾಗುವುದರಿಂದ ಉಂಟಾಗುವ ಲಾಭವು ಇದರಿಂದ ತಿಳಿಯುವುದು.

ಮುಂಬೈಯ ಮಿ. ನರಿಮೋನರ ಮೇಲಿನ ಮಾನ ನಷ್ಟದ ಮೊಕದ್ದಮೆ.

ಕೋಟ್ಯಾಂತರ ರೂಪಾಯಿ ಜನರಿಂದ ಸಾಲ ಪಡೆದು ಮುಂಬೈ ಪ್ರಾಂತಿಕ ಸರಕಾರವು ಮುಂಬೈ ಅಭಿವೃದ್ಧಿಯ ಶಾಖೆಯೆಂಬುದೊಂದನ್ನು ಸ್ಥಾಪಿಸಿ ಮುಂಬೈ ಶಹರನ್ನು ಇನ್ನೂ ವಿಸ್ತರಿಸಿ ಅಭಿವೃದ್ಧಿಗೆ ತರುವ ಹೊಸ ಸ್ಕೀಮುಗಳನ್ನು ಜ್ಯಾರಿಯಲ್ಲಿ ತಂದಿತು. ಈ ಅಭಿವೃದ್ಧಿಯ ಕೆಲಸಗಳಿಗೆ ಬೇಕಾಗುವ ಕಬ್ಬಿಣ ಮುಂತಾದ ಲಕ್ಷಾವಧಿ ರೂಪಾಯಿ ಬೆಲೆಬಾಳುವ ಸಾಮಾನುಗಳನ್ನು ಕ್ರಯಕ್ಕೆ ಕೊಳ್ಳುವ ಸಮಯದಲ್ಲಿ ಸಂಬಂಧಪಟ್ಟ ಜವಾಬ್ದಾರ ಆಫೀಸರರು ಲಂಚ ತಿಂದು ಪ್ರಜಾ ದ್ರವ್ಯವನ್ನು ಅಪಹರಿಸುತ್ತಾರಾಗಿಯೂ, ಈ ಅಭಿವೃದ್ಧಿಯ ಸ್ಕೀಮು ಬಹಳ ನಷ್ಟಕರವಾಗಿ ಪರಿಣಮಿಸುತ್ತಿರುವುದರಿಂದ ಇದನ್ನು ನಿಲ್ಲಿಸಬೇಕಾಗಿಯೂ ಬಹಳವಾಗಿ ಚಳವಳ ವೆಬ್ಬಿಸಿದವರಲ್ಲಿ ಮಿ. ನರಿಮಾನರು ಪ್ರಮುಖರು. ಇವರ ಚಳವಳದಿಂದ ಇವರ ಆರೋಪಗಳ ತನಖೆಗಾಗಿ ಸರಕಾರವು ಒಂದು ಕಮಿಟಿಯನ್ನು ನೇಮಿಸಿತು. ಈ ಕಮಿಟಿಯ ಮುಂದೆ ಮಿ. ನರಿಮಾನರು ದೊಡ್ಡ ಹುದ್ದೇದಾರರು ಲಂಚ ತಿಂದ ವಿಷಯದಲ್ಲಿ ಆರೋಪಗಳನ್ನು ಕೊಟ್ಟಿದ್ದರ ಮೇಲೆ ಅಭಿವೃದ್ಧಿ ಶಾಖೆಯ ಇಂಜಿನಿಯರರಾದ ಮಿ. ಹಾರ್ವಿಯೆಂಬವರು ನರಿಮಾನರ ಮೇಲೆ ಮಾನ ನಷ್ಟದ ವ್ಯಾಜ್ಯವನ್ನು ಹೂಡಿದರು. ಇದರ ಎಲ್ಲಾ ಖರ್ಚನ್ನು ಸರಕಾರವೇ ವಹಿಸಿ ಮಿ. ಹಾರ್ವಿಯವರ ಪರವಾಗಿ ಬಹಳವಾಗಿ ಪ್ರಯತ್ನಿಸಿತು. ಮಿ. ಹಾರ್ವಿಯವರ ಬಗ್ಯೆ ಸರಕಾರಕ್ಕೆ ೫೦,೦೦೦ ರೂಪಾಯಿ ಖರ್ಚಾಯಿತು. ಆದರೆ ಕಟ್ಟಕಡೆಗೆ ಮಿ: ನರಿಮಾನರ ಮೇಲಿನ ಮಾನನಷ್ಟದ ದಾವೆಯು ತೆಗೆದುಹಾಕಲ್ಪಟ್ಟಿತು. ಮಿ. ನರಿಮಾನರು ಪ್ರಜಾಹಿತದ ದೃಷ್ಟಿಯಿಂದ ಪಟ್ಟ ಕಷ್ಟಗಳಿಗಾಗಿಯೂ, ನಷ್ಟಗಳಿಗಾಗಿಯೂ ಮುಂಬೈ ಜನರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಮಿ. ನರಿಮಾನರು ಕೊಟ್ಟ ಸೂಚನೆಗಳ ಮೇರೆಗೆ ಪ್ರಜಾಹಿತದ ದೃಷ್ಟಿಯಿಂದ ನಡೆಯುವ ಬದಲಿಗೆ ನರಿಮಾನರಿಗೇನೇ ತೊಂದರೆ ಕೊಡಲು ಪ್ರಯತ್ನಿಸಿದುದು ಆಶ್ಚರ್ಯಕರವಾಗಿರುವುದು. ಮತ್ತು ಇದು ಸರಕಾರದ ಮಾನಸಿಕತೆಯನ್ನು ತೋರುವುದು. ಸರಕಾರದ ಕೈಯಲ್ಲಿರುವ ಪ್ರಜಾದ್ರವ್ಯವು ಇಂತಹ ಹುದ್ದೇದಾರರಿಂದ ಯಾವ ರೀತಿಯಲ್ಲಿ ದುರ್ವ್ಯಯವೂ ದುರ್ವಿನಿಯೋಗವೂ ಆಗುತ್ತಿದೆಯೆಂಬುವುದು ಇದರಿಂದ ವ್ಯಕ್ತವಾಗುವುದು.

ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಸುಧಾರಿತ ಸ್ತ್ರೀ ವರ್ಗದಲ್ಲೊಬ್ಬರು; ಮತ್ತು ಸ್ತ್ರೀಸಮಸ್ಯೆಗಳ ಮೇಲೆ ಅವರು ಕೊಡಬಹುದಾದ ಅಭಿಪ್ರಾಯಗಳ ಸಮಸ್ಯೆಯ ತೀರ್ಮಾನಕ್ಕೆ ಆಧಾರವಾಗಿರತಕ್ಕವುಗಳಾಗಿವೆ. ಆದರೆ ಶ್ರೀಮತಿಯವರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವಾಗ ಸ್ತ್ರೀ ಪುರುಷರ ಸೌಹಾರ್ದ ಸಂಬಂಧದ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟಂತೆ ತೋರುವುದಿಲ್ಲ. ಉತ್ಸಾಹಕ ಸುಧಾರಕರಂತೆ ಶ್ರೀಮತಿಯವರೂ ಪಾಶ್ಚಾತ್ಯ ಜೀವನ ಕ್ರಮಗಳ ಆಧಾರದ ಮೇಲೆ ಕ್ರಾಂತಿಕಾರಕ ಸುಧಾರಣೆಗಳನ್ನೇ ಉದ್ದೇಶಿಸುವರಾಗಿರುವರು. ಪೌರ್ವಾತ್ಯ ಸಾಂಸಾರಿಕ ಕ್ರಮಗಳ ಸಂಪೂರ್ಣ ಬದಲಾವಣೆಗಳಾಗಲು ಬೇಕಾಗುತ್ತದೆ. ಕೆಲವು ದಿನಗಳ ಹಿಂದೆ ಶ್ರೀಮತಿಯವರು ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯದ ಬಗ್ಯೆ ಒಂದು ಉಪನ್ಯಾಸವನ್ನು ಕೊಟ್ಟಿದ್ದರು. ಸ್ತ್ರೀ ಸ್ವಾತಂತ್ರ್ಯವೆನ್ನುವುದು ಬಹಳ ಸುಲಭ. ಆದರೆ ಕಾರ್ಯದಲ್ಲಿ ಅದರಷ್ಟು ಕಠಿಣವೂ ಅಸ್ವಾಭಾವಿಕವೂ ಆದ ಸಮಸ್ಯೆಗಳು ಬೇರೆ ಇಲ್ಲ. ಸ್ತ್ರೀಸ್ವಾತಂತ್ರ್ಯವು ಇರಬೇಕು. ಆದರೆ ಸ್ತ್ರೀಯನ್ನು ಪುರುಷನಿಂದ ಸಂಪೂರ್ಣವಾಗಿ ವಿಂಗಡಿಸುವಂತಹ ಸ್ವಾತಂತ್ರ್ಯವು ಸಮಾಜ ಬಂಧನಗಳನ್ನು ಕಡಿದು ಸಮಾಜ ಹಾನಿಯನ್ನು ಮಾಡಲು ಕಾರಣವಾಗುವುದೇ ಹೊರತು ಯಾವ ಪಕ್ಷಕ್ಕೂ ಸುಖಕರವಾಗಿರಲಾರದು. ಆರ್ಥಿಕ ಸ್ವಾತಂತ್ರ್ಯವೆಂದರೆ ಸ್ತ್ರೀ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಅರ್ಥ ಉಳ್ಳದ್ದಾಗಿದೆ. ಅದು ಸ್ತ್ರೀ ಪುರುಷರ ಸಂಪೂರ್ಣ ವಿಚ್ಛೇದವನ್ನು ಸಾಧಿಸುತ್ತದೆ; ಅದು ಸ್ತ್ರೀ ಮತ್ತು ಪುರುಷರ ಪ್ರತ್ಯೇಕ ಸ್ವಾರ್ಥಗಳನ್ನು ರಚಿಸುತ್ತಿದೆ; ಅದು ಸ್ತ್ರೀ ಮತ್ತು ಪುರುಷರಿಗಾಗಿ ಬೇರೆ ಬೇರೆ ಹಿತಗಳನ್ನು ರಚಿಸಿ ಈ ಹಿತಗಳ ಪರಸ್ಪರ ವಿರೋಧಗಳಿಗೆ ಕಾರಣವಾಗುತ್ತದೆ. ಆದುದರಿಂದ ಇಂತಹ ಚಳವಳಗಳು ಸರಿಯಾಗಿ ಸಾಧಿಸಲ್ಪಟ್ಟು ಕೃತಕಾರ್ಯಗಳಾದರೆ, ಸಂಸಾರ ಜೀವನಕ್ಕೆ ಬಹಳ ಬಾಧಕ ಒದಗಲಿಕ್ಕೆ ಕಾರಣವುಂಟು ಇದರ ಪರಿಣಾಮವಾಗಿ ವಿವಾಹತ್ಯಾಗ (Divorce) ಮತ್ತು ಪುನರ್ವಿವಾಹಗಳು ಅಗತ್ಯಬೇಕಾಗಿ ವಿವಾಹದ ಪಾವಿತ್ರ್ಯವು ಕಳೆಗುಂದಿ ಅದು ಸಮಾಜದ ಒಂದು ನಿತ್ಯದ ಸಾಂಪ್ರದಾಯವಾಗಿ ಪರಿಣಮಿಸುವುದು. ಹಿಂದೂ ಸಮಾಜವು ಇಂತಹ ಹಾನಿಕರ ತತ್ವಗಳನ್ನು ಗ್ರಹಣಮಾಡಲಾರದೆಂದು ನಾವು ಆಶಿಸುವೆವು.

ನೋಟಗಳು.
NOTE...S.

ಸ್ಯಾಮನ್ ಕಮಿಶನ್ ಬರುವಾಗಲಿ ಹರತಾಳ. ಎಲ್ಲೆಲ್ಲಿಯೂ ಹರತಾಳ. ಬನಾರಿಸ್ ಅತ್ತಕಡೆ ಡಿಸ್ಟ್ರಿಕ್ಟ್ ಬೋರ್ಡ ಮ್ಯುನಿಸಿಪಾಲಟಿ ಸಹ ತಮ್ಮ ಆಫೀಸು, ಶಾಲೆಗಳು ಹರತಾಳವನ್ನು ಆಚರಿಸುವ ಠರಾವನ್ನು ತಮ್ಮ ಎಮರ್ಜೆಂಟ್ ಮಿಟಿಂಗಿನಲ್ಲಿ ಠರಾವನ್ನು ಪಾಸುಮಾಡಿ ಹರತಾಳವನ್ನು ಆಚರಿಸಿದರು.

• • • •

ಮುಖ್ಯವಾಗಿ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಹರತಾಳವನ್ನು ಆಚರಿಸಬೇಕೆಂದೂ ಪತ್ರಗಳ ಗಲಾಟೆ ಆದರೆ ದಕ್ಷಿಣ ಕನ್ನಡ ಜಿಲ್ಲೆಗೆ ಅದೊಂದು ಅಷ್ಟು ಅಗತ್ಯವಾಗಿ ಕಂಡು ಬರಲಿಲ್ಲವೆಂದು ಕಾಣುತ್ತದೆ.

• • • •

ಮಂಗಳೂರಿನ ಬಿಳಿ ಟೊಪ್ಪಿಯ ಮ್ಯುನಿಸಿಪಲ್ ಮತ್ತು ಡಿ. ಬೋರ್ಡು ಮೆಂಬರುಗಳಿಗೆ ಹರತಾಳವನ್ನು ಆಚರಿಸುವ ಅಗತ್ಯ ಕಂಡುಬರಲಿಲ್ಲ ಕಾಣುತ್ತದೆ. ರಾವ್ ಸಾಹೇಬ ದಿವಾನ್ ಬಹದ್ದೂರ, ಖಾನ್ ಬಹದ್ದೂರ ಇತ್ಯಾದಿಯವರಿಗೆ ಇದರ ಯೋಚನೆ ಇಲ್ಲ.

• • • •

ಸ್ಯಾಮನ್ ಕಮಿಶನ್ ಇಳಿಯುವಾಗಲೆ ಮಳೆಯೊಟ್ಟಿಗೆ ಇಳಿದಿದೆ. ಬಹುಶಃ ಇದರ ಕಾರ್ಯ ಸಹ ಮಳೆಯೊಟ್ಟಿಗೆನೆ ನಿಷ್ಪ್ರಯೋಜನವಿಲ್ಲದೆ ಹೋಗುತ್ತದೆಂದು ಕಾಣುತ್ತದೆ.

• • • •

ವೇಣೂರು ಗುಮಟಾಭಿಷೇಕ, ಗುಮಟಾಭಿಷೇಕ ಎಂದು ಡಂಗುರ ಸಾರಿದ್ದೆ ಬಂತು, ಜಾತ್ರೆಯನ್ನು ವಿಜೃಂಭಣೆಯಿಂದ ನಡಿಸುವ ಪುಣ್ಯ ಗುಮಟರಾಯನಿಗೆ ಇಲ್ಲದೆ ಹೋಯಿತು.

• • • •

ಮಳೆ ಬಂದದ್ದು ಬಸ್ಸು ಕಂಪೆನಿಗೆ ಸಾವಿರಪಾಲಿಗೆ ಒಳ್ಳೆದಾಯಿತು. ದೂಳೂ, ಜೋರು ಸ್ಪೀಡು ಎಂಬ ಗಲಾಟೆಲ ದಿವಸಕ್ಕೆ ದೂಳರಾಯರನ್ನು ಮಳೆರಾಯರು ಸಸ್‌ಪೆಂಡ್ ಮಾಡಿದರು. ಆ ಮಳೆರಾಯನಿಗೆ ಬಸ್ಸು ಕಂಪೆನಿಯವರ ಒಂದು ಥೆಂಕ್ಸ್.

• • • •

ಮಂಗಳೂರು ಮತ್ತು ಇತರ ದಕ್ಷಿಣ ಕನ್ನಡ ಜಿಲ್ಲೆಯ ಊರುಗಳಲ್ಲಿ ರೊಯಲ್ ಕಮಿಶನ್ ಬಹಿಷ್ಕಾರದ ಬಗ್ಗೆ ಹರತಾಳವನ್ನು ಆಚರಿಸುವ ಕೆಲವು ದಿವಸಗಳ ಮುಂಚೆ ಸಭೆ ಕೂಡಿದ್ದು ತಿಳಿದುಬರುವುದಿಲ್ಲ. ಆದರೆ ಮಂಗಳೂರಿನಲ್ಲಿ ನಿನ್ನೆಯ ದಿವಸ ನಾಟಕ ಕಂಪೆನಿಯವರು "ನಾಳೆ ನಾಟಕ ಉಂಟು ಎಲ್ಲರೂ ಹಾಜರಿರಬೇಕು" ಎಂಬಂತೆ ಒಂದು ಪ್ರಕಟಣೆ ಕೆಲವರ ಕೈಯಲ್ಲಿ ಕಂಡು ಬಂತು. ಇದೀಗ ನಮ್ಮ ಕಾಂಗ್ರೆಸ್ಸಿನವರ ಸಾಹಸ!

• • • •

ಕರ್ನಾಟಕಾಯುರ್ವೇದ ವಿದ್ಯಾಪೀಠ ಪರೀಕ್ಷೆಗಳು ಈ ವರ್ಷ ನಮ್ಮ ಮಂಗಳೂರಿನಲ್ಲಿ ನಡೆಯುತ್ತವೆಂತಲೂ ಶೃಂಗೇರಿಯಿಂದ ನಮಗೆ ಕಳುಹಿಸಿದ ಪ್ರಕಟಣೆಯಲ್ಲಿ ಖಾತ್ರಿಯಿಂದ ತಿಳಿದುಬರುತ್ತದೆ.

• • • •

"ಆಯುರ್ವೇದ ವಿದ್ವಾನ್"ರ ಬದಲಿಗೆ ಇನ್ನು "ಆಯುರ್ವೇದ ವೈದ್ಯ"ರು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬರುವರು. ರೋಗಿಗಳಿಗೆ ಬಹಳ ಆಶಾಜನಕ ವಿಷಯ!

• • • •

ಮಂಗಳೂರಿನಲ್ಲಿ ದಿವಸ ಹೋಗುತ್ತಾ ಮೋಟಾರುಗಳು ಪ್ಲೇಗ್ ರೋಗ ಬಂದಂತೆ ಏರುತ್ತವೆ. ಆದರೆ ಮಾಡುವದೇನು, ಟ್ರಾಫಿಕ್ ಕಂಟ್ರೋಲ್ ಮಾಡುವ ಬಗ್ಗೆ ನಿಲ್ಲುವ ಕೆಂಪು ಪಕಡಿ ಪೋಲಿಸಿರಿಗೆ ಎಡ ಯಾವುದು ಬಲ ಯಾವುದು ಎಂಬುದು ಗೊತ್ತೆ ಇಲ್ಲ. ಇಂಥವರಿಗೆ, ಪೋಲಿಸ್ ಅಧಿಕಾರಿಗಳು ಸ್ವಲ್ಪ ಟ್ರಾಫಿಕ್ ಕಂಟ್ರೋಲ್ ಮಾಡುವದು ಹಾಗೆ, ಎಡ ಯಾವುದು ಬಲ ಯಾವುದು ಎಂದು ಕಲಿಸುವದು ಉತ್ತಮ.

• • • •

ರಶ್ಯಾದಿಂದ ಹೊರಟು ಬಂದ ಜಟ್ಟಿ, ನಿರ್ಬಲ ಹಿಂದೀಯರನ್ನು ಗಳಿಗೆಯೊಳಗೆ ಕೆಡಹುವೆನೆಂಬ ವಿಶ್ವಾಸ. ಆದರೆ ಹಿಂದೂಸ್ಥಾನದಲ್ಲಿಯೂ ಬಲಶಾಲಿಗಳಿರುವರು. ನೈಸ್ ಮೇಯೊಳ ಕಣ್ಣಿಗೆ ಅವರು ಬೀಳದಿದ್ದರೆ ಇಲ್ಲವೆಂದಾಗುವುದಿಲ್ಲ. ರಶ್ಯಾದ ಜೆಬಿಸ್ಕಿ ಎಂಬವನು ಕೊಲ್ಹಾಪುರದ ಗಾಮು ನೆಂಬವನೊಡನೆ ಜಟ್ಟಿ ಕಾಳಗಕ್ಕೆ ನಿಂತನು. ಬರೇ ಅರ್ಧ ಮಿನಿಟನಲ್ಲಿಯೇ ಬಿದ್ದನು. ದೂರದಿಂದ ಬಂದ ಜಟ್ಟಿಗೆ ನಮ್ಮ ಸಹಾನುಭೂತಿಯಿದೆ.

[illegible]

ಈಗ ತಮ್ಮ ಅಭಿಪ್ರಾಯಗಳನ್ನು [illegible] ನೆಶನಲ್ ಪಕ್ಷದ ಪರವಾಗಿ ಲಾಲಾ ಲಜಪತರಾಯರು [illegible] ರಾವಿಗೆ ಅವರು ತಮ್ಮ ಒಪ್ಪಿಗೆಯನ್ನಿತ್ತಿರುವರು.

ರಿಸ್ಪೊನ್ಸಿವ್ ಕೊ-ಒಪರೇಶನ್ [illegible] ಮೇಲೆ ಲಾಲಾ ಲಜಪತರಾಯರು ಸ್ವರಾಜ್ಯಪಕ್ಷದಿಂದ ಪ್ರತ್ಯೇಕ ವಾದರು. ಅವರ ಧೋರಣವು ಸ್ವರಾಜ್ಯಪಕ್ಷ, ಮತ್ತು ರಿಸ್ಪೊನ್ಸಿವ್ ಕೊ-ಒಪರೇಶನ್ ಪಕ್ಷದ ಮಧ್ಯ ತಂಗತಿಯಾಗಿ [illegible] ಅವರೂ ರಿಸ್ಪೊನ್ಸಿವ್ ವಾದಿಗಳೂ ಸೇರಿ ಪ್ರತ್ಯೇಕ ಪಕ್ಷವನ್ನೇ ಸ್ಥಾಪಿಸಿದರು. ಈ ಪಕ್ಷದ ಪರವಾಗಿ ಎಸೆಂಬ್ಲಿಗೆ ಸ್ಯಾಮನ್ ಕಮಿಶನ್ನಿಗೆ ಸಂಪೂರ್ಣ ಬಹಿಷ್ಕಾರವನ್ನು ಸೂಚಿಸಿ ಲಾಲಾ ಲಜಪತರಾಯರು ಒಂದು ಠರಾವನ್ನು ತರುವರು. ಒಟ್ಟಿನಿಂದ, ಮುಸಲ್ಮಾನರ ಪರವಾಗಿ ಮಿ| ಜಿನ್ನಾರವರೂ, ನೆಶನಲ್ ಪಕ್ಷದ ಪರವಾಗಿ ಲಾಲಾ ಲಜಪತರಾಯರೂ, ಸ್ವರಾಜ್ಯ ಪಕ್ಷದ ಪರವಾಗಿ ಶ್ರೀ ಶ್ರೀನಿವಾಸ ಐಯಂಗಾರರೂ, ಮೊಡರೇಟ್ ಪಕ್ಷದ ಪರವಾಗಿ ಸರ್ ತೇಜ ಬಹದ್ದೂರ ಸಪ್ರೂರವರೂ ಹಿಮ್ಮತದವರಾಗಿರುವಾಗ, ಸ್ಯಾಮನ್ ಕಮಿಶನ್ನಿನ ಬಹಿಷ್ಕಾರವು ಸರ್ವ ಜನಾನುಮೋದಿತವಾಗಿಲ್ಲವೆಂಬುವುದು ಹಾಸ್ಯಾಸ್ಪದವಾಗಿದೆ.

[illegible]

— ಇಂಡಿಯನ್ 'ಶ್ರೀಡ' [illegible] ಫೆಬ್ರುವರಿ ೧೬ [illegible] ೬ ತಿಂಗಳ ರಜೆಯ ಮೇಲೆ ಹೋಗಿರುವರು. ಅವರ ಬದಲಾಗಿ ಮಿ| ಆಯರ್ ಗೋಡ್ಸ್ ಎಂಬವರು ಬರುವರು.

— ಕ್ರಕಾಟೊ ದ್ವೀಪದಲ್ಲಿ ಪ್ರಾರಂಭವಾದ ಜ್ವಾಲಾಮುಖಿಯು ಶಾಂತವಾಗುತ್ತಾ ಬರುತ್ತಿದೆ. ಆದರೆ ಭೂಮಿಯೊಳಗಿನ ಕಂಪವು ಇನ್ನೂ ನಿಲ್ಲಲಿಲ್ಲ.

— ಯುರೋಪಿನಿಂದ ಅಮೇರಿಕಕ್ಕೆ ವಾಯರ್‌ಲೆಸ್ ಟೆಲಿಗ್ರಾಫಿಯನ್ನು ಪ್ರಾರಂಭಿಸುವರು. ಇದಕ್ಕಾಗಿ ಅಮೇರಿಕದಲ್ಲಿ ಸೇವಿಲ್ಲೆ ಎಂಬ ಪಟ್ಟಣದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿರುವರು.

— ವಿಲಾಯತಿಯನ್ನು ಸಂದರ್ಶಿಸುವ ಹಿಂದೂಗಳಿಗಾಗಿ ಒಂದು ದೇವಾಲಯವನ್ನು ಅಲ್ಲಿ ನಿರ್ಮಿಸಬೇಕೆಂದು ಜಿ. ಡಿ. ಬಿರ್ಲಾರವರು ನಿಶ್ಚಯಿಸಿದ್ದರು. ಅದಕ್ಕಾಗಿ ಒಂದು ಸಂಘವನ್ನು ಈಗ ಪ್ರಾರಂಭಿಸಿರುವರು. ಇದಕ್ಕೆ ಚೆಯರ್‌ಮೇನರು, ವೈಸ್ ಚೆಯರ್‌ಮೇನರು, ಸೆಕ್ರಿಟರಿಗಳು ಮುಂತಾದವರೆಲ್ಲರೂ ಇರುವರು. ಹಿಂದೂಗಳಿಗೆ ಉಳಕೊಳ್ಳುವದಕ್ಕಾಗಿ ಅಲ್ಲೊಂದು ಮಂದಿರವನ್ನು ಕಟ್ಟಲು ಪ್ರಾರಂಭಿಸಿರುವರು. ಹಿಂದೂ ಆಯುವ ಮೇಲೆ ಅನುಸರಿಸಿ ಮಂದಿರವು ಪ್ರಾರಂಭವಾಗಿಯದೆ. ಎಪ್ರಿಲ್ ತಿಂಗಳಲ್ಲಿ ಕಟ್ಟಡವು ತಯಾರಾಗುವದು.

— ಅಮಾನುಲ್ಲಾ ರಾಜರು ಈಗ ಪೆರಿಸ್‌ನಲ್ಲಿರುವರು. ಲಂಡನಿನಲ್ಲಿರುವ ಮಹಮ್ಮದೀಯರ ಪರವಾಗಿ ಅವರಿಗೆ ಸಲಾಮುಗಳನ್ನು ಅರ್ಪಿಸಲು ಲಂಡನ್ ಮಸೀದಿಯ ಇಮಾಮರು ಪೆರಿಸಿಗೆ ಒಬ್ಬ ರಿಪ್ರಸೆಂಟೇಟಿವನ್ನು ಕಳುಹಿಸಿರುವರು.

— ಬಟೇವಿಯಾದ ಕಲ್ಲಿದಲ್ಲಿನ ಗನಿಯಲ್ಲಿ ಬೆಂಕಿಯುಂಟಾಗಿ, ಅದರ ಅನಾಹುತದಿಂದ ೩೫ ಜನರು ಮೃತಪಟ್ಟರು. ಅವರಲ್ಲಿ ೫ ಜನರು ಗನಿಯ ಪೋಲೀಸ್ ಇನ್ಸ್‌ಪೆಕ್ಟರರು ಇದ್ದರು.

— ಲಂಡನಿನಿಂದ ಅಂಗೋರಾ, ಇಲ್ಲಿಗೆ ಒಂದು ವಾಯರ್‌ಲೆಸ್ ಟೆಲಿಗ್ರಾಫಿಯನ್ನು ತೆರೆದಿರುವರು.

— ಅರ್ಲ್ ಓಫ್ ವಾರ್‌ವಿಕ್, ಇವನು ತನ್ನ ೭೫ನೇ ವರ್ಷ ಪ್ರಾಯದಲ್ಲಿ ಮೃತಪಟ್ಟನು. ಇವನು ಬಹಳ ಪ್ರಖ್ಯಾತಿಪಟ್ಟ ಮನುಷ್ಯನು. ೧೭ ವರ್ಷ ಪ್ರಾಯದವದಾಗಿರುವಾಗಲೇ ದಕ್ಷಿಣ ಅಫ್ರಿಕಕ್ಕೆ ಓಡಿ ಹೋಗಿ ಅಲ್ಲಿಯ ಸೈನ್ಯದಲ್ಲಿ ಸೇರಿದನು. ಹೀಗೆಯೇ ಮೇಲಕ್ಕೇರುತ್ತಾ ಬಂದು ಕೊನೆಗೆ ವಾರ್‌ವಿಕ್‌ನ ಅರ್ಲನಾದನು.

— ಮೊಸ್ಕೋವಿನ ಸಮೀಪದ ಅಜುವಾ ಸಮೀಪದಲ್ಲಿ ಬಿರುಗಾಳಿ ಮಳೆ ಬಂದು ಬಹಳ ನಷ್ಟವುಂಟಾಗಿದೆ. ಮಂಜು ಬೆಟ್ಟಗಳು ತೇಲಿ ಬಂದು ದೋಣಿಗಳೆಲ್ಲವೂ ಒಡದು ಹೋಗಿವೆ.

ಒಳದೇಶ ವರ್ತಮಾನ.

— ಹೈದರಾಬಾದಿನಲ್ಲಿ ಪ್ರಾರಂಭವಾದ ಪ್ಲೇಗ್ ರೋಗವು ಇನ್ನೂ ಶಾಂತವಾಗಿಲ್ಲ. ದಿನದ ಸರಾಸರಿ ಮರಣದ ಪಟ್ಟಿಯಲ್ಲಿ ಸಂಖ್ಯೆಗಳು ಏರುತ್ತಾ ಬರುತ್ತಿವೆಯಲ್ಲದೆ ಇಳಿಯುವದಿಲ್ಲ. ದಿನಕ್ಕೆ ೧೦೦ಕ್ಕೆ ಮಿಕ್ಕಿಯೇ ಮರಣಗಳಾಗುತ್ತವೆ. ಆರೋಗ್ಯಕ್ಕಾಗಿ ಸುಮಾರು ೭೫ ಸಾವಿರ ಜನರು ಪಟ್ಟಣವನ್ನು ತ್ಯಜಿಸಿರುವರು. ಹೆಲ್ತ್ ಡಿಪಾರ್ಟ್‌ಮೆಂಟಿನವರು ಪ್ಲೇಗ್ ರೋಗವನ್ನು ನಿಲ್ಲಿಸುವದಕ್ಕಾಗಿ ಹೊಸ ಹೊಸ ಉಪಾಯಗಳನ್ನು ಕಂಡು ಹಿಡಿಯುತ್ತಿರುವರು.

— ಕುಂಭಕೋಣದ ಮೋಟಾರ ಡ್ರೈವರನೋರ್ವನು ತನ್ನ ಮೋಟಾರನ್ನು ಜೋಡು ಎತ್ತುಗಳನ್ನು ಕಟ್ಟಿದ ಗಾಡಿಗೆ ತಾಗಿಸಿ ಒಂದು ಎತ್ತನ್ನು ಕೊಂದು ಗಾಡಿಯಲ್ಲಿದ್ದ ಇಬ್ಬರು ಹೆಂಗಸರನ್ನು ಅಪಾಯಕ್ಕೆ ಗುರಿಪಡಿಸಿದುದರಿಂದ, ಆತನಿಗೆ ನೂರು ರೂಪಾಯಿಗಳ ಜುರುಮಾನೆಯು ವಿಧಿಸಲ್ಪಟ್ಟು, ಆತನ ಲೈಸನ್ಸು ಹಿಂದೆಗೆಯಲ್ಪಟ್ಟಿತು. ಮೋಟಾರು ಡ್ರೈವರರು ಇನ್ನು ಮುಂದಾದರೂ ಬಹಳ ಜಾಗ್ರತೆಯಿಂದಿರಬೇಕಾಗಿದೆ.

— ಕುಂಭಕೋಣದ ಬೇಂಕಿನವರು ಲಾಭ ಹೆಚ್ಚಿದ್ದರಿಂದ ಪಾಲುಗಾರರಿಗೆ ಶೇಕಡಾ ೧೫ರಷ್ಟು ಡಿವಿಡೆಂಡ್, ಶೇಕಡಾ ೧ ಬೋನಸ್ ಮತ್ತು ಕೆಲಸದವರಿಗೆ ಒಂದೂವರೆ ತಿಂಗಳಿನ ಸಂಬಳವನ್ನು ಕೊಟ್ಟಿರುವರು.

— ಗುಂಟೂರಿನ ಯುವಕರು ಸಭೆಕೂಡಿ ಈ ಕೆಳಗಿನ ಠರಾವುಗಳನ್ನು ಮಂಜೂರುಮಾಡಿದರು. ೧೪ ಮತ್ತು ೧೮ ವರ್ಷಗಳ ಪ್ರಾಯಕ್ಕೆ ಬಾರದ ಹುಡುಗಿಯರು ಮತ್ತು ಹುಡುಗರು ಮದುವೆಯಾಗದಂತೆ ಕಾನೂನನ್ನು ಮಾಡಿ ಅದನ್ನು ಜ್ಯಾರಿಗೆ ತರತಕ್ಕದ್ದು.

— ಕಳೆದ ಹಿಂದೂ ಮುಸಲ್ಮಾನರ ಕಲಹದ ಸಮಯದಲ್ಲಿ ಹಿಂದೂಗಳು ಒಬ್ಬ ಫಕೀರನನ್ನು ಕೊಂದುದಕ್ಕಾಗಿ ಈಗ ನಾಗಪುರದ ಸೆಶನ್ ಜಡ್ಜರು ಎಂಟು ಜನರ ಪೈಕಿ ನಾಲ್ಕು ಜನರಿಗೆ ಫಾಶಿ ಶಿಕ್ಷೆಯನ್ನು ವಿಧಿಸಿದರು. ಉಳಿದ ನಾಲ್ಕು ಜನರಿಗೆ ಟ್ರಾನ್ಸ್‌ಪೋರ್ಟ ಶಿಕ್ಷೆಯನ್ನು ವಿಧಿಸಿದರು.

— ಮುಂಬಾಯಿಯ ಗವರ್ನರರು ಬಾಲ್ಲೂರು ಮತ್ತು ಧರ್ಮಪುರವನ್ನು ಸಂದರ್ಶಿಸಿದರು. ಧರ್ಮಪುರದಲ್ಲಿ ಅವರು ಒಂದು ಆಸ್ಪತ್ರೆಯನ್ನು ತೆರೆದಿರುವರು.

— ಸೇಲಮಿನಲ್ಲಿ ಹಿಂದೂ ಮುಸಲ್ಮಾನರ ಕಲಹಗಳು ಶಾಂತವಾಗಿ ಪರಸ್ಪರ ಸ್ನೇಹವು ನೆಲೆಗೊಂಡುದಕ್ಕಾಗಿ, ಮುನಿಸಿಪಲ್ ಕೌನ್ಸಿಲಿನವರು ಒಂದು ಸಭೆಕೂಡಿ ಹಿಂದೂ ಮುಸಲ್ಮಾನರ ಅಭಿನಂದನೆಯನ್ನು ಮಾಡಿದರು.

— ಮದರಾಸಿನ ಹಿಂದೀ ಪ್ರಚಾರ ಛಾಪಖಾನೆಯ ಕಂಪೋಸಿಟರನಾಗಿದ್ದ ಏಕಾಂಬರನೆಂಬವನನ್ನು ಮೂವರು ಕೊಲೆಗಾರರು ಹಗಲಿನಲ್ಲಿ ಮಾರ್ಗದಲ್ಲಿ ಸಂಚಾರ ಮಾಡುತ್ತಿರುವಾಗ ಹಿಂಸಿಸಿದರು. ಆಸ್ಪತ್ರೆಯಲ್ಲಿ ಏಕಾಂಬರನು ಮೃತಪಟ್ಟನು.

ಮಹಾತ್ಮಾ ಗಾಂಧಿಯವರು ಇನ್ನು ಮುಂದೆ ಗುಜರಾತಿ ವಿದ್ಯಾಪೀಠದಲ್ಲಿ ವಾಸಿಸುವರು. ಇದರಿಂದ ವಿದ್ಯಾರ್ಥಿಗಳ ಜಾಗ್ರತೆಯನ್ನು ಚೆನ್ನಾಗಿ ತೆಗೆದುಕೊಳ್ಳಲಾಗುವುದಂತೆ. ಸಾಯಂಕಾಲದ ಹೊತ್ತಿಗೆ ಆಶ್ರಮಕ್ಕೆ ನಡೆಯುವರು.

— ಕಲ್ಕತ್ತದಲ್ಲಿ ಪ್ರೆಸಿಡೆನ್ಸಿ ಕೋಲೇಜ್ ಯೂನಿಯನಿನ ಸೆಕ್ರಿಟರಿಯಾಗಿದ್ದ ಪ್ರಮೋದ ಕುಮಾರಘೋರನೆಂಬವನು ವಂದೇ ಮಾತರಮ್ ಪದ ಹಾಡಿ ಮತ್ತು ಮೂರು ಬಣ್ಣಗಳುಳ್ಳ ಸ್ವರಾಜ್ಯ ಧ್ವಜವನ್ನು ಎತ್ತಿದುದಕ್ಕಾಗಿ ತಾನು ಕ್ಷಮಾಪಣೆಯನ್ನು ಬೇಡಬೇಕೆಂದು ಮೆನೇಜಿಂಗ್ ಬೋಡಿಯವರು ಹೇಳಿದರು. ಇವನದಕ್ಕೆ ಒಪ್ಪದೆ ಇದ್ದುದರಿಂದ ಇವನನ್ನು ಸಸ್ಪೆಂಡ್ ಮಾಡಿರುವರು.

— ನೆಲ್ಲೂರಿನ ಬಿರುಗಾಳಿ ಮಳೆಯಿಂದ ಪೀಡಿತರಾದ ಜನರಿಗಾಗಿ ರಿಲೀಫ್ ಕಮಿಟಿಯವರು ಬಹಳ ಸಾಹಸಪಟ್ಟು ೩೦೦ ಸೀರೆಗಳನ್ನು ೨೫೦ ಕಂಬಳಿಗಳನ್ನೂ ೫೭೪ ಸಣ್ಣ ಕಂಬಳಿಗಳನ್ನು ಒಟ್ಟುಗೂಡಿಸಿರುವರು. ಇದರಿಂದ ಪೀಡಿತರಾದವರಲ್ಲಿ ಕೆಲವರಿಗೆ ಸುಖವಾಗುವದು. ಧರ್ಮದ ರೂಪದಲ್ಲಿ ಒಟ್ಟಿಗೆ ಸಿಕ್ಕಿದ ಹಣವು ರೂಪಾಯಿ ೧೦೩೫೮—೧೦—೦ ಇದರಲ್ಲಿ ಖರ್ಚಾಗಿ ಸದ್ಯಕ್ಕೆ ಉಳಿದಿರುವ ಹಣವು ೮೩—೧—೦ ಇದಕ್ಕೆ ಇನ್ನಷ್ಟು ವಂತಿಗೆಯನ್ನು ಕೂಡಿಸಿ ಫಂಡನ್ನು ಅಭಿವೃದ್ಧಿಪಡಿಸುವರು.

— ರೋಯಪುರದಿನ ಧರ್ಮಶಾಲೆಯ ಜಗಲಿಯ ಮೇಲೆ ಒಬ್ಬ ಕಾಶಿ ಸಾಹುಕಾರನ ಶವವು ಇತ್ತು. ಆತನ ಶವವನ್ನು ಪರೀಕ್ಷಿಸಿ ನೋಡುವಾಗ ಜೇಬಿನಲ್ಲಿ ಒಂದು ಪತ್ರವು ಸಿಕ್ಕಿತು. ತಾನು ೬ ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದನೆಂದೂ, ತನಗಿದ್ದ ಸಾಲವೆಲ್ಲವನ್ನೂ ತೀರಿಸಿರುವನೆಂದೂ, ೩೦೦ ರೂಪಾಯಿಗಳನ್ನು ಮಾತ್ರ ತನ್ನ ಶವಸಂಸ್ಕಾರಕ್ಕಾಗಿ ಇಟ್ಟಿರುವನೆಂದೂ ಪತ್ರದಲ್ಲಿ ಬರೆದಿತ್ತು. ಅಷ್ಟು ಹೊತ್ತಿಗೆ ಅವನ ಸೇವಕನು ಅಲ್ಲಿಗೆ ಬಂದನು. ವಿಚಾರಿಸಲಾಗಿ ಕಳೆದ ರಾತ್ರಿ ಯಜಮಾನನ ಅಪ್ಪಣೆಯಂತೆ ಸಮೀಪದ ಅಂಗಡಿಯಿಂದ ಒಂದು ಮದ್ದನ್ನು ತಾನು ಆತನಿಗೆ ತಂದುಕೊಟ್ಟಿದ್ದನೆಂದು ಅವನು ಹೇಳಿದನು. ಆ ಮದ್ದೇ ವಿಷವಾಗಿತ್ತು. ಶರೀರದ ಮೇಲೆ ಬೇಜಾರು ಹುಟ್ಟಿ ಸಾಹುಕಾರನು ಆತ್ಮಹತ್ಯವನ್ನು ಮಾಡಿಕೊಂಡನು.

— ಬೆಂಗಳೂರಿನಲ್ಲಿ ಮೇಜರ್ ವಿಲರ್‌ನೆಂಬ ಸೈನ್ಯದ ಅಧಿಪತಿಯು ಮೃತಪಟ್ಟನು. ಆತನ ಶವವನ್ನು ಸಂಸ್ಕಾರಕ್ಕಾಗಿ ಕೊಂಡೊಯ್ಯುವಾಗ ಬಹುಜನರು ನೆರೆದಿದ್ದರು.

— ಗುಜರಾತಿಗೆ ಒಂದು ಹೊಸ 'ಹಿಲ್ ಸ್ಟೇಶನನ್ನು' ಮಾಡುವರು. ಈ ಸ್ಟೇಶನು ಬೊಂಬಾಯಿ ಸಂಸ್ಥಾನದಲ್ಲಿರುವ ಯುರೋಪಿಯಾನರಿಗೆ ಬಹಳ ಪ್ರಯೋಜನಕಾರಿಯಾಗುವುದರಲ್ಲಿ ಸಂದೇಹವಿಲ್ಲ.

— ತಿರುವೆಲ್ಲೂರಿನಲ್ಲಿ ಕೊಲೆರಾ ರೋಗವು ಪ್ರಬಲವಾಗಿ ಬೆಳೆದಿರುತ್ತದೆ. ಹೆಲ್ತ್ ಆಫೀಸರರು ಬಹಳ ಜಾಗ್ರತೆಯನ್ನು ತೆಗೆದುಕೊಳ್ಳುತ್ತಿರುವರು.

— ಇದೇ ತಿಂಗಳ ೨೩ನೇ ಸಾಯಂಕಾಲ ಮದರಾಸಿನ ಗವರ್ನರ ದೊರೆಗಳಾದ ಲೋರ್ಡ್ ಗೋಶನರು ಸೈದಾಪೆಟ್ ಮುನಿಸಿಪಾಲಿಟಿಯ ಹೊಸ ಉದ್ಯಾವನದ ಪ್ರವೇಶ ಸಮಾರಂಭವನ್ನು ಜರಗಿಸುವರು.

— ಎಗ್ರಿಕಲ್ಚರಲ್ ಮಿನಿಸ್ಟರರಾದ ಎ. ರಂಗನಾಥ ಮುದಲಿಯಾರರು ೯ನೇ ತಾರೀಕಿನ ದಿನ ಮದರಾಸಿನಿಂದ ಹೊರಟು ಇರೋಡಿಗೆ ಬಂದು, ೧೨ನೇ ತಾರೀಕಿಗೆ ಕುಂಭಕೋಣಕ್ಕೆ ಹೋಗುವರು. ೧೫ನೇ ತಾರೀಕಿಗೆ ಪುನಃ ಮದರಾಸಿಗೆ ಹೋಗುವರು.

— ಭೂಪಾಲದ ಬ್ರಾಹ್ಮಣರೆಲ್ಲರೂ ಒಟ್ಟುಕೂಡಿ, ತಮಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಭೂಪಾಲ ರಾಜರಿಗೆ ಒಂದು ಮನವಿಯನ್ನು ಮಾಡಿಕೊಂಡಿರುವರು.

— ಕುಂಭಕೋಣದ ಮಧ್ಯ ಸಭೆಯವರ ಆಶ್ರಯದಲ್ಲಿ ಮಧ್ವನವಮಿಯ ಆಚರಣೆಯು ಸಾಂಗವಾಗಿ ನೆರವೇರಿತು. ದ್ವೈತಮತದ ಕುರಿತು ಭಾಷಣಗಳು ಹರಿಕಥೆಗಳು ಮೊದಲಾದುವುಗಳು ನಡೆದವು.

— ಮಹಾತ್ಮಾ ಗಾಂಧಿಯವರ ಮೂರನೇ ಮಗನಾದ ರಾಮದಾಸ ಗಾಂಧಿಯವರು ನಿರ್ಮಲಾದೇವಿಯೆಂಬವಳನ್ನು ಕಳೆದ ೨೭ನೇ ತಾರೀಕಿನ ದಿನ ಸತ್ಯಾಗ್ರಹ ಆಶ್ರಮದಲ್ಲಿ ಮದುವೆಯಾದರು. ಅಷ್ಟೊಂದು ಸಂಭ್ರಮವಿರಲಿಲ್ಲ. ಆಶ್ರಮದ ನಿವಾಸಿಗಳು ಮತ್ತು ವಧುವಿನ ಕೆಲವು ಸಂಬಂಧಿಕರು ಹಾಜರಿದ್ದರು. ವಧುವು ಕಾಥಿಯಾವಾಡಿನ ಮರ್ಯಾದಿತ ಕುಟುಂಬಕ್ಕೆ ಸೇರಿದವಳು. ಆಶ್ರಮದಲ್ಲಿಯೇ ವಿದ್ಯಾಭ್ಯಾಸ ಹೊಂದಿದವಳು. ಮದುವೆಯಾದ ಮೇಲೆ ಮಹಾತ್ಮರು ದಂಪತಿಗಳನ್ನು ಹರಸಿದರು.

— ರಂಗೂನಿನಿಂದ ಮಂಡಲೇ ಪಟ್ಟಣಕ್ಕೆ ರೈಲು ಹೋಗುತ್ತಿರುವಾಗ, ಇಂಜಿನು, ಎರಡು ಲಗ್ಗೇಜ್ ಗಾಡಿಗಳು, ೩ ಥರ್ಡ್ ಕ್ಲಾಸ್ ಗಾಡಿಗಳು ಒಂದು ಸಂಕದಿಂದ ಜಾರಿ ಕೆಳಗೆ ಬಿದ್ದವು. ಅನೇಕ ಜನರು ಮೃತರಾದರು. ಹಲವರಿಗೆ ಗಾಯಗಳಾಗಿವೆ.

— ಆರ್. ಎ. ಎಫ್. ಸೀಪ್ಲೇನ್ ವಿಮಾನಗಳು ಕಲ್ಕತ್ತಕ್ಕೆ ತಲಪಿರುವವು. ಅಲ್ಲಿಂದ ಅವು ರಂಗೂನ್, ಸಿಂಗಪೂರ್ ಮೊದಲಾದ ಪಟ್ಟಣಗಳಿಗೆ ಹೋಗುವವು.

— ಟ್ರಾವನ್ಕೂರಿನ ಮಹಾರಾಜರು ಮುಂಬಾಯಿಗೆ ಹೋಗಿರುವರು.

— ಐದು ವರುಷಗಳ ಹಿಂದೆ ಹಿಂದೂದೇಶದಲ್ಲಿ ಒಟ್ಟು ೬ ಸಾವಿರ ಸ್ಕೌಟರು ಇದ್ದರು. ಈಗ ಒಟ್ಟು ೧೦೭ ಸಾವಿರ ಸ್ಕೌಟರು ಇರುವರು.

— ತಿನ್ನವೆಲ್ಲಿಯಲ್ಲಿ ರೈಲು ಓಡುತ್ತಿರುವಾಗ ಕೆಲವು ಕುರಿ ಮೇಯಿಸುವ ಹುಡುಗರು ರೈಲಿಗೆ ಕಲ್ಲನ್ನು ಹೊಡೆದುದರಿಂದ ಪ್ರಯಾಣಿಕರಿಗೆ ಗಾಯಗಳಾದವು. ರೈಲನ್ನು ನಿಲ್ಲಿಸಿ ಹುಡುಗರನ್ನು ಹಿಡಿದಿರುವರು. ಅವರ ವಿಚಾರಣೆಯು ಕೋರ್ಟಿನಲ್ಲಿ ನಡೆಯುತ್ತಿದೆ.

— ದಕ್ಷಿಣ ಹಿಂದೂಸ್ಥಾನದ ಬ್ರಹ್ಮ ಸಮಾಜದ ೬೩ನೇ ವರ್ಧಂತಿಯನ್ನು ಜರಗಿಸುವ ನಿಮಿತ್ತ ಮದರಾಸಿನಲ್ಲಿ ಯುವತಿಯವರ ಒಂದು ಸಭೆ ಕೂಡಿತು. ರಾಜರಾಮ ಮೋಹನ ರೋಯಿಯವರ ಸೂತ್ರಗಳಿಗೆ ಅನುಸಾರವಾಗಿ ಸರ್ವರೂ ವರ್ತಿಸಬೇಕು ಎಂದು ಹಲವರ ಭಾಷಣಗಳಾದ ತರುವಾಯ ಸಭೆಯು ಕೊನೆಗಂಡಿತು.

— ಫ್ರೆಂಚ್ ಡಾಕ್ಟರ್ ಮಿ| ಥರೆಲ್ ಎಂಬವರು ಬ್ರಿಟಿಷ್ ಸರಕಾರದಿಂದ ಹಿಂದೂದೇಶಕ್ಕೆ ಕಳುಹಿಸಲ್ಪಟ್ಟಿರುವರು. ಇವರು ಕೊಲೆರಾ (ವಾಂತಿಬೇಧಿ) ರೋಗವನ್ನು ಗುಣಮಾಡುವುದರಲ್ಲಿ ನಿಪುಣರಂತೆ. ಶೇಕಡಾ ೬೨ರಿಂದ ೬ಕ್ಕೆ ವಾಂತಿಬೇಧಿಯಿಂದಾದ ಮರಣಗಳ ಸಂಖ್ಯೆಯನ್ನು ಇವರೇ ತಮ್ಮ ಔಷಧದ ಪ್ರಯೋಗದಿಂದ ಇಳಿಸಿದವರು.

— ೧೯೨೮-೨೯ನೇ ಇಸವಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಸಲುವಾಗಿ ೨೮ ಲಕ್ಷ ರೂಪಾಯಿಗಳ ಅಂದಾಜು ಖರ್ಚನ್ನು ಬೊಂಬಾಯಿ ಮುನಿಸಿಪಲ್ ಕೊರ್ಪೊರೇಶನಿನವರು ನಿರ್ಣಯಿಸಿರುವರು.

— ತಂಜಾವೂರಿನ ಟಪ್ಪಾಲು ಪೇದೆ ಯುನಿಯನಿನವರು ತಮಗೆ ಸಂಬಳ ಏರಿಸದೆ ಇದ್ದುದನ್ನು ನೋಡಿ ಈ ವರುಷವಾದರೂ ತಮಗೆ ಸಂಬಳವನ್ನು ಏರಿಸಲೇ ಬೇಕೆಂದು ಗವರ್ನಮೆಂಟ್ ಆಫ್ ಇಂಡಿಯದ ಅಧಿಕಾರಿಗಳಿಗೂ, ಲೆಜಿಸ್ಲೇಟಿವ್ ಎಸೆಂಬ್ಲಿಯ ಕೆಲವು ಮೆಂಬರರಿಗೂ ತಂತಿಗಳನ್ನು ಬಿಟ್ಟಿರುವರು.

— ಫೆಬ್ರುವರಿ ೩ನೇ ತಾರೀಕಿನ ದಿನ ಎಲ್ಲೆಲ್ಲಿಯೂ ಹರತಾಳವನ್ನಾಚರಿಸಬೇಕೆಂದೂ ತಂಜಾವೂರಿನಲ್ಲಿ ಜನರು ಒಂದು ಸಭೆ ಕೂಡಿ ದೃಢವಾಗಿ ನಿಶ್ಚೈಸಿದರು.

— ಫೆಬ್ರುವರಿ ೧ನೇ ತಾರೀಕಿನಿಂದ ಹೊನರೇಬಲ್ ಜಸ್ಟಿಸ್ ವಿ. ವಿ. ಶ್ರೀನಿವಾಸ ಅಯ್ಯಂಗಾರರು ತಾನು ಮದ್ರಾಸ್ ಹೈಕೋರ್ಟಿನಲ್ಲಿ ಟೆಂಪರರಿಯಾಗಿ ನಡಿಸಿಕೊಂಡು ಬರುತ್ತಿದ್ದ ಜಡ್ಜ ಶಿಫ್ ಕೆಲಸವನ್ನು ಬಿಟ್ಟಿರುವರು.

— ಬೆಂಗಳೂರಿಗೆ ಬಂದಿರುವ ಸರ್. ಪಿ. ಸಿ. ರೇಯರರು 'ಖಾದಿ'ಯ ಕುರಿತು ಚೆನ್ನಾದ ಒಂದು ಭಾಷಣವನ್ನು ಮಾಡಿದರು.

— ರಂಗೂನಿನ ಪ್ರಾಂತಿಕ ಸರಕಾರದವರು ಟೇಕ್ಸಿಗಳಿಗೆ ರೆಜಿಸ್ಟ್ರೇಶನ್ ಲೈಸನ್ಸುಗಳನ್ನು ಪಡೆಯುವಾಗಲೇ ಅವುಗಳನ್ನು ಇನ್ಶೂರ್ ಮಾಡಬೇಕೆಂದು ಒಂದು ಹೊಸ ಕಾನೂನನ್ನು ತಯಾರಿಸಿರುವರು. ಅದಕ್ಕಾಗಿ ಟೆಕ್ಸಿ ಡ್ರೈವರರೆಲ್ಲರೂ ಮುಷ್ಕರ ಹಾಕಿರುವರು. ಈ ಕಾನೂನನ್ನು ಹಿಂದೆಗೆಯಬೇಕೆಂದು ಡ್ರೈವರರೆಲ್ಲರೂ ಕೂಡಿ ಪೋಲಿಸ್ ಕಮಿಶನರಿಗೆ ಮನವಿಯನ್ನು ಮಾಡಿದರು. ಆದರೆ ಕಮಿಶನರು ತಾನು ಇದರಲ್ಲಿ ಪ್ರವೇಶವನ್ನೇ ಮಾಡಲಾರೆನೆಂದು ತಿರಸ್ಕರಿಸಿ ಬಿಟ್ಟರು.

— ಹಿಂದೂ ಧರ್ಮ ಮಂಡಲದ ಕಾರ್ಯದರ್ಶಿಯವರಾದ ಡಾಕ್ಟರ್ ಸುರ್ತಕರರು ಮಿಸ್ ಮಿಲ್ಲರಳನ್ನು ಹಿಂದುವನ್ನಾಗಿ ಮಾಡಬಹುದೆಂದು ಎಕ್ಸ್ ಮಹಾ ರಾಜರಿಗೆ ತಂತಿಯನ್ನು ಬಿಟ್ಟಿರುವರು.

ದಕ್ಷಿಣ ಕನ್ನಡ

ಸ್ವೀಕಾರ: — ವಿಶ್ವಕರ್ನಾಟಕದಲ್ಲಿ ಪ್ರಕಟಿತವಾದ "ಮಹಾತ್ಮಾಜಿಯವರ ಆತ್ಮವೃತ್ತ" (ಸತ್ಯಶೋಧನೆ) ಎಂಬ ಪುಸ್ತಕವು ನಮ್ಮ ಕೈಸೇರಿರುವುದು. ಇದರ ವಿಮರ್ಶೆಯನ್ನು ಬರುವ ಸಂಚಿಕೆಯಲ್ಲಿ ಕೊಡುವೆವು.

ಮಂಗಳೂರು: — ದಕ್ಷಿಣ ಕನ್ನಡಾ ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ತೃತೀಯ ವಾರ್ಷಿಕ ಮಹಾಸಭೆಯು ಕಾರ್ಕಳ ತಾಲೂಕು ವೇಣೂರು ಕಸಬೆಯಲ್ಲಿ ತಯಾರಿಸಿದ ಸಭಾ ಮಂಟಪದಲ್ಲಿ ಫೆಬ್ರುವರಿ ತಾ. ೧೨ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೮ಕ್ಕೆ ಜರಗಲಿಕ್ಕಿರುವುದರಿಂದ ಶ್ರೀ ಪರಮಾತ್ಮನ ಕೃಪೆಯಿಂದ ನೆರವೇರಲಿಕ್ಕಿರುವ ಈ ಮಹಾಸಭೆಗೆ ಸ್ವಜಾತಿ ಬಾಂಧವರೆಲ್ಲರೂ ದಯಮಾಡಿ ಬಂದು ಮಹಾಸಭೆಯನ್ನು ಯಶಸ್ವಿಯಾಗಿ ನಡಿಸಿಕೊಡಬೇಕಾಗಿ ಸದರಿ ಸ್ವಾಗತ ಮಂಡಲಿಯವರ ಸವಿನಯ ವಿನಂತಿ.

ಸ್ವಾಮಿ ಈಶ್ವರಾನಂದಜಿಯೆಂದು ಹೆಸರು ಪಡೆದು ಆಶ್ರಮವನ್ನು ಹೊಂದಿದ್ದ ಮಂಗಳೂರಿನ ಪ್ರಾಮುಖ ಗೃಹಸ್ಥರಾಗಿದ್ದ ರಾ| ಕುದ್ಮುಲ್ ರಂಗರಾಯರು ಕಳೆದ ಸೋಮವಾರ ಬೆಳಿಗ್ಗೆ ಹೃದಯದೌರ್ಬಲ್ಯದಿಂದ ಮೃತರಾದರು. ಇವರು ಅಸ್ಪೃಶ್ಯರ ಉದ್ಧರಣೆಗಾಗಿ ಸೊಂಟ ಕಟ್ಟಿದವರೂ ಡಿಪ್ರೆಸ್ಡ್ ಕ್ಲಾಸ್ ಮಿಶ್ಯನಿನ ಸ್ಥಾಪನಾಚಾರ್ಯರೂ ಆಗಿದ್ದರಲ್ಲದೆ ಪತಿತ ಜನರನ್ನು ಮೇಲಕ್ಕೆ ತರಬೇಕೆಂದು ಅತ್ಯಂತ ಸಾಹಸಪಟ್ಟು ಕೆಲಸವನ್ನು ಮಾಡುತ್ತಿದ್ದವರಲ್ಲಿ ಮೊದಲನೆಯವರು. ಇವರ ಮರಣಕ್ಕಾಗಿ ನಾವು ತುಂಬಾ ದುಃಖಪಡುವೆವು.

ಗವರ್ನಮೆಂಟ್ ಕೊಲೇಜಿನ ಅಧ್ಯಾಪಕರಾಗಿದ್ದ ಕಡಲೆ ವಿಟ್ಠಲರಾಯರು ಕಳೆದ ಶನಿವಾರ ದಿನ ಬೆಳಿಗ್ಗೆ ೯ ಘಂಟೆ ಸಮಯ ಅಕಾಸ್ಮಾತ್ತಾಗಿ ತನ್ನ ಮನೆಯಲ್ಲಿ ಹೃದ್ರೋಗದಿಂದ ಮೃತಪಟ್ಟರು. ಇವರ ಮರಣವನ್ನು ಕೇಳಿ ವಿಷಾದಪಟ್ಟು ಕೊಲೇಜಿನ ಪ್ರಿನ್ಸಿಪಾಲರಾದ ರಾ. ಜಿ. ಕೆ ಚೆಟ್ಟೂರರೂ ಕೊಲೇಜಿನ ಸ್ಟಾಫು ದಳದವರೂ, ಅವರ ಮನೆಗೆ ಬಂದು ತಮಗಾದ ದುಃಖವನ್ನು ಸೂಚಿಸಿದರು. ಇದರಿಂದ, ಇವರು ಕೊಲೇಜಿನ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪ್ರೀತಿಗೆ ಪಾತ್ರರಾಗಿದ್ದರೆಂದು ಸರಿಯಾಗಿ ವ್ಯಕ್ತವಾಗುವದು. ಇವರ ಆತ್ಮಕ್ಕೂ, ಕುಟುಂಬಕ್ಕೂ ಭಗವಂತನು ಶಾಂತಿಯನ್ನೀಯಲಿ.

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ವರ್ಷವರ್ಷವೂ ನಡೆಯುವಂತೆ ಈ ವರುಷವೂ ಕಳೆದ ಆದಿತ್ಯವಾರ ಬಹಳ ಸಂಭ್ರಮದಿಂದ ನಡೆಯಿತು. ಸೋಮವಾರ ದಿನ ಓಕುಳಿಯೂ ವಿಜೃಂಭಣೆಯಿಂದ ಜರಗಿತು.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕ ಸಭೆಯು ಬರುವ ೫ನೇ ತಾರೀಕಿನ ದಿನ ಸಂಜೆ ೫ ಘಂಟೆಗೆ ಕ್ಲಬ್ಬಿನ ವಠಾರದಲ್ಲಿ ಜರಗುವದು. ಅಂದೇ ಕ್ಲಬ್ಬಿನ ವಾರ್ಷಿಕ ವರ್ಧಂತಿ ಉತ್ಸವವೂ ಜರಗುವದು.

ಇಲ್ಲಿಯ ಗವರ್ನಮೆಂಟ್ ಕೊಲೇಜಿನ ವಾರ್ಷಿಕ ವರ್ಧಂತಿ ಉತ್ಸವವು ಬಾಸೆಲ್ ಮಿಶ್ಯನಿನ ಮೆನೇಜರರಾದ ಕೂಸರ್ ದೊರೆಗಳ ಅಧ್ಯಕ್ಷತೆಯಲ್ಲಿ ಕಳೆದ ಶನಿವಾರ ದಿನ ಆಚರಿಸಲ್ಪಟ್ಟಿತು. ಮೊದಲು ಪ್ರಾರ್ಥನೆಯಾಗಿ, ಅಧ್ಯಕ್ಷರು ಪತ್ನಿ ಸಮೇತರಾಗಿ ಆಸನವನ್ನಲಂಕರಿಸಿದ ತರುವಾಯ ಕೊಲೇಜಿನ ಪ್ರಿನ್ಸಿಪಾಲರು ವರದಿಯನ್ನೋದಿದರು. ತದನಂತರ ಕೆಪ್ಟನ್ ಅನಂತಯ್ಯನವರ ಭಾಷಣವಾಯಿತು. ಆ ಮೇಲೆ ಅಧ್ಯಕ್ಷರ ಪತ್ನಿಯವರು ನಿಪುಣರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು. ಆ ಮೇಲೆ ಅಧ್ಯಕ್ಷರ ಭಾಷಣವಾಯಿತು. ಕನ್ನಡ ಮತ್ತು ಇಂಗ್ಲಿಷ ನಾಟಕಗಳ ಅಭಿನಯವಾಗಿ ಕೃತಜ್ಞತಾ ವಂದನೆಗಳನ್ನು ಸಮರ್ಪಿಸಿದ ತರುವಾಯ ವರ್ಧಂತಿ ಉತ್ಸವವು ಕೊನೆಗೆಂಡಿತು.

ಕಳೆದ ಸೋಮವಾರ ಛೀಸ್ತ್ಯಾಪ್ತಮಿ ದಿನ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಪ್ರೊಫೆಸರ್ ರಾಮ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಶಾಲೆಯ ಸ್ಕೌಟ್ ಟ್ರೂಪಿನ ವಾರ್ಷಿಕೋತ್ಸವವು ಜರಗಿತು. ರಾಮ ಮೂರ್ತಿಯವರು ಸ್ಕೌಟರಿಗೆ ಇನಾಮುಗಳನ್ನು ಹಂಚಿದ ತರುವಾಯ ಮನೋರಂಜಕ ಭಾಷಣವನ್ನು ಮಾಡಿದರು. ನಮ್ಮ ಹಿರಿಯರಂತೆ ಹೆಸರು ಹೊಂದಲು ಯಾವ ರೀತಿಯಲ್ಲಿ ವರ್ತಿಸಬೇಕೆಂಬುದೇ ಭಾಷಣದ ವಿಷಯವಾಗಿದ್ದಿತು. ಮಂಗಳೂರಿನಲ್ಲಿ ಭಾರತ ಯುವಕ ಸಂಘದ ಶಾಖೆಯನ್ನು ತೆರೆಯಬೇಕೆಂದೂ ಅವರು ಭಾಷಣ ಮಾಡಿ, ಅಂಗಸಾಧನೆಯ ಆವಶ್ಯಕತೆಯೆಷ್ಟಿದೆ ಎಂಬುದನ್ನು ವಿವರಿಸಿ, ಒಂದು ಕಾರ್ಯಕಾರಿ ಮಂಡಳಿಯನ್ನು ಸ್ಥಾಪಿಸಿದರು. ಈ ಮಂಡಳಿಗೆ ಅಧ್ಯಕ್ಷರು ಶ್ರೀ ಎ. ಬಿ. ಶೆಟ್ಟಿ, ಉಪಾಧ್ಯಕ್ಷರು ಶ್ರೀ ಎಮ್. ರಾಮಕೃಷ್ಣ ಪುಂಜರು.

ತಾರೀಕು ೨೮—೧—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೬ ಮರಣಗಳಾದವು. ಈ ಪೈಕಿ ಸಿಡುಬಿನಿಂದ ೧, ಸನ್ನಿಪಾತ ಜ್ವರದಿಂದ ೨, ಮಲೇರಿಯಾದಿಂದ ೨, ಉದರ ರೋಗದಿಂದ ೩, ಶಿಶು ಮರಣ ೧, ಇತರ ಎಲ್ಲಾ ಕಾರಣಗಳಿಂದ ೧೭, ಜನನ ಸಂಖ್ಯೆಯು ಮಿಲೆಗೆ ಸರಾಸರಿ ೪೯.೧ರಂತೆ.

ಮಂಗಳೂರು ಸರ್ಕಲ್ ಟೆಂಪಲ್ ಕಮಿಟಿಯವರ ಸಭೆಯು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ರಾವ್‌ಸಾಹೇಬ್ ಎಮ್. ಅನಂತರಾವ್, ಬಿ. ಎ., ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿ, ಈ ಕಮಿಟಿಗೆ ಅಧ್ಯಕ್ಷರಾಗಿ ಕೆ. ಸದಾಶಿವರಾವ್ ಅಡಿಗರೂ, ಉಪಾಧ್ಯಕ್ಷರಾಗಿ ರಂಗನಾಥ ಪುಂಜರೂ ಆರಿಸಲ್ಪಟ್ಟರು.

ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಬರುವ ಚುನಾವಣೆ ಸಂದರ್ಭದಲ್ಲಿ ಎಲ್ಲಾ ಸರ್ಕಲುಗಳಿಗೆ ಉಮೇದುವಾರರಾಗಿ ನಿಲ್ಲುವರೆ ಅಪೇಕ್ಷೆ ಪಡುವದರಿಂದಲೂ, ೧೯೨೭ನೇ ಇಸವಿಯ ದಶಂಬರ ೨೨ನೇ ತಾರೀಕಿನ ನಂಬ್ರ ೩೬೮೯ನೇ ಗವರ್ನಮೆಂಟ್ ಹುಕುಮಿನ ನಂಬ್ರ ೩೭ನೇ ಕ್ರಮದ ಪ್ರಕಾರ ಸದರಿ ತಾಲೂಕು ಬೋರ್ಡಿನವರು ಈ ಕೆಳಗೆ ದಸ್ಕತು ಮಾಡಿದವರನ್ನು ಚುನಾವಣೆ ಸಂಬಂಧವಾದ ಎಲ್ಲಾ ಸಂಗತಿಗಳಲ್ಲಿ ಪ್ರೆಸಿಡೆಂಟರವರ ಕೆಲಸಗಳನ್ನು ನಡಿಸಲಿಕ್ಕೆ ನೇಮಿಸಿರುವದರಿಂದಲೂ ಪುತ್ತೂರು ತಾಲೂಕು ಬೋರ್ಡಿನ ಮೆಂಬರರ ಸ್ಥಾನಗಳಿಗೆ ವಾಯಿದೆ ಗುಜಾರಾಗುವ ಮೆಂಬರುಗಳ ಬದಲಿಗೆ ಚುನಾಯಿಸುವ ವಿಷಯ ಈ ಕೆಳಗಿನ ತಪಶೀಲುಗಳನ್ನು ಪ್ರಕಟಿಸಿಯದೆ.

ಚುನಾವಣೆ ಮಾಡಬೇಕಾದ ಸಂಖ್ಯೆ ೧೧. ಪುತ್ತೂರು ಸರ್ಕಲ್ ೨, ಉಪ್ಪಿನಂಗಡಿಗೆ ೩, ಬೆಳ್ತಂಗಡಿಗೆ ೩, ಸುಳ್ಯಕ್ಕೆ ೩, ಶಿಫಾರಸುಪಟ್ಟಿಗಳನ್ನು ಫೆಬ್ರುವರಿ ತಾರೀಕು ೧೪ರಲ್ಲಿ ಪುತ್ತೂರು ತಾಲೂಕು ಬೋರ್ಡು ಆಫೀಸಿನಲ್ಲಿ ಅಪರಾಹ್ನ ಘಂಟೆ ೨-೩೦ರಿಂದ ೪.೩೦ರ ವಳಗೆ ಅರ್ಪಿಸತಕ್ಕದ್ದು. ಓಟುಗಳನ್ನು ಮಾರ್ಚಿ ತಾರೀಕು ೧೯ರಲ್ಲಿ ಪೂರ್ವಾಹ್ನ ಘಂಟೆ ೭ರಿಂದ ಅಪರಾಹ್ನ ಘಂಟೆ ೬ರ ವರೆಗೆ ಪುತ್ತೂರು ಸರ್ಕಲಿನ ಬಗ್ಗೆ ಪುತ್ತೂರು ಬಂಗ್ಲೆ, ವಿಟ್ಲ ಇನ್ಸ್‌ಪೆಕ್ಶನ್ ಶೆಡ್ಡಿನಲ್ಲಿಯೂ, ಉಪ್ಪಿನಂಗಡಿ ಸರ್ಕಲಿನ ಬಗ್ಗೆ ಉಪ್ಪಿನಂಗಡಿ ಬಂಗ್ಲೆ ಕಡಬ ಮತ್ತು ಬರೆಪಾಡಿ ಇನ್ಸ್‌ಪೆಕ್ಶನ್ ಶೆಡ್ಡುಗಳಲ್ಲಿಯೂ ಬೆಳ್ತಂಗಡಿ ಸರ್ಕಲಿನ ಬಗ್ಗೆ ಬೆಳ್ತಂಗಡಿ ಬಂಗ್ಲೆ ಮತ್ತು ಕೊಕ್ಕಡ ಇನ್ಸ್‌ಪೆಕ್ಶನ್ ಶೆಡ್ಡಿನಲ್ಲಿಯೂ ಸುಳ್ಯ ಸರ್ಕಲಿನ ಬಗ್ಗೆ ಸುಳ್ಯ ಛತ್ರ, ಬೆಳ್ಳಾರೆ ಮತ್ತು ಗುತ್ತಿಗಾರು ಇನ್ಸ್‌ಪೆಕ್ಷನ್ ಶೆಡ್ಡುಗಳಲ್ಲಿಯೂ ತೆಗೆಯಲಾಗುವದು. ಓಟುಗಳನ್ನು ಮಾರ್ಚಿ ೨೨ರಲ್ಲಿ ಅಪರಾಹ್ನ ಘಂಟೆ ೩ಕ್ಕೆ ಪುತ್ತೂರು ತಾಲೂಕು ಬೋರ್ಡು ಆಫೀಸಿನಲ್ಲಿ ಲೆಕ್ಕಮಾಡೋಣಾಗುವದು.

ರಾಷ್ಟ್ರೀಯ ಸಭೆಯ ಕೋರಿಕೆಯಂತೆ ಈ ದಿನ ಸೈಮನ್ ಕಮಿಶನಿನ ಬಹಿಷ್ಕಾರದ ಬಗ್ಗೆ ಹರತಾಳದ ಆಚರಣೆಯು ಮಂಗಳೂರು ಪಟ್ಟಣದಲ್ಲಿಯೂ ಉತ್ತಮರೀತಿಯಿಂದ ಜರಗಿತು. ಸೈಮನ್ ಕಮಿಶನ್ ಬಹಿಷ್ಕಾರದ ಪರವಾಗಿ ಸಾಯಂಕಾಲ ಇಲ್ಲಿಯ ಸ್ಟೆಂಡಾರ್ಡ್ ಟಾಯಿಲ್ ಕಂಪೆನಿಯ ಕಟ್ಟೋಣದಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಶ್ರೀ ವಕೀಲ್ ಮಾಧವರಾಯರು ಬಹಿಷ್ಕಾರದ ಠರಾವನ್ನು ಸಭೆಯ ಮುಂದಿರಿಸಿ, ವಿಷಯವನ್ನು ವಿವರಿಸಿ ಹೇಳಿದರು. ಶ್ರೀ ಧರ್ಮದೇವ ಸಿದ್ಧಾಂತಾಲಂಕಾರರು ಅದನ್ನು ಅನುಮೋದಿಸಿ ಮಾತನಾಡಿದರು. ಅನಂತರ ಹೈಕೋರ್ಟ್ ವಕೀಲ್ ಯು. ಸಿ ಕೃಷ್ಣಭಟ್ಟರು ಇದನ್ನು ಸಮರ್ಥಿಸಿದರು. ಶ್ರೀ ಕವಿ ಪಣಂಬೂರು? ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಶ್ರೀ ಅರೆಬೈಲು ಭೋಜರಾಯರು ಈ ಕಾರ್ಯದಲ್ಲಿ ಮುಂದೆಯೂ ಜನರ ಸಹಕಾರವನ್ನಪೇಕ್ಷಿಸಿ ವಿನಂತಿಮಾಡಿಕೊಂಡರು. ಕೊನೆಗೆ ಅಧ್ಯಕ್ಷರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಕಾಸರಗೋಡು:(ನಮ್ಮಣೆಗೆ ಬೆಳ್ಳೂರು) ಇಲ್ಲಿ ಸಿಡುಬು ರೋಗವು ತಲೆದೋರಿಯದೆ. ಶ್ರೀಮಾನ್ ಓಲೆಸರಿ ವೆಂಕಟಕೃಷ್ಣ ಕಡಂಬಳಿತ್ತಾಯರು ಈ ರೋಗಕ್ಕೆ ತುತ್ತಾಗಿ ಸ್ವರ್ಗಸ್ಥರಾದ ಸಂಗತಿಯನ್ನು ತಿಳಿಸಲು ವಿಷಾದಪಡುತ್ತೇವೆ. ದಿವಂಗತರು ಕೇವಲ ೨೫ ವರ್ಷದೊಳಗಿನ ಶ್ರೀಮಂತ ಯುವಕರಿದ್ದು ಬಡ ಜನಪ್ರಿಯರಾಗಿ ಪರೋಪಕಾರಶೀಲರಾಗಿದ್ದರು— ಇಂತಹ ಮಹನೀಯರ ಅಕಾಲನಿಧನವು ಊರಿನವರ ದೌರ್ಭಾಗ್ಯವೇ ಸರಿ. ಜಗದೀಶ್ವರನು ಇವರ ಆತ್ಮಕ್ಕೆ ಸಾಯುಜ್ಯವನ್ನು ದಯಪಾಲಿಸಲಿ!

ಕುರುಕಾಲು: — ಈ ಕಾಲಾ ಭಜನ ಮಂಡಳಿಯವರು ಜನವರಿ ತಾ. ೨—೫ರ ವರೇಗೆ ೪ ರಾತ್ರಿಗಳಲ್ಲಿ ಭಜನಾ ಮೆರವಣಿಗೆಯಿಂದ ಗ್ರಾಮ ಸಂಚರಿಸಿದಾಗ ಬಡ ವಿದ್ಯಾರ್ಥಿ ಫಂಡಿಗೆ ರೂ. ೫೩—೧೪—೦ ಧನ ಸಹಾಯ ದೊರಕಿರುತ್ತದಾಗಿ ತಿಳಿದುಬರುತ್ತದೆ.

ಕಲ್ಲಡ್ಕ: — ಈ ಸೆಂಟರಿನ ಉಪಾಧ್ಯಾಯರ ಸಂಘದ ೭ನೇ ಸಭೆಯು ತಾ. ೨೮—೧—'೨೮ರಲ್ಲಿ ಮಂಗಳೂರು ತಾಲೂಕು ಬೋರ್ಡು ಮೆಂಬರ್ ಮ| ರಾ ರಾ| ಬಿ. ಎಲ್ ಹಾಮದ್ ಬಹದೂರವರ ಅಧ್ಯಕ್ಷತೆಯಲ್ಲಿ ಕ. ಬೋ. ಹಾ. ಎ. ಶಾಲೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಗತ ಮೀಟಿಂಗಿನ ವರದಿಯನ್ನು ಸಂಘದ ಸೆಕ್ರಿಟರಿಯವರು ಓದಿದ ತರುವಾಯ ಕಲ್ಲಡ್ಕ ಶಾಲೆಯ ಉಪಾಧ್ಯಾಯ ರಾಮಣ್ಣ ಸೆಟ್ಟರು 'ಶಾಲೆಯ ತೋಟದ ಅಗತ್ಯ'ವೆಂಬುದರ ಕುರಿತು ಭಾಷಣವನ್ನೂ ಮಣಿ ನಾಲ್ಕೂರು ಶಾಲೆಯ ಉಪಾಧ್ಯಾಯ ಕೇತಮಯ್ಯನವರು ೫ನೇ ವರ್ಗಕ್ಕೆ ಗ್ರೇಫ್ ಮೂಲಕ ಭಿನ್ನರಾಶಿಯ ಮಾದರಿ ಪಾಠವನ್ನು ಕೊಟ್ಟದ್ದಾಯಿತು.

ಅನಂತರ ಮುಂದಿನ ೬, ೭, ೮, ೯, ಠರಾವುಗಳು ಉಪಾಧ್ಯಾಯರ ಏಳಿಗೆಯ ಕುರಿತು ಪಾಸುಮಾಡಿ ವಿದ್ಯಾ ಇಲಾಖೆಯವರೊಡನೆ ಕೇಳಿಕೊಳ್ಳಬೇಕೆಂತಲೂ ೧೦, ೧೧, ೧೨, ೧೩ನೇ ಠರಾವುಗಳನ್ನು ಈ ದಿನದ ಸಭೆಯ ಪ್ರೆಸಿಡೆಂಟರವರ ಮೂಲಕ ತಾಲೂಕು ಬೋರ್ಡು ಪ್ರೆಸಿಡೆಂಟರನ್ನು ಕೇಳಿಕೊಳ್ಳಬೇಕೆಂತಲೂ ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟವು.

ಮುಂದಿನ ಮೀಟಿಂಗನ್ನು ೧೮—೨—'೨೮ನೇ ದಿನ ಕಲ್ಲಡ್ಕ ಸೆಂಟರಿನಲ್ಲಿಯೇ ಜರಗಿಸುವದೆಂತಲೂ ನಿರ್ಣಯಿಸಿದೊಡನೆ ಅಧ್ಯಕ್ಷರ ಸುರಸವಾದ ಭಾಷಣದೊಡನೆ ಸೆಕ್ರಿಟರಿಯವರ ಉಪಕಾರ ಸ್ಮರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಹೊಸದುರ್ಗ: — ಇಲ್ಲಿಯ ಸಬ್ ಮೆಜಿಸ್ಟ್ರೇಟರಿಗೆ ಕಾಸರಗೋಡಿಗೆ ವರ್ಗ ಆಗಿಯದೆ. ತಾಲೂಕು ಹೆಡ್ ಎಕೌಂಟೆಂಟ ಮ| ರಾ| ಕೆ. ಲಕ್ಷ್ಮಣರು ಇಲ್ಲಿಯ ಡಿಪ್ಯುಟಿ ತಹಶೀಲದಾರರಾಗಿ ನೇಮಕಪಟ್ಟಿರುತ್ತಾರೆ.

ಹೊಸದುರ್ಗದಿಂದ ಪಣತ್ತಡಿಗೆ ಹೋಗುವ ರಸ್ತೆಯಲ್ಲಿ ಮೋಟರ್ ಚಲಾವಣೆಗೆ ಕೆಲವು ಕಾಲದಿಂದ ಪ್ರಯತ್ನಗಳು ನಡೆದು ಮೊನ್ನೆ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರ ಸವಾರಿಯು ಈ ರಸ್ತೆಯನ್ನು ಪರಿಶೋಧಿಸಿ ಹೋಗಿರುತ್ತಾರೆ. ಹುಕುಂ ಯಾವ ತರದಲ್ಲಿ ಆಗುವದೆಂತ ನೋಡಲಿಕ್ಕಿದೆ. ಮೋಟರ್ ಚಲಾವಣೆಗೆ ರಸ್ತೆಯಲ್ಲಿ ನ್ಯೂನತೆಗಳು ಇರುವುದಾದರೆ ರೋಡ್ ಸೆಸ್ಸಿನಿಂದ ಅಂಥ ನ್ಯೂನತೆಗಳು ಹೋಗಲಾಡಿಸುವದು ಅಗತ್ಯ. ಮೋಟರ್ ಚಲಾವಣೆಯಾದರೆ ಬೇರೆ ರೂಪದ ತೆರಿಗೆಯು ಸಹಾ ಡಿಸ್ಟ್ರಿಕ್ಟ ಬೋರ್ಡಿಗೆ ಕೈಸೇರುವುದಿಲ್ಲವೇ?

The Chickmagalur Public Conveyance Motor Service.
...ALUR.

...ನ್ಸ್ ಮೋಟರ್ ಸರ್ವಿಸ್.

Tel: Conveyance.

...ಮಂಗಳೂರು.

... (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳ ...ಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ... ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ...ವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ... ಬಸ್ಸುಗಳನ್ನು ಏರ್ಪಡಿಸಿರುತ್ತೆ.

...ರ್ಗಗಳ ವಿವರ.

... ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7¼ ಗಂಟೆಗೆ ಸಿದ್ಧ ... 11-45ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, ... ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ... ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ

...ಟಿಕೆಟ್, ಇತರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕೂ ... 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ...ವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ...-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ... ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್, ಗೋವಾ, ಲೋಂಡ

... ಗಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ... ನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ

...ತಕ್ಕ ಅನುಕೂಲತೆ.

... ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ...ಗಳೂರು, ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು

... ಬರೆದುಕೊಳ್ಳಬಹುದು.

... ಸೂರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

THE CANARA PUBLIC CONVEYANCE CO., LTD, MANGALORE.

ಕೆನರಾ ಪಬ್ಲಿಕ್ ... ಲಿಮಿಟೆಡ್, ಮಂಗಳೂರು.

... ಕಂಪೆನಿಯಾಗಿದೆ.

... ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.
... ಪ್ರತಿಮೆಯನ್ನೂ
... ಕಾರ್ಕಳ ಮಾರ್ಗವಾಗಿಯೂ
... ಒಂದೇ ಶಿಲೆಕಲ್ಲಿನಿಂದ
... ಮೇಲೆ ನೆಲಸಿರುವ,
... ರ ನ

... ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.
... ದೇವಾಲಯ
... ಕುಂದಾಪುರಕ್ಕೆ ತಲಪಬಹುದು.
... ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.
... ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
... ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
... ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
... ತಂಕೆರೆ ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ವಿವಿಧ ವಿಷಯಗಳು.

ಕಪಟಿ ಸಾಧುವಿನ ಅತ್ಯಾಚಾರ!

ಅಲ್ಲಹಾಬಾದಿನ ಕೋರ್ಟಿನಲ್ಲಿ ಮೊನ್ನೆ ಒಂದು ವಿಚಿತ್ರ ತರದ ಕಥೆಯ ವಿಚಾರಣೆಯು ನಡೆಯಿತು. ಸುಮಾರು ಹದಿನೆರಡು ವರ್ಷಗಳ ಕೆಳಗೆ ಬಾಸೋರಿ ಎಂಬವನು ಸಣ್ಣಪ್ರಾಯದ ತನ್ನ ಹೆಂಡತಿಯನ್ನು ತ್ಯಜಿಸಿ ದೇಶಾಂತರವಾಸಿಯಾದನು. ಕೆಲವು ವರುಷಗಳ ತರುವಾಯ ಒಬ್ಬ ಸಾಧುವು ಆ ಊರಿಗೆ ಬಂದು ಒಂದು ದೇವಸ್ಥಾನದಲ್ಲಿ ಉಳಕೊಂಡನು. ಸಾಧುವಿನ ಸಂದರ್ಶನಕ್ಕಾಗಿ ಊರಿನ ಜನರು ತುಂಬಾ ಬರುತಿದ್ದರು. ಅವರಿಂದ ಈ ಸಾಧುವು ಆ ಗಂಡನಿಲ್ಲದ ಹೆಂಡತಿಯ ಸಂಗತಿಯನ್ನೆಲ್ಲಾ ತಿಳಿದುಕೊಂಡನು. ಅವಳ ಹೆಸರು ಮುಸಾಮತ್ ಕುಂಞ. ಸಾಧುವು ಒಬ್ಬಂಟಿಗನಾಗಿದ್ದುದರಿಂದ ತನ್ನದೆಂದೇ ಅನ್ನಿಸಿಕೊಳ್ಳುವ ಒಂದು ಮನೆಯಲ್ಲಿ ಇರಬೇಕೆಂದು ಬಹಳ ಅಭಿಲಾಷೆಯಿತ್ತು. ತಾನು ಅಂದು ಊರನ್ನು ಬಿಟ್ಟುಹೋದ ಮುಸಾಮತ್ ಕುಂಞಯ ಗಂಡನೆನ್ನುವದೇ ಯೋಗ್ಯ ಉಪಾಯವೆಂದು ನೆನಸಿದನು. ಒಂದು ದಿನ ಮುಸಾಮತ್ ಕುಂಞಯು ದೇವಸ್ಥಾನಕ್ಕೆ ಬಂದಾಗ, ತಾನು ಅವಳ ನಿಜವಾದ ಗಂಡನೆಂದು ಹೇಳಿ ಅವಳೊಡನೆ ಸಾಧುವು ಒಂದು ಕಲ್ಪನಾಕಥೆಯನ್ನು ವಿವರಿಸಿದನು. ಇದನ್ನು ಕೇಳಿ ಹೆಂಗಸಿಗೂ ಅವಳ ಅಣ್ಣನಿಗೂ ನಿಜವೆಂದು ತೋರಿತು, ಸಾಧುವನ್ನು ಮನೆಗೆ ಕೊಂಡ್ಹೊದರು. ಸಾಧುವು ತನ್ನ ವೃತ್ತಿಯನ್ನು ತ್ಯಜಿಸಿ ಸಾಮಾನ್ಯ ಮನುಷ್ಯನಂತಾದನು. ಈ ಪ್ರಕಾರವಾಗಿ ಆತನು ಒಂದು ವರುಷದ ವರೆಗೆ ಇದ್ದನು.

ಒಂದು ದಿನ ಆತನ ಊರಿಗೆ ತನ್ನನ್ನು ಕರಕೊಂಡು ಹೋಗಬೇಕೆಂದು ಹೆಂಡತಿಯು ಹಟ ಹಿಡಿದುದಕ್ಕಾಗಿ ಆತನು ಒಪ್ಪಿಕೊಂಡು ಹೆಂಡತಿಯೊಂದಿಗೆ ಅವಳ ಮೊದಲಿನ ಗಂಡನ ಊರಿಗೆ ತಲಪಿದರು. ಅಲ್ಲಿ ಅವಳ ಗಂಡನ ಮನೆಯಾಗಲಿ ಅವಳ ಬಂಧುಗಳ ಗುರುತಾಗಲಿ ತಿಳಿಯದೆ ಇದ್ದುದರಿಂದ ಅವನ ಗುಟ್ಟು ಬಯಲಾಯಿತು. ಕಡೆಗೆ ಅವನು ತನ್ನ ನಿಜಸ್ಥಿತಿಯನ್ನು ತಿಳಿಸಿಬಿಟ್ಟನು. ಕಾನ್ಪುರದ ಸೆಶ್ಯನ್ ಜಡ್ಜರು ಅವನಿಗೆ ೪ ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಿದರು. ಅಲ್ಲಾಹಾಬಾದಿನ ಕೋರ್ಟಿನವರು ಒಂದು ವರುಷದ ಶಿಕ್ಷೆಗೊಳಗಾದರೆ ಸಾಕೆಂದು ವಿಧಿಸಿದರು.

§ § § §

ದಿಲ್ಲಿಯಲ್ಲಿ ಗುಂಡಿನ ಹಾರಿಸುವಿಕೆ!

ಖ್ವಾಜಾ ಹಜನ್ ನಿಜಾಮಿ ಎಂಬವನು ೫೫ ವರ್ಷ ಪ್ರಾಯದ ತನ್ನ ಮಾವನೊಂದಿಗೂ ಒಂದು ಮಗುವಿನೊಂದಿಗೂ ಕುಳಿತು, ನಿಜಾಮದ್ದೀನ್ ಗೋರಿಯ ಸಮೀಪದಲ್ಲಿ ಮೋಟಾರಿನಲ್ಲಿ ಹೋಗುತ್ತಿರುವಾಗ ಹಿಂದಿನಿಂದ ಅವರ ಮೇಲೆ ನಾಲ್ಕು ಗುಂಡುಗಳು ಹಾರಿಸಲ್ಪಟ್ಟವು. ಖ್ವಾಜಾ ನಿಜಾಮಿಯ ಮೇಲೆ ಎರಡು ಗುಂಡುಗಳು ಹಾರಿಸಲ್ಪಟ್ಟಿದ್ದವು. ಆದರೆ ಇವು ಆತನಿಗೆ ತಾಗದೆ ತಪ್ಪಿಹೋದವು. ಉಳಿದೆರಡು ಗುಂಡುಗಳು ಆತನ ಮಾವನಾದ ಬ್ಯಾಸಿಮೇಲಿಯಾ ಇವನಿಗೆ ತಾಗಿ ಆತನು ತಕ್ಷಣದಲ್ಲಿಯೇ ಮೃತಪಟ್ಟನು. ಈ ಗುಂಡುಗಳನ್ನು ಹೊಡೆದವನು ಜಾಹೀರನೆಂಬವನಾಗಿರಬೇಕೆಂಬದಾಗಿ ಆತನನ್ನು ಸಂಶಯದ ಮೇಲೆ ಹಿಡಿದಿರುವರು. ಆತನು ಹದಿನೈದು ವರ್ಷ ಪ್ರಾಯದ ಹುಡುಗನು. ಖ್ವಾಜಾನಿಜಾಮಿಯ ಸಂಬಂಧಿಕನು. ಈ ಹುಡುಗನ ಕುಟುಂಬದವರಿಗೂ ಖ್ವಾಜಾನಿಜಾಮಿಗೂ ವ್ಯಾಜ್ಯಗಳು ನಡೆಯುತಿದ್ದವು. ಗುಂಡುಗಳು ತಾಗಬೇಕಾದರೆ ಕಾರಿನ ಹಿಂದೆ ಜಾಹೀರನು ಬರುವುದನ್ನು ತಾನು ಕಂಡಿದ್ದೆನೆಂದು ಬ್ಯಾಸಮೆಲಿಯನು ಸಾಯುವ ಮೊದಲು ಹೇಳಿದ್ದರಿಂದಲೇ ಆ ಹುಡುಗನನ್ನು ಕೈದುಮಾಡಿದರು.

§ § § §

ತಿರುಪುರ ಮಹಾರಾಜರ ಪಟ್ಟಾಭಿಷೇಕ.

ತಿರುಪುರ ಮಹಾರಾಜರ ಸಿಂಹಾಸನಾರೋಹಣ ಸಮಾರಂಭವು ಹಿಂದೂಗಳ ಪೂರ್ವಕ್ರಮಕ್ಕನುಸಾರವಾಗಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ರಾಜರು ಸಿಂಹಾಸನವನ್ನು ಹತ್ತಿ ಕುಳಿತೊಡನೆ, ಪುಣ್ಯ ಕ್ಷೇತ್ರಗಳಿಂದ ತಂದಿದ್ದ ತೀರ್ಥಗಳನ್ನು ಪಂಡಿತರು ಅವರ ತಲೆಯ ಮೇಲೆ ತಳಿದರು. ಆಶೀರ್ವಾದವನ್ನು ಮಾಡಿದರು. ಬ್ರಾಹ್ಮಣರು ಮಂತ್ರಗಳನ್ನು ಉಚ್ಚರಿಸುತ್ತಿರುವಾಗ ಮಹಾರಾಜರು ಕುಲದೇವತೆಗೆ ಪುಷ್ಪಗಳನ್ನು ಸಮರ್ಪಿಸಿದರು. ತಾ. ೩೧ನೇ ದಿನ ಈ ಸಂತೋಷದ ಕುರಿತು ಕುಂಜವನ ಅರಮನೆಯಿಂದ ಒಂದು ಮೆರವಣಿಗೆಯು ಹೊರಟಿತು. ಈ ಮೆರವಣಿಗೆಯಲ್ಲಿ ಚಿನ್ನಾಭರಣಗಳಿಂದ ಶೃಂಗರಿಸಿದ್ದ ೭೫ ಆನೆಗಳಿದ್ದವು. ಕುದುರೆ ಮೊದಲಾದವುಗಳು ಬಹಳವಿದ್ದವು. ಮೆರವಣಿಗೆಯು ಮುಖ್ಯ ರಾಜಮಾರ್ಗದಲ್ಲಿಯೇ ಜರಗಿಸಲ್ಪಟ್ಟಿತು. ಹಾದಿಯಲ್ಲಿ ಪ್ರಜೆಗಳು ಮಹಾರಾಜರಿಗೆ ಜಯವಾಗಲಿ ಎಂದು ಗಟ್ಟಿಯಾಗಿ ಬೊಬ್ಬಿಡುತ್ತಿದ್ದರು. ಸಾಯಂಕಾಲದ ಹೊತ್ತಿಗೆ ಜಮೀನುದಾರರು ಅರ್ಪಿಸಿದ ನಜರು ಕಾಣಿಕೆಗಳ ಸ್ವೀಕಾರವೂ ನಡೆಯಿತು.

§ § § §

ಕೈದಿಗಳ ಪಲಾಯನ!

ರಂಗೂನಿನಲ್ಲಿ ಇಬ್ಬರು ಮನುಷ್ಯರು ಯುದ್ಧಸನ್ನಾಹಗಳನ್ನು ಹಿಡಿದು ಕಳ್ಳತನವನ್ನು ಮಾಡಿದುದಕ್ಕಾಗಿ ಪೋಲೀಸರು ಅವರನ್ನು ಹಿಡಿದು ಕೈದು ಮಾಡಿದರು. ಇಬ್ಬರನ್ನೂ ಜೈಲಿನಲ್ಲಿಡಲು ಪ್ರಾಕೋನ್ ಎಂಬಲ್ಲಿಗೆ ಕರೆದೊಯ್ಯುತಿದ್ದರು. ಅವರ ಕಾವಲಿಗಾಗಿ ನಾಲ್ಕು ಜನ ಮಿಲಿಟರಿ ಪೋಲೀಸರಿದ್ದರು. ಅವರನ್ನು ಹಡಗದ ಮೇಲೆ ಕುಳ್ಳಿರಿಸಿ ಒಯ್ಯುತ್ತಿದ್ದರು. ರಾತ್ರಿ ಕಾವಲಿನವನು ಮಲಗಿದ ಸುಸಂದರ್ಭವನ್ನು ಸಂಪಾದಿಸಿ ಕೈದಿಗಳು ಕೋಳವನ್ನು ಮುರಿದು ಕಾಲಿನ ಕೋಳವನ್ನು ಕಳಚಿ ಸಮುದ್ರಕ್ಕೆ ಹಾರಿದರು. ಅಲ್ಲಿಂದ ಈಜಾಡಿಕೊಂಡು ಕರಾವಳಿಗೆ ತಲಪಿದರು. ಅವರು ಹೋಗುವಾಗ ಪೋಲೀಸಿನವರೊಡನಿದ್ದ ಒಂದು ಕೋವಿಯನ್ನೂ ೩೦ ಗುಂಡುಗಳನ್ನೂ ಅಪಹರಿಸಿಕೊಂಡು ಹೋಗಿದ್ದರು. ಒಬ್ಬನು ಈಜಾಡುವುದರಲ್ಲಿ ಅಷ್ಟು ಪ್ರಬಲನಾಗಿಲ್ಲದುದರಿಂದ ಮುಳುಗಿ ಸತ್ತನು. ಇನ್ನೊಬ್ಬನನ್ನು ಪೋಲೀಸರು ಹುಡುಕುತ್ತಿರುವರಾದರೂ ಇಷ್ಟರ ವರೆಗೆ ಆತನ ಸೋವು ಕೂಡ ದೊರತಿಲ್ಲ.

§ § § §

ಜಗಜಟ್ಟಿಯಾದ ಗಾಮನು.

ಪಾಟಿಯಾಲದಲ್ಲಿ ಕಳೆದ ೨೯ನೇ ತಾರೀಕಿನ ದಿನ ಜಟ್ಟಿಯಾದ ಗಾಮನೆಂಬವನಿಗೂ ಜಿಬಿಸ್ಕೊ ಎಂಬವನಿಗೂ ಮಲ್ಲಯುದ್ಧವಾಗಿ ಗಾಮನು ಜಯಶಾಲಿಯಾದನು. ೧೬ ವರುಷಗಳ ಹಿಂದೆ ಗಾಮನು ಲಂಡನಿಗೆ ಹೋಗಿ ಜಿಬಿಸ್ಕೊಯೊಂದಿಗೆ ೩ ತಾಸುಗಳ ತನಕ ಕಾದಾಡಿ ಇಬ್ಬರೂ ಸೋಲದೆ ಇದ್ದುದರಿಂದ ಆಟವನ್ನು ಮರುದಿನಕ್ಕೆ ಮುಂದರಿಸಿಡಲಾಯಿತು. ಆದರೆ ಮರುದಿನ ನಿಶ್ಚಿತ ಸಮಯದಲ್ಲಿ ಜಿಬಿಸ್ಕೊಯು ಕಾಣದೆ ಹೋದುದರಿಂದ ಗಾಮನೇ ಜಗಜಟ್ಟಿಯೆಂದು ಪ್ರಸಿದ್ಧಿಹೊಂದಿದನು. ಎರಡು ತಿಂಗಳುಗಳ ಕೆಳಗೆ ಜಿಬಿಸ್ಕೊಯು ಪುನಃ ಬಂದು ತಾನೀಗ ಗಾಮನೊಡನೆ ಜಗಳವಾಡಲು ಸಿದ್ಧನಿರುವೆನೆಂದು ಸಾರಿದನು. ಪಾಟಿಯಾಲದ ಮಹಾರಾಜರು ಇವರಿಬ್ಬರ ಜಗಳಕ್ಕಾಗಿ ಒಂದು ಅಂದವಾದ ಮಂಟಪವನ್ನು ಕಟ್ಟಿಸಿದರು. ರಾತ್ರಿಯ ವರೆಗೂ ಜಗಳವು ಮುಂದರಿಯಬೇಕಾದೀತೆಂದು ವಿದ್ಯುಚ್ಛಕ್ತಿಯ ದೀಪಗಳೂ ತಯಾರಿಸಲ್ಪಟ್ಟಿದ್ದವು. ಮಂಟಪದಲ್ಲಿ ಸುಮಾರು ೪೦ ಸಾವಿರ ಜನರು ಕುಳಿತುಕೊಳ್ಳಲು ಎಡೆಯಿತ್ತು. ನೋಡುವುದಕ್ಕಾಗಿ ಪಾಟಿಯಾಲದ ಮಹಾ ರಾಜರು, ಕಪರ್ತಾಲಿನ ಮಹಾರಾಜರು ಮೊದಲಾದವರು ಬಂದಿದ್ದರು. ೩೦ ಸಾವಿರ ಜನರು ನೆರೆದಿದ್ದರು, ಸಾಯಂಕಾಲ ಘಂಟೆ ೪-೧೫ಕ್ಕೆ ಇಬ್ಬರೂ ರಣರಂಗಕ್ಕೆ ಇಳಿದರು. ಜಿಬಿಸ್ಕೊವು ಆಕಾರದಲ್ಲಿ ಗಾಮನಿಗಿಂತ ದೊಡ್ಡವನಾಗಿದ್ದನು. ಅವನ ಶರೀರವು ಗಟ್ಟಿಮುಟ್ಟಾಗಿದ್ದುದರಿಂದ ಗಾಮನನ್ನು ಆತನು ಒಂದೇ ನಿಮಿಷದಲ್ಲಿ ಸೋಲಿಸುವನೆಂದು ಭಾಸವಾಗುತಿತ್ತು. ಆದರೆ ಜಗಳವು ಪ್ರಾರಂಭವಾದ ಕೂಡಲೆ ಗಾಮನು ಜಿಬಿಸ್ಕೊವನ್ನು ನೆಲಕ್ಕುರುಳಿಸಿ ಆತನ ಎದೆಯ ಮೇಲೆ ಕುಳಿತು ಜಯಶಾಲಿಯಾದನು. ೩೦ ಸೆಕೆಂಡುಗಳೊಳಗೆ ಗಾಮನು ಅವನನ್ನು ಸೋಲಿಸಿದನು. ಗಾಮನು ಕೂಡಲೆ ಎದ್ದು ಪಾಟಿಯಾಲದ ರಾಜರ ಮುಂದೆ ಮೊಣಕಾಲೂರಿದೊಡನೆ ಭೂಪಾಲದ ನವಾಬರು ಆತನಿಗೆ ಒಂದು ಗದೆಯನ್ನು ಕೊಟ್ಟು ಆತನು ಜಗಜಟ್ಟಿಯೆಂದು ಸಾರಿದರು. ಜಿಬಿಸ್ಕೊವು ಸ್ನಾನಕ್ಕಾಗಿ ಹೋಗುವಾಗ "ಗಾಮನು ಹುಲಿಯು, ದೊಡ್ಡ ಆಟಗಾರನು" ಎಂದು ಹೇಳಿ ಹೊರಟುಹೋದನು.

§ § § §

ಶೈಕ್‍ಧಾರಿ ಎಂಬವನ ಮರಣ!

— ಬಗದಾದಿನ ಶೈಕ್‍ಧಾರಿ ಎಂಬವನು ೧೯೨೦ನೇ ಇಸವಿಯಲ್ಲಿ ಲೀಟ್‍ಮೇನನೆಂಬವನನ್ನು ಕೊಂದ ತಪ್ಪಿಗಾಗಿ ಆತನನ್ನು ಜೈಲಿನಲ್ಲಿಟ್ಟಿದ್ದರು. ಕಳೆದ ಸೋಮವಾರ ದಿನ ಆತನನ್ನು ಫಾಶಿಗೆ ಹಾಕುವುದೆಂದು ನಿಶ್ಚಯಿಸಲ್ಪಟ್ಟಿದ್ದಿತು. ಆದರೆ ಆತನು ಈ ಸಂಗತಿಯನ್ನು ಕೇಳಿಯೇ ಜೈಲಿನಲ್ಲಿ ಹೃದಯ ದೌರ್ಬಲ್ಯದಿಂದ ಮೃತಪಟ್ಟನು. ಆತನ ಶವವನ್ನು ಕೊಂಡೊಯ್ಯುವಾಗ ಹಿಂದೆ ಸಾವಿರಾರು ಜನರು ಬಂದಿದ್ದರು.

ಕಳೆದ ವಾರ ಬಾಧಿಸಿದ ವಿನಂತಿಯನ್ನು ವಿವರಿಸುವ ಬಗ್ಗೆ

ಟೀಪು ಸುಲ್ತಾನರು ಸತ್ತನಂತರ ಈ ಕನ್ನಡ ಮತ್ತು ಮಲಬಾರು ಜಿಲ್ಲೆಯೂ, ಕಂಪೆನಿಯ ಆಡಳ್ತೆಗೆ ಬಂದು ಅವರ ರಾಜ್ಯಭಾರವನ್ನು ನಡೆಸುವ ಡ್ಯಾರೆಕ್ಟರವರು, ೧೮೦೪-೧೮೦೫ರಲ್ಲು ಜಿಲ್ಲೆಯ ಆಫೀಸರರಿಂದಲೂ, ಮದ್ರಾಸು ಸರಕಾರದಿಂದಲೂ ಮಾಹೀತಿಯನ್ನು ಪಡೆದು ಈ ನಮ್ಮ ಜಿಲ್ಲೆಯ ವಿಷಯ ಈ ಕೆಳಗೆ ಸಂಕ್ಷೇಪವಾಗಿ ಬರೆದ ಕಟ್ಟಪ್ಪಣೆಯನ್ನು ಕೊಟ್ಟರು. ಇದರ ಸಾರಾಂಶ ಈ ಕೆಳಗೆ ಬರದಿದ್ದೇನೆ. ಇದು ನಮ್ಮ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸುವದು.

"ನೀವು ನಡಿಸಿಕೊಂಡು ಬರುವ ಆಧಿಪತ್ಯದಲ್ಲಿ ಸಂಪೂರ್ಣ ಭೂಸ್ವಾಮಿಕತ್ವ ಹಕ್ಕುಗಳು ಕನ್ನಡ ಮತ್ತು ಮಲಬಾರು ಜಿಲ್ಲೆಯಲ್ಲಿ ಮಾತ್ರ ಇರುವುದು. ಇವುಗಳು ಅನಾದಿಯಿಂದ ಈ ಜಿಲ್ಲೆಗಳಲ್ಲಿ ಇರುವ ಭೂಮಾಲಿಕರಿಗೆ ಕ್ರಯದಾನ ವಾರಿಸ ಹಕ್ಕು ಮುಂತಾದವುಗಳಿಂದ ಬಂದಿರುವವು. ಇವುಗಳು ನಮ್ಮ ಇಂಗ್ಲೆಂಡ್ ದೇಶದಲ್ಲಿರುವ ಎಲ್ಲಾ ಭೂಮ್ಯಾಲಿಕರ ಹಕ್ಕುಗಳಿಗಿಂತ ಹೆಚ್ಚು ತನ್ನಿಗಳಿಗೂ ಸಂಸ್ಕಾರಗಳಿಗೂ ಗುರಿಯಾಗಿ ಪರಿಶುದ್ಧವಾಗಿಯೂ, ನಿರ್ಮಲವಾಗಿಯೂ ಉಳಿದಿದ್ದಾವೆ. ಈ ಹಕ್ಕುಗಳು ಅತಿ ನಿಪುಣತೆಯಿಂದ ದಸ್ತಾವೇಜುಗಳಲ್ಲಿ ಬರೆಯಲ್ಪಟ್ಟಿರುವುದರಿಂದ ಸಂಪೂರ್ಣತ್ವವನ್ನು ಹೊಂದಿ ಸ್ಪಷ್ಟವಾಗಿ ತೋರುವ ಗಡಿಗಳೊಳಗೆ ಒಳಪಟ್ಟು ಸಂಪೂರ್ಣವಾಗಿ ತೋರುವದು. ಆದುದರಿಂದ ನೀವು ಅವುಗಳನ್ನು ಮನ್ನಿಸಿ ತುಚ್ಛೀಕರಿಸದೆ ಸ್ಥಿರಪಡಿಸಬೇಕಾದಲ್ಲದೆ ನಮ್ಮ ಖಜಾನೆಯ ಆದಾಯಕ್ಕೋಸ್ಕರ ಅವುಗಳನ್ನು ಗುಮಾನೆಮಾಡದೆ ಯಾವದೊಂದು ಶಿಸ್ತು ಪದ್ಧತಿಯನ್ನು ಏರ್ಪಡಿಸಲಿಕ್ಕೆ ನಿಮಗೆ ಈ ಮೂಲಕ ನಾವು ಅತಂಕಪಡಿಸಿದ್ದೇವೆ. ಆದುದರಿಂದ ಈ ಗಡಿಗಳೊಳಗೆ ಇರುವ ಸ್ಥಳವನ್ನು ಅವರು ಸ್ವೇಚ್ಛೆತೆಯಿಂದ ಉಪಯೋಗಿಸುಕೊಳ್ಳುವಲ್ಲಿ ನೀವು ಅತಂಕಿಸಕೂಡದು.

"ನೀವು ಕೊಟ್ಟಿರುವ ವಿವರದಿಂದ ಕಾಯಂ ಸೆಟ್ಲಮೆಂಟು ಆಗಿಯದೆ ಎಂತ ಎಣಿಸಲಿಕ್ಕೆ ಅಗತ್ಯವಿರುವ ತತ್ವಗಳು ಈ ಜಿಲ್ಲೆಗಳಲ್ಲಿ ಸ್ಥಿರವಾಗಿ ನಿಂತಿದ್ದಾವೆ. ಈಗ ನಮ್ಮ ನೌಕರರಿಗೆ ಮೇಲೆ ಬರೆದ ಪ್ರಕಾರ ಕಾಯಂ ಆಗಿ ಕೂಡಲೆ ವಸೂಲುಮಾಡಲಿಕ್ಕೆ ಅಗತ್ಯ ಇರುವ ಮಾಹೀತಿಯನ್ನು ಪಡದಿದ್ದಾರೆ. ನಮ್ಮ ಅನುಮತಿ ಶಿವಾ ಕಾಯಂ ಸೆಟ್ಲಮೆಂಟು ಸ್ಥಿರಪಡಿಸತಕ್ಕದ್ದು. ನೌಕರರು ಶಿಸ್ತು ಜಮಾಬಂಧಿಯನ್ನು ತಯಾರಿಸಲಿಕ್ಕೆ ಹೆಚ್ಚಿನ ಮಾಹೀತಿ ಇನ್ನು ಪಡಿಯಬೇಕಾದರೆ ಅದನ್ನು ಅದಷ್ಟು ತ್ವರ್ಯದಿಂದ ಪಡಕೊಂಡು ಕಾಯಂ ಸೆಟ್ಲಮೆಂಟು ಏರ್ಪಡಿಸತಕ್ಕದ್ದು. ಈ ಬಗ್ಗೆ ನಮ್ಮ ಆದಾಯವೆಲ್ಲಾ ಪ್ರಜೆಗಳ ಹಿತವೇ ಮುಖ್ಯವಾಗಿರುತ್ತದೆ."

ಮೇಲೆ ಬರೆದ ಶಾಸನಗಳು ೧೮೧೨–೧೮೧೩ನೇ ಇಸವಿಯಲ್ಲಿ ಪಾರ್ಲಿಮೆಂಟಿನವರು ಸ್ಥಿರಪಡಿಸಿದ್ದಾರೆ– ನಂತರ ಇದನ್ನು ಗವರ್ನರ್ ಜನರಲರವರೂ, ಮದ್ರಾಸು ಸರಕಾರದವರೂ, ಪ್ರಿವಿ ಕೌನ್ಸಿಲರವರೂ, ಹೈಕೋರ್ಟಿನವರೂ, ರೆವಿನ್ಯೂ ಬೋರ್ಡಿನವರೂ, ಅಂಗೀಕರಿಸಿದ್ದಾರೆ– ಹೀಗೆ ಇರುವಲ್ಲಿ ರೈತರ ಆಸ್ತಿಗಳ ಪೈಕಿ ಸಾಗುವಳಿ ಆದ ಗದ್ದೆಗಳ ಕಟ್ಟಪುಣಿಗಳನ್ನು ಕೂಡಾ ಪರಂಬೋಕ್ ಎಂತ ರೀಸರ್ವೆಯಲ್ಲಿ ಮಾಡಿ, ಕುತ್ರಿಕಾಣೆ-ಗತ ತೀರ್ವೆ–ಹೊರಿಸಿದ್ದು ಮೇಲೆ ಬರೆದ ಶಾಸನಗಳಿಗೆ ಎಷ್ಟು ವಿರೋಧವೆಂತ ಕಣ್ಣಾರೆ ಕಾಣುವದು. ಈ ಸರ್ವೆ, ರೀಸರ್ವೆ, ರೀಸರ್ವೆಯೆಂತ ಸರ್ವೆಗಳನ್ನು ಆಗಾಗ್ಯೆ ತಬ್ದೀಲ್ ಮಾಡುತ್ತಾ ಸರ್ವೆಗಡಿಗಳನ್ನು ಮಾರ್ಪಡಿಸುತ್ತಾ ಹೊಸ ಹೊಸ ಸರ್ವೆ ನಂಬ್ರಗಳನ್ನು ಕಲ್ಪಿಸಿದ್ದು ಪ್ರಜಾಪಾಲನ ಧರ್ಮಕ್ಕೆ ವಿರೋಧವಾಗಿರುತ್ತದೆ.

M. SHANKERNARAYANA RAO,
Vakil, MANGALORE

(೪ನೇ ಪೇಜಿನಿಂದ ಮುಂದುವರಿಸಿದ್ದು.)

ಕಂಠಶೋಷಣೆಯನ್ನು ಮಾಡಿ ಆಶಾಭಂಗವನ್ನು ಹೊಂದುವ ಬದಲು ಮೊದಲೇ ಕಮಿಶನಿಗೆ ಬಹಿಷ್ಕಾರವನ್ನು ಹಾಕಿ ಅದನ್ನು ಓಡಿಸುವ ಪ್ರಯತ್ನವನ್ನು ಮಾಡಿದರೆ ಉತ್ತಮವೆಂದು ಹೇಳಿದರು.

ಇದಾದ ತರುವಾಯ ರಾ॥ ಸತ್ಯಮೂರ್ತಿಯವರೂ ಭಾಷಿಸಿದರು. ನಾವು ಸ್ಯಾಮನ್ ಕಮಿಶನಿನ ಬಹಿಷ್ಕಾರಕ್ಕಾಗಿ ಹೋರಾಡಿದರೆ, ಹಿಂದುಗಳ ಮತ್ತು ಮುಸಲ್ಮಾನರ ಹೋರಾಟದಲ್ಲಿ ಯಾರದು ಮಿಗಿಲಾದದ್ದು ಎಂಬುದು ಸರಕಾರದವರಿಗೆ ಮನವರಿಕೆಯಾಗುವದು. ಇಷ್ಟು ಹೋರಾಡುವ ಜನರನ್ನು ಅಧೀನತೆಯಲ್ಲಿ ಇಟ್ಟುಕೊಳ್ಳುವದು ಅಧಿಕಾರಕ್ಕೆ ಮಿಕ್ಕಿದ ಕೆಲಸವೆಂದು ನಮಗೆ ಸರಕಾರದವರು ಸ್ವಾತಂತ್ರ್ಯವನ್ನು ಕೊಡುವರು. ಬ್ರಿಟಿಷರಆಳುವಿಕೆಯಿಂದ ಮುಸಲ್ಮಾನರಿಗೆ ಪ್ರಯೋಜನವಾಗಿಲ್ಲ. ಹಿಂದುಗಳಷ್ಟೇ ಕಷ್ಟಗಳು ಉಂಟಾಗಿವೆ. ಕಷ್ಟದಲ್ಲಿ ಬಿದ್ದಾಗ ಎಲ್ಲರೂ ಸಮಾನರು. ಆದಕಾರಣ ಹಿಂದೂ-ಮುಸಲ್ಮಾನರು ಒಟ್ಟಾಗಿ ಸ್ಯಾಮನ್ ಕಮಿಶನಿಗೆ ಎದುರು ನಿಲ್ಲಬೇಕು. ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ॥ ಅನ್ಸಾರಿಯವರು ಒತ್ತಿ ಹೇಳಿದ ಮಾತೇ ಇದು. ಅಲಿ ಸಹೋದರರು ಎಂದಿನಿಂದಲೂ ಪ್ರಯತ್ನಪಡುವುದು ಇದಕ್ಕಾಗಿಯೇ; ಧುರೀಣರ ಪಥದಲ್ಲಿ ಮುಸಲ್ಮಾನರು ಅಡಿಯಿಡದೆ ಹೋದರೆ ಅದು ಅವರೊಳಗಿನ ನೀಚಭಾವವನ್ನು ಹೊರಗೆಡಹುವದು. ಕಮಿಶನಿಗೆ ಬಹಿಷ್ಕಾರವನ್ನು ಹಾಕಿದರೆ ಸ್ವರಾಜ್ಯದ ಹಾದಿಯು ಸುಲಭವಾಗುವುದು. ಇಲ್ಲದಿದ್ದರೆ ಕಮಿಶನನ್ನು ಜಯಿಸಿ, ಮತ್ತೆ ಸ್ವರಾಜ್ಯವನ್ನು ಪಡೆಯುವದೆಂಬುದು ಅಬದ್ಧವು!

ಕೊನೆಗೆ ಅಬ್ದುಲ್ ಹಮೀದ್ ಖಾನರು ಈ ಠರಾವನು ಮಂಡಿಸಿದರು. "ಈ ಸಭೆಯು ಮದರಾಸಿನ ಪ್ರತಿಯೊಬ್ಬ ಮುಸಲ್ಮಾನನು ಅಂದರೆ ಸಾಹುಕಾರನಾಗಲಿ, ಕೂಲಿಯಾಗಲಿ, ಧನಿಕನಾಗಲಿ, ಬಡವನಾಗಲಿ, ಈಗ ತಾನೆ ಹಿಂದೂ ದೇಶಕ್ಕೆ ಬರಲಿರುವ ಸ್ಯಾಮನ್ ಕಮಿಶನಿಗೆ ಬಹಿಷ್ಕಾರವನ್ನು ಹಾಕತಕ್ಕದೆಂದೂ, ಆ ಕುರಿತು ಫೆಬ್ರವರಿ ತಾರೀಕು ೩ ಮತ್ತು ೧೭ರಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಬೇಕೆಂದೂ ಸಾರುತ್ತದೆ."

ಮುಸಲ್ಮಾನರು ಕಮಿಶನಿನೊಂದಿಗೆ ಸೇರದೆ ಇದ್ದರೆ ಅವರಿಗೆ ಮೇಲಕ್ಕೆ ಬರಲು ಹಾದಿಯಿಲ್ಲವೆಂದು ಕೆಲವರು ಅವರಿಗೆ ಬೋಧಿಸುತ್ತಿರುವರು. ಸರಕಾರದವರು ಬೇರೆ ಬೇರೆ ಜಾತಿಯವರಿಗೆ ಹಿತವಾಗುವಂತೆ ಎಂದೂ ಆಳಲಾರರು. ಮುಸಲ್ಮಾನರು ಸ್ಯಾಮನ್ ಕಮಿಶನಿನೊಂದಿಗೆ ಕೂಡಿದರೆ ಸ್ವರಾಜ್ಯದ ಹಾದಿಯಲ್ಲಿ ದೊಡ್ಡದೊಂದು ಕಲ್ಲನ್ನು ಉರುಳಿಸಿದಂತಾಗುವುದು. ಹಿಂದೂ ದೇಶದ ಅವನತಿಗೆ ಅವರೇ ಕಾರಣರಾಗುವರು ಎಂದು ಮೊದಲಾಗಿ ಅವರು ವಿವರಿಸಿದುದರಿಂದ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಮತ್ತೆ ಮೌಲಾನಾ ಯಾಕುಬ್ ಹುಸನ್ ಶೇಟರು ಮುಸಲ್ಮಾನರ ಕರ್ತವ್ಯವನ್ನು ವಿವರಿಸಿದರು. ಹಿಂದೂಗಳೂ ಮುಸಲ್ಮಾನರೂ ಏಕ ಪ್ರಕಾರವಾಗಿ ಎದುರು ನಿಂತದ್ದನ್ನು ಕಂಡರೆ ಸ್ಯಾಮನ್ ಕಮಿಶನು ಧೈರ್ಯಗೆಡುವುದು. ಸ್ವರಾಜ್ಯದ ಚಳವಳದಲ್ಲಿ ಇದು ವರೆಗೆ ಮುಸಲ್ಮಾನರು ಹಿಂದೆ ಸರಿದಿಲ್ಲ. ಅಸಹಕಾರ ಚಳವಳದಲ್ಲಿ ಮುಂದೊತ್ತಿ ಬಂದವರು ಮುಸಲ್ಮಾನರೇ. ಈ ಸಂದರ್ಭದಲ್ಲಿಯೂ ಮುಸಲ್ಮಾನರು ಮುಂದಕ್ಕೆ ಬಾರದೆ ಹಿಂದೆಯೇ ನಿಂತರೆ ವಿಜಯವಿರಲಾರದು. ಹಿಂದೂ ಮುಸಲ್ಮಾನರ ಐಕ್ಯದ ಠರಾವು ಕಳೆದ ಕಾಂಗ್ರೆಸ್ಸಿನಲ್ಲಿ ಮಂಜೂರಾಗಿದೆ. ಠರಾವು ಮಂಜೂರಾದ ಮೇಲೆ ಹಿಂದೂ ಮುಸಲ್ಮಾನರು ಬೇರೆ ಬೇರೆಯಾದರೆ ಠರಾವಿಗೆ ಬೆಲೆ ಬಾರದಂತೆ ಆಯಿತು. ಇಂತಹ ಸುಸಂದರ್ಭದಲ್ಲಿಯೇ ಹಿಂದೂ-ಮುಸಲ್ಮಾನರೊಟ್ಟಾಗಿ ಕಾಂಗ್ರೆಸ್ ಠರಾವನ್ನು ಮನ್ನಿಸಬೇಕು. ಹಿಂದೂ ದೇಶದ ಹಿತವನ್ನು ಸಾಧಿಸಬೇಕು. ಕೆಲವರು ಮಾತ್ರ ಅಂದರೆ ಹಿಂದೂಗಳಲ್ಲಿ ಕೆಲವರು, ಮುಸಲ್ಮಾನರಲ್ಲಿ ಕೆಲವರು ಸ್ಯಾಮನ್ ಕಮಿಶನಿನೊಂದಿಗೆ ಕೂಡಬಹುದು. ಹಾಗೆ ಮಾಡಿದರೆ ಅವರಿಗೆ ಬಿರುದಾವಳಿಗಳೂ, ಪದವಿಗಳೂ ದೊರೆಯಬಹುದು. ಆದರೆ ಅದು ಅವರ ಸ್ವಾರ್ಥಾಭಿಲಾಷೆಯನ್ನು ತೋರಿಸುವುದು. ಸಮಾಜದೃಷ್ಟಿಯಿಂದ ನೋಡಿದರೆ ಅವರು ದ್ರೋಹಿಗಳೆಂದೇ ಕಾಣುವರು. ಹಾಗೆ ದ್ರೋಹಿಗಳೆಂದೆನ್ನಿಸಿಕೊಳ್ಳಲು ಎಡೆಕೊಡದೆ ಸರ್ವ ಮುಸಲ್ಮಾನರೂ ಏಕಪ್ರಕಾರವಾಗಿ ಕಮಿಶನಿಗೆ ವಿರೋಧವಾಗಿ ನಿಂತು ತಮ್ಮ ದೇಶವಾತ್ಸಲ್ಯವನ್ನೂ ಬಂಧು ಪ್ರೇಮವನ್ನೂ ಬಿಚ್ಚಿ ತೋರಿಸಬೇಕು ಎಂದು ಹೇಳಿದರು.

ಈ ಪ್ರಕಾರ ಅನೇಕ ಮುಸಲ್ಮಾನರ ಮತ್ತು ಹಿಂದೂಗಳ ಭಾಷಣಗಳಾದ ತರುವಾಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು. ಮುಸಲ್ಮಾನರು ಸ್ಯಾಮನ್ ಕಮಿಶನಿಗೆ ಅಖಂಡ ಬಹಿಷ್ಕಾರವನ್ನು ಹಾಕಬೇಕೆಂದೇ ಮಂಜೂರಾಯಿತು. ಫೆಬ್ರವರಿ ೩ನೇ ತಾರೀಕಿನ ದಿನ ಹರತಾಳವನ್ನು ಆಚರಿಸಿ ಕಮಿಶನಿಗೆ ಹಿಂದೂ ದೇಶದಲ್ಲಿ ಪ್ರವೇಶವೇ ಇಲ್ಲದಂತೆ ಮಾಡಬೇಕೆಂದಾಯಿತು.

ಶ್ರೀ ಸ್ವಾಮಿ ನಿತ್ಯಾನಂದರವರ

ಪರಮಾರ್ಥ ಸಾಧನೆಗಳನ್ನು ಕುರಿತಾದ

ಬೋಧಾಮೃತ ಸಂಗ್ರಹ.

ಚಿದಾಕಾಶ ಗೀತಾ
ಆತ್ಮ ಪ್ರಭಾವ

ಪುಟಗಳಲ್ಲಿ, ಶ್ರೀ ಸ್ವಾಮಿಯವರು 1924ರಿಂದ ... ಅಗಾಗ್ಯೆ ಬೋಧಿಸಿದ ತತ್ವೋಪದೇಶಗಳನ್ನು ... ತಿಯೋ ಸುಲಭ ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ... ಗದದಲ್ಲಿ ಸುಂದರ ಅಕ್ಷರಗಳಲ್ಲಿ, ಶ್ರೀ ಸ್ವಾಮಿ ... ಚಿತ್ರ ಮತ್ತು ಏಕಾಗ್ರತೆ ಅಧ್ಯಾಸಕ್ಕಾಗಿ ... ಒಡನೆ, ಉತ್ತಮವಾಗಿ ಮುದ್ರಿಸಿ, ದಪ್ಪ ... ನಲ್ಲಿ ಚಿನ್ನದ ಅಕ್ಷರಗಳಲ್ಲಿ ಕೆತ್ತಿದ ಹೆಸರುಳ್ಳ ... ಥವು. ಶ್ರೀ ಸ್ವಾಮಿಯವರು ಈ ಜಿಲ್ಲೆಯಲ್ಲಿ ... ತರು. ಇವರಿಂದ ಭಕ್ತಿ, ಜ್ಞಾನ, ವೈರಾಗ್ಯ, ಪುರುಷಾರ್ಥ ಸಾಧನೆ, ಆತ್ಮ ಶಕ್ತಿ, ಪ್ರಾಣಾ ... ಚಕ್ರ, ಯೋಗಸಾಧನೆ, ಸಾಕ್ಷಾತ್ಕಾರ ಇತ್ಯಾದಿ ... ಯೋಗ್ಯ ಉಪದೇಶವನ್ನು ಓದಿಕೊಳ್ಳಬೇಕೆಂದಿರು ... ಕ್ಕೆ ಅತ್ಯುಪಯುಕ್ತವಾದ ಗ್ರಂಥ.

... ರೂಪಾಯಿ ಮಾತ್ರ.

ವಿ. ಪಿ.ಯಿಂದ 1—4—0.

ಶೆಣ್ಯೆ ಬ್ರದರ್ಸ್ ಎಂಡ್ ಕೋ.

ರಥಬೀದಿ, ಮಂಗಳೂರು,

ತ್ವರೆಮಾಡಿರಿ !!

1928ನೇ ವರುಷದ

...ಕೆಟ್ ಡೈರಿ

...ಕೇಟೂ ಇರುವ ದೊಡ್ಡ ಸೈಜಿನ ಡೈರಿ	೧೪ ಆಣೆ
...ದಾ ಡೈರಿ	೧೦ ಆಣೆ
...ಳ ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
...ಜಿನ ಡೈರಿ	೮ ಆಣೆ
...ದಾ ಡೈರಿ.	೭ ಆಣೆ
...ಬ್ಯಾಂಡಿನ ಡೈರಿ	೬ ಆಣೆ

...ರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,

...ದ ಬೆಲೆಗೆ ಅಪ್ರಿತವಾದ ಬೆಳಕು,

...ಒಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯು ವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ಯಿತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸು ಗಳು, ಪ್ರತಿ ಒಬ್ಬರ ಕೈಲಿ ಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ ...ಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ ...ಲ್ಯಾಂಪುಗಳು, ಎಲೆಕ್ಟ್ರಿಕ್ ...ಗಳು, ರೋಜಾ ಹುವ್ವಿನ ...ಲ್ಯಾಟಗಳು, ಬೆಂಕಿ ... ಮತ್ತು ಸಿಗರೆಟ್ ಹಚ್ಚುವ ...ಗಳು ಮತ್ತು ಇವುಗಳೆಲ ...ಸಾಮಾನುಗಳು ಸಹ ...ಬೆಲೆಗೆ ನಮ್ಮಲ್ಲಿ ದೊರೆಯು ...ಪರೀಕ್ಷಿಸಿ ತೃಪ್ತಿಪಡಿರಿ.

... ವಗೈರೆ ಪಡೆಯಲಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,

...ಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

(...-11-27) ನಗರ್ತಪೇಟೆ, ಬೆಂಗಳೂರು ಸಿಟಿ

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕಲಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯು ಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿ ಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ವಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡು ವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿ ಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗ ಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ ಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆಯುರ್ವೇದ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.

,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಶನ್ —

ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,

ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡು ವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ,

ನಂ. 26 ಬ್ರಾಡ್ವೇ, ಮದ್ರಾಸ್,

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds ,, 313,100—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore, 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವ ವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿ ದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ,
ಮಂಗಳೂರು ಟಿಪಾಗೆ ಮಾತ್ರ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುತರಾನ ಕೆಲಸಲು ಯೋಗ್ಯವಾದ ಕಲ್ಲುಗಳು, ಮುತ್ತುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅಚ್ಚುಕಟ್ಟಾಗಿ ... ತಯಾರಿಸಿದ ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟು ಹಾಜರಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಚೊಕ್ಕಟವಾದಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘುವೇಂದ್ರಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

(21-10-'27) ಅವಿನ್ಯೂ ರೋಡು, ಬೆಂಗಳೂರು ಸಿಟಿ,

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತೀ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ದಿರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೦ನೇ ಶುಕ್ರವಾರ ಫೆಬ್ರವರಿ ೧೯೨೮. ಸಂಚಿಕೆ ೬

THE CANARA BANKING CORPORATION,

UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲ್ಪಟ್ಟಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉಳುಕು, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ರಾಗದ ಪೆಟ್ಟಿಗೆಗಳು



Batliwala's Preparations Cover All Your Needs.

A NAME THAT MERIT HAS MADE FAMOUS.

೪೦ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್ ದೊರೆಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

LIBERAL DISCOUNT TO TRADE

[illegible] WORLI, DADAR, BOMBAY.

ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

[illegible] Road P. O. Cadell Road, Bombay. No. 14.

... ಲೋಧ್ರ

ಡಾ. [illegible] ಕೇಸರೀ ಕುಟೀರಂ, P. B. 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

[illegible] ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.



ಟೈಂಪೀಸ್ ಸಹಿತ ಬೆಲೆ 1ಕ್ಕೆ 2—8—0.

1ಕ್ಕೆ 7—0—0.

ವಿಳಾಸ:— ಪೀಟರ್ ವಾಚ್ ಕಂಪೆನಿ, ವಿಳಾಸ:— ವಿ. ಎಸ್. ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ. 105, ಮದರಾಸು.

'ಅಂಬಾ ಕಾಯಿತ್'

ಶಿವರಾಮ ಭಟ್ಟ ತೆಂಗಿನಮನೆ;

೨೦—೨—'೨೮

ಶಾಲಿವಾಹನ ಶಕೆ ೧೮೪೯ನೆಯ ಪ್ರಭವ ಸಂವತ್ಸರದ ಮಾಘ ಶು॥ ೯ ಶನಿವಾರದಿಂದ ಪ್ರಭವ ಸಂವತ್ಸರದ ಮಾಘ ಬ॥ ೧೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೭ನೆಯ. ಧನು (ಬೆಂಡರ್)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ. ಉ.	ಸೂರ್ಯ. ಅಸ್ತ
11	ಶನಿ	೫	೧ ೫೮	ಚಿತ್ರಾ	೪೩ ೧	೨೮	6.57	6.34
12	ರವಿ	೬	೬. ೫೯	ಸ್ವಾತಿ	೪೯.೩೦	೨೯	6 57	6 34
13	ಸೋಮ	೭	೧೧.೫೭	ವಿಶಾಖಾ	೨೧.೧೪	೧	6 56	6 31
14	ಮಂಗಳ	೮	೧೭.೧೪	ಅನುರಾಧಾ	೫೫.೪೭	೨	6 56	6.35
15	ಬುಧ	೯	೨೧ ೪೬	ಅನುರಾಧಾ	೬೦. ೦	೩	6 56	6.35
16	ಗುರು	೧೦	೨೫. ೦	ಜ್ಯೇಷ್ಠಾ	೧. ೪೬	೪	6.55	6 36
17	ಶುಕ್ರ	೧೧	೨೭.೩೨	ಮೂಲಾ	೬. ೪೪	೫	6.55	6.36

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ಇವತ್ತು ಮಳೆ	ಒಟ್ಟು ಮಳೆ
3	91— 3	74— 2	0—45	—
4	77 0	72— 2	0—42	—
5	85— 2	72— 2	—	—
6	88— 8	74— 7	—	—
7	89— 2	75— 8	0—11	—
8	88— 8	75— 7	—	—
9	90— 1	76— 3	—	—
				128-19

ಮಂಗಳೂರಿನ ಪೇಟೆ ಧಾರಣೆ.

ದಿನಸು	ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮಸೂರಿ	6- 12	7—10
ಹೊಸ ಗುಡ್ಡ	6— 8	6—12
ಸುಗ್ಗಿ	6— 4	6- 10
ಹೊಸ ರಾಶಿ	6— 0	6— 9
ಊರ ಅವ್ವಲ್ ಬೆಳ್ತಿಗೆ	7-- 4	8— 0
ರಂಗೂನು ಬೆಳ್ತಿಗೆ ಗೋಣಿ ೧	13— 8	14— 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	7— 0	7— 4
ಗೋಧಿ ಗೋಣಿ ೧ಕ್ಕೆ	17— 8	18 0
ಹುರುಳಿಗೋಣಿ ೧ಕ್ಕೆ	8— 8	10 0
ಕಡಲೆಗೋಣಿ ೧ಕ್ಕೆ	13— 8	14— 0
ಕೆಂಪುಗೋಣಿ ೧ಕ್ಕೆ	17— 0	17- 8
ಕೆಂಪುಬೇಳೆ ಗೋಣಿ ೧ಕ್ಕೆ	19— 0	23- 0
ಉದ್ದು ಗೋಣಿ ೧ಕ್ಕೆ	14— 0	14 8
ಹೆಸರುಗೋಣಿ ೧ಕ್ಕೆ	15— 0	15 8
ಊರು ಬೆಲ್ಲ ಖಂಡಿ ೧ಕ್ಕೆ	35— 0	45 0
ಉಪ್ಪು ಗೋಣಿ ೧ಕ್ಕೆ	4— 0	4— 4
ಕೊಬ್ಬರಿ ಖಂಡಿ ೧ಕ್ಕೆ	130- 0	-
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	49— 0	50— 0
ಎಳ್ಳಿಂಡಿ ಖಂಡಿ ೧ಕ್ಕೆ	60— 0	55— 0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	8— 4	8 5
ಎಳ್ಳೆಣ್ಣೆ ಮುಡಿ ೧ಕ್ಕೆ	7— 0	8 - 0
ಹರಳೆ ಎಣ್ಣೆ ಬೆಳ್ಳಿಗೆ ೧ಕ್ಕೆ	6— 8	7 0
ಕೋರಿನ ಸಕ್ಕರೆ ಮುಡಿ ೧ಕ್ಕೆ	3— 10	3 12
ಊರ ಮೆಣಸಿನಕಾಯಿ ಮುಡಿ ೧ಕ್ಕೆ	8— 0	8 4
ಸಾಸಿವೆ ಮುಡಿ ೧ಕ್ಕೆ	9— 0	—
ಕೊತ್ತಂಬರಿ ಮುಡಿ ೧ಕ್ಕೆ	7— 8	7—12
ಕಾಫಿ ಖಂಡಿ ೧ಕ್ಕೆ	335— 0	400-- 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	145- 0	170-- 0
ಕಾಳುಮೆಣಸು ಖಂಡಿ ೧ಕ್ಕೆ	420— 0	450-
ಯಾಲಕ್ಕಿ, ಪೌಂಡು ೧ಕ್ಕೆ	50— 0	54— 0
ಗೇರುಬೀಜ ಮುಡಿ ೧ಕ್ಕೆ	3—12	4— 4
ಕಳ್ಳೆ ಖಂಡಿ ೧ಕ್ಕೆ	37— 8	40 - 0
ಹುಂಡ್ಯ ಹಸಿತು ಮುಡಿ ೧ಕ್ಕೆ	15- 0	15 - 0
ಹುಂಡ್ಯ [illegible] ಮುಡಿ ೧ಕ್ಕೆ	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ	15— 0	—
ಹಿತ್ತಾಳೆ ಹಳತು ಮುಡಿ ೧ಕ್ಕೆ	15— 0	—
ಜವಳಿ	13— 7	—

ವಿವಿಧ ವಿಷಯಗಳು.

ಹಿಂದೂ ಜಗದ್ಗುರು!

ಗಾವುಸಿಂಗ ಜಿಲ್ಲೆಯ ... "ಗಾವುಸಿಂಗ ಹಿಂದೂದೇಶದ ಜಯಸಿಂಹ" ...

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಜಡ್ಜರವರ ಕೋರ್ಟಿನಲ್ಲಿ.

O. P. 16/1928.

ಎಚ್. ಹಂಪರಂಪೋತಿ—ಅರ್ಜಿದಾರ

ಮತ್ತು

ರತ್ನಾವತಿ ಅಮ್ಮ—ರೆಸ್ಪೊಂಡೆಂಟಳು.

... ಸದರಿ ಅರ್ಜಿಯು ತಾ. 22-2-'28ಕ್ಕೆ ತನ್ನಿಗೆ ಇಟ್ಟಿರುತ್ತದೆ. ...

ಮಂಗಳೂರು, ತಾ. 6-2-'28. } K. GOPALA RAO, B. A. B. L., Vakil for Petitioner.

ಇಸ್ತಿಹಾರು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಕೋರ್ಟಿನಲ್ಲಿ

ಓ. ಪಿ. ನಂಬ್ರ 4/28.

ಮ್ಯಾನರ ಮೇಟ್ರಿಕ್ ಸಾಲ್ವಾಣಾನ ದೇಹ ಮತ್ತು ಆಸ್ತಿಗಳ ಗಾರ್ಡಿಯನ್‌ಶಿಪ್ ಕುರಿತು.—

E. P ಸಾಲ್ವಾಣಾ ಮತ್ತು ಅರ್ಜಿದಾರ

ಸ್ಟೆಲ್ಲಾ ಸಾಲ್ವಾಣಾ ...ರೆಸ್ಪಾಂಡೆಂಟಳು

... ಸದರಿ ಅರ್ಜಿಯು ತಾ. 8-3-28ಕ್ಕೆ ತನ್ನಿಗೆ ಇಟ್ಟಿದೆ. ...

PANGAL SUBBA RAO,

10—2—'28. Vakil for Petitioner.

ಮದರಾಸು ಎಲಿಮೆಂಟರಿ ಎಜ್ಯುಕೇಶನ್ ಬಿಲ್.

...

ಸ್ಕೂಲ್ ಕಮಿಟಿ.

... (ಸಶೇಷ)

WANTED

A Head Clerk for the office of the Mangalore Circle Temple Committee. Starting salary of Rs. 30 to Rs. 40 a month according to qualifications. Apply with testimonials to the undersigned, stating age and qualifications before the 27th of February 1928.

(Sd) K. Sadasiva Adiga,
President.

Mangalore, 5—2—'28. } THE MANGALORE CIRCLE TEMPLE COMMITTEE.

ವೇಣೂರು

ಗೋಮಟೇಶ್ವರ ಸ್ವಾಮಿಯವರ

ಮಸ್ತಕಾಭಿಷೇಕ ಸಮಾರಂಭ.

ಲೇಖಕ:—ಎನ್. ಗಣಪತಿ ರಾವ್ ಐಗಳ್.

ವೇಣೂರಿನ ವಿಷಯವೂ ಭುಜಬಲಿ ಸ್ವಾಮಿಯವರ ಜೀವನಚರಿತ್ರವೂ ಕಳೆದ ಎರಡು ಸಂಚಿಕೆಗಳಲ್ಲಿ ಪ್ರಕಟವಾಗಿತ್ತು. ವೇಣೂರಲ್ಲಿರುವ ಬಸದಿಗಳ ವಿಷಯವೂ ಅವುಗಳಲ್ಲಿರುವ ಶಾಸನಗಳ ವಿಷಯವೂ ಸ್ವಲ್ಪಮಟ್ಟಿಗೆ ಇಲ್ಲಿ ಕೊಟ್ಟಿದೆ.

ಮೂಡಬಿದರೆಯ ಗುರುಗಳಾಗಿದ್ದ [illegible] ಮೂಡಬಿದರೆಯ ತ್ರಿಭುವನತಿಲಕ ಚೈತ್ಯಾಲಯವನು ಕಟ್ಟಿಸಿದನಂತರ [illegible] ಎಂಬ ಪುಸ್ತಕವನ್ನು ಬರೆದರು. ಅದರಲ್ಲಿ [illegible] ಬಸದಿಗಳ ಚರಿತ್ರೆಯನ್ನೂ [illegible] ಬಸದಿಗಳ ಚರಿತ್ರೆಯನ್ನೂ [illegible] ವಿಷಯಗಳನ್ನೂ ಬರೆದಿರುವರು. ಅದರಲ್ಲಿ ವೇಣೂರಿನ ಬಸದಿಯ ವಿಷಯ ಹೀಗೆ ಬರೆದಿದೆ. ವೇಣೂರಿನೊಳು ಕಟ್ಟಿದ ಭುಜಬಲಿ [illegible] ಶಾಂತೀಶ [illegible] ಬಸದಿಗಳು [illegible] ಪೂರ್ಣನಾಗಿ [illegible] ಇದರ ತಾತ್ಪರ್ಯವೇನೆಂದರೆ, ವೇಣೂರಿನಲ್ಲಿ ಭುಜಬಲಿಸ್ವಾಮಿಯವರ ಪ್ರತಿಮೆಯು [illegible] ತ್ತದೆ. ಇದರ ಮುಂಗಡೆ ಬಸದಿಯಲ್ಲಿ ಚಂದ್ರನಾಥ ಬಸದಿ ಇದೆ. ಬಲದಿಕ್ಕಿನಲ್ಲಿ ಶಾಂತೀಶ ಬಸದಿಗಳು ಇವೆ. [illegible] ಶ್ವರ (ಭುಜಬಲಿ) ಸ್ವಾಮಿಯವರ ಬಸದಿಯ [illegible] ಹೊರಗಡೆ ದಕ್ಷಿಣ ದಿಕ್ಕಿನಲ್ಲಿ ಪಾರ್ಶ್ವನಾಥ ಸ್ವಾಮಿಯವರು ನಿಂತುಕೊಂಡ ಪ್ರತಿಮೆ ಇರುವ ಬಸದಿ ಇದೆ. ಇನ್ನು ಈ ಬಸದಿಗಳಿಂದ ಅರ್ಧ ಮೈಲು ದೂರದಲ್ಲಿ ಪೂರ್ವದಿಕ್ಕಿನಲ್ಲಿ [illegible] ದಲ್ಲಿ ನಿಂತುಕೊಂಡಿರುವ ೨೪ ತೀರ್ಥಂಕರರ ಬಸದಿ ಇದೆ. ಶಾಂತೀಶ ಬಸದಿಯ ಎಡದಿಕ್ಕಿನಲ್ಲಿ [illegible] ತಿರುವ ಪುರುವಿಗಜಸ್ವಾಧೀಶ ಸ್ವಾಮಿಯವರ ಪ್ರತಿಮೆ ಇರುವ ಬಸದಿ ಇದೆ.

ಶಾಸನಗಳು.

ಭುಜಬಲಿ ಸ್ವಾಮಿಯವರ ಬಲದಿಕ್ಕಿನಲ್ಲಿರುವ ಶಿಲಾಶಾಸನದಲ್ಲಿ ಹೀಗೆ ಬರೆದಿದೆ.—ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ‖ ೧ ‖ ಶಕವರ್ಷೇಷ್ವತೀತೇಷು [illegible] ವರ್ತಮಾನೇ ಶೋಭಕೃತಿ ವತ್ಸರೇ ಫಾಲ್ಗುಣಾಖ್ಯಕೇ ‖ ೨ ‖ ಮಾಸೇಥ ಶುಕ್ಲಪಕ್ಷೇಧ್ದ ದಶಮ್ಯಾಂ ಗುರುಪುಷ್ಯಕೇ ಸಲ್ಲಗ್ನೇ ಮಿಥುನೇ ದೇಶಿಗಣಾಂಬರ ದಿನೇಶಿತುಃ ‖ ೩ ‖ ಬೆಳ್ಗುಳಾಖ್ಯಪುರೀ ಪಟ್ಟಾ ಕ್ಷೀರಾಂಬುಧಿ ನಿಶಾಪತೇ ‖ ಚಾರುಕೀರ್ತಿ ಮುನೇರ್ದಿವ್ಯ ವಾಕ್ಯಾ ವೇಣೂರುಪತ್ತನೇ ‖ ೪ ‖ ಶ್ರೀರಾಯ ಕುಮಾರಸ್ಯಾಥ ಚಾಮುಂಡ [illegible] ‖ ಪಾಂಡ್ಯರಾಜ್ಞಿ ಮಹಾದೇವ್ಯಾಃ ಸುಪುತ್ರ ಪಾಂಡ್ಯ ಭೂಪತೇ ‖ ೫ ‖ ಅನುಜಸ್ತಿಮ್ಮರಾಜಾಖ್ಯಸ್ತಾ ಮುಂಡಾನ್ವಯ ಭೂಷಣ ‖ ಅಸ್ಥಾಪಯತ್ಪ್ರತಿಷ್ಠಾಸ್ಯ ಭುಜಬಲ್ಯಾಖ್ಯಕಂ ಜಿನಂ ‖ ೬ ‖

‖ ಶುಭಮಸ್ತು ‖

ತಾತ್ಪರ್ಯ—ಮೂರು ಲೋಕಗಳ ಒಡೆಯನಾದ ಯಾವ ಜಿನನ ಶಾಸನವು ಶ್ರೀಯಿಂದ ಕೂಡಿಯೂ ಅತೀ ಅಗಾಧವಾದ ಸ್ಯಾದ್ವಾದ ಎಂಬ ಲಕ್ಷಣದಿಂದ ಕೂಡಿದುದಾಗಿ ಇದೆಯೋ ಆ ಶಾಸನವು ಜಯಿಸಲಿ. ಶಾಲಿವಾಹನ ಶಕವರ್ಷ ೧೫೨೬ನೇ ಶೋಭಕೃತು ಸಂವತ್ಸರದ ಫಾಲ್ಗುಣ ಮಾಸದ ಶುಕ್ಲಪಕ್ಷ ದಶಮಿಯು ಗುರುವಾರ ಚಂದ್ರನು ಪುಷ್ಯಾ ನಕ್ಷತ್ರದಲ್ಲಿರುವಾಗ ಮಿಥುನ ಲಗ್ನದಲ್ಲಿ ದೇಶಗಣ ಎಂಬ ಆಕಾಶಕ್ಕೆ ಸೂರ್ಯನೋಪಾದಿಯಲ್ಲಿರುವ ಶ್ರವಣ ಬೆಳಗುಳದಲ್ಲಿಯ ಗುರುಪಟ್ಟ ಎಂಬ ಕ್ಷೀರಸಮುದ್ರಕ್ಕೆ ಚಂದ್ರನಂತಿರುವ ಚಾರುಕೀರ್ತಿ ಎಂಬ ಯತಿಗಳ ದಿವ್ಯ ಆಜ್ಞೆಯನ್ನು ಅನುಸರಿಸಿ ವೇಣೂರು ಪಟ್ಟಣದಲ್ಲಿ ಶ್ರೀ ರಾಯಕುಮಾರ ಅಜಿಲರ ಮಗಳ ಗಂಡನೂ ಅದೇ ಅಜಿಲರ ಸಹೋದರಿಯಾದ ಪಾಂಡ್ಯಕ ದೇವಿಯ ಮಗನೂ, ಪಾಂಡ್ಯರಾಯನ ತಮ್ಮನೂ, ಚಾಮುಂಡರಾಯನ ಕುಲಕ್ಕೆ ಭೂಷಿತನೂ ಆದ ತಿಮ್ಮರಾಜನು ಭುಜಬಲಿ ಎಂಬ ಹೆಸರುಳ್ಳ ಜಿನನ ಮೂರ್ತಿಯನ್ನು ಪ್ರತಿಷ್ಠಿಸಿದನು.

ಭುಜಬಲಿಯವರ ವಿಷಯದಲ್ಲಿರುವ ಶಾಸನದಲ್ಲಿ ಕನ್ನಡ ವೃತ್ತದಲ್ಲಿ ಹೀಗಿದೆ.

ಶ್ರೀ ಶಕವರ್ಷಮಂಗಣಿಸೆನಾಸಿರದಿಂ ಮಿಗುವಯ್ದು [illegible] ಮುಳ್ಳ | ಪಡಿದಿಪ್ಪತ್ತಾರನೆಯ ಶೋಭಕೃತಬ್ದ ಫಾಲ್ಗುಣ [illegible] ಮಾ ‖ ಸಾತ್ವಿಕ ಶುಕ್ಲಪಕ್ಷ ದಶಮಿ ಗುರುಪಂಡಿತದೇವನ ದಿವ್ಯವಾಕ್ಯದಿಂದ ‖ ೧ ‖ ರಾಯಕುಮಾರ ನೊಪ್ಪುವಳಿಯಂ ಸತಿ ಪಾಂಡ್ಯಕ ದೇವಿಯ ಪುತ್ರನತ್ಯನೋ ‖ ಸೋಮಾಯಿತ [illegible] ಭೂಮಿಪ್ಯ [illegible] ಧೇಯನುದಾರ ಪುಂಬಳಿಕೆ ಪಟ್ಟಣನಾಳ್ವ ನೃಪಾಗ್ರಣಿ ತಿಮ್ಮ ಭೂಭುಜಂ ‖ ಶ್ರೀಯುತನಂ ಪ್ರತಿಷ್ಠಿಸಿದ ನಾದಿಜನಾಕ್ಯಜಿನಂ ಜಿನ ಗುಮ್ಮಟೇಶನಂ ‖ ೨ ‖

ತಾತ್ಪರ್ಯ—ಶ್ರೀ ಶಾಲಿವಾಹನ ಶಕವರ್ಷ ೧೫೨೬ನೇ ಶೋಭಕೃತು ಸಂವತ್ಸರದ ಫಾಲ್ಗುಣ ಮಾಸದ ಶುಕ್ಲಪಕ್ಷದ ದಶಮಿಯು ಚಂದ್ರನು ಪುಷ್ಯಾ ನಕ್ಷತ್ರದಲ್ಲಿ ಗುರುವಾರ ಮಿಥುನ ಲಗ್ನದಲ್ಲಿ ದೇಶಿಯ ಗಣ [illegible] ಪಂಡಿತದೇವನೆಂಬ ಗುರುವಿನ ದಿವ್ಯವಾದ ಅಪ್ಪಣೆಯು ಮೇರೆಗೆ ರಾಯಕುಮಾರನ ಮಗಳನ್ನೇ ಅವನ ಸಹೋದರಿಯಾದ ಪಾಂಡ್ಯಕ ದೇವಿಯ ಮಗನೂ [illegible] ತಮ್ಮನೂ [illegible] ಪುಂಬಳಿಕೆ ಪಟ್ಟಣವನ್ನಾಳುವ [illegible] ಗೊಮ್ಮಟೇಶ್ವರ ಜಿನನ ಪ್ರತಿಷ್ಠೆಯನ್ನು ಪ್ರತಿಷ್ಠಿಸಿದನು [illegible]

ಅಭಿಷೇಕ ಮಹೋತ್ಸವವು

[illegible]

ಸ್ಥಾನದಲ್ಲಿ [illegible] ದೇವರ ಪೂಜೆ [illegible] ದಾನ, ಮಾನ, ಜೋಪ [illegible] ಗಳನ್ನು ಕೊಡುತ್ತಿರುವವು. ಇದರಿಂದ [illegible] ಮನಸ್ಸು ಶಾಂತವಾಗಿರುವದಿಲ್ಲ. ಆದುದರಿಂದ ದೇವರ ಪೂಜೆ ಉತ್ಸವ ಮೊದಲಾದವುಗಳಲ್ಲಿಯೂ ಮನಸ್ಸು ಶಾಂತವನ್ನು ಹೊಂದಿ ಅವನಿಗೆ ಒಳ್ಳೇದಾಗಲಿ ಎಂದು ಶ್ರೀ ಜಿನೇಶ್ವರರು ನಾನಾ ತರದ ಧರ್ಮ ಕೆಲಸಗಳನ್ನು ಮಾಡುವಂತೆ ಆಜ್ಞಾಪಿಸಿರುವರು.

ಈ ಉದ್ದೇಶದಿಂದಲೇ ಶ್ರೀ ಬಾಹುಬಲಿ ಸ್ವಾಮಿಯವರಿಗೆ ಅಟ್ಟಳಿಗೆ ಕಟ್ಟಿ ಮಸ್ತಕಾಭಿಷೇಕ, ಪೂಜೆ, ಉತ್ಸವ ಮೊದಲಾದವುಗಳನ್ನು ಮಾಡುವರು. ಈ ಅಭಿಷೇಕ ಸ್ವಾಮಿಯವರು ಪೂರ್ವದಲ್ಲಿ ಈ ಸ್ವಾಮಿಯವರು ಮನುಷ್ಯಾವಸ್ಥೆಯಲ್ಲಿದ್ದು ಯಾವ ಉತ್ತಮ ಕಾರ್ಯಗಳನ್ನು ಮಾಡಿ, ವೈರಾಗ್ಯ ಪಡೆದು, ಮುನಿಯಾಗಿ ತಪಸ್ಸನ್ನಾಚರಿಸಿ, ಕೇವಲ ಜ್ಞಾನ ಪಡೆದು ಕಡೆಗೆ ಮೋಕ್ಷವನ್ನು ಹೊಂದಿ ಪರಬ್ರಹ್ಮಸ್ವರೂಪವನ್ನು ಹೊಂದಿದರು. ಅಂಥ ಇವರ ಸತ್ಕೃತ್ಯಗಳನ್ನು ಪುನಃ ಭಕ್ತಿಯಿಂದ ವಿಧಿಪ್ರಕಾರ ಮಾಡಿದರೆ ಕರ್ಮದಿಂದ ಬಿಡುಗಡೆಯಾಗಲು ಪ್ರಯತ್ನ ಮಾಡುವುದಕ್ಕೆ ಮನಸ್ಸು ಬರುವುದು. ಈ ಕಾರ್ಯದಿಂದ ಸಮಸ್ತ ಧರ್ಮ ದೇವತೆಗಳು ಸಂತುಷ್ಟರಾಗಿ ಇಹ ಸಂಪತ್ತುಗಳನ್ನು ಸಹ ಹೊಂದುವುದರಲ್ಲಿ ಸಹಾಯ ಮಾಡುವರು.

ಶ್ರೀ ಭುಜಬಲಿ ಸ್ವಾಮಿಯವರ ಮೂರ್ತಿಯು ದಿಗಂಬರ ಮೂರ್ತಿಯಾಗಿದೆ. ಪರಮ ಯೋಗಿಯಾಗಿ ಧ್ಯಾನಮಾಡಿ ಕರ್ಮಕ್ಷಯ ಮಾಡುವಂಥವರೆಲ್ಲರೂ ಎಲ್ಲಾ ವಸ್ತುಗಳ ಕಡೆಗೂ ನಿರ್ಲಕ್ಷ್ಯರಾದಿರುತ್ತಾರೆ. ಅಂಥಾ ಪರಮ ಯೋಗಿಗಳಿಗೆ ಶರೀರದ ಗೊಡವೆಯು ಸಹ ಇರುವದಿಲ್ಲ. ಇವರಿಗೆ ಲಜ್ಜೆ, ರಾಗ, ದ್ವೇಷ, ಮತ್ಸರ ಮೊದಲಾದ ಭಾವನೆಗಳು ಇರುವುದಿಲ್ಲ. ಆದುದರಿಂದ ಇಂಥಾ ಯೋಗಿಗಳು ದಿಗಂಬರರೇ ಆಗಿರುವರು. ಪರಮ ಯೋಗಿಗಳ ದಿಗಂಬರತ್ವವು ಪವಿತ್ರವಾದುದೆಂದು ಮಹಾಜ್ಞಾನಿಗಳೆಲ್ಲರೂ ಒಪ್ಪುವರು. ಜೈನರು ದೇವರ ವಿಗ್ರಹಗಳನ್ನೆಲ್ಲಾ ಅವರು ಮನುಷ್ಯ ಅವಸ್ಥೆಯಲ್ಲಿ ಪರಮ ದಿಗಂಬರ ಯೋಗಿಯಾಗಿರುವ ಆಕಾರದಲ್ಲಿಯೇ ತಯಾರಿಸುವರು. ಈ ಆಕಾರವೇ ಅರ್ಹಂತಾವಸ್ಥೆಯೂ ಇರುತ್ತದೆ. ಆತನು ಅರ್ಹಂತಾವಸ್ಥೆಯಲ್ಲಿರುವುದನ್ನೇ ಪ್ರತಿಬಿಂಬವಾಗಿ ಮಾಡಿ ಅದರ ಮೂಲಕ ಜಿನೇಶ್ವರನನ್ನು ಪೂಜಿಸುವರು.

ಅಟ್ಟಳಿಗೆಯ ಕೆಲಸ.

ಅಟ್ಟಳಿಗೆಯನ್ನು ಮಾಡಿಸುವುದಕ್ಕಾಗಿ ಜೈನ ಮಹನೀಯರೆಲ್ಲರೂ ಮರವನ್ನೂ ಹಣವನ್ನೂ ವಂತಿಗೆಯಿಂದ ಕೊಟ್ಟಿದ್ದರು. ಅಟ್ಟಳಿಗೆಯನ್ನು ಮಾಡಿಸುವ ಕೆಲಸವನ್ನು ಹೊಸಂಗಡಿ ಅರಸರು ವಹಿಸಿಕೊಂಡಿದ್ದರು. ಈ ಅಟ್ಟಳಿಗೆಯ ಕೆಲಸವನ್ನು ಮಾಡಿದವರು ಪುತ್ತೂರು ಮಹಾಲಿಂಗಾಚಾರಿಯವರು. ಅಟ್ಟಳಿಗೆಗೆ ೫ ಅಂತಸ್ತುಗಳು ಇದ್ದವು. ಇದರ ಮೇಲುಗಡೆಯಲ್ಲಿ ಬಹಳ ಅಂದವಾದ ನಕ್ಷೆಗಳಿರುವ ಮಾಡನ್ನು ಮಾಡಿ ಮಧ್ಯದಲ್ಲಿ ಬಹಳ ಅಂದವಾದ ಒಂದು ಕಲಶವನ್ನೂ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಲಶಗಳನ್ನೂ ಇಟ್ಟಿದ್ದರು.

ಮುಂದುಗಡೆಯಲ್ಲಿ ಬಣ್ಣದಿಂದ ಚಿತ್ರಿಸಿದ ೨೪ ತೀರ್ಥಂಕರ ಪ್ರತಿಮೆಗಳನ್ನು ಇಟ್ಟಿದ್ದರು. ಅಟ್ಟಳಿಗೆಯು ನೆಲದಿಂದ [illegible] ಎತ್ತರವಾಗಿತ್ತು. ಇದರ ಬಣ್ಣದ ಕೆಲಸಮಾಡಿದವರು [illegible] ಗಣಪತಿಶಾಸ್ತ್ರಿಯವರು. ಅಟ್ಟಳಿಗೆಯು [illegible] ನಾಗಿತ್ತು.

ಅಭಿಷೇಕ ಸಮಾರಂಭ ಪ್ರಾರಂಭ.

ಅಭಿಷೇಕ ಕೆಲಸದ ವಿಧಿಯು ಮಾಘ ಶುದ್ಧ ಬಿದಿಗೆಯು [illegible] ದಿವಾಗಳಿಗೆ ೯ಕ್ಕೆ ನಡಿಯುವ ಮೀನ ಲಗ್ನದಲ್ಲಿ [illegible] ತಿಮ್ಮಣ್ಣ ಅರಸರಾದ ಹರಿಶ್ಚಂದ್ರರಾಜ ಅಜಿಲರು [illegible] ಪ್ರತಿಷ್ಠಾ, ತೋರಣ ಮುಹೂರ್ತ, ವಿಮಾನ ಶುದ್ಧಿ, [illegible] ಚತ್ವರ ಶೋಧನ, ೯ ಕಲಶಗಳಿಂದ ಅಭಿಷೇಕ [illegible] ತಾ| ೩ಯು ದಿವಸ ವೇಣೂರು ಮಾಗಣೆಯವರು ವಾಸ್ತುಶಾಂತಿ ವಿಧಾನ, ಗ್ರಾಮಬಲಿ ೧೦೮ ಕಲಶ ಅಭಿಷೇಕ ಮಾಡಿಸಿದರು. ತಾ| ೪ ದಿವಸ ಬಂಗಾಡಿ ಮತ್ತು [illegible] ಮಾಗಣೆಯವರು ಮೃತ್ತಿಕಾಸಂಗ್ರಹಣ, ಅಂಕುರಾರ್ಪಣ, ಯಜ್ಞಶಾಲಾ ಪ್ರವೇಶನ, ಯಕ್ಷಾರಾಧನೆ ೧೦೮ ಕಲಶಗಳ ಅಭಿಷೇಕವನ್ನು ಮಾಡಿಸಿದರು. ತಾ| ೫ನೇ ಶುಕ್ರವಾರ [illegible] ಚೆನ್ನಪ್ಪ ಚೌಟರು ಮತ್ತು ಪಿಲ್ಲಂಬು ಆದಿರಾಜ [illegible] ಯಕ್ಷ ಪ್ರತಿಷ್ಠಾ, ಧ್ವಜಾರೋಹಣ, ಭೇರಿ [illegible] ಮಂಗಲ ಸೂತ್ರ ಬಂಧನ ೧೦೮ ಕಲಶಗಳ ಅಭಿಷೇಕ [illegible] ಮಾಡಿಸಿದರು. ತಾ| ೬ಯು ಶನಿವಾರ ಪಣಪಿಲು ಅರ [illegible] ಶೆಟ್ರು ನಿತ್ಯವಿಧಿ, ಶ್ರೀ ಪೀಠ ಯಂತ್ರಾರಾಧನೆ, [illegible] ವಿಧಾನ, ೧೦೮ ಕಲಶಾಭಿಷೇಕವನ್ನು ಮಾಡಿಸಿದರು. [illegible] ಆದಿತ್ಯವಾರ ಅಳದಂಗಡಿ ಮತ್ತು ಸುಳ್ಕೇರಿ ಮಾಗಣೆಯವರು ಶಾಂತಿಚಕ್ರ ಯಂತ್ರಾರಾಧನೆ, ಲಘುಶಾಂತಿ, ಜಲಾಗ್ನಿ [illegible] ೧೦೮ ಕಲಶಗಳ ಅಭಿಷೇಕವನ್ನು ಮಾಡಿಸಿದರು. [illegible] ಚಂದ್ರವಾರ ಕಿಜನಾರು ಶೇಶಪ್ಪ ಶೆಟ್ರು ನಿತ್ಯವಿಧಿ [illegible] ವಿಧಾನ ೧೦೮ ಕಲಶಾಭಿಷೇಕ ಮಾಡಿಸಿದರು. ತಾ| ೯ಯು ಕುಜವಾರ ಪೆರಂಜೆ ಮಾಗಣೆಯವರು [illegible] ಪ್ರತಿಷ್ಠಾ ವೇದಿ ಪ್ರತಿಷ್ಠಾ, ಬೃಹದ್ಯಾಗ ಮಂಡಲಾರಾಧನಾ, ಜಲಯಾತ್ರಾ ಮಹೋತ್ಸವ; ಮಾತುರಾಹ್ವಾನಾದಿ ಗರ್ಭಾವತಾರ ಕಲ್ಯಾಣ ೧೦೮ ಕಲಶಾಭಿಷೇಕ ಮಾಡಿಸಿದರು. ತಾ| ೧೦ ಬುಧವಾರ ಕಾಡುಬೆಟ್ಟು ಚೆನ್ನಪ್ಪಾಜ್ರಿಯವರು ಮತ್ತು ಅಜಿಲಮೊಗರು ಕೇಚಪ್ಪಾಜಿಲರು ಅಷ್ಟದಿಕ್ಪಾಲರು ಸಂಪ್ರೋಕ್ಷಣ, ಯಜಮಾನ ದರ್ಶನ, ಜನ್ಮಾಭಿಷೇಕ ಕಲ್ಯಾಣ. ೧೦೮ ಕಲಶಾಭಿಷೇಕ ಮಾಡಿಸಿದರು. ತಾ| ೧೧ಯು ಗುರುವಾರ ಮಿಜಾರು ಚಂದಯ ಹೆಗಡೆಯವರು ಮತ್ತು ಮಾಲದ ಬೆಟ್ಟು ನೇಮಿರಾಜ ಪಡಿವಾಳರು ರಾಜ್ಯಭಾರ ಪರಿನಿಷ್ಕ್ರಮಣ ಕಲ್ಯಾಣ ೩೦೮ ಕಲಶಾಭಿಷೇಕ ಮಾಡಿಸಿದರು. ತಾ| ೧೩ ಶುಕ್ರವಾರ ಕೊರಂಜಿ ಆದು ಹೆಗಡೆಯವರು ಮಂತ್ರನ್ಯಾಸಯುಕ್ತ ಕಲಶಾರೋಪಣಾ ರಾತ್ರೆ ಘಳಿಗೆ ೬-೧೫ಕ್ಕೆ ಉದಯಿಸುವ ಕನ್ಯಾಲಗ್ನದಲ್ಲಿ ಶ್ರೀ ಬಾಹುಬಲಿ ಸ್ವಾಮಿಯವರ ಕೈವಲ್ಯ ಜ್ಞಾನ ಕಲ್ಯಾಣ ರಥಾರೋಹಣ ೮೫೨ ಕಲಶಾಭಿಷೇಕ ಮಾಡಿಸಿದರು.

(ಮುಂದುವರಿಯುವುದು)

ಸ್ಫುಟ ವಿಚಾರಗಳು.

ಭಾರತ ಯುವಕ ಸಂಘ.

ಸಾಧು ವಸ್ವಾನಿಯವರು ಇದೇ ತಿಂಗಳ ತಾ. ೪ಕ್ಕೆ ಮಂಗಳೂರಿಗೆ ಬಂದಿದ್ದರು. ವಾಸ್ವಾನಿಯವರು ಸಾಮಾನ್ಯವಾಗಿ ಸುಶಿಕ್ಷಿತ ಭಾರತೀಯರಿಗೆಲ್ಲಾ ಪರಿಚಿತರು. ಗಹನವಾದ ವಿಚಾರಗಳನ್ನು ಅವರು ಆಗಾಗ ಹೊರಗೆಡಹುತ್ತಿರುವರಾದುದರಿಂದ ಲೇಖಗಳನ್ನು ಅವರ ಭಾಷಣಗಳನ್ನೂ ಎಲ್ಲರೂ ಬಹಳ ಆದರದಿಂದ ಓದುವರು. ಈ ಬಾರಿ ಅವರು ಭಾರತ ಯುವಕ ಸಂದೇಶವನ್ನು ಸಾರುತ್ತಾ ದೇಶ ಪರಿಭ್ರಮಣವನ್ನು ಮಾಡುತ್ತಿರುವರು. ಹಿಂದೂಸ್ಥಾನದ ಯುವಕ ಶಕ್ತಿಯು ಕಳೆಗುಂದುತ್ತಿದೆ, ಅದರ ಉತ್ಸಾಹವು ಕಡಿಮೆಯಾಗುತ್ತಿದೆ, ಅದರ ಕಾರ್ಯಾಸಕ್ತತೆಯು ನಿಶ್ಶಕ್ತಿಯ ಚಿಹ್ನೆಯನ್ನು ತೋರುತ್ತಿದೆ ಎಂಬುವುದು ಸ್ಪಷ್ಟವಿದೆ. ಯಾವ ದೇಶದಲ್ಲಿ ಯುವಕ ಶಕ್ತಿಯೇ ನಿರುತ್ತೇಜಕತೆಯು ಜಡತೆಯನ್ನು ಸೇರುವುದೋ ಆ ದೇಶವು ಪತನವನ್ನು ಖಂಡಿತವಾಗಿಯೂ ಸೇರುವುದು. ಆದರ್ಶದ ಪ್ರೇಮ, ಆತ್ಮಯಜ್ಞಕ್ಕಾಗಿ ಮನೋಸಿದ್ಧತೆ ಮತ್ತು ಕಾರ್ಯಪ್ರೇಮದ ಚಿರ ಅವಿಶ್ರಾಂತತೆ ಇವು ಯುವಕ ಶಕ್ತಿಯಲ್ಲಿ ಮಾತ್ರವೇ ಕಾಣುವ ಶ್ರೇಷ್ಠ ಗುಣಗಳು, ರಾಷ್ಟ್ರದ ಉತ್ಕ್ರಾಂತಿಗಳು, ಧರ್ಮಗಳ ಸ್ಥಾಪನೆಯು, ಸಮಾಜಗಳ ಮಹಾನ್ ಪರಿವರ್ತನಗಳು, ಈ ಯುವಕ ಶಕ್ತಿಯ ಶ್ರೇಷ್ಠ ಗುಣಗಳಿಂದಲೇ ಆಗಿರುತ್ತವೆ. ಜನಾಂಗದ ರಚನೆಯೂ, ಜನಾಂಗ ಶಕ್ತಿಯ ರಚನೆಯೂ ಯುವಕ ಜಾಗೃತಿಯಿಂದಾಗಬೇಕು. ಯುವಕ ಮಂಡಳಿಯ ಗರ್ಭದಲ್ಲಿ ಭಾವಿ ಕ್ರಾಂತಿಗಳ ಪ್ರತಿಧ್ವನಿಯಿದೆ. ಆದುದರಿಂದ ಶ್ರೀ ವಸ್ವಾನಿಯವರ ಈ ಸಂದೇಶವು ಎಲ್ಲರಿಗೂ ಆಕರ್ಷಕವಾಗಬೇಕು. ಮಂಗಳೂರಿನ ಯುವಕ ಸಮಾಜವು ಇದನ್ನು ಹೇಗೆ ಸ್ವಾಗತೀಕರಿಸಿಯದೆಂದು ನೋಡಲಿದೆ.

ಯುವಕ ಶಾರೀರಿಕ ಶಕ್ತಿ.

ಯುವಕ ಸಂದೇಶದಲ್ಲಿ ಶಾರೀರಿಕ ಶಕ್ತಿಯೂ ಪ್ರಮುಖ ಸ್ಥಾನ ಉಳ್ಳದಾಗಿದೆ. ಶ್ರೀ. ವಸ್ವಾನಿಯವರು ಕರ್ಮ ಸಾಯುಜ್ಯವನ್ನು ಸಾರಲು ಬಂದಿರುವರು. ಕರ್ಮ ಸಾಯುಜ್ಯಕ್ಕೆ ಶಾರೀರಕ ಶಕ್ತಿಯು ಅತ್ಯಂತ ಸಹಕಾರಿಯಾಗುವುದಾಗಿಯೂ, ಅದಕ್ಕಾಗಿ ದೇಹ ಧಾರ್ಢ್ಯವನ್ನು ಬೆಳೆಸಬೇಕಾಗಿಯೂ ಅವರ ಉಪದೇಶ. ಹಿಂದೀ ಯುವಕರ ಸಾಮಾನ್ಯ ದೇಹ ಧಾರ್ಢ್ಯವು ಚೆನ್ನಾಗಿರುವುದಿಲ್ಲ. ಇಷ್ಟು ಐಹಿಕ ವಾದಿಗಳೆಂದೂ ನೂತನ ನಾಗರಿಕತೆಯಿಂದ ಶಾರೀರಿಕ ಶಕ್ತಿಯ ಉಪಯೋಗದ ಆವಶ್ಯಕತೆಯನ್ನು ಕಡಿಮೆಮಾಡಿಕೊಂಡವರೆಂದೂ ಹೆಸರುಹೋದ ವಿಲಾಯತಿ ಜನರ ದೇಹಧಾರ್ಢ್ಯವನ್ನು ನೋಡಿದರೆ ಬಾಯಿ ನೀರಾಗಬೇಕು. ಹಿಂದೂಗಳು ಬರೆ ತತ್ವ ಸಂಧಾನದಲ್ಲಿ ಆಯುಷ್ಯವನ್ನು ವ್ಯಯಿಸಿ ಪೂರ್ವಜರ ವಿಷಯದಲ್ಲಿ ಬಡಾಯಿಯನ್ನು ಕೊಚ್ಚಿಕೊಳ್ಳುವುದರಲ್ಲಿಯೇ ಇರುವರಲ್ಲದೆ ಸ್ವಂತದ ಏಳಿಗೆಯನ್ನು ಸಾಧಿಸುವುದಿಲ್ಲ. "ಎಕ್ಸರ್ ಸೈಜ್" ಮತ್ತು "ಸ್ಪೋರ್ಟ್ಸ್" ಎಂದು "ಬೆಡ್ ಮಿಂಟನ್", "ಟೆನ್ನಿಸ್ ಕ್ರಿಕೆಟ್"ಗಳಿಂದ ನಾವು ಪಾಶ್ಚಾತ್ಯರನ್ನು ಅನುಕರಿಸುತ್ತಿರುವರಲ್ಲದೆ, ನಿಜವಾಗಿ ದೇಹಧಾರ್ಢ್ಯಕ್ಕಾಗಿ ಅವರು ಮಾಡುವ ಶ್ರೇಷ್ಠ ಕಾರ್ಯಗಳನ್ನು ನಾವು ಮಾಡುವುದಿಲ್ಲ. ಶ್ರೀ. ವಸ್ವಾನಿಯವರ ಸಂದೇಶದಿಂದಲೂ, ಭಾರತ ಯುವಕ ಸಂಘದ ಸರಿಯಾದ ವ್ಯವಸ್ಥೆಯು ನಮ್ಮಲ್ಲಿಯೂ ಆಗಿ, ಊರಿನ ಎಲ್ಲಾ ಯುವಕರು ಈ ಸಂಘದಲ್ಲಿ ಕೇಂದ್ರೀಕರಿಸಲ್ಪಟ್ಟು, ಶಾರೀರಿಕ ಬೆಳವಣಿಗೆಗಳಿಗೆ ಸರಿಯಾದ ಲಕ್ಷ್ಯ ಕೊಡಲ್ಪಡಲೆಂದು ನಮ್ಮ ಆಶಯವಿದೆ.

ಸುಧಾರಣೆಯ ಪರಮಾವಧಿ.

ಸುಧಾರಣೆಯು ಆಗಬೇಕು. ಸಮಾಜದ ಕುಂದು ಕೊರತೆಗಳನ್ನು ನಿವಾರಿಸಬೇಕು. ಆದರೆ ಸಮಾಜದಲ್ಲಿ ಭ್ರಷ್ಟ ವರ್ತನಗಳನ್ನು ಪ್ರೇರಿಸುವ ಸುಧಾರಣೆಗಳು ಬೇಕೆ? ಹಿಂದೂ ಸಮಾಜವನ್ನು ವೃದ್ಧಿಗೊಳಿಸಲಿಕ್ಕೆ ಮತಾಂತರವು ಅಗತ್ಯವಿದೆ. ಆದರೆ ಸಮಾಜಕ್ಕೆ ಕೆಟ್ಟ ಹೆಸರನ್ನು ತರುವವರ ಭೋಗೋನ್ಮತ್ತರ ತೃಪ್ತಿಗಾಗಿ ಮತಾಂತರವು ಅಗತ್ಯವಿದೆಯೇ? ಇಂದೋರಿನ ಮಾಜಿ ಮಹಾರಾಜರು ಮಿಸ್ ಮಿಲ್ಲರಳನ್ನು ಮದುವೆಯಾಗುವರೆಂದರೆ, ಆ ಮಿಸ್ ಮಿಲ್ಲರಳನ್ನು ಹಿಂದೂ ಮತಕ್ಕೆ ಮತಾಂತರ ಪಡಿಸಲಿಕ್ಕೆ ಹಿಂದೂ ಮಿಶನುಗಳು ಇಷ್ಟು ಆತುರಪಡುವುದೇಕೆ? ಒಬ್ಬ ಮುಸಲ್ಮಾನರು ಇಂದೂರಿನ ಮಾಜಿ ಮಹಾರಾಜರನ್ನು ಮುಸಲ್ಮಾನ ಮತಕ್ಕೆ ಸೇರಿಕೊಳ್ಳಲು ಕೇಳಿಕೊಂಡರಂತೆ; ಅವರನ್ನೂ ಮಿಸ್ ಮಿಲ್ಲರಳನ್ನೂ ಮುಸಲ್ಮಾನ ಮತಕ್ಕೆ ಸೇರಿಸಿ ಅವರಿಬ್ಬರನ್ನು ಮದುವೆಮಾಡಿ ಬಿಡುವರಂತೆ. ಯಾವುದೋ ಮತಾಂತರದಲ್ಲಿ ಬಹಳ ಆತುರವಿದ್ದ ಹಿಂದೂ ಮಿಶನ್ನಿನವರು ಕೂಡಲೇ ಈ ಮಹಾರಾಜರಿಗೆ ತಂತಿ ಕೊಟ್ಟರು—ನೀವು ಮಿಲ್ಲರಳನ್ನು ಮದುವೆಯಾಗುವುದು ಕೇಳಿ ಸಂತೋಷವಾಯಿತು; ನಾವು ಮಿಲ್ಲರಳನ್ನು ಮತಾಂತರ ಪಡಿಸಿ ನಿಮಗೆ ಮದುವೆಮಾಡಿ ಬಿಡುತ್ತೇವೆ—ಎಂದು. [ಮತಾಂತರ ಚಳವಳಿವು ಪಶುವರ್ತನವುಳ್ಳ ಜನರ ಭಯಂಕರ ಲಾಲಸೆಯ ತೃಪ್ತಿಗಾಗಿ ಉಪಯೋಗಿಸಿ, ಅದರಲ್ಲೂ ಅವರಿಗೆ—ನೀವು ಮಾಡುವುದು ಚೆನ್ನಾಯಿತು—ಎಂದು ಬೆನ್ನು ತಟ್ಟುವುದಾದರೆ, ಅಂತಹ ಚಳವಳಿವು ಇಲ್ಲದಿರುವುದೇ ಉತ್ತಮವೆಂದು ತೋರುವುದು. ಅದು ಮತಾಂತರ ಚಳವಳವನ್ನು ಅಪಹಾಸ್ಯಕ್ಕೆ ಗುರಿಮಾಡುವುದಲ್ಲದೆ ಸಮಾಜದಲ್ಲಿ ವಿಶೃಂಖಲತೆಯನ್ನು ಪ್ರೇರಿಸುವುದು.

ಮದ್ರಾಸಿನ ಹರತಾಳ.

ಮದ್ರಾಸಿನಲ್ಲಿ ಹರತಾಳವು ಆಚರಿಸಲ್ಪಟ್ಟಿತು. ಆ ಸಮಯದಲ್ಲಿ ಬಡಿದಾಟಗಳೂ ಆಗಿ ಪ್ರಾಣಹಾನಿಯೂ ಆಯಿತು. ಇದರ ಜವಾಬ್ದಾರಿಯು ಯಾರ ಮೇಲಿನದು? ಹಿಂದೂ ಪತ್ರಿಕೆಯೇ ಧುರೀಣರ ಧುರೀಣತ್ವದ ಅಭಾವವನ್ನು ದೂಷಿಸುತ್ತಿದೆ. ಆದರೆ ಹಂತಾಳ ಪ್ರಚಾರ ಸಮಯದಲ್ಲಿ ಹರತಾಳ ವಿರೋಧಿಗಳೇ ಗದ್ದಲವೆಬ್ಬಿಸಿರುವಾಗ್ಯೆ ಹರತಾಳಕ್ಕೆ ಕೆಟ್ಟ ಹೆಸರನ್ನು ತರುವ ಬಗ್ಗೆಯೇ ಈ ಹಿಂಸಾಚರಣೆಯು ಆಗಿಲ್ಲವೆನ್ನಲಾಗುವುದಿಲ್ಲ. ಮಾತ್ರವಲ್ಲದೆ ಇಂತಹ ಸಾರ್ವಜನಿಕ ಚಳವಳಗಳಲ್ಲಿ ಒಂದಿಷ್ಟು ಹಿಂಸೆಯು ಇರುವುದು ಆಶ್ಚರ್ಯವಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಾದರೆ ಒಂದು ಹರತಾಳವೆಂದರೆ ಪ್ರಚಂಡ ಕೊಲೆಗಳು ಆಗ ಇರುತ್ತಿರಲಿಲ್ಲ. ಸಾಕ್ಕೊ ಮತ್ತು ವೆಂಜೆಟ್ಟಿಯನ್ನು ಯುನೈಟೆಡ್ ಸ್ಟೇಟ್ಸಿನಲ್ಲಿ ಫಾಶೀ ವಿಧಿಸಿದುದಕ್ಕಾಗಿ ಯುರೋಪಿನಲ್ಲಿ ನಡೆದ ನಿಷೇಧಗಳು ಎಷ್ಟು ಹಿಂಸಾಚರಣೆಗೆ ಪರಿಣಾಮಹೊಂದಿವೆ ಎಂಬುದು ಎಲ್ಲರಿಗೂ ಗೊತ್ತೇ ಇದೆ. ಹಾಗಿರುವಾಗ ಈ ಹರತಾಳ ಸಮಯದಲ್ಲಿ ಆದ ಕಿಂಚಿತ್ ಬಲಾತ್ಕಾರಗಳನ್ನು ಪರ್ವತೀಕರಿಸುವುದರಲ್ಲಿ ಯಾವ ನ್ಯಾಯವೂ ಇರಲಾರದು. ಪಾಶ್ಚಾತ್ಯ ದೇಶಗಳ ಸಾರ್ವಜನಿಕ ಚಳವಳಗಳೊಡನೆ ನಮ್ಮ ದೇಶದ ಚಳವಳಗಳನ್ನು ಹೋಲಿಸಿದರೆ, ನಮ್ಮ ದೇಶದವುಗಳು ಎಷ್ಟೋ ಪಾಲು ಮೇಲಾಗಿವೆ.

ರಿಸರ್ವಬೇಂಕ್ ಬಿಲ್ಲು ಬಿದ್ದುಹೋಯಿತು.

ಸರಕಾರವು ಹೊಸದೊಂದು ರಿಸರ್ವ ಬೇಂಕ್ ಬಿಲ್ಲನ್ನು ತಯಾರಿಸಿ ಎಸೆಂಬ್ಲಿ ಮುಂದೆ ತಂದಿತು. ಮೊದಲು ತಂದ ಬಿಲ್ಲನ್ನು ಹಿಂತೆಗೆದುಕೊಳ್ಳದೆ ಇದನ್ನು ತರಬಾರದಾಗಿ ಪ್ರೆಸಿಡೆಂಟ್ ಪಟೇಲರು ನಿಷೇಧಿಸಿದುದರಿಂದ ಮೊದಲಿನ ಬಿಲ್ಲೇ ಚರ್ಚೆಯಾಯಿತು. ಅದರಲ್ಲಿ ಕೆಲವು ಅಂಶಗಳನ್ನು ತೆಗೆದುಹಾಕಬೇಕಾಗಿ ಸರಕಾರವು ತಂದ ಠರಾವು ಬಿದ್ದುಹೋದುದರಿಂದ ಸರಕಾರವು ಮೊದಲಿನ ಮಸೂದೆಯನ್ನು ತೆಗೆದುಹಾಕಿಯದಾಗಿ ತಿಳಿದುಬರುತ್ತಿದೆ. ಆದುದರಿಂದ ರಿಸರ್ವ ಬೇಂಕು ಸ್ಥಾಪನೆಯು ತತ್ಕಾಲಕ್ಕೆ ಸ್ಥಾಪಿಸಲ್ಪಡಲಾರದು. ಹಿಂದೂಸ್ಥಾನಕ್ಕೆ ರಿಸರ್ವ ಬೇಂಕಿನ ಆವಶ್ಯಕತೆಯಿರುವುದು ಎಲ್ಲರೂ ಒಪ್ಪತಕ್ಕದ್ದು. ಆ ಕಾರಣದಿಂದ ಹೇಗಾದರೂ ಮಾಡಿ ರಿಸರ್ವ ಬೇಂಕು ಸ್ಥಾಪನೆಯ ಬಗ್ಗೆ ಎಲ್ಲರೂ ಪ್ರಯತ್ನಿಸುವುದು ಉತ್ತಮವಿತ್ತು. ಇದರಲ್ಲೂ ಸರ್ ಬೆಸಿಲ್ ಬ್ಲೆಕೆಟ್ಟರು ಎಂಡನೆಯ ಬಾರಿ ತಂದ ಮಸೂದೆಯೂ ಕೆಟ್ಟದಿರಲಿಲ್ಲ. ಪರಸ್ಪರ ಸಹಕಾರದಿಂದ ಇದನ್ನಾದರೂ ತರಿಸಲಿಕ್ಕೆ ಪ್ರಯತ್ನಿಸಬಹುದಿತ್ತು. ಸದ್ಯಕ್ಕೆ ಇದು ಬಿದ್ದುಹೋದುದು ವಿಷಾದಕರವಿದೆ.

ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಹಿಂದೂಗಳು.

ಹಿಂದೂ ಮತದಲ್ಲಿ ನಾಲ್ಕು ವರ್ಣಗಳನ್ನು ಮಾಡಿ ನಾಲ್ಕನೇ ವರ್ಣದಲ್ಲಿ ಶೂದ್ರರನ್ನು ಪರಿಗಣಿಸುವರು. ಆದರೆ ಈ ಶೂದ್ರರ ಕಡೆಗೆ ಹಿಂದೂ ಮತವು ತೋರಿಸುವ ಆದರವೇ ಸಾಕಾಗಿದ್ದರೆ ಶೂದ್ರರನ್ನು ಹಿಂದೂಗಳಾಗಿ ಏಕೆ ಪರಿಗಣಿಸಬೇಕೆಂದು ನಮಗೆ ತಿಳಿಯುವುದಿಲ್ಲ. ನಮ್ಮ ಜಿಲ್ಲೆಯ ಶೂದ್ರರನ್ನು ನೋಡಿದರೆ ಅವರಿಗೂ ಹಿಂದೂ ಮತಕ್ಕೂ ಯಾವ ಸಂಬಂಧವೂ ತೋರುವುದಿಲ್ಲ. ಹಿಂದೂಮತದಲ್ಲಿರದ ಭೂತಾದಿಗಳ ಪೂಜೆಯೇ ಅವರ ಭಕ್ತಿ. ಒಂದು ಬಾರಿ ಅವರು ದೇವಸ್ಥಾನಕ್ಕೆ ಹೋದರೂ ಅದು ಹಿಂದೂಗಳು ಅವರೆನ್ನಲ್ಲಿ ಸ್ವಾಗತೀಕರಿಸಿದುದರಿಂದಲ್ಲ. ಸ್ವೇಚ್ಛೆಯ ಭಕ್ತಿಯಿಂದ ಅವರು ದೇವಸ್ಥಾನಕ್ಕೆ ಹೋಗುವರು; ದುಡ್ಡು ಸಿಕ್ಕುವುದೆಂದು ದೇವರನ್ನು ನೋಡಲು ಉಚ್ಚ ಜಾತಿಯ ಹಿಂದೂಗಳು ಬಿಡುವರು. ವೇದ ತತ್ವಗಳ ಮಾತಂತಿರಲಿ; ಸಾಮಾನ್ಯ ಪುರಾಣ ಬೋಧೆಯು ಕೂಡ ಅವರಿಗೆ ಆಗುವುದಿಲ್ಲ. ಒಂದಿಷ್ಟು ಕಲಿತವರಿಗೆ ತಿಳಿಯಬಹುದು; ಇಲ್ಲವೆ ಬಯಲಾಟಗಳನ್ನು ನೋಡಿರಬಹುದು. ಅಲ್ಲದೆ ಅವರನ್ನು ಹಿಂದೂಗಳೆಂದು ಕರೆಯಲಿಕ್ಕೆ ಯಾವ ಹಿಂದೂತ್ವದ ಸಂಸ್ಪರ್ಶವೂ ಅವರಿಗೆ ಆಗುವುದಿಲ್ಲ. ಅಂತಹ ಸ್ಥಿತಿಯಲ್ಲಿ ಅವರು ಮಿಶನ್ ಮತಕ್ಕೆ ಹೆಚ್ಚು ಹೆಚ್ಚಾಗಿ ಸೇರುವುದು ಆಶ್ಚರ್ಯವೂ ಅಲ್ಲ; ಅವರ ತಪ್ಪು ಆಗಿರುವುದಿಲ್ಲ. ಒಂದು ಬಾರಿ ಮಿಶನ್ ಮತಕ್ಕೆ ಸೇರಿದ ಮೇಲೆ ಅವರ ಕ್ರಮಪ್ರಕಾರದ ಮತಬೋಧೆಯಿಂದ ಅವರು ಅದರ ಮೇಲೆ ಶ್ರದ್ಧೆಯನ್ನು ತಾಳುತ್ತಾರೆ. ಆದುದರಿಂದ ಆರ್ಯಸಮಾಜದ ದೃಷ್ಟಿಯನ್ನು ನಾವು ಈ ಕಡೆಗೆ ಎಳೆಯಬೇಕಾಗುವುದು.

ನೋಟಗಳು.

NOTE...S.

ಚಿಮಿಣಿ ಎಣ್ಣೆಯ ದರಗಳ ಯುದ್ಧವನ್ನು ನಿಲ್ಲಿಸಲು ಒಬ್ಬ ಏಶ್ಯಾಟಿಕ್ ಕಂಪೆನಿಯ ಮಹನಿಯರು ಅಮೇರಿಕಕ್ಕೆ ತೆರಳಿರುವರು. ಇದೇ ದರ ಕೆಲವು ಸಮಯ ನಿಂತರೆ ಎಣ್ಣೆ ಕಂಪೆನಿಯ ಖಜಾನೆಗಳು ಖಾಲಿಯಾಗುವ ಸಂಭವ ಒದಗಿತೆಂದು ರಾಜಿ ಬಗ್ಗೆ ಹೋಗಿರುವರು. ಇವರ ರಾಜಿಯಿಂದ ಇನ್ನು ದರಗಳಲ್ಲಿ ನೆರೆ ಬರುಲು ಪ್ರಾರಂಭವಾಗುತ್ತದೆ.

• • • •

ನಮ್ಮ ಇಂಡಿಯನ್ಸ್‌ರೊಳಗೆ ವ್ಯಾಪಾರದಲ್ಲಿ ದರಗಳ ಯುದ್ಧ ಪ್ರಾರಂಭ ಮಾಡಿದರೆ ಸುರುವಿನಿಂದ ಕೊನೆಯ ವರೆಗೆ ಹೊಡೆದಾಟ. ದಿವಾಳಿಯಾಗುವ ವರೆಗೂ.

• • • •

ಮದ್ರಾಸಿನ ಹರತಾಳಕ್ಕೆ ವಿಪರೀತದ ಪಿತ್ತ ಏರಿದೆ. ಪಿತ್ತದ ಏರುವಿಕೆಯಿಂದ ಇಬ್ಬರು ಮೃತ್ಯುವಿಗೆ ತುತ್ತಾದರು.

• • • •

ಮದ್ರಾಸಿನಲ್ಲಿ, ಇಂಗ್ಲೀಷ್ ಮಿಠಾಯಿ, ಇಂಗ್ಲೀಷ್ ಹೆಂಡವನ್ನು ಮಾರುತ್ತಿದ್ದ ಹೆರಿಸನ್ ಕಂಪೆನಿಯವರ ಮೇಲೆ ಹರತಾಳ. ಬಾಟ್ಲಿಗಳ ಮೇಲೂ ಬಲಾತ್ಕಾರ.

• • • •

ಒಬ್ಬ ಯುರೋಪಿಯನರು ಕಾರಿನಲ್ಲಿ ಜನಸ್ತೋಮದ ಮಧ್ಯದಿಂದ ಹೋಗುತ್ತಿರುವಾಗ್ಯೆ ಅವರ ಮೇಲೆ ಬಲಾತ್ಕಾರದಿಂದ ಕಾರಿನ ಮೇಲೆ ಕಲ್ಲು ಎಸೆದು ಅವರ ಕಾರಿಗೆ ಹೆಚ್ಚಿನ ಜಖಂ ಮಾಡಿ ಕೊನೆಗೆ ಸ್ಯಾಮನ್ ಕಮಿಟಿಯವರ ಸಹಸ್ರನಾಮಾವಳಿ ಮಾಡಿ ಕಾರಿಗೆ ಬೆಂಕಿ ಕೊಟ್ಟು ಅಗ್ನಿಯ ಹೋಮವನ್ನು ಆಚರಿಸಿದರು.

• • • •

ಡಿಲ್ಲಿಯಲ್ಲಿರುವ ಸ್ಯಾಮನ್ ಕಮಿಶನ್ ರಾಯರುಗಳೆಲ್ಲರು ತಾ. ೧೭ಕ್ಕೆ ಮದ್ರಾಸಿಗೆ ಬರಲಿರುವರು. ಈ ಸಮಯದಲ್ಲಿ ಮದ್ರಾಸಿನಲ್ಲಿ ಹರತಾಳವುಂಟಂತೆ.

• • • •

ಕಮಿಶನಿನವರು ಬಂದಾಗ ಗಲಾಟೆ ಉಂಟಾದೀತೆಂದು ಪೋಲೀಸ್ ಕಮಿಶನರು ಮೆಜಿಸ್ಟ್ರೇಟರ ಹತ್ತಿರ ಹುಕುಂ ಪಡೆದು ೧೪೪ ಪ್ರಕರಣದ ನೋಟೀಸನ್ನು ಡಂಗುರದಲ್ಲಿ ಸಾರಿರುವರು.

• • • •

೧೪೪ನೇ ಪ್ರಕರಣದ ನೋಟೀಸು ಮದರಾಸಿನ ಎಲ್ಲಾ ಕೋಂಗ್ರೆಸು ಮುಖಂಡರಿಗೂ ಕೊಟ್ಟಿರುತ್ತದೆ. ನೋಟಿಸಿನ ಆಕ್ಷೇಪ. ಸ್ಯಾಮನ್ ಕಮಿಷನು ಮದ್ರಾಸಿಗೆ ಬಂದಾಗ, ಹರತಾಳ ಮಾಡುವ ವಿಷಯ ಸಭೆಗಳು, ನೋಟಿಸ ಹಂಚೋಣ ಇವೆ ಮುಂತಾದನ್ನು ನಡಿಸಬಾರದಾಗಿ ಎಲ್ಲಾ ಕೋಂಗ್ರೇಸು ಮುಖಂಡರ ಕೈಗೆ ಪೋಲಿಸಿನವರ ಒಂದೊಂದು ೧೪೪ ಪ್ರಕರಣದ ಕೋಳ.

• • • •

ಮದ್ರಾಸಿನಲ್ಲಿ ಬರುವ ತಾ ೧೭ಕ್ಕೆ ಹರತಾಳ ನಡೆಯಲಿಕ್ಕಿರುವುದು. ೧೪೪ನೇ ಪ್ರಕರಣದ ಫಲ ನೋಡಲಿಕ್ಕಿದೆ.

§ § § §

ಳೆದ ತಾ. ೯ಕ್ಕೆ ನಮ್ಮ ಮಂಗಳೂರಿನ ಮೋಟಾರು ಕಂಪೆನಿಗಳ ಗ್ರಹಚಾರ. ಬಹಳ ಕೆಟ್ಟದು ಒಂದೇ ದಿನ ೬ ಮೋಟಾರುಗಳು ಅವಘಡ. ಪೋಲೀಸರಿಗೆ ಪುರುಸೊತ್ತೇ ಕಮ್ಮಿ.

• • • •

ನಮ್ಮ ಮುನಿಸಿಪಾಲಿಟಿಯವರು ಮಾರ್ಗಗಳಲ್ಲಿ ಮೋಟಾರು ಲೋರಿಗಳಲ್ಲಿ ನೀರು ಹಾಕಲು ಪ್ರಾರಂಭ ಮಾಡಿರುವರು. ದೂಳಿನ ಬಾದೆ ಹೆಚ್ಚಿದ್ದಲ್ಲಿ ಮಾತ್ರ ನೀರಿನ ಸುದ್ದಿಯೇ ಇಲ.

• • • •

ಟವನ್ನ ಪ್ಲೆನಿಂಗ್ ಕೆಲಸ ಬಹಳವಾಗಿ ನಡಿಯುತ್ತಿದೆ. ಮಂಗಳೂರಿನವರ ಪುಣ್ಯ.

§ § § §

ಇಂದೂರಿನ ತುಕೋಜಿರಾಯರಿಗೆ ಮಿಸ್. ಮಿಲ್ಲರಳನ್ನು ಮದುವೆಯಾಗಲು ಕೂಡದಾಗಿ ಈಗಿನ ಅರಸರಾಗಿದ್ದ ಅವರ ಮಗನು ಆಕ್ಷೇಪಿಸಿದ್ದಾರಂತೆ. ಆದರೂ ತುಕೋಜಿಯವರು ಹಗಲು ರಾತ್ರೆ ಎಡೆಬಿಡದೆ ಯಾವ ಮತಕ್ಕೆ ಸೇರಿ ಆಕೆಯನ್ನು ಮದುವೆಯಾಗಬಹುದೆಂದು ಯೋಚಿಸುತ್ತಿರುವರು.

§ § § §

ಮಿಸ್ ಮಿಲ್ಲರಳಿಗೆ ತನ್ನ ಇಷ್ಟ ಒಂದಂತೆ ಯಾವ ಮತಕ್ಕಾದರೂ ಸೇರಿ ಮದುವೆಯಾಗಲು ಅವಳಿಗೆ ಇನ್ನೂ ಸ್ವಾತಂತ್ರ್ಯದ ವಯಸ್ಸಾಗಲಿಲ್ಲವಂತೆ. ಇದಕ್ಕೆ ಇನ್ನೂ ಎರಡು ವರ್ಷಗಳು ಹೋಗಬೇಕಂತೆ. ಪಾಪ ತುಕೋಜಿಯವರು ಏನು ಮಾಡುವರೋ!

ಅನುಕ್ರಮಣಿಕೆ.

ಅಗ್ರಲೇಖ,
ಕನ್ನಡಿಯೊಳಗಿನ ಗಂಟು
ವಿದೇಶ, ಒಳದೇಶ ವರ್ತಮಾನ
ಸ್ಫುಟವಿಚಾರಗಳು
ನೋಟಗಳು
ವರ್ತಮಾನ ಸಂಗ್ರಹಗಳು
ಒಳದೇಶ
ದಕ್ಷಿಣ ಕನ್ನಡ — ಮಂಗಳೂರು, ಹೊಸದುರ್ಗ, ಕುರುಕಾಲು,
ಕಲ್ಲಡ್ಕ, ಮುಂಡಾಜೆ, ಉಡ್ಪಿ, ಮುಂಡ್ಕೂರು.
ವಿವಿಧವಿಷಯಗಳು
ಸ್ಯಾಮುನ್ ಕಮಿಶನ್ನು ಬಂದಿತು
ಗೋಮಟೇಶ್ವರ [illegible]

ಸ್ವದೇಶಾಭಿಮಾನಿ

ಶಕ [illegible]

ಕನ್ನಡಿಯೊಳಗಿನ ಗಂಟು.

ಮು[illegible] ನೊದಲಾದ ಸದಸ್ಯರಿಗೆ [illegible] ಸ್ವಾಗತವನ್ನು [illegible] ನೋಡಿದ ಮೇಲೆ ಸ್ಯಾಮುನ್ ಕಮಿಶನ್ನಿನ ಅಧ್ಯಕ್ಷರಾದ ಸರ್ ಜಾನ್ ಸ್ಯಾಮುನ್ನರು ಹಿಂದೀಯರ [illegible] ಇರಲಿಕ್ಕಿಲ್ಲ. [illegible] ನ್ಯಾಯವಾದ ಮೇಲೆ ಈಗ ಪುನಃ [illegible] ಪ್ರೋತ್ಸಾಹದಿಂದ [illegible] ಸಿರಲಿಕ್ಕಿಲ್ಲ. ಆದರೂ ಹಿಂದೂಸ್ಥಾನದ ಎಲ್ಲಾ [illegible] ಈ ಹರತಾಳವು ಆಚರಿಸಲ್ಪಟ್ಟಿತು. ಈ ಹರತಾಳಕ್ಕೆ [illegible] ಚಳವಳದಂತಹ ಅನಿರ್ಬಂಧಿತ [illegible] ವೈಯುಕ್ತಿಕ ವತ್ತಾಯವಿರಲಿಲ್ಲ. [illegible] ಇರಲಿಲ್ಲ. ಆದರೂ ಸಮಗ್ರ ಹಿಂದೂಸ್ಥಾನದಲ್ಲಿ ಈ ಹರತಾಳವು ಚೆನ್ನಾಗಿ ಆಚರಿಸಲ್ಪಟ್ಟಿತು. ಆದುದರಿಂದ ದೇಶದ ಜನರ ನಿಜವಾದ ಆಶಯಗಳು ಯಾವ ರೀತಿಯಲ್ಲಿವೆಯೆಂಬುದು ಇದರಿಂದ ವ್ಯಕ್ತವಾಗುವುದು.

ಸ್ಯಾಮುನರಿಗೆ ತಾವು ಹಿಂದೂಸ್ಥಾನದಲ್ಲಿ ಬೇಡವಾದ ಅತಿಥಿಗಳಾಗಿರುವರೆಂಬುದು ಸ್ಪಷ್ಟವಾಗಿ ತಿಳಿದುಹೋಯಿತು. ಹಿಂದೂಸ್ಥಾನವನ್ನು ಬಹಿಷ್ಕರಿಸಿಕೊಳ್ಳುವುದು ಹೇಗೆ ಎಂಬುದೇ ಅವರಿಗೆ ಹರತಾಳ ನೋಡಿದಂದಿನಿಂದ ಆಲೋಚನೆಯ ವಿಷಯವಾಗಿರಬಹುದಿತ್ತು. ಸ್ಯಾಮುನರು ಹೀಗೆ ಆಲೋಚಿಸಿ ಆಲೋಚಿಸಿ ಒಂದುಪಾಯವನ್ನು ಹೂಡಿದರು.

ಕಮಿಶನ್ನು ಬರೀ ಬ್ರಿಟಿಷರದಾಗಿದ್ದು, ಹಿಂದೀ ಹಿತಕ್ಕಾಗಿ ಹೋರಾಟ ಇದಬಲ್ಲ ಹಿಂದೀಯರಾರೂ ಅದರಲ್ಲಿಲ್ಲವೆಂದೂ, ತಮ್ಮ ಅರ್ಹತೆಯನ್ನು ಬ್ರಿಟಿಷರು [illegible] ನಿರ್ಧರಿಸಬಹುದೇ ತಮಗೆ ಅತಿ ಅವಮಾನಕರವೆಂದೂ ಹಿಂದೀಯರಲ್ಲಿ ಹಲವರು ತಮ್ಮ ನಿಷೇಧದಲ್ಲಿ ಆಕ್ಷೇಪಿಸಿದ ಸಂಗತಿ. ಆದುದರಿಂದ ಈ ನಿಷೇಧವನ್ನು ಮುರಿಯುವುದೇ ಸ್ಯಾಮುನರ ಉದ್ದೇಶವಾಗಿದ್ದಿತು. ಇದಕ್ಕವರು ಬಹಳ ಬುದ್ಧಿವಂತಿಕೆಯ ಉಪಾಯವನ್ನು ಹೂಡಿದರು.

ಈ ಉಪಾಯದ ತಾತ್ಪರ್ಯವಿಷ್ಟೆ — ಸ್ಯಾಮುನ್ ಕಮಿಶನ್ನು ಹಿಂದೂಸ್ಥಾನದ ಅರ್ಹತೆಯ ವಿಷಯದಲ್ಲಿ ಸಾಕ್ಷ್ಯಗಳನ್ನು ತೆಗೆದುಕೊಳ್ಳುವಾಗ, ಅದರಷ್ಟೆ ಸಂಖ್ಯೆಯ ಇನ್ನೊಂದು ಹಿಂದೀ ಕಮಿಟಿಯೊಡನೆ ಸೇರಿ ಸಾಕ್ಷ್ಯಗಳನ್ನು ತೆಗೆದುಕೊಳ್ಳತಕ್ಕದ್ದು. ಮಧ್ಯವರ್ತಿ ಸರಕಾರದ ಸಮಸ್ಯೆಗಳ ವಿಚಾರಗಳ ಸಮಯದಲ್ಲಿ ಕೌನ್ಸಿಲ್ ಒಫ್ ಸ್ಟೇಟ್ ಮತ್ತು ಎಸೆಂಬ್ಲಿ ಮೆಂಬರರು ಒಟ್ಟು ಕೂಡಿ ಚುನಾಯಿಸಿದವರು ಈ ಕಮಿಟಿಯ ಸದಸ್ಯರಾಗಿರತಕ್ಕದ್ದು. ಪ್ರಾಂತೀಯ ವಿಚಾರಗಳ ಸಮಯದಲ್ಲಿ ಪ್ರಾಂತಿಕ ಕೌನ್ಸಿಲುಗಳು ಈ ಸದಸ್ಯರನ್ನು ಚುನಾಯಿಸತಕ್ಕದ್ದು. ಗುಟ್ಟಿನಲ್ಲಿ ಸಾಕ್ಷ್ಯ ಕೇಳುವದಿದ್ದ ಪಕ್ಷದಲ್ಲಿ ಸ್ಯಾಮುನ್ ಕಮಿಶನ್ನು ಹಿಂದೀ ಕಮಿಟಿಗಳ ವಿಂಗಡವಾಗಿ ಸಾಕ್ಷ್ಯ ಕೇಳುವದಲ್ಲದೆ, ಹಿಂದೀ ಕಮಿಟಿಗಳೂ ಅದೇ ರೀತಿಯಲ್ಲಿ ಸ್ಯಾಮುನ್ ಕಮಿಶನ್ನಿನ ವಿಂಗಡವಾಗಿ ಸಾಕ್ಷ್ಯ ಕೇಳಬಹುದು. ಸ್ಯಾಮುನ್ ಕಮಿಶನ್ನು ಪ್ರತ್ಯೇಕವಾಗಿಯೂ, ಹಿಂದೀ ಕಮಿಟಿಗಳೂ ಪ್ರತ್ಯಪ್ರತ್ಯೇಕವಾಗಿಯೂ ತಮ್ಮ ರಿಪೋರ್ಟುಗಳನ್ನು ತಯಾರಿಸಿ, ಸ್ಯಾಮುನ್ ಕಮಿಶನ್ನು ಪಾರ್ಲಿಮೆಂಟಿಗೂ ಹಿಂದೀ ಕಮಿಟಿಗಳು ತಮ್ಮ ತಮ್ಮನ್ನು ಅರಿಸಿದ ಸಂಸ್ಥೆಗಳಿಗೂ ತಮ್ಮ ರಿಪೋರ್ಟುಗಳನ್ನು ಒಪ್ಪಿಸತಕ್ಕದ್ದು. ಬೇಕಾದರೆ ಹಿಂದೀ ರಿಪೋರ್ಟುಗಳನ್ನು ತಮ್ಮ ರಿಪೋರ್ಟಿನೊಟ್ಟಿಗೆ ಪಾರ್ಲಿಮೆಂಟಿನ ಮುಂದೆ ಸ್ಯಾಮುನ್ ಕಮಿಶನ್ನಿನವರು ಇಡುವರು. ಹಿಂದೀ ಕಮಿಟಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವೂ ಸಮಾನತೆಯೂ ಇರುವುವು.

ಕೊಡಬೇಕಾದರೆಂದು ನಿರ್ಧರಿಸುವುದನ್ನು [illegible]

[illegible]

ಹಿಂದೂಸ್ಥಾನದ ಧುರೀಣರು [illegible] ಸ್ವೀಕರಿಸಲು ತಯಾರಿಲ್ಲದಿದ್ದುದು [illegible] ಕಾಂಗ್ರೆಸ್ಸ್ [illegible] ಶ್ರೀ ಶ್ರೀನಿವಾಸ ಅಯ್ಯಂಗಾರ [illegible] ಸ್ವಾತಂತ್ರ್ಯ [illegible] ಸ್ಯಾಮುನ್ ಕಮಿಶನ್ನಿನ ಆಹ್ವಾನವನ್ನು ತಿರಸ್ಕರಿಸಿದರು. ಸ್ಯಾಮುನ್ [illegible] ವಿದೆಯೆಂದು ಸ್ಯಾಮುನ್ ಕಮಿಶನ್ನಿನ ಈ ಕ್ರಮದ ಪ್ರಕಟನೆಯಿಂದ ನಿಶ್ಚಯವಾಗುವುದು.

ವಿದೇಶ ವರ್ತಮಾನ.

— [illegible]

— ಗ್ರೀಕಿನ ಮರ್ಗಾರೆಟ್ [illegible] ಮೆಂಬರರ ಮೇಲೆ ಕೋಪದಿಂದ [illegible]

— ಅಮಾನುಲ್ಲಾ ರಾಜರು ಮಾರ್ಸೇಲಿನಲ್ಲಿರುವರು. ಅಲ್ಲಿಯ ಸ್ಥಳಗಳ [illegible] ನೋಡುತ್ತಿರುವರು.

— ಬರ್ಟ ಹಿಂಕ್ಲರೆಂಬವರು ಲಂಡನಿನಲ್ಲಿ ವಿಮಾನದ ಮೇಲೆ ಕುಳಿತು ನೀಡಾ ಆಸ್ಟ್ರೇಲಿಯಕ್ಕೆ ಹೋಗಬೇಕೆಂದಿದ್ದರು. ಆದರೆ ಹವಾ ಗುಣವು ಒಳ್ಳೆಯದಾಗಿಲ್ಲವಾದ್ದರಿಂದ ತನ್ನ ಪ್ರಯಾಣವನ್ನು ನಿಲ್ಲಿಸಿರುವರು.

— ನೆವಿಸಿಕೊಂಡ ಸಮಿದ್ರದಲ್ಲಿ ಅಮೆರಿಕಾ ಎಂದೊಂದು ಹಡಗವು ಮುಳುಗಿ ಹೋಯಿತು. ಈ ಹಡಗದಲ್ಲಿ ತುಂಬಾ ಕೆಲ್ಲಿಯರ್ ಕಾಬ್ಡಿರ್ಡ್ ಇದ್ದಿತು.

— ನೆವಾಲ್ ಮತ್ತು ವಿನ್ಸೆಂಟ್ ಎಂಬವರಿಬ್ಬರು ಭೂಲೋಕವನ್ನು ವಿಮಾನದ ಮೇಲೆ ಕುಳಿತು ಸಂಚರಿಸಬೇಕೆಂದು ಹೊರಟಿರುವರು.

— ಲಂಡನಿನಲ್ಲಿ ಕಳೆದ ಸಪ್ಟಂಬರ ತಿಂಗಳಲ್ಲಿ ಯಾರೋ, ಒಬ್ಬ ಪೋಲೀಸನನ್ನು ಗುಂಡು ಹೊಡೆದು ಕೊಂದಿದ್ದರು. ಈಗ ಬ್ರೌನ್ ಮತ್ತು ಕೆನ್ನಡಿ ಎಂಬಿಬ್ಬರನ್ನು ಸಂಶಯದ ಮೇಲೆ ಹಿಡಿದು ಜೈಲಿನಲ್ಲಿಟ್ಟಿರುವರು.

— ಕ್ಲೋಡೊ ಎಂಬಲ್ಲಿಗೆ ಒಬ್ಬ ಧನಿಕನ ಮನೆಗೆ ಮೋಟಾರ ಕಾರಿನಲ್ಲಿ ಕುಳಿತು ನಾಲ್ಕು ಜನರು ಬಂದು ರಾತ್ರೆ ಉಳಕೊಳ್ಳಲಿಕ್ಕಾಗಿ ಸ್ಥಳವನ್ನು ಕೇಳಿದರು. ಧನಿಕನು ಇಬ್ಬರು ಉಳಕೊಳ್ಳಬಹುದು ಇಬ್ಬರು ಹೋಗತಕ್ಕದ್ದು ಎಂದನು. ಇಬ್ಬರು ಅಲ್ಲಿ ಉಳಕೊಂಡರು. ಉಳಿದಿಬ್ಬರು ಸಮೀಪದ ಮನೆಯಲ್ಲಿ ಉಳಕೊಂಡರು. ರಾತ್ರೆ ಈ ಇಬ್ಬರು ಅತಿಥಿಗಳು ಧನಿಕನ ಟ್ರಿಜರಿಯನ್ನು ಮುರಿಯುತ್ತಿದ್ದರು. ಅವರು ಕವಚ ಮೊದಲಾದವುಗಳನ್ನು ತೊಟ್ಟಿದ್ದರು. ಧನಿಕನು ಇದನ್ನು ನೋಡಿ ಅವರಿಬ್ಬರನ್ನೂ ಗುಂಡು ಹೊಡೆದು ಕೊಂದು ಬಿಟ್ಟನು. ಒಡನೆ ಸಮೀಪದ ಮನೆಯಲ್ಲಿ ಉಳಕೊಂಡ ಮತ್ತಿಬ್ಬರು ಬರಲಾಗಿ ಧನಿಕನು ಅವರನ್ನೂ ಕೊಂದು ಬಿಟ್ಟನು. ಇವರಿಬ್ಬರು ತಾವು ಉಳಕೊಂಡ ಮನೆಯ ಯಜಮಾನನನ್ನೂ, ಹೆಂಡತಿಯನ್ನೂ, ಇಬ್ಬರು ಮಕ್ಕಳನ್ನೂ ಕೊಂದಿದ್ದರೆಂದು ವಿಚಾರಿಸಲಾಗಿ ತಿಳಿದುಬಂದಿತು.

— ಮಾರ್ಚ ತಾರೀಕು ೧ರಿಂದ ೧೨ ಹೋರ್ಸ್ ಪವರಿಗಿಂತ ಕಡಿಮೆಯಾದ ಮೋಟಾರು ಕಾರುಗಳ ಇನ್ಸುರೆನ್ಸ್ ಪ್ರಿಮಿಯಮನ್ನು ಶೇಕಡಾ ೨೫ರಷ್ಟು ಏರಿಸುವರು.

— ಲಂಡನಿನ ಬೊಸ್ವನ ಕ್ವಾರ್ಟರಿನಲ್ಲಿ ಬೆಂಕಿಯುಂಟಾಗಿ ಹೆಚ್ಚು ನಷ್ಟವಾಗಿದೆ. ಸುಮಾರು ಅರ್ಧ ಚದರ ಮೈಲನ್ನು ಆವರಿಸಿಕೊಂಡಿದ್ದ ೧೮ ಕಟ್ಟೋಣಗಳು ಸುಟ್ಟು ಹೋಗಿವೆ. ನಷ್ಟವು ಸುಮಾರು ೨೫,೦೦೦ ಮಿಲ್ಲಿಯ ಡೊಲರ್ ಆಗಿರಬಹುದು.

— ಟರ್ಕಿಯ ಎಕ್ಸ ಮಂತ್ರಿಯಾದ ಇಸನ್‌ಬೆಯನ್ನು ಹ್ಯಾಕೋಟ್ಯೂ ಮಾನಾಂಟಿನಿಂದ ಹಿಡಿದು ಕೈದುಮಾಡಿರುವರು.

— ಸಿವಿಲ್ ಸರ್ವಿಸಿನ ಕೆಲಸದವರ ವಿಚಾರಣಾ ಬೋರ್ಡಿನ ಮೊದಲನೆ ಮೀಟಿಂಗು ಲಂಡನಿನಲ್ಲಿ ಫೆಬ್ರವರಿ ೨ನೇ ತಾರೀಕಿನ ದಿನ ನಡೆಯಿತು.

— ಸತ್ತ ಮೇಲಣ ಖರ್ಚು, ಬದುಕಿರಬೇಕಾದರೆ ತಗಲುವ ಖರ್ಚಿಗಿಂತ ಹೆಚ್ಚಿನದೆಂದು ಯುನ್ಯಾಟೆಡ್ ಸ್ಟೇಟ್ಸಿನ ಇನ್ಸುರೆನ್ಸ್ ಕಂಪೆನಿಯವರು ಕಂಡುಕೊಂಡಿರುವರು. ಯುನ್ಯಾಟೆಡ್ ಸ್ಟೇಟ್ಸಿನ ೧೦ ಪಟ್ಟಣಗಳ ಒಳಗೆ ಸರಾಸರಿ ಒಬ್ಬ ಮನುಷ್ಯನ ಉತ್ತರಕ್ರಿಯೆಗೆ ೧೦೦ ಪವನುಗಳು ಬೇಕಾಗುವವಂತೆ. ಆಯರ್‌ಲೆಂಡಿನವರು ಪ್ರೇತಸಂಸ್ಕಾರಕ್ಕಾಗಿ ತುಂಬಾ ಹಣ ಖರ್ಚು ಮಾಡುವವರಲ್ಲಿ ಮೊದಲನೆಯವರು, ಇಟಲಿಯವರು ಎರಡನೆಯವರು. ಮಾರವಾಡಿಗಳು ಕಡೇಯವರು.

ಒಳದೇಶ ವರ್ತಮಾನ.

— ಶಿವಗಂಗಾ ಎಂಬಲ್ಲಿ ಅತಿ ಭಯಂಕರವಾದ ಒಂದು ಮೋಟರ್ ಅಪಘಾತವು ಆಯಿತು. 'ರಾಮಚಂದ್ರ ವಿಲಾಸ್' ಎಂಬ ಹೆಸರಿನ ಒಂದು ಮೋಟಾರು ತುಂಬಾ ಜನರನ್ನು ಹೊತ್ತುಕೊಂಡು ಶಿವಗಂಗೆಯ ಕಡೆಗೆ ಬರುತ್ತಿತ್ತು. ಹಾದಿಯಲ್ಲಿ ಶಿವಗಂಗೆಯಿಂದ ಬರುವ ಮತ್ತೊಂದು ಮೋಟಾರುಕಾರು ಇವಕ್ಕೆ ಎದುರು ಸಿಕ್ಕಿತು. ಮೊದಲಿನ ಮೋಟಾರು ಒಂದು ದೊಡ್ಡ ಮರಕ್ಕೆ ಬಡಿಯಿತು. ಒಡನೆ ಎಲ್ಲಾ ಪ್ಯಾಸೆಂಜರರೂ ಕೆಳಕ್ಕೆ ಬಿದ್ದರು. ಕಾರಿಗೂ ಬಹಳ ಪೆಟ್ಟಾಯಿತು. ಎಲ್ಲರಿಗೂ ಪೆಟ್ಟಾಗಿದೆಯಾದರೂ ಏಳು ಜನರಿಗೆ ಜೋರಿನ ಪೆಟ್ಟು ತಾಗಿದೆ. ಪೆಟ್ಟು ತಾಗಿದವರಲ್ಲಿ ಒಂದು ಗರ್ಭಿಣಿಯಾದ ಹೆಂಗಸಿರುವಳು. ಎಲ್ಲಾ ಪ್ಯಾಸೆಂಜರರನ್ನು ಶಿವಗಂಗಾ ಆಸ್ಪತ್ರೆಗೆ ಒಯ್ದಿರುವರು.

— ತೆಂಕಾಸಿಯಲ್ಲಿ ಕೆಲವು ದಿನಗಳ ಹಿಂದೆ ಉದ್ಭವಿಸಿದ ವಾಂತಿಭೇಧಿ ರೋಗವು ದಿನ ಹೋದಷ್ಟಕ್ಕೆ ಪ್ರಬಲವಾಗುತ್ತಾ ಬರುತ್ತಿದೆ. ದಿನಕ್ಕೆ ಸರಾಸರಿ ಇಪ್ಪತ್ತಕ್ಕಿಂತ ಮಿಕ್ಕಿ ಜನರು ಸಾಯುತ್ತಿರುವರು. ಒಟ್ಟಾರೆ ಇಷ್ಟರ ವರೆಗೆ ಸುಮಾರು ೩೦೦ ಜನರು ಸತ್ತುಹೋದರು. ಬೇರೆ ಸ್ಥಳದಿಂದ ಮೆಡಿಕಲ್ ಆಫೀಸರರನ್ನು ತಂದಿರುವರು. ಅಲ್ಲಿಯೇ ಹರಿಯುವ ನದಿಯ ನೀರು ಬಹು ಕೊಳಕಾಗಿದ್ದರೂ ಜನರು ಅದನ್ನೇ ಕುಡಿಯುತ್ತಿರುವರು. ಮುಸಲ್ಮಾನರು [illegible] ಮೊದಲಾದವರಲ್ಲಿ ಹೆಚ್ಚಾಗಿ ಈ ರೋಗವು ಹಬ್ಬಿರುತ್ತದೆ.

— ಮಳೆಯು ಬಹಳ ಜೋರಾಗಿ ಬಂದದ್ದರಿಂದ ತಾಮ್ರಪರ್ಣಿ ನದಿಯಲ್ಲಿ ಅಕಸ್ಮಾತ್ತಾಗಿ ನೆರೆಯು ಉಕ್ಕೇರಿ ಬಂದಿತು. ಐದು ಜನ ಹೆಂಗಸರು ತಿನ್ನವೆಲ್ಲಿಯ ಸಮೀಪ ವಸ್ತ್ರವನ್ನೊಗೆದು ಮೀಯುತ್ತಿದ್ದರು. ಅಕಸ್ಮಾತ್ತಾಗಿ ನೆರೆಯು ಬಂದುದು ಅವರಿಗೆ ಗೊತ್ತಾಗಲೇ ಇಲ್ಲ. ನೆರೆಯು ಅವರಿಬ್ಬರನ್ನು ಎಳದೊಯ್ದು ಬಿಟ್ಟಿತು. ಆದರೆ ಬಹಳ ಪ್ರಯಾಸದಿಂದ ಮೂರು ಜನರು ದಡವನ್ನು ಸೇರಿದರು. ಇಬ್ಬರು ಬ್ರಾಹ್ಮಣ ಕನ್ಯೆಯರ ಪತ್ತೆಯು ಕೂಡ ಸಿಕ್ಕಿಲ್ಲ.

— ಕಳೆದ ೬ನೇ ತಾರೀಕಿನ ದಿನ ಮದರಾಸಿನ ಮುಸಲ್ಮಾನ ಹೆಂಗಸರು ಒಂದು ಸಭೆ ಕೂಡಿ ತಮ್ಮ ಹುಡುಗಿಯರಿಗೆ ವಿದ್ಯಾಭ್ಯಾಸವು ಅಗತ್ಯವಾಗಿರುವುದರಿಂದ, ಧರ್ಮಾರ್ಥವಾಗಿ, ಬೇಗನೆ ಮುಸಲ್ಮಾನ ಹುಡುಗಿಯರಿಗೆ ವಿದ್ಯೆಯ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಒಂದು ಠರಾವನ್ನು ಮಂಜೂರು ಮಾಡಿದರು.

— ತ್ರಾವನ್ಕೂರಿನ ಮಹಾರಾಜರು ಈಗ ಮಧುರೆಗೆ ಬಂದಿರುವರು.

— ಆರ್. ಎ. ಎಫ್. ಸೀಪ್ಲೇನ್ ವಿಮಾನಗಳು ಈಗ ರಂಗೂನಿಗೆ ತಲಪಿರುವವು.

— ಕಳೆದ ಶುಕ್ರವಾರ ಹರತಾಳ ಸಮ್ಬಂಧ ಮುಂಬಾಯಿಯ ಮುನಿಸಿಪ 'ವರ್ಕ ಶೋಪಿನ ಕೆಲವು ಜನರು ಕೆಲಸಕ್ಕೆ ಬಾರದೆ ಇದ್ದುದರಿಂದ ೫೦ ಜನರನ್ನು ಕೆಲಸದಿಂದ ಸಸ್ಪೆಂಡ್ ಮಾಡಿದರು. ಅವರನ್ನು ಪುನಃ ಸೇರಿಸಿಕೊಳ್ಳಬೇಕೆಂದು ಎಲ್ಲಾ ಕೆಲಸದವರು ಮೊನ್ನೆ ಇಡೀ ದಿನ ಕೆಲಸಕ್ಕೆ ಮುಷ್ಕರಹಾಕಿದರು. ಆದರೆ ಅಧಿಕಾರಿಗಳು ಇದಕ್ಕೆ ಕೇಳದಿದ್ದುದನ್ನು ಕಂಡು ಬೇರೆ ವರ್ಕಶೋಪುಗಳ ಕೂಲಿಗಳೂ ಮುಷ್ಕರ ಹಾಕುವಂತೆ ಇವರು ಪ್ರಯತ್ನಿಸಿದರು. ಅಷ್ಟರಲ್ಲಿ ಪೋಲೀಸರು ಬಂದು ಇವರನ್ನು ಸಮಾಧಾನಗೊಳಿಸಿದರು. ಈಗ ಅವರು ಕ್ರಮ ಕ್ರಮವಾಗಿ ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಂಡಿರುವರು.

— ಸಬರಮತಿ ಆಶ್ರಮದಲ್ಲಿ ಮಹಾತ್ಮಾ ಗಾಂಧಿಯವರು ಫಕ್ಕನೆ ತಲೆ ತಿರ್ರ್ತ್ತಲೆ ಬಂದು ಮೂರ್ಛೆ ಹೊಂದಿದ್ದರು. ಇದರಿಂದ ಅಲ್ಲಿದ್ದವರೆಲ್ಲರಿಗೂ ಹೆದರಿಕೆಯಾಯಿತು. ಆದರೆ ಹೆದರುವ ಕಾರಣವಿಲ್ಲವೆಂದು ಗಾಂಧಿಯವರು ಹೇಳುವರು. ಕೆಲವು ಸಮಯದಿಂದ ಹೆಚ್ಚು ಕೆಲಸವನ್ನವರು ಮಾಡುವದೇ ಇದಕ್ಕೆ ಕಾರಣವೆಂದು ವೈದ್ಯರ ಅಭಿಪ್ರಾಯ. ಜನರು ಅವರೊಡನೆ ಅಗತ್ಯವಿಲ್ಲದ ಪತ್ರವ್ಯವಹಾರವನ್ನು ನಡೆಸಿ, ಅವರನ್ನು ದಣಿಸಬಾರದೆಂದು ಪ್ರಾರ್ಥಿಸಲಾಗಿದೆ.

ಟಿನ್ನವೆಲ್ಲಿಯಲ್ಲಿ ಐದು ಜನ ಹೆಂಗಸರು ಒಂದು ನದಿಯನ್ನು ದಾಟುವದಕ್ಕಾಗಿ ಪ್ರಯತ್ನಿಸುವಾಗ ನೀರು ಬಹಳವಿದ್ದಲ್ಲಿ ಮುಳುಗಿ ಸಾಯುತ್ತಿದ್ದರು. ನದಿಯಲ್ಲಿ ಸ್ನಾನವನ್ನು ಮಾಡುತ್ತಿದ್ದ ಸ್ಕಾಟನೋರ್ವನು ಇವನ್ನು ಕಂಡು ಅವರಿದ್ದಲ್ಲಿಗೆ ಹೋಗಿ, ಅವರನ್ನು ದಡಕ್ಕೆ ಬಂದು ಬದುಕಿಸಿದನು. ಅವನ ಧೈರ್ಯವಾದರೂ ಅಸಾಮಾನ್ಯವಾದುದು.

— ಮೆಕ್ಕಾದಲ್ಲಿ ಒಂದು ಶಾಲೆಯನ್ನು ನಿರ್ಮಿಸುವದಕ್ಕಾಗಿ ನಿಜಾಮ ಧೊರೆಗಳು ರೂಪಾಯಿ ೨೫,೦೦೦ವನ್ನು ಸೆಂಕ್ಷನ್ ಮಾಡಿರುವರು.

— ತಿರುಪತಿಯ ಒಬ್ಬ ಮಹಾಂತನ ಪೆಟ್ಟಿಗೆಯನ್ನು ಮುರಿದು, ೫೦೦೦ ರೂಪಾಯಿಗಳನ್ನೂ ೧೧೦೦೦ ಕ್ರಯ ಬಾಳುವ ಚಿನ್ನಾಭರಣಗಳನ್ನು ಯಾರೋ ಕಳ್ಳರು ಕದ್ದುಕೊಂಡು ಹೋಗಿರುವರು.

— ರಂಗೂನಿನ ಒಂದು ಮರ ಸಿಗಿಯುವ ಕಾರಖಾನೆಯಲ್ಲಿ ಬೆಂಕಿ ಬಿದ್ದು, ಕಾರಖಾನೆಯಲ್ಲಿದ್ದ ಸುಮಾರು ೬೦೦ ಟನ್ ಮರವು ಸುಟ್ಟು ಬೂದಿಯಾಯಿತು. ಅಲ್ಲಿನ ಕೆಲಸಗಾರರು ಬಹಳ ಕಷ್ಟಪಟ್ಟು ಬೆಂಕಿಯು ಹೆಚ್ಚಿಗಾಗಿ ಹಬ್ಬದ ಹಾಗೆ ಮಾಡಿದರು. ಒಟ್ಟಾರೆ ನಷ್ಟವು ೨೧ ಲಕ್ಷವೆಂದು ಅಂದಾಜು ಮಾಡಲ್ಪಟ್ಟಿದೆ.

— ಮಹಾತ್ಮಾಜೀಯವರು ಅಸೌಖ್ಯದಲ್ಲಿರುವ ಕಾರಣ, ಅವರು ಓದಲೂ ಬಾರದು ಬರೆಯಲೂ ಬಾರದು ಎಂದು ಡಾಕ್ಟರರು ಅವರಿಗೆ ಹೇಳಿರುವರು. ಅವರ ಕುರಿತು ಏನೂ ಹೆದರಬೇಕಾದುದಿಲ್ಲವೆಂದೂ ಡಾಕ್ಟರರು ಹೇಳಿರುವರು. ತಾನು ಡಾಕ್ಟರರ ಅಭಿಪ್ರಾಯಕ್ಕೆ ಸರಿಯಾಗಿ ವರ್ತಿಸುವೆನೆಂದು ಮಹಾತ್ಮಾಜಿಯವರು ಪ್ರತಿಜ್ಞೆ ಮಾಡಿಕೊಂಡಿರುವುದರಿಂದ ಅವರೀಗ ಆಶ್ರಮದಲ್ಲಿಯೇ ಇರುವರು.

— ಬರ್ಮಾದ ಸುಪ್ರಸಿದ್ಧ ಡಕಾಯಿತನನ್ನು ಪೋಲೀಸರು ಹಿಡಿದಿರುವರು. ಈತನು ೧೯೨೫ನೇ ಇಸವಿಯಲ್ಲಿ ಒಬ್ಬ ಸಂಗಡಿಗನನ್ನು ಕೂಡಿ ಅಂಡಮಾನ ದ್ವೀಪದಿಂದ ತಪ್ಪಿಸಿಕೊಂಡು ಹೋಗಿದ್ದನಂತೆ; ಸಿರಿಯಮಿನಲ್ಲಿ ಒಂದು ಉತ್ಸವದ ಸಮಯದಲ್ಲಿ ಇವನು ಕಾಣಸಿಕ್ಕಿದ್ದರಿಂದ ಪೋಲೀಸರು ಇವನನ್ನು ಕೈದು ಮಾಡಿದರು. ಆದರೆ ಇವನ ಸಂಗಡಿಗನು ಮಾತ್ರ ಸಿಕ್ಕಲಿಲ್ಲ.

— ಆಂಧ್ರ ದೇಶದಲ್ಲಿ ಉಂಟಾಗುವ ಹಿಂದೂ ಮುಸಲ್ಮಾನರ ಕಲಹಗಳನ್ನು ನಿಲ್ಲಿಸಲಿಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸುವರು. ಕಮಿಟಿಯಲ್ಲಿ ಇಬ್ಬರು ಹಿಂದುಗಳು, ಇಬ್ಬರು ಮುಸಲ್ಮಾನರು.

— ಕಳದ ಜನವರಿ ತಿಂಗಳಿನಲ್ಲಿ ಗುಂಟೂರಿನಲ್ಲಿ ಒಂದು ವಿಧವಾ ವಿವಾಹವೂ, ಬಳ್ಳಾರಿಯಲ್ಲಿ ಒಂದು ವಿಧವಾ ವಿವಾಹವೂ ನಡೆದವು. ಗುಂಟೂರಿನ ವರನೂ ವಧುವೂ ಬ್ರಾಹ್ಮಣರು; ಬಳ್ಳಾರಿಯ ವರನೂ ವಧುವೂ ವೈಶ್ಯರು.

— ಮೈಸೂರು ಮಹಾರಾಜಾ ಕೊಲೇಜಿನ ಕನ್ನಡ ಪಂಡಿತರಾಗಿದ್ದ ರಾ| ಬಿ. ಕೃಷ್ಣಪ್ಪರೆಂಬವರು ಮೃತರಾದರು. ಎರಡು ವರ್ಷಗಳ ಕೆಳಗೆ ಇವರ ಎರಡೂ ಕಣ್ಣುಗಳು ಕುರುಡಾಗಿದ್ದವು. ಕಣ್ಣು ಮಾಡಲು ಎಷ್ಟು ಪ್ರಯತ್ನಗಳನ್ನು ಮಾಡಿದರೂ ಸಾರ್ಥಕವಾಗಲಿಲ್ಲ. ಕಡೆಗೆ ಅವರು ಮರಣವನ್ನೇ ಹೊಂದಿದರು. ಅವರ ಸ್ಮಾರಕಾರ್ಥವಾಗಿ ಕೊಲೇಜನ್ನು ಒಂದು ದಿನ ಮುಚ್ಚುಘ್ ಮಾಡಿದರು.

— ಮೈಸೂರಿನಲ್ಲಿ ನಾಲ್ಕೈದು ದಿನಗಳಿಂದ ವಿಪರೀತವಾದ ಮಳೆಯು ಬಂದು ಬೆಳೆಗೆ ಬಹಳ ನಷ್ಟವನ್ನುಂಟುಮಾಡಿಯದೆ. ಆದರೆ ಈ ಮಳೆಯಿಂದ ಕುಡಿಯುವುದಕ್ಕೆ ನೀರು ದೊರಕಿದಂತಾಯಿತು. ಕೆಲವು ರೋಗಗಳ ಪ್ರತಾಪವು ಕಡಿಮೆಯಾಗುವಂತಾಯಿತು.

— ತಂಜಾವೂರಿನ ಮುನಿಸಿಪಲ್ ಕೌನ್ಸಿಲಿನವರ ಸಭೆಯಲ್ಲಿ ಮುನಿಸಿಪಾಲಿಟಿಯೊಳಗೆ ಕಡ್ಡಾಯವಾದ ವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕೆಂಬದನ್ನು ಮಂಜೂರು ಮಾಡಿರುತ್ತಾರೆ.

— ಮದರಾಸಿನ ಮಹಾಜನ ಸಭಾ ಹೋಲಿಗೆ ಒಬ್ಬ ಪಾಶ್ಚಾತ್ಯ ಸೈನಿಕನು ಒಂದು ಕಾಂಗ್ರೆಸ್ ಆಫೀಸಿನ ಅಧ್ಯಕ್ಷರೆಲ್ಲಿರುವರೆಂದು ಕೇಳಿದನು. ಯಾತಕ್ಕೆಂದು ವಿಚಾರಿಸಲಾಗಿ, ಅವನು 'ನಾನು ವಸ್ಟ್‌ಕೌಂಟ್ ರೆಜಿಮೆಂಟಿನ ಸೈನಿಕನು; ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರಕಬೇಕೆಂದು ಹಿಂದೂದೇಶದ ಪರವಾಗಿ ಕಾದಾಡಲು ಸಿದ್ಧನಿರುತ್ತೇನೆ. ಯಾವ ಸಹಾಯವನ್ನು ಮಾಡಲೂ ತಯಾರಿರುತ್ತೇನೆ. ನಾನು ಮಾತ್ರವಲ್ಲ, ಇಡೀ ಒಂದು ಸೈನ್ಯವು ಹಿಂದೂಸ್ಥಾನದ ಪರವಾಗಿ ಕೆಲಸವನ್ನು ಮಾಡಲು ಸಿದ್ಧವಿದೆ' ಎಂದನು. ಇದು ಪೋಲೀಸರಿಗೆ ತಿಳಿದು ಅವರು ಇವರ ಶೋಧವನ್ನು ಮಾಡುತ್ತಿರುವರು.

— ಮೈಸೂರಿನ ದೇವರಾಜ ಮಾರ್ಕೆಟಿನ ಹಿಂಬದಿಯ ಕಟ್ಟೋಣ ಕುಸಿದು ಬಿದ್ದು ಒಬ್ಬ ಮುದುಕಿಯೂ, ಒಬ್ಬ ಮುದುಕನೂ, ಮಣ್ಣಿನ ಅಡಿಯಲ್ಲಾದರು. ಮುದುಕಿಯು ಸತ್ತು ಹೋದಳು. ಮುದುಕನಿಗೆ ಬಹಳ ಗಾಯವಾಗಿದೆ, ಆದರೂ ಸಾಯಲಿಲ್ಲ. ಅನೇಕ ದಿನಗಳಿಂದ ಮಳೆ ಬಂದುದೇ ಇದರ ಕುಸಿದು ಬೀಳುವಿಕೆಗೆ ಕಾರಣವಾಗಿದೆ.

ದಕ್ಷಿಣ ಕನ್ನಡ

ಮಂಗಳೂರು:— ಕಳೆದ ೩ನೇ ತಾರೀಕಿನ ದಿನ ಸಾಧು ಟಿ. ಎಲ್. ವಾಸ್ವಾನಿಯವರು ಮೈಲಿನಲ್ಲಿ ಕುಳಿತು ಕಲಿಕೋಟೆಯಿಂದ ಇಲ್ಲಿಗೆ ಬಂದಿಳಿದರು. ರೈಲುವೇ ಸ್ಟೇಶನಿನಲ್ಲಿ ಬೇಂಡು ವಾದ್ಯದೊಡನೆ ಅವರನ್ನು ಇದಿರುಗೊಂಡು ರಾ| ಕಾರ್ನಾಡು ಸದಾಶಿವರಾಯರು ಅವರಿಗೆ ಪುಷ್ಪಮಾಲೆಯನ್ನು ಹಾಕಿದರು. ಪ್ರೊಫೆಸರ್ ರಾಮಮೂರ್ತಿಯವರು ಅಂದು ರಾತ್ರೆ ಅವರನ್ನು ಸತ್ಕರಿಸಿದರು. ಮರುದಿನ ಬೆಳಗ್ಗೆ ಗಣಪತಿ ಹ್ಯಾಸ್ಕೂಲಿನ ಮಂದಿರದಲ್ಲಿ ಸಾಧುರವರು ಭಾಷಣವನ್ನು ಮಾಡಿದರು. "ನಾನು ನಿಮ್ಮೆಲ್ಲರ ಸಹೋದರನಂತೆ ಪ್ರೀತಿಯಿಂದ ಬಂದಿರುವೆನು— ಯುವಕರ ಸಂಘವು ಅಪರಿಚಿತವಾದುದಲ್ಲ. ಸರಿಯಾದ ಆರೋಗ್ಯದಲ್ಲಿದ್ದು ಸದಾಚಾರಿಯಾಗಿರಲು ಪ್ರತಿಯೊಬ್ಬರೂ ಪ್ರಯತ್ನಿಸತಕ್ಕದ್ದು. ಯಾವ ಪುಣ್ಯವನ್ನು ಸಂಪಾದಿಸಬೇಕಾದರೂ ಮೊದಲಾಗಿ ಶರೀರವನ್ನು ಕಾಪಾಡುವುದು ಅಗತ್ಯವಾದುದರಿಂದ ಅದನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳಬೇಕು. ಎರಡನೆಯದಾಗಿ ಧಾರ್ಮಿಕ ಮತ್ತು ಆಡಂಬರವಿಲ್ಲದ ಜೀವನವನ್ನು ನಡೆಸಿ ನೀತಿಯುವಾಗುವನ್ನರಿತುಕೊಳ್ಳಬೇಕು. ಮತ್ತು ರಾಷ್ಟ್ರೀಯ ಧುರೀಣರನ್ನು ಸನ್ಮಾನಿಸಬೇಕು" ಎಂಬುದೇ ಅವರ ಭಾಷಣದ ಮುಖ್ಯ ತಾತ್ಪರ್ಯವಾಗಿದ್ದಿತು. ನೆರೆದವರೆಲ್ಲರೂ ಭಾರತ ಯುವಕ ಸಂಘಕ್ಕೆ ಸೇರಿ ದೇಶಸೇವೆಯನ್ನಾಚರಿಸಬೇಕೆಂದೂ, ಎಂದಿಗೆ ಹಿಂದೂಸ್ಥಾನವು ಪೂರ್ವಕಾಲದಂತೆ ಆರೋಗ್ಯದಿಂದಿರುವ ಯುವಕರಿಂದ ಕೂಡಿರುದೆಂಬದನ್ನು ನಿರೀಕ್ಷಿಸಿಕೊಂಡಿರುತ್ತಾ, ಅದಕ್ಕೆ ಸರಿಯಾದ ಕೆಲಸವನ್ನು ಮಾಡುತ್ತಿರಬೇಕೆಂದೂ ಹೇಳಿದರು. ಅಧ್ಯಕ್ಷರಾಗಿದ್ದ ರಾಮಮೂರ್ತಿಯವರು ಅಂಗಸಾಧನೆಯ ಆವಶ್ಯಕತೆಯನ್ನು ನೆರೆದವರಿಗೆ ಒತ್ತಿಹೇಳಿ ಪ್ರತಿಯೊಬ್ಬರು ಭಾರತ ಯುವಕ ಸಂಘದ ಸದಸ್ಯರಾಗುವದು ಉತ್ತಮವಿದೆಯೆಂದು ತನ್ನ ಅಭಿಪ್ರಾಯವನ್ನು ಸೂಚಿಸಿದರು.

ಇದೇ ತಿಂಗಳ ತಾ. ೨೦ನೇ ಸೋಮವಾರ ಘಂಟೆ ೯-೩೦ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡು ಮೆಂಬರರ ಸಭೆಯು ಕಾಸರಗೋಡಿನಲ್ಲಿ ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವುದು; ಈಗಣ ಆಫೀಶಿಯಲ್ ವರುಷದ ತಿದ್ದಿದ ಅಂದಾಜು ಖರ್ಚು ಪಟ್ಟಿಯನ್ನೂ, ಬರುವ ವರುಷದ ಬಜೆಟ್ ಅಂದಾಜು ಖರ್ಚು ಪಟ್ಟಿಯನ್ನೂ ಈ ಸಭೆಯು ಮುಂದಿಡುವರು.

ಆರ್ಯಸಮಾಜದವರ ಆಶ್ರಯದಲ್ಲಿ ಕಳೆದ ೨ನೇ ತಾರೀಕಿನ ದಿನ ಕಾಸರಗೋಡಿನಲ್ಲಿ ನಡೆದ ಸಭೆಯಲ್ಲಿ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು. "ದಕ್ಷಿಣ ಕನ್ನಡದ ಪಂಚಮರ ಅಭಿವೃದ್ಧಿಗಾಗಿ ಬಹಳವಾಗಿ ಕಷ್ಟಪಟ್ಟ ಸ್ವಾಮಿ ಈಶ್ವರಾನಂದಜಿಯವರು, ಕಳೆದ ೩೦ನೇ ಸೋಮವಾರ ಅಕಸ್ಮಾತ್ತಾಗಿ ಹೃದಯದೌರ್ಬಲ್ಯ ರೋಗದಿಂದ ಮೃತಪಟ್ಟುದಕ್ಕಾಗಿ ಕಾಸರಗೋಡಿನ ಮಹಾಜನರು ಬಹಳೇ ದುಃಖಿಸುತ್ತಾರೆ. ಅವರ ದುಃಖೀ ಕುಟುಂಬಕ್ಕೆ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿ, ಅವರ ಆತ್ಮವನ್ನು ಚಿರಶಾಂತಿಯಲ್ಲಿರಿಸುವಂತೆ ಭಗವಂತನನ್ನು ಪ್ರಾರ್ಥಿಸುತ್ತಾರೆ."

ಈ ಸರ್ತಿಯ ತಾಲೂಕು ಬೋರ್ಡು ಚುನಾವಣೆಯಲ್ಲಿ ಬಂಟವಾಳ ಸರ್ಕಲಿಗೆ ದೇವಸ್ಥಾನದ ಮೊಕ್ತೇಸರರಾದ ರಾ| ಬಾಬುಕಮ್ತಿಯವರೂ ಗುರುಪುರ ಸರ್ಕಲಿಗೆ ರಾ| ಕಟ್ಟೆಮಾರ್ ರಘುಚಂದ್ರ ಬಲ್ಲಾಳ ಮತ್ತು ರಾ| ಕರಿಯಂಗಳ ಮುತ್ತಯ್ಯಸೆಟ್ಟಿ ಇವರು ಎದುರು ಇಲ್ಲದೆ ಚುನಾಯಿಸಲ್ಪಟ್ಟರೆಂದೂ, ಪಾಣೆಮಂಗಳೂರು ಸರ್ಕಲಿಗೆ ರಾಗಳಾದ ನರಿಕೊಂಬು ರಾಮರಾವ್, ಸದಾಶಿವ ಅಡಿಗ, ಬಿ. ಎಲ್ ಹಾಮದ್, ರಾಮಯ್ಯ ಭಂಡಾರಿ ಇವರೂ, ಸುರತ್ಕಲ್ ಸೆಂಟರಿಗೆ ರಾಗಳಾದ ಎಚ್ ದಾಮೋದರ ರಾವ್, ಎಮ್ ರಾಮಕೃಷ್ಣ ಪೂಂಜ, ವಾಸುಸೆಟ್ಟಿ, ಮೂಲ್ಕಿ ಸೆಂಟರಿಗೆ ರಾಗಳಾದ ರಾಮಕೃಷ್ಣಪೂಂಜ, ಪಾದೆ ಮಂಜಯ್ಯಶೆಟ್ಟಿ, ಬೋಳ ಮಾಧವರಾವ್, ಕೋಟಿಶೆಟ್ಟಿ, ಮಂಗಳೂರು ಸರ್ಕಲಿಗೆ ರಾ| ನೆಲ್ಲಿಕ್ಕಾ ವೆಂಕಟರಾವ್ ಮತ್ತು ಅಪ್ಪಯ್ಯ ಭಂಡಾರಿ ಇವರೆಲ್ಲರೂ ನೋಮಿನೇಶನ್ ಪತ್ರಗಳನ್ನು ಹಾಜರುಮಾಡಿರುವರೆಂದೂ ತಿಳಿಯುತ್ತದೆ. ಪಾಣೆಮಂಗಳೂರು ಸರ್ಕಲಿಗೆ ಒಮ್ಮೆ ಶಿವ ಐತಾಳರು ನೋಮಿನೇಶನ್ ಪತ್ರವನ್ನು ಕೊಟ್ಟು ಪುನಃ ಬೇಡವೆಂದು ಹಿಂತೆಗೆದರು.

ತಾ. ೪-೨-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೩ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೩, ಶ್ವಾಸಕೋಶದ ರೋಗದಿಂದ ೧೦, ಇತರ ಎಲ್ಲಾ ಕಾರಣಗಳಿಂದ ೧೦, ಜನನ ಸಂಖ್ಯೆಯು ಮಿಲಿಗೆ ಸರಾಸರಿ ೪೮-೧ರಂತೆ.

ಬಿಲ್ಲವರ ಸಮಾಜದವರು ಪೆಂಟಲೆಂಡ ಪೇಟೆಯಲ್ಲಿ ಹೊಸತಾಗಿ ಕಟ್ಟಿದ ಕಟ್ಟೋಣದಲ್ಲಿ ಇಲ್ಲಿಯ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯ ವಾರ್ಷಿಕ ವರ್ಧಂತಿ ಉತ್ಸವವು ಸಬೋರ್ಡಿನೇಟ್ ಜಡ್ಜರಾದ ರಾ| ಎ. ವರ್ಗಿಸ್, ಅವರ್ಗಳ್ ,ಬಿ. ಎ. ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ಕಳೆದ ೫ನೇ ತಾರೀಕಿನ ಸಂಜೆ ಘಂಟೆ ೪ಕ್ಕೆ ಜರಗಿತು,

ಕಳೆದ ೫ನೇ ತಾರೀಕಿನ ದಿನ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕ ವರ್ಧಂತಿ ಉತ್ಸವವು ಬಹು ಸಂಭ್ರಮದಿಂದ ಆಚರಿಸಲ್ಪಟ್ಟಿತು, ಬೆಳಗ್ಗೆ ೭ ಘಂಟೆಗೆ ಟೆನ್ನಿಸ್ ಆಟ ಮತ್ತು ಬೇರೆ ಆಟಗಳೂ ನಡೆದವು. ತರುವಾಯ ಮೆಂಬರರಿಗೆ ಫಲಾಹಾರವಾಯಿತು. ಕ್ಲಬ್ಬಿನ ವಠಾರವನ್ನು ಬಹಳ ಅಂದವಾಗಿ ಶೃಂಗರಿಸಿದ್ದರು. ಸಾಯಂಕಾಲ ೩ ಘಂಟೆಯಿಂದ ೫ ಘಂಟೆಯ ವರೆಗೆ ಸೋಶಿಯಲ್ ಗೇದರಿಂಗ್, ೫-೩೦ ಘಂಟೆಯಿಂದ ವಾರ್ಷಿಕ ಕಾರ್ಯಕಾರಿ ಸಭೆಯು ರಾ| ಅಮ್ಮೆಂಬಳ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು; ಗೌರವ ಕಾರ್ಯದರ್ಶಿಯವರು ಕ್ಲಬ್ಬಿನ ರಿಪೋರ್ಟನ್ನು ಓದಿದರು, ಇತರರು ಕ್ಲಬ್ಬಿನ ಅಭಿನಂದನೆಯನ್ನು ಮಾಡಿದರು.

ಬೆಂದೂರ ಸೈಂಟ್ ಸಬೆಸ್ತಿಯನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ೧೯೨೮ನೇ ಇಸವಿ ಜನವರ ೨೮ರಲ್ಲಿ ಜರಗಿದ ಮಂಗಳೂರು ರೇಂಜಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಮಹಾಸಭೆಯಲ್ಲಿ ಈ ಕೆಳಗಿನ ಠರಾವುಗಳು ಮಂಜೂರಾದವು. ಮ| ರಾ| ರಾ| ಕೇ. ಮಂಗೇಶರಾವ್ ಅವರ್ಗಳ್, ಬಿ. ಎ. ಎಲ್. ಟಿ. (ಮಂಗಳೂರು ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಸ್ಪೆಕ್ಟರವರು) ಇವರನ್ನು ಸಭಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಅಧ್ಯಕ್ಷರ ಸಂಕ್ಷೇಪ ಭಾಷಣವಾದ ಮೇಲೆ ಸಭೆಯ ಕಾರ್ಯಕ್ರಮಗಳು ಆರಂಭಿಸಲ್ಪಟ್ಟವು. ಶಾಲಾ ಉಪಾಧ್ಯಾಯರುಗಳ ಸಂಘಕ್ಕೆ ಬೇಕಾದ ನಿಯಮಗಳನ್ನು ಓದಲಾಗಿ ಅವುಗಳೆಲ್ಲವೂ ಸರ್ವಸಮ್ಮತಿಯಿಂದ ಮಂಜೂರಾದವು. ಶ್ರೀಯುತ ಲಕ್ಷ್ಮೀನಾರಾಯಣರಾವ್ ಇವರು ಕಾರ್ಯದರ್ಶಿಗಳಾಗಿಯೂ ಶ್ರೀ| ಜೇ. ಪ್ಯಾಸರು ಅಧ್ಯಕ್ಷರಾಗಿಯೂ ನೇಮಿಸಲ್ಪಟ್ಟರು. ಈ ಸಭೆಯು ಫೆಬ್ರವರಿತಿಂಗಳ ೨೫ನೇ ತಾರೀಕಿನಲ್ಲಿ ಜರಗಲ್ಪಡುವುದೆಂಬದಾಗಿ ನಿರ್ಣಯಿಸಲ್ಪಟ್ಟುದರಿಂದ, ಸೈಂಟ್ ಜೋಸೆಫ್ಸ್ ಎಸ್ಸೈಲಮ್ ಶಾಲೆಯ ಮಿ. ಸಿಕೇರರವರು ಆ ಸಭೆಯನ್ನು ತಮ್ಮ ಶಾಲೆಗೆ ಆಮಂತ್ರಿಸಿದರು, ಅನಂತರ ಅಧ್ಯಕ್ಷರ ಭಾಷಣವಾಗಿ ಧನ್ಯವಾದ ವಂದನೆಗಳನ್ನು ಅರ್ಪಿಸಿದ ಬಳಿಕ ಸಭಾವಿಸರ್ಜನೆಯಾಯಿತು.

ಹೊಸದುರ್ಗ:— ಇಲ್ಲಿಯ ಗೌಡ ಸಾರಸ್ವತ ತರುಣರ ಕೀರ್ತನಾ ಮಂಡಳಿಯವರ 'ಕೀರ್ತನಾ ಸಪ್ತಾಹ' ಉತ್ಸವವು ಅತೀ ವಿಜೃಂಭಣೆಯಿಂದ ಪೊನ್ನೆ ಮುಕ್ತಾಯವಾಗಿ ದೇವರ ಹಗಲು ಉತ್ಸವ ದ್ವಾದಶ ಕಲಶಾರ್ಚನೆ, ಭೂರಿ ಬ್ರಾಹ್ಮಣ ಸಂತರ್ಪಣೆ ಸಹಾ ಜರಗಲ್ಪಟ್ಟಿತು. ಊರು ಪರ ಊರು ಭಕ್ತವೃಂದವು ಈ ಶುಭಕಾರ್ಯದಲ್ಲಿ ಸಹಭಾಗಿಯಾಗಿದ್ದರು. ಏಕಾದಶಿ ದಿವಸ ಮಂಡಳಿ ಪರವಾಗಿ ಅಧ್ಯಕ್ಷ ಶ್ರೀಯುತ ನರಸಿಂಹ ಕಾಮತರಿಗೆ ಒಂದು ಚಿನ್ನದ ಪದಕವನ್ನು ಅರ್ಪಿಸಲಾಯಿತು.

ಮೊನ್ನೆ ಇಲ್ಲಿ ಮಳೆಯೂ ಗುಡುಗುಡು ಕೂಡಾ ವಿಶೇಷವಾಗಿ ಇತ್ತು. ಹೊಸದುರ್ಗ ಪಣತ್ತಡಿ ರಸ್ತೆಯಲ್ಲಿ ಮೋಟರ್ ಚಲಾವಣೆಗೆ ಲೈಸೆನ್ಸ ಕೊಡೋಣಾಗಿ ಚಲಾವಣೆಯು ಸದ್ಯದಲ್ಲಿಯೇ ಕೊಡಗುವದು.

ಈ ತಿಂಗಳ ೩ನೇ ತಾರೀಕಿನ ದಿವಸ ಇಲ್ಲಿ ಬಜಾರಿನಲ್ಲಿ ಹರತಾಳವು ಐಕ್ಯತ್ವದಲ್ಲಿ ಆಚರಿಸಲಾಯಿತು.

ಕುರುಕಾಲು:— ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆಯ ೧ನೇ ಸಹಾಯಕ ಉಪಾಧ್ಯಾಯರಾದ ಕೆ. ಜನಾರ್ಧನಯ್ಯನವರು ೧ ತಿಂಗಳಿನಿಂದ ಸನ್ನಿಪಾತ ಜ್ವರ ಪೀಡಿತರಾಗಿದ್ದು ತಾ. ೨೮-೧-೨೮ನೇ ಪೂರ್ವಾಹ್ನ ಗಂಟೆ ೭ಕ್ಕೆ ಅಕಾಲ ಮೃತ್ಯುವಿನ ತುತ್ತಾದರೆಂಬ ವಾರ್ತೆಯು ತುಂಬಾ ವಿಷಾದ ಜನಕವಾಗಿದೆ. ಮೃತರು ಈ ಶಾಲಾ ಶಿಕ್ಷಕರಾಗಿದ್ದು ತನ್ನ ೨೫ನೇ ತರುಣ ವಯಸ್ಸಿನ ಚಟುವಟಿಕೆಯನ್ನು ಕಾರ್ಯದಕ್ಷತೆಯಲ್ಲಿ ತೋರಿಸುತ್ತಾ ಶಾಲೆಯ ಅಭಿವೃದ್ಧಿಯಲ್ಲಿ ತುಂಬಾ ಸಹಭಾಗಿಗಳಾಗಿದ್ದರು. ಇವರ ಅಂತರ್ಧಾನದ ವ್ಯಸನದಿಂದ, ಶಾಲೆಗೆ ೧ ವಾರದ ರಜೆಯನ್ನು ಕೊಡಲಾಯಿತು. ಶ್ರೀಭಗವಂತನು, ಮೃತರ ಆತ್ಮಕ್ಕೆ ಚಿರಶಾಂತಿಯನ್ನೂ ದಯಪಾಲಿಸಲಿ.

ಕಲ್ಲಡ್ಕ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯೋತ್ಸವವು ಇದೇ ಫೆಬ್ರವರಿ ತಿಂಗಳ ೩ ಮತ್ತು ೪ನೇ ದಿನ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ತಾ. ೩ನೇ ಶುಕ್ರವಾರ ಬೆಳಗ್ಗೆ ಶಾಲಾ ಮಕ್ಕಳ ಪಂದ್ಯಾಟವೂ ಸಾಯಂಕಾಲ ೪-೩೦ರಿಂದ ಸ್ತ್ರೀಯರ ಮತ್ತು ಮಕ್ಕಳ ಸಲುವಾಗಿ ವಿದ್ಯಾರ್ಥಿಗಳಿಂದ ನಾಟಕವೂ ನಡೆದುವು.

ಮಾರಣೆ ದಿನ ಬೆಳಗ್ಗೆ ಮಕ್ಕಳಿಗೆ ತಿಂಡಿ ಹಂಚೋಣಾದ ಕಾರ್ಯಕ್ರಮವೂ ಮುಗಿದ ಬಳಿಕ ಸಾಯಂಕಾಲ ೪-೩೦ಕ್ಕೆ ಮ| ರಾ| ರಾ| ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರವರಾದ ಎಮ್. ರಾಮಕೃಷ್ಣ ಪೂಂಜ ಅವರ್ಗಳರವರ ಅಧ್ಯಕ್ಷತೆಯಲ್ಲಿ ಸಭೆಯು ಜರಗಿತು. ಪ್ರಾರ್ಥನಾ, ಶಾಲಾ ವರದಿ ಓದೋಣ, ಇನಾಮು ಹಂಚೋಣ, ಹಿತಚಿಂತಕರ ಸೂಚನೆ, ಅಧ್ಯಕ್ಷರ ಭಾಷಣ, ಉಪಕಾರಸ್ಮರಣ, ಇತ್ಯಾದಿಗಳ ತರುವಾಯ ವಿದ್ಯಾರ್ಥಿಗಳಿಂದ, ವಿದ್ಯಾಕಲಾ, ಸೀತಾಪರಿಣಯ ಎಂಬ ನಾಟಕವೂ ಅಭಿನಯಿಸಲ್ಪಟ್ಟವು. ತರುವಾಯ ಯೋಗ್ಯಪಾತ್ರಗಳಿಗೆ ಕೆಲವು ಮಹನೀಯರುಗಳಿಂದ ಕೊಡಲ್ಪಟ್ಟ ಪದಕಗಳನ್ನೂ ಇನಾಮುಗಳನ್ನು ಕೊಡೋಣಾದ ಬಳಿಕ, ಸಭೆಯು ಮುಕ್ತಾಯವಾಯಿತು. ರಾತ್ರೆ ರಾಮರಾಜ್ಯವಿಯೋಗ ಎಂಬ ಯಕ್ಷಗಾನ ಪ್ರಸಂಗವು ನಡೆಯಿತು.

ಮುಂಡಾಜೆ:— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ೧೯೨೭ನೇ ಇಸವಿಯ ವರ್ಧಂತಿ ಉತ್ಸವವು ತಾ. ೧೫-೧-'೨೮ನೇ ಭಾನುವಾರ ಜರಗಿತು. ಕಾರ್ಯಕ್ರಮದಂತೆ ೧೪-೧-'೨೮ನೇ ದಿನ ಸಾಯಂಕಾಲ ಮಕ್ಕಳ ಪಂದ್ಯಾಟ ೭ ಘಂಟೆಗೆ ಬೆಳ್ತಂಗಡಿ ಶಾಲೆಯ ಹೆಡ್ ಮಾಸ್ತರಿಂದ ಮಾಯಾಲಾಂಧ್ರದ ದೀಪಾವಳಿ ತೋರಿಸಲ್ಪಟ್ಟಿತು. ಭಾನುವಾರ ಬೆಳಗ್ಗೆ ಮಕ್ಕಳ ಮೆರವಣಿಗೆ, ಮಕ್ಕಳಿಗೆ ಫಲಹಾರ ವ ಇತರರಿಗೆ ಸಹಾ ಹಂಚಿದ ಬಳಿಕ ಅಂದಿನ ಬೆಳಗಿನ ಕಾರ್ಯಕ್ರಮವು ಕೊನೆಗೊಂಡಿತು. ತದ್ದಿನ ಮಧ್ಯಾಹ್ನ ೪ ಘಂಟೆಗೆ ಸರಿಯಾಗಿ ಶಾಲಾ ವಠಾರದಲ್ಲಿ ನೂತನವಾಗಿ ಶೃಂಗರಿಸಿದ ಚಪ್ಪರದಲ್ಲಿ ಬೆಳ್ತಂಗಡಿ ಆಯುರ್ವೇದಿಕ ಡಾಕ್ಟರರಾದ ಶ್ರೀಯುತ ಅನಂತ ರಾಮ ಅದ್ಯಂತಾಯರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯಕ್ರಮದಂತೆ ಶಾಲಾ ವರದಿ ಮಕ್ಕಳಿಗೆ ಪಾರಿತೋಷಕ ಹಿತಚಿಂತಕರ ಭಾಷಣವಾದ ಬಳಿಕ ಸಭಾ ಅಧ್ಯಕ್ಷರು ತನ್ನ ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟ ಬಳಿಕ ಸಾಯಂಕಾಲ ಘಂಟೆ ೭ಕ್ಕೆ ಶಾಲಾ ಮಕ್ಕಳಿಂದ 'ಕೃಷ್ಣ ಸಂಧಾನ'ವೆಂಬ ನಾಟಕವನ್ನು ಚಲೋ ರೀತಿಯಿಂದ ಹಳ್ಳಿ ಶಾಲೆಯ ಮಕ್ಕಳು ಅಭಿನಯಿಸಿದರು.

ಉಡ್ಪಿ:— ಇಲ್ಲಿ ಈ ವರುಷದ ಮಧ್ವನವಮಿ ಸಮಾರಂಭವು ತಾ. ೩೧-೧-'೨೮ರಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪರ್ಯಾಯಕ್ಕಾಗಿ ಬಂದಿದ್ದ ಹಲವು ಮಂದಿ ಯಾತ್ರಿಕರು ಈ ವರೇಗೂ ಇಲ್ಲೇ ನಿಂತಿದ್ದುದರಿಂದ ಉಡುಪಿಯು ಪರ್ಯಾಯ ಕಾಲದಿಂದ ಈ ವರೇಗೂ ಉತ್ಸವಪ್ರಾಯವಾಗಿಯೇ ಇದ್ದಿತು. ಈ ದಿನ ಬೆಳಗಿನಿಂದ ಸಂಜೆಯ ವರೇಗೂ ಶ್ರೀ ಮದನಂತೇಶ್ವರ ದೇವಾಲಯದಲ್ಲಿ ಮಧ್ವಪೀಠದ ಬಳಿ ಪೂಜಾ ಪಾರಾಯಣಾದಿಗಳು ನಡೆಯುತ್ತಲೇ ಇದ್ದುವು. ಪ್ರಕೃತ ಪರ್ಯಾಯಸ್ಥರಾದ ಶ್ರೀ ಶ್ರಿಪುತ್ತಿಗೆ ಶ್ರೀಗಳವರು ಅತ್ಯಾದರದಿಂದ ನೆರೆದಿದ್ದ ಆರೇಳು ಸಹಸ್ರ ಬ್ರಾಹ್ಮಣರ ಸಂತರ್ಪಣೆಯನ್ನು ನಡೆಯಿಸಿದರು. ಈಗ ಕೆಲ ಕಾಲದಿಂದ ಮಠಾಧಿಪತಿಗಳಲ್ಲಿ ಉಂಟಾಗಿದ್ದ ಪಕ್ಷಭೇದವನ್ನು ಶ್ರೀ ಪರ್ಯಾಯ ಶ್ರಿಪಾದಂಗಳವರು ತಮ್ಮ ಸವಿನಯ ಸತ್ಯಾಗ್ರಹದಿಂದ ಅಡಗಿಸಿ ಏಕಪಕ್ಷತೆಯನ್ನುಂಟುಮಾಡಿ ಸರ್ವಮಠಾಧಿಪತಿಗಳೊಡನೆ ಈ ದಿನ ಶ್ರೀ ಸರ್ವಜ್ಞರಾಯರ ಪೂಜಾದಿಗಳನ್ನು ನಿರ್ವಹಿಸಿದರೆಂಬುದು ತುಂಬ ಸಂತೋಷಕರವಾಗಿದೆ. ಸರ್ವಜ್ಞಸಂಕಲ್ಪದಿಂದುಂಟಾದ ಮಠಾಧಿಪತಿಗಳ ಈ ಐಕ್ಯವು ಇನ್ನೆಂದಿಗೂ ಒಡೆಯದಿರಲೆಂದು ಕೋರಲಾಗುತ್ತದೆ. ಈ ದಿನ ಸಾಯಂ ಗಂಟೆ ೬ರಿಂದ ೯ರ ವರೆಗೆ ಶ್ರೀ ಪುತ್ತಿಗೆ ಮಠದ ಮುಂಬಾಗಿಲಲ್ಲಿ ಹರಿಕಥೆ ಮಧ್ವ ಚರಿತೋಪನ್ಯಾಸ ಮುಂತಾದುವುಗಳು ಜರುಗಿದುವು. ಈ ಸಂದರ್ಭದಲ್ಲಿ ಶ್ರೀ ಪುತ್ತಿಗೆ ಮಠದ ಚಿಕ್ಕ ಶ್ರೀಗಳವರು ಆಚಾರ್ಯರ ಮಹಿಮೆ ಹರಿಸರ್ವೋತ್ತಮತ್ವಗಳ ಕುರಿತು ಸುಮಾರು ಒಂದು ತಾಸಿನ ವರೆಗೆ ಉದಾತ್ತವಾದ ವ್ಯಾಖ್ಯಾನಮಾಡಿ ಶ್ರೋತೃವರ್ಗದ ಮನಸ್ಸಿನಲ್ಲಿ ಭಕ್ತಿರಸವನ್ನು ಹರಿಯಿಸಿದರು. ಶ್ರೀಗಳವರ ಕರ್ತವ್ಯಜ್ಞಾನವೂ ಕಾರ್ಯೋತ್ಸಾಹವೂ ವಿಶೇಷತಃ ಸುತ್ಯವಾಗಿವೆ.

ಮುಂಡ್ಕೂರು:— ಇಲ್ಲಿಯ ಶಿಶುಸಪ್ತಾಹ ಸಮಾರಂಭವು ಇದೇ ತಾರೀಕು ೧೧ನೇ ಶನಿವಾರ ಮುಂಡ್ಕೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ್ ಎಮ್. ರಾಮಣ್ಣಶೆಟ್ರುವರ ಅಧ್ಯಕ್ಷತೆಯಲ್ಲಿ ಜರಗುವದು.

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

Tel: Conveyance.

[illegible] ಮಂಗಳೂರು.

(1) [illegible] (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳ [illegible] ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ [illegible] ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ [illegible] ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು [illegible] ಬಸ್ಸುಗಳನ್ನು ಏರ್ಪಡಿಸಿರುತ್ತೆ.

[illegible] ವಿವರ.

[illegible] 1½ ಗಂಟೆ ಅವಕಾಶ ಕೊಟ್ಟು 7¼ ಗಂಟೆಗೆ ಸಿದ್ಧ [illegible] 11-45ಕ್ಕು. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, [illegible] ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕು ಬೆಳ್ತಂಗಡಿಗೆ 1-45ಕ್ಕೆ [illegible] ಮುಲ್ಕಿ, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ [illegible]

[illegible] ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕೂ [illegible] ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು [illegible] ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ [illegible] 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ [illegible] ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್, ಗೋವಾ, ಲೋಂಡ, [illegible]

[illegible] ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ [illegible] ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ [illegible]

[illegible] ಅನುಕೂಲತೆ.

(3) [illegible] ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ [illegible] ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು [illegible]

[illegible] ಬರೆದುಕೊಳ್ಳಬಹುದು.

[illegible] ಸಾಹೇಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

THE CANARA PUBLIC CONVEYANCE CO., LTD., MANGALORE.

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್. ಮಂಗಳೂರು.

ಇದು ದಕ್ಷಿಣ ಕನ್ನಡ [illegible] ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

[illegible]

[illegible] ಮಾರ್ಗವಾಗಿಯೂ

[illegible] ಒಂದೇ ಶಿಲೆಕಲ್ಲಿನಿಂದ

[illegible]

[illegible]

ಪ್ರತಿಮೆಯನ್ನು ನೋಡಲು [illegible] ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

[illegible]

ಎಂಬ [illegible] ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ [illegible] ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು [illegible] ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ [illegible] ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ [illegible] ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು [illegible] ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ಸ್ಯಾಮನ ಕಮಿಶನ್ನು ಬಂದಿತು

"ಸ್ಯಾಮನರೇ, ನೀವು ಹಿಂದೆ ತೆರಳಿರಿ"

ಬೇಡವಾದ ಕಮಿಶನ್ನಿಗೆ ವತ್ತಾಯದ ಸ್ವಾಗತ.

ಮುಂಬಾಯಿಯಲ್ಲಿಯ ಹರತಾಳ.

ಕಳೆದ ಶುಕ್ರವಾರ ಸೈಮನ ಕಮಿಶನು ಮುಂಬಾಯಿಗೆ ಬಂದಿಳಿಯುವ ದಿನ ಮುಂಬಾಯಿಯಲ್ಲಿ ಹರತಾಳವು ಬಹಳೇ ಉತ್ತಮ ರೀತಿಯಲ್ಲಿ ಆಚರಿಸಲ್ಪಟ್ಟಿತು. ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಒಂದು ಲೇಬರ್ ಮೀಟಿಂಗು ನಡೆದು, ಬಾಲ್ಡವಿನ್, ಲೋರ್ಡ್ ಬರ್ಕನ್ ಹೆಡ್, ಮೆಕ್‌ಡೊನಾಲ್ಡ್ ಮತ್ತು ಸರ್ ಜೋನ್ ಸ್ಯಾಮನ್ ಇವರ ಚಿತ್ರಗಳು ಸುಡಲ್ಪಟ್ಟವು. ಸಾಯಂಕಾಲದ ಹೊತ್ತಿಗೆ ಚೌಪಾಟಿಯಲ್ಲಿ ಒಂದು ಸಭೆ ಕೂಡಿತು. ಈ ಸಭೆಗೆ ಸುಮಾರು ೫೦,೦೦೦ ಜನರು ಹಾಜರಿದ್ದರು. ವಿದ್ಯಾರ್ಥಿಗಳೇ ಮೊದಲಾದವರು ಮೆರವಣಿಗೆಯಲ್ಲಿ ಬಂದು ಸೇರಿದರು. ಸ್ಯಾಮನ್ ಕಮಿಶನನ್ನು ಯಾವ ವಿಧದಲ್ಲಿಯೂ ಲಕ್ಷಿಸಬಾರದೆಂದು ಆ ಸಭೆಯಲ್ಲಿ ಮಂಜೂರಾಯಿತು. ಗಾಳಿಯು ರಭಸವು ವಿಪರೀತವಾಗಿದ್ದುದರಿಂದ ಸ್ಯಾಮನ್ ಕಮಿಶನಿನವರು ಬರುತ್ತಿದ್ದ "S. S. ರಾವಲ್ ಪಿಂಡಿ" ಎಂಬ ಹಡಗವು ಒಂದು ಘಂಟೆ ತಡವಾಗಿ ಮುಂಬಾಯಿಗೆ ತಲಪಿತು. ಸ್ವಲ್ಪ ಸ್ವಲ್ಪ ಮಳೆಯೂ ಬರುತಿತ್ತು. ದಕ್ಕೆಯ ಸಮೀಪ ಕಪ್ಪು ಧ್ವಜಗಳನ್ನು ಹಿಡಿದು ಹಲವರು ಸ್ಯಾಮನ್ ಕಮಿಶನಿಗೆ ತಮ್ಮ ಬಹಿಷ್ಕಾರವನ್ನು ಸೂಚಿಸುತಿದ್ದರು. ಪತಾಕೆಗಳ ಮೇಲೆ "ಸ್ಯಾಮನ್, ಹಿಂದಕ್ಕೆ ಹೋಗು" ಎಂದು ಬರೆದು ಅವುಗಳನ್ನು ಎತ್ತಿಹಿಡಿದಿದ್ದರು. ಕಮಿಶನು ಬಂದಿಳಿದೊಡನೆಯೇ ಫೋಟೋಗ್ರಾಫರರೂ ಪ್ರೆಸ್ಸಿನ ಜನರೂ ಬಂದು ಸೇರಿದರು. ಕಮಿಶನಿನ ಮೆಂಬರರಿಗೆ ಅನೇಕ ಪ್ರಶ್ನೆಗಳನ್ನು ಹಾಕಿದರು. ಕಮಿಶನಿನಲ್ಲಿ ಒಬ್ಬರಾದ ವಿಸ್ಕೌಂಟ್ ಬರ್ನಹೇಮರು, ಕಮಿಶನಿನ ಕುರಿತು ಹಿಂದುಗಳಲ್ಲಿದ್ದ ವಿರುದ್ಧಭಾವವು ಹಿಂದೂ ಪತ್ರಿಕೆಗಳಿಂದ ತನಗೆ ತಿಳಿದಿದೆಯೆಂದೂ ಆದರೆ ತಾವು ಹಿಂದುಗಳ ಮೇಲೆ ಸಹಾನುಭೂತಿಯುಳ್ಳವರೆಂದೂ ಹೇಳಿದರು. ಮುಂಬಾಯಿ ಗವರ್ನರರ ಸೆಕ್ರೆಟರಿಗಳು ಅವರೆಲ್ಲರನ್ನೂ ಸತ್ಕರಿಸಿದರು. ಕಾರಿನಲ್ಲಿ ಕುಳಿತು ಅವರು ಹೋಗುತ್ತಿರುವಾಗ—"ಸ್ಯಾಮನ್, ಹಿಂತೆರಳು" ಎಂದು ಜನರು ಅಲ್ಲಲ್ಲಿ ಬೊಬ್ಬಿಡುತ್ತಿದ್ದರು. ಸರ್ ಜೋನ್ ಸ್ಯಾಮನರು ತಾನು ಹಿಂದೂದೇಶದ ಮೇಲೆ ಪ್ರೀತಿಯುಳ್ಳವನೆಂದೂ ತಾನು ಮಾಡಬೇಕಾದ ಕೆಲಸವನ್ನು ಮನಃಪೂರ್ವಕವಾಗಿ, ಹಿಂದುಗಳ ಮೇಲೆ ಪ್ರೀತಿಯಿಟ್ಟು ಮಾಡುವೆನೆಂದೂ, ಬ್ರಿಟಿಷರೂ, ಹಿಂದುಗಳೂ ವಿರೋಧಭಾವವನ್ನು ತ್ಯಜಿಸಬೇಕೆಂದೂ, ಕಮಿಶನಿನ ಕುರಿತು ಹಿಂದೂಗಳಲ್ಲಿ ಉಂಟಾಗಿರುವ ವಿರೋಧಭಾವವನ್ನು ತ್ಯಜಿಸುವದುತ್ತಮವೆಂದೂ ಹೇಳಿದರು.

ಕಮಿಶನು ಡಿಲ್ಲಿಗೆ ತೆರಳಬೇಕಾದರೆ, ಪಂಚಮರದೊಂದು, ಕೆಲವು ಮುಸಲ್ಮಾನರದೊಂದು ಹೀಗೆ ಎರಡು ಮಾನಪತ್ರಗಳು ಸ್ಯಾಮನರಿಗೆ ಸಮರ್ಪಿಸಲ್ಪಟ್ಟವು. ಪಂಚಮರಿಗೆ ಈಗ ಉಂಟಾಗುತ್ತಿರುವ ಅನ್ಯಾಯಗಳನ್ನು ಹೋಗಲಾಡಿಸಬೇಕೆಂದೂ ಅವರಿಗೆ ಕೆಲವು ಹಕ್ಕುಗಳನ್ನು ಕರುಣಿಸಬೇಕೆಂದೂ ಮಾನಪತ್ರದಲ್ಲಿತ್ತು. ತಾವು ಎಲ್ಲದರ ಕುರಿತು ವಿಚಾರಿಸುವೆವೆಂದು ಸ್ಯಾಮನರು ಹೇಳಿದರು. ಮರುದಿನ ಮಧ್ಯಾಹ್ನ ಘಂಟೆ ೧ಕ್ಕೆ ಕಮಿಶನು ಮುಂಬಾಯಿಯನ್ನು ಬಿಟ್ಟು ಡಿಲ್ಲಿಗೆ ತೆರಳಿತು.

ಮದರಾಸಿನಲ್ಲಿಯ ಹರತಾಳ.

ಮದರಾಸಿನ ಹರತಾಳವು ಇತರ ಸ್ಥಳಗಳಂತೆ ಶಾಂತಿಯಿಂದ ಕೊನೆಗಾಣದೆ, ಬಹಳ ಅನಾಹುತಗಳನ್ನು ಉಂಟುಮಾಡಿತು. ಜೋರ್ಜ್ ಟೌನಿನಲ್ಲಿ ಜನರ ಜೋರಾವರಿಯು ವಿಪರೀತವಾಗಿದ್ದಿತು, ಒಂದು ಮೋಟರ್ ಕಾರನ್ನು ಸುಟ್ಟುಹಾಕಿದರು. ಪೋಲೀಸರು ಗುಂಡುಹೊಡೆದು ಒಬ್ಬನನ್ನು ಕೊಂದರು. ಇಬ್ಬರು ಗಾಯಹೊಂದಿದರು. ಹರತಾಳವೆಂದು ಈ ರೀತಿಯಲ್ಲಿ ಬಲಾತ್ಕಾರ ಮೊದಲಾದವುಗಳಿಗೆ ಎಡೆಕೊಟ್ಟುದು ಧುರೀಣರ ಮನಸ್ಸಿಗೆ ಏನೂ ಸಂಬಂಧಿಸಲಿಲ್ಲ. ಬೆಳಿಗ್ಗೆ ಹರತಾಳವು ಉತ್ತಮರೀತಿಯಲ್ಲಿ ಆಚರಿಸಲ್ಪಟ್ಟು ಏನೊಂದೂ ಗಲಭೆಯಾಗಲಿಲ್ಲ. ಹಿಂದಿನ ದಿನ ನಿಶ್ಚಯಿಸಲ್ಪಟ್ಟಂತೆ ಪೋಲೀಸರು ಅಲ್ಲಲ್ಲಿ ನಿಂತು ಲೂಟಿಯಾಗದಂತೆ ನೋಡಿಕೊಳ್ಳುತಿದ್ದರು. ಸುಮಾರು ಒಂಭತ್ತು ಗಂಟೆಯ ತರುವಾಯ ಓಡುತ್ತಿರುವ ಟ್ರಾಮುಗಳ ಮೇಲೆ ಕಲ್ಲಿನ ಮಳೆ ಸುರಿಯಲಾರಂಭಿಸಿತು. ಅದಕ್ಕಾಗಿ ಟ್ರಾಮು ಓಡಿಸುವುದನ್ನು ನಿಲ್ಲಿಸಿದರು. ಮೋಟಾರುಕಾರುಗಳ ಮೇಲೆ ಕಲ್ಲುಗಳನ್ನು ಬಿಸಾಡತೊಡಗಿದುದರಿಂದ ಅವುಗಳ ಚಲಾವಣೆಯನ್ನು ನಿಲ್ಲಿಸಬೇಕಾಯಿತು. ಹೆದರಿಕೆಯಿಂದ ಕಾರುಗಳನ್ನು ಜೋರಾಗಿ ಓಡಿಸುತ್ತಿರುವಾಗ ಎರಡು ಕಾರುಗಳು ಒಂದಕ್ಕೊಂದು ಬಡೆದು ಬಹಳ ನಷ್ಟವಾಯಿತು. ಒಂದು ಇಂಗ್ಲಿಷ್ ಕೋಪನ್ನು ಮುಚ್ಚದಿದ್ದುದಕ್ಕಾಗಿ ಜನರು ಅಲ್ಲಿಗೆ ಹೋಗಿ ಬಲಾತ್ಕಾರವನ್ನು ಮಾಡಿದ ಕಾರಣ ಕುಸ್ತಿಗಳಿಂದ ಹೊಡೆದಾಟವು ಆಯಿತು. ಗಲಾಟೆಯು ಬೆಳೆಯುತ್ತಾ ಬಂದಕಾರಣ ಪೋಲೀಸರು ಅಲ್ಲಿ ಇಬ್ಬರನ್ನು ಕೈದುಮಾಡಿ ಜೈಲಿಗೆ ಕರೆದೊಯ್ದರು.

ಕೈದಿಗಳನ್ನು ಬಿಡುಗಡೆ ಮಾಡದಿದ್ದುದಕ್ಕಾಗಿ ಜನರು ಪೋಲೀಸ್ ಆಫೀಸರರ ಮೇಲೆ ಕಲ್ಲುಗಳನ್ನೆಸೆದು ಅನೇಕರನ್ನು ಹಿಂಸಿಸಿದರು. ಲೋ ಕಾಲೇಜಿಗೆ ವಿದ್ಯಾರ್ಥಿಗಳು ಹೋಗದಂತೆ ತಡೆದರು. ಇದಕ್ಕಾಗಿ ಪೋಲೀಸರು ಪುನಃ ಮೂರು ಜನರನ್ನು ಕೈದುಮಾಡಿದರು. ಹೈಕೋರ್ಟಿನ ಸಮೀಪದಲ್ಲಿ ಜನರು ಬೆಂಕಿಕಡ್ಡಿಗಳನ್ನು ಸುಟ್ಟು ಬಿಸಾಡತೊಡಗಿದ್ದರಿಂದ ಯಾವುದಕ್ಕೋ ಬೆಂಕಿತಾಗಿತು. ಅಷ್ಟರೊಳಗೆ ಅದನ್ನು ನಂದಿಸಿಬಿಟ್ಟರು. ಹೈಕೋರ್ಟಿನ ಸಮೀಪ ಜನಸಂದಣಿಯು ಕಿಕ್ಕಿರಿದಿತ್ತು. ಡಾ। ಪೋರ್ಬ್ಸ್ ಎಂಬವರು ಕೋರ್ಟಿಗೆ ಹೋಗಲು ಒಂದು ಮೋಟಾರಕಾರಿನ ಮೇಲೆ ಕುಳಿತು ಬಂದವರು ಹೋಗಲಾರದೆ ಕಾರನ್ನು ನಿಲ್ಲಿಸಿ ಮುಂದಕ್ಕೆ ನಡೆದುಕೊಂಡುಹೋದರು. ಅವರು ಹೋದೊಡನೆ ಜನರು ಕಾರನ್ನು ಮುರಿದು ಅದಕ್ಕೆ ಬೆಂಕಿಯನ್ನು ಕೊಟ್ಟರು. ಕೂಡಲೇ ಜಡ್ಜರೂ, ವಕೀಲರೂ ಹೊರಗೆ ಬಂದು ಜನರು ಅಲ್ಲಿಂದ ತಕ್ಷಣವೇ ಹೋಗಬೇಕೆಂದು ಹೇಳಿದರು. ಆದರೆ ಅವರು ಹೋಗದ ಕಾರಣ ಹತ್ತು ಜನ ಪೋಲೀಸರು ಸಾಲಾಗಿ ನಿಂತು ಗುಂಡುಹಾರಿಸಿದರು. ಇದರ ಫಲಿತಾಂಶವಾಗಿ ಇಬ್ಬರು ಸತ್ತರು. ಒಬ್ಬರಿಗೆ ಗಾಯವಾಯಿತು. ಆದರೂ ಜನರ ಗಲಾಟೆಯು ಕಡಿಮೆಯಾಗಲಿಲ್ಲ. ಕಾರುಗಳ ಮೇಲೆ ಕಲ್ಲುಬಿಸಾಡುವುದು ಹೆಚ್ಚಾದ ಕಾರಣ ಎರಡು ಲೋರಿಗಳಲ್ಲಿ ಸೈನಿಕರು ಬಂದು ತಲಪಿದರು. ಆಗ ಮಾತ್ರ ಜನರು ಸಿಕ್ಕಿದಲ್ಲಿಗೆ ಓಡಿದರು.

ಮೌಂಟ್‌ರೋಡಿನಲ್ಲಿ ಮಾತ್ರ ಯಾವದೊಂದು ತರದ ಗಲಾಟೆಯಾಗದೆ ಸಮಾಧಾನದಿಂದಲೇ ಹರತಾಳವು ಆಚರಿಸಲ್ಪಟ್ಟಿತು. ಶಾಲೆಗಳಲ್ಲಿಯೂ ಕೊಲೇಜುಗಳಲ್ಲಿಯೂ ಹುಡುಗರ ಹಾಜರಿಯು ತೀರ ಕಡಿಮೆಯಾಗಿದ್ದಿತು.

ಟ್ರಿಪ್ಲಿಕೇನಿನ ಹಿಂದೂ ಹೈಸ್ಕೂಲನ್ನು ಮುಚ್ಚಬೇಕಾಗಿ ವಿದ್ಯಾರ್ಥಿಗಳು ಪ್ರಾರ್ಥಿಸಿಕೊಂಡರೂ ಅಧಿಕಾರಿಗಳು ಕೇಳಲಿಲ್ಲ. ಅದಕ್ಕಾಗಿ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಯ ಮೇಲೆ ಕಲ್ಲುಗಳನ್ನು ಬಿಸಾಡಿ ವಿದ್ಯುದ್ದೀಪಗಳನ್ನು ಪುಡಿಮಾಡಿದರು. ರೈಲುಗಳ ಮೇಲೆಯೂ ಕಲ್ಲುಗಳನ್ನು ಬಿಸಾಡಿದ್ದರೂ ಯಾರಿಗೂ ಹೆಚ್ಚಿನ ಅಪಾಯ ಉಂಟಾಗಲಿಲ್ಲ. ಟಪ್ಪಾಲ ಅಧಿಕಾರಿಗಳು ಅಂದಿನ ದಿನ ಪೇದೆಗಳ ಕೂಡೆ ಮನಿಯಾರ್ಡರನ್ನಾಗಲೀ ಹಣವನ್ನಾಗಲೀ ಕೊಡಲೇ ಇಲ್ಲ. ಬೇಂಕುಗಳೆಲ್ಲವೂ ಬಂದು ಮಾಡಲ್ಪಟ್ಟಿದ್ದವು. ಗಲಾಟೆಯು ಬಹಳವಿದ್ದುದರಿಂದ ಹೈಕೋರ್ಟನ್ನೂ ಮುಚ್ಚಬೇಕಾಯಿತು.

ಸಾಯಂಕಾಲ ೫ ಘಂಟೆಯ ಹೊತ್ತಿಗೆ ತಿಲಕಘಾಟಿನಲ್ಲಿ ಮಹಾಜನ ಸಭೆಯೊಂದು ಜರಗಿತು. ರಾ। ಸತ್ಯಮೂರ್ತಿಯವರೇ ಅಧ್ಯಕ್ಷರಾಗಿದ್ದರು. ಒಬ್ಬ ಮಹಮ್ಮದೀಯರು ಉರ್ದುವಿನಲ್ಲಿ ಭಾರತ ಗೀತೆಯನ್ನು ಹಾಡಿದೊಡನೆ ಸಭೆಯ ಕಾರ್ಯಕ್ರಮಗಳು ಪ್ರಾರಂಭವಾದವು. ಈ ತರದಲ್ಲಿ ಗಲಾಟೆಯನ್ನೆಬ್ಬಿಸಿದುದು ಹರತಾಳಕ್ಕೆ ತೀರ ವಿರುದ್ಧವೆಂದೂ ಕಾಂಗ್ರೆಸಿನ ಠರಾವಿಗೆ ಸರಿಯಾದುದಲ್ಲವೆಂದೂ ಇದರಿಂದ ಕಮಿಶನಿನ ಮೇಲಿನ ತಿರಸ್ಕಾರವು ಮಾಯವಾಗಿ ಅದರ ಕಡೆಗೆ ಮನವು ಒಲಿಯಬಹುದೆಂದೂ ಆದಕಾರಣ ಶಾಂತಿಯಿಂದ ಎಲ್ಲರೂ ಮನೆಗೆ ನಡೆಯಬೇಕೆಂದೂ ಅಧ್ಯಕ್ಷರು ಹೇಳಿದರು. ಈ ಸಭೆಯು ಕಮಿಶನಿನ ಬಹಿಷ್ಕಾರವನ್ನು ಸಾರುವದೆಂಬ ಠರಾವನ್ನು ಡಾಕ್ಟರ್ ಪಿ ವರದರಾಜಲು ನ್ಯಾಡುರವರು ಮುಂದಕ್ಕೆ ತಂದರು. ಈ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಹುಬ್ಬಳ್ಳಿಯ ಹರತಾಳವು.

ತಾ. ೩ನೇ ಫೆಬ್ರವರಿ ದಿವಸ ಕರ್ನಾಟಕ ಪ್ರೆಸ್ಸಿನಿಂದ ಮೆರವಣಿಗೆಯು ಹೊರಡಿಸಲ್ಪಟ್ಟಿತು. ಊರಲ್ಲಿಯ ಮುಖ್ಯ ಮುಖ್ಯ ಬೀದಿಗಳಲ್ಲಿ ಸುಮಾರು ಒಂದೂವರೆ ಎರಡು ತಾಸುಗಳ ವರೆಗೆ ತಿರುಗಾಡಿ ಕೊನೆಗೆ ಪುನಃ ಕರ್ನಾಟಕ ಪ್ರೆಸ್ಸಿಗೆ ಬಂದಿತು. ಮೆರವಣಿಗೆಯಲ್ಲಿ ಭಾಗವಹಿಸಿಕೊಂಡ ಜನರು ಕೇವಲ ಹರತಾಳದ ದೆಸೆಯಿಂದಲೇ ರಚಿಸಿದ ಪದವನ್ನು ತಾಳದಲ್ಲಿ ಅನ್ನುತ್ತ ಹೊರಟಿದ್ದರು. ಅಲ್ಲದೆ ಬಹಳ ಜನರ ಕೈಯಲ್ಲಿ ಹರತಾಳವನ್ನು ಪಾಲಿಸಿರಿ. ಸಾಯಮನ್ ಕಮಿಶನಕ್ಕೆ ಬಹಿಷ್ಕಾರ ಹಾಕಿರಿ, ಎಂಬ ದೊಡ್ಡ ಅಕ್ಷರಗಳಿಂದ ಬರೆಯಲ್ಪಟ್ಟ ಪಠಗಳು, ರಾಷ್ಟ್ರೀಯ ನಿಶಾನೆಗಳು ಮತ್ತು ಅಪಮಾನದಿಂದಾದ ವ್ಯಸನವನ್ನು ವ್ಯಕ್ತಪಡಿಸುವ ಕರೀ ನಿಶಾನೆಗಳು ಒಡೆದು ಕಾಣಿಸುತಿದ್ದವು. ಅದೇ ದಿವಸ ಮತ್ತು ಇದಕ್ಕೂ ಮೊದಲು ಊರಲ್ಲಿ ಗೋಡೆಗಳ ಮೇಲೆ ಪ್ರಕಟನೆಗಳು ಹಚ್ಚಲ್ಪಟ್ಟಿದ್ದವು. ಇದಲ್ಲದೆ ಊರೊಳಗಿನ ವಿದ್ಯಾರ್ಥಿಗಳನ್ನು ಮತ್ತು ಉಳಿದ ಜನರನ್ನು ಕುರಿತು ಬರೆಯಲ್ಪಟ್ಟ ಚಿಕ್ಕ ಪತ್ರಿಕೆಗಳನ್ನು ಹಂಚಲಾಗಿತ್ತು.

ತಾ. ೩ನೇ ದಿವಸ ಹುಬ್ಬಳ್ಳಿಯಲ್ಲಿ ಕೊನೆಗೆ ಕಂಡುಬಂದ ಕಾರ್ಯವೆಂದರೆ ಕಾಟನ್ ಮಾರ್ಕೆಟ್, ಸರಾಫ ಗಲ್ಲಿಯಲ್ಲಿಯ ಅಂಗಡಿಗಳು, ಜವಳೀ ಪೇಟೆಯಲ್ಲಿಯ ಅಂಗಡಿಗಳು, ಹಲವು ಫರಾಳದ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ವಿದ್ಯಾರ್ಥಿಗಳು ಬಾರದೆ ಇದ್ದುದರಿಂದ ಎರಡು ಹೈಸ್ಕೂಲುಗಳು ನಿರ್ವಾಹವಿಲ್ಲದೆ ಮುಚ್ಚಲ್ಪಟ್ಟಿದ್ದವು. ಎರಡು ಪ್ರಾಥಮಿಕ ಶಾಲೆಗಳಾದರೂ ಹರತಾಳದ ಪರಿಣಾಮವನ್ನು ಅನುಭೋಗಿಸಬೇಕಾಯಿತು. ಉಳಿದ ಶಾಲೆಗಳಿಗಾದರೂ ಬಹಳ ಸ್ವಲ್ಪ ಹುಡುಗರು ಹೋಗಿದ್ದರು.

ಇದೇ ದಿವಸ ಸಂಜೆಯ ೬ ಗಂಟೆಗೆ ಕರ್ನಾಟಕ ಪ್ರೆಸ್ಸಿನಲ್ಲಿ ಹುಬ್ಬಳ್ಳಿಯ ಪ್ರಸಿದ್ಧ ಲಿಂಗಾಯತ ವಕೀಲರಾದ ಶ್ರೀ. ಪಾವಟೆಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತು. ಈ ದಿವಸ ಮುಂಜಾವಿನಿಂದ ಮಳೆ ಹೊಡೆಯುತಿದ್ದರೂ ೮೦೦ ಜನರು ಕೂಡಿದ್ದರು. ಅಸಹಕಾರತೆಯ ದಿವಸಗಳ ನಂತರ ಬಹಳ ಜನರು ಕೂಡಿದ ಸಭೆಯೆಂದರೆ ಇದೇ ಮೊದಲು ಎನ್ನಬಹುದು. ಈ ಸಭೆಯಲ್ಲಿ ಲೋಕಮತದ ಸಂಪಾದಕರಾದ ಶ್ರೀ. ಪುರಾಣಿಕ, ಕರ್ಮವೀರ ಸಂಪಾದಕರಾದ ದೇ. ಭ. ದಿವಾಕರ, ಡಾ। ಹರ್ಡೀಕರ ಶ್ರೀ। ಬಳೇಅಂಗಡಿ ವಕೀಲ ಮುಂತಾದವರ ಪರಿಣಾಮಕಾರಕವಾದ ಭಾಷಣಗಳಾದವು. ಮತ್ತು ಸಾಯಮನ್ ವಿಚಾರ ಮಂಡಲದ ವಿಷಯಕ್ಕೆ ನಿಷೇಧವನ್ನು ವ್ಯಕ್ತಪಡಿಸುವಂಥ ಮತ್ತು ಮಂಬಾಯಿ ಕಾಯಿದೇ ಕೌನ್ಸಿಲಿಗೆ ಹೋದ ಡಿಲ್ಲಿಯ ಎಸೆಂಬ್ಲಿಗೆ ಹೋದ ಕನ್ನಡಿಗರು ಈ ವಿಚಾರ ಮಂಡಲವನ್ನು ಏಕಸ್ವರದಿಂದ ವಿರೋಧಿಸಬೇಕೆಂದು ಹೇಳುವ ಎರಡು ಠರಾವುಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ಸ್ಯಾಮನ್ ಕಮಿಶನಿನ ಹೇಳಿಕೆ.

ಸರ್ ಜೋನ್ ಸ್ಯಾಮನರು ಡಿಲ್ಲಿಯಲ್ಲಿ ತನ್ನ ಹೇಳಿಕೆಗಳೆಲ್ಲವನ್ನು ಹೇಳಿದರು. ಈ ಹೇಳಿಕೆಯನ್ನು ಕೇಳಿ ಪ್ರತಿ ಪಾರ್ಟಿಯ ಧುರೀಣರು ಎರಡೆರಡು ತಾಸು ಗಾಢವಾದ ವಿಚಾರವನ್ನು ಮಾಡಿ ಕೊನೆಗೆ ಅವರೆಲ್ಲರೂ ಒಟ್ಟುಕೂಡಿ, ಕಮಿಶನಿಗೂ ಇಂಡಿಯಕ್ಕೂ ಯಾವ ಸಂಬಂಧವೂ ಇರಬಾರದು; ಯಾವ ರೀತಿಯಲ್ಲಿಯೂ ಯಾವ ಕಾಲದಲ್ಲಿಯೂ ಕಮಿಶನಿಗೂ ಹಿಂದೂಸ್ಥಾನಕ್ಕೂ ಸಂಬಂಧವಿರಲಾರದು. ಎಂದು ಸಾರಿದರು. ಸರ್ ಜೋನ್ ಸ್ಯಾಮನರು ಹೇಳುವದು ತಮಗೆ ಹಿತಕರವಲ್ಲವೆಂದು ತಿಳಿದು ವ್ಯಾಸರಾಯರ ಬೆದರಿಕೆಗಳಿಗೂ ಹೆದರದೆ ಧುರೀಣರು ತಿರಸ್ಕಾರವನ್ನೇ ತೋರುತ್ತಿರುವರು. ಒಟ್ಟಾರೆ ಯಾರಿಗೂ ಕಮಿಶನಿನ ಉದ್ದೇಶವು ಒಪ್ಪಿಗೆಯನ್ನುಂಟುಮಾಡಿಲ್ಲ. ಈ ಠರಾವನ್ನು ೧೬ನೇ ತಾರೀಕಿನಲ್ಲಿ ಎಸೆಂಬ್ಲಿಯಲ್ಲಿ ಒಯ್ದು ಚರ್ಚಿಸುವರು. ಅದುವರೆಗೆ ಸರ್ ಜೋನ್ ಸ್ಯಾಮನರು ಡಿಲ್ಲಿಯಲ್ಲೇ ಉಳಕೊಳ್ಳುವರು.

ಧುರೀಣರು ಈ ತರದಲ್ಲಿ ಹೇಳುವರು—ಸರ್ ಜೋನ್ ಸ್ಯಾಮನರ ಹೇಳಿಕೆಯ ಕುರಿತು ನಾವು ಬಹಳ ವಿಚಾರಮಾಡಿದೆವು. ಆದರೆ ನಮಗೆ ಅದು ಸರಿತೋರದ ಕಾರಣ ನಾವು ಅದನ್ನು ವಿರೋಧಿಸುವೆವು.

ಸ್ಯಾಮನ್ ಕಮಿಶನಿನ ಅಧ್ಯಕ್ಷರು ವ್ಯಾಸರಾಯರಿಗೆ ಬರೆದ ಪತ್ರವು ಈ ರೀತಿಯಲ್ಲಿತ್ತು:—ನೀವು ನಮ್ಮನ್ನು ಹೊಂದಿರುವ ಕೆಲಸದ ಕುರಿತು ಸೆಂಟ್ರಲ್ ಲೆಜಿಸ್ಲೇಚರ್‌ನಲ್ಲಿ ಭಾಷಣಕೊಡುವಾಗ ಒತ್ತಿಹೇಳಿದ್ದೀರಿ. ನಮ್ಮ ಉದ್ದೇಶವನ್ನು ಹಿಂದೂದೇಶದಲ್ಲಿ ನೆರವೇರಿಸುವದು ನಮಗೆ ಸುಲಭಸಾಧ್ಯವಾದ ಕೆಲಸವೆಂದು ನಾವು ನಂಬುವುದಿಲ್ಲ. ಕೆಲವರು ನಮಗೆ ಸ್ವಾಗತವನ್ನು ಕೊಡುವರಾದರೂ, ಹಲವರು ನಮ್ಮನ್ನು ತಿರಸ್ಕರಿಸುವರು. ಆದಕಾರಣ ನಾವು ಸತ್ಯದ ಹಾದಿಯನ್ನೇ ಹಿಡಿದು ಮುಂದರಿಯುವೆವು.

ಹಲವು ಸಮಯದಿಂದ ಇಂಡಿಯಾ ಸರಕಾರದವರೂ ಲೋಕಲ್ ಗವರ್ನಮೆಂಟಿನವರೂ ಏನೋ ಚರ್ಚೆಯಲ್ಲಿರುವುದರಿಂದ ಅದನ್ನೀಗ ಈ ಕಮಿಶನಿನ ಮುಂದಿಡುವುದು ಲೇಸು. ಅದರ ಕೂಲಂಕುಷವು ನಮಗೆ ತಿಳಿದಿಲ್ಲವಾದುದರಿಂದ ಇಂಗ್ಲಿಷರಿಂದಲೂ, ಹಿಂದೂ ಪ್ರತಿನಿಧಿಗಳಿಂದಲೂ ಕೂಡಿದ ಒಂದು ಪರಿಷತ್ತಿನಲ್ಲಿ ಅದನ್ನು ಮುಂದಕ್ಕೆ ತರುವುದುತ್ತಮ. ಆ ಪರಿಷತ್ತಿಗೆ ನಾನು ಅಧ್ಯಕ್ಷನಾಗುವೆನು. ಬ್ರಿಟಿಷ ಪಾರ್ಲಿಮೆಂಟಿನಿಂದ ಹೇಗೆ ನಾವು ಆರಿಸಲ್ಪಟ್ಟಿರುವೆವೋ ಹಾಗೆಯೇ ಹಿಂದೂಗಳು ತಮ್ಮ ಪ್ರತಿನಿಧಿಗಳನ್ನು ಆರಿಸಿ ನಮ್ಮೊಂದಿಗೆ ಕುಳಿತುಕೊಳ್ಳಲು ಕಳುಹಿಸಲಿ. ಆಗ ನಾವು ಹೇಳುವುದು ಸರಿಯೆಂದು ಕಂಡುಬಂದರೆ ಮಾತ್ರ ಹಿಂದುಗಳು ಅದಕ್ಕೆ ಒಪ್ಪಿಕೊಳ್ಳಲಿ.

ಕಮಿಶನು ಅರಸನಿಂದ ಕಳುಹಲ್ಪಟ್ಟಿದೆ. ಪಾರ್ಲಿಮೆಂಟಿನ ಮೆಂಬರರಿಂದ ಕೂಡಿದೆ. ಹಿಂದೂಗಳ ಕಡೆ ಸ್ನೇಹದಿಂದ ಬಂದಿರುತ್ತದೆ. ಇಂಡಿಯಕ್ಕೆ ಅಗತ್ಯವಿರುವ ವಿಷಯಗಳನ್ನು ವಿಚಾರಿಸಿ ನಾವು ತಿಳಿಸುವೆವು. ಜೊಯಿಂಟ್ ಕೊನ್ಫರೆನ್ಸನ್ನು ಮಾಡುವುದರಿಂದ ಪರಸ್ಪರರ ಆಲೋಚನೆಗಳನ್ನು ಸರಿಯಾಗಿ ತಿಳಕೊಳ್ಳಲಿಕ್ಕೆ ಆಗುವದು. ಕಮಿಶನು ಹಿಂದುಗಳ ಹಿತಸಾಧನೆಗೆ ಸಿದ್ಧವಾಗಿರುವುದು; ತಾನು ಮಾಡಬೇಕಾದುದನ್ನು ನ್ಯಾಯದಿಂದಲೇ ಮಾಡುವದು. ನಮ್ಮೊಡನೆ ಸಹಕರಿಸಲು, ಲೆಜಿಸ್ಲೇಟಿವ್ ಎಸೆಂಬ್ಲಿ, ಕೌನ್ಸಿಲ್ ಇವುಗಳ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದ ತರುವಾಯ ಅವರನ್ನು ಕೂಡಿಕೊಂಡು ನಾವು ನಮ್ಮ ಕೆಲಸಕ್ಕೆ ಮೊದಲುಮಾಡುವೆವು."

"ಸರ್ ಜೋನ್ ಸ್ಯಾಮನರ ಹೇಳಿಕೆಯು ನಮಗೆ ಸರಿತೋರುವುದಿಲ್ಲ. ಹಿಂದೂಸ್ಥಾನಕ್ಕೆ ಹಿಂದುಗಳದೇ ಒಂದು ಕೊನ್ಸಿಟ್ಯೂಶನು ಇರಬೇಕು. ಸ್ಯಾಮನರ ಹೇಳಿಕೆಯಲ್ಲಿ ನಮಗೆ ನಂಬಿಕೆಯು ಉಂಟಾಗುವುದಿಲ್ಲ" ಎಂದು ಸುಭಾಸ ಚಂದ್ರಭೋಸರು ಹೇಳಿದರು. ಇದೇ ಪ್ರಕಾರ ಎಲ್ಲಾ ಧುರೀಣರು ಸ್ಯಾಮನರ ಹೇಳಿಕೆಗೆ ತಮ್ಮ ತಿರಸ್ಕಾರವನ್ನೇ ಸೂಚಿಸಿದರು.

ಕಾಂಗ್ರೆಸ್ ಧುರೀಣರ ಬಾಯಿ ಮುಚ್ಚುವಿಕೆ.

ಮದರಾಸಿನ ಕಾಂಗ್ರೆಸ್ ಧುರೀಣರು ಹರತಾಳವನ್ನು ಆಚರಿಸಿದಾಗ ಉಂಟಾದ ಅತಿಕ್ರಮಗಳ ಕುರಿತು ಒಬ್ಬ ಪೋಲೀಸ್ ಅಸಿಸ್ಟಾಂಟ್ ಕಮಿಶನರು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಿಗೆ ಮನವಿ ಮಾಡಿದ ಮೇರೆಗೆ ಮೆಜಿಸ್ಟ್ರೇಟರು ಈ ಹುಕುಮನ್ನು ಕೊಟ್ಟಿರುವರು.

"ಸ್ಯಾಮನ್ ಕಮಿಶನಿನ ಬಹಿಷ್ಕಾರ ಮಂಡಳಿಯವರು ಬಹಿಷ್ಕಾರದ ಕುರಿತಾಗಲಿ ಹರತಾಳದ ಕುರಿತಾಗಲಿ ಭಾಷಣವನ್ನೂ ಸಭೆಗಳನ್ನೂ ಜರಗಿಸಬಾರದು.

ಈ ಕೆಲಸಕ್ಕೆ ಸ್ವಯಂಸೇವಕರನ್ನು ನೇಮಿಸಬಾರದು, ಮೆರವಣಿಗೆಗಳನ್ನು ಮಾಡಕೂಡದು, ಇದನ್ನು ಉತ್ತೇಜಿಸಿ ನೋಟಿಸುಗಳನ್ನೂ ಪತ್ರಗಳನ್ನೂ ಮುದ್ರಿಸಿ ಹಂಚಬಾರದು, ಮೇಲೆ ಹೇಳಿದ ಕೆಲಸವನ್ನು ಮಾಡಲು ಇತರರಿಗೆ ಪ್ರೋತ್ಸಾಹವನ್ನು ಕೊಡಬಾರದು". ಈ ಹುಕುಮನ್ನು ಕಾಂಗ್ರೆಸಿನ ಧುರೀಣರೆಲ್ಲರ ಮೇಲೆ ಕೊಟ್ಟಿರುವರು.

ಪಟ್ಟಣದ ಜನರ ಶಾಂತಿಗೆ ಭಂಗವು ಬಂದು ಅತಿಕ್ರಮಗಳು ನಡೆಯದಂತೆ ಮೆಜಿಸ್ಟ್ರೇಟರು ೧೪೪ನೇ ಸೆಕ್ಷನಿಗನುಸಾರವಾಗಿ ಈ ಹುಕುಮನ್ನು ಕೊಟ್ಟಿರುವರು,

ಫೆಬ್ರವರಿ ೩ನೇ ತಾರೀಕಿನ ದಿನ ಸ್ಯಾಮನ್ ಕಮಿಶನಿನ ಬಹಿಷ್ಕಾರದ ಪರವಾಗಿ ಎಲ್ಲಾ ಅಂಗಡಿಗಳನ್ನು ಮುಚ್ಚಬೇಕೆಂದೂ ವ್ಯವಹಾರವನ್ನೂ ವಾಹನಗಳ ಚಲಾವಣೆಯನ್ನೂ ನಿಲ್ಲಿಸಬೇಕೆಂದೂ, ಈ ಧುರೀಣರು ಒಂದು ತಿಂಗಳಿಂದ ಜನರಿಗೆ ಸಾರುತ್ತಬಂದಿದ್ದರೆಂದು ಪೋಲೀಸರ ದೂರು, ಇದಕ್ಕೊಪ್ಪದಿದ್ದವರ ಮೇಲೆ ಪಾದರಕ್ಷೆಗಳನ್ನು ಬಿಸಾಡುವುದು, ಹರತಾಳದ ದಿನ ಕೋರ್ಟಿನ ಸಮೀಪ ಜನರು ಮೋಟಾರುಕಾರನ್ನು ಸುಟ್ಟುದ್ದು, ಹೆಂಡರ್ಸನ್ ಎಂಡ್ ಕಂಪೆನಿಯವರಲ್ಲಿ ನಡೆಸಿದ ಬಲಾತ್ಕಾರ, ಮೋಟಾರುಕಾರುಗಳ ಮೇಲೆಯೂ ಟ್ರಾಮ್ ಗಾಡಿಗಳ ಮೇಲೆಯೂ ಕಲ್ಲುಗಳನ್ನು ಬಿಸಾಡಿದುದು ಇವೆಲ್ಲವುಗಳನ್ನು ಪೋಲೀಸರು ವಿವರವಾಗಿ ಮೆಜಿಸ್ಟ್ರೇಟರಿಗೆ ಅರಿಕೆ ಮಾಡಿಕೊಂಡಿರುವರು; ಇಷ್ಟೆಲ್ಲ ಅನ್ಯಾಯಗಳು ನಡೆದಕಾರಣ ಈ ಹುಕುಮನ್ನು ಕೊಡಲಿಕ್ಕೆ ಆಧಾರವಿದೆಯೆಂದು ಮೆಜಿಸ್ಟ್ರೇಟರು ತಿಳಿದಿರುವರು.

ಹುಕುಮನ್ನು ಸತ್ಯಮೂರ್ತಿಯವರಲ್ಲಿಗೆ ಪೋಲೀಸ ಇನ್ಸ್‌ಪೆಕ್ಟರರು ಕೊಂಡೊಯ್ದು ದಸ್ಕತು ಹಾಕಬೇಕೆಂದು ಹೇಳಿದಾಗ ಸತ್ಯಮೂರ್ತಿಯವರು ಒಪ್ಪದೆ ಇನ್ಸ್‌ಪೆಕ್ಟರರನ್ನು ಹಿಂದಕ್ಕೆ ಕಳುಹಿಸಿದರು,

Shroff Shri Vallabha Shivappa Shet & Co.

Shroff & Jewellers.

DONGERKERY

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

ಮೊದಲ್ ತರವಾದ ಬೆಳ್ಳಿ ಪುಡಿದಾರಹಗ್ಗ.

ESTD 1896.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ತ್ವರೆಮಾಡಿರಿ ! ತ್ವರೆಮಾಡಿರಿ !!

1928ನೇ ಇಸವಿಯ

ಪೊಕೆಟ್ ಡೈರಿ

O. P. No. 428

Swadeshi (Bombay) Life Assurance Co. Ltd. Bombay

Udipi, 6-2-1928. } M. VITTAL KAMATH, Vakil for Petitioner.

(18-11-27)

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಯಮ್. ವಿ. ಶಾಸ್ತ್ರೀ,

The Canara Bank Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

Branches: Karkal, Kasaragod, & Cochin.

Authorised and fully paid up Capital Rs. 300,000—0—0	ರೂ. 300,000—0—0
Reserve and other sinking Funds „ 313,100—0—0	313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

For further particulars apply to the Secretary.

Canara Bank Ltd.

Mangalore, 8th Feb. 1927.

K. Venkat Rao,

Secretary.

ಒಂದೇ ದಾರಿ

ವೈದ್ಯವಿದ್ಯ

ಮದನಮಂಜರಿ ಮಾತ್ರೆಗಳು

ಉತ್ಕೃಷ್ಟವಾದ ನಸ್ಯದ ಪುಡಿ

ವೀರವರ್ಮ ರಾಜಾ

ಮತ್ತು

ಮಾಲಿನಿ.

'ಸಾರಸ್ವತಾಸವ.'

ಬಾಲಸುಧೋದಯ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

(21-10-27)

DUNLOP

fit Dunlop
and be satisfied

Registered: No. M. 498.

ಚಂದಾನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೭ನೇ ಶುಕ್ರವಾರ ಫೆಬ್ರವರಿ ೧೯೨೮ ಸಂಚಿಕೆ ೭

THE CANARA BANKING CORPORATION,
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರ್ಯಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಮಕ್ಕಳ ಸಲುವಾಗಿ,

ಡೋಂಗರ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಳ್ಳದ್ದು ಕೂಡಿ ಉತ್ತಮವಾಗಿರುತ್ತದೆ ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

ರಾಗದ ಪೆಟ್ಟಿಗೆಗಳು

ನಾಟಕೀ ಸಾಮಾನು—ತಬಲ, ಡಕ್ಕೆ ವಗೈರೆ.



ಗೋಪಾಲ ಸಖಾರಾಮ ಮತ್ತು ಕಂಪೆನಿ.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್.

ಟಿ. ಪಿ. ನಾಗಲಿಂಗಪ್ಪ ಅಂಡ್ ಕೋ.,

2/4 ... ಮದರಾಸ್.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾವಣಾ ... ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ... ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯುಳ್ಳಂಥ ವಾಗಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ... ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

೦-೯-'೨೭ ಸಳ್ಳೆಬೈಲ್ ಪೋಸ್ಟ್ ಕಡೂರ್ ಡಿಸ್ಟ್ರಿಕ್ಟ್.

Batliwalla's Preparations Cover All Your Needs.
A NAME THAT MERIT HAS MADE FAMOUS.

೩೨ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಶನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

... —ಮಲೇರಿಯಾ ಜ್ವರ ನಿವಾರಣ, ರೂ. ೧.

... ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

... ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

... ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

... ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

... ರೂ. ೧—೨—೦. ರೂ. ೧—೪—೦. ೧—೧೨—೦.

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

...—CAWASHAPUR, BOMBAY.

... ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಕೇಸರಿಯಾ ವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

... ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಋತುಸ್ರಾವವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...

ಕೇಸರೀ ಕುಟೀರಂ,

ಆಯುರ್ವೇದ ಔಷಧಶಾಲಾ, P. B. 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

... ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

ಟೈಂಪೀಸ್ ಸಹಿತ ಬೆಲೆ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪೆನಿ, ... ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನ ವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳು ವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ. ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕ ೧೮೪೯ನೆಯ ಪ್ರಭವ ಸಂವತ್ಸರದ ಮಾಘ ಬ॥ ೧೦ ಶನಿವಾರದಿಂದ ಪ್ರಭವ ಸಂವತ್ಸರದ ಫಾಲ್ಗುನ ಶು॥ ೩ ಶುಕ್ರವಾರದ ವರೆಗಿನ ಪಂಚಾಂಗ

(೧೯೨೮ನೆಯ ಕಂಭ (ವಾರು)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರಮಾನ	ಸೂರ್ಯ ಉ.	ಸೂರ್ಯ ಅಸ್ತ
18	ಶನಿ	೧೨	೨೮.೩೦	ಪೂ. ಆ	೧೩.೩೨	೬	6.55	6.36
19	ರವಿ	೧೩	೨೮.೧೪	ಉ. ಆ.	೧೫.೧೬	೭	6 54	6 36
20	ಸೋಮ	೧೪	೨೬.೪೬	ಶ್ರವಣಾ	೧೫.೩೧	೮	6 54	6 37
2.	ಮಂಗಳ	●	೨೪.೧೬	ಧನಿಷ್ಠಾ	೧೪.೯೬	೯	6 54	6.37
22	ಬುಧ	೧	೨೦.೩೨	ಶತಭಿಷಾ	೧೩. ೨	೧೦	6 53	6.37
23	ಗುರು	೨	೧೬.೧೪	ಪೂ. ಭಾ.	೧೦.೧೪	೧೧	6.53	6 37
24	ಶುಕ್ರ	೩	೧೧.೧೬	ಉ. ಭಾ.	೬. ೨	೧೨	6,52	6.38

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
10	89— 2	76— 2	—	—
11	89 7	75— 3	—	—
12	91— 7	74— 7	—	—
13	93— 1	72— 2	—	—
14	95— 6	71— 9	—	—
15	90— 7	71— 3	—	—
16	89— 6	72— 2	—	—
				128-19

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ		6— 12	7— 10
ಹೊಸ ಗುಡ್ಡು	...	6— 6	6— 8
ಸಗ್ಗ	...	6— 4	6— 8
ಹೊಸ ರಾಶಿ	...	6— 2	6— 8
ಊರ ಅವ್ವಲ್ ಬೆಳ್ತಿಗೆ	...	7— 4	8— 4
ರಂಗೂನು ಬೆಳ್ತಿಗೆ ಗೋಣಿ ೧	...	13— 8	14 - 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	7— 0	7— 4
ಗೋಧಿ ಗೋಣಿ ೧ಕ್ಕೆ	...	17— 8	18 - 0
ಹುರುಳಿಗೋಣಿ ೧ಕ್ಕೆ	...	9— 0	10 8
ಕಡಲೆಗೋಣಿ ೧ಕ್ಕೆ	...	13— 0	14 - 0
ಕೊಂಗಣಿಗೋಣಿ ೧ಕ್ಕೆ	...	15— 0	16 - 0
ತೊಗರಿಬೇಳೆ ಗೋಣಿ ೧ಕ್ಕೆ	...	19— 0	23 - 0
ಉದ್ದು ಗೋಣಿ ೧ಕ್ಕೆ	...	13— 8	14 0
ಹೆಸರುಗೋಣಿ ೧ಕ್ಕೆ	...	15 - 8	16 0
ಊರೆ ಬೆಲ್ಲ ಖಂಡಿ ೧ಕ್ಕೆ	...	35— 0	45 - 0
ಉಪ್ಪು ಗೋಣಿ ೧ಕ್ಕೆ	...	4— 0	4— 4
ಕೊಪ್ರ ಖಂಡಿ ೧ಕ್ಕೆ	...	130- 0	-
ಕೊಪ್ರ ಹಿಂಡಿ ಖಂಡಿ ೧ಕ್ಕೆ	...	47— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ	...	50— 0	52— 0
ಕೊಪ್ರ ಎಣ್ಣೆ ಮುಡಿ ೧ಕ್ಕೆ	...	8— 3	8 - 4
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 4	8 - 4
ಹರಳೆಣ್ಣೆ ಹೆಚ್ಚಿಗೆ ೧ಕ್ಕೆ	...	6— 8	7 0
ಕೋಲಾರ ಸಕ್ಕರೆ ಮುಡಿ ೧ಕ್ಕೆ	...	3— 10	3 12
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	8— 0	8 4
ಸಾಸಿವೆ ಮುಡಿ ೧ಕ್ಕೆ	...	8— 4	—
ಕೊತ್ತುಂಬರಿ ಮುಡಿ ೧ಕ್ಕೆ	...	7— 8	9 8
ಕಾಫಿ ಖಂಡಿ ೧ಕ್ಕೆ	...	335— 0	355 - 0
ಕೆಂಗೋಟು ಅಡಿಕೆ ಖಂಡಿ ೧ಕ್ಕೆ	...	145— 0	170 - 0
ಕಾಳುಮೆಣಸು ಖಂಡಿ ೧ಕ್ಕೆ	...	450— 0	460—
ಹುಣಿಸೆ, ... ೧ಕ್ಕೆ	...	50— 0	54— 0
ಗೇರುಬೀಜ ಮುಡಿ ೧ಕ್ಕೆ	...	3— 8	3— 12
ಚಕ್ಕೆ ಖಂಡಿ ೧ಕ್ಕೆ	...	37— 8	40 0
ಕಾಂಪ್ರ ಹಗಡು ಮುಡಿ ೧ಕ್ಕೆ	...	15— 0	15 - 0
ಕಾಂಪ್ರ ಬಾಕ್ರಗಳು ಮುಡಿ ೧ಕ್ಕೆ		21— 0	—
ಬೇಳೆ ಚೆಕ್ಕೆ ಸೇರು ೧ಕ್ಕೆ	...	15— 0	—
ಹಿತ್ತಾಳೆ ಹಗಡು ಮುಡಿ ೧ಕ್ಕೆ	...	15— 0	—
ಭವನು		13— 7	—



ಎಫ್. ಮುಲ್ಲರರ

ಒಯಿಲ್ ಎಕ್ಸ್‌ಪೆಲ್ಲರ್

ಎಣ್ಣೆಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ, ಎಣ್ಣೆಯನ್ನಿಳಿಸಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ—ಸಂಪೂರ್ಣ ಸ್ವತಶ್ಚಲನಕ—ಕಡಿಮೆ ಖರ್ಚು—ಕಡಿಮೆ ಪವರಿನ ವ್ಯಯ - ಹೆಚ್ಚಿನ ಎಣ್ಣೆಯ ಲಾಭ.

ರೋಲರ್ ಮಿಲ್ಲುಗಳು, ಡಿಸ್‌ಇಂಟಿಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವದಕ್ಕೆ ತಕ್ಕದಾದ ಸಣ್ಣ ಹೈಡ್ರೋಲಿಕ್ ಪ್ರೆಸ್ ಪ್ಲೆಂಟುಗಳು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

VOLKART BROS
ENGINEERS

Box G. 45
Armenian Street, MADRAS.

Diamonds. Diamonds. Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೋಗ್ಯಬೆಲೆಗೆ, ಯೂರೋಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಪ್ರಕಟಣೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No 67/28.

ಧರಣಪ್ಪ ಮುಂದ್ಯಾ ಯಾನೆ ಕೊಟ್ಯಾರಿ ಸಹ 5 ಜನರು —ವಾದಿರು.

ಮತ್ತು

ಪೋಕಬ್ಯಾರಿ ಸಹಾ 7 ಜನರು—ಪ್ರತಿವಾದಿರು.

ಇವರೊಳಗೆ —

ಸದರಿ ಕೋರ್ಟಿನವರ ಅನುಮತಿ ಪಡದು ಸದರಿ ದಾವೆಯು ವಾದಿರು ಕಾರ್ಕಳ ತಾಲೂಕು ಈದು ಗ್ರಾಮದ ಮುಜೆಲ್ಯಾಯ ದೈವದ ಭಂಡಾರದ ಕಡೆಯಿಂದ ಸದರಿ ಈದು ಗುತ್ತಿನ ದೇವರಾಜ ಹೆಗಡೆಯು (2ನೇ ಪ್ರತಿವಾದಿ) 1ನೇ ಪ್ರತಿವಾದಿಗೆ ಕೊಟ್ಟ ಕಾಯಂ ಗೇಣಿ ರದ್ದತೆಯಿಂದ ಸದರಿ ಆಸ್ತಿ ಸ್ವಾಧೀನತೆ ಅದರ ಗೇಣಿ ಬಾಕಿ ಬಡ್ಡಿ ವಗೈರೆ ಬರಮಾಡಿಕೊಳ್ಳುವರೇ ಸದರಿ ದಾವೆಯನ್ನು ಮಾಡಿರುತ್ತಾರೆ. ಕ್ರಮಾಗತದ ಮುಕ್ತೇಸರ ಹಕ್ಕಿನಿಂದ ಸದರಿ ದೈವದ ಭಂಡಾರದ ಹಕ್ಕುಗಳನ್ನು ಕಾಪಾಡಿಸುವರೇ ಸದರಿ ವಾದಿರು ಮಾಡಿರುವ ಸದರಿ ದಾವೆಯಲ್ಲಿ ಕಕ್ಷಿಗಾರರಾಗಿ ಸೇರಲು ಇಚ್ಛೆ ಉಳ್ಳವರು ಅಥವಾ ಸದರಿ ದೈವದ ಭಂಡಾರದ ಹಕ್ಕುಗಳನ್ನು ಕಾಪಾಡಲಿಕ್ಕೆ ಮನಸ್ಸು ಉಳ್ಳವರು ಅಥವಾ ವಾದಿರು ಮಾಡಿರುವ ಸದರಿ ದಾವೆಗೆ ಆಕ್ಷೇಪ ಹೇಳಲಿಕ್ಕೆ ಮನಸ್ಸು ಉಳ್ಳವರು ಇದೇ ಫೆಬ್ರುವರಿ ತಿಂಗಳ ತಾ. 27ಕ್ಕೆ ಬೆಳಿಗ್ಯೆ 11-30 ಗಂಟೆಗೆ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿಗೆ ಸ್ವತಹಾ ಯಾ ವಕೀಲರ ಮುಖಾಂತರ ಅರಿಕೆಮಾಡಿಕೊಳ್ಳಬಹುದು ಎಂಬದನ್ನು ಸದರಿ ದೈವಸ್ಥಾನಕ್ಕೆ ಸಮ್ಮಂಧಪಟ್ಟ ಸಮಸ್ತ ಜನರಿಗೆ ಇದರಿಂದ ತಿಳಿಸೋಣಾಗುತ್ತದೆ.

ಕಾರ್ಕಳ, ತಾ 5-2-28. } ಇಡ್ಯದ ವಾಸುದೇವಯ್ಯ, ಬಿ. ಎ. ಬಿ. ಎಲ್, ವಾದಿರ ಕಡೆ ವಕೀಲ್.

ನೋಟೀಸು.

ದ. ಕ. ಜಿಲ್ಲಾ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 52/1927.

ಉಳ್ಳಾಲ ನರಸಿಂಹ ಶೆಣೈ—ಕ್ರೆಡಿಟರ—ಅರ್ಜಿದಾರ

ಮತ್ತು

ಪಾಂಡೇಶ್ವರ ಶ್ರೀನಿವಾಸ ಉಪಾಧ್ಯಾ—ಡೆಟ್ಟರ—ರೆಸ್ಪೊಂಡೆಂಟ.

ಮೇಲ್ಕಾಣಿಸಿದ ಡೆಟ್ಟರ ರೆಸ್ಪೊಂಡೆಂಟನನ್ನು ದಿವಾಳಿ ಎಂತ ಎಡಜಜ್ ಮಾಡಬೇಕಾಗಿ ಅರ್ಜಿದಾರನು ಮಾಡಿದ ಅರ್ಜಿಯು ರೆಸ್ಪೊಂಡೆಂಟನು ಈ ತನಕ ನೋಟೀಸುಗಳಿಗೆ ಸಿಕ್ಕದಿದ್ದರಿಂದ ಇದೇ ಬರುವ ತಾ. 25—2—1928ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತದೆಂತ ರೆಸ್ಪೊಂಡೆಂಟನಿಗೆ ಈ ಮೂಲಕ ತಿಳಿಸಿರುತ್ತದೆ.

ಮಂಗಳೂರು, ತಾ. 13-2-'28. } M. JANARDAN MALLYA, *Vakil for Petitionr.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 22/1928.

ನೂಜಿ ಅನಂತ ರಾಮಯ್ಯ—ಅರ್ಜಿದಾರ

ಮತ್ತು

ಪರಮೇಶ್ವರಿ—ರೆಸ್ಪೊಂಡೆಂಟ.

ಮೇಲ್ಕಾಣುವ ಅರ್ಜಿದಾರನು ಮೃತ ಬರೆಪಾಡಿ ನಾರ್ಣಪ್ಪಯ್ಯನ ಮ್ಯಾನರ ಮಗ ಬಾಬುರಾಯ ಯಾನೆ ಶಿವರಾಮನ ದೇಹದ ವ ಆಸ್ತಿಯ ಗಾರ್ಡಿಯನನಾಗಿ ತನ್ನನ್ನು ನೇಮಿಸಬೇಕಾಗಿ ಸದರಿ ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ಅರ್ಜಿಯು ತಾ. 7—3—1928ಕ್ಕೆ ತನ್ಕಿಗೆ ಇಟ್ಟಿದೆ. ಈ ಬಗ್ಗೆ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ಮೇಲ್ಕಂಡ ವಾಯಿದೆಗೆ ಹಾಜರಿಪಡಿಸತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

Mangalore, 13—2—1928. } GANGOLLY KRISHNA RAO, B. A. L. L. B. *Pleader for Petitioner.*

[illegible]

ಇಂಡಿಯದ ರೈಲುವೇ ಆಡಳಿತ.

[illegible]

ಕಲ್ಕತ್ತದಲ್ಲಿಯೂ ಅದರ ಸುತ್ತಲೂ ಬಸ್ಸು ಸರ್ವಿಸ್ಸುಗಳಿಂದ ಈಸ್ಟ್ ಇಂಡಿಯನ್ ಮತ್ತು ಪೂರ್ವ ಬಂಗಾಳ ರೈಲುವೇಗಳಿಗೂ ಸ್ವಲ್ಪ ನಷ್ಟವುಂಟಾಗಲು ಪ್ರಾರಂಭವಾಗಿಯದೆ.

ಮೋಟಾರು ಮತ್ತು ರೈಲುವೇಗಳಿಗೆ ಇರುವ ಸ್ಪರ್ಧೆಯನ್ನು ಜಾಗ್ರತೆಯಿಂದ ಲೆಕ್ಕ ತೆಗಿಯುತ್ತಲಿದ್ದಾರೆ.

ಬಂಗಾಳದ ಕಾಳಿಗಾಟ ರೈಲುವೇಗೆ ಸಮಾನಾಂತರವಾಗಿರುವ ಮಾರ್ಗಗಳಲ್ಲಿ ಬಸ್ಸ್ ಸರ್ವಿಸು ಇರುವುದರಿಂದ ಕಳದ ಎರಡು ವರ್ಷಗಳಿಂದ ಹೆಚ್ಚು ನಷ್ಟವಾಗುತ್ತಾ ಬರುತ್ತಿದೆ. ಬರದ್ವಾನ ಕಟ್ವಾ ರೈಲುವೇಯ ಸ್ಥಿತಿಯು ಹೀಗೆಯೇ ಆಗಿದೆ.

ರಂಗೂನಿನ ಹೊಂಗಿರುವ ರೈಲುವೇಗೆ ಇಲೆಕ್ಟ್ರಿಕ್ ಟ್ರಿಮುವೇ ಸರ್ವಿಸು ಇಟ್ಟಿದ್ದರಿಂದಲೂ ಮೋಟರ್ ಬಸ್ಸ್ ಸರ್ವಿಸು ಇಟ್ಟಿದ್ದರಿಂದಲೂ ಕಳದ ಮೂರು ವರ್ಷಗಳಿಂದ ಪ್ರಯಾಣಿಕರ ಸಂಖ್ಯೆಯು ಕಡಿಮೆಯಾಗಿದೆ.

ಜಿ. ಐ. ಪಿ. ರೈಲುವೇಯು ಇರುವಲ್ಲಿ ೬೦ ಮೋಟಾರು ಸರ್ವಿಸುಗಳಿವೆ ಎಂದು ಆ ಕಂಪೆನಿಯವರ ರಿಪೋರ್ಟು ಇದೆ. ಐಶ್ವರ್ಯವಂತರು ಸ್ವಂತ ಮೋಟಾರುಕಾರುಗಳನ್ನು ಇಟ್ಟಿದ್ದರಿಂದ ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲುವೇಯಲ್ಲಿ ಮೇಲುತರಗತಿಯ ಪ್ರಯಾಣಸ್ಥರ ಸಂಖ್ಯೆಯು ಕಡಿಮೆಯಾಗಿದೆ.

ನೊರ್ತ ವೆಸ್ಟರ್ನ ರೈಲುವೇಯ ಹತ್ತಿರವಿರುವ ಮಾರ್ಗಗಳಲ್ಲಿ ಮೋಟಾರು ಸರ್ವಿಸು ಹೆಚ್ಚಾಗುತ್ತಾ ಬರುತ್ತಿದೆ. ಸೌತ್ ಇಂಡಿಯನ್ ರೈಲುವೇಯಲ್ಲಿ ಮದ್ರಾಸಿನಿಂದ ಕಂಜೀವರಮಿಗೆ ಮೋಟರ ಸರ್ವಿಸು ಹೆಚ್ಚಾದ್ದರಿಂದಲೂ ಮದ್ರಾಸಿನಿಂದ ಕಂಜೀವರಮಿಗೆ ಹೆಚ್ಚು ರೈಲುವೇ ಸರ್ವಿಸುಗಳನ್ನು ಇಟ್ಟಿದೆ. ತಿರುವಾಂಕೂರು ರೈಲುವೇಯಲ್ಲಿಯೂ ಹೀಗೆಯೇ ಮಾಡಿಯದೆ. ರೊಹಿಲ ಕಂಡಕುಮಾವುನ್ ರೈಲುವೇಯಲ್ಲಿ ಇದೇ ರೀತಿ ಮಾಡಿಯದೆ. ಈಸ್ಟ್ ಇಂಡಿಯನ್ ರೈಲುವೇಯಲ್ಲಿ ಇನ್ನೊಂದು ಉಪಾಯ ಮಾಡಿಯದೆ ಮೂರನೇ ಕ್ಲಾಸ್ ಪ್ರಯಾಣಸ್ಥರು ಕೂತುಕೊಳ್ಳುವ ಒಂದು ಗಾಡಿಗೆ ಒಂದು ಸಣ್ಣ ಇಂಜಿನನ್ನು ಕೂಡಿಸಿ ದಾರಿಯಲ್ಲಿ ಸಿಕ್ಕಿದ ಪ್ರಯಾಣಸ್ಥರನ್ನು ಅವುಗಳಲ್ಲಿ ಕೂತುಕೊಳ್ಳಿಸುತ್ತಾ ಅವರು ಗಾಡಿಗೆ ಹತ್ತಿದ ಕೂಡಲೇ ಅವರಿಗೆ ಟಿಕೇಟು ಕೊಡುತ್ತಾ ದಿನಕ್ಕೆ ೪ ಸಾರಿ ಆಚೆ ಈಚೆ ಓಡಿಸಲಾಯಿತು. ಇದರಿಂದ ತಿಂಗಳಿಗೆ ೬೦೦೦ ಪ್ರಯಾಣಸ್ಥರು ಸಿಕ್ಕಿದರು. ಇನ್ನು ಕೆಲವು ಕಡೆಗಳಲ್ಲಿ ನಾಲ್ಕೈದು ಗಾಡಿಗಳನ್ನು ಕಟ್ಟಿ ಓಡಿಸಿ ದಾರಿಯಲ್ಲಿ ಸಿಕ್ಕಿದ ಪ್ರಯಾಣಸ್ಥರನ್ನು ತೆಗೆದುಕೊಳ್ಳುತ್ತಾ ಓಡುತಿರುತ್ತವೆ.

ಪ್ರಯಾಣಸ್ಥರ ಸೌಕರ್ಯಕ್ಕಾಗಿ ೧೮ ಹಿಂದೂ ರಿಫ್ರೆಶ್‌ಮೆಂಟ್ ರೂಮುಗಳನ್ನು ಪ್ರಯಾಣಸ್ಥರಿಗೆ ಉಳುಕೊಳ್ಳುವುದಕ್ಕೆ ೧೦೦ ಹೆಚ್ಚಿಗೆ ವೈಟಿಂಗ್ ರೂಮುಗಳನ್ನೂ ಕಟ್ಟಿಸಿಯದೆ. ಸೇಕಡಾ ೫೦ ಗಾಡಿಗಳಿಗೆ ಇಲೆಕ್ಟ್ರಿಕ್ ಲ್ಯಾಟುಗಳನ್ನು ಇಟ್ಟಿಯದೆ.

ಈ ವರ್ಷ ರೈಲುವೇಗಳಿಗಾಗಿ ಇಂಡಿಯಾದಿಂದಲೇ ಹೆಚ್ಚಿಗೆ ಸಾಮಾನು ತೆಗೆದುಕೊಂಡದೆ. ಕಳದ ವರ್ಷ ೮|| ಕೋಟಿ ರೂಪಾಯಿ ಸಾಮಾನುಗಳನ್ನು ಇಂಡಿಯಾದಿಂದ ತೆಗೆದುಕೊಂಡಿತ್ತು. ಈ ವರ್ಷ ೧೦ ಕೋಟಿ ರೂಪಾಯಿಯ ಸಾಮಾನು ತೆಗೆದುಕೊಂಡದೆ.

ರೈಲುವೆಗಳಲ್ಲಿ ಕೆಲಸಮಾಡುವ ಉದ್ಯೋಗಸ್ಥರಲ್ಲಿ ಸೇಕಡಾ ೪೦ರಷ್ಟು ಜನರನ್ನು ಇಂಡಿಯದಿಂದಲೇ ನೇಮಿಸಿಯದೆ. ಸಿವಿಲ್ ಇಂಜಿನಿಯರ್ ಟ್ರಿನ್ಸಪೋರ್ಟು ವ್ಯಾಪಾರದ ಸ್ಟೋರ್ ಮತ್ತು ಮೆಡಿಕಲ್ ಕೆಲಸಕ್ಕೆ ಇಂಡಿಯದ ಜನರನ್ನೇ ನೇಮಿಸಿಯದೆ. ಆದರೆ ಮಿಕೆನಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಸಿಗ್ನಲ್ ಇಂಜಿನಿಯರಿಂಗ್ ಸೇತುವೆಗಳ ಇಂಜಿನಿಯರಿಂಗ್ ಈ ವಿದ್ಯೆಗಳನ್ನು ಚೆನ್ನಾಗಿ ಕಲಿತವರು ಇಂಡಿಯದಲ್ಲಿ ಇಲ್ಲದ್ದರಿಂದ ವಿದೇಶೀಯರನ್ನೇ ನೇಮಿಸಬೇಕಾಯಿತು.

ಟಿಕೇಟು ಇಲ್ಲದೆ ತಿರುಗಾಡುವವರಿಗೆ ಶಿಕ್ಷೆ ವಿಧಿಸುವುದೇ ಉತ್ತಮವೆಂದು ತಿಳಿದುಬಂದದೆ.

ಡಿಂಡಿಗಲಿನಲ್ಲಿ ರೈಲುವೇ ಸ್ಕೂಲ್ ಕಾಲೇಜನ್ನು ಇಡುವುದಕ್ಕೆ ೫೦ ಲಕ್ಷ ರೂಪಾಯಿ ಸೆಂಕ್ಷನ್ ಮಾಡಿಯದೆ.

ಸ್ಫುಟ ವಿಚಾರಗಳು.

ಮೋಸ್ಕೊ ಭೂತ.

ಮದ್ರಾಸಿನಲ್ಲಿ ಹರತಾಳವಾಯಿತು; ಕೆಲವು ಗಡಿಬಿಡಿಗಳೂ ಆದುವು; ಪೋಲೀಸರು ಗುಂಡು ಹಾರಿಸಿಯೂ ಆಯಿತು; ಕೆಲವರು ಪ್ರಾಣ ಬಿಟ್ಟೂ ಆಯಿತು; ಹರತಾಳ ಕಥೆ ಇಷ್ಟು. ಆ ಮೇಲೆ ೧೪ನೇ ಪ್ರಕರಣ ಜ್ಯಾರಿಗೆ ಬಂದಿತು. ಇಷ್ಟರೊಳಗೆ ಬ್ರಿಟಿಷ ಪತ್ರಿಕೆಗಳಿಗೆ ಇಲ್ಲದ ಭಯಸೂಚನೆಗಳು ಕಾಣಬಂದಿವೆ. ಬ್ರಿಟಿಷ ಸರಕಾರವು ಮೊದಲೇ ರಷ್ಯಾ ದೇಶದ ಪ್ರತಿಯಾಗಿ ಕಲ್ಪನೆಯ ಭಯಗಳನ್ನಿಟ್ಟು ಭಾವೀ ಯುದ್ಧಗಳ ಬಗ್ಗೆ ಪೂರ್ವ ತಯಾರಿಯನ್ನು ಮಾಡುತ್ತಿದೆ. ಈಗ ಈ ಪತ್ರಿಕೆಗಳು ರಷ್ಯಾವನ್ನು ಮದ್ರಾಸಿನಲ್ಲಿಯೂ ಕಾಣಲಾರಂಭಿಸಿವೆ. ಮದ್ರಾಸಿನ ಗಡಿಬಿಡಿಗಳಲ್ಲಿ ಮೋಸ್ಕೊ ಪಟ್ಟಣದ ಕೈ ಈ ಪತ್ರಿಕೆಗಳು ಕಾಣುತ್ತಿವೆ. ಮೋಸ್ಕೊ ಇಲ್ಲದೆ ಯಾವ ದಂಗೆಗಳೂ ಆಗಲಾರವೆಂದು ಇವರ ಅಭಿಪ್ರಾಯವೇನೊ ಈ ಮೋಸ್ಕೊ ಭೂತವು ಇವರಿಗೆ ಇನ್ನೂ ಬಿಟ್ಟುಹೋಗಿಲ್ಲ

ಸಹಕಾರ ಚಳವಳ.

ಸಹಕಾರ ಸಂಘಗಳು ನಮ್ಮ ಜಿಲ್ಲೆಯಲ್ಲಿ ನಡಸುತ್ತಿರುವ ಕಾರ್ಯಕ್ರಮಗಳನ್ನು ನೋಡಿದರೆ ಅವುಗಳಿಂದ ದೇಶದ ಹಿತದ ಬಗ್ಗೆ ಆಶಿಸತಕ್ಕದ್ದೇನೊ ಇಲ್ಲವೊ ಎಂಬಂತೆ ತೋರುತ್ತಿದೆ. ಹಲವು ಸಂಘಗಳು ಅವುಗಳ ವ್ಯವಸ್ಥಾಪಕರ ಹಣದ ದುರುಪಯೋಗದ ನಂತರ ಮುಚ್ಚಲ್ಪಟ್ಟವು; ಹಲವು ಹಣ ಬಾಕಿ ನಿಂತು ವಸೂಲು ಆಗದೆ ಮುಚ್ಚಲ್ಪಟ್ಟವು. ಇವುಗಳಿಂದಲೇ ಸಹಕಾರಿ ಸಂಘಗಳು ಬ್ಯಾಂಕುಗಳಂತಹ ನಿರ್ದಾಕ್ಷಿಣ್ಯ ಸಾಲಗಳ ಲೇವಾದೇವಿಯನ್ನು ಮಾಡುವುದಿಲ್ಲವಲ್ಲದೆ, ಸಹಕಾರಿ ಸಂಘಗಳು ಸ್ವಾಧೀನ ಮಾಡಬೇಕಾದಂತಹ ಆರ್ಥಿಕ ಅಭಿವೃದ್ಧಿಯನ್ನು ಮಾಡುವುದಿಲ್ಲವೆಂಬುದು ಸ್ಪಷ್ಟವಾಗುವುದು. ವರ್ಷಕ್ಕೊಮ್ಮೆ ಕೂಡುತ್ತಿರುವ ಸಹಕಾರಿ ಕೂಟದಲ್ಲಾದರೂ ಸಹಕಾರದ ವಿಫಲತೆಯ ಈ ಚಿತ್ರಕ್ಕೆ ಸರಿಯಾದ ಲಕ್ಷ್ಯವು ಕೊಡಲ್ಪಡುವುದಿಲ್ಲ. ಸಹಕಾರಿ ಸಂಘಗಳು ಬಡವರು ಸಾಲಕೊಳ್ಳಲು ಸುಲಭ ಉಪಾಯಗಳನ್ನು ಕಲ್ಪಿಸಿಯುವೆಯಷ್ಟೇ ಅಲ್ಲದೆ, ಅವರು ಆ ಸಾಲದ ದ್ರವ್ಯವನ್ನು ಸದುಪಯೋಗ ಮಾಡಿಕೊಳ್ಳುವ ಉಪಾಯಗಳನ್ನು ಕಲ್ಪಿಸಿಕೊಡುವುದೂ ಇಲ್ಲ; ಆ ಕಡೆಗೆ ಚಿಂತಿತವಿರುವುದೂ ಇಲ್ಲ. ಫಲವಾಗಿ ಬಡವರ ಸಾಲಗಳು ಹೆಚ್ಚುತ್ತಿವೆ. ಹೆಚ್ಚು ಬಡ್ಡಿಯ ಹೊರಗಿನ ಸಾಲಗಳು ಕಡಿಮೆಯಾಗುವುದಿಲ್ಲ; ರೈತರ ಬಾಳು ಸುಧಾರಿಸಿಲ್ಲ. ಅತೀ ಮುಖ್ಯವಾದ ಕೃಷಿ ಸಮಸ್ಯೆಯನ್ನು ಕೂಡ ಈ ಸಹಕಾರಿ ಸಂಘಗಳಿಂದ ನಿರ್ವಹಿಸಲು ಸಾಧ್ಯವಾಗಿಲ್ಲ. ಸಹಕಾರ ಚಳವಳಕ್ಕೆ ಈಗಿನಗಿಂತಲೂ ಹೆಚ್ಚು ಕಾರ್ಯಾಸಕ್ತರಾದ ಧುರೀಣರು ಬೇಕಾಗಿದೆ. ಸರಕಾರದ ಕೃಷಿ ಖಾತೆ ಮತ್ತು ಕೈಗಾರಿಕೆ ಖಾತೆಗಳೊಡನೆ ಸಹಕಾರ ಸಂಘಗಳು ಅನ್ಯೋನ್ಯವನ್ನು ಬೆಳಸಿ, ಅವುಗಳ ಸಹಾಯವನ್ನು ತೆಗೆದುಕೊಂಡು ಬಡವರ ಬಗ್ಗೆ ಜೀವನ ನಿರ್ವಾಹದ ಉಪಾಯಗಳ ರಚನೆಯನ್ನು ಈ ಸಂಘಗಳು ಕೈಕೊಳ್ಳಬೇಕು.

ಲೊರ್ಡ ಸಿಂಹರವರ ರಾಜಭಕ್ತಿ.

ಲೊರ್ಡ ಸಿಂಹರನ್ನು ವಿಜ್ಞರೆನ್ನುವುದನ್ನು ನಾವು ಅಲ್ಲವೆನ್ನಲಾರೆವು; ಆದರೆ ಅವರು ಹಿಂದೂಸ್ಥಾನದ ಹೆಸರಿನಲ್ಲಿ ಸ್ಯಾಮನ್ ಕಮಿಶನ್ನಿಗೆ ಸ್ವಾಗತವನ್ನೀಯುವಾಗ ಮತ್ತು ಸ್ಯಾಮನ್ ಕಮಿಶನ್ನಿನ ಬಹಿಷ್ಕಾರವು ಬರೇ ಕ್ಷಣಿಕವೆಂದು ತಿರಸ್ಕರಿಸುವಾಗ ಈ ಹಿಂದೀ ಲೊರ್ಡರು ಸ್ವಲ್ಪ ಮಟ್ಟಿಗೆ ತಮ್ಮನ್ನು ತಾವೇ ಮರೆತುಕೊಳ್ಳುವರೆಂದು ಹೇಳಬೇಕಾಗಿದೆ. ಲೊರ್ಡ ಸಿಂಹರವರ ಲೊರ್ಡ ಪದವಿಯೂ, ಮೊದಲು ಅವರನ್ನು ಮೇಲಕ್ಕೆತ್ತಿದ್ದ ಎಕ್ಸಿಕ್ಯೂಟಿವ್, ಗವರ್ನರ ಮೊದಲಾದ ದೊಡ್ಡ ಹುದ್ದೆಗಳೂ ಹಿಂದೂಸ್ಥಾನದ ಈ ಕ್ಷಣಿಕವೆನ್ನಲ್ಪಡುವಂತಹ ತೀವ್ರ ಚಳವಳಗಳ ಪರಿಣಾಮ ಮಾತ್ರವಾಗಿವೆ ಎಂಬುದನ್ನು ಲೊರ್ಡ ಸಿಂಹರವರು ಮರೆತುಬಿಡುವರು. ಎಕ್ಸಿಕ್ಯೂಟಿವ್ ಪದವಿಗಳಂತಹ ಉಚ್ಚಪದವಿಗಳಿಗೆ ಹಿಂದೀಯರನ್ನು ನೇಮಿಸಲಿಕ್ಕೆ ಶಾಂತಿಪ್ರಿಯರೆಂದು ಹೆಸರು ಧರಿಸಿದ ಏಳನೇ ಎಡ್ವರ್ಡ ದೊರೆಗಳವರು ಕೂಡ ನಿಷೇಧಿಸುತ್ತಿದ್ದರೆಂದು ಇತ್ತೀಚೆಗೆ ತಿಳಿದುಬಂದಿದೆ. ಆದುದರಿಂದ ಹಿಂದೀಯರಿಗೆ ರಾಜ್ಯದಾಡಳಿತದಲ್ಲಿ ಪ್ರವೇಶ ದೊರೆಯಲಿಕ್ಕೆ ತೀಕ್ಷ್ಣ ಪಕ್ಷದ ಚಳವಳವು ಎಷ್ಟು ಕೆಲಸಮಾಡಿಯದೆಂದು ಇದರಿಂದ ತಿಳಿದುಬರುವುದು. ಲೊರ್ಡ ಸಿಂಹರು ಇದೆಲ್ಲವನ್ನು ಮರೆತು ಒಮ್ಮಿಂದೊಮ್ಮೆ ಈ ಸ್ವದೇಶದ ಗೌರವಕ್ಕೇನೇ ಹಾನಿಕರವಾದ ರೀತಿಯಲ್ಲಿ ವರ್ತಿಸಿದುದು ವಿಷಾದಕರ.

ಕರ್ನಾಟಕ ಪ್ರಾಂತರಚನೆ.

ಢಿಲ್ಲಿಯಲ್ಲಿ ಎಲಾ ಪಕ್ಷಗಳ ಧುರೀಣರು ಒಟ್ಟುಗೂಡಿ ಸ್ವರಾಜ್ಯ ಸಂಕಾರದ ರಚನೆಯನ್ನು ತಯಾರುಮಾಡುವ ಸಮಯದಲ್ಲಿಯೇ ಕರ್ನಾಟಕವು ಈ ಸಮಸ್ಯೆಯನ್ನು ಅದರೆದುರು ತಂದುದು ಚೆನ್ನಾಯಿತು. ಕರ್ನಾಟಕ ಪ್ರಾಂತರಚನೆಗೆ ೧೯೦೭ರಿಂದ ಆರಂಭವಾದ ಚಳವಳದ ಇತಿಹಾಸವು ನಿವೇದಿಸಲ್ಪಟ್ಟಂತೆ ತೋರುತ್ತಿದೆ. ೧೯೧೬ರಲ್ಲಿ ಕರ್ನಾಟಕ ಸಭೆಯು ಸ್ಥಾಪಿಸಲ್ಪಟ್ಟು ೧೯೨೦ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಕೂಡಿ, ಅದೇ ವರ್ಷದ ಕೊಂಗ್ರೆಸ್ಸಿನಲ್ಲಿ ನಾಗಪುರದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರತಿನಿಧ್ಯವು ಕೊಡಲ್ಪಟ್ಟಿತು. ಅಂದಿನಿಂದ ಕರ್ನಾಟಕ ಏಕೀಕರಣಕ್ಕಾಗಿ ಬಹಳವಾಗಿ ಪ್ರಯತ್ನಗಳು ನಡೆಯುತ್ತಲೇ ಇವೆ. ಭಾಷೆಗಳಲ್ಲಿ ಕರ್ನಾಟಕವು ಹೊಂದಿದಷ್ಟು ಅನ್ಯಾಯವು ಬೇರೆ ಯಾವ ಪ್ರಕೃತ ಉಜ್ಜೀವಿತವಾಗಿರುವ ಭಾಷೆಯೂ ಹೊಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆಂಧ್ರಕ್ಕೆ ಪ್ರತ್ಯೇಕ ಪ್ರಾಂತವಿಲ್ಲದಿದ್ದರೂ ಈ ತರದ ವಿಭಾಗಗಳು ಅದರಲ್ಲಿಲ್ಲ. ಕೇರಳಕ್ಕೂ ಏಕೀಕರಣಕ್ಕೆ ಸರ್ವಾನುಕೂಲತೆ ಇದೆ. ಆದರೆ ಕರ್ನಾಟಕಕ್ಕೆ ರಾಜಕೀಯ ತೊಡಕುಗಳು ಬಹಳವಾಗಿವೆ. ಒಂದು ಭಾರಿ ಧಾರವಾಡ, ಬೆಳಗಾಂವ, ಬಿಜಾಪುರ, ಕಾರವಾರ ಜಿಲ್ಲೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಂದಿಗೂ ಕೊಡಗಿನೊಂದಿಗೂ ಕೂಡಿಸಬಹುದಾದರೂ, ಇವುಗಳನ್ನು ಒಂದು ಕಡೆಯಲ್ಲಿ ಬಳ್ಳಾರಿ ಅನಂತಪುರಗಳೊಡನೆಯೂ, ಇನ್ನೊಂದು ಕಡೆಯಲ್ಲಿ ಸೇಲಂ, ಕೊಯಮುತ್ತೂರು, ನೀಲಗಿರಿಗಳೊಡನೆಯೂ ಕೂಡಿಸುವುದು ಕಷ್ಟಸಾಧ್ಯವೂ ಪ್ರಾಂತರಚನೆಗೆ ಅಸ್ವಾಭಾವಿಕವೂ ಆಗಿದೆ. ಇವೆಲ್ಲವುಗಳನ್ನು ಮೈಸೂರು ಒಂದು ಮಾತ್ರವೇ ಏಕೀಕರಿಸಬಲ್ಲುದು. ಆದರೆ ಬ್ರಿಟಿಷ ಕರ್ನಾಟಕವು ದೇಶೀರಾಜರ ಮಾನಸಿಕ ಪರಿಸ್ಥಿತಿಯ ಲೊಟರಿಗೆ (Lottery) ಚೀಟುಹಾಕಲೊಪ್ಪಲಾರವು. ಆದುದರಿಂದ ಕರ್ನಾಟಕ ಸಮಸ್ಯೆಯು ಢಿಲ್ಲಿ ಪರಿಷತ್ತಿನಲ್ಲಿ ಯಾವ ರೀತಿಯಲ್ಲಿ ಚರ್ಚಿಸಲ್ಪಡಬಹುದೆಂದು ಹೇಳಲಾಗುವುದಿಲ್ಲ. ಕರ್ನಾಟಕ ಧುರೀಣರು ನಾವು ಈ ಮೊದಲೇ ಸೂಚಿಸಿದಂತೆ ಮುಂದಾಗಿ ತಮ್ಮ ರಚನೆಯೊಂದನ್ನು ಸಿದ್ಧಪಡಿಸಿದರೆ ಉತ್ತಮವೆಂದು ನಮಗನ್ನಿಸುತ್ತಿದೆ.

ವಿದ್ಯಾರ್ಥಿಗಳ ಆರೋಗ್ಯ.

ವಿದ್ಯಾರ್ಥಿಗಳ ಆರೋಗ್ಯ ಪರಿಶೀಲನೆಯ ಬಗ್ಗೆ ಹ್ಯಾಸ್ಕೂಲುಗಳಲ್ಲಿ ಡಾಕ್ತರರ ಪರೀಕ್ಷೆಯಾಗುವುದಾಗಿ ನಾವು ತಿಳಿಯುತ್ತೇವೆ. ಇದಕ್ಕಾಗಿ ವಿದ್ಯಾರ್ಥಿಯು ಕಿಂಚಿತ್ 'ಫೀ' ಯನ್ನು ಕೊಡಬೇಕಾಗುವುದು. ಒಬ್ಬ ಡಾಕ್ತರರು ಬಂದು ಶಾಲೆಯಲ್ಲಿದ್ದ ಹುಡುಗರನ್ನೆಲ್ಲಾ ಪರೀಕ್ಷಿಸಿ ಹೋಗಿ ಬಿಡುವರು. ಆದರೆ ಈ ಪರೀಕ್ಷೆಯ ಫಲಿತಾಂಶವ ಸಂದೇಹವನ್ನೇ ಸೂಚಿಸಬೇಕಾಗಿದೆ. ವಿದ್ಯಾರ್ಥಿಗಳ ಆರೋಗ್ಯದ ಕಡೆಗಿನ ಚಿಂತನೆಯಿಂದ ಅಧಿಕಾರಿಗಳು ಈ ಅಗ್ಗವಾದ mass examination ನನ್ನು ಕೈಗಾರಿಕೆಗಳ mass production ಸೂತ್ರದ ಮೇಲೆ ಹೊಂದಿ ಮಾಡಿದರೇನೊ ಸಹಜ. ಆದರೆ ಇಲ್ಲಿ ಮಾನವ ವೈಶಿಷ್ಟ್ಯಗಳು ಅಧಿಕವಿದ್ದುದರಿಂದ ಈ ತರದ ಪರೀಕ್ಷೆಗಳಿಂದ ಯಾವ ಲಾಭವೂ ಉಂಟಾಗದು. ಇವುಗಳಲ್ಲಿ ಹೆಚ್ಚಾಗಿ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯಾಗುವುದೇ ಕಾಣುತ್ತಿದೆ. ವಿದ್ಯಾರ್ಥಿಗಳಿಗೆ ಕಾಯಂ ಆಗಿ ಪರೀಕ್ಷಿಸಲು ದಾಕ್ತರರಿದ್ದು ಆಗಾಗ್ಯೆ ಅವರು ವಿದ್ಯಾರ್ಥಿಗಳನ್ನು ಕಂಡು ಅವರ ಆರೋಗ್ಯಕ್ಕೆ ಹಿತಕರವಾದ ಸೂಚನೆಗಳನ್ನು ಕೊಟ್ಟು ವಿದ್ಯಾರ್ಥಿಗಳ ಶಾರೀರಕ ಧಾರ್ಢ್ಯಕ್ಕೆ ಸಹಕಾರಿಯಾಗುವುದಾದರೆ ಮಾತ್ರ ಇವುಗಳನ್ನು ವ್ಯವಸ್ಥೆಗೊಳಿಸಬಹುದು. ಇದಕ್ಕಾಗಿ ಜಿಲ್ಲೆಗೊಬ್ಬ ವಿಚಕ್ಷಣ ಡಾಕ್ತರರೊಬ್ಬರನ್ನು ನೇಮಿಸುವುದು ಉತ್ತಮವು. ಇವರು ಖಾಸಗಿ ಚಿಕಿತ್ಸೆಗಳನ್ನು ನಡಿಸದೆ ಬರೇ ವಿದ್ಯಾರ್ಥಿಗಳ ಆರೋಗ್ಯಕ್ಕಾಗಿಯೇ ತಮ್ಮ ಸಮಯವನ್ನುಪಯೋಗಿಸಿಕೊಳ್ಳಬೇಕು. ಅಲ್ಲದೆ ಈ ಅರ್ಧ ಮನಸ್ಸಿನ ಅಗ್ಗ ಎಕ್ಜಾಮಿನೇಶನುಗಳು ವಿದ್ಯಾರ್ಥಿಗಳಿಗೆ ಯಾವ ಪ್ರಯೋಜನವನ್ನೂ ಕೊಡಲಾರವು.

ಹಿಂದಕ್ಕೆ ತೆಗಿಸಿ ಕೊಡುವ ವಕೀಲರು ಇಲ್ಲಿ ಇರಬಹುದು. ವಾದಿ ಪ್ರತಿವಾದಿರ ಖಜಾನೆ ತುಂಬ ಇದ್ದರೆ ಸರಿ.

• • • •

ಉಡುಪಿ ಅಷ್ಟ ಮಠದವರು ಏಕಪ್ಷದಲ್ಲಿ ಇದ್ದಾರಾಗಿ ಉಡುಪಿಯ ಒಂದು ಪತ್ರದಿಂದ ತಿಳಿದುಬರುವದು. ಈ ಏಕಪ್ಷವು ಬಲವಾಗಿ ನಿಲ್ಲುವ ಹಾಗೆ ಶ್ರಿ ಪಾದಂಗಳವರಿಗೆ ಅವರು ಪೂಜಿಸುವ ಶ್ರೀಕೃಷ್ಣನು ಅನುಗ್ರಹಿಸಲಿ.

ನೋಟಗಳು.

NOTE...S.

ಸರ್ ಜೋನ್ ಸ್ಯಾಮನರಿಗೆ ಸುಮಾರು ೩೦೦ ಟಿಲಿ ಗ್ರಾಮುಗಳು ಸುಸ್ವಾಗತವೆಂದು ಬಂದವು. ಆದರೆ, ಹಿಂದೂಸ್ಥಾನದಲ್ಲಿ ೩೦೦ ಮಿಲಿಯ ಜನರಿರುವರೆಂದು ಸ್ಯಾಮನರಿಗೆ ಗೊತ್ತೇ ಇರಬಹುದು.

• • • •

ಸರ್ ಜೋನ್ ಸ್ಯಾಮನರಿಗೆ ಬರೇ ಹನ್ನೆರಡಾಣೆಯೊಳಗಿನ ಸುಸ್ವಾಗತದಲ್ಲಿಯೇ ತೀರಿಸಿದಿಟ್ಟರು. ಪಾಪ! ಸರ್ ಜೋನ್ ಸ್ಯಾಮನರದು.

• • • •

ಮಿಸ್. ಮಿಲ್ಲರಳನ್ನು ಮದುವೆಯಾಗಲು ನಿಶ್ಚೈಸಿದ ಇಂದೋರಿನ ಮಾಜಿ ಮಹಾರಾಜರ ಮೇಲೆ ಕೊಲೊಂಬೊ ಡಾಕ್ಟರರು ೫೫೫೦ ರೂಪಾಯಿಗಳಿಗೆ ಕೊಲೊಂಬೊ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುವರು. ಮಹಾರಾಜರು ಕೊಲೊಂಬೊ ಸರಕಾರದವರ ಹತ್ತಿರ ೫೦೦೦ ರೂಪಾಯನ್ನು ಡಿಪೊಜಿಟ್ ಇಟ್ಟಿರುವರು. ೫೫೦ ರೂಪಾಯಿಗೆ ಮಾತ್ರ ಈಗ ಚರ್ಚೆ. ಹೀಗಿದ್ದಲ್ಲಿ ಅಮೇರಿಕದ ಶ್ರೀಮಂತ ಮನೆತನಕ್ಕೆ ಸೇರಿದ ಮಿಲ್ಲರಳಿಗೆ ಅಸಮಾಧಾನವಾಗಬಹುದೋ ಏನೋ?

• • • •

ಬೆನಾರಿಸ್ ಡಿಸ್ಟ್ರಿಕ್ಟ್ ಬೋರ್ಡಿನವರು ಸ್ಯಾಮನ್ ಕಮಿಶನನ್ನು ಬಹಿಷ್ಕರಿಸಿ ಒಂದು ಠರಾವನ್ನು ಮಂಜೂರು ಮಾಡಿದರು. ಆದರೆ ೩ನೇ ತಾರೀಕಿನ ದಿನ ಡಿಸ್ಟ್ರಿಕ್ಟ್ ಕಲೆಕ್ಟರರ ಹುಕುಮಿಗೆ ಹೆದರಿ ಕೆಲವು ಜನ ಮೆಂಬರರು ಕೂಡಿ ಮೊದಲು ಮಂಜೂರಾದ ಠರಾವನ್ನು ರದ್ದುಪಡಿಸಿದರು.

• • • •

ಡಿಸ್ಟ್ರಿಕ್ಟ್ ಬೋರ್ಡೆಂಬದು ಸೆಲ್ಫ್ ಗವರ್ನಮೆಂಟು; ಸರಕಾರಕ್ಕೆ ಸಮ್ಮತಿಯಿಲ್ಲದ ಪ್ರಸಂಗಗಳಲ್ಲಿ ಸರಕಾರದ ಇಚ್ಛೆಯಂತೆ ನಡೆಯಬೇಕು. ಅಧಿಕಾರಿಗಳು ಹರತಾಳವನ್ನು ಆಚರಿಸದ ಹಾಗೆ ಬೋರ್ಡಿನವರಿಂದ ಆಫೀಸಿನ ಕೆಲಸಗಳನ್ನು ಮಾಡಿಸಿದರು. ಇದೀಗ ಹಿಂದೂಸ್ಥಾನಕ್ಕೆ ಈ ಮೊದಲು ಕೊಟ್ಟ ರಿಫೋರ್ಮುಗಳು. ಇನ್ನು ಜೋನ್ ಸೈಮನರು ಇದಕ್ಕಿಂತ ಉತ್ತಮವಾದ ರಿಫೋರ್ಮುಗಳನ್ನು ಕೊಡಲಿಕ್ಕಿರುವರು. ಜನರ ಮೂಢ ಬುದ್ಧಿಯನ್ನು ನೋಡಲಿಕ್ಕಿದೆ.

• • • •

ಬೋರ್ಡಿನವರ ಹುಕುಂ ಮೇರೆಗೆ ಶಾಲೆಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಅಧಿಕಾರಿಗಳಿಗೆ ಹೆದರಿ ಮುಚ್ಚಿದ್ದರ ಪ್ರಾಯಶ್ಚಿತ್ತವಾಗಿ ಆದಿತ್ಯವಾರ ಶಾಲೆ ಜರಗಿಸಬೇಕೆಂದು ಹುಕುಂ ಹೊರಡುವದೋ ಏನು?

§ § § §

ಮಂಗಳೂರು ತಾಲೂಕು ಬೋರ್ಡಿನ ಚುನಾವಣೆಯ ಗದ್ದಲವೇ ಗದ್ದಲ. ಉಮೇದ್ವಾರರ ನೋಮಿನೇಶನ್ ಪತ್ರಗಳು ಆಫೀಸಿನಲ್ಲಿ ಅರ್ಪಿಸಲ್ಪಟ್ಟವು. ನೋಮಿನೇಶನ್ ಮುಗಿಯಿತು. ಕಾಫಿ ಫಲಾಹಾರಗಳೆಲ್ಲಾ ಆದವು. ಏನೂ ಆಕ್ಷೇಪವಿಲ್ಲವೆಂದು ಒಬ್ಬರು ಹೇಳಿದರು. ಕಡೆಗೆ ಆಕ್ಷೇಪವಿಲ್ಲವೆಂತ ಹೇಳಿದವರಿಗೆನೇ ಖಾರಬರುವದೋ, ಎಂದು ಚಿಂತಿಸಿ ಒಬ್ಬರ ನೋಮಿನೇಶನ್ ಪತ್ರದ ಮೇಲೆ ಆಕ್ಷೇಪವನ್ನೆತ್ತಿದರು. ಹೇರಿಂಗ್ ಮಾಡಿದರು. ಬಹಳ ಕಚ್ಚಾಟವಾಯಿತು. ಮುಂದೆ ಸಾಗಲಿಲ್ಲ. ಆ ಮೆಂಬರರ ನೋಮಿನೇಶನು ಸ್ವೀಕರಿಸಲ್ಪಟ್ಟು ಮೆಂಬರಿಕೆಗೆ ಅರ್ಹರಾದರು. ನೋಮಿನೇಶನ್‌ನಲ್ಲಿಯೂ ಕುಯುಕ್ತಿ.

• • • •

ಟಿಕ್ಸಿಕಾರುಗಳಲ್ಲಿ ಹಳ್ಳಿ ಹಳ್ಳಿ ಹೋಗಿ ಓಟಿನ ಬೇಡುವಿಕೆಗೆ ಪ್ರಾರಂಭ. ಓಟರರಿಗೆ ಒಳ್ಳೇ ಸಂದರ್ಭ.

• • • •

ಉಡ್ಪಿ ತಾಲೂಕು ಬೋರ್ಡ ಕೋಟ ಸರ್ಕಲಿನ ಮೆಂಬರರ ಇಲೆಕ್ಷನು ಆಗಬಾರದಾಗಿ ಇಲ್ಲಿಯ ಕೋರ್ಟಿನಲ್ಲಿ ಒಂದು ವ್ಯಾಜ್ಯ. ಇಂಜೆಂಕ್ಷನ್ ಕೊಡಬೇಕಾಗಿ ಅರ್ಜಿ. ವ್ಯಾಜ್ಯವು ದೊಡ್ಡ ವ್ಯಾಜ್ಯ. ವಕೀಲರಿಗೆ ಒಂದಿಷ್ಟು ದುಡ್ಡು. ಪಸೆಯ ಒಂದಿಷ್ಟು ಮಾರಾಟ. ವೆಂಡರರಿಗೆ ಕಿಂಚಿತ್ ಕಮಿಶನ್. ಸ್ವರಾಜ್ಯದ ಅರ್ಹತೆಯು ಇಲ್ಲಿ ತಿಳಿದುಬರುವದು.

• • • •

ವ್ಯಾಜ್ಯವು ಗುಣವಾಗದೆ ಹೋದಲ್ಲಿ ಪಣೆ ಮೌಲ್ಯವನು

ವಿದೇಶ ವರ್ತಮಾನ.

— ಜರ್ಮನಿಗೂ ಅಮೇರಿಕಕ್ಕೂ ಟೆಲಿಫೋನನ್ನು ಪ್ರಾರಂಭಿಸಿರು ವರು

— ಲಂಡನಿನ ಒಂದು ಇಗರ್ಜಿಯಲ್ಲಿ ಪಾದರಿಯು ಹಾಡನ್ನು ಹಾಡು ತ್ತಿರುವಾಗ ನೆರೆದವರಲ್ಲಿ ಕೆಲವರು ಬೊಬ್ಬೆ ಹಾಕಿ ಪಾದರಿಯನ್ನು ಹೀನೈಸಿ ದರು. ಪೂಜೆಯು ಶಾಂತಿಯಿಂದ ನಡೆಯದಂತೆ ಮಾಡಿದರು. ಪೋಲೀಸಿ ನವರು ಬಂದು ಹೇಗಾದರೂ ಬೊಬ್ಬೆಯನ್ನು ನಿಲ್ಲಿಸಿದರು.

— ಯುರೋಪಿನಲ್ಲಿ ಅತಿರೇಕವಾದ ಮಳೆಗಾಳಿ ಬಂದು ಬಹಳ ಅನಾಹುತಗಳಾಗಿರುವವು. ಮನೆಯ ಮಾಡುಗಳು ಹಾರಿರುವವು. ನದಿ ಗಳೆಲ್ಲ ನೆರೆ ಬಂದು ಬಹು ನಷ್ಟವುಂಟಾಗಿದೆ.

— ಐರಿಶ್ ಫ್ರೀಸ್ಟೇಟಿನ ಪ್ರೆಸಿಡೆಂಟರಾದ ಮಿಸ್ಟರ್ ಕೊಸ್‌ಗ್ರೇವ್ ವರು ಅಮೇರಿಕ ಸಂಚಾರಕ್ಕೆ ತೆರಳಿದವರು ಸಂಚಾರವನ್ನು ಮುಗಿಸಿ ... ಹಿಂದಕ್ಕೆ ಬಂದಿರುವರು. ಅವರನ್ನು ಆಯರ್‌ಲೆಂಡಿನ ಜನರು ... ಸಂಭ್ರಮದಿಂದ ಎದುರುಗೊಂಡು ಸತ್ಕರಿಸಿದರು.

— ಹಕೀಮ್ ಅಜಮಲ್ ಖಾನರು ಮರಣಪಟ್ಟುದಕ್ಕಾಗಿ ಮೆಂಚೆಸ್ಟ ... ಇಂಡಿಯನ್ ಎಸೋಸಿಯೇಶನಿನವರು ಸಭೆಕೂಡಿ ತಮಗಾದ ದುಃಖ ವನ್ನು ವ್ಯಕ್ತಗೊಳಿಸಿದರು. ಇವರ ದುಃಖೀ ಕುಟುಂಬಕ್ಕೆ ಭಗವಂತನು ... ನೀಯುವಂತೆ ಪ್ರಾರ್ಥಿಸಿಕೊಂಡರು.

— ವೊಶಿಂಗ್‌ಟನ್ನಿನ ರಿಪಬ್ಲಿಕನ್ ಅಧ್ಯಕ್ಷತೆಗೆ ಹೂವರ್ ಎಂಬ ... ಉಮೇದುವಾರರಾಗಿ ಮುಂದಕ್ಕೆ ಬಂದಿರುವರು.

— ಅಫಘಾನಿಸ್ಥಾನದ ರಾಜರಾದ ಅಮನುಲ್ಲಾ ದೊರೆಗಳು ರಾಣಿ ಯವರೊಂದಿಗೆ ಈಗ ಬೆಲ್ಜಿಯಮಿಗೆ ಹೋಗಿರುವರು. ಬೆಲ್ಜಿಯಮಿನಲ್ಲಿ ಅವರಿಗೆ ಒಂದು ಔತಣವನ್ನು ಕೊಟ್ಟರು. ಈ ಔತಣಕ್ಕೆ ೯೦ ಜನ ಅತಿಥಿ ... ಬಂದಿದ್ದರು.

— ಕೆಪ್ಟನ್ ಹಿಂಕ್ಲರನೆಂಬವನು ರೋಮ್ ಪಟ್ಟಣದಲ್ಲಿ ವಿಮಾನದ ... ಕುಳಿತು ಸೀದಾ ಪೂರ್ವಕ್ಕೆ ಹಾರಿ ಆಸ್ಟ್ರೇಲಿಯದ ಮಾಲ್ಟಾ ಪಟ್ಟಣ ...

— ಸರ್ ಆಲನ್ ಕೋಬಾಮರೆಂಬವರು ವಿಮಾನದ ಮೇಲೆ ಕುಳಿತು ... ಸುತ್ತಲೂ ತಿರುಗುತ್ತಿರುವರು.

— ಫ್ರಾನ್ಸಿನ ಥಾಯನೊವಿಲ್ಲೆ ಎಂಬಲ್ಲಿ ಟ್ರಾಮು ಗಾಡಿಗಳು ಒಂದ ... ತಾಗಿ ೧೩ ಜನರು ಸತ್ತುಹೋದರು. ೩೪ ಜನರಿಗೆ ಗಾಯ ...

— ಅಫಗಾನದಿಂದ ಮಾರ್ಚಿ ತಿಂಗಳಲ್ಲಿ ಒಂದು ಕಮರ್ಸಿಯಲ್ ... ಹೊರಟು, ರಸ್ಸಿಯಾ, ಜರ್ಮನಿ, ಫ್ರಾನ್ಸ್, ಬೆಲ್ಜಿಯಮ್ ... ದೇಶಗಳಲ್ಲಿ ಸಂಚರಿಸುವದು.

— ಕೆಲಿಫೋರ್ನಿಯದ ಲೋಂಗ್ ಬೀಚ್ ಎಂಬಲ್ಲಿ ಎಣ್ಣೆ ಮಿಲ್ಲು ... ಗಳಿಗೆ ಬೆಂಕಿತಾಗಿ ಬಹಳ ಅನಾಹುತಗಳುಂಟಾದವು. ... ಸತ್ತಿರುವರು.

— ಎಟ್ಲಾಂಟಿಕ್ ಸಮುದ್ರದ ಮೇಲೆ ವಿಮಾನ ಪ್ರಯಾಣವನ್ನು ... ಅಮೇರಿಕದ ವಿ. ಹೂವರರೆಂಬವರಿಗೆ ಸರಕಾರದವರು ಅನುಜ್ಞೆ ... ಕೊಟ್ಟಿರುವರು. ಇವರು ಇನ್ನು ಮೂರು ತಿಂಗಳುಗಳ ತರು ... ಹೊರಡುವರು.

— ಕೇಪ್ ಟೌನಿನ ಕೋಲ್ಡ್‌ಸ್ಟೋರೇಜ್ ಕಟ್ಟೋಣಕ್ಕೆ ಬೆಂಕಿ ... ಹತ್ತಿಹೋಯಿತು. ಖಾಲಿ ಗೋಡೆಗಳೂ, ಕಬ್ಬಿಣದ ತೊಲು ... ಉಳಿದವು. ನಷ್ಟವು ಸ್ವಲ್ಪ. ೪೦೦,೦೦೦ ಪವನುಗಳು.

— ... ನಲ್ಲಿ ಎಣ್ಣೆಯ ಮೇಲಿನ ಸುಂಕವನ್ನು ಕಡಿಮೆ ಮಾಡಿರು. ... ಟನ್ ಎಣ್ಣೆಯ ಮೇಲೆ ಕೇವಲ 12 ಫ್ರೆಂಕುಗಳು ...

— ... ಲಾಯತಿಯ ಕಂಬರ್‌ಲೇಂಡ್ ಗಣಿಯಲ್ಲಿ ಕಳೆದ ದಶಂಬರ ... ನು ಸತ್ತಿದ್ದನು. ಆತನ ಶವವನ್ನು ಹುಡುಕಿ ತೆಗೆಯುವ ... ಹದಿನೈದು ಜನರು ದೀಪಗಳನ್ನು ಹಿಡಿದು ಒಳಗೆ ಹೋಗು ... ಎಕ್ಸ್‌ಪ್ಲೋಜನುಗಳುಂಟಾಗಿ ಗಣಿಯೊಳಗೆ ಕೆಟ್ಟಿ ... ಕೆಲವರು ಹೇಗಾದರೂ ಮಾಡಿ ಹೊರಕ್ಕೆ ಬಂದರು. ... ಸುಳಿವೇ ಇರುವುದಿಲ್ಲ.

— ... ಓಫ್ ವೇಲ್ಸರು ಉರುಗ್ವೇಗೆ ಬಂದು ಸಂದರ್ಶನವನ್ನ ... ಉರುಗ್ವೇಯ ಕೆಲವರು ಹೊರಟು ವಿಲಾಯತಿಯನ್ನು ... ಹೋಗಿರುವರು. ಇವರನ್ನು ಅರಸರ ಕಡೆಯ ಜನರು ...

— ... ನ ಚಿಕೋರಾದಲ್ಲಿ ಬಹಳ ಥಳಿ ಬಿದ್ದಿರುತ್ತದೆ. ಜನರು ... ಹೊರಗೆ ಬರಲಿಕ್ಕೆ ಸಾಧ್ಯವೇ ಇರುವದಿಲ್ಲ. ತೋಳಗಳೂ ... ಪಟ್ಟಣದೊಳಕ್ಕೆ ಬಂದು ಸಿಕ್ಕಿದವರನ್ನು ತಿನ್ನಲಾರಂಭಿಸಿವೆ.

— ... ಟೌನಿನಲ್ಲಿ ಜೋನ್ ಬರ್ಗ್ ಎಂಬ ವರನಿಗೂ, ಮಿಸ್. ... ವಧುವಿಗೂ ಇಗರ್ಜಿಯಲ್ಲಿ ಮದುವೆಯಾಗುತ್ತಿರುವಾಗ ... ತಪ್ಪಿ ಕೆಳಕ್ಕೆ ಬಿದ್ದನು. ಅವನು ಪುನಃ ಬೋಧಕ್ಕೆ ಬಂದು ... ಅವನನ್ನು ಇಬ್ಬರು ಹಿಡಿದು ನಿಂತರು. ಮದುವೆಯ ಕ್ರಮ ... ವಾಗಿ ಮಾಡಿ ಮುಗಿಸಿದರು.

— ... ಬಂಗಾಳ ಸಿವಿಲ್ ಸರ್ವಿಸಿನಲ್ಲಿದ್ದ ಡಬ್ಲ್ಯು. ಎಚ್. ... ಎಂಬವರು ವಿಲಾಯತಿಯಲ್ಲಿ ೧೦೦ ವರ್ಷ ಭರ್ತಿಯಾಗಿ ... ಕಳೆದ ನಂತರ ಮೃತಪಟ್ಟರು.

— ... ಸ್ಥಾನದಲ್ಲಿ ಬಹಳ ಜೋರಿನ ಮಳೆ ಬಂದು ರೈಲ್ವೆ ಚಲಾವಣೆಗೆ ... ತ್ತದೆ.

— ... ಕಲಕತ್ತವೆಂಬ ಹೆಸರಿನ ಬ್ರಿಟಿಷರ ಅತೀ ದೊಡ್ಡ ವಿಮಾನವು ... ಇರುವದು. ಇದರಲ್ಲಿ ೧೫ ಜನ ಪ್ಯಾಸೆಂಜರರು ಕುಳಿತು ... ಗಂಟೆಗೆ ೧೦೦ ಮೈಲು ಓಡುವುದು.

— ... ಅಂಗೋರಾದಲ್ಲಿ ಮುಸ್ತಾಫಾ ಕೆಮಲ್ ಪಾಶಾರು ಥಟ್ಟನೆ ಸ್ಮೃತಿ ... ತಪ್ಪಿ ಬಿದ್ದು ಪುನಃ ಚೇತರಿಸಿಕೊಂಡರು.

— ... ಜಪಾನಿನ ಹೊಲ್ಲಿಂಗರ್ ಚಿನ್ನದ ಗಣಿಯಲ್ಲಿ ಬೆಂಕಿಯುಂಟಾಗಿ ... ಸತ್ತುಹೋದರು. ಇವರಲ್ಲಿ ೩೦ ಜನರ ಶರೀರಗಳು ಸಿಕ್ಕಿ ...

ತಾರೀಕು ೧೭ನೇ ಶುಕ್ರವಾರ ಫೆಬ್ರುವರಿ ೧೯೨೮

ಒಳದೇಶ ವರ್ತಮಾನ.

— ಬರುವ ವರುಷ ಮೆಡಿಕಲ್ ಕೋಲೇಜಿನ ೯ ಹೆಚ್ಚಿಗೆ ಹುಡುಗ ರಿಗೆ ಸ್ಕೊಲರ್‌ಶಿಪ್ಪನ್ನು ಕೊಡುವರಂತೆ. ಆದರೆ ಪತಿತಸಮಾಜದವರಿಗಲ್ಲ. ಯಾಕಂದರೆ ಈಗ ಸ್ಕೊಲರ್‌ಶಿಪ್ ಸಿಕ್ಕುವದೇ ಪಂಚಮರಿಗೆ ಮತ್ತು ಬೇಕ್ ವರ್ಡ್ ಕ್ಲಾಸಿನವರಿಗೆ.

— ಬೆಂಗಳೂರಿನಲ್ಲಿ ಕಳೆದ ವಾರ ಒಂದು ವಿಧವಾವಿವಾಹವು ನಡೆಯಿತು. ಆರ್ಯಸಮಾಜದವರೇ ಇದಕ್ಕೆ ಆಶ್ರಯದಾತರು.

— ಸೌತ್ ಇಂಡಿಯನ್ ರೈಲುವೇ ಕಂಪೆನಿಯವರ ಇಂಜಿನಿಯರ ರಾಗಿ ಪಿ. ಎಸ್. ಸುಂದರಮ್ ಅಯ್ಯರರು ನೇಮಿಸಲ್ಪಟ್ಟಿರುವರು. ಇದು ವರೆಗೆ ಈ ಕಂಪೆನಿಯಲ್ಲಿ ಹಿಂದುಗಳು ಇಂಜಿನಿಯರರಾಗಿದ್ದಿಲ್ಲ.

— ತಿರುವನ ಮಲಯಿಯ ಪಂಚಮರ ಗುಡಿಸಲುಗಳು ಮಳೆನೀರಿನಿಂದ ಹಾಳಾಗಿ ಹೋದ ಕಾರಣ ಅವರ ಸಹಾಯಕ್ಕೆಂದು ಎಸ್. ಶ್ರೀನಿವಾಸ ಅಯ್ಯಂಗಾರರು ರೂಪಾಯಿ ೫೦೦ನ್ನು ಕಳುಹಿಸಿರುವರು. ಮದರಾಸಿನ ಕಾಂಗ್ರೆಸ್ ಅಧಿಕಾರಿಗಳು ಇವರಿಗಾಗಿ ಸ್ವಲ್ಪ ಖಾದಿ ವಸ್ತ್ರವನ್ನು ಕಳುಹಿಸಿರುವರು.

— ಮದರಾಸಿನ ಪ್ರೆಸಿಡೆನ್ಸಿ ಕೋಲೇಜಿನ ವಿದ್ಯಾರ್ಥಿಗಳು ಹರತಾಳದ ದಿನ ಕೋಲೇಜಿಗೆ ಬಾರದಿದ್ದದಕ್ಕಾಗಿ ೧೬೬ ವಿದ್ಯಾರ್ಥಿಗಳಿಗೆ, ಪ್ರತಿಯೊಬ್ಬನಿಗೆ ರೂಪಾಯಿ ೫ರ ಜುಲುಮಾನೆಯನ್ನು ವಿಧಿಸಿರುವರು. ಜುಲುಮಾನೆಯನ್ನು ೧೮ನೇ ತಾರೀಕಿನೊಳಗೆ ಕೊಡತಕ್ಕದ್ದು. ೧೦ ಜನ ಹುಡುಗರಿಗೆ ಕೊಡುತಿದ್ದ ಒಂದೊಂದು ತಿಂಗಳ ವೇತನವನ್ನು ವಜಾಮಾಡಿರುವರು. ಕೋಲೇಜಿನ ಪ್ರಿನ್ಸಿಪಾಲರು, ಹರತಾಳದಲ್ಲಿ ಭಾಗವನ್ನು ವಹಿಸಬಾರದೆಂದು ವಿದ್ಯಾರ್ಥಿಗಳಿಗೆ ಮೊದಲೇ ಒತ್ತಿ ಹೇಳಿದ್ದರು. ಇನ್ನು ಮುಂದಕ್ಕೆ ಎಂದಾದರೂ ಹಾಗೆ ಮಾಡಿದರೆ ಕಠಿಣ ಶಿಕ್ಷೆಯನ್ನು ವಿಧಿಸುವೆನೆಂದು ಪ್ರಿನ್ಸಿಪಾಲರು ಹೇಳಿರುವರು.

— ಸ್ಯಾಮನ್ ಕಮಿಶನಿನವರು ಮದರಾಸಿಗೆ ಬಂದಾಗ ಗುಂಟೂರು ಮತ್ತು ತಂಜಾವೂರನ್ನೂ ಸಂದರ್ಶಿಸಿ ತೆರಳುವರು.

— ಕಾಶಿಯ ಮಹಾರಾಜರು ಕಳೆದ ೬ ನೇ ತಾರೀಕಿನ ದಿನ ತನ್ನ ಪ್ರವಾಸವನ್ನು ಮುಗಿಸಿ ಪುನಃ ಬನಾರಸಿಗೆ ಬಂದು ತಲಪಿರುವರು.

— ಹೈದರಾಬಾದಿನಲ್ಲಿ ಹಬ್ಬಿಕೊಂಡಿದ್ದ ಪ್ಲೇಗ್ ರೋಗದ ಹಾವಳಿಯು ಇಳಿಯುತ್ತಾ ಬರುತ್ತಿದೆ. ಮರಣ ಸಂಖ್ಯೆಯು ಕಡಿಮೆಯಾಗುತ್ತಾ ಇದೆ.

— ಮಹಾತ್ಮ ಗಾಂಧಿಯವರು ಡಾಕ್ಟರರ ಅಭಿಪ್ರಾಯಕ್ಕೆ ಸರಿಯಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದುದರಿಂದ, ಅವರ ಅಸೌಖ್ಯತೆಯು ಕಡಿಮೆಯಾಗುತ್ತಾ ಬರುತ್ತಿದೆ. ಅವರ ಆಹಾರವು ಈಗ ಮುಖ್ಯವಾಗಿ ಹಣ್ಣುಗಳೇ. ಹಾಲು ಕುಡಿಯುವದನ್ನು ಕೂಡ ಅವರು ಸಧ್ಯಕ್ಕೆ ನಿಲ್ಲಿಸಿರುತ್ತಾರೆ.

— ಮುಂಬಾಯಿಯಲ್ಲಿ ಮಿಸೆಸ್. ಇ. ಬಾರ್ಬರಳೆಂಬ ೪೦ ವರ್ಷ ಪ್ರಾಯದ ಯುರೋಪಿಯಾನ ವಿಧವೆಯು ಒಂದು ಕಾರನ್ನು ಬಾಡಿಗೆಗೆ ಪಡದು ಸಿಕ್ಕಿದ ಕಡೆಗಳಲ್ಲೆಲ್ಲ ತಿರುಗಿ ಕೊನೆಗೆ ಪೋಲೀಸ್ ಕಮಿಶನರ ಆಫೀಸಿನ ಎದುರು ಪಿಸ್ತೂಲಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯವನ್ನು ಮಾಡಿಕೊಂಡಳು. ಡ್ರೈವರನು ಅವಳನ್ನು ಪೋಲೀಸ್ ಸ್ಟೇಶನಿಗೆ ಕೊಂಡುಹೋಗುವಾಗ ಅವಳು ಸತ್ತುಹೋಗಿದ್ದಳು. ಅವಳ ಜೇಬಿನಲ್ಲಿ ಅನೇಕರಿಗೆ ಬರೆದ ಕಾಗದಗಳಿದ್ದವು. ಮಿಸ್ಟರ್ ಇ. ಡಿ. ಎಂಬವನನ್ನು ತಾನು ಪ್ರೀತಿಸುತ್ತಿದ್ದರೂ ಅವನು ತನ್ನನ್ನು ತಿರಸ್ಕರಿಸಿದನೆಂದು ಅವಳ ಕಾಗದಗಳಲ್ಲಿದ್ದಿತು. ಈ ದುಃಖದಿಂದ ಎದೆಯೊಡೆದ ಅವಳು ಆತ್ಮಹತ್ಯವನ್ನು ಮಾಡಿಕೊಂಡಳಂತೆ. ತನ್ನ ಸಂಸ್ಕಾರದ ಖರ್ಚನ್ನು ಆ ಇ. ಡಿ. ಯಿಂದಲೇ ಪೋಲೀಸರು ಪಡೆಕೊಳ್ಳಬೇಕೆಂದು ಅವಳು ಬರೆದಿರುವಳು.

— ಇಂದೋರಿನ ಎಕ್ಸ್ ಮಹಾರಾಜರ ವೈದ್ಯರಾದ ಡಾಕ್ಟರ್ ಗೋಸಾವಿಯವರು ಮಿಸ್. ಮಿಲ್ಲರಳನ್ನು ಮತಾಂತರಗೊಳಿಸುವ ಪ್ರಯತ್ನವನ್ನು ಮಾಡುವದಕ್ಕಾಗಿ ಮುಂಬಾಯಿಗೆ ಬಂದಿದ್ದವರು ಮದರಾಸಿಗೆ ತೆರಳಿರುವರು. ಪೂನೆಯ ಸತ್ಯಶೋಧಕ ಸಮಾಜದವರು ಮಿಸ್. ಮಿಲ್ಲರಳನ್ನು ಮತಾಂತರಗೊಳಿಸುವರಂತೆ. ಕರವೀರ ಮಠದ ಶ್ರೀ ಶಂಕರಾಚಾರ್ಯರು ಇದಕ್ಕೆ ಸಹಾಯಕರಾಗಿರುವರು. ಈ ಸ್ವಾಮಿಯವರು ಪ್ರತ್ಯಕ್ಷತೆಯಲ್ಲಿಯೇ ಮತಾಂತರವು ನೆರವೇರುವದೆಂಬ ಸಂಶಯವೂ ಇದೆ.

— ಸ್ಯಾಮನ್ ಕಮಿಶನು ಇದೇ ತಿಂಗಳ ೨೫ನೇ ತಾರೀಕಿಗೆ ಮದರಾಸಿಗೆ ಬರವದು.

— ಅಲ್ಲಹಾಬಾದಿನ ಒಂದು ಡಕಾಯಿತರ ಗುಂಡು ಪೋಲೀಸರ ಕೈಗೆ ಸಿಕ್ಕಿದ್ದರಿಂದ ಸೆಶ್ಶನ್ ಜಡ್ಜರು ಒಬ್ಬನಿಗೆ ಫಾಶಿ ಶಿಕ್ಷೆಯನ್ನೂ, ಒಬ್ಬನಿಗೆ ಟಾಪು ಶಿಕ್ಷೆಯನ್ನೂ, ಇತರರಿಗೆ ನಾನಾ ತರದ ಕಾರಾಗೃಹ ವಾಸವನ್ನೂ ವಿಧಿಸಿರುವರು.

— ಮಧುರೆಯ ಸಮೀಪದ ರೈಲುವೇ ಮಾರ್ಗದ ಮೇಲೆ ಒಬ್ಬ ಮನುಷ್ಯನ ಮೃತದೇಹವು ದೊರಕಿತು. ದೇಹಕ್ಕೆ ಕೈಕಾಲುಗಳಿರದೆ ರುಂಡ ಮಾತ್ರ ಇತ್ತು. ಯಾರೋ ದುಷ್ಟರು ಆತನನ್ನು ಕೊಂದು ಕೈಕಾಲುಗಳನ್ನು ಕಡಿದು, ತಮ್ಮ ಮೇಲೆ ಸಂಶಯ ಉಂಟಾಗದಂತೆ, ಆತ್ಮಘಾತವನ್ನು ಮಾಡಿಕೊಂಡನೆಂದು ತೋರಿಸಲಿಕ್ಕಾಗಿ ಶವವನ್ನು ರೈಲುವೇ ಮಾರ್ಗದ ಮೇಲೆ ಬಿಸಾಡಿದ್ದರು.

— ತಿರುಚಿನಾಪಳ್ಳಿಯ ಅಬ್ದುಲ್ ಸತಾರನೆಂಬವನ ಮನೆಯಲ್ಲಿ ಅನೇಕ ಕಳವಿನ ಸಾಮಾನುಗಳು ದೊರಕಿರುವವು. ಆತನು ಬಹು ಕಾಲದಿಂದಲೂ ಕಳ್ಳನಾಗಿದ್ದನೆಂದು ಈಗ ತಿಳಿದಿರುವದು. ಅವನನ್ನು ಈಗ ಕೈದುಮಾಡಿರುವರು.

— ಬ್ರಿಟಿಷ ರಾಜ್ಯದಿಂದ ಇಲ್ಲಿಗೆ ಬರುವ, ಇಲ್ಲಿಂದ ಹೊರಗೆ ಹೋಗುವ ಮನಿಯಾರ್ಡರುಗಳ ನಾಣ್ಯಗಳ ಬದಲಾವಣೆಗಳನ್ನು ಬೇರೆ ಮಾಡಿರುವರು. ಹೇಗಂದರೆ, ಒಂದು ರೂಪಾಯಿಗೆ ೧ ಶಿಲಿಂಗ್, ೫ ಪೆನ್ಸ್ ಮತ್ತು ೩ ಫಾರ್ದಿಂಗ್; ಒಂದು ಪೌಂಡಿಗೆ ೧೩ ರೂಪಾಯಿ ೪ ಆಣೆ.

— ಲೋರ್ಡ್ ಸಿಂಹಾರವರು ಬಿಕಾನೀರಿನ ಮಹಾರಾಜರ ಭೇಟಿಯನ್ನು ತೆಗೆದುಕೊಳ್ಳಲು ಹೋದುದರಲ್ಲಿ ಏನೋ ಒಂದು ಗೋಪ್ಯವಿರಬೇಕೆಂದು ಹಲವರು ಹೇಳುವರು. ಆದರೆ ತಮ್ಮಿಬ್ಬರೊಳಗೆ ಬಹು ಕಾಲದಿಂದ ಸ್ನೇಹವಿದ್ದುದರಿಂದಲೂ ರಾಜರು ಲೋರ್ಡ್ ಸಿಂಹಾರವರನ್ನು ಅನೇಕ ದಿನಗಳ ಹಿಂದೆ ಬರಬೇಕೆಂದು ಆಮಂತ್ರಿಸಿದ ಕಾರಣ ಬಿಕಾನೀರಿಗೆ ಹೋಗಿದ್ದರೆಂದೂ, ಅಲ್ಲದೆ ಯಾವದೊಂದು ತರದ ರಾಜಕೀಯ ಕಾರಣಗಳಿರಲಿಲ್ಲವೆಂದೂ ಈಗ ಇಬ್ಬರೂ ಸಾರುತ್ತಿರುವರು.

— ಬಿಜಾಪುರದ ಮುನಿಸಿಪಾಲಿಟಿ ಅಧ್ಯಕ್ಷರ ಹೆಸರಿನಲ್ಲಿ ಸರ್ ಜೋನ್ ಸ್ಯಾಮನರಿಗೆ ಒಂದು ಸ್ವಾಗತದ ತಂತಿ ಬಂದಿರುತ್ತದೆ. ಆದರೆ ತಮಗದರ ಸಂಗತಿಯೇ ಗೊತ್ತಿಲ್ಲವೆಂದೂ, ಮುನಿಸಿಪಾಲಿಟಿಯ ಅಧ್ಯಕ್ಷರೂ ಸದಸ್ಯರೂ ಹೇಳುತ್ತಿರುವರು.

— ಸಾಧು ಟಿ ಎಲ್. ವಾಸ್ವಾನಿಯವರು ಈಗ ಟೆಲಿಚೇರಿಯಲ್ಲಿರುವರು. ಅವರೊಂದಿಗೆ ಪ್ರೊಫೆಸರ್ ರಾಮಮೂರ್ತಿಯವರೂ ಇರುವರು. ಅಲ್ಲಿ ಅವರು ಭಾಷಣಗಳನ್ನು ಕೊಡುತ್ತಿರುವರು.

— ಕಾಶಿ ವಿದ್ಯಾಪೀಠದ ೭ನೇ ವರ್ಧಂತಿಯು ಮೊನ್ನೆ ತಾನೆ ಜರಗಿತು. ಭಗವಾನ್ ದಾಸರೇ ಅಧ್ಯಕ್ಷರು. ವಿದ್ಯಾರ್ಥಿಗಳಿಂದ ನಿರ್ಮಿಸಲ್ಪಟ್ಟ ಸಾಮಗ್ರಿಗಳ ಪ್ರದರ್ಶನವೂ ಜರಗಿತು.

— ಮುಂಬಾಯಿ ಹ್ಯಾಕೋರ್ಟಿನ ಕ್ರಿಮಿನಲ್ ಸೆಶ್ಶನ್ ಜಡ್ಜರು ಒಬ್ಬ ರಸ್ಯದವನಿಗೆ ೯ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿರುವರು. ಅಪರಾಧಿತನು ತನ್ನ ಸಹೋದರನ ಧನವನ್ನೂ ಆಭರಣವನ್ನೂ ಕದ್ದಿದ್ದನಂತೆ.

— ಮುಂಬಾಯಿಗೆ ಅಮೇರಿಕದಿಂದ ೩೫೦ ಜನ ಸಂಚಾರಿಗಳು ಬಂದಿರುವರು. ಇವರಲ್ಲಿ ಹೆಚ್ಚಿನವರು ಪೆನ್‌ಶನು ಹೊಂದಿದ ಆಫೀಸರರು.

— ಮಿಸ್ ಮೆಯೋಳ 'ಮದರ ಇಂಡಿಯಾ' ಪುಸ್ತಕವನ್ನು ಖಂಡಿಸಿ ಲಾಲಾಲಜಪತರೈಯವರು ಒಂದು ಪುಸ್ತಕವನ್ನು ಬರೆದಿರುವರು. ಇದರ ಹೆಸರು "ಅನ್‌ಹೆಪ್ಪಿ ಇಂಡಿಯಾ" ಎಂದು. ಇದು ಬೇಗನೆ ಅಚ್ಚಾಗಿ ಹೊರಬೀಳುವದು. ಅಮೇರಿಕ ಮತ್ತು ಯುನ್ಯಾಟಿಡ್ ಕಿಂಗ್‌ಡಮ್‌ಗಳಲ್ಲಿ ಇದನ್ನು ಒಂದೇ ಸಮಯದಲ್ಲಿ ಪ್ರಕಟಿಸಲೋಸುಗ ವ್ಯವಸ್ಥೆಗಳು ನಡೆದಿರುತ್ತವೆ.

ದಕ್ಷಿಣ ಕನ್ನಡ

ಮಂಗಳೂರು: — ಇದೇ ತಿಂಗಳಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಗೇಸ್ ದೀಪಗಳನ್ನು ಪ್ರತಿ ದಿನ ಸಾಯಂಕಾಲ ಘಂಟೆ ೬ರಿಂದ ೧೨ರ ವರೆಗೂ, ಸ್ಮಶಾನ ದೀಪ, ಬೇಂಕ್ ದೀಪ, ಮತ್ತು ಅಪಾಯ ಸೂಚಕ ದೀಪಗಳನ್ನು ಪ್ರತಿ ದಿನ ಸಾಯಂಕಾಲ ಘಂಟೆ ೬ರಿಂದ ಬೆಳಿಗ್ಗೆ ಘಂಟೆ ೬ರ ವರೆಗೂ, ಸಾಮಾನ್ಯ ದೀಪಗಳನ್ನು ತಾರೀಕು ೧೯, ೨೦, ೨೧, ೨೨, ೨೩, ಈ ದಿನಗಳಲ್ಲಿ ಇಡೀ ರಾತ್ರೆಯೂ, ಉಳಿದ ದಿವಸಗಳಲ್ಲಿ ಸಮಯಾನುಸಾರವೂ ಉರಿಸಲಾಗುವದು.

ಇದೇ ತಿಂಗಳ ತಾರೀಕು ೧೨ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಕೊಡಿಯಾಲು ಬೈಲಿನಲ್ಲಿ ಜಿಲ್ಲಾ ಕೊಂಗ್ರೆಸು ಕಮಿಟಿಯ ಕಚೇರಿಯ ಮಾಳಿಗೆಯಲ್ಲಿರುವ ನಮ್ಮ ಕಚೇರಿಯಲ್ಲಿ ಜರಗಲಿಕ್ಕಿದ್ದ ಮಂಗಳೂರು ತಾಲೂಕು ಕೊಂಗ್ರೆಸು ಕಮಿಟಿಯ ಮಹಾಸಭೆಯು ಕನಿಷ್ಠ ಹಾಜರಿಯಿಲ್ಲವಾದ್ದರಿಂದ ಜರಗಲಿಲ್ಲ. ಈಗ ಊರ್ಜಿತದಲ್ಲಿರುವ ನಿಯಮ ಪ್ರಕಾರ ಸದರಿ ಸಭೆಯು ಇದೇ ತಾ. ೧೯ನೇ ಆದಿತ್ಯವಾರ ಸದರಿ ಸಮಯ ಸದರಿ ಸ್ಥಳದಲ್ಲಿ ಜರಗುವದು. ಕೈನೂಲಿನಿಂದ ಹಾಗೂ ಕೈಮಗ್ಗದಿಂದ ಮಾಡಿದ ಖಾದಿಯನ್ನು ಕಾಯಂ ಆಗಿ ಧರಿಸುವ ಸದಸ್ಯರೆಲ್ಲರೂ ಬಂದು ಸದರಿ ಸಭೆಯಲ್ಲಿ ಭಾಗಿಯಾಗಬೇಕಾಗಿ ವಿನಂತಿ ಇದೆಯೆಂದು ಕಾರ್ಯದರ್ಶಿಗಳಾದ ಅರೆಬೈಲು ಭೋಜರಾಯರು ತಿಳಿಸುತ್ತಾರೆ.

ಮಂಗಳೂರು ತಾಲೂಕು ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು, ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಇದೇ ತಿಂಗಳ ೨೫ನೇ ತಾರೀಕು ಶನಿವಾರ ದಿನ ಘಂಟೆ ೩ಕ್ಕೆ ಜರಗುವದು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು ಇದೇ ತಿಂಗಳ ತಾರೀಕು ೧೮ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಕೂಡುವದು.

ಇದೇ ತಿಂಗಳ ತಾ, ೫ನೇ ದಿನ ಪೆಂಟಲೆಂಡ ಪೇಟೆಯಲ್ಲಿ ನವೀನವಾಗಿ ಕಟ್ಟಿಸಿದ ಸೂಟರ್ ವಿದ್ಯಾರ್ಥಿ ಭವನದಲ್ಲಿ ಶ್ರೀಯುತ ಎ, ವರ್ಗಿಸ್ ಬಿ, ಎ, ಬಿ, ಎಲ್, ರವರ ಅಧ್ಯಕ್ಷತೆಯಲ್ಲಿ ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯ ಚತುರ್ಥ ವಾರ್ಷಿಕೋತ್ಸವವು ಜರಗಿತು. ಮೊದಲಿನ ದಿನ ೮ ಘಂಟೆಗೆ ಸಮಿತಿಯ ಸದಸ್ಯರು ಮತ್ತು ಬೋಳೂರು ಸ್ಕೌಟರು ಶ್ರೀ ಚಾಮುಂಡಿ ವಿಲಾಸದಲ್ಲಿ ದೇವಾರಾಧನೆಗೈದು ನಾರಾಯಣ ಸ್ವಾಮಿಯವರ ಪಟಸಮೇತ ಗೋಕರ್ಣನಾಥ ದೇವಾಲಯವನ್ನು ಸಂದರ್ಶಿಸಿ ಸೂಟರ್ ವಿದ್ಯಾರ್ಥಿ ಭವನದಲ್ಲಿ ಸ್ವಾಮಿಯವರ ಪಟವನ್ನು ಸ್ಥಾಪಿಸಿದರು. ಮರುದಿನ ಘಂಟೆ ೪ಕ್ಕೆ ವಿದ್ಯಾರ್ಥಿ ಭವನದಲ್ಲಿ ಆಮಂತ್ರಣದ ಮೇರೆಗೆ ಜಾತಿ ಪರಜಾತಿಗಳ ಪ್ರಮುಖ ಗೃಹಸ್ಥರು ಸೇರಿದ್ದರು. ಸಮಿತಿಯ ಅಧ್ಯಕ್ಷರ ಅಪೇಕ್ಷೆಯ ಮೇರೆಗೆ ಅಧ್ಯಕ್ಷರು ಆಸನವನ್ನು ಅಲಂಕರಿಸಿದ್ದರು. ರಾ। ಯು. ಸೋಮಯ್ಯ ಬಿ. ಎ. ಯವರು ಪರಊರಿನಿಂದ ಬಂದ ಶ್ಲಾಘನಾ ಪತ್ರವನ್ನು ಓದಿದರು. ಸಮಿತಿಯ ಕಾರ್ಯದರ್ಶಿಯವರು ಗತವರ್ಷದ ವರದಿಯನ್ನು ಓದಿದರು. ಇಂಪೀರಿಯಲ್ ಬೇಂಕಿನ ಏಜಂಟರಾದ ರಾವ್ ಬಹದ್ದೂರ್ ಯು. ಆನಂದ ರಾಯರು ಭವನದ ಮುಂದಿನ ಏಳಿಗೆಯ ಉಪಾಯಗಳನ್ನು ಕುರಿತು ಚಲೋ ಭಾಷಣವನ್ನಿತ್ತರು. ಬಿಲ್ಲವ ಸಮಾಜದವರು ಮುಂದಕ್ಕೆ ಬರಲು ಚೆನ್ನಾಗಿ ಪ್ರಯತ್ನಿಸಬೇಕೆಂದೂ ಈ ಭವನದಲ್ಲಿ ವಿದ್ಯಾರ್ಥಿಗಳು ಸೇರಿ ವಿದ್ಯಾರ್ಜನೆ ಮಾಡಿದರೆ ಇದಕ್ಕಾಗಿ ಪಟ್ಟ ಕಷ್ಟಗಳು ಸಾರ್ಥಕವಾಗುವದೆಂದೂ ಅಧ್ಯಕ್ಷರು ಭಾಷಣವನ್ನಿತ್ತರು,

ಸಮಿತಿಯ ಕಡೆಯಿಂದ ಫಲಾಹಾರವಾಯಿತು, ಕೊನೆಗೆ ಮಂಗಲವನ್ನು ಹಾಡಿ ಸಭಾ ಮುಕ್ತಾಯವಾಯಿತು.

ತಾರೀಕು ೧೧—೨—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೩೪ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೧, ಉದರ ರೋಗದಿಂದ ೫, ಶ್ವಾಸಕೋಶದ ರೋಗದಿಂದ ೮, ಇತರ ಎಲ್ಲಾ ಕಾರಣಗಳಿಂದ ೧೯. ಜನ ಸಂಖ್ಯೆಯು ಮಿಲೆಗೆ ಸರಾಸರಿ ೩೪-೬ರಂತೆ.

ಮದರಾಸಿನ ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಸಭೆಯ ಮೆನೇಜಿಂಗ್ ಕಮಿಟಿಯವರ ವಿಶೇಷ ಸಭೆಯು ೧೧ನೇ ಶನಿವಾರ ದಿನ ಮೆಸ್ಸರ್ಸ್ ವಿ.ಆರ್. ಕಾಮತ್ ಎಂಡ್ ಕಂಪೆನಿಯವರ ವಠಾರದಲ್ಲಿ ಆಯಿತು. ಮಂಗಳೂರಿನಲ್ಲಿ ಮೊನ್ನೆ ತಾನೆ ಕುದ್ಮುಲ್ ರಂಗರಾಯರು ಮೃತಪಟ್ಟುದಕ್ಕಾಗಿ ತಮಗಾದ ದುಃಖವನ್ನು ಸೂಚಿಸಿದರು. ಮೃತರು ಪತಿತಜನೋದ್ಧರಣೆಗಾಗಿ ಮಾಡಿದ ಸಾಹಸವನ್ನು, ಅವರ ಸಮಾಜಸೇವೆಯನ್ನು ಕುರಿತು ಭಾಷಣಗಳಾದವು. ಕೊನೆಗೆ, ಅವರ ದುಃಖಿಕುಟುಂಬಕ್ಕೆ ರಾ. ದಿವಾನ್ ಬಹದೂರ್ ನಯಂಪಳ್ಳಿ ಸುಬ್ಬರಾಯರ ಮುಖೇನ ತಮಗಾದ ದುಃಖವನ್ನು ಸೂಚಿಸಬೇಕಾಗಿ ಮಂಜೂರಾಯಿತು.

ಇಲ್ಲಿಯ ಸುಪ್ರಸಿದ್ಧ ಪಂಚಾಂಗಕರ್ತರಾದ ಪಂಡಿತ ಮಂಗಳೂರು ನಾರಾಯಣಾಚಾರ್ಯರು ಈ ದಿನ ಬೆಳಿಗ್ಗೆ ಘಂಟೆ ೭ಕ್ಕೆ ದಿವಂಗತರಾದರೆಂದು ತಿಳಿಸಲು ತುಂಬಾ ದುಃಖಪಡುತ್ತೇವೆ.

ಕೆನರಾ ಹೈಸ್ಕೂಲಿಗೆ ಇನ್ನೊಂದು ಒಂದು ಲಕ್ಷದ ಸೋಡ್ತಿಯನ್ನು ಮಾಡುವರೆ ಜಿಲ್ಲಾ ಕಲೆಕ್ಟರರವರು ಅನುಮತಿಯನ್ನು ದಯಪಾಲಿಸಿದ್ದಾರಾಗಿ ನಾವು ತಿಳಿಯುತ್ತೇವೆ.

ಪಂಜಿಕಲ್ಲು: — ಬಂಟವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಪಂಜಿಕಲ್ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪಂಜಿಕಲ್ಲು ಗ್ರಾಮದ ಪಟೇಲರಾದ ರಾ। ಆದಿರಾಜರವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಜಿಕಲ್ಲು ಬೋರ್ಡು ಶಾಲಾ ಮಕ್ಕಳು ದೇವರ ಪ್ರಾರ್ಥನೆಯನ್ನು ಮಾಡಿದರು. ಅಸಿಸ್ಟಾಂಟ ಸೆಕ್ರೆಟರಿಯವರಾದ ಬಿ. ಶ್ರೀನಿವಾಸ ಪೈಗಳು ಗತಮೀಟಿಂಗಿನ ರಿಪೋರ್ಟನ್ನು ಓದಿದರು, ಸಂಘದ ಮಹಾಸಭೆಯ ವಿಷಯ ಆಲೋಚಿಸುವುದಕ್ಕಾಗಿ ಬರುವ ಮಾರ್ಚಿ ೧೦ನೇ ತಾರೀಕಿನಲ್ಲಿ ಬಂಟವಾಳ ಎಸ್. ವಿ. ಎಸ್. ಫ್ರೀ ಎಲಿಮೆಂಟರಿ ಶಾಲೆಯಲ್ಲಿ ಸಭೆಯನ್ನು ಜರಗಿಸಬೇಕಾಗಿಯೂ ಮಹಾಸಭೆಯ ಖರ್ಚಿನ ಬಗ್ಗೆ ಸಂಘಕ್ಕೆ ಸೇರಿದ ಪ್ರತಿ ಒಬ್ಬ ಉಪಾಧ್ಯಾಯನು ೮ ಆಣೆಯ ಪ್ರಕಾರ ವಂತಿಗೆಯನ್ನು ಅದೇ ಸಭೆಯ ದಿನ ತಪ್ಪದೆ ತೆರಬೇಕಾಗಿಯೂ ನಿರ್ಣಯಿಸಲಾಯಿತು.

ಅದೇ ಮಹಾಸಭೆಯ ಸಮಯ ಜರಗಿಸುವ ವಸ್ತುಪ್ರದರ್ಶನದ ಕುರಿತು ಸಂಘಕ್ಕೆ ಸೇರಿದ ಪ್ರತಿ ಒಬ್ಬ ಉಪಾಧ್ಯಾಯರೂ ಎಲಿಮೆಂಟರಿ ಶಾಲಾ ಪಾಠಗಳಿಗೆ ಬೇಕಾಗುವ ತರತರದ ವಸ್ತುಗಳನ್ನು ತಯಾರಿಸಿ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು.

ನಂತರ ಸಿದ್ಧಕಟ್ಟೆ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಎಲ್. ನೊರೊಂಞಾರವರು ಪುಷ್ಪದ ಭಾಗಗಳ ವಿಷಯ ಒಂದು ಪಾಠವನ್ನು ಕೊಟ್ಟರು. ನಂತರ ಹಳೆ ಕ್ರಮದ ಪ್ರಕಾರ ಪಾಠ ಕಲಿಸುವುದು ಉತ್ತಮವೋ ಹೊಸ ಕ್ರಮದ ಪ್ರಕಾರ ಪಾಠ ಕಲಿಸಬೇಕೊ ಎಂಬುದರ ವಿಷಯ ಒಂದು ಚರ್ಚೆಯು ನಡೆಯಿತು,

ಮುಂದಿನ ಸಭೆಯ ಸಮಯ ೪ನೇ ವರ್ಷ ಮಕ್ಕಳಿಗೆ ಆರೋಗ್ಯ ಶಾಸ್ತ್ರದ ವಿಷಯ ಮೊಡಂಕಾಪು ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ. ತಿಮ್ಮಪ್ಪಯ್ಯನವರು ಪಾಠ ಕೊಡಬೇಕೆಂದು ನಿರ್ಣಯಿಸಲಾಯಿತು. ಅಧ್ಯಕ್ಷರ ಭಾಷಣ ಧನ್ಯವಾದಗಳು, ಫಲಾಹಾರ ಮುಂತಾದ ಸತ್ಕಾರಗಳು ನಡೆದು ರಾಜಗೀತ ಹಾಡಿ ಸಭೆಯು ಮುಕ್ತಾಯವಾಯಿತು.

ಪಾಣೆಮಂಗಳೂರು: — ತಾಲೂಕು ಬೋರ್ಡು ಪ್ರೆಸಿಡೆಂಟರ, ಡಿಪ್ಯುಟಿ ಇನ್ಸಪೆಕ್ಟರ ಮತ್ತು ಹೆಲ್ತ ಇನ್ಸಪೆಕ್ಟರರ ಹುಕುಂ ಮೇರೆಗೆ ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಮಾಪಿಳ್ಳಾ ಬೋರ್ಡು ಶಾಲೆಯವರೂ ಬೋರ್ಡು ಹುಡುಗಿಯರ ಶಾಲೆಯವರೂ ೧೫ನೇ ತಾರೀಕಿನ ದಿವಸ ಆರೋಗ್ಯವಾರವನ್ನು ವಿಜೃಂಭಣೆಯಿಂದ ಆಚರಿಸಿದರು. ಹುಡುಗಿಯರ ಶಾಲೆಯನ್ನು ಬಹಳ ಅಂದವಾಗಿ ಅಲಂಕರಿಸಿದ್ದರು.

ಧ್ವಜ ಪತಾಕೆಗಳನ್ನು ಹಿಡಿದು ಮಾಪಿಳ್ಳಾ ಶಾಲೆಯ ಮಕ್ಕಳು ಮೆರವಣಿಗೆಯಾಗಿ ಹುಡುಗಿಯರ ಶಾಲೆಗೆ ಬಂದರು. ಅನಂತರ ಹುಡುಗರ ಪಂದ್ಯಾಟಗಳು ನಡೆದವು.

ಈ ಸಮಾರಂಭಕ್ಕೆ ಪೇಟೆಯ ಮಹನೀಯರು, ಮಹಿಳೆಯವರೂ ಮಕ್ಕಳೂ ಕೂಡಿ ಬಂದಿದ್ದರು. ಶಾಲೆಯು ಜನ ಸಮೂಹದಿಂದ ತುಂಬಿತ್ತು. ಸಭೆಗೆ ತಾಲೂಕು ಬೋರ್ಡು ಮೆಂಬರರಾದ ಬಿ. ವೆಂಕಟ್ರಾಯ ಪ್ರಭುಗಳು ಬಂದಿದ್ದರು. ರಾ। ಪಾಣೆಮಂಗಳೂರು ವಿಟ್ಟ ಪೈಗಳವರನ್ನು ಅಧ್ಯಕ್ಷರಾಗಿ ಚುನಾಯಿಸಲಾಯಿತು. ನಂತರ ಮಕ್ಕಳು ದೇವರ ಪ್ರಾರ್ಥನೆಯನ್ನು ಮಾಡಿದರು, ಆರೋಗ್ಯ ಸಮ್ಮಂಧ ಭಾಷಣಗಳಾದವು. ಅನಂತರ ಹುಡುಗಿಯರ ಶಾಲೆಯ ಹುಡುಗಿಯರು ಕೋಲೆರಾ ಮತ್ತು ಸಿಡುಬು ರೋಗ ಸಮ್ಮಂಧವಾದ ಒಂದು ನಾಟಕವನ್ನು ಆಡಿ ಜನರನ್ನು ಸಂತೋಷಗೊಳಿಸಿದರು. ನಟನೆಯು ಉತ್ಕೃಷ್ಟ ರೀತಿಯಲ್ಲಿತ್ತು. ಆರೋಗ್ಯದ ವಿಷಯ ಒಂದು ಹಾಡನ್ನು ಹಾಡಿದರು. ಕೋಲಾಟವಾಯಿತು,

ನಂತರ ಹುಡುಗರಿಗೂ ಹುಡುಗಿಯರಿಗೂ ಇನಾಮುಗಳು ಹಂಚಲಾದವು. ಈ ಆರೋಗ್ಯವಾರವನ್ನು ಆಚರಿಸಲಿಕ್ಕೆ ಧನಸಹಾಯ ಮಾಡಿದ ಊರಿನ ಮಹನೀಯರಿಗೂ ಅಧ್ಯಕ್ಷಸ್ಥಾನವನ್ನು ವಹಿಸಿದ ರಾ। ವಿಟ್ಟ ಪೈಗಳಿಗೂ, ಮಹನೀಯರಿಗೂ ಮಹಿಳೆಯರಿಗೂ ತಾಲೂಕು ಬೋರ್ಡು ಮೆಂಬರರಾದ ವೆಂಕಟ್ರಾಯ ಪ್ರಭುಗಳಿಗೂ ಧನ್ಯವಾದಗಳನ್ನು ಕೊಟ್ಟ ಮೇಲೆ ರಾಜಗೀತ ಹಾಡಿ ಸಭೆಯು ಸುಮಾರು ೭ ಗಂಟೆಗೆ ಅಗಲಿತು.

ಇಲ್ಲಿಯ ಗಾಡಿ ಚೌಕವು ಏಲಂ ಆಯಿತು. ಆದರೆ ಕಳೆದ ವರ್ಷದಷ್ಟು ಹಣವು ಈ ವರುಷ ದೊರಿಯಲಿಲ್ಲ.

ಬಂಟವಾಳ: — ಇಲ್ಲಿಯ ಗಾಡಿ ಚೌಕವು ೬೦೦ ರೂಪಾಯಿ ಚಿಲ್ಲರೆಗೆ ಏಲಂ ಆಯಿತು. ಕಳೆದ ವರುಷ ೯೦೦ ರೂ.ಗೆ ಏಲಂ ಆಗಿತ್ತು.

ಕಳೆದ ವರ್ಷ ಇನ್ನೂರು ರೂಪಾಯಿಗೆ ಏಲಂ ಆದ ಮೀನು ಮತ್ತು ಕಾಯಿಪಲ್ಯದ ಮಾರ್ಕೆಟು ಈ ವರುಷ ೧೦೦ ಚಿಲ್ಲರೆ ರೂಪಾಯಿಗೆ ಏಲಂ ಆಯಿತು.

ಇಲ್ಲಿಯ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನದ ರಥೋತ್ಸವವು ಇದೇ ತಿಂಗಳ ತಾರೀಕು ೨೩ನೇಗೆ ಧ್ವಜಾರೋಹಣವಾಗಿ, ಆದಿತ್ಯವಾರ ಮೃಗಬೇಟೆ, ಸೋಮವಾರ ರಥೋತ್ಸವ ಮಂಗಳವಾರ ಅವಭೃತವಾಗುವುದು.

ಕಾರಂಜೆ: — ಇಲ್ಲಿಯ ಉತ್ಸವವು ಇದೇ ತಿಂಗಳ ತಾರೀಕು ೧೯ನೇ ಸೋಮವಾರ ರಾತ್ರೆ ಬಹಳ ವಿಶೇಷ ರೀತಿಯಲ್ಲಿ ನಡಿಯುವುದು.

ಉಡುಪಿ: — ಬಾಲ್ಯದಲ್ಲೆ ವಿರಕ್ತರಾಗಿ ಬಾಲಾಶ್ರಮ ಪಡೆದು ಧಾರ್ಮಿಕ ಗುರುಗಳೆನಿಸಿರುವ ಶ್ರೀ ಪಾದಂಗಳವರುಗಳು ಖಾಸಗಿ ಮತ್ತು ಲೌಕಿಕ ಸಮ್ಮಂಧದ ವ್ಯಾಜ್ಯಗಳನ್ನು ಸಾರ್ವಜನಿಕ ವಿಧಿಗಳಲ್ಲಿ ಸಹ ತಂದುಕೊಂಡು ಪರಸ್ಪರ ಕಲಹದಲ್ಲಿ ಪ್ರವೃತ್ತರಾಗಿದ್ದರೂ ಕಳದ ಮಧ್ವನವಮಿ ಉತ್ಸವದ ದಿನ ಇವರೆಲ್ಲರಲ್ಲಿಯೂ ಪರಸ್ಪರ ತಿಳಿವಳಿಕೆಯುಂಟಾದುದರ ಸುಪರಿಣಾಮವಾಗಿ. ಸರ್ವರೂ ಒಂದಾಗಿ ಸೇರಿ ನಡೆದರೆಂದು ತಿಳಿಸಲು ಅತ್ಯಾನಂದವಾಗುತ್ತದೆ. ಆದರೆ ಶ್ರೀ ಕೃಷ್ಣನಿಗೆ ಧನ್ಯವಾದಗಳನ್ನು ವಾಗಲೇ ಪಲ್ಲಟಪ್ರದರ್ಶನವಾಗುವುದೆಂದು ಯಾರಿಗೆ ಗೊತ್ತು!

೯ನೇ ಪೇಜಿಗೆ ಮುಂದುವರಿಸಿಯದೆ.

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

Tel: Conveyance.

... ಚಿಕ್ಕಮಗಳೂರು ... ಮಂಗಳೂರು.

(1) ... (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗೆ ... ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ... ನಕರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ... ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ... ಬಸ್ಸುಗಳನ್ನು ಏರ್ಪಡಿಸಿರುತ್ತೆ.

... ಸ್ಥಾನಗಳ ವಿವರ.

(2) ... ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧ ... 11-45ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, ... ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ... ಕನ್ನನೂರು ಪ್ರಾಂತಗಳಿಗೂ ಆಯಾ ದಿನವೇ ...

... ಇತರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ ... ಮೈಸೂರು, ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ... ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ... ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ... ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್, ಗೋವಾ, ಲೋಂಡ, ...

... ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ... ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ...

... ಅನುಕೂಲತೆ.

(1) ... ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ... ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ...

... ಬರೆದುಕೊಳ್ಳಬಹುದು.

... ಕೆ. ಸೂರಪ್ಪ ಸೆಟ್ಟಿ,

ಪ್ರೊ ಪ್ರೈ ಟ ರ್ಸ್.

THE CANARA PUBLIC CONVEYANCE CO., LTD, MANGALORE.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ... ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳ ... ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ... ವಾರ್ಗವಾಗಿಯೂ ... ಒಂದೇ ಶಿಲೆಕಲ್ಲಿನಿಂದ ... ನಿಲಿಸಿರುವ,

ಕಾ ರ ಕ ಳ ಗೋ ಮ ಟೇ ಶ್ವ ರ ನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ... ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ... ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ... ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ... ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ... ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ... ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ... ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ಇಲ್ಲಿಯ 'ಟೆಂಪರ್‌ ಕಮಿಟಿ'ಗೆ ಅಂದರೆ (ಉಡುಪಿ, ಕುಂದಾಪುರ, ಕಾರ್ಕಳ) ರಿಟಾಯರ್ಡ್ ಇಂಜಿನಿಯರರಾದ ಶ್ರೀ ವೆಂಕಟ್ರಾಯರು ಅಧ್ಯಕ್ಷರಾಗಿ—ಶ್ರೀ ಚಾರ್ಕಳ ನಾಗಣ್ಣ ಹೆಗ್ಡೇರು ಉಪಾಧ್ಯಕ್ಷರಾಗಿ—ಚುನಾಯಿಸಲ್ಪಟ್ಟಿರುತ್ತಾರೆ.

ಕಳೆದ ತಾ. ೨೮ಕ್ಕೆ ಇಲ್ಲಿಯ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ—ವಕೀಲ್ ಶ್ರೀ ಪಾಂಡುರಂಗನಾಯಕರ ಅಧ್ಯಕ್ಷತೆಯಲ್ಲಿ—'ಪರದೇಶಗಳಲ್ಲಿ ನನಗೆ ದೊರೆತ ಅನುಭವಗಳು' ಎಂಬುವದರ ಕುರಿತು ತನ್ನ ಶಿಕ್ಷಣವನ್ನು ಮುಗಿಸಿ ಇತ್ತೀಚೆಗೆ ಇಂಗ್ಲೆಂಡಿನಿಂದ ಹಿಂದಿರುಗಿ ಬಂದ ಕಾರ್ಕಳದ ಸಯ್ಯದ ನುರುಲ್ಲಾ ಸಾಹೇಬ, ಎಮ್. ಇ. ಡಿ. (ಲೀಡ್ಸ್). ಬಾರ್, ಎಟ್. ಲೊ—ಇವರು ಸ್ಫೂರ್ತಿಪರ ಭಾಷಣವಿತ್ತರು.

ಶಿರಹಟ್ಟಿ ನಾಟಕ ಮಂಡಳಿಯವರು ತಮ್ಮ ಪ್ರದರ್ಶನಗಳನ್ನು ತೋರಿಸುತ್ತಿರುವರು. ಹಿಂದುಸ್ಥಾನಿ ಸೇವಾದಲದ ವ್ಯಾಯಾಮ ಮಂದಿರದ ಸಹಾಯಾರ್ಥವಾಗಿ ಒಂದು, ಬಂಟರ ಯಾನೆ ನಾಡವರ ಉಪವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಒಂದು, ಸಂಸ್ಕೃತ ಕೊಲೇಜಿನ ಸಹಾಯಾರ್ಥವಾಗಿ ಒಂದು ಹೀಗೆ ಮೂರು 'ಬೆನೆಫಿಟ್ ಪರ್ಫೋರ್ಮೆನ್ಸ್'ಗಳನ್ನು ಪ್ರದರ್ಶಿಸಿದರು. ಮಂಡಳಿಯ ಪ್ರೊಪ್ರೈಟರರಾದ ಶ್ರೀ ವೆಂಕೋಬರಾಯರ ಉದಾರತೆಯು ಪ್ರಶಂಸನೀಯವಿದೆ. ಇವರು ಇನ್ನಲ್ಲಿ ಕೆಲವೇ ಆಟಗಳನ್ನು ಅಭಿನಯಿಸಿ ಇಲ್ಲಿಂದ ತೆರಳಲಿರುವರಂತೆ.

ದಕ್ಷಿಣ ಕನ್ನಡದ ದ್ರಾವಿಡ ಬ್ರಾಹ್ಮಣ ಪರಿಷತ್ತಿನಲ್ಲಿ ನಿರ್ಣಯವಾದಂತೆ ಉಡುಪಿಯಿಂದ ಹೊರಡಲಿರುವ "ಹಿತವಾದಿನೀ" ಎಂಬ ಉತ್ತಮ ತರಗತಿಯ ತಿಳಿಗನ್ನಡದ ಮಾಸಪತ್ರಿಕೆಯು ಹಿಂದೆ "ಸೂಕ್ತಿ" ಸಂಪಾದಕರಾಗಿದ್ದ ಶ್ರೀಮಾನ್ ಎನ್. ರಾಜಗೋಪಾಲಕೃಷ್ಣರಾಯರ ಪ್ರಮುಖ ಸಂಪಾದಕತ್ವವನ್ನೂ, ಶ್ರೀಯುತರುಗಳಾದ ಪು. ಲಕ್ಷ್ಮೀನಾರಾಯಣ ಪುಣಿಂಚತ್ತಾಯರ, ಕೊ. ಶ್ರೀನಿವಾಸರಾಯರ, ಪೇ. ಸೀತಾರಾಮಾಚಾರ್ಯರ ಮತ್ತೂ ಐ. ಶಿವರಾಮಯ್ಯನವರ ಸಹಕಾರವನ್ನೂ ಒಳಕೊಂಡು, ರಿಟಾಯರ್ಡ್ ಎಂಜಿನೀಯರ್ ಶ್ರೀಮಾನ್ ಯು. ವೆಂಕಟರಾಯರ ಕಾರ್ಯದರ್ಶಿತ್ವದೊಡನೆ ಬರುವ ವಿಭವ ಸಂವತ್ಸರದ ಸೌರ ಯುಗಾದಿಗೆ ಸರಿಯಾಗಿ ಪ್ರಕಟವಾಗತೊಡಗುವುದು. ಪರಿಷತ್ತಿನ ಅಂಗವಾಗಿ ಈ ಪತ್ರಿಕೆ ಹೊರಡುವುದಾದರೂ, ಪರಿಷತ್ತಿನ ಉದ್ದೇಶಗಳ ಸಮಯೋಚಿತ ಪ್ರಚಾರದೊಡನೆ ಅವಕ್ಕೆ ವಿರುದ್ಧವಲ್ಲದ ಸರ್ವಸಾಮಾನ್ಯವಾದ ಮತ್ತೂ ಸಾರ್ವಜನಿಕವಾದ ವಿಷಯಗಳಿಗೂ ಇದರಲ್ಲಿ ಬೇಕಾದಷ್ಟು ಅವಕಾಶವು ಕೊಡಲ್ಪಡಬೇಕೆಂದು ನಿಶ್ಚಯಿಸಿರುವುದರಿಂದ ಇದು ಕೇವಲ ಏಕ ಜಾತಿಯ (Sectarian) ದೆಂಬ ಶಂಕೆಗೆ ಆಸ್ಪದವಿಲ್ಲದಂತೆ, ಅವರಿವರೆನ್ನದೆ ಸರ್ವರಿಗೂ ಸಂಗ್ರಹ ಯೋಗ್ಯವಾಗಿರುವುದು. ಉತ್ತಮವಾದ ಹೊಳಪಿನ ದಪ್ಪ ಕಾಗದದ ರಾಯಲ್ ಅಷ್ಟಪತ್ರದ ಆಕೃತಿಯ ಎರಡು ಕಲಮುಗಳ ಪ್ರಕೃತ ೪೦ ಪುಟಗಳನ್ನುಳ್ಳ ಈ ಮಾಸಪತ್ರಿಕೆಯ ವಾರ್ಷಿಕ ಚಂದಾಪ್ರಮ್ಯವು ಅಂಚೆಯ ವೆಚ್ಚದೊಡನೆ ಬರೀ ರೂ ೨-೮-೦; ಬಿಡಿ ಸಂಚಿಕೆಗೆ ನಾಲ್ಕಾಣೆ. ಜಾಹಿರಾತುಗಳ ದರವು ಪೂರ್ಣ ಪುಟಕ್ಕೆ, ಅರ್ಧ ಪುಟ ಅಥವಾ ೧ ಕಲಮಿಗೆ, ಕಾಲು ಪುಟ ಅಥವಾ ಅರ್ಧ ಕಲಮಿಗೆ ಮತ್ತು ೧/೮ ಪುಟ ಅಥವಾ ಕಾಲು ಕಲಮಿಗೆ ಕ್ರಮವಂತೆ ವರ್ಷಕ್ಕೆ ರೂ. ೪೦-೦-೦, ೪೨-೦-೦, ೨೨-೮-೦ ಮತ್ತು ೧೨॥ ಆಗಿರುವುದು. ಪ್ರಕಟನಕ್ಕಾಗಿ ಲೇಖನಗಳನ್ನು ಮೇಲಿನ ಸಂಪಾದಕ ವರ್ಗದಲ್ಲಿ ಯಾರಿಗೂ ಕಳುಹಬಹುದು. ಚಂದಾಪ್ರಮ್ಯದ ಮತ್ತು ಜಾಹಿರಾತುಗಳ ಕುರಿತು ಉಡುಪಿಯ ಶ್ರೀಮಾನ್ ಯು. ವೆಂಕಟರಾಯರಿಗೆ ಬರೆದುಕೊಳ್ಳಬೇಕು.

ಕಾಸರಗೋಡು:— ಇದೇ ತಾ. ೫ನೇ ಆದಿತ್ಯವಾರ ಸಾಯಂಕಾಲ ಇಲ್ಲಿಯ ಡಿ. ಮುನ್ಸಿಫರಾದ ರಾ। ಯಂ. ಎನ್. ಬಂಗೇರರ ಅಧ್ಯಕ್ಷತೆಯಲ್ಲಿ ಕಾಸರಗೋಡು ಕ್ಲಬ್ಬಿನ ಪ್ರಥಮ ವಾರ್ಷಿಕ ವರ್ಧಂತಿಯು ಜರಗಿತು. ಮೊದಲು ಕಾರ್ಯದರ್ಶಿ ರಾ। ವಕೀಲ ಸುಂದರ ರಾಮಶೆಟ್ಟರು ಗತವರ್ಷದ ವರದಿಯನ್ನು ಓದಿದರು. ಮತ್ತೆ ಆಡಿಟರ್ ರಾ. ವಾಸುದೇವನವರು ತನ್ನ ರಿಪೋರ್ಟನ್ನು ಓದಿದರು. ಆ ವೇಳೆ ಸಭಿಕರ ಅಪೇಕ್ಷೆಯಂತೆ, ಶ್ರೀ ಲಕ್ಷ್ಮೀನಾರಾಯಣ ಪುಣಿಚಿತ್ತಾಯರು ಮಹಾಜನರು ಈ ಕ್ಲಬ್ಬಿನ ಏಳಿಗೆಗಾಗಿ ಹೇಗೆ ಸಹಾಯಮಾಡಬಹುದೆಂಬವನ್ನು ವಿವರಿಸಿ ಮನೋಹರವಾಗಿ ಭಾಷಣ ಮಾಡಿದರು. ರಾ. ವಕೀಲ ನರಸಿಂಹ ನಾಯ್ಕ (ಕ್ಲಬ್ಬಿನ ಅಧ್ಯಕ್ಷ)ರು ತಮ್ಮ ಸೂಚನೆಗಳನ್ನು ತಿಳಿಸಿದ ಮೇಲೆ, ರಾ ರಾಮ ನಂಬ್ಯಾರ್, ಬಿ. ಎ. ಎಲ್. ಟಿ.ಯವರ ಸರಸವಾದ ಭಾಷಣವಾಯಿತು. ಕೊನೆಗೆ ಅಧ್ಯಕ್ಷಮಹಾಶಯರ ಸುಲಲಿತ ಭಾಷಣವಾಯಿತು. ಈ ಸಭೆಗೆ ತಹಶಿಲ್ದಾರ್, ಮೆಜಿಸ್ಟ್ರೇಟ್, ಸರ್ಕಲ್ ಇನಸ್ಪೆಕ್ಟರ್, ಮೊದಲಾದ ಊರ ಸರಕಾರಿ ಉದ್ಯೋಗಸ್ಥ ಪ್ರಮುಖರಲ್ಲದೆ, ಹಲವು ಜಮೀನ್‌ದಾರರೂ, ವಕೀಲರೂ, ವರ್ತಕರೂ, ವಿದ್ವಜ್ಜನರೂ ಚಿತ್ತೈಸಿದ್ದರು. ಉಪಹಾರಾ ನಂತರ ಮುಂದಿನ ವರ್ಷಕ್ಕೆ ರಾ. ವಕೀಲ ನರಸಿಂಹನಾಯಕರು (ಅಧ್ಯಕ್ಷ)ರು ರಾ. ಶೆಣ್ಣಾಡ್, ಎಮ್. ಎಲ್. ಸಿ.ಯವರು (ಉಪಾಧ್ಯಕ್ಷರು) ರಾ. ವಕೀಲ ಸುಂದರ ರಾಮಶೆಟ್ಟರೂ ರಾ. ವಕೀಲ ಚಂದ್ರಶೇಖರ ರಾಯರೂ (ಕಾರ್ಯದರ್ಶಿಗಳು) ಅಲ್ಲದೆ ಒಂದು ಆಡಳಿತ ಸಭೆಯವರನ್ನೂ ಆರಿಸಲಾಯಿತು. ಭಗವದನುಗ್ರಹದಿಂದ ಈ ಕ್ಲಬ್ಬಿಗೆ ಚಿರಾಯುಷ್ಯವಿರಲಿ!

ಅಜೆಕಾರು:— ಕಾರ್ಕಳ ತಾಲೂಕು ಬೋರ್ಡಿನ ಚುನಾವಣೆಯು ಇದೇ ಬರುವ ತಾ. ೧೭—೩—'೨೮ರಲ್ಲು ಅಜೆಕಾರು ಸರ್ಕಲಿಗೆ ಒಳಪಟ್ಟ ಅಜೆಕಾರು, ಬೈಲೂರು, ಮುನಿಯಾಲು ಮತ್ತು ಹೆಬ್ರಿ ಮೊಕ್ಕಾಂಗಳಲ್ಲಿ ಜರಗುವುದು. ಈ ವರ್ಷ ವೇಣೂರು ಸರ್ಕಲು ಎಂಬದಾಗಿ ಹೊಸತಾಗಿ ಮಾಡಿರುವುದರಿಂದ ಅಜೆಕಾರು ಸರ್ಕಲಿಗೆ ಎಂದಿನಂತೆ ಇದ್ದ ನಾಲ್ಕು ಮೆಂಬರುಗಳ ಬದಲಾಗಿ ಮೂರೇ ಮೆಂಬರುಗಳು ಆರಿಸಲ್ಪಡುವರಂತೆ. ಆದ್ದರಿಂದ ಮತದಾರರು ತಮ್ಮ ಮತಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಉತ್ಸಾಹಿಗಳಿಗೆನೇ ಕೊಡಬೇಕಾಗಿ ವಿನಂತಿ.

ವರಂಗ ಶ್ರೀ ಪದ್ಮಾವತೀ ಅಮ್ಮನವರ ಮಠದ ವಾರ್ಷಿಕ ರಥೋತ್ಸವವು ಇದೇ ತಾ ೧೦-೨-೨೮ರಲ್ಲು ಜರಗಿತು. ಜನಸ್ತೋಮವು ಅಷ್ಟೊಂದಿಲ್ಲವಾದರೂ ಮರುದಿವಸ ಆದ ದಶಾವತಾರ ಆಟಕ್ಕೆ ಜನರು ಕಿಕ್ಕಿರಿದು ಬಂದಿದ್ದರು. ಇದೀಗ ಕಾಲ ಮಹಿಮೆ!

ಹೆಬ್ರಿ ಶ್ರೀ ರಾಮ ಪ್ರಸಾದಿಕ ನಾಟಕ ಮಂಡಳಿಯವರು ನೂತನವಾಗಿ ಕಟ್ಟಿಸಿದ ಥಿಯೇಟರಿನಲ್ಲಿ 'ಶ್ರೀ ರಾಮ ಪಟ್ಟಾಭಿಷೇಕ'ವೆಂಬ ನಾಟಕವನ್ನು ತಾ. ೧೮—೨—'೨೮ನೇ ಶನಿವಾರ ಆಡುವರೆಂದು ವದಂತಿ ಇದೆ.

ವಿವಿಧ ವಿಷಯಗಳು.

ಕೊಂಗ್ರೆಸ್ ಕಾರ್ಯಕಾರಿ ಮಂಡಳಿ.

ಕೊಂಗ್ರೆಸ್ ಕಾರ್ಯಕಾರಿ ಮಂಡಳಿಯವರ ಒಂದು ಸಭೆಯು ಡಿಲ್ಲಿಯಲ್ಲಿ ಕಳೆದ ೯ನೇ ತಾರೀಕಿನ ದಿನ ಜರಗಿತು. ಅನೇಕರು ಹಾಜರಿದ್ದರು. ಮಹಾತ್ಮಾಜಿಯವರು ಮಾತ್ರ ಬಂದಿರಲಿಲ್ಲ. ಎಸೆಂಬ್ಲಿಯ ಮತ್ತು ಕೌನ್ಸಿಲಿನ ಕಾಂಗ್ರೆಸ್ ಮೆಂಬರರೂ ಬಂದಿದ್ದರು. ಅವರು ಕಾಂಗ್ರೆಸ್ ಠರಾವುಗಳ ಕುರಿತು ಎಸೆಂಬ್ಲಿ ಕೌನ್ಸಿಲುಗಳಲ್ಲಿ ಯಾವ ಯಾವ ವಿಷಯಗಳ ಕುರಿತು ಚರ್ಚಿಸಬೇಕೆಂಬುದನ್ನು ನಿರ್ಣಯಿಸಲಾಯಿತು. ರಿಸರ್ವ ಬೇಂಕ್ ಮಸೂದೆಯನ್ನು ವಿರೋಧಿಸಬೇಕೆಂದೂ, ಮಧ್ಯಪ್ರಾಂತಗಳ ಕಾಂಗ್ರೆಸ್ ಪಾರ್ಟಿಯವರು ಸೆಟ್ಲ್‌ಮೆಂಟ್ ಮಸೂದೆಯನ್ನೂ, ಮದರಾಸ್ ಕೊಂಗ್ರೆಸ್ ಪಾರ್ಟಿಯವರು ಮಲಬಾರ್ ಟೆನೆನ್ಸಿ ಬಿಲ್ಲನ್ನೂ, ಬಿಹಾರ್ ಕೊಂಗ್ರೆಸ್ ಪಾರ್ಟಿಯವರು ಬಿಹಾರ್ ಟೆನೆನ್ಸಿಬಿಲ್ಲನ್ನೂ ಬೊಂಬೇ ಕೊಂಗ್ರೆಸ್ ಪಾರ್ಟಿಯವರು ಯುನಿವರ್ಸಿಟಿ ಬಿಲ್ಲನ್ನೂ, ಬಂಗಾಳಿನವರು ಮೆಡಿಕಲ್ ಎಕ್ಟ್ ಎಮೆಂಡ್‌ಮೆಂಟ್ ಬಿಲನ್ನೂ ವಿರೋಧಿಸಬಹುದೆಂದಾಯಿತು.

ಸೈಮನ್ ಕಮಿಶನು ಬಂದಿಳಿಯುವ ದಿನ ಎಲ್ಲೆಡೆಗಳಲ್ಲಿಯೂ ಹರತಾಳವನ್ನಾಚರಿಸಿದುದಕ್ಕಾಗಿ ಕಮಿಟಿಯು ಅಭಿನಂದಿಸುತ್ತದೆಂದೂ, ಆದರೆ ಮದರಾಸಿನಲ್ಲಿ ಮಾತ್ರ ಕೆಲವು ಅತಿಕ್ರಮಗಳಾದುದಕ್ಕೆ ದುಃಖಿಸುತ್ತದೆಂದೂ ಮಂಜೂರಾಯಿತು. ಮದರಾಸಿನ ಮೆಜಿಸ್ಟ್ರೇಟರು ೧೪೪ನೇ ಸೆಕ್ಷನಿಗನುಸಾರವಾಗಿ ಕೊಂಗ್ರೆಸ್ ಪಾರ್ಟಿಯವರು ಹರತಾಳಕ್ಕೆ ಯಾವ ಪ್ರೋತ್ಸಾಹವನ್ನೂ ಕೊಡಬಾರದೆಂದು ವಿಧಿಸಿದ ಆಜ್ಞೆಯನ್ನು ಕಮಿಟಿಯು ಖಂಡಿಸಿತು.

§ § § §

ಡ್ರೈವರರಿಲ್ಲದ ರೈಲುವೇ ಗಾಡಿಗಳು!

ವಿಲಾಯತಿಯಲ್ಲಿ ಕಳೆದ ಸೋಮವಾರದಿಂದ ಟಪ್ಪಾಲನ್ನು ಕೊಂಡು ಹೋಗುವುದಕ್ಕಾಗಿ ನೆಲದಡಿಯಲ್ಲಿ ಚಲಿಸುವ ಡ್ರೈವರರಿಲ್ಲದ ರೈಲುವೇ ಗಾಡಿಗಳನ್ನು ಮಾಡಿರುವರು. ಈ ರೈಲುವೇ ಗಾಡಿಗಳು ಘಂಟೆಗೆ ೩೫ ಮೈಲು ಓಡುವವು. ಇಂತಹ ರೈಲುವೇಯನ್ನು ಇನ್ನೆಲ್ಲಿಯೂ ಮಾಡಿಲ್ಲ. ಇದರ ಶೋಧನೆಯನ್ನು ಯುದ್ಧದ ಸಮಯದಲ್ಲಿಯೇ ಮಾಡಿದ್ದರು. ಇದು ಓಡುವ ಸುರಂಗವು ೯ ಅಡಿ ವ್ಯಾಸವುಳ್ಳದ್ದು. ರೈಲುವೇಯಲ್ಲಿ ೩ ಗಾಡಿಗಳು ಮತ್ತು ಎರಡು ಮೋಟರುಗಳು ಇವೆ; ಇದನ್ನು ನಿಲ್ಲಿಸಲಿಕ್ಕೆ ಆಯಾಯ ಸ್ಟೇಶನುಗಳಲ್ಲಿ ಬ್ರೇಕುಗಳಿವೆ. ಇದರಿಂದ ಬಹಳ ಲಾಭವಿದೆ, ಜನರಿಗೆ ಕೊಡುವ ಸಂಬಳ ಉಳಿದಂತಾಯಿತು.

§ § § §

ಮಹಾತ್ಮಾಜಿಯವರ ಆಶ್ರಮ.

ಅಮೇರಿಕದಿಂದ ಹಿಂದೂದೇಶಕ್ಕೆ ಬಂದು ಸಂಚರಿಸುತ್ತಿದ್ದ ಇಬ್ಬರು ಅಮೇರಿಕನ್ ಕನ್ಯೆಯರು ಮಹಾತ್ಮಾಜಿಯವರ ಸಬರಮತಿ ಆಶ್ರಮವನ್ನು ಸಂದರ್ಶಿಸಿ, ತಮ್ಮ ಅಭಿಪ್ರಾಯವನ್ನು ಈ ರೀತಿಯಲ್ಲಿ ವ್ಯಕ್ತಗೊಳಿಸಿರುವರು:—ನಾವು ವಿದ್ಯಾರ್ಥಿಗಳ ಕೆಲಸಗಳಲ್ಲಿ ಅಭಿರುಚಿಯುಳ್ಳವರು. ಅಮೇರಿಕದ ವಿದ್ಯಾರ್ಥಿಗಳೊಂದಿಗೆ ಕೆಲಸಮಾಡಿದವರು. ಅಮೇರಿಕದ ವಿದ್ಯಾರ್ಥಿಗಳು ಮಹಾತ್ಮಾಜಿಯವರನ್ನು ತುಂಬಾ ಹೊಗಳುವರು. ನಮಗೂ ಕೂಡ ಅವರ ಧಾರ್ಮಿಕ ಸೂತ್ರಗಳನ್ನು ಕಂಡು ಸಂತೋಷವಾಯಿತು. ಆಶ್ರಮವಾಸಿಗಳು ನಮ್ಮನ್ನು ಸತ್ಕರಿಸಿ ನಮಗೊಂದು ಪ್ರತ್ಯೇಕ ಕೋಣೆಯನ್ನು ಕೊಟ್ಟಿದ್ದರಿಂದ ನಾವು ಮೂರು ದಿನಗಳ ವರೆಗೆ ಆಶ್ರಮದಲ್ಲಿದ್ದೆವು. ಅದರಿಂದ ಆಶ್ರಮದಲ್ಲಿನ ಚರ್ಯೆಗಳನ್ನು ತಿಳಿಯಲು ನಮಗೆ ಅನುಕೂಲವಾಯಿತು. ಬೆಳಗ್ಗೆ ನಡಿಸಲ್ಪಡುವ ದೇವರ ಪ್ರಾರ್ಥನೆಗೂ ನಾವು ಹೋಗುತ್ತಿದ್ದೆವು. ಹರತಾಳದ ದಿನವೂ ನಾವು ಅಲ್ಲಿದ್ದೆವು. ನಾವು ಸ್ವತಹ ಮಹಾತ್ಮಾಜಿಯವರೊಡನೆಯೂ ಇತರರೊಡನೆಯೂ ಸಂಭಾಷಿಸಿರುವೆವು. ನೈಗೆಯನ್ನೂ, ನೂಲುವದನ್ನೂ ಕಂಡು ಸಂತೋಷವಾಗುವದು. ಆಶ್ರಮವಾಸಿಗಳಲ್ಲಿನ ಪರಸ್ಪರ ಸಹೋದರ ಭಾವವೂ ನಿಸ್ವಾರ್ಥಬುದ್ಧಿಯೂ ನಮ್ಮನ್ನು ಮರುಳುಗೊಳಿಸಿರುವವು. ಹಿಂದೂಸ್ಥಾನದ ಆದರ್ಶಪುರುಷನಾದ ಮಹಾತ್ಮಾಜಿಯವರ ದರ್ಶನ ಲಾಭವು ದೊರಕುವದು ಮಹತ್ಪುಣ್ಯವು.

ಮಿಸ್. ಮೆಯೊಳು ಬರೆದ 'ಮದರ್ ಇಂಡಿಯಾ' ಪುಸ್ತಕವನ್ನು ನಾವು ವಿರೋಧಿಸುವೆವು. ಹಿಂದುಗಳ ಕುರಿತು ಅವಳು ಬರೆದದ್ದು ಅಸಂಬದ್ಧವು. ಅಮೇರಿಕದಲ್ಲಿಯೂ ಕೂಡ ಅವಳ ಪುಸ್ತಕವನ್ನು ನಿಂದಿಸುವವರೇ ಬಹಳ. ಆ ಪುಸ್ತಕದಿಂದ ಹಿಂದೂ-ಅಮೇರಿಕನರೊಳಗೆ ನೆಲಸಿರುವ ಪರಸ್ಪರ ಸ್ನೇಹಭಾವವು ಮಾಯವಾಗುವ ಸಂಭವವಿರುವದರಿಂದ ಅಮೇರಿಕನ್ ವಿದ್ಯಾರ್ಥಿಗಳು ಅದನ್ನು ತಿರಸ್ಕರಿಸುತ್ತಿರುವರು.

§ § § §

ತಂದೆಯನ್ನು ಕೊಂದ ಕೊಲೆಪಾತಕಿಯು!

ತಿನ್ನವೆಲ್ಲಿಯಲ್ಲಿ ರಾಮಸ್ವಾಮಿಯೆಂಬವನೊಬ್ಬನು ತನ್ನ ತಂದೆಯು ತನಗೆ ಮದುವೆಯನ್ನು ಮಾಡಲಿಲ್ಲವೆಂದು ಅವನ ಮೇಲೆ ವಿರೋಧದಿಂದಿದ್ದನು. ಮಗನು ಬಹಳ ಸತ್ಯಾಗ್ರಹಪೂರ್ವಕವಾಗಿ ಕೇಳಿದಾಗಲೂ ಕೂಡ ಸದ್ಯಕ್ಕೆ ತನ್ನೊಡನೆ ಹಣವಿಲ್ಲವೆಂದೂ, ಬರುವ ವರುಷ ಮದುವೆಯನ್ನು ಮಾಡೋಣವೆಂದೂ ತಂದೆಯು ಮಗನಿಗೆ ಸಮಾಧಾನ ಹೇಳುತ್ತಿದ್ದನು. ಇದರಿಂದ ನಿರಾಶೆಹೊಂದಿದ ಮಗನು ಒಂದು ದಿನ ತಂದೆಯು ಮಂಚದ ಮೇಲೆ ಮಲಗಿದ ಸಮಯವನ್ನು ಕಾದು ಒಂದು ಈಟಿಯಿಂದ ಅವನ ಎದೆಯನ್ನು ತಿವಿದು ಓಡಿಹೋದನು. ತಂದೆಯು ಹೇಳುವುದನ್ನೆಲ್ಲಾ ಮುಗಿಸಿ ಪ್ರಾಣಬಿಟ್ಟನು! ಪೋಲೀಸರಿಗೆ ಈ ಸಂಗತಿಯು ತಿಳಿದು ಅವರು ಮಗನನ್ನು ಹಿಡಿದು ಕೈದುಮಾಡಿ ಅವನ ವಿಚಾರಣೆಗೆ ತೊಡಗಿದರು. ತಾನು ತಂದೆಯನ್ನು ಕೊಂದುದಿಲ್ಲವೆಂದು ಮಗನು ಎಷ್ಟು ಹೇಳಿದರೂ ಬಲವಾದ ನಿದರ್ಶನಗಳಿದ್ದುದರಿಂದ ಅವನ ಹೇಳಿಕೆಯು ನಿರರ್ಥಕವಾಯಿತು. ತಂದೆಯನ್ನು ಕೊಂದಾದರೂ ತಾನು ಮದುವೆಯಾಗಿ ಸುಖಪಡುವೆನೆಂಬ ಅಭಿಲಾಷೆಯಿಂದ ತಂದೆಯನ್ನು ಕೊಂದ ಪಾಪದ ಫಲವಾಗಿ ಅವನಿಗೆ ಸೆಶ್ಶನ್ ಜಡ್ಜರು ಫಾಸಿ ಶಿಕ್ಷೆಯನ್ನು ವಿಧಿಸಿದರು.

§ § § §

ಹಿಂದೂ ಸ್ತ್ರೀ ಸಮಾಜ.

ಈ ಸಮಾಜದ ೩ನೇ ವಾರ್ಷಿಕ ಅಧಿವೇಶನವು ಮದ್ರಾಸಿನಲ್ಲಿ ಕಳೆದ ಶನಿವಾರ ಜರಗಿತು. ಎಲ್ಲಾ ಜಾತಿಯ ಸ್ತ್ರೀಯರು ಒಟ್ಟು ೨೦೦ ಮಂದಿ ಬಂದಿದ್ದರು. ಮೊದಲನೆಯದಾಗಿ ಶ್ರೀ. ಸದಾಶಿವ ಅಯ್ಯರರ ಮರಣಕ್ಕಾಗಿ ದುಃಖವನ್ನು ಪ್ರದರ್ಶಿಸಿದರು. ಮೃತರು ಸಮಾಜದ ಉದ್ಧಾರಕ್ಕಾಗಿ ಬಹಳ ಶ್ರಮವನ್ನು ವಹಿಸಿದ್ದರು. ಅನಂತರ ಲಕ್ಷ್ಮೀಪತಿಯವರು ರಿಪೋರ್ಟನ್ನು ಓದಿದರು; ಸಮಾಜವು ಸ್ವಾಮಿ ಶ್ರದ್ಧಾನಂದರವರು ಮದ್ರಾಸಿಗೆ ಬಂದಂದಿನಿಂದ ಪ್ರಾರಂಭವಾಯಿತೆಂದೂ, ಹಣದಡಚಣೆಯು ಇದ್ದುದರಿಂದ ಸರಕಾರದವರು ಈ ಸಮಾಜಕ್ಕೆ ಸಹಾಯ ಮಾಡುವದುತ್ತಮವೆಂದೂ ರಿಪೋರ್ಟಿನಲ್ಲಿ ಬರೆದಿತ್ತು. ದೇವದಾಸಿಯರು ತಮ್ಮ ಕುಲಪದ್ಧತಿಯನ್ನು ಬಿಟ್ಟುಬಿಡುವಂತೆ ಮಾಡಿ, ಅವರಿಗೆ ಒಳ್ಳೇ ವಿದ್ಯಾಭ್ಯಾಸವನ್ನು ಕಲಿಸುವುದು ಈ ಸಮಾಜದ ಮುಖ್ಯ ಧ್ಯೇಯವು. ಪ್ರತಿಯೊಬ್ಬ ಸ್ತ್ರೀಯು ಈ ಸಮಾಜಕ್ಕೆ ಸದಸ್ಯಳಾಗಿ ಕೆಲಸವನ್ನು ಮಾಡಿ ಸ್ತ್ರೀಸಮಾಜವನ್ನು ಉದ್ಧರಿಸಬೇಕೆಂದರು; ಈ ಸಮಾಜದ ಆಶ್ರಯದಲ್ಲಿ ಈಗ ೯ ಜನ ಹುಡುಗಿಯರಿರುವರು; ಇವರಿಗಾಗಿ ಒಂದು ಹೊಸ್ಟೆಲನ್ನು ತೆರೆಯಬೇಕಾದುದರಿಂದ ಬಹಳ ಹಣದ ಅಗತ್ಯವಿದೆ, ಇಂಥಾ ಸಮಾಜಗಳನ್ನು ಬೆಳಕಿಗೆ ತಂದು ಸ್ತ್ರೀಯರು ಇನ್ನಾದರೂ ಮುಂದಕ್ಕೆ ಬರುವಂತೆ ಪುರುಷರ ಸಹಾಯವನ್ನು ಬಯಸಬೇಕೆಂದು ಹೇಳಿ ಅಧ್ಯಕ್ಷರು ಭಾಷಣವಿತ್ತರು. ಮಂಗಲಗೀತವನ್ನು ಹಾಡಿದನಂತರ ಸಭೆಯು ಕೊನೆಗೊಂಡಿತು.

ಸ್ವೀಕಾರ ಮತ್ತು ವಿಮರ್ಶೆ.

ರಂಗಭೂಮಿ—ಮಾಸಪತ್ರಿಕೆ, ವರ್ಷ ೩. ಸಂಪಾದಕರು—ಶ್ರೀ ದ. ಕೃ. ಭಾರದ್ವಾಜ, ವಾರ್ಷಿಕ ಚಂದಾ ರೂ. ೩-೮-೦. ವಿಳಾಸ—ರಂಗಭೂಮಿ ಕಾರ್ಯಾಲಯ, ಮನೆ ವಾರ್ತೆ ಪೇಟೆ, ಬೆಂಗಳೂರು ಸಿಟಿ.

ಕರ್ನಾಟಕ ಪತ್ರಿಕಾ ಪ್ರಕಟನದ ಕಡೆಯಿಂದ ಶ್ರೀ ದ. ಕೃ. ಭಾರದ್ವಾಜರನ್ನು ಬಲವಾಗಿ ಅಭಿನಂದಿಸಬೇಕಾಗಿದೆ. 'ಮಕ್ಕಳ ಪುಸ್ತಕ'ದ ಸೊಗಸನ್ನು ನಾವು ಈ ಮೊದಲೇ ವರ್ಣಿಸಿರುವೆವು. ಈಗ ಅವರ ಈ 'ರಂಗಭೂಮಿ'ಯನ್ನೂ ನಾವು ನಮ್ಮ ಪ್ರಶಂಸೆಯ ಮೂಲಕ ವಾಚಕರ ದೃಷ್ಟಿಗೆ ತರಲು ಬಹಳ ಸಂತೋಷವಾಗುವುದು. ಪ್ರಥಮ ವರ್ಷದ ಪ್ರಥಮ ಸಂಚಿಕೆಗಳ ಸ್ವೀಕಾರದ ಕೃತಜ್ಞತೆಯಿಂದಾಗಲಿ, ಅವುಗಳ ಪ್ರಥಮೋತ್ಸಾಹದ ಉತ್ಕರ್ಷತೆಯ ಮೋಹದಿಂದಾಗಲಿ ಪತ್ರಿಕೆಗಳನ್ನು ಹೊಗಳುವವರು ನಾವಲ್ಲ. 'ರಂಗಭೂಮಿ'ಯು ಮೂರನೇ ವರ್ಷಕ್ಕೆ ಬಂದಿದೆ; ಬಂದಿದೆ ಮಾತ್ರವಲ್ಲ; ಅದರ ಉತ್ಕರ್ಷತೆಯು ಈ ಮೂರನೆಯ ವರ್ಷದಲ್ಲಿ ಯಾದರೂ ಪ್ರಥಮೋತ್ಸಾಹಕ್ಕಿಂತ ಕಡಿಮೆಯಾಗಿಲ್ಲ; ಅರ್ಥಾತ್ ಉತ್ಸಾಹ ನಿರುತ್ಸಾಹಗಳ ತರಂಗೋತ್ಥಾನಪತನಗಳಿಗೆ ಗುರಿಯಾಗದೆ ಒಂದೇ ರೀತಿಯಲ್ಲಿ ಇದು ಪ್ರಕಟವಾಗುವುದೇ ಶ್ರೀ ಭಾರದ್ವಾಜರಿಗೆ ಹೆಚ್ಚು ಶ್ರೇಷ್ಠತೆಯನ್ನು ಕೊಡುವ ವಿಷಯ; ನಾಟಕಕಲೆಗಾಗಿ ಈ ಪತ್ರಿಕೆಯು ಅತ್ಯುಪಯೋಗಕರವಾಗಿದೆ ಎಂಬುದು ಸಂದೇಹವಿಲ್ಲ.

ಮದರಾಸು ಎಲಿಮೆಂಟರಿ ಎಜ್ಯುಕೇಶನ್ ಬಿಲ್.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಸ್ಕೂಲ ಕಮಿಟಿಯ ಕರ್ತವ್ಯಗಳು.

ಸ್ಕೂಲ ಕಮಿಟಿಯ ಕೆಲಸಗಳು (೧) ಕಮಿಟಿಯ ಸರಹದ್ದಿನೊಳಗಿರುವ ಎಲ್ಲಾ ಎಲಿಮೆಂಟರಿ ಶಾಲೆಗಳ ಒಂದು ರಿಜಿಸ್ಟರನ್ನು ಇಡುವುದು. (೨) ಸರಹದ್ದಿನೊಳಗಿರುವ ಶಾಲೆಗೆ ಹೋಗುವ ಪ್ರಾಯದ ಮಕ್ಕಳಿಗಾಗಿ ಇಟ್ಟ ಅಥವಾ ಇನ್ನು ಮುಂದೆ ಇಡಲ್ಪಡಬೇಕಾಗುವ ಶಾಲೆಗಳು ಇರುವ ಸ್ಥಳಗಳ ಪ್ಲೇನುಗಳನ್ನು ಪಠಗಳನ್ನು ತಯಾರಿಸುವುದು. (೩) ಎಲಿಮೆಂಟರಿ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಸ್ಕೀಮುಗಳನ್ನು ತಯಾರಿಸುವುದು. (೪) ಸ್ಥಳೀಕ ಸರಕಾರಗಳ ಕೈಕೆಳಗಿರುವ ಶಾಲೆಗಳ ಆಡಳಿತೆಯನ್ನು ನೋಡುವುದು. (೫) ಈ ಬಿಲ್ಲಿನ ಪ್ರಕಾರ ಸ್ಥಾಪಿಸಿದ ಎಲಿಮೆಂಟರಿ ಎಜ್ಯುಕೇಶನ್ ಫಂಡಿನ ಆಡಳಿತ ನೋಡುವುದು. (೬) ಅದರ ಆಡಳಿತೆಯೊಳಗಿರುವ ಎಲ್ಲಾ ಶಾಲೆಗಳಿಗೆ ಹಣ ಬಟ್ವಾಡೆ ಮಾಡುವುದು. (೭) ಸ್ಥಳೀಕ ಸರಕಾರದವರು ಇದರ ಸ್ವಾಧೀನ ಕೊಡುವ ಖಾಸಗಿ ಶಾಲೆಗಳ ಗ್ರೇಂಟನ್ನು ಆಯಾ ಶಾಲೆಗಳಿಗೆ ಬಟ್ವಾಡೆ ಮಾಡುವುದು. (೮) ತಮ್ಮ ಸರಹದ್ದಿನೊಳಗಿರುವ ಎಲ್ಲಾ ಎಲಿಮೆಂಟರಿ ಟ್ರೈನಿಂಗ್ ಶಾಲೆಗಳ ಒಂದು ರಿಜಿಸ್ಟರನ್ನು ಇಡುವುದು.

ಎಲಿಮೆಂಟರಿ ಎಜ್ಯುಕೇಶನ್ ಫಂಡ್.

ಎಲಿಮೆಂಟರಿ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟ ಫಂಡಿಗೆ ಎಲಿಮೆಂಟರಿ ಎಜ್ಯುಕೇಶನ್ ಫಂಡ್ ಎಂದು ಹೇಳುವರು. ಈ ಫಂಡಿಗೆ ಈ ಆಕ್ಟಿಗೆ ಅನುಸಾರವಾಗಿ ವಿಧಿಸುವ ವಿದ್ಯಾತೆರಿಗೆಯಿಂದ ಸಿಕ್ಕುವ ಹಣ ಸರಕಾರದವರು ಕಮಿಟಿಯ ಸ್ವಾಧೀನ ಇರುವ ಶಾಲೆಗಳ ಆರ್ಟಿಗಾಗಿ ಕೊಡುವ ಹಣ, ಖಾಸಗಿ ಶಾಲೆಗಳಿಗೆ ಗ್ರೇಂಟ ಕೊಡುವುದಕ್ಕಾಗಿ ಸರಕಾರವು ಕೊಟ್ಟ ಹಣ

ರಿಕೊಗ್ನಿಶನ್ ಕೊಡುವ ಅಧಿಕಾರ.

ಇಷ್ಟರ ವರೇಗೆ ಎಲಿಮೆಂಟರಿ ಶಾಲೆಗಳಿಗೆ ರಿಕೊಗ್ನಿಶನ್ ಕೊಡುವ ಅಧಿಕಾರವು ಎಜ್ಯುಕೇಶನ್ ಕೌನ್ಸಿಲಿಗೆ ಇತ್ತು. ಇನ್ನು ಮುಂದೆ ಈ ಅಧಿಕಾರವು ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರಿಗೆ ಕೊಡಲ್ಪಟ್ಟಿದೆ. ಮೆನೇಜರರು ರಿಕೊಗ್ನಿಶನ್ ಅರ್ಜಿಗಳನ್ನು ಈ ಆಫೀಸರರಿಗೆ ಕಳುಹಿಸಬೇಕು. ಇವರ ಹುಕುಂಗಳ ಮೇಲೆ ಅಪೀಲು ಮಾಡುವದಾದರೆ ಡ್ಯಾರೆಕ್ಟರರಿಗೆ ಮಾಡಬೇಕಾಗುವುದು.

ಶಾಲಾ ಫರ್ನಿಚರ್, ಕಟ್ಟೋಣ ಮುಂತಾದಕ್ಕೆ ಗ್ರೇಂಟಿಗಾಗಿ ಮಾಡುವ ಅರ್ಜಿಗಳನ್ನು ಎಜ್ಯುಕೇಶನಲ್ ಆಫೀಸರರ ಮುಖಾಂತರ ಶಾಲಾ ಕಮಿಟಿಗೆ ಮಾಡಬೇಕು. ಇವರ ಮೇಲಿನ ಅಪೀಲನ್ನು ಡ್ಯಾರೆಕ್ಟರರಿಗೆ ಮಾಡತಕ್ಕದ್ದು.

ಮತಸಮ್ಬಂಧವಾದ ವಿದ್ಯೆ.

೫ನೇ ಅಧ್ಯಾಯದಲ್ಲಿ ಪ್ರಾಥಮಿಕ ವಿದ್ಯೆಯನ್ನು ಕಡ್ಡಾಯವಾಗಿ ಕೊಡುವ ವಿಷಯ ವಿವರಿಸಲ್ಪಟ್ಟಿದೆ. ೬ನೇ ಅಧ್ಯಾಯದಲ್ಲಿ ಶಾಲೆಗಳಲ್ಲಿ ಮತಸಮ್ಬಂಧವಾದ ವಿದ್ಯೆಯನ್ನು ಕಲಿಸುವ ವಿಷಯವಿದೆ. ಶಾಲೆಗಳಲ್ಲಿ ಕಲಿಯುವ ಬೇರೆ ಬೇರೆ ಮಕ್ಕಳು ಯಾವ ಯಾವ ಮತಕ್ಕೆ ಸೇರಿರುತ್ತಾರೋ ಅದೇ ಮತಸಮ್ಬಂಧವಾದ ವಿದ್ಯೆಗಳನ್ನು ಕಲಿಸಬೇಕಲ್ಲದೆ ಅನ್ಯ ಮತಗಳನ್ನು ಆ ಮಕ್ಕಳಿಗೆ ಕಲಿಸಬಾರದೆಂದು ಏರ್ಪಾಡು ಇದೆ.

ಮೇಲಿನ ವಿಷಯಗಳಲ್ಲಿರುವ ಕುಂದುಕೊರತೆಗಳ ವಿಷಯ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಉಪಾಧ್ಯಾಯರು ಸಭೆಕೂಡಿ ಠರಾವುಗಳನ್ನು ತಯಾರಿಸಿ ಮದರಾಸು ಸರಕಾರಕ್ಕೆ ಮನವಿ ಕಳುಹಿಸಿರುತ್ತಾರೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಸಭೆಕೂಡಿ ಠರಾವುಗಳನ್ನು ಮದರಾಸು ಸರಕಾರಕ್ಕೆ ಕಳುಹಿಸುವುದು ಒಳ್ಳೇದು.

ADVERTISE IN OUR WEEKLY
To Reach the Hearths & Homes
of India's Masses

For Particulars Apply to:

The Manager,
SWADESHABHIMANI,
MANGALORE.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD 1896.

...ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ... ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ ... ನೀಡಿಸಿದ ಅನುಭವದ ... ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸ ... ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ... ದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ... ಕೊಡುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ... ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ... ದಾರಣೆ ಹಾಕಿ ಕಳುಹಿಸುತ್ತೇವೆ.

... ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಜಂಗಾವು ವ್ಯಾಪಾರ,
ಶಿವ್ವಾಪೇಟೆ, ಸೇಲಂ (ದಕ್ಷಿಣ ಇಂಡಿಯಾ).

...ಮಾಡಿರಿ ! ತ್ವರೆಮಾಡಿರಿ !!

1928ನೇ ವರುಷದ

ಪೋಕೆಟ್ ಡೈರಿ

...ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ	೧೪ ಆಣೆ
... ಸಾದಾ ಡೈರಿ	೧೦ ಆಣೆ
... ಮಚ್ಚಳ ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
... ಸೈಜಿನ ಡೈರಿ	೮ ಆಣೆ
... ಸಾದಾ ಡೈರಿ.	೭ ಆಣೆ
...ಫ್ ಬ್ರಾಂಡಿನ ಡೈರಿ	೬ ಆಣೆ

...ಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,

...ವ ಬೆಲೆಗೆ ಅಮಿತವಾದ ಬೆಳಕು.
ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ಯತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ ... ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನುಗಳು, ಸ್ಟೌವ್‌ಗಳು ಎಲೆಕ್ ... ಲ್ಯಾಂಪುಗಳು, ಎಲೆಕ್ಟ್ರಿಕ್ ... ರೋಜಾ ಹುವ್ವುಗಳ ... ಬ್ಯಾಟರಿಗಳು, ಬೆಂಕಿಕ ... ಮತ್ತು ಸಿಗರೆಟ್ ಹಚ್ಚುವ ... ದೀಪಗಳು ಮತ್ತು ಇವುಗಳಿಗೆ ... ಬೇಕಾಗುವ ಸಾಮಾನುಗಳು ಸಹ ... ಬೆಲೆಗೆ ನಮ್ಮಲ್ಲಿ ದೊರೆಯುವವು. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ವಗೈರೆ ತಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
ನಗರ್ತಪೇಟೆ, ಬೆಂಗಳೂರು ಸಿಟಿ.

(18-11-27)

The Canara Bank Ltd. Mangalore.

NOTICE.

Wanted one Agent and one clerk for the Branch of the Canara Bank Ltd. to be opened shortly at Udipi, and one Agent for the Branch to be opened at Gangolly. For particulars apply to the undersigned.

CANARA BANK LTD.
MANGALORE.
15—2—'28

K. Venkat Rao,
Secretary.

In the court of the Subordinate Judge of South Kanara.

I. P. No 4/'28.

1. Kotekar Narsimh Prabhu
2. Kotekar Narsin Prabhu } *Petitioners.*

AND

D. Laxman Pai & 16 others—*Creditors.*

Take notice that the above Petitioners have applied for being declared insolvents and that the said application will come on for hearing at 12 A. M. on 8—3—1928.

Mangalore, 15—2—1928

M. KESHAVA PAI,
Vakil for Petitioners.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ...

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಅರ್ಕಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ
ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು
ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 313,100—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 313,100—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore, 8th Feb. 1927.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ॥ ಅಂಚೆಹಾಸಲು ಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ
ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಛೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ...ಗೆ ಮಾತ್ರ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ಖಚಿತವಾದ ವಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುತರಾನ ಕೊಡಲು ಯೋಗ್ಯವಾದ ಚಿನ್ನಗಳು, ಮೆಡಲುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅಚ್ಚುಕಟ್ಟಾಗಿ ... ಎಲ್ಲಾ ವಿಧವಾದ ನಗಗಳೂ ವಜ್ರ ವೈಡೂರ್ಯ ಕೆಂಪುಗಳಿಂದ ಕೆತ್ತಲ್ಪಟ್ಟ ... ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ ಸಕಾಲಕ್ಕೆ ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)



DUNLOP

ಟ್ರಿಪ್ಪಲ್ ಸ್ಟಡ್ ಸ್ಪ್ಯಾಕಲ್ ಟಾಯರು.

ಶಾಸ್ತ್ರೋಕ್ತವಾಗಿ ತಯಾರಿಸಿದ ಟಾಯರು ಕೊಡುವ ಎಲ್ಲಾ ಭದ್ರತೆಯು ಇದರಿಂದ ದೊರಕುವಂತೆ ಇದು ತಯಾರಿಸಲ್ಪಟ್ಟಿರುತ್ತದೆ. ಇಳಿಜಾರಿನಲ್ಲಿ ಫಕ್ಕನೆ ಜಾರಿಹೋಗದಿರುವಿಕೆಯು ಇದರ ಅನೇಕ ಗುಣಗಳಲ್ಲಿ ಒಂದೇ ಒಂದಾಗಿದೆ.

fit Dunlop and be satisfied

ದಿ ಡನ್ಲೋಪ್ ರಬ್ಬರ್ ಕಂಪೆನಿ (ಇಂಡಿಯಾ) ಲಿಮಿಟೆಡ್,

ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ, ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು, ಮಂಡೆಲೇ, ಮದ್ರಾಸು, ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Registered: No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗೆದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೪ನೇ ಶುಕ್ರವಾರ ಫೆಬ್ರುವರಿ ೧೯೨೮. ಸಂಚಿಕೆ ೮

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:— ಉಡುಪಿ.

Branches:—COONDAPOOR.
„ Mangalore.
ಶಾಖೆ:— ಕುಂದಾಪುರ.
„ ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
Udipi, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋಜರ್ ಹೌಸ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.

Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.



Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್ ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

... ರೂ. ೧.

... ಶಕ್ತಿ ಕೊಡುವ ಔಷಧ ಆಣೆ ೧೩.

... ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩

... ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

... ರೂ. ೧—೨—೦. ರೂ. ೧—೪—೦. ೧—೧೨—೦.

... ರೂ. ೦—೬—೦

... ರೂ. ೦—೬—೦. LIBERAL DISCOUNT TO TRADE

...-CAWASHAPUR, BOMBAY.

... ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಗ ... ಲೋಧ್ರ

ಗರ್ಭಾಶಯ ರೋಗನಿವಾರಿಣೀ.

... ವನಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹೊಗಳುತ್ತಿರುವರು.

... ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವಿಶೇಷವಾಗಿ ಗುಣವಾಗುವುವು.

... ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು. ರೂ. 1—10—0.

ಕೇಸರೀ ಕುಟೀರಂ,

... ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

... ಮಾರ್ಕೆಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.



ಈ ನಕ್ಷೆಯಲ್ಲಿ ಕಂಡ ... ೧೪ ಕ್ಯಾರೆಟ್ಟು ಭಂಗಾರದಂಥ ... ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,

ಪೋ॥ ಬಾಕ್ಸ್ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್‌ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್ 1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ॥ ಬಾಕ್ಸ್ ನಂ. 105, ಮದರಾಸು.

... ತೆಪ್ಪಿಗೆ ಬೇಕಾದವರು ಬರೆದು ಧಾರಣೆ ತಿಳಿಯಬಹುದು. ... ರೂ. 2-0-0 ಕಳುಹಿಸಬೇಕು.

ಟಿ. ಸಿ. ನಾಗಲಿಂಗಪ್ಪಾ ಅಂಡ್ ಕೋ,

2/4 ಸಿಂಗಣ್ಣನಬೀದಿ, ಜಾರ್ಜಟೌನ್ ಮದರಾಸ್.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

೧—೯—'೨೭ ಸಳ್ಳೆಬೈಲ್ ಪೋಸ್ಟು ಕಡೂರ್ ಡಿಸ್ಟ್ರಿ.

ಶಾಲಿವಾಹನ ಶಕೆ ೧೮೪೯ನೇ ಪ್ರಭವ ಸಂ॥ದ ಫಾ.

ಶು॥ ೪ ಶನಿವಾರದಿಂದ ಪ್ರಭವ ಸಂ॥ದ ಫಾಲ್ಗುಣ

ಶು॥ ೧೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಕ್ರಿಸ್ತಾಬ್ದ (ಮಾಯಿ))

ತಾರೀಕು	ವಾರ	ತಿ.	ಘ. ಗ.	ನಕ್ಷತ್ರ	ಘ. ಗ.	ಯೋಗ	ಸೂರ್ಯ. ಉ.	ಅಸ್ತ
25	ಶನಿ	೪	೫.೪೨	ರೇವತಿ	೩.೨೫	೧೩	6.52	6 38
26	ರವಿ	೬	೫೪. ೩	ಭರಣೀ	೫೫.೧೬	೧೪	6 51	6 38
27	ಸೋಮ	೭	೪೯.೧೪	ಕೃತ್ತಿಕಾ	೫೧.೪೪	೧೫	6.51	6.38
28	ಕುಜ	೮	೪೨.೪೨	ರೋಹಿಣೀ	೪೭.೩೨	೧೬	6 50	6.38
29	ಬುಧ	೯	೩೮. ೦	ಮೃಗಶಿರಾ	೪೪.೩೧	೧೭	6 49	6.38
1	ಗುರು	೧೦	೩೩.೪೫	ಆರ್ದ್ರಾ	೪೨. ೧	೧೮	6.48	6.38
2	ಶುಕ್ರ	೧೧	೩೦.೩೨	ಪುನರ್ವಸು	೪೦.೩೨	೧೯	6.48	6.39

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
17	89— 2	76— 2	—	—
18	89 7	75— 3	—	—
19	91— 7	74— 7	—	—
20	93— 1	72— 2	—	—
21	95— 6	71— 9	—	—
22	90— 7	71— 3	—	—
28	89— 6	72— 2	—	— 128-19

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕತಿ	7— 4	7—14
ಹೊಸ ಗುಡ್ಡು ...	6— 8	6—14
ಸುಗ್ಗಿ ...	6— 4	6— 8
ಹೊಸ ರಾಶಿ ...	6— 2	6— 6
ಊರ ಅವ್ವಲ್ ಬೆಳ್ತಿಗೆ ...	7— 4	8— 4
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 0
ಎಳ್ಳೂರು ಬೆಳ್ತಿಗೆ ಮುಡಿ ೧ಕ್ಕೆ ...	7— 0	7— 4
ಗೋದಿ ಗೋಣಿ ೧ಕ್ಕೆ ...	17— 8	18— 0
ಕುರುಳಿಗೋಣಿ ೧ಕ್ಕೆ ...	9— 4	9— 8
ಕಡಲೆಗೋಣಿ ೧ಕ್ಕೆ ...	12— 8	13— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	18— 0	25— 0
ಉದ್ದು ಗೋಣಿ ೧ಕ್ಕೆ ...	14— 0	14— 8
ಹೆಸರುಗೋಣಿ ೧ಕ್ಕೆ ...	12— 0	13— 8
ಊರು ಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	4— 0	4— 5
ಕೊಬ್ರಿ ಖಂಡಿ ೧ಕ್ಕೆ ...	130— 0	—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	47— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ ...	42— 0	50— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8— 2	8— 4
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8— 4
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	6— 8	7— 0
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	3— 11	3—12
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7— 0	7— 4
ಸಾಸಿವೆ ಮುಡಿ ೧ಕ್ಕೆ ...	8— 4	—
ಕೊತ್ತಂಬರಿ ಮುಡಿ ೧ಕ್ಕೆ ...	6— 8	6—12
ಕಾಫಿ ಖಂಡಿ ೧ಕ್ಕೆ ...	335— 0	355— 0
ಬೀಗೋಟ್ಟು ಅಡಿಕೆ ಖಂಡಿ ೧ಕ್ಕೆ ...	145— 0	170— 0
ಕಾಳುಮೆಣಸು ಖಂಡಿ ೧ಕ್ಕೆ ...	450— 0	460—
ಹುಣಸೆ ಮುಡಿ ೧ಕ್ಕೆ ...	50— 0	54— 0
ಗೇರುಬೀಜ ಮುಡಿ ೧ಕ್ಕೆ ...	3— 8	3—12
ಚಕ್ಕೆ ಖಂಡಿ ೧ಕ್ಕೆ ...	37— 8	40— 0
ತಾಂಮ್ರ ತಗಡು ಮುಡಿ ೧ಕ್ಕೆ ...	15— 0	15— 0
ತಾಂಮ್ರ ಪಾತ್ರೆಗಳು ಮುಡಿ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	15— 0	—
ಹಿತ್ತಾಳೆ ತಗಡು ಮುಡಿ ೧ಕ್ಕೆ ...	15— 0	—
ಪವನು	13— 10	—

NOTICE.

Know all persons whom it may concern that the Policy No. 2002 issued by the Hindusthan Co-operative Insurance Society Ltd. Calcutta in favour of my husband Late Parameshwar Raghunath Shriyan son of Late Raghunath Narayan Shriyan of Kadri Village, Mangalore Taluk who died on 14—9—'26 has been lost to which effect I affirmed an affidavit before the Stationary Sub-Magistrate Court of Mangalore Taluk on 21—2—1928. I am entitled to the said policy money on the strength of the Will executed by my husband while alive and the said Society has agreed to pay to me the policy money on furnishing an Indemnity the said lost policy is null and void and any body dealing with the same will do so at his own risk.

Mangalore, Date 22-2-'28. } *Left-hand thumb impression of,* **Revathi Hengsu.**

The Canara Bank Ltd, Kasaragod.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ವ್ಯಕ್ತಪಟ್ಟಿರುವ ಕಾರಣ ವಾಪಾಸು ಬಂದಿರುವುದರಿಂದ ಸದರಿಯವರಿಂದ ಬಹಾ ಅಸಲು ಬಡ್ಡಿ ಐವೇಜುಗಳನ್ನು ಇದೇ ತಿಂಗಳ ತಾರೀಕು 27ನೇ ಸೋಮವಾರದೊಳಗೆ ಬ್ಯಾಂಕಿಗೆ ಸಲಾಯಿಸಿ ಅಡವಿಟ್ಟ ಆಭರಣಗಳನ್ನು ಪಡೆದುಕೊಳ್ಳದಿದ್ದರೆ ಸದರಿ ಆಭರಣಗಳನ್ನು ಇದೇ 1928ನೇ ಫೆಬ್ರವರಿ ತಾರೀಕು 29ನೇ ಬುಧವಾರ ದಿವಸ 12 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಹೆಸರು	ಸಾಲದ ನಂಬ್ರ	ಸಾಲದ ಮೊಬಲಗು	ಬ್ಯಾಂಕಿಗೆ ಬ. ಅಸ್ಲು ಬಡ್ಡಿ ವಗೈರೆ
ಬಿ. ನರಸಿಂಗರಾವ್	412/27 515/27 717/27	345-0-0	364-15-3.

Canara Bank Ltd. Kasaragod 20-2-28. } H. S. Bhat, *Agent.*

ಮಂಗಳೂರು ಸರ್ಕಲ್ ದೇವಸ್ಥಾನ ಕಮಿಟಿ ಆಫೀಸು.

1927ನೇ ಇಸವಿ ಮದ್ರಾಸು ಆಕ್ಟು II ಸೆಕ್ಷನು 51 (4)ರ ಮೇರೆಗೆ ಹಿಂದುಮತದ ಸ್ಥಾಪನೆಗಳ ಮೊಕ್ತೇಸರರ ಮೊಕ್ತೇಸರಿಕೆಯು 8—2—1928ಕ್ಕೆ ಅಂತ್ಯವಾಗಿಯದೆ. ಸದರಿ ಸ್ಥಾಪನೆಗಳಿಗೆ ಮಂಗಳೂರು ಸರ್ಕಲ್ ದೇವಸ್ಥಾನ ಕಮಿಟಿಯವರು ಸಧ್ಯದಲ್ಲೇ ಹೊಸದಾಗಿ ಮೊಕ್ತೇಸರರನ್ನು ನೇಮಕಮಾಡುವರು. ಸದರಿ ಸ್ಥಾಪನೆಗಳಿಗೆ ಮೊಕ್ತೇಸರಿಕೆ ನೇಮಕಪಡೆಯಬೇಕೆಂಬ ಅಪೇಕ್ಷೆ ಉಳ್ಳವರು ಕಮಿಟಿಯವರಿಂದ ಸನ್ನದು ಪಡೆಯುವ ಬಗ್ಯೆ 20—3—1928ರ ವಳಗೆ ಕಮಿಟಿಗೆ ಅರ್ಜಿಮಾಡಬೇಕಾಗಿ ಪ್ರತಿ ಸ್ಥಾಪನೆಯ ಆಸ್ತಾಸಿನಲ್ಲಿ ಆಯಾಯ ಸ್ಥಾಪನೆಯ ಹಾಲಿ ಆಡಳಿತೆ ನೋಡುವವರು ಪ್ರಾಸ್‌ಮಾಡತಕ್ಕದ್ದು. 8—2—1928ರ ವರೆಗೆ ಮೊಕ್ತೇಸರಿ ಸನ್ನದು ಇರುತ್ತಿದ್ದವರು ಪುನಹಾ ಮೊಕ್ತೇಸರಿಗೆ ಪಡೆಯುವರೆ ಅರ್ಜಿ ಮಾಡುವರೆ ಅರ್ಹರಾಗಿರುತ್ತಾರೆ. ಮತ್ತು ಅಂಥಾ ಮೊಕ್ತೇಸರರು ಅವರವರ ಸ್ಥಾಪನೆಗಳ ಬಗ್ಯೆ ಅವರು ಇಟ್ಟಿರುವ ಕಳೆದ 3 ವರ್ಷಗಳ ಬಾಬತು ಲೆಕ್ಕದ ಪುಸ್ತಕಗಳನ್ನು 20—3—1928ರ ವಳಗೆ ಕಮಿಟಿ ಪ್ರೆಸಿಡೆಂಟರ ಮುಂದೆ ಹಾಜರುಪಡಿಸತಕ್ಕದ್ದು. ಸದರಿ ಸ್ಥಾಪನೆಗಳಿಗೆ ಸಮ್ಮಂಧಪಟ್ಟ ಭಜಕರು ಮೊಕ್ತೇಸರಿಕೆಗೆ ಯೋಗ್ಯರಾದವರ ಹೆಸರುಗಳನ್ನು ಕಮಿಟಿಗೆ 20—3—1928ರ ವಳಗೆ ಬರಹ ಮೂಲಕ ಸೂಚಿಸಬಹುದು. ಕಮಿಟಿಯವರು 24—3—1928ಕ್ಕೆ ಮೊಕ್ತೇಸರರು ನೇಮಕಮಾಡುವರು.

ಮಂಗಳೂರು, ತಾ. 22—2—'28. } ಕೆ. ಸದಾಶಿವ ಅಡಿಗ, ಪ್ರೆಸಿಡೆಂಟ್ ಮಂಗಳೂರು ಸರ್ಕಲ್ ದೇವಸ್ಥಾನ ಕಮಿಟಿ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಮೊಗವೀರ ಕ್ಲಾರ್ಕ್ಸ್ ಯೂನಿಯನ್ ಮುಂಬಾಯಿ.

ಈ ಮೇಲಿನ ಸಂಸ್ಥೆಯವರು ಬಂಟರ ಯಾನೆ ನಾಡವರ ಸಂಘದ ಪ್ರಥಮ ವಾರ್ಷಿಕೋತ್ಸವ ಸಭಾಧ್ಯಕ್ಷತೆಯನ್ನು ವಹಿಸಲು ಇಲ್ಲಿಗೆ ದಯಮಾಡಿಸಿದ್ದ ಶ್ರೀಯುತ ಆತ್ಮಾವರ ಬಾಲಕೃಷ್ಣ ಶೆಟ್ಟಿ, ಯಮ್. ಯಲ್. ಸಿ. ಇವರನ್ನು ಇದೇ ತಿಂಗಳ ತಾ. ೮ನೇ ಬುಧವಾರ ರಾತ್ರಿ ಘಂಟೆ ೮ಕ್ಕೆ ಇಲ್ಲಿಯ ಸರ್ ಡಿನ್ ಷಾ ಪೆಟಿಟ್ ಆಫೀಸಿಗೆ ಆಮಂತ್ರಿಸಿ ಮೇಜುವಾನಿ ಪಾರ್ಟಿ ಕೊಟ್ಟು ಸತ್ಕರಿಸಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯನಿರ್ವಾಹಕ ಕಾರ್ಯಕಾರಿ ಸಮಿತಿ ಹಾಗೂ ಸಂಘದ ಸದಸ್ಯರು ಮತ್ತು ಜಾತಿ ಪರಜಾತಿಯವರು ಬಹಳ ಮಂದಿ ಹಾಜರಿದ್ದರು.

ದೇವತಾ ಪ್ರಾರ್ಥನೆಯಾದ ಬಳಿಕ ಮಂಡಳಿಯ ಅಗ್ರಸ್ಥರಾದ ರಾ॥ ಮುಲ್ಕಿ ಏಕನಾಥ ಟಿ. ದೇವುಜಿಯವರು ಅಂದು ಅತಿಥಿಗಳಾಗಿ ಚಿತ್ತೈಸಿದ್ದ ಮಾನ್ಯ ಶೆಟ್ರನ್ನು ವಂದಿಸಿ ಮನೋಹರವಾದ ಕೊಂಚ ಮಾತುಗಳಿಂದ ನೆರೆದಿದ್ದವರಿಗೆ ಅವರ ಪರಿಚಯವನ್ನು ಮಾಡಿಕೊಟ್ಟರು. ಇದಾದ ಬಳಿಕ ತತ್ಸಂದರ್ಭಕ್ಕಾಗಿ ರಚಿಸಲ್ಪಟ್ಟಿದ್ದ ಅಭ್ಯಾಗತ ಸ್ವಾಗತ ಪದವು ಹಾಡಲ್ಪಟ್ಟಿತು. ತರುವಾಯ ಮಂಡಳಿಯ ಸಂಸ್ಥಾಪನಾ ಪ್ರೇರಿತರಾದ ಶ್ರೀಯುತ ಕಾಡಿಪಟ್ಣ ಚೆಂಮ ಎ ಮಾಸ್ತರರು ಅಲ್ಲದೆ ಇನ್ನು ಇತರ ಈ ವ್ಯವಸ್ಥಾಪಕ ಮಂಡಳಿಯ ಮಹನೀಯರು ಅಧ್ಯಕ್ಷರ ಗುಣಕಥನವನ್ನು ಬಹಳ ಶ್ಲಾಘಿಸಿ ಮಾತನಾಡಿದರು.

ಈ ಮೇಲಿ ಮಂಡಳಿಯ ಪರವಾಗಿ ಅಧ್ಯಕ್ಷರು ಸಭಿಕರ ಹಸ್ತತಾಡನದೊಡನೆ ಪುಷ್ಪಹಾರವನ್ನು ಸಮರ್ಪಿಸಿದರು. ಮಾನನೀಯ ಶೆಟ್ರು ತಾನು ಅಂತಹ ಸತ್ಕಾರವನ್ನು ಹೊಂದಲು ವಾಸ್ತವವಾಗಿ ಯೋಗ್ಯನಲ್ಲವಾದರೂ ಅಂದುಗೈದ ಅತಿಥಿ ಸನ್ಮಾನದ ಉಜ್ವಲ ಭಾವನೆಯನ್ನು ನೋಡಿ ತುಂಬಾ ಸಂತೋಷಗೊಂಡೆನೆಂದೂ ಮೊಗವೀರರಲ್ಲಿ ದೇಶಭಕ್ತಿ, ತಮ್ಮ ಮಾತೃಭೂಮಿಯ ಬಂಧುಗಳ ಮೇಲಿನ ಪ್ರೇಮ, ಹಾಗೂ ಸಮಾಜಸೇವೆಯ ಕುಶಲತೆ ಎಷ್ಟಿರುವದೆಂಬುವಕ್ಕೆ ಅದೇ ಯೋಗ್ಯ ನಿದರ್ಶನವೆಂದೂ, ಈ ಸಂಘದವರೇ ದಕ್ಷಿಣ ಕನ್ನಡ ಜಿಲ್ಲಾ ನಿವಾಸಿಗಳಾದ 'ಹಲವು' ಕುಲದವರ ಸಂಘ ಸ್ಥಾಪನೆಗಳಿಗೆ ಮಾನರಿಯನ್ನು ತೋರಿಸಿಕೊಟ್ಟವರೆಂದೂ, ಸಂಘದಲ್ಲಿ ೩೦೦ ಮಂದಿ ಮೆಂಬರರೂ, ಅಂದಾಜು ಹನ್ನೊಂದು ಸಾವಿರದ ನಿಧಿಯೂ ಇರುವುದು ಮೊಗವೀರರ ಭಾಗ್ಯೋದಯವೆಂದೂ, ಆಂಗ್ಲೇಯ ಜನರಿಗೆ ಮುಖ್ಯ ಬಲವೆನಿಸುವ ಸಮುದ್ರ ಶಿಕಾರಿಯು ಸ್ವತಂತ್ರ ವೃತ್ತಿಯೆನಿಸುವುದರಿಂದ ಎಷ್ಟಕ್ಕೂ ಆ ವೃತ್ತಿಯು ಶೀಲಿಸುವುದಿಲ್ಲವೆಂದೂ, ಮೊಗವೀರರಲ್ಲಿ ಕೆಲಜನರಾದರೂ ವಕೀಲ, ಡಾಕ್ಟರ ವೃತ್ತಿಯನ್ನು ಅವಲಂಭಿಸುವದಾದರೆ ಅವರಿಂದ ಜನಾಂಗದೇಳಿಗೆಗೆ ಹೆಚ್ಚಿನ ಪ್ರಯೋಜನವಾಗುವದೆಂದೂ, ಕಾಲಹೋದಂತೆ ಹಿಂದುಳಿದವರು ಮುಂದುವರಿಯುವುದು ನಿಜವೆಂದೂ ಅಲ್ಲಲ್ಲಿ ದೃಷ್ಟಾಂತಗಳನ್ನಿತ್ತು ಸುರಸವಾಗಿ ಭಾಷಣಗೈದರು.

ಅಂತ್ಯದಲ್ಲಿ ಸಭೆಯು ಮೇಜುವಾನಿ ಪಾರ್ಟಿ ಮೂಲಕ ಸತ್ಕರಿಸಲ್ಪಟ್ಟ ವಂದನೀಯ ಶೆಟ್ರನ್ನೂ ಅವರೊಂದಿಗೆ ಬಂದಿದ್ದ ಕರಿಯಂಗಳ ಮುತ್ತು ಮಾರ್ಲರನ್ನೂ, ಡಾಕ್ಟರ್ ಬೆಳ್ಳೆ ರಾಮಣ್ಣ ಶೆಟ್ರನ್ನೂ ವಂದಿಸಿದ ತರುವಾಯ ಸಭೆಯು ಆತ್ಮಾನಂದದಿಂದ ಕೊನೆಗೊಂಡಿತು.

ಮುಂಬಾಯಿ, ತಾ. ೧೩—೨—'೨೮.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

O. P. 130/1927.

ಸುಬ್ರಾಯ ಸಂಪಿಗೆತ್ತಾಯ—ಅರ್ಜಿದಾರ

ವಿದ್ರಿ

ರಾಮಪ್ಪಪಾದ್ಯಾಯ ಕೂಡಾ—ರೆಸ್ಪೊಂಡೆಂಟರು.

ಕಾರ್ಕಳ ತಾಲೂಕು ತೆಂಕ ಕರಂದೂರು ಗ್ರಾಮದ ಸುಬ್ರಾಯ ನೂರಿತ್ತಾಯರ ಮ್ಯಾನರ ಮಕ್ಕಳ ದೇಹರಕ್ಷಣೆಗೆ ಗಾರ್ಡಿಯನನನ್ನೂ, ಸೊತ್ತುಗಳಿಗೆ ಮೆನೇಜರರನ್ನೂ ನೇಮಕ ಮಾಡುವಂತೆ ವಗೈರೆ ಕಾಣಿಸಿ ಅರ್ಜಿದಾರನು ಕೊಟ್ಟ ಮೇಲಿನ ಅರ್ಜಿಯು ಸದರಿ ಮೇಲಣ ಕೋರ್ಟಿನಲ್ಲಿ ತಾ. 28-2-28ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪ ಉಳ್ಳವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿನಲ್ಲಿ ಸದರಿ ಕೋರ್ಟಿಗೆ ದಾಖಲುಮಾಡಿಕೊಳ್ಳತಕ್ಕದ್ದು.

Mangalore, 20—2—'28 } U. C. S. BHAT, *Vakil for Petitioner.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ.

O. P. ನಂಬ್ರ 11/1928.

ಲೋರೆಸ್ ಗಾಬ್ರಿಯಲ್ ನಜರತ್—ಅರ್ಜಿದಾರ

ಮತ್ತು

ಸೆರಫಿನಾ ನಜರತ್ ಬ್ಯಾ ಕೂಡಾ—ರೆಸ್ಪೊಂಡೆಂಟರು.

ಮೇಲ್ಕಂಡ ಅರ್ಜಿ ವ್ಯವಹರಣೆಯಲ್ಲಿ ಮೃತ ಜುವಾಂವ್ ನಜರತನು ಬರದಿಟ್ಟ ವಿಲು ಪ್ರಕಾರ ಮೃತನ ಸೊತ್ತುಗಳ ಕುರಿತು ತನಗೆ ಪ್ರೊಬೇಟ್ ಕೊಡಬೇಕಾಗಿ ವಗೈರೆ ಅಪೇಕ್ಷಿಸಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಣ ಅರ್ಜಿಯು ತಾರೀಕು 1—3—'28ಕ್ಕೆ ಹೇರಿಂಗಿನ ಬಗ್ಯೆ ಇಟ್ಟಿದೆ. ಸದರಿ ಅರ್ಜಿಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 23—2—'28. } G. SOMASHEKER RAO, *Vakil for Petitioner.*

ಮೈಸೂರು ಮಹಾರಾಜರ ರಜತ ಮಹೋತ್ಸವದ ಸ್ಮಾರಕ.

ಮೈಸೂರಿನಲ್ಲೊಂದು ಕೈಗಾರಿಕೆ ಇಂಜಿನಿಯರಿಂಗ್ ಮಹಾ ವಿದ್ಯಾಲಯ.

[illegible]

ಸ್ಕೀಮು.

[illegible]

ಬರೋಡಾ ಸಂಸ್ಥಾನದ ವಿದ್ಯಾಭ್ಯಾಸ.

ವಿದ್ಯಾಭ್ಯಾಸದ ಅಭಿವೃದ್ಧಿಯ ಸಾಧನೆಗಳು ಬರೋಡಾ ಸಂಸ್ಥಾನದಲ್ಲಿ ಪ್ರಯತ್ನದಿಂದ ಸಾಧಿಸಲ್ಪಡುತ್ತಿವೆ. ಇದರಿಂದ ಬರೋಡಾ ರಾಜ್ಯಕ್ಕೆ ಮಾತ್ರವಲ್ಲ, ಇಡೀ ಹಿಂದೂಸ್ಥಾನಕ್ಕೇನೇ ಲಾಭವಿದೆಯೆಂದರೆ ಅತಿಶಯೋಕ್ತಿಯಾಗಲಾರದು. ೧೯೨೬-೨೭ನೇ ಎಜ್ಯುಕೇಶನಲ್ ರಿಪೋರ್ಟನ್ನು ನೋಡಿದರೆ ಸರಕಾರದವರು ಎಷ್ಟು ಪರಿಶ್ರಮಗಳನ್ನು ವಹಿಸಿರುವರೆಂಬುದು ಸರಿಯಾಗಿ ತಿಳಿಯುವುದು. ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಅಲ್ಲಿ ಎಲ್ಲಾ ತರದ ವಿದ್ಯೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಅದಕ್ಕೊಂದು ಕಮಿಶನು ನೇಮಕವಾಗಿದೆ. ಆ ವಿದ್ಯಾಲಯವೇ ವಿದ್ಯಾಭ್ಯಾಸದ ಕೇಂದ್ರವಾಗಿರಬೇಕು, ಪಾಶ್ಚಾತ್ಯ ದೇಶಗಳಲ್ಲಿ ನಡೆಸುವ ರೀತಿಯಲ್ಲಿಯೇ ಈ ವಿಶ್ವವಿದ್ಯಾಲಯವನ್ನು ನಡೆಯಿಸಬೇಕು, ಇತರ ವಿಶ್ವವಿದ್ಯಾಲಯಗಳಂತೆ ಅದು ಕೂಡ ಒಂದು ವಿದ್ಯಾಲಯವಾಗಿದೆ ಎಂದು ಹೆಸರಿಗೆ ಮಾತ್ರ ಇದ್ದಿರದೆ ಪ್ರಯೋಜನಕಾರಿಯಾಗಿರಬೇಕು ಎಂದು ಅಲ್ಲಿಯ ಸರಕಾರದವರ ಪ್ರಯತ್ನವಿರುವುದರಿಂದ ಸದ್ಯದಲ್ಲಿಯೇ ಅಂಥದೊಂದು ವಿದ್ಯಾಲಯವು ಉಂಟಾಗುವುದು.

ಇನ್ನು ಸೆಕೆಂಡರಿ ಶಾಲೆಗಳ ಪಾಠಪಟ್ಟಿಯನ್ನು ಸುಧಾರಿಸಿರುವರು. ಇದನ್ನು ಸುಶಿಕ್ಷಿತ ಜನರ ಮಂಡಳಿಯಲ್ಲಿ ಚರ್ಚಿಸಿ, ನಿಶ್ಚಯಿಸಿರುವರು. ಖಾಸಗಿ ಹೈಸ್ಕೂಲುಗಳಿಗೆ ಹೆಚ್ಚಿಗೆ ಗ್ರೇಂಟು ಕೊಡಲ್ಪಡುವುದು. ಪ್ರಾಥಮಿಕ ಶಾಲೆಗಳಿಗೂ ತುಂಬಾ ಗ್ರೇಂಟು ಸಿಕ್ಕುವುದು. ನಾಲ್ಕನೇ ಕ್ಲಾಸಿನಿಂದ ಹಿಂದೀ ಪಾಠವನ್ನು ಕಲಿಸುವುದು ಕಡ್ಡಾಯವಾಗಿ ಮಾಡಲ್ಪಟ್ಟಿರುವುದು. ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗೆ ಮಿ. ಬಿ. ಎ. ದೇಸಾಯಿಯವರು ಯಾವ ಉಪಾಯಗಳನ್ನು ಸೂಚಿಸಿರುವರೊ, ಅವುಗಳನ್ನು ಅನುಸರಿಸಿ ವರ್ತಿಸಲು ಒಂದು ಕಮಿಟಿಯು ನೇಮಕಹೊಂದಿರುವುದು. ನಿಜವಾಗಿಯೂ ನೋಡಹೋದರೆ, ಅಲ್ಲಿನ ವಿದ್ಯಾಭ್ಯಾಸದಲ್ಲಿ ಪ್ರಯೋಜನಕಾರಿಯಾದ ಪರಿವರ್ತನೆಗಳಾಗಿರುತ್ತವೆ. ಕಡ್ಡಾಯವಾದ ವಿದ್ಯಾಭ್ಯಾಸ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬೇಕಾದ ಸಾಹಿತ್ಯ ಸಂಗ್ರಹ, ಬಡ ಮತ್ತು ರೋಗಿಗಳಾದ ವಿದ್ಯಾರ್ಥಿಗಳ ಆರೈಕೆ, ಇವುಗಳ ಕುರಿತು ಬರೋಡಾದಲ್ಲಿ ಹೆಚ್ಚಿನ ಶ್ರದ್ಧೆಯನ್ನು ವಹಿಸಿಕೊಳ್ಳುವರು. ಮೊದಲು ವಿದ್ಯಾರ್ಥಿಗಳ ಸಂಖ್ಯೆಯು ೨೦೦,೧೪೦ ಆಗಿದ್ದುದು ಈಗ ಹೆಚ್ಚಾಗಿ ಆಗಿಯದೆ. ಒಟ್ಟು ೩೪೮ ಹುಡುಗಿಯರ ಶಾಲೆಗಳಿವೆ. ೩೨,೩೪೭ ಹುಡುಗಿಯರು ಕಲಿಯುತ್ತಿದ್ದರು. ಈಗ ಕಳದ ವರ್ಷಕ್ಕಿಂತ ಹುಡುಗಿಯರ ಸಂಖ್ಯೆಯು ೧೯೫೦ ಹೆಚ್ಚಾಗಿರುವುದು. ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದುದಕ್ಕಾಗಿ ಹೆತ್ತವರ ಮೇಲೆ ವಿಧಿಸಿದ ಜುರುಮಾನೆಯು ಒಟ್ಟು ರೂ. ೧,೧೯,೬೧೭ ಇದರಲ್ಲಿ ರೂಪಾಯಿ ೩೭,೨೪೯ ವಸೂಲಾಗಿದೆ. ಇದರಿಂದ ಹೆತ್ತವರು ಕಡ್ಡಾಯವಾದ ವಿದ್ಯಾಭ್ಯಾಸವೇನೆಂಬುದನ್ನು ಇನ್ನು ಅರಿತುಕೊಳ್ಳಬೇಕೆಂಬುದು ತಿಳಿಯುವುದು.

ಒಕ್ಸ್‌ಫೋರ್ಡಿನ ಬೊಡಲಿಯ ಲ್ಯಾಬ್ರೆರಿ.

ಒಕ್ಸ್‌ಫೋರ್ಡ ಯುನಿವರ್ಸಿಟಿಯ ಬೊಡಲಿಯನ್ ಲ್ಯಾಬ್ರೆರಿಯನ್ನು ಹೊಸದಾಗಿ ಕಟ್ಟಿಸುವುದಕ್ಕೆ ಆಲೋಚನೆಯಾಗಿದೆ. ಇದನ್ನು ಮಧ್ಯ ಕಟ್ಟುವ ಆಲೋಚನೆ ಹುಟ್ಟಿಯದೆ. ಅದರ ಹಳೆ ಹಂಪ್ರೆ ಲ್ಯಾಬ್ರೆರಿಯ ೨ ಶಾಖೆಗಳನ್ನು ಈಗ ಇದ್ದಲ್ಲಿಯೇ ಇಡುವರು.

ಇದಕ್ಕೆ ಹೊಸ ಕಟ್ಟೋಣ ಕಟ್ಟುವುದಕ್ಕೂ ಕೆಟಲೋಗ್ ತಯಾರಿಸುವುದಕ್ಕೂ ಹಳೆ ಲ್ಯಾಬ್ರೆರಿಯಿಂದ ಹೊಸ ಲ್ಯಾಬ್ರೆರಿಗೆ ತರುವುದಕ್ಕೂ ೫ ಲಕ್ಷ ಪೌಂಡು ಬೇಕಾಗುವುದು.

ಪ್ರತಿ ವರುಷ ಈ ಲ್ಯಾಬ್ರೆರಿಗೆ ೨೦—೨೫ ಸಾವಿರ ಪುಸ್ತಕಗಳನ್ನು ಕೂಡಿಸುತ್ತಿರುವರು. ಈಗ ಈ ಪುಸ್ತಕ ಭಂಡಾರದಲ್ಲಿ ೧೫ ಮಿಲಿಯ ಪುಸ್ತಕಗಳಿರುವವು. ೪೦ ಸಾವಿರ ಹಸ್ತ ಪ್ರತಿಗಳು ಇರುವವು.

ಈ ಪುಸ್ತಕ ಭಂಡಾರವನ್ನು ಆದಿಯಲ್ಲಿ ಹಂಪ್ರೆ ಎಂಬವರು ಸ್ಥಾಪಿಸಿದರು. ಇವರು ಗ್ಲೋಸೆ ಸಟರಿನ ಪ್ರಭುಗಳಾಗಿದ್ದರು. ನಂತರ ೧೫೯೮ರಲ್ಲಿ ಇದನ್ನು ಸರ್ ಥೋಮಸ್ ಬೊಡ್ಲೆಯವರು ೧೦ ಸಾವಿರ ಪೌಂಡು ಖರ್ಚು ಮಾಡಿ ಬಹಳ ದೊಡ್ಡದಾಗಿ ಮಾಡಿದರು. ಈಗ ಭೂಲೋಕದಲ್ಲಿರುವ ಉತ್ಕೃಷ್ಟ ಪುಸ್ತಕ ಭಂಡಾರಗಳಲ್ಲಿ ಇದು ಒಂದಾಗಿದೆ. ಇಂಗ್ಲಿಷ ರಾಜ್ಯದಲ್ಲಿ ಛಾಪೆಯಾಗುವ ಪ್ರತಿ ಒಂದು ಪುಸ್ತಕದ ಪ್ರತಿಯು ಇಲ್ಲಿಗೆ ಕಳುಹಿಸಲ್ಪಡುತ್ತದೆ.

ಸ್ಫುಟ ವಿಚಾರಗಳು.

ಬಡತನದ ಪರಿಣಾಮ.

ಬಡತನದ ಕಾರಣದಿಂದ ಹಿಂದೀ ಮನೆಗಳು ಎಷ್ಟರ ಮಟ್ಟಿಗೆ ಹೀನಸ್ಥಿತಿಯಲ್ಲಿವೆ ಎಂದು ಬಡವರ ಮನೆಗಳನ್ನು ನೋಡಿದವರು ಬಲ್ಲರು. ಹಿಂದೂಸ್ಥಾನದ ವೈಶಿಷ್ಟ್ಯವೇ ಬಡತನವಾಗಿದೆ. ನಮ್ಮ ಜಿಲ್ಲೆಯು ಇದಕ್ಕೆ ವಿರಹಿತವಾಗಿಲ್ಲ. ಬಡತನದೊಟ್ಟಿಗೆ ಬೆಳೆದು ಬರುವ ಸಂಸಾರ ಕೂಡಿದರೆ ಆ ಮನೆಯ ಸ್ಥಿತಿಯನ್ನು ಹೇಳಬೇಕಾಗಿಲ್ಲ. ಸಾಮಾನ್ಯವಾಗಿ ನಾವು ಈ ಪರಿಸ್ಥಿತಿಯು ಕೇವಲ ವೈಯಕ್ತಿಕವಾದುದೆಂದು ತಿಳಿಯುತ್ತೇವೆ. ಆದರೆ ನಿಜವಾಗಿ ಇಡೀ ಸಮಾಜದ ಮೇಲೂ ರಾಷ್ಟ್ರದ ಮೇಲೂ ಇದರಿಂದ ಯಾವ ಕಠಿಣವಾದ ಪರಿಣಾಮವುಂಟಾಗುವುದೆಂದು ಸರಿಯಾಗಿ ಆಲೋಚಿಸಿದರೆ ತಿಳಿಯುವುದು. ಬಡತನದ ಕಾರಣದಿಂದಲೇ ಹಿಂದೀ ಗೃಹಗಳಲ್ಲಿ ನಿಜವಾದ ಸುಖವು ಇರುವುದಿಲ್ಲ. ಒಂದು ಸಣ್ಣ ಮುರುಕು ಮನೆಯಲ್ಲಿ ಹಲವು ಮಕ್ಕಳಿಂದ ಕೂಡಿ ಒಬ್ಬನು ತನ್ನ ಬಡತನದೊಂದಿಗೆ ಸಂಸಾರ ಮಾಡುವುದೆಂದರೆ ಸಾಧಾರಣದ ಮಾತಲ್ಲ. ಈ ದೊಡ್ಡ ಸಂಸಾರದೊಳಗಿನ ಪ್ರತಿಯೊಂದು ವ್ಯಕ್ತಿಯೂ ಅರ್ಧ ಉಪವಾಸದಿಂದ ನರಳಬೇಕಾಗುವುದು. ಮನೆಯ ಶುಚಿತ್ವವು ಇರುವುದಿಲ್ಲ. ರೋಗಾದಿಗಳುಂಟಾದರೆ ಅದರ ಬಗ್ಗೆ ತಕ್ಕ ಚಿಕಿತ್ಸೆ ನಡಿಸಲಿಕ್ಕೆ ಅವರಿಗೆ ಧನಸಹಾಯ ಇರುವುದಿಲ್ಲ. ಮಕ್ಕಳಿಗೆ ಒಂದು ಸಾಧಾರಣ ವಿದ್ಯಾಭ್ಯಾಸವನ್ನು ಕಲಿಸಲೆಂದರೆ ಈಗಿನ ವಿದ್ಯಾಭ್ಯಾಸದ ಖರ್ಚು ವಿಪರೀತವಾಗಿದೆ. ಆದುದರಿಂದ ಮಕ್ಕಳು ಬೆಳೆದು ಪುರುಷರಾಗುವ ಮೊದಲೇ ನಿರ್ವೀರ್ಯರಾಗುವುದು ಆಶ್ಚರ್ಯವಲ್ಲ. ಸರಕಾರವು ಈ ಬಡತನದ ಪರಿಹಾರಕ್ಕೆ ಏನೂ ಮಾಡಲೊಲ್ಲದೆಂಬುದಂತೂ ಸ್ಥಿರನಿಶ್ಚಯವಿದೆ. ಆದ್ದರಿಂದ ಹಿಂದೂಸ್ಥಾನದ ಶ್ರೀಮಂತರಿಗೆ ಈ ಕಡೆಗೆ ಗಮನ ಕೊಡುವ ಕರ್ತವ್ಯವಿದೆ. ಏಕೆಂದರೆ ರಾಷ್ಟ್ರ ಜೀವನದ ಉನ್ನತಿಯು ಅಧಿಕ ಸಂಖ್ಯಾಕರಾದ ಈ ಸಹಾಯಹೀನ ಬಡವರನ್ನು ಹೊಂದಿಕೊಂಡಿರುತ್ತದೆ. ಸಾರ್ವಜನಿಕ ಸಂಸ್ಥೆಗಳಾದರೂ ಏರ್ಪಟ್ಟು ಬಡವರ ಹಿತವನ್ನು ಸಾಧಿಸುವಂತಾದರೆ ಉತ್ತಮವಿದ್ದಿತು.

ಪ್ರಾಥಮಿಕ ವಿದ್ಯಾಭ್ಯಾಸ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡಬೇಕೆಂದು ಎಂದಿನಿಂದಲೂ ಪ್ರಯತ್ನಗಳು ನಡಿಯುತ್ತಿವೆ. ಇತ್ತೀಚೆಗಿನ ಪ್ರಾಥಮಿಕ ವಿದ್ಯಾಭ್ಯಾಸದ ವಿಕಾಸವನ್ನು ನೋಡಿದರೆ ಹಿಂದೀಯರಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಮತ್ತಷ್ಟು ದೂರವಾಗುತ್ತಾ ಬಂದಿದೆಯೆನ್ನಬೇಕಾಗುವುದು. ಪೂರ್ವಕಾಲದಲ್ಲಿ ಒಂದನೇ ತರಗತಿಯ ಬಾಲಕರೆಂದರೆ ಒಂದು ಪಾಠಪುಸ್ತಕ, ಒಂದು ಸ್ಲೇಟು ಮತ್ತು ಹಳೇ ಗಜೇಟು ಕಾಗದದ ಒಂದು ಕೋಪಿಪುಸ್ತಕ ಇಷ್ಟರೊಳಗೆ ಒಂದು ವರ್ಷವು ಮುಗಿಯುತ್ತಿತ್ತು. ಈಗ ಅದೇ ತರಗತಿಗೆ ನಾಲ್ಕೈದು ಪಠ್ಯಪುಸ್ತಕಗಳೂ, ಒಳ್ಳೇ ಕಾಗದದ ಎಕ್ಸರಸೈಜ್ ಬೂಕುಗಳೂ ಇನ್ನೂ ಹಲವು ತರದ ಉಪಕರಣಗಳೂ ಬೇಕಾಗಿ ಸಂಬಳಕ್ಕಿಂತಲೂ ಪುಸ್ತಕಗಳ ಖರ್ಚು ಹೆಚ್ಚಾಗಿ ಬಂದಿದೆ. ಇಷ್ಟು ಪುಸ್ತಕಗಳ ಓದುವಿಕೆಯ ಏರ್ಪಾಡಿನಿಂದ ವಿದ್ಯಾಭ್ಯಾಸವು ಹಿಂದಿಗಿಂತಲೂ ಚೆನ್ನಾಗಿದೆಯೊ ಎಂದು ನಾವು ಹೇಳಲಾರೆವು. ಆದರೆ ಇದರಿಂದ ವಿದ್ಯಾಭ್ಯಾಸವನ್ನು ಎಲ್ಲಾ ಮನೆಗಳ ಮಕ್ಕಳಿಗೆ ಮುಟ್ಟುವಂತೆ ಮಾಡುವುದು ಮತ್ತಷ್ಟು ಕಷ್ಟವಾಗಿ ಬಂದಿದೆ ಎಂಬುದನ್ನು ಹೇಳಬೇಕಾಗಿದೆ. ಈಗ ಪ್ರೌಢ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿವೇತನಗಳು ಮೊದಲಾಗಿ ಸಹಾಯಗಳು ಹೆಚ್ಚುತ್ತಾ ಬರುತ್ತಿವೆ. ಆದರೆ ಪ್ರೌಢ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ದಿನಗಳು ಹೋಗಿರುವುವೆಂಬುದನ್ನು ನಾವು ತಿಳಿದುಕೊಳ್ಳುವುದು ಉತ್ತಮವಿದೆ. ಪ್ರೌಢವಿದ್ಯಾಭ್ಯಾಸವು ವಿದ್ಯಾರ್ಥಿಗಳ ಜೀವನ ಕ್ರಮವನ್ನು ಪ್ರತ್ಯೇಕ ಒಂದು ರೀತಿಗೆ ಪರಿವರ್ತಿಸುವುದು; ಮತ್ತು ಅಂತಹ ಜೀವನ ಕ್ರಮದ ಯುವಕರಿಗೆ ಇರುವ ಜೀವನೋಪಾಯಗಳು ಅತ್ಯಲ್ಪವಾಗಿವೆ. ಆದುದರಿಂದ ಪ್ರೌಢ ವಿದ್ಯಾಭ್ಯಾಸದ ಕಡೆಗೆ ನಮ್ಮ ವಿದ್ಯಾರ್ಥಿ ಸಹಾಯಕ ಮಂಡಳಿಗಳು ಲಕ್ಷ್ಯಕೊಡುವುದಕ್ಕಿಂತ, ಪ್ರಾಥಮಿಕ ವಿದ್ಯಾಭ್ಯಾಸ ಪ್ರಸಾರಕ್ಕೆ ಹೆಚ್ಚು ಗಮನವಿಡುವುದು ಉತ್ತಮ. ಅದರಿಂದ ಒಬ್ಬನ ಬದಲಿಗೆ ಹತ್ತು ಜನರಿಗೆ ವಿದ್ಯಾದಾನ ಮಾಡಿದಂತಾಗುವದಲ್ಲದೆ ಸಾರ್ವಜನಿಕ ಜೀವನಕ್ರಮದಲ್ಲಿ ಸುಧಾರಣೆಯನ್ನು ಕಲ್ಪಿಸಿದಂತಾಗುವುದು.

ಅಧೀನ ಜನಾಂಗ.

ಹಿಂದೂಸ್ಥಾನದಲ್ಲಿ ಸ್ಯಾಮನ್ ಹರತಾಳದ ಮೆರವಣಿಗೆಯ ಸಿನೆಮಾವನ್ನು ಸರಕಾರವು ಪ್ರದರ್ಶಿಸಲು ಬಿಡದಿರುವಾಗ ಅಮೇರಿಕದಲ್ಲಿ ಮಿಸ್ ಮೇಯೋಳವಳ "ಮದರ್ ಇಂಡಿಯಾ" ಎಂಬ ಹಿಂದೀಯರಿಗೆ ಅಪಮಾನಕರವಾದ ಪುಸ್ತಕದ ನಾಟಕ ರೂಪವು ರಚಿಸಲ್ಪಟ್ಟು ಅಭಿನಯಿಸಲ್ಪಡುತ್ತಿದೆ. ಒಂದು ಕಡೆಯಲ್ಲಿ ಹಿಂದೂಸ್ಥಾನದ ಸ್ವಾಭಿಮಾನದ್ಯೋತಕ ಪ್ರದರ್ಶನಕ್ಕೆ ನಿಷೇಧ; ಇನ್ನೊಂದು ಕಡೆ ಹಿಂದೀಯ ಮಾನಭಂಗದ ಭಯಂಕರ ಕಲ್ಪನೆಗೆ ಪ್ರೋತ್ಸಾಹ! ಇದೀಗ ಹಿಂದೀ ಜನಾಂಗವು ಪ್ರಕೃತ ಅನುಭವ ಮಾಡುವ ಪರಿಸ್ಥಿತಿ. ಹರತಾಳದ ಸಿನೆಮಾವನ್ನು ತಡೆಯಿಸುವುದಕ್ಕೆ ಬ್ರಿಟಿಷ ಸರಕಾರವು ಕಾರಣವಿದೆ; ಹಾಗೆಯೇ ಈ ಮದರ ಇಂಡಿಯಾ ನಾಟಕದ ಸೂತ್ರಧಾರನು ಬ್ರಿಟಿಷನಲ್ಲವೆಂದು ಹೇಳಲಾಗುವುದಿಲ್ಲ. ಇತ್ತೀಚೆಗೆ ಇನ್ನೊಬ್ಬ ಬಿಳೇ ಮಹನೀಯರು ಹೊಸದೊಂದು ತತ್ವವನ್ನು ಮುಂದೆ ಮಾಡಿ ಬಿಳಿಯವರನ್ನು ಒಟ್ಟುಗೂಡಿಸಲು ಯತ್ನಿಸುತ್ತಿರುವರು. ಕಪ್ಪು ಜನರನ್ನು ಆಳಲಿಕ್ಕಾಗಿ ಬಿಳಿಯವರು ಒಂದಾಗಬೇಕು; ಬಿಳಿಯರಲ್ಲಿ ಒಳಭೇದಗಳಿದ್ದರೆ ಕಪ್ಪು ಜನರನ್ನು ಆಳುವುದು ಕಷ್ಟ ಎಂಬುದೇ ಈ ನೂತನ ತತ್ವದ ಒಳಗುಟ್ಟು. ಮದರ್ ಇಂಡಿಯಾ ಪುಸ್ತಕಕ್ಕೆ ಕೊಟ್ಟ ಪ್ರಕಟಣೆ, ಅದರ ಮೇಲೆ ಅದಕ್ಕೆ ಕೊಟ್ಟ ನಾಟಕ ರೂಪ, ಮತ್ತು ಅಮೇರಿಕದಲ್ಲಿ ಇದನ್ನು ಪ್ರಚಾರಪಡಿಸಲು ಬ್ರಿಟಿಷರು ಪಡುವ ಸಾಹಸ ಇತ್ಯಾದಿಗಳನ್ನು ನೋಡಿದರೆ, ಇವುಗಳೆಲ್ಲ ಆ ನೂತನ ತತ್ವಾಚರಣೆಯನ್ನೇ ಉದ್ದೇಶಿಸುತ್ತವೆ ಎಂದು ಅನುಮಾನವಾಗುತ್ತದೆ. ಬ್ರಿಟಿಷರೊಳಗೂ ಅಮೇರಿಕನರೊಳಗೂ ಬಹು ಕಠಿಣವಾದ ವ್ಯಾಪಾರೀ ಮೇಲಾಟವು ಬೆಳೆದುಬಂದಿದೆ. ಅದರೊಡನೆ, ಲೋಕದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದ ಬ್ರಿಟಿಷ ನೌಕೆಯನ್ನು ಹಿಂದೆ ಹಾಕಿ ಲೋಕದ ಅಗ್ರಸ್ಥಾನವನ್ನು ತಾನು ಪಡೆಯಬೇಕೆಂದು ಅಮೇರಿಕವು ಒಂದರ ಹಿಂದಾಗಿ ಒಂದು ಯುದ್ಧದ ಹಡಗುಗಳನ್ನು ಕಟ್ಟಿಸುತ್ತಿದೆ. ನೋಡಿದರೆ ಚಿಹ್ನೆಗಳು ಒಳ್ಳೆಯದಾಗಿ ಕಾಣುವುದಿಲ್ಲ. ಯುದ್ಧದ ಪೂರ್ವ ಚಿಹ್ನೆಗಳು ಈಗಲೇ ಕಾಣಿಸ ಹತ್ತಿವೆ. ಈ ಮಧ್ಯದಲ್ಲಿ ಇವರ ಪರಸ್ಪರ ದ್ವೇಷಾಸೂಯೆಗಳನ್ನು ವರ್ಣವಿದ್ವೇಷದಿಂದ ಮುಳುಗಿಸಿ ಬಿಡಲು ಈ ಹೊಸ ತರದ ಪ್ರಯತ್ನಗಳು ನಡೆಯುತ್ತಿವೆಯೆಂದು ನೆನಸಲೂ ಬಹುದು. ಒಟ್ಟಾರೆ ಕಪ್ಪು ಜನರನ್ನು ಅಧಿಕರಿಸುವ ಅಭಿಲಾಷೆಯನ್ನು ಹುಟ್ಟಿಸಿ, ಬಿಳಿಯವರೆಂಬ ವರ್ಣಾಭಿಮಾನವನ್ನು ಹುಟ್ಟಿಸಿ, ಅಂತಃ ಕ್ಲೇಶಗಳನ್ನು ಮರೆಯಿಡಿಸುವುದೇ ಈ ಮದರ್ ಇಂಡಿಯಾ ಚಳವಳದ ಅಂತರಂಗದ ಉದ್ದೇಶವೆಂದೂ ಊಹಿಸಬಹುದಾಗುತ್ತದೆ.

ತುರ್ಕಿಯಲ್ಲಿ ಮಿಶನರಿಗಳು.

ತುರ್ಕಿಯಲ್ಲಿ ಅಮೇರಿಕನ್ ಮಿಶನರಿಗಳು ಸ್ಥಾಪಿಸಿದ ಒಂದು ಹುಡುಗಿಯರ ಶಾಲೆಯನ್ನು ಅಲ್ಲಿಯ ಸರಕಾರವು ಮುಚ್ಚಿಸಿತು. ಮಿಶನರಿಗಳು ತಾವು ವಿದ್ಯಾಪ್ರಸಾರ ಮಾಡುವೆವೆಂಬ ನಿಸ್ವಾರ್ಥ ನೆವನದಿಂದ ಶಾಲೆಗೆ ಬರುವ ಹುಡುಗಿಯರನ್ನು ಮತಾಂತರಗೊಳಿಸಿದುದೇ ಇದರ ಕಾರಣವಂತೆ. ಇಷ್ಟರೊಳಗೆ ಮೂವರು ತುರ್ಕಿ ಹುಡುಗಿಯರನ್ನು ಮಿಶನ್ ಮತಕ್ಕೆ ಸೇರಿಸಿಕೊಂಡಿರುವರೆಂದೂ ತಿಳಿದುಬರುತ್ತಿದೆ. ಮಿಶನೆರಿಯವರು ಮತಾಂತರಗೊಳಿಸುವ ಕ್ರಮವನ್ನು ತಿಳಿದವರಿಗೆ ತುರ್ಕಿಯಂತಹ ರಾಷ್ಟ್ರೀಯ ಸರಕಾರವು ಮಿಶನೆರಿಯವರ ಪ್ರತಿಯಾಗಿ ಮಾಡಿದ ಈ ಕಾರ್ಯವನ್ನು ನೋಡಿ ಆಶ್ಚರ್ಯವಾಗಲಾರದು. ಇಂತಹ ಶಾಲೆಗಳಿಂದ ಇವರು ವಿದ್ಯಾಪ್ರಸಾರ ಮಾಡಿ ವಿದ್ಯಾದಾನದ ಪುಣ್ಯಕಾರ್ಯವನ್ನು ಮಾಡುವರಾದರೂ ಅವರು ಅದರೊಟ್ಟಿಗೆ ವಿದ್ಯಾರ್ಥಿನಿಗಳಲ್ಲಿ ಮತಶ್ರದ್ಧೆಯನ್ನು ಕಡಿಮೆಮಾಡುವರಲ್ಲದೆ ಅವರೊಳಗಿನ ರಾಷ್ಟ್ರಾಭಿಮಾನವನ್ನು ಕಳೆದು ಹಾಕುವರೆಂಬುದು ನಮ್ಮ ದೇಶಕ್ಕಾದರೂ ಅನುಭವವಿದ್ದ ವಿಷಯ. ಮಂಗಳೂರಿನಲ್ಲಿಯೇ ಹಲವು ರೋಮನ್ ಕೆಥೋಲಿಕರ ಸ್ತ್ರೀಪಾಠಶಾಲೆಗಳೂ ಕೋಲೇಜುಗಳೂ ಇವೆ. ಇವುಗಳಿಂದ ಹಿಂದೂ ಮತಾಭಿಮಾನವು ಹಿಂದೂ ಗೃಹಗಳಿಂದ ಕಡಿಮೆಮಾಡಲ್ಪಡುವುದೆಂದು ತಿಳಿಯಬೇಕು. ಆದರೂ ಮಂಗಳೂರಲ್ಲಿ ಏರ್ಪಟ್ಟ ಒಂದೇ ಒಂದು ರಾಷ್ಟ್ರೀಯ ಪಾಠಶಾಲೆಯು ಸರಿಯಾಗಿ ಕೆಲಸಮಾಡಲಾರದಾಯಿತು. ಸ್ವತಂತ್ರವಾದ ತುರ್ಕಿಗೂ ನಮಗೂ ಇರುವ ವ್ಯತ್ಯಾಸವೆಂದರೆ ಇಷ್ಟೇ. ಅವರು ಮಿಶನ್ ಸಂಸ್ಥೆಗಳನ್ನು ಮುಚ್ಚಿಸಿದರೂ ಅವರ ಸ್ತ್ರೀ ವಿದ್ಯಾಭ್ಯಾಸಕ್ಕೆ ಭಂಗವೊದಗುವುದಿಲ್ಲ. ಆದರೆ ನಮಗೆ ಅವರಿಲ್ಲದಿದ್ದರೆ ಬೇರೆ ಗತಿಯಿಲ್ಲ.

ಹೊಸ ತರದ ಸಮ್ಮೇಲನ.

ವಿಜ್ಞಾನವು ನಾವು ಎಣಿಸಲಾಗದ ಎಂತಹ ಆಶ್ಚರ್ಯಕರ ಘಟನೆಗಳನ್ನು ಮಾಡಿಸಬಲ್ಲುದೆಂದು ಈಗಿನ ವ್ಯಾರ್ಲೆಸ್‌ನ ನೂತನ ಆವಿಷ್ಕಾರಗಳಿಂದ ತಿಳಿಯುವುದು. ಕೆಲವು ದಿನಗಳ ಹಿಂದೆ ಅಮೇರಿಕದ ಕೆಲವು ಇಂಜಿನಿಯರರು ನ್ಯೂಯೋರ್ಕಿನಲ್ಲಿಯೂ ಇಂಗ್ಲೆಂಡಿನ ಕೆಲವರು ಲಂಡನಿನಲ್ಲಿಯೂ ಕುಳಿತು ಸಭೆ ಸೇರಿದರು. ಅಮೇರಿಕದವರ ಭಾಷಣವಾಗಿ ಇಂಗ್ಲೆಂಡಿನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕೆಲವು ಸಂಭಾಷಣಗಳ ವಿನಿಮಯವಾಯಿತು. ಸಾವಿರಾರು ಮೈಲುಗಳ ಅಗಲುವಿಕೆಯಿಂದಲೂ ಸಭೆ ಸೇರಬಹುದೆಂಬುದು ಪಾಶ್ಚಾತ್ಯ ಶೋಧನಾಕ್ರಮಕ್ಕೆ ವಿಶೇಷ ಗೌರವದ್ದಾಗಿದೆ. "ನಮ್ಮ ಪುರಾಣಗಳಲ್ಲಿಯೂ ಇದೆ" ಎಂಬುದನ್ನು ನಮಗೆ ಹೇಳಲು ಇನ್ನು ಸಂಕೋಚವಾಗದಿದ್ದರೂ ಪಾಶ್ಚಾತ್ಯರ ಈ ಪ್ರಚಂಡ ಆವಿಷ್ಕಾರಗಳಿಗಾಗಿ ನಾವು ತಲೆದೂಗಲೇಬೇಕು.

ನೋಟಗಳು.
NOTE....S.

ಮದ್ರಾಸಿನ ವಿಕ್ಟೋರಿಯಾ ಹೋಸ್ಟೆಲಿನಲ್ಲಿ ಕೆಲವು ದಿವಸಗಳ ಹಿಂದೆ ಸರ್ವ ಜಾತಿ ಮತಸ್ಥರ ತರುಣರು ಸೇರಿ ಒಂದು ಸಹ ಪಂಕ್ತಿಭೋಜನವು ನಡೆಯಿತು. ಇದರಲ್ಲಿ ಮಂಗಳೂರಿನ ಹಲವು ಮಂದಿ ಮಾನ್ಯಗೃಹಸ್ಥರ ಮಕ್ಕಳು ಸಹ ಇದ್ದರು. "ಗುರುವಿನಂತೆ ಶಿಷ್ಯ, ತಂದೆಯಂತೆ ಮಗ" ಎಂದು ಹಿರಿಯರ ನಾಣ್ನುಡಿಯು ಇಲ್ಲಿ ಸಾರ್ಥಕವಾಯಿತು.

• • • •

ಇದರಲ್ಲಿಯೇ ಸಹ ಪಂಕ್ತಿಭೋಜನ ಮಾಡಿದ ಒಬ್ಬ ಪ್ರತ್ಯಕ್ಷದರ್ಶಿಯು ಹೀಗೆ ಹೇಳುತ್ತಿರುವರು. "ಆ ಯುವಕರೇ ತಮ್ಮ ಜಾತಿಮತಗಳ ಆಚರಣೆಗೆ ವಿರುದ್ಧವಾಗಿ ವರ್ತಿಸಿದರೆ ಅನಾದಿ ಕಾಲದಿಂದಲೂ ನಡೆದು ಬಂದಿರುವ ಕುಲಾಚಾರಗಳ ಪಾಡೇನು?" ಬಹುಶಃ ಈ ಬುದ್ಧಿಯು ಇವರಿಗೆ ಊಟವಾದೊಡನೆ ಸಿಗ್ರೇಟು ಸೇದುವಾಗ ಬಂದಿರಬಹುದು.

• • • •

ಇನ್ನುಮುಂದೆ Inter Marriageಗಳು ನಡೆದರೆ ಇಡೀ ಸಮಾಜಗಳ ಏಳಿಗೆಮಾಡಿದಂತಾಗುವುದು.

• • • •

ತಾಲೂಕು ಬೋರ್ಡು ಇಲೆಕ್ಷನ್ ಪ್ರಾರಂಭ ಸಮಯ "ಮುಲ್ಕಿ ಸರ್ಕಲಿನ ತಾಲೂಕು ಬೋರ್ಡು ವೋಟರರಿಗೆ ವಿನಂತಿ" ಎಂದು ೬ ಜನ ದೊಡ್ಡ ಮಹನೀಯರು ಕೂಡಿ ಒಂದು ವಿನಂತಿಯನ್ನು ಪ್ರಕಟಿಸಿದ್ದಾರೆ. ವಿನಂತಿಯನ್ನು ಎಲ್ಲಾ ವೋಟರರು ಒಂದು ಅಕ್ಷರ ಬಿಡದೆ ಓದಿದರೆ ಉತ್ತಮ.

• • • •

ನಿಜವಾಗಿ ದೇಶಭಕ್ತಿಯೂ ಜನರ ಪ್ರೀತಿಯೂ ಇರುವವರಿಗೆ ವಿನಂತಿ ಪತ್ರಗಳ ಪ್ರಯೋಜನವು ಇರಲಾರದು. ವೋಟರರು ತಮ್ಮ ಮತವನ್ನು ಇಂಥವರಿಗೇನೇ ಕೊಡುವಂಲ್ಲದೆ ಮತ್ತಾರಿಗೂ ಕೊಡುವ ಹಾಗಿಲ್ಲ.

• • • •

ಮುಲ್ಕಿ ಸರ್ಕಲಿನಲ್ಲಿ (Anti Voters) ಎಂಟಿ ವೋಟರರ ಒಂದು ಸಂಘವು ಮಾರ್ಪಟ್ಟು ಯಾರಿಗೂ ತಮ್ಮ ಮತಗಳನ್ನು ಕೊಡಬಾರದಾಗಿ ಒಂದು ಠರಾವು ಮಂಜೂರಾಗಿದೆಯಾಗಿ ಒಂದು ಪತ್ರವು ಬಂದಿರುತ್ತದೆ.

• • • •

ಈ ಸಂಘವು ಎಷ್ಟರ ಮಟ್ಟಿಗೆ ಕಾರ್ಯಕಾರಿಯಾಗಿ ನಿಲ್ಲುವುದೆಂಬುದು ಅದಕ್ಕೆ ಸೇರಿದವರ ಮೇಲೆ ಹೊಂದಿರುವುದು.

• • • •

ಸ್ಯಾಮನ್ ಕಮಿಶನ ಮೇಲೆ ಅವಿಶ್ವಾಸದ ಠರಾವು ಮಂಜೂರಾದೊಡನೆ ಅವಿಶ್ವಾಸದ ಠರಾವಿಗೆ ವಿರೋಧವಾಗಿ ಮತವನ್ನು ಕೊಟ್ಟ ಸರ್ ಬ್ಲೆಸಿಲ್‌ಬ್ಲೆಕಟರ ತಲೆಯ ಮೇಲೆ ಮೇಲಿನಿಂದ ಒಂದು ಕೇಸ್ ಬಿದ್ದು ಕೊಂಚ ಸಮಯದ ವರೇಗೆ ಬೋದತಪ್ಪಿತು. ಕೂಡಲೇ ಡಾಕ್ಟರರು ಬಂದು ಇವರನ್ನು ಪರೀಕ್ಷೆ ಮಾಡಿದರು. ಇವರಿಗೆ ಸದ್ಯಕ್ಕೆ ಏನು ಆಗಲಿಕ್ಕಿಲ್ಲ ಎಂದು ಡಾಕ್ಟರರ ಅಭಿಪ್ರಾಯ.

• • • •

ಇಂದೂರಿನ ತುಕೋಜಿರಾಯರ ಮದುವೆ ಸಮಾರಂಭಕ್ಕೆ ಅಮೇರಿಕದಿಂದ ೪೦೦ ಜನ ಅಮೇರಿಕನ್ ಮಹಿಳೆಯರು ಬರುತ್ತಿರುವರಂತೆ. ತುಕೋಜಿರಾಯರ ಪ್ರತಾಪವೇ.

• • • •

ನಭಾ ಮಹಾರಾಜರಿಗೆ ತಮ್ಮ ತಿಂಗಳ ಶಾಸನ ಕಡಿಮೆ ಮಾಡಿ ಆ ಊರಿನಿಂದ ಗಡಿಪಾರು. ಉಳಿದ ಸಂಸ್ಥಾನದ ರಾಜರುಗಳಿಗೆ ಒಂದು ದೃಷ್ಟಾಂತ.

• • • •

ನಮ್ಮ ಮಂಗಳೂರಿನಲ್ಲಿ ಜರಗಲಿಕ್ಕಿರುವ ಆಯುರ್ವೇದ ಚತುರ್ಥ ಸಮ್ಮೇಲನವು ಏಪ್ರಿಲ್‌ನಲ್ಲಿಯಂತ ಒಬ್ಬರ ನಿಶ್ಚಿತ. ಇನ್ನೊಬ್ಬರದು ದಶಂಬರಕ್ಕೆ ಎಂದು ವಾದ.

• • • •

ವಾದದ ನಡುವೆ ಕೆಲ ಗೃಹಸ್ಥರಿಗೆ ಪುರಸೊತ್ತು ಇಲ್ಲವಾಗಿ ತಮ್ಮ ಓನರರಿ ಕೆಲಸಕ್ಕೆ ರಾಜಿ. ಸಮ್ಮೇಲನ ಕೂಡಿಸಬೇಕೆಂದಿರುವವರೊಳಗೇನೆ ಕಲಹ. ಯಾರ ಹೆಸರು ಮೇಲ್ ತರಲು ಈ ಸಮ್ಮೇಲನವು ಎಂದು ತಿಳಿಯುವುದಿಲ್ಲ.

ಅನುಕ್ರಮಣಿಕೆ.

ಅಗ್ರಲೇಖ,
ಎಸೆಂಬ್ಲಿಯ ನಿರ್ಧಾರ
ಪರದೇಶ ವರ್ತಮಾನ
ಸ್ಫುಟವಿಚಾರಗಳು
ಸೂಚನೆಗಳು
ವರ್ತಮಾನ ಸಂಗ್ರಹಗಳು
ಒಳದೇಶ
ದಕ್ಷಿಣ ಕನ್ನಡ—ಮಂಗಳೂರು, ಮುಂಡ್ಕೂರು, ಹೊಸದುರ್ಗ, ಬಂಟವಾಳ, ಕಾಸರಗೋಡು, [illegible]
[illegible]
[illegible]
[illegible]
[illegible]
[illegible]

ಸ್ವದೇಶಾಭಿಮಾನಿ.
[illegible]

ಎಸೆಂಬ್ಲಿಯ ನಿರ್ಧಾರ

ರೆ [illegible] ಇಂಗ್ಲೆಂಡಿನಲ್ಲಿ [illegible] ಯನ್ನು ಧ್ವನಿಸಿದರು. [illegible] ಎಸೆಂಬ್ಲಿಯನ್ನು [illegible] ಆದರೆ ಸ್ಯಾಮನ್ ಕಮಿಶನ್ನಿನಿಂದ [illegible] ದೇಶದಲ್ಲಿ [illegible] ದನ್ನು ಅವರು [illegible]

“ಕಮಿಶನ್ನಿನ ಆ ಬಹಿಷ್ಕಾರವನ್ನು [illegible] ವವರು, ನಮ್ಮ ಅರ್ಜಿಯು [illegible] ವಿಶಾಲವೂ ಭಿನ್ನಭಿನ್ನವೂ ಆದ ಜನತೆಯನ್ನು [illegible] ಪ್ರತಿನಿಧಿಸುವುದಿಲ್ಲವೆಂದು ತಿಂಗಳುಗಳು ಕಳೆದಷ್ಟಕ್ಕೆ ಅವರಿಗೆ ತಿಳಿದುಬರುವುದಾಗಿ ನನ್ನ ಅಭಿಪ್ರಾಯವಿದ್ದೆ [illegible] “ಲೋರ್ಡ ಬರ್ಕನ್ ಹೆಡ್ಡರ ಈ ಅಭಿಪ್ರಾಯವು [illegible] ದ್ದಾಗಿದೆ. [illegible] ಜನರ ಆಕೈಕೆಯನ್ನು ವಹಿಸಿಕೊಂಡಿರುವ ಈ ಬ್ರಿಟಿಷ ಮಹನೀಯರು ಯಾವ ಸಂಜಯನ ಮೂಲಕ ಭಾರತ [illegible] ರಾಜಕೀಯ ಕ್ಷೇತ್ರವನ್ನು ನೋಡುತ್ತಿರುವಂತಾಗಿ ತಿಳಿಯುವುದಿಲ್ಲ. ಇಷ್ಟು ಪರಿಷತ್ತುಗಳೂ, ಬಹಿಷ್ಕಾರಗಳೂ ಆಗಿ ಇವು ಕೌನ್ಸಿಲುಗಳೂ ತಮ್ಮ ಸ್ವಾಭಿಪ್ರಾಯವನ್ನು ವ್ಯಕ್ತಗೊಳಿಸಿ ಅಜ್ಞಸ್ವಾಜ್ಞರೂ ಮೊದಲೇಟ [illegible] ಹಿಂದೂ ಮುಸಲ್ಮಾನರು ಏಕಕಂಠದಿಂದ ಸ್ಯಾಮನ್ ಕಮಿಶನ್ ಒಪ್ಪುವುದಿಲ್ಲವೆಂದು ಸಾರುತ್ತಿರುವಾಗ, ಇವರು ಜನರ ಪ್ರತಿನಿಧಿಗಳಲ್ಲವೆಂದು ಆ ಗೊಡ್ಡು ಸಮಜಾಯಿಸಿಕೆಯನ್ನು ಹಿಂದೀ [illegible] ಮೇಲೆ ಲಕ್ಷ್ಯವಿರದ ಆ ಬ್ರಿಟಿಷ ಮತದಾರ ಮಂಡಳಿಯ ಮೋಹಕ್ಕಾಗಿ ಮಾತ್ರವೇ ಅವರು ಉಪಯೋಗಿಸಿಕೊಳ್ಳಬೇಕು.

ಈ ರೀತಿಯಲ್ಲಿ ಲೊರ್ಡ ಬರ್ಕನ್ ಹೆಡ್ಡರು ಹಿಂದೀಯರ ಆಶಯಗಳ ಅಜ್ಞಾನವನ್ನು ತೋರಿಸಿದಾಗ ಕಮಿಶನ್ನಿನ ಅಧ್ಯಕ್ಷರಾದ ಸ್ಯಾಮನರವರೂ ಈ ಆಶಯಗಳ ರಹಸ್ಯವನ್ನು ತಿಳಿಯಲೆತ್ನಿಸಿಲ್ಲ. ಇಂಗ್ಲೆಂಡಿನಿಂದ ತನ್ನೊಡನೆ ತಂದ ಆ ಕೆಲವು ಲೊರ್ಡ ಬರ್ಕನ್ ಹೆಡ್ಡರ ಅಭಿಪ್ರಾಯಗಳಲ್ಲದೆ ಸ್ಯಾಮನರಲ್ಲಿ ಬೇರೆ ಸ್ಟಾಕ್ ಇರುವಂತೆ ತೋರುವುದಿಲ್ಲ. ಅವರು ಹೋದ ಕಡೆಯಲ್ಲಿ ನಿರ್ದಾಕ್ಷಿಣ್ಯ ಬಹಿಷ್ಕಾರವೇ ಅವರಿಗೆ ಲಾಭವಾಗುವುದನ್ನು ನೋಡಿದರೂ ಅವರು ಜನತೆಯ ಕಲ್ಪನೆಯನ್ನು ಸೇರಿಲ್ಲವೆಂಬುವುದು ತಾನಾಗಿ ವ್ಯಕ್ತವಾಗುವುದು.

ಆದುದರಿಂದ ಎಸೆಂಬ್ಲಿಯಲ್ಲಿ ಅಷ್ಟು ಸ್ಪಷ್ಟವಾಗಿ ಈ ಕಮಿಶನ್ನಿಗೆ ನಿರೋಧವು ಉಂಟಾದುದು ವಿಶೇಷವಲ್ಲ. ಜಲ್ಪಿಕೇರಿ

ಅಲ್ಪೀಖಾನರಂತಹರು ಇರಲಿಲ್ಲವೆಂದಲ್ಲ. ಈ ರಾಜಭಕ್ತರು ಸರ್ ಜೋನ್ ಸ್ಯಾಮನರ ಸಹಕಾರದ ಕೈಯನ್ನು ಹೊಗಳಿದರು. ಈ ಕಮಿಶನ್ನಿನಿಂದ ಅಲ್ಪ ಸಂಖ್ಯಾತ ಸಮಾಜಗಳಿಗೆ (minorities) ಬಹಳ ಪ್ರಯೋಜನವಿದೆಯೆಂದರು. [illegible]

[illegible]

ಪರದೇಶ ವರ್ತಮಾನ

[illegible]

—ಇಜಿಪ್ಟದೇಶದಲ್ಲಿ ಸಾಧಾರಣ ೩೫೦೦ ವರುಷಗಳ ಹಿಂದೆ ಸತ್ತ ಒಂದು ಪತಿವ್ರತಾ ಹೆಂಗಸಿನ ಕೈಯು ಇತ್ತಲಾಗೆ ಸಿಕ್ಕಿಯದೆ. ಈ ಕೈಯು ಆರ್ಥರ ಎಡಾಮ್ಸ ಎಂಬವರು ಇಜಿಪ್ಟದೇಶದಲ್ಲಿ ಸಂಚರಿಸುವಾಗ ಸಿಕ್ಕಿತು. ಇವರು ಒಂದು ಹೊಸ್ಟೇಲಿನಲ್ಲಿ ಉಳಕೊಂಡಿರುವಾಗ ಒಬ್ಬ ಐಶ್ವರ್ಯವಂತ ಇಜಿಪ್ಟ ಮನುಷ್ಯನ ಹತ್ತರ ಒಂದು ಹೆಂಗಸಿನ ಕೈ (ನನ್ನಿಕೈ) ಇದೆ ಎಂದು ಹೊಟೇಲಿನವನು ಹೇಳಿದನು. ಇದು ಆ ಧನಿಕನಿಗೆ ಒಂದು ಸಮಾಧಿಯಲ್ಲಿ ಭಂಗಾರದ ಪೆಟ್ಟಿಗೆಯಲ್ಲಿ ಸಿಕ್ಕಿತಂತೆ. ಈ ಪೆಟ್ಟಿಗೆಯ ಕ್ರಯವು ೨೫,೦೦೦ ಪೌಂಡು ಆಗಿತ್ತಂತೆ. ಈ ಕೈಯನ್ನು ಕೈಯಲ್ಲಿ ಹಿಡಿದವರಿಗೆ ರೋಗಗಳು ಗುಣವಾಗುತ್ತಿದ್ದವು. ಎಡಾಮ್ಸರು ಈ ಧನಿಕನಿಂದ ೫೦ ಪೌಂಡಿಗೆ ಇದನ್ನು ತೆಗೆದುಕೊಂಡರು. ಈ ಕೈ ಸಮಾಧಿಯಲ್ಲಿರುವ ಪೆಟ್ಟಿಗೆಯಲ್ಲಿ ಸಿಕ್ಕಿದಾಗ ಇದಕ್ಕೆ ಕೈಬಳೆಗಳು ಇದ್ದವಂತೆ. ಈಗ ಈ ಕೈಯು ವೆಸ್ಟಮಿನಿಸ್ಟರ್ ಅಬ್ಬಿಯ ಮುಂದುಗಡೆಯಿರುವ ಕೊನೊನ್ ಡ್ಸೊಲ ಮುಜಿಯಮಿನಲ್ಲಿ ಇದೆ. ಹತ್ತು ವರುಷಗಳಿಂದ ಒಂದು ಕೈಗೆ ಪಕ್ಷವಾತ ಹಿಡಿದ ಒಂದು ಹೆಂಗಸು ಇದನ್ನು ಮೂರು ಸರ್ತಿ ಕೈಯಲ್ಲಿ ಹಿಡಿದೊಡನೆ ಪಕ್ಷವಾತ ಹಿಡಿದ ಕೈ ಸರಿಯಾಯಿತಂತೆ. ಈಗ ಈ ಕೈಯನ್ನು ನೋಡಲಿಕ್ಕೆ ಸಾವಿರಗಟ್ಲೆಯಿಂದ ಜನರು ಬರುತ್ತಿರುವರು. ಇಂಡಿಯದಲ್ಲಿರುವ ನಾಸ್ತಿ ಕಟ್ಟಗಳು ಹಾಳಾಗುತ್ತಾ ಬರುವಾಗ ಇಂಗ್ಲೆಂಡಿನವರಿಗೆ ನಾಸ್ತಿ ಕೈಯಲ್ಲಿ ನಂಬಿಕೆ ಹುಟ್ಟಿತು.

—ಅಮೇರಿಕದಿಂದ ಎಣ್ಣೆ ತುಂಬಿಸಿ ಹೊರಟ ಹಡಗವು ಜಪಾನದ ಸಮುದ್ರದಲ್ಲಿ ಸುಟ್ಟು ಧ್ವಂಸವಾಯಿತು. ೧೪ ಜನ ನಾವಿಕರೂ, ಕಪ್ತಾನನೂ ಸತ್ತುಹೋದರು.

—ಪೇರಿಸ್‌ನಲ್ಲಿ ೮೬ ವರ್ಷದ ವಧುವಿಗೆ ಮದುವೆ ಮಾಡುವದೆಂದು ನಿಶ್ಚಯಿಸಿದರು. ಅದಕ್ಕಾಗಿ ಅವಳು ಒಂದು ಬರ್ಚಿಯನ್ನು ತನ್ನ ಎದೆಯಲ್ಲಿ ತಿವಿದಳು. ಆದರೆ ಹೃದಯಕಮಲಕ್ಕೆ ತಾಗಲಿಲ್ಲ. ಆಗ ಅವಳು ಧೈರ್ಯದಿಂದ ಒಂದು ಕೈಯಲ್ಲಿ ಬರ್ಚಿಯನ್ನು ಹಿಡಿದು ಇನ್ನೊಂದರಲ್ಲಿ ಸುತ್ತಿಗೆಯನ್ನು ಹಿಡಿದು ಬರ್ಚಿಯ ಹಿಡಿಯ ಮೇಲೆ ಹೊಡೆದು ಹೃದಯಕಮಲವನ್ನು ಸೀಳಿಕೊಂಡು ಸತ್ತಳು.

—ಫ್ರೋಕ್‌ಸ್ಟೆನಿನಲ್ಲಿ ಎರಡು ವಿಮಾನಗಳಿಗೆ ದ್ವಂದ ಯುದ್ಧವಾಗುತ್ತಿರುವಾಗ ಒಂದರ ರೆಕ್ಕೆಯು ಇನ್ನೊಂದರ ಬಾಲದಲ್ಲಿ ಸಿಕ್ಕಿಕೊಂಡು ಎರಡು ಕೆಳಕ್ಕೆ ಬಿತ್ತು. ಇನ್ನೊಂದಕ್ಕೆ ಬೆಂಕಿ ಹಿಡಿಯಿತು. ಬೆಂಕಿ ಹಿಡಿದೊಡನೆ ಒಬ್ಬನು ಮೆಲ್ಲನೆ ತಪ್ಪಿಸಿಕೊಂಡನು. ಇನ್ನೊಬ್ಬನು ಕೆಳಕ್ಕೆ ಹಾರಿದ್ದರಿಂದ ಸತ್ತುಹೋದನು.

—ಜಗತ್ತಿನಲ್ಲೆಲ್ಲಾ ಅತೀ ದೊಡ್ಡದಾಗಿರುವ “ಲೆವಿಯೇಥನ್” ಎಂಬ ಹಡಗವು ನ್ಯೂಯೋರ್ಕಿನಿಂದ ಸೌತ್ ಹೆಂಪಟನಿಗೆ ಹೋಗುತ್ತಿರುವಾಗ ಕರಾವಳಿಗೆ ಬಂದು ಹೊಗೆಯಲ್ಲಿ ಸಿಕ್ಕಿಕೊಂಡಿತು. ಭರತದ ಸಮಯದಲ್ಲಿ ನೀರು ಹೆಚ್ಚಿದಾಗ ಎದ್ದು ಹೋಯಿತು.

—ಕಳೆದ ೨೨ನೇ ತಾರೀಕಿಗೆ ಅಫಘಾನದ ಅಮನುಲ್ಲ ರಾಜರು ಬರ್ಲಿನಿಗೆ ತಲಪಿರುವರು. ಬರ್ಮಿಂಗ್ ಹೆಮ್ ಮುನಿಸಿಪಾಲಿಟಿಯವರು [illegible] ಗೆಲನ್ ರಸ್ತದ ಪೆಟ್ರೋಲನ್ನು ತೆಗೆದುಕೊಂಡಿರುವುದರಿಂದ ಅವರಿಗೆ ೫೦೦೦ ಪೌಂಡುಗಳು ಉಳಿದಿರುತ್ತವೆ. ಇನ್ನು ಲೀಡ್ಸ್ ಮತ್ತು ಬ್ರಾಡ್‌ಫೋಲಿನ ಮುನಿಸಿಪಾಲಿಟಿಯವರೂ ರಸ್ತದ ಪೆಟ್ರೋಲನ್ನೇ ತೆಗೆದುಕೊಳ್ಳುವರಂತೆ.

—ಬರ್ಲಿನ್ ಮತ್ತು ಸೇನ್‌ಫ್ರೆನ್ಸಿಸ್ ಪಟ್ಟಣಗಳೊಳಗೆ ಟೆಲಿಫೋನ್ ಸಂಭಾಷಣೆಯು ನಡೆಯುತ್ತಿದೆ. ಇವೆರಡು ಪಟ್ಟಣಗಳ ನಡುವಿನ ಅಂತರ ೧೩೦೦೦ ಕೀಲೋ ಮೀಟರುಗಳು.

—ಕೆಪ್ಟನ್ ಬರ್ಟ ಹಿಂಕ್ಲರನು ಸಿಂಗಪೂರನ್ನು ದಾಟಿ ವಿಕ್ಟೋರಿಯಾ ಫ್ಲೋಟಿಗೆ ತಲಪಿರುವನು.

—ಜರ್ಮನಿಯ ಗಣಿಗಳಲ್ಲಿ ಕೆಲಸಮಾಡುವ ಕೂಲಿಗಳಿಗೆ ಗಂಟೆಗೆ ೫ ಪೆನ್ನಿ ಸಂಬಳವನ್ನು ಹೆಚ್ಚಿಸಿರುವರು.

ವಿಕ್ಟೋಲಿನ ಅರ್ಲರು ಹೃದಯದೌರ್ಬಲ್ಯದಿಂದ ಮೃತಪಟ್ಟರು.

ಚೈನದ ಸ್ಟೀಮರಾದ “ಹಿಂಟಿಮಂಗ್” ಎಂಬುದು ಜಪಾನದ “ಅಕ್ಕಿತಮಾರು” ಎಂಬ ಹಡಗದೊಂದಿಗೆ ತಾಗಿ, ಸುಮಾರು ೩೦೦ರಿಂದ ೪೦೦ ಪ್ರಯಾಣಿಕರು ಮುಳುಗಿರುವರು. ಜಪಾನದ ಹಡಗವು ಅವರಲ್ಲಿ ೧೦೦ ಜನರನ್ನು ಮೇಲಕ್ಕೆ ತೆಗೆಯಿತು. ಅವರಲ್ಲಿಯೂ ಹಲವರು ಶೀತದಿಂದ ಸತ್ತುಹೋದರು.

—ತನ್ನನ್ನು ಏನೂ ಆಡಂಬರವಿಲ್ಲದೆ ಹುಗಿಯಬೇಕೆಂದು ಒಕ್ಸ್‌ಫೋರ್ಡಿನ ಅರ್ಲರು ಸಾಯುವ ಮೊದಲು ಅಪೇಕ್ಷಿಸಿದಂತೆ ಅವರನ್ನು ಅದೇ ಪ್ರಕಾರ ಹುಗಿದರು. ಹೆಣದ ಪೆಟ್ಟಿಗೆಯನ್ನು ಅವರ ಆಳುಗಳೇ ಸ್ಮಶಾನ ಭೂಮಿಗೆ ಕೊಂಡೊಯ್ದರು. ಪಟ್ಟಣಿಗರು ಯಾರೂ ಬಂದಿರಲಿಲ್ಲ.

—ಬ್ರಿಟಿಷ ರಾಜ್ಯದ ಕಳೆದ ವರ್ಷದ ಒಟ್ಟಾರೆ ಹುಟ್ಟುವಳಿಯು [illegible] ಮಿಲಿಯ ಸ್ಟರ್ಲಿಂಗ್‌ಗಳು. ಸುಂಕ ಮೊದಲಾದುವುಗಳಿಂದ ೪೪೪ ಮಿಲಿಯ ಸ್ಟರ್ಲಿಂಗ್‌ಗಳು.

—ಪೋರ್ಚುಗೀಸಿನ ವಿಮಾನದ ಕಾರ್ಲಗ್ ಬ್ಲೆಕ್ ಎಂಬವನು ಆಫ್ರಿಕಾ [illegible] ಪೊಲಿಸಿಗೆ ಬಂದಿರುವನು.

—ಕಿಸ್ಮಾಯಿಯಲ್ಲಿ ಕಳೆದ ೫೦ ವರುಷಗಳಿಂದ ಇಂಡಿಯದ ರೆಸಿಡೆಂಟನಾಗಿದ್ದ ಮಹಮ್ಮದ್ ಅಲಿ, ಇಬ್ರಾಹಿಮ್‌ಜಿ ಆದಮ್‌ಜಿ ಎಂಬವನು ಇಟೆಲಿಯದ ಗವರ್ನರನು ಅಲ್ಲಿಗೆ ಬಂದಾಗ ಆತನಿಗೆ ಸಲಾಮು ಮಾಡದ್ದಕ್ಕಾಗಿ ರೆಸಿಡೆಂಟನನ್ನು ಕಳುಹಿಸಿಬಿಟ್ಟಿರುವರು. ಇತರ ಹಿಂದೂಗಳನೇಕರೂ ಸಲಾಮು ಮಾಡದ್ದರಿಂದ ಅವರಿಗೆ ಕಠಿಣ ತರದ ಶಿಕ್ಷೆಗಳನ್ನು ವಿಧಿಸಿರುವರು.

—ಬ್ರಿಟಿಷ್ ಕೈಗಾರಿಕೆಗಳ ಪ್ರದರ್ಶನದಲ್ಲಿ ಬರ್ಮಿಂಗ್ ಹೇಮ್ ಸೆಕ್ಷನಿನಲ್ಲಿ ಒಂದು ಕಬ್ಬಿಣದ ಮನುಷ್ಯನ ಪ್ರತಿಮೆಯಿದೆ. ಇದು ೧೫ ಹಂಡ್ರೆಡ್ ವೇಟ್ ಭಾರವಿದೆ. ಇಂಜಿನುಗಳ ಮೂಲಕ ಈ ಮನುಷ್ಯನನ್ನು ಚಲಿಸಬಹುದು, ಕುಳಿತುಕೊಂಡವನನ್ನು ಎದ್ದು ನಿಲ್ಲುವಂತೆ ಮಾಡಬಹುದು. ಇದನ್ನು ವಿರಚಿಸಿದವನ ಬುದ್ಧಿವಂತಿಕೆಯು ಬಹು ಹೊಗಳತಕ್ಕದ್ದಿದೆ.

—ಅಮೇರಿಕದಲ್ಲಿ ಕೆಲಸವಿಲ್ಲದಿರುವವರು ಈಗ ಒಟ್ಟು ೪ ಮಿಲಿಯ ಜನರಿರುವರು.

ಒಳದೇಶ ವರ್ತಮಾನ.

—ಬಿಹಾರ ಮತ್ತು ಒರಿಸ್ಸಾದ ಗವರ್ನರ ದೊರೆಗಳು ಸಂಚಾರಕ್ಕಾಗಿ ಪಾಟ್ಣಾಕ್ಕೆ ತೆರಳಿರುವರು. ಮಾರ್ಚಿ ತಿಂಗಳ ೨ನೇ ತಾರೀಕಿಗೆ ಇವರು ಹಿಂತಿರುಗಿ ಬರುವರು.

—ಲಾಹೋರಿನಲ್ಲಿ ಕಳೆದ ವಾರ ಸಾಧಾರಣ ತರದ ಭೂಕಂಪ ಉಂಟಾಯಿತು. ಮಲಗಿದ್ದವರೆಲ್ಲರೂ ದಿಗಿಲುಬಿದ್ದು ಎಚ್ಚೆತ್ತರು. ಕೆಲವೆಡೆಗಳಲ್ಲಿ ಕಟ್ಟೋಣಗಳೂ ಕುಸಿದು ಬಿದ್ದವು. ಆದರೆ ಕಂಪನವು ಕೆಲವು ಸೆಕುಂಡಗಳಿಗೆ ಮಾತ್ರ ಇತ್ತು.

—ಮಂಗಳೂರಿಗೆ ಬಂದಿದ್ದ ೪ ಸೀಪ್ಲೇನ್ ವಿಮಾನಗಳು ಈಗ ಪಿನೇಂಗಿನಲ್ಲಿವೆ.

—ಬಂಗಾಳದಲ್ಲಿ ಒಬ್ಬ ವ್ಯಕ್ತಿಯನ್ನು ಕ್ರಿಮಿನಲ್ ಕೇಸಿನ ಮೇಲೆ ಕೈದುಮಾಡಿಕೊಂಡೊಯ್ಯುತ್ತಿರುವಾಗ ಹಳ್ಳಿಯವರಿಗೆ ಸಿಟ್ಟಾಗಿ, ಪೋಲೀಸರೊಂದಿಗೆ ಕಾದಾಡತೊಡಗಿದರು. ಅದಕ್ಕಾಗಿ ಪೋಲೀಸರು ಗುಂಡುಬಿಟ್ಟು ಇಬ್ಬರನ್ನು ಗಾಯಗೊಳಿಸಿದರು.

—ಲಾಹೋರಿನಲ್ಲಿ ರೈಲ್ವೆ ಟಿಕೆಟ್ ಎಕ್ಸಾಮಿನರನು ಪ್ರಯಾಣಿಕರ ಟಿಕೇಟುಗಳನ್ನು ಚೆಕ್ ಮಾಡುತ್ತಿರುವಾಗ ಒಬ್ಬ ಪಾರ್ಸಿ ಪ್ರಯಾಣಿಕನು ಆತನನ್ನು ಕೊಂದುಬಿಟ್ಟನು.

—ಇಂದೋರದ ಮಾಜಿ ಮಹಾರಾಜರೂ ಮಿಸ್ ಮಿಲ್ಲರಳೂ, ಸಿಲೋನನ್ನು ಬಿಟ್ಟು ಬೆಂಗಳೂರಿಗೆ ಬಂದಿರುವರು. ಅಲ್ಲಿ ಮಿಲ್ಲರಳನ್ನು ಹಿಂದೂತ್ವಕ್ಕೆ ಮತಾಂತರಗೊಳಿಸುವರು.

—ಆದಿದ್ರಾವಿಡರ ಪರಿಷತ್ತು ಕಳೆದ ೧೯ನೇ ತಾರೀಕಿನ ದಿನ ಪುಲಿಯೂರು ಎಂಬಲ್ಲಿ ಜರಗಿತು. ರಾವ್‌ಸಾಹೇಬ್ ಮಧುರೈ ಪಿಳ್ಳೆಯವರು ಅಧ್ಯಕ್ಷರಾಗಿದ್ದರು.

—ನೈಲ ಪ್ರತಿಮೆಯ ಚಳವಳಕ್ಕಾಗಿ ಕೈದುಮಾಡಿ ವೆಲ್ಲೂರಿನ ಜೈಲಿನಲ್ಲಿ ಇಟ್ಟಿದ್ದ ಜನಾಬ್ ಮಹಮ್ಮದ್ ಸೇಲಾ ಎಂಬವರನ್ನು ಬಿಟ್ಟುಬಿಟ್ಟರು. ಜೈಲಿನ ಗೇಟಿನ ಹತ್ತಿರ ಅವರನ್ನು ಅನೇಕ ಜನ ಕಾಂಗ್ರೆಸ್ ಧುರೀಣರು ಎದುರುಗೊಂಡರು. ಕೊಂಗ್ರೆಸಿನ ಪರವಾಗಿ ಪುಷ್ಪಮಾಲಿಕೆಯನ್ನು ಹಾಕಿದ ತರುವಾಯ ಅವರನ್ನು ಮೆರವಣಿಗೆಯಿಂದ ಕೊಂಗ್ರೆಸ್ ಆಫೀಸಿಗೆ ಕರೆದೊಯ್ದರು.

—ಸಾಧು ಟಿ. ಎಲ್. ವಾಸ್ವಾನಿಯವರು ಪಾಲಘಾಟಿನಲ್ಲಿದ್ದರು ಅಲ್ಲಿ ಭಾರತ ಯುವಕ ಸಂಘದ ಕುರಿತು ಭಾಷಣಗಳನ್ನು ಮಾಡುತ್ತಿದ್ದರು. ಆದರೆ ಮದರಾಸಿನಲ್ಲಿ ಶಕ್ತಿ ಆಶ್ರಮವನ್ನು ತೆರೆಯುವುದಕ್ಕಾಗಿ ಅಲ್ಲಿಗೆ ಹೋದರು.

—ಹೈದರಾಬಾದಿನ ರೆಸಿಡೆಂಟರು ಮೈಸೂರಿನ ರೆಸಿಡೆಂಟರಾಗಿ ನೇಮಕಹೊಂದಿರುವರು.

—ವಿದ್ಯಾರ್ಥಿಗಳು ರಾಜಕೀಯ ವಿಷಯಗಳಲ್ಲಿ ಭಾಗಿಗಳಾಗಬಾರದೆಂದು ಬಂಗಾಳ ಎಜ್ಯುಕೇಶನಲ್ ಡಿಪಾರ್ಟಮೆಂಟಿನವರು ಒಂದು ಕಾನೂನು ಮಾಡಿದರೆಂಬ ವಿಷಯವು ಈಗ ಸುಳ್ಳೆಂದು ಕಂಡುಬಂದಿದೆ.

—ಎಸೆಂಬ್ಲಿ ಹೋಲಿನಲ್ಲಿ ಸ್ಯಾಮನ್ ಕಮಿಶನಿನ ಓಟು ಮುಗಿದೊಡನೆ ಸರ್ ಸ್ಯಾಮನ್ ಬ್ಲೆಕೆಟರ ತಲೆಯ ಮೇಲೆ ಏನೋ ಒಂದು ಕೇಸ್ ಬಿದ್ದು ಅವರಿಗೆ ಸ್ಮೃತಿ ತಪ್ಪಿತಂತೆ. ಆದರೆ ಹೆಚ್ಚಿನ ಪೆಟ್ಟಾಗಿಲ್ಲವೆಂದು ತಿಳಿದು ಬಂದಿದೆ.

—ಗುಂಟೂರಿಗೆ ಸ್ಯಾಮನ್ ಕಮಿಶನು ಬರುವಾಗ, ಬಹಿಷ್ಕಾರವನ್ನು ಹಾಕುವವರ ಬದಲು, ಆಮಂತ್ರಣವನ್ನೇ ಕೊಡಬೇಕೆಂದು ಕೆಲವರು ಸಭೆಕೂಡಿ ಆಲೋಚಿಸಿರುವರು. ಗುಂಟೂರು ಕಲೆಕ್ಟರರ ಹುಕುಮಿನ ಮೇರೆಗೆ ಒಂಗೋಲ್ ಮುನಿಸಿಪಾಲಿಟಿಯವರು ಸ್ಯಾಮನ್ ಕಮಿಶನಿನ ಪ್ರತ್ಯಕ್ಷತೆಯಲ್ಲಿಯೇ ತಮ್ಮ ಸಭೆಯನ್ನು ಜರಗಿಸಲಿಕ್ಕಿರುವರು.

—ಶ್ರೀ ನಾರಾಯಣ ಗುರುಸ್ವಾಮಿಯವರ ಆರೋಗ್ಯವು ಈಗ ಅಭಿವೃದ್ಧಿಯಾಗುತ್ತಾ ಬರುತ್ತಿದೆ.

—ಸರ್ ಜೋನ್ ಸ್ಯಾಮನರಿಗೆ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ತಾರೀಕು ೨೭ನೇ ದಿನ ಒಂದು ಡಿನ್ನರ ಪಾರ್ಟಿಯನ್ನೂ ೨೮ನೇ ದಿನ ಒಂದು ಟೀಪಾರ್ಟಿಯನ್ನೂ ಕೊಟ್ಟು ಸನ್ಮಾನಿಸುವರು.

—ಮಹಾತ್ಮಾಜಿಯವರ ಅಸೌಖ್ಯತೆಯು ಕಡಿಮೆಯಾಗಿದೆ. ದಿನ ಕಳೆದಷ್ಟಕ್ಕೆ ಆರೋಗ್ಯವು ಹೆಚ್ಚುತ್ತಾ ಬರುತ್ತಿದೆ. ಇನ್ನು ಮುಂದೆಯೂ ಕೆಲವು ದಿನಗಳ ವರೆಗೆ ಪೂರ್ಣ ವಿಶ್ರಾಂತಿಯನ್ನು ಹೊಂದಬೇಕೆಂದು ವೈದ್ಯರ ಅಭಿಪ್ರಾಯವಿರುವದರಿಂದ ಈಗಲೂ ನೋಡಬೇಕೆಂದಿರುವವರನ್ನು ಅವರಿದ್ದಲ್ಲಿಗೆ ಹೋಗಲು ಬಿಡುವದಿಲ್ಲ.

—ಬರೋಡದ ಕಾಲೋಲ ಎಂಬಲ್ಲಿ ಕಳೆದ ೧೨ನೇ ತಾರೀಕಿನ ದಿನ ಬಾಬೂಬ್ಬಾ ಪುರುಷೋತ್ತಮದಾಸ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಶುದ್ಧಿ ಸಮ್ಮೇಳನವು ಜರಗಿತು. ಮುಸಲ್ಮಾನಿ ಮತಕ್ಕೆ ಪರಿವರ್ತಿತವಾದ ಮುನ್ನೂರು ಕುಟುಂಬದ ಜನರು ಪುನಃ ಹಿಂದೂ ಮತಕ್ಕೆ ಸೇರಿದರು. ಅಧ್ಯಕ್ಷರು ಹಿಂದೂತ್ವದ ಮಹತ್ವವನ್ನು ವಿವರಿಸಿ ಪರಿವರ್ತಿತರಾದವರನ್ನು ಹಿಂದೂಗಳು ಪುನಃ ತಮ್ಮೊಂದಿಗೆ ಸೇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದರು. ಆಗ ಒಂದು ಊಟವು ನಡೆದು ಅದರಲ್ಲಿ ಸರ್ವರೂ ಸರಿಸಮಾನವಾದ ಭಾಗವನ್ನು ವಹಿಸಿಕೊಂಡರು.

—ನಭಾ ಮಹಾರಾಜರು ಸರಕಾರಕ್ಕೆ ವಿರುದ್ಧವಾಗಿ ವರ್ತಿಸಿದ ಕಾರಣ ಅವರ ಬಿರುದನ್ನು ವಜಾಪಡಿಸಿರುವರು. ಮಾಸಿಕ ಭತ್ತೆಯಾಗಿ ಅವರಿಗೆ ಮೊದಲು ೨೫,೦೦೦ ರೂಪಾಯಿಗಳು ಸಿಕ್ಕುತ್ತಿದ್ದವು. ಈಗ ಬರೇ ೧೦,೦೦೦ ರೂಪಾಯಿಗಳು ಮಾತ್ರ ಸಿಕ್ಕುವವು.

—ಹೊಸತಾಗಿ ತೆರೆದ ಬೆಂಗಳೂರಿನ ಎಗ್ರಿಕಲ್ಚರಲ್ ಬೇಂಕಿನ ಮೆನೇಜಿಂಗ್ ಏಜಂಟನು ಸುಮಾರು ೨೫೦೦ ರೂಪಾಯಿಗಳನ್ನು ಅಪಹರಿಸಿ ಕಾಣೆಯಾದನು. ಆದರೆ ಕೊನೆಗೆ ಸಿಕ್ಕಿದ್ದರಿಂದ ಸ್ಟೇಶನ್ ಮೆಜಿಸ್ಟ್ರೇಟರು ಆತನನ್ನು ಜಾಮೀನಿನ ಮೇಲೆ ಬಿಟ್ಟಿರುವರು.

—ಮದರಾಸಿನ ಆದಿದ್ರಾವಿಡ ಮಹಾ ಜನ ಸಭೆಯ ಕಾರ್ಯದರ್ಶಿಗಳಾಗಿದ್ದ ಕಾಲತೂರು ಮುನಿಸ್ವಾಮಿ ಪಿಳ್ಳೆಯವರು ಮರಣಪಟ್ಟರು.

—ಹೈದರಾಬಾದಿನ ಪ್ಲೇಗ್ ರೋಗದ ಹಾವಳಿಯು ಇನ್ನಷ್ಟು ಕಡಿಮೆಯಾಗುತ್ತಾ ಬರುತ್ತಿದೆ. ದಿನಕ್ಕೆ ಸರಾಸರಿ ೫೦ ಜನರು ಮಾತ್ರವೇ ಸಾಯುತ್ತಿರುವರು. ಕೆಲವು ದಿನಗಳ ಹಿಂದೆ ನೂರಕ್ಕೆ ಮಿಕ್ಕಿ ಜನರು ಸಾಯುತ್ತಿದ್ದರು. ಅಧಿಕಾರಿಗಳ ತಕ್ಕ ಕಾಲಕ್ಕೆ ಸರಿಯಾದ ಸಹಾಯವು ಇಲ್ಲಿ ಪ್ರಯೋಜನಕಾರಿಯಾಯಿತು.

—ಬಿಹಾರ ಮತ್ತು ಒರಿಸ್ಸಾ ದೇಶಗಳಲ್ಲಿ ನೆರೆಬಂದುದರ ಕೋಲಂಕುಷ ಸ್ಥಿತಿಯನ್ನು ವಿಚಾರಿಸಬೇಕೆಂದು ಒಂದು ಕಮಿಟಿಯನ್ನು ಏರ್ಪಡಿಸಿದ್ದರು. ಈ ಕಮಿಟಿಯವರು ಕಳೆದೆರಡು ತಿಂಗಳುಗಳಿಂದ ನೆರೆಯಿಂದ ಹಾಳಾದ ಸ್ಥಳಗಳಲ್ಲೆಲ್ಲ ಸಂಚರಿಸಿ ಸಿಕ್ಕಿದ ಅನುಭವಗಳೆಲ್ಲವನ್ನೂ ಬರೆದುಕೊಂಡಿರುವರು. ಬರುವ ಜುಲ್ಯಾ ತಿಂಗಳಲ್ಲಿ ನೆರೆ ಬಂದಾಗ ಬರೆಯುವದೆಲ್ಲವನ್ನೂ ಬರೆದು ಆಗೋಸ್ಟು ತಿಂಗಳಲ್ಲಿ ತಮ್ಮ ರಿಪೋರ್ಟನ್ನು ಸರಕಾರದವರಿಗೆ ಕೊಡುವರು.

—ವ್ಯಾಸರಾಯರು ಹೊಸ ದಿಲ್ಲಿಯಲ್ಲಿ ಯುವರಾಜರುಗಳ ಸಭೆಯನ್ನು ಕರೆದರು. ಸುಮಾರು ೫೦ ಜನ ಯುವರಾಜರೂ ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಇತರರನೇಕರೂ ಬಂದಿದ್ದರು.

—ರಂಗೂನಿನಲ್ಲಿ ಮಧ್ಯರಾತ್ರೆ ಬೆಂಕಿಯುಂಟಾದುದರಿಂದ ಹುಲ್ಲು ಛಾವಣಿಮಾಡಿದ ಕೂಲಿ ಕೆಲಸದವರ ಮುನ್ನೂರು ಮನೆಗಳು ಸುಟ್ಟುಹೋದವು. ಬೆಂಕಿಯು ಒಂದು ಅಡಿಗೆ ಕೋಣೆಯಲ್ಲಿ ಉಂಟಾಯಿತು. ಗಾಳಿಯು ಜೋರಿದ್ದುದರಿಂದ ಬೆಂಕಿಯು ಹೆಚ್ಚಿತು. ನೊಂದಿಸಲಿಕ್ಕೆ ಆಗಲೇ ಇಲ್ಲ. ತರುವಾಯ ಪೋರ್ಟ ಕಮಿಶನರರ ಬೆಂಕಿಯ ಇಂಜಿನು ಅಲ್ಲಿಗೆ ಹೋಗಿ ಸಹಾಯವನ್ನು ಮಾಡಿತು.

—ಮದರಾಸಿನ ಮೆಜಿಸ್ಟ್ರೇಟರು ೧೪೪ನೇ ಪ್ರಕರಣಕ್ಕನುಸಾರವಾಗಿ ಅಂದು ಕೊಟ್ಟ ಹುಕುಮನ್ನು ಪೂರ್ಣ ವಿರೋಧಿಸಬೇಕೆಂದು ಆಂಧ್ರದ ಪ್ರಾಂತಿಕ ಕೊಂಗ್ರೆಸ್ ಮಂಡಳವರು ನಿಶ್ಚಯಿಸಿರುವರು.

—ಮೈಸೂರಿನಲ್ಲಿ ಸಿಡುಬು ಸ್ವಲ್ಪ ಇದೆಯೆಂದೂ ಮಹಾರಾಜರಿಗೆ ಈ ರೋಗವು ಸ್ವಲ್ಪ ಮಾತ್ರ ತಟ್ಟಿದ್ದು ಈಗ ಗುಣವಾಗಿದೆಯೆಂದೂ ತಿಳಿಯುತ್ತದೆ.

—ಮದರಾಸಿನ ಲೋಕಲ್ ಸೆಲ್ಫ್ ಗವರ್ನಮೆಂಟ್ ಡಿಪಾರ್ಟಮೆಂಟಿನ ಅಸಿಸ್ಟಾಂಟ್ ಸೆಕ್ರಿಟೆರಿಯವರು ರಾತ್ರೆ ೮ ಗಂಟೆ ಸಮಯ ಮನೆಗೆ ಹೋಗುತ್ತಿರುವಾಗ ಯಾರೋ ಅವರನ್ನು ಹಿಡಿದು ಗುದ್ದಿದರು. ಅವರಿಗೆ ಮುಖದಲ್ಲಿ ತುಂಬಾ ಗಾಯಗಳಾಗಿರುವುದರಿಂದ ಅವರೀಗ ಆಸ್ಪತ್ರೆಯಲ್ಲಿರುವರು.

—ಆಸ್ಟ್ರೇಲಿಯದ ಒಬ್ಬ ಸ್ತ್ರೀಯು ಹಿಂದುಸ್ಥಾನಕ್ಕೆ ಸದ್ಯದಲ್ಲಿಯೇ ಬಂದು ಹಿಂದು ಪುಸ್ತಕವನ್ನು ಬರೆಯಲಿರುವಳಂತೆ. ಮಿಸ್ ಮೆಯೋಳ ಸ್ವಭಾವದವಳು ಇವಳೆಂದು ಹಿಂದೂಗಳು ಇವಳನ್ನು ತಿರಸ್ಕರಿಸದೆ ಯೋಗ್ಯವಾದ ಸತ್ಕಾರಗಳನ್ನು ಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನ ಸೆಕ್ರಿಟರಿಗಳ ಅಭಿಪ್ರಾಯ.

ದಕ್ಷಿಣ ಕನ್ನಡ

ಮಂಗಳೂರು:—ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ‘ವರ್ಧಂತಿ ಉತ್ಸವವು’ ಕಳೆದ ೧೮ನೇ ತಾರೀಕಿನ ದಿನ ಡಿಸ್ಟ್ರಿಕ್ಟ್ ಮುನಸೀಫರಾದ ರಾ। ಸಿ. ಆರ್. ಕೃಷ್ಣರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಃ ಇಬ್ಬರು ಕ್ರೈಸ್ತ ಹುಡುಗರು ಒಂದು ಕೊಂಕಣಿ ಪದವನ್ನು ಚಂದವಾಗಿ ಹಾಡಿದರು. ಮುಖ್ಯೋಪಾಧ್ಯಾಯರಾದ ಶ್ರೀ ಉಳ್ಳಾಲ ಮಂಗೇಶರಾಯರು ಶಾಲೆಯ ವರದಿಯನ್ನೋದಿದರು. ಸಭಾಧ್ಯಕ್ಷರು ಯೋಗ್ಯರಾದ ಹುಡುಗರಿಗೆ ಇನಾಮುಗಳನ್ನು ಹಂಚಿದರು. ಆ ಮೇಲೆ ಅಧ್ಯಕ್ಷರ ಭಾಷಣವಾಯಿತು. ಅಧ್ಯಕ್ಷರ ಭಾಷಣವಾದ ಮೇಲೆ ‘ಧ್ಯೇಯವೇನು’ ಎಂಬ ನಾಟಕದ ಅಭಿನಯವಾಯಿತು. ನಾಟಕವು ಬಹು ಮನೋರಂಜಕವಾಗಿ ಅಭಿನಯಿಸಲ್ಪಟ್ಟಿತು. ಇಷ್ಟು ಕಾರ್ಯಕ್ರಮಗಳಿಂದ ಸಭೆಯು ಕೊನೆಗಂಡಿತು. ರಾತ್ರೆ ೧೦ ಘಂಟೆಗೆ ‘ವಿಶ್ವಾಮಿತ್ರ ಪ್ರತಾಪ’ ಎಂಬ ಯಕ್ಷಗಾನ ಪ್ರಸಂಗವು ಆಯಿತು.

ಇದೇ ಬರುವ ತಾ. ೨೬—೨—’೨೮ನೇ ಆದಿತ್ಯವಾರ ದಿವಸ ಇಲ್ಲಿಯ ‘ರಾಮಕೃಷ್ಣ ಧರ್ಮಾಶ್ರಮದಲ್ಲಿ’ ರಾಮಕೃಷ್ಣ ಪರಮಹಂಸರ ಜಯಂತಿಯನ್ನು ಆಚರಿಸುವರು. ಬಡವರಿಗೆ ಈ ದಿವಸ ಬೆಳಿಗ್ಗೆ ಅಕ್ಕಿ ಧರ್ಮವನ್ನು ನಡಿಸುವರು.

ಇಲ್ಲಿ ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿ ಭವನದ ವರ್ಧಂತಿ ಉತ್ಸವವು ಕಳೆದ ೧೨ನೇ ತಾರೀಕಿನ ದಿನ ಆಚರಿಸಲ್ಪಟ್ಟಿತು. ಡಿಸ್ಟ್ರಿಕ್ಟ್ ಮುನ್ಸಿಫ್ ರಾ। ಸಿ. ಆರ್. ಕೃಷ್ಣರಾವ್, ಬಿ. ಎ. ಬಿ. ಎಲ್.ರವರೇ ಅಧ್ಯಕ್ಷರಾಗಿದ್ದರು. ಮೊದಲು ಪ್ರಾರ್ಥನೆಯಾಯಿತು. ಅನಂತರ ಸೈಂಟ್ ಎಲೊಸಿಯಸ್ ಕೊಲೆಜಿನ ಲೋಜಿಕ್ ಪ್ರೊಫೆಸರರಾದ ರಾ। ಕೆ. ರಾಮಚಂದ್ರ ಅಯ್ಯರರು ಕೊಳಲನ್ನೂದಿ ಸಭಿಕರನ್ನು ಸಂತೋಷಗೊಳಿಸಿದರು. ಫಲಾಹಾರವೂ ಆಯಿತು. ಅನಂತರ ಶ್ರೀಗಳಾದ ಅಡಕ, ಉಪಾಧ್ಯಾ ಮತ್ತು ಕೃಷ್ಣರಾವ್ ಇವರ ಸುಶ್ರಾವ್ಯಗಾಯನವಾಯಿತು. ಕಾರ್ಯದರ್ಶಿಗಳು ವಿದ್ಯಾರ್ಥಿ ಸಭೆಯ ವಾರ್ಷಿಕ ವರದಿಯನ್ನು ಓದಿದರು. ಭವನದ ನಿವಾಸಿಯಾದೊಬ್ಬ ವಿದ್ಯಾರ್ಥಿಯು, ಭವನದ ಅಭಿನಂದನವನ್ನು ಮಾಡಿದರು.

ದಿವಂಗತರಾದ ಸ್ವಾಮಿ ಈಶ್ವರಾನಂದಜಿಯವರ ಶ್ರಾದ್ಧ ಸಮಾರಂಭವು ದಿವಾನ್ ಬಹದೂರ್ ಎನ್. ಸುಬ್ಬರಾಯರ ಸದನದಲ್ಲಿ ನಡೆಯಿತು. ವಿಲಾಯತಿಯಲ್ಲಿರುವ ಮಗಳಲ್ಲದೆ ಉಳಿದ ಮಕ್ಕಳೆಲ್ಲರೂ ಬಂದಿದ್ದರು. ವಕೀಲ್ ರಾ। ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆಯನ್ನು ಮಾಡಿ, ಮೃತರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು. ಇದರ ತರುವಾಯ ಸರ್ವರಿಗೂ ಊಟವಾಯಿತು. ಮೃತರ ಕೊನೆಯ ಆಶೆಯಂತೆ ಅವರಿಗೆ ಪ್ರಿಯರಾಗಿದ್ದ ಆದಿದ್ರಾವಿಡರಿಗೂ ಈ ಕುರಿತು ಒಂದು ದಿಕಣವಾಯಿತು.

ತಾರೀಕು ೧೮ ೨—’೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೪ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೨, ಉದರ ರೋಗದಿಂದ ೨, ಶ್ವಾಸಕೋಶದ ರೋಗದಿಂದ ೨, ಇತರ ಎಲ್ಲಾ ಕಾರಣಗಳಿಂದ ೮, ಜನನ ಸಂಖ್ಯೆಯು ಒಟ್ಟು ೨೬.

ದಕ್ಷಿಣ ಕನ್ನಡಾ ಸರಕಾರಿ ನೌಕರರ ಸಹಕಾರಿ ಸಂಘದ ವಾರ್ಷಿಕ ಸಭೆಯು ಕಳೆದ ೧೨ನೇ ತಾರೀಕಿನ ದಿನ ಮಧ್ಯಾಹ್ನ ಡಿಸ್ಟ್ರಿಕ್ಟ್ ಕೋರ್ಟು ಶಿರಸ್ತೆದಾರರಾದ ಮ. ರಾ. ರಾ. ಪಿ. ಎನ್. ಭಂಡಾರ್‌ಕಾರ್ ಬಿ. ಎ., ಎಲ್. ಎಲ್. ಬಿ.ರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಸಂಘದ ೧೯೨೬-೨೭ರ ಆಡಿಟ್ ಸರ್ಟಿಫಿಕೇಟನ್ನು ಮುಂದಿರಿಸಿದರು. ಈ ವರ್ಷ ಸಂಘಕ್ಕೆ ರೂಪಾಯಿ ೧೨೪೧ ಲಾಭವಾಗಿದೆಯಂತೆ.

ಇಲ್ಲಿಯ ರೆವೆನ್ಯು ಡಿವಿಜನಲ್ ಆಫೀಸರರಾಗಿದ್ದ ಮಿ। ಎಲ್. ಇ. ಹರ್ಟಿಸ್ ದೊರೆಗಳವರು ಮಧುರೆಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಮುಂಡ್ಕೂರು:—ಆರೋಗ್ಯ ಮತ್ತು ಶಿಶು ಸಪ್ತಾಹದ ಸಮಾರಂಭವನ್ನು ಮುಂಡ್ಕೂರು ಗ್ರಾಮದಲ್ಲಿಯೂ ಬಲು ವಿಜೃಂಭಣೆಯಿಂದ ಜರಗಿಸೋಣಾಯಿತು. ಶಿಶುಗಳ ದಿನದಲ್ಲಿ ಸಣ್ಣದೊಂದು ಶಿಶು ಪ್ರದರ್ಶನಾ ಕೂಟವೂ ನೆರೆದು, ಕೂಸುಗಳಿಗೆ ತಕ್ಕ ಪಾರಿತೋಷಕಗಳು ಕೊಡಲ್ಪಟ್ಟವು.

ಹೊಸದುರ್ಗ:—ಇಲ್ಲಿಯ ಪಣತ್ತಡಿ ರಸ್ತೆ ಮೇಲೆ ಮೋಟರ್ ಚಲಾವಣೆಯು ತಾ. ೨೨ಕ್ಕೆ ತೊಡಗುವದೆಂದು ವಾರ್ತೆ.

ಶಿಶು ಸಪ್ತಾಹದ ಪ್ರದರ್ಶನವು, ಕಾಂಞಂಗಾಡ ಹಿಂದು ಬೋರ್ಡು ಶಾಲೆಯಲ್ಲಿ ಜೂನಿಯರ್ ಡಿಪ್ಯುಟಿ ಇನ್ಸಪೆಕ್ಟರ್ ಮ. ರಾ. ರಾ. ಟಿ. ಶ್ರೀಪಾದರಾಯರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು. ಹೊಸದುರ್ಗ ಮುಕ್ಕಮರ ಬೋರ್ಡು ಶಾಲೆಯ ಮಕ್ಕಳು ಸಹಾ ಭಾಗಿಯಾಗಿದ್ದರು. ಕಾಲೋಚಿತ ಭಾಷಣೆಯಿಂದ ಮಕ್ಕಳಿಗೆ ಮಿಠಾಯಿ ತಿಂಡಿ ವ ಇನಾಮು ಹಂಚೋಣದಿಂದ ಸಂಭ್ರಮವು ಕೊನೆಗೊಂಡಿತು. ಹೊಸದುರ್ಗ ಕಸಬೆಯ ಪ್ರದರ್ಶನವು ಅದೇ ರೀತಿಯಲ್ಲಿ ಹೊಸದುರ್ಗ ಡಿಪ್ಯುಟಿ ತಹಸಿಲದಾರರ ಅಧ್ಯಕ್ಷತೆಯಲ್ಲಿ ಜರಗಿತು.

ನಿಲೇಶ್ವರ ಅರ್ಸುಗಳಿಗೂ ಚೆಳ್ಳಿಕೋತನವರಿಗೂ ವಿವಾದ ಇರುವ ಮೆಣ್ಣಿನ ಬಳ್ಳಿಯ ಫಲಕೊಯ್ಯುವ ಸಂದರ್ಭದಲ್ಲಿ ನೆಮ್ಮದಿಭಂಗವಾಗದಂತೆ ಅರ್ಸುಗಳು ಸದರಿ ಸ್ಥಳದಲ್ಲಿ ಪ್ರವೇಶಿಸಕೂಡದಾಗಿ ಹುಕುಂ ಜ್ಯಾರಿ ಆಗಿ ಯಾವರೂ ಕೊಯ್ದ ಮೆಣ್ಣೆ ಇಟ್ಟಲ್ಲಿಂದ ಥಕ್ಕನೆ ಮಾಯವಾಗಿಯದಂತೆ, ತನ್ನಿಯು ನಡಿಯುತ್ತದೆ.

ವೇಣೂರು:—ದಕ್ಷಿಣ ಕನ್ನಡ ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ತೃತೀಯ ಮಹಾಸಭೆಯು ಇದೇ ತಿಂಗಳ ತಾರೀಕು ೧೨ನೇ ಆದಿತ್ಯವಾರ ವೇಣೂರು ಕಸಬೆಯಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯಲ್ಲಿ ತಯಾರಿಸಿದ ಸಭಾ ಮಂಟಪದಲ್ಲಿ ಮುಲ್ಕಿ ಡಿವಿಜನ್ ಆಯರ್ಕ ಮಾಗಣೆ ಶ್ಯಾನುಭಾಗರಾದ ರಾ. ಪೆ. ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಮಂಗಳೂರು ಕಾಸರಗೋಡು ಪುತ್ತೂರು ಕಾರ್ಕಳ ತಾಲೂಕುಗಳಿಂದ ಸುಮಾರು ೩೦೦ಕ್ಕೆ ಮಿಕ್ಕಿದ ಪ್ರತಿನಿಧಿಗಳು ಹಾಜರಿದ್ದರು. ಆದರೆ ಮುಲ್ಕಿ, ಉಡುಪಿ, ಕುಂದಾಪುರ ಪ್ರಾಂತ್ಯಗಳಿಂದ ಒಬ್ಬ ಪ್ರತಿನಿಧಿಯಾದರೂ ಬಂದಿರಲಿಲ್ಲ. ಪ್ರಾತಃಕಾಲ ವೈದಿಕ ಹೋಮವೂ, ಭಜನೆಯೂ ನಡೆಯಿತು. ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಸಭಾಕಾರ್ಯವು ಪ್ರಾರಂಭಿಸಲ್ಪಟ್ಟಿತು. ಸಭಿಕರ ಅಪೇಕ್ಷೆಯಂತೆ ಅಧ್ಯಕ್ಷರು ಅಗ್ರಾಸನವನ್ನು ವಹಿಸಿದ ಬಳಿಕ ಅಂದಿನ ಸಭೆಯು ನಿರ್ವಿಘ್ನವಾಗಿಯೂ ಯಶಸ್ವಿಯಾಗಿಯೂ ನಡಿಯುವಂತೆ ಶ್ರೀ ದೇವರನ್ನು ಪ್ರಾರ್ಥಿಸಲಾಯಿತು. ಸಂಘದ ಕಾರ್ಯದರ್ಶಿಯವರು ಗತವರುಷದ ವರದಿಯನ್ನು ಓದಿ ಹೇಳಿದರು. ಸಂಘದ ಏಳಿಗೆಯ ಕುರಿತು ಸ್ವಜಾತಿ ಮತ್ತು ಇತರ ಮಹನೀಯರ ಭಾಷಣವಾಯಿತು. ತರುವಾಯ ಜಾತಿನೀತಿಗಳಲ್ಲಿ ಸುಧಾರಣೆಗಳೂ ಸಂಘದ ಏಳಿಗೆಯ ಕುರಿತು ಏರ್ಪಾಡುಗಳೂ ಚರ್ಚಿಸಲಾಯಿತು. ಬಳಿಕ ಅಧ್ಯಕ್ಷರು ಮಧುರವಾದ ಶೈಲಿಯಿಂದ ಸಂಘದ ಮೂಲತತ್ವಗಳನ್ನೂ, ಉದ್ದೇಶಗಳನ್ನೂ ಸಭಿಕರಿಗೆ ಬೋಧಿಸಿದರು. ಸ್ವಾಗತ ಕಮಿಟಿಯ ಅಧ್ಯಕ್ಷರು ತಮ್ಮ ಅನೇಕ ಕೆಲಸ ವಗೈರೆಗಳನ್ನು ಬಿಟ್ಟು ಬಹು ಪ್ರಯಾಸದಿಂದ ಬಂದು ನೆರೆದಿರುವ ಸಭಿಕರಿಗೆ ಧನ್ಯವಾದಗಳನ್ನಿತ್ತು, ಹೀಗೆ ಎಲ್ಲಾ ಪ್ರಾಂತ್ಯದವರು ಪ್ರೀತಿಯಿಂದ ಒಟ್ಟಿಗೆ ಕೂಡಿ ನಮ್ಮೊಳಗಿನ ಕುಂದುಕೊರತೆಗಳನ್ನು ನೀಗುವಂತೆ ಮಾಡುವ ಈ ಸುಧಾರಕ ಸಂಘವನ್ನು ಶ್ರೀ ಪರಮಾತ್ಮನು ಚಿರಂಜೀವಿಯಾಗಿ ರಕ್ಷಿಸಲಿ ಎಂದು ಪ್ರಾರ್ಥಿಸಿದ ಬಳಿಕ ಅಂದಿನ ಸಭೆಯು ಶಾಂತಿವಚನದೊಂದಿಗೆ ಮುಕ್ತಾಯವಾಯಿತು.

೧೯೨೯ನೇ ಇಸವಿಯ ೪ನೇ ಮಹಾಸಭೆಯನ್ನು ಪುತ್ತೂರು ತಾಲೂಕಿನವರು ಆಮಂತ್ರಿಸಿದ ಪ್ರಕಾರ ಬೆಳ್ತಂಗಡಿಯಲ್ಲಿ ಜರಗಬೇಕಾಗಿ ನಿಶ್ಚಯವಾಯಿತು. ಸ್ವಾಗತ ಮಂಡಳಿಯವರ ಯೋಗ್ಯವ್ಯವಸ್ಥೆಯಿಂದ ಪ್ರತಿನಿಧಿಗಳ ಆದರಸತ್ಕಾರಾಧಿಗಳು ಚೆಲೋ ರೀತಿಯಲ್ಲಿ ನಡೆದಿದ್ದವು.

ಕಾಸರಗೋಡು:—ಇದೇ ತಾ. ೧೭ನೇ ಶುಕ್ರವಾರ ದಿನ ಸಾಯಂಕಾಲ ಘಂಟೆ ೫-೩೦ಕ್ಕೆ ಮುನ್ಸಿಫ ಕೋರ್ಟು ಬಳಿಯಲ್ಲಿಯ ಟೆನ್ನಿಸ್ ಗ್ರಾಂಡಿನಲ್ಲಿ, ಇಲ್ಲಿಯ ಮಿಶನ್ ಸೆಕೆಂಡರಿ ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದ ಸರ್ವಜನ ಪ್ರಿಯರಾಗಿದ್ದ ಶ್ರೀಯುತ ಯು. ಉಮಾನಾಥರಾಯರಿಗೆ, ಮಂಗಳೂರಿಗೆ ವರ್ಗವಾಗಿದ್ದುದರ ಕುರಿತು ಒಂದು ಫೇರ್‌ವೆಲ್ ಕೊಡುವ ಬಗ್ಗೆ ಒಂದು ಸಭೆಯು ಊರ ಎಲ್ಲಾ ಸರಕಾರಿ ನೌಕರರಿಂದಲೂ, ಇತರ ಮಹನೀಯರಿಂದಲೂ, ಕೂಡಿ ಜರಗಿತು. ಸಭೆಯಲ್ಲಿ ಶ್ರೀಯುತ ಪುಂಡೂರು ಪುಣಿಂಚತ್ತಾಯರಿಂದಲೂ ಇತರ ಅನೇಕ ಗೃಹಸ್ಥರಿಂದಲೂ ಶ್ರೀಯುತ, ಉಮಾನಾಥರಾಯರ ಅಗಲುವಿಕೆಯ ಕುರಿತು, ದುಃಖಸೂಚಕವಾದ ಭಾಷಣಗಳಾದ ತರುವಾಯ ಸದರಿಯವರು, ಇಲ್ಲಿ ಹೆಚ್ಚಿನ ಕಾಲವಿದ್ದ ಸದರಿ ಶಾಲೆಯನ್ನೂ ಇತರ ಅನೇಕ ತರದ ಸಂಸ್ಥೆಗಳನ್ನೂ ಅಭಿವೃದ್ಧಿಗೆ ತಂದುದರ ಬಗ್ಗೆ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಲ್ಲದೆ ಎರಡು ಭಂಗಾರದ ಮೆಡಲುಗಳನ್ನೂ ಒಂದು ಬೆಳ್ಳಿಯ ಕಪ್ಪನ್ನೂ ಮತ್ತೂ ಒಂದು ಮಾನಪತ್ರವನ್ನು ಅರ್ಪಿಸಿದ ತರುವಾಯ, ಸದರಿಯವರು ದೀರ್ಘಾಯುವಾಗಿರಲೆಂದೂ, ಇನ್ನೂ ಉಚ್ಚ ಪದವಿಗೆ ಬರಲೆಂದು ಕೂಡ ಶ್ರೀ ಭಗವಂತನನ್ನು ಪ್ರಾರ್ಥಿಸಿ, ಅಧ್ಯಕ್ಷರಾದ ಶ್ರೀಯುತ ಕೆ. ಪಿ. ಪದ್ಮನಾಭಯ್ಯನವರ ಭಾಷಣವಾದ ನಂತರ ಅತೀ ದುಃಖದಿಂದ ಸಭೆಯು ಮುಕ್ತಾಯವಾಯಿತು.

ಈ ತಾಲೂಕಿನ ಜಮಾಬಂದಿಯು ಈ ವರ್ಷ ಹಜರತ್ ಜಿಲ್ಲಾ ಕಲೆಕ್ಟರವರಿಂದ ನಡಿಸಲ್ಪಡುತ್ತದೆ. ಈಗಲೆ ಲೆಖ್ಖ ವಗೈರೆ ಚೆಕ್ಕಿಂಗ್ ಸುರುವಾಗುತ್ತದೆ. ಹಜೂರು ಸಿಬಂದಿಯೂ ಶಿರಸ್ತೆದಾರರೂ ಇಲ್ಲಿ ಇರುತ್ತಾರೆ.

ಊರಲ್ಲಿ ಅಲ್ಲಲ್ಲಿ ವೈಲೆಗಜ್ಜ ಅಂದರೆ ಬಸೂರಿ ರೋಗವು ಇರುತ್ತದೆ.

ಮೊನ್ನೆ ತಾನೆ ನಡದ ತಾಲೂಕು ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ, ಇಚ್ಲಂಪಾಡಿ ಪಟೇಲರಾದ, ಶ್ರೀಯುತ ಚೆಕ್ಕಪ್ಪ ಭಂಡಾರಿಯವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ಇದು ತುಂಬಾ ಸಂತೋಷಕರವಾದ ವಾರ್ತೆ. ಇನ್ನಾದರೂ ಸದರಿ ಬೋರ್ಡು ಸರಿಯಾಗಿ ನಡೆಯುವದೆಂದು ಕೋರುತ್ತೇವೆ.

The Chickmagalur Public Conveyance Motor Service.

CHICKMAGALUR.

... ಮೋಟರ್ ಸರ್ವಿಸ್.

Tel: Conveyance.

... (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳ ... ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ... ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ... ೨ಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ... ಏರ್ಪಡಿಸಿರುತ್ತೆ.

... ವಿವರ.

... 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧ ... 11-45ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, ... ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ... ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ

... ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ ... ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ... ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ... 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ... ಗದಗ್, ಪಂಡರಪೂರ್, ಗೋವಾ, ಲೋಂಡ,

... ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ... ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ

... ಅನುಕೂಲತೆ.

... ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ... ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು

... ಕೊಳ್ಳಬಹುದು.

... ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

THE CANARA ... MANGALORE.

ಕೆನರಾ ಪಬ್ಲಿಕ್ ... ಮಂಗಳೂರು.

... ಯಾಗಿದೆ.

... ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

... ಮಾರ್ಗವಾಗಿಯೂ

... ಶಿರಿಕಲ್ಲಿನಿಂದ

... ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

... ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ... ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ... ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

... ಗೋಕರ್ಣಕ್ಕೆ ... ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ... ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ... ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುತ್ತದೆ.

Secretary,

The Canara Public Conveyance Co., Ltd., Mangalore. S. K.

ಮೂಡುಗ್ರಾಮ:— ಇಲ್ಲಿಯ ಗೂಡಿನ ಬಳಿ ಬೋರ್ಡ್ ಶಾಲೆಯವರು ಚಲೋ ರೀತಿಯಲ್ಲಿ ಆರೋಗ್ಯವಾರವನ್ನು ಆಚರಿಸಿದರು.

ಬಂಟವಾಳ:— ಇಲ್ಲಿಯ ಮಹಾಮಾಯಿ ದೇವಸ್ಥಾನದ ಕಾಣಿಕೆ ಡಬ್ಬಿಯು ಕಳವಾಗಿ ಹೋಯಿತು. ಪೋಲೀಸ ಅಧಿಕಾರಿಗಳು ತನಿಖೆ ನಡಿಸುತ್ತಿರುವರು. ಕಳೆದ ವರುಷ ಮಹಾಲಿಂಗೇಶ್ವರ ದೇವಸ್ಥಾನದ ಕಾಣಿಕೆ ಡಬ್ಬಿ ಕಳವಾಗಿತ್ತು.

ಸುಳ್ಯ:— ಇಲ್ಲಿಯ ಡಾಕ್ಟರ್ ವೆಂಕಟರಾಯರು ತಾ॥ ೧—೨—'೨೮ನೇ ದಿವಸ ಕೆಲಸದಿಂದ ನಿವೃತ್ತರಾದ ಸಮ್ಮಂಧ ಊರ ನಿವಾಸಿಗರು ಕೂಡಿ ಒಂದು ಟೀ ಪಾರ್ಟಿಯನ್ನು ಕೊಟ್ಟದ್ದಲ್ಲದೆ ಒಂದು ಫೋಟೋಗ್ರಾಫ್ ಸಹ ತೆಗೆದು ಸದರಿ ವೆಂಕಟರಾಯರು ಇಲ್ಲಿಯ ಶಾಲಾ ಕಮಿಟಿಯ ಅಧ್ಯಕ್ಷರಾಗಿ ಶಾಲಾ ವರ್ಧಂತಿ ಉತ್ಸಹ ಆರೋಗ್ಯ ಸಪ್ತಾಹ ಸಮಾರಂಭಗಳಲ್ಲಿ ಹೆಚ್ಚಿನ ಶ್ರಮಪಟ್ಟು ಕೆಲಸ ಮಾಡಿದ್ದಕ್ಕೆ ಕೂಡಿದ ಸಭಿಕರು ಕೊಂಡಾಡಿ ಶ್ರೀ ದೇವರ ಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಆರೋಗ್ಯ ಮತ್ತು ಶಿಶು ಸಪ್ತಾಹವು ಬಹಳ ವಿಜೃಂಭಣೆಯಿಂದ ನಡೆದದೆ.

ವಿವಿಧ ವಿಷಯಗಳು.

ದಿವಂಗತರಾದ ಹರಚಂದ್ರೈ ವಿಶಿನ್‌ದಾಸರು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಸದಸ್ಯರಾದ ಹರಚಂದ್ರೈ ವಿಶಿನ್‌ದಾಸರು ೧೬ನೇ ತಾರೀಕಿನ ದಿನ ದೈವಾಧೀನರಾದರು! ಇವರ ಸ್ಮಾರಕಕ್ಕಾಗಿ ಎಸೆಂಬ್ಲಿಯಲ್ಲಿ ನಡೆಯುತಿದ್ದ ಕೆಲಸವನ್ನು ನಿಲ್ಲಿಸಿ ಕಾರ್ಯಕ್ರಮಗಳನ್ನು ಮುಂದಿನ ದಿನಕ್ಕೆ ಮುಂದರಿಸಿಟ್ಟರು. ಇವರ ಪ್ರೇತಸಂಸ್ಕಾರಕ್ಕೆ ಅನೇಕ ಸದ್ಗೃಹಸ್ಥರುಗಳು ಬಂದಿದ್ದರು. ಸ್ಯಾಮನ್ ಕಮಿಶನಿನ ವಿರುದ್ಧವಾಗಿ ಎಸೆಂಬ್ಲಿಯಲ್ಲಿ ತಾನು ಮತವನ್ನು ಕೊಡುವೆನೆಂದು ವೃತರು, ವೈದ್ಯರ ಅಭಿಪ್ರಾಯಕ್ಕೆ ಗಮನಿಸದೆ ಡಿಲ್ಲಿಗೆ ಹೊರಟುಬಂದಿದ್ದರು. ಕಳೆದ ಒಂದು ವರ್ಷದಿಂದಲೂ ಅವರು ರೋಗಪೀಡಿತರಾಗಿದ್ದರು. ಡಿಲ್ಲಿಗೆ ಬಂದೊಡನೆ ಅಸೌಖ್ಯತೆಯು ಬಹು ಬೇಗನೆ ಅಭಿವೃದ್ಧಿಹೊಂದಿತು. ವೆಸ್ಟರ್ನ್ ಹೋಟೆಲಿನಲ್ಲಿ ಬಂದೊಡನೆ ರಕ್ತವನ್ನು ಕಾರಲು ಪ್ರಾರಂಭವಾಯಿತು. ಅಲ್ಲಿಂದ ಅವರನ್ನು ಹಿಂದೂ ರಾವ್ ಆಸ್ಪತ್ರೆಗೆ ಕೊಂಡೊಯ್ದರು. ಅಲ್ಲಿ ಸುಮಾರು ೧೧ ಘಂಟೆಗೆ ಪ್ರಾಣತ್ಯಾಗವನ್ನು ಮಾಡಿದರು. ವೃತರು ೬೬ ವರ್ಷ ಪ್ರಾಯದವರು, ದೊಡ್ಡ ಕುಟುಂಬದವರು; ಮುದುಕರಾದ ಜನಕರಿರುವರು. ಅವರ ವೃತದೇಹವನ್ನು ಆಸ್ಪತ್ರೆಯಿಂದ ತೆಗೆದು ಕಾಶ್ಮೀರ ಗೇಟಿನ ಸಮೀಪವಿರುವ ಅವರ ಅಳಿಯನ ಮನೆಗೆ ಕೊಂಡೊಯ್ದರು. ಅಲ್ಲಿಂದ ಸ್ಮಶಾನಭೂಮಿಗೆ ತೆಗೆದುಕೊಂಡು ಹೋದರು. ಸ್ಮಶಾನ ಭೂಮಿಗೆ ಹಿಂದುಗಳೂ, ಇತರರೂ ಹೋಗಿದ್ದರು. ಅವರ ಮರಣ ವಾರ್ತೆಯು ಕರಾಚಿಗೆ ತಲಪಿದೊಡನೆ ಅಲ್ಲಿ ಹಾಹಾಕಾರವೆದ್ದಿತು. ಅವರು ಕಳೆದ ಎರಡು ವರುಷಗಳಿಂದ ಜೋರು ಅಸ್ವಸ್ಥದಲ್ಲಿದ್ದು, ಡಿಲ್ಲಿಗೆ ಹೋಗಬಾರದೆಂದಾಗಿ ಎಷ್ಟು ಅಡ್ಡಿಮಾಡಿದರೂ, ಎಸೆಂಬ್ಲಿಯಲ್ಲಿ ಇವರು ಅಗತ್ಯವಾಗಿ ಬರಬೇಕೆಂದು ಲಾಲಾ ಲಜಪತ ರೈಯವರ ಮೂರು ತಂತಿಗಳು ಬಂದುದರಿಂದ ಇವರು ಡಿಲ್ಲಿಗೆ ಪ್ರಯಾಣಬೆಳೆಸಬೇಕಾಯಿತು. ೮೪ ವರ್ಷ ಪ್ರಾಯದ ಅವರ ಮುದಿ ತಂದೆಗೆ ಈ ದುಃಖಕರ ವಾರ್ತೆಯು ತಲಪಿ ಅವರು ಕೊರಗುತ್ತಿರುವರು. ದೇಶವೇ ಧಿಕ್ಕರಿಸಿ ಬಂದಿರುವ ಈ ಸ್ಯಾಮನ್ ಕಮಿಶನನ್ನು ವಿರೋಧಿಸಲೋಸುಗ ತನ್ನ ಅಂಥ ಕಠಿಣ ಅಸ್ವಸ್ಥವನ್ನು ಕೂಡ ಲೆಕ್ಕಿಸದೆ, ಡಿಲ್ಲಿಗೆ ಬಂದು ತನ್ನ ಪ್ರಾಣವನ್ನು ಅರ್ಪಿಸಿದ್ದು ಪ್ರಶಂಸನೀಯವಿದೆ. ಅವರ ಆತ್ಮಕ್ಕೆ ಭಗವಂತನು ಸಾಯುಜ್ಯವನ್ನು ದಯಪಾಲಿಸಲಿ!

§ § § §

ಮದರಾಸಿಗೆ ಸ್ಯಾಮನ್ ಕಮಿಶನು ಬರುವುದು!

ಕಮಿಶನು ಮದರಾಸಿಗೆ ಬರುವ ದಿನವು ಖಂಡಿತವಾಗಿ ತಿಳಿದಿಲ್ಲವಾದರೂ, ೨೬ನೇ ಆದಿತ್ಯವಾರ ಬರುವದೆಂದು ಹೇಳುವರು. ಮದರಾಸಿಗೆ ಬರುವಾಗ ಹಾದಿಯಲ್ಲಿರುವ ಗುಂಟೂರಿನಲ್ಲಿ ಎರಡು ದಿನ ಉಳಕೊಳ್ಳುವುದು. ಮದರಾಸಿನಿಂದ ಮಾರ್ಚಿ ೩ನೇ ತಾರೀಕಿನ ದಿನ ಹೊರಟು ತಂಜಾವೂರಿಗೆ ಹೋಗುವದು; ತಂಜಾವೂರಿನಲ್ಲಿ ಮೂರು ದಿನ ಉಳಕೊಳ್ಳುವದು. ಮದರಾಸಿನಲ್ಲಿ ಸರಕಾರದ ಕರ್ತವ್ಯವನ್ನು ಪರೀಕ್ಷಿಸುವದು; ಅಪೇಕ್ಷಿಸಿದವರಿಗೆ ಭೇಟಿಯನ್ನು ಕೊಡುವದು; ಇದೇ ಕಮಿಶನಿನ ಕರ್ತವ್ಯ. ೨೭ನೇ ದಿನ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಮತ್ತು ಓನರೇಬಲ್ ಸರ್ ಮುರೇಕೋಟ್ ಟ್ರೋಟ್ಟರರು ಸರ್ ಜೋನ್ ಸ್ಯಾಮನರಿಗೆ ಒಂದು ಡಿನ್ನರ್‌ಪಾರ್ಟಿಯನ್ನು ಕೊಡುವರು. ೩ನೇ ತಾರೀಕಿನ ದಿನ ನಡೆವಂತೆ ಅಂದಿನ ದಿನವೂ ಏನಾದರೂ ಅನಾಹುತಗಳಾಗದಂತೆ ತಡೆಯಲು ಸರಕಾರದವರು ಬೇರೆ ಕಡೆಗಳಿಂದಲೂ ಪೋಲಿಸ್ ದಳವನ್ನು ತರುವರೆಂದು ವರ್ತಮಾನವಿದೆ.

§ § § §

ಸ್ಯಾಮನ್ ಕಮಿಶನಿನ ಕುರಿತು ಎಸೆಂಬ್ಲಿಯಲ್ಲಾದ ನಿಶ್ಚಯ

ಸ್ಯಾಮನ್ ಕಮಿಶನು ಹಿಂದೂಸ್ಥಾನಕ್ಕೆ ಬಂದೀದೊಡನೆ ಅದನ್ನು ಹಲವರು ಬಹಿಷ್ಕರಿಸಿದರು. ಕೆಲವರು ಆಮಂತ್ರಿಸಿದರು. ಕೊನೆಗೆ ಇದನ್ನು ಡಿಲ್ಲಿಯ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಧುರೀಣರು ಮತಗಳನ್ನು ಕೊಟ್ಟು ನಿಶ್ಚಯಿಸಬೇಕೆಂದಾಯಿತು. ಅಂತೆಯೇ ಕಳೆದ ೧೬ ಮತ್ತು ೧೮ನೇ ತಾರೀಕಿನ ದಿನ ಎಸೆಂಬ್ಲಿಯಲ್ಲಿ ವಾದವು ನಡೆಯಿತು. ಜನಸಂದಣಿಯು ಕಿಕ್ಕಿರಿದಿದ್ದಿತು. ಬರೋಡಾ, ಕಪುರ್ತಲದ ರಾಜರೂ ಮಂಡಿಯ ರಾಣಿಯವರೂ ಬಂದಿದ್ದರು. ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರರೂ ಹಾಜರಿದ್ದರು. ಮೊದಲು ಹರಚಂದ್ರೈ ವಿಶಿನ್‌ದಾಸರು ವೃತಪಟ್ಟುದಕ್ಕಾಗಿ ಅಧ್ಯಕ್ಷರು ದುಃಖವನ್ನು ಸೂಚಿಸಿದರು. ಪಂಚಮರ ಪ್ರತಿನಿಧಿಯಾದ ಎಮ್. ಸಿ. ರಾಜರು ಅವರ ಭಾಷಣವನ್ನು ಮಾಡಿದರು. ಅನಂತರ ಮತಕೊಡಲು ಪ್ರಾರಂಭವಾಯಿತು. ಅವುಗಳನ್ನು ಲೆಕ್ಕ ಮಾಡಿಯೂ ಆಯಿತು. ಪ್ರೆಸಿಡೆಂಟ್ ಪಟೇಲರು ಲೆಕ್ಕ ಮಾಡಿ, ಎದ್ದು ನಿಂತು ಲಜಪತರೈವರ ಕಡೆಗೆ ೬ ಮತಗಳು ಹೆಚ್ಚಿಗೆ ದೊರಕಿವೆ ಎಂದು ಹೇಳಿದೊಡನೆ, "ವಂದೇ ಮಾತರಮ್" ಎಂಬ ಜಯಘೋಷವು ಸರ್ವರ ಬಾಯಿಯಿಂದಲೂ ಹೊರಹೊಮ್ಮಿತು. ಸ್ಯಾಮನ್ ಕಮಿಶನನ್ನು ಬಹಿಷ್ಕರಿಸಬೇಕೆಂದು ೬೮ ಮತಗಳು, ಬಹಿಷ್ಕರಿಸಬಾರದೆಂದು ೬೨ ಮತಗಳು, ಇದರ ಪ್ರಯತ್ನಕ್ಕಾಗಿ ಪಾರ್ಟಿಯ ಧುರೀಣರನ್ನೂ, ಇತರರನ್ನೂ ಸರಿಯಾಗಿ ಹೊಗಳಬೇಕಾಗಿದೆ. ಹಲವರು ಮತಗಳನ್ನು ಕೊಡದೆ ಸುಮ್ಮನೆ ಕುಳಿತಿದ್ದರು, ಈ ರೀತಿಯಲ್ಲಿ ಎಸೆಂಬ್ಲಿಯು ಕಮಿಶನಿಗೆ ನಾಸ್ತಿಕ್ಯವನ್ನೇ ಸಾರಿತು.

§ § § §

ಎಸೆಂಬ್ಲಿಯ ಠರಾವಿನಿಂದ ಮಹಾರಾಷ್ಟ್ರದಲ್ಲಿನ ಪರಿಣಾಮ.

ಎಸೆಂಬ್ಲಿಯಲ್ಲಿ ಸ್ಯಾಮನ್ ಕಮಿಶನ್ ಬಹಿಷ್ಕಾರಕ್ಕೆ ಹೆಚ್ಚಿನ ಮತಗಳು ದೊರಕಿದವೆಂಬ ವರ್ತಮಾನವನ್ನು ಕೇಳಿ ಮಹಾರಾಷ್ಟ್ರ ದೇಶದವರು ಬಹಳ ಸಂತೋಷಗೊಂಡರು. ಎಸೆಂಬ್ಲಿಯ ಪ್ರತಿನಿಧಿಗಳನ್ನು ಅಭಿನಂದಿಸಲಿಕ್ಕಾಗಿ ಒಂದು ಬಹಿರಂಗವಾದ ಸಭೆಯು ಜರಗಿತು. ಇಡೀ ವಾರದಲ್ಲೆಲ್ಲ ಅಲ್ಲಲ್ಲಿ ಈ ಕುರಿತು ಸಭೆಗಳು ನಡೆದವು. ಲಾಲಾ ಲಜಪತರೈಯವರಿಗೆ ಪೂನೆಯ ಸಾರ್ವಜನಿಕ ಸಭೆಯವರು ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಲೋಸುಗ ತಂತಿಯನ್ನು ಬಿಟ್ಟಿರುವರು. ಮಹಾರಾಷ್ಟ್ರವು ಸ್ಯಾಮನ್ ಕಮಿಶನಿಗೆ ಅಸಹಾಯಕವಾಗಿದೆಯೆಂದು ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಭೋಪಾಟ್‌ಕರರು ತಂತಿಯನ್ನು ಬಿಟ್ಟಿರುವರು. ಮಹಾರಾಷ್ಟ್ರದ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರು ಪರದೇಶೀ ಸಾಮಾನುಗಳನ್ನು ಬಹಿಷ್ಕರಿಸುವಂತೆ ಜನರಿಗೆ ಸಾರುತ್ತಿರುವರು. ಬ್ರಿಟಿಷರ ವಸ್ತ್ರ, ಸಾಬೂನು, ಪರಿಮಳ ದ್ರವ್ಯ, ಎಣ್ಣೆ, ಬಿಸ್ಕೂಟು ಮೊದಲಾದುವುಗಳನ್ನು ಎಂದಿಗೂ ಮುಟ್ಟಬಾರದು ಎಂದು ಪ್ರಯತ್ನಗಳು ನಡೆಯುತ್ತಲೇ ಇವೆ. ಸ್ವದೇಶಿ ವಸ್ತ್ರವಾದ ಖಾದಿಯ ಉಪಯೋಗವನ್ನು ಜನರಲ್ಲಿ ಪ್ರಾರಂಭಿಸುವಂತೆ ಮಾಡುತ್ತಿದ್ದಾರೆ.

§ § § §

ಬನಾರಸಿನಲ್ಲಿ ಸ್ಯಾಮನ್ ಕಮಿಶನು.

ಸ್ಯಾಮನ್ ಕಮಿಶನು ೨೦ನೇ ತಾರೀಕಿನ ದಿನ ಮಧ್ಯಾಹ್ನ ಬನಾರಸಿಗೆ ತಲಪಿತು. ಇಂತಿಷ್ಟೇ ಸಮಯಕ್ಕೆ ಕಮಿಶನು ಬರುವದೆಂಬದನ್ನು ಆಫೀಸರರು ಗುಟ್ಟಾಗಿ ಇಟ್ಟಿದ್ದರೂ, ಸ್ಟೇಶನಿನಲ್ಲಿಯೂ, ಅವರು ನಡೆದ ಮಾರ್ಗಗಳಲ್ಲಿಯೂ, ಗಲಾಟೆಯಾಗದಿರಲಿಲ್ಲ. ಮುಂಬಾಯಿಯಲ್ಲಿ ಮಾಡಿದಂತೆಯೇ ಹಲವರು ಧ್ವಜಗಳ ಮೇಲೆ "ಸ್ಯಾಮನ್ ಹಿಂದಕ್ಕೆ ಹೋಗು" ಎಂದು ಮೊದಲಾಗಿ ಬರೆದು ಪ್ರದರ್ಶಿಸುತ್ತಿದ್ದರು. ಪಟ್ಟಣದ ಅಂಗಡಿಗಳೆಲ್ಲವನ್ನೂ ಮುಚ್ಚಿ ಬಹಿಷ್ಕಾರವನ್ನೇ ಸಾರಿದ್ದರು. ಹರತಾಳವನ್ನು ಆಚರಿಸಿದವರಲ್ಲಿ ಮುಖ್ಯವಾಗಿ ಪಟ್ಟಣಿಗರು, ಕೊಂಗ್ರೆಸ್ ಜನರು, ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು. ಕಮಿಶನು ಮುಂದರಿದು ಹೋಗಬೇಕಾದ ಮಾರ್ಗಗಳಲ್ಲೆಲ್ಲಾ ಅಲ್ಲಲ್ಲಿ ಪೋಲೀಸರನ್ನು ನಿಲ್ಲಿಸಿದ್ದರು.

§ § § §

ಕಲಕತ್ತಾವಿಗೆ ಆಗಮನ.

ಕಲಕತ್ತದಲ್ಲಿ ಕಮಿಶನು ಇಳಿಯುವ ಹೌರಾ ರೈಲ್ವೆ ಸ್ಟೇಶನಿನಲ್ಲಿ ಹಿಂದುಗಳು, ಮುಸಲ್ಮಾನರು, ಯುರೋಪಿಯಾನರು, ಪಂಚಮರು ಎಂದು ದೊಡ್ಡ ಜನಸಂದಣಿಯು ಕೂಡಿದ್ದಿತು. ಆಯಾಯ ಜಾತಿಗಳ ಮುಖ್ಯಸ್ಥರು ಕಮಿಶನಿನವರಿಗೆ ಮಾಲಿಕೆಗಳನ್ನು ಹಾಕಿ ಸತ್ಕರಿಸಿ, ಸರಕಾರಿ ಮಂದಿರಕ್ಕೆ ಕರೆದೊಯ್ದರು. ಮಾರ್ಗದಲ್ಲಿ ಹೆಚ್ಚಿನ ಗಲಭೆಯೇನೂ ಇರಲಿಲ್ಲ. ಒಂದು ಧ್ವಜವು ಮಾತ್ರ ಕಮಿಶನಿಗೆ ವಿರುದ್ಧವಾಗಿ ತೋರಿಸಲ್ಪಟ್ಟಿತ್ತು.

ಊರು ವಿಟ್ಟಪ್ಪ ಕಾಮತ್ (ಮೆಡಿಕಲ್ ಕಾಲೇಜ್ ವಿದ್ಯಾರ್ಥಿ); ೧೧ ಸುಜೀರ ಪುರುಷೋತ್ತಮ ನಾಯಕ್; ೧೨ ಕೊಂಚಾಡಿ ಅಪ್ಪಯ್ಯ ಶೆಣೈಗಳವರ ಮಗ ಬಾಲಕೃಷ್ಣ ಶೆಣೈ; ೧೩ ಗುರುಪುರ ಮೂಷ್ಣಗಿರಿ ಶೆಣೈಗಳವರ ಮಗ ವಾಸುದೇವ ರಾವ್; ೧೪ ಕುಂಬಳೆ ರಾಮಕೃಷ್ಣ ನಾಯ್ಕರವರ ಮಗ ದೇವದಾಸ ನಾಯ್ಕ; ೧೫ ಉಡುಪಿ ಗಣಪತಿ ನಾರಾಯಣ ಪ್ರಭುಗಳವರ ಮಗ ಸಂಜೀವರಾಯ ಪ್ರಭು; ೧೬ ಹುಂಡಿ ರಾಮಕಮ್ತಿಯವರ ಮಗ ವಿಷ್ಣುಕಾಮತ್, ೧೭ ಕಾಸರಗೋಡು ಕೆ. ಪಿ. ಕೇಶವರಾಯರ ಮಗ ಕೆ. ಪಿ. ಅನಂತರಾವ್; ೧೮ ಉಡುಪಿ ಇಂಜಿನಿಯರ್ ವೆಂಕಟ್ರಾಯರ ಮಗಂದಿರು ಶ್ರೀನಿವಾಸ ರಾವ್ ಮತ್ತು ಸುಂದರರಾವ್; ೨೦ ಮುನ್ಸಿಫ್ ಪೇಜಾವರ ವ್ಯಾಸರಾಯರ ಅಳಿಯ ಸುಬ್ಬರಾವ್; ೨೧ ಉಡುಪಿ ಪರಂಪಳ್ಳಿ ವೆಂಕಟರಾಯರ ಮಗ ಮಾಧವರಾವ್; ೨೨ ಮುನ್ಸಿಫ್ ಪೇಜಾವರ ವ್ಯಾಸರಾಯರ ಮಗ ವೆಂಕಟ್ರಾವ್; ೨೩ ಕಡೇಕಾರ್ ರಾಜಗೋಪಾಲ ಕೃಷ್ಣರಾಯರ ಮಗ ನರಸಿಂಹ ಮೂರ್ತಿ; ೨೪ ವಕೀಲ್ ಪೇಜಾವರ ಸಂಜೀವರಾಯರ ತಮ್ಮ ಶ್ರೀಧರರಾವ್; ೨೫ ಸಾಲ್ಯತ್ತೂರ ಅಮೃತರಾಯರ ಮಗ ರಾಮರಾವ್; ೨೬ ವಕೀಲ ಉಳ್ಳಾಲ ರಾಮರಾಯರ ಮಗ ರತ್ನಾಕರ ರಾವ್; ೨೭ ಉಡುಪಿಯ ಸಬ್ ಅಸಿಸ್ಟಾಂಟ್ ಸರ್ಜನ್ ಕುಂಡಾಜೆ ಶಿವರಾಯರ ಮಗ ದೇವರಾವ್; ೨೮ ಕೀರ್ತಿಶೇಷ ಕೇಳ ಗಣಪತಿ ರಾಯರ ಮಗ ಅನಂತರಾವ್; ೨೯ ಕಾಸರಗೋಡ ವಕೀಲ ಪಡುಕೋಣೆ ಅನಂತರಾಯರ ದತ್ತಪುತ್ರ ಮನಮೋಹನರಾವ್; ೩೦ ಮು. ಸೀತಾರಾಮರಾಯರ ಮಗ ಶಂಕರ ರಾವ್; ೩೧ ಬೆಳ್ತಂಗಡಿ ವಕೀಲ್ ಮಂಗೇಶರಾಯರ ಮಗ ಗೋಪಾಲಕೃಷ್ಣರಾವ್; ೩೨ ಸಪ್ಪೂರ್ ಮಂಗೇಶರಾಯರ ಮಗ ಅಮೃತರಾವ್; ೩೩ ಬಲ್ಲಾಳರ ಮಂಗೇಶರಾವ್; ೩೪ ಬೆಳ್ತಂಗಡಿಯ ಡಿಪ್ಯುಟಿ ತಹಸಿಲ್‌ದಾರ್ ಬಿ. ಕೆ. ಕೃಷ್ಣರಾಯರ ಮಗ ಸರ್ವೋತ್ತಮ ರಾವ್ ಇವರೆಲ್ಲರೂ ಇದ್ದರು.

ಪ್ರತಿಯೊಂದು ಸಂಸ್ಥೆಯ ಉನ್ನತಿ ಅವನತಿಗಳು ಆ ಸಂಸ್ಥೆಯ ಯುವಕರ ಮೇಲೆಯೇ ಆಧರಿಸಿರುವುವು ಎಂಬುದು ಎಲ್ಲರಿಗೂ ತಿಳಿದ ವಿಷಯವು. ಹೀಗಿರಲು ಆ ಯುವಕರೇ ತಮ್ಮ ಜಾತಿಮತಗಳ ಆಚರಣೆಗೆ ವಿರುದ್ಧವಾಗಿ ವರ್ತಿಸಿದರೆ ಅನಾದಿ ಕಾಲದಿಂದಲೂ ನಡೆದು ಬಂದಿರುವ ಕುಲಾಚಾರ ಪದ್ಧತಿಗಳ ಪಾಡೇನು?

ಮದರಾಸು, ೨೦—೨—'೨೮ } ಇತಿ, 'ಪ್ರತ್ಯಕ್ಷದರ್ಶಿ'.

ಈ ಬಾತ್ಮಿಯು ಮೇಲಿನ ಪಟ್ಟಿಯೊಳಗಿನ ಹೆಸರಿನವರಲ್ಲೊಬ್ಬರಿಂದ ಬಂದದ್ದಾಗಿರುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಹೊಸದುರ್ಗ ಪತ್ರ. (ನೋಟ್ಸ್)

(ನಮ್ಮ ಬಾತ್ಮೀದಾರರಿಂದ)

ಒಂದು ಸ್ತ್ರೀವ್ಯಕ್ತಿಯು ತನ್ನ ಬಾಬ್ತು ಸುಮಾರು ೩೫ ರೂಪಾಯಿ ಕ್ರಯಬಾಳುವ ರಿಸ್ಟವಾಚ್ ಮತ್ತು ಅದರ ಸರಪಳಿಯನ್ನು ತನ್ನ ಗಂಡನಿಗೆ ತೋರಿಸಿ ಕ್ರಯಕ್ಕೆ ಪಡಕೊಳ್ಳುತ್ತೇನಾಗಿ ಹೇಳಿ ಒಬ್ಬ ಪುರುಷನಿಂದ ಪಡಕೊಂಡಳೆಂತಲೂ ನಂತರ ಸದರಿ ಗಡಿಯಾರದ ಮೌಲ್ಯ ತಾನು ಬೇಗನೇ ಕೊಡುತ್ತೇನಾಗಿಯೂ ಹೇಳಿದ ಪ್ರಕಾರ ವಾಚಾಗಲಿ ಅದರ ಕ್ರಯವಾಗಲೀ ತನಗೆ ಸಿಕ್ಕಲಿಲ್ಲವಾದ್ದರಿಂದ ಅವುಗಳ ಪೈಕಿ ಯಾವದಾದರೂ ಒಂದನ್ನು ತನಗೆ ಕೊಡಿಸಬೇಕಾಗಿ ಸದರಿ ಪುರುಷನು ಇಲ್ಲಿಯ ಪಂಚ್ಯಾತ ಕೋರ್ಟಿನಲ್ಲಿ ವಾದಿಯಾಗಿ ಸದರಿ ಸ್ತ್ರೀ ಪ್ರತಿವಾದಿ ಮೇಲೆ ದಾವಾದಾಖಲು ಮಾಡಿದ್ದನು. ಈ ವ್ಯವಹರಣೆಯು ಕೆಲವು ಸಮಯ ಇತ್ಯರ್ಥದಲ್ಲಿ ಬಾಕಿ ಇದ್ದು ತಾ. ೧೩—೨—'೨೮ರಲ್ಲು ತೀರ್ಮಾನವಾಯಿತು. ತೀರ್ಮಾನವು ಪ್ರತಿವಾದಿಗೆ ರೂ ೧೨—೦—೦ ವಾದಿ ಕೊಡಬೇಕಾಗಿ ಡಿಕ್ರಿ. ವ್ಯಾಜ್ಯವು ಪ್ರತಿವಾದಿಯಿಂದ ೩೫ ರೂಪಾಯಿ ಬರಮಾಡಿಕೊಳ್ಳುವರೆ ವಾದಿಯ ವ್ಯಾಜ್ಯ. ವಾದಿಯ ವ್ಯಾಜ್ಯ ಸುಳ್ಳುಯೆಂಬದಾಗಿ ಕೋರ್ಟಿನವರು ಅಭಿಪ್ರಾಯಪಟ್ಟಲ್ಲಿ ಅದನ್ನು ತಳ್ಳಿ ಹಾಕಬೇಕಾಗಿ ಪಂಚ್ಯಾತ ಕೋರ್ಟಿನ ನಿಯಮದ ಪ್ರಕಾರ. ಅದರ ಬದಲಿಗೆ ವಾದಿಮೇಲೆ ಡಿಕ್ರಿಯು ಕಲಾಪ.

'ಹೊಸದುರ್ಗ ಪಣತ್ತಡಿ ರಸ್ತೆ ಮೇಲೆ ಮೋಟರ್ ಚಲಾವಣೆ'— ಮೋಟರ್‌ಗಾಡಿ ಚಲಾವಣೆಗೆ ಲೈಸನ್ಸ ಕೊಡೋಣಾಗಿಯದಾಗಿ ವರ್ತಮಾನ ಈ ಮೊದಲೇ ಹಬ್ಬಿರುವದು. ಈ ರಸ್ತೆ ಮೇಲೆ ಚಲಾವಣೆ ಸಮಯ ಮೋಟರ್ ಡ್ರೈವರನ ಚುರುಕುತನವು ಅತೀ ಸೂಕ್ಷ್ಮವಾಗಿರಬೇಕು. ರಸ್ತೆಯು ಬಹಳ ಅಗಲವಾಗಿರುವುದಿಲ್ಲ. ಕೆಲವು ಕಡೆಗಳಲ್ಲಿ ಅಜುಬಾಜಿಗೆ ಏನೂ ಆಸ್ಪದವಿರುವುದಿಲ್ಲ. ಇರಿಯ ಸಮೀಪ ಮುಟ್ಟುವಾಗ ರಸ್ತೆಯು ಬಹಳ ಸುತ್ತಿ ಏರು ತಗ್ಗುಗಳು ಇದ್ದು ಮಾರ್ಗದ ಭಾಗದಲ್ಲಿ ಅಗಾಧವಾದ ಕಂದಕಗಳು ಇರುತ್ತವೆ. ಹೆಚ್ಚಿನ ಜಾಗ್ರತೆಯು ಮುಂದಾಗಿ ಈ ಸ್ಥಳವಲ್ಲಿ ತೆಗೆದುಕೊಳ್ಳಬೇಕಾಗಿರುವುದು. ರಸ್ತೆಯ ದುರುಸ್ತಿಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತ್ವರ್ಯ ಮಾಡಿಸುವಲ್ಲಿ ನಿಗಾ ಕೊಡಬೇಕಾಗಿರುತ್ತದೆ.

ಸರಕಾರದಿಂದ ಇತ್ತಲಾಗೆ ಮಂಜೂರು ಮಾಡಿದ ಬೋರ್ಡು ಶಾಲೆಗಳ ಪೈಕಿ ಕೆಲವು ಶಾಲೆಗಳು ಮೂಡು ಪ್ರಾಂತ್ಯದಲ್ಲಿ ತೆರೆಯೋಣಾಗಿಯವೆ. ಪಣತ್ತಡಿ ಗ್ರಾಮದಲ್ಲಿ ಚುಳ್ಳಿಕರೆಯಲ್ಲಿ ಇಂಥಾ ಒಂದು ಶಾಲೆ ಇದೆ. ೧೩ ಮತ್ತು ೧೪-೨-'೨೮ ದಿವಸಗಳಲ್ಲಿ ಶಾಲೆ ತೆರೆಯೋಣಾಗಲಿಲ್ಲ. ಮೂಡು ಪ್ರಾಂತ್ಯದಲ್ಲಿ ಗಡಿಯಾರವಿಲ್ಲದೆ ಸಮಯ ತಿಳಿಯುವುದಿಲ್ಲ. ಈ ಶಾಲೆಗೆ ವದಗಿಸಿಕೊಟ್ಟ ಗಡಿಯಾರವು ನಾದುರುಸ್ತಿಯಾಗಿಯದೆ; ಕ್ಲಪ್ತ ಸಮಯಕ್ಕೆ ಶಾಲೆ ನಡಿಸುವಂಥಾದ್ದು ಹ್ಯಾಗೋ! ರಜೆ ಇಲ್ಲದ ದಿವಸ ಶಾಲೆ ಮುಚ್ಚಿಯದೊ ಯಾ ತೆರದದೊ ಎಂಬದು ತಿಳಿಯುವುದು ಬಹಳ ಅಸಾಧ್ಯ. ಹಳೇ ಶಾಲೆಗಳ ಉಪಾಧ್ಯಾಯರ ವೇತನವು ಸರಿಯಾಗಿ ಬಟ್ವಾಡೆ ಮಾಡದೆ ಹೋದರೂ ಹೊಸ ಶಾಲೆಗಳ ವ್ಯವಸ್ಥೆ ಸರಿಯಾಗಿ ನಡಿಯುತ್ತದೋ ಎಂಬದನ್ನು ತಾಲೂಕು ಬೋರ್ಡಿನವರು ತಿಳಕೊಳ್ಳುವದು ಬಹಳ ಅಗತ್ಯ. ಬೋರ್ಡಿನ ಮಾನ್ಯ ಮೆಂಬರರು ತಮ್ಮ ಸರ್ಕಲಿಗೆ ಒಳಪಟ್ಟ ಇಂಥಾ ಶಾಲೆಗಳ ಹೆಚ್ಚಾಗಿ ಮೂಡುಪಾಂತ್ಯದ ಶಾಲೆಗಳ ಮೇಲ್ತನಿಖೆ ಆಗಾಗ ಮಾಡಿದರೆ ಹೆಚ್ಚಿನ ಉಪಕಾರವಾಗುವದು. ಈ ಚುಳ್ಳಿಕರೆ ಶಾಲೆಯಲ್ಲಿರುವ ಶ್ರೀಮಾನ್ ಮಹಾರಾಜ ಮತ್ತು ಮಹಾರಾಣಿಯವರ ಪಟದ ಕನ್ನಡಿ ಒಡೆದು ಹೋಗಿಯದೆ. ಆದ್ದರಿಂದ ಮೂಡು ಪ್ರಾಂತ್ಯದ ಶಾಲೆಗಳು ಕ್ರಮವಾಗಿ ನಡಿಸಲ್ಪಡುತ್ತವೋ ಎಂಬದಕ್ಕೆ ಆಕಸ್ಮಿಕ ಸಂದರ್ಶನೆಗಳನ್ನು ಕೊಡುವರೆ ಮಾನ್ಯ ಕಾಸರಗೋಡು ತಾಲೂಕು ಬೋರ್ಡು ಪ್ರೆಸಿಡೆಂಟರು ತಕ್ಕ ಏಲೆವಾರಿ ಮಾಡಿಸುವದು ಅಗತ್ಯವಿರುತ್ತದೆ.

ಮದರಾಸು ವಿಕ್ಟೋರಿಯಾ ಹೊಸ್ಟೆಲಿನಲ್ಲಿ ಜರಗಿದ ಸಹಪಂಕ್ತಿ ಭೋಜನ.

ಮದರಾಸಿನ ವಿಕ್ಟೋರಿಯಾ ಹೊಸ್ಟೆಲಿನಲ್ಲಿ ನಿನ್ನೆ ಆದಿತ್ಯವಾರ (೧೯-೨-'೨೮) ರಾತ್ರೆ ಸರ್ವ ಜಾತಿಮತಸ್ಥರು ಸೇರಿ ಒಂದು ಸಹಪಂಕ್ತಿ ಭೋಜನವು (cosmopolitan vegetarian dinner) ಜರಗಿತು. ಸಾಧಾರಣ ೧೦೦ ಮಂದಿ ಸೇರಿದ್ದರು. ಇವರಲ್ಲಿ ಕ್ರೈಸ್ತ ಮುಸಲ್ಮಾನ ಮತದವರೂ ಇದ್ದರು. ಮತಾಭಿಮಾನಿಗಳಾದ ಕೆಲವು ವಿದ್ಯಾರ್ಥಿಗಳು ಅನ್ಯ ಜಾತಿಯವರೊಡನೆ ಸೇರಿ ಊಟಮಾಡಲು ಇಷ್ಟವಿಲ್ಲದೆ ಬೇರೆಯಾಗಿ ಊಟಮಾಡಿದರು. ಹೀಗೆ ಪ್ರತ್ಯೇಕವಾಗಿ ಊಟಮಾಡಿದವರಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯಿಂದ ಇಲ್ಲಿ ಬಂದವರ ಪೈಕಿ ಒಬ್ಬರಾದರೂ (ಉಡುಪಿ ಪಾಂಗಾಳ ಪಾಂಡುರಂಗ ನಾಯ್ಕರ ಮಗ ಪಾಂಗಾಳ ಅನಂತ ನಾಯ್ಕರು) ಇದ್ದರೆಂಬುದು ಅತೀ ಶ್ಲಾಘನೀಯವಾದ ಸಂಗತಿ. ಮಿಕ್ಕವರೆಲ್ಲರೂ ಸಹಪಂಕ್ತಿಯಾಗಿಯೇ ಊಟಮಾಡಿದರು. ಆಮಂತ್ರಿಸಲ್ಪಟ್ಟ ಸದ್ಗೃಹಸ್ಥರ ಪೈಕಿ ನಮ್ಮ ಜಿಲ್ಲೆಯವರಾದ ಮ॥ ರಾ॥ ದೂಮೋಣರ ಕಿಣಿಯವರೂ, ಮ॥ ರಾ॥ ಮೂಡ್ನಗಿರಿ ನಾಯ್ಕರವರೂ, ಮ॥ ರಾ॥ ಉಚ್ಚಿಲ ಕಣ್ಣಪ್ಪನವರೂ ಮ॥ ರಾ॥ ಕೊಟ್ಟಿಕಾರ ನಾರಾಯಣ ಪೈಗಳವರೂ ಇದ್ದರು.

ನಮ್ಮ ಜಿಲ್ಲೆಯ ವಿದ್ಯಾರ್ಥಿಗಳ ಪೈಕಿ—೧ ಕೀರ್ತಿಶೇಷ ಮಂಗಳೂರು ವೆಂಕಟರಮಣ ದೇವಸ್ಥಾನದ ಮೊಕ್ತೇಸರರಾದ ರಂಗಪೈಗಳವರ ಪುತ್ರ ವೆಂಕಟೇಶ ಪೈ; ೨ ನಗರ ನರಸಿಂಹ ಶೆಣೈಗಳವರ ಮಗ ಗೋಪಾಲಕೃಷ್ಣ ಶೆಣೈ; ೩ ಸಿವಿಲ್ ಸರ್ಜನ್ ಚೋಲ್ಪಾಡಿ ರಾಮಕಮ್ತಿಯವರ ಮಗ ಗೋಪಾಲಕೃಷ್ಣ ಕಮ್ತಿ ೪ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಮಗ ಪುರುಷೋತ್ತಮ ಪೈ ೫ ವಡೇರಬೆಟ್ಟು ಪದ್ಮನಾಭ ಕಮ್ತಿಯವರ ಮಗ ರಾಮಚಂದ್ರ ಕಮ್ತಿ; ೬ ಕಾರ್ಕಳ ಕುಕ್ಕುಂದೂರು ಸುಬ್ರಾಯ ಕಮ್ತಿಯವರ ಮಗ ವೆಂಕಟೇಶ ಕಮ್ತಿ; ೭ ಉಡುಪಿ ಪಾಂಗಾಳ ಪದ್ಮನಾಭ ನಾಯ್ಕರ ಮಗ ರಾಘವೇಂದ್ರ ನಾಯಕ್; ೮ ಕೆನರಾ ಹೈಸ್ಕೂಲಿನ ಹೆಡ್‌ಮಾಸ್ಟರ್ ನಾರಾಯಣ ಪ್ರಭುಗಳವರ ಮಗ ಸುಬ್ಬರಾಯ ಪ್ರಭು, ೯ ಅಡಿಗೆ ಪದ್ಮನಾಭಯ್ಯನವರ ಮಗ ಉಮಾನಾಥ ರಾವ್; ೧೦ ಮಂಗ

Shroff Shri Vallabha Shivappa Shet & Co.

Shroff & Jewellers,

DONGERKKERY.

ESTABLISHED 1918.

ಖಾತ್ರಿಯಾದ ವಸ್ತುಲು! ನ್ಯಾಯವಾದ ಖರೀದಿ!





ಸರಾಫ್ ಶ್ರೀ ವಲ್ಲಭ ಶಿವಪ್ಪ ಶೇಟ ಮತ್ತು ಕಂಪನಿ.

ಸರಾಫ್ ಮತ್ತು ಜುವೆಲ್ಲರ್ಸ್,

ಡೊಂಗರಕೇರಿ, ಮಂಗಳೂರು.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಆಂಡ್ ಸನ್ಸ್,

ಷರಾಫು ವ್ಯಾಪಾರ,

ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಕನ್ನಡ ಮೂಲಾಕ್ಷರಗಳ

ಸಚಿತ್ರ ನಕಾಶೆಯು.

ಒಂದೇ ಪುಸ್ತಕದಿಂದ ತೆಗೆದ

ಪ್ರಾಣಿಗಳ ಚಿತ್ರಪಟವು.

ವಿಳಾಸ— ಚಿತ್ರಶಾಲಾ ಪ್ರೆಸ್ ಪುಣೆ ಸಿಟಿ.

PARIS EMPORIUM,

George Town,

MADRAS.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸದೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗಾಯತು 800 ಕ್ಯಾಂಡಲ್ ಪವರಿನ ಶೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಲ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ 300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪರಟು ಗುಂಡಿಗಳು, ರೋಜಾ ಹುವ್ವಗಳ ಹಾರಯಗಳು, ಬ್ಯಾಟರಿಗಳು, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ವಗೈರೆ ತಿಳಿಯಲಿಕ್ಕೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

(18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

VOLKART ENGINEERS

ಇಂಟರ್ ನೇಶನಲ್

ಹಾರ್ವೆಸ್ಟರ್

ಆಯಿಲ್ ಇಂಜಿನು

ಈ ಇಂಜಿನುಗಳ ಬಾಳುವಿಕೆ, ಕಡಿಮೆ ಖರ್ಚು, ಚಲಿಸುವುದರಲ್ಲಿ ಸುಲಭತ್ವ, ಇವುಗಳು ಆವರ್ಣನೀಯವಾಗಿವೆ.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ.

VOLKART BROS.

P. Box 45. Armenian Street Madras.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ,

ಪೋಸ್ಟ್ ಕಾಂಞಂಗಾಡ (ದ. ಕ.

Diamonds. ವಜ್ರಗಳು Diamonds.

BOLA MANGESH ROW & Co.,

MANGALORE.

Agents & Direct importers of Superior Diamonds of Antwerp.

ಯೇಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

ಮಂಗಳೂರು.

WANTED.

Qualified Medical Practitioners for the Rural Dispensaries at Kadaba and Mundaje. Remuneration as usual. Apply by the end of February to the undersigned through the District Medical Officer, South Kanara.

Puttur, 16th Febry, 28.

Sd/ M. SHIVA RAO,
President,
Puttur Taluk Board.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.

„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —

ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,

ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ ಮತ್ತು ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ,

ನಂ. 26 ಪಾಡ್ಯೇ, ಮದ್ರಾಸ್.

The Canara Bank Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0

Reserve and other sinking Funds „ 338,500—0—0

of which amount invested on G. P. Notes Rs. 228,898—2—0

Rates of interest on fixed deposits at Head Office 6¼% for 2 Years

6% „ 1 Year

Season deposits of Rs. 100/- & above terminable by the end of June are received at 6¼% p. a.

ಅಧಿಕಾರಿಗೊಳಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0

ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0

ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0

ಹೆಡ್ ಆಫೀಸಿನಲ್ಲಿ ಕಾಯಂ ಠೇವಣಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಸೇಕಡಾ 6¼ 1ವರುಷಕ್ಕೆ ಸೇ. 6%.

ಜೂನ್ ಅಂತ್ಯದ ವರೆಗೆ ವ್ಯಾಪ್ತಿ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಚಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ,

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೧ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟೆವಿಲಿ ವಾತ್ರ.

DUNLOP

fit Dunlop
and be satisfied

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ... ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುದುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨ನೇ ಶುಕ್ರವಾರ ಮಾರ್ಚಿ ೧೯೨೮. ಸಂಚಿಕೆ ೯

THE CANARA BANKING CORPORATION,
UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ **Mangalore.**
ಶಾಖೆ:—ಕುಂದಾಪುರ.
„ ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗೆ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗೆ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation,
UDIPI, 31—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

Preparations Cover All Your Needs.
THAT MERIT HAS MADE FAMOUS.
ಸಿದ್ಧವಾದ ಬಾಟ್ಲಿವಾಲಾ ಇವರ
ಪ್ರಸಿದ್ಧ ಔಷಧಗಳು.

ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ಜ್ವರ ನಿವಾರಣ, ರೂ. ೧.
ಪುಷ್ಟಿ ಕೊಡುವ ಔಷಧ ಆಣೆ ೧೩.
ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ
೧—೨—೦. ರೂ. ೧—೪—೦. ೧—೧೨—೦.
೦—೬—೦
೦—೬—೦. LIBERAL DISCOUNT TO TRADE
WASHAPUR, BOMBAY.
ಎಚ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Bayani Road, P. O. Cadell Road, Bombay. No. 14.

ವರ ಲೋದ್ರ

ರೋಗನಿವಾರಿಣಿ.

ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಬಗೆಯಾಗಿ ಹೊಗಳುತ್ತಿರುವರು.

ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

ಸ್ರಾವವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ ತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ನಿಶ್ಶೇಷವಾಗಿ ಗುಣವಾಗುವುವು.

ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,
ಔಷಧಶಾಲಾ, P. B: 752, ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟ್ರೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ರ್ಯಾಂಪೀಸ್ ಇನಾಮಾಗಿ ಕೊಡುವೆವು. ಈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟ್ರ್ಯಾಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7-0-0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕ ೧೮೪೯ನೆಯ ಪ್ರಭವ ಸಂದ ಫಾ. ಶು| ೧೦ ಶನಿವಾರದಿಂದ ಪ್ರಭವ ಸಂ|ರದ ಫಾಲ್ಗುಣ ಬ| ೩ ಶುಕ್ರವಾರದ ವರೆಗಿನ ಪಂಚಾಂಗ

(೧೯೨೮ನೆಯ ಕುಂಭ (ಮಾಯಿ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ. ಉ.	ಅಸ್ತ
3	ಶನಿ	೧೩	೩೮. ೧	ಪುಷ್ಯ	೪೦ ೧	೨೦	6.47	6 39
4	ರವಿ	೧೪	೫೪. ೩	ಆಶ್ಲೇಷಾ	೪೦. ೪೬	೨೧	6 47	6 39
5	ಸೋಮ	೧೪	೨೭. ೦	ಮಘಾ	೪೨. ೩೨	೨೨	6 46	6 39
6	ಮಂಗಳ	○	೨೮.೧೪	ಹುಬ್ಬ	೪೫.೪೬	೨೩	6 45	6.39
7	ಬುಧ	೧	೩೧. ೧	ಉತ್ತರಾ	೫೦. ೨	೨೪	6 44	6 39
8	ಗುರು	೨	೩೪.೩೨	ಹಸ್ತಾ	೫೫.೧೬	೨೫	6.49	6.39
9	ಶುಕ್ರ	೩	೩೯.೧೬	ಚಿತ್ರಾ	೬೦. ೦	೨೬	6.43	6.39

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಜುಮಲಾ ಮಳೆ.
24	89— 4	72— 6	—	—
25	9) 6	72— 9	—	—
26	90— 1	74— 7	—	—
27	90— 5	75— 3	—	—
28	90 — 2	79— 0	—	—
29	90 — 2	76 — 9	—	—
1	90— 6	76— 2	—	—
				128-19

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ
ಹೊಸ ಮಸ್ಕತಿ	7- 6	7 — 14
ಹೊಸ ಗುಡ್ಡು ...	6 — 8	7— 0
ಸಗ್ಗಿ ...	6 — 4	6- 6
ಹೊಸ ರಾತಿ ...	6 — 2	6 — 6
ಊರ ಅನ್ನಲ್ ಬೆಸ್ತಿಗೆ ...	7-- 4	8 — 4
ರಂಗೂನು ಬೆಸ್ತಿಗೆ ಗೋಣಿ ೧ ...	13— 0	14 - 0
ಎಲ್ಲೂರು ಬೆಸ್ತಿಗೆ ಮುಡಿ ೧ಕ್ಕೆ ...	7 -- 0	7— 4
ಗೋದಿ ಗೋಣಿ ೧ಕ್ಕೆ ...	17— 8	18 - 8
ಹುರುಳಿಗೋಣಿ ೧ಕ್ಕೆ ...	9 — 4	11 - 8
ಕಡಲೆಗೋಣಿ ೧ಕ್ಕೆ ...	12— 0	13 - 8
ತೊಗರಿಗೋಣಿ ೧ಕ್ಕೆ ...	15 — 0	15 - 8
ತೊಗರಿಬೇಳೆ ಗೋಣಿ ೧ಕ್ಕೆ ...	18— 0	26 .. 0
ಉದ್ದುಗೋಣಿ ೧ಕ್ಕೆ ...	14— 0	14 8
ಹೆಸರುಗೋಣಿ ೧ಕ್ಕೆ ...	13 - 8	14 0
ಊರು ಬೆಲ್ಲ ಖಂಡಿ ೧ಕ್ಕೆ ...	40 — 0	45 — 0
ಉಪ್ಪು ಗೋಣಿ ೧ಕ್ಕೆ ...	4 — 4	4 — 6
ಕೊಬ್ರಿ ಖಂಡಿ ೧ಕ್ಕೆ ...	135 - 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	47 — 8	48— 8
ಎಳ್ಳಿಂಡಿ ಖಂಡಿ ೧ಕ್ಕೆ ...	42— 8	51 — 4
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8 — 2	8 — 4
ಎಳ್ಳೆಣ್ಣೆ ಮುಡಿ ೧ಕ್ಕೆ ...	8 — 0	8 — 4
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ	6 — 8	7 - 0
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	3 — 11	3 - 12
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6 — 12	7 — 0
ಸಾಸಿವೆ ಮುಡಿ ೧ಕ್ಕೆ ...	8 — 0	8 — 2
ಕೊತ್ತಂಬರಿ ಮುಡಿ ೧ಕ್ಕೆ ...	7 — 0	7 — 8
ಕಾಫಿ ಖಂಡಿ ೧ಕ್ಕೆ ...	420— 0	425-- 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ...	145— 0	170— 0
ಕಾಳುಮೆಣಸು ಖಂಡಿ ೧ಕ್ಕೆ ...	500— 0	505-
ಯಾಲಕ್ಕಿ ಮುಡಿ ೧ಕ್ಕೆ ...	65 — 0	70 — 0
ಗೇರುಬೀಜ ಮುಡಿ ೧ಕ್ಕೆ ...	3 — 0	3 — 4
ಕಲ್ಲಿಂಬ ಖಂಡಿ ೧ಕ್ಕೆ ...	37 — 8	40 - 0
ತಾಂಬ್ರ ತಗಡು ಮುಡಿ ೧ಕ್ಕೆ ...	15 - 0	15 — 0
ತಾಂಬ್ರ ಪಾತ್ರಗಳು ಮುಡಿ ೧ಕ್ಕೆ	21 — 0	-
ಚೀನಿ ಬೆಳ್ಳಿ ಸೇರು ೧ಕ್ಕೆ ...	15 — 0	—
ಹಿತ್ತಾಳೆ ತಗಡು ಮುಡಿ ೧ಕ್ಕೆ ...	15 — 0	—
ಪವನು	13 — 9	—



ಪ್ರಸಿದ್ಧ ಪಟ್ಟ
ಎಫ್. ಮುಲ್ಲರರ
ಓಯಿಲ್ ಎಕ್ಸ್‌ಪೆಲ್ಲರ್

ಎಣ್ಣೆ ಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ ಎಣ್ಣೆಯನ್ನಿಳಿಸಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ, ಸಂಪೂರ್ಣ ಸ್ವತಶ್ಚಲನಕ, ಕಡಿಮೆ ಖರ್ಚು, ಕಡಿಮೆ ಪವರಿನ ವ್ಯಯ, ಹೆಚ್ಚಿನ ಎಣ್ಣೆಯ ಲಾಭ.

ರೋಲರ್ ಮಿಲ್ಲುಗಳು, ಡಿಸ್ ಇಂಟೆಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವುದಕ್ಕೆ ತಕ್ಕದಾದ ಸಣ್ಣ ಹೈಡ್ರೊಲಿಕ್ ಪ್ರೆಸ್ ಪ್ಲೆಂಟ್‌ಗಳು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

VOLKART BROS ENGINEERS
Armenian Street, MADRAS.

ಅಖಿಲ ಕರ್ಣಾಟಕದ ಆಯುರ್ವೇದ ವಿದ್ಯಾಪೀಠದ ಆಯುರ್ವೇದ ವೈದ್ಯ ಪರೀಕ್ಷೆ.

ಪ್ರಧಾನ ಕಾರ್ಯಾಲಯದ ೨೧-೨-'೨೮ರ ಲೇಖವನ್ನು ಮನ್ನಿಸಿ, ಅ. ಕ. ಆ. ಮಂಡಲದ ತಾ. ೧೯-೧-'೨೮ರಲ್ಲಿ ನಡೆದ ವಿಶಿಷ್ಟ ಅಧಿವೇಶನದ ೩ನೇ ಪ್ರಸ್ತಾವನೆಯ ೧ನೇ ಉಪಪ್ರಸ್ತಾವನೆಯನ್ನು ಅನುಸರಿಸಿ ಅ. ಕ. ಆ. ವಿದ್ಯಾಪೀಠದ ವಿಶಿಷ್ಟ ಅಧಿವೇಶನದ ೧ನೇ ಪ್ರಸ್ತಾವನೆಯ ನಿರ್ಣಯದಂತೆ ವರ್ತಮಾನ ಸಂವತ್ಸರದ ಆಯುರ್ವೇದ ಪರೀಕ್ಷೆಗಾಗಿ ಸ್ಥಾಪಿಸಲ್ಪಟ್ಟ ವ್ಯವಸ್ಥಾಪಕ ಮಂಡಲಿಯ ಕೃತಿಗಳು.

೧-೩-'೨೮ರ ಪ್ರಕಟಣೆಯಲ್ಲಿ ನಿಶ್ಚಯಿಸಿದಂತೆ ಶ್ರೀರಾಮಕೃಷ್ಣ ಧರ್ಮ ವೈದ್ಯಾಶ್ರಮದಲ್ಲಿ ನಡೆಯತಕ್ಕ ಸಮಿತಿಯು ಕೆಲವು ಅನಾನುಕೂಲತೆಗಳಿಂದ ಅದೇ ಸಾಯಂಕಾಲ ೬|| ಘಂಟೆಗೆ ಡೊಂಗರಕೇರಿಯಲ್ಲಿ ಡಾಕ್ಟರ್ ಕಿಣಿ ಮಹಾಶಯರ ಔಷಧಾಲಯದಲ್ಲಿ ಡಾಕ್ಟರ್ ಕೆ. ಆರ್. ಕಿಣಿ ಯಮ್. ಬಿ ಬಿ ಯಸ್.ರವರ ಅಧ್ಯಕ್ಷತೆಯಲ್ಲಿ ನಡೆದು ಈ ಮುಂದಿನ ವಿಷಯಗಳು ನಿರ್ಣಯಿಸಲ್ಪಟ್ಟವು.

ಗವರ್ನಮೆಂಟ್ ಹೈಯರ್ ಎಲಿಮೆಂಟರಿ ಟ್ರೈನಿಂಗ್ ಸ್ಕೂಲಿನಲ್ಲಿ ಪ್ರಧಾನ ಕಾರ್ಯಾಲಯದವರು ಹಾಲ್ ಟಿಕೇಟಿನಲ್ಲಿ ಸೂಚಿಸಿದಂತೆ ತಾ. ೧೩-೩-'೨೮ರಿಂದ ೧೫-೩-'೨೮ರ ತನಕ ಈ ವರ್ಷದ ಆಯುರ್ವೇದ ವೈದ್ಯ ಪರೀಕ್ಷೆಯು ನಡಿಸಲ್ಪಡುವದು. ಪ್ರಥಮದ ಮೂರು ದಿವಸಗಳಲ್ಲಿ ಹಾಲ್ ಟಿಕೇಟಿನಲ್ಲಿ ಸೂಚಿಸಿದ ಸಮಯದಲ್ಲಿಯೂ ೪ನೆ ದಿವಸ ಪ್ರಾತಃ ೮ ಗಂಟೆಯಿಂದ ೧೦ ಘಂಟೆಯ ವರೇಗೂ ೧೦-೩೦ ಘಂಟೆಯಿಂದ ೧೨-೩೦ರ ವರೇಗೂ ಶ್ಯಾಮ ೨ ಘಂಟೆಯಿಂದ ೬ ಘಂಟೆ ತನಕವೂ ನಡಿಸಬೇಕೆಂಬ ನಿರ್ಣಯವಾಯಿತು. ಪರೀಕ್ಷಾಭವನದಲ್ಲಿ ಪ್ರಥಮದ ಮೂರು ದಿವಸಗಳಲ್ಲಿ ಮ. ರಾ. ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರು ೪ನೇ ದಿವಸ ಮ. ರಾ. ರಾ. ಎಮ್. ಕೆ. ವೈದ್ಯರೂ ನಿರೀಕ್ಷಕರಾಗಬೇಕು. ಅವಶ್ಯವಿದ್ದಲ್ಲಿ ಅವರಿಗೆ ಸಹಾಯಕರಾಗಿ ಯೋಗ್ಯರಾಗಿರುವ ಬೇರೆ ಇಬ್ಬರು ಮಹನೀಯರುಗಳನ್ನು ಕೂಡಿಸುವ ಅಧಿಕಾರವು ಕೊಟ್ಟದೆಂದು ನಿಶ್ಚಯವಾಯಿತು. ಮತ್ತು ಪರೀಕ್ಷೆಗೆ ಬೇಕಾದ ಇತರ ಸೌಕರ್ಯಗಳನ್ನು ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿ ಮತ್ತು ರಾ.ವೈದ್ಯವಿದ್ವಾನ್ ಪಿ. ನರಸಿಂಹ ಪೈಗಳು ನಡಿಸಬೇಕೆಂಬ ನಿಶ್ಚಯವೂ ಇದರೊಂದಿಗೆ ಆಗಿದೆ.

ದಿ. ಕೆನರಾ ವಿದ್ಯಾದಾಯಿನಿ ಪ್ರೈವೇಟ್ ಹೈಸ್ಕೂಲ್ ಮುಂಬಾಯಿ—ಮೇಲಿನ ಶಾಲೆಯ ತೃತೀಯ ವಾರ್ಷಿಕೋತ್ಸವದ ಮಹಾ ಸಭೆಯು ಇದೇ ಫೆಬ್ರವರಿ ತಿಂಗಳ ತಾರೀಕು ೧೯-೨-'೨೮ಕ್ಕೆ ಕೋಟೆಯೊಳಗಣದ ಲಾಲ್ ರಸ್ತೆಯ ಶೆಸಾರ್ ಬಜಾರ ಮಂದಿರದಲ್ಲಿ ಡಾಕ್ಟರ್ ಎಸ್. ಪ್ರತಾಪ್ ಯಮ್. ಬಿ. ಬಿ. ಯಸ್‌ರವರ ಅಧ್ಯಕ್ಷತೆಯಲ್ಲಿ ಜರಗೋಣಾಯಿತು. ಅಂದಿನ ಸಭೆಗೆ ಶಾಲೆಯ ವಿದ್ಯಾರ್ಥಿಗಳಾಗಿಯೂ ಇತರ ಸದ್‌ಗ್ರಹಸ್ತರಾಗಿಯೂ ಸಾಧಾರಣ ೫೦೦ ಮಂದಿಯು ದಯಪಾಲಿಸಿದ್ದರು. ಪ್ರಥಮತ ಶಾಲೆಯ ಮುಖ್ಯೋಪಾಧ್ಯಾಯರಿಂದ ಗತವರ್ಷದ ವರದಿ ನೆರದು ಬಂದ ಸಭಿಕರಿಗೆ ತಿಳಿಸಲಾಯಿತು. ತದನಂತರ ಶಾಲೆಯ ಕಮಿಟಿಯಿಂದಲೂ ಇತರ ಮಾನ್ಯರಿಂದಲೂ ಉಚಿತವಾಗಿ ಬಂದ ಇನಾಮುಗಳನ್ನು ಶಾಲೆಯ ವರ್ಷಾವಧಿ ಪರೀಕ್ಷೆಯಲ್ಲಿ, ಒಂದನೇ ಮತ್ತು ಎರಡನೇದಾಗಿ ಬಂದ ವಿದ್ಯಾರ್ಥಿಗಳಿಗೆ ಅಧ್ಯಕ್ಷರ ಮುಖಾಂತರ ಹಂಚಿಸಲಾಯಿತು. ಅಂದಿನ ಸಭೆಯಲ್ಲಿ ನೆರೆದು ಬಂದ ಮಹನೀಯರೊಳು ಕೆಲವರು ಈ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಉದರ ಪೋಷಣೆಗಾಗಿ ಈ ಊರಿಗೆ ಬಂದ ಬಡ ಬಾಲ ಬಾಲಕಿಯರ ಮೇಲೆ ದಯದೋರಿ ಅವರ ಮುಂದಾಭಿವೃದ್ಧಿಯಗೋಸ್ಕರ ಅವರಿಗೆ ತಕ್ಕ ವಿದ್ಯೆಯನ್ನು ಕೊಡುವುದಲ್ಲದೆ ಹಲವು ನಮೂನೆಯ ಸುಭೋಧನೆಯನ್ನು ಕಲಿಸಿ ಅವರನ್ನು ಸನ್ಮಾರ್ಗಕ್ಕೆ ಕೊಂಡುಬರುವ ಮಹನೀಯರುಗಳಾದ ಉಪಾಧ್ಯಾಯರುಗಳ ಸಾಹಸವನ್ನು ಹಲವು ತರದಲ್ಲಿ ಕೊಂಡಾಡಿ ಕರ್ಣಾನಂದವಾದ ಭಾಷಣಗಳನ್ನು ಮಾಡಿದರು. ಅದಲ್ಲದೆ ಅಂದಿನ ಸಭೆಗೆ ದಯಪಾಲಿಸಿದ ರಾವ್ ಬಹದೂರ್ ಎ. ಕೆ. ಪೈಯವರು ಶಾಲೆಯ ವರದಿಯ ಮತ್ತು ಶಾಲೆಯಲ್ಲಿ ನವೀನವಾಗಿ ಏರ್ಪಡಿಸಿದ ಬ್ಯೋಸ್ಕೌಟು ಟ್ರೂಪಿನ ಕುರಿತು ಹೆಚ್ಚಿನ ಸಂತೋಷಪಟ್ಟಿರಲ್ಲದೆ ಸ್ಕೌಟುಗಳಾಗಿ ಸೇರಿದವರು ಮಾಡುವ ಕರ್ತವ್ಯದ ಕುರಿತು ಅನೇಕ ತರದಲ್ಲಿ ಕೊಂಡಾಡಿ ಬಾಷಣಮಾಡಿದರು. ಆ ಮೇಲೆ ಅಧ್ಯಕ್ಷರು ಶಾಲೆಯ ಮುಂದಾಭಿವೃದ್ಧಿಯ ಮತ್ತು ಉಪಾಧ್ಯಾಯರು ಬಡ ವಿದ್ಯಾರ್ಥಿಗಳಿಗೋಸ್ಕರವಾಗಿ ಪಡುವ ಸಾಹಸಗಳ ಕುರಿತು ಭಾಷಣ ಮಾಡಿದರು. ಆ ನಂತರ ಮಂಗಳಗೀತಗಳಿಂದಲೂ ಪುಷ್ಪಹಾರಗಳಿಂದಲೂ ಅಧ್ಯಕ್ಷರಿಗೆ ಧನ್ಯವಾದವನ್ನಿತ್ತು ಸಭೆಯು ಕೊನೆಗೊಂಡಿತು.

'ತೀರ್ಥಹಳ್ಳಿಯಲ್ಲಿ ವೈದಿಕ ಧರ್ಮಪ್ರಚಾರ'.

ಮಂಗಳೂರು ಆರ್ಯಸಮಾಜದಲ್ಲಿ ಶುದ್ಧಿಸಂಸ್ಕಾರಹೊಂದಿದ ಇಲ್ಲಿಯ ಶ್ರೀಯುತ ಜ್ಞಾನೇಂದ್ರ ಪ್ರಭು (ಮೊದಲು ಜೋನ್ ಡಿ'ಸೋಜರು) ಗಳು ಆಮಂತ್ರಿಸಿದ ಪ್ರಕಾರ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರೂ ಅವರ ಧರ್ಮಪತ್ನಿ ಶ್ರೀಮತಿ ವಿದ್ಯಾವತಿದೇವಿಜಿಯವರೂ ಇಲ್ಲಿಗೆ ಕಳೆದ ತಿಂಗಳ ತಾ. ೨೭ಕ್ಕೆ ಬಂದಿದ್ದರು. ತಾ. ೨೮ಕ್ಕೆ ಇಲ್ಲಿಯ ಥಿಯೇಟರಿನಲ್ಲಿ ನೆರೆದ ಎಲ್ಲಾ ಜಾತಿಮತಗಳ ಮಹಾಸಭೆಯಲ್ಲಿ "ವೇದಗಳ ಸಂದೇಶ" ಎಂಬ ವಿಷಯವಾಗಿ ಸ್ಫೂರ್ತಿದಾಯಕವಾದ ಭಾಷಣವನ್ನು ಕನ್ನಡದಲ್ಲಿ ಮಾಡಿದರು. ತಾ. ೨೯ಕ್ಕೆ ಅದೇ ಸ್ಥಳದಲ್ಲಿ ನೆರೆದ ಹಿಂದೂ-ಮುಸಲ್ಮಾನ-ಕ್ರೈಸ್ತ ಸಭಿಕರ ಸಮಕ್ಷಮ ಶ್ರೀ ಜ್ಞಾನೇಂದ್ರ ಪ್ರಭುಗಳು ಸಹಧರ್ಮಿಣಿ ಮತ್ತು ಇಬ್ಬರು ಮಗಂದಿರ ಶುದ್ಧಿಸಂಸ್ಕಾರವು ವೈದಿಕ ವಿಧಿಪ್ರಕಾರ ಜರಗಿಸಿ ಗಾಯತ್ರೀ ಮಂತ್ರೋಪದೇಶದ ಮೂಲಕ ಅವರಿಗೆ ಆರ್ಯಧರ್ಮ ದೀಕ್ಷೆಯು ಪಂಡಿತಜೀಯವರಿಂದ ಕೊಡಲ್ಪಟ್ಟಿತು. ಕ್ರೈಸ್ತ ಹೆಸರುಗಳ ಬದಲಿಗೆ ಸುನೀತಿದೇವಿ, ನರೇಂದ್ರಪ್ರಭು, ವಿರೇಂದ್ರಪ್ರಭು, ಎಂಬ ಹಿಂದೂ ಹೆಸರುಗಳನ್ನು ಇಡಲಾಯಿತು! ಗಾಯತ್ರಿ, ಯಜ್ಞೋಪವೀತ, ಮತ್ತು ಯಜ್ಞಗಳ ವಿಷಯವಾಗಿ ಪಂಡಿತಜಿಯವರು ವ್ಯಾಖ್ಯಾನಮಾಡಿ ಸಭಿಕರಲ್ಲನೇಕರ ಶಂಕಾಸಮಾಧಾನಗೊಳಿಸಿದರು.

ಇಲ್ಲಿಯ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ನರಸಿಂಹ ಶಾಸ್ತ್ರಿಯವರ ಉತ್ತೇಜನದಿಂದ "ಹಿಂದೂ ಸಮಾಜ ಸುಧಾರಣೆ" ವಿಷಯವಾಗಿ ಅದೇ ದಿನ ಸಂಜೆಗೆ ಇನ್ನೊಂದು ವ್ಯಾಖ್ಯಾನವಾಯಿತು ಮೈಸೂರು ಎಸೆಂಬ್ಲಿಯ ಮೆಂಬರರಾದ ಶ್ರೀಮಾನ್ ದಾಕಪ್ಪನವರು ಪಂಡಿತಜೀಯವರನ್ನು ತಮ್ಮ ಮನೆಗೆ ಆಮಂತ್ರಿಸಿ ಹೋಮ ಸಂಸ್ಕಾರವನು ಮಾಡಿಸಿದರು. ಆಗ ನೆರೆದ ಸಭಿಕರಿಗೆಲ್ಲ "ಪಂಚ ಮಹಾಯಜ್ಞ"ದ ಕುರಿತು ಭಾಷಣಕೊಟ್ಟರು. ಈ ಎಲ್ಲಾ ಸಭೆಗಳಲ್ಲಿಯೂ ಶ್ರೀಮತಿ ವಿದ್ಯಾವತಿದೇವಿಜಿಯವರು ಭಕ್ತಿರಸಪೂರ್ಣವಾದ ಹಿಂದಿ, ಕನ್ನಡ ಭಜನೆಗಳನ್ನು ಹಾಡುತ್ತಿದ್ದರು. ಇಲ್ಲಿಯ ಕೆಲವು ಹಿಂದೂ ಮುಖಂಡರ ಆಶಯದಿಂದ ಆರ್ಯಸಮಾಜದ ಒಂದು ಶಾಖೆಯು ತೆರೆಯೋಣಾಯಿತು. ಇದಕ್ಕೆ ಕೆಲವು ಮಹನೀಯರು ಸದಸ್ಯರಾಗಿ ಸೇರಿದರು.

Diamonds. ವಜ್ರಗಳು Diamonds.

BOLA MANGESH ROW & CO.,
MANGALORE.

Agents & Direct importers of Superior Diamonds of Antwerp.

ಯೇಜಂಟರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
ಮಂಗಳೂರು.

೧೯೩೦-೩೧ನೇ ಇಸವಿಯ ಇಂಡಿಯನ ರೈಲುವೇಯ ಬಜೆಟ್

[illegible]

೧೯೩೦-೩೧ರ ರಿವ್ಹಾಯಿಜ್ಡ ಎಸ್ಟಿಮೇಟ್

[illegible]

ರೈಲುವೇ ದರಗಳನ್ನು ಕಡಿಮೆ ಮಾಡಿಯದೆ.

[illegible]

ರೈಲುವೇಗಳಲ್ಲಿ ಇಂಡಿಯನರಿಗಿರುವ ಹುದ್ದೆಗಳು

[illegible]

೧೯೩೦-೩೧ನೇ ಇಸವಿಯ ಕೆಪಿಟಲ ಬಜೆಟ್

[illegible]

ವರ್ಷ ಮಾರ್ಗಗಳಿಗಾಗಿ ೧೨½ ಕೋಟಿ ಗಾಡಿಗಳಿಗಾಗಿ ೫½ ಕೋಟಿ ರೂಪಾಯಿ ಖರ್ಚುಮಾಡಬೇಕೆಂದು ಅಂದಾಜು ಮಾಡಿಯದೆ. ಸೌತ್ ಇಂಡಿಯನ್ ರೈಲುವೇಯಲಿ ಯುರೋಡು ಸ್ಟೇಶನನ್ನು ಹೊಸದಾಗಿ ಕಟ್ಟುವರು. ೩ ಕೋಟಿ ರೂಪಾಯಿ, ಇದ್ದ ಮಾರ್ಗಗಳನ್ನು ಅಗಲ ಮಾಡುವುದಕ್ಕಾಗಿಯೂ ಅವುಗಳಲ್ಲಿರುವ ಸೇತುವೆಗಳನ್ನು ಬಲಪಡಿಸುವುದಕ್ಕಾಗಿ ಉಪಯೋಗಿಸಲ್ಪಡುವುದು. ಮುಂಬಾಯಿಯ ಹತ್ತರ ಇರುವ ರೈಲುವೆಗಳನ್ನು ವಿದ್ಯುಚ್ಛಕ್ತಿಯಿಂದ ನಡಿಸುವುದಕ್ಕಾಗಿ ೨ ಕೋಟಿ ರೂಪಾಯಿಯನ್ನೂ ಸೌತ್ ಇಂಡಿಯನ್ ರೈಲುವೇಯನ್ನು ವಿದ್ಯುಚ್ಛಕ್ತಿಯಿಂದ ನಡಿಸುವುದಕ್ಕೂ ಸ್ವಲ್ಪ ಹಣ ಸೆಂಕ್ಶನ್ ಮಾಡಿಯದೆ.

ಹೊಸ ರೈಲುವೇ ಕನ್ಸ್ಟ್ರಕ್ಷನ್.

ಈಗ ಅರ್ಧದಲ್ಲಿರುವ ಮತ್ತು ಈ ವರ್ಷ ಶುರುಮಾಡಲಿಕ್ಕಿರುವ ರೈಲು ಮಾರ್ಗ ಮಾಡಿಸಲಿಕ್ಕಾಗಿ ೧೧ ಕೋಟಿ ರೂಪಾಯಿ ಇಟ್ಟಿದೆ. ಇದರಿಂದ ೯ ಕೋಟಿ ರೂಪಾಯಿ ಖರ್ಚುಮಾಡಲ್ಪಡುವುದು. ೫೦ ಹೊಸ ರೈಲು ಮಾರ್ಗಗಳನ್ನು ಈ ಮೊದಲೇ ಸೆಂಕ್ಶನ್ ಮಾಡಿಯದೆ. ೧೯೩೦-೩೧ರಲ್ಲಿ ಇನ್ನು ೪೦ ಹೊಸ ರೈಲು ಮಾರ್ಗಗಳನ್ನು ತೆರಿಯುವ ಆಲೋಚನೆ ಇದೆ. ಈ ವರ್ಷದ ಅಖೈರಿಗೆ ಇವುಗಳ ೨೦ ಮಾರ್ಗಗಳು ತಯಾರಾಗುವವು. ಅಂದರೆ ೮೦೦ ಮೈಲು ಮಾರ್ಗ ತಯಾರಾಗುವುದು. ಇವುಗಳಲ್ಲಿ ವಿಲ್ಲಪುರಂ, ತಿರುಚಿನಾಪಳ್ಳಿ, ರೈಲುವೇ (೧೦೩ ಮೈಲು ಉದ್ದ) ಡಿಂಡಿಗಲ್ ಪೊಳ್ಳಾಚಿ ರೈಲುವೇ (೭೫ ಮೈಲು ಉದ್ದ) ಕಾಂಗ್ರಾವೆಲ್ಲಿ ರೈಲುವೇ ಇವುಗಳ ಕೆಲಸ ಮುಗಿಯುವುದು. ತಿರುಚಿನಾಪಳ್ಳಿ ಮಾನಮದುರಾ ರೈಲುವೇ ಕೆಲಸ ಮುಂದರಿಯುವುದು.

ಇದಲ್ಲದೆ ಹೊಸ ರೀತಿಯ ಎಂಜಿನುಗಳೂ, ಗಾಡಿಗಳೂ, ಪ್ಲಗ್‌ಸ್ಟ್ಯಾಂಪುಗಳೂ ಒದಗಿಸಲ್ಪಡುವವು.

ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನಲ್ಲಿ ಹೊಸ ಬದಲಾವಣೆ.

ಈಗಿರುವ ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಯದೆಂದು ಒಂದು ಸರಕಾರಿ ಹುಕುಂ ಹೊರಟಿದೆ.

ಇಷ್ಟರ ವರೆಗೆ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಈ ಬೋರ್ಡಿನ ಎಕ್ಸ ಒಫಿಶಿಯೊ ಮೆಂಬರರಾಗಿದ್ದರು. ಇನ್ನು ಮುಂದೆ ಹೀಗಿರುವುದು ಬೇಡವೆಂದು ತೆಗೆದು ಹಾಕಿರುವರು. ಮಿಶನ್ ಶಾಲೆಗಳ ಪ್ರತಿನಿಧಿಗಳು ಬೇರೆ ನೊನ್‌ಮಿಶನ್ ಶಾಲೆಗಳ ಪ್ರತಿನಿಧಿಗಳು ಬೇರೆ ಎಂಬ ಎರಡು ಭೇದಗಳು ಇದ್ದವು. ಇದನ್ನು ತೆಗೆದುಹಾಕಿಯದೆ.

ಇನ್ನು ಮುಂದೆ ಎಲ್ಲಾ ಜಾತಿಯ ಎಯಿಡೆಡ್ ಶಾಲೆಗಳು ಮತ್ತು ಬೋರ್ಡು ಶಾಲೆಗಳ ಹೆಡ್‌ಮಾಸ್ತರರಿಗೆ ಪ್ರತ್ಯೇಕ ಚುನಾವಣೆ. ಇದೇ ರೀತಿಯಲ್ಲಿ ಎಲ್ಲಾ ಶಾಲೆಗಳ ಸಹಾಯಕ ಉಪಾಧ್ಯಾಯರ ಚುನಾವಣೆ ಬೇರೆ ಎಂಬ ಕ್ರಮವನ್ನು ಮಾಡಿಯದೆ. ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರು ಈ ಬೋರ್ಡಿನ ಸೆಕ್ರಿಟೆರಿಯಾಗಿರುವರು. ವಿಾಟೆಂಗುಗಳ ಸ್ಥಳ ಕಾಲ ನಿರ್ಣಯ ಮಾಡಿ ಆಮಂತ್ರಿಸುವವರೂ ಇವರೇ. ಇನ್ನು ಮುಂದೆ ನೊಮಿನೇಟೆಡ್ ಸ್ಕೀಮುಗಳು, ಹೆಂಗಸರು ಮಹಮ್ಮದೀಯರು ಮತ್ತು ಆದಿದ್ರಾವಿಡರಿಗೆ ಮಾತ್ರವೇ ಇರುವವು.

ಬೋರ್ಡಿನ ಕೆಲಸಗಳು.

ಹುಡುಗರಿಗಾಗಿಯೂ, ಹುಡುಗಿಯರಿಗಾಗಿಯೂ ಎಲ್ಲೆಲ್ಲಿ ಹೊಸ ಶಾಲೆಗಳನ್ನು ಇಡಬೇಕೆಂದು ನಿರ್ಣಯಿಸುವುದೂ ಅವುಗಳಿಗೆ ಗ್ರೇಂಟಿಗೂ ರಿಕೊಗ್‌ನಿಶನಿಗೂ ಶಿಫಾರಸು ಮಾಡುವುದು. ಸಿಲೆಬಸ್ ತಯಾರಿಸುವುದು; ದೇಶಭಾಷೆಯಲ್ಲಿ ಪಾಠಗಳನ್ನು ಕೊಡುವಂತೆ ಅನುಕೂಲಮಾಡುವುದು. ಶಾಲೆಗಳ ಮೆಡಿಕಲ್ ಇನ್ಸ್‌ಪೆಕ್ಷನ್, ಅಂಗಸಾಧನೆಯ ವಿಷಯ ಪ್ಲೆಗ್ರೌಂಡಿನ ಏರ್ಪಾಡು ಮುಂತಾದ ಹಲವು ಏರ್ಪಾಡುಗಳನ್ನು ಮಾಡುವುದು ಇವರ ಕೆಲಸವಾಗಿದೆ.

ಮೇಲಿನ ಸಂಗತಿಗಳನ್ನು ಒಳಕೊಂಡು ಅದಕ್ಕೆ ಬೇಕಾಗುವ ಕ್ರಮಗಳನ್ನು ತಯಾರುಮಾಡಲಿಕ್ಕೆ ಡ್ರಾಫ್ಟರವರಿಗೆ ಹುಕುಂ ಹೋಗಿಯದೆ.

ಸ್ಫುಟ ವಿಚಾರಗಳು.

ಚತುರ್ಥ ಕರ್ಣಾಟಕಾಯುರ್ವೇದ ಸಮ್ಮೇಲನ.

ಈ ಸಮ್ಮೇಲನವನ್ನು ಕೂಡಿಸುವ ಉತ್ಸಾಹವು ಸ್ವಾಗತ ಕಮಿಟಿಯನ್ನು ಕೂಡಿಸುವುದರಲ್ಲಿಯೇ ಮುಗಿದುಹೋದಂತೆ ಕೇಳುತ್ತೇವೆ. ಇಷ್ಟರೊಳಗೇನೇ ಈ ಆಯುರ್ವೇದ ಸಮ್ಮೇಲನದ ವ್ಯವಸ್ಥೆಯಲ್ಲಿ ತೊಂದರೆಗಳುಂಟಾಗಿಯದೆಂಬುದನ್ನು ಕೇಳಿ ನಮಗೆ ದುಃಖವೆನ್ನಿಸಿಯದೆ. ಇಂತಹ ಒಂದು ಸಮ್ಮೇಲನವನ್ನು ಕೂಡಿಸಬೇಕಾದರೆ ವ್ಯವಸ್ಥಾಪಕರೊಳಗೆ ಇಷ್ಟು ಭಿನ್ನತೆಗಳು ತಲೆದೋರಬೇಕಾಗುವುದೆಂಬುದು ಆಯುರ್ವೇದಕ್ಕಾಗಲಿ, ಆಯುರ್ವೇದ ಪಂಡಿತರಿಗಾಗಲಿ, ಮಂಗಳೂರಿನ ಮಹಾ ಜನರಿಗಾಗಲಿ ಗೌರವಕರವಾದುದಲ್ಲ. ಅಲ್ಲದೆ ಈ ಪರಿಷತ್ತನ್ನು ನವೆಂಬರ ದಶಂಬರ ತಿಂಗಳಿಗೆ ದೂರ ಹಾಕುವದರ ಉದ್ದೇಶವೂ ನಮಗೆ ತಿಳಿದು ಬರುವುದಿಲ್ಲ. ವ್ಯವಸ್ಥಾಪಕರಲ್ಲಿ ಕೆಲವರೊಳಗೆ ಕಾರ್ಯಕ್ಕಿಂತಲೂ ಡಂಭವೇ ಹೆಚ್ಚಾಗಿ ಇಷ್ಟೆಲ್ಲಾ ತೊಂದರೆಗಳಿಗೆ ಕಾರಣವಾಗಿಯದೆಂದು ನಾವು ತಿಳಿಯುತ್ತೇವೆ. ಸಮ್ಮೇಲನವನ್ನು ಕೂಡಿಸಲಿಕ್ಕೆ ಮೇ ತಿಂಗಳು ಉತ್ತಮವಾಗಿತ್ತು. ಈಗ ಮನಸ್ಸು ಮಾಡಿದರೂ ಮೇ ತಿಂಗಳೊಳಗೆ ಈ ಸಮ್ಮೇಲನವನ್ನು ಕೂಡಿಸಲು ಸಾಧ್ಯವಿದೆ. ಸಮ್ಮೇಲನವನ್ನು ದಶಂಬರಕ್ಕೆ ದೂರ ಹಾಕುವುದರಿಂದ ಸಮ್ಮೇಲನದ ಒಂದು ವರ್ಷವೇ ಕಳೆದುಹೋಗುವುದು. ಆಯುರ್ವೇದದ ಹಿತಚಿಂತಕರು ಚೆನ್ನಾಗಿ ಮನಸ್ಸು ಮಾಡಿ ಸಮ್ಮೇಲನವು ಶೀಘ್ರದಲ್ಲಿಯೇ ಜರಗುವಂತೆ ಮಾಡಿದರೆ ಉತ್ತಮವಿತ್ತು.

ಮದ್ರಾಸು ಕೌನ್ಸಿಲಿನ ಆಯವ್ಯಯ ಪಟ್ಟಿ.

ಕಳದ ತಿಂಗಳ ತಾ. ೨೮ಕ್ಕೆ ಮದ್ರಾಸ್ ಕೌನ್ಸಿಲಿನ ಮುಂದೆ ೧೯೩೦-೩೧ರ ಅಂದಾಜು ಆಯವ್ಯಯದ ಪಟ್ಟಿ ಕೊಡಲ್ಪಟ್ಟಿತು. ಅದರ ಪ್ರಕಾರ ೧೯೭೭ ಲಕ್ಷ ಆಯವೂ ೧೯೮೭ ಲಕ್ಷ ವ್ಯಯವೂ ತೋರಿ ಸಾಧಾರಣ ೫೦ ಲಕ್ಷ ರೂಪಾಯಿ ವ್ಯಯಾಧಿಕವಾಗಿರುವುದು. ಈ ಪಟ್ಟಿಯನ್ನು ಕೌನ್ಸಿಲಿನ ಮುಂದೆ ತಂದ ಎ. ಟಿ. ಈ. ಮೊಯರ್‌ರವರ ಭಾಷಣವೂ ಬಹಳ ಅನುತ್ಸಾಹಕವಿದ್ದಿತು. ಕಳದ ವರ್ಷದಲ್ಲಿ ೧೧೮ ಲಕ್ಷ ಉಳಿತಾಯವಿರುವಾಗ ಈ ವರ್ಷ ೫೦ ಲಕ್ಷ, ಇಂಪೀರಿಯಲ್ ಸರಕಾರಕ್ಕೆ ಕೊಡಲಿಕ್ಕಿದ್ದ ಹಣವು ಇನ್ನು ಕೊಡಬೇಕಿಲ್ಲವಾದುದರಿಂದ, ೨ ಲಕ್ಷ ರೂಪಾಯಿ ವ್ಯಯಾಧಿಕವಾಗಿ ತೋರಿದುದು ಮದ್ರಾಸು ಪ್ರಾಂತಿಕ ಆಯವ್ಯಯ ಕ್ರಮಗಳು ಚೆನ್ನಾಗಿಲ್ಲವೆಂದು ತೋರಿಸುವುದು. ಆದಾಯವು ಕಳದ ವರ್ಷಕ್ಕಿಂತ ೨೧ ಲಕ್ಷ ಮಾತ್ರವೇ ಹೆಚ್ಚಾಗಿರುವಾಗ ವ್ಯಯವು ಕಳದ ವರ್ಷಕ್ಕಿಂತ ೧೮ ಲಕ್ಷ ಹೆಚ್ಚಾಗಿಯದೆ; ಈ ಬಜೆಟ್ಟಲ್ಲಿ ಸಾರ್ವಜನಿಕ ಹಿತಕ್ಕೆ ಎಷ್ಟು ಉಪಯೋಗಿಸಲ್ಪಟ್ಟಿದೆಂದು ಹೇಳಬರುವುದಿಲ್ಲ. ಹಾಗೂ ಈ ಆಯವ್ಯಯ ಪಟ್ಟಿಯು ವ್ಯಯಾಧಿಕ್ಯದ ಭಯವನ್ನು ಪುನಃ ಮುಂದೆ ತಂದಿರುವುದಷ್ಟೆ ಅಲ್ಲದೆ, ಅದರಲ್ಲಿ ಪ್ರಜಾಹಿತದ ಸ್ಪಷ್ಟವಾದ ಯಾವ ಕಾರ್ಯಗಳೂ ತೋರುವುದಿಲ್ಲ. ಲೋಕಲ್ ಬೋರ್ಡು ಆಸ್ಪತ್ರೆಗಳನ್ನು ಸರಕಾರವು ತನ್ನ ಕೈಯಲ್ಲಿ ತೆಗೆದುಕೊಂಡಿರುವ ೧.೮೮ ಲಕ್ಷ ರೂಪಾಯಿಯನ್ನು ಹುಡುಗಿಯರಿಗಾಗಿ ಹೊಸ ಶಾಲೆಗಳ ಸ್ಥಾಪನೆಗೆಂದು ಪ್ರತ್ಯೇಕಿಸಿರುವರು. ೪.೮೦ ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಹೊಸ ಶಾಲೆಗಳ ಬಗ್ಗೆ ವಿಂಗಡಿಸಿರುವರು. ೪.೮೦ ರೂಪಾಯಿ ಪ್ರಾಥಮಿಕ ಶಾಲೆಗಳ ಕಟ್ಟೋಣ ಮತ್ತು ಉಪಕರಣಗಳ ಬಗ್ಗೆ ಕೊಟ್ಟಿರುವರು. ೩.೨೭ ಲಕ್ಷ ಆಂಧ್ರ ವಿಶ್ವವಿದ್ಯಾಲಯದ ಕಟ್ಟೋಣಗಳಿಗಾಗಿ ಕೊಟ್ಟಿರುವರು. ಪ್ರಜಾಹಿತದ ಹೊಸ ಖರ್ಚುಗಳೆಂದರೆ ಇಷ್ಟೇ ಎನ್ನಬಹುದು. ಉಳಿದ ದೊಡ್ಡ ಸ್ಕೀಮುಗಳ ವಿಷಯದಲ್ಲಿ ಹೆಚ್ಚಿನ ವಿಮರ್ಶೆಯು ಅಗತ್ಯವಿದೆ.

ಸಾಂಪ್ರದಾಯದ ನಿರ್ಜೀವಕತೆ.

ಡಾ|| ಅನ್ನಿಬೆಸೆಂಟಮ್ಮನವರ ಹೊಸ ಕ್ರೈಸ್ತನಾದ ಜೆ. ಕೃಷ್ಣ ಮೂರ್ತಿಯು ಯೂರೋಪಿಗೆ ಹೊರಡುವ ಸಮಯದಲ್ಲಿ ಮುಂಬಾಯಿಯಲ್ಲಿ ಪತ್ರಿಕಾ ಪ್ರತಿನಿಧಿಗೆ ತನ್ನ ಕೆಲವು ಅಭಿಪ್ರಾಯಗಳನ್ನು ತಿಳಿಸಿದನು. "ಸಾಂಪ್ರದಾಯದ ನಿರ್ಜೀವತನದಿಂದ ಹಿಂದೂಸ್ಥಾನದಲ್ಲಿ ಇಷ್ಟು ಧಾರಾಳವಾಗಿ ದಿನ್ನಂತೆ ಆದವರು ಬೇರೆ ದೇಶದಲ್ಲಿಯೂ ಇಲ್ಲ. ಈ ಸಮಸ್ಯೆಯನ್ನು ತೀರಿಸಿದರೆಂದರೆ ಹಿಂದೂಸ್ಥಾನದ ಇತರ ಎಲ್ಲಾ ಸಮಸ್ಯೆಗಳೂ ಶೀಘ್ರವಾಗಿ ಪರಿಹಾರ ಹೊಂದುವವು" ಎಂದು ಕೃಷ್ಣಮೂರ್ತಿಯು ತಿಳಿಸಿದನು. ಕೃಷ್ಣಮೂರ್ತಿಯನ್ನು ದೈವೀ ಅವತಾರವೆಂದು ಹೇಳುವಂತಹ ಶ್ರೇಷ್ಠತೆಯು ಈ ಮಾತುಗಳಲ್ಲಿಲ್ಲವಾದರೂ, ಈ ಮಾತುಗಳು ಅಕ್ಷರಶಃ ನಿಜವೆಂದು ಹೇಳಬೇಕಾಗುತ್ತದೆ; ವಾಸ್ತವವು; ಈ ಘಟ್ಟದ ನಿರ್ಜೀವ ಸಾಂಪ್ರದಾಯಗಳು ಈಗ ನಾಶವಾಗದೆ ಗೊಂದಲದಲ್ಲಿ ಸಿಲುಕಿ [illegible] ದೇಶವು ವಿಚಾರಗಳ ಜಡತೆಯಲ್ಲಿ ಸಿಕ್ಕಿಕೊಂಡು ಬಿದ್ದಿದೆ. ಸಕಾರಣ ವರ್ತನಕ್ಕೆ (rational action) ಸಾಂಪ್ರದಾಯಗಳ ಹಿಡಿತವು ಬಿಡದಿದ್ದರೂ, ಸಾಂಪ್ರದಾಯಗಳ ಅನುಕರಣಕ್ಕೆ ಸಾಕಷ್ಟು ವಿಶ್ವಾಸವಿಲ್ಲದೆ ಅದೂ ಸಾಧ್ಯವಿಲ್ಲದೆ ಹೋಗಿದೆ. ಶತಮಾನಗಳ ಈ ಜೀವಹೀನಕರವು ಹಿಂದೂಸ್ಥಾನದ ಮೇಲೆ ಬಿದ್ದು ಹಿಂದೂಸ್ಥಾನದ ಸಕಾರಣ ತಾರ್ಕಿಕ ಶಕ್ತಿಯನ್ನೇ ಅಪಹರಣ ಮಾಡಿರುವುದರಿಂದ ಒಂದು ಬಾರಿ ವಿಜ್ಞಾನದ ಆವಿಷ್ಕಾರದಲ್ಲಿ ಬಹಳ ಮುಂದಿದರಿಂದ ಹಿಂದೂಸ್ಥಾನವು ವಿಜ್ಞಾನವನ್ನು ಗೊಡ್ಡು ಸೂತ್ರಗಳ ಆವರಣದಲ್ಲಿ ಬಂಧಿಸಿ ನಾಗರಿಕತೆಯ ಬೆಳವಳಿಗೆಗೆ ಇತಿಶ್ರೀಯನ್ನು ಹಾಕಿಬಿಟ್ಟಿತು. ಕೃಷ್ಣಮೂರ್ತಿಯು ಹೇಳುವಂತೆ ಸಾಂಪ್ರದಾಯದ ಈ ನಿರ್ಜೀವಕರವು ಎತ್ತಲ್ಪಟ್ಟರೆ ಮಾತ್ರವೇ ಹಿಂದೂಸ್ಥಾನದ ಪ್ರಗತಿಯು ಶೀಘ್ರವಾಗಿ ಸುಧಾರಿತವಾಗ್ಗುವುದು.

ಸರಕಾರೀ ಅಧಿಕಾರಿಗಳ ಜವಾಬ್ದಾರಿ.

ಹಿಂದೂಸ್ಥಾನ ಸರಕಾರೀ ಅಧಿಕಾರಿಗಳು ಏನೊಂದು ದೋಷಗಳನ್ನು ತೋರಿಸಿದರೆ ಸರಕಾರವು ಕೂಡಲೆ ಅದನ್ನು ಮುಚ್ಚುಮರೆ ಮಾಡಲು ಪ್ರಯತ್ನಿಸುವುದಷ್ಟೇ ಅಲ್ಲದೆ ಸರಕಾರಿ ನೌಕರಿಯು ದುರ್ವರ್ತನಗಳಿಂದ ಕಲಂಕಿತವಾಗಬಾರದೆಂಬ ಯೋಚನೆಯು ಅವರಿಗಿರುವಂತೆ ತೋರುವುದಿಲ್ಲ. ಸರಕಾರಿ ನೌಕರರು ಪ್ರಜೆಗಳಲ್ಲಿ ಯಾರೊಬ್ಬರೊಡನಾದರೂ ಪತ್ರವ್ಯವಹಾರವನ್ನು ನಡೆಸಿದರೆ "ತಮ್ಮ ಅತ್ಯಂತ ವಿಧೇಯ ಸೇವಕ" ಎಂದು ಬರೆಯಬೇಕಾದರೂ, ಅವರೊಡನೆ ವರ್ತಿಸುವಾಗ "ನಿಮ್ಮ ಅತ್ಯಂತ ಕಠಿಣನಾದ ಪ್ರಭು" ಎನ್ನುವಂತೆ ವರ್ತಿಸುವರು ಹೊರತು ತಮ್ಮ ಸಾರ್ವಜನಿಕ ಜವಾಬ್ದಾರಿಯನ್ನು ತಿಳಿಯಲು ಯತ್ನಿಸುವುದಿಲ್ಲ. ಮುಂಬೈಯ ಅಭಿವೃದ್ಧಿ ಶಾಖೆಯ ಹಾರ್ವಿನರಿಮಾನರ ಮೊಕದ್ದಮೆಯೂ ಈ ತರದ ಮಾನಸಿಕತೆಯ ದ್ಯೋತಕವಾಗಿದೆ. ಅಭಿವೃದ್ಧಿ ಶಾಖೆಯ ಅಧಿಕಾರಿಗಳು ಸರಕಾರೀ ನೌಕರಿಗೆ ಕಲಂಕ ತರುವಂತಹ ರೀತಿಯಲ್ಲಿ ವರ್ತಿಸಿರುವರಾಗಿ ನರಿಮಾನರು ಸ್ಪಷ್ಟ ಚಳವಳವೆದ್ದಿಸಿ ಸರಕಾರದ ಲಕ್ಷ್ಯಕ್ಕೆ ತರುವಾಗ, ಆ ಬಗ್ಗೆ ಸರಿಯಾದ ವಿಚಾರಣೆಯನ್ನು ನಡೆಸಿ ತಪ್ಪುಗಾರರನ್ನು ಶಿಕ್ಷಿಸುವ ಬದಲು, ಹಾರ್ವಿಯವರಿಂದ ಮೊಕದ್ದಮೆ ನಡೆಸಿ, ಹಾರ್ವಿಯವರಿಗೆ ಸರಕಾರವು ಸಹಾಯವನ್ನೇ ಕೊಟ್ಟಿತು. ಬ್ರಿಟನ್ನಿನಲ್ಲಿಯೂ ಇನ್ನೊಂದು ತರದಲ್ಲಿ ಸರಕಾರೀ ನೌಕರಿಗೆ ಕೆಟ್ಟ ಹೆಸರು ತರುವ ಅಪಾದನೆಯು ಬಂದಾಗ ಬ್ರಿಟಿಷ ಸರಕಾರವು ಕೂಡಲೇ ತನಿಖಿ ನಡಿಸಿ ಕೆಲವು ದಿನಗಳಲ್ಲಿಯೇ ತಪ್ಪುಗಾರರನ್ನು ಕಠಿಣವಾಗಿ ಶಿಕ್ಷಿಸಿತು. ಸ್ವತಂತ್ರ ಸರಕಾರಕ್ಕೂ ಪರಾಧೀನ ಸರಕಾರಕ್ಕೂ ಇರುವ ವ್ಯತ್ಯಾಸ ಇಷ್ಟೇ. ಆದರೆ ನರಿಮಾನರು ತಮಗೆ ಸ್ವಂತಕ್ಕಾದ ಬಹಳ ನಷ್ಟವನ್ನು ಲೆಕ್ಕಿಸದೆ ನಡೆಸಿದ ಚಳವಳವು ವ್ಯರ್ಥವಾಗಿಲ್ಲವೆಂಬುವುದು ಸಂತೋಷದ ವಿಷಯ. ಅಲ್ಲಿಯ ಅಭಿವೃದ್ಧಿ ಶಾಖೆಯ ಹಿಂದಿನ ವರ್ತನೆಗಳ ವಿಚಾರ ನಡಿಸಲಿಕ್ಕೆ ಒಂದು ಬೇರೆ ಸರಕಾರಿ ಕಮಿಟಿಯು ನೇಮಿಸಲ್ಪಡುವುದು. ಆದರೂ ಸರಕಾರವು ತನ್ನ ನೌಕರರ ವರ್ತನೆಯ ವಿಷಯದಲ್ಲಿ ಸುಣ್ಣ ಬಳಿಯುವ (white washing) ಕ್ರಮವನ್ನು ಬಿಡದಿರುವ ವರೆಗೆ ಹಿಂದೀ ನೌಕರ ಶಾಹಿಯ ವರ್ತನದಲ್ಲಿ ಜನರಿಗೆ ಹೆಚ್ಚು ಗೌರವವು ಕಾಣಲಾರದು.

ಅಭಿವೃದ್ಧಿ ಸಂಘ.

ನಮ್ಮ ಜಿಲ್ಲೆಗೊಂದು ಅಭಿವೃದ್ಧಿ ಸಂಘವಿದೆಯಷ್ಟೇ ಅಲ್ಲದೆ, ಅದರ ಕಾರ್ಯಗಳ ಸಮಾಚಾರವು ಜನರಿಗೆ ಸಿಕ್ಕುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಈ ಸಂಘವು ಜಿಲ್ಲೆಯ ಹಿತದ ಬಗ್ಗೆ ಪ್ರಯತ್ನಿಸಿಯದೆಂಬುದೇನೋ ನಿಜ, ಆದರೆ ಪರಿಣಾಮಕಾರಿಯಾದ ಕಾರ್ಯವು ಇವರ ಮೂಲಕ ನಡೆಸಲ್ಪಟ್ಟದೆಂಬುದಕ್ಕೆ ಸಾಕಾದ ನಿದರ್ಶನಗಳು ಕಾಣಬರುವುದಿಲ್ಲ. ಅಭಿವೃದ್ಧಿ ಸಂಘವು ಸರಿಯಾಗಿ ಕೆಲಸ ಮಾಡುವುದಾದರೆ ಅದಕ್ಕೆ ಜಿಲ್ಲೆಯ ಅತೀ ಪ್ರಮುಖವೂ ಸಂಪದಭಿವೃದ್ಧಿಗೆ ಕಾರಣವೂ ಆಗುವುದು ಕಷ್ಟ ಸಾಧ್ಯವಿಲ್ಲ. ಆದರೆ ಜಿಲ್ಲೆಯ ಸಂದಿಗ್ಧ ಸಂದರ್ಭಗಳಲ್ಲಿ ಈ ಸಂಘ ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡಿಲ್ಲವೆಂದೇ ಹೇಳಬೇಕಾಗುವುದು. ಜಿಲ್ಲೆಯ ಯಾವುದೊಂದು ಕೈಗಾರಿಕೆಯು ಸಂದಿಗ್ಧ ಸ್ಥಿತಿಗೆ ಬರುವಾಗ, ಅಥವಾ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಬಗ್ಗೆ ಯಾವುದೊಂದು ಪ್ರಯತ್ನಗಳು ಆಗಬೇಕಾದಾಗ ಈ ಅಭಿವೃದ್ಧಿ ಸಂಘವು ಕೆಲಸ ಮಾಡಬೇಕು. ಜಿಲ್ಲೆಯ ಅಭಿವೃದ್ಧಿಯು ಯಾವ ಯಾವ ರೀತಿಯಲ್ಲಿ ಸಾಧ್ಯವೆಂದು ಈ ಸಂಘವು ಕಂಡುಹಿಡಿದು ಅದು ಕಾರ್ಯಸಾಧ್ಯವಾಗುವಂತೆ ಪ್ರಯತ್ನಿಸಬೇಕು. ಮುಖ್ಯವಾಗಿ ವರ್ಷಕ್ಕೊಂದು ಬಾರಿ ಇಡೀ ಜಿಲ್ಲೆಯ ಪ್ರಮುಖ ವ್ಯಾಪಾರಸ್ಥರೂ, ಕೈಗಾರಿಕೆಗಳ ಸ್ಥಾಪಕರೂ, ಬೆಂಕರರೂ, ಕೃಷಿಕರೂ ಮೊದಲಾದ ಆರ್ಥಿಕ ಜೀವನದಲ್ಲಿ ಭಾಗ ವಹಿಸಿದವರ ಪರಿಷತ್ತನ್ನು ಸೇರಿಸಿ ಜಿಲ್ಲೆಯ ವಾರ್ಷಿಕ ಅಭಿವೃದ್ಧಿಯ ವಿಚಾರವೂ ಜಿಲ್ಲೆಯ ಅಭಿವೃದ್ಧಿಯ ಸಾಧನೆಗಳನ್ನು ಚರ್ಚಿಸಿ ವಾರ್ಷಿಕ ಕಾರ್ಯಕ್ರಮವನ್ನು ನಿರ್ಮಿಸಲ್ಪಟ್ಟರೆ ಈ ಸಂಘವು ಜಿಲ್ಲೆಗೆ ಬಹಳ ಪ್ರಯೋಜನಕಾರಿಯಾಗಿ ಪರಿಣಮಿಸಲು ಸಂದೇಹವಿಲ್ಲ.

ನೋಟಗಳು.
NOTE...S.

ಕೊಳ್ಳೆಗಾಲಿನ ವಿಧವಾ ವಿವಾಹ ಸಹಾಯಕ ಸಂಘದ ಕಾರ್ಯದರ್ಶಿಗಳು ವಿಮರ್ಶೆಗಾಗಿ ಖಾಲಿ ಪೋಸ್ಟು ಕಾರ್ಡಿನ ಮೇಲೆ ಮುದ್ರಿಸಿದ ಗಾನ ರಾಮಾಯಣದ ಕೆಲವು ಪ್ರತಿಗಳನ್ನು ನಮಗೆ ರವಾನಿಸಿರುವರು. ಪ್ರತಿ ಬೇಕಾದರೆ ಎರಡಾಣೆ ಸ್ಟಾಂಪು ಕಳುಹಿಸಬೇಕಾಗಿ ಇವರೇ ಕಳುಹಿಸಿದ ವಿಮರ್ಶೆಯ ಕಾಗದದಲ್ಲಿ ಬರೆದಿರುತ್ತದೆ.

• • • •

ಪ್ರಾಯಶಃ ಇವರು ಕೆಲವೇ ಸಹಸ್ರ ಪ್ರತಿಗಳನ್ನು ಅಚ್ಚು ಮಾಡಿಸಿರಬಹುದು. ಇವರು ವಿಧವಾ ವಿವಾಹದ ಪ್ರೋತ್ಸಾಹಕರಾಗಿರುವುದರಿಂದ ಇದರಿಂದ ಹುಟ್ಟಿ ಬಂದ ಹಣವನ್ನು ಈ ಸಂಸ್ಥೆಗೆ ಉಪಯೋಗಿಸಿದರೆ, ಸಂಸ್ಥೆಗೆ ಇತರ ಧನಸಹಾಯದ ಅಗತ್ಯವೇ ಇರುವುದಿಲ್ಲ.

• • • •

ಇದರ ವಿಮರ್ಶೆಯನ್ನು ಇವರೇ ಬರದು ನಮಗೆ ಕಳುಹಿಸಿರುವರು. ಆದಕಾರಣ ನಾವು ಪ್ರತ್ಯೇಕವಾಗಿ ವಿಮರ್ಶಿಸುವ ಅಗತ್ಯವಿಲ್ಲ.

• • • •

ಆದರೆ ಈ ಕಾರ್ಡಿನಲ್ಲಿ with best compliments from, ಎಂದು ಕೂಡ ಬರದಿದೆ. ಹೀಗೆ ಬರೆದಿರುವ ಮದುವೆಯ ಕಾರ್ಡುಗಳು ಧರ್ಮಾರ್ಥವಾಗಿ ಬರುತ್ತಿರುವಾಗ, ಇದಕ್ಕೆ ಎರಡಾಣೆ ಕ್ರಯ ಕೊಡುವದು ಹೆಚ್ಚೆಂದೇ ನಮಗನ್ನಿಸುವದು.

• • • •

ಇಂದೋರಿನ ಮಾಜಿ ಮಹಾರಾಜರಾದ ತುಕ್ಕೋಜಿ ರಾಯರು ಶ್ರೀಮತೀ ಮಿಲನಾ ಬಾಯಿಯನ್ನು (ಮಿಸ್. ಮಿಲ್ಲರನ್ನು) ನಕ್ಷತ್ರ, ಕರಣ, ಯೋಗ, ತಾರಾಬಲ ಮೊದಲಾದವುಗಳನ್ನು ನೋಡಿ ಇದೇ ಫಾಲ್ಗುಣ ಬಹುಳ ೬ಯು ಸೋಮವಾರ (ತಾರೀಕು ೧೭ನೇ) ರಾತ್ರಿ ಘಂಟೆ ೧೦-೫ಕ್ಕೆ ನಡಿಯುವ ತುಲಾಲಗ್ನದಲ್ಲಿ ಅಗ್ನಿಸಾಕ್ಷ್ಯವಾಗಿ ಪಾಣಿಗ್ರಹಣ ಮಾಡಿಕೊಳ್ಳುವರು.

• • • •

ಮಿಸ್. ಮಿಲ್ಲರರ ಶುದ್ಧೀಕರಣವು ನಾಶಿಕ ಮಹಾಕ್ಷೇತ್ರದಲ್ಲಿ ನಡೆಯುವದು. ಈ ಶುದ್ಧೀಕರಣದಿಂದ ಮಿಸ್. ಮೇಯೊಳಗೆ ಸ್ವಲ್ಪ ಅಸಮಾಧಾನವೂ, ಅವಮಾನವೂ ಉಂಟಾಗದಿರಲಾರದು.

• • • •

ಚುನಾವಣೆಗಳ ಸಮಯ ಮೆಂಬರರ ದೀನತ್ವವು ತಿಳಿದು ಬರುವುದು. ಅಲ್ಪಸ್ವಲ್ಪ ಒಳ್ಳೇದನ್ನು ಮಾಡಿದರೆ ಅದನ್ನು ಪರ್ವತೀ ಕರಿಸಿ ಬರೆಯಲಿಕ್ಕೆ ನಮ್ಮವರೇ ಇರುತ್ತಾರೆ. ಖಾದಿಯನ್ನು ಧರಿಸಿದವರಾದರೆ, "ಅವರು ಚರಕ ಪ್ರಚಾರ ಮಾಡಿಸಿರುತ್ತಾರೆ. ಕೈಮಗ್ಗಗಳನ್ನು ಇಡಿಸಿದ್ದಾರೆ. ಆದಕಾರಣ ಓಟುಗಳನ್ನು ಖಾದಿ ಧರಿಸಿದ ಮೆಂಬರರಿಗೆ ಕೊಡಿರಿ" ಎಂದು ಬರೆಯುತ್ತಾರೆ.

• • • •

ಮೂಲ್ಕಿ ಸರ್ಕಲಿನ ತಾಲೂಕು ಬೋರ್ಡು ಓಟರರ ವಿನಂತಿಯಲ್ಲಿ, "ತಮ್ಮ ಜಾತಿಯ ಮೇಲೆ ಪ್ರೇಮವಿರುವದು ಸಹಜ, ಆದರೆ ಇವರ ಕಾರ್ಯಕ್ರಮದಲ್ಲಿ ಪಕ್ಷಪಾತವಿಲ್ಲದೆ, ಸಕಲ ಜಾತಿಗಳ ಶ್ರೇಯಸ್ಸನ್ನು ಬಯಸಿ ಇವರು ಕೆಲಸ ಮಾಡಿದ್ದಾರೆಂಬುದು ನಮಗೆ ಖಚಿತವಾಗುತ್ತದೆ" ಎಂದು ಬರೆದು ಉಂಟು.

• • • •

ಮೇಲಿನ 'ಪಕ್ಷಪಾತವಿಲ್ಲ' ಎಂಬುದು ಇದರಿಂದ ಖಚಿತವಾಗುವುದು. ಇಲ್ಲವಾದರೆ ವಿನಂತಿಗೆ ಸಹಿ ಹಾಕಿ ಡಾಕ್ಟರರ ಸರ್ಟಿಫಿಕೇಟುಗಳನ್ನು ಇವರು ತಿರಸ್ಕರಿಸುತ್ತಿರಲಿಲ್ಲ.

• • • •

ಇವರು ಆಯುರ್ವೇದಕ್ಕೆ ಒಳ್ಳೇ ಬೆಂಬಲವನ್ನು ಕೊಟ್ಟಿರುತ್ತಾರೆ. ನೇಟಿವ್ ಡಾಕ್ಟರರ ಸರ್ಟಿಫಿಕೇಟುಗಳನ್ನು ಇವರು ಅಂಗೀಕರಿಸುತ್ತಿದ್ದರು. ಇದರಿಂದ ಇವರ ವಾತ್ಸಲ್ಯವೂ ನಿಷ್ಪಕ್ಷಪಾತವೂ ಬಯಲಾಗುವದು.

• • • •

ಮದರಾಸು ಸರಕಾರದವರು ಸ್ಯಾಮನ್ ಸಪ್ತಕರು ಮದರಾಸಿಗೆ ಬರುವ ಮೊದಲು ೧೪೪ನೇ ಪ್ರಕರಣದ ಹುಕುಮಿನ ಮೇರೆಗೆ ಯಾರೂ ಸ್ಯಾಮನ್ ಬಹಿಷ್ಕಾರದಲ್ಲಿ ಸೇರಬಾರದಾಗಿಯೂ ಯಾವುದೊಂದು ತರದ ಸಭೆಯನ್ನು ಸೇರಿಸಬಾರದಾಗಿಯೂ ಹುಕುಂ ಕೊಟ್ಟರು.

• • • •

ಇದರಿಂದ ಕಾಂಗ್ರೆಸ್ಸಿನ ಧುರೀಣರಿಗೆ ಸ್ವಲ್ಪ ಕೆಲಸವನ್ನು ಉಳಿಸಿದಂತಾಯಿತು. ಈ ಹುಕುಮಿನ ಕಾರಣದಿಂದ ಮುದ್ರಣಕಾರರಿಗೆ ಮಾತ್ರ ಲಾಭದಲ್ಲಿ ಸ್ವಲ್ಪ ನಷ್ಟ. ಅಂತೂ ಇಂತೂ ಬಹಿಷ್ಕಾರವು ಸಮಧಾನದಿಂದಲೇ ನಡೆದುಹೋಯಿತು.

ವಿದೇಶ ವರ್ತಮಾನ.

— ಮೊರೊಕ್ಕೋದಿನ ಕೊಮ್ಯುನಿಷ್ಟರ ಮೂರು ಜನ ಧುರೀಣರನ್ನು ಕೈದುಮಾಡಿರುವರು.

— ವಿಲಾಯತಿಯಲ್ಲಿ ೨೦ ಫೀಟು ಉದ್ದದ ಒಂದು ಲ್ಯಾಫ್ ಬೋಟ್ ...ಮಾಡಿದರೂ ಮುಳುಗಲಾರದೆಂಬ ನಂಬಿಗೆಯಿದ್ದುದರಿಂದ ಇದರ ಮೇಲೆ ...ನೇಕರು ಕುಳಿತು ನ್ಯೂಯೋರ್ಕಿಗೆ ಪ್ರಯಾಣ ಬೆಳೆಸಿರುವರು. ಪ್ರಯಾಣಕ್ಕೆ ಒಟ್ಟು ೪೦ ದಿನಗಳು ಬೇಕಾಗುವವಂತೆ.

— ಹಿಂದೂ ನರ್ತಕಿಯಾದ, ಮಿಸ್. ಗೈಟ್ರಿ ಎಂಬವಳು ಪೆರಿಸಿನ ಸ್ತ್ರೀ... ಕುದುರೆ ಓಟವನ್ನು ಮಾಡುವಾಗ ಮೊದಲನೆ ಸ್ಥಾನವನ್ನು ಪಡೆದಿರುವಳು. ಇವಳಿಗೆ ಇನ್ನೂ ೨೦ ವರ್ಷ ಪ್ರಾಯವಾಗಿಲ್ಲ. ಒಟ್ಟು ಇವಳು ಓಡಿದುದು ೫೯೦ ಮೈಲು. ದಿನಕ್ಕೆ ಸರಾಸರಿ ೩೦ ಮೈಲಿನ ಪ್ರಕಾರ ಇವಳು ಕುದುರೆಯನ್ನೋಡಿಸುವಳು. ಕುದುರೆಯ ಆರೈಕೆಯನ್ನೆಲ್ಲ ತಾನೇ ಮಾಡಿಕೊಳ್ಳುವಳು.

— ಮೊನ್ನೆ ತಾನೆ ಅಮೇರಿಕದಿಂದ ೬೪ ಮಿಲ್ಲಿಯ ಡೊಲ್ಲರ್ ಚಿನ್ನವನ್ನು ಹಡಗನಲ್ಲಿ ತುಂಬಿಸಿ ಫ್ರಾನ್ಸಿಗೆ ತಂದರು. ಇದು ಕೂಡಿ ಕಳದ ಮೂರು ತಿಂಗಳುಗಳಿಂದ ಅಮೇರಿಕದಿಂದ ಫ್ರಾನ್ಸಿಗೆ ತಂದ ಚಿನ್ನವು ೨೫ ...ಮಿಲ್ಲಿಯ ಡೊಲರ್‌ಗಳಾದವು.

— ರಸ್ಯಾದೇಶದ ಪ್ರಸಿದ್ಧ ಲೇಖಕನಾಗಿರುವ ಮಕ್ಸಿಮ್‌ಗೋರ್ಕಿಗೆ ಸಂತೋಷವಾಗುವಂತೆ ರಸ್ಯಾ ಸರಕಾರದವರು ಆತನ ಚಿತ್ರವುಳ್ಳ ಟಪ್ಪಾಲು ...ಗಳನ್ನು ಹೊರಡಿಸಲಿಕ್ಕಿರುವರು.

ಲಂಡನಿನ ಪಾರ್ಲಿಮೆಂಟ್ ಸದನದಲ್ಲಿ ಎರಡು ಕೋಣೆಗಳೊಳಗೆ ನೆಲದಡಿಯಲ್ಲಿ ಸುರಂಗವಿದ್ದುದು ಮೊನ್ನೆ ತಾನೆ ತಿಳಿದು ಬಂದಿದ್ದಿತು. ಈ ಸುರಂಗದ ಹಾದಿಯು ಇದ್ದಿತೆಂದು ಕಳೆದ ನೂರು ವರುಷಗಳಿಂದಲೂ ಒಬ್ಬರಿಗೂ ತಿಳಿದಿರಲಿಲ್ಲ.

— ಎರ್ರೊಲಿನ ಅರ್ಲ್‌ರ ಸಂಸ್ಕಾರ ವಿಧಿಯು ಮೊನ್ನೆ ತಾನೆ ಜರಗಿತು. ದುಃಖವನ್ನು ಸೂಚಿಸಿ ಅವರ ಪತ್ನಿಯವರಿಗೆ ಬಂದ ತಂತಿಗಳಲ್ಲಿ ಜರ್ಮನಿ ಸರಕಾರದಿಂದ ಬಂದ ತಂತಿಯೂ ಇದ್ದಿತು.

— ಜರ್ಮನಿಯ ಮಾಜಿ ಕೈಸರನ ಭಾವನಾದ ಜುಬ್‌ಕೋಫನೆಂಬವನು ಒಬ್ಬ ಹುಡುಗನನ್ನು ಹೊಡೆದನೆಂಬ ಆರೋಪಣೆಯ ಮೇಲೆ ಕೈದು ಮಾಡಿದರು. ಆದರೆ ಹೆಸರು ವಿಳಾಸಗಳು ತಿಳಿದೊಡನೆ ಬಿಟ್ಟುಬಿಟ್ಟರು.

— ಬ್ರಿಟಿಷ ಕೈಗಾರಿಕೆಯ ಸಂತೆಯನ್ನು ಸಂದರ್ಶಿಸುವದಕ್ಕಾಗಿ ನಮ್ಮ ರಾಜರೂ ರಾಣಿಯವರೂ ಹೋಗಿದ್ದರು. ಮೊದಲು ಲಂಡನಿನ ಸಂತೆಯನ್ನು ನೋಡಿ ಅನಂತರ ಬರ್ಮಿಂಗ್ ಹೇಮಿನ ಸಂತೆಯನ್ನು ನೋಡಲು ಅಲ್ಲಿಗೆ ತೆರಳಿದರು.

ಒಳದೇಶ ವರ್ತಮಾನ.

— ಕಡಪೆಯಲ್ಲಿ ಎಲೆಕ್ಟ್ರಿಸಿಟಿಯ ಸ್ಕೀಮನ್ನು ಪ್ರಾರಂಭಿಸುವರು. ಈ ಕುರಿತು ಮುನಿಸಿಪಾಲಿಟಿಯವರು ವಿಚಾರಿಸುತ್ತಿರುವರು.

— ೧೯೨೦ನೇ ಇಸವಿಯಲ್ಲಿ ಮುಂಬಾಯಿ ಪಟ್ಟಣದ ಬೀದಿಗಳಲ್ಲಿ ...ವಿಲ್ಲದ ೫೦೦ ಜನ ಭಿಕ್ಷುಕರು ಮೃತಪಟ್ಟಿದ್ದರು. ಆದರೆ ಭಿಕ್ಷುಕರ ಸಹಾಯಕ್ಕಾಗಿ ಒಂದು ಮಂಡಳವನ್ನು ಸ್ಥಾಪಿಸಿದ ಕಾರಣ ೨೬ನೇ ...ಯಲ್ಲಿ ಒಟ್ಟು ೨೫೦ ಜನ ಭಿಕ್ಷುಕರು ಮಾತ್ರ ಸತ್ತಿರುವರು. ಈ ಮಂಡಳವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ ಭಿಕ್ಷುಕರಿಗೆ ಮತ್ತಷ್ಟು ...ವು ದೊರೆಯುವಂತೆ ಮಾಡಬೇಕೆಂದು ಮಂಡಳದವರು ತಮ್ಮ ...ಣಗಳಿಗಾಗಿ ೨೫ ಎಕ್ರೆ ಸ್ಥಳವನ್ನು ದಯಪಾಲಿಸಬೇಕೆಂದು ಸರಕಾರದೊಡನೆ ಕೇಳಿರುವರು.

— ಪಾಟಿಯಾಲದ ಮಹಾರಾಜರು ಚೇನ್ಸಲರರಾಗಿ ಆರಿಸಲ್ಪಟ್ಟಿರುವರು. ಅವರಿಗೆ ೨೮ ವೋಟುಗಳೂ, ಅಲ್ವಾರದ ಮಹಾರಾಜರಿಗೆ ...ಗಳೂ ದೊರಕಿದ್ದವು.

— ಬರೋಡಾ ರಾಜ್ಯದ ಯುವರಾಜರಾಗಿರುವ ಪ್ರತಾಪಸಿಂಗೆ ... ಗಾಯಕವಾಡರು ಎಪ್ರಿಲ್ ತಿಂಗಳಲ್ಲಿ ಶಾಂತಾದೇವಿ ಘೋರ್ಪಡೆಯವರನ್ನು ಮದುವೆಯಾಗುವರು.

— ಬರೋಡಾ ಮಹಾರಾಜರ ೬ನೇ ಜನ್ಮದಿನವು ಇದೇ ತಾ. ೧೩ನೇ ಆಚರಿಸಲ್ಪಡುವದು.

...ಮಾಡಲ್ಪಡುವುದೇ ವಿನಹ, ದೇಶದೊಳಗಾಗುವ ಆಫೀ...ನ ಖರ್ಚು ಕಡಿಮೆ ಮಾಡುವ ಪ್ರಯತ್ನಗಳು ತೋರಿಬರು...ವುದಿಲ್ಲ; ಟಪ್ಪಾಲು ಮತ್ತು ತಂತೀ ಇಲಾಖೆಗಳ ದರಗಳು ಕಡಿಮೆ ಮಾಡಲ್ಪಡುವುದಿಲ್ಲ. ಸಂಕ್ಷೇಪತಃ ಯುದ್ಧಕಾಲದ ಅತೀಯಾದ ದರದ ಕರಗಳು ಈ ಶಾಂತತೆಯ ಕಾಲದಲ್ಲಿಯೂ ಕಡಿಮೆ ಮಾಡಲಾಗುವುದಿಲ್ಲ.

ಸೈನ್ಯ ಖಾತೆಯ ಖರ್ಚು ಎಂದಿನಂತೆಯೇ ಇದೆ. ಈ ವರ್ಷ ೧೮ ಲಕ್ಷ ರೂಪಾಯಿ ಹೆಚ್ಚಾಗಿ ಹೋಗಿಯದೆ. ೧೯೨೫-೨೬ರಲ್ಲಿ ೫೬ ಕೋಟಿಯೂ, ೧೯೨೬-೨೭ರಲ್ಲಿ ೫೫ ಕೋಟಿ ೯೭ ಲಕ್ಷವೂ ೧೯೨೭-೨೮ರಲ್ಲಿ ೫೪ ಕೋಟಿ ... ಲಕ್ಷವೂ ಖರ್ಚಾಗಿ ಮೆಲ್ಲನೆ ತಗ್ಗಿಸಿ ತಂದಿರುವ ಖರ್ಚನ್ನು ೧೯೨೮-೨೯ಕ್ಕೆ ಪುನಃ ೫೫ ಕೋಟಿ ೧೦ ಲಕ್ಷಕ್ಕೆ ಏರಿಸಿಬಿಟ್ಟು ... ಮುಂದಿನ ಬಜ್ಜೇಟು ನಿರ್ಮಾಣಕರ್ತರಿಗೆ ಕೆಟ್ಟ ಉದಾಹರಣೆಯನ್ನು ಕೊಟ್ಟಂತಾಗಿದೆ. ಹಿಂದೂಸ್ಥಾನದ ಮಟ್ಟಿಗೆ ಈ ಖರ್ಚು ಬಹಳ ಹೆಚ್ಚಾಯಿತೆಂದು ಹೇಳಬೇಕು.

ಪ್ರಜಾಹಿತದ ಕೆಲಸಗಳಿಗಾಗಿ ಹೊಸದೇನೂ ಬ್ಲೆಕೆಟ್ಟರು ಮಾಡಿಲ್ಲ. ಆದುದರಿಂದ ಒಟ್ಟಿಗೆ ನೋಡಿದರೆ ಬಜ್ಜೇಟಿನಲ್ಲಿ ಕರಗಳು ಕಡಿಮೆ ಮಾಡಲ್ಪಟ್ಟಿಲ್ಲ; ಹೊಸ ಲಾಭಗಳು ಕೊಡಲ್ಪಟ್ಟಿಲ್ಲ ಮತ್ತು ಪ್ರಜಾಹಿತದ ಕೆಲಸಗಳ ಹೊಸ ಸೂಚನೆಗಳು ಇಲ್ಲ. ಮಾನವ ಅನುಭೂತಿ ಇರದ ಕಠಿಣವಾದ ಯಂತ್ರದಂತೆ ಸಹಾನುಭೂತಿ ಇಲ್ಲದ ಹಿಂದೀ ಸರಕಾರವು ತನ್ನ ಬಜ್ಜೇಟನ್ನು ನಿರ್ಮಿಸಿಯದೆ.

— ವ್ಯಾಸರಾಯರು ಧೋಲಾಪುರ ಮಹಾರಾಜರ ಸಂದರ್ಶನವನ್ನು ಪಡೆಯಲು ಧೋಲಾಪುರಕ್ಕೆ ಹೋಗಿದ್ದರು. ಅಲ್ಲಿ ಇವರನ್ನು ಬಹಳವಾಗಿ ಸತ್ಕರಿಸಿದರು. ಸ್ಟೇಶನಿನಲ್ಲಿ ಮಹಾರಾಜರು ಮಂತ್ರಿಪರಿವಾರದವರೊಂದಿಗೆ ವ್ಯಾಸರಾಯರನ್ನು ಎದುರುಗೊಂಡು ವ್ಯಾಸರಾಯದಂಪತಿಗಳಿಗೆ ಪುಷ್ಪ ಮಾಲಿಕೆಯನ್ನು ಹಾಕಿದರು. ಮತ್ತೆ ಎಲ್ಲರೂ ಮೆರವಣಿಗೆಯಿಂದ ಹೊರಟು ಅರಮನೆಯನ್ನು ಸೇರಿದರು.

— ಸ್ವಾಮಿ ಸತ್ಯಾನಂದರನ್ನು ಕೊಲೆಮಾಡಲು ಯತ್ನಿಸಿದ ಅಬ್ದುಲ್ ಅಜೀಜನೆಂಬವನಿಗೆ ಲಾಹೋರಿನಲ್ಲಿ ೧೪ ವರ್ಷದ ಕಾರಾಗ್ರಹ ವಾಸವನ್ನು ವಿಧಿಸಿದ್ದರು. ಆದರೆ ಈತನು ಮೇಲಿನ ಕೋರ್ಟಿನಲ್ಲಿ ಅಪೀಲನ್ನು ಮಾಡಿದ್ದರೂ, ಅಪೀಲು ಡಿಸ್‌ಮಿಸ್‌ಆಗಿ ಹೋಯಿತು.

— ಮುಂಬಾಯಿಯ ಹತ್ತಿಯ ಕಾರಖಾನೆಯ ಮುಖ್ಯ ಕೆಲಸಗಾರನನ್ನು ಕೆಲಸದಿಂದ ನಿವೃತ್ತಿಪಡಿಸಿದ್ದರು. ಆತನನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಕೂಲಿಗಳು ಪತ್ತಾಯಪಡಿಸಿದಾಗ್ಯೂ, ಅಧಿಕಾರಿಗಳು ಸೇರಿಸಿಕೊಳ್ಳಲಿಲ್ಲೆಂಬ ಕೋಪದ ಮೇಲೆ ಸುಮಾರು ಐನೂರು ಜನ ಕೂಲಿಗಳು ಕೆಲಸಕ್ಕೆ ಮುಷ್ಕರವನ್ನು ಹಾಕಿದರು.

— ಇಂದೋರಿನ ಮಾಜಿ ಮಹಾರಾಜರಾದ ತುಕೋಜಿರಾಯರು ಬೆಂಗಳೂರಿನಿಂದ ಹೊರಟು ಮದರಾಸಿಗೆ ನಡೆದರು. ಮದರಾಸಿನಲ್ಲಿ ಅವರು ೫ ದಿನ ಉಳಕೊಳ್ಳುವರು. ಮಿಸ್. ಮಿಲ್ಲರಳೂ ಕೂಡ ಅವರೊಂದಿಗಿರುವಳು. ಮದರಾಸಿನಿಂದ ಕಲಕತ್ತಕ್ಕೆ ಹೋಗಿ, ಅಲ್ಲಿಂದ ನಾಸಿಕಕ್ಕೆ ಹೋಗುವರು. ೮ನೇ ತಾರೀಕಿನ ದಿನ ನಾಸಿಕದಲ್ಲಿ ಮಿಸ್. ಮಿಲ್ಲರಳು ಹಿಂದೂ ಮತಕ್ಕೆ ಪರಿವರ್ತಿತಳಾಗುವಳು. ಮದುವೆಯು ಇಂದೋರಿನ ಸಮೀಪದಲ್ಲಿರುವ ಬರೂಜಾ ಎಂಬಲ್ಲಿ ೧೨ನೇ ತಾರೀಕಿನ ದಿನ ಜರಗುವದು.

— ಮಧುರೆಯಲ್ಲಿ ಗೂಡ್ಸ್ ಟ್ರೈನಿನಲ್ಲಿ ಮೂರು ಗೋಣಿ ಕಾಫಿಯು ಕಳವಾಗಿರುವದು. ಇದನ್ನು ಕಂಡು ರೈಲ್ವೇ ಕೋಣೆಗೆ ಬಂದೋಬಸ್ತನ್ನು ಮಾಡಿದರು. ಮರುದಿನ ಬೆಳಿಗ್ಗೆ ನೋಡುವಾಗ ಇನ್ನೊಂದು ಗೋಣಿ ಕಾಫಿ ಬೀಜವು ಇರಲಿಲ್ಲ.

— ವಿಶಾಖಪಟ್ಟಣದ ಒಂದು ಮಾರ್ಗದಲ್ಲಿ ಬೆಂಕಿಯುಂಟಾಗಿ ಸುಮಾರು ೨೫ ಮನೆಗಳು ಸುಟ್ಟುಹೋದವು. ಆದರೆ ಪೋಲೀಸರ ಸಹಾಯದಿಂದ ನಷ್ಟವು ಅಷ್ಟರಲ್ಲೇ ತೀರಿಹೋಯಿತು. ಇಲ್ಲದಿದ್ದರೆ ಗಾಳಿಯ ರಭಸಕ್ಕೆ ಬೆಂಕಿಯು ಹೆಚ್ಚಾಗಿ ಇನ್ನಷ್ಟು ಮನೆಗಳು ಸುಟ್ಟುಹೋಗುತ್ತಿದ್ದವು. ಬೆಂಕಿಯ ಸುದ್ದಿಯು ಪೋಲೀಸ್ ಸುಪರಿಂಟೆಂಡೆಂಟರಿಗೆ ತಿಳಿದೊಡನೆ ಅವರು ಅಲ್ಲಿಗೆ ಓಡಿ ಸ್ವತಃ ಕಷ್ಟಪಟ್ಟು ಬೆಂಕಿನೊಂದಿಸಲು ಪ್ರಯತ್ನಿಸಿದರು. ಅವರಿಗೆ ಕೆಲವು ಗಾಯಗಳಾಗಿವೆ.

— ಬೆಂಗಳೂರಿನ ಶಿವಣ್ಣಗೌಡನೆಂಬವನನ್ನು ಯಾರೋ ಗುಂಡು ಹೊಡೆದು ಕೊಂದಿರುವರು. ಪೋಲೀಸರು ತನಿಖೆಯನ್ನು ನಡೆಸುತ್ತಿರುವರು.

ಬರೋಡಾದ ಆರ್ಯಸಮಾಜದ ವಾರ್ಷಿಕ ಸಭೆಯ ಸಮಯ ಮೆರವಣಿಗೆಯನ್ನು ಮಾಡಕೂಡದಾಗಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಹುಕುಮು ಕೊಟ್ಟಿರುವರು.

— ಅಹಮದಾಬಾದಿನ ಏಟ್ರಿಳ್ ಮಿಲ್ಲಿನ ಏಜಂಟನಾದ ಮಾಗನ ಲಾಲನೆಂಬವನು ಲೆಕ್ಕಪತ್ರದಲ್ಲಿ ಹೆಚ್ಚುಕಡಿಮೆ ಮಾಡಿ ೩ ಲಕ್ಷ ರೂಪಾಯಿಗಳನ್ನು ತಿಂದುಹಾಕಿದುದಕ್ಕಾಗಿ ೫ ವರ್ಷದ ಕಠಿಣ ಸಜೆಯನ್ನೂ, ಮೂರು ವರ್ಷಗಳ ಸಾಧಾರಣ ಸಜೆಯನ್ನೂ ವಿಧಿಸಿರುವರು.

— ಪೂನೆಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಸ್ಯಾಮನ್ ಕಮಿಶನನ್ನೂ, ಬ್ರಿಟಿಷ ವಸ್ತುಗಳನ್ನೂ ಬಹಿಷ್ಕರಿಸಬೇಕೆಂಬ ಠರಾವು ಅಂಗೀಕರಿಸಲ್ಪಟ್ಟಿತು.

ಮದರಾಸಿನ ರೋಯಪುರಮ್ ಮೈದಾನಿನಲ್ಲಿ ಇಬ್ಬರು ಸ್ನೇಹಿತರು ರಾತ್ರೆ ೮ ಗಂಟೆಗೆ ವಿಹರಿಸುತಿದ್ದಾಗ, ಯಾರೋ ಒಬ್ಬನು ಹಿಂದಿನಿಂದ ಬಂದು ಒಬ್ಬನನ್ನು ಆಕ್ರಮಿಸಿ ಕತ್ತಿಯಿಂದ ಹೊಡೆದನು. ಇನ್ನೊಬ್ಬನು ತನ್ನ ಸ್ನೇಹಿತನ ಸಹಾಯಕ್ಕೆ ಒದಗುವ ಮೊದಲೇ ಖೂನಿಮಾಡಿದವನು ಕತ್ತಲೆಯಲ್ಲಿ ಎತ್ತಲೋ ಓಡಿಹೋದನು. ಖೂನಿಯಾದವನು ಆಸ್ಪತ್ರೆಯಲ್ಲಿ ಮೃತಪಟ್ಟನು. ಪೋಲೀಸಿನವರು ಇದರ ತನಿಖೆಯನ್ನು ನಡಿಸುತ್ತಿರುವರು.

— ಮೈಸೂರಿನ ಈಗಿನ ರೆಸಿಡೆಂಟರಾದ ಮಿ. ಪಿಯರ್ಸ್‌ರೆಂಬವರು ಆರು ತಿಂಗಳ ರಜೆಯ ಮೇಲೆ ತೆರಳುವರು. ಅವರ ಬದಲಿಗೆ ಮೈಸೂರಿನ ರೆಸಿಡೆಂಟರಾಗಿಯೂ, ಕೊಡಗಿನ ಚೀಫ್ ಕಮಿಶನರಾಗಿಯೂ, ಹೊನರೇಬಲ್ ಮಿಸ್ಟರ್ ಎಲ್. ಎಮ್. ಕ್ರಂಪ್ ಎಂಬವರು ಮಾರ್ಚ ೧೨ನೇ ತಾರೀಕಿನ ದಿನ ಮೈಸೂರಿಗೆ ಬರುವರು.

— ಮೊದಲೇ ಮುಸಲ್ಮಾನರಾಗಿರದೆ ಮತ್ತೆ ಮುಸಲ್ಮಾನ ಮತಕ್ಕೆ ಮತಾಂತರ ಹೊಂದಿದವರು ಮಕ್ಕಾ ಅಥವಾ ಮದೀನಕ್ಕೆ ಯಾತ್ರೆಯನ್ನು ಮಾಡಬೇಕಾದರೆ ತಮಗೆ ತಿಳಿಸಿ ತಮ್ಮ ಒಪ್ಪಿಗೆಯನ್ನು ಪಡೆಯಬೇಕೆಂದು ಮೈಸೂರು ಸರಕಾರದವರು ಒಂದು ಕಾನೂನು ಮಾಡಿರುವರು.

— ನವನಗರದ ಮಹಾರಾಜರು ಬನಾರಸಿನ ಹಿಂದೂ ವಿಶ್ವವಿದ್ಯಾಲಯದಲ್ಲಿ ಕೆಮಿಸ್ಟ್ರಿ ಶಾಖೆಯನ್ನು ತೆರೆಯುವದಕ್ಕಾಗಿ ವರ್ಷಕ್ಕೆ ೧೨೦೦೦ ರೂಪಾಯಿ ಕೊಡಲಿಕ್ಕೆ ಒಪ್ಪಿರುವರು. ಈ ವಿಜ್ಞಾನ ಶಾಖೆಯನ್ನು ಅವರ ಹೆಸರಿನಿಂದ ಕರೆಯುವರು.

— ಕಲಿಕೋಟೆಯ ಮುನ್ಸಿಪಲ್ ಕೌನ್ಸಿಲರರ ಸಭೆಯು ಕಳೆದ ವಾರ ಜರಗಿತು. ಕೌನ್ಸಿಲಿನ ಅಧ್ಯಕ್ಷರು ಅನೇಕ ಕಾರಣಗಳಿಂದ ನಂಬಿಗೆಯನ್ನು ಕಳಕೊಂಡಿರುವರೆಂದು, ಒಬ್ಬ ಮಹನೀಯರು ಒಂದು ಠರಾವನ್ನು ಮುಂದೆ ತಂದರು. ಈ ಠರಾವಿನ ಕುರಿತು ತುಂಬಾ ಚರ್ಚೆಯಾಯಿತು. ಕೊನೆಗೆ ಮತಕೊಟ್ಟು ಠರಾವು ಬಿದ್ದುಹೋಯಿತು.

— ಆರ್. ಎ. ಎಫ್. ಸೀಪ್ಲೇನ್ ವಿಮಾನಗಳು ಈಗ ಆಸ್ಟ್ರೇಲಿಯಕ್ಕೆ ತಲಪಿರುವವು. ಇವು ಇಷ್ಟರ ವರೆಗೆ ೧೦,೦೦೦ ಮೈಲು ಪ್ರಯಾಣ ಮಾಡಿದವು.

— ಧೋಲಾಪುರದಲ್ಲಿ ಒಂದು ಹೊಸ ಆಯುರ್ವೇದ ಆಸ್ಪತ್ರೆಯನ್ನು ತೆರೆದಿರುವರು. ಇದನ್ನು ವೈಸರಾಯರ ಪತ್ನಿಯವರಾದ ಲೇಡಿ ಇರ್ವಿನರವರೇ ತೆರೆದರು.

— ಮದರಾಸಿನಲ್ಲಿ ಫೈನ್ ಆರ್ಟ್ಸ್ ಎಕ್ಸಿಬಿಶನು ನಡೆಯಿತು. ಇದನ್ನು ಗವರ್ನರರವರೇ ತೆರೆದರು. ಒಬ್ಬೊಬ್ಬ ಉಪಾಧ್ಯಾಯನ ಮೇಲ್ವಿಚಾರಣೆಯಲ್ಲಿ ೧೦ ಜನ ವಿದ್ಯಾರ್ಥಿಗಳು ಒಮ್ಮೆ ಬಂದು ನೋಡಬಹುದಾಗಿತ್ತು.

ದಕ್ಷಿಣ ಕನ್ನಡ

ಮಂಗಳೂರು:— ಮುನಿಸಿಪಾಲಿಟಿಯ ಸದಸ್ಯರ ಸಭೆಯು ರಾವ್‌ಸಾಹೆಬ್ ನೆಲ್ಲಿಕ್ಕಾ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪಟ್ಟಣದೊಳಗೆ ಬಾಡಿಗೆ ಮೋಟಾರು ಬಸ್ಸುಗಳನ್ನೋಡಿಸಲು, ಬಸ್ಸುಗಳ ಮಾಲಕರಿಗೆ ಲೈಸನ್ಸನ್ನು ಕೊಡಬೇಕೊ, ಬಾರದೊ, ಎಂದು ವಿವಾದವಾಯಿತು. ಕೊನೆಗೆ ಅದರ ನಿರ್ಣಯವಾಗದೆ, ಆ ವಿಷಯವನ್ನೇ ಮುಂದರಿಸಿಡಲಾಯಿತು.

ವೆಸ್ಟ್‌ಕೋಸ್ಟ್ ಡಿವಿಜನಿನ ಹುಡುಗಿಯರ ಶಾಲೆಯ ಇನ್ಸ್‌ಪೆಕ್ಟ್ರೆಸ್, ಮಿಸ್. ಎಮ್. ಟೊಮಿನ್‌ಸರು, ಇಲ್ಲಿಗೆ ಬಂದಿರುವರು. ಇವರು ಇಲ್ಲಿ ಇನ್ನೂ ಕೆಲವು ವಾರಗಳ ವರೆಗೆ ಉಳಕೊಳ್ಳುವರು.

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ಸ್ಕೂಲ್‌ಫ್ಯಾನಲ್ ಕ್ಲಾಸಿನ ವಿದ್ಯಾರ್ಥಿಗಳ ಸೋಶಿಯಲ್‌ಗೆದರಿಂಗ್ ಕಳದ ೨೬ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೬ಕ್ಕೆ, ಮ. ರಾ. ರಾ. ಎಮ್. ಮಾಧವರಾವ್, ವಕೀಲ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಃ ನೆರೆದಿದ್ದವರ ಭಾವಚಿತ್ರವನ್ನು ತೆಗೆದ ಮೇಲೆ, ಫಲಾಹಾರವಾಯಿತು. ಕನ್ನಡ, ಇಂಗ್ಲಿಷ್, ಸಂಸ್ಕೃತಗಳಲ್ಲಿ ಪ್ರಾರ್ಥನೆಯಾಗಿ, ಇಬ್ಬರು ವಿದ್ಯಾರ್ಥಿಗಳು ಗಾಯನವನ್ನು ಮಾಡಿದರು. ಒಬ್ಬ ವಿದ್ಯಾರ್ಥಿಯು ತಾನು ಬರೆದಿದ್ದ ತಮಾಷೆಯ ವಾರ್ತಾಪತ್ರದ ವಾಚನವಾದೊಡನೆ, ಇನ್ನೊಬ್ಬ ವಿದ್ಯಾರ್ಥಿಯ ಮೆಜಿಕ್ ಆಟವಾಯಿತು. ಕೆ. ರಾಮಚಂದ್ರ ನಾಯ್ಕ ಎಂಬ ವಿದ್ಯಾರ್ಥಿಯಿಂದ 'ಕೋಳಿರು ಕೊಡಗೂಸು' ಎಂಬ ಕೀರ್ತನೆಯು ಜರಗಿಸಲ್ಪಟ್ಟಿತು. ಯು. ನರಸಿಂಗರಾವ್ ಎಂಬ ವಿದ್ಯಾರ್ಥಿಯು ಮಾನಪತ್ರವನ್ನೋದಿದೊಡನೆ ವಿದ್ಯಾರ್ಥಿಗಳಲ್ಲಿ ಕೆಲವರು, ಉಪಾಧ್ಯಾಯರನ್ನು ಅಗಲುವಾಗ ತಮಗಾಗುವ ದುಃಖವನ್ನು ಸೂಚಿಸಿ ಭಾಷಣ ಮಾಡಿದರು. ಉಪಾಧ್ಯಾಯರಲ್ಲಿಯೂ ಕೆಲವರು, ವಿದ್ಯಾರ್ಥಿಗಳ ಮುಂದಿನ ಕರ್ತವ್ಯವನ್ನು ತೋರಿಸಿಕೊಟ್ಟು ಮಾತನಾಡಿದರು. ತದನಂತರ ಅಧ್ಯಕ್ಷರ ಭಾಷಣವಾಗಿ, ಅಧ್ಯಕ್ಷರು, ವಿದ್ಯಾರ್ಥಿಯೊರ್ವನಿಂದ ಬರೆಯಲ್ಪಟ್ಟ 'ಶ್ರೀ ರಾಮಕೃಷ್ಣ ಪರಮಹಂಸ'ರ ಪಟದ ಅನಾವರಣಗೈದರು. ವಿದ್ಯಾರ್ಥಿಗಳ ಕಡೆಯಿಂದ ಕೃತಜ್ಞತಾವಂದನೆಗಳು ಕೊಡೋಣಾದ ಮೇಲೆ ಸಭೆಯು ಮುಕ್ತಾಯವಾಯಿತು.

ಇಲ್ಲಿಯ 'ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ'ದಲ್ಲಿ ಕಳದ ಆದಿತ್ಯವಾರ ಪ್ರಾತಃಕಾಲ ಶ್ರೀ ರಾಮಕೃಷ್ಣ ಜಯಂತಿಯು ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಬಡವರಿಗೆ ಅಕ್ಕಿ ಹಂಚೋಣವೂ ಇತ್ತು.

ಮಂಗಳೂರು ಕೋಪರೇಟಿವ್ ಟೌನ್ ಬೇಂಕಿನ ವಾರ್ಷಿಕ ಮಹಾಸಭೆಯು ಇದೇ ಮಾರ್ಚ ತಿಂಗಳ ತಾರೀಕು ೧೧ನೇ ಆದಿತ್ಯವಾರ ಘಂಟೆ ೩ಕ್ಕೆ ಬೇಂಕಿನ ಕಟ್ಟೋಣದಲ್ಲಿ ಜರಗುವದು.

ಇದೇ ಬರುವ ೬ನೇ ತಾರೀಕಿನ ದಿನ ಮಂಗಳೂರಿಗೆ ಹೊಸ ಬಿಶಪರಾದ, ಮೊನ್‌ಸಿಗ್ನೊರ್, ವಿ. ಜೆ. ಡಿ ಸೋಜರು ಬರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿದ್ದ ಮಿ. ಇ. ಎಮ್. ಗೊನ್ ಧೊರೆಗಳಿಗೆ ಮಲಬಾರಿಗೆ ವರ್ಗವಾಗಿರುತ್ತದೆ. ಮಲಬಾರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿದ್ದ ಮಿ. ಎಚ್. ಆರ್. ಪೇಟ್ ಎಂಬವರಿಗೆ ೬ ತಿಂಗಳುಗಳ ರಜೆಯನ್ನು ಕೊಟ್ಟಿರುತ್ತದೆ. ನಮ್ಮ ಜಿಲ್ಲೆಗೆ ಈಗ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿ ಮಿ. ಸಿ. ಜಿ. ಹರ್ಬರ್ಟ್ ಧೊರೆಗಳು ನೇಮಕಹೊಂದಿರುವರು.

ತಾರೀಕು ೨೫ - ೨ - '೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೫ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೫, ಸನ್ನಿಪಾತ ಜ್ವರದಿಂದ ೧, ಶ್ವಾಸಕೋಶದ ರೋಗದಿಂದ ೫. ಇತರ ಎಲ್ಲಾ ಕಾರಣಗಳಿಂದ ೧೬. ಜನನಸಂಖ್ಯೆಯು ಒಟ್ಟು ೪೬.

ಇದೇ ತಿಂಗಳ ತಾರೀಕು ೪ನೇ ಆದಿತ್ಯವಾರ ಬೆಳಿಗ್ಗೆ ೬॥ ಘಂಟೆಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಎಮ್. ಬಾಬು ಇವರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಕಳೆದ ತಿಂಗಳ ೫ನೇ ತಾರೀಕಿನ ದಿನ ಕೆನರಾ ಹ್ಯಾಸ್ಕೂಲಿನಲ್ಲಿ ಮಹಾಜನರು ಸಭೆ ಸೇರಿ, ಸ್ವಾಮಿ ಈಶ್ವರಾನಂದಜಿಯವರ ಮರಣದಿಂದ ತಮಗಾದ ದುಃಖವನ್ನು ಸೂಚಿಸಿ ಅವರ ದುಃಖಿಕುಟುಂಬದ ಅನುತಾಪದೊಡನೆ ತಾವು ಕೂಡ ಸಹಭಾಗಿಗಳಾಗಿರುವೆವೆಂದು ವ್ಯಕ್ತಪಡಿಸಿದುದಕ್ಕಾಗಿ, ತಾವು ಅವರೆಲ್ಲರಿಗೆ ಬಹು ಕೃತಜ್ಞರಾಗಿರುವೆವೆಂದು, ಮೃತರ ಕುಟುಂಬದವರು ತಿಳಿಸುತ್ತಾರೆ.

ಮಂಗಳೂರು ಮುನಿಸಿಪಾಲಿಟಿಯವರು ಶಿಶು ಸಪ್ತಾಹ ಸಮಾರಂಭವನ್ನು ಇದೇ ತಾರೀಕು ೫ರಿಂದ ತಾರೀಕು ೮ರ ವರೆಗೆ ಜರಗಿಸುವರು. ಈ ಸಂದರ್ಭದಲ್ಲಿ ಮೈದಾನಿನಲ್ಲಿಯೂ, ಹಿಂದುಸ್ಥಾನ ಸಿನೆಮಾ ಹೋಲಿನಲ್ಲಿಯೂ, ಆರೋಗ್ಯಕ್ಕೆ ಸಂಬಂಧಿಸಿದ ಭಾಷಣಗಳೂ, ಚಿತ್ರಪ್ರದರ್ಶನವೂ ಜರಗುವದು. ಶಿಶುಗಳ ಪ್ರದರ್ಶನವಾಗಿ ಯೋಗ್ಯ ಶಿಶುಗಳಿಗೆ ಪಾರಿತೋಷಕಗಳು ಕೊಡಲಾಗುವವು.

ಮುಂಬಾಯಿಯಲ್ಲಿ ಇರುವ ಶ್ರೀಯುತ ಸೋಮಯ್ಯ ಮಂದಣ್ಣಯರು ತನ್ನ ಮೃತಮಾತಾಮಹಿಯ ಅಂತ್ಯೇಷ್ಟಿ ಸಂಸ್ಕಾರವನ್ನು ವೈದಿಕ ರೀತಿಯಿಂದ ಕಳದ ವಾರ ಜರಗಿಸಿದರು. ಇದರ ಸ್ಮರಣಾರ್ಥವಾಗಿ ಶ್ರೀ ಜ್ಞಾನೋದಯ ಸಮಾಜ ಮತ್ತು ಆರ್ಯಸಮಾಜಗಳ ಕಾರ್ಯಸಾಧನೆಗಳಿಗಾಗಿ ಪ್ರತಿ ಒಂದು ಸಂಸ್ಥೆಗೆ ಐದೈದು ರೂಪಾಯಿಗಳಂತೆ ದಾನ ಕಳುಹಿಸಿರುತ್ತಾರೆ. ಅನುಕರಣೀಯವಾದ ಈ ದಾನವನ್ನು ಕೃತಜ್ಞತೆಯಿಂದ ಸ್ವೀಕರಿಸೋಣಾಗಿದೆ. ಮೋಹನತಿಂಗಳಾಯ, ಕಾರ್ಯದರ್ಶಿ.

ಕಳದ ಸೋಮವಾರ ಮಂಗಳೂರು ಸರ್ಕಲಿನ ತಾಲೂಕು ಬೋರ್ಡು ಚುನಾವಣೆಯು ನಡೆಯಿತು. ಉಮೇದುವಾರರ ಪೈಕಿ ರಾವ್‌ಸಾಹೇಬ್ ನೆಲ್ಲಿಕ್ಕಾ ವೆಂಕಟರಾಯರಿಗೆ ೫೫೦ ವೋಟುಗಳು, ರಾ॥ ಕೆ. ಅಪ್ಪಯ ಭಂಡಾರಿಯವರಿಗೆ ೩೩೫ ವೋಟುಗಳೂ ದೊರೆತವು. ೧೩ ವೋಟುಗಳು ಬೆಲೆ ಇಲ್ಲದೆ ತೆಗೆದುಹಾಕಲ್ಪಟ್ಟವು. ಒಟ್ಟು ವೋಟುಗಳು ೮೯೮

ಬಂಟವಾಳ:— ಇಲ್ಲಿಯ ತಿರುಮಲ ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವ ಮಹೋತ್ಸವವು ಯಥಾವಿಧಿ ಪ್ರಕಾರ ನಡಿಯಿತು. ಜನಸ್ತೋಮವು ವಿಶೇಷವಾಗಿತ್ತು.

ಇಲ್ಲಿಯೂ ಸುತ್ತುಮುತ್ತಲಿನ ಹಳ್ಳಿಗಳಲ್ಲಿಯೂ ಸನ್ನಿಪಾತ ನಮೂನೆಯ ಜ್ವರವು ತಲೆದೋರಿಯದೆ. ಕೋರಾ, ನೀರು ಕೊಟಲೆ ರೋಗಗಳೂ ತಲೆದೋರಿಯವೆ.

ದಾಕು ಹಾಕುವ ಅಂಟಿನಲ್ಲಿ ಏನೊ ದೋಷವಿದ್ದುದರಿಂದ ಎರಡು ಮಕ್ಕಳು ಜ್ವರ ಹೆಚ್ಚಾಗಿಯೂ ಕೈಗಳು ಬಾತು ಹೋಗಿಯೂ ಮರಣ ಹೊಂದಿದವು. ಇತರ ಮಕ್ಕಳೂ ಬಹಳ ಕಷ್ಟಪಡುತ್ತವೆ. ಅಂಟಿನ ವಿಷಯ ಸ್ವಲ್ಪ ಜಾಗ್ರತೆ ತೆಗೆದುಕೊಳ್ಳುವುದು ಒಳ್ಳೇದು. ದಾಕು ಹಾಕಿಸಲಿಕ್ಕೆ ಯಾರೂ ಆಕ್ಷೇಪ ತೆಗಿಯುವುದಿಲ್ಲ. ದಾಕು ಹಾಕಿ ಮಕ್ಕಳು ಸತ್ತುಹೋದರೆ ಆ ನಷ್ಟ ತಂದೆತಾಯಿಗಳಿಗಲ್ಲದೆ ವೆಕ್ಸಿನೇಟರರಿಗಿಲ್ಲ.

ತಲಪಾಡಿ:— ಇಲ್ಲಿಯ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಳದಲ್ಲಿ ವರ್ಷಂಪ್ರತಿ ಜರಗತಕ್ಕ ಮಹೋತ್ಸವವು, ಇದೇ ಬರುವ ಮೀನಸಂಕ್ರಮಣ, ತಾ. ೧೩ – ೩ – '೨೮ನೇ ಮಂಗಳವಾರದ ಮೊದಲುಗೊಂಡು, ತಾ. ೧೭ – ೩ – '೨೮ನೇ ಶನಿವಾರ ವರೇಗೆ ಬಹು ವಿಜೃಂಭಣೆಯಿಂದ ಜರಗುವದು. ತತ್ಸಮ್ಬಂಧ, ಭಕ್ತಸಮಾಜದವರು ದಯಮಾಡಿ ಬಂದು, ಶ್ರೀ ದೇವಿಯ ಹರಕೆ, ಕಾಣಿಕೆಗಳನ್ನು ಸಲ್ಲಿಸಿ, ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಿಕೊಂಡು ಹೋಗುವಂತೆ, ಸದರಿ ದೇವಳ ಆಡಳಿತೆ, ಮೊಕ್ತೇಸರ್ ತಲಪಾಡಿ ದೊಡ್ಡ ಮನೆ, ಪಟೇಲ್ ಸುಬ್ಬಯ ಮಾರ್ಳರು ಅಪೇಕ್ಷಿಸುತ್ತಾರೆ.

ಉಕ್ಕಿನಡ್ಕ:— ಮ॥ ರಾ॥ ಪದರಿ ಗ್ರಾಮದ ಪಟೇಲ ಪಂಬತಡ್ಕ ವಿಷ್ಣು ಕಡಂಬಳಿತ್ತಾಯರ ಅಧ್ಯಕ್ಷತೆಯಿಂದ ಈ ದಿನ ಸಭೆಯು ಜರಗಿಸಲ್ಪಟ್ಟಿತು.

೧) ಕಾರ್ಯಕ್ರಮ:– ಸಂಘದ ಕಾರ್ಯದರ್ಶಿಯವರಿಂದ ಲೆಕ್ಕಪತ್ರಗಳನ್ನು ಓದಲಾಯಿತು. ೨) ಕೋಶಾಧಿಕಾರಿಯವರ ವಶಾ ಇರುವ ಹಣದ ಲೆಕ್ಕಗಳನ್ನು ತಕ್ಕಿ ಮಾಡಲ್ಪಟ್ಟಿತು. ೩) ಈ ಮೊದಲಿನಂತೆ ಬರುವ ಮಹಾಸಭೆಯ ವರೇಗೆ ಸಂಘದ ಈ ವರೇಗಿನ ಮೆಂಬರರೇ ನಡಿಸಿಕೊಂಡು ಬರುವದು. ೪) ಶಾಲಾ ಕಟ್ಟಡವನ್ನು ವೈದ್ಯ ಶಂಕರ ಭಟ್ಟರು ಅನೇಕ ಸಹಾಯದಿಂದ ಆದಷ್ಟು ಬೇಗನೇ ಕಟ್ಟಿಸುವದು. ೫) ದಕ್ಷಿಣ ಕನ್ನಡಾ ಜಿಲ್ಲೆಯ ದ್ರಾವಿಡ ಬ್ರಾಹ್ಮಣರ ಸಪ್ತಮ ಪರಿಷತ್ತಿನಲ್ಲಿ ಸ್ಥಳೀಯ ಕಮಿಟಿಯವರ ವಶಾ ಅಂದರೆ ವೈದ್ಯ ಶಂಕರನಾರಾಯಣ ಭಟ್ಟರ ವಶಾ ಇರುವ ರೂಪಾಯಿ ೧೧೨ನ್ನು ಶಾಲಾ ಕಟ್ಟಡಕ್ಕೆ ಉಪಯೋಗಿಸುವ ಕುರಿತು ಬರುವ ಮೀಟಿಂಗನಲ್ಲಿ ಆಲೋಚಿಸುವದೆಂತ ನಿಶ್ಚೈಸಲ್ಪಟ್ಟಿತು. ಸುಮಾರು ೨೦ ಜನ ಮಹನೀಯರು ಈ ಸಭೆಗೆ ಹಾಜರಿದ್ದರು.

ಪಾಣಾಜೆ:— ತಾ. ೨೨ – ೨ – '೨೮ನೇ ಬುಧವಾರ ಮ॥ ರಾ॥ ವೈದ್ಯ ಶಂಕರನಾರಾಯಣ ಭಟ್ಟರು ನೂತನವಾಗಿ ಕಟ್ಟಿಸಿದ ಮನೆಯ ಗೃಹಪ್ರವೇಶವಾಯಿತು. ಮ. ರಾ.ಗಳಾದ ಖಂಡಿಗೆ ನಾರಾಯಣ ಭಟ್ಟ, ಕೂಳಮರ್ವ ಕೇಶವಭಟ್ಟ, ಪೆರಡಾಲ ಪಟೇಲ ಗೋವಿಂದ ಭಟ್ಟ, ಕೇದಿಗೆ ಕೃಷ್ಣಾಚಾರ್ಯ, ಮ. ರಾ. ಕಜಪಾಡಿ ರಾಮಚಂದ್ರ ಭಟ್ಟ, ಮ. ರಾ. ಪದ್ಯೆಯ ಅನಂತ ಭಟ್ಟ. ಮ. ರಾ. ಪಿಲ್ಲಂಗಲ್ಲಿ ಶಂಕರ ಭಟ್ಟ, ಎಡಮಲೆ ಮ. ರಾ ಗೋವಿಂದ ಭಟ್ಟ ಮುಂತಾದ ಸುಮಾರು ಮುನ್ನೂರು ಜನ ಬ್ರಾಹ್ಮಣ ಸಂತರ್ಪಣೆಯಿಂದಲೂ ಮತ್ತು ಸುಮಾರು ನಾನೂರು ಜನ ಬ್ರಾಹ್ಮಣೇತರರ ಊಟೋಪಚಾರಗಳಿಂದಲೂ ವಾದ್ಯಘೋಷ ಮುಂತಾದ ವಿಜೃಂಭಣೆಯಿಂದ ಪಾಣಾಜೆ ಗ್ರಾಮದ ದೈಕೋಟಿ ಮ. ರಾ ವೈದ್ಯ ಶಂಕರನಾರಾಯಣಭಟ್ಟರ ಮನೆಯಲ್ಲಿ ಈ ಗೃಹಪ್ರವೇಶೋತ್ಸವವು ಜರಗಿತು.

ಕಾರಂಜೆ:— ಇಲ್ಲಿಯ ಜಾತ್ರೆಯೂ ಶಿವರಾತ್ರೆ ಉತ್ಸವವೂ ವರ್ಷಂಪ್ರತಿ ನಡಿಯುವಂತೆ ಈ ವರುಷವೂ ನಡಿಯಿತು. ಊಟ ಉಪಚಾರವು ಬ್ರಾಹ್ಮಣರಿಗೆ ನಡಿಯಿತು.

ಈ ದೇವಸ್ಥಾನಗಳಲ್ಲಿ ಗಿರಿಯ ಮೇಲಿರುವ ಶಿವಾಲಯದ ಗುಂಡವು ಮಾತ್ರವೆ ಒಳ್ಳೆ ಸ್ಥಿತಿಯಲ್ಲಿದೆ. ಅದರ ಪಶ್ಚಿಮದ್ವಾರದಲ್ಲಿರುವ ನೊಗಶಾಲೆಯು ಬಿದ್ದು ಹೋಗಿ ಹೆಚ್ಚು ವರುಷಗಳಾದವು. ದಕ್ಷಿಣ ದಿಕ್ಕಿನ ಸುತ್ತು ಪೌರವಾದ್ದರಿಂದ ಪ್ರದಕ್ಷಿಣೆ ತೆಗಿಯುವವರಿಗೆ ಕಷ್ಟ ಬಂದು ಅಪಾಯ ಬಾರದಂತೆ ದೇವಸ್ಥಾನದ ಅಡಿಯಿಂದಲೇ ಎರಡು ಅಡ್ಡಗಳನ್ನು ಹಾಕಿ ಅದರ ಮೇಲೆ ಶಿಲೆಕಲ್ಲುಗಳನ್ನು ಮುಚ್ಚಿದ್ದರು. ಅದೂ ಜರಿದು ಬಿದ್ದು ಹೆಚ್ಚು ವರ್ಷಗಳಾದವು. ಆದುದರಿಂದ ಇವುಗಳನ್ನು ಮೊದಲಿದ್ದಂತೆಯೇ ತಿರಿಗಿ ಸರಿಪಡಿಸುವುದು ಇದರ ಆಡಳಿತೆದಾರರ ಮುಖ್ಯ ಕರ್ತವ್ಯವಾಗಿದೆ.

ಮೇಲಿನ ದೇವಸ್ಥಾನಕ್ಕೆ ಪಾರ್ವತಿ ದೇವಸ್ಥಾನದಿಂದ ಮೇಲಕ್ಕೆ ಹತ್ತಿ ಹೋಗುವ ಮೆಟ್ಟುಗಳು ಬಹಳ ಇಕ್ಕಟ್ಟಾಗಿವೆ. ಇವುಗಳನ್ನು ಸರಿಯಾಗಿ ಉದ್ದ ಅಗಲ ಮಾಡಿಸಿದರೆ ಮೇಲಿನ ದೇವಸ್ಥಾನಕ್ಕೆ ಹೋಗುವ ಯಾತ್ರಿಕರಿಗೆ ಸುಲಭವಾಗುತ್ತಿತ್ತು.

ಕೆಳಗಡೆ ಇರುವ ಪಾರ್ವತಿ ದೇವಸ್ಥಾನದ ಪೂರ್ವಕ್ಕೆ ಇರುವ ಚಾವಡಿಯು ಬಿದ್ದುಹೋಗಿದೆ. ಸುತ್ತಲೂ ಇದ್ದ ಚಾವಡಿಯೂ ಬಿದ್ದುಹೋಗಿದೆ. ಅಡಿ ಸ್ಥಳ ಮಾತ್ರವೇ ಉಳಿದದೆ.

ಗದಾತೀರ್ಥವೆಂಬ ದೊಡ್ಡ ಕೆರೆಗೆ ಪೂರ್ವಕಾಲದಲ್ಲಿ ಕಲ್ಲು ಕಟ್ಟಿ ಸರಿಪಡಿಸಿ ಯಾತ್ರಿಕರಿಗೆ ಕೈಕಾಲು ತೊಳಿಯಲಿಕ್ಕೆ ಅನುಕೂಲಮಾಡಿದ್ದರು. ಇದೂ ಜರಿದು ಬಿದ್ದದೆ. ಕೆರೆಯ ಮಧ್ಯದಲ್ಲಿ ಒಂದು ಮಂಟಪ ಇದ್ದು ಕೆರೆಯಲ್ಲಿ ದೋಣಿಯಲ್ಲಿ ದೇವರು ಕೂತು ಉಡುಪಿ ಮಧ್ವ ಸರೋವರದಲ್ಲಿ ಆದಂತೆಯೇ ಜಲಾಟವಾಗಿ ಮಂಟಪದಲ್ಲಿ ಕೂತು ಪೂಜೆಯಾಗುವ ಪದ್ಧತಿ ಇತ್ತು. ಈಗ ಮಂಟಪವೂ ಹಾಳಾಗಿದೆ. ಜಲಾಟವೂ ನಿಂತದೆ. ಕೆರೆಯೂ ನಾದುರುಸ್ತಿ ಸ್ಥಿತಿಯಲ್ಲಿದ್ದೆ. ಕೆರೆಯ ಕೆಸರು ತೆಗಿಸದೆ ನೀರೂ ಹಾಳಾಗಿದೆ. ಆದುದರಿಂದ ಕೆರೆಯ ಕೆಸರು ತೆಗಿಸಿ ಕೆರೆಯನ್ನು ಸ್ವಚ್ಛಪಡಿಸುವುದು ದೇವಸ್ಥಾನದವರ ಕರ್ತವ್ಯವಾಗಿದೆ.

ಈ ದೇವಸ್ಥಾನದ ಪೂಜೆ ಉತ್ಸವಾದಿಗಳು ನಡಿಯಲಿಕ್ಕೆ ಕಾವಳಮೂಡುರು ಗ್ರಾಮವನ್ನೆ ಮೊದಲಿನ ಅರಸರು ಉಂಬಳಿ ಬಿಟ್ಟರು. ಈಗ ಇಂಗ್ಲಿಷ ಸರಕಾರದವರು ಇದಕ್ಕೆ ಪ್ರತಿಯಾಗಿ ವರುಷಕ್ಕೆ ೪೮೦ ರೂಪಾಯಿ ತಸಡಿಕಿನ ರೂಪದಲ್ಲಿ ಕೊಡುತ್ತಾರೆ. ಇದಕ್ಕೆ ಹೆಚ್ಚು ಭೂಮಿಯೂ ಇದೆ, ಹರಕೆ ಕಾಣಿಕೆಗಳೂ ವಿಶೇಷವಾಗಿ ಬರುತ್ತಿವೆ. ಈ ಎಲ್ಲಾ ಹಣವು ಏನಾಗುತ್ತದೋ ಆ ಕಾರಂಜೇಶ್ವರನೇ ಬಲ್ಲ.

ಆದುದರಿಂದ ಎಂಡೌಮೆಂಟ ಬೋರ್ಡಿನವರು ಆಡಳಿತೆದಾರರಿಗೆ ಮೇಲೆ ತೋರಿಸಿದ ವಿಷಯಗಳನ್ನೆಲ್ಲಾ ದುರುಸ್ತಿ ಪಡಿಸುವಂತೆ ತಿಳಿಸುವುದೆ ಒಳ್ಳೆದು.

ಪಾಣೆಮಂಗಳೂರು:— ಇಲ್ಲಿಯ ವಿಠಲ ಸ್ವಾಮಿ ಎಲಿಮೆಂಟರಿ ಶಾಲೆಯವರು ಆರೋಗ್ಯ ವಾರವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು. ಮೊದಲನೆಯ ದಿವಸ ಹುಡುಗಿಯರ ಮತ್ತು ಹುಡುಗರ ಪಂದ್ಯಾಟಗಳು ಶಾಲೆಯ ಮುಂದುಗಡೆ ಇರುವ ವಿಶಾಲವಾದ ಗುರಿಕ್ಕಂ

Motor Service.

...ಟರ್ ಸರ್ವಿಸ್.

Tel: Conveyance.

...Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳ ...ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ...ನೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ...ಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ... ಏರ್ಪಡಿಸಿರುತ್ತೆ.

...ವಿವರ.

... 1½ ಗಂಟೆ ಅವಕಾಶ ಕೊಟ್ಟು 7¼ ಗಂಟೆಗೆ ಸಿದ್ಧ ... 11-45ಕ್ಕೂ. ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, ... ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ..., ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ

... ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ ...ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ...ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ...ತು, 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ...ಗೂ, ಗದಗ್, ಪಂಢರಪೂರ್, ಗೋವಾ, ಲೋಂಡ,

...ಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ...ಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ

...ನುಕೂಲತೆ.

...ಅನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ...ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು

...ಕೊಳ್ಳಬಹುದು.

... ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

MANGALORE.

ಮಂಗಳೂರು.

...ಸಿಯಾಗಿದೆ.

...ಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

...ಮಾರ್ಗವಾಗಿಯೂ

...ಂದೇ ಶಿಲೆಕಲ್ಲಿನಿಂದ

...ಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

...ತಲಪಬಹುದು.

...ಗೆ ಬೇಗನೆ ತಲಪುವಿರಿ.

...ಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

...ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

... ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ... ಸುಲಭವಾಗುವದು.

... ಕಾರ್ಕಳ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

... ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ಗದ್ದೆಯಲ್ಲಿ ನಡೆವವು. ಇವನ್ನು ನೋಡಲಿಕ್ಕೆ ಜನಸ್ತೋಮವು ವಿಶೇಷ ರೀತಿಯಲ್ಲಿ ಕೂಡಿತ್ತು. ಮರುದಿನ ಬೆಳಗ್ಗೆ ೮ ಗಂಟೆಗೆ ಸರಿಯಾಗಿ ವಾದ್ಯ ಘೋಷದೊಡನೆ ಧ್ವಜ ಪತಾಕೆ, ಆರೋಗ್ಯ ಸೂತ್ರಗಳ ಪಠಗಳನ್ನು ಹಿಡಿದು ಮೆರವಣಿಗೆಯಾಯಿತು. ನಂತರ ಶಾಲೆಗೆ ಬಂದ ಮಕ್ಕಳಿಗೆ ತಿಂಡಿ ಹಂಚಲಾಯಿತು.

ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಊರ ಮಹನೀಯರೂ, ಮಹಿಳೆಯರೂ, ಶಾಲಾ ಮಕ್ಕಳೂ, ಇತರ ಮಕ್ಕಳೂ, ಬಂಟವಾಳ, ಕಲ್ಲಡ್ಕ ಸೆಂಟರುಗಳಿಗೆ ಸೇರಿದ ಅನೇಕ ಮಂದಿ ಉಪಾಧ್ಯಾಯರೂ ಶಾಲೆಯಲ್ಲಿ ಸಭೆಕೂಡಿದರು. ಸಭೆಯವರಿಗೆ ವಿನೋದ ಪಡಿಸುವುದಕ್ಕಾಗಿ ಪಾಣೆಮಂಗಳೂರು ರೇಂಜಿನ ಅಬಕಾರಿ ಇನ್ಸಪೆಕ್ಟರರು ಹೊಸ ನಮೂನೆಯ ಹೊರ್ನ ಇಲ್ಲದ ಚಲೋ ಫೋನೊಗ್ರಾಫನ್ನು ತಂದಿದ್ದರು.

ಅಧ್ಯಕ್ಷ ಸ್ಥಾನವನ್ನು ಬಂಟವಾಳ ಡೆಪ್ಯುಟಿ ತಹಶೀಲರಾಗಿದ್ದ ರಾ। ಬೀಕಲ ನರಸಿಂಗರಾಯರು ವಹಿಸಿದ್ದರು. ಮಕ್ಕಳು ದೇವರ ಸ್ತುತಿಯನ್ನು ಹಾಡಿದೊಡನೆ ಅದೇ ಶಾಲೆಯ ಮಕ್ಕಳು ಪ್ರಥಮ ಚಿಕಿತ್ಸೆಯ ಕ್ರಮಗಳನ್ನು ಮಾಡಿ ಜನರನ್ನು ಆನಂದಗೊಳಿಸಿದರು.

ಅನಂತರ ರಾಜಶ್ರೀ ಪಾಣೆಮಂಗಳೂರು ವಿಟ್ಲ ಪೈಗಳೂ, ಬಗಳ ಗಣಪತಿರಾಯರೂ ಪಟ್ಟಣದ ಆರೋಗ್ಯದ ವಿಷಯ ಭಾಷಣಗಳನ್ನು ಕೊಟ್ಟರು.

ಇದಾದ ಮೇಲೆ ಪಂದ್ಯಾಟದಲ್ಲಿ ಗೆದ್ದವರಿಗೆ ಸುಮಾರು ೧೫ ರೂಪಾಯಿ ಬೆಲೆ ಬಾಳುವ ಸುಮಾರು ೩೦ ಇನಾಮುಗಳು ಹಂಚಲಾದವು.

ನಂತರ ಅಧ್ಯಕ್ಷರು ಕಾಲೋಚಿತ ಭಾಷಣ ಮಾಡಿದರು. ತಾಂಬೂಲಾದಿ ಸಭಾ ಸತ್ಕಾರಗಳಾದ ಮೇಲೆ ಸಭೆಯು ಅಗಲಿತು.

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆ ಮತ್ತು ಮಾಪಿಳ್ಳಾ ಶಾಲೆಗಳಿಗೆ ಆರೋಗ್ಯವಾರವನ್ನು ಆಚರಿಸುವುದಕ್ಕೆ ಮಂಗಳೂರು ತಾಲೂಕು ಬೋರ್ಡಿನವರು ೨॥ ರೂಪಾಯಿ ಪ್ರಕಾರ ೫ ರೂ. ಸೆಂಕ್ಷನ್ ಮಾಡಿದ್ದರಂತೆ. ಈ ಹಣವನ್ನು ತಾನು ಕೊಡುತ್ತೇನೆಂದು ಬೆಳ್ತಂಗಡಿ ರೇಂಜ್ ಹೆಲ್ತ ಇನ್ಸಪೆಕ್ಟರರ ಪತ್ರವು ಅಲ್ಲಿಯ ಬೋರ್ಡು ಮಾಪಿಳ್ಳಾ ಶಾಲೆಗೆ ಬಂದಿತ್ತು. ಆದುದರಿಂದ ಕೈಯಿಂದ ಖರ್ಚು ಮಾಡಿರುವ ಈ ಉಪಾಧ್ಯಾಯಿನಿಯರಿಗೆ ಈ ಹಣವನ್ನು ತಾಲೂಕು ಬೋರ್ಡಿನವರು ಕೊಡಿಸುವರು ಉತ್ತಮ. ಇಲ್ಲವಾದರೆ ಹೆಸರಿಗೆ ಪೂರ್ತಿ ಹಣ ಸೆಂಕ್ಷನ ಮಾಡಿದಂತಾಗಿ ತೋರುವುದು.

ಈ ಸರ್ಕಲಿನ ತಾಲೂಕು ಬೋರ್ಡು ಚುನಾವಣೆಯು ಮಾರ್ಚಿ ೫ನೇ ತಾರೀಕಿನಲ್ಲಿ ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಬೆಳಗ್ಗೆ ೭ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೇಗೆ ನಡಿಯುವುದು. ಈ ಸರ್ಕಲಿಗೆ ಇನ್ನೊಂದು ಪೋಲಿಂಗ್ ಸ್ಟೇಶನ್ ಕುರ್ನಾಡು ರಾಜಶ್ರೀಗಳಾದ ನರಿಕೊಂಬು ರಾಮರಾಯರೂ, ವಕೀಲ ಸದಾಶಿವ ಅಡಿಗರೂ ಹೊನರಿ ಕೊ-ಓಪರೇಟಿವ್ ಅಸಿಸ್ಟಾಂಟ ರಜಿಸ್ಟ್ರಾರರಾದ ಬಿ. ಎಲ್. ಅಮದರೂ ಉಮೇದುವಾರರಾಗಿರುವರು. ವೋಟುಗಳನ್ನು ಸಂಗ್ರಹಿಸುವುದಕ್ಕಾಗಿ ಮೆಂಬರರೂ ಅವರ ಏಜಂಟರುಗಳೂ ರಾತ್ರೆ ಹಗಲು ಊಟ ಉಪಚಾರ ಬಿಟ್ಟು ಕೆಲಸ ನಡಿಸುತ್ತಿರುವರು. ಆದರೆ ನಂದಾವರ ತೋಡಿಗೆ ಅತೀ ಅಗತ್ಯವಾದ ಸೇತುವೆಯನ್ನು ಮಾಡಿಸುತ್ತೇನೆಂದು ಮಾತು ಕೊಟ್ಟ ವಿನಹ ಯಾರಿಗೂ ಓಟು ಕೊಡುವದಿಲ್ಲವೆಂದು ಓಟರರು ಹಟಹಿಡಿಯುವುದು ಒಳ್ಳೆದು. ಕಳೆದ ಮೂರು ವರುಷಗಳಲ್ಲಿ ಇದ್ದ ಮೆಂಬರರು ಈ ಸರ್ಕಲಿನ ಅಭಿವೃದ್ಧಿಗಾಗಿ ಮಾಡಿದ ಸಂಗತಿಗಳು ಯಾವುದೊಂದೂ ಕಂಡುಬರುವುದಿಲ್ಲ.

ಬ್ರಹ್ಮರಕೂಟ್ಲು:— ಇಲ್ಲಿಯ ಎರಡು ಮಾಪಿಳ್ಳೆಯರ ಪಂಗಡಗಳೊಳಗೆ ಕಠಿಣ ಜಗಳವಾಗಿ ಐದು ಮಂದಿಗೆ ಜಖಂ ಆಗಿಯದೆ. ಇವರಲ್ಲಿ ಒಂದು ಕಡೆಯ ಮೂರು ಮಂದಿಗೆ ಕಠಿಣ ಜಖಂ ಆಗಿ ಬಂಟವಾಳ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿರುವರು.

ಕೊಕ್ಕಡ:—

ಮಂಗಳೂರಿನಲ್ಲಿ ೭-೧-'೨೮ರಲ್ಲಿ ನಡೆದ ವರ್ಗದಾರರ ಸಂಘೆಯಲ್ಲಿ ನಿಶ್ಚಯಿಸಿದ ಪ್ರಕಾರ ಕೊಕ್ಕಡ ಗ್ರಾಮದಲ್ಲಿ ೧೮-೨-'೨೮ ರಲ್ಲಿ ಶ್ಯಾಮ ಘಂಟೆ ೪॥ಗೆ ಶಿಶಿಲ, ನಿಬಾಜೆ, ಹತ್ಯಡ್ಕ, ಕಕ್ಕಡ, ನಿಡ್ಲೆ, ಕಳಂಜೆ, ಕೊಕ್ರಾಡಿ, ಪುದುಬೆಟ್ಟು ನೆಲ್ಯಾಡಿ ಗ್ರಾಮದಲ್ಲಿರುವ ವರ್ಗದಾರರ ಮಹಾಸಭೆಯ ಪ್ರೊಸಿಡಿಂಗ್ಸ್. ಸರ್ವಸಮ್ಮತದಿಂದ ಶ್ರೀಯುತ ಕೆ. ಆರ್, ಕಾರಂತರು ಎಮ್. ಎಲ್. ಸಿ.ಯವರು ಅಧ್ಯಕ್ಷರಾಗಿ ಚುನಾಯಿಸಲಾಯಿತು. ವರ್ಗದಾರರ ಸಂಘವು ಈಗ ಮಂಗಳೂರಲ್ಲಿ ಸ್ಥಾಪಿಸಿದ ವಿಷಯವಾಗಿ ಕಾರ್ಯದರ್ಶಿಗಳಾದ ಮ. ರಾ. ವಕೀಲ್ ಮೂಡುಬಿದ್ರೆ ಶಂಕರನಾರಾಯಣರಾವ್, ಬಿ. ಎ. ಬಿ. ಎಲ್.ರವರು ಸಭೆಯವರಿಗೆ ವಿವರಿಸಿ ಹೇಳಿದರು. ಮುಂಚೆ ನಮ್ಮ ಜಿಲ್ಲೆಗೆ ಅತ್ಯಧಿಕ ತೆರಿಗೆಯು ಹ್ಯಾಗೆ ಹೊರಿಸಲ್ಪಡಲಾಯಿತೆಂತಲೂ ಮತ್ತು ನಮ್ಮ ಜಿಲ್ಲೆಯ ಭೂಮ್ಯಾಲಿಕರಿಗೆ ಅನಾದಿಯಿಂದ ಇರುವ ಸಂಪೂರ್ಣ ಹಕ್ಕುಗಳಿಗೆ ಈಗ ಬಂದಿರುವ ಕಷ್ಟವನ್ನು ವಿವರಿಸಿದರು. ೨ ಕೊಡಿದ ಗ್ರಾಮಸ್ಥರ ಪರವಾಗಿ ಶ್ರೀ ಬೆಳ್ಳಿ ಶಿವರಾಯರು ರೈತರ ಸಂಕಷ್ಟಗಳ ವಿಷಯವಾಗಿ ಒಂದು ಹೇಳಿಕೆಯನ್ನು ಓದಿದರು. ೩ ನಂತರ ಹತ್ಯಡ್ಕ ಗ್ರಾಮದ ಹೊಸ ತೋಟವಾಳ್ಯ ನಾಡೋಳಿ ಕಾಶಿನಾಥ ಭಟ್ಟರು ಅವರ ಗ್ರಾಮಗಳಲ್ಲಿ ಅಡಿಕೆ ತೋಟಗಳ ಕೃಷಿಗೆ ಬಂದ ಸಂಕಷ್ಟಗಳನ್ನು ಮತ್ತು ಫೋರೆಸ್ಟು ಇಲಾಖೆಯವರಿಂದ ಬಂದ ತೊಂದ್ರೆಗಳನ್ನು ವಿವರಿಸಿ ಹೇಳಿದರು. ನಂತರ ಅಧ್ಯಕ್ಷರಾದ ಶ್ರೀಯುತರು ಸದರಿ ಸಂಕಷ್ಟಗಳ ಪೈಕಿ ಕೆಲವು ಸಂಕಷ್ಟಗಳ ವಿಷಯವಾಗಿ ಮದ್ರಾಸ್ ಕೌನ್ಸಿಲಿನಲ್ಲಿ ನಡದ ವಿಷಯಗಳನ್ನು ವಿವರಿಸಿದರು. ಕೂಡಲೇ ಇಲ್ಲಿ ಕೂಡಿದ ಭೂಮ್ಯಾಲಿಕರು ಒಂದು ಸಂಘದ ಶಾಖೆಯನ್ನು ಏರ್ಪಡಿಸಿ ಅದರ ಮುಖಾಂತರ ತಮ್ಮ ಎಲ್ಲಾ ಸಂಕಷ್ಟಗಳನ್ನು ಯುಕ್ತ ಅಧಿಕಾರಿಗಳ ಮುಂದೆ ಇಡುವರೆ ಪ್ರಯತ್ನಿಸಬೇಕಾಗಿ ಸಹಾ ಹೇಳಿದರು. ಸದರಿ ಗ್ರಾಮಗಳು ಅವುಗಳ ಆಸ್ಪಾಸ್ ಇರುವ ಗ್ರಾಮಗಳ ಬಗ್ಗೆ ಒಂದು ಭೂಮ್ಯಾಲಿಕರ ಸಭೆಯ ಶಾಖೆಯು ಕೂಡಲೆ ಏರ್ಪಾಡಾಗಿ ಅದಕ್ಕೆ ಈ ಕೆಳಗಿನ ಒಂದು ತಾತ್ಕಾಲಿಕ ಕಾರ್ಯನಿರ್ವಾಹಕ ಕಮಿಟಿಯನ್ನು ಏರ್ಪಡಿಸಲಾಯಿತು. ಮತ್ತು ಸಭೆಯ ಮೆಂಬರಿಕೆಗೆ ವರ್ಷ ೧ಕ್ಕೆ ರೂ. ೦-೪-೦ ಆಣೆಯಂತೆ ವಂತಿಗೆಯನ್ನು ನಿರ್ಣಯಿಸಲಾಯಿತು.

ಕಾರ್ಯನಿರ್ವಾಹಕ ಕಮಿಟಿಯಲ್ಲಿ ಮೆಂಬರರು— ಸಿಸಿಲ, ಅಹಲ್ಯಾ ಸುಬ್ರಾಯ ಭಟ್ಟ, ನಿಬಾಜೆ ಚಿಪ್ಪೂಣ್ಯಾರ ಗಣಪತಿ ಭಟ್ಟ, ಹತ್ಯಡ್ಕ ಜೋಸಿ ದಾಮಿಸ ಭಟ್ಟ, ಜೋಸಿ ಕಾಶಿನಾಥ ಭಟ್ಟ, ಕೊಕ್ಕಡ ನಾರಾಯಣ ಉಪ್ಪಾರ್, ನಿಡ್ಲೆ ಸಣ್ಣಯ್ಯ ಪದ್ಮನಾಭಯ್ಯ, ಪಾಂಡೀಲು ಪದ್ಮನಾಭಯ್ಯ, ಹೊಸಹಿತ್ಲು ಶ್ರೀನಿವಾಸಯ್ಯ, ಕಳಂಜೆ ಬಿ. ಶಿವರಾವ್, ಬಿ ಪರಮ ಶಾಂತಿರಾಜ ಶೆಟ್ಟಿ, ಕೊಕ್ರಾಡಿ ರಾಮಾಚಾರ್ಯ, ಪುದುಬೆಟ್ಟು ರಾಮಕೃಷ್ಣಯ್ಯ, ನೆಲ್ಯಾಡಿ ಉಚ್ಚಬ್ಬಾರಿ. ಈ ಪೈಕಿ ಬಿ. ಶಿವರಾಯರನ್ನು ಕಾರ್ಯದರ್ಶಿಯವರಾಗಿಯೂ ೧೦೦ ಜನ ಮೆಂಬರರಾದ ಕೂಡಲೇ ಪುನಹಾ ಸಂಘದ ಅಧಿಕಾರಿಗಳನ್ನು ಚುನಾಯಿಸಬೇಕಾಗಿ ನಿರ್ಣಯಿಸಲಾಯಿತು. ಮಂಗಳೂರಿನಿಂದ ಬಂದ ಶ್ರೀಯುತ ಕೆ. ಆರ್. ಕಾರಂತರು ಎಮ್. ಎಲ್. ಸಿ.ಯವರು ಮತ್ತು ಭೂಮ್ಯಾಲಿಕರ ಸಂಘದ ಕಾರ್ಯದರ್ಶಿಯವರಾದ ಮ. ರಾ. ವಕೀಲ್ ಎನ್. ಶಂಕರನಾರಾಯಣರಾವ್ ಬಿ. ಎ. ಬಿ. ಎಲ್.ರವರುಗಳು ತಮ್ಮ ಪ್ರಾಂತ್ಯಕ್ಕೆ ಬಂದು ವ್ಯಾಸಂಗಮಾಡಿ ಪಟ್ಟ ಶ್ರಮಕ್ಕೆ ಸಭೆಯ ಕಡೆಯಿಂದ ಧನ್ಯವಾದಗಳನ್ನು ಅರ್ಪಿಸಿದರು.

ಕಾಪು:— ಇಲ್ಲಿಯ ಹಳೇ ಮಾರಿಗುಡಿಯಲ್ಲಿ ಕಾಲಂಪ್ರತಿ ನಡಿಯುವ ಸುಗ್ಗಿ ಸೇವೆಯು ಇದೇ ತಿಂಗಳ ತಾ. ೨೦-೨೧ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯುವುದು. ಸುಗ್ಗಿ ಸೇವೆಯ ದಿವಸ (ತಾ. ೨೦) ಮಂಗಳವಾರ ಇಲ್ಲಿಯ ಸದರಿ ಮಾರಿಗುಡಿಯ ಭಜಕರ ವ ಪೋಟರರ ಅಪೇಕ್ಷೆ ಮೇರೆಗೆ ಸುಮಾರು ೩೦೦೦ ರೂಪಾಯಿ ಬೆಲೆ ಬಾಳುವ ಬೆಳ್ಳಿಯ ಮಂಟಪವನ್ನು ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ಸುಮಾರು ಅಪರಾಹ್ನ ಗಂಟೆ ೭ಕ್ಕೆ ಸರಿಯಾಗಿ ಬಹಳ ಸಂಭ್ರಮದಿಂದ ಹೊರಟು ಗಂಟೆ ೯ಕ್ಕೆ ಶ್ರೀ ಮಾರಿಗುಡಿಯಲ್ಲಿ ಪ್ರತಿಷ್ಠಿಸುವರು. ಶ್ರೀ ಮಾರಿಗುಡಿಯಲ್ಲಿ ಪ್ರತಿಷ್ಠಿಸುವ ಸಮಾರಂಭಕ್ಕೆ ಭಜಕರು ಬಂದು ಈ ಕೆಲಸವನ್ನು ನಿರ್ವಹಿಸಿ ಶ್ರೀ ದೇವಿಯ ಗಂಧಪ್ರಸಾದವನ್ನು ಪಡದು ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಸದರಿ ಮಾರಿಗುಡಿಯ ಆಡಳಿತದಾರರು ಅಪೇಕ್ಷಿಸುತ್ತಾರೆ.

ವಿವಿಧ ವಿಷಯಗಳು.

'ಮದರ್ ಇಂಡಿಯಾ'ವನ್ನು ಸುಟ್ಟುಹಾಕಿದರು!

ಮಿಸ್ ಮೆಯೊಳು ಹಿಂದುಗಳ ಕುರಿತು ನ್ಯೂಯೋರ್ಕಿನ ಟೌನ್ ಹೋಲಿನಲ್ಲಿ ಭಾಷಣವನ್ನು ಮಾಡುತ್ತಿರುವಾಗ ಹಿಂದುಗಳು ಹೊರಗೆ, ಮದರ್ ಇಂಡಿಯಾ ಪುಸ್ತಕದ ಪ್ರತಿಗಳನ್ನು ಒಟ್ಟುಗೂಡಿಸಿ ಬೆಂಕಿಯುರಿಸಿ ಸುಟ್ಟುಹಾಕಿದರು. ಒಬ್ಬ ಹಿಂದೂ ಧುರೀಣನು ಒಂದು ರಟ್ಟೆಯ ಮೇಲೆ 'ಮಿಸ್ ಮೆಯೋಳ ಅಭಿಪ್ರಾಯವು ಬಯಲಾಗುವುದು' ಎಂದು ಬರೆದು ಎಲ್ಲರಿಗೂ ತೋರಿಸುತ್ತಿದ್ದನು. ಅಷ್ಟರಲ್ಲಿ ಅಮೇರಿಕನ್ ಹೆಂಗಸೊಬ್ಬಳು ಬಂದು ಹಾಗೆ ಮಾಡಲಾಗದೆಂದು ಹೇಳಿದಳು. ಆದರೆ ಹಿಂದುವು ಕೇಳಲಿಲ್ಲ. ಹಿಂದುಗಳ ಗಲಭೆಯು ಬೆಳದದ್ದರಿಂದ ಪೋಲೀಸರು ಒಬ್ಬನನ್ನು ಹಿಡಿದು ಕೈದುಮಾಡಿದರೂ ಕೊನೆಗೆ ಆತನನ್ನು ಜಾಮೀನಿನ ಮೇಲೆ ಬಿಟ್ಟುಬಿಟ್ಟರು. ಒಳಗೆ ಮಿಸ್ ಮೆಯೋಳ ಭಾಷಣವು ನಡೆಯುತ್ತಾ ಇದ್ದಿತು. ಹಿಂದುಸ್ಥಾನದ ಜನರ ಪರಿಸ್ಥಿತಿಯನ್ನು ಕಂಡು ಮನಕರಗಿ ತಾನು ಪುಸ್ತಕವನ್ನು ಬರೆದುದೆಂದೂ ಅದರಿಂದಲಾದರೂ ಅವರು ಅಭಿವೃದ್ಧಿ ಹೊಂದಬೇಕೆಂಬುದೇ ತನ್ನ ಅಭಿಲಾಷೆಯೆಂದೂ ಅವಳು ವ್ಯಕ್ತಗೊಳಿಸಿದಳು. ಸಭೆಯಲ್ಲಿ ನೆರೆದಿದ್ದವರಲ್ಲಿ ಅನೇಕರು ಅವಳ ಅಭಿಮತವನ್ನೇ ಆಧರಿಸಿ ನುಡಿದರು. ಅಮೇರಿಕನರು ಮಹಾತ್ಮಾ ಗಾಂಧಿಯವರನ್ನೂ, ರವೀಂದ್ರನಾಥ ಠಾಗೋರರನ್ನೂ ಮಹತ್ವಶಾಲಿಯವರೆಂದು ತಿಳಿದಿದ್ದರು. ಅವನ್ನು ಕೂಡ, ಈ ಮೆಯೊಳು ಕಿತ್ತೊಗೆಯಲು ಪ್ರಯತ್ನಿಸಿದಳು. ಮಹಾತ್ಮಾ ಗಾಂಧಿಯವರು ಅವಳು ಬರೆದ ಪುಸ್ತಕವನ್ನು ಖಂಡಿಸಿದುದೇ ಅವಳ ಈ ಹೇಳುವಿಕೆಗೆ ಕಾರಣವಾಗಿದೆ. ತನ್ನ ಪುಸ್ತಕವನ್ನು ಬರೆಯಲು ಬಹಳ ಸಹಾಯ ಮಾಡಿದ ಮಿಸ್. ಕೊರ್ನಲಿಯಾ ಸೊರಾಬ್‌ಜಿ ಎಂಬ ಹೆಂಗಸನ್ನು ಮಾತ್ರ ಮೆಯೋಳು ಹೊಗಳಿದಳು. ಹೀಗೆಲ್ಲ ಅವಳು ಮಾತನಾಡುವಾಗ ಸಭೆಯಲ್ಲಿದ್ದ ಲಕ್ನೋವಿನ ಪಂಡಿತನೊಬ್ಬನು ಎದ್ದುನಿಂತು ಅವಳನ್ನುವದು ಪೂರಾ ಸುಳ್ಳೆಂದೂ, ಅವಳು ತನ್ನೊಡನೆ ಚರ್ಚೆಗೆ ನಿಲ್ಲಬೇಕೆಂದೂ ಹೇಳಿದನು. ಆದರೆ ಮೇಯೊಳು ಮಾತ್ರ ಅದಕ್ಕೊಪ್ಪಲಿಲ್ಲ.

§ § § §

ಮದರಾಸಿಗೆ ಸೈಮನ್ ಕಮಿಶನಿನ ಆಗಮನ.

ಸೈಮನ್ ಕಮಿಶನು ಮದರಾಸಿಗೆ ಬಂದಾಗ ಹರತಾಳವನ್ನಾಚರಿಸ ಕೂಡದೆಂದು ಮೊದಲೇ ಹುಕುಮಾಗಿದ್ದರೂ ತಾರೀಖು ೨೨ನೇ ದಿನ ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಈ ತರದ ಹರತಾಳವನ್ನು ಕಂಡು ಪ್ರತಿಯೊಬ್ಬರಿಗೂ ಆಶ್ಚರ್ಯವಾಗದಿರಲಿಲ್ಲ. ಆದರೆ ವಾಹನಗಳು ಓಡುತ್ತ ಇದ್ದವು. ಕಮಿಶನು ಗುಂಟೂರಿನಿಂದ ಹೊರಟು ಸ್ಪೆಶಿಯಲ್ ಟ್ರೈನಿನಲ್ಲಿ ಕುಳಿತು ಬೆಳಗ್ಗೆ ೮॥ ಘಂಟೆಗೆ ಮದರಾಸಿಗೆ ತಲಪಿತು. ಮೊದಲು ಅವರನ್ನು ಆದಿದ್ರಾವಿಡರ ಪ್ರತಿನಿಧಿಗಳು ಎದುರುಗೊಂಡರು. ಇತರ ಎಲ್ಲಾ ಸರಕಾರಿ ಉದ್ಯೋಗಸ್ಥರು ಅವರನ್ನು ಸತ್ಕರಿಸಿದರು. ಪಟ್ಟಣದ ಪ್ರತಿಯೊಂದು ಕಡೆಯಲ್ಲಿಯೂ ಕೋವಿಗಳನ್ನು ಹಿಡಿದು ಪೋಲೀಸರು ನಿಂತಿದ್ದರು. ರಾತ್ರಿ ಅವರು ಗವರ್ನರ ಧೊರೆಗಳ ಅತಿಥಿಗಳಾಗಿ ಉಳಕೊಂಡರು. ಮದರಾಸಿನಲ್ಲಿ ಕಮಿಶನಿನ ಕಾರ್ಯಕ್ರಮಗಳು ಗುಟ್ಟಿನಲ್ಲಿಡಲ್ಪಟ್ಟಿರುವುದರಿಂದ ಅವು ಯಾರಿಗೂ ತಿಳಿದಿಲ್ಲ.

§ § § §

ಗುಂಟೂರಿಗೆ ಸ್ಯಾಮನ್ ಕಮಿಶನಿನ ಆಗಮನ.

ಕಮಿಶನಿನ ಬಹಿಷ್ಕಾರವು ಗುಂಟೂರಿನಲ್ಲಿ ನಡೆದಂತೆ ಇನ್ನೆಲ್ಲಿಯೂ ನಡೆಯಲಿಲ್ಲ. ಹಳ್ಳಿಯ ಜನರು ಕಮಿಶನನ್ನು ನೋಡಲಿಕ್ಕೆ ಕೂಡ ಬರಲಿಲ್ಲ. ಕಮಿಶನು ಮಾರ್ಗದಲ್ಲಿ ಹೋಗುತ್ತಿರುವಾಗ ವಿದ್ಯಾರ್ಥಿಗಳು ದೊಡ್ಡವರು ಎಲ್ಲರೂ ಕೂಡಿ 'ಮಹಾತ್ಮಾ ಗಾಂಧಿಕೀ ಜೈ। ಸ್ಯಾಮನ ಹಿಂದಕ್ಕೆ ಹೋಗು' ಎಂದು ಗಟ್ಟಿಯಾಗಿ ಕೂಗಿಡುತ್ತಿದ್ದರು. ಆಸ್ಪತ್ರೆಯ ಸಮೀಪ ಕೆಲವು ಆಫೀಸರರು ಅವರಿಗೆ ಪುಷ್ಪಮಾಲೆಯನ್ನು ಹಾಕಿ ಸತ್ಕರಿಸಿದರು. ಗುಂಟೂರಿನ ಎತ್ತರವಾದ ದೇವಾಲಯಗಳನ್ನು ಕಂಡು ಕಮಿಶನಿನವರಿಗೆ ಆಶ್ಚರ್ಯವಾಯಿತು. ಅವುಗಳ ಭಾವಚಿತ್ರವನ್ನವರು ತೆಗೆದರು. ಬಹಿಷ್ಕಾರ ಮಂಡಳಿಯವರು ಕಪ್ಪು ಧ್ವಜಗಳನ್ನು ಏರಿಸಿದ್ದರು; ಎಲ್ಲೆಲ್ಲಿಯೂ ಹರತಾಳವನ್ನು ಆಚರಿಸಿದ್ದರು. ತದನಂತರ ಕಮಿಶನು ಕೃಷ್ಣಾ ನದಿಯ ಅಣೆಕಟ್ಟನ್ನು ಸಂದರ್ಶಿಸಿತು.

§ § § §

ಪತಿತ ಜನರ ಪರಿಷತ್ತು.

ಪತಿತ ಜನರ ಪರಿಷತ್ತಿನ ಕೊನೆಯ ಸಮ್ಮೇಳನವು ದಿಲ್ಲಿಯಲ್ಲಿ ಕಳೆದ ತಾ. ೨೭ನೇ ದಿನ ಜರಗಿ ೧೦ ಠರಾವುಗಳನ್ನು ಮಂಜೂರು ಮಾಡಿತು. ಪ್ರತಿಯೊಂದು ಕಡೆಯ ಎಕ್ಸಿಕ್ಯೂಟಿವ್ ಕೌನ್ಸಿಲಿಗೆ ತಮ್ಮ ಸಮಾಜದಿಂದ ಪ್ರತಿನಿಧಿಗಳನ್ನು ಆರಿಸಬೇಕು; ಪ್ರತಿಯೊಂದು ಇಲಾಖೆಯಲ್ಲಿಯೂ ತಮ್ಮವರು ಇರಬೇಕು; ಪ್ರತಿಯೊಂದು ಪ್ರಾಂತ್ಯಕ್ಕೆ ಮುಖ್ಯ ರಕ್ಷಕರನ್ನಾಗಿ ತಮ್ಮ ಜಾತಿಯ ಜನರನ್ನು ನೇಮಿಸಬೇಕು; ಕೌನ್ಸಿಲ್ ಒಫ್ ಸ್ಟೇಟಿಗೆ, ವ್ಯಾಸರಾಯರು ತಮ್ಮ ಒಬ್ಬ ಪ್ರತಿನಿಧಿಯನ್ನು ಆರಿಸಬೇಕು, ಸರಕಾರದವರು ಪರ್‌ಖಾನನು ಬರೆದ ಮನುಸ್ಮೃತಿಯನ್ನೂ ಚಾಮರ ನಾಮವನ್ನೂ ಬಹಿಷ್ಕರಿಸಬೇಕು, ಗವಾಯಿ, ದೇವಿದಾಸ ಮೊದಲಾದವರ ಒಂದು ಕಮಿಟಿಯನ್ನು ಸ್ಥಾಪಿಸಿ ತಮ್ಮ ಸಮಾಜದ ನ್ಯೂನತೆಗಳನ್ನು ಅವರು ವಿಚಾರಿಸಿ ಸರಕಾರಕ್ಕೆ ತಿಳಿಸಿ ಸರಿಪಡಿಸಬೇಕು, ಲೇಬರ್ ಡಿಪಾರ್ಟಮೆಂಟಿಗೆ ತಮ್ಮ ಪ್ರತಿನಿಧಿಗಳನ್ನೇ ಆರಿಸಬೇಕು; ಮಂಡವಿಯ ಮಹಾರಾಜರು ಪಂಚಮರ ಮೇಲೆ ಹೊರಿಸಿದ 'ಬುಂದಿಬೂಚ್'ಯನ್ನು ತೆಗೆದುಹಾಕಬೇಕು; ಕೊನೆಯದಾಗಿ ಪಂಜಾಬು, ಮಧ್ಯಪ್ರಾಂತದ ಧನಿಗಳು ತಮ್ಮವರನ್ನು ಒಕ್ಕಲುಗಳನ್ನಾಗಿ ಮಾಡದಂತೆ ಸರಕಾರದವರು ನಿರ್ಣಯಿಸಬೇಕು ಎಂದು ಮೊದಲಾದ ಹತ್ತು ಠರಾವುಗಳು ಮಂಜೂರಾದವು. ಇವೆಲ್ಲವನ್ನು ಸರಕಾರದವರು ಮಾಡಬೇಕಂತೆ.

§ § § §

ಅಫಘಾನಿ ರಾಜರ ಭೂ-ಸಂಚಾರ.

ಅಫಘಾನಿಸ್ಥಾನದ ರಾಜರು ಜರ್ಮನಿಗೆ ತಲಪಿ ಅಲ್ಲಿ ನಿಂತುದಕ್ಕಾಗಿ ಜರ್ಮನಿ ಸರಕಾರದವರು ಅವರಿಗೆ ಒಂದು ಹತ್ತು ಜನರು ಕುಳಿತು ಕೊಳ್ಳಬಹುದಾದ ವಿಮಾನವನ್ನು ರಾಜಕಾಣಿಕೆಯಾಗಿ ಕೊಟ್ಟಿರುವರು. ಅಫಘಾನಿಸ್ಥಾನದಲ್ಲಿ ಅಂತಹ ವಿಮಾನಗಳು ಮೊದಲಿನಿಂದಲೇ ಇವೆಯಂತೆ. ವಿಲಾಯತಿಯಲ್ಲಿ ಇವರನ್ನು ಎದುರುಗೊಳ್ಳಲು ತಯಾರಿಯು ಭರದಿಂದ ಸಾಗುತ್ತಿದೆ. ಕೆಂಜ್ ಹೊಸ್ಟೆಲಿನ ಎರಡು ಅಂತಸ್ತುಗಳನ್ನು ಈ ರಾಜದಂಪತಿಗಳಿಗಾಗಿಯೇ ಎಂದು ಪ್ರತ್ಯೇಕಿಸಿ, ಚಿತ್ರಗಳಿಂದಲೂ ದೀಪಗಳಿಂದಲೂ ಅಲಂಕರಿಸಿರುವರು. ಈ ಮೊದಲು ಲಂಡನನ್ನು ಸಂದರ್ಶಿಸಿದ ಇತರ ಮಹಾರಾಜರೆಲ್ಲರಿಗೂ ಇದೇ ಹೊಸ್ಟೇಲಿನಲ್ಲಿ ಸತ್ಕಾರಗಳಾಗಿದ್ದವು. ಬಕ್ಕಿಂಗ್‌ಹಾಮ್ ಅರಮನೆಯಲ್ಲಿ ಅಫಘಾನ ರಾಜದಂಪತಿಗಳಿಗೆ ಯೋಗ್ಯವಾದ ಆದರಾತಿಥ್ಯವನ್ನು ಕೊಡಲು ಸ್ವತಹ ನಮ್ಮ ರಾಣಿಯವರೇ ತಯಾರಿ-ಮಾಡುತ್ತಿರುವರು. ರಾಜರಿಗಾಗಿ ಏಳು ಕೋಣೆಗಳಿವೆ. ಈ ಕೋಣೆಗಳನ್ನು ಬಗೆಬಗೆಯ ಅಲಂಕಾರದಿಂದ ಶೃಂಗರಿಸಿರುವರು. ಜರತಾರಿ ವಸ್ತ್ರಗಳನ್ನು ಅಲ್ಲಲ್ಲಿ ಜೋಲು ಹಾಕಿರುವದರಿಂದ ಕೋಣೆಗಳೆಲ್ಲವೂ ಜಗಜಗ ಹೊಳೆಯುತ್ತಿರುವವು.

§ § § §

ಬಾಲಕನ ಅಗಾಧ ಶೌರ್ಯ!

ಲಂಡನಿನಲ್ಲಿ ಏಳು ವರ್ಷ ಪ್ರಾಯದ ಹ್ಯೂ ಬೊನ್ನೆಲನೆಂಬ ಬಾಲಕನ ಶೌರ್ಯವು ಅಪ್ರತಿಮವಾದುದು. ಆತನು ಒಬ್ಬ ಗಣಿಯ ಕೂಲಿಕಾರನ ಮಗನು ಮನೆಯಲ್ಲಿ ಎಲ್ಲರೂ ಮಲಗಿದ್ದಾಗ ಸುಮಾರು ರಾತ್ರಿ ಮೂರು ಘಂಟೆಯ ಹೊತ್ತಿಗೆ ಮನೆಗೆ ಬೆಂಕಿ ಹಿಡಿಯಿತು. ಮೊದಲು ಇದು ತಂದೆ ತಾಯಿಗಳಿಗೆ ತಿಳಿದು ಅವರು ಬೊಬ್ಬೆಹಾಕಿದರು. ತಾಯಿಯ ಬೊಬ್ಬೆಯನ್ನು ಕೇಳಿ ಬೊನ್ನೆಲನು ಎದ್ದು, ಮೂಳಿಗೆಯಲ್ಲಿ ಮಲಗಿದ್ದ ಒಬ್ಬ ತಮ್ಮನನ್ನು ಬದುಕಿಸಿದನು. ಮೆಟ್ಟಿಲುಗಳು ಜಾರಿ ಬಿದ್ದರೂ ಕಿಟಿಕಿಯಿಂದ ಕೋಣೆಯನ್ನು ಪ್ರವೇಶಿಸಿ ಇನ್ನೊಬ್ಬ ಸಹೋದರನನ್ನೂ ಕಾಪಾಡಿದನು. ಇನ್ನೀರ್ವರು ತಮ್ಮಂದಿಯರನ್ನೂ, ಇಬ್ಬರು ತಂಗಿಯರನ್ನೂ ಕಾಪಾಡಬೇಕೆಂದು ಮತ್ತೊಂದು ಕೋಣೆಯೊಳಕ್ಕೆ ನುಗ್ಗಿ ಪ್ರಯತ್ನಿಸಿದನು. ಆದರೆ ಸಾಧ್ಯವಾಗದೆ ಅವರೊಂದಿಗೆ ಅಲ್ಲೇ ಬಿದ್ದುಬಿಟ್ಟನು. ಬೊನ್ನೆಲನನ್ನೂ ಉಳಿದವರನ್ನೂ ಬದುಕಿಸಬೇಕೆಂದು ನೆರೆಹೊರೆಯವರು ಪ್ರಯತ್ನಿಸಿ ಬೊನ್ನೆಲನನ್ನು ಹೊರಕ್ಕೆ ತೆಗೆದಾಗ ಆತನು ಮೂರ್ಛಾವಸ್ಥೆಯಲ್ಲಿದ್ದನು. ಅಷ್ಟು ಹೊತ್ತಿಗೆ ಬೇರೆಯವರೆಲ್ಲರೂ, ಫಾಯರ್ ಬ್ರಿಗೇಡಿನವರೂ ಬಂದು ಬೆಂಕಿಯನ್ನು ನೊಂದಿಸಿ ಇತರ ಮನೆಗಳು ಸುಟ್ಟುಹೋಗದಂತೆ ಮಾಡಿದರು.

§ § § §

ಮೈಸೂರಿನಲ್ಲಿ ಮರಾಠಿಗಳು.

ಮೈಸೂರಿನಲ್ಲಿರುವ ಮರಾಠಿ ಜನರು ಸರಕಾರಿ ನೌಕರಿಕೆಯಲ್ಲಿ ತಮಗೆ ಪ್ರವೇಶವನ್ನು ಕೊಡಬೇಕೆಂದೂ ಈ ಮೊದಲೇ ಒಮ್ಮೆ ದಿವಾನರೊಡನೆ ಬಿನ್ನವಿಸಿಕೊಂಡಿದ್ದರು. ಆದರೆ ಅಂದು ದಿವಾನರು ಅವರ ಮನವಿಗೆ ಸೊಪ್ಪುಹಾಕಲಿಲ್ಲ. ಪುನಃ ಮರಾಠಿಗಳು ಇನ್ನೊಂದು ಮನವಿಯನ್ನು ಮಾಡಿಕೊಂಡಿರುವರು. ಮೈಸೂರಿನಲ್ಲಿ ಒಟ್ಟು ೫೩,೦೦೦ ಮರಾಠಿಗಳು ಇರುವರು. ರಾಜಭಕ್ತಿಯಲ್ಲಿ ಅವರಿಗೆ ಸರಿಯಾಗುವ ಜನರು ಇತರರಾರೂ ಇರುವುದಿಲ್ಲ. ರಾಜಕುಟುಂಬದ ಮರ್ಯಾದೆಯನ್ನು ಕಾಪಾಡಿ, ಮೈಸೂರು ರಾಜ್ಯವನ್ನೇ ಎತ್ತಿ ಹಿಡಿಯಬೇಕೆಂಬುದೇ ಅವರ ಪ್ರಯತ್ನ. ಶಿವಾಜಿಯ ಕಾಲದಲ್ಲಿ ಮರಾಠಿಗಳು ಮಾತೃಭೂಮಿಗಾಗಿ ಕಾದಾಡಿದುದು ನಮಗೆ ತಿಳಿದಿರಬಹುದು. ಅವರಷ್ಟು ನಿಸ್ವಾರ್ಥ ಬುದ್ಧಿಯವರೂ, ಧೃಢಕಾಯರೂ, ಸ್ಥಿರಪ್ರಯತ್ನಿಗಳೂ ಇತರರಿಲ್ಲವು. ಯುದ್ಧವಿದ್ಯೆಯನ್ನು ಅವರು ಚೆನ್ನಾಗಿ ಬಲ್ಲರು. ಇನ್ನು ಓದುಬರಹದಲ್ಲಿಯೂ ಕೂಡ ಅವರು ಕೀಳಲ್ಲ. ಅವರಲ್ಲಿ ಅನೇಕಜನ ಪಂಡಿತರಿರುವರು. ಮೈಸೂರು ಸಿವಿಲ್ ಸರ್ವಿಸಿನಲ್ಲಿ ಒಬ್ಬನೇ ಒಬ್ಬ ಮರಾಠಿಯವನೂ ಇದುವರೆಗೂ ಇರುವುದಿಲ್ಲ. ಇದೇ ಅವರ ಮನವಿಯ ಮುಖ್ಯ ತಾತ್ಪರ್ಯ. ಮರಾಠಿಗಳಿಗೆ ಮೈಸೂರು ಸರಕಾರದಲ್ಲಿ ಕೆಲಸಕೊಟ್ಟರೆ ನಿಜವಾಗಿಯೂ ಈ ಎಲ್ಲ ಕಾರಣಗಳಿಂದ ಸರಕಾರಕ್ಕೆ ಲಾಭವಿದೆ.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,
SWADESHABHIMANI,
MANGALORE.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಆಂಡ್ ಸನ್ಸ್,
ಷಂತಾಪು ವ್ಯಾಪಾರ,
ಶೆವ್ವಾಪೇಟೆ, ಸೇಲಂ (ದಕ್ಷಿಣ ಇಂಡಿಯಾ).

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ ಯಿತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ವಚಂದ್ರಕಾಂತಿ ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ... ಲ್ಯಾಂಪುಗಳು, ಎಲೆಕ್ಟ್ರಿಕ್ ... ಗುಂಡಿಗಳು, ರೋಜಾ ಹುವ್ವಿಗಳ ...ಗಳು, ಬ್ಯಾಟರಿಗಳು, ಬೆಂಕಿಕಡ್ಡಿ ಮತ್ತು ಸಿಗರೆಟ್ ಹಚ್ಚಿಸುವ ...ಟ್ರಿಕ್ ದೀಪಗಳು ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳು ಸಹ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವಂತೆ ...ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿ.

ಕ್ರಯ ವಗೈರೆ ತಪಸೀಲಿಗೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
(...11-27) ನಗರ್ತಪೇಟೆ, ಬೆಂಗಳೂರು ಸಿಟಿ.

ನೋಟೀಸು.

ಕಾಸರಗೋಡು ತಾಲೂಕು ಬಾಯಾರು ಗ್ರಾಮದಲ್ಲಿ ... ಬಳ್ಳೂರು ಬೀಡು ರುಕ್ಮಿಣಿ ಅಮ್ಮನ ಮಗ ವ ರಾಮ ಬಲ್ಲಾಳನ ಅಳಿಯ ಶಂಕ್ರನಾರಾಯಣ ಬಲ್ಲಾಳನು ಈ ...ಲಕ ಸಮಸ್ತರಿಗೆ ತಿಳಿಸುವದೇನಂದರೆ:—

ನನ್ನ ಗೈರ್ ಹಾಜರಿ ಸಮಯ ನನ್ನ ಮಾವಂದಿರಾದ ...ಕೃಷ್ಣ ವ ರಾಮಯ್ಯ ಬಲ್ಲಾಳರು ನಮ್ಮ ಕುಟುಂಬದ ...ರು ಮನೆಗೆ ತಾ. 14—2—28ರಲ್ಲು ಸೋಮವಾರ ...ಬಂದು ನನ್ನ ದೊಡ್ಡ ತಾಯಿ ಸೀತಮ್ಮ ವ ನನ್ನ ಅಕ್ಕ ...ಅಮ್ಮ ಕೂಡಾ ಇಬ್ಬರನ್ನು ದುರ್ಭೋದಿಸಿ ಮೋಸಗೊಳಿಸಿ ...ನಿಂದ 2 ಖಾಲಿ ಕಾಗದಗಳಿಗೆ ಪ್ರತಿವಂದಕ್ಕೆ ಅವ... ಹೆಬ್ಬೆಟ್ಟು ಪಡಕೊಂಡು ಹೋಗಿರುತ್ತಾರೆ. ಸದರಿ ... ಕಾಗದಗಳನ್ನು ಕುಟುಂಬಕ್ಕೆ ಮೋಸವಾಗುವಂತೆ ...ಪ್ರ ನೋಟಾಗಲಿ, ಕೈಕಾಗದವಾಗಲೀ, ವ ಬೇರೆ ರಿಕಾರ್ಡಾಗಿ ...ಮಾಡುವ ಉದ್ದಿಶ್ಯದಿಂದ ಪಡದದ್ದಾಗಿರುತ್ತದೆ. ಆದ್ದರಿಂದ ...ಂಗತಿ ಸೂಕ್ಷ್ಮವಾಗಿ ಮನಸ್ಸಿನಲ್ಲಿಡಿರಿ. ಮೋಸಗೊಳ್ಳ... ಸೀತಮ್ಮಳಾಗಲಿ, ಲಕ್ಷ್ಮಿ ಅಮ್ಮಳಾಗಲಿ, ಏನೊಂದು ...ರ್ದು ಮಾಡಿಕೊಟ್ಟದ್ದಿಲ್ಲ. ಜಾಗ್ರತೆಯಿಂದ ಗ್ರಹಿಸಿರಿ.

ಪುತ್ತೂರು, ... 23-2-28. } ಶಂಕರನಾರಾಯಣ ಬಲ್ಲಾಳನ ರುಜು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —

ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, & Cochin.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಮತ್ತು ಕೊಚ್ಚಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds ,, 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years 6% ,, 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇ. 6%.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ದಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನು ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವರಿಗೆ ಹತ್ತಿರ.

DUNLOP

fit Dunlop and be satisfied

Registered No. M. 498.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

THE CANARA BANKING CORPORATION.
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಉಡುಪಿ, ಲಿಮಿಟೆಡ್

Head offices:—UDIPI.

Branches:—COONDAPOOR.
Mangalore

Authorised Capital	Rs. 3,50,000-
Subscribed „	2,25,000-
Paid up „	1,99,650-
Reserve and other Funds as on 31—12—1927	85,000-
Investment on G. P. Notes	1,85,931—13—0-

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928.—

Office of the Corporation,
Udipi, 21—1—'28.

N. ANANDA RAO.
Secretary.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಅಮೃತಾಂಜನ

ಅಮೃತಾಂಜನ ಡಿಪೋ.

Ready for Sale.

THE
MADRAS HINDU RELIGIOUS ENDOWMENT ACT
No. III of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

Your Needs
MOUS.
…ಾಲಾ ಇವರ
…ಗಳು.

…ದಕಗಳು ದೊರೆತಿರುತ್ತವೆ.

… ೧೩.
…ವುಗಳಿಗೂ ಒಳ್ಳೇ ಔಷಧ ಆಣೆ ೧೨.
…ದ ಔಷಧ. ಆಣೆ ೧೩
… ೧೦೦ ಚೀಟುಗಳು ಇರುತ್ತವೆ.
…೦. ೧–೧೨–೦

DISCOUNT TO TRADE

… ಎಂಡ್ ಕೋ. ಲಿಮಿಟೆಡ್.
… Road, Bombay. No. 14.

…ಂದ್ರ

…ಧವು. ಈ ದಿವ್ಯೌಷಧವನ್ನು ಕೆಲವರು … ಇನ್ನು ಕೆಲವರು ‘ರತ್ನಬಚಿತವಾದ … ವರು.

…ಯಾರಿಸಿ ಇರುತ್ತದೆ. ಇದು ಅತ್ಯಂತ

…ವಾಗುವುದು, ಋತುವು ನಾನಾ ಬಣ್ಣ… ಮೂರ್ಛೆ, ಪಿಶಾಚಬಾಧೆ ಮೊದಲಾದ …ದ್ಧತೆ, ಸೊಂಟನೋವು, ಕಾಲುಸೆಳೆತ, …ವು.

…ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

…ಟೀರಂ,
…52. ಎಗ್ಮೋರು, ಮದರಾಸು.
18 ಬಳೇಪೇಟೆ, ಬೆಂಗಳೂರು.
…, ಮಂಗಳೂರು.

…ಟೈಂಪೀಸ್ ಇನಾಂ.
…ಗೋಲ್ಡ್ ರಿಸ್ಟ್‌ವಾಚುಗಳು.



…ದ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ …ದ ಗಟ್ಟಿ ಸಾಮಾನುಗಳಿಂದ (ಸ್ವಿಸ್ …ದರ ಬಣ್ಣವು ಭಂಗಾರಕ್ಕೆ ಸರಿಸಮಾನ …ರು ।ಗಂಟೆಯನ್ನು ತೋರಿಸುವವು. …ದ 5 ವರುಷ ಗ್ಯಾರಂಟಿ ಕೊಡುವೆವು. …ಲ್ಲಿ ಕಾಣುವ ರಿಸ್ಟ್‌ವಾಚನ್ನು ಖರೀ… …ಡಿಯಾರಕ್ಕೊಂದು ಟೇಬಲ್ ಟೈಂಪೀಸ್ …ಕ್ಕೆ ಗಡಿಯಾರವನ್ನು ಖರೀಸಿಕೊಳ್ಳ… …ದ ನಂಬರನ್ನು ತಿಳಿಸಿ ಬರೆಯಿರಿ.
…ಟೈಂಪೀಸ್ ಸಹಿತ ರಿಸ್ಟ್‌ವಾಚ್
… 7–0–0.
… ಎಸ್. ವಾಚ್ ಕಂಪೆನಿ.
… ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕ ೧೮೪೯ನೆಯ ಪ್ರಭವ ಸಂ॥ದ ಫಾ.
ಶು॥ ೧೦ ಶನಿವಾರದಿಂದ ಪ್ರಭವ ಸಂ॥ರದ ಫಾಲ್ಗುಣ
ಬ॥ ೩ ಶುಕ್ರವಾರದ ವರೆಗಿನ ಪಂಚಾಂಗ
(೧೯೨೮ನೆಯ ಕುಂಭ (ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಗ್ರಾದಿಗಾಸ	ಸೂರ್ಯ ಉ.	ಸೂರ್ಯ ಅಸ್ತ
10	ಶನಿ	೪	೪೪.೩೨	ಚಿತ್ರಾ	೧೩೦	೨೭	6.42	6 39
11	ರವಿ	೫	೪೯.೩೦	ಸ್ವಾತಿ	೬.೪೬	೨೮	6 42	6 39
12	ಸೋಮ	೬	೫೪.೩೨	ವಿಶಾಖಾ	೧೪.೧೪	೨೯	6.41	6 39
13	ಕುಜ	೭	೫೯. ೦	ಅನುರಾಧಾ	೨೦. ೨	೩೦	6 40	6.40
14	ಬುಧ	೮	೬೦ ೦	ಜ್ಯೇಷ್ಠಾ	೨೫.೧೪	೧	6 40	6.40
15	ಗುರು	೮	೨.೧೪	ಮೂಲಾ	೨೯.೩೦	೨	6.39	6 40
16	ಶುಕ್ರ	೯	೪.೩೨	ಪೂ. ಷಾ.	೩೨.೪೬	೩	6.39	6.40

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
2	89— 9	74— 1	—	—
3	90 3	74— 0	—	—
4	90— 0	74— 2	—	—
5	89—8	74 – 7	—	—
6	88— 3	74 – 3	—	—
7	88— 6	73 — 7	—	—
8	89— 6	76— 2	—	—
				128–19

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಆ	ವರೆಗೆ ರೂ ಆ
ಹೊಸ ಮುಸ್ಕಿ	7– 6	7 – 14
ಹೊಸ ಗುಡ್ಡು ...	6 – 8	7 – 0
ಸಗ್ಗಿ ...	6 – 2	6– 6
ಹೊಸ ರಾಶಿ ...	6 – 0	6 – 2
ಊರ ಅಮ್ಮಲ್ ಬೆಳ್ತಿಗೆ ...	7 –- 4	8 – 4
ರಂಗೂನು ಬೆಳ್ತಿಗೆ ಗೋಣಿ ೧ ...	12 – 12	13 8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6 – 14	7 – 7
ಗೋದಿ ಗೋಣಿ ೧ಕ್ಕೆ ...	17 – 0	18 .,0
ಹುರುಳಿಗೋಣಿ ೧ಕ್ಕೆ ...	9 – 0	11 8
ಕಡಲೆಗೋಣಿ ೧ಕ್ಕೆ ...	11 – 8	13 - 8
ತೊಗರಿಗೋಣಿ ೧ಕ್ಕೆ ...	15 – 0	15 8
ತೊಗರಿಬೇಳೆ ಗೋಣಿ ೧ಕ್ಕೆ ...	18 – 0	26 . 0
ಉದ್ದುಗೋಣಿ ೧ಕ್ಕೆ ...	14 – 0	14 8
ಹೆಸರುಗೋಣಿ ೧ಕ್ಕೆ ...	12 - 0	14 8
ಊರು ಬೆಲ್ಲ ಖಂಡಿ ೧ಕ್ಕೆ ...	40 – 0	45 – 0
ಉಪ್ಪು ಗೋಣಿ ೧ಕ್ಕೆ ...	4 – 6	4 – 8
ಕೊಬ್ಬರಿ ಖಂಡಿ ೧ಕ್ಕೆ ...	135 0	-
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	40 – 0	47 – 8
ಎಳ್ಳಿಂಡಿ ಖಂಡಿ ೧ಕ್ಕೆ ...	40 – 0	50 – 0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ ...	8 – 0	8 - 2
ಎಳ್ಳೆಣ್ಣೆ ಮುಡಿ ೧ಕ್ಕೆ ...	8 – 0	8 - 4
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	6 – 12	7 8
ಮಾರಿಸ ಸಕ್ಕರೆ ಮುಡಿ ೧ಕ್ಕೆ ...	3 – 11	3 12
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6 – 8	6 10
ಸಾಸಿವೆ ಮುಡಿ ೧ಕ್ಕೆ ...	8 – 0	8 - 2
ಕೊತ್ತಂಬರಿ ಮುಡಿ ೧ಕ್ಕೆ ...	7 – 0	9 - 8
ಶುಂಠಿ ಖಂಡಿ ೧ಕ್ಕೆ ⋮	420 – 0	425 .- 0
ಬೆಳ್ಗೋಟು ಅಡಿಕೆ ಖಂಡಿ ೧ಕ್ಕೆ ...	150 - 0	180 – 0
ಕಾಳುಮೆಣಸು ಖಂಡಿ ೧ಕ್ಕೆ ...	555 - 0	560 -
ಯಾಲಕ್ಕಿ ಮುಡಿ ೧ಕ್ಕೆ ...	65 – 0	70 – 0
ಗೇರುಬೀಜ ಮುಡಿ ೧ಕ್ಕೆ ...	3 – 0	3 – 2
ಅಕ್ಕಿಬ ಖಂಡಿ ೧ಕ್ಕೆ ...	37 – 8	40 - 0
ತಾಂಬ್ರ ತಗಡು ಮುಡಿ ೧ಕ್ಕೆ ...	15 - 0	15 - 0
ತಾಂಬ್ರ ಪಾತ್ರಗಳು ಮುಡಿ ೧ಕ್ಕೆ	21 – 0	–
ಬೀಡಿ ಬೆಳ್ಳಿ ಸೇರು ೧ಕ್ಕೆ ...	15 – 0	–
ಹಿತ್ತಾಳೆ ತಗಡು ಮುಡಿ ೧ಕ್ಕೆ ...	15 – 0	–
ಪವನು	13 – 9	–

ಪಂಪುಗಳು

ಬಹು ಕಾರ್ಯಸಾಧಕ ಸೂಕ್ಷ್ಮವಾದ ಹಸ್ತಕೌಶಲ

ನೀರಾವರಿ, ನೀರನ್ನೊದಗಿಸುವ ಮತ್ತು ನೀರಿನ ಹರಿತದ ಉಪಾಯ ಕಾರಖಾನೆ, ಪವರ್ ಸ್ಟೇಶನ್, ಇವೆಲ್ಲವುಗಳಿಗೆ ತಕ್ಕದ್ದಾಗಿದೆ.

ನಮ್ಮಲ್ಲಿ ತುಂಬಾ ದಾಸ್ತಾನು ಇದೆ.

ಬೊಂಬಾಯಿ VOLKART BROS ENGINEERS ಕಲಕತ್ತಾ
ಕರಾಚಿ ಮದರಾಸು

Armenian Street, MADRAS.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ ಸಹಿತ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ತೀರಾಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ] ದೊಡ್ಡ ಗ್ರಂಥವು.
ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದರಸಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು
ಕ್ರಯ ೧ಕ್ಕೆ ೨–೦–೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ಏಕದಮ್ಮಿಗೆ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪಾತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨–೮–೦ ಟ. ಹಾಸಲು ೬ ಆಣೆ.

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾಲ್ಪನಿಕ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಉಪವಾಸದ ಆವಶ್ಯಕತೆ.

ಒಳ್ಳೆಯ ಆರೋಗ್ಯದಿಂದಿರುವದಕ್ಕೆ ಉಪವಾಸವಿರುವುದು ಒಂದು ಸಾಧನವಾದುದರಿಂದ, ಉಪವಾಸವಿರುವುದು ಹಿಂದಿನಿಂದಲೂ ಇಜಿಪ್ಟ ಮತ್ತು ಹಿಂದೂದೇಶಗಳಲ್ಲಿ ವಾಡಿಕೆಯಂತೆ ಅನುಸರಿಸಲ್ಪಡುತ್ತಿದೆ. ಹಿಬ್ರೂ ಜಾತಿಯವರಲ್ಲಿ ಪ್ರತಿಯೊಬ್ಬನೂ ವಾರಕ್ಕೆರಡು ದಿನ ಉಪವಾಸ ಮಾಡಲೇ ಬೇಕಾಗಿದೆ. ಇದು ಹೊರತು ವರ್ಷದಲ್ಲಿ ಇತರ ಅನೇಕ ದಿನಗಳಲ್ಲಿ ಉಪವಾಸ ಮಾಡುವ ಪದ್ಧತಿಯು ಅವರಲ್ಲಿದೆ. ಆಂಗ್ಲ ವೈದ್ಯಶಾಸ್ತ್ರವನ್ನು ರಚಿಸಿದ ಹಿಪೊಕ್ರೇಟಸನು ಹೀಗೆ ಹೇಳುವನು. “ರೋಗಶಮನವಾಗಿ ಮರುಪತ್ಯದ ಸಮಯದಲ್ಲಿ ಆಹಾರವನ್ನು ಕೊಟ್ಟರೆ ಶಕ್ತಿಯು ವರ್ಧಿಸುವುದು ಅಲ್ಲದೆ ರೋಗದ ಚಿನ್ಹೆಯು ಪೂರ್ಣ ಮಾಯವಾಗದಿರುವ ಸಂದರ್ಭದಲ್ಲಿ ಆಹಾರವನ್ನು ಕೊಟ್ಟರೆ ರೋಗವು ಹೆಚ್ಚುವುದು.” ಉಪವಾಸವಿರುವುದು ಒಳ್ಳೆಯದೆಂದು ನಮ್ಮ ಪೂರ್ವಜರು ಎಷ್ಟು ತಿಳಿದಿದ್ದರೊ, ಅಷ್ಟೇಯಾಗಿ ಆಧುನಿಕ ಪಂಡಿತರೂ ತಿಳಿಯುವರು.

ರೋಗಿಗಳು ಹಸಿವಿಲ್ಲವೆಂದು ಹೇಳುವಾಗ ಒತ್ತಾಯದಿಂದಲಾದರೂ ಆಹಾರವನ್ನು ಅವರ ಬಾಯೊಳಗೆ ತುರುಕಿಸುವುದು ನಮ್ಮವರಲ್ಲಿ ಹಲವರ ಅಭ್ಯಾಸವಿದೆ. ಹಾಗೆ ಮಾಡಿದರೆ ದೇಹಕ್ಕೆ ಕೊಂಚ ಬಲಬರುವದು ಎಂದು ಅವರ ಹೇಳಿಕೆಗೆ ಆಧಾರವಾಗಿ ಕೆಲವು ಗ್ರಂಥಗಳೂ ಇವೆ. ಆದರೂ ಈಗಿನ ಪಂಡಿತರು ಉಪವಾಸವಿರುವುದೇ ಒಳ್ಳೇಯದೆಂದೂ, ಉಪವಾಸ ಮಾಡುವುದರಿಂದ ನೈಸರ್ಗಿಕವಾಗಿ ರೋಗವು ಶಮನವಾಗುವದೆಂದೂ ಅಭಿಪ್ರಾಯ ಪಡುವರು.

ಉಪವಾಸ ಮಾಡುವುದರಿಂದ ಶರೀರದಲ್ಲಿ ಉಂಟಾಗಿರುವ ಅಸ್ವಸ್ಥತೆಗಳು ಸರಿಯಾಗಿ ಚಿಕ್ಕ ರೋಗಗಳು ಗುಣಹೊಂದುವವು. ಪ್ರಾಣಿಗಳು ಅಸ್ವಸ್ಥವಾಗಿರುವಾಗ ಅವು ಆಹಾರ ತಿನ್ನುವದನ್ನೇ ಬಿಟ್ಟುಬಿಡುವವು. ಉಪವಾಸದ ಉಪಯೋಗವನ್ನು ತಿಳಿದವನು ಬೇರೆಯವರಿಗೆ ಇದನ್ನು ತಿಳಿಯ ಹೇಳಿ ರೋಗಿಗಳು ಆಹಾರವನ್ನು ಹೆಚ್ಚಾಗಿ ತಿನ್ನದಂತೆ ಪ್ರೇರಿಸುವನು.

ಹೊಟ್ಟೆಯಲ್ಲಿ ಜೀರ್ಣಿಸದೆ ಉಳಿದ ಆಹಾರವು ಜಮೆಯಾಗುವದರಿಂದ ರೋಗವು ಉಂಟಾಗುವದೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಕೆಟ್ಟ ಆಹಾರವು ಜಮೆಯಾಗುವದು ಹೆಚ್ಚಾಗಿ ಬರುತ್ತಿದ್ದಂತೆ ರೋಗವೂ ಬಲವಾಗುತ್ತಾ ಬರುವದು. ಕೊನೆಗೆ ಮನುಷ್ಯನು ಸಾಯುವನು. ಆಹಾರವು ಜೀರ್ಣಿಸದೆ ಮೊದಲೇ ಜಮೆಯಾಗಿದ್ದಾಗ ಮತ್ತಷ್ಟು ಆಹಾರವನ್ನು ತಿಂದರೆ, ರೋಗಕ್ಕೆ ಮತ್ತಷ್ಟು ಎಡೆಕೊಟ್ಟಂತಾಯಿತು. ಹಾಗೆ ಮಾಡದೆ ಉಪವಾಸವನ್ನು ಮಾಡಿದರೆ ಜೀರ್ಣಾಂಗಗಳು ಪ್ರಯತ್ನಪಟ್ಟು ವಿಷರೂಪವಾದ ಆ ಜಮೆಯಾದ ಆಹಾರವನ್ನು ಜೀರ್ಣಿಸಿ ಹೊರಗೆಡಹುವವು.

ಯಾವಾಗಲೂ ಅಂದರೆ ಮನಸ್ಸಿದ್ದಾಗ ಉಪವಾಸವನ್ನು ಮಾಡುವುದು, ಅದನ್ನು ಸಹಿಸಿಕೊಳ್ಳಲು ಅಸಾಧ್ಯವಾದೊಡನೆ ಉಪವಾಸವನ್ನು ತ್ಯಜಿಸಿ ಪುನಃ ಆಹಾರವನ್ನು ತಿನ್ನುವದು, ಹೀಗೆ ಮಾಡುವದು ಯುಕ್ತವಲ್ಲ. ಉಪವಾಸ ಮಾಡಲು ನಿಶ್ಚಿತ ಸಮಯವಿದೆ. ನೈಸರ್ಗಿಕವಾಗಿ ಒಮ್ಮೆ ತಿಂದ ಆಹಾರವು ಜೀರ್ಣಿಸದೆ ಇದ್ದೊಡನೆ ರೋಗವು ಕಾಣಿಸಿಕೊಳ್ಳುವುದು. ಉಪವಾಸವು ಆಗ ಅಗತ್ಯವಾಗಿ ಬೇಕಾಗಿದೆ ಎಂಬುದನ್ನು ಸೂಚಿಸುವದಕ್ಕಾಗಿ ರೋಗವು ಕಾಣಿಸಿಕೊಳ್ಳುವುದು. ಆಗ ಮಾತ್ರ ಅಗತ್ಯವಾಗಿ ಉಪವಾಸವನ್ನು ಮಾಡತಕ್ಕದ್ದು.

ಥಕ್ಕನೆ ಗುಣವಾಗದೆ ಬಹುಕಾಲದ ವರೆಗೆ ನೆಲೆಗೊಂಡಿರುವ ರೋಗವು ಆಕ್ರಮಿಸಿದರೆ ಆಹಾರ ಜೀರ್ಣಾಂಗಗಳು ಜೀರ್ಣಿಸುವ ಶಕ್ತಿಯನ್ನು ಕಳಕೊಳ್ಳುವವು ಆಗ ಮಾತ್ರ ಪ್ರತಿ ದಿವಸವೂ ಉಪವಾಸವಿರಬೇಕೆಂದಿಲ್ಲ. ಲಘುವಾದ ಸ್ವಲ್ಪ ಸ್ವಲ್ಪ ಆಹಾರವನ್ನು ಭಕ್ಷಿಸುತ್ತಿರಬೇಕು. ಆ ಆಹಾರವನ್ನು ಮಾತ್ರ ಜಗಿದು ಜಗಿದು, ಅದು ತನ್ನಷ್ಟಕ್ಕೇನೇ ಹೊಟ್ಟೆಯೊಳಕ್ಕೆ ಹೋಗುವ ವರೆಗೂ ಜಗಿಯುತ್ತಿರಬೇಕು. ದೀರ್ಘ ಕಾಲದ ರೋಗವು ಸಮಾಧಾನ ಹೊಂದುತ್ತಾ, ಬಂದು ನಿಲ್ಲುವ ಸಮಯದಲ್ಲಿ ಉಪವಾಸವನ್ನು ಮಾಡಬೇಕಾಗುವದು. ಆ ಕಾಲದಲ್ಲಿ ಅರುಚಿ ಮಾತ್ರವಿರುವದು.

(೯ನೇ ಪೇಜಿಗೆ ಮುಂದುವರಿಸಿದುದೆ.)

ಪಬ್ಲಿಕ್ ವರ್ಕ್ಸ್ ಇಲಾಖೆ.

ಮದರಾಸು, ಬಾಲ್ಸೆರ್, ಬೆಜವಾಡಾ, ತಂಜಾವೂರು ಮತ್ತು ತಿರುಚಿನಾಪಳ್ಳಿ ಸರ್ಕಲುಗಳಲ್ಲಿರುವ ಕೆರೆಗಳ ದುರುಸ್ತಿಗಾಗಿ ರೂಪಾಯಿ ೧.೯೮ ಲಕ್ಷ; ಪಬ್ಲಿಕ್ ವರ್ಕ್ಸ್ ಶೋಪಿನ ಕಟ್ಟಡ ಮತ್ತು ಯಂತ್ರಸಾಧನೆಗೆ ರೂಪಾಯಿ ೫೬,೦೦೦; ನರಸಾಪಟ್ಟಣದಲ್ಲಿ ಏಜನ್ಸಿ, ಡಿವಿಜನ್ ಮತ್ತು ಸಬ್ ಡಿವಿಜನ್ ಆಫೀಸುಗಳ ಕಟ್ಟಡಗಳಿಗೆ ರೂಪಾಯಿ ೬೦,೦೦೦; ಗಂಜಾಮು ಜಿಲ್ಲೆಯ ರುಶಿಕುಲ್ಯಾ ಸೇತುವೆಯ ೮|| ಲಕ್ಷ ಅಂದಾಜು ಪಟ್ಟಿಯಲ್ಲಿ ಈ ವರ್ಷ ಖರ್ಚಿಗೆ ೧೫ ಸಾವಿರ ಪತ್ತುಕೋಟ್ಟೆ, ದೇವಿಕೋಟೆ ಮತ್ತು ಯರಗೊಂಡಪಾಲೆಂ ಈ ಸ್ಥಳಗಳಲ್ಲಿ ಆಫೀಸುಗಳನ್ನು ಕಟ್ಟಲಿಕ್ಕೆ ರೂಪಾಯಿ ೧| ಲಕ್ಷ, ಗವರ್ನಮೆಂಟ್ ಇನ್‌ಸ್ಟಿಟ್ಯೂಟ್ ಒಫ್ ಕಾಮರ್ಸ್ ಕಟ್ಟಡಕ್ಕೆ ರೂಪಾಯಿ ೨.೬೬ ಲಕ್ಷ; ತಂಜಾವೂರು ಹೊರ ರೋಗಿಗಳ ಆಸ್ಪತ್ರೆ ಕಟ್ಟಡಕ್ಕೆ ರೂಪಾಯಿ ೪೬ ಸಾವಿರ; ಪಶ್ಚಿಮ ಕಂಡಾವಳಿಯ ಖಾರಿ ಮತ್ತು ಕಾಲುವೆಗಳ ದುರುಸ್ತಿಗೆ ರೂಪಾಯಿ ೧| ಲಕ್ಷ; ಗವರ್ನಮೆಂಟ್ ರೊಯಪುರಂ ಆಸ್ಪತ್ರೆಗೆ ಸೆಪ್ಟಿಕ್ ವಾರ್ಡ ಕಟ್ಟಲಿಕ್ಕೆ ರೂಪಾಯಿ ೧,೨೦,೦೦೦ ಹಣ ಒದಗಿಸಿಯದೆ.

ಹಿಂದೂಸ್ಥಾನಕ್ಕೊಂದು ಸಾರ್ವಜನಿಕ ಶಾಲೆ.

ಇಂಡಿಯಾ ಸರಕಾರದ ಲೊ. ಮೆಂಬರರಾದ ಶ್ರೀ. ಎಸ್. ಆರ್. ದಾಸರು ಹಿಂದೂಸ್ಥಾನಕ್ಕೊಂದು ಬಹಿರಂಗವಾದ ಸಾರ್ವಜನಿಕ ಶಾಲೆಯನ್ನು ನಿರ್ಮಿಸಲಿಕ್ಕಾಗಿ ಹಣ ಕೂಡಿಸುತ್ತಿರುವರು. ಇಷ್ಟರ ವರೆಗೆ ಒಟ್ಟು ೧೮ ಲಕ್ಷ ರೂಪಾಯಿ ಒಟ್ಟಾಗಿಯದೆ. ಒಟ್ಟಾರೆ ಇದಕ್ಕೆ ೩೦ ಲಕ್ಷ ರೂಪಾಯಿ ಬೇಕಾಗುವವಂತೆ. ಇದು ವರೆಗೆ ಸಿಕ್ಕಿದ ಹಣದಲ್ಲಿ ಹಿಂದೂ ರಾಜರಿಂದ ಸಿಕ್ಕಿದುದು ೧೦|| ಲಕ್ಷ ರೂಪಾಯಿ. ಉಳಿದ ೭|| ಲಕ್ಷ ರೂಪಾಯಿಯು ಹಿಂದೂಸ್ಥಾನದ ಎಲ್ಲಾ ಕಡೆಗಳಿಂದ ಸಿಕ್ಕಿದ್ದು. ಮುಂಬಾಯಿ ನಗರದಿಂದ ಮಾತ್ರವೇ ೪|| ಲಕ್ಷ ರೂಪಾಯಿಗಳು ಸಿಕ್ಕಿರುವವು. ಮುಂಬಾಯಿಯ ಇಬ್ಬರು ಮೂವರು ಮಹನೀಯರು ೫೦ ಸಾವಿರ ರೂಪಾಯಿಗಳಂತೆ ಕೊಟ್ಟಿರುವರು.

ಈ ಶಾಲೆಯಲ್ಲಿ ಎರಡು ವಿಭಾಗಗಳನ್ನಾಗಿ ಮಾಡುವರು. ೯ ವರ್ಷಗಳಿಗೆ ಮೇಲ್ಪಟ್ಟು ೧೩ ವರ್ಷಗಳಿಗೆ ಮೀರದ ಹುಡುಗರಿಗೆ ಒಂದು ಶಾಲೆ. ೧೩ ವರ್ಷಗಳಿಗೆ ಮೀರಿದ ವಿದ್ಯಾರ್ಥಿಗಳಿಗೆ ಇನ್ನೊಂದು ಶಾಲೆ. ಈ ಶಾಲೆಯನ್ನು ಆಂಗ್ಲೇಯ ಕ್ರಮಗಳಿಗನುಸಾರವಾಗಿ ನಡೆಸುವರು.

ಈ ಹೊಸ ವಿದ್ಯಾಲಯವನ್ನು ಎಲ್ಲಿ ಸ್ಥಾಪಿಸಬೇಕೆಂದು ಇನ್ನೂ ನಿರ್ಣಯವಾಗಿಲ್ಲ. ಶ್ರೀ. ಎಸ್. ಆರ್. ದಾಸರು ಭೂಪಾಲ, ಪೂನಾ, ಮತ್ತು ಸಿಮ್ಲಾ ಈ ಮೂರು ಸ್ಥಳಗಳ ಪೈಕಿ ಒಂದು ಸ್ಥಳದಲ್ಲಿ ಸ್ಥಾಪಿಸಬೇಕೆಂದು ಅಭಿಪ್ರಾಯಪಡುವರು. ಅದರೂ ಸಿಮ್ಲಾವೇ ಆದೀತೆಂದು ಅವರ ಅಭಿಪ್ರಾಯ.

ಈ ಶಾಲೆಯ ಮುಖ್ಯ ಧ್ಯೇಯವು "ಜಾತಿಭೇದವನ್ನು ಕಳಚಿಬಿಡುವುದು. ಬೇರೆ ಬೇರೆ ಜಾತಿಯವರಲ್ಲಿರುವ ಪರಸ್ಪರ ಮನಃಕ್ಲೇಶವನ್ನು ತೊಲಗಿಸುವದು. ರಾಷ್ಟ್ರೀಯ ಉತ್ಸಾಹವನ್ನು ಜನರಲ್ಲಿ ತುಂಬಿಸುವುದು. ಆಂಗ್ಲೇಯ ಕ್ರಮಗಳನ್ನು ಹಿಂದೂಗಳಲ್ಲಿ ಆಚರಣೆಗೆ ತರುವುದು. ಹಿಂದೂ ಶಾಸ್ತ್ರ, ಸ್ಮೃತಿಪುರಾಣಗಳನ್ನು ಕಲಿಸುವುದು.

ಹಿಂದೂಗಳನ್ನೂ ಮುಸಲ್ಮಾನರನ್ನೂ ಪಾರ್ಸಿಗಳನ್ನೂ ಒಂದು ಶಾಲೆಯಲ್ಲಿ ತರಬೇತು ಮಾಡುವದರಲ್ಲಿ ಯಾವ ಕಷ್ಟವಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಅವರು ಒಟ್ಟಿಗೆ ಕಲೆತು ಇರಲು ಪ್ರಾರಂಭಿಸಿರುವುದರಿಂದ ಈ ವಿದ್ಯಾಲಯದಲ್ಲಿ ಅವರ ಒಟ್ಟಿಗೆ ಬೆರೆತುಕೊಂಡಿರುವರೆಂದು ನಂಬಬಹುದು.

ಇನ್ನು ಕಡೆಯದಾಗಿ ಸಂಬಳ ನಿರ್ಣಯವಾಗಲಿಕ್ಕಿದೆ, ಆದರೂ ಇದಕ್ಕಾಗಿ ಹೆದರಿ ಆಲೋಚನೆಯನ್ನು ರದ್ದುಪಡಿಸಲಾಗುವುದಿಲ್ಲ. ಪ್ರತಿ ವರ್ಷವೂ ಸರಕಾರಿ ಸಹಾಯವು ದೊರಕಬಹುದು. ಮತ್ತು ಸ್ಥಿರಪ್ರಯತ್ನದಿಂದಲೂ, ಸಾಹಸದಿಂದಲೂ ಅದರ ಸ್ಥಾಪಕರು ಶಾಲೆಯನ್ನು ನಡಿಸದೆ ಇರಲಾರರು.

ಸ್ಫುಟ ವಿ ಚಾ ರ ಗಳು.

ಲೋರ್ಡ ಸಿಂಹರ ನಿಧನ.

ಕಳೆದ ತಾ. ೫ಕ್ಕೆ ಲೋರ್ಡ ಸಿಂಹರವರು ಮೃತ್ಯುವಶರಾದರು. ಲೋರ್ಡ ಸಿಂಹರು ಪ್ರತಿಭಾಶಾಲಿಗಳಾದ ಪುರುಷರೆನ್ನುವುದಕ್ಕೆ ಸಂದೇಹವಿಲ್ಲ.' ಲೋರ್ಡ ಸಿಂಹರಷ್ಟು ಸರಕಾರದಿಂದ ಆದೃತರಾದವರು ಇನ್ನಾರೂ ಇರುವುದಿಲ್ಲ. ತನ್ನ ಇಪ್ಪತ್ತಮೂರನೆಯ ವಯಸ್ಸಿನಲ್ಲಿಯೇ ಲೋರ್ಡ ಸಿಂಹರು ಇಂಗ್ಲೆಂಡಿನಲ್ಲಿ ತಮ್ಮ ವಕೀಲಿ ಪರೀಕ್ಷೆಯನ್ನು ಮುಗಿಸಿ ಕಲ್ಕತ್ತಾದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು; ಮತ್ತು ಬೇಗನೇ ಅವರು ತಮ್ಮ ವೃತ್ತಿಯಲ್ಲಿ ಪ್ರಸಿದ್ಧಿಯನ್ನು ಪಡೆದರು. ಸರಕಾರೀ ಅಧಿಕಾರಗಳನ್ನು ಹಿಂದೀಯರಿಗೂ ಕೊಡುವ ಧೋರಣವು ಜಾರಿಗೆ ತರುವಾಗ, ಹೆಚ್ಚಿನ ಅಧಿಕಾರಗಳಲ್ಲಿ ಪ್ರಥಮವಾಗಿ ನೇಮಕಪಟ್ಟವರು ಇವರೇ. ಪ್ರಥಮದ ಹಿಂದೀಯನಾದ ಸ್ಟೆಂಡಿಂಗ್ ಕೌನ್ಸೆಲ್, ಪ್ರಥಮ ಹಿಂದೀಯ ಎಡ್ವೊಕೇಟ್ ಜನರಲ್, ಪ್ರಥಮ ಹಿಂದೀಯ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರ, ಪ್ರಥಮ ಹಿಂದೀಯ ಅಂಡರ ಸೆಕ್ರೆಟೇರಿ ಒಫ್ ಸ್ಟೇಟ್, ಪ್ರಥಮ ಹಿಂದೀಯ ಲೋರ್ಡ ಮತ್ತು ಪ್ರಥಮ ಹಿಂದೀಯ ಗವರ್ನರ ಪದವಿಗಳು ಲೋರ್ಡ ಸಿಂಹರ ಪಾಲಿಗೇನೇ ಬಿದ್ದವು. ಲೋರ್ಡ ಸಿಂಹರು ಹೀಗೆ ಒಂದರ ಮೇಲೊಂದು ಪದವಿಗೆ ಏರಿಸಲ್ಪಟ್ಟರೆನ್ನುವಾಗ ಅವರ ಪ್ರತಿಭೆಯ ವಿಷಯ ಬೇರೆ ಹೇಳಬೇಕಾಗಿಲ್ಲ. ಆದರೆ ಗಮನಿಸತಕ್ಕ ವಿಷಯವೆಂದರೆ ಇವರು ಇಂತಹ ಪದವಿಗಳನ್ನು ಅಲಂಕರಿಸಿದರೂ ಅವುಗಳಿಂದ ಹಿಂದೂಸ್ಥಾನದ ಮೇಲೆ ಕೃಶತಃ ಯಾವ ಪರಿಣಾಮವೂ ಉಂಟಾಗದೆ ಇದ್ದುದು. ಎರಡನೇದಾಗಿ, ಕೆಲವು ಮಹತ್ವದ ಪದವಿಗಳು ಇವರ ನಂತರ ಬೇರೆ ಯಾರಿಗೂ ಲಾಭವಾಗದೆ ಇದ್ದುದು. ೧೯೨೦ರಲ್ಲಿ ಇವರು ಬಿಹಾರ್ ಮತ್ತು ಒರಿಸ್ಸಾ ಪ್ರಾಂತಗಳ ಗವರ್ನರರಾಗಿ ನೇಮಕಹೊಂದಿದರು. ೧೯೨೧ರಲ್ಲಿಯೇ ಇವರು ಈ ಪದವಿಗೆ ರಾಜಿಕೊಟ್ಟರು. ಆ ಮೇಲೆ ಇವರ ಹೆಸರು ಹೆಚ್ಚು ಪ್ರಸಿದ್ಧಿಗೆ ಬರಲಿಲ್ಲ. ಇದರ ಕಾರಣವೇನೋ ತಿಳಿಯದು. ಆದರೆ ಇವರಿಗೆ ಬ್ರಿಟಿಷರ ಮೇಲೆ ಅಪೂರ್ವವಾದ ಭಕ್ತಿಯಿದ್ದಿತೆಂಬುದು ಅವರು ಸ್ಯಾಮನ್ ಕಮಿಶನ್ನಿಗೆ ಕೊಟ್ಟ ಆನಂದದ ಸ್ವಾಗತದಿಂದ ತಿಳಿದುಬರುವುದು.

ಇಂಗ್ಲೆಂಡೂ ಐಗುಪ್ತ್ಯವೂ.

ಇಂಗ್ಲೆಂಡು ಐಗುಪ್ತ್ಯದೇಶಕ್ಕೆ "ಸ್ವಾತಂತ್ರ್ಯ"ವೆಂಬ ಹೆಸರನ್ನು ಕೊಟ್ಟು ಐಗುಪ್ತ್ಯವನ್ನು ತಣ್ಣಗಿರಿಸುವುದಾಗಿ ಎಣಿಸಿತ್ತು. ಆದರೆ ಐಗುಪ್ತ್ಯ ದೇಶವು ಬರೇ ಹೆಸರಿನಿಂದ ಮೋಸ ಹೋಗುವಂತಹುದುದಲ್ಲವೆಂದು ಆ ಮೇಲಿನ ಅಲ್ಲಿಯ ಘಟನಾವಳಿಗಳು ಚೆನ್ನಾಗಿ ತಿಳಿಸಿಯವೆ. ಆ ಮೇಲೆ ಇಂಗ್ಲೆಂಡು-ಐಗುಪ್ತ್ಯದೇಶಗಳ ಸಂಬಂಧವು ಒಂದು ಬಾರಿ ಸಾಮದಿಂದಲೂ ಒಂದು ಬಾರಿ ದಂಡದಿಂದಲೂ ನಡಿಯುತ್ತಾ ಉಂಟು. ಆದರೆ ಈ ತರದ ಸಂಬಂಧವನ್ನು ಸದಾಕಾಲವೂ ಇರಿಸಲಾಗುವುದಿಲ್ಲ. ಕಳೆದ ವರ್ಷ ಐಗುಪ್ತ್ಯದ ಪ್ರಧಾನ ಮಂತ್ರಿಗಳಾದ ಸರ್ವತ್ ಪಾಶಾರವರು ಲಂಡನ್ನಿಗೆ ಹೋದ ಸಮಯಲ್ಲಿ ಚೆಂಬರ್‌ಲೇನರೊಡನೆ ಹೊಸ ಸಂಧಿಯ ವಿಷಯ ಪ್ರಸ್ತಾಪಿಸಿದ್ದರು. ಅದರ ಪ್ರಕಾರ ಇಂಗ್ಲೆಂಡಿಗೂ ಐಗುಪ್ತ್ಯಕ್ಕೂ ಹೊಸ ಸಂಧಿಯ ರಚನೆಯ ಬಗ್ಗೆ ಈ ವರೆಗೆ ಪ್ರಯತ್ನಗಳು ನಡೆಯುತ್ತಾ ಇದ್ದವು. ಆದರೆ ಇಂಗ್ಲೆಂಡು ಇಷ್ಟು ಸುಲಭವಾಗಿ ಐಗುಪ್ತ್ಯವನ್ನು ಬಿಟ್ಟು ಹೋಗಲು ತಯ್ಯಾರಿರುವುದಿಲ್ಲ. ತನ್ನ ಸೈನ್ಯವನ್ನು ಇನ್ನೂ ಹತ್ತು ವರ್ಷಗಳ ತನಕ ಐಗುಪ್ತ್ಯದಲ್ಲಿ ಇರಿಸಬೇಕೆಂದು ಇಂಗ್ಲೆಂಡಿನ ವತ್ತಾಯವಿದೆ. ಸೌಮ್ಯಧೋರಣದ ಸರ್ವತ್ ಪಾಶಾರವರಿಗೆ ಇದರ ಒಪ್ಪಿಗೆ ಇರಬಹುದಾದರೂ ಅವರ ಮಂತ್ರಿಮಂಡಲವು ಇದನ್ನು ನಿರಾಕರಿಸಿರುವುದು. ಆ ಕಾರಣದಿಂದ ಈ ರಾಜಿಪ್ರಸ್ತಾಪವು ಬಿದ್ದುಹೋಗುವುದು. ಹೀಗೆ ಬಿದ್ದುಹೋದ ಇಂಗ್ಲೆಂಡು-ಐಗುಪ್ತ್ಯದ ಸಂಬಂಧವು ೧೯೨೨ನೇ ಇಸವಿಯ ಶರ್ತಗಳಿಗೆ ಅನುಸರಿಯೇ ಇರುವುವಾಗಿ ಚೆಂಬರಲೇನರು ಹೇಳುವದಾದರೂ ನಿಜವಾಗಿ ಯಾವ ರೂಪಕ್ಕೆ ಪರಿಣಾಮ ಹೊಂದಬಹುದೆಂದು ಹೇಳಲಾಗುವುದಿಲ್ಲ; ಇಂತಹ ಸಂದರ್ಭದಲ್ಲಿ ಲೀಗ್ ಒಫ್ ನೇಶನ್ಸು ಸುಮ್ಮನೆ ಕೈಕಟ್ಟಿ ಕೂತುಕೊಳ್ಳುವುದು ಲೀಗಿನ ನಿಷ್ಪ್ರಯೋಜಕತೆಯನ್ನು ತೋರಿಸುವುದು.

ಬಂದರದ ಮಾರಾಟ.

ಹಿಂದೀ ಅರಸರ ಕೈಕೆಳಗಿರುವ ಬಹಳ ಕೆಲವೇ ಬಂದರಗಳಿವೆ. ಆದರೆ ಅವುಗಳನ್ನಿಟ್ಟುಕೊಳ್ಳುವ ಶಕ್ತಿಯೇ ಅವರಲ್ಲಿಲ್ಲವೆಂಬಂತೆ ಕಾಣುತ್ತಿದೆ. ಮೈಸೂರು ನಾಲ್ಕು ದಿಕ್ಕುಗಳಿಂದಲೂ ಬ್ರಿಟಿಷ ಪ್ರಾಂತಗಳಿಂದ ಆವರಿಸಲ್ಪಟ್ಟದ್ದಾಗಿದ್ದು ಒಂದು ಬಂದರವಿಲ್ಲದೆ ತನ್ನ ಕೈಗಾರಿಕೆಗಳನ್ನು ಬೆಳೆಸಲು ಕಷ್ಟಪಡುತ್ತಿದೆಯಾದರೂ ಬ್ರಿಟಿಷ ಸರಕಾರವು ಅದಕ್ಕೊಂದು ಬಂದರನ್ನು ಕೊಡಲು ತಯಾರಿಲ್ಲ. ಭಟ್ಕಳ, ಮಲ್ಪೆ ಮುಂತಾದ ಬಂದರಗಳನ್ನು ತಾನಾಗಿ ಅಭಿವೃದ್ಧಿ ಪಡಿಸಲಾರದಾದರೂ ಹಿಂದೀ ಸರಕಾರವು ಅವುಗಳಲ್ಲೊಂದನ್ನಾದರೂ ಮೈಸೂರಿಗೆ ಕೊಡಲೊಪ್ಪುವದಿಲ್ಲ. ಕೊಚ್ಚಿ ಬಂದರವು ಕೊಚ್ಚಿ ಸಂಸ್ಥಾನದ್ದಾದರೂ ಅದಕ್ಕೆ ಪೂರ್ಣ ಸ್ವಾತಂತ್ರ್ಯವಿಲ್ಲ. ಆದರೆ ಈಗ ಹಿಂದೀ ಸರಕಾರವು ಕಥಿಯಾವಾಡದಲ್ಲಿರುವ ಜಾಮನಗರ ಬಂದರವನ್ನು ಅಲ್ಲಿಯ ರಾಜರಿಂದ ಕ್ರಯಕ್ಕೆ ಪಡೆಯಲು ಪ್ರಯತ್ನಿಸುವುದಾಗಿ ತಿಳಿದು ಬಂದಿದೆ. ಕರ್ತವ್ಯತಃ ಇಂತಹ ಬಂದರಗಳು ನಿರಂಕುಶ ಅಧಿಕಾರಿಗಳಾಗಿದ್ದ ದೇಶೀ ಸಂಸ್ಥಾನಿಕರ ಕೈಯಲ್ಲಿರುವುದಕ್ಕಿಂತಲೂ ಬ್ರಿಟಿಷ ಅಧಿಕಾರದೊಳಗಿರುವುದೇ ಉತ್ತಮವೆಂದು ನಮಗೆ ತೋರುವುದು. ಯಾವಾಗಲೂ ದುಡ್ಡಿನ "ಗರಜಿ"ನಲ್ಲಿರುವ ಈ ರಾಜರು ಉತ್ತಮವಾದ ಈ ಬಂದರವನ್ನು ಮಾರುವುದರಲ್ಲಿ ಆಶ್ಚರ್ಯವಿರದು. ಪ್ರಜಾಸಂಪದಭಿವೃದ್ಧಿಯ ಒಂದಿಷ್ಟಾದರೂ ಯೋಚನೆ ಇವರಿಗೆ ಇಲ್ಲದೆ ಬರೇ ವಿಲಾಸದಲ್ಲಿಯೇ ಮುಳುಗಿರುವಾಗ ಬಂದರುಗಳ ಬೆಲೆ ಯಾರಿಗೆ ತಿಳಿಯ ಬೇಕು? ಇಲ್ಲಿಯೇ ಬ್ರಿಟಿಷ ಸೂಕ್ಷ್ಮ ದರ್ಶಿತೆಗೂ ದೇಶೀ ಅಲಕ್ಷ್ಯಕ್ಕೂ ಇರುವ ತಾರತಮ್ಯವು ವ್ಯಕ್ತವಾಗುವುದು.

ಸಮ್ಮತಿ ವಯಸ್ಸೂ ದಕ್ಷಿಣ ಹಿಂದೂಸ್ಥಾನದ ಮತಾಭಿಮಾನಿಗಳೂ.

ಮದ್ರಾಸು, ಕುಂಭಕೋಣಂ ಇತ್ಯಾದಿ ದಕ್ಷಿಣ ಹಿಂದೂಸ್ಥಾನದ ಹಿಂದೂಗಳ ಧರ್ಮವೇ ಈ ಸಮ್ಮತಿವಯ ಮಸೂದೆಯಿಂದ ಗ್ಲಾನಿ ಹೊಂದ ತೊಡಗಿದೆಯೆಂದು ಇಲ್ಲಿಯ ಚಳವಳಗಳಿಂದ ತಿಳಿಯಬೇಕು. ದಕ್ಷಿಣ ದೇಶದ ಬ್ರಾಹ್ಮಣರ ಧರ್ಮಾಭಿಮಾನವು ವಿಪರೀತವಾದುದೆಂದು ಎಲ್ಲರೂ ತಿಳಿದೇ ಇರುವರು. ಧರ್ಮದ ಹೆಸರಿನಲ್ಲಿ ದೇವದಾಸಿಗಳನ್ನು ಪತನಕ್ಕೆ ಕೊಂಡೊಯ್ದು, ಅವರನ್ನು ಉದ್ಧರಿಸಲೆತ್ನಿಸುವಾಗ ಧರ್ಮಗ್ಲಾನಿಯಾಗುವುದೆಂದು ತಿಳಿಯುವ ಈ ಧರ್ಮಾಭಿಮಾನಿಗಳು ಈ ಸಮ್ಮತಿವಯ ಮಸೂದೆಗೂ ನಿರೋಧವನ್ನು ತಿಳಿಸುವುದು ಆಶ್ಚರ್ಯವಲ್ಲ. ಆದರೆ ಹಿಂದೂ ಗೃಹಗಳು ಬರೇ ಕಾಮತೃಪ್ತಿಯ ವೇಶ್ಯಾಭವನಗಳಾಗಿರದೆ ಅದಕ್ಕಿಂತಲೂ ಮಹತ್ವದ ಅನುಭೂತಿಯ ಕೇಂದ್ರವಾಗಿರಬೇಕೆಂಬುದನ್ನು ಇವರು ತಿಳಿದಂತೆ ತೋರುವುದಿಲ್ಲ. ತತ್ವತಃ ಮದುವೆಯು ಅತೀ ಪವಿತ್ರವೂ ಅವಿಚ್ಛಿನ್ನವೂ ಆದ ದೈವೀ ಸಂಬಂಧ. ಆದರೆ ಕಾರ್ಯತಃ ಹಿಂದೂ ಗೃಹಗಳಲ್ಲಿ ಈಗಿನ ಸಾಂಪ್ರದಾಯಗಳ ಕಾರಣದಿಂದ ಈ ದೈವೀಕತೆಯು ಉಳಿಯುವುದಿಲ್ಲ. ಧರ್ಮಾಧಿಕಾರಿಗಳಿಂದ ಈ ವಿಷಯ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕಾಗಿ ಕುಂಭಕೋಣಮದ ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಹೇಳುವರು. ಆದರೆ ಹಿಂದೂಗಳ ಪರವಾಗಿ ಮಾತನಾಡ ಬಲ್ಲ ಧರ್ಮಾಧಿಕಾರಿಗಳು ಯಾರಾದರೂ ಇರುವರಾಗಿ ನಾವು ನೆನಸುವುದಿಲ್ಲ. ಧರ್ಮಾಧಿಕಾರಿಗಳೆನ್ನುವವರು ಅವರ ಜಡತೆಯಿಂದ ಆ ಅಧಿಕಾರವನ್ನು ಕಳಕೊಂಡಿರುವರು.

ಚುನಾವಣೆಗಳ ಗದ್ದಲ.

ಚುನಾವಣೆಗಳ ಗದ್ದಲವು ತಪ್ಪಲಿಕ್ಕೆ ಇಲ್ಲವೇ ಇಲ್ಲ. ಈಗ ತಾಲೂಕು ಬೋರ್ಡುಗಳ ಚುನಾವಣೆಗಳಿಗೆ ಆರಂಭ. ಮಂಗಳೂರು ತಾಲೂಕು ಬೋರ್ಡಿನ ಕೆಲವು ಚುನಾವಣೆಗಳು ಆಗಿ ಹೋದವು. ಇನ್ನು ಕೆಲವು ಆಗಲಿಕ್ಕಿವೆ. ಉಡುಪಿ, ಕಾರ್ಕಳ ತಾಲೂಕು ಬೋರ್ಡುಗಳ ಚುನಾವಣೆಗಳ ಚಳವಳ ನಡಿಯುತ್ತಾ ಉಂಟು. ಉಮೇದ್ವಾರರ ಗುಣಕಥನ—ಖಂಡನಗಳು ವಿರಾಮವಿಲ್ಲದೆ ಸಾಗುತ್ತಿವೆ. ಜಾತಿಯೊ, ವ್ಯಕ್ತಿಯೊ ಮನಸ್ವೀ ದ್ವೇಷಾಸೂಯೆಗಳ ಪ್ರಕಟಣೆಯೂ ನಡೆಯುತ್ತಿದೆ. ಸಹಜವಾಗಿ ಯೋಗ್ಯತೆಗಳನ್ನು ತೂಗುವುದು ಕೆಲವರು; ವೈಯಕ್ತಿಕ ಲಾಭಕಷ್ಟಗಳ ಲೆಖ್ಖಾಚಾರದಿಂದ ರಾಷ್ಟ್ರೀಯ ಹಿತಾಹಿತಗಳನ್ನು ಗುಣಿಸಿಕೊಳ್ಳುವವರು ಕೆಲವರು; ಸ್ವಜಾತ್ಯಭಿಮಾನದ ಅಮಿತಭಾವವನ್ನು ತೋರುವವರು ಕೆಲವರು. ಹೇಗೂ ಸ್ಥಳೀಕ ಸ್ವರಾಜ್ಯದ ಮಹತ್ವವು ಜನಜನಿತವಾಗುತ್ತಾ ಬರುತ್ತಿದೆ. ಉಮೇದ್ವಾರರ ಈ ಜನಸೇವೆಯ ನಿಸ್ವಾರ್ಥತೆಯ ಸ್ವಾರ್ಥವನ್ನು ಸಂರಕ್ಷಿಸಲಿಕ್ಕೆ, ಈ ಮಧ್ಯೆ, ಪೋಲಿಸರೇ ಬೇಕಾದುದು ಈ ಮಹತ್ವದ ಮಹತ್ವ. ಈ ಚುನಾವಣೆಗಳು ದೇಶವನ್ನುದ್ಧರಿಸುವುವೊ, ಏನೊ? ಚುನಾಯಿಸಲ್ಪಟ್ಟವರೇ ಹೇಳಬೇಕು.

ನೋಟಗಳು.
NOTES.

"ಪ್ರೆಸಿಡೆಂಟರು ಹಾಗೆ ಮಾಡಿದರು; ಪ್ರೆಸಿಡೆಂಟರು ಹೀಗೆ ಮಾಡಿದರು; ಐನೂರರ ಕೆಲಸಕ್ಕೆ ಒಂದು ಸಾವಿರ ಖರ್ಚುಮಾಡಿದರು" ಇತ್ಯಾದಿ ಮಾತುಗಳು ... ಆದರೆ ಬೋರ್ಡ ಮೆಂಬರರು ಮಾಡುವುದೇನು? ... ಕುರ್ಚಿಯ ಮೇಲೆ ಕುಳಿತು ಆಕಳಿಸುತ್ತ ಹೂಂಗುಟ್ಟುವುದೇ?

• • • •

ಸ್ಥಳೀಕ ಸ್ವರಾಜ್ಯ ಸಂಸ್ಥೆಗಳಂತೂ ಪ್ರಾತಿನಿಧ್ಯದಿಂದ ಜನತೆಯ ಇಚ್ಛೆಯಂತೆ ಆಳಿಸಿಕೊಳ್ಳುವದಂತೆ. ಆದರೆ ಪ್ರೆಸಿಡೆಂಟರೇ ಡಿಕ್ಟೇಟರರಾಗಿದ್ದು ಮೆಂಬರರು ತಾವೂ ಮೆಂಬರರೆನ್ನಿಸಿಕೊಳ್ಳುವುದರಲ್ಲಿಯೇ ತೃಪ್ತರಾಗಿರುವುದು ಈ ಡಿಮೊಕ್ರಸಿಯ ವಿಶೇಷತ್ವ.

• • • •

ಸ್ಯಾಮನ್ ಕಮಿಶನ್ನಿಗೆ ಹರತಾಳ ಒಂದು ಅಭ್ಯಾಸದ ಸ್ವಾಗತವಾಗಿ ಇಷ್ಟರೊಳಗೆ ತಿಳಿದಿರಬೇಕು; ಹೋದಲ್ಲೆಲ್ಲಾ ಹರತಾಳ. ಹರತಾಳವಿಲ್ಲದಿದ್ದರೆ ಅವರಿಗೆ ಸ್ವಾಗತವೇ ಇಲ್ಲವೆಂದು ಅನ್ನಿಸಿರಬಹುದು. ಸ್ಯಾಮನ್ ಕಮಿಶನೂ ಈ ಹರತಾಳದ ಶೂನ್ಯತೆಯಲ್ಲಿ ಚೆನ್ನಾಗಿ ಆನಂದಿಸುತ್ತಿದೆ.

• • • •

ಒಂದು ಕಡೆಯಲ್ಲಿ ಪೋಲಿಸ್ ಸಂಖ್ಯೆಯನ್ನೆಲ್ಲಾ ಈ ಸ್ವಾಗತದ ಸಮಾರಂಭಕ್ಕಾಗಿ ಒಟ್ಟುಕೂಡಿಸಬೇಕಾಯಿತು. ಪೋಲಿಸ ಸಂಖ್ಯೆಯು ಮತ್ತೇನಲ್ಲದಿದ್ದರೂ ಇಂತಹ ಎಮರ್ಜನ್ಸಿಗಳಿಗೆ ಬಹಳ ಸಹಾಯಕವಿದೆ.

• • • •

ಮೈಸೂರಿಗೆ ಪ್ರಾಥಮಿಕ ಒತ್ತಾಯ ಶಿಕ್ಷಣ—ಇದಕ್ಕಾಗಿ ಸರಕಾರ ಕೊಡುವುದು ೨೪ ಲಕ್ಷ; ಜನರು ತಾವಾಗಿ ಕೊಡುವುದು ೧೬ ಲಕ್ಷ; ಬೋರೇ ಗೌಡನ ಹಿತಚಿಂತಕ "ವಿಶ್ವಕರ್ನಾಟಕಕ್ಕೆ ಹತ್ತಿದೆ ಚಿಂತೆ—ಬೋರೇ ಗೌಡನ ತಲೆಗೆ ಬಂತು ೪೦ ಲಕ್ಷದ ತೆಂಗೆ! ಎಂದು ಖರ್ಚಿಲ್ಲದ ಒತ್ತಾಯದ ಶಿಕ್ಷಣ ಇನ್ನು ತಿಳಿಯಬೇಕು, "ವಿಶ್ವಕರ್ನಾಟಕ"ದಿಂದ.

• • • •

ದಕ್ಷಿಣ ಆಫ್ರಿಕದಲ್ಲಿ ವಜ್ರದ ಪ್ರದೇಶಗಳು ಹೆಚ್ಚಾಗ ಹತ್ತಿವೆ. ಹೆಕ್ಕುವುದೇ ಬಾಕಿ. ಸರಕಾರದ ಮಂತ್ರಿಯವರೊಬ್ಬರು ಒಂದು ಗಂಟೆಯೊಳಗೆ ೧೦,೦೦೦ ಬೆಲೆಯ ವಜ್ರವನ್ನು ಹೆಕ್ಕಿದರಂತೆ. ವಜ್ರವು ಈ ರೀತಿ ಧಾರಾಳವಾದರೆ ವಜ್ರದ ಬೆಲೆಯು ತಗ್ಗದಿರದು.

• • • •

"ಇದ್ದವರಿಗೆ ಕೊಡಲ್ಪಡುವುದು" ಎಂದು ಬೈಬಲಿನ ವಾಕ್ಯ. ಬಿಳೇಯವರ ಈ ಅದೃಷ್ಟವನ್ನು ನೋಡುವಾಗ ಈ ವಾಕ್ಯವು ಸತ್ಯವೆನ್ನುತ್ತದೆ.

• • • •

Crossword Puzzleಗಳಿಂದ ಲಾಭವಾಗದೇಕೋ? ದೈನಿಕಪತ್ರಿಕೆಗಳ ಎಡ್ವರ್ಟೈಸಮೆಂಟ್ ನೋಡಿ. ಸುಲಭದಲ್ಲಿ ದುಡ್ಡು ಮಾಡಿ ದೊಡ್ಡವರಾಗಿ. ಕೆಲವು ರಾತ್ರಿ ತಲೆಕರಡು, ಕೆಲವು ದಿನ ಕಾಯುವಿಕೆ. ಮತ್ತೆ ಬರುವುದು ದುಡ್ಡು—ಬಂದರೆ. ಇದರ ಉತ್ಸಾಹದಲ್ಲಿ ಗೋವಾ ಲೊಟರಿಯ ನೆನಪೇ ಉಳಿಯಲಿಲ್ಲ.

• • • •

ಆದರೆ ಕಷ್ಟವಿಲ್ಲದೆ ದುಡ್ಡು ಸಿಕ್ಕಬಲ್ಲ ಲೋಟರಿಯೇ ಈ ಕ್ರೊಸ್‌ವರ್ಡ ಪಜಿಲಿಗಿಂತ ಉತ್ತಮವಲ್ಲವೇ?

• • • •

ಕಣಿಯರ ಸತ್ಯಾಗ್ರಹದ ವಿಶೇಷವು ಕಣಿಯರ ಪತ್ರಿಕೆಯ ಸತ್ಯಾಗ್ರಹ. ಪತ್ರಿಕೆಯ ಸತ್ಯಾಗ್ರಹದ ಮುಂದೆ ಕಮಿಟಿಯರ ಸತ್ಯಾಗ್ರಹವು ಬಲಗೆಡದಿದ್ದರೆ ಅಭಿನಂದನೀಯ.

• • • •

ಕಣಿಯರ ಪತ್ರಿಕೆಗಾಗಿ ಸತ್ಯಾಗ್ರಹವು ಅಗತ್ಯವಿದೆಯೇ? ಎಂಬುದೊಂದು ಪ್ರಶ್ನೆ. ಕಣಿಯರ ಪತ್ರಿಕೆಯು ಪ್ರಕಟಿಸಲು ಉದ್ದೇಶಿಸುವ ವಿಷಯಗಳನ್ನು ಪ್ರಕಟಿಸಲು ಇತರ ಹಲವು ಪತ್ರಿಕೆಗಳು ತಯಾರಿರುವಾಗ ಸತ್ಯಾಗ್ರಹ ಮಾಡಿ ಪ್ರಕಟಿಸುವ ಕ್ರಮವನ್ನು ಶ್ರೀ. ತಗಡೂರು ರಾಮಚಂದ್ರರಾಯರು ವಹಿಸದಿದ್ದರೆ ಕಣಿಯರ ಸತ್ಯಾಗ್ರಹಕ್ಕೆ ಹೆಚ್ಚಿನ ಸಹಾಯವಾಗಬಹುದು.

• • • •

ಬರುವ ಎಪ್ರಿಲ್‌ನಲ್ಲಿ ಜಬಲಪುರದಲ್ಲಿ ಹಿಂದೂ ಮಹಾಸಭೆಯು ಕೂಡುವುದು. ಇಂದೂರಿನ ಮಾಜಿಮಹಾರಾಜರಾಗಿರುವ ಸರ್. ತುಕೋಜಿರಾಯರು ಮಿಸ್. ಮಿಲ್ಲರರೊಡನೆ ಆ ಸಮ್ಮೇಲನಕ್ಕೆ ಬರುವರು. ತುಕೋಜಿ ಮಹಾರಾಜರು ಇನ್ನು ಸಾರ್ವಜನಿಕ ಚಳವಳಗಳಲ್ಲಿ ಸೇರಲಿಚ್ಛಿಸುವರಂತೆ!

• • • •

ಮಿಸ್ ಮಿಲ್ಲರಳು ಮತಾಂತರದ ಶುದ್ಧಿಯೊಡನೆ ಇವರ ಹಿಂದೂ ಮಹಾಸಭೆಯ ಸೇರುವಿಕೆಯು ಸಭೆಯ ಕಾರ್ಯಕ್ರಮದ ಚೆನ್ನಾದ ಆರಂಭವಾಗಬಹುದೇನೊ! ಆದರೆ ಇದರಿಂದ ಅವರ ಪ್ರಣಯಾಭಿನಯಗಳು ಅಕ್ಷರಿ ಹೊಂದುವುದು ಮಾತ್ರ ಸಂದೇಹವಿದೆ.

ಅನುಕ್ರಮಣಿಕೆ.

[illegible]

ಸ್ವದೇಶಾಭಿಮಾನಿ

[illegible]

ಕರ್ನಾಟಕ ಪತ್ರಿಕೆಗಳು.

[illegible] ಬರುತ್ತಿವೆ.

[illegible] ಪತ್ರಿಕೆಗಳು ಹೆಚ್ಚಾಗಿದ್ದರೂ [illegible] ಕಡಿಮೆಯಿದೆ.

ಪತ್ರಿಕೆಗಳು ಹೆಚ್ಚಾಗಿದೆ [illegible] ಪ್ರತಿಧ್ವನಿಯು ಪ್ರತಿಬಿಂಬಿಸಲ್ಪಡುವುದಿಲ್ಲವೆಂಬುದೇನೂ [illegible] ಗೌರವಿತರೂ ಸಮಾಜದ ಪ್ರಮುಖರೂ [illegible] ವಾಗಿದೆ. ಈ ಕಾರಣದಿಂದ ಜನತೆಯು ಪತ್ರಿಕಾ [illegible] ಅಷ್ಟೊಂದು ಉತ್ಸಾಹಿತನಾಗಿರುವುದಿಲ್ಲ. ಹಾಗೆಯೇ ಪತ್ರಿಕೆಗಳಿಗಿರಬೇಕಾದ ಜನಾದರದ ಅಭಾವದ ಕಾರಣ [illegible] ಪ್ರಮುಖರು ಪತ್ರಿಕೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವುದರ ಆವಶ್ಯಕತೆಯನ್ನು ಕಾಣುವುದಿಲ್ಲ. ಆದುದರಿಂದ ಕರ್ನಾಟಕ ಪತ್ರಿಕೆಗಳಿಗೆ [illegible] ಒಂದು ಪ್ರಮುಖ ಸಮಸ್ಯೆಯಾಗಿರುತ್ತದೆ. ಪತ್ರಿಕೆಗಳು ಇದರ ಕಡೆಗೆ ಗಮನವನ್ನಿಟ್ಟರೆ ಉತ್ತಮವಿದ್ದಿತು.

ವಾಚನಾಭಿರುಚಿಯು ಕರ್ನಾಟಕಕ್ಕೆ ಇಷ್ಟು ಕಡಿಮೆ ಯೇಕೆ? ಹಿಂದೂಸ್ಥಾನದ ಇತರ ದೇಶಭಾಷೆಗಳಿಗೆ, ಸಾಧಾರಣ ಎಲ್ಲ ಭಾಷೆಗಳಿಗೂ ಜನಾದರವು ಇರುತ್ತಿದೆ. ಕೇರಳ ಪ್ರಾಂತವು ಇಷ್ಟು ಚಿಕ್ಕದಾದರೂ ಮಲೆಯಾಳಿ ಭಾಷೆಗೆ ಸಿಕ್ಕುವ ಪ್ರೋತ್ಸಾಹವನ್ನು ನೋಡಿದರೆ ಆಶ್ಚರ್ಯವೆನ್ನಿಸುತ್ತಿದೆ. ಕೇರಳ ಪ್ರಾಂತಕ್ಕೂ ಅನ್ಯೆಸರ್ಗಿಕ ರಾಜಕೀಯ ವಿಭಾಗಗಳಿವೆ. ಆದರೂ ಮಲೆಯಾಳಿ ಭಾಷೆಯ ಅಭಿವೃದ್ಧಿಯನ್ನೂ ಕರ್ನಾಟಕ ಭಾಷೆಯ ಅಭಿವೃದ್ಧಿಯನ್ನೂ ಸರಿಹೋಲಿಸಿದರೆ ಮಲೆಯಾಳಿ ಭಾಷೆಯುಳ್ಳವರ ಕೆಲಸವು ನಮ್ಮಲ್ಲಿ ಆಶ್ಚರ್ಯವನ್ನುಂಟು [illegible] ಕರ್ನಾಟಕಕ್ಕೆ ಇಷ್ಟು ವಿಶಾಲ [illegible] ರಾಜಕೀಯ ವಿಭಾಗಗಳು ವಾಙ್ಮಯ [illegible]

[illegible] ಪತ್ರಿಕೆಗಳು ತಮ್ಮ ಶಕ್ತಿಯನ್ನು [illegible] ಪತ್ರಿಕೆಗಳ ಕೆಲಸವು [illegible] ಮಾಡುವುದು ಮಾತ್ರವೇ [illegible] ರಚಿಸಬೇಕು. [illegible] ಸಾಧ್ಯವಾಗಲಿಲ್ಲವೆಂಬು [illegible] ಇದಕ್ಕಾಗಿ ಸಾಕಷ್ಟು [illegible] ಸಾಧ್ಯವಾಗದಿರಲು [illegible]

[illegible] ಪ್ರಶ್ನೆಯಾಗಿಲ್ಲ. [illegible] ಆದುದರಿಂದ ಪತ್ರಿಕೆ [illegible] ಪತ್ರಿಕಾಕರ್ತರದಾಗಿ [illegible] ಈಗಿನಂತೆ [illegible] ವಿಷ [illegible] ಕೆಲವು ಪತ್ರಿಕೆ [illegible] ಒಳ್ಳೆಯದು. [illegible] ನಿರೋಧಿಸ [illegible] ರಚನೆ [illegible] ಸಾಧ್ಯವಿದೆ.

[illegible] ಸಿದ್ಧರಿರು [illegible] ವರ್ಷಗಳಿಂದಲೂ [illegible]

[illegible] ವರ್ತಮಾನ.

[illegible] ವಿಜೃಂಭಣೆಯಿಂದ [illegible] ಉಪಚಾರಾದಿಗಳು [illegible]

[illegible] ಜೇಮ್ಸ್ [illegible]

[illegible] ಒಂದು [illegible] ಪೌಂಡು [illegible]

[illegible] ಕೈದುಮಾಡಿರುವರು. [illegible]

[illegible] ಹಡಗವನ್ನು [illegible] ಸಾಮಾನುಗಳನ್ನು [illegible] ಬಹು ಕಷ್ಟದಿಂದ [illegible]

[illegible] ೧೩ ಜನ [illegible]

[illegible] ಆಕಾಶ [illegible] ವಿಮಾನವನ್ನು ಕೆಳ [illegible] ಸಂಧಿಸಿದರಂತೆ. [illegible] ಯಾವಾಗ ಸರಿ [illegible]

[illegible] ಈಗಿರುವ [illegible] ಕೌನ್ಸಿಲಿನಲ್ಲಿ [illegible]

[illegible] ಉಪದೇಶನು [illegible]

[illegible] ವಿನೋದ [illegible] ಸಾಮಾನುಗಳನ್ನು [illegible] ಮಾಡುತ್ತಿರುವರು. [illegible] ಪರೀಕ್ಷಿಸು [illegible] ಇತರ ಕೆಲವು [illegible]

— ಲೊರ್ಡ್ [illegible] ಧಾರಾಳ [illegible] ಮತ್ತು ರೇಮ್ಸೆಟ [illegible] ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ [illegible]

— [illegible] ರೂಪದಲ್ಲಿ ೨೫೦ [illegible]

— [illegible] ಕೊಡುತ್ತಿದ್ದ ಬಡ್ಡಿ [illegible]

— ಮೆಕ್ಸಿಕೊದ ಪ್ರೆಸಿಡೆಂಟನಾದ ಕೊಲ್ಲನೆಂಬವನನ್ನು ಕೊಲ್ಲುವದಕ್ಕೆ ಕ್ರೈಸ್ತಪಾದರಿಯಾದ [illegible] ಎಂಬವನು ಪ್ರಯತ್ನಿಸಲಾಗಿ ಕೊನೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದನು. ಪ್ರೆಸಿಡೆಂಟನು ಮರಣಪಟ್ಟರೆ, ಆತನ ಸ್ಥಾನವು ಅನಾಯಾಸವಾಗಿ ತನಗೆ ಲಭಿಸುವದೆಂಬ ಅಭಿಲಾಶೆಯೇ ಪಾದರಿಯ ಈ ತರದ ಕ್ರೂರವರ್ತನೆಗೆ ಕಾರಣ.

— ಇಂಗ್ಲಾಂಡಿನ ಬಹು ಹಳೇ ಬೆರಿಸ್ಟರರಾಗಿದ್ದ ಸರ್. ಹೆರಿ ಪೂಲೆಂಡರು ವೃತಪಟ್ಟರು. ಇವರು ೯೯ ವರ್ಷ ಪ್ರಾಯದವರು. ವಕೀಲತನವನ್ನು ೬೬ ವರ್ಷ ನಿರ್ವಹಿಸಿದರು.

— ಬ್ರಿಟಿಷ ಕೈಗಾರಿಕೆಗಳ ಪ್ರದರ್ಶನವು ಕಳೆದ ಆದಿತ್ಯವಾರ ಕೊನೆಗಂಡಿತು. ನೂರು ಸಾವಿರ ಜನರು ಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕಾಗಿ ಬಂದಿದ್ದರು. ಸಮುದ್ರದಾಚೆಯಿಂದ ಬಂದವರಲ್ಲಿ ೬೦ ರಾಜ್ಯಗಳ ಜನರಿದ್ದರು. ಪ್ರದರ್ಶನವು ಸಂತೋಷದಾಯಕವಾಗಿತ್ತು. ಜಯಪ್ರದವಾಗಿ ನಡೆಯಿತು. ಈ ಪ್ರದರ್ಶನವು ಜರಗಿದುದರಿಂದ ಆಶ್ಚರ್ಯಕರ ಕೈಗಾರಿಕೆ ವಸ್ತುಗಳು ಎಲ್ಲರಿಗೂ ಕಾಣಸಿಕ್ಕಿದಂತಾಯಿತು.

— ಒಟ್ಟೊ ರೈಮಂಡ ಮತ್ತು ರೊಬರ್ಟ ರೈಮಂಡ್ ರೆಂಬ ಇಬ್ಬರು ಸಹೋದರರು ನಡೆದುಕೊಂಡೇ ಭೂಸಂಚಾರವನ್ನು ಮಾಡಬೇಕೆಂದು ೧೯೨೬ನೇ ಇಸವಿ ಜುಲೈ ತಿಂಗಳಲ್ಲಿ ಹೊರಟಿದ್ದರು. ಅವರು ಈಗ ಬಸರಾದೇಶಕ್ಕೆ ತಲಪಿರುವರು. ಇನ್ನು ನಾಲ್ಕು ವರ್ಷಗಳ ವರೆಗೆ ಅವರು ಹಿಂದೂದೇಶ, ಚೀನಾ, ಉತ್ತರ ಅಮೇರಿಕಾ ಮುಂತಾದ ದೇಶಗಳಲ್ಲಿ ಸಂಚರಿಸಿ ತಮ್ಮ ಪ್ರಯಾಣವನ್ನು ಮುಗಿಸುವರು.

— ಲೆಫ್ಟಿನೆಂಟ್ ಬೆಂಟಲೀ ಎಂಬವರು ಕೇಪ್ ಆಫ್ ಗುಡ್ ಹೋಪಿನಿಂದ ಇಂಗ್ಲಾಂಡಿಗೆ ವಿಮಾನದಲ್ಲಿ ಕುಳಿತು ಹಾರಬೇಕೆಂದು ನಿರ್ಣಯಿಸಿರುವರು.

— ಎಂಟವರ್ಪಿನಲ್ಲಿ ಜೂಟ್‌ನಾರನ್ನು ತುಂಬಿಸಿದ ಒಂದು ಹಡಗಕ್ಕೆ ಬೆಂಕಿ ಬಿದ್ದು ೧೦೩ ಬೇಲು ನಾರು ಸುಟ್ಟುಹೋಯಿತು. ಬೆಂಕಿಯನ್ನು ನೊಂದಿಸಲಿಕ್ಕೆಂದು ನೀರನ್ನು ಹೊಯ್ದುದರಿಂದ ಸುಡದೆ ಬಾಕಿ ಉಳಿದ ನಾರು ನೀರಿನಿಂದ ತೊಯ್ದು ಹಾಳಾಯಿತು.

— ಮಾಲ್ಟಾದಲ್ಲಿ ಬ್ರಿಟಿಷರ ಸ್ಟೀಮರಾದ ಕೊರಿಂಥಿಕ್ ಎಂಬುದು ಕ್ವೀನ್ ಎಲಿಜಬೆಥ್ ಎಂಬ ಯುದ್ಧ ನಾವೆಗೆ ತಾಗಿ ಎರಡು ಹಡಗಗಳಿಗೂ ಪೆಟ್ಟಾಗಿರುತ್ತದೆ.

- ಗ್ಲಾಸಗೋ ಪಟ್ಟಣದ ಗ್ಲೈಟ ಥಿಯೇಟರಿನಲ್ಲಿ ಫೂಟ್‌ಬೋಲ್ ಆಟದ ಕುರಿತು ಎರಡು ಪಂಗಡಗಳೊಳಗೆ ಚರ್ಚೆಯಾಗಿ ಕೊನೆಗೆ ಗುದ್ದಾಟಕ್ಕೆ ಪ್ರಾರಂಭವಾಯಿತು. ಕುಪ್ಪಿಗಳಿಂದ ಹೊಡಕೊಂಡರು. ಇದನ್ನು ಕಂಡು ಹೆದರಿ ಥಿಯೇಟರಿನಲ್ಲಿ ಕೂಡಿದ್ದ ಜನರೆಲ್ಲರೂ ಚೆಲ್ಲಾಪಿಲ್ಲಿ ಓಡಿಹೋದರು. ಅಷ್ಟರಲ್ಲಿ ಪೋಲೀಸರು ಬಂದು ಜಗಳವನ್ನು ನಿಲ್ಲಿಸಿ, ಅದಕ್ಕೆ ಮುಖ್ಯ ಕಾರಣಭೂತರಾದ ೬ ಜನರನ್ನು ಕೈದು ಮಾಡಿದರು. ಲಡಾಯಿ ನಡೆಯುತ್ತಿರುವಾಗಲೇ ಅತ್ತ ಕಡೆ ಇಬ್ಬರು ಹುಡುಗಿಯರ ನಾಟ್ಯವೂ ನಡೆಯುತ್ತಿತ್ತು. ಆದರೆ ಅದನ್ನು ಯಾರೂ ಗಮನಿಸಲಿಲ್ಲ.

ಒಳದೇಶ ವರ್ತಮಾನ.

— ಆಸ್ಸಾಮ್ ಕೌನ್ಸಿಲಿನ ಬರುವ ಅಧಿವೇಶನದಲ್ಲಿ ಸ್ವರಾಜ್ಯ ಪಾರ್ಟಿಯ ಮೆಂಬರರೆಲ್ಲರೂ ಒಟ್ಟು ಕೂಡಿ, ಸೈಮನ್ ಕಮಿಶನಿನಲ್ಲಿ 'ನಂಬಿಗೆ ಇಲ್ಲ'ವೆಂಬ ಠರಾವನ್ನು ಮಂಜೂರು ಮಾಡಲಿರುವರು.

— ಪಂಜಾಬಿನ ನೇಶನಲ್ ಬೇಂಕಿನಲ್ಲಿ ದೇಸರಾಜ ಮತ್ತು ರಾಮಗೋಪಾಲ ಎಂಬವರಿಬ್ಬರು ಫೋರ್ಜರಿಯನ್ನು ಮಾಡಿ ಹಣದಲ್ಲಿ ಮೋಸ ಮಾಡಿದುದರಿಂದ ಲಾಹೋರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅವರನ್ನು ರಿಮಾಂಡಿನಲ್ಲಿಟ್ಟಿರುವರು.

— ಕಲಕತ್ತದ ಯುವತಿಯರು ಶ್ರೀಮತಿ ಉರ್ಮಿಳಾದೇವಿಯವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ಬ್ರಿಟಿಷ ವಸ್ತ್ರಗಳನ್ನು ಪೂರ್ಣ ತ್ಯಜಿಸಬೇಕೆಂದು ಠರಾವು ಮಂಜೂರು ಮಾಡಿದರು— ಈ ಸಮಯದಲ್ಲಿ ಸಭಾಷ ಚಂದ್ರ ಬೋಸರು ವಿದೇಶಿ ವಸ್ತ್ರ ಬಹಿಷ್ಕಾರದ ಆವಶ್ಯಕತೆಯ ಕುರಿತು ಚೆನ್ನಾಗಿ ಭಾಷಣವನ್ನು ಮಾಡಿದರು

— ಮದರಾಸಿನಲ್ಲಿ ಎಲೆಗಳನ್ನು ಕೊಯ್ಯುವದಕ್ಕಾಗಿ ಒಬ್ಬ ಹುಡುಗನು ೨೫ ಫೀಟ್ ಎತ್ತರವಿರುವ ಒಂದು ಮರವನ್ನು ಹತ್ತಿದ್ದಾಗ ಕೆಳಗೆ ಬಿದ್ದು ತುಂಬಾ ಜಖಮು ಆಗಿ ಆಸ್ಪತ್ರೆಯಲ್ಲಿ ಸತ್ತನು.

— ಊಟಾಕಮಂಡಿನಲ್ಲಿ ಬರುವ ಮೇ ತಿಂಗಳಲ್ಲಿ ಒಂದು ಎಜುಕೇಶನಲ್ ಎಕ್ಸಿಬಿಶನನ್ನು ಜರಗಿಸುವರು. ಇದನ್ನು ತೆರೆಯಲಿಕ್ಕೆ ಗವರ್ನರ ದೊರೆಗಳನ್ನು ಆಮಂತ್ರಿಸುವರು. ಇದರೊಂದಿಗೆ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಒಂದು ಪರಿಷತ್ತು ಕೂಡುವದು.

— ತಿನ್ನವೆಲ್ಲಿಯಲ್ಲಿ ಒಬ್ಬ ಹೆಂಗಸಿನ ವೃತದೇಹವು ಸಿಕ್ಕಿರುವದು. ಈ ಹೆಂಗಸಿಗೆ ಸುಮಾರು ೨೦ ವರ್ಷ ಪ್ರಾಯವಾಗಿದೆ. ಕೊಲೆ ಮಾಡಿದುದು ಯಾರೆಂದು ತಿಳಿಯುವದಿಲ್ಲ. ಶೋಧನೆಯು ನಡೆಯುತ್ತಲೇ ಇದೆ.

— ಎಸ್. ಎಸ್. ಎಲ್. ಸಿ ಬೋರ್ಡಿನವರು ಕುಂಭಕೋಣದ ಎಲ್ಲಾ ಹ್ಯಾಸ್ಕೂಲುಗಳ ವಿದ್ಯಾರ್ಥಿಗಳನ್ನು ಒಟ್ಟುಕೂಡಿಸಿ ಒಂದೇ ಕಡೆಯಲ್ಲಿ ಪರೀಕ್ಷೆ ನಡೆಸಬೇಕೆಂದು ಆಲೋಚಿಸಿದ್ದರು. ಆದರೆ ಇದರಿಂದ ತಮಗೆ ಒಪ್ಪಿಗೆಯಿಲ್ಲವೆಂದು, ಉಪಾಧ್ಯಾಯರೆಲ್ಲರೂ ಇದಕ್ಕೆ ನಿರಾಕರಿಸಿರುವರು

— ಮಧುರೆಯಲ್ಲಿ ಕೈಲ್ಸಿ ಕೂಲಿಯ ಒಬ್ಬ ಮಗನು ಬಾವಿಯಲ್ಲಿ ಬಿದ್ದು ವೃತನಾದನು

— ತಿರುವಲೂರಿನ ಶ್ರೀತ್ಯಾಗರಾಜ ರಥವನ್ನು ಕಟ್ಟಿಸುವ ಬಗ್ಗೆ ಮಲಬಾರಿನ ಮರವನ್ನು ಕೊಂಡುಕೊಳ್ಳುವದಕ್ಕಾಗಿ ವಿದ್ಯಾಪತಿ ಮಂಗಲಮ್ ಆಸ್ತಿಯ ರಂಗನಾಥ ಮುದಲಿಯಾರರೆಂಬವರು ರೂಪಾಯಿ ೫,೦೦೦ವನ್ನು ದಾನಮಾಡಿದರು.

— ಶ್ರೀ ನಾರಾಯಣ ಗುರುಸ್ವಾಮಿಯವರು ಈಗ ಪಾಲಘಾಟಿಗೆ ಬಂದಿರುವರು. ಅವರೊಂದಿಗೆ ಡಾಕ್ಟರ್ ವಿಶ್ವನಾಥ ಮೆನನರು ಇರುವರು. ಪ್ರಯಾಣದಿಂದ ಸ್ವಾಮಿಜಿಯವರ ಆರೋಗ್ಯದಲ್ಲಿ ಬದಲಾವಣೆಗಳಾವವೂ ಆಗಿಲ್ಲ.

— ತಮಿಳನಾಡಿನ ಕಾಂಗ್ರೆಸ್ ಖಾದಿ ವಸ್ತ್ರಾಲಯದಲ್ಲಿ ಕಳೆದ ಫೆಬ್ರುವರಿ ತಿಂಗಳಲ್ಲಿ ಒಟ್ಟು ರೂಪಾಯಿ ೬೩೫೬–೧೪–೬ರ ಖಾದಿ ವಸ್ತ್ರವು ವಿಕ್ರೀತವಾಯಿತು.

— ಅಖಿಳಭಾರತೀಯ ಹಿಯೂಪರಿಷತ್ತಿನ ೨ನೇ ವಾರ್ಷಿಕ ಅಧಿವೇಶನವು ಕಲಕತ್ತದಲ್ಲಿ ತಾರೀಕು, ೭, ೮, ೯ರಲ್ಲಿ ಜರಗುವದು. ಪಾಯರಪುರ ಮತ್ತು ಸಿಂಧೂದೇಶದ ಅಮೀರರು ಅಧ್ಯಕ್ಷರಾಗುವರು.

— ಕಲಕತ್ತದಲ್ಲಿ ೧೦ ಸಾವಿರ ಕಸಗುಡಿಸುವವರು ಮುಷ್ಕರಹಾಕಿ ಕೆಲಸಕ್ಕೆ ಬರಲೇ ಇಲ್ಲ. ಅವರಿಗೆ ಕೊಡುತ್ತಿರುವ ಸಂಬಳವು ಬಹು ಕಡಿಮೆಯಾಗಿರುವುದೇ ಇದಕ್ಕೆ ಕಾರಣವಂತೆ. ಮೊದಲೆಲ್ಲರೂ ಅವರು ಒಟ್ಟುಕೂಡಿ ಮುಖ್ಯ ಎಕ್ಸಿಕ್ಯೂಟಿವ್ ಆಫೀಸರರಿಗೆ ತಮ್ಮ ಕಷ್ಟಗಳ ಕುರಿತು ಒಂದು ಅರ್ಜಿಯನ್ನು ಮಾಡಿದ್ದರು. ಆಫೀಸರರು ಇದಕ್ಕೆ ಕಿವಿಕೊಡದಿದ್ದುದರಿಂದ ಬಿಳಿ ಮನಸ್ಸಿನಿಂದ ಮುಷ್ಕರ ಹಾಕಿಯೇ ಬಿಟ್ಟರು.

— ವ್ಯಾಸರಾಯ ದೊರೆಗಳವರು ಪಾಟಿಯಾಲಕ್ಕೆ ತೆರಳಿರುವರು. ಸೋಮವಾರ ಬೆಳಿಗ್ಗೆ ಅವರು ಅಲ್ಲಿಗೆ ತಲಪುವರು. ಪ್ರಾತಃಕಾಲ ಪಾಟಿಯಾಲದ ರಾಜರು ಅವರನ್ನು ಎದುರುಗೊಂಡು ಅರಮನೆಗೆ ಕರದೊಯ್ಯುವರು. ಮಧ್ಯಾಹ್ನ ಟೆನ್ನಿಸ್ ಆಟವಾಗುವದು. ಮಂಗಳವಾರ ಅರಸರ ಕಡೆಯಿಂದ ಊಟಉಪಚಾರಾದಿಗಳು ನಡೆಯುವವು. ಅಲ್ಲಿಂದ ವ್ಯಾಸರಾಯರು ಡಿಲ್ಲಿಗೆ ತೆರಳುವರು.

ಬಂಗಾಳದ ದ್ವಿಜೇಂದ್ರನಾಥ ಮುಖರ್ಜಿ ಎಂಬವರು ರೋಯಲ್ ಇಂಡಿಯನ್ ಮೆರಿನಿನ ಸಬ್ ಲೆಫ್ಟಿನೆಂಟ್ ಇಂಜಿನಿಯರರಾಗಿ ನೇಮಿಸಲ್ಪಟ್ಟಿರುವರು. ನಾವಿಕತನದಲ್ಲಿ ಹಿಂದುಗಳಿಗೆ ಕೆಲಸ ಸಿಕ್ಕಿದುದು ಇದೇ ಮೊದಲು.

— ರಂಗೂನಿನ ರೋಯಲ್ ಸರೋವರದಲ್ಲಿ ಒಬ್ಬ ಯುರೋಪಿಯಾನನ ಶವವು ತೇಲುತಿತ್ತು: ಮೈಯ ಮೇಲೆಲ್ಲ ಗಾಯಗಳಿದ್ದವು. ವಸ್ತ್ರವಿರಲಿಲ್ಲ. ಯಾರೋ ದುಷ್ಟರು ಆತನನ್ನು ಕೊಂದು ಶವವನ್ನು ಸರೋವರಕ್ಕೆ ಬಿಸಾಡಿದ್ದರು.

— ಮದರಾಸಿನಲ್ಲಿ ಬಾಲಕಳ್ಳರ ಕಾಟವು ಬೆಳೆದಿರುತ್ತದೆ. ಈ ಸಣ್ಣ ಕಳ್ಳಹುಡುಗರು ಧನಿಕರ ಹುಡುಗರೊಂದಿಗೆ ಬೆರೆತು ಸಮಯಸಾಧಿಸಿ, ಅವರ ಮೈಮೇಲಿರುವ ಆಭರಣಗಳೆಲ್ಲವನ್ನೂ ದೋಚಿಕೊಳ್ಳುವರಂತೆ. ಮೊನ್ನೆ ಶನಿವಾರ ಸಬ್ ಇನ್ಸ್‌ಪೆಕ್ಟರರು ಸಾಧನೆ ಹಿಡಿದು ನಾಲ್ಕು ಜನ ಹುಡುಗರನ್ನು ಕೈದುಮಾಡಿದರು. ಕೈದುಮಾಡಲ್ಪಟ್ಟ ಹುಡುಗರು ೬ ವರ್ಷದಿಂದ ೯ ವರ್ಷ ಪ್ರಾಯದ ವರೆಗಿನ ಚಿಕ್ಕ ಹುಡುಗರು. ಈ ಹುಡುಗರು ಕದ್ದಿದ್ದ ಸಾಮಾನುಗಳನ್ನು ಒಬ್ಬ ಚಿನಿವಾರನಿಗೆ ಮಾರಿದ್ದರು. ಆ ಚಿನಿವಾರನ ಕೂಡೆ ಇವರು ಕೊಟ್ಟ ಸಾಮಾನುಗಳೆಲ್ಲವೂ ದೊರೆತವು.

— ಲೋರ್ಡ್ ಸಿಂಹರವರ ಮರಣದ ಸುದ್ದಿಯನ್ನು ಕೇಳಿದೊಡನೆ ಕಲಕತ್ತದ ಸರಕಾರೀ ಆಫೀಸುಗಳೂ, ಶಾಲೆಗಳೂ, ಕೊಲೇಜುಗಳೂ ಮುಚ್ಚಲ್ಪಟ್ಟವು.

— ಸೇಲಮಿನ ಸುಭಾದಾರರ ಮನೆಯ ಸಮೀಪದ ಮನೆಗೆ ಮೊನ್ನೆ ಬೆಂಕಿಹಿಡಿಯಿತು: ಬಹಳ ಕಷ್ಟಪಟ್ಟು ನೆರೆಕರೆಯವರು ಬೆಂಕಿಯನ್ನು ನೊಂದಿಸಿದರು. ನಷ್ಟವು ಹೆಚ್ಚಾಗಿ ಉಂಟಾಗಲಿಲ್ಲ. ಸೇಲಮಿನಲ್ಲಿ ಇನ್ನಾದರೂ ಒಂದು ಫಾಯರ್ ಇಂಜಿನನ್ನು ತಂದಿಡುವುದು ಪ್ರಯೋಜನಕಾರಿಯಾಗಿದೆ.

— ಮೈಸೂರು ಡಿಸ್ಟ್ರಿಕ್ಟ ಬೋರ್ಡಿನವರು ಹಾಸನದಲ್ಲಿ ಒಂದು ಎಗ್ರಿಕಲ್ಚರಲ್ ಶಾಲೆಯನ್ನು ಪ್ರಾರಂಭಿಸುವರಂತೆ. ಸರಕಾರದವರು ಪ್ರತಿವರ್ಷವೂ ಇದಕ್ಕೆ ೨೫೦೦ ರೂಪಾಯಿ ಕೊಟ್ಟರೆ ಇದನ್ನು ನಡೆಸಲು ಸಾಧ್ಯವಾಗುವದಂತೆ.

— ಆಲಿಗಾರಿನ ಅಬ್ದುಲ್ ಹಾಮದ್ ಖಾನನೆಂಬವನ ಮನೆಯನ್ನು ಜಪ್ತಿಮಾಡುವುದಕ್ಕಾಗಿ ಒಬ್ಬ ಸಿವಿಲ್ ಅಮೀನನು ಒಬ್ಬ ಪೇದೆಯೊಂದಿಗೆ ಹೋದಾಗ ಮನೆಯಲ್ಲಿದ್ದ ೧೬ ವರ್ಷದ ಹುಡುಗನು ಬಾಗಿಲುಗಳನ್ನು ಮುಚ್ಚಿದನು. ಅಮೀನನು ಬಲಾತ್ಕಾರದಿಂದ ಬಾಗಿಲುಗಳನ್ನೊಡೆಯಲು ಪ್ರಯತ್ನಿಸಿದನು. ಆಗ ಹುಡುಗನು ಇವರನ್ನು ಹೆದರಿಸುವದಕ್ಕಾಗಿ ಗುಂಡುಬಿಡಲು ಅಮೀನನು ಸತ್ತುಹೋದನು. ಪೇದೆಗೂ ಕೂಡ ಬಹಳ ಜಖಂ ಆಗಿಯದೆ.

— ಪೊಲ್ಲಾಚಿಯ ಪೋಲಿಸ್ ಕೊನ್ಸ್‌ಟೇಬಲನಾದ ಕೃಷ್ಣಸ್ವಾಮಿ ನೈಡು ಎಂಬವನು ಗುಂಡಿನಿಂದ ತನ್ನನ್ನು ತಾನೇ ಹೊಡೆದು ಸತ್ತನು. ಇವನು ಸ್ಟೇಶನಿನ ಸಮೀಪ ರಾತ್ರೆ ಕಾವಲಿನಲ್ಲಿದ್ದನು.

— ಕಳೆದವಾರದಲ್ಲಾದ ಮುಂಬಾಯಿ ಗವರ್ನರರ ಗಾರ್ಡನ ಪಾರ್ಟಿಗೆ ಸುಮಾರು ೨೦೦೦ ಜನರು ಬಂದಿದ್ದರು.

— ಮದರಾಸಿನಲ್ಲಿ ಹಡಗವನ್ನು ಕಟ್ಟುತ್ತಿದ್ದ ಒಬ್ಬ ಚೀನಾದೇಶದ ಮನುಷ್ಯನ ಕೂಡೆ ಒಂದು ಆರು ನಳಿಗೆಯ ಪಿಸ್ತೂಲು ಇದೆಯೆಂದು ಆತನಿಗೆ ೨೦೦ ರೂಪಾಯಿ ಜುರುಮಾನೆ ವಿಧಿಸಿದರು.

— ಅಖಿಲ ಭಾರತೀಯ ಪತಿತ ಜನರ ಪರಿಷತ್ತಿನ ಸಮಯದಲ್ಲಿ ಹೊಸದೊಂದು ಪತಿತ ಜನರ ಸಂಘವನ್ನು ಸ್ಥಾಪಿಸಿ, ಅವರ ಕಾನೂನುಗಳನ್ನು ತಯಾರಿಸಿರುವರು.

ಇಂದೋರಿನ ಮುಮ್ತಾಜ್ ಬೇಗಮಳು ಚರ್ಮದ ವ್ಯಾಪಾರಿಯಾದ ತನ್ನ ಗಂಡ ಅಬ್ದುಲ್ ರಹಮಾನ್‌ನ ಮನೆಯಲ್ಲಿ ತನ್ನ ಆಭರಣಗಳೆಲ್ಲವನ್ನೂ ಶೋಧಿಸಿ ತೆಗೆಯುವ ಬಗ್ಗೆ ಕೋರ್ಟ ಸಹಾಯವನ್ನು ದಯಪಾಲಿಸಬೇಕೆಂದು ಅಮೃತಸರಿನ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಲ್ಲಿ ಒಂದು ಅರ್ಜಿಯನ್ನು ಮಾಡಿರುವಳು. ಎರಡು ವರುಷಗಳ ಹಿಂದೆ ಆತನನ್ನು ಮದುವೆಯಾಗಿ ಅವಳಿಗೊಂದು ಮಗುವು ಜನಿಸಿದೊಡನೆ ಅವಳು ಗಂಡನನ್ನು ತ್ಯಜಿಸಿ ತಂದೆ ತಾಯಿಗಳಿದ್ದಲ್ಲಿಗೆ ಬಂದಿದ್ದಳಂತೆ.

— ಮುಂಬಾಯಿಯ ಕಳೆದ ಕೌನ್ಸಿಲಿನಲ್ಲಿ ಸಿಂಧೂದೇಶದ ನೀರಾವರಿ ಕೆಲಸಕ್ಕಾಗಿ ರೂಪಾಯಿ ೬೦,೦೦೦ವನ್ನು ಸೆಂಕ್ಷನ್‌ಮಾಡಿರುವರು.

— ಬೆಂಗಳೂರಿನ ಇಬ್ಬರು ಸೈನಿಕರು ಒಂದು ಶರಾಬು ಅಂಗಡಿಯನ್ನು ಹೊಕ್ಕು ಕೆಲವು ಶರಾಬಿನ ಬಾಟಲಿಗಳನ್ನು ಬಲಾತ್ಕಾರದಿಂದ ಎಳೆದುಕೊಂಡುಹೋದರು. ಇದನ್ನು ಶರಾಬಿನ ಅಂಗಡಿಯ ಯಜಮಾನನು ಮಿಲಿಟರಿ ಮುಖ್ಯ ಅಧಿಕಾರಿಗಳಿಗೆ ತಿಳಿಸಲಾಗಿ ವಿಚಾರಣೆಯು ನಡಿಯುತ್ತಲಿದೆ.

ದಕ್ಷಿಣ ಕನ್ನಡ.

ಮಂಗಳೂರು: — ಗ್ರಾಮಾಭಿವೃದ್ಧಿ ಸ್ಕೀಮನ್ನು ಜ್ಯಾರಿಗೆ ತರುವ ಆಲೋಚನೆಯು ಮದರಾಸು ಸರಕಾರಕ್ಕೆ ಸದ್ಯಕ್ಕೆ ಇಲ್ಲವೆಂದು ರಾ॥ ಎ. ಬಿ. ಸೆಟ್ಟಿ ನ್ಯಾಯವಿಧಾಯಕ ಸಭೆಯಲ್ಲಿ ಕೇಳಿದ ಪ್ರಶ್ನೆಯಿಂದ ತಿಳಿದುಬರುತ್ತದೆ.

ಸೆಕೆಂಡರಿ ಶಾಲೆಗಳ ಗ್ರೇಂಟನ್ನೂ ಉಪಾಧ್ಯಾಯರಿಗೆ ಕೊಡುವ ಟೀಚಿಂಗ್ ಗ್ರೇಟನ್ನೂ ಹೆಚ್ಚಿಸಬೇಕೆಂದು ಮದರಾಸು ಸರಕಾರಕ್ಕೆ ಒಂದು ಮೆಮೋರಿಯಲ್ ಕಳುಹಿಸುವುದಕ್ಕಾಗಿ ಎಲ್ಲಾ ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ದಸ್ಕತಿನ ಬಗ್ಗೆ ಒಂದು ಸೆಕೆಂಡರಿ ಶಾಲೆಗೆ ಪ್ರಿಂಟೆಡ್ ಮೆಮೋರಿಯಲಿನ ನಕಲನ್ನು ಸೌತ ಇಂಡಿಯನ್ ಟೀಚರ್ಸ ಯೂನಿಯನ್ನಿನವರು ಕಳುಹಿಸಿರುವರು. ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ಟೀಚರ್ಸ ಗಿಲ್ಡನ್ನು ಮಾಡುವುದು ಒಳ್ಳೇದು. ಪ್ರತಿಯೊಂದು ಜಿಲ್ಲೆಗೂ ಒಂದೊಂದು ಗಿಲ್ಡ ಇದೆ. ಮಲಬಾರು ಮತ್ತು-ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವೇ ಇರುವುದಿಲ್ಲ.

ಪುತ್ತೂರು ತಾಲೂಕು ಬೋರ್ಡು ಮೆಂಬರರ ಚುನಾವಣೆ ತಾ. 19-3-'28.

ಸುಳ್ಯ ಸರ್ಕಲಿನ ಮತದಾರರಿಗೆ ವಿನಂತಿ.

ಈ ಚುನಾವಣೆಯಲ್ಲಿ ಸುಳ್ಯ ಸರ್ಕಲಿನ ಕೆಲವು ಮತದಾರರ ಆಗ್ರಹಪೂರ್ವಕವಾದ ಅಪೇಕ್ಷೆಯ ಮೇರೆಗೆ ನಿಮ್ಮ ಸರ್ಕಲಿನ ಮೂರು ಸ್ಥಾನಗಳಲ್ಲಿ ಒಂದಕ್ಕೆ ಉಮೇದ್ವಾರನಾಗಿ ನಿಂತಿರುವೆನು. ನಿಮ್ಮೆಲ್ಲರ ಕೂಡೆ ಸ್ವತಹ ಬಂದು ನಿಮ್ಮ ಮತದಾನವನ್ನು ಕೇಳಿಕೊಳ್ಳಲು ಅವಕಾಶವಿಲ್ಲದುದನ್ನು ಕ್ಷಮಿಸಿ ನಾನು ಇದು ವರೆಗೆ ಮಾಡಿದಂತೆಯೇ ಇನ್ನು ಮುಂದೆಯೂ ಕೂಡ ಜನತೆಯ ಸೇವೆಯನ್ನು ಮಾಡಲಿರುವೆನೆಂಬದನ್ನು ಸ್ಮರಣೆಯಲ್ಲಿಟ್ಟುಕೊಂಡು ನಿಮಗಿರುವ ಮೂರು ಓಟುಗಳಲ್ಲಿ ಒಂದನ್ನು ನನಗೆ ಕೊಟ್ಟು ನನ್ನಲ್ಲಿ ನಿಮಗಿರುವ ವಿಶ್ವಾಸವನ್ನು ಪ್ರದರ್ಶಿಸುವಿರಾಗಿ ನಂಬಿರುವ,

ನಿಮ್ಮ ಸೇವಕ,

(ವಕೀಲ) ಮೊಳಹಳ್ಳಿ ಶಿವರಾವ್.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೆರಡು ಹೆಚ್ಚಿಗೆ ಡಿಸ್ಪೆನ್ಸರಿ ಇನ್ನಸ್ಪೆಕ್ಟರುಗಳನ್ನು ನೇಮಿಸುವುದಕ್ಕೂ ಕೆಲವು ಹುಡುಗಿಯರ ಶಾಲೆಗಳನ್ನು ಹುಡುಗರ ಶಾಲೆಗಳನ್ನು ತೆರೆಯುವುದಕ್ಕೂ ಒಂದೆರಡು ಹಳ್ಳಿಯ ಆಸ್ಪತ್ರೆಗಳನ್ನು ತೆರೆಯುವುದಕ್ಕೂ ಮದರಾಸು ಬಜೆಟಿನಲ್ಲಿ ಹಣ ಸೆಂಕ್ಷನಾಗಿದೆ

ಕಳೆದ ಆದಿತ್ಯವಾರ ದಿನ ಇಲ್ಲಿಯ ಗವರ್ನಮೆಂಟ್ ಕೊಲೇಜಿನಲ್ಲಿ ಭಾರತ ಯುವಕ ಸಂಘದ ಆಶ್ರಯದಲ್ಲಿ ಅದೇ ಕೊಲೇಜಿನ ಅಧ್ಯಾಪಕರಾಗಿದ್ದ ಶ್ರೀ॥ ಯಮ್. ವೆಂಕಟರಾವ್ ಎಮ್. ಎ. ಎಲ್. ಟಿ.ಯವರು "ಶಿವಾಜಿ" ಎಂಬ ವಿಷಯವಾಗಿ ಹರಿಕಥಾ ಪ್ರಸಂಗವನ್ನು ನಡೆಸಿದರು. ಮೊದಲು ನಿಶ್ಚಯಿಸಿದ ಕಾರ್ಯಕ್ರಮಕ್ಕನುಸಾರವಾಗಿ ಸೈಂಟ್ ಎಲೋಸಿಯಸ್ ಕೊಲೇಜಿನ ಪ್ರಿನ್ಸಿಪಾಲರಾದ ಫಾದರ್ ಫ್ರಾಸರ್ಪಿಯೊರವರನ್ನು ಅಧ್ಯಕ್ಷಪದವಿಗೆ ಆಮಂತ್ರಿಸಿದ್ದರೂ, ಅವರು ಬಾರದೆ ಇದ್ದ ಕಾರಣ ಮಿ॥ ಆರ್. ಎಮ್. ಶೇ, ಬಾರ್ ಎಟ್ ಲೋರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಹರಿಕಥೆಯು ಬಹು ಮನೋರಂಜಕವಾಗಿದ್ದಿತು. ಶಿವಾಜಿಯ ಒಂದೊಂದೇ ಗುಣಗಳನ್ನು ಹೆಕ್ಕಿ ತೆಗೆದು, ಅವನ್ನು ನಾವೀಗ ಆಚರಿಸುವುದರಿಂದ ನಮಗಾಗುವ ಲಾಭವನ್ನು ಸಕಾರಣವಾಗಿ ವಿವರಿಸಿ ಕೀರ್ತನಕಾರರು ತಮ್ಮ ಕಥೆಗೆ ವಿಶೇಷ ಪ್ರಾಮುಖ್ಯತೆಯನ್ನು ಕೊಟ್ಟರು. ಮತ್ತೊಂದು ವಿಶೇಷ ಸಂಗತಿಯೆಂದರೆ ಇಂಗ್ಲಿಷು ಪದಗಳನ್ನು ಹಿಂದು ಪದಗಳ ದಾಟಿಯಲ್ಲಿ ಅವರು ಹಾಡುತಿದ್ದುದೇ.

ತಾಲೂಕು ಬೋರ್ಡು ಚುನಾವಣೆಯಲ್ಲಿ ಸುರತಕಲ್ ಸರ್ಕಲಿಗೆ ಉಮೇದುವಾರರಾಗಿ ನಿಂತಿದ್ದ ರಾ. ರಾಮಕೃಷ್ಣ ಪೂಂಜರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದಿರುವರಾಗಿ ಕೇಳುತ್ತೇವೆ.

ಕಳೆದ ಮಂಗಳವಾರ ದಿನ ಮಂಗಳೂರಿಗೆ ಹೊಸ ಬಿಶಪರಾದ ರೈಟ್ ರೆವರೆಂಡ್ ವಿ. ಜೆ. ಡಿ ಸೋಜರು ಬಂದರು. ರೈಲುವೇ ಸ್ಟೇಶನಿನಲ್ಲಿ ಕ್ರೈಸ್ತಜನರು ಬಂದು ಕೂಡಿದುದಕ್ಕೆ ಮಿತಿಯೇ ಇಲ್ಲ. ಸ್ಟೇಶನಿನ ವಠಾರವನ್ನು ತೋರಣ ಮೊದಲಾದುವುಗಳಿಂದ ಶೃಂಗರಿಸಿದ್ದರು. ರೈಲು ಬಂದೊಡನೆ ಅವರನ್ನು ಎದುರುಗೊಂಡು ಮೋಟಾರುಕಾರಿನಲ್ಲಿ ಕುಳ್ಳಿರಿಸಿ ಬೇಂಡ್‌ವಾದ್ಯದಿಂದ ಕರೆದೊಯ್ದರು. ಸ್ಟೇಶನಿನಲ್ಲಿ ನೆರೆದಿದ್ದ ಕ್ರೈಸ್ತ ಜನಸಂದಣಿಯನ್ನು ನೋಡಿದ್ದಾದರೆ ಅವರ ಗುರುಭಕ್ತಿಯು ಎಷ್ಟಿದೆ ಎಂಬುದು ಸರಿಯಾಗಿ ತಿಳಿಯುತ್ತಿತ್ತು.

೧೯೨೮ನೇ ಇಸವಿ ಮಾರ್ಚ ತಿಂಗಳ ೧೫ನೇ ಗುರುವಾರ ಅಪರಾಹ್ನ ಘಂಟೆ ೪ಕ್ಕೆ ಮಂಗಳೂರಲ್ಲಿ ತಾಲೂಕು ಬೋರ್ಡ ಆಫೀಸಿನಲ್ಲಿ ೧೯೨೮ನೇ ಇಸವಿ ಫೆಬ್ರವರಿ ಮತ್ತು ನಂತರ ರಿಟಾಯರ್ ಮಾಡಿದ ಉಪಾಧ್ಯಾಯರಿಗೆ ಒಂದು ವರ್ಷ ಪರಿಯಂತರ ಕೆಲಸದಲ್ಲಿ ಇರಗೊಳಿಸಬೇಕಾಗಿ ಮ॥ ರಾ॥ ರಾವ್‌ಸಾಹೇಬ್ ನೆಲ್ಲಿಕಾಯಿ ವೆಂಕಟರಾವ್ ಅವರ್ಗಳರವರು ತರುವ ನಿರ್ಣಯವನ್ನು ಆಲೋಚಿಸುವ ಕುರಿತು ಮಂಗಳೂರು ತಾಲೂಕು ಬೋರ್ಡು ಸಭೆಯು ಕೂಡಬೇಕೆಂತ ನಿಶ್ಚಯಿಸಿಯದೆ.

ದ. ಕ. ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಸ್ಥಾಯಿಕ ಕಮಿಟಿಯು ತಾ. ೨೬–೨–'೨೮ರಲ್ಲಿ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಭವನದಲ್ಲಿ ಕೂಡಿತು. ಪ್ರಮುಖ ಸ್ಥಾಯಿಕ ಕಮಿಟಿ ಮೆಂಬರರಾದ ಶ್ರೀ॥ ಕಲ್ಯಾಡಿ ಲಕ್ಷ್ಮೀನಾರಾಯಣರಾವ್, ಬಿ. ಆರ್. ವ್ಯಾಸರಾಯಾಚಾರ್, ಪಿ. ಎಲ್. ಪುಣಿಂಚಿತ್ತಾಯ, ಕೆ. ಆರ್. ಆಚಾರ್, ಯು. ವೆಂಕಟರಾವ್ ಮತ್ತು ಪಿ. ವಾಸುದೇವರಾಯರು, ಸಭೆಗೆ ಬಂದಿದ್ದರು. ಮುಖ್ಯವಾಗಿ 'ಹಿತವಾದಿನೀ' ಪತ್ರಿಕೆಯನ್ನು ಬರುವ ಸೌರ॥ ಯುಗಾದಿಗೆ ಸರಿಯಾಗಿ ಹೊರಡಿಸಬೇಕೆಂದೂ ಮುಂದಿನ ವಾರ್ಷಿಕ ಮಹಾಸಭೆಯನ್ನು ಕಾಸರಗೋಡು ತಾಲೂಕಿನ ಅಗಲ್ಪಾಡಿ ಅನ್ನಪೂರ್ಣೇಶ್ವರೀ ದೇವಸ್ಥಾನದಲ್ಲಿ ಜರಗಿಸಬೇಕೆಂದೂ ನಿರ್ಧಾರವಾಯಿತು. ಇದೇ ದಿನ ಸಾಯಂಕಾಲ ೪ ಘಂಟೆಗೆ ಕರ್ನಾಟಕ ಬೇಂಕಿನ ವಾರ್ಷಿಕ ಸಭೆಯೂ ಬೇಂಕಿನ ಕಟ್ಟಡದಲ್ಲಿ ಶ್ರೀ॥ ಬಿ. ಆರ್. ವ್ಯಾಸರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಳೆದ ಫೆಬ್ರವರಿ ತಿಂಗಳ ತಾ. ೨೫ನೇ ಶನಿವಾರ ದಿವಸ ಅಪರಾಹ್ನ ಘಂಟೆ ೨ಕ್ಕೆ ಜಪ್ಪಿನ ಸೈಂಟ್ ಜೋಸೆಫ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ದ್ವಿತೀಯ ಸಭೆಯು ಮ॥ ರಾ॥ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಸೈಂಟ್ ಜೋಸೆಫ್ಸ್ ಶಾಲೆಯ ಮೆನೇಜರರು, ೫೦ ಮಂದಿ ಉಪಾಧ್ಯಾಯರು, ೨೪ ಮಂದಿ ಉಪಾಧ್ಯಾಯಿನಿಯರು ಹಾಜರಿದ್ದರು. ಪ್ರಥಮತಃ ಸೆಬೆಸ್ಟಿಯನ್ಸ್ ಶಾಲೆಯಲ್ಲಿ ಜರಗಿದ ಪ್ರಥಮ ಸಭೆಯ ವರದಿಯನ್ನು ಓದಲಾಯಿತು. ಅನಂತರ ಸೈಂಟ್ ಜೋಸೆಫ್ಸ್ ಶಾಲೆಯ ಮಕ್ಕಳು ಕೊಂಕ್ಣಿ ಭಾಷೆಯಲ್ಲಿ ಅಭಿನಯ ಗೀತವನ್ನು ಹಾಡಿದರು. ನಾಲ್ಕನೆ ದರ್ಜೆಯ ಮಕ್ಕಳಿಗೆ ಲೆಕ್ಕಪಾಠವನ್ನು ಇದೇ ಶಾಲೆಯ ಉಪಾಧ್ಯಾಯರಾದ ಮಿ॥ ಎ. ಪಿ. ಡಿ'ಸೋಜರು ಮಾಡಿದರು. ಕಂಕನಾಡಿ ಸೈಂಟ್ ಜೋಸೆಫ್ಸ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಮಿಸ್. ಲೂಸಿ ಡಿ'ಸೋಜರವರು, ಎಲಿಮೆಂಟರಿ ಶಾಲೆಯಲ್ಲಿ "ಸಬ್ಜೆಕ್ಟ್ ಟೀಚರ್ಸ್ ಸಿಸ್ಟಮ್" ಮತ್ತು 'ಕ್ಲಾಸ್ ಟೀಚರ್ಸ್ ಸಿಸ್ಟಮ್' ಇವುಗಳ ಕುರಿತು ಉಪನ್ಯಾಸವನ್ನೋದಿ ಕಡೆಗೆ ಮೊದಲನೆಯದೆ ಉತ್ತಮವಾದುದೆಂದು ನಿಷ್ಕರ್ಷೆಮಾಡಿದರು. ಅಧ್ಯಕ್ಷರೂ ಕೂಡ ಈ ವಿಷಯ ಕೆಲವು ಅಭಿಪ್ರಾಯಗಳನ್ನು ಸೂಚಿಸಿ ಅವರ ಮಾತುಗಳನ್ನೇ ಧೃಢೀಕರಿಸಿದರು. ಬೋಳೂರು ಕೆಥೋಲಿಕ್ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ರಾ॥ ಪಿ. ಕೇಸ್ತಲೀನರು ಮಾರ್ಚ ತಿಂಗಳ ತಾ. ೩೧ನೇ ಶನಿವಾರ ದಿವಸ ನಡೆಯತಕ್ಕ ತೃತೀಯ ಸಭೆಯನ್ನು ತಮ್ಮ ಶಾಲೆಗೆ ಆಮಂತ್ರಿಸಿದರು. ಇದಾದ ಮೇಲೆ ಸಭಾಧ್ಯಕ್ಷಸ್ಥಾನವನ್ನು ವಹಿಸಿ, ಅನೇಕ ಅಮೂಲ್ಯವಾದ ಸದುಪದೇಶಗಳನ್ನು ಕೊಟ್ಟು ಪ್ರೋತ್ಸಾಹಿಸಿದುದಕ್ಕಾಗಿ ರಾ॥ ಉಳ್ಳಾಲ ಮಂಗೇಶರಾಯರಿಗೂ, ಸಭಾವಿನಿಯೋಗಕ್ಕಾಗಿ ಶಾಲಾ ಮಂದಿರವನ್ನು ಬಿಟ್ಟುಕೊಟ್ಟು ಅನುಕೂಲತೆಗಳನ್ನು ಮಾಡಿಕೊಟ್ಟ ಸೈಂಟ್ ಜೋಸೆಫ್ಸ್ ಶಾಲಾ ಮೆನೇಜರರಿಗೂ, ಮುಖ್ಯೋಪಾಧ್ಯಾಯರಿಗೂ ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾವಿಸರ್ಜನೆಯಾಯಿತು.

ತಾರೀಕು ೩–೩–'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೧ ಮರಣಗಳೂ ೪೬ ಜನನಗಳೂ ಆಗಿರುವವು.

ಇದೇ ತಿಂಗಳ ತಾರೀಕು ೧೧ನೇ ಆದಿತ್ಯವಾರ ಬೆಳಿಗ್ಗೆ ೮ ಘಂಟೆಗೆ ಮಂಗಳೂರು ಬ್ರಾಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಗಂಗೊಳ್ಳಿ ಕೃಷ್ಣರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ

ಉಡುಪಿ: — ಪ್ರಸಿದ್ಧ ಪಟ್ಟ ಲೇಖಕರೂ ಕವಿಗಳೂ ಆದ ಶ್ರೀ ಕೆರೋಡಿ ಸುಬ್ಬರಾಯರು ಕಳೆದ ಮಂಗಳವಾರ ರಾತ್ರಿದಿವಂಗತರಾದರೆಂಬುದನ್ನು ತಿಳಿಸಲು ಬಹುವಿಷಾದಿಸುತ್ತೇವೆ

ಕಾಸರಗೋಡು: — ದ್ರಾವಿಡ ಬ್ರಾಹ್ಮಣ ಪರಿಷತ್ತಿನ ನವಮಾಧಿವೇಶನವನ್ನು ಅಗಲ್ಪಾಡಿ ಅನ್ನಪೂರ್ಣೇಶ್ವರೀ ದೇವಾಲಯದಲ್ಲಿ ಜರಗಿಸಬೇಕೆಂದು ಸ್ಥಾಯಿಕ ಕಮಿಟಿಯಲ್ಲಿ ನಿರ್ಧಾರವಾದಂತೆ, ಆ ಬಗ್ಗೆ ಒಂದು ಸ್ವಾಗತ ಮಂಡಲವನ್ನು ಏರ್ಪಡಿಸುವುದಕ್ಕಾಗಿ ತಾ. ೧೧–೩–'೨೮ನೇ ಆದಿತ್ಯವಾರ ಅಪರಾಹ್ನ ೨ ಘಂಟೆಗೆ ಸದರಿ ದೇವಾಲಯದಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಗುವುದು. ಸ್ವಜಾತಿ ಬಂಧುಗಳು ಸಹಕರಿಸಬೇಕಾಗಿ ವಿನಂತಿಯದೆ.

ಹೊಸದುರ್ಗ: — ಇಲ್ಲಿಯ ಸಬ್ ರಿಜಿಸ್ಟ್ರಾರರಿಗೆ ವರ್ಗವಾಗಿ ಬದ್ಲಿಗೆ ಮ॥ ರಾ॥ ಗೋವಿಂದರಾಯರು ಬರುತ್ತಾರಾಗಿ ತಿಳಿದುಬರುತ್ತದೆ.

ಹೊಸದುರ್ಗದಿಂದ ಪಣತ್ತಡಿಗೆ ಚಲಾವಣೆಯಾಗುವ 'ಸ್ಟೆಂಡಾರ್ಡ ಮೋಟರ್'ಯೆಂಬ ಗಾಡಿಯು ನಿನ್ನೆ ಇಲ್ಲಿಗೆ ತಲ್ಪಿರುತ್ತದೆ.

ಪಂಚಾಯಿತ ಕೋರ್ಟಿನಲ್ಲಿ ನಂಬ್ರ ತಪ್ಪಿ ಸಮಯ ಕೋರ್ಟು ಬೇನಪ್ ಮಾಡಿದ ಕಕ್ಷಿಗಾರರ ಮೇಲೆ ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖ್ಲಾದ ವ್ಯವಹರಣೆಯ ತಪ್ಪಿ ನಡಿಯುತ್ತದೆ. ಕಕ್ಷಿಗಾರರು ಮಾಡಿದ ಅರ್ಜಿಯು ತನ್ನಿಯಾದ ಏಲಿ ಮಾಡಿಯದಾಗಿ ಸಹಾ ತಿಳಿದು ಬರುತ್ತದೆ.

ಕಾಸರಗೋಡು ತಾಲೂಕು ಬೋರ್ಡಿನ ಹೊಸ ಮೆಂಬರರ ಚುನಾವಣೆಗೆ ಈ ಸರ್ಕಲಿನಲ್ಲಿ ಒಂದೇ ಮನೆತನದ ಮಾವ ಮತ್ತು ಅಳಿಯ ಸಮ್ಮಂಧದ ಉಮೇದ್ವಾರರಿಬ್ಬರು ನಿಂತಿರುವರು.

ಪಾಣೆಮಂಗಳೂರು: — ಈ ಸರ್ಕಲಿನಲ್ಲಿ ಇಬ್ಬರು ಮೆಂಬರರ ಚುನಾವಣೆಯು ೫ನೇ ತಾರೀಕು ಸೋಮವಾರ ಬೆಳಿಗ್ಗೆ ೭ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೇಗೆ ಬಹಳ ಗೌಜಿಯಿಂದ ನಡಿಯಿತು. ಈ ಸರ್ಕಲಿಗೆ ಪಾಣೆಮಂಗಳೂರು, ಕುರ್ನಾಡು, ಕರಿಯಂಗಳ ಎಂಬ ಮೂರು ಪೋಲಿಂಗ್ ಸ್ಟೇಶನುಗಳು ಇದ್ದವು. ೩೫೦ ವೋಟರ್ರುಗಳಲ್ಲಿ ಪಾಣೆಮಂಗಳೂರು ಸ್ಟೇಶನಿಗೆ ಸುಮಾರು ೩೫೦ ವೋಟರುಗಳು ಇರುವರು. ಇವರಲ್ಲಿ ೩೦೦ ವೋಟರರು ಬಂದು ವೋಟು ಕೊಟ್ಟಿರುವರು. ಇದರಲ್ಲಿ ವಿಶೇಷವಾದ ಸಂಗತಿಯು ಒಂದು ಕಂಡು ಬಂತು. ಅನೇಕ ಮಂದಿ ನಾಡದ ಮಹಿಳೆಯರೂ, ಬ್ರಾಹ್ಮಣ ಮಹಿಳೆಯರೂ ಬಂದು ಓಟನ್ನು ಕೊಟ್ಟಿರುವರು. ಮುಸಲ್ಮಾನ ಸ್ತ್ರೀ ವೋಟರರು ಬಂದು ಓಟು ಕೊಟ್ಟದು ಕಂಡುಬರಲಿಲ್ಲ. ಸ್ಪರ್ಧೆಯು ಬಹಳ ವಿಶೇಷವಾಗಿತ್ತು ಆದರೆ ಗಲಾಟೆಗಳು ಏನೊಂದೂ ಇರಲಿಲ್ಲ. ಉಮೇದುವಾರರಲ್ಲಿ ವೋಟಿನ ಮಟ್ಟಿಗೆ ಸ್ಪರ್ಧೆಯಿದ್ದರೂ ನಾಲ್ವರೂ ಪರಸ್ಪರ ಸಂತೋಷದಿಂದ ಮಾತನಾಡುತ್ತಾ ತಿರುಗುತ್ತಿದ್ದರು. ರಾಜೆಸ್ಟ್ರಿಗಳಾದ ನರಿಕೊಂಬು ರಾಮರಾಯರೂ ಸದಾಶಿವ ಅಡಿಗರೂ ಒಂದು ತಂಡವಾಗಿ ಕೆಲಸ ನಡಿಸುತ್ತಿದ್ದರು. ಇವರ ಕಡೆಯಿಂದ ಎರಡು ಮೂರು ಬಸ್ಸುಗಳು ವೋಟರರನ್ನು ತರುವ ಕೆಲಸ ಮಾಡುತ್ತಿದ್ದವು. ಬಂದ ವೋಟರರಿಗೆ ಫಲಾಹಾರ ತಿಂಡಿ ಒದಗಿಸುವುದಕ್ಕಾಗಿ ಇಲ್ಲಿಯ ವಿಠಲ ಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಹಾಕಿದ ಚಪ್ಪರದಲ್ಲಿ ಕಾಫಿ ಹೊಟೆಲನ್ನಿಟ್ಟಿದ್ದರು. ಸುಮಾರು ೫೦ ಮಂದಿ ಉಮೇದುವಾರರು ಬೆಳಗಿನಿಂದ ಸಾಯಂಕಾಲದ ವರೇಗೆ ಕೆಲಸ ನಡಿಸುತ್ತಿದ್ದರು. ಎಲ್ಲಾ ವಿಧದ ಬ್ರಾಹ್ಮಣರು ವೋಟನ್ನು ಇವರಿಗೆ ಕೊಟ್ಟಿರುವರು.

ರಾಜೆಸ್ಟ್ರಿಗಳಾದ ಬಿ. ಎಲ್. ಅಹಮದ ಸಾಹೇಬ ಬಹದೂರರವರೂ ರಾಮಯ್ಯ ಭಂಡಾರಿಗಳೂ ಇನ್ನೊಂದು ತಂಡವಾಗಿ ಕೆಲಸ ನಡಿಸುತ್ತಿದ್ದರು. ಇವರು ಮೂರು ಕಾರುಗಳು ಒಂದು ಬಸ್, ೬ ಸ್ಯಾಕಲುಗಳನ್ನು ವೋಟರರಿಗಾಗಿ ಒದಗಿಸಿದ್ದರು. ಹುಡುಗಿಯರ ಶಾಲೆಯ ಪೂರ್ವಕ್ಕೆ ಹಾಕಿದ ಅಂದವಾದ ಚಪ್ಪರದಲ್ಲಿ ಹೊಟೆಲನ್ನು ಇಟ್ಟು ವೋಟರುಗಳನ್ನು ಸತ್ಕರಿಸುತ್ತಿದ್ದರು. ಇವರ ಕಡೆಯಲ್ಲಿ ಬಂಟ ಮಹನೀಯರೂ ಹೆಚ್ಚಾಗಿ ಕೆಲಸ ನಡಿಸುತ್ತಿದ್ದರು.

ಒಟ್ಟಾರೆ ಪಾಣೆಮಂಗಳೂರು ಪೇಟೆಯು ಅಂದು ದೊಡ್ಡ ಜಾತ್ರೆಯ ಮಹೋತ್ಸವದಂತೆ ಶೋಭಿಸುತ್ತಿತ್ತು.

ಇಲ್ಲಿಯ ತಾಲೂಕು ಬೋರ್ಡು ಚುನಾವಣೆಯಲ್ಲಿ ಮ॥ ರಾ॥ ರಾ॥ ನರಿಕೊಂಬು ರಾಮರಾಯರಿಗೆ ೩೨೮ ವೋಟುಗಳು ಕೆ. ಸದಾಶಿವ ಅಡಿಗ

The Chickmagalur Public Conveyance Motor Service.

CHICKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) [illegible] (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, [illegible] ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ [illegible] ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ [illegible] ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು [illegible] ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರು ಬಸ್ಸುಗಳು ಹೊರಡುವ ಟೈಮ್‌ಗಳ ವಿವರ.

(2) [illegible] ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗುವ [illegible] 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮ, [illegible] 12-30ಕ್ಕೆ [illegible] ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ [illegible] ಮುಲಬಾಗು, ಕನ್ನನೂರು ಪ್ರಾಂತಗಳಿಗೂ ಅದೂ ದಿನವೇ [illegible]

(3) [illegible] ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ [illegible] 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ [illegible] ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ [illegible] 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ [illegible] 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್, ಗೋವಾ, ಲೋಂಡ, ಪೂನಾ, [illegible]

[illegible] 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ12 ಘಂಟೆಗೆ ಬರತಕ್ಕ ಮೈಲ್ [illegible] ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲವಾಗಿದೆ.

ಈ ಮೋಟರ್ ಸರ್ವಿಸಿನಲ್ಲಿ ಪ್ರಯಾಣಿಕರಿಗೆ ಇರತಕ್ಕ ಅನುಕೂಲತೆ.

(4) [illegible] ಅನಾನುಕೂಲವೂ ಇರುವದಿಲ್ಲ. ಮಂಗಳೂರು ವಗೈರೆ ಕಡೆಗಳಿಂದ [illegible] ಚಿಕ್ಕಮಗಳೂರು, ಕಡೂರು ಈ ಸ್ಥಳಗಳಲ್ಲಿ ಬ್ರಾಹ್ಮಣರಿಗೂ ಮತ್ತು ಇತರರಿಗೂ ಅನುಕೂಲವಾದ [illegible]

ವಿಶೇಷ ಮಾಹಿತಿಗೆ [illegible] ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

[illegible] ಫ್ರಾಮರೋಜ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

[illegible] ಶ್ರೀ [illegible] ಪ್ರತಿಮೆಯನ್ನೂ

ನೋಡಲಿಚ್ಛಿಸುವವರು [illegible] ಕಾರ್ಕಳ ಮಾರ್ಗವಾಗಿಯೂ

ಹೊರಡುವ ಕಂಪೆನಿಯ ಬಸ್ಸುಗಳು [illegible] ತಲಪಿರಿ. ಒಂದೇ ಶಿಲೆಕಲ್ಲಿನಿಂದ

[illegible] 37 [illegible] ಮೇಲೆ ನೆಲಸಿರುವ,

ಶ್ರೀ [illegible] ಗೊಮ್ಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದವರು, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore, S. K.

ರಿಗೆ ೨೪೪ ವೋಟುಗಳು ದೊರೆತದ್ದರಿಂದ ಸದಸ್ಯತನಕ್ಕೆ ಇವರಿಬ್ಬರೂ ಚುನಾಯಿಸಲ್ಪಟ್ಟರು.

ಬಂಟವಾಳ:— ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯ ಹೊಸ ಕಟ್ಟೋಣದ ಪ್ರವೇಶ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಟೆಂಪಲ್ ಸೆಕೆಂಡರಿ, ಟೆಂಪಲ್ ಎಲಿಮೆಂಟರಿ, ಬೋರ್ಡು ಹುಡುಗರ ಶಾಲೆ, ಹುಡುಗಿಯರ ಶಾಲೆಯ ಸುಮಾರು ೭೦೦ ಮಂದಿ ಮಕ್ಕಳಿಗೆ ಉತ್ತಮ ತರದ ತಿಂಡಿಗಳನ್ನು ಕೊಟ್ಟು ಕಾಫಿ ಫಲಾಹಾರವು ನಡೆಯಿತು. ಇಲ್ಲಿಯ ಟೆಂಪಲ್ ಸಂಸ್ಕೃತ ಶಾಲೆಯವರು ಇದಕ್ಕೆ ಭಾಗಿಗಳಾಗದೆ ಇದ್ದುದು ವಿಶಾದಕರವಾಗಿದೆ. ಪೇಟೆಯ ಅನೇಕ ಮಹನೀಯರೂ, ದೇವಸ್ಥಾನದ ಆಡಳಿತ ಮೊಕ್ತೇಸರರೂ, ಉಪಾಧ್ಯಾಯರೂ ಫಲಾಹಾರದಿಂದ ಸತ್ಕರಿಸಲ್ಪಟ್ಟರು.

ಎಪಿಗ್ರಾಫಿಸ್ಟ್ ಇಲಾಖೆಯವರು ಇಲ್ಲಿಗೆ ಬಂದು ೭-೮ ಶಿಲಾ ಶಾಸನಗಳ ಕಲ್ಲುಗಳನ್ನು ತೆಗೆದುಕೊಂಡು ಹೋದರು. ಇವರಲ್ಲಿ ೧೫ನೇ ಮೈಲುಕಲ್ಲಿನ ಹತ್ತಿರವಿರುವ ವಿಜಯನಗರದ ವೀರಬುಕ್ಕಣ್ಣ ಒಡೆಯರ ಶಾಸನವೇ ವಿಶೇಷವಾಗಿದೆ. ಇನ್ನು ಬಂಟವಾಳದ ಒಂದು ಎರಡು ಮೈಲು ಸರಹದ್ದಿನೊಳಗೆ ನಕಲು ತೆಗಿಯುವ ಹಲವು ಶಿಲಾ ಶಾಸನಗಳು ಇವೆ. ಇವುಗಳೆಲ್ಲವುಗಳ ನಕಲು ತೆಗೆದರೆ ಚರಿತ್ರಾಶೋಧನೆಗೆ ಉತ್ತಮವಿತ್ತು.

ಇಲ್ಲಿಯ ನೆರೆ ಸಮಯ ಹಾಳಾದ ಎಲ್ಲಾ ತಾಲೂಕು ಬೋರ್ಡು ಕಟ್ಟಡಗಳು ಈಗ ದುರುಸ್ತಿ ಮಾಡಲ್ಪಡುತ್ತವೆ. ಹುಡುಗಿಯರ ಶಾಲೆಯ ಕಂಪೌಂಡಿನ ಗೋಡೆಗಳೂ ಗೇಟೂ ದುರುಸ್ತಿ ಆಯಿತು.

ಅನಂತಾಡಿ:— ಇಲ್ಲಿಯ ಉಳ್ಳಾಲ್ತಿ ದೈವದ ಅಯನವು ಬಹಳ ವಿಶೇಷ ತರದಲ್ಲಿ ನಡೆಯಿತು. ೩-೪ ಸಾವಿರ ಜನರು ಕೂಡಿ ಬಂದಿದ್ದರು.

ಪೊಳಲಿ:— ಬಂಟವಾಳ ಪೊಳಲಿ ಮಾರ್ಗದಲ್ಲಿರುವ ಒಂದು ದೊಡ್ಡ ಕಲ್ವರ್ಟ ಕಟ್ಟಿಸಲಿಕ್ಕೆ ೧೮೦೦ನ್ನು ಇತರ ದುರಸ್ತಿಗೆ ಸುಮಾರು ೧೮೦೦ ರೂಪಾಯಿಯನ್ನು ಮಂಗಳೂರು ತಾಲೂಕು ಬೋರ್ಡಿನವರು ಸಂಕ್ಷನ ಮಾಡಿರುವರು.

ವಿವಿಧ ವಿಷಯಗಳು.

ಇಂದೋರಿನ ಮಾಜಿ ಮಹಾರಾಜರ ಮದುವೆ!

ಮಿಸ್. ಮಿಲ್ಲರಳನ್ನು ಹಿಂದೂಮತಕ್ಕೆ ಪರಿವರ್ತಿಸುವಗೋಸ್ಕರ ಕರವೀರ ಪೀಠದ ಜಗದ್ಗುರುಗಳಾದ ಶ್ರೀ ಶಂಕರಾಚಾರ್ಯರು ತಯಾರಿದ್ದರೆಂದು ಒಂದು ವರ್ತಮಾನವಿದ್ದಿತು. ಆದರೆ ತಾನು ಆ ವಿಷಯವಾಗಿ ಉತ್ಸುಕನಿದ್ದಿಲ್ಲವೆಂದೂ, ಅದರ ಸಂಗತಿಗಳೇ ತನಗೆ ಸರಿಯಾಗಿ ತಿಳಿದಿಲ್ಲವೆಂದೂ ಸ್ವಾಮಿಜಿಯವರು ಈಗ ಹೇಳುತ್ತಿರುವರು. ಒಮ್ಮೆ ತುಕೋಜಿರಾಯರ ಕಡೆಯಿಂದ ಜನಬಂದು ಸ್ವಾಮಿಜಿಯವರ ಕೂಡೆ ಮಿಲ್ಲರಳನ್ನು ಹಿಂದುವನ್ನಾಗಿ ಮಾಡಬಹುದೋ ಎಂದು ಕೇಳಿದಾಗ ಮಾತ್ರ ಶ್ರೀ ಸ್ವಾಮಿಜಿಯವರು ಶಾಸ್ತ್ರೋಕ್ತವಾಗಿಯಾದರೆ ಮಾಡಬಹುದು ಎಂದಿದ್ದರು. ತದನಂತರ ಮಿಸ್ ಮಿಲ್ಲರಳ ಕಾಗದವೇ ಇವರಿಗೆ ಬಂದಿತು. ಆಗ ಮಾತ್ರ ಸಹಾಯಮಾಡುವೆನೆಂದು ಇವರು ಮಾತುಕೊಟ್ಟಿದ್ದರು. ಮಿಸ್ ಮಿಲ್ಲರಳು ಬಹು ಧನಿಕಳು. ತುಕೋಜಿರಾಯರ ಸ್ವಭಾವವು ಅವಳಿಗೆ ಪೂರ್ಣ ತಿಳಿದಿದ್ದರೂ ತಾನೇಕೆ ಅವರನ್ನು ಮದುವೆಯಾಗುವಳೋ ಏನೋ! ಮಿಸ್. ಮಿಲ್ಲರಳ ಈ ತರದ ವರ್ತನದಿಂದ ಮಿಸ್. ಮೆಯೋಳ 'ಮದರ್ ಇಂಡಿಯಾ' ಪುಸ್ತಕಕ್ಕೆ ಬಹಳ ಅವಮಾನವನ್ನು ಮಾಡಿದಂತಾಯಿತು. ಮಿಲ್ಲರಳು ಹಿಂದೂವಾಗಿ ಹಿಂದೂಕ್ರಮಕ್ಕನುಸಾರವಾಗಿ ನಡೆದು ಮೆಯೋಳ ಅನ್ನುವಿಕೆಯು ತೀರ ಸುಳ್ಳೆಂದು ಹೇಳಸತಕ್ಕದ್ದು. 'ದೀನರಿಗೆ ಸಹಾಯವನ್ನು ಮಾಡಲೇ ಬೇಕು, ಜಾತಿಮತಗಳನ್ನು ಅಂತಹ ಸಮಯದಲ್ಲಿ ಲಕ್ಷಿಸಬಾರದು' ಎಂದಿರುವುದರಿಂದ ದೀನಳಾದ ಮಿಸ್ ಮಿಲ್ಲರಳನ್ನು ಶ್ರೀ ಶಂಕರಾಚಾರ್ಯರೂ ಹಿಂದೂಮತಕ್ಕೆ ಪರಿವರ್ತಿಸುವರು. ಯಾವಾಗ ಎಂಬುದು ಮಾತ್ರ ಸರಿಯಾಗಿ ತಿಳಿದಿಲ್ಲ.

§ § § §

ತಂಜಾವೂರಿಗೆ ಸೈಮನ್ ಕಮಿಶನಿನ ಆಗಮನ.

ಮಾರ್ಚಿ ೩ನೇ ತಾರೀಕಿನ ದಿನ ರಾತ್ರಿ ಸೈಮನ್ ಕಮಿಶನು ಮದರಾಸಿನಿಂದ ಹೊರಟು ತಂಜಾವೂರಿಗೆ ತಲಪಿತು. ರೈಲುವೇ ಗಾಡಿಯು ಬಿಟ್ಟುಹೋಗುವ ಸ್ಟೇಶನಿನಲ್ಲಿ ಅನೇಕ ಜನರು ಕೂಡಿ ರೈಲು ಹೋಗುತ್ತಿರುವಾಗ "ಶೇಮ್, ಶೇಮ್" ಎಂದು ಬೊಬ್ಬೆಹಾಕಿದರು. ರೈಲು ಮರುದಿನ ಬೆಳಗ್ಗೆ ತಂಜಾವೂರಿಗೆ ಬಂದು ತಲಪಿತು. ಸ್ಟೇಶನಿನ ಪ್ಲೇಟ್‌ಫೋರ್ಮಿನ ಮೇಲೆ ಜನರನ್ನು ಬರಗೊಡುತ್ತಿದ್ದಿಲ್ಲ. ಆಫೀಸರರನ್ನೂ ಇತರ ಯೋಗ್ಯ ಗೃಹಸ್ಥರನ್ನೂ ಮಾತ್ರ ಒಳಕ್ಕೆ ಬಿಟ್ಟಿದ್ದರು. ಸ್ಟೇಶನಿನ ಹೊರಗಡೆ ಊರಿನವರೆಲ್ಲ ಕೂಡಿ ಕಪ್ಪು ಧ್ವಜಗಳನ್ನು ಎತ್ತಿಹಿಡಿದಿದ್ದರು. "ಸೈಮನ್, ಹಿಂದಕ್ಕೆ ಹೋಗು" ಎಂದು ಬರೆದಿದ್ದ ಪತಾಕೆಗಳನ್ನು ಬೀಸುತ್ತಿದ್ದರು. ಕಮಿಶನಿನವರಿಗೆ ಇರಲಿಕ್ಕಾಗಿ ಸರಕಾರೀ ಆಫೀಸರರು ಒಂದು ಮಂಟಪವನ್ನು ರಚಿಸಿದ್ದರು. ಅಂದು ಪಟ್ಟಣದಲ್ಲೆಲ್ಲಾ ಹರತಾಳವನ್ನಾಚರಿಸಿದ್ದರು. ಹರತಾಳವನ್ನು ಆಚರಿಸಬೇಕೆಂದು ಮೊದಲೇ ತಯಾರಿಯು ಇರುದಿದ್ದರೂ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಇಂತಹ ಹರತಾಳವು ಆಚರಿಸಲ್ಪಟ್ಟದ್ದೇ ಬಹಳ ಆಶ್ಚರ್ಯಕರವಾಗಿ ಕಂಡುಬಂದಿತು. ಸಾಯಂಕಾಲ ಇವರನ್ನು ಮರ್ಯಾದಿಸುವುದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ಸಭೆಯನ್ನು ಜರಗಿಸಿದರು. ಈ ಸಭೆಗೆ ಕಮಿಶನಿನವರು ಬಂದಿದ್ದರು. ಸಭೆಯು ಮುಗಿದ ಮೇಲೆ ಮುನಿಸಿಪಲ್ ಆಫೀಸುಗಳನ್ನು ಸಂದರ್ಶಿಸುವುದಾಯಿತು.

§ § § §

ಬಂಗಾಳಿ ಯುವತಿಯ ಅಸಾಮಾನ್ಯ ಸಾಹಸ!

ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ವಾಸವಾಗಿದ್ದ ಅಮೂಲ್ಯಘೋಷನೆಂಬವನ ಮನೆಗೆ ಒಂದುದಿನ ರಾತ್ರಿ ೧೫ ಜನ ದರೋಡೆಕೋರರು ಆಯುಧಪಾಣಿಗಳಾಗಿ ಬಂದು ಬಾಗಿಲನ್ನೊಡೆಯಲು ಪ್ರಯತ್ನಿಸಿದರು. ಅಮೂಲ್ಯಘೋಷನ ಪತ್ನಿಯೂ, ಆತನ ಸಣ್ಣ ಕುಟುಂಬವೂ ಮನೆಯಲ್ಲಿ ಮಲಗಿದ್ದರು. ಅಮೂಲ್ಯಬಾಬುವಿಗೆ ಈ ಸಂಗತಿಯು ತಿಳಿದು ತನ್ನ ಕುಟುಂಬವನ್ನು ರಕ್ಷಿಸುವುದಕ್ಕಾಗಿ ಕೈಯಲ್ಲಿ ಒಂದು ಹರಿತವಾದ ಚೂರಿಯನ್ನು ಹಿಡಿದುಕೊಂಡು ಬಾಗಿಲಿಗೆ ಅಡ್ಡವಾಗಿ ನಿಂತನು. ಆದರೂ ದರೋಡೆಕೋರರು ಬಾಗಿಲನ್ನೊಡೆದು ಒಳಕ್ಕೆ ಬಂದು ಬಾಬುವನ್ನು ಹಿಂಸಿಸತೊಡಗಿದರು. ಆತನ ಪತ್ನಿಯು ಪತಿಗಾಗುವ ತೊಂದರೆಗಳನ್ನು ಕಂಡು ಸಹಿಸಲಾರದೆ ಮಾಳಿಗೆಗೆ ಹೋಗಿ ಇಟ್ಟಿಂಗಿಯ ಚೂರುಗಳನ್ನು ದರೋಡೆಕೋರರ ಮೇಲೆ ಬಲವಾಗಿ ಎಸೆಯತೊಡಗಿದಳು. ಇಷ್ಟೆಲ್ಲ ಬೊಬ್ಬೆಯಾಗುತ್ತಿರುವಾಗ ನೆರೆಕರೆಯವರೂ ಎದ್ದು ಅಲ್ಲಿಗೆ ಬಂದರು. ಇಟ್ಟಿಂಗಿಯ ಪೆಟ್ಟುಗಳನ್ನು ತಿಂದು ಮೊದಲೇ ಸೋತುಹೋದ ದರೋಡೆಕೋರರ ಪಂಗಡವು ಜನರು ಬಂದುದನ್ನು ನೋಡಿ ಕಾಲಿಗೆ ಬುದ್ಧಿ ಹೇಳಿದರು. ಹೀಗೆ ಒಬ್ಬ ಯುವತಿಯ ಸಾಹಸದಿಂದ ಇಡೀ ಕುಟುಂಬದ ರಕ್ಷಣೆಯಾಯಿತು!

§ § § §

ಹುಚ್ಚು ಹಿಡಿದ ಆನೆ.

ತಲಚೇರಿಯಲ್ಲಾಗುವ ಒಂದು ದೊಡ್ಡ ಉತ್ಸವಕ್ಕೆ ಅದೇ ತಾಲೂಕಿನ ಒಂದು ಹಳ್ಳಿಯ ಆನೆಯನ್ನು ತಂದಿದ್ದರು. ದೇವಸ್ಥಾನಕ್ಕೆ ತಂದೊಡನೆ ಆನೆಯ ಮಾವುತನು ಅದರ ಕಿವಿಗೆ ಅಂಕುಶವನ್ನು ಹಾಕಿ ತಿರುಗಿಸಿದನು. ಒಡನೆ ಆನೆಗೆ ಸಿಟ್ಟುಬಂದು ಮಾವುತನನ್ನು ಕೆಳಕ್ಕುರುಳಿಸಿ ಬಾಧೆಕೊಟ್ಟು ಕೊನೆಗೆ ಆತನನ್ನು ಕೊಂದೇಬಿಟ್ಟಿತು. ಇದನ್ನು ಕಂಡು ಇನ್ನಿಬ್ಬರು ಮಾವುತರು ಆತನ ಸಹಾಯಕ್ಕೆಂದು ಓಡಿದರು. ಅವರು ಈತನ ಸಹೋದರರಾಗಿದ್ದರು. ಆನೆಯು ಅವರಿಬ್ಬರನ್ನೂ ಬಹಳವಾಗಿ ಹಿಂಸಿಸಿತು. ಒಬ್ಬನು ಅಲ್ಲಿಯೇ ಮೃತಪಟ್ಟನು. ಅಲ್ಲಿಂದ ಆನೆಯು ಸಮೀಪದ ಹಳ್ಳಿಗೆ ಹೋಗಿ ಸಣ್ಣ ಸಣ್ಣ ಗುಡಿಸಲುಗಳೆಲ್ಲವನ್ನೂ ಧ್ವಂಸಮಾಡಿತು. ಹಾದಿಯಲ್ಲಿ ಸಿಕ್ಕಿದವರನ್ನು ಕಾಲಿನಿಂದ ಒದೆದು ಕೊಂದುಹಾಕಿತು. ಈ ರೀತಿಯಲ್ಲಿ ಆನೆಯು ಹೇಳಲಸಾಧ್ಯವಾದ ಹಾವಳಿಯನ್ನು ಮಾಡಿತು. ಸತ್ತವರಲ್ಲಿ ಮಧುರೆಯ ಧನಿಕ ಸಾಹುಕಾರನೊಬ್ಬನೂ ಇದ್ದನು. ತದನಂತರ ಮಲಬಾರ್ ಸ್ಪೆಶಿಯಲ್ ಪೋಲಿಸಿನ ಸುಪರಿಂಟೆಂಡೆಂಟರೂ, ಸುಭೇದಾರರೂ ಬಂದು ಆನೆಗೆ ಗುಂಡುಹೊಡೆದು ಕೊಂದುಬಿಟ್ಟರು. ಅವರು ಬಾರದೆ ಇರುತ್ತಿದ್ದರೆ ಇನ್ನೆಷ್ಟು ಜನರು ಅದರ ಕಾಲಿಗೆ ತುತ್ತಾಗುತ್ತಿದ್ದರೆಂದು ಬೇರೆ ಹೇಳಬೇಕಾಗಿಲ್ಲ.

§ § § §

ಸೈಮನು ಕಮಿಶನು ಮಧುರೆಯನ್ನು ಸಂದರ್ಶಿಸಿತು.

ಮಾರ್ಚಿ ೫ನೇ ತಾರೀಕಿನ ದಿವಸ ಬೆಳಗ್ಗೆ ಸೈಮನ್ ಕಮಿಶನು ಮಧುರೆಗೆ ಬಂದು ತಲಪಿತು. ರೈಲ್ವೇ ಪ್ಲೇಟ್‌ಫೋರ್ಮಿನ ಮೇಲೆ ಆಫೀಸರರೂ, ಇತರ ಕೆಲವರೂ ಕೂಡಿ ಅವರನ್ನು ಎದುರುಗೊಂಡರು. ರೈಲ್ವೆ ಸ್ಟೇಶನಿನಲ್ಲಿ ಪೋಲೀಸ ಬಂದೋಬಸ್ತಿಯು ಇದ್ದಿತು. ಅಲ್ಲಿಂದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿಗಾಗಿ ಕಮಿಶನು ಕಲೆಕ್ಟರರ ಬಂಗಲೆಗೆ ಹೋಯಿತು. ಹಾದಿಯಲ್ಲಿ ಜನಸಂದಣಿಯು ನೆರೆದಿದ್ದು, 'ಶೇಮ್ ಶೇಮ್' ಎಂದು ಬೊಬ್ಬಿಡುತ್ತಾ, ಕಪ್ಪು ಧ್ವಜಗಳನ್ನು ಏರಿಸಿದ್ದರು. ಪಟ್ಟಣದಲ್ಲೆಲ್ಲಿಯೂ ಹರತಾಳವು ಆಚರಿಸಲ್ಪಟ್ಟು, ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಹರತಾಳಕ್ಕಾಗಿ ಜನರು ತುಂಬಾ ಉತ್ಸಾಹಿಗಳಾಗಿ ಕಾಣುತ್ತಿದ್ದರು.

ಡಿಸ್ಟ್ರಿಕ್ಟ್ ಬೋರ್ಡ್ ಸಭೆಗೆ ಬರೇ ೩೬ ಸದಸ್ಯರು ಮಾತ್ರ ಬಂದಿದ್ದರು. ಬೋರ್ಡಿನ ಕಡೆಯಿಂದ ಸತ್ಕಾರವಾಯಿತು. ಮದರಾಸು ಸಂಸ್ಥಾನದಲ್ಲಿ ತಮಗೆ ಎಲ್ಲರೂ ಆಮಂತ್ರಣವನ್ನು ಕೊಟ್ಟದ್ದೇ ಹೆಚ್ಚೆಂದು ಸರ್. ಜೋನ್ ಸೈಮನರು ಹೇಳಿದರು.

ಕಮಿಶನು ಹೊರಟುಹೋಗಬೇಕಾದರೆ ಅದಕ್ಕೆ ಒಂದು ಗಾರ್ಡನ್ ಪಾರ್ಟಿಯು ಕೊಡಲ್ಪಟ್ಟಿತು.

§ § § §

ಲೋರ್ಡ ಸಿಂಹರವರ ಮರಣ.

ಸರಕಾರಿ ಉದ್ಯೋಗದಲ್ಲಿ ಉಚ್ಚಪದವಿಗೇರಿದ್ದ ರಾಯಪುರದ ಲೋರ್ಡ್ ಸಿಂಹರವರು ಹೃದಯ ದೌರ್ಬಲ್ಯದಿಂದ ಮೃತರಾದರು; ಇವರು ಮೊದಲನೇ ಬಂಗಾಳದ ಎಡ್ವೊಕೇಟ್ ಜನರಲರು, ಸ್ಟೇಟ್ ಫೋರ್ ಇಂಡಿಯದ ಮೊದಲನೇ ಅಂಡರ್ ಸೆಕ್ರೆಟರಿಗಳು, ಅವರು ಮೇಲಿಂದ ಮೇಲೆ ಬೇರೆ ಬೇರೆ ಕೆಲಸಗಳಲ್ಲಿ ನೇಮಿಸಲ್ಪಟ್ಟು, ಆ ಕೆಲಸಗಳನ್ನು ಸರಿಯಾಗಿ ಮಾಡಿ ಕೀರ್ತಿಪಟ್ಟವರು. ಇವರು ೧೮೬೩ರಲ್ಲಿ ಜನಿಸಿದರು. ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಕಲಿತ ಮೇಲೆ, ತಂದೆಯಿಂದ ತಮಗೆ ಸಿಕ್ಕಿದ ಹಣವನ್ನು ಹಿಡಿದುಕೊಂಡು ಇವರೂ, ಇವರ ಸಹೋದರರೂ ಕೂಡಿ ವಿಲಾಯಿತಿಗೆ ತೆರಳಿದರು. ೧೮೮೬ರಲ್ಲಿ ಇವರು ವಕೀಲರಾದರು. ನ್ಯಾಯವಿಚಾರದಲ್ಲಿ ಇವರು ಹೆಸರು ಹೊಂದಿ ವ್ಯವಹರಿಸುವವರಲ್ಲಿ ಅಗ್ರಗಣ್ಯರೆಂದು ಪ್ರಸಿದ್ಧಿಪಟ್ಟರು. ೧೯೦೩ರಲ್ಲಿ ಇವರು ಸ್ಥಾಯಿಕ ಕೌನ್ಸಿಲರರಾಗಿಯೂ ೧೯೦೮ರಲ್ಲಿ ಇವರು ಪರ್ಮನೆಂಟ್ ಎಡ್ವೊಕೇಟ್ ಜನರಲರಾಗಿಯೂ ನೇಮಿಸಲ್ಪಟ್ಟರು. ೧೯೧೫ನೇ ಇಸವಿಯಲ್ಲಿ ಇವರೇ ಕಾಂಗ್ರೆಸ್ ಅಧ್ಯಕ್ಷರಾದರು. ಸರಕಾರಿ ಹುದ್ದೆಯನ್ನು ಆಗ ಬಿಟ್ಟುಬಿಟ್ಟರು. ೧೯೧೭ರಲ್ಲಿ ಪುನಃ ಬಂಗಾಳದ ಎಡ್ವೊಕೇಟ್ ಜನರಲರಾದರು. ತರುವಾಯ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರಾದರು. ೧೯೧೯ರಲ್ಲಿ ಇಂಡಿಯಾ ಸ್ಟೇಟಿನ ಅಂಡರ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಕೆಲವು ಸಮಯ ಬಿಹಾರ್ ಮತ್ತು ಒರಿಸ್ಸದ ಗವರ್ನರರಾಗಿದ್ದರು. ತನ್ನ ನಾಡಿನ ಜನರ ಉದ್ಧಾರಕ್ಕಾಗಿ ಇವರು ತುಂಬಾ ಹೋರಾಡಿದರು. ಅವರ ಮರಣದಿಂದ ಭಾರತ ಭೂಮಿಯ ಒಂದು ರತ್ನವು ಕಳೆದುಹೋಯಿತು.

§ § § §

ಭಾರತ ಯುವಕ ಸಮಾಜ.

ಆಸ್ಟ್ರಿಯದ ಯುವಕ ಸಮಾಜದ ಸ್ಥಾಪಕರಾದ ಫೋನ್ ವೈಲರೆಂಬವರು ಸಂಚಾರಕ್ಕಾಗಿ ಈಗ ಹಿಂದುಸ್ಥಾನಕ್ಕೆ ಬಂದಿರುವರು. ಸಾಧು ಟಿ. ಎಲ್. ವಾಸ್ವಾನಿಯವರು ಸ್ಥಾಪಿಸಿದ ಭಾರತ ಯುವಕ ಸಮಾಜದ ಕುರಿತು ಈ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು.

ಇಂಡಿಯದಲ್ಲಿ ನಾನು ಇದು ವರೆಗೆ ನೋಡಿದವುಗಳಲ್ಲಿ ಈ ಭಾರತ ಯುವಕ ಸಂಘವು ನನಗೆ ಬಹು ಆಶ್ಚರ್ಯವನ್ನುಂಟುಮಾಡುತ್ತಿದೆ. ಹಿಂದುಸ್ಥಾನದ ಇತರ ಯಾವ ವಿಷಯಗಳೂ ನನಗಷ್ಟು ತೃಪ್ತಿಕರವಾಗಿ ತೋರದಿದ್ದರೂ ಈ ಸಂಘವನ್ನು ನಾನು ಹೊಗಳದಿರಲಾರೆನು. ಸಾಧು ವಾಸ್ವಾನಿಯವರ ಸಾಹಸಕ್ಕಾಗಿ ನಾನು ನಿಜವಾಗಿಯೂ ಸಂತೋಷಪಡುತ್ತೇನೆ. ಯುವಕ ಸಮಾಜದವರು ಕೆಲವು ಸ್ಥಳಗಳಲ್ಲಿ ಸರಿಯಾದ ಕ್ರಮಕ್ಕನುಸಾರವಾಗಿ ವರ್ತಿಸದೆ ತಮ್ಮ ಕರ್ತವ್ಯದಲ್ಲಿ ಜಯವನ್ನು ಹೊಂದದೆ ನಿರಾಶರಾಗುವರು. ಆದರೆ ಈ ಯುವಕ ಸಮಾಜವು ಹಾಗಲ್ಲ. ಇದು ಮುಂದೆ ಸಂಪೂರ್ಣ ಜಯವನ್ನು ಪಡೆಯುವದೆನ್ನಲು ಯಾವ ಸಂಶಯವೂ ಇಲ್ಲ.

ನಿಮ್ಮ ಸಮಾಜದಿಂದ ಮುಂದಿನ ಹಿಂದೂ ಜನಾಂಗಕ್ಕೆನೇ ಲಾಭವೂ ಜಯವೂ ಉಂಟಾಗುವದು. ಎಂದಿರುವರು. ಇವರು ದೊಡ್ಡ ಕವಿಗಳು, ಲೇಖಕರು, ಅಂಥವರೇ ಈ ಹಿಂದೂ ಯುವಕ ಸಮಾಜವನ್ನು ಹೊಗಳಿರುವದರಿಂದ ಅದರ ಯೋಗ್ಯತೆಯು ಎಷ್ಟಿದೆಯೆಂದು ತಾನಾಗಿಯೇ ಜನರಿಗೆ ತಿಳಿಯಬಹುದು.

ಸ್ವೀಕಾರ ಮತ್ತು ವಿಮರ್ಶೆ.

THE CANARA HIGH SCHOOL MAGAZINE.

Vol. 2] [No. 1

Edited by Mr. M. N. KAMATH
and published for the
OLD BOY'S ASSOCIATION.

We congratulate the Old Boys of the Canara High School on the successful conduct of this Magazine under the able Editorship of Mr. M. N. Kamath. Since its inaugaration last year, it has shown signs of developments and we have been only highly pleased to note that every new issue is bringing forth articles that seem better than the earlier. The English section is giving very thoughtful articles from the ablest pen of our District, while in the Kanarese section useful articles in chaste style are given to give interesting reading. We specially draw attention to "New Lamps for Old." & "Law of Compensation in History".

But when expressing our deep appreciation of the Magazine, we wish to be permitted to state an opinion which is expressed with a view to utility. We note that there is a tendency among writers to be more and more philosophic and as the Magazine, we presume, is intended for the young generation which has to face life we think that philosophy ought to be expressed in due proportion to other subjects. But after all this is an opinion which ought to be judged by the public by their own requirements.

ಸುಬೋಧ—ಮಾಸಪತ್ರಿಕೆ, ಸಂಪುಟ ೩. ಸಂಪಾದಕರು—ಶ್ರೀಯುತ ರಾಮರಾವ್ ವಾರ್ಷಿಕ ಚಂದಾ ರೂ. ೧-೮-೦. ವಿಳಾಸ—ಕಾರ್ಯದರ್ಶಿ, ಸುಬೋಧ ಪ್ರಕಟಣಾಲಯ, "ನ್ಯೂಮಾರ್ಕೆಟ್", ಬೆಂಗಳೂರು ಸಿಟಿ.

ಭಕ್ತಿಪರ ಮತ್ತು ಪಾರಮಾರ್ಥಿಕ ಲೇಖನಗಳು ಉತ್ತಮ ಶೈಲಿಯಲ್ಲಿ ಪ್ರಕಟವಾಗುತ್ತಿವೆ. ಅಲ್ಲದೆ ಕಾವ್ಯ, ಹಾಸ್ಯ, ಉಪನ್ಯಾಸ ಮೊದಲಾದ ಹಲವು ತರದ ಇತರ ಶ್ರೇಷ್ಠ ಲೇಖನಗಳೂ ಬರುತ್ತಿವೆ.

(೩ನೇ ಪೇಜಿನಿಂದ ಮುಂದುವರಿದುದು.)

ಮಾನಸಿಕ ಶಕ್ತಿಯನ್ನು ಉಪಯೋಗಿಸಿ ಮೆದುಳಿಗೆ ಚೆನ್ನಾಗಿ ಕೆಲಸವನ್ನು ಕೊಡುವಾಗ ಉಪವಾಸವನ್ನು ಮಾಡುವದು ಯೋಗ್ಯವು. ಮತ್ತು ಆಹಾರದಲ್ಲಿ ಪರಿವರ್ತನೆಗಳನ್ನು ಮಾಡುವ ಸಂದರ್ಭಗಳಲ್ಲಿ ಈ ಮಧ್ಯದಲ್ಲಿ ಉಪವಾಸವನ್ನು ಮಾಡುವದು ಅಗತ್ಯವಿದೆ. ಉದಾಹರಣಾರ್ಥವಾಗಿ ಮಾಂಸಾಹಾರಿಯು ಸಸ್ಯಾಹಾರಿಯಾಗಬೇಕಾದರೆ ಆತನು ಮಾಂಸಭಕ್ಷಣೆಯನ್ನು ಬಿಟ್ಟು ಸಸ್ಯಾಹಾರವನ್ನು ಹಿಡಿಯುವ ಮೊದಲು ಕೆಲವು ದಿನಗಳ ಉಪವಾಸವನ್ನು ಮಾಡಬೇಕು. ಮದುವೆಯ ಮುಂಚಿನ ದಿನ ೨೪ ತಾಸುಗಳ ಉಪವಾಸವನ್ನು ಮಾಡುವ ಪದ್ಧತಿಯು ಮಾರವಾಡಿಗಳಲ್ಲಿ ಮೊದಲಿನಿಂದಲೂ ಇದ್ದು ಈಗಲೂ ಅನುಸರಿಸಲ್ಪಡುತ್ತದೆ. ಅನೇಕ ಕಾರಣಗಳಿಂದ ವಿಚಾರಿಸಿ ನೋಡಲಾಗಿ ಈ ಅಭ್ಯಾಸವು ಸರಿಯಾದುದೆಂದು ತೋರುವುದರಿಂದ ಅದನ್ನು ಮುಂದಕ್ಕಾದರೂ ಅವಲಂಬಿಸುವದು ಉತ್ತಮವಿದೆ.

ಆದರೆ ಹಸಿವೆಯು ಬಹಳವಿದ್ದು ಆಹಾರವು ಬೇಕೆಂದು ಅನ್ನಿಸುತ್ತಿರುವಾಗ ಉಪವಾಸವನ್ನು ಮಾಡುವದು ಸರಿಯಲ್ಲ. ಮನಸ್ಸು ಆಹಾರ ಬೇಕೆಂದು ಒತ್ತಾಯ ಪಡಿಸುವಾಗ ಬೇಡವೆನ್ನುವಷ್ಟರ ವರೆಗೆ ಮನಸ್ಸನ್ನು ತಿರುಗಿಸುವುದು ಸುಲಭಸಾಧ್ಯವಲ್ಲ. ಅದಕ್ಕೆ ಬಹಳ ಕಷ್ಟವಿದೆ. ಹಾಗೆ ಕಷ್ಟಪಡುವುದರಿಂದ ಕೆಡುಕಿದೆ. ಮಾನಸಿಕ ಮತ್ತು ನರಗಳ ರೋಗದಿಂದ ಬಳಲುತ್ತಿರುವಾಗ ಉಪವಾಸವನ್ನು ಮಾಡಿದರೆ ಪ್ರಯೋಜನಕಾರಿಯಾಗಲಿಕ್ಕಿಲ್ಲ. ಉಪವಾಸವನ್ನು ಮೇಲೆ ಹೇಳಿದ ರೀತಿಯಲ್ಲಿ ಮತ್ತು ಸಮಯದಲ್ಲಿ ಮಾಡಬೇಕು.

ಉಪವಾಸದ ಮೊದಲನೆಯ ಒಂದೆರಡು ದಿನಗಳು ಬಹು ಕಷ್ಟದಾಯಕವಾಗಿರುವವು. ಅನೇಕರು ಪುಸ್ತಕಗಳಲ್ಲಿ ಬರೆದುದನ್ನು ನೋಡಿಯೊ ಅಥವಾ ಮಿತ್ರರು ಮಾಡುವುದನ್ನು ನೋಡಿಯೊ, ತಾನೂ ಉಪವಾಸ ಮಾಡುವೆನೆಂದು ಉತ್ಸಾಹದಿಂದ ಪ್ರಾರಂಭಿಸಿ ಎರಡೇ ದಿನಗಳೊಳಗೆ ಸೋತುಹೋಗಿ ಬಿಟ್ಟುದುಂಟು. ಅಂಥವರು ಮನೋ ದೌರ್ಬಲ್ಯವುಳ್ಳವರು, ಸ್ವಲ್ಪ ಕಷ್ಟಪಟ್ಟಾದರೂ ಆರೋಗ್ಯವನ್ನು ಸಂಪಾದಿಸುವ ಬದಲು, ಸುಖವಾಗಿ ಅನಾರೋಗ್ಯವನ್ನು ಗಳಿಸುವದು ಅವರಿಗೆ ಯೋಗ್ಯವೆನಿಸುವುದು. ತಿನ್ನುವದು ಮತ್ತು ಕುಡಿಯುವುದು ಈ ಕ್ರಮಗಳು ಅನಾದಿಯಿಂದಲೂ ನಡೆದುಬಂದವುಗಳು. ಅವುಗಳನ್ನು ಥಕ್ಕನೇ ಬಿಡಲಾಗುವುದಿಲ್ಲ. ಉಪವಾಸದ ಮೊದಲನೇ ನಾಲ್ಕು ದಿನ ಹೇಳಲಾಗದಷ್ಟು ಕಷ್ಟವಾಗುವದು. ಆಹಾರದ ಹೆಸರನ್ನು ಕೇಳಿದೊಡನೆ ತಿನ್ನೋಣವೆಂದು ತೋರುವುದು, ತಲೆ ನೋಯುವದು, ಉಪವಾಸಿಯು ಕುಗ್ಗಿದ ಸ್ಥಿತಿಯಲ್ಲಿರುವನು.

(ಸಶೇಷ)

Shroff Shri Vallabha Shivappa Shet & Co.

Shroff & Jewellers,

DONGERKERY MANGALORE

ESTABLISHED 1918 ಸ್ಥಾಪಿತವಾದದ್ದು ೧೯೧೮

ಖಾತ್ರಿಯಾದ ವಸ್ತುಗಳು! ನ್ಯಾಯವಾದ ಖರೀದಿ!!



ನಮ್ಮಲ್ಲಿ ಇರುವ [illegible] ಬಂಗಾರದ ಒಡವೆಗಳಲ್ಲದೆ ಅನೇಕ ನಮೂನೆಯ [illegible] ಅಡ್ಡಿಗೆ ಸರಪಳಿ, ಬಳೆಗಳು, ಯಸ್. [illegible] ಗುಲಾಬಿ ಹೂ, ಅಲ್ಲದೆ ನವಯೌವನದ [illegible] ಆಭರಣಗಳನ್ನು ನಾವು ಕ್ಲುಪ್ತಕಾಲಕ್ಕೆ [illegible]

[illegible] ರವಾನಿಸತಕ್ಕದ್ದು.

[illegible] ಮತ್ತು ಕಂಪೆನಿ,

[illegible] ಮತ್ತು ಜಿವೆಲ್ಲರ್ಸ್,

[illegible], ಮಂಗಳೂರು.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಪುಣ್ಯದಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ತಂಬಾಕು ವ್ಯಾಪಾರ,

ಶೆವ್ವಾಪೇಟೆ, ಸೇಲಂ (ದಕ್ಷಿಣ ಇಂಡಿಯಾ.)

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುತರದ ಕೆಲಸ ಯೋಗ್ಯವಾದ ಕಪ್ಪುಗಳು, ಮೆಡಲುಗಳು ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ. ಮತ್ತು ಪೂಜೆಗೆ ಯೋಗ್ಯವಾದ ಎಲ್ಲಾ ವಿಧವಾದ ವಿಗ್ರಹಗಳು ದೊರೆಯುತ್ತವೆ.

ನಮ್ಮಲ್ಲಿ ಅಪ್ಪಟ ಸವರನ್ ಬಂಗಾರದಿಂದ ತಯಾರಿಸಿದ ಎಲ್ಲಾ ವಿಧವಾದ ನಗಗಳೂ [illegible] ಕೆಂಪುಗಳಿಂದ ಕೆತ್ತಲ್ಪಟ್ಟ ತಾಜಾಕಾಗಿ ತಯಾರಿಸಿದ ಎಲ್ಲಾ ವಿಧವಾದ ಆಭರಣಗಳೂ, ಚೊಕ್ಕಬೆಳ್ಳಿಯಿಂದ ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ [illegible] ತಯಾರಿಸಿ ಕೊಡುತ್ತೇವೆ.

ಕೆ. ವಿ. ರಾಘುವೇಂದ್ರಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

ಅವಿನ್ಯೂ ರೋಡು, ಬೆಂಗಳೂರು ಸಿಟಿ.

(21-10-'27)

[illegible]

ಮಂಗಳೂರು. ಕೆ. ಸದಾಶಿವ ಅಡಿಗ,

ತಾ. 22-2-'28. ಪ್ರೆಸಿಡೆಂಟ್

ಮಂಗಳೂರು [illegible]

ತ್ವರೆಮಾಡಿರಿ ! ತ್ವರೆಮಾಡಿರಿ !!

1928ನೇ ವರುಷದ

ಪೊಕೆಟ ಡೈರಿ

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ	೧೪ ಆಣೆ
ದೊಡ್ಡ ಸೈಜಿನ ಸಾದಾ ಡೈರಿ	೧೨ ಆಣೆ
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ	೧೨ ಆಣೆ
ಮಿಡಿಯಮ್ ಸೈಜಿನ ಡೈರಿ	೮ ಆಣೆ
ಸಣ್ಣ ಸೈಜಿನ ಸಾದಾ ಡೈರಿ.	೭ ಆಣೆ
„ „ ಸ್ಟಿಫ್ ಬ್ಯಾಂಡಿನ ಡೈರಿ	೬ ಆಣೆ

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ

ವಿಳಾಸ:— ಶಾರದಾ ಛಾಪಖಾನೆ,

ಖಾತ್ರಿಯಾಗುವದು!!

ಫಲತೃಪ್ತಿಕರ

ಶ್ರೀ [illegible] ಅಮೃತೇಶ್ವರೀ ವೈದ್ಯಶಾಲಾ

[illegible] ಕಾಂಞಂಗಾಡ (ದ. ಕ.)

[illegible] ಕಾಂಞಂಗಾಡ (S. I. R.)

[illegible] ಮುಖ್ಯವಾಗಿ ಸರಕಾರದಿಂದ [illegible] ಪ್ರಸಿದ್ಧಪಟ್ಟ 'ಭೃಹ್ಮ ಶ್ರೀ ವೈದ್ಯ [illegible]' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆ [illegible] ಕೊಡುವಂಥಾ ಸಕಲ ತರದ ರೋಗಗಳನ್ನು [illegible] ಎಲ್ಲಾ ತರದ ಎಣ್ಣೆಗಳು, [illegible], ಚೂರ್ಣ, ಮಾತ್ರೆ, ಅರಿಷ್ಟಾಸವಗಳು [illegible] ಸಿಲುಕಿನಲ್ಲಿ ತಯಾರ [illegible] ರೋಗಿಗಳು ತಮ್ಮ [illegible], ವ್ಯಾಯ, ನಿತ್ಯ ಆಹಾರದ [illegible] ಪದಾರ್ಥಗಳ ಅಭ್ಯಾಸ [illegible] ಆ ವಿವರ ಮತ್ತು [illegible] ಉಳ್ಳವರೂ ಎಂಬ ತಪಶೀಲು, [illegible] ವಿವರಗಳು ಸಹಾ [illegible] ಚಿಕಿತ್ಸೆ ನಡಿಸುವರೆಯೂ [illegible] ಕೆಳಗಿನ ವಿಳಾಸಕ್ಕೆ [illegible] ಕೊಡಲಾಗುವದಲ್ಲದೆ ಅನಾನು [illegible] ವಹಿತಗಳನ್ನು [illegible] ಅದನ್ನು ಸೇವಿಸುವ [illegible] ಈ ವೈದ್ಯಶಾಲೆಯು ಯಾವಾಗಲೂ [illegible] ಮದ್ದುಗಳನ್ನು ಒದಗಿಸಿ [illegible] ವಿವರಕ್ಕೆ ಪತ್ರ [illegible]

[illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ,

ಪೋಸ್ಟ್, ಕಾಂಞಂಗಾಡ (ದ. ಕ.

Diamonds. ವಜ್ರಗಳು Diamonds.

BOLA MANGESH ROW & Co.,

MANGALORE.

Agents & Direct importers of Superior Diamonds of Antwerp

ಯೇಜಂಟ್ಸಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

ಮಂಗಳೂರು.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ಯಾತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸ್‌ಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ಮಚಂದ್ರಕಾಂತಿ 300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪರಟು ಗುಂಡಿಗಳು, ರೋಜಾ ಹುವ್ವುಗಳ ತುರಾಯಿಗಳು, ಬ್ಯಾಟರಿಗಳು, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ಪಟ್ಟಿಗೆ ಕಡಿತೀಲಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,

ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

ನಗರತಪೇಟೆ, ಬೆಂಗಳೂರು ಸಿಟಿ.

(18-11-27)

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನುಕೂಲವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಆಶ್ಚರ್ಯಕರವೂ, ಲೋಕೋತ್ತರವೂ, ಹಾಸ್ಯಕರವೂ ಆಗಿರುವ,

ಪೋಕೆಟ್ ಡಿಟೆಕ್ಟಿವ್.

೨೦ನೇ ಶತಮಾನದ ಅಮೇರಿಕನ್ ಶೋಧನೆ.

ಈ ಚಮತ್ಕಾರಿಕವಾದ ಮತ್ತು ವಿಶದವಾದ, ಹೊಸ ನಮೂನೆಯ ಪೋಕೆಟ್ ಲೈಟು ಪ್ರತಿಯೊಬ್ಬನಿಗೂ ಅಗತ್ಯವಿದೆ. ನಿಮ್ಮ ಹೆಚ್ಚಿನ ಪ್ರೀತಿಗೆ ಪಾತ್ರಳಾಗಿರುವ ಸುಂದರಿಯನ್ನೂ, ಅವಳ ಚರ್ಯೆಗಳನ್ನೂ, ಯಾರೂ ತಿಳಿಯದಂತೆ ನೀವು ಮಾತ್ರ ಸಂಪೂರ್ಣವಾಗಿ ಕಾಣಬಹುದು. ಯಾವಾಗಲೂ ಉಪಯೋಗಕ್ಕೆ ತಕ್ಕುದಾಗಿದೆ. ಇದನ್ನು ಕೊಂಡುಕೊಳ್ಳುವವರಿಗೆ 4 ಪೇರಿಸ್ ಬೆಡ್‌ರೂಮ್ ಫೋಟೋಗಳು ಉಚಿತವಾಗಿ ಕೊಡಲ್ಪಡುವವು. ಮಾಹಿತಿ ಪತ್ರವೂ ಕೊಡಲಾಗುವದು.

ಕ್ರಯ ರೂಪಾಯಿ 2/-ಮಾತ್ರ.

PARIS EMPORIUM,

George Town,

MADRAS.

1 12—'27.

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ

ಮತ್ತು

ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,

ನಂ. 26 ಬ್ರಾಡ್ವೇ ಮದ್ರಾಸ್.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6%.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.

Mangalore, 16th Feb. 1928.

K. Venkat Rao,

Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನಿ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.

ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವರಿನ ಹತ್ತಿರ.

OP.

...Dunlop
and be satisfied

Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೬ನೇ ಶುಕ್ರವಾರ ಮಾರ್ಚಿ ೧೯೨೮. ಸಂಚಿಕೆ ೧೧

THE CANARA BANKING CORPORATION,
UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ:

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
— Car-street, MANGALORE.



Batliwalla's Preparations Cover All Your Needs.
A NAME THAT MERIT HAS MADE FAMOUS.

೩೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

... ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
... — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
... — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... — ಮಂಕಬೇಧಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... — ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೩—೦.
ರೂ. ೦—೬—೦
ರೂ. ೦—೬—೦. LIBERAL DISCOUNT TO TRADE

ಕಾರ್ಖಾನೆ:-CAWASHAPUR, BOMBAY.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

... ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ... ಯೋಗ್ಯವಾಗಿದೆ.

... ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... (ಬಿಳಿ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವವು.

... ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...

ವಿಳಾಸ:— **ಕೇಸರೀ ಕುಟೀರಂ,**
ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

18-11-27)

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲತೆಯನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
೦—೯—'೨೮ ಸಳೈಬೈಲ್ ಪೋಸ್ಟ್ ಕಡೂರ್ ಡಿಸ್ಟ್ರಿ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌಂಟೆನ್‌ಪೆನಾವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,
ಪೋ ಬಾಕ್ಸ್ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

Shroff Shri Vallabha Shivappa Shet & Co.

Shroff & Jewellers,
DONGERKERY MANGALORE

ESTABLISHED 1918. ಸ್ಥಾಪಿತವಾದದ್ದು ೧೯೧೮.

ಖಾತ್ರಿಯಾದ ವ್ಯಾಪಾರ! ನ್ಯಾಯವಾದ ಖರೀದಿ!!



ನಮ್ಮಲ್ಲಿ ಇದರಲ್ಲಿ ತೋರುವ ನಮೂನೆಯ ಭಂಗಾರದ ಒಡವೆಗಳಲ್ಲದೆ ಅನೇಕ ನಮೂನೆಯ ಗೆಜ್ಜೆಟಿಕೆಗಳೂ ಚಕ್ರಸರ, ಅಡ್ಡಿಗೆ ಸರಪಳಿ, ಬಳೆಗಳು, ಯುಸ್‌ಕ್ಲಾವರ್, ಮಲ್ಲಿಗೆ ಮೊಗ್ಗು ನಾನಾ ತರದ ಗುಲಾಬಿ ಹೂ, ಅಲ್ಲದೆ ನವಯೌವನದ ಸ್ತ್ರೀಯರಿಗೆ ಬೇಕಾದ ನವೀನ ರೀತಿಯ ಆಭರಣಗಳನ್ನು ನಾವು ಕ್ಲಪ್ತಕಾಲಕ್ಕೆ ತಯಾರಿಸಿಕೊಡುವೆವು.

ಕೆಂಪಿನ ಬೆಂಡೋಲೆಗಳು, ಸ್ಕ್ರೂಗಳು, ಟಿಕಿಗಳು, ಯಾವಾಗಲೂ ಮಾರಾಟಕ್ಕೆ ಸಿಗುತ್ತವೆ.

ನಮ್ಮ ಸಂಸ್ಥೆ ಕಚೇರಿಯಲ್ಲಿ ತಯಾರಿಸಿದ ಯಾವತ್ತು ಆಭರಣಗಳಿಗೆ ಒಂದು ವರುಷದೊಳಗೆ ಯಾವದೊಂದು ತರದ ಊನವು ನಮ್ಮ ಕಾರಣದಿಂದ ಉಂಟಾದರೆ ಅಂಥವುಗಳನ್ನು ಮಜೂರಿ ಬಿಟ್ಟು ಪರತು ತೆಗೆದುಕೊಳ್ಳುತ್ತೇವೆ.

ಆರ್ಡರ ಕೊಡುವಾಗ ಸೇಕಡಾ 25ರ ಪ್ರಕಾರ ಹಣವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಸರಾಫ್ ಶ್ರೀ ವಲ್ಲಭ ಶಿವಪ್ಪ ಶೇಟ್ ಮತ್ತು ಕಂಪೆನಿ,
ಸರಾಫ್ ಮತ್ತು ಜಿವೆಲ್ಲರ್ಸ್,
(31-3) ಡೊಂಗರಕೇರಿ, ಮಂಗಳೂರು.

ಉಪವಾಸದ ಆವಶ್ಯಕತೆ.

(ಮುಂದುವರಿದುದು)

ಹೀಗೆ ಮನಸ್ಸನ್ನು ಗಟ್ಟಿಹಿಡಿದು ಉಪವಾಸ ಮಾಡುತ್ತಾ ಹೋದಾಗ ಮಾತ್ರ ಅದು ಸುಲಭವಾಗಿ ಕಂಡುಬರುವುದು. ಆಹಾರದ ಮೇಲಿನ ಅಧಿಕ ಅಭಿಲಾಷೆಯು ತೊಲಗಿ ಕೊನೆಗೆ ತಿರಸ್ಕಾರ ಭಾವವು ಹುಟ್ಟುವುದು.

ಉಪವಾಸಿಯು ಆತ್ಮಜ್ಞಾನವನ್ನು ಹೊಂದುವನು. ಐಹಿಕ ಸುಖಾಪೇಕ್ಷಿಯಾಗಿರದೆ ಯಾವಾಗಲೂ ಭಗವಂತನ ಧ್ಯಾನದಲ್ಲಿಯೇ ಇರುವನು. ಸ್ವಾರ್ಥಾಭಿಲಾಷಿಯಾಗಿರದೆ ಪರೋಪಕಾರ ನಿರತನಾಗುವನು. ದೈವಿಕವಾದ ಪ್ರೇಮವನ್ನು ಸಂಪಾದಿಸುವನು. ಒಟ್ಟಾರೆ ಆತನು ಮನುಷ್ಯರ ಅಧೋಗತಿಯಲ್ಲಿರದೆ ಉಚ್ಚ ಪದವಿಗೇರುವನು. ಪೂಜ್ಯನಾಗುವನು. ಮನಸ್ಸು ಶಾಂತಿಯನ್ನು ಹೊಂದಿ ಸದ್ವಿಷಯಗಳನ್ನು ಥಕ್ಕನೆ ಹೀರುವದು, ಪರೋಕ್ಷಜ್ಞಾನವೂ ಸೇರಿ, ಯೋಗಸಾಧನೆಯು ಸುಲಭವಾಗುವದು.

ಉಪವಾಸದ ಸಮಯದಲ್ಲಿ ಶರೀರದ ಪ್ರಕೃತಿಯೇ ಬದಲಾಗಿ ಬಿಡುವುದು. ಮೊದಲು ಶರೀರದಲ್ಲಿ ಜಮೆಯಾದ ಆಹಾರವು ತೊಲಗಿ ಶರೀರವು ಸ್ವಚ್ಛವಾಗುವಾಗ ಉದರಶೂಲೆಗಳುಂಟಾಗುವವು. ಅಶುದ್ಧವಾದ ವಾಯುರೂಪ ಪದಾರ್ಥವು ಹೊರಡುವದರಿಂದ ಉಸಿರಿನ ಗಾಳಿಗೆ ವಾಸನೆಯು ಬರುವದು. ಆಗಾಗ ಬಿಸಿನೀರಿನ ವಿರೇಚಕಗಳನ್ನು ತೆಗೆದುಕೊಳ್ಳಬೇಕಾಗುವುದು. ಇದರಿಂದ ಕರುಳಿನಲ್ಲಿ ಕೂಡಬಹುದಾದ ವಿಷವಾಯುರೂಪ ಪದಾರ್ಥವು ಹೋಗುವದು. ಶರೀರದಲ್ಲಿ ಸೆಕೆ ಹೆಚ್ಚಬಹುದು, ತಂಪು ಹೆಚ್ಚಬಹುದು; ಇದನ್ನು ನಿಲ್ಲಿಸಲು ಏನೂ ಮಾಡಬಾರದು. ಬಾಯಿಯಲ್ಲಿ ಗಟ್ಟಿಯಾದ ಎಂಜಲು ಆಗಾಗ ಬರಬಹುದು. ಪಿತ್ತದ ಆಕಳಿಕೆಗಳು ಬರುವವು, ಕಾರುವದು ಹೆಚ್ಚಬಹುದು. ಇವೆಲ್ಲ ಸೂಚನೆಗಳು ಹೆದರಿಕೆಯನ್ನುಂಟುಮಾಡುವುವಾದರೂ ಭಯಂಕರವಾಗಿಲ್ಲ. ಆದರೂ ಬಹಳ ಜಾಗರೂಕತೆಯಿಂದಿದ್ದರೆ ಮಾತ್ರ ಹಲವು ದಿವಸಗಳ ಉಪವಾಸವನ್ನು ಮಾಡಬೇಕು. ಬೆವರು ಕೂಡ ವಾಸನೆಯನ್ನು ಕೊಡುವದು. ಉಪವಾಸವನ್ನು ಮಾಡಲಿಕ್ಕೆ ಹೆದರಿಕೆ ಇದ್ದರೆ ಮಾಡದಿರುವದೇ ಉತ್ತಮ; ಈ ಹೆದರಿಕೆಯಿಂದಲೇ ಮುಂದೆ ತೊಂದರೆಗಳುಂಟಾಗಬಹುದು. ಹೆಚ್ಚಾದರೆ ಒಂದೊಂದು ದಿವಸದ ಉಪವಾಸವನ್ನು ಸಾಮಾನ್ಯನೂ ಮಾಡಬಹುದು. ಉಪವಾಸ ಮಾಡುವದರಿಂದ ಶರೀರವೂ ಮನಸ್ಸೂ ಉತ್ಸಾಹಭರಿತವಾಗುವವು. ಆಹಾರ ಜೀರ್ಣಾಂಗಗಳಿಗೆ ವಿರಾಮ ದೊರಕಿದಂತಾಗುವದು.

ಉಪವಾಸ ಮಾಡುವಾಗಲೂ, ಮೊದಲೂ, ಮತ್ತೆಯೂ ಬಹಳ ಜಾಗ್ರತೆಯಿಂದ ವರ್ತಿಸಬೇಕಾಗುವದು. ಉಪವಾಸವನ್ನು ಪ್ರಾರಂಭಿಸುವಾಗ ಹೇಗೆ ಮೆಲ್ಲಮೆಲ್ಲನೆ ಪ್ರಾರಂಭಿಸಬೇಕೋ ಹಾಗೆಯೇ ಬಿಡುವಾಗಲೂ ಮೆಲ್ಲಮೆಲ್ಲನೆ ಬಿಟ್ಟುಬಿಡಬೇಕು. ಮೊದಲಿನ ದಿನ ಸ್ವಲ್ಪ ಆಹಾರವನ್ನು ಭುಂಜಿಸಬೇಕು. ಮರುದಿವಸ ಸ್ವಲ್ಪ ಹೆಚ್ಚಿಗೆ ತಿನ್ನಬೇಕು. ಹೀಗೆ ಮೆಲ್ಲ ಮೆಲ್ಲನೆ ಆಹಾರದ ಪರಿಮಾಣವನ್ನು ಹೆಚ್ಚಿಸುತ್ತ ಹೋಗಿ ಅನೇಕ ದಿನಗಳ ತರುವಾಯ ಪೂರ್ಣ ಆಹಾರವನ್ನು ಭಕ್ಷಿಸಬೇಕು.

ಉಪವಾಸದ ಸಮಯದಲ್ಲಿ ಹುಳಿಯಾದ ಹಣ್ಣುಗಳ ರಸವನ್ನು ನೀರಿನೊಂದಿಗೆ ಬೆರಸಿ ಕುಡಿಯುವದರಿಂದ ಒಳ್ಳೆಯದಾಗುವದು. ಸಣ್ಣ ಉಪವಾಸ ಮಾಡುವದಾದರೆ ಏನೂ ಕುಡಿಯದಿರುವದು ಉತ್ತಮ. ಹೆಚ್ಚು ನೀರು ಕುಡಿಯುತ್ತಿರುವದು ಎಂದಿಗೂ ಒಳ್ಳೇಯದಲ್ಲ.

ಸಣ್ಣವರೂ, ದೊಡ್ಡವರೂ ಸರಿಯಾದ ಆರೋಗ್ಯದವರಾಗಿದ್ದರೂ ಕೂಡ ಆಗಾಗ ಉಪವಾಸವನ್ನು ಮಾಡಲೇಬೇಕು. ಮೂರು ನಾಲ್ಕು ತಿಂಗಳಿಗೊಮ್ಮೆ ಮೂರು ನಾಲ್ಕು ದಿನಗಳ ಉಪವಾಸವನ್ನೂ, ಮೂರು ವರ್ಷಗಳಿಗೊಮ್ಮೆ ಎರಡು ವಾರಗಳ ಉಪವಾಸವನ್ನೂ ಮಾಡಬೇಕು.

ಯಾವನಾದರೂ ಆಗಲಿ ತಕ್ಕ ಕ್ರಮಗಳಿಗನುಸಾರವಾಗಿ ವರ್ತಿಸುವನಾದರೂ ಒಂದಲ್ಲ ಒಂದು ಸಮಯದಲ್ಲಿ ಕ್ರಮದಿಂದ ತಪ್ಪಿಹೋಗುವದುಂಟು; ಅದು ಸ್ವಾಭಾವಿಕವಾದುದೆ. ಹೊಟ್ಟೆಯ ವಿಷಯದಲ್ಲಿ ನಾವು ಜಾಗ್ರತೆಯನ್ನು ತೆಗೆದುಕೊಳ್ಳುವುದೇ ಕಡಿಮೆ. ಅದುಕಾರಣ ಆಗಾಗ್ಗೆ ಅಜೀರ್ಣಗಳಾಗುವದುಂಟು. ಏನಾದರೂ ಒಂದು ವಸ್ತುವನ್ನು ತಿನ್ನುವಾಗ ಅದು ಕರಗುವದೋ ಇಲ್ಲವೋ ಎಂದು ಆಲೋಚಿಸದೆ ಅದು ಉತ್ತಮವಾದ ವಸ್ತುವು ಎಂದೇ ಭಾವಿಸಬೇಕು. ಅಜೀರ್ಣವಾಗುವದೋ ಏನೋ ಎಂದು ಆಗಾಗ ಹೆದರುತ್ತಾ ಇರುವದು ಮೂರ್ಖತನ. ಆಗಾಗ ಸಣ್ಣ ಸಣ್ಣ ಉಪವಾಸಗಳನ್ನು ಮಾಡಲಿಕ್ಕೆ ಮಾತ್ರ ಮರೆಯಲಾಗದು.

ಬಂಟವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯ ಪ್ರೊಸಿಡಿಂಗ್ಸ್.

ಈ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಬಂಟವಾಳ ಎಸ್. ವಿ. ಎಸ್. ಫ್ರೀ ಎಲಿಮೆಂಟರಿ ಶಾಲೆಯಲ್ಲಿ ತಾ. ೧ನೇ ಶನಿವಾರ ಮಧ್ಯಾಹ್ನ ೩ ಘಂಟೆಗೆ ಅಗ್ರಹಾರ ಚರ್ಚ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಸಿ. ಎ. ಕುಂಞರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ೪೯ ಮಂದಿ ಉಪಾಧ್ಯಾಯರೂ ೫ ಮಂದಿ ಉಪಾಧ್ಯಾಯಿನಿಯರೂ ಬಂದಿದ್ದರು. ಅಲ್ಲದೆ ಕಲ್ಲಡ್ಕ ಸೆಂಟರಿನ ಸೆಕ್ರಿಟೇರಿಯವರಾದ ಕೆ. ರಾಮರಾಯರೂ ಇತರ ಉಪಾಧ್ಯಾಯರೂ ಬಂದಿದ್ದರು.

ಅಧ್ಯಕ್ಷರ ಚುನಾವಣೆಯಾದೊಡನೆ ಎಸ್. ವಿ. ಎಸ್. ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ। ಮಾಧವ ಕಮ್ತಿಯವರು ದೇವರ ಪ್ರಾರ್ಥನೆಯ ಹಾಡನ್ನು ಹಾಡಿದರು.

ಎಪ್ರಿಲ್ ತಿಂಗಳ ತಾ. ೧೮ರಲ್ಲಿ ಜರಗುವ ಸಂಘದ ಮಹಾಸಭೆಯ ಖರ್ಚಿಗಾಗಿ ಹಣವು ವಸೂಲಾಯಿತು. ಗತಮೀಟಿಂಗಿನ ರಿಪೋರ್ಟನ್ನು ಎಸ್. ವಿ. ಎಸ್. ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ನ. ವಾಸುದೇವರಾಯರು ಓದಿದರು.

ಮಹಾಸಭೆಗೆ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲಿಕ್ಕೆ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ಕನ್ನಡ ಸಾಹಿತ್ಯದ ವಿಷಯ ಭಾಷಣ ಕೊಡುವುದಕ್ಕಾಗಿ ರಾವ್‌ಸಾಹೇಬ್ ಮಂಜೇಶ್ವರ ಅನಂತರಾಯರನ್ನೂ, ಪ್ರಾಥಮಿಕ ವಿದ್ಯಾಭ್ಯಾಸದ ವಿಷಯ ಭಾಷಣ ಕೊಡುವುದಕ್ಕಾಗಿ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾಜೇಶ್ರೀ ಉಳ್ಳಾಲ ಮಂಗೇಶರಾಯರನ್ನೂ, ಚರಿತ್ರಾಶೋಧನೆಯ ವಿಷಯ ಭಾಷಣಕೊಡುವುದಕ್ಕಾಗಿ ರಾಜೇಶ್ರೀ ಎಮ್. ಗೋವಿಂದಪೈಯವರನ್ನೂ, ಸ್ತ್ರೀವಿದ್ಯಾಭ್ಯಾಸದ ವಿಷಯ ಭಾಷಣ ಕೊಡುವುದಕ್ಕಾಗಿ ಕೆನರಾ ಗರ್ಲ್ಸ ರೇಂಜಿನ ಡಿಪ್ಯುಟಿ ಇನ್ಸಪೆಕ್ಟ್ರೆಸರವರನ್ನೂ ಮಂಗಳೂರು ಗರ್ಲ್ಸ ಟ್ರೈನಿಂಗ್ ಶಾಲೆಯ ಮುಖ್ಯ ಉಪಾಧ್ಯಾಯಿನಿಯರನ್ನೂ, ಮಾಪಿಳ್ಳಾ ವಿದ್ಯಾಭ್ಯಾಸದ ವಿಷಯ ಭಾಷಣ ಕೊಡುವುದಕ್ಕಾಗಿ ಮಹಮ್ಮಡನ್ ರೇಂಜ್ ಡಿಪ್ಯುಟಿ ಇನ್ಸಪೆಕ್ಟರರನ್ನೂ, ಇನ್ನು ಇತರ ಎಲ್ಲಾ ತರದ ಅನುಭವವನ್ನು ಕೊಡುವುದಕ್ಕಾಗಿ ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸಪೆಕ್ಟರರಾದ ರಾ। ಕೋಡಿಕಲ್ ಮಂಗೇಶರಾಯರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಮಹಾಸಭೆಯ ಸಮಯ ಜರಗುವ ವಸ್ತುಪ್ರದರ್ಶನದಲ್ಲಿ ತಂದ ವಸ್ತುಗಳಲ್ಲಿ ಯೋಗ್ಯವಾದವುಗಳಿಗೆ ಸಭಾಧ್ಯಕ್ಷರಿಂದ ಪ್ರಿಂಟೆಡ್ ಫೋರ್ಮುಗಳಲ್ಲಿ ಸರ್ಟಿಫಿಕೇಟುಗಳನ್ನು ಕೊಡಿಸಬೇಕೆಂದೂ ನಿರ್ಣಯಿಸಲಾಯಿತು. ಮಹಾಸಭೆಯನ್ನು ಬಂಟವಾಳ ಬೋರ್ಡ ಹುಡುಗರ ಶಾಲೆಯಲ್ಲಿ ಜರಗಿಸಬೇಕೆಂದೂ ಎಲ್ಲಾ ಕಾರ್ಯಕ್ರಮಗಳನ್ನು ನಡಿಸುವುದಕ್ಕೆ ೧೩ ಮಂದಿ ಮೆಂಬರಿರುವ ಒಂದು ಸ್ವಾಗತ ಕಮಿಟಿಯನ್ನು ನೇಮಿಸಲಾಯಿತು. ಅನಂತರ ಅಧ್ಯಕ್ಷರ ಭಾಷಣವಾಗಿ ಸಭಾಸತ್ಕಾರ ಧನ್ಯವಾದಗಳು ಕೊಡಲಾಗಿ ಸಭೆಯು ಮುಗಿಯಿತು.

ಮಂಗಳೂರು ತಾಲೂಕು ಬೋರ್ಡಿನಲ್ಲಿ ಖಾಲಿಯಾದ ನೋಮಿನೇಟೆಡ್ ಮೆಂಬರಿಕೆಗೆ ನೇಮಿಸಬೇಕಾದ ಮೆಂಬರರ ವಿಷಯ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗೆ ಸೂಚನೆ.

ಮಂಗಳೂರು ತಾಲೂಕು ಬೋರ್ಡಿನಲ್ಲಿ ೧೨ ಮಂದಿ ಚುನಾಯಿಸಲ್ಪಡುವ ಮೆಂಬರರೂ ೪ ಮಂದಿ ನೇಮಿಸಲ್ಪಟ್ಟ ಮೆಂಬರರೂ ಹೀಗೆ ೧೬ ಮಂದಿ ಮೆಂಬರರಿರುವರು. ಈಗ ಸದ್ಯಕ್ಕೆ ಖಾಲಿಯಾದ ಚುನಾಯಿಸಲ್ಪಡುವ ಮೆಂಬರರ ಚುನಾವಣೆಯು ಮುಗಿಯುತ್ತಾ ಬಂತು. ನೋಮಿನೇಟೆಡ್‌ಮೆಂಬರರ ಪೈಕಿ ಇಬ್ಬರು ಮೆಂಬರರ ಸೀಟುಗಳು ಖಾಲಿಯಾಗಿವೆ. ಈ ನೇಮಕವು ಆಗಲಿಕ್ಕಿದೆ. ಲೋಕಲ್ ಬೋರ್ಡು ಕಾನೂನು ಪ್ರಕಾರ ಈ ನಾಲ್ಕು ಸೀಟುಗಳಿಗೆ ಪೋಟಿಗೆ ನಿಲ್ಲುವದಕ್ಕೆ ಸಾಮರ್ಥ್ಯವಿಲ್ಲದ ಜಾತಿಯವರಿಗೆ ಈ ಮೆಂಬರಿಕೆಗಳನ್ನು ಕೊಡಬೇಕೆಂದು ಇದೆ.

ಈಗ ಇರುವ ನಾಲ್ವರು ಮೆಂಬರರಲ್ಲಿ ಒಬ್ಬರು ಡಿಪ್ರೆಸ್ಡ ಕ್ಲಾಸಿನ ಪ್ರತಿನಿಧಿಗಳಾಗಿರುವ ರಾಜೇಶ್ರೀ ಏಕಾಂಬರರಾಯರು. ಮಹಮ್ಮದೀಯರ ಕಡೆಯಿಂದ ನೇಮಿಸಲ್ಪಟ್ಟ ರಾ। ಉಳ್ಳಾಲ ಶೀದಿಬ್ಯಾರಿಗಳು. ಇನ್ನು ಇಬ್ಬರು ಮೊಗೇರ ಮತ್ತು ಗಾಣಿಗ ಜಾತಿಯ ಪ್ರತಿನಿಧಿಗಳು.

ಹಲವು ವರುಷಗಳಿಂದ ಈ ನಾಲ್ಕು ನೋಮಿನೇಟೆಡ್ ಸೀಟುಗಳಿಗೆ ಬಿಲ್ಲವ ಜಾತಿಯಿಂದಲೂ ಮೊಗೇರ ಜಾತಿಯ ಕಡೆಯಿಂದಲೂ, ಗಾಣಿಗ ಜಾತಿಯ ಕಡೆಯಿಂದಲೂ ಆದಿದ್ರಾವಿಡ ಜಾತಿಯ ಕಡೆಯಿಂದಲೂ ನೇಮಿಸಲ್ಪಟ್ಟಿರುವರು.

ಮೇಲೆ ಹೇಳಿದ ಜಾತಿಗಳಲ್ಲದೆ ಇನ್ನು ಯಾವ ವಿಷಯದಲ್ಲಿಯೂ ಮುಂದಕ್ಕೆ ಬಾರದ ಮರಾಟಿ ಮತ್ತು ಕುಂಬಾರ ಜಾತಿಯವರೂ ಇನ್ನೂ ಇತರ ಸುಮಾರು ೧೦ ಜಾತಿಗಳು ಈ ತಾಲೂಕಿನಲ್ಲಿ ಇರುವರು.

ಆದುದರಿಂದ ಈ ಸಾರಿ ಖಾಲಿಯಾದ ಮೆಂಬರಿಕೆಗೆ ಈ ಮೊದಲು ನೇಮಿಸಿದ ಜಾತಿಯವರನ್ನೇ ನೇಮಿಸದೆ ಮರಾಟಿ ಮತ್ತು ಕುಂಬಾರ ವ ಇತರ ಜಾತಿಗಳ ಪ್ರತಿನಿಧಿಗಳನ್ನು ನೇಮಿಸುವುದು ನ್ಯಾಯಸಮ್ಮತವೆಂದು ಕಾಣುತ್ತದೆ.

ಹಿಂದುಸ್ಥಾನಿ ಸೇವಾದಲಕ್ಕೆ ಶಿರಹಟ್ಟಿ ನಾಟಕ ಕಂಪೆನಿಯವರ ಎರಡನೇ ಭಿಕ್ಷೆ.

ಹಿಂದುಸ್ಥಾನಿ ಸೇವಾದಲದ ಮಧ್ಯವರ್ತಿ ವ್ಯಾಯಾಮ ಮಂದಿರದ ಸಹಾಯಕ್ಕಾಗಿ ಶಿರಹಟ್ಟಿ ನಾಟಕ ಕಂಪೆನಿಯವರು ತಾವು ವಚನವನ್ನಿತ್ತಂತೆ ೧೩—೩—೨೮ನೇ ದಿವಸ ತಮ್ಮ ೨ನೇ ನಾಟಕವನ್ನು ಕುಂದಾಪುರದಲ್ಲಿ ವಿನೋದಪೂರ್ಣವಾದ 'ಯುವತೀವಿಜಯ'ವೆಂಬ ಆಟವನ್ನಾಡಿ ಅದರ ಉತ್ಪನ್ನವಾದ ೨೬೫ ರೂಪಾಯಿಗಳನ್ನು ಸೇವಾದಲಕ್ಕೆ ಕೊಟ್ಟರು. ಇದಕ್ಕಾಗಿ ಸೇವಾದಲವು ನಾಟಕ ಕಂಪೆನಿಗೆ ಅತ್ಯಂತ ಋಣಿಯಾಗಿದೆ. ಇಲ್ಲಿಯ ಜಮೀನುದಾರರಾದ ಶ್ರೀ ನರಸಿಂಹ ಕಾರಂತರು ಅಧ್ಯಕ್ಷಸ್ಥಾನವನ್ನು ವಹಿಸಿ ಸಹಾಯ ಮಾಡಿದ್ದಕ್ಕಾಗಿಯೂ, ಕೊಡಗಿ ಕೃಷ್ಣರಾವ, ಗುಜ್ಜಾಡಿ ಮಾಧವನಾಯಕ, ಕಿರಿಯಾಡಿ ಹಿರಿಯಣ್ಣ ಸೆಟ್ಟರು, ವಕೀಲ ಮಹಾಬಲಯ್ಯ ಇವರೇ ಮೊದಲಾದವರು ಟಿಕೇಟುಗಳನ್ನು ಮಾರಲು ಸಹಾಯ ಮಾಡಿದ್ದಕ್ಕಾಗಿಯೂ, ಸುತ್ತುಮುತ್ತಲಿನ ಹಳ್ಳಿಗಳ ಹಾಗೂ ಕುಂದಾಪುರದ ಜನರು ನಾಟಕಕ್ಕೆ ಬಂದು ಆಶ್ರಯಕೊಟ್ಟದ್ದಕ್ಕಾಗಿಯೂ ಸೇವಾದಲವು ಈ ಮಹನೀಯರ ಆಭಾರವನ್ನು ಮನ್ನಿಸುತ್ತದೆ.

ಹೊಸಕೊಪ್ಪ ಕೃಷ್ಣರಾವ,
ದಲಪತಿ, ಹಿಂದುಸ್ಥಾನಿ ಸೇವಾದಲ.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp

ಏಜಂಟರಾಗಿ, ಏಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28 ಮಂಗಳೂರು

WANTED.

A trained Secondary Grade Teacher for the post of an Assistant teacher in the Sri Rama H. E. School Farangipet. Applications mentioning the least pay required, should be sent to the under signed by the 10th of April next.

A. Ramachendra Hegde,
Secretary,
The Educational Society,
FARANGIPET.

[illegible]

ಟೆಳವನ್ನು ಜಯಿಸುವ ಮಹತ್ಕಾರ್ಯದಲ್ಲಿ ಉದ್ಯುಕ್ತನಾದನು. ಇವನು ಬಲವಾದ ತನ್ನ ಸೈನ್ಯವನ್ನು ತೆಗೆದುಕೊಂಡು ಗೊಲ್ಕೊಂಡ ದಾರಿಯಾಗಿ ವೆಲ್ಲೂರಿಗೆ ಬಂದನು. ಅಲ್ಲಿಂದ ದಕ್ಷಿಣಕ್ಕೆ ಹೋಗಿ ಕೊಲೆರೂನ್ ನದಿ ತೀರದಲ್ಲಿ ಉಳಕೊಂಡು ತನ್ನ ತಮ್ಮನಾದ ವೆಂಕೋಜಿಯನ್ನು ಅಲ್ಲಿಗೆ ಕರತರಿಸಿ ಅವನಿಂದ ತನ್ನ ಪಾಲನ್ನು ಪಡಕೊಳ್ಳಲು ಸಾಧಿಸಿದನು. ವೆಂಕೋಜಿಯು ನದಿ ದಾಟಿ ತಪ್ಪಿಸಿಕೊಂಡು ಓಡಿಹೋದನು. ನಂತರ ಶಿವಾಜಿಯು ಮೈಸೂರು ಬೆಳಗಾಂವ ದಾರಿಯಾಗಿ ಹೊರಟು ರಾಜಧಾನಿಗೆ ತಲಪಿದನು. ಶಿವಾಜಿಯು ತನ್ನ ಕಡೆಯ ದಿವಸಗಳನ್ನು ಬಿಜಾಪುರಕ್ಕೆ ಸುತ್ತು ಹಾಕಿದ್ದ ಮೊಗಲ್ ಸೈನ್ಯವನ್ನು ಓಡಿಸುವುದರಲ್ಲಿ ಕಳೆದನು.

ಶಿವಾಜಿಯ ಮಹತ್ವ.

ಚರಿತ್ರೆಗಳಲ್ಲಿ ಮಹತ್ವವನ್ನು ಪಡೆದವರಲ್ಲಿ ಶಿವಾಜಿಯು ಅತೀ ಉನ್ನತ ಸ್ಥಾನವನ್ನು ಪಡೆದಿರುವನು. ಇವನು ಗೃಹಸ್ಥನೂ, ರಾಜನೂ, ಒಂದು ಜನಾಂಗ ಸ್ಥಾಪಕನೂ ಆಗಿರುವನು. ಇವನಿಗೆ ತಾಯಿಯ ಮೇಲೆ ಬಹಳ ಭಕ್ತಿಯು ಇತ್ತು. ತನ್ನ ಮಕ್ಕಳ ಮೇಲೆ ಪ್ರೀತಿಯುಳ್ಳವನು. ಏಕ ಪತ್ನೀ ವ್ರತವುಳ್ಳವನು. ಇತರ ಸ್ತ್ರೀಯರನ್ನು ತನ್ನ ತಾಯಿಯಂತೆ ಭಾವಿಸುತ್ತಿದ್ದನು. ಯುದ್ಧದಲ್ಲಿ ಸೈನಿಕರು ಹಿಡಿದು ತಂದ ಬಹಳ ರೂಪವತಿಯಾದ ಒಂದು ಕನ್ಯಾ ರತ್ನವನ್ನು ಶಿವಾಜಿಯ ಮುಂದೆ ನಿಲ್ಲಿಸಲು ಅವನು ಅವಳನ್ನು ತನ್ನ ತಾಯಿಯಂತೆ ಭಾವಿಸಿ ಉಡಿಗೆ ಉಚಿತಗಳನ್ನು ಕೊಟ್ಟು ಸೈನಿಕರೊಡನೆ ಅವಳ ಹೆತ್ತವರ ಮನೆಗೆ ಕಳುಹಿಸಿರುವನು. ಇವನಿಗೆ ಯಾವ ತರದ ದುರಾಭ್ಯಾಸಗಳೂ ಇರಲಿಲ್ಲ. ವಿಶೇಷ ತರದ ಮತಾಭಿಮಾನವಿದ್ದ ಆ ಕಾಲದಲ್ಲಿ ಶಿವಾಜಿಯು ಎಲ್ಲಾ ಮತದವರನ್ನು ಏಕರೀತಿಯಿಂದ ಕಾಣುತ್ತಿದ್ದನು. ಅವನಿಗೆ ಮತ ವೈರವಿರಲಿಲ್ಲ. ಹಿಂದೂಗಳ ಮೇಲೆ ತಲೆ ತೆರಿಗೆಯನ್ನು ತೆಗೆದುಹಾಕಬೇಕೆಂದು ಮೊಗಲ್ ಚಕ್ರವರ್ತಿಯಾದ ಅವರಂಗಜೇಬನಿಗೆ ಬರದ ಒಂದು ಪತ್ರವು ಶಿವಾಜಿಯ ರಾಜಕೀಯ ಜ್ಞಾನವನ್ನೂ ಅವನ ತಾತ್ವಿಕ ಸ್ವಭಾವವನ್ನು ತಿಳಿಸುತ್ತದೆ. ಶಿವಾಜಿಯು ಹಿಂದುವಾಗಿದ್ದರೂ ಮುಸಲ್ಮಾನರಲ್ಲಿ ಪ್ರೀತಿಯುಳ್ಳವನಾಗಿದ್ದನು. ಇವನು ಬಾಬಾ ಯಾಕುತ ಎಂಬ ಒಬ್ಬ ಮುಸಲ್ಮಾನ ಫಕೀರನಿಗೆ ಒಂದು ಉಂಬಳಿಯನ್ನು ಬಿಟ್ಟು ಕೆಲಸಿ ಎಂಬಲ್ಲಿ ನಿಲ್ಲಿಸಿದನು. ಇವನಿಗೆ ಖಾಜಿ ಹೈದರ್ ಎಂಬ ಸೆಕ್ರಿಟರಿಯು ಇದ್ದನು.

ಶಿವಾಜಿಯು ತನ್ನ ಪ್ರಾಯ್ವೇಟ್ ಸೆಕ್ರಿಟರಿಯಾಗಿ ಖಾಜಿ ಹೈದರ್ ಎಂಬ ಮುಸಲ್ಮಾನನನ್ನು ನೇಮಿಸಿದ್ದನು. ಶಿವಾಜಿಯ ಮರಣಾನಂತರ ಈ ಹೈದರನು ಢಿಲ್ಲಿಗೆ ಹೋಗಿ ಅಲ್ಲಿ ಮುಖ್ಯ ನ್ಯಾಯಾಧೀಶನಾದನು. ಶಿವಾಜಿಯ ಸೈನ್ಯದಲ್ಲಿ ಅನೇಕ ಮಂದಿ ಮುಸಲ್ಮಾನ ಸೇನಾಧಿಪತಿಗಳಿದ್ದರು. ಅಬಿಸೀನಿಯಾ ದೇಶದ ಸಿದ್ದಿಮಿಸ್ರಿ ಎಂಬ ಮುಸಲ್ಮಾನನು ಶಿವಾಜಿಯ ನೌಕಾ ಸೇನಾಧಿಪತಿಯಾಗಿದ್ದನು. ಮುಸಲ್ಮಾನರ ಮಸೀದಿಗಳನ್ನು ಹಾಳು ಮಾಡಬಾರದೆಂದೂ ಯಾವ ರೀತಿಯೂ ಮುಸಲ್ಮಾನ ಗುರುಗಳನ್ನು ಪೀಡಿಸಬಾರದೆಂದೂ ಯಾವ ಜಾತಿ ಮತದ ಹೆಂಗಸರನ್ನು ಪೀಡಿಸಬಾರದೆಂದೂ ಸೈನಿಕರಿಗೆ ಪ್ರತ್ಯೇಕ ಅಪ್ಪಣೆಯನ್ನು ಕೊಟ್ಟಿದ್ದನು. ಸೈನಿಕರಿಗೆ ಎಲ್ಲಿಯಾದರೂ ಖುರಾನಿನ ಪ್ರತಿಗಳು ಸಿಕ್ಕಿದರೆ ಅವುಗಳನ್ನು ಸೈನಿಕರು ಶಿವಾಜಿಗೆ ಒಪ್ಪಿಸುತ್ತಿದ್ದರು. ಶಿವಾಜಿಯು ಅವುಗಳನ್ನು ಯಾರಾದರೂ ವಿದ್ಯಾವಂತರಾದ ಮುಸಲ್ಮಾನರಿಗೆ ಉಡಿಗೆರೆ ಸಮೇತ ಕೊಡುತ್ತಿದ್ದನು.

ಶಿವಾಜಿಯ ಹಿಂದೂ ಉದ್ಯೋಗಸ್ಥರಲ್ಲಿ ಅನೇಕ ಮಂದಿ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಸಿವಿಲ್ ಮತ್ತು ಮಿಲಿಟರಿ ಇಲಾಖೆಗಳಲ್ಲಿ ಇದ್ದರು. ಇದಲ್ಲದೆ ಬ್ರಾಹ್ಮಣರೂ, ಪ್ರಭು (ಕಾಯಸ್ತ) ಜಾತಿಯವರೂ, ಮರಾಠರೂ, ಕುಣಬಿಗಳೂ (ಕುಡುಬಿ) ಇನ್ನು ಇತರ ವೈಶ್ಯ ಜಾತಿಯವರು ಹಲವರಿದ್ದರು.

ಶಿವಾಜಿಯು ಉನ್ನತಿಗೆ ಬರುವ ಮೊದಲು ಮರಾಠಾ ಜನಾಂಗದವರು ಇಂಡಿಯದ ಬೇರೆ ಬೇರೆ ಭಾಗಗಳಲ್ಲಿರುವ ರಾಜ್ಯಗಳಲ್ಲಿ ಚದರಿಕೊಂಡಿದ್ದರು. ಎಲ್ಲರೂ ಸೇವಕರಾಗಿಯೇ ಇದ್ದರು. ಒಬ್ಬರಾದರೂ ಸ್ವತಂತ್ರ ಜೀವನವುಳ್ಳವರಾಗಿರಲಿಲ್ಲ. ಶಿವಾಜಿಯು ಮರಾಠಿಯವರನ್ನು ಒಂದು ಜನಾಂಗವನ್ನಾಗಿ ಮಾಡಿ ಅವರಿಗೆ ತಮ್ಮ ಸ್ವಂತ ಅರಸನು ಇರುವಂತೆ ಮಾಡಿದನು. ಬಾಲ್ಯಾವಸ್ಥೆಯಲ್ಲಿದ್ದ ಇವನ ಮರಾಠಾ ರಾಜ್ಯವು ವಿದ್ಯೆ, ಭಕ್ತಿ, ವ್ಯಾಪಾರ, ಐಶ್ವರ್ಯ, ಸಾಮಾಜಿಕ ಉನ್ನತಿಯ ಕೇಂದ್ರಸ್ಥಾನವನ್ನು ಪಡೆಯಿತು.

(೯ನೇ ಪುಟಕ್ಕೆ ಮುಂದುವರಿಸಿಯದೆ)

ಸ್ಫುಟ ವಿ ಚಾ ರ ಗಳು.

ಮದ್ರಾಸ ಕೌನ್ಸಿಲಿನಲ್ಲಿ ಅವಿಶ್ವಾಸದ ಠರಾವು.

ಮದ್ರಾಸ ಕೌನ್ಸಿಲಿನಲ್ಲಿ ಕೆಲವು ದಿನಗಳೊಳಗೆ ನಡೆದ ಘಟನೆಗಳು ಸುಧಾರಿತ ಸರಕಾರದ ನಿಜಸ್ವರೂಪವನ್ನು ಚೆನ್ನಾಗಿ ಚಿತ್ರಿಸುವುವು. ಸುಧಾರಿತ ಸರಕಾರ ಅರ್ಥಾತ್ ಈ ದ್ವಿದಳ ರಾಜ್ಯಪದ್ಧತಿಯು ಹಿಂದೀಯರನ್ನು ಮೋಸಗೊಳಿಸಿ ಮಂಕು ಮಾಡಲು ಉದ್ದೇಶಿಸುವುದೇ ಹೊರತು ಬೇರೆಯಲ್ಲವೆಂದು ಈ ಘಟನೆಗಳಿಂದ ತಿಳಿದುಬರುವುದು. ಮಂತ್ರಿವರ್ಗವು ಪ್ರಜಾಭಿಪ್ರಾಯಗಳನ್ನು ಮನ್ನಿಸಬೇಕಾಗಿರುವುದಾದರೂ ಮದ್ರಾಸಿನ ಮೂವರು ಮಂತ್ರಿಗಳಲ್ಲೊಬ್ಬರು ಸರಕಾರೀ ವರ್ಗದ ಅಂಗವಾಗಿ ಪರಿಣಮಿಸಲಿಚ್ಛಿಸುವುದು ಆಶ್ಚರ್ಯಕರವಾಗಿದೆ. ಡಾ| ಸುಬ್ಬರಾಯನ್‌ರವರು ಪ್ರಧಾನ ಮಂತ್ರಿಗಳಾಗಿರುವರು; ಮದ್ರಾಸು ಕೌನ್ಸಿಲು ಸ್ಯಾಮನ್ ಕಮಿಶನ್ನಿನ ಬಹಿಷ್ಕಾರವನ್ನು ನಿರ್ಧರಿಸಿರುವುದು; ಆದರೂ ಈ ಪ್ರಧಾನ ಮಂತ್ರಿಗಳು ಈ ಅಭಿಪ್ರಾಯವನ್ನು ಮಾನಿಸದೆ ಸ್ಯಾಮನ್ ಕಮಿಶನನ್ನು ಸ್ವಾಗತೀಕರಿಸಿದರು. ಅವರ ಇಂತಹ ಇತರ ವರ್ತನಗಳ ಕಾರಣದಿಂದಲೂ ಇವರ ಮೇಲೆ ಅವಿಶ್ವಾಸದ ಠರಾವು ತರಲ್ಪಟ್ಟಿತು. ಆದರೆ ಮದ್ರಾಸಿನ ಸ್ವರಾಜ್ಯಪಕ್ಷೀಯರು ಈ ಅವಿಶ್ವಾಸದ ಠರಾವಿಗೆ ಮನಃಪೂರ್ವಕ ಬೆಂಬಲ ಕೊಡಲು ಪ್ರಯತ್ನಿಸಲಿಲ್ಲ. ಇಂತಹ ಮುಖ್ಯವಾದ ಠರಾವನ್ನು ಅನುಮೋದಿಸಲು ಸ್ವರಾಜ್ಯ ಪಕ್ಷೀಯರೆಲ್ಲರೂ ಕೌನ್ಸಿಲಿನಲ್ಲಿ ಹಾಜರಿರಬೇಕಿತ್ತು. ಹಾಗೆ ಹಾಜರಾಗದೆ ಈ ಠರಾವು ಬಿದ್ದುಹೋಗುವಂತೆ ಆಯಿತು.

ಮಂತ್ರಿಗಳಿಬ್ಬರ ರಾಜಿನಾಮೆ.

ಈ ಅವಿಶ್ವಾಸದ ಠರಾವಿನ ಪರಿಣಾಮವು ಇನ್ನೊಂದಾಯಿತು. ಅವಿಶ್ವಾಸದ ಠರಾವು ಬರುವ ಮೊದಲು ಪ್ರಧಾನ ಮಂತ್ರಿಗಳಿಗೆ ತಮ್ಮ ಸ್ಥಾನದಲ್ಲಿರುವುದು ಕಷ್ಟವಾಯಿತು. ಈ ಠರಾವಿನ ನಂತರ ಅವರ ವಿಶೃಂಖಲತೆಗೆ ಮೇರೆಯೇ ಇಲ್ಲದಂತಾಯಿತು. ತಮ್ಮ ಸ್ಥಾನವು ಇನ್ನು ಘಟ್ಟಿಯಾಯಿತೆಂದು ಅವರು ತಿಳಿದುಕೊಂಡರು. ಅಲ್ಲದೆ ತಮ್ಮ ಸಹೋದ್ಯೋಗಿಗಳಾದ ಇತರ ಇಬ್ಬರು ಮಂತ್ರಿಗಳೊಡನೆ ಮಂತ್ರಿಮಂಡಳದ ಐಕ್ಯಕ್ಕೆ ಬಾಧಕ ಬರುವಂತೆ ವರ್ತಿಸುವುದರಲ್ಲಿ ಮತ್ತಷ್ಟು ಧೈರ್ಯವಾಯಿತು. ಉಳಿದಿಬ್ಬರು ಮಂತ್ರಿಗಳು ಈ ಕಾರಣದಿಂದ ರಾಜಿನಾಮೆ ಕೊಟ್ಟರು. ರಾಜಿನಾಮೆ ಕೊಟ್ಟ ಮಂತ್ರಿಗಳು ಕೌನ್ಸಿಲಿನಲ್ಲಿ ಕೊಟ್ಟ ಭಾಷಣವನ್ನು ನೋಡಿದರೆ ದ್ವಿದಳ ರಾಜ್ಯಪದ್ಧತಿಯ ದೋಷಗಳು ಮನಗಾಣುವುವು. ಗವರ್ನರರಾದರೂ ಮಂತ್ರಿಗಳೊಳಗಿನ ತಾರತಮ್ಯಗಳನ್ನು ನೋಡಿ ತಮಗೆ ಹಿತಕರವಾಗುವ ರೀತಿಯಲ್ಲಿ ಭೇದಗಳನ್ನು ಅಭಿವರ್ಧಿಸಲು ಹಿಂಜರಿಯದಿದ್ದಂತೆ ತೋರುತ್ತಿದೆ. ಮಂತ್ರಿಗಳು ಪ್ರಜಾಹಿತ ಸಾಧಕರಾಗಿದ್ದು, ಅನ್ಯಸರಕಾರದಿಂದ ಪ್ರತ್ಯೇಕವಾಗಿದ್ದು, ಏಕಾಭಿಪ್ರಾಯವನ್ನೇ ವ್ಯಕ್ತಗೊಳಿಸಬೇಕಾದುದು ಮಂತ್ರಿಮಂಡಳದ ಒಂದು ಉದ್ದೇಶವಾಗಿರುತ್ತದೆ. ಆದರೆ ಡಾ| ಸುಬ್ಬರಾಯನ್‌ರವರು ಪ್ರಜಾಹಿತ ದೃಷ್ಟಿಗಿಂತಲೂ ಸರಕಾರೀ ಆಶ್ರಯವನ್ನೇ ಹೆಚ್ಚು ಮಾನಿಸಿರುವರಾಗಿ ತೋರುವುದು. ಈ ಮಧ್ಯದಲ್ಲಿ ಧೈರ್ಯದಿಂದ ಪ್ರಜಾಧಿಕಾರಗಳ ಮೇಲಿನ ಅಭಿಮಾನದಿಂದ ತಮ್ಮ ಪದವಿಗೆ ರಾಜಿನಾಮೆ ಕೊಟ್ಟ ಶ್ರೀ| ರಂಗನಾಥ ಮುದಲಿಯಾರ ಮತ್ತು ಆರೋಗ್ಯಸ್ವಾಮಿ ಮುದಲಿಯಾರರ ನಿಸ್ವಾರ್ಥತೆಯನ್ನೂ ದೇಶಪ್ರೇಮವನ್ನೂ ನಾವು ಅಭಿನಂದಿಸದಿರಲಾರೆವು.

ಎರಡು ದಿನಗಳ ಲೋ ಮೆಂಬರರು

ಮದ್ರಾಸ ಗವರ್ನರರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಲೊ ಮೆಂಬರರಾಗಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರ ಮೆಂಬರಿಕೆಯ ಅವಧಿಯು ಮುಗಿದು ಅವರು ಕೆಲಸದಿಂದ ನಿವೃತ್ತರಾದಮೇಲೆ ಅದೇ ಮೆಂಬರಿಕೆಗೆ ಶ್ರೀ| ಟಿ. ಆರ್. ವೆಂಕಟರಾಮ ಶಾಸ್ತ್ರಿಯವರು ನೇಮಕರಾದರು. ಇವರು ತಮ್ಮ ಹೊಸ ಕೆಲಸವನ್ನು ಕೈಕೊಂಡ ಎರಡೇ ದಿನಗಳೊಳಗೆ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಗಿ ಬಂದುದು ಮದ್ರಾಸು ಸರಕಾರದ ಅಪಹಾಸಕರವಾದ ವರ್ತನೆಗಳ ಇನ್ನೊಂದು ಚಿಹ್ನೆಯಾಗಿರುತ್ತದೆ. ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರ ಕೈಕೆಳಗೆ ಹಲವು ಅಧಿಕಾರಗಳಿದ್ದವು. ಅವುಗಳಲ್ಲಿ ಪೋಲೀಸ ಖಾತೆಯ ಅಧಿಕಾರ, ನ್ಯಾಯವಿಧಾಯಕ ಅಧಿಕಾರ ಮೊದಲಾದ ಪ್ರಮುಖ ಅಧಿಕಾರಗಳೇ ಕಿತ್ತುಕೊಳ್ಳಲ್ಪಟ್ಟು ಉಳಿದ ಸಾಮಾನ್ಯ ಅಧಿಕಾರಗಳು ಈ ಹೊಸ ಲೋ ಮೆಂಬರರ ಬಗ್ಗೆ ಪ್ರತ್ಯೇಕಿಸಲ್ಪಟ್ಟವು. ಸ್ವಾಭಿಮಾನಶಾಲಿಯಾದ ಶ್ರೀ| ಶಾಸ್ತ್ರಿಗಳವರು ಸರಕಾರದ ಅಪಮಾನಕಾರಕ ಕೃತಿಯನ್ನು ಇದರಲ್ಲಿ ನೋಡಿ ಇಂತಹ ಸ್ವಾಭಿಮಾನಕ್ಕೆ ಭಂಗ ತರುವ ಕೆಲಸವು ತನಗೆ ಬೇಡವೇ ಬೇಡವೆಂದು ಅದಕ್ಕೆ ತಿಲಾಂಜಲಿಯನ್ನಿತ್ತರು. ಮಂತ್ರಿಗಳ ರಾಜಿನಾಮೆಯೊಡನೆ ಈ ರಾಜಿನಾಮೆಯೂ ಸರಕಾರವನ್ನು ಎಚ್ಚರಿಸತಕ್ಕದ್ದು. ಡಾ| ಸುಬ್ಬರಾಯನರಲ್ಲ, ಅಧಿಕಾರದ ಮತ್ತು ಹಣದ ಅಭಿಲಾಷೆಯನ್ನು ತ್ಯಜಿಸಬಲ್ಲ ಇಂತಹವರೇ ಹಿಂದೂಸ್ಥಾನದ ಸ್ವರಾಜ್ಯದ ಅರ್ಹತೆಯನ್ನು ಸಾರುವವರಾಗಿರುವರು. ನಿರ್ವೀರ್ಯ ಹಿಂದೀಯರನ್ನು ಜವಾಬ್ದಾರ ಕೆಲಸಗಳಿಗೆ ನೇಮಿಸಿ ಸೂತ್ರದ ಗೊಂಬೆಗಳಂತೆ ಅವರನ್ನು ಸಂಚಲಿಸುವ ಈ ದುರುದ್ದೇಶವು ಸರಕಾರದ ಈ ಕೆಲಸಗಳಲ್ಲಿ ಕಾಣಬರುವುದು. ಶ್ರೀ| ರಂಗನಾಥ ಮುದಲಿಯಾರ, ಮಿ| ಆರೋಗ್ಯಸಾಮಿ ಮುದಲಿಯಾರ್ ಮತ್ತು ಶ್ರೀ| ವೆಂಕಟರಾಮ ಶಾಸ್ತ್ರಿ, ಇವರು ತಮ್ಮ ವರ್ತನದಿಂದ ಸ್ವಾಭಿಮಾನವನ್ನಷ್ಟೇ ಅಲ್ಲದೆ ದೇಶಾಭಿಮಾನವನ್ನೂ ಪಾಲಿಸಿರುವರು.

ಹಿರಿಯರ ಕೌನ್ಸಿಲು.

ಸರಕಾರಕ್ಕೆ ಬೇಕಾದ ಠರಾವುಗಳನ್ನು ಬೇಕಾದ ರೀತಿಯಲ್ಲಿ ಮಂಜೂರು ಮಾಡಿಸಿಕೊಳ್ಳುವುದಕ್ಕೆಂದು ಇದೆ ಇದೊಂದು ಕೌನ್ಸಿಲು; ಕೌನ್ಸಿಲ್ ಒಫ್ ಸ್ಟೇಟ್ ಎಂದು. ದೇಶದ ಹಲವು ಶ್ರೀಮಂತರು ಇದನ್ನು ಸೇರುವರು. ಸರಕಾರದ ಅನುಜ್ಞೆಗಳಿಗೆ ವಿಧೇಯವಾಗಿ ತಲೆದೂಗುವವರು ಇದರಲ್ಲಿ ಅಧಿಕ ಸಂಖ್ಯಾಕರು. ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ನಿರಾಕರಿಸಲ್ಪಟ್ಟ ಯಾವ ವಿಷಯವಾದರೂ ಈ ಹೌದಣ್ಣನವರೊಳಗೆ ಮಂಜೂರಾಗಿ ಹೋಗುವುದು. ಮೊಂಟೆಗ್ಯೂ ಚೆಲ್ಮ್ಸ್‌ಪೋರ್ಡರವರು ಈ ವೈಚಿತ್ರ್ಯವನ್ನು ಇಷ್ಟು ದೂರದರ್ಶಿತ್ವದಿಂದಲೇ ರಚಿಸಿರುತ್ತಾರೆ. ಸ್ವಾಭಿಮಾನ ಶೂನ್ಯರಾಗಿ ಹಿಂದೀಯರು ಸರಕಾರೀ ತಂತ್ರಗಳಿಗೆ ಒಪ್ಪಿಗೆಯನ್ನೀಯಲಿಕ್ಕೇನೆ ಇದರ ಸದಸ್ಯತನದ ಗೌರವವನ್ನು ಅನುಭೋಗಿಸುವುದು ಆಶ್ಚರ್ಯಕರ. ಆದರೂ ಹಿರಿಯರ ಕೌನ್ಸಿಲೆಂಬ ಹೆಸರಿನ ಮಾನವಿದೆ. ಎಲ್ಲಾ ದೇಶಗಳಲ್ಲಿಯೂ ವೈಮಾನಿಕ ಉಜ್ಜೀವನವಾಗಿ, ಇದರ ವಿಜ್ಞಾನದ ಪ್ರಚಾರಕ್ಕಾಗಿ ಸರಕಾರಗಳು ಶ್ರಮಿಸುವಾಗ, ನಮ್ಮ ಸರಕಾರಕ್ಕೆ ಹಿಂದೀಯರು ಇದಕ್ಕಾಗಿ ಪ್ರಯತ್ನಿಸುವುದು ಬೇಡವಾಗಿಯದೆ, ಮಾತ್ರವಲ್ಲದೆ ಈ ಕೌನ್ಸಿಲ್ ಒಫ್ ಸ್ಟೇಟೂ ಇದನ್ನು ನಿರೋಧಿಸುತ್ತಿದೆ. ಬಂದದ್ದು ಸಾಮಾನ್ಯವಾದ್ದೊಂದು ಠರಾವು. 'ಹಿಂದೂಸ್ಥಾನಕ್ಕೆ ವೈಮಾನಿಕ ಶಾಲೆಯೊಂದನ್ನು ಸ್ಥಾಪಿಸಬೇಕು' ಎಂದು. ಕೆಲವು ಮೆಂಬರರಿಗೆ ಇದು ಕುದುರೆ ಮುಂದೆ ಗಾಡಿ (Cart before horse) ಆಗಿಹೋಯಿತು. ಕೆಲವರಿಗೆ ಇದರ ಖರ್ಚು ಅನಾವಶ್ಯಕವಾಯಿತು. ಈ ಹಿರಿಯರ ಬುದ್ಧಿವಂತಿಕೆಯ ತರ್ಕವು ನಡೆಯುವಾಗ ಇತರ ದೇಶಗಳು ಈ ವಿಜ್ಞಾನದಲ್ಲಿ ಮುಂದರಿದು, ನಾವು ಅನಾಗರಿಕರೆಂದಾಗಿ ನಮ್ಮ ಸಂರಕ್ಷಣೆಯ ಬಗ್ಯೆ ಇಂಗ್ಲೆಂಡಿಗೇನೇ ಶರಣು ಹೋಗಬೇಕು. ಕಾಲೆಗಾಗಿ ದ್ರವ್ಯಾಭಾವವನ್ನು ಕಾಣುವಾಗ ಪರದೇಶೀಯರಿಂದ ವ್ಯವಸ್ಥೆಗೊಳಿಸಲ್ಪಡುವ ವಿಮಾನಗಳಿಗಾಗಿ ಸರಕಾರವು ಎಲ್ಲಿಂದ ದುಡ್ಡನ್ನು ತರುವುದೋ! ಅಂತೂ ಹಿಂದುಸ್ಥಾನವು ಇಂಗ್ಲೆಂಡಿನ ಶಾಶ್ವತ ಅಧೀನತೆಯಲ್ಲಿರಬೇಕೆಂಬುದೇ ಇದರ ತತ್ವವೆನ್ನಬೇಕಾಗುವುದು.

ಮದ್ರಾಸ ಕೌನ್ಸಿಲಿನಲ್ಲಿ ಮದ್ಯಪಾನ ನಿಷೇಧ.

ಮದ್ಯಪಾನ ನಿಷೇಧದ ವಿಷಯದಲ್ಲಿ ಮದ್ರಾಸ ಕೌನ್ಸಿಲಿನಲ್ಲಿ ಕೆಲವು ವಿಚಾರಗಳು ತರ್ಕಿಸಲ್ಪಟ್ಟವು. ಮಿ| ಸಾಮಿ ವೆಂಕಟಾಚಲಂರವರು ಸರಕಾರ ಧೋರಣವನ್ನು ಖಂಡಿಸಿ ಬಜೆಟಿನಲ್ಲಿ ೧೦೦ ರೂಪಾಯಿ ತಗ್ಗಿಸಲು ಠರಾವು ತಂದರು. ಮದ್ಯಪಾನ ನಿಷೇಧಕ್ಕಾಗಿ ನಡೆಯಬೇಕಾದ ಪ್ರಯತ್ನಗಳು ನಡೆದಿಲ್ಲವೆಂಬುದನ್ನು ಎಲ್ಲರೂ ಒಪ್ಪುವ ಮಾತೇ. ಆದರೆ ಈ ಠರಾವನ್ನು ಕೊಂಗ್ರೆಸ್ ಸದಸ್ಯರಲ್ಲದೆ ಇತರರು ಪುಷ್ಟೀಕರಿಸುವ ಆವಶ್ಯಕತೆಯನ್ನು ಕಾಣದಿದ್ದುದು ಆಶ್ಚರ್ಯ. ಪಂಚಮರ ಪರವಾಗಿ ನೇಮಕಹೊಂದಿರುವ ಮಿ| ಶಿವರಾಜರಿಗೆ ಈ ಠರಾವಿನ ವಿರೋಧವಾಗಿ ಕೆಲವು ಆಶ್ಚರ್ಯಕರ ವಿಚಾರಗಳನ್ನು ಹೇಳಲಿಕ್ಕಿದ್ದುವು. ಪಂಚಮರನ್ನು ಇತರರು ದಬ್ಬಾಳಿಸುವರಂತೆ. ಅವರಿಗೆ ಹೊಟ್ಟೆಗಿಲ್ಲದಂತೆ ಮಾಡುವರಂತೆ; ಹಸಿವು ಮತ್ತು ಶ್ರಮವನ್ನು ತಣಿಸಲಿಕ್ಕೆ ಕುಡಿಯಲೇ ಬೇಕಾಗುವುದಂತೆ. ಇಂತಹ ಪ್ರತಿನಿಧಿಗಳನ್ನು ಹೊಂದಿ ಪಂಚಮರು ಧನ್ಯರಾದರು! ಏಕೆಂದರೆ ದಿನಕ್ಕೊಂದು ಇಡೀ ರೂಪಾಯಿ ಸಂಪಾದಿಸಿದರೂ ಗಡಂಗಿನ ಬಾಗಿಲಲ್ಲಿ ಅದನ್ನು ಖಾಲಿಮಾಡಿ ಏಳುತ್ತ ಬೀಳುತ್ತ ಮನೆಗೆ ಹೋಗಿ ಉಪವಾಸ ಬೀಳುವ ಪಂಚಮರ ಕಥೆ ಇವರಿಗೆ ತಿಳಿದಿಲ್ಲವಾಗಬೇಕು! ಈಗಿನ ಏಕಮಾತ್ರ ಮಂತ್ರಿಗಳಾಗಿನ್ನ ಡಾ| ಸುಬ್ಬರಾಯನರು ಮದ್ಯಪಾನವು ಮಂತ್ರಿಗಳ ಅಧಿಕಾರದಲ್ಲಿಲ್ಲವೆಂದು ಸರಕಾರೀ ಒಲುಮೆಗಾಗಿ ತಮ್ಮ ಅಧಿಕಾರವನ್ನು ಮಾರಿಬಿಟ್ಟರು. ಮದ್ಯಪಾನ ನಿಷೇಧದ ಪ್ರಚಾರಕರಾಗಿದ್ದ ಶ್ರೀಯುತ ಎ. ಬಿ. ಸೆಟ್ಟೊ ಈ ಠರಾವಿಗೆ ವಿರೋಧವಾದರು. ಇದರ ಕಾರಣವನ್ನು ಅವರು ವಿವರಿಸಿ ತಿಳಿಸುವರಾಗಿ ಆಶಿಸುವೆವು. ಠರಾವು ಬಿದ್ದುಹೋಯಿತು. ಇದರಿಂದ ಡಾ| ಸುಬ್ಬರಾಯನರ ಮಾತಿಗೆ ಕೌನ್ಸಿಲು ಒಪ್ಪಿಗೆಕೊಟ್ಟಂತಾಯಿತೆ? ಮದ್ರಾಸ್ ಕೌನ್ಸಿಲಿನಲ್ಲಿ ವಿಷಯ ವಿಚಾರಕ್ಕಿಂತಲೂ ಇತರ ಸಂಬಂಧಗಳು ಹೆಚ್ಚು ಕೆಲಸ ಮಾಡುತ್ತಿರುವುವೇ ಎಂದು ಸಂದೇಹವಾಗುತ್ತಿದೆ.

ನೋಟಗಳು.

NOTE....S.

ಮಂಗಳೂರಿಗೆ ಕಿರಿಸ್ತಾನರ ಮೊದಲಿನ ಇಂಡಿಯನ್ ಬಿಶೊಪರವರು ಚಿತ್ತೈಸಿದರು. ಇಂಡಿಯನ್ಬಿಶೊಪರಿಗೆ ಪೋಪ ಗುರುಗಳವರೂ ಮಾನಿಸಿದುದಕ್ಕೆ ನಾವು ಮಂಗಳೂರು ಕೆಥೊಲಿಕರನ್ನು ಅಭಿನಂದಿಸುವೆವು.

• • • •

ತಂಜಾವೂರಿನ ಮನ್ನರಗುಡಿಯ ಮ್ಯುನಿಸಿಪಾಲಿಟಿಯು ತೆಗದುಹಾಕಬೇಕೆಂದ ಗಡಂಗು ಅಂಗಡಿಯನ್ನು ಮೆಟ್ಟೂರು ಕಾಮಗಾರಿ ಸಂಬಂಧ ತೆಗೆದು ಹಾಕಬಾರದಾಗಿ ಕಲೆಕ್ಟರರವರ ಕಟ್ಟಪ್ಪಣೆ! ಮೆಟ್ಟೂರು ಕಾಮಗಾರಿಯು ಮದ್ಯಪಾನದ ಸಹಾಯವಿಲ್ಲದೆ ನಡೆಯಲಾರದು!

• • • •

ಪಂಜಾಬ ಕೌನ್ಸಿಲಿನ ರಾಜಭಕ್ತಿಯು ನೆರೆಬಂದು ಬಿಟ್ಟಿದೆ. ಅದು ಸ್ಯಾಮನ್ ಕಮಿಶನ್ನಿಗೆ ಸ್ವಾಗತ ಮಾತ್ರವಲ್ಲ, ಕಮಿಶನ್ನಿನೊಡನೆ ಸಹಕರಿಸಲಿಕ್ಕೆ ತನ್ನ ಕಮಿಟಿಯನ್ನು ನೇಮಿಸಿತು! ಇಡೀ ಹಿಂದೂಸ್ಥಾನವೇ ಕಮಿಶನನ್ನು ಬಹಿಷ್ಕರಿಸುವಾಗ ಪಂಜಾಬೊಂದು—ಪ್ರತ್ಯೇಕ!

• • • •

ಪಾರ್ಲಿಮೆಂಟುಗಳಲ್ಲಿ, ಚೇಂಬರಿನಲ್ಲಿ, ರೈಕ್‌ಸ್ಟೆಗಿನಲ್ಲಿ ಮುಂತಾದ ಆಯಾ ರಾಷ್ಟ್ರಗಳ ನ್ಯಾಯವಿಧಾಯಕ ಸಭೆಗಳಲ್ಲಿ ಮಾತ್ರವಲ್ಲ—ಲೀಗ್ ಒಫ್ ನೇಶನ್ನಿನಲ್ಲಿಯೂ ಇದೆ—ಹೊಡೆದಾಟ. ಬೀದಿಯಲ್ಲಿ ಹೊಡಕೊಂಡರೆ ಮರ್ಯಾದೆಯಿಲ್ಲದ ಪೋಕರಿಯಾಗುತ್ತಾನೆ. ಕೌನ್ಸಿಲುಗಳಲ್ಲಿ, ಪಾರ್ಲಿಮೆಂಟಿನಲ್ಲಿ ಹೊಡಕೊಂಡರೆ ಏನನ್ನುವರೊ! ಆದರೆ ಲೀಗ್ ಒಫ್ ನೇಶನ್ನಿನಲ್ಲಿ ಬೊಬ್ಬಾಟ ಪ್ರಾರಂಭವಾದರೆ ಲೋಕ ಶಾಂತತೆಯ ಲಕ್ಷಣಗಳನ್ನು ಚೆನ್ನಾಗಿ ಸೂಚಿಸಿದಂತಾಗುವುದು.

• • • •

ಒಂದು ಕಡೆಯಿಂದ ಇಂದೂರಿನ ಮಾಜಿ ಮಹಾರಾಜ—ಇನ್ನೊಂದು ಕಡೆಯಿಂದ ಅವರ ಮಾಜಿ ಪ್ರಣಯಿನಿ—ಇಬ್ಬರೂ ದೈನಿಕ ವಾರ್ತೆಗಳಿಂದ ಸರಿದುಹೋಗಲು ಇನ್ನೂ ಇಚ್ಛಿಸುವುದಿಲ್ಲ. ಓದುಗರಿಗೊಂದು ಉತ್ತೇಜಕ ವಿಷಯ. ಮಾಜಿ ಮಹಾರಾಜರ ವಿವಾಹ ಮಾಡಿಕೊಳ್ಳುವರು; ಅವರ ಮಾಜಿ ಪ್ರಣಯಿನಿಯು ವಿವಾಹವನ್ನು ರದ್ದುಪಡಿಸಿಕೊಳ್ಳುವಳು.

• • • •

ಹಾಗೂ ಮಮ್ತಾಜ ಬೇಗಮಳು ಇನ್ನೆಷ್ಟು ಜನರನ್ನು ಅಧಃಪಾತಕ್ಕಿಳಿಸಲಿದೆಯೊ!

• • • •

ಅಫಘಾನಿಸ್ಥಾನದ ಅಮೀರರಿಗೆ ಹೋದಲ್ಲೆಲ್ಲಾ ಪ್ರಚಂಡ ಸ್ವಾಗತ. ಅಂತರಾಷ್ಟ್ರೀಯ ಪಗಡೆಯಲ್ಲಿ ಇದರರ್ಥವೇನೊ! ಮುಂದೆ ತಿಳಿಯುವುದು.

• • • •

ಸ್ಯಾಮನ್ ಕಮಿಶನ್ನಿಗೆ ಸ್ವಾಗತವೀಯುವವರ ಸಂಖ್ಯೆ ಬಹಳವಾಗಿ ಹೋಗಿದೆ. ಆದರೆ ಈ ಸ್ವಾಗತಕ್ಕಾಗಿ ಅಭಿವಂದಿಸಿ ಕಮಿಶನ್ನಿನವರು ಬರೆದ ಪತ್ರವು ವಿಳಾಸದಾರನನ್ನು ಸೇರುವ ಬದಲು ಡೆಡ್‌ಲೆಟರ್ ಆಫೀಸನ್ನೇ ಸೇರುತ್ತಿವೆ! ವಿಳಾಸವಿಲ್ಲದವರ ಈ ಸ್ವಾಗತವು ಕಮಿಶನ್ನಿಗೆ ತೃಪ್ತಿಯನ್ನಿತ್ತರೆ ಸರಿ.

• • • •

ಈ ಬಾರಿಯ ತಾಲೂಕು ಬೋರ್ಡು ಚುನಾವಣೆಗಳಲ್ಲಿ ಆಶ್ಚರ್ಯಕರ ಸಂಗತಿಗಳಿದ್ದುವು. ಒಬ್ಬ ಹೆಂಗುಸು ಶೀರೆ ಬದಲಾವಣೆಯಿಂದ ಕೂಡಲೇ ಇನ್ನೊಬ್ಬಳಾಗುತ್ತಿದ್ದಳು; ಜನಿವಾರ ಹಾಕಿಕೊಂಡು ಕೆಲವರು ಬ್ರಾಹ್ಮಣರಾಗುತ್ತಿದ್ದರು; ಓಟರರು ಬೀಗದ ಕೋಣೆಯೊಳಗೆ ಬೀಳುತ್ತಿದ್ದರು—ಒಬ್ಬರನ್ನು ಮಾಡುಬಿಚ್ಚಿ ಹೊರತೆಗೆಯಬೇಕಾಯಿತಂತೆ! ಊಟ, ಫಲಾಹಾರ, ಗಮ್ಮತ್ತೇ ಗಮ್ಮತ್ತು!

• • • •

ಅಂತೂ ದೇಶವತ್ಸಲರನ್ನು ಚುನಾಯಿಸಬೇಕಾದರೆ ಇಷ್ಟು ಶ್ರಮ!

• • • •

ಮೂಲ್ಕಿ ಸರ್ಕಲಿನ ಓಟಿನ ಗಡಿಬಿಡಿ ವರ್ಣಿಸಲು ಒಂದು ರೀಮು ಕಾಗದ ಸಾಲದು. ಕೊನೆಗೆ ಗೆದ್ದವರು ಮನವಿ ವಿಜ್ಞಾಪನೆ ಪತ್ರ ಮುಂತಾದೆಲ್ಲಾ ಇಲ್ಲದವರು.

• • • •

ಆ ಶಾಲೆಯಾಯಿತು, ಈ ಸಾಲ ಮಾಡಿತು, ಅನೇಕ ಅಭಿವೃದ್ಧಿ ಕೆಲಸವಾಯಿತು ಎಂದು ಓಟರರಿಗೆ ವಿನಂತಿ. ಬಹುಶಃ ಇದು ಓಟರರ ತಲೆಗೆ ಹಚ್ಚಲಿಲ್ಲ.

• • • •

ಕಳೆದ ಒಂದು ವರ್ಷದಿಂದ ಮೋಟಾರ್ ಆಕ್ಟ್ ಬೇರೆ. ಕಾರಣ ಮೋಟಾರುಗಳ ಸಂಖ್ಯೆ ಏರಿದ್ದು. ಪೋಲಿಸ್ ಕೊನ್‌ಸ್ಟೇಬಲರಿಗೂ ಆಕ್ಟಿನ ಪವರ್. ಸಬ್ ಮ್ಯಾಜಿಸ್ಟ್ರೇಟರಿಗೆ ಒಂದು ಕೊಪ್ಪರಿಗೆ.

ಅನುಕ್ರಮಣಿಕೆ.

ಅಗ್ರಲೇಖ,
ತಾಲೂಕು ಬೋರ್ಡು ಚುನಾವಣೆ ... ೬
ವಿದೇಶ ವರ್ತಮಾನ [illegible]
ಒಳದೇಶ ವರ್ತಮಾನ ... ೬-೭
ಸ್ಫುಟ ವಿಚಾರಗಳು [illegible]
ನೋಟಗಳು [illegible]
ವರ್ತಮಾನ ಸಂಗ್ರಹಗಳು
ಒಳದೇಶ [illegible]
ದಕ್ಷಿಣ ಕನ್ನಡ — ಮಂಗಳೂರು, ಹೊಸದುರ್ಗ, ಫರಂಗಿಪೇಟೆ
ಕಾಸರಗೋಡು, ಕಾರ್ಕಳ, ಕುಂದಾಪುರ [illegible]
ವಿವಿಧ ಸಮಾಚಾರಗಳು [illegible]
[illegible]
ಶ್ರೀ [illegible]

ಸ್ವದೇಶಾಭಿಮಾನಿ.

ಶಕ ೧೮೪೯ ಫಾಲ್ಗುಣ ಬ [illegible] ಶುಕ್ರವಾರ.

ತಾಲೂಕು ಬೋರ್ಡು ಚುನಾವಣೆ.

ಈ ತ್ತೀಚಿನ ಚುನಾವಣೆಗಳಲ್ಲಿ [illegible] ಹೆಚ್ಚಾಗಿ [illegible] [illegible]

ಪ್ರಜಾಸತ್ತೆಯಿಂದ ಅಧಿಕಾರ [illegible] ಕೊಡುವಷ್ಟು [illegible] ತಿಳಿಯಲಾರದು. ಅಧಿಕಾರವು [illegible] (Power is sweet) ಎಂಬ ಆಂಗ್ಲೋಕ್ತಿಯಂತೆ [illegible] ರಲ್ಲಿ ಇದು ನೂರು ಪಾಲು ನಿಜವಿದೆ. [illegible] ಮೇಲೆ ಅಧಿಕಾರವನ್ನು [illegible] ಕಾಂಕ್ಷೆಗಳಲ್ಲಿ ಒಂದಾಗಿದೆ. ಹಿಂದೀಯರಿಗೆ [illegible] ಅದೆ ಇನ್ನಾತ್ತದರಲ್ಲಿಯೂ ಇಲ್ಲ. [illegible] ಜವಾಬ್ದಾರಿಯು ತಿಳುವಳಿಕೆಗಿಂತಲೂ ಅಧಿಕಾರದ ಪ್ರದರ್ಶನದಲ್ಲಿ ಅಧಿಕಾರಿಯು ತೃಪ್ತಿಹೊಂದುವನು. ಹಿಂದೂಸ್ಥಾನದ [illegible] ಹಾಸವು ಇಂತಹ ಘಟನೆಗಳ ಸಂಕಲನ ಮಾತ್ರವಾಗಿದೆ.

ಕೆಲವು ಚುನಾಯಿಸಲ್ಪಡದ ಉಮೇದ್ವಾರರನ್ನು ಬಿಟ್ಟರೆ, ಮಂಗಳೂರು ತಾಲೂಕು ಬೋರ್ಡಿನ ಈ ಚುನಾವಣೆಗಳಲ್ಲಿ ನಮ್ಮ ಹೃತ್ಪೂರ್ವಕ ಸಹಾನುಭೂತಿ ಇರುವುದಾದರೂ, ಮತ ದಾರರ ಚುನಾವಣೆಯಲ್ಲಿ ಅತೃಪ್ತಿಪಡುವಂತಹದುದೇನೂ ಇಲ್ಲವೆಂಬುದನ್ನು ಸಂತೋಷದಿಂದ ಸೂಚಿಸಬೇಕಾಗಿದೆ. ಚುನಾವಣೆಯ ತಿಕ್ಕಾಟವು ಎಲ್ಲಾ ಕಡೆಗಳಲ್ಲಿಯೂ ಇದ್ದಿತಾದರೂ, ಇದರ ಅತೀ ತೀಕ್ಷ್ಣವಾದ ಮೇಲಾಟವು ಮೂಲ್ಕಿಯಲ್ಲಿ ಕೇಂದ್ರಿತವಾಗಿದ್ದಿತು. ಶ್ರೀ ರಾಮಕೃಷ್ಣ ಪೂಂಜರು, ಶ್ರೀ ಮಂಜಯ್ಯ ಸೆಟ್ಟರು ಶ್ರೀ ಬೋಳ ಮಾಧವರಾಯರು, ಶ್ರೀ ಕೋಟಿ ಸೆಟ್ಟರು, ಇವರು ನಾಲ್ವರು ಇಲ್ಲಿಯ ಉಮೇದ್ವಾರರಾಗಿದ್ದರು. ಶ್ರೀ ಪೂಂಜರವರು ತಾಲೂಕು ಬೋರ್ಡಿನ ನಿವೃತ್ತರಾಗುವ ಅಧ್ಯಕ್ಷರು; ಅಲ್ಲದೆ ಮೂಲ್ಕಿಯಲ್ಲಿ ವಿಶೇಷ ಗೌರವವನ್ನು ಪಡೆಯುತ್ತಿರುವ ಗೃಹಸ್ಥರಾಗಿರುವರು. ಆದುದರಿಂದ ಶ್ರೀ ರಾಮಕೃಷ್ಣ ಪೂಂಜರಿಗೆ ಅಲ್ಲಿ ಚುನಾಯಿಸಲ್ಪಡಲು ಹೆಚ್ಚು ಕ ಷ

ವಾಗಲು ಕಾರಣವಿಲ್ಲ. ಹಾಗಾದರೂ ಅವರು ಚುನಾಯಿಸಲ್ಪಡದೆ ಇದ್ದುದನ್ನು ನೋಡಿದರೆ, ಶ್ರೀಯವರ ಕಡೆಗೆ ಮತದಾರರ ಅಭಿಪ್ರಾಯವು ತೀರಾ ವಿರೋಧವಾಗಿ ಹೋಗಿಯದೆಂದು ಊಹಿಸಬೇಕಾಗುತ್ತದೆ.

ಇಂತಹ ತಿಕ್ಕಾಟದಲ್ಲಿಯೂ ಚುನಾವಣೆಯು ಜಾತೀಯತ್ವಕ್ಕೆ ಪರ್ಯವಸಾನವಾಗದಿದ್ದುದು ಅಭಿನಂದನೀಯವಾಗಿದೆ. ಬ್ರಾಹ್ಮಣ ಬ್ರಾಹ್ಮಣೇತರರೆಂಬ ಕಚ್ಚಾಟವು ತಲೆದೋರಲು ಪ್ರಯತ್ನಗಳಾಗುವ ಈ ಸಮಯದಲ್ಲಿ ಎರಡೂ ಪಕ್ಷಗಳ ಧುರೀಣರು ಒಂದುಗೂಡಿ ಜಾತಿಯ ಬೆಂಬಲವನ್ನು ತಿರಸ್ಕರಿಸಿ, ಅಂತರ್ಜಾತೀಯ ಸೌಹಾರ್ದದಿಂದ ಚುನಾವಣೆಗಾಗಿ [illegible] ಈ ಚುನಾವಣೆಗಳ ಪ್ರಶಂಸನೀಯವಾದ ಲಕ್ಷಣವಾಗಿದೆ. ಇದರಿಂದ ಚುನಾವಣೆಗಳೆಲ್ಲವೂ ಯೋಗ್ಯ ರೀತಿಯಲ್ಲಿಯೇ ನಡೆದವು; [illegible] ಜಾತೀಯವಾಗಿ ಕೆಲಸ ಮಾಡುವುದರ ಹಾನಿಯು ತಿಳಿದು ಬಂದಿತು.

ಶ್ರೀಯುತ ರಾಮಕೃಷ್ಣ ಪೂಂಜರು ಚುನಾಯಿಸಲ್ಪಡದಿದ್ದುದರ ವಿಷಯವಾಗಿ ಒಂದಿಷ್ಟು ವಿಚಾರಿಸುವುದು ಅಗತ್ಯವಾಗಿದೆ. ಶ್ರೀಯುತರು ಮಹಾತ್ಮಾ ಗಾಂಧಿಯವರ ಅನುಯಾಯಿಗಳಲ್ಲೊಬ್ಬರು, [illegible] ನಿರ್ಭಯವಾಗಿ ನಡೆಯುವವರು, [illegible] ಪೂರಯಿಸುವವರು; [illegible] ಅತ್ಯಮೂಲ್ಯವಾಗಿವೆ. ಆದರೆ [illegible] ವಿಶ್ವಾಸವು ಕಡಿಮೆ [illegible] ಕಾರಣವಾಗಿದೆ. ಆದುದರಿಂದ [illegible] ಕರ್ತವ್ಯಗಳನ್ನು ಸರಿಯಾದ [illegible] ಅಭಿಪ್ರಾಯಪಡಬೇಕಾಗಿದೆ.

ಈ [illegible] ಮಾಧವರಾಯರಾದಿ [illegible] ರಾಮಕೃಷ್ಣ ಪೂಂಜರ ಕಡೆ [illegible] ಬೇಕಾಗಿದೆ. ಗವರ್ನರ [illegible] ಮಾನಪತ್ರದ [illegible] ತಾಲೂಕು [illegible] ಮಾಡಿಲ್ಲ. ಅಲ್ಲದೆ [illegible] ವಿನಂತಿಯನ್ನು [illegible] ತುಂಬಿ [illegible] ವಿಮರ್ಶೆ [illegible] ಜಾತಿಯ ಮೇಲೆ [illegible] ನೀತಿಸಲ್ಲಿಯೇ ವಿನಂತಿ [illegible] ಅಗತ್ಯ [illegible] ಯಾರೊಬ್ಬರೂ [illegible]

ಶ್ರೀಯುತ ರಾಮಕೃಷ್ಣ ಪೂಂಜರು [illegible] ದೊಡನೆ [illegible] ಶ್ರೀ ಪೂಂಜರು [illegible] ಶಕ್ತಿಯುಳ್ಳವರು [illegible] ಅಧಿಕಾರಿಗಳಿಗೆ [illegible] ಶ್ರೀಯವರು ಈ [illegible] ದಿಂದ ದುರ [illegible] ಸಂದರ್ಭಗಳಿಗಾಗಿ [illegible]

ವಿದೇಶ ವರ್ತಮಾನ.

— ಬ್ರಿಟಿಷ್ [illegible] ಸಂಕ್ಷ [illegible] ಉಳಿಸಿರುವನು. [illegible]

— [illegible] ಎಂಬವಳು ಇನ್ [illegible] ೬ ತಿಂಗಳು [illegible]

— ಇಂಗ್ಲೆಂಡಿನ [illegible] ನಡುವೆ [illegible] ಇದ್ದಿತು. [illegible] ಮುಳುಗಿ [illegible] ಬಹಳ [illegible]

— [illegible] ಮೇಲೆ ಒಬ್ಬ ಮನುಷ್ಯನನ್ನು ಹಿಡಿದರು. [illegible] ಬೊಂಬುಗಳನ್ನು [illegible] ಪ್ರೆಸಿಡೆಂಟರಾದ [illegible] ಹೊಂಚು [illegible] ಪ್ರೆಸಿಡೆಂಟರ ಮನೆಯ ಮೇಲೆ ಬೊಂಬನ್ನು [illegible] ಪ್ರಯಾಣ ಮಾಡುತ್ತಿರುವಾಗ ರೈಲನ್ನು [illegible] ಮಾಡುವನು, ಇದೇ ವಿಷಯವಾಗಿ ಅವನ ಆಲೋಚನೆಯಾಗಿದ್ದಿತು. ಆದರೆ ತಾನು ನಿರಪರಾಧಿಯೆಂದು ಅವನನ್ನುತ್ತಿರುವನು.

— ಲಂಡನಿನ ಗೋವರ್ ಸ್ಟ್ರೀಟ್ ಹಾಸ್ಪಿಟಲಿನಲ್ಲಿ ಕರ್ನಲ್ ವೆಜ್‌ವುಡರು ಗೋಖಲೆ ಮತ್ತು ತಿಲಕರ ಪಟಗಳನ್ನು ಅನಾವರಣಗೈದರು. ಅವರು ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಅವಿಶ್ರಾಂತವಾಗಿ ಶ್ರಮಪಟ್ಟವರೆಂದೂ, ಅವರ ನಿದರ್ಶನವೇ ಹಿಂದೀಯರು ಸೈಮನ್ ಕಮಿಶನನ್ನು ಬಹಿಷ್ಕರಿಸಲು ಕಾರಣವೆಂದೂ ಕರ್ನಲರು ಹೇಳಿದರು.

— ಸೆಂಟ್ರಲ್ ಅಮೇರಿಕದಲ್ಲಿ ಒಂದು ವಿಮಾನವು ಯಾವದಕ್ಕೋ ಬಡಿದು ಪುಡಿಪುಡಿಯಾಯಿತು. ವಿಮಾನದಲ್ಲಿದ್ದ ಇಬ್ಬರು ಮನುಷ್ಯರೂ ಮೃತರಾದರು.

ಅಫಘಾನದ ಅಮೀರರಾದ ಅಮನುಲ್ಲಾ ಧೊರೆಗಳೂ, ಅವರ ಪತ್ನಿಯವರೂ ಪೆರಿಸಿನಲ್ಲಿದ್ದವರು ಇಂಗ್ಲೆಂಡಿಗೆ ತೆರಳಿದರು.

— ಬೆಲ್ಜಿಯಮ್‌ನಲ್ಲಿ ಕೆವೆಲ್ ಫಿಲ್ಮಿನ ಪ್ರದರ್ಶನವಾಯಿತು. ಇದನ್ನು ನೋಡಲಿಕ್ಕಾಗಿ ಸುಮಾರು ೨೫೦೦ ಜನರು ಬಂದಿದ್ದರು. ಪ್ರದರ್ಶನವು ಮುಗಿದ ನಂತರ ಐದು ಮಿನಿಟುಗಳ ವರೆಗೆ ಹೊಗಳಿಕೆಯಿದ್ದಿತು. ಪ್ರದರ್ಶನವು ನಡೆಯುತ್ತಿರುವಾಗ್ಯೆ ಬೊಬ್ಬೆಯಿರಲಿಲ್ಲ.

— ಲೇಡಿ ಎಬೆಟ್ಸಲಿ ಎಂಬವಳು ಎಡ್ಜ್‌ವೇರಿನಿಂದ ವಿಮಾನದ ಮೇಲೆ ಕುಳಿತು ಹೊರಟು, ಫ್ರಾನ್ಸ್, ಇಟಲಿ, ಮಾಲ್ಟಾ, ಇಜಿಪ್ಟ, ಸುಡಾನ್ ಮೊದಲಾದವುಗಳನ್ನು ಸಂದರ್ಶಿಸಿ ಕೇಪ್ ಟೌನಿಗೆ ತಲಪುವಳು.

— ಕೆಂಟೋನಿನವರಲ್ಲಿಯೂ, ಬ್ರಿಟಿಷರಲ್ಲಿಯೂ ನೆಲಸಿದ್ದ ವಿರೋಧ ಭಾವವು ಈಗ ಶಾಂತವಾಗಿ ಅವರು ಸ್ನೇಹದಲ್ಲಿರುವರು.

ಒಳದೇಶ ವರ್ತಮಾನ.

— ಮುಂಬಾಯಿಯಲ್ಲಿ ಮಕ್ಕಳಿಗಾಗಿ ಒಂದು ಆಸ್ಪತ್ರೆಯನ್ನು ತೆರೆದಿರುವರು. ಇದನ್ನು ಅಲ್ಲಿಯ ಗವರ್ನರ ಧೊರೆಗಳೇ ತೆರೆದರು. ಈ ಆಸ್ಪತ್ರೆಗಾಗಿ ಬ್ಯಾಜಿಬ್ಯಾ ಎಂಬವರ ಇಬ್ಬರು ಮಕ್ಕಳು ೨೪ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರಂತೆ.

— ಕಲಕತ್ತದ ಒಂದು ಮೈಲ್‌ಗಾಡಿಯಿಂದ ಸುಮಾರು ೫೦,೦೦೦ ರೂಪಾಯಿಗಳ ವರೆಗಿನ ಇನ್ಸೂರೆನ್ಸ್ ಕವರುಗಳನ್ನು ಯಾರೋ ಕದ್ದುಕೊಂಡಿರುವರು. ಸಂಶಯದ ಮೇಲೆ ಮೂವರನ್ನು ಕೈದುಮಾಡಿರುವರು.

— ಹರತಾಳದ ದಿನ ಗುಂಡು ಹಾರಿಸಿದುದರ ಫಲಿತಾಂಶವಾಗಿ ಆಸ್ಪತ್ರೆಯಲ್ಲಿ ಮಲಗಿದ್ದವರಲ್ಲಿ ಮೊನ್ನೆ ಇನ್ನೊಬ್ಬನು ಸತ್ತುಹೋದನು.

— ತಂಜಾವೂರಿನಲ್ಲಿ ರೈಲುವೇ ಪಾಸೆಂಜರರ ಒಂದು ಸಭೆಯು ನಡೆದು ಮೂರನೇ ತರಗತಿಯ ರೈಲುವೇ ಫೀಸನ್ನು ಕಡಿಮೆಮಾಡುವದಕ್ಕಾಗಿ ರೈಲುವೇ ಬೋರ್ಡಿನವರಿಗೆ ಅರಿಕೆಮಾಡಿಕೊಳ್ಳಬೇಕೆಂದು ಮಂಜೂರಾಯಿತು

— ತುತಿಕೋರಿನಿನಲ್ಲಿ ತಾಲೂಕು ಬೋರ್ಡಿನವರು ಒಂದು ಹೊಸ ಮಾರ್ಕೇಟನ್ನು ತೆರೆಯಬೇಕೆಂದು ಆಲೋಚಿಸಿರುವರು. ಈ ಮಾರ್ಕೇಟು ಎರಡು ಎಕ್ರೆ ವಿಸ್ತಾರವಾಗಿರುವದಂತೆ.

— ಕೊಲ್ಲಪಾತಿಯ ತಾಲೂಕು ಬೋರ್ಡಿನವರು ತಾಲೂಕಿನ ಮುಖ್ಯ ಮುಖ್ಯ ಸ್ಥಳಗಳಲ್ಲಿ ತಮ್ಮ ಖರ್ಚಿನಿಂದ ಹುಡುಗಿಯರ ಶಾಲೆಗಳನ್ನು ಇಡಬೇಕೆಂದು ನಿಶ್ಚಯಿಸಿರುವರು.

— ತ್ರಿವೆಂಡ್ರಮಿನಲ್ಲಿ ಒಂದು ಖಾದಿ ವಸ್ತ್ರಾಲಯವನ್ನು ತೆರೆದಿರುವರು. ಇದು ಅಖಿಲ ಭಾರತೀಯ ನೂಲುವವರ ಸಂಘದ ಆಶ್ರಯದಲ್ಲಿಯೇ ನಡೆಯುವದಂತೆ. ವಸ್ತ್ರಾಲಯವನ್ನು ತೆರೆಯುವ ಸಮಯದಲ್ಲಿ ಊರ ನಿವಾಸಿಕರ ಒಂದು ಸಭೆಯೂ ಜರಗಿತು.

— ಎಲ್ಲೋರಿನಲ್ಲಿ ಬೆಂಕಿಯುಂಟಾಗಿ ೨೦೦೦ ಮನೆಗಳು ಸುಟ್ಟು ಹೋದವು. ಇವೆಲ್ಲ ಮನೆಗಳು ಕೂಲಿಯವರ ಮನೆಗಳಾಗಿದ್ದವು. ಈಗ ಸುಮಾರು ೧೦,೦೦೦ ಜನರು ಮನೆಯಿಲ್ಲದೆ ತಿರುಗಾಡುತ್ತಿರುವರು. ಇಬ್ಬರು ಮನುಷ್ಯರು ಸತ್ತುಹೋದರು. ಇವರಿಗೆ ಸಾಧಾರಣ ತರದ ಗುಡಿಸಲುಗಳನ್ನು ಒದಗಿಸಬೇಕಾದರೂ ಸುಮಾರು ೩೦,೦೦೦ ರೂಪಾಯಿಗಳು ಬೇಕಾಗುವವು. ಮುನಿಸಿಪಾಲಿಟಿಯವರಿಗೂ, ಕಲೆಕ್ಟರರಿಗೂ, ಇವರಿಗೆ ಸಹಾಯಮಾಡಬೇಕೆಂದು ಮನಸ್ಸಿದೆಯಾದರೂ ಹಣವಿಲ್ಲದುದರಿಂದ ಅವರು ಸುಮ್ಮನಿರುವರು.

— ರಂಗೂನಿನ ಸುಲೇಮಾನ್ ಹಾಜಿ ಮತ್ತು ಸಹೋದರರ ಅಕ್ಕಿಯ ಕಾರಖಾನೆಗೆ ಬೆಂಕಿಯು ಬಿದ್ದು ಯಂತ್ರಗಳೂ ಕಾರಖಾನೆಯೂ ಸುಟ್ಟು ಹೋದವು. ನಷ್ಟವು ಎಷ್ಟೆಂದು ಸರಿಯಾಗಿ ತಿಳಿಯದೆ ಇದ್ದರೂ ಸುಮಾರು ೩॥ ಲಕ್ಷವಾಗಬಹುದೆಂದು ಅಂದಾಜುಮಾಡಲ್ಪಟ್ಟಿದೆ.

— ರಣಪುರಾ ಎಂಬ ಹಡಗವು ಪ್ರಯಾಣವನ್ನು ಮಾಡುತ್ತಿರುವಾಗ ಅದರ ಕೆಪ್ಟನನು ಆತ್ಮಹತ್ಯವನ್ನು ಮಾಡಿಕೊಂಡಿರುವನು.

— ಮುಂಬಾಯಿಯ ಗವರ್ನರರು ಥಾನಾ ಜಿಲ್ಲೆಯನ್ನು ಸಂದರ್ಶಿಸಿದರು. ಅಲ್ಲಿ ಬೇರೆ ಬೇರೆ ವರ್ಗದವರ ಮಾನಪತ್ರಗಳನ್ನು ಸ್ವೀಕರಿಸಿ ಅವರಿಗೆ ಉತ್ತರ ಕೊಟ್ಟು ಮುಂಬಾಯಿಗೆ ಹಿಂತೆರಳಿದರು.

— ಕಲಕತ್ತಾ ಮುನಿಸಿಪಾಲಿಟಿಯ ಜಾಡಮಾಲಿಗಳ ಸಂಬಳವನ್ನು ಹೆಚ್ಚಿಸುವರೆಂದು ಮೆಯೋರರು ಮಾತುಕೊಟ್ಟ ಕಾರಣ ಅವರು ಮುಷ್ಕರವನ್ನು ನಿಲ್ಲಿಸಿರುವರು.

— ಕಲಕತ್ತದ ವೈ. ಎಮ್. ಸಿ. ಯೆ. ಕ್ಲಬ್ಬಿನ ವಾರ್ಷಿಕ ಸಭೆಯು ಗವರ್ನರ ಧೊರೆಗಳ ಅಧ್ಯಕ್ಷತೆಯಲ್ಲಿ ಜರಗಿತು.

— ಕಳದ ೯ನೇ ತಾರೀಕಿನ ದಿನ ಹೈದರಾಬಾದಿನಲ್ಲಿ ಒಂದು ಭೂಕಂಪ ಉಂಟಾಯಿತು.

— ಪಲ್ಲಿಕೊಟ್ಟಾದ ಇಂಡಿಯನ್ ಕ್ರಿಶ್ಚಿಯನ್ ಎಸೋಸಿಯೇಶನಿನವರು ಸ್ಯಾಮನ್ ಕಮಿಶನಿಗೆ ತಮ್ಮ ಸ್ವಾಗತವನ್ನು ತಿಳಿಸಿ, ತಮ್ಮ ಸ್ಥಳಕ್ಕೆ ಬರಬೇಕೆಂದು ವರ್ತಮಾನವನ್ನು ಕಳುಹಿಸಿದರು. ಆಮಂತ್ರಣಕ್ಕಾಗಿ ತಾವು ಕೃತಜ್ಞರಿರುವೆವೆಂದೂ, ಬರಲು ಸಮಯವಿಲ್ಲವೆಂದೂ ಕಮಿಶನಿನವರು ತಿಳಿಸಿದರು.

— ಇಂಡಿಯದ ಲೋ ಮೆಂಬರರಾದ ಎಸ್. ಆರ್. ದಾಸರು ರಜೆಯಲ್ಲಿ ಹೋದಾಗ, ಅವರ ಸ್ಥಾನಕ್ಕೆ ಉಮೇದ್ವಾರರಾಗುವವರಲ್ಲಿ ಮುಂಬಾಯಿ ಹೈಕೋರ್ಟಿನ ಮುಲ್ಲಾರವರು ಒಬ್ಬರಾಗಿರುವರು.

— ಯುನೈಟೆಡ್ ಸ್ಟೇಟ್ಸಿನ ಒಂದು ಹಡಗವು ಬ್ರಿಟಿಷರ ಹಡಗದ ಮೇಲೆ ಬೊಂಬುಗಳನ್ನು ಬಿಸಾಡಿತು. ಹಡಗಕ್ಕೆ ಅಷ್ಟು ಹಾನಿಯಾಗದಿದ್ದರೂ, ಜನರಿಗೆ ಪೆಟ್ಟಾಗಿದೆ.

— ಸ್ವಿಡನಿನಿಂದ ಹಿಂದುಸ್ಥಾನದಲ್ಲಿ ಸಂಚಾರಕ್ಕಾಗಿ ಮಿಸ್ ನಡ್‌ಸನ್ ಎಂಬ ಹೆಂಗಸೊಬ್ಬಳು ಬಂದಿರುವಳು. ಮಹಾತ್ಮಾಜಿಯವರು ಅಸ್ವಸ್ಥತೆಯಲ್ಲಿರುವರೆಂಬುದನ್ನು ಕೇಳಿ ಇವಳು ತನ್ನ ಸಂಚಾರವನ್ನು ನಿಲ್ಲಿಸಿ ಮಹಾತ್ಮಾಜಿಯವರ ಆಶ್ರಮಕ್ಕೆ ಬಂದು ಕಳದ ಹದಿನೈದು ದಿನಗಳಲ್ಲಿ ಉದರ ರೋಗಪರಿಹಾರದ ಕುರಿತು ಬೋಧನೆಯನ್ನು ಕೊಡುತ್ತಿರುವಳು.

— ಲೋರ್ಡ್ ಸಿಂಹರು ನಿಧನಪಟ್ಟುದಕ್ಕಾಗಿ ದುಃಖವನ್ನು ವ್ಯಕ್ತಪಡಿಸಿ ನಮ್ಮ ವೈಸರಾಯರು ಲೋರ್ಡ್ ಸಿಂಹರ ಪತ್ನಿಯವರಿಗೆ ಒಂದು ತಂತಿಯನ್ನು ಕಳುಹಿಸಿರುವರು.

— ಇಂದೋರಿನ ತುಕೋಜಿಮಹಾರಾಯರ ಮೇಲೆ ಕೊಲೊಂಬೋ ದಿನ ಡಾಕ್ಟರ ರೋವರು ರೂಪಾಯಿ ೫೨,೫೦೦ಕ್ಕೆ ಕೊಲೊಂಬೋ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಒಂದು ವ್ಯಾಜ್ಯವನ್ನು ಮಾಡಿದ್ದರು. ಆದರೆ ಜೂರಿಗಳೆಲ್ಲರೂ ವಿಚಾರಿಸಿ ತುಕೋಜಿರಾಯರು ಡಾಕ್ಟರರಿಗೆ ೩೨೫೦ ರೂಪಾಯಿಗಳನ್ನು ಮಾತ್ರವೇ ಕೊಟ್ಟರೆ ಸಾಕೆಂದು ವ್ಯಾಜ್ಯವನ್ನು ಖುಲಾಸುಮಾಡಿರುವರು.

— ಮುಂಬಾಯಿಯ ವೈ. ಎಮ್. ಸಿ. ಎ. ಕ್ಲಬ್ಬಿನವರು ಗತವರ್ಷದಲ್ಲಿ ಮಾಡಿದ ಕೆಲಸಗಳು ಅತ್ಯುತ್ತಮ ರೀತಿಯಲ್ಲಿ ಮಾಡಲ್ಪಟ್ಟಿವೆ ಎಂದು ಮುಂಬಾಯಿಯ ಗವರ್ನರ ಧೊರೆಗಳೇ ಅಭಿಪ್ರಾಯಪಟ್ಟಿರುವರು.

— ಬಂಗಾಳ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಸುಭಾಸಚಂದ್ರಬೋಸರು ಬ್ರಿಟಿಷ ವಸ್ತ್ರಗಳನ್ನು ಪೂರ್ಣವಾಗಿ ಬಹಿಷ್ಕರಿಸಬೇಕೆಂದು ಒಂದು ಮಂಡಳವನ್ನು ಏರ್ಪಡಿಸಿರುವರು. ಇದಕ್ಕಾಗಿ ೧೦೦೦ ರೂಪಾಯಿಗಳು ಒಂದು ಸಭೆಯಲ್ಲಿ ಒಟ್ಟು ಕೂಡಿಸಲ್ಪಟ್ಟವು. ಸ್ವರಾಜ್ಯಕ್ಕೂ ಸ್ವದೇಶೀ ವಸ್ತ್ರಕ್ಕೂ ಬಲವಾದ ಹೋಲಿಕೆಯಿದೆಯೆಂದು ಅವರನ್ನುತ್ತಿರುವರು.

— ಕಲಕತ್ತದ ಮುನಿಸಿಪಾಲಿಟಿಯ ಜಾಡಮಾಲಿಗಳು ತಮ್ಮ ಮುಷ್ಕರವನ್ನು ಇನ್ನೂ ನಿಲ್ಲಿಸಿಲ್ಲ. ಪಟ್ಟಣದ ಕೆಲವೆಡೆಗಳಲ್ಲಿ ಉತ್ಸಾಹಿಗಳಾದ ಯುವಕರು ತಾವೇ ಮಾರ್ಗಗಳನ್ನು ಸ್ವಚ್ಛಗೊಳಿಸುವರು. ಹಲವು ಕಡೆಗಳಲ್ಲಿ ಹೊಲಸು ಹಾಗೆಯೇ ಬಿದ್ದಿರುತ್ತದೆ.

— ಶ್ರೀ ನಾರಾಯಣ ಗುರುಸ್ವಾಮಿಯವರ ಸ್ಥಿತಿಯು ಸ್ವಲ್ಪ ಮಟ್ಟಿಗೆ ಒಳ್ಳೇದಾಗಿದೆ. ಅವರು ಮೊನ್ನೆ ಎರ್ನಾಕುಳದಿಂದ ಹೊರಟು ವರ್ಕಾಲಿಗೆ ತೆರಳಿದರು.

— ಕೊಡಗಿನ ಜಮೀನುದಾರರ ಸಭೆಯು ಬರುವ ತಿಂಗಳ೨೧-೨೨ನೇ ತಾರೀಕಿಗೆ ನಡೆಯುವದು. ಅಧ್ಯಕ್ಷಸ್ಥಾನಕ್ಕೆ ರಾ. ಎಸ್. ಸತ್ಯಮೂರ್ತಿಯವರು ಆಮಂತ್ರಿಸಲ್ಪಟ್ಟಿರುವರು.

ಮದರಾಸಿನ ಮೇಸ್ತ್ರಿಯೋರ್ವನು ತಾನು ಕಟ್ಟಿದ ಕಟ್ಟಡವನ್ನು ಪರೀಕ್ಷಿಸುವದಕ್ಕಾಗಿ ಕಟ್ಟಡದ ಕೊನೆಯನ್ನು ಹತ್ತಿ ನಡೆಯುತ್ತಿರುವಾಗ ಕೆಳಕ್ಕೆ ಬಿದ್ದು ಬಲವಾದ ಪೆಟ್ಟಾಯಿತು. ಪೋಲೀಸರು ಆತನನ್ನು ಆಸ್ಪತ್ರೆಗೆ ಕೊಂಡೊಯ್ಯುತ್ತಿರುವಾಗ ಆತನು ಹಾದಿಯಲ್ಲಿಯೇ ಮೃತಪಟ್ಟನು.

— ತಿರುಚಿನಾಪಳ್ಳಿಯಲ್ಲಿರುವ ಕಾವೇರಿ ನದಿಯ ಹಳೇ ಸಂಕವನ್ನು ತೆಗೆದು ಹೊಸ ಸಂಕವನ್ನು ನಿರ್ಮಿಸಲು ಪ್ರಾರಂಭಿಸಿರುವರು. ಈ ಕೆಲಸವನ್ನು ಮಾರ್ಟಿನ್ ಎಂಡ್ ಕಂಪೆನಿಯವರು ರೂಪಾಯಿ ೬,೦೦,೦೦೦ಕ್ಕೆ ವಹಿಸಿಕೊಂಡಿರುವರು.

— ಜಿ. ಐ. ಪಿ. ರೈಲುವೆಯ ಕೆಲಸಗಾರರಲ್ಲಿ, ಭೋರ್ಕರೊಳಗೂ, ಪಠಾಣರೊಳಗೂ ಹೊಡೆದಾಟವಾಗಿ ಒಬ್ಬ ಭೋರ್ಕನು ಮೃತಪಟ್ಟನು. ೪೧ ಜನರು ಆಸ್ಪತ್ರೆಯಲ್ಲಿರುವರು. ಇವರಲ್ಲಿ ಇಬ್ಬರು ಪಠಾಣರೂ, ೬ ಜನ ಭೋರ್ಕ ಹೆಂಗಸರೂ ಇರುವರು.

— ಇಬ್ಬರು ಬಂಗಾಳಿ ಯುವಕರ ಕಡೆ ಬೋಂಬುಗಳು ಸಿಕ್ಕಿದ್ದರಿಂದ ಅವರನ್ನು ಕೈದುಮಾಡಿ ಡೆಪ್ಯುಟಿ ಸೆಶನ್ ಜಡ್ಜರು ಪ್ರತಿಯೊಬ್ಬನಿಗೆ ೨ ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು.

— ನಾಗಪುರದಲ್ಲಿ ಹೆಂಗಸರಿಗಾಗಿ ಒಂದು ಹೊಸ ಆಸ್ಪತ್ರೆಯನ್ನು ತೆರೆದಿರುವರು.

ದಕ್ಷಿಣ ಕನ್ನಡ.

ಮಂಗಳೂರು:— ಇದೇ ತಿಂಗಳ ೧೫ನೇ ತಾರೀಕಿನ ಮೊದಲ್ಗೊಂಡು ದಿ. ಬೊಂಬೇಸ್ಟೀಮ್ ನೆವಿಗೇಶನ್ ಕಂಪೆನಿ ಲಿಮಿಟೆಡ್ ಇವರ ಎಸ್. ಎಸ್. ಜೂಬಾ ಎಂಬ ಹಡಗವು ಪ್ರತಿ ಗುರುವಾರ ಪ್ರಾತಃಕಾಲ ಇಲ್ಲಿಗೆ ಬಂದು ಮರುದಿನ ಶುಕ್ರವಾರ ಬೆಳಿಗ್ಗೆ ಘಂಟೆ ೧೦ಕ್ಕೆ ಇಲ್ಲಿಂದ ಹೊರಟು, ಆದಿತ್ಯವಾರ ಬೆಳಿಗ್ಗೆ ಘಂಟೆ ೭ಕ್ಕೆ ಮುಂಬಾಯಿಗೆ ತಲಪುವದು. ಕಾರ್ಗೋ ಸ್ಟೀಮರಿನ ಚಲಾವಣೆಯ ಸಮಯವು ಬದಲಾಗದೆ ಮೊದಲಿನಂತೆಯೇ ಆಗಿರುತ್ತದೆ.

ತಾರೀಕು ೧೦—೩—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೧ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೩, ಅತಿಸಾರದಿಂದ ೨, ಶ್ವಾಸಕೋಶದ ರೋಗದಿಂದ ೪, ಇತರ ಎಲ್ಲಾ ಕಾರಣಗಳಿಂದ ೧೨. ಜನನ ಸಂಖ್ಯೆಯು ಒಟ್ಟು ೪೧.

ಮಂಗಳೂರು ತಾಲೂಕು ಬೋರ್ಡಿಗೆ ಸುರತಕಲ್ಲು ಮತ್ತು ಮೂಲ್ಕಿ ಸೆಂಟರಿನ ಚುನಾವಣೆಯು ಕಳದ ೧೨ನೇ ತಾರೀಕಿನ ದಿನ ನಡೆಯಿತು. ಮೂಲ್ಕಿ ಸೆಂಟರಿನಲ್ಲಿ ಉಮೇದ್ವಾರರಾಗಿ ನಿಂತಿದ್ದ ರಾ. ಕೋಟಿ ಸೆಟ್ರಿಗೆ ೫೨೯ ವೋಟುಗಳೂ, ರಾ. ಬೋಳ ಮಾಧವರಾಯರಿಗೆ ೫೧೬ ವೋಟುಗಳೂ, ರಾ. ರಾಮಕೃಷ್ಣ ಪೂಂಜರಿಗೆ ೩೨೨ ವೋಟುಗಳೂ, ರಾ. ಮಂಜಯ್ಯ ಸೆಟ್ರಿಂಗೆ ೧೯೯ ವೋಟುಗಳೂ ದೊರೆತವು. ಸುರತಕಲ್ಲು ಸೆಂಟರಿನಲ್ಲಿ ಉಮೇದ್ವಾರರಾಗಿ ನಿಂತಿದ್ದ ರಾ. ಎಚ್. ದಾಮೋದರರಾಯರಿಗೆ ೪೦೯ ವೋಟುಗಳೂ, ರಾ. ರಾಮಕೃಷ್ಣ ಪೂಂಜರಿಗೆ ೧ ವೋಟೂ ದೊರೆತವು.

ನೆಲ್ಲೂರಿನ ಬಿರುಗಾಳಿಯಿಂದ ಪೀಡಿತರಾದ ಜನರಿಗಾಗಿ ತೆರೆದ ಫಂಡಿಗೆ ಮಂಗಳೂರು ತಾಲೂಕು ಬೋರ್ಡಿನವರು ೨೫ ರೂಪಾಯಿ ವಂತಿಗೆಯನ್ನು ಕೊಟ್ಟಿರುವರು.

ಇದೇ ತಿಂಗಳ ತಾರೀಕು ೧೮ನೇ ಆದಿತ್ಯವಾರ ಬೆಳಿಗ್ಗೆ ೭॥ ಘಂಟೆಗೆ ಮಂಗಳೂರು ಬ್ರಾಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಯಮ್. ಬಾಬುರವರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನವನ್ನು ನಡಿಸುವರು. ತಾ. ೨೨ನೇ ಗುರುವಾರ ಬೆಳಿಗ್ಗೆ ೭॥ ಘಂಟೆಗೆ ಮಂಗಳೂರು ಬ್ರಾಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಗಂಗೋಳಿ ಕೃಷ್ಣರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ವ್ಯಾಖ್ಯಾನದ ವಿಷಯ—'ಯುಗಾದಿ'. ಸರ್ವರಿಗೂ ಸುಸ್ವಾಗತವಿದೆ.

ಇಲ್ಲಿ ಮೊದಲು ಅಸಿಸ್ಟಾಂಟ್ ಸರ್ಜನರಾಗಿದ್ದ ನಾಡಕರ್ಣಿ ಮಂಗೇಶರಾವ್ ಇವರು ಎಫ್. ಆರ್. ಸಿ. ಎಸ್ ಫಸ್ಟ್‌ಕ್ಲಾಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಂಗ್ಲೆಂಡಿನಿಂದ ಬೊಂಬಾಯಿಗಾಗಿ ಎಸ್. ಎಸ್. ಜೂಬಾ ಸ್ಟೀಮರಿನಿಂದ ನಿನ್ನೆ ೮-೩೦ಕ್ಕೆ ಇಲ್ಲಿ ತಲ್ಪಿರುವರು. ಈ ಸಂದರ್ಭದಲ್ಲಿ ಇವರಿಗೆ ಬಂದರದಲ್ಲಿ ಸ್ವಾಗತವನ್ನು ಕೊಡೋಣಾಯಿತು. ಇವರನ್ನು ಎದುರುಗೊಳ್ಳಲಿಕ್ಕೆ ಅನೇಕ ಮಹಾಶಯರು ಹೋಗಿದ್ದರು.

ಮಂಗಳೂರು ಮುನಿಸಿಪಾಲಿಟಿಯವರ ವಿಶೇಷ ಸಭೆಯು ಕಳೆದ ಶನಿವಾರ ದಿನ ಸಾಯಂಕಾಲ ಜರಗಿ, ಮೋಟಾರು ಬಸ್ಸುಗಳ ಚಲಾವಣೆಯನ್ನು ಮುನಿಸಿಪಾಲಿಟಿಯ ಸರಹದ್ದಿನೊಳಗೆ ಆಯಾಯ ಮಾರ್ಗಗಳಲ್ಲಿ ಮಾತ್ರವೇ ಮಾಡಬೇಕೆಂಬುದನ್ನು ನಿರ್ಣಯಿಸಲು ಚರ್ಚೆಯು ನಡೆಯಿತು.

ಬರುವ ಜುಲೈ ೧ನೇ ತಾರೀಕಿನಿಂದ ಇದನ್ನು ಜ್ಯಾರಿಗೆ ತರಲಿರುವರು. ಪಟ್ಟಣಗಳಲ್ಲಿ ಹಲವು ಕಡೆಗಳಲ್ಲಿ ಮಾರ್ಗಗಳು ಅಗಲವಾಗಿಲ್ಲದುದರಿಂದ ಅಲ್ಲಿ ಮೋಟಾರುಗಳನ್ನು ಓಡಿಸುವದರಿಂದ ಜನರಿಗೂ ಗಾಡಿಗಳಿಗೂ ವಿಶೇಷ ತೊಂದರೆಯಾಗಬಹುದಾದುದರಿಂದ ಹೀಗೆ ಮಾಡುವರು

ಹೊಸದುರ್ಗ:— ಇಲ್ಲಿಂದ ಪಣತ್ತಡಿಗೆ ಮೋಟರ್ ಚಲಾವಣೆಯು ಆರಂಭವಾಗಿಯದೆ.

ಪ್ರೊಫೆಸರ್ ಗುಲ್‌ಮಹಮ್ಮದರವರ ಗ್ರೇಟ ಮಲಬಾರ ಇಂಡಿಯನ್ ಸರ್ಕಸ್ ಆಟವು ಇಲ್ಲಿ ಬಂದಿರುತ್ತದೆ. ಐದು ಆಟಗಳು ಇಲ್ಲಿಯ ಕೋರ್ಟ ಮೈದಾನಿನಲ್ಲಿ ಕಾಣಿಸುವರೆ ಲೈಸನ್ಸ ಕೊಡೋಣಾಗಿಯದಂತೆ. ಜನಸ್ತೋಮವು ತುಂಬಿ ಡೇರೆಯಲ್ಲಿ ಸ್ಥಳವೇ ಇರುವದಿಲ್ಲ. ಕಂಪೆನಿಯವರ ಅದೃಷ್ಟ!

ಕೆನರಾ ಪಬ್ಲಿಕ್ ಕನ್‌ವೇಯನ್ಸ ಕಂಪೆನಿಯವರು ತಮ್ಮ ಬಾಬತು ಒಂದು ಮೋಟರ್ ಇತ್ತ ಕಡೆ ಚಲಾವಣೆಗೆ ಇರಿಸಿದರೆ ಶ್ರಮೋಚಿತ ಪ್ರಯೋಜನ ಸಿಕ್ಕುವಲ್ಲಿ ಸಂದೇಹವಿಲ್ಲ. ರಸ್ತೆಯು ಪಣತ್ತಡಿಯಿಂದ ಕೊಡಗು ಗಡಿಗೆ ಕೂಡಿದ ನಂತರ ಉತ್ತಮ ಪ್ರಯೋಜನವೂ ಹೆಚ್ಚು ಪ್ರಯಾಣಸ್ಥರೂ ಸಿಕ್ಕುವಲ್ಲಿ ಅಡ್ಡಿ ಇಲ್ಲ.

ಫರಂಗಿಪೇಟೆ:— ಈ ಸೆಂಟರಿನ ಉಪಾಧ್ಯಾಯರ ೮ನೇ ಸಭೆಯು ಫರಂಗಿಪೇಟೆ ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೧೮—೨ '೨೮ರಲ್ಲು ಮೇರಮಜಲು ಇಗರ್ಜಿಯ ಸಹಾಯಕ ಗುರುಗಳಾದ ರೆವರೆಂಡ್ ಫಾದರ್ ಎಮ್. ಪಿಂಟೊರವರ ಅಧ್ಯಕ್ಷತೆಯಲ್ಲಿ ಜರಗಿತು. ೩೬ ಮಂದಿ ಉಪಾಧ್ಯಾಯರೂ ಇತರ ಗೃಹಸ್ಥರೂ ಹಾಜರಿದ್ದರು. ಮಂಗಳೂರಿನಲ್ಲಿ ಮಹಮ್ಮದನ್ ಶಾಲಾ ಉಪಾಧ್ಯಾಯರ ಸಂಘವು ಏರ್ಪಟ್ಟಿದ್ದರಿಂದ ಈ ಸೆಂಟರಿಗೆ ಸೇರಿದ್ದ ಕಂಜಾರು ಮಾಪಿಳ್ಳಾ ಬೋರ್ಡು ಮತ್ತು ಪುದು ಮಾಪಿಳ್ಳಾ ಬೋರ್ಡು ಶಾಲೆಗಳ ಉಪಾಧ್ಯಾಯರನ್ನು ಈ ಸಂಘದಿಂದ ಬಿಡುಗಡೆ ಮಾಡಲಾಯಿತು. ೩ನೇ ಕ್ಲಾಸಿಗೆ ಟಪ್ಪಾಲು ಇಲಾಖೆಯ ಕುರಿತು ಒಂದು ಮಾದರಿ ಪಾಠವನ್ನು ಕೈರಂಗಳ ಶಾಲಾ ಹೆಡ್ ಮಾಸ್ಟರ್ ಐ. ಪರಮೇಶ್ವರಯ್ಯನವರು ಕೊಟ್ಟರು. 'ಶಾಲೆಗಳ ಬಳಿಯಲ್ಲಿ ತೋಟಗಳ ಆವಶ್ಯಕತೆ'ಯ ಕುರಿತು ಪಾವೂರು ಬೋರ್ಡು ಶಾಲಾ ಮಾಸ್ಟರ್ ಎಮ್. ವೆಂಕಪ್ಪ ಶೆಟ್ರು ಒಂದು ಉಪನ್ಯಾಸವನ್ನು ಓದಿದರು. ಇದರ ಸಾಧ್ಯಾ ಸಾಧ್ಯದ ಕುರಿತು ಭಾಷಣಗಳ ಮೂಲಕ ಚರ್ಚೆಯು ನಡದು ತೋಟವನ್ನು ಉಪಾಧ್ಯಾಯರೇ ಮಕ್ಕಳ ಸಹಾಯದಿಂದ ಮಾಡಬೇಕಾಗಿಯೂ, ದೊಡ್ಡ ತೋಟವಿರುವಲ್ಲಿ ಒಬ್ಬ ಮಾಲಿಯನ್ನು ಇಟ್ಟು ಅವನಿಗೆ ಸರ್ಕಾರದಿಂದ ಗ್ರೇಂಟು ಸಿಕ್ಕುವ ಹಾಗೆ ಕೆಲಸ ಮಾಡಿಸಬೇಕಾಗಿಯೂ ನಿರ್ಣಯಿಸಲಾಯಿತು.

ಮುಂದಿನ ಸಭೆಯನ್ನು ಸುಜೀರು ದಾಸ ಎಲಿಮೆಂಟರಿ ಶಾಲೆಯಲ್ಲಿ ತಾ. ೧೭—೩—'೨೮ಕ್ಕೆ ಜರಗಿಸಬೇಕಾಗಿ ನಿರ್ಣಯಿಸಿದ ಬಳಿಕ, ಅಧ್ಯಕ್ಷರು ತಮ್ಮ ಅನುಭವಯುಕ್ತವಾದ ಭಾಷಣದ ಮೂಲಕ ಉಪಾಧ್ಯಾಯರೆಲ್ಲಾ ಪರಸ್ಪರ ಪ್ರೀತಿಯಿಂದಲೂ ಮಕ್ಕಳೊಡನೆ ಯಾವಾಗಲೂ ಬೆರತುಕೊಂಡೂ ಇರಬೇಕೆಂದು ಹೇಳಿ ರಾಜಗೀತದೊಂದಿಗೆ ಸಭೆಯು ಮುಕ್ತಾಯ ಮಾಡಲಾಯಿತು.

ಕಾಸರಗೋಡು:— ದಕ್ಷಿಣ ಕನ್ನಡಾ ಜಿಲ್ಲಾ ದ್ರಾವಿಡ ಬ್ರಾಹ್ಮಣರ ನವಮ ಪರಿಷತ್ತಿನ ಕಾರ್ಯಕಾರಿ ಮಂಡಳಿಯ ಸಭೆಯು ಅಗಲ್ಪಾಡಿ ದುರ್ಗಾ ಪರಮೇಶ್ವರೀ ಸನ್ನಿಧಿಯ ಅನ್ನಪೂರ್ಣೇಶ್ವರೀ ಸಂಸ್ಕೃತ ಪಾಠಶಾಲೆಯಲ್ಲಿ ಮ. ರಾ. ರಾ. ವಕೀಲ ಕೆ. ರಾಮಚಂದ್ರಾಚಾರ್ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಮ. ರಾ. ರಾ. ಬಳ್ಳಪದವು ವಾಸುದೇವ ಉಪಾಧ್ಯಾಯರನ್ನು ಸ್ವಾಗತ ಮಂಡಳಿಯ ಅಧ್ಯಕ್ಷರನ್ನಾಗಿಯೂ, ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಮ. ರಾ. ರಾ. ಸಣಗೋಲು ಅಚ್ಯುತ ಭಟ್ಟರನ್ನು ಕಾರ್ಯದರ್ಶಿಯಾಗಿಯೂ, ಮ. ರಾ. ರಾ. ವೈದ್ಯ ಶಂಕರ ನಾರಾಯಣ ಭಟ್ಟರನ್ನು ಉಪಕಾರ್ಯದರ್ಶಿಯಾಗಿಯೂ, ಮ. ರಾ. ರಾ. ಕಜಪಾಡಿ ಶಂಕರ ಭಟ್ಟರನ್ನು ಕೋಶಾಧಿಕಾರಿಯಾಗಿಯೂ, ಬೌಗ್ರಾಮಸ್ಥರಲ್ಲಿ ೧೨ ಜನರನ್ನು ಮೆಂಬರರನ್ನಾಗಿಯೂ ಸಭೆಯವರು ಬಹು ಪಕ್ಷ ಸಮ್ಮತದಿಂದ ಆರಿಸಿದರು. ಇನ್ನೂ ಅಗತ್ಯ ತೋರುವ ಮೆಂಬರರನ್ನು ಇದೇ ಸ್ಥಳದಲ್ಲಿ ತಾ. ೨೯ ೩—'೨೮ಕ್ಕೆ ಜರಗುವ ಸಭೆಯಲ್ಲಿ ಆರಿಸಲುದುವಂತೆ ನಿಶ್ಚಯಿಸಲಾಯಿತು.

ಇಲ್ಲಿನ ವಾರ್ಷಿಕ ಶಿಶುಸಪ್ತಾಹವು ಕಳೆದ ವಾರ ಬಹು ವಿಜೃಂಭಣೆಯಿಂದ ನಡೆಯಿತು. ಊರಿನ ಹಲವು ಶಿಶುಗಳಿಗೆ ಅಂದರೆ ಚೆನ್ನಾಗಿ ಆರೋಗ್ಯವುಳ್ಳವುಗಳಿಗೆ ಅನೇಕ ತರದ ಇನಾಮುಗಳೂ ಇತರ ಶಿಶುಗಳಿಗೆ ಮಿಠಾಯಿ ಮುಂತಾದವೂ ಹಂಚಲ್ಪಟ್ಟವು. ಕಳದ ವರ್ಷಕ್ಕಿಂತ ಈ ವರ್ಷದ ಈ ಸಪ್ತಾಹವು ಚಲೋ ರೀತಿಯಲ್ಲಿ ನಡೆಸಲ್ಪಟ್ಟಿತು. ಇದಕ್ಕೆಲ್ಲಾ ಈ ಊರ ಹೆಲ್ತ ಇನ್‌ಸ್ಪೆಕ್ಟರರಾದ ರಾ. ಕೇಶವ ಮೇನೋನರು ಮುಖ್ಯ ಕಾರಣಭೂತರಾಗಿದ್ದರು. ಈ ವಾರದಲ್ಲಿ ಶಾಲಾ ಹುಡುಗರ ಪಂದ್ಯಾಟಗಳೂ, ಮೆರವಣಿಗೆಯೂ ಇದ್ದವು. ಪಂದ್ಯಾಟಗಳಲ್ಲಿ ಗೆದ್ದ ಅನೇಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಇನಾಮುಗಳು ಹಂಚಲ್ಪಟ್ಟವು.

ಇಲ್ಲಿನ ಶ್ರೀ ಮಲ್ಲಿಕಾರ್ಜುನ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಜಾತ್ರೋತ್ಸವವು ಇದೇ ತಾ. ೧೮ನೇ ಆದಿತ್ಯವಾರ ಪ್ರಾರಂಭವಾಗಿ ತಾ. ೨೨ನೇ ಗುರುವಾರ ಮುಕ್ತಾಯವಾಗುವದು.

ಇಲ್ಲಿಯ ಅಬ್ಕಾರಿ ಸರ್ಕಲ್ ಇನ್‌ಸ್ಪೆಕ್ಟರರಾಗಿದ್ದ ಮ. ರಾ. ರಾ. ಗಂಗಾಧರ್‌ರಾವ್ ನಾಯಡು ಅವರ್ಗಳ್ ರವರಿಗೆ ವರ್ಗವಾಗಿಯದಾಗಿಯೂ, ಮಲ್ಲಪುರದಿನ ಸರ್ಕಲ್ ಇನ್‌ಸ್ಪೆಕ್ಟರರಿಗೆ ಇಲ್ಲಿಗೆ ವರ್ಗವಾಗಿಯದಾಗಿಯೂ ತಿಳಿಯಬರುತ್ತದೆ.

ಮೈಲಿಗೆಯ ಉಪಟಳವು ಇನ್ನೂ ಶಾಂತವಾಗಿಲ್ಲ. ಅಲ್ಲಲ್ಲಿ ಜ್ವರವೂ ಇರುತ್ತದೆ.

ಕಾರ್ಕಳ:— ತಾಲೂಕು ಬೋರ್ಡು ಚುನಾವಣೆಯ ಸಮ್ಬಂಧ ಉಮೇದ್ವಾರರು ಹೆಚ್ಚಿನ ಉತ್ಸಾಹದಿಂದ ವೋಟು ಸಂಗ್ರಹಿಸುವದರಲ್ಲಿದ್ದಾರೆ. ಕಾರ್ಕಳ ಸರ್ಕಲಿಗೆ ಒಂಭತ್ತು ಮಂದಿ ಉಮೇದ್ವಾರರಿದ್ದಾರೆ. ಚುನಾವಣೆ ಆಗತಕ್ಕ ಸ್ಥಾನಗಳು ೩. ಹೀಗೆಯೇ ಅಜೆಕಾರು ಮೂಡಬಿದ್ರೆ ವೇಣೂರು ಸರ್ಕಲುಗಳಿಗೂ ಹೆಚ್ಚಿನ ಉಮೇದ್ವಾರರು ಇದ್ದಾರೆ. ಪ್ರಜೆಗಳ ಹಿತದೃಷ್ಟಿಯಿಂದ ಕೆಲಸ ಮಾಡುವವರೆಷ್ಟು ಮಂದಿಯೋ ಗೊತ್ತಿಲ್ಲ. ಹಾಗೂ ಹೀಗೂ ಇದೇ ತಾ ೧೭ರಲ್ಲು ಚುನಾವಣೆ ನಡಿಯುವದು.

ಕುಂದಾಪುರ:— ಇಲ್ಲಿಯ ತಾಲೂಕಿಗೆ ಮಹಾತ್ಮಾ ಗಾಂಧಿಯವರು ಬಂದಾಗ್ಯೆ ಅವರಿಗೆ ಅರ್ಪಿಸಬೇಕೆಂದು ವಂತಿಗೆ ಮಾಡಿದ ಐವೇಜು ಅವರು ಬಾರದಿರುವ ಕಾರಣ ಬಾಕಿ ಇರುವದರಿಂದ ಸದರಿ ಐವೇಜು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂದು ನಿರ್ಣಯಿಸುವರೆ ತಾ. ೩—೪—'೨೮ನೇ ದಿವಸ ಅಪರಾಹ್ನ ಘಂಟೆ ೩ಕ್ಕೆ ಕುಂದಾಪುರ ಕ್ಲಬ್ಬಿನಲ್ಲಿ (ಮಹಾತ್ಮಾ ಗಾಂಧಿ ನಿಧಿಗೆ ಹಣಕೆತ್ತವರ) ಸಭೆಯನ್ನು ಜರುಗಿಸಬೇಕೆಂದು ನಿರ್ಣಯಿಸಿರುತ್ತದೆ. ಆ ಬಗ್ಗೆ ಎಲ್ಲರೂ ಬರಬೇಕೆಂದು ವಿನಂತಿ.

ವಿವಿಧ ಸಮಾಚಾರಗಳು.

ಮದರಾಸು ಟೀಚರ್ ಮೆನೇಜರರ ಸಭೆ.

ಮದರಾಸು ಟೀಚರ್ ಮೆನೇಜರರ ಸಭೆಯು ಕಳೆದ ೯ನೇ ತಾರೀಕಿನ ದಿನ ಜರಗಿತು. ರಾ॥ ಎ ರಾಮಸ್ವಾಮಿ ಮುದಲಿಯಾರರು ಅಧ್ಯಕ್ಷರಾಗಿದ್ದರು. ಮೊದಲು ಅಧ್ಯಕ್ಷರು ಈಗಿನ ಟೀಚರ್ ಮೆನೇಜರರ ಕುರಿತೂ ಯೆಡೆಡ್ ಎಲಿಮೆಂಟರಿ ಶಾಲೆಗಳ ಕುರಿತೂ ವಿಚಾರಿಸಿದರು. ಕೊರ್ಪೊರೇಶನಿನವರು ಹೊಸ ಶಾಲೆಗಳನ್ನು ತೆರೆಯುವರೆಂದೂ ಈ ಶಾಲೆಗಳನ್ನು ತೆರೆಯುವುದರಿಂದ ಯೆಡೆಡ್ ಶಾಲೆಗಳಿಗೆ ತೊಂದರೆಯಾಗದಂತೆ ತಾನು ನೋಡುವೆನೆಂದೂ ಹೇಳಿದರು. ಧರ್ಮಾರ್ಥವಾದ ಮತ್ತು ಕಡ್ಡಾಯವಾದ ವಿದ್ಯಾಭ್ಯಾಸವನ್ನು ಮೊದಲಿನ ಐದು ತರಗತಿಗಳ ಅಂದರೆ ೧೧ ವರ್ಷಕ್ಕೆ ಮಿಕ್ಕದ ವಿದ್ಯಾರ್ಥಿಗಳಿಗೆ ಕೊಡಬೇಕು. ಅಂಥ ಸಂದರ್ಭಗಳಲ್ಲಿ ಉಪಾಧ್ಯಾಯರು ಸಂಬಳವನ್ನು ಪಡೆಯಬಾರದು. ಪ್ರತಿಫಲವಾಗಿ ಮಾತ್ರ ಅವರಿಗೆ ಸ್ವಲ್ಪ ಹಣ ಸಿಕ್ಕಬೇಕು. ಇತರ ಸಂದರ್ಭಗಳಲ್ಲಿ ಉಪಾಧ್ಯಾಯರು ಮಕ್ಕಳ ಹತ್ತರಿಂದ ಹಣ ವಸೂಲು ಮಾಡಬಹುದು.

ಉಪಾಧ್ಯಾಯರಿಗೆ ಸಿಕ್ಕುವ ಪರಿಹಾರ ದ್ರವ್ಯವು ಮೊದಲಿನ ಐದು ವರ್ಷಗಳಲ್ಲಿ ಒಂದೇ ತೆರನಾಗಿರಬೇಕು. ಆ ಶಾಲೆಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯೂ ಒಂದೇ ರೀತಿಯಾಗಿರಬೇಕು. ಹೀಗೆ ಮಾಡಿದರೆ ಕೊರ್ಪೊರೇಶನಿನವರಿಂದ ತೆರೆಯಲ್ಪಟ್ಟ ಶಾಲೆಗಳಿಗೆ ನಷ್ಟವುಂಟಾಗುವದು. ಯೆಡೆಡ್ ಶಾಲೆಯು ತೃಪ್ತಿಕರವಾಗಿ ಕೆಲಸ ಮಾಡುವದಾದರೆ ಕೊರ್ಪೊರೇಶನ್ ಶಾಲೆಯ ಅಗತ್ಯವಿರುವುದಿಲ್ಲ. ಅದಕ್ಕೆ ಕೊರ್ಪೊರೇಶನ್ ಶಾಲೆಗಿಂತ ಖರ್ಚು ಕಡಿಮೆ ತಗಲುವದು. ಇದರ ಕುರಿತು ಚರ್ಚಿಸಲಿಕ್ಕೆ ೬ ಜನ ಟೀಚರ್ ಮೆನೇಜರರ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕೆಂದು ಅಧ್ಯಕ್ಷರು ಹೇಳಿದ ತರುವಾಯ ಸಭೆಯು ಕೊನೆಗಂಡಿತು.

§ § § §

ಪಾಟಿಯಾಲದಲ್ಲಿ ವ್ಯಾಸರಾಯ ಧೊರೆಗಳು.

ನಮ್ಮ ವ್ಯಾಸರಾಯ ಧೊರೆಗಳು ಸಪತ್ನೀಕರಾಗಿ ಪಾಟಿಯಾಲದ ರಾಜರ ಅತಿಥಿಗಳಾಗಿರುವರು. ಔತಣದ ಸಮಯ ವ್ಯಾಸರಾಯರು ಹೇಳಿದುದೇನೆಂದರೆ "ನಮಗೆ ಪ್ರತಿಯೊಬ್ಬ ಹಿಂದೂರಾಜರನ್ನು ಆಮಂತ್ರಿಸುವದಾಗಲೀ, ಹಿಂದೂರಾಜರ ಅತಿಥಿಗಳಾಗುವುದಾಗಲೀ ಸಂತೋಷಪ್ರದವಾಗಿದೆ. ಅದರಲ್ಲೂ ಬ್ರಿಟಿಷ ಸರಕಾರಕ್ಕೆ ಪಾಟಿಯಾಲ ಮಹಾರಾಜರ ಸಹಾಯವು ಬಹಳ. ಯುದ್ಧದ ಸಮಯದಲ್ಲಿ ವೀರರಾದ ಸಿಕ್ಖ ಸೈನಿಕರು ಬ್ರಿಟಿಷರ ಕಡೆಯಲ್ಲಿ ಪ್ರಾಣವನ್ನಿತ್ತರು. ಹೆಚ್ಚೇಕೆ ಪಾಟಿಯಾಲದ ಮಹಾರಾಜರು ಇಂಗ್ಲಿಷ ಚಕ್ರವರ್ತಿಗಳನ್ನು ಪ್ರೀತಿಸುವಷ್ಟು ಇತರ ಯಾವ ರಾಜರೂ ಪ್ರೀತಿಸುವುದಿಲ್ಲ.

ಇಲ್ಲಿಯ ಸೈನಿಕರನ್ನು ನೋಡಿ ನನಗೆ ಬಹಳ ಸಂತೋಷವೆನಿಸುತ್ತದೆ. ಮುಂದೆಯೂ ಮಹಾರಾಜರು ಇಂತಹ ಸೈನ್ಯವನ್ನು ಏರ್ಪಡಿಸುವದರಲ್ಲಿಯೇ ನಿರತರಾಗಿರಲೆಂದು ನನ್ನ ಆಶೆ. ಪಾಟಿಯಾಲದ ಮಹಾರಾಜರ ನ್ಯಾಯವಿಧಾಯಕತ್ವವು ಅಸಾಮಾನ್ಯವಾಗಿದೆ. ಶಾಲೆಗಳನ್ನು ತೆರೆಯಲು ಪಾಟಿಯಾಲದ ಪ್ರಜೆಗಳು ಉತ್ಸುಕರಾಗಿರುವುದನ್ನು ಕಂಡು ಬಹಳೇ ಆನಂದವಾಗುತ್ತದೆ" ಕಡೆಗೆ ತಮಗೆ ಕೊಟ್ಟ ಸನ್ಮಾನಕ್ಕಾಗಿ ಮಹಾರಾಜರಿಗೆ ವ್ಯಾಸರಾಯರು ಕೃತಜ್ಞತೆಯನ್ನು ಸೂಚಿಸಿ, ಮಹಾರಾಜರು ಬೇಸಿಗೆ ಕಾಲದಲ್ಲಿ ಇಂಗ್ಲೆಂಡಿಗೆ ಹೋಗುವಾಗ ಸುಖಪ್ರದವಾದ ಪ್ರಯಾಣವಾಗಲೆಂದೂ ಬೇಗನೆ ಹಿಂದಿರುಗಿ ಬರಲೆಂದೂ ಹೇಳಿದರು.

§ § § §

ಅಫಘಾನ ಅಮೀರರ ಉದಾರಭಾವ.

ಅಫಘಾನದ ಅಮೀರರು ಜರ್ಮನಿಯನ್ನು ಬಿಟ್ಟುಹೋಗಬೇಕಾದರೆ ಒಂದು ಶ್ಲಾಘನೀಯವಾದ ಕೆಲಸವನ್ನು ಮಾಡಿದರು. ಚಾರ್ಲೊಟ್ಟಿ ಬೇಚೆರಳೆಂಬ ಜರ್ಮನಿ ಹೆಂಗಸೊಬ್ಬಳು ಕಾಬೂಲಿನ ಮನುಷ್ಯನನ್ನು ಮದುವೆಯಾಗಿ ಅವನೊಂದಿಗೆ ಅಫಘಾನಿಸ್ಥಾನಕ್ಕೆ ಬಂದಿದ್ದಳು. ಸ್ವಲ್ಪ ಸಮಯದೊಳಗಾಗಿ ಆಕೆಯ ಗಂಡನು ಮೃತಪಟ್ಟನು. ಅಫಘಾನದ ಕ್ರಮಕ್ಕನುಸಾರವಾಗಿ ಅವಳು ಗಂಡನ ಸಹೋದರನ ದಾಸಿಯಾಗಬೇಕಾಯಿತು. ಗಂಡನ ಸಹೋದರನು ಅವಳನ್ನು ತಾನು ಮದುವೆಯಾಗುವೆನೆಂದು ಹೇಳಿದಾಗ ಈ ಯುವತಿಯು ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಆಕೆಯು ಜರ್ಮನಿಗೆ ತೆರಳಬಹುದೆಂದೂ ಅವಳ ನಾಲ್ಕು ಜನ ಮಕ್ಕಳು ಮಾತ್ರ ಇಲ್ಲಿಯೇ ಉಳಕೊಳ್ಳಬೇಕೆಂದೂ ನಿಶ್ಚಯವಾಯಿತು. ಆದರೆ ಮಕ್ಕಳನ್ನು ಅವಳು ತುಂಬಾ ಪ್ರೀತಿಸುತ್ತಿದ್ದ ಕಾರಣ ಮಕ್ಕಳನ್ನು ಬಿಟ್ಟು ಸ್ವದೇಶಕ್ಕೆ ತೆರಳಲು ಒಪ್ಪದೆ ಅಫಘಾನಸ್ಥಾನದಲ್ಲಿಯೇ ಉಳಕೊಂಡಳು.

ಆದರೆ ಅಮನುಲ್ಲಾ ಧೊರೆಗಳು ಅದೀಗೆ ಪೆನಶನನ್ನು ಕೊಡಲೊಪ್ಪಿ ಅವಳು ಮಕ್ಕಳ ಸಮೇತ ಜರ್ಮನಿಗೆ ತೆರಳಬಹುದೆಂದು ಅಪ್ಪಣೆ ಕೊಟ್ಟಿರುವರು. ನಿಜವಾಗಿಯೂ ಇದು ಮಹಾರಾಜರ ಉದಾರಭಾವವನ್ನು ಸೂಚಿಸುವದು.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯಾನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯಾನ್ಸ್ Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] (M. S. M. Railway) ರೈಲ್ವೇ ಸ್ಟೇಷನಿನಿಂದ [illegible] ಮಾರ್ಗವಾಗಿ [illegible] ಉಪ್ಪಿನಂಗಡಿ, [illegible] ಮೂಡ [illegible] ಬಂಟವಾಳ [illegible] 4—30 ಗಂಟೆ [illegible].

(2) ಕಡೂರಿನಿಂದ [illegible] 9 ಗಂಟೆಗೆ [illegible] 10-30ಕ್ಕೆ [illegible] 12-30ಕ್ಕೆ [illegible] 1-30ಕ್ಕೂ [illegible] 1-45ಕ್ಕೆ [illegible].

(3) [illegible] ಬಿ.ಬಿ.ಹೆಚ್, [illegible]

ಪ್ರೊಪ್ರೈಟರ.

THE CANARA PUBLIC CONVEYANCE CO., LTD., MANGALORE.

(Established 1914)

ಕೆನರಾ ಪಬ್ಲಿಕ್ ಕನ್ವೆಯಾನ್ಸ್ ಕಂಪನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕನ್ನಡಜಿಲ್ಲೆಗಳ ಬಸ್ಸುಗಳೊಂದಿಗೆ ಕನೆಕ್ಷನ್ ಇರುತ್ತದೆ.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ರಚಿತವಾಗಿ, 37 ಫೀಟು ಉನ್ನತವಾಗಿ ಏಕಶಿಲಾ [illegible] ಮೇಲೆ ನಿಲ್ಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ [illegible]

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible] ಕಲಪುವುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ಶಾಸ್ತ್ರ, ವಿವರಣ ಸಹಿತ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ, ವ್ಯಭಿಚಾರದಲ್ಲಿ ಆಸಕ್ತರಾಗಿ, ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರೆಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಶಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದರಸ ಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ತ್ಯಗನ್ನಡಿ ಎಂಬ

ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತೂ ಚಿತ್ರಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರು ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಲೆಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ಪಾತಿವ್ರತ್ಯವನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯೂ ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ೨-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಶ್ರೀ ಎ. ಬಿ. ಸೆಟ್ರ ಕೌನ್ಸಿಲು ಪ್ರಶ್ನೋತ್ತರಗಳು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳಲ್ಲಿ ಟೀಚರ್ ಮೆನೇಜರರ ಪ್ರಾತಿನಿಧ್ಯ.

ಶಿಕ್ಷಣ ಮಂತ್ರಿಗಳೊಡನೆ:—(*a*) ಕೆಲವು ಜಿಲ್ಲೆಗಳ ಎಲಿಮೆಂಟರಿ ಶಾಲೆಗಳ ಟೀಚರ್ ಮೆನೇಜರರಿಗೆ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳಲ್ಲಿ ಕೊಟ್ಟಿರುವ ಪ್ರಾತಿನಿಧ್ಯವು ಆ ಜಿಲ್ಲೆಗಳ ಎಲ್ಲಾ ನೋನ್‌ಮಿಶನ್ ಏಡೆಡ್ ಶಾಲೆಗಳಿಗೂ ಆಗಿರುತ್ತದೆಯೇ?

(*b*) ಟೀಚರ್ ಮೆನೇಜರರಿಂದಲ್ಲದೆ ಹಲವು ಸಂಸ್ಥೆಗಳಿಂದಲೂ ಅಧ್ಯಾಪಕರಲ್ಲದ ವ್ಯಕ್ತಿಗಳಿಂದಲೂ ನಡೆಸಲ್ಪಡುವ ಅನೇಕ ಶಾಲೆಗಳಿರುವವೆಂಬುದು ಸರಕಾರಕ್ಕೆ ಗೊತ್ತಿದೆಯೇ?

(*c*) ಇಂತಹ ಶಾಲೆಗಳನ್ನು ನಡಿಸುವ ಸಂಸ್ಥೆಗಳಿಗೆ ಅಥವಾ ಮೆನೇಜರರಿಗೆ ಪ್ರಾತಿನಿಧ್ಯವನ್ನೀಯುವ ಆಲೋಚನೆಯು ಸರಕಾರಕ್ಕಿದೆಯೇ?

ಉತ್ತರ:—(*a*) ಅಲ್ಲ. ಈ ಪ್ರಾತಿನಿಧ್ಯವು ಟೀಚರ್ ಮೆನೇಜರರಿಂದ ನಡಿಸಲ್ಪಡುವ ಎಲ್ಲಾ ಶಾಲೆಗಳಿಗಾಗಿದೆ.

(*b*) ಮತ್ತು (*c*) ನಾನಾ ಸಂಸ್ಥೆಗಳ ಆಡಳಿತದೊಳಗಿರುವ ಮತ್ತು ಟೀಚರ್ ಮೆನೇಜರಲ್ಲದೆ ವ್ಯಕ್ತಿಗಳ ಕೈಕೆಳಗಿರುವ ಶಾಲೆಗಳ ಸಂಖ್ಯೆಯು ಹೆಚ್ಚಿನ ಜಿಲ್ಲೆಗಳಲ್ಲಿ ಅವುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನೀಯಲು ಸಾಕಷ್ಟು ಹೆಚ್ಚಾಗಿರುವುದಿಲ್ಲ. ಆಂತೂ ಇಂತಹ ಶಾಲೆಗಳು ಸಾಕಷ್ಟು ಹೆಚ್ಚಾಗಿರುವ ಜಿಲ್ಲೆಗಳಲ್ಲಿನ ಮೆನೇಜ್‌ಮೆಂಟಿನವರು ತಮ್ಮ ಸಂಘಗಳನ್ನು ಸ್ಥಾಪಿಸಿ ಸರಕಾರಕ್ಕೆ ಮನವಿಮಾಡಿಕೊಂಡಲ್ಲಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳಲ್ಲಿ ಅವುಗಳಿಗೆ ಪ್ರಾತಿನಿಧ್ಯ ಕೊಡುವ ಕುರಿತು ಯೋಚಿಸಲಾಗುವುದು.

ಪ್ರಯಾಣ ಭತ್ತೆ.

(*a*) ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳಿಗೆ ಇತ್ತಲಾಗಿ ಪ್ರಾತಿನಿಧ್ಯ ಪಡೆದಿರುವ ಟೀಚರ್ ಮೆನೇಜರರಿಗೆ ಪ್ರಯಾಣ ಭತ್ತೆ ಕೊಡಲ್ಪಟ್ಟಿರುವುದಿಲ್ಲವೆಂಬುದು ನಿಜವೇ?

(*b*) ಕೊಡಲ್ಪಟ್ಟಿರುವುದಿಲ್ಲವಾದರೆ ಈ ವಿಷಯವನ್ನು ಪುನರಾಲೋಚಿಸಿ ಟೀಚರ್ ಮೆನೇಜರರ ಪ್ರತಿನಿಧಿಗಳು ಪ್ರಯಾಣ ಭತ್ತೆ ಮತ್ತು ಇತರ ಎಲೋವೆನ್ಸ್‌ಗಳ ವಿಷಯದಲ್ಲಿ ಇತರ ಮೆಂಬರರಂತೆಯೇ ಪರಿಗಣಿಸಲ್ಪಡುವರೇ?

ಉತ್ತರ:—(*a*) ಸರಕಾರಕ್ಕೆ ಈ ವಿಷಯ ಗೊತ್ತಿರುವುದಿಲ್ಲ. (*b*) ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ಟೀಚರ್ ಮೆನೇಜರರ ಪ್ರತಿನಿಧಿಗಳಿಗೆ ಎಲೋವೆನ್ಸ್ ಕೊಡಬಾರದೆಂದು ಯಾವ ಹುಕುಮೂ ಕೊಟ್ಟಿರುವುದಿಲ್ಲ.

ಮಂಗಳೂರಿನಲ್ಲಿ ತೆರೆಯಬೇಕೆಂದಿರುವ ಟ್ರೇಡ್ ಸ್ಕೂಲು.

ಡೆವೆಲೆಪ್‌ಮೆಂಟ್ ಮಂತ್ರಿಗಳೊಡನೆ:—(*a*) ಮಂಗಳೂರಲ್ಲಿ ತೆರೆಯಬೇಕೆಂದಿರುವ ಟ್ರೇಡ್ ಸ್ಕೂಲಿಗೆ ಸರಕಾರದ ಸಮ್ಮತಿ ದೊರೆತಿದೆಯೇ?

(*b*) ಇದಕ್ಕೆ ಬೇಕಾಗಿರುವ ಹಣವು ಬರುವ ವರ್ಷದ ಬಜೆಟಿನಲ್ಲಿ ಸೇರಿಸಲಾಗಿದೆಯೇ?

ಉತ್ತರ:—(*a*) ಮತ್ತು (*b*) ಈ ಕುರಿತು ಸರಕಾರವು ಆಲೋಚಿಸುತ್ತಿದೆ. ಇದಕ್ಕೆ ಬೇಕಾದ ಹಣವು ಬರುವ ವರ್ಷದ ಬಜೆಟಿನಲ್ಲಿ ಸೇರಿಸಲ್ಪಡಲಿಲ್ಲ.

ದಕ್ಷಿಣ ಕನ್ನಡಿಗರೂ ಅಬಕಾರಿ ಖಾತೆಯೂ.

ಆರೋಗ್ಯ ಖಾತೆಯ ಮಂತ್ರಿಗಳೊಡನೆ:—ಪಶ್ಚಿಮ ಕರಾವಳಿಯ ಡಿವಿಜನಿನಲ್ಲಿ ಅಬಕಾರಿ ಇನ್ಸಪೆಕ್ಟರ್ ಮತ್ತು ಕ್ಲಾರ್ಕರಾಗಿ ನೇಮಕ ಹೊಂದಿರುವ ಜನರು ಮಲಬಾರಿನವರೊಡನೆ ಸರಿಹೋಲಿಸಿ ನೋಡಿದರೆ ತೀರಾ ಕಡಿಮೆಯೆಂಬುದು ನಿಜವೇ?

ಉತ್ತರ:—ಈ ವಿಷಯ ಗೊತ್ತಿಲ್ಲ. ಇದನ್ನು ವಿಚಾರ ಮಾಡಲು ತಾಗುವ ಶ್ರಮವು ಹಿತವಾದುದೆಂದು ಸರಕಾರವು ಭಾವಿಸುವುದಿಲ್ಲ.

ದಕ್ಷಿಣ ಕನ್ನಡದಲ್ಲೊಂದು ಜಾನುವಾರು ಸಂರಕ್ಷಣಾಕ್ಷೇತ್ರ.

ಡೆವೆಲೆಪ್‌ಮೆಂಟ್ ಮಂತ್ರಿಗಳೊಡನೆ.—(*a*) ಇದೇ ಕಳೆದ ಜನವರಿ ತಾ. ೨೪ರ ನನ್ನ ೧೩೫೫ನೇ ಪ್ರಶ್ನೆಯ ಉತ್ತರದ ಸಂಬಂಧವಾಗಿ ದಕ್ಷಿಣ ಕನ್ನಡದಲ್ಲಿ ಜಾನುವಾರು ಸಂರಕ್ಷಣಾ ಕ್ಷೇತ್ರವೊಂದನ್ನು ತೆರೆವ ಅವಶ್ಯಕತೆಯಿಲ್ಲವೆಂಬ ಸರಕಾರದ ಆಲೋಚನೆಗೆ ಕಾರಣಗಳಾವುವು?

(*b*) ದಕ್ಷಿಣ ಕನ್ನಡದ ಜಾನುವಾರುಗಳ ಸ್ಥಿತಿಯನ್ನು ಸುಧಾರಿಸುವ ಅವಶ್ಯಕತೆಯ ದೃಷ್ಟಿಯಿಂದ ಜಿಲ್ಲೆಯ ಪ್ರತಿ ತಾಲೋಕಿನ ಕೇಂದ್ರಗಳಲ್ಲಿ ಬೀಜದೆತ್ತು ಮತ್ತು ಕೋಣಗಳನ್ನಿಡುವ ವ್ಯವಸ್ಥೆಯನ್ನಾದರೂ ಮಾಡಲಾಗುವುದೇ?

ಉತ್ತರ.—(*a*) ಪಶ್ಚಿಮ ಕರಾವಳಿಗೆ ಯೋಗ್ಯವಾದ ಬೀಜದೆತ್ತಂದರೆ ಸಿಂಧ್ ಜಾತಿಯದಾಗಿದೆ. ಇದು ಹೊಸೂರು ಜಾನುವಾರು ಕ್ಷೇತ್ರದಲ್ಲಿ ತಯಾರಿಸಲ್ಪಡುತ್ತಿದೆ. ಹೊಸೂರು ಮತ್ತು ಈಗಿರುವ ಇನ್ನಿತರ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕೆಲಸವು ವೃದ್ಧಿಹೊಂದಿ ದೃಢ ಸ್ಥಿತಿಗೆ ಮುಟ್ಟುವ ತನಕ ಹೊಸ ಕ್ಷೇತ್ರವನ್ನು ತೆರೆಯುವ ಆಲೋಚನೆಯು ಸರಕಾರಕ್ಕಿಲ್ಲ.

(*b*) ಬೀಜದೆತ್ತುಗಳು ತಯಾರಿಯಾದಂತೆ ಇಡೀ ಪ್ರಾಂತ್ಯದ ಅವಶ್ಯಕತೆಗಳಿಗನುಗುಣವಾಗಿ ಕೃಷಿ ಇಲಾಖೆಯ ಡೈರೆಕ್ಟರರಿಂದ ಹಂಚಲ್ಪಡುತ್ತದೆ. ದಕ್ಷಿಣ ಕನ್ನಡದ ಅವಶ್ಯಕತೆಯ ಕುರಿತು ನಿಗಾ ಕೊಡಲಾಗುವುದು.

ಗ್ರಾಮ ವೈದ್ಯಕೀಯ ಸಹಾಯಕಯೋಜನೆ.

ಆರೋಗ್ಯ ಖಾತೆಯ ಮಂತ್ರಿಗಳೊಡನೆ:—ಮದ್ರಾಸ್ ಪ್ರಾಂತ್ಯದ ಯಾವ ಭಾಗದಲ್ಲಾದರೂ ಗ್ರಾಮ ವೈದ್ಯಕೀಯ ಸಹಾಯಕ ಯೋಜನೆಯನ್ನು ಪ್ರಯೋಗಕ್ಕೆ ಹಚ್ಚಲಾಗುವುದೇ?

ಉತ್ತರ:—ಈ ಯೋಜನೆಯನ್ನು ಪ್ರಯೋಗಿಸುವ ಆಲೋಚನೆಯು ಸರಕಾರಕ್ಕಿಲ್ಲ.

ದಕ್ಷಿಣ ಕನ್ನಡದಲ್ಲಿ ರಿಸರ್ವೆ.

ರೆವಿನ್ಯೂ ಮೆಂಬರರೊಡನೆ:—ದಕ್ಷಿಣ ಕನ್ನಡದ ರಿಸರ್ವೆಯ ಕುರಿತು ಸರಕಾರವು ಯಾವ ನಿರ್ಧಾರವನ್ನಾದರೂ ಇಷ್ಟರ ತನಕ ಮಾಡಿರುವುದೇ?

1928—29ನೇ ವರ್ಷದ 'ಬಜೆಟ್ಟಿ'ನ ಮೇಲೆ ಮದ್ರಾಸ್ ಕೌನ್ಸಿಲಿನಲ್ಲಿ ಶ್ರೀ ಎ. ಬಿ. ಶೆಟ್ಟರ ಭಾಷಣ.

ಅಭಿವೃದ್ಧಿಪರಯೋಜನೆಗಳು.

ಸರಕಾರದ ಸ್ವಭಾವವು ಪ್ರಗತಿಪರವಾಗಬೇಕಾದರೆ, ಅಭಿವೃದ್ಧಿ ಖಾತೆಯಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಹೂಡುವುದಕ್ಕೆ ಬೇಕಾದ ದ್ರವ್ಯವು ದೊರೆವಂತೆ ಕಂದಾಯದ ಉತ್ಪನ್ನವನ್ನು ಜಾಗ್ರತೆಯಿಂದ ರಚಿಸಬೇಕು. ಜನಸಾಮಾನ್ಯಕ್ಕೆ ಖಡ್ಡಾಯ ಮತ್ತು ಧರ್ಮಾರ್ಥವಾದ ವಿದ್ಯಾಭ್ಯಾಸವನ್ನು ಕೊಡುವುದಕ್ಕೂ, ಗ್ರಾಮಗಳಲ್ಲಿ ಈಗ ಉಪಲಬ್ಧವಾಗುವ ವೈದ್ಯಕೀಯ ಅನುಕೂಲತೆಗಳನ್ನು ಹೆಚ್ಚಿಸುವುದಕ್ಕೂ, ಮದ್ಯಪಾನನಿಷೇಧವನ್ನು ಆಚರಣೆಯಲ್ಲಿ ಬರಿಸುವುದಕ್ಕೂ, ಗ್ರಾಮ ಸಂಘಟನೆಗೂ, ಇವುಗಳಂತಹ ಇತರ ಜನಹಿತಕಾರ್ಯಗಳಿಗೂ ನಮಗೆ ದ್ರವ್ಯಾನುಕೂಲವು ವಿಪುಲವಾಗಿರಬೇಕು. ಪ್ರಾಂತಿಕ ವಂತಿಗೆಗಳು ಮಾಫಿಯಾದ ಕಾರಣದಿಂದ ಕಳೆದ ೩-೪ ವರ್ಷಗಳಲ್ಲಿ ಕೆಲವು ಅಭಿವೃದ್ಧಿಪರಯೋಜನೆಗಳನ್ನು ಮಾಡುವುದು ಸರಕಾರಕ್ಕೆ ಶಕ್ಯವಾಗಿದೆ. ೧೯೨೮—೨೯ನೇ ವರ್ಷದ ಆಯವ್ಯಯದ ಪಟ್ಟಿಯ ಪ್ರಕಾರ ನಿಯಮಿತವಾದ ವ್ಯಯಕ್ಕೆ ೯೯೮೩ ಲಕ್ಷವನ್ನು ಸೇರಿಸಿದುದಲ್ಲದೆ, ಹೊಸ ವೆಚ್ಚದ ಬಗ್ಗೆ ೧೧೬.೩೬ ಲಕ್ಷಗಳನ್ನೂ ಪ್ರತ್ಯೇಕಿಸಿರುತ್ತಾರೆ. ಆದರೆ ಈ ರೀತಿಯಲ್ಲಿ ಮುಂದೆಯೂ ವೆಚ್ಚ ಮಾಡುತ್ತಾ ಹೋಗಲು ಸಾಧ್ಯವೇ? ಎಂಬುದನ್ನೀಗ ವಿಚಾರಿಸಬೇಕು. ಈ ವಿಷಯದಲ್ಲಿ ಫೈನಾನ್ಸ್ ಮೆಂಬರರು ಮಾಡಿದ ನಿರ್ದೇಶಗಳು ಸಂತೋಷಜನಕವಾಗಿಲ್ಲ.

ವ್ಯವಸಾಯ ಕೈಗಾರಿಕೆಗಳು.

ಜನರ ಅಭಿವೃದ್ಧಿಯನ್ನೂ ಸರಕಾರದ ಉತ್ಪತ್ತಿಯನ್ನೂ ಏಕತ್ರ ಸಾಧಿಸುವುದಕ್ಕೆ ನ್ಯಾಯವಾದ ಮತ್ತು ಫಲಕಾರಿಯಾದ ಮಾರ್ಗವೆಂದರೆ ಸಂಸ್ಥಾನದ ಬೇಸಾಯ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು ಎಂದು ನನಗೆ ತೋರುತ್ತಿದೆ. ಆದ್ದರಿಂದ ವ್ಯವಸಾಯದಿಂದಲೂ, ಕೈಗಾರಿಕೆಯಿಂದಲೂ ಬರುವ ಉತ್ಪತ್ತಿಯನ್ನು ಹೆಚ್ಚಿಸುವಂತೆ ಮಾಡುವುದು ಸರಕಾರದ ಮುಖ್ಯ ಕರ್ತವ್ಯವಾಗಿದೆ. ಪ್ರಬುದ್ಧ ರಾಷ್ಟ್ರಗಳಲ್ಲಿ ಈ ಎರಡು ವಿಷಯಗಳಲ್ಲಿ ಹೆಚ್ಚಿನ ಅಭಿವೃದ್ಧಿಯು ಗೋಚರಿಸುತ್ತದೆ. ಆದರೆ ನಮ್ಮ ಪಾಡೇನು? ನಾವು ವರ್ಷದಲ್ಲಿ ಮಾಡುವ ಇಡೀ ವೆಚ್ಚವಾದ ೧೬೪೭ ಲಕ್ಷಗಳ ಪೈಕಿ ವ್ಯವಸಾಯ ಖಾತೆಗೆ ೩೮ ಲಕ್ಷಗಳೂ, ಕೈಗಾರಿಕೆಗಳಿಗೆ ೨೩ ಲಕ್ಷಗಳೂ ಹೋಗುತ್ತವೆ. ಎಂದರೆ ಎರಡು ಪ್ರಾಮುಖ್ಯ ಇಲಾಖೆಗಳಿಗೆ ಇಡೀ ವೆಚ್ಚದ ಸೇಕಡಾ ೪ರಷ್ಟು ವೆಚ್ಚಕೂಡ ಆಗುವದಿಲ್ಲ. ಆಗಾಮಿ ವರ್ಷದಲ್ಲಿ ಹೊಸ ವೆಚ್ಚಕ್ಕಾಗಿ ಪ್ರತ್ಯೇಕಿಸಿಟ್ಟ ೧೧೬ ಲಕ್ಷಗಳಲ್ಲಿ ವ್ಯವಸಾಯಕ್ಕೆ ಒಂದು ಲಕ್ಷ ಮಾತ್ರ ಸಿಕ್ಕುವುದು. ಕಂದಾಯರೂಪವಾಗಿ ದೊರೆವ ಹಣದಲ್ಲಿ ಬಹ್ವಂಶವು ಬೇಸಾಯಗಾರರಿಂದ ಬರುತ್ತದೆ. ಅವರ ಹಿತವನ್ನು ಮೊದಲು ಲಕ್ಷ್ಯಕೊಡುವುದು ಕರ್ತವ್ಯವೆಂದು ಸರಕಾರಕ್ಕೆ ಗೊತ್ತಿಲ್ಲವೇ?

ವ್ಯವಸಾಯದ ಪ್ರಯೋಗ ಕ್ಷೇತ್ರಗಳು.

ಮುಖ್ಯವಾಗಿ ವ್ಯವಸಾಯಪೂರ್ಣವಾದ ಸಂಸ್ಥಾನದಲ್ಲಿ ವ್ಯವಸಾಯ ಇಲಾಖೆಯ ನೌಕರರು ಹೆಚ್ಚಾಗಿರಬೇಕು. ಎಂದರೆ ಮಾತ್ರ ಅವರ ಉಪಯೋಗವು ಸಣ್ಣ ಸಣ್ಣ ಹಳ್ಳಿಗಳಲ್ಲೂ ದೊರೆವಂತಾಗುವುದು. ಮುಖ್ಯ ಮುಖ್ಯವಾದ ಕೇಂದ್ರಗಳಲ್ಲಿ, ಎಂದರೆ ತಾಲೂಕಿನ ಮುಖ್ಯ ಪಟ್ಟಣಕ್ಕೆ ಒಂದೊಂದರಂತಾದರೂ ಪ್ರಯೋಗ ಕ್ಷೇತ್ರವು ಅಗತ್ಯವಾಗಿರಬೇಕು. ಆದರೆ ಸದ್ಯಸ್ಥಿತಿಯಲ್ಲಿ ವ್ಯವಸಾಯ ನೌಕರರ ಮತ್ತು ಪ್ರಯೋಗ ಕ್ಷೇತ್ರಗಳ ಸಂಖ್ಯೆಯು ಬೇಕಾದ್ದಕ್ಕಿಂತ ಎಷ್ಟೋ ಕಡಿಮೆ. ಉದಾಹರಣೆಗಾಗಿ ನನ್ನ ಜಿಲ್ಲೆಯಾದ ದಕ್ಷಿಣ ಕನ್ನಡವನ್ನು ತೆಗೆದುಕೊಳ್ಳಬಹುದು. ಇಲ್ಲಿಯ ಬೆಳೆಯೆಂದರೆ ಭತ್ತದ್ದು. ಅಲ್ಲದೆ ಕಬ್ಬು ಮೊದಲಾದ ಬೇರೆ ಬೆಳೆಗಳೂ ಆಗುತ್ತದೆ. ಆದರೆ ಇವುಗಳೊಂದಕ್ಕೂ ಒಂದೇ ಒಂದು ಪ್ರಯೋಗ ಕ್ಷೇತ್ರವಿಲ್ಲ. ಆದರೆ ತೆಂಗಿನ ಕ್ಷೇತ್ರಗಳು ಮಾತ್ರ ಕೆಲವಿವೆ. ಹೊಸ ಹೊಸ ವ್ಯವಸಾಯೋಪಕರಣಗಳನ್ನು ತೋರಿಸುವುದಕ್ಕೂ ಬಗೆ ಬಗೆಯ ಗೊಬ್ಬರಗಳ ಉಪಯೋಗವನ್ನು ತಿಳಿಸುವುದಕ್ಕೂ, ಹೊಸ ರೀತಿಯ ಬೀಜಗಳನ್ನಾಗಲೀ ಕಬ್ಬಿನ ಹೊಸ ಬೆಳೆಸನ್ನಾಗಲಿ ತೋರಿಸುವುದಕ್ಕೂ ಸುಧಾರಿತ ವ್ಯವಸಾಯ ಕ್ರಮಗಳನ್ನು ಪ್ರದರ್ಶಿಸುವದಕ್ಕೂ ಅಲ್ಲಿ ವ್ಯವಸ್ಥೆಯೇ ಇಲ್ಲವಾಗಿದೆ.

ನೀರಾಶ್ರಯ ಕಾರ್ಯ.

ವ್ಯವಸಾಯಕ್ಕೆ ಅತ್ಯಾವಶ್ಯಕವಾಗಿರುವ ನೀರಾಶ್ರಯವನ್ನೊದಗಿಸುವ ಕುರಿತು ವಿಚಾರಿಸಿ ನೋಡುವ. ಮದ್ರಾಸ್ ಪ್ರಾಂತ್ಯದಲ್ಲಿ ಸಾಗುವಳಿಯಾಗುವ ೩೩ ಮಿಲ್ಯ ಎಕ್ರೆ ಜಮೀನಿನಲ್ಲಿ ಬರೇ ೭ ಮಿಲ್ಯ ಎಕ್ರೆಗೆ ಮಾತ್ರ ಕಾಲುವೆ ಕೆರೆಗಳ ನೀರಾವರಿಯ ಉಪಯೋಗ ದೊರೆಯುತ್ತಿದೆ. ಸಾಕಷ್ಟು ನೀರಾಶ್ರಯವು ದೊರೆತರೆ ಉಳಿದ ೨೬ ಮಿಲ್ಯ ಎಕ್ರೆ ಜಮೀನನ್ನೂ ಸಾಗುವಳಿ ಮಾಡಬಹುದು; ಮಾತ್ರವಲ್ಲದೆ ಹೆಚ್ಚಿನ ಉತ್ಪತ್ತಿ ದೊರೆಯುವಂತೆಯೂ ಮಾಡಬಹುದು. ಬೇರೆ ದೇಶಗಳ ಸರಕಾರಗಳು ಮಾಡಿರುವಂತೆ ಸರಕಾರವು ಈ ಕುರಿತು ಹೆಚ್ಚಿನ ಗಮನ ಕೊಟ್ಟು ಇಡೀ ವರ್ಷ ಬೆಳೆಸಲ್ಪಡುವ ಬೇರೆ ಬೇರೆ ಬೆಳೆಗಳಿಗೆಲ್ಲಾ ಸಾಕಷ್ಟು ನೀರಿನ ಅನುಕೂಲತೆ ದೊರೆಯುವ ವ್ಯವಸ್ಥೆ ಮಾಡಬೇಕು. ಮೆಟ್ಟೂರಿನಂತ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಸರಕಾರವು ಆರಂಭಿಸಿರುವುದೇನೋ ನಿಜ; ಆದರೆ ಇದರಿಂದ ಚಿಕ್ಕ ಪುಟ್ಟ ನೀರಾವರಿ ಕೆಲಸಗಳು ಅಲಕ್ಷಿಸಲ್ಪಡಬಾರದು. ಸಾಕಷ್ಟು ಮಳೆ ಬರುವ ಮಲಬಾರು ಮತ್ತು ದಕ್ಷಿಣ ಕನ್ನಡದಂತಹ ಜಿಲ್ಲೆಗಳಲ್ಲಿಯೂ, ಇಡೀ ವರ್ಷದಲ್ಲಿ ವ್ಯವಸಾಯ ಕಾರ್ಯಗಳಿಗಾಗಿ ನೀರು ದೊರೆಯುವಂತೆ ಕೆರೆಗಳಲ್ಲಿ ನೀರು ಸಂಗ್ರಹಿಸಿಡುವ ಅನುಕೂಲತೆಗಳನ್ನೊದಗಿಸುವ ಅವಶ್ಯಕತೆಯಿದೆ; ಪಶ್ಚಿಮ ಕರಾವಳಿಯಲ್ಲಿ ವೃಥಾ ಪ್ರವಹಿಸಿ ಹಾಳಾಗುತ್ತಿರುವ ನೆರೆಯ ಮತ್ತು ನದಿನೀರನ್ನು ಸಂಗ್ರಹಿಸಿಡುವಂತಾದರೆ ಒಕ್ಕಲಿಗರಿಗೆ ದೊಡ್ಡ ಉಪಕಾರ ಮಾಡಿದಂತಾಗುವುದು.

ಹಳೆ ಕಾಸರಗೋಡು ತಾಲೂಕಿನಲ್ಲಿ ಅಂದರೆ ಈಗಣ ಇಡೀ ಕಾಸರಗೋಡು ತಾಲೋಕು ಮಂಗಳೂರು ಪುತ್ತೂರು ತಾಲೂಕುಗಳ ಸ್ವಲ್ಪ ಭಾಗದಲ್ಲಿ ರಿಸರ್ವೆ ನಡಿಸಲು ಸೆಂಕ್ಷನ್ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇತರ ಭಾಗಗಳಲ್ಲಿ ರಿಸರ್ವೆಯ ಅವಶ್ಯಕತೆ ಇದೆಯೋ ಇಲ್ಲವೋ ಎಂಬೀ ಕುರಿತು ಸರಕಾರವು ಈ ವರೆಗೆ ಯಾವ ನಿರ್ಧಾರಕ್ಕೂ ಬಂದಿರುವುದಿಲ್ಲ.

(೪ನೇ ಪುಟದಿಂದ ಮುಂದರಿದುದು.)

ಶಿವಾಜಿಯ ರಾಜಕೀಯ ವಿಚಾರಗಳು.

ಶಿವಾಜಿಯು ತಯಾರಿಸಿದ ರಾಜ್ಯಭಾರದ ಸೂತ್ರಗಳು ಈಗಲೂ ಯಾವದೊಂದು ಬದಲಾವಣೆಗಳಿಲ್ಲದೆ ಮಾನ್ಯವಾಗತಕ್ಕವುಗಳೇ ಆಗಿವೆ. ಶಿವಾಜಿಯ ರಾಜ್ಯದಲ್ಲಿ ಶಾಂತತೆಯು ನೆಲೆಗೊಂಡಿತ್ತು. ಪ್ರಜೆಗಳೊಳಗೆ ಪರಸ್ಪರ ವೈಶಮ್ಯವಿರಲಿಲ್ಲ. ಎಲ್ಲಾ ಜಾತಿಮತಗಳವರಿಗೆ ಉನ್ನತಿಗೆ ಬರಲು ಎಡೆಯು ಇತ್ತು. ರಾಜ್ಯಭಾರ ಕ್ರಮವು ಉನ್ನತ ಸ್ಥಿತಿಯಲ್ಲಿತ್ತು. ಯಾವ ತರದ ಕಳಂಕಗಳು ಇಲ್ಲದೆ ಶುದ್ಧವಾಗಿತ್ತು. ವ್ಯಾಪಾರದ ಅಭಿವೃದ್ಧಿಗಾಗಿ ನೌಕಾಸೈನ್ಯವಿತ್ತು. ದೇಶವನ್ನು ಕಾಯಲಿಕ್ಕೆ ಉತ್ತಮ ರೀತಿಯಲ್ಲಿ ತರಬೇತಾದ ಸೈನ್ಯವಿತ್ತು. ದೇಶೋದ್ಧಾರ ಎಂದು ಬಾಯಿ ಮಾತುಗಳಿಂದ ಸಭೆಗಳಲ್ಲಿ ಕಂಠಶೋಷಣೆ ಮಾಡುತ್ತಿರಲಿಲ್ಲ. ನಿಜವಾಗಿಯೂ ದೇಶೋದ್ಧಾರವು ಕಾರ್ಯರೂಪದಲ್ಲಿಯೇ ಆಗುತ್ತಿತ್ತು. ಯಾವ ದೇಶದಿಂದಲಾದರೂ ಯಾರೇ ಆಗಲಿ ಶಿವಾಜಿಯು ಇದ್ದಲ್ಲಿ ಕೆಲಸ ಕೇಳಿಕೊಂಡು ಬಂದರೆ ಅವನಿಗೆ ಅವನ ವಿದ್ಯೆಗನುಸಾರವಾಗಿ ಕೆಲಸಗಳು ಸಿಕ್ಕುತ್ತಿದ್ದವು. ಅವರಿಗೆ ಯೋಗ್ಯವಾದ ಕೆಲಸಗಳು ಸಿಕ್ಕಿದ್ದರಿಂದ ಅವರು ಉನ್ನತಾವಸ್ಥೆಗೆ ಬಂದು ಸುಖದಿಂದ ಇರುತ್ತಿದ್ದರು. ಶಿವಾಜಿಯ ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿಯೂ ಬೇಕಾದ ಅಭಿವೃದ್ಧಿಯು ಆದುದರಿಂದ ಈಗಿನ ನವನಾಗರೀಕತೆಯಲ್ಲಿ ಉನ್ನತಾವಸ್ಥೆಯನ್ನು ಪಡೆದ ರಾಜ್ಯಗಳಂತೆಯೇ ಉತ್ತಮ ಸ್ಥಿತಿಯಲ್ಲಿತ್ತು.

ಇಷ್ಟೆಲ್ಲಾ ಅಭಿವೃದ್ಧಿಗಳಾದುದು ಶಿವಾಜಿಯ ಒಬ್ಬನ ಆಲೋಚನೆಯಿಂದಲ್ಲದೆ ಮತ್ತು ಯಾರ ಆಲೋಚನೆಯಿಂದಲೂ ಅಲ್ಲ. ಶಿವಾಜಿಯು ಮಹಾರಾಷ್ಟ್ರದ ಕೇಂದ್ರವಾಗಿದ್ದನು. ಶಿವಾಜಿಯು ಮನುಷ್ಯರ ಸ್ವಭಾವವನ್ನು ತಿಳುಕೊಳ್ಳಲು ಶಕ್ತನಾಗಿದ್ದುದರಿಂದ ಆಯಾ ಮನುಷ್ಯನ ಸ್ವಭಾವಕ್ಕನುಸಾರವಾಗಿಯೇ ಅವನನ್ನು ಆಯಾ ಕೆಲಸಗಳಿಗೆ ನೇಮಿಸುತ್ತಿದ್ದನು. ಇದರಿಂದ ಎಲ್ಲಾ ಕೆಲಸಗಳು ಸುಲಭದಲ್ಲಿ ಆಗುತ್ತಿದ್ದವು. ಶಿವಾಜಿಗೆ ರಾಜ್ಯಭಾರದ ಎಲ್ಲಾ ವಿಚಾರಗಳು ಚೆನ್ನಾಗಿ ತಿಳಿದಿದ್ದವು. ರಾಜ್ಯಭಾರ ಕ್ರಮಗಳನ್ನು ಕಲಿಯುವುದಕ್ಕಾಗಿ ಬೇರೆ ಬೇರೆ ರಾಜಸ್ಥಾನಗಳಿಗೆ ಹೋಗುತ್ತಿರಲಿಲ್ಲ. ರಾಜ್ಯಭಾರದ ಕ್ರಮಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ ಯೋಗ್ಯವಾಗಿ ರೀತಿಯಲ್ಲಿ ಮಾಡಿದ್ದರು. ರಣಜಿತಸಿಂಗನ ಹಾಗೂ, ಮಹದಾಜಿ ಸಿಂಧ್ಯನ ಹಾಗೂ ಇವನ ಹತ್ತಿರ ಫ್ರೆಂಚ ಮಂತ್ರಿಗಳಿರಲಿಲ್ಲ. ಬೇಕಾದ ಆಲೋಚನೆಗಳೆಲ್ಲವೂ ಅವನ ಹೃದಯದಿಂದಲೂ ಮನಸ್ಸಿನಿಂದಲೂ ಹೊರಡುತ್ತಿದ್ದವು. ಆದುದರಿಂದ ಇಂಗ್ಲಿಷ, ಫ್ರೆಂಚ, ಡೆಚ್, ಮರಾಟಿ, ಸಂಸ್ಕೃತ, ಪಾರ್ಸಿ, ಪೊರ್ತುಗಿಸ್, ಹಿಂದಿ ಭಾಷೆಗಳಲ್ಲಿರುವ ಗ್ರಂಥಗಳನ್ನೂ ಶಾಸನಗಳನ್ನೂ ಓದಿ ನೋಡಿ ಅಭ್ಯಾಸಮಾಡಿ ಶಿವಾಜಿಯ ಚರಿತ್ರೆಯನ್ನು ಬರೆದವನು ಶಿವಾಜಿಯು ಮರಾಠಾ ರಾಜ್ಯಸ್ಥಾಪಕನು ಮಾತ್ರವಲ್ಲ. ಆ ಕಾಲದಲ್ಲಿದ್ದ ರಾಜತಂತ್ರ ಪ್ರವೀಣರಲ್ಲಿ ಉನ್ನತ ಪದವಿಯನ್ನು ಪಡೆದವನೆಂದು ಒಪ್ಪಲೇ ಬೇಕಾಗುವುದು.

ರಾಜ್ಯಗಳು ಬಿದ್ದುಹೋಗಬಹುದು, ಸಾಮ್ರಾಜ್ಯಗಳು ಒಡೆದುಹೋಗಬಹುದು, ರಾಜವಂಶಗಳು ಅಳಿದುಹೋಗಬಹುದು. ಆದರೆ ಮಹಾ ವೀರನಾಗಿದ್ದು ತನ್ನ ಬುದ್ಧಿಬಲದಿಂದ ರಾಜನಾದ ಶಿವಾಜಿಯಂಥಾ ಮಹಾ ಪುರುಷನ ನೆನಪು ಯಾವಾಗಲೂ ಉಳಿಯುವುದು. ಚರಿತ್ರೆಯಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲ್ಪಟ್ಟಂತೆ ಆತನ ಕೀರ್ತಿಯು ಹೊಳೆಯುತ್ತಿರುವುದು. ಇದರಿಂದ ಮುಂದಿನಜನಾಂಗಕ್ಕೆ ಮೇಲಕ್ಕೇರಲು ಇದ್ದ ಸೋಪಾನದಂತೆ ಇರುವುದು. ಸಾಧು ರಾಮದಾಸರು ಶಿವಾಜಿಯ ಗುರುಗಳು ಹೇಳುವ ಮಾತು ಸರಿಯಾಗಿದೆ.

"ಶಿವ ಚರಿತ್ರೆ ಆಟವಾವೆ ಕೀರ್ತಿರೂಪೆ!!"

ಅಂದರೆ ಶಿವಾಜಿಯ ಚರಿತ್ರೆಯನ್ನು ತಿರಿಗಿ ತಿರಿಗಿ ಮನಸ್ಸಿಗೆ ತಂದು ಅವನ ಕೀರ್ತಿಯನ್ನು ತಿಳಕೊಳ್ಳಿ.

ನಮ್ಮ ಸಂಸ್ಥಾನದ ಕಂದಾಯ.

ಫೈನೇನ್ಸ್ ಮೆಂಬರರ ಅಭಿಪ್ರಾಯದಂತೆ ಇನ್ನು ಮುಂದೆ ವರ್ಷಂಪ್ರತಿ ಲಭಿಸಬಹುದಾದ ಅಧಿಕ ಕಂದಾಯವನ್ನು ೧೬ ಲಕ್ಷಕ್ಕಿಂತ ಹೆಚ್ಚಾಗಿ ಎಂದೂ ಊಹಿಸಲು ಸಾಧ್ಯವಿಲ್ಲೆಂದು ತಿಳಿವುದು. ಈ ಉತ್ಪತ್ತಿಯಿಂದ, ಪ್ರಾಂತಿಕ ವಂತಿಗೆಯ ಮಾಫಿಯಾದಂದಿನಿಂದಿ ಹೊಸ ಯೋಜನೆಗಳು ನಡೆದುಬಂದಂತೆ ಇನ್ನೂ ನಡೆಯುವುದು ಶಕ್ಯವೆಂದು ತೋರುವುದಿಲ್ಲ. ಆಯವ್ಯಯವು ಸಮತೂಕವಾಗಿರುವುದು ಮಾತ್ರವಲ್ಲದೆ ಉಳಿತಾಯವು ಆಗಬೇಕೆಂದಿದ್ದರೆ, ನಾವು ಅವಶ್ಯವಾಗಿ ಹೊಸ ಕಂದಾಯಗಳ ದಾರಿಯನ್ನು ಹುಡುಕಬೇಕಾಗುವುದು. ಆದರೆ ಇಂತಹ ಹೊಸ ಕಂದಾಯಗಳು, ಮೊದಲೆ ತೆರಿಗೆಯ ಭಾರವನ್ನು ಹೊರಲಾರದವರ ಮೇಲೆ ಮತ್ತಷ್ಟು ಹೊರೆಯನ್ನು ಹೊರಿಸುವಂತಿರಬಾರದು. ನಮ್ಮ ಸಂಸ್ಥಾನದಲ್ಲಿ ಭೂಕಂದಾಯವು ಈಗಲೆ ಬಿಗುವಾಗಿರುವುದರಿಂದ ಅದನ್ನು ಇನ್ನಷ್ಟು ಹೆಚ್ಚಿಸಿ, ಆಯವನ್ನು ಬೆಳಸುವ ಹಂಚಿಕೆ ಮಾಡುವುದು ಸರಕಾರಕ್ಕೆ ಯುಕ್ತವಲ್ಲ. ಅಬ್ಕಾರಿ ತೆರಿಗೆಯನ್ನು ಹೆಚ್ಚಿಸುವುದೂ ಯೋಗ್ಯವಾಗಿಲ್ಲ. ಏಕೆಂದರೆ ಕುಡಿತ ತನಕ್ಕೆ ಬಲಿಬಿದ್ದ ಬಡ ಮನುಷ್ಯರಿಂದ ಬರುವ ಹಣವದು. (ಸಶೇಷ)

KART
...NEERS

...eet, MADRAS.

ನೇಗಿಲುಗಳು

...ತರದ ಗಟ್ಟಿಭೂಮಿಯನ್ನು ಉಳುವುದಕ್ಕೆ ಇಲ್ಲಿ ತೋರಿಸಿರುವ
...ಂಟರ್ ನೇಶನಲ್ ಹಾರ್ವೆಸ್ಟರ್ ನೇಗಿಲುಗಳಷ್ಟು
ಉತ್ತಮ ತರದ್ದು ಇನ್ನೊಂದಿಲ್ಲ.
...ರೂ. 32—0—0ಗೆ ಮುಫತ್ತಾಗಿ ಇನ್‌ಷೂರ್ ಮಾಡಿ
ತಲುಪಿಸಲಾಗುತ್ತೆ.



...ಜೂಯಲರಿ ಹಾಲ್.

...ತಯಾರುಮಾಡುವವರು. ನ್ಯಾಯವಾದ ಬೆಲೆ!!

...ವಾದ ಕಷ್ಟಗಳು, ಮಡಲುಗಳು ಎಷ್ಟು ಬೆಲೆಯಲ್ಲಿ
...ತ್ತವೆ. ಮತ್ತು ಪೂಜೆಗೆ ಯೋಗ್ಯವಾದ
...ವಿಗ್ರಹಗಳು ದೊರೆಯುತ್ತವೆ.

...ಬಂಗಾರದಿಂದ ತಯಾರಿಸಿದ ಎಲ್ಲಾ ವಿಧವಾದ ನಗಗಳೂ
...ಕೆಲ್ಪಟ್ಟ, ನಾಜೂಕಾಗಿ ತಯಾರಿಸಿದ ಎಲ್ಲಾ ವಿಧವಾದ
...ಮಾಡಲ್ಪಟ್ಟ ನಗಗಳು ಸಿದ್ಧವಾಗಿರುತ್ತವೆ. ಆರ್ಡರಿಗೆ

...ಶ್ರೀನಿವಾಸಯ್ಯ ಅಂಡ್ ಬ್ರದರ್ಸ್,
...ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

KART
...NEERS

...ಜಂಟರು

...ಯುವರ ಹೆಂಬರ್ಗ್

...ಮಾಡುವ

...ತ್ರಗಳು.

...ಕೆಲಸಗಳೂ ತನ್ನಷ್ಟಕ್ಕೆನೇ ಆಗುವ ಸಣ್ಣ

ಮತ್ತು

...ಯಂತ್ರದ ಆಯೋಜನೆಗಳು, ಭತ್ತ ಒಡೆಯ...
...ಅಕ್ಕಿ ಸ್ವಚ್ಛ ಮಾಡಲಿಕ್ಕೆ ಯಂತ್ರಗಳು, ಬೀಸು
ಕಲ್ಲುಗಳು ... ಕೂಡಾ.

Armenian Street,
MADRAS.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0
Reserve and other sinking Funds „ 338,500—0—0
of which amount invested on G. P. Notes Rs. 228,898—2—0
Rates of interest on fixed deposits at Head Office 6¼% for 2 Years
6% „ 1 Year
Season deposits of Rs. 1000/- & above terminable by the end of June are received at 6¼% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಸೇಕಡಾ 6¼% 1ವರುಷಕ್ಕೆ ಸೇ. 6.
ಜೂನ್ ಅಂತ್ಯದ ವಳಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮೌಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ದೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೩೬ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಆಡ್ಯಾರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ,
ಮಂಗಳೂರು ಟವರಗೆ ಹತ್ತಿ.



DUNLOP

ಟ್ರಿಪ್ಪಲ್ ಸ್ಟಡ್ ಸ್ನಾಕಲ್ ಟಾಯರು.

ಶಾಸ್ತ್ರೋಕ್ತವಾಗಿ ತಯಾರಿಸಿದ ಟಾಯರು ಕೊಡುವ ಎಲ್ಲಾ ಭದ್ರತೆಯು ಇದರಿಂದ ದೊರಕುವಂತೆ ಇದು ತಯಾರಿಸಲ್ಪಟ್ಟಿರುತ್ತದೆ. ಇಳಿಜಾರಿನಲ್ಲಿ ಪಕ್ಕನೆ ಜಾರಿಹೋಗದಿರುವಿಕೆಯು, ಇದರ ಅನೇಕ ಗುಣಗಳಲ್ಲಿ ಒಂದೇ ಒಂದಾಗಿದೆ.

fit Dunlop and be satisfied

ದಿ ಡನ್ಲೋಪ್ ರಬ್ಬರ್ ಕಂಪೆನಿ (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ.೨೩ ನೇ ಶುಕ್ರವಾರ ಮಾರ್ಚಿ ೧೯೨೮. ಸಂಚಿಕೆ ೧೨

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ಮಾಯದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಜರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ಹೊಸ ಮೆಟ್ರಿಕ್ಯುಲೇಶನ್ ಪರೀಕ್ಷೆ.

ಕಳೆದ ೧೬ನೇ ತಾರೀಕಿನಲ್ಲಿ ಜರಗಿದ ಮದರಾಸು ಯೂನಿವರ್ಸಿಟಿಯ ಎಕಡೆಮಿಕ್ ಕೌನ್ಸಿಲಿನ ಸಭೆಯಲ್ಲಿ ಮದರಾಸು ಯೂನಿವರ್ಸಿಟಿಯವರು ನೇಮಿಸಿ ಮದರಾಸು ಸರಕಾರದವರು ಮಂಜೂರು ಮಾಡಿದ ಯೂನಿವರ್ಸಿಟಿ ಕಮಿಟಿಯವರು ತಯಾರಿಸಿದ ಮೆಟ್ರಿಕ್ಯುಲೇಶನ್ ಸ್ಕೀಮನ್ನು ಮಂಜೂರು ಮಾಡಿದರು. ಹೊಸ ಸ್ಕೀಮಿನ ಪ್ರಕಾರ ಸೆಕೆಂಡರಿ ಸ್ಕೂಲ ಲೀವಿಂಗ್ ಸರ್ಟಿಫಿಕೇಟಿನ ಬೋರ್ಡು ಹೊಸದಾಗಿ ಸ್ಥಾಪಿಸಲ್ಪಡುವುದು. ಮದರಾಸು ವಿದ್ಯಾ ಇಲಾಖೆಯ ಡೈರೆಕ್ಟರು ಈ ಬೋರ್ಡಿನ ಅಧ್ಯಕ್ಷರಾಗಿರುವರು. ಮದರಾಸು ಯೂನಿವರ್ಸಿಟಿಯವರು ನೇಮಿಸುವ ಮೂವರು ಹುದ್ದೆದಾರ ಮೆಂಬರರೂ, ಮೂವರು ನೊನ್ ಒಫಿಶಿಯಲ್ ಮೆಂಬರರೂ, ಅಂದರೆ ಯೂನಿವರ್ಸಿಟಿಯ ಕಡೆಯಿಂದ ಆರು ಹುದ್ದೆದಾರ ಮೆಂಬರರೂ, ಆರು ನೊನ್ ಒಫಿಶಿಯಲ್ ಮೆಂಬರರೂ [illegible] ಸುವ ಆರು ಹುದ್ದೆದಾರ ಮೆಂಬರರೂ, [illegible] ಯಲ್ ಮೆಂಬರರೆಂದೂ [illegible] ಈ ಬೋರ್ಡಿನಲ್ಲಿರುವರು. ಈ ಸ್ಕೀಮಿನ ಪ್ರಕಾರ [illegible] ಈ ಬೋರ್ಡು [illegible] ಗಿಂತಲೂ [illegible] ಶಾಲೆಗಳಿಂದ [illegible] ಯವರಿಗೆ [illegible] ಯೂನಿವರ್ಸಿಟಿಯ [illegible] ವರು [illegible] ಒಂದು ಎಸ್. ಎಸ್. ಎಲ್. ಸಿ. [illegible] ಎರಡು [illegible] ತರದ [illegible] ಮೇಲೆ [illegible] ಯಿತು. [illegible] ಕೊಡುವ ಬೋರ್ಡಿನ [illegible] ಅಧಿಕಾರವಿರುವುದಿಲ್ಲ. [illegible] ಶಾರವನ್ನು ಈ ಬೋರ್ಡಿಗೆ ಕೊಟ್ಟಿದೆ. [illegible] ನವರು ಸೂಚಿಸಿದ ಸೂಚನೆಗಳನ್ನು [illegible] ಅದರ ಅಧ್ಯಕ್ಷರಾಗಿರುವ ವಿದ್ಯಾ ಇಲಾಖಾ ಡೈರೆಕ್ಟರರಿಗೆ [illegible] ಹೊಸತಾಗಿ ಮಾಡಿದ ಬೋರ್ಡಿಗೆ ಪರೀಕ್ಷೆಯ ಮೇಲೆ ಸಂಪೂರ್ಣ ಅಧಿಕಾರವಿದೆ. ಕಲಿಕಾಕ್ರಮವನ್ನು ತಯಾರಿಸುವುದು, ಪರೀಕ್ಷೆಯನ್ನು ಕ್ರಮವಾಗಿ ನಡಿಸುವುದು, ಈ ಪರೀಕ್ಷೆಯ ಉದ್ದೇಶವನ್ನು ಸಾಧಿಸುವುದು ಇವೇ ಈ ಬೋರ್ಡಿಗಿರುವ ಅಧಿಕಾರಗಳು.

ಈಗಿರುವ ಪರೀಕ್ಷೆಯಲ್ಲಿ ಬಿ ಗ್ರೂಪಿನ ಪಾಠಗಳ ವಿಷಯ ವಿದ್ಯಾರ್ಥಿಗಳು ಗಮನಕೊಡುವುದಿಲ್ಲ. ಮೂರು ವರ್ಷಗಳ ಹಿಂದಿನ ವರೆಗೆ ಎ ಮತ್ತು ಬಿ ಗ್ರೂಪಿನ ಮಾರ್ಕುಗಳನ್ನು ಮೊಡರೇಟು ಮಾಡುತ್ತಿದ್ದರು. ಆಗಲಾದರೂ ಬಿ ಗ್ರೂಪಿನ ಪಾಠಗಳನ್ನು ವಿದ್ಯಾರ್ಥಿಗಳು ಸ್ವಲ್ಪವಾದರೂ ಮನಸ್ಸು ಕೊಟ್ಟು ಕಲಿಯುತ್ತಿದ್ದರು. ಮೊಡರೇಶನ್ ತೆಗೆದುಹಾಕಿದ ಮೇಲೆ ಬಿಗ್ರೂಪಿನ ಪಾಠಗಳನ್ನು ಕಲಿಯುವುದನ್ನೇ ಬಿಟ್ಟು ಬಿಟ್ಟರು. ಹುಡುಗರು ಟೆಕ್ಸ್ಟ ಪುಸ್ತಕಗಳನ್ನು ಕಲಿಯುವುದರ ಬದಲಾಗಿ ನೋಟ್ಸುಗಳನ್ನೂ ಎನೋಟೇಶನುಗಳನ್ನೂ ಕಲಿಯುವುದರಲ್ಲಿಯೇ ಉದ್ಯುಕ್ತರಾದರು. ವಿದ್ಯಾರ್ಥಿಗಳ ಸಮಯವೆಲ್ಲವೂ ಯೂನಿವರ್ಸಿಟಿಯ ಪರೀಕ್ಷೆಗೆ ತಯಾರುಮಾಡುವುದರಲ್ಲಿಯೇ ಕಳೆದು ಹೋಗಿ ಅವರ ಬುದ್ಧಿ ಶಕ್ತಿಯು ಅಭಿವೃದ್ಧಿಯಾಗಲಿಕ್ಕೆ ಯಾವ ತರದ ಎಡೆಯೂ ಇಲ್ಲದಂತಾಯಿತು.

ಹೊಸ ಸ್ಕೀಮಿನ ಪ್ರಕಾರ ಬಿಗ್ರೂಪಿನ ಪಾಠಗಳನ್ನು ಎ ಮತ್ತು ಸಿ ಗ್ರೂಪಿನೊಳಗೆ ಹಂಚಿಹಾಕುವ ಅಧಿಕಾರವು ಹೊಸ ಬೋರ್ಡಿಗೆ ಇರುವುದರಿಂದ ವಿದ್ಯಾರ್ಥಿಗಳು ಎಲ್ಲಾ ಪಾಠಗಳನ್ನು ಏಕರೀತಿಯಿಂದ ಕಲಿಯಬೇಕಾಗುವುದು.

ಪರಸ್ಪರ ಸಹಾಯಕ ಸಂಘಗಳ ಅಭಿವೃದ್ಧಿಯ ಗೋಸ್ಕರ ನೇಮಿಸಿದ ಕಮ್ಮಿಟಿಯ ರಿಪೋರ್ಟು.

ಈ ರಿಪೋರ್ಟು ಇತ್ತಲಾಗೆ ಹೊರಬಿದ್ದದೆ. ಈ ರಿಪೋರ್ಟಿನಿಂದ ಸರಕಾರಕ್ಕೂ, ಆಫೀಸರರಿಗೂ, ನೊನ್ ಒಫಿಶಿಯಲರಿಗೂ ಈ ಇಲಾಖೆಯಲ್ಲಿರುವ ಕುಂದುಕೊರತೆಗಳನ್ನು ಹೋಗಲಾಡಿಸಲಿಕ್ಕೆ ಹೆಚ್ಚು ಸಹಾಯವಾಗುವುದರಲ್ಲಿ ಸಂದೇಹವಿಲ್ಲ. ಈ ಸೂಚನೆಗಳನ್ನು ಅನುಸರಿಸಿ ನಡೆದರೆ ಪರಸ್ಪರ ಸಹಾಯಕ ಸಂಘಗಳು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಈ ರಿಪೋರ್ಟಿನಲ್ಲಿ ಕಾಣುವ ನೂರಾರು ೫೦೮ ಸೂಚನೆಗಳು ಚಲೋದಾಗಿವೆ. ಇದನ್ನು ಜಾರಿಗೆ ತರಬೇಕಾದರೆ ಸಮಯವೂ, ಹಣವೂ, ಉತ್ತೇಜನವೂ ಬೇಕಾಗುವುದು. ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿದುದರಿಂದ ಬಡ್ಡಿಯ ದರವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಆದರೆ ಇದರಿಂದ ದೇಶದ ಶೇಕಡಾ ೧೦ ಪಾಲಷ್ಟು ಜನರಿಗೆ ಮಾತ್ರವೇ ಇದರಿಂದ ಪ್ರಯೋಜನವಾಗಿದೆ. ಹಲವು ಸಂಘಗಳಲ್ಲಿ ಸಾಲ ಕೊಟ್ಟ ಹಣವು ಎಾದ ದಿವಸಗಳಿಗೆ ಸಂದಾಯವಾಗಲಿಲ್ಲವೆಂದು ಕಂಡುಬಂದದೆ. ಇದರಿಂದ ದೀರ್ಘಕಾಲದ ಸಾಲಕ್ಕೂ ಸ್ವಲ್ಪ ಸಮಯಕೆ ಕೊಟ್ಟ ಸಾಲಕ್ಕೂ ಸ್ಪಷ್ಟ ವ್ಯತ್ಯಾಸವನ್ನು ಮಾಡಬೇಕಾಗಿದೆ.

ಮಿತವ್ಯಯ, ಸ್ವಾವಲಂಬನ, ಪರಸ್ಪರ ಸಹಾಯಕ ಈ ಮೂರೇ ಮುಖ್ಯ ಸಂಘಗಳ ಉದ್ದೇಶಗಳಾಗಿವೆ. ಆದರೆ ಇಷ್ಟರ ವರೆಗಿನ ಸ್ಥಿತಿಯನ್ನು ನೋಡಿದರೆ ಈ ಮೂರು ವಿಷಯ [illegible] ಅಭಿವೃದ್ಧಿಯು [illegible] ವುದಿಲ್ಲ. ಈ ಕಮ್ಮಿ [illegible] ನಡಿಸಿ ನೊನ್ [illegible] ಸರಿಯೆಂದು [illegible] ನವರೂ ಈ [illegible] ನಾಶವಾಗುವದಿಲ್ಲ [illegible] ಪರ [illegible] ವಿವರಿಸಿ ಹೇಳಲು [illegible] ಸರಕಾರ [illegible] ಖರ್ಚುಮಾಡ [illegible] ವುದಕ್ಕಾಗಿ [illegible] ಪ್ರತಿ ಜಿಲ್ಲೆಯಲ್ಲಿ [illegible] ಗೋರಕ್ಷಣೆ, [illegible] ನಾಲ್ಕಾವರ್ತಿ [illegible] ಮಾಡಿದ [illegible] ಸೆಂಟ್ರಲು [illegible] ಮಾಡಬೇಕಾಗಿದೆ. [illegible] ಉದ್ಧಾರ [illegible] ಮನಸ್ಸಿನಿಂದ [illegible] ಕೆಲಸವನ್ನು [illegible] ಬಿಡುವಷ್ಟು [illegible] ಇನ್ನು ಕೆಲವು [illegible] ಮಾಡಬೇಕಾ [illegible]

[illegible] ಸೂಪರ್‌ವೈಜ್ [illegible] ಇದ [illegible] ಉಂಟಾಗಲು [illegible]

ಈ ಕಮಿಟಿಯ [illegible] ಹಿಂದಿಯುರನ್ನೇ ರಿಜಿಸ್ಟ್ರಾರ [illegible] ಹೇಳು ತ್ತಿರುವರು. [illegible] ಬರಿ [illegible] ಬದಲಾಯಿಸು [illegible] ಐದು ವರ್ಷಗಳ ಮೊದಲು ಆಫೀಸರರು ಬದಲಾಯಿಸುವುದು ಸರಿಯಲ್ಲವೆಂದೂ [illegible] ಮೊದಲು [illegible] ಬರೆದಿರು [illegible] ಜನ್ನಪೆಕ್ಟರ [illegible] ರಿಪೋರ್ಟು ತೋರಿಸುತ್ತದೆ.

ಪ್ರತಿ ಒಂದು [illegible] ರಿಜಿಸ್ಟ್ರಾರರನ್ನು ನೇಮಿಸಬೇಕೆಂದೂ [illegible] ಕೆಲಸವನ್ನು ನಿರ್ವಹಿಸಲಿಕ್ಕೆ [illegible] ಕೊಡಬೇಕೆಂದೂ ಕಮ್ಮಿಟಿಯವರು ಹೇಳುತ್ತಿರುವರು.

ಸೊಸೈಟಿಗಳ ಲೆಕ್ಕಪತ್ರ ಶೋಧನೆಮಾಡುವ ಖರ್ಚನ್ನು ಸೊಸೈಟಿಗಳ ಮೇಲೆ ಹೊರಿಸಬಾರದೆಂದೂ ರಿಪೋರ್ಟಿನಲ್ಲಿದೆ. ಪ್ರಾಂತಿಕ ಕೊ-ಒಪರೇಟಿವ್ ಯೂನಿಯನುಗಳಲ್ಲಿ ಮಾಡತಕ್ಕ ಬದಲಾವಣೆಗಳ ವಿಷಯ ಹಲವು ಸೂಚನೆಗಳಿವೆ.

ಮೇಲಿನ ಎಲ್ಲಾ ಸೂಚನೆಗಳ ಪ್ರಕಾರ ನಡಿಯಲಿಕ್ಕೆ ಸರಕಾರಕ್ಕೆ ಹೆಚ್ಚು ಹಣವು ಬೇಕಾಗಿಯದೆಂದೂ, ಸಂಯುಕ್ತ ಸಂಸ್ಥಾನ ಒಂದನ್ನು ಬಿಟ್ಟು ಇತರ ಎಲ್ಲಾ ಸಂಸ್ಥಾನಗಳಿಗಿಂತಲೂ ಮದರಾಸು ಸರಕಾರ ಈ ವಿಷಯ ಮಾಡುವ ಖರ್ಚು ಬಹಳ ಕಡಿಮೆಯಾಗಿರುವುದರಿಂದಲೂ, ಈ ಇಲಾಖೆಯಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನ ಇರುವುದರಿಂದಲೂ ಮದರಾಸು ಸರಕಾರವು ಈ ಇಲಾಖೆಗಾಗಿ ಸ್ವಲ್ಪ ಹೆಚ್ಚಿಗೆ ಹಣ ಖರ್ಚು ಮಾಡಿದರೆ ಅಷ್ಟೊಂದು ಹೆಚ್ಚಾಯಿತೆಂದು ಕಂಡು ಬರಲಿಕ್ಕಿಲ್ಲ.

ಒಟ್ಟಾರೆ ಈ ರಿಪೋರ್ಟಿನಿಂದ ಮದರಾಸು ಸಂಸ್ಥಾನಕ್ಕೆ ಮಾತ್ರವಲ್ಲ ಇತರ ಸಂಸ್ಥಾನಗಳಿಗೂ ಇದರಿಂದ ಹೆಚ್ಚಿನ ಪ್ರಯೋಜನವುಂಟೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮದರಾಸಿನಲ್ಲಿ ಜರಗಿದ ಪೋಷ್ಟುಮೇನರ ಮಹಾ ಸಭೆಯಲ್ಲಿ ಪಾಸಾದ ಠರಾವುಗಳು.

ಮದರಾಸು ಸಂಸ್ಥಾನದ ಬೇರೆ ಬೇರೆ ಜಿಲ್ಲೆಗಳ ಲೋವರ ಸ್ಟಾಫ್ ಮತ್ತು ಪೋಷ್ಟು ಮೇನರುಗಳ ಸಭೆಯು ಮದರಾಸಿನ ಮುತ್ತಯ್ಯ ಪೇಟೆ ಹ್ಯಾಸ್ಕೂಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರಾದ ಡೊಕ್ಟರ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಈ ಕೆಳಗಿನ ಠರಾವುಗಳು ಪಾಸಾದವು.

(೧) ಸರಕಾರದವರು ಪೋಷ್ಟುಮೇನರುಗಳಿಗೂ ರನ್ನರುಗಳಿಗೂ ಕೊಡುವ ಅಪ್ಸೆಂ ಸಂಬಳವನ್ನು ಆದಷ್ಟು ಬೇಗನೆ ಕೊಡಬೇಕು. (೨) ಗ್ರೇಡೇಶನಲಿಸ್ಟನ್ನು ತಯಾರಿಸಬೇಕು. (೩) ಮನೆ ಬಾಡಿಗೆಯನ್ನು ಕೊಡಬೇಕು. (೪) ರನ್ನರುಗಳ ಸಂಬಳವನ್ನು ಹೆಚ್ಚಿಸಬೇಕು. (೫) ಯೂನಿಫೋರ್ಮುಗಳನು ಕೆಳನೌಕರರಿಗೂ ಕೊಡಬೇಕು. (೬) ರಜೆಯ ರೂಲ್ಸುಗಳನ್ನು ಸಂಪಡಿಸಬೇಕು. (೭) ಪೋಷ್ಟುಮೇನರುಗಳಿಗೆ ಸೋರ್ಟಿಂಗ್ ಕೆಲಸವನ್ನು ಇನ್ನು ಇತರ ಬರಹದ ಕೆಲಸಗಳನ್ನೂ ಕೊಡಬೇಕು, (೮) ಹೆಚ್ಚು ಸಮಯ ಕೆಲಸ ಮಾಡಿದರೆ ಹೆಚ್ಚಿಗೆ ಸಂಬಳವನ್ನು ಕೊಡಬೇಕು. (೯) ಪೋಷ್ಟುಮೇನರುಗಳ ಸರಹದ್ದನ್ನು ೧೦ ಮೈಲಿಗಳಿಗಿಂತ ಹೆಚ್ಚಿಗೆ ಇರಿಸಬಾರದು. (೧೦) ವರ್ಗಾ ವರ್ಗಿಗಳನ್ನು ಕಡಿಮೆಮಾಡಬೇಕು.

ಮಂಗಳೂರು ತಾಲೂಕು ಬೋರ್ಡಿನ ಹುಡುಗಿಯರ ಶಾಲೆಗಳ ದೀನಾವಸ್ಥೆ.

ಮಂಗಳೂರು ತಾಲೂಕು ಬೋರ್ಡಿನ ಕೈಕೆಳಗೆ ಮೂಲಿಕೆ ಕೊಳಚಿಕಂಬಳ, ಚಿತ್ರಾಪು, ಸುರತಕಲ್, ಮುಳ್ಕಿ, ಪಣಂಬೂರು, ಬಜಪೆ, ಉಳ್ಳಾಲ, ಗುರುಪುರ, ಪದವು, ಬಂಟವಾಳ, ಪಾಣೆಮಂಗಳೂರು, ಗುರುಪುರ, ತಲಪಾಡಿ, ಇಷ್ಟು ಕಡೆಗಳಲ್ಲಿ ಹುಡುಗಿಯರ ಶಾಲೆಗಳಿರುವವು.

ಈ ಹುಡುಗಿಯರ ಶಾಲೆಗಳಲ್ಲಿ ಹುಡುಗರ ಶಾಲೆಗಳಂತೆ ಉನ್ನತಸ್ಥಿತಿಯಲ್ಲಿರುವುದು ಮೂಲಿಕೆ ಒಂದು ಶಾಲೆ ಅಲ್ಲದೆ ಬೇರೆ ಯಾವದೂ ಕಂಡುಬರುವುದಿಲ್ಲ.

ಉಪಾಧ್ಯಾಯಿನಿಯರು. ಮೂಲಿಕೆ ಶಾಲೆ ಬಿಟ್ಟು ಬೇರೆ ಎಲ್ಲಾ ಶಾಲೆಗಳಲ್ಲಿಯೂ ಕ್ಲಾಸುಗಳಿರುವಷ್ಟು ಉಪಾಧ್ಯಾಯಿನಿಯರು ಇರುವುದಿಲ್ಲ. ಇದರಿಂದ ಶಾಲೆಯ ಕೆಲಸವು ಉತ್ತಮ ರೀತಿಯಲ್ಲಿ ನಡಿಯಲು ಸಾಧ್ಯವೇ ಇಲ್ಲ. ಕೆಲವು ಶಾಲೆಗಳಲ್ಲಿ ಒಬ್ಬೊಬ್ಬರೇ ಉಪಾಧ್ಯಾಯಿನಿಯರಿರುವರು. ಕಂಡಕ್ಟ್ರೆಸುಗಳು ಇರುವಾಗ ಅವರು ಮನೆ ಮನೆಗೆ ಹೋಗಿ ಮಕ್ಕಳನ್ನು ಕರೆದು ತರುತ್ತಿದ್ದರು. ಈಗ ಇವರನ್ನು ತೆಗೆದು ಹಾಕಿದುದರಿಂದ ಒಂದೊಂದು ಉಪಾಧ್ಯಾಯಿನಿಯರು ಶಾಲೆಯಲ್ಲಿ ಬಾರದ ಮಕ್ಕಳನ್ನು ಬರುವಂತೆ ಮಾಡುವುದಕ್ಕಾಗಿ ಉಪಾಧ್ಯಾಯಿನಿಯು ಮನೆ ಮನೆಗೆ ಹೋದರೆ ಶಾಲೆಯಲ್ಲಿ ಕೆಲಸಮಾಡಲು ಸಾಧ್ಯವೇ ಇಲ್ಲ.

ಉಪಾಧ್ಯಾಯಿನಿಯರಿಗಾಗಿ ಮನೆಗಳು. ಉಪಾಧ್ಯಾಯಿನಿಯರು ಹೆಂಗಸರು, ಅಬಲೆಯರು. ಗಂಡಸರಂತೆ ಹೊಟೆಲುಗಳಲ್ಲಿ ಊಟಮಾಡಿ ಎಲ್ಲಿಯಾದರೂ ನಿದ್ರೆ ತೆಗಿಯಲು ಹೋಗಲು ಅವರಿಗೆ ಸಾಧ್ಯವಿಲ್ಲ. ಹೊಟೆಲುಗಳಲ್ಲಿ ಊಟ ಮಾಡುವಾ ಎಂದು ಆಲೋಚಿಸಿದರೂ ಕೆಲವು ಶಾಲೆಗಳು ಇರುವಲ್ಲಿ ಹೊಟೆಲುಗಳೇ ಇರುವುದಿಲ್ಲ. ಯಾವದೊಂದು ಹುಡುಗಿಯರ ಶಾಲೆಗಳ ಹತ್ತಿರವಾದರೂ ಉಪಾಧ್ಯಾಯಿನಿಯರಿಗೆ ಉಳಕೊಳ್ಳಲು ತಾಲೂಕು ಬೋರ್ಡಿನವರು ಒಂದು ಕಟ್ಟೋಣವನ್ನು ಕಟ್ಟಸಿದ್ದು ಕಂಡುಬರುವುದಿಲ್ಲ. ಎಲ್ಲಿಯಾದರೂ ಒಂದೆರಡು ಶಾಲೆಗಳ ಹತ್ತಿರ ಮನೆಗಳಿದ್ದರೆ ಅದರಲ್ಲಿ ಹಳೇ ಕಂಡಕ್ಟ್ರೆಸುಗಳು ಯಜಮಾನಿಯರಾಗಿ ಆ ಮನೆಯಲ್ಲಿಯೇ ಉಳಕೊಂಡಿರುವರು. ಇದರಿಂದ ಉಪಾಧ್ಯಾಯಿನಿಯರಿಗೆ ಬಹಳ ಕಷ್ಟಗಳು ಬಂದು ಅವರಿಗೆ ಯಾವ ತರದ ಅನುಕೂಲತೆಗಳೂ ಇಲ್ಲದೆ ಅವರಿಗೆ ಸರಿಯಾಗಿ ಕೆಲಸ ನಡಿಸಲು ಸಾಧ್ಯವಿಲ್ಲದೆ ಆಗಾಗ್ಗೆ ವರ್ಗಾ ವರ್ಗಿಯನ್ನು ಮಾಡಬೇಕಾಗುವುದು. ಇದರಿಂದ ಎಲ್ಲಾ ಹುಡುಗಿಯರ ಶಾಲೆಗಳೂ ೫ನೇ ದರ್ಜೆ, ಹೆಚ್ಚಾಗಿ ೪ನೇ ದರ್ಜೆಯ ವರೆಗೆ ಮಾತ್ರವೇ ಇರುವ ಶಾಲೆಗಳಾದುದರಿಂದ ಸಣ್ಣ ಹುಡುಗಿಯರ ವಿದ್ಯಾಭಿವೃದ್ಧಿಗೆ ತೊಡಕುವುಂಟಾಗುವುದು.

(೧೧ನೇ ಪುಟಕ್ಕೆ ಮುಂದುವರಿಸಲಾಗಿದೆ.)

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದ್ದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಅರ್ಕಚಿಕಿತ್ಸಾರತ್ನ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ ಮತ್ತು ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ದ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಪ್ರಿಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ದೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ದೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ದೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ, ಮಂಗಳೂರು ಟವನಿಗೆ ಮುಖ್ಯ.

ಛಳಿಗಾಲವೂ ಆರೋಗ್ಯದ ಅಭ್ಯಾಸಗಳೂ.

ಹಿಂದೂಸ್ಥಾನದಲ್ಲಿ ಛಳಿಗಾಲವು ಮೂರೇ ತಿಂಗಳುಗಳ ಕಾಲ ಇರುವದಾದರೂ ಇತರ ಅನೇಕ ದೇಶಗಳಲ್ಲಿ ವರ್ಷದ ಹೆಚ್ಚಿನ ಭಾಗವು ಛಳಿಗಾಲವಾಗಿಯೇ ಇರುವುದುಂಟು. ಛಳಿಗಾಲದಲ್ಲಿ, ಶೀತ, ಕೆಮ್ಮು [illegible]ಗಳು ಮನುಷ್ಯರನ್ನು ಆಕ್ರಮಿಸುವವೆಂದು ಸಾಧಾರಣವಾಗಿ ಜನರು ತಿಳಿದುಕೊಳ್ಳುವುದಾಗಿದೆ. ಆದರೂ ಅವುಗಳನ್ನು ತಪ್ಪಿಸಿಕೊಳ್ಳಲು ನಮಗೆ ಸುಲಭವಾದಷ್ಟು ಛಳಿಗಾಲವೇ ಹೆಚ್ಚಾಗಿರುವ ಇತರ ರಾಜ್ಯಗಳ [illegible]ಗೆ ಸುಲಭವಾಗಿಲ್ಲ.

ಛಳಿಗಾಲವು ಕೆಲವರಿಗೆ ಭಯಂಕರವಾಗಿ ತೋರುವುದು. ಕೆಲವರು [illegible] ಜಾಗ್ರತೆಯಿಂದಿದ್ದರೂ ಛಳಿಗಾಲದಲ್ಲಿ ಅವರಿಗೆ ಶೀತವು ಆಗಿಯೇ [illegible]. ಇತರ ಸಮಯಗಳಲ್ಲಿ ಆರೋಗ್ಯದಿಂದಿದ್ದು ಛಳಿಗಾಲದಲ್ಲಿ [illegible] ಆರೋಗ್ಯವು ತಪ್ಪಿಹೋಗದಂತೆ ಮಾಡುವದು ಅವರ ಮುಖ್ಯ [illegible]ವಾಗಿದೆ.

ಆದರೆ ಇತರ ಎಲ್ಲಾ ಋತುಗಳಿಗಿಂತಲೂ ಹೇಮಂತ್ಯಶಿಶಿರ ಋತು [illegible] ಉತ್ತಮವೆಂದು ನಮ್ಮ ಅಭಿಪ್ರಾಯ. ಮನಸ್ಸಿನಿಂದಲೂ ಶರೀರ [illegible] ಕೆಲಸವನ್ನು ಮಾಡುವವರು ಛಳಿಗಾಲದಲ್ಲಿ ಉತ್ತಮ ಫಲವನ್ನು [illegible]ವರು. ಬೇಸಿಗೆ ಕಾಲದಲ್ಲಿ ತುಸು ಆಲೋಚಿಸಿದೊಡನೆ ಮನಸ್ಸು [illegible] ಸೋತುಹೋಗುವನು. ಆದರೆ ಛಳಿಗಾಲದಲ್ಲಿ ಹಾಗಲ್ಲ. ಎಷ್ಟು [illegible]ಸಿದರೂ ಥಕ್ಕನೆ ಸೋತುಹೋಗನು; ಬೆವರು ಬಾರದು, ರೋಗದ [illegible] ಪ್ರತಾಪವು ಸೆಕೆಗಾಲದಲ್ಲಿ ಹೆಚ್ಚಾಗಿದೆಯಾದರೂ ಛಳಿಗಾಲದಲ್ಲಿ [illegible] ಶಕ್ತಿಯನ್ನು ಕಳಕೊಳ್ಳುವವು. ಮನುಷ್ಯನ ಶರೀರದಲ್ಲಿ ನಾಶವಾದ [illegible] ಛಳಿಗಾಲದಲ್ಲಿ ಪುನಃ ತುಂಬಿಕೊಳ್ಳುವುವು. ಶಸ್ತ್ರಚಿಕಿತ್ಸೆಗಾಗಿ ಛಳಿಗಾಲವು ಉತ್ತಮವಾದುದೆಂದು ಹೇಳುವರು. ಛಳಿಗಾಲದ [illegible]ಕ್ಕನುಸಾರವಾಗಿ ವರ್ತಿಸಲು ಕಲಿತರೆ ಯಾವತರದ ಶೀತವೂ [illegible]ನ್ನೂ ತಟ್ಟಲಾರದು. ಗ್ರೀಸ್‌ಲೇಂಡ್ ಮತ್ತು ಲೇಪ್‌ಲೇಂಡಿನ [illegible] ಅನವರತವೂ ಛಳಿಯಲ್ಲಿರುವರಾದರೂ ಅವರು ಶೀತದಿಂದ ಬಾಧಿಸ[illegible]ಲ್ಲ. ಭಿಕ್ಷುಕರು ಇಡೀ ರಾತ್ರಿ ಛಳಿಯಿಂದ ನಡುಗುತ್ತಾ [illegible] ಮೇಲೆ ಬಿದ್ದುಕೊಂಡು ಮರುದಿನ ಸರಿಯಾಗಿರುವದನ್ನು ನಾವು [illegible]ವೆವು. ಹೀಗೆ ರೋಗವು ಬಾರದಿರಲು ನಾವು ಮಾಡಬೇಕಾದ [illegible]ಗಳು ಕೆಲವಿವೆ:—

ಮೊದಲಾಗಿ ತಂಪಾದ, ನಿರ್ಮಲವಾದ ಗಾಳಿಯನ್ನು ಉಸಿರಾಡಬೇಕು. [illegible]ದಲ್ಲಿ ಮುಖ್ಯವಾಗಿ ನಿರ್ಮಲ ವಾಯುವು ಬೇಕಾಗಿದೆ. ಹಲವರು [illegible]ವದೆಂದು ಕೋಣೆಯ ಬಾಗಿಲುಗಳನ್ನೂ ಕಿಟಿಕಿಗಳನ್ನೂ ಮುಚ್ಚಿ [illegible] ಸಂಚರಿಸದಂತೆ ಮಾಡುವರು. ಇದು ತೀರ ತಪ್ಪು. ಉಸಿರಾಡು[illegible] ಅಂಗಾರಾಮ್ಲವು ಹೊರಕ್ಕೆ ಬರುವದು. ಅದರ ಬದಲಿಗೆ ನಮಗೆ [illegible]ವು ಬೇಕಾಗುವದು. ವಿಷರೂಪ ಅಂಗಾರಾಮ್ಲವು ಹೊರಕ್ಕೆ [illegible] ಶುದ್ಧವಾದ ಆಮ್ಲಜನಕವು ಒಳಕ್ಕೆ ಬರುವಂತೆ ಕಿಟಿಕಿಗಳನ್ನು [illegible]. ಇಲ್ಲದಿದ್ದರೆ ಆತ್ಮಹತ್ಯವನ್ನು ಮಾಡಿಕೊಂಡಂತೆಯೆ ಸರಿ. [illegible]ನವೆಂದು ಹಾಗೆ ಮುಚ್ಚಿಕೊಳ್ಳುವ ಜನರಿಗೆ ಹೆಚ್ಚಾಗಿ ಶೀತ [illegible] ಬರುವದು.

[illegible]ವಾದ ವಾಯುವನ್ನು ಹೊಂದುವುದಕ್ಕಾಗಿ ಬಯಲಿನಲ್ಲಿ ಪ್ರಾತಃ [illegible] ಸ್ವಲ್ಪ ನಡೆಯುತ್ತಿರಬೇಕು. ಈ ತರದ ಸಂಚಾರದಿಂದ [illegible] ಹೆಚ್ಚಾಗಿ ಪ್ರತಿದಿನವೂ ಒಂದೆರಡು ತಾಸುಗಳ ವರೆಗೆ ನಡೆಯು[illegible] ಶೀತರೋಗವನ್ನು ತಪ್ಪಿಸಬಹುದು. ಬಯಲಿನಲ್ಲಿರುವಾಗ [illegible] ಉಸಿರಾಡುವುದರಿಂದ ತುಂಬಾ ಆಮ್ಲಜನಕವು ದೊರಕುವದು. [illegible] ಸ್ಥಳದಲ್ಲಿ ನಿಂತು ಗಂಟೆಗೆ ಸುಮಾರು ಒಂದು ಸಾವಿರ ಸಲ [illegible]ವುದರಿಂದ ಶರೀರದಲ್ಲಿ ಶಕ್ತಿ ತುಂಬುವುದು. ಬೆಳಿಗ್ಗೆ ನಡಿಯು[illegible] ಶಿಕ್ಷಣದ ಫಲವು, ಕೋಣೆಯೊಳಗೆ ಕುಸ್ತಿಯಾಡುವುದರಿಂದ ಸಿಕ್ಕ[illegible] ಛಳಿಗಾಲದಲ್ಲಿ ನಡೆಯುವುದರಿಂದ ಮೈಯು ಬೆಚ್ಚಗಾಗುವುದು. [illegible] ಗಟ್ಟಿಯಾಗುವುದು. ರಕ್ತದಲ್ಲಿದ್ದ ವಿಷರೂಪ ಪದಾರ್ಥವು [illegible] ಶುದ್ಧವಾಗುವುದು. ಶೀತರೋಗವಿರುವಾಗ ಆಮ್ಲಜನಕ [illegible] ಉಸಿರಾಡಿದರೆ ಶೀತರೋಗವು ದೂರವಾಗುವುದು. ಬಿಸಿಯಾದ [illegible]ಗಿಂತಲೂ, ತಂಪಾದ ಗಾಳಿಯು ಹಿತಕರ.

[illegible]ಬಯಲಿನಲ್ಲಿ ತಿರುಗಾಡುವುದರಿಂದ ಶೀತರೋಗವುಂಟಾಗುವದೆಂದು [illegible] ತೀರ ತಪ್ಪು. ಇತರ ರೋಗಗಳಂತೆ ಶೀತರೋಗವೂ ಕ್ರಿಮಿ[illegible]ವಾಗುವುದು. ಶೀತರೋಗದಿಂದ ನರಳುವ ಮನುಷ್ಯನು ಬಿಟ್ಟ [illegible]ನ್ನು ಉಸಿರಾಡುವುದರಿಂದ ಶೀತರೋಗವಾಗುವುದು. ಆದಕಾರಣ [illegible]ವಾಗಿರುವದು ಒಳ್ಳೆಯದು. ನೆಲದ ಮೇಲೆ ಉಗುಳುವುದರಿಂದ [illegible] ಹಬ್ಬುವುದು.

ಛಳಿಗಾಲದಲ್ಲಿ ಭಾರವಾದ ವಸ್ತ್ರಗಳನ್ನು ತೊಟ್ಟುಕೊಳ್ಳದೆ ಹಗುರ [illegible] ವಸ್ತ್ರವನ್ನು ತೊಟ್ಟುಕೊಳ್ಳಬೇಕು. ಭಾರವಾದ ವಸ್ತ್ರವನ್ನು [illegible]ಕೊಳ್ಳುವುದರಿಂದ ರಕ್ತ ಚಲಾವಣೆಯು ಸರಿಯಾಗಿ ಆಗಲಾರದು. [illegible] ಮೈಯ ಮೇಲೆ ಹಗುರವಾದ ಮತ್ತು ಸಡಿಲಾದ ಎರಡು [illegible] ಅಂಗಿಗಳನ್ನು ತೊಟ್ಟುಕೊಳ್ಳುವರು. ಇದರಿಂದ ಶರೀರವು [illegible] ಸುತ್ತಲಿನ ಗಾಳಿಯು ಬೆಚ್ಚಗಾಗಿ ಶೀತವಾಗುವುದಿಲ್ಲ. ಕಾವು [illegible] ಬರುವಾಗ ಅವರು ಒಂದೊಂದೇ ಅಂಗಿಯನ್ನು ತೆಗೆಯು[illegible] ಶರೀರಕ್ಕೆ ಬಲವಾಗಿ ಹಿಡಕೊಳ್ಳುವ ಅಂಗಿಯನ್ನು ತೊಡಬಾರದು. [illegible] ಸಡಿಲಾಗಿದ್ದು ಜೋಲಾಡುವಂತೆ ಇರಬೇಕು. ಇನ್ನು ಹಣದ [illegible] ನೋಡುವುದಾದರೂ ತೆಳುವಾದ ವಸ್ತ್ರಗಳಿಗೆ ಕ್ರಯ ಕಡಿಮೆ[illegible]ಯಾಗಿದೆ. ಬಿಳಿಯ ವಸ್ತ್ರವನ್ನು ತೊಟ್ಟುಕೊಳ್ಳುವದು ಒಳ್ಳೆಯದು. ಕಪ್ಪು [illegible]ವು ಛಳಿಗಾಲದಲ್ಲಿ ಸೆಕೆಯನ್ನು ಹೆಚ್ಚಿಸುವುದು. ಧ್ರುವಗಳ ಸಮೀಪ[illegible]ನ ಕರಡಿಗೆ ರೋಮವು ಬಿಳಿಯಾಗಿದೆ.

ಮಲಗಿದ್ದಾಗ ಶುದ್ಧವಾಯುವು ಸಿಕ್ಕುವಂತೆ ಮಾಡಬೇಕು. ಒಂದು [illegible] ಮೈಯನ್ನು ಹೊದ್ದುಕೊಳ್ಳುವದಾದರೂ ಮುಖದ ಮೇಲೆ ವಸ್ತ್ರವನ್ನು [illegible]ಬಾರದು. ಹಾಗೆ ಮಾಡಿದರೆ ಶುದ್ಧ ವಾಯುವು ದೊರೆಯುವುದಿಲ್ಲ. ಮಲಗಿದ್ದಾಗ ಬಾಗಿಲುಗಳನ್ನು ಮುಚ್ಚಿರುವುದರಿಂದ ಮಲಗಿದವರು ಮೃತ[illegible] ಎಷ್ಟೋ ಕಡೆಗಳಲ್ಲಿದೆ.

ತಂಪು ನೀರಿನ ಸ್ನಾನವನ್ನು ಮಾಡುವದು ಒಳ್ಳೇಯದು. ಬಿಸಿ ನೀರಿನ ಸ್ನಾನಮಾಡುವುದರಿಂದ ಚರ್ಮಕ್ಕೂ ಶ್ವಾಸಕೋಶಗಳಿಗೂ ಕೆಡು[illegible]. ಮೈಗೆ ಎಣ್ಣೆಯನ್ನು ಸವರಿಕೊಳ್ಳುವುದು ಉತ್ತಮ. ಯಾವಾ[illegible] ಮೈಯನ್ನೂ ಉಡಿಗೆಯನ್ನೂ ಸ್ವಚ್ಛವಾಗಿರಿಸಬೇಕು.

ಇವೆಲ್ಲವುಗಳಿಂದ ವಿಚಾರಿಸಲಾಗಿ ಛಳಿಗಾಲವೆಂದು ಹೆದರಬೇಕಾ[illegible]. ಅದು ಆರೋಗ್ಯವನ್ನುಂಟುಮಾಡುವುದು. ಸರಿಯಾದ ಕ್ರಮಗಳನ್ನು ಕಲಿತುಕೊಂಡವನಾದರೆ ಛಳಿಗಾಲದಲ್ಲಿ ಉತ್ತಮವಾದ ಆರೋಗ್ಯವನ್ನು ಸಂಪಾದಿಸುವನೆಂಬುದರಲ್ಲಿ ಸಂಶಯವಿಲ್ಲ.

Diamonds ವಜ್ರಗಳು Diamonds
Bola Mangesh Row & Co.
MANGALORE.
Agents & Direct Importers of Superior Diamonds of Antwerp.
ಬೋಳ ಮಂಗೇಶ ರಾವ್,
10-8-'28 ಮಂಗಳೂರು.

ಸ್ಫುಟ ವಿಚಾರಗಳು.

ಹಿಂದೀ ಮೂಲಧನ.

ಸರ್. ಬೆಸಿಲ್ ಬ್ಲೆಕೆಟ್ಟರಿಂಗೆ ತಾ. ೧೯ರಲ್ಲು ಲೆಜಿಸ್ಲೇಟಿವ್ ಎಸೆಂಬ್ಲಿಯ ಬೇಸರಕಾರೀ ಯುರೋಪಿಯನ್ ಮೆಂಬರರು ಕೊಟ್ಟ ಔತಣದ ಸಮಯದಲ್ಲಿ ಹಿಂದೀ ಮೂಲಧನ (Indian Capital)ದ ವಿಷಯು ಅವರು ಕೆಲವು ಅಭಿಪ್ರಾಯಗಳನ್ನು ಕೊಟ್ಟರು. ಈ ಭಾಷಣದಲ್ಲಿ ಅವರು ಹಿಂದೀ ಮೂಲಧನವು ಈಗ ಯಾವ ರೀತಿಯಲ್ಲಿ ಹೆಚ್ಚು ಹೆಚ್ಚಾಗಿ ಸದ್ವಿನಿಯೋಗವಾಗುತ್ತಿದೆ ಎಂದು ತೋರಿಸಿದರು. ಅಲ್ಲದೆ ಹೊರಗಿನ ದೇಶಗಳ ಅವಶ್ಯಕತೆಗಳಿಗಾಗಿ ಹಿಂದೀ ಮೂಲಧನವು ವಿನಿಯೋಗಿಸಲ್ಪಟ್ಟು, ಆ ದೇಶಗಳಿಗೆ ಸಾಲಕೊಡುವವನೆಂದು ಹಿಂದೀ ಧನಿಕನು ಹೆಸರುಗೊಂಡರೆ ಆರ್ಥಿಕ ರೂಪದಲ್ಲಿಯೂ ರಾಜಕೀಯ ರೂಪದಲ್ಲಿ ಹಿಂದೂಸ್ಥಾನಕ್ಕೆ ಪ್ರಾಮುಖ್ಯತೆಯೂ ಶ್ರೇಷ್ಠತೆಯೂ ದೊರಕುವುದೆಂದು ಸರ್. ಬೆಸಿಲ್ ಬ್ಲೆಕೆಟ್ಟರು ಹೇಳಿದರು. ಮತ್ತು ಯುರೋಪೀಯ ವಿಜ್ಞಾನದ ಮಹತ್ವದ ಮತ್ತು ಹಿಂದೀ ಮೂಲಧನದ ಮಧ್ಯದಲ್ಲಿ ಉಂಟಾದ ಸಮಾನತೆಯು ಮತ್ತು ಸೌಹಾರ್ದದಿಂದ ಹೇಗೆ ಟಾಟಾ ಕಬ್ಬಿಣದ ಕಾರ್ಖಾನೆಯು ಉಂಟಾಯಿತೆಂದೂ ತಿಳಿಸಿದರಲ್ಲದೆ, ಈ ಕಾರ್ಖಾನೆಯು ಸ್ಥಾಪಿಸಲ್ಪಡುವ ಸಮಯದಲ್ಲಿ ಸರಕಾರ ನಿರೋಧವಿದ್ದ ಸಂಗತಿಯನ್ನೂ ಒಪ್ಪಿದರು. ಸರ್. ಬೆಸಿಲ್ ಬ್ಲೆಕೆಟ್ಟರ ಈ ಅಭಿಪ್ರಾಯಗಳ ವಿಷಯದಲ್ಲಿ ಎಲ್ಲರಿಗೂ ಸಮ್ಮತವೇ ಇರಬಹುದು. ಆದರೆ ಹಿಂದೀ ಮೂಲಧನವು ಪರದೇಶಿಗಳಿಗೆ ಹೋಗುವ ಮೊದಲೂ ಹಿಂದೂಸ್ಥಾನದಲ್ಲಿಯೇ ಹಿಂದೀ ಸಾಂಪತ್ತಿಕ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವ ಸಂದರ್ಭಗಳು ಬೇಕಾದಷ್ಟು ಇವೆ. ಮತ್ತು ಹಿಂದೀಯರ ಪ್ರಕೃತದ ರಾಜಕೀಯ ಪರಿಸ್ಥಿತಿಯಲ್ಲಿ ಪರದೇಶೀಯರಿಗೆ ಮೂಲಧನ ಕೊಟ್ಟುದರಿಂದ ಸರ್. ಬೆಸಿಲ್ ಬ್ಲೆಕೆಟ್ಟರು ಊಹಿಸುವಷ್ಟು ಪ್ರಯೋಜನವು ಹಿಂದೀಯರಿಗೆ ಉಂಟಾಗುವುದು ಅಸಂಭವವಿದೆ. ಆದುದರಿಂದ ಹಿಂದೀಯರ ಮೂಲಧನವು ಪರದೇಶಗಳಿಗೆ ಹರಿಯುವ ಮೊದಲು ಹಿಂದೂಸ್ಥಾನದೊಳಗಿನ ಪರದೇಶೀಯರ ಹಿಡಿತವನ್ನು ಕಡಿಮೆಮಾಡಲು ಉಪಯೋಗಿಸಿಕೊಳ್ಳುವುದು ಹೆಚ್ಚು ವಿಹಿತವಿದೆ.

ಬಾಲ್ಯ ವಿವಾಹ ಮಸೂದೆ.

ರಾಯ್ ಸಾಹೇಬ ಹರಿ ವಿಲಾಸ ಸಾರ್ದಾರವರ ಬಾಲ್ಯ ವಿವಾಹ ಮಸೂದೆಯು ಸಿಲೆಕ್ಟ ಕಮಿಟಿಯಲ್ಲಿ ಚರ್ಚಿಸಲ್ಪಟ್ಟು ಸ್ವಲ್ಪ ಮಟ್ಟಿಗೆ ರೂಪಾಂತರಿಸಲ್ಪಟ್ಟು ಮುಂದೆ ಎಸೆಂಬ್ಲಿಯಲ್ಲಿ ಮಂಜೂರಾತಿ ಬಗ್ಗೆ ಬರಲಿರುವುದು. ಈ ಮಸೂದೆಯ ಪ್ರಕಾರ ಹದಿನಾಲ್ಕು ವರ್ಷಕ್ಕಿಂತ ಕೆಳಗಿನ ಹುಡುಗಿಯರನ್ನು ಹದಿನಾರು ವರ್ಷಕ್ಕಿಂತ ಕೆಳಗಿನ ಹುಡುಗರನ್ನೂ ವಿವಾಹ ಮಾಡಬಾರದಾಗಿ ನಿಷೇಧವಿದೆ. ಈ ಮಸೂದೆಯು ಹಿಂದುಗಳಿಗೆ ಮಾತ್ರವಲ್ಲದೆ ಹಿಂದೂಸ್ಥಾನದ ಎಲ್ಲಾ ಜಾತಿ ಮತಸ್ಥರಿಗೆ ಅನ್ವಯಿಸುವುದು. ಇದರ ವಿರುದ್ಧವಾಗಿ ನಡೆದವರಿಗೆ ಒಂದು ತಿಂಗಳ ಸಾದಾ ಸಜೆಯಾಗಲೀ ಒಂದು ಸಾವಿರ ರೂಪಾಯಿ ಜುಲುಮಾನೆ ವಿಧಿಸಲ್ಪಡುವುದು. ಈ ತರದ ಮಸೂದೆಯು ನ್ಯಾಯವಾದುದಾಗಿ ತೋರಿ ಬರುವುದು. ಹದಿನಾಲ್ಕಕ್ಕಿಂತ ಕಡಿಮೆ ಪ್ರಾಯದಲ್ಲಿ ಹುಡುಗಿಯರನ್ನು ವಿವಾಹ ಮಾಡುವುದರಿಂದ ವಿವಾಹದ ಗಾಂಭೀರ್ಯವೇ ಹೋಗಿಬಿಡುವುದು. ವಿಚಾರಿಗಳಾದ ಹಿಂದುಗಳೆಲ್ಲರೂ ಇದಕ್ಕೆ ಒಪ್ಪಿಗೆಯನ್ನಿತ್ತಿರುವರು. ಸಾಂಪ್ರದಾಯವಾದಿಗಳು ಕೆಲವರು ಇದಕ್ಕೆ ನಿಷೇಧವನ್ನಿತ್ತಿರುವರಾದರೂ, ಈ ನಿಷೇಧವು ಮಾನಿಸಲ್ಪಡತಕ್ಕುದಲ್ಲ. ಏಕೆಂದರೆ ಯಾವ ಸಾಂಪ್ರದಾಯವಾದರೂ [illegible]ಂಗದ ಶಕ್ತಿಯನ್ನು ನಾಶಪಡಿಸುವುದಾದರೆ ಅದು ಯಾವ ಧರ್ಮದಲ್ಲಿಯೇ ಹೇಳಲ್ಪಟ್ಟಿದ್ದಾದರೂ ತಿರಸ್ಕರಣೀಯವೇ ಆಗಿದೆ. ವಿಚಾರಿ ಸಮೂಹವನ್ನು ಪ್ರತಿನಿಧಿಸುವ ಎಸೆಂಬ್ಲಿ ಮೆಂಬರರು ಈ ಮಸೂದೆಯನ್ನು ಮಂಜೂರು ಪಡಿಸುವರಾಗಿ ಆಶಿಸಲಾಗಿದೆ.

ಕೊ-ಒಪರೇಶನಿನಲ್ಲಿ ಟ್ರೈನಿಂಗ್.

ಯಾವ ಪುಣ್ಯಾತ್ಮನು ಈ ಚಳವಳವನ್ನು ಕಾಫಿ—ರೊಟ್ಟಿ ಚಳವಳವೆಂದನೊ ಅಂತೂ ಯಾವ ಸಮಾರಂಭವಾದರೂ ಕಾಫಿ-ರೊಟ್ಟಿ ಇಲ್ಲದೆ ಮುಕ್ತಾಯ ಹೊಂದುವುದೇ ಇಲ್ಲ. ಅನಂತಪುರದ ಬಾತ್ಮಿದಾರರೊಬ್ಬರು ಅಲ್ಲಿಯೊಂದು ಪರಸ್ಪರ ಸಹಾಯ ಚಳವಳದ ತರಬೇತಿಯ ತರಗತಿಗಳನ್ನು ಪ್ರಾರಂಭಿಸುವ ಸಮಾರಂಭವನ್ನು ವಿವರಿಸುವಾಗ "ಫಲಾಹಾರ ಮತ್ತು ಸಾಂಪ್ರದಾಯಿಕ ವಂದನೆಗಳ ನಂತರ ಸಮಾರಂಭವು ಮುಕ್ತಾಯವನ್ನು ಹೊಂದಿತು" ಎಂದೇ ಆಕ್ಷೇಪಿಸಿರುವರು. ಈ ಫಲಾಹಾರ ವಿಷಯದಲ್ಲಿ ನಿಷಿದ್ಧವಾದುದೇನೂ ಇಲ್ಲ. ಅದು ಹೃದಯದ ಐಕ್ಯವನ್ನು ಸಾಧಿಸದಿದ್ದರೂ ಜಿಹ್ವಾಗ್ರದ ಐಕ್ಯವನ್ನು ಸಾಧಿಸುವುದು. ಆದರೆ ವಿಷಾದಕರವೆಂದರೆ ಯಾವ ಸೌಹಾರ್ದವೂ, ಔದಾರ್ಯವೂ, ದೂರದರ್ಶಿತ್ವವೂ ಈ ಚಳವಳಕ್ಕೆ ಅಗತ್ಯವಿದೆಯೊ, ಅವು ವಾರ್ಷಿಕ, ಅರ್ಧ ವಾರ್ಷಿಕ ಸಮ್ಮೇಳನಗಳು ಕೂಡಿಯೂ, ಟ್ರೈನಿಂಗ್ ಕ್ಲಾಸೆಸ್ ರಚಿಸಲ್ಪಟ್ಟೂ, ನೆಲಸಲ್ಪಡುವುದಿಲ್ಲ. ಕೊ-ಒಪರೇಟಿವ್ ಚಳವಳವು ಜನರಿಗೆ ಹಿತವನ್ನು ಮಾಡಿಯದೊ ಅಹಿತವನ್ನು ಮಾಡಿಯದೊ ಎಂಬ ಚರ್ಚೆಯು ಪ್ರಕೃತ ನಮ್ಮ ಉದ್ದೇಶವಲ್ಲ. ಆದರೆ ಆದರ್ಶಗಳ ಆಧಾರವಾಗಿದ್ದ ಏಕ ಮಾತ್ರ ಸರಕಾರೀ ಚಳವಳವಾಗಿರುವ ಈ ಕೊ-ಒಪರೇಶನ್ನು ಯಾವ ಪ್ರಬಲ ಹಿತಗಳನ್ನು ಸಾಧಿಸಬಲ್ಲುದೊ ಅವುಗಳ ಗೋಜಿಗೇನೇ ಅದು ಹೋಗದಿದ್ದುದೇ ಈ ಪರಿಸ್ಥಿತಿಯ ಖೇದಾತ್ಮಕ ವಿಚಾರವಾಗಿದೆ. ಉತ್ಸಾಹವು ಅಲ್ಲಿದೆ, ಅದರ ವರ್ತನವಿಲ್ಲ. ಪ್ರಬಲವಾದ ಆಕಾಂಕ್ಷೆಯು ಅಲ್ಲಿದೆ; ಆದರೆ ಪ್ರತಿಭೆಯು ಅಲ್ಲಿಲ್ಲ. ಆದುದರಿಂದ ಎಂದಿನ ರೂಪಾಯಿ, ಆಣೆ, ಪೈಗಳ ಲೆಕ್ಕದ ಅನಂತ ಪರಿಶ್ರಮವೇ ಈ ಕೊ-ಒಪರೇಶನ್ನಿನ ಕಾರ್ಯಚಿತ್ರವಾಗಿದೆಯಲ್ಲದೆ ಬಡತನದ ಉದ್ಧರಣೆಯು ಇನ್ನೂ ಅಲ್ಲಿ ಚಿತ್ರಿಸಲ್ಪಟ್ಟಿಲ್ಲ.

ಫೊಟೊಗ್ರಾಫು.

ನಮ್ಮ ಈಗಿನ ವಿದ್ಯಾಸಂಸ್ಥೆಗಳ ನಿಷ್ಫಲತೆಯನ್ನು ಕಾಣಬೇಕಾದರೆ ವಿದ್ಯಾಸಂಸ್ಥೆಯೊಂದರ ಫೊಟೊಗ್ರಾಫನ್ನು ನೋಡಬೇಕು. ಒಂದು ಫೊಟೊಗ್ರಾಫಿನಿಂದ ಏನೆಲ್ಲ ತಿಳಿಯಬಹುದೆಂಬುದನ್ನು ಚೆನ್ನಾಗಿ ನೋಡಿಕೊಂಡರೆ ತಿಳಿಯುವುದು. ಹಿಂದಿನೊಂದು ಲೇಖನದಲ್ಲಿ ಒಬ್ಬರು ಅಂದಂತೆ ಶಾಲೆಯ ಸುಗುಣತನದ ಬಹುಮಾನವನ್ನು ಹೊಂದಿದ ಹುಡುಗನ ಸುಗುಣನೆಂದರೆ-ಸಾತ್ವಿಕತೆ; ಅಲ್ಲಿ ಅಶಕ್ತಿಯಿಂದ ಸಂಜನಿತವಾದ ಸಾತ್ವಿಕತೆಯಿದೆ; ನಿರಾರೋಗ್ಯದಿಂದ ಉಂಟಾದ ಸೌಮ್ಯ ಮುಖಭಾವವಿದೆ. ಆಲಸ್ಯದಿಂದ ಉಂಟಾದ ಜಡತೆಯಿದೆ. ವಿದ್ಯಾರ್ಥಿಯು ಶಾಲೆಗೆ ಬರುತ್ತಾನೆ; "ದೇವರಂತೆ" ಕೂತುಕೊಳ್ಳುತ್ತಾನೆ. ಪಾಠ ಕಲಿಯುತ್ತಾನೆ. ಮನೆಗೆ ಹೊರಡುತ್ತಾನೆ ಅಲ್ಲಿಗೆ ನಡತೆಯ ಮಾನದಿಂದ ನಡತೆಯು ಅಳೆಯಲ್ಪಟ್ಟು ಸಾಕೆನಿಸಲ್ಪಟ್ಟಿತು. ಹಿಂದೀಯ ಶಾಲೆಗಳ ಫೊಟೊಗ್ರಾಫುಗಳು ಈ ಸಾತ್ವಿಕತೆಯ ಆದರ್ಶವನ್ನೇ ತೋರುತ್ತಿವೆ; ಈ ಅಹಿಂಸಾತ್ಮಕತೆಯ ಭೀರುತನವನ್ನೇ ತೋರುತ್ತಿವೆ. ಜೀವನದ ಸಮಸ್ತಾನುಭವವನ್ನೂ ಪಡೆದು ಹಳೆಯರಾದ ಅಧ್ಯಾಪಕರು ದೀನತೆಯ ಆದರ್ಶವನ್ನು ಸೂಚಿಸುತ್ತ ಮುಖಭಾವವನ್ನು ವ್ಯಕ್ತಪಡಿಸುವರು. ನಿಸ್ಸಂಗತ್ವವೇ ಗೀತೆಯ ಏಕ ಮಾತ್ರ ರಹಸ್ಯವೆಂಬುದನ್ನು ತಾವು ತಿಳಿದುಕೊಂಡೆವು ಎಂದೇನೊ ವಿದ್ಯಾರ್ಥಿಗಳು ನಿರ್ಭಾವದಿಂದ ಮುಂದೆ ನೋಡುತ್ತಿರುವರು. ಭಾವಿ ಜನಾಂಗವು ಯಾರಿಂದ ರಚಿತವಾಗಬೇಕೊ ಅವರ ಈ "ಫೊಟೊಗ್ರಾಫ್"ನ್ನು ನೋಡಿದರೆ ಯಾರಿಗೂ ನಿರಾಶೆಯಾಗದಿರದು. ಸಮಸ್ತವನ್ನೂ ಜಯಿಸಿ ಧಿಕ್ಕರಿಸಬಲ್ಲೆವೆಂಬ ಆ ಆತ್ಮಶಕ್ತಿಯ ಆತ್ಮಾನುಭವವೇ ಮುಖದಲ್ಲಿ ಹೊರಹೊಮ್ಮಬೇಕಾದ ಆ ಹಿಂದೀ ಎಳೆ ನೆತ್ತರುಗಳ ನಿಸ್ತೇಜ ಮುಖವನ್ನು ನೋಡಿದರೆ ನಮ್ಮ ಸರ್ವ ಆಶಾಂಕುರವೂ ಮುರಿದು ಹೋಗುವುದು. ಶಾಲಾಧಿಕಾರಿಗಳ ಲಕ್ಷ್ಯವನ್ನು ನಾವಿಲ್ಲಿ ಎಳೆಯದಿರಲಾರೆವು.

ಇಂಗ್ಲೆಂಡಿನಲ್ಲಿ ಅಮೀರ ಅಮಾನುಲ್ಲಾರವರು.

ಅಫಘಾನಿಸ್ಥಾನದ ರಾಜರಾದ ಅಮಾನುಲ್ಲಾರವರಿಗೆ ಹಿಂದೂಸ್ಥಾನದಲ್ಲಿ ಅಧಿಕಾರಾಂಧವಾದ ಬ್ಯೂರೋಕ್ರಸಿಯಿಂದ ಯಾವ ಸ್ವಾಗತದ ಅಭಾವವಿದ್ದಿತೊ ಅದನ್ನು ರಾಜತಂತ್ರ ಪ್ರವೀಣರಾದ ಬ್ರಿಟಿಷ್ ಸರಕಾರವು ಇಂಗ್ಲೆಂಡಿನಲ್ಲಿ ಪರಿಹರಿಸಿದಂತೆ ತೋರುತ್ತಿದೆ. ಅಮೀರ ಅಮಾನುಲ್ಲಾರವರಿಗೆ ಸಂಭ್ರಮದ ಸ್ವಾಗತವಿದ್ದಿತಲ್ಲದೆ ಅರಮನೆಯಲ್ಲಿ ಸಮ್ರಾಟರ ಆತಿಥ್ಯವೂ ಮಹತ್ವದ್ದಾಗಿದ್ದಿತು. ಆ ಮೇಲೆ ಅವರಿಗೆ ಇಂಗ್ಲೆಂಡಿನಲ್ಲಿ ಸಂಚರಿಸಿದ ಕ್ರಮವೂ ಬಹಳ ಆದರದ್ದಾಗಿದ್ದಿತು. ಅವರನ್ನು ಪಂಚಭೂತಗಳಲ್ಲಿಯೂ ವಿಹರಿಸಿದ್ದಾಯಿತು:—ನೆಲದಲ್ಲಿ ರೈಲ್ವೆಗಳಲ್ಲಿಯೂ, ಜಲದಲ್ಲಿ ಸಬ್ ಮೆರೀನುಗಳಲ್ಲಿಯೂ, ಅನಲದಲ್ಲಿ ಟೆಂಕ್‌ಮೂಲಕವೂ, ಅನಿಲ-ಖಗೋಲದಲ್ಲಿ ವಿಮಾನಗಳಲ್ಲಿಯೂ ಅಮೀರರನ್ನು ಸಂಚರಿಸುವಂತೆ ಮಾಡಿ, ಪೌರ್ವಾತ್ಯ ಅಬ್ಬರಗಳಿಗೆ ಸರಿಹೋಗುವ ಗೌರವ—ಡಂಭಗಳಿಂದ ಬ್ರಿಟಿಷರು ಅಮಾನುಲ್ಲಾಖಾನರನ್ನು ತೃಪ್ತಿಗೊಳಿಸಿರುವರು. ಅಮಾನುಲ್ಲಾಖಾನರು ಪ್ರಥಮತಃ ಫ್ರಾನ್ಸಿಗೆ ಹೋದರು; ಅಲ್ಲಿ ಅವರಿಗೆ ಬಹಳ ಬಹುಮಾನಗಳೂ ಆತಿಥ್ಯವೂ ನಡೆದವು ಆ ಮೇಲೆ ಅವರು ಜರ್ಮನಿಗೂ ಹೋದರು; ಅಲ್ಲಿಯೂ ಬಹಳ ಆತಿಥ್ಯ ಆದರಗಳು ನಡೆದುವು. ಈಗ ಅವರು ಇಂಗ್ಲೆಂಡಿಗೆ ಹೋಗಿರುವರು; ಅಲ್ಲಿ ಅವರಿಗೆ ಎಲ್ಲಕ್ಕಿಂತಲೂ ಹೆಚ್ಚು ಗೌರವಾದರಗಳು ನಡೆದಿವೆ. ಅಮಾನುಲ್ಲಾ ಖಾನರವರಿಗೆ ಆತಿಥ್ಯವನ್ನು ಕೊಡುವುದರಲ್ಲಿ ನಡೆಯುವ ಅಂತರರಾಷ್ಟ್ರೀಯ ಸ್ಪರ್ಧೆಯ ಕಡೆಗೆ ಹಿಂದೂಸ್ಥಾನವು ಕಣ್ಣನ್ನು ತೆರೆಯಬೇಕು. ಈ ಮಧ್ಯದಲ್ಲಿ ಬರದ್ವಾನ ಮಹಾರಾಜರ ವಿಚಿತ್ರ ವಿನಂತಿಯು ಇವರಿಗೆ ಮಾಡಲ್ಪಟ್ಟಿತು. ಹಿಂದೀಯ ಹೆಸರಿನ ಮಹಾರಾಜರು ಬ್ರಿಟಿಷರ ಜಯಗೀತಗಳನ್ನು ಹಾಡುವುದರಲ್ಲಿ ಆನಂದವನ್ನು ಹೊಂದುವುದೇ ನಮ್ಮ ಪತನದ ಚಿತ್ರ. ಅಫಘಾನಿಸ್ಥಾನದ ಮಹಾರಾಜರನ್ನು ಸ್ವತಂತ್ರರೆಂದು ಒಲಿಸಿಕೊಳ್ಳಲು ಗೌರವಗಳು ವಿತರಿಸಲ್ಪಡುವಾಗ ತಿರಸ್ಕರಿಸಲ್ಪಟ್ಟ ಹಿಂದೀಯ ಮಹಾರಾಜರು ಅದರಲ್ಲಿ ಸಹಭಾಗಿಗಳಾಗುವುದು. ಆಶ್ಚರ್ಯ.

ನೋಟಗಳು.
NOTE...S.

ಸ್ವದೇಶಾಭಿಮಾನಿಯು ತನ್ನ ಕುಂಟ ಮಾಲೆಯಲ್ಲಿ ತುಂಟತನ ತೋರಿಸುತ್ತಾ ಬರುತ್ತಿದೆ ಎಂದು ಬರೆಯುವರು. ತುಂಟತನದವರು ಕುಂಟುತನಮಾಡುವಾಗ್ಗೆ ಸ್ವದೇಶಾಭಿಮಾನಿ ನೋಟಗಳಲ್ಲಿ ಕುಂಟ ಮಾಲೆ ತೋರಿಸಿದ್ದು ಆಶ್ಚರ್ಯವಲ್ಲ.

• • • •

ಮತದಾರ ವಿರೋಧದ ವಿಷಯ ಟೀಕೆ. ಈ ಟೀಕೆ ಬರೆದವರಿಗೇನೆ ಉಡಿದಾರ, ಜಾತೀಯತೆಯನ್ನು ಪ್ರಾರಂಭ ಮಾಡಿದ್ದು.........

• • • •

ಪರದೆಯೊಳಗೆ ನಡೆದಿರುವ ಜಾತೀಯತೆಯ ಆಟದ ಸೀನು ಹಳ್ಳಿಯವರಿಗೆ ತಿಳಿದಿದೆ ಎಂದು ಹಿಂದುಳಿದವನ ಟೀಕೆ; ಟೀಕೆಯವರೇ ಕಲಿಸಿ ಆಟ ಮಾಡಿ ಪರದೆಯೊಳಗಿಂದ ತೋರಿಸುವಾಗ್ಗೆ ತಿಳಿಯದೆ ಹೋದೀತೇ.

• • • •

"ನೀನು ಬೈದಿಲ್ಲವಾದರೂ ನಿನ್ನ ಅಪ್ಪ ಬೈದಿರಬೇಕು" ಎಂಬ ಕುರಿಮರಿ ತೋಳನ ಗಾದೆಗೆ ವಕೀಲರನ್ನು ಅಷ್ಟು ಬೇಗನೆ ಮುಂದೆ ಹಾಕಿರುವರು. ವಕೀಲರ ಮನವಿ ಮರೆತೇ ಹೋಯಿತು.

• • • •

ಒಟ್ಟಾರೆ "ಅಡಿಗೆ ಬಿದ್ದರೂ ಮೂಗು ಮೇಲೆ" ಎಂಬದನ್ನು ಹಿಂದುಳಿದವನು ರುಜುಪಡಿಸುತ್ತಿದ್ದಾನೆ.

• • • •

ತಾಲೂಕು ಬೋರ್ಡ ಟಿಟ್ ಬಿಟ್ಸ್:—ಕಷ್ಟದಿಂದ ತಾಲೂಕು ಬೋರ್ಡು ಪ್ರೆಸಿಡೆಂಟರಾದರು; ಖುರ್ಚಿ ಅಲಂಕಾರವಾಯಿತು; ರಿಕಾರ್ಡಿಗೆ ಹೆಡ್ ಕ್ಲಾರ್ಕರೇ ಗತಿ—ಹೆಡ್ ಕ್ಲಾರ್ಕರ ಉಪಾಸನೆ ನಡೆಯಬೇಕೇ ಬೇಕು. ಲಕ್ಷ್ಮೀಸಮೇತ ಹೆಡ್ ಕ್ಲಾರ್ಕ ನಾರಾಯಣನ ಆಹ್ವಾನ ಪೂಜಾದಿಗಳು ನಡೆದು ಉಡುಗೊರೆ ಉಚಿತಗಳ ನಂತರ ಉಪಾಸನೆ ಐಕ್ಯಂ ಹೊಂದಿತು. ಎಲ್ಲಿ?

ತಾಲೂಕು ಬೋರ್ಡು ಚುನಾವಣೆ.

"ಹಿಂದುಳಿದವ"ರೊಬ್ಬರಿಗೆ ನಮ್ಮ "ನೋಟಗಳ" ತುಂಟತನವು ಬಹಳ ಬಾಧಿಸಿಯದೆ. ಅಲ್ಲದೆ ನಮ್ಮ ಕಳೆದ ಅಗ್ರಲೇಖಗಳ ಊಹೆಗಳ ಖಂಡನೆಯ ಆವಶ್ಯಕತೆಯನ್ನು ತಿಳಿದು ಅವರು "ನವಯುಗ"ಕ್ಕೆ ಒಂದು ಪತ್ರವ್ಯವಹಾರವನ್ನೇ ಬರೆದಿರುವರು. ಈ ವಿಷಯದಲ್ಲಿ ನವಯುಗವು ಬರೆದ "ಚುನಾವಣೆಗಳಿಗನುಗುಣವಾಗಿ ತಾತ್ಕಾಲಿಕವಾಗಿ ಕಾರ್ಮುಗಿಲುಗಳಿದ್ದು ಸ್ವಲ್ಪ ಕ್ಷೋಭೆಯನ್ನುಂಟುಮಾಡಿ ನಂತರ ಹಾದು ಹೋಗುವವುಗಳಾಗಿವೆಯೆಂದೇ ನಮ್ಮ ಭರವಸೆ". ಎಂಬುದನ್ನು ನಾವು ತಿಳಿದುಕೊಂಡಿದುದರಿಂದಲೇ ಚುನಾವಣೆಯ ಗದ್ದಲದ ಮೇಲಿನ ಜಾತೀಯ ವೈಷಮ್ಯ ಪ್ರಕಟಣೆಗಳಿಗೆ ಪ್ರಾಮುಖ್ಯತೆಯನ್ನು ಕೊಡದೆ ನಾವು ವಿಶಾಲ ಪರಿಣಾಮವನ್ನು ಲಕ್ಷಿಸಿ ನಮ್ಮ ಅಭಿಪ್ರಾಯಗಳನ್ನು ರಚಿಸಿದ್ದೆವು. "ಹಿಂದುಳಿದವರು" ಚುನಾವಣೆಗಳಿಗೆ ಸ್ವಾಭಾವಿಕವಾದ ಆ ತಾತ್ಕಾಲಿಕ ಉತ್ತೇಜಕತೆಯನ್ನು ಇನ್ನೂ ಮರೆತಂತೆ ಕಾಣುವುದಿಲ್ಲ. ಚುನಾವಣೆಗಳ ವಿಷಯದಲ್ಲಿ ಉಂಟಾಗುವ ಜಾತೀಯ ತಪ್ಪು ಭಾವನೆಗಳ (misunderstandings) ಭಯದಿಂದ ಮಾತ್ರವೇ ಚುನಾವಣೆಗಳ ವಿಷಯ ಅಭಿಪ್ರಾಯಗಳನ್ನು ಕೊಡುವುದನ್ನು ಹಿಂದೆಗೆಯ ಬೇಕಾಗುತ್ತದೆ. ಆ ಕಾರಣದಿಂದಲೇ ಅವುಗಳ ವಿಷಯ ತರ್ಕವನ್ನೆಬ್ಬಿಸಲು ನಾವು ಒಪ್ಪುವುದಿಲ್ಲ. ಆದುದರಿಂದ ಕಳೆದ ಘಟನೆಗಳಿಗಾಗಿ ಜಾತೀಯ ವೈಷಮ್ಯವನ್ನೆಬ್ಬಿಸುವುದಕ್ಕಿಂತಲೂ ಮುಂದಿನ ವರ್ತನದ ವಿಷಯ ತರ್ಕಿಸುವುದಕ್ಕೆ "ಹಿಂದುಳಿದವರು" ಆಲೋಚಿಸುವರಾಗಿ ನಾವು ನೆನಸುವೆವು.

[illegible]

ವಿದೇಶ ವರ್ತಮಾನ.

— ಇಜಿಪ್ತದ ಸೆನೇಟಿನ ಪ್ರೆಸಿಡೆಂಟರಾಗಿದ್ದ ಹುಸ್ಸೈನ್‌ಪಾಶಾ ರುಸದಿಯವರು ಮೃತರಾದರು. ಯುದ್ಧದ ಸಮಯದಲ್ಲಿ ಇವರು ಇಜಿಪ್ತದ ಪ್ರೈಮ್ ಮಿನಿಸ್ಟರರಾಗಿದ್ದು ಬ್ರಿಟಿಷರಿಗೆ ಬಹಳ ಸಹಾಯವನ್ನು ಮಾಡಿದ್ದರು.

— ಚೈನದ ಕೊಮ್ಯುನಿಸ್ಟನಾಗಿದ್ದ ಚೊಂಗ್‌ಯುಕಾಯಿ ಎಂಬವನು ಲಿಂಬೂನಕಿಂಗನೆಂಬವನನ್ನು ಗಾಯಗೊಳಿಸಿದುದಕ್ಕಾಗಿ ಅವನಿಗೆ ಜನ್ಮಾಂತ್ಯದ ವರೆಗೆ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿರುವರು.

— ಬ್ರಿಟನಿನಲ್ಲಿ ಕೆಲಸ ಇಲ್ಲದಿರುವವರ ಸಂಖ್ಯೆಯು ೧,೩೪,೫೦೦. ಕಳೆದ ವರ್ಷ ಕೆಲಸವಿಲ್ಲದವರ ಸಂಖ್ಯೆಯು ಇನ್ನೂ ಹೆಚ್ಚಿತ್ತು.

— ಯುನೈಟೆಡ್ ಸ್ಟೇಟ್ಸಿನಲ್ಲಿ ಭೂಕಂಪವುಂಟಾಗಿ, ಸೆನ್ ಫ್ರೆನ್ಸಿಸ್ಕೊಕೆನಿಯನ್ ತಗ್ಗಿನಲ್ಲಿ ವಾಸಿಸುತ್ತಿದ್ದ ಜನರ ಮೇಲೆ ಮಣ್ಣು ಬಿದ್ದು ಸಜೀವ ಹುಗಿಯಲ್ಪಟ್ಟಿರುವರು. ಮಣ್ಣನ್ನು ಅಗೆಯುವಾಗ ಈಗ ಮೃತ ದೇಹಗಳು ನೂರಾರು ಸಿಕ್ಕುತ್ತಿವೆ.

— ಜರ್ಮನಿಯ ಕೈಸರನ ಭಾವನು ೨೮ ವರ್ಷ ಪ್ರಾಯದವನಾಗಿದ್ದರೂ ೬೩ ವರ್ಷ ಪ್ರಾಯದ ಒಬ್ಬ ರಾಜಕುಮಾರಿಯನ್ನು ಮದುವೆಯಾಗಿದ್ದನು. ಈಗ ಆತನನ್ನು ಅಯೋಗ್ಯ ಮನುಷ್ಯನೆಂದು ಊರಿನಿಂದ ಹೊರಗೆ ಹಾಕಿರುವರು. ಆತನೀಗ ಕೊಂಗೊ ಪಟ್ಟಣಕ್ಕೆ ಹೋಗಿರುವನು. ಅಲ್ಲಿ ಆತನ ಬಳಗದವರಿರುವರಂತೆ.

— ಲಂಡನಿನ ಸಮೀಪ ಎರಡು ವಾಯು ವಿಮಾನಗಳು ಒಂದಕ್ಕೊಂದು ಬಡಿದು ೮೦೦ ಅಡಿ ಎತ್ತರದಿಂದ ಕೆಳಕ್ಕೆ ಬಿದ್ದವು. ಎರಡೂ ವಿಮಾನಗಳ ಆಫೀಸರರು ಸತ್ತುಹೋದರು. ಆದರೆ ಪ್ರಯಾಣಿಕರು ಸತ್ತುಹೋಗಲಿಲ್ಲ.

— ಯಾಮೆನಿನಲ್ಲಿ ಹಾವಳಿಯನ್ನು ಮಾಡುತ್ತಿದ್ದ ಅರಬಿಯರ ಜಿಡಿಸ್ ಎಂಬ ಪಂಗಡವನ್ನು ಚೆನ್ನಾಗಿ ಶಿಕ್ಷಿಸಿರುವರು.

— ಲೇಡಿ ಎಬಿಬೈಲಿಯು ಕೆನಿಯಕ್ಕೆ ಬಂದು ಅಲ್ಲಿಂದ ಮಾಲ್ಟಾವಿಗೆ ತೆರಳಿದಳು.

— ಯುದ್ಧದ ಸಮಯದಲ್ಲಿ ಮಾಡಿದ ಸಾಲದ ಮರುಪಾವತಿಯ ಐದನೆಯ ಕಂತಿನ ಎರಡು ಮಿಲಿಯ ಸ್ಟರ್ಲಿಂಗುಗಳನ್ನು ಇಟಲಿ ಸರಕಾರದವರೂ, ನಾಲ್ಕನೇ ಕಂತಿನ ಮೂರು ಮಿಲಿಯ ಸ್ಟರ್ಲಿಂಗುಗಳನ್ನು ಫ್ರೆಂಚ ಸರಕಾರದವರೂ, ಬ್ರಿಟಿಷ್ ಸರಕಾರಕ್ಕೆ ಕೊಟ್ಟಿರುವರು.

ಆಫ್ರಿಕದಲ್ಲಿ ಅಮೇರಿಕನ್ ಪ್ರಯಾಣಿಕರು ತುಂಬಿದ್ದ ಒಂದು ರೈಲುವೇ ಗಾಡಿಗೆ ಬೆಂಕಿ ಹಿಡಿಯಿತು. ಪ್ರಯಾಣಿಕರಿಗೆ ಇದು ತಿಳಿದು, ಅವರ ವಸ್ತ್ರದ ಮೂಟೆಗಳನ್ನು ಬಂಡಿಯಲ್ಲಿಯೇ ಬಿಟ್ಟು ಓಡಿ ಹೋದರು. ವಸ್ತ್ರ ಮೊದಲಾದವುಗಳು ಸುಟ್ಟು ಹೋದವು. ಪ್ರಯಾಣಿಕರಲ್ಲಿ ಕೆಲವರಿಗೆ ಗಾಯಗಳಾಗಿರುವುವಾದರೂ ಮರಣಗಳುಂಟಾಗಿಲ್ಲ.

— ನ್ಯಾಟ್‌ರಸ್ಯದಲ್ಲಿ ಒಬ್ಬ ಕೊಮ್ಯುನಿಸ್ಟನನ್ನು ಕೊಂದಿರುವರು.

— ಒರೇಂಜ್ ಫ್ರೀಸ್ಟೇಟಿನಲ್ಲಿ ಎಣ್ಣೆಯ ಗಣಿಗಳಿರುವವೆಂದು ಕಂಡುಕೊಂಡಿರುವರು. ಅಲ್ಲಿ ಎಣ್ಣೆ ಅಗಿಯುವ ಕಾರಖಾನೆಯನ್ನು ಮಾಡಿದರೆ ಬಹಳ ಲಾಭವಾಗಬಹುದಂತೆ.

— ಯುನೈಟೆಡ್ ಸ್ಟೇಟ್ಸಿನಲ್ಲಿ ಯುದ್ಧ ನಾವೆಗಳನ್ನು ಕಟ್ಟಿಸಬೇಕೆಂದು ನಿರ್ಣಯಿಸಿರುವರು. ಇವಕ್ಕೆ ಒಟ್ಟು ೨೭೪ ಮಿಲಿಯ ಡೊಲ್ಲರುಗಳು ಬೇಕಾಗುವವು.

— ಲಂಡನಿನಲ್ಲಿ ವೆಂಕೋವರ್ ಕೋಟೆಯ ವರ್ಧಂತಿ ಉತ್ಸವವು ಜರಗಿಸಲ್ಪಟ್ಟಿತು.

— ಇಂಗ್ಲಾಂಡಿನ ಸನ್ ಫೋರ್ಡ್ ಸಕ್ರಿಯಲ್ಲಿ ಒಂದು ಶಾಲೆಯಲ್ಲಿ ಒಬ್ಬ ಹುಡುಗನೂ ನಾಲ್ಕು ಜನ ಹುಡುಗಿಯರೂ ಬೆಂಕಿಗೆ ಆಹುತಿಯಾದರು. ಮಾಳಿಗೆಯಲ್ಲಿ ಈ ಮಕ್ಕಳು ಮಲಗಿದ್ದರು. ಉಪಾಧ್ಯಾಯಿನಿಯು ಇತರ ಮೂವರನ್ನು ಹೇಗಾದರೂ ಬದುಕಿಸಿದಳು. ಇವರನ್ನು ಬದುಕಿಸಲಾಗಲಿಲ್ಲ. ಸತ್ತ ಮಕ್ಕಳ ಹೆತ್ತವರೆಲ್ಲರೂ ಪರದೇಶಗಳಲ್ಲಿರುವರಂತೆ.

— ಫ್ರೌ ಲೈನ್ ಕ್ಲೆರೆನೋರ್‌ಸ್ಟಿನ್ ಎಂಬ ಜರ್ಮನ ಹುಡುಗಿಯೋರ್ವಳು ಒಂದು ಮೋಟಾರಿನಲ್ಲಿ ಕುಳಿತು ಭೂಸಂಚಾರವನ್ನು ಮಾಡಬೇಕೆಂದು ಕಳೆದ ಮೇ ತಿಂಗಳಲ್ಲಿ ಹೊರಟಿದ್ದಳು. ಅವಳು ಬಲ್ಕಾನ್ಸ್, ತುರ್ಕಿ, ಸಿರಿಯಾ, ಪರ್ಸಿಯಾ, ಕೊಕೆಸಿಯಾ, ರಸ್ಯಾ, ಸೈಬೇರಿಯಾ, ಮತ್ತು ಮೊಂಗೋಲಿಯಾ ದೇಶಗಳನ್ನು ದಾಟಿ ಈಗ ಚೀನಾದೇಶಕ್ಕೆ ಬಂದಿರುವಳು. ಇರ್‌ಕುಟ್ಸ್ಕ ಎಂಬ ಸರೋವರದ ಮೇಲೆ ಹಾದು ಹೋಗುವದಕ್ಕಾಗಿ ಅವಳು ೬ ತಿಂಗಳುಗಳ ವರೆಗೆ ಕಾದು ನಿಂತು ಕೊನೆಗೆ ಸರೋವರದ ನೀರು ಗಟ್ಟಿಯಾದ ಮೇಲೆ ಅದರ ಮೇಲೆ ಮೋಟಾರನ್ನೋಡಿಸಿದಳು. ಹಾದಿಯಲ್ಲಿ ಕಳ್ಳರು ತೋಡಿದ ಕಣಿಯಲ್ಲಿ ಕಾರು ಬಿದ್ದಿತಾದರೂ, ಉಪಾಯದಿಂದ ತಪ್ಪಿಸಿಕೊಂಡು ಬಂದಳು. ಇವಳೀಗ ಜಪಾನಿಗೆ ಹೋಗಿ, ಅಲ್ಲಿಂದ ಅಮೇರಿಕಕ್ಕೆ ತೆರಳುವಳು.

ಒಳದೇಶ ವರ್ತಮಾನ.

— ಕೊಲೊಂಬೊದಲ್ಲಿ ಎರಡು ರೈಲು ಗಾಡಿಗಳು ಒಂದಕ್ಕೊಂದು ತಾಗಿ ೨೮ ಜನರು ಮೃತಪಟ್ಟರು. ೧೧ ಜನರು ಗಾಯಹೊಂದಿದರು.

— ವಿಯನ್ನಾದಲ್ಲಿ ಜರಗಲಿಕ್ಕಿರುವ ಯುವಕ ಪರಿಷತ್ತಿಗೆ ಮಹಾತ್ಮಾಜಿಯವರನ್ನು ಆಮಂತ್ರಿಸಿರುವುದರಿಂದ ಅವರು ಅಲ್ಲಿಗೆ ತೆರಳುವರು. ಅಲ್ಲಿಗೆ ಹೋದಾಗ ಮಹಾತ್ಮಾಜಿಯವರು ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಸ್ವಿಜರ್‌ಲೇಂಡ್ ಮತ್ತು ಆಸ್ಟ್ರಿಯಾ ದೇಶಗಳನ್ನು ಸಂದರ್ಶಿಸುವರು.

— ಮೂವರು ಪಾರ್ಸಿಗಳು ಸ್ಯಾಕಲಿನ ಮೇಲೆ ಕುಳಿತು ಭೂಸಂಚಾರವನ್ನು ಮಾಡಬೇಕೆಂದು ೧೯೨೩ನೇ ಇಸವಿಯ ಅಕ್ಟೋಬರ ೧೫ನೇ ತಾರೀಕಿನ ದಿನ ಮುಂಬಾಯಿಯಿಂದ ಹೊರಟು ಯುರೋಪಿಗೆ ಹೋಗಿ, ಆಯರ್‌ಲೇಂಡಿನಿಂದ ನ್ಯೂಯೋರ್ಕಿಗೆ ಹಡಗದ ಮೇಲೆ ಪ್ರಯಾಣ ಮಾಡಿ, ಸೆನ್‌ಫ್ರೆನ್ಸಿಸ್ಕೊವಿನಿಂದ ಜಪಾನಕ್ಕೆ ಹಡಗವನ್ನು ಹತ್ತಿ ಅಲ್ಲಿಂದ ಚೈನಾ ಮಾರ್ಗವಾಗಿ, ಬರ್ಮವನ್ನು ದಾಟಿ ಮೊನ್ನೆ ತಾನೇ ಪುನಃ ಮುಂಬಾಯಿಗೆ ಬಂದು ತಲಪಿದರು.

— ಕುಂಭಕೋಣದಲ್ಲಿ ಕಳ್ಳನೋರ್ವನು ಹೆಂಗಸಿನ ವೇಷವನ್ನು ಧರಿಸಿ ರೈಲುವೇಯಲ್ಲಿ ಪ್ರಯಾಣ ಮಾಡುತ್ತಾ ಸಿಕ್ಕಿದವರನ್ನು ಸುಲಿಯುತ್ತಿದ್ದನು. ಕೊನೆಗೆ ಆತನು ಪೋಲೀಸರ ಕೈಗೆ ಸಿಕ್ಕಿಬಿದ್ದು ಎರಡು ವರ್ಷದ ಕಠಿಣ ಶಿಕ್ಷೆಗೆ ಗುರಿಯಾದನು.

— ಎ. ಜಿ. ದೋಸನೆಂಬ ಹೆಸರಿನಿಂದ ಕ್ರೈಸ್ತ ಮತಕ್ಕೆ ಪರಿವರ್ತಿತನಾದ ಮುಸಲ್ಮಾನನೋರ್ವನು ಬಹಳ ಅನ್ಯಾಯವನ್ನುಮಾಡಿ ಕಾಣದೆ ಓಡಿಹೋಗಿದ್ದನು. ಕೊನೆಗೆ ಮೊನ್ನೆ ಆತನು ಮದರಾಸಿನಲ್ಲಿ ಕಾಣಸಿಕ್ಕಿದುದರಿಂದ ಆತನನ್ನು ಕೈದುಮಾಡಿ ವಿಚಾರಣೆಯು ನಡೆಯುತ್ತಲಿದೆ.

— ಪಾಲಘಾಟಿನ ಮುನಿಸಿಪಾಲಿಟಿಯ ಸದಸ್ಯತನಕ್ಕೆ ಉಮೇದ್ವಾರರ ಇಲೆಕ್ಷನು ನಡೆಯುವಾಗ ಉಮೇದ್ವಾರರು ವೋಟರರಿಗೆ ತಿಂಡಿ ತಿನಸುಗಳನ್ನು ಒದಗಿಸಿ ಕೊಟ್ಟುದಕ್ಕಾಗಿ ಇಲೆಕ್ಷನನ್ನೇ ನಿಲ್ಲಿಸಬೇಕೆಂದು ಸಬೋರ್ಡಿನೇಟ್ ಜಡ್ಜರು ಹುಕುಮು ಕೊಟ್ಟರು. ಇನ್ನೊಮ್ಮೆ ಇಲೆಕ್ಷನ್ ಮಾಡುವ ಸಮಯವನ್ನು ಮುಂದರಿಸಿರುವರು.

— ರೋಯಾಪುರದಲ್ಲಿ ಬೆಂಕಿಯ ಹಾವಳಿಯಿಂದ ಸುಮಾರು ೨೫ ಮನೆಗಳು ಸುಟ್ಟುಹೋಗಿ ೩೦೦ ಜನರು ನಿರ್ಗತಿಕರಾಗಿರುವರು. ಮೊದಲು ಒಬ್ಬ ಪಲ್ಯಕಾಯಿ ಮಾರುವವನ ಮನೆಯಲ್ಲಿ ಉಂಟಾದ ಬೆಂಕಿಯು ಗಾಳಿಯ ದೆಸೆಯಿಂದ ಜೋರು ಹಬ್ಬಿ ಹಲವು ಮನೆಗಳು ಸುಟ್ಟುಹೋದವು. ಆಗ ನಡೆದ ಆಶ್ಚರ್ಯವೆಂದರೆ ಒಂದು ಮನೆಯಲ್ಲಿದ್ದ ಒಂದು ಬೆಕ್ಕು ಅಂದೇ ನಾಲ್ಕು ಮರಿಗಳನ್ನಿಟ್ಟಿತು. ಆ ಮನೆಗೆ ಬೆಂಕಿ ತಾಗಿದೊಡನೆ ಒಂದೊಂದೇ ಮರಿಯನ್ನು ಬಾಯಿಯಲ್ಲಿ ಹಿಡಿದು ದೂರಕ್ಕೆ ಕೊಂಡು ಹೋಗಿ ಇಟ್ಟಿತು. ಮೂರು ಮರಿಗಳನ್ನೊಯ್ದು ನಾಲ್ಕನೇ ಮರಿಯನ್ನೊಯ್ಯಲು ಮನೆಯೊಳಗೆ ಹೋದಾಗ ಬೆಂಕಿ ಜೋರಾಗಿ ಹೊರಗೆ ಬರಲಿಕ್ಕಾಗದೆ ಸುಟ್ಟುಹೋಯಿತು.

— ಮಹಾತ್ಮಾ ಗಾಂಧಿಯವರು ಈಗ ಪುನಃ ಅಸೌಖ್ಯದಲ್ಲಿರುವರು. ಅವರನ್ನು ಕಾಣಲಿಕ್ಕಾಗಿ ಜಮ್ನಾಲಾಲ್ ಬಜಾಜರೂ ಡಾಕ್ಟರ್ ಅನ್ಸಾರಿಯವರೂ ಹೋಗಿದ್ದರು.

— ಬನಾರಸ್ ಜಿಲ್ಲೆಯಲ್ಲಿ ಒಂದು ಮೋಟರ್ ಅಪಘಡವಾಗಿ ಇಬ್ಬರು ಹೆಂಗಸರು ಸತ್ತರು. ಅನೇಕರು ಗಾಯಹೊಂದಿದರು. ಗಾಯಹೊಂದಿದವರಲ್ಲಿ ಐದು ಜನರ ಸ್ಥಿತಿಯು ಬಹು ಸಂಶಯಾಸ್ಪದ.

— ಸೌತ್ ಇಂಡಿಯನ್ ರೈಲ್ವೆ ಏಜನ್ಸಿಯವರು ಸೇಲಮ್‌ನಿಂದ ಮೆಟ್ಟೂರಿನ ವರೆಗೆ ೫ ಫೀಟು ೬ ಇಂಚು ಅಗಲದ ರೈಲ್ವೆ ಕಂಬಿಯನ್ನು ತೆರೆಯಬೇಕೆಂದು ರೈಲ್ವೆ ಬೋರ್ಡಿನವರು ಸೆಂಕ್ಷನ್ ಮಾಡಿರುವರು. ಈ ಮಾರ್ಗದ ಉದ್ದವು ಒಟ್ಟು ೨೬.೪೮ ಮೈಲುಗಳು.

— ಮೈಸೂರಿನ ಆಫೀಸಿಯೇಟಿಂಗ್ ರೆಸಿಡೆಂಟ್ ಮತ್ತು ಕೊಡಗಿನ ಚೀಫ್ ಕಮಿಶನರರಾಗಿ ಹೊನರೇಬಲ್ ಮಿಸ್ಟರ್ ಎಲ್. ಎಮ್. ಕ್ರೆಂಪರು ನೇಮಕಹೊಂದಿರುವರು.

— ನೋರ್ತ್ ವೆಸ್ಟರ್ನ್ ರೈಲ್ವೆಯ ಲಾಹೋರಿನ ಗಾರ್ಡನ ಮಗನಾಗಿದ್ದ ಹದಿನಾಲ್ಕು ವರ್ಷ ಪ್ರಾಯದ ಬಾಲಕನನ್ನು ಕದ್ದುಕೊಂಡು ಹೋಗಿ ನಾಲ್ಕೈದು ದಿನಗಳ ವರೆಗೆ ಅಡಗಿಸಿಟ್ಟು, ತರುವಾಯ ಕೊಂದು ಶವವನ್ನು ಸ್ಟೇಶನಿನ ಸಮೀಪದ ಕೆರೆಯಲ್ಲಿ ಬಿಸಾಡಿರುವರು.

— ಗೋವೆಯಲ್ಲಿ ಹಲವು ಜನ ಗೌಡ ಕ್ರೈಸ್ತರನ್ನು ಹಿಂದೂ ಮತಕ್ಕೆ ಸೇರಿಸಿರುವರು.

— ಕಲಕತ್ತದ ಸಿಕ್ಖರ ಧುರೀಣನಾದ ಬಾಬಾ ಗುರುದತ್ತ ಸಿಂಗನನ್ನು ಕೈದುಮಾಡಿ, ಕೊನೆಗೆ ಕಾಂಗ್ರೆಸ್ ಕಮಿಟಿಯವರ ಅಪ್ಪಣೆಯಂತೆ ಜಾಮೀನಿನ ಮೇಲೆ ಬಿಟ್ಟರು.

— ಮದರಾಸಿನ ಗವರ್ನರ ದಂಪತಿಗಳು ಡಿಲ್ಲಿಗೆ ತೆರಳಿರುವರು. ವೈಸರಾಯರು ಈಗ ಡಿಲ್ಲಿಯಲ್ಲಿರುವುದರಿಂದ ಅವರು ವೈಸರಾಯರ ಅತಿಥಿಗಳಾಗುವರು.

— ಬನಾರಸಿನಲ್ಲಿ ಪ್ಲೇಗ್ ಮತ್ತು ಕೋಲಿರಾ ರೋಗಗಳು ತಲೆದೋರಿ, ಸುತ್ತಮುತ್ತಲೂ ಅನೇಕ ಮರಣಗಳಾದವು.

— ಮಹಾತ್ಮಾ ಗಾಂಧಿಯವರನ್ನು ಡಾಕ್ಟರ್ ಅನ್ಸಾರಿಯವರು ಪರೀಕ್ಷಿಸಿದರು. ಅವರೀಗ ೯೬ ರಾತಲು ಭಾರವಿರುವರು. ಅಂದರೆ ಕೆಲವು ದಿನಗಳ ಹಿಂದೆ ಇದ್ದುದಕ್ಕಿಂತ ಎರಡು ರಾತಲು ಭಾರದಲ್ಲಿ ಜಾಸ್ತಿಯಾಗಿರುವರು.

— ದೋಹಾದಿನ ಮುನಿಸಿಪಲ್ ಶಾಲೆಯು ಕುಸಿದು ಬಿದ್ದು ೨೦ ಜನ ವಿದ್ಯಾರ್ಥಿಗಳೂ ನಾಲ್ಕು ಜನ ಉಪಾಧ್ಯಾಯರೂ ಗಾಯಹೊಂದಿದರು.

ವೆಂಕಟ ರಾಮ ಶಾಸ್ತ್ರಿಗಳು ತನ್ನ ಮಂತ್ರಿಪದವಿಗೆ ರಾಜಿನಾಮೆಯನ್ನು ಕೊಟ್ಟುದಕ್ಕಾಗಿ ಪಂಡಿತ ಮೋತಿಲಾಲ ನೆಹರುರವರು ಅಭಿನಂದನೆಯ ಒಂದು ತಂತಿಯನ್ನು ಬಿಟ್ಟಿರುವರು.

ತಿನ್ನವೆಲ್ಲಿಯಲ್ಲಿ ಲಕ್ಷ ಗಟ್ಟಲೆ ರೂಪಾಯಿ ಖರ್ಚು ಮಾಡಿ ಕಟ್ಟಿಸಿದ ಇಗರ್ಜಿಯ ಪ್ರವೇಶ ಸಮಾರಂಭವು ಕಳೆದ ೧೫ನೇ ತಾರೀಕಿನ ದಿನ ಬೆಳಗ್ಗೆ ನಡೆಯಿತು.

— ಪ್ರೊಫೆಸರ್ ರಾಮಮೂರ್ತಿಯವರು ತನ್ನ ಸರ್ಕಸಿನೊಂದಿಗೆ ಎಲಿಪ್ಪಿಗೆ ತಲಪಿರುವರು. ಅಲ್ಲಿ ಅವರು 'ಶಾರೀರಿಕ ಶಿಕ್ಷಣೆಯ ಕುರಿತು ಒಂದು ಸ್ಫೂರ್ತಿದಾಯಕ ಭಾಷಣವನ್ನಿತ್ತರು. ಈ ಸಂದರ್ಭದಲ್ಲಿ ಸೆಷನ್ ಜಡ್ಜರು ಅಧ್ಯಕ್ಷರಾಗಿದ್ದರು.

ಮದರಾಸಿನಲ್ಲಿ ಒಂದು ಸುಧಾರಿತ ವಿವಾಹವು ನಡೆಯಿತು. ವರನು ಮಧ್ವಮತದವನು. ವಧುವು ಸ್ಮಾರ್ತ ಮತದವಳು. ಮದುವೆಯು ಮಾತ್ರ ಶಾಸ್ತ್ರೋಕ್ತವಾದ ರೀತಿಯಲ್ಲಿಯೇ ನಡೆಯಿತು. ವರನ ಕಡೆಯವರೂ ವಧುವಿನ ಕಡೆಯವರೂ ಅನೇಕ ಜನರು ಬಂದು ದಂಪತಿಗಳಿಗೆ ಉಡಿಗೆರೆಗಳನ್ನು ಕೊಟ್ಟರು.

ನಾಗಪುರದ ಅಂದಿನ ಕಲಹದಲ್ಲಿ ಹಿಂದುಗಳು ಮುಸಲ್ಮಾನರನ್ನು ಕೊಂದು ಅವರ ಮನೆಗಳನ್ನು ಸುಟ್ಟುಹಾಕಿದ್ದರೆಂದು ಅವರ ಮೇಲೆ ಅಪವಾದವಿದ್ದಿತು. ಜೂರಿಗಳು ಹಿಂದುಗಳು ನಿರಪರಾಧಿಗಳೆಂದು ತೀರ್ಮಾನಿಸಿದರು. ಆದರೆ ಜಡ್ಜರು ಜೂರಿಗಳ ತೀರ್ಮಾನಕ್ಕೊಪ್ಪದೆ ನಂಬ್ರವನ್ನು ಹೈಕೋರ್ಟಿಗೆ ಟ್ರಾನ್ಸ್‌ಫರ್ ಮಾಡಿರುವರು

— ಮುಂಬಾಯಿಯ ವಿಕ್ಟೋರಿಯಾ ಟರ್ಮಿನಸಿನಲ್ಲಿ ರೈಲು ಬಂದು ನಿಂತಾಗ ಗಾಡಿಯೊಂದರಲ್ಲಿ ಒಬ್ಬ ಯುರೋಪಿಯನನ ಶವವಿದ್ದಿತು. ಆತನ ಮುಖದಲ್ಲಿ ಗುಂಡಿನ ಹೊಡೆತದ ಕುರುವಿದ್ದಿತು. ಬಲಗೈಯಲ್ಲಿ ಪಿಸ್ತೊಲು ಇದ್ದಿತು. ಅವನೊಡನೆ ಇದ್ದದ್ದೆಂದರೆ ಒಂದು, ಫಸ್ಟ್‌ಕ್ಲಾಸ್ ಟಿಕೇಟು ಮತ್ತು ಒಂದು ಕರವಸ್ತ್ರ. ಕರವಸ್ತ್ರದ ಮೇಲೆ ಆರ್. ಪಿ. ಎಂದು ಬರೆದಿದ್ದಿತು.

— ಗೋವೆಯಲ್ಲಿ ಕ್ರಿಶ್ಚಿಯನರನ್ನು ಆರ್ಯಸಮಾಜಕ್ಕೆ ಸೇರಿಸಿದುದಕ್ಕಾಗಿ ಸಮಾಜದ ಮುಖ್ಯ ಅಧಿಕಾರಿಗಳನ್ನು ಕೈದು ಮಾಡಿದರು. ಇದು ಯೋಗ್ಯವಲ್ಲವೆಂದು ಮುಂಬಾಯಿ ಕೌನ್ಸಿಲಿನವರು, ಗೋವೆಯ ಗವರ್ನರ ಜನರಲರಿಗೆ ಬರೆದಿರುವರು.

ದಕ್ಷಿಣ ಕನ್ನಡ.

ಮಂಗಳೂರು: - ರಾಜೇಶ್ರೀ ಗುರುಪುರ ಕೃಷ್ಣಪ್ರಭುಗಳವರ ಪುತ್ರ ರಾ। ಗುರುಪುರ ಪಾಂಡುರಂಗ ಪ್ರಭು ಬಿ. ಎ. ಇವರು ಶ್ರೀ ರಾಮಕೃಷ್ಣ ಮಿಶನಿಗೆ ಸೇರಿ ಇದೇ ಕಳದ ಮಂಗಳವಾರ ಸಾಯಂಕಾಲ ಘಂಟೆ ೬ಕ್ಕೆ ಕೆನರಾ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ, ಡಿಸ್ಟ್ರಿಕ್ಟ ಮುನ್ಸಿಫರಾದ ರಾ। ಸಿ. ಆರ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಇಂಗ್ಲಿಷಿನಲ್ಲಿ (what is Religion?) ಎಂಬುದರ ಕುರಿತು ಒಂದು ಬಹಿರಂಗವಾದ ಭಾಷಣವನ್ನು ಮಾಡಿದರು.

ಕೆಲವು ಸಮಯದ ಹಿಂದೆ ಇಲ್ಲಿಯ ಪಿಯರ್ಸ್‌ಲೆಸ್ಲಿ ಕಂಪೆನಿಯ ವಾಟ್ಸ್ ದೊರೆಗಳ ಮೋಟಾರು ಸ್ಯಾಕಲಿಗೆ, ತನ್ನ ಮೋಟಾರು ಕಾರನ್ನು ತಗಲಿಸಿ, ಧೊರೆಗಳ ಕಾಲಿಗೆ ಜಖಮನ್ನುಂಟುಮಾಡಿದ ಮನಡಿಯರ್ ಎಂಬವರಿಗೆ ಟೌನ್ ಮೆಜಿಸ್ಟ್ರೇಟರು ೫೦ ರೂಪಾಯಿಗಳ ಜುರುಮಾನೆಯನ್ನೂ, ೬ ತಿಂಗಳುಗಳ ಶಿಕ್ಷೆಯನ್ನೂ ವಿಧಿಸಿ, ಅವರ ಲೈಸನ್ಸನ್ನು ರದ್ದುಪಡಿಸಿದ್ದರು. ಆದರೆ ಅಪ್ಪೀಲು ಮಾಡಲಾಗಿ ಡಿಸ್ಟ್ರಿಕ್ಟ ಕಲೆಕ್ಟರರು, ಸದರಿಯವರಿಗೆ ೧೦೦ ರೂಪಾಯಿ ಜುರುಮಾನೆಯನ್ನು ಮಾತ್ರ ವಿಧಿಸಿ ಜೈಲಿನ ಶಿಕ್ಷೆಯನ್ನು ತೆಗೆದುಹಾಕಿದರು.

ಮಂಗಳೂರು ತಾಲೂಕು ಬೋರ್ಡಿನ ಬರುವ ಸಾಧಾರಣ ಸಭೆಯು ಇದೇ ಮಾರ್ಚಿ ತಿಂಗಳ ೩೦ನೇ ಶುಕ್ರವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವದು.

/ ನಮ್ಮ ಜಿಲ್ಲೆಯ ಕಲೆಕ್ಟರರಾಗಿ ನೇಮಕಹೊಂದಿದ ಮಿಸ್ಟರ್ ಸಿ. ಜಿ. ಹರ್ಬರ್ಟ್ ಧೊರೆಗಳು ಕಳೆದ ಮಂಗಳವಾರ ದಿನ ಮೈಲಿನಲ್ಲಿ ಬಂದು ಬುಧವಾರ ತನ್ನ ಕೆಲಸದ ಚಾರ್ಜನ್ನೂ ಪಡಕೊಂಡರು. ಮೊದಲಿನ ಕಲೆಕ್ಟರರಾಗಿದ್ದ ಮಿ. ಇ. ಎಮ್. ಗೋನ್ ಧೊರೆಗಳು ತನ್ನ ಚಾರ್ಜನ್ನು ಇವರಿಗೆ ವಹಿಸಿಕೊಟ್ಟು ತಾನು ಮಲಬಾರಿಗೆ ತೆರಳಿದರು.

ತಾರೀಕು ೧೬—೩—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೮ ಮರಣಗಳಾದವು. ಈ ಪ್ಯೆಕಿ ಶ್ವಾಸಕೋಶದ ರೋಗದಿಂದ ೯. ಇತರ ಎಲ್ಲಾ ಕಾರಣಗಳಿಂದ ೯. ಜನನ ಸಂಖ್ಯೆಯು ಒಟ್ಟು ೩೮.

ಕಾಸರಗೋಡು ತಾಲೂಕಿನ ಜಮೀನುದಾರರ ಸಭೆಯು ಕಾಸರಗೋಡಿನಲ್ಲಿ, ವಕೀಲ್ ರಾ। ಕೆ. ನರಸಿಂಗ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ, ತಾಲೂಕಿನ ಜಮೀನುದಾರರ ಸಂಘವನ್ನು, ಜಿಲ್ಲೆಯ ಸಂಘದ ಆಶ್ರಯದಲ್ಲಿ ಸ್ಥಾಪಿಸಬೇಕೆಂದೂ, ಪ್ರತಿ ಗ್ರಾಮದಲ್ಲಿ ಒಂದೊಂದು ಶಾಖೆಯನ್ನು ತೆರೆಯಬೇಕೆಂದೂ ನಿರ್ಣಯವಾಯಿತು.

ಇದೇ ತಿಂಗಳ ತಾರೀಕು ೨೫ನೇ ಆದಿತ್ಯವಾರ ಬೆಳಗ್ಗೆ ೭॥ ಘಂಟೆಗೆ ಮಂಗಳೂರು ಬ್ರಾಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಕಾರ್ನಾಡ್ ಸದಾಶಿವರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣ ಏಸೋಶಿಯೇಶನಿನವರು, ವಿದ್ಯಾರ್ಥಿ ಭವನದ ಹೋಲಿನಲ್ಲಿ ಮಹಾರಾಜೇಶ್ರಿ ಕಲ್ಮಾಡಿ ಲಕ್ಷ್ಮೀನಾರಾಯಣರಾವ್ ಮತ್ತು ಪಾಂಗಾಳ ಸುಬ್ಬರಾವ್, ಇವರಿಬ್ಬರ ಭಾವಚಿತ್ರಗಳು ಇರಿಸುವ ಸಮಾರಂಭವನ್ನು ಇದೇ ಬರುವ ತಾ ೨೫ನೇ ಆದಿತ್ಯವಾರ ರಾಜೇಶ್ರಿ ಮಹಾಬಲ ಹೆಗ್ಗಡೆಯವರ ಅಧ್ಯಕ್ಷತನದಲ್ಲಿ ನಡಿಸುವರು.

ಕಳದ ತಾರೀಕು ೨೬ನೇ ಗುರುವಾರ ಚಾಂದ್ರಮಾನ ಯುಗಾದಿ ದಿನ, ಸ್ವಾಮಿ ವಿರೇಶ್ವರಾನಂದರವರು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಸ್ವಾಮಿ ವಿವೇಕಾನಂದರ ಮತ್ತು ಶ್ರೀ ರಾಮಕೃಷ್ಣ ಪರಮಹಂಸರ ಭಾವ ಚಿತ್ರಗಳ ಅನಾವರಣ ಸಮಾರಂಭವನ್ನು ಜರಗಿಸಿದರು.

ಇದೇ ಬರುವ ಮಾರ್ಚಿ ೩೧ಕ್ಕೆ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಸೇರಲಿರುವದು. ಈ ಸಭೆಯಲ್ಲಿ ೧೯೨೮-೨೯ನೇ ಇಸವಿಯ ಬಜೆಟು ಸಭೆಯ ಮುಂದೆ ಇಡಲಾಗುವುದು.

ಕಾರ್ಕಳ ತಾಲೂಕು ಬೋರ್ಡಿಗೆ ಚುನಾವಣೆಯಾಗಿ ಬಂದ ಮೆಂಬರರು, ಕಾರ್ಕಳ ಸರ್ಕಲ ಶ್ರೀ ಶಿವಪ್ಪ ಹೆಗ್ಗಡೆ. ಅದ್ಯೆ ಮಂಜಪ್ಪ ಅಡ್ತಂತಾಯ. ನಂದ್ಯಪ್ಪ ಶೆಟ್ಟಿ. ಅಜೆಕಾರು ಸರ್ಕಲಿಗೆ. ನಾಗಣ್ಣ ಹೆಗ್ಗಡೆ ತಿಂಗಳೆ ವೆಂಕಪ್ಪ ಹೆಗ್ಗಡೆ. ಹೆಬ್ರಿ ಭುಜಂಗ ಬಳ್ಳಾಲ. ಮೂಡಬಿದ್ರೆ ಸರ್ಕಲಿನಿಂದ ದೇಜು ಸೆಟ್ಟಿ, ಧರ್ಮಸ್ವಾಮಿ ರಾಜರು ಮತ್ತು ಎಮ್. ರಾಮಣ್ಣ ಸೆಟ್ಟಿ, ವೇಣೂರು ಸರ್ಕಲಿನಿಂದ ಇರ್ವತ್ತೂರು ನಾರಾಯಣ ನಾಯ್ಕ, ಸದಾಶಿವಭಟ್ಟ, ಇದ್ಯ ವಾಸುದೇವಯ್ಯ.

ಪೊಳಲಿ: — ಅಖಿಲ ಕರ್ನಾಟಕದಲ್ಲಿ ಪ್ರಖ್ಯಾತಿಹೊಂದಿದ ಸಕಲರಾಜ ಮಾಂಡಲೀಕಾದಿ ಭಜಕ ಮಂಡಲಿಯವರಿಂದಲೂ ಕಪ್ಪಕಾಣಿಕೆಗೊಂಡು ಶ್ರೀಮನ್ಮಹಾದೇವ ದೇವೋತ್ತಮರ್ಮಾ ಪರಮೇಶ್ವರಿ ರಾಜರಾಜೇಶ್ವರಿ ಎನಿಸಿಮೆರೆವ ಬಿರುದಾಂಕಿತ ಪೊಳಲಿ ಅಮ್ಮನವರ ಸನ್ನಿಧಿಯಲ್ಲಿ ನಿಯಮದಂತೆ ಇದೇ ಮಾರ್ಚಿ ತಾ. ೧೩ನೇ ಮೀನ ಸಂಕ್ರಮಣಕ್ಕೆ ಧ್ವಜಾರೋಹಣವಾಗಿ ಕಾಲಾವಧಿ ಜಾತ್ರೆಯು ಪ್ರಾರಂಭವಾಗಿರುವುದು. ಪದ್ಧತಿಯಂತೆ ಮೀನ ಮಾಸ ೫. ೧೦. ೧೫. ೨೦ನೆ ದಿನಗಳಲ್ಲಿ ದಂಡಮಾಲಾ ಪರ್ಯಾಯೋತ್ಸವಗಳಾಗಿ ೨೩ನೆ ಚಿತ್ರಾಪೂರ್ಣಿಮೆಯಿಂದ ಕ್ರಮದಂತೆ ಚೆಂಡಿನ ಉತ್ಸವ ತೊಡಗಿ ೨೬ನೆ ಚೈತ್ರ ಬ। ೪ಯು (ತಾ. ೯—೪—'೨೮) ಚಂದ್ರವಾರ ಅಖಂಡಯಶೋಬಲ ಪ್ರಚಂಡ ಕಡೆ ಚೆಂಡಾಟ ಮಹೋತ್ಸವವು ನಡದು ಮರು ದಿನ ರಥೋತ್ಸವ ೨೯ನೆಗೆ ಅವಭೃತವಾಗಿ ೩೦ನೆ ವಿಷುಸಂಕ್ರಮಣಕ್ಕೆ ಪೋಳಲಿ ಕೊಡಮಣಿತ್ತಾಯ ನೇಮ ಮತ್ತೆ ಸಂಪ್ರೋಕ್ಷಣೆಯಾಗುವದು. ಈ ಮಧ್ಯ ಭಜಕ ಸಮುದಾಯ ತಪ್ಪದೆ ಹಿಂದಿನಂತೆ ಬಂದು ಶಕ್ತ್ಯಾನುಸಾರ ಸೇವೆ ನಡಸಿ ಯಥೋಚಿತ ಫಲಪ್ರಸಾದ ಪಡಕೊಳ್ಳುವದಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ವಿವಿಧ ಸಮಾಚಾರಗಳು.

ಮಿಸ್ ಮಿಲ್ಲರಳ ಮತಾಂತರ.

ಇಂದೋರಿದ ಮಾಜಿ ಮಹಾರಾಯರು ತಂದ ಅಮೇರಿಕನ್ ಯುವತಿಯಾದ ಮಿಸ್. ನೆನ್ಸಿ ಮಿಲ್ಲರಳ ಮತಾಂತರವು ಗೋದಾವರಿ ತೀರದಲ್ಲಿರುವ ಗಂಗಾಪುರವೆಂಬಲ್ಲಿ ಕಳೆದ ೧೩ನೇ ತಾರೀಕಿನ ದಿನ ನಡೆಯಿತು, ಗಂಗಾಪುರವು ನಾಸಿಕ ಕ್ಷೇತ್ರದಿಂದ ೬ ಮೈಲು ದೂರದಲ್ಲಿದೆ. ಅಲ್ಲಿ ಒಂದು ಮಂಟಪವನ್ನು ಮಾಡಿ ಮತಾಂತರವನ್ನು ವೇದೋಕ್ತವಾದ ರೀತಿಯಲ್ಲಿ ಆಚರಿಸಿದರು. ಪ್ರಾತಃಕಾಲ ಎಂಟು ಗಂಟೆಯ ಸಮಯ ಮಿಲ್ಲರಳು ಒಂದು ಪಟ್ಟೆ ಸೀರೆಯನ್ನುಟ್ಟು ಹಿಂದುಗಳಂತೆ ರವಕೆಯನ್ನು ತೊಟ್ಟು ಕಾಣಿಸಿಕೊಂಡಳು. ಜನಸಂದಣಿಯು ನೆರೆದಿದ್ದಿತು. ಅವರಲ್ಲಿ ಸುಮಾರು ೮೦ ಜನರು ಸಾಕ್ಷಿಮಾತ್ರರಿದ್ದರು. ಮಿಲ್ಲರಳ ಸಹಾಯಕ್ಕಾಗಿ ಹೋಳಕರ ವಂಶದ ಇಬ್ಬರು ಹೆಂಗಸರಿದ್ದರು. ಅವಳ ಮೈಯಲ್ಲಿ ಒಂದು ವಜ್ರದ ಉಂಗುರ, ಗಾಜಿನ ಎರಡು ಬಳೆಗಳ ಹೊರತು ಬೇರೇನೂ ಆಭರಣವಿರಲಿಲ್ಲ. ಹಣೆಗೆ ಕುಂಕುಮದ ಬೊಟ್ಟು ಇದ್ದಿತು. ನೆರೆದವರಲ್ಲಿ ಪೂನಾ, ಮುಂಬಾಯಿ ಪ್ರಾಂತ್ಯದ ಪಂಡಿತರೂ ಅಮೇರಿಕನ್ ಸಂಚಾರಕರೂ ಇದ್ದರು.

ಸುಮಾರು ೯ ಘಂಟೆಗೆ ಡಾಕ್ಟರ್ ಸಾವರ್‌ಕರರೆದ್ದು ಮತಾಂತರವು ಆಗಲೇ ಆಗುವದೆಂದರು ಒಡನೆ "ಹಿಂದೂಧರ್ಮಕೀ ಜೈ" ಎಂಬ ಜಯಘೋಷವೆದ್ದಿತು. ಆಗಲೇ ಕರವೀರ ಪೀಠದ ಶ್ರೀ ಶಂಕರಾಚಾರ್ಯರೂ ಬಂದು ತಲಪಿದರು. ಮಿಸ್ ಮಿಲ್ಲರಳು ಸ್ವಾಮಿಗಳ ಪಾದಗಳನ್ನು ವಂದಿಸಿದೊಡನೆ ಸ್ವಾಮಿಜಿಯವರು ಅವಳನ್ನು ಆಶೀರ್ವದಿಸಿ 'ಶರ್ಮಿಷ್ಠಾ' ಎಂಬ ಹೆಸರನ್ನು ಅವಳಿಗೆ ಇಟ್ಟರು. ಹಿಂದೂವಾದವಳೆಂದು ಗುರುತಿಗಾಗಿ ಸ್ವಾಮಿಜಿಯವರು ಅವಳಿಗೊಂದು ಸೀರೆಯನ್ನೂ ರವಕೆಯನ್ನೂ ಕೊಟ್ಟರು. ತರುವಾಯ ತಿಲಕರಾದರು ಒಂದು ರೇಶ್ಮೆ ಸೀರೆಯನ್ನು ಹೋಳ್ಕರ್ ಹೆಂಗಸರು ಬೇರೆ ಉಡಿಗೆರೆಗಳನ್ನೂ ಅವಳಿಗೆ ಸಮರ್ಪಿಸಿದರು. ತದನಂತರ ಹೋಮಾಗ್ನಿಯನ್ನು ಪ್ರಜ್ವಲಿಸಿ ಮಂತ್ರೋಚ್ಚಾರಣೆಯಾಯಿತು. ಕೊನೆಯಲ್ಲಿ ಪುರೋಹಿತರು ಹೂಮಾಲೆಗಳಿಂದ ಅಲಂಕರಿಸಿ ಅವರಿಗೆ ಪಾನ್‌ಸುಪಾರಿಯನ್ನು ಕೊಟ್ಟದ್ದಾಯಿತು. ಈ ಕರ್ಮದಿಂದ ಹಿಂದೂ ಧರ್ಮದ ಪುನರುಜ್ಜೀವನವಾಗುವಂತಾಯಿತೆಂದು ಡಾ। ಸವರ್‌ಕಾರರು ಭಾಷಣವಿತ್ತರು.

ಹಿಂದೂ ಉಡುಗೆಯಲ್ಲಿ ಮಿಲ್ಲರಳು ಸೊಬಗಿನಿಂದ ತೋರುತ್ತಿದ್ದಳು. ಅವಳ ಚಿತ್ರಪಟಗಳನ್ನು ಅನೇಕರು ತೆಗೆದರು. ಹೋಮವನ್ನು ಮಾಡುವಾಗ ಮಿಲ್ಲರಳು ಮುಂದೆ ಕುಳಿತಿದ್ದಳು. ಒಬ್ಬ ಬ್ರಾಹ್ಮಣನು ಅವಳಿಗೆ ಆಗಾಗ ಆಚರಿಸುತಿದ್ದ ಬೇರೆ ಬೇರೆ ಕರ್ಮಗಳ, ಉಚ್ಚರಿಸುತಿದ್ದ ಶ್ಲೋಕಗಳ ಅರ್ಥವನ್ನು ವಿವರಿಸಿ ಹೇಳುತಿದ್ದನು. ಇದರಿಂದ ಹಿಂದೂಮತದಲ್ಲಿ ಮಿಲ್ಲರಳಿಗೆ ಎಷ್ಟು ಆಸಕ್ತಿಯಿದ್ದಿತೆಂದು ತಿಳಿಯುತಿತ್ತು.

§ § § §

ಮದುವೆಯ ತಯಾರಿ.

ಶರ್ಮಿಷ್ಠಾದೇವಿಯು ನಾಸೀಕಿನಿಂದ ಬಾರವಕ್ಕೆ ಹೋಗಲಿಕ್ಕೆ ಕಾಂಡವಾ ರೈಲ್ವೇ ಸ್ಟೇಶನಿಗೆ ಬಂದು ತಲಪಿದಳು. ಇಲ್ಲಿ ಇವಳನ್ನು ನೋಡುವುದಕ್ಕೆ ಸಾವಿರಾರು ಜನರು ಬಂದು ಕೂಡಿದ್ದರು. ಇವಳೊಡನೆ ತುಕೋಜಿರಾಯರ ಸಹೋದರಿಯಾದ ರಾಜಕುಮಾರಿ ಸಾವಿತ್ರಿ ಬಾಯಿಯವರು ಕೆಪ್ಟನ್ ಜಾದವರು, ಸಿಂಗಡೆಯವರು ಇದ್ದರು. ಇಂದೂರಿನಿಂದ ಸ್ವಲ್ಪ ದೂರವಿರುವ ನರ್ಮದಾನದಿಯ ಉಪನದಿಯಾದ ಚೋರಲಾ ನದಿಯ ದಡದಲ್ಲಿರುವ ಬಾರ್ವಾ ಪಟ್ಟಣದಲ್ಲಿರುವ ತುಕೋಜಿ ಮಹಾರಾಜರ ದರ್ಯಾಮಹಾಲನ್ನು ಬಹಳ ಅಂದವಾಗಿ ಅಲಂಕರಿಸಿದ್ದರು. ಮದುವೆ ಸಮಾರಂಭಕ್ಕೆ ನಾಲ್ಕುಸಾವಿರ ಜನರಿಗೆ ಆಮಂತ್ರಣವನ್ನು ಕಳುಹಿಸಿದ್ದರು ದನಗರು ವಂಶದ ಸಾವಿರಾರು ಜನರು ಬಂದಿದ್ದರು. ಅರಮನೆಯ ಮುಂದುಗಡೆಯಲ್ಲಿ ಬಹಳ ದೊಡ್ಡದಾದ ಚಪ್ಪರವನ್ನು ಹಾಕಿಸಿ ಅದರಲ್ಲಿ ಬಹಳ ಅಂದವಾದ ಮಂಟಪವನ್ನು ಕಟ್ಟಿಸಿದ್ದರು. ಮದುವೆ ಸಮಯದಲ್ಲಿ ಸುಡುವುದಕ್ಕೆ ಬಾಣಬಿರುಸುಗಳನ್ನು ತಯಾರಿಸಿದರು.

ಶರ್ಮಿಷ್ಠಾ ದೇವಿಯು ಬಂದು ತಲ್ಪಿದ ದಿವಸ ತುಕೋಜಿರಾಯರ ಇಬ್ಬರು ಪಟ್ಟದ ಅರಸಿಯರು ಬಂದು ಅರಮನೆಗೆ ತಲ್ಪಿದರು. ಮರುದಿನ ಭಾರಿ ದೊಡ್ಡ ಔತಣವಾಯಿತು.

§ § § §

ಮಿಸ್. ಮೆಯೋಳ 'ಮದರ್ ಇಂಡಿಯಾ'

ಮಿಸ್. ಮೆಯೊಳ ಮದರ್ ಇಂಡಿಯಾ ಪುಸ್ತಕವನ್ನೋದಿದ ವಿಚಕ್ಷಣ ಆಸ್ಟ್ರೇಲಿಯನ್ ಹುಡುಗಿಯೋರ್ವಳು ತಾನು ಅದರ ಕುರಿತು ಈ ರೀತಿಯಲ್ಲಿ ಅಭಿಪ್ರಾಯಪಟ್ಟಿರುವಳು:—"ಮೆಯೊಳ ಮದರ್ ಇಂಡಿಯಾ ಪುಸ್ತಕವು ಮೂಢತನ, ಸ್ವಾರ್ಥಪರತೆ, ಮತವೈಶಮ್ಯದ ಆಗಾರವಾಗಿದೆಯೆನ್ನಬಹುದು, ಸಜ್ಜನನಲ್ಲಿ ಅನೇಕ ದುರ್ಗುಣಗಳಿವೆಯೆಂದೂ, ದುರ್ಜನನಲ್ಲಿ ಸದ್ಗುಣಗಳಿವೆಯೆಂದೂ, ಪರಕೀಯರ ಗುಣಗಳನ್ನು ವಿಮರ್ಶಿಸಿ ಹೀನೋಕ್ತಿಗಳನ್ನಾಡುವುದು ತನ್ನ ಮರ್ಯಾದೆಗೆ ಕುಂದುತರುವದೆಂದೂ ಅವಳು ತಿಳಿಯದೆ ಇದನ್ನು ಬರೆದಿರುವಳು. ಒಬ್ಬರ ದೋಷಗಳನ್ನೇ ಹುಡುಕ ತೊಡಗಿದರೆ ದೋಷಗಳೆಷ್ಟೋ ಸಿಕ್ಕುವವು. ಹಿಂದೂ ಸ್ತ್ರೀಯರು ದುರಾಚಾರಿಗಳೆಂದು ಅವಳು ಬಹಳ ಧೈರ್ಯದಲ್ಲಿ ಬರೆದುದು ಆಶ್ಚರ್ಯಜನಕವಾಗಿದೆ. ಮೊದಲಿನಿಂದ ಕಡೆಯ ವರೆಗೂ ನೋಡಿದರೆ ತೀರ ಅವಿಚಾರದಿಂದ ಅವಳು ಪುಸ್ತಕವನ್ನು ಬರೆದುದೆಂದು ಪೂರ್ಣ ಖಚಿತವಾಗುವುದು ಪರರಾಜ್ಯಗಳ ಜನರ ನಡೆನುಡಿಗಳನ್ನೂ, ಆಚಾರ ವಿಚಾರಗಳನ್ನೂ ಕಂಡು ಹಿಡಿಯುವುದು ಯಾರಿಗೂ ಸುಲಭ ಸಾಧ್ಯವಾದ ಕೆಲಸವಲ್ಲ. ಹಾಗಿರುವಾಗ ಮಿಸ್ ಮೆಯೊಳು ಮಾಡಿದುದು ಯೋಗ್ಯವೆಂದು ನನಗೆ ತೋರುವುದಿಲ್ಲ. ಹಿಂದೂಗಳ ಕುರಿತು ಅವಳು ದೋಷಗಳನ್ನು ಬರೆದಿರುವಳಾದರೂ,-ಅಂತಹ ದೋಷಗಳು ಅಮೇರಿಕನರಲ್ಲಿಯೂ ಇತರ ಬ್ರಿಟಿಷರಲ್ಲಿಯೂ ಇವೆ. ನಮ್ಮಲ್ಲಿಯೂ ಇವೆ. ಅಂತಹ ದೋಷಗಳಿಂದ ಇಡೀ ರಾಜ್ಯವೇ ಕೆಟ್ಟಿದೆಂದು ಹೇಳಲಾಗುವುದಿಲ್ಲ."

ತುಕೋಜಿರಾಯರ ಮದುವೆ

[illegible]

1928–29ನೇ ವರ್ಷದ 'ಬಜೆಟ್ಟಿ'ನ ಮೇಲೆ ಮದ್ರಾಸ್ ಕೌನ್ಸಿಲಿನಲ್ಲಿ ಶ್ರೀ ಎ. ಬಿ. ಶೆಟ್ಟರ ಭಾಷಣ.

[illegible]

ಪತ್ರವ್ಯವಹಾರ.

ಕಾಗದದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಅಖಿಲ ಕರ್ನಾಟಕ ವಿದ್ಯಾಪೀಠದ ವರ್ಷಾವಧಿ ಪರೀಕ್ಷೆ 'ವೈದ್ಯಬಿರುದು'

ಈ ವರುಷ ತಾ. ೧೨–೩–'೨೮ರಿಂದ ತಾ. ೧೫–೩–'೨೮ರ ವರೆಗೆ ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಶ್ರೀಯುತ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರೀಯವರು ಪ್ರೆಸಿಡೆಂಟರಾಗಿ ಮತ್ತು ಇನ್ನೂ ಇತರ ಮಾನ್ಯರಾದ ವೈದ್ಯರು ಕೂಡಿ ಜರಗಿಸಿದ ಮೇಲೆ ಕಾಣಿಸಿದ ವಿದ್ಯಾಪೀಠದ ವೈದ್ಯ ಬಿರುದು ಪರೀಕ್ಷೆಯು ಮುಗಿದು ಇವತ್ತಿಗೆ ಬರೇ ಕೆಲವು ದಿವಸಗಳಾದವು. ವೈದ್ಯ ಬಿರುದು ಪ್ರಶ್ನಾ ಪತ್ರಿಕೆಗಳು ಉತ್ತರ ಬರಿಯುವರೆ ಬಹಳ ಕಷ್ಟವೆಂಬದಾಗಿ ಪರೀಕ್ಷೆಗೆ ನಿಂತಿದ್ದ ಉಮೇದ್ವಾರರಿಂದ ತಿಳಿಯಬಂತು. ಈ ಮೊದಲಿನ ೨ ಯಾ ೩ ವರ್ಷಗಳ ಪ್ರಶ್ನಾ ಪತ್ರಿಕೆಗಳನ್ನೂ ಮತ್ತು ಈ ವರುಷದ ಪ್ರಶ್ನಾ ಪತ್ರಿಕೆಗಳನ್ನೂ ಹೋಲಿಸಿ ನೋಡಿದ್ದಲ್ಲಿ ಮೊದಲಿನವುಗಳು ಅತೀ ಸುಲಭವಿದ್ದು ಈ ವರುಷದ್ದು ಮಾತ್ರ ಕಷ್ಟವಿತ್ತು. ಹೀಗಿರುತ್ತಾ ಗತವರುಷ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ 'ಆಯುರ್ವೇದ ವಿದ್ವಾನ್' ಎಂಬ ಬಿರುದೂ ಈ ವರುಷ ಪಾಸಾದ ವಿದ್ಯಾರ್ಥಿಗಳಿಗೆ 'ವೈದ್ಯ' ಎಂಬ ಬಿರುದು ಎಂದರೆ ಅದು ಬಹಳ ಶೋಚನಿಯವಾದ ಸಂಗತಿಯೇ ಸರಿ. ಶಾಸ್ತ್ರೀಯರೀತ್ಯಾನುಸಾರವಾಗಿ ಮತ್ತು ಅನೇಕ ಪೂರ್ವ ಗ್ರಂಥಗಳನ್ನು ಮೂರು, ನಾಲ್ಕು ವರುಷಗಳಿಂದ ಪಾಠ ಮಾಡಿಕೊಂಡು ಶಾಸ್ತ್ರರೀತ್ಯಾ ಚಿಕಿತ್ಸೆಯನ್ನು ಅಭ್ಯಾಸಿಸಿ ಪರೀಕ್ಷೆಗೆ ಉಮೇದ್ವಾರರಾಗಿ ನಿಂತು ಅದರಲ್ಲಿ ತೇರ್ಗಡೆ ಹೊಂದಿದವರಿಗೂ, ಬರೇ ೨ ಯಾ ೩ ೧೦ದ ಮೂಲಿಕೆಗಳನ್ನು ತಿಳಕೊಂಡು ರೋಗ ಚಿಕಿತ್ಸೆ ಮಾಡುವ ಈಗ ರೂಢಿಯಲ್ಲಿರುವ ವೈದ್ಯರಿಗೂ ಬರೆ 'ವೈದ್ಯ' ಎಂಬ ಬಿರುದು ಇದ್ದರೆ ಇದರಿಂದ ವಿದ್ಯಾಪೀಠದ ಪರೀಕ್ಷೆಗೆ ನಿಂತು ವೈದ್ಯ ಎಂಬ ಬಿರುದನ್ನು ಧರಿಸುವುದರಿಂದ ಹೆಚ್ಚು ಭೇದವೇನು ತಿಳಿಯಲಾಗುವುದಿಲ್ಲ. ಮಾತ್ರವಲ್ಲದೆ ವಿದ್ಯಾಪೀಠದ ಡಿಗ್ರಿಗೆ ಹೆಚ್ಚು ಮಾನ್ಯತೆ ದೊರಕಲಿಕ್ಕಿಲ್ಲ.

ನಮ್ಮ ಈ ಮಂಗಳೂರು ಪಟ್ಟಣದಲ್ಲಿ ಬೀದಿ, ಕೇರಿಗಳಲ್ಲಿಯೂ ವೈದ್ಯ ಎಂಬ ಬೋರ್ಡುಗಳು ಅಲ್ಲಲ್ಲಿ ಕಾಣುತ್ತವೆ. ಆದರೆ 'ವೈದ್ಯ ವಿದ್ವಾನ್' ಬೋರ್ಡುಗಳನ್ನು ನಾನು ಇಷ್ಟರ ವರೇಗೆ ಕಂಡದು ಬಹಳ ಅಪರೂಪ. ಆದುದರಿಂದ ವೈದ್ಯ ಬಿರುದಿನ ಬದಲಾಗಿ ಈ ಮೊದಲು ನಿಶ್ಚಯಿಸಿದ್ದ 'ವೈದ್ಯ ವಿದ್ವಾನ್' ಎಂಬ ಬಿರುದನ್ನೇ ಇನ್ನು ಮುಂದೆಯೂ ಕೊಡಕೊಡುವುದರಿಂದ ವಿದ್ಯಾಪೀಠಕ್ಕೆ ಒಂದು ದೊಡ್ಡ ಯಶಸ್ಸು ಬರುವುದಲ್ಲದೆ ಇನ್ನು ಮುಂದೆ ಪರೀಕ್ಷೆಗೆ ಕೂತುಕೊಳ್ಳುವ ಉಮೇದ್ವಾರರ ಸಂಖ್ಯೆಯು ಹೆಚ್ಚಾಗುವುದು.

ಮಂಗಳೂರು,
ತಾ. 20–3–'28. } ಒಬ್ಬ ವಿದ್ಯಾರ್ಥಿ.

ಪೊಳಲಿ 'ಪಾಪಿ'.

'ಪಾಪಿ ಹೋದಲ್ಲಿ ಮೊಳಕಾಲು ನೀರು' ಅಂದ ಹಾಗೆ ಎಷ್ಟು ಪ್ರಾರ್ಥಿಸಿದರೂ ಅರಣ್ಯರೋದನವೇ ಆಗಿಹೋಯಿತು. ನಮಗೊಂದು ನದಿ ಇದ್ದರೂ ಮಾರ್ಚಿ ಎಪ್ರೀಲಿಗೆ ಕುಡಿಯಲಿಕ್ಕೇ ನೀರಿಲ್ಲದಿರುವ ನಮ್ಮ ಊರಿಗೊಂದು ರಸ್ತೆಯನ್ನು ಮಾಡಿಸಿಕೊಡಬೇಕೆಂದು ೩೩ ವರ್ಷಗಳಲ್ಲಿ ಬೇಕಷ್ಟು ಅರ್ಜಿ ಬರಕೊಂಡದ್ದಾಯಿತು. ಆದರೇನು 'ಹಲವು ಮಡಿಕೆಗೆ ಒಂದೇ ಬಡಿಗೆ' ಅಂದ ಹಾಗೆ ನಮ್ಮ ಎಲ್ಲಾ ಅರ್ಜಿಗಳಿಗೂ ಪ್ರಥಮ ನಿರ್ಣೈಸಲ್ಪಟ್ಟ ಒಂದೇ ಹುಕುಂ 'ಬೋರ್ಡಿನಲ್ಲಿ ಹಣವಿಲ್ಲ ಹಣ ದೊರಗಿದ ಕೂಡಲೆ ಕೆಲಸ ಪ್ರಾರಂಭಿಸಲಾಗುವದು' ಇಷ್ಟೆ. ಆದರೆ ಬೇರೆ ಊರುಗಳಲ್ಲಿ ಪ್ರತಿ ಮನೆ ಬಾಗಿಲಿಗೆ ಬೇಕಾದರೂ ರಸ್ತೆ ಮಾಡಿಸಲಿಕ್ಕೆ ಹಣವುಂಟು ಇರಲಿ. ಪೊಳಲಿ ಪ್ರಾಂತ್ಯದಿಂದ ಪ್ರತಿಯೊಂದೂ ಮಂಗಳೂರಿಗೆ ಸಾಗುವದು ಅದರ ಅನಾನುಕೂಲತೆಯನ್ನು ಪರಿಹರಿಸಲಿಕ್ಕೆ ಬಂಟ್ವಾಳದಿಂದ ಬೆಂಜನಪದವಿಗೊಂದು ರಸ್ತೆ. ಸರಿ! ಮಂಗಳೂರಿನಿಂದ ಗುರುಪುರಕ್ಕಾಗಿ ೧೨ ಮೈಲಿಯೊಳಗೆ ತಲ್ಪುವ ಪೊಳಲಿಗೆ ರಸ್ತೆ ಮಾಡಿಸುವರೆ ಬಂಟ್ವಾಳಕ್ಕಾಗಿ ಬರುವ ೨೧ ಮೈಲು ದೂರದ ದಾರಿ. ಎಷ್ಟು ಸಮಂಜಸ ಮೈಲಿಗಳ ಅಂಕೆಗಳನ್ನು ಮಾತ್ರ ಆಚೆ ಈಚೆ ಮಾಡಿದರಾಯಿತು. ಒಟ್ಟಾರೆ ಆಗಬೇಕಾದ ೯ ಮೈಲು ರಸ್ತೆ ಪೈಕಿ ೩೩ ವರ್ಷಗಳಲ್ಲಿ ಹೇಗಾದರೂ ೬ ಮೈಲು ರಸ್ತೆ ಆಯಿತು. ಗಾಡಿ ಮಾತ್ರ ಬರಲಿಕ್ಕೆ ದಾರಿ ಬೇರೆಯಾಗಬೇಕು. ಅಂತು ಸಂಪೂರ್ಣವಾಗುವದು ಯಾವ ಯುಗಕ್ಕೋ ಎಂದು ಬ್ರಾಂತಿಬಿಡುವ,

ಪೊಳಲಿ ಪ್ರಾಂತ್ಯದವರ ಪೈಕಿ ನಾನೊಬ್ಬ ಪಾಪಿ.

ಬಳ್ಳಾರಿ, ಕಲ್ಲಿಕೋಟೆ, ಮತ್ತು ಮಂಗಳೂರಲ್ಲಿ ಮೂರು ಮೊಡೆಲ್ ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಕೈಗಾರಿಕೆ ಮತ್ತು ಟೆಕ್ನಿಕಲ್ ಶಿಕ್ಷಣದ ಕುರಿತು ವಿಚಾರಿಸಲು ನಿಯುಕ್ತವಾದ ಕಮಿಟಿಯು ಸೂಚಿಸಲ್ಪಟ್ಟು, ಮಾನ್ಯ ಮಂತ್ರಿ ಮತ್ತು ಡೈರೆಕ್ಟರರ ಶಿಫಾರಸನ್ನು ಹೊಂದಿದರೂ ಇನ್ನೂ ಕೊನೆಯ ಮಾತಿಗಾಗಿ ಕಾಯುವಂತಿದೆ. ಈ ಕುರಿತು ಪ್ರಸ್ತಾಪಿಸಲ್ಪಟ್ಟಿರುವ ಯೋಜನೆಯು ಫೀನೆನ್ಸ್ ಖಾತೆಯ ನಿರ್ಬಂಧದಿಂದ ಹೊರ ಬರುವಾಗ ಯಾವ ವಿರೂಪವನ್ನು ಹೊಂದುವುದೋ ನನಗೆ ತಿಳಿಯದು. ಇಂಗ್ಲೆಂಡಿನಲ್ಲಿ ಪ್ರತಿ ಟೌನಿಗೊಂದು ಕೈಗಾರಿಕೆ ಕೊಲೆಜು ಅಥವಾ ಶಾಲೆಯಿದ್ದು ಇದರಿಂದ ವಿದ್ಯಾರ್ಥಿಗಳು ಕೈಗಾರಿಕೆ ವ್ಯಾಪಾರಾದಿಗಳಲ್ಲಿ ತರಬೇತು ಹೊಂದುವರೆಂದು ತಿಳಿದುಬರುತ್ತದೆ. ಆದರೆ ಇಲ್ಲಿ ನಾವು ಉದ್ಯೋಗ ಮಾರ್ಕೇಟಿನಲ್ಲಿ ಗಿರಾಕಿಗಳಿಲ್ಲದ ಗ್ರೇಜುವೇಟರರನ್ನು ತಯಾರಿಸುವ ಹೊಸ ಆರ್ಟ್ ಕೊಲೇಜುಗಳನ್ನೂ ಯುನಿವರ್ಸಿಟಿಗಳನ್ನೂ ಸ್ಥಾಪಿಸುವುದರಲ್ಲಿ ಪ್ರವೃತ್ತರಾಗಿರುವೆವು. ನಮ್ಮ ಯುವಕರಿಗೆ ಗನಿ, ಗಿರಣಿ, ಬೇಂಕ್, ರೈಲ್ವೇ, ಟೆಲಿಗ್ರಾಫ್, ನಾವೆ, ವ್ಯಾಪಾರ ಸಂಘಗಳೇ ಮೊದಲಾದುವುಗಳ ಕುರಿತು ಅವಶ್ಯವಿರುವ ತರಬೇತನ್ನು ಕೊಡುವಂತಹ ಮಾತ್ರವಲ್ಲ, ದೇಶದ ನಾನಾ ಉತ್ಪತ್ತಿಗಳನ್ನು ವೃದ್ಧಿಗೊಳಿಸಲು ಸಹಾಯಕವಾಗುವ ಉತ್ಕೃಷ್ಟ ತರದ ಶಿಕ್ಷಣ ಮತ್ತು ತರಬೇತು ದೊರೆಯುವ ಸಂಸ್ಥೆಗಳನ್ನು ಸರಕಾರವು ಸ್ಥಾಪಿಸಬೇಕು. ಇನ್ನು ಮುಂದೆ ಕೊಡಲಾಗುವ ಶಿಕ್ಷಣವು ಬಹುಮಟ್ಟಿಗೆ ಉದ್ಯೋಗಕವಾಗಿರಬೇಕು. ವ್ಯವಸಾಯವನ್ನು ವೃದ್ಧಿಗೊಳಿಸುವ ಮತ್ತು ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಪ್ರಬಲ ಧೋರಣೆಯನ್ನು ಸರಕಾರವು ಅಂಗೀಕರಿಸಿ ಅವುಗಳಿಗಾಗಿ ಧೈರ್ಯದ ಕಾರ್ಯಕ್ರಮವೊಂದನ್ನು ಜ್ಯಾರಿಗೆ ತರಬೇಕು. ಇಲ್ಲವಾದರೆ ನಮ್ಮ ದೇಶಕ್ಕೆ ಗತ್ಯಂತರವೇ ಇಲ್ಲ.

Shroff Shri Vallabha Shivappa Shet & Co.
Shroff & Jewellers,
DONGERKERY MANGALORE

ESTABLISHED 1918. ಸ್ಥಾಪಿತವಾದದ್ದು ೧೯೧೮.

ಖಾತ್ರಿಯಾದ ಮಾಲು! ನ್ಯಾಯವಾದ ಖರೀದಿ!!



ನಮ್ಮಲ್ಲಿ ಇದರಲ್ಲಿ ತೋರುವ ನಮೂನೆಯ ಭಂಗಾರದ ಒಡವೆಗಳಲ್ಲದೆ ಅನೇಕ ನಮೂನೆಯ ಗೆಜ್ಜೆಟಿಕೆಗಳೂ ಚಕ್ರಸರ, ಅಡ್ಡಿಗೆ ಸರಪಳಿ, ಬಳೆಗಳು, ಯಸ್. ಕ್ಲಾವರ್, ಮಲ್ಲಿಗೆ ಮೊಗ್ಗು ನಾನಾ ತರದ ಗುಲಾಬಿ ಹೂ, ಅಲ್ಲದೆ ನವಯೌವನದ ಸ್ತ್ರೀಯರಿಗೆ ಬೇಕಾದ ನವೀನ ರೀತಿಯ ಆಭರಣಗಳನ್ನು ನಾವು ಕ್ಲುಪ್ತಕಾಲಕ್ಕೆ ತಯಾರಿಸಿಕೊಡುವೆವು.

ಕೆಂಪಿನ ಬೆಂಡೋಲೆಗಳು, ಸ್ಕ್ರೂಗಳು, ಟಿಕ್ಕಿಗಳು, ಯಾವಾಗಲೂ ಮಾರಾಟಕ್ಕೆ ಸಿಗುತ್ತವೆ.

ನಮ್ಮ ಸಂಘ ಕಟ್ಟೆಯಲ್ಲಿ ತಯಾರಿಸಿದ ಯಾವತ್ತು ಆಭರಣಗಳಿಗೆ ಒಂದು ವರುಷದೊಳಗೆ ಯಾವದೊದು ತರದ ಊನವು ನಮ್ಮ ಕಾರಣದಿಂದ ಉಂಟಾದರೆ ಅಂಥವುಗಳನ್ನು ಮಜೂರಿ ಬಿಟ್ಟು ಸರತು ತೆಗೆದುಕೊಳ್ಳುತ್ತೇವೆ.

ಆರ್ಡರ ಕೊಡುವಾಗ ಸೇಕಡಾ 25ರ ಪ್ರಕಾರ ಹಣವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಸರಾಫ್ ಶ್ರೀ ವಲ್ಲಭ ಶಿವಪ್ಪ ಶೇಟ್ ಮತ್ತು ಕಂಪೆನಿ.

ಸರಾಫ್ ಮತ್ತು ಜಿವೆಲ್ಲರ್ಸ್,
ಡೊಂಗರಕೇರಿ, ಮಂಗಳೂರು.

(31–3)

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಒಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು ಎಷ್ಟು ಬೆಲೆ

ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

ಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕ್ರಿಷ್ಣ, ಕಾಳಿಂಗ ಕ್ರಿಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು. ಮತ್ತು ಪಠಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಕೊಡಲ್ಪಡುತ್ತವೆ. ಧಾರಣೆ ವಗೈರೆಗೆ ಬರೆಯಿರಿ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(6–5)



ಪ್ರಸಿದ್ಧ ಪಟ್ಟ
ಎಫ್. ಮುಲ್ಲರರ
ಒಯಿಲ್ ಎಕ್ಸ್‌ಪೆಲ್ಲರ್

ಎಣ್ಣೆ ಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ ಎಣ್ಣೆಯನ್ನು ಳಿಸಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ, ಸಂಪೂರ್ಣ ಸ್ವತಃಶ್ಚಲನಕ, ಕಡಿಮೆ ಖರ್ಚು, ಕಡಿಮೆ ಪವರಿನ ವ್ಯಯ, ಹೆಚ್ಚಿನ ಎಣ್ಣೆಯ ಲಾಭ.

ರೋಲರ್ ಮಿಲ್ಲುಗಳು, ಡಿಸ್ ಇಂಟೆಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವುದಕ್ಕೆ ತಕ್ಕದಾದ ಸಣ್ಣ ಹೈಡ್ರೊಲಿಕ್ ಪ್ರೆಸ್ ಪ್ಲೇಂಟ್‌ಗಳು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

VOLKART BROS ENGINEERS

Armenian Street, MADRAS.

VOLKART ENGINEERS

ಇಂಟರ್ ನೇಶನಲ್
ಹಾರ್ವೆಸ್ಟರ್
ಆಯಿಲ್ ಇಂಜಿನು

ಈ ಇಂಜಿನುಗಳ ಬಾಳುವಿಕೆ, ಕಡಿಮೆ ಖರ್ಚು, ಚಲಿಸುವುದರಲ್ಲಿ ಸುಲಭತ್ವ, ಇವುಗಳು ಅವರ್ಣನೀಯವಾಗಿವೆ.



ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆಯಿರಿ.

VOLKART BROS.
Armenian Street, MADRAS.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,
SWADESHABHIMANI,
MANGALORE.

ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ

ಉಡುಪಿ ತಾಲೂಕು ಕಾಪು ಪೇಟೆಗೆ ಒಪ್ಪಿದ ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಇದೇ ಬರುವ ವಿಭವ ಸಂವತ್ಸರದ ವೈಶಾಖ ಶು ೪ ದಿವಸ ಪ್ರತಿಷ್ಠೆ ಮಾಡುವದೆಂತಲೂ ವ ನಮ್ಮ ಕಾಶೀ ಮಠದ ಗುರುಗಳವರ ಸವಾರಿ ಇಲ್ಲಿಗೆ ಚಿತ್ತೈಸುತ್ತರೆಯಂತಲೂ ಆ ಬಗ್ಗೆ ಸುಮಾರು ೩–೪ ಸಾವಿರ ರೂಪಾಯಿ ಖರ್ಚಿಗೆ ಬೇಕೆಂತಲೂ ಈ ಬಗ್ಗೆ ನಾವು ಸದ್ರಿ ಕಾಪು ಪೇಟೆಗೆ ಒಪ್ಪಿದ ಗೃಹಸ್ಥರು ವೈದಿಕರು ಎಂತಲೂ ಸದ್ರಿ ಖರ್ಚಿನ ಗೋಸ್ಕರ ಊರಲ್ಲಿ ಹೋಗಿ ವಂತಿಗೆ ಮಾಡಬೇಕಾಗಿ ನಮ್ಮ ಪೇಟೆಯವರು ನಿರ್ಣಯಿಸಿದಂತೆ ಆ ಪೈಕಿ ನಾವು ಈ ಪ್ರಾಂತ್ಯಕ್ಕೆ ವಂತಿಗೆಗೆ ಹೊರಟು ಬಂದಿರುತ್ತೇವೆ ಎಂತಲೂ ೨ ಜನ ಗೃಹಸ್ಥರು ೧ ವೈದಿಕ ಭಟ್ಟು ಕೂಡಾ ೩ ಜನರು ಶ್ರೀ ದೇವಿಯ ಪ್ರಸಾದವನ್ನು ಹಿಡಕೊಂಡು ವಂತಿಗೆ ವಸೂಲು ಮಾಡುತ್ತಾರೆಯೆಂಬದಾಗಿ ಕುಂದಾಪುರ ತಾಲೂಕಿನ ಹಳ್ಳಿ ಗ್ರಾಮದ ವೈದೀಕರ ಮುಖಾಂತರ ನನಗೆ ತಿಳಿದು ಬಂತು. ಅಲ್ಲದೆ ಸದ್ರಿಯವರು ಬೈಂದೂರು ಅತ್ತ ಕಡೆಗೆ ಹೋಗಿರುತ್ತಾರೆಯೆಂತ ತಿಳಿದುಬರುತ್ತದೆ. ಆದರೆ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ ಸದ್ರಿ ವೆಂಕಟ್ರಮಣ ದೇವರ ಪ್ರತಿಷ್ಠೆಯು ಯಾವಾಗ್ಯೆ ಎಂಬದು ನಿರ್ಣಯಿಸಿದ್ದಾಗಲಿ ಗುರುಗಳು ಕಾಪಿಗೆ ಬರುವದು ನಿರ್ಣಯಿಸಿದ್ದಾಗಲಿ ಇಲ್ಲಾ. ಮೇಲೆ ಹೇಳಿದ ಪ್ರಕಾರ ಖರ್ಚಿನ ಬಗ್ಗೆಯಾಗಲಿ ಇತರ ಯಾವ ಖರ್ಚಿನ ಬಗ್ಗೆಯಾಗಲಿ ವಂತಿಗೆಗೋಸ್ಕರ ಯಾವ ಕ್ರಮವೂ ಈ ವರೆಗೂ ಏರ್ಪಡಿಸಿದ್ದಿಲ್ಲ. ಈ ನಮೂನೆಯಲ್ಲಿ ಸುಳ್ಳು ಹೇಳಿ ವಂತಿಗೆ ವಸೂಲು ಮಾಡಿದವರ ಎಡ್ರೆಸ್‌ಗಳು ಯಾ ಗುರ್ತುಗಳು ವಸೂಲು ಕೊಟ್ಟವರ ಪೈಕಿ ಯಾರಿಗಾದರೂ ಇದ್ದಲ್ಲಿ ಅವರು ಸೀವಾ ನನಗಾಗಲಿ ವ ಇದೇ ಪತ್ರಿಕ್ಕಾಗಲಿ ಉತ್ತರ ಕೊಟ್ಟಲ್ಲಿ ಬಹಳ ಉಪಕಾರವಾಗುತ್ತಿತ್ತು. ಈ ನಮೂನೆಯಲ್ಲಿ ಇನ್ನು ಸುಳ್ಳು ನೆವನಗಳು ಹೇಳಿ ವಂತಿಗೆ ಬಂದಲ್ಲಿ ವಂತಿಗೆ ಕೊಡುವದು ನಮಗೆ ಹಿತವಿಲ್ಲನೆಂತ ಈ ಮೂಲಕ ತಿಳುಹಿಸುತ್ತೇನೆ. ಅಲ್ಲದೆ ಈ ಪೇಟೆಯಿಂದ ಸಪ್ತಾಹ ಘಂಟಿನ ಬಗ್ಗೆ ದಸ್ಕತು ಮೊಹರು ಇರುವ ಛಾಪೆಮಾಡಿದ ಸೀರು ಪುಸ್ತಕಗಳು ಮಾತ್ರ ನಾವು ಹೆಂಚುವರೆ ತಯಾರಿಸಿದ್ದೇವೆ.

ಶ್ರೀಧರ ಶ್ಯಾನಭಾಗ, ಪಟೇಲ ಕಾಪು.
ಕಾಪು ವೆಂಕಟ್ರಮಣ ದೇವಸ್ಥಾನದ ಮೊಕ್ತೇಸರ.
ಕಾಪು, 20–3–1928.

ಪತ್ರವ್ಯವಹಾರ.

ಕಾಗದದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಅಖಿಲ ಕರ್ನಾಟಕ ವಿದ್ಯಾಪೀಠದ ವರ್ಷಾವಧಿ ಪರೀಕ್ಷೆ 'ವೈದ್ಯಬಿರುದು'

ಈ ವರುಷ ತಾ. ೧೨-೩-'೨೮ರಿಂದ ತಾ. ೧೫-೩-'೨೮ರ ವರೆಗೆ ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನಲ್ಲಿ ಶ್ರೀಯುತ ...ಯುರ್ವೇದ ಭೂಷಣ ಎಮ್. ವಿ. ಶಾಸ್ತ್ರೀಯವರು ಪ್ರೆಸಿಡೆಂಟರಾಗಿ ಮತ್ತು ...ನ್ನೂ ಇತರ ಮಾನ್ಯರಾದ ವೈದ್ಯರು ಕೂಡಿ ಜರಗಿಸಿದ ಮೇಲೆ ಕಾಣಿಸಿದ ...ದ್ಯಾಪೀಠದ ವೈದ್ಯ ಬಿರುದು ಪರೀಕ್ಷೆಯು ಮುಗಿದು ಇವತ್ತಿಗೆ ಬರೇ ...ವು ದಿವಸಗಳಾದವು. ವೈದ್ಯ ಬಿರುದು ಪ್ರಶ್ನಾ ಪತ್ರಿಕೆಗಳು ಉತ್ತರ ...ಯುವರೆ ಬಹಳ ಕಷ್ಟವೆಂಬದಾಗಿ ಪರೀಕ್ಷೆಗೆ ನಿಂತಿದ್ದ ಉಮೇದ್ವಾರ ...ದ ತಿಳಿಯಬಂತು. ಈ ಮೊದಲಿನ ೨ ಯಾ ೩ ವರ್ಷಗಳ ಪ್ರಶ್ನಾ ...ಕೆಗಳನ್ನೂ ಮತ್ತು ಈ ವರುಷದ ಪ್ರಶ್ನಾ ಪತ್ರಿಕೆಗಳನ್ನೂ ಹೋಲಿಸಿ ...ದ್ದಲ್ಲಿ ಮೊದಲಿನವುಗಳು ಅತೀ ಸುಲಭವಿದ್ದು ಈ ವರುಷದ್ದು ಮಾತ್ರ ...ವಿತ್ತು. ಹೀಗಿರುತ್ತಾ, ಗತವರುಷ ತೇರ್ಗಡೆ ಹೊಂದಿದ ವಿದ್ಯಾರ್ಥಿ ...ಗೆ 'ಆಯುರ್ವೇದ ವಿದ್ವಾನ್' ಎಂಬ ಬಿರುದೂ ಈ ವರುಷ ಪಾಸಾದ ...ರ್ಥಿಗಳಿಗೆ 'ವೈದ್ಯ' ಎಂಬ ಬಿರುದು ಎಂದರೆ ಅದು ಬಹಳ ಶೋಚ ...ವಾದ ಸಂಗತಿಯೇ ಸರಿ. ಶಾಸ್ತ್ರೀಯರೀತ್ಯಾನುಸಾರವಾಗಿ ಮತ್ತು ... ಪೂರ್ವ ಗ್ರಂಥಗಳನ್ನು ಮೂರು, ನಾಲ್ಕು ವರುಷಗಳಿಂದ ಪಾಠ ...ಕೊಂಡು ಶಾಸ್ತ್ರರೀತ್ಯಾ ಚಿಕಿತ್ಸೆಯನ್ನು ಅಭ್ಯಾಸಿಸಿ ಪರೀಕ್ಷೆಗೆ ಉಮೇ ...ವಾಗಿ ನಿಂತು ಅದರಲ್ಲಿ ತೇರ್ಗಡೆ ಹೊಂದಿದವರಿಗೂ, ಬರೇ ೨ ಯಾ ...ದ ಮೂಲಿಕೆಗಳನ್ನು ತಿಳಕೊಂಡು ರೋಗ ಚಿಕಿತ್ಸೆ ಮಾಡುವ ಈಗ ...ಲ್ಲಿರುವ ವೈದ್ಯರಿಗೂ ಬರೆ 'ವೈದ್ಯ' ಎಂಬ ಬಿರುದು ಇದ್ದರೆ ಇದ ...ವಿದ್ಯಾಪೀಠದ ಪರೀಕ್ಷೆಗೆ ನಿಂತು ವೈದ್ಯ ಎಂಬ ಬಿರುದನ್ನು ಧರಿಸುವ ... ಹೆಚ್ಚು ಭೇದವೇನು ತಿಳಿಯಲಾಗುವುದಿಲ್ಲ. ಮಾತ್ರವಲ್ಲದೆ ವಿದ್ಯಾ ...ಠಕ್ಕಿಗೆ ಹೆಚ್ಚು ಮಾನ್ಯತೆ ದೊರಕಲಿಕ್ಕಿಲ್ಲ.

...ಮ್ಮ ಈ ಮಂಗಳೂರು ಪಟ್ಟಣದಲ್ಲಿ ಬೀದಿ, ಕೇರಿಗಳಲ್ಲಿಯೂ ...ಎಂಬ ಬೋರ್ಡುಗಳು ಅಲ್ಲಲ್ಲಿ ಕಾಣುತ್ತವೆ. ಆದರೆ 'ವೈದ್ಯ ... ಬೋರ್ಡುಗಳನ್ನು ನಾನು ಇಷ್ಟರ ವರೇಗೆ ಕಂಡದು ಬಹಳ ಅಪ... ಆದುದರಿಂದ ವೈದ್ಯ ಬಿರುದಿನ ಬದಲಾಗಿ ಈ ಮೊದಲು ನಿಶ್ಚಯಿ... ...ದ್ಯ ವಿದ್ವಾನ್' ಎಂಬ ಬಿರುದನ್ನೇ ಇನ್ನು ಮುಂದೆಯೂ ಕೊಡ ...ರಿಂದ ವಿದ್ಯಾಪೀಠಕ್ಕೆ ಒಂದು ದೊಡ್ಡ ಯಶಸ್ಸು ಬರುವುದಲ್ಲದೆ ...ಮುಂದೆ ಪರೀಕ್ಷೆಗೆ ಕೂತುಕೊಳ್ಳುವ ಉಮೇದ್ವಾರರ ಸಂಖ್ಯೆಯು ...ವುದು.

...ಗಳೂರು, ...-3-'28. } ಒಬ್ಬ ವಿದ್ಯಾರ್ಥಿ.

ಪೊಳಲಿ 'ಪಾಪಿ'.

...ಪಿ ಹೋದಲ್ಲಿ ಮೊಳಕಾಲು ನೀರು' ಅಂದ ಹಾಗೆ ಎಷ್ಟು ...ರೂ ಅರಣ್ಯರೋಧನವೇ ಆಗಿಹೋಯಿತು. ನಮಗೊಂದು ನದಿ ...ದಾಟಿ ಎಪ್ರೀಲಿಗೆ ಕುಡಿಯಲಿಕ್ಕೇ ನೀರಿಲ್ಲದಿರುವ ನಮ್ಮ ...ಗ್ಗೆ ರಸ್ತೆಯನ್ನು ಮಾಡಿಸಿಕೊಡಬೇಕೆಂದು ೩೩ ವರ್ಷಗಳಲ್ಲಿ ...ಅರ್ಜಿ ಬರಕೊಂಡದ್ದಾಯಿತು. ಆದರೇನು 'ಹಲವು ಮಡಿಕೆಗೆ ...ಡಿಗೆ' ಅಂದ ಹಾಗೆ ನಮ್ಮ ಎಲ್ಲಾ ಅರ್ಜಿಗಳಿಗೂ ಪ್ರಥಮ ...ಲ್ಲ ಒಂದೇ ಹುಕುಂ 'ಬೋರ್ಡಿನಲ್ಲಿ ಹಣವಿಲ್ಲ ಹಣ ದೊರಕಿದ ...ಲಸ ಪ್ರಾರಂಭಿಸಲಾಗುವದು' ಇಷ್ಟೆ. ಆದರೆ ಬೇರೆ ಊರುಗಳಲಿ ...ವಾಗಿಲಿಗೆ ಬೇಕಾದರೂ ರಸ್ತೆ ಮಾಡಿಸಲಿಕ್ಕೆ ಹಣವುಂಟು ಇರಲಿ. ...ತ್ಯದಿಂದ ಪ್ರತಿಯೊಂದೂ ಮಂಗಳೂರಿಗೆ ಸಾಗುವದು ಅದರ ...ಯತೆಯನ್ನು ಪರಿಹರಿಸಲಿಕ್ಕೆ ಬಂಟ್ವಾಳದಿಂದ ಬೆಂಜನ ಪದವಿ ... ಸರಿ! ಮಂಗಳೂರಿನಿಂದ ಗುರುಪುರಕ್ಕಾಗಿ ೧೨ ಮೈಲಿ ...ಟ್ಟುವ ಪೊಳಲಿಗೆ ರಸ್ತೆ ಮಾಡಿಸುವರೆ ಬಂಟ್ವಾಳಕ್ಕಾಗಿ ಬರುವ ...ರದ ದಾರಿ. ಎಷ್ಟು ಸಮಂಜಸ ಮೈಲಿಗಳ ಅಂಕೆಗಳನ್ನು ...ಟಿ ಮಾಡಿದರಾಯಿತು. ಒಟ್ಟಾರೆ ಆಗಬೇಕಾದ ೯ ಮೈಲು ...೩ ವರ್ಷಗಳಲ್ಲಿ ಹೇಗಾದರೂ ೬ ಮೈಲು ರಸ್ತೆ ಆಯಿತು. ...ಬರಲಿಕ್ಕೆ ದಾರಿ ಬೇರೆಯಾಗಬೇಕು. ಅಂತು ಸಂಪೂರ್ಣ ...ವ ಯುಗಕ್ಕೋ ಎಂದು ಬ್ಯಾ ಬಿಡುವ,

ಪೊಳಲಿ ಪ್ರಾಂತ್ಯದವರ ಪೈಕಿ ನಾನೊಬ್ಬ ಪಾಪಿ.

..., ಕಲ್ಲಿಕೋಟೆ, ಮತ್ತು ಮಂಗಳೂರಲ್ಲಿ ಮೂರು ಮೊಡೆಲ್ ...ಸ್ಥಾಪಿಸಬೇಕೆಂದು ಕೈಗಾರಿಕೆ ಮತ್ತು ಟೆಕ್ನಿಕಲ್ ಶಿಕ್ಷಣದ ...ಸಲು ನಿಯುಕ್ತವಾದ ಕಮಿಟಿಯು ಸೂಚಿಸಲ್ಪಟ್ಟು, ಮಾನ್ಯ ...ರೆಕ್ಟರರ ಶಿಫಾರಸನ್ನು ಹೊಂದಿದರೂ ಇನ್ನೂ ಕೊನೆಯ ...ಯುವಂತಿದೆ. ಈ ಕುರಿತು ಪ್ರಸ್ತಾಪಿಸಲ್ಪಟ್ಟಿರುವ ಯೋಜ... ...ಶಾಲೆಯ ನಿರ್ಬಂಧದಿಂದ ಹೊರ ಬರುವಾಗ ಯಾವ ...ಹೊಂದಾವುದೋ ನನಗೆ ತಿಳಿಯದು. ಇಂಗ್ಲೆಂಡಿನಲ್ಲಿ ...ದು ಕೈಗಾರಿಕೆ ಕೊಲೆಜು ಅಥವಾ ಶಾಲೆಯದ್ದು ಇದರಿಂದ ...ಕೈಗಾರಿಕೆ ವ್ಯಾಪಾರಾದಿಗಳಲ್ಲಿ ತರಬೇತು ಹೊಂದುವ ...ತ್ತದೆ. ಆದರೆ ಇಲ್ಲಿ ನಾವು ಉದ್ಯೋಗ ಮಾರ್ಕೆಟಿನಲ್ಲಿ ...ಗ್ರೇಜುವೇಟರರನ್ನು ತಯಾರಿಸುವ ಹೊಸ ಆರ್ಟ... ...ಯುನಿವರ್ಸಿಟಿಗಳನ್ನೂ ಸ್ಥಾಪಿಸುವುದರಲ್ಲಿ ಪ್ರವೃತ್ತರಾಗಿ ...ಮ್ಮ ಯುವಕರಿಗೆ ಗನಿ, ಗಿರಣಿ, ಬೇಂಕ್, ರೈಲ್ವೇ, ಟಲಿ ...ವ್ಯಾಪಾರ ಸಂಘಗಳೇ ಮೊದಲಾದವುಗಳ ಕುರಿತು ಅವಶ್ಯ ...ನ್ನು ಕೊಡುವಂತಹ ಮಾತ್ರವಲ್ಲ, ದೇಶದ ನಾನಾ ಉತ್ಪತ್ತಿ ...ಳಿಸಲು ಸಹಾಯಕವಾಗುವ ಅತ್ಯುತ್ಕೃಷ್ಟ ತರದ ಶಿಕ್ಷಣ ... ದೊರೆಯುವ ಸಂಸ್ಥೆಗಳನ್ನು ಸರಕಾರವು ಸ್ಥಾಪಿಸಬೇಕು. ...ಕೆಂತರಾಗುವ ಶಿಕ್ಷಣವು ಬಹುಮಟ್ಟಿಗೆ ಔದ್ಯೋಗಿಕವಾಗಿರ ...ಯುವನ್ನು ವೃದ್ಧಿಗೊಳಿಸುವ ಮತ್ತು ಕೈಗಾರಿಕೆಗಳನ್ನು ... ಪ್ರಬಲ ಧೋರಣೆಯನ್ನು ಸರಕಾರವು ಅಂಗೀಕರಿಸಿ ಅದ ...ಸರ ಕಾರ್ಯಕ್ರಮವೊಂದನ್ನು ಜಾರಿಗೆ ತರಬೇಕು. ...ನ್ನ ದೇಶಕ್ಕೆ ಗತ್ಯಂತರವೇ ಇಲ್ಲ.

Shroff Shri Vallabha Shivappa Shet & Co.

Shroff & Jewellers,

DONGERKERY MANGALORE

ESTABLISHED 1918. ಸ್ಥಾಪಿತವಾದದ್ದು ೧೯೧೮.

ಖಾತ್ರಿಯಾದ ಮಾಲು! ನ್ಯಾಯವಾದ ಖರೀದಿ!!



ನಮ್ಮಲ್ಲಿ ಇದರಲ್ಲಿ ತೋರುವ ನಮೂನೆಯ ಭಂಗಾರದ ಒಡವೆಗಳಲ್ಲದೆ ಅನೇಕ ನಮೂನೆಯ ಗೆಜ್ಜೆಟಿಕೆಗಳೂ ಚಕ್ರಸರ, ಅಡ್ಡಿಗೆ ಸರಪಳಿ, ಬಳೆಗಳು, ಯಸ್. ಕ್ಲಾವರ್, ಮಲ್ಲಿಗೆ ಮೊಗ್ಗು ನಾನಾ ತರದ ಗುಲಾಬಿ ಹೂ, ಅಲ್ಲದೆ ನವಯೌವನದ ಸ್ತ್ರೀಯರಿಗೆ ಬೇಕಾದ ನವೀನ ರೀತಿಯ ಆಭರಣಗಳನ್ನು ನಾವು ಕ್ಷಿಪ್ರಕಾಲಕ್ಕೆ ತಯಾರಿಸಿಕೊಡುವೆವು.

ಕೆಂಪಿನ ಬೆಂಡೋಲೆಗಳು, ಸ್ಟಾರುಗಳು, ಟಿಕ್ಕಿಗಳು, ಯಾವಾಗಲೂ ಮಾರಾಟಕ್ಕೆ ಸಿಗುತ್ತವೆ.

ನಮ್ಮ ಸಂಘ ಕಟ್ಟೆಯಲ್ಲಿ ತಯಾರಿಸಿದ ಯಾವತ್ತು ಆಭರಣಗಳಿಗೆ ಒಂದು ವರುಷದೊಳಗೆ ಯಾವದೊಂದು ತರದ ಊನವು ನಮ್ಮ ಕಾರಣದಿಂದ ಉಂಟಾದರೆ ಅಂಥವುಗಳನ್ನು ಮಜೂರಿ ಬಿಟ್ಟು ಪರತು ತೆಗೆದುಕೊಳ್ಳುತ್ತೇವೆ.

ಆರ್ಡರ ಕೊಡುವಾಗ ಸೇಕಡಾ 25ರ ಪ್ರಕಾರ ಹಣವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಸರಾಫ್ ಶ್ರೀ ವಲ್ಲಭ ಶಿವಪ್ಪ ಶೇಟ್ ಮತ್ತು ಕಂಪೆನಿ,

ಸರಾಫ್ ಮತ್ತು ಜುವೆಲ್ಲರ್ಸ್,

(31-3) ಡೊಂಗರಕೇರಿ, ಮಂಗಳೂರು.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು ಎಷ್ಟು ಬೆಲೆ

ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

ಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು. ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಕೊಡಲ್ಪಡುತ್ತವೆ. ಧಾರಣೆ ಪಟ್ಟಿಗೆ ಬರೆಯಿರಿ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

(6-5) ಅವಿನ್ಯೂ ರೋಡು, ಬೆಂಗಳೂರು ಸಿಟಿ.



ಪ್ರಸಿದ್ಧಪಟ್ಟ

ಎಫ್. ಮುಲ್ಲರರ

ಒಯಿಲ್ ಎಕ್ಸ್‌ಪೆಲ್ಲರ್

ಎಣ್ಣೆ ಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ ಎಣ್ಣೆಯನ್ನಿಳಿಸಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ, ಸಂಪೂರ್ಣ ಸ್ವತಶ್ಚಾಲನಕ, ಕಡಿಮೆ ಖರ್ಚು, ಕಡಿಮೆ ಪವರಿನ ವ್ಯಯ, ಹೆಚ್ಚಿನ ಎಣ್ಣೆಯ ಲಾಭ.

ರೋಲರ್ ಮಿಲ್ಲುಗಳು, ಡಿಸ್ ಇಂಟೆಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವುದಕ್ಕೆ ತಕ್ಕದಾದ ಸಣ್ಣ ಹೈಡ್ರೊಲಿಕ್ ಪ್ರೆಸ್ ಪ್ಲೆಂಟ್‌ಗಳು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

VOLKART BROS ENGINEERS

Armenian Street, MADRAS.

VOLKART ENGINEERS

ಇಂಟರ್ ನೇಶನಲ್

ಹಾರ್ವೆಸ್ಟರ್

ಆಯಿಲ್ ಇಂಜಿನು

ಈ ಇಂಜಿನುಗಳ ಬಾಳುವಿಕೆ, ಕಡಿಮೆ ಖರ್ಚು, ಚಲಿಸುವುದರಲ್ಲಿ ಸುಲಭತ್ವ, ಇವುಗಳು ಆವರ್ಣನೀಯವಾಗಿವೆ.



ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆಯಿರಿ.

VOLKART BROS.

Armenian Street, MADRAS.

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ

ಉಡ್ಪಿ ತಾಲೂಕು ಕಾಪು ಪೇಟೆಗೆ ಒಪ್ಪಿದ ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಇದೇ ಬರುವ ವಿಭವ ಸಂ|ರದ ವೈಶಾಖ ಶು ೪ ದಿವಸ ಪ್ರತಿಷ್ಠೆ ಮಾಡುವದೆಂತಲೂ ವ ನಮ್ಮ ಕಾಶೀ ಮಠದ ಗುರುಗಳವರ ಸವಾರಿ ಇಲ್ಲಿಗೆ ಚಿತ್ತೈಸುತ್ತದೆಯಂತಲೂ ಆ ಬಗ್ಗೆ ಸುಮಾರು ೩—೪ ಸಾವಿರ ರೂಪಾಯಿ ಖರ್ಚಿಗೆ ಬೇಕೆಂತಲೂ ಈ ಬಗ್ಗೆ ನಾವು ಸದ್ರಿ ಕಾಪು ಪೇಟೆಗೆ ಒಪ್ಪಿದ ಗೃಹಸ್ಥರು ವೈದಿಕರು ಎಂತಲೂ ಸದ್ರಿ ಖರ್ಚಿನ ಗೋಸ್ಕರ ಊರಲ್ಲಿ ಹೋಗಿ ವಂತಿಗೆ ಮಾಡಬೇಕಾಗಿ ನಮ್ಮ ಪೇಟೆಯವರು ನಿರ್ಣಯಿಸಿದಂತೆ ಆ ಪೈಕಿ ನಾವು ಈ ಪ್ರಾಂತ್ಯಕ್ಕೆ ವಂತಿಗೆಗೆ ಹೊರಟು ಬಂದಿರುತ್ತೇವೆ ಎಂತಲೂ ೨ ಜನ ಗ್ರಹಸ್ಥರು ೧ ವೈದಿಕ ಭಟ್ಟು ಕೂಡಾ ೩ ಜನರು ಶ್ರೀ ದೇವಿಯ ಪ್ರಸಾದವನ್ನು ಹಿಡಕೊಂಡು ವಂತಿಗೆ ವಸೂಲು ಮಾಡುತ್ತಾರೆಯೆಂಬದಾಗಿ ಕುಂದಾಪುರ ತಾಲೂಕಿನ ಹಳ್ಳಿ ಗ್ರಾಮದ ವೈದೀಕರ ಮುಖಾಂತರ ನನಗೆ ತಿಳಿದು ಬಂತು. ಅಲ್ಲದೆ ಸದ್ರಿಯವರು ಬೈಂದೂರು ಅತ್ತ ಕಡೆಗೆ ಹೋಗಿರುತ್ತಾರೆಯೆಂತ ತಿಳಿದುಬರುತ್ತದೆ. ಆದರೆ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ ಸದ್ರಿ ವೆಂಕಟ್ರಮಣ ದೇವರ ಪ್ರತಿಷ್ಠೆಯು ಯಾವಾಗ್ಯೆ ಎಂಬದು ನಿರ್ಣಯಿಸಿದ್ದಾಗಲಿ ಗುರುಗಳು ಕಾಪಿಗೆ ಬರುವದು ನಿರ್ಣಯಿಸಿದ್ದಾಗಲಿ ಇಲ್ಲಾ. ಮೇಲೆ ಹೇಳಿದ ಪ್ರಕಾರ ಖರ್ಚಿನ ಬಗ್ಗೆಯಾಗಲಿ ಇತರ ಯಾವ ಖರ್ಚಿನ ಬಗ್ಗೆಯಾಗಲಿ ವಂತಿಗೆಗೋಸ್ಕರ ಯಾವ ಕ್ರಮವೂ ಈ ವರೆಗೂ ಏರ್ಪಡಿಸಿದ್ದಿಲ್ಲ. ಈ ನಮೂನೆಯಲ್ಲಿ ಸುಳ್ಳು ಹೇಳಿ ವಂತಿಗೆ ವಸೂಲು ಮಾಡಿದವರ ಎಡ್ರೆಸ್‌ಗಳು ಯಾ ಗುರ್ತುಗಳು ವಸೂಲು ಕೊಟ್ಟವರ ಪೈಕಿ ಯಾರಿಗಾದರೂ ಇದ್ದಲ್ಲಿ ಅವರು ಸೀದಾ ನನಗಾಗಲಿ ವ ಇದೇ ಪತ್ರಿಕ್ಯಾಗಲಿ ಉತ್ತರ ಕೊಟ್ಟಲ್ಲಿ ಬಹಳ ಉಪಕಾರವಾಗುತ್ತಿತ್ತು. ಈ ನಮೂನೆಯಲ್ಲಿ ಇನ್ನು ಸುಳ್ಳು ನೆವನಗಳು ಹೇಳಿ ವಂತಿಗೆ ಬಂದಲ್ಲಿ ವಂತಿಗೆ ಕೊಡುವದು ನಮಗೆ ಹಿತವಿಲ್ಲವೆಂತ ಈ ಮೂಲಕ ತಿಳುಹಿಸುತ್ತೇನೆ. ಅಲ್ಲದೆ ಈ ಪೇಟೆಯಿಂದ ಸಪ್ತಾಹ ಫಂಡಿನ ಬಗ್ಗೆ ದಸ್ಕತು ಮೊಹರು ಇರುವ ಛಾಪೆಮಾಡಿದ ಸೀರು ಪುಸ್ತಕಗಳು ಮಾತ್ರ ನಾವು ಹಂಚುವರೆ ತಯಾರಿಸಿದ್ದೇವೆ.

ಶ್ರೀಧರ ಶ್ಯಾನಭಾಗ, ಪಟೇಲ ಕಾಪು.

ಕಾಪು ವೆಂಕಟ್ರಮಣ ದೇವಸ್ಥಾನದ ಮೊಕ್ತೇಸರ.

ಕಾಪು, 20-3-1928.

...cations Cover All Your Needs.
...ERIT HAS MADE FAMOUS.
...ಸಿದ್ಧವಾದ ಬಾಟ್ಲಿವಾಲಾ ಇವರ
...ದ ಔಷಧಗಳು.
...ಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ರೂ. ೧.
... ಕೊಡುವ ಔಷಧ ಆಣೆ ೧೩.
... ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಅತ್ಯುತ್ತಮವಾದ ಔಷಧ. ಆಣೆ ೧೩
... ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ರೂ. ೧—೪—೦. ೧—೧೨—೦
...—೦
LIBERAL DISCOUNT TO TRADE
...APUR, BOMBAY.
...ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...Road, P. O. Cadell Road, Bombay. No. 14.

...ರ ಲೋಧ್ರ
...ಗನಿವಾರಿಣೀ.
...ಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು
...ವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ
...ವಾಗಿ ಹೊಗಳುತ್ತಿರುವರು.
...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ
...ವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ
... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ
... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ,
...ವಾಗಿ ಗುಣವಾಗುವುವು.
...ವು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು
...ಸರೀ ಕುಟೀರಂ,
... P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
... ಹಂಪನಕಟ್ಟಾ, ಮಂಗಳೂರು.

...ಟೇಬಲ್ ಟೈಂಪೀಸ್ ಇನಾಂ.
...ರೆಕ್ಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ...ಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ಟೀಲ್ ...) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನ ...ವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ...ಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ...ವರೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿ ...ವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ...ವಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳು...ವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್
1ಕ್ಕೆ 7—0—0.
ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ|| ಬಾಕ್ಸ್ ನಂ. 105, ಮದರಾಸು.

ಸಿಲೆಬಸ್ಸು. ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನ್ ಕೌನ್ಸಿಲಿನವರು ಸಿಲೆಬಸ್ಸನ್ನು ತಯಾರಿಸಿ ಪ್ರತಿ ಒಂದು ಶಾಲೆಗೂ ಧರ್ಮಾರ್ಥವಾಗಿ ಒದಗಿಸಿರುವರು. ಆದರೆ ಈ ಸಿಲೆಬಸ್ಸು ಪ್ರಕಾರ ಕೆಲಸ ನಡಿಯುವುದು ಕಂಡುಬರುವುದಿಲ್ಲ. ಒಬ್ಬೊಬ್ಬ ಉಪಾಧ್ಯಾಯಿನಿ ಇರುವ ಶಾಲೆಗಳಲ್ಲಿ ಓದುಬರಹ ಕಲಿಸುವುದೆ ಕಷ್ಟ. ಇನ್ನು ಸಿಲೆಬಸ್ಸಿನ ಇತರ ಪಾಠಗಳನ್ನು ಕಲಿಸಲಿಕ್ಕೆ ದಾರಿಯೇ ಕಂಡುಬರುವುದಿಲ್ಲ. ಇತರ ಶಾಲೆಗಳಲ್ಲಿ ಕಲಿಸ ಬಹುದು. ಆದರೆ ಇನ್ಸ್‌ಪೆಕ್ಟರುಗಳು ಉಪಾಧ್ಯಾಯಿನಿಯರು ಸಿಲೆಬಸ್ಸು ಪ್ರಕಾರ ಪಾಠ ಕಲಿಸುತ್ತಾರೊ ಎಂದು ನೋಡುವುದೇ ದುರ್ಲಭ. ಇನ್ಸ್‌ಪೆಕ್ಟರುಗಳು ಬರುವಾಗ ಗೋಡೆಗೆ ಕ್ಲಾಸಿನಲ್ಲಿ ಒಂದೊಂದು ಟೈಮಟೇಬಲ್, ಸಿಲೆಬಸ್ಸ್ ತಯಾರಿಸುವ ಮುಂಚೆ ತಯಾರಿಸಿದ್ದು ಎಷ್ಟೊ ಕಡೆಗಳಲ್ಲಿದೆ. ಒಂದೊಂದು ಕ್ಲಾಸಿನ ಗೋಡೆಗಳಲ್ಲಿ ಒಂದೊಂದು ತೂಗಾಡಿಸಿದರೆ ಸಾಕು. ಒಂದೆರಡು ಮಿಸ್ಟ್ರೆಸುಗಳು ಇರುವಲ್ಲಿ ಎರಡೆರಡು ಕ್ಲಾಸುಗಳಿಗೆ ಒಂದೇ ಸಮಯಕ್ಕೆ ಒಂದೇ ತರದ ಪಾಠವು ಇದ್ದರೂ ಚಿಂತೆ ಇಲ್ಲ. ಪಾಠಗಳ ಸ್ಕೀಮು ಇದ್ದರೆ ಸಾಕು. ಅದು ಸಿಲೆಬಸ್ಸಿಗೆ ಸರಿಯಾಗಿರಲೂ ಇರಬಹುದು. ಅಥವಾ ಕಲಿಸುವ ಉಪಾಧ್ಯಾಯಿನಿಯು ಕಲಿಯುವಾಗ ಇದ್ದ ಸ್ಕೀಮೂ ಆಗಿರಬಹುದು.

ಹುಡುಗಿಯರ ಶಾಲೆಗಳಲ್ಲಿ ಮುಖ್ಯವಾದುದು ನೋಟ್ಸ್ ಒಫ್ ಲೆಸನ್ಸ್. ಇದನ್ನು ತಿಂಗಳು, ತಾರೀಕು, ವಾರ ಗಂಟೆ ಪ್ರಕಾರ ಬರೆದಿಟ್ಟರೆ ಸಾಕು. ನೋಟ್ಸ್ ಒಫ್ ಲೆಸನ್ಸ್ ಇದ್ದರೆ ಮಕ್ಕಳಿಗೆ ಪಾಠ ಬಂತೆಂದು ಭಾವನೆ. ನಾಲ್ಕೈದು ಕ್ಲಾಸುಗಳಿಗೆ ಒಬ್ಬ ಉಪಾಧ್ಯಾಯಿನಿಯು ಇದ್ದರೆ ಅವಳ ಆಯುಷ್ಯವೆಲ್ಲವೂ ನೋಟ್ಸು ಬರಿಯುವುದರಲ್ಲಿಯೇ ಕಳೆದುಹೋಯಿತು. ಕಲಿಸುವುದಕ್ಕೆ ಸಮಯ ಎಲ್ಲಿದೆಯೊ ಪರಮಾತ್ಮನೇ ಬಲ್ಲ.

ಡಿಪ್ಟಿ ಇನ್ಸ್‌ಪೆಕ್ಟರುಗಳು ಈ ನೋಟ್ಸುಗಳನ್ನೇ ನೋಡಿ ಶಾಲೆಯ ಕೆಲಸವು ಒಳ್ಳೇದೊ ಕೆಟ್ಟದೊ ಎಂದು ತಿಳಿಯುವರು. ಒಂದೊಂದು ಸಾರಿ ಮೋಟರು ಓಡುವ ಮಾರ್ಗದ ಬದಿಯಲ್ಲಿ ಶಾಲೆ ಇದ್ದರೆ ಉಪಾಧ್ಯಾಯಿನಿಯನ್ನು ಅಲ್ಲಿಗೇ ಕರೆದು ನೋಟ್ಸು ಚೆಕ್ ಮಾಡಿ ಅದಕ್ಕೆ ದಸ್ಕತು ಹಾಕುವ ಸಂದರ್ಭಗಳೂ ಇವೆ. ಇದರಿಂದ ಶಾಲೆಯ ಮಕ್ಕಳ ವಿದ್ಯಾಭಿವೃದ್ಧಿಯು ಹೇಗೂ ಇರಲಿ ಉಪಾಧ್ಯಾಯಿನಿಯರು ಗಂಟೆ ತಾರೀಕು ಪ್ರಕಾರ ನೋಟ್ಸನ್ನು ತಯಾರಿಸುವುದಕ್ಕೆ ಅಸಡ್ಡೆ ಮಾಡುವುದಿಲ್ಲ. ಇದರಿಂದ ಇನ್ನಾದರೂ ಸಿಲೆಬಸ್ಸ್ ಪ್ರಕಾರ ಪಾಠಗಳನ್ನು ತಯಾರಿಸುವಂತೆ ಉಪಾಧ್ಯಾಯಿನಿಯರಿಗೆ ಅಧಿಕಾರಿಗಳು ತಿಳಿಸುವುದು. ಈಗ ಎಲ್ಲಾ ಪಾಠಗಳ ವಿಷಯವೂ ಸಿಲೆಬಸ್ ಪ್ರಕಾರ ಬರೆದ ಪುಸ್ತಕಗಳು ಇವೆ. ಮಕ್ಕಳು ಆ ಪುಸ್ತಕಗಳನ್ನು ತೆಗೆದುಕೊಂಡರೆ ಉಪಾಧ್ಯಾಯಿನಿಯರಿಗೆ ಕಲಿಸುವುದಕ್ಕೂ ಮಕ್ಕಳಿಗೆ ಮನೆಯಲ್ಲಿ ಕಲಿಯುವುದಕ್ಕೂ ಸುಲಭವಾಗುವುದು. ಕೆಳಗಿನ ಕ್ಲಾಸಿನ ಮಕ್ಕಳಿಂದ ನೋಟ್ಸು ಬರಿಸಿ ಏನೊಂದು ಪ್ರಯೋಜನವಿಲ್ಲ. ನೋಟ್ಸು ಕೊಡಲಿಕ್ಕೆ ಸಮಯವೂ ಇಲ್ಲ.

ಡಿಸಿಪ್ಲಿನ್. ಯಾವ ಹುಡುಗಿಯರ ಶಾಲೆಯಲ್ಲಿ ನೋಡಿದರೂ ಉಪಾಧ್ಯಾಯಿನಿಯರೊಳಗೆ ಜಗಳಗಳು ತಪ್ಪುವುದೇ ಇಲ್ಲ. ಇದರಿಂದ ಇವರು ಶಾಲೆ ಸಮಯದಲ್ಲಿ ದೂರ ದೂರದಿಂದ ಬಂದು ಒಟ್ಟುಕೂಡುವುದರಿಂದ ಕೆಲವು ಶಾಲೆಗಳಲ್ಲಿದ್ದ ಸಮಯವೆಲ್ಲವೂ ಉಪಾಧ್ಯಾಯಿನಿಯರ ಜಗಳದಲ್ಲಿಯೂ ಬೈದಾಟಗಳಲ್ಲಿಯೂ ಕಳೆದು ಹೋಗಿ ಮಕ್ಕಳು ಈ ಜಗಳವನ್ನೂ ಬೈಗಳನ್ನೂ ಕೇಳಿ ಕೇಳಿ ಕಡೆಗೆ ಶಾಲೆಗೆ ಬರುವುದನ್ನೇ ಬಿಟ್ಟು ಬಿಟ್ಟು ಹುಡುಗರ ಶಾಲೆಗೆ ಸೇರಿ ಅಲ್ಲಿ ಓದು ಬರಹಗಳನ್ನು ಕಲಿಯಲುದ್ಯುಕ್ತರಾಗುವರು. ಆದುದರಿಂದ ಕೆಲವು ಊರುಗಳಲ್ಲಿ ಹುಡುಗಿಯರ ಶಾಲೆಗಳಿದ್ದರೂ ಹುಡುಗಿಯರ ಶಾಲೆಗಳಲ್ಲಿರುವುದಕ್ಕಿಂತ ಹುಡುಗಿಯರು ಹುಡುಗರ ಶಾಲೆಯಲ್ಲಿ ಹೆಚ್ಚಾಗಿರುವರು. ಕೆಲವು ಶಾಲೆಗಳಲ್ಲಿ ಜಗಳಗಳು ವರ್ಷಗಟ್ಟಲೆಯಿಂದ ಮುಂದರಿದು ತಾಲೂಕು ಬೋರ್ಡಿನವರಾಗಲೀ ಡಿಪ್ಯುಟಿ ಇನ್ಸ್‌ಪೆಕ್ಟರರಾಗಲಿ ಈ ಜಗಳಗಳನ್ನು ತೀರ್ಮಾನ ಮಾಡದೆ ಹುಡುಗಿಯರ ಶಾಲೆಯ ಮಕ್ಕಳ ಸಂಖ್ಯೆಯು ಅಧೋಗತಿಗಿಳಿಯುವುದು. ಮಕ್ಕಳ ಸಂಖ್ಯೆಯು ಕಡಿಮೆಯಾದ್ದನ್ನು ಮಂತ್ಲಿ ರಿಟರ್ನಿನಲ್ಲಿ ಎಲ್ಲಿಯಾದರೂ ನೋಡಿ ನಂತರ ಚರಿಪಡಿಸುವ ಸಂದರ್ಭಗಳು ಕಾಣುತ್ತವೆ.

ಆದುದರಿಂದ ಹುಡುಗಿಯರ ಶಾಲೆಗಳು ನಿಜವಾಗಿ ಅಭಿವೃದ್ಧಿ ಹೊಂದಬೇಕಾದರೆ ಕ್ಲಾಸಿಗೊಬ್ಬಳಂತೆ ಉಪಾಧ್ಯಾಯಿನಿಯನ್ನು ನೇಮಿಸಬೇಕು. ಸಿಲೆಬಸ್ಸ್ ಪ್ರಕಾರ ಪಾಠ ಮಾಡುವಂತೆ ಉಪಾಧ್ಯಾಯಿನಿಯರನ್ನು ಪತ್ತಾಯ ಪಡಿಸಬೇಕು. ಟೈಮಟೇಬಲುಗಳು ಸಿಲೆಬಸ್ಸಿಗೆ ಅನುಸಾರವಾಗಿರುವಂತೆ ಮಾಡಬೇಕು. ನೋಟ್ಸು ಒಫ್ ಲೆಸನ್ನಿಗಿಂತಲೂ ಕಲಿಸುವಿಕೆಯಲ್ಲಿ ಉಪಾಧ್ಯಾಯಿನಿಯರು ಗಮನಕೊಡುವಂತೆ ಅವರಿಗೆ ತಿಳಿಸಬೇಕು. ಸಿಲೆಬಸ್ಸ್ ಪ್ರಕಾರ ತಯಾರಿಸಿದ ಪ್ರತಿ ಒಂದು ಪುಸ್ತಕವನ್ನು ಅವರು ತೆಗೆದುಕೊಳ್ಳುವಂತೆ ಮಾಡಬೇಕು. ಮುಖ್ಯವಾಗಿ ಶಾಲೆಯಲ್ಲಿ ಉಪಾಧ್ಯಾಯಿನಿಯರೊಳಗೆ ಜಗಳವು ಹುಟ್ಟಿದೊಡನೆ ಅದನ್ನು ನಿಲ್ಲಿಸುವಂತೆ ಕೂಡಲೇ ಬಂದೋಬಸ್ತು ಮಾಡಬೇಕು. ಇಲ್ಲವಾದರೆ ಶಾಲೆಯು ಹಾಳಾಗುವುದು. ಮಕ್ಕಳ ಗುಣನಡತೆಗಳು ಕೆಡುವವು. ಹುಡುಗಿಯರು ಮುಂದಕ್ಕೆ ಮನೆ ನಡಿಸುವ ಗೃಹಿಣಿಯರಾಗುವುದರಿಂದ ಅವರ ಗುಣನಡತೆಗಳು ಸಣ್ಣ ಪ್ರಾಯದಿಂದಲೇ ತಿದ್ದಲ್ಪಟ್ಟರೆ ಮಾತ್ರವೇ ಪ್ರಾಯದಲ್ಲಿ ಸರಿಯಾಗುವವು.

ಮಕ್ಕಳು ಸರಿಯಾಗಿ ಬರಲಿಕ್ಕೆ ಅವರಿಗೆ ಉತ್ತೇಜನ ಸಿಕ್ಕುವಂತೆ ಅವರಿಗೆ ವರ್ಷಕ್ಕೊಂದಾವರ್ತಿ ಇನಾಮು ಹಂಚಬೇಕು. ಈ ಸಮಯದಲ್ಲಿ ಮಕ್ಕಳ ಹೆತ್ತವರನ್ನು ಶಾಲೆಗೆ ಬರುವಂತೆ ಮಾಡಿದರೆ ಶಾಲೆಯಲ್ಲಿ ಮಾಡುವ ಉತ್ತಮ ಕೆಲಸವು ಗೊತ್ತಾಗುವುದು.

ಶಾಲೆಗೆ ಒಂದೊಂದು ಸಿಂಗರ್ ಹೊಲಿಗೆ ಮೆಶನನ್ನು ಒದಗಿಸಿ ಹುಡುಗಿಯರಿಗೆ ತಮ್ಮ ತಮ್ಮ ಲಂಗ, ಜಾಕೆಟು, ತಲೆದಿಂಬು ಶರ್ಟು ಮುಂತಾದ್ದನ್ನು ಹೊಲಿಯಲಿಕ್ಕೆ ಕಲಿಸಿದರೆ ಮತ್ತಷ್ಟು ಉತ್ತೇಜನ ಸಿಕ್ಕಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಅಭಿವೃದ್ಧಿಯಾಗುವುದು. ಹುಡುಗಿಯರ ಶಾಲೆಗಳಿರುವ ಊರುಗಳಲ್ಲಿ ಹುಡುಗರ ಶಾಲೆಗಳಲ್ಲಿ ಹುಡುಗಿಯರನ್ನು ದಾಖಲುಮಾಡದಂತೆ ಸರಿಯಾದ ಹುಕುಮನ್ನು ಕೊಡಬೇಕು. ಇದರಿಂದ ಹುಡುಗಿಯರ ಸಂಖ್ಯೆಯು ಹೆಚ್ಚಾಗುವುದು.

ಇಂಡಿಯಕ್ಕೆ ಹೊಸ ರೀತಿಯ ಸರಕಾರವನ್ನು ಕೊಡಲಿಕ್ಕೆ ಅನುಭವ ಪಡಿಯಲಿಕ್ಕೆ ಬಂದ ಸ್ಯಾಮನ್ ರೊಯಲ್ ಕಮಿಶನ್ನಿನವರು ಕೊಟ್ಟ ಸ್ಟೇಟಮೆಂಟು.

ಇಂಡಿಯಕ್ಕೆ ಯಾವ ತರದ ರಾಜ್ಯಾಧಿಕಾರವನ್ನು ಕೊಡಬೇಕೆಂದು ಸರಕಾರಿ ಮತ್ತು ನೊನ್ ಒಫಿಶಿಯಲ್ ಜನರೂ, ಸ್ಥಳೀಕ ಸರಕಾರಗಳೂ ಅಥವಾ ವಿದ್ವಾಂಸರೂ ತಮ್ಮ ತಮ್ಮ ಅನುಭವಗಳನ್ನು ಬರಹಮೂಲಕ ಕೊಡಬೇಕೆಂದು ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ಕೇಳಿಕೊಳ್ಳುತ್ತದೆ. ಈ ಕಮಿಶನ್ ಇಂಡಿಯಕ್ಕೆ ತಿರಿಗಿ ಬರುವ ಒಕ್ಟೋಬರ ತಿಂಗಳಲ್ಲಿ ಬರುವಷ್ಟರಲ್ಲಿ ಯಾವ ಯಾವ ಸ್ಥಳಗಳಲ್ಲಿ ಉಳುಕೊಂಡು ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ಕಾರ್ಯಕ್ರಮಗಳನ್ನು ತಯಾರಿಸಬೇಕಾಗಿದೆ. ಬರಹಮೂಲಕ ಸ್ಟೇಟುಮೆಂಟುಗಳನ್ನಾಗಲೀ ಮೆಮೊರೆಂಡಮುಗಳನ್ನಾಗಲಿ ಆದಷ್ಟು ಬೇಗನೇ ಕಮಿಶನಿನ ಆಫೀಸಿಗೆ ಕಳುಹಿಸಬೇಕು. ಹೀಗೆ ಮಾಡಿದರೆ ಯಾವ ಯಾವ ಸಂಗತಿಗಳ ವಿಷಯ ಆಲೋಚಿಸಬೇಕೆಂದು ಕಮಿಶನಿಗೆ ತಿಳಿಯುವುದು. ಇದರಿಂದ ಇನ್ನುಮುಂದೆ ಯಾವ ರೀತಿಯಲ್ಲಿ ತನಖಿ ನಡಿಸಬೇಕೆಂದೂ ತಿಳಿದಂತಾಗುವುದು. ಕಮಿಶನು ಮಾರ್ಚಿ ೩೧ನೇ ತಾರೀಕಿನಲ್ಲಿ ಇಂಡಿಯದಿಂದ ಹೊರಟು ಇಂಗ್ಲೆಂಡಿಗೆ ಹೋಗುವುದು. ಆದುದರಿಂದ ಸ್ಟೇಟಮೆಂಟನ್ನು ತಯಾರಿಸುವರು. ಅಂಥಾ ಸ್ಟೇಟುಮೆಂಟುಗಳನ್ನಾಗಲೀ ಮೆಮೊರೆಂಡಮುಗಳನ್ನಾಗಲೀ ರಿಜಿಸ್ಟರ ಮಾಡಿ "ದಿ ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ಕೇಂಪ ಇಂಡಿಯಾ" ಎಂದು ಮೇಲು ವಿಳಾಸ ಬರೆದು ಕಳುಹಿಸಬೇಕು. ಇದರ ನಂತರ ಕಳುಹಿಸುವವರು ಇಂಡಿಯದಲ್ಲಿ ತಮ್ಮ ಪ್ರತ್ಯೇಕ ಆಫೀಸನ್ನು ಇಡುವರು. ಅಂಥವರು ಈ ಆಫೀಸಿಗೆ "ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ನ್ಯೂಡಿಲ್ಲಿ ಒಫಿಸ್, ನ್ಯೂಡಿಲ್ಲಿ" ಎಂದು ವಿಳಾಸ ಬರೆದು ಕಳುಹಿಸಬೇಕಾಗುವುದು. ಈ ಆಫೀಸಿನಿಂದ ಈ ಮೆಮೊರೆಂಡಮುಗಳು ಇಂಗ್ಲೆಂಡಿನಲ್ಲಿರುವ ಕಮಿಶನ್ನಿನ ಆಫೀಸಿಗೆ ಕಳುಹಿಸಲ್ಪಡುವವು. ಈ ರೀತಿ ಮೆಮೊರೆಂಡಮುಗಳನ್ನು ಕಳುಹಿಸುವದಾದರೆ ಮೊದಲನೆ ಸರ್ತಿಗೆ ಅದರ ೧೨ ಪ್ರತಿಗಳನ್ನು ಕಳುಹಿಸಬೇಕು. ನಂತರ ಇಂಡಿಯದ ಸರಕಾರವೂ ಸಂಸ್ಥಾನ ಸರಕಾರಗಳೂ ಕಮಿಟಿಗಳನ್ನು ಸ್ಥಾಪಿಸಿದರೆ ಮೆಮೊರೆಂಡಮಿನ ಹೆಚ್ಚು ಪ್ರತಿಗಳನ್ನು ಕಳುಹಿಸಬೇಕಾಗುವುದು.

ಈ ಮೆಮೊರೆಂಡಮುಗಳನ್ನು ಆದಷ್ಟು ಬೇಗನೇ ಕಳುಹಿಸಬೇಕು. ಅಖೈರಿಗೆ ಜೂನು ೧ನೇ ತಾರೀಕಿನೊಳಗಾದರೂ ಕಳುಹಿಸಬೇಕು. ಇದರ ನಂತರ ಕಳುಹಿಸುವವರು ಯೋಗ್ಯವಾದ ಕಾರಣಗಳನ್ನು ತೋರಿಸಿ ಬರದರೆ ಅವುಗಳು ಅಂಗೀಕರಿಸಲ್ಪಡುವವು.

ಕಮಿಶನು ಈ ಕೆಳಗಿನ ವಿಷಯಗಳ ಸಂಗತಿಗಳ ವಿಷಯ ಕೆಲಸ ನಡಿಸುವುದು:—

(೧) ಈಗಿನ ಸರಕಾರವು ಯಾವ ರೀತಿಯಲ್ಲಿ ಕಾರ್ಯವನ್ನು ನಡಿಸುತ್ತಿದೆ. ವಿದ್ಯಾಭಿವೃದ್ಧಿಯು ಯಾವ ರೀತಿಯಲ್ಲಿದೆ. ಜನರ ಪ್ರತಿನಿಧಿಗಳಿರುವ ಸಂಸ್ಥೆಗಳು ಯಾವ ರೀತಿಯಲ್ಲಿ ಕೆಲಸ ನಡಿಸುತ್ತಿವೆ ಮತ್ತು ಇವುಗಳಿಗೆ ಸಂಬಂಧ ಪಟ್ಟ ಇತರ ವಿಷಯಗಳು? ಇನ್ನುಮುಂದೆ ಹೊಸ ಬದಲಾವಣೆಗಳನ್ನು ಮಾಡುವುದಾದರೆ ಯಾವ ತರದ ಪ್ರಜಾ ಪ್ರತಿನಿಧಿ ಸರಕಾರವನ್ನು ಸ್ಥಾಪಿಸಬೇಕು ಅಥವಾ ಈಗಿರುವ ಸರಕಾರದಲ್ಲಿಯೇ ಸ್ವಲ್ಪ ತಿದ್ದುಪಡಿಗಳನ್ನು ಮಾಡಿದರೆ ಸಾಕಾದೀತೊ. ನ್ಯಾಯವಿಧಾಯಕ ಸಭೆಯಲ್ಲದೆ ಇನ್ನೊಂದು ಸಭೆಯನ್ನು ಸ್ಥಾಪಿಸುವ ಅಗತ್ಯವಿದೆಯೊ ಎಂಬುದೇ ಮುಖ್ಯ ಉದ್ದಿಶ್ಯಗಳಾಗಿವೆ.

ಇಷ್ಟರ ವರೆಗೆ ಕಮಿಶನು ಇಂಡಿಯದಲ್ಲಿ ಸಂಚರಿಸಿ ಪ್ರಾಮುಖ್ಯವಾದ ಮತ್ತು ಪ್ರಜಾ ಪ್ರತಿನಿಧಿ ಸಂಸ್ಥೆಗಳಿಂದ ಡಿಲ್ಲಿಯಲ್ಲಿಯೂ ಇತರ ಕಡೆಗಳಲ್ಲಿಯೂ ಅನುಭವವನ್ನು ಪಡೆದದೆ. ಇದರಿಂದ ಇನ್ನುಮುಂದೆ ಮಾಡಬೇಕಾದ ತನಖಿಯನ್ನು ಯಾವ ರೀತಿಯಲ್ಲಿ ನಡಿಸಬೇಕೆಂದು ಕಮಿಶನಿಗೆ ಸ್ವಲ್ಪ ಮಟ್ಟಿಗೆ ಸೂಚನೆಗಳು ತಿಳಿದುಬಂದಿವೆ.

ಈಗ ಕಮಿಶನು ಪ್ರಕಟಿಸಿರುವ ಸ್ಟೇಟುಮೆಂಟಿಗೆ ಲಗ್ತಪಡಿಸಿದ ಪುರವಣಿಯಲ್ಲಿ ತೋರಿಸಿದ ವಿಷಯಗಳ ಕುರಿತು ಮೆಮೊರೆಂಡಮಿನಲ್ಲಿ ಅನುಭವವನ್ನು ಕೊಡಬೇಕಾಗಿದೆ. ಅದಲ್ಲದೆ ಈ ಪುರವಣಿಯಲ್ಲಿ ಇಲ್ಲದೆ ಇರುವ ಸಂಗತಿಗಳ ವಿಷಯಗಳು ಇದ್ದರೆ ಅವುಗಳ ವಿಷಯವೂ ಬರಿಯಬಹುದು. ಮೆಮೊರೆಂಡಮುಗಳನ್ನು ಕಳುಹಿಸುವವರು ಪ್ರತಿ ಒಂದರ ವಿಷಯವೂ ತಮ್ಮ ಅನುಭವವನ್ನು ಬರೆಯಬೇಕೆಂದಿಲ್ಲ. ತಮಗೆ ಅಗತ್ಯ ಕಂಡವುಗಳ ವಿಷಯ ಮಾತ್ರವೇ ಬರೆದರೆ ಸಾಕು.

ಈಗ ಕಳುಹಿಸುವ ಬರಹಮೂಲಕ ಮೆಮೊರೆಂಡಮುಗಳಲ್ಲಿ ತೋರಿಸುವ ಎಲ್ಲಾ ಸಂಗತಿಗಳ ವಿಷಯ ಕಮಿಶನು ಚೆನ್ನಾಗಿ ಆಲೋಚಿಸುವುದು. ನಂತರ ಈ ಮೆಮೊರೆಂಡಮುಗಳನ್ನು ಕಳುಹಿಸುವವರಿಂದ ಇನ್ನುಮುಂದೆ ತನಖಿ ನಡಿಸುವಾಗ ಬಾಯಿಂದ ಅನುಭವಗಳನ್ನು ಅಗತ್ಯವಿದ್ದಲ್ಲಿ ಪಡಕೊಳ್ಳಲಿಕ್ಕೂ ಅನುಕೂಲತೆಯನ್ನು ಮಾಡುವುದು.

ಪ್ರತಿ ಒಂದು ಮೆಮೊರೆಂಡಮಿಗೂ ತಾರೀಕು ದಸ್ಕತು ಹಾಕಿ, ಮೇಲುವಿಳಾಸವನ್ನು ಕೊಡಬೇಕು. ಯಾಕಂದರೆ ಅಗತ್ಯವಿದ್ದಲ್ಲಿ ಇವರನ್ನು ಕಮಿಶನಿನ ಮುಂದೆ ಬರಮಾಡಿಸಿ ಅವರಿಂದ ಇನ್ನು ಹೆಚ್ಚು ಅನುಭವವನ್ನು ಪಡಿಯುವ ಅಗತ್ಯ ಬೀಳಬಹುದು.

ಪ್ರತಿನಿಧಿ ಸಂಘದವರು ಕಳುಹಿಸುವದಾದರೆ ಈ ಸಂಘದಲ್ಲಿ ಎಷ್ಟು ಮಂದಿ ಮೆಂಬರರಿರುವರು. ಇವುಗಳಲ್ಲಿ ಯಾರಿಂದ ಅನುಭವ ಪಡಿಯಬಹುದು ಎಂದು ಆಲೋಚಿಸಬೇಕಾಗುವುದು.

ಈ ಕೆಳಗಿನ ಪುರವಣಿಯನ್ನು ಕಮಿಶನು ಪ್ರಕಟಿಸಿರುವುದು:—

ನೋಟ್ (*A*) ಈ ಕೆಳಗೆ ಕೊಟ್ಟಿರುವ ಪ್ರಾಮುಖ್ಯ ವಿಷಯಗಳ ಕುರಿತು ಉದಾಹರಣೆಗಾಗಿ ಕೆಲವು ಪ್ರಶ್ನೆಗಳನ್ನು ಕೊಟ್ಟಿದೆ.

ನೋಟ್ (*B*) ಈ ಪ್ರಾಮುಖ್ಯ ವಿಷಯಗಳ ಕುರಿತು ಪ್ರತಿ ಒಂದು ಪ್ರಶ್ನೆಗೂ ಉತ್ತರ ಬರೆಯಬೇಕೆಂದಿಲ್ಲ. ತಮಗೆ ಅಗತ್ಯ ಕಾಣುವ ಪ್ರಶ್ನೆಗೆ ಉತ್ತರ ಕೊಟ್ಟರೂ ಸಾಕು.

ನೋಟ್ (C) ಈಗಿರುವ ಇಂಡಿಯಾ ಸರಕಾರದಲ್ಲಿಯೂ, ಪ್ರಾಂತಿಕ ಸರಕಾರಗಳಲ್ಲಿಯೂ ಯಾವ ಕೊರತೆಗಳಿವೆ ಎಂದು ತೋರಿಸಿ ಕೊಟ್ಟರೂ ಆಗಬಹುದು. ಇನ್ನುಮುಂದೆ ಯಾವ ವಿಧದಲ್ಲಿ ಬದಲಾವಣೆಗಳಾಗಬೇಕೆಂದು ತಮಗೆ ಯೋಗ್ಯ ಕಂಡ ಸ್ಕೀಮುಗಳನ್ನು ಬರದು ಕಳುಹಿಸಬಹುದು.

(೧) ಬ್ರಿಟಿಷ ಇಂಡಿಯಕ್ಕೆ ಸರಿಯಾಗುವ ರೀತಿಯ ಪ್ರತಿನಿಧಿ ಕ್ರಮಗಳು ಉದಾಹರಣೆಗಾಗಿ (a) ವೋಟರುಗಳ ಪಟ್ಟಿಯನ್ನು ಯಾವ ಸೂತ್ರಗಳನ್ನು ಅನುಸರಿಸಿ ತಯಾರಿಸಬೇಕು. (b) ಚುನಾವಣೆಗಳನ್ನು ಯಾವ ರೀತಿಯಲ್ಲಿ ಮಾಡಬೇಕು. (c) ಆಯಾ ಜಾತಿ, ಮತ, ಇತರ ದೇಶೋದ್ಧಾರಕ ಸಂಸ್ಥೆಗಳು, ಸಾಮಾಜಿಕ, ಆರ್ಥಿಕ ಸಂಗತಿಗಳಲ್ಲಿ ಇಂಡಿಯಾ ಸರಕಾರದಲ್ಲಿಯೂ ಪ್ರಾಂತಿಕ ಸರಕಾರದಲ್ಲಿಯೂ ಯಾವ ರೀತಿಯ ಪ್ರಾತಿನಿಧ್ಯವು ಬೇಕು. (d) ಪ್ರಾತಿನಿಧ್ಯಕ್ಕೂ ಕೊನ್ಸ್ಟಿಟ್ಯುಯೆಂಟ್ಸಿಗೂ ಯಾವ ತರದ ಸಂಬಂಧವಿರಬೇಕು (e) ಅಫಿಶಿಯಲುಗಳನ್ನು ಯಾವ ರೀತಿಯಲ್ಲಿ ನೊಮಿನೇಟ ಮಾಡಬೇಕು. ನೊನ್ ಒಫಿಶಿಯಲುಗಳನ್ನು ಯಾವ ರೀತಿಯಲ್ಲಿ ನೊಮಿನೇಟ ಮಾಡಬೇಕು ಎಂಬುದರ ವಿಷಯ ಬರಿಯಬೇಕು.

ಈಗಿರುವ ೯ ಸಂಸ್ಥಾನಗಳೂ ಸಾಕಾದೀತೇ ಇನ್ನು ಹೆಚ್ಚು ಸಂಸ್ಥಾನಗಳನ್ನು ಮಾಡುವ ಅಗತ್ಯವಿದೆಯೋ ಅಥವಾ ಈಗಿರುವ ಸಂಸ್ಥಾನಗಳನ್ನು ವಿಭಾಗಿಸಿದರೆ ಸಾಕಾದೀತೊ.

ಮುನಿಸಿಪಾಲಿಟಿಗಳು, ಡಿಸ್ಟ್ರಿಕ್ಟ ಬೋರ್ಡುಗಳೂ, ತಾಲೂಕು ಬೋರ್ಡುಗಳೂ ಮುಂತಾದ ಲೋಕಲ್‌ಸೆಲ್ಫ ಗವರ್ನಮೆಂಟುಗಳಲ್ಲಿ (a) ಎಷ್ಟು ಮಂದಿ ಮೆಂಬರುಗಳು ಇರಬೇಕು. (b) ಇವುಗಳು ಯಾವ ಯಾವ ಕೆಲಸಗಳನ್ನು ನಡಿಸಬೇಕು. (c) ಪ್ರಾಂತಿಕ ಸರಕಾರಗಳ ಉದ್ಯೋಗಸ್ಥರಿಗೂ ಇವರಿಗೂ ಯಾವ ತರದ ಸಂಬಂಧ ಇರಬೇಕು. (d) ಹಣದ ವಿಷಯ ಯಾವ ತರದ ಅನುಕೂಲತೆ ಮಾಡಬೇಕು.

(ಸಶೇಷ)



Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

... ಎಗ್ಜಿಬಿಷನ್‌ನೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

... ರೂ. ೧.

... ತಕ್ಷಣ ಗುಣ ಕೊಡುವ ಔಷಧ ಆಣೆ ೧೪.

... ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

... ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

... ರೂ. ೧—೪—೦. ರೂ. ೧—೮—೦. ೧—೧೨—೦.

... ೦—೬—೦

... ೦—೬—೦. LIBERAL DISCOUNT TO TRADE

... CAWASHAPUR, BOMBAY.

... ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Savani Road, P. O. Cadell Road, Bombay, No. 14.

ಕೇಸರಿಯವರ ಲೋಧ್ರ

... ರೋಗನಿವಾರಿಣೀ.

... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ನವಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹಲವು ಬಗೆಯಾಗಿ ಹೊಗಳುತ್ತಿರುವರು.

... ದೊರೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...

ಕೇಸರೀ ಕುಟೀರಂ,

... ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

... ಮಾರ್ಕೆಟ್, ಹಂಪನಕಟ್ಟಾ, ಮಂಗಳೂರು.



ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.



ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವೀಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಬರಾರು ಗಂಟೆಯನ್ನೂ ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ಯಾಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟ್ಯಾಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ॥ ಬಾಕ್ಸ್ ನಂ. 105, ಮದರಾಸು.

ಸಿಲೆಬಸ್ಸು. ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನ್ ಕೌನ್ಸಿಲಿನವರು ಸಿಲೆಬಸ್ಸನ್ನು ತಯಾರಿಸಿ ಪ್ರತಿ ಒಂದು ಶಾಲೆಗೂ ಧರ್ಮಾರ್ಥವಾಗಿ ಒದಗಿಸಿರುವರು. ಆದರೆ ಈ ಸಿಲೆಬಸ್ಸು ಪ್ರಕಾರ ಕೆಲಸ ನಡಿಯುವುದು ಕಂಡುಬರುವುದಿಲ್ಲ. ಒಬ್ಬೊಬ್ಬ ಉಪಾಧ್ಯಾಯಿನಿ ಇರುವ ಶಾಲೆಗಳಲ್ಲಿ ಓದುಬರಹ ಕಲಿಸುವುದೆ ಕಷ್ಟ. ಇನ್ನು ಸಿಲೆಬಸ್ಸಿನ ಇತರ ಪಾಠಗಳನ್ನು ಕಲಿಸಲಿಕ್ಕೆ ದಾರಿಯೇ ಕಂಡುಬರುವುದಿಲ್ಲ. ಇತರ ಶಾಲೆಗಳಲ್ಲಿ ಕಲಿಸಬಹುದು. ಆದರೆ ಇನ್ಸ್‌ಪೆಕ್ಟ್ರೆಸುಗಳು ಉಪಾಧ್ಯಾಯಿನಿಯರು ಸಿಲೆಬಸ್ಸು ಪ್ರಕಾರ ಪಾಠ ಕಲಿಸುತ್ತಾರೊ ಎಂದು ನೋಡುವುದೇ ದುರ್ಲಭ. ಇನ್ಸ್‌ಪೆಕ್ಟ್ರೆಸುಗಳು ಬರುವಾಗ ಗೋಡೆಗೆ ಕ್ಲಾಸಿನಲ್ಲಿ ಒಂದೊಂದು ಟ್ಯಾಮಟೇಬಲ್, ಸಿಲೆಬಸ್ಸ್ ತಯಾರಿಸುವ ಮುಂಚೆ ತಯಾರಿಸಿದ್ದು ಎಷ್ಟೊ ಕಡೆಗಳಲ್ಲಿದೆ. ಒಂದೊಂದು ಕ್ಲಾಸಿನ ಗೋಡೆಗಳಲ್ಲಿ ಒಂದೊಂದು ತೂಗಾಡಿಸಿದರೆ ಸಾಕು. ಒಂದೆರಡು ವಿಸ್ಟ್ರೆಸುಗಳು ಇರುವಲ್ಲಿ ಎರಡೆರಡು ಕ್ಲಾಸುಗಳಿಗೆ ಒಂದೇ ಸಮಯಕ್ಕೆ ಒಂದೇ ತರದ ಪಾಠವು ಇದ್ದರೂ ಚಿಂತೆ ಇಲ್ಲ. ಪಾಠಗಳ ಸ್ಕೀಮು ಇದ್ದರೆ ಸಾಕು. ಅದು ಸಿಲೆಬಸ್ಸಿಗೆ ಸರಿಯಾಗಿರಲೂ ಇರಬಹುದು. ಅಥವಾ ಕಲಿಸುವ ಉಪಾಧ್ಯಾಯಿನಿಯು ಕಲಿಯುವಾಗ ಇದ್ದ ಸ್ಕೀಮೂ ಆಗಿರಬಹುದು.

ಹುಡುಗಿಯರ ಶಾಲೆಗಳಲ್ಲಿ ಮುಖ್ಯವಾದುದು ನೋಟ್ಸ್ ಒಫ್ ಲೆಸನ್ಸ್. ಇದನ್ನು ತಿಂಗಳು, ತಾರೀಕು, ವಾರ ಗಂಟೆ ಪ್ರಕಾರ ಬರೆದಿಟ್ಟರೆ ಸಾಕು. ನೋಟ್ಸ್ ಒಫ್ ಲೆಸನ್ಸ ಇದ್ದರೆ ಮಕ್ಕಳಿಗೆ ಪಾಠ ಬಂತೆಂದು ಭಾವನೆ. ನಾಲ್ಕೈದು ಕ್ಲಾಸುಗಳಿಗೆ ಒಬ್ಬ ಉಪಾಧ್ಯಾಯಿನಿಯು ಇದ್ದರೆ ಅವಳ ಆಯುಷ್ಯವೆಲ್ಲವೂ ನೋಟ್ಸ್ ಬರಿಯುವುದರಲ್ಲಿಯೇ ಕಳೆದುಹೋಯಿತು. ಕಲಿಸುವುದಕ್ಕೆ ಸಮಯ ಎಲ್ಲಿದೆಯೊ ಪರಮಾತ್ಮನೇ ಬಲ್ಲ.

ಡಿಪ್ಟಿ ಇನ್ಸ್‌ಪೆಕ್ಟ್ರೆಸುಗಳು ಈ ನೋಟ್ಸ್‌ಗಳನ್ನೇ ನೋಡಿ ಶಾಲೆಯ ಕೆಲಸವು ಒಳ್ಳೇದೊ ಕೆಟ್ಟದೊ ಎಂದು ತಿಳಿಯುವರು. ಒಂದೊಂದು ಸಾರಿ ಮೋಟರು ಓಡುವ ಮಾರ್ಗದ ಬದಿಯಲ್ಲಿ ಶಾಲೆ ಇದ್ದರೆ ಉಪಾಧ್ಯಾಯಿನಿಯನ್ನು ಅಲ್ಲಿಗೇ ಕರೆದು ನೋಟ್ಸ್ ಚೆಕ್ ಮಾಡಿ ಅದಕ್ಕೆ ದಸ್ಕತು ಹಾಕುವ ಸಂದರ್ಭಗಳೂ ಇವೆ. ಇದರಿಂದ ಶಾಲೆಯ ಮಕ್ಕಳ ವಿದ್ಯಾಭಿವೃದ್ಧಿಯು ಹೇಗೂ ಇರಲಿ ಉಪಾಧ್ಯಾಯಿನಿಯರು ಗಂಟೆ ತಾರೀಕು ಪ್ರಕಾರ ನೋಟ್ಸನ್ನು ತಯಾರಿಸುವುದಕ್ಕೆ ಅಸಡ್ಡೆ ಮಾಡುವುದಿಲ್ಲ. ಇದರಿಂದ ಇನ್ನಾದರೂ ಸಿಲೆಬಸ್ಸ್ ಪ್ರಕಾರ ಪಾಠಗಳನ್ನು ತಯಾರಿಸುವಂತೆ ಉಪಾಧ್ಯಾಯಿನಿಯರಿಗೆ ಅಧಿಕಾರಿಗಳು ತಿಳಿಸುವುದು. ಈಗ ಎಲ್ಲಾ ಪಾಠಗಳ ವಿಷಯವೂ ಸಿಲೆಬಸ್ ಪ್ರಕಾರ ಬರೆದ ಪುಸ್ತಕಗಳು ಇವೆ. ಮಕ್ಕಳು ಆ ಪುಸ್ತಕಗಳನ್ನು ತೆಗೆದುಕೊಂಡರೆ ಉಪಾಧ್ಯಾಯಿನಿಯರಿಗೆ ಕಲಿಸುವುದಕ್ಕೂ ಮಕ್ಕಳಿಗೆ ಮನೆಯಲ್ಲಿ ಕಲಿಯುವುದಕ್ಕೂ ಸುಲಭವಾಗುವುದು. ಕೆಳಗಿನ ಕ್ಲಾಸಿನ ಮಕ್ಕಳಿಂದ ನೋಟ್ಸ್ ಬರಿಸಿ ಏನೊಂದು ಪ್ರಯೋಜನವಿಲ್ಲ. ನೋಟ್ಸ್ ಕೊಡಲಿಕ್ಕೆ ಸಮಯವೂ ಇಲ್ಲ.

ಡಿಸಿಪ್ಲಿನ್. ಯಾವ ಹುಡುಗಿಯರ ಶಾಲೆಯಲ್ಲಿ ನೋಡಿದರೂ ಉಪಾಧ್ಯಾಯಿನಿಯರೊಳಗೆ ಜಗಳಗಳು ತಪ್ಪುವುದೇ ಇಲ್ಲ. ಇದರಿಂದ ಇವರು ಶಾಲೆ ಸಮಯದಲ್ಲಿ ದೂರ ದೂರದಿಂದ ಬಂದು ಒಟ್ಟುಕೂಡುವುದರಿಂದ ಕೆಲವು ಶಾಲೆಗಳಲ್ಲಿದ್ದ ಸಮಯವೆಲ್ಲವೂ ಉಪಾಧ್ಯಾಯಿನಿಯರ ಜಗಳದಲ್ಲಿಯೂ ಬೈದಾಟಗಳಲ್ಲಿಯೂ ಕಳೆದು ಹೋಗಿ ಮಕ್ಕಳು ಈ ಜಗಳವನ್ನೂ ಬೈಗಳನ್ನೂ ಕೇಳಿ ಕೇಳಿ ಕಡೆಗೆ ಶಾಲೆಗೆ ಬರುವುದನ್ನೇ ಬಿಟ್ಟು ಬಿಟ್ಟು ಹುಡುಗರ ಶಾಲೆಗೆ ಸೇರಿ ಅಲ್ಲಿ ಓದು ಬರಹಗಳನ್ನು ಕಲಿಯಲುದ್ಯುಕ್ತರಾಗುವರು. ಆದುದರಿಂದ ಕೆಲವು ಊರುಗಳಲ್ಲಿ ಹುಡುಗಿಯರ ಶಾಲೆಗಳಿದ್ದರೂ ಹುಡುಗಿಯರ ಶಾಲೆಗಳಲ್ಲಿರುವುದಕ್ಕಿಂತ ಹುಡುಗಿಯರು ಹುಡುಗರ ಶಾಲೆಯಲ್ಲಿ ಹೆಚ್ಚಾಗಿರುವರು. ಕೆಲವು ಶಾಲೆಗಳಲ್ಲಿ ಜಗಳಗಳು ವರ್ಷಗಟ್ಟಲೆಯಿಂದ ಮುಂದರಿದು ತಾಲೂಕು ಬೋರ್ಡಿನವರಾಗಲೀ ಡಿಪ್ಯುಟಿ ಇನ್ಸ್‌ಪೆಕ್ಟರರಾಗಲಿ ಈ ಜಗಳಗಳನ್ನು ತೀರ್ಮಾನ ಮಾಡದೆ ಹುಡುಗಿಯರ ಶಾಲೆಯ ಮಕ್ಕಳ ಸಂಖ್ಯೆಯು ಅಧೋಗತಿಗಿಳಿಯುವುದು. ಮಕ್ಕಳ ಸಂಖ್ಯೆಯು ಕಡಿಮೆಯಾದ್ದನ್ನು ಮಂತ್ಲಿ ರಿಟರ್ನಿನಲ್ಲಿ ಎಲ್ಲಿಯಾದರೂ ನೋಡಿ ನಂತರ ಸರಿಪಡಿಸುವ ಸಂದರ್ಭಗಳು ಕಾಣುತ್ತವೆ.

ಆದುದರಿಂದ ಹುಡುಗಿಯರ ಶಾಲೆಗಳು ನಿಜವಾಗಿ ಅಭಿವೃದ್ಧಿ ಹೊಂದಬೇಕಾದರೆ ಕ್ಲಾಸಿಗೊಬ್ಬಳಂತೆ ಉಪಾಧ್ಯಾಯಿನಿಯನ್ನು ನೇಮಿಸಬೇಕು. ಸಿಲೆಬಸ್ಸ್ ಪ್ರಕಾರ ಪಾಠ ಮಾಡುವಂತೆ ಉಪಾಧ್ಯಾಯಿನಿಯರನ್ನು ಪತ್ತಾಯ ಪಡಿಸಬೇಕು. ಟೈಮಟೇಬಲುಗಳು ಸಿಲೆಬಸ್ಸಿಗೆ ಅನುಸಾರವಾಗಿರುವಂತೆ ಮಾಡಬೇಕು. ನೋಟ್ಸ್ ಒಫ್ ಲೆಸನ್ನಿಗಿಂತಲೂ ಕಲಿಸುವಿಕೆಯಲ್ಲಿ ಉಪಾಧ್ಯಾಯಿನಿಯರು ಗಮನಕೊಡುವಂತೆ ಅವರಿಗೆ ತಿಳಿಸಬೇಕು. ಸಿಲೆಬಸ್ಸ್ ಪ್ರಕಾರ ತಯಾರಿಸಿದ ಪ್ರತಿ ಒಂದು ಪುಸ್ತಕವನ್ನು ಅವರು ತೆಗೆದುಕೊಳ್ಳುವಂತೆ ಮಾಡಬೇಕು. ಮುಖ್ಯವಾಗಿ ಶಾಲೆಯಲ್ಲಿ ಉಪಾಧ್ಯಾಯಿನಿಯರೊಳಗೆ ಜಗಳವು ಹುಟ್ಟಿದೊಡನೆ ಅದನ್ನು ನಿಲ್ಲಿಸುವಂತೆ ಕೂಡಲೇ ಬಂದೋಬಸ್ತು ಮಾಡಬೇಕು. ಇಲ್ಲವಾದರೆ ಶಾಲೆಯು ಹಾಳಾಗುವುದು. ಮಕ್ಕಳ ಗುಣನಡತೆಗಳು ಕೆಡುವವು. ಹುಡುಗಿಯರು ಮುಂದಕ್ಕೆ ಮನೆ ನಡಿಸುವ ಗೃಹಿಣಿಯರಾಗುವುದರಿಂದ ಅವರ ಗುಣನಡತೆಗಳು ಸಣ್ಣ ಪ್ರಾಯದಿಂದಲೇ ತಿದ್ದಲ್ಪಟ್ಟರೆ ಮಾತ್ರವೇ ಪ್ರಾಯದಲ್ಲಿ ಸರಿಯಾಗುವವು.

ಮಕ್ಕಳು ಸರಿಯಾಗಿ ಬರಲಿಕ್ಕೆ ಅವರಿಗೆ ಉತ್ತೇಜನ ಸಿಕ್ಕುವಂತೆ ಅವರಿಗೆ ವರ್ಷಕ್ಕೊಂದಾವರ್ತಿ ಇನಾಮು ಹಂಚಬೇಕು. ಈ ಸಮಯದಲ್ಲಿ ಮಕ್ಕಳ ಹೆತ್ತವರನ್ನು ಶಾಲೆಗೆ ಬರುವಂತೆ ಮಾಡಿದರೆ ಶಾಲೆಯಲ್ಲಿ ಮಾಡುವ ಉತ್ತಮ ಕೆಲಸವು ಗೊತ್ತಾಗುವುದು.

ಶಾಲೆಗೆ ಒಂದೊಂದು ಸಿಂಗರ್ ಹೊಲಿಗೆ ಮೆಶನನ್ನು ಒದಗಿಸಿ ಹುಡುಗಿಯರಿಗೆ ತಮ್ಮ ತಮ್ಮ ಲಂಗ, ಜಾಕೆಟು, ತಲೆದಿಂಬು ಶರ್ಟು ಮುಂತಾದ್ದನ್ನು ಹೊಲಿಯಲಿಕ್ಕೆ ಕಲಿಸಿದರೆ ಮತ್ತಷ್ಟು ಉತ್ತೇಜನ ಸಿಕ್ಕಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಅಭಿವೃದ್ಧಿಯಾಗುವುದು. ಹುಡುಗಿಯರ ಶಾಲೆಗಳಿರುವ ಊರುಗಳಲ್ಲಿ ಹುಡುಗರ ಶಾಲೆಗಳಲ್ಲಿ ಹುಡುಗಿಯರನ್ನು ದಾಖಲುಮಾಡದಂತೆ ಸರಿಯಾದ ಹುಕುಮನ್ನು ಕೊಡಬೇಕು. ಇದರಿಂದ ಹುಡುಗಿಯರ ಸಂಖ್ಯೆಯು ಹೆಚ್ಚಾಗುವುದು.

ಇಂಡಿಯಕ್ಕೆ ಹೊಸ ರೀತಿಯ ಸರಕಾರವನ್ನು ಕೊಡಲಿಕ್ಕೆ ಅನುಭವ ಪಡಿಯಲಿಕ್ಕೆ ಬಂದ ಸ್ಯಾಮನ್ ರೊಯಲ್ ಕಮಿಶನ್ನಿನವರು ಕೊಟ್ಟ ಸ್ಟೇಟಮೆಂಟ.

ಇಂಡಿಯಕ್ಕೆ ಯಾವ ತರದ ರಾಜ್ಯಾಧಿಕಾರವನ್ನು ಕೊಡಬೇಕೆಂದು ಸರಕಾರಿ ಮತ್ತು ನೊನ್ ಒಫಿಶಿಯಲ್ ಜನರೂ, ಸ್ಥಳೀಕ ಸರಕಾರಗಳೂ ಅಥವಾ ವಿದ್ವಾಂಸರೂ ತಮ್ಮ ತಮ್ಮ ಅನುಭವಗಳನ್ನು ಬರಹಮೂಲಕ ಕೊಡಬೇಕೆಂದು ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ಕೇಳಿಕೊಳ್ಳುತ್ತದೆ. ಈ ಕಮಿಶನ್ ಇಂಡಿಯಕ್ಕೆ ತಿರಿಗಿ ಬರುವ ಒಕ್ಟೋಬರ ತಿಂಗಳಲ್ಲಿ ಬರುವಪ್ಪರಲ್ಲಿ ಯಾವ ಯಾವ ಸ್ಥಳಗಳಲ್ಲಿ ಉಳುಕೊಂಡು ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ಕಾರ್ಯಕ್ರಮಗಳನ್ನು ತಯಾರಿಸಬೇಕಾಗಿದೆ. ಬರಹಮೂಲಕ ಸ್ಟೇಟುಮೆಂಟುಗಳನ್ನಾಗಲೀ ಮೆಮೊರೆಂಡಮುಗಳನ್ನಾಗಲಿ ಅದಷ್ಟು ಬೇಗನೇ ಕಮಿಶನಿನ ಆಫೀಸಿಗೆ ಕಳುಹಿಸಬೇಕು. ಹೀಗೆ ಮಾಡಿದರೆ ಯಾವ ಯಾವ ಸಂಗತಿಗಳ ವಿಷಯ ಆಲೋಚಿಸಬೇಕೆಂದು ಕಮಿಶನಿಗೆ ತಿಳಿಯುವುದು. ಇದರಿಂದ ಇನ್ನುಮುಂದೆ ಯಾವ ರೀತಿಯಲ್ಲಿ ತನಖಿ ನಡಿಸಬೇಕೆಂದೂ ತಿಳಿದಂತಾಗುವುದು. ಕಮಿಶನು ಮಾರ್ಚಿ ೩೧ನೇ ತಾರೀಕಿನಲ್ಲಿ ಇಂಡಿಯದಿಂದ ಹೊರಟು ಇಂಗ್ಲೆಂಡಿಗೆ ಹೋಗುವುದು. ಆದುದರಿಂದ ಸ್ಟೇಟಮೆಂಟನ್ನು ತಯಾರಿಸುವರು. ಅಂಥಾ ಸ್ಟೇಟುಮೆಂಟುಗಳನ್ನಾಗಲೀ ಮೆಮೊರೆಂಡಮುಗಳನ್ನಾಗಲೀ ರಿಜಿಸ್ಟರ ಮಾಡಿ "ದಿ ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ಕೇಂಪ ಇಂಡಿಯಾ" ಎಂದು ಮೇಲು ವಿಳಾಸ ಬರೆದು ಕಳುಹಿಸಬೇಕು. ಇದರ ನಂತರ ಕಳುಹಿಸುವವರು ಇಂಡಿಯದಲ್ಲಿ ತಮ್ಮ ಪ್ರತ್ಯೇಕ ಆಫೀಸನ್ನು ಇಡುವರು. ಅಂಥವರು ಈ ಆಫೀಸಿಗೆ "ಇಂಡಿಯನ್ ಸ್ಟೆಚ್ಯುಟರಿ ಕಮಿಶನ್ ನ್ಯೂಡಿಲ್ಲಿ ಒಫಿಸ್, ನ್ಯೂಡಿಲ್ಲಿ" ಎಂದು ವಿಳಾಸ ಬರೆದು ಕಳುಹಿಸಬೇಕಾಗುವುದು. ಈ ಆಫೀಸಿನಿಂದ ಈ ಮೆಮೊರೆಂಡಮುಗಳು ಇಂಗ್ಲೆಂಡಿನಲ್ಲಿರುವ ಕಮಿಶನ್ನಿನ ಆಫೀಸಿಗೆ ಕಳುಹಿಸಲ್ಪಡುವವು. ಈ ರೀತಿ ಮೆಮೊರೆಂಡಮುಗಳನ್ನು ಕಳುಹಿಸುವದಾದರೆ ಮೊದಲನೆ ಸರ್ತಿಗೆ ಅದರ ೧೨ ಪ್ರತಿಗಳನ್ನು ಕಳುಹಿಸಬೇಕು. ನಂತರ ಇಂಡಿಯದ ಸರಕಾರವೂ ಸಂಸ್ಥಾನ ಸರಕಾರಗಳೂ ಕಮಿಟಿಗಳನ್ನು ಸ್ಥಾಪಿಸಿದರೆ ಮೆಮೊರೆಂಡಮಿನ ಹೆಚ್ಚು ಪ್ರತಿಗಳನ್ನು ಕಳುಹಿಸಬೇಕಾಗುವುದು.

ಈ ಮೆಮೊರೆಂಡಮುಗಳನ್ನು ಆದಷ್ಟು ಬೇಗನೇ ಕಳುಹಿಸಬೇಕು. ಅಪ್ರೈಲಿಗೆ ಜೂನು ೧ನೇ ತಾರೀಕಿನೊಳಗಾದರೂ ಕಳುಹಿಸಬೇಕು. ಇದರ ನಂತರ ಕಳುಹಿಸುವವರು ಯೋಗ್ಯವಾದ ಕಾರಣಗಳನ್ನು ತೋರಿಸಿ ಬರದರೆ ಅವುಗಳು ಅಂಗೀಕರಿಸಲ್ಪಡುವವು.

ಕಮಿಶನು ಈ ಕೆಳಗಿನ ವಿಷಯಗಳ ಸಂಗತಿಗಳ ವಿಷಯ ಕೆಲಸ ನಡಿಸುವುದು:—

(೧) ಈಗಿನ ಸರಕಾರವು ಯಾವ ರೀತಿಯಲ್ಲಿ ಕಾರ್ಯವನ್ನು ನಡಿಸುತ್ತಿದೆ. ವಿದ್ಯಾಭಿವೃದ್ಧಿಯು ಯಾವ ರೀತಿಯಲ್ಲಿದೆ. ಜನರ ಪ್ರತಿನಿಧಿಗಳಿರುವ ಸಂಸ್ಥೆಗಳು ಯಾವ ರೀತಿಯಲ್ಲಿ ಕೆಲಸ ನಡಿಸುತ್ತಿವೆ ಮತ್ತು ಇವುಗಳಿಗೆ ಸಂಬಂಧ ಪಟ್ಟ ಇತರ ವಿಷಯಗಳು? ಇನ್ನುಮುಂದೆ ಹೊಸ ಬದಲಾವಣೆಗಳನ್ನು ಮಾಡುವುದಾದರೆ ಯಾವ ತರದ ಪ್ರಜಾ ಪ್ರತಿನಿಧಿ ಸರಕಾರವನ್ನು ಸ್ಥಾಪಿಸಬೇಕು ಅಥವಾ ಈಗಿರುವ ಸರಕಾರದಲ್ಲಿಯೇ ಸ್ವಲ್ಪ ತಿದ್ದುಪಡಿಗಳನ್ನು ಮಾಡಿದರೆ ಸಾಕಾದೀತೊ, ನ್ಯಾಯವಿಧಾಯಕ ಸಭೆಯಲ್ಲದೆ ಇನ್ನೊಂದು ಸಭೆಯನ್ನು ಸ್ಥಾಪಿಸುವ ಅಗತ್ಯವಿದೆಯೊ ಎಂಬುದೇ ಮುಖ್ಯ ಉದ್ದಿಶ್ಯಗಳಾಗಿವೆ.

ಇಷ್ಟರ ವರೆಗೆ ಕಮಿಶನು ಇಂಡಿಯದಲ್ಲಿ ಸಂಚರಿಸಿ ಪ್ರಾಮುಖ್ಯವಾದ ಮತ್ತು ಪ್ರಜಾ ಪ್ರತಿನಿಧಿ ಸಂಸ್ಥೆಗಳಿಂದ ಡಿಲ್ಲಿಯಲ್ಲಿಯೂ ಇತರ ಕಡೆಗಳಲ್ಲಿಯೂ ಅನುಭವವನ್ನು ಪಡೆದದೆ. ಇದರಿಂದ ಇನ್ನುಮುಂದೆ ಮಾಡಬೇಕಾದ ತನಖಿಯನ್ನು ಯಾವ ರೀತಿಯಲ್ಲಿ ನಡಿಸಬೇಕೆಂದು ಕಮಿಶನಿಗೆ ಸ್ವಲ್ಪ ಮಟ್ಟಿಗೆ ಸೂಚನೆಗಳು ತಿಳಿದುಬಂದಿವೆ.

ಈಗ ಕಮಿಶನು ಪ್ರಕಟಿಸಿರುವ ಸ್ಟೇಟುಮೆಂಟಿಗೆ ಲಗ್ತ ಪಡಿಸಿದ ಪುರವಣಿಯಲ್ಲಿ ತೋರಿಸಿದ ವಿಷಯಗಳ ಕುರಿತು ಮೆಮೊರೆಂಡಮಿನಲ್ಲಿ ಅನುಭವವನ್ನು ಕೊಡಬೇಕಾಗಿದೆ. ಅದಲ್ಲದೆ ಈ ಪುರವಣಿಯಲ್ಲಿ ಇಲ್ಲದೆ ಇರುವ ಸಂಗತಿಗಳ ವಿಷಯಗಳು ಇದ್ದರೆ ಅವುಗಳ ವಿಷಯವೂ ಬರಿಯಬಹುದು. ಮೆಮೊರೆಂಡಮುಗಳನ್ನು ಕಳುಹಿಸುವವರು ಪ್ರತಿ ಒಂದರ ವಿಷಯವೂ ತಮ್ಮ ಅನುಭವವನ್ನು ಬರೆಯಬೇಕೆಂದಿಲ್ಲ. ತಮಗೆ ಅಗತ್ಯ ಕಂಡವುಗಳ ವಿಷಯ ಮಾತ್ರವೇ ಬರೆದರೆ ಸಾಕು.

ಈಗ ಕಳುಹಿಸುವ ಬರಹಮೂಲಕ ಮೆಮೊರೆಂಡಮುಗಳಲ್ಲಿ ತೋರಿಸುವ ಎಲ್ಲಾ ಸಂಗತಿಗಳ ವಿಷಯ ಕಮಿಶನು ಚೆನ್ನಾಗಿ ಆಲೋಚಿಸುವುದು. ನಂತರ ಈ ಮೆಮೊರೆಂಡಮುಗಳನ್ನು ಕಳುಹಿಸುವವರಿಂದ ಇನ್ನುಮುಂದೆ ತನಖಿ ನಡಿಸುವಾಗ ಬಾಯಿಂದರೆ ಅನುಭವಗಳನ್ನು ಅಗತ್ಯವಿದ್ದಲ್ಲಿ ಪಡಕೊಳ್ಳಲಿಕ್ಕೂ ಅನುಕೂಲತೆಯನ್ನು ಮಾಡುವುದು.

ಪ್ರತಿ ಒಂದು ಮೆಮೊರೆಂಡಮಿಗೂ ತಾರೀಕು ದಸ್ಕತು ಹಾಕಿ, ಮೇಲುವಿಳಾಸವನ್ನು ಕೊಡಬೇಕು. ಯಾಕಂದರೆ ಅಗತ್ಯವಿದ್ದಲ್ಲಿ ಇವರನ್ನು ಕಮಿಶನಿನ ಮುಂದೆ ಬರಮಾಡಿಸಿ ಅವರಿಂದ ಇನ್ನು ಹೆಚ್ಚು ಅನುಭವವನ್ನು ಪಡಿಯುವ ಅಗತ್ಯ ಬೀಳಬಹುದು.

ಪ್ರತಿನಿಧಿ ಸಂಘದವರು ಕಳುಹಿಸುವದಾದರೆ ಈ ಸಂಘದಲ್ಲಿ ಎಷ್ಟು ಮಂದಿ ಮೆಂಬರರಿರುವರು. ಇವುಗಳಲ್ಲಿ ಯಾರಿಂದ ಅನುಭವ ಪಡಿಯಬಹುದು ಎಂದು ಆಲೋಚಿಸಬೇಕಾಗುವುದು.

ಈ ಕೆಳಗಿನ ಪುರವಣಿಯನ್ನು ಕಮಿಶನು ಪ್ರಕಟಿಸಿರುವುದು:—

ನೋಟ್ (*A*) ಈ ಕೆಳಗೆ ಕೊಟ್ಟಿರುವ ಪ್ರಾಮುಖ್ಯ ವಿಷಯಗಳ ಕುರಿತು ಉದಾಹರಣೆಗಾಗಿ ಕೆಲವು ಪ್ರಶ್ನೆಗಳನ್ನು ಕೊಟ್ಟಿದೆ.

ನೋಟ್ (*B*) ಈ ಪ್ರಾಮುಖ್ಯ ವಿಷಯಗಳ ಕುರಿತು ಪ್ರತಿ ಒಂದು ಪ್ರಶ್ನೆಗೂ ಉತ್ತರ ಬರೆಯಬೇಕೆಂದಿಲ್ಲ. ತಮಗೆ ಅಗತ್ಯ ಕಾಣುವ ಪ್ರಶ್ನೆಗೆ ಉತ್ತರ ಕೊಟ್ಟರೂ ಸಾಕು.

ನೋಟ್ (C) ಈಗಿರುವ ಇಂಡಿಯಾ ಸರಕಾರದಲ್ಲಿಯೂ, ಪ್ರಾಂತಿಕ ಸರಕಾರಗಳಲ್ಲಿಯೂ ಯಾವ ಕೊರತೆಗಳಿವೆ ಎಂದು ತೋರಿಸಿ ಕೊಟ್ಟರೂ ಆಗಬಹುದು. ಇನ್ನುಮುಂದೆ ಯಾವ ವಿಧದಲ್ಲಿ ಬದಲಾವಣೆಗಳಾಗಬೇಕೆಂದು ತಮಗೆ ಯೋಗ್ಯ ಕಂಡ ಸ್ಕೀಮುಗಳನ್ನು ಬರದು ಕಳುಹಿಸಬಹುದು.

(೧) ಬ್ರಿಟಿಷ ಇಂಡಿಯಕ್ಕೆ ಸರಿಯಾಗುವ ರೀತಿಯ ಪ್ರತಿನಿಧಿ ಕ್ರಮಗಳು ಉದಾಹರಣೆಗಾಗಿ (a) ವೋಟರುಗಳ ಪಟ್ಟಿಯನ್ನು ಯಾವ ಸೂತ್ರಗಳನ್ನು ಅನುಸರಿಸಿ ತಯಾರಿಸಬೇಕು. (b) ಚುನಾವಣೆಗಳನ್ನು ಯಾವ ರೀತಿಯಲ್ಲಿ ಮಾಡಬೇಕು. (c) ಆಯಾ ಜಾತಿ, ಮತ, ಇತರ ದೇಶೋದ್ಧಾರಕ ಸಂಸ್ಥೆಗಳು, ಸಾಮಾಜಿಕ, ಆರ್ಥಿಕ ಸಂಗತಿಗಳಲ್ಲಿ ಇಂಡಿಯಾ ಸರಕಾರದಲ್ಲಿಯೂ ಪ್ರಾಂತಿಕ ಸರಕಾರದಲ್ಲಿಯೂ ಯಾವ ರೀತಿಯ ಪ್ರಾತಿನಿಧ್ಯವು ಬೇಕು. (d) ಪ್ರಾತಿನಿಧ್ಯಕ್ಕೂ ಕೊನ್ಸ್ಟಿಟ್ಯುಯೆಂಟ್ಸಿಗೂ ಯಾವ ತರದ ಸಂಬಂಧವಿರಬೇಕು (e) ಆಫಿಶಿಯಲುಗಳನ್ನು ಯಾವ ರೀತಿಯಲ್ಲಿ ನೊಮಿನೇಟ ಮಾಡಬೇಕು. ನೊನ್ ಒಫಿಶಿಯಲುಗಳನ್ನು ಯಾವ ರೀತಿಯಲ್ಲಿ ನೊಮಿನೇಟ ಮಾಡಬೇಕು ಎಂಬುದರ ವಿಷಯ ಬರಿಯಬೇಕು.

ಈಗಿರುವ ೯ ಸಂಸ್ಥಾನಗಳೂ ಸಾಕಾದೀತೇ ಇನ್ನು ಹೆಚ್ಚು ಸಂಸ್ಥಾನಗಳನ್ನು ಮಾಡುವ ಅಗತ್ಯವಿದೆಯೋ ಅಥವಾ ಈಗಿರುವ ಸಂಸ್ಥಾನಗಳನ್ನು ವಿಭಾಗಿಸಿದರೆ ಸಾಕಾದೀತೊ.

ಮುನಿಸಿಪಾಲಿಟಿಗಳು, ಡಿಸ್ಟ್ರಿಕ್ಟ ಬೋರ್ಡುಗಳೂ, ತಾಲೂಕು ಬೋರ್ಡುಗಳೂ ಮುಂತಾದ ಲೋಕಲ್‌ಸೆಲ್ಫ ಗವರ್ನಮೆಂಟುಗಳಲ್ಲಿ (a) ಎಷ್ಟು ಮಂದಿ ಮೆಂಬರುಗಳು ಇರಬೇಕು. (b) ಇವುಗಳು ಯಾವ ಯಾವ ಕೆಲಸಗಳನ್ನು ನಡಿಸಬೇಕು. (c) ಪ್ರಾಂತಿಕ ಸರಕಾರಗಳ ಉದ್ಯೋಗಸ್ಥರಿಗೂ ಇವರಿಗೂ ಯಾವ ತರದ ಸಂಬಂಧ ಇರಬೇಕು. (d) ಹಣದ ವಿಷಯ ಯಾವ ತರದ ಅನುಕೂಲತೆ ಮಾಡಬೇಕು.

(ಸಶೇಷ.)

...ಗುಟ್ಟು ಎಂಬ ಸಚಿತ್ರ ಶಾಸ್ತ್ರದ ವಿವರಣ

ಕಾಮ ಶಾಸ್ತ್ರವು.

...ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ...ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ...ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ...ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ...ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿ ...ದಂತೆ ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ...ನೋಡಿ ಈ ಗ್ರಂಥವನ್ನು ಬಹುನೂತನವಾಗಿ ತಯಾರು ...ದ್ದೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ...ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿ ...ಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನ ...ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ...ವನ್ನು ಬಯಸಿದಂತೇ ಸದಾವಶರಾಗುವಂತೆ ಸುಖ ...ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ...ಅತ್ಯಂತವಾಗಿ ಸ್ಖಲನವಾಗದಂತೆ ಮಾಡುವ ಕ್ರಮ ...ಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ...ರೋಗಪೀಡಾದಿಗಳ ವಿಷಯ ಸುಖಸಂತಾನ ...ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ...ಯಾವ ವಿಧವಾದ ರೋಗಗಳ ತೊಂದರೆ ...ದೇಹದಾರ್ಢ್ಯವುಂಟಾಗುವಂತೆ ತಿಗೆದು ...ಸಾನೀಯ ಪದಾರ್ಥಗಳ ವಿವರವು ಸಂಭೋಗ ...ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯ ...ಸಂತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ...ಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ...ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲ ...ಗವು ಬಹುದೃಢಕರವಾಗಿ ಸುರತಸುಖವುಂಟಾ ...ಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತ ...ಯರು ಪರಪುರುಷರನ್ನು ಅಪೇಕ್ಷೆಮಾಡದಂತೆ ...ವು, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ...ಗಳನ್ನು ಹಾಕಿರುತ್ತವೆ. ಪ್ರತಿಗಳು ಶೀಘ್ರಾಸ್ವಲ್ಪ ...ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ...ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

...ಗಳುಳ್ಳ ಅಕಬರ ಬಾದಷಾ ಬೀರಬಲರ ...ನೋದ ಕಥೆಗಳು.

...ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ...ಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗ ...ಶಿರೋಮಣಿಯಾಗಿದ್ದ ಬೀರಬಲನ ಹೆಸರನ್ನು ...ರನು ಈ ಹಿಂದೂದೇಶದಲ್ಲಿ ಒಬ್ಬನಾದರೂ ...ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ...ನಡೆದಂಥ ಚಾತುರ್ಯವಾದ ವಿನೋದರಸ ...ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವ ...ಬೆಳೆದು ವಿನೋದದಿಂದ ಹೊತ್ತು ಗಳೆಯು ...ಧನೆಯಾಗಿದೆ. ಇದನ್ನು ಓದಿದವರ ಹಾಗೂ ...ಯು ನಕ್ಕುನಕ್ಕು ಹುಚ್ಚಾಗುವುದು. ಇಂಥ ...ವಾದ ಗ್ರಂಥವು ಅಂದವಾದ ಮುದ್ರಣದಿಂದ ...ಲೆ ಅಚ್ಚು ಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನು ...ಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ...೨—೦—೦ ಟಪ್ಪಾಲು ಹಾಸಲು ೬ಆಣೆ.

...ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ...ಚಿತ್ರ ಸ್ತ್ರೀ ಚರಿತ್ರೆ.

...ಮಾನವರು ಚಂದ್ರಗಳನ್ನು ಸುಲಭಸಾಧ್ಯವಾಗಿ ತಿಳಿದು ...ಸ್ತ್ರೀಯರ ಅವ್ಯಕ್ತಚರಿತ್ರೆಯು ಅಗಾಧವಾದದ್ದು. ಈ ...ವನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀ ...ವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರು ...ಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರು ...ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ...ವನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ...ಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ...ಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ...ಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ...ಪರಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ...ಪರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡು ...ತ ಅಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ...ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯ ...ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ...ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದ ...ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ...ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ...ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ...ಯು ಪ್ರತಿ ೧ಕ್ಕೆ ೧-೮-೦ ಟ. ಹಾಸಲು ೮ ಆಣೆ

...ಫೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರ ...ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವ ...ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ...ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದ ...ರಿಸಿಕೊಳ್ಳಿರಿ.

...ಶಿ. ಎಂ. ಪ್ರಭು ಅಂಡ್ ಬ್ರದರ್ಸ್, ಪ್ರಭು ಬುಕ್ ಡಿಪೋ, ಬಳ್ಳಾರಿ.

Edited Printed & Published by V. S. ... Press, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ ೨—೦—೦. ... ಟಪ್ಪಾಲು ಹಾಸಲು ಸೇರಿ ರೂಪಾಯಿ ೨—18—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. ಮಂಗಳೂರು, ತಾ.೩೦ ನೇ ಶುಕ್ರವಾರ ಮಾರ್ಚಿ ೧೯೨೮. ಸಂಚಿಕೆ ೧೩.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷದವಾಯಿದೆ ಠೇವಣಾತಿಗೆ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗೆ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಸೆಳವು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಅಂಗಡಿಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharf Press,
Car-street, MANGALORE.



...Preparations Cover All Your Needs.
...THAT MERIT HAS MADE FAMOUS.
...ಸಿದ್ಧವಾದ ಭಾಟ್ಲಿವಾಲಾ ಇವರ
...ಪ್ರಸಿದ್ಧ ಔಷಧಗಳು.

...ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
...ಜ್ವರ ನಿವಾರಣ. ರೂ. ೧.
...ತೃಪ್ತಿ ಕೊಡುವ ಔಷಧ ಆಣೆ ೧೩.
...ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
...ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
...ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
...೧—೨—೦. ರೂ. ೧—೪—೦. ೧—೧೨—೦.
...೦—೬—೦
...೦—೬—೦. LIBERAL DISCOUNT TO TRADE
...AWASHAPUR, BOMBAY.
...ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...Road, P. O. Cadell Road, Bombay. No. 14.

...ವರ ಲೋಧ್ರ

...ರೋಗನಿವಾರಿಣೀ.

...ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...'ನಿಧಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...ಬಗೆಯಾಗಿ ಹೊಗಳುತ್ತಿರುವರು.

...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

...ಸ್ರಾವ ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ...ನೋವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ನಿಶ್ಶೇಷವಾಗಿ ಗುಣವಾಗುವುವು.

...ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,
...ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
...ಮಾರ್ಕೆಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ಯಾಂಪೀಸ್ ಇನಾಮವಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟ್ಯಾಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.



(8-11-27)

'ಅಂಟಾ ಶಾಯಿ'

ಶಿವರಾಮ ಭಟ್ಟ ತೆಂಗಿನಮನೆ,

ನ್ಯೂಯೋರ್ಕಿನಲ್ಲಿ ಅನುಸರಿಸಲ್ಪಡುವ ಎಲಿಮೆಂಟರಿ ಶಾಲಾ ಕ್ರಮಗಳು.

ನ್ಯೂಯೋರ್ಕಿನ ಎಲಿಮೆಂಟರಿ ಶಾಲಾ ಕ್ರಮಗಳು ಬೇರೆ ತರದ್ದಾಗಿವೆ. ಯಾಕಂದರೆ ಅಲ್ಲಿ ಒಟ್ಟು ೬೭೩ ಶಾಲೆಗಳಿವೆ. ಬಹು ಮಂದಿ ಉಪಾಧ್ಯಾಯರಿದ್ದಾರೆ. ವಿದ್ಯಾರ್ಥಿಗಳನ್ನು ಮೊದಲು ವಿಂಗಡಿಸಿ ಮೊದಲನೇ ಕ್ಲಾಸಿನಲ್ಲಿ ಮಾನಸಿಕ ಅಭಿವೃದ್ಧಿಯಾಗುವ ಪಾಠಗಳನ್ನು ಕಲಿಸುವರು. ಎರಡನೇ ಕ್ಲಾಸಿನಲ್ಲಿ ಶಾರೀರಿಕ ಅಭಿವೃದ್ಧಿಯ ಪಾಠಗಳನ್ನು ಕಲಿಸುವರು. ವಿದ್ಯಾರ್ಥಿಯ ಆರೋಗ್ಯದಲ್ಲಿ ದೋಷಗಳು ಕಂಡರೆ, ಆತನನ್ನು ಮನೆಗೆ ಕಳುಹಿಸಿ, ಔಷಧೋಪಚಾರಗಳನ್ನು ಮಾಡಿಸುವರು. ವಿದ್ಯಾರ್ಥಿಗಳಿಗೆ ಶಾರೀರಿಕ, ಮಾನಸಿಕ, ವಿದ್ಯೆಯನ್ನು ಕೊಡುವದು, ವ್ಯಾಪಾರ ಮತ್ತು ಉದ್ಯೋಗಿಕ ಕಲೆಗಳಲ್ಲಿ ತರಬೇತಿಯನ್ನು ಕೊಡುವದು, ಇವೇ ಅಲ್ಲಿಯ ಶಾಲೆಗಳ ಉದ್ದೇಶ.

ಕಿಂಡರ್ ಗಾರ್ಟನ್:—ಒಟ್ಟು ೯೭೩ ಕಿಂಡರ್ ಗಾರ್ಟನ್ ಕ್ಲಾಸುಗಳಿವೆ. ೪೧,೬೧೩ ಕಿಂಡರ್ ಗಾರ್ಟನ್ ಕಲಿಯುವ ವಿದ್ಯಾರ್ಥಿಗಳಿರುವರು. ಕಿಂಡರ್ ಗಾರ್ಟನ್ ಕ್ಲಾಸಿನಲ್ಲಿ ಮಕ್ಕಳು ನಾಲ್ಕನೇ ವರ್ಷದಲ್ಲಿ ಸೇರಿ ಎರಡು ವರ್ಷ ಉಳಕೊಳ್ಳುವರು. ನಂತರ ಎಲಿಮೆಂಟರಿ ಶಾಲೆಗಳಿಗೆ ಹೋಗುವರು. ಕಿಂಡರ್ ಗಾರ್ಟನ್ ಕ್ಲಾಸಿನಲ್ಲಿ ಮಕ್ಕಳಿಗೆ ಭಾಷೆ, ಕೈಕೆಲಸ, ದಯೆದಾಕ್ಷಿಣ್ಯ, ನಡತೆ ಮೊದಲಾದುವುಗಳನ್ನು ಕಲಿಸುವರು. ಉಪಾಧ್ಯಾಯರು ಮಕ್ಕಳ ಹೆತ್ತವರ ಗುರುತನ್ನು ಮಾಡಿಕೊಳ್ಳುವರು.

ಎಲಿಮೆಂಟರಿ ಶಾಲೆಗಳು:—ಕಿಂಡರ್ ಗಾರ್ಟನ್ ಕ್ಲಾಸಿನ ನಂತರ ಎಲಿಮೆಂಟರಿ ಶಾಲೆಗಳಿವೆ. ಅಲ್ಲಿ ನಮ್ಮಲ್ಲಿರುವಂತೆ ಮೊದಲು ೫ ಕ್ಲಾಸುಗಳೂ, ಮತ್ತೆ ಮೂರು ಫಾರ್ಮುಗಳೂ ಇವೆ. ಒಟ್ಟು ಎಲಿಮೆಂಟರಿ ಶಾಲೆಗಳಲ್ಲಿ ೯೦೦,೦೦೦ ಹುಡುಗರಿದ್ದಾರೆ.

ಶಿಕ್ಷಕರು:—ಒಟ್ಟು ೨೩,೦೦೦ ಉಪಾಧ್ಯಾಯರಿರುವರು. ೧೧೬೩ ಪ್ರಿನ್ಸಿಪಾಲರೂ ಅಸಿಸ್ಟಾಂಟ ಪ್ರಿನ್ಸಿಪಾಲರೂ ಇರುವರು. ಪ್ರಿನ್ಸಿಪಾಲರು ಮೂವತ್ತು ನಾಲ್ವತ್ತು ಶಾಲೆಗಳ ತನಿಖೆಯನ್ನು ಮಾಡುವರು. ಪ್ರಿನ್ಸಿಪಾಲರಿಗಿಂತ ಮೇಲೆ ಒಂದೊಂದು ಜಿಲ್ಲೆಗೆ ಒಬ್ಬ ಎಸೋಸಿಯೇಟ್ ಸುಪರಿಂಟೆಂಡೆಂಟನಿರುವನು. ಇವನು ಮೇಲ್ವಿಚಾರಣೆ ಮಾಡುವದು ಮಾತ್ರವಲ್ಲ, ಭಾಷಣಗಳನ್ನೂ ಕೊಡುವನು.

ಸ್ಪೆಶಿಯಲ್ ಕ್ಲಾಸುಗಳು:—ಪರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಮೊದಲು ಇಂಗ್ಲೀಷನ್ನು ಮಾತ್ರ ಕಲಿಸಲು "C" ಕ್ಲಾಸುಗಳೆಂಬ ಹೆಸರಿನ ತರಗತಿಗಳಿವೆ. ದಡ್ಡ ವಿದ್ಯಾರ್ಥಿಗಳನ್ನು ಈ ಕ್ಲಾಸುಗಳಲ್ಲಿ ತರಬೇತು ಮಾಡುವರು. ಶಾಲೆಗಳಲ್ಲಿ, ಚುರುಕು ವಿದ್ಯಾರ್ಥಿಗಳಿಗಾಗಿ ಸ್ಪೆಶಿಯಲ್ ಕ್ಲಾಸುಗಳನ್ನು ತೆರೆಯುವುದೂ ಉಂಟು.

ಶಿಕ್ಷಣ:—ನಾಲ್ಕನೇ ಕ್ಲಾಸಿನ ವರೆಗೂ ಓದಲೂ ಬರೆಯಲೂ ಚೆನ್ನಾಗಿ ಕಲಿಸಲು ತೊಡಗುವರು. ನಾಲ್ಕನೇ ಕ್ಲಾಸಿನಿಂದ ಪ್ರತ್ಯೇಕಪ್ರತ್ಯೇಕ ಪಾಠಗಳನ್ನು ಪ್ರಾರಂಭಿಸುವರು. ಪಾಠಗಳೆಂದರೆ:—ಇಂಗ್ಲೀಷು, ಲೆಕ್ಕ, ಚರಿತ್ರೆ, ಭೂಗೋಳ, ಸಿವಿಕ್ಸ್, ಬರಹ, ಗಾಯನ, ಹೊಲಿಗೆ, ಅಡಿಗೆ ಮಾಡುವದು, ನೀತಿಶಾಸ್ತ್ರ, ನಡತೆ, ವ್ಯಾಯಾಮ ಶಿಕ್ಷಣ, ಆರೋಗ್ಯ ಶಾಸ್ತ್ರ, ವಿಜ್ಞಾನ ಶಾಸ್ತ್ರ ಮೊದಲಾದುವುಗಳು.

ಪಾಠಗಳು:—ಚರಿತ್ರೆಯಲ್ಲಿ ಬೇರೆ ಬೇರೆ ಕಥೆಗಳನ್ನು ಹೇಳಿ ಮಕ್ಕಳ ಜ್ಞಾನವನ್ನು ಹೆಚ್ಚಿಸುವರು. ಸಿವಿಕ್ಸನ್ನು ಕಲಿಸಿ, ಸಮಾಜದಲ್ಲಿ ಹೇಗೆ ವರ್ತಿಸಬೇಕು, ಹಿರಿಯರಿಗೆ ಹೇಗೆ ವಿಧೇಯರಾಗಿರಬೇಕು ಎಂಬುದನ್ನು ಕಲಿಸುವರು—ಕಲಾಭ್ಯಾಸವೆಂದರೆ ಚಿತ್ರ ಬಿಡಿಸುವದು—ವಸ್ತು ಪ್ರದರ್ಶನ ಪ್ರಕೃತಿ ಶಾಸ್ತ್ರ ಮೊದಲಾದುವುಗಳೂ ಇವೆ. ತೋಟದ ಕೆಲಸವನ್ನು ಕಲಿಸಿ, ಉತ್ತಮ ತರದ ತೋಟಗಳನ್ನು ಬೆಳಸುವರು. ಬೇಂಕನ್ನು ತೆರದು ವಿದ್ಯಾರ್ಥಿಗಳ ಹಣವನ್ನು ಸಂಗ್ರಹಿಸಿಡುವದು; ಒಟ್ಟು ನ್ಯೂಯೋರ್ಕಿನಲ್ಲಿ ೧೦,೦೦೦ ಲ್ಯಾಬ್ರರಿಗಳಿವೆ.

ಶಿಕ್ಷಣಾಕ್ರಮಗಳು:—ಕಲಿಸುವಾಗ ಪ್ರತಿಯೊಬ್ಬ ವಿದ್ಯಾರ್ಥಿಯ ಅಭಿವೃದ್ಧಿಯಾಗಬೇಕೆಂದು ಬಯಸುವರು. ವಿದ್ಯಾರ್ಥಿಗಳು ಮೌನದಿಂದಿರುವರು.

ಆಧುನಿಕ ಉಪಕರಣಗಳ ಉಪಯೋಗ:—ಪ್ರತಿಯೊಂದು ಶಾಲೆಗೆ ಒಂದೊಂದು ಸಿನೆಮಾ ಕಟ್ಟಡವಿದೆ. ಇಲ್ಲಿ ಚರಿತ್ರೆಯ ಪಾಠಗಳನ್ನೂ, ಸಿವಿಕ್ಸ್, ಭೂಗೋಳ, ಆರೋಗ್ಯ ಶಾಸ್ತ್ರ, ಪ್ರಕೃತಿ ಶಾಸ್ತ್ರ ಮೊದಲಾದವುಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಚಿತ್ರದ ಮೂಲಕ ಪ್ರದರ್ಶಿಸುವರು. ಒಂದೊಂದು ಶಾಲೆಯಲ್ಲಿ ಒಂದೊಂದು ರೇಡಿಯೊ ಇದೆ. ಬೇರೆ ಶಾಲೆಗಳಲ್ಲಿ ಕಲಿಸುವ ಪಾಠವನ್ನು ಈ ರೇಡಿಯೊಗಳ ಮೂಲಕ ತಾವೂ ತಿಳಕೊಳ್ಳಬಹುದು.

ರಜಾ ಸಮಯದಲ್ಲಿ ಶಾಲೆಗಳು:—ಬೇಸಿಗೆ ರಜೆಯ ಸಮಯದಲ್ಲಿಯೂ ಶಾಲೆಯನ್ನು ತೆರೆಯುವದುಂಟು. ಈ ಶಾಲೆಗಳಲ್ಲಿ, ಪಾಸಾಗದ ಹುಡುಗರನ್ನೂ, ಹಾಜರಿಯು ಪೂರ್ಣವಿಲ್ಲದ ಹುಡುಗರನ್ನೂ, ಪ್ರಾಯ ದಾಟಿಹೋದ ಹುಡುಗರನ್ನೂ, ಪರದೇಶಗಳಿಂದ ಬಂದು ಇಂಗ್ಲೀಷು ಗೊತ್ತಿಲ್ಲದ ಹುಡುಗರನ್ನೂ ಸೇರಿಸಿಕೊಳ್ಳುವರು. ವಾರಕ್ಕೆ ೫ ದಿನ ಶಾಲೆ ನಡೆದು ೬ ವಾರಗಳ ತನಕ ಇರುವದು. ಈ ಶಾಲೆಯಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಸಂಬಳದ ವಿನಹ ವಿಶೇಷ ಭತ್ತೆಯಿದೆ.

ಕಲಾಭ್ಯಾಸದ ಶಾಲೆಗಳು:—ವಿದ್ಯಾರ್ಥಿಗಳಿಗೆ ಎಲಿಮೆಂಟರಿ ಶಾಲೆಯಲ್ಲಿ ಕಲಿಯಲು ಮನಸ್ಸಿಲ್ಲದಿದ್ದರೆ ಅವರಿಗೆ ಯಾವ ಪಾಠದಲ್ಲಿ ಹೆಚ್ಚಿನ ಅಭಿರುಚಿಯಿದೆಯೆಂಬುದನ್ನು ತಿಳಿದು ಅದೇ ಪಾಠಗಳನ್ನು ಕಲಿಸುವರು. ಹೊಲಿಗೆ, ಲೋಹದ ಕೆಲಸ, ಮರದ ಕೆಲಸ, ವಿದ್ಯುಚ್ಛಕ್ತಿಯ ಕೆಲಸ, ಪಾತ್ರ ತಯಾರಿಸುವದು, ಚಿತ್ರ ಬಿಡಿಸುವದು, ಬುಕ್ ಬ್ಯಾಂಡ್ ಮಾಡುವದು, ಕ್ಯಾಪ್ ಮಾಡುವದು, ಮಿಶಿನುಗಳನ್ನು ತಯಾರಿಸುವದು, ಭಾಷಿಸುವದು, ವ್ಯಾಪಾರ, ಕೈಗೆ, ಮನೆ ಕಟ್ಟುವದು, ವ್ಯವಸಾಯ ಮೊದಲಾದುವುಗಳನ್ನು ಕಲಿಸುವರು. ಈ ಪಾಠಗಳನ್ನು ೭ನೇ ವರ್ಷದಲ್ಲಿ ಮೊದಲು ಮಾಡುವರು.

ವೃತ್ತಿಯನ್ನು ಕಲಿಸುವ ಶಾಲೆಗಳು:—ಎಲಿಮೆಂಟರಿ ಶಾಲೆಗಳಲ್ಲಿ ಕಲಿತಾದ ಮೇಲೆ ಕೆಲಸಕ್ಕೆ ಹೋಗಲು ಪ್ರಾಯಬಾರದ ಹುಡುಗರಿಗೆ ವೃತ್ತಿಯನ್ನು ಕಲಿಸುವ ಶಾಲೆಗಳಿವೆ. ಈ ಶಾಲೆಯಲ್ಲಿ ಕೆಲವು ವರ್ಷಗಳ ವರೆಗೆ ಕಲಿಯಬೇಕಾಗುವದು. ಅರ್ಧ ದಿವಸ ವ್ಯಾಪಾರವನ್ನೂ ಕಲಿಸುವರು. ಉಳಿದ ಅರ್ಧ ದಿವಸ ಬೇರೆ ವಿದ್ಯೆಗಳನ್ನು ಕಲಿಸುವರು. ವ್ಯಾಪಾರದ ವಹಿವಾಟುಗಳನ್ನು ಕಲಿಸುವ ಶಿಕ್ಷಕರು ವ್ಯಾಪಾರದ ವಿಷಯಗಳನ್ನು ಪ್ರತಿ ದಿನವೂ ತಿಳಿಯುತ್ತ ಇರುವರು.

ಆರೋಗ್ಯ ಶಿಕ್ಷಣ:—ಇವುಗಳಲ್ಲಿ ಮೂರು ಭಾಗಗಳಿವೆ. ಶಾರೀರಿಕ ಬೆಳವಣಿಗೆಯ ಸೂತ್ರಗಳು, ಆರೋಗ್ಯ ಶಾಸ್ತ್ರ, ಮತ್ತು ಅಂಗಸಾಧನೆ. ಈ ಕ್ಲಾಸಿಗೆ ಸೇರಿಸಿಕೊಳ್ಳಬೇಕಾದರೆ ಹುಡುಗನನ್ನು ಮೊದಲು ವೈದ್ಯರು ಪರೀಕ್ಷಿಸಬೇಕು. ದೋಷಗಳಿದ್ದರೆ ಆತನನ್ನು ಸೇರಿಸಿಕೊಳ್ಳುವದಿಲ್ಲ. ಪ್ರತಿ ಶಾಲೆಗೆ ಎರಡು ಜಿಮ್ನೇಸಿಯಮುಗಳಿವೆ. ಒಂದು ಹುಡುಗರಿಗಾಗಿ, ಒಂದು ಹುಡುಗಿಯರಿಗಾಗಿ; ಈಜಾಡುವದಕ್ಕೆ ಒಂದು ಸರೋವರವೂ ಇದೆ. ಆರೋಗ್ಯದ ಪಾಠವನ್ನು ಪ್ರತಿ ದಿನವೂ ಮೊದಲು ಕಲಿಸುವರು. ಮಕ್ಕಳು ಶುಚಿಯಾಗಿರುವದು, ಹಲ್ಲುಗಳೂ, ವಸ್ತ್ರವೂ ಶುಚಿಯಾಗಿರುವದು ಈ ವಿಷಯದಲ್ಲಿ ಉಪಾಧ್ಯಾಯರು ಬಹಳ ಜಾಗ್ರತೆಯನ್ನು ತೆಗೆದುಕೊಳ್ಳುವರು. ಮಕ್ಕಳ ದೋಷಗಳ ಕುರಿತು ಉಪಾಧ್ಯಾಯರು ಹೆತ್ತವರಿಗೆ ತಿಳಿಸಿ ಅವುಗಳನ್ನು ಸರಿಪಡಿಸಿಕೊಳ್ಳುವರು.

ವಿಸಿಟಿಂಗ್ ಉಪಾಧ್ಯಾಯರು:—ಅಲ್ಲಿಯ ವಿದ್ಯಾಭ್ಯಾಸದ ಕ್ರಮದಲ್ಲಿ ಮುಖ್ಯವಾಗಿ ಹೊಗಳತಕ್ಕದ್ದೆಂದರೆ ಇದೊಂದು. ಮಕ್ಕಳ ಗುಣಸ್ವಭಾವಾದಿಗಳನ್ನು ಶಾಲೆಯಲ್ಲಿಯೇ ತಿಳಿಯಲಾಗುವದಿಲ್ಲ. ಮನೆಯಲ್ಲಿಯೂ, ಹೊರಗಡೆಯೂ ಅವುಗಳನ್ನು ಪರೀಕ್ಷಿಸುವುದಕ್ಕಾಗಿ ಅಲ್ಲಿ ವಿಸಿಟಿಂಗ್ ಉಪಾಧ್ಯಾಯರಿರುವರು. ವಿಸಿಟಿಂಗ್ ಉಪಾಧ್ಯಾಯರು ಹುಡುಗರೊಡನೆ ಸ್ನೇಹ ಬೆಳಸಿ, ಶಾಲೆ ಬಿಟ್ಟ ಮೇಲೆ ಅವರೇನೇನು ಮಾಡುವರೆಂದು ಉಪಾಯದಿಂದ ಅವರನ್ನು ಕೇಳಿ ತಿಳಕೊಳ್ಳುವರು. ಅವರ ಮನೆಗೆ ಹೋಗಿ, ಅವರ ಸಂಗತಿಗಳೆಲ್ಲವನ್ನು ಹೆತ್ತವರಿಂದ ತಿಳಿದುಕೊಳ್ಳುವರು. ಎಲ್ಲಾ ತಿಳುವಳಿಕೆಯನ್ನು ಒಟ್ಟುಗೂಡಿಸಿದ ಮೇಲೆ ಈ ಉಪಾಧ್ಯಾಯರಿಗೆ ವಿದ್ಯಾರ್ಥಿಗಳ ಗುಣದೋಷಗಳು ತಿಳಿಯುವವು. ಅವುಗಳನ್ನು ಅವರು ಸರಿಪಡಿಸುವರು.

ಅಂಗಹೀನರಿಗಾಗಿ ಕ್ಲಾಸುಗಳು:—ಅಂಗಹೀನರ ಶಿಕ್ಷಣಕ್ಕಾಗಿ ಎಜ್ಯುಕೇಶನ್ ಬೋರ್ಡಿನವರು ತುಂಬಾ ಸಾಹಸವನ್ನು ವಹಿಸುವರು. ಅವರನ್ನು ಶಾಲೆಗೆ ಒಯ್ಯಲಿಕ್ಕೆ ಪ್ರತ್ಯೇಕ ಮೋಟಾರು ಬಸ್ಸುಗಳಿರುವವು. ಕುಳಿತುಕೊಳ್ಳಲಿಕ್ಕೆ ತಕ್ಕದಾದ ಉಪಕರಣಗಳು, ಶಾಲೆಯಾದ ಮೇಲೆ ಮಲಗಲು ಮಂಚ, ಹಾಲು, ಊಟ ಮೊದಲಾದವುಗಳೂ ಇರುವವು. ಈ ಕ್ಲಾಸಿನಲ್ಲಿ ಆರೋಗ್ಯದ ಪಾಠವನ್ನು ವಿಶೇಷ ಉತ್ಸಾಹದಿಂದ ಕಲಿಸುವರು.

ವಾಕ್ಶಕ್ತಿ ಅಭಿವೃದ್ಧಿ:—ಮಕ್ಕಳ ಮಾತನಾಡುವ ಶಕ್ತಿಯನ್ನು ಹೆಚ್ಚಿಸಿ ನಾಚಿಕೆಯನ್ನು, ಕಳೆಯುವದಕ್ಕಾಗಿ, ಮಕ್ಕಳು ಕೂಡಿ ಆಯಾಯ ವಿಷಯಗಳ ಕುರಿತು ಮಾತನಾಡುವ ಒಂದು ಕ್ಲಾಸು ಇರುತ್ತದೆ. ಹೀಗೆ ಭಾಷಣ ಕೊಡುವಿಕೆಯು ವಾರದಲ್ಲಿ ಒಂದೆರಡು ಸಲ ನಡೆಯುವದು.

ಹಿರಿಯರ ಶಿಕ್ಷಣ:—ಸಾಯಂಕಾಲ ಪ್ರಾಯ ಕಳದವರಿಗೆ ವಿದ್ಯೆಯನ್ನು ಕಲಿಸಲು ಶಾಲೆಗಳಿವೆ. ಇಂತಹ ಶಾಲೆಗಳು ಒಟ್ಟು ೧೧೦ ಇವೆ. ಈ ಶಾಲೆಗಳಲ್ಲಿ ಒಟ್ಟು ೩೫೦೦೦ದಿಂದ ೫೦೦೦೦ದ ವರೆಗೆ ಕಲಿಯುವವರಿದ್ದಾರೆ. ಇವರಲ್ಲಿ ಹೆಚ್ಚಿನವರು ಪರವೂರಿನಿಂದ ಬಂದು ಇಂಗ್ಲಿಷು ಕಲಿಯುವವರು. ಕೆಲವರು ಮೊದಲೇ ಅರ್ಧದಲ್ಲಿ ಶಾಲೆ ಬಿಟ್ಟವರು. ಈ ಶಾಲೆಯಲ್ಲಿ ೪ ವರ್ಷದ ವರೆಗೆ ಇಂಗ್ಲಿಷ್ ಕಲಿಸುವರು. ಮತ್ತು ಎಲಿಮೆಂಟರಿ ವಿದ್ಯೆಯನ್ನು ಕಲಿಸುವರು. ಸಾಯಂಕಾಲ ನಡೆಸುವ ಶಾಲೆಗಳೂ ಪ್ರಖ್ಯಾತಿಹೊಂದಿದವುಗಳು. ಈ ಶಾಲೆಗಳಲ್ಲಿ ಕಲಿಯುವವರಲ್ಲಿ ೧೪ ವರ್ಷದಿಂದ ೬೧ ವರ್ಷದ ವರೆಗಿನ ಮನಷ್ಯರೂ ಇರುವರು. ಎಲ್ಲಾ ಜಾತಿ, ಎಲ್ಲಾ ಹುದ್ದೆಯ ಜನರೂ ಇರುವರು. ಇಂತಹ ಶಾಲೆಗಳನ್ನು ಕೆಲವೆಡೆಯಲ್ಲಿ ಹಗಲಿನಲ್ಲಿಯೂ ನಡೆಸುವರು. ಉಪಾಧ್ಯಾಯರಿಗೆ ಮಾತ್ರ ಸರಕಾರದ ಲ್ಯಾಸನ್ನು ಸಿಕ್ಕಬೇಕು. ಟ್ರಿಪ್ಪಿಗಾಗಿ ಅಲ್ಲಿ ಕಲಿಯುವವರನ್ನು ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ಯುವದು ಉಂಟು.

ಶಿಕ್ಷಕರು:—ಶಾಲೆಗಳ ಅಭಿವೃದ್ಧಿಯಾಗಬೇಕಾದರೆ ಉಪಾಧ್ಯಾಯರನ್ನು ಸರಿಯಾಗಿ ತರಬೇತುಮಾಡಬೇಕು. ನ್ಯೂಯೋರ್ಕಿಗೆ ಬರುವ ಶಿಕ್ಷಕರು ನಾಲ್ಕು ಕೋಲೇಜುಗಳಲ್ಲಿ ತರಬೇತಾಗಿ ಬರುವರು. ಎಲಿಮೆಂಟರಿ ಶಾಲೆಯ ಉಪಾಧ್ಯಾಯರಿಗೆ ೩ ವರ್ಷ ಟ್ರೈನಿಂಗಾಗಬೇಕು. ಇನ್ನು ನಾಲ್ಕು ವರ್ಷ ಮಾಡುವರಂತೆ. ಟ್ರೈನಿಂಗಿನಲ್ಲಿ ಶಿಕ್ಷಕರಿಗೆ ಕಲಿಯಲು ಅನೇಕ ವಿಷಯಗಳಿವೆ. ಅಲ್ಲಿ ಅವರು ಚೆನ್ನಾಗಿ ತರಬೇತಾಗುವರು. ಅಲ್ಲಲ್ಲಿ ಉಪಾಧ್ಯಾಯರ ಸಂಘಗಳಿವೆ. ಉಪಾಧ್ಯಾಯರ ಸಂಘಗಳಲ್ಲಿ ಬೇಕಾದುವನ್ನು ಚರ್ಚಿಸಿ ಶಾಲೆಗಳಲ್ಲಿ ಕಲಿಸುವರು.

ಒಟ್ಟಾರೆ ಹೇಳುವದಾದರೆ ಅಲ್ಲಿಯ ಕೆಲವು ಕ್ರಮಗಳನ್ನು ನಮ್ಮ ಶಾಲೆಗಳಲ್ಲಿಯೂ ಪ್ರಾರಂಭಿಸಿದರೆ ಉಪಕಾರವಾಗಬಹುದು.

ನೋಟೀಸು.

The Canara Bank Ltd., Mangalore.
ದಿ. ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

NOTICE. ನೋಟೀಸು.

ಉಪ್ಪಿನಂಗಡಿ ತಾಲೂಕು ಬಲ್ನಾಡ ಗ್ರಾಮದ ರಂಗಪ್ಪಯ್ಯನವರ ಮಗ ಕೃಷ್ಣಯ್ಯನವರು ಈ ಬ್ಯಾಂಕಿನಲ್ಲಿ ತಾರೀಕ್ 10—11—'27ರಲ್ಲಿ ಆಭರಣಗಳ ಈಡಿನ ಮೇಲೆ ಪಡೆದ ರೂ. 140/- ನೂರನಾಲ್ವತ್ತರ ವಸೂಲ ಬಗ್ಗೆ ಕೊಟ್ಟ ನೋಟೀಸು ಸದರಿಯವರು ಮೃತಪಟ್ಟಿದ್ದಾರಾಗಿ ವಾಪಾಸು ಬಂದಿರುವದರಿಂದ ಸದರಿ ನಗಗಳನ್ನು ಅವರ ವಾರೀಸದಾರರು ತಾ. 22—4—1928ರ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸ್ಲು ಬಡ್ಡಿ ವಗೈರೆ ವಿವೇಜು ಕೊಟ್ಟು ಬಿಡಿಸದೆ ಇದ್ದರೆ ಅವುಗಳನ್ನು ತಾ. 27—4—'28ನೇ ಶುಕ್ರವಾರ ಮಧ್ಯಾಹ್ನ ಘಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

The Canara Bank Ltd., MANGALORE, 25—3—1928. } K. VENKAT RAO, Secretary.

ಭೂಮಾಲಿಕರ ಸಭೆಯ ಪ್ರೊಸಿಡಿಂಗ್ಸು.

ಕಳಂಜೆ:—ಗ್ರಾಮದ ಭೂಮಾಲಿಕರ ಸಭೆಯ ಪ್ರೊಸಿಡಿಂಗ್ಸು:—
(೧) ತಾ. ೧೧—೩—'೨೮ಕ್ಕೆ ಸರ್ವಸಮ್ಮತದಿಂದ ಶ್ರೀಯುತ ಪರಾರಿ ಮುಖ್ಯಪ್ರಾಣ ಹೆಬ್ಬಾರರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಭೂಮಾಲಿಕರ ಸಂಘವು ಯಾಕೆ ಏರ್ಪಡಿಸಬೇಕು. ಮತ್ತೆ ಅದರ ಅಗತ್ಯ, ಹಿಂದಿನ ಸೆಟ್ಲ್‌ಮೆಂಟ್ ಕಾಲದಲ್ಲಿ ತೀರ್ವೆ ಹೊರಿಸಿದ್ದು ಜಾಸ್ತಿ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿರ್ದಿಷ್ಟವಾದ ಹಕ್ಕುಗಳು ಸರಕಾರವು ಒಪ್ಪಿರುತ್ತಾ ಈಗ ರೀಸರ್ವೆ (ಪುನಃ ಸರ್ವೆ) ಮಾಡುವುದು, ಕೇವಲ ಪ್ರಜಾಹಿತಕ್ಕೆ ವಿರುದ್ಧವೆಂಬ ವಿಷಯ ಮತ್ತು ಫಾರೆಸ್ಟು ದರ್ಖಾಸ್ತು ಮೊದಲಾದ ಕ್ರಮಗಳನ್ನು ಜಾರಿಗೆ ತಂದು ರಹಿತರ ಸಂಕಷ್ಟಗಳು ಹೆಚ್ಚಾಗಿರುತ್ತವೆ ಎಂಬ ವಿಷಯವನ್ನು ಮ॥ ರಾ॥ ರಾ॥ ಕಳಂಜೆ ಪಿ. ಶಿವರಾಯರು ವಿವರಿಸಿದರು.

(೨) ಮ॥ ರಾ॥ ರಾ॥ ಮುಂಡಾಜೆ ದೇರೆ ಅನಂತ ಭಟ್ಟರು ಭೂಮಾಲಿಕರಾದ ನಾವೆಲ್ಲರೂ ಮೆಂಬರರಾಗಿ ಸಂಘವನ್ನು ಏರ್ಪಡಿಸಿ ರಹಿತರಿಗೆ ಒದಗಿದ ಯಾವತ್ತು ಸಂಕಷ್ಟಗಳನ್ನು ಯುಕ್ತ ಅಧಿಕಾರಿಗಳ ಮುಂದೆ ಇಡುವರೇ ಪ್ರಯತ್ನಿಸಬೇಕಾಗಿಯೂ ಕಳಂಜೆ ಗ್ರಾಮದ ಆಸ್‌ಪಾಸು ಇರುವ ಅಡಿಕೆ ಬಾಗಾಯಿತು ವಾಮಂಜೆ ಭೂಮಾಲಿಕರ ಸಂಕಷ್ಟಗಳು ಬಂದ ಹೇಳಿಕೆಯನ್ನು ಓದಿ ಹೇಳಿದರು.

ಈ ಗ್ರಾಮದ ಬಗ್ಗೆ ಕಾರ್ಯನಿರ್ವಾಹಕ ತತ್ಕಾಲ ಕಮಿಟಿಯನ್ನು ಏರ್ಪಡಿಸಿ ಮ. ರಾ. ಕನ್ಯಾಡಿ ಅಣ್ಣಪ್ಪಯ್ಯ, ಎಚ್. ಬಿ. ಪಟ್ವರ್ಧನ ವಿಕಂಬಿ ಗೋಪಾಲ ಕೃಷ್ಣಭಟ್ಟರು ಈ ಮೂರು ಜನ ಮೆಂಬರರನ್ನು ಆರಿಸಲಾಯಿತು. ಈ ಪೈಕಿ ರಾ॥ ಅಣ್ಣಪ್ಪಯ್ಯನವರು ಕಾರ್ಯದರ್ಶಿಯಾಗಿದ್ದು ವರ್ಷ ಒಂದಕ್ಕೆ ಆಣೆ ೪ರಂತೆ ವಂತಿಗೆಯನ್ನು ವಸೂಲು ಮಾಡಿ ಈ ಪ್ರಾಂತಗಳ ಪರಿಯೋಚಿತವಾಗುವ ಮುಂಡಾಜೆ ಭೂಮಾಲಿಕರ ಶಾಖೆಯ ಸಂಘಕ್ಕೆ ಸೇರಿಸುವಂತೆ ನಿರ್ಣಯಿಸಲಾಯಿತು. ೪ ಅಧ್ಯಕ್ಷರು ಕೂಡಿದ ಸಭಿಕರಿಗೆ ಧನ್ಯವಾದವನ್ನು ಅರ್ಪಿಸಿ, ಅಂದಿನ ಸಭೆಯನ್ನು ಆಖೇರಿ ಮಾಡಲಾಯಿತು.

ಮುಂಡಾಜೆ:—ತಾ. ೨೩—೩—'೨೮ರಲ್ಲು ಮ॥ ರಾ. ಮಾಣಿಗಣಪತಿ ಭಟ್ಟರಲ್ಲಿ ನಂ. ೧೨ನೆ ಮುಂಡಾಜೆ ಗ್ರಾಮದ ಭೂಮಾಲಿಕ ವರ್ಗದಾರರ ಸಭೆ ಕೂಡಿತು.

೧. ಸರ್ವಸಮ್ಮತದಿಂದ ಮ. ರಾ. ಶ್ರೀಯುತ ಭೀಡೆ ನಾರಾಯಣ ಭಟ್ಟರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

೨. ಭೂಮಾಲಿಕ ಸಂಘವನ್ನು ಯಾಕೆ ಏರ್ಪಡಿಸಬೇಕು, ಮತ್ತು ಅದರ ಅಗತ್ಯ. ಸೆಟ್ಲ್‌ಮೆಂಟ್ ತೀರ್ವೆ ಹೊರಿಸಿದ್ದು ಜಾಸ್ತಿ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿರ್ದಿಷ್ಟವಾದ ಹಕ್ಕುಗಳು ಸರಕಾರವು ಒಪ್ಪಿರುತ್ತಾ ಈಗ ರೀಸರ್ವೆ ಪುನಹಾ ಮಾಡುವದು ಕೇವಲ ಪ್ರಜಾಹಿತಕ್ಕೆ ವಿರುದ್ಧ ಎಂಬ ವಿಷಯ ಮತ್ತು ಫಾರೆಸ್ಟು ದರ್ಖಾಸ್ತು ಮೊದಲಾದ ಕ್ರಮವನ್ನು ಜ್ಯಾರೀಗೆ ತಂದು ರೈತರ ಸಂಕಷ್ಟಗಳು ಹೆಚ್ಚಾಗಿರುತ್ತವೆಂಬ ವಿಷಯಗಳನ್ನು ಮ. ರಾ. ಗೋರೆ ಅನಂತ ಭಟ್ಟರು ವಿವರಿಸಿದರು. ೩. ಗೋದಾವರಿ ಕೃಷ್ಣಾ ಮುಂತಾದ ಮೂರು ಕರಾವಳಿಯ ಉತ್ಪತ್ತಿಯನ್ನು ಹೋಲಿಸಿ ಮಲಬಾರಿಗಿಂತ ದಕ್ಷಿಣ ಕನ್ನಡ ಜಿಲ್ಲೆಯ ತೀರ್ವೆಯೂ ಕಳೆದ ಸೆಟ್ಲ್‌ಮೆಂಟಿನಲ್ಲಿ ಜಾಸ್ತಿ ಹೊರಿಸಿದ್ದು ಮುಂತಾಗಿ ಮ. ರಾ. ಯಚ್. ಬಿ. ಪಟ್ವರ್ಧನರು ವಿವರಿಸಿದರು. ಮ ರಾ, ಕೊಳ್ಳ ಮಹಾದೇವ ಭಟ್ಟರು ತತ್ಕಾಲ ಕಾರ್ಯನಿರ್ವಾಹಕ್ಕೋಸ್ಕರ ಕಮಿಟಿಯೊಂದು ಏರ್ಪಡಿಸಿ, ಮ. ರಾ. ಭೀಡೆ ನಾರಾಯಣ ಭಟ್ಟರ ಮಾಣಿ ಗಣಪತಿ ಭಟ್ಟರು ಎಚ್. ಬಿ. ಪಟ್ವರ್ಧನರು ಈ ಮೂರು ಜನರಿಗೆ ಆರಿಸಬೇಕಾಗಿ ಸಭೆಯಲ್ಲಿ ಸೂಚಿಸಿದ ಪ್ರಕಾರ ಸರ್ವಾನುಮತದಿಂದ ಆರಿಸಲಾಯಿತು. ೪ನೆ ಭೀಡೆ ನಾರಾಯಣ ಭಟ್ಟರು ಕಾರ್ಯದರ್ಶಿಗಳಾಗಿಯೂ, ಮಾಣಿ ಗಣಪತಿ ಭಟ್ಟರು ಎಚ್. ಬಿ. ಪಟ್ವರ್ಧನರು ಕೂಡ ಮೆಂಬರರಾಗಿ ಆರಿಸಲಾಯಿತು. ಸದರಿ ಕಾರ್ಯದರ್ಶಿಯವರು ಪ್ರತಿ ವರ್ಗದಾರರಿಂದ ೦—೪—೦ ಪ್ರಕಾರ ವಂತಿಗೆಯನ್ನು ಜಮಾಮಾಡಿ ಜಮೆ ಇಟ್ಟುಕೊಂಡು ಮುಂದೆ ಇನ್ನೊಂದು ಸಭೆಯಲ್ಲಿ ನಿರ್ಣಯಿಸುವಂತೆ ಸಂಘಕ್ಕೆ ಸೇಕರಿಸುವ ಬಗ್ಗೆ ಜಮೆ ಇಟ್ಟುಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ೫ ಈ ಗ್ರಾಮಸ್ಥರ ಹೇಳಿಕೆಯನ್ನು ಕಾರ್ಯದರ್ಶಿಗಳು ತಯಾರಿಸಿಕೊಡಬೇಕಾಗಿ ನಿರ್ಣಯಿಸಲಾಯಿತು. ಅನಂತರ ಅಧ್ಯಕ್ಷರ ಭಾಷಣವಾಯಿತು. ಈ ದಿನ ಸಭೆಯಲ್ಲಿ ಬಂದ ಉದ್ದೇಶಗಳೆಲ್ಲಾ ತನುಮನಧನದಿಂದರ್ಪಿಸಿ ಪ್ರೋತ್ಸಾಹಿಸಿದರೆ ಗ್ರಾಮವು ಏಳಿಗೆಗೆ ಬರುವುದಾಗಿಯೂ ಕೂಡಿದ ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿ ಅಂದಿನ ಸಭೆ ಮುಕ್ತಾಯವಾಯಿತು.

ನೋಟೀಸು.

The Canara Bank Ltd., Mangalore.
ದಿ. ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು.

NOTICE. ನೋಟೀಸು.

ಕಾಸ್ರಗೋಡು ತಾಲೂಕು ಕೊಡ್ಲ ಮೊಗ್ರು ಗ್ರಾಮದ ಚಿಕ್ಕಪ್ಪ ಶೆಟ್ಟಿ ಅಳಿಯ ನಾರಾಯಣ ಭಂಡಾರಿಯು ಈ ಬ್ಯಾಂಕಿನಲ್ಲಿ ತಾ. 3—3—1926ರಲ್ಲಿ ಆಭರಣಗಳ ಈಡಿನ ಮೇಲೆ ಪಡೆದ ರೂಪಾಯಿ 650 ಆರುನೂರಐವತ್ತು ವಸೂಲು ಬಗ್ಗೆ ಕೊಟ್ಟ ನೋಟೀಸು ಪ್ರಕಾರ ಸದ್ರಿ ನಗಗಳನ್ನು ಅವರು ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ವಗೈರೆ ವಿವೇಜು ಕೊಟ್ಟು ಬಿಡಿಸಲಿಲ್ಲವಾದ್ದರಿಂದ, ಸದ್ರಿ ನಗಗಳನ್ನು ತಾ. 27-4-1928ನೇ ಶುಕ್ರವಾರ ಮಧ್ಯಾಹ್ನ ಘಂಟೆ 12ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

The Canara Bank Ltd., Mangalore, 29—3—1928 } K. VENKAT RAO, Secretary.

ಸಮಯದ ಗ್ರಂಥಕಾರರಲ್ಲಿ ಹಲವರು ದೇಶಭಾಷೆಗಳಲ್ಲಿ ಗ್ರಂಥಗಳನ್ನು ಬರಿಯುವಾಗ ಹೆಚ್ಚಾಗಿ ಸಂಸ್ಕೃತ ಶಬ್ದಗಳನ್ನೇ ಉಪಯೋಗಿಸಿರುವರು. ಶುದ್ಧ ದೇಶಭಾಷೆಯ ಶಬ್ದಗಳನ್ನು ಉಪಯೋಗಿಸಲಿಲ್ಲವಾದರೂ ಇವರು ಬರೆದ ಗ್ರಂಥಗಳು ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ರುಚಿಕರವಾಗಿ ಬರೆಯಲ್ಪಟ್ಟಿವೆ. ನಾಟ್ಯಕಲೆಯಲ್ಲಿ ವಿಶೇಷ ತರದ ಬದಲಾವಣೆಗಳುಂಟಾಗಿ ಹಳೇ ಕ್ರಮಗಳೇ ಮರೆತುಹೋಗಿ ಪೂರ್ಣ ಯೂರೋಪಿಯ ಕ್ರಮಗಳನ್ನೇ ಹೋಲುತ್ತವೆ. ನಾಟ್ಯಕಲೆ ಮತ್ತು ಕಾದಂಬರಿಗಳಷ್ಟು ಹೊಸರೀತಿಯನ್ನು ಇತರ ವಿಷಯಗಳಲ್ಲಿ ಬದಲಾವಣೆಗಳು ಉಂಟಾಗಲಿಲ್ಲ.

ಪಾಶ್ಚಿಮಾತ್ಯ ಸಾಹಿತ್ಯವನ್ನು ಅಭ್ಯಾಸಿಸುವುದರಿಂದ ನಮ್ಮಲ್ಲಿ ದೇಶವಾತ್ಸಲ್ಯವು ತಲೆದೋರಿಯದೆ. ನಮ್ಮ ಪ್ರಾಚೀನ ಇತಿಹಾಸದ ವಿಷಯವೂ ಶೋಧನೆ ಮಾಡುವಷ್ಟು ಶಕ್ತಿಯನ್ನು ನಮ್ಮಲ್ಲಿ ಉಂಟುಮಾಡಿಯದೆ. ನಾವು ಭೂಲೋಕದ ಇತರ ಜನಾಂಗಗಳಂತೆಯೇ ಒಂದು ಜನಾಂಗವಾಗಬೇಕೆಂದು ಠಾಕೂರ ರವೀಂದ್ರನಾಥ ಟಾಗೋರರು ನಮಗೆ ದಾರಿಯನ್ನು ತೋರಿಸಿ ಕೊಟ್ಟರು. ಗ್ರಂಥಗಳನ್ನೆಲ್ಲಾ ಯೂರೋಪಿಯನ್ ರೀತಿಯಲ್ಲಿಯೇ ಬರೆದಿರುವುದರಿಂದ ಯೂರೋಪಿಯನ ಜನರಿಗೂ ಈ ಗ್ರಂಥಗಳನ್ನು ಓದಿ ಅಭ್ಯಾಸಮಾಡುವಷ್ಟು ಅದರಲ್ಲಿ ಆಸೆಯನ್ನು ಹುಟ್ಟಿಸಿಯದೆ.

ಈ ೧೯ನೇ ಶತಮಾನದಲ್ಲಿ ಹಲವು ಶತಮಾನಗಳ ವರೆಗೆ ಮೂಲೆಗೊತ್ತಲ್ಪಟ್ಟ ಪ್ರಾಚೀನ ಸಾಹಿತ್ಯವೂ, ಅಂದರೆ ವೇದಗಳ ಕಾಲದ ಮತ್ತು ಬೌದ್ಧರ ಕಾಲದ ಮುಂದಕ್ಕೆ ಬಂದುದು ಮಾತ್ರವಲ್ಲ ಪುರಾತನ ಹಿಂದೂಗಳ ಸ್ಮಾರಕಗಳಾಗಿರುವ ಹಲವು ಕಟ್ಟಡಗಳೂ, ಶಿಲ್ಪಶಾಸ್ತ್ರವೂ ಮುಂದಕ್ಕೆ ತರಲ್ಪಟ್ಟಿವೆ. ವೇದಗಳೂ ಅವುಗಳ ಭಾಷ್ಯಗಳೂ ಆರ್ಯಾವರ್ತದಿಂದ ಮಾಯವಾಗಿದ್ದವು. ಹಲವರಿಗೆ ಅವುಗಳ ಅರ್ಥವೇ ತಿಳಿಯುತ್ತಿರಲಿಲ್ಲ. ಕೈಬರಹದ ಮೇಲಿನ ಗ್ರಂಥಗಳ ಪ್ರತಿಗಳೇ ಕಾಣಲು ಸಿಗುತ್ತಿರಲಿಲ್ಲ. ಇಂಗ್ಲೀಷರು ಇವುಗಳನ್ನು ಅಚ್ಚುಹಾಕಿಸಿ ನಮ್ಮ ಮುಂದೆ ತಂದರು. ಬೌದ್ಧಮತದ ತವರು ಮನೆಯಾದ ಇಂಡಿಯದಿಂದ ಮಾಯವಾಗಿದ್ದ ಬೌದ್ಧ ಗ್ರಂಥಗಳನ್ನು ಪುನಹ ಇಂಡಿಯಕ್ಕೆ ತಂದವರು ಯೂರೋಪಿಯನರೇ ನೇಪಾಳ, ಚೀನ ಮತ್ತು ಜಪಾನ ದೇಶಗಳಿಂದ ಇಂಗ್ಲೀಷ ವಿದ್ವಾಂಸರು ಬೌದ್ಧ ಮತದ ಗ್ರಂಥಗಳನ್ನು ಯೂರೋಪಿಗೆ ಕಳುಹಿಸಿದರು, ಅಲ್ಲಿ ಯೂರೋಪಿಯನರು ಅವುಗಳನ್ನು ಅಚ್ಚುಹಾಕಿಸಿ ನಮಗೆ ದೊರಕುವಂತೆ ಮಾಡಿದರು.

ಸಮಾಜ ಉನ್ನತಿ.

ಸಾಹಿತ್ಯವು ಅಭಿವೃದ್ಧಿಯಾದೊಡನೆ ದೇಶವು ವೃದ್ಧಿಯಾಯಿತೆಂದು ಹೇಳಲಾಗುವುದಿಲ್ಲ, ಸಮಾಜದಲ್ಲಿಯೂ ಮತದಲ್ಲಿಯೂ ನೀತಿಗಳಲ್ಲಿಯೂ ಅಭಿವೃದ್ಧಿಯಾದರೆ ಮಾತ್ರವೇ ದೇಶವು ಉನ್ನತಾವಸ್ಥೆಗೆ ಬಂತೆಂದು ಹೇಳಬೇಕು.

ಯೂರೋಪ ಖಂಡದಲ್ಲಿ ಲೂಥರನು ಪ್ರೊಟೆಸ್ಟಾಂಟ ಮತವನ್ನು ಸ್ಥಾಪಿಸಿದೊಡನೆ ಜನರ ಜೀವನದಲ್ಲಿಯೂ ಸಾಮಾಜಿಕ ಪದ್ಧತಿಗಳಲ್ಲಿಯೂ ಯಾವ ರೀತಿಯಲ್ಲಿ ಬದಲಾವಣೆಯನ್ನು ಉಂಟುಮಾಡಿತೊ ಅದೇ ರೀತಿಯಲ್ಲಿ ಇಂಡಿಯಾದಲ್ಲಿ ಇಂಗ್ಲೀಷ ವಿದ್ಯಾಭ್ಯಾಸದಿಂದ ಜನರ ಸಾಮಾಜಿಕ ಪದ್ಧತಿಗಳಲ್ಲಿ ಬದಲಾವಣೆಗಳು ಉಂಟಾಗಲಾರಂಭಿಸಿದವು. ೧೮೨೦-೯೧ರ ವರೇಗೆ ಜೀವಿಸಿಕೊಂಡಿದ್ದ ಪಂಡಿತ ಈಶ್ವರಚಂದ್ರ ವಿದ್ಯಾಸಾಗರನು ಹಿಂದೂ ಬ್ರಾಹ್ಮಣ ವಿಧವೆಗಳಿಗೆ ಮದುವೆಮಾಡಬಹುದೆಂದು ೧೮೫೬ರಲ್ಲಿ ಕಾನೂನು ಮಾಡಿಸಿದನು. ಒಬ್ಬ ಗಂಡಸು ಹೆಚ್ಚು ಮಂದಿ ಹೆಂಡಂದಿಯರನ್ನು ಮಾಡಿಕೊಳ್ಳಕೂಡದೆಂದು ಸಾಧಿಸಿದನು ಆದರೆ ಈ ಪ್ರಯತ್ನವು ವ್ಯರ್ಥವಾಯಿತು. ಕ್ರೈಸ್ತ ಮಿಶನರಿಗಳು ೧೮೪೯ರಲ್ಲಿ ಇಲ್ಲಿಯೇ ಕ್ರೈಸ್ತರಾದವರ ಹೆಣ್ಣು ಮಕ್ಕಳಿಗಾಗಿ ಶಾಲೆಗಳನ್ನು ಸ್ಥಾಪಿಸಿದ್ದರು. ಹಿಂದೂ ಹುಡುಗಿಯರಿಗೂ ೧೮೫೭ರಿಂದ ಹುಡುಗಿಯರ ಶಾಲೆಗಳು ಸ್ಥಾಪಿಸಲಿಕ್ಕೆ ಆರಂಭವಾಯಿತು. ಆದರೆ ನಿಜವಾದ ಸಮಾಜಾಭಿವೃದ್ಧಿಯು ಶಿಪಾಯಿರ ದಂಗೆಯ ನಂತರವೇ ಆರಂಭವಾಯಿತೆನ್ನಬಹುದು. ೧೮೩೮—೧೮೮೪ರ ವರೆಗೆ ಜೀವಿಸಿದ್ದ ಕೇಶವ ಚಂದ್ರಸೆನ್ನನು ಕಲ್ಕತ್ತ ಪಟ್ಟಣದ ಸುತ್ತಲೂ ಇರುವ ಗ್ರಾಮಗಳಲ್ಲಿ ಆ ಸಮಾಜ ಬದಲಾವಣೆಗಳನ್ನು ಮಾಡುವುದರಲ್ಲಿ ಉದ್ಯುಕ್ತನಾದನು. ಇವನು ಹುಡುಗಿಯರ ಶಾಲೆಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲ, ವಿಧವಾವಿವಾಹವನ್ನು ಅಭಿವೃದ್ಧಿ ಮಾಡಿ, ಕುಡಿತತನವನ್ನು ನಿಲ್ಲಿಸುವುದಕ್ಕೂ ರಾತ್ರಿ ಶಾಲೆಗಳನ್ನು ಇಡುವುದಕ್ಕೂ ಪತಿತೋದ್ಧಾರ ಮಾಡಲಿಕ್ಕೂ ಅಂತರ್ಜಾತಿಯ ಮದುವೆಗಳನ್ನು ಆಚರಣೆಗೆ ತರಲಿಕ್ಕೂ ಜನಸಾಮಾನ್ಯರಿಗೆ ತಿಳಿಯಲಿಕ್ಕಾಗುವ ರೀತಿಯಲ್ಲಿ ಪುಸ್ತಕಗಳನ್ನು ಪ್ರಕಟಿಸುವುದಕ್ಕೂ ಕ್ಷಾಮ ಪೀಡಿತರಾದವರಿಗೆ ಗತಿಯನ್ನು ತೋರಿಸಲಿಕ್ಕೂ ಸಾಧಿಸಿದನು.

ಸಶೇಷ.

ಸ್ಫುಟ ವಿಚಾರಗಳು.

ಮದ್ರಾಸ ಕೌನ್ಸಿಲಿನಲ್ಲಿ ವೈದ್ಯಕೀಯ ವಿಚಾರ.

ವೈದ್ಯವೃತ್ತಿಯವರಿಗೆ (ಪಾಶ್ಚಾತ್ಯ ಕ್ರಮದವರಿಗೆ) ಇರುವಷ್ಟು ಪ್ರಬಲವಾದ ಟ್ರೇಡ್ ಯೂನಿಯನ್ನು ಬೇರೆ ಯಾವ ವೃತ್ತಿಯವರಿಗೂ ಇರುವುದಿಲ್ಲ. ಅವರು ಮೆಡಿಕಲ್ ಕೌನ್ಸಿಲ್ ಎಂಬ ಬಹಳ ಗೌರವದ ಹೆಸರಿನ ಟ್ರೇಡ್ ಯೂನಿಯನ್ ಒಂದನು ರಚಿಸಿ ಆ ಮೂಲಕ ಅಪೂರ್ವ ಹಕ್ಕುಬಾಧ್ಯತೆಗಳನ್ನು ಸಾಧಿಸಿರುವರು. ಈ ತರದ ಅವರ ವೃತ್ತಿಸ್ವಾರ್ಥದ ವಿಷಯದಲ್ಲಿ ಇಂಗ್ಲೆಂಡಿನಲ್ಲಿ ಕೂಡ ನಿಷೇಧಪರ ತರ್ಕವೆದ್ದಿತು. ಹಾಗೆಯೇ ಮದ್ರಾಸ್ ಕೌನ್ಸಿಲಿನಲ್ಲಿಯೂ ಡಾಕ್ಟರರ ವಿಷಯ ಕೆಲವು ಸ್ಪಷ್ಟ ಸಲಹೆಗಳನ್ನು ತರ್ಕಿಸಿದಿದ್ದುದು ಆಶ್ಚರ್ಯಕರವಾಗಲಾರದು. ಸರಕಾರದಿಂದ ಉತ್ತಮ ವರ್ಗದ ಸಂಪಾದನೆಯನ್ನು ಹೊಂದಿಯೂ ಅವರು ತಮ್ಮ ನೌಕರಿಗೆ ಅನುಗುಣವಾದ ಕರ್ತವ್ಯಗಳನ್ನಲ್ಲದೆ ಖಾಸಗಿ ಸಂಪಾದನೆಯನ್ನು ಮಾಡಿಕೊಳ್ಳಬಹುದೋ? ಎಂಬುದೊಂದು ಪ್ರಶ್ನೆ. ಮುಖ್ಯತಃ ಮನುಷ್ಯನ ಪ್ರಾಣವೇ ಡಾಕ್ಟರರ ಕೌಶಲ್ಯಕ್ಕೆ ಅಧೀನವಾಗಿದೆ ಎಂಬುದೇ ಪ್ರಕೃತ ಡಾಕ್ಟರರಿಗೆ ಅನೇಕ ಸೌಕರ್ಯಗಳನ್ನು ಉಂಟುಮಾಡಿಕೊಟ್ಟಿಯದೆ. ಸರಕಾರೀ ಧರ್ಮಾಸ್ಪತ್ರೆಯಲ್ಲಿ ಕೆಲಸಮಾಡಿರಬೇಕಾದ ಡಾಕ್ಟರರು ಖಾಸಗಿ ಸಂಪಾದನೆಯನ್ನು ಮಾಡಿಕೊಳ್ಳಬಹುದೋ? ಎಂದು ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟಿತು. ಸರಕಾರೀ ಧರ್ಮಾಸ್ಪತ್ರೆಗಳಲ್ಲಿ ಡಾಕ್ಟರರು ರೋಗಿಗಳ ಕಡೆಗೆ ಯಾವ ತರದ ಲಕ್ಷ್ಯವನ್ನು ಕೊಡುತ್ತಾರೆ ಎಂಬುದು ತಿಳಿದ ವಿಷಯವೇ ಆಗಿದೆ. ಅಲ್ಲಿ ಬರುವ ರೋಗಿಗಳು ಈಗೀಗ ಬಹಳ ಬಡತರಗತಿಯವರಾಗಿರುವರು. ಒಳ್ಳೇ ವಿಚಕ್ಷಣ ಡಾಕ್ಟರರು ಇರುವರೆಂದರೆ ಮಾತ್ರ ಶ್ರೀಮಂತರು ಬರುವರು; ಆದರೆ ಈ ಸಂದರ್ಭದಲ್ಲಿ ಶ್ರೀಮಂತರು ಧರ್ಮಕ್ಕಾಗಿ ಬಾರದೆ ಯೋಗ್ಯ ಪುರಸ್ಕಾರವನ್ನೂ ಕೊಡುವರಾದುದರಿಂದ ಬಡ ರೋಗಿಗಳು ತೀರಾ ಅಲಕ್ಷಿಸಲ್ಪಡುತ್ತಾರೆ. ಸರಕಾರದ ಇತರ ಯಾವ ವೃತ್ತಿಯ ನೌಕರರಿಗೂ ಈ ಖಾಸಗಿ ಸಂಪಾದನೆಯ ಸ್ವಾತಂತ್ರ್ಯವಿರುವುದಿಲ್ಲ. ಅದೇ ಕ್ರಮವು ಇವರಿಗೂ ಏಕೆ ಅನ್ವಯಿಸಬಾರದೆಂದು ನಮಗೆ ತಿಳಿಯುವುದಿಲ್ಲ. ಈ ಖಾಸಗಿ ಸಂಪಾದನೆಯ ಕ್ರಮದಿಂದ ಬಡವರಾದ ರೋಗಿಗಳು ಯಾವ ರೀತಿಯಲ್ಲಿ ಹಾನಿಪಡುತ್ತಾರೆಂದು ವೃತ್ತಿಯ ಅನುಭವವಿರುವ ಡಾಕ್ಟರ ಮಲ್ಯರವರೇ ಕೌನ್ಸಿಲಿನಲ್ಲಿ ಸ್ಪಷ್ಟಪಡಿಸಿರುವರು.

ಪರದೇಶೀ ವಸ್ತ್ರ ಬಹಿಷ್ಕಾರ.

ಪರದೇಶೀ ವಸ್ತ್ರ ಬಹಿಷ್ಕಾರದ ಚಳವಳದೊಡನೆ ಮಹಾತ್ಮಾಜೀಯವರು ಈಗ ಸಹಕರಿಸಲು ನಿರ್ಧರಿಸಿದುದು ಚೆನ್ನಾಯಿತು. ಗಿರಣಿಮಾಲಿಕರೂ ಈಗಿನ ಅವರ ದುಸ್ಥಿತಿಯಲ್ಲಿ ಬಹಿಷ್ಕಾರ ಚಳವಳವು ಎಷ್ಟು ಪ್ರಯೋಜನಕ್ಕೆ ಬೀಳುವುದೆಂಬದನ್ನು ತಿಳಿದುಕೊಂಡಿರುವರು. ಮಹಾತ್ಮಾಜೀಯವರು ಈ ಚಳವಳದಲ್ಲಿ ಜನತೆಯನ್ನು ಪ್ರೇರಿಸಲು ಒಪ್ಪಿಕೊಂಡಿರುತ್ತಾರೆ. ಬರೇ ಖದ್ದರ್ ಚಳವಳಕ್ಕಿಂತ, ಅವರೊಡನೇ ದೇಶೀ ಗಿರಣೀ ವಸ್ತ್ರದ ಉಪಯೋಗದ ಬಗ್ಯೆ ಈ ಚಳವಳವನ್ನೂ ಕೂಡಿಸಿದರೆ ಹೆಚ್ಚು ಫಲಕಾರಿಯಾಗುವುದೆಂದು ಭಾವಿಸಬಹುದು. ಮತ್ತು ಪರದೇಶೀ ವಸ್ತ್ರ ಬಹಿಷ್ಕಾರವು ಬರೇ ಖಾದೀ ಚಳವಳದಿಂದ ಕಾರ್ಯಕಾರಿಯಾಗಲಾರದು. ಹಿಂದೀ ಗಿರಣಿಯ ಮಾಲಿಕರು ತಮ್ಮ ಗಿರಣಿಗಳನ್ನು ಪಾಶ್ಚಾತ್ಯರ ಇತ್ತೀಚೆಗಿನ ವೈಜ್ಞಾನಿಕ ಕ್ರಮಗಳಿಗೆ ಸರಿಯಾಗಿ ವ್ಯವಸ್ಥೆಗೊಳಿಸಿದರೆ, ಜಾಪಾನ್ ಮತ್ತು ಇಂಗ್ಲೆಂಡಿನೊಡನೆ ಸ್ಪರ್ಧಿಸಲು ಯಾವ ಕಷ್ಟವೂ ಉಂಟಾಗಲಾರದು. ಆದರೆ ಹಿಂದೀಯರ ಮಾನಸಿಕತೆಗೆ ಸರಿಯಾಗಿ ಈ ಗಿರಣೀ ಮಾಲಿಕರು ಬರೇ ಲಾಭನಷ್ಟಗಳನ್ನೆಣಿಸಿ ಸುಖದುಃಖಗಳನ್ನು ವ್ಯಕ್ತಪಡಿಸುವುದರಲ್ಲಿ ಮಾತ್ರವೇ ಇರುವರಲ್ಲದೆ ಗಿರಣಿಗಳನ್ನು ನೂತನ ಸುಧಾರಣೆಗಳಿಗೆ ಸರಿಯಾಗಿ ಅನುಕೂಲಗೊಳಿಸಲು ಯಾವ ಪ್ರಯತ್ನಗಳನ್ನೂ ಮಾಡುವುದಿಲ್ಲ. ದೇಶದ ಜನತೆಯು ಸ್ವದೇಶೀ ಚಳವಳದಲ್ಲಿ ಉತ್ಸಾಹದಿಂದ ಸಹಭಾಗಿಗಳಾಗಿ ಗಿರಣೀ ಮಾಲಿಕರೂ ನ್ಯಾಯವಾದ ರೀತಿಯಲ್ಲಿ ಪರದೇಶೀ ಗಿರಣಿಗಳೊಡನೆ ಸ್ಪರ್ಧಿಸಬಲ್ಲರಾದರೆ ಹಿಂದೂಸ್ಥಾನವು ಗಿರಣೀ ಕೈಗಾರಿಕೆಯ ಮಟ್ಟಿಗೆ ಕಷ್ಟಪಡಬೇಕಾಗುವುದಿಲ್ಲ.

ಸ್ಯಾಮನರು ಹಿಂದೆ ಹೋಗುವರು.

ಇದೇ ಶನಿವಾರ ಸ್ಯಾಮನ್ ಕಮಿಶನ್ನು ತನ್ನ ಪ್ರಥಮದ ಭೇಟಿಯನ್ನು ಅಖೈರುಮಾಡಿ ಇಂಗ್ಲೆಂಡಿಗೆ ಹಿಂತಿರುಗುವುದು. ಸ್ಯಾಮನ್ ಕಮಿಶನ್ನಿಗೆ ಸಮಗ್ರ ಭಾರತದಿಂದ ಯಾವ ತರದ ಸ್ವಾಗತ ಸಿಕ್ಕಿತೆಂದು ಎಲ್ಲರಿಗೂ ಗೊತ್ತೇ ಇದೆ. ಸ್ಯಾಮನ್ ಕಮಿಶನ್ನು ಹೊರಗಿನಿಂದ ಏನೇ ಪತ್ರುಟಣೆಗಳನ್ನು ಕೊಟ್ಟಿರಬಹುದಾದರೂ, ಈ ಸ್ವಾಗತದ ವಿಷಯದಲ್ಲಿ ತನ್ನ ಅಂತರ್ಯದಲ್ಲಿ ಸರಿಯಾಗಿ ತಿಳಿದಿರಲೇಬೇಕು. ಇಡೀ ದೇಶದಲ್ಲಿ ಪಂಜಾಬ ಒಂದು ಮಾತ್ರ ದೇಶದ ಸಮಗ್ರ ಆಶಯದೊಡನೆ ಸಮ್ಮಿಳಿಸಲಾರದೆ ಹೋದುದು ವಿಷಾದಕರ. ಒಂದು ಕೋಗಿಲೆಯು ಒಂದು ವಸಂತವನ್ನು ಸೂಚಿಸುವುದಿಲ್ಲವೆಂದು ಹಿಂದೂ ಪತ್ರಿಕೆಯು ಅಂದಂತೆ, ಪಂಜಾಬ ಕೌನ್ಸಿಲೊಂದರಿಂದ ಸಮಗ್ರ ಭಾರತದ ಅಭಿಪ್ರಾಯವನ್ನು ವ್ಯಕ್ತಪಡಿಸಲಾರದು. ಲೆಜಿಸ್ಲೇಟಿವ್ ಎಸೆಂಬ್ಲಿಯು ಏನೊಂದೂ ಕ್ಲೇಶವಿಲ್ಲದೆ ತನ್ನ ಮತವನ್ನು ಪ್ರಕಾಶಪಡಿಸಿತು, ಮಧ್ಯ ಪ್ರಾಂತ, ಮದ್ರಾಸು ಮುಂತಾದ ಪ್ರಾಂತಿಕ ಕೌನ್ಸಿಲುಗಳೂ ಸ್ಯಾಮನನಿಗೆ ಹಿಂದೆ ಹೋಗಲು ಹೇಳಿದುವು. ಆದರೂ ಸ್ಯಾಮನರು ಹಿಂದೂ ದೇಶದ ಹಿತದ ಉದಾರ ಉದ್ದೇಶದ ಹೆಸರಿನಲ್ಲಿ ಹಿಂದೂ ದೇಶವನ್ನು ತಿರುಗಿದರು. ಸ್ಯಾಮನರಿಗೆ ನಿಜವಾಗಿಯೂ ಹಿಂದೂ ದೇಶದ ಹಿತವಿದ್ದರೆ ಈ ಬಹಿಷ್ಕಾರದ ಪಾಠವನ್ನು ತೆಗೆದುಕೊಳ್ಳದೆ ನಿಲ್ಲಲಿಕ್ಕಿಲ್ಲ. ಇವರು ಇಂಗ್ಲೆಂಡಿಗೆ ಹೋದ ಮೇಲೆ ಎರಡನೆಯ ಬಾರಿ ಹಿಂದೂಸ್ಥಾನಕ್ಕೆ ಬರುವ ಮೊದಲು ತಮ್ಮ ಕಾರ್ಯಕ್ರಮವನ್ನು ಯಾವ ರೀತಿಯಲ್ಲಿ ರೂಪಿಸುವರೆಂಬುದನ್ನು ನೋಡಲಿದೆ. ಹಿಂದೀ ಮುಖಂಡರೂ ಹಿಂದೂಸ್ಥಾನದ ಗೌರವವನ್ನು ಬ್ರಿಟಿಷ ರಾಜಯುಕ್ತಿಗೆ ಬಲಿಯೊಯಲಿಕ್ಕಿಲ್ಲವೆಂದು ನೆನಸುತ್ತೇವೆ.

ಮೈಸೂರು ಕೈಗಾರಿಕೆಗಳೂ ಮೈಸೂರು ವಿಮರ್ಶಕರೂ.

ಬ್ರಿಟಿಷ ಹಿಂದೂಸ್ಥಾನದ ಸರಕಾರವನ್ನು ಖಂಡಿಸಲಿಕ್ಕೆ ಬ್ರಿಟಿಷ ಹಿಂದೂಸ್ಥಾನದ ಪತ್ರಿಕೆಗಳು ಕೈಕೊಳ್ಳುವ ಕ್ರಮವನ್ನು ತಮ್ಮ ಸರಕಾರವನ್ನು ಖಂಡಿಸಲಿಕ್ಕೆ ಕೈಕೊಳ್ಳುವುದೇ ಶ್ರೇಷ್ಠತಮವಾದ ಪತ್ರಿಕಾರಚನೆಯೆಂದು ಹಲವು ಮೈಸೂರು ಪತ್ರಿಕೆಗಳು ತಿಳಿದುಕೊಂಡಂತೆ ತೋರುವುದು. ಈ ಪತ್ರಿಕೆಗಳಿಗೆ ಉದಾರ ಉದ್ದೇಶವಿದೆ; ನಿಸ್ಸೀಮ ದೇಶಪ್ರೇಮವಿದೆ. ಆದರೆ ಬ್ರಿಟಿಷ ಹಿಂದೂಸ್ಥಾನದ ಧ್ವಂಸಕಾರಕ (Destructive) ಉತ್ತೇಜಕ ವಿಮರ್ಶೆಗಳು ಮೈಸೂರು ಸರಕಾರವನ್ನು ಖಂಡಿಸಲಿಕ್ಕೆ ಉಪಯೋಗಿಸಿಕೊಳ್ಳುವದು ಬರೇ ಆತ್ಮಘಾತುಕತೆಯೆಂದು ಹೇಳಬೇಕಾಗುತ್ತದೆ. ಏಕೆಂದರೆ ಸ್ವಭಾವತಃ ಬ್ರಿಟಿಷ ಹಿಂದೂಸ್ಥಾನವು ಧ್ವಂಸಕಾರಕ ಉದ್ದೇಶವನ್ನು ಇಟ್ಟುಕೊಳ್ಳಬೇಕಾಗಿದೆ; ಆದರೆ ಮೈಸೂರು ಪತ್ರಿಕೆಗಳಿಗೆ ಅಂತಹ ಉದ್ದೇಶವನ್ನಿಟ್ಟುಕೊಳ್ಳಬಾರದು; ಅದರ ಉದ್ದೇಶವು ರಚನಾತ್ಮಕ (Constructive) ವಿರಬೇಕು. ಈ ದೃಷ್ಟ್ಯಾ ನೋಡಿದರೆ ವಿಶ್ವಕರ್ನಾಟಕ ತಾಯಿನಾಡು ಮೊದಲಾದುಗಳಲ್ಲಿ ಒಂದೊಂದು ಬಾರಿ ಬರುವ ವಿಮರ್ಶೆಗಳು ಅಗತ್ಯವಿದ್ದುದಕ್ಕಿಂತಲೂ ಹೆಚ್ಚಾಗಿದೆ.

ಈ ವಿಮರ್ಶೆಗಳಲ್ಲಿ ಮೈಸೂರು ಕೈಗಾರಿಕೆಗಳ ವಿಮರ್ಶೆಯು ಒಂದಾಗಿದೆ. ವಿಶ್ವಕರ್ನಾಟಕದಲ್ಲಿ ಕೆಲವು ಸಮಯದ ಹಿಂದೆ ಬಂದ ಭದ್ರಾವತಿ ಕಾರ್ಖಾನೆಯ ವಿಷಯದ ವಿಮರ್ಶೆಯ ಕ್ರಮವು ನಮಗೆ ಇನ್ನೂ ಮನಸ್ಸಿನಲ್ಲಿದ್ದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಈ ಮೊದಲೇ ಕೊಟ್ಟಿರುವೆವು. ಈ ವಿಮರ್ಶೆಗಳಲ್ಲಿ ಹೆಚ್ಚಿನ ದೋಷವು ಸರ್. ಎಮ್. ವಿಶ್ವೇಶ್ವರಯ್ಯನವರ ಪಾಲಿಗೇ ಕೊಡಲ್ಪಟ್ಟಿದೆ. ಇಂತಹ ವಿಮರ್ಶೆಗಳಿಗೆ ಸ್ಥಳೀಕ ಪತ್ರಿಕೆಗಳು ಸಾಕಾಗದೆ ಹಿಂದೂ ಮೊದಲಾದ ಮದ್ರಾಸಿನ ದೈನಿಕ ಪತ್ರಿಕೆಗಳಲ್ಲಿಯೂ ಸ್ಥಳವು ಕೊಡಲ್ಪಡುತ್ತಿದ್ದಿತು. ಈ ವಿಮರ್ಶೆಗಳಲ್ಲಿ ಹೆಚ್ಚಿನವು ಮಾಜಿ ಜಡ್ಜರಾಗಿದ್ದ ವಿ. ಟಿ. ಪರಮಶಿವಯ್ಯನವರಿಂದಲೇ ಬರುತ್ತಿದ್ದುವು. ಸರ್. ವಿಶ್ವೇಶ್ವರಯ್ಯನವರೂ ಈ ಟೀಕೆಗಳಿಗೆ ಆಗಾಗ ಸರಿಯಾದ ಉತ್ತರವನ್ನು ಕೊಡುತ್ತಿದ್ದರು. ಪುನಃ ತಾ. 28ರ ಹಿಂದೂ ಪತ್ರಿಕೆಯಲ್ಲಿ ಈ ಧ್ವಂಸಕಾರಕ ವಿಮರ್ಶೆಗಳ ವಿಷಯದಲ್ಲಿ ವಿಶ್ವೇಶ್ವರಯ್ಯನವರು ಬಹಳ ಚೆನ್ನಾಗಿ ಮೈಸೂರು ಜನರ ಕಡೆಗೆ ನಿವೇದಿಸಿರುವರು. ಮೈಸೂರು ಪತ್ರಿಕೆಗಳು ಶ್ರೀ ವಿಶ್ವೇಶ್ವರಯ್ಯನವರ ಈ ಸ್ವದೇಶ ಪ್ರೇಮದಿಂದ ತುಂಬಿತುಳುಕಾಡುವ ಈ ನಿವೇದನವನ್ನು ಇನ್ನಾದರೂ ತಿರಸ್ಕರಿಸದೆ ಧ್ವಂಸಕಾರಕ ವಿಮರ್ಶೆಗಳನ್ನು ಬಿಟ್ಟುಕೊಟ್ಟು ರಚನಾತ್ಮಕ ವಿಮರ್ಶೆಗಳ ಕಡೆಗೆ ತಮ್ಮ ಲಕ್ಷ್ಯವನ್ನು ಕೊಡುವರಾಗಿ ನಾವು ಆಶಿಸುವೆವು.

ಶಾಲೆ ಮತ್ತು ಕೊಲೇಜುಗಳಲ್ಲಿ ವೈದ್ಯಕೀಯ ಸಹಾಯ.

ಶಾಲೆ ಮತ್ತು ಕೊಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಶರೀರ ಶಾಸ್ತ್ರ ಮತ್ತು ಆರೋಗ್ಯವನ್ನು ಕಲಿಸಲಿಕ್ಕೂ ಶರೀರ ಸ್ವಾಸ್ಥ್ಯದ ಪರೀಕ್ಷೆಯನ್ನು ಮಾಡಲಿಕ್ಕೂ ವೈದ್ಯರನ್ನೇ ನೇಮಿಸಬೇಕಾಗಿ ಶ್ರೀಯುತ ಎ. ಬಿ. ಶೆಟ್ರು ಮದ್ರಾಸು ಕೌನ್ಸಿಲಿನಲ್ಲಿ ತಂದ ಠರಾವು ಬಹಳ ಉಪಯುಕ್ತವಾದುದೆನ್ನುವಲ್ಲಿ ಸಂಶಯವಿಲ್ಲ. ಶಾಲೆಗಳಲ್ಲಿಯೂ ಕೊಲೇಜುಗಳಲ್ಲಿಯೂ ವಿದ್ಯಾರ್ಥಿಗಳ ದೈಹಿಕ ಪರಿಸ್ಥಿತಿಯು ಚೆನ್ನಾಗಿರುವದಿಲ್ಲವೆಂಬ ದೋಷಾರೋಪಣೆಯು ಎಂದಿನಿಂದಲೂ ಇರುವ ಮಾತಾಗಿದೆ. ಆದರೆ ಈ ನ್ಯೂನ್ಯತೆಯನ್ನು ಪರಿಹರಿಸಲಿಕ್ಕೆ ಸರಕಾರವಾಗಲಿ ಶಾಲಾ ಸಂಸ್ಥೆಗಳಾಗಲಿ ಏನೊಂದು ಉಪಕಾರಿಯಾದ ಪ್ರಯತ್ನವನ್ನು ಮಾಡಿಲ್ಲ. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳಿಂದ ಕಿಂಚಿತ್ "ಫೀ"ಯು ವಸೂಲು ಮಾಡಲ್ಪಟ್ಟು ಶರೀರ ಪರೀಕ್ಷೆಯು ನಡೆಸಲ್ಪಡುತ್ತಿರುವುದು. ಸಂಬಂಧಪಟ್ಟ ವೈದ್ಯರೂ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯನ್ನು ತೆಗೆದು ಬಿಡುವರು. ಆದರೆ ಫಲಕಾರಿಯಾದ ಯಾವ ಪ್ರಯೋಜನವೂ ಇದರಿಂದಾಗುವುದಿಲ್ಲ. ಆದರೆ ವಿದ್ಯಾ ಇಲಾಖೆಯು ಈ ವಿದ್ಯಾ ಸಂಸ್ಥೆಗಳ ಕೆಲಸಕ್ಕಾಗಿ ಮಾತ್ರವೆಂದು ಪ್ರತ್ಯೇಕ ನೇಮಕಗಳನ್ನು ಮಾಡಿದರೆ, ಹಾಗೆ ನೇಮಕಹೊಂದಿದ ಡಾಕ್ಟರರು ವಿದ್ಯಾರ್ಥಿಗಳ ಶಾರೀರಿಕ ಅಭಿವೃದ್ಧಿ ಬಗ್ಯೆ ಸತತವೂ ಪ್ರಯತ್ನಿಸಲು ಸಾಧ್ಯವಾಗುವುದೆಂದು ಶ್ರೀ. ಎ. ಬಿ. ಶೆಟ್ರು ಹೇಳಿದುದು ನಿಜವಾಗಿರುವುದು. ಡಾ| ಸುಬ್ಬರಾಯನರು ಸರಕಾರದ ಪರವಾಗಿ ಈ ಠರಾವಿನ ತತ್ವವನ್ನೊಪ್ಪಿಕೊಂಡುದರಿಂದ ಶ್ರೀ. ಶೆಟ್ರು ತಮ್ಮ ಠರಾವನ್ನು ಹಿಂತೆಗೆದುಕೊಂಡರು. ಆದರೆ ಡಾ| ಸುಬ್ಬರಾಯನರ ಏನೊಂದು ಜವಾಬ್ದಾರಿಯನ್ನೊಪ್ಪಿಕೊಳ್ಳದ ಸ್ವೀಕಾರವು ಎಷ್ಟು ಫಲಕಾರಿಯಾದೀತೆಂದು ಮಾತ್ರ ಹೇಳಲಾಗುವುದಿಲ್ಲ.

ನೋಟಗಳು.

NOTE...S.

ಭೂತಪ್ರೇತಗಳಿದ್ದಾವೊ ಇಲ್ಲವೊ? ಪಾಶ್ಚಾತ್ಯರು ಈ ವಿಷಯವನ್ನು ಊಹೆಗೆ ಬಿಡಲೊಪ್ಪುವುದಿಲ್ಲ. ಹಲವು ಪ್ರಮುಖರು ಸತ್ತವರ ವಿಷಯ ಶೋಧ ನಡಿಸುತ್ತಿದ್ದಾರೆ.

• • • •

ಇಂಗ್ಲೆಂಡಿನಲ್ಲಿ ಭೂತವಿದ್ದ ಒಂದು ಹಡಗು ಇತ್ತು, ಹೆಸರು ಎಮಿ ಎಂದು, ಒಂದು ಸಿನೆಮಾ ಫಿಲ್ಮ ಕಂಪೆನಿಯವರು ತಮ್ಮದೊಂದು ಫಿಲ್ಮಿಗಾಗಿ ಮೂರು ಸಲ ಅದನ್ನು ಬೆಂಕಿ ಹತ್ತಿಸಿ ಮುಳುಗಿಸಲು ಪ್ರಯತ್ನಿಸಿದರು; ಮುಳುಗಲಿಲ್ಲ. ಕೆಲವು ದಿನಗಳ ಹಿಂದೆ ಅದರಲ್ಲಿ ಸಿಡಿಮದ್ದುಗಳನ್ನೂ ಪೆಟ್ರೋಲನ್ನೂ ತುಂಬಿಸಿ ಇಲೆಕ್ಟ್ರಿಸಿಟಿಯಿಂದ ಬೆಂಕಿ ಇಟ್ಟರು. ಆದರೂ ಮುಳುಗಲಿಲ್ಲ. ಸಬ್‌ಮೆರೀನ್‌ನೊಂದು ಆ ಮೇಲೆ ಅದಕ್ಕೆ ಗುಂಡು ಹಾರಿಸಿತು. ಹಾಗೆಲ್ಲ. ಕಟ್ಟಕಡೆಗೆ ದೊಡ್ಡ ಯುದ್ಧನಾವೆಯು ಹತ್ತು ಸಲ ಗುಂಡು ಹಾರಿಸಿ ಪ್ರಯತ್ನಿಸಿದ ಮೇಲೆ ಅದು ಮುಳುಗಿತು; ಅದರಲ್ಲಿ ಭೂತಪ್ರೇತಾದಿಗಳಿದ್ದುವೊ ಇಲ್ಲವೊ?

• • • •

ಸ್ಯಾಮನ್ ಕಮಿಶನ್ನಿನ ಬಹಿಷ್ಕಾರದ ಉತ್ಸಾಹದಿಂದ ಸರ್ ಬೆಸಿಲ್ ಬ್ಲೆಕೆಟ್ಟರ ತಲೆಗೆ ಪೆಟ್ಟಗೆಯನ್ನೆಸೆದ ಹಿಂದೂಸ್ಥಾನ ಟೈಮ್ಸಿನ ಜಾತ್ಮೀದಾರರಿಗೆ ಇಂಗ್ಲೀಷ ಮೆಜಿಸ್ಟ್ರೇಟರು ಬರೇ ೫೦ ರೂಪಾಯಿ ಜುಲುಮಾನೆ ವಿಧಿಸಿ ತೀರ್ಮಾನಿಸಿದರು, ಹಿಂದೀಯರು ಮೆಜಿಸ್ಟ್ರೇಟರಾಗಿದ್ದರೆ ನೋಡಬೇಕಿತ್ತು!

• • • •

ಸ್ಯಾಮನ್ ಸಪ್ತಕರ ಅದೃಷ್ಟ! ಹಿಂದೂಸ್ಥಾನದಲ್ಲಿ ಕಾಲಿಡುವ ದಿವಸವೇ ಸೂರ್ಯಚಂದ್ರರಾದಿಯಾಗಿ ಹರತಾಳವನ್ನು ಆಚರಿಸಿದರು ಈ ಸಪ್ತಕರು ಬರುವಾಗ ಮಳೆಯೇ ಇವರನ್ನು ಸ್ವಾಗತೀಕರಿಸಿತು. ಹಿಂತಿರುಗುವಾಗಲೂ ಮಳೆಯೇ ಇವರನ್ನು ಬೀಳ್ಕೊಟ್ಟಿತು.

• • • •

ತಾಲೂಕು ಬೋರ್ಡು ಟಿಟ್‌ಬಿಟ್ಸ್:-ಅಂತೂ ಇಂತೂ ಮೆಂಬರರ ಚುನಾವಣೆಗಳು ವೋಟರರಿಗೆ ಕಾಫಿ, ಚಾ, ತಿಂಡಿ ಭೋಜನ ದಕ್ಷಿಣೆ ಮೊದಲಾದ ಸಮ್ಮಾನಗಳ ವಿಶೇಷತ್ವದಲ್ಲಿ ಬಹಳ ವಿಜೃಂಭಣೆಯಿಂದ ಮುಗಿದವು. ಇನ್ನು ಪ್ರೆಸಿಡೆಂಟರ ಚುನಾವಣೆಗೆ ಇಷ್ಟೇ ಗದ್ದಲ ಇರಬಹುದು.

• • • •

ತಾಲೂಕು ಬೋರ್ಡಿನವರ ಕೈಕೆಳಗಿರುವ ವಿದ್ಯಾ ಇಲಾಖೆಯನ್ನು ತೆಗಿಯುತ್ತಾರಾಗಿ ಒಂದು ವಾರ್ತೆ- ಅದು ಹೌದಾದರೆ ಇನ್ನು ಚುನಾವಣೆಗೆ ಮೆಂಬರರು ಸಿಕ್ಕುವುದು ಕಷ್ಟಸಾಧ್ಯವೇ ಆಗುವುದು ಹ್ಯಾಗೆ......?

• • • •

ಹಿಂದೂಸ್ಥಾನದ ಜನರು ತಮ್ಮನ್ನು ಬಹಿಷ್ಕರಿಸಿದ್ದರಿಂದ ತಮಗೆ ವ್ಯಸನವಾಗಲಿಲ್ಲ. ತಮ್ಮ ಉದ್ದೇಶವು ಹಿಂದುಗಳಿಗೆ ಮುಂದೆ ತಿಳಿಯಲಿರುವದು. ಆಗ ಅವರು ತಮ್ಮನ್ನು ಸಂತೋಷದಿಂದ ಸ್ವಾಗತೀಕರಿಸುವರು ಎಂದು ಸರ್ ಜೋನ್ ಸ್ಯಾಮನರ ಅಂಬೋಣ.

• • • •

ನರಿಯೂ, ದ್ರಾಕ್ಷೆಯ ಹಣ್ಣು, ಈ ಕಥೆಯಂತೆ ತಮ್ಮಷ್ಟಕ್ಕೆ ತಾವೇ ಸಮಾಧಾನಮಾಡಿಕೊಳ್ಳುತ್ತಿರುವರು.

[illegible] ಸ್ವಾರ್ಥಿಯಾಗಿ ಬೆಳೆದಿದೆ. [illegible] ಭಾವನೆಯಲ್ಲಿ, ಮತ್ತು [illegible] ಪೌರ್ವಾತ್ಯ [illegible] ಎಂಬುದು ಚಿಂತನೀಯವಿದೆ.

[illegible] ನಿಃಶೇಷವಾದ ಈ ಪರಿ[illegible] ಪರಸ್ಪರ ವಿರೋಧ [illegible] ವ್ಯಾಪಾರ ಮತ್ತು [illegible] ಇದೆಯೆಂಬುದು [illegible] ಅವರ ಈ ಸ್ಪರ್ಧೆಯಿಂದ [illegible] ಏಕೆಂದರೆ [illegible] ತಮ್ಮ ಭೇದಗಳನ್ನು [illegible]

[illegible] ಸರ್ವಸಾಧಾ[illegible] ಸಂತೋ[illegible] ಅಫಘಾನಿ[illegible] ಅಧೀನ [illegible] ಮುಸ[illegible] ಇಂತಹ [illegible] ವಗುಪ್ತ್ಯವು [illegible] ಪರಂಪರೆಗಳ [illegible]

[illegible] ಸ್ವಾತಂತ್ರ್ಯ [illegible] ರೀತಿಯಲ್ಲಿ [illegible] ಸ್ವಾತಂತ್ರ್ಯ [illegible] ಜಪಾ[illegible] ಅದು [illegible]

[illegible]

[illegible] ಕ್ಕಾಗಿ ನಡೆಯುವ ಅನೇಕ ಪ್ರಯತ್ನಗಳು [illegible] ನಲ್ಲಿ ಪರ್ಯವಸಾಯಿಯಾಗಿವೆ ಎಂಬುದನ್ನು [illegible] ವುದಿಲ್ಲ. ವಿಚಾರಿಸಿದರೆ ಇದನ್ನು [illegible] ಕೊಳ್ಳಬೇಕೆಂಬುದು ಅವಶ್ಯಕ.

ನೂತನ ನಾಗರಿಕತೆಯು ವಿಜ್ಞಾನವನ್ನು [illegible] ರಿಸಿತೊ, ಹಾಗೆ ಆ ನಾಗರಿಕತೆಯು ಅಧೀನವಿದ್ದವರಿಗೆ [illegible] ಆವಶ್ಯಕತೆಯು ಹೆಚ್ಚಿತು; ಮತ್ತು ಆ ನಾಗರಿಕತೆಯು [illegible] ದಿಂದ ಆ ಅವಶ್ಯಕತೆಯನ್ನು ಪೂರಯಿಸುವ ಶಕ್ತಿಯೂ ಹೆಚ್ಚಿತು. ಪಾಶ್ಚಾತ್ಯ ಜನಾಂಗಗಳು ಆ ವಿಜ್ಞಾನವನ್ನೂ, ಅದ್ಭುತ ಸಂಘಯದಶಕ್ತಿಯನ್ನೂ ಹೊಂದಿಕೊಂಡಿದ್ದುದರಿಂದ ಅವು ಪೌರ್ವಾತ್ಯ ಜನಾಂಗಗಳ ಮೇಲೆ ಅಧಿಕರಿಸುವ ಅವಶ್ಯಕತೆಯನ್ನು ಕಂಡವು.

ಪಾಶ್ಚಾತ್ಯರ ಈ ಪ್ರಚಂಡ ಸ್ವಾರ್ಥಸಾಧನೆಯ ಮಧ್ಯದಲ್ಲಿ ಪೌರ್ವಾತ್ಯರ ಗತಿಯೇನು? ಎಂಬುದೇ ಈಗ ಹಲವರಲ್ಲಿ ಉಂಟಾದ ಪ್ರಶ್ನೆಯಾಗಿದೆ. ಡಾರ್ವಿನನ ತತ್ವದಂತೆ (Survival of the fittest) ಯೋಗ್ಯರಾದವರೇ ಬಾಳತಕ್ಕದ್ದೆಂಬ ತತ್ವವನ್ನು ನಿರ್ದಾಕ್ಷಿಣ್ಯವಾಗಿಯೂ ನಿಷ್ಕರುಣೆಯಾಗಿಯೂ ಪಾಶ್ಚಾತ್ಯ ಜನಾಂಗಗಳು ಅನುಕರಿಸಿರುವರು. ಒಂದು ಸಮಯದಲ್ಲಿ ಉಚ್ಚತತ್ವಗಳನ್ನೇ ಲೋಕಕ್ಕೆಲ್ಲ ಉಪದೇಶ ಮಾಡುತ್ತಿದ್ದ ಅಮೇರಿಕವು ಕೂಡ ಸಂಪನ್ನತೆಯಿಂದ ಇತರ

[illegible] ಪೂರ್ವದ [illegible] ನಾಗರಿಕತೆಯು [illegible] ಆದುದರಿಂದ [illegible] ಉನ್ನತಿಯು [illegible]

ಈ ಮಧ್ಯದಲ್ಲಿ ಜಪಾನು [illegible] ಮೇಲೆ ಅಧಿಕರಿಸಲು ಯತ್ನಿಸುತ್ತಿದೆ. ಆದರೆ [illegible] ಆ ಸ್ವಾರ್ಥ ಧೋರಣವನ್ನು ಬಿಟ್ಟು ಚೀನವನ್ನು ಸಮಾನತೆಯಿಂದ ತನ್ನೊಟ್ಟಿಗನೇ ಮೇಲೆತ್ತಿದ್ದುದಾದರೆ ಪಾಶ್ಚಾತ್ಯರ ಮಧ್ಯದಲ್ಲಿ ಅಸ್ವಸ್ಥತೆಯುಂಡಕಲ್ಪ, ಅದರೊಡನೆ ಜಪಾನಿಗೂ ಬಹಳ ಗೌರವವು ಉಂಟಾಗುತ್ತಿತ್ತು. ಜಪಾನಿನ ಈಗಿನ ಧೋರಣವೇ ಅಸ್ವಸ್ಥಂಡವನ್ನು ಪಾಶ್ಚಾತ್ಯರ ಎದುರು ನಿರ್ಬಲವಾಗಿ ಮಾಡಿತು; ಕಟ್ಟಕಡೆಗೆ ಜಪಾನು ಕೂಡ ಪಾಶ್ಚಾತ್ಯರಲ್ಲಿ ಕಡಿಮೆ ಸ್ಥಾನವನ್ನು ಹೊಂದಿತು.

ಇನ್ನು ಹಿಂದೂಸ್ಥಾನದ ಮುಂದಿನ ಗತಿಯೇನು? ಹಿಂದೂಸ್ಥಾನ ಮತ್ತು ಬ್ರಿಟಿಷರ ಸಂಬಂಧವು ಇತರ ದೇಶಗಳಂತಲ್ಲ, ಶತಮಾನಗಳಿಂದ ಬೆಳೆದು ಬಂದುದು. ಸಾವಿರಾರು ಬ್ರಿಟಿಷರು ಇಲ್ಲಿ ತಮ್ಮ ಜೀವನವನ್ನು ಹೊಂದುತ್ತಿರುವರು. ಬ್ರಿಟಿಷರ ಕೈಗಾರಿಕೆಗಳು ಈ ದೇಶದ ಮೇಲೆ ಹೊಂದಿವೆ. ಬ್ರಿಟಿಷರ ರಾಜಕೀಯ ಪ್ರಾಬಲ್ಯವು ಈ ಅತೀ ಸಂಖ್ಯಾಕ ಜನರಿರುವ ದೇಶದ ಮೇಲೆ ಹೊಂದಿದೆ. ಸಂಕ್ಷೇಪತಃ, ಬ್ರಿಟಿಷರ ರಾಜಕೀಯ ಮತ್ತು ಆರ್ಥಿಕ ಅಸ್ತಿತ್ವವೇ ಇದನ್ನು ಅವಲಂಬಿಸಿಯದೆ. ಆದುದರಿಂದ ಹಿಂದೂಸ್ಥಾನವು ಸ್ವತಂತ್ರವಾಗುವುದು ಕಷ್ಟವಿದೆ.

ಪೌರ್ವಾತ್ಯ ಜನಾಂಗಗಳ ಹೀನಸ್ಥಿತಿಯ ಕಾರಣದಿಂದ ಪೌರ್ವಾತ್ಯ ಜನಾಂಗ ಸಂಘದ ಅವಶ್ಯಕತೆಯು ವಿದಿತವಾಗುವುದು. ಯುರೋಪಿಗಾಗಿ ಲೀಗ್ ಒಫ್ ನೇಶನ್ಸ್ ಇದೆ. ಅಮೇರಿಕಕ್ಕೆ ಪಾನ್ ಅಮೇರಿಕನ್ ಕಾಂಗ್ರೆಸ್ಸು ಇದೆ. ಹಾಗೆಯೇ ಪೌರ್ವಾತ್ಯರೂ ಪೌರ್ವಾತ್ಯ ಜನಾಂಗ ಸಂಘವನ್ನು ವಿರಚಿಸಿದರೆ ಬಹಳ ಉತ್ತಮವಿದ್ದಿತು. ಇಂತಹ ವ್ಯವಸ್ಥೆಯ ಮೇಲೆಯೇ ಪೌರ್ವಾತ್ಯರ ಭವಿಷ್ಯತ್ತು ಹೊಂದಿಕೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿದೇಶ ವರ್ತಮಾನ.

— ಲಂಡನಿನ ಗನಿಕಾರರಲ್ಲಿ ಮೂರು ಸಾವಿರ ಜನರು ಕರಾರನ್ನು ವಿಾರಿ ಅತಿಕ್ರಮ ಮಾಡಿ ಯಜಮಾನರಿಗೆ ನಷ್ಟವನ್ನುಂಟುಮಾಡಿದುದರಿಂದ ಅವರ ಸಂಬಳವನ್ನು ಕಡಿಮೆ ಮಾಡಿ ಅಧಿಕಾರಿಗಳ ನಷ್ಟವನ್ನು ಭರ್ತಿ ಮಾಡಿಕೊಳ್ಳಬೇಕೆಂದು ಕೋರ್ಟಿನವರು ಅಪ್ಪಣೆ ಕೊಟ್ಟಿರುವರು.

— ಲೋರ್ಡ ಬರ್ಕನ್ ಹೆಡ್ಡರ ಪ್ರಕೃತಿಯು ಈಗ ತಕ್ಕ ಮಟ್ಟಿಗೆ ಚೆನ್ನಾಗಿದೆ.

— ವಿಯನ್ನಾದಲ್ಲಿ ಸಂಚರಿಸುತ್ತಿದ್ದ ಹದಿನೇಳು ಜನ ಪ್ರಯಾಣಿಕರು ಮಂಜುಗಡ್ಡೆಯಿಂದ ಆಚ್ಛಾದಿತವಾದ ಒಂದು ಪರ್ವತವನ್ನು ಹತ್ತುವಾಗ ಕೆಳಕ್ಕೆ ಬಿದ್ದು ಮಂಜಿನಡಿಯಲ್ಲಿ ಹುಗಿಯಲ್ಪಟ್ಟರು. ನಾಲ್ಕು ಜನರನ್ನು ಹೇಗೂ ಬದುಕಿಸಿದರು. ಉಳಿದ ಹದಿಮೂರು ಜನರು ಮಾತ್ರ ನಾಶವಾದರು.

— ಆಸ್ಪತ್ರೆಯಲ್ಲಿ ವೈದ್ಯಪರೀಕ್ಷೆಗೆ ಕಲಿಯಲು ಸ್ತ್ರೀ ಉಮೇದ್ವಾರರು ಬರಬಾರದೆಂದು ಆಸ್ಪತ್ರೆಯವರು ಅಡ್ಡಿ ಮಾಡಿದುದರ ಕುರಿತು ಲಂಡನ ಯುನಿವರ್ಸಿಟಿಯ ಸೆನೇಟಿನಲ್ಲಿ ಒಂದು ಸಭೆ ಜರಗಿಸಿದರು. ಇದನ್ನು ವಿಚಾರಿಸುವದಕ್ಕಾಗಿ ಒಂದು ಕಮಿಟಿಯನ್ನು ಈ ಸಭೆಯಲ್ಲಿ ಏರ್ಪಡಿಸಿದರು.

— ಮೆಕ್ಸಿಕೊವಿನಲ್ಲಿ ಒಂದು ಭಯಂಕರ ಭೂಕಂಪವುಂಟಾಯಿತು. ಭೂಮಿಯು ಎರಡು ಮಿನಿಟುಗಳ ವರೆಗೆ ನಡುಗುತ್ತಲೇ ಇದ್ದಿತು.

— ಕ್ರೊಯಿಡನಿನಿಂದ ಬ್ರುಸ್ಸೆಲ್ಸಿಗೆ ಹೋಗುವ ವಾಯು ವಿಮಾನದಲ್ಲಿ ಅರ್ಧ ಮಿಲಿಯ ಪೌಂಡು ಬೆಲೆ ಬಾಳುವ ಚಿನ್ನದ ಗಟ್ಟಿಗಳನ್ನು ತುಂಬಿಸಿದ್ದರು. ಈ ಭಾರವನ್ನು ಸರಿಯಾಗಿ ವಿಂಗಡಿಸಿ ಹಾಕುವದಕ್ಕಾಗಿ, ಗಟ್ಟಿಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಸಿ, ಒಬ್ಬೊಬ್ಬ ಪ್ರಯಾಣಿಕನು ಒಂದೊಂದು ಪೆಟ್ಟಿಗೆಯನ್ನು ಕುರ್ಚಿಯಂತೆ ಉಪಯೋಗಿಸಿ, ಮೇಲಕ್ಕೆ ಕುಳಿತುಕೊಂಡನು.

— ಲೀಗಿನಲ್ಲಿ ತಮಗೆ ಮೆಂಬರ್‌ಸಿಫ್‌ನ್ನು ಕರುಣಿಸಬೇಕೆಂದು ಟರ್ಕಿಯವರು ಅರ್ಜಿ ಮಾಡಿರುವರು. ಈ ಅರ್ಜಿಯ ಕುರಿತು ಜನೇವಾದಲ್ಲಿ ನಡೆವ ಲೀಗಿನ ಬರುವ ಅಧಿವೇಶನದಲ್ಲಿ ವಿಚಾರಿಸುವರು.

— ಲಂಡನಿನ ವಾಯು ವಿಮಾನಗಳನ್ನು ತಯಾರಿಸುವ ಕಾರಖಾನೆಯ ಜನರು ಸಂಬಳ ಸಾಕಾಗುವದಿಲ್ಲವೆಂದು ಕೆಲಸಕ್ಕೆ ಮುಷ್ಕರ ಹಾಕಿರುವರು. ಇದರಿಂದ ಕೆಲಸವು ಮುಂದರಿಯದೆ ನಷ್ಟವುಂಟಾಗುತ್ತಿದೆ.

· ಮೊಸ್ಕೋದಿಂದ ೧೦ ಟನ್ ಭಾರವಿರುವ ಭಂಗಾರವನ್ನು ಇಂಗ್ಲಾಂಡಿಗೆ ಹಡಗದ ಮೇಲೆ ಕೊಂಡೊಯ್ದಿರುವರು.

— ಲಂಡನಿನಲ್ಲಿ ತಂತಿ ಚಾರ್ಜು ಮೊದಲು ಶಬ್ದಕ್ಕೆ ಒಂದು ಪೆನ್ನಿಯಂತಿದ್ದಿತು. ಆದರೆ ಈಗ ತಂತಿಗೆ ೧೩ ಪೆನ್ಸ್ ಎಂದೂ, ಒಂದೊಂದು ಹೆಚ್ಚಿನ ಶಬ್ದಕ್ಕೆ ಅರ್ಧ ಪೆನ್ನಿಯನ್ನು ಹೆಚ್ಚಿಗೆ ಕೊಡಬೇಕೆಂದೂ ನಿರ್ಣಯಿಸಿರುವರು.

— ಥೇಮ್ಸ್ ನದಿಯಲ್ಲಿ ಸದ್ಯದಲ್ಲಿಯೇ ಒಂದು ದೊಡ್ಡ ನೆರೆ ಬರುವದೆಂದು ಊಹಿಸಿರುವರು. ನೆರೆಯನ್ನು ತಪ್ಪಿಸುವದಕ್ಕಾಗಿ ಉಪಾಯಗಳು ನಡೆಯುತ್ತಿವೆ.

— ಮೆಕ್ಸಿಕೊವಿನಲ್ಲಿ ಉಂಟಾದ ಭೂಕಂಪದಿಂದ ಬರೇ ಎರಡು ಜನರು ಮಾತ್ರ ಸತ್ತಿರುವರು.

— ಹೌಸ್ ಒಫ್ ಕೊಮನ್ಸಿನ ಒಬ್ಬ ಮೆಂಬರನಾಗಿದ್ದ ಸೆಮುವೇಲ ಕ್ಲೀನರೆಂಬವರು ಮೃತಪಟ್ಟರು.

— ಕಿಂಗ್ಸ್ಟನಿನ ಕ್ವೀನ್ಸ್ ಯುನಿವರ್ಸಿಟಿಯ ಮೂವರು ವಿದ್ಯಾರ್ಥಿಗಳು ಒಂದು ನಾಟ್ಯಕ್ಕೆ ಹೋದರೆಂದು ಅವರನ್ನು ಸಸ್ಪೆಂಡ್ ಮಾಡಿದರು. ಇದಕ್ಕಾಗಿ ಯುನಿವರ್ಸಿಟಿಯ ವಿದ್ಯಾರ್ಥಿಗಳು ತಾವು ಕ್ಲಾಸಿಗೆ ಬರಲಾರೆನೆಂದು ಬಲವಾದ ಮುಷ್ಕರವನ್ನು ಹಾಕಿದರು.

— ಚಾರ್ಲೆಮೆಗ್ನೆ ಎಂಬಲ್ಲಿದ್ದ ಒಂದು ಗೋಪುರವು ಕುಸಿದು ಬಿದ್ದಿತು. ಇದು ೧೧೦೦ ವರ್ಷಗಳ ಹಿಂದೆ ಕಟ್ಟಲ್ಪಟ್ಟಿತು. ಇದರಿಂದ ಇತರ ಎರಡು ಕಟ್ಟೋಣಗಳಿಗೂ ಪೆಟ್ಟಾಗಿ, ಮಾರ್ಗದಲ್ಲಿ ಚಲಾವಣೆಯು ನಿಂತುಹೋಯಿತು.

— ಯುನೈಟೆಡ್ ಸ್ಟೇಟ್ಸಿನ ಸೆನೇಟರನ ಮನೆಯಲ್ಲಿ ರಾತ್ರೆ ಎರಡು ಬೊಂಬುಗಳು ಒಡೆದು ಹೋಗಿ ಮನೆಗೆ ಬಹು ಜಖಂ ಉಂಟಾಯಿತು.

— ಮೆಕ್ಸಿಕೊವಿನಲ್ಲಿ ಆಲ್ಕೊ ಹಾಲನ್ನು ಉಪಯೋಗಿಸಬಾರದೆಂದು ಜನರಲ್ ಒಬ್ರೆಗೋಸರು ಅಪ್ಪಣೆ ಕೊಟ್ಟಿರುವರು.

— ಎಮ್‌ಸ್ಟರ್ಡೇಮಿನಲ್ಲಿ ಒಬ್ಬ ರಬ್ಬರ ಸಾಹುಕಾರನನ್ನು ಯಾರೋ ಗುಂಡು ಹೊಡೆದು ಕೊಂದಿರುವರು. ಅವನ ಪತ್ನಿಯ ತಲೆಗೆ ಗುಂಡು ಹೊಡೆದು ಗಾಯಗೊಳಿಸಿರುವರು.

— ಲೇಡಿ ಎಬೆಮ್ಮೆಲಿಗೆ ಕಾರ್ಟೋಮಿನ ವರೆಗೆ ಹಾರಲು ಪುನಃ ಅಪ್ಪಣೆಯು ದೊರಕಿರುತ್ತದೆ.

ಒಳದೇಶ ವರ್ತಮಾನ.

— ಶಿಮೊಗಾದಿನ ಎಸೂರ ಎಂಬ ಹಳ್ಳಿಯಲ್ಲಿ ಬೆಂಕಿಯ ಅನಾಹುತದಿಂದ ೪೦೦ ಮನೆಯುಗಳು ಸುಟ್ಟು ಹೋಗಿ, ಸುಮಾರು ೩೧ ಪ್ರಾಣಿಗಳು ನಾಶಹೊಂದಿದವು. ಹಳ್ಳಿಯಲ್ಲಿ ಒಟ್ಟಾರೆ ೨೦೦೦ ನಿವಾಸಿಕರಿದ್ದರು. ಅವರಿಂದ ಕಂದಾಯವನ್ನು ಈ ವರ್ಷ ವಸೂಲು ಮಾಡಬಾರದೆಂದು, ಸಹಾಯಾರ್ಥವಾಗಿ ಅವರಿಗೆ ಸಾಲಗಳನ್ನು ಕೊಡಬೇಕೆಂದೂ ಮಹಾರಾಜಾ ಸರಕಾರದವರು ನಿರ್ಣಯಿಸಿರುವರು.

— ಡಾಕ್ಟರ್ ರವೀಂದ್ರನಾಥ ಠಾಗೋರರು ಎಪ್ರಿಲ್ ತಿಂಗಳಲ್ಲಿ ಯೂರೋಪಿಗೆ ತೆರಳಿ, ಬೇಸಿಗೆ ಕಾಲದಲ್ಲಿ ದಕ್ಷಿಣ ಫ್ರಾನ್ಸಿನಲ್ಲಿ ಉಳಕೊಳ್ಳುವರು.

— ಕೊಯಮುತ್ತೂರಿನಲ್ಲಿ ಗೋಪಾಲಸ್ವಾಮಿ ಪಿಳ್ಳೆಯೆಂಬ ಯುವಕನೋರ್ವನು ಆತ್ಮಹತ್ಯವನ್ನು ಮಾಡಿಕೊಳ್ಳಲೆನಿಸಿ ಹೊಟ್ಟೆಯೊಳಗೆ ಕತ್ತಿಯನ್ನು ತಿವಿದನು. ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದುದರಿಂದ ಈಗ ಜೀವದಿಂದಿರುವನು.

— ತಿರುಪತಿಯನ್ನು ಸಂದರ್ಶಿಸುವ ಯಾತ್ರಿಕರಿಗಾಗಿ ಅಲ್ಲಿ ೧೦ ಕಡೆಗಳಲ್ಲಿ ನೀರನ್ನು ಸಂಗ್ರಹಿಸಿಡಬೇಕೆಂದು ಅಲ್ಲಿಯ ಮುನಿಸಿಪಾಲಿಟಿಯವರು ನಿರ್ಣಯಿಸಿರುವರು. ಅಲ್ಲಲ್ಲಿ ಬಾವಿಗಳನ್ನು ತೋಡುವದಕ್ಕಾಗಿ, ೬೦೦೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು.

— ವಿಯಯಾನದಿಂದ ಆಮಂತ್ರಣದಂತೆ ಮಹಾತ್ಮಾಜಿಯವರು ಹೋಗುವರೋ ಇಲ್ಲವೋ ಎಂಬುದು ಸರಿಯಾಗಿ ಗೊತ್ತಿಲ್ಲ. ಅವರ ಪ್ರಕೃತಿಯು ಈಗ ಸರಿಯಾಗಿದೆಯಾದರೂ, ಸ್ಥಳ ಬದಲಾವಣೆಯಾಗುವದುತ್ತಮವೆಂದು ಡಾ। ಅನ್ಸಾರಿಯವರು ಹೇಳಿರುವರು. ಅವರು ಹೊರಡುವದಾದರೆ ಎಪ್ರಿಲ್ ತಿಂಗಳ ಕಡೆಯ ವಾರದಲ್ಲಾಗಲಿ, ಮೇ ತಿಂಗಳ ಮೊದಲನೇ ವಾರದಲ್ಲಾಗಲೀ ಹೊರಡುವರು. ಅವರು ಯುರೋಪಿಗೆ ಹೋದರೆ, ತನ್ನ ಹಲವು ಮಿತ್ರರನ್ನು ಕಾಣುವ ಸಲುವಾಗಿ ಇಂಗ್ಲಾಂಡಿಗೂ ಹೋಗುವರು.

— ಉಪ್ಪಿನ ಸುಂಕವನ್ನು ಮಣಕ್ಕೆ ಎಂಟಾಣೆ ಮಾಡಬೇಕೆಂದು ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಸೇಟ್ ಗೋವಿಂದ ದಾಸರು ತಂದ ಠರಾವು ಬಿದ್ದುಹೋಯಿತು. ಪಾವಾಣೆಯ ಟಪ್ಪಾಲು ಕಾರ್ಡನ್ನು ಜ್ಯಾರಿಗೆ ತರಬೇಕೆಂಬ ಠರಾವು ಕೂಡ ಬಿದ್ದುಹೋಯಿತು.

— ಮಧುರೆಯಲ್ಲಿ ಭಯಂಕರವಾದ ಒಂದು ಬೆಂಕಿಯುಂಟಾಯಿತು. ಇದರಿಂದ ೬೦ ಕುಟುಂಬದವರು ನಿರ್ಗತಿಕರಾಗಿರುವರು. ಸುಮಾರು ೧೦,೦೦೦ ರೂಪಾಯಿಗಳು ನಷ್ಟವಾಗಿವೆ.

— ಮುಂಬಾಯಿಯಲ್ಲಿ ಸುಮಾರು ಒಂದು ಸಾವಿರ ಅಸ್ಪೃಶ್ಯರಿಗೆ ಯಜ್ಞೋಪವೀತವನ್ನು ಹಾಕಿ ಪುನೀತರನ್ನಾಗಿ ಮಾಡಿರುವರು. ಬ್ರಾಹ್ಮಣರನ್ನೂ, ಇವರನ್ನೂ, ಒಂದೇ ಸಾಲಿಗೆ ತರಬೇಕೆಂಬ ಉದ್ದೇಶದಿಂದ ಸಮತಸಮಾಜದವರು ಹೀಗೆ ಮಾಡಿದರು. ಬ್ರಾಹ್ಮಣ ಹುಡುಗರಿಗೆ ಉಪನಯದವನ್ನು ಮಾಡುವಾಗ ಇವರು ಯಾವ ಕರ್ಮಗಳನ್ನು ಅನುಸರಿಸುತ್ತಿದ್ದರೋ, ಅದೇ ಕ್ರಮಗಳನ್ನು ಅವಲಂಬಿಸಿ ಇವರನ್ನು ಪುನೀತರನ್ನಾಗಿ ಮಾಡಿದರು.

— ಪೆರಿಯಮಟ ಹೊಟೆಲಿನಲ್ಲಿ ಮಹಮ್ಮದ್ ಬೇಗನೆಂಬವನು ಬೆಳಗ್ಗೆ ಇಡ್ಳಿಗಳನ್ನು ತಿನ್ನುವಾಗ ಒಂದರಲ್ಲಿ ಒಂದು ಚೇಳಿನ ಮೃತದೇಹವಿದ್ದಿತು. ಇದನ್ನು ಕಂಡೊಡನೆ ಆತನು ತಿಂದುದನ್ನೆಲ್ಲಾ ವಾಂತಿ ಮಾಡಿದನು. ಆತನನ್ನು ಆಸ್ಪತ್ರೆಗೆ ಕೊಂಡೊಯ್ದು ಉಳಿದ ಇಡ್ಳಿಗಳೆಲ್ಲವನ್ನು ಬಿಸಾಡಿದರು.

— ತಿನ್ನವೆಲ್ಲಿಯ ಡಾಕ್ಟರ್ ಟಿ. ಎನ್. ಗೋವಿಂದಯ್ಯರರು ಮದ್ದಿನ ಬಾಬತು ರೂಪಾಯಿ ೧೬,೨೮೦ ತನಗೆ ಬರಬೇಕೆಂದು ಉಧಯ್ಯಪುರದ ರಾಜರ ಮೇಲೆ ಹಾಡಿದ ಮೊಕದ್ದಮೆಯಲ್ಲಿ ರಾಜರು ಸಮಯವನ್ನು ಕೊಡಬೇಕೆಂದು ಉದಾಹರಣೆ ಕೊಟ್ಟಿದ್ದರು. ಆದರೆ ಸಬ್ ಜಡ್ಜರು ಕೂಡಲೇ ಡಿಕ್ರಿಯನ್ನು ಮಾಡಿದರು.

— ಬನಾರಸಿನಲ್ಲಿ ಅಸ್ಪೃಶ್ಯರನ್ನು ಉದ್ಧರಿಸುವದಕ್ಕಾಗಿ ಸಭೆಗಳು ನಡೆಯುತ್ತಿವೆ.

— ಸ್ಯಾಮನ್ ಕಮಿಶನವರು ಹಿಂದುಸ್ಥಾನದಲ್ಲಿನ ತಮ್ಮ ಸಂಚಾರವನ್ನು ಮುಗಿಸಿ ಪುನಃ ಡಿಲ್ಲಿಗೆ ಬಂದಿರುವರು.

— ಒಬ್ಬ ಹೆಂಗಸಿನ ಕುರಿತು ಜಗಳವಾಗಿ ಒಬ್ಬ ಮಾಪಿಳ್ಳಾ ಯುವಕನು ಕಣ್ಣಾನೂರಿನ ಡಿಸ್ಟ್ರಿಕ್ಟ ರಿಜಿಸ್ಟ್ರಾರರ ಆಫೀಸಿನ ಪೇದೆಯಾದ ಫ್ರೆನ್ಸಿಸನನ್ನು ಕೊಂದಿರುವನು. ಮಾಪಿಳ್ಳೆಯನ್ನು ಪೋಲೀಸರು ಹಿಡಿದು ಕೈದುಮಾಡಿ ತಮ್ಮ ಸ್ವಾಧೀನತೆಯಲ್ಲಿಟ್ಟುಕೊಂಡಿರುವರು.

— ವ್ಯಾಸರಾಯ ಧೊರೆಗಳ ಪತ್ನಿಯವರಾದ ಲೇಡಿ ಇರ್ವಿನ್ ಸಾಹೇಬರು 'ರಣಪುರ' ಹಡಗದಲ್ಲಿ ಕುಳಿತು ವಿಲಾಯತಿಗೆ ತೆರಳಿರುವರು.

— ಸೇಲಮಿನ ಹೊಸ ಕಲೆಕ್ಟರರು ಬಂದ ದಿನವೇ, ಕ್ಲಾರ್ಕರು ಆಫೀಸಿನಲ್ಲಿ ಸಮಯದ ಅವಧಿಯಾದ ಮೇಲೆ ಕೆಲಸ ಮಾಡಬಾರದೆಂದೂ, ರಜಾ ದಿನಗಳಲ್ಲಿ ಆಫೀಸಿಗೆ ಬರಬಾರದೆಂದೂ, ಆಫೀಸಿನ ಪತ್ರಗಳನ್ನು ಮನೆಗೆ ಒಯ್ಯಬಾರದೆಂದೂ ಒಂದು ಹುಕುಮನ್ನು ಕೊಟ್ಟಿರುವರು. ಇದರಿಂದ ರಾತ್ರೆ ಹಗಲೆನ್ನದೆ ಕೆಲಸ ಮಾಡಲು ಪತ್ರಾಯದಿಂದ ಕುಳ್ಳಿರಿಸಲ್ಪಡುತ್ತಿದ್ದ ಗುಮಾಸ್ತರಿಗೆ ಸ್ವಲ್ಪ ಸುಖವಾದಂತಾಯಿತು.

— ಲಾಲಾಜಿಯವರನ್ನು ಸನ್ಮಾನಿಸುವದಕ್ಕಾಗಿ ಲಾಹೋರಿನಲ್ಲಿ ಅವರ ಹೆಸರಿನಲ್ಲಿ ಒಂದು ಮಂದಿರವನ್ನು ಕಟ್ಟಿವರು. ಇದರ ವಾಸ್ತು ಕಲ್ಲನ್ನು ಪಂಡಿತ ಮಾಲವೀಯರವರು ಹಾಕಿದರು. ಈ ಮಂದಿರದಲ್ಲಿ ಒಂದು ವಾಚನಾಲಯವನ್ನು ಪ್ರಾರಂಭಿಸುವರು.

— ಪಂಡಿತ ಮೋತಿಲಾಲ ನೆಹರುರವರು ಮಹಾತ್ಮಾಜಿಯವರನ್ನು ಸಂದರ್ಶಿಸಿದರು. ಮಹಾತ್ಮಾಜಿಯವರ ದೇಹಸ್ಥಿತಿಯು ಒಳ್ಳೆ ರೀತಿಯಲ್ಲಿದೆಯೆಂದೂ, ವಿಲಾಯತಿಗೆ ಹೋಗುವ ಪ್ರಯಾಣವನ್ನು ಅವರು ನಿಶ್ಚಯಿಸಿಲ್ಲವೆಂದೂ ಪಂಡಿತರು ಹೇಳುತ್ತಿರುವರು.

— ಅಲಹಾಬಾದಿನ ಹೆಂಗಸರ ಆಸ್ಪತ್ರೆಯ ಸುಪರಿಂಟೆಂಡೆಂಟಳಾದ ಮಿಸ್. ಕಮಿಸರಿಯೋಟಳ ಮನೆಗೆ ಕಳ್ಳರು ಹೊಕ್ಕು, ಸುಮಾರು ೧೦,೦೦೦ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು, ನಗದಿ ಹಣವನ್ನು, ಕದ್ದುಕೊಂಡಿರುವರು.

— ಬನಾರಸಿನ ಹಿಂದೂ ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಗಂಗಾನದಿಯಲ್ಲಿ ಮುಳುಗಿ ಸತ್ತರು. ಅವರ ಶವಸಂಸ್ಕಾರವಾಗುವಾಗ ವಿದ್ಯಾಲಯದ ಬಹು ಮಂದಿ ವಿದ್ಯಾರ್ಥಿಗಳು ಬಂದಿದ್ದರು.

— ಕತ್ರಾವಿರ್ರಾ ಎಂಬಲ್ಲಿ ರೈಲುವೇ ಮಾರ್ಗದ ಮೇಲೆ ತಲೆಯಿಲ್ಲದ ಒಬ್ಬ ಪುರುಷನ ಮೃತದೇಹವಿದ್ದಿತು.

— ಜೂನ್ ೪ನೇ ತಾರೀಕಿನ ದಿನ ನಮ್ಮ ಸಾರ್ವಭೌಮರ ಜನ್ಮದಿನವಾದುದರಿಂದ ಆ ದಿನ ರಜೆ ಇರುತ್ತದೆ.

— ಲಂಡನಿನಲ್ಲಿ ಹೊಸದೊಂದು ಮಸೀದಿಯನ್ನು ಕಟ್ಟಿಸುವ ಸಲುವಾಗಿ ರೂಪಾಯಿ ಒಂದು ಲಕ್ಷವನ್ನು ಕೂಡಿಸುವದಕ್ಕಾಗಿ ಹಿಂದೂಸ್ಥಾನದಲ್ಲಿ ಸಂಚಾರವನ್ನು ಮಾಡುತ್ತಿದ್ದ, ಮಹಮಡನ್ ಪಿಯರರಾದ ಲೋರ್ಡ್ ಹೆಡ್‌ಲೆಯವರು ಇಷ್ಟರ ವರೆಗೆ ೬೦,೦೦೦ ರೂಪಾಯಿಗಳನ್ನು ಸಂಗ್ರಹಿಸಿರುವರು.

— ಯುನ್ಯಾಟೆಡ್ ಪ್ರೊವಿನ್ಸಸಿನಲ್ಲಿ ಪ್ಲೇಗ ರೋಗದಿಂದ ೪೬೩೦ ಮರಣಗಳಾದವು.

— ನಾಗಪುರದ ಹಿಂದೂ ಮುಸಲ್ಮಾನ ಕಲಹದ ವಿಚಾರಣೆಯಾಗಿ ನಾಲ್ಕು ಜನ ಹಿಂದೂಗಳಿಗೆ ಫಾಶಿ ಶಿಕ್ಷೆಯನ್ನು ವಿಧಿಸಿದ್ದರು. ಅಪೀಲಿನಲ್ಲಿ ಟಾಪು ಶಿಕ್ಷೆಯನ್ನು ವಿಧಿಸಿದರು.

— ಮದರಾಸಿನ ಲೋ ಮೆಂಬರರಾಗಿ ಮಿ. ಕೃಷ್ಣನ್ ನಾಯರರು ನೇಮಕಹೊಂದಿರುವರು.

— ಸರ್ ಜೋನ್ ಸ್ಯಾಮನರು ೩೦ನೇ ತಾರೀಕಿನ ದಿನ ಡಿಲ್ಲಿಯಿಂದ ಮುಂಬಾಯಿಗೆ ತೆರಳಿ, ೩೧ನೇ ತಾರೀಕಿನ ದಿನ ಹಡಗ ಹತ್ತಿ ಲಂಡನಿಗೆ ಹೋಗುವರು.

— ಸರ್ ಜೋನ್ ಸ್ಯಾಮನರು ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷರಾದ ಮಿ. ಜೆ ಪಟೇಲರ ಮನೆಗೆ ಹೋಗಿದ್ದರು. ಅಲ್ಲಿ ಅವರಿಗೆ ಟೀಪಾರ್ಟಿಯನ್ನು ಪಟೇಲರು ಕೊಟ್ಟರು.

— ಮದರಾಸಿನ ಗವರ್ನರರು ಡಿಲ್ಲಿಗೆ ತಲಪಿರುವರು.

ಮಹಾರಾಷ್ಟ್ರ ಪರಿಷತ್ತಿನ ಆರನೇ ಅಧಿವೇಶನದ ಸ್ವಾಗತ ಮಂಡಳದವರ ಸಭೆಯು ಭೋಪಟ್‌ಕರರ ಅಧ್ಯಕ್ಷತೆಯಲ್ಲಿ, ಪೂನೆಯ ಸಾರ್ವಜನಿಕ ಸಭಾ ಮಂದಿರದಲ್ಲಿ ಜರಗಿತು. ಪರಿಷತ್ತು ಮೇ ತಿಂಗಳ ೨ನೇ ಮತ್ತು ಮೂರನೇ ತಾರೀಕುಗಳಲ್ಲಿ ನಡೆಯಬೇಕೆಂದಾಯಿತು.

— ಸ್ವಸ್ತಿ ಶ್ರೀ ಪಾಯಸಾಗರ ವರ್ಣಿಜಿಯವರು ಕೊಲ್ಹಾಪುರದಲ್ಲಿ ಕಳೆದವಾರ ದಿವಂಗತರಾದರು! ಇವರ ದುಃಖದಿಂದ ಇಡೀ ಜೈನ ಸಮಾಜವೇ ಸಂತಪ್ತವಾಗಿದೆ. ಇವರ ಆತ್ಮಕ್ಕೆ ಸಾಯುಜ್ಯಸಾಮ್ರಾಜ್ಯವು ದೊರಕಲಿ.

ದಕ್ಷಿಣ ಕನ್ನಡ.

ಮಂಗಳೂರು:— ಎಪ್ರಿಲ್ ತಿಂಗಳ ತಾ. ೩ನೇ ಮಂಗಳವಾರ ಸಾಯಂಕಾಲ ಐದು ಘಂಟೆಗೆ ಉರುವ ಮಾರಿಗುಡಿ ಬಳಿ ಮೈದಾನಿನಲ್ಲಿ ಮಾರಿಪೂಜೆ ಜಾತ್ರೆ ಸಮಯ ಶ್ರೀಯುತ ಮೋಹನಪ್ಪ ತಿಂಗಳಾಯರು "ಪಶುಬಲಿ ನಿಷೇಧದ"ಪರವಾಗಿ ಭಾಷಣ ಮಾಡುವರು. ಶ್ರೀ. ಜ್ಞಾನೋದಯ ಸಮಾಜದ ವೈದಿಕ ಭಜನೆ ಮಂಡಲಿಯವರು "ಹರಿಭಕ್ತಿ"ಪರವಾದ ಕೀರ್ತನೆ ಭಜನೆಗಳನ್ನು ಹಾಡುವರು. ಸರ್ವರಿಗೂ ಸುಸ್ವಾಗತವಿದೆ.

ದ್ರಾವಿಡ ಬ್ರಾಹ್ಮಣ ಸಂಘದ ಸ್ಥಾಪಕರಾದ ರಾ. ಕಲ್ಮಾಡಿ ಲಕ್ಷ್ಮೀನಾರಾಯಣರಾವ್ ಮತ್ತು ಪಾಂಗಾಳ ಸುಬ್ಬರಾವ್ ಇವರ ಎರಡು ಪಟಗಳನ್ನು ವಿದ್ಯಾರ್ಥಿ ಭವನದ ಪರಿಷನ್ಮಂದಿರದಲ್ಲಿ, ಕಳೆದ ಆದಿತ್ಯವಾರ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರಾದ ರಾ. ಬಿ. ಮಹಾಬಲ ಹೆಗ್ಗಡೆಯವರು ಅನಾವರಣಗೈದರು. ಹೊನರೇಬಲ್ ಡಾಕ್ಟರ್ ಯು. ರಾಮರಾಯರು ಪಟಗಳನ್ನು ಸಂಘದವರಿಗೆ ಕೊಟ್ಟು ಈ ಜಿಲ್ಲೆಯಲ್ಲಿ ಅವರಿಬ್ಬರು ಮಾಡಿದ ಮಹತ್ವದ ಕೆಲಸಗಳ ಕುರಿತು ಭಾಷಣವಿತ್ತರು. ರಾ. ಹೆಗ್ಗಡೆಯವರೂ ಕೂಡ ಅನಾವರಣವನ್ನು ಮಾಡಿದ ಮೇಲೆ ಒಂದು ಭಾಷಣವನ್ನು ಮಾಡಿದರು.

ರಜೆಯ ಮೇಲೆ ಹೋಗಿದ್ದ ರಾ. ಎಚ್. ಶಂಕರರಾಯರು, ಪುನಃ ಟ್ರೆಜರಿ ಡಿಪ್ಯೂಟಿ ಕಲೆಕ್ಟರರಾಗಿ ನೇಮಕಹೊಂದಿರುವರು.

ಮಂಗಳೂರಿನಲ್ಲಿ, ಶ್ರೀ. ವಿ. ಆರ್. ಗ್ಯಾಕೊಂಡೆಯವರು ಸದ್ಯದಲ್ಲಿಯೇ, ದಿ ಹಿಂದುಸ್ಥಾನ ಸಿನೆಮಾ, ಲಿಮಿಟೆಡ್, ಇದರ ಬಳಿಯಲ್ಲಿ 'ದಿ ಶಾಂತಿ ಕ್ಯಾಸ್ ಪೆಕ್ಟರಿ' ಎಂಬೊಂದು ಕ್ಯಾಸ್ ಫೆಕ್ಟರಿಯನ್ನು ತೆರೆಯುವರೆಂದು ತಿಳಿಯುತ್ತೇವೆ.

ತಾರೀಕು ೨೪—೩—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೬ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೨, ಅತಿಸಾರದಿಂದ ೧, ಶ್ವಾಸಕೋಶ ರೋಗದಿಂದ ೧ ಇತರ ಎಲ್ಲಾ ಕಾರಣಗಳಿಂದ ೧೨. ಜನನ ಸಂಖ್ಯೆಯು ಒಟ್ಟು ೩೮

ಇಲ್ಲಿಯ ಕೊಡಿಯಾಲ್‌ಬೈಲ್ ಪ್ರೆಸ್ಸಿನ ಡ್ಯಾರೆಕ್ಟರರಾಗಿದ್ದ ರೆವರೆಂಡ್ ಫಾದರ್ ವಿ. ಆರ್. ಫೆರ್ನಾಂಡಿಸರವರು ಇಲ್ಲಿಯ ವಿಕರ ಜನರಲ (General Vicar)ರಾಗಿ ನೇಮಿಸಲ್ಪಟ್ಟಿರುವರು. ಮತ್ತು ರೆವರೆಂಡ್ ಫಾದರ್ ಇ. ಎಲ್. ಮಥಾಯಸರು, ಬಿಶೋಪರ ಸೆಕ್ರೆಟರಿಯಾಗಿಯೂ ಫಾದರ್ ಚಾರ್ಲ್ಸ್ ಲೋಬೊರವರು ಸೈಂಟ್ ಮೊನಿಕರ 'ಸೊಡಾಲಿಟಿಯ' ಡೈರೆಕ್ಟರರಾಗಿಯೂ ನೇಮಕಹೊಂದಿರುವರು.

ಮುನಿಯಾಲು:— ತಾ. ೧೨—೩—'೨೮ರಿಂದ ತಾರೀಕು ೧೪—೩—'೨೮ರ ವರೆಗೆ ಪ್ರಚಾರಕರಾದ ಶ್ರೀಯುತ ಡಿ. ಆರ್. ಮುದೇಶ್ವರರವರು ಮುನಿಯಾಲು ಮೊಕ್ಕಾಮಿನಲ್ಲಿ ಸಹಕಾರದ ವಿಷಯ ಮತ್ತು ತತ್ವಬೋಧನೆಯ ಟ್ರೈನಿಂಗ್ ಕ್ಲಾಸುಗಳನ್ನೂ, ಮ್ಯಾಜಿಕ್ ಲಾಂತ್ರದ ಮೂಲಕ ಒಂದು ಚಿಕ್ಕ ಕಥೆಯ ದೇಖಾವೆಯನ್ನೂ ಜರಗಿಸಿದರು. ಇದಕ್ಕೆ ಸಮ್ಬಂಧಪಟ್ಟ ಸಹಕಾರ ಸಂಘಗಳ ಪಂಚಾಯತರೂ ಮೆಂಬರರೂ ಹಾಜರಿದ್ದರು. ಆದರೆ ಸ್ಥಳೀಕ ಸಂಘವಾದ ವರಂಗ ಸಹಕಾರದ ಆಡಳಿತೆ ಮೆಂಬರರು ಏನೂ ಉತ್ತೇಜನವನ್ನು ತೆಗೆದುಕೊಳ್ಳದೆ ಗೈರ್‌ಹಾಜರಿಯಾಗಲು ಕಾರಣವೇನು? ಇದೇನು ಅಸಹಕಾರದ ಚಳವಳವೋ?

ಅಜೆಕಾರು:— ತಾ. ೧೬—೩—'೨೮ರಲ್ಲು ನಡೆದ ಕಾರ್ಕಳ ತಾಲೂಕು ಬೋರ್ಡು ಚುನಾವಣೆಯಲ್ಲಿ ಅಜೆಕಾರು ಸರ್ಕಲಿನ ಪರವಾಗಿ ಎಂಟು ಜನ ಉಮೇದ್ವಾರರ ಪೈಕಿ ಶ್ರೀಗಳಾದ ಹೆಬ್ರಿ ಭುಜಂಗ ಬಲ್ಲಾಳ ತಿಂಗಳೆ ವೆಂಕಪ್ಪ ಹೆಗ್ಡೆ ಮತ್ತು ಜಾರ್ಕಳ ನಾಗಣ್ಣ ಹೆಗ್ಡೆಯವರು ಚುನಾಯಿಸಲ್ಪಟ್ಟಿರುವರು. ಈ ಸರ್ತಿಯ ಚುನಾವಣೆಯ ಗೊಂದಲವೂ ಪೋಲಾಟವೂ ಅತಿರೇಕವಾದುದರಿಂದ ಭಗೀರಥ ಪ್ರಯತ್ನವೂ ಶಕುನಿ ಕುತಂತ್ರವೂ ಚಾಣಕ್ಯನ ತಂತ್ರವೂ ನಡೆಯಿತು. ಅಂತೂ ಚುನಾಯಿಸಲ್ಪಟ್ಟ ಮೆಂಬರರು ತಮ್ಮ ಜವಾಬ್ದಾರಿಯನ್ನು ಪೂರ್ಣವಾಗಿ ತಿಳಿದು ಸಾರ್ವಜನೋಪಕಾರಿಯಾದ ಕೆಲಸಗಳಲ್ಲಿ ಆಸಕ್ತಿಯನ್ನೂ ಶ್ರದ್ಧೆಯನ್ನೂ ತೋರಿಸಿ ದೇವರ ಭಕ್ತಿಗೂ ಜನರ ಪ್ರೀತಿವಿಶ್ವಾಸಕ್ಕೂ ಪಾತ್ರರಾಗುವರೆಂದು ತುಂಬಾ ಭರವಸೆ ಇದೆ.

ಇದೇ ತಾ. ೨೨—೩—'೨೮ರಲ್ಲು ಉಡ್ಪಿ ಡಿವಿಜನಿನ ಟಪ್ಪಾಲು ಮತ್ತು ಟೆಲಿಗ್ರಾಫ್ ಇನ್ಸ್‌ಪೆಕ್ಟರರು ಅಜೆಕಾರು ಅಂಚೆಕಟ್ಟೆಯ ಸಂದರ್ಶನೆಯನ್ನು ಮಾಡಿರುವರು.

ಪೊಳಲಿ:— ಅಖಿಲ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಳ ಮಹೋತ್ಸವಕ್ಕೆ ನಿಯಮದಂತೆ ಪ್ರತಿವರ್ಷ ಧ್ವಜಸ್ಥಂಬಕ್ಕೆ ಏರಿಸುವ ಗರುಡಪಠವು ಇದೇ ತಾ. ೨೭ನೇ ಮಂಗಳವಾರ ಮಧ್ಯಾಹ್ನ ೧೨ ಘಂಟೆ ಸಮಯಕ್ಕೆ ಅದನ್ನು ಏರಿಸಿದ್ದು ಹಗ್ಗ ಹರಿದು ಭೂಪತನವಾಗಿ ಹೋಯಿತು. ಒಡನೆ ಅದಕ್ಕೆ ಆಗಬೇಕಾದ ವಿಧಿಪ್ರಕಾರ ಪರಿಹಾರಗಳು ಮಾಡಿ ತಿರಿಗಿ ಏರಿಸುವದಾಯಿತು. ಆದರೆ ಈ ವರೆಗೆ ಇಂತಹ ಅನರ್ಥಗಳು ಇಲ್ಲಿ ಒದಗಲಿಲ್ಲವೆಂದೂ ಇದರಿಂದ ರಾಷ್ಟ್ರಕ್ಕೂ ರಾಜರಿಗೂ ಅರಿಷ್ಟಸೂಚನೆಯೆಂದು ಬಲ್ಲ ಪ್ರಾಜ್ಞರು ಹೇಳುತಿದ್ದಾರೆ. ಇದರಿಂದ ಮುಂದೆ ಬರತಕ್ಕ ಸಕಲ ಕಷ್ಟಗಳನ್ನು ಶ್ರೀ ಪರಮಾತ್ಮನು ಪರಿಹರಿಸಿ ಪರಿಪಾಲಿಸಲೆಂದು ಪ್ರಾರ್ಥಿಸಿಕೊಳ್ಳುವದಾಗುತ್ತದೆ.

ಕುಂಭಾಶಿ:— ಈ ಗ್ರಾಮಕ್ಕೆ ಸೇರಿದ ಕೊರವಡಿಯಿಂದ ರಸ್ತೆಗೆ ಬರಲಿಕ್ಕೆ ಮಾರ್ಗವಿಲ್ಲದೆ ಜನರಿಗೆ ಬಹಳ ಕಷ್ಟ ಉಂಟಾದ ಕಾರಣ ವಗೈರೆ ನಮೂದಿಸಿ ಮಾನ್ಯ ಕುಂದಾಪುರ ತಾಲೂಕು ಬೋರ್ಡಿನವರಿಗೆ ಕುಂಬಾಶಿ ರಸ್ತೆಯಿಂದ ೧ ಮೈಲು ಪಶ್ಚಿಮಕ್ಕೆ ರಸ್ತೆ ಮಾಡಿಸಿಕೊಡಬೇಕಾಗಿ ೧ ಅರ್ಜಿ ಮಾಡಿದ್ದಾರೆ. ಕೊರವಡಿ ಜನರಿಗೆ ಉಂಟಾದ ಕಷ್ಟನಷ್ಟ ಅಷ್ಟಿಷ್ಟಲ್ಲ. ತಾಲೂಕು ಬೋರ್ಡಿನವರು ಆದಷ್ಟು ಬೇಗನೆ ರಸ್ತೆ ಮಾಡಿಸಿಕೊಟ್ಟಾರಾಗಿ ತಿಳಿಯುತ್ತೇವೆ. ಹೆಚ್ಚು ಹಣ ಬೇಡ. ಕುಂಭಾಶಿಯಲ್ಲಿ ೧ ಬ್ರಾಂಚ್ ಪೋಸ್ಟ್ ಆಫೀಸು ಆಗುತ್ತದೆ ಎಂತ ಕಳೆದ ವರ್ಷ ಬಹಳ ಗಾಜಿ ಇದ್ದಿತು. ಆದರೆ ಈ ವರೆಗೂ ಅದರ ಸಮಾಚಾರವೇ ಇಲ್ಲ. ಗ್ರಾಮಸ್ಥರ ಪುಣ್ಯ. ಯಾರೇನು ಮಾಡಲಿ. ಇನ್ನಾದರೂ ದಯಾಳು ಟಪ್ಪಾಲ್ ಇಲಾಖೆಯವರು ಕೂಡಲೆ ಒಂದು ಬ್ರಾಂಚ್ ಪೋಸ್ಟ್ ಆಫೀಸನ್ನು ತೆರೆಯಬೇಕಾಗಿಯದೆ.

ಕಾರ್ಕಳ:— ಈ ತಾಲೂಕು ಬೋರ್ಡು ಚುನಾವಣೆಯ ಫಲಿತಾಂಶದ ಪಟ್ಟಿ — ವೇಣೂರು ಸರ್ಕಲಿಗೆ — ವಿ. ನಾರಾಯಣ ನ್ಯಾಕ ೩೦೮, ಕೆ. ಸದಾಶಿವ ಭಟ್ಟ ೨೮೮, ಇಧ್ಯ ವಾಸುದೇವಯ್ಯ ೨೪೮, ಪದ್ಮರಾಜ ಬಲ್ಲಾಳ ೧೩೪, ಎಮ್. ಧರ್ಮಸಾಮ್ರಾಜ್ಯ ೯೧, ಬಾಬುರಾಯ ಜ್ಯೋಸ ೫೬.

ಅಜೆಕಾರು ಸರ್ಕಲು — ಭುಜಂಗ ಬಲ್ಲಾಳ ೪೪೯. ತಿಂಗಳೆ ವೆಂಕಪ್ಪ ಹೆಗ್ಗಡೆ ೩೬೮, ಜಾರ್ಕಳ ನಾಗಣ್ಣ ಹೆಗ್ಗಡೆ ೫೯೨, ಕವಡೂರು ಶ್ರೀನಿವಾಸ ಹೆಗ್ಗಡೆ ೨೮೯, ಕಾರ್ಕಳ ಗಣಪತಿ ಹೆಗ್ಗಡೆ ೧೭೬, ಪಡುಕೊಡೊರು ಪಟೇಲ್ ಮುತ್ತಯ ಹೆಗ್ಗಡೆ ೧೪೬, ರೆವರೆಂಡ್ ಪಾದರ್ ಡಿ'ಸೋಜ ಕಾರ್ಕಳ ಇಗರ್ಜಿ ಗುರುಗಳು ೧೧೬, ಬಾಬುರಾಯ ಜ್ಯೋಸ ೩.

ಮೂಡುಬಿದ್ರೆ ಸರ್ಕಲು — ಕಡಂದಲೆ ಗುತ್ತು ದೇಜು ಸೆಟ್ಟಿ ೩೩೫, ಮರ್ಕದ ಗುತ್ತು ರಾಮಣ್ಣ ಸೆಟ್ಟಿ ೩೧೪, ಮೂಡಬಿದ್ರೆ ಅರಮನೆ ಧರ್ಮಸಾಮ್ರಾಜ್ಯ ೨೯೭, ಕೆದಿಂಜೆ ತಿಮಪ್ಪ ಹೆಗ್ಗಡೆ ೨೩೫, ಶಕ್ತಿ ಎಡಿಟರ್ ಗೋವರ್ಧನರಾವ್ ೧೬೩, ಅನಂತ ಧರ್ಮಪಾಲ ಜೈನಿ ೧೫೦, ಹೊಸಬೆಟ್ಟು ಇಗರ್ಜಿ ಗುರುಗಳು ೧.

ಕಾರ್ಕಳ ಸರ್ಕಲು — ಕಪ್ಪೆಟ್ಟು ಶಿವಪ್ಪ ಹೆಗ್ಗಡೆ ೫೭೧, ಎಸ್. ನಂದ್ಯಪ್ಪ ಸೆಟ್ಟಿ ವಕೀಲ್ ಕಾರ್ಕಳ ೪೦೭, ನಿಟ್ಟೆ ಗುತ್ತು ಮಂಜಪ್ಪ ಅಧ್ಯಂತಾಯ ೩೮೪, ಕೆ. ಪದ್ಮನಾಭ ಕಾಮತ್ ವಕೀಲ್ ಕಾರ್ಕಳ ೩೬೫, ಕೆ. ಲಕ್ಷ್ಮಣ ಕುಡುವ ೩೦೫, ಸೀತಾರಾಮಭಟ್ಟ ದುರ್ಗ ೨೦೧, ರೆವರೆಂಡ್ ಫಾದರ್ ಡಿ. ಸೋಜ ಕಾರ್ಕಳ ಇಗರ್ಜಿ ಗುರುಗಳು ೧೨೯ ಕೆ. ರಾಮಯ್ಯ ಹೆಗ್ಗಡೆ ವಕೀಲ್ ಕಾರ್ಕಳ ೯೪, ಪ್ರತಿ ಒಂದು ಸರ್ಕಲಿನಿಂದ ಮೂರು ಮೂರು ಜನ ಮೆಂಬರರನ್ನು ಆರಿಸೋಣಾಗಿಯದೆ.

ಸೋಮೇಶ್ವರ:— ಇಲ್ಲಿಯ ಶ್ರೀ ಸೋಮನಾಥ ದೇವಸ್ಥಾನದಲ್ಲಿ ವರ್ಷಾವಧಿ ಮಹೋತ್ಸವದ ಧ್ವಜಾರೋಹಣವು ತಾ. ೩—೪—'೨೮ನೇ ಮಂಗಳವಾರ ಆಗಿ ತಾರೀಕು ೭—೪—'೨೮ನೇ ಶನಿವಾರ ದಿವಸ ರಾತ್ರಿಯಲ್ಲಿ ಜಲಕ ಯಾನೆ ಅವಭೃತಸ್ನಾನವೂ ಅಲ್ಲದೆ ಇದೇ ದಿವಸ ಶ್ರೀ ಸೋಮನಾಥ ದೇವರ ಭೇಟಿಗೆ ಅದ್ಯ ಶ್ರೀ ಭಗವತಿ ಅಮ್ಮನವರು ಭಂಡಾರ ಸಮೇತ ಹೋಗುವದು ಶ್ರೀ ಸೋಮನಾಥ ದೇವರ ಭೇಟಿ ಪಡಮ ಶ್ರೀ ಭಗವತಿ ಅಮ್ಮನವರು ಬಂದು ಮಾರಣೆ ಆದಿತ್ಯವಾರ ಪ್ರಾತಃಕಾಲ ಗಂಟೆ ೪ರಿಂದ ಬಲಿ ಸುರು ಆಗಿ ಬೆಳಿಗ್ಗೆ ಗಂಟೆ ೭ಗೆ ಕೆಂಡಸೇವೆ ಆಗುತ್ತದೆಂಬನ್ನನ್ನು ಸರ್ವಜನರಿಗೂ ಈ ಮೂಲಕ ತಿಳಿಸೋಣಾಗಿಯದೆ.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಜಡ್ಜರ ಕೋರ್ಟಿನಲ್ಲಿ.

O. P. 44/1928.

ರಾಜಮ್ಮ—ಗುರುರಾಯ ಭಟ್ಟರ ವಿಧವೆ—ಉಡ್ಪಿ ತಾಲೂಕು ಉದ್ಯಾವರ ಗ್ರಾಮದಲ್ಲಿರುವವಳು—ಅರ್ಜಿದಾರ.

ಉಡ್ಪಿ ತಾಲೂಕು ಉದ್ಯಾವರ ಗ್ರಾಮದ ಮೃತಪಟ್ಟ ಗುರುರಾಯ ಭಟ್ಟರ ಮೈನರ ಮಕ್ಕಳು ಅಪ್ಪು ಯಾನೆ ಶ್ರೀನಿವಾಸ 1 ವ ಅಪ್ಪಾಜಿ 1 ಕೂಡಾ 2 ಜನರ ದೇಹದ, ವ, ಆಸ್ತಿಯ ಗಾರ್ಡಿಯನಳಾಗಿ ತನ್ನನ್ನು ನೇಮಿಸಬೇಕಾಗಿ ಮೇಲ್ಕಂಡ ಅರ್ಜಿದಾರಳು ಅರ್ಜಿ ಕೊಟ್ಟಿರುತ್ತಾಳೆ. ಸದರಿ ಅರ್ಜಿಯು ತಾ. 16—4—'28ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಸಮ್ಮಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗಳೂರು, ತಾ. 29-3-28.

K. Gopal Rao,
B. A. B. L. High Court Vakil,
Vakil for Petitioner

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನಗಳ ಅನುಕೂಲಕ್ಕಾಗಿ [illegible] ಕಡೂರು (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, [illegible] ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, [illegible] ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ [illegible] ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ [illegible] ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ [illegible] ಏರ್ಪಡಿಸಿರುತ್ತೆ.

ಮೋಟರ ಬಸ್ಸುಗಳು [illegible]

(2) ಕಡೂರಿನಿಂದ ಬೆಳಿಗ್ಗೆ [illegible] ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು [illegible] ಮೂಡಿಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ [illegible] ಬೆಳ್ತಂಗಡಿಗೆ ಎವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೂ [illegible] ಮಂಜೇಶ್ವರ, ಕಾಸರಗೋಡು, ಮಲಬಾರು, [illegible] ಸೇರಬಹುದು.

(3) [illegible] ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು [illegible] ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ [illegible] 2-30ಕ್ಕೆ, ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಿಗೆರೆಗೂ [illegible] ಚಿಕ್ಕಮಗಳೂರಲ್ಲಿ [illegible] ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಹೊರಟು 7-30ಕ್ಕೆ [illegible] ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ [illegible] ಪಂಡ್ರಾಪೂರ್, ಗೋವಾ, [illegible] ಏರ್ಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ [illegible] ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ [illegible] ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ [illegible] ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ [illegible] ಬರೆದು ಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, [illegible] ಕೆ. [illegible] ಸೆಟ್ಟಿ,

ಪ್ರೊಪ್ರೈಟರ್ಸ್.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರು ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿ ಕಂಬಳ ಮಾರ್ಗವಾಗಿಯೂ ಎಡಬಲ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು [illegible] ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾ ವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢಕರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು.

ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತೂ ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದು ಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧರವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ವಿವಿಧ ಸಮಾಚಾರಗಳು.

ಪಾಶ್ಚಿಮಾತ್ಯನು ಹಿಂದೂವಾದನು!

ಲಂಡನಿನ ನೆಶನಲ್ ಕೆಮಿಕಲ್ ಹೋಲ್ಡಿಂಗ್ಸಿನ ಡ್ಯಾರೆಕ್ಟರರಾದ ಡಾಕ್ಟರ್ ಡಬ್ಲ್ಯೂ. ಎನ್. ಆರ್. ಮುರ್ರೆ. ಎಮ್. ಡಿ. ಇವರು ಮುಂಬಾಯಿಯಲ್ಲಿ ಕಳೆದ ೨೩ನೇ ತಾರೀಕಿನ ದಿನ ಹಿಂದೂಮತಕ್ಕೆ ಸೇರಿದರು. ಇವರು ತರುಣ ಪ್ರಾಯದವರು. ಮೂರು ತಿಂಗಳ ಸಂಚಾರಕ್ಕಾಗಿ ಹಿಂದೂ ದೇಶಕ್ಕೆ ಬಂದವರು. ಒಮ್ಮೆ ಆರ್ಯಸಮಾಜದ ಭಾಷಕರಾದ ಡಾಕ್ಟರ್ ಭಗವತ್ ರಾಮಜಿಯವರ ಭಾಷಣವನ್ನಿವರು ಕೇಳಿದರು. ಅದರಿಂದಲೇ ಮನಸ್ಸು ತಲ್ಲೀನವಾಗಿ ಈ ಪಾಶ್ಚಿಮಾತ್ಯರು ಬೋಧಕರಿಗೆ ಒಂದು ಕಾಗದವನ್ನು ಬರೆದರು. "ನಾನು ಮೊದಲಿನಿಂದಲೂ ಹಿಂದೂ ಮತದ ಮೇಲೆ ಅಭಿರುಚಿಯುಳ್ಳವನು. ಅದರಲ್ಲೂ ನಿಮ್ಮ ಭಾಷಣವನ್ನು ಕೇಳಿ ಮುಗ್ಧನಾಗಿ ಹಿಂದೂವಾಗಬೇಕೆಂದು ದೃಢನಿಶ್ಚಯ ಮಾಡಿಕೊಂಡಿರುವೆನು. ನಿಮ್ಮ ಭಾಷಣದ ಭಾಷೆಯು ನನಗೆ ತಿಳಿಯದಿದ್ದರೂ, ನಿಮ್ಮ ಹಾವಭಾವಗಳನ್ನೂ ಸ್ವರಮಾಧುರ್ಯವನ್ನೂ ಕಂಡು ಕೇಳಿ, ಹಿಂದೂ ಮತದ ಶ್ರೇಷ್ಠತೆಯು ಎಷ್ಟಿದೆಯೆಂಬುದನ್ನು ಅರಿತುಕೊಂಡೆನು. ನನ್ನ ಆಯುಷ್ಯವನ್ನು ಹಿಂದೂ ಭೂಮಾತೆಯ ಸೇವೆಯಲ್ಲಿಯೇ ಕಳೆಯಲಿರುವೆನು" ಎಂದು.

ಇವರ ತಾಯಿಯು ಮೊದಲಿನಾರಭ್ಯ ವೇದಗಳನ್ನೋದಿ, ಅವುಗಳ ಮಹತ್ವವನ್ನು ಮಗನಿಗೆ ವಿವರಿಸಿದ್ದಳು. ಆಗಲೇ ಇವರಿಗೆ ಹಿಂದೂಮತದಲ್ಲಿ ಅಭಿರುಚಿಯು ಅಂಕುರಿಸಿತು. ಅಷ್ಟು ಮಾತ್ರವಲ್ಲ; ಅಂದಿನಿಂದಲೂ ಇವರು ಮಾಂಸವನ್ನು ತಿಂದಿಲ್ಲ, ಮದ್ಯಪಾನ ಮಾಡಿಲ್ಲ, ಧೂಮಸೇವನೆ ಮಾಡಿಲ್ಲ, ಪ್ರಾಣಿಹತ್ಯವನ್ನು ಮಾಡಿಲ್ಲ. ಯುದ್ಧಕ್ಕಿಂತ ಮೊದಲು ತಾಯಿಮಗರಿಬ್ಬರೂ ಹಿಂದೂಸ್ಥಾನದಲ್ಲಿ ಸಂಚರಿಸಿ ರಾಮಕೃಷ್ಣ ಮಿಶನನ್ನು ಸಮೀಪಿಸಿದ್ದರು. ಇದರಿಂದಲಾದರೂ ಹಿಂದೂಮತದ ಮಹತ್ವವೆಷ್ಟಿದೆಯೆಂದು ಮಿಸ್. ಮೇಯೋಳು ತಿಳಿದುಕೊಳ್ಳಲಿ.

§ § § §

ವಿದೇಶಿ ವಸ್ತ್ರ ಬಹಿಷ್ಕರಣ.

ವಿದೇಶೀ ವಸ್ತ್ರವನ್ನು ಬಹಿಷ್ಕರಿಸಬೇಕೆಂದು ಮಹಾತ್ಮಾಜಿಯವರು ಹೇಳಿದುದನ್ನು ಅನುಸರಿಸಲು ಹೇಗೆ ಮಾಡಬೇಕೆಂಬುದನ್ನು ಚರ್ಚಿಸುವುದಕ್ಕಾಗಿ ಹಿಂದುಸ್ಥಾನದ ಹತ್ತಿಯ ಕಾರಖಾನೆಗಳ ಮಾಲಿಕರು ಸಬರಮತಿ ಆಶ್ರಮದಲ್ಲಿ ಸಭೆಕೂಡಿದರು. ಸಭೆಗೆ ಗಾಂಧಿಜಿಯವರೂ, ಪಂಡಿತ ಮೋತಿಲಾಲರೂ ಬಂದಿದ್ದರು. ವಸ್ತ್ರಗಳನ್ನು ಬಹಳ ಕಡಿಮೆ ಕ್ರಯದಲ್ಲಿ ಮಾರಬೇಕೆಂದು ಮಹಾತ್ಮಾಜಿಯವರು ಹೇಳಲು ಇದರಿಂದ ತಮಗೆ ಹೇರಳ ನಷ್ಟವಾಗುವದೆಂದು ಮಾಲಿಕರು ಹೇಳಿದರು. ಕೊನೆಗೆ ಸಮಾಜಕ್ಕಾಗಿ ತಾವು ಕಷ್ಟಪಟ್ಟಾದರೂ ಸ್ವದೇಶಿ ವಸ್ತ್ರವನ್ನು ಮಾರುವಂತೆ ಪ್ರಯತ್ನಿಸುವೆವೆಂದು ಕಾರಖಾನೆಗಳ ಮಾಲಿಕರು ಮಾತುಕೊಟ್ಟರು.

ಕೆಲವು ಕಾರಖಾನೆಗಳಿಗೆ ಬಹಳ ಲಾಭವೂ, ಕೆಲವಕ್ಕೆ ಸಾಧಾರಣ ಲಾಭವೂ ಇದೆ. ಎಲ್ಲವೂ ಒಟ್ಟಾಗಿ ವಸ್ತ್ರದ ಬೆಲೆಯನ್ನು ಒಂದೇ ರೀತಿಯಾಗಿ ಮಾಡಿದರೆ ಜನಾಂಗಕ್ಕೆ ಹಿತವಾಗುವುದು. ಮಾಲಿಕರಿಗೂ ನಷ್ಟವಾಗದು.

ಮಿಲ್ಲುಗಳ ಮಾಲಿಕರು ಖಾದಿಯನ್ನು ತಮ್ಮ ಮಿಲ್ಲುಗಳಲ್ಲಿ ಸಂತೋಷದಿಂದ ನೇಯಬೇಕು. ಭಾರತ ಭೂಮಾತೆಯ ಮೇಲೆ ಪ್ರೀತಿಯಿದೆ ಎಂಬುದನ್ನು ವ್ಯಕ್ತಗೊಳಿಸಬೇಕಾದರೆ ಮಿಲ್ಲುಗಳ ಮಾಲಿಕರು ತಮ್ಮ ಮಿಲ್ಲುಗಳಲ್ಲಿ ಖಾದಿಯನ್ನು ನೇಯಬೇಕು.

ನಮ್ಮ ಊರಿನ ಮಿಲ್ಲುಗಳಲ್ಲಿ ಪರದೇಶೀ ನೂಲನ್ನು ಉಪಯೋಗಿಸದೆ ಖಾದಿ ನೂಲನ್ನೇ ಉಪಯೋಗಿಸಬೇಕು. ತಮ್ಮ ಮಿಲ್ಲುಗಳನ್ನು ವಿದೇಶೀ ಕಂಪೆನಿಗಳಲ್ಲಿ ಇನ್‌ಸ್ಯೂರ್ ಮಾಡಬಾರದು. ಪರದೇಶಿ ವಸ್ತ್ರಗಳನ್ನು ತರಿಸಿ ಸ್ವದೇಶಿ ವಸ್ತ್ರಗಳೆಂದು ಮಾರಬಾರದು. ಹೀಗೆ ಮಾಡಿದರೆ ಮಾತ್ರ ವಿದೇಶಿ ವಸ್ತ್ರ ಬಹಿಷ್ಕಾರವನ್ನು ಮಾಡಿದ ಹಾಗಾಯಿತೆಂದು ಮಹಾತ್ಮರು ಹೇಳುವರು.

§ § § §

ಮದರಾಸು ಕೌನ್ಸಿಲಿನಲ್ಲಿ.

ಮದರಾಸು ಕೌನ್ಸಿಲಿನಲ್ಲಿ ರಾ॥ ಭಕ್ತವತ್ಸಲ ನ್ಯಾಡುರವರು ಪೋಲಿಸರಿಗೆ ಖದ್ದರ್ ಉಡುಪನ್ನು ಒದಗಿಸಿಕೊಡಬೇಕೆಂಬ ಠರಾವನ್ನು ಮುಂದಕ್ಕೆ ತಂದರು. ಪೋಲೀಸರು ಹಿಂದುಗಳಾಗಿರುವುದರಿಂದ ಹಿಂದೂಸ್ಥಾನದಲ್ಲಿ ತಯಾರಿಸಿದ ಖಾದಿಯನ್ನು ಧರಿಸುವದರಿಂದ ಅವರಿಗೆ ಶೋಭಿಸುವದೆಂದರು. ಇದೇ ಠರಾವನ್ನು ಬಲಪಡಿಸಿ ರಾ॥ಗಳಾದ ಹರಿಸರ್ವೋತ್ತಮರಾಯರೂ ಶ್ರೀನಿವಾಸ ಅಯ್ಯಂಗಾರರೂ ಮಾತನಾಡಿದರು. ಆದರೆ ರಾ॥ ಅಬ್ಬಾಸ ಅಲಿಯವರು ಮಾತ್ರ ಇದನ್ನು ವಿರೋಧಿಸಿದರು. ಖಾದಿಯು ತಯಾರಾದುದು ತುಂಬಾ ಸಿಕ್ಕುವುದು ಅಸವಳವೆಂದೂ, ಅದನ್ನು ತಯಾರಿಸಲು ಬಹು ಸಮಯ ಬೇಕಾಗುವದೆಂದೂ ಅವರು ಹೇಳಿದರು. ಖಾದಿಯನ್ನು ಉಡುವುದರಿಂದ ನಮ್ಮ ಹಣವೆಲ್ಲವು ನಮ್ಮೂರಲ್ಲೇ ಉಳಿದು ಹಿಂದೂದೇಶವು ಅಭಿವೃದ್ಧಿಗೆ ಬರುವದಾದ ಕಾರಣ ಖಾದಿಯನ್ನೇ ಪೋಲೀಸರು ಧರಿಸಬೇಕೆಂಬ ಠರಾವನ್ನು ಮಂಜೂರು ಮಾಡಲೇಬೇಕೆಂದು ರಾ॥ ಸತ್ಯಮೂರ್ತಿಯವರು ವಾದಿಸಿದರು. ಅನಂತರ ಮಾತನಾಡಿದ ರಾ॥ ಉಸ್ಮಾನರು ಅದಕ್ಕೆ ತೀರ ವಿರುದ್ಧವಾಗಿದ್ದರು. ಖಾದಿಯು ಧರಿಸಿಕೊಳ್ಳಲು ಬಹು ಭಾರವಾಗಿದೆಯೆಂದೂ, ಅದು ಕೊಂಗ್ರೆಸ್ ಪಕ್ಷದವರ ಉಡುಪಾಗಿದೆಯೆಂದೂ ಅವರು ಹೇಳಿದರು. ಸರ್, ಜೇಮ್ಸ ಸಿಂಪ್ಸನರೂ ಠರಾವನ್ನು ಎದುರಿಸಿದರು. ಖಾದಿಯನ್ನು ಅಗ್ಗವಾಗಿಯೂ ತೆಳುವಾಗಿಯೂ ಮಾಡಿದ ಮೇಲೆ ಒಮ್ಮೆಗೆ ಈ ಠರಾವನ್ನು ಮಂಜೂರಾತಿಗೆ ತರಬಹುದೆಂಬುದೇ ಅವರ ಅಭಿಪ್ರಾಯವಿದ್ದಿತು. ಕಡೆಗೆ ಮತ ತೆಗಿಯಲಾಗಿ ಬೇಕೆಂದು ೩೮ ವೋಟುಗಳೂ, ಬೇಡವೆಂದು ೩೧ ವೋಟುಗಳೂ ಸಂಗ್ರಹವಾದವು.

§ § § §

ಬಾಲ್ಯವಿವಾಹ ಮಸೂದೆ.

ಹರವಿಲಾಸ ಸರ್ದಾರರವರ ಬಾಲ್ಯವಿವಾಹ ಮಸೂದೆಯ ಮೇಲೆ ಸಿಲೆಕ್ಟ್ ಕಮಿಟಿಯವರ ರಿಪೋರ್ಟು ಈಗತಾನೆ ಹೊರಬಿದ್ದಿದೆ. ಅದಕ್ಕೆ ಸರಿಯಾದ ಸಮ್ಮತಿಯನ್ನು ತೋರಿಸದೆ ಐದು ಜನ ಮೆಂಬರರು ಸಹಿ ಹಾಕಿರುವರು. ಕಮಿಟಿಯ ಅಭಿಪ್ರಾಯವು ಹೀಗಿದೆ, 'ಬಾಲ್ಯವಿವಾಹವು ನಡೆಯಬಾರದೆಂದೂ, ಶಿಕ್ಷಿತ ಪ್ರಾಯದೊಳಗೆ ಮದುವೆಯನ್ನು ಮಾಡಿದರೆ ಅದು ತಪ್ಪಾಗುವದೆಂದೂ, ಈ ಮಸೂದೆಯು ಇದೆಯಾದರೂ ಒಮ್ಮೆ ಆದ ಮದುವೆಯನ್ನು ರದ್ದುಪಡಿಸುವುದು ಶಾಸ್ತ್ರ ಮತ್ತು ನ್ಯಾಯಸಮ್ಮತವಾಗಿ ಸರಿಯಲ್ಲವು. ಆದಕಾರಣ ಮದುವೆಯಾದ ಮೇಲೆ ರದ್ದುಪಡಿಸದೆ ಮದುವೆಯಾದವರಿಗೆ ಕಠಿಣ ಶಿಕ್ಷೆಯನ್ನು ವಿಧಿಸುವದಾದರೂ ಒಮ್ಮೆಗೆ ಸರಿಹೋಗಬಹುದು. ಈ ಮಸೂದೆಯು ಹಿಂದೂ, ಜೈನ, ಸಿಕ್ಖ, ಆರ್ಯಸಮಾಜ, ಬೌದ್ಧರು ಇವರಿಗೆ ಮಾತ್ರ ಸಂಬಂಧಿಸುವದು. ಈ ಜಾತಿಯನ್ನುಳಿದು ಅನ್ಯಜಾತಿಯವರಲ್ಲಿ ಬಾಲ್ಯವಿವಾಹವಾಗುತ್ತಿದೆಯಾದುದರಿಂದ ಅದು ಬ್ರಿಟಿಷ ಹಿಂದೂಸ್ಥಾನದ ಸರ್ವಮತದವರಿಗೂ ಸಂಬಂಧಿಸುವಂತಾಗಬೇಕು. ಗಂಡಸರು ೧೮ ವರ್ಷಗಳ ಮೊದಲೂ, ಹೆಂಗಸರು ೧೪ ವರ್ಷಗಳ ಮೊದಲೂ ಮದುವೆಯಾಗಬಾರದು. ಈ ಪ್ರಾಯವು ಸರ್ವರಿಗೂ ಒಪ್ಪಿಗೆಯನ್ನುಂಟು ಮಾಡುವದೆಂದು ತಿಳಿಯುವೆವು. ಸಣ್ಣ ಪ್ರಾಯದಲ್ಲಿ ಮದುವೆಯಾಗುವ ಹುಡುಗಿಯು ನಿರಪರಾಧಿಯಾದುದರಿಂದ ಅವಳ ಹೆತ್ತವರನ್ನು ಶಿಕ್ಷಿಸಬೇಕು' ಎಂದು. ಈ ಅಭಿಪ್ರಾಯಗಳ ಕುರಿತು ಮದರಾಸಿನಲ್ಲಿ ಒಂದು ಬಹಿರಂಗವಾದ ಸಭೆಯು ನಡೆದು ಕೆಳಗಿನ ಠರಾವುಗಳು ಅಂಗೀಕರಿಸಲ್ಪಟ್ಟವು. "ಈ ಸಭೆಯು ಸಿಲೆಕ್ಟ್ ಕಮಿಟಿಯವರ ಅಪೇಕ್ಷೆಯಂತೆ ಮದುವೆ ಪ್ರಾಯವನ್ನು ೧೮ ಮತ್ತು ೧೪ ವರ್ಷಗಳಾಗಿ ಮಾಡಿ, ಮದುವೆಯನ್ನು ರದ್ದುಪಡಿಸುವ ಬದಲು ಶಿಕ್ಷೆಗೆ ಗುರಿಪಡಿಸಬೇಕೆಂದು ನಿರ್ಣಯಿಸುವರು. ಈ ಠರಾವನ್ನು ವ್ಯಾಸರಾಯರಿಗೂ ಇತರರಿಗೂ ತಿಳಿಸಬೇಕೆಂದಾಯಿತು.

§ § § §

ಸ್ಯಾಮುನ್ ಕಮಿಶನ್ನಿನ ಉದ್ದೇಶ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಎಂಗ್ಲೋ ಇಂಡಿಯನರ ಪರವಾಗಿ ಕರ್ನಲ್ ಗಿಡ್ನಿಯವರು ಡಿಲ್ಲಿಯ ವೆಸ್ಟರ್ನ್ ಹೊಟೆಲಿನಲ್ಲಿ ಜೋನ್ ಸ್ಯಾಮುನರಿಗೊಂದು ಔತಣವನ್ನು ಮಾಡಿದರು. ಆ ಸಮಯದಲ್ಲಿ ಸ್ಯಾಮುನರು "ಹಿಂದೂದೇಶದ ಸ್ಥಿತಿಯನ್ನು ಮೊದಲೊಮ್ಮೆ ವಿಚಾರಿಸಿ ನೋಡುವುದಕ್ಕಾಗಿ ಎರಡು ತಿಂಗಳುಗಳ ಹಿಂದೆ ನಾವು ಮುಂಬಾಯಿಯಲ್ಲಿ ಬಂದಿಳಿದೆವು. ಶನಿವಾರ ದಿನ ನಾವು ಹಿಂದಿರುಗುವೆವು. ಹಿಂದೂಜನರಿಂದ ಕಿಕ್ಕಿರಿದ, ಮುಂಬಾಯಿ, ಮದರಾಸು, ಕಲಕತ್ತಾ ಮತ್ತು ಇತರ ಎಲ್ಲಾ ಸಣ್ಣ ಪಟ್ಟಣಗಳನ್ನು ನಾವು ಸಂದರ್ಶಿಸಿದುದಾಯಿತು. ಈ ಸಮಯದಲ್ಲಿ ನಮ್ಮನ್ನು ಸತ್ಕರಿಸಿದುದಕ್ಕಾಗಿ ಹಿಂದೂದೇಶಕ್ಕೆ ನಾವು ಕೃತಜ್ಞರಾಗಿರಬೇಕಾಗಿದೆ. ನಮ್ಮನ್ನು ಸ್ವಾಗತಮಾಡಿದ್ದಕ್ಕಾಗಿ ನಾವು ಆನಂದಿಸುವೆವು. ಅಂತೆಯೇ ಬಹಿಷ್ಕರಿಸಿದ್ದಕ್ಕಾಗಿ ನಾವು ವ್ಯಸನಪಡುವುದಿಲ್ಲ. ನಮ್ಮ ಉದ್ದೇಶ ಮತ್ತು ಕರ್ತವ್ಯಗಳು ಹಿಂದುಗಳಿಗೆ ತಿಳಿದೊಡನೆ, ಅವರು ಸ್ವತಃ ನಮ್ಮನ್ನು ಆನಂದದಿಂದ ಸ್ವಾಗತೀಕರಿಸುವರೆಂದು ನಾವು ಬಲ್ಲೆವು. ನಾವು ಡಿಲ್ಲಿಗೆ ಬಂದೊಡನೆ ಬರುವ ಅಕ್ಟೋಬರದಲ್ಲಿ ನಾವು ಪ್ರಾರಂಭಿಸಲಿರುವ ಕಾರ್ಯಗಳ ಕುರಿತು ವ್ಯಾಸರಾಯರಿಗೊಂದು ಪತ್ರವನ್ನು ಬರೆದೆವು. ನಾವು ಒಟ್ಟು ಕಲಿತು ಚೆನ್ನಾಗಿ ಆಲೋಚಿಸಿಯೇ ಆ ಪತ್ರವನ್ನು ಬರೆದುದು. ಹಿಂದುಗಳ ಸಹಕಾರವನ್ನು ನಾವು ಸಂತೋಷದಿಂದ ಬಯಸಿದೆವು. ಎರಡು ತಿಂಗಳುಗಳ ವರೆಗೆ ಇಲ್ಲಿದ್ದು ಸಿಕ್ಕಿದ ಫಲಿತಾಂಶದಿಂದ ನಾವು ಅತೃಪಿ ಹೊಂದಿಲ್ಲ. ನಮ್ಮ ಅಂದಿನ ಪತ್ರವು ನಮ್ಮ ನಿಜವಾದ ಉದ್ದೇಶವನ್ನು ಹೊರಗೆಡಹಿರುವದಲ್ಲದೆ ಬೇರೆಯಲ್ಲ. ನಾವು ಹಿಂದೂದೇಶದ ಅಚ್ಚ ಸ್ನೇಹಿತರು. ಮುಂದೆಯೂ ಸ್ನೇಹಿತರಾಗಿಯೇ ಇರುವೆವು. ಪೂರ್ವ ಮತ್ತು ಪಶ್ಚಿಮ ದೇಶಗಳ ಸಂಬಂಧದ ವಿಷಯ ಜೋತಿಷ್ಯರು ಅನೇಕ ವಿಧವಾಗಿ ಬರೆದಿರುವರು. ನಾವು ಮುಂದೆ ಮಾಡಲಿಕ್ಕಿರುವ ಕೆಲಸವನ್ನು ನೆನಸುವಾಗ ಎರಡೂ ದೇಶಗಳೊಳಗೆ ಬಹು ಹತ್ತಿರದ ಸಂಬಂಧವಿದೆಯೆಂದು ನನಗೆ ಹೊಳೆಯುತ್ತದೆ. ಈ ಎರಡೂ ದೇಶಗಳು ಪರಸ್ಪರ ಮುಖ ತಿರುಗಿಸಿದರೆ ಎರಡಕ್ಕೂ ನಷ್ಟವಿದೆ. ಒಂದೇ ಮನಸ್ಸಿನಿಂದ ಇದ್ದರೆ ಶಾಂತಿಯೂ ಸುಖವೂ ಆಗಿ ಎರಡೂ ದೇಶಗಳ ಅಭಿವೃದ್ಧಿಯಾಗುವುದು.

§ § § §

ಬರ್ಮಾದಲ್ಲಿ ಹಿಂದೂ ವಿರೋಧಿಗಳು!

ಹಿಂದೂಗಳು ತಮ್ಮ ಕಾಲುಗಳ ಮೇಲೆ ತಾವು ನಿಂತು ಆದಷ್ಟುಬೇಗನೆ ಸ್ವರಾಜ್ಯವನ್ನು ಪಡೆಯಬೇಕೆಂದು ಹೋರಾಡುವರು. ಮೊನ್ನೆ ತಾನೆ ಮದರಾಸಿನಲ್ಲಿ ನಡೆದ ಕೊಂಗ್ರೆಸ್ ಅಧಿವೇಶನದಲ್ಲಿ ಸ್ವಾತಂತ್ರ್ಯವೇ ಹಿಂದೂಗಳ ಜನ್ಮಸಿದ್ಧವಾದ ಹಕ್ಕು ಎಂಬುದಾಗಿ ನಿರ್ಣಯಿಸಿರುವುದು. ಆದರೆ ಇಂಡಿಯನ್ ಬ್ಯುರೋಕ್ರಸಿಯ ಪರಿಚಾರಕರು ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವರು. ಹಿಂದೂಗಳ ನಿರ್ಣಯಗಳನ್ನು ವಿರೋಧಿಸಿ, ಅವರ ಮನೋರಥವು ನಡೆಯಗೊಡದಂತೆ ಮಾಡುತ್ತಿರುವರು. ಇವರು ಬರ್ಮಾದ ಮುಖ್ಯ ಮುಖ್ಯ ಯುರೋಪಿಯನ್ ಆಫೀಸರರಿಗೂ, ವ್ಯಾಪಾರಿಗಳಿಗೂ, ಮಿಸ್. ಮೇಯೋಳ 'ಮದರ್ ಇಂಡಿಯಾ' ಪುಸ್ತಕದ ಹಲವು ಪ್ರತಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರು. ಇಂತಹ ಪ್ರತಿಗಳನ್ನು ಹಿಂದೂಸ್ಥಾನದಲ್ಲಿಯೂ ಹಂಚಿರುವರೋ ಇಲ್ಲವೋ ಎಂಬುದು ಸರಿಯಾಗಿ ತಿಳಿದಿಲ್ಲ. ಅಲ್ಲಿನ ಯುರೋಪಿಯಾನರಿಗೆ ಹಿಂದುಗಳ ವಿರುದ್ಧವಾಗಿ ಭಾವನೆಯನ್ನು ತಲೆದೋರಿಸಿ, ಹಿಂದುಗಳಿಗೆ ಸ್ವರಾಜ್ಯ ಸಿಕ್ಕದಂತೆ ಅವರು ತೀರ ಎದುರು ನಿಲ್ಲಬೇಕೆಂಬುದೇ ಇದರ ಉದ್ದೇಶವಾಗಿದೆ.

§ § § §

ಸರ್, ತುಕೋಜಿರಾಯರ ಭವಿಷ್ಯತ್ತು.

ಇಂದೋರಿನ ಮಾಜಿ ಮಹಾರಾಜರಾದ ಸರ್, ತುಕೋಜಿರಾಯರು ಮಿಸ್ ನೆನ್ಸಿ ಮಿಲ್ಲರಳನ್ನು ಹಿಂದೂಮತಕ್ಕೆ ಮತಾಂತರಗೊಳಿಸಿ, ಮಹಾರಾಣಿ ಶರ್ಮಿಷ್ಠಾದೇವಿ ಹೋಳ್ಕರ್ ಎಂಬ ಹೆಸರನ್ನು ಅವಳಿಗಿಟ್ಟು ಅವಳನ್ನು ಮದುವೆಯಾದ ಸಂಗತಿಯು ಸರ್ವರಿಗೂ ತಿಳಿದ ವಿಷಯವೇ. ಮದುವೆಯು ಗುಟ್ಟಿನಲ್ಲಿ ನಡೆಯಲಿಲ್ಲ. ಜುಮ್ಮೇದಾರರು, ಧನಿಕರು, ಸಾಹುಕಾರರು, ಎಲ್ಲರೂ ಮದುವೆಗೆ ಹೋಗಿದ್ದರು. ಬಂದವರೆಲ್ಲರ ಅಸಾಮಾನ್ಯ ಸಹಕಾರದಿಂದಲೇ ತನ್ನ ಮದುವೆಯು ನಿರ್ವಿಘ್ನವಾಗಿ ಕೊನೆಗಂಡಿತೆಂಬುದು ಅವರ ಮನಸ್ಸಿಗೆ ಹೊಳೆದಿರುವುದು. ಅದಕ್ಕಾಗಿ ಅವರು ಸರ್ವರಿಗೂ ತಾನು ಕೃತಜ್ಞನಾಗಿರುವೆನು, ಸರ್ವರ ಉಪಕಾರವನ್ನು ತಾನು ಮರೆಯೆನು ಎಂದು ಸಾರುತ್ತಿರುವರು. ಬ್ರಿಟಿಷ ಸರಕಾರದವರನ್ನಂತೂ ಅವರು ಅತ್ಯಂತವಾಗಿ ಹೊಗಳುತ್ತಿರುವರು. ತನ್ನ ಪರವಾಗಿ ಬ್ರಿಟಿಷ ಸರಕಾರವು ದಯಾಳುವೂ ವಿಚಾರಪೂರ್ಣವೂ ಆಗಿದೆಯೆಂದು ಅವರ ಹೇಳಿಕೆ.

ಅವರ ಇನ್ನು ಮುಂದಿನ ಕರ್ತವ್ಯದ ಕುರಿತು ಹೇಳುವದಾದರೆ ಅವರು ಪತ್ನಿಯೊಂದಿಗೆ ಇಲ್ಲಿಯೇ ಉಳಕೊಳ್ಳುವರಂತೆ. ದೇಶಸೇವೆಯನ್ನೂ, ಸಮಾಜಸೇವೆಯನ್ನೂ ಮಾಡಿಕೊಂಡು ತನ್ನ ಜನರೊಂದಿಗೆ ಇರಬೇಕೆಂದು ಅವರಿಗೆ ಬಹಳ ಅಭಿಲಾಷೆಯಿದೆ. ಆದರೆ ಥಟ್ಟನೆ ಹಾಗೆ ಮಾಡಲು ಆಗುವುದೋ ಇಲ್ಲವೋ ಎಂದು ಸಂಶಯವಿದೆ.

ಹಿಂದೂ ಮುಸಲ್ಮಾನರ ಸಂಬಂಧ.

ಹಿಂದೂ ಮುಸಲ್ಮಾನರ ಸಬಂಧದ ಕುರಿತು ಮೌಲ್ವಿ ಮಹಮದ್ ಯಾಕುಬ್ ಹುಸೇನರು ಡಿಲ್ಲಿಯಲ್ಲಿ ಒಂದು ಭಾಷಣವನ್ನು ಮಾಡಿದರು. ಕಳೆದ ಒಕ್ಟೋಬರ ತಿಂಗಳಲ್ಲಿ ಹಿಂದೂ ಮುಸಲ್ಮಾನರೊಳಗೆ ವಿಶೇಷ ವೈಮನಸ್ಸಿದ್ದಿತಾದರೂ ಈಗಲದು ಶಾಂತವಾಗಿಯದೆಂದು ಅವರು ಹೇಳಿದರು. ಹಿಂದೂ ಮುಸಲ್ಮಾನರ ಐಕ್ಯದಿಂದಲ್ಲದೆ ಹಿಂದೂದೇಶಕ್ಕೆ ಸ್ವಾತಂತ್ರ್ಯವಿಲ್ಲ. ಹಲವು ಮುಸಲ್ಮಾನರು ಹಿಂದೂ ಧುರೀಣರ ಪ್ರೀತಿ, ಆದರಗಳನ್ನು ಸಂಪಾದಿಸಿರುವರಾದರೂ ಹಲವರು ಇನ್ನೂ ಸಂಪಾದಿಸಬೇಕಾಗಿದೆ. ಶಾಂತಿಯು ನೆಲೆಗೊಳ್ಳುವುದು ಬಹಳ ಮೆಲ್ಲಗಾದರೂ ಅದರಿಂದ ನಿರಾಶರಾಗಬಾರದು. ಮುಸಲ್ಮಾನರು ಸ್ವಾರ್ಥದಿಂದ ಗ್ರಸ್ತರಾಗದೆ ಸ್ವಂತ ವಿಚಾರಣೆಯಿಂದ ಆಧರಿಸಲ್ಪಡಬೇಕು. ಮತವೈಶಮ್ಯವನ್ನು ಹಿಡಿದು ಹಿಂದೂಗಳ ಕೂಡೆ ಅಲ್ಲದ ಸಲ್ಲದ ಕಾರಣಗಳಿಗಾಗಿ ಕೋಪಿಸಿ, ಹೊಡೆದಾಡಿ, ಕೆಟ್ಟವರೆನ್ನಿಸಿಕೊಳ್ಳಬಾರದು. ಅಂತೆಯೇ ಹಿಂದೂಗಳು ಕೂಡ ಸ್ವಾರ್ಥಪರರಾಗಿ ಮುಸಲ್ಮಾನರನ್ನು ಕೆಣಕದೆ ಅವರು ತಮ್ಮ ಸಮೀಪದ ಸಹೋದರರೆಂದೇ ಭಾವಿಸಿ, ಪರಸ್ಪರ ಪ್ರೀತಿಯಿಂದ ವರ್ತಿಸಿ, ಶಹಬಾಸ್ ಅನ್ನಿಸಿಕೊಳ್ಳಬೇಕು. ಜಾತೀಯ ಕಲಹಗಳನ್ನು ಅಡಗಿಸಿದರೆ ಮಾತ್ರ ನಮ್ಮ ಭಾರತಭೂಮಿಯಲ್ಲಿ ಸ್ವಾತಂತ್ರ್ಯಸೂರ್ಯನುದಯಿಸಬಹುದು. ಅಲ್ಲದಿದ್ದರೆ ಎಂದೆಂದಿಗೂ ಪರತಂತ್ರವೆಂಬ ಅಂಧತಮಸ್ಸಿನಲ್ಲಿ ಕಣ್ಣುಕಾಣದೆ ಬಿದ್ದಿರಬೇಕಾಗುವುದು. ಇವೇ ಮೊದಲಾದ ಸಂಗತಿಗಳನ್ನು ವಿವರಿಸಿ ಅವರು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು. ಇದನ್ನರಿತಾದರೂ ಹಿಂದೂಮುಸಲ್ಮಾನರು ಮುಂದೆ ಪರಸ್ಪರ ಕಾದಾಡುವದನ್ನು ನಿಲ್ಲಿಸಿ, ಸ್ವರಾಜ್ಯ ಸಂಪಾದನೆಗೆ ಸುಲಭವಾದ ಒಂದು ಹಾದಿಯನ್ನು ಮಾಡಿಕೊಡುವರೆಂದು ನಂಬಲಾಗಿದೆ.

§ § § §

ಕ್ರಿಸ್ತಪಾದರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ!

ಎಲಾಮೆಲ್ಲೂರಿನ ಇಗರ್ಜಿಯ ಪಾದರಿಯಾದ ಜೊಸೆಫ್ ಮಿನೆಜಸರೆಂಬವರು ಹಗಲು ಹೊತ್ತಿನಲ್ಲಿ ಒಬ್ಬ ಹುಡುಗಿಯೊಂದಿಗೆ ಇರುವುದನ್ನು ಕಂಡು ದುಮ್ಮಿನಿ ಕುರುವಿಲ್ಲಾ ಎಂಬವನೊಬ್ಬನು ಕಂಡು ಇದು ಸರಿಯಲ್ಲವೆಂದೂ, ಅಪಮಾನಕಾರಕವೆಂದೂ, ಒಂದು ಪತ್ರವನ್ನು ಬರೆದು ಪಾದರಿಗೆ ತಲಪಿಸಿದನು. ಇದರಿಂದ ಪಾದರಿಗೆ ಸಿಟ್ಟುಬಂದಿತು. ಅತನಿಗೂ ಕುರುವಿಲ್ಲನಿಗೂ ಮಾತುಗಳಿಂದಲೇ ಜಗಳವಾಯಿತು. ಕುರುವಿಲ್ಲನು ಬದುಕಿ ಉಳಿದರೆ ತನ್ನ ಗುಟ್ಟು ಬಯಲಾಗಿ ಮುಂದೆ ತಾನು ಅಪಮಾನಕ್ಕೀಡಾಗುವೆನೆಂದು ಪಾದರಿಯು ಇತರ ಒಂಭತ್ತು ಜನ ಪಾದರಿಗಳನ್ನು ಸಹಾಯಕ್ಕೆ ಪಡಕೊಂಡು ಕುರುವಿಲ್ಲನನ್ನು ಹರಿತವಾದ ಆಯುಧದಿಂದ ಚುಚ್ಚಿ ಗಾಯಗೊಳಿಸಿ ಮಾಳಿಗೆಯಿಂದ ಕೆಳಕ್ಕೆ ನೂಕಿದನು. ಕುರುವಿಲ್ಲನು ಜಖಮುಹೊಂದಿದ್ದರಿಂದ ಒಂದೆರಡು ತಾಸುಗಳೊಳಗೆ ಮೃತಪಟ್ಟನು. ಕೊನೆಗೆ ಹತ್ತು ಜನರ ಮೇಲೂ ಮೊಕದ್ದಮೆಯಾಯಿತು. ಇದರ ವಿಚಾರಣೆಯು ನಡಿಯುತ್ತಾ ಇದೆ. ಮುಂದೇನಾಗುವುದೋ ನೋಡಲಿಕ್ಕಿದೆ.

ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ

ಉಡುಪಿ ತಾಲೂಕು ಕಾಪು ಪೇಟೆಗೆ ಒಪ್ಪಿದ ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಇದೇ ಬರುವ ವಿಭವ ಸಂ॥ರದ ವೈಶಾಖ ಶು ೪ ದಿವಸ ಪ್ರತಿಷ್ಠೆ ಮಾಡುವದೆಂತಲೂ ವ ನಮ್ಮ ಕಾಶೀ ಮಠದ ಗುರುಗಳವರ ಸವಾರಿ ಇಲ್ಲಿಗೆ ಚಿತ್ತೈಸುತ್ತದೆಯಂತಲೂ ಆ ಬಗ್ಗೆ ಸುಮಾರು ೩—೪ ಸಾವಿರ ರೂಪಾಯಿ ಖರ್ಚಿಗೆ ಬೇಕೆಂತಲೂ ಈ ಬಗ್ಗೆ ನಾವು ಸದ್ರಿ ಕಾಪು ಪೇಟೆಗೆ ಒಪ್ಪಿದ ಗ್ರಹಸ್ಥರು ವೈದಿಕರು ಎಂತಲೂ ಸದ್ರಿ ಖರ್ಚಿನ ಗೋಸ್ಕರ ಊರಲ್ಲಿ ಹೋಗಿ ವಂತಿಗೆ ಮಾಡಬೇಕಾಗಿ ನಮ್ಮ ಪೇಟೆಯವರು ನಿರ್ಣಯಿಸಿದಂತೆ ಆ ಪೈಕಿ ನಾವು ಈ ಪ್ರಾಂತ್ಯಕ್ಕೆ ವಂತಿಗೆಗೆ ಹೊರಟು ಬಂದಿರುತ್ತೇವೆ ಎಂತಲೂ ೨ ಜನ ಗ್ರಹಸ್ಥರು ೧ ವೈದಿಕ ಭಟ್ಟು ಕೂಡಾ ೩ ಜನರು ಶ್ರೀ ದೇವಿಯ ಪ್ರಸಾದವನ್ನು ಹಿಡಕೊಂಡು ವಂತಿಗೆ ವಸೂಲು ಮಾಡುತ್ತಾರೆಯೆಂಬದಾಗಿ ಕುಂದಾಪುರ ತಾಲೂಕಿನ ಹಳ್ಳಿ ಗ್ರಾಮದ ವೈದೀಕರ ಮುಖಾಂತರ ನನಗೆ ತಿಳಿದು ಬಂತು. ಅಲ್ಲದೆ ಸದ್ರಿಯವರು ಬೈಂದೂರು ಅತ್ತ ಕಡೆಗೆ ಹೋಗಿರುತ್ತಾರೆಯೆಂತ ತಿಳಿದುಬರುತ್ತದೆ. ಆದರೆ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ ಸದ್ರಿ ವೆಂಕಟ್ರಮಣ ದೇವರ ಪ್ರತಿಷ್ಠೆಯು ಯಾವಾಗ್ಯೆ ಎಂಬದು ನಿರ್ಣಯಿಸಿದ್ದಾಗಲಿ ಗುರುಗಳು ಕಾಪಿಗೆ ಬರುವದು ನಿರ್ಣಯಿಸಿದ್ದಾಗಲಿ ಇಲ್ಲಾ. ಮೇಲೆ ಹೇಳಿದ ಪ್ರಕಾರ ಖರ್ಚಿನ ಬಗ್ಯೆಯಾಗಲಿ ಇತರ ಯಾವ ಖರ್ಚಿನ ಬಗ್ಗೆಯಾಗಲಿ ವಂತಿಗೆಗೋಸ್ಕರ ಯಾವ ಕ್ರಮವೂ ಈ ವರೆಗೂ ಏರ್ಪಡಿಸಿದ್ದಿಲ್ಲ. ಈ ನಮೂನೆಯಲ್ಲಿ ಸುಳ್ಳು ಹೇಳಿ ವಂತಿಗೆ ವಸೂಲು ಮಾಡಿದವರ ಎಡ್ರೆಸ್‌ಗಳು ಯಾ ಗುರ್ತುಗಳು ವಸೂಲು ಕೊಟ್ಟವರ ಪೈಕಿ ಯಾರಿಗಾದರೂ ಇದ್ದಲ್ಲಿ ಅವರು ಸೀದಾ ನನಗಾಗಲಿ ವ ಇದೇ ಪತ್ರಕ್ಕಾಗಲಿ ಉತ್ತರ ಕೊಟ್ಟಲ್ಲಿ ಬಹಳ ಉಪಕಾರವಾಗುತ್ತಿತ್ತು. ಈ ನಮೂನೆಯಲ್ಲಿ ಇನ್ನು ಸುಳ್ಳು ನೆವನಗಳು ಹೇಳಿ ವಂತಿಗೆ ಬಂದಲ್ಲಿ ವಂತಿಗೆ ಕೊಡುವದು ನಮಗೆ ಹಿತವಿಲ್ಲವೆಂತ ಈ ಮೂಲಕ ತಿಳುಹಿಸುತ್ತೇನೆ. ಅಲ್ಲದೆ ಈ ಪೇಟೆಯಿಂದ ಸಪ್ತಾಹ ಫಂಡಿನ ಬಗ್ಗೆ ದಸ್ಕತು ಮೊಹರು ಇರುವ ಛಾಪೆಮಾಡಿದ ಸೇರು ಪುಸ್ತಕಗಳು ಮಾತ್ರ ನಾವು ಹಂಚುವರೆ ತಯಾರಿಸಿದ್ದೇವೆ.

ಶ್ರೀಧರ ಶ್ಯಾನಭಾಗ, ಪಟೇಲ ಕಾಪು,
ಕಾಪು ವೆಂಕಟ್ರಮಣ ದೇವಸ್ಥಾನದ ಮೊಕ್ತೇಸರ,
ಕಾಪು, 20—3—1928.

ಶಾಲಿವಾಹನ ಶಕ ೧೮೫೦ನೆಯ ವಿಭವ ಸಂವತ್ಸರದ ಚೈತ್ರ ಶು|| ೧೦ ಶನಿವಾರದಿಂದ ವಿಭವ ಸಂ|ರದ ಚೈತ್ರ ಬ|| ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಏಪ್ರಿಲ್ (ಸುಗ್ಗಿ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ
	ಶನಿ	೧೦	೩೧	ಆಶ್ಲೇಷಾ	೬೦.೦	೧೮	6.39	6.41
	ರವಿ	೧೧	೧	ಆಶ್ಲೇಷಾ	೦.೧೬	೧೯	6.29	6.41
	ಸೋಮ	೧೨	೩೧	ಮಘಾ	೧.೪೮	೨೦	6.28	6.41
	ಮಂಗಳ	೧೩	೪೬	ಪುಬ್ಬಾ	೪.೪೨	೨೧	6.27	6.41
	ಬುಧ	೧೪	೧೪	ಉತ್ತರಾ	೮.೪೪	೨೨	6.26	6.41
	ಗುರು	○	೧೦.೨	ಹಸ್ತಾ	೧೩.೪೬	೨೩	6.26	6.42
	ಶುಕ್ರ	೧	೧೪.೩೧	ಚಿತ್ತಾ	೧೯.೪೮	೨೪	6,25	6.42

ಮಂಗಳೂರಿನ ವಾಯುಸ್ಥಿತಿ.

Temperature. ಉಷ್ಣ (ಕಾವು) Maximum ಅತ್ಯಧಿಕ	Minimum ಅತ್ಯಲ್ಪ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
90—4	77—2	—	—
91-3	76—2	—	—
92—7	76—2	—	—
92—6	80—3	—	—
93—0	78—8	—	—
92—3	80—1	—	—
92—3	78—3	—	—
			128-19

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
[illegible]	7-0	7-10
[illegible]	6-8	7-0
[illegible]	6-2	6-10
[illegible]	6-0	6-4
[illegible] ಬೆಳ್ತಿಗೆ	7-4	8-4
[illegible] ಬೆಳ್ತಿಗೆ ಗೋಣಿ ೧	12-10	13-0
[illegible] ಬೆಳ್ತಿಗೆ ಮುಡಿ ೧ಕ್ಕೆ	6-14	7-0
[illegible] ೧ಕ್ಕೆ	15-12	17-4
[illegible] ೧ಕ್ಕೆ	8-8	11-8
[illegible] ೧ಕ್ಕೆ	11-8	13-0
[illegible] ೧ಕ್ಕೆ	15-0	15-8
[illegible] ಗೋಣಿ ೧ಕ್ಕೆ	18-0	26-0
[illegible] ೧ಕ್ಕೆ	14-0	14-8
[illegible] ೧ಕ್ಕೆ	12-0	14-8
[illegible] ಕಂಡಿ ೧ಕ್ಕೆ	35-0	45-0
[illegible] ೧ಕ್ಕೆ	4-6	4-8
[illegible] ೧ಕ್ಕೆ	135-0	-
[illegible] ಕಂಡಿ ೧ಕ್ಕೆ	—	42-8
[illegible] ೧ಕ್ಕೆ	40-0	47-8
[illegible] ಮುಡಿ ೧ಕ್ಕೆ	7-14	8-0
[illegible] ೧ಕ್ಕೆ	8-0	8-4
[illegible] ೧ಕ್ಕೆ	6-12	7-8
[illegible] ಮುಡಿ ೧ಕ್ಕೆ	3-14	4-0
[illegible] ಮುಡಿ ೧ಕ್ಕೆ	6-8	6-10
[illegible] ೧ಕ್ಕೆ	8-0	8-2
[illegible] ಮುಡಿ ೧ಕ್ಕೆ	7-0	8-8
[illegible] ೧ಕ್ಕೆ	395-0	480-0
[illegible] ಕಂಡಿ ೧ಕ್ಕೆ	150-0	180-0
[illegible] ಕಂಡಿ ೧ಕ್ಕೆ	515-0	520-
[illegible] ೧ಕ್ಕೆ	65-0	70-0
[illegible] ೧ಕ್ಕೆ	3-2	3-4
[illegible] ಕಂಡಿ ೧ಕ್ಕೆ	37-8	40-0
[illegible] ಮುಡಿ ೧ಕ್ಕೆ	15-0	15-0
[illegible] ಮುಡಿ ೧ಕ್ಕೆ	21-0	-
[illegible] ೧ಕ್ಕೆ	15-0	-
[illegible] ಮುಡಿ ೧ಕ್ಕೆ	15-0	-
[illegible]	18-0	-

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಪಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ತಿಳುವಳಿಕೆಗೆ "ಆರ್ಯವೈದ್ಯರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ಈಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿ ಯೂ, ದಾರಣೆ ಸರಸದಲ್ಲಿ ಯೂ, ಸರಕಿನ ನಾಣಯದಲ್ಲಿ ಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಪೆಂಡಾರು ವ್ಯಾಪಾರ,
24-8-28   ಶಿವ್ವಾಪೇಟೆ, ಸೇಲಂ (ದಕ್ಷಿಣ ಇಂಡಿಯಾ).

ಮುಫತ್ತು   ಮುಫತ್ತು   ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ
ಮತ್ತು
ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ ಮದ್ರಾಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.   1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6 .
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ — ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮೃತಿ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ,   48 ಚೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.   ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ.   ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦,   ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಕ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ, ಮಂಗಳೂರು ಟೌನ್‌ಹಾಲ್ ಹತ್ತಿರ.

DUNLOP

ಬೇಟ್ಸ್ ಕೋರ್ಡ್ ಸ್ಟಾಕ್ ಟಾಯರು.

ಈ ಟಾಯರು ಶಾಸ್ತ್ರೀಯವಾದ ಮತ್ತು ಸಮಂಜಸವಾದ ರೀತಿಯಲ್ಲಿ ತಯಾರಿಸಲ್ಪಟ್ಟಿವೆ. ಉತ್ತಮ ತರಗತಿಯ ಮತ್ತು ಬೇಗನೆ ಸವೆದುಹೋಗದಿರುವಿಕೆಯಲ್ಲಿ ಪ್ರಸಿದ್ಧಿಪಟ್ಟ ಗಟ್ಟಿ ರಬ್ಬರ ಉಪಯೋಗಿಸಿದ

ಶ್ರೇಷ್ಠತಮ ಟಾಯರು

fit Dunlop and be satisfied

ದಿ. ಡನ್ಲೋಪ ರಬ್ಬರ ಕಂಪೆನಿ (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. Sharada Press, Mangalore.

ಚಂದಾನಿರ್ಣಯ: — ವರ್ಷ ಒಂದಕ್ಕೆ ರೂಪಾಯಿ 2-0-0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೬ ನೇ ಶುಕ್ರವಾರ ಎಪ್ರಿಲ್ ೧೯೨೮. ಸಂಚಿಕೆ ೧೪

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
Udipi, 21-1-'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.



'ಅಂಬಾ ತಾಯಿತ್'

ಶಿವರಾಮ ಭಟ್ಟ ತೆಂಗಿನಮನೆ.

Batliwalla's Preparations Cover All Your Needs.
A NAME THAT MERIT HAS MADE FAMOUS.

ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

— ಮಲೇರಿಯಾ ಜ್ವರ ನಿವಾರಣ. ರೂ. ೧.

ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.

ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩

ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟಿಕೆಟುಗಳು ಇರುತ್ತವೆ.

ರೂ. ೧—೨—೦. ರೂ. ೧—೪—೦. ೧—೧೨—೦.

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

-CAWASHAPUR, BOMBAY.

ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ಜುಬಿಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

FREE

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಪೂರ್ಣ ಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ಕರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ಯಾಂಪೀಸ್ ಇನಾಮವಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟ್ಯಾಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋಸ್ಟ್ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನ ಶಕೆ ೧೮೫೦ನೆಯ ವಿಭವ ಸಂವತ್ಸರದ ಚೈತ್ರ

ಬ ೯ರಿಂದ ಶನಿವಾರದಿಂದ ವಿಭವ ಸಂ।ರದ ಚೈತ್ರ ಬ ೮ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ವಿಜಾನ (ಸುಗ್ಗಿ)

ತಾರೀಖು	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ. ಉ	ಅಸ್ತ
7	ಶನಿ	೨	೧೯.೩೨	ಸ್ವಾತಿ	೨೬.೧೬	೨೫	6.25	6 42
8	ರವಿ	೩	೨೪.೩೦	ವಿಶಾಖಾ	೩೨.೩೨	೨೬	6 24	6 42
9	ಸೋಮ	೪	೨೯.೩೨	ಅನುರಾಧಾ	೩೮.೪೬	೨೭	6.24	6 42
10	ಕುಜ	೫	೩೩ ೩೧	ಜ್ಯೇಷ್ಠಾ	೪೪. ೦	೨೮	6 23	6.42
11	ಬುಧ	೬	೩೬ ೫೮	ಮೂಲಾ	೪೮.೪೬	೨೯	6 22	6.42
12	ಗುರು	೭	೩೮.೫೯	ಪೂ. ಆ	೫೨. ೧	೩೦	6.22	6 42
13	ಶುಕ್ರ	೮	೩೯.೪೬	ಉ. ಆ	೫೪.೧೬	೧	6,21	6.42

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
30	93— 5	79— 0	0—15	—
31	89 2	73— 0	1—48	—
1	88— 3	71— 7	3—10	—
2	90— 2	75— 9	—	—
3	90— 3	74— 4	0—23	—
4	90— 1	75— 6	—	—
5	91— 0	78— 6	—	—
				138-15

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ
ಹೊಸ ಮಸೂರಿ	7— 0	7—10
ಹೊಸ ಗುಡ್ಡು ...	6— 8	7— 0
ಸುಗ್ಗಿ ...	6— 4	6— 10
ಹೊಸ ರಾಶಿ ...	6— 0	6— 6
ಊರ ಅಮ್ಮರ್ ಬೆಳ್ತಿಗೆ ...	7—4	8— 4
ರಂಗೂನು ಬೆಳ್ತಿಗೆ ಗೋಣಿ ೧ ...	12—10	13 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6—14	7— 0
ಗೋಧಿ ಗೋಣಿ ೧ಕ್ಕೆ ...	15—12	17 4
ಹುರುಳಿಗೋಣಿ ೧ಕ್ಕೆ ...	8— 8	11 - 0
ಕಡಲೆಗೋಣಿ ೧ಕ್ಕೆ ...	10— 0	12 0
ತೊಗರಿಗೋಣಿ ೧ಕ್ಕೆ ...	15— 0	16 0
ತೊಗರಿಬೇಳೆ ಗೋಣಿ ೧ಕ್ಕೆ ...	18— 0	26 0
ಉದ್ದು ಗೋಣಿ ೧ಕ್ಕೆ ...	13— 8	14 0
ಹೆಸರುಗೋಣಿ ೧ಕ್ಕೆ ...	12 0	14 8
ಊರು ಬೆಲ್ಲ ಖಂಡಿ ೧ಕ್ಕೆ ...	40— 0	50 - 0
ಉಪ್ಪು ಗೋಣಿ ೧ಕ್ಕೆ ...	4— 6	4—10
ಕೊಪ್ರ ಖಂಡಿ ೧ಕ್ಕೆ ...	130 0	-
ಕೊಪ್ರ ಹಿಂಡಿ ಖಂಡಿ ೧ಕ್ಕೆ ...	30— 0	40 - 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	48— 8
ಕೊಪ್ರ ಎಣ್ಣೆ ಮುಡಿ ೧ಕ್ಕೆ ...	7—14	9 0
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8— 4
ಹರಳೆ ಎಣ್ಣೆ ಹೆಟ್ಟಿಗೆ ೧ಕ್ಕೆ	7— 2	8 0
ಪೋರಿನ ಸಕ್ಕರೆ ಮುಡಿ ೧ಕ್ಕೆ ...	4—4	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6— 8	6 - 13
ಸಾಸಿವೆ ಮುಡಿ ೧ಕ್ಕೆ ...	8— 0	8— 2
ಕೊತ್ತಂಬರಿ ಮುಡಿ ೧ಕ್ಕೆ ...	6— 4	7— 0
ಕಾಫಿ ಖಂಡಿ ೧ಕ್ಕೆ ...	365— 0	380— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ...	170— 0	220— 0
ಕಾಳುಮೆಣಸು ಖಂಡಿ ೧ಕ್ಕೆ ...	520— 0	-
ಯಾಲಕ್ಕಿ ಮಣ ೧ಕ್ಕೆ ...	65— 0	80— 0
ಗೇರುಬೀಜ ಮುಡಿ ೧ಕ್ಕೆ ...	3— 3	3— 4
ಕಬ್ಬಿಣ ಖಂಡಿ ೧ಕ್ಕೆ ...	37— 8	40— 0
ತಾಂಮ್ರ ತಗಡು ಮಣ ೧ಕ್ಕೆ ...	15— 0	16— 8
ತಾಂಮ್ರ ಪಾತ್ರಗಳು ಮಣ ೧ಕ್ಕೆ	20— 0	21 —
ಚೀನಿ ಬೆಳ್ಳಿ ಸೇರು ೧ಕ್ಕೆ ...	15— 0	-
ಹಿತ್ತಾಳಿ ತಗಡು ಮಣ ೧ಕ್ಕೆ ...	15— 0	16— 8
ಪವನು	13— 8	16—

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪಟನೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು ಎಷ್ಟು ಬೆಲೆ

ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

ಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು. ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಕೊಡಲ್ಪಡುತ್ತವೆ. ಧಾರಣೆ ವಗೈರೆಗೆ ಬರೆಯಿರಿ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
(6-5) ಅವಿನ್ಯೂ ರೋಡು, ಬೆಂಗಳೂರು ಸಿಟಿ.

Diamonds. ವಜ್ರಗಳು **Diamonds.**

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೇಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-28 ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. ನಂಬ್ರ 41/1928.

In the matter of Chandra Shekhara alias Annappaya a minor.

ಕಾನಾರ್ಡು ಲಕ್ಷ್ಮಣ ರಾವ್ ಅರ್ಜಿದಾರ.

ಮತ್ತು

1. ಯಂ. ವೆಂಕಟ್ರಾವ್.
2. ಚಂದ್ರಾವತಿ ಬಾೖ. } ರೆಸ್ಪೊಂಡೆಂಟರು.

ಮೇಲ್ಕಂಡ ಮೈನರನ ದೇಹದ ಗಾರ್ಡಿಯನಳಾಗಿ ೨ನೇ ರೆಸ್ಪೊಂಡೆಂಟಳನ್ನು ಸ್ಥಿರಸೊತ್ತುಗಳ ಬಾಬಿನಲ್ಲಿ ಮುಲ್ಕಿ ಕಸಬಾ ಪೇಟೆಯಲ್ಲಿರುವ ರಾಮ ಭಟ್ಟರ ಮಗ ಅಣ್ಣಪ್ಪ ಭಟ್ಟ ಇವರನ್ನು ಗಾರ್ಡಿಯನರಾಗಿ ನೇಮಿಸಬೇಕೆಂತ ಅರ್ಜಿದಾರನು ದಾಖಲುಮಾಡಿರುವ ಮೇಲ್ಕಂಡ ಅರ್ಜಿಯು ತನ್ನಿ ಬಗ್ಗೆ ಇದೇ ಎಪ್ರಿಲ್ ತಿಂಗಳ ತಾ. ೧೭ಕ್ಕೆ ನಿಶ್ಚಯಿಸಿರುವದರಿಂದ ಆಕ್ಷೇಪ ಉಳ್ಳವರು ತಮ್ಮ ಆಕ್ಷೇಪಗಳನ್ನು ಸದರಿ ವ್ಯಾದೆಗೆ ಸದರಿ ಕೋರ್ಟಿನ ಮುಂದೆ ಜ್ಯಾಹೀರು ಮಾಡತಕ್ಕದ್ದು.

ತಾರೀಖು 2-4-1928. } A. VARADA RAO,
Vakil for Petitioner.

ಪರೀಕ್ಷಿಸಿರಿ! ಕಿಮ್ಮತ್ತು ಅಗ್ಗ — ಖಾತ್ರಿಯಾಗುವದು!! ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರೀ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (SIR)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರೆಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರಜ್ಞ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರಾಗಿ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೂ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

VOLKART BROS ENGINEERS

ಶೂಲೆಯವರು
ಅಕ್ಕಿ ತಯಾರು ಮಾಡುವ

ಯಂತ್ರಗಳು.

ಅಕ್ಕಿಯಾಗುವ ವರೆಗೆ ಎಲ್ಲಾ ಕೆಲಸಗಳೂ ತನ್ನಷ್ಟಕ್ಕೇನೇ ಆಗುವ ಸಣ್ಣ ಯಂತ್ರಗಳು

ಮತ್ತು

ಸಂಪೂರ್ಣವಾದ ದೊಡ್ಡ ಯಂತ್ರದ ಆಯೋಜನೆಗಳು.

ಭತ್ತ ಬಡಿಯಲಿಕ್ಕೆ, ಹೊಟ್ಟು ಪ್ರತ್ಯೇಕಿಸಲಿಕ್ಕೆ, ಅಕ್ಕಿ ಸ್ವಚ್ಛ ಮಾಡಲಿಕ್ಕೆ—ಯಂತ್ರಗಳು, ಬೀಸುಕಲ್ಲುಗಳು ಎಲಿವೇಟರುಗಳು ಕೂಡ.

ಈ ಯಂತ್ರಗಳ ಹೆಚ್ಚಿನ ಮಾಹಿತಿ ಪಡೆವನ್ನು ಅಂಚೆಹಾಸಿಲಿಲ್ಲದೆ ಕೆಳಗಿನ ವಿಳಾಸಕ್ಕೆ ಬರೆದರೆ, ಕಳುಹಿಸಲಾಗುವುದು.

VOLKART BROS
Armenian Street, MADRAS.

ಅನಂತಪುರದ ಕೈಗಾರಿಕೆಗಳು.

ಕೊಪ್ರೇಟ್ ಇಂಡಸ್ಟ್ರೀ ವಿಚಾರಕರಾದ ಡಿ. ನಾರಾಯಣ ರಾಯರು ಅನಂತಪುರವನ್ನು ಸಂದರ್ಶಿಸಿ, ಅಲ್ಲಿಯ ಕೈಗಾರಿಕೆಯನ್ನು ಕಂಡು ಸಂತೋಷಪಟ್ಟು ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುವರು.

ಅನಂತಪುರದಲ್ಲಿ ಕೃಷಿಯು ಪ್ರಾಮುಖ್ಯತೆಯನ್ನು ಪಡೆದಿದೆ. ಹೆಚ್ಚಿನ ಜನರು ಕೃಷಿಮಾಡುತ್ತಲೂ ದನಕರುಗಳನ್ನು ಸಾಕುತ್ತಲೂ ವಾಸಿಸುವರು. ಪ್ರತಿ ಹಳ್ಳಿಯವರು ಅವಲಂಬಿಸುವ ಇತರ ಸಣ್ಣ ಕೈಗಾರಿಕೆಗಳ ಹೊರತು ಇಲ್ಲಿ ನೇಯಿಗೆಯ ಕೈಗಾರಿಕೆಯೂ ಇದೆ. ಬಳೆ ಮಾಡುವುದು, ಕಾಗದ ತಯಾರಿಸುವುದು, ಸಿಲ್ಕ್ ಮಾಡುವುದು, ಬಾಚಣಿಗೆ ಮಾಡುವುದು ಈ ಕೈಗಾರಿಕೆಗಳೂ ಇವೆ. ಇವುಗಳಲ್ಲಿ ಬಳೆ ಮಾಡುವುದು ಮುಖ್ಯವಾಗಿದೆ.

ನೇಯಿಗೆ:—ನೇಕಾರರು ಇಲ್ಲಿ ದಪ್ಪವಾದ ಖಾದಿ ಬಟ್ಟೆಯನ್ನು ತಯಾರಿಸುವರು. ಇದನ್ನು ಹೆಚ್ಚಿನ ರೈತರು ಉಟ್ಟುಕೊಳ್ಳುವರು. ಇನ್ನು ರುಮಾಲಿಗಾಗಿ ತೆಳುವಾದ ವಸ್ತ್ರವನ್ನು ತಯಾರಿಸುವರು. ಇಲ್ಲಿಯ ನೇಕಾರರು ಸ್ವತಂತ್ರರಾಗಿಲ್ಲ. ಧನಿಕರ ವಶರಾಗಿರುವರು. ಅವರ ಕುಡಿಕತನದ ಅಜ್ಞಾನವು ಮಾತ್ರ ಅವರಿಗೆ ನಷ್ಟದಾಯಕವಾಗಿದೆ. ಇವರಿಗಾಗಿ ಒಂದು ಕೊ-ಒಪರೇಟಿವ್ ಸೊಸೈಟಿಯನ್ನು ತಯಾರಿಸುವುದು ಉತ್ತಮವಾಗಿದೆ.

ಕಂಬಳಿ ಕೈಗಾರಿಕೆ:—ಕಂಬಳಿ ಕೈಗಾರಿಕೆಯು ಅಭಿವೃದ್ಧಿಯಾಗಲಿಕ್ಕಿದೆ. ಮೊದಲಾಗಿ ಒಳ್ಳೇ ಉಣ್ಣೆ ಸಿಕ್ಕುವಂತಾಗಬೇಕು. ನೇಯುವ ಮೊದಲು ಉಣ್ಣೆಯನ್ನು ಸ್ವಚ್ಛಮಾಡುವುದಿಲ್ಲ. ಈ ಕುರಿತು ಅವರಿಗೆ ಮಾಹಿತಿಯನ್ನು ಕೊಡಬೇಕು. ಕೊ-ಒಪರೇಟಿವ್ ಸೊಸೈಟಿಗಳನ್ನಿಟ್ಟು ವ್ಯಾಪಾರಕ್ಕಾಗಿ ನೇಕಾರರಿಗೆ ಸಾಲ ಕೊಟ್ಟರೆ ಒಳ್ಳೆದಾಗಬಹುದು.

ಬಳೆಯ ಕೈಗಾರಿಕೆ:—ಬಳೆಯ ಕೈಗಾರಿಕೆಯಲ್ಲಿ ಹೆಚ್ಚಿನ ಖರ್ಚು ಕಟ್ಟಿಗೆಗಾಗಿ ತಗಲುವದು. ಕಟ್ಟಿಗೆಯನ್ನು ಮಿತಿಮೀರಿದ ಕ್ರಯಕ್ಕೆ ಪಡಕೊಳ್ಳುವುದರಿಂದ ಈ ಕೈಗಾರಿಕೆಯಿಂದ ಬಹಳ ಲಾಭವಾಗುವುದಿಲ್ಲ. ಫೊರೆಸ್ಟ್ ಇಲಾಖೆಯವರು ಕಡಿಮೆ ದರದಲ್ಲಿ ಇವರಿಗೆ ಕಟ್ಟಿಗೆಯನ್ನು ಉಪಯೋಗಿಸಿ ಕೊಟ್ಟರೆ ನಿಜವಾಗಿಯೂ ಇವರ ಕೈಗಾರಿಕೆಯು ಬೆಳಕಿಗೆ ಬರುವುದು. ಬಹು ಹೆಚ್ಚು ಬಳೆಗಳೇ ತಯಾರಾಗುವ ಕಾರಖಾನೆಗಳಿರುವ ಪಟ್ಟಣಗಳಿಗೆ ಇವರನ್ನು ಕೊಂಡೊಯ್ದು ಉತ್ತಮ ಕ್ರಮಗಳನ್ನು ಇವರಿಗೆ ಕಲಿಸಬೇಕು.

ಕಾಗದದ ಕೈಗಾರಿಕೆ:—ಈಗ ಅವರು ಉಪಯೋಗಿಸುವ ಅಕ್ಕಿಯ ಗೋಂದಿನ ಬದಲು ಬೇರೆ ಯಾವದಾದರೂ ಅಗ್ಗವಾದ ಗೋಂದನ್ನು ಉಪಯೋಗಿಸಿದರೆ ಮತ್ತು ನಯವಾದ ಕಾಗದವನ್ನು ತಯಾರಿಸಿದರೆ ಲಾಭವಾಗುವುದು. ಅಲ್ಲಿ ತಯಾರಾಗುವ ಕಾಗದಕ್ಕೆ ಗಿರಾಕಿ ಇದೆ. ಮಿಲ್ಲುಗಳಲ್ಲಿಯೇ ಕಾಗದ ತಯಾರಿಸುವದೆಂಬುದನ್ನು ಒಬ್ಬೊಬ್ಬರಿಗೆ ತಿಳಿಸಿದರೆ ಅವರು ತಮ್ಮ ಕ್ರಮಗಳಲ್ಲಿ ಸುಧಾರಣೆಯನ್ನು ಮಾಡಿಕೊಳ್ಳುವರು.

ಹರಳೆಣ್ಣೆ ತೆಗಿಯುವದು:—ಜಿಲ್ಲೆಯಲ್ಲಿ ಹೆಚ್ಚಾಗಿ ಹರಳೆ ಗಿಡಗಳನ್ನು ಬೆಳಸಿ ಎಣ್ಣೆಯನ್ನು ತಯಾರಿಸುವರು. ಗಾಣಿಗರು ಇತರ ಹಣ್ಣುಗಳಿಂದಲೂ ಎಣ್ಣೆ ತೆಗಿಯುವರಾದರೂ ಅದು ಬಹು ಸ್ವಲ್ಪ. ಇನ್ನು ಹರಳ ಬೀಜಗಳನ್ನು ರಫ್ತು ಮಾಡುತ್ತಾರೆ. ಮರದ ಗಾಣಗಳ ಬದಲು ಕಬ್ಬಿಣದ ಗಾಣದ ಉಪಯೋಗವನ್ನು ಅವರಿಗೆ ಕಲಿಸಿದರೆ ಕಡಿಮೆ ಖರ್ಚಿನಲ್ಲಿ ಎಣ್ಣೆಯೂ ಹಿಂಡಿಯೂ ಸಿಕ್ಕುವುದು.

ಹೊಸ ಕೈಗಾರಿಕೆಗಳು:—ಲೋಳೆ ಸರವು ಅಲ್ಲಿ ತುಂಬಾ ಬೆಳೆಯುವುದು. ಅದರ ನಾರನ್ನು ತೆಗೆದು ಹಗ್ಗವನ್ನು ಮಾಡುವರು. ನಾರನ್ನು ತೆಗೆದು ಒಣಗಿಸಿ ಇಂಗ್ಲೆಂಡಿಗೆ ಕಳುಹಿಸುವುದೂ ಉಂಟು. ದಕ್ಷಿಣ ಭಾಗದಲ್ಲಿ ತೆಂಗು ಮತ್ತು ಅಡಿಕೆಯು ಚೆನ್ನಾಗಿ ಬೆಳೆಯುವುದು. ಅಲ್ಲಿಯೇ ಮಲ್‌ಬೆರಿಯನ್ನೂ ಬೆಳಸಬಹುದು. ಸರಕಾರದವರ ಸಹಾಯವು ದೊರಕಿದರೆ ದನಗಳನ್ನು ಸಾಕಿ ಹಾಲು ತೆಗೆದು ಕಂಡೆನ್ಸ್‌ಡ್ ಮಿಲ್ಕನ್ನೂ ತಯಾರಿಸಿದರೆ ಹೆಚ್ಚಿನ ಲಾಭವಾಗುವದರಲ್ಲಿ ಸಂದೇಹವಿಲ್ಲ.

ವಿದ್ಯೆಯಲ್ಲಿಯೂ ಕೈಗಾರಿಕೆ ವಿದ್ಯೆಯಲ್ಲಿ ಬಹಳ ಅಭಿವೃದ್ಧಿಯನ್ನು ಹೊಂದಿವೆ. ಇಂಗ್ಲಿಷ ಸರಕಾರದವರು ಬಲವಾದ ಸೈನ್ಯವನ್ನು ಇಟ್ಟಿರುವುದರಿಂದ ಹಿಂದೂ ದೇಶವು ಅನ್ಯ ದೇಶೀಯರ ಹಾವಳಿಯಿಂದ ದೂರವಾಗಿಯದೆ.

ಸ್ಫುಟ ವಿಚಾರಗಳು.

ಮಂತ್ರಿಗಳೂ ಸ್ಯಾಮನ್ ಕಮಿಶನ್ನೂ.

ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸ್ಯಾಮನ್ ಕಮಿಶನ್ನಿನೊಡನೆ ಸಹಕರಿಸಬಾರದಾಗಿ ಠರಾಯಿಸಿರುವಾಗ ಮಂತ್ರಿಗಳು ಯಾವ ರೀತಿಯಲ್ಲಿ ಈ ಕಮಿಶನ್ನಿನೊಡನೆ ವರ್ತಿಸಬಹುದೆಂಬುದು ಈಗ ಕೆಲವು ದಿನಗಳಿಂದ ಚರ್ಚಿಸಲ್ಪಡುತ್ತಿದೆ. ಮೊನ್ನೆ ಮದ್ರಾಸ್ ಕೌನ್ಸಿಲಿನಲ್ಲಿ ಮಂತ್ರಿಗಳಿಗೆ ಮೆಂಬರರು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕಿತ್ತು. ಆದರೆ ಮದರಾಸಿನ ಈಗಿನ ಮಂತ್ರಿಗಳು ಡಾ| ಸುಬ್ಬರಾಯನರ ಅಧೀನತೆಯಲ್ಲಿ, ಈ ಮೊದಲಿನ ಬ್ರಾಹ್ಮಣೇತರ ಮಂತ್ರಿಗಳಿಗಿಂತ ಶ್ರೇಷ್ಠತರರಾಗಿ ಕಾಣುವುದಿಲ್ಲ. ಮದರಾಸು ಮಂತ್ರಿಮಂಡಲವು ಯಾರನ್ನು ಪ್ರತಿನಿಧಿಸಿ, ಅವರ ಗೌರವಾಧಿಕಾರಗಳನ್ನು ರಕ್ಷಿಸಬೇಕಿದ್ದಿತೊ, ಆ ಚುನಾಯಿಸಲ್ಪಟ್ಟ ಪ್ರಜಾ ಪ್ರತಿನಿಧಿಗಳು ಆಜ್ಞಾಪಾಲನೆಯನ್ನು ಮಾಡುವುದಕ್ಕಿಂತ, ಸರಕಾರದ ದಾಕ್ಷಿಣ್ಯಕ್ಕೆ ಬೀಳುವುದೇ ಲಾಭಕರವೆಂದೂಹಿಸುವಂತೆ ಕಾಣುವುದು. ಮದರಾಸು ಮಂತ್ರಿಮಂಡಲದ ಈ ವರ್ತನವೇ ಡಾಯರ್ಕಿಗೆ ಸಾಕಷ್ಟು ಖಂಡನೆಯಾಗಿದೆ, ಸರಕಾರವು ಹಿಂದೀಯರೊಳಗಿನ ಭೇದಗಳನ್ನೂ ಸ್ವಾರ್ಥಗಳನ್ನೂ ಯಾವ ರೀತಿಯಲ್ಲಿ ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದೆಯೆಂದೂ ಇಂತಹ ವಿಷಯಗಳಿಂದ ತಿಳಿದು ಬರುವುದು. ಸಂಯುಕ್ತ ಪ್ರಾಂತ್ಯದ ಮಂತ್ರಿಗಳಾದರೂ ಇವರಿಗಿಂತ ಹೆಚ್ಚಿನ ಜವಾಬ್ದಾರಿಯ ಭಾವನೆಯನ್ನು ತೋರಿಸಿ ಸ್ವಾಭಿಮಾನವನ್ನು ಉಳಿಸಿಕೊಂಡಿರುವರು. ಈ ಪ್ರಾಂತ್ಯದ ಮಂತ್ರಿಗಳು ಸಂಪೂರ್ಣ ಅಸಹಕಾರವನ್ನು ಕೈಕೊಳ್ಳಲು ಸಿದ್ಧರಿಲ್ಲವಾದರೂ, "ಕೌನ್ಸಿಲಿನ ಠರಾವಿಗೆ ಅನುಗುಣವಾಗಿ ನಮಗೂ ಸ್ಯಾಮನ್ ಕಮಿಶನ್ನಿಗೂ ಯಾವುದೊಂದು ಸಂಬಂಧವೂ ಇರುವುದಿಲ್ಲ" ಎಂದು ಅವರು ಸ್ಪಷ್ಟಪಡಿಸಿದುದು ಇತರ ಕಡೆಗಳ ಮಂತ್ರಿಗಳಿಗೂ ಒಂದು ಪಾಠವಾಗುವುದು. ಮಧ್ಯಪ್ರಾಂತ್ಯದ ಮಂತ್ರಿಮಂಡಲವೂ ಸ್ಯಾಮನ್ ಕಮಿಶನನ್ನು ಬಹಿಷ್ಕರಿಸುವುದಾಗಿದೆ. ಹೀಗೆ ಎರಡು ಕೌನ್ಸಿಲುಗಳ ಸ್ಪಷ್ಟ ಧೋರಣವು ಮದರಾಸ ಮಂತ್ರಿಗಳ ಮುಂದಿದ್ದರೂ ಅದನ್ನು ಅನುಕರಿಸುವಷ್ಟು ನಿಸ್ವಾರ್ಥತೆಯು ಮದರಾಸ ಮಂತ್ರಿಗಳಲ್ಲಿಲ್ಲ. ಅದರಲ್ಲೂ ಇತ್ತೀಚೆಗೆ ಮದರಾಸು ಮಂತ್ರಿಮಂಡಲವನ್ನು ಸೇರಿದವರಿಗೆ ಕೌನ್ಸಿಲು ಕಡೆಗಿನ ಜವಾಬ್ದಾರಿಗಿಂತಲೂ ಮಂತ್ರಿಪದವಿಯ ಲಾಭದ ಮೇಲೆಯೇ ದೃಷ್ಟಿ ಛಟ್ಟಿಯಾಗಿದೆ. ಒಂದು ಬಾರಿ ಕಾಂಗ್ರೆಸ್ಸಿನ ಆಧಾರಸ್ಥಾನವಾಗಿದ್ದ ಬಂಗಾಳದಲ್ಲಿಯೂ ಕೌನ್ಸಿಲಿನ ಪ್ರಾಬಲ್ಯವು ಕುಂದಿದೆ. ಅಲ್ಲಿಯ ಮಂತ್ರಿವರ್ಗವು ಮದರಾಸಿನಂತೆಯೆ ಇದೆ. ಅಲ್ಲಿಯ ಕೌನ್ಸಿಲಿಗೂ ಈ ಮಂತ್ರಿಗಳ ವಿರೋಧವಾಗಿ ಅವಿಶ್ವಾಸವನ್ನು ಪ್ರಕಟಿಸಲು ಸಾಧ್ಯವಾಗಿಲ್ಲ. ಪಂಜಾಬ, ಬರ್ಮಾದಲ್ಲಿ ಹ್ಯಾಗೂ ಸಹಕಾರದ ಕಮಿಟಿಗಳು ಕೂಡ ಏರ್ಪಾಡಾದವು. ಅಂತೂ ಸಮಗ್ರ ಹಿಂದೂಸ್ಥಾನದ ಪರಿಸ್ಥಿತಿಯು ಹೀಗಿದೆ. ಆದರೆ ದೇಶದ ಸಮಸ್ತ ಧುರೀಣರೂ ಸ್ಯಾಮನ್ ಕಮಿಶನ್ನಿನ ಕಡೆಗೆ ಈಗ ಸದ್ಯಕ್ಕೆ ಒಮ್ಮತದವರಾಗಿರುವುದರಿಂದ ದೇಶದ ಪ್ರತಿರೋಧವು ಬಲಗುಂದದೆಂದು ಆಶಿಸುವೆವು.

ಹಿಂದೂಸ್ಥಾನದಲ್ಲಿ ಕೂಲಿಗಳ ಜೀವನ.

"ನಾಗರೀಕತೆಗೆ ಇದೊಂದು ಕಲಂಕ"ವೆಂದು ಹಿಂದೂಸ್ಥಾನಕ್ಕೆ ಬಂದು ಹಿಂದಿರುಗಿ ಹೋದ ಮಜೂರ ಪಕ್ಷದ ಪಾರ್ಲಿಮೆಂಟ ಮೆಂಬರರು ಹಿಂದೂಸ್ಥಾನದ ಕೂಲಿಗಳ ವಿಷಯದಲ್ಲಿ ಅಭಿಪ್ರಾಯಪಡುವರು. ಸುಮಾರು ೩೦೦ ಮಿಲಿಯ ಜನರಿಗೆ ಸರಿಯಾದ ಊಟಉಡುಗೆಗಳಿಲ್ಲ; ನಿಲ್ಲಲಿಕ್ಕೆ ಸರಿಯಾದ ನೆಲೆಯಿಲ್ಲ. ಮಿಲ್ಯಾವಧಿ ಕೂಲಿಗಳು—ಗಂಡಸರು, ಹೆಂಗಸರು, ಮಕ್ಕಳು ಕೂಡ—ಗೋಳಾಡಿಸಲ್ಪಡುತ್ತಾರೆ; ಅವರು ಅವರ ಯೋಗ್ಯವಾದ ಮಜೂರಿಯಿಂದ ವಂಚಿಸಲ್ಪಡುತ್ತಾರೆ" ಎಂದು ಈ ಪಾರ್ಲಿಮೆಂಟ ಮೆಂಬರರು ಮಜೂರರ ಪರಿಸ್ಥಿತಿಯನ್ನು ಚಿತ್ರಿಸಿರುತ್ತಾರೆ. ಆದರೆ "ದೇಶದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ನಮಗೇನೂ ಹೇಳಲಿಕ್ಕಿರುವುದಿಲ್ಲ"ವೆಂದೊಂದು ಮಾತು; ಮೇಲೆ ಅಂತಃಕಲಹಗಳಿದ್ದ, ಮೋಸದ ರಾಷ್ಟ್ರೀಯತ್ವವಾಗಲಿ, ಬಿಳಿ, ಕಪ್ಪು, ಕೆಂಪು ಸರಕಾರಗಳಾಗಲಿ ಈ ಹತಾಶಜನಕವಾದ ಪರಿಸ್ಥಿತಿಯನ್ನು ಸುಧಾರಿಸಲಾರವು" ಎಂಬ ಇನ್ನೊಂದು ಮಾತೂ, ಬ್ರಿಟಿಷರು ಯಾವ ಪಕ್ಷದವರೇ ಆದರೂ ಹಿಂದೀ ರಾಜಕೀಯ ಪರಿಸ್ಥಿತಿಯು ಮಟ್ಟಿಗೆ ಒಂದೇ ಆಗಿರುವರೆಂಬುದನ್ನು ತೋರುವುದು. ಇವರು "ಸೋಶಲಿಸಮ್"ನ ಔದಾರ್ಯದಿಂದ ಹಿಂದೀ ಮಜೂರ ಸಮಾಜದೊಳಗಿನ ಸಂಕಷ್ಟ ನ್ಯೂನತೆಗಳನ್ನು ಕಂಡುಹಿಡಿಯಲು ಬಂದುದು ಅವರ ಪರೋಪಕಾರಪರಾಯಣತೆಯನ್ನು ತೋರಿಸುವುದಾದರೂ ಅವರು ಅವುಗಳನ್ನು ಪರಿಹರಿಸಲು ಸೂಚಿಸುವ ಉಪಾಯಗಳು ಮಾತ್ರ ರಾಷ್ಟ್ರೀಯದೃಷ್ಟ್ಯಾ ಹಾನಿಕರವಾಗಿವೆ. ಹಿಂದೂಸ್ಥಾನದ ಮಜೂರರಿಗೆ ಏನಾದರೂ ಸುಖ ಸುಧಾರಣೆಗಳು ದೊರಕಬೇಕಾದರೆ ಸರಕಾರದ ಧೋರಣದ ದೃಷ್ಟಿಯು ಬದಲಾಗಬೇಕೆಂಬ ಅತ್ಯಂತ ಪ್ರಮುಖ ವಿಷಯವನ್ನೇ ಈ ವಿಲಾಯತಿ ಪ್ರವಾಸಿಗಳು ಕಾಣದೆ, ರಾಜಕೀಯ ಸ್ಥಿತಿಯಲ್ಲಿ ಕೈಹಾಕುವುದಿಲ್ಲವೆಂಬ ತಮ್ಮ ಸುಗುಣವನ್ನು ಹೊಗಳಿಕೊಳ್ಳುತ್ತಿರುವರು. ಇವರು ಇಷ್ಟು ದೂರ ಬಂದು ಇಷ್ಟು ಶ್ರಮಿಸಿ ಕಂಡುಕೊಂಡ ರೋಗಗಳಿಗೆ ಸೂಚಿಸಿದ ಮದ್ದು ದೇಶಕ್ಕೆ ಬಹಳ ಹಾನಿಯೊದ್ದುವಂತಹದುದಾಗಿದೆ. ಎಲ್ಲಾ ಮಜೂರರ ಕೂಲಿಯನ್ನು ನಾಲ್ಕು ಪಾಲಷ್ಟು ಹೆಚ್ಚಿಸಬೇಕೆಂಬುದೇ ಇವರ ಸೂಚನೆ. ಇದನ್ನು ಅನುಸರಿಸಿದಲ್ಲಿ ಕೂಲಿಗಾರರಿಗೆ ಈಗ ಸಿಕ್ಕುವ ಕೂಲಿಯೂ ಹೋಗಿ ಅರ್ಧ ಉಪವಾಸದಿಂದ ಸಂಪೂರ್ಣ ಉಪವಾಸಕ್ಕೆ ಬೀಳಬೇಕಾಗುವುದೆಂಬುದನ್ನು ಇವರು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಹಿಂದೀ ಕೂಲಿಕಾರರ ಶ್ರಮಶಕ್ತಿಯು ವಿಲಾಯತಿ ಕೂಲಿಕಾರರಿಗಿಂತ ಎಷ್ಟೋ ಪಾಲು ಕಡಿಮೆಯೆಂದು ಎಲ್ಲರೂ ಒಪ್ಪುವರು. ಹಾಗಿರುವಾಗ ಅವರ ಕೂಲಿಯನ್ನು ಪಾಶ್ಚಾತ್ಯ ಕೂಲಿಯಂತೆ ಏರಿಸಿದರೆ ಹಿಂದೂಸ್ಥಾನದ ಸಮಸ್ತ ಕೈಗಾರಿಕೆಗಳೂ ಕ್ಷಿಪ್ರದಲ್ಲಿಯೇ ನಾಮಾವಶೇಷವಾಗುವುದರಲ್ಲಿ ಸಂದೇಹವಿಲ್ಲ. ಇದರಿಂದ ದೇಶದ ಸಾಂಪತ್ತಿಕ ಮತ್ತು ರಾಜಕೀಯ ಸ್ಥಿತಿಗಳು ಕೆಡುವುವು. ಮುಖ್ಯವಾಗಿ ಬೇಕಾದುದೆಂದರೆ ಕೈಗಾರಿಕೆಗಳ ಮತ್ತಷ್ಟು ಪ್ರಚಾರ; ಕೆಲಸವಿಲ್ಲದವರ ಸಂಖ್ಯೆಯು ಕಡಿಮೆಯಾಗಬೇಕಾದುದು ಮುಖ್ಯ. ಎರಡನೆಯದಾಗಿ ಅವರಿಗೆ ವಿದ್ಯಾಭ್ಯಾಸ. ಕೈಗಾರಿಕೆಗಳಿಗೆ ಸರಕಾರೀ ಪ್ರೋತ್ಸಾಹವಿರಲೇಬೇಕು. ಆದರೆ ಹಿಂದೀ ಸರಕಾರವು ಕೈಗಾರಿಕೆಗಳ ಪ್ರಸಾರಕ್ಕೆ ವಿರೋಧವಾಗಿಯೇ ಇದೆ ಎಂಬುದನ್ನು ಸರಕಾರದ ಮೆಂಬರರಾದ ಸರ್. ಬೆಸಿಲ್ ಬ್ಲೆಕೆಟ್ಟರೇ ಒಪ್ಪಿರುತ್ತಾರೆ. ವಿದ್ಯಾಭ್ಯಾಸ ಪ್ರಚಾರಕ್ಕೂ ಸರಕಾರವು ವಿರೋಧವಿದೆ ಎಂಬುದು ಕೇವಲ ಅನುಭವದ ಮಾತು. ಈ ಸ್ಥಿತಿಯಲ್ಲಿ ಮಜೂರರನ್ನು ಸುಧಾರಿಸುವುದು ಕಷ್ಟವಿದೆ. ಹಿಂದೂಸ್ಥಾನಕ್ಕೆ ಬಂದಿದ್ದ ಪಾರ್ಲಿಮೆಂಟ್ ಮೆಂಬರರು "ಟ್ರೇಡ್ ಯೂನಿಯನ್ನ"ಗಳ ಸ್ಥಾಪನೆ ಮತ್ತು ಸಂಬಳ ಬಡಾಯಿಸುವ ಸೂಚನೆಯಲ್ಲದೆ ಬೇರಾವುದನ್ನೂ ಸೂಚಿಸುವುದಿಲ್ಲ. ಆದರೆ ಮೇಲಿನ ಸೂಚನೆಯಿಂದ ಇವು ರಾಷ್ಟ್ರಘಾತುಕವಾಗಿ ಹಿಂದೀ ಮಜೂರರ ಅನ್ನವನ್ನು ಕಿತ್ತು ವಿಲಾಯತಿ ಮಜೂರರಿಗೆ ಇತ್ತಂತಾಗುವುದೆಂದು ತಿಳಿಯುವುದು. ಆದುದರಿಂದ ಈ ಬಿಳಿ ಪ್ರವಾಸಿಗಳು ಹಿಂದೀ ಹಿತದ ವಿಷಯವಾಗಿ ಮಾತನಾಡುವಾಗ ಅವರನ್ನು ಎಚ್ಚರದಿಂದ ಕೇಳಬೇಕು.

ಹಿಂದೀ ವಿಮೇ ಸಂಘಗಳು.

ಕಳೆದ ತಾ. ೮ರಲ್ಲು ಮುಂಬಾಯಿಯಲ್ಲಿ ಹಿಂದೀ ವಿಮೇ ಸಂಘಗಳ ಪರಿಷತ್ತು ಕೂಡಿದ್ದಿತು. ಹಿಂದೂಸ್ಥಾನದಲ್ಲಿ ಪರದೇಶದ ವಿಮೇ ಸಂಘಗಳು ಬಹಳ ವಹಿವಾಟಗಳನ್ನು ನಡಿಸುತ್ತಿವೆ. ಜೀವ ವಿಮೆಯಲ್ಲಿ ಹಿಂದೀ ಕಂಪೆನಿಗಳು ಜನರಲ್ಲಿ ಹೆಚ್ಚು ಹೆಚ್ಚಾಗಿ ವಿಶ್ವಾಸಕ್ಕೆ ಪಾತ್ರವಾಗುತ್ತಿವೆಯಾದರೂ ಸಾಮಾನುಗಳ ವಿಮೆಯಲ್ಲಿ ಪರದೇಶೀಯ ಕಂಪೆನಿಗಳ ವಹಿವಾಟುಗಳೇ ಹೆಚ್ಚಾಗಿವೆ. ಮತ್ತು ಜೀವ ವಿಮೆಯಲ್ಲಿಯೂ ದೊಡ್ಡ ದೊಡ್ಡ ಐವೇಜಿನ ವಿಮೆಗಳು ಶ್ರೀಮಂತರಿಂದ ಈ ಪಾಶ್ಚಾತ್ಯ ಕಂಪೆನಿಗಳಿಗೇನೇ ಕೊಡಲ್ಪಡುತ್ತಿವೆ. ಹಿಂದೂಸ್ಥಾನದ ವಿಮೇ ವಹಿವಾಟದಲ್ಲಿ ಬರೇ ಶೇಕಡಾ ೫ ಮಾತ್ರ ಹಿಂದೀ ಕಂಪೆನಿಗಳ ಕೈಯಲ್ಲಿದೆಯೆಂಬುದು ವಿಮೇ ವ್ಯವಹಾರಗಳ ಶೋಚನೀಯ ಸ್ಥಿತಿಯನ್ನು ತೋರಿಸುತ್ತಿದೆ. ವಿಮೇ ವಹಿವಾಟವು ಇತರ ವ್ಯಾಪಾರಗಳಂತೆಯೇ ಮುಖ್ಯವಾದುದು. ದೇಶದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಬಗ್ಗೆ ಹೇಗೆ ಪರದೇಶೀ ವಸ್ತು ಬಹಿಷ್ಕಾರದ ಚಳವಳವು ನಡಿಯುವುದೊ, ಹಾಗೆಯೇ ವಿಮೇ ಕಂಪೆನಿಗಳ ಬಹಿಷ್ಕಾರವೂ ಅಗತ್ಯವಿದೆ. ಪರದೇಶದ ವಿಮೇ ಕಂಪೆನಿಗಳನ್ನು ಪ್ರೋತ್ಸಾಹಿಸಿದುದರಿಂದ ಎರಡು ತರದಲ್ಲಿ ನಷ್ಟವಿದೆ; ವಹಿವಾಟದ ಲಾಭವು ಪರದೇಶಕ್ಕೆ ಹೋಗುವುದು ಮಾತ್ರವಲ್ಲ. ವಹಿವಾಟದಿಂದ ಜಮೆಯಾದ ಪ್ರೀಮಿಯಮಿನ ಮೊಬಲಗು ಈ ದೇಶದಿಂದ ಹೊರಗೆ ಹೋಗಿ ಪರದೇಶೀಯ ವ್ಯಾಪಾರಗಳಿಗೆ ಸಹಾಯಕ್ಕೆ ಬೀಳುವುದು. ಆದುದರಿಂದ ಹಿಂದೂಸ್ಥಾನದ ಪ್ರಮುಖ ಸಂಸ್ಥೆಗಳು ತಮ್ಮ ಮೂಲಕ ಆಗಬೇಕಾದ ವಿಮೇಯನ್ನು ಹಿಂದೀ ಕಂಪೆನಿಗಳ ಕೈತಪ್ಪದಂತೆ ನೋಡಿಕೊಳ್ಳುವುದು ಅವಶ್ಯಕ. ಹಿಂದೀ ಕಂಪೆನಿಗಳು ಯೋಗ್ಯ ಭದ್ರತೆಯಿಂದ ತಮ್ಮ ವಹಿವಾಟವನ್ನು ಬೆಳೆಯಿಸತಕ್ಕದ್ದು. ಈ ಬಗ್ಗೆ ವಿಮೇ ಕಂಪೆನಿಗಳು ಒಟ್ಟಾಗಿ ಪ್ರಯತ್ನಿಸಲಾರಂಭಿಸಿದುದು ಒಂದು ಶುಭಚಿಹ್ನೆ. ಈ ಬಾರಿ ಜೀವ ವಿಮೇ ಸಂಘಗಳ ಒಂದು ಹೊಸ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು; ಇವರೆಲ್ಲರೂ ಒಟ್ಟು ಕೂಡಿ ಸರಕಾರ ಮೂಲಕವೂ ಹಿಂದೀ ವಿಮೇ ವಹಿವಾಟಗಳಿಗೆ ಹೊಸ ಸೌಕರ್ಯಗಳನ್ನು ಹೊಂದಲು ಪ್ರಯತ್ನಿಸುವುದಾಗಿ ತಿಳಿಯುತ್ತೇವೆ. ತಮ್ಮ ಸಂಘ ಶಕ್ತಿಯಿಂದಲೂ ಸರಕಾರದ ಸಹಾಯದಿಂದಲೂ ಜನತೆಯ ಪ್ರೋತ್ಸಾಹದಿಂದಲೂ ಹಿಂದೀ ವಿಮೇಯು ಹೆಚ್ಚು ಅಭಿವೃದ್ಧಿಯನ್ನು ಹೊಂದುವುದೆಂದು ಆಶಿಸುವೆವು.

ತಾಲೂಕು ಬೋರ್ಡುಗಳ ನಿವೃತ್ತ ಅಧ್ಯಕ್ಷರು.

ನಮ್ಮ ಜಿಲ್ಲೆಯ ತಾಲೂಕು ಬೋರ್ಡು ಚುನಾವಣೆಗಳು ಮುಗಿದು ಅಧ್ಯಕ್ಷ ಚುನಾವಣೆಯು ಆರಂಭವಾಗಿಯದೆ. ಈ ಚುನಾವಣೆಗಳನ್ನು ಲಕ್ಷಿಸುವಾಗ, ತಾಲೂಕು ಬೋರ್ಡಿನ ಕಾರ್ಯಕ್ಷೇತ್ರದಿಂದ ತತ್ಕಾಲಕ್ಕೆ ನಿವೃತ್ತರಾಗುವ ಎರಡು ಅಧ್ಯಕ್ಷರ ಆಡಳಿತವನ್ನು ನೆನಪಿಗೆ ತಾರದಿರಲಾರೆವು. ಪ್ರಥಮತಃ ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದ ರಾ| ರಾಮಕೃಷ್ಣ ಪೂಂಜರು. ಇವರ ಆಡಳಿತದ ವಿಷಯದಲ್ಲಿ ಬಂದ ಒಂದು ಪತ್ರವ್ಯವಹಾರವನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಜಿಲ್ಲೆಯ ತಾಲೂಕು ಬೋರ್ಡು ಅಧ್ಯಕ್ಷರೊಳಗೆ ಪ್ರತ್ಯೇಕ ವೈಯಕ್ತಿಕತೆ (individuality) ಇದ್ದವರೆಂದರೆ ಇಬ್ಬರೇ. ಇಬ್ಬರಲ್ಲಿ ಒಬ್ಬರು ಶ್ರೀ| ರಾಮಕೃಷ್ಣಪೂಂಜರಾಗಿದ್ದರು; ಮತ್ತೊಬ್ಬರು ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದ ಶ್ರೀ| ವಿಠಲ ಕಾಮತ್‌ರಾಗಿದ್ದರು. ಒಬ್ಬರು ಚುನಾಯಿಸಲ್ಪಡದೆ ಪುನಃ ತಾಲೂಕು ಬೋರ್ಡನ್ನು ಸೇರಲಾರರಾದರು; ಇನ್ನೊಬ್ಬರು ಚುನಾವಣೆಗೇನೇ ನಿಲ್ಲದೆ ತಾಲೂಕು ಬೋರ್ಡನ್ನು ಸೇರುವ ಇಚ್ಛೆಯುಳ್ಳದವರಾಗಿರುವರು. ತಾಲೂಕು ಬೋರ್ಡುಗಳಿಗೆ ಸಿಕ್ಕುವ ಅಧಿಕಾರಗಳೂ, ಅವುಗಳ ಕೈಯಲ್ಲಿ ಬರುವ ಹಣವೂ ಅತ್ಯಲ್ಪವಾಗಿದ್ದು, ಅವುಗಳಿಂದ ವಿಶೇಷತರದ ಪ್ರಜಾಸೇವೆಯ ಕಾರ್ಯಗಳು ನಡಿಯುವುದು ಕಷ್ಟವಾಗಿರುವುದಾದರೂ, ಅಂತಹ ಪರಿಮಿತ ಕ್ಷೇತ್ರದೊಳಗಿನ ಇವರಿಬ್ಬರ ಆಡಳಿತಗಳನ್ನು ನೋಡಿದರೆ, ಇತರ ಅಧ್ಯಕ್ಷರಿರುವಾಗ ಇರದ ಒಂದು ತರದ ಪ್ರತ್ಯೇಕ ವೈಯಕ್ತಿಕತೆ ಇದೆ. ಆದರೆ ಶ್ರೀ| ಪೂಂಜರವರು ತಮ್ಮ ಸ್ವತಂತ್ರ ಧೋರಣವನ್ನು ಅಗತ್ಯವಿದ್ದುದಕ್ಕಿಂತಲೂ ಹೆಚ್ಚು ತೋರಿಸಿಕೊಂಡಂತೆ ಕಾಣುವುದು; ಅವರು ಹಾಗೆ ಮಾಡದೆ ಇದ್ದುದಾದರೆ ಅವರ ಆಡಳಿತೆಯು ಹೆಚ್ಚು ಕಾರ್ಯಕಾರಿಯೂ ಯಶಸ್ವಿಯೂ ಆಗುತ್ತಿತ್ತು. ಶ್ರೀ| ವಿಠಲ ಕಾಮತರವರು ವಿಚಾರಶೀಲರೂ, ಹಿತಕರವೂ ಆದ ಸ್ವತಂತ್ರ ಧೋರಣವನ್ನು ಪಾಲಿಸಿದುದರಿಂದ, ಭಿನ್ನಾಭಿಪ್ರಾಯಗಳಿದ್ದರೂ, ಆಡಳಿತೆಯಲ್ಲಿ ಯಾವುದೊಂದು ಕುಂದುಕೊರತೆಯುಂಟಾಗದಂತೆ ನೋಡಿಕೊಳ್ಳಲು ಸಮರ್ಥರಾದರು; ಜಿಲ್ಲೆಯ ತಾಲೂಕು ಬೋರ್ಡು ಆಡಳಿತಗಳಲ್ಲಿ, ಶ್ರೀ| ಕಾಮತರದೇ ಶ್ರೇಷ್ಠತಮವಿರುವುದೆಂಬ ಯಶಸ್ಸನ್ನೂ ಅವರು ಸಂಪಾದಿಸಿದಂತೆ ಕಾಣುತ್ತಿದೆ. ಶ್ರೀ| ಕಾಮತರು ತಮ್ಮ ಸ್ವತಂತ್ರ ಧೋರಣದಿಂದಲಾದರೂ ಬೋರ್ಡು ಮೆಂಬರರೆಲ್ಲರ ಗೌರವಾದರಕ್ಕೆ ಪಾತ್ರರಾಗಿ ನಿವೃತ್ತರಾಗುವ ಸಮಯದಲ್ಲಿ ಬಹುಮಾನಿತರಾದರು. ಆದರೆ ಶ್ರೀ| ರಾಮಕೃಷ್ಣಪೂಂಜರು ನಿವೃತ್ತರಾಗುವ ಸಮಯದಲ್ಲಿಯಾದರೂ ಮೆಂಬರರ ಸೌಹಾರ್ದಕ್ಕೆ ಪಾತ್ರರಾಗಲೆಚ್ಛಿಸಿದಂತೆ ಕಾಣುವುದಿಲ್ಲ. ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರ ಪರಸ್ಪರ ವಿರೋಧವಾದ ಹುಕುಂಗಳು ಆಚ್ಛೆರಿಗೆ ಬೋರ್ಡು ನೌಕರರ ಕೈಗೆ ಹೋದುದು ಬೋರ್ಡು ಆಡಳಿತದ ಗೌರವಕ್ಕೆ ಒಂದು ಕುಂದಾಗಿರುತ್ತದೆ.

ನೋಟಗಳು.
NOTE...S.

ಈ ವರ್ಷದ ಮುನಿಸಿಪಾಲಿಟಿಯ ಮಾರ್ಗಗಳು ಬಹಳ ಗಟ್ಟಿ. ಇನ್ನು ಕೆಲವು ವರ್ಷಗಳ ವರೇಗೆ ಮುಟ್ಟಬೇಕೆಂತಿಲ್ಲ. ಹ್ಯಾಗೂ ಮೋಟಾರುಗಳಿಗೆಲ್ಲ ಟೊಳ್ಳು ಟಾಯರುಗಳು. ಇನ್ನು ಇವುಗಳಿಂದ ಮಾರ್ಗಗಳಿಗೆ ಹಾನಿಯಾಗುವಂತಿಲ್ಲ.

• • • •

ವಾಹನ ಮುಂತಾದುವುಗಳಲ್ಲಿ ಸಂಚಾರಮಾಡಿದರೆ ಮೈ ಎಲುಬುಗಳು ಕಳಚಿದಂತಾಗುವುದು. ಕಾಲ್ನಡೆಯಲ್ಲಿ ಹೋದರೆ ಕಾಲ್ಬೆರಳುಗಳಲ್ಲಿ ಕೆಂಪು ಹೊರಡುವುದು.

• • • •

ಇನ್ನು ಮಾರ್ಗದ ಮೇಲ್ಭಾಗದಲ್ಲಿ ಬಿದ್ದಿರುವ ಪ್ರತಿ ಒಂದು ಜಲ್ಲಿ ಕಲ್ಲಿಗೆ ಡೇಂಜರ್ ಲೈಟ್ ಇಡುವುದು ಉತ್ತಮ.

• • • •

ಇನ್ನೂ ಇಲೆಕ್ಷನಿನ ಗೌಜಿ ಶಾಂತವಾಗಲಿಲ್ಲ. ಉಡುಪಿ ತಾಲೂಕು ಬೋರ್ಡಿನ ಕೋಟ ಸರ್ಕಲಿನ ಇಲೆಕ್ಷನು ಆಯಿತು. ಆದರೆ ಡೆಲಿಟ್ ಪಾಳ್ಸ ತೆಗಿಯಲಿಕ್ಕೆ ಇಂಜಕ್ಷನ್. ವಾದಿಗಳ ಸಾಹಸ ಇಲ್ಲಿ ವರೇಗೆ. ಹ್ಯಾಕೋರ್ಟು ವರೇಗೆ. ಅಲ್ಲಿಯೂ ಸಬ್ ಕೋರ್ಟಿನಂತೆಯೇ ಆದರೆ, 'ಇಲಿಯ ನೆವನದಿಂದ ಮನೆಗೆ ಬೆಂಕಿ ಇಟ್ಟಂತೆ' ಆಗುವುದು.

ಅನುಕ್ರಮಣಿಕೆ.

ಅಗ್ರಲೇಖ,
ಪ್ರಜಾಸೇವೆ
ವಿದೇಶ, ಒಳದೇಶ ವರ್ತಮಾನ
ಸ್ಫುಟವಿಚಾರಗಳು
ನೋಟಿಗಳು
ವರ್ತಮಾನ ಸಂಗ್ರಹಗಳು
ದಕ್ಷಿಣ ಕನ್ನಡ—ಮಂಗಳೂರು, ಫರಂಗಿಪೇಟೆ, ಅರಳ ಮೂಲರ ಪಟ್ಟಣ, ಉಡ್ಪಿ, ಮುಲ್ಕಿ, ಧರ್ಮಸ್ಥಳ ಕಲ್ಮಂಜ ಬಂಟವಾಳ, ಪುತ್ತೂರು ೭
ವಿವಿಧ ಸಮಾಚಾರಗಳು ೭-೮
ಹೊಸದುರ್ಗ ೮
೧೯ನೇ ಶತಮಾನದಲ್ಲಿ ಇಂಡಿಯಾದಲ್ಲಿ ಆದ ಅಭಿವೃದ್ಧಿ ೯
ಅನಂತಪುರದ ಕೈಗಾರಿಕೆಗಳು
ಪತ್ರವ್ಯವಹಾರ ೧, ೨, ೩, ೧೦

ಸ್ವದೇಶಾಭಿಮಾನಿ.

ಶಕ ೧೮೫೦ ಚೈತ್ರ ಬ ೧ಯು ಶುಕ್ರವಾರ.

ಪ್ರಜಾಸೇವೆ.

ಮನುಷ್ಯನಲ್ಲಿ ಸ್ವಾರ್ಥವು ನಿಸರ್ಗಬದ್ಧವಾದರೂ, ಪರಾರ್ಥದ ಆಶಯವೂ ಅಷ್ಟೇ ನಿಸರ್ಗಬದ್ಧವಾಗಿದೆ. ಫಲವಾಗಿ ಪ್ರತಿ ಒಬ್ಬನಲ್ಲಿ ಸಂದರ್ಭಾನುಸಾರವಾಗಿ ಸ್ವಾರ್ಥವನ್ನು ತಿರಸ್ಕರಿಸಿ ಪರಾರ್ಥವನ್ನು ಸಾಧಿಸಬೇಕೆಂಬ ಮನಸ್ಸಾಗುವುದು. ಅದರಲ್ಲೂ ಎಳೆ ವಯಸ್ಸಿನಲ್ಲಿ, ಆದರ್ಶಗಳ ಸಾಹಸವೇ ದಿನ ದಿನವೂ ಕಿವಿಯಲ್ಲಿ ಧ್ವನಿಸಲ್ಪಟ್ಟು ಸ್ವಾರ್ಥ ಸಾಧನೆಯ ಜವಾಬ್ದಾರಿಯು ತನ್ನ ಮೇಲಿಲ್ಲದಿರುವಾಗ, ಪ್ರಜಾ ಸೇವೆಯು ಅತ್ಯಂತ ಉದಾರ ಭಾವನೆಯು ಸಾಮಾನ್ಯತಃ ಎಲ್ಲರಲ್ಲಿಯೂ ಜಾಗೃತವಾಗುವುದು.

"ಅನುಭವಸ್ಥ"ರೆನ್ನಿಸಿಕೊಳ್ಳುವ ಹಿರಿಯರು ತರುಣರು ಪ್ರಜಾ ಸೇವೆಗಾಗಿ ಸ್ವಾರ್ಥತ್ಯಾಗವನ್ನು ಮಾಡುವಾಗ ಅವರ ಹುಚ್ಚುತನವನ್ನೂ ಅವಿಚಾರವನ್ನೂ ನಿಂದಿಸುವರು. ಆದರೆ ಇಂತಹ "ಹುಚ್ಚುತನ" ಮತ್ತು "ಅವಿಚಾರ"ವಿಲ್ಲದಿದ್ದರೆ ತಾರುಣ್ಯಕ್ಕೆ ತಾರುಣ್ಯವೆನ್ನಲಾಗುವುದಿಲ್ಲ. ಜೀವನದ ಅತ್ಯಂತ ಮೃದುವೂ ಆದರ್ಶಮಯವೂ ಆದ ಈ ಸನ್ಮೋಹಕ ವಿಭಾಗವು ತನ್ನ ಆ ಹುಚ್ಚು ಅವಿಚಾರಗಳನ್ನು ತೋರಿಸದೆ ಪ್ರಾಯಸ್ಥರ ಅನುಭವಗಳನ್ನೇ ತೋರಿಸಿದ್ದಾದರೆ, ಪ್ರಪಂಚವು ಕಾವ್ಯ ಭಾವನೆಯಿಂದ ಅನಧೃತವಾಗುತ್ತಿತ್ತಲ್ಲದೆ, ನಿಸರ್ಗವು ಅದರ ಅಂತರ್ಯದ ಮಾಧುರ್ಯದಿಂದ ವಂಚಿಸಲ್ಪಡುತ್ತಿದ್ದಿತು.

ಮಹಾತ್ಮಾಜೀಯವರು ದೇಶದ ಎಳೆ ನೆತ್ತರಿಗೆ ಸ್ವಾರ್ಥ ತ್ಯಾಗ ಮತ್ತು ಸಹನೆಯ ಕಠಿಣವಾದ ಸಂದೇಶವನ್ನು ಕಳುಹಿಸಿದಾಗ, ನಿಸರ್ಗದ ಆ ಕಾವ್ಯ ಕಲ್ಪನೆಯನ್ನೇ ಹುರಿದುಂಬಿಸಿದರು. ಆ ಕಾರಣದಿಂದಲೇ ಸಮಗ್ರ ಭಾರತವು ಒಮ್ಮೆಂದೊಮ್ಮೆ ಚೇತನಾತ್ಮಕವಾಯಿತು. ಮಾನವ ಹೃದಯಾಂತರಾಳದ ಆ ಮಹಾನ್ ಅನುಭೂತಿಯ ಪ್ರಚಂಡ ಪ್ರವಾಹದ ಮುಂದೆ "ಅನುಭವಸ್ಥರೂ" ಸಂಸಾರದ ಜವಾಬ್ದಾರಿಯನ್ನು ಕ್ಷಣಕ್ಷಣವೂ ತಿಳಿದುಕೊಳ್ಳುವವರೂ, "ಅಪ್ರತಿಮ ವಿಜ್ಞರೂ" ಮೂಕರಾಗಿ ಹೋದರು. ಕರ್ಮಾಧಿಕಾರವು ನಮ್ಮದು; ಕರ್ಮ ಫಲವು ಈಶ್ವರನಿಗರ್ಪಿತವಾದುದು. ಆ ಮಹಾ ಚಳವಳವು ಎಷ್ಟೇ ವ್ಯರ್ಥವಾಯಿತೆಂದು ಹೇಳುವುದಾದರೂ, ಅದು ಸಂಜನಿಸಿ ಪ್ರೇರಿಸಿದ ಮಹಾನ್ ಭಾವನೆಯ ಛಾಯೆಯು ಸದಾ ಕಾಲವೂ ಭಾರತ ವರ್ಷಕ್ಕೆ ಅಭಿಮಾನದ ಸ್ಮೃತಿಯಾಗಿ ಉಳಿಯುವುದು.

ಸ್ವಾರ್ಥಿಯನ್ನು ಸ್ವಾರ್ಥ ಸಾಧನೆಯಿಂದ ತಡೆಯುವುದು ಎಷ್ಟು ಕಷ್ಟವೋ ಜನ ಸೇವೆಯಲ್ಲಿ ದೀಕ್ಷಾಬದ್ಧನಾದವನ ಹೃದಯ ಸ್ಪಂದನವನ್ನು ತಡೆಯುವುದು ಅಷ್ಟೇ ಕಷ್ಟವಾಗಿದೆ. ಅದು ಜೀವನದ ಅತ್ಯಂತ ಮಹತ್ವದ ಸಮಯ. ಅಲ್ಲಿ ಮಾನವ ಮನಸ್ಸಿನಲ್ಲುಂಟಾಗಬಹುದಾದ ಸ್ವರ್ಗೀಯ ಕಲ್ಪನೆಯು ಒಮ್ಮೆಂದೊಮ್ಮೆ ಅರಳುವುದು; ಅಲ್ಲಿ ಅತ್ಯುಜ್ವಲವಾದ ಸ್ವರ್ಗೀಯ ಸ್ವಪ್ನವು ಮಾನವ ದೃಷ್ಟಿಯ ಮುಂದೆ ವಿಸ್ತರಿಸುವುದು. ಯಾರು ಅದನ್ನು "ಅನುಭವಸ್ಥರ" ಬುದ್ಧಿವಾದಕ್ಕಾಗಿ ತಿರಸ್ಕರಿಸಿ ಸಂಸಾರದ ರೈಲು ಹಾದಿಯನ್ನು ಅನುಸರಿಸುವರೋ ಅವರು ಜೀವನದ ಭಂಗಾರದಂತಹ ಒಂದು ಸಂದರ್ಭವನ್ನು ಕಳೆದುಕೊಳ್ಳುವರು.

ಮಹಾತ್ಮಾಜೀಯವರ ಮಹತ್ವವು ಇದರಲ್ಲಿಯೇ ಗೂಢವಾಗಿದೆ. ಪ್ರಪಂಚದಲ್ಲಿ ಐಹಿಕ ಸುಖಗಳನ್ನು ವಿಸ್ತರಿಸಿದವರು ಮಹತ್ವವನ್ನು ಹೊಂದುವುದಿಲ್ಲ. ಒಬ್ಬರು ಎಷ್ಟು ಸ್ವಾರ್ಥ ತ್ಯಾಗಗಳನ್ನು ರಚಿಸಿರುವರು ಎಂಬುದರ ಮೇಲೆ ಲೋಕಪ್ರತಿಷ್ಠೆಯು ಮಾನವು ರಚಿಸಲ್ಪಟ್ಟಿದೆ. ಮಹಮ್ಮದ್, ಕ್ರಿಸ್ತ, ಬುದ್ಧರಾದಿಯಾಗಿ ಎಲ್ಲರ ಮಹತ್ವವೂ ಇದರಲ್ಲಿದೆ. ಮಹಾತ್ಮಾಜೀಯವರೂ ತಮ್ಮ ಆದರ್ಶ ಜೀವನ ಕ್ರಮದಿಂದಲೂ ನಿಸ್ವಾರ್ಥದ ಆಶಯಗಳಿಂದಲೂ ಲೋಕೋಪಕಾರಕ್ಕಾಗಿ ಅನುಯಾಯಿಗಳನ್ನು ಹೊಂದಿ ಲೋಕದಲ್ಲಿ ಶ್ರೇಷ್ಠರೊಳಗೊಬ್ಬರಾದುದು ಆಶ್ಚರ್ಯವಲ್ಲ.

ಸಮಾಜ ಸೇವೆಗೆಂದು ತಮ್ಮ ಜೀವನ ಕುಸುಮವನ್ನು ಅತ್ಯುಜ್ವಲ ಪ್ರಖರವಾದ ಅಗ್ನಿಯಲ್ಲಿ ಬಾಡಿಸುವವರು ಎಷ್ಟೇ ಕ್ಷುದ್ರರೆಂದು ತಾತ್ಕಾಲಿಕವಾಗಿ ತೋರಬಹುದಾದರೂ ಅಂತಹ [illegible] ವಿಶಾಲ ವಿಶ್ವ ಸಂಸಾರದ ಸೂತ್ರವು ಭ್ರಷ್ಟ ಮಾಡಲ್ಪಟ್ಟಿರುವುದೆಂಬುದನ್ನು ತಿಳಿಯುವವರು ವಿರಳ. ಸೌಲಭ್ಯದಲ್ಲಿ ನಾವು ಒಬ್ಬನನ್ನು ನೋಡಿ, ಹುಚ್ಚ, ಸ್ವಾರ್ಥತ್ಯಾಗನೆಂದು [illegible] ಹೇಳುವೆವು. ಆದರೆ [illegible] ಹುಚ್ಚು ಸ್ವಾರ್ಥತ್ಯಾಗದ [illegible] ನಮಗೆ [illegible].

ಪ್ರಜಾಸೇವೆಯು ಉತ್ಕೃಷ್ಟೆಯು ಸಾಮಾನ್ಯವಾದುದಲ್ಲ; ಅದನ್ನು ಎಲ್ಲರೂ ಎಲ್ಲಾ ಕಾಲದಲ್ಲಿಯೂ ಇಟ್ಟುಕೊಳ್ಳ [illegible] ಕೇವಲ ಕೆಲವರೇ ಅದಕ್ಕಾಗಿ ಶ್ರಮಿಸಬಲ್ಲರು. ಆದರೆ ಹಿಂದೂಸ್ಥಾನದಲ್ಲಿ ಪ್ರಜಾಸೇವೆಯ ಉತ್ಕೃಷ್ಟತೆಯು ಸರಿಯಾಗಿ ಅನುಭವಿಸಲ್ಪಟ್ಟಿಲ್ಲ. [illegible] ರಾಜಭಕ್ತಿಯ ಪ್ರಭಾವವೂ, [illegible] ತತ್ವ ಸಂಭವಕ್ಕೆ ದೊಡ್ಡ ಪ್ರತಿಬಂಧಕವಾಗಿದೆ. [illegible] ರಾಷ್ಟ್ರತ್ವದಲ್ಲಿ ದಿನದಿನವೂ ವಿಸ್ತರಿಸಲಾಗುತ್ತಿರುವ ಆನಿರ್ಬಂಧಿತ ಸ್ವತಂತ್ರ ಮತತತ್ವವು ಈ ಪ್ರಜಾಸೇವೆಯ ಭಾವನೆಯನ್ನು ಅತ್ಯಂತ ಶ್ರೇಷ್ಠ ಸ್ಥಾನಕ್ಕೆ ಅಭಿವೃದ್ಧಿಪಡಿಸಿರುವದು. ಈ ಭಾವನೆಯು ತೀಕ್ಷ್ಣವಾದ ರಾಷ್ಟ್ರೀಯ ಪ್ರೇಮದಿಂದ ಪ್ರಬಲವೂ ಪರಿಮಿತವೂ ಆಗಿ ಕಾರ್ಯಕಾರಿಯಾಗಿ ಕೆಲಸಮಾಡುತ್ತಿದೆ.

ಮುಖ್ಯತಃ ಪ್ರಜಾ ಸೇವೆಯು ಅತ್ಯಂತ ಮುಖ್ಯವಾದುದು. ಅನುಭವಕ್ಕೆ ಅದನ್ನು ಅಭಿವರ್ಧಿಸಿದರೆ ಲೋಕ ಶಾಂತತೆಯು ಅತಿ ಶಕ್ತಿವಾಗುವುದು. ಪ್ರಜಾ ಸೇವೆಯನ್ನು ರಾಷ್ಟ್ರೀಯತೆಯ ಪರಿಮಿತಿ (Limitations of Nationalism)ಯಿಂದ ಪ್ರತ್ಯೇಕಿಸಿದರೆ, ಅದು ಜಾಗತಿಕವಾಗಿಯೂ ಲೋಕಶಾಂತತೆಗೆ ಕಾರಣವಾಗುವುದು.

ವಿದೇಶ ವರ್ತಮಾನ.

— [illegible] ಅರ್ಲ್ ಆಫ್ [illegible] ಮುಂತಾದ ಪದವಿಗೆ ತನ್ನ ಮಗನಾಗಿರುವನು ಏರಿಸಿರುವರು.

— [illegible] ಸ್ವಲ್ಪ ಕಾಲದ ಹಿಂದೆ [illegible] ಹೋಗುತ್ತಿರುವಾಗ [illegible] ಆತನನ್ನು ಮುತ್ತಿ [illegible] ಒಂದು [illegible] ಆತನನ್ನು ಬದುಕಿಸಿತು.

— ಬರ್ಲಿನ್ ಯುನಿವರ್ಸಿಟಿಯಲ್ಲಿ [illegible] ಎಂಬವಳು ಫಿಲೊಸೊಫಿಯ ಪ್ರೊಫೆಸರಳಾಗಿ ನೇಮಕಹೊಂದಿರುವಳು. ವಿಶ್ವವಿದ್ಯಾಲಯದಲ್ಲಿ ಹೆಂಗಸರು ಪ್ರೊಫೆಸರಳಾದುದು ಇದೇ ಮೊದಲು.

— ಅಫಘಾನಿಸ್ತಾನದ ಅಮೀರರು ಲಂಡನಿನಿಂದ [illegible] ಹೊರಟರು.

— ಸ್ವಿಟ್ಜರ್ಲಂಡಿನಲ್ಲಿ [illegible] ಅನ್ಯಾಯವನ್ನು ಮಾಡಿದವರನ್ನು ಕೂಡಲೆ ಕೊಂದುಹಾಕುತ್ತಿದ್ದರು. ಈಗ ಆ ಕಾನೂನನ್ನು ನಿಲ್ಲಿಸಿರುವರು. ಆದರೆ [illegible] ಕೆಲಸಬಿಟ್ಟು ಹೋಗುವಂತೆ [illegible] ಅಧಿಕಾರಿಗಳಿಗೆ ಎಮು [illegible] ಮರಣದ ಶಿಕ್ಷೆಯಿಲ್ಲವಂತೆ.

— ನರ್ಸ್ ಕೆವಲ್‌ಳ ಮರಣದ ಕುರಿತು ತೆಗೆಯಲ್ಪಟ್ಟ "ಡಾನ್" ಎಂಬ ಬ್ರಿಟಿಷರ ಫಿಲ್ಮನ್ನು ಪ್ರದರ್ಶಿಸಬಾರದೆಂದು ಬೋರ್ಡ್ ಆಫ್ ಫಿಲ್ಮ್ ಸೆನ್ಸೊರಿನವರು ಅಪ್ಪಣೆಕೊಟ್ಟದ್ದಾಗ್ಯೂ, ಲಂಡನ್ ಮತ್ತು ಮಿಡಲ್ ಸೆಕ್ಸ್ ಕೌಂಟಿ ಕೌನ್ಸಿಲಿನ ಪ್ರತಿನಿಧಿಗಳು ಅದರ ಪ್ರದರ್ಶನವನ್ನು ಮಾಡಿಸಿದರು. ಇದು ಗುಟ್ಟಾಗಿ ನಡೆದುದು. ತಮ್ಮ ಅಲ್ಲಲ್ಲಿ ಫಿಲ್ಮಿನ ತುಂಡನ್ನು ತೆಗೆದು ಬಹಿರಂಗವಾದ ಪ್ರದರ್ಶನವನ್ನು ಮಾಡಬಹುದೆಂದು ಅವರು ನಿರ್ಣಯಿಸಿದರು.

— ಲೋರ್ಡ್ ಚೆನ್ಸೆಲರರಾಗಿದ್ದ ಲೋರ್ಡ್ ಕೇವ್‌ರು ತನ್ನ ೬೯ನೇ ವಯಸ್ಸಿನಲ್ಲಿ ಮೊನ್ನೆ ತಾನೆ ಮೃತಪಟ್ಟರು.

— ಆಫ್ರಿಕಾ ಸಂಚಾರವನ್ನು ಮಾಡುತ್ತಿದ್ದ ಸರ್. ಎ. ಕೊಬಹಾಮರು ಕೇಪ್ ಟೌನಿಗೆ ಬಂದಿರುವರು. ಇದರಿಂದ ಅವರ ಹೊರಗಣ ಅರ್ಧ ಸಂಚಾರವು ಮುಗಿದಂತಾಯಿತು.

— ಟರ್ಕಿಯ ಕಾನ್‌ಸ್ಟೆಂಟಿನೋಪಲಿನಲ್ಲಿ ಅನೇಕ ಭೂಕಂಪಗಳುಂಟಾದವು, ಸ್ಮಾಯರ್ನ ಎಂಬಲ್ಲಿ ನಾಲ್ವತ್ತು ಜನರು ಮೃತಪಟ್ಟರು. ಅನೇಕರು ಗಾಯಹೊಂದಿದರು. ಎರಡು ಹಳ್ಳಿಗಳೇ ನಾಶವಾಗಿರುವವು. ಇದರಿಂದ ಜನರು ಹೆದರಿ, ರಾತ್ರೆ ಮನೆಯಲ್ಲಿರಲು ಕೇಳದೆ ವಿಶಾಲವಾದ ಮೈದಾನುಗಳಲ್ಲಿ ಮಲಗಿದ್ದರು. ಒಟ್ಟು ೪೦ ಕಟ್ಟಡಗಳು ಭೂಮಿ ಬಿದ್ದಿರುವವು. ೪೦೦ ಕಟ್ಟೋಣಗಳಿಗೆ ಹಾನಿಯಾಗಿದೆ.

— ಲೆಫ್ಟಿನೆಂಟ್ ಕರ್ನಲ್ ಜೋರ್ಜ್ ಸ್ಟಿವರ್ಟ್, ಪೆಲೆಸ್ಟೈನ್ ಸರಕಾರದ ಮುಖ್ಯ ಸೆಕ್ರೆಟರಿಗಳಾಗಿದ್ದು ಏಡನಿನ ರೆಸಿಡೆಂಟರೂ, ಕಮಾಂಡರ್ ಇನ್ ಚೀಫರೂ ಆಗಬೇಕೆಂದು ರಾಜರು ನಿರ್ಣಯಿಸಿರುವರು. ಏಡನಿನ ಪೊಲಿಟಿಕಲ್ ಮತ್ತು ಮಿಲಿಟರಿ ಆಡಳಿತವನ್ನು ಬ್ರಿಟಿಷ ಸರಕಾರದವರೂ, ಒಳಗಣ ಮುನಿಸಿಪಲ್ ಆಡಳಿತವನ್ನು ಇಂಡಿಯಾ ಸರಕಾರದವರೂ ನೋಡಿಕೊಳ್ಳುವರು.

— ಇಟೆಲಿಯ ಮೇಜರ್ ಡಿ. ಬರ್ನ ಹಾರ್ಡಿಯವರು ವಿಮಾನದಲ್ಲಿ ಕುಳಿತು ಒಂದು ಗಂಟೆಯಲ್ಲಿ ೫೧೨ ಕಿಲೋಮಿಟರ್ ದೂರ ಹಾರಿರುವರು. ಇದು ಸುಮಾರು ೩೩೦ ಮೈಲುಗಳಿಗೆ ಹತ್ತಿರವಾಯಿತು. ಇಷ್ಟು ಜೋರಾಗಿ ಇದು ವರೆಗೆ ಯಾರೂ ಹಾರಿದ್ದಿಲ್ಲ.

— ಟೆಹೆರಾನಿನ ಶಹರು ಉರಿಸ್ತಾನ ಮತ್ತು ಪರ್ಷಿಯದ ನೈಋತ್ಯ ಭಾಗವನ್ನು ಸಂದರ್ಶಿಸುವದಕ್ಕಾಗಿ ಬರುವ ವಾರದಲ್ಲಿ ಹೊರಡುವರು.

ಒಳದೇಶ ವರ್ತಮಾನ.

— ಮುಂಬಾಯಿಯ ಇಂಡಿಯನ್ ಮರ್ಚೆಂಟ್ಸ್ ಚೆಂಬರಿನ ಪ್ರೆಸಿಡೆಂಟರಾಗಿ ಮಿಸ್ಟರ್. ಎಚ್. ಪಿ. ಮೋಡಿಯವರು ಆರಿಸಲ್ಪಟ್ಟಿರುವರು. ಮೊದಲು ಪ್ರೆಸಿಡೆಂಟರಾಗಿದ್ದ ಸರ್. ಪುರುಷೋತ್ತಮದಾಸ ಠಾಕೂರ್‌ದಾಸರು [illegible] ರಾಜಿನಾಮೆ ಕೊಟ್ಟಿದ್ದರು.

ಡಿಲ್ಲಿಯಿಂದ ಏಳು ಮೈಲು ದೂರದಲ್ಲಿ ಒಕಾಲಾ ಎಂಬಲ್ಲಿ ಯಮುನಾ ನದಿಯಲ್ಲಿ ಸ್ನಾನಮಾಡುತ್ತಿರುವಾಗ ಸಣ್ಣ ಹುಡುಗನೋರ್ವನು ಜಾರಿ ನೀರಿನಲ್ಲಿ ಬಿದ್ದನು. ಆತನನ್ನು ಬದುಕಿಸಬೇಕೆಂದು ಆತನ ಅಣ್ಣನು ನೀರಿಗಿಳಿಯಲು, ಪ್ರವಾಹವು ಇವರಿಬ್ಬರನ್ನೂ ಸೆಳೆದುಕೊಂಡು ಹೋಯಿತು. ಇಬ್ಬರೂ ಮೃತಪಟ್ಟರು.

— ಅಖಿಲಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಳನವು ಹರಿದ್ವಾರದ ಗುರುಕುಲ ವಿದ್ಯಾಲಯದಲ್ಲಿ ೫ನೇ ತಾರೀಕಿನಿಂದ ಪ್ರಾರಂಭವಾಯಿತು. ಇದೇ ಸಮಯದಲ್ಲಿ ಒಂದು ಕವಿತಾ ಸಮ್ಮೇಳನವೂ ಜರಗಿತು.

ಜಘ್ನಾದಲ್ಲಿ ಕಳೆದ ೨೮ನೇ ತಾರೀಕಿನಿಂದ ಒಂದು ಖಾದಿ ಪ್ರದರ್ಶನವು ನಡೆಯಿತು.

— ಮದರಾಸಿನ ಓಲ್ ಇಂಡಿಯಾ ಕಾಂಗ್ರೆಸ ಕಮಿಟಿಯವರು ಒಂದು ಹೊಸ ಸಬ್ ಕಮಿಟಿಯನ್ನು ಏರ್ಪಡಿಸಿರುವರು.

— ಈಸ್ಟ್ ಇಂಡಿಯನ್ ರೈಲ್ವೇ ಕೆಲಸಗಾರರೊಂದಿಗೆ ಸಹಕರಿಸುವದಕ್ಕಾಗಿ ಕಲಕತ್ತದ ಜೆಸೊಪ್ ಕಂಪೆನಿಯ ೧೫೦೦ ಕೆಲಸಗಾರರು ತಮ್ಮ ಕೆಲಸಕ್ಕೆ ಮುಷ್ಕರವನ್ನು ಹಾಕಿದರು.

— ಎಸೆಂಬ್ಲಿ ಮೆಂಬರರು ಕೂಡಿ ಪ್ರಾಂತ್ಯವನ್ನು ಸಂದರ್ಶಿಸಲಿಕ್ಕೆಂದು ಹೋಗಿದ್ದವರು ಡೇರಾ ಇಸ್ಮಾಯಿಲ್ ಖಾನಿಗೆ ತಲುಪಿದರು. ಅವರಲ್ಲಿ ಪಂಡಿತ ನೆಹರು, ಶ್ರೀನಿವಾಸ ಅಯ್ಯಂಗಾರ್, ಅಮರನಾಥ ದತ್ತ, ಕಿದ್ವಾಯಿ, ಜೋಶಿ, ಮುಂಜೆ, ಕೇಳ್ಕರ್ ಮೊದಲಾದವರು ಇದ್ದರು. ಇವರನ್ನು ಹಿಂದೂ ಸಭೆಯವರೂ, ಕಾಂಗ್ರೆಸ್ ಸಭೆಯವರೂ, ಕಿಲಾಫತ್ ಕಮಿಟಿಯವರೂ ವಿಜೃಂಭಣೆಯಿಂದ ಎದುರುಗೊಂಡರು. ಅವರನ್ನು ಸ್ವಾಗತಿಸುವಾಗ ಸರ್ವರೂ "ವಂದೇ ಮಾತರಮ್" ಎಂದು ಘೋಷವನ್ನು ಮಾಡಿದರು.

— ಮದರಾಸಿನ ಗವರ್ನರರಾದ ಲೋರ್ಡ್ ಗೋಶನ್ನ್ ದೊರೆಗಳು ಡಿಲ್ಲಿಯನ್ನು ಬಿಟ್ಟು ಮಾಯವ್ಯಗಡಿ ಪ್ರಾಂತ್ಯವನ್ನು ಸಂದರ್ಶಿಸಲು ಹೋಗಿರುವರು.

— ಆಂಧ್ರಾ ಯುನಿವರ್ಸಿಟಿಗೆ ಜಯಪುರದ ಮಹಾರಾಜರು ಪ್ರೊ ಚೆನ್ಸೆಲರರಾಗಿ ಆರಿಸಲ್ಪಟ್ಟಿರುವರು. ಮೊದಲು ಪೀಠಾಪುರದ ಮಹಾರಾಜರಿದ್ದರು.

— ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ಆರನೇ ಅಧಿವೇಶನದ ಸ್ವಾಗತ ಮಂಡಳಿಯವರು ಪ್ರೊಫೆಸರ್ ಪರಾಂಜಪೆಯವರನ್ನು ಸ್ವಾಗತಾಧ್ಯಕ್ಷರನ್ನಾಗಿ ಚುನಾಯಿಸಿರುವರು.

— ಈ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಇನ್ನೊಮ್ಮೆ ಜರಗಿಸುವರಂತೆ. ಮೊದಲು ನಡೆದ ಪರೀಕ್ಷೆಯ ಪ್ರಶ್ನಾಪತ್ರಗಳು ಪರೀಕ್ಷೆಗಿಂತ ಮೊದಲೇ ಪ್ರಕಟವಾಗಿ ಕೆಲವು ವಿದ್ಯಾರ್ಥಿಗಳಿಗೆ ದೊರಕಿದ್ದವು. ಮುಂದೆ ನಡೆಯುವ ಪರೀಕ್ಷೆಯು ಎಪ್ರಿಲ್ ತಿಂಗಳ ಅಖೈರಿನಲ್ಲಿ ನಡೆಯುವದು.

— ಅಲ್ಲಹಾಬಾದಿನ ಮುನಿಸಿಪಾಲಿಟಿಯವರು ಗೋಹತ್ಯೆ ಮಾಡಬಾರದೆಂದು ಮೊನ್ನೆ ತಾನೆ ಒಂದು ಕಾನೂನನ್ನು ಜ್ಯಾರಿಗೆ ತಂದಿದ್ದರು. ಇದು ಸರಿಯಲ್ಲವೆಂದು ಅಲ್ಲಿಯ ಮುಸಲ್ಮಾನರು ಮಿ ಫರೂಕಿಯವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ನಿರ್ಣಯಿಸಿದರು.

— ಪಂಡಿತ ಜವಹರಲಾಲನೆಹರುರವರು ಅಲ್ಲಹಾಬಾದಿನ ಸ್ತ್ರೀ ವಿಶ್ವವಿದ್ಯಾಲಯದ ಶಂಖುಸ್ಥಾಪನೆ ಮಾಡಿದರು. ಹಿಂದೂ ಸ್ತ್ರೀಯರು ವಿದ್ಯಾವಂತರಾಗಿ ಸ್ವತಂತ್ರರಾಗದ ವಿನಹ ಹಿಂದೂಸ್ಥಾನಕ್ಕೆ ಸ್ವರಾಜ್ಯವು ಲಭಿಸದೆಂದು ನೆಹರುರವರು ತನ್ನ ಭಾಷಣದಲ್ಲಿ ವಿವರಿಸಿ ಹೇಳಿದರು.

ದಕ್ಷಿಣ ಕನ್ನಡ.

ಮಂಗಳೂರು:— ಇಲ್ಲಿಯ ಉರ್ವ ಮಾರಿಗುಡಿಯ ವರ್ಷಾವಧಿ ಮಾರಿಪೂಜೆಯು ಕಳೆದ ಮಂಗಳವಾರ ದಿನ ಜರಗಿತು. ಈ ಸಂದರ್ಭದಲ್ಲಿ ಶ್ರೀ ಜ್ಞಾನೋದಯ ಸಮಾಜದ ಸೆಕ್ರೆಟರಿಗಳಾದ ಶ್ರೀ ಮೋನಪ್ಪ ತಿಂಗಳಾಯರು ಪಶುಬಲಿ ನಿಷೇಧದ ಕುರಿತು ಭಾಷಣವನ್ನು ಮಾಡಿದುದರಿಂದ ಇಷ್ಟು ವರ್ಷಗಳಲ್ಲಿ ನಡೆದ ಪಶುಬಲಿಗಿಂತ ಈ ವರ್ಷದ ಪಶುಬಲಿಯು ಕಡಿಮೆಯಾಯಿತು. ಶ್ರೀ ತಿಂಗಳಾಯರ ಪರಿಶ್ರಮವು ಫಲಕಾರಿಯಾಗದೆ ಹೋಗದು. ಮೆಲ್ಲ ಮೆಲ್ಲನೆ ಪಶುಬಲಿಯು ನಿಲ್ಲುವದರಲ್ಲಿ ಸಂದೇಹವಿಲ್ಲ.

ತಾರೀಕು ೩೧—೩—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೩೫ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೨, ಮಲೇರಿಯದಿಂದ ೧, ಅತಿಸಾರದಿಂದ ೨, ಶ್ವಾಸಕೋಶದ ರೋಗದಿಂದ ೧೧, ಇತರ ಎಲ್ಲಾ ಕಾರಣಗಳಿಂದ ೧೯. ಜನನ ಸಂಖ್ಯೆಯು ಒಟ್ಟು ೪೮.

ತಾಲೂಕು ಬೋರ್ಡಿನವರು ಸೆಂಕ್ಷನ್ ಮಾಡಿದ ಪ್ರಕಾರ ಅಳ್ಳ, ಭಜೀರ, ಮತ್ತು ಕಲ್ಲಡ್ಕ ಈ ಮೂರು ಸ್ಥಳಗಳಲ್ಲಿ ಕೆಲಸ ಮಾಡಲು ಮೂವರು ಸೂಲಗಿತ್ತಿಯವರು ಬೇಕಾಗಿದ್ದದರಿಂದ ಅನುಭವಹೊಂದಿದ ಸೂಲಗಿತ್ತಿಯವರು ಆದಷ್ಟು ಬೇಗನೆ ತನಗೆ ಅರ್ಜಿಮಾಡಬೇಕೆಂದೂ ಪ್ರತಿಯೊಬ್ಬ ಸೂಲಗಿತ್ತಿಗೆ ತಿಂಗಳಿಗೆ ಹದಿನೈದರಂತೆ ಸಂಬಳವೂ, ಅದು ಹೊರತು ಒಂದು ಹೆರಿಗೆಗೆ ನಾಲ್ಕಾಣೆಯಂತೆ ಇನಾಮು ದೊರಕುವದೆಂದೂ, ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ। ರಾಮಕೃಷ್ಣ ಪೂಂಜರು ತಿಳಿಸುತ್ತಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ಸರ್ಜನರಾಗಿದ್ದ ಮೇಜರು ಬರೂಚಾ ಇವರಿಗೆ ಮದರಾಸಿಗೆ ವರ್ಗವಾಗಿರುವದರಿಂದ, ಇವರು ತನ್ನ ಚಾರ್ಜನ್ನು ಅಸಿಸ್ಟಾಂಟ್ ಸರ್ಜನರಾಗಿದ್ದ ರಾ। ರಾಮಣ್ಣಸೆಟ್ಟಿಗೆ ವಹಿಸಿಕೊಟ್ಟು ಮದರಾಸಿಗೆ ತೆರಳಿರುವರು.

ಎಂದಿನಂತೆ ರಾಷ್ಟ್ರೀಯ ಸಪ್ತಾಹವು ಇದೇ ಬರುವ ತಾ. ೬ರಿಂದ ೧೩ರ ವರೆಗೆ ನಡೆಯುವುದು. ಈ ದಿವಸಗಳನ್ನು ಆತ್ಮಶುದ್ಧಿ, ಖಾದಿ ಪ್ರಚಾರವೇ ಮೊದಲಾದ ಜನಾಂಗದ ಏಳಿಗೆಯ ಕೆಲಸಗಳಿಗೆ ಪ್ರತಿಯೊಬ್ಬರೂ ಉಪಯೋಗಿಸಬೇಕಾಗಿ ಮಹಾತ್ಮಾಜೀಯವರು ಅವರ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದಿರುವರು. ಹಿಂದು, ಮುಸಲ್ಮಾನ, ಕ್ರೈಸ್ತ ಮೊದಲಾದ ಎಲ್ಲಾ ಮತದವರು ಯಾವ ಮತಭೇದವನ್ನು ಇಡದೆ, ಖಾದಿ ಧರಿಸದ ಪ್ರತಿಯೊಬ್ಬರೂ ಅಂದಿನಿಂದಲಾದರೂ ಧರಿಸಿ ನಮ್ಮ ಊರಿನ ಕೈಗಾರಿಕೆಗೆ ಪ್ರೋತ್ಸಾಹಿಸಿರಿ. ನಾವು ಹಿಂದೀಯರು ಐಕ್ಯಭಾವದಿಂದ ನಿಲ್ಲಲು ಸಮರ್ಥರೆಂದು ವ್ಯಕ್ತಪಡಿಸುವ ಪ್ರತಿಯೊಬ್ಬರೂ ಕಾಂಗ್ರೆಸು ಮೆಂಬರರಾಗಿ ದೇಶಸೇವೆಯ ಕೆಲಸದಲ್ಲಿ ಭಾಗಿಗಳಾಗಬೇಕಾಗಿ ಆಶೆ.

ಎಲ್ಲರ ಅನುಕೂಲತೆ ಬಗ್ಗೆ ಕೊಡಿಯಾಲಬೈಲಲ್ಲಿರುವ ಕಾಂಗ್ರೆಸು ಆಫೀಸಿನಲ್ಲಿ ಮತ್ತು ರಥಬೀದಿಯಲ್ಲಿರುವ ಸೋಮಯಾಜಿ ಕಂಪೆನಿಯವರಲ್ಲಿ ಕಾಂಗ್ರೆಸು ಮೆಂಬರರಾಗಿ ಸೇರಿಸಿಕೊಳ್ಳುವ ಏರ್ಪಾಡು ಮಾಡಿದೆ. ಎಲ್ಲರೂ ಮೆಂಬರರಾಗುವುದಲ್ಲದೆ ಕಾಂಗ್ರೆಸು ಕೆಲಸವನ್ನು ಮಾಡಲಿಚ್ಛಿಸುವ ಸ್ವಯಂಸೇವಕರು ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ಅಪೇಕ್ಷಿಸಲಾಗಿದೆ.

ಬರುವ ಶುಕ್ರವಾರ ತಾರೀಕು ೧೩ನೇ ದಿನ, ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಹದಿನೆಂಟನೇ ವಾರ್ಷಿಕೋತ್ಸವವೂ, ಅವರ ಶಾಲೆಯ ವರ್ಧಂತಿಯೂ ಜರಗುವದು. ಅಧ್ಯಕ್ಷತನಕ್ಕೆ ಶ್ರೀ ವಕೀಲ ಅದ್ಯಂಬಳ ಶ್ರೀನಿವಾಸಪೈಗಳು ಒಪ್ಪಿರುವರು.

ದ್ರಾವಿಡ ಬ್ರಾಹ್ಮಣರ ಕಳೆದ ಪರಿಷತ್ತಿನಲ್ಲಿ ಮಾಸಪತ್ರಿಕೆಯೊಂದನ್ನು ಹೊರಡಿಸಬೇಕೆಂದು ನಿರ್ಣಯವಾಗಿದ್ದಿತು. ಆದರೆ ಅದರ ಬದಲು ದ್ರಾವಿಡ ಬ್ರಾಹ್ಮಣರ ಹಲವು ಮುಖಂಡರು ಕೂಡಿ ಒಂದು ರಾಷ್ಟ್ರೀಯ ವಾರ ಪತ್ರಿಕೆಯನ್ನು ಹೊರಡಿಸುವರೆಂದೂ ಈ ಪತ್ರಿಕೆಯು ಮೇ ತಿಂಗಳಲ್ಲಿ ಪ್ರಾರಂಭವಾಗುವದೆಂದೂ ವದಂತಿಯುದೆ. ಇದರ ಹೆಸರು 'ದೇಶಬಂಧು' ಎಂದು.

ಈ ಜಿಲ್ಲೆಯ ಜನರ ಆವಶ್ಯಕತೆಗಳನ್ನೂ, ಸಂಕಷ್ಟಗಳನ್ನೂ, ಮುಖ್ಯವಾಗಿ ಫೋರೆಸ್ಟ್ ಮತ್ತು ಮುಂದಿನ ರಿಸೆಟ್ಲ್‌ಮೆಂಟಿನ ವಿಷಯ ಅವರ ಅಭಿಪ್ರಾಯವನ್ನು ತಿಳಿಯುವದಕ್ಕಾಗಿ, ಮತ್ತು ಮದರಾಸು ನ್ಯಾಯವಿಧಾಯಕ ಸಭೆಯ ಕೆಲಸ, ಸ್ಯಾಮನ್ ಕಮಿಶನಿನ ಬಹಿಷ್ಕಾರದ ಸಂಬಂಧವಾಗಿ ಉಂಟಾದ ರಾಜಕೀಯ ಸ್ಥಿತಿಯನ್ನು ಜನರಿಗೆ ತಿಳಿಸುವದಕ್ಕಾಗಿ, ಇದೇ ೨೧ನೇ ತಾರೀಕಿನಿಂದ ಮೇ ತಿಂಗಳ ಅಂತ್ಯದ ವರೆಗೆ ತಾನು ಜಿಲ್ಲೆಯಲ್ಲಿ ಸಂಚರಿಸುವೆನೆಂದೂ, ಪುತ್ತೂರು ತಾಲೂಕಿನ ಕೊಕ್ಕಡವನ್ನು ತಾನು ಈ ಮೊದಲೇ ಸಂದರ್ಶಿಸಿರುವೆನೆಂದೂ ತಾರೀಕು ೬ರಿಂದ ೮ರ ವರೆಗೆ ಮುಂಡಾಜೆಗೆ ಹೋಗುವೆನೆಂದೂ, ತನ್ನ ಆಗಮನವು ಅಗತ್ಯವಿದೆಯಾದರೆ, ಯಾವಾಗ ಮತ್ತು ಎಲ್ಲಿಗೆ ಬರಬೇಕು ಎಂಬುದನ್ನು ತಿಳಿಸುವವರಿಗೆ ತಾನು ಕೃತಜ್ಞನಾಗಿರುವೆನೆಂದೂ, ನ್ಯಾಯವಿಧಾಯಕ ಸಭೆಯ ಮೆಂಬರರಾದ ಶ್ರೀ. ಕೆ. ಆರ್. ಕಾರಾಂತರು ತಿಳಿಸುತ್ತಾರೆ. ಮತ್ತು ತಾನು ಬರಬೇಕಾದ ಸ್ಥಳ ಮತ್ತು ಸಮಯವನ್ನು ಮುಂದಾಗಿ ಸೂಚಿಸಿದಲ್ಲಿ, ಹಾಗೆ ತಿಳಿಸಿದವರು ಅಗತ್ಯವಿದ್ದ ವಿಷಯಗಳ ಸಂಗ್ರಹವನ್ನು ಮಾಡುವ ಬಗ್ಗೆ ತಾನು ಅವರಿಗೆ ಸದರಿ ವಿಷಯಗಳನ್ನು ಸೂಚಿಸಲಿಕ್ಕೆ ಅನುಕೂಲವಾಗುವುದೆಂದೂ ಅವರು ತಿಳಿಸುತ್ತಾರೆ.

ರಿಟಾಯರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ ಜಡ್ಜರಾದ ದಿವಾನ ಬಹದೂರ್ ಶ್ರೀ ಎಮ್. ಮುಂಡಪ್ಪ ಬಂಗೇರರ ಪುತ್ರಿಯೂ, ಶ್ರೀ ಎಮ್. ಬಾಬು ಬಿ ಎ ಎಲ್. ಟಿ. ಇವರ ಪತ್ನಿಯು ಆದ ಶ್ರೀ ಲಕ್ಷ್ಮೀಬಾಯಿಯೆಂಬವರನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಮಂಗಳೂರು ತಾಲೂಕು ಬೋರ್ಡು ಸದಸ್ಯತನಕ್ಕೆ ನೇಮಿಸಿರುವರು.

ಇಲ್ಲಿಯ ಲೈಟ್ ಮೈದಾನಿನಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸು ಕಮಿಟಿಯವರೂ ಮಹಾಜನರೂ ಕೂಡಿ ಕಳೆದ ಶನಿವಾರ ಸಾಯಂಕಾಲ ರಾ। ಯಂ. ಎಸ್ ಮಾಧವ ರಾಯರ ಅಧ್ಯಕ್ಷತೆಯಲ್ಲಿ ಸ್ಯಾಮನ್ ಬಹಿಷ್ಕಾರದ ಕುರಿತು ಒಂದು ಸಭೆನಡೆಯಿತು. ರಾಷ್ಟ್ರೀಯ ಹಾಡನ್ನು ಹಾಡಿದ ಮೇಲೆ ಅಧ್ಯಕ್ಷರು ಸ್ಯಾಮನ್ ಕಮಿಶನಿನ ಹೋಗುವಿಕೆಯಿಂದ ಆದ ಸಂತೋಷವನ್ನು ವ್ಯಕ್ತಗೊಳಿಸಿದರು. ತದನಂತರ ರಾ। ಕೆ. ಆರ್. ಕಾರಂತರೂ, ರಾ। ಎಮ್. ಮಾಧವರಾಯರೂ, ಮಾತನಾಡಿದರು. ಕೌನ್ಸಿಲಿನಲ್ಲಿರುವ ನಮ್ಮ ಪ್ರತಿನಿಧಿಗಳು ಸ್ಯಾಮನ್ ಕಮಿಟಿ ಮುಂತಾದ ಕಮಿಟಿಗಳಿಗೆ ಓಟು ಕೊಡಬಾರದೆಂದು ನಿರ್ಣಯವಾಯಿತು.

ಫರಂಗಿಪೇಟೆ:— ಈ ಸೆಂಟರಿನ ಉಪಾಧ್ಯಾಯರ ಸಭೆಯು ಕಳೆದ ತಾ. ೬—೩—'೨೮ರಲ್ಲು ಸುಜೀರು ದಾಸ ಎಲಿಮೆಂಟರಿ ಶಾಲೆಯಲ್ಲಿ ಮೇರಮಜಲು ಶಾಲಾ ಅಸಿಸ್ಟಾಂಟ್ ಮಾಸ್ಟರ್ ಜೋನ್ ಅಲ್ಬರ್ಟ್ ಡಿಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ೨೬ ಮಂದಿ ಉಪಾಧ್ಯಾಯರೂ ಇತರ ಗೃಹಸ್ಥರೂ ಹಾಜರು ಇದ್ದರು. ಸೆಕ್ರೆಟರಿಯವರು ಗತಮಿಟಿಂಗಿನ ಪ್ರೊಸಿಡಿಂಗ್ಸುಗಳನ್ನು ಓದಿ ಹೇಳಿದ ತರುವಾಯ 'ದಶಮಾಂಶಗಳ' ಕುರಿತು ಒಂದು ಮಾದರಿ ಪಾಠವನ್ನು ತುಂಬೆ ಬೋರ್ಡು ಶಾಲಾ ಮಾಸ್ಟರ್ ಬಿ. ಸುಬ್ರಾಯ ಕಮ್ತಿಯವರು ಕೊಟ್ಟರು. 'ಉಪಾಧ್ಯಾಯರೂ ಶಿಕ್ಷಣವೂ' ಎಂಬವರ ಕುರಿತು ಸಜೀಪ ಪಡು ಶಾಲಾ ಹೆಡ್ ಮಾಸ್ಟರ್ ಕೆ. ರಾಮ, ಹರೇಕಳ ಶಾಲಾ ಮಾಸ್ಟರ್ ಬಿ. ಮಂಜಪ್ಪ ಸೆಟ್ಟಿ, ಬೇಳೂರು ಶಾಲಾ ಹೆಡ್ ಮಾಸ್ಟರ್ ಎಲ್. ಡಿಸೋಜ ಮತ್ತು ಸೆಕ್ರೆಟರಿಯವರು ಭಾಷಣಗಳ ಮೂಲಕ ವಿವರಿಸಿದರು. ಬರುವ ಸಭೆಯನ್ನು ತಾ. ೨೧—೪—'೨೮ರಲ್ಲು ಸಜೀಪ ನಡುಶಾಲೆಯಲ್ಲಿ ಜರಗಿಸಬೇಕಾಗಿ ಸದರಿ ಶಾಲಾ ಹೆಡ್ ಮಾಸ್ಟರವರ ಆಮಂತ್ರಣವನ್ನು ಸ್ವೀಕರಿಸಿ ಆ ದಿನದ ಸಭೆಯ ವಿಷಯ ಸೂಚಕ ಪಟ್ಟಿಯನ್ನು ತಯಾರಿಸಿ ಸದರಿ ಸುಜೀರು ಶಾಲೆಯ ಉಪಾಧ್ಯಾಯರುಗಳಿಂದ ಕೊಡಲ್ಪಟ್ಟ ಉಪಹಾರಾದಿ ಆತಿಥ್ಯಗಳನ್ನು ಪಡೆದು, ರಾಜಗೀತದೊಂದಿಗೆ ಸಭೆಯು ಮುಕ್ತಾಯಮಾಡಲ್ಪಟ್ಟಿತು.

ಇಲ್ಲಿಯ ವಿದ್ಯಾವರ್ಧಕ ಸಂಘದ ವರ್ಧಂತಿ ಉತ್ಸವವೂ, ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯ ಹನ್ನೊಂದನೇ ವಾರ್ಷಿಕೋತ್ಸವ ಸಮಾರಂಭವೂ ಕೆನರಾ ಹ್ಯಾಸ್ಕೂಲಿನ ಹೆಡ್ ಮಾಸ್ಟರ್ ರಾ। ಎಮ್. ನಾರಾಯಣ ಪ್ರಭುಗಳವರ ಅಧ್ಯಕ್ಷತೆಯಲ್ಲಿ ತಾ. ೨೯ನೇ ಗುರುವಾರ ಶ್ರೀ ರಾಮನವಮಿ ದಿನ ಜರಗಿತು.

ತಾ. ೨೮ನೇ ಬುಧವಾರ ಮಕ್ಕಳ ಪಂದ್ಯಾಟಗಳೂ, ಮಹಿಳೆಯವರಿಗೂ ಶಾಲಾ ಬಾಲಕರಿಗೂ ನಾಟಕವಿತ್ತು. ತಾ. ೨೯ಕ್ಕೆ ಬೆಳಗ್ಗೆ ವಿದ್ಯಾವರ್ಧಕ ಸಂಘದ ಮೆಂಬರರಿಗೂ ಶಾಲಾ ಬಾಲಕರಿಗೂ ಉಪಹಾರವಾದ ಬಳಿಕ ವಿದ್ಯಾವರ್ಧಕ ಸಂಘದ ಮಹಾಸಭೆಯು ಜರಗಿಸಲ್ಪಟ್ಟಿತು. ಸಾಯಂಕಾಲ ಅಧ್ಯಕ್ಷರು ಬಂದೊಡನೆ ಶ್ರೀರಾಮಾ ಸ್ಕೌಟುದಳದ ಧರ್ಮಸ್ವೀಕಾರ ಸಮಾರಂಭವು ಗವರ್ನ್‌ಮೆಂಟ್ ಕೋಲೇಜಿನ ಪ್ರೊಫೆಸರ್ ವ. ಸ್ಕೌಟ ಮಾಸ್ಟರ್ ರಾ। ಮುಲ್ಕಿ ಮಂಜುನಾಥ ರಾಯರಿಂದ ನೆರವೇರಿಸಲ್ಪಟ್ಟಿತು. ಬಳಿಕ ಸಭಾಕಾರ್ಯವು ಪ್ರಾರಂಭಿಸಲ್ಪಟ್ಟು ಶಾಲೆಯ ಹೆಡ್ ಮಾಸ್ಟರ್ ಎ. ರಾಮಚಂದ್ರ ಹೆಗ್ಡೆಯವರು ಶಾಲಾ ರಿಪೋರ್ಟನ್ನು ಓದಿದರು. ಶಾಲೆಯ ಹಳೇ ವಿದ್ಯಾರ್ಥಿ ರಾ। ಎಸ್. ಶ್ರೀಧರ ಅಣ್ಣಪ್ಪನಾಯ್ಕರು ಶಾಲಾ ಹಿತವನ್ನು ಬಯಸಿದ ಬಳಿಕ ಅಧ್ಯಕ್ಷರು ಆಟಪಾಠಗಳಲ್ಲಿ ಉತ್ತೀರ್ಣರಾದವರಿಗೆ ಇನಾಮುಗಳನ್ನು ಹಂಚಿದರು.

ತರುವಾಯ ಅಧ್ಯಕ್ಷರು ತಮ್ಮ ಅರ್ಥಗರ್ಭಿತವಾದ ಮಾತುಗಳಿಂದ ಗ್ರಾಮಸೇವೆಯೇ ದೇಶಸೇವೆಯನ್ನು ಮಾಡಲು ಪ್ರಥಮ ಸೋಪಾನವೆಂಬುದನ್ನೂ, ವಿದ್ಯೆಗೆ ಹಣವೇ ಮೂಲಾಧಾರವೆಂದೂ, ದೃಷ್ಟಾಂತ ಮೂಲಕ ವಿವರಿಸಿದರು. ಸಂಘದ ಸೆಕ್ರೆಟರಿಯವರು ಅಧ್ಯಕ್ಷರನ್ನೂ, ಸಭಿಕರನ್ನೂ ವಂದಿಸಿ, ಬಳಿಕ ಶಾಲಾ ಬಾಲಕರು 'ಸಂತ ನಾಮದೇವ್' ಎಂಬ ಎರಡು ಅಂಕಗಳುಳ್ಳ ಚಿಕ್ಕ ನಾಟಕವನ್ನು ಚಲೋ ರೀತಿಯಲ್ಲಿ ಅಭಿನಯಿಸಿ ತೋರಿಸಿ, ರಾಜಗೀತದೊಂದಿಗೆ ಶಾಲಾ ವರ್ಧಂತಿ ಉತ್ಸವವು ಕೊನೆಗೊಂಡಿತು.

ಚಿಕ್ಕ ಬಾಲಕರು ಆಡಿದ ಈ ನಾಟಕವನ್ನು ಕಂಡು ಮಂಗಳೂರಿನಿಂದ ಬಂದಿದ್ದ ಗೃಹಸ್ಥರೂ, ಇತರರೂ ಪಟ್ಟ ಸಂತೋಷವನ್ನು ತಮ್ಮ ಭಾಷಣಗಳಿಂದ ವಿಶದಪಡಿಸಿದರು. ೨ ದಿನಗಳಲ್ಲೂ ಶಾಲಾ ಮಂದಿರವು ಸಭಿಕರಿಂದ ಕಿಕ್ಕಿರಿದು ಹೋದ್ದರಿಂದ ಎಲ್ಲರಿಗೂ ನಾಟಕವನ್ನು ನೋಡಲು ಸಾಧ್ಯವಾಗಲಿಲ್ಲ. ಹಲವರು ಅದೇ ನಾಟಕವನ್ನು ಟಿಕೇಟು ಇಟ್ಟು ಆಡಿ ತೋರಿಸಬೇಕಾಗಿ ಅಪೇಕ್ಷಿಸಿದ್ದರಿಂದ ಇದೇ ಕಳೆದ ಆದಿತ್ಯವಾರ ದಿನ ತಿರಿಗೊಮ್ಮೆ ಆಡಿ ಅದರಿಂದ ಹುಟ್ಟಿ ಬಂದ ಮೊಬಲಗನ್ನು ಶ್ರೀರಾಮಾ ಸ್ಕೌಟ್ ಟ್ರೂಪಿನ ಸಹಾಯಾರ್ಥವಾಗಿ ಕೊಡಲ್ಪಟ್ಟಿತು.

ಅರಳ ಮೂಲರ ಪಟ್ಟಣ:— ಈ ಸೆಂಟರಿನ ಉಪಾಧ್ಯಾಯರ ಸಂಘದ ೯ನೇ ಸಮ್ಮೇಳನವು ಕೊಳವೂರು ಬೋರ್ಡು ಶಾಲೆಯಲ್ಲಿ ತಾ. ೨೪—೩—'೨೮ರಲ್ಲು ಅತಿ ವಿಜೃಂಭಣೆಯಿಂದ ಜರಗಿತು. ಮ। ರಾ। ರಾ। ಪುತ್ತಿಗೆ ಅಧಿಕಾರಿ ಲಕ್ಷ್ಮಣ ರಾಯರನ್ನು ಸರ್ವಾನುಮತದಿಂದ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ನಂತರ ಸಂಘಕ್ಕೆ ಸೇರಿದ ಉಪಾಧ್ಯಾಯರುಗಳ ಪೈಕಿ ಇಬ್ಬರು ಅತ್ಯುತ್ತಮ ತರದ ಮಾದರಿ ಪಾಠಗಳನ್ನು ಕೊಟ್ಟರು. ಕಿಲೆಂಜಾರು ಶಾಲಾ ಹೆಡ್ ಮಾಸ್ಟರ್ ಬಿ. ಶಂಕರನಾರಾಯಣ ಭಟ್ಟರು ಪದ್ಯ ಕಲಿಸುವುದರಿಂದ ಮಕ್ಕಳಲ್ಲಿ ಅಂಕುರಿಸಬಹುದಾದ ಆಲಸ್ಯ ಮತ್ತು ಶ್ರಮವನ್ನು ಹೋಗಲಾಡಿಸಿದಂತಾಗುವದೆಂದೂ, ಬಾಲ, ಬಾಲಕಿಯರ ಮಾನಸಿಕಶಕ್ತಿ, ಜ್ಞಾಪಕಶಕ್ತಿ, ಶಬ್ದ ಸಾಹಿತ್ಯ ಸಂಗ್ರಹಶಕ್ತಿ, ವಿಮರ್ಶಣಶಕ್ತಿ, ಮುಂತಾದ ಮನೋಭಿಶಕ್ತಿಗಳು ಸ್ಫುಟಕ್ಕೆಟ್ಟಿಂತಾಗುವುದಲ್ಲದೆ ಮುಂದೆ ಬಳೆಯತಕ್ಕ ವಿದ್ಯಾರ್ಥಿಗಳನ್ನು ನೀತಿ ವಿಚಾರವರನ್ನಾಗಿ ಮಾಡುವ ಸಮುಪಾಯವೆಂದು ಅರ್ಥಗರ್ಭಿತವಾದ ಒಂದು ಭಾಷಣವನ್ನು ಕೊಟ್ಟರು. ಈ ಸಂಘದ ಹಿತಚಿಂತಕರಾಗಿಯೂ, ತನ್ನ ತನು, ಮನಧನಗಳನ್ನು ಅರ್ಪಿಸಿ ಸಂಘದ ಯಾವತ್ತು ಅಭ್ಯುದಯವನ್ನೇ ಹಾರೈಸುತ್ತಿದ್ದ ಗೌರವಾಧ್ಯಕ್ಷರಾದ ಮ। ರಾ। ರಾ। ಎ. ಸೋಮಯ್ಯ ಶೆಟ್ರನ್ನು ಬಿಜಾರು ಶಾಲೆಗೆ ವರ್ಗಾಯಿಸಲ್ಪಟ್ಟ ವಿಷಯದಲ್ಲಿ, ಸಂಘದ ಸೆಕ್ರೆಟರಿಯರಾದ ಮ। ರಾ। ರಾ। ಬಿ. ವೆಂಕಟ್ರಾಯರು ಸದರಿ ಮಹನೀಯರ ಅಗಲುವಿಕೆಯಿಂದ ಸಂಘಕ್ಕುಂಟಾದ ಹಲವು ಬಗೆಯ ನಷ್ಟಗಳ ಕುರಿತು, ಕೆಲವು ಪಶ್ಚಾತ್ತಾಪದ ಮಾತುಗಳನ್ನು ವಿವರಿಸಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ ನಂತರ ಮ। ರಾ। ರಾ। ಬಿ. ಶಂಕರನಾರಾಯಣ ಭಟ್ರನ್ನು ಸರ್ವಾನುಮತದಿಂದ ಮುಂದಿನ ಗೌರವಾಧ್ಯಕ್ಷರನ್ನಾಗಿ ನೇಮಿಸಲಾಯಿತು. ಪರಿತರುವಾಯ ಅಧ್ಯಕ್ಷರ ಸುಲಲಿತವಾದ ಭಾಷಣವು ಕೊನೆಗೊಂಡ ನಂತರ ಫಲಾಹಾರ, ತಾಂಬೂಲಾದಿ, ಅತಿಥಿ ಸತ್ಕಾರ್ಯಗಳಿಂದ ಸಭೆಯು ಮುಕ್ತಾಯವಾಯಿತು.

ಮೂಲರಪಟ್ಟಣ ಶ್ರೀ ಚಂದ್ರನಾಥ ಬಸದಿಯ ವರ್ಷಾವಧಿ ಅಟ್ಟವಣೆ ಅಭಿಷೇಕವು ಇದೇ ಮಾರ್ಚಿ ತಿಂಗಳ ತಾ. ೨೨ರ ರಾತ್ರಿಯಾಯಿತು ೨೬ನೇ ಸೋಮವಾರದ ಪರಿಯಂತರ ಅತಿ ವಿಜೃಂಭಣೆಯಿಂದ ಜರಗಿಸಲಾಯಿತು. ಈ ಬಸದಿಯ ಆಡಳಿತದಾರರಾದ ಮ। ರಾ। ರಾ। ಎ. ಧರ್ಮಪಾಲ ಶೆಟ್ಟು ಕೈಕೊಂಡ ಉತ್ಸವ ಸಮಾರಂಭ, ಅತಿಥಿ ಸತ್ಕಾರ್ಯ ಮುಂತಾದ ಧರ್ಮಕಾರ್ಯಗಳು ಅತಿಸ್ತುತ್ಯಾರ್ಹವೇ ಸರಿ.

ಉಡ್ಪಿ:— ತಾಲೂಕು ಬೋರ್ಡು ಚುನಾವಣೆಯ ಫಲಿತಾಂಶ

ಉಡ್ಪಿ ಸರ್ಕಲ್—(೧) ರಾ। ರಾಜಗೋಪಾಲ ಕೃಷ್ಣರಾವ್ (೬೩೪) (೨) ಕೊಚ್ಚಿಕಾರ್ ನರಸಿಂಹ ಪೈ (೫೫೨) (೩) ಡಾಕ್ಟರ್ ರಾಮಚಂದ್ರರಾವ್ (೪೮೪.)

ಬ್ರಹ್ಮಾವರ ಸರ್ಕಲ್:—(೧) ಕೃಷ್ಣಯ ಹೆಗ್ಡೆ (೫೩೮) (೨) ರಾಮಣ್ಣ ಶೆಟ್ಟಿ (೪೮೨) ಚೆಂದಯ್ಯ ಸೆಟ್ಟಿ (೪೦೦.)

ಕಾಪು ಸರ್ಕಲ್:—(೧) ಜಗನ್ನಾಥ ಬಲ್ಲಾಳ (೮೫೬) (೨) ಉಪೇಂದ್ರ ನಾಯಕ (೬೪೦) (೩) ಆದಿರಾಜ ಅರಸು ಕಿನ್ನಿಯಕ್ಕ ಬಲ್ಲಾಳ (೬೧೩.)

N. B:— ಕೋಟ ಸರ್ಕಲಿನ ಚುನಾವಣೆಯಲ್ಲಿ ಏನೋ ಮೋಸವು ನಡೆದಿರುತ್ತದೆಂದು ತಿಳಿದುಬಂದುದರಿಂದ ಬಾಕ್ಸ್‌ಗಳನ್ನು ಒಡೆಯದ ಹಾಗೆ ಹೈಕೋರ್ಟಿನವರಿಂದ ೪ನೇ ತಾರೀಕಿನ ವರೇಗೆ ಇಂಜಂಕ್ಷನ್ ಮಾಡಲಾಗಿಯದೆ. ಶ್ರೀಗಳಾದ ಎ. ಎಸ್. ಕಾರೆಟರೂ ಉದ್ಯಾವರ ಸದಿಯ ಮರಕಾಲರೂ ಕೆ. ಗೋವಿಂದನ್‌ರೂ ನೋಮಿನೇಶನ್ ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಉಡುಪಿ:— ಪರಿಯಾಯದ ಸಮಯದಲ್ಲಿ ಹಿಂದೊಮ್ಮೆ ಇಲ್ಲಿಗೆ ಬಂದಿದ್ದ ಶ್ರೀ ಶಿರಹಟ್ಟಿ ಸಂಗೀತ ನಾಟಕ ಮಂಡಳಿಯವರು ಕುಂದಾಪುರದಿಂದ ಮಂಗಳೂರಿಗೆ ಹೋಗುವವರು ಇಲ್ಲಿ ನಿಂತು ಕೆಲವು ನಾಟಕಗಳನ್ನು ಅಭಿನಯಿಸಿದರು.

ಇಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ರಾಮನವಮಿ ಉತ್ಸವವು ಕ್ರಮಪ್ರಕಾರ ಜರಗಿಸಲ್ಪಟ್ಟಿತು. ಎಂದಿನಂತೆ ಹರಿಕೀರ್ತನೆ, ಪಾರಾಯಣೆ, ಭಜನೆ ಸಂಗೀತಾದಿ ವಿನೋದಗಳೂ ನಡೆದವು.

ಈ ಸಲದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪೇಪರು ಔಟು ಆಗಿದೆಯೆಂಬ ಕಾರಣದಿಂದ 'ರೀ ಎಕ್ಸಾಮಿನೇಶನ್' ಆಗಲಿರುವುದೆಂಬ ವದಂತಿಯುದೆ. ಇದು ಯಥಾರ್ಥವಾದುದಾದರೆ ವಿದ್ಯಾರ್ಥಿಗಳಿಗೆ ಒಂದು ಸಂಕಷ್ಟವೇ ಸರಿ.

ಮುಲ್ಕಿ:— ೩೧—೩—'೨೮.

ಇಲ್ಲಿಯ ಬಪ್ಪನಾಡು ಶ್ರೀದುರ್ಗಾ ಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನೆರವೇರತಕ್ಕ ವರ್ಷಾವಧಿ ಜಾತ್ರೆಯು ಈ ವರ್ಷ ಈ ಕೆಳಗೆ ಬರೆದಂತೆ ನೆರವೇರಲಿರುವದು. ಭಕ್ತಾದಿಗಳೆಲ್ಲರೂ ಬಂದು, ಶ್ರೀ ದೇವಿಯ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ಪ್ರಾರ್ಥನೆ. ತಾ. ೪—೪—'೨೮ ಧ್ವಜಾರೋಹಣ. ೫ಕ್ಕೆ ಅಯನೋತ್ಸವ, ೬ಕ್ಕೆ ಪೇಟೆ ಸವಾರಿ, ೭ಕ್ಕೆ ಕೊಪ್ಪ ಸವಾರಿ, ೮ಕ್ಕೆ ಬಾಕಿಮಾರ ದೀಪ, ೯ಕ್ಕೆ ಕೆರೆದೀಪ, ೧೦ಕ್ಕೆ ರಥಾರೋಹಣ, ೧೧ಕ್ಕೆ ರಥೋತ್ಸವ, ಮತ್ತು ಅವಭೃತ.

ಧರ್ಮಸ್ಥಳ ಕಲ್ಮಂಜ:— ಈ ಗ್ರಾಮದ ಮೂಲಾರು ಎಂಬಲ್ಲಿ ಮೈಸೂರಿನ ಶ್ರೀ ಶಾರದಾ ಪ್ರಸಾದಿಕ ಕರ್ನಾಟಕ ನಾಟಕ ಸಭಾ ಹಿಂದುಸ್ಥಾನ ಎಂಬ ಕಂಪನಿಯ ಮೆನೇಜರಾದ ಎ. ಎಮ್. ಗೋಖಲೆ ಮತ್ತು ಪ್ರೊಪ್ರೈಟರರಾದ ಆರ್. ಕೆ. ಪಟ್ವರ್ಧನರವರು ಇಲ್ಲಿಗೆ ಬಂದು ಕೆಲವು ನಾಟಕಗಳನ್ನು ಟಿಕೇಟು ಇಟ್ಟು ಆಡಿತೋರಿಸುತ್ತಿರೆಂದು ತಿಳಿಯುತ್ತದೆ.

ಬಂಟವಾಳ:— ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಬಹಳ ಕಡಿಮೆಯಾಗಿದೆ ಇಲ್ಲಿರುವ ಎಲ್ಲಾ ಶಾಲೆಗಳಲ್ಲಿಯೂ ಹಾಯರ ಎಲಿಮೆಂಟರಿ ಗ್ರೇಡಿನ ಮುಖ್ಯ ಉಪಾಧ್ಯಾಯರಿದ್ದು ಶಾಲೆಗಳು ಒಳ್ಳೇ ರೀತಿಯಲ್ಲಿ ನಡಿಯುತ್ತವೆ. ಇಲ್ಲಿಯ ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸ್ ಲೋವರ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯಿನಿಯಾಗಿರುವುದರಿಂದ ಮಕ್ಕಳಿಗೆ ಬೇಕಾದ ವಿದ್ಯೆಯು ಸಿಕ್ಕದೆ ಹುಡುಗಿಯರಲ್ಲಿ ಹೆಚ್ಚಿನವರು ಟೆಂಪಲ್ ಎಲಿಮೆಂಟರಿ ಶಾಲೆಯಲ್ಲಿಯೇ ಕಲಿಯುತ್ತಾರೆ ಆದುದರಿಂದ ಈ ಶಾಲೆಯ ಹೆಡ್ ಮಿಸ್ಟ್ರೆಸರವರು ಡಿಪ್ಯುಟಿ ಇನ್ಸಪೆಕ್ಟ್ರೆಸ್‌ರವರ ಸಹೋದರಿಯರಾಗಿದ್ದಾಗ್ಯೂ ಅವರನ್ನು ಬೇರೆ ಶಾಲೆಗೆ ವರ್ಗಮಾಡಿ ಇಲ್ಲಿಗೆ ಒಬ್ಬ ಹಾಯರ್ ಎಲಿಮೆಂಟರಿ ಅಥವಾ ಸೆಕೆಂಡರಿ ಗ್ರೇಡಿನ ಉಪಾಧ್ಯಾಯಿನಿಯನ್ನು ಹೆಡ್ ಮಿಸ್ಟ್ರೆಸ್ಸಾಗಿ ನೇಮಿಸದೆ ಇದ್ದರೆ ಬಹಳ ಅನ್ಯಾಯವಾಗುವುದು. ಡಿಪ್ಯುಟಿ ಇನ್ಸಪೆಕ್ಟ್ರೆಸರವರು ಇವರು ತನ್ನ ತಂಗಿಯೆಂದು ಈ ಶಾಲೆಯಲ್ಲಿ ಅಧೋಗತಿಗೆ ಇಳಿದರೂ ಅದನ್ನು ಮರೆಮಾಚಿರುತ್ತಾರೆಂದು ಕಾಣುತ್ತದೆ. ಬೋರ್ಡಿನವರು ಇದರ ವಿಷಯ ಕೂಡಲೇ ಗಮನಕ್ಕೆ ತರುವುದು ಒಳ್ಳೇದು. ಇಲ್ಲವಾದರೆ ಬಂಟವಾಳ ಬೋರ್ಡು ಮಾಪಿಳ್ಳಾ ಶಾಲೆಯ ಕಟ್ಟೋಣವು ಪಾಳುಬಿದ್ದಂತೆ ಇದು ಖಾಲಿ ಬೀಳುವವರಲ್ಲಿ ಸಂದೇಹವಿಲ್ಲ.

ಪುತ್ತೂರು:— ಕಳೆದ ವಾರ ಒಬ್ಬ ಕೊಡಗನು ಮಂಗಳೂರಿನಿಂದ ಮಡಿಕೇರಿಗೆ ಹೋಗುವವನು ಇಲ್ಲಿ ನಿಂತು ಒಂದು ಕಟ್ಟಿರ ಅಂಗಡಿಯಲ್ಲಿ ಏನೊ ವ್ಯಾಪಾರ ಮಾಡುತ್ತಿದ್ದವನು ಹಣದ ಚಿಲ್ಲರೆ ಸಂಗತಿಯಲ್ಲಿ ಅಂಗಡಿಯವನಿಗೂ ಸುಮಾರು ೧೧ ಜನರಿಗೂ ಚೂರಿಯಿಂದ ತಿವಿದು ಜಖಂ ಪಡಿಸಿದನು ಜಖಂ ಆದವರ ಪೈಕಿ ಕೆಲವರು ಆಸ್ಪತ್ರೆಯಲ್ಲಿರುವರು. ಇತನು ಜಖಂಪಡಿಸಿ ಇಲ್ಲಿಯೇ ಹತ್ತಿರವಿರುವ ಫರ್‌ಲಾಂಗ ಕೆರೆಯಲ್ಲಿ ಬಿದ್ದು ಪ್ರಾಣಕಳಕೊಂಡನು.

ವಿವಿಧ ಸಮಾಚಾರಗಳು.

ಮಕ್ಕಳಿಗೆ ಮಹಾತ್ಮಾಜಿಯವರ ಬೋಧನೆ.

ಅಹಮದಾಬಾದಿನ ಲೇಬರ್ ಶಾಲೆಗಳ ಸುಮಾರು ೫೦೦ ಹುಡುಗರು ಒಟ್ಟುಕೂಡಿ ಮಾಡಿದ ನೂಲುವ ಪಂದ್ಯಾಟಕ್ಕೆ ಮಹಾತ್ಮಾಜಿಯವರು ಹೋಗಿದ್ದರು. ತಕಲಿಯನ್ನು ಹಿಡಿದು ಮೆಹನತ್ತಿನಿಂದ ಕೆಲಸವನ್ನು ಮಾಡುವ ಮಕ್ಕಳನ್ನು ಕಂಡು ಮಹಾತ್ಮಾಜಿಯವರು ಬಹಳೇ ಆನಂದಪಟ್ಟರು ಲೇಬರ ಯೂನಿಯನಿನ ಸೆಕ್ರೆಟರಿಯವರು ತಮ್ಮ ರಿಪೋರ್ಟನ್ನು ಓದಿದರು. ಲೇಬರ ಯೂನಿಯನಿನವರ ೨೬ ಶಾಲೆಗಳವೆಯೆಂದೂ ಈ ಶಾಲೆಗಳಲ್ಲಿ ೧೪೦೦ ವಿದ್ಯಾರ್ಥಿಗಳು ಕಲಿಯುವರೆಂದೂ ಅವರ ರಿಪೋರ್ಟಿನಲ್ಲಿತ್ತು. ಅನಂತರ ಮಹಾತ್ಮಾಜಿಯವರು ಭಾಷಣವನ್ನು ಕೊಟ್ಟರು— "ನೀವೆಲ್ಲರೂ ಖಾದಿಯನ್ನು ಧರಿಸಿ ಖಾದಿಯ ಕೆಲಸವನ್ನು ಮಾಡುವುದನ್ನು

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು

Toll Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯು [illegible] (M. S. M. Railway) [illegible]

[illegible]

ಮೋಟರು ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) [illegible]

(3) [illegible]

ಬಿ. ಎನ್. ಹನುಮಂತಪ್ಪ, [illegible]

ಪ್ರೊಪ್ರೈಟರ.

THE CANARA PUBLIC CONVEYANCE CO. LTD. MANGALORE.

(ESTABLISHED 1914)

ಕೆನರಾ ಪಬ್ಲಿಕ ಕನ್ವೆಯನ್ಸ್ ಕಂಪನಿ ಲಿಮಿಟೆಡ್.

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರು ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. [illegible] ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು [illegible]

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ,

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ [illegible] ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ [illegible] ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು [illegible] ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ [illegible] ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯ [illegible] ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ತಂಕಿರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನ್ನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ. ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ತೀರಾಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಆಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೆಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಲಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಆಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್, ಪ್ರಭು ಬುಕ್ ಡಿಪೋ, ಬಳ್ಳಾರಿ.

ಕಂಡು ಬಹಳ ಸಂತೋಷವಾಯಿತು. ಆದರೆ ನಿಮ್ಮ ಉಡುಗೆಯು ಸ್ವಚ್ಛವಾಗಿಲ್ಲದ್ದನ್ನು ಕಂಡು ಅಸಹ್ಯವೆನಿಸುತ್ತದೆ" ಎಂದು ವಿದ್ಯಾರ್ಥಿಗಳನ್ನು ಸಂಭೋಧಿಸಿದರು. "ಮಿಲ್ಲಿನ ಮಾಲಿಕರು ಹಣಸಹಾಯಮಾಡಿ ಉದಾರಿಗಳೆಂದು ಅನ್ನಿಸುವದಿಲ್ಲ. ಚಿಂತಿಲ್ಲ. ಆದರೆ ದೇವರಲ್ಲಿ ಭಕ್ತಿಯನ್ನಿಟ್ಟು ಕೆಲಸಮಾಡಿ ಸತ್ಯಥವನ್ನು ಅವಲಂಬಿಸಿ ನಡೆದರೆ ಧನವು ಒಂದಲ್ಲ ಒಂದು ರೀತಿಯಲ್ಲಿ ಸಿಕ್ಕಿಯೇ ಸಿಕ್ಕುವದು" ಎಂದರು. "ಉಪಾಧ್ಯಾಯರು ಪುಸ್ತಕಗಳನ್ನು ಉಪಯೋಗಿಸಬಾರದು. ಕೃಷಿಮಾಡುವುದು, ನೂಲುವದು, ಇವನ್ನು ಕಲಿಸುತ್ತಿರಬೇಕು. ರಶ್ಯಾದಲ್ಲಿ ಹೀಗೆಯೇ ಮಾಡುವರು. ತಮ್ಮ ತಮ್ಮ ಮನೆಗಳನ್ನು ತಾವೇ ಗುಡಿಸಿ ಸಾರಿಸಕಲಿಯಬೇಕು. ಅಲ್ಪ ವಿಷಯಗಳಿಗಾಗಿ ಪರರ ಸಹಾಯವನ್ನು ಬಯಸಬಾರದು" ಎಂದು ಉಪಾಧ್ಯಾಯರಿಗೆ ಹೇಳಿದರು. ಸರ್ವ ವಿಷಯದಲ್ಲಿಯೂ ಲೇಬರ್ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಇಡಬೇಕೆಂದೂ, ಸತ್ಯದ ಹಾದಿಯನ್ನು ಬಿಡಬಾರದೆಂದೂ ಒತ್ತಿಹೇಳಿದರು.

§ § § §

ಸ್ಯಾಮನ್ ಕಮಿಶನ್ನಿನ ಹಿಂದಿರುಗುವಿಕೆ.

ಸ್ಯಾಮನ್ ಕಮಿಶನು ಕಳೆದ ಶನಿವಾರ ದಿನ ಮುಂಬಾಯಿಯಿಂದ ಹೊರಟು ಹೋಯಿತು. ಹೋಗುವಾಗ ಕಮಿಶನಿನ ಪರವಾಗಿ ಸ್ಯಾಮನರು—"ಕಮಿಶನಿನ ಪ್ರಥಮ ಸಂದರ್ಶನವು ಇಂದಿಗೆ ಮುಗಿಯಿತು. ಹಿಂದೂದೇಶಕ್ಕೆ ಬೇಕಾಗಿದ್ದುದನ್ನು ಮೊದಲೇ ಸರಿಯಾಗಿ ವಿಚಾರಿಸಿಕೊಂಡು ಧುರೀಣರ ಸಹಕಾರವು ಲಭಿಸುವಂತೆ ಮಾಡಬೇಕೆಂದು ನಾವು ಬಂದಿದ್ದೆವು. ಹಿಂದುಸ್ಥಾನದಲ್ಲಿ ಮಾಡಬೇಕಾಗಿದ್ದ ಕೆಲಸವು ನಮಗೆ ಕಷ್ಟತರವಾಗಿ ತೋರುವುದಿಲ್ಲ. ನಾವು ಹಿಂದೂಸ್ಥಾನದ ಹೆಚ್ಚಿನ ಭಾಗವನ್ನು ಸಂದರ್ಶಿಸಿದುದಾಯಿತು. ಸರ್ವ ಜಾತಿಯವರ ಪರಿಚಯವನ್ನು ಮಾಡಿದಂತಾಯಿತು. ನಮ್ಮ ಮುಂದಿನ ಕೆಲಸವು ಸುಸೂತ್ರವಾಗಿ ಸಾಗುವದೆಂಬ ನಂಬಿಗೆಯಿಂದಲೇ ನಾವೀಗ ಕೆಲವು ತಿಂಗಳುಗಳ ಮಟ್ಟಿಗೆ ಹಿಂದಿರುಗುವೆವು" ಎಂದರು.

ಅವರನ್ನು ಬೀಳ್ಕೊಡಲಿಕ್ಕೆ ಮುಂಬಾಯಿ ಸರಕಾರದವರು ಮಾತ್ರವಲ್ಲದೆ ಮುಸಲ್ಮಾನ ತರ್ಫಿನವರು, ಪ್ರಭುಮತದವರು, ಬ್ರಾಹ್ಮಣೇತರರು, ಆಂಗ್ಲೋ ಇಂಡಿಯನರು, ಯುರೋಪಿಯನರು, ಈ ಎಲ್ಲಾ ಮತಕ್ಕೆ ಸೇರಿದವರಲ್ಲಿ ಅನೇಕರು ಬಂದಿದ್ದರು. ಹೋಗುವ ಸ್ವಲ್ಪ ಮೊದಲು ಕಮಿಶನಿನ ಮೆಂಬರರಿಗೆ ಹೂಮಾಲೆಯನ್ನು ಹಾಕಿದರು. ಕಮಿಶನಿನವರು 'ಡಾಯಮಂಡ್' ಎಂಬ ಲೋಂಚಿನಲ್ಲಿ ಕುಳಿತು "ಮುಲ್ತಾನ್" ಎಂಬ ಹೊಗೆ ಹಡಗವನ್ನು ಹತ್ತಲು ಹೊರಟುಹೋದರು. ಅವರು ಹೋಗುವಾಗ ನೆರೆದವರು ಜಯಘೋಷವನ್ನು ಮಾಡಿದರು.

§ § § §

ಕಲ್ಕತ್ತದ ಹೊಸ ಮೆಯೋರರ ಚುನಾವಣೆ!

ಕಲ್ಕತ್ತದ ಹೊಸ ಮೆಯೋರರ ಚುನಾವಣೆಯಲ್ಲಿ ಬಹು ಗೊಂದಲವು ನಡೆಯಿತು. ಕೊರ್ಪೊರೇಶನ್ ಹೋಲಿನ ಗೆಲರಿಯಲ್ಲೆಲ್ಲಾ, ಕಾಂಗ್ರೆಸ್ ಸ್ವಯಂಸೇವಕರೂ ಉಮೇದ್ವಾರರೂ ತುಂಬಿದ್ದರು. ಸ್ವರಾಜ್ಯಪಾರ್ಟಿಯವರಲ್ಲದವರ ಭಾಷಣಗಳಾಗುವಾಗ ಬೊಬ್ಬೆಹಾಕಿ ಅವರ ಭಾಷಣಗಳೇ ಕೇಳದಂತೆ ಮಾಡಿದರು. ಮೆಯೋರತನಕ್ಕೆ ಉಮೇದ್ವಾರರೆಂದರೆ ಸುಭಾಸ ಚಂದ್ರಭೋಸರು ಮತ್ತು ಬಿ. ಕೆ. ಬಸುಗಳವರೂ. ಸುಭಾಸ ಚಂದ್ರ ಭೋಸರು ಸ್ವರಾಜ್ಯಪಾರ್ಟಿಯವರು.

ಹಳೆ ಮೆಯೋರರಾದ ಜೆ. ಎಮ್. ಸೇನಗುಪ್ತರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದರು. ಚುನಾವಣೆಯು ನಡೆದು ಬೋಸರಿಗೆ ೩೭ ವೋಟುಗಳೂ, ಬಸುಗಳಿಗೆ ೧೩ ವೋಟುಗಳೂ ದೊರೆತವೆಂದು ಅಧ್ಯಕ್ಷರು ಗಟ್ಟಿಯಾಗಿ ಹೇಳಿದರು. ಒಡನೆ "ಶೇಮ್, ಶೇಮ್" ಎಂಬ ಬೊಬ್ಬೆಯುಂಟಾಗಿ ಹತ್ತು ನಿಮಿಷಗಳ ವರೆಗೆ ಕೆಲಸವನ್ನು ಮುಂದರಿಸಲಾಗಲಿಲ್ಲ. ಹೊಸ ಮೆಯೋರರಿಗೆ ಅಭಿನಂದನೆಗಳನ್ನು ಕೊಡಲು ಕೂಡ ಆಗಲಿಲ್ಲ. ಅಷ್ಟು ಗೊಂದಲವಿದ್ದಿತು. ವಿದ್ಯುಚ್ಛಕ್ತಿಯ ದೀಪಗಳೂ ಉರಿಯದೆ ಮಂದಿರದಲ್ಲಿ ಕತ್ತಲೆಯಾಗಿದ್ದಿತು. ಸುಭಾಸ ಚಂದ್ರಭೋಸರಿಗೆ ವೋಟು ಕೊಡದಿದ್ದ ಕೆಲವು ಕೌನ್ಸಿಲರರಿಗೆ ಪೆಟ್ಟುಗಳು ದೊರೆತವೆಂದೂ, ಪೋಲೀಸರು ಬಂದೊಡನೆ ಎಲ್ಲವೂ ನಿಂತುಹೋಯಿತೆಂದೂ ಒಂದು ವಾರ್ತೆ ಇದೆ.

§ § § §

ಬಾಲ್ಯ ವಿವಾಹ ಮಸೂದೆ.

ಹರವಿಲಾಸ ಸರ್ದಾರರವರ ಬಾಲ್ಯವಿವಾಹ ಮಸೂದೆಯ ಕುರಿತು ಸಿಲೆಕ್ಟ ಕಮಿಟಿಯು ತನ್ನ ಅಭಿಪ್ರಾಯವನ್ನು ಕೊಟ್ಟಿತು. ಮದುವೆಯ ಪ್ರಾಯವನ್ನು ಹುಡುಗ ಹುಡುಗಿಯರಿಗೆ ೧೮, ೧೪ ಮಾಡಬೇಕೆಂದೂ, ಮೊದಲೇ ಮದುವೆ ಮಾಡಿದರೆ ಶಿಕ್ಷೆಕೊಡಬೇಕೆಂದೂ ಅವರ ಅಭಿಪ್ರಾಯವಿದ್ದಿತು. ಆದರೆ ಮದರಾಸಿನ ಹೆಂಗಸರು ಇದಕ್ಕೆ ವಿರುದ್ಧವಾಗಿ ಸಭೆ ಕೂಡಿದರು. ಮೊದಲು ಮಾತುಶ್ರೀ ಎಮ್. ಲಕ್ಷ್ಮಿ ಅಮ್ಮನವರು ಮಸೂದೆಯ ಕುರಿತು ವಿವರಿಸಿ ಹೇಳಿದರು. ಹಿಂದೂಮತದ ಕರ್ಮಗಳ ಒಂದು ಅಂಗವಾದ ಮದುವೆಯ ವಿಷಯದಲ್ಲಿ ಸರಕಾರದವರು ಕೈಹಾಕಬಾರದೆಂದೂ, ಮದುವೆಯು ಇಂತಿಷ್ಟೇ ಪ್ರಾಯದಲ್ಲಿ ಆಗಬೇಕೆಂದು ನಿರ್ಣಯಿಸುವದು ಹಿಂದೂಮತಸೂತ್ರಗಳಿಗೆ ತೀರ ವಿರೋಧವೆಂದೂ ಸಭೆಯು ನಿರ್ಣಯಿಸಿತು. ಈ ಮಸೂದೆಯನ್ನು ಆಧರಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದವರನ್ನು ಮಾತ್ರ ಕೌನ್ಸಿಲಿಗೆ ಕಳುಹಿಸಬೇಕೆಂದು ನಿರ್ಣಯವಾಯಿತು. ಈ ಮಸೂದೆಯ ಅರಿಕೆಯನ್ನು ಕಿವಿಗೆ ಹಾಕಿಕೊಳ್ಳಬಾರದೆಂದೂ ಗವರ್ನರರಿಗೂ ವ್ಯಾಸರಾಯರಿಗೂ ತಿಳಿಸಿ ಗತಿಸಿದ ವಿಕ್ಟೋರಿಯ ರಾಣಿಯವರು ಹಿಂದೂ ಮತಕ್ಕೆ ವಿರೋಧವಾಗಿ ವರ್ತಿಸುವದಿಲ್ಲವೆಂದು ಮಾತು ಕೊಟ್ಟಂತೆ ಇವರಿಂದಲೂ ಅಂತಹ ಒಪ್ಪಿಗೆಯನ್ನು ಪಡಕೊಳ್ಳಬೇಕೆಂದೂ ನಿಶ್ಚಯವಾಯಿತು.

§ § § §

ಬ್ರಿಟಿಷ ವಸ್ತುಗಳ ಬಹಿಷ್ಕಾರ.

ಬಂಗಾಳದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ಬ್ರಿಟಿಷ ವಸ್ತ್ರಗಳನ್ನು ಬಹಿಷ್ಕರಿಸುವುದಕ್ಕಾಗಿ ಬಲವಾದ ವ್ಯವಸ್ಥೆಗಳು ನಡೆಯುತ್ತಿವೆ. ಬೇರೆ ಬೇರೆ ಜನರಿಂದ ಬ್ರಿಟಿಷ ವಸ್ತುಗಳನ್ನು ಉಪಯೋಗಿಸುವುದಿಲ್ಲವೆಂದು ಹೇಳಿ ಪತ್ರಗಳನ್ನು ಬರೆದು ಸಹಿಹಾಕುವುದು ಮೊದಲಾದ ಕೆಲಸಗಳೂ ನಡೆಯುತ್ತಿವೆ. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ಸೂಚನೆಯಂತೆ ರಾ। ವಿ. ವಿ. ದಿವಾಕರರೂ, ವಿ ಕೆ. ಭಾವೆಯವರೂ, ವಿ. ವಿ. ಗೋಖಲೆಯವರೂ ಈ ವಿಷಯದಲ್ಲಿ ಸಂಚಾರ ಮಾಡಿ ಅಲ್ಲಲ್ಲಿ ಭಾಷಣಗಳನ್ನು ಮಾಡಿದುದೂ ಆಯಿತು. ಬರುವ ಪ್ರಾಂತಿಕ ಪರಿಷತ್ತಿನಲ್ಲಿ ಮುಂದೆ ಮಾಡಬೇಕಾದುದೆಲ್ಲವನ್ನು ನಿರ್ಣಯಿಸುವರು. ಬಹಿಷ್ಕಾರಕ್ಕಾಗಿ ಇತರ ಪ್ರಾಂತಗಳೂ ಪ್ರಯತ್ನಿಸುತ್ತಿವೆ. ಮದರಾಸು, ಮುಂಬಾಯಿ ಪಟ್ಟಣಗಳಲ್ಲಿಯೂ ಪ್ರಯತ್ನವು ನಡೆಯುತ್ತಲೇ ಇದೆ. "ಸ್ವರಾಜ್ಯವು ದೊರಕುವ ವರೆಗೆ, ಬ್ರಿಟಿಷ ವಸ್ತ್ರಗಳನ್ನು ಕೊಂಡುಕೊಳ್ಳಲಾರೆವು, ಮುಟ್ಟಲಾರೆವು, ಅಪೇಕ್ಷಿಸಲಾರೆವು" ಎಂದು ಕಾಗದದಲ್ಲಿ ಬರೆದು ಬೇರೆ ಬೇರೆ ಜನರ ಸಹಿ ತೆಗೆದುಕೊಳ್ಳುವರು. ಇದರಲ್ಲಿ ಮುಖ್ಯವಾಗಿ ಬೇಕಾದುದೇ ಸಹಕಾರ. ಮಹಾತ್ಮಾಜಿಯವರು, ಮಿಲ್ಲಿನ ಮಾಲಿಕರೊಡನೆ ಚರ್ಚಿಸುತ್ತಿರುವುದು ನಿಜವಾದ ಸಂಗತಿಯಾಗಿದೆ. ಬ್ರಿಟಿಷ ಕಾರಖಾನೆಗಳಲ್ಲಾಗುವ ವಸ್ತ್ರವನ್ನು ಬೇರೆಯಾಗಿಡಲಿಕ್ಕೆ ಜನರಿಗೆ ಕಲಿಸಿ, ರಾಷ್ಟ್ರೀಯ ಕಾರಖಾನೆಯಲ್ಲಾಗುವ ವಸ್ತ್ರಗಳನ್ನೇ ಉಪಯೋಗಿಸುವಂತೆ ಮಾಡಬೇಕು. ಬ್ರಿಟಿಷ ವಸ್ತ್ರಗಳನ್ನು ಬಹಿಷ್ಕರಿಸಲು ಎಲ್ಲರಿಗೂ ಮನಸ್ಸಿದೆಯಾದರೂ, ಅದನ್ನು ಕಾರ್ಯತಃ ಆಚರಣೆಗೆ ತರುವದು ಮಾತ್ರ ಸುಲಭಸಾಧ್ಯವಾದುದಲ್ಲ. ಇದಕ್ಕಾಗಿ ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯವರು ಒಂದು ಪ್ರತ್ಯೇಕ ಸಂಘವನ್ನು ಉಂಟುಮಾಡಿ ಪ್ರಯತ್ನಿಸಿದರೆ ಒಳ್ಳೇದು.

§ § § §

ಶ್ರೀ. ಶ್ರೀನಿವಾಸ ಶಾಸ್ತ್ರಿಯವರ ಸ್ವದೇಶಪ್ರೇಮ.

ಶ್ರೀ। ಶ್ರೀನಿವಾಸ ಶಾಸ್ತ್ರಿಯವರು ಹಿಂದೂದೇಶದ ಏಜಂಟರಂತೆ ದಕ್ಷಿಣ ಆಫ್ರಿಕದಲ್ಲಿ ಉಳಕೊಳ್ಳಲು ನಿರ್ಣಯಿಸಿರುವರು. ಅವರ ಆರೋಗ್ಯವು ಬಹುಬೇಗನೇ ಕೆಡುವ ಸಂಭವವಿದ್ದರೂ ಅವರು ಅದನ್ನು ಗಣಿಸದೆ ೨೮ನೇ ಇಸವಿಯ ಅಂತ್ಯದ ವರೆಗೆ ಆಫ್ರಿಕದಲ್ಲಿ ಉಳಕೊಳ್ಳಲು ಗೊತ್ತುಮಾಡಿರುವದನ್ನು ನೋಡಿದರೆ ಅವರ ದೇಶಪ್ರೇಮವೂ, ಸ್ವಾರ್ಥತ್ಯಾಗವೂ ಧೈರ್ಯವೂ ಬಹಳವಿದೆಯೆಂದು ಅನ್ನಲೇಬೇಕು. ಅಲ್ಲಿಯ ಹಿಂದೂಗಳಿಗೆ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷ ಸರಕಾರದವರಿಗೆ ಮನಸ್ಸಿನಲ್ಲಿಲ್ಲದ್ದರಿಂದ ಇವರ ಕೆಲಸವು ಬಹು ಕಷ್ಟತರವಾಗಿದೆ. ಆದರೂ, ಹಿಂದೂಗಳಿಗೆ ಅಲ್ಲಿ ನ್ಯಾಯವು ಸಿಕ್ಕುವಂತೆ ಅವರು ಪ್ರಯತ್ನಿಸಹತ್ತಿದ್ದಾರೆ. ಅವರು ಅಲ್ಲಿಂದ ಹಿಂತೆರಳಬೇಕಾದರೆ ಬ್ರಿಟಿಷ ಸರಕಾರ ಮತ್ತು ಹಿಂದೂಗಳೊಳಗೆ ಸಂಬಂಧದ ಬಲವಾದ ಪಂಚಾಂಗವನ್ನು ಹಾಕಿಯೇ ಬರುವರೆಂದು ಖಂಡಿತವಾಗಿಯೂ ಹೇಳಬಹುದು. ಶ್ರೀ। ಶಾಸ್ತ್ರಿಯವರು ತನ್ನ ಕಷ್ಟವನ್ನು ಲೆಕ್ಕಿಸದೆ ತನ್ನ ಊರಿನ ಜನರಿಗಾಗಿ ಕಷ್ಟಪಟ್ಟಾದರೂ ಅಲ್ಲಿರುವೆನೆಂದು ನಿರ್ಣಯಿಸಿದುದಕ್ಕಾಗಿ ನಾವು ಅವರಿಗೆ ಚಿರಕಾಲವೂ ಆಭಾರಿಗಳಾಗಿರಬೇಕು.

§ § § §

ಮಿಸ್. ಮೆಯೋಳನ್ನು ಖಂಡಿಸಿದರು!

ಅಮೇರಿಕದ ಕೆಲಿಫೋರ್ನಿಯಾ ಎಂಬಲ್ಲಿ ಅಮೇರಿಕನರ ಒಂದು ಸಭೆ ಜರಗಿತು. ಸಭೆಯೇನಾದರೂ ಅಲ್ಪದಲ್ಲ. ಪ್ರಸಿದ್ಧಪಟ್ಟ ಭಾಷಕರು, ವಿದ್ಯಾವಂತರು, ವಕೀಲರು, ಪಾದರಿಗಳು ಇವರುಗಳಿಂದಲೇ ಕೂಡಿದ್ದಿತು. ಇವರೆಲ್ಲರೂ ಏಕಮನಸ್ಸಿನಿಂದ "ಮಿಸ್ ಮೆಯೊಳು ಹಿಂದೂದೇಶದ ಕುರಿತು ಬರೆದ, 'ಮದರ್ ಇಂಡಿಯಾ' ಪುಸ್ತಕವು ತೀರಸುಳ್ಳು, ಅನರ್ಥವಾದಿಯಾಗಿದೆ. ಅವಳ ಲಿಖಿತವನ್ನು ಅಮೇರಿಕನರು ನಂಬಬಾರದು." ಎಂದು ಸಾರಿದರು. ಕಳೆದ ಎರಡು ತಿಂಗಳುಗಳಿಂದ ಮಿಸ್. ಮೆಯೋಳನ್ನು ಖಂಡಿಸಿ ಅಮೇರಿಕದಲ್ಲಿ ಇದುವರೆಗೆ ಹದಿನೆರಡು ಸಭೆಗಳು ಜರಗಿದವಂತೆ! ಈ ಸಭೆಯ ವಿವರವೆಲ್ಲವನ್ನು ಕೆಲಿಫೋರ್ನಿಯದ ಪ್ರೊಫೆಸರ ಪೋಪರು ತಂತಿಯ ಮೂಲಕ ಲಾಲಾ ಲಜಪತರಾಯರವರಿಗೆ ತಿಳಿಸಿರುವರು. ಸ್ವದೇಶಿಯರೇ ಮೆಯೋಳ ಕೈಬಿಡುತ್ತಾ ಬಂದರೆ ಅವಳಿಗೆ ಎಷ್ಟು ಆಶಾಭಂಗವಾಗುವದೋ! ಇನ್ನಾದರೂ ಅವಳು ಇಂಥ ಕೆಲಸಕ್ಕೆ ಉತ್ಸುಕಳಾಗದಿರಲಿ.

§ § § §

ಕರಾಚಿಯಲ್ಲಿ ಭಯಂಕರವಾದ ಅಗ್ನಿ!

ಕಳೆದ ಮಂಗಳವಾರ ಮಧ್ಯಾಹ್ನ ಮೂರು ಘಂಟೆಯ ಹೊತ್ತಿಗೆ ಕರಾಚಿಯ ಹತ್ತಿಯ ಮೂಟೆಗೆ ಬೆಂಕಿಬಿದ್ದಿತು. ಸಹಾಯಕ್ಕಾಗಿ ಇತರರಿಗೆ ತಂತಿ ಮಾಡುವ ಮೊದಲೇ ೩೩,೦೦೦ ಬೇಲ್ ಹತ್ತಿ ಸುಟ್ಟುಹೋಯಿತು. ಗಾಳಿಯು ಸಹಾಯಕವಾಗಿದ್ದುದರಿಂದ ಬೆಂಕಿಯ ಉರಿಯೋಣವು ಹೆಚ್ಚಿತು. ಸುಮಾರು ಕಾಲುಮೈಲು ವಿಸ್ತೀರ್ಣದ ವರೆಗೆ ಬೆಂಕಿಯೇ ಉರಿಯುತ್ತಿದ್ದಿತು. ಜ್ವಾಲೆಗಳು ಆಕಾಶದಲ್ಲಿ ೩೦ ಫೀಟ್ ಎತ್ತರದ ವರೆಗೆ ಹಾರುತ್ತಿದ್ದವು. ಸೆಕೆಯು ಬಹು ಜೋರಾಗಿದ್ದುದರಿಂದ ಫಾಯರ್ ಬ್ರಿಗೇಡಿನ ಜನರು ಸಮೀಪಕ್ಕೆ ಬರಲಾರದೆ, ಸಹಾಯವನ್ನು ಮಾಡಲಾರದಾದರು. ಒಟ್ಟಾರೆ ನಷ್ಟವು ಸುಮಾರು ೬೦ ಲಕ್ಷಕ್ಕೆ ಮಿಕ್ಕಿ ೮೦ ಲಕ್ಷಕ್ಕೆ ಕಡಿಮೆಯಾಗಿದೆ. ರಾತ್ರೆ ಏನಾಯಿತೆಂದು ಸರಿಯಾಗಿ ತಿಳಿದಿಲ್ಲ. ಸಮೀಪದ ಕಟ್ಟೋಣಗಳನ್ನೂ ಮನೆಗಳನ್ನೂ ಬೀಳಿಸಿರುವರು. ಇದರಿಂದಲಾದರೂ ಬೆಂಕಿಯು ವಿಶ್ರಾಂತಿಸದಂತಾಯಿತು. ಬೆಂಕಿಗೆ ಹತ್ತಿರವಾಗಿದ್ದ ಕಬ್ಬಿಣದ ತಂತಿ ಕಂಬಗಳು ಕರಗಿ ನೀರಾದವು. ಸಮೀಪದಲ್ಲಿದ್ದ ಒಂದು ರೈಲ್ವೆ ಗಾಡಿಯು ಕರಗಿ ಆಕಾರವಿಲ್ಲದೆ ಮುದ್ದೆಯಾಗಿ ಬಿದ್ದಿತು.

§ § § §

ಖಾನಪುರದ ಮಜದೂರ ಸಭೆ.

ಖಾನಪುರದ ಮಜದೂರ ಸಭೆಯು ಪಂಡಿತ ಜವಹರಿಲಾಲ ನೆಹರುರವರ ಅಧ್ಯಕ್ಷತೆಯಲ್ಲಿ ಜರಗಿತು. ಮಿಲ್ಲುಗಳ ಜನರನೇಕರು ಬಂದಿದ್ದರು ಸ್ವಾತಂತ್ರ್ಯದ ಚಳವಳದಲ್ಲಿ ಐಕ್ಯವು ಇರಲೇ ಬೇಕೆಂದೂ, ಸ್ವರಾಜ್ಯವು ಬಡವನಿಗೂ ಧನಿಕನಿಗೂ ಆವಶ್ಯಕವೆಂದೂ ಅಧ್ಯಕ್ಷರು ಒತ್ತಿಹೇಳಿದರು.

ಅನೇಕ ಠರಾವುಗಳಾದವು. ಮುಖ್ಯವಾಗಿ ಮಿಲ್ಲುಗಳಲ್ಲಿ ದಿನಕ್ಕೆ ಎಂಟು ಗಂಟೆ ಮಾತ್ರ ಕೆಲಸಮಾಡಬೇಕೆಂಬ ಒಂದು ಠರಾವು ಅಂಗೀಕೃತವಾಯಿತು.

ಹೊಸದುರ್ಗ 1—4—'28.

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಪ್ರಕಾರ ವಾದಿಯು ಕೊಟ್ಟ ವ್ಯಾಜ್ಯದಲ್ಲಿ ಇಲ್ಲಿಯ ಪಂಚಾಯಿತ ಕೋರ್ಟಿನಲ್ಲಿ ವಾದಿಯ ಮೇಲೆ ಕೊಟ್ಟ ಡಿಕ್ರಿ ಮುನ್ಸಿಫ್ ಕೋರ್ಟಿನಲ್ಲಿ ರದ್ದುಪಡಿಸಿ ಪುನಃ ತನ್ನಿಗೆ ಸದರಿ ವ್ಯಾಜ್ಯ ನಿಲೇಶ್ವರ ಪಂಚಾಯಿತ ಕೋರ್ಟಿಗೆ ರವಾನಿಸಿಯದೆ.

ಇಲ್ಲಿಯ ಗ್ರಾಮ ಉದ್ಯೋಗಸ್ತರ ಜಮಾಬಂಧಿಯು ಬರುವ ಮೇ ತಿಂಗಳಲ್ಲಿ ಆರಂಭವಾಗುವದೆಂತ ತಿಳಿದುಬರುತ್ತದೆ. ಕಾಡು ಉತ್ಪತ್ತಿಗಳನ್ನು ಜಮಾಯಿಸುವ ಹಕ್ಕು ಇಲ್ಲಿಯ ಡಿಪ್ಯುಟಿ ತಹಸಿಲದಾರರಿಂದ ಬರುವ ತಿಂಗಳಲ್ಲಿ ಏಲಂ ಮಾಡೋಣಾಗುವದು.

ಕೆಲವು ಕಾಲದ ಹಿಂದೆ ಪಳ್ಳಿನೆ ಗಂಡಾಂತರಕ್ಕೆ ಸಿಲುಕಿ ನಾಶಹೊಂದಿದ ಜಲಮ ಹುಗಿ ಹಡಗದಲ್ಲಿ ಇದ್ದ ಅನೇಕ ಸಾಮಾನುಗಳು ಸರಕಾರದಿಂದ ಇಲ್ಲಿ ಏಲಂ ಮಾಡೋಣಾಯಿತು. ಆ ಪೈಕಿ ಉತ್ತಮವಾದ ಎರಡು (Life boats) ಸಹಾ ಇದ್ದವು. ಅವು ಈಗಲೂ ಅವಶ್ಯಪಟ್ಟವರು ಇಲ್ಲಿ ವ್ಯಾಪಾರಸ್ಥರೊಬ್ಬರ ಕೂಡೆ ಪಡಕೊಳ್ಳಬಹುದು.

ಕೆಲವು ದಿವಸಗಳ ಹಿಂದೆ ಮಳೆ ಮೋಡ, ಮಿಂಚು, ಗುಡುಗು ಇಲ್ಲಿಯು ಕಾಣಿಸಿಕೊಳ್ಳುತ್ತಾ ಇದ್ದವು. ವೃಶ್ಚಿರಾಯರು ಫಕ್ಕನೆ ನಿನ್ನೆಯಿಂದ ಸರಾಗವಾಗಿ ಬೇಟೆಕೊಡಲಿಕ್ಕೆ ಪ್ರಾರಂಭಿಸಿದ್ದಾರೆ.

ಇಲ್ಲಿಂದ ಕಳ್ಳಾರಿಗೂ, ಕಳ್ಳಾರಿನಿಂದ ಇಲ್ಲಿಗೂ ಹೋಗಿ ಬರುವರೆ ಮೋಟರ ಸರ್ವಿಸು ಆರಂಭಿಸಿಯದೆ. ಈ ಮೋಟರ್ ದಿನಕ್ಕೆ ಒಂದಾವರ್ತಿ ಮಾತ್ರ ಹೋಗಿಬರುವಂತೆ ಲೈಸೆನ್ಸ್ ಕೊಡೋಣಾಗಿಯದಂತೆ. ದಿವಸಕ್ಕೆ ಎರಡು ಸಾರಿ ಓಡಿಸಿದರೆ ಲೈಸೆನ್ಸ್ ಶರ್ತಕ್ಕೆ ವಿರೋಧವಾಗುವದೋ ಎಂದು ನೋಡಲಿಕ್ಕಿದೆ.

ಈ ಡಿವಿಜನಿನಲ್ಲಿ ಎರಡು ಕೊಲೆ ನಂಬ್ರಗಳು ನಡೆದವು. ಮೊದಲಿನದು ತ್ರಿಕರಪುರ. ಮತ್ತೊಂದು ನಿಲೇಶ್ವರ. ಎರಡು ನಂಬ್ರಗಳು ಕೋರ್ಟಿನಿಂದ ತನ್ನಿ ಪ್ರಕಾರ ಶಿಕ್ಷೆ ವಿಧಿಸಲಾಗಿಯದೆ. ಮೊದಲನೇ ನಂಬ್ರವು ತಲಾಸಿಗೆ ಕಾರಣಭೂತರಾದ ಕಾಸರಗೋಡ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ ಮ. ರಾ. ರಾ. ಲಕ್ಷ್ಮಣನವರು. ಇವರ ಕೆಲಸವು ಬಹಳ ಶ್ಲಾಘನೀಯವಾದದ್ದು ಇವರ ಮನಃಪೂರ್ವಕ ಶ್ರದ್ಧೆ ಬಗ್ಗೆ ತಕ್ಕ ಬಡ್ತಿಯನ್ನು ಭಗವಂತನು ಅನುಗ್ರಹಿಸದೆ ಇರಲಾರನು. ಎರಡನೇ ನಂಬ್ರವು ಸಹಾ ಹೆಚ್ಚಿನ ಮೋಹನತ್ತ ಪಡೆದು ಆಲೆರನ್ನು ಹಿಡಿದದಾಗಿರುತ್ತದೆ. ಪೈಕಿ ಇಬ್ಬರಿಗೆ ಖುಲಾಸಪಡಿಸಿ ಬಾಕಿ ಮೂರು ಜನರಿಗೆ ಶಿಕ್ಷೆ ಆಗಿಯದೆ. ಈ ನಂಬ್ರದ ತಲಾಶಿ ಬಗ್ಗೆ ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರಿಗೆ ಹೊಗಳಬೇಕಾಗಿರುತ್ತದೆ.

ತಾಲೂಕು ಬೋರ್ಡ ಮೆಂಬರರ ಚುನಾವಣೆಯು ಇಲ್ಲಿಯ ೩ ಸೆಂಟರುಗಳಲ್ಲಿ ನಿಶ್ಚಯಿಸೋಣಾಗಿತ್ತು. ಹೊಸದುರ್ಗ ಸೆಂಟರಿನಲ್ಲಿ ಮ ರಾ. ರಾ. ಎ. ಸಿ. ಕೋಮುನಾಯರಿಗೂ, ನಿಲೇಶ್ವರ ಸೆಂಟರಿನಲ್ಲಿ ಮ। ರಾ। ರಾ। ಕೆ. ಕೆ. ನಂಬ್ಯಾರರಿಗೂ ಸಹಾ ಮೊಕ್ತ್ರಿರು ಆಗಿಯದೆ. ತ್ರಿಕರಪುರ ಸೆಂಟರಿನಲ್ಲಿ ಚುನಾವಣೆ ನಡಿಯುವರೆ ಗಡಿಬಿಡಿಯಿಂದ ಸಾಧ್ಯವಾಗಲಿಲ್ಲವಾಗಿ ತಿಳಿದುಬರುತ್ತದೆ. ನಿಂತ ಮೂರು ಜನ ಉಮೆದ್ವಾರರ ಪೈಕಿ ಒಬ್ಬರು ಕೋರ್ಟು ಇಂಜೆಕ್ಷನ್ ಪ್ರಕಾರ "ಇನ್‌ವೆಲ್ಲಿಡ್" ಆದರು. ಉಳಿದವರಲ್ಲಿ ಕಾದಾಟ! ಕ್ರಿಮಿನಲ್ ಕಾನೂನು ಮೇರೇಗೆ ಕೋರ್ಟು ಬಾಗಲಿಗೆ ಓಡಾಟ! ಫಲಿತಾಂಶ ನೋಡಲಿಕ್ಕಿದೆ. ಅಲೆದಾಡುವ ನಾಯಿಗಳು ಕೊಲ್ಲುವ ವಿಷಯ ಬೋರ್ಡು ಹುಕುಂ ಪ್ಯಾಸ್‌ಮಾಡಿದ್ದು ಮಾತ್ರ, ವ್ಯಾದಿ ಕಳಿಯಲಿಕ್ಕೆ ಆಯಿತು. ನಾಯಿಗಳ ಸಂಖ್ಯೆ ಯೇರಿತು. ಕಾರಣ ಗೊತ್ತಾಗಲಿಲ್ಲ. ಹುಕುಂ ಜ್ಯಾರಿ ನಡಿಯಲಿಲ್ಲಾ.

ನಾನು ಬ್ರಹ್ಮಾವರ ಸರ್ಕಲಿನಲ್ಲಿ ಉಡುಪಿ ತಾಲೋಕು ಬೋರ್ಡು ಮೆಂಬರಿಕೆಯ ಸ್ಥಾನಕ್ಕೆ ಒಬ್ಬ ಉಮೇದವಾರನಾಗಿ ನಿಂತಿದ್ದೆ ಈ ಸರ್ಕಲಿನ ಓಟುದಾರರಲ್ಲಿ, ಹೆಚ್ಚಾದವರು ಪ್ರೀತಿ, ವ, ವಿಶ್ವಾಸದಿಂದ ನನಗೆ ತಮ್ಮ ಓಟನ್ನು ಕೊಟ್ಟು ಯಾ ಬೇರೆಯವರಿಂದ ಸಹ ಕೊಡಿಸಿ ನನಗೆ ಪ್ರೋತ್ಸಾಹಿಸಿದ ಈ ಎಲ್ಲಾ ಮಹನೀಯರುಗಳಿಗೆ ನಾನು ಸದಾಋಣಿಯಾಗಿರುತ್ತೇನೆ. ಮಾತ್ರವಲ್ಲ ನಾನಾ ಕೃತಜ್ಞತೆಯನ್ನು ಅವರಿಗೆಲ್ಲಾ ಈ ಮೂಲಕ ಕೃತಪಡಿಸಿರುತ್ತೇನೆ.

ಈ ಸರ್ಕಲ ಓಟುದಾರರು, ನನಗೆ ಮಾಡಿರುವ ಈ ಮಹೋಪಕಾರವನ್ನು ಶಿರಸಾ ವಹಿಸಿ ಈ ಮೂಲಕ ನಾನು ಜನರ ಹಿತಕ್ಕಾಗಿ ಮಾಡಬಹುದಾದಷ್ಟು ಸೇವೆಯನ್ನು ಮಾಡಬೇಕೆಂದು ಇಚ್ಛಿಸಿರುತ್ತೇನೆ. ಆ ಸರ್ವ ಚೈತನ್ಯಸ್ವರೂಪಿಯಾದ ಭಗವಂತನು ಈ ನನ್ನ ಕಾಂಕ್ಷೆಯನ್ನು ನೆರವೇರಿಸಲಿ ಎಂದು ಪ್ರಾರ್ಥಿಸುವ,

ಪೆರಡೂರು, ತಾ. 1-4-'28.

ತಮ್ಮ ಕೃಪಾಭಿಲಾಷಿ,
ಬೇಳಂಜೆ ಕೃಷ್ಣಯ್ಯ ಹೆಗಡೆ.

ನೋಟೀಸು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಸಮಸ್ತ ಓಟರರಿಗೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಶ್ರೀ ದೇವಸ್ಥಾನದ ಸ್ಕೀಮಿನ 45ನೇ ಕಲಂ ಪ್ರಕಾರ ಪ್ರಭವ ಸಂವತ್ಸರದ ಕಾರ್ತಿಕ ಶು। ೧೫ಕ್ಕೆ ಅಂತ್ಯವಾಗುವ ವರುಷದ ವರುಷಾವಧಿ ಲೆಖ್ಖಗಳನ್ನು ಕೌನ್ಸಿಲರ ರಿಪೋರ್ಟ ವ ಓಡಿಟರರ ರಿಪೋರ್ಟ ಅಂಗೀಕರಿಸಿ ಮಂಜೂರು ಮಾಡುವ ಬಗ್ಗೆ ಮೊಕ್ತೇಸರರನ್ನು ಚುನಾಯಿಸುವ ಬಗ್ಗೆ ವ ಈ ಕೆಳಗೆ ಕೊಟ್ಟ ವಿಷಯಗಳನ್ನು ತೀರ್ಮಾನಿಸುವ ಬಗ್ಗೆ ಇಲೆಕ್ಟರರ ಮಹಾಸಭೆಯು ಇದೇ 1928ನೇ ಇಸವಿ ಎಪ್ರಿಲ್ ತಿಂಗಳ ತಾ. 22ನೇ ರವಿವಾರ (ವಿಭವ ಸಂ।ರದ ವೈಶಾಖ ಶು। ೨) ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ರಾತ್ರೆ ಘಂಟೆ 9ಕ್ಕೆ ಜರಗುವುದು. ಸಮಸ್ತ ವೋಟರರು ಹಾಜರಾಗಬೇಕಾಗಿ ಅಪೇಕ್ಷಿಸೋಣಾಗಿಯದೆ.

ವಿಷಯಗಳು—

೧) ಶ್ರೀ। ರಾಮಕೃಷ್ಣ ಧರ್ಮವಿದ್ಯಾಶ್ರಮದ ಮುಲ್ಕಿ ಶಾಖೆಗೆ ತಾ. ೧—೨—'೨೮ರಿಂದ ಕೊಡತಕ್ಕ ಧರ್ಮಸಹಾಯದ ವಿಷಯ.

೨) ೯೪ನೆ ಕಲಂಪ್ರಕಾರ ವಿದ್ಯಾಶಾಲೆ ವಗೈರೆಗಳಿಗೆ ಖರ್ಚನ್ನು ವಿಭಾಗಿಸಿಡುವ ವಿಷಯ.

೩) ಈ ಮುಂಚೆ ಬಾಕಿ ಇದ್ದ ವಿಷಯಗಳು.

೪) ಇತರ ವಿಷಯಗಳು.

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ
ತಾ. 4-4-'28.

U. V. SHENAI,
Manager.

ಪತ್ರವ್ಯವಹಾರ.

ಉಚಿತ ದ್ರವ್ಯಸಹಾಯವನ್ನು ಮಾಡ್ಯಾರೆಂದು ನಮ್ಮ ನಿರ್ಮಲವಾದ ನಂಬಿಕೆ. ದೇಶೀಯ ವೈದ್ಯರು, ಎಲ್ಲೋಪೆತಿ, ಹೋಮಿಯೋಪೆತಿ, ಕ್ರೋಮೋಪೆತಿ, ಹೈಡ್ರೋಪೆತಿ, ಯುನೀಪೆತಿ, ಯುನಾನಿ ಸಿದ್ಧ, ಆಯುರ್ವೇದಗಳೆಂಬ ತಮ್ಮೊಳಗಿರುವ ವಿಚ್ಛಿನ್ನ ವ್ಯವಹಾರಗಳನ್ನು ಬಿಟ್ಟು ಅವಿಚ್ಛಿನ್ನರಾಗಿ ವೈತ್ರೀಭಾವದಿಂದ ಈ ಸಾರ್ವಜನಿಕ ಪವಿತ್ರಕಾರ್ಯದಲ್ಲಿ ಶ್ರದ್ಧಾಳುಗಳಾಗಬೇಕಾಗಿ ನಮ್ಮ ಸಂಕಲ್ಪ. ಕಾಶಿ, ಕಲ್ಕತ್ತಾ, ಬರೋಡಾ, ಹೈದರಾಬಾದ್, ಮೈಸೂರು, ಮದ್ರಾಸ್, ಅನಂತಶಯನ, ಮೊದಲಾದ ದಿವ್ಯ ವಿದ್ಯಾಸಂಸ್ಥೆಗಳಲ್ಲಿ ಶಾಸ್ತ್ರವನ್ನು ಅಧ್ಯಯನ ಮಾಡಿ, ಚಿಕಿತ್ಸಾ ವೃತ್ತಿಯಲ್ಲಿ ಕನ್ನಡ ಜಿಲ್ಲೆಯನ್ನು ಅಲಂಕರಿಸುತ್ತಿರುವ ವೈದ್ಯೋತ್ತಮರು ಇನ್ನಷ್ಟು ಹೆಚ್ಚಿನ ಜವಾಬ್ದಾರಿಕೆಯನ್ನು ತಕ್ಕೊಂಡು ಈ ಸಮ್ಮೇಲನ ಕಾರ್ಯಕ್ಕೆ ಧನಸಹಾಯವನ್ನು ಮಾಡುವದರಿಂದಲೂ, ಪ್ರಬಂಧಗಳನ್ನು ಬರೆದುಕಳುಹಿಸುವದರಿಂದಲೂ, ಪ್ರದರ್ಶ ವಸ್ತುಗಳನ್ನು ಸಂಗ್ರಹಿಸಿ ಅನುಕೂಲಿಸುವದರಿಂದಲೂ, ಸಮ್ಮೇಲನದಲ್ಲಿ ಸಾಯುಜ್ಯರೂಪವನ್ನು ತೋರಿಸಬೇಕೆಂದು ನಮ್ಮ ಆಗ್ರಹಪೂರ್ವಕ ಅಂಬೋಣ.

ಮಹನೀಯರೇ,—ಸಮ್ಮೇಲನಕ್ಕೆ ಕೇವಲ ೧॥ ತಿಂಗಳು ಮಾತ್ರ ಉಳಿಯಿತು. ನಾವು ಇನ್ನೂ ರಿಕ್ತಹಸ್ತರಾಗಿ ತಮ್ಮೆಲ್ಲರನ್ನೂ ಮುಕ್ತಹಸ್ತರಾಗಲಿಕ್ಕೆ ವಿನೀತಭಾವದಿಂದ ಪ್ರಾರ್ಥಿಸುತ್ತೇವೆ. ನಮ್ಮ ಪ್ರತಿನಿಧಿಗಳು, ದ್ರವ್ಯಸಂಗ್ರಾಹಕರು, ತಮ್ಮಲ್ಲಿ ಬರುವಾಗ್ಗೆ ದಯೊಸ್ತಾರಸ್ಯವನ್ನೂ, ತ್ಯಾಗಭಾವವನ್ನೂ, ತೋರಿಸಿರಿ. ಸಾಕ್ಷಾತ್ ತಾವಾಗಿಯಾದರೂ ಉಚಿತ ಸಹಾಯಗಳನ್ನು ನಮ್ಮ ಸಮಿತಿಗೆ ಕಳುಹಿಸಿರಿ!—ಮಿಕ್ಕ ವಿಷಯಗಳನ್ನು ನಮ್ಮ ಕಾರ್ಯದರ್ಶಿಗಳಿಂದ ತಿಳಕೊಳ್ಳಬಹುದಾಗಿ ವಿನಯಪೂರ್ವಕ ವಿನಂತಿ.

ಅಖಿಲ ಕರ್ನಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ

31—3—'28. ಸಮ್ಮೇಲನದ ಸ್ವಾಗತ ಸಮಿತಿ.

ಮಂಗಳೂರು.

ಮಂಗಳೂರು ಬಾರ್ಕೂರು ಸುಧಾರಕ ಹೋಬಳಿ ಮುಂಬಾಯಿ.

ಮುಂಬಾಯಿಯಲ್ಲಿರುವ ಮಂಗಳೂರು ಬಾರ್ಕೂರು ಹೋಬಳಿ ಸಭೆಯು ಪೂಜಿಸುತ್ತಿರುವ ದೇವಿಗೆ ಪ್ರಥಮತವಾಗಿ ವರುಷಕ್ಕೆ ಮೂರು ಪೂಜೆಗಳನ್ನು ಕೊಡುತ್ತಾ ಬರುತಿದ್ದರೂ ಈಗ್ಗೆ ಕೆಲವು ವರುಷಗಳಿಂದ ದೇವಿಯ ಆಶೀರ್ವಾದವನ್ನು ವಿಶೇಷವಾಗಿ ಸಂಪಾದಿಸುವುದಕ್ಕೋ ಯಾ ಭಜಕರ ಇಂದ್ರಿಯ ತೃಪ್ತಿಗಾಗಿಯೋ ಪೂರ್ವಿಕ ಪದ್ಧತಿಯನ್ನು ತ್ಯಜಿಸಿ ವರುಷಕ್ಕೆ ೧೫ ಪೂಜೆಗಳನ್ನು ಮಾಡುತ್ತಾ ಬರುತ್ತಾರೆಂಬುದು ಮೊಗವೀರರೆಲ್ಲರಿಗೂ ಗೊತ್ತಿರುವ ವಿಷಯವಾಗಿರುತ್ತದೆ. ಈ ಪೂಜೆಯ ನಿಮಿತ್ತದಿಂದ ಹೆಚ್ಚು ಕಡಿಮೆ ರೂ. ೩೦೦೦/- ವ್ಯಯಮಾಡುತ್ತಾರಾದರೂ, ಜಾತಿಗೆ ಬರುವ ರೋಗರುಜೆಗಳಾಗಲೀ ಯಾ ಬರಗಾಲವಾಗಲೀ ಕಮ್ಮಿಯಾದಂತೆ ಕಾಣುವುದಿಲ್ಲ. ಈ ಪ್ರಕಾರ ಅನಾವಶ್ಯಕವಾಗಿ ಹಣ ವ್ಯಯಮಾಡುವುದನ್ನೂ ಮತ್ತು ಎಲ್ಲಾ ಜಾತಿಯವರು ತಮ್ಮ ತಮ್ಮ ಸಂಸ್ಥೆಗಳನ್ನು ನಾನಾ ಬಗೆಗಳಿಂದ ಸುಧಾರಿಸುವರೆ ಪ್ರಯತ್ನಿಸುವುದನ್ನು ನೋಡಿ ನಮ್ಮ ಜಾತಿ ಅಭಿವೃದ್ಧಿಯ ತಿರುಳನ್ನೇ ನಾಶಮಾಡುವಂಥಾ ಈ ಪೂಜಾ ಪದ್ಧತಿಯನ್ನು ಕಡಿಮೆಮಾಡಿ ಮಿಕ್ಕುಳಿದ ಹಣವನ್ನು ಜಾತಿಯ ಮಕ್ಕಳ ವಿದ್ಯಾಭ್ಯಾಸಕ್ಕೂ ಅಥವಾ ಜಾತಿಯ ಇತರ ಅಭಿವೃದ್ಧಿಯ ಕಾರ್ಯಗಳಿಗೆ ವಿನಿಯೋಗ ಮಾಡಬೇಕೆಂದು ನಮ್ಮ ಜಾತಿಯ ಎಷ್ಟೋ ಜನರು ಅಲ್ಲದೆ ಕೆಲವು ಗ್ರಾಮಸ್ಥರೂ ಕೂಡ ಹೋಬಳಿ ಸಭೆಗೆ ಎಷ್ಟೋ ಸಾರಿ ವಿನಂತಿ ಮಾಡಿಕೊಂಡರೂ ಅದನ್ನು ಗಣನೆಗೆ ತಾರದೆ ಯಥಾವಿಧಿಯಂತೆ ಪೂಜೆ ಮಾಡುತ್ತಾ ಬರುವುದರಿಂದ ಇಂಥಾ ಪೂಜೆಗೆ ಸಹಾಯಕವಾಗದಿರುವವರಿಗೆ ಹೋಬಳಿ ಸಭೆಯ ಬಹಿಷ್ಕಾರವನ್ನು ಮಾಡಲು ಪ್ರಾರಂಭಮಾಡಿ ಈಗ ಕಮ್ಮಿ ಎಂದರೂ ನೂರು ಜನರು ಬಹಿಷ್ಕಾರ ಬಹುಮಾನಕ್ಕೆ ಒಳಪಟ್ಟಿರುತ್ತಾರೆ. ಅದಲ್ಲದೆ ಪೂಜೆಗೆ ವಂತಿಗೆ ಕೊಡದೆ ಇರುವ ಎಷ್ಟೋ ಜನರು ಇರುತ್ತಾರೆಂಬ ಸಂಗತಿ ಹೋಬಳಿ ಮುಕ್ತೇಶ್ವರರಿಗೆ ಗೊತ್ತಿದ್ದರೂ ಅವರ ಅಪ್ರೀತಿಯನ್ನು ಗಳಿಸಬಾರದ ಹಾಗೆ ವಂತಿಗೆ ಕೊಡದವರ ಬಳಿಗೆ ತಮ್ಮ ಬಂಟರನ್ನು ಕಳುಹಿಸಿ ಅವರು ವಂತಿಗೆಯನ್ನು ಕೊಡುವಂತೆಯೂ ಅವರಲ್ಲಿ ಹಣವಿಲ್ಲದಿದ್ದರೆ ಅಪ್ಪಣೆಕೊಟ್ಟರೆ ತಮ್ಮ ಕೈಯಿಂದಾದರೂ ಕೊಡುತ್ತೇವೆ ಎಂದು ಕೂಡಾ ಬೇಡಿಕೊಂಡರೂ, ಈ ಬಂಟರ ಮಾತಿಗೆ ಮರುಳಾಗದಂತವರಿಗೆ ಕೊಡ ಪೂಜೆ ಪ್ರಾರಂಭವಾಗಿ ಎರಡು ಮೂರು ತಿಂಗಳ ವರೆಗೂ ಬಹಿಷ್ಕಾರವಿರದಿದ್ದರೂ ಪಾಪ! ಕೆಲವರು ಮಾತ್ರ ವಂತಿಗೆ ಪಾವತಿ ಮಾಡುವರೆ ಒಂದೆರಡು ದಿನ ಜಾಸ್ತಿ ತಡಮಾಡಿದಕ್ಕೆ ಬಹಿಷ್ಕಾರ! ಕೆಲವರು ವಂತಿಗೆ ಕಳುಹಿಸಿದುದನ್ನು ಸ್ವೀಕಾರ ಮಾಡದೆಯೂ ಬಹಿಷ್ಕಾರ!! ಕೆಲವರು ವಂತಿಗೆಯನ್ನು ಪಾವತಿ ಮಾಡಿದರೂ ಮುಕ್ತೇಶ್ವರನು ಕಿಸೆಯಲ್ಲಿಟ್ಟುಕೊಂಡು ವಂತಿಗೆ ಬರಲಿಲ್ಲವೆಂದು ಸಭೆಗೆ ತಿಳಿಸಿ ಬಂಟರ ಪ್ರೋತ್ಸಾಹದ ಬಲದಿಂದ ಬಹಿಷ್ಕಾರ!!! ಇಂಥಾ ಅನ್ಯಾಯಕ್ಕೆ ಯಾವ ತರದ ವಿಚಾರಣೆ ಇದೆಯೋ! ಅವರ ಇಚ್ಛೆಯಂತೆ ಬಹಿಷ್ಕಾರ ಇಚ್ಛೆಯಂತೆ ಕೂಡಾಟ! ಮತ್ತೂ ಬಲಾತ್ಕಾರ. ಈ ತರದ ಪಕ್ಷಪಾತಯುಕ್ತವಾದ ವರ್ತನೆಯನ್ನು ತೀರಾ ತಿರಸ್ಕಾರ ದೃಷ್ಟಿಯಿಂದ ನೋಡುವುದೇ ಉತ್ತಮವಾದ ಮರ್ಯಾದೆ ಎಂದು ಜಾತಿಯ ಎಷ್ಟೋ ಜನರು ತಿಳಕೊಂಡು ನ್ಯಾಯನೀತಿಯಿಲ್ಲದ ಹೋಬಳಿ ಸಭೆಯನ್ನೇ ಬಹಿಷ್ಕಾರ ಮಾಡುವುದುತ್ತಮವೆಂದು ಮೊಗವೀರರ ಸಭೆಯು ತಾ. ೧೧-೩-'೨೮ರಲ್ಲಿ ಕೂಡಿಸಿ "ಮಂಗಳೂರು ಬಾರ್ಕೂರು ಸುಧಾರಕ ಹೋಬಾಳಿ" ಎಂಬ ಸಭೆಯನ್ನು ಸ್ಥಾಪಿಸಿದೆವು. ಇದಕ್ಕೆ ಮೊಗವೀರ ಜಾತಿಯು ಪ್ರತಿಯೊಬ್ಬ ವ್ಯಕ್ತಿಯನೂ ಜಾತಿಯ ಸುಧಾರಣೆಗೆ ಇದೇ ಸುಸಂದರ್ಭವೆಂದು ಭಾವಿಸಿ, "ಮೊಗವೀರರ" ಎಂಬ ಕುಲನಾಮವು ಅಳಿದು ಹೋಗದಂತೆ ಮಾಡಲು ಮುಂದಾಗಿ ಬಂದು ನಮಗೆ ಪ್ರೋತ್ಸಾಹವನ್ನು ಕೊಡುವರಾಗಿ ನಂಬುತ್ತೇವೆ.

ಇದಕ್ಕೆ ಮ॥ ರಾ॥ ಓದರಬೆಟ್ಟು ಕೇಶವ ಟಿ. ದೇವುಜಿಯವರನ್ನು ಅಧ್ಯಕ್ಷರನ್ನಾಗಿಯೂ ಪಣಂಬೂರು ಉಮ್ಮಯ್ಯ ಸುವರ್ಣರನ್ನು ಉಪಾಧ್ಯಕ್ಷರನ್ನಾಗಿಯೂ, ಬೈಕಂಪಾಡಿ ದೂಮಪ್ಪ ಎ. ಕರ್ಕೇರರನ್ನೂ ದೊಡ್ಡಎರ್ಮಾಳ ಚಂದು ಸಿ. ಕೋಟಿಯನ್‌ರನ್ನೂ ಕಾರ್ಯದರ್ಶಿಯರನ್ನಾಗಿಯೂ ಹೊಸಬೆಟ್ಟು ದೂಮಪ್ಪ ಸಾಲಿಯಾನರನ್ನು ಕೋಶಾಧಿಕಾರಿಯನ್ನಾಗಿಯೂ ನೇಮಕ ಮಾಡಲಾಗಿದೆ. ಆದ್ದರಿಂದ ಈ ಹೋಬಳಿ ಸಂಬಂಧಪಟ್ಟ ಎಲ್ಲಾ ಪತ್ರವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ಗೌರವ ಜೊತೆ ಕಾರ್ಯದರ್ಶಿಗಳು,

ಮಂಗಳೂರು ಬಾರ್ಕೂರು ಸುಧಾರಕ ಹೋಬಾಳಿ

ಜಮ್ನಾದಾಸ್ ಬಿಲ್ಡಿಂಗ್, ಪೀಥಾ ಸ್ಟ್ರೀಟ್,

ಫೋರ್ಟ್ ಮುಂಬಾಯಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ಹಂಡಾವು ವ್ಯಾಪಾರ,

24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ ಮತ್ತು ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,

ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ದ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.

Mangalore, 16th Feb. 1928.

K. Venkat Rao,

Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಕೆಮ್ಮು, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವನಿಗೆ ಮಾತ್ರ.



ಹಿಂದೂಸ್ಥಾನದ ಹೆಂಗಸರಿಗೆ

ಹೆಚ್ಚಿನ ಆರೋಗ್ಯ

[illegible] ಹೆಂಗಸರಿಗೆ ಮಾತ್ರ ಇವುಗಳು ದೊರಕುವಂತೆ [illegible] ಉಪಯೋಗಕ್ಕೆ ತರಲ್ಪಟ್ಟಿವೆಯೊ, ಅಲ್ಲಿ ಅವುಗಳ ಫಲಕಾರಿತೆಯು [illegible] ಮುಟ್ಟುದೋಷಗಳನ್ನು ನಿವಾರಿಸಿ, ಹೊಸದಾದ ಉತ್ತಮ [illegible] ಕೊಡುವ, ಇತ್ತೀಚಿಗಿನ ಅತ್ಯಂತ ಮಹತ್ವದ ವೈದ್ಯಕೀಯ ಶೋಧವಾಗಿ [illegible] ದೊರಕಲಾಗುವಂತೆ, ಆದರ ಬೆಲೆಯೂ ಕಡಿಮೆಯಾಗಿ ನಿಶ್ಚಯಿಸಲ್ಪಟ್ಟಿರುವದು.

[illegible]

[illegible] ಮಾತ್ರೆಗಳ ಸೇವನೆಯಿಂದ, ರಜಸ್ವಲೆಯಾಗಲಿರುವ ಹುಡುಗಿಯರಿಗೆ [illegible] ಅವರಿಗೆ ಈ ಶಕ್ತಿಕಾರಕ ಔಷಧದ ರಕ್ತವನ್ನು ಹೆಚ್ಚಿಸುವ [illegible] ಕ್ರಮಪಡಿಸುವ ಸಹಾಯವು ಅಗತ್ಯವಿದೆ. ಫೆಲೂನಾ ಮಾತ್ರೆಗಳಲ್ಲಿ [illegible] ರೂಪದಲ್ಲಿ ಕಬ್ಬಿಣವಿದೆ. ಮೈಯಲ್ಲಿ ರಕ್ತವಿಲ್ಲದ [illegible] ಮಾತ್ರೆಗಳ ಸೇವನೆಯ ನಂತರ ತನ್ನ ಮುಖದಲ್ಲಿ ದೀರಿಬರುವ [illegible] ಫೆಲೂನಾ ಮಾತ್ರೆಗಳ ರಕ್ತರಚನೆಯ ಶಕ್ತಿಯೂ ರಕ್ತವನ್ನು ಅಧಿ[illegible] ತೋರಿಸಿಕೊಳ್ಳುವಳು. ಪ್ರಾಯಶಃ, ಪ್ರಸವ ಸಮಯ [illegible] ಅಲಕ್ಷ್ಯದಿಂದ ಉಂಟಾದ ನೋವುಗಳಿಂದ ಜೀವನದಲ್ಲಿ ಬೇಸರಿಕೆ [illegible] ಉಂಟಾದವರಾಗಿ, ಗೃಹಕರ್ತವ್ಯಗಳೂ ಸಂಸಾರದ ತಾಪತ್ರಯಗಳೂ [illegible] ಕಾಣುವ ಹೆಂಡಂದಿರೂ ತಾಯಂದಿರೂ ಫೆಲೂನಾ ಮಾತ್ರೆಗಳ [illegible] ಶಕ್ತಿಕಾರಕ ಅನುಭವವನ್ನು ಪಡೆಯುವರು. ಮತ್ತು ಪ್ರಾಯ ಹೆಚ್ಚಿ ಜೀವನ ಪರಿವರ್ತನೆಯ ಸಮಯ ಬರುವಾಗ, ಈ ಸಮಯದಲ್ಲಿ ಸರ್ವಸಾಮಾನ್ಯ[illegible] ಮೈಬೆವರುವಿಕೆ, ತಲೆತಿರುಗುವಿಕೆ, ಸ್ಮೃತಿ ತಪ್ಪುವಿಕೆ ಮತ್ತು ಇತರ [illegible] ಮಾತ್ರೆಗಳನ್ನು ವಿರಾಮಕರವೂ ಪ್ರಕಾಂತವೂ ಆದ ಆರೋಗ್ಯಕರ [illegible] ಉಪಯೋಗಿಸಿದ್ದಲ್ಲಿ ಖಂಡಿತವಾಗಿ ತಲೆದೋರಲಾರವು.

ಫೆಲೂನಾ ಮಾತ್ರೆಗಳು

[illegible] ದೇಹವನ್ನು ಸರಿಯಾದ ಕ್ರಮಕ್ಕೆ ತರುವುದು.

ಈ ಮೇಲಿನ ರೋಗಗಳಲ್ಲಿ ಯಾವುದಾದರೂ ನಿಮಗೆ ಬಾಧಿಸುವುದಾದರೆ, ಫೆಲೂನಾ ಮಾತ್ರೆಗಳು ಕಾರಣವನ್ನು ಹುಡುಕಿ, ವಿಷವನ್ನು ನಿವಾರಿಸಿ, ಸ್ನಾಯುಗಳನ್ನು ಭದ್ರಪಡಿಸಿ, ಆರೋಗ್ಯ ಕ್ರಮವನ್ನು ಭದ್ರಪಡಿಸಿ, ಅವಯವಗಳನ್ನು ಬಲಮಾಡಿ, ಹೊಸ ಕೇಜಸ್ವೀ ರಕ್ತವನ್ನು ಕೊಟ್ಟು ಜೀವನವೆಂದರೊಂದು ಆನಂದದ ಅನುಭೂತಿಯಾಗಿ ಮಾಡುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ—ಇವುಗಳು [illegible] ಕೆಂಪು ಕಟ್ಟುಗಳಲ್ಲಿ, ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲೆಲ್ಲಿಯೂ ದೊರಕುವವು.

ಹೆಚ್ಚಿನ ಮಾಹಿತಿಗಾಗಿ [illegible]

ಮೆಸ್ಸರ್ಸ್ ಪಟೇಲ್ ಮತ್ತು ಘೊಂಡಿ, ಕ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

(ಪೋಸ್ಟ ಆಫೀಸು ಬೊಕ್ಸ 838) ಅಥವಾ ಕಲ್ಕತ್ತಾ (ಪೋಸ್ಟ ಆಫೀಸು ಬೊಕ್ಸ 620)

ಇವರ ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು. 93

Edited Printed & Published by V. S. Kamath at the M. T. A. Sharada Press, Mangalore.

ಚಂದಾನಿರ್ಣಯಃ—ವರ್ಷ ಒಂದಕ್ಕೆ ರೂಪಾಯಿ 2—0—0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೩ನೇ ಶುಕ್ರವಾರ ಎಪ್ರಿಲ್ ೧೯೨೮. ಸಂಚಿಕೆ ೧೫

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed ,,	2,25,000.
Paid up ,,	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬೇಂಕಿನ ಹೆಡ್ಡ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation,
Udipi, 21—1—'28.

N. ANANDA RAO,
Secretary.

ಅಮೃತಾಂಜನ

ತಲೆಶೂಲೆ, ಬೆನ್ನುನೋವು, ವಾತ, ಶೈತ್ಯ, ಕೆಮ್ಮು, ಉರಿತ, ಮೊದಲಾದ ಬೇನೆಗಳಿಗೂ ವೇದನೆಗಳಿಗೂ, ಇತರ ದುಃಖಕರ ವ್ಯಾಧಿಗಳಿಗೂ ದಿವ್ಯ ಔಷಧ. ಬಾಹ್ಯ ಪ್ರಯೋಗದಿಂದ ಆಂತರಿಕ ಉಪಶಾಂತಿಯು ದೊರೆಯುವದು. ಇಂತಹ ಬೇನೆಗಳನ್ನು ನಿವಾರಣೆ ಮಾಡುವುದಕ್ಕೆ ಅಮೃತಾಂಜನದ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಈ ರೋಗಗಳು ಅಲ್ಪವೆಂದು ಕಂಡರೂ ಅವು ನಿಮ್ಮ ಶರೀರವನ್ನು ಕೆಡಿಸಿ ನಿಮ್ಮ ಸುಖಕ್ಕೆ ಭಂಗವನ್ನುಂಟುಮಾಡುವವು. ಆದರೆ ಒಂದು ಸಣ್ಣ ಅಮೃತಾಂಜನದ ಡಬ್ಬಿಯು ಇವುಗಳೆಲ್ಲವನ್ನೂ ನಾಶಪಡಿಸುವುದು. ಕ್ರಯ ಡಬ್ಬಿ 1ಕ್ಕೆ 10 ಆಣೆ. ಅಂಚೆವೆಚ್ಚ ಬೇರೆ.

ಎಲ್ಲಾ ಕಡೆಯಲ್ಲಿಯೂ — ಅಮೃತಾಂಜನವು — ದೊರೆಯುವುದು.

ಗಜಕರ್ಣದ ಮುಲಾಮುಃ—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನಃ—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

Preparations Cover All Your Needs.
MERIT HAS MADE FAMOUS.
ಸಿದ್ಧವಾದ ಬಾಟ್ಲಿವಾಲಾ ಇವರ
ಪ್ರಸಿದ್ಧ ಔಷಧಗಳು.

ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ನಿವಾರಣ. ರೂ. ೧.
ಪುಷ್ಟಿ ಕೊಡುವ ಔಷಧ ಆಣೆ ೧೩.
ಎಡೆತೋಬ, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
೧—೩—೦. ರೂ, ೧—೪—೦. ೧—೧೩—೦.
೧—೬—೦
೧—೬—೦. LIBERAL DISCOUNT TO TRADE
ASHAPUR, BOMBAY.
ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Road, P. O. Cadell Road, Bombay. No. 14.

ರ ಲೋಧ್ರ

ರೋಗನಿವಾರಿಣಿ.

ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಬಗೆಯಾಗಿ ಹೊಗಳುತ್ತಿರುವರು.

ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

ಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವಿಶೇಷವಾಗಿ ಗುಣವಾಗುವುವು.

...ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

...ಬರ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಕ್ಕೆ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ. ಬಾಕ್ಸ್ ನಂ. 105, ಮದರಾಸು.

DON'T HAVE AN OPERATION!

ಒಪರೇಶನನ್ನು
ಮಾಡಿಕೊಳ್ಳಬೇಡಿರಿ!

ಮೊದಲು
ಹೆಂಗಸರ ಫೆಲೂನಾ ಮಾತ್ರೆಗಳನ್ನು

ಉಪಯೋಗಿಸಿ ನೋಡಿರಿ,

ಕೆಲವು ತಿಂಗಳುಗಳ ಹಿಂದೆ ಮುಂಬ್ಬಾಯಲ್ಲಿ ವಾಸಿಸುತ್ತಿದ್ದ ಒಬ್ಬ ಪಾರ್ಸಿ ಸ್ತ್ರೀಯು ಕಠಿಣ ಕಾಹಿಲೆಯಲ್ಲಿದ್ದಳು. ಅವಳಿಗೆ ಮದ್ದು ಕೊಡುತ್ತಿದ್ದ ಡಾಕ್ಟರರು ಅವಳಿಗೆ "ಒಪರೇಶನ್" ಮಾಡಬೇಕೆಂದು ಹೇಳಿದರು. ಒಪರೇಶನಿಗಾಗಿ ನಿರ್ಣಯಿಸಿದ ತಾರೀಕಿನ ಕೆಲವು ದಿನಗಳ ಮೊದಲು, ಫೆಲೂನಾ ಮಾತ್ರೆಗಳನ್ನುಪಯೋಗಿಸಿ ಆಶ್ಚರ್ಯಕರ ಪ್ರಯೋಜನವನ್ನು ಹೊಂದಿದ ಒಬ್ಬಳು ಸ್ತ್ರೀ ಸ್ನೇಹಿತಳಿಂದ, ಒಪರೇಶನನ್ನು ಕೆಲವು ದಿನ ಹಿಂದೆ ಹಾಕಿ ಫೆಲೂನಾಮಾತ್ರೆಗಳನ್ನು ಉಪಯೋಗಿಸಿನೋಡಬೇಕಾಗಿ ಕೇಳಿಕೊಂಡು ಒಂದು ಪತ್ರವು ಬಂದಿತು. ಆ ಸ್ನೇಹಿತಳು ತನ್ನ ಪತ್ರದೊಂದಿಗೆ ಆರು ಬಾಟ್ಲಿಗಳನ್ನೂ ಕಳುಹಿಸಿದಳು. ಒಪರೇಶನನ್ನು ಆ ಮೇಲೆ ಮಾಡಲೇ ಇಲ್ಲ. ಆ ಪಾರ್ಸಿ ಸ್ತ್ರೀಯು ಈಗ ಸಂಪೂರ್ಣ ಆರೋಗ್ಯದಲ್ಲಿರುವಳು ಮತ್ತು ಅವಳು ತನ್ನ ಆರೋಗ್ಯಕ್ಕಾಗಿ ಹೆಂಗಸರ ಫೆಲೂನಾ ಮಾತ್ರೆಗಳ ಉಪಕಾರಸ್ಮರಣೆ ಮಾಡುತ್ತಿರುವಳು.

ಮೇಲಿನಂತೆಯೇ ನಡೆದ ಕತೆಗಳನ್ನು ವರ್ಣಿಸಿ ನೂರಾರು ಜನರು ನಮಗೆ ಪತ್ರಗಳನ್ನು ಬರೆದಿರುವರು. ಮತ್ತು ಉತ್ತಮ ಪರೀಕ್ಷೆ ಮತ್ತು ಚಿಕಿತ್ಸೆಯಿಂದಲೂ ಗುಣವಾಗದ ಶರೀರದೊಳಗಿನ ಅವ್ಯವಸ್ಥೆಗಳ ಚಿಹ್ನೆಗಳು ಕಾಣುವಾಗ ಫೆಲೂನಾ ಮಾತ್ರೆಗಳ ಸೇವನೆಯನ್ನು ಮಾಡಿಕೊಳ್ಳಬಹುದೆಂದು ನಾವು ಪತ್ತಾಯದಿಂದ ಹೇಳುವೆವು.

ಫೆಲೂನಾ ಮಾತ್ರೆಗಳಿಂದ ಎಲ್ಲಾ ಒಪರೇಶನುಗಳೂ ಅನಾವಶ್ಯಕವಾಗುತ್ತವೆ ಎಂದು ನಾವು ಹೇಳುವುದಿಲ್ಲ. ಆದರೆ ಅವುಗಳ ಸೇವನೆಯಿಂದ ಕಲ್ಮಶವನ್ನು ನಿವಾರಿಸುವ, ಗುಣಕಾರಕ, ರೋಗಪರಿಹಾರಕ ಮತ್ತು ಶಕ್ತಿದಾಯಕ ಪರಿಣಾಮವಿದೆಯೆಂಬುದನ್ನು ನಿಸ್ಸಂದೇಹವಾಗಿ ಹೇಳಬಲ್ಲೆವಲ್ಲದೆ—

ಸ್ತ್ರೀಯರ ಗರ್ಭಕೋಶ ಮತ್ತು ಜೀರ್ಣಕೋಶಗಳ ಮೇಲೆ ಕೂಡಲೇ ಸತ್ಪರಿಣಾಮವನ್ನುಂಟುಮಾಡುತ್ತವೆ.
ಎಂಬುದನ್ನು ಹೇಳುವೆವು.

ರಕ್ತಹೀನ ಹುಡುಗಿಯರಿಗೆ, ಶಕ್ತಿಹೀನ ಹೆಂಗಸರಿಗೆ ಮತ್ತು ಮುಟ್ಟುದೋಷ ನಿಲ್ಲುವ ಆ ಸಂದಿಗ್ಧ ಸಮಯವು ಹತ್ತಿರ ಬಂದಿರುವ ಮಧ್ಯವಯಸ್ಕ ಸ್ತ್ರೀಯರಿಗೆ **ಹೆಂಗಸರ ಫೆಲೂನಾ ಮಾತ್ರೆಗಳಲ್ಲಿ** ಅವರ ಪ್ರತ್ಯೇಕ ಮತ್ತು ವಿಶಿಷ್ಟ ಆವಶ್ಯಕತೆಗಳಿಗಾಗಿಯೇ ತಯಾರಿಸಲ್ಪಟ್ಟ ಔಷಧವಿದೆ. ಫೆಲೂನಾ ಮಾತ್ರೆಗಳಲ್ಲಿ, ಅದನ್ನು ಸೇವಿಸುವವರಿಗೆ ಮಲಬದ್ಧತೆಯುಂಟಾಗದೆ ರಕ್ತವೃದ್ಧಿಕಾರಕವಾಗುವಂತೆ ಇತರ ರಸಾಯನಗಳ ಸಂಯೋಗದಿಂದ ಕಬ್ಬಿಣವು ಸೇರಿಸಲ್ಪಟ್ಟಿದೆ. ಫೆಲೂನಾ ಮಾತ್ರೆಗಳು ಗರ್ಭಕೋಶ ಮತ್ತು ಜೀರ್ಣಕೋಶಗಳ ಮೇಲೆ ಸತ್ಪರಿಣಾಮವನ್ನುಂಟುಮಾಡುವುವಲ್ಲದೆ ಅವುಗಳಲ್ಲಿ ಶಕ್ತಿಕಾರಕ ಗುಣಗಳೂ ಇವೆ. ಮನೆಗೆಲಸದಲ್ಲಿ ಬೇಸರವನ್ನು ಕಾಣುವ ತಾಯಂದಿರೂ, ಹೆಂಡಂದಿರೂ, ತಮ್ಮ ಗರ್ಭಕೋಶ ಸಂಬಂಧವಾದ ಅವಯವಗಳ ಅವ್ಯವಸ್ಥೆಯನ್ನು ಈ ಬೇಸರದಲ್ಲಿ ಕಾಣಬಹುದು. ಹೆರುವ ಸಮಯದಲ್ಲಿನ ಕಿಂಚಿತ್ ಅಲಕ್ಷ್ಯವಾಗಲಿ, ಗರ್ಭಕೋಶ ಸಂಬಂಧವಾದ ಅವಯವಗಳ ಅವ್ಯವಸ್ಥೆಯಾಗಲಿ ಆರೋಗ್ಯದಲ್ಲಿ ಬಾಧಕಗಳನ್ನುಂಟುಮಾಡಿ ಫೆಲೂನಾ ಮಾತ್ರೆಗಳ ಸಹಾಯವನ್ನು ನಿರೀಕ್ಷಿಸುವುದು.

ಫೆಲೂನಾ ಸೇವನೆಯನ್ನು ಮಾಡಿದ ಆರೋಗ್ಯವತಿಗಳೂ ಸುಖಿಗಳೂ ಆದ ಸ್ತ್ರೀವೃಂದವನ್ನು ಸೇರಿದ ಮೇಲೆ ಹೆಂಗಸರೂ ಹುಡುಗಿಯರೂ ಜೀವನದಲ್ಲಿ ಒಂದು ನವೀನಾನುಭವವನ್ನು ಮಾಡಿಕೊಳ್ಳುವರು. ಪ್ರತಿ ದಿವಸವೂ ಅವರು ತೇಜಸ್ವೀ ಚೇತನವನ್ನು ಅನುಭವಿಸುವರು. ಮನೆಗೆಲಸವು ಮತ್ತೆ ಹೊರಲಾಗದ ಹೊರೆಯಾಗಿ ಕಾಣುವುದಿಲ್ಲ. ಬೇಸತ್ತು ಮನಶ್ಶಾಂತಿ ಕಳೆದ ಸ್ತ್ರೀಯು ಕಾರ್ಯಾಸಕ್ತಳಾಗಿ ಸುಖಿಯಾಗುವಳು. ಮತ್ತು ಅವಳ ಶಾರೀರಿಕ ಆರೋಗ್ಯವು ಅವಳ ಸುಧಾರಿತ ದೈಹಿಕ ಸ್ಥಿತಿಯಿಂದ ಮಾತ್ರವಲ್ಲದೆ, ಅವಳು ಗೃಹವಾತಾವರಣದಲ್ಲಿ ಬೀರುವ ಸಮುತ್ಸಾಹದಿಂದಲೂ ಪ್ರತಿಬಿಂಬಿಸಲ್ಪಡುವುದು. ತಾಯಿಯು ಅಸುಖದಿಂದ ಮಲಗಿರುವಾಗ ಮನೆಯು ಸುಖಕರವಾಗಲಾರದು. ಫೆಲೂನಾ ಮಾತ್ರೆಗಳು ತಮ್ಮ ಗುಣಕಾರಕ ಪರಿಣಾಮದಿಂದ ಒಂದು ಕಾಲದಲ್ಲಿ ರೋಗಗಳ ವೇದನೆಯಿಂದ ಬಳಲುತ್ತಿದ್ದ ಹೆಂಡರನ್ನು ಸ್ವಸ್ಥ, ಸುಖ ಮತ್ತು ತೃಪ್ತಿಯ ಪ್ರಕಾಶಕ್ಕೆ ತಂದು, ಗೃಹಸ್ಥಿತಿಯನ್ನು ನವೀನಾನಂದಕ್ಕೆ ಪರಿವರ್ತಿಸಿ, ಸಂಸಾರ ಜೀವನವನ್ನು ಒಂದು ಆನಂದವಾಗಿಯೂ, ಒಂದು ದೈವೀಕವರವಾಗಿಯೂ ಪರಿವರ್ತಿಸಿರುವುವಾಗಿ ಗಂಡಸರು ಪುನಃ ಪುನಃ ಬರೆದಿರುವರು.

ಹೆಂಗಸರಿಗೂ ಹುಡುಗಿಯರಿಗೂ ಸಾಮಾನ್ಯವಾದ ಕೆಳಗಿನಚಿಹ್ನೆಗಳು
ಫೆಲೂನಾ ಮಾತ್ರೆಗಳ ಗುಣಕಾರಕ ಸೇವನೆಯ ಆವಶ್ಯಕತೆಯುಳ್ಳದಾಗಿವೆ:—

ಅಶಕ್ತಿ	ತಲೆ ತಿರುಗುವಿಕೆ	ಹರಿವಾತ	ಹೊಲಸು ಉಸಿರು
ಮಲಬದ್ಧತೆ	ಮೂರ್ಛೆಹೋಗುವಿಕೆ	ಸೊಂಟನೋವು	ತಲೆನೋವು
ಧಾತುನಷ್ಟ	ಧೃತಿಗೆಡುವಿಕೆ	ದೌರ್ಬಲ್ಯ	ಬೆನ್ನುನೋವು
ರಕ್ತಹೀನತೆ	ಚುಚ್ಚುವ ಬೇನೆ	ಕೈಕಾಲು ನೋವು	ಅಂಗಾಯಾಸ
ತುರಿಸುವಿಕೆ	ಅಜೀರ್ಣ	ಉತ್ಸಾಹಹೀನತೆ	ಮುಟ್ಟಿನ ಅಕ್ರಮಗಳು
ಅಶುದ್ಧರಕ್ತ	ಕಣ್ಣುಗಳ ಜಡತ್ವ	ಅರಸಿನ ಮುಖಛಾಯೆ	ಮುದ್ದಣ

ಈ ವರೆಗೆ ಮಕ್ಕಳಿಲ್ಲದ ಮನೆಗಳಲ್ಲಿ ಫೆಲೂನಾ ಮಾತ್ರೆಗಳು ಮಕ್ಕಳನ್ನು ಪಡೆಯುವ ಅಮೂಲ್ಯ ವರವನ್ನೂ ಸುಖವನ್ನೂ ತಂದಿತ್ತಿವೆ. ಕೆಲವು ಕಡೆಗಳಲ್ಲಿ ಹಲವು ವರ್ಷಗಳು ದಾಟಿದರೂ ಆ "ಪುಟ್ಟ ಅಪರಿಚಿತನ" ಆಗಮನದ ಸೂಚನೆಯೇ ಇರಲಿಲ್ಲ. ಆದರೆ ಹೆಂಡತಿಯಲ್ಲಿ ಫೆಲೂನಾ ಮಾತ್ರೆಗಳನ್ನು ಒಳಗೆ ಸೇವಿಸಿಕೊಂಡವರ ಫಲವಾಗಿ ಉಂಟಾದ ಆರೋಗ್ಯಾಭಿವೃದ್ಧಿಯು ಶಿಶು ಸ್ವೀಕಾರಕ್ಕೆ ಅಗತ್ಯವಾದ ಆ ಅನುಕೂಲವಾದ ಪರಿಸ್ಥಿತಿಯನ್ನು ರಚಿಸಿತು. ಫೆಲೂನಾ ಮಾತ್ರೆಗಳು ಸ್ತ್ರೀ ಅವಯವಗಳನ್ನು ಕ್ರಮಬದ್ಧವಾಗಿ ಮಾಡಿದುವು, ದುರ್ಬಲವಾದ ನಾಡಿಗಳನ್ನು ನಿರೋಗಪಡಿಸಿ ಗುಣಪಡಿಸಿದುವು, ಅವಯವಗಳಿಗೆ ಶಕ್ತಿಯನ್ನೂ ಸಾಮರ್ಥ್ಯವನ್ನೂ ಕೊಟ್ಟವು; ಜೀರ್ಣಕೋಶವನ್ನು ಶುಚಿಮಾಡಿದುವು; ಮತ್ತು ಆ ಮೂಲಕ ಇಚ್ಛಿತ ಫಲವನ್ನು ಹೊಂದಲು ನಿಸರ್ಗಕ್ಕೆ ಸಹಾಯಮಾಡಿದುವು.

ಹೆಂಗಸರ ಫೆಲೂನಾ ಮಾತ್ರೆಗಳು ಆರೋಗ್ಯಕ್ಕಾಗಿ ಚಿಂತಿಸುವವರಲ್ಲಿ ನಿರಾಶೆಯನ್ನುಂಟುಮಾಡಲಾರವು. ಬರೇ ವಿರೇಚಕ ಗುಣವಿರುವ ಅಥವಾ ತಾತ್ಕಾಲಿಕ ಪರಿಣಾಮಕೊಡುವ ಸಾಮಾನ್ಯ ಔಷಧಗಳನ್ನು ಸೇವಿಸಿ ವ್ಯರ್ಥವೆಂದು ಕಂಡುಕೊಂಡ ಹೆಂಗಸರ ಜೀವನದಲ್ಲಿ ಇವು ಆಶಾರಶ್ಮಿಯನ್ನು ತರುತ್ತವೆ. ಫೆಲೂನಾ ಪರಿಣಾಮವು ಪ್ರತ್ಯೇಕ ಗುಣವುಳ್ಳ ಮತ್ತು ಕೂಡಲೇ ತೋರುವಂತಹುದು; ಮತ್ತು ಅದು ಸ್ತ್ರೀಯರ ವ್ಯಾಧಿಗಳಿಗಾಗಿಯೇ ಉದ್ದೇಶಿಸಲ್ಪಟ್ಟಿದ್ದು. ಯಾರಿಗೆ "ಫೆಲೂನಾ" ಆಧಾರವಿದೆಯೋ ಸುಖದರ್ಶಕ ತೇಜಸ್ವೀ ಆರೋಗ್ಯವು ಸರ್ವಕಾಲವೂ ಅವರದಾಗಿರುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ—ಇವುಗಳು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ, ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲೆಲ್ಲಿಯೂ ದೊರಕುವುವು.

ಹೆಚ್ಚಿನ ಮಾಹಿತಿಗಾಗಿ ಕಾಗದಗಳನ್ನೂ ವಿ. ಪಿ. ಮೂಲಕ ಕಳುಹಿಸಲಿಕ್ಕೆ ಆರ್ಡರುಗಳನ್ನೂ

ಮೆಸ್ಸರ್ಸ್ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ,

(ಪೋಸ್ಟ್ ಆಫೀಸು ಬೊಕ್ಸ 838) ಅಥವಾ ಕಲ್ಕತ್ತಾ (ಪೋಸ್ಟ್ ಆಫೀಸು ಬೊಕ್ಸ 620)

ಇವರ ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು. 92

Product of Graham Remedies Ltd., Cape Town, South Africa.

...ಂಡಿಯದಲ್ಲಿ ಉಂಟಾದ ಎರಡು ಮಾರ್ಪಾಟುಗಳು.

...ರೀತಿಯಲ್ಲಿ ಇಂಡಿಯದಿಂದ ಮತಬೋಧಕರು ಇಂಡಿಯದ ...ದೇಶಗಳಿಗೆ ಹೋಗಿ ಬೌದ್ಧಮತಬೋಧನೆಯನ್ನು ಮಾಡಲಾರಂಭಿ... ಎರಡನೆದಾಗಿ ಈ ಮತಬೋಧನೆಗೊಳಗಾದ ಅನ್ಯದೇಶಿಯರು ... ಯಾತ್ರಿಕರಾಗಿ ಬರಲಾರಂಭಿಸಿದರು. ಈ ರೀತಿಯಲ್ಲಿ ...ಗಿದ್ದ ಇಂಡಿಯದ ಮೇಲೆ ಅನ್ಯದೇಶಿಯರೊಳಗೆ ಪರಸ್ಪರ ...ಹುಟ್ಟಲಾರಂಭವಾಯಿತು.

...ಮತವು (ಕ್ರೈಸ್ತನು ಹುಟ್ಟಿದ ಮುನ್ನೂರು ವರುಷಗಳ ...ಮತಬೋಧಕರಿಂದ ಅನ್ಯದೇಶಗಳಲ್ಲಿ ಬೋಧಿಸಲಾರಂಭ... ಅವು ಹಿಂದೂಮತಬೋಧಕರು ಗಾಂಧಾರ ಮುಂತಾದ ದೇಶ... ...ವರು ಸಿಲೋನ್, ಜಾವಾ, ಸುಮಾತ್ರಾ ಇನ್ನು ಶಾಂತಸಾಗರ ...ದ ಮುಂತಾದ ದ್ವೀಪಗಳಿಗೂ ಹೋಗಿ ಬೋಧಿಸಲಾರಂಭಿಸಿ... ...ರೀತಿಯಲ್ಲಿ ಬೌದ್ಧರ ಕಾಲದಲ್ಲಿ ಅನ್ಯದೇಶದ ಅನೇಕ ... ಇಂಡಿಯದ ಜನರೊಡನೆ ಕಲೆತುಹೋದರು. ಇದಕ್ಕೆ ...ಆಧಾರಗಳಿವೆ. ಕ್ರೈಸ್ತಮತದ ಒಂದನೇಯ ಶತಮಾನ ... ಹೆಸರುಗೇರುವ ಅನೇಕ ಕುಟುಂಬಗಳು ಇಂಡಿಯದ ...ದಲ್ಲಿ ಬಂದು ನೆಲೆನಿಂತು ಬ್ರಾಹ್ಮಣರನ್ನು ಬೌದ್ಧ ಸನ್ಯಾಸಿ... ...ತಿಯ ಮರ್ಯಾದೆಯಿಂದ ಕಾಣಲಾರಂಭಿಸಿದರು. ಕಾರ್ಲೆ ...ಗವಿಗಳಲ್ಲಿರುವ ಶಾಸನಗಳ ಪ್ರಕಾರ ಸೋವಸತ ಕುಲದ ...ಗನಾದ ಹರಫರ್ನನು ಒಂದು ಬಂಡೆಯಲ್ಲಿ ಒಂದು ದೊಡ್ಡ ... ಕೊರದು ತಯಾರಿಸಿದನು. ಇದರಲ್ಲಿ ಒಂದು ದೊಡ್ಡ ... ಅದರ ಸುತ್ತಲೂ ೯ ಕೋಣೆಗಳೂ ಇದ್ದವು. ಇದನ್ನು ...ಸಂಘಿಕ ಭಾಗಕ್ಕೆ ಸೇರಿದ ಬೌದ್ಧ ಸನ್ಯಾಸಿಗಳಿಗೆ ದಾರೆ... ... ಸಕಕುಲಕ್ಕೆ ಸೇರಿದ ಇನ್ನೊಬ್ಬನಾದ ಉಶವದತ್ತ... ...ನು, (ಕ್ಷತ್ರಪನ ಹಪಾನನ ಮಗಳ ಗಂಡ) ಬ್ರಾಹ್ಮಣರಿಗೆ ...ದನಗಳನ್ನು ೧೬ ಗ್ರಾಮಗಳನ್ನು ದಾನವಾಗಿ ...ಲ್ಲದೆ ಎಂಟು ಮಂದಿ ಬ್ರಾಹ್ಮಣ ಕನ್ನೆಯರಿಗೆ ವಿವಾಹ ... ಒಂದು ಲಕ್ಷ ಬ್ರಾಹ್ಮಣರಿಗೆ ಒಂದು ವರುಷದ ವರೆಗೆ, ... ಬೌಧ ಮತದ ಭಿಕ್ಷುಕರಿಗೆ ಉಳಕೊಳ್ಳುವುದಕ್ಕಾಗಿ ...ಕೊರೆಸಿ ಒಂದು ವಿಹಾರವನ್ನು ಮಾಡಿಸಿಕೊಟ್ಟನು. ವಲು... ... ಗುಹೆಗಳಲ್ಲಿ ವಾಸವಾಗಿರುವ ಬೌದ್ಧ ಸನ್ಯಾಸಿಗಳಿಗೆ ...ಜಿತಾ ಎಂಬ ಗ್ರಾಮವನ್ನು ಉಂಬಳಿಯಾಗಿ ಬಿಟ್ಟನು. ...ಬ್ರಾಹ್ಮಣರನ್ನು ಬೌದ್ಧ ಸನ್ಯಾಸಿಗಳನ್ನು ಏಕರೀತಿಯಿಂದ ...ತರ ಬೌದ್ಧ ಮತವು ಹೀನಸ್ಥಿತಿಗೆ ಬಂದ ಮೇಲೆ ಪರ... ...ಮು ಇಂಡಿಯದಲ್ಲಿ ಉಳಕೊಂಡ ಈ ಬೌದ್ಧ ಮತಾನು... ...ಗಳೊಡನೆ ಪೂರ್ಣ ಸೇರಿಹೋಗಿ ನಂತರ ಪರದೇಶದ ... ತಪ್ಪಿಹೋಯಿತು.

...ಲ್ಲಿ ಬೌದ್ಧ ಮತವು ತಾನಾಗಿ ಈ ದೇಶಿಯರನ್ನು ...ತ ಕೆಲಸವನ್ನು ಮಾಡದೆ ಇದ್ದರೂ ಅದರ ಸೂತ್ರಗಳ ...ಮು ಮತದಲ್ಲಿ ಅನೇಕ ತರದ ಸಾಮಾಜಿಕ ಸುಧಾರಣೆ ...

...ಲ್ಲಿ ಅನ್ಯದೇಶಿಯರನ್ನು ಇಂಡಿಯದವರನ್ನು ಒಟ್ಟು... ...ನ್ನು ಕ್ರೈಸ್ತನು ಹುಟ್ಟುವ ಮುನ್ನೂರು ವರುಷಗಳ ...ಕ್ರವರ್ತಿಯು ಮಾಡಿರುವನು. ಆದರೆ ಈ ಚಳವಳವು ...ಮೊದಲನೇ ಶತಮಾನದಲ್ಲಿ ಬಲಗೊಂಡಿತು ಅಂದರೆ ...ಯುನರೂ, ಬಾಕ್ಟ್ರಿಯಗ್ರೀಕರೂ, ಇಂಡೋ ಪಾರ್ಥಿಯ ...

... ಬೌದ್ಧಮತವು ಇಂಡಿಯದ ಪಶ್ಚಿಮದಲ್ಲಿಯೂ, ... ಉತ್ತರದಲ್ಲಿಯೂ ಮುಂದರಿಸಿತು. ಅದೇ ...ಅನ್ಯದಲ್ಲಿ ರಾಜ್ಯಭಾರ ಮಾಡಕೊಂಡಿದ್ದ ಕುಶಾನ್ ... ದೇಶದ ಆಗ್ನೇಯಕ್ಕಿರುವ ಗಂಗಾನದಿಯ ತಪ್ಪಲಿಗೆ ...ಯಿಸಿ ಅಲ್ಲಿ ನೆಲೆನಿಂತರು. ಕೆಲವು ಶತಮಾನಗಳ ...ವರು ಹಿಂದೂಮತವನ್ನೇ ಅವಲಂಭಿಸಲಾರಂಭಿಸಿ... ...ರ್ವತವು ಅಡ್ಡವಾಗಿದ್ದರೂ ಪಂಜಾಬ, ಅಫಘಾನಿ... ಮತ್ತು ಸೀಸ್ತಾನ ದೇಶಗಳು ಒಂದೇರಾಜ್ಯವಾಗಿ ...

...ಕರಾವಳಿಯಲ್ಲಿರುವ ಬಂದರಗಳಾದ ಸೋಪರಾ... ...ಚೌಲ್ ಬಂದರಗಳ ಮೂಲಕ ಅನ್ಯದೇಶಿಯರು ...ನೆಲೆನಿಂತು ಸ್ವಲ್ಪ ಸಮಯದ ನಂತರ ಹಿಂದೂ... ...ಲ್ಲಿ ಕೊಂಕಣ, ಗುಜರಾಥ ಮಾಲವಾ ದೇಶದಲ್ಲಿ ...ಂಬಗಳು ಬಂದು ನೆಲೆನಿಂತು ಹಿಂದೂಗಳಾದರು. ...ಳಕೊಂಡ ರಾಜವಂಶದ ಮೂಲಪುರುಷನಾದ ...ೋತಿಕಾ ಎಂಬ ರಾಜನ ಮಗನು. ಈ ರಾಜ... ...ಜಿಪ್ಪ ಮತ್ತು ಬೆಬಿಲೋನಿಯ ರಾಜಕುಟುಂಬಗಳ ...ದೆ. ಆದರೆ ಈ ಚೆಸ್ತಾನನು ಉಜ್ಜಯಿನಿಯಲ್ಲಿ ...ಹಿಂದೂಮತವನ್ನು ಅನುಸರಿಸಲಾರಂಭಿಸಿದನು. ...ಂದವರ ಸಾಮಾಜಿಕ ಪದ್ಧತಿಗಳು.

...ಇಂಡಿಯಕ್ಕೆ ಬಂದ ಈ ಅನ್ಯದೇಶಿಯರು ಸ್ವಲ್ಪ ... ಹೆಸರುಗಳನ್ನು ಸಾಮಾಜಿಕ ಪದ್ಧತಿಗಳನ್ನೂ ...ತ್ತು ಕಾಲಾಂತರಗಳು ಕಳೆದ ಮೇಲೆ ಹಿಂದೂ... ...ಲದಲ್ಲಿ ಇವರು ತಮ್ಮ ಹಳೆಯ ಹೆಸರುಗಳನ್ನೂ ... ಬಿಟ್ಟು ಬಿಟ್ಟು ಇಂಡಿಯದಲ್ಲಿದ್ದ ಇತರ ಜನರ ...ಕ ಪದ್ಧತಿಗಳನ್ನೂ ಅನುಸರಿಸಲಾರಂಭಿಸಿದರು. ...ವಶಿಷ್ಠ ಚಕ್ರವರ್ತಿಯ ಮಗನಾದ ರಾಜಶ್ರೀ ...ಮತೋದ್ಧಾರವನ್ನು ಮಾಡಿದನೆಂದು ಕಾಣುತ್ತದೆ. ...ಯು ಭಟಿಯಾನಿಯಾ ಎಂಬ ಬೌದ್ಧ ಸಂಘದ ...ಸನ್ಯಾಸಿಗಳಿಗೆ ಒಂದು ಗ್ರಾಮವನ್ನು ದಾನಮಾಡಿ ...

... ಕುಶಾನ್ ವಂಶದ ಮೊದಲಿನ ಅರಸರಿಗೆ ..., ಕನಿಷ್ಕ, ಹುವಿಷ್ಕ ಎಂಬ ತುರ್ಕಿ ಹೆಸರು ...ಷ್ಕಿಯ ನಂತರ ಆಳಿದ ಈ ವಂಶದ ರಾಜನಿಗೆ ...ಹೆಸರಿದೆ. (ಸಶೇಷ)

ಸ್ಫುಟ ವಿಚಾರಗಳು.

ನವಜೀವನದ ಸಂದೇಶ.

"ಲೋಕವು ಅಂತರಾಷ್ಟ್ರೀಯವಾಗಿ ಬೆಳದಿದೆ. ಯಾವ ಜನಾಂಗವೂ ನಿಜವಾಗಿ ನೋಡಿದರೆ ಸ್ವತಂತ್ರವಿರುವುದಿಲ್ಲ. ನಮ್ಮ ಪೂರ್ವಜರ ನಾಗರಿಕತೆಯು ಭಿನ್ನ ಯುಗಗಳಿಗಾಗಿ ರಚಿಸಲ್ಪಟ್ಟದ್ದಾಗಿತ್ತು; ಮತ್ತು ನಮ್ಮ ಕಾಹಿನಿಗಳು, ವರ್ತನಗಳು, ಸಾಂಪ್ರದಾಯಗಳು, ಸ್ತ್ರೀಯರ ರಚನೆಯು ಮತ್ತು ನಮ್ಮಲ್ಲಿ ಹೊರಿಸಿರುವ ಮತತತ್ವಗಳು ಪೂರ್ವಕಾಲದ ಅವಶೇಷ ಮಾತ್ರವಾಗಿವೆ. ಅವು ಆಧುನಿಕತೆಯ ಪರಿಸ್ಥಿತಿಯೊಡನೆ ನಿಲ್ಲಲಾರವು" ಎಂದು ಪಂಡಿತ ಜವಾಹರ ಲಾಲನೆಹರವರು ಪಂಜಾಬ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿ ಹೊಸ ಸಂದೇಶವನ್ನು ಕೊಟ್ಟರು. ಜೀವನವು ಕಟ್ಟು ಕಾಯಿದೆಗಳ ಅಪರಿವರ್ತಕ ನಿರ್ಬಂಧಗಳಿಂದ ಸಂಕುಚಿತವಾದುದಲ್ಲವೆಂದು ಎಷ್ಟು ಬೇಗ ಹಿಂದೂಸ್ಥಾನವು ಕಾಣುವುದೊ ಅಷ್ಟು ದೇಶಕ್ಕೆ ಹಿತವಾಗುವುದು. ಬರೇ ಪೂರ್ವಕಾಹಿನಿಗಳನ್ನೆತ್ತಿ ನಮ್ಮ ಪೂರ್ವಜರ ದೊಡ್ಡಸ್ಥಿಕೆಯನ್ನೇ ಎತ್ತಿ ನಾವು ನಿರ್ವೀರ್ಯರಾಗುತ್ತಾ ಬರುವುದೇ ಇಂದಿನ ಹಿಂದೂಗಳ ಪರಿಸ್ಥಿತಿಯಾಗಿದೆ. ನಿಜವಾಗಿ ನೋಡುವುದಾದರೆ ಪ್ರಕೃತ ಇತಿಹಾಸವಿಲ್ಲದ ಜನಾಂಗಗಳೇ ಈ ಯುಗದಲ್ಲಿ ಮುಂದರಿದು ಪ್ರಸಿದ್ಧವಾಗಿರುವುವು. ಇಂಗ್ಲೆಂಡಿನ ನಾಗರಿಕತೆಯು ಬರೇ ಒಂದೆರಡು ಶತಮಾನಗಳದ್ದಾಗಿದೆ. ಜಪಾನಿನ ನಾಗರಿಕತೆಗೆ ಒಂದು ಶತಮಾನ ಕೂಡ ಆಗಿಲ್ಲ. ಯುನೈಟೆಡ್ ಸ್ಟೇಟ್ಸ್ ಕೆಲವು ಶತಮಾನಗಳ ಹಿಂದೆ ಬರೇ ಕಾಡುಜನರ ನಿವಾಸ ಸ್ಥಾನವಾಗಿದ್ದಿತು. ಆದುದರಿಂದ ಬರೇ ಪ್ರಾಕೃತ ಇತಿಹಾಸವು ಜನಾಂಗಕ್ಕೆ ಮುಂದಿನ ಕೃತ್ಯಗಳಿಗಾಗಿ ಪ್ರೇರಿತವೆನ್ನುವುದು. ಆಧುನಿಕ ಜನಾಂಗಗಳ ಇತಿಹಾಸವನ್ನು ನೋಡಿದ್ದಲ್ಲಿ ನಿಜವಾಗಿ ಕಾಣುವುದಿಲ್ಲ. ಮತ್ತು ಅವುಗಳಲ್ಲಿ ಇತಿಹಾಸವನ್ನು ಸರಿಯಾಗಿ ಲಕ್ಷಿಸಿದ್ದಲ್ಲಿ ಜನಾಂಗಗಳು ಕಾಲ ಪರಿವರ್ತನಗಳಿಗೆ ಅನುಕೂಲವಾಗಿ ಸುಧಾರಣೆಗಳನ್ನು ಮಾಡಿಕೊಳ್ಳುವ ಆವಶ್ಯಕತೆಯು ವ್ಯಕ್ತವಾಗುವುದು. ನೂತನ ಜನಾಂಗಗಳ ನೂತನ ಇತಿಹಾಸದಲ್ಲಿ ಹಿಂದೂಸ್ಥಾನಕ್ಕೆ ಸ್ಪಷ್ಟವಾದ ಸಂದೇಶವಿದೆ. ಅದೊಂದನ್ನು ಯಾವಾಗಿನ ವರೆಗೆ ಹಿಂದೂಸ್ಥಾನವು ಮಾನಿಸುವುದಿಲ್ಲವೊ ಆ ವರೆಗೆ ಅದು ಲೋಕ ಜನಾಂಗಗಳಲ್ಲಿ ತಲೆಯೆತ್ತಲಾರದು.

ಬ್ರಿಟಿಷ ವಸ್ತು ಬಹಿಷ್ಕಾರ.

ಬ್ರಿಟಿಷ ವಸ್ತು ಬಹಿಷ್ಕಾರದ ಚಳವಳವು ಬಂಗಾಳ ವಿಭಜನೆಯ ಕಾಲದಲ್ಲಿ ಪ್ರಾರಂಭವಾದುದು. ಆ ಮೇಲೆ ಹಲವು ತರದಲ್ಲಿ ಹಿಂದೂಸ್ಥಾನದಲ್ಲಿ ಅನುಕರಿಸಲ್ಪಟ್ಟಿತು. ಬಂಗಾಳ ವಿಭಜನೆಯ ಕಾಲದಲ್ಲಿ ಈ ಚಳವಳವು ಸಾಕಷ್ಟು ಕಾರ್ಯಕಾರಿಯಾಗಿದ್ದಿತಾಗಿ ತಿಳಿದು ಬರುತ್ತದೆ. ಬಂಗಾಳ ವಿಭಜನೆಯು ಚಳವಳವು ಶಾಂತವಾದ ಮೇಲೆ ಸ್ವದೇಶೀಯು ಸಾಮಾನ್ಯವಾದ ಅನುಭೂತಿಯೊಂದು ಮಾತ್ರವಾಗಿದ್ದು, ವೈಯಕ್ತಿಕ ಆವಶ್ಯಕತೆಗಳಿಗೆ ಸರಿಯಾಗಿ ಆಚರಿಸಲ್ಪಡುತಿದ್ದಿತು. ಯುದ್ಧಕಾಲದಲ್ಲಿ ರಾಜದ್ರೋಹಕ್ಕೆ ವಿಪರೀತಾರ್ಥಗಳು ಉಂಟಾಗುತ್ತಿದ್ದ ಸಮಯದಲ್ಲಿ ಇದು ಹೆಚ್ಚು ಹೆಚ್ಚಾಗಿ ಮರೆಯಲ್ಪಡುತ್ತಾ ಬಂದಿತು. ೧೯೨೧ನೇ ಇಸವಿಯ ಅಸಹಕಾರ ಚಳವಳದಲ್ಲಿ ಮಹಾತ್ಮಾಜೀಯವರು ಸ್ವದೇಶೀಯನ್ನು ಪುರಸ್ಕರಿಸಬೇಕಲ್ಲದೆ ಪರದೇಶೀ ಬಹಿಷ್ಕಾರವನ್ನು ಪ್ರೋತ್ಸಾಹಿಸ ಬಾರದಾಗಿ ಹೇಳಿದುದರಿಂದ ಬಹಿಷ್ಕಾರವೆಂಬ ಪ್ರತಿರೋಧ ಸೂಚಕ ಠರಾವು ಕೊಂಗ್ರೆಸ್ಸಿನಲ್ಲಿ ಮಂಜೂರಾಗಲಿಲ್ಲ. ಆ ಮೇಲೂ ಕೆಲವು ವರ್ಷಗಳ ಮೇಲೆ ಈ ಬಹಿಷ್ಕಾರದ ಠರಾವು ಮಂಜೂರಾಗಲಿಲ್ಲ. ಆದರೆ ಕಟ್ಟಕಡೆಗೆ ಮಹಾತ್ಮಾಜೀಯವರ ಒಪ್ಪಿತವಿರದಾದರೂ ಠರಾವು ಮಂಜೂರಾಯಿತು. ನಮ್ಮ ಜನರು ಬರೇ ತತ್ವಗಳನ್ನು ಮಾತನಾಡಿ ಬ್ರಿಟಿಷ ಬಹಿಷ್ಕಾರ ಏಕೆ ತತ್ವತಃ ಅಯೋಗ್ಯವಾದು ಎಂದು ಚರ್ಚಿಸುತ್ತ ಕೂತುಕೊಂಡರೆ ಲಾಭವಾಗದು. ಬ್ರಿಟಿಷ ಸಾಮ್ರಾಜ್ಯ ವಾದವು ಹಿಂದೂಸ್ಥಾನವು ದಿನೇ ದಿನೇ ಕ್ಷೀಣ ಸ್ಥಿತಿಗೆ ತರುತ್ತಿದೆ ಎಂಬುದನ್ನು ಮರೆಯಲಾಗದು. ಬ್ರಿಟಿಷರ ಎಲ್ಲಾ ಪಕ್ಷಗಳೂ ಹಿಂದೂಸ್ಥಾನವನ್ನು ದಬ್ಬಾಳುವ ಮಟ್ಟಿಗೆ ಏಕಾಭಿಪ್ರಾಯವುಳ್ಳವುಗಳಾಗಿವೆ ಎಂಬುದನ್ನೂ ಮರೆಯಲಾಗದು; ಆದುದರಿಂದ ಬ್ರಿಟಿಷ ವಸ್ತು ಬಹಿಷ್ಕಾರದಲ್ಲಿ ಯಾವ ಪಾಪವೂ ಕಾಣುವುದಿಲ್ಲ; ಪ್ರತಿಯಾಗಿ ಹಿಂದೀ ಮಾನಸಿಕತೆಯ ಅನುಭವವು ಚೆನ್ನಾಗಿ ಬ್ರಿಟಿಷರಲ್ಲಿ ಉಂಟಾಗಿ ಬ್ರಿಟಿಷ ಜನತೆಯು ಬ್ರಿಟಿಷ ರಾಜತಂತ್ರಜ್ಞರನ್ನು ಎಚ್ಚರಿಸುವುದು. ಮಾತ್ರವಲ್ಲ, ಬ್ರಿಟಿಷರಿಂದ ಕೊಂಡುಕೊಳ್ಳಬಹುದಾದ ಪ್ರತಿ ವಸ್ತುವೂ, ಇತರರಿಂದ ಮತ್ತಷ್ಟು ಕಡಿಮೆ ಬೆಲೆಗೆ ಸಿಕ್ಕುವುದು. ಆದುದರಿಂದ ಬ್ರಿಟಿಷ ವಸ್ತು ಬಹಿಷ್ಕಾರವು ಹಿಂದೂಸ್ಥಾನಕ್ಕೆ ಸುಲಭವಾಗಿದೆ. ಬ್ರಿಟಿಷ ವ್ಯಾಪಾರವೇ ಹಿಂದೀ ಕೈಗಾರಿಕೆಗಳಿಗೆ ಪ್ರಕೃತದ ಮುಖ್ಯ ಪ್ರತಿಬಂಧವಾಗಿದೆ. ಆ ವ್ಯಾಪಾರದ ಆಶೆಯನ್ನೇ ಅವರಿಂದ ಬಿಡಿಸಿದರೆ, ಹಿಂದೀ ಕೈಗಾರಿಕೆಗಳು ಮುಂದರಿಯಲು ಉತ್ತಮವಾಗುವುದು. ಆದುದರಿಂದ ಹ್ಯಾಗೆ ಆಲೋಚಿಸಿದರೂ ಬ್ರಿಟಿಷ ವಸ್ತು ಬಹಿಷ್ಕಾರವು ಹಿಂದೂಸ್ಥಾನದ ಈಗಿನ ರಾಜಕೀಯ ಸ್ಥಿತಿಗೆ ಆವಶ್ಯಕವಾಗಿದೆ.

ಹಿಂದೀ ಕೈಗಾರಿಕೆಗಳಿಗೆ ಬ್ರಿಟಿಷ ಆಡಳಿಯು ಮಾಡಿದ ಉಪಕಾರ.

ಮೋಡರ್ನ್ ರಿವ್ಯೂ ಪತ್ರಿಕೆಯಲ್ಲಿ ಈ ಕೆಳಗಿನ ಉಪಕಾರಗಳು ವರ್ಣಿಸಲ್ಪಟ್ಟಿವೆ:—ಗ್ರೇಟ್ ಬ್ರಿಟನ್ನಿಗೆ ಹೋಗುತ್ತಿದ್ದ ಹಿಂದೀ ಸಕ್ಕರೆಗೆ ಹಂಡ್ರಡ್‌ವೇಟಿಗೆ ಇತರ ಸಕ್ಕರೆಗಿಂತ ೮ ಶಿಲ್ಲಿಂಗು ಹೆಚ್ಚು ಸುಂಕವು ವಸೂಲು ಮಾಡಲ್ಪಟ್ಟಿತು. ಇದರಿಂದ ಹಿಂದೂಸ್ಥಾನದ ಸಕ್ಕರೆ ಕೈಗಾರಿಕೆಗೆ ಸಹಿಸಲಾಗದ ಪೆಟ್ಟು ಬಿದ್ದಿತು. ಇಂಗ್ಲೆಂಡು ಹಿಂದೀ ಸಕ್ಕರೆಯನ್ನು ಪ್ರೋತ್ಸಾಹಿಸಿದ್ದುದಾದರೆ ಹಿಂದೂಸ್ಥಾನದಲ್ಲಿ ಸಕ್ಕರೆಯ ಕ್ಷೇತ್ರವು ದೊಡ್ಡದಾಗುತಿದ್ದಿತು" ಎಂದು ಸರ್ ಜೋರ್ಜ್ ವಾಟ್ಟ ಎಂಬವರು ಬರೆಯುತ್ತಿರುವರು. ಅದೇ ಗ್ರಂಥಕರ್ತರು ಕಾಗದದ ಕೈಗಾರಿಕೆಯ ವಿಷಯವಾಗಿ ಹೀಗೆ ಹೇಳಿರುವರು—"೧೮೪೦ರ ವರೆಗೆ ಚೈನಾದಿಂದ ಕಾಗದವು ಬರುತ್ತಿತ್ತು. ಆ ಮೇಲೆ ದೇಶದಲ್ಲಿ ಎಲ್ಲೆಲ್ಲಿಯೂ ಕಾಗದದ ಕಾರಖಾನೆಗಳಾದವು. ಸರ್ ಚಾರ್ಲ್ಸ್‌ವುಡ್‌ರವರು ಸೆಕ್ರೆಟರಿ ಒಫ್ ಸ್ಟೇಟ್ ಆಗಿರುವಾಗ ಹಿಂದೂಸ್ಥಾನದ ಸರಕಾರವು ಕಾಗದವನ್ನು ಗ್ರೇಟ್ ಬ್ರಿಟನಿನಿಂದಲೇ ತರಿಸಿಕೊಳ್ಳಬೇಕಾಗಿ ಆಜ್ಞಾಪಿಸಲ್ಪಟ್ಟಿತು. ಇದರಿಂದ ಹಿಂದೂಸ್ಥಾನದ ಕಾಗದ ಕೈಗಾರಿಕೆಯು ಹಿಂದೆ ನೂಕಲ್ಪಟ್ಟಿತು. ಹಿಂದೂಸ್ಥಾನದ ಕಬ್ಬಿಣದ ಕೈಗಾರಿಕೆಯ ವಿಷಯದಲ್ಲಿಯೂ ಸರ್ ಜೋರ್ಜ ವಾಟ್ಟರವರು ಬ್ರಿಟಿಷ ಉಪಕಾರದ ಗುಟ್ಟನ್ನು ಹೊರಹಾಕಿರುವರು. ಅಲ್ಲಲ್ಲಿ ಹಳ್ಳಿಗಳಲ್ಲಿ ಕಬ್ಬಿಣವನ್ನು ತಯಾರಿಸುವ ಕಾರ್ಖಾನೆಗಳಿದ್ದುವು. ಎಷ್ಟೊ ಉತ್ತಮ ವರ್ಗದ ಕಬ್ಬಿಣವು ಹಿಂದೂಸ್ಥಾನದಲ್ಲಿ ತಯಾರಾಗುತ್ತಿದ್ದಿತು. ಈ ಕೈಗಾರಿಕೆಗಳು ಬ್ರಿಟಿಷ ಕಂಪೆನಿಗಳ ಪ್ರತಿಬಂಧಕ್ಕೆ ಒಳಮಾಡಲ್ಪಟ್ಟು ಮುಂದೆ ಅಭಿವೃದ್ಧಿಗೆ ಬರುತ್ತಿದ್ದ ಪಾಶ್ಚಾತ್ಯ ಕೈಗಾರಿಕೆಗಳ ಎದುರಿನಲ್ಲಿ ಬಿದ್ದುಹೋಯಿತು. ಸರಕಾರವು ಯಾವಾಗಿನಿಂದಲೂ ಹಿಂದೀ ಸಾಂಪತ್ತಿಕ ಅಭಿವೃದ್ಧಿಗೆ ವಿರೋಧವಿದ್ದಿತೆಂಬುದು ಹಿಂದೀ ಸರಕಾರದ ಈಗಿನ ಧೋರಣವನ್ನು ನೋಡಿದರೂ ತಿಳಿಯುವುದು. ಪಾಶ್ಚಾತ್ಯ ಪೌರ್ವಾತ್ಯ ಹಿತಗಳನ್ನು ತೂಕಮಾಡಿ ಅವುಗಳಲ್ಲಿ ಪಾಶ್ಚಾತ್ಯ ಹಿತವೇ ಸಾಧಿಸಲ್ಪಡತಕ್ಕದೆಂದು ಬ್ರಿಟಿಷ ನಿರ್ಧಾರವಿರುತ್ತದೆ. ಇವೆಲ್ಲ ಇತಿಹಾಸಗಳ ಕತೆಗಳನ್ನು ಓದಿದರೆ ಹಿಂದೂಸ್ಥಾನಕ್ಕೆ ರಾಷ್ಟ್ರೀಯ ಸರಕಾರವಿಲ್ಲದೆ ಹಿಂದೂಸ್ಥಾನದ ಸಾಂಪತ್ತಿಕ ಅಭಿವೃದ್ಧಿಯು ಎಂದಿಗೂ ಸಾಧ್ಯವಿಲ್ಲವೆಂದು ತಿಳಿಯುವುದು.

ಸ್ವತಂತ್ರ ಹಿಂದೂಸ್ಥಾನ.

ಹಿಂದೂಸ್ಥಾನವು ಸ್ವತಂತ್ರವಾದರೆ? ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟುಹೋದರೆ? ಏನೆಲ್ಲಾ ಆಗ ಸಂಭವಿಸಲಾರದು? ಹಿಂದುವಿನೊಡನೆ ಮುಸಲ್ಮಾನನು ಜಗಳವೆತ್ತುವನು; ಬ್ರಾಹ್ಮಣನು ಶೂದ್ರನೊಡನೆ ಹೊಡೆದಾಟವನ್ನು ಪ್ರಾರಂಭಿಸುವನು; ಶ್ರೀಮಂತನನ್ನು ಬಡವನು ಕೊಲ್ಲುವನು; ದರೋಡೆ ದಂಗೆಗಳು ದಿನನಿತ್ಯದ ಘಟನೆಗಳಾಗುವುವು. ಇವೇ ಮುಂತಾದ ಚಿತ್ರಗಳೇ ಸ್ವತಂತ್ರ ಹಿಂದೂಸ್ಥಾನದ ಸಂಭವನೀಯ ಅವಸ್ಥೆ ಎಂದು ಯುರೋಪಿಯಾನರು ಹಿಂದೀ ಸ್ವಾತಂತ್ರ್ಯಕ್ಕೆ ವಿರೋಧವಾಗಿ ತೋರಿಸುವ ಕಾರಣಗಳಾಗಿವೆ. ಒಂದು ಸಮಯದಲ್ಲಿ ಬ್ರಿಟಿಷರು ಸರ್ವಾಧಿಕಾರಿಗಳಾಗಿರದ ಸಮಯದಲ್ಲಿ ಹಿಂದೂಸ್ಥಾನದಲ್ಲಿ ಇಂತಹ ಘಟನೆಗಳು ಸಾಮಾನ್ಯವಿದ್ದುದೇನೋ ನಿಜ. ಆದರೆ ಅದೇ ಘಟನೆಗಳು ನಡೆದಿರದ ರಾಜ್ಯವು ಆ ಕಾಲದಲ್ಲಿ ಭೂಲೋಕದಲ್ಲಿ ಇನ್ನೆಲ್ಲಿತ್ತು? ಆ ಕಾಲದ ಯುರೋಪಿನ ಇತಿಹಾಸವು ಎಷ್ಟು ಗೌರವಾತ್ಮಕವಿದೆ? ಇಂಗ್ಲೆಂಡಿನಲ್ಲಿಯೇ ಎಷ್ಟು ಸಿವಿಲ್ ವೋರ್‌ಗಳೂ, ದಂಗೆ ದರೋಡೆಗಳೂ, ಮೂಢವರ್ತನಗಳೂ ನಡೆಯುತ್ತಿರಲಿಲ್ಲ? ಆ ಕಾರಣದಿಂದ ಇಂಗ್ಲೆಂಡು ಈಗಲೂ ಅಂತಹ ಘಟನೆಗಳುಳ್ಳದೆಂದು ಹೇಳಲಾಗುವುದಿಲ್ಲ. ಸುಧಾರಣೆಯು ಇತರ ಜನಾಂಗಗಳಿಗೆ ಸಾಧ್ಯವೆಂದಾದರೆ ಹಿಂದೂಸ್ಥಾನಕ್ಕೆ ಏಕೆ ಸಾಧ್ಯವಲ್ಲವೆಂದು ನಮಗೆ ತಿಳಿಯುವುದಿಲ್ಲ. ನಾಗರಿಕತೆಯಲ್ಲಿ ಕೂಡ ಪೌರ್ವಾತ್ಯರಂತೆ ಮುಂದರಿದರಿಂದ ಅಫಘಾನಿಸ್ಥಾನ, ಪರ್ಸಿಯಾ, ತುರ್ಕಿ ಮೊದಲಾದ ರಾಜ್ಯಗಳು ಕೂಡ ಪಾಶ್ಚಾತ್ಯರ ಆಶ್ರಯ ಸಹಾಯವಿಲ್ಲದೇನೇ ತಮ್ಮ ದೇಶದಲ್ಲಿ ಶಾಂತತೆಯನ್ನು ಸ್ಥಿರವಾದ ಸರಕಾರವನ್ನೂ ಸ್ಥಾಪಿಸಬಲ್ಲರಾದರು. ಅಂತಃಕಲಹಗಳಿದ್ದಾದರೂ ಚೈನಾದೇಶವು ಸಾಕಷ್ಟು ಸ್ಥಿರವಾದ ಸರಕಾರವನ್ನುಳ್ಳದಾಗಿದೆ. ವಿಶಾಲತೆಯೂ, ಭಿನ್ನಭಿನ್ನ ಜನತೆಯರಿಂದ ಕೂಡಲವಿಕೆಯೂ ಸ್ಥಿರಸರಕಾರ ಸ್ಥಾಪನೆಗೆ ವಿರೋಧವಾದ ಪರಿಸ್ಥಿತಿಯೆನ್ನಲಾಗುವುದಿಲ್ಲ. ಯುನೈಟೆಡ್ ಸ್ಟೇಟ್ಸಿನ ಸರಕಾರವು ಆದರ್ಶಕರವಿದೆ. ಹಾಗೆಂದು ಅತ್ಯಂತ ಸಣ್ಣದಾದ ಒಂದೇ ಜನತೆಯಿಂದ ಕೂಡಿದ ಪೋರ್ಚುಗಲ್ಲಿಗೆ ರಾಜಕೀಯ ಶಾಂತತೆಯೆಂದರೇನೆಂದು ಗೊತ್ತೇ ಇಲ್ಲ. ಅಲ್ಲಿ ದಿನಕ್ಕೊಂದು ದಂಗೆಯಾಗುತ್ತಲೇ ಇದೆ. ಆದುದರಿಂದ ಹಿಂದೂಸ್ಥಾನವು ಪಾಶ್ಚಾತ್ಯರ ಈ ತರದ ಬೆದರಿಕೆಗಳಿಂದ ಕಂಗೆಡಲು ಯಾವ ಕಾರಣವೂ ಇಲ್ಲ.

ನೋಟಗಳು.

NOTE...S.

"ಬೆಳ್ಳಗಿರುವುದೆಲ್ಲ ಹಾಲಲ್ಲ"ವೆಂದು ವಿಶ್ವ ಕರ್ನಾಟಕವು ಮೈಸೂರು ಕೈಗಾರಿಕೆಗಳ ವಿಷಯ ಮೈಸೂರು ಪತ್ರಿಕೆಗಳು ಅನುಸರಿಸುತ್ತಿರುವ ಧೋರಣದ ಪ್ರತಿಯಾಗಿ ನಾವು ಮಾಡಿದ ಟೀಕೆಯನ್ನು ಟೀಕಿಸುತ್ತಿದೆ. ಆದರೆ ಹಾಲಲ್ಲವೆಂದ ಕೂಡಲೇ "ಹೊರಗೆ ಬಿಸಾಡು" ಎಂಬ ಧೋರಣವೂ ನ್ಯಾಯವಾದುದಲ್ಲವೆಂದು ನಾವು ಸೂಚಿಸದಿರಲಾರೆವು.

• • • •

ಮೈಸೂರು ಸರಕಾರವನ್ನು "ರಾಮರಾಜ್ಯ"ವಾಗಿ ಅತಿಶಕ್ತಿ ಹೊಗಳಲು ಸ್ವದೇಶಾಭಿಮಾನಿಯು ಎಂದಿಗೂ ಮುಂದರಿದ ನೆನವು ನಮಗಿರುವುದಿಲ್ಲ. ಮೈಸೂರು ಪತ್ರಿಕೆಗಳ ವಿಮರ್ಶೆಯು ಧ್ವಂಸಾತ್ಮಕವಿರಬೇಕೋ ರಚನಾತ್ಮಕವಿರಬೇಕೋ ಎಂಬುದೇ ಪ್ರಶ್ನೆ. "ವಿಶ್ವಕರ್ನಾಟಕ"ವು ಈ ಪ್ರಶ್ನೆಗೆ ಸಮರ್ಪಕ ಉತ್ತರವನ್ನಿತ್ತಂತೆ ಕಾಣುವುದಿಲ.

• • • •

ವಿಕಟವಿನೋದಿನಿ ಎಂಬುದೊಂದು ಪತ್ರಿಕೆ ಇದೆ. ಹಾಸ್ಯರಸಪ್ರಧಾನವಾದ ಲೇಖಗಳನ್ನು ಕೊಡುವುದೇ ಈ ಪತ್ರಿಕೆಯ ಮುಖ್ಯೋದ್ದೇಶ. ಆದರೆ ಈ ಪತ್ರಿಕೆಗೆ ಅಕಾಲ ವೈಧವ್ಯದ ಅತ್ಯಂತ ಹೇಯ ರೀತಿಯ ವ್ಯಭಿಚಾರವನ್ನು ವರ್ಣಿಸುವುದೆಂದರೆ ಬಹಳ ಪ್ರೀತಿ. ಇದರಲ್ಲಿ ಯಾವ ಹಾಸ್ಯರಸವಿದೆಯೆಂದು ನಮಗೆ ತಿಳಿಯುವುದಿಲ್ಲ.

• • • •

ಸಪ್ತಸ್ತ್ರೀ ಸಾಹ ವೆಂಬ ಪುಸ್ತಕವನ್ನು ಪ್ರಕಟಿಸಿದವರು ಇವರೇ ಅಂದ ಮೇಲೆ ಇದರ ಲೇಖನಾಭಿರುಚಿಯು ಸ್ವಯಂ ವ್ಯಕ್ತವಾಗುವುದು. ಆದರೆ ಇಂತಹ ಲೇಖನಗಳು ವಾಚನಾಭಿರುಚಿಯನ್ನು ಕೆಡಿಸುವವು ಮಾತ್ರವಲ್ಲದೆ ಕರ್ನಾಟಕ ಸಂಸಾರ ಜೀವನದ ವಿಷಯದಲ್ಲಿ ಕೆಟ್ಟದಾದ ಚಿತ್ರವನ್ನು ರಚಿಸುವವೆಂಬುದನ್ನು ಲೇಖಕರು ಮನಸ್ಸಿನಲ್ಲಿಟ್ಟರೆ ಉತ್ತಮವಿತ್ತು.

• • • •

ಸಹಕಾರದ ಹಳ್ಳಿಯ ಚಿತ್ರ:—ಒಂದು ಹಳ್ಳಿಯಲ್ಲಿ ಒಂದು ಸಹಕಾರೀ ಸಂಘವಿದೆ. ಅವರಲ್ಲೊಬ್ಬ ಮಾರಾಯ ಸಾಲಕೊಂಡ. ಎರಡು ಜಾಮೀನನ್ನು ಕೊಟ್ಟ. ಮತ್ತೆ ಪರಾರಿಯಾದ. ಸಂಘದ ಪುಣ್ಯದಿಂದ ಜಾಮೀನುದಾರರು ಆಗಲೇ ಪರಾರಿಯಾಗಲಿಲ್ಲ. ದುಡ್ಡು ವಸೂಲು ಬರಲಿಲ್ಲ. ಬರೇ ೮೦ ರೂಪಾಯಿ ಐವೇಜು. ಡಿಕ್ರಿಯಾಗಿ ಅಮಲ್ದಾರಿಗೆ ಹೋಯಿತು. ಅಮಲ್ದಾರಿ ಹಿಡಿದು ಹೋದ ಪುಣ್ಯಾತ್ಮ ಪೇದೆಯು ಹುಡುಕಿ ಹುಡುಕಿ ಸೋತು ಹೋದ. ಕಡೆಗೆ ಕಂಡನು, ಜಾಮೀನುದಾರನೊಬ್ಬನನ್ನು. ಒಂದು ಹೆಣವನ್ನು ನಾಲ್ವರು ಹೊತ್ತು ತರುತ್ತಿದ್ದರು—ಶ್ಮಶಾನ ಯಾತ್ರೆಗೆ. ಎದನೆಯವನು ಆ ಹಳ್ಳಿಯಲ್ಲಿ ಸಿಕ್ಕಲಿಲ್ಲ. ನಾಲ್ವರಲ್ಲೊಬ್ಬನು ಜಾಮೀನುದಾರನೆಂದು ಪೇದೆಗೆ ತಿಳಿಯಿತು. ಜಾಮೀನಿನ ವಸೂಲಿಗೆ ಬಂದವನಿವನು ಪೇದೆಯೆಂದು ಹೆಗಲುಕೊಟ್ಟವನಿಗೆ ತಿಳಿಯಿತು. ಪೇದೆಗೂ ಘಾಬರಿ; ಜಾಮೀನುದಾರನಿಗೂ ಘಾಬರಿ. ಪೇದೆಯು ಅತ್ತಿತ್ತ ನೋಡುವಷ್ಟರಲ್ಲಿ ಜಾಮೀನುದಾರನು ತನ್ನ ಸಹ ವ್ಯವಸಾಯಿಗಳಿಗೆ ಯಾವ ಸೂಚನೆಯನ್ನೂ ಕೊಡದೆ ಹೆಗಲು ತಪ್ಪಿಸಿಬಿಟ್ಟನು. ಹೆಣ ಬೀಳುವದೆಂದು ತಿಳಿಯುವ ಮೊದಲೇ ಹತ್ತಿರ ಹರಿಯುತ್ತಿದ್ದ ಹೊಳೆಗೆ ಹಾರಿ ಈಜಿ ಪಾರಾದನು. ಪೇದೆಗೊಂದು ಕಠಿಣ ಸಮಸ್ಯೆಯಾಯಿತು:—ಬೀಳುವ ಹೆಣಕ್ಕೆ ಹೆಗಲು ಕೊಡುವುದೋ, ಹಾರಿದ ಜಾಮೀನುದಾರನಿಗಾಗಿ ಹೊಳೆ ಈಜುವುದೊ? ಎಂದು, ನೀವೇ ತೀರ್ಮಾನಿಸಿರಿ.

• • • •

ಪೇದೆಯು ಇವೆರಡನ್ನೂ ಮಾಡಲೇ ಇಲ್ಲ. ಅವನು ಕಂಗಾಲಾಗಿ ಹೇಳಿದ ದಾರಿಗೇ ಕಾಲಿಗೆ ಬುದ್ಧಿ ಹೇಳಿದನು. ಜೀವಂತ ಮೂವರ ಪೇಚಾಟದಿಂದ ನಿರ್ಜೀವಿಯ ಶ್ಮಶಾನ ಯಾತ್ರೆಯು ಪೂರೈಸಿತು.

• • • •

ರೋಗ ಗುಣಹೊಂದಲಿಕ್ಕೆಂದು ಪಾವಂಜೆಯಲ್ಲಿ ಕೆಲವು ವರ್ಷಗಳ ಹಿಂದೆ ನಿತ್ಯಾನಂದ ಸ್ವಾಮಿಯ ಸುತ್ತ ಸಾವಿರಾರು ಜನರು ನೆರೆದುದು ಎಲ್ಲರ ನೆನಪಿನಲ್ಲಿಯೂ ಇರಬಹುದು. ಆದರೆ ಈ ಹುಚ್ಚು ಹಿಂದೀಯರಿಗೆ ಮಾತ್ರವಲ್ಲ; ಬ್ರಿಟಿಷರಲ್ಲಿಯೂ ಇದೆ. ಜೆಫ್ರಿಸ್ ಎಂಬವನು ವಿಶ್ವಾಸದ ಮೂಲಕ ರೋಗ ಗುಣಮಾಡುವುದನ್ನು ನೋಡಲು ಲಂಡನ್ನಿನ ಅಲ್ಬರ್ಟ ಹೋಲಿನಲ್ಲಿ ೮೦೦೦ ಜನರು ನೆರೆದಿದ್ದರೆಂದು ತಿಳಿದುಬರುವುದು.

— ಸ್ಪೇನಿನ ಕಾರ್ಲೋಸ್ ಕ್ವೇನಾ ಎಂಬಲ್ಲಿ ಒಬ್ಬ ನಾವಿಕನ ಮನೆಯ ಸಮೀಪದಲ್ಲಿ ಒಂದು ಬೊಂಬ್ ಬಿದ್ದಿತು. ಬೊಂಬ್ ದೊಡ್ಡ ಶಬ್ದದಿಂದ ಒಡೆದು ಅನೇಕ ಕಿಟಿಕಿಗಳು ಚೂರುಚೂರಾದವು. ಮನೆಯೊಳಗೆ ಕೆಪ್ಟನ್ ಕೌಂಟ್ ಫೋಟ್ ದಂಪತರು ಒಬ್ಬರೇ ಇದ್ದರಾದರೂ, ಅವರಿಗೆ ಯಾವ ತರದ ಜಖಂ ಆಗಲಿಲ್ಲ.

— ಪಾರ್ಶಿಯ ಪಬ್ಲಿಕ್ ವರ್ಕ್ಸ್ ಮಿನಿಸ್ಟರರಾದ ಅಮೀರ್ನ ಲಷ್ಕರ್ ಅಬ್ದುಲ್ಲಾ ಖಾನ್ ಥಮಸ್ಪಿ ಎಂಬವರು ಲುರಿಸ್ತಾನಕ್ಕೆ ಸಂಚಾರಕ್ಕಾಗಿ ಬಂದವರು ಊರರೊಡನೆ ಜಗಳಾಡುವಾಗ ಕೊಲ್ಲಲ್ಪಟ್ಟರು. ಈ ವರ್ತಮಾನವನ್ನು ಕೇಳಿ ಪರ್ಶಿಯದ ಶಹರು ಲುರಿಸ್ತಾನಕ್ಕೆ ತೆರಳಿರುವರು.

— ಅಫಘಾನ ಅಮೀರರಾದ ಅಮಾನುಲ್ಲಾ ಧೊರೆಗಳ ಇಂಗ್ಲೆಂಡು ಪ್ರವಾಸವು ಮುಗಿದಂತಾಯಿತು. ಅವರು ಇನ್ನು ಅಲ್ಲಿಂದ ಹೋಗುವಾಗ ಜೋರ್ಜ್ ಚಕ್ರವರ್ತಿಗಳಿಗೆ ಈ ರೀತಿಯಲ್ಲಿ ಒಂದು ತಂತಿಯನ್ನು ಬಿಟ್ಟರು. "ನಾನು ಮತ್ತು ನನ್ನ ರಾಣಿಯವರು ಇಂಗ್ಲೆಂಡಿನ ಕರಾವಳಿಯನ್ನು ಬಿಟ್ಟು ಈಗ ಹೋಗುತ್ತಿರುವಾಗ ನೀವು ನಮ್ಮನ್ನು ಪ್ರೀತಿಯಿಂದ ಸತ್ಕರಿಸಿದುದಕ್ಕಾಗಿ ಕೃತಜ್ಞತಾಭಾವವನ್ನು ಸೂಚಿಸದಿರಲಾರೆವು. ರಾಜವಂಶದವರಿಗೆ ಆರೋಗ್ಯವೂ ಸಂಪತ್ತೂ ಉಂಟಾಗಲೆಂದು ನಾವು ಬಯಸುವೆವು" ಎಂದು.

— ಕಪುರ್ಥಾಲಾ ಮತ್ತು ರಜಪಿಪಾಲಾದ ಮಹಾರಾಜರು ಮಾರ್ಸೆಲಿಸಿಗೆ ತಲಪಿರುವರು. ಕಪುರ್ಥಾಲಾ ಮಹಾರಾಜರು ಅಲ್ಲಿಂದ ನ್ಯಾಸಿಗೂ, ಇನ್ನೊಬ್ಬರು ಪೆರಿಸಿಗೂ ತೆರಳುವರು.

— ಮೆಕ್ಸಿಕೊವಿನ ಟಿಕ್ರಿಲಾ ಎಂಬಲ್ಲಿ ಯುದ್ಧವಾಗಿ ೩೪ ಜನ ಸೈನಿಕರು ಕೊಲ್ಲಲ್ಪಟ್ಟರು.

— ಹವಾನಾದಲ್ಲಿ ಸ್ಟೇಂಡಾರ್ಡ್ ಒಯಿಲ್ ಕಂಪೆನಿಯವರ ಎಣ್ಣೆಯ ಹಲವು ಟಾಂಕಿಗಳಿಗೆ ಬೆಂಕಿ ಹಿಡಿದು ಬಹು ಹೆಚ್ಚು ಪೆಟ್ರೋಲು ಉರಿದು ಹೋಯಿತು.

— ಅಮೇರಿಕದ ಫೋರ್ಡ್ ಕಂಪೆನಿಯ ಮಾಲಿಕರಾದ ಹೆನ್ರಿ ಫೋರ್ಡರು ಸಪತ್ನೀಕರಾಗಿ ವಿಲಾಯತಿಗೆ ಮೂರು ವಾರಗಳ ಸಂಚಾರಕ್ಕಾಗಿ ಬಂದಿರುವರು.

— ಇಂಗ್ಲೆಂಡಿನಲ್ಲಿ ಯುದ್ಧ ಸನ್ನಾಹಗಳನ್ನು ತರಿಸುತ್ತಿದ್ದ ನಾಯಕನ ವಿಲ್ಲಿಯಮ್ಸ್ ಎಂಬವನಿಗೆ ೧೦೦ ಪೌಂಡು ಜುರುಮಾನೆ ಅಥವಾ ಮೂರು ತಿಂಗಳುಗಳ ಶಿಕ್ಷೆಯನ್ನು ವಿಧಿಸಿರುವರು.

— ಜರ್ಮನಿಯ ಸೆಕ್ಸನ್ ಮೆಟಲ್ ಇಂಡಸ್ಟ್ರಿ ಕಾರಖಾನೆಯ ೫೦,೦೦೦ ಜನರು ಮುಷ್ಕರ ಹಾಕಿದುದಕ್ಕಾಗಿ ಅಧಿಕಾರಿಗಳು ೩೦೦,೦೦೦ ಜನರನ್ನು ಹೊರಗೆ ಹಾಕಬೇಕೆಂದು ನಿರ್ಣಯಿಸಿರುವರು. ಪಾಪ! ತಪ್ಪು ಮಾಡದಿದ್ದರೂ ಹಲವರು ಕೆಲಸವಿಲ್ಲದೆ ತಿರುಗಾಡಬೇಕಾಯಿತು.

— ಆಫ್ರಿಕಾ ಖಂಡದ ಕರಾವಳಿಯನ್ನು ಸಂಚರಿಸಲಿಕ್ಕೆ ಹೋದ ಸರ್ ಎಲನ್ ಕೊಬಾಮರು ಕೇಪ್‌ಟೌನಿನಿಂದ ಆಫ್ರಿಕದ ಪಶ್ಚಿಮ ಕರಾವಳಿ ಸಂಚಾರವನ್ನು ಮಾಡಲು ಆರಂಭಿಸಿರುವರು.

— ಇಂಗ್ಲೆಂಡಿನಲ್ಲಿ ಗಣಿಗಳಲ್ಲಿ ಕೆಲಸ ಮಾಡುವವರ ಮಕ್ಕಳಿಗೂ ಹೆಂಗಸರಿಗಾಗಿಯೇ ಅವರು ಹೊಟ್ಟೆಗಿಲ್ಲದೆ ಕಷ್ಟಪಡದಂತೆ ಒಂದು ಫಂಡನ್ನು ಮಾಡಿರುವರು.

— ಲಂಕಶಯರಿನಲ್ಲಿರುವ ಅಮೇರಿಕದ ಹತ್ತಿಯ ನೂಲು ಮಾಡುವ ಕಾರ್ಖಾನೆಯವರು ಕಾರ್ಖಾನೆಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ನಡಿಸಿದರೆ ನಷ್ಟ ಬರುತ್ತದೆಂದು ಕೆಲವು ಕಾರ್ಖಾನೆಗಳನ್ನು ಒಟ್ಟುಕೂಡಿಸಿ ನಡಿಸುವರೆ ಆಲೋಚಿಸಿರುವರು.

— ರಷ್ಯಾದೇಶದ ರಾಜಕೀಯ ವಿದ್ವಾಂಸರಲ್ಲಿ ಹೆಸರುಗೊಂಡ ಟ್ರೊಟ್ಸ್ಕಿ ಎಂಬವರು ಸೈಬೇರಿಯದ ಯಾವದೊ ಒಂದು ಊರಿನಲ್ಲಿ ಸಾಯುವ ಸ್ಥಿತಿಯಲ್ಲಿರುವರಂತೆ.

ಸ್ವದೇಶ ವರ್ತಮಾನ.

— ಮುಂಬಾಯಿ ಕೊರ್ಪೊರೇಶನಿನ ಪ್ರೆಸಿಡೆಂಟರಾಗಿ ಸ್ವರಾಜ್ಯ ಪಾರ್ಟಿಯವರಾದ ಡಾಕ್ಟರ್ ದೇಶಮುಖರವರು ಚುನಾಯಿಸಲ್ಪಟ್ಟಿರುವರು. ಅವರ ಎದುರಾಗಿದ್ದವರಲ್ಲಿ ಒಬ್ಬರು ಜಮ್ನಾದಾಸ ಮೇಥಾರವರು. ಇನ್ನೊಬ್ಬರು ಡಾಕ್ಟರ್ ಜವಳೆಯವರು.

— ಕೆಲಸದಿಂದ ನಿವೃತ್ತರಾಗುವ ಇಂಡಿಯದ ಫೈನೆನ್ಸ್ ಮೆಂಬರರಾದ ಸರ್ ಬೆಸಿಲ್ ಬ್ಲೆಕೆಟರು ಮದರಾಸಿಗೆ ಬಂದಿದ್ದರು. ಅಲ್ಲಿಂದ ಅವರು ತಿರುಚಿನಾಪಳ್ಳಿ, ತಂಜಾವೂರು ಮೊದಲಾದ ಸ್ಥಳಗಳಿಗೆ ಹೋಗಿ, ನಾಗಪಟ್ಟಿಣದಲ್ಲಿ ರಾಜುಲಾ ಹಡಗದಲ್ಲಿ ಕುಳಿತು ಇಂಗ್ಲೆಂಡಿಗೆ ಹೊರಟು ಹೋಗುವರು.

ಕೊಲೊಂಬೊನಿನ ಒಂದು ನಾರಿನ ಕಾರಖಾನೆಗೆ ಬೆಂಕಿಬಿದ್ದಿತು. ನಷ್ಟವು ಸುಮಾರು ೪೫೦೦೦ಕ್ಕೆ ಹತ್ತಿರವಾಗಿದೆ. ಫಾಯರ್ ಬ್ರಿಗೆಡಿನವರು ಬೆಂಕಿ ನೊಂದಿಸಿದ ಕಾರಣ ಬೇರೆ ಕಟ್ಟೋಣಗಳಿಗೆ ಬೆಂಕಿಯು ಹತ್ತಲಿಲ್ಲ.

— ಮದರಾಸಿನ ಸೈದಾಪೇಟೆ ಟೀಚರ್ಸ್ ಕೊಲಿಜಿನ ಭೂಗೋಳ ಶಾಸ್ತ್ರ ಉದ್ಧಾರಕ ಸಂಘದವರು ಸಮ್ಮರ್ ಸ್ಕೂಲ್ ಒಫ್ ಜಿಯೊಗ್ರೊಫಿ ಎಂಬ ಶಿಬಿರಾಲದ ಭೂಗೋಳ ಶಾಸ್ತ್ರದ ಶಾಲೆಯನ್ನು ಇದೇ ತಾ. ೨೮ರ ೧೦ ಗಂಟೆಗೆ ತೆರೆದರು.

— ಮುಂಬಾಯಿಯಲ್ಲಿರುವ ಪಾರ್ಸಿಗಳಿಗಾಗಿ ಒಂದು ಸಾರ್ವಜನಿಕ ಶಾಲೆಯನ್ನು ತೆರಿಯುವುದಕ್ಕಾಗಿ ಮುಂಬಾಯಿ ದಾನ ಶೂರರಲ್ಲಿ ಒಬ್ಬರಾದ ಸರ್ ಕವಾಸ್‌ಜಿ ಜಹಾಂಗೀರರು ೧೫ ಲಕ್ಷ ರೂಪಾಯಿ ದಾನವಾಗಿ ಕೊಟ್ಟಿರುವರು.

— ಮಧುರೆಯ ಕೊಲೇಜಿನ ಒಂದು ಮೂಲೆಗೆ ಬೆಂಕಿ ಹಿಡಿಯಿತು. ಇದರಿಂದ ನಷ್ಟವು ರೂಪಾಯಿ ೧೧,೦೦೦ಕ್ಕೆ ಸಮೀಪಿಸಿದೆಯಂತೆ. ಬೆಂಕಿ ಹಿಡಿದೊಡನೆ ವಿದ್ಯಾರ್ಥಿಗಳನ್ನು ಜಾಗ್ರತೆಯಿಂದ ಹೊರಗೆ ತೆಗೆದುದರಿಂದ ಅಪಾಯಗಳುಂಟಾಗಲಿಲ್ಲ.

— ತ್ರಾವಣ್ಕೋರಿನ ಮಹಾರಾಜರು ತಾಯಿಯನ್ನು ಕೂಡಿ ಬೇಸಿಗೆ ಕಾಲವನ್ನು ಕಳೆಯುವದಕ್ಕಾಗಿ ಊಟಕಮಂಡಿಗೆ ಹೋಗುವರಂತೆ.

— ಪಂಡಿತ ಮೋತಿಲಾಲನೆಹರುರವರಿಗೆ ಅಫಘಾನದಿಂದ ಒಂದು ಆಮಂತ್ರಣವು ಬಂದಿರುತ್ತದೆ. ಆದ ಕಾರಣ ಅವರು ಅಮೀರರ ಅತಿಥಿಗಳಾಗಿ ಬೇಸಿಗೆ ಕಾಲದ ಅಂತ್ಯದಲ್ಲಿ ಅಫಘಾನವನ್ನು ಸಂದರ್ಶಿಸುವರು.

— ಅಖಿಳ ಭಾರತೀಯ ಖಾದಿ ಫಂಡಿನ ಅಭಿವೃದ್ಧಿಗಾಗಿ ಶ್ರೀ ರಾಜಗೋಪಾಲಾಚಾರಿಯವರು, ಜಮ್ನಾಲಾಲಾ ಬಜಾಜರು, ಇನ್ನು ಇತರ ಧುರೀಣರೂ ಕೂಡಿ ಬಂಗಾಳದಲ್ಲಿ ಸಂಚರಿಸಿ ಭಾಷಣಗಳನ್ನು ಕೊಟ್ಟು ಹಣ ಸಂಗ್ರಹ ಮಾಡುತ್ತಿರುವರು

— ಕಲಕತ್ತದ ದಕ್ಷಿಣ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ರಾ। ಎಲ್. ಎಮ್. ಸೀನರೆಂಬವರು ಕಳೆದ ಹರತಾಳದ ಸಮಯದಲ್ಲಿ "ರಣಭೇರಿ" ಎಂಬ ಹೆಸರಿನ ಕಾಗದಗಳನ್ನು ಜನರಲ್ಲಿ ಬಹಿರಂಗವಾಗಿ ಹಂಚಿದ ಆರೋಪಣೆಯ ಮೇಲೆ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅವರಿಗೆ ೩೪ ಮೊಹರುಗಳ ಜುರುಮಾನೆಯನ್ನೂ, ಮೂರು ತಿಂಗಳುಗಳ ಸದಾ ಸಜೆಯನ್ನೂ ವಿಧಿಸಿರುವರು. ಇವರು ಗ್ಲಾಸ್‌ಗೊ ಯುನಿವರ್ಸಿಟಿಯಲ್ಲಿ ಬಿ. ಎ. ಕ್ಲಾಸ್ ತರಬೇತಾದವರು. ಹ್ಯಾಕೋರ್ಟಿನವರು ಇವರನ್ನು ಸದ್ಯಕ್ಕೆ ಜಾಮೀನಿನ ಮೇಲೆ ಬಿಟ್ಟು ಅಪ್ಪೀಲು ಮಾಡಲು ಎಡೆ ಕೊಟ್ಟಿರುವರು.

— ಬ್ರಹ್ಮ ಸ್ತ್ರೀ ವಿದ್ಯಾ ಶಾಲೆಯ ಹೊಸ ಹೊಸ್ಟೆಲಿನ ಪ್ರವೇಶ ಸಮಾರಂಭವನ್ನು ಸರ್ ಜಗದೀಶ ಚಂದ್ರಬೋಸರು ಜರಗಿಸಿದರು. ದೇಶದ ಕತ್ತಲೆಯನ್ನು ಹೋಗಲಾಡಿಸಲು ಹುಡುಗಿಯರು ಪ್ರಯತ್ನಿಸಬೇಕೆಂದೂ, ಮನಸ್ಸನ್ನು ದೃಢಪಡಿಸಬೇಕೆಂದೂ, ಹೆಂಗಸರು ಸ್ವರಾಜ್ಯ ಸಾಧನೆಗೆ ಪ್ರಮುಖರಾಗಿ ಎದುರು ಬರಬೇಕಾದವರೆಂದೂ ಅವರು ಒಂದು ಭಾಷಣವನ್ನು ಮಾಡಿದರು.

— ಲಾಹೋರಿನ ಹಜರಾ ಜಿಲ್ಲೆಯಲ್ಲಿ ೧೯ ಜನ ಪಠಾಣರನ್ನು ಕೈದುಮಾಡಿರುವರು. ಇಪ್ಪತ್ತು ಜನ ಪಠಾಣರು ಒಂದು ಗುಂಪಿನಲ್ಲಿ ಬಂದು ಒಂದು ಮಸೀದಿಗೆ ಲಗ್ನವಿರುವ ಕೆಲವು ಕೋಣೆಗಳನ್ನು ಬಾಡಿಗೆಗೆ ಪಡಕೊಂಡು ಉಳಕೊಂಡರು. ಹೋಗುವಾಗ ಬಾಡಿಗೆಯನ್ನು ಕೊಡದೆ ಹೋಗಲು ಪ್ರಯತ್ನಿಸಿದ ಕಾರಣ, ಕೋಣೆಗಳ ಯಜಮಾನನಿಗೂ, ಪಠಾಣರಿಗೂ ಕಲಹವಾಗಲು ಒಬ್ಬ ಪಠಾಣನು ಒಂದು ಕೊಡಲಿಯನ್ನು ಉಪಯೋಗಿಸದನು. ಆದು ಕಾರಣ ಒಬ್ಬನ ಹೊರತು ಉಳಿದೆಲ್ಲರನ್ನೂ ಕೈದು ಮಾಡಿರುವರು.

— ಅಸಮ್ಮತವಾದ ಮದುವೆಗಳನ್ನು ಅಂದರೆ ೪೮ ವರ್ಷಗಳಿಗೆ ಮಿಕ್ಕಿದ ವರನು ೧೮ ವರ್ಷಗಳಿಗೂ ಕಿರಿಯಳಾದ ವಧುವನ್ನು ಮದುವೆಯಾಗುವದು ಮೊದಲಾದ ಮದುವೆಗಳನ್ನು ರದ್ದುಪಡಿಸಲು ಮುಂಬಾಯಿ ಸರಕಾರದವರು ಒಂದು ಮಸೂದೆಯನ್ನು ಮುಂದಕ್ಕೆ ತರಲಿರುವರು. ಇಂತಹ ಮದುವೆಯನ್ನು ಮಾಡಿದರೆ ಜುರುಮಾನೆ, ಕಾರಾಗ್ರಹವಾಸ ಮೊದಲಾದ ಶಿಕ್ಷೆಗಳನ್ನು ವಿಧಿಸುವರು.

— ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನಾಪತ್ರಗಳು ಪ್ರಕಟವಾದ ಕಾರಣ ಪುನಃ ಒಂದು ಪರೀಕ್ಷೆಯನ್ನು ಜರಗಿಸಬೇಕೆಂದು ಮೊದಲು ನಿರ್ಣಯವಾಗಿದ್ದರೂ ಈಗ ಆ ವಿಷಯವಾಗಿ ಡಿಪಾರ್ಟಮೆಂಟಿನವರು ವಿಚಾರವನ್ನು ಮಾಡುತ್ತಿರುವರು. ಪರೀಕ್ಷೆಯು ನಡೆಯುವದೋ, ಇಲ್ಲವೋ ಎಂಬುದು ಇನ್ನೂ ನಿರ್ಣಯವಾಗಿಲ್ಲ.

— ಬರುವ ತಿಂಗಳಲ್ಲಿ ನಾಗಪುರದಲ್ಲಿ ನಡೆಯುವ ರೈತರ ಪರಿಷತ್ತಿಗೆ ಅಧ್ಯಕ್ಷರಾಗಲು ರಾ। ಜವಹರಿಲಾಲನೆಹರುರವರು ಒಪ್ಪಿರುವರು.

— ಹಿಂದೂಸ್ಥಾನದ ಸುಧಾರಣೆಯ ಕುರಿತು ವಿಚಾರಿಸುವದಕ್ಕಾಗಿ ಇಲ್ಲಿಯ ಅರಸರೆಲ್ಲರೂ ಒಟ್ಟಾಗಿ ಸೆಕೆಕಾಲದಲ್ಲಿ ಇಂಗ್ಲೆಂಡಿಗೆ ತೆರಳಲಿರುವರು. ಅವರಲ್ಲಿ ಕಾಶ್ಮೀರ, ಪಾಟಿಯಾಲ, ಆಲವಾರ, ಭೋಪಾಲ, ಕಚ್, ಈ ಪ್ರಾಂತ್ಯಗಳ ಅರಸರುಗಳೂ ಇರುವರು.

— ಪಂಜಾಬದ ೧೩ನೇ ಪ್ರಾಂತಿಕ ಪರಿಷತ್ತು ಬರುವ ೧೧ನೇ ತಾರೀಕಿನಿಂದ ನಡೆಯುವದು. ಈ ಪರಿಷತ್ತಿಗೆ ಡಾ। ಅನ್ಸಾರಿಯವರೂ, ಮೌಲಾನಾ ಮಹಮದ್ ಅಲಿಯವರೂ ಬರುವರು. ಪಂಡಿತ ಜವಹರಲಾಲನೆಹರುರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

— ಮದರಾಸಿನ ಗವರ್ನರರು ಈಗ ಕಾಶ್ಮೀರದಲ್ಲಿರುವರು. ಅಲ್ಲಿ ಶ್ರೀನಗರ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು.

— ಜೀವನ್‌ಜಿ ಮತ್ತು ಕಂಪೆನಿಯವರ «ಕೆಲಿಕಟ್» ಎಂಬ ಸಣ್ಣ ಉಗಿ ಹಡಗವು ಮುಂಬಾಯಿಗೆ ಹೋಗುವಾಗ ಮೊಂಬಾಸಾ ಎಂಬಲ್ಲಿ ಹಾದಿ ತಪ್ಪಿ ಬಹು ಅಪಾಯಕ್ಕೆ ಸಿಕ್ಕಿಕೊಂಡಿತು. ನಾವಿಕರು ಬುದ್ಧಿವಂತರಾದುದರಿಂದ ಪ್ರಯಾಣಿಕರನ್ನು ಹೇಗಾದರೂ ಬದುಕಿಸಿದರು.

— ಬಟ್ಲರ್ ಕಮಿಟಿಯು ಈಗ ಕಾಶ್ಮೀರಕ್ಕೆ ತೆರಳಿರುವದು.

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷತನಕ್ಕೆ ರಾ। ಸುಭಾಸ ಚಂದ್ರಬೋಸರು ಒಪ್ಪಿರುವರು. ಬಂಗಾಳಕ್ಕೂ ಮಹಾರಾಷ್ಟ್ರಕ್ಕೂ ಪೂರ್ವಕಾಲದಿಂದಲೂ ಬಲವಾದ ಸಂಬಂಧವಿದೆಯೆಂದೂ, ಆ ಕಾರಣ ತಾನು ಇದಕ್ಕೊಪ್ಪಿದೆನೆಂದೂ ಅವರನ್ನುವರು. ಪರಿಷತ್ತು ಬರುವ ತಿಂಗಳ ಎರಡನೇ ಮತ್ತು ಮೂರನೇ ತಾರೀಕುಗಳಲ್ಲಿ ನಡೆಯುವದು.

ಮದರಾಸ್ ಪಟ್ಟಣದಲ್ಲಿ ಆಭರಣಗಳನ್ನು ಧರಿಸಿದ ಚಿಕ್ಕ ಮಕ್ಕಳನ್ನು ಕದ್ದುಕೊಂಡು ಹೋಗುವಿಕೆಯು ಇತ್ತೀಚೆಗೆ ಚೆನ್ನಾಗಿ ಬೆಳೆದಿರುತ್ತದೆ. ಮೊನ್ನೆ ತಾನೆ ವಾಶರ್‌ಮೇನ್ ಪೇಟೆಯಲ್ಲಿ ಏಳು ವರ್ಷದ ಹುಡುಗಿಯೊಬ್ಬಳು ಆಭರಣಗಳನ್ನು ಧರಿಸಿ ಹಾದಿಯ ಸಮೀಪದಲ್ಲಿ ನಿಂತು ದಾರಿಯಲ್ಲಿ ಹೋಗುವವರನ್ನು ನಿರೀಕ್ಷಿಸುತ್ತಿದ್ದಳು. ಅಷ್ಟರಲ್ಲಿ ಒಬ್ಬ ಯುವತಿಯು ಅಲ್ಲಿಗೆ ಬಂದು, ಅವಳ ತಾಯಿಯು ಮಾರ್ಕೇಟಿನಲ್ಲಿರುವಳೆಂದೂ, ಅವಳಿಗಾಗಿ ಬೊಂಬೆಗಳನ್ನು ಕೊಂಡಿರುವ ಕಾರಣ ಅವಳನ್ನು ಕರಕೊಂಡು ಬರಲು ತನಗೆ ಹೇಳಿರುವಳೆಂದು ಹೇಳಿ ಹುಡುಗಿಯನ್ನು ಕರೆದೊಯ್ದಳು. ಹೆಂಗಸು ಹುಡುಗಿಯನ್ನು ಕೊಂಡುಹೋಗಿ, ಅವಳ ಆಭರಣವನ್ನೆಲ್ಲವನ್ನು ಅಪಹರಿಸಿ ಆ ಬಡ ಮಗುವನ್ನು ಹಿಂದಕ್ಕೆ ಹೋಗಲು ಹೇಳಿದಳು. ಈ ಕುರಿತು ಪೋಲೀಸರ ವಿಚಾರಣೆಯಾಗುತ್ತಲಿದೆ.

ಕಲಕತ್ತದ ಡೆಕ್ಕಾ ಯುನಿವರ್ಸಿಟಿಯ ಮೊಸ್ಲೆಮ್ ಹೋಲನ್ನು ರಮಜಾನಿನ ದಿನ ಮುಚ್ಚಿದುದಕ್ಕಾಗಿ, ಎ. ಕೆ. ರಹಮಾನನೆಂಬ ವಿದ್ಯಾರ್ಥಿಯು, ಅಧಿಕಾರಿಗಳ ಮೇಲೆ ವ್ಯಾಜ್ಯವನ್ನು ಹೂಡಿದನು. ಆತನನ್ನು ಅವಿಧೇಯನೆಂದು ಯುನಿವರ್ಸಿಟಿಯಿಂದ ತಳ್ಳಿರುವರು.

— ಕೊಯಿಂಬುತ್ತೂರಿನಲ್ಲಿ ಮುನಿಯನ್ ಎಂಬ ಯುವಕನು ಒಬ್ಬ ದಾಸನನ್ನು ಕೊಲೆಮಾಡಿದುದಕ್ಕಾಗಿ ಆತನಿಗೆ ಮರಣ ಶಿಕ್ಷೆಯನ್ನು ವಿಧಿಸಿದರು.

— ಲಾಲಾಲಜಪತರೈಯವರು ಹಿಂದೂ ಸ್ತ್ರೀಯರ ಕುರಿತು ಭಾಷಣವನ್ನು ಕೊಡುವುದಕ್ಕಾಗಿ ಅಹಮದಾಬಾದಿನ ಸತ್ಯಾಗ್ರಹಾಶ್ರಮಕ್ಕೆ ಹೋಗಿದ್ದರು.

— ಮುಂಬಾಯಿಯಲ್ಲಿ ಲೈಸೆನ್ಸಿಲ್ಲದೆ ಒಂದು ರೇಡಿಯೊ ಸೆಟ್ಟನ್ನು ಇಟ್ಟುಕೊಂಡದ್ದಕ್ಕಾಗಿ ಗಂಜೆವಿಯಾ ಎಂಬವರಿಗೆ ೩೦ ರೂಪಾಯಿ ಜುರುಮಾನೆಯಾಯಿತು. ಈ ರೇಡಿಯೊ ಸೆಟ್ ಹಲವರ ಹತ್ತಿರ ಇರುವುದರಿಂದ ಇಂಡಿಯನ್ ಬ್ರೊಡ ಕಾಸ್ಟಿಂಗ್ ಕಂಪೆನಿಗೆ ಹೆಚ್ಚು ನಷ್ಟವಾಗಿಯದಂತೆ.

— ಇಂದೋರಿನ ತುಕೋಜಿರಾಯರು ಮಿಲ್ಲರಳನ್ನು ಮದುವೆಯಾಗುವಾಗ ಫಿಲ್ಮ್ ತೆಗೆದಿದ್ದರು. ಅದರ ಪ್ರದರ್ಶನವು ಈಗ ಮದರಾಸಿನ ಎಲ್‌ಫಿನ್‌ಸ್ಟೋನ್ ಪಿಕ್ಚರ್ ಪೆಲೆಸಿನಲ್ಲಿ ನಡೆಯುತ್ತದೆ.

— ಡಿಲ್ಲಿಯಲ್ಲಿ ಕಾಲಾಯಾನೆ ಲಟಿಸ್ ಎಂಬ ದರೋಡೆ ಕಳ್ಳನು ಒಂದು ದಿನ ಸಂಕದ ಮೇಲಿನಿಂದ ಹೋಗುವಾಗ ಸಂಕದ ಎರಡೂ ಗೇಟುಗಳನ್ನು ಮುಚ್ಚಿ ಸಂಕದ ಮಧ್ಯಕ್ಕೆ ಹೋಗಿ ಅವನನ್ನು ಹಿಶನ್‌ಲಾಲ್ ಎಂಬ ಪೋಲೀಸ ಕೊನ್ಸ್ಟೇಬಲನು ಹಿಡಿದನು. ಕಳ್ಳನು ಕೊನ್ಸ್ಟೇಬಲನ ಎರಡು ಗುಂಡು ಹಾರಿಸಿದನು. ಆದರೂ ಕೊನ್ಸ್ಟೇಬಲನೂ ಕಳ್ಳನೂ ಉರುಡಾಡಿ ಯಮುನಾ ನದಿಗೆ ಹಾರಿದರು. ಅಷ್ಟರಲ್ಲಿ ಜನರ ಗುಂಪು ಬಂದು ಕಳ್ಳನನ್ನು ಹಿಡಿದರು. ಕೊನ್ಸ್ಟೇಬಲನು ಕೂಡಲೇ ಪ್ರಾಣಬಿಟ್ಟನು. ಕಳ್ಳನನ್ನು ಕೈದುಮಾಡಿರುವರು. ಇವನು ಪ್ರಖ್ಯಾತಿಪಟ್ಟ ಕಳ್ಳನಂತೆ.

ದಕ್ಷಿಣ ಕನ್ನಡ.

ಮಂಗಳೂರು:— ಮಂಗಳೂರು ತಾಲೂಕು ಬೋರ್ಡಿಗೆ ಒಬ್ಬ ಪ್ರೆಸಿಡೆಂಟರನ್ನೂ, ಡಿಸ್ಟ್ರಿಕ್ಟ ಬೋರ್ಡಿಗೆ ೩ ಜನ ಮೆಂಬರರನ್ನೂ, ಮತ್ತು ಸ್ಟೆಂಡಿಂಗ್ ಕಮಿಟಿಗೆ ಮೆಂಬರರನ್ನೂ-ಚುನಾಯಿಸುವ ಉದ್ದಿಶ್ಯ ಇದೇ ತಾ. ೧೬ನೇ ಸೋಮವಾರ ಮಧ್ಯಾಹ್ನ ೩ ಘಂಟೆಗೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಸಭೆ ಕೂಡುವುದು.

ನಮ್ಮ ಜಿಲ್ಲೆಯಲ್ಲಿ ಈಗ ಜಾರಿಯಿರುವ ಭೂಕಂದಾಯವು ಸರ್ಕಾರಿ ಸರಾಸರಿ ಲೆಖ್ಖ ಪ್ರಕಾರವೇ ಬಾಕಿ ಜಿಲ್ಲೆಗಳಲ್ಲಿ ಜಾರಿಯಿರುವ ಕಂದಾಯಕ್ಕಿಂತಲೂ ಹೆಚ್ಚಿಗೆಯಾಗಿರುವುದರಿಂದ ಭೂಕಂದಾಯವನ್ನು ಸರಕಾರದವರು ಇನ್ನೂ ಏರಿಸದಂತೆಯೂ ಈಗ ಇರುವ ಕಂದಾಯವನ್ನು ತಗ್ಗಿಸುವಂತೆ ಸಹಾ ಅಗತ್ಯವಿರುವ ಏರ್ಪಾಡುಗಳನ್ನು ಮಾಡುವ ಉದ್ದೇಶದಿಂದ ಮಂಗಳೂರಿನಲ್ಲಿ ಸ್ಥಾಪಿಸೋಣಾದ ಭೂಮ್ಯಾಲಿಕರ ಸಂಘದ ಒಂದು ತಾಲೂಕು ಶಾಖೆಯನ್ನು ಕಾಸರಗೋಡಿನಲ್ಲಿ ತಾ ೩-೪-'೩೮ರಲ್ಲು ಸ್ಥಾಪಿಸೋಣಾಗಿಯದೆ. ಸದರಿ ತಾಲೂಕು ಶಾಖೆಯ ಒಂದು ಮಹಾಸಭೆಯು ಕಾಸರಗೋಡು ಮುನ್ಸೀಫ್ ಕೋರ್ಟು ಬಳಿಯಲ್ಲಿರುವ ವಕೀಲರ ಕ್ಲಬ್ಬಿನ ಹೋಲಿನಲ್ಲಿ ತಾ. ೧೫-೪-'೩೮ನೇ ರವಿವಾರ ಅಪರಾಹ್ನ ೩ ಘಂಟೆಗೆ ಜರಗುವದು. ಎಲ್ಲಾ ಭೂಮ್ಯಾಲಿಕರಿಗೂ ಅವರ ಹಿತಚಿಂತಕರಿಗೂ ಸುಸ್ವಾಗತವಿದೆ!

ಇದೇ ತಿಂಗಳ ತಾರೀಕು ೧೫ನೇ ಶುಕ್ರವಾರ ಸಾಯಂಕಾಲ ೪॥ ಗಂಟೆಗೆ ಮೊಗವೀರ ಆರ್ಯ ಜ್ಞಾನೋದಯ ಸಮಾಜದ ಹದಿನೆಂಟನೆಯ ವಾರ್ಷಿಕೋತ್ಸವವೂ ಜ್ಞಾನೋದಯ ವಿದ್ಯಾಶಾಲೆಯ ವಾರ್ಷಿಕ ವರ್ಧಂತ್ಯುತ್ಸಹವೂ ಹೊಯಿಗೆ ಬಾಜಾರದಲ್ಲಿ ಇರುವ ಸಮಾಜ ಮಂದಿರದಲ್ಲಿ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸ ಪೈ ಅವರ್ಗಳ್ ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಜರಗುವುದು.

ಮಂಗಳೂರು ಮುನಿಸಿಪಾಲಿಟಿಯಲ್ಲಿ ತಾ. ೭-೪-'೩೮ಕ್ಕೆ ಅಂತ್ಯವಾಗುವ ವಾರದಲ್ಲಿ ೧೭ ಜನನಗಳೂ, ೧೫ ಮರಣಗಳೂ ಆಗಿದ್ದವು.

ಕರ್ನಾಟಕ ಪ್ರಾಂತ್ಯದ ಆಯುರ್ವೇದ ಚತುರ್ಥ ಸಮ್ಮೇಲನವು ವಿಭವ ವೈಶಾಖ ಕೃಷ್ಣಪಕ್ಷಕ್ಕೆ ಸರಿಯಾದ ಮೇ ತಿಂಗಳಿನ ಮಧ್ಯಕಾಲ ಮಂಗಳೂರಿನಲ್ಲಿ ನಡಿಯುವುದು. ದಯವಿಟ್ಟು ತಮಗೆ ಪರಿಚಯವಿರುವ ನಮ್ಮ ಭ್ರಾತೃ ವೈದ್ಯ ಮಹಾಶಯರ ಮತ್ತು ಡಾಕ್ಟರ್ ಮಹಾಶಯರ ಪೂರ್ಣ ವಿಳಾಸಗಳನ್ನು ಅವಶ್ಯ ಶೀಘ್ರದಿಂದ ಬರೆದು ಕಳುಹಿಸಬೇಕೆಂದೂ ಪ್ರಬಂಧ ಬರಿಯುವವರನ್ನೂ, ವಸ್ತುಗಳನ್ನು ಕಳುಹಿಸುವವರನ್ನೂ ಸಾಧ್ಯವಾದಷ್ಟು ಮಟ್ಟಿಗೆ ಪ್ರೋತ್ಸಾಹಿಸಬೇಕೆಂದೂ, ತಮ್ಮ ಕಡೆಯಿಂದ ಸಮ್ಮೇಲನಕ್ಕೆ ಅಧಿಕಾರಿಕ ಪ್ರತಿನಿಧಿಗಳನ್ನು ಸಂಗ್ರಹಿಸಿ ಅವರೊಂದಿಗೆ ಬರಮಾಡಿ ಬರಬೇಕೆಂದು ಡಾಕ್ಟರ್ ಪಿ. ಅನಂತರಾವ್, ಕಾರ್ಯದರ್ಶಿ, ಇವರು ತಿಳಿಸುತ್ತಾರೆ

ಇಲ್ಲಿಯ ಪ್ರಸಿದ್ಧ ಇಂಜಿನಿಯರರಾದ ಮಿ. ಮೈಕೇಲ್‌ವಾಸರು ೧೯೩೪ನೇ ಇಸವಿಯಲ್ಲಿ, ಹೈಡ್ರೊ ಇಲೆಕ್ಟ್ರಿಕ್ ಇಂಜಿನಿಯರಿಂಗನ್ನು ಕಲಿಯಲು ಇಂಗ್ಲೆಂಡಿಗೆ ಹೋದವರು, ಆ ಶಾಲೆಯಲ್ಲಿ ತುಂಬಾ ಅನುಭವವನ್ನು ಹೊಂದಿ ಪುನಃ ಮಂಗಳೂರಿಗೆ ಬಂದಿರುವರು. ನೀಲಗಿರಿಯ ಪ್ಯಾಕಾರಾ ಹೈಡ್ರೊ ಇಲೆಕ್ಟ್ರಿಕ್ ಕೆಲಸವನ್ನು ನೋಡುವದಕ್ಕಾಗಿ ಅವರು ನೀಲಗಿರಿಗೆ ಹೋಗಿರುವರು.

ಇಲ್ಲಿಯ ಗವರ್ನಮೆಂಟ ಕೊಲೇಜಿನ ಇಂಗ್ಲೀಷ್ ಲೆಕ್ಚರರಾಗಿದ್ದ ಶ್ರೀಮಾನ್ ಬೋತರ್ ಎಮ್. ಎ. ಇವರಿಗೆ ಪಾಲಘಾಟಿನ ವಿಕ್ಟೋರಿಯಾ ಕೊಲಿಜಿಗೆ ವರ್ಗವಾಯಿತು. ಅದಕ್ಕಾಗಿ ಕೊಲೇಜಿನ ಸ್ಕೂಲ್ ಫೈನಲ್ ಕ್ಲಾಸಿನ ವಿದ್ಯಾರ್ಥಿಗಳು, ಕೊಲೇಜಿನ ಪ್ರಿನ್ಸಿಪಾಲರಾದ ರಾ। ಗೋವಿಂದ ಕೃಷ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಅವರನ್ನು ಸನ್ಮಾನಿಸಿದರು.

ಅಜೆಕಾರು:— ಇಲ್ಲಿಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವಾರ್ಷಿಕ ರಥೋತ್ಸವವು ಇದೇ ತಾ. ೧೬-೪-'೩೮ನೇ ಸೋಮವಾರ ದಿವಸ ಯಥಾವಿಧಿಯಂತೆ ಜರಗಲಿರುವುದು. ಭಕ್ತಜನವೃಂದಕ್ಕೆ ಸುಸ್ವಾಗತವಿದೆ.

ಅಜೆಕಾರು ಬೋರ್ಡು ಶಾಲಾ ವರ್ಷಾವಧಿ ಪರೀಕ್ಷೆಯು ಇದೇ ತಿಂಗಳ ಮೂರನೇ ವಾರದಲ್ಲಿ ಮ॥ ರಾ। ರಾಮಯ್ಯನಾಯಕ, ಬಿ. ಎ. ಎಲ್. ಟಿಯವರಿಂದ ಜರಗಿಸಲ್ಪಡುವುದು.

ಪ್ರಾಥಮಿಕ ಶಾಲಾ ಉಪಾಧ್ಯಾಯರ ಮಾಸಿಕಕೂಟಗಳು ಈಗ ಸರಿಯಾಗಿ ಜರಗುವುದಿಲ್ಲವೆಂಬ ವಾರ್ತೆಯು ತುಂಬಾ ಶೋಚನೀಯವಾಗಿದೆ, ಇದಕ್ಕೆ ಸಮ್ಮಂಧಪಟ್ಟ ಕಾರ್ಯದರ್ಶಿಗಳು ಇನ್ನಾದರೂ ಉತ್ತೇಜನವನ್ನು ತೆಗೆದುಕೊಂಡು ಸಭೆಗಳು ಸರಿಯಾಗಿ ಕೂಡುವಂತೆ ಮಾಡುವರಾಗಿ ತುಂಬಾ ಭರವಸೆ ಇದೆ.

ಹೊಸದುರ್ಗ:— ಕಾಸರಗೋಡು ತಾಲೂಕು ಬೋರ್ಡು ಪರವಾಗಿ ಇಲ್ಲಿಯ ಪಂಚಾಯಿತ ಕೋರ್ಟು ಮೆಂಬರರು ಮ॥ ರಾ। ರಾ। ಪಿ. ಪಿ. ಕಲಂದನ್ ಎಂಬವರಿಗೆ ಸೋಮುಶೆಟ್ಟಿಸ್ ಬೋರ್ಡ್ ಮೆಂಬರರಾಗಿ ನೇಮಕಮಾಡೋಣಾಗಿಯದೆ, ವರುಷಂಪ್ರತಿ ಬೇಕಲ ಸೆಂಟರಿಂದ ಚುನಾಯಿಸುವ ಧೀವರ ಗ್ರಹಸ್ಥರ ಬದಲಿಗೆ ಇಲ್ಲಿಯ ಸೆಂಟರಿನಲ್ಲಿ ನೇಮಕಪಟ್ಟ ಈ ಮೊಕ್ರ್ಯರಿಯು ನಿಜವಾಗಿ ನ್ಯಾಯದೃಷ್ಟಿಯಲ್ಲಿ ಸಮತುಲ್ಯವಾದದ್ದು.

ಇಲ್ಲಿಯ ಪರಸ್ಪರ ಸಹಾಯಕ ಸಂಘದ ಪಂಚಾಯಿತ ಚುನಾವಣೆ ಬಗ್ಗೆ ಈ ಮಧ್ಯ ಮಹಾಸಭೆಯು ಜರಗಿತು ಹೊಸ ಪಂಚಾಯಿತರು ಮತ್ತು ಪ್ರೆಸಿಡೆಂಟರ ಬಗ್ಗೆ ಉಮೇದ್ವಾರರು ಇದ್ದರು. ತನ್ಮಧ್ಯ ಫಕ್ಕನೇ ಬಿರುಗಾಳಿಯೊಂದು ಬೀಸಿದ ಸಮ್ಮಂಧ ಮೋದವು ಕತ್ತರಿಸಿ ಹೋದುದರಿಂದ ಗತವರುಷದ ಪಂಚಾಯಿತರ ಸ್ಥಾನಗಳನ್ನು ಹೊಸಬರು ಅಲಂಕರಿಸುವರೆ ಬಿಟ್ಟುಹೋಯಿತು.

ಬಪ್ಪನಾಡು:— ಬಪ್ಪನಾಡಿನ ಶ್ರೀಮದ್ ಪರಮೇಶ್ವರಿ ದೇವಸ್ಥಾನದ ವರ್ಷಾವಧಿ ಜಾತ್ರೆಯು ಕಳೆದ ಬುಧವಾರದ ವರೆಗೆ ನಡೆಯಿತು. ಬುಧವಾರ ರಾತ್ರೆ ರಥೋತ್ಸವವಾಗಿ, ದೇವರು ಅವಭೃತಕ್ಕಾಗಿ ನದಿಗೆ ಹೋಗುತ್ತಿರುವಾಗ ಅರ್ಚಕರು ಹಾದಿಯಲ್ಲೇ ಫಕ್ಕನೆ ಕುಳಿತು ಒಂದೆರಡು ನಿಮಿಷಗಳಲ್ಲಿ ಅಲ್ಲಿಯೇ ಪ್ರಾಣವನ್ನು ವಿಸರ್ಜಿಸಿದುದು ಬಹು ಆಶ್ಚರ್ಯಕರವೂ ಖೇದದಾಯಕವೂ ಆಗಿದೆ.

ಬಂಟವಾಳ:— ಇಲ್ಲಿಯ ಉಪಾಧ್ಯಾಯರ ಸಂಘದ ವರುಷಾವಧಿ ಮಹಾ ಸಭೆಯು ಇದೇ ತಿಂಗಳ ತಾ. ೧೪ನೇ ಶನಿವಾರ ೧೦ ಘಂಟೆಯಿಂದ ೧ ಘಂಟೆ ವರೆಗೆ ಜಿಲ್ಲಾ ಎಜ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗುವುದು.

ಇಲ್ಲಿ ಕೋರಾ, ನೀರುಕೊಟಲೆ, ಹಾಲುಕೊಟಲೆ ಮುಂತಾದ ಮಕ್ಕಳ ರೋಗಗಳು ಇನ್ನೂ ಶಾಂತವಾಗಲಿಲ್ಲ.

ಪಾಣೆಮಂಗಳೂರು:— ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಒಂದು ವರುಷದ ವರೆಗೆ ಉಪಾಧ್ಯಾಯಿನಿಯರೊಳಗೆ ಜಗಳವಾಗಿ ಶಾಲೆಯ ಸ್ಥಿತಿಯು ಹಾಳಾಯಿತು. ಅನಂತರ ಅಲ್ಲಿಯ ಒಬ್ಬ ಉಪಾಧ್ಯಾಯಿನಿಯನ್ನು ಬೇರೆ ಕಡೆಗೆ ವರ್ಗಮಾಡಿ ಇನ್ನೊಬ್ಬ ಹೊಸ ಮಿಸ್ಟೆಸನ್ನು ಅಲ್ಲಿಗೆ ಹೆಡ್ ಮಿಸ್ಟ್ರೆಸ್ಸಾಗಿ ಕಳುಹಿಸಿದ ಮೇಲೆ ಶಾಲೆಯಲ್ಲಿ ಪಾಠಗಳು ಒಳ್ಳೇ ರೀತಿಯಲ್ಲಿ ಕಲಿಸಲ್ಪಟ್ಟು ಶಾಲೆಯು ಒಳ್ಳೇ ಸ್ಥಿತಿಗೆ ಬಂತು. ಒಟ್ಟಾರೆ ೭-೮ ತಿಂಗಳಲ್ಲಿ ಏನೂ ಕಾರಣವಿಲ್ಲದೆ ಆ ಹೆಡ್ ಮಿಸ್ಟ್ರೆಸ್ಸಿಗೆ ಉಳ್ಳಾಲಕ್ಕೆ ವರ್ಗ! ಅದೇ ಗ್ರೇಡಿನ ಇನ್ನೊಬ್ಬ ಮಿಸ್ಟ್ರೆಸ್ಸಿಗೆ ಈ ಶಾಲೆಗೆ ವರ್ಗ. ಒಳ್ಳೇ ಕೆಲಸ ಮಾಡಿದರೆ ಬೇಗನೆ ವರ್ಗ. ಇನ್ನು ಶಾಲೆಯ ಸ್ಥಿತಿಯು ಏನಾಗುತ್ತದೋ ನೋಡಲಿಕ್ಕಿದೆ.

ಕಲ್ಲಡ್ಕ:— ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಭೆಯು ಕಳೆದ ೩೧ನೇ ತಾರೀಕಿನ ದಿನ ಬರಿಮಾರು ಶಾಲೆಯ ಅಧ್ಯಾಪಕ ರಾ। ಲಕ್ಷ್ಮಣ ಕಮ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸೆಕ್ರೆಟರಿಯವರು ಗತಮೀಟಿಂಗಿನ ವರದಿಯನ್ನು ಓದಿದ ಬಳಿಕ ಬರಿಮಾರು ಚರ್ಚ್ ಶಾಲೆಯ.ಲ್ಲಿ ವೇಗೆಸ್‌ರವರು ೩ನೇ ದರ್ಜೆಗೆ ಸಾಮಾನ್ಯ ತಿಳುವಳಿಕೆಯಲ್ಲಿ ಒಂದು ಪಾಠವನ್ನು ಕಲ್ಲಡ್ಕ ಥಾ। ಪಿ. ಶಾಲೆಯ ಮುಖ್ಯೋಪಾಧ್ಯಾಯರಾದ ಕೆ. ರಾಮರಾಯರು ಅಭಿನಯ ಹಾಡುಗಳ ವಿಷಯ ಒಂದು ಭಾಷಣವನ್ನು ಇತ್ತರು. ಅನೇಕ ಠರಾವುಗಳೊಂದಿಗೆ, ಇತ್ತೀಚೆಗೆ ನ್ಯಾಯವಿಧಾಯಕ ಸಭೆಯಲ್ಲಿ ತಿದ್ದುಪಡಿ ಆಗಲಿಕ್ಕಿರುವ ವಿದ್ಯಾ ಇಲಾಖೆ ಸಮ್ಮಂಧವಾದ ನಿಬಂಧನೆಗಳನ್ನು ಅನುಮೋದಿಸಿ, ಮುಂದಿನ ಸಭೆಯು ಕಡೇಶ್ವಾಲ್ಯ ಬೋರ್ಡ್‌ಶಾಲೆಯಲ್ಲಿ ೨೧ನೇ ತಾರೀಕಿನ ದಿನ ಜರಗಬೇಕೆಂದು ನಿಶ್ಚಯಿಸಿ, ಸಭೆಯು ಮುಕ್ತಾಯವಾಯಿತು.

ವಿವಿಧ ಸಮಾಚಾರಗಳು.

ಹಿಂದೂತ್ವವೂ ಮತಾಂತರವೂ.

ಕಳೆದ ಕೆಲವು ವರುಷಗಳಿಂದ ಉತ್ತರ ಹಿಂದೂಸ್ಥಾನದಲ್ಲಿ ಹಿಂದೂಗಳಲ್ಲದವರನ್ನು ಹಿಂದುಗಳನ್ನಾಗಿ ಮಾಡುವ ಚಳವಳವು ನಡೆಯುತ್ತಲೇ ಇದೆ. ಕೆಲವು ತಲೆಗಳ ಹಿಂದೆ ಹಿಂದೂವಾಗಿದ್ದು ಮತ್ತೆ ಅನ್ಯಮತಕ್ಕೆ ಸೇರಿದ ಜನರನ್ನು ಪುನಃ ಹಿಂದೂಗಳನ್ನಾಗಿ ಮಾಡುವದು ಒಂದು ರೀತಿಯಲ್ಲಿ ನ್ಯಾಯಸಮ್ಮತವಾಗಿಯೇ ಇದೆಯೆನ್ನಬಹುದು. ಹಿಂದೂಗಳಲ್ಲದವರನ್ನು ಮೊದಲಿನಿಂದಲೂ ಅವರು ಅನ್ಯಮತದವರಾಗಿದ್ದಾಗ್ಯೂ, ಅವರನ್ನು ಹಿಂದೂಗಳಾಗಿ ಮಾಡುವದು ತಪ್ಪೆಂದು ಹೇಳಲು ಯಾವ ಗ್ರಂಥಾಧಾರವೂ ಇರುವುದಿಲ್ಲ. ಆದರೆ ಸಮಾಜವು ಕೂಡಿ ಅನ್ಯಮತದವನನ್ನೇ ಹಿಂದೂಮತಕ್ಕೆ ಸೇರಿಸುವಾಗ ಅದು ಅನ್ಯಾಯವಾಗದು. ಆ ಕುರಿತು ನ್ಯಾಯಸ್ಥಾನದವರು ವಿಚಾರಿಸಬೇಕಾದುದೇನೂ ಇರಲಾರದು. ಅದರಿಂದುಂಟಾಗುವ ಸಾಧಕ, ಬಾಧಕಗಳಿಗೆ ಸಮಾಜವೇ ಹೊಣೆಯಾಗಿರುವದಲ್ಲದೆ ಕೋರ್ಟು ಕಚೇರಿಯವರಲ್ಲಿ ಒಬ್ಬನು ಪರಕೀಯನನ್ನು ತನ್ನ ಸಮಾಜಕ್ಕೆ ಸೇರಿಸುವಾಗ ಆತನು ಮಾಡಿದುದು ತಪ್ಪೆಂದು ಹೇಳಲು ಇತರರು ಅಧಿಕಾರಿಗಳಾಗಿಲ್ಲ. ಇನ್ನು ಇತ್ತೀಚೆಗೆ ಹಿಂದೂತ್ವಕ್ಕೆ ಜನರನ್ನು ಸೇರಿಸಿಕೊಳ್ಳುವದು ಕಡಿಮೆಯಾಗಿದೆ ಎಂದು ಹೇಳಬಹುದು. ಪೂರ್ವಕಾಲದಲ್ಲಿ ಹಿಂದೂತ್ವಕ್ಕೆ ಅನ್ಯರನ್ನು ಮತಾಂತರಗೊಳಿಸುವದು ಬಹಳವಾಗಿದ್ದಿತು. ಹೀಗಿರುವಾಗ ಮಿಸ್. ಮಿಲ್ಲರಳ ಮತಾಂತರವು ನ್ಯಾಯಸಮ್ಮತವಲ್ಲವೆಂದು ಯಾರಿಗೂ ಹೇಳಲು ಬರುವಂತಿಲ್ಲ. ಪೂರ್ವಕಾಲದಲ್ಲಿ ಹಿಂದುಸ್ಥಾನವನ್ನು ಆಕ್ರಮಿಸಲು ಬಂದ ಹಲವು ಗ್ರೀಕ ಮತ್ತು ಇತರ ಪಂಗಡದವರು ಹಿಂದೂಗಳಾಗಿ ಕ್ಷತ್ರಿಯರಂತೆ ಉಳಕೊಂಡ ನಿದರ್ಶನಗಳು ಹಲವಿವೆ. ಮೊದಲು ಸಮಾಜದ ಪ್ರಮುಖರು ನ್ಯಾಯವಾಗಿ ವರ್ತಿಸಿದುದೇ ಕಾನೂನಿನ ರೂಪವಾಗಿ ಪರಿಣಮಿಸಿ, ಅದನ್ನು ಇಡೀ ಸಮಾಜದವರು ಅನುಸರಿಸಿಕೊಂಡು ಬರುತ್ತಿದ್ದರು. ಮಿಸ್. ಮಿಲ್ಲರಳ ಮತಾಂತವು ತೀರ ನ್ಯಾಯ ವಿಹೀನವೆಂದೂ, ಹಿಂದೂತ್ವಕ್ಕೆ ಈ ಮತಾಂತರದಿಂದ ಕುಂದು ಆಯಿತೆಂದೂ ಹಲವು ಜನರು ಅನ್ನಬಹುದು. ಆದರೆ ಇದರಿಂದ ಹಿಂದೂತ್ವದ ಅಭಿವೃದ್ಧಿಗೆ ಒಂದು ಹಾದಿಯಾಯಿತೆಂದು ತಿಳಿಯುವವರು ಬಹಳ ಜನರಿರಬಹುದು. ಮಿಲ್ಲರಳು ಮತಾಂತರಗೊಳಿಸಿದ ಶ್ರೀ ಶಂಕರಾಚಾರ್ಯರ ಸಮಾಜಪ್ರೀತಿಯೂ ಧೈರ್ಯವೂ ಬಹಳ ಹೊಗಳತಕ್ಕದ್ದಿದೆ. ಇದರಿಂದ ಹಿಂದೂ ಸಮಾಜದ ಅಭಿವೃದ್ಧಿಯು ಅಂಕುರಿಸಿತೆಂದೂ ಮುಂದೆ ಅದು ವಿಶಾಲವಾದ ವೃಕ್ಷವಾಗಿ ಬೆಳೆಯಲಿರುವಿದೆಂದೂ ತಿಳಿಯತಕ್ಕದ್ದು. ಹಲವರು ಇದನ್ನು ಹೊಗಳಿ, ಕೆಲವರು ಮಾತ್ರ ಹೀನೈಸುವ ಕಾರಣ ಬಹುಮತವೇ ನ್ಯಾಯರೀತಿಯಾಗಿದೆಯೆಂದು ಧೈರ್ಯದಿಂದ ಹೇಳಬಹುದು.

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು
Tel. Conveyance.
... (M. S. M. Railway) ... ಮಾರ್ಗವಾಗಿ ... ಪ್ರಧಾನ ಕಂಪೆನಿಯಾದ ... ಉಪ್ಪಿನಂಗಡಿ ... ಮೂಡ ... ಬಂಟವಾಳ ... ಏರ್ಪಡಿಸಿರುತ್ತೆ.
... ವಿಶ್ರಾಂತಿಗೆ ... 9 ಗಂಟೆಗೆ ... 12-30ಕ್ಕೆ ... 1-30ಕ್ಕೆ ... ಕಾಸರ...

THE CANARA PUBLIC CONVEYANCE CO., LTD. MANGALORE.
(Established 1919)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,
ಮಂಗಳೂರು.
ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ್ ಕಂಪೆನಿಯಾಗಿದೆ.
ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ ...
ಕೊಲ್ಲೂರು ಮೂಕಾಂಬಿಕಾ ದೇವಾಲಯ ...
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ...
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ...
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ...
ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ...
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.
Secretary,
The Canara Public Conveyance Co., Ltd., Mangalore S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢಕರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿಪ್ರನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೬ಆಣೆ.

೬೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅವ್ಯಕ್ತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ ಆದರೆ ಸ್ತ್ರೀ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇವನ್ನು ಪ್ರತಿ ಒಬ್ಬರು ಓದಬೇಕಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೬ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಮಿಸ್. ಮೆಯೊಳ ಧೈರ್ಯ.

ಮಿಸ್ ಮೆಯೊಳು ಹಿಂದುಸ್ಥಾನವನ್ನುದ್ದೇಶಿಸಿ 'ಮದರ್ ಇಂಡಿಯಾ' ಪುಸ್ತಕವನ್ನು ಬರೆದುದಾಯಿತು. ಈಗ ಅವಳ ದೃಷ್ಟಿಯು ಇಜಿಪ್ತದ ಕಡೆಗೆ ಹೊರಳಿರುವುದು. ಇದಕ್ಕಾಗಿ ಅವಳು ಬರುವ ಮೇ ತಿಂಗಳಲ್ಲಿ ಇಂಗ್ಲೆಂಡಿಗೆ ಬಂದು ಬೇಕಾದ ಸಂಗ್ರಹವನ್ನು ಮಾಡಿ ತನ್ನ ಎರಡನೆಯ ಪುಸ್ತಕವನ್ನು ಬರೆದು ಬೇಗನೆ ಪ್ರಕಟಿಸಲಿಕ್ಕಿರುವಳು. ಇಜಿಪ್ತದ ಇಂಪಿರಿಯಲಿಸ್ಮಿನ ಕುರಿತು ಮೆಯೊಳು ಆ ಪುಸ್ತಕದಲ್ಲಿ ಬರೆಯುವಳಂತೆ. ಈ ಪುಸ್ತಕವನ್ನು ಬರೆಯಲು ಅವಳಿಗೆ ಕಷ್ಟವಾಗುವ ಹಾಗಿಲ್ಲ. ಇಲ್ಲದ್ದನ್ನು ಬರೆಯಲು ಅವಳು ಬಹಳ ನಿಪುಣಳು. ಮೊದಲೇ ಅವಳು ಮದರ್ ಇಂಡಿಯಾ ಪುಸ್ತಕವನ್ನು ಬರೆದು ಅಭ್ಯಾಸವನ್ನು ಹೊಂದಿರುವಳು. ಆಂಗ್ಲೊ ಇಜಿಪ್ತಿಯಾನ ಸಂಬಂಧದ ವಿಷಯವು ಬೆಳೆದಿರುವದರಿಂದ ತಾನು ಇಂಗ್ಲೆಂಡಿನಿಂದ ಅಲ್ಲಿಗೆ ಹೋಗಿ, ಪುಸ್ತಕವನ್ನು ಬರೆದು ಜಗತ್ತಿನ ಜನರೆಲ್ಲರಿಗೆ ಅಲ್ಲಿನ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಅವಳು ಮಾಡುವಳಂತೆ. ಈ ಸಲದ ಅವಳ ಪ್ರಯತ್ನಗಳು ಎಷ್ಟು ಫಲಕಾರಿಯಾಗುವವೆಂದುನೋಡಲಿದೆ

ಯುರೋಪಿಯನರು ಬೆಂಕಿಯ ಮೇಲೆ ನಡೆದರು!

ನೇಟಾಲದ ಹಿಂದೂ ಧುರೀಣರು ಬೆಂಕಿಯ ಮೇಲೆ ನಡೆಯುವೆವೆಂದು ಚರ್ಚಿಸಿದ ಕಾರಣ ಮಾರಿಟ್ಜ್ ಬರ್ಗನಲ್ಲಿ ಇಬ್ಬರು ಯುರೋಪಿಯಾನರು ಬೆಂಕಿಯನ್ನುರಿಸಿ ಅದರ ಮೇಲೆ ನಡೆದುಹೋದರು. ನಡೆದವರಲ್ಲಿ ಒಬ್ಬನ ಹೆಸರು ಕೊಮಿನ್ಸನೆಂದು. ಇನ್ನೊಬ್ಬನ ಹೆಸರು ಹೆಂಟಜಾಕೋಸನೆಂದು. ಇಬ್ಬರೂ ಜೊಹಾನ್ಸ್ ಬರ್ಗನವರು. ಹಿಂದೂಗಳು ನಡೆಯುವರೆಂದು ಹೇಳುವಾಗ, ತಾವೂ ನಡೆಯುವೆವೆಂದು ನಂಬಿಗೆಯಿಂದ ಹೇಳಿ ಇವರು ನಡೆದೇ ಬಿಟ್ಟರು. ಸುತ್ತುಮುತ್ತಲಿನ ಸ್ಥಳವೆಲ್ಲವೂ ಜನರಿಂದ ತುಂಬಿದ್ದಿತು. ಮರಗಳಲ್ಲಿಯೂ, ಕಟ್ಟೋಣಗಳ ಮಾಳಿಗೆಗಳಲ್ಲಿಯೂ, ಬಹು ಮಂದಿ ನೆರೆದಿದ್ದರು. ನೋಟಕರಲ್ಲಿ ಬಹುಮಂದಿ ಹಿಂದುಗಳಿದ್ದರು. ಹತ್ತು ಟನ್ ಅಂದರೆ ೪೦ ಖಂಡಿ ಕಟ್ಟಿಗೆಯನ್ನು ತಂದು ರಾಶಿ ಹಾಕಿ ಅದಕ್ಕೆ ಬೆಂಕಿಯನ್ನು ಕೊಟ್ಟರು. ಮೊದಲು ಇಬ್ಬರು ಹಿಂದುಗಳು ಬರೀ ಕಾಲಿನಿಂದ ಆ ಉರಿಯುವ ಕಟ್ಟಿಗೆಯ ರಾಶಿಯ ಮೇಲೆ ನಡೆದುಹೋದರು. ಅವರ ಉದಾಹರಣೆಯನ್ನು ಅನುಸರಿಸಿ ಆ ಇಬ್ಬರು ಯುರೋಪಿಯಾನರೂ ನಡೆದುಕೊಂಡು ಹೋದರು. ಹೆಂಟಜಾಕೋಸನು ಮೊದಲು ತಾನು ಯಾವಾಗಲೂ ನಡೆಯುವ ರೀತಿಯಲ್ಲಿಯೇ ನಡೆದು ಕೊನೆಗೆ ಮಾತ್ರ ಬೇಗ ಬೇಗನೇ ಅಡಿಯಿಟ್ಟು ಓಡಿಹೋದನು. ಆದರೆ ಕೋಮಿನ್ಸನು ಮಾತ್ರ ಮೊದಲಿನಿಂದ ಕಡೆಯ ವರೆಗೆ ಒಂದೇ ರೀತಿಯಲ್ಲಿ ನಡೆದು ಜಯಶಾಲಿಯಾದನು. ಈ ನಾಲ್ವರೂ ನಡೆದುದನ್ನು ಕಂಡು ಹಿಂದೂಗಳೂ ಇತರರೂ ಜಯಘೋಷವನ್ನು ಮಾಡಿ ಹೊಗಳಿದರು. ಕಡೆಗೆ ಅವರನ್ನು ಮೆರವಣಿಗೆಯಿಂದ ಕರೆದೊಯ್ದರು.

ಹಿಂದೀಯನ್ನು ಕಲಿಯಿರಿ.

ಕಳೆದವಾರವು ರಾಷ್ಟ್ರೀಯ ವಾರವೆಂದು ಕಳೆದುಹೋಯಿತು. ನಾವು ಯಾವಾಗಲೂ ಪರಸ್ಪರ ಕಾದಾಡುತ್ತಿರುವೆವೆಂದೂ, ಜಾತೀಯ ಕಲಹವು ನಮ್ಮನ್ನು ಬಿಟ್ಟು ಹೋಗಿಲ್ಲವೆಂದೂ ನಾವು ತಿಳಿಯಬೇಕು. ಅಂತಹ ದೋಷಗಳನ್ನು ದೂರಮಾಡಲು ನಾವು ಸತತವೂ ಪ್ರಯತ್ನಿಸಬೇಕಾದರೂ, ರಾಷ್ಟ್ರೀಯ ವಾರದಲ್ಲಿ ಅಂತಹ ಕಲಹಾದಿಗಳನ್ನು ಪೂರ್ಣ ತ್ಯಜಿಸಿ ಐಕ್ಯವನ್ನು ಸಾಧಿಸುತ್ತಿರಬೇಕು. ನಮ್ಮಲ್ಲಿ ಸಣ್ಣ ಸಣ್ಣ ವಿಭಾಗಗಳಾಗಿ ನಾವು ಬೇರೆ ಬೇರೆ ಇರುವುದರಿಂದ ಐಕ್ಯಕ್ಕೆ ಬಹು ತೊಂದರೆಯೂ ಆಗಿದೆ. ಈ ವಾರದಲ್ಲಿ ನಾವು ಒಂದೇಯೆಂದು ಭಾವಿಸಬೇಕು. ರಾಷ್ಟ್ರೀಯ ಐಕ್ಯದ ಆಲೋಚನೆಯೇ ನಮ್ಮ ಮನಸ್ಸನ್ನಾವರಿಸಬೇಕು. ರಾಷ್ಟ್ರೀಯ ಕಾರ್ಯಕ್ಷೇತ್ರದಲ್ಲಿ ರಚನಾತ್ಮಕ ವಿಷಯಗಳನ್ನೇ ನಾವು ಚರ್ಚಿಸುತ್ತಿರಬೇಕು.

ಇನ್ನು ಈ ಸಂದರ್ಭದಲ್ಲಿ ದಕ್ಷಿಣ ಹಿಂದೂಸ್ಥಾನದವರು ಒಂದು ಸರ್ವಸಾಮಾನ್ಯವಾದ ಭಾಷೆಯನ್ನು ತಾವು ಕಲಿಯಬೇಕೆಂಬುದನ್ನು ಮರೆಯಬಾರದು. ಅಂತಹ ಭಾಷೆಯೇ ಹಿಂದಿಯಾಗಿದೆ. ಹಿಂದೀಯು ಸ್ವರಾಜ್ಯದ ಹೋರಾಟಕ್ಕೆ ಸಹಾಯಕವಾಗಿದೆ. ಈ ಭಾಷೆಯನ್ನು ಕಲಿಯುವುದರಿಂದ ಉತ್ತರ ದಕ್ಷಿಣದವರ ಐಕ್ಯಕ್ಕೆ ಸುಲಭವಾಗುವುದು. ನಾವು ಹಿಂದೀ ಭಾಷೆಯನ್ನು ಕಲಿಯುವುದರಿಂದ ನಮ್ಮ ಅಭಿಪ್ರಾಯವು ಬೇರೆ ಬೇರೆಯವರಿಗೆ ತಿಳಿದು ನಾವು ಒಟ್ಟಿಗೆ ಕಲೆತಿರಲು ಸಹಾಯಕವಾಗುವದು. ಹಿಂದೀಯನ್ನರಿಯುವ ೯ ಕೋಟಿ ಜನರು ಇಲ್ಲಿರುವರು. ನಾವು ಹಿಂದಿಯನ್ನು ಕಲಿತರೆ ಹಿಂದೂಸ್ಥಾನದಲ್ಲಿ ಹಿಂದೀಯನ್ನರಿತವರು ೩೨ ಕೋಟಿ ಜನರಾಗುವೆವು. ಹಿಂದಿಯು ಸರಳ ಭಾಷೆಯಾಗಿರುವುದರಿಂದ ಯಾರೂ ಅದನ್ನು ಕಲಿಯಬಹುದು. ಅದಕ್ಕೆ ಉತ್ಸುಕರಾಗಿ ಇಂದಿನಿಂದಲೇ ಎಲ್ಲರೂ ಹಿಂದೀಯನ್ನು ಕಲಿಯತೊಡಗಿದರೆ ಬಹು ಉತ್ತಮವಿರುವುದು.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ದಕ್ಷಿಣ ಕನ್ನಡಾ ಜಿಲ್ಲಾ ಹಿಂದೂ ರಿಲೀಜಿಯಸ್ ಎಂಡೋಮೆಂಟಿನ ಉಪಹತಿ.

ಹಿಂದೂ ಮತಸ್ಥಾಪನೆಯ ಮಟ್ಟಿಗೆ ಉಂಟಾದ ೧೯೨೬ನೇ ಇಸವಿ ೨ನೇ ಆಕ್ಟ ಪ್ರಕಾರ ಸರ್ವಾಧಿಕಾರವು ಕಮಿಟಿಗೆಂತ ಇರುತಿದ್ದದನ್ನು ಈಗ ಉಂಟಾದ ಎಂಡೋಮೆಂಟ್ ಆಕ್ಟ ಎಂಬ ವಿಕ್ಟ ಇದೀ ತಿಂದು ಬಿಟ್ಟಿತು. ಇದರಿಂದ ಲೋಕಕ್ಕೆ ಉಪಕಾರವೊ ಉಪದ್ರವೊ ಎಂತ ಎಲ್ಲರೂ ತಿಳಿದ ಸಂಗತಿಯಾಗಿದೆ. ರೂ. ೨೫೦/-ಕ್ಕೆ ಮಿಕ್ಕಿದ ಸ್ಥಾಪನೆಗಳ ಮಟ್ಟಿಗೆ ಮಾತ್ರ ಎಂಡೋಮೆಂಟ್ ತನ್ನ ಅಧಿಕಾರವನ್ನು ನಡಿಸುವದೆಂತ ಅದರಿಂದುಂಟಾದ ಕಾನೂನಿನಿಂದ ಗೊತ್ತಾಗುತ್ತದೆ. ಅದರಲ್ಲೂ ಕೂಡ ತನ್ನ ಅದ್ಭುತ ಅಧಿಕಾರವನ್ನು ಚಲಾಯಿಸಲು ಆಲೋಚಿಸಿದೆ. ಹಾಗೆಂದರೆ ಕಮಿಟಿಗೆ ಸಿಟ್ಟಾಗುವದು. ಆದರೂ ಒಂದೆರಡು ಸಂಗತಿ ಹೇಳಬೇಕಾಯಿತು. ಇಡೀ ಹಿಂದೂಸ್ಥಾನದಲ್ಲಿ ಮತಗಳಲ್ಲಿ ಹಿಂದೂಮತವೇ ಪ್ರಬಲವಾದೆಂತಲೂ ಹಿಂದೂಶಾಸ್ತ್ರವೆಂದರೆ ಒಂದು ಪ್ರಬಲವಾದ ನಡವಳಿಕೆಯಲ್ಲಿ ಏನೂ ತಿಳಿಯದ ಪಾಮರರಿಗೂ ಬಾಲಬೋಧಿನಿಯಂತೆ ಬುದ್ಧಿವಾದವನ್ನು ಸಾರಿ ಸಾರಿ ಹೇಳುತ್ತಿರುವುದು. ಅಂಥಾ ಶಾಸ್ತ್ರ ಮತ್ತು ಪುರಾಣ ಇತಿಹಾಸ ವೇದಸ್ಮೃತಿಗಳೆಂಬವು ಅನೇಕ ಯೋಗ್ಯ ಉತ್ಕೃಷ್ಟರಾದ ಮಹರ್ಷಿಗಳು ಅಲ್ಲದೆ ಬ್ರಹ್ಮನಿಂದ ಸಹ ಹೇಳಲ್ಪಟ್ಟಿದೆಯೆಂತ ಸರ್ವ ಶಾಸ್ತ್ರದಲ್ಲೂ ತಿಳಿದುಬರುತ್ತದೆ. ಅಂಥಾ ಶಾಸ್ತ್ರಾಧೀಕಾರ ಸಂಭೂತರಾದವರೇ ನಮ್ಮ ಶೈಕಣ್ಣಡಿಯಾದ-ಸರ್ವೋತ್ಕೃಷ್ಟವಾದ ನಮ್ಮ ಶಾಸ್ತ್ರಕ್ಕೆ ನಾವೇ ಮಣ್ಣೆರಚಲು ಆರಂಭವಾಗಿದೆ ಅಜ್ಞಾನಿಗಳಾದ ಮನುಷ್ಯರು ಈ ಕಲಿಯುಗದಲ್ಲಿ ದೇವತಾಸಾಧಿಷ್ಯವನ್ನು ಸುಲಭವಾಗಿ ಪಡೆಯಲು ಅಸಾಧ್ಯವಾದೀತೆಂಬವಕ್ಕೋಸ್ಕರವಲ್ಲವೇ ಯುಗಾಂತರದಿಂದಲೇ ದೇವಸ್ಥಾನವೆಂತ ನಿರ್ಮಿಸಿದ್ದು? ಯಾಕೆಂದರೆ ಹತ್ತುಜನ ಭಜಕರು ಕೂಡಿ ದೇವಸ್ಥಾನದಲ್ಲಿ ದೇವರಿದ್ದಾರೆಂಬ ಭಯದಿಂದ ವಂದಿಸಿ ಯಥಾನುಶಕ್ತಿಯಿಂದ ಪೂಜಿಸುತ್ತಿರುವರು. ಅಂಥಾ ದೇವಾಲಯಗಳಿಗೆ ಪ್ರವೇಶಿಸಬೇಕಾದರೆ ತಾನು ಅಶುಚಿಯೆಂಬ ಭಯವು ದೇವರು ಏನಾದರೂ ಉಪದ್ರಕೊಟ್ಟಾರೆಂಬ ಹೆದರಿಕೆಯು ಇಂದಿನ ವರೆಗೂ ಅಂತ್ಯಜಮತದಲ್ಲಿ ಜನಿತವಾಗಿರುವುದು. ಎಂಡೋಮೆಂಟು ಯಾಕೆ ಉಂಟಾದ್ದು? ದೇವಸ್ಥಾನಗಳ ಆಡಳ್ತೆಯು ಸರಿಯಲ್ಲೆಂತಲೂ ದುರುಪ್ರಯವಾಗುತ್ತದೆಂತಲೂ ಮೆನೇಜಮೆಂಟು ನಿಗಾವಾನಿ ಸಾಲದೆಂಬುದೇ ಅದರ ಅರ್ಥ. ಆ ಕಾನೂನು ಉಂಟಾಗಿ ಇಂದಿಗೆ ಸುಮಾರು ೩ ವರುಷಗಳು ದಾಟಿದರೂ ಸ್ಥಾಪನೆಯಿಂದ ಅನೇಕ ಕೋಟಿಯಾಂತರ ರೂಪಾಯಿಗಳು ಬೋರ್ಡಿನಲ್ಲಿ ಸಂಗ್ರಹವಾದುವು. ಹೊಸ ಕಮಿಟಿಯು ಏರ್ಪಟ್ಟಿತ್ತು. ಹಳೇ ಮುಕ್ತೇಸರಿಕೆಯೂ ಪೂರಾ ಅಸಿಂಧುಗಳಾದವು. ಈಗ ನವಯುವಕರು ಹಿಂದು ದೇವಾಲಯಗಳಿಗೆ ಹಿಂದು ಮತದವರೆಲ್ಲರೂ ಸಮಾಭಾಗಿಗಳೆಂಬ ಸಂತೋಷದಿಂದ ಮುಂದು ಬರಲು ನಾಮಿನೇಶನ್ ಪಿಟೀಶನುಗಳು ದಿನಂಪ್ರತಿ ಬರುತ್ತಿರುವವು. ಇದೇ ಹಿಂದುಗಳಲ್ಲಿ ಐಕ್ಯಸಂಪಾದನೆಯಲ್ಲಿ ಸಹಕರಿಸುವದೆಂಬ ಭಾವನೆಯು ಮಿತಿಮೀರಿ ಬಂದದೆ. ದೇವಾಲಯವು ಕ್ರಮೇಣ ರಾಜಾಲಯವಾಗುವುದು, ಹಿಂದುಗಳಲ್ಲಿದ್ದ ಗುಟ್ಟುಗಳು ಪೂರಾ ರಟ್ಟಾಗತೊಡಗಿದೆ. ಸ್ಥಾಪನೆಯು ಮೊದಲಾರಭ್ಯ ಯಾರಲ್ಲಿದ್ದರೂ ಒಂದೇ ರೀತಿಯ ಆಡಳ್ತೆಯು ನಡಿಯುತ್ತಾ ಬಂದದೆ. ಹೊಸ ಕಮಿಟಿಯಾದರೂ ಹಳೆ ಕಮಿಟಿಯಾದರೂ ಪೂರ್ವ ಮಾಮೂಲಿಗೆ ವಿರುದ್ಧಾಚರಣೆಗೆ ಸಾಧ್ಯವೇ ಇರುವುದಿಲ್ಲ. ವಿಷಯಗಳು ಇದ್ದ ಸ್ಥಾಪನೆಗಳಲ್ಲಿ ಮೊದಲು ಸ್ವಲ್ಪ ರೂಢಿಯಾಗಿದ್ದುದು ಈಗ ಗೋಪ್ಯವಾಗಿರುವ ಹಾಗೆ ಆಯಿತಷ್ಟೆ. ಅಲ್ಲದೆ ಯೋಗ್ಯನಾದವನು ಎಲ್ಲಿ ಹೋದರೂ ಯೋಗ್ಯನೆನಿಸುವನು. ಅಯೋಗ್ಯನು ಎಲ್ಲಿದ್ದರೂ ಆತನು ಮಾಡುವ ಕೆಲಸವನ್ನು ಮಾಡದೆ ಎಂದೂ ಬಿಡಲಾರನು.

ವ್ಯಾಪಾರಿಯೆಂದುದೇ ಸರಿ. ಮೋಹರು ಬಿದ್ದರೆ ಸೇರು ಅಥವಾ ಕಲ್ಲುಗಳಿಗಲ್ಲದೆ ಕೈಗೆ ಬಿದ್ದಿರುವುದೇಯೆಂದ ಹಾಗೆ ಸಂಶಯವೇ ನಮ್ಮನ್ನು ಇದುವರೇಗೂ ಹಾಳುಮಾಡುತ್ತಿರುವುದಲ್ಲದೇ ಬೇರೇನೂ ಪ್ರಯೋಜನವಿಲ್ಲ. ಅಂತೂ ಈ ಕಮಿಟಿಯಿಂದ ರೂಢಿ ಗಣಿತ ಅಭ್ಯಾಸ ಪ್ರಾರಂಭವಾಗುವವಷ್ಟೆ. ಆದರೂ ಹಳೆ ಕಮಿಟಿಯರು ಯೋಗ್ಯರೋ ಅಥವಾ ಅಯೋಗ್ಯರೊ ಎಂತ ತಿಳಿಯುವದು ಯಾವದರಿಂದ? ಅವರ ರಿಕಾರ್ಡುಗಳಿಂದ ಅಂಥವುಗಳು ಯಾವುದೂ ನೋಡದೆ ನ್ಯಾಯವಾಗಿ ನೇಮಕ ಮಾಡಿದ ಯೋಗ್ಯ ಮೊಕ್ತೇಸರರನ್ನು ರದ್ದುಪಡಿಸಿದೆಯೆಂದರೆ ಇದರಿಂದ ನ್ಯಾಯಕ್ಕೆ ವಿರುದ್ಧವಾಯಿತೆಂತಾ ಹೇಳಲೇ ಬೇಕಾಗುತ್ತದೆ. ಸಾಮಾನ್ಯ ಗ್ರಾಮ ಕೋರ್ಟುಗಳಿಂದ ಕೊಡಲ್ಪಟ್ಟ ತೀರ್ಪುಗಳನ್ನಾದರೂ ಮೇಲ್ಕೋರ್ಟಿನವರು ಮಂಜೂರುಮಾಡಿಯೆ ಇಟ್ಟಿರುವರು. ಹಾಗೇನೂ ಇವರಲ್ಲಿಲ್ಲದೆ ಪೂರಾ ಮೊಕ್ತೇಸರಿಕ್ಕೆ ರದ್ದಾದರೆ ಹಳೇ ಕಮಿಟಿಯ ಪೂರಾ ರಿಜಿಸ್ತ್ರಿಗಳು ವ ರಿಕಾರ್ಡುಗಳು ನಾಶವಾದವೆಂತಲೇ ಎಣಿಸಬೇಕಾಯಿತು. ಅಂದರೆ ಮುಂದಕ್ಕೆ ಈ ಟೆಂಪಲುಗಳಲ್ಲಿ ಅನೇಕ ಅನರ್ಥಗಳು ಒದಗಲಿಕ್ಕಿವೆ. ಅದೂ ಹ್ಯಾಗೂ ಆಗಲಿ, ಈ ಸಣ್ಣ ಟೆಂಪಲುಗಳು ಏನೂ ಅಪರಾಧ ಮಾಡಿದವೊ ತಿಳಿಯದು. ಇದರ ಸಂಗತಿಯಲ್ಲಾದರೂ ಕಮಿಟಿ ಆಕ್ಟ ಅನ್ಯಾಯದ್ದೆಂತಾ ಯಾರೂ ಹೇಳದೆ ಇರಲಾರರು. ಸಣ್ಣ ಸ್ಥಾಪನೆಯೆಂದರೆ ಬರೇ ೦-೧೦-೩ಯ್ಯ ಸ್ಥಾಪನೆ ಕೂಡಾ ಇರುವದು. ಇಂಥವುಗಳಲ್ಲೂ ಮಾಮೂಲು ನಡಿಯತಕ್ಕ ವಿನಿಯೋಗವು ಈಗಲೂ ಈ ಸನದಿನ ಆಧಾರದಿಂದ ನಡಿಯುತ್ತಿರುವದು. ಅಂಥಾ ಕಮಿಟಿಯು ಮತ್ತು ಸನದು ರದ್ದಾಯಿತೆಂದರೆ ಸಣ್ಣ ಸ್ಥಾಪನೆಯು ಹಣವನ್ನು ಬಾಕಿಮಾಡಿಸಿ ಸರಕಾರಕ್ಕೆ ಜಮೆಕಟ್ಟಿಸುವವಲ್ಲದೆ ಎಂದಿಗೂ ಉದ್ಧಾರವಾಗಲಿಕ್ಕಿಲ್ಲ. ಯಾಕೆಂದರೆ ಒಂದೊಂದು ಸ್ಥಾಪನೆಯ ವಿನಿಯೋಗವು ನಿತ್ತು ಹೋದರೆ ದೈವ ದ್ರೋಹವು ಕಮಿಟಿಯ ಮೇಲೆ ಬರುವದೆಂಬ ಭಯದಿಂದ ಏನಾದರು ಸನದು ಅವಘಡ ಉಂಟಾದರೆ ಆ ಸ್ಥಳಕ್ಕೆ ಓಡಿ ಹೋಗಿ ದೈವದ್ರೋಹಕ್ಕೆ ಹೆದರಿ ಯಾರನ್ನಾದರು ಎಬ್ಬಿಸಿ ಅರ್ಜಿ ತೆಕ್ಕೊಂಡು ವಿನಿಯೋಗ ನಡಿಯುವ ಹಾಗೆ ಏರ್ಪಡಿಸಿ ಹೊತ್ತುಕೊಂಡು ಹೋಗಿ ಹಳೆ ಕಮಿಟಿಯರು ಮೊಕ್ತೇಸರಿಯನ್ನು ಅವರ ಕೈಯ್ಯ ಖರ್ಚಿಯಿಂದ ಕೊಡುತ್ತಿದ್ದರು. ಆದ್ದರಿಂದ ಅಂಥಾ ಹಳೆ ಯೋಗ್ಯ ಕಮಿಟಿಯರನ್ನು ಶ್ರೀ ದೇವರು ಕಾಪಾಡಲಿ. ಹಾಗಿದ್ದರಿಂದ ಅಂಥಾ ಸಣ್ಣ ಸ್ಥಾಪನೆಗಳು ಈಗಲೂ ಕಂತಿಗೆ ಕಂತು ನಡಿಯುತ್ತಾ ಬರುತ್ತಿರುವದು. ಅಂಥವುಗಳ ಮೊಕ್ತೇಸರಿಯು ರದ್ದಾಗಿ ಹಣವು ಬಟವಾಡೆಗೆ ಸಿಕ್ಕದಿದ್ದರೆ ಪುನಃ ಕಾಯಸುಮಾಡಿ ಹೊಸ ಕಮಿಟಿಯಿಂದ ಅನ್ನ ಬುತ್ತಿಕಟ್ಟಿ ಯಾರೂ ಮೊಕ್ತೇಸರಿಕೆಗೆ ಮುಂದಾಳಾಗಿ ಹೋಗಲಿಕ್ಕಿಲ್ಲ. ಅಂತು ಸ್ಥಾಪನೆಗಳು ಮಣ್ಣುಪಾಲಾಗುವಲ್ಲಿ ಸಂದೇಹವೇ ಇರುವದಿಲ್ಲ. ಅಂದರೆ ಇದರಿಂದ ಪುಣ್ಯವೊ ಪಾಪವೊ ನ್ಯಾಯವೋ ಅನ್ಯಾಯವೊ ಎಂತ ಅವರೇ ತಿಳಿಯಲಿ. ಒಟ್ಟಾರೆ ಹಿಂದೂ ಮತಸ್ಥರಿಗೆ ಬಂದ ದುರ್ಘಟವು ಪ್ರಬಲವಾದದ್ದೆಂದರೆ ಇದೇ. ಲೋಕದಲ್ಲಿ ಅನ್ಯಾಯ ಪ್ರಾಪ್ತವಾಯಿತೆಂತ ಹೇಳಲು ನಾನೇನೂ ಹಿಂಜರಿಯೆನು. ಇದರಿಂದ ನ್ಯಾಯವೆಂದಾದರೂ ದೊರೆಯಲಾರದು. ಈ ಸಂಗತಿಯಲ್ಲಿ ಹಿಂದುಗಳಿಗುಂಟಾದ ಈ ಕಷ್ಟವನ್ನು ಯಾರೊಬ್ಬರೂ ಗಮನ ಕೊಡುವವರಿಲ್ಲವಲ್ಲಾ ಯೆಂಬುದಕ್ಕೆ ನಾನು ಬಹಳ ವ್ಯಸನಪಡುತ್ತಿರುವೆನು.

ಇಂತಿ ಯೋರ್ವ ಬಡ ಭಜಕನ ವಿನಂತಿ.

ತಾರೀಕು 1-4-1928.

ಅಯ್ಯಾ ಪತ್ರಕರ್ತರೇ!

ಹಳ್ಳಿ ಸಹಕಾರ ಸಂಘಗಳಿಂದ ಅಸಿಸ್ಟಾಂಟ ರಿಜಿಸ್ತ್ರಾರರ ಬಳಿಗೆ ಕಳುಹಿಸುವ ಯಾವತ್ತು ಕ್ಲೈಮುಗಳು ಕೂಡಲೇ ಡಿಕ್ರಿಯಾಗದೆ ನಾಲ್ಕಾರು ತಿಂಗಳು ವಿಳೆಯಾಗಿಲ್ಪಡುವುದು. ಹೀಗೆ ಡಿಕ್ರಿಯಾಗಲು ವಿಳಂಬವಾಗದಿದ್ದರೆ ಸಾಲಗಾರರ ಹತ್ತಿರ ಹಣ ಜಮೆಯಾಗುವ ಸುಸಂದರ್ಭದಲ್ಲಿ ಅಮಲ್ಜಾರಿಯನ್ನು ತೆಗೆದರೆ ವಸೂಲಿಗೆ ಬಹಳ ಸುಲಭವಾಗುವುದು. ಆದ್ದರಿಂದ ಕ್ಲೈಮುಗಳನ್ನು ಆಗಾಗಲೇ ಸಮ್ಮಂಧಪಟ್ಟ ಆರ್ಬಿಟ್ರೇಟರವರಿಗೆ ಕಳುಹಿಸಿ ಡಿಕ್ರಿ ಕೊಡಿಸಿದರೆ ಸಹಕಾರ ಸಂಘಗಳು ವ್ಯಾದೆದಾಟಿದ ಸಾಲಗಳು ಇಲ್ಲವೆಂದು ಹೇಳಿಸಿ, ನಿದ್ರಾವಸ್ಥೆಯನ್ನು ಹೊಂದಲಾರದೆ ಅದಷ್ಟು ಅಭಿವೃದ್ಧಿಯನ್ನು ಹೊಂದುವುದೆಂಬದರಲ್ಲಿ ಏನೂ ಸಂಶಯವಿಲ್ಲವೆಂದು ನಂಬುವ,

"ಹಳ್ಳಿಯ ಸಹಕಾರಿ"

ಏಲಂ ಪ್ರಕಟಣೆ.

ಮಂಗಳೂರು ಭಾರತ ಸೇವಾಸಮಿತಿಗೆ ಒಪ್ಪಿಸಿದ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಗಳು ಈ ಕೆಳಗೆ ಕಾಣಿಸಿದಂತೆ ಲಾಟುಗಳಾಗಿ ಪ್ರಥಮ ಮೂರು ಲಾಟಿನ ಸ್ಥಿರಾಸ್ತಿಗಳು ಉಡಿಕಲ್ಯಾಡಿಯಲ್ಲಿರುವ ರಾ| ರಾ| ಸೋಮ ಮರಕಾಲರವರ ಬಂಗ್ಲೆಯಲ್ಲಿ ಇದೇ ಎಪ್ರಿಲು ತಾ. 15ನೇ ಆದಿತ್ಯವಾರ ಹಗಲು ಘಂಟೆ 9ಕ್ಕೆ, ಉಳಿದ ಲಾಟುಗಳು ಮಂಗಳೂರು ಶಹರಿನ ರ್‍ಯಾರಾ| ಕೋಟಿ ರಾಮಕೃಷ್ಣ ಕಾರಂತ, ವಕೀಲ, ಇವರ ಆಫೀಸಿನಲ್ಲಿ ಇದೇ ಎಪ್ರಿಲು ತಾ. 22ನೇ ಆದಿತ್ಯವಾರ ಹಗಲು ಘಂಟೆ 9ಕ್ಕೆ ಆರಂಭಿಸಿ ಬಹಿರಂಗವಾಗಿ ಏಲಮಿನಿಂದ ಮಾರಲ್ಪಡೋಣಾಗುವುವು. ಈ ಬಗ್ಗೆ ಬೇಕಾದ ಪೂರ್ಣ ಮಾಹಿತಿ ಕೊಡುವ ಏಲಂ ನೋಟೀಸುಗಳು ಮಂಗಳೂರಲ್ಲಿ ಕೊಡಿಯಾಲಬೈಲು ಟಪ್ಪಾಲು ಕಟ್ಟೆಯ ಬಳಿಯಲ್ಲಿರುವ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯ ಮಳಿಗೆಯಲ್ಲಿರುವ ಸದರಿ ಸಮಿತಿಯ ಕಚೇರಿಯಲ್ಲಿ ದೊರಕುವುವು.

ಸ್ಥಿರಾಸ್ತಿ ವಿವರ.

ಲಾಟು ನಂಬ್ರ	ಅಕ್ಕಿ ಇರುವ ತಾಲೂಕು ವ ಗ್ರಾಮ.	ಹೊಲದ ನಂಬ್ರ	ತಿಸಂ.	ವಿಸ್ತೀರ್ಣ ಎ.ಸೆ.
1	ಉಡುಪಿ ತಾಲೂಕು ನಂಬ್ರ 60 ... ಗ್ರಾಮ	225/2	ನಂಜ 2	0-14
2	" "	225/7	" 2	0-33
3	" "	182/16	ಬಾಗಾಯತು	0-16
4ರಿಂದ 22ರ ವರೆಗಿನವು.	ಮಂಗಳೂರು ತಾಲೂಕು ನಂಬ್ರ 84 B. ... ಗ್ರಾಮ	87/2	ಪುಂಜ	0-98
		87/4	"	5-46
		87/5	"	2-6
		87/6	"	1-61
		87/7	"	0-20
		87/8	"	0-25
		88/1	"	2-44
		88/2	"	2-72
		93/[illegible]	"	0-18
		94/4	"	1-64
23	ಮಂಗಳೂರು ತಾಲೂಕು ನಂಬ್ರ 101 ಈಗ 86 ... ಗ್ರಾಮ	138/2	ಪುಂಜ	1820 Sq. ft.
24	" 102 B ... ಗ್ರಾಮ	66/3ರ ಅಂಶ	"	0-25
25	" 104 B ... ಗ್ರಾಮ	41/ ಪುಂಜ 8-98ರ ...		3-25

ತಾಬಾ ಕಲಂ.

ಲಾಟು ನಂಬ್ರ 23 ಹಂಪನಕಟ್ಟೆಯಲ್ಲಿರುವ ಈ ಮೊದಲು ಸೋಡಾ ಫೇಕ್ಟರಿ ಆಗಿತ್ತು. ಇದರಲ್ಲಿ ಹಂಚು ಛಾವಣಿಯ ಉಪ್ಪರಿಗೆ ತಕ್ತಪೋಸಿ ಕಟ್ಟೋಣ ಅಂಗಡಿ ವಗೈರೆ ಇರುತ್ತದೆ. ಇದು ರೈಲ್ವೆ ಸ್ಟೇಶನಿಗೂ ಆಸ್ಪತ್ರೆಗೂ, ಕಾಲೇಜುಗಳಿಗೂ, ಕೋರ್ಟುಗಳಿಗೂ ಬಹಳ ಸಮೀಪವಿದ್ದು ಎಲ್ಲಾ ವ್ಯಾಪಾರಕ್ಕೂ ಮೋಟರು ಕಂಪೆನಿಗಳಿಗೂ ಶ್ರೇಯಸ್ಥಾನವಾಗಿರುವುದು. ಇದರ ಪೂರಾ ಹಕ್ಕು ಇದೆ.

ಲಾಟು ನಂಬ್ರ 25 ಮೂಲಗೇಣಿ ಕೃತದ ಹಕ್ಕು. ಇದು ಮಂಗಳೂರು ಶಹರು ಸೋಡಿಗೆ ಹೋಗುವ ಮಾರ್ಗದ ಬದಿಯಲ್ಲಿರುತ್ತದೆ. ಇದು ವಾಸ್ತವ್ಯದ ಕಟ್ಟೋಣ ಕಟ್ಟಲಿಕ್ಕೆ ಯೋಗ್ಯವಾದ ನೀರಿನಾಶ್ರಯವಿರುವ ಒಳ್ಳೇ ಆರೋಗ್ಯ ಸ್ಥಳವಾಗಿದೆ. ಇದಕ್ಕೆ ರಾಜಮಾರ್ಗದಿಂದ 10 ಫೀಟು ಅಗಲದ ಹೆದ್ದಾರಿ ಇದೆ.

ಲಾಟು ನಂಬ್ರ 24 ಮೂಲಗೇಣಿ ಕೃತದ ಹಕ್ಕು. ಇದು ಒಳ್ಳೇ ತೋಟವಿರುವ ಸ್ಥಳವಾಗಿದ್ದು ಒಂದು ಎಕ್ರೆ ಖಾಲಿ ಸ್ಥಳ ಸೇರಿಯದೆ.

ಇವುಗಳ ಪೈಕಿ ಲಾಟು ನಂಬ್ರ 1 ಮತ್ತು 2ರ ಬಾಬತು ನಮಗೆ ಮೂಲಗೇಣಿ ಬರುವಂಥಾದಿದ್ದು ಮೂಲಿ ಹಕ್ಕು ಮಾತ್ರ ಮತ್ತು ಲಾಟು ನಂಬ್ರ 4ರಿಂದ 22ರ ವರೆಗಿನದು ಕೂಡ ಅದೇ ರೀತಿ ಹೆಚ್ಚಿನ ಅಂಶ ಮೂಲಿ ಹಕ್ಕು ಮಾತ್ರ ಆಗಿರುತ್ತದೆ.

ಭಾರತ ಸೇವಾಸಮಿತಿ ಕಚೇರಿ ಕೊಡಿಯಾಲಬೈಲು ತಾ. 7-4-'28 } ಅ. ಬೋಜರಾಯ. ಕಾರ್ಯದರ್ಶಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. ನಂಬ್ರ 51/1928

ಕೆ. ದೇವರಾವ್—ಅರ್ಜಿದಾರ, ತಾ. 30—1—'28.

ಮಂಗಳೂರು ಕೈಹಾರದಲ್ಲಿ ಮೃತಪಟ್ಟ ರಾವ್ ಸಾಹೇಬ್ ಕೆ. ರಂಗರಾಯರ ಬಾಬ್ತು, ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವ ಬಗ್ಗೆ ಸದ್ರಿಯವರ ಹಿರೇ ಮಗ ಮೇಲ್ಕಂಡ ಅರ್ಜಿದಾರನು ತನಗೆ ವಾರಿಸ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿಕೊಟ್ಟಿರುತ್ತಾನೆ. ಸದ್ರಿ ಅರ್ಜಿಯು ತಾ. 30—6—'28ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆದರಿಂದ ಈ ಬಗ್ಗೆ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ವಾಯಿದೆಗೆ ಜ್ಯಾಹೀರುಮಾಡತಕ್ಕದ್ದೆಂದು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

Mangalore. 11—4—'28 } GANGOLLY KRISHNA RAO, Pleader for Pet.



...ಸಿದ್ಧಿಪಟ್ಟ ಎಫ್ ಮುಲ್ಲರರ

ಆಯಿಲ್ ಎಕ್ಸ್‌ಪೆಲ್ಲರ್.

...ಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ ಎಣ್ಣೆಯನ್ನು ... ಉಪಕರಣ.

... ಸುಲಭ, ಸಂಪೂರ್ಣ ಸ್ವತಶ್ಚಲನಕ, ಕಡಿಮೆ ಖರ್ಚು, ... ಹೆಚ್ಚಿನ ಎಣ್ಣೆಯ ಲಾಭ.

... ಏಜಂಟರು—

VOLKART BROS ENGINEERS

Armenian Street, MADRAS.

...ಗಳು, ಡಿಸ್ ಇಂಟಿಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು ... ಹರಳೆಬೀಜವನ್ನು ಒಡೆಯುವುದಕ್ಕೆ ತಕ್ಕದಾದ ಸಣ್ಣ ...ಂಟ್‌ಗಳು.

... ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು

ನೋಟೀಸು

...ರ್ಡಿನೇಟ ಕೋರ್ಟನಲ್ಲಿ
ಕ್ರಮ ನಂಬ್ರ 72/1927

...ಬ್ರಾಯ ಉಪಾಧ್ಯ ಕೂಡಾ—ವಾದೀರು.

ಮತ್ತು

...ಕ್ಕಮ್ಮ ನ್ಯಾರ್ತಿ ಕೂಡಾ—ಪ್ರತಿವಾದೀರು.

...ಕ್ಕಮ್ಮ ನ್ಯಾರ್ತಿ ಕೂಡಾ ಸುಬ್ರಾಯ ಉಪಾಧ್ಯರಿಗೆ ... 27—8—1914ರಲ್ಲು ರೂಪಾಯಿ 1500ಕ್ಕೆ ಬರ... ಅಡವು ದಸ್ತೈವೇಜಿನ ಬಾಬ್ತು ಹಣದ ಬಗ್ಗೆ ಸದ್ರಿ ... ಸುಬ್ಸೈಸೆಟ್ಟಿ ಅಳಿಯ ಕೃಷ್ಣಪ್ಪ ಹೆಗ್ಗಡೆ ... ಮೇಲೆ ಕೂಡಾ ಸದ್ರಿ ಕೋರ್ಟಿನಲ್ಲಿ ದಾವಾದಾಖಲು ...ವನ್ನು ಅಯ್ಯೆರು ತನಕಿ ಬಗ್ಗೆ 19—4—1928ಕ್ಕೆ ...ಗಿಯದೆ. ಸದ್ರಿ ಕೃಷ್ಣಪ್ಪ ಹೆಗ್ಗಡೆ ವ ಬೇರೆ ಯಾರಿ...ನಾದರೂ ಆಕ್ಷೇಪವಿರುವುದಾದರೆ ಅಂಥಾ ಆಕ್ಷೇಪ... 19—4—'28ಕ್ಕೆ ಬೆಳಿಗ್ಯೆ ಘಂಟೆ 11ಕ್ಕೆ ಸದ್ರಿ ...ನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

...ರು
...'28

K. S. RAU.
Vakil for Plaintiff.

ಪ್ರಕಟಣೆ.

... ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾ... ಇದೇ ಬರುವ ಎಪ್ರಿಲ್ ತಿಂಗಳ ಮಧ್ಯದಲ್ಲಿ ... ಮುಚ್ಚಲ್ಪಟ್ಟು ಪುನಹ ಬರುವ ಜೂನ್ ತಿಂಗಳ ... ವಾರದಲ್ಲಿ ತೆರೆಯಲಾಗುವದು. ಕಳದ ವರ್ಷ ... ವರುಷ ಕೂಡಾ ವಿದ್ಯಾಲಯದಲ್ಲಿ ಯೋಗ್ಯರಾದ ... ದಾಖಲುಮಾಡಿಕೊಳ್ಳಬೇಕಾಗಿ ನಿಶ್ಚಯಿಸಿದೆ. ...ದಲ್ಲಿ ಮದ್ರಾಸು ಯುನಿವರ್ಸಿಟಿಯು ಆಯುರ್ವೇದ ... ಸಾಹಿತ್ಯ ಶಿರೋಮಣಿ ಪರೀಕ್ಷೆಗಳಿಗೆ ಹೋಗಲು ...ವಾದ ಶಿಕ್ಷಣವು ದೊರೆಯುವದು ಮಾತ್ರವಲ್ಲದೆ ... ಧರ್ಮಕ್ಕೆ ಸಂಬ್ಮಂಧಪಟ್ಟ ಕರ್ಮಾಂಗದ ಪಾಠಗಳೂ ... ಇನ್ನು ಇದಕ್ಕೆ ಕೂಡಿ ಹೊಲಿಯುವದು, ... ಕೆಲಸ, ನೂಲುವದು, ಟ್ಯಾಪರ್ಮ್ಯಾಟಿಂಗ ಮುಂತಾದ ... ಜೀವನೋಪಾಯಗಳ ಸಮ್ಮಂಧದ ವಿಷಯಗಳಲ್ಲಿ ... ಹುಡುಗರ ಅಭಿರುಚಿಯನ್ನು ನೋಡಿ ಶಿಕ್ಷಣವು ಕೊಡ...ವದು. ವಿದ್ಯಾಲಯದಲ್ಲಿ ಶಿಕ್ಷಣವು ಧರ್ಮಾರ್ಥವಾಗಿ ...ವದು. ಯೋಗ್ಯರಾದ ಬಡ ಹುಡುಗರಿಗೆ ಭೋಜನದ ...ವು ಕೂಡ ಮುಫತ್ತಾಗಿ ಕೊಡೋಣಾಗುವದು. ವಿದ್ಯಾಲಯಕ್ಕೆ ಸೇರಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಂಡು ಹೆಚ್ಚಿನ ಮಾಹಿತಿಯನ್ನು ಪ್ರವೇಶ ಅರ್ಜಿಯ ನಮೂನೆಗಳನ್ನೂ ಪಡೆಯಬಹುದು. ಅರ್ಜಿಗಳು ತಾರೀಕು 10—5—'28ರ ವಳಗೆ ಆಫೀಸಿಗೆ ತಲ್ಪತಕ್ಕದ್ದು.

ಕೆ. ... ಕಾಮತ್, M.A.B.L. ಅಧ್ಯಕ್ಷ,
ಶ್ರೀ ವೆಂಕಟ್ರಮಣ ದೇವಾಲಯ ವಿದ್ಯಾ ...
ಬೋರ್ಡು, ಕಾರ್ಕಳ, ದ. ಕನ್ನಡ.

K. GOPALA RAO, B.A., B.L.
High Court Vakil
Vakil for Petitioenr.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದವಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶಿವ್ಯಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಮುಫತ್ತು ಮುಫತ್ತು ಮುಫತ್ತು

ಬಹಳ ಮನೋರಂಜಕವಾದ ಪುಸ್ತಕವು.

ವೀರವರ್ಮ ರಾಜಾ ಮತ್ತು ಮಾಲಿನಿ.

ಈ ಪುಸ್ತಕವನ್ನು ಅಂಚೆ ಹಾಸಲನ್ನು ಕೂಡ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಕಳುಹಿಸಿಕೊಡುವರು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಆತಂಕನಿಗ್ರಹ ಫಾರ್ಮಸಿ,
ನಂ. 26 ಬ್ರಾಡ್ವೇ, ಮದ್ರಾಸ್.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಜೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಜೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ...ರಿಂದ ...೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ... ಆಣೆ, ಒಕ್ಕೆ ೧—...—೦, ... ಸೀಸೆಗೆ ...—...—೦, ... ಸೀಸೆಗೆ ...—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ...
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನ್ ಹಾಲ್ ...



DUNLOP

ಟ್ರಿಪ್ಪಲ್ ಸ್ಟಡ್ ಸ್ಟ್ಯಾಕಲ್ ಟಾಯರು.

ಶಾಸ್ತ್ರೋಕ್ತವಾಗಿ ತಯಾರಿಸಿದ ಟಾಯರು ಕೊಡುವ ಎಲ್ಲಾ ಭದ್ರತೆಯು ಇದರಿಂದ ದೊರಕುವಂತೆ ಇದು ತಯಾರಿಸಲ್ಪಟ್ಟಿರುತ್ತದೆ. ಇಳಿಜಾರಿನಲ್ಲಿ ಪಕ್ಕನೆ ಜಾರಿಹೋಗದಿರುವಿಕೆಯು ಇದರ ಅನೇಕ ಗುಣಗಳಲ್ಲಿ ಒಂದೇ ಒಂದಾಗಿದೆ.

fit Dunlop and be satisfied

ದಿ ಡನ್ಲೋಪ್ ರಬ್ಬರ್ ಕಂಪೆನಿ (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ, ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು, ಮಂಡಲೇ, ಮದ್ರಾಸು, ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ ೨—1[illegible]

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೦ನೇ ಶುಕ್ರವಾರ ಎಪ್ರಿಲ್ ೧೯೨೮. ಸಂಚಿಕೆ ೧೬

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ಬೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲ್ಪಟ್ಟಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಕಳಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ, ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಕಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

...Preparations Cover All Your Needs.
...THAT MERIT HAS MADE FAMOUS.
...ಸಿದ್ಧವಾದ ಬಾಟ್ಲಿವಾಲಾ ಇವರ
...ಪ್ರಸಿದ್ಧ ಔಷಧಗಳು.

...ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.
...ಜ್ವರ ನಿವಾರಣ. ರೂ. ೧.
...ಪುಷ್ಟಿ ಕೊಡುವ ಔಷಧ ಆಣೆ ೧೩.
...ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
...ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
...ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
...೧—೩—೦. ರೂ. ೧—೪—೦. ೧—೧೨—೦
...೦—೬—೦
...೦—೬—೦. LIBERAL DISCOUNT TO TRADE
...WASHAPUR, BOMBAY.
...ಚ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...yani Road, P. O. Cadell Road, Bombay. No. 14.

...ವ ರ ಲೋಧ್ರ

...ರೋಗನಿವಾರಿಣಿ.

...ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಬಗೆಯಾಗಿ ಹೊಗಳುತ್ತಿರುವರು.

...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

...ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ...ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ನಿಶ್ಶೇಷವಾಗಿ ಗುಣವಾಗುವುವು.

...ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,
...ಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
...ರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನೂ ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಶ್ರೀ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಖಾಸಗಿ

ಅತೀ ಮಹತ್ವದ ಸೋಡ್ತಿ.

ಕೆನರಾ ಹ್ಯಾಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್

ಇವುಗಳ ಸಹಾಯಾರ್ಥವಾಗಿ

ಕೆನರಾ ಹ್ಯಾಸ್ಕೂಲಿಗೆ ಧನಸಹಾಯವನ್ನು ಒದಗಿಸುವ ಬಗ್ಗೆ 1923ನೇ ಇಸವಿಯಲ್ಲಿ ತೆಗೆದ ಸೋಡ್ತಿಯಿಂದ ಸಿಕ್ಕಿದ ಹಣ ಕಾಲಕ್ರಮೇಣ ಅಭಿವೃದ್ಧಿಯಾಗಿ ಬರುತ್ತಿರುವ ಈ ಸಂಸ್ಥೆಯು ಹೆಚ್ಚುತ್ತಾ ಬರುವ ಖರ್ಚಿಗೆ ಸಾಲದೆ ಹೋದ್ದರಿಂದ ಈ ಸಂಸ್ಥೆಯ ಬಗ್ಗೂ ಕೆನರಾ ಗರ್ಲ್ಸ್ ಸ್ಕೂಲಿನ ಬಗ್ಗೂ ಹೆಚ್ಚಿನ ಹಣವನ್ನು ಕೂಡಿಸಲಿಕ್ಕೆ ಶಾಲಾ ಕೌನ್ಸಿಲ್ ಮೆಂಬರರು ದಕ್ಷಿಣ ಕನ್ನಡಾ ಜಿಲ್ಲಾ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಪುನಃ ಈ ವರ್ಷವೂ ಇನ್ನೊಂದು ಸೋಡ್ತಿಯನ್ನು ತೆಗಿಯುವರೇ ನಿಶ್ಚಯಿಸಿರುತ್ತಾರೆ. ಈ ಸೋಡ್ತಿಯು ಆಡಳಿತೆ ಶಾಲಾ ಕೌನ್ಸಿಲ್ ಮೆಂಬರರಷ್ಟೆ ಧೋರಣೆಯುಳ್ಳ ಸದ್ಗೃಹಸ್ಥರಿಂದ ನಡಿಸಲ್ಪಡುವುದು.

ಉದ್ದೇಶ.

1. ಶಾಲೆಗಳ ಮೂಲ ಧನವನ್ನು ವೃದ್ಧಿಪಡಿಸಲಿಕ್ಕೆ.
2. ಓದ್ಯೋಗಿಕ ಶಿಕ್ಷಣದ ಬಗ್ಗೆ ಈಗ ಶಾಲೆಯ ಸ್ವಾಧೀನ ಇರುವ 5000 ರೂಪಾಯಿಯ ಮೂಲ ಧನವನ್ನು ಹೆಚ್ಚಿಸಲಿಕ್ಕೆ.
3. ಎರಡು ಶಾಲೆಗಳ ಬಗ್ಗೆ ಮತ್ತು ಮುಖ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿ ಸ್ಥಳ ಇಕ್ಕಟ್ಟಾಗಿರುವ ಬಾಲಿಕಾ ಶಾಲೆಯ ಬಗ್ಗೆ ಹೆಚ್ಚಿಗೆ ಕಟ್ಟೋಣಗಳನ್ನು ಒದಗಿಸಿಕೊಡುವ ಬಗ್ಗೆ.

ಜಮೆಯಾಗುವ ಒಂದು ಲಕ್ಷ ರೂಪಾಯಿಗಳಲ್ಲಿ ರೂಪಾಯಿ 15000ವನ್ನು ಸೋಡ್ತಿಯ ಖರ್ಚಿಗಾಗಿ ತೆಗೆದಿಟ್ಟು ಉಳಿದ ಹಣದಲ್ಲಿ ರೂಪಾಯಿ 40000ವನ್ನು ಶಾಲೆಗಳ ವಿನಿಯೋಗಕ್ಕಾಗಿ ಇಟ್ಟು ಉಳಿದ 45000ವನ್ನು ಈ ಕೆಳಗಿನ ಬಹುಮಾನಗಳಾಗಿ ಹಂಚಲಾಗುವದು.

1ನೇ ರೂಪಾಯಿ **12,500**; 2ನೇ ರೂಪಾಯಿ **5,000**;
ರೂಪಾಯಿ 1,000 ದರದ 2; ರೂಪಾಯಿ 500 ದರದ 3; ರೂಪಾಯಿ 250 ದರದ 16;
ರೂಪಾಯಿ 100 ದರದ 10; ರೂಪಾಯಿ 50 ದರದ 20; ರೂಪಾಯಿ 20 ದರದ 100;
ರೂಪಾಯಿ 10 ದರದ 800; ರೂಪಾಯಿ 5 ದರದ 2,100.

ಟಿಕೇಟುಗಳು 25ರ ಪುಸ್ತಕಗಳಾಗಿ ದೊರೆಯುವುವು. ಒಂದು ಇಡೀ ಪುಸ್ತಕದಲ್ಲಿನ ಟಿಕೇಟುಗಳನ್ನು ಮಾರಿದವರು, ರೂ. 25ರ ಬದಲಾಗಿ 24 ರೂಪಾಯಿಗಳನ್ನು ಮಾತ್ರವೇ ಪಾವತಿ ಮಾಡಿದರೆ ಸರಿಯಾಗುವುದು; ಉಳಿದೊಂದು ರೂಪಾಯಿಯನ್ನು ಅವರ ಮೆಹನತ್ತಿನ ಬಗ್ಗೆ ಅವರು ಇಟ್ಟುಕೊಳ್ಳಬಹುದು. ಇದರಿಂದ ಟಿಕೇಟು ಮಾರುವವರು ಶಾಲೆಗಳಿಗೆ ಸಹಾಯ ಮಾಡುವುದರೊಂದಿಗೆ ಅವರು ಕೂಡಿಸಿದ ಹಣದಲ್ಲಿ ನೇಕಡಾ 4ರ ಪ್ರತಿಫಲವನ್ನೂ ದೊರಕಿಸಿಕೊಂಡಂತಾಗುವುದು. ಇದಲ್ಲದೆ ಅತಿ ಹೆಚ್ಚು ಸಂಖ್ಯೆಯ ಟಿಕೇಟು ಪುಸ್ತಕಗಳನ್ನು ಮಾರುವವರಿಗೆ, ಮಾರಾಟದಲ್ಲಿ ಸ್ಪರ್ಧೆಯುಂಟಾಗುವ ಹಾಗೆ, ಬೇರೆ ಬಹುಮಾನಗಳು ಪ್ರತ್ಯೇಕವಿವೆ.

ಟಿಕೇಟು ಮಾರಾಟವು 1929ನೇ ಇಸವಿ ಜನವರಿ ತಾ. 4ಕ್ಕೆ ಮುಗಿಯುವುದು. ಸೋಡ್ತಿಯನ್ನು 1929ನೆ ಇಸವಿ ಜನವರಿ ತಾ. 26 ಮತ್ತು ಅದೇ ದಿನ ಮುಗಿಯದಿದ್ದಲ್ಲಿ ಅದರ ನಂತರದ ದಿನಗಳಲ್ಲಿ ತೆಗಿಯಲಾಗುವುದು.

ಹಣವನ್ನು ಪಾವತಿಮಾಡುವುದಕ್ಕೂ, ಇತರ ಪತ್ರವ್ಯವಹಾರಕ್ಕೂ ವಿಳಾಸ:—

ಬಿ. ಮಂಜುನಾಥ ಬಾಳಿಗಾ,
ಒನರರಿ ಸೆಕ್ರಿಟರಿ, ರೆಫಲ್ ಆಫೀಸು, ಪ್ರಿಟೋಲೀನ, ಪಲನೀರ್,
ಮಂಗಳೂರು, ದ. ಕ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ಸಿಖರವಾದ ಪಡಪೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು
ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು
ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ.
ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.
ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಧಾರಣೆ ವಗೈರೆಗೆ ಬರೆಯಿರಿ. ಕೊಡಲ್ಪಡುತ್ತವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
(6—5) ಅವಿನ್ಯೂ ರೋಡು, ಬೆಂಗಳೂರು ಸಿಟಿ.

ಪಂಪುಗಳು



ಪ್ಲಂಜರ್ ಪಂಪುಗಳು
ಡೂಪ್ಲೇ ಸ್ಟೀಮ್ ಪಂಪುಗಳು
ಮೂರು ಹಾರ್ಸ್ ಪವರಿಗೆ ಮೀರಿದ ಕ್ರೂಡ್ ಎಣ್ಣೆ ಇಂಜಿನುಗಳು.
ಮುಖ್ಯ ಏಜಂಟರು
VOLKART
Box G. 45, Armenian Street, MADRAS.

ಏಲಂ ಪ್ರಕಟಣೆ.

ಮಂಗಳೂರು ಭಾರತ ಸೇವಾಸಮಿತಿಗೆ ಒಪ್ಪಿಸಿದ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಗಳು ಈ ಕೆಳಗೆ ಕಾಣಿಸಿದಂತೆ ಲಾಟುಗಳಾಗಿ ಪ್ರಥಮ ಮೂರು ಲಾಟಿನ ಸ್ಥಿರಾಸ್ತಿಗಳು ಉಡುಪಿ ಕಲ್ಯಾಡಿಯಲ್ಲಿರುವ ರಾ। ತೋಮ ಮರಕಾಲರವರ ಬಂಗ್ಲೆಯಲ್ಲಿ ಮುಂದರಿಸಿಟ್ಟ ಹಾಗೆ ಇದೇ ಎಪ್ರಿಲು ತಾ. 29ನೇ ಆದಿತ್ಯವಾರ ಹಗಲು ಘಂಟೆ 2ಕ್ಕೆ, ಉಳಿದ ಲಾಟುಗಳು ಮಂಗಳೂರು ಶಹರಿನ ರಾ। ಕ್ರೋಟ ರಾಮಕೃಷ್ಣ ಕಾರಂತ, ವಕೀಲ, ಇವರ ಆಫೀಸಿನಲ್ಲಿ ಇದೇ ಎಪ್ರಿಲು ತಾ. 22ನೇ ಆದಿತ್ಯವಾರ ಹಗಲು ಘಂಟೆ 9ಕ್ಕೆ ಆರಂಭಿಸಿ ಬಹಿರಂಗವಾಗಿ ಏಲಮಿನಿಂದ ಮಾರಲ್ಪಡೋಣಾಗುವವು. ಈ ಬಗ್ಗೆ ಬೇಕಾದ ಪೂರ್ಣ ಮಾಹಿತಿ ಕೊಡುವ ಏಲಂ ನೋಟೀಸುಗಳು ಮಂಗಳೂರಲ್ಲಿ ಕೊಡಿಯಾಲಬೈಲು ಟಪ್ಪಾಲು ಕಟ್ಟೆಯ ಬಳಿಯಲ್ಲಿರುವ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯ ಮಾಳಿಗೆಯಲ್ಲಿರುವ ಸದರಿ ಸಮಿತಿಯ ಕಚೇರಿಯಲ್ಲಿ ದೊರಕುವವು.

ಸ್ಥಿರಾಸ್ತಿಗಳ ವಿವರ.

ಲಾಟು ನಂಬ್ರ	ಆಸ್ತಿ ಇರುವ ತಾಲೂಕು ಮತ್ತು ಗ್ರಾಮ	ಸರ್ವೆ ನಂಬ್ರ	ಕಿಸಂ.	ವಿಸ್ತೀರ್ಣ ಎ. ಸೆ.
1	ಉಡುಪಿ ತಾಲೂಕು ನಂಬ್ರ 60 ಕೊಡವೂರು ಗ್ರಾಮ	225/2	ನಂಜ 2	0—14
2	" "	225/7	" 2	0—33
3	ಮಂಗಳೂರು ತಾಲೂಕು ನಂಬ್ರ 84 B. ಕಂಕನಾಡಿ ಗ್ರಾಮ	182/16	ಬಾಗಾಯತು	0—16
4ರಿಂದ 22ರ ವರೆಗಿನವುಗಳು	"	87/2	ಪುಂಜ	0—98
		87/4	"	5—46
		87/5	"	2—6
		87/6	"	1—61
		87/7	"	0—20
		87/8	"	0—25
		88/1	"	2—44
		88/2	"	2—72
		93/[illegible]	"	0—18
		94/4	"	1—64
23	ಮಂಗಳೂರು ತಾಲೂಕು ನಂಬ್ರ 101 ಕಸಬ 88	138/2	ಪುಂಜ	1820 Sq. ft.
24	" 102 B ಅತ್ತಾವರ ಗ್ರಾಮ	60/3ರ ಅಂಶ	"	0—25
25	" 104 B ಕೊಡಿಯಾಲಬೈಲು ಗ್ರಾಮ	41	"	3—25

ಖಾಸಾ ಕಲಂ.

ಲಾಟು ನಂಬ್ರ 23 ಹಂಪನಕಟ್ಟೆಯಲ್ಲಿರುವ ಈ ಮೊದಲು ಸೋಡಾ ಕೋಠಾಗಿತ್ತು. ಇದರಲ್ಲಿ ಹಂಚು ಛಾವಣಿಯ ಉಪ್ಪರಿಗೆ ತಕ್ತ್ಪೋಶ ಕಟ್ಟೋಣ ಅಂಗಡಿ ವಗೈರೆ ಇರುತ್ತದೆ. ಇದು ರೈಲ್ವೆ ಸ್ಟೇಶನಿಗೂ ಆಸ್ಪತ್ರೆಗೂ, ಕಾಲೇಜುಗಳಿಗೂ, ಕೋರ್ಟುಗಳಿಗೂ ಬಹಳ ಸಮೀಪವಿದ್ದು ಎಲ್ಲಾ ವ್ಯಾಪಾರಕ್ಕೂ ಮೋಟರು ಕಂಪೆನಿಗಳಿಗೂ ಕೇಂದ್ರಸ್ಥಾನವಾಗಿರುವುದು. ಇದರ ಪೂರಾ ಹಕ್ಕು ಇದೆ.

ಲಾಟು ನಂಬ್ರ 25 ಮೂಲಗೇಣಿ ಕೃತದ ಹಕ್ಕು. ಇದು ಮಂಗಳೂರು ಶಹರು ಸೋಡಿಗೆ ಹೋಗುವ ಮಾರ್ಗದ ಬದಿಯಲ್ಲಿರುತ್ತದೆ. ಇದು ವಾಸ್ತವ್ಯದ ಕಟ್ಟೋಣ ಕಟ್ಟಲಿಕ್ಕೆ ಯೋಗ್ಯವಾದ ನೀರಿನಾಶ್ರಯ ವಿರುವ ಒಳ್ಳೇ ಆರೋಗ್ಯ ಸ್ಥಳವಾಗಿದೆ. ಇದಕ್ಕೆ ರಾಜಮಾರ್ಗದಿಂದ 10 ಫೀಟು ಅಗಲದ ಹೆದ್ದಾರಿ ಇದೆ.

ಲಾಟು ನಂಬ್ರ 24 ಮೂಲಗೇಣಿ ಕೃತದ ಹಕ್ಕು. ಇದು ಒಳ್ಳೇ ಸೋಟವಿರುವ ಸ್ಥಳವಾಗಿದ್ದು ಒಂದು ಎಕ್ರೆ ಖಾಲಿ ಸ್ಥಳ ಸೇರಿಯುದೆ.

ಇವುಗಳ ಪೈಕಿ ಲಾಟು ನಂಬ್ರ 1 ಮತ್ತು 2ರ ಬಾಬತು ನಮಗೆ ಮೂಲಗೇಣಿ ಬರುವಂಥಾದಿದ್ದು ಮೂಲಿ ಹಕ್ಕು ಮಾತ್ರ ಮತ್ತು ಲಾಟು ನಂಬ್ರ 4ರಿಂದ 22ರ ವರೆಗಿನದು ಕೂಡ ಅದೇ ರೀತಿ ಹೆಚ್ಚಿನ ಅಂಶ ಮೂಲಿ ಹಕ್ಕು ಮಾತ್ರ ಆಗಿರುತ್ತದೆ.

ಭಾರತ ಸೇವಾಸಮಿತಿ ಕಚೇರಿ, ಕೊಡಿಯಾಲಬೈಲು ತಾ. 7-4-'28 } ಅ. ಬೋಜರಾಯ, ಕಾರ್ಯದರ್ಶಿ.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಏಜಂಟ್ರಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28 ಮಂಗಳೂರು.

ಕಾರ್ಕಳ ಚತುರ್ಮುಖ ಬಸದಿಯ ಪಶ್ಚಿಮ ದ್ವಾರದಲ್ಲಿ ಪ್ರತಿಷ್ಠಿಸಿದ ಶಿಲಾಶಾಸನದ ನಕಲು.

ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನ ಯಾತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ ೧ ॥ ಆ ಚಂದ್ರಾರ್ಕ ಸ್ಥಿರಂ ಭೂಯಾದಾಯು ಶ್ರೀ ಜಯ ಸಂಪದಃ ॥ ಭೈರವೇಂದ್ರ ಮಹಾಕಾಂತ ಶ್ರೀ ಜಿನೇಂದ್ರ ಪ್ರಸಾದತಃ ॥ ಭದ್ರಮಸ್ತು ॥ ತೀರ್ಥಕೃಃ ಸುಖಮಕ್ಷಯಂ [illegible] ಪಾರ್ಶ್ವನಾಥೋ ಬಲಂ । ಕೀರ್ತಿಂ ನೇಮಿಜಿನಃ ಸುವೀರ ಜಿನಪ [illegible] ಕ್ಷಾಯಂ ಶ್ರಿಯಂ ದೋರ್ಬಲಿಃ ॥ ಕಲ್ಯಾಣಂ ವರಮಲ್ಲಿ ಸುವ್ರತ ಜಿನೌ [illegible] ಪದ್ಮಾವತೀ [illegible] ಚಂದ್ರಾರ್ಕ ಮಾಭಾಗದಾಸ್ತು ಸುಚಿರಂ ॥ ಶ್ರೀ [illegible] ॥ ಶ್ರೀಮತ್ಸಿ [illegible] ಗಣಾವಿಖ್ಯಾತೋ ಪನಸೋಗಾವಳೀಶ್ವರಃ । [illegible] ಕೀರ್ತ್ಯಾರ್ಜ್ಯ [illegible] ॥ ಶ್ರೀಮತ್ಕ್ಷೀರ [illegible] ಮ್ರುಶಾಂಬುಧಿ ವಿಧುಃ ಶ್ರೀ ಜಿನಪತ್ಪಾದ್ಯಯಃ ಶ್ರೀಮದ್ಭೈರವ ರಾಜ ತುಂಗ ಭಗಿನೀ ಶ್ರೀ ಗೋಮಟಾಂಬಾ [illegible] ॥ ಶ್ರೀ ಪಾಂಡ್ಯೇಗ ಸುದೇಂದ್ರ ಪ್ರಭುಃ । ಶ್ರೀ [illegible] ಜದ ಪಾನ್ನಿವಾರ್ಗಸ್ಯ [illegible] । ಶ್ರೀ [illegible] ಜೃಶ್ರೀ ವಿಗಲಿತ ನಾಗಾಳ್ದ [illegible] ಸರ್ವ್ವ [illegible] ಹೃಕ್ರಸಿತ [illegible] ಸೌಮ್ಯವಾರ [illegible] ಚಿರತರಂ ಶ್ರೀ ಭೈರವೇಂದ್ರ [illegible] ಜಿನಪಾಃ ಧಾಂತು ಪ್ರತಿಷ್ಠಾಪಿತಾಃ ॥

ಸ್ವಸ್ತಿ ಶ್ರೀ ಶಾಲಿವಾಹನ ಶಕ [illegible] ವ್ಯಯ ಸಂವತ್ಸರದ ಚೈತ್ರ ಶುದ್ಧ ೬ ಬುಧವಾರ ಮೃಗಶಿರಾ ನಕ್ಷತ್ರ ವೃಷಭ ಲಗ್ನದಲ್ಲು [illegible] ಚಕ್ರವರ್ತಿ [illegible] ಗಂಡ [illegible] ರಾಧೀಶ್ವರ ಮಹಾಶೂರ [illegible] ರಾಯ ಮಸ್ತಕ ಶೂಲ ಷಡ್ದರ್ಶನ ಸ್ಥಾಪನಾಚಾರ್ಯ [illegible] ಶಿಖಾಮಣಿ ಕಾಶ್ಯಪಗೋತ್ರ ಪವಿತ್ರ [illegible] ಪದ್ಮಾವತೀ [illegible] ಪ್ರಸಾದ [illegible] ಗಣಾಲಂಕೃತ ಜಿನ ಗಂಧೋದಕ ಪವಿತ್ರೀಕೃತೋತ್ತಮಾಂಗ [illegible] ನಾಲ್ಕು ಮಂಡಲೀಕರ ಗಂಡ [illegible] ಕುಮಾರ ಭೈರರಸ ಒಡೆಯರ [illegible] ವಂಶ ಸುಧಾಂಬುಧಿ ಪೂರ್ಣಚಂದ್ರ ಶ್ರೀಮದ್ವೀರ ನರಸಿಂಹ ವಂಗ ನರೇಂದ್ರ ಶ್ರೀ ಗುಮಟಾಂಬ ಕುಲದೀಪಕ [illegible] ಅರಿರಾಯರ ಗಂಡರಬಾವಣಿ ಶ್ರೀಮದಿಮ್ಮಡಿ ಭೈರವ ಒಡೆಯರು ತಮಗೆ ಅಭ್ಯುದಯ ನಿಶ್ರೇಯಃ ಸಕಲ [illegible] ಸಂಪ್ರಾಪ್ತಿ ನಿಮಿತ್ತವಾಗಿ ಕಾರ್ಕಳದ ಪಾಂಡ್ಯ ನಗರಿಯಲ್ಲಿ ಶ್ರೀ ಗುಮಟೇಶ್ವರನ ಸನ್ನಿಧಾನದಲ್ಲಿ ಕೈಲಾಸಗಿರಿ ಸನ್ನಿಭ [illegible] ಬೆಟ್ಟದಲ್ಲು ॥ ಶ್ರೀ ಶಾಂತಾಕುಲವೆಸ್ಯ [illegible] ಪ್ರಮೋದಾಸುರ ಭೂಕಾಂತಾರತಿ ಪದ್ಮಸದ್ಮ [illegible] ಸ್ಪದಂ ಕಿಂಪುನಃ ಸ್ವಾತ್ಮಾರೋಜ್ವಲ ಸನ್ನಿಧುದ್ಯಯುಮಹೀ ಶ್ರೀ ಭಾರತಿ ರಂಗಭೂಃ ಸ್ವ ಶ್ರೀ ಮುಕ್ತಿ ರಮಾ ಸ್ವಯಂವರ ಗೃಹಂ ಶ್ರೀ ಜೈನಗೇಹಂ ವ್ಯಧೆ ॥ ಇಂತಪ್ಪ ಸಕಲ ಜನಾನಂದ ಮಂದಿರವಾದ ಸರ್ವತೋಭದ್ರ ಚತುರ್ಮುಖ ರತ್ನತ್ರಯ ರೂಪ ತ್ರಿಭುವನ ತಿಲಕ ಜಿನಚೈತ್ಯಾಲಯವನ್ನು ಕ್ಷುದ್ರದ ಗೋವರ್ಧಿಕಳಂಕ ಮಲ್ಲ ಭಟ್ಟರ ಭಾವ ಪರನಾರಿ ಸಹೋದರ ನುಡಿದು ಬಾಹೆಗೆ ತಪ್ಪುವರಾಯರ ಗಂಡ ಸುವರ್ಣ ಕಲಶ ಸ್ಥಾಪನಾಚಾರ್ಯರಾದ ಕಾರಣ ಧರ್ಮಸಾಮ್ರಾಜ್ಯ ನಾಯಕರಾಗಿ ನಿಜಪುಣ್ಯಾನುಬಂಧಿ ಪುಣ್ಯದ ಪ್ರೇರಣೆಯಿಂದ ನಮಗುತ್ತಮ ಜಿನಭವನ ಪ್ರೇಕ್ಷಕರಾದ ಸಕಲಶೀಲಗುಣಸಂಪನ್ನರಾದ ಚತುಸ್ಸಂಗಕ್ಕೂ ಸಾಕ್ಷಾನ್ಮೋಕ್ಷ ಲಕ್ಷ್ಮಿ ಸ್ವಯಂವರ ಸಾಮ್ಯೋಪಮವಾಗಿ ನಿರ್ಮ್ಮಿಸಿ ಅನಂತ ಸುಖದ ಸಂಪ್ರಾಪ್ತಿ ನಿಮಿತ್ತವಾಗಿ ಆ ನಾಲ್ಕು ದಿಕ್ಕಿನಲ್ಲೂ ಅರ, ಮಲ್ಲಿ, ಮುನಿಸುವ್ರತ ಪ್ರತಿಮೆಗಳನ್ನು ಸ್ಥಾಪಿಸಿ, ಆ ಪಶ್ಚಿಮ ದಿಗ್ಭಾಗದಲ್ಲಿ ಚತುರ್ವಿಂಶತಿ ತೀರ್ಥಕರ ಪ್ರತಿಮೆಗಳನ್ನು ಉಭಯ ಮಂಟಪದ ಗುಂಡಗಳೊಳಗೆ ಜಿನ ಬಿಂಬಗಳನ್ನು ಎಡ ಬಲದಲ್ಲಿ ಬ್ರಹ್ಮ ಪದ್ಮಾವತೀ ಸಹಿತವಾಗಿ ಸಂಸ್ಥಾಪಿಸಿ, ಸವಿಧಾನದಿಂ ಪ್ರತಿಷ್ಠಾಪಿಸಿ ಆ ನಾಲ್ಕು ದಿಕ್ಕಿನಲ್ಲು ಹದಿನಾಲ್ಕು ವಕ್ಕಲು ಸ್ಥಾನಿಕರು ನಡಸುವ ಅಭಿಷೇಕ, ಪೂಜೆ ಮುಂತಾದವಕ್ಕೂ ಮೇಲೆ ನಡವ ಅಂಗರಂಗ ವೈಭವಾದಿ ಕಂಗಳಿಂಗು ಆ ಭೈರರಸ ಒಡೆಯರು ನಿಜ ಸಂತೋಷದಿಂದ ರಾಜ್ಯವನಾಳುವಾಗ ಆ ತ್ರಿಭುವನತಿಲಕ ಜಿನ ಚೈತ್ಯಾಲಯದಲ್ಲಿ ಆ ಪ್ರತಿಷ್ಠಾ ಸಮಯದ ಪುಣ್ಯಕಾಲದಲ್ಲಿ ತಮಗೆ ಪುಣ್ಯಾರ್ಥವಾಗಿ ಮೂಡು ಮುಳ್ಕಡುಪಿನ ಹೊಳೆ, ತೆಂಕ ಎಣ್ಣೆ ಹೊಳೆ, ಪಡುವ ಪೊಳಳಿಯದ ಹೊಳೆ, ಬಡಗ ಅಗುಳ್ಗೆ ದಿಲಿಮೆಹೊಳೆ, ಈ ನಾಲ್ಕು ಹೊಳೆಗಳಗೂ ಮೇರೆಯಾಗ, [illegible] ನಿಧಿ ನಿಕ್ಷೇಪ ಅಕ್ಷಿಣಿ ಉಗಾಮ್ಯ ಜಲ ಪಾಷಾಣ [illegible] ಅಷ್ಟ ಭೋಗಂಗಳಿಗೊಳಗಾದ [illegible] ಅವರೊಳಗೆ ಅಕ್ಕಿ ಮುಡಿ ೭೦೦ [illegible] ಗ ೫೩ಲನ್ನೂ ಧಾರಾಪೂರ್ವಕವಾಗಿ ಆ ಚಂದ್ರಾರ್ಕಸ್ಥಾಯಿಯಪ್ಪಂತೆ ದೇವರ್ಗೆ ಮಾಡಿಕೊಟ್ಟ ಧರ್ಮಕ್ಷೇತ್ರದ ವಿವರ. ಆ ಕ್ಷೇತ್ರದ ಚತುಸ್ಸೀಮೆಯೊಳಗುಳ್ಳ [illegible] ಮುಂತಾದವರಲ್ಲಿ ಸಲ್ಲುವ ಗೇಣಿ [illegible] ಅಕ್ಕಿ, ಜೋಳಕ್ಕೆ [illegible] ಸಹ ಸಲ್ಲುವ ಅಕ್ಕಿ ಹಾನೆ [illegible] ರಂಜಾಳದಲ್ಲಿರುವ ಕಲ್ಯಾಣಕರ್ಣಕೆಯಾಕೆ [illegible] ವಂಹಕ್ಕೂ ಸಹವಾಗಿ ನಡವ ಧರ್ಮ [illegible] ಬಾಗಲಲ್ಲಿರುವ ಕಲ್ಲು ಅಕ್ಕಿ [illegible] ನೇಮೆಲ್ಲು ಚರು ಹಾನೆ [illegible] ತುಪ್ಪ, ಕಲಸು [illegible] ಭಕ್ಷ್ಯಕ್ಕೆ ಅರಹಾನೆ [illegible] ಆ ಲೆಕ್ಕದಲ್ಲಿ [illegible] ಪಂಚಾಮೃತ ಅಭಿಷೇಕಕ್ಕೆ [illegible] ಸಿದ್ಧ ಚಕ್ರದ [illegible] ಬೈಗಿನ ಹಾಲ [illegible] ಲ ಅಷ್ಟ [illegible] ಅಂತು [illegible]

[illegible] ಇಂಡಿಯಾ ಅಫೀಸ್

[illegible] ಆಫೀಸಿನಲ್ಲಿ ಸ್ಥಳ [illegible] ಆಫೀಸಿನ [illegible] ಅನುಮತಿಯು [illegible] ಆಫೀಸು [illegible]

[illegible] ಎಂಬ [illegible] ಆಳತೆಯು [illegible] ೧೩೦ [illegible] ಎಂದು [illegible] ವಾಗಿದೆ.

[illegible] ಮುಟ್ಟಿಗೆ [illegible] ಅನು [illegible] ಅವರ ಸುತ್ತ [illegible] ರೀತಿಯಲ್ಲಿಯೇ [illegible] ಮಾಡ [illegible] ಸಾಧ್ಯ ವಾಗಲಿಲ್ಲ.

[illegible] ಕೋಣೆಗಳೂ [illegible] ಕೆಳಗಡೆಯ ಕೋಲಿ [illegible] ವಸ್ತುಗಳನ್ನಿಡುವ ವಸ್ತು ಪ್ರದರ್ಶನಶಾಲೆಯು ಇರುವುದು. [illegible] ಮೇಲೆ ಎರಡು ಮಾಳಿಗೆಗಳು ಇರುವವು. ಮೇಲಿನ ಮಾಳಿಗೆಯಲ್ಲಿ ಗಲರಿಯು ಇರುವುದು. ವಸ್ತುಪ್ರದರ್ಶನದ ಕೋಲಿನ ಎರಡೂ ಕಡೆಗಳಲ್ಲಿ ಇಂಡಿಯಾದ ಅಂಗಡಿಗಳಲ್ಲಿ ಸಾಮಾನುಗಳನ್ನು ಇಡುವ ರೀತಿಯಲ್ಲಿ ವಸ್ತುಗಳನ್ನು ಇಡಲಾಗುವುದು. ಕಟ್ಟೋಣದೊಳಗೆ ಪ್ರವೇಶಿಸಿದೊಡನೆ ಇರುವ ಅಷ್ಟಪಟ್ಟೆ ಯಾಕೃತಿಯಲ್ಲಿರುವ ಹಾಲಿನಲ್ಲಿ ಎರಡು ಬದಿಗಳಲ್ಲಿರುವ ದೊಡ್ಡ ಏಣಿಗಳಿಂದ ಮೇಲಿನ ಗೆಲರಿಗೆ ಹೋಗಲು ದಾರಿ ಇರುವುದು. ಈ ಗೆಲರಿಯಿಂದ ಏಣಿ ಹತ್ತಿ ಮೇಲಕ್ಕೆ ಹೋದರೆ ಒಂದು ವಿಶಾಲವಾದ ಕೋಣೆಯು ಇರುವುದು. ಇದರಲ್ಲಿ ಒಂದು ಸಾರ್ವಜನಿಕ ಪುಸ್ತಕಭಂಡಾರವು ಇರುವುದು. ಕಪಾಟುಗಳನ್ನು ಬದಿಗಳಲ್ಲಿಡುವುದರಿಂದ ಮಧ್ಯದಲ್ಲಿರುವ ಸ್ಥಳವನ್ನು ಸಭೆಗಳಿಗಾಗಿ ಉಪಯೋಗಿಸಲ್ಪಡುವುದು.

ಹೀಗೆ ಸುತ್ತಲೂ ದಳಗಳಿರುವ ಮಾಳಿಗೆ ವಸ್ತು ಪ್ರದರ್ಶನ ಮಂದಿರ, ಅಷ್ಟಕೋಣಾಕೃತಿಯ ಮಂದಿರ, ಪುಸ್ತಕ ಭಂಡಾರವಿರುವ ಕೋಣೆ ಇವೆಲ್ಲವೂ ಇಂಡಿಯದಲ್ಲಿರುವ ಕಟ್ಟಡಗಳಂತೆಯೇ ಇರುವವು.

ಇವುಗಳನ್ನು ಆಗ್ರಾ ಮತ್ತು ಡಿಲ್ಲಿಯಲ್ಲಿ ಸಿಕ್ಕುವ ರೀತಿಯ ಕೆಂಪು ಕಲ್ಲಿನಿಂದಲೇ ಕಟ್ಟುವರು. ಈ ಕಲ್ಲುಗಳ ಮೇಲೆ ನಾನಾ ತರದ ಇಂಡಿಯದ ಚಿತ್ರಗಳನ್ನು ಇಂಡಿಯದ ಶಿಲ್ಪಿಗಳಿಂದಲೇ ಕೊರೆದು ಮಾಡಿಸಲ್ಪಡುವವು. ಇನ್ನು ಡೋಮುಗಳಲ್ಲಿಯೂ ಮಾಳಿಗೆಯ ಮೆತ್ತಿಗೆಯ ಕೆಳಭಾಗದಲ್ಲಿಯೂ ಇಂಡಿಯದ ಚಿತ್ರಕಾರರಿಂದಲೇ ಇಂಡಿಯದ ಚಿತ್ರಗಳು ಬಿಡಿಸಲ್ಪಡುವವು. ಮರಗಳು ಬೇಕಾದಲ್ಲಿ ಇಂಡಿಯದಲ್ಲಿ ಸಿಕ್ಕುವ ನಾನಾ ತರದ ಚಿತ್ರಗಳನ್ನು ಬಿಡಿಸಲಿಕ್ಕೆ ಯೋಗ್ಯವಾದ ಮರಗಳನ್ನೇ ಉಪಯೋಗಿಸುವರು. ಕಿಟಿಕಿ ಬಾಗಲುಗಳಿಗೂ ಇಂಡಿಯದ ಮರಗಳನ್ನೇ ಉಪಯೋಗಿಸುವರು.

ಕೆಳಗಡೆಯಲ್ಲಿ ಬದಿಗಳಲ್ಲಿರುವ ಕೋಣೆಗಳಲ್ಲಿ ಇಂಡಿಯದಲ್ಲಿ ಅಚ್ಚುಹಾಕಿದ ಪುಸ್ತಕಗಳು ಮಾರಲ್ಪಡುವವು. ಇನ್ನೊಂದರಲ್ಲಿ ಇಂಡಿಯದ ರೈಲುವೇ ಆಫೀಸು ಇರುವುದು. ಇಲ್ಲಿ ಪ್ರಯಾಣಿಕರಿಗೆ ಬೇಕಾದ ಎಲ್ಲಾ ಅನುಭವವು ಕೊಡಲ್ಪಡುವುದು. ಪಶ್ಚಿಮ ಭಾಗದಲ್ಲಿ ಸಂಬಳ ಮತ್ತು ಪೆನ್‌ಶನ್ ಕೊಡುವ ಇಲಾಖೆಯು ಇರುವುದು. ಎರಡನೆ ಮಾಳಿಗೆಯಲ್ಲಿ ಹೈ ಕಮಿಶನರ್ ಇವರ ಖಾಸಗಿ ಇಲಾಖೆ, ಒಫಿಶಿಯಲ್ ಸೆಕ್ರಿಟರಿ, ಟ್ರೇಡ್ ಕಮಿಶನರ್, ಇನ್ನು ಇತರ ಮುಖ್ಯ ಉದ್ಯೋಗಸ್ಥರ ಆಫೀಸುಗಳು ಇರುವವು. ಬರುವ ವರುಷದೊಳಗೆ ಕಟ್ಟೋಣವು ತಯಾರಾಗುವುದು.

ದಕ್ಷಿಣಕನ್ನಡ ಜಿಲ್ಲೆಯ ಬೆಲ್ಲದ ಕೈಗಾರಿಕೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಮುಖ್ಯವಾಗಿ ಸಮುದ್ರ ಕರಾವಳಿಯಲ್ಲಿರುವ ನದಿಗಳ ದಡಗಳಲ್ಲಿಯೂ ಹೊಳೆಗಳ ದ್ವಾರಗಳಲ್ಲಿರುವ ಕುದುರುಗಳಲ್ಲಿಯೂ ಕಬ್ಬನ್ನು ಬೆಳಸುತ್ತಾರೆ. ಈ ಕೆಲಸವನ್ನು ದೊಡ್ಡ ಕಾರ್ಖಾನೆಗಳ ರೀತಿಯಲ್ಲಿ ಮಾಡುವುದಿಲ್ಲ. ಬಡ ಗೇಣಿ ವಕ್ಕಲುಗಳು ತಮ್ಮ ಸ್ವಂತ ಆಲೋಚನೆಯಿಂದಲೇ ಹಳೇ ರೀತಿಯಲ್ಲಿಯೇ ಈ ಕಬ್ಬಿನಿಂದ ಬೆಲ್ಲವನ್ನು ತಯಾರಿಸುತ್ತಾರೆ. ಅವರು ಸಣ್ಣ ಸಣ್ಣ ಗದ್ದೆಗಳಲ್ಲಿ ಈ ಕಬ್ಬನ್ನು ಬೆಳಸಿ ಸ್ವಲ್ಪ ಸ್ವಲ್ಪ ಬೆಲ್ಲವನ್ನು ತಯಾರಿಸುವುದರಿಂದ ಅವರಿಗೆ ಇದರಿಂದ ವಿಶೇಷ ತರದ ಲಾಭವೇನೂ ಸಿಕ್ಕುವುದಿಲ್ಲ. ಅವರಿಗೆ ಮನೆ ಖರ್ಚಿಗೆ ಬೇಕಾದ ಬೆಲ್ಲವೂ, ಸ್ವಲ್ಪ ಬೆಲ್ಲ ಮಾರಿ ಸ್ವಲ್ಪ ಮುನಾಫೆಯೂ ಸಿಕ್ಕುತ್ತದೆ. ಆದರೆ ಅವರ ಬಡತನವು ಹೋಗುವುದಿಲ್ಲ.

ಕಬ್ಬಿನ ಬೆಳೆ. ಈ ಬಡ ಗೇಣಿ ವಕ್ಕಲುಗಳು ಬೆಳೆಸುವ ಕಬ್ಬು ಚೆನ್ನಾಗಿ ಪುಷ್ಟಿಯಾಗಿ ಬೆಳೆಯುವುದಿಲ್ಲ. ಯಾಕಂದರೆ ಅದಕ್ಕೆ ಬೇಕಾಗುವ ಯೋಗ್ಯವಾದ ಗೊಬ್ಬರವನ್ನು ಹಾಕಲು ಅವರ ಕೈಯಲ್ಲಿ ಹಣವಿರುವದಿಲ್ಲ. ಅವರು ಕಬ್ಬು ಸರಿಯಾಗಿ ಬೆಳೆಯುವ ಮೊದಲೇ ಅದನ್ನು ಕೊಯಿದು ತೆಗಿಯುವುದರಿಂದ ಅದರಲ್ಲಿ ಹೆಚ್ಚು ಸಿಹಿ ಪದಾರ್ಥವು ಉಂಟಾಗುವುದಿಲ್ಲ. ಚೆನ್ನಾಗಿ ಬೆಳೆದ ಕಬ್ಬನ್ನು ಬೀಜಕ್ಕಾಗಿ ಬಿಟ್ಟರೆ ನಷ್ಟವಾಗುತ್ತದೆಂದು ಒಳ್ಳೇ ಬೆಳೆದ ಕಬ್ಬನ್ನು ಬೆಲ್ಲ ಮಾಡಲಿಕ್ಕೆ ಉಪಯೋಗಿಸುವರು. ಇದರಿಂದ ಕಬ್ಬು ವರುಷ ಹೋಗುವಷ್ಟಕೆ ಸಪೂರವಾಗುತ್ತಾ ಬರುತ್ತಿದೆ. ಅದರಿಂದ ಸಿಕ್ಕುವ ಸಿಹಿ ಪದಾರ್ಥವೂ ಕಡಿಮೆಯಾಗುತ್ತದೆ. ಇದರಿಂದ ಸಿಕ್ಕುವ ಮುನಾಫೆಯೂ ಕಡಿಮೆಯಾಗಿ ಕಡೆಗೆ ಕಬ್ಬು ಬೆಳಸುವುದನ್ನು ಬೆಲ್ಲ ಮಾಡುವುದನ್ನು ಬಿಟ್ಟುಬಿಡುತ್ತಾರೆ.

ಬೆಲ್ಲ ತಯಾರಿಸುವುದು. ಬೆಲ್ಲವನ್ನು ಮರದ ಗಾಣಗಳಲ್ಲಿ ಹಾಕಿ ಅದರ ರಸವನ್ನು ತೆಗಿಯುತ್ತಾರೆ. ಇದರಿಂದ ರಸವು ಪೂರಾ ಬಾರದೆ ನಷ್ಟವಾಗುತ್ತದೆ. ಈಗ ಕೆಲವು ಕಡೆಗಳಲ್ಲಿ ಕಬ್ಬಿಣದ ಗಾಣಗಳನ್ನು ಉಪಯೋಗಿಸಲು ಆರಂಭಿಸಿರುವರು. ಗಾಣವನ್ನು ತಿರುಗಿಸಲಿಕ್ಕೆ ಎತ್ತುಗಳನ್ನಾಗಲೀ ಕೋಣಗಳನ್ನಾಗಲೀ ಉಪಯೋಗಿಸುವರು. ಇವುಗಳು ತಿರುಗುವಾಗ ಹಾಕಿದ ಸಗಣಿ ಮುಂತಾದ್ದು ಸ್ವಲ್ಪ ಮಟ್ಟಿಗೆ ಈ ರಸದಲ್ಲಿ ಬೀಳುತ್ತದೆ. ಅದು ಬೀಳದಂತೆ ಮಾಡುವುದಕ್ಕೆ ಯಾವ ಅನುಕೂಲತೆಯನ್ನೂ ಮಾಡುವುದಿಲ್ಲ. ಅವರೊಡನೆ ಕೇಳಿದರೆ ಆ ರಸಕ್ಕೆ ಸುಣ್ಣ ಬೆರಸಿದೊಡನೆ ಯಾವ ತರದ ಕಲ್ಮಷವೂ ಅದರಲ್ಲಿ ನಿಲ್ಲುವುದಿಲ್ಲ, ಅದು ಬಿಸಿಯಾಗಿ ಮೇಲಕ್ಕೆ ಬರುತ್ತದೆ, ಅದನ್ನು ತೆಗೆದು ಬಿಸಾಡುತ್ತದೆ ಎಂದು ಹೇಳುವರು. ಬೆಲ್ಲದಲ್ಲಿ ಅವಗುಣ ಬಂದು ಬೆಲ್ಲ ಹಾಳಾಗಲಿಕ್ಕೆ ಇದೊಂದು ಕಾರಣವಾಗಿರಬಹುದು. ಎಳತಾದ ಕಬ್ಬನ್ನು ಬೆಲ್ಲ ಮಾಡುವುದರಿಂದಲೂ ಬೆಲ್ಲಕ್ಕೆ ನೀರಿನ ಪಶೆ ಬರಲಿಕ್ಕೆ ಕಾರಣವಿರಲೂ ಬಹುದು. ಗಾಟಿ ಬೆಲ್ಲವು ಅಷ್ಟು ಬೇಗನೇ ಹಾಳಾಗುವುದಿಲ್ಲ. ಆದರೆ ಈ ಜಿಲ್ಲೆಯಲ್ಲಿ ತಯಾರಿಸಿದ ಊರ ಬೆಲ್ಲವು ಬೇಗನೆ ಪಶೆ ಬಂದು ಹಾಳಾಗುತ್ತದೆ.

ಸಕೇಶ.

ಸ್ಫುಟ ವಿ ಚಾ ರ ಗ ಳು .

ಯುದ್ಧಗಳು ನಡೆಯದಂತೆ ಪ್ರಯತ್ನ.

ಯುನೈಟೆಡ್ ಸ್ಟೇಟ್ಸಿಗೆ ತನ್ನದೊಂದು ಈ ಪ್ರಯತ್ನವಾದರೂ ವಿಜಯಿಯಾಗಿ ಮಾಡಬೇಕೆಂಬಾಸೆ ಬಲವತ್ತರವಾಗಿ ಹೋಗಿಯದೆ. ಈ ಯುದ್ಧಕ್ಕೆ ತಡೆ ಹಾಕುವೆವೆಂದು ಇವರು ಮಾಡುವ ಪ್ರಯತ್ನಗಳು ಯಾವ ಪರಿಣಾಮ ಹೊಂದುವುವೆಂದು ಹೇಳಲಾಗುವುದಿಲ್ಲ. ಎಲ್ಲಿ ಹೋದರೂ ಮನುಷ್ಯನ ಮಾನಸಿಕತೆಯೆಂದರೆ ಒಂದೇ. ಆದುದರಿಂದ ಈ ಹೊಸ ಒಪ್ಪಂದವನ್ನು ಯಾವ ರೀತಿಯಲ್ಲಿ ಈ ಜನಾಂಗಗಳು ಮಾಡಿಕೊಂಡಾರೆಂದೂ ಹೇಳಲಾಗುವುದಿಲ್ಲ. ಅಲ್ಲದೆ ಲೋಕಶಾಂತತೆಯ ರಕ್ಷಣೆಗಾಗಿಯೆಂದು ಅಮೇರಿಕದ ಪ್ರೋತ್ಸಾಹದಿಂದಲೇ ಸ್ಥಾಪಿಸಲ್ಪಟ್ಟ ಲೀಗ್ ಒಫ್ ನೇಶನ್ಸ ಮೂಲಕ ಅಮೇರಿಕವು ತನ್ನ ಈ ಉದಾರ ಉದ್ದೇಶಗಳನ್ನು ಸ್ಥಾಪಿಸಲು ಯತ್ನಿಸದೆ, ಆರು ಪ್ರಬಲ ರಾಜ್ಯಗಳನ್ನು ಮಾತ್ರ ಹತ್ತಿರ ಕರಕೊಂಡು ಲೋಕಶಾಂತತೆಯ ಬಗ್ಗೆ ಮಹತ್ತಾಯದ ಶಾಸನವನ್ನು ತಯಾರಿಸಿ ನಿರ್ಬಲ ಜನಾಂಗಗಳ ಮೇಲೆ ಹೊರಿಸಲು ಪ್ರಯತ್ನಿಸುವುದನ್ನು ನೋಡಿದರೆ ಅಮೇರಿಕದ ಉದ್ದೇಶದ ವಿಷಯದಲ್ಲಿ ಸದಭಿಪ್ರಾಯಗಳನ್ನು ಪಡೆಯಲಾಗುವುದಿಲ್ಲ. ಸಣ್ಣ ಜನಾಂಗಗಳನ್ನು ಕೂಡಿಕೊಂಡಿದ್ದರೂ ಲೀಗ್ ಒಫ್ ನೇಶನ್ಸ ಸಂಘದಲ್ಲಿ ಪ್ರಬಲ ರಾಷ್ಟ್ರಗಳ ಸ್ವಾರ್ಥವೇ ಹೆಚ್ಚಾಗಿ ನಿರ್ಬಲ ರಾಷ್ಟ್ರಗಳ ತಿರಸ್ಕಾರವು ತೋರಿಬರುತ್ತಿದೆ. ಅನ್ನುವಾಗ ಅಮೇರಿಕದ ಈ ಸೂಚನೆಯು ಮಾನಿಸಲ್ಪಟ್ಟರೆ ಸಮಗ್ರ ಲೋಕವನ್ನು ಪ್ರಬಲ ರಾಷ್ಟ್ರಗಳ ಸ್ವೇಚ್ಛಾಚಾರಕ್ಕೆ ಬಲಿಯಿತ್ತಂತಾಗುತ್ತದೆ. ಇದು ಶಾಂತತೆಯೊ ಅಥವಾ ದಬ್ಬಾಳಿಕೆಯೊ ಎಂದು ವಿಚಾರಿಸಿದರೆ ತಿಳಿಯುವುದು. ಆದರೆ ಲೋಕದ ಸೌಭಾಗ್ಯದಿಂದ, ಈ ಜನಾಂಗಳೊಳಗಿನ ವ್ಯಾಪಾರೀ ಮತ್ತು ರಾಜಕೀಯ ಮೇಲಾಟಗಳೂ, ಆ ಕಾರಣದಿಂದ ಇವರೊಳಗೆ ಉಂಟಾಗುವ ಮನೋಕ್ಲೇಶಗಳೂ ಲೋಕವನ್ನು ಈ ತರದ ದಬ್ಬಾಳಿಕೆಯಿಂದ ಕಾಪಾಡುತ್ತಿವೆ. ಸಾಮ್ರಾಜ್ಯವಾದದ ಮಹದಭಿಲಾಷಿಗಳಾದ ಈ ಪ್ರಬಲ ರಾಷ್ಟ್ರಗಳು ಈ ರೀತಿಯಲ್ಲಿ ಒಟ್ಟುಕೂಡಿದರೆ ಅಧೀನ ಜನಾಂಗಗಳು ಸ್ವಾತಂತ್ರ್ಯದ ಆಶೆಯನ್ನೇ ತೊರೆಯಬೇಕಾಗುವುದು. ಈಗಲೇ ಈ ಪ್ರಬಲ ಜನಾಂಗಗಳು ಅಧೀನ ಜನಾಂಗಗಳ ತಿರಸ್ಕಾರದಲ್ಲಿ ಕಡಿಮೆಯಾಗಿಲ್ಲ. ಅದರಲ್ಲೂ ಇಂತಹ ಒಪ್ಪಂದಗಳಿಂದ ಒಬ್ಬರೊಡನೊಬ್ಬರು ಬಂಧಿಸಲ್ಪಟ್ಟರೆ ಮತ್ತೆ ಹೇಳಬೇಕೆಂದಿಲ್ಲ.

ಹಿಂದೀ ರಾಜಕಾರಣದಲ್ಲಿ ಕ್ರಿಸ್ತೀಯರ ಕರ್ತವ್ಯ.

ಕ್ರಿಸ್ತೀಯರೆಲ್ಲರೂ ಪರದೇಶೀಯರಿಂದ ಪರಮತಾವಲಂಬಿಗಳಾದುದರಿಂದ ಸ್ವಭಾವತಃ ಅವರಲ್ಲಿ ಸ್ವದೇಶಾಭಿಮಾನವು ಕಡಿಮೆಯಾಗಿದ್ದಿತು. ಆದರೆ ಇತ್ತೀಚೆಗೆ ಕೆಲವು ಕ್ರಿಸ್ತೀಯ ಮುಖಂಡರು ರಾಷ್ಟ್ರೀಯ ಕ್ಷೇತ್ರದಲ್ಲಿ ಕಾಲಿಟ್ಟುದರಿಂದ ಕ್ರಿಸ್ತೀಯರ ಬಹುಭಾಗವು ತಾವೂ ಹಿಂದೀಯರೆಂದು ಅನುಭವಮಾಡಿಕೊಳ್ಳಲು ಆರಂಭಿಸಿಯದೆ. ಆದರೆ ಇನ್ನೂ ಅಧಿಕ ಸಂಖ್ಯಾಕ ಕ್ರಿಸ್ತೀಯರು ತಮ್ಮ ಹಿತಗಳ ಬಗ್ಗೆ ಸರಕಾರವನ್ನೂ ಪರದೇಶೀಯರನ್ನೂ ನೋಡುತ್ತಿರುವರಲ್ಲದೆ, ತಾವು ಹಿಂದೀಯರು, ಪರದೇಶೀಯರು ತಮಗೇನು ಹಿತಮಾಡಿದರೂ ತಮ್ಮ ಹಿತವನ್ನೂ ಹಿಂದೀ ಹಿತವನ್ನೂ ಹೆಚ್ಚು ಹೊತ್ತು ದೂರ ಇಡಲಾಗುವುದಿಲ್ಲ. ಹಿಂದೀಯ ರಾಜಕೀಯ ಆಶಯಗಳಲ್ಲಿ ತಾವೂ ಭಾಗ ತೆಗೆದುಕೊಳ್ಳುವುದು ಅವಶ್ಯವಿದೆ ಎಂಬುದನ್ನು ತಿಳಿದುಕೊಳ್ಳುವುದಿಲ್ಲ; ಮಾತ್ರವಲ್ಲದೆ, ತಮ್ಮ ನಿತ್ಯ ವ್ಯವಹಾರಗಳ ಹಿಂದೀಯ ಆದರ್ಶಗಳನ್ನು ಅನುಕರಿಸುವ ಬದಲಿಗೆ ತಮ್ಮ ಉಪದೇಶಕರಾದ ಪಾಶ್ಚಾತ್ಯರ ಆದರ್ಶಗಳನ್ನೇ ಮುಂದಿಟ್ಟು ನಡೆಯುವರು. ಪಾಶ್ಚಾತ್ಯರು ಉಪದೇಶಿಸಿದರಾದರೂ ಕ್ರಿಸ್ತೀ ಮತದ ಸ್ಥಾಪಕನು ಪೌರ್ವಾತ್ಯನೇ ಆಗಿರುವನು. ಅವನ ನಡೆನುಡಿಗಳು ಪಾಶ್ಚಾತ್ಯರಿಗಿಂತಲೂ ಪೌರ್ವಾತ್ಯರಿಗೆ ಹತ್ತಿರವಾದವುಗಳೆಂದು ಕ್ರಿಸ್ತೀಯರು ನೆನಪಿಟ್ಟುಕೊಳ್ಳುವುದು ಒಳ್ಳೆಯದಿತ್ತು. ಮತವು ಬದಲಾದರೂ ರಾಷ್ಟ್ರೀಯತ್ವವು ಬದಲಾಗಬೇಕಿಲ್ಲ. ಆದುದರಿಂದ ಹಿಂದೂಸ್ಥಾನದ ಇಷ್ಟು ಪ್ರಮುಖವಾಗಿರುವ ಕ್ರಿಸ್ತೀ ಮತಸ್ಥರು ಹಿಂದೀಯತ್ವದ ರಾಷ್ಟ್ರೀಯತ್ವವನ್ನು ಆಚರಣೆಯಲ್ಲಿ ಅನುಕರಿಸುವರಾಗಿ ಆಶಿಸುವೆವು.

ಸ್ಯಾಮನ್ ಕಮಿಶನ್ನಿನ ಭವಿತವ್ಯ.

ಸ್ಯಾಮನ್ ಕಮಿಶನ್ನು ಬಂದು ಹೋಯಿತು. ಹಿಂದೀಯರೆಲ್ಲರೂ ಕೂಡಿ ಅದನ್ನು ಬಹಿಷ್ಕರಿಸಿದರು. ಸರಕಾರವು ಸಾಧ್ಯವಿದ್ದಷ್ಟು ಪರಿಶ್ರಮದಿಂದ ಸ್ವಾಗತವನ್ನದಕ್ಕೆ ಕೊಟ್ಟಿತು. ಸ್ಯಾಮನರು ಜನತೆಯ ಬಹಿಷ್ಕಾರವನ್ನರಿತರಾದರೂ ತೋರಿಕೆಗೆ ತಮಗೆ ಉತ್ತಮ ಸ್ವಾಗತವಿದ್ದಿತೆಂದರು. ಈಗಿನ ಮಟ್ಟಿಗೆ ಹೇಗೂ ಸ್ಯಾಮನ್ ಕಮಿಶನ್ನಿನ ಬಹಿಷ್ಕಾರ ಚಳವಳವು ವಿಜಯಿಯಾಯಿತು. ಆದರೆ ಪುನಃ ಅದು ಒಕ್ಟೋಬರಿನಲ್ಲಿ ಬಂದಾಗ ಹಿಂದೀಯರು ಹೇಗೆ ವರ್ತಿಸುವರು? ಈ ವರೆಗೆ ತೋರಿದ ಬಹಿಷ್ಕಾರವು ಆ ವರೆಗೂ ಬಾಳೀತೇ? ಸ್ಯಾಮನ್ ಕಮಿಶನಿನೊಡನೆ ಸಹಕರಿಸಬಾರದೆಂಬುದರಲ್ಲಿ ಅಭಿಪ್ರಾಯ ಭೇದವಿಲ್ಲವೆಂಬುದೇನೊ ನಿಜ. ಆದರೆ ಹಾಗೆ ಆಚರಿಸುವವರೆಷ್ಟು ಮಂದಿ? ಸರಕಾರದ ಮಾಯಾ ಪಾಶಕ್ಕೆ ಬಲಿಬೀಳಲೊಪ್ಪದವರೆಷ್ಟು ಮಂದಿ? ಕೌನ್ಸಿಲುಗಳೊಳಗೆ ಇತ್ತೀಚೆಗೆ ನಡೆದ ಕೆಲವು ಘಟನೆಗಳನ್ನು ನೋಡಿದರೆ ಈ ಬಹಿಷ್ಕಾರವು ಇನ್ನೊಂದು ಬಾರಿ ಹೀಗೆಯೇ ವಿಜಯಿಯಾಗುವುದೆಂದು ಹೇಳಲು ಧೈರ್ಯವಾಗುವುದಿಲ್ಲ. ಮದ್ರಾಸು ಕೌನ್ಸಿಲು ಒಂದು ಬಾರಿ ಬಹಿಷ್ಕಾರವನ್ನು ಮಂಜೂರು ಮಾಡಿರುವುದಾದರೂ, ಪುನಃ ಅದೇ ಠರಾವು ಬಂದರೆ ಅದು ಪುನಃ ಮಂಜೂರು ಮಾಡೀತೆಂದು ನೆನಸಲಾಗುವುದಿಲ್ಲ. ಏಕೆಂದರೆ ಆ ಮೇಲೆ ನೂತನ ಮಂತ್ರಿಮಂಡಲ ನಿರ್ಮಾಣದಲ್ಲಿ ಹಲವು ಸಭಾಸದರು ಉಪಯುಕ್ತವಾಗಿ ತಮ್ಮ ಅಭಿಪ್ರಾಯವನ್ನೂ ನಿರ್ಧಾರವನ್ನೂ ಬದಲಾಯಿಸಿರುವರು. ಬಂಗಾಳ ಕೌನ್ಸಿಲಿನಲ್ಲಿಯೂ ಹೆಚ್ಚಿನ ಆಶೆ ಇರುವುದಿಲ್ಲ. ಮುಂಬಯಿ ಕೌನ್ಸಿಲು ರಾಷ್ಟ್ರೀಯತೆಯ ಕಡೆಗಿನ ಪಕ್ಷಪಾತಕ್ಕೆ ಹೆಸರು ಹೋಗಿಲ್ಲ. ಅಲ್ಲದೆ ಕಲ್ಕತ್ತಾ ಕೊರ್ಪೊರೇಶನಿನ ಮೊನ್ನೆ ನಡೆದ ಅಧ್ಯಕ್ಷ ಚುನಾವಣೆಯು ರಾಜಕೀಯ ಪರಿಸ್ಥಿತಿಯು ಯಾವ ರೂಪಾಂತರಕ್ಕೆ ಬಗ್ಗುತ್ತಿದೆ ಎಂದು ಸೂಚಿಸುತ್ತಿದೆ. ಹಾಗೂ ಸ್ಯಾಮನರು ಕಲ್ಪಿಸಿದಂತೆ ಬಹಿಷ್ಕಾರವು ಕ್ಷಣ ಮಾತ್ರದ ಚಳವಳ ಮಾತ್ರವಾಗಿದೆಯೊ ಎಂದು ಸಂದೇಹಿಸಲು ಅವಕಾಶವಿದೆ.

ಮದ್ರಾಸ ಸಂಸ್ಥಾನದಲ್ಲಿ ಪಂಚಾಯತ.

ತಾಲೂಕು ಬೋರ್ಡು, ಯೂನಿಯನ್ನು, ಮ್ಯುನಿಸಿಪಾಲಿಟಿಗಳಂತೆ ಇವು ಅಲ್ಲಲ್ಲಿ ಸ್ಥಾಪಿಸಲ್ಪಡುತ್ತಿವೆ. ಅಲ್ಲಲ್ಲಿ ಈ ಪಂಚಾಯತ ಕಮಿಟಿಯು ಚುನಾಯಿಸಲ್ಪಡುತ್ತಿದೆ. ಕಳೆದ ವರ್ಷ ಪಂಚಾಯತ ಸಭೆಗಳ ಸಂಖ್ಯೆಯು ೯೩೩ರಿಂದ ೧೯೨೮ಕ್ಕೆ ಏರಿಯದೆ. ಅಂದರೆ ಸರಿ ಸಂಖ್ಯೆ ಎರಡು ಪಾಲಿಗಿಂತಲೂ ಹೆಚ್ಚಿದಂತಾಯಿತು. ಚುನಾವಣೆಗಳಲ್ಲಿ ಇತರ ಚುನಾವಣೆಗಳಂತೆಯೇ ವೈಯಕ್ತಿಕ ದ್ವೇಷಾಸೂಯೆಗಳಿಗೆ ಎಡೆ ಸಿಕ್ಕುತ್ತಿದೆ. ಈ ಪಂಚಾಯತದ ಸ್ಥಾಪನೆಯ ಸೂತ್ರವೇನೊ ಅತ್ಯುತ್ತಮವಾಗಿದ್ದು, ಇದರಿಂದ ಜನರಿಗೆ ಬಹಳ ಲಾಭವಾಗಲಿಕ್ಕೆ ಸಾಧ್ಯವುಂಟು. ಆದರೆ ಇಂತಹ ಇತರ ಉಚ್ಚ ಉದ್ದೇಶಗಳ ಸರಕಾರಿ ಸಂಸ್ಥೆಗಳಂತೆಯೇ ಇವುಗಳು ನಡೆಯಬೇಕಾದ ರೀತಿಯಲ್ಲಿ ನಡೆಯುವುದಿಲ್ಲ. ಪಂಚಾಯತ ಮೆಂಬರರು ಸಾರ್ವಜನಿಕ ಕೆಲಸದ ಜವಾಬ್ದಾರಿಯನ್ನು ತಿಳಿಯುವವರಾಗಿರಬೇಕು. ಅದರ ಅಧ್ಯಕ್ಷರು ಜನರ ಮೇಲೆ ತುಂಬಾ ಸಹಾನುಭೂತಿಯುಳ್ಳವರಾಗಿರಬೇಕು. ಆದರೆ ಕಾರ್ಯತಃ ಇತರ ಸಂಸ್ಥೆಗಳಲ್ಲಿ ಕಾಣುವಂತೆಯೇ ಇದರಲ್ಲಿ ಅಧಿಕಾರದ ಅಭಿಲಾಷಿಗಳು ಅಧಿಕ ಸಂಖ್ಯಾಕರಾಗಿರುವರು. ಈ ಕಾರಣದಿಂದ ಪಂಚಾಯತದಿಂದ ಎಷ್ಟು ಪ್ರಯೋಜನವು ಜನರಿಗೆ ಆಗಲಿಕ್ಕೆ ಸಾಧ್ಯವಿದೆಯೊ ಅದರ ಕಿಂಚಿತಂಶವಾದರೂ ಹೆಚ್ಚಿನ ಕಡೆಗಳಲ್ಲಿ ಜನರಿಗೆ ಲಾಭವಾಗುವುದಿಲ್ಲ. ತೆರಿಗೆಗಳನ್ನು ವಸೂಲು ಮಾಡಲಿಕ್ಕೆ ಅಧಿಕೃತರಾದ ಎಷ್ಟೊ ಪಂಚಾಯತಗಳು ಸ್ವೇಚ್ಛೆಯಂತೆ ನಿರಂಕುಶವಾಗಿ ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡ ಹಲವು ನಿದರ್ಶನಗಳು ಇವೆ. ಇನ್ನಾದರೂ ಈ ಪಂಚಾಯತ ಸಭೆಗಳು ಜನರಿಗೆ ಹೆಚ್ಚಿನ ಉಪಯೋಗಕ್ಕೆ ಬೀಳಲೆಂದು ಆಶಿಸುವೆವು.

ಪರದೇಶೀ ವಸ್ತ್ರ ಬಹಿಷ್ಕಾರ.

ಪರದೇಶೀ ವಸ್ತ್ರ ಬಹಿಷ್ಕಾರವನ್ನು ಸಾಧಿಸುವ ಬಗ್ಗೆ ರಾಷ್ಟ್ರೀಯ ಚಳವಳವು ನಡೆಯುವಾಗ, ಈ ಸಂದರ್ಭದಲ್ಲಿ ತಾವೂ ಪ್ರಯೋಜನ ಹೊಂದಲೆಂದು ಗಿರಣೀ ಮ್ಯಾಲೀಕರ ಪ್ರಯತ್ನಗಳು ನಡೆಯುತ್ತಿವೆ. ಗಿರಣೀ ಮ್ಯಾಲೀಕರೆಂದರೆ, ಇತರ ವಹಿವಾಟುದಾರರಂತೆ, ಆದರ್ಶ ಧ್ಯೇಯಗಳ ವಿಷಯದಲ್ಲಿ ಚಿಂತೆ ಪಡುವವರಲ್ಲ. ಅವರ ಆದರ್ಶವು ರೂಪಾಯಿ, ಆಣೆ, ಪೈ. ಆದುದರಿಂದ ಈ ಪರದೇಶೀ ವಸ್ತ್ರ ಬಹಿಷ್ಕಾರದಲ್ಲಿ ಅವರು ದೇಶದ ಅಭ್ಯುದಯವನ್ನು ಕಾಣುವುದಕ್ಕಿಂತಲೂ ತಮ್ಮ ಲಾಭವನ್ನೇ ಆಶಿಸುವರು. ಆದರೆ ಇಷ್ಟು ಸ್ವಾರ್ಥದಿಂದ ಮಹಾತ್ಮಾಜೀಯವರ ಹತ್ತಿರ ಹೋದುದು ಅವರ ಧೈರ್ಯವೆನ್ನಬೇಕು; ಪ್ರಾಯಶಃ ಈ ಧೈರ್ಯವು ಆ ಸ್ವಾರ್ಥದಿಂದಲೇ ಉಂಟಾಗಿರಬೇಕು. ಗಿರಣೀ ಮ್ಯಾಲೀಕರು ಎರಡು ಪಕ್ಷಗಳನ್ನೂ ಒಲಿಸಬೇಕು.—ಸರಕಾರವನ್ನು ಒಲಿಸಿಕೊಳ್ಳದಿದ್ದರೆ ಸುಂಕ ಮುಂತಾದ ಹಲವು ಉಪಾಯಗಳಿಂದ ಸರಕಾರವು ಅವರನ್ನು ಪೀಡಿಸುವುದು. ಜನತೆಯನ್ನು ಒಲಿಸಿಕೊಳ್ಳದಿದ್ದರೆ ಅವರು ತಯಾರಿಸುವ ವಸ್ತ್ರವು ವಿಕ್ರಯಿಸಲ್ಪಡುವುದಿಲ್ಲ. ಆದುದರಿಂದ ಸರಕಾರವು ನಿರೋಧಿಸುವ ಬಹಿಷ್ಕಾರದ ಚಳವಳಕ್ಕೆ ಗಿರಣೀ ಮ್ಯಾಲೀಕರು ವಿರೋಧಿಗಳು; ಸರಕಾರವು ನಿರೋಧಿಸಲಾಗದ ಸ್ವದೇಶೀ ಚಳವಳಕ್ಕೆ ಅವರು ಸಹಕಾರಿಗಳು. ಈ ರೀತಿಯಲ್ಲಿ ಸ್ವದೇಶೀ ಬಗ್ಗೆ ಅವರು ತಮ್ಮ ದೇಶಾಭಿಮಾನವನ್ನು ತೋರಿಸುವಾಗ, ತಾವು ಠಕಾಯಿಸಲಿಕ್ಕೆ ತಯಾರಿಸುವ ಗಿರಣೀ ಖಾದಿಯ ತಯಾರಿಯನ್ನು ನಿಲ್ಲಿಸಲಿಕ್ಕೆ ಅವರಿಗೆ ಸಮ್ಮತವಿಲ್ಲ. ಖಾದಿಯು ಕೈನೂಲಿನದೆಂಬುದರಿಂದಲೇ ಅಷ್ಟು ಪ್ರಾಮುಖ್ಯತೆಯನ್ನು ಹೊಂದಿತು. ಆ ಉದ್ದೇಶದಿಂದಲೇ ಅದಕ್ಕಾಗಿ ಇಷ್ಟು ದೊಡ್ಡ ಚಳವಳವು ಹೂಡಲ್ಪಟ್ಟಿತು. ದೇಶದ ಖಾದಿಯ ಆ ರಾಷ್ಟ್ರಾಭಿಮಾನವನ್ನು ಮಾನಿಸಲು ಗಿರಣೀ ಮ್ಯಾಲೀಕರು ತಯಾರಿಲ್ಲ. ಮಾತ್ರವಲ್ಲದೆ, ಅವರ ಗಿರಣೀ ವಸ್ತ್ರದ ಮಾರಾಟವೂ ಮಹಾತ್ಮಾಜೀಯವರ ಅಖಿಲ ಭಾರತ ಸಂಸ್ಥೆಯಿಂದಲೇ ನಡೆಯಬೇಕಾಗಿ ಅವರ ಆಶಯ. ಇವೆಲ್ಲ ವಿಷಯಗಳನ್ನು ನೋಡುವಾಗ ಗಿರಣೀ ಮ್ಯಾಲೀಕರಿಂದ ರಾಷ್ಟ್ರೀಯ ಚಳವಳಕ್ಕೆ ಬಹಳ ಸಹಾಯವಾದೀತೆಂದು ಹೇಳಲಾಗುವುದಿಲ್ಲ.

ನೋ ಟ ಗ ಳು .
NOTE...S.

ನಮಗೊಬ್ಬ ತಮ್ಮನ್ನು ಬೇಗನೇ ಜನಿಸಲಿರುವನು. ರಾಷ್ಟ್ರಬಂಧುವೆಂದವನನ್ನು ಕರೆಯುವೆವು. ನಮ್ಮಾ ಬಂಧುವಿಗೆ ಆನಂದದಿಂದ ಸ್ವಾಗತವನ್ನು ಬಯಸುವೆವು.

• • • •

ಈ ವರೆಗೆ ಇಲ್ಲದುದು—ಆತ್ಮಘಾತುಕರ ಕ್ಲಬ್ಬು—ಬರ್ಲಿನಿನಲ್ಲಿ ಇದೊಂದು ಹೊಸದಾಗಿ ವ್ಯವಸ್ಥೆಗೊಳಿಸಲ್ಪಡುತ್ತಿದೆ. ಒಬ್ಬ ಹುಡುಗಿಯೂ ಒಬ್ಬ ತರುಣನೂ ತಮ್ಮನ್ನು ತಾವೇ ಕೊಂದುಹೋದರು.

• • • •

ಆತ್ಮಘಾತವೇ ಜೀವನದ ಶ್ರೇಷ್ಠತಮ ಕಾರ್ಯವೆಂದು ಇವರ ತತ್ವ. ಈ ತತ್ವದಲ್ಲಿ ಪೂರ್ಣತೆಯನ್ನು ಹೊಂದಿದ ಕೂಡಲೇ ಮುಕ್ತಿ ದೊರೆಯುವುದೆಂಬುದೊಂದು ನಿಸ್ಸಂಶಯವಾದುದು. ಮತ್ತಾವ ತತ್ವದಲ್ಲಿಯೂ ಈ ಸಂದೇಹಹೀನ ಮುಕ್ತಿಯು ತೋರಿಬರುವುದಿಲ್ಲ.

• • • •

ದೊಡ್ಡ ಬಳ್ಳಾಪುರದಲ್ಲಿನ ಒಬ್ಬ ಆರು ವರ್ಷದ ಹುಡುಗಿಯ ವೀರತೆಯ ವರ್ತಮಾನವಿದೆ. ಹುಡುಗಿಯು ಹೊರಗೆ ಆಡುತ್ತಿದ್ದ ಸಮಯದಲ್ಲಿ ಮನೆಗೆ ಬೆಂಕಿ ತಗಲಿತು. ಮನೆ ಎಲ್ಲಾ ಸುಡುವುದನ್ನು ನೋಡಿ ಕೂಡಲೇ ಒಳಗೆ ಓಡಿ ಮೂರು ವರ್ಷದ ತನ್ನ ತಮ್ಮನನ್ನು ತಂದು ಮಾರ್ಗದ ಬದಿಯಲ್ಲಿಟ್ಟಳು. ಪುನಃ ವೈಸುಟ್ಟರೂ ಲಕ್ಷಿಸದೆ, ಒಳಗೆ ಹೋಗಿ ಆರು ತಿಂಗಳ ಇನ್ನೊಂದು ಮಗುವನ್ನು ಹೊರಗೆ ತಂದು ಮಾರ್ಗದಲ್ಲಿ ಬಿದ್ದುಬಿಟ್ಟಳು.

• • • •

ಮುಂಬಾಯಿಯ ಮಜೂರ ಚಳವಳವು ಬಹಳ ರಭಸದಿಂದ ಸಾಗುವಂತಿದೆ; ೩೦,೦೦೦ ಜನರು ಮುಷ್ಕರ ಹಾಕಿರುವರು. ಉದ್ದೇಶ ಗಿರಣಿಮ್ಯಾಲೀಕರು ಲಾಭಕರವಾದ ರೀತಿಯಲ್ಲಿ ಗಿರಣಿಗಳನ್ನು ನಡೆಯಿಸಬಾರದೆಂದೇನೊ!

• • • •

ಮಜೂರರ ಹಿತವನ್ನು ಸಾಧಿಸುವೆವೆಂದು ಮುಷ್ಕರಗಳನ್ನು ಹಾರಿಸಿ, ಮಜೂರರನ್ನು ಉಪವಾಸವಿರಿಸಿ, ಕೈಗಾರಿಕೆಗಳನ್ನು ಕೆಡಿಸಿ ಮಜೂರರಿಗೂ ಹಾನಿಯನ್ನು ತರುವ ಕೆಲವು ಮಜೂರ ಧುರೀಣರ ಬಡವರ ಪ್ರೇಮದ ವಿಷಯ ಹೇಳಬೇಕಿಲ್ಲ.

• • • •

ಈ ಮುಷ್ಕರಗಳು ವರ್ಷಂಪ್ರತಿಯ ಅಭ್ಯಾಸವಾಗಿ ಹೋಗಿವೆ. ಇವು ಜನಾಂಗಜೀವನಕ್ಕೆ ಸುಖಕರವಾಗಿಲ್ಲ. ಇವುಗಳನ್ನು ನೋಡುವಾಗ ಮುಸ್ಸೊಲೀನಿಯ ಕ್ರಮವೇ ಒಳ್ಳೇಯದೊ ಎಂದು ತೋರುವುದು.

• • • •

ಮಂತ್ರಿಪದವಿಯು ಸ್ವೀಕಾರಾರ್ಹವಾಗಿದೆ ಎಂದು ಈಗಿನ ಹೊಸ ಮಂತ್ರಿಗಳಿಗೆ ಸಂಪೂರ್ಣ ಸಮಾಧಾನವಾಗಿ ಇದ್ದ ತುಂಡು ಮನಸ್ಸಾಕ್ಷಿಗೂ ಶಾಂತಿಯನ್ನುಂಟುಮಾಡಿರಬೇಕು. ಹೋದಲ್ಲೆಲ್ಲಾ ಮೆರವಣಿಗೆ, ಸಂಭ್ರಮ, ಸ್ವಾಗತ ಮತ್ತು ಉಪಚಾರ.

• • • •

ಮಂತ್ರಿ ಪದವಿಯಿಂದ ದೇಶಸೇವೆಯಾಗುವುದಿಲ್ಲವೆಂದು ಹೇಳಿದವರಾರು? ಇಡೀ ದೇಶವೇ ಅವರ ಕೈಕಾಲು ಹಿಡಿದು ಸೇವೆಮಾಡುವುದು. ಇದಕ್ಕಿಂತ ದೊಡ್ಡ ದೇಶ ಸೇವೆ ಎಲ್ಲಿ?

• • • •

ಮಿ. ಆರೋಗ್ಯಸಾಮಿ ಮುದಲಿಯಾರರು ಕೂಡ ತಾವು ತಿರಸ್ಕರಿಸಿದ ಮಂತ್ರಿಪದವಿಯ ಖಂಡನೆ ಮಾಡುವಾಗ ಈ ಸಂಭ್ರಮ ಸ್ವಾಗತಗಳ ನೆನಪು ಮಾಡದೆ ನಿಲ್ಲಲಿಲ್ಲ. ಏಕೆಂದರೆ ಈ ಸಂಭ್ರಮಗಳು ಮರೆಯಲ್ಪಡುವಂತಹವುಗಳಲ್ಲ. ಅಧಿಕಾರದ "ಜೋಹುಕುಂ"ದಾರರನ್ನು ನೋಡಬೇಕಾದರೆ ಈ ಸಂದರ್ಭಗಳೇ ಬೇಕು.

ಅನುಕ್ರಮಣಿಕೆ.

ಅಗ್ರಲೇಖ,
ಅಸ್ಪೃಶ್ಯತೆ
ವಿದೇಶ ವರ್ತಮಾನ
ಸ್ಫುಟವಿಚಾರಗಳು
ನೋಟಗಳು
ವರ್ತಮಾನ ಸಂಗ್ರಹಗಳು
ಒಳದೇಶ
ದಕ್ಷಿಣ ಕನ್ನಡ — ಮಂಗಳೂರು, ಹೊಸದುರ್ಗ, ಬಿಬಿದ್ರೆ, ಮುಲ್ಕಿ
ವಿವಿಧ ಸಮಾಚಾರಗಳು
ಬೌದ್ಧಮತವೂ ಹಿಂದೂದೇಶದಲ್ಲಿ ಅದರಿಂದ ಉಂಟಾದ ಬದಲಾವಣೆಗಳೂ
ಮದ್ರಾಸ ಕೌನ್ಸಿಲಿನಲ್ಲಿ ಸರಕಾರದ ಫೊರೆಸ್ಟ್ ಆಡಳಿತದ ಕುರಿತು ಶ್ರೀ ಎ. ಬಿ. ಶೆಟ್ಟಿರ ಭಾಷಣ
ಪತ್ರವ್ಯವಹಾರ ೧,
ಕರ್ನಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನ
ಕಾರ್ಕಳ ಚತುರ್ಮುಖ ಬಸದಿಯ ಪಶ್ಚಿಮದ್ವಾರದಲ್ಲಿ ಪ್ರಕಟಿಸಿದ ಶಿಲಾಶಾಸನದ ನಕಲು, ಲಂಡನಿನಲ್ಲಿ ಕಟ್ಟುವ ಹೊಸ ಇಂಡಿಯಾ ಆಫೀಸು, ದಕ್ಷಿಣ ಕನ್ನಡ ಜಿಲ್ಲೆಯ ಬೆಳೆಯ ಸ್ಥಿತಿ.

ಸ್ವದೇಶಾಭಿಮಾನಿ.

ಶಕ ೧೮೫೦ ಚೈತ್ರ ಬ ೩ನೆಯ ಶುಕ್ರವಾರ.

ಅಸ್ಪೃಶ್ಯತೆ.

ಲಾಲಾ ಲಜಪತರಾಯರು ... [illegible]

... ದಾಯವಿದೆ. ಬ್ರಾಹ್ಮಣೇತರರೊಳಗೂ ಈ ತರದ ಅಸ್ಪೃಶ್ಯತೆ ಇದೆ. ಅಸ್ಪೃಶ್ಯರೆನಿಸಿಕೊಳ್ಳುವ ಹೊಲೆಯರೊಳಗೇನೇ ಪುನಃ ಅಸ್ಪೃಶ್ಯತೆಯ ಪ್ರಭೇದವಿದೆ. ಅನ್ಯವಾಗ ಇಡೀ ಜನತೆಯೊಳಗೆ ಭಿನ್ನತೆಯ ಸಂಕುಚಿತತನವು ಅನೇಕಗುಣವಾಗಿ ಪರಿಣಮಿಸಿ ಯದೆನ್ನಬೇಕಾಗುತ್ತದೆ.

[illegible]

ವಿದೇಶ ವರ್ತಮಾನ.

[illegible]

— ಮಿಲಾನ್ ಎಂಬಲ್ಲಿ ಪೋಲೀಸರು ಗುಂಡುಗಳನ್ನು ಹಿಡಿದು ನಿಂತು ಮಿಲಿಟರಿ ಇನ್ಸ್‌ಪೆಕ್ಷನ್ ನಡೆಯುತ್ತಿರುವಾಗ, ಅಕಾಸ್ಮಾತ್ತಾಗಿ ಬಿಟ್ಟಿನ ಗುಂಡಿನಿಂದ ಮತ್ತು ಹಾರಿ ಇಬ್ಬರು ಪೋಲೀಸರು ಮೃತಪಟ್ಟರು.

— ಸರ್. ಜೋನ್ ಸ್ವಾಮಿನರೂ, ಸ್ವಾಮನ್ ಕಮಿಶನೂ ಫ್ರಾನ್ಸಿನ ಮಾರ್ಸೇಲಿಸಿಗೆ ಬಂದು ತಲಪಿದರು. ಇವರ ಭೇಟಿ ಪಡಕೊಳ್ಳಲು ಸರ್ ಜೋನ್ ಸ್ವಾಮಿನರು ಒಪ್ಪಲಿಲ್ಲ. ಅಲ್ಲಿಂದ ಅವರು ಲಂಡನಿಗೆ ಹೋದರು.

— ರಾಜಕುಮಾರಿ ಮೇರಿಯವರು ಜೆರುಸಲೆಮಿಗೆ ಬಂದಿರುವರು.

— ಸೊಲೊಮನ್ ದ್ವೀಪದಲ್ಲಿ ಲೂಟಿಯನ್ನು ಮಾಡಿದುದಕ್ಕಾಗಿ ಹಲವರನ್ನು ಕೈದುಮಾಡಿ ಜೈಲಿನಲ್ಲಿ ಹಾಕಿದ್ದರು. ಈ ಕೈದಿಗಳಿಗೆ ಸರಿಯಾದ ಆಹಾರ ವೊದಲಾದುವುಗಳಿಲ್ಲದೆ ಇಷ್ಟರ ವರೆಗೆ ೧೩ ಜನರು ಜೈಲಿನಲ್ಲೇ ಸತ್ತುಹೋದರು.

— ಬರ್ಲಿನಿನ ಲೋಹದ ಕಾರಖಾನೆಯ ೩೦ ಸಾವಿರ ಜನರು ಕೆಲಸಕ್ಕೆ ಮುಷ್ಕರವನ್ನು ಹಾಕಿದ ಕಾರಣ ಕಾಲು ಮಿಲಿಯ ಜನರನ್ನು ಕೆಲಸದಿಂದ ಹೊರಗೆ ಹಾಕಿರುವರು.

— ಪರ್ಶಿಯದ ಮಂತ್ರಿಗಳನ್ನು ಉರಿಸ್ಥಾನದಲ್ಲಿ ಕೊಂದುಹಾಕಿದುದಕ್ಕಾಗಿ ಪರ್ಶಿಯದ ಶಹರೇ ಸ್ವತಹ ಸೈನ್ಯವನ್ನು ಕೊಂಡೊಯ್ದು ಉರಿಸ್ಥಾನದ ಜನರನ್ನು ಶಿಕ್ಷಿಸುವರಂತೆ.

— ಭೂಲೊಗ್ನೊದಲ್ಲಿ ನಡೆದ ಸ್ತ್ರೀ ಡಾಕ್ಟರರ ಪರಿಷತ್ತಿನಲ್ಲಿ ಹಿಂದೂಸ್ಥಾನದ ಕಡೆಯ ಸ್ತ್ರೀ ಡಾಕ್ಟರರಾದ ಬೆನ್ಸನರು, ಹಿಂದೂಸ್ಥಾನದ ಶಿಶುಗಳ ಆರೈಕೆಯ ಕುರಿತು ಒಂದು ರಿಪೋರ್ಟನ್ನು ಓದಿದರು.

— ಅಫಘಾನದ ಅಮೀರರು ಪೋಲೆಂಡನ್ನು ಸಂದರ್ಶಿಸುವರು. ಅಲ್ಲಿ ಅವರನ್ನು ಸತ್ಕರಿಸಲು ಉತ್ತಮ ತಯ್ಯಾರಿಯು ಈಗಲೇ ನಡೆಯುತ್ತಿದೆ.

— ಲಂಡನಿನಿಂದ ಹೊರಟು ೩೯೨ ಮೈಲು ದೂರದಲ್ಲಿರುವ ಎಡಿನ್‌ಬರ್ಗಿಗೆ ರೈಲು ಗಾಡಿಯು ಸೀದಾ ನಿಲ್ಲದೆ ಹೋಗುವ ವ್ಯವಸ್ಥೆಯನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆ. ಇಷ್ಟರ ವರೆಗೆ ಹೀಗೆ ಹೋದದ್ದಿಲ್ಲ.

[illegible]

ಒಳದೇಶ ವರ್ತಮಾನ.

[illegible]

— ಮೈಸೂರಿನಲ್ಲಿ ಒಂದು ಹೊಸ ಪತ್ರಿಕೆಯು ಹೊರಡುವದು. ರಾ। ಹಯವದನರಾಯರೇ ಇದರ ಸಂಪಾದಕರಾಗುವರು.

— ಬಟ್ಲರ್ ಕಮಿಟಿಯು ಈಗ ಕಾಶ್ಮೀರಿನಲ್ಲಿದೆ.

— ಬಿಹಾರ ಮತ್ತು ಒರಿಸ್ಸದ ರಾಜರ ಒಂದು ಪರಿಷತ್ತು ಪುರಿಯಲ್ಲಿ ಮಯೂರಭಂಜದ ರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಬಟ್ಲರ್ ಕಮಿಟಿಯ ಕುರಿತು ವಿಚಾರಿಸುವದೇ ಈ ಪರಿಷತ್ತಿನ ಉದ್ದೇಶವಾಗಿದ್ದಿತು.

— ಕಾಶಿಯಲ್ಲಿ ರಾಷ್ಟ್ರೀಯ ವಾರದ ಸಮಯ ೩೦೦೦ ರೂಪಾಯಿಗಳ ಖಾದಿ ವಿಕ್ರಯವಾಯಿತು. ಅನೇಕರು ಕಾಂಗ್ರೆಸ್ ಮೆಂಬರರಾದರು. ಪ್ರತಿ ದಿನವೂ ಬೇರೆ ಬೇರೆ ಕಡೆಗಳಲ್ಲಿ ಸಭೆ ನಡೆಯಿತು.

— ಪಂಜಾಬಿನ ಯುವಕ ಪರಿಷತ್ತಿನಲ್ಲಿ ಇಂಪಿರಿಯಲಿಸ್ಮಿನ ವಿರುದ್ಧವಾಗಿ ಠರಾವುಗಳು ಅಂಗೀಕೃತವಾದವು.

— ಅಹಮದಾಬಾದಿನಲ್ಲಿ ಪಟ್ಟಣದ ಮಳ್ಳೆಳನ್ನು ಕದ್ದುಕೊಂಡು ಹೋಗುವರೆಂದು ಸುದ್ದಿಯು ಹರಡಿರುವದರಿಂದ ಸುಮಾರು ೫೦೦ ಪಟ್ಟಣಿಗರು ದಸ್ಕತು ಹಾಕಿ, ಅವನ್ನು ತಡೆಗಟ್ಟಲು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿರುವರು.

— ಮುಂಬಾಯಿಯ ಮುನಿಸಿಪಲ್ ಕೌನ್ಸಿಲರನಾದ ವಿಲ್ಸನ್ ಲಟಂಡ ಯೆಂಬವನು ಮುರ್ರೆ ಎಂಡ್ ಕೊ ಎಂಬ ವ್ಯಾಪಾರಿಗಳನ್ನು ಮೋಸಗೊಳಿಸಿ ಅವರಿಂದ ೩೫ ರೂಪಾಯಿಗಳನ್ನು ಉಪಾಯದಿಂದ ವಸೂಲು ಮಾಡಿದುದಕ್ಕಾಗಿ, ಅವನಿಗೆ ಸಿಟಿ ಮೆಜಿಸ್ಟ್ರೇಟರು ೯ ತಿಂಗಳುಗಳ ಸಜೆಯನ್ನು ವಿಧಿಸಿರುವರು.

— ಮದರಾಸು ಪಟ್ಟಣದಲ್ಲಿ ಸಿಡುಬು ರೋಗವು ಜೋರು ಹಿಡಿಕೊಂಡಿರುತ್ತದೆ.

— ಮಸೂಲಿ ಪಟ್ಟಣದಲ್ಲಿ ಯಾರೋ ಕಳ್ಳರು ಚಲ್ಲಪಲ್ಲಿ ರಾಜರ ಅರಮನೆಯಿಂದ ಸುಮಾರು ೩೦,೦೦೦ ರೂಪಾಯಿ ಕ್ರಯಬಾಳುವ ಒಡವೆಗಳನ್ನು ಕದ್ದುಕೊಂಡು ಹೋಗಿರುವರು.

— ಬರುವ ಆಗೋಸ್ತು ತಿಂಗಳಿನಲ್ಲಿ ಹೊಲೆಂಡಿನಲ್ಲಿ ನಡೆಯಲಿರುವ ... [illegible]

ದಕ್ಷಿಣ ಕನ್ನಡ.

ಸ್ವೀಕಾರ ಮತ್ತು ವಿಮರ್ಶೆ.

[illegible]

ಮಂಗಳೂರು:— [illegible]

... ಒಂದು ಚರ್ಚಿಸಲ್ಪಟ್ಟಿತು. ಡಾಕ್ಟರ್ ಕ್ಯಾರೊಲರವರು ಅದನ್ನು ೬೦೦ ರೂಪಾಯಿಗಳನ್ನಾಗಿ ಮಾಡಬೇಕೆಂದರು. ಆದರೆ ರಾ। ಯು. ಸಂಜೀವರಾಯರೂ, ರಾ। ಎಸ್. ಮಾಧವರಾಯರೂ ಕೂಡಿ ಅದು ಅಗತ್ಯವಿಲ್ಲವೆಂದೂ, ಸರಕಾರದವರು ಆ ಸಂಸ್ಥೆಗೆ ಸಹಾಯ ಮಾಡುವದರಿಂದ ಮುನಿಸಿಪಾಲಿಟಿಯವರ ಸಹಾಯವು ಅನಗತ್ಯವೆಂದೂ ಹೇಳಿದರು. ಕೊನೆಗೆ ಅಧ್ಯಕ್ಷರಾದ ರಾ। ಎಸ್. ವೆಂಕಟರಾಯರ ಠರಾವಿನಂತೆ ಈ ವರುಷ ಮಾತ್ರ ರೂಪಾಯಿ ೩೦೦ನ್ನು ಕೊಡಬಹುದೆಂದು ನಿರ್ಣಯವಾಯಿತು. ಮುನಿಸಿಪಾಲಿಟಿಯ ಕ್ವಾರ್ಟರ ಸಂಬಳದ ವಿಷಯದಲ್ಲಿ ಎಸ್. ಎಸ್. ಎಲ್. ಸಿ.ಯವರಿಗೆ ರೂಪಾಯಿ ೩೩ ಇಂಟರ್ ಮಿಡಿಯೆಟಿನವರಿಗೆ ರೂಪಾಯಿ ೩೫, ಪ್ರಾರಂಭದ ಸಂಬಳವನ್ನಾಗಿ ಮಾಡಬೇಕೆಂದು ನಿರ್ಣಯವಾಯಿತು.

ತಾರೀಕು ೧೪—೪—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೪ ಮರಣಗಳೂ, ೩೩ ಜನನಗಳೂ ಆದವು. ಮರಣಗಳ ಪೈಕಿ ಶ್ವಾಸಕೋಶದ ರೋಗದಿಂದ ೬, ಇತರ ಎಲ್ಲಾ ಕಾರಣಗಳಿಂದ ೭.

ಮಂಗಳೂರು ತಾಲೂಕು ಬೋರ್ಡು ಸದಸ್ಯರ ವಿಶೇಷ ಸಭೆಯೊಂದು ಕಳೆದ ಸೋಮವಾರ ಜರಗಿ, ಅಧ್ಯಕ್ಷರ ಚುನಾವಣೆಗೆ ಮತ ತೆಗೆಯಲಾಯಿತು. ರಾ। ಸದಾಶಿವ ಅಡಿಗರಿಗೆ ೮ ವೋಟುಗಳೂ, ರಾ। ಪಿ. ಎಸ್. ಡಿಸೋಜರಿಗೆ ೬ ವೋಟುಗಳೂ ದೊರೆತದ್ದರಿಂದ, ಮುಂದಿನ ತಾಲೂಕು ಬೋರ್ಡು ಪ್ರೆಸಿಡೆಂಟರಾಗಿ ರಾ। ಕೆ. ಸದಾಶಿವ ಅಡಿಗರೇ ಚುನಾಯಿಸಲ್ಪಟ್ಟರು. ಖಾಲಿಬಿದ್ದ ಡಿಸ್ಟ್ರಿಕ್ಟ್ ಬೋರ್ಡು ಸದಸ್ಯತನಕ್ಕೆ ರಾ। ಮುತ್ತು ಮಾರ್ಲರೂ, ರಾ। ರಘುಚಂದ್ರ ಬಲ್ಲಾಳರೂ, ರಾ। ಬೋಳ ಮಾಧವರಾಯರೂ ಆರಿಸಲ್ಪಟ್ಟರು.

ಮಂಗಳೂರಿಗೆ ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಶಿರಹಟ್ಟಿ ನಾಟಕ ಮಂಡಳಿಯವರು ಬಂದು ಮೈದಾನಿನಲ್ಲಿ ಕಟ್ಟಿಸಿದ ಭವ್ಯವಾದ ಥಿಯೇಟರಿನಲ್ಲಿ ... [illegible]

... ದಾರರಿಂದ ಈ ಸಂಘದ ವಂತಿಗೆಯೂದ ಪ್ರಕೃತ ೦—೪—೦ ಪ್ರಕಾರ ವಸೂಲು ಮಾಡಿ ಜಮಾ ಇಟ್ಟುಕೊಂಡು ಇನ್ನೊಂದು ಸಂಯೋಜಿತವಾದ ಸಭೆಯಲ್ಲಿ ಸ್ವೀಕರಿಸುವ ವಿಲೆವಾರಿ ಬಗ್ಗೆ ಜಮಾ ಇಟ್ಟುಕೊಳ್ಳಬೇಕಾಗಿಯೂ ಆ ಬಗ್ಗೆ ರಶೀದಿಗಳು ಕೊಡುವ ವಿಲೆವಾರಿ ಮಾಡುವದಾಗಿ ಕೂಡಾ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು. ಅಧ್ಯಕ್ಷರ ಸಂಭಾಷಣೆ ಈ ದಿವಸ ಕೂಡಿದ ಸಭಿಕರಿಗೆ ಧನ್ಯವಾದವನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಮಾಡಲಾಯಿತು.

ಹೊಸದುರ್ಗ:— ಇಲ್ಲಿ ಚಲಾವಣೆಯಾಗುವ ಸ್ಟೇಂಡಾರ್ಡ ಮೋಟರ ಕಂಪೆನಿಯವರ ಬಾಬತು ೧೪ ಪ್ರಯಾಣಿಕರು ಹಿಡಿಯುವ ದೊಡ್ಡ ಬಸ್ ಮತ್ತು ಒಂದು ಕಾರು ಸಹಾ ವೊನ್ನೆಯಿಂದ ಚಲಾವಣೆಯಾಗುತ್ತದೆ.

ರಾಷ್ಟ್ರೀಯ ಹಪ್ತೆಯನ್ನು ಆಚರಿಸಿದ ಕುರುಹು ಪ್ರಕಾಶ ಪಡಿಸುವ ಬಗ್ಗೆ ಮ। ರಾ। ರಾ। ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಸಭೆಯು ಕೂಡಿತು. ಅನೇಕ ಮಹನೀಯರು ಹಾಜರು ಇದ್ದರು. ಸಭೆಯಲ್ಲಿ 'ಜಾಲಿಯಾನ್ ವಾಲಾ ಬಾಗ'ದ ಅತ್ಯಾಚಾರದ ನೆನಪನ್ನು ಬಹಳ ವಿಷಾದಕರದಿಂದ ವಿವರಿಸಲಾಯಿತು. ಖಾದಿ ಪ್ರಚಾರದ ಕಾಲೋಚಿತ ಉಪನ್ಯಾಸವೂ ಕೊಡಲ್ಪಟ್ಟಿತು. ಸದ್ಗೃಹಸ್ಥರನೇಕರು ಖಾದಿಯನ್ನು ವಿಕ್ರಯಿಸಿದರು. ಖಾದಿ ಭಂಡಾರದ ಬಾಬತು ಮಹಾತ್ಮ ಗಾಂಧಿಯವರು ಈ ಜಿಲ್ಲೆಗೆ ಸಂದರ್ಶಿದ ಸಮಯ ನೀಲೇಶ್ವರ ಮತ್ತು ಹೊಸದುರ್ಗ ಸೆಂಟರ ನಿವಾಸಿಕರು ಎತ್ತಿದ ವಂತಿಗೆ ಹ್ಯಾಗೆ ವಿನಿಯೋಗಿಸಲ್ಪಟ್ಟಿತು ಎಂಬ ಪ್ರಶ್ನೆಯನ್ನು ಸದ್ರಿ ಸಭೆಯಲ್ಲಿ ಕೇಳಬೇಕಾಗಿ ಹೋದ ಮೆಂಬರರೊಬ್ಬರು ಸಭೆಗೆ ಸೇರುವಷ್ಟರಲ್ಲಿ ಸಭೆ ಮುಕ್ತಾಯವಾಯಿತು ಎಂತ ವಿಷಾದಪಟ್ಟರು. ರಾಷ್ಟ್ರೀಯ ಅಧೀನಿನವರು ಪತ್ರ ಮುಖಾಂತರ ಈ ವಿವರವನ್ನು ತಿಳಿಸಿದಾದರೆ ವಿಷಾದಪಡಬೇಕೇ!

[illegible]

ಮುಲ್ಕಿ:— [illegible]

ವಿವಿಧ ಸಮಾಚಾರಗಳು.

ಲಂಡನಿನಲ್ಲಿ ಸರ್. ಜೋನ್ ಸ್ವಾಮನರು.

[illegible]

ಡೋಟರ್ ಅಫ್ ಇಂಡಿಯಾ.

[illegible]

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಕಡೂರು (M. S. M. Railway) [illegible] ಮಾರ್ಗವಾಗಿ [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, [illegible] ಗುರುವಾಯನಕೆರೆ, ಉಪ್ಪಿನಂಗಡಿ [illegible] ಗುರುವಾಯನಕೆರೆ, ಮೂಡ [illegible] ಬಂಟವಾಳ [illegible] ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ವ್ಯವಸ್ಥೆ [illegible]

(2) [illegible] ವಿಶ್ರಾಂತಿಗೆ [illegible] 9 ಗಂಟೆಗೆ [illegible] 12-30ಕ್ಕೆ [illegible] 1-30ಕ್ಕೂ [illegible] 1-45ಕ್ಕೆ [illegible] ಮಂಜೇಶ್ವರ, ಕಾಸರ ಗೋಡು, ಮುಲದಾರು, [illegible]

(3) [illegible] 12 [illegible] 12-30ಕ್ಕೆ [illegible] ಚಿಕ್ಕಮಗಳೂರಿನಿಂದ [illegible] 6-30ಕ್ಕೆ [illegible] 7-20ಕ್ಕೆ [illegible]

ಚಿಕ್ಕಮಗಳೂರಿನಿಂದ [illegible] 12 [illegible] 3-30ಕ್ಕೆ [illegible]

[illegible] ಬಸ್ಸು ಚಲಾವಣೆಯಾಗುತ್ತದೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ [illegible] ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, [illegible]

ಪ್ರೊ ಪ್ರೈಟರ್.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿ ಕಾಪು ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತಂಕರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ದಾಂಪತ್ಯದ ಗುಟ್ಟು ಎಂಬ ಸಚಿತ್ರ ಶಾಸ್ತ್ರೀಯ ವಿವರಣ

ಕಾಮ ಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ಎಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯರು ಪರಪುರುಷರನ್ನು ಅಪೇಕ್ಷಿಸದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು.

ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಆಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅವ್ಯಕ್ತಚರಿತ್ರೆಯು ಅಗಾಧವಾದದ್ದು, ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ, ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಅಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇವನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋವಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವ ಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ದಂತೆ ಪೂರ್ಣ ಅಸಂಬದ್ಧವೂ, ಅನ್ಯಾಯದ್ದೂ ಆಗಿರುತ್ತದೆ. ಮಾರ್ಗರೇತಳು ಕಾದಂಬರಿ ಕರ್ತೆಯಾಗಿರುವುದರಿಂದ ಇರುವೆಯನ್ನು ಆನೆಯಷ್ಟು ದೊಡ್ಡದು ಮಾಡಿ ಬರೆಯಲಿಕ್ಕೆ ಅವಳಿಗೆ ಚೆನ್ನಾಗಿ ತಿಳಿದಿದೆ. ಬೇಕಾದ ರೀತಿಯಲ್ಲಿ ಬಣ್ಣ ಕೊಟ್ಟು ಬರೆಯುವ ರೀತಿಯಂತೂ ಅವಳಿಗೆ ಹೊಸದಲ್ಲ. ಮುಖ್ಯವಾಗಿ ಅವಳು ಬರೆದುದು ಪಂಜಾಬದವರ ಕುರಿತು ಮತ್ತು ಅಸ್ಪೃಶ್ಯರ ಕುರಿತು. ಹಿಂದೂಗಳಿಗೆ ಕೆಡುಕುಂಟಾಗುವದೇ ಅವರ ಅಧಿಕ ವಿಷಯಾಸಕ್ತಿಯಿಂದ ಎಂದು ಮಿಸ್ ಮೆಯೋಳು ಬರೆದಿರುವಳು. ಅಂತೆಯೇ ಇವಳೂ ಕೂಡ ಹಿಂದುಗಳ ವಿಷಯಾಸಕ್ತಿಯು ಮಿತಿಮೀರಿದ್ದ ಕಾರಣ ಪ್ರಾಚೀನ ಪಟ್ಟಣಗಳೂ ರಾಜ್ಯಗಳೂ ನಾಶವಾಗಿ ಸುಟ್ಟು ಹೋದವು ಎಂದು ಬರೆದಿರುವಳು. ಹಿಂದೂ ಯುವಕರು ಬಹು ಕೆಟ್ಟವರು ಎಂದು ಬರೆದು ಅದನ್ನು ದೃಢಪಡಿಸಲು ಸುಳ್ಳುರುಜುವಾತುಗಳನ್ನು ಕೊಟ್ಟಿರುವಳು ಹಿಂದುಗಳ ಮೇಲೆ ಅಮೇರಿಕನ್ ಹೆಂಗಸರಿಗೆ ಈ ರೀತಿಯಲ್ಲಿ ಮತ್ಸರವೇತಕ್ಕಿರುವದೋ!

ಬಂಗಾಳದಲ್ಲಿ ಖಾದಿ ಪ್ರಚಾರ

ಅಖಿಲ ಭಾರತೀಯ ನೂಲುವವರ ಸಂಘದ ಪರವಾಗಿ ಶೇಟ್ ಜಮ್ನಾಲಾಲ್ ಬಜಾಜ್, ಶ್ರೀ ರಾಜಗೋಪಾಲಾಚಾರಿ, ಶಂಕರ್‌ಲಾಲ್ ಬ್ಯಾಂಕರ್ ಮೊದಲಾದವರು ಬಂಗಾಳದಲ್ಲಿ ಸಂಚರಿಸುತ್ತಿರುವರು. ಅವರು ಇಷ್ಟರ ವರೆಗೆ ರೂಪಾಯಿ ೩೭.೦೦೦ನ್ನು ಖಾದಿನಿಧಿಗೆ ಕೂಡಿಸಿರುವರು. ಇವರು ಹುಗ್ಲಿ, ಚಂದ್ರ ನಗರ ಮೊದಲಾದ ಸ್ಥಳಗಳನ್ನು ಸಂಚರಿಸಿ ಖಾದಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ ಎಂದು ಭಾಷಣಗಳನ್ನು ಕೊಡುತ್ತಿರುವರು. ಚಂದ್ರನಗರದಲ್ಲಿ ಮುನಿಸಿಪಾಲಿಟಿಯವರ ಪರವಾಗಿ ಇವರಿಗೆ ಮೆಯೋರರು ಒಂದು ಮಾನಪತ್ರವನ್ನು ಸಮರ್ಪಿಸಿದಾಗ ಅಲ್ಲಿಯ ಖಾದಿ ನಿಲಯ, ವಿದ್ಯಾ ನಿಲಯ ಮತ್ತು ಇತರ ಅನೇಕ ಸಂಸ್ಥೆಗಳನ್ನು ಕಂಡು ತಮಗೆ ಸಂತೋಷವಾಯಿತೆಂದು ರಾ। ರಾಜಗೋಪಾಲಾಚಾರಿಯವರು ಉತ್ತರವಿತ್ತರು. ಸಮಾಜದ ಆರ್ಥಿಕ ಜೀವನದ ರಹಸ್ಯವು ತಿಳಿಯದಿರುವದೇ ಸಮಾಜಾಭಿವೃದ್ಧಿಗೆ ತೊಡಕೆಂದು ಹೇಳಿದರು. ಆದಕಾರಣ ಮೊದಲು ತಮ್ಮ ತಮ್ಮ ಮನೆಗಳ ಕುರಿತು ಜಾಗ್ರತೆ ತೆಗೆದುಕೊಂಡು ಮತ್ತೆ ಹಳ್ಳಿ, ಪಟ್ಟಣ, ದೇಶ ಇವುಗಳ ಕುರಿತು ವಿಚಾರಿಸಬೇಕು. ಹಳ್ಳಿಯವರು ತಯಾರಿಸುವ ಖಾದಿಯನ್ನು ಕೊಂಡುಕೊಂಡು ಪ್ರತಿಯಾಗಿ ಅವರಿಗೆ ಜೀವನಕ್ಕೆ ಹಣ ಸಿಕ್ಕುವಂತೆ ಮಾಡಬೇಕು. ಎಂದು ಒತ್ತಿ ಹೇಳಿದರು.

ತಾಯಿಗೆ ವಿಷವಿಕ್ಕಿದ ಮಗನು!

ವಿಲಾಯತಿಯಲ್ಲಿ ತಾಯಿಯನ್ನು ಅತಿರೇಕವಾಗಿ ಪ್ರೀತಿಸುತ್ತಿದ್ದ ಮಗನೊಬ್ಬನು ತಾನಾಗಿಯೇ ತಾಯಿಗೆ ವಿಷಪ್ರಯೋಗವನ್ನು ಮಾಡಿದನು. ತಾಯಿಯು ಹಲವು ವರುಷಗಳಿಂದ ಒಂದು ಕಠಿಣವಾದ ರೋಗದಿಂದ ವ್ಯಥೆ ಪಡುತಿದ್ದಳು. ಈ ರೋಗವನ್ನು ವಾಸಿಮಾಡಲು ಯಾವ ವೈದ್ಯನಿಂದಲೂ ಆಗಲಿಲ್ಲ. ಒಂದು ದಿನ ರಾತ್ರೆ ಅವಳ ಸಂಕಟವು ವಿಪರೀತವಾಗಿ ಪರಿಣಮಿಸಿತು. ಅವಳು ನರಳುವದನ್ನು ಈ ಮಗನು ಕಂಡು ಸಹಿಸಲಾರದೆ ಒಂದು ತಟ್ಟೆಯಲ್ಲಿ ಒಂದಿಷ್ಟು ವಿಷವನ್ನಿಟ್ಟು ನೀರನ್ನು ಹೊಯ್ದು, ತಾಯಿಗೆ ಔಷಧವೆಂದು ಕುಡಿಯಲು ಕೊಟ್ಟನು. ವಿಷವನ್ನು ಕುಡಿದ ಕಾರಣ ಅವಳು ಒಂದೆರಡು ತಾಸುಗಳಲ್ಲಿಯೇ ಮೃತಪಟ್ಟಳು. ಯಾವ ಸಂಶಯವೂ ಇಲ್ಲದೆ ಅವಳ ಸಂಸ್ಕಾರವೂ ನಡೆಯಿತು. ಮಗನು ತಾಯಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನಾದಕಾರಣ ಅವಳು ಕಷ್ಟಬಡುತ್ತಿರುವುದನ್ನು ಕಂಡು ಸಹಿಸಲಾರದೆ ಅವಳಿಗೆ ವಿಷವನ್ನು ಕೊಟ್ಟುದು. ಇತ್ತ ತಾಯಿಗೆ ತಾನು ವಿಷವನ್ನು ಕೊಟ್ಟು ಕೊಂದೆನಲ್ಲಾ ಎಂಬ ಕಠಿಣ ಪಶ್ಚಾತ್ತಾಪವು ಮಗನಲ್ಲಿ ಉದಯಿಸಿ ಹುಚ್ಚನಾಗಿ ಆತನು ಆತ್ಮಹತ್ಯಕ್ಕೆಳಸಿದನು. ಅಷ್ಟರಲ್ಲಿ ಆತನ ಬಂಧುಗಳು ಆತನನ್ನು ಬದುಕಿಸಿದರು. ಪೋಲೀಸರಿಗೆ ಈ ಸಂಗತಿಯು ತಿಳಿದು ಆತನನ್ನು ಕೈದುಮಾಡಿದರು.

ವಿದೇಶಿ ವಸ್ತ್ರಬಹಿಷ್ಕಾರ.

ಪಂಡಿತ ಜವಹಿರಲಾಲ ನೆಹರುರವರು ಲಾಹೋರಿನಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರದ ಕುರಿತು ಒಂದು ಭಾಷಣವನ್ನು ಮಾಡಿದರು. "ಬ್ರಿಟಿಷರ ವಸ್ತ್ರವನ್ನು ಮಾತ್ರ ಬಹಿಷ್ಕರಿಸುವದು ನಮಗೆ ಸಾಧ್ಯವಲ್ಲವಾದುದರಿಂದ ಅನ್ಯದೇಶಿಯರ ವಸ್ತ್ರವನ್ನೇ ನಾವು ಬಹಿಷ್ಕರಿಸಬೇಕು. ನಾವು ಉಡುವ ವಸ್ತ್ರದಲ್ಲಿ ಶೇಕಡಾ ೮೦ರಷ್ಟು ಬ್ರಿಟನಿನಿಂದ ಬರುವದು ಜಪಾನ ಮೊದಲಾದ ಇತರ ದೇಶಗಳಿಂದ ಬರೇ ಶೇಕಡಾ ೨೦ರಷ್ಟು ಮಾತ್ರ ಬರುವದು ಒಮ್ಮೆಗೆ ಬ್ರಿಟಿಷರ ವಸ್ತ್ರ ಬಹಿಷ್ಕರಣವು ಜಯಪ್ರದವಾದರೂ ಬ್ರಿಟಿಷರ ವಸ್ತ್ರವು, ಜಪಾನರ ಯಾ ಅಮೇರಿಕನರ ವಸ್ತ್ರವೆಂದು ಹಿಂದೂದೇಶಕ್ಕೆ ಬರಬಹುದು. ಆದಕಾರಣ ಪರದೇಶದಿಂದ ವಸ್ತ್ರ ತರಿಸುವುದನ್ನೇ ನಿಲ್ಲಿಸಿ ಬಿಡಬೇಕು. ಹಿಂದೂಗಳಿಗೆ ಬೇಕಾದ ವಸ್ತ್ರದ ಮೂರನೇ ಒಂದುಪಾಲು ಹಿಂದೂಸ್ಥಾನದ ಮಿಲ್ಲುಗಳಲ್ಲಿ ತಯಾರಾಗುವದು. ಉಳಿದ ಮೂರನೇ ಎರಡು ಪಾಲು ವಸ್ತ್ರಕ್ಕಾಗಿ ಖಾದಿಯನ್ನುಪಯೋಗಿಸಬೇಕು. ಪರದೇಶಿ ವಸ್ತ್ರವನ್ನು ಪೂರ್ಣವಾಗಿ ಬಹಿಷ್ಕರಿಸಿದರೆ ಮಾತ್ರ ಖಾದಿ ಕೈಗಾರಿಕೆಗೆ ಪ್ರೋತ್ಸಾಹವು ದೊರಕುವದು, ಖಾದಿಬಟ್ಟೆಗೂ ಬೆಲೆ ಕಡಿಮೆಯಾಗುವುದು" ಎಂದು ಅವರು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು.

ಚಿರತೆಯ ಹಾವಳಿ!

ಹಾಸನದ ಉಪ್ಪಹಳ್ಳಿ ಎಂಬಲ್ಲಿ ಒಂದು ದೊಡ್ಡ ಚಿರತೆಯ ಹಾವಳಿಯು ವಿಶೇಷವಾಗಿದ್ದಿತು. ಹಗಲುಹೊತ್ತಿನಲ್ಲಿ ಒಂದು ದಿನ ಗದ್ದೆಯಲ್ಲಿ ಮೇಯುತಿದ್ದ ಹಂದಿಯನ್ನು ಚಿರತೆಯು ಆಕ್ರಮಿಸಲು ಸಮೀಪದಲ್ಲೇ ಇದ್ದ ಹೆಂಗಸೊಬ್ಬಳು ದೊಣ್ಣೆಯಿಂದ ಚಿರತೆಯನ್ನು ಹೊಡೆದಳು. ಹಂದಿಯನ್ನು ಬಿಟ್ಟು ಚಿರತೆಯು ಹೆಂಗಸಿನ ಮೇಲೆ ಬಿದ್ದಿತು. ಒಬ್ಬ ರೈತನು ಇದನ್ನು ನೋಡಿ ಓಡಿಬರಲು ಚಿರತೆಯು ಆತನನ್ನೂ ಕಚ್ಚಿತು. ಮೂರನೆಯವನೊಬ್ಬನು ಹಿಂದಿನಿಂದಲೇ ಬಂದು ಆ ಕ್ರೂರ ಪ್ರಾಣಿಯನ್ನು ಹೊಡೆಯಲು ಅದು ಮೊದಲಿನವರಿಬ್ಬರನ್ನೂ ಬಿಟ್ಟು ಮೂರನೆಯವನನ್ನೂ ಕಚ್ಚಿ ಗಾಯಗೊಳಿಸಿ ಸಮೀಪದ ಪೊದರಿನಲ್ಲಿ ಅಡಗಿ ಕುಳಿತುಕೊಂಡಿತು. ಅಷ್ಟರಲ್ಲಿ ಸಿಪಾಯಿಗಳ ಸುಬೇದಾರರೂ ಒಬ್ಬ ಪ್ಲಾಂಟರರೂ ಅಲ್ಲಿಗೆ ಬಂದು ಗುಂಡಿನಿಂದ ಅದನ್ನು ಹಿಂಸಿಸಿದರು. ಸುಭೇದಾರರ ಗುಂಡು ತಾಗಿದುದನ್ನು ಕಂಡು ಚಿರತೆಯು ಅವರ ಮೇಲೆ ಹಾರಿ ಅವರನ್ನೂ ಗಾಯಗೊಳಿಸಿತು. ಇದೆಲ್ಲವೂ ಕೆರೆಯ ದಡದಲ್ಲಿ ಆದುದರಿಂದ ಚಿರತೆಯೂ, ಸುಭೇದಾರರೂ ನೀರಿಗುರುಳಿದರು. ಕೂಡಲೇ ಚಿರತೆಯು ಈಜಾಡಿ ದಡವನ್ನು ಸೇರಿ ೪೦ ಅಡಿ ಎತ್ತರದ ಒಂದು ಮರವನ್ನು ಹತ್ತಿ ಕುಳಿತುಕೊಂಡಿತು. ಅಷ್ಟರಲ್ಲಿ ಸುಭೇದಾರರೊಂದಿಗಿದ್ದ ಪ್ಲಾಂಟರರು ಒಂದೇ ಗುಂಡಿನಿಂದ ಚಿರತೆಯನ್ನು ಕೊಂದು ನೆಲಕ್ಕುರುಳಿಸಿದರು. ಗಾಯಹೊಂದಿದವರ ಪೈಕಿ ಹೆಂಗಸು ಸತ್ತಳು. ಉಳಿದವರು ಆಸ್ಪತ್ರೆಯಲ್ಲಿರುವರು.

ಬಾಲ್ಯವಿವಾಹ ನಿಷೇಧ.

ಬಾಲ್ಯವಿವಾಹ ನಿಷೇಧದ ಕುರಿತು ಮಂಡಿಯ ಮಹಾರಾಜರು ತನ್ನ ಅಭಿಪ್ರಾಯವನ್ನು ಕೊಟ್ಟಿರುವರು. "ಬಾಲ್ಯವಿವಾಹ ನಿಷೇಧದ ಕುರಿತು ಕಳೆದ ಮೂರು ವರುಷಗಳಿಂದ ನಾನು ಚೆನ್ನಾಗಿ ಆಲೋಚಿಸಿ ಈಗ ತಾನೆ ಹುಡುಗರು ೧೮ ವರ್ಷದ ಮೊದಲೂ, ಹುಡುಗಿಯರು ೧೪ ವರ್ಷದ ಮೊದಲೂ ಮದುವೆಯಾಗಬಾರದೆಂದು ನಿಶ್ಚಯಿಸಿರುವೆನು. ಈ ನಿಶ್ಚಯವನ್ನು ಒಂದು ಕಾನೂನಾಗಿ ಪರಿಣಮಿಸುವಂತೆ ಮಾಡುವೆನು. ಹುಡುಗಿಯರಿಗೆ ಹದಿಮೂರು ವರುಷವು ಕಡಿಮೆಯೊದಾಗ್ಯೂ ಮಹಾಚಾರವು ಬಹಳವಾಗಿ ಸುತ್ತಿಕೊಂಡಿರುವ ಬ್ರಾಹ್ಮಣರನೇಕರಿರುವದರಿಂದ ಅವರಿಗೆ ಅನುಕೂಲವಾಗುವಂತೆ ಹೀಗೆ ಮಾಡಿದುದಾಗಿದೆ. ಇದಕ್ಕೆ ವಿರೋಧವಾಗಿ ಮದುವೆಯನ್ನು ಮಾಡುವವರೂ ಮದುವೆಯನ್ನು ಮಾಡಬೇಕೆಂದು ಪ್ರೋತ್ಸಾಹಿಸುವವರೂ ಶಿಕ್ಷೆಗೆ ಪಾತ್ರರಾಗುವರು. ಈ ಕಾನೂನು ನ್ಯಾಯಸಮ್ಮತವಾಗಿದೆಯೆಂದು ಸರ್ವರೂ ಅಭಿಪ್ರಾಯಪಡುವರೆಂದು ನಾನು ಭರವಸೆ ಪಡುತ್ತೇನೆ. ಬಾಲ್ಯವಿವಾಹವು ವಧೂವರರ ಆರೋಗ್ಯಹಾನಿಗೆ ಸುಲಭ ಹಾದಿಯಾದುದರಿಂದ ಅದನ್ನು ನಿಷೇಧಿಸುವದು ಸರ್ವರ ಕರ್ತವ್ಯವೂ ಆಗಿದೆ. ಆದಕಾರಣ ನನ್ನ ಪ್ರಜೆಗಳು ನನ್ನ ಈ ಅಭಿಪ್ರಾಯಕ್ಕೆ ಅನುಮೋದನೆಯನ್ನು ಕೊಡುವರೆಂದು ನಂಬುವೆನು" ಎಂದು ಮಂಡಿಯ ಮಹಾರಾಜರೆನ್ನುವರು.

ಮದ್ರಾಸ್ ಕೌನ್ಸಿಲಿನಲ್ಲಿ ಸರಕಾರದ ಫೊರೇಸ್ಟ್ ಆಡಳಿತದ ಕುರಿತು ಶ್ರೀ. ಎ. ಬಿ. ಸೆಟ್ರು ಭಾಷಣ.

(ಕಳೆದ ಮಾರ್ಚ್ ತಾ. ೧೫ರ ಸಭೆಯಲ್ಲಿ.)

ಕಳೆದ ವರ್ಷದ ಬಜೆಟ್ಟಿನ ಚರ್ಚೆಯ ಸಂದರ್ಭದಲ್ಲಿ ತಮ್ಮ ವರ್ಗಸ್ಥಳಗಳ ಸಮೀಪ ಕಾಡುಗಳಿರುವುದರಿಂದ ರೈತರಿಗೆ ಉಂಟಾಗುವ ಹಾನಿ, ಅನಾನುಕೂಲತೆ, ಸಂಕಷ್ಟಾದಿಗಳ ಕುರಿತು ಅನೇಕ ಮೆಂಬರರು ದೂರು ಹೇಳಿದ್ದರು. ಇವುಗಳಿಗೆಲ್ಲಾ ಕನ್‌ಸರ್ವೇಟರರಾದ ಮಿ. ಟ್ರ್ಯಾರ್‌ಮನರು, ಉತ್ತರವೀಯುವಾಗ ರಿಸರ್ವ್ ಕಾಡುಗಳು ರೈತರ ಸಾಗುವಳಿ ಜಮೀನಿಗೆ ತಾಗಿರುವ ಸಂಗತಿಗಳನ್ನು ಸ್ಥಳೀಕ ಆಫೀಸರರಿಗೆ ತಿಳಿಸಿದ್ದಲ್ಲಿ ಅಂತಹ ರಿಸರ್ವ್ ಕಾಡುಗಳ ಮೇರೆಯನ್ನು ದೂರಹಾಕಲು ವ್ಯವಸ್ಥೆ ಮಾಡುವಂತೆ ಕೂಡಲೇ ಅವುಗಳನ್ನು ತನಗೆ ತಿಳಿಸಬೇಕೆಂದು ಅನೇಕ ವೇಳೆ ಹುಕುಂ ಕೊಟ್ಟಿರುವೆನೆಂದು ಹೇಳಿದರು. ಆದರೆ ದಕ್ಷಿಣ ಕನ್ನಡದಲ್ಲಿ ಗ್ರಾಮಗಳ ಗಡಿಪ್ರದೇಶಗಳು ಅಂಕುಡೊಂಕಾಗಿರುವುದರಿಂದ ಮತ್ತು ಇವುಗಳ ಸುತ್ತುವರಿದಿರುವ ಘಟ್ಟ ಭಾಗಗಳ ಹೊರತು ಇತರ ಕಡೆಗಳಲ್ಲಿನ ರಿಸರ್ವ್ ಕಾಡುಗಳ ಅಗಲವು ಒಂದು ಮೈಲಿಗಿಂತ ಮೀರದಿರುವುದರಿಂದ ಸಾಗುವಳಿ ಜಮೀನಿನ ಮೇರೆಯಿಂದ ರಿಸರ್ವ್ ಕಾಡುಗಳ ಗಡಿಯನ್ನು ಇನ್ನೂ ದೂರ ಹಾಕುವುದು ಸಾಧ್ಯವಿಲ್ಲೆಂದು ನಾನು ಕೇಳಿರುತ್ತೇನೆ. ಈ ಸಂಗತಿಯು ನಿಜವಾದರೆ ದಕ್ಷಿಣ ಕನ್ನಡದಲ್ಲಿ ಈ ಸಂಕಷ್ಟವನ್ನು ನಿವಾರಿಸಲು ಆಸ್ಪದವಿಲ್ಲ.

ರಿಸರ್ವ್ ಗಡಿಯನ್ನು ದೂರಹಾಕಲು ಅಸಾಧ್ಯವೆಂದಾದರೆ ಎರಡನೆಯ ಉತ್ತಮ ಕೆಲಸವು ರೈತರ ವರ್ಗಸ್ಥಳಗಳಿಂದ ಕೆಲವು ದೂರದ ತನಕ ಕಾಡುಗಳ ಒಳಕುರಿಚಲನ್ನು ಕಡಿದುತೆಗೆಯುವುದಾಗಿದೆ. ದಕ್ಷಿಣ ಕನ್ನಡದ ರೈತರಿಗೆ ಕರಾವಳಿಯಲ್ಲಿ ೨೦೦ ಗಜದ ವರೆಗೆ, ಒಳಪ್ರದೇಶದಲ್ಲಿ ½ ಮೈಲಿನ ತನಕ ಕಾಡುಗಳ ಒಳಕುರಿಚಲನ್ನು ಕಡಿದು ತೆಗೆಯುವ ಹಕ್ಕೀಯಲಾಗಿದೆ. ಆದರೆ ಈ ರಿಯಾಯತಿಯ ಉಪಯೋಗವನ್ನು ಅವರು ಮಾಡಿಕೊಂಡಿಲ್ಲ. ಆದುದರಿಂದ ಫೋರೆಸ್ಟ್ ಡಿಪಾರ್ಟ್‌ಮೆಂಟಿನವರು ಕಾಡುಮೃಗಗಳಿಗೆ ಆಶ್ರಯವೀಯುವ ಪೊದೆಪೊದರುಗಳನ್ನು ಗ್ರಾಮ ಗಡಿಗಳಿಂದ ಸ್ವಲ್ಪ ದೂರದ ತನಕ ಕಡಿದು ಹಾಕುವ ವ್ಯವಸ್ಥೆಯನ್ನು ತಾವೆ ಮಾಡಿಸುವಂತಾಗಬೇಕು. ಕಾಡುಗಳ ಸಮೀಪದಲ್ಲಿನ ಗದ್ದೆಗಳಿಗೆ ಕಾಡುಮೃಗಗಳಿಂದ ಉಂಟಾಗುವ ಹಾವಳಿಯನ್ನು ಸರಕಾರವು ಒಪ್ಪುತ್ತದೆ. ಈ ಹಾವಳಿಯ ಪ್ರಮಾಣವೆಷ್ಟೆಂಬುದನ್ನು ತೋರಿಸಲು ಯಾವ ದಾಖಲೆಯೂ ಇರುವುದಿಲ್ಲ; ರೈತರು ಯಾವ ವಿಧದ ಸಹಾಯದ ಆಶೆಯನ್ನೇ ಕಾಣದೆ ಈ ಹಾವಳಿಯನ್ನು ಸಹಿಸಿ ಸುಮ್ಮನಿರಬೇಕು. ಕಾಡುಗಳ ಸಮೀಪ ವಾಸಿಸುವ ರೈತರ ಜಾನುವಾರುಗಳಿಗೆ ಕಾಡು ಮೃಗಗಳಿಂದುಂಟಾಗುವ ಹಾವಳಿಯನ್ನು ಸರಕಾರವು ಒಪ್ಪುತ್ತದೆ. ಕಳೆದ ಜನವರಿ ತಾರೀಕು ೨೫ರ ನನ್ನ ಪ್ರಶ್ನೆಯೊಂದಕ್ಕುತ್ತರವಾಗಿ ಕೌನ್ಸಿಲಿನ ಮುಂದಿಟ್ಟ ಕಲೆಕ್ಟರರ ವರದಿಯಿಂದ ದಕ್ಷಿಣ ಕನ್ನಡದಲ್ಲಿ ಕಾಡುಮೃಗಗಳಿಂದ ಕೊಲ್ಲಲ್ಪಟ್ಟ ಜಾನುವಾರು ಸಂಖ್ಯೆಯು ೧೯೨೪ರಿಂದ ೧೯೨೬ಕ್ಕೆ ರೂ. ೩,೪೯೦ರಿಂದ ರೂ. ೬೨೫೦ಕ್ಕೆ ಏರಿದೆಯೆಂದು ತಿಳಿದುಬರುತ್ತದೆ. ಆದರೂ ಕಾಡು ಮೃಗಗಳನ್ನು ಕೊಂದವರಿಗಿತ್ತ ಇನಾಮುಗಳ ಸಂಖ್ಯೆಯು ೧೯೨೨ರಿಂದ ೨೬ ತನಕ ೩೦೦ರಿಂದ ೧೧೧೬ಕ್ಕೆ ಇಳಿದುಬಿಟ್ಟಿರುತ್ತದೆ. ಅರ್ಹರಾದವರಿಗೆ ಮಾತ್ರ ಇನಾಮುಗಳನ್ನು ಕೊಡಬೇಕೆಂಬ ರೆವಿನ್ಯೂ ಬೋರ್ಡಿನ ಸೂಚನೆಯೇ ಇದಕ್ಕೆ ಕಾರಣವಿರಬೇಕೆಂದು ಕಲೆಕ್ಟರರ ಹೇಳಿಕೆ. ಅರ್ಹರಾದವರಿಗೆಂದರೆ ಸರಿಯಾದ ಅರ್ಥವೇನೆಂದು ವಿಷದಗೊಳಿಸಲ್ಪಡದುದರಿಂದ ಇದರ ಪರಿಣಾಮವಾಗಿ ಇನಾಮುಗಳ ಮೇಲೆ ನಿರ್ಬಂಧ ಹಾಕಲಾಯಿತು, ಜಾನುವಾರು ಮತ್ತು ಬೆಳೆಗಳ ಸಂರಕ್ಷಣೆಗಾಗಿ ಕಾಡುಪ್ರಾಣಿಗಳ ವಧೆಯು ಅವಶ್ಯವಾಗಿದೆ. ಇದಕ್ಕಾಗಿ ಸರಕಾರವು ಹೆಚ್ಚೆಚ್ಚು ಉದಾರವಾಗಿ ಇನಾಮುಗಳನ್ನು ಕೊಡಬೇಕಲ್ಲದೆ ಕಾಡುಗಳಲ್ಲಿ ಬೇಟೆನಡಿಸಲು ಜನರಿಗೆ ಸರ್ವ ಅನುಕೂಲತೆಗಳನ್ನೂ ಕಲ್ಪಿಸಿಕೊಡಬೇಕು. ೧೯೨೦ರಿಂದ ೨೬ರ ವರೆಗೆ ಒಟ್ಟಿಗೆ ೨೬ ಮಂದಿಯನ್ನು ಮಾತ್ರ ರಿಸರ್ವ್ ಕಾಡುಗಳಲ್ಲಿ ಬೇಟೆ ನಡಿಸಲು ಬಿಟ್ಟಿಂತಿದೆ. ಇನ್ನು ಮುಂದಾದರೂ ಗ್ರಾಮಸ್ಥರು ಒಟ್ಟಾಗಿ ಬೇಟೆ ನಡಿಸುವಂತೆ ಹೆಚ್ಚಿನ ಪ್ರೋತ್ಸಾಹಕೊಡಲಾಗುವುದೆಂದು ನಂಬುತ್ತೇನೆ.

ದಕ್ಷಿಣ ಕನ್ನಡದಲ್ಲಿ ರಿಸರ್ವ್ ಕಾಡುಗಳಿಂದ ತರಗೆಲೆ, ಸೊಪ್ಪು, ಕಟ್ಟಿಗೆ ಮೊದಲಾದುವುಗಳನ್ನು ತೆಗೆಯುವ ಕುರಿತು ರೈತರಿಗೆ ರಿಯಾಯತಿಗಳು ಕೊಡಲ್ಪಟ್ಟಿರುವುದೇನೋ ನಿಜ. ಆದರೆ ಫೋರೆಸ್ಟ್ ಗಾರ್ಡುಗಳು ಅನೇಕ ವೇಳೆ ರೈತರನ್ನು ಪೀಡಿಸಿ, ಅವರಿಗೆ ಮಾಮೂಲಾಗಿ ಕೊಡುವುದನ್ನು ತೆರದಿದ್ದರೆ ಸುಳ್ಳು ರಿಪೋರ್ಟುಗಳನ್ನು ಬರೆದು ಬಡ ಜನರ ಮೇಲೆ ನಂಬ್ರಗಳನ್ನು ಮಾಡುವರು. ಯಾವ ಕಾರಣಗಳಿಂದಾಗಲಿ ಈ ರಿಯಾಯತಿಗಳನ್ನು ಹಿಂತೆಗೆದ ಪಕ್ಷಕ್ಕೆ ರೈತರಿಗೆ ವಿಶೇಷವಾಗಿ ಕರಾವಳಿಯ ರಿಸರ್ವ್ ಕಾಡುಗಳ ಬಳಿಯಲ್ಲಿರುವವರಿಗೆ ಹೆಚ್ಚಿನ ಸಂಕಷ್ಟಕ್ಕೆ ಕಾರಣವಾಗುವುದು.

ಕಳೆದ ವರ್ಷದ ಬಜೆಟಿನ ಚರ್ಚೆಯ ಸಂದರ್ಭದಲ್ಲಿ ಹೊನರೆಬ್ಲ್ ಮಿ. ಮೋಯಿರರು ಫೋರೆಸ್ಟ್ ಡಿಪಾರ್ಟ್‌ಮೆಂಟಿನ ಕುರಿತು ಮಾತಾಡುವಾಗ ಸರಕಾರವು ಅದನ್ನು ಕೇವಲ ಆದಾಯಕಾರಕ ಖಾತೆಯೆಂದು ಪರಿಗಣಿಸಿಲ್ಲವೆಂದೂ, ಸದರಿ ಖಾತೆಯ ಮುಖ್ಯ ಉದ್ದೇಶವು ಜನತೆಯ ಆವಶ್ಯಕತೆಗಳನ್ನು ಒದಗಿಸಿಕೊಡುವುದೆಂಬುದನ್ನು ಸರಕಾರವು ಎಂದಿಗೂ ಮರೆಯಲಿಲ್ಲೆಂದೂ, ಕಟ್ಟಿಗೆ, ಸೊಪ್ಪು ವಗೈರೆ ಮತ್ತು ಗೋಚರಾವು ಸ್ಥಳವು ರೈತರಿಗೆ ಅತ್ಯಾವಶ್ಯಕವೆಂಬುದರ ಕಡೆಗೆ ಅದು ಹೆಚ್ಚಿನ ಲಕ್ಷ್ಯಕೊಡಬೇಕೆಂದೂ ಹೇಳಿದ್ದರು. ಆದರೆ ಈ ಧೋರಣೆಯು ಎಷ್ಟರ ಮಟ್ಟಿಗೆ ಸರಿಯಾಗಿ ಆಚರಣೆಯಲ್ಲಿ ತರಲ್ಪಟ್ಟಿದೆ? ಕೆಲವು ಸಮಯದ ಹಿಂದೆ ಆಗ ಫೋರೆಸ್ಟ್ ಖಾತೆಯ ಆಡಳಿತವಿದ್ದ ಮಾನ್ಯಮೆಂಬರು ನನ್ನ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಗೋಚರಾವು ಫೀಸನ್ನು ಸಂಪೂರ್ಣ ಅಥವಾ ಅರ್ಧ ಮಾಫಿ ಬಿಡಬೇಕೆಂದು ದಕ್ಷಿಣ ಕನ್ನಡದ ರೈತರ ಮನವಿ ಬಂದಿರುತ್ತದೆಂದು ಒಪ್ಪಿದ್ದರು. ಆದರೆ ಈ ವಿಷಯದಲ್ಲಿ ತೀರಾ ಬಡ ಒಕ್ಕಲಿಗರಿಗೂ ಕೂಡ ಯಾವ ರಿಯಾಯತಿಯನ್ನಾದರೂ ತೋರಿಸುವ ಕುರಿತು ಶಂಕೆ ಸೂಚಿಸಿದ್ದರು. ಇನ್ನು ಮುಂದಾದರೂ ಸರಕಾರವು ಹೆಚ್ಚಿನ ಸಹಾನುಭೂತಿಯ ಧೋರಣೆಯನ್ನು ವಹಿಸಿ ಸಾಧ್ಯವಿದ್ದಷ್ಟು ಮಟ್ಟಿಗೆ ಫೋರೆಸ್ಟ್ ಸಂಕಷ್ಟಗಳನ್ನು ನಿವಾರಿಸುವಂತೆ ನೋಡುವುದೆಂದೇ ನನ್ನ ನಿರೀಕ್ಷೆಯಾಗಿದೆ.

ಬೌದ್ಧಮತವೂ ಹಿಂದೂದೇಶದಲ್ಲಿ ಆದರಿಂದ ಉಂಟಾದ ಬದಲಾವಣೆಗಳೂ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಹದಿಮೂರನೆಯ ಶತಮಾನದಲ್ಲಿ ಅಸ್ಸಾಮದೇಶವನ್ನು ಜಯಿಸಿದ ಅಹೋಮ್ ಎಂಬ ಮಂಗೋಲ ವಂಶದ ಅರಸರು ಮೊದಲು (೧೪೯೭) ಸುದಂಗಪಾ (೧೪೯೪) ಸುಪಿಂಪಾ, (೧೪೯೭) ಸುಹಂಗಮುಂಗ್, (೧೫೫೨) ಶುಕಂಪ ಎಂಬ ಅನ್ಯದೇಶಿಯ ಹೆಸರುಗಳನ್ನೇ ಇಟ್ಟುಕೊಂಡಿದ್ದರು. ಆದರೆ ೧೭ನೇ ಶತಮಾನದ ಆದಿಭಾಗದಿಂದ ಈ ಅರಸರು (೧೬೦೩) ಪ್ರತಾಪಸಿಂಹ (೧೬೪೮) ಜಯಧ್ವಜ, (೧೬೬೯) ಉದಯಾದಿತ್ಯ (೧೬೯೬) ರುದ್ರಸಿಂಹ ಎಂಬ ಹೆಸರುಗಳನ್ನೇ ಇಟ್ಟುಕೊಳ್ಳಲು ಆರಂಭಿಸಿದರು.

ಸಿಥಿಯನರು ಅಥವಾ ಸಕರು ಮೊದಲು ಮೊದಲು ತಮ್ಮ ಮಾತೃಭೂಮಿಯವರೊಡನೆ ಸಮ್ಮಂಧಬೆಳಸಿದರು. ಇವರ ರಾಜ್ಯ ಕೂಶಕಸ್ಥಾನವೆಂಬ ಸಂಸ್ಕೃತ ಹೆಸರು ಗ್ರೀಕಭಾಷೆಯಲ್ಲಿ "ಸಿಕಿಸ್ತನ್" ಎಂದಾಯಿತು. ಪಾರ್ಸಿ ಭಾಷೆಯಲ್ಲಿ ನಿಜಸ್ತಾನವೆಂದಾಯಿತು. ಈ ಭಾಗವು ಈಗಿನ ಪರ್ಶಿಯಾ ರಾಜ್ಯದ ಆಗ್ನೇಯ ದಿಕ್ಕಿನಲ್ಲಿದೆ.

ಹಲವು ವರುಷಗಳ ನಂತರ ಸಕರು ಹಿಂದೂಗಳಂತೆ ನಡಿಯಲಾರಂಭಿಸಿದರು. ೫ನೇ ಶತಮಾನದಲ್ಲಿ ಬಂದ ಹೂಣರೂ ಇದೇ ರೀತಿಯಲ್ಲಿ ನಡಿಯಲಾರಂಭಿಸಿದರು. ಆದರೆ ಗುಪ್ತರ ಯುದ್ಧದಲ್ಲಿ ಇವರು ಸೋತು ರಾಜಾಧಿಕಾರವನ್ನು ಕಳಕೊಂಡರು. ನಂತರ ಇವರು ಸಾಮಾನ್ಯ ಜನರಂತೆ ಇರಲಾರಂಭಿಸಿದರು. ಹಿಂದೂ ಮತದಲ್ಲಿ ಇನ್ನೊಂದು ಹೊಸ ಜಾತಿಯು ಉಂಟಾದಂತಾಯಿತು. ಒಂದು ರಾಜಪುತ್ರ ರಾಜ ಕುಟುಂಬಕ್ಕೆ ಈಗಲೂ ಹೂಣ ಎಂಬ ಹೆಸರಿದೆ. ಇವರ ಸಹೋದರರಾಜರರು ಡಿಲ್ಲಿಯ ಹತ್ತರ ಉಳಕೊಂಡು ಒಂದು ಜಿಲ್ಲೆಯ ಗುಜರನ್‌ವಾಲಾ ಎಂಬ ಹೆಸರನ್ನೇ ಕೊಟ್ಟಿರುತ್ತಾರೆ. ಒಂದು ರಾಜಪುತ್ರ ಕುಟುಂಬಕ್ಕೆ ಬಾರಗುಜರ ಎಂಬ ಹೆಸರೂ ಇದೆ.

ಹಿಂದೂ ಸಮಾಜದಲ್ಲಿ ಉಂಟಾದ ಮಾರ್ಪಾಟು.

ಕ್ರಿಸ್ತಶಕದ ೧ನೇ ಶತಮಾನದಿಂದ ೬ನೇ ಶತಮಾನದ ವರೇಗೆ ಉಂಟಾದ ಚಳವಳದಿಂದ ಸಿಥಿಯನರೂ, ಇನ್ನು ಹಲವು ಊರಿಂದ ಊರು ಸಂಚರಿಸುವ ಕುಟುಂಬಗಳು ಉನ್ನತಿಗೆ ಬಂದವು. ಹಿಂದೂ ಸಮಾಜದಲ್ಲಿ ಹೊಸ ಬದಲಾವಣೆಗಳು ಉಂಟಾದವು. ಇಷ್ಟರ ವರೆಗೆ ಇಲ್ಲದ ಜಾತಿಭೇದಗಳು ಉಂಟಾಗಿ ಬಲವಾದವು. ಈ ರೀತಿಯ ಬದಲಾವಣೆಯು ಯಾರಿಂದ ಆಯಿತು ಎಂಬದಕ್ಕೆ ಚರಿತ್ರಾಧಾರಗಳು ಕಂಡುಬರುವುದಿಲ್ಲ. ಈ ರೀತಿಯಲ್ಲಿ ಜಾತಿಭೇದವನ್ನು ಬಲಪಡಿಸಿದ ಬ್ರಾಹ್ಮಣ ವಿದ್ವಾಂಸರ ಹೆಸರುಗಳು ಕಂಡುಬರುವುದಿಲ್ಲ. ಆದರೆ ಇವುಗಳ ವಿಷಯ ಗುಜರಾತ ಅಸ್ಸಾಮ, ಬಂಗಾಳ ಮತ್ತು ಒರಿಸ್ಸಾದೇಶಗಳಲ್ಲಿ ಕೆಲವು ಕಥೆಗಳಿವೆ. ಒಟ್ಟಾರೆ ಬೌದ್ಧಮತದಿಂದ ಹೊಸ ಬದಲಾವಣೆಗಳು ೨೦ ಶತಮಾನಗಳ ವರೇಗೆ ನಡೆದವು. ಭೂಲೋಕ ಜನಸಂಖ್ಯೆಯ ಕಾಲು ಪಾಲು ಜನರು ಬೌದ್ಧರಾದರು. ಆದರೆ ಬೌದ್ಧಮತವು ತನ್ನ ಜನ್ಮಭೂಮಿಯಾದ ಇಂಡಿಯದಿಂದ ಮಾಯವಾದುದು ಆಶ್ಚರ್ಯವಾಗಿ ಕಂಡುಬರುತ್ತದೆ.

ಇದಕ್ಕೆ ಕಾರಣವೇನೆಂದರೆ ಬೌದ್ಧಮತವು ಒಂದು ಹೊಸ ಮತವಲ್ಲ. ಆ ಸಮಯದಲ್ಲಿದ್ದ ಹಿಂದೂ ಮತದ ಸೂತ್ರಗಳಿಗಿಂತಲೂ ಸ್ವಲ್ಪ ಶ್ರೇಷ್ಠ ತರದ ಸೂತ್ರಗಳು ಇದರಲ್ಲಿವೆ. ಬುದ್ಧನು ಇತರ ಪ್ರವಾದಿಗಳಂತೆ ಒಬ್ಬ ಪ್ರವಾದಿಯಲ್ಲ, ಒಬ್ಬ ಸನ್ಯಾಸಿಯಾಗಿರುವನು. ಇವನು ಎಲ್ಲಾ ತರದ ದುರ್ಗುಣಗಳನ್ನು ಬಿಟ್ಟುಬಿಡಬೇಕೆಂದು ತನ್ನ ಶಿಷ್ಯರಿಗೆ ಬೋಧಿಸಿದನು. ಇವನು ಹೊಸ ತತ್ವಜ್ಞಾನವನ್ನು ಬೋಧಿಸಲಿಲ್ಲ. ಕೆಲವು ಉತ್ತಮ ತರಗತಿಯ ನೀತಿಸೂತ್ರಗಳನ್ನು ಕೊಟ್ಟಿರುವನು. ಯಜ್ಞಯಾಗಗಳನ್ನು ಮಾಡಿಯೂ ಮಂತ್ರೋಚ್ಚಾರಗಳಿಂದಲೂ ಏನೂ ಪ್ರಯೋಜನವಿಲ್ಲವೆಂದೂ ಎಲ್ಲಾ ದುರ್ಗುಣಗಳನ್ನು ಬಿಟ್ಟು ನಡೆದರೆ ಮಾತ್ರವೇ ಮೋಕ್ಷವು ಸಿಕ್ಕುವದೆಂದು ಬೋಧಿಸಿರುವನು. ದಯೆ, ದಾನ, ಸತ್ಯ ಮತ್ತು ಮನಶುದ್ಧಿ ಇವೇ ಮುಖ್ಯವಾದವು. ಬೌದ್ಧಶಾಸ್ತ್ರಗಳನ್ನು ಬರೆದುದು ಬುದ್ಧನ ಮರಣಾನಂತರವಲ್ಲದೆ ಬುದ್ಧನ ಕಾಲದಲ್ಲಿ ಅಲ್ಲ. ಸನ್ಯಾಸಿಗಳನ್ನು ಉಂಟುಮಾಡಿದುದೇ ಈ ಮತದಲ್ಲಿ ಉಂಟಾದ ಹೊಸ ಬದಲಾವಣೆ. ಆದರೆ ಈ ಸನ್ಯಾಸಿಗಳು ಸಹ ಯಾವ ರೀತಿಯಲ್ಲಿ ವರ್ತಿಸಬೇಕೆಂದು ಬುದ್ಧನು ಕ್ರಮಗಳನ್ನು ಬರೆದಿಡಲಿಲ್ಲ. ಈ ಸೂತ್ರಗಳನ್ನು ಬುದ್ಧನ ಮರಣಾನಂತರವೇ ಬರೆಯಲ್ಪಟ್ಟವುಗಳು.

ಬುದ್ಧನ ನಂತರದ ಎರಡು ಸಭೆಗಳಲ್ಲಿ ಮುಖ್ಯವಾಗಿ ವೈಸಾಲಿಯಲ್ಲಿ ಆದ ಸಭೆಯಲ್ಲಿ ಬೌದ್ಧರಲ್ಲಿ ಎರಡು ತಂಡಗಳಾದವು. ಒಂದು ತಂಡದವರು ಬುದ್ಧನ ಸೂತ್ರಗಳೇ ಸಾಕೆಂದು ವಾದಿಸಿದರು. ಸನ್ಯಾಸಿಗಳು ಮಾಡುವ ಅನಾಚಾರಗಳು ಹೆಚ್ಚಾದುದರಿಂದ ಸನ್ಯಾಸಿಗಳ ಜೀವನಕ್ರಮಗಳಲ್ಲಿ ವ್ಯತ್ಯಾಸಗಳನ್ನುಂಟುಮಾಡಬೇಕೆಂದು ಯಶನ, ಶಾರ್ವಕ, ರೇವತಿ ಮುಂತಾದ ಬೌದ್ಧ ವಿದ್ವಾಂಸರು ವಾದಿಸಿದರು.

ಕೊಣಾಜೆಗ್ರಾಮ ಅಮೃತೇಶ್ವರೀ ವೈದ್ಯಶಾಲಾ

(S.I.R.)

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಕಡಿಮೆ ರೂ. ಆ.	ಹೆಚ್ಚು ರೂ. ಆ.
ಹೊಸ ಮುಸ್ಸಿ	7— 4	7— 1[illegible]
ಹೊಸ ಗುಡ್ಡ	6—10	[illegible]
ಸುಗ್ಗಿ	6— [illegible]	6—14
ಹೊಸ ರಾಳಿ	6— 0	[illegible]
ಊರ ಅವ್ವಲ್ ಬೆಳ್ತಿಗೆ	7— 4	[illegible]
ರಂಗೂನು ಬೆಳ್ತಿಗೆ ಗೋಣಿ	12—10	[illegible]
ಎಲ್ಲೂರು ಬೆಳ್ತಿಗೆ ಮುಡಿ ಗಳ್ಕೆ	6—14	[illegible]
ಗೋದಿ ಗೋಣಿ ಗಳ್ಕೆ	15—12	1[illegible]
ಹುರುಳಿಗೋಣಿ ಗಳ್ಕೆ	8— 8	11— [illegible]
ಕಡಲೆಗೋಣಿ ಗಳ್ಕೆ	10— 0	1[illegible]
ತೊಗರಿಗೋಣಿ ಗಳ್ಕೆ	15— 0	1[illegible]
ತೊಗರಿಬೇಳೆ ಗೋಣಿ ಗಳ್ಕೆ	18— 0	2[illegible]— 0
ಉದ್ದು ಗೋಣಿ ಗಳ್ಕೆ	13— 8	14— 0
ಹೆಸರುಗೋಣಿ ಗಳ್ಕೆ	12— 0	14— 8
ಊರು ಬೆಲ್ಲ ಖಂಡಿ ಗಳ್ಕೆ	45— 0	52— 8
ಉಪ್ಪು ಗೋಣಿ ಗಳ್ಕೆ	4— 8	4—12
ಕೊಬ್ರಿ ಖಂಡಿ ಗಳ್ಕೆ	130— 0	—
ಕೊಬ್ರಿ ಹಿಂಡಿ ಖಂಡಿ ಗಳ್ಕೆ	30— 0	40— 0
ಎಳ್ಳಿಂಡಿ ಖಂಡಿ ಗಳ್ಕೆ	40— 0	47— 8
ಕೊಬ್ರಿ ಎಣ್ಣೆ ಮುಡಿ ಗಳ್ಕೆ	7—14	9— 0
ಎಳ್ಳೆಣ್ಣೆ ಮುಡಿ ಗಳ್ಕೆ	8— 0	8— 4
ಹಿಪ್ಪೆ ಎಣ್ಣೆ ಪೆಟ್ಟಿಗೆ ಗಳ್ಕೆ	7— 2	8— 0
ಮೋರಿಸ ಸಕ್ಕರೆ ಮುಡಿ ಗಳ್ಕೆ	4— 0	—
ಊರ ಮೆಣಸಿನಕಾಯಿ ಮುಡಿ ಗಳ್ಕೆ	7— 0	7— 2
ಸಾಸಿವೆ ಮುಡಿ ಗಳ್ಕೆ	8— 0	8— 2
ಕೊತ್ತಂಬರಿ ಮುಡಿ ಗಳ್ಕೆ	6— 4	6—12
ಕಾಫಿ ಖಂಡಿ ಗಳ್ಕೆ	365— 0	380— 0
ಬೆಳಗೋಟು ಅಡಿಕೆ ಖಂಡಿ ಗಳ್ಕೆ	175— 0	190— 0
ಕಾಳುಮೆಣಸು ಖಂಡಿ ಗಳ್ಕೆ	520— 0	—
ಯಾಲಕ್ಕಿ ಮಣ ಗಳ್ಕೆ	65— 0	80— 0
ಗೇರುಬೀಜ ಮುಡಿ ಗಳ್ಕೆ	3—12	4— 0
ಕಬ್ಬಿಣ ಖಂಡಿ ಗಳ್ಕೆ	37— 8	40— 0
ತಾಂಬ್ರ ತಗಡು ಮಣ ಗಳ್ಕೆ	15— 0	16— 8
ತಾಂಬ್ರ ಪಾತ್ರಗಳು ಮಣ ಗಳ್ಕೆ	20— 0	21—
ಚೀನ ಬೆಳ್ಳಿ ಸೇರು ಗಳ್ಕೆ	15— 0	—
ಹಿತ್ತಾಳೆ ತಗಡು ಮಣ ಗಳ್ಕೆ	15— 0	16— 8
ಪವನು	13— 9	—

ಕರ್ಣಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನ.

ತಾ. ೧೨–೪–'೨೮ರಲ್ಲಿ ನಡೆದ ಸ್ವಾ. ಸಾ ಮಂಡಲದ ಅಧಿವೇಶನದ ನಿರ್ಣಯದಂತೆ ತಾ. ೨೦-೨೨-೨೩–೫–'೨೮ಕ್ಕೆ ಸರಿಯಾದ ವಿಭವ ಜೇಷ್ಠ ಶುಕ್ಲ ೨-೩-೪ ಚಂದ್ರವಾರ ಕುಜವಾರ ಬುಧವಾರ ದಿವಸಗಳಲ್ಲಿ ಚತುರ್ಥ ಆಯುರ್ವೇದ ಸಮ್ಮೇಲನವು ಮಂಗಳಾಪುರದಲ್ಲಿ ನಡಿಯುವದೆಂತ ನಿಶ್ಚಯವಾಗಿದೆ. ಮಾನ್ಯರೇ! ದೇಶೀಯ ಚಿಕಿತ್ಸೆಯಲ್ಲಿ ಪ್ರೇಮವುಳ್ಳ ಸಕಲ ಮಹಾನುಭಾವರು ಸಮ್ಮೇಲನದಲ್ಲಿ ಸಹಾನುಭೂತಿಯನ್ನು ತೋರಿಸಿ ಸಮ್ಮೇಲನವು ಸಫಲವಾಗಿ ಸರ್ವಾಂಶದಿಂದಲೂ ಯಶಸ್ವಿಯಾಗುವಂತೆ ಸಾಹಾಯವನ್ನು ಮಾಡಬೇಕಾಗಿ ಸ್ವಾಗತಸಮಿತಿಯ ಪ್ರಾರ್ಥನೆ, ಭಿನ್ನಭಿನ್ನ ಚಿಕಿತ್ಸಾ ಪದ್ಧತಿಯಿಂದ ರೋಗಗಳನ್ನು ಹೋಗಲಾಡಿಸಿ ಜನಸಮುದಾಯದ ಆರೋಗ್ಯವನ್ನು ಸ್ಥಾಪಿಸುವ ಚಿಕಿತ್ಸಾ ಮಹಾನುಭಾವರು ಈ ಸಮ್ಮೇಲನದಲ್ಲಿ ಅತ್ಯಧಿಕ ಸಹಾನುಭೂತಿಯಿಂದಲೂ ದಯಾಭಾವದಿಂದಲೂ ಔದಾರ್ಯವನ್ನು ತೋರಿಸಬೇಕಾಗಿ ವಿನಯಪೂರ್ವಕವಾದ ನಮ್ಮ ವಿನಂತಿ. ಸಮ್ಮೇಲನಕ್ಕೆ ಬಹಳ ಸ್ವಲ್ಪ ದಿವಸಗಳೇ ಉಳಿದವು. ಕರ್ತವ್ಯ ಅಂಶವು ಅತ್ಯಧಿಕವಾಗಿಯೇ ಇದೆ. ಪರಂತು ನಮ್ಮ ನಗರದ ಹಾಗೂ ಸಕಲ ದಕ್ಷಿಣ ಕನ್ನಡದ ಆಯುರ್ವೇದ ಚಿಕಿತ್ಸಕರು ಈ ವಿಷಯದ ತಮ್ಮ ಕರ್ತವ್ಯ ಜವಾಬ್ದಾರಿಕೆಯನ್ನು ತಾವಾಗಿಯೇ ತಿಳಿದು ಸ್ವೇಚ್ಛೆಯಿಂದ ಸಹಾಯಕರಾದರೆ ಕನ್ನಡದ ಬೇರೆ ಕಡೆಗಳಿಂದ ಸಮ್ಮೇಲನಕ್ಕೆ ದಯಮಾಡಿ ಚಿತ್ತಯಿಸುವ ನಮ್ಮ ಅತಿಥಿಗಳನ್ನು ಸಂತೋಷಗೊಳಿಸಲಿಕ್ಕೂ ವಸ್ತುಪ್ರದರ್ಶನವನ್ನು ಯಥೋಚಿತವಾಗಿ ನಡಿಸಲಿಕ್ಕೂ ಸ್ವಾಗತ ಸಮಿತಿಗೆ ಪ್ರಯಾಸ ಉಂಟಾಗಲಾರದು. ಚಿಕಿತ್ಸಕರೇ! ತಮ್ಮೆಲ್ಲರ ನಾಮ, ಧಾಮ, ವಿಲಾಸಗಳನ್ನು ಯಥೋಚಿತವಾಗಿ ಸ್ವಾಗತ ಸಮಿತಿಯು ತಿಳಿಯದಿರುವದರಿಂದ ಸರ್ವಸಾಮಾನ್ಯವಾಗಿ ತಮ್ಮಗಳನ್ನು ಪ್ರಾರ್ಥಿಸಿಕೊಳ್ಳುತ್ತದೆ. ತಾವುಗಳಾಗಿಯೇ ಈ ಸಮ್ಮೇಲನಕಾರ್ಯದಲ್ಲಿ ಮುಂದಾಗಿ ಬಂದು ಉಪಸ್ಥಿತರಾಗಿ ಸಮ್ಮೇಲನವು ಯಶಸ್ವಿಯಾಗಿ ದಕ್ಷಿಣ ಕನ್ನಡಿಗರ ಕೀರ್ತಿಯನ್ನು ಸ್ಥಾಪಿಸಿ ದೀನರೋಗಿಗಳ ಕಡೆ ದಯಾಹೃದಯರಾಗಿ ಜನತೆಯ ಆದರಕ್ಕೆ ಪಾತ್ರರಾಗಿರಿ. ಈ ಸದ್ವಿಷಯದಲ್ಲಿ ಕುತೂಹಲಿಗಳಾಗಿ ಸಜ್ಜನರ ಮನಸ್ಸನ್ನು ಆಕರ್ಷಿಸಿರಿ. ಈ ಸಂದರ್ಭವು ದಕ್ಷಿಣ ಕನ್ನಡದ ಇತಿಹಾಸದಲ್ಲಿ ಮೊದಲನೇದಾಗಿರುತ್ತದೆ. ಶೀಘ್ರದಲ್ಲಿಯೇ ಇಂಥಾ ಇನ್ನೊಂದು ಸಂದರ್ಭವು ಸಂಘಟಿಸೀತೆಂದು ಯೋಚಿಸಿ ವಿಲಂಬವನ್ನು ಮಾಡಬೇಡಿರಿ.

ಸ್ವಾಗತ ಸಮಿತಿಯ ಕಾರ್ಯದರ್ಶಿಗಳು,

(Sd) Dr. P. ANANDA RAO.
" Kaviraja N. M. SHETTY.
" Vaidya B. R. HARIDAS.

WANTED

Qualified Medical Practitioners for the rural dispensary to be opened at Bellare on usual conditions. Apply by 30th April 1928 to the undersigned through the District Medical Officer, South Kanara.

(Sd) M. SHIVA RAO.
President,
Puttur Taluk Board

ADVERTISE IN OUR WEEKLY

To Reach the Hearths & Homes of India's Masses

For Particulars Apply to:

The Manager,
SWADESHABHIMANI,
MANGALORE

೧೦ನೇ ತಾರೀಖು ಬೈಸಾರಿ ರಥೋತ್ಸವದ ವಿಭವ, ರಥದ ಕೊಟ್ಟಿಗೆಯ ಪಡು ಪಾರ್ಶ್ವ ಸಂತೆ ಕಟ್ಟೋಣಗಳು ಕಟ್ಟಿದಂದಿನಿಂದ ಪ್ರತಿ ವರ್ಷ ಕಟ್ಟೋಣ ವ ಚಪ್ಪರಗಳಿಗೆ ಅಪಾಯ ಬರುತ್ತಿದೆ. ಅಂತೆ. ಅಗ್ರಸಾಲೆಯ ಮೂಡು ಪಾರ್ಶ್ವ ಕಟ್ಟುತ್ತಿರುವ ಸಂತೆಗಳಿಗೂ ತೊಂದರೆಯಾಗುವದ್ದಿದೆ. ಅಲ್ಲಿ ಇರುವ ತೆಂಗಿನ ಮರಗಳು ಪ್ರತಿ ವರ್ಷ ರಥಕ್ಕೆ ತಾಗುತ್ತಿತ್ತು. ಈ ವರ್ಷ ಮಾತ್ರ ರಥದ ಕೊಟ್ಟಿಗೆಯ ಪಡು ಮತ್ತು ಅಗ್ರಸಾಲೆಯ ಮೂಡು ಕೆಲಸಂತೆಗಳಿಗೆ ಜಖಮಾದದ್ದಲ್ಲದೆ ಮಹಾರಥದ ಹೊಡೆತದಿಂದ ಸುಮಾರು ೪೦ ಫೀಟು ಉನ್ನದ ತೆಂಗಿನ ಮರವು ಮುರಿದು ಬಿತ್ತು. ಜನರು ಓಡಿ ತಪ್ಪಿಸಿಕೊಂಡದ್ದರಿಂದ ಪ್ರಾಣಾಪಾಯ ಒದಗಲಿಲ್ಲ. ಅಂತೂ ಯಾವ ಅಪಾಯ ಒದಗುವಂತೆ ಇದ್ದರೂ ಸ್ಥಳವಂದಿಗರು ಕಂಡರೂ ಕಾಣದಂತೆ ಆನೆಯ ಮೇಲೆ ಮಳೆ ಸುರಿದಂತೆ ಇರುವುದು ಬಹಳ ವಿಷಾದಕರ. ಒಟ್ಟಾರೆ ನೋಡಿದರೆ ಈ ವರ್ಷದ ಉತ್ಸವವು ಚಾಂದ್ರ ಸೌರ ಪ್ರಭವ ವಿಭವ ಸಂವತ್ಸರಗಳ ಸಮ್ಮಿಲನದಿಂದ ಕೂಡಿ ದೇವರ ದಯದಿಂದ ಬಹು ವಿಭವದಿಂದ ನಡೆಯಿತು. ಇಷ್ಟರಲ್ಲಿ ಕಾರ್ಕಳ ತಾಲೂಕಿನವರ ಪ್ರಾರ್ಥನೆಯಂತೆ ಹೊಸದಾಗಿ ಮಾಡಿಸತಕ್ಕ ಉಡ್ಪಿ ರೈಲ್ವೆ ಲೈನ್ ತೋಳಲಿ ಸಮೀಪ ಹೋಗುವದೆಂಬದು ಕೇಳಿದರೆ ಯಾರಿಗೆ ಸಂತೋಷವಾಗದಿರದು! ಆದರೆ ಮಾಡುವುದೇನು! ಅಷ್ಟನ ಪ್ರಾರ್ಥನೆಯು ಫಲ ನಮ್ಮಗನಿಗೂ ಒದಗಲಿಲ್ಲವೆಂದಂತೆ ೩೩ ವರ್ಷಗಳಲ್ಲಿ ಹೋರಾಡುತ್ತಿರುವ ಬಂಟ್ವಾಳ ಗುರುಪುರ ತೋಳಲಿ ರಸ್ತೆಯಂತೆ ಅಜ್ಜದಂಟೆಯಾಗದೆ ರಾಜನ ಪಾಲಕಿಯಾಗಲಿ ಎಂದು ಪ್ರಾರ್ಥನೆ.

ಪ್ರತ್ಯಕ್ಷದರ್ಶಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‍ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24–8–'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಲಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,37,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,

ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಠರಾಯಿ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳ ಠೇವಣಿಗೆ 6¼% 1 ವರುಷಕ್ಕೆ ಶೇ. 6
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮುಸಮ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ	ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು. ಮತ್ತು	**ಮದನಮಂಜರಿ ಮಾತ್ರೆಗಳು** ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0. ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‍ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‍ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಿಣಿಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ೭೫ಕ್ಕೆ ೧—೪—೦, ೧೫೦ ಸೀಸೆಗೆ ೨—೭—೦, ೩೦೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಭಿಷಕ್‍ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‍ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.	ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು. ಟವುನ್ ಮಾರ್ಕೆಟ್.

ಆರೋಗ್ಯ

MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 3-18-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರಿಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೭ನೇ ಶುಕ್ರವಾರ ಎಪ್ರಿಲ್ ೧೯೨೮. ಸಂಚಿಕೆ ೧೭

THE CANARA BANKING CORPORATION,
UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ದೇಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21-1-'28.

N. ANANDA RAO,
Secretary.

ಮಕ್ಕಳ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ ತುರಿಕೆ, ಕಜ್ಜಿಗೂ, ನಂಬಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿದಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249. ಫ್ರೇಯರ್ ರೋಡ್.
ಮುಂಬಯಿ

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.



Batliwalla's Preparations Cover All Your Needs.

A NAME THAT MERIT HAS MADE FAMOUS.

ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಮಲೇರಿಯಾ ಜ್ವರ ನಿವಾರಣ. ರೂ. ೧.

ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ರೂ. ೧—೨—೦. ರೂ. ೧—೪—೦. ೧—೧೨—೦

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

-CAWASHAPUR, BOMBAY.

ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

...ಯವರ ಲೋದ್ರ

...ಗರ್ಭಾಶಯ ರೋಗನಿವಾರಿಣಿ.

...ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ಭಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹಲವು ಬಗೆಯಾಗಿ ಹೊಗಳುತ್ತಿರುವರು.

... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

..., ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ... ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಗಳೂ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

...ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

...ಗೂಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

'ಅಂಬಾ ತಾಯಿತ'

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ಖರಿದಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ಯಾಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ಖರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟ್ಯಾಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ವೈಶಾಖ ಶು ೮ರಿಂದ ಶನಿವಾರದಿಂದ ವಿಭವ ಸಂವತ್ಸರದ ವೈಶಾಖ ಶು ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಮೇಷ (ಪಗ್ಗು)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಮೇಷಾದಿ	ಸೂರ್ಯ. ಉ	ಅಸ್ತ
28	ಶನಿ	೯	೩೫.೩೨	ಆಶ್ಲೇಷಾ	೨೦.೪೬	೧೬	6.13	6.43
29	ರವಿ	೧೦	೩೫.೩೧	ಮಘಾ	೨೧.೧೬	೧೭	6 12	6 43
30	ಸೋಮ	೧೧	೩೬.೪೬	ಪುಬ್ಬಾ	೨೪.೦	೧೮	6.12	6 43
1	ಮಂಗಳ	೧೨	೩೯.೧೪	ಉತ್ತರಾ	೨೭.೪೬	೧೯	6 12	6.44
2	ಬುಧ	೧೩	೪೨.೪೬	ಹಸ್ತಾ	೩೩.೪೪	೨೦	6 12	6.44
3	ಗುರು	೧೪	೪೭.೧೬	ಚಿತ್ರಾ	೩೮.೩೨	೨೧	6.11	6.44
4	ಶುಕ್ರ	○	೫೩.೧೪	ಸ್ವಾತಿ	೪೪.೪೬	೨೨	6.11	6.44

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಪರಮಾವಧಿ		Minimum ಅಲ್ಪಾವಧಿ		Rainfall. ಮಳೆ ದಿನದ ಮಳೆ	ಒಟ್ಟು ಮಳೆ.
20	92—	0	78—	8	—	—
21	90	7	78—	2	—	—
22	90—	0	77—	8	—	—
23	89—	6	78—	6	—	—
24	91—	4	81—	7	—	—
25	90—	8	81—	2	—	—
26	91—	2	81—	2	—	—
						138–15

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಆ	ವರೆಗೆ ರೂ ಆ
ಹೊಸ ಮಸ್ಕತಿ	7— 4	8— 0
ಹೊಸ ಗುಡ್ಡು ...	6—10	7— 4
ಸಗ್ಗಿ ...	6— 6	7— 0
ಹೊಸ ರಾಶಿ ...	6— 0	6—14
ಊರ ಅವ್ವಲ್ ಬೆಳ್ತಿಗೆ ...	7— 4	8— 4
ರಂಗೂನು ಬೆಳ್ತಿಗೆ ಗೋಣಿ ೧ ...	12—10	13— 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6—14	7— 0
ಗೋದಿ ಗೋಣಿ ೧ಕ್ಕೆ ...	15—10	18— 8
ಹುರುಳಿಗೋಣಿ ೧ಕ್ಕೆ ...	8— 8	10—10
ಕಡಲೆಗೋಣಿ ೧ಕ್ಕೆ ...	10— 0	12— 8
ತೊಗರಿಗೋಣಿ ೧ಕ್ಕೆ ...	14— 8	15— 8
ತೊಗರಿಬೇಳೆ ಗೋಣಿ ೧ಕ್ಕೆ ...	18— 0	26— 0
ಉದ್ದುಗೋಣಿ ೧ಕ್ಕೆ ...	13— 0	14— 0
ಹೆಸರುಗೋಣಿ ೧ಕ್ಕೆ ...	12— 0	14— 8
ಊರು ಬೆಲ್ಲ ಖಂಡಿ ೧ಕ್ಕೆ ...	45— 0	52— 8
ಉಪ್ಪು ಗೋಣಿ ೧ಕ್ಕೆ ...	4—12	4—14
ಕೊಪ್ರ ಖಂಡಿ ೧ಕ್ಕೆ ...	130— 0	—
ಕೊಪ್ರ ಹಿಂಡಿ ಖಂಡಿ ೧ಕ್ಕೆ ...	30— 0	40— 0
ಎಳ್ಳಿಂಡಿ ಖಂಡಿ ೧ಕ್ಕೆ ...	37— 8	46— 4
ಕೊಪ್ರ ಎಣ್ಣೆ ಮುಡಿ ೧ಕ್ಕೆ ...	8— 2	9— 2
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8— 4
ಹರಳೆಣ್ಣೆ ಬೆಳ್ತಿಗೆ ೧ಕ್ಕೆ	7— 2	8 0
ದೇಶೀ ಸಕ್ಕರೆ ಮುಡಿ ೧ಕ್ಕೆ ...	4— 4	4— 6
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7— 0	7— 2
ಸಾಸಿವೆ ಮುಡಿ ೧ಕ್ಕೆ ...	8— 0	8— 2
ಕೊತ್ತಂಬರಿ ಮುಡಿ ೧ಕ್ಕೆ ...	6— 8	7— 8
ಕಾಫಿ ಖಂಡಿ ೧ಕ್ಕೆ ...	365— 0	360— 0
ಚಿಕಣಿ ಅಡಿಕೆ ಖಂಡಿ ೧ಕ್ಕೆ ...	170— 0	190— 0
ಕಾಳುಮೆಣಸು ಖಂಡಿ ೧ಕ್ಕೆ ...	510— 0	—
ಮೆಂತ್ಯ ಮುಡಿ ೧ಕ್ಕೆ ...	65— 0	80— 0
ಗೇರುಬೀಜ ... ೧ಕ್ಕೆ ...	3—12	3—14
ಶುಂಠಿ ಖಂಡಿ ೧ಕ್ಕೆ ...	37— 8	40— 0
ಹುಣಿಸೆ ಹಣ್ಣು ಮುಡಿ ೧ಕ್ಕೆ ...	15— 0	16— 8
ಹುಣಿಸೆ ಬೀಜಗಳು ಮುಡಿ ೧ಕ್ಕೆ	20— 0	21—
ಬೇಳೆ ಬೆಳ್ಳಿ ಸೇರು ೧ಕ್ಕೆ ...	15— 0	—
ಹಿತ್ತಾಳೆ ಹಣ್ಣು ಮುಡಿ ೧ಕ್ಕೆ ...	15— 0	16— 8
ಪವನು	13— 8	13— 9

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕೆಮ್ಮತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಿ ಪಡೆದ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಒಬ್ಬ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಸೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದಿದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ... ಪತ್ರವ್ಯವಹಾರ ನಡಿಸಿದಲ್ಲಿ ... ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.

ಅಕ್ಕಿ ತಯಾರು ಮಾಡುವ

ಯಂತ್ರಗಳು.

ಸಾಮಾನ್ಯವಾದ ಎಂಗೆಲ್ಬರ್ಗ್ ತರಹದ ಹಲ್ಲರುಗಳು ಮೊದಲುಗೊಂಡು ಈ ಕಾಲದ ದೊಡ್ಡ ದೊಡ್ಡ ಅಕ್ಕಿ ತಯಾರು ಮಾಡುವ ಸಾಮಗ್ರಿಯ ವರೆಗೆ—

ನಿಮ್ಮ ಕೆಲಸಕ್ಕೆ ಬೇಕಾಗುವಂಥಾ ಯಂತ್ರಗಳನ್ನು ನಾವು ಒದಗಿಸಿಕೊಡುತ್ತೇವೆ.

ವಿಚಾರಿಸಿದಲ್ಲಿ ಪೂರ್ಣ ಮಾಹಿತಿಯನ್ನು ಸಂತೋಷದಿಂದ ಕೊಡುವೆವು.

VOLKART BROS ENGINEERS

Armenian Street,

MADRAS.

ADVERTISE IN OUR WEELKY

To Reach the Hearths & Homes of India's Masses

For Particulars pply to:

The Manager,

SWADESHABHIMANI,

MANGALORE.

'ರಾಷ್ಟ್ರಬಂಧು' ವಾರಪತ್ರಿಕೆ.

ಭಗವಂತನ ಕೃಪೆಯಿಂದ ಪತ್ರಿಕಾಪ್ರಪಂಚದಲ್ಲಿಂದು 'ರಾಷ್ಟ್ರಬಂಧು'ವಿನ ಪ್ರವೇಶವಾಗಿದೆ. ಗತಕಾಲದ ಸಹಾನುಭೂತಿ, ಭವಿಷ್ಯತ್ಕಾಲದ ವಿಶ್ವಾಸ ಇವೆರಡು ಕಾರ್ಯಶಕ್ತಿಗೆ ಪ್ರೇರಕವಾಗಿರಲು ಇಂದಿನಿಂದ ಎಡೆಬಿಡದೆ ಕರ್ತವ್ಯಭಾರವನ್ನು ವಹಿಸುವುದಕ್ಕೆ ಅವನು ಸಿದ್ಧನಾಗುವನು. ಅನುಭವಿಗಳಾದ ಮಹನೀಯರು ಪತ್ರಿಕಾಪರಿಚಾಲನೆಯ ಮಾರ್ಗವು ಖಡ್ಗಧಾರೆಯಷ್ಟು ದುರ್ಗಮವೆಂದು ಹೇಳುತ್ತಿರುವರು. ಅವರ ಹಿತವಾದವನ್ನು ಅಲಕ್ಷಿಸಿ, ಅನುಭವಗಳನ್ನು ಕಡೆಗಣಿಸಿ, ಕರ್ಮಕ್ಷೇತ್ರದ ಈ ಕಾದುದಾರಿಗೆ ದುಮುಕುವುದು ಧೃಷ್ಟತೆಯಲ್ಲವೇ? ಎಂದು ಹಿತಚಿಂತಕರು ಪ್ರಶ್ನಿಸಬಹುದು. ಹೌದು; ಅವರ ಪೃಚ್ಛೆಯು ಮಹತ್ತಾದುದು; ಅದಕ್ಕೆ ಉತ್ತರ ಕೊಡುವುದು ಕಷ್ಟಸಾಧ್ಯವಾದುದು. ವಿಭವಸಂವತ್ಸರದ ಕಾರ್ಯಶಕ್ತಿಯು, ಇದುವರೆಗೆ ಸೂಕ್ಷ್ಮದೇಹದಲ್ಲಿದ್ದಿರಬಹುದಾದ ರಾಷ್ಟ್ರಬಂಧುವಿಗೆ ಸ್ಥೂಲದೇಹವು ದೊರೆವಂತೆ ಮಾಡಿತು. ಸಹೃದಯರಾದ ಮಹಾಶಯರಲ್ಲಿ ಕೆಲವರು ಸಹೃದಯತೆಯೊಂದಿಗೆ ಉದಾರತೆಯನ್ನು ಬೆರಸಿ ದ್ರವ್ಯಸಹಾಯವನ್ನು, ಅದಕ್ಕಿಂತ ಅನರ್ಘ್ಯವಾದ ಪ್ರೋತ್ಸಾಹವನ್ನು ಕೊಟ್ಟುದರಿಂದ ಕರ್ನಾಟಕ ದೇಶಬಾಂಧವರ ಮುಂದೆ ಮುಖ ತೋರಿಸುವ ಧೃಷ್ಟತೆಯೋ, ಧೈರ್ಯವೋ ಅವನಿಗೆ ಪ್ರಾಪ್ತವಾಗಿದೆ. ಮೊದಲಾಗಿ ಅವರ ಉಪಕಾರಕ್ಕೆ ಶಿರಸಾವಂದನೆಯಿಂದ ಕೃತಜ್ಞತೆಯನ್ನು ಸಮರ್ಪಿಸಿ ರಾಷ್ಟ್ರಬಂಧುವು ಸೇವಾಮಂತ್ರದ ಬೀಜಾಕ್ಷರವನ್ನು ಉಚ್ಚರಿಸುವನು. ಅಂತಹ ಮಹಾನುಭಾವರ ಹಸ್ತಾವಲಂಬವೆ ತನ್ನ ಅಭಿವೃದ್ಧಿಗೆ ಕಾರಣಭೂತವೆಂಬುದನ್ನವನು ಮರೆಯಲಾರನು.

ಹೊಸ ಪತ್ರಿಕೆಯು ಜನ್ಮತಾಳುವಾಗ, ಅದರ ಹೊಸತನವು ಎಲ್ಲರ ದೃಷ್ಟಿಯನ್ನು ಆಕರ್ಷಿಸುತ್ತದೆ. ಈ ಆಕರ್ಷಣದೊಂದಿಗೆ ಅನೇಕಾನೇಕ ವಿತರ್ಕಗಳು ಮೂಡುತ್ತವೆ. ಹೊಸದೆಂದು ಹೇಳಿಸಿಕೊಳ್ಳುವುದರಲ್ಲಿರುವ ನವೀನತೆಯೇನು? ಹಳೆಯವುಗಳಲ್ಲಿಯ ಸಮಯ ವಿರೋಧವೇನು? ಒಂದರ ಗುಣವೇನು? ಉಳಿದವುಗಳ ದೋಷಗಳೇನು? ಪತ್ರಿಕಾಯುಗವಾದ ಈ ಶತಮಾನದಲ್ಲಿ ಇದ್ದವುಗಳನ್ನೇ ಕೇಳುವವರಿಲ್ಲ; ಇದು ವರೆಗೆ ಇಲ್ಲದವುಗಳನ್ನು ಯಾರು ಗಣನೆಗೆ ತರುತ್ತಾರೆ? ಎಂಬೀ ಪ್ರಶ್ನೆಗಳು ಸ್ವಾಭಾವಿಕವಾಗಿಯೇ ಸಮಂಜಸವಾಗಿವೆ. ಇವಕ್ಕೆ ಉತ್ತರ ಕೊಡುವ ಪ್ರಯತ್ನದಲ್ಲಿ ನಾವು ಅನ್ಯ ಪತ್ರಿಕೆಗಳ ಅವಹೇಳನಕ್ಕೆ ಬಾಯಿ ಹಾಕುವುದಿಲ್ಲ. ಕನ್ನಡ ನಾಡಿನ ದುರ್ದೈವದಿಂದ ಇಲ್ಲಿ ಅನ್ಯಭಾಷೆಗಳಲ್ಲಿರುವಂತೆ ಸರ್ವ ಜನರ ಅಚ್ಚುಮೆಚ್ಚುಗೆಗೆ ಪಾತ್ರವಾದ ಪತ್ರಿಕೆಗಳಿಲ್ಲ. ಇರುವವುಗಳು ಪ್ರತಿಕೂಲ ದೈವದೊಡನೆ ಹೊಡೆದಾಡುತ್ತಿವೆ; ಉಸಿರುಗಟ್ಟಿ ಹೇಗೋ ಜೀವಹಿಡಿದಿವೆ. ಎಂದ ಮೇಲೆ ಕರ್ನಾಟಕದ ಪರಿಸ್ಥಿತಿಯ ವಿಷಮತೆಯ ಮಧ್ಯದಲ್ಲಿ ಇನ್ನೊಂದು ಪತ್ರಿಕೆಯ ಜನ್ಮವು ಅವಶ್ಯವೆಂದು ಅರ್ಥವಾಗುವುದಿಲ್ಲ. ಆದರೂ ರಾಷ್ಟ್ರಬಂಧುವು ಹಿಂದೆಗೆಯಲಾರದ ಹೆಜ್ಜೆಯನ್ನಿಟ್ಟಿರುವನು. ಪತ್ರಿಕೆಗಳಲ್ಲಿ ಆದರ್ಶಸ್ಥಾನವನ್ನು ಪಡೆಯಬೇಕೆಂಬ ಉದ್ದೇಶವು ಬಲುದೂರದ ಆಕಾಶದಲ್ಲಿ ಮಿರುಗುವ ನಕ್ಷತ್ರದಂತಿದ್ದರೂ, ಅದನ್ನು ಸಾಧಿಸುವ ಕುತೂಹಲವು ಅವನಲ್ಲಿಲ್ಲದಿದ್ದರೆ ಈಗಿರುವ ಪತ್ರಿಕೆಗಳ ಸಂಖ್ಯೆಯನ್ನು ಒಂದರ ಮಟ್ಟಿಗಾದರೂ ಹೆಚ್ಚಿಸುವುದಕ್ಕೆ ಅವನು ಉದ್ಯುಕ್ತನಾಗುತ್ತಿರಲಿಲ್ಲ.

ಇನ್ನೀಗ ಅವನ ಧೋರಣವೇನೆಂದು ವಿಚಾರಿಸಬಹುದು. "ರಾಷ್ಟ್ರಬಂಧು" ಎಂಬ ಆತನ ನಾಮಧೇಯವು ಅರ್ಥಗರ್ಭಿತವಾದುದು. ಅದನ್ನು ಅನ್ವರ್ಥಗೊಳಿಸುವುದಕ್ಕಾಗಿಯೇ ಅವನ ಸರ್ವ ಪ್ರಯತ್ನಗಳು ಪ್ರೇರಿತವಾಗುವುವು. ರಾಜಕೀಯ ಪ್ರಗತಿಯ ಸಮಸ್ಯೆಗಳು ಬಂದಾಗ ಉದಾತ್ತವಾದ, ಉದಾರವಾದ, ಪ್ರಗಲ್ಭವಾದ ತತ್ವಗಳನ್ನೇ ಅವನು ಬೋಧಿಸುವನು. ಸಾಮಾಜಿಕ, ಆರ್ಥಿಕ, ನೈತಿಕ, ವಿಷಯಗಳಲ್ಲಿಯೂ ಅವನ ವಿಚಾರವು ಸರ್ವಜನಸಮಾದರಣೀಯವಾಗುವಂತಿರುವುದು. ದೋಷಗಳನ್ನು ಉದ್ಘಾಟಿಸುವುದರಲ್ಲಿ, ಗುಣಗಳನ್ನು ಗ್ರಹಿಸುವಲ್ಲಿ ಅವನು ಉಚಿತ್ಯದ ಮರ್ಯಾದೆಯನ್ನು ಮೀರನು. ಒಂದೆಡೆ ಜನತೆಯ ಸರಳಾಭಿಪ್ರಾಯಗಳ ಪ್ರಕಟೀಕರಣ, ಇನ್ನೊಂದೆಡೆ ಲೋಕಮತರಚನೆ, ಹೀಗೆ ಅವನ ಕರ್ತವ್ಯವು ದ್ವಿವಿಧವಾಗಿರುವುದು. ಸಂಗ್ರಹವಾಗಿ ಹೇಳುವುದಿದ್ದರೆ ರಾಷ್ಟ್ರಜೀವನವೆ ಅವನ ಜೀವನ; ಭಾಷಾಪ್ರೇಮವೆ ಅವನ ಸಕಲ ಕಾರ್ಯಗಳ ಚೋದಕವಾಗಿರುವ ಚೈತನ್ಯ; ಸ್ವಜನಾಭಿಮಾನ, ಸ್ವಾಭಿಮಾನಗಳೆ ಅವನ ಶ್ವಾಸೋಚ್ಛ್ವಾಸಗಳು; ಎಂದರೆ ಅತನ ಕರ್ತವ್ಯಗಳನ್ನು ಇಂತಿಂತಹವೆಂದು ನಿರ್ದೇಶಿಸುವುದರ ಅವಶ್ಯಕತೆ ಇಲ್ಲ. ಆದರೆ ಯೋಚನೆಗಳೆಲ್ಲಾ ಕಾರ್ಯದಲ್ಲಿ ರೂಪಿತವಾಗುವುದಿಲ್ಲ; ಎಂಬ ನ್ಯಾಯದಿಂದ ರಾಷ್ಟ್ರಬಂಧುವು ತನಗೆ ಯಾವ ಧೋರಣೆಯು ಅನುಸರಣೀಯವೆಂದು ಭಾವಿಸಿರುವನೋ ಅದೆಲ್ಲವೂ ಆತನ ಜನ್ಮವಾದೊಡನೆ ಸಾಧ್ಯವಾಗುವುವೆಂದು ಹೇಳುವುದು ಹೇಗೆ? ಅಂತೂ ಸರಳವರ್ತನೆಯಿಂದ ಉದ್ದೇಶವನ್ನು ಮುಂದಿಟ್ಟು ಆ ಕಡೆಗೆ ಹೆಜ್ಜೆಯಿಡುವುದಷ್ಟೆ ಅವನ ಕೆಲಸ. ಈ ಸಂದರ್ಭದಲ್ಲಿ ಆಗಬಹುದಾದ ತಪ್ಪುಗಳನ್ನು ಕ್ಷಮಿಸಿ, ಒಪ್ಪುಗಳು ಕಂಡಲ್ಲಿ ಮೈದಡವಿ ಅವನಿಗೆ ಉತ್ಸಾಹ ಕೊಡುವ ಭಾರವು ಉದಾರ ಸ್ವಭಾವದ ದೇಶಬಾಂಧವರನ್ನು ಸೇರಿದುದು.

'ವಿಶ್ವಾಸಃ ಫಲದಾಯಕಃ' ಎಂದು ಬಲ್ಲವರು ಹೇಳುತ್ತಾರೆ. ಈ ವಾಕ್ಯವು ಸಾರ್ಥವಾಗುವುದೋ ಅಪಾರ್ಥವಾಗುವುದೋ ರಾಷ್ಟ್ರಬಂಧುವರಿಯದು. ಕರ್ತವ್ಯದಲ್ಲಿ ತೊಡಗುವವರಿಗೆ ಸಲ್ಲದ ವಿಚಾರಗಳೇಕೆ? ರಾಷ್ಟ್ರಬಂಧುವನ್ನು ಈ ಕರ್ಮಭೂಮಿಗೆ ಕಳುಹಿಸುವುದರಲ್ಲಿ ದೈವಸಂಕೇತವೇನಾದರೂ ಇದ್ದರೆ, ಅದೇ ದೈವವು ಅವನನ್ನು ಬೆನ್ನುಬಿಡದೆ ಸಕಲ ಸಂಕಷ್ಟಗಳಿಂದಲೂ ಪಾರಾಗಿಸಿ ಯಶಸ್ಸಿನ ದಾರಿಯನ್ನು ತೋರಬಲ್ಲುದು. ಅಥವಾ ವಿಧಿನಿಯಮವು ವಿರುದ್ಧವಾಗಿದ್ದರೆ, ಅದಕ್ಕಾಗಿ ಸ್ವಲ್ಪವೂ ಚಿಂತೆಯಿಲ್ಲ. ಏಕೆಂದರೆ ವಿಧಿನಿಯಮವು ಅಲಂಘನೀಯವಷ್ಟೆ? ಅದುದರಿಂದಲೆ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಭಗವಂತನು ಕರ್ತವ್ಯದೀಕ್ಷಿತನಾಗಲಿದ್ದ ಅರ್ಜುನನಿಗೆ ಕೊಟ್ಟ ಸದುಪದೇಶವನ್ನು ರಾಷ್ಟ್ರಬಂಧುವು ಸ್ಮರಣೆಗೆ ತಂದುಕೊಳ್ಳುವನು. "ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್" ಎಂದು ಪರಮಾತ್ಮನು ಅಂದು ಭೇರಿ ಬಾರಿಸಿದನು. ಅದರ ಪ್ರತಿಧ್ವನಿಯೇ ಇಂದು ರಾಷ್ಟ್ರಬಂಧುವಿನ ಕಿವಿಗೆ ಕೇಳಿಸುತ್ತಿದೆ. ಅದರ ಪ್ರೇರಣೆಯಂತೆ ಅವನಿಂದು ಕೆಲಸಕ್ಕೆ ಕೈಹಚ್ಚಿದ್ದಾನೆ. ಭಗವದರ್ಪಣಬುದ್ಧಿಯಿಂದ ಅವನು ಇಂದು ಕರ್ತವ್ಯನಿಷ್ಠನಾಗುತ್ತಾನೆ. ಎಂದ ಮೇಲೆ ಯಶಸ್ಸು, ಅಪಯಶಸ್ಸು, ಫಲ, ಅಫಲ, ಸುಖ, ದುಃಖ ಎಂಬ ಈ ದ್ವಂದ್ವಗಳನ್ನು ವಿಚಾರಿಸುವ ಗೊಡವೆಯು ಅವನಿಗಿಲ್ಲ.

DON'T HAVE AN OPERATION!

...ನೆ ಮಾಡುತ್ತಿರುವಳು.

... ಉತ್ತಮ ಪರೀಕ್ಷೆ ಮತ್ತು ಚಿಕಿತ್ಸೆಯಿಂದಲೂ ಗುಣವಾಗದ ಶರೀರ ... ಸಹಾಯದಿಂದ ಹೇಳುವೆವು.

... ಅವುಗಳ ಸೇವನೆಯಿಂದ ಕಲ್ಮಶವನ್ನು ನಿವಾರಿಸುವ, ಗುಣಕಾರಕ,

...ಣಾಮವನ್ನುಂಟುಮಾಡುತ್ತಿವೆ.

... ಮಾಡದ ಆರೋಗ್ಯವತಿಗಳೂ ಸುಖಿಗಳೂ ಆದ ಸ್ತ್ರೀ ವೃಂದವನ್ನು ... ಜೀವನದಲ್ಲಿ ಒಂದು ನವೀನಾನುಭವವನ್ನು ಮಾಡಿಕೊಳ್ಳು... ತೇಜಸ್ವೀ ಚೇತನವನ್ನು ಅನುಭವಿಸುವರು. ಮನೆಗೆಲಸವು ಮತ್ತು ... ವಿಲ್ಲ. ಬೇಸತ್ತು ಮನಶ್ಶಾಂತಿ ಕಳೆದ ಸ್ತ್ರೀಯು ಕಾರ್ಯಾಸಕ್ತಳಾಗಿ ... ಶಾರೀರಿಕ ಆರೋಗ್ಯವು ಅವಳ ಸುಧಾರಿತ ದೈಹಿಕ ಸ್ಥಿತಿಯಿಂದ ... ಬೀರುವ ಸಮುತ್ಸಾಹದಿಂದಲೂ ಪ್ರತಿಬಿಂಬಿಸಲ್ಪಡುವುದು. ... ಮನೆಯು ಸುಖಕರವಾಗಲಾರದು. ಫೆಲೂನಾ ಮಾತ್ರೆಗಳು ... ಒಂದು ಕಾಲದಲ್ಲಿ ರೋಗಗಳ ವೇದನೆಯಿಂದ ಬಳಲುತ್ತಿದ್ದ ಹೆಂಡ... ಪ್ರಕಾಶಕ್ಕೆ ತಂದು, ಗೃಹಸ್ಥಿತಿಯನ್ನು ನವೀನಾನಂದಕ್ಕೆ ಪರಿವರ್ತಿಸಿ... ವಾಗಿಯೂ, ಒಂದು ದೈವೀಕವರವಾಗಿಯೂ ಪರಿವರ್ತಿಸಿರುವುವಾಗಿ

...ಚಿಹ್ನೆಗಳು

...ಕೆಯುಳ್ಳದಾಗಿವೆ:—

...ಲಸು ಉಸಿರು

...ಲೆನೋವು

...ನ್ನುನೋವು

...ಂಗಾಯಾಸ

...ನ ಅಕ್ರಮಗಳು

... ಕೆಲವು ಕಡೆಗಳಲ್ಲಿ ಹಲವು ವರ್ಷಗಳು ದಾಟಿದರೂ ಆ ... ಉಂಟಾದ ಆರೋಗ್ಯಾಭಿವೃದ್ಧಿಯು ಶಿಶು ಸ್ವೀಕಾರಕ್ಕೆ ಅಗತ್ಯವಾದ ... ಗಳನ್ನು ನಿರೋಗಪಡಿಸಿ ಗುಣಪಡಿಸಿದುವು; ಅವಯವಗಳಿಗೆ ಶಕ್ತಿ ... ಸಹಾಯಮಾಡಿದುವು.

... ಅಥವಾ ತಾತ್ಕಾಲಿಕ ಪರಿಣಾಮಕೊಡುವ ಸಾಮಾನ್ಯ ... ಗುಣವು ಮತ್ತು ಕೂಡಲೇ ತೋರುವಂತಹುದು; ಮತ್ತು ಅದು ... ಅವಳದಾಗಿರುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ— ... ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ...ಲ್ಲೆಲ್ಲಿಯೂ ದೊರಕುವುವು.

ಮೆಸ್ಸರ್ಸ್ ಪಟೇಲ್ ಮತ್ತು ಥೋರಟ, ...

(...ಪೋಸ್ಟ್ ಆಫೀಸು ಬೊಕ್ಸ 838) ... (ಪೋಸ್ಟ್ ಆಫೀಸು ಬೊಕ್ಸ 620)

... ನೇಮಿಸಲ್ಪಟ್ಟಿರುವರು.

Product of Graham Remedies Ltd., Cape Town, South Africa.

92

ಸ್ಫುಟ ವಿಚಾರಗಳು.

ಹಿಂದೂಸ್ಥಾನದಲ್ಲಿ ಬೇಂಕಿಂಗ್.

ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಬೇಂಕಿನ ವಹಿವಾಟುಗಳು ಬಹಳವಾಗಿ ಹೆಚ್ಚಿರುವುವಾದರೂ, ಇತರ ದೇಶಗಳ ಬೇಂಕುಗಳ ವಹಿವಾಟುಗಳೊಡನೆ ಹೋಲಿಸಿ ನೋಡಿದ್ದಲ್ಲಿ ಬಹಳ ಸಣ್ಣದಾಗಿ ತೋರುವುವು. ಬ್ರಿಟಿಷ ರಾಜ್ಯದಲ್ಲಿ ಹದಿಮೂರು ಚಚ್ಚೌಕ ಮೈಲಿಗಳಿಗೊಂದರಂತೆ ಬೇಂಕು ಇರುವಾಗ ಹಿಂದೂಸ್ಥಾನದಲ್ಲಿ ೩,೫೩೦ ಚಚ್ಚೌಕ ಮೈಲಿಗೊಂದರಂತೆ ಬೇಂಕು ಇರುವುದೆನ್ನುವಾಗ ಹಿಂದೂಸ್ಥಾನದ ವ್ಯಾಪಾರವು ಎಷ್ಟು ಕ್ಷೀಣವಾಗಿದೆ ಎಂದು ತಿಳಿಯುವುದು. ಅಲ್ಲದೆ ಬ್ರಿಟಿಷರಲ್ಲಿ ಸರಾಸರಿ ಒಬ್ಬೊಬ್ಬರು ೫೭ ಪವನಿನಂತೆ ಡಿಪೋಜಿಟ್ಟು ಇಡುವಾಗ ಹಿಂದೂಸ್ಥಾನದಲ್ಲಿ ಒಬ್ಬರು ೧೦ ಶಿಲ್ಲಿಂಗಿನಂತೆ ಠೇವಣಾತಿಗಳನ್ನು ಇಡುವರು. ಈ ಸಂಖ್ಯೆಗಳನ್ನು ನೋಡಿದ ಮಾತ್ರದಿಂದ ಬೇಂಕಿಂಗಿನ ವಿಷಯದಲ್ಲಿ ಯಾವುದೊಂದು ತೀರ್ಮಾನವನ್ನು ಮಾಡಲಾಗುವುದಿಲ್ಲ. ಹಿಂದೂಸ್ಥಾನದ ಆರ್ಥಿಕ ಪರಿಸ್ಥಿತಿಯ ವೈಶಿಷ್ಟ್ಯವೇ ಹಿಂದೀ ಬೇಂಕುಗಳ ಅಭಿವೃದ್ಧಿಯನ್ನು ನಿರ್ಧರಿಸತಕ್ಕದ್ದು. ಈಗಿನ ಬೇಂಕುಗಳು ಪಾಶ್ಚಾತ್ಯರಲ್ಲಿನ ಬೇಂಕುಗಳಂತೆ ಜನರ ಆರ್ಥಿಕ ಉಜ್ಜೀವನದಲ್ಲಿ ಸಹಕಾರಿಗಳಾಗಿವೆ ಎನ್ನಲಾಗುವುದಿಲ್ಲ. ಮದ್ರಾಸು ಬೇಂಕಿನ (ಈಗಿನ ಇಂಪೀರಿಯಲ್ ಬೇಂಕ್) ಕಟ್ಟೋಣದ ಪಂಚಾಂಗವು ಕಟ್ಟಲ್ಪಡುತ್ತಿರುವಾಗ ಒಬ್ಬ ಸದ್ಗೃಹಸ್ಥರೊಡನೆ ಇದು ಏನು? ಎಂದು ಪ್ರಶ್ನಿಸಿದಾಗ್ಗೆ "ಇದು ಮುಂದಿನ ಸಾಹುಕಾರರ ಘೋರಿ" ಎಂದು ಒಬ್ಬ ಸದ್ಗೃಹಸ್ಥರು ಸೂಚಿಸಿದಂತೆ, ಪ್ರಕೃತದ ಮಟ್ಟಿಗೆ, ಈ ಬೇಂಕುಗಳು ಜನರ ಆರ್ಥಿಕ ಪರಿಸ್ಥಿತಿಯನ್ನು ಭಟ್ಟಿಪಡಿಸಿ, ಅರ್ಜನೆಗೆ ನೂತನ ಉಪಾಯಗಳನ್ನು ಕಲ್ಪಿಸುವುದರ ಬದಲಾಗಿ, ವ್ಯಕ್ತಿಯ ಸಾಲಗಳ ಹೊರೆಯನ್ನು ಹೆಚ್ಚಿಸಿ ವಹಿವಾಟದ ಶಕ್ತಿಯನ್ನೂ ಕುಂದಿಸುತ್ತಿದೆ. ಮುಂಬಾಯಿಯಂತಹ ದೊಡ್ಡ ಶಹರುಗಳಲ್ಲಿ ಬೇಂಕುಗಳು ಹೆಚ್ಚಿನ ಕಾರ್ಯಶಕ್ತಿಯನ್ನು ತೋರಿಸುತ್ತಿವೆ. ಪರದೇಶೀಯರೊಡನೆ ನಡೆಯುವ ವ್ಯಾಪಾರಗಳಲ್ಲಿ ಈ ಬೇಂಕುಗಳು ಸಾಹುಕಾರರಿಗೆ ಬಹಳ ಸಹಾಯವನ್ನು ಮಾಡುತ್ತಿವೆ. ಆದರೆ ಹಲವು ಮುಖ್ಯ ವಹಿವಾಟುಗಳೂ, ಅಂತರಾಷ್ಟ್ರೀಯ ಎಕ್ಸ್ಚೇಂಜ್ ವಹಿವಾಟವೂ ಪರದೇಶೀಯ ಬೇಂಕುಗಳ ಕೈಕೆಳಗೇನೇ ಇವೆ. ಆದುದರಿಂದ ಹಿಂದೀ ಬೇಂಕುಗಳು ಈ ನ್ಯೂನ್ಯತೆಗಳ ದೃಷ್ಟ್ಯಾ ಸುಧಾರಿಸಲ್ಪಡುವುದು ಅವಶ್ಯವಿದೆ. ಸರ್. ಫಿರೋಜ್ ಶೆಟ್ನಾರವರು ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸಿ ನೂತನ ಸಲಹೆಗಳನ್ನು ಕೊಡುವ ಬಗ್ಗೆ ಒಂದು ಕಮಿಟಿಯನ್ನು ನೇಮಿಸಬೇಕಾಗಿ ಸೂಚಿಸುವರು. ಹಿಂದೀ ಆರ್ಥಿಕ ಶಾಸ್ತ್ರಜ್ಞರಿಂದ ಕೂಡಿದ ಇಂತಹದೊಂದು ಕಮಿಟಿಯು ಏರ್ಪಟ್ಟರೆ ದೇಶದ ಬೇಂಕಿಂಗ್ ಕ್ರಮಗಳು ಸುಧಾರಿಸಲ್ಪಡಬಹುದೆಂದು ಆಶಿಸಲಾಗಿದೆ.

ಬರ್ಡೋಲಿ ಸತ್ಯಾಗ್ರಹ.

ಬರ್ಡೋಲಿಯಲ್ಲಿ ಕಂದಾಯವು ಅನ್ಯಾಯವಾಗಿ ಹೆಚ್ಚಾದುದರಿಂದ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಈ ಸತ್ಯಾಗ್ರಹವು ಪ್ರಾರಂಭವಾಗಿ ಕೆಲವು ತಿಂಗಳುಗಳಾದವು. ಬರ್ಡೋಲಿಯೆಂದರೆ ಎಲ್ಲರಿಗೂ ಚಿರಪರಿಚಿತವಾದ ಸ್ಥಾನ. ಇಲ್ಲಿಯೇ ಮಹಾತ್ಮಾಜೀಯವರು ತಮ್ಮ ೧೯೨೧ನೇ ಇಸವಿಯ ಪ್ರಚಂಡ ಅಸಹಕಾರ ಚಳವಳದ ಆಖೈರಿಯ ಸತ್ಯಾಗ್ರಹ ಚಳವಳವನ್ನು ಹೂಡಲು ಅನುಕೂಲಿಸಿ ಲೊರ್ಡ ರೀಡಿಂಗ್ ದೊರೆಗಳಿಗೆ ತಮ್ಮ ಆಖೈರಿಯ ಎಚ್ಚರದ ಪತ್ರವನ್ನು ಕಳುಹಿಸಿದ್ದರು. ಒಂದು ಸಮಯದಲ್ಲಿ ಸಮಸ್ತ ಹಿಂದೀಯರ ಮತ್ತು ಸರಕಾರದ ನೌಕರಶಾಹಿಯ ದೃಷ್ಟಿಯು ಇಲ್ಲಿಯೇ ಕೇಂದ್ರಿತವಾಗಿದ್ದಿತು. ಆದರೆ ಸತ್ಯಾಗ್ರಹವು ಮಹಾತ್ಮಾಜೀಯವರಿಂದಲೇ ಆ ಬಾರಿ ನಿಲ್ಲಿಸಲ್ಪಟ್ಟಿತು. ಹಿಂದೂಸ್ಥಾನದ ಸ್ವರಾಜ್ಯ ಸಮರದ ಆಖೈರಿ ತೀರ್ಮಾನದ ಕಾದಾಟವು ಒಮ್ಮಿಂದೊಮ್ಮೆ ನಿಲ್ಲಿಸಲ್ಪಟ್ಟ ಮೇಲೆ ಬರ್ಡೋಲಿಯು ಆ ಉತ್ತೇಜಕತೆಯನ್ನು ಮರೆಯಲಾರಂಭಿಸಿತು. ಆದರೆ ಸರಕಾರವು ಪುನಃ ಅದರ ನೆನಪನ್ನು ಮಾಡಿಕೊಟ್ಟಿತು. ವಲ್ಲಭಭಾಯಿ ಪಟೇಲರ ಧುರೀಣತೆಯಲ್ಲಿ ಬರ್ಡೋಲಿಯು ಪುನಃ ತನ್ನ ಹಕ್ಕುಗಳ ಸಾಧನೆಗಾಗಿ ಪುನಃ ಆ ಕಠೋರ ಸಂಗ್ರಾಮವನ್ನಾರಂಭಿಸಲು ನಿಶ್ಚಯಿಸಿಯದೆ. ಇದರಿಂದ ಪ್ರಜಾ ಜನರಿಗೆ ಅಸಂಖ್ಯ ಕಷ್ಟನಷ್ಟಗಳುಂಟಾಗುವುವು. ಇವುಗಳೆಲ್ಲವನ್ನೂ ಅನುಭವಿಸಿಯೇ ತಮ್ಮ ಹಕ್ಕು ಸಾಧನೆ ಮಾಡುವೆವೆಂದು ಇವರು ದೀಕ್ಷಾಬದ್ಧರಾದುದು ಇವರ ವೀರತ್ವವನ್ನು ತೋರಿಸುವುದು. ಸರಕಾರವು ಈಗಲೇ ತನ್ನ ದಬ್ಬಾಳಿಕೆಯನ್ನು ನಿರ್ದಾಕ್ಷಿಣ್ಯವಾಗಿ ಆರಂಭಿಸಿರುವುದು. ಎರಡು ಸಾವಿರ ರೂಪಾಯಿ ವಸೂಲಿಗಾಗಿ ೬೦೦೦೦ ರೂಪಾಯಿ ಬೆಲೆಯ ಸ್ಥಿರಾಸ್ತಿಯನ್ನು ಸರಕಾರವು ಏಲಂ ಹಾಕಿಸಲು ನೋಟೀಸು ಕೊಟ್ಟಿರುವುದು. ಆಸ್ತಿಯನ್ನು ಸರಕಾರದ ವಶಪಡಿಸುವ ಆಫೀಸರರಿಗೆ ಯಾವ ಸಹಾಯವನ್ನು ಮಾಡಬಾರದಾಗಿ ಎಲ್ಲರೂ ನಿರ್ಧರಿಸುವರು. ಜನತೆಯು ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸಲು ಸಿದ್ಧರಾಗಿರುವಾಗ ಮುಂಬಾಯಿ ಪ್ರಾಂತ್ಯದಲ್ಲಿ ಸಹಾನುಭೂತಿಪರವಾದ ಯಾವ ಚಳವಳವೂ ಕಾಣಬರುವುದಿಲ್ಲ. ಮುಂಬಾಯಿಯ ಕಾಯಿದೆ ಕೌನ್ಸಿಲಾದರೂ ಈ ಬಡ ಪ್ರಜೆಗಳ ಸಹಾಯಕ್ಕೆ ಬಂದಂತೆ ಕಾಣುವುದಿಲ್ಲ. ಸರಕಾರದ ಕಾಠಿಣ್ಯವು ಎಷ್ಟು ಆಶ್ಚರ್ಯಕರವೋ ಇತರರ ಉದಾಸೀನತೆಯೂ ಅಷ್ಟೇ ಆಶ್ಚರ್ಯಕರವಾಗಿದೆ. ಇನ್ನಾದರೂ ಮುಂಬಾಯಿಯ ಜನರು ಬರ್ಡೋಲಿ ಸತ್ಯಾಗ್ರಹಕ್ಕೆ ಬೆಂಬಲವನ್ನಿತ್ತು, ನ್ಯಾಯಕ್ಕೆ ವಿಜಯವು ಸಿಕ್ಕುವಂತೆ ಮಾಡುವುದಾಗಿ ಆಶಿಸುವೆವು.

ಹಿಂದೀ ಕೈಗಾರಿಕೆಗಳ ವಿನಾಶ.

ಈ ವಿಷಯದಲ್ಲಿ ಹಿಂದೊಂದು ಬಾರಿ ನಾವು ಮೊಡರ್ನ್ ರೀವ್ಯೂ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಕೆಲವು ವಿಷಯಗಳನ್ನು ಕೊಟ್ಟಿದ್ದೆವು. ಈ ಬಾರಿ ಮೇಲಿನ ಹೆಸರಿನಲ್ಲಿ ಮಹಾತ್ಮಾಜೀಯವರೇ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಲೇಖವನ್ನು ಕೊಟ್ಟಿರುತ್ತಾರೆ. "ಹಿಂದೂಸ್ಥಾನದ ಬ್ರಿಟಿಷ ಸರಕಾರದ ಇತಿಹಾಸವೆಂದರೆ, ಹಿಂದೂ ಕೈಗಾರಿಕೆಗಳ ಮತ್ತು ಹಿಂದೀ ಮನುಷ್ಯತ್ವದ ವಿನಾಶದ ಇತಿಹಾಸವೆಂದು ಒಪ್ಪುವುದು ಸರಕಾರಕ್ಕೆ ಸರಿಬೀಳಲಾರದು" ಎಂದು ಬ್ರಿಟಿಷರ ಆಡಳಿತೆಯ ಇತಿಹಾಸವನ್ನು ಸಂಕ್ಷೇಪವಾಗಿ ವ್ಯಕ್ತಪಡಿಸುವರು. ಬ್ರಿಟಿಷರ ಈ ವಿನಾಶಕಾರಕ ಕೃತ್ಯಗಳಲ್ಲಿ ನೂಲುವಿಕೆಯನ್ನೂ ನೇಯುವಿಕೆಯನ್ನೂ ನಿಲ್ಲಿಸಿಬಿಟ್ಟದು ಒಂದಾಗಿದೆ. ಇದನ್ನು ನಿಲ್ಲಿಸಲಿಕ್ಕಾಗಿ ಈ ಕೈಗಾರಿಕೆಗಳಲ್ಲಿ ನಿರತರಾದವರ ಕೈಯ ಹೆಬ್ಬೆರಳುಗಳನ್ನು ಕಡಿಸಿದುದನ್ನು ರಮೇಶಚಂದ್ರದತ್ತರವರು ವಿವರಿಸಿರುವರು. ಈ ಕಾರಣಗಳಿಂದ ಇಂಗ್ಲೆಂಡಿನಿಂದ ೧೮೧೩ನೇ ಇಸವಿಯಲ್ಲಿ ಹತ್ತಿ ಮತ್ತು ಪಟ್ಟೆಯ ಸಾಮಾನುಗಳು ಹಿಂದೂಸ್ಥಾನಕ್ಕೆ ಬರೇ ೧೫೭ ಪವನಿನಷ್ಟು ಬಂದಿದ್ದಾಗ ೧೮೨೩ಕ್ಕೆ ಅವು ೧೦೬,೮೪೮ರಷ್ಟು ಬಂದವು. ಇಂಗ್ಲೆಂಡಿನ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಹಿಂದೂಸ್ಥಾನವು ಎಷ್ಟರ ಮಟ್ಟಿಗೆ ನಷ್ಟವನ್ನು ಅನುಭವಿಸಿಯದೆಂಬುದು ಇದರಿಂದ ವ್ಯಕ್ತವಾಗುವುದು ಅಲ್ಲದೆ, ವಿಧಿಯ ಉಪಹಾಸ (irony of fate) ಎಂದರೆ, ಯಾವ ದುಡ್ಡನ್ನು ಕಂಪೆನಿಯ ನೌಕರರು ಹಿಂದೂಸ್ಥಾನದಿಂದ ಸುಲಿಗೆಮಾಡಿ ಕೊಂಡೊಯ್ದರೊ ಅದೇ ಹಣವು ಬ್ರಿಟಿಷ ಕೈಗಾರಿಕೆಗಳನ್ನು ಹೆಚ್ಚಿಸಲಿಕ್ಕೂ ಹಿಂದೀ ಕೈಗಾರಿಕೆಗಳನ್ನು ವಿನಾಶಪಡಿಸಲಿಕ್ಕೂ ಉಪಯೋಗಿಸಲ್ಪಟ್ಟಿತು. ಹಿಂದೂಸ್ಥಾನದಿಂದ ಇಂಗ್ಲೆಂಡಿಗೆ ರಫ್ತಾಗುತ್ತಿದ್ದ ಹತ್ತೀ ಸಾಮಾನುಗಳ ಮೇಲೆ ಶೇಕಡಾ ೭೦ರಂತೆ ಕರಹೊರಿಸಲಾಯಿತೆಂದು ಹೆನ್ರಿಟಕ್ಕರ್ ಎಂಬವರು ಹೇಳುವರು. "ಇದು ಹಿಂದೂಸ್ಥಾನಕ್ಕೆ ಮಾಡಿದ ಅತೀ ದುಃಖದಾಯಕ ಅನ್ಯಾಯವಾಗಿದೆ. ಶೇಕಡಾ ೭೦,೮೦ರಷ್ಟು ಕರಹೊರಿಸದೆ ಇದ್ದುದಾದರೆ, ಯಂತ್ರ ಸಹಾಯದಿಂದಲಾದರೂ ಮಂಚೆಸ್ಟರ ಗಿರಣಿಗಳು ಹಿಂದೀ ವಸ್ತ್ರಗಳೊಡನೆ ಸ್ಪರ್ಧಿಸಲಾರವಾಗಿದ್ದುವು. ಹಿಂದೂಸ್ಥಾನವು ಸ್ವತಂತ್ರವಿದ್ದುದಾದರೆ ಅದು ಬ್ರಿಟಿಷ ವಸ್ತ್ರಗಳ ಮೇಲೆ ಹಾಗೆಯೇ ಕರಹೊರಿಸಿ ತನ್ನ ಕೈಗಾರಿಕೆಗಳನ್ನು ರಕ್ಷಿಸುತ್ತಿದ್ದಿತು. ಆದರೆ ಆ ಸ್ವಾತಂತ್ರ್ಯವು ಹಿಂದೂಸ್ಥಾನಕ್ಕಿರಲಿಲ್ಲ"ವೆಂದು ವಿಲ್ಸನ್ ಎಂಬವರೊಬ್ಬರು ಹೇಳುವರು. ಮಹಾತ್ಮಾಜೀಯವರು ತಮ್ಮ ಲೇಖದಲ್ಲಿ ಇದೇ ರೀತಿಯಲ್ಲಿ ಬ್ರಿಟಿಷ ಅತ್ಯಾಚಾರಗಳ ಕಥೆಗಳನ್ನು ಸಾಧಾರವಾಗಿ ಹೇಳುವರು. ಬ್ರಿಟಿಷರಿಂದ ಹಿಂದೂಸ್ಥಾನಕ್ಕುಂಟಾದ ಪ್ರಯೋಜನಗಳ ಪಟ್ಟಿಯನ್ನು ರಾಜಭಕ್ತರು ಮಾಡುತ್ತಿರುವಾಗ ಅವರು ಇದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಉತ್ತಮ.

ಮಂತ್ರಿಗಳ ಸಾರ್ಥಕತೆ.

ಮಂತ್ರಿಗಳಲ್ಲಿ ರಾಜಭಕ್ತಿಗಿಂತಲೂ ನೌಕರಶಾಹಿ ಭಕ್ತಿಯೇ ಅಪ್ರತಿಮ ಸುಗುಣವಾಗಿ ಈಗ ಪರಿಗಣಿಸಲ್ಪಡುತ್ತಿದೆ. ಮದ್ರಾಸು ಪ್ರಾಂತದ ಮಂತ್ರಿಮಂಡಲವೇ ಇದಕ್ಕೆ ನಿದರ್ಶನವಾಗಿದೆ. ಹಿಂದೂಸ್ಥಾನದ ಮಂತ್ರಿಗಳೆಂದರೆ ಇಂಗ್ಲೆಂಡ್ ಮೊದಲಾದ ಇತರ ಸ್ವತಂತ್ರ ರಾಷ್ಟ್ರಗಳ ಮಂತ್ರಿಗಳಂತಲ್ಲ. ಇತರ ರಾಷ್ಟ್ರಗಳಲ್ಲಿ ಮಂತ್ರಿಗಳು "ರಾಜಭಕ್ತರು" ಅಷ್ಟೇ ಅಲ್ಲದೆ, ರಾಜನ ಆಜ್ಞಾಪಾಲಕರಲ್ಲ. ಇಂಗ್ಲೆಂಡಿನ ಮಂತ್ರಿಗಳೆಂದರೆ ಹಾಗೆ. ರಾಜನಿಗೇನೇ ಮತದ ಅಧಿಕಾರ ಮಾತ್ರವಲ್ಲದೆ, ಕೆಲಸದಿಂದ ತಳ್ಳಿಹಾಕುವ ಅಧಿಕಾರವಿಲ್ಲ. ಹಿಂದೂಸ್ಥಾನದ ಪ್ರಾಂತಿಕ ಮಂತ್ರಿಗಳೆಂದರೆ ಹಾಗಲ್ಲ. ಅವರ ರಾಜಭಕ್ತಿಯು ಅಪ್ರತಿಮವಾದುದು. ಆ ರಾಜಭಕ್ತಿಯು ರಾಜನ ಮೇಲಿನ ಭಕ್ತಿಯಲ್ಲ; ನೌಕರಶಾಹಿಯ ಭಕ್ತಿ. ಇಂಗ್ಲೆಂಡಿನಲ್ಲಿ ಜನರಿಗೆ ಬೇಡವಾದವರು ಮಂತ್ರಿಗಳಾಗಲಾರರು; ರಾಜನಿಗೆ ಬೇಡವೆಂದರೆ ತೆಗೆಯಲ್ಪಡಲಾರರು. ಆದರೆ ನಮ್ಮ ಮಂತ್ರಿಗಳು ಹಾಗಲ್ಲ; ಜನರಿಗೆ ಬೇಡವೆಂದರೆ ನೇಮಕಹೊಂದದೆ ಇರುವುದಿಲ್ಲ; ಆದರೆ ನೌಕರಶಾಹಿಗೆ ಬೇಡವೆಂದರೆ ಮತ್ತೇ ಬಿಟ್ಟೇ ಬರಬೇಕು. ಆದರೂ ಈ ಮಂತ್ರಿಪದವಿಯಲ್ಲಿ ಅಷ್ಟು ಸಮ್ಮೋಹಕ ಶಕ್ತಿಯಿದೆ. ಮಂತ್ರಿತ್ವದ ಮಹತ್ವವು ಅಷ್ಟೇ ಅಲ್ಲ. ಇವರ ಮೂಲಕ ಪ್ರಬಲ ಪಕ್ಷಗಳನ್ನು ಮುರಿಯುವುದು ಸರಕಾರಕ್ಕೆ ಬಹಳ ಸುಲಭವಾಗುವುದು. ಏಕಂದರೆ ಮಂತ್ರಿಗಳಾದವರಿಗೆ ಎಕ್ಸಿಕ್ಯೂಟಿವ್ ಮೆಂಬರಿಕೆ ಸಿಕ್ಕುವಾಗ ಬೇಡವೆನ್ನಲಾಗುವುದಿಲ್ಲ. ಅಂತಹ ಲಾಭಕರ ಮತ್ತು ಗೌರವಕರ ಹುದ್ದೆಯ ಆಶೆಯು ಇರುವಾಗ ಸರಕಾರಕ್ಕೆ ವಿಧೇಯವಾಗಿ ನಡೆಯುವುದು ಮಂತ್ರಿಗಳ ಕರ್ತವ್ಯವಾಗುತ್ತದೆ, ಮತ್ತು ಅದು ಸಿಕ್ಕಿದರೆ ಮಂತ್ರಿತ್ವದ ಸಾರ್ಥಕತೆಯೂ ಆಗುತ್ತದೆ. ಇದರಿಂದ ಮಂತ್ರಿಯು ಪ್ರತಿನಿಧಿಸುವ ಪಕ್ಷವು ಮಾತ್ರ ಬಣಗಳಾಗಿ ಕುಂದಿಹೋಗುವುದು.

ನೋಟಗಳು.
NOTE...S.

ಶಿರಹಟ್ಟಿ ನಾಟಕ ಕಂಪೆನಿಯವರು ಮಂಗಳೂರಲ್ಲಿ ಈಗ ಆಡಲಾರಂಭಿಸಿರುವ ನಾಟಕಗಳ ವಿಷಯದಲ್ಲಿ ವಿಮರ್ಶಾತ್ಮಕ ಒಂದೆರಡು ಮಾತುಗಳನ್ನು ಹೇಳುವಾಗ, ನಮಗೆ ಫ್ರೀಪಾಸು ಬಂದದೊ ಇಲ್ಲವೊ ಎಂಬುದನ್ನು ನಾವು ಹೇಳಲೊಪ್ಪಲಾರೆವು.

• • •

ನಾಟಕ ರಂಗದಲ್ಲಿ ಶ್ರೀ ಗರೂಡರವರು ಆರಂಭಿಸಿದ "ಐದು ಮಿನಿಟು"ಗಳ ಭಾಷಣಗಳು ಇತರರಿಗೂ ಬಹಳ ಪ್ರಯೋಜನವಾಗಿ ತೋರಿದಂತೆ ಕಾಣುತ್ತದೆ.

• • • •

ಶಿರಹಟ್ಟಿಯವರ "ದಿವ್ಯ ಪ್ರೇಮ"ದ ಕೀರ್ತಿಯು ಕಲಮು ಕಲಮುಗಳಾಗಿ ಹಲವು ಪತ್ರಿಕೆಗಳಲ್ಲಿ ಒಂದೇ ಬಾರಿ ಬಂದುದು ಅಭಿನಂದನೀಯ. ಮಂಗಳೂರು ನಾಗರಿಕರು ತಾ. ೨೮ನ್ನು ಉತ್ಸಾಹದಿಂದ ಕಾಯುತ್ತಿರುವರು.

• • • •

ಶ್ರೀ ಗರೂಡರವರ ಮಾಸ್ಟರ್ ಪೀಸ್ (Master Piece) ಎಂದಿರುವ ಪಾದುಕಾ ಪಟ್ಟಾಭಿಷೇಕವು ಶಿರಹಟ್ಟಿಯವರ ಮಟ್ಟಿಗೆ ಪ್ರೇಕ್ಷಕರಲ್ಲಿ ಸ್ವಲ್ಪ ಮಟ್ಟಿಗೆ ಚೆನ್ನಾಗಿರದೆ ಹೋದುದು "ರಂಗಭೂಮಿಯ ಸುಧಾರಣೆಯಲ್ಲಿ ಚಿಂತಿತರಿರುವ ನಾಟಕಕಂಪೆನಿಯವರು ವಿಚಾರಿಸಿಕೊಳ್ಳುವುದು ಉತ್ತಮ"

• • • •

ಪದ್ಯಕ್ಕೆ ಪ್ರಾಸವು ಶೋಭಿಸುವುದು—ಅಲ್ಲಿಯೂ ಅಭಿಪ್ರಾಯ ಭೇದವಿದೆ—ಆದರೆ ನಾಟಕದ ಮಾತುಗಳಲ್ಲಿ ಛಲಪ್ರಾಸವಿರುವಷ್ಟು ಕರ್ಕಶವೂ ಅಶ್ಲೀಲವೂ ಬೇರೆ ಇಲ್ಲ. ಪಾದುಕಾ ಪಟ್ಟಾಭಿಷೇಕದಲ್ಲಿ ಈ ದೋಷವು ಹಲವು ಕಡೆಗಳಲ್ಲಿ ಕಾಣುತ್ತದೆ.

• • • •

ಚಿಕ್ಕವರ ಪಾರ್ಟಿನ ಮಾತುಗಳ ಗಾಂಭೀರ್ಯಕ್ಕೂ ದೊಡ್ಡವರ ಪಾರ್ಟುಗಳ ಗಾಂಭೀರ್ಯಕ್ಕೂ ಬಹಳ ಪ್ರಭೇದ. ಚಿಕ್ಕವರು ಚೆನ್ನಾಗಿ ಬಾಯಿಪಾಠ ಮಾಡಿಕೊಂಡಾಗ ದೊಡ್ಡವರು ಬಾಯಿಪಾಠದ ಅವಶ್ಯಕತೆಯನ್ನು ಮರೆತಿರಬಹುದೇ?

• • • •

ಭರತನ ಪಾತ್ರವನ್ನು ವಹಿಸಿಕೊಂಡ ಆ ಚಿಕ್ಕ ಹುಡುಗನಿಗೆ ನಮ್ಮ ಅಭಿನಂದನಗಳು. ಉಳಿದವರ ವಿಷಯದಲ್ಲಿ ನಾವು ಹೆಚ್ಚು ಹೇಳಲಾರೆವು.

• • • •

ತಾತಾರವರ ಕಬ್ಬಿಣ ಕಾರ್ಖಾನೆಯಲ್ಲಿಯೂ ಮುಷ್ಕರದ ತಯಾರಿಯು ನಡೆಯುತ್ತಿದೆ. ಹಿಂದೂಸ್ಥಾನವು ಪಾಶ್ಚಾತ್ಯರ ಅಭಿವೃದ್ಧಿಗೆ ಬಂದ ಕೈಗಾರಿಕೆಗಳೊಡನೆ ಕಷ್ಟದಿಂದ ಸ್ಪರ್ಧಿಸಲಿರುವಾಗ ಇಂತಹ ಮಜೂರ ತೊಂದರೆಗಳು ಬಹಳ ದುಃಖಕರವಿವೆ.

• • • •

ವಿಮಾನ ಸಂಚಲನೆಗಾಗಿ ಪಾಶ್ಚಾತ್ಯ ವೈಮಾನಿಕರು ಎಂತಹ ಆತ್ಮಯಜ್ಞವನ್ನು ಮಾಡುವರೆಂದು ಸಾಮಾನ್ಯರಿಗೆ ತಿಳಿಯಲಾರದು. ಆದರೆ ಒಬ್ಬರಮೇಲೊಬ್ಬರಾಗಿ ಅಟ್ಲಾಂಟಿಕ್ ಸಾಗರವನ್ನು ದಾಟಲೆತ್ನಿಸಿ ಸಾಯುತ್ತಿರುವಾಗ, ಇನ್ನೂ ವೈಮಾನಿಕರು ಹಾರಲು ಮುಂದೊತ್ತಿ ಬರುವುದನ್ನು ನೋಡಿದರೆ ಪಾಶ್ಚಾತ್ಯರ ಪ್ರಯತ್ನದ ಮಹತ್ವವು ತಿಳಿದುಬರುವುದು.

• • • •

ಹಿಂದೀ ಮಾನಸಿಕತೆಗೆ ಈ ಆತ್ಮಯಜ್ಞದ ಮಹತ್ವವು ಸರಿಯಾಗಿ ತಿಳಿಯಬರುವುದು ಕಷ್ಟವಿದೆ. ಆದರೆ ಪಾಶ್ಚಾತ್ಯ ದೇವಪೂಜೆಯು ಇಂತಹ ಉಪಾಸನೆಗಳಿಂದಲೇ ನಡಿಯುತ್ತಿವೆಯೆಂಬುದನ್ನು ನಾವು ತಿಳಿಯುವುದು ಉತ್ತಮ.

ವೆಂದು ಅವರ ಸೂಚನೆ. ಮಲಬಾರಿನ ವ್ಯವಸ್ಥೆಯಾಗಲಿ ಅವ್ಯವಸ್ಥೆಯ ವಿಷಯದಲ್ಲಿ ನಮಗೆ ಚೆನ್ನಾಗಿ ಗೊತ್ತಿರುವುದಿಲ್ಲ. ಆದರೆ ನಮ್ಮ ಜಿಲ್ಲೆಯೊಳಗೆ ಇಂತಹದೊಂದು ಕೇಂದ್ರವನ್ನು ಸ್ಥಾಪಿಸುವಂತೆ ಈಗಲೇ ಪ್ರಯತ್ನಗಳನ್ನು ಮಾಡುವುದು ಉತ್ತಮ.

ವಿದೇಶ ವರ್ತಮಾನ.

— ಉಬ್ಬಿಂಗ್‌ಶಾಫೆನಿನ ಒಂದು ಕಾರಖಾನೆಯು ಕೆಲಸಗಾರನನ್ನು ಕೆಲಸದಿಂದ ಹೊರಗೆ ಹಾಕಿದ ಮುಯ್ಯಿಯನ್ನು ತೀರಿಸುವುದಕ್ಕಾಗಿ ಆತನು ಕಾರಖಾನೆಯ ಹದಿನೆರಡು ಜನ ಡ್ಯಾರೆಕ್ಟರರು ಕುಳಿತು ವಿನೋದದಿಂದ ಊಟ ಮಾಡುತ್ತಿರುವಾಗ ಎರಡು ಕೈಗಳಲ್ಲಿ ಎರಡು ಪಿಸ್ತೂಲುಗಳನ್ನು ಹಿಡಿದು ಕೋಣೆಯನ್ನು ಪ್ರವೇಶಿಸಿ ಅವರ ಮೇಲೆ ಗುಂಡುಗಳನ್ನು ಎಸೆದನು. ದೈವವಶಾತ್ ಮೂವರು ಡ್ಯಾರೆಕ್ಟರರಿಗೆ ಮಾತ್ರ ಪೆಟ್ಟು ತಾಗಿ ಒಬ್ಬರು ಸತ್ತುಹೋದರು.

— ಬರ್ಲಿನಿನ ಒಂದು ಆಸ್ಪತ್ರೆಯಲ್ಲಿ ಅಫಘಾನದ ಅಮನುಲ್ಲಾ ರಾಜರಿಗೆ ಗಂಟಲಿನಲ್ಲಿ ಒಪರೇಶನು ಮಾಡಿತ್ತು. ಅವರು ಸೌಖ್ಯವಾದೊಡನೆ ರಾಜರು ಆಸ್ಪತ್ರೆಗೆ ಒಂದು ದೊಡ್ಡ ದೀಪವನ್ನು ಕೊಟ್ಟದ್ದು ಮಾತ್ರವಲ್ಲದೆ ರೋಗಿಗಳಿಗೆ ತನ್ನ ಖರ್ಚಿನಲ್ಲಿ ಹೆಚ್ಚಿಗೆ ಹತ್ತು ಮಂಚಗಳನ್ನು ಇಡಿಸಿದರು. ಅವರ ಆರೈಕೆಯನ್ನು ಮಾಡಿದ ಪ್ರತಿಯೊಬ್ಬನಿಗೂ ಇನಾಮುಗಳು ದೊರೆತವು. ಅಡಿಗೆಯವನಿಗೆ ಕೂಡ ಇಪ್ಪತ್ತು ಪವನಿಗೆ ಬಿಕ್ಷೆ ಕೊಟ್ಟಿರುವರು.

— ಸರಕಾರದವರು ಗಾಜಾ ಎಂಬಲ್ಲಿ ಅನ್ಯಾಯ ಮಾಡಿದುದಕ್ಕಾಗಿ ಜೆರುಸಲೇಮಿನಲ್ಲಿ ಮುಸಲ್ಮಾನರು ಹರತಾಳವನ್ನಾಚರಿಸಿದರು. ಇದರಿಂದ ಪೋಲೀಸರು ಗುಂಡುಹಾರಿಸಿ ಇಬ್ಬರನ್ನು ಜಖಂಪಡಿಸಿದರು.

— ಒಂದು ತರದ ಮಿಡಿತೆಗಳ ಗುಂಪು ಪೆಲೆಸ್ಟೈನಿನ ಜಬೆರಿಯಾಸ್ ಎಂಬಲ್ಲಿ ಬಂದು ಬಹಳ ಹಾವಳಿಯನ್ನು ಮಾಡಿತು. ಜನರು ಅವುಗಳ ಉಪದ್ರವನ್ನು ಸಹಿಸಲಾರದೆ ತುಂಬಾ ಕಷ್ಟಪಟ್ಟರು.

— ಅಫಘಾನ ಅಮೀರರ ಮಗನೂ, ಕುಟುಂಬದವರೂ ಪೇಶಾವರವನ್ನು ಸಂದರ್ಶಿಸಲು ಹೋಗಿರುವರು. ಅಲ್ಲಿ ಅವರೆಲ್ಲರೂ ಕೆಲವು ದಿನಗಳ ವರೆಗೆ ಉಳಕೊಳ್ಳುವರು.

— ಬಲ್ಗೇರಿಯದಲ್ಲಿ ಭೂಕಂಪವುಂಟಾಗಿ ಬಹಳ ನಷ್ಟವಾಗಿಯದೆ. ಆಸ್ಪತ್ರೆಗಳೂ, ಸರಕಾರಿ ಕಟ್ಟೋಣಗಳೂ, ಇಗರ್ಜಿಗಳೂ ಕುಸಿದು ಬಿದ್ದಿರುವವು. ಹಲವು ಜನರು ಸಜೀವವಾಗಿ ಮಣ್ಣಿನಡಿಯಲ್ಲಿ ಹುಗಿಯಲ್ಪಟ್ಟಿರುವರು. ಹಲವರಿಗೆ ಹುಚ್ಚು ಹಿಡಿದಿರುತ್ತದೆ. ನೂರಾರು ಜನರು ಸತ್ತಿರುವರು.

— ಇಜಿಪ್ತದ ಸಕ್ಕಾರಾ ಎಂಬ ನೆಲಗೋಪುರದೊಳಗೆ ಪ್ರಖ್ಯಾತಿಪಟ್ಟ ಅರಸನಾದ ಜೋಸನೆಂಬವನ ಮೃತದೇಹವಿದೆಯೆಂದು ಅನ್ನುತಿದ್ದರು. ಆದರೆ ಮೊನ್ನೆ ಗೋಪುರವನ್ನು ಅಗೆದು ಜಾಗ್ರತೆಯಿಂದ ಶೋಧಿಸಿ ನೋಡಿದರೂ ಶವವು ಸಿಕ್ಕಿಲ್ಲ. ಕಳೆದ ಎರಡು ವರುಷಗಳ ಹಿಂದೆ, ಇದೇ ರೀತಿಯಲ್ಲಿ ಇನ್ನೊಂದು ಗೋಪುರವನ್ನು ಅಗೆದು ಆಶಾಭಂಗವಾಗಿತ್ತು.

— ಬ್ರಿಟಿಷ ನಾವೆಯಲ್ಲಿ ೧೯೧೪ನೇ ಇಸವಿಯಲ್ಲಿ ೯೪೮೯ ನಾವಿಕರಿದ್ದರು. ಈ ವರ್ಷ ೮೫೧೧೫ ನಾವಿಕರು ಮಾತ್ರ ಇರುವರು.

— ಖುರಿಸ್ತಾನದ ಜನರನ್ನು ಶಿಕ್ಷಿಸುವದಕ್ಕಾಗಿ ಪರ್ಶಿಯದ ಶಹರು ಹೋಗಿದ್ದರಾದರೂ, ಅವರು ಶಹರಿಗೆ ಶರಣುಬಂದರಂತೆ. ಆದಕಾರಣ ಶಹರು ಅವರೊಡನೆ ಯುದ್ಧಮಾಡಲಿಲ್ಲ.

— ಲಾಟವಿಯದಲ್ಲಿ ೧೧ ಜನ ಕೊಮ್ಯುನಿಷ್ಟರರನ್ನು ಕೈದುಮಾಡಿರುವರು. ಇವರು ಮೊಸ್ಕೊವಿನವರೊಡನೆ ರಾಜಕೀಯ ಸಂಬಂಧದಲ್ಲಿ ಗುಪ್ತ ಪತ್ರವ್ಯವಹಾರವನ್ನು ನಡೆಸುತ್ತಿದ್ದರು.

— ಫ್ರಾನ್ಸಿನಲ್ಲಿ ಒಂದು ಹೊಸ ಕ್ರೂಸರನ್ನು ನೀರಿಗಿಳಿಸಿರುವರು. ಇದು ಹತ್ತುಸಾವಿರ ಟನ್ ಭಾರವಿದೆ. ಅದು ಮೂವತ್ತಮೂರು ನೋಟ್ ಓಡುವದು, ಎರಡು ಸೀಪ್ಲೇನ್ ವಿಮಾನಗಳನ್ನು ಹೊತ್ತುಕೊಳ್ಳುವದು.

— ಸ್ನೋಡನ್ ಪರ್ವತದ ಗ್ಲೈಡರ್‌ಪೇಚ್ ಎಂಬ ಶಿಖರವನ್ನು ಏರಲು ಪ್ರಯತ್ನಿಸುತ್ತಿರುವಾಗ ಓಕ್ಸ್‌ಫೋರ್ಡ್ ಕೊಲೆಜಿನ ರೆವರೆಂಡ್ ಎ. ಜೆ. ಜೆಂಕಿನ್‌ಸನರು ಕೆಳಗೆ ಬಿದ್ದು ಸತ್ತುಹೋದರು.

— ರಾಜಕುಮಾರಿ ಮೇರಿಯವರು ಇಜಿಪ್ತದಿಂದ ಲಂಡನಿಗೆ ಹಿಂತಿರುಗಿರುವರು

— ಏಥೆನ್ಸಿನಲ್ಲಿ ಕಳೆದ ೨೨ನೇ ತಾರೀಕಿನ ದಿನ ನಾಲ್ಕುಸಲ ಭೂಕಂಪನವುಂಟಾಯಿತು ಜನರೆಲ್ಲರೂ ಹೆದರಿ ಮಾರ್ಗಕ್ಕೆ ಬಂದು ಗುಂಪು ಕೂಡಿದ್ದರು.

— ಬಗದಾದಿನಲ್ಲಿ ಪೊಲಿಟಿಕಲ್ ಪಾರ್ಟಿ ಮತ್ತು ವಿರೋಧಪಾರ್ಟಿಯವರಲ್ಲಿ ಮತಕೆಗೆಯುತ್ತಿರುವಾಗ ಜಗಳವಾಗಿ ಇಬ್ಬರು ಕೊಲ್ಲಲ್ಪಟ್ಟರು. ಹಲವರು ಗಾಯಹೊಂದಿದ್ದರಿಂದ ಆಸ್ಪತ್ರೆಗೆ ಕರೆದೊಯ್ದಿರುವರು.

ಒಳದೇಶ ವರ್ತಮಾನ.

— ಮೈಸೂರು ಅರಮನೆಯ ಟ್ರೆಜರಿಯ ಹಣ ಕಾಣೆಯಾದ ವ್ಯಾಜ್ಯದಲ್ಲಿ ಐದು ಜನರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿರುವರು. ಇಬ್ಬರನ್ನು ಕೆಳಕೆಲಸಕ್ಕೆ ನೇಮಿಸಿರುವರು. ಕೆಲವರು ತಾವಾಗಿಯೇ ಕೆಲಸ ಬಿಟ್ಟುಹೋಗಿರುವರು.

— ಕನ್ಯಾಕುಮಾರಿಯಿಂದ ತಾ. ೨೧ನೇ ದಿನ ಲಾಲಾ ಲಜಪತರೈಯವರು ಮಧುರೆಗೆ ಬಂದು ತಲಪಿದರು. ಅವರಿಗೆ ಕಾಂಗ್ರೆಸ್ ಕಮಿಟಿಯವರೂ ಆರ್ಯಸಮಾಜದವರೂ ಸ್ವಾಗತವನ್ನು ಮಾಡಿದರು. ಸಾಯಂಕಾಲ ಲಾಲಾಜಿಯವರು ಒಂದು ಭಾಷಣವನ್ನು ಮಾಡಿದರು. ಅವರು ಮಧುರೆಯಲ್ಲಿ ಜೋರ್ಜ ಜೊಸೆಫರ ಅತಿಥಿಗಳಾಗಿದ್ದರು.

— ತಂಜಾವೂರಿನ "ಜನಮಿತ್ರ" ಪತ್ರಿಕೆಯ ಸಂಪಾದಕರನ್ನು ಜೈಲಿನಲ್ಲಿ ಹಾಕಿದ್ದರು. ಆದರೆ ಈಗ ಅವರನ್ನು ಬಿಟ್ಟುಬಿಟ್ಟಿರುವರು.

— ಕಲಕತ್ತದಿಂದ ಮದರಾಸಿಗೆ ಹೋಗುವ ರೈಲ್ವೆ ಲ್ಯಾನಿನ ಮೇಲೆ ದುಗ್ಗಿರಾಯಾ ಎಂಬಲ್ಲಿ ಒಬ್ಬ ಮನುಷ್ಯನ ಮೃತದೇಹವಿದ್ದಿತು. ಆ ದೇಹಕ್ಕೆ ರುಂಡ ಇರಲಿಲ್ಲ.

— ಜಗದ್ಗುರು ಶ್ರೀ ಶಂಕರಾಚಾರ್ಯರು ಈಗ ಅಲ್ಲೆಪ್ಪಿಯಲ್ಲಿರುವರು. ಅಲ್ಲಿ ಅವರು ಹಿಂದು ಮತದ ಕುರಿತು ಉತ್ತಮ ತಾತ್ವಿಕ ಭಾಷಣಗಳನ್ನು ಕೊಡುತ್ತಿರುವರು.

— ಚೊವಾರಾ ಎಂಬಲ್ಲಿ ರಾತ್ರೆ ನದಿಯಲ್ಲಿ ಸ್ನಾನಮಾಡಲು ಹೋಗಿದ್ದಾಗ ಇಬ್ಬರು ಮನುಷ್ಯರಿಗೆ ಮಿಂಚುಬಡಿದು ಸುಟ್ಟುಹೋದರು. ಸಮೀಪದಲ್ಲಿಯೇ ಇದ್ದ ಇಬ್ಬರು ಮಕ್ಕಳಿಗೆ ಕಣ್ಣುಕತ್ತಲೆ ಬಂದು ಮೂರ್ಛೆಹರಾದರು. ಮತ್ತೆ ಈ ಮಕ್ಕಳು ಮೂರ್ಛೆ ತಿಳಿದು ಎದ್ದರು.

— ಗಂಜಾಮು ಜಿಲ್ಲೆಯ ಶಿಕಾಲಿ ಎಂಬಲ್ಲಿ ಪಂಚಮರ ಪರಿಷತ್ತು ಜರಗಲಿರುವದು. ಬರಹಾಂಪುರದ ಮುನಿಸಿಪಲ್ ಚೆಯರ್‌ಮೇನರಾದ ಪಂಡಿತ ರಾಮಲಿಂಗಮ್ ಇವರೇ ಅಧ್ಯಕ್ಷರಾಗುವರು.

— ಮಹಾತ್ಮಾ ಗಾಂಧಿಯವರ ಅಳಿಯನಾದ ಮಗನ್‌ಲಾಲ್ ಗಾಂಧಿಯವರು ಕಳೆದ ೨೩ನೇ ತಾರೀಕಿನ ದಿನ ಪಾಟ್ನಾದಲ್ಲಿ ಮೃತಪಟ್ಟರು. ಇವರು ಗಯೆಯಲ್ಲಿದ್ದವರು ಜ್ವರವೆಂದು ಪಾಟ್ನಾಕ್ಕೆ ಬಂದರು. ಖಾಲಿ ಜ್ವರವು ನಿಮೋನಿಯಾ ಜ್ವರಕ್ಕೆ ಪರಿವರ್ತಿತವಾಗಿ ಹದಿನೈದೇ ದಿನಗಳಲ್ಲಿ ತೀರಿಹೋದರು.

— ಕಳೆದ ಎರಡು ತಿಂಗಳುಗಳಿಂದ ಪೂನಾ ಪಟ್ಟಣದಲ್ಲಿ ದರೋಡೆಯನ್ನು ಮಾಡುತ್ತಿದ್ದ ಐದು ಜನ ಕಳ್ಳರನ್ನು ಪೋಲೀಸರು ಹಿಡಿದಿರುವರು.

ಲಾಲಾಲಜಪತರೈಯವರು ದಕ್ಷಿಣ ಹಿಂದೂಸ್ಥಾನದ ತನ್ನ ಸಂಚಾರವನ್ನು ಮುಗಿಸಿ, ಪಂಜಾಬಕ್ಕೆ ತೆರಳಿದರು.

ಇಂಡಿಯದ. ಲೈಟ್ ಏರೊಕ್ಲಬ್ಬಿನ ಒಂದು ವಿಮಾನವು ಜುಹು ಎಂಬಲ್ಲಿ ಕೆಳಕ್ಕೆ ಬಿತ್ತು. ಒಳಗೆ ಮೂವರು ಜನರಿದ್ದರು. ವಿಮಾನವು ಸುಮಾರು ೩೦ ಫೀಟು ಎತ್ತರವಿರುವಾಗ ಇವರು ಕೆಳಕ್ಕೆ ಹಾರಿ ಜೀವ ಉಳಿಸಿಕೊಂಡರು. ವಿಮಾನಕ್ಕೆ ಬಹಳ ಪೆಟ್ಟಾಗಿಯದೆ.

— ಹರವಿಲಾಸ ಸರ್ದಾರರವರ ಪ್ರೌಢ ವಿವಾಹ ಮಸೂದೆಯನ್ನು ಎತ್ತಿ ಹಿಡಿಯುವದಕ್ಕಾಗಿ ಬ್ರಹ್ಮಸಮಾಜದವರ ಒಂದು ಸಭೆಯು ಲಾಹೋರಿನಲ್ಲಿ ನಡೆಯಿತು ಪಂಜಾಬದಲ್ಲಿ ಇನ್ನು ಮುಂದೆ ಹುಡುಗಿಯರಿಗೆ ೧೬ ವರ್ಷದ ಮೊದಲೂ, ಹುಡುಗರಿಗೆ ೨೦ ವರ್ಷದ ಮೊದಲೂ ಮದುವೆ ಮಾಡಬಾರದೆಂದೂ ಅವರು ನಿರ್ಣಯಿಸಿದರು.

— ಮಯೂರಭಂಜದ ಮಹಾರಾಜರು ಮುಂಬಾಯಿಯ ತಾಜಮಹಾಲ್ ಹೊಟೆಲಿನಲ್ಲಿ ಮೃತಪಟ್ಟರು.

— ಪೂನೆಯ ಸಮೀಪ ೩೩೦೦ ಮೈಲು ಆಡಿಯಲ್ಲಿ ಸ್ವಲ್ಪ ಭೂಕಂಪವುಂಟಾಯಿತೆಂದು ತಿಳಿದುಬರುತ್ತದೆ.

— ಬೆಂಗಳೂರಿನಿಂದ ಬರುವ ತಿಂಗಳಿನಿಂದ "ವೀರಕೇಸರಿ" ಎಂಬ ಒಂದು ದೈನಿಕ ಕನ್ನಡ ಪತ್ರಿಕೆಯನ್ನು ಹೊರಡಿಸುವರು.

— ಮೈಸೂರಿನ ದಾವಣಗೆರೆಯಲ್ಲಿ ಒಂದು ಮನೆಗೆ ಬೆಂಕಿ ತಾಗಿ ಸುಟ್ಟುಹೋಯಿತು. ಇದರಿಂದ ಸುಮಾರು ಹದಿನೈದು ಸಾವಿರದಿಂದ ೨೦ ಸಾವಿರ ರೂಪಾಯಿಗಳ ವರೆಗೆ ನಷ್ಟವಾಗಿಯದೆ. ಬೆಂಕಿಪೆಟ್ಟಿಗೆಗೆ ನಡುರಾತ್ರೆಯಲ್ಲಿ ತನ್ನಷ್ಟಕ್ಕೆನೇ ಬೆಂಕಿ ಹಿಡಿದು ಇಷ್ಟೆಲ್ಲ ಅನಾಹುತಗಳಾದವು ಆದರೆ ಪೊಲಿಸರೇ ಮೊದಲಾದವರು ಬೆಂಕಿಯನ್ನು ಬಹಳ ಪ್ರಯತ್ನದಿಂದ ನೊಂದಿಸಿ. ಇನ್ನೂ ಹೆಚ್ಚಿನ ನಷ್ಟವಾಗಲು ಬಿಡಲಿಲ್ಲ.

— ಮೈಸೂರಿನ ಮಹಾರಾಜರು ಪ್ರ್ಯಾವೇಟ್ ಸೆಕ್ರೆಟರಿಯವರೊಂದಿಗೆ ಉಟಾಕಮಂಡಿಗೆ ಹೋಗಿರುವರು

— ಮಧುರೆಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ಬಹಳ ಜೋರಿನ ಮಳೆ ಬಂದ ಕಾರಣ ಒಂದೆರಡು ದಿನಗಳ ವರೆಗೆ ಮಾರ್ಗದಲ್ಲಿ ಗಾಡಿ ಚಲಾವಣೆಗೆ ಕೂಡಾ ಅಡ್ಡಿಯಾಯಿತು.

— ಕುದುರೆ ಸವಾರಿ ಮಾಡುತ್ತಿರುವಾಗ ಇಂದೋರಿನ ಪೊಲಿಟಿಕಲ್ ಆಫೀಸರರಾದ ಮಿ. ಅಂಚ್‌ಬ್ಲೋಸರು ಪೆಟ್ಟು ತಾಗಿ ಸತ್ತರು.

— ಮುಂಬಾಯಿಯ ಸಮೀಪದ ಒಂದು ಹತ್ತಿಯ ಕಾರಖಾನೆಯಲ್ಲಿ ಬೆಂಕಿಯುಂಟಾದ ಕಾರಣ ೫,೦೦೦ ಹತ್ತಿ ಕಟ್ಟು ಸುಟ್ಟುಹೋಯಿತು. ಸುಮಾರು ಎರಡು ಲಕ್ಷ ರೂಪಾಯಿಯಷ್ಟು ನಷ್ಟವಾಯಿತು.

ದಕ್ಷಿಣ ಕನ್ನಡ.

ಮಂಗಳೂರು:— ತಾರೀಕು ೨೧-೪-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೧ ಮರಣಗಳಾದವು. ಈ ಪೈಕಿ ಮಲೇರಿಯಾ ಜ್ವರದಿಂದ ೨; ಶ್ವಾಸಕೋಶದ ರೋಗದಿಂದ ೬, ಇತರ ಎಲ್ಲಾ ಕಾರಣಗಳಿಂದ ೧೩, ಜನನ ಸಂಖ್ಯೆಯು ಒಟ್ಟು ೩೭.

ಇಲ್ಲಿಯ ರಾ. ಬೋಳ ದಯಾನಂದರಾಯರು ಡಿ. ಟಿ. ಎಮ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಮಂಗಳೂರು ತಾಲೂಕು ಬೋರ್ಡಿನ ಮಂಗಳೂರು ಸರ್ಕಲಿನ ಒಬ್ಬ ಮೆಂಬರರ ಅವಧಿಯು ಇದೇ ಬರುವ ಜೂನ್ ತಾರೀಕು ೭ರಲ್ಲಿ ಗುಜಾರಾಗುವದರಿಂದ ಆ ಕುರಿತು ಇನ್ನೊಬ್ಬ ಮೆಂಬರರನ್ನು ಆರಿಸುವ ಬಗ್ಗೆ ಚುನಾವಣೆಯು ನಡೆಯುವದು. ನೋಮಿನೇಶನ್ ಪೇಪರನ್ನು ಮೇ ತಾರೀಕು ೧೧ನೇ ಶುಕ್ರವಾರ ಅಪರಾಹ್ನ ಘಂಟೆ ೨ರಿಂದ ಘಂಟೆ ೪ರ ವರೇಗೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಕೊಡತಕ್ಕದ್ದು. ಈ ನೋಮಿನೇಶನ ಪತ್ರಗಳನ್ನು ಮೇ ತಾರೀಕು ೧೨ನೇ ಶನಿವಾರ ಪರಿಶೋಧಿಸುವರು. ಚುನಾವಣೆಯು, ಮಂಗಳೂರು ಸ್ಟೇಶನಿನಲ್ಲಿ ಮೇ ತಾರೀಕು ೨೮ನೇ ದಿನ ಘಂಟೆ ೭ರಿಂದ ೧೨ರ ವರೆಗೂ, ಬಜ್ಪೆ ಸ್ಟೇಶನಿನಲ್ಲಿ ಘಂಟೆ ೭ರಿಂದ ೧೨, ೧ರಿಂದ ೬ರ ವರೆಗೂ, ಕೋಟೆಕಾರು ಕಣ್ಣೂರು ಸ್ಟೇಶನುಗಳಲ್ಲಿ ಅದೇ ರೀತಿಯೂ ನಡೆಯುವದು. ವೋಟುಗಳನ್ನು ತಾಲೂಕು ಬೋರ್ಡು ಪ್ರೆಸಿಡೆಂಟರು ಮೇ ತಾ. ೨೯ನೇ ಮಂಗಳವಾರ ಅಪರಾಹ್ನ ೧ ಘಂಟೆಯಿಂದ ೫ ಘಂಟೆ ವರೆಗೆ ಲೆಕ್ಕ ಮಾಡುವರು.

ಕಾಸರಗೋಡು ತಾಲೂಕಿನ ಭೂಮಾಲಿಕರ ಸಂಘದ ಸಭೆಯು ಕಳೆದ ೧೬ನೇ ತಾರೀಕಿನ ದಿನ ನಡೆದು, ತಾಲೂಕಿನ ರಿಸರ್ವೆಯು ಅನಾಗತ್ಯವೆಂದೂ, ಕಷ್ಟದಾಯಕವೆಂದೂ, ರೈತರಿಗೆ ನಷ್ಟವನ್ನುಂಟುಮಾಡುವದೆಂದೂ, ಈ ತಿಂಗಳ ಅಂತ್ಯದಲ್ಲಿ ಇಲ್ಲಿಗೆ ಬರಲಿರುವ ಸರ್ವೆಯ ಎಕ್ಟಿಂಗ್ ಡ್ಯಾರೆಕ್ಟರರಿಗೆ, ಹಳೆ ಕಾಸರಗೋಡು ತಾಲೂಕಿನ ಇದು ವರೆಗೆ ಸರ್ವೆಯಾದ ಸ್ಥಳಗಳಲ್ಲಿ ಉಂಟಾದ ಕಷ್ಟಗಳೆಲ್ಲವನ್ನು ತಿಳಿಸುವಂತೆ ಈ ಕೆಳಗಿನವರನ್ನು ನೇಮಕಮಾಡಲಾಯಿತು. ಶ್ರೀಯುತರುಗಳಾದ—ಕೆ. ನರಸಿಂಗ ನಾಯ್ಕ, ಕೆ. ಕಾಮತಿಟ್ಟಿ, ಮಹಮದ್ ಶರೂಲ್, ಖಂಡಿಗೆ ಮಹಾಲಿಂಗ ಭಟ್ಟ, ಗೋಪಾಲಕೃಷ್ಣ ಶಡಗ, ಪೂವಣಶೆಟ್ಟಿ. ರಾಮಪ್ಪ ಆಳ್ವ, ಕೊಡ್ಲು ಸದಾಶಿವ ಶ್ಯಾನುಭಾಗ, ಶಂಕರನಾರಾಯಣ ಭಟ್ಟ, ವೈಕುಂಠ ಭಕ್ತ.

ಮಂಗಳೂರಿಗೆ ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಶಿರಹಟ್ಟಿ ನಾಟಕ ಮಂಡಳಿಯವರು ಬಂದು ತಮ್ಮ ನಾಟಕಗಳನ್ನು ಪ್ರದರ್ಶಿಸಲು ಆರಂಭಿಸಿರುವರು. ಇವರು ಕಳೆದ ಸೋಮವಾರ 'ಕೃಷ್ಣಲೀಲಾ' ಎಂಬ ನಾಟಕವನ್ನೂ, ಬುಧವಾರ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ಎಂಬ ನಾಟಕವನ್ನೂ ಆಡಿತೋರಿಸಿದರು. ನಾಳೆ ಶನಿವಾರ ದಿನ ಹೆಸರುಹೊಂದಿದ 'ದಿವ್ಯಪ್ರೇಮ' ಎಂಬ ನಾಟಕವನ್ನು ಆಡುವರು.

ಮಂಗಳೂರು ತಾಲೂಕ ಕಾಂಗ್ರೆಸ್ ಕಮಿಟಿಯ ಈ ವರ್ಷದ ದ್ವಿತೀಯ ಮಹಾಸಭೆಯು ಬರುವ ಮೇ ತಿಂಗಳ ತಾ. ೧೩ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಕಾರ್ಯಕ್ರಮ—೧. ಕಳದ ಮೂರು ತಿಂಗಳ ಕೆಲಸದ ವರದಿ, ೨. ಚಾಲ್ತಿ ವರ್ಷದ ಕಾರ್ಯಕ್ರಮ ೩. ಜಿಲ್ಲಾ ಪರಿಷತ್ತನ್ನು ಜರಗಿಸುವ ವಿಷಯ. ೪. ಗ್ರಾಮ ಕಮಿಟಿಯನ್ನು ಪುನರುಜ್ಜೀವನಗೊಳಿಸುವ ವಿಷಯ. ೫. ಕ್ಲಪ್ತಕಾಲದಲ್ಲಿ ಸದಸ್ಯರಿಂದ ಬರಬಹುದಾದ ಸೂಚನೆಗಳು ಯಾ ಪ್ರಶ್ನೆಗಳು. ೬. ಅಧ್ಯಕ್ಷರ ಅಪ್ಪಣೆಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು

ವಿ ಸೂ. ೧) ಸದಸ್ಯರಿಂದ ಬರತಕ್ಕ ಸೂಚನೆಗಳು ಯಾ ಪ್ರಶ್ನೆಗಳು ಜರುವ ತಿಂಗಳ ತಾ. ೮ರೊಳಗೆ ಕಚೇರಿಗೆ ತಲ್ಪತಕ್ಕದ್ದು; ೨) ಈ ಸಭೆಯಲ್ಲಿ ಭಾಗಿಯಾಗತಕ್ಕ ಸದಸ್ಯರು ಕೈನೂಲಿನಿಂದ ಹಾಗು ಕೈಮಗ್ಗದಿಂದ ತಯಾರಿಸಿದ ಖಾದಿಯನ್ನು ಕಾಯಂ ಧರಿಸುವವರಾಗಿರತಕ್ಕದ್ದು, ಎಂದು ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿ ಕಚೇರಿಯ ಕಾರ್ಯದರ್ಶಿಗಳಾದ ಬಿ ನಾರಾಯಣ ಸೋಮಯಾಜಿಯವರು ತಿಳಿಸುತ್ತಾರೆ.

ಫರಂಗಿಪೇಟೆ:— ಈ ಸೆಂಟರಿನ ಉಪಾಧ್ಯಾಯರ ಸಂಘದ ೧೦ನೇ ಸಭೆಯು ತಾ. ೨೧-೪-'೨೮ನೇ ಶನಿವಾರ ದಿನ ಸಜೀಪ ನಡು ಬೋರ್ಡು ಶಾಲೆಯಲ್ಲಿ ನೀರುಮಾರ್ಗ ಶಾಲಾ ಹೆಡ್‌ಮಾಸ್ತರ್ ಮೈ ಅಂತೋನಿ ಡಿಸೋಜರ ಅಧ್ಯಕ್ಷತೆಯಲ್ಲಿ ನಡೆಯಿತು. ಗ್ರಾಮದ ಪಟೇಲರೂ ೨೭ ಮಂದಿ ಉಪಾಧ್ಯಾಯರೂ ಹಾಜರು ಇದ್ದರು. ಸೆಕ್ರೆಟರಿಯವರು ಗತ ಮೀಟಿಂಗಿನ ಪ್ರೊಸಿಡಿಂಗ್ಸುಗಳನ್ನು ಓದಿ ಹೇಳಿ ಮಂಜೂರು ಮಾಡಿದ ತರುವಾಯ ಗೈರಹಾಜರು ಆದ ಉಪಾಧ್ಯಾಯರು ಬರುವ ಸಭೆಗೆ ಬರುವಂತೆ ಬರಹ ಮೂಲಕ ತಿಳಿಸಬೇಕೆಂದು ನಿರ್ಣಯಿಸಿ ವಸೂಲು ಆದ ವಂತಿಗೆ ಹಣದ ಜಮಾ ಖರ್ಚಿನ ಪಟ್ಟಿ ಓದಲಾಯಿತು. ಸಜೀಪ ನಡು ಶಾಲೆಯ ಹೆಡ್ ಮಾಸ್ತರ್ ರಾ. ಕೆ. ರಾಮನವರು IVನೇ ಕ್ಲಾಸಿಗೆ ಭೂಗೋಳದಲ್ಲಿ ಬಂದು ಮಾದರಿ ಪಾಠವನ್ನು ಕೊಟ್ಟರು. 'ಸಂಘಗಳ ಉಪಯೋಗ ಮತ್ತು ಮೆಂಬರರ ಕರ್ತವ್ಯ ಇದರ ಕುರಿತು ಉಪನ್ಯಾಸಗಳನ್ನು ಮೇರಮಜ್ಜ ಶಾಲಾ ಮಾಸ್ತರ್ ಮೆ. ಪಾವುಲ್ ಲೋಬೊ ಮತ್ತು ನೀರುಮಾರ್ಗ ಶಾಲಾ ಮಾಸ್ತರ್ ರಾ. ಕೊರಗ ಪೂಜಾರಿಗಳು ಓದಿದ ತರುವಾಯ ಇತರ ಉಪಾಧ್ಯಾಯರು ಇದರ ಕುರಿತು ಬಹಳ ಸಮಯದ ವರೇಗೆ ಭಾಷಣಗಳನ್ನು ಮಾಡಿದರು. ಮುಂದೆಮಾದರಿಪಾಠಗಳನ್ನು ಕೊಡುವದರ ಸಂಗಡ ಇತರ ಉಪಾಧ್ಯಾಯರೂ ಅದೇ ಪಾಠವನ್ನು ಸ್ಪರ್ಧೆಯಿಂದ ಕೊಡಬಹುದೆಂದೂ, ವಿಮರ್ಶಿಸಬಹುದೆಂದೂ ಗೊತ್ತು ಮಾಡಲ್ಪಟ್ಟಿತು. ಮುಂದಿನ ಸಭೆಯನ್ನು ತಾ. ೨-೬-'೨೮ನೇ ದಿನ ಫರಂಗಿಪೇಟೆ ಶ್ರೀರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಿ ಅಧ್ಯಕ್ಷರ ಕಾಲೋಚಿತ ಭಾಷಣವಾಗಿ ಧನ್ಯವಾದಗಳನ್ನು ಅರ್ಪಿಸಿ, ಸದರಿ ಶಾಲಾ ಉಪಾಧ್ಯಾಯರುಗ ಕೊಡೋಣಾದ ಆತಿಥ್ಯ ಸತ್ಕಾರಗಳನ್ನು ಸ್ವೀಕರಿಸಿದ ಬಳಿಕ ರಾಜಗೀತದೊಂದಿಗೆ ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ಸುರತ್ಕಲ್:— ಇಲ್ಲಿನ 'ಇದ್ಯ ವಿದ್ಯಾದಾಯಿನೀ ಶಾಲೆಯ ಹನ್ನೊಂದನೆ ವಾರ್ಷಿಕ ವರ್ಧಂತಿ ಉತ್ಸವವನ್ನು ಇದೇ ಬರುವ ತಾ. ೨೯ನೇ ಆದಿತ್ಯವಾರ ದಿನ ಅಪರಾಹ್ನ ಘಂಟೆ ೩ಕ್ಕೆ ಸದರಿ ಶಾಲಾ ಮಂದಿರದಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುವುದರಿಂದ ವಿದ್ಯಾಭಿಮಾನಿಗಳಾದ ಮಹನೀಯರೆಲ್ಲರೂ ಮಿತ್ರರೊಡಗೂಡಿ ಚಿತ್ತೈಸಿ ಶಾಲಾಭ್ಯುದಯವನ್ನು ಬಯಸುವಂತೆ ಹಾರೈಸೋಣಾಗುತ್ತದೆ.

ಕಾಪು;— ಇಲ್ಲಿಯ ಶ್ರೀ ವೆಂಕಟರಮಣ ದೇವಾಲಯದಲ್ಲಿ, ಶೃಂಗೇರಿ ಮಾಧವ ಬಟ್ರೆಂಬವರಿಂದ ಅಧ್ಯಾತ್ಮ ರಾಮಾಯಣ ಪಾರಾಯಣವೂ ಹರಿಕಥೆಯೂ ನಡೆಯುತ್ತಿದೆ. ಇಂಥಾ ಕಾರ್ಯಗಳು ಇಲ್ಲಿ, ಇದೇ ಪ್ರಥಮ. ಇನ್ನು ಮುಂದಕ್ಕೆ ಕೂಡಾ ಭಜಕಮಂಡಲಿಗೆ ವೆಂಕಟರಮಣನು ಇದೇ ಬುದ್ಧಿಯನ್ನು ಕೊಡಬೇಕೆಂದು ಸದಾ ಹಾರೈಸುತ್ತೇವೆ.

ಈ ದೇವಾಲಯದ ಚಂದ್ರ ಶಾಲೆಯ ಮರದ ದಳಿಯು ಅರ್ಧದಲ್ಲಿ ನಿಲ್ಲಿಸಲ್ಪಟ್ಟಿದೆ. ಈ ವಿಷಯ ಬೋರ್ಡು ಮೆಂಬರರಿಗಾಗಲೀ, ಇತರರಿಗಾಗಲೀ ಗೋಚರಕ್ಕೆ ಬಾರದಿದ್ದದ್ದು ಅತ್ಯಂತ ಶೋಚನೀಯ. ಈ ಕಾರ್ಯವನ್ನು ಇನ್ನಾದರೂ ಪೂರೈಸಬಾರದೇಕೆ? ಇನ್ನು ನೋಡಲಿಕ್ಕಿದೆ. ಕೆಲಸದ ವಾರ್ತೆ! ಭಜಕರ ಭಕ್ತಿ!! ವೆಂಕಟ್ರಮಣನ ಚಿತ್ತ!!!

ಹೊಸದುರ್ಗ:— ಪಂಚಾಯಿತ ಕೋರ್ಟ ಅಪಮಾನಪಡಿಸಿದಕ್ಕಾಗಿ ನಡಿಯುತ್ತಿದ್ದ ಮೊಕದ್ದಮೆಯು ಮುದ್ದೈ ಆಲೆಗೆ ೪೦ ರೂಪ್ಯಾ ಜುರುಮಾನೆ ತೀರ್ಪುನಿಶಿಂ ಪಡಿಚಾವಾಗಿಯದೆ.

ಇಲ್ಲಿಯ ಮುಕ್ಕವರ ಬೋರ್ಡ ಶಾಲೆಯ ಮಕ್ಕಳಿಂದ "ಕುಚೇಲ ಚರಿತ್ರೆ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ಚಿಕ್ಕ ಬಾಲಕರು ತರ್ಬೇತು ಹೊಂದದೆ ಕಾಣಿಸಿದ ಅಭಿನಯವು ತೃಪ್ತಿಕರವಾಗಿತ್ತು. ಅಧ್ಯಾಪಕರಿಗೆ ಸ್ತುತ್ಯ.

ಧೀವರ ಜಾತಿಯಲ್ಲಿ ಸರಕಾರದಿಂದ ಹೆಕ್ಕಿ ತೆಗೆದು ಕಾಸರಗೋಡು ತಾಲೂಕು ಬೋರ್ಡಿಗೆ ಒಬ್ಬ ಮೆಂಬರನಾಗಿ ನೇಮಿಸಲ್ಪಟ್ಟ ಮ। ರಾ। ರಾ। ಪಿ. ವಿ. ಕಲಂದನ್ ಅವರ್ಗಳ್ ಇವರಿಗೆ ಇಲ್ಲಿಯ ನಿವಾಸಿಕರ ಪರವಾಗಿ ಒಂದು ಉಪಹಾರವನ್ನು ಕೊಡಲಾಯಿತು. ಸದರಿ ಸಂಭ್ರಮಕ್ಕೆ ದೊಡ್ಡ ಸಭೆಯು ಇಲ್ಲಿಯ ಹ್ಯಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿತ್ತು. ಸಭೆಗೆ ಸ್ಥಳೀಕ ಮೆಜಿಸ್ಟ್ರೇಟರೂ ಸಬ್‌ರಿಜಿಸ್ತ್ರಾರರೂ, ವೈದ್ಯ ಉದ್ಯೋಗಸ್ಥರೂ, ವಿದ್ಯಾ ಇಲಾಖಾ ಕಾಸರಗೋಡುರೇಂಜಿನ ಡಿಪ್ಯುಟಿ ಇನ್ಸಪೆಕ್ಟರಂಬ್ಬರೂ, ಸ್ಥಳೀಕ ಸದ್ಗೃಹಸ್ಥರನೇಕರೂ ಕೂಡ ಹಾಜರು ಇದ್ದರು. ಸರ್ವಸಮ್ಮತದಿಂದ ಸದರಿ ಸಭೆಗೆ ವಕೀಲ್ ಮ। ರಾ। ರಾ। ಹೊಸದುರ್ಗ ಗಣಪತಿರಾಯರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ನಂತರ ಸರಕಾರ ಕಡೆಯಿಂದ ನೇಮಕ ಹೊಂದಿದ ತಾಲೂಕು ಬೋರ್ಡು ಮೆಂಬರರು ನಡಕೊಳ್ಳಬೇಕಾದ ವ ಮನಸ್ಸು ಕೊಡಬೇಕಾದ ಆನೇಕ ಸಂಗತಿಗಳ ಅನುಭವಗಳನ್ನು ಶ್ರೀಯುತರಾದ ಎಚ್. ಶೇಷಗಿರಿ ಕಮ್ತಿ, ಯಚ್. ಯಸ್. ಕಾಮತ್, ಯಚ್. ಆರ್. ಪೈ ಮತ್ತು ಕೆ. ಜನಾಯ್ಕರಿಂದ ಚಲೋ ಭಾಷಣಗಳು ಕೊಡಲ್ಪಾಟು. ಸದರಿ ಭಾಷಣಗಳು ಸಮಾಪ್ತಿಹೊಂದಲಿಕ್ಕೆ ಬಾಕಿ ಇರುವ ಇತರ ಸಂಗತಿಗಳನ್ನು ತಾಲೂಕು ಬೋರ್ಡಿನ ತತ್ವವನ್ನು ಕೂಡ ಸರಿಯಾಗಿ ವಿವರಿಸಿದ ಅನುಭವಶಾಲಿಯಾದ ಅಧ್ಯಕ್ಷರ ಮುದ್ರಿಕೆಯಿಂದ ಸಭೆಯು ಮುಕ್ತಾಯಪಡಿಸಿ ಡಿಸ್ಟ್ರಿಕ್ಟ ಬೋರ್ಡಿಗೆ ವಂದನೆಗಳನ್ನು ಸಮರ್ಪಿಸಿ ಉಪಹಾರವನ್ನು ಸಸಾರವಾಗಿ ಕೊನೆಗಾಣಿಸಲಾಯಿತು.

ವಿವಿಧ ಸಮಾಚಾರಗಳು.

ಹಿಂದೂ-ಮುಸಲ್ಮಾನರ ಐಕ್ಯ.

ಹಿಂದೂ-ಮುಸಲ್ಮಾನರ ಐಕ್ಯದ ಕುರಿತು ಖಾನಬಹದ್ದೂರ್ ಮಿರ್. ಮುಜಿರುದ್ದಿನ್‌ರು ಈ ರೀತಿ ಬರೆಯುತ್ತಿರುವರು.

ಹಿಂದೂ ಮುಸಲ್ಮಾನರ ಐಕ್ಯವಾಗುವಂತೆ ಎರಡು ಬಣಗಳ ಧುರೀಣರು ಬಹಳ ಪ್ರಯತ್ನಿಸುತ್ತಿರುವರಾದರೂ ಅದು ಸಫಲವಾಗಿಲ್ಲ. ಹಿಂದೂ ರಾಜರ ಕಾಲದಲ್ಲಿಯೂ. ಮುಸಲ್ಮಾನ ಅರಸರ ಆಳುವಿಕೆಯಲ್ಲಿಯೂ, ಹಿಂದೂ ಮುಸಲ್ಮಾನರೊಳಗೆ ಅಷ್ಟೊಂದು ವಿರೋಧಭಾವವಿರಲಿಲ್ಲೆಂದು ಒಪ್ಪತಕ್ಕದ್ದು. ಆಗ ದರೋಡೆಯತರ, ಪುಂಡರ ಹಾವಳಿ ಇದ್ದಿತಾದರೂ ಅವರು ಮತಬೇಧವನ್ನಿಡದೆ ಹಿಂದೂ-ಮುಸಲ್ಮಾನರಿಬ್ಬರನ್ನೂ ಸುಲಿಯುತ್ತಿದ್ದರು. ಹಿಂದೂ-ಮುಸಲ್ಮಾನರು ಪರಸ್ಪರ ವೈರಿಗಳಂತಿದ್ದು ವರ್ತಿಸುತ್ತಿದ್ದಿಲ್ಲ. ಒಮ್ಮೊಮ್ಮೆ ಕಾದಾಡುತಿದ್ದರಾದರೂ ಸ್ನೇಹವು ಮಾಯವಾಗಿ ಹೋಗಿರಲಿಲ್ಲ. ಈಗಿನಂತೆ ಹಿಂದೂ-ಮುಸಲ್ಮಾನರ ಐಕ್ಯಕ್ಕೆಂದು ಆಗ ಪರಿಷದಗಳು ನಡೆದದ್ದಿಲ್ಲ. ಮನುಷ್ಯನು ತನ್ನ ಕರ್ತವ್ಯವನ್ನು ತಿಳಿದನಾದರೆ ಹಿಂದೂವಾಗಲಿ ಮುಸಲ್ಮಾನನಾಗಲಿ, ಕ್ರಿಸ್ತನಾಗಲಿ ಮತವೈಶಮ್ಯವನ್ನು ಅಲ್ಲಗಳೆದು ಪರಸ್ಪರ ಸ್ನೇಹಭಾವದಿಂದ ಇರುವನು. ತನ್ನ ಮತವೇ ಶ್ರೇಷ್ಠವು. ಅನ್ಯಮತವು ಕನಿಷ್ಠವು ಎಂಬ ಭಾವನೆಯೇ ಜಾತೀಯ ಕಲಹಗಳಿಗೆ ಎಡೆಕೊಡುವದು. ಆಗ ಶಾಂತತಾಭಂಗವಾಗುವದು. ಪ್ರತಿಯೊರ್ವನು ಅನ್ಯಮತವು ತನ್ನ ಮತಕ್ಕಿಂತ ಹೀನವೆಂದು ಭಾವಿಸುವನಾದರೆ ಅನ್ಯಮತದವರ ಮೇಲೆ ಒಂದುತರದ ವೈಮನಸ್ಸು ಆತನಲ್ಲಿ ಉದ್ಭವಿಸುವದು. ಯಾವ ಮತದಲ್ಲಿದ್ದರೂ ಸತ್ಯದ ಹಾದಿಯನ್ನು ಬಿಟ್ಟುಹೋಗಬಾರದು. ಧರ್ಮಾಚರಣೆಯನ್ನು ಮಾಡಬೇಕೆಂದು ಎಲ್ಲಾ ಮತಸೂತ್ರಗಳಲ್ಲಿಯೂ ಹೇಳಿರುವಾಗ ಬೇರೆಯವರ ಮತಗಳು ಕಡಿಮೆ ಯೋಗ್ಯತೆಯವುಗಳೆಂದು ತಿಳಿಯುವದೆಂತು? ವಿಶ್ವದ ಆದಿಯಿಂದಲೂ ಜಗತ್ತಿನಲ್ಲಿ ಒಂದೇ ಮತವಿರದೆ ಬೇರೆ ಬೇರೆ ಮತಗಳಿವೆ. ಅಂದ ಮೇಲೆ ಮನುಷ್ಯನು ಮತದ ಕುರಿತು ಸಂಕುಚಿತ ಭಾವನೆಯನ್ನು ಬಿಡಬೇಕು. ಹಿಂದೂ-ಮುಸಲ್ಮಾನರು ಮೇಲಿನ ಸೂತ್ರಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟು ವರ್ತಿಸಿದರೆ ಅವರ ಐಕ್ಯವು ಸುಲಭಸಾಧ್ಯವಾಗಿ ಪರಿಣಮಿಸುವುದು ಎಂದು ಅವರು ಬರೆದಿರುವರು.

ಬಾಲ್ಯವಿವಾಹ ಮಸೂದೆ.

ಶ್ರೀ। ಹರವಿಲಾಸ ಸರ್ದಾರರವರೂ ಡಾ। ಮುತ್ತುಲಕ್ಷ್ಮಿ ರೆಡ್ಡಿಯವರೂ ಬಾಲ್ಯವಿವಾಹದ ಕಟ್ಟಳೆಯನ್ನು ಹೋಗಲಾಡಿಸಿ ಪ್ರೌಢ ವಿವಾಹವನ್ನು ಹಿಂದೂಸಮಾಜದಲ್ಲಿ ಆಚರಣೆಗೆ ತರಬೇಕೆಂದು ಎಸೆಂಬ್ಲಿಯಲ್ಲಿಯೂ, ಲೆಜಿಸ್ಲೇಟಿವ್ ಕೌನ್ಸಿಲುಗಳಲ್ಲಿಯೂ ಮುಂದಕ್ಕೆ ತಂದ ಮಸೂದೆಯನ್ನು ವಿರೋಧಿಸುವುದಕ್ಕಾಗಿ ಮದರಾಸಿನ ಯುವತಿಯರ ಒಂದು ಸಭೆಯು ಶಂಕರಾಚಾರ್ಯ ಮಠದಲ್ಲಿ ಜರಗಿತು. ಸಭೆಗೆ ಬಹುಮಂದಿ ಮಹಿಳೆಯರು ಬಂದಿದ್ದರು. ಇವರು ಮುಂದಕ್ಕೆ ತಂದ ಈ ಠರಾವುಗಳನ್ನು ಎಸೆಂಬ್ಲಿಯಲ್ಲಿ ಮಂಜೂರು ಮಾಡಿದುದಾದರೆ ಹಿಂದೂ ಸಮಾಜದಲ್ಲಿ ಬಹಳ ಅಸ್ತವ್ಯಸ್ತಕ್ಕೆ ಕಾರಣವಾಗುವದೆಂಬ ಒಂದೇ ಅಭಿಪ್ರಾಯವನ್ನು ಬಲಪಡಿಸಿ, ಮೂವರು ಸಭೆಯಲ್ಲಿ ಉದ್ಧವಾದ ಭಾಷಣಗಳನ್ನು ಕೊಟ್ಟರು. ಈಗ ಬಾಲ್ಯವಿವಾಹವು ಆಚರಣೆಯಲ್ಲಿರುವದಾದರೂ ಎರಡು ಜಾತಿಯವರಲ್ಲಿ, ಬ್ರಾಹ್ಮಣರಲ್ಲಿ ಮತ್ತು ವೈಶ್ಯರಲ್ಲಿ; ಹಿಂದೂ ಸಮಾಜದಲ್ಲಿ ಈ ಎರಡು ಜಾತಿಯ ಜನರ ಸಂಖ್ಯೆಯು ಬಹಳವಾಗಿಲ್ಲ; ಅಂದ ಮೇಲೆ ಇವರಲ್ಲಿ ಪ್ರೌಢ ವಿವಾಹವನ್ನು ಜ್ಯಾರಿಗೆ ತಂದು ಉಂಟಾಗುವ ಲಾಭವೇನು? ಸರಕಾರದವರಿಗೆ ಅದರಿಂದ ಸಿಕ್ಕುವದಾದರೂ ಏನು?—ಎಂಬುದೇ ಅವರ ಮುಖ್ಯ ಅಭಿಪ್ರಾಯವಾಗಿದ್ದಿತು. ಜಾತೀಯ ಧರ್ಮದಲ್ಲಿ ವಿಧಾಯಕ ಸಭೆಗಳ ಸದಸ್ಯರು ವೃಥಾ ಕೈಹಾಕಿ ಅಪಕೀರ್ತಿಯನ್ನು ತಾಳಿಕೊಳ್ಳದೆ ಅವುಗಳ ಗೋಜಿಗೆನೇ ಹೋಗದಿರಬೇಕೆಂದೂ, ಹಾಗೆ ಅವರು ಮಸೂದೆಯನ್ನು ಕೆಳ್ಳದೆ ಅದನ್ನು ಮಂಜೂರು ಮಾಡಿದುದಾದರೆ, ಮತದಾರರು ಅವರಿಗೆ ವಿರೋಧಿಗಳಾಗುವರೆಂಬುದನ್ನೂ, ಸದಸ್ಯರಿಗೆ ಜಾಗ್ರತೆಯಾಗಿ ತಿಳಿಸಬೇಕೆಂದೂ ಸಭೆಯಲ್ಲಿ ಮಂಜೂರಾಯಿತು;

ಮಧುರೆಯಲ್ಲಿ ಲಾಲಾಲಜಪತರಾಯರು.

ಲಾಲಾ ಲಜಪತರಾಯರು ಮಧುರೆಗೆ ಬಂದಾಗ ಚಿಕ್ಕ ಒಂದು ಭಾಷಣವನ್ನು ಕೊಟ್ಟರು; ಮುಖ್ಯವಾಗಿ ದಕ್ಷಿಣ ಹಿಂದೂಸ್ಥಾನದಲ್ಲಿರುವ ಬ್ರಾಹ್ಮಣ, ಬ್ರಾಹ್ಮಣೇತರ, ಅಸ್ಪೃಶ್ಯತೆ ಮೊದಲಾದ ಸಮಸ್ಯೆಗಳ ಕುರಿತು ಅವರು ಮಾತನಾಡಿದರು; ಮದರಾಸು ಸಂಸ್ಥಾನದಲ್ಲಿ ಅದರಲ್ಲೂ ಮಲಬಾರಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಬೇಧವು ಬಲವಾಗಿ ಬೆಳೆದಿರುತ್ತದೆ; ಬ್ರಾಹ್ಮಣರಲ್ಲದವರನ್ನು ಮುಟ್ಟಿದುದಾದರೆ ಕೂಡಲೇ ಸ್ನಾನವನ್ನು ಮಾಡುವ ಬ್ರಾಹ್ಮಣರೂ ಇರುವರು; ಹೀಗೆ ನಡಿಯುತ್ತಿರುವಾಗ ಅಸ್ಪೃಶ್ಯರ ಕಡೆಗೆ ಬ್ರಾಹ್ಮಣರು ಹೇಗೆ ವರ್ತಿಸುವರೆಂಬುದನ್ನು ವರ್ಣಿಸಿತೀರದು; ಎಂದಿನ ವರೆಗೆ ನಮ್ಮ ನಮ್ಮೊಳಗೆ ನಾವು ವಿರೋಧ ಭಾವವನ್ನು ಇರಗೊಡಲು ಅಸ್ಪದವನ್ನು ಕೊಡುವೆವೊ, ಅಂದಿನ ವರೆಗೆ ಅನ್ಯದೇಶದವರೊಡನೆ ನಾವು

(೯ನೇ ಪುಟಕ್ಕೆ ಮುಂದುವರಿಸಿಯದೆ)

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮ ಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿ ಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿ ಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನ ಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದೆಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮ ಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನ ವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದು ಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯ ರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಕಾಲ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲ ದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾ ಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ. ಮರಣಾಂತ ದವರೆಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷಿಸದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ರಹಸ್ಯವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಶೀಘ್ರಾಸ್ವಲ್ಪ ವಾಗಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು.

ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಆಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗ ದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ತಿಳಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ಸಿಗುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವ ಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯು ವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ಉತ್ತಮ ಕಾಗದದ ಮೇಲೆ ಅಚ್ಚು ಹಾಕಲ್ಪಟ್ಟದೆ. ಪ್ರತಿ ಒಬ್ಬ ಮನು ಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತೂ ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದು ಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ, ಆದರೆ ಸ್ತ್ರೀ ಯರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರು ವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರು ತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ದುಷ್ಟ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಯಜಮಾನರಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ಸ್ತ್ರೀಯಳು ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ವೇಶ್ಯೆಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡು ವದೇ ಮುಂತಾದ ಅನೇಕ ಅದ್ಭುತ ಲಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯ ದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇವನ್ನು ಪ್ರತಿ ಒಬ್ಬರು ಓದ ಬೇಕಾಗಿ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಮನೋಹರವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೮ ಆಣೆ.

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರ ವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವ ಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದ ವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು

ಬುಕ್ ಡಿಪೋ, ಬಳ್ಳಾರಿ.

ಸ್ನೇಹವನ್ನು ಸಂಪಾದಿಸಲಾರೆವು; ಅಂತೆಯೇ ಸ್ವರಾಜ್ಯವನ್ನೂ ಸಾಧಿಸ ಲಾರೆವು. ಅಸ್ಪೃಶ್ಯರೆಂದೆನಿಸಿಕೊಳ್ಳುವವರು ಸಂಖ್ಯೆಯೂ ಸ್ವಲ್ಪವೇ ಬಹಳ ಹೆಚ್ಚಿದ್ದು; ಆದ್ದರಿಂದ ಅವರನ್ನು ನಮ್ಮ ಸ್ವರಾಜ್ಯದ ಹೋರಾಟದಲ್ಲಿ ಸೇರಿಸಿಕೊಳ್ಳದಿದ್ದರೆ ನಿರರ್ಥಕವು. ಈ ಕುರಿತು ಬ್ರಾಹ್ಮಣರೂ, ಅಬ್ರಾಹ್ಮ ಣರೂ ಎಲ್ಲ ರೀತಿಯಲ್ಲಿ ಪ್ರಯತ್ನಿಸಬೇಕು. ದಕ್ಷಿಣ ಹಿಂದೂಸ್ಥಾನಕ್ಕೆ ಕೊರತೆಯೆಂದರೆ ಇದೊಂದೇ ವಿಷಯವಲ್ಲ. ಆದುದರಿಂದ ಈ ಕೊರತೆ ಯನ್ನು ಆದಷ್ಟು ಬೇಗನೇ ಹೋಗಲಾಡಿಸಬೇಕು. ಅಸ್ಪೃಶ್ಯರ ಒಟ್ಟಿಗೆ ಊಟಮಾಡಬೇಕೆಂದಿಲ್ಲ. ಅವರ ಹೆಣ್ಣುಗಳನ್ನು ಮದುವೆಯಾಗಬೇಕೆಂ ದಿಲ್ಲ. ಕೇವಲ ಅಸ್ಪೃಶ್ಯತೆಯನ್ನು ಮಾತ್ರ ಹೋಗಲಾಡಿಸಿದರೆ ಸಾಕು ಎಂದು ರಾಜಾಜಿಯವರು ಭಾಷಣವಿತ್ತರು.

§ § § §

ಶ್ರೀ| ಶ್ರೀನಿವಾಸ ಅಯ್ಯಂಗಾರರ ಯುರೋಪ ಸಂಚಾರ.

ರಾ| ಎಸ್. ಶ್ರೀನಿವಾಸ ಅಯ್ಯಂಗಾರರು ಸದ್ಯದಲ್ಲಿ ಯುರೋಪಿಗೆ ತೆರಳಲಿರುವರು. ಇದನ್ನು ಎಂಪ್ಯಾಯರ್ ಪಾರ್ಲಿಮೆಂಟರಿ ಎಸೋಸಿ ಯೇಶನಿನ ಲಂಡನ್ ಸೆಂಟ್ರಲ್ ಹೆಡ್ ಕ್ವಾರ್ಟರಿಗೆ ತಿಳಿಸಬೇಕೆಂದು ಅವರು ಎಂಪಾಯರ ಪಾರ್ಲಿಮೆಂಟರಿ ಎಸೋಸಿಯೇಶನಿನ ಇಂಡಿಯನ್ ಶಾಖೆಗೆ ಬರೆದಿರುವರು. ಇವರು ಎಸೋಸಿಯೇಶನಿನ ಮೆಂಬರರಾದ ಕಾರಣ ಇವರ ಆಗಮನವು ಮೊದಲೇ ಅಲ್ಲಿ ಗೊತ್ತಾಗಲೆಂದು ಇವರು ತಿಳಿಸಿದುದು. ಇದರಿಂದ ಥೈಲ್ಸಿ ಚಾರ್ಜ ಕಡಿಮೆಯಾಗುವದು. ಪಾರ್ಲಿ ಮೆಂಟ್ ಗೃಹಗಳನ್ನು ಸಂದರ್ಶಿಸಿ ತನ್ನ ಜನ್ಮಭೂಮಿಯ ನ್ಯೂನತೆಗಳನ್ನು ತಿಳಿಸಿ ಪಾರ್ಲಿಮೆಂಟ್ ಮೆಂಬರರೊಂದಿಗೆ ಭಾಷಣಮಾಡಬಹುದು. ಶ್ರೀ| ಅಯ್ಯಂಗಾರರು ತನ್ನ ಆರೋಗ್ಯವೃದ್ಧಿಗಾಗಿ ಯುರೋಪಿಗೆ ತೆರಳುವರಾ ದರೂ ಮಾತೃಭೂಮಿಯ ಸೇವೆಯ ಸಂದರ್ಭಗಳನ್ನು ಕಳಕೊಳ್ಳಲಾರರು. ಇನ್ನು ಮುಂದೆ ಸ್ಯಾಮನ್ ಕಮಿಶನು ಹಿಂದೂಸ್ಥಾನಕ್ಕೆ ಬರುವ ವಿಷಯ ಅವರು ಆಲೋಚಿಸುವಾಗ ಶ್ರೀ| ಶ್ರೀನಿವಾಸ ಅಯ್ಯಂಗಾರರು ಅಲ್ಲಿಗೆ ತಲಪುವರು. ರಾ| ಪಟೇಲರ ಅಧ್ಯಕ್ಷತೆಯಲ್ಲಿ ನಿರ್ವಹಿಸಲ್ಪಡುತ್ತಿರುವ ಪಾರ್ಲಿಮೆಂಟರಿ ಎಸೋಸಿಯೇಶನಿನ ಇಂಡಿಯನ್ ಶಾಖೆಯವರು ಇವರ ಹೆಸರನ್ನು ಅಲ್ಲಿಗೆ ಕಳುಹಿಸುವರು.

§ § § •

ಇಂದೋರಿನ ಮಾಜಿ ಮಹಾರಾಜರು.

ಇಂದೋರಿನ ಮಾಜಿ ಮಹಾರಾಜರಾದ ಸರ್, ತುಕೋಜಿರಾವ್ ಹೋಳ್ಕರರು ತನ್ನ ನವಪತ್ನಿಯನ್ನು ಕೂಡಿ ಯುರೋಪಿಗೆ ಹೋಗಬೇ ಕೆಂದು ಹಡಗಹತ್ತಲು ಕರಾಚಿಗೆ ಬಂದಿದ್ದರು. ಕಳೆದ ೨೮ನೇ ತಾರೀಕಿನ ದಿನ ಹಡಗಹತ್ತಿ ಯುರೋಪಿಗೆ ತೆರಳಿದರು. ಹಡಗೆಹತ್ತಿದೊಡನೆ ಇಂದೋರ ಪ್ರಜೆಗಳ ಮುಖಂಡರು ಹಡಗಹತ್ತಿ ರಾಜರಿಗೆ ಹೂಮಾಲೆಯನ್ನು ಹಾಕಿ ದರು. ಮಹಾರಾಜರೊಂದಿಗೆ ಅವರ ಹೆಂಡತಿಯು ಅಜ್ಜಿ, ಪ್ರೈವೇಟ್ ಸೆಕ್ರೆಟರಿಯಾದ ರಶೀದ್, ಠಾಕ್ಕುರ್ ಗೋಸಾಯಿ, ಮೊದಲಾದವರಿರುವರು. ಇವರು ಮಾರ್ಸೇಲಿಸಿನಲ್ಲಿಳಿದು ಅಲ್ಲಿಂದ ಪೆರಿಸಿಗೆ ಹೋಗುವರು. ಮಹಾ ರಾಜರು ಈಗ ಏನೋ ಒಂದು ತರದ ರೋಗಪೀಡಿತರಾಗಿರುವುದರಿಂದ ಪೆರಿಸಿಗೆ ಹೋಗಿ ವೈದ್ಯರನ್ನು ಕಾಣುವರಂತೆ. ತನ್ನ ಯುರೋಪಿನ ಪ್ರವಾಸದ ಕಾರ್ಯಕ್ರಮಗಳು ಇನ್ನೂ ನಿಶ್ಚಯವಾಗಿಲ್ಲವೆಂದೂ, ಅಲ್ಲಿ ಸಂದರ್ಭಗಳಿಗನುಸಾರವಾಗಿ ತಾನು ವರ್ತಿಸುವೆನೆಂದೂ ಮಹಾರಾಜರು ಹೇಳುವರು.

§ § § §

ಕಲ್ಕತ್ತದಲ್ಲಿ ಭಯಂಕರವಾದ ಜಗಳ.

ಕಲಕತ್ತದ ದಕ್ಕೆಯ ಮೇಲೆ ಚೈನಾದೇಶದ ಜನರೊಳಗೂ ಹಿಂದೂ ಗಳಿಗೂ ಜಗಳವಾಗಿ ೬ ಜನ ಚೀನಿಯರಿಗೂ ೧೫ ಜನ ಹಿಂದುಗಳಿಗೂ ಕಠಿಣವಾದ ಜಖಮಾಯಿತು. ಜಗಳದಲ್ಲಿ ಒಟ್ಟು ಒಂದು ಸಾವಿರ ಹಿಂದೂಗಳೂ ಮಹಮ್ಮದೀಯರೂ ೨೫೦ ಚೀನಿಯರೂ ಇದ್ದರು. ಕಲ್ಲು ಉಳಿ, ಕೋಲು ಮೊದಲಾದ ಆಯುಧಗಳನ್ನು ಎಲ್ಲರೂ ಉಪಯೋಗಿಸಿದ್ದರು ಅದೇ ಸ್ಥಳದಲ್ಲಿ ಎರಡು ವರ್ಷಗಳ ಕೆಳಗೆ ಮಹಮ್ಮದೀಯರೊಳಗೂ ಸಿಕ್ಕ ರೊಳಗೂ ಬಲವಾದ ಜಗಳವಾಗಿದ್ದಿತು. ಆಗ ಹಲವರು ಸತ್ತುಹೋಗಿ ದ್ದರು. ಅದೇ ಜಗಳವು ಮೊನ್ನೆ ಪುನರುದ್ಭವಿಸಿತು. ಒಂದು ತಿಂಗಳ ಹಿಂದೆ ಚೀನಿಯರೊಳಗೂ ಹಿಂದೂಗಳೊಳಗೂ ಅಲ್ಲಿ ಜಗಳವಾಗಿದ್ದಿತು. ಮೊದಲು ಹದಿನೆರಡು ಜನ ಚೀನಿಯರು ಕೆಲಸ ಮಾಡುತ್ತಿದ್ದ ಒಂದು ತೋಪಿ ನೊಳಗೆ ಒಬ್ಬ ಹಿಂದುವು ಕಲ್ಲುಬಿಸಾಡಿದನು, ಒಡನೆ ಚೀನಿಯರು ಕಲ್ಲು ಬಿಸಾಕಲು ಪ್ರಾರಂಭಿಸಿದರು. ಹಿಂದುಗಳು ಗುಂಪುಕೂಡಿ ಬಂದು ಮಾರಾಮಾರಿಯಾಯಿತು. ಹಿಂದೂ-ಮುಸಲ್ಮಾನರು ಒಟ್ಟಾಗಿ ಸಾವಿರಾರು ಸಂಖ್ಯೆಯಲ್ಲಿ ನೆರೆದು ೨೫೦ ಜನ ಚೀನಿಯರ ಮೇಲೆ ಬಿದ್ದರು. ಆದರೆ ಬೇಗನೆ ಪೋಲೀಸ್ ದಳವು ಅಲ್ಲಿಗೆ ಬಂದು ಜಗಳವನ್ನು ನಿಲ್ಲಿಸಿತು.

§ § § §

ವಿದ್ಯಾರ್ಥಿಗಳಿಗೆ ಮಿಲಿಟರಿ ತರಬೇತಿ.

ಪಂಜಾಬಿನ ಮಂಜೂರಾತಿಯನ್ನು ಪಡೆದ ಕೊಲಿಜುಗಳ ವಿದ್ಯಾರ್ಥಿ ಗಳ ಶಾರೀರಿಕ ಶಿಕ್ಷಣದೊಂದಿಗೆ ಮಿಲಿಟರಿ ತರಬೇತಿಯನ್ನು ಕೊಡಬೇ ಕೆಂದೂ, ಕೋವಿಯನ್ನು ಉಪಯೋಗಿಸುವಿಕೆಯನ್ನು ಅವರಿಗೆ ಕಲಿಸ ಬೇಕೆಂದೂ ಬರುವ ಲೆಜಿಸ್ಲೇಟಿವ್ ಕೌನ್ಸಿಲ್ ಅಧಿವೇಶನದಲ್ಲಿ ಮಿ| ಗಂಗಾ ರಾಮರವರು ಒಂದು ಠರಾವನ್ನು ಮುಂದಕ್ಕೆ ತರುವರು. ಈ ಠರಾವನ್ನು ಕೌನ್ಸಿಲಿನಲ್ಲಿ ಚರ್ಚಿಸಿ, ಅದನ್ನು ಜ್ಯಾರಿಗೆ ತರಬೇಕೆಂದು ಮಂಜೂರಾದರೆ ಮತ್ತೆ ಕೊಲೇಜುಗಳಲ್ಲಿಯೂ, ಶಾಲೆಗಳಲ್ಲಿಯೂ ಯುದ್ಧವಿದ್ಯೆಯು ಕೊಡ ಲ್ಪಡುವುದು, ಸೈನ್ಯದಲ್ಲಿ ಸೈನಿಕರು ಕಡಮೆಯಾಗಿ ಬಿಟ್ಟರೆ ಅವರ ಬದ ಲಿಗೆ ಈ ವಿದ್ಯಾರ್ಥಿಗಳನ್ನು ಸೈನ್ಯಕ್ಕೆ ಕೊಂಡುಹೋಗಲು ಮತ್ತೆ ಸುಲಭ ವಾಗುವದು.

ಕನ್ನಡ ರಹಿತರ ಯಾ ಭೂಮಾಲಿಕ ಸಂಘದ ಪ್ರಥಮ ಮಹಾಸಭೆ

ಸದರಿ ಸಂಘದ ಪ್ರಾಸ್ ಪ್ರೆಸಿಡೆಂಟರವರಾಗಿದ್ದ ಮ. ರಾ. ಯು. ಸಿ. ಕೃಷ್ಣಭಟ್ಟ ಪ್ಲಾಕೋರ್ಟು ವಕೀಲ್ ದೊಡ್ಡ ಜಮೀನ್‌ದಾರ ಇವರು ನೇಶ ನಲ್ ಹುಡಿಗೆಯರ ಶಾಲೆಯಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು.

ಕಾರ್ಯದರ್ಶಿಗಳಾದ ಮ. ರಾ. ರಾ. ವಕೀಲ್ ಶಂಕ್ರನಾರಾಯಣ ರಾಯರು ಈ ವರೇಗೆ ನಡೆದ ಸಂಘದ ಪ್ರಥಮ ವರದಿಯನ್ನು ಓದಿದರು. ಈ ಸಂಘವು ತಾರೀಕು ೨೬—೧೧—'೨೭ರಲ್ಲು ಮಂಗಳೂರಲ್ಲು ಸ್ಥಾಪಿ ಸಲ್ಪಟ್ಟು ಉಡುಪಿ ಹೊರತು ಇತರ ಎಲ್ಲಾ ತಾಲೂಕುಗಳಲ್ಲಿಯೂ ಇದಕ್ಕೆ ಶಾಖೆಗಳನ್ನು ಏರ್ಪಡಿಸಿಯದೆ.], ಜಿಲ್ಲಾ ಸಂಘಕ್ಕೆ ೨೫೦ ಮೆಂಬರರುಗಳು ತಾಲೂಕ: ಸಂಘಕ್ಕೆ ಪ್ರತ್ಯೇಕ ಮೆಂಬರರುಗಲು ಇರುವರು. ತಾಲೂಕು ಸಂಘದ ಪಟ್ಟಿ ಸಿಕ್ಕಲಿಲ್ಲವಾದರಿಂದ ಈ ಮಹಾಸಭೆಯಲ್ಲಿ ಎಲ್ಲಾ ಜಿಲ್ಲಾ ತಾಲೂಕಿಗೆ ಕೂಡಾ ಒಂದೇ ಮೆಂಬರು ಪಟ್ಟಿ ಯಿರಬೇಕಾಗಿ ಠರಾವ್ನಾ ರಿಂದ ಜುಮ್ಲಾ ಪಟ್ಟಿಯು ಹಿಂದಿನಿಂದ ಕೊಡಲ್ಪಡುವುದು.

ಸಂಪೂರ್ಣ ಭೂಮಾಲಿಕ ಹಕ್ಕು ಇದ್ದ ನಮ್ಮ ಮೂಲಗಾರರ ಅವ ಸ್ಥೆಯು ಈಗ ಸರಕಾರ ನೌಕರರ ಪ್ರಯತ್ನಗಳಿಂದ ಅಧೋಗತಿಗೆ ಬಂದ ದನ್ನು ಪುನಃ ಮುಂಚಿನ ಸ್ಥಿತಿಗೆ ತರುವುದು ದುಬಾರಿಗಿಂತ ಹೆಚ್ಚು ಕಂದಾ ಯವನ್ನು ಹೊರಿಸಲ್ಪಟ್ಟ ಈ ಜಿಲ್ಲೆಯ ಕಂದಾಯವನ್ನು ತಗ್ಗಿಸುವುದೂ ರೀಸರ್ವೆಯಿಂದ ಉಂಟಾದ ಬಾಧಕಗಳನ್ನು ತಡೆಕಟ್ಟುವುದು, ಇತರ ತಾಲೂ ಕಿಗೆ ಮುಂದುವರಿಸದ ಹಾಗೆ ಪ್ರಯತ್ನಿಸುವುದು. ರೀಸರ್ವೆಯಲ್ಲಿ ಬೇರೆ ಬೇರೆ ಜನರ ಸ್ಥಳ ಗಡಿಕಲ್ಲುಗಳನ್ನು ತಪ್ಪಿಸಿ ಜೊತೆ ಪಟ್ಟೆಗಳ ಮುಖಾಂತರ ಹಕ್ಕುಗಳನ್ನು ಬೆರಸಿ ಮುಂದಿನ ಕಲಹಕ್ಕೆ ಬೀಜ ಬಿತ್ತಿದ ಹಾಗೆ ಮಾಡಿ ರೈತರೇ ನಟ್ಟು ಬೆಳಸಿದ ಮರಗಳಿರುವ ರೈತರ ಕಟ್ಟಪುಣಿಗಳನ್ನು ಪರಂಭೋ ಕಿಗೆ ಕೂಡಿಸಿ ಗತತಿರ್ವೆ ಉತ್ತಿಲಾಜಿಕೆ ಮೊದಲಾದುವುಗಳನ್ನು ವಸೂಲು ಮಾಡದ ಹಾಗೆ ತಟಸ್ಥಪಡಿಸುವುದೂ ಮುಂಚಿನ ಸೆಟ್ಲ್‌ಮೆಂಟಿನಲ್ಲಿ ನಡೆದ ತಪ್ಪುಗಳನ್ನು ಕೂಡಾ ತಿದ್ದುಪಾಡು ಮಾಡುವುದೂ, ಇದಲ್ಲದೆ ಕೃಷಿಯ ಅಭಿ ವೃದ್ಧಿಗೂ ಕೃಷಿಗೆ ಸಂಬಂಧಿಸಿದ ಇತರ ಕೈಗಾರಿಕೆಗಳ ಮುಖಾಂತರ ಕೃಷಿ ಮಾಡುವವರಿಗೆ ಉದ್ಯೋಗ ಇಲ್ಲದ ಸಮಯದಲ್ಲಿ ಸ್ವಲ್ಪ ಮಟ್ಟಿಗಾ ದರೂ ಜೀವನೋಪಾಯಗಳನ್ನು ಸೂಚಿಸುವದು ಈ ಸಂಘದ ಇತರ ಉದ್ದೇಶಗಳಾಗಿರುವದು. ಇದೇ ನಮೂನೆಯ ಸಂಸ್ಥೆಯು ಮೂವತ್ತು ವರ್ಷ ಗಳ ಮುಂಚೆ, ಇದ್ದು ಬಾಲಾವಸ್ಥೆಯಲ್ಲಿಯೇ ಅಡಗಿ ಹೋಯಿತು. ಈಗ ಅದು ಪುನಃ ಜನ್ಮವನ್ನೆತ್ತಿ ಮುಂದಿನ ಕಾರ್ಯವನ್ನು ಮಾಡಬೇಕಾ ಗಿದೆ. ಮಹತ್ವದ ಕಾರ್ಯಗಳು ಅನೇಕ ಇರುವದರಿಂದ ರೈತರ ಹಕ್ಕುಗಳು ಬಲಹೀನವಾಗುವುದಲ್ಲದೆ ಅಡಗಿ ಹೋಗುವ ಸಂಭವ ಸರಕಾರ ನೌಕರರು ಉಂಟುಮಾಡುವುದರಿಂದ ಅವುಗಳನ್ನು ಮುಂಚಿನ ಸ್ಥಿತಿಗೆ ತರುವರೇ ಮೇಲಾಧಿಕಾರಿಗಳ ಮುಂದೆ ರೈತರ ಸಂಕಷ್ಟಗಳನ್ನು ಮುಂದಿಡುವುದು ಅಗತ್ಯ. ದೊರೆತನಕ ದೂರು ಎಂಬ ಪ್ರಮಾಣದ ಮೇರೆಗೆ ಸಾರ್ವ ಭೌಮರ ವರೇಗೆ ಕೂಡಾ ದೂರುಕೊಂಡು ಹೋಗುವುದು ಅಗತ್ಯ ಬಿದ್ದೀತು. ಮೇಲಿನ ಎಲ್ಲಾ ಕಾರ್ಯಗಳಿಗೂ ವರ್ಷ ೧ಕ್ಕೆ ರೂಪಾಯಿ ಎಂಟು ಹತ್ತು ಸಾವಿರದ ವರೇಗೆ ಅಗತ್ಯವಿರುವದು. ಈ ಜಿಲ್ಲೆಯಲ್ಲಿಯ ಚುನಾವಣೆಯ ಗೊಂದಳದಲ್ಲಿ ಇದಕ್ಕಿಂತ ಹೆಚ್ಚು ಹಣ ವೆಚ್ಚವಾಗುವುದು. ಈ ಜಿಲ್ಲೆ ಯವರ ಮೂಲಧನವಾದ ಆಸ್ತಿಗಳನ್ನು ರಕ್ಷಿಸುವುದರಲ್ಲಿ ಚುನಾವಣೆಯ ಖರ್ಚಿಗಿಂತ ಕಡಮೆ ವೆಚ್ಚಮಾಡಿದಲ್ಲಿ ಯಾರೂ ಅಪೇಕ್ಷಿಸತಕ್ಕದಿಲ್ಲ ವೆಂಬದು ಒಪ್ಪತಕ್ಕದ್ದಾಗಿರುತ್ತದೆ. ಆದರೆ ಚುನಾವಣೆಯಲ್ಲಿ ಆದ ಖರ್ಚು ಕೆಲವರ ಕೈಯಿಂದ ಮಾತ್ರ ಹೋಗುವುದು. ಪರಂತು ಈ ಸಂಘದ ಖರ್ಚು ಇಡೀ ರೈತರ ಮಂಡಲವು ವಹಿಸಿಕೊಳ್ಳುವಂಥಾದ್ದಾಗಿರುತ್ತದೆ. ಈ ಜಿಲ್ಲೆ ಯಲ್ಲಿ ಒಂದೂ ಕಾಲು ಲಕ್ಷ ಪಟ್ಟಾದಾರರಿರುವರು. ಆದರಿಂದ ಇಷ್ಟು ಜನರು ಕೂಡಿ ಈ ಅಲ್ಪ ವೆಚ್ಚವನ್ನು ಮಾಡುವುದು ದೊಡ್ಡದಲ್ಲ. ಪ್ರತಿ ವರ್ಗ ದಾರರಿಗೇ ಅವರ ಹಕ್ಕುಗಳು ಎಷ್ಟೊ ಒಳ್ಳೆಯ ಸ್ಥಿತಿಯಲ್ಲಿತ್ತೆಂಬದೂ ಅದನ್ನು ರಕ್ಷಿಸುವುದು ಧರ್ಮವೆಂತಲೂ ತಿಳಿಯತಕ್ಕದ್ದು. ಈ ಮುಂ ಚೆಯೇ ಮಾಡತಕ್ಕ ಪ್ರಯತ್ನಗಳು ನಡೆದದ್ದಾದರೆ ಮಲಬಾರು ಜಿಲ್ಲೆಗಳ ಹಾಗೆಯೇ ವರ್ಷ ಒಂದಕ್ಕೆ ಕಳೆದ ೨೫ ವರುಷಗಳಿಂದ ಹತ್ತು ಲಕ್ಷ ರೂಪಾಯಿ ಪ್ರಕಾರ ಉಳಿಸಿಕೊಳ್ಳಬಹುದಿತ್ತು. ಈ ಧನವು ಉಳಿದದ್ದಾದರೆ ರೈತರ ಸ್ಥಿತಿ ಹ್ಯಾಗೆ ಇರುತ್ತಿತ್ತು ಎಂಬದನ್ನು ಗ್ರಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಡಿಸತಕ್ಕದ್ದು.

ಮೆಂಬರಿಕೆಗೆ ರೂಪಾಯಿ ೧೦೦೦ಕ್ಕಿಂತ ಮಿಕ್ಕಿ ಕೊಟ್ಟವರು ಸ್ಥಾಪಕ ರೆಂತಲೂ ರೂಪಾಯಿ ೫೦೦ಕ್ಕಿಂತ ಮಿಕ್ಕಿ ಕೊಟ್ಟವರು ಪೋಷಕರೆಂತಲೂ ೧೦೦ ರೂಪಾಯಿ ಮಿಕ್ಕಿ ಕೊಟ್ಟವರು ಜೀವಾಂತ ಮೆಂಬರೆಂತಲೂ ವರ್ಷ ೧ಕ್ಕೆ ರೂಪಾಯಿ ೧—೪—೧ ಮತ್ತು ಆಣೆ ೮ ಪ್ರಕಾರ ಕೊಟ್ಟವರು ಸಾಧಾರಣ ಮೆಂಬರರೆಂತಲೂ ಕರೆಯಲ್ಪಡುವರು. ಮೆಂಬರುಗಳಿಗೆ ಅವರ ವರ ಸ್ಥಿತಿ ಕಂದಾಯಕ್ಕನುಸರಿಸಿ ಕ್ಲಾಸುವಾರು ಮಾಡಲ್ಪಡುವುದು. ಜಿಲ್ಲೆಗೂ ತಾಲೂಕಿಗೂ ಪ್ರತ್ಯೇಕ ಪ್ರತ್ಯೇಕ ಮೆಂಬರುಗಳಿದ್ದರೆ ಕೆಲವು ಸೀಮೆಗಳಲ್ಲಿ ತಟಸ್ಥಭಾವ ಉಂಟಾಗಿ ಸಂಘದ ಕೆಲಸವು ಕೆಟ್ಟುಹೋಗ ದಂತೆ ಒಂದೇ ಪಟ್ಟಿ ಇಡೀ ಜಿಲ್ಲೆಗೆ ಮಾಡಲ್ಪಟ್ಟಿದೆ. ಆಯಾಯ ತಾಲೂಕು ಸೀಮೆಯವರು ಯುಕ್ತಕಂಡ ರೀತಿಯಲ್ಲಿಯಾಗಲೀ ಈಗಿನ ಚುನಾವಣೆಯ ಸರಕ್ಯೂಲರ್ ಮೂಲ್ಕವಾಗಲೀ ಗ್ರಾಮಗಳ ಯೂನಿಯನ್ ಗಳನ್ನು ಸ್ಥಾಪಿಸತಕ್ಕದ್ದು. ಈ ಯೂನಿಯನುಗಳು ತಾಲೂಕು ಕಮಿಟಿಯ ಮುಖಾಂತರ ಇಡೀ ಜಿಲ್ಲೆಯ ಕೆಲಸವನ್ನು ಸರಕಾರ ಭಾವನೆಯಿಂದ ನಡಿಸ ತಕ್ಕದ್ದಾಗಿ ನಿಶ್ಚಯಿಸಲಾಯಿತು. ಕಾರ್ಯನಿರ್ವಾಹಕ ಸಭೆಗೆ ಈ ಕೆಳಗೆ ಬಂದ ಪ್ರಕಾರ ತಾಲೂಕುವಾರು ಪಟ್ಟಿ ಪ್ರಕಾರ ಮೆಂಬರುಗಳನ್ನು ಚುನಾ ಯಿಸಲಾಯಿತು. ಸಶೇಷ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲಿ ಅವು ಗಳ ಬಡ್ಡಿಯನ್ನಾಗಲಿ ವ್ಯಾದೆಗೆ ಕೊಡದೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಮೃತಪಟ್ಟಿರುತ್ತರಾಗಿ ವಾಪಾಸು ಬಂದಿರುವದರಿಂದ ಸದರಿ ಸಾಲಗಾರರ ಅಧಿಕಾರಿಗಳು ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಿವೇಚುಗಳನ್ನು ಇದೇ ತಿಂಗಳ ತಾರೀಕು 28ನೇ ಶನಿವಾರದೊಳಗೆ ಬ್ಯಾಂಕಿಗೆ ಸಲಾಯಿಸಿ ಅಡವಿಟ್ಟ ಆಭರಣ ಗಳನ್ನು ಪಡಕೊಳ್ಳದಿದ್ದರೆ ಸದರಿ ಆಭರಣಗಳನ್ನು ಇದೇ 1928 ಇಸವಿ ಎಪ್ರಿಲ್ ತಾರೀಕು 30ನೇ ಸೋಮವಾರ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗು ವದು.

ಸಾಲಪಡಕೊಂಡ ತಾರೀಕು	ಹೆಸರು	ಸಾಲದ ಮೊಬಲಗು	ಬ್ಯಾಂಕಿಗೆ ಬಹಾ ಅಸ್ಲು ಬ ವಗೈರೆ
1-9-27	ಅಬ್ದುಲ್‌ರಹಿಮಾನ್	70-0-0	74-9-9

Canara Bank, Ltd.
Kasaragod
21—4—'28.

H. S. Bhat,
Agent.

ಬಂಟವಾಳ ಸೆಂಟರಿನ ಉಪಾಧ್ಯಾಯರ ಸಂಘದ ವರುಷಾವಧಿ ಮಹಾಸಭೆಯ ವರದಿ.

ಈ ಸಂಘದ ವರುಷಾವಧಿ ಮಹಾಸಭೆಯು ಬಂಟವಾಳ ಬೋರ್ಡು ಹುಡುಗರ ಶಾಲೆಯಲ್ಲಿ ಎಪ್ರಿಲ್ ತಿಂಗಳ ತಾರೀಕು ೧೪ನೇ ಶನಿವಾರ ಬೆಳಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆ ವರೆಗೆ ಜರಗಿತು. ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ಮಾನ್ಯ ಕೆ. ಐ. ವರ್ಗೀಸರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಸಭೆಗೆ ಈ ಸೆಂಟರಿಗೆ ಸೇರಿದ ೬೪ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರೂ, ಟೆಂಪಲ್ ಸೆಕೆಂಡರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಸುರತಕಲ್ ರಾಮ ಕಾಮತ್ ಬಿ. ಎ. ಎಲ್. ಟಿ.ಯವರೂ ಅಳಕೆ ಸೆಂಟರಿನ ಸೆಕ್ರೆಟೇರಿಯವ ರಾದ ಡಾ. ವೆಂಕಟರಾಯರೂ ಕಲ್ಲಡ್ಕ ಸೆಂಟರಿನ ಸೆಕ್ರೆಟೆರಿಯವರಾದ ರಾ. ಕೆ. ರಾಮರಾಯರೂ, ಕಾವಳಕಟ್ಟೆ ಸೆಂಟರಿನ ಸೆಕ್ರೆಟರಿಯವರಾದ ರಾ. ನರಸಿಂಹಯ್ಯನವರೂ ಇನ್ನು ಈ ಸಂಘಗಳಿಗೆ ಸೇರಿದ ಇತರ ಉಪಾ ಧ್ಯಾಯರೂ ಬಂದಿದ್ದರು. ಒಟ್ಟಾರೆ ಸುಮಾರು ೧೧೦ ಮಂದಿ ಉಪಾಧ್ಯಾ ಯರೂ ಉಪಾಧ್ಯಾಯಿನಿಯರೂ ಹಾಜರಿದ್ದರು. ಶಾಲಾ ಕಟ್ಟೋಣವನ್ನು ಧ್ವಜಪತಾಕೆಗಳಿಂದಲೂ ಚಿತ್ರಪಟಗಳಿಂದಲೂ ಬಹಳ ಅಂದವಾಗಿ ಅಲಂಕರಿ ಸಿದ್ದರು.

ವಸ್ತುಪ್ರದರ್ಶನ:—ಸಂಘದ ಕಡೆಯಿಂದ ಒಂದು ವಸ್ತುಪ್ರದರ್ಶ ನವು ಜರಗಿಸಲ್ಪಟ್ಟಿತು. ಈ ಪ್ರದರ್ಶನಕ್ಕೆ ಕಥೆಗಳ ಚಿತ್ರಗಳೂ, ದೇಹ ಶಾಸ್ತ್ರದ ಚಿತ್ರಗಳೂ, ಪ್ರಾಣಿಶಾಸ್ತ್ರದ ಚಿತ್ರಗಳೂ ಭೂಗೋಳ ಶಾಸ್ತ್ರದ ಚಿತ್ರ ಗಳೂ ಪ್ರತಿ ತಿಂಗಳಲ್ಲಿ ಪಶ್ಚಿಮ ಕರಾವಳಿಯಲ್ಲಿ ಕಾಣುವ ನಕ್ಷತ್ರ ಪಟ ಗಳೂ, ೨೭ ನಕ್ಷತ್ರ ಪುಂಜಗಳ ಪ್ರತ್ಯೇಕ ಪಟಗಳೂ, ಬಂಟವಾಳ ಪಾಣೆ ಮಂಗಳೂರು ಊರಿನ ಪಟಗಳೂ, ಶಾಲೆಗಳ ಚಿತ್ರಗಳೂ ಪಟಗಳೂ, ರಟ್ಟೆ ಯಿಂದ ಮಾಡಿದ ಮೊಡೆಲುಗಳೂ, ಬೇಕಲ ಚಂದ್ರಗಿರಿ, ಕುಂಬಳೆ, ನಂದಾವರ ಕೋಟೆಯ ಪ್ಲೇನುಗಳೂ ರಟ್ಟೆಯ ಮೊಡೆಲುಗಳೂ, ಭೂಸ್ವಭಾವ ಶಾಸ್ತ್ರದ ಮೊಡೆಲುಗಳೂ, ಒಂದು ರೈಲುವೇ ಸ್ಟೇಶನಿನ ಮೊಡೆಲು ಎರಡು ಬಸ್ಸುಗಳ ಮತ್ತು ಒಂದು ಕಾರಿನ ಮೊಡೆಲುಗಳೂ, ಒಂದು ಸೀಪ್ಲೇನ್ ಮತ್ತು ಒಂದ ಪ್ಲಾಯಿಂಗ್ ಬೋಟಿನ ಮೊಡೆಲುಗಳೂ, ಲೆಕ್ಕ ಕಲಿಸುವ ಪಟಗಳು, ಭಾಷಾ ಪಾಠ ಕಲಿಸುವ ಕ್ಲೊಬುಗಳೂ ಚಿತ್ರಗಳೂ ಬೇರೆ ಬೇರೆ ಉಪಾಧ್ಯಾಯರಿಂದ ತರಲ್ಪಟ್ಟಿದ್ದವು. ಉಪಾಧ್ಯಾಯಿನಿಯರು ವೂಲನ್, ಕ್ರೋಚೆಟ್ ಕೆಲಸಗ ಳನ್ನು ತಯಾರಿಸಿದ್ದರು. ವಸ್ತ್ರದಿಂದ ತಯಾರಿಸಿದ್ದ ಹೂವಿನ ಮಾಲೆಯು ಬಹಳ ಅಂದವಾಗಿತ್ತು. ಎಸ್. ಆರ್. ಕಾಮತರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ಮೊಕರೂರಾಗಿ ಯೋಗ್ಯವಾದ ವಸ್ತುಗಳಿಗೆ ೩೪ ಸರ್ಟಿ ಫಿಕೇಟುಗಳು ಕೊಡಲಾದವು. ಇವುಗಳಲ್ಲಿ ೨೩ ಫಸ್ಟಕ್ಲಾಸ್ ೧೧ ಸೆಕೆಂಡ್ ಕ್ಲಾಸ್.

ಸಭಾಕಾರ್ಯವು ೧೦ ಗಂಟೆಗೆ ಪ್ರಾರಂಭವಾಯಿತು, ಸಭಾಧ್ಯ ಕ್ಷರು ಅಧ್ಯಕ್ಷಸ್ಥಾನವನ್ನು ವಹಿಸಿದೊಡನೆ ಪುಷ್ಪಹಾರವು ಹಾಕಲ್ಪಟ್ಟಿತು. ಪಾಣೆಮಂಗಳೂರು ಎಸ್. ಪಿ. ಎಸ್. ಎಲಿಮೆಂಟರಿ ಶಾಲೆಯ ಮಕ್ಕಳು ದೇವರ ಪ್ರಾರ್ಥನೆಯನ್ನು ಮಾಡಿದರು. ಅದೇ ಶಾಲೆಯ ಮುಖ್ಯ ಉಪಾ ಧ್ಯಾಯರಾದ ರಾ. ಎನ್. ವಾಸುದೇವರಾಯರು ಸ್ವಾಗತ ಭಾಷಣವನ್ನು ಕೊಟ್ಟರು. ಈ ಭಾಷಣದಲ್ಲಿ ಬೋರ್ಡು ಶಾಲೆಯ ಉಪಾಧ್ಯಾಯರ ವರ್ಗಾವರ್ಗಿ, ಸಂಬಳದ ಬಬ್ತಾದೆ ಕಾಸಗಿ ಶಾಲೆಗಳಲ್ಲಿ ಸರಕಾರದವರು ಆಯಾ ಗ್ರೇಡಿನವರಿಗೆ ಕೊಟ್ಟ ಗ್ರಾಂಟಿಗಿಂತಲೂ ಕಡಿಮೆ ಸಂಬಳವನ್ನು ಉಪಾಧ್ಯಾಯರಿಗೆ ಕೊಟ್ಟು ಶಾಲಾ ಮೆನೆಜಮೆಂಟಿನವರು ಮಾಡುವ ಅನ್ಯಾಯ ಮುಂತಾದವುಗಳ ವಿಷಯ ಹೇಳಿದರು. ಇದರ ನಂತರ ಬಂಟ ವಾಳ ಬೋರ್ಡು ಹುಡುಗಿಯರ ಶಾಲೆಯ ಮಕ್ಕಳು ಒಂದು ಹಾಡನ್ನು ಹಾಡಿದರು. ಇದರ ತರುವಾಯ ಸೆಕ್ರೆಟರಿಯವರು ವರುಷಾವಧಿ ರಿಪೋ ರ್ಟನ್ನು ಓದಿದರು. ಬಂಟವಾಳ ಬೋರ್ಡು ಹುಡುಗಿಯರ ಶಾಲೆಯ ಮಕ್ಕಳು ಜಡೆ ಹೆಣೆಯುವ ಹಾಡನ್ನು ಹಾಡಿದರು. ನಂತರ ಅಗ್ರಹಾರ ಚರ್ಚ ಎಲಿಮೆಂಟರಿ ಶಾಲೆಯ ಮಕ್ಕಳು ಫಿಷ್ಲಬಾರಿಸಿ ಡ್ರಿಲ್ ಮಾಡಿದರು. ನಂತರ ಅದೇ ಶಾಲೆಯ ಮುಖ್ಯ ಉಪಾಧ್ಯಾಯರಾದ ಸಿ. ಎ. ಕುಂಞರ ವರು ಪ್ರಾಣಿವರ್ಗದಲ್ಲಿ ಭೇದಗಳು ಎಂಬುವರ ವಿಷಯ ಒಂದು ಚಲೋ ಮಾದರಿ ಪಾಠ ಕೊಟ್ಟರು. ಅಧ್ಯಕ್ಷರು ವಿಮರ್ಶೆಯನ್ನು ಯಾರ ಮನಸ್ಸು ನೋಯದ ರೀತಿಯಲ್ಲಿ ಮಾಡುವ ಕ್ರಮವನ್ನು ಕಲಿಸಿಕೊಟ್ಟರು. ಈ ತರದ ಕ್ರಮವನ್ನು ಇಷ್ಟರ ವರೇಗೆ ಯಾರೂ ತೋರಿಸಿಕೊಟ್ಟದ್ದಿಲ್ಲ. ಎಸ್. ವಿ. ಎಸ್. ಪ್ರಿ. ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ. ಮಾಧವ ಕಡ್ತಿಯವರು ಭಾರತಮಾತೆಯ ಸ್ತುತಿಯನ್ನು ಹಾಡಿದರು. ಬಂಟವಾಳ ಬೋರ್ಡು ಹುಡುಗಿಯರ ಶಾಲೆಯ ಹೆಮ್ಮಕ್ಕಳು ಒಂದು ಕಥಾನಟನೆ ಯನ್ನು ಮಾಡಿತೋರಿಸಿದರು.

ಇದಾದ ಮೇಲೆ ಅಧ್ಯಕ್ಷರ ಭಾಷಣವು ಆರಂಭವಾಯಿತು. ಭಾಷ ಣದ ಆದಿಯಲ್ಲಿ ಕನ್ನಡ ಸಾಹಿತ್ಯ, ಎಲಿಮೆಂಟರಿ ವಿದ್ಯಾಭ್ಯಾಸ, ಚರಿತ್ರಾ ಶೋಧನೆ ಮುಂತಾದವುಗಳ ವಿಷಯ ಭಾಷಣ ಕೊಡಲು ಮಹನೀಯರುಗಳು ಬಾರದೆ ಇದ್ದುದರಿಂದ ಅವರ ವಿಷಯ ತಾನೇ ಹೇಳುತ್ತೇನೆಂದು ಪ್ರತಿ ಒಂದು ವಿಷಯವಾಗಿಯೂ ಉತ್ತಮ ರೀತಿಯಲ್ಲಿ ಭಾಷಣ ಕೊಟ್ಟರು. ಇವುಗಳ ವಿಷಯವಲ್ಲದೆ ಶಾಲೆಗಳಲ್ಲಿ ಗಾಯನ ವಿದ್ಯೆಯನ್ನು ಅಗತ್ಯವಾಗಿ ಕಲಿಸಬೇಕೆಂದು ಹೆಚ್ಚು ಸಮಯದ ವರೇಗೆ ಮಾತನಾಡಿದರು.

ನಂತರ ಸೆಕ್ರೆಟರಿಯವರಾದ ಎಂ. ಜಿ. ಐಗಳರು ಅಧ್ಯಕ್ಷರಿಗೂ, ಎಸ್. ಆರ್. ಕಾಮತರಿಗೂ, ಇತರ ಸಂಘಗಳ ಕಾರ್ಯದರ್ಶಿಗಳಿಗೂ ಉಪಾಧ್ಯಾಯರಿಗೂ ಧನ್ಯವಾದಗಳನ್ನು ಕೊಟ್ಟರು. ರಾಜಗೀತ ಹಾಡಿ ಸಭೆಯು ಮುಕ್ತಾಯವಾಯಿತು.

ಅಧ್ಯಕ್ಷರಿಗೂ ಉಪಾಧ್ಯಾಯ ಉಪಾಧ್ಯಾಯಿನಿಯರಿಗೂ ಫಲಾಹಾರ ಗಳಾದವು. ಮಧ್ಯಾಹ್ನದ ನಂತರ ಬಂಟವಾಳ ಎಸ್. ವಿ. ಎಸ್. ಸೆಕೆಂಡರಿ ಶಾಲೆಯ ಫಿಜಿಕಲ್ ಇನ್ಸಪೆಕ್ಟರರಾದ ರಾ. ವಾಸುದೇವ ಸೋಮಯಾಜಿ ಗಳು ಸಿಲಿಬಸ್ ಪ್ರಕಾರ ೫ನೇ ದರ್ಜೆಯ ವರೆಗಿನ ಮಕ್ಕಳಿಗೆ ಕಲಿಸ ಬೇಕಾದ ಆಟಗಳನ್ನು ಆಡಿತೋರಿಸಿದರು. ಒಂದು ಗ್ರೂಪ್ ಫೋಟೋ ತೆಗೆ ಯಲಾಯಿತು. ರಾತ್ರಿ ತಾಳಮದ್ದಳೆ, ಕೃಷ್ಣಸಂಧಾನ, ಸುಬ್ರಾಯ ಭಾಗ ವತರು, ಚೆಂಡೆ ರಾಮರಾಯರು, ಮದ್ದಳೆ ಅರ್ಥಗಾರರು ಉಪಾಧ್ಯಾಯರೇ ಆಗಿದ್ದರು. ಬಂಟವಾಳ ಮಹನೀಯರೆಲ್ಲರೂ ದಯಮಾಡಿದ್ದರು. ಬೆಳಗ್ಗೆ ೫ ಗಂಟೆಗೆ ಪ್ರಸಂಗವು ಮುಗಿದು ಮಹನೀಯರೆಲ್ಲರಿಗೂ ಉಪಾಧ್ಯಾಯ ವರ್ಗದವರಿಗೂ ಧನ್ಯವಾದಗಳನ್ನು ಕೊಟ್ಟು ಸಂಘದ ಕಡೆಯಿಂದ ಬೆಳಗ್ಗೆ ಫಲಾಹಾರ ಮಾಡಿದರು. ಸಮಾರಂಭವು ಇಲ್ಲಿಗೆ ಮುಗಿ ಯಿತು.

Diamonds

BOLA MANGESH RAO & CO.
MANGALORE.

Agents & Direct importers of Superior Diamonds of Antwerp

ದಕ್ಷಿಣಕನ್ನಡ ಜಿಲ್ಲೆಯ ಬೆಲ್ಲದ ಕೈಗಾರಿಕೆ.

(ಕಳೆದ ಸಂಚಿಕೆಯಿಂದ ಮುಂಬರಿಸಿದ್ದು.)

ಬೆಲ್ಲದ ಅಚ್ಚು. ಕುಂದಾಪುರ ತಾಲೂಕಿನಲ್ಲಿಯೂ ಉಡುಪಿ ತಾಲೂಕಿನ ಉತ್ತರ ಭಾಗದಲ್ಲಿಯೂ ಬೆಲ್ಲದ ಅಚ್ಚುಗಳಲ್ಲಿ ಉಂಡೆಗಳನ್ನು ತಯಾರಿಸುವರು. ಕುಂದಾಪುರದಲ್ಲಿ ನುಡಿಕೆ ಬೆಲ್ಲ ಅಂದರೆ ಕಬ್ಬಿನ ರಸ ಬಿಸಿಮಾಡಿ ಮಡಿಕೆಗಳಲ್ಲಿ ಹೊಯ್ದು ಮಾರಲಿಕ್ಕೆ ತರುವರು. ಉಡುಪಿ ತಾಲೂಕಿನ ದಕ್ಷಿಣ ಭಾಗದಿಂದ ಉಳ್ಳಾಲದ ವರೆಗೆ ಗಾಟಿ, ಶಾಲ್ಕಾಟು ಬೆಲ್ಲದ ಅಚ್ಚುಗಳಿಗಿಂತಲೂ ದೊಡ್ಡದಾದ ಚಪ್ಪಟೆಯಾದ ಅಚ್ಚುಗಳನ್ನು ತಯಾರಿಸುವರು. ಕಾಸರಗೋಡು ತಾಲೂಕಿನಲ್ಲಿ ಸಾಧಾರಣ ಒಂದುವರೆ ಸೇರು ಭಾರವಿರುವ ಅಚ್ಚುಗಳನ್ನು ತಯಾರಿಸುವರು.

ಈಗ ಕಾಫಿ, ಚಾ ಹೊಟೇಲುಗಳಲ್ಲಿಯೂ ಬೆಲ್ಲವನ್ನು ಉಪಯೋಗಿಸುವುದು ಕಡಿಮೆಯಾಗುತ್ತಾ ಬಂದದೆ. ಎಲ್ಲಾ ಹೊಟೇಲುಗಳಲ್ಲಿ ಸಕ್ಕರೆಯನ್ನೇ ಉಪಯೋಗಿಸುತ್ತಾರೆ. ಇದರಿಂದ ಬೆಲ್ಲದ ಉಪಯೋಗವು ಕಡಿಮೆಯಾಯಿತು. ಮೊದಲು ಮದುವೆ ಉಪನಯನ ಮುಂತಾದ ಶುಭಕಾರ್ಯಗಳ ಸಮಯ ಬೆಲ್ಲನೀರು ಅಥವಾ ಒಳ್ಳೆ ಮೆಣಸು ಶುಂಠಿ, ಮುಂತಾದ್ದು ಹಾಕಿ ಬೆಲ್ಲದ ಪಾನಕ ಮಾಡುತ್ತಿದ್ದರು. ಈಗ ಲಿಂಬೆಹುಳಿ ಏಲಕ್ಕಿಯ ಕೇಸರಿ, ರಂಗು, ಅಥವಾ ಕುಂಕುಮ ಕೇಸರಿ ಕೃತಕಕೇಸರ ಮುಂತಾದ್ದನ್ನು ಉಪಯೋಗಿಸಿ ಶರ್ಬತ್ ತಯಾರಿಸುತ್ತಾರೆ. ಇದರಿಂದಲೂ ಬೆಲ್ಲದ ಉಪಯೋಗವು ಕಡಿಮೆಯಾಯಿತು. ಪಾಯಸ ಮುಂತಾದ್ದಕ್ಕೆ ಬೆಲ್ಲವನ್ನು ಉಪಯೋಗಿಸುತ್ತಿದ್ದರು. ಈಗ ಹಾಲು ಸಕ್ಕರೆ ದ್ರಾಕ್ಷೆ ಮುಂತಾದನ್ನು ಉಪಯೋಗಿಸಿ ಹಾಲು ಪಾಯಸ ಮಾಡುತ್ತಾರೆ. ಮದುವೆ ಉಪನಯನದ ಸಮಯ ಸಕ್ಕರೆಯನ್ನೇ ಹಂಚುತ್ತಾರೆ.

ಒಟ್ಟಾರೆ ಬೆಲ್ಲದ ಉಪಯೋಗವು ಕಡಿಮೆ ಕಡಿಮೆಯಾಗುತ್ತಾ ಬಂತು. ಸಕ್ಕರೆಯ ಉಪಯೋಗವು ಹೆಚ್ಚಾಗುತ್ತಾ ಬಂತು. ಈಗ ಉಪಯೋಗಿಸಲ್ಪಡುವ ಸಕ್ಕರೆಯು ಈ ಜಿಲ್ಲೆಯಲ್ಲಿಯಾಗಲಿ ಅಥವಾ ಹಿಂದೂಸ್ಥಾನದಲ್ಲಿಯಾದರೂ ತಯಾರಾಗುತ್ತಿದ್ದರೆ ಆ ಜಿಲ್ಲೆಗಾಗಲೀ ಹಿಂದೂಸ್ಥಾನಕ್ಕಾಗಲೀ ನಷ್ಟವಿಲ್ಲ. ಇಲ್ಲಿಗೆ ಬರುವ ಸಕ್ಕರೆಯು ಹೆಚ್ಚಾಗಿ ಜಾವಾ ಸುಮಾತ್ರಾ ಮೊರಿಶಿಯಸ್ ದ್ವೀಪಗಳಿಂದ ಬರುತ್ತದೆ.

ಈ ರೀತಿ ಸಕ್ಕರೆಯ ಉಪಯೋಗವು ಹೆಚ್ಚಾಗಿ ಬೆಲ್ಲದ ಉಪಯೋಗವು ಕಡಿಮೆಯಾಗಿ ಬಡ ಗೇಣಿ ಒಕ್ಕಲುಗಳಿಗೆ ಬೆಲ್ಲದ ತಯಾರಿಕೆಯಿಂದ ಸಿಕ್ಕುವ ಮುನಾಫೆಯು ಕಡಿಮೆ ಕಡಿಮೆಯಾಗುತ್ತಾ ಈಗಲೇ ಬಂತು. ಇನ್ನು ವಿಶೇಷ ಬರಲಿಕ್ಕಿದೆ. ಸಕ್ಕರೆ ಉಪಯೋಗದಿಂದ ಬೆಲ್ಲ ತಯಾರಿಸುವವರಿಗೆ ಮಾತ್ರ ನಷ್ಟವಲ್ಲ. ಸಕ್ಕರೆಯನ್ನು ಉಪಯೋಗಿಸುವವರಿಗೆ ಬಹುಮೂತ್ರದ ರೋಗವು ಹೆಚ್ಚೆಚ್ಚಾಗುತ್ತಾ ಬಂತು, ಬೆಲ್ಲದಿಂದ ಯಾವ ಕೇಡೂ ಇಲ್ಲ.

ಪ್ರಕಟಣೆ.

ಮಂಗಳೂರು ತಾಲೂಕು ಮಂಜೆಗ್ರಾಮದ ಮಣಚಿ ... ಎಲಿಮೆಂಟರಿ ಶಾಲೆಯ ಉಪಾಧ್ಯಾಯ ಅನಂತ ... ನಾಗ ಎಸ್. ತಿಮ್ಮಪ್ಪ ನ್ಯಾಕನು ಸರ್ವ ಜನರಿಗೆ ತಿಳಿಸುವದೇನೆಂದರೆ—

ಇದೇ ಮಂಜಿ ಗ್ರಾಮದ ಸುಳ್ಳದಲ್ಲಿರುವ ನನ್ನ ಖಾಸಾ ... ತಿಮ್ಮಪ್ಪನ್ಯಾಕರು ನಮ್ಮ ಪಿತ್ರಾರ್ಜಿತದ ಬಾಬ್ತು ಹಣ ... ಸರಕಾರಗಳಿಗೆ ಪ್ರೊಮಿಸರಿ ನೋಟು ವಗೈರೆ ಆಧಾ... ಕೊಟ್ಟಿರುವದರಿಂದ ಆ ಹಣಗಳಲ್ಲಿ ನನಗೆ ಸಮ... ಹಕ್ಕು ಇರುವುದರಿಂದ ಆ ಹಣಗಳನ್ನು ಖಾಸಗಿ ... ಸಾಲಗಾರರು ಯಾರೂ ಸಲ್ಲಿಸಿದರೆ ಆ ದೆಸೆಯಿಂದ ... ಉಂಟಾಗಬಹುದಾದ ಸಕಲ ನಷ್ಟಕ್ಕೂ ಅವರೇ ಜವಾಬ್ದಾರರಾಗಿರಬೇಕಾದೀತೆಂಬ ಸಂಗತಿ ತಿಳಿದಿರತಕ್ಕದ್ದು.

ಮಂಜೆ ... ಎಲಿಮೆಂಟರಿ ಸ್ಕೂಲ್ ... 23-4-28 } S. Thimmappa Naik,

NOTICE.

Intending applicants for Scholarships from the A. Subba Rao Memorial Fund are requested to send us their applications with testimonials of efficiency and poverty to Mr. M Panduranga Kini, Retired Deputy Collector Pentland Petah Urva Post by 31st May 1928.

M. MADHAVA RAO.
Secretary.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕ್ಕಿತ್ಸಕಾಪೇಕ್ಷಿಗಳಿಗೆ "ಆರೋಗ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,
24-8-28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ, ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ‖ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವನ್‌ಹಾಲ್ ಹತ್ತಿರ.

OP

Edited Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0 | ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೨. | ಮಂಗಳೂರು, ತಾ. ೪ನೇ ಶುಕ್ರವಾರ ಮೇ ೧೯೨೮. | ಸಂಚಿಕೆ ೧೮

THE CANARA BANKING CORPORATION,
UDIPI, LIMITED.
ಧಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000
Subscribed "	2,25,000
Paid up "	1,99,650
Reserve and other Funds as on 31—12—1927	83,000
Investment on G. P. Notes	1,85,931—13—0

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಠೇವಣಿಕಿಡ ಹೆಡ್ಡ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation, N. ANANDA RAO,
UDIPI, 21—1—'28. *Secretary.*



ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಠಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂಬಿಗೆಯ ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, | 249 ಫ್ರೇಯರ್ ರೋಡ್
ಜೋರ್ಜ ಟೌನ್, ಮದ್ರಾಸು. | ಮುಂಬಯಿ

ಮಂಗಳೂರಲ್ಲಿ—ಯೂನಿಯನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ಧಿ ಯೂನಿಯನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

ರಾಗದ ಪೆಟ್ಟಿಗೆಗಳು.



ಪಿ. ಆರ್. ಖಲೀಲ್

ಫ್ಯಾನ್ಸಿ, ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು.

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರವನ್ನಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೩ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

೦—೯—೩೭ ಸಳ್ಳೆಬೈಲ್ ಪೋಸ್ಟ ಕುಮಟಾ ಡಿಸ್ಟ್ರಿಕ್ಟ

Battiwalla's Preparations Cover All Your Needs.
A NAME THAT MERIT HAS MADE FAMOUS.

ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

— ಮಲೇರಿಯಾ ಜ್ವರ ನಿವಾರಣ, ರೂ. ೧.

— ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.

— ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

— ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩

— ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

— ಬಾಹು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay, No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ಯೋಗ್ಯವಾಗಿದೆ.

ಪ್ರದರೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಅಂಗಡಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ವಿಳಾಸ:— ಕೇಸರೀ ಕುಟೀರಂ,

ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ಜುಬಿಲಿ ಜೂಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.



ಈ ಪೆನ್ನಿಯಲ್ಲಿ ... ಫೌಂಟನ್‌ಪೆನ್ನಾವು ... ಇದಕ್ಕೆ 14 ಕ್ಯಾರೆಟ್ಸ್ ಭಂಗಾರದಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು.

ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,

ಪೋ ಬಾಕ್ಸ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವೀಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ ೫ ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ ಬಾಕ್ಸ ನಂ. 105, ಮದರಾಸು.

ವಿವಿಧ ಸಮಾಚಾರಗಳು.

ಅಂಗಡಿಗಾರರು ಮೋಸಗೊಳಿಸಲ್ಪಟ್ಟರು.

ಮದರಾಸಿನಲ್ಲಿ ಲತೀಫನೆಂಬೊಬ್ಬ ಮಹಮ್ಮದೀಯನು ಇದುವರೆಗೆ ಹಲವು ಅಂಗಡಿಗಾರರನ್ನು ಮೋಸಗೊಳಿಸಿದನು. ಮೊನ್ನೆ ಆತನು ಒಬ್ಬ ಅಕ್ಕಿ ಸಾಹುಕಾರನಲ್ಲಿಗೆ ಹೋಗಿ ತಾನು ಬಂದರದಲ್ಲಿ ಕೆಲಸಕ್ಕಿರುವವನೆಂದು ಸುಳ್ಳು ಹೇಳಿ ೩೭॥ ಸೇರು ಅಕ್ಕಿಯನ್ನು ಆತನಿಂದ ಪಡಕೊಂಡು, ಹಣವನ್ನು ಕಳುಹಿಸುವೆನೆಂದು ಹೇಳಿ ಅಂಗಡಿಗಾರನ ಒಬ್ಬ ಕೂಲಿಯವನನ್ನು ತನ್ನ ಸಂಗಡ ಕರೆದುಕೊಂಡು ಹೋದನು. ಅರೆಹಾದಿಯಲ್ಲಿ ಲತೀಫನು ತಾನು ಒಂದು ಮದ್ದಿನ ಬಾಟಲಿಯನ್ನು ಅಂಗಡಿಯಲ್ಲಿ ಬಿಟ್ಟ ಕಾರಣ ಬಾಟಲಿಯನ್ನು ಬೇಗನೆ ತರಬೇಕೆಂದು ಕೂಲಿಯವನನ್ನು ಹಿಂದಕ್ಕೆ ಕಳುಹಿಸಿದನು. ಕೂಲಿಯವನು ಹಿಂದಕ್ಕೆ ಬಂದನು. ಆದರೆ ಲತೀಫನು ಅಂಗಡಿಯಲ್ಲಿ ಏನನ್ನೂ ಬಿಟ್ಟಿರಲಿಲ್ಲ. ಸಾಹುಕಾರನಿಗೆ ಸ್ವಲ್ಪ ಸಂಶಯವಾಗಿ ಆತನು ಕೂಲಿಯು ಅಕ್ಕಿಯ ಗಂಟನ್ನಿಟ್ಟಲ್ಲಿಗೆ ಓಡಿದನು. ಆದರೆ ನೋಡುವುದೇನು! ಅಕ್ಕಿಯೂ ಇಲ್ಲ, ಲತೀಫನೂ ಇಲ್ಲ.

ಕೆಲವು ಸಮಯದ ಹಿಂದೆ ಲತೀಫನು ಇನ್ನೊಬ್ಬನನ್ನು ಮೋಸಗೊಳಿಸಿದ್ದನು. ಪ್ರಾತಃಕಾಲದಲ್ಲಿ ಬೀಡ ಮಾರುವ ಒಬ್ಬ ಅಂಗಡಿಗಾರನಲ್ಲಿಗೆ ಹೋಗಿ, ಸಿಗರೇಟು ಮೊದಲಾದ ಎರಡು ರೂಪಾಯಿ ಬೆಲೆಬಾಳುವ ಸಾಮಾನನ್ನು ಕೊಂಡು, ತಾನು ಚಿಲ್ಲರೆ ತರುವೆನೆಂದು ಹೇಳಿ ವಸ್ತ್ರದ ಗಂಟೆಂದು ಒಂದು ಸಣ್ಣ ಗಂಟನ್ನು ಅಲ್ಲಿ ಇಟ್ಟು ಹೋದನು. ಇವನು ಈಗ ಬರುವನು ಮತ್ತೆ ಬರುವನು ಎಂದು ಅಂಗಡಿಗಾರನು ಬೇಸತ್ತು ಮೆಲ್ಲನೆ ಅವನ ಗಂಟನ್ನು ಬಿಚ್ಚಿ ನೋಡಿದನು. ನೋಡಲಾಗಿ ಅದರಲ್ಲಿ ಹಸುರು ಸೊಪ್ಪಿದ್ದಿತ್ತಲ್ಲದೆ ಬೇರೇನೂ ಇರಲಿಲ್ಲ. ಕೊನೆಗೆ ಈ ಕಳ್ಳನು ಇಂತಹ ಅನೇಕ ತರದ ಮೋಸಕೃತ್ಯಗಳನ್ನು ಮಾಡಿ ಮೊನ್ನೆ ತಾನೆ ಸಿಕ್ಕಿಬಿದ್ದನು.

§ § § §

ಚಿತ್ತೂರಿನಲ್ಲಿ ಸರೋಜಿನಿ ದೇವಿಯವರು.

ಸರೋಜಿನಿ ದೇವಿಯವರು ಚಿತ್ತೂರನ್ನು ಸಂದರ್ಶಿಸಿದರು. ಅಲ್ಲಿ ಅವರಿಗೆ ಕಾಂಗ್ರೆಸ್ ಪಾರ್ಟಿಯವರೂ, ಮುನಿಸಿಪಾಲಿಟಿಯವರೂ, ಮಾನಪತ್ರಗಳನ್ನು ಸಮರ್ಪಿಸಿದರು. ಅವರನ್ನು ವಂದಿಸಿ ದೇವಿಯವರು ಒಂದು ಭಾಷಣವನ್ನು ಮಾಡಿದರು. "ನಿಮ್ಮೆಲ್ಲರ ಸತ್ಕಾರಕ್ಕಾಗಿ ನಿಮಗೆ ಆಭಾರಿಯಾಗಿದ್ದೇನೆ. ಇಲ್ಲಿ ನೆರೆದಿರುವ ಯುವಕ ದಳವನ್ನು ಕಾಣುವಾಗ ಸಂತೋಷವಾಗುತ್ತದೆ. ಯುವಕರಿಂದಲೇ ಹಿಂದೂಸ್ಥಾನಕ್ಕೆ ಸದ್ಗತಿಯುಂಟಾಗಬೇಕಾಗಿದೆ. ಯುವಕರೇ ಸ್ವರಾಜ್ಯಕ್ಕೆ ಆಧಾರಸ್ತಂಭರಂತಿರುವರು. ಯುವಕರೇ ದೇಶಭಕ್ತರಾಗಿದ್ದರೆ ಸ್ವರಾಜ್ಯ ಸಾಧನೆಯು ಬಹು ಸುಲಭವಾಗುವದು. ಹಿಂದೂಸ್ಥಾನಕ್ಕೆ ಹೇಗೆ ಸ್ವಾತಂತ್ರ್ಯವು ಅಗತ್ಯವಿದೆಯೋ, ಹಾಗೆಯೇ, ಐಕ್ಯ, ಉದಾರತೆ, ಶುಚಿತ್ವ ಇವು ಬೇಕಾಗಿವೆ ಇವುಗಳನ್ನು ಸಂಪಾದಿಸುವದರಲ್ಲಿ ನಮ್ಮ ಯುವಕರೇ ಸೊಂಟಕಟ್ಟಬೇಕು ಮುದುಕರಿಂದಿದು ಆಗುವ ಕೆಲಸವಲ್ಲ. ಪರದೇಶಿ ವಸ್ತ್ರ ಬಹಿಷ್ಕಾರವೆಂದು ಸುಮ್ಮನೆ ವಸ್ತ್ರವನ್ನು ಬಹಿಷ್ಕರಿಸಿದರೆ ಆಗಲಿಲ್ಲ. ಜನ್ಮಭೂಮಿಯ ಈಗಿನ ಸ್ಥಿತಿಯನ್ನು ಚೆನ್ನಾಗಿ ಮನಸ್ಸಿಗೆ ತೆಗೆದುಕೊಂಡಾಗ, ಅದರ ಮೇಲೆ ಪವಿತ್ರವಾದ ಪ್ರೇಮವು ಹುಟ್ಟುವದು. ಆಗ ಪರದೇಶೀ ವಸ್ತ್ರ ಬಹಿಷ್ಕಾರವು ಸ್ವಭಾವಿಕವಾಗಿಯೇ ಆಗುವದು.

ಹಿಂದೆ ಇಟಲಿಗೆ ಸ್ವಾತಂತ್ರ್ಯವು ದೊರಕಬೇಕೆಂದು ಅಲ್ಲಿಯ ಯುವಕರು ಕೆಲವರೊಟ್ಟಾಗಿ "ನಮ್ಮನ್ನು ಹೊರಕ್ಕೆ ಅಟ್ಟಿ, ಓಡಿಸಿಕೊಂಡು ಬೇಟೆಯಾಡಲಿ, ಕಾರಾಗೃಹದಲ್ಲಿ ಬಂಧಿಸಲಿ, ನಮ್ಮ ಸ್ವಾಧೀನತೆಯಲ್ಲಿರುವ ವಸ್ತುಗಳನ್ನು ನಮ್ಮಿಂದ ಕಸಕೊಳ್ಳಲಿ, ಹೆಂಡತಿಮಕ್ಕಳನ್ನು ನಮ್ಮಿಂದ ಬಿಂಗಡಿಸಲಿ, ಬಾಧಿಸಲಿ, ಆದರೂ ನಾವು ಚಿಂತೆಪಡುವುದಿಲ್ಲ. ಇಟಲಿಯು ಸ್ವತಂತ್ರವಾಗಬೇಕು." ಎಂದು ಹೇಳಿದಂತೆ ಭಾರತೀಯರು ಟೊಂಕ ಕಟ್ಟಿ, ಇದೇ ರೀತಿಯಲ್ಲಿ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯದಿಂದಲೇ ಮುಕ್ತಿಯೂ ಮೋಕ್ಷವೂ ದೊರುಕುವದು. ಸ್ವಾತಂತ್ರ್ಯವು ಸಿಕ್ಕಬೇಕಾದರೆ ಮೊದಲಾಗಿ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು. ಎಲ್ಲರೂ ಒಟ್ಟಾಗಿ ಸಹೋದರ ಭಾವದಿಂದ ವರ್ತಿಸಬೇಕು. ಹಾಗೆ ಮಾಡದೆ ಇದ್ದರೆ ವಿಶ್ವಮಾತೆಗೆ ಅವಳ ಮಕ್ಕಳಾದ ನಮ್ಮ ಮೇಲೆ ಸಿಟ್ಟು ಉಂಟಾಗುವದು. ನಾವು ಐಕ್ಯದಿಂದಿರದೆ ವಿರೋಧದಿಂದಿದ್ದು ಪರಸ್ಪರ ಕಾದಾಡಿಕೊಂಡಿದ್ದ ಕಾರಣವೇ ಮಿಸ್ ಮೆಯೋಳೆಂಬ ಕ್ಷುಲ್ಲಕಸ್ತ್ರೀಗೆ ನಮ್ಮ ಕುರಿತು ವಿಮರ್ಶಾತ್ಮಕ ನುಡಿಗಳನ್ನು ನುಡಿಯಲು ಎಡೆಕೊಟ್ಟಂತಾಯಿತು. ಇದು ನಮಗೆ ಅತ್ಯಂತ ನಾಚಿಕೆಯಾಗಿದೆ." ಈ ವಿಷಯಗಳನ್ನು ವಿವರವಾಗಿ ತಿಳಿಸಿದನಂತರ ಅವರ ಭಾಷಣವು ಕೊನೆಗೆಂಡಿತು

§ § §

ಪ್ರಯಾಣಿಕನೋರ್ವನ ಆತ್ಮಹತ್ಯೆ.

ಫ್ರಾನ್ಸಿನಿಂದ ಮದರಾಸಿಗೆ ಬರುತ್ತಿದ್ದ 'ಕೊಂಪಿನ್' ಎಂಬ ಸ್ಟೀಮರಿನಲ್ಲಿದ್ದ ಒಬ್ಬ ಮದರಾಸಿಯು ನೀರಿಗೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡನು. ಆಗ ಸ್ಟೀಮರು ಒಂದೇ ಮೈಲು ದೂರದಲ್ಲಿದ್ದಿತು. ಹಡಗಿನಲ್ಲಿರುವಾಗ ಇವನು ಸ್ವಲ್ಪ ಹುಚ್ಚುಬುದ್ಧಿಯಲ್ಲಿದ್ದನು. ಆತ್ಮಹತ್ಯವನ್ನು ಮಾಡಿಕೊಳ್ಳುವ ದಿನ ಪ್ರಾತಃಕಾಲ ಸೂರ್ಯೋದಯಕ್ಕೆ ಮೊದಲು ಫಸ್ಟ ಕ್ಲಾಸ್ ಕೆಬಿನಿನ ಹತ್ತಿರ ಈತನು ಅಲೆದಾಡುತಿದ್ದನು. ಆಗ ಅಧಿಕಾರಿಯು ಅಲ್ಲಿಗೆ ಬಂದು ಹುಚ್ಚನಂತೆ ಅಲೆದಾಡುವುದೇಕೆಂದು ಈತನನ್ನು ಪ್ರಶ್ನಿಸಲು ಉತ್ತರವೇ ಹೊರಡಲಿಲ್ಲ. ಈತನಿಗೆ ಬುದ್ಧಿಸ್ವಸ್ಥತೆಯಿಲ್ಲವೆಂದು ತಿಳಿದು ಅಧಿಕಾರಿಯು ಇವನ ಜೇಬನ್ನು ಶೋಧಿಸಿ ನೋಡಲಾಗಿ ೨೫೦ ರೂಪಾಯಿಯ ಚೆಕ್ಕು ಮತ್ತು ನಗದಿ ೩೦ ರೂಪಾಯಿಗಳು ಇದ್ದವು. ಕೊನೆಗೆ ಮನುಷ್ಯನು ತನ್ನ ಹೆಸರು ಕನಕಸಭಾಯಿ ಎಂದು ಹೇಳಿದನು. ಅರ್ಧ ಗಂಟೆಯೊಳಗೆ ಈತನು ನೀರಿಗೆ ಹಾರಿದನು. ಲ್ಯಾಫ್‌ಬೋಟುಗಳನ್ನು ನೀರಿಗಿಳಿಸಿ ಶೋಧನೆಯನ್ನು ಮಾಡಿದರೂ, ಶವವು ಸಿಕ್ಕಲಿಲ್ಲ. ಮದರಾಸಿಗೆ ಬಂದು ಆತನು ಕೊಟ್ಟ ವಿಳಾಸಕ್ಕೆ ಸರಿಯಾಗಿ ನೋಡಲು ಆತನ ಕುಟುಂಬಿಕರ ನೆಲೆಯು ಕೂಡ ಗೊತ್ತಾಗುವದಿಲ್ಲ.

§ § § §

ಬಾಲ್ಯವಿವಾಹ ನಿಷೇಧ ಮಸೂದೆ.

ಮದುವೆಯ ಪ್ರಾಯವನ್ನು ಹೆಚ್ಚಿಸಬೇಕೆಂದು ರಾ| ಹರವಿಲಾಸ ಸರ್ದಾರರವರು ಎದುರು ತಂದ ಮಸೂದೆಯನ್ನು ಅನುಮೋದಿಸುವುದಕ್ಕಾಗಿ ಮದರಾಸಿನ ಹಲವು ಹೆಂಗಸರೂ, ಹೆಸರು ಹೊಂದಿದ ಗಂಡಸರೂ ಕೂಡಿ ಸಭೆ ಸೇರಿದರು. ಹೆಂಗಸರೇ ಈ ಸಭೆಗೆ ಹೆಚ್ಚಾಗಿ ಬಂದಿದ್ದರು. ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಕೊಡುವದು, ಸ್ವಾತಂತ್ರ್ಯವನ್ನು ಕೊಡುವದು, ಇವುಗಳ ಕುರಿತು ಪ್ರಯತ್ನ ನಡೆಯುತ್ತಿರುವ ಈ ದಿನಗಳಲ್ಲಿ ಸ್ವಾತಂತ್ರ್ಯಕ್ಕೆ ಪ್ರೌಢವಿವಾಹವು ಮುಖ್ಯ ಹಾದಿಯಾಗಿದೆ. ಬಾಲ್ಯವಿವಾಹದಿಂದ ಆರೋಗ್ಯ ಹಾನಿಯಾಗಿ, ಶಿಶು ಮರಣಗಳು ಹೆಚ್ಚಾಗಿ, ಸಮಾಜದಲ್ಲಿ ಅನೇಕ ರೀತಿಯ ತೊಂದರೆಗಳಾಗುವವು. ಆ ಪ್ರಯುಕ್ತ ಬಾಲ್ಯವಿವಾಹ ನಿಷೇಧವು ಅತ್ಯಗತ್ಯವಾಗಿದೆ. ಸಮಾಜದಲ್ಲಿ ಇದರಿಂದ ವೀರತ್ವವು ಕುಂದಿ ಜಡತೆಯು ಪ್ರವೇಶಿಸತೊಡಗಿದೆ. ಬಾಲಜನನಿಗಳಲ್ಲಿ ಕ್ಷಯರೋಗವು ಉದ್ಭವಿಸತೊಡಗಿದೆ. ಅದುಕಾರಣ ಇವೆಲ್ಲ ಕೇಡುಗಳನ್ನು ಹೋಗಲಾಡಿಸಿ ಸುಖವನ್ನು ತಂದೊಡ್ಡುವ ಉಪಾಯವನ್ನು ಸೂಚಿಸುವ ಆ ಮಸೂದೆಯು ನಿಜವಾಗಿಯೂ ಅಗತ್ಯವಾಗಿದ್ದು ಅದು ಪರಿಗಣಿಸಲ್ಪಡಲುತಕ್ಕದ್ದಾಗಿದೆ. ಬಾಲ್ಯವಿವಾಹದಿಂದ ಉಂಟಾಗುವ ತೊಂದರೆಗಳು ಬಹಳ. ಬಾಲವಿಧವೆಯರ ಸಂಖ್ಯೆಯು ನಮ್ಮೂರಲ್ಲಿ ಬಹು ಬೆಳದಿರುತ್ತದೆ ಬಾಲವಿಧವೆಯರು ಆಜನ್ಮತಃ ಕಷ್ಟಪಡುವದು ಅವರ ತಪ್ಪಿನಿಂದಲ್ಲ, ಅವರ ಹೆತ್ತವರ ತಪ್ಪಿನಿಂದ. ಬಾಲ್ಯವಿವಾಹವು ನಿಷೇಧಿಸಲ್ಪಟ್ಟರೆ ಬಾಲವಿಧವೆಯರ ಸಂಖ್ಯೆಯೂ ತಗ್ಗುವದು. ಪುರಾತನ ಕಾಲದಲ್ಲಿ ಪ್ರೌಢವಿವಾಹವು ಪ್ರಚಾರದಲ್ಲಿದ್ದಿತು. ಅದು ವೇದಶಾಸ್ತ್ರ ಪುರಾಣಸಮ್ಮತವಾದದ್ದು. ಹಾಗಿರುವಾಗ ಅವರ ಈ ಮಸೂದೆಯನ್ನು ಆಧರಿಸಲೇಬೇಕಾಗಿದೆ. ಎಂದು ಮೊದಲಾಗಿ ನಿರ್ಣಯಗಳಾಗಿ ಸಭೆಯು ಕೊನೆಗಂಡಿತು.

§ § § §

ಕಾಶ್ಮೀರ ರಾಜ್ಯದ ಅಭಿವೃದ್ಧಿ.

ಕಾಶ್ಮೀರ ರಾಜ್ಯ ಇಂಡಿಯದ ಉತ್ತರ ಭಾಗದಲ್ಲಿರುವ ದೊಡ್ಡ ರಾಜ್ಯವಾಗಿದೆ. ಬಹಳ ಸುಂದರವಾದ ಪರ್ವತ ರಾಜ್ಯ, ಇದರ ಅರಸರು ಹಿಂದೂ ಮತದವರು. ಪ್ರಜೆಗಳಲ್ಲಿ ಹೆಚ್ಚಿನವರು ಮುಸಲ್ಮಾನರು. ಈ ರಾಜ್ಯದ ಈಗಿನ ಅರಸರಾದ ಸರ್ ಹರಿಸಿಂಗಜೀಯವರು ಪಟ್ಟಕ್ಕೆ ಬಂದ ಮೇಲೆ ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿರುವರು.

ಈ ರಾಜ್ಯದ ಮುನಿಸಿಪಾಲಿಟಿಗಳಲ್ಲಿ ಜಾತಿವಾರು ಮೆಂಬರರು ಇದ್ದರು. ಇದನ್ನು ತೆಗೆದು ಹಾಕಿ ಎಲ್ಲಾ ಜಾತಿಯವರಿಗೆ ಸರಿಸಮಾನವಾದ ರೀತಿಯಲ್ಲಿ ಮೆಂಬರರನ್ನು ಚುನಾಯಿಸುವ ಕ್ರಮವನ್ನು ಏರ್ಪಡಿಸಿರುವರು. ಬಹಳ ಸಣ್ಣ ಪ್ರಾಯದಲ್ಲಿ ಮಕ್ಕಳಿಗೆ ಮದುವೆ ಮಾಡುವ ಪದ್ಧತಿಯು ಈ ರಾಜ್ಯದಲ್ಲಿತ್ತು. ಈ ಕ್ರಮವನ್ನು ತೆಗೆದು ಹಾಕಿ ಹುಡುಗರಿಗೆ ೧೮ ವರುಷ ಪ್ರಾಯದ ನಂತರವೂ ಹುಡುಗಿಯರಿಗೆ ೧೪ ವರ್ಷದ ನಂತರವೂ ಮದುವೆಯಾಗಬೇಕೆಂದು ಕಾನೂನು ಮಾಡಿರುವರು.

ಕುಡಿತವನ್ನು ನಿಲ್ಲಿಸುವುದಕ್ಕೂ ಪ್ರಯತ್ನಗಳು ನಡಿಯುತ್ತಲಿವೆ. ತನ್ನ ರಾಜ್ಯದಲ್ಲಿ ಸೂಳೆಗಾರಿಕೆಯನ್ನು ಕಡಿಮೆ ಮಾಡುತ್ತಲಿರುವರು.

ರಾಜ್ಯಭಾರದಲ್ಲಿ ಸುಧಾರಣೆಗಳನ್ನು ಮಾಡಿ ೫ ಮಂದಿ ಮಂತ್ರಿಗಳನ್ನು ನೇಮಿಸಿ ಒಬ್ಬೊಬ್ಬ ಮಂತ್ರಿಗೆ ಒಂದೊಂದು ಅಧಿಕಾರವನ್ನು ಕೊಟ್ಟಿರುವರು. ಈ ಮಂತ್ರಿಸಭೆಗೆ ಮಹಾರಾಜರೇ ಅಧ್ಯಕ್ಷರಾಗಿರುವರು. ಸೈನ್ಯದ ಅಧಿಕಾರವನ್ನು ಮಂತ್ರಿಗಳಿಗೆ ಕೊಡಲಿಲ್ಲ. ಇದಕ್ಕಾಗಿ ಒಂದು ಮಿಲಿಟರಿ ಬೋರ್ಡು ಇದೆ. ಈ ಬೋರ್ಡು ಮಹಾರಾಜರ ಅಧೀನದಲ್ಲಿಯೇ ಇದೆ. ಇವರು ಈ ಸೈನ್ಯದ ಸರ್ವ ಸೇನಾಧಿಪತಿಯಾಗಿರುವರು.

ಪ್ರಜಾ ಪ್ರತಿನಿಧಿ ಸಭೆಯು ಇಲ್ಲದಿದ್ದರೂ ರಾಜ್ಯದ ಪ್ರಜೆಗಳ ಒಂದು ಪ್ರತಿನಿಧಿ ಸಭೆಯು ವರುಷಕ್ಕೆ ಒಂದಾವರ್ತಿ ಕೂಡಿ ಬರುವುದು. ಈ ಸಮಯದಲ್ಲಿ ಪ್ರಜೆಗಳಿಗಿರುವ ಕುಂದುಕೊರತೆಗಳನ್ನು ಈ ಪ್ರತಿನಿಧಿಗಳು ಮಹಾರಾಜರಿಗೆ ತಿಳಿಸುವರು. ಮಂತ್ರಿಗಳೂ ರಾಜರೂ ರಾಜ್ಯದಲ್ಲಿ ಸಂಚರಿಸಿ ಪ್ರಜೆಗಳಿಗೆ ಬೇಕಾದ ವಿಷಯಗಳನ್ನು ಕಣ್ಣಾರೆ ನೋಡಿ ತಿಳಕೊಳ್ಳುವರು.

ರಾಜ್ಯದ ನೌಕರರಲ್ಲಿಯೂ ಹೆಚ್ಚು ಹೊಸ ಕ್ರಮಗಳನ್ನು ಜ್ಯಾರಿಗೆ ತಂದಿರುವರು. ಲೋಕಲ್ ಬೋರ್ಡುಗಳಿಗೂ ಹೆಚ್ಚು ಹಣವನ್ನು ಒದಗಿಸುತ್ತಿರುವರು. ಒಂದು ಹೈಕೋರ್ಟನ್ನು ಸ್ಥಾಪಿಸಿರುವರು. ರಾಜ್ಯದ ಖರ್ಚಿಗೆ ಬೇಕಾದಷ್ಟು ಹಣವಿದೆ. ವರುಷಕ್ಕೆ ೩೩ ಲಕ್ಷ ರೂಪಾಯಿ ಬಾಕಿ ಉಳಿಯುತ್ತಲಿದೆ. ಸಾಲವಿಲ್ಲ. ಭಂಡಾರದಲ್ಲಿ ಯಾವಾಗಲೂ ೫೦ ಲಕ್ಷ ರೂಪಾಯಿ ಸಿಲ್ಕಿಯಿದ್ದೇ ಇದೆ. ೭೫॥ ಲಕ್ಷ ರೂಪಾಯಿ ಪ್ರಯೋಜನಕರಗಳಾದ ಸಂಸ್ಥೆಗಳಿಗೆ ಒದಗಿಸಲ್ಪಟ್ಟಿವೆ. ಸರಕಾರಿ ಕಾಡುಗಳಿಂದಲೂ ಗನಿಗಳಿಂದಲೂ, ಕೈಗಾರಿಕೆಗಳಿಂದಲೂ, ಹೆಚ್ಚು ಹಣವು ಸಂಪಾದನೆಯಾಗುತ್ತಲಿದೆ.

ಕಳೆದ ೧೧ ವರುಷಗಳಿಂದ ವಿದ್ಯಾಭಿವೃದ್ಧಿಯು ಉತ್ತಮ ರೀತಿಯಲ್ಲಿ ನಡಿಯುತ್ತಲಿದೆ. ಈ ವರುಷ ೨ ಹೊಸ ಹೈಸ್ಕೂಲುಗಳೂ ೪ ಮಿಡ್ಲ ಸ್ಕೂಲುಗಳೂ ಸ್ಥಾಪಿಸಲ್ಪಡುವವು. ಇದೇ ರೀತಿಯಲ್ಲಿ ಪ್ರತಿ ವರುಷವೂ ಪ್ರಜೆಗಳಿಗೆ ಸಾಕಾಗುವಷ್ಟು ಶಾಲೆಗಳಾಗುವ ವರೆಗೆ ಸ್ಥಾಪಿಸಲ್ಪಡುವವು. ಸ್ತ್ರೀ ವಿದ್ಯಾಭ್ಯಾಸವು ಮಾತ್ರ ಅಭಿವೃದ್ಧಿಗೆ ಬರಲಿಲ್ಲವಂತೆ.

§ § § §

ಇಂಗ್ಲೆಂಡಿನಲ್ಲಿ ಕುಡಿಕತನ.

ಇಂಗ್ಲಿಷ ಪಾರ್ಲಿಮೆಂಟಿನಲ್ಲಿ ಕುಡಿಕತನವನ್ನು ಕಡಿಮೆ ಮಾಡುವುದಕ್ಕಾಗಿ ಒಂದು ಬಿಲ್ ಮುಂದಕ್ಕೆ ಬರಲಿಕ್ಕಿದೆ. ಇದರಲ್ಲಿ ಬಿಲ್ ತಯಾರಿಸಿದವರು ಕುಡಿಕತನದ ವಿಷಯ ಒಂದು ಸ್ಟೇಟಮೆಂಟನ್ನು ತಯಾರಿಸಿರುವರು. ಇದರ ಪ್ರಕಾರ ಇಂಗ್ಲೆಂಡ್, ಸ್ಕೊಟಲೆಂಡ ಆಯರ್‌ಲೆಂಡಿನಲ್ಲಿ ೧೯೩೭ನೇ ಇಸವಿಯಲ್ಲಿ ಜನರು ಕುಡಿಕತನಕ್ಕೆ ೨೯೮, ೯೦೦,೦೦೦ ಪೌಂಡನ್ನು ಖರ್ಚು ಮಾಡಿರುವರು. ಅಂದರೆ ಇಷ್ಟು ಮೌಲ್ಯದ ಬ್ರಾಂಡಿ, ಬೀರ್, ವಿಸ್ಕಿ ಮುಂತಾದ ಮಾದಕ ಪದಾರ್ಥಗಳನ್ನು ಕುಡಿದಿರುವರು. ಇದರಿಂದ ಒಬ್ಬ ಮನುಷ್ಯನು ಸರಾಸರಿ ಪೌ. ೬—೧೫—೩ ಸಾಧಾರಣ ೯೦ ರೂಪಾಯಿ ಮೌಲ್ಯದ ಅಮಲು ಪದಾರ್ಥ ಕುಡಿದಂತಾಗುವದು. ಪ್ರತಿ ಒಬ್ಬನಿಗೆ ಭೂಮಿ ಗೇಣಿಯಿಂದಲೂ ಮನೆ ಬಾಡಿಗೆಯಿಂದಲೂ ಸಿಕ್ಕುವ ಉತ್ಪತ್ತಿಗಿಂತಲೂ ೧.೨ ಪಾಲಿಯ ಹೆಚ್ಚಿಗೆ ಹಣ ಕುಡಿಯಲಿಕ್ಕೆ ಖರ್ಚಾಗುತ್ತದೆ. ಸೈನ್ಯ, ನೌಕೆ, ವಿಮಾನ ಸೈನ್ಯಕ್ಕೆ ಖರ್ಚಾಗುವುದಕ್ಕಿಂತಲೂ ೨ ಪಾಲು ಹೆಚ್ಚಿಗೆ ಹಣ ಕುಡಿಕತನಕ್ಕೆ ಖರ್ಚಾಗುತ್ತಲಿದೆ. ವಿದ್ಯಾ ಇಲಾಖೆಗೆ ರೊಟ್ಟಿ ಹಾಲು, ಯುದ್ಧದ ಪೆನ್‌ಶನಿನಷ್ಟೆ ಹಣವು ಕುಡಿಕತನಕ್ಕೆ ಖರ್ಚಾಗುತ್ತದೆ.

ವರುಷಕ್ಕೆ ೫೧,೫೦೦,೦೦೦ ಗೆಲನ್ ಅಮಲು ಪದಾರ್ಥ ಖರ್ಚಾಗುತ್ತದೆ. ಇದರಲ್ಲಿ ಶೇಕಡಾ ೮೦ ಪಾಲು ಬೀರ್, ಶೇಕಡಾ ೧೪ ಸ್ಪಿರಿಟ್, ಶೇಕಡಾ ೬ ವ್ಯಾನ್, ಈ ಕುಡಿಕತನದಿಂದ ಸರಕಾರಕ್ಕೆ ೧೨೮,೫೦೦,೦೦೦ ಪೌಂಡ ಕಂದಾಯವು ಸಿಕ್ಕುತ್ತದೆ.

ಕೈಗಾರಿಕೆಯಿಂದ ಇಂಗ್ಲೆಂಡಿನ ಉತ್ಪತ್ತಿಯು ಕಡಿಮೆಯಾಗುತ್ತಾ ಬಂತು. ಕುಡಿಕತನವು ಈ ರೀತಿಯಲ್ಲಿ ಮುಂದರಿಸಿದರೆ ಜನರ ಅವಸ್ಥೆಯು ಏನಾಗುವದೊ ಎಂದು ಯೋಚನೆಯುಂಟಾಗಿದೆ.

ಕುಡಿಯುವ ಕ್ಲಬ್ಬುಗಳ ಸಂಖ್ಯೆಯು ಹೆಚ್ಚಾಗುತ್ತಲಿದೆ. ೧೯೩೬ ರಲ್ಲಿ ೧೩,೨೮೮ ಕುಡಿಕತನದ ಕ್ಲಬ್ಬುಗಳಲ್ಲಿ ೧೩,೩೨೮,೫೬೦ ಪೌಂಡು ಬೆಲೆ ಬಾಳುವ ಅಮಲು ಪದಾರ್ಥವು ಈ ಕ್ಲಬುಗಳಲ್ಲಿ ಖರ್ಚಾಗಿಯದೆ. ಈ ಕ್ಲಬುಗಳು ಗೆಲನ್ ಒಂದಕ್ಕೆ ೩ ಪೆನ್ಸ ಸುಂಕದ ಪ್ರಕಾರ ೧೬,೬೦೭ ಪೌಂಡು ಸುಂಕ ಸರಕಾರಕ್ಕೆ ಕೊಟ್ಟಿರುವರು. ಇದರಿಂದ ಕ್ಲಬ್ಬುಗಳಲ್ಲಿ ಕುಡಿಯುವವರು ೧೬,೭೦೦,೦೦೦ ಪೌಂಡಿನ ಅಮಲು ಪದಾರ್ಥ ಕುಡಿದಂತಾಯಿತು. ಕೂಲಿಕಾರರ ಕ್ಲಬ್ಬುಗಳು ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ೨೪೪೮ ಇದೆ. ಇತರ ಕ್ಲಬ್ಬುಗಳು ೧೦,೩೩೪ ಇವೆ. ಇತರ ಜನರಿಗಿಂತ ಕೂಲಿಕಾರರು ಕುಡಿಯುವದೇ ಹೆಚ್ಚಾಗುತ್ತಾ ಬಂದಿದೆ.

ಕನ್ನಡ ರಹಿತರ ಯಾ ಭ್ರೂಮಾಲಿಕ ಸಂಪದ ಪ್ರಥಮ ಮಹಾಸಭೆ.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು.)

ಈ ಕಾರ್ಯನಿರ್ವಾಹಕ ಸಭೆಯೊಳಗೆ ಒಂದು ಆಡಳಿತ ಕಮಿಟಿಯು ನಿಶ್ಚಯಿಸಲಾಯಿತು. ಈ ಆಡಳಿತ ಕಮಿಟಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಎಂ. ಎಲ್. ಸಿ.ರವರು ಸಹ ಮೆಂಬರುಗಳ ಸ್ಥಾನ ವಹಿಸಿಕೊಂಡವರಾಗಿರುತ್ತಾರೆ. ಪ್ರಕೃತಕ್ಕೆ ಈ ಕೆಳಗಿನ ಠರಾವು ಮಂಜೂರಾಯಿತು. ಈಗ ಕಾಸರಗೋಡಿನಲ್ಲಿ ನಡಿಯುವ ರೀಸರ್ವೆಯ ಕೆಲಸವು ತಪ್ಪುಳ್ಳದ್ದು ಪ್ರಜೆಗಳಿಗೆ ಬಾಧಕವು ಅನ್ಯಾಯದ್ದು ಆಗಿರುವುದಲ್ಲದೆ ರೈತರಿಗೆ ಹೆಚ್ಚಿನ ಸಂಕಷ್ಟಗಳನ್ನು ಉಂಟುಮಾಡುವುದರಿಂದ ಸರಕಾರದವರು ರೈತರಿಂದ ಈ ವರೆಗೆ ರೈತರ ತಪ್ಪಿಲ್ಲದೆ ನಮ್ಮ ಸಿಬ್ಬಂದಿಯರ ತಪ್ಪಿಗೋಸ್ಕರ ಇಂಥಾ ಅನ್ಯಾಯ ದಂಡನೆಯು ಹೊರಿಸುವುದು ಸರಿಯಲ್ಲವೆಂತ ಕಂಡುಬರುವುದರಿಂದ ಗತತೀರ್ವೆ ಕುತ್ತಿಕಾಣಿಕೆ ಸರ್ವೆ ಖರ್ಚು ಇವುಗಳನ್ನು ಪ್ರಜೆಗಳಿಗೆ ವಾಪಾಸು ಕೊಡುವಂತೆಯೂ ಹುಕುಂ ಕೊಡತಕ್ಕದ್ದಾಗಿಯೂ ಯಾವತ್ತು ರೀಸರ್ವೆ ಮಾಡಿದ್ದ ಉದ್ದೇಶ ವಿರೋಧವಾಗಿ ನಿಂತದ್ದರಿಂದ ಇದನ್ನು ಈ ಜಿಲ್ಲೆಯ ಇತರ ಕಡೆಗಳಿಗೆ ಜಾರಿ ಮಾಡದ ಹಾಗೆಯೂ ಕಾಸರಗೋಡು ಗ್ರಾಮದಲ್ಲಿ ಇನ್ನು ಮೇಲೆ ಸರ್ವೆ ಮುಂದುವರಿಸದ ಹಾಗೆಯೂ ಸರಕಾರದವರಿಗೆ ಮತ್ತು ಸರ್ವೆ ಡೈರೆಕ್ಟರರಿಗೆ ಸೂಚಿಸಬೇಕಾಗಿ ನಿಶ್ಚಯಿಸಲಾಯಿತು.

ಕಾರ್ಯನಿರ್ವಾಹಕ ಸಭೆಯವರ ಪಟ್ಟಿ.

ಅಧ್ಯಕ್ಷರು ಮೆಸ್ಸರ್ಸ್ ಎಸ್. ಎಲ್. ಮತ್ತಾಯೆಸ್ಸರು ಕೆ. ಎಸ್. ಜಿ. ಸಾಹುಕಾರ ಮತ್ತು ಕಾಫಿ ತೋಟದ ಮ್ಹಾಲಿಕರು.

ಉಪಾಧ್ಯಕ್ಷರು ಉಳ್ಳಾಲ ಚಾವಡಿ ಕೃಷ್ಣಭಟ್ಟರು ವಕೀಲ್ ಮಂಗಳೂರು. ಅತ್ತಾವರ ದೇವಪ್ಪ ಪುಂಜರು ಮಾಜಿ ತಹಸೀಲ್‌ದಾರರು.

ಕಾರ್ಯದರ್ಶಿ ಮೂಡುಬಿದ್ರೆ ಶಂಕರನಾರಾಯಣರಾಯರು ವಕೀಲ್ ಮಂಗಳೂರು ತಾಲೂಕಿಗೆ ೧ ಮತ್ತಯ್ಯ ಸೆಟ್ರು ಪೊಳಲಿ, ೨ ಪಿ. ಎಲ್. ಬಿ. ಅಲ್ವಕರ್‌ರು, ೩ ರಾವ್ ಸಾಹೇಬ್ ಎ. ಜಿ. ಲೋಬರು, ೪ ರಘು ಚೆಂಪ್ರ ಬಳ್ಳಾಳರು.

ಕಾಸರಗೋಡು ತಾಲೂಕಿಗೆ ೧ ಖಂಡಿಗೆ ಕೃಷ್ಣಭಟ್ಟರು, ೨ ನೀಲೇಶ್ವರ ಅರಸರಾದ ರಾಮ ವರ್ಮರಾಜರು ೩ ಮಾಯಿಪಡಿ ಅರಸುಗಳಾದ ಭುವನೇಂದ್ರ ರಾಮವರ್ಮರಾಜರು, ೪ ಕುಂಬ್ಳೆ ನರಸಿಂಗ ನ್ಯಾಕರು ವಕೀಲ್ ೫ ಶ್ಯಾಮಭಟ್ಟ ವಕೀಲ್ ೬ ವೈಕುಂಠ ಭಕ್ತರು ಮಂಜೇಶ್ವರ.

ಪುತ್ತೂರು ತಾಲೂಕಿಗೆ ೧ ಬೆಳ್ತಂಗಡಿ ಮಂಗೇಶರಾಯರು ೨ ಧರ್ಮಸ್ಥಳ ಮಂಜಯ್ಯ ಹೆಗ್ಗಡೆರು, ೩ ಗೋರೆ ಅನಂತ ಭಟ್ಟರು ಮುಂಡಾಜೆ ೪ ಮೊಳಹಳ್ಳಿ ಶಿವರಾಯರು ವಕೀಲ್.

ಕಾರ್ಕಳ ತಾಲೂಕಿಗೆ ಕೇಪವ ಶಿವಭಟ್ಟರು ವಕೀಲ್ ೨ ಶಿವಪ್ಪ ಹೆಗ್ಗಡೆಯವರು ೩ ಎಸ್. ನಂಜಪ್ಪ ಶೆಟ್ರು ವಕೀಲ್ ೪ ಎಸ್. ಜಾಣ ಹೆಗ್ಗಡೆಯವರು.

ಉಡುಪಿ ಕುಂದಾಪುರಕ್ಕೆ ಮೆಂಬರು ಹಾಜರಿ ಸಾಕಷ್ಟು ಇಲ್ಲದೆ ಇದ್ದದರಿಂದ ಚುನಾಯಿಸಲಿಲ್ಲ.

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ವಡವೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು

ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು. ಮತ್ತು ಪಠಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಧಾರಣೆ ವಗೈರೆಗೆ ಬರೆಯಿರಿ. ಕೊಡಲ್ಪಡುತ್ತವೆ.

ಕೆ. ಎ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

(6—5) ಅವೆನ್ಯೂ ರೋಡು, ಬೆಂಗಳೂರು ಸಿಟಿ.

ಶ್ರೀ ರಾಜಗೋಪಾಲಾಚಾರಿಯರ ಭಾಷಣ.

[illegible]

ಬ್ರಿಟಿಷ ವಸ್ತ್ರ ಬಹಿಷ್ಕಾರವೇ ಅಥವಾ ವಿದೇಶೀ ವಸ್ತ್ರ ಬಹಿಷ್ಕಾರವೇ?

[illegible] ಬಹಿಷ್ಕರಿಸಬೇಕೋ, ಯಾ ಪರ [illegible] ಬಹಿಷ್ಕರಿಸಬೇಕೋ, ಎಂಬುದೇ ಹಿಂದೂ [illegible] ವಿಷಯವಾಗಿದೆ. ಈ [illegible] ಹೋಗುವ ಬದಲು [illegible] ನಿರ್ಣಯಿಸುವದು ಉತ್ತಮ. ಬ್ರಿಟಿಷ [illegible] ಪರದೇಶೀ ವಸ್ತ್ರವೆಲ್ಲವನ್ನು [illegible] ಲಾಲಾಲಜಪತರಾಯರು ಅಭಿ [illegible] ಅದನ್ನು ಖಂಡಿತವಾಗಿ [illegible]

[illegible] ಮಾತ್ರ ಬಹಿಷ್ಕರಿ [illegible] ದೇಶಗಳಲ್ಲಿ ತಯಾ [illegible] ಪೂರ್ಣ ಬಹಿ [illegible] ಪೂರ್ವಕವಾಗಿ ಬಯ [illegible] ವಸ್ತುಗಳನ್ನು [illegible] ನಮ್ಮ [illegible] ಆಗುವವುಗಳು [illegible] ಆಗುವುದಿಲ್ಲ. [illegible] ಬಹಿಷ್ಕರಿಸಲು [illegible] ಪೂರ್ಣ ಬಹಿ [illegible] ಎಲ್ಲಾ ಜಾತಿಯ [illegible] ಯಾಗಬೇಕು. [illegible] ಪರದೇಶಗಳಿಂದ [illegible] ಚಳವಳವನ್ನು [illegible] ಇಲ್ಲಿಯೇ ತಯಾ [illegible] ಹಿಂದೂಸ್ಥಾನದಿಂದ [illegible] ಹೊರಕ್ಕೆ [illegible] ಬೇಕಾಗುವದು. [illegible] ನಿಜವಾಗಿಯೂ [illegible] ಮೂಲ [illegible] ವಸ್ತ್ರಕ್ಕೆ ಖಾದಿ [illegible] ಸಂಕಟಜನ್ಯವಾದ [illegible] ಎಲ್ಲಾ [illegible] ಧನಿಕರಿಗಾಗಿ [illegible] ವಸ್ತ್ರವೂ [illegible] ತಯಾ [illegible] ಒಂದೇ [illegible] ತಿಳಿದೇ [illegible] ಹೋಗುವದೋ! [illegible] ಇಲ್ಲಿ ತಯಾರಾಗುವದು ಸುಲಭ ಸಾಧ್ಯವಾದುದು.

[illegible] ಇಲ್ಲಿ ವಸ್ತ್ರವನ್ನು ತಯಾರಿಸುವ ಗಿರಣಿಗಳು [illegible] ವಿಪರೀತ ಕ್ರಯವನ್ನು ಹೇಳಬಹುದು. [illegible] ಸಂಪಾದನೆ ಮಾಡುವಾಗ ಸ್ವದೇಶೀ [illegible] ಯುವರೋ? ಅವರು ಸ್ವದೇಶಿ ವಸ್ತ್ರವನ್ನುಡಬೇಕೆಂದು ಜನರಿಗೆ ಹೇಳುವರು. ತಮ್ಮ ವಸ್ತ್ರವನ್ನುಡಬೇಕೆಂದೂ ಹೇಳುವರು. ಮಹಾತ್ಮಾಜಿಯವರಂತಹ ಧುರೀಣರ ಪ್ರಯತ್ನದಿಂದಲೂ, ಗಿರಣಿಕಾರರು ರಾಷ್ಟ್ರೀಯ ಪುರುಷರೊಡನೆ ಸಹಕರಿಸಲು ಒಪ್ಪಿಲ್ಲ. ಹೀಗಿರುವಾಗ ಅವರನ್ನು ನಂಬಿ ನಾವು ಬಹಿಷ್ಕಾರ, ಬಹಿಷ್ಕಾರ ವೆಂದು ಹೇಳುವದು ಒಂದು ರೀತಿಯಲ್ಲಿ ಹೆಡ್ಡತನವೆನ್ನಬಹುದು.

ಸೆಕೆಂಡರಿ ವಿದ್ಯಾಭ್ಯಾಸ.

ಸೆಕೆಂಡರಿ ಎಡ್ಯುಕೇಶನಲ್ ಬೋರ್ಡನ್ನು ಬೇಗನೆ ರಚನೆ ಮಾಡಲಿರುವರು. ಈ ಬೋರ್ಡಿನಲ್ಲಿ ಮದ್ರಾಸು ಆಂಧ್ರಾ ಯುನಿವರ್ಸಿಟಿಗಳ ಪ್ರತಿನಿಧಿಗಳೂ ಸರಕಾರದಿಂದ ನೇಮಿಸಲ್ಪಟ್ಟ ವಿದ್ಯಾವಂತರೂ ಇರುವರು. ಇದರ ಮೊದಲನೇ ಕರ್ತವ್ಯವೆಂದರೆ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪಾಠಪಟ್ಟಿ ಮೊದಲಾದವುಗಳನ್ನು ತಯಾರಿಸುವದು. ಈಗ ಬಿ. ಗ್ರೂಪಿನಲ್ಲಿ ಕಲಿಸುತ್ತಿರುವ ಪಾಠಗಳನ್ನು ಎ ಅಥವಾ ಸಿ ಗ್ರೂಪಿಗೆ ತಂದು ಎರಡೇ ಗ್ರೂಪುಗಳನ್ನಾಗಿ ಮಾಡುವರು. ಇದರಲ್ಲಿ ಒಂದು ಗ್ರೂಪು ಐಚ್ಛಿಕವುಳ್ಳದ್ದು, ಒಂದು ಐಚ್ಛಿಕವಿಲ್ಲದುದು.

ಹೆಚ್ಚಾಗಿ ಶಾಲೆಗಳಲ್ಲಿ ವಾರಕ್ಕೆ ೩೫ ಪಾಠಗಳಿವೆ. ಒಂದೊಂದು ಪಾಠವು ೪೫ ನಿಮಿಷಗಳ ಸಮಯ ಕಲಿಸಲ್ಪಡುವದು. ಹಲವು ಶಾಲೆಗಳಲ್ಲಿ ವಾರಕ್ಕೆರಡು ಪಿರೇಡು ಮೆನ್ಯುವಲ್ ಪಾಠವನ್ನು ಕಲಿಸುವರು. ಈಗಿನ ಸಿಲೆಬಸಿನಂತೆ ವಾರಕ್ಕೊಂದು ಪಾಠವನ್ನಾದರೂ ನೀತಿ ವಿಷಯಗಳಿಗೆಂದು ನಿರ್ಣಯಿಸಬೇಕು. ಕೆಲವು ಶಾಲೆಗಳಲ್ಲಿ ಮೂರು ಯಾ ನಾಲ್ಕು ಪಿರೇಡು ಮತಸಂಬಂಧವಾದ ಪಾಠಗಳನ್ನು ಕಲಿಸುವರು. ಈ ಪಾಠಗಳಿಗಾಗಿ ೫ ಪಿರೇಡುಗಳನ್ನು ವಿನಿಯೋಗಿಸಿ, ಉಳಿದ ೩೦ ಪಿರೇಡುಗಳಲ್ಲಿ ಪರೀಕ್ಷೆಗೆ ನಿಶ್ಚಯಿಸಿದ ಪಾಠಗಳನ್ನು ಚೆನ್ನಾಗಿ ಕಲಿಸಬಹುದು.

ಇಂಗ್ಲಿಷ ವಿದ್ಯಾಭ್ಯಾಸಕ್ಕೆ ಈಗ ಪ್ರಾಮುಖ್ಯತೆಯನ್ನು ಕೊಡಬೇಕಾದುದರಿಂದ ವಾರಕ್ಕೆ ಎಂಟು ಪಿರೇಡುಗಳನ್ನು ಇಂಗ್ಲಿಷಿಗೆ ಉಪಯೋಗಿಸಬೇಕು. ವೆರ್ನಾಕ್ಯುಲರಿಗೆ ೫ ಪಿರೇಡು ಸಾಲದು. ಇದು ಹೊರತು ಇನ್ನೂ ಮೂರು ಪಾಠಗಳಿವೆ. ಲೆಕ್ಕ, ಎಲಿಮೆಂಟರಿ ಸಾಯನ್ಸ್ ಮತ್ತು ಚರಿತ್ರೆ ಮತ್ತು ಭೂಗೋಳ. ಲೆಕ್ಕಕ್ಕೆ ಐದು ಪಿರೇಡುಗಳನ್ನೂ, ಉಳಿದ ಎರಡು ಪಾಠಗಳಿಗೆ ನಾಲ್ಕು ನಾಲ್ಕು ಪಿರೇಡುಗಳನ್ನೂ ಪ್ರತ್ಯೇಕಿಸಬಹುದು. ಇಲ್ಲಿಗೆ ಇಪ್ಪತ್ತಾರು ಪಿರೇಡುಗಳಾದವು. ಮತ್ತೆ ಉಳಿದ ೪ ಪಿರೇಡುಗಳಲ್ಲಿ ಒಂದು ಒಪ್ಶನಲ್ ಪಾಠವನ್ನು ಕಲಿಸಬಹುದು. ಎಸ್. ಎಸ್. ಎಲ್. ಸಿ.ಯ ಮಟ್ಟಿಗೆ ಒಪ್ಶನಲ್ ಪಾಠವು ಒಂದೇ ಇದ್ದರೆ ಸಾಕೆಂದು ಮದರಾಸ್ ಟೀಚರ್ ಗಿಲ್ಡಿನವರು ನಿರ್ಣಯಿಸಿದುದು ಸರಿಯಾಗಿದೆ. ಪತ್ಯಾಯದ ಪಾಠಗಳಾಗಿ ಲೆಕ್ಕ, ಸಾಯನ್ಸ್, ಭೂಗೋಳ, ಚರಿತ್ರೆ ಇವುಗಳನ್ನು ಕಲಿಯುವದರಿಂದ ಎರಡು ಒಪ್ಶನಲ್ ಪಾಠಗಳನ್ನು ಕಲಿಸುವ ಆವಶ್ಯಕತೆಯಿರುವದಿಲ್ಲ. ಕಂಪಲ್ಸರಿ ಪಾಠಗಳಿಂದ ವಿದ್ಯಾರ್ಥಿಗೆ ಬೇಕಾದಷ್ಟು ಜ್ಞಾನಾರ್ಜನೆಯಾಗುವದು. ಮತ್ತು ಮನಸ್ಸಿದ್ದರೆ ಒಂದು ಒಪ್ಶನಲ್ ಪಾಠವನ್ನು ಕಲಿಸಬೇಕಾಗುವದು. ಕೊಲೇಜು ವಿದ್ಯಾಭ್ಯಾಸಕ್ಕೆ ಹೋಗುವದಾದರೂ ಇದು ಸಾಕಾಗುವದು. ಇನ್ನು ಒಪ್ಶನಲ್ ಪಾಠವನ್ನು ಈ ಕೆಳಗಿನವುಗಳಿಂದ ಆರಿಸಿ ತೆಗೆಯಬಹುದು. "ಜೊಮೆಟ್ರಿ, ಬೀಜಗಣಿತ, ಫಿಸಿಕ್ಸ್, ಕೆಮಿಸ್ಟ್ರಿ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಇಂಗ್ಲಾಂಡಿನ ಚರಿತ್ರೆ, ಕಮರ್ಸಿಯಲ್ ಶಿಕ್ಷಣ, ಕೃಷಿಶಾಸ್ತ್ರ, ಗಾಯನ" ಮೊದಲಾದವುಗಳು. ಪತ್ಯಾಯದ ಪಾಠಗಳನ್ನು ಕಲಿಸಿ, ಇವುಗಳಲ್ಲೊಂದು ಪಾಠವನ್ನು ಕಲಿಸಲು ಸಮಯವನ್ನಿಡಬೇಕು. ಬೋರ್ಡಿನವರು ಪಾಠಪಟ್ಟಿಯನ್ನು ನಿಶ್ಚಯಿಸುವಾಗ ಇದನ್ನು ಲಕ್ಷ್ಯಕ್ಕೆ ತರುವರೆಂದು ನಂಬುತ್ತೇವೆ. ಒಪ್ಶನಲ್ ಪಾಠವು ಪತ್ಯಾಯದ ಪಾಠಗಳಿಗೆ ಸಂಬಂಧಿಸಿರಬೇಕು. ಹೀಗೆ ಮಾಡಿದರೆ ಕಲಿಯುವ ವಿದ್ಯಾರ್ಥಿಗಳಿಗೆ ಸುಲಭವಾಗುವದು. ಬೋರ್ಡಿನವರಿಗೆ ಕೀರ್ತಿ ಬರುವದು.

ಇನ್ನೊಂದು ವಿಷಯವಿದೆ. ಪರದೇಶೀ ವಸ್ತ್ರ ಬಹಿಷ್ಕಾರವೆಂದು ನಾವು ಸಾರಿದೊಡನೆ ಪರದೇಶದವರು ನಮ್ಮನ್ನು ಮೋಸಗೊಳಿಸುವದಕ್ಕಾಗಿ ವಸ್ತ್ರವನ್ನು ಬಹಳ ಅಗ್ಗವಾಗಿ ಮಾರಬಹುದು. ಆಗ ನಮ್ಮ ಊರಿನ ಬಡವರು ಆ ಅಗ್ಗವಾದ ವಸ್ತ್ರವನ್ನೇ ಕೊಂಡುಕೊಳ್ಳಲು ಅಪೇಕ್ಷಿಸುವರಲ್ಲದೆ ಖಾದಿಯನ್ನು ಪಡೆಯಲು ಬಯಸಲಾರರು. ಹೀಗಿರುವಾಗ ಈ ಬಹಿಷ್ಕಾರವು ಜಯಪ್ರದವಾಗಬಹುದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ.

ಆದರೆ ಬ್ರಿಟಿಷ ವಸ್ತ್ರ ಬಹಿಷ್ಕಾರವು ಮಾತ್ರ ಜಯಪ್ರದವಾಗಬಹುದು. ೧೯೨೬-೨೭ನೇ ಇಸವಿಯಲ್ಲಿ ಬ್ರಿಟಿಷ ರಾಜ್ಯದಿಂದ ಒಟ್ಟು ರೂಪಾಯಿ ೪೯,೦೦,೬೩,೦೦೦ ಕ್ರಯಬಾಳುವ ಹತ್ತಿ ವಸ್ತ್ರವು ಹಿಂದೂಸ್ಥಾನಕ್ಕೆ ಬಂದಿತು. ಬ್ರಿಟಿಷ ವಸ್ತ್ರ ಬಹಿಷ್ಕಾರವನ್ನು ಮಾಡುವಾಗ ಈ ವಸ್ತ್ರವನ್ನು ಬೇರೆ ರಾಜ್ಯಗಳಿಂದ ತರಿಸಬೇಕಾಗುವದು. ಇದು ಕೂಡ ಸುಲಭ ಸಾಧ್ಯವಾದುದಲ್ಲವಾದರೂ ಪ್ರಯತ್ನದಿಂದ ಸಾಧ್ಯವಾಗುವಂತೆ ಮಾಡಬಹುದು. ಧನಿಕರಿಗೆ ಬೇಕಾಗುವ ರೀತಿಯ ಉತ್ತಮ ವಸ್ತ್ರಗಳನ್ನು ಇತರ ಪರರಾಜ್ಯಗಳಿಂದ ತರಿಸಬಹುದು. ಆದ ಕಾರಣ ಬ್ರಿಟಿಷ ವಸ್ತ್ರ ಮತ್ತು ವಸ್ತು ಬಹಿಷ್ಕಾರದಲ್ಲಿ ನಾವು ಸತತವೂ ಪ್ರಯತ್ನಿಸುತ್ತಿರಬೇಕಲ್ಲದೆ, ಪರದೇಶಿ ವಸ್ತ್ರ ಬಹಿಷ್ಕಾರಕ್ಕೆ ಕೈಹಾಕಬಾರದು. ಕೈ ಹಾಕಿದರೆ ಅದು ಫಲಪ್ರದವಾಗುವದೆಂದು ನಂಬಲೂಬಾರದು.

ಸ್ಫುಟ ವಿಚಾರಗಳು.

ಶಕ್ತಿಯ ದರ್ಪ.

ಇಂಗ್ಲೆಂಡು ಐಗುಪ್ತ್ಯದೊಡನೆ ಕಳೆದ ವಾರದಲ್ಲಿ ವರ್ತಿಸಿದ ರೀತಿಯು ಆ ಬಲವಂತ ರಾಷ್ಟ್ರದಿಂದ ಅಂತಹ ಶಕ್ತಿಹೀನ ರಾಷ್ಟ್ರದ ಕಡೆಗೇನೇ ಸಾಧ್ಯವಾದುದು. ಬಲಹೀನರನ್ನು ದಬ್ಬಾಳಿಸುವ ಮಟ್ಟಿಗೆ ಇಂಗ್ಲೆಂಡು ಬಹಳ ಸ್ಥಿರವಾದ ನಿರ್ಧಾರವನ್ನು ತೋರಿ ತನ್ನ ದೃಢತೆಯ ಕಡೆಗೆ ತಾನೇ ಹಿಗ್ಗುತ್ತಿದೆ. "ಬ್ರಿಟನ್ನು ಲೋಕದ ಇತರ ಯಾವುದೊಂದು ರಾಷ್ಟ್ರಕ್ಕೆ ತನ್ನ ಅಲ್ಟಿಮೇಟಂ (ultimatum)ನ್ನು ಕಳುಹಿಸುವಾಗ, ಅದು ಬ್ರಿಟಿಷ ಸರಕಾರಕ್ಕೆ ತನ್ನ ಮನಸ್ಸೇನೆಂದು ಗೊತ್ತಿದೆಯೆಂದೂ, ದೇಶವು ತನ್ನನ್ನು ಅನುಮೋದಿಸುವುದೆಂದೂ ತೋರಿಸುವುದು" ಎಂದು ಸರ್ ಜೊಯ್ನ್ಸನ್ ಹಿಕ್ಸರವರು ಹೆಗ್ಗಳಿಸಿಕೊಳ್ಳುವರು. ಆದರೆ ಲೋಕದ ಯಾವುದೊಂದು ರಾಷ್ಟ್ರವೆಂದರೆ ಅಮೇರಿಕ, ಫ್ರಾನ್ಸ್, ಇಟಲಿಗಳಂತಹ ರಾಷ್ಟ್ರಗಳಲ್ಲ. ಐಯರ್ಲೆಂಡು, ಹಿಂದೂಸ್ಥಾನ, ಐಗುಪ್ತ್ಯ ಇಂತಹ ರಾಷ್ಟ್ರಗಳೆಂದು ಅರ್ಥಮಾಡಿಕೊಳ್ಳಬೇಕು. ಈಗ ಚೈನಾದಲ್ಲಿ ಕೂಡ ಈ ಬ್ರಿಟಿಷ ಬೆದರಿಕೆಗಳಿಗೆ ತಲೆತಗ್ಗಿಸುವವರಿಲ್ಲ. ಐಗುಪ್ತ್ಯವು ತನ್ನ ಒಳದೇಶದ ಆಡಳಿತೆಯ ಬಗ್ಗೆ ಕಾನೂನೊಂದನ್ನು ರಚಿಸುವಾಗ, ಬ್ರಿಟಿಷರು ಅದರಿಂದ ಪರದೇಶೀಯರಿಗೆ ಹಾನಿಯಾಗುವುದೆಂಬ ನೆವದಿಂದ ಅವರನ್ನು ಆಜ್ಞಾಪಿಸಿ, ಆ ಆಜ್ಞೆಯ ಶಕ್ತಿಯನ್ನು ಯುದ್ಧ ನಾವೆಗಳಿಂದ ಬಲಪಡಿಸುವುದನ್ನು ನೋಡಿದರೆ ಬ್ರಿಟಿಷರ ಮದಾಂಧತೆಯು ಸುವ್ಯಕ್ತವಾಗುವುದು. ಒಂದು ಅಶುಭ ಸಮಯದಲ್ಲಿ ಬ್ರಿಟಿಷರು ಐಗುಪ್ತ್ಯದ ಸ್ವಾತಂತ್ರ್ಯವನ್ನು ಒಪ್ಪಿ ಹೋಯಿತು. ಆ ಒಪ್ಪಿಗೆಯನ್ನು ಹೇಗೆ ಹಿಂದೆಗೆಯಬಹುದೆಂಬುದೇ ಈಗಿನ ಬ್ರಿಟಿಷ ಸರಕಾರಕ್ಕೆ ಬಹಳ ಕಠಿಣವಾದ ಸಮಸ್ಯೆಯಾಗಿದೆ. ಅದಕ್ಕಾಗಿ ಆಗಾಗ ಹೊಸ ಹೊಸ ನೆವಗಳನ್ನು ಕಲ್ಪಿಸಿ ಐಗುಪ್ತ್ಯವನ್ನು ಇಂಗ್ಲೆಂಡು ದಬ್ಬಾಳುತ್ತದೆ. ಇಂತಹ ಬಲ ಪ್ರದರ್ಶನದಿಂದ ತಾತ್ಕಾಲಿಕವಾಗಿ ಯಾವ ಲಾಭವು ಆಗಬಹುದಾದರೂ, ಕಡೆಗೆ ಇಡೀ ಲೋಕದ ದೃಷ್ಟಿಯು ಈ ಕಠಿಣವಾದ ಅನ್ಯಾಯದ ಮೇಲೆ ಕೇಂದ್ರಿತವಾಗಲಿದೆ. ಇಂಗ್ಲೆಂಡಿನ ಸರಕಾರದ ಮಾನಸಿಕತೆಯು ಹೀಗೆಂದು, ಅದರ ಜನತೆಯಾದರೂ ಉದಾರ ಬುದ್ಧಿಯವರೇ? ಎಂದು ನೋಡಿದರೆ ಅವರ ರಕ್ತದ ಬಿಂದು ಬಿಂದುಗಳಲ್ಲಿಯೂ ಸಾಮ್ರಾಜ್ಯವಾದದ ದುರಭಿಮಾನವು ಸ್ಫುರಿಸುತ್ತಿದೆ. ಪರರಾಷ್ಟ್ರಗಳ ದಬ್ಬಾಳಿಕೆಯೇ ತಮ್ಮ ಮಣಿತನದ ಸುಖವೆಂದು ಅವರು ತಿಳಿದುಕೊಂಡಿದ್ದಾರೆ. ಬಾಲ್ಡ್ವಿನ್ನರು ಪ್ರಧಾನ ಮಂತ್ರಿತ್ವದ ಗದ್ದಿಗೆಯಿಂದ ಪಾಪದ ರಾಷ್ಟ್ರಗಳ ಮೇಲೆ ಆಘಾತಗಳನ್ನೆಸೆಯುವಾಗ, ಸ್ನಾಮನರೂ, ಲೊಯಡ್ ಜೋರ್ಜರೂ, ರಾಮ್ಸೆ ಮೆಕ್ಡೊನಾಲ್ಡರೂ "ಶಹಬಾಸ್" ಎನ್ನುತ್ತಿದ್ದಾರೆ. ಆದುದರಿಂದ ಇಂಗ್ಲೆಂಡಿನ ಜನತೆಯನ್ನು ಒಲಿಸಿಯಾದರೂ ಅಧೀನರು ಸ್ವಾಧೀನರಾಗುವೆವೆಂಬ ಆಶೆಯು ಬರೇ ಮೃಗತೃಷ್ಣಿಕೆಯಂತಿದೆ. ಐಗುಪ್ತ್ಯವು ತತ್ಕಾಲಕ್ಕೆ ಅನಿರುದ್ಧವಾದ ಶಕ್ತಿಗೆ ತಲೆತಗ್ಗಿಸಿದುದು ಅವರ ರಾಜತಂತ್ರ ವಿಚಕ್ಷಣತೆಯೇ ಆಗಿದೆ. ಆದರೆ ಅವರ ಮನಸ್ಸಿನ ಸ್ಥಿರ ಪ್ರತಿಜ್ಞೆಯು ಒಂದು ದಿನ ಫಲಕಾರಿಯಾಗದಿರದು.

ಆಯುರ್ವೇದ ಸಮ್ಮೇಲನ.

ಒಂದು ಬಾರಿ ಆಲೋಚಿಸಿದಂತೆ ಈ ಸಮ್ಮೇಲನವನ್ನು ದಶಂಬರದಲ್ಲಿ ಸೇರಿಸಲು ಕಾದಿರದೆ, ಅದನ್ನು ಇದೇ ತಿಂಗಳಲ್ಲಿ ಸೇರಿಸಲು ನಿಶ್ಚಯಿಸಿದುದಕ್ಕಾಗಿ ಇದನ್ನು ವ್ಯವಸ್ಥೆಗೊಳಿಸುವವರನ್ನು ನಾವು ಅಭಿನಂದಿಸುವೆವು. ನಮ್ಮ ಜಿಲ್ಲೆಯಲ್ಲಿ ಈ ವರೆಗೆ ಯಾವ ತರದಲ್ಲಿ ಆಯುರ್ವೇದದ ಹಿತಾರ್ಥವಾಗಿ ಚಳವಳವೆದ್ದಿಲ್ಲ. ವರ್ಷಂಪ್ರತಿ ಹೆಚ್ಚುತ್ತಿರುವ ಡಾಕ್ಟರರ ಸಂಖ್ಯೆಯೊಡನೆ ಜನತೆಯ ಆಯುರ್ವೇದದ ಮೇಲಿನ ವಿಶ್ವಾಸವು ಕಡಿಮೆಯಾಗಿ ಬರುತ್ತಿರುವ ಈ ಕಾಲದಲ್ಲಿ ಈ ಸಮ್ಮೇಲನವು ಬಹಳ ಉಪಕಾರಿಯಾಗಲು ಸಾಧ್ಯವಿದೆ. ಇದರಿಂದ ಜನತೆಯ ದೃಷ್ಟಿಯು ಈ ಕಡೆಗೆ ಕೇಂದ್ರಿಸಲ್ಪಡಬೇಕು; ಇದರಿಂದ ಪಾಶ್ಚಾತ್ಯ ವೈದ್ಯರಿಗೂ ಆಯುರ್ವೇದದ ಮೇಲೆ ಅಭಿಮಾನ ಉಂಟಾಗುವಂತೆ ಮಾಡಬೇಕು; ಇದರಿಂದ ಆಯುರ್ವೇದದ ಅಭಿವೃದ್ಧಿಯ ಸಾಧನಗಳು ನಿರ್ಣಯಿಸಲ್ಪಡಬೇಕು; ಆಯುರ್ವೇದ ವೈದ್ಯರೊಳಗೆ ಸೌಹಾರ್ದವು ನೆಲಸುವಂತೆ ಮಾಡಬೇಕು ಇತ್ಯಾದಿ ಆಯುರ್ವೇದದ ಹಿತಕ್ಕಾಗಿ ಈ ಸಮ್ಮೇಲನವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬಹುದು. ಅಲ್ಲದೆ ಆಯುರ್ವೇದ ವೈದ್ಯರಿಗಾಗಿ ಒಂದು ಪ್ರತ್ಯೇಕ ಸಂಸ್ಥೆಯನ್ನೇ ರಚಿಸುವ ವಿಚಾರದಲ್ಲಿ ನಾವು ಕೆಲವು ಸಮಯದ ಹಿಂದೆ ನಮ್ಮ ಅಗ್ರಲೇಖದಲ್ಲಿ ಸೂಚನೆಗಳನ್ನು ಕೊಟ್ಟಿದ್ದೆವು. ಅವನ್ನೂ ಈ ಸಮ್ಮೇಲನವು ಆಲೋಚಿಸಬಹುದು. ಹೇಗೂ ಮಂಗಳೂರಲ್ಲಿ ಈ ಸಮ್ಮೇಲನವು ನೆರೆದುದಕ್ಕೆ ಮಂಗಳೂರಿನ ಉತ್ಸಾಹವೂ, ಜಾಣತನವೂ ಸ್ಪಷ್ಟವಾಗಿ ತೋರಿಬರಲೆಂದು ಆಶಿಸುವೆವು. ಇದರಲ್ಲಿ ಬರೆ ಪಂಡಿತರು ಮಾತ್ರವೇ ಉತ್ಸಾಹಪಡುವುದಲ್ಲ. ಇದು ಪಂಡಿತರಿಗೆ ಎಷ್ಟು ಪ್ರಾಮುಖ್ಯವೋ ಜನಸಾಮಾನ್ಯರಿಗೂ ಇದು ಅಷ್ಟೇ ಪ್ರಾಮುಖ್ಯತೆಯುಳ್ಳದಾಗಿದೆ. ಆದುದರಿಂದ ನಮ್ಮ ಜಿಲ್ಲೆಯಿಂದ ಇತರರೂ ಈ ಸಮ್ಮೇಲನದಲ್ಲಿ ಸಹಭಾಗಿಗಳಾಗಿ, ಪ್ರಯೋಜನಕಾರಿಯೂ ಅಗ್ಗವೂ ಸ್ವದೇಶಿಯೂ ಆಗಿರುವ ಆಯುರ್ವೇದದ ಉದ್ಧರಣೆಯನ್ನು ಚಿಂತಿಸುವುದು ಆವಶ್ಯವಿದೆ.

ಸ್ಯಾಮನ್ ಕಮಿಶನನ್ನೂ ಪ್ರಾಂತಿಕ ಕೌನ್ಸಿಲುಗಳೂ.

ಸ್ಯಾಮನ ಕಮಿಶನ್ನಿಗೆ ಹಲವು ಕೌನ್ಸಿಲುಗಳು ಬಹಿಷ್ಕರಿಸಬೇಕಾಗಿ ಠರಾಯಿಸಿದುವು ಎಂದು ಹೆಗ್ಗಳಿಸಿಕೊಂಡುದೇ ಬಂತೇ? ಎಂಬುದು ಈಗಿನ ಪರಿಸ್ಥಿತಿಯನ್ನು ಲಕ್ಷಿಸುವಾಗ ಮನಸ್ಸಿನಲ್ಲಿ ತೋರುವ ವಿಷಯವಾಗಿದೆ. ಬಂಗಾಳ ಕೌನ್ಸಿಲಿನ ಸ್ವರಾಜ್ಯ ಪಕ್ಷದಿಂದ ಒಬ್ಬೊಬ್ಬರೇ ಪ್ರತಿಪಕ್ಷವನ್ನು ಸೇರಿ ಸರಕಾರದಿಂದ ಸಿಕ್ಕಬಹುದಾದ ಲಾಭಗಳನ್ನು ಅನುಭೋಗಿಸುತ್ತಿರುವರು. ಮದ್ರಾಸು ಕೌನ್ಸಿಲಿನಲ್ಲಿ ಬಹಿಷ್ಕಾರದ ಇಬ್ಬರು ಮಂತ್ರಿಗಳಾದರು. ಮತ್ತೊಬ್ಬರು ಲೊ ಮೆಂಬರರಾದರು. ಬಹಿಷ್ಕಾರ ಠರಾವಿಗೆ ಮುಂದಾಗಿ ತನ್ನ ಓಟನ್ನು ಕೊಟ್ಟ ಡಾ। ಮುತ್ತು ಲಕ್ಷ್ಮೀ ಅಮ್ಮನವರು, ಅದೇ ಕಮಿಶನ್ನಿನವರಿಂದ ಅದೇ ಕಮಿಶನ್ನಿನ ಎಡ್ಯುಕೇಶನ್ ಕಮಿಟಿಗೆ ನೇಮಿಸಲ್ಪಟ್ಟಿರುವರಂತೆ! ಬಾಕಿ ಪ್ರಾಂತಗಳಲ್ಲಿ ಆಶಾಪ್ರದ ಪರಿಸ್ಥಿತಿಯು ಕಾಣುವುದಿಲ್ಲ. ಮಧ್ಯಪ್ರಾಂತ ಕೌನ್ಸಿಲಿನಲ್ಲಿ ಸಾಕಷ್ಟು ಅಂತಃಕಲಹಗಳೂ ದ್ವೇಷಾಸೂಯೆಗಳೂ ಇವೆ! ಅಂತೂ ಸ್ಯಾಮನರು ಹೇಳಿದಂತೆ ತಮಗೆ ದೊರಕಿದ ನಿರೋಧವು ಕ್ಷಣಿಕವಾದುದಾಗಿದ್ದು ಸಮಯಾಂತರದಲ್ಲಿ ಕಾಣೆಯಾಗುವುದೆಂಬುದು ನಿಜವಾಗುವುದೋ? ಎಂದು ಸಂದೇಹಿಸಬೇಕಾಗಿದೆ. ಹಿಂದೀ ರಾಜಕಾರಣಗಳಲ್ಲಿ ಕೆಲಸ ಮಾಡುವವರ ಮಾನಸಿಕತೆಯು ಅತ್ಯಂತ ಆಶ್ಚರ್ಯಕರವಾದುದು!

ಅಸ್ಪೃಶ್ಯರ ಚಳವಳ

ಅಸ್ಪೃಶ್ಯರ ಸುಧಾರಣೆಯ ಬಗ್ಗೆ ಮೂರು ತರದಲ್ಲಿ ಚಳವಳವು ನಡೆಯುತ್ತಿದೆಯಾಗಿ ಹೇಳಬಹುದು. ಮೊದಲನೆಯದಾಗಿ ಸುಧಾರಕರದು; ಎರಡನೆಯದು ರಾಷ್ಟ್ರೀಯ ಚಳವಳದ್ದು; ಮೂರನೆಯದು ಅಸ್ಪೃಶ್ಯರದು. ಮೊದಲನೆಯ ಎರಡು ಚಳವಳಗಳೂ ಬಹಳ ಶಾಂತವಾಗಿಯೂ ಕಾರ್ಯಕಾರಿಯಾಗಿಯೂ ನಡೆಯುವಾಗ, ಕಡೆಯದು ಬರೇ ಇತರ ಜಾತಿಗಳ ಮತ್ಸರವನ್ನು ವ್ಯಕ್ತಪಡಿಸುವುದರಲ್ಲಿಯೇ ನಿರತವಿರುವಂತೆ ತೋರುವುದು. ಈ ಅಸ್ಪೃಶ್ಯರದು ತಮ್ಮ ಉದ್ಧರಣೆಯ ಬಗ್ಗೆ ಅಲ್ಲಲ್ಲಿ ಸಮ್ಮೇಲನಗಳು ನಡೆಯುವುದುಂಟು. ಈ ಸಮ್ಮೇಲನಕ್ಕೆ ಸರಕಾರಿ ನೇಮಕದಿಂದಾದ ಕೆಲವು ಎಮ್. ಎಲ್. ಸಿ.ಗಳು, ಲೋಕಲ್ ಮೆಂಬರರೂ ಧುರೀಣರಾಗುವುದುಂಟು. ಇವರಿಗೆ ಸರಕಾರವೆ ಇಹಪರಗಳೆರಡು ದೈವ; ಪಾಶ್ಚಾತ್ಯರೇ ಸರ್ವಹಿತಕಾರಣರು. ಇವರ ಈ ತರದ ಮಾನಸಿಕತೆಯನ್ನು ನೋಡಿದರೆ ಆಶ್ಚರ್ಯವಾಗುವುದು. ಮೇಲ್ಜಾತಿಯವರು ಇವರನ್ನು ಕೀಳತರಗತಿಗೆ ತಂದರೆಂಬುದೇನೋ ನಿಜ; ಆದರೆ ಈಗಿನ ಅವರ ಉದ್ಧರಣೆಯು ಆ ಮೇಲ್ಜಾತಿಗಳ ಮನಸ್ಸಿನೊಳಗಿನ ಪಶ್ಚಾತ್ತಾಪದಿಂದಲೇ ನಡೆಯುತ್ತಿದೆಯೆಂದೂ, ಅನ್ಯದೇಶೀಯರು ಎಷ್ಟಾದರೂ ಅನ್ಯದೇಶೀಯರೇ ಆಗಿದ್ದು ನಮ್ಮೊಳಗಿನ ಭಿನ್ನತೆಗಳಲ್ಲಿ ಸಂತೋಷಪಡುವವರಾಗಿರುವರೆಂದೂ ಇವರು ತಿಳಿದುಕೊಳ್ಳುವುದಿಲ್ಲ. ಮಾಯಾವರಮ್ಮಿನಲ್ಲಿ ಅಸ್ಪೃಶ್ಯರದೊಂದು ಸಭೆಸೇರಿತು. ಅದಕ್ಕೆ ವಿ. ಮುನಿಸ್ವಾಮಿಪಿಳ್ಳೆ, ಎಮ್. ಎಲ್. ಸಿ.ಯವರೇ ಅಧ್ಯಕ್ಷರು. ತಮ್ಮ ಅಧ್ಯಕ್ಷ ಭಾಷಣದಲ್ಲಿ—"ಪರದೇಶೀಯರ ಸಹಾನುಭೂತಿಯೂ, ಡಾ. ನಾಯರರಂತಹರ ಸಹಾಯವೂ ಅಲ್ಲದಿದ್ದರೆ ನಾವು ಈಗಿನ ಸ್ಥಿತಿಗೆ ಕೂಡಾ ಬರುತ್ತಿರಲಿಲ್ಲ"ವೆಂದು ಈ ಅಸ್ಪೃಶ್ಯ ಮಹಾತ್ಮರು ಹೇಳುವರು. ಆದರೆ ಡಾ. ನಾಯರರ ಚಳವಳವು ಅಸ್ಪೃಶ್ಯೋದ್ಧಾರವಾಗಿರಲಿಲ್ಲ; ಅದು ಬ್ರಾಹ್ಮಣೇತರರ ಸ್ವಾರ್ಥವಾಗಿತ್ತು ಎಂಬುದನ್ನು ಮಾತ್ರ ಈ ಅಧ್ಯಕ್ಷರು ತಿಳಿದುಕೊಂಡಿಲ್ಲ. ಡಾ। ನಾಯರರಿಂದ ಅಸ್ಪೃಶ್ಯರಿಗೆ ಯಾವ ಉಪಕಾರವೂ ಆಗಿಲ್ಲ. ಆದರೆ ಇಷ್ಟೆಲ್ಲ ಉಪಕಾರಸ್ಮರಣೆ ಮಾಡುವಾಗ, ಇವರಿಗೆ ಮಹಾತ್ಮಾಗಾಂಧಿಯವರ ನೆನಪೇ ಆಗದಿದ್ದುದು ಮುಖ್ಯವಿದೆ. ಇದು ಈ ಅಧ್ಯಕ್ಷರ ಮಾನಸಿಕತೆಯನ್ನು ತೋರಿಸುವುದು. ರಾಜಭಕ್ತಿಯೆಂದು ನೌಕರಶಾಹಿಯ ಕಾಲು ಹಿಡಿಯ ಹೋಗುವುದು ಇವರಿಗೆ ಈಗ ಉದ್ಧರಣೆಯ ಏಕಮಾತ್ರ ಉಪಾಯವಾಗಿ ಕಂಡುಬಂದಿದೆ. ಉತ್ತಮ ಜಾತಿಗಳೊಡನೆ ಸಮಾನತೆಯನ್ನು ತೋರಿ, ಅವರು ಮುಂದರಿಸುವ ರಾಷ್ಟ್ರೀಯ ಚಳವಳಗಳಲ್ಲಿ ಭಾಗಿಯಾಗಿ ತಮ್ಮ ಸ್ವಾಭಿಮಾನವನ್ನು ಹೆಚ್ಚಿಸುವ ಬದಲಿಗೆ ಇವರು ಈ ತರದಲ್ಲಿ ಸರಕಾರೀ ಕರುಣೆಯನ್ನೇ ನಿರೀಕ್ಷಿಸುತ್ತ ಚಳವಳ ನಡಿಸುವುದು ಅವರಿಗೇನೇ ಹಾನಿಕರವಾಗಿದೆ.

ನೋಟಗಳು.
NOTE...S.

ವಿಕಟವಿನೋದಿನಿಯು ಈ ಬಾರಿ ನಮಗೊಂದು ದೊಡ್ಡ ಬಿರುದಾವಳಿಯನ್ನೇ ತಯಾರಿಸಿರುವಳು. ನಾವದಕ್ಕೆ ಅರ್ಹರಲ್ಲವೆಂದು ವಿನೀತರಾಗಿ ನಿವೇದಿಸುವೆವು.

ವಿಕಟವಿನೋದಿನಿಯು ತನ್ನ ಕಥೆಗಳ ಮಾನದಿಂದ ನಾವು ಮಿಸ್ ಮೇಯೊಳಿಗೆ ಎಷ್ಟು ಉಪಕೃತರಿರಬೇಕೆಂದು ಸೂಚಿಸಿದರೆ ಉತ್ತಮವಿತ್ತು.

ಹೊಸದೊಂದು "ಆವಿಷ್ಕಾರ — ಮೋಟರಿಗೆ — ಒಂದು ಬಂಪರು. ಇಪ್ಪತ್ತು ಮೈಲು ವೇಗದಿಂದ ಒಂದಕ್ಕೊಂದು ಮೋಟರು ಢಿಕ್ಕೆ ಬಡಿದರೂ ಈ ಬಂಪರಿನ ಸಹಾಯದಿಂದ ಯಾವ ಹಾನಿಯೂ ಆಗುವುದಿಲ್ಲವಂತೆ!

ಈ ಬಂಪರು ಕಾಲುನಡೆಯಲ್ಲಿ ಹೋಗುವವರಿಗೂ ಅಪಾಯ ತಪ್ಪಿಸುವುದು. ಒಬ್ಬ ಮನುಷ್ಯನಿಗೆ ಕಾರು ಅಷ್ಟೇ ವೇಗದಿಂದ ತಗಲಿದಾಗ ಅವನಿಗೆ ಯಾವ ಪೆಟ್ಟೂ ಆಗಲಿಲ್ಲ. ಇನ್ನು ಎಚ್ಚರ ತಪ್ಪಿ ನಡೆಯಲಿಕ್ಕೆ ಬಹಳ ಅನುಕೂಲ.

ಹಿಂದೂಸ್ಥಾನದ ಇತಿಹಾಸದಲ್ಲಿ ಕಿಂಗ್ ಮೇಕರ್ಸ (king makers) ಇದ್ದರಂತೆ. ನಮ್ಮ ಸ್ಥಳೀಕ ಸ್ವರಾಜ ಸಂಸ್ಥೆಗಳಲ್ಲಿ ಪ್ರೆಸಿಡೆಂಟ್ ಮೇಕರ್ಸ್ ಇರುವರಂತೆ!

ಅಧ್ಯಕ್ಷರಾಗಿ ಯಾರನ್ನು ಚುನಾಯಿಸಬೇಕು? ಯೋಗ್ಯತೆಯ ಮಾನವು ಈ ಅಧ್ಯಕ್ಷತನಕ್ಕೆ ಅಗತ್ಯವಿಲ್ಲ. ಜಾತೀಯ ವಿಚಾರಗಳು; ದುಡ್ಡಿನ ಬಲಾತ್ಕಾರವು; ಇಷ್ಟಿದ್ದರೆ ದಸ್ಕತು ಹಾಕಲಿಕ್ಕೆ ಕೂಡ ತಿಳಿಯಬೇಕೆಂತಿಲ್ಲ—ಅದಕ್ಕೆ ಹೆಡ್‌ಕ್ಲಾರ್ಕರಿದ್ದಾರೆ.

ಶ್ರೀ ಶಂಕರ ಜಯಂತಿ.

ಕೆಲವು ದಿನಗಳ ಹಿಂದೆ ನಮ್ಮ ಜಿಲ್ಲೆಯಲ್ಲಿಯೂ ಕೆಲವು ಕಡೆಗಳಲ್ಲಿ ಶಂಕರ ಜಯಂತಿಯು ಆಚರಿಸಲ್ಪಟ್ಟಿತು. ಶ್ರೀ ಶಂಕರನು ಹಿಂದೂ ಮತದಲ್ಲಿ ಚಿರಕೀರ್ತಿವಾನನಾದವನು. ಒಂದು ಸಮಯದಲ್ಲಿ ಹಿಂದೂತ್ವವು ಅತ್ಯಂತ ಸಂದಿಗ್ಧತೆಯನ್ನು ಹೊಂದಿ ಬೌದ್ಧಮತದ ಮುಂದೆ ನಾಶವಾಗುವುದೊ ಎಂಬ ಅನುಮಾನ ಕೂಡ ಉಂಟಾದಾಗ ಈ ಮಹಾಪುರುಷನು ಜನಿಸಿ ಹಿಂದೂ ಮತವನ್ನು ಪುನಃ ಪ್ರತಿಷ್ಠಿಸಿದನು. ಹಿಂದೂಸ್ಥಾನದಿಂದ ಬೌದ್ಧ ನಾಸ್ತಿಕ್ಯವು ಅಂತರ್ಹಿತವಾಗಲಿಕ್ಕೆ ಇವನೇ ಕಾರಣನು. ಇವನು ಪ್ರಸರಿಸಿದ ತತ್ವಗಳೂ ಬರೇ ಸಾಂಪ್ರದಾಯಿಕವಿರದೆ ನೂತನತೆಯುಳ್ಳದವುಗಳಾಗಿ ಅಗಾಧವಾದವುಗಳಾಗಿವೆ. ದ್ವೈತಾದ್ವೈತದ ವಾದವನ್ನು ನಾವಿಲ್ಲಿ ಎತ್ತಲಾರೆವು ಆದರೆ ಅದ್ವೈತವಾದವು ಅತೀಗಹನವಾದುದೆಂದೂ, ಅದರಲ್ಲಿ ಆಧುನಿಕ ವಿಜ್ಞಾನವು ಕೂಡ ಒಪ್ಪಬಲ್ಲ ವಿಷಯಗಳಿರುವುವೆಂದೂ ಹೇಳಬಹುದು. ಪಾಶ್ಚಾತ್ಯ ತತ್ವದರ್ಶಕರು ಕೂಡ ಶ್ರೀ ಶಂಕರನ ತತ್ವಗಳನ್ನು ಬಹುವಾಗಿ ಮಾನಿಸುವರು. ಶ್ರೀ ಶಂಕರನು ಪ್ರಸರಿಸಿದ ತತ್ವದಷ್ಟು ವಿಶಾಲವೂ, ವಿಶ್ವನಿಯಮಗಳುಳ್ಳದೂ ಆದ ಮತವು ಇಡೀ ಲೋಕದಲ್ಲಿ ಬೇರೆಯಿಲ್ಲ. ಅದು ಹಿಂದೂ ಮತಕ್ಕೆ ಮತ್ತು ಗಾಂಭೀರ್ಯವನ್ನೂ ಮಹತ್ವವನ್ನೂ ತರುತ್ತಿದ್ದಿತು; ಆದರೆ ಪ್ರಚಲಿತವಿರುವ ಸಾಂಪ್ರದಾಯಗಳನ್ನು ಯಾರೊಬ್ಬ ಮಹಾಪುರುಷನೂ ಒಮ್ಮಿಂದೊಮ್ಮೆ ಕಿತ್ತೊಗೆಯಲಾರನು. ಹಾಗೆಯೇ ಶ್ರೀ ಶಂಕರನು ಕೂಡ ತನ್ನ ಸಮಯದಲ್ಲಿ ಪ್ರಚಲಿತವಿರುವ ಸಾಂಪ್ರದಾಯಗಳನ್ನು ನಿರಾಕರಿಸಲಾರನಾದನು. ಅವನು ತನ್ನ ತತ್ವಗಳಿಗೆ ಅನುಗುಣವಾಗಿ ಈ ಸಾಂಪ್ರದಾಯಗಳನ್ನು ನಿರಾಕರಿಸುಮದಾದರೆ, ಹಿಂದೂ ಮತದಲ್ಲಿ ಹಿತಕರವಾದ ಪ್ರಬಲವಾದ ಒಂದು ಉತ್ಕ್ರಾಂತಿಯೇ ಉಂಟಾಗುತ್ತಿದ್ದಿತು. ಅಷ್ಟು ಶ್ರೀ ಶಂಕರನು ಮಾಡಲಾರನಾದರೆ ಅದು ಅವನ ತಪ್ಪಲ್ಲ. ಆದರೆ ಹಿಂದೂ ಮತದಲ್ಲಿ ಅವನು ನೂತನ ಜೀವಕಳೆಯನ್ನು ತುಂಬಿದನೆಂಬುದು ನಿರ್ವಿವಾದದ ಮಾತು. ಅವನು ಹೊರಗೆಡಹಿದ ಮಾಯೆ ಮೊದಲಾದ ತತ್ವಗಳನ್ನು ಈಗಿನ ವಿಜ್ಞಾನವು ಇಷ್ಟೆಲ್ಲ ಶೋಧಗಳ ಮೇಲೆಯೂ ಒಪ್ಪಲಿಕ್ಕೆ ಬಂದಂತೆ ತೋರುತ್ತಿದೆ. ಐನ್‌ಸ್ಟೈನ್ ಎಂಬ ಆಸ್ಟ್ರಿಯಾದೇಶದ ವೈಜ್ಞಾನಿಕನ ಸಾಂಬಂಧಿಕತಾತತ್ವವು (Theory of Relativity) ಮಾಯಾತತ್ವದ ಹತ್ತಿರ ಬರುವಂತೆ ತೋರುತ್ತಿದೆ. ವಿಶ್ವವನ್ನು ಮೂಲಭೂತಗಳಾಗಿ ವಿಭಜಿಸಿದುದೂ, ಮೂಲಭೂತಗಳನ್ನು ಅಣುಗಳಾಗಿ ವಿಭಜಿಸಿದುದೂ, ಅಣುಗಳನ್ನು ವಿದ್ಯುದಣುಗಳಾಗಿ ವಿಭಜಿಸಿದುದೂ, ವಿದ್ಯುದಣುಗಳೆಲ್ಲಾ ಒಂದೇ ಜಾತಿಯವುಗಳೆಂದು ತೋರಿಸಿದುದೂ, ಈ ರಾಸಾಯನಿಕ ತತ್ವಸಂಶೋಧವು ಕೂಡ ಇಷ್ಟು ಭಿನ್ನತೆಗಳಿಂದ ಕೂಡಿದ ಜಡಸೃಷ್ಟಿಯಲ್ಲಿಯೇ ಅದ್ವೈತವನ್ನು ಸ್ಥಾಪಿಸುತ್ತಿದೆ. ಹಾಗೆಯೇ ಶ್ರೀ ಶಂಕರನ ಅದ್ವೈತವಾದವನ್ನು ಪಾಶ್ಚಾತ್ಯರು ಕೂಡ ಒಪ್ಪುವಂತಿದೆ.

ಅನುಕ್ರಮಣಿಕೆ.

ಅಗ್ರಲೇಖ,
ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು
ವಿದೇಶ ವರ್ತಮಾನ
ಸ್ಫುಟವಿಚಾರಗಳು
ನೋಟಗಳು
ವರ್ತಮಾನ ಸಂಗ್ರಹಗಳು.
ಒಳದೇಶ [illegible]
ದಕ್ಷಿಣ ಕನ್ನಡ—ಮಂಗಳೂರು, ಅರಳ, ಬಂಟ್ವಾಳ, ಸಿದ್ಧಕಟ್ಟೆ,
ದೇವಶ್ಯಪಡೂರು, ಕಾರ್ಕಳ, ಮೂಡಬಿದರೆ, [illegible]
[illegible] [illegible]
ವಿವಿಧ ಸಮಾಚಾರಗಳು
[illegible]
[illegible]
[illegible]
ಸತ್ಯನ್ಯವಹಾರ [illegible]
[illegible]
[illegible]
[illegible]

ಸ್ವದೇಶಾಭಿಮಾನಿ.

ಶಕ ೧೮೫೧ ಚೈತ್ರ ಬ. [illegible] ಶುಕ್ರವಾರ

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು

ಈ ಬಾರಿ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು [illegible] ನಡೆಯಿತು. ಈ ಪರಿಷತ್ತಿನಲ್ಲಿ [illegible] ಗಳು ಆ ವರೆಗೆ [illegible] ಆದರೆ ಸ್ವಾಗತಾಧ್ಯಕ್ಷರಾದ [illegible] ಪರಾಂಜಪೆಯವರ ಮತ್ತು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸುಭಾಷಚಂದ್ರಬೋಸ ಇವರಿಬ್ಬರ ಭಾಷಣಗಳೂ ಪ್ರಸ್ತುತ ರಾಜಕೀಯ ಪರಿಸ್ಥಿತಿಯ [illegible] ಕೊಟ್ಟು ಪರಿಷತ್ತಿನ ಮುಂದಿನ [illegible] ಧುರೀಣತ್ವವನ್ನು ಕೊಡುವಂತಿದ್ದುವು.

ಪರಿಷತ್ತಿನ ಅಧ್ಯಕ್ಷರಾದ ಸುಭಾಷ ಬಾಬುಗಳು [illegible] ಯರೆಲ್ಲರಿಗೂ ಚಿರಪರಿಚಿತರು. ಅಸಹಕಾರ [illegible] ಬಂಗಾಳದಲ್ಲಿ ಪ್ರಥಮ ಆತ್ಮಯಜ್ಞ ಮಾಡಿದವರಲ್ಲಿ ಇವ ರೊಬ್ಬರು. ದೇಶಬಂಧು ದಾಸರಿಗೆ ಇವರು [illegible] ದ್ದರು; ಕಲ್ಕತ್ತಾ ಕೊರ್ಪೊರೇಶನಿನ [illegible] ಆ ವೇಳೆ ಅವರ ಮೇಲೆ ರಾಜದ್ರೋಹದ [illegible] ಜೈಲಿಗೆ ಕೊಂಡೊಯ್ಯಲ್ಪಟ್ಟರು. ಅಲ್ಲಿಂದ ಅನಾರೋಗ್ಯ ಕಾರಣದಿಂದ ಕೆಲವು ತಿಂಗಳುಗಳ ಹಿಂದೆ ಬಿಡುಗಡೆ ಮಾಡ ಲ್ಪಟ್ಟು, ದೇಹಾರೋಗ್ಯವನ್ನು ಪುನಃ ಹೊಂದಿದ ಮೇಲೆ ಅವರು ಪುನಃ ಅದೇ ಉತ್ಸಾಹದಿಂದ ರಾಜಕೀಯ ರಂಗದಲ್ಲಿ ಕೆಲಸ ವನ್ನು ಆರಂಭಿಸಿರುವರು.

ಮಹಾರಾಷ್ಟ್ರವು ಇವರನ್ನು ಅಧ್ಯಕ್ಷರನ್ನಾಗಿ ಆರಿಸಿದುದು ಸಾಮಯಿಕವಾಯಿತು. ಅವರ ಅಧ್ಯಕ್ಷ ಭಾಷಣವೂ ಇದನ್ನು ವ್ಯಕ್ತಪಡಿಸುತ್ತಿದೆ. ಅಧ್ಯಕ್ಷ ಭಾಷಣವು ಸದ್ಯದ ಪರಿಸ್ಥಿತಿ ಯನ್ನು ಚೆನ್ನಾಗಿ ವಿಮರ್ಶಿಸಿದ್ದಿತಲ್ಲದೆ, ಹಿಂದೀ ರಾಜಕೀಯ ವಾತಾವರಣದಲ್ಲಿ ಬಾಧೆ ಕೊಡುತ್ತಿದ್ದ ಹಲವು ಸಮಸ್ಯೆಗಳನ್ನು ತರ್ಕಿಸಿದ್ದಿತು. ಸಾಮ್ರಾಜ್ಯದಲ್ಲಿ ಹಿಂದೂಸ್ಥಾನವು ಇದ್ದು ಏನೂ ಲಾಭವಿಲ್ಲವೆಂದೂ, ಅದರಿಂದ ಹಿಂದೂಸ್ಥಾನಕ್ಕೆ ಬಾಧಕ ಗಳೇ ಹೆಚ್ಚೆಂದೂ ಅವರು ತೋರಿಸಿದುದು ಮನನೀಯವಾಗಿದೆ. ಬ್ರಿಟಿಷರ ಸಾಮ್ರಾಜ್ಯ ವಾದವು ಅಧೀನ ಜನಾಂಗಗಳನ್ನು ದಬ್ಬಾಳಿಸಲಿಕ್ಕಲ್ಲದೆ ಬೇರಾವುದಕ್ಕೂ ಅಲ್ಲವೆಂದು ಸಾಮ್ರಾ ಜ್ಯದ ಬಿಳಿಯರ ಅಂಶಗಳನ್ನು ನೋಡಿದರೆ ತಿಳಿಯುವುದು. ಆಸ್ಟ್ರೇಲಿಯಾ, ಕೆನಡಾ, ದಕ್ಷಿಣ ಆಫ್ರಿಕಾ ಮೊದಲಾದ ಬಿಳಿ ರಾಜ್ಯಗಳು ಕಾರ್ಯತಃ ಇಂಗ್ಲೆಂಡಿನಿಂದ ಸಂಪೂರ್ಣ ಸ್ವತಂತ್ರ ವಾಗಿವೆ. ಹಿಂದೂಸ್ಥಾನವು ಸಾಮ್ರಾಜ್ಯದ ಅಂಶವೆಂದು ಪರಿ ಗಣಿಸಲ್ಪಟ್ಟರೂ ಕೂಡ, ಈ ಸ್ವತಂತ್ರ ರಾಜ್ಯಗಳು ಹಿಂದೂ ಸ್ಥಾನದ ಕಡೆಗೆ ತಿರಸ್ಕಾರಭಾವವನ್ನೇ ತೋರಿಸುತ್ತಿವೆ. ಆದು ದರಿಂದ ಹಿಂದೂಸ್ಥಾನವು ಸ್ವತಂತ್ರವಾಗಿ ಸಾಮ್ರಾಜ್ಯದ ಅಂಶ ವಾಗಿರುವುದು ಕಷ್ಟಸಾಧ್ಯವಿದೆ.

ಆದರೆ ಹಿಂದೂಸ್ಥಾನವು ಹೇಗೆ ಸ್ವತಂತ್ರವಾಗುವುದು? ಎಂದು ಪ್ರಶ್ನೆ ಹಾಕಿ ಸುಭಾಷ ಬಾಬುಗಳು ಉತ್ತರಕೊಡಲೆತ್ನಿ

[illegible]

ವಿದೇಶ ವರ್ತಮಾನ.

[illegible]

ವಾದ ಪರ್ವತದ ಮೇಲೆ ಸುತ್ತುತಿರುಗುತ್ತಿರುವಾಗ ಅಡಿಗೆಕೋಣೆಯು ಕಂಬಿಗಳಿಂದ ತಪ್ಪಿಹೋಗಿ ಅದರ ಹಿಂದೆ ಆರು ಗಾಡಿಗಳು ಒಂದರ ಮೇಲೊಂದು ಉರುಳಿ ಎಲ್ಲಾ ಗಾಡಿಗಳಿಗೂ ಬೆಂಕಿ ತಾಗಿತು. ರೈಲಿನಲ್ಲಿದ್ದ ಅಮೇರಿಕನ್ ವೈದ್ಯರು ಹಲವರಿಗೆ ಚಿಕಿತ್ಸೆಯನ್ನು ಮಾಡಿದರು.

—ಗ್ರೀಸಿನ್ ಕೋರಿಂಟ್ ಎಂಬಲ್ಲಿ ಭೂಕಂಪದಿಂದ ಬಹಳ ನಷ್ಟವುಂಟಾಗಿದೆ. ಕಟ್ಟೋಣಗಳೆಲ್ಲವೂ ಬಿದ್ದಿರುವವು. ಆದರೂ ಅದು ಇತಿಹಾಸದಲ್ಲಿ ಪ್ರಸಿದ್ಧ ಹೊಂದಿದ ಸ್ಥಳವಾದ್ದರಿಂದ ಅಲ್ಲಿ ಪುನಃ ಮನೆಗಳನ್ನು ಕಟ್ಟಿ ಜನರು ಬಾಳಕೊಳ್ಳುವರಂತೆ. ಕಳೆದ ಗುರುವಾರ ಒಂದೇ ದಿನ ಐವತ್ತು ಸಲ ಭೂಕಂಪನವುಂಟಾಯಿತು. ಇವರಿಗೆ ಬ್ರಿಟಿಷ ಸರಕಾರದವರು ಆಹಾರ ಮೊದಲಾದುವುಗಳನ್ನು ಕೊಟ್ಟು ತುಂಬಾ ಸಹಾಯವನ್ನು ಮಾಡುತ್ತಿರುವರು. ಮನೆಯಿಲ್ಲದವರಿಗೆ ಗುಡಾರಗಳನ್ನು ಕಟ್ಟಿಕೊಡುವುದು, ದಿನಕ್ಕೆ ವಿಮಾನಗಳ ಮೂಲಕ ೨,೦೦೦ ರಾತಲು ಬ್ರೆಡ್ಡನ್ನು ಒದಗಿಸುವದು, ಇದೇ ಬ್ರಿಟಿಷರ ಮುಖ್ಯವಾದ ಸಹಾಯವಾಗಿದೆ.

—ಪರ್ಶಿಯದ ನಾಪ್ಟ್ಖಾನೆಯೆಂಬಲ್ಲಿ ದಿ ಆಂಗ್ಲೋಪರ್ಶಿಯನ್ ಆಯಿಲ್ ಕಂಪೆನಿಯವರು ಒಂದು ಹೊಸ ಎಣ್ಣೆಬಾವಿಯನ್ನು ಕೋಡಿರುವರು. ಇದು ದಿನಕ್ಕೆ ೪೫೦,೦೦೦ ಗೆಲನು ಎಣ್ಣೆಯನ್ನು ಕೊಡುವದಂತೆ. ಈ ರಾಜ್ಯದಲ್ಲಿ ಇರುವ ಎಣ್ಣೆಬಾವಿಗಳಲ್ಲಿ ಇದು ಎರಡನೆಯದಾಗಿದೆ.

—ಅಪ್ಪರ್‌ಲೆಪ್‌ಲೆಂಡಿನ ಜನರು ಜಿನೇವದ ಜನರೊಡನೆ ಟೆಲಿಫೋನಿನಲ್ಲಿ ಮಾತನಾಡುವರು. ಅಲ್ಲಿಂದ ಇಲ್ಲಿಗೆ ದೂರ ೨೯೩೨ ಮೈಲುಗಳು. ಇಷ್ಟು ದೂರ ಮಾತನಾಡಲಿಕ್ಕೆ ಇದುವರೆಗೆ ಯಾರೂ ಪ್ರಯತ್ನಿಸಿದ್ದಿಲ್ಲ.

—ಮೆಕ್ಸಿಕೋವಿನಲ್ಲಿ ಒಬ್ಬ ಕುಬೇರನು ಗುಹೆಗಳಲ್ಲಿ ಚಿನ್ನ ಇದೆಯೋ ಎಂದು ಹುಡುಕುತ್ತಿರುವಾಗ, ಒಂದು ಗುಹೆಯಲ್ಲಿ ೧೦೦ ಶವಗಳು ಸಿಕ್ಕಿದವು. ಇವುಗಳಲ್ಲಿ ಹೆಂಗಸರ, ಗಂಡಸರ ಮತ್ತು ಮಕ್ಕಳ ಶವಗಳು ಇದ್ದವು. ಎಲ್ಲರ ಶರೀರಗಳೂ ಒಟ್ಟಿಗೆ ಕಟ್ಟಲ್ಪಟ್ಟಿದ್ದವು. ಸ್ಪೈನಿನ ಜನರು ಅಮೇರಿಕವನ್ನು ಜಯಿಸಿದಾಗ ಇವರನ್ನು ಈ ರೀತಿಯಲ್ಲಿ ಗುಹೆಯಲ್ಲಿ ಅಡಗಿಸಿ ಇಟ್ಟಿದ್ದರೋ ಏನೋ!

—ಯುದ್ಧದ ಸಾಲದ ಮರುಪಾವತಿಯಾಗಿ ಫ್ರೆಂಚರು ಬ್ರಿಟಿಷರಿಗೆ ಈ ವರುಷ ೮ ಮಿಲಿಯ ಸ್ಟರ್ಲಿಂಗುಗಳನ್ನು ಕೊಡುವರು. ೫ನೇ ಸಪ್ಟಂಬರದ ದಿನ ೬ ಮಿಲಿಯವನ್ನೂ ೧೯೩೦ನೇ ಇಸವಿ ಮಾರ್ಚ ೧೫ನೇ ದಿನ ಉಳಿದ ೪ ಮಿಲಿಯವನ್ನೂ ಹೀಗೆ ಎರಡು ಕಂತುಗಳಾಗಿ ಕೊಡುವರು.

—ಅಫಗಾನದ ಅಮೀರರು ತನ್ನ ಪತ್ನಿಯನ್ನು ಕೂಡಿ ಪೋಲೆಂಡಿಗೆ ಹೋಗಿರುವರು.

—ಮುಜಾಪರ್‌ಪುರದ ಸರ್ರನ್ ಇಂಜಿನಿಯರಿಂಗ್ ಕಂಪೆನಿಗೆ ಬೆಂಕಿ ತಾಗಿ ಸುಮಾರು ಒಂದು ಲಕ್ಷ ರೂಪಾಯಿ ವರೆಗೆ ನಷ್ಟವುಂಟಾಯಿತು.

—ಕ್ರಿಮಿಯನ್ ರಿಫಬ್ಲಿಕಿನ ಎಕ್ಸಿಕ್ಯೂಟಿವ್ ಕಮಿಟಿಯ ಪ್ರೆಸಿಡೆಂಟರಾಗಿದ್ದ ವೆಲಿ ಇಬ್ರಾಯಿಮೋಫ್ ಎಂಬವರು ಮತ್ತು ವ್ಯಾಸ್ ಪ್ರೆಸಿಡೆಂಟರಾದ ಮುಸ್ತಾಫಾ ಎಂಬವರು, ಸರಕಾರಕ್ಕೆ ವಿರೋಧವಾದ ಒಂದು ಪುಂಡಿಗೆ ಸಹಾಯ ಮಾಡಿ ಇಬ್ಬರು ಪೋಲೀಸರನ್ನು ಕೊಲ್ಲಿಸಿದ ತಪ್ಪಿಗಾಗಿ ಅವರಿಬ್ಬರಿಗೂ ಪ್ರಾಣಶಿಕ್ಷೆಯನ್ನು ವಿಧಿಸಬೇಕೆಂದು ಸಿಂಪೆರೊಪೊಲಿನ ಹ್ಯಾಕೋರ್ಟಿನಲ್ಲಿ ವಿಧಿಸಿರುತ್ತಾರೆ.

—ಮುಸ್ಸೋಲಿನಿಯವರನ್ನು ಕಾಣುವದಕ್ಕಾಗಿ ಸುಮಾರು ಹತ್ತು ಸಾವಿರಕ್ಕೆ ಮಿಕ್ಕಿದ ಕೆಲಸಗಾರರು ರೋಮಿಗೆ ಹೋಗಿದ್ದರು. ಅವರೆಲ್ಲರಿಗೂ ಬುದ್ಧಿವಾದಗಳನ್ನು ಹೇಳಿ ಮುಸ್ಸೋಲಿನಿಯವರು ಒಂದು ಭಾಷಣವನ್ನು ಮಾಡಿದರು.

—ಇಂಗ್ಲೀಷ್ ಸರಕಾರಕ್ಕೆ ಪರ್ಶಿಯದಲ್ಲಿ ಒಂದು ಎಣ್ಣೆಯ ಗಣಿಯುರುವದರಿಂದ ಅದರಿಂದ ಬಡ್ಡಿಯ ರೂಪವಾಗಿಯೇ ೬,೦೪೩,೦೦೦ ಪವನುಗಳು ಸಿಕ್ಕಿಯವೆ.

—ಬರ್ಮಿಂಗ್ ಹೇಮಿನಲ್ಲಿ ಎರಡು ರೈಲುಗಳು ಒಂದಕ್ಕೊಂದು ತಗಲಿ ಮೂವರು ಮನುಷ್ಯರಿಗೆ ಕಠಿಣ ತರದ ಜಖಮಾಗಿದೆ.

—ಅಂದು ತುರ್ಕಿಸ್ಥಾನಕ್ಕೆ ಬಂದ ಒಂದು ತರದ ಮಿಡಿತೆಯ ಗುಂಪು ಇಜಿಪ್ಟಕ್ಕೂ ಬಂದಿತು. ಆದರೆ ಇಲ್ಲಿಯ ಜನರು ಅವುಗಳ ಹಾವಳಿಯನ್ನು ತಪ್ಪಿಸುವ ಉಪಾಯವನ್ನು ಕೈಕೊಂಡದ್ದರಿಂದ, ಬೆಳೆಗೆ ಅವುಗಳಿಂದ ಬಾಧೆಯಾಗಲಿಲ್ಲ.

—ಲೀಗ್ ಒಫ್ ನೇಶನ್ಸಿನ ಇಂಡಿಯನ್ ಡೆಲಿಗೇಶನಿಗೆ ಲೋರ್ಡ್ ಲಿಟ್ಟನರೇ ಮುಖ್ಯ ಪುರುಷರಾಗಿ ನೇಮಿಸಲ್ಪಟ್ಟಿರುವರು.

—ಉತ್ತರ ಬಲ್ಗೇರಿಯದಲ್ಲಿ ವಿಪರೀತವಾದ ಮಳೆಗಾಳಿ ಬಂದು ಬಹಳ ನಷ್ಟವಾಗಿಯದೆ. ಮನೆಯ ಮಾಡುಗಳೇ ಹಾರಿ ಹೋಗಿವೆ. ಮೊದಲೇ ಭೂಕಂಪದಿಂದ ಹೆದರಿ ಹೋದ ಅಲ್ಲಿಯ ಜನರು ಇದರಿಂದ ಇನ್ನಷ್ಟು ಹೆದರಿರುವರು. ಈ ಮಳೆಯಿಂದ ೬೦ ಜನರಿಗೆ ಜಖಮಾಗಿಯದೆ.

—ಅಫಘಾನದ ಅಮೀರರೂ ಅವರ ಪತ್ನಿಯವರೂ ರಷ್ಯಾ ದೇಶಕ್ಕೆ ತೆರಳಿರುವರು.

—ಪೋಪದೊರೆಗಳು ಮುಂಬಾಯಿಗೊಬ್ಬ ಆರ್ಚ ಬಿಷಪರನ್ನು ನೇಮಿಸಿರುವರು.

—ಡಿಲ್ಲಿಯಲ್ಲಿ ಸಾರಸ್ವತ ಬ್ರಾಹ್ಮಣರ ಒಂದು ಸಭೆಕೂಡಿ ಅಖಿಳ ಭಾರತೀಯ ಸಾರಸ್ವತ ಮಹಾಸಭೆಯ ಎರಡನೇ ಅಧಿವೇಶನವನ್ನು ಡಿಲ್ಲಿಯಲ್ಲಿ ಬೇಸಿಗೆ ಕಾಲವು ಕಳೆಯುವ ಮೊದಲೇ ನಡೆಯಿಸಬೇಕೆಂದು ನಿಶ್ಚಯಿಸಿದರು. ಡಿಲ್ಲಿಯಲ್ಲಿ ಒಂದು ಸಣ್ಣ ಆಫೀಸನ್ನು ಮಾಡಿ ಸ್ವಾಗತಕಮಿಟಿಗೆ ಸದಸ್ಯರನ್ನು ಸೇರಿಸುತ್ತಿರುವರು.

—ಕಳೆದ ಎಪ್ರಿಲ್ ೨೨ನೇ ದಿನದ ವರೆಗೆ ಬ್ರಿಟನಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ೧,೧೬೨,೩೦೦ ಆಗಿತ್ತು. ಕಳೆದ ವಾರದಲ್ಲಿ ಕೆಲಸವಿಲ್ಲದವರು ಇದಕ್ಕಿಂತ ೨೧,೪೭೭ ಹೆಚ್ಚಾಗಿದ್ದರು.

—ಲಂಡನಿನಲ್ಲಿ ಭೂಲೋಕದಲ್ಲಿ ಅತೀ ದೊಡ್ಡದಾದ ಒಂದು ವಸ್ತು ಪ್ರದರ್ಶನಾಲಯವನ್ನು ಕಟ್ಟುವರಂತೆ.

—ಹವಾನಾದಲ್ಲಿ ಉಂಟಾದ ಗದಿಬಿಡಿಯಲ್ಲಿ ವಿದ್ಯಾರ್ಥಿಗಳು ಸೇರಿರುವದಕ್ಕಾಗಿ ಯುನಿವರ್ಸಿಟಿಯ ೫೦ ಜನ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಗೆ ಹಾಕಿರುವರು.

ಒಳದೇಶ ವರ್ತಮಾನ.

—ಡಾ| ರವೀಂದ್ರನಾಥ ಠಾಗೋರರ ಆರೋಗ್ಯವು ಉತ್ತಮ ಸ್ಥಿತಿಯಲ್ಲಿಲ್ಲದಿರುವದರಿಂದ ಅವರು ಯುರೋಪಿಗೆ ಒಮ್ಮೆ ಹೋಗುವದು ಯೋಗ್ಯವೆಂದು ಡಾಕ್ಟರರು ಹೇಳುವರಂತೆ. ಜೂನ್ ೨ನೇ ತಾರೀಕಿನ ದಿನ ಅವರು ವರ್ಸೆಲ್ಸಿಗೆ ತಲಪುವರು. ಯುರೋಪಿನಲ್ಲಿ ಅವರ ಬಾಷಣಗಳನ್ನು ಕೊಡುವದು ವೈದ್ಯರ ಅನುಮತಿಯ ಮೇಲೆ ಹೊಂದಿಕೊಂಡಿದೆ.

—ಇಂಡಿಯಾ ಸರಕಾರಕ್ಕೆ ಹಾನರೇಬಲ್ ಸಿ. ಸಿ. ವಾಟ್ಸನರವರು ಪೊಲಿಟಿಕಲ್ ಸೆಕ್ರೆಟರಿಯವರಾಗಿ ನೇಮಿಸಲ್ಪಟ್ಟಿರುವರು.

—ಬಂಗಾಳ ಹೆಲ್ತ್ ಡಿಪಾರ್ಟಮೆಂಟಿನವರಿಗೆಂದು ಇಂಡಿಯಾ ಸರಕಾರದವರು ೨,೦೦೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು.

—ಹಿಂದುಸ್ಥಾನದ ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಗುಂಡುಗಳನ್ನು ಹೊಡೆಯುತ್ತಿರುವಾಗ, ಆರ್ಮಿ ಸಿಗ್ನಲರರಾದ ಜೇಮ್ಸ್ ಫ್ರೆಡರಿಕ್ ಕ್ವೆಯರ್ ಎಂಬವರಿಗೆ ಪೆಟ್ಟು ತಾಗಿ, ಲಂಡನಿನ ಒಂದು ಆಸ್ಪತ್ರೆಯಲ್ಲಿ ಮೃತಪಟ್ಟರು.

—ಬಿಹಾರಿನ ಚಂಪ್ರಾರು ಎಂಬಲ್ಲಿ ಮೊನ್ನೆ ತಾನೆ ಒಂದು ಭಯಂಕರವಾದ ಹಿಂದೂ ಮುಸಲ್ಮಾನ ಜಗಳವುಂಟಾಯಿತು.

—ಹಿಂದೂಗಳು ಶಿವಾಜಿಯ ಜನ್ಮದಿನಾಚರಣೆಯ ದಿನ ಶಿವಾಜಿಯ ಪಟವನ್ನು ಹಿಡಿದು ಮೆರವಣಿಗೆ ಮಾಡುತ್ತಿರುವಾಗ ಒಂದು ಮಸೀದಿಯೊಳಗಿಂದ ಮುಸಲ್ಮಾನರು ಕಲ್ಲು ಬಿಸಾಡಿ ಪಟವನ್ನು ನುಚ್ಚುನೂರು ಮಾಡಿದರು. ಜಗಳವಾಗಿ ಸುಮಾರು ೩೩ ಜನರು ಗಾಯ ಹೊಂದಿದರು.

—ಅಟ್ಟಕಿನ ಸಮೀಪ ಒಂದು ವಾಯುವಿಮಾನವು ನದಿಗೆ ಬಿತ್ತು. ನದಿಯ ಮೇಲೆ ಹಾರುತ್ತಿರುವಾಗ ತಂತಿಸಂಗೆಗಳಿಗೆ ತಗಲಿ ಕೆಳಕ್ಕೆ ಬಿತ್ತು. ಒಬ್ಬನು ತಪ್ಪಿಸಿಕೊಂಡನು. ಒಬ್ಬನು ನೀರಲ್ಲಿ ಮುಳುಗಿದನು. ಶರೀರವು ಸಿಕ್ಕಿಲ್ಲ.

—ರೂರಲ್ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರಿಗೆ ಈಗ ಕೊಡುತ್ತಿರುವ ೪೦೦ ರೂಪಾಯಿಗಳ ಬದಲು ೬೦೦ ರೂಪಾಯಿಯನ್ನು ಕೊಡುತ್ತಿರಬೇಕೆಂದೂ ರಜೆಮೊದಲಾದುವುಗಳನ್ನು ಕೊಟ್ಟು ರಿಯಾಯಿತಿಯನ್ನು ತೋರಿಸಬೇಕೆಂದೂ ಸರಕಾರದವರಿಗೆ ಬರೆದಿರುವರು.

—ಎಸೆಂಬ್ಲಿ ಮೆಂಬರರಾದ ಎಸ್. ಶ್ರೀನಿವಾಸ ಅಯ್ಯಂಗಾರರು ಯುರೋಪಿಗೆ ಹೊರಟುಹೋದರು.

—ಸರ್. ಟಿ. ಸದಾಶಿವ ಅಯ್ಯರರ ಮರಣದ ನಂತರ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟ ಸಿ. ವೆಂಕಟರಂಗ ರೆಡ್ಡಿಯವರು ಈಗ ಮದರಾಸಿಗೆ ಬಂದು ತಲಪಿರುವರು.

—ಜೈಲಿನ ಶಿಕ್ಷೆಯನ್ನು ಅನುಭವಿಸುತ್ತಿರುವ ಪಂಡಿತ ಇಂದ್ರರವರು ಸ್ವಲ್ಪ ಅಸೌಖ್ಯವಾಗಿರುವರು. ಅವರನ್ನು ಯೋಗ್ಯ ಆರೈಕೆಯಲ್ಲಿರಿಸಬೇಕೆಂದು ಡಿಸ್ಟ್ರಿಕ್ಟ್ ಜಡ್ಜರ ಹುಕುಂ ಇದೆಯಾದರೂ, ಜೈಲಿನವರು ಹಾಗೆ ಮಾಡುವದಿಲ್ಲ. ಕಳೆದ ಹದಿನೈದು ದಿನಗಳಿಂದ ಅವರು ಜ್ವರ ಪೀಡಿತರಾಗಿರುವದರಿಂದ ಅವರು ಭಾರದಲ್ಲಿ ಬಹು ಕಡಿಮೆಯಾಗಿರುವರು.

—ನೋರ್ಥಾಲಿ ಎಂಬಲ್ಲಿ ಒಬ್ಬ ಮಹಮ್ಮದೀಯನು ವಾಂತಿಬೇಧಿ ರೋಗದಿಂದ ಮೃತನಾದನು. ಆತನ ಶವವನ್ನು ಮ್ಯುನಿಸಿಪಾಲಿಟಿಯ ಒಳಗೆ ಹುಗಿಯದೆ ಹೊರಗೆ ಹುಗಿಯಬೇಕೆಂದು ಸರಕಾರದವರ ಹುಕುಮಿದ್ದರೂ. ಅವರು ಬಲಾತ್ಕಾರದಿಂದ ಒಳಗೆ ಹುಗಿದೇ ಬಿಟ್ಟರು. ಇದಕ್ಕಾಗಿ ಈಗ ಒಬ್ಬೊಬ್ಬ ಮಹಮ್ಮದೀಯನನ್ನೆ ಕೈದು ಮಾಡುತ್ತಿರುವರು.

—ಮುಂಬಾಯಿಯ ಪ್ರಸಿದ್ಧ ಸರಾಫರ ಅಂಗಡಿಯಾದ ಮಾರ್ಕ್ಸ್ ಎಂಡ್ ಕಂಪೆನಿಯವರಿಂದ ಒಂದು ಲಕ್ಷ ರೂಪಾಯಿ ಕ್ರಯ ಬಾಳುವ ಆಭರಣಗಳು ಕಳವಾಗಿರುವವು. ಹೊರಗಿನಿಂದ ಹಾಕಿದ ಬೀಗವು ಹಾಗೆಯೇ ಇರುವದಾದರೂ ಒಳಗಿಂದೊಳಗೇ ಕಳ್ಳತನವಾಗಿದೆ.

—ಅಲ್ಲಹಾಬಾದಿನ ಲಿವರ್‌ಪುಲ್ ಪ್ರೆಸ್ಸಿನ ಪ್ರೊಪ್ರೈಟರನಾದ ಒಬ್ಬ ಯುರೋಪಿಯನನು ಒಂದು ಮೋಟಾರು ಕಾರನ್ನು ಕದ್ದುಕೊಂಡದ್ದಕ್ಕಾಗಿ, ೩೦೦ ರೂಪಾಯಿ ಜುರ್ಮಾನೆ ತೆರಬೇಕೆಂದೂ ಕೋರ್ಟು ಪ್ರಾರಂಭವಾಗುವ ವರೆಗೆ ಜೈಲಿನಲ್ಲಿರಬೇಕೆಂದೂ ಶಿಕ್ಷೆ ವಿಧಿಸಿದರು

—ಖಾನಪುರದ ಎಲ್ಜಿನ್ ಮಿಲ್ಲಿನ ಸುಮಾರು ೧,೦೦೦ ಜನರು ಕೆಲಸಕ್ಕೆ ಮುಷ್ಕರವನ್ನು ಹಾಕಿದರು. ಮಿಲ್ಲಿನ ಸುತ್ತುಮುತ್ತಲೂ ಪೋಲೀಸರನ್ನು ಇಟ್ಟಿದ್ದರು. ತಮ್ಮ ಸಂಬಳವನ್ನು ಹೆಚ್ಚಿಸದ ವಿನಹ ಕೆಲಸಕ್ಕೆ ಕೈ ಹಾಕುವದಿಲ್ಲವೆಂದು ಕೂಲಿಗಳು ತಮ್ಮ ಸ್ಥಳಗಳಲ್ಲಿ ಹಟಸ್ಥರಾಗಿ ಕುಳಿತಿದ್ದರು. ಕೊನೆಗೆ ಹೇಗಾದರೂ ಮಾಡಿ ಸಮಾಧಾನವನ್ನು ಮಾಡಲಾಯಿತು.

—ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ಸುಭಾಸಚಂದ್ರಬೋಸರು ಮುಂಬಾಯಿಗೆ ಬಂದು ತಲಪಿದರು. ಅವರನ್ನು ಬಹಳ ಸಂಭ್ರಮದಿಂದ ಸತ್ಕರಿಸಿದರು. ಸತ್ಕರಿಸುವದಕ್ಕಾಗಿ ಪರಿಷತ್ತಿನ ಸ್ವಾಗತ ಅಧ್ಯಕ್ಷರಾಗಿ ಇತರರೂ ಬಂದಿದ್ದರು. ಒಂದು ದಿನ ರಾ| ಜಯಕರರಲ್ಲಿ ಉಳಕೊಂಡು ಮರುದಿನ ಪೂನೆಗೆ ತೆರಳಿದರು.

—ಕಲಕತ್ತದಲ್ಲಿ ಬಹು ಜೋರಿನ ಮಳೆ ಬಂದು ೧೨೫ ಟೆಲಿಫೋನ್ ಸಂಗೆಗಳು ತಪ್ಪಿ ಟೆಲಿಫೋನ್ ಕೆಲಸವು ನಡೆಯುವುದಿಲ್ಲ. ಮಾಡಿನ ಹಂಚುಗಳು ಕೆಳಕ್ಕೆ ಹಾರಿ, ಹಲವೆಡೆಗಳಲ್ಲಿ ಮಾರ್ಗಸ್ಥರಿಗೆ ಜಖಮಾದದ್ದು ಇದೆ.

—ಮುಂಬಾಯಿಯ ಹಾಜಿಬಂದರದಲ್ಲಿದ್ದ ಜಿ. ಐ. ಪಿ. ರೈಲುವೆಯ ದಾಸ್ತಾನಿನ ಕೋಣೆಗೆ ಮೊನ್ನೆ ಬೆಂಕಿತಾಗಿ ಬಹಳ ನಷ್ಟವಾಯಿತು. ಟಾರ್ಪೋಲಿನುಗಳೂ, ಪಟ್ಟಿಗಳೂ, ಗೋಣಿಗಳೂ, ದಾಸ್ತಾನಿನಲ್ಲಿದ್ದವುಗಳು ಸುಟ್ಟುಹೋದವು. ಉಳಿದ ಸಾಮಾನುಗಳು ಉಪಯೋಗಕ್ಕೆ ಅನರ್ಹವಾಗಿ ಮಾರ್ಪಟ್ಟವು.

—ಬರುವ ಜುಲೈ ತಿಂಗಳಲ್ಲಿ ಊಟಾಕಮಂಡಿನಲ್ಲಿ ಕಲ್ಲಿಕ್ಟರರ ಪರಿಷತ್ತು ನಡೆಯಲಿರುವದು.

—ಇಂಡಿಯನ್ ಫೋರೆಸ್ಟ್ ಸರ್ವಿಸಿಗೆ ಉಮೇದುವಾರರನ್ನು ಆರಿಸುವ ಬಗ್ಗೆ ೨ನೇ ಅಗಸ್ಟದಿಂದ ಡಿಲ್ಲಿಯಲ್ಲಿ ಪರೀಕ್ಷೆಯು ಜರಗುವದು.

—ಕಲಕತ್ತಾ ಯುನಿವರ್ಸಿಟಿಯ ಸಾಯನ್ಸ್ ಕಾಲೇಜಿಗೆ ಶ್ರೀಮತಿ ಕೈಲಸುಖ ದೇವಿಯವರು ೧,೫೦,೦೦೦ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು. ಇವರು ಮೃತಪಟ್ಟ ಶ್ರೀ ರಾಧಿಕಾ ಮೋಹನರಾಯ ಇವರ ಧರ್ಮಪತ್ನಿಯವರು.

—ಮುಂಬಾಯಿಯ ಇಂಪೀರಿಯಲ್ ಬೇಂಕಿನಿಂದ ೮೦೦೦ ರೂಪಾಯಿಗಳು ಕಳವಾಗಿವೆಯಂತೆ. ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಕೋರ್ಟಿನಿಂದ ೮೦೦೦ ರೂಪಾಯಿಗಳಿಗೆ ಒಂದು ಚೆಕ್ಕನ್ನು ಕೊಟ್ಟು ಕೇಶ್ ಮಾಡಲು ಬೇಂಕಿಗೆ ಕಳುಹಿಸಿದ್ದರು. ಕೇಶ್ ಮಾಡಿ ಹಣ ಪಡೆದು ಹಣವನ್ನು ಪೇದೆಯು ಮೇಜಿಯ ಮೇಲೆ ಇಟ್ಟಿದ್ದನು. ಕೂಡಲೇ ಮೇಜಿಯ ಮೇಲೆ ಹಣವಿರಲಿಲ್ಲ.

—ಬರುವ ಇಂಡಿಯನ್ ನೆಶನಲ್ ಕಾಂಗ್ರೆಸ್ಸಿನ ಸ್ವಾಗತ ಮಂಡಲದ ಅಧ್ಯಕ್ಷರ ಚುನಾವಣೆಯಾಗುವಾಗ ಬಹಳ ಗಡಿಬಿಡಿಯಾಗಲಿದೆ. ಯಾಕೆಂದರೆ ಇದಕ್ಕೆ ಮೂವರು ಉಮೇದ್ವಾರರಿರುವರು. ಯಾರೆಂದರೆ ೧ ಜೆ. ಎಮ್. ಸೇನಗುಪ್ತರು; ೨ ನಿರ್ಮಲ ಚಂದ್ರರು; ೩ ಸುಭಾಸ ಚಂದ್ರಭೋಸರು.

—ಮುಟ್ವಾಲ್, ರೋಸ್‌ಮಾಯರ್ ಮತ್ತು ಪಾರ್ಕರ್ ಎಂಬ ಮೂವರು ಯುವಕರು ಲಾಹೋರಿನಿಂದ ಸ್ಯಾಕಲಿನ ಮೇಲೆ ಹೊರಟು ಭೂಸಂಚಾರವನ್ನು ಮಾಡುವರಂತೆ. ಮುಂಬಾಯಿಯ ಮೂವರು ಪಾರ್ಸಿ ಯುವಕರಿಗಿಂತ ಬೇಗನೇ ತಮ್ಮ ಭೂಸಂಚಾರವನ್ನು ಮುಗಿಸಿ ಅವರಿಗಿಂತಲೂ ದೊಡ್ಡ ಹೆಸರನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಇವರಲ್ಲಿರುವುದು.

—ಮೃತಪಟ್ಟ ಲೋರ್ಡ ಸಿಂಹರವರು ೧||ಕೋಟಿ ರೂಪಾಯಿಗಳನ್ನು ಈ ಕೆಳಗಿನಂತೆ ಹಂಚಿಕೊಟ್ಟಿರುವರೆಂದು 'ಬಿಹಾರ ಹೆರಾಲ್ಡ' ಪತ್ರಿಕೆಯು ಹೇಳುತ್ತಿದೆ. ಹಿರಿಯ ಮಗನಿಗೆ ೫೫ ಲಕ್ಷ, ಉಳಿದ ಇಬ್ಬರು ಮಕ್ಕಳಿಗೆ ೨೦-೨೦ ಲಕ್ಷ. ಹೆಂಡತಿಗೆ ಪ್ರತಿ ತಿಂಗಳಿಗೆ ೪೦೦೦ ದಂತೆ ಕೊಡುವ ವ್ಯವಸ್ಥೆ. ಮೂವರು ಹೆಣ್ಣು ಮಕ್ಕಳಲ್ಲಿ ಪ್ರತಿ ಒಬ್ಬರಿಗೆ ಒಂದೊಂದು ಲಕ್ಷ. ಒಂದು ಲಕ್ಷ ಧರ್ಮಕ್ಕಾಗಿ; ಇವರು ವಕೀಲರಾಗಿದ್ದಾಗ ಇಷ್ಟು ಸಂಪಾದನೆಯನ್ನು ಮಾಡಿದ್ದರಂತೆ.

ದಕ್ಷಿಣ ಕನ್ನಡ.

ಮಂಗಳೂರು:—ದಕ್ಷಿಣ ಕನ್ನಡ ಜಿಲ್ಲೆಯ ೬ ತಾಲೂಕುಗಳ ಸೆಟ್ಲಮೆಂಟ ಕೆಲಸವು ಪ್ರಾರಂಭವಾಯಿತು. ನಂಬ್ರ ೪ನೇ ಸೆಟ್ಲಮೆಂಟ ಪಾರ್ಟಿಯು ಈ ಕೆಲಸವನ್ನು ಮಾಡುವುದು. ಇದರ ಹೆಡ್ ಆಫೀಸು ಕಣ್ಣಾನೂರು.

ಪದವು ಟೋಲ್ ಗೇಟನ್ನು ತೆಗೆದುಹಾಕಿರುವರು.

ಬರುವ ತಾರೀಕು ೬ನೇ ಆದಿತ್ಯವಾರ ಬೆಳಿಗ್ಗೆ ೮|| ಘಂಟೆಗೆ ಮಂಗಳೂರಿನ ಬ್ರಹ್ಮ ಸಮಾಜದವರ ಮಂದಿರದಲ್ಲಿ ಶ್ರೀ ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು.

ಕಳೆದ ತಿಂಗಳ ೨೮ನೇ ತಾರೀಕಿನ ದಿನ ಮಂಗಳೂರು ಇತಿಹಾದುಲ್ ಇಸ್ಲಾಮಿಯ ಸಂಘದ ವಾರ್ಷಿಕ ಸಭೆಯು ನಡೆಯಿತು. ಜನಾಬ್ ಬಾಳೇಪುಣೆ ಅಹಮ್ಮದ್ ಬ್ಯಾರಿಸಾಹೇಬರವರು ಅಧ್ಯಕ್ಷರಾಗಿದ್ದರು.

ಶ್ರೀ ಹರವಿಲಾಸ್ ಶಾರದರವರ ಬಾಲ್ಯವಿವಾಹ ನಿಷೇಧ ಮಸೂದೆಯನ್ನು ಆದರಿಸುವದಕ್ಕಾಗಿ ಇಲ್ಲಿಯ ನೆಶನಲ್ ಗರ್ಲ್ಸ್‌ಸ್ಕೂಲಿನಲ್ಲಿ ಶ್ರೀ ಎಮ್. ಎಸ್. ಮಾಧವ ರಾಯರ ಪತ್ನಿಯವರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ಸಂಜೆ ಸಭೆ ಜರಗಿತು. ಸಭೆಯಲ್ಲಿ ಶ್ರೀಯುತರುಗಳಾದ ಕಾರ್ನಾಡು ಸದಾಶಿವ ರಾಯರು ಮತ್ತು ಇತರರು ಬಾಲ್ಯವಿವಾಹದಿಂದಾಗುವ ಹಾನಿಯನ್ನು ಸಕಾರಣವಾಗಿ ವಿವರಿಸಿ, ಹರವಿಲಾಸರವರ ಮಸೂದೆಯನ್ನು ಸಮರ್ಥಿಸಿದರು. ಸಭಿಕರೆಲ್ಲರೂ ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ಇತ್ತರು.

ತಾರೀಕು ೨೮-೪-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೪ ಮರಣಗಳಾದವು. ಈ ಪೈಕಿ ಸನ್ನಿಪಾತದಿಂದ ೩ ಉದರರೋಗದಿಂದ ೨, ಶ್ವಾಸಕೋಶದ ರೋಗದಿಂದ ೫, ಇತರ ಎಲ್ಲಾ ಕಾರಣಗಳಿಂದ ೮. ಜನನ ಸಂಖ್ಯೆಯು ೪೩.

ನಿನ್ನೆಯ ದಿನ ಮಂಗಳೂರಿನಲ್ಲಿ ಸಾಯಂಕಾಲ ಅಕಸ್ಮಿಕವಾಗಿ ಸಿಡಿಲು ಮಿಂಚಿನ ಸಮೇತ ಜೋರಿನ ಮಳೆ ಬಂದಿತು. ಇದರಿಂದ ಇನ್ನಷ್ಟು ಸೆಕೆ ಹೆಚ್ಚಲು ಕಾರಣವಾಯಿತಲ್ಲದೆ ಬೇರೆಯಲ್ಲ.

ಇದೇ ಮೇ ತಿಂಗಳಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಗೇಸ್ ದೀಪಗಳನ್ನೂ ತಿಂಗಳಿನ ಪ್ರತಿ ದಿನ ಸಾಯಂಕಾಲ ೬ ಘಂಟೆಯಿಂದ ಮಧ್ಯರಾತ್ರಿ ೧೨ ಗಂಟೆಯ ವರೆಗೂ, ಸ್ಮಶಾನ, ಅಪಾಯ ಸೂಚಕ ಮತ್ತು ಬೇಂಕ್ ದೀಪಗಳನ್ನು ಪ್ರತಿ ದಿನ ಸಾಯಂಕಾಲ ಘಂಟೆ ೬ರಿಂದ ಬೆಳಿಗ್ಗೆ ಘಂಟೆ ೬ರ ವರೆಗೂ ಉರಿಸುವರು. ಸಾಮಾನ್ಯ ದೀಪಗಳನ್ನು ತಾರೀಕು ೧೭, ೧೮, ೧೯, ೨೦, ೨೧, ಈ ಐದು ದಿನಗಳಲ್ಲಿ ಇಡಿ ರಾತ್ರಿಯೂ, ಉಳಿದ ದಿನಗಳಲ್ಲಿ ಸಮಯಾನುಸಾರವೂ ಉರಿಸಲಾಗುವದು.

ಜೆಪ್ಪು ಕೋಮನ್ ವೆಲ್ತ್ ಹಂಚಿನ ಕಾರಖಾನೆಯ ಮೆನೇಜರರಾದ ಮಿ. ಯು. ಜಿ. ಪ್ರೆಡ್ಡಿಯವರು ಯುರೋಪಿಗೆ ತೆರಳಿದ ಕಾರಣ ಕಾರಖಾನೆಯ ಕೆಲಸಗಾರರೂ ಕಾರಕೂನರೂ ಅವರನ್ನು ಬೀಳ್ಕೊಳ್ಳುವ ಸಮಾರಂಭವನ್ನು ಬಹು ವಿಜೃಂಭಣೆಯಿಂದ ಜರಗಿಸಿ, ಅವರಿಗೆ ಮಾನಪತ್ರ ಪುಷ್ಪಹಾರ ಮೊದಲಾದುವುಗಳನ್ನು ಸಮರ್ಪಿಸಿದರು.

ದ. ಕ. ದ್ರಾವಿಡಬ್ರಾಹ್ಮಣ ಪರಿಷತ್ತಿನ ಕಡೆಯಿಂದ 'ಹಿತವಾದಿನಿ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಾರೆಂದು ಈ ಮೊದಲು ಪ್ರಕಟವಾಗಿತ್ತಷ್ಟೆ! ಆದರೆ ಅದರ ಬದಲಾಗಿ 'ರಾಷ್ಟ್ರಬಂಧು' ಎಂಬ ವಾರಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಧರಿಸಿರುವುದರಿಂದ ಸದ್ಯಕ್ಕೆ ಮಾಸಪತ್ರಿಕೆಯನ್ನು ಹೊರಡಿಸುವುದಿಲ್ಲ. ಇದೇ ಬರುವ ತಾ. ೬-೫-'೨೯ನೇ ಸೋಮವಾರದಿಂದ ಪ್ರತಿ ಸೋಮವಾರವೂ 'ರಾಷ್ಟ್ರಬಂಧು'ವಿನ ಆಗಮನವಾಗುವುದೆಂದು ತಿಳಿಯುತ್ತೇವೆ.

ಅರಳ:—ಮೂಲರ ಪಟ್ಣ ಶ್ರೀಚಂದ್ರನಾಥ ಬಸದಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯೋತ್ಸವವು ಇದೇ ಬರುವ ಮೇ ತಿಂಗಳ ತಾರೀಕು ೬ನೇ ಚಂದ್ರವಾರ ಮ| ರಾ: ರಾ| ಪಂಜೆ ಮಂಗೇಶರಾಯರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಡುವುದು. ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಲಿಕ್ಕಿರುವ ಈ ಸಂದರ್ಭವನ್ನು ಬಿಡಬಾರದಾಗಿ ವಿನಂತಿ.

ಬಂಟವಾಳ:—ಇಲ್ಲಿ ಈಗ ಗೇರು ಹಣ್ಣು ವಿಶೇಷವಾಗಿ ಬೆಳೆಯುವ ಸಮಯವಾದ್ದರಿಂದ ಗೇರು ಹಣ್ಣಿನ ಶರಾಬಿನ ನಂಬ್ರಗಳು ಹೆಚ್ಚಾಗುತ್ತಲಿವೆ. ಈ ನಂಬ್ರಗಳಿಗೆ ಇತರ ಸಾಕ್ಷಿಗಾರರ ಅಗತ್ಯವೇ ಇಲ್ಲ. ಅಬಕಾರಿ ಇಲಾಖೆಯವರೇ ಸಾಕ್ಷಿ. ಹಳ್ಳಿಗಳಲ್ಲಿ ದ್ವೇಷ ಸಾಧಿಸುವದಕ್ಕೆ ಇದೊಂದು ಒಳ್ಳೇ ಹಾದಿ. ಎಷ್ಟು ಶಿಕ್ಷೆ ಕೊಟ್ಟರೂ ಗೇರು ಹಣ್ಣಿನ ಶರಾಬು ತಯಾರಿಸುವ ಕೆಲಸವು ಗುಪ್ತರೀತಿಯಲ್ಲಿ ನಡಿಯುತ್ತಲೇ ಇದೆ. ಇದರಿಂದ ಹಳ್ಳಿ ಜನರಿಗೆ ಈ ಶರಾಬನ್ನು ಕುಡಿಯಬೇಕೆಂದು ಬಹಳ ಆಸೆ ಇದೆ ಎಂದು ಸ್ಪಷ್ಟವಾಗುತ್ತದೆ. ಆದುದರಿಂದ ಗೇರು ಹಣ್ಣಿನ ಶರಾಬನ್ನು ಬಹಿರಂಗವಾಗಿ ತಯಾರಿಸುವಂತೆ ಏಲಿವಾರಿ ಮಾಡಿ ಆ ಶರಾಬನ್ನು ಗಡಂಗುಗಳಲ್ಲಿ ಮಾರಲಿಕ್ಕಿಟ್ಟರೆ ಗೇರು ಹಣ್ಣಿನ ಶರಾಬಿನ ನಂಬ್ರಗಳು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ. ಇದನ್ನು ತಯಾರಿಸಿ ಮಾರುವ ಹಕ್ಕನ್ನು ಪೆರಿ ಕಂಪೆನಿಯವರಿಗೆ ಕೊಟ್ಟರೂ ಚಿಂತಿಲ್ಲ. ನಂಬ್ರಗಳು ಬೇಡ.

ಇಲ್ಲಿಯ ಎಲ್ಲಾ ಶಾಲೆಗಳೂ ಸೆಕೆ ಕಾಲವಾದ್ದರಿಂದ ಮುಚ್ಚಲ್ಪಟ್ಟಿವೆ. ಸೆಕೆಯು ಬಹಳ ವಿಶೇಷವಾಗಿದೆ. ಕೋರಾ ಕೊಟಲೆ ಮುಂತಾದ ರೋಗಗಳು ಕಡಿಮೆಯಾಗುತ್ತಾ ಬಂದಿವೆ. ಕೆಂಗಣ್ಣಿನ ರೋಗವೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಮಲೇರಿಯಾ ಜ್ವರವೂ ಹೆಚ್ಚಾಗಿ ಹರಡಿದೆ. ಆಸ್ಪತ್ರೆಯಲ್ಲಿ ೧೨ ಗಂಟೆ ವರೆಗೆ ಮದ್ದು ಕೊಟ್ಟು ಸಾಕುಸಾಕಾಗುತ್ತದೆ.

ಬಂಟವಾಳದ ವ್ಯಾಪಾರಸ್ಥರ ಪರಸ್ಪರ ಸಹಾಯಕ ಸಂಘ ಬಿಲ್ಡಿಂಗ್ ಸೊಸೈಟಿ ಮರಣಹೊಂದಿದವು. ಆದಿದ್ರಾವಿಡರ ಸಹಕಾರಿ ಸಂಘವು ಇನ್ನು ಗರ್ಭಾವಸ್ಥೆಯಲ್ಲಿಯೇ ಇದೆ. ಜನನವಾಗುವಾಗ ಈಗ ಇರುವ ಆದಿದ್ರಾವಿಡ ಮೆಂಬರರು ಸ್ವರ್ಗಸ್ಥರಾಗುತ್ತಾರೊ ಏನೊ. ನಂಬ್ರ ೧೧೧೨ನೇ ಸಂಘದ ಅವಸ್ಥೆಯು ವೃದ್ಧಾಪ್ಯದಲ್ಲಿದೆ. ಇದರ ಪಂಚಾಯತರು ಹಲವು ವರುಷಗಳಿಂದ ಮೊದಲಿನವರೇ ಆಗಿರುತ್ತಾರೆ. ಹೊಸ ಚುನಾವಣೆ ಇಲ್ಲ. ಲೆಕ್ಕಪತ್ರಗಳನ್ನು ಇಷ್ಟರ ವರೇಗೆ ಸಭೆಯಲ್ಲಿ ಓದಿ ಹೇಳಿದ್ದು ಕಂಡುಬರುವದಿಲ್ಲ. ಮೆಂಬರರು ಬಡವರು, ಪಂಚಾಯತರು ಧನಿಕರು.

ಇಲ್ಲಿ ಕೊ-ಒಪರೇಟಿವ್ ಯೂನಿಯನ್ ಇದೆ. ಒನರೆರಿ ಅಸಿಸ್ಟಾಂಟ ರಿಜಿಸ್ಟ್ರಾರರಿರುತ್ತಾರೆ. ಸುಪರ್‌ವೈಜರರಿರುತ್ತಾರೆ. ಗುಮಾಸ್ತರಿರುತ್ತಾರೆ. ಪೇದೆಗಳಿರುತ್ತಾರೆ. ಲೆಕ್ಕಪತ್ರ ಬರಿಯುವುದು ಕಟ್ಟಕಟ್ಟಿ ಕಪಾಟಿನಲ್ಲಿಡುವುದು. ಒಡಿಟರ್ ಚೆಕ್ ಮಾಡುತ್ತಾರೆ. ಈ ಯೂನಿಯನಿಗಿದ್ದ ೧೮ ಸಂಘಗಳಲ್ಲಿ ಎಷ್ಟು ಜೀವದಿಂದ ಇದ್ದಾವೆ. ಪರಮಾತ್ಮನೇ ಬಲ್ಲ. ಆದುದರಿಂದ ಇಲ್ಲಿಯ ಸಂಘಗಳನ್ನು ಒಳ್ಳೇ ಸ್ಥಿತಿಗೆ ತರಲಿಕ್ಕೆ ಸಾಧಿಸಬೇಕು. ಇಲ್ಲವಾದರೆ ಯುನಿಯನನ್ನು ತೆಗೆದು ಹಾಕುವದೇ ಒಳ್ಳೇದು.

ಸಿದ್ಧಕಟ್ಟೆ:—ಇಲ್ಲಿ ಒಂದು ಬ್ರೆಂಚ್ ಪೋಸ್ಟ ಆಫೀಸು ತೆರಿಯಲಾಗಿದೆ. ಬಟ್ವಾಡೆ ಪೇದೆ ಇಲ್ಲದ ಪೋಸ್ಟ ಆಫೀಸುಗಳಿಂದ ಏನೊಂದೂ ಪ್ರಯೋಜನ ಕಂಡುಬರುವುದಿಲ್ಲ.

ದೇವಶ್ಯಪಡೂರು:—ಈ ಗ್ರಾಮದವರು, ಗ್ರಾಮದ ಮಧ್ಯ ಸ್ಥಳದಲ್ಲಿ ಒಂದು ಚಲೋ ಶಾಲಾ ಕಟ್ಟೋಣವನ್ನು ಕಟ್ಟಿಸುವ ಕೆಲಸವು ಬಹಳ ಜೋರಿನಿಂದ ನಡಿಯುತ್ತಲಿದೆ. ಅಡಿ ಸ್ಥಳ ಒಬ್ಬರ ಲೆಕ್ಕಕ್ಕೆ ಗೋಡೆ ಒಬ್ಬರದು, ಕಿಟಕಿಬಾಗಿಲುಗಳು ಮಾಡು ಇನ್ನೊಬ್ಬರದು ಹಂಚು ಒಬ್ಬರದು, ಸಾರಣೆ ಒಬ್ಬರದು ಈ ರೀತಿಯಲ್ಲಿ ಕೆಲಸವು ನಡಿಯುತ್ತಲಿದೆ. ಇದೇ ರೀತಿಯಲ್ಲಿ ಇತರ ಗ್ರಾಮದವರೂ ಮಾಡಿದರೆ ಉತ್ತಮವಿತ್ತು. ಮೂಡಬಿದರೆ ನರಸಿಂಗರಾಯರು ಈ ಶಾಲೆಯ ಹೆಡ್ ಮಾಸ್ತರರಾದ ಮೇಲೆ ವಿದ್ಯಾವಸ್ಥೆಯಲ್ಲಿದ್ದ ಈ ಶಾಲೆಯು ಉನ್ನತಿಗೆ ಬಂದು ಮಕ್ಕಳ ಸಂಖ್ಯೆಯು ಹೆಚ್ಚಾಯಿತು. ಇಲ್ಲಿಯ ಹೆಮ್ಮಕ್ಕಳಿಗೆ ಹೊಲಿಗೆ ಕೆಲಸ ಕಲಿಸುವುದಕ್ಕೆ ತಲಪಾಡಿ, ಪೊಳಲಿ ಶಾಲೆಗಳಿಗೆ ಒಬ್ಬೊಬ್ಬ ಕಿಂಡರ ಗಾರ್ಟನ ಮಿಸ್ಟ್ರೆಸ್ ಹೊಲಿಗೆ ಕೆಲಸ, ಕಸೂತಿ ಕೆಲಸ ಚೆನ್ನಾಗಿ ಕಲಿತವಳೊಬ್ಬಳನ್ನು ನೇಮಿಸಿದರೆ ಹೆಮ್ಮಕ್ಕಳ ವಿದ್ಯಾಭಿವೃದ್ಧಿಗೆ ಉತ್ತಮವಿತ್ತು.

ನಂದಾವರ:—ಪಾಣೆಮಂಗಳೂರಿನಿಂದ ಕಡ್ತಲಮೊಗರಿಗೆ ಹೋಗುವ ಮಾರ್ಗದಲ್ಲಿ ನಂದಾವರ ತೋಡು ಇದೆ, ಈ ತೋಡಿನಲ್ಲಿ ಮಳೆಗಾಲದಲ್ಲಿ ನೀರು ಹೆಚ್ಚಾಗಿ ತುಂಬುತ್ತದೆ. ಮಳೆಗಾಲದಲ್ಲಿ ದಾಟುವುದು ಬಹಳ ಕಷ್ಟ. ಈಗಿನ ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರು ಪಾಣೆಮಂಗಳೂರು ಸರ್ಕಲಿನಿಂದ ಚುನಾಯಿಸಲ್ಪಟ್ಟವರು. ಓಟಿನ ಸಮಯ ಮತದಾರರು ಇವರಿಗೆ ಮಾಡಿದ ಸಹಾಯವನ್ನು ಮರೆತು ಬಿಡದೆ ಈ ತೋಡಿಗೆ ಒಂದು ಸೇತುವೆಯನ್ನು ಮಾಡಿಸುವಂತೆ ಹಣ ಸೆಂಕ್ಷನ್ ಮಾಡಿದರೆ ಉತ್ತಮವಿತ್ತು. ರಾ. ನರಿಕೊಂಬು ರಾಮರಾಯರವರೂ ಈ ವಿಷಯ ಸಹಕರಿಸ್ಯಾರೆಂದು ನಂಬಲಾಗಿದೆ.

ಕಾರ್ಕಳ:—ಇಲ್ಲಿಯ ಶ್ರೀ ತಿರುಮಲ ವೆಂಕಟ್ರಮಣ ಗೌಡ ಸಾರಸ್ವತ ದೇವಸ್ಥಾನದ ವರುಷಾವಧಿ ರಥೋತ್ಸವವು ವಿಶೇಷ ರೀತಿಯಲ್ಲಿ ಜರಗಿತು.

ಮಾರಿಪೂಜೆಯು ಸಮಾಪಿಸಿತು. ಮಾರಿಪೂಜೆಯ ಸಮಯ ಕೋಣ ಕುರಿ, ಕೋಳಿ ಮುಂತಾದವುಗಳನ್ನು ಈ ಪ್ರಾಣಿಗಳ ಮಾಂಸ ತಿನ್ನುವವರೇ ಕೊಯ್ಯುವ ವಾಡಿಕೆಯು ಇದೆ. ಮಾಂಸ ತಿನ್ನದ ಹಲವರಿಗೆ ಇದರಿಂದ ಸ್ವಲ್ಪ ಬೇಸರ ಬಂದದೆ. ಇಂಥವರು ಮಾರಿಪೂಜೆಗೆ ಬರಬೇಕೆಂದು ಯಾರೂ ಹೇಳುವದಿಲ್ಲ. ಮಾಂಸ ತಿನ್ನುವುದಕ್ಕಾಗಿ. ಕೋಣಗಳನ್ನೆಲ್ಲ ಸಾವಿರಾರು ದನಗಳನ್ನು ಅವರ ಮಾಂಸವನ್ನು ತಿನ್ನುವವರು ಕೊಲ್ಲುತ್ತಿರುವರು. ಲಕ್ಷಗಟ್ಲೆಯಿಂದ ಕುರಿಗಳನ್ನು ಕೊಲ್ಲುತ್ತಿರುವರು. ಇದೆಲ್ಲ ನರದೇವತೆಯ ಬಲಿಗಾಗಿ ನಡಿಯುತ್ತದೆ. ಮಂಗಳೂರು ವೆಲ್ಲಿಟರ್ ಮಾರ್ಕೆಟು ದೊಡ್ಡ ಮಾರಿಗುಡಿಯಾದ ಮೇಲೆ ಚೋಳಾರ, ಉರ್ವದಲ್ಲಿ ಪೂಜೆಯ ಗೌಜಿಯು ಕಡಿಮೆಯಾಗಿದೆ. ಇದೇ ತರದ ಒಂದು ಮಾರ್ಕೆಟನ್ನು ಕಾರ್ಕಳದಲ್ಲಿಯೂ ತೆರದರೆ ಮತ್ತು ಮಾರಿಪೂಜೆಯ ವಿಷಯ ಉಂಟಾದ ಹೊಟ್ಟೆನೋವು ಕಡಿಮೆಯಾದೀತು.

ಮೂಡಬಿದರೆ:—ಇಲ್ಲಿಯ ಅರಮನೆಯ ಬದಗು ದಿಕ್ಕಿಗೆ ಬಹಳ ದೊಡ್ಡದಾದ ಕೆರೆ ಇದೆ. ಇದು ಈಗ ಪೂರ್ಣ ಮುಚ್ಚಿಹೋಗಿದೆ. ಕೆರೆಗಳನ್ನು ತಾಲೂಕು ಬೋರ್ಡಿನವರು ದುರುಸ್ತಿ ಮಾಡಿಸಬಹುದೆಂಬ ಹುಕುಂ ಇದೆ ಎಂದು ಕಳದ ನವಯುಗದ ಸಂಚಿಕೆಯಲ್ಲಿ ರಾ. ರಾಮಕೃಷ್ಣ ಪೂಂಜರವರು ಬರದ ಪತ್ರದಿಂದ ಕಾಣುತ್ತದೆ. ಈಗಿನ ಮೂಡಬಿದರೆಯ ಚೌಟರಾದ ರಾ. ಧರ್ಮಸಾಮ್ರಾಜರವರು ಕಾರ್ಕಳ ತಾಲೂಕು ಬೋರ್ಡು ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಇವರು ತಾಲೂಕು ಬೋರ್ಡಿನಲ್ಲಿ ಸಾಧಿಸಿ ಈ ಕೆರೆಯನ್ನು ದುರುಸ್ತಿ ಪಡಿಸಿದರೆ ನೀರಿನ ವಿಷಯ ಕಷ್ಟಪಡುತ್ತಿರುವ ಈ ಊರಿನವರಿಗೆ ಬಹಳ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

(೧೦ನೇ ಪೇಜಿಗೆ ಮುಂದುವರಿಸಿಯದೆ.)

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗೆ [illegible] ಚಾರ್ಮಾಡಿಘಾಟ್ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ [illegible] ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ [illegible] ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ [illegible] ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ [illegible] ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) [illegible] ವಿಶ್ರಾಂತಿಗೆ [illegible] ಮೂಡಗೆರೆಗೆ 9 ಗಂಟೆಗೆ [illegible] 10-30ಕ್ಕೆ [illegible] ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೆ ಸೇರಿ, [illegible] ರೋಡಿಗೆ ಬಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4.30ಕ್ಕೆ [illegible] ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು [illegible] ಸೇರಬಹುದು.

(3) [illegible] ಕಂಪೆನಿ! ಲಿಮಿಟೆಡ್ [illegible]

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ [illegible] ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, [illegible], ಕೆ. [illegible] ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಈ ತಿಂಗಳಿನಿಂದ ಸಿ. ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD. MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ಮೂಡಬಿದರೆ ಕಾರ್ಕಳ ಮಾರ್ಗವಾಗಿಯೂ ಎಡಪದವು [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. [illegible] ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವ.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮ ಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು, ಯಾವ ಯಾವ ತಿಂಗಳಲ್ಲಿ ಯಾವರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು, ಎಷ್ಟು ನಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರೆಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆ ಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಶಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚು ಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತೂ ಚಂತ್ರಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವರಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕಾಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಲಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ವೈಶಾಖ ಬ| ೧ರಿಂದ ಶನಿವಾರದಿಂದ ವಿಭವ ಸಂ|ರದ ವೈಶಾಖ ಬ| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಮೇಶ (ಮಗ್ಗ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಗಮನಾಂಶ	ಸೂರ್ಯ. ಉ	ಸೂರ್ಯ. ಅಸ್ತ
5	ಶನಿ	೧	೫೬.೧೪	ವಿಶಾಖಾ	೫೧.೨	೨೩	6.11	6.44
6	ರವಿ	೨	೬೦.೦	ಅನುರಾಧಾ	೫೭.೧೪	೨೪	6.10	6.44
7	ಸೋಮ	೨	೨.೧	ಜ್ಯೇಷ್ಠಾ	೬೦.೦	೨೫	6.10	6.45
8	ಕುಜ	೩	೫.೫೯	ಮೂಲಾ	೩.೨	೨೬	6.10	6.45
9	ಬುಧ	೪	೮.೪೭	ಪೂ. ಷ.	೭.೪೬	೨೭	6. 9	6.45
10	ಗುರು	೫	೧೧.೧೩	ಉ. ಷ	೧೧.೧೪	೨೮	6. 9	6.45
11	ಶುಕ್ರ	೬	೧೨.೦	ಶ್ರವಣ	೧೩.೪೬	೨೯	6. 9	6.45

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
27	92— 9	81— 3	—	0-1-0
28	93 4	80— 8	—	—
29	92— 3	80— 9	—	0-0-4
30	91— 8	82— 1	—	—
1	92— 3	81— 2	—	—
2	92— 3	82— 8	—	—
3	92— 3	81— 5	—	—
				138-15

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಸೂರಿ	7- 4	8— 2
ಹೊಸ ಗುಡ್ಡು ...	6—10	7— 2
ಸುಗ್ಗಿ ...	6— 4	6- 15
ಹೊಸ ರಾಶಿ ...	6— 1	6— 8
ಊರ ಅತ್ತರ್ ಬೆಳ್ತಿಗೆ ...	7— 4	8— 4
ರಂಗೂನು ಬೆಳ್ತಿಗೆ ಗೋಣಿ ೧ ...	12—10	13 - 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6—14	7— 2
ಗೋದಿ ಗೋಣಿ ೧ಕ್ಕೆ ...	15— 0	18 8
ಹುರುಳಿಗೋಣಿ ೧ಕ್ಕೆ ...	8— 8	10 - 8
ಕಡಲೆಗೋಣಿ ೧ಕ್ಕೆ ...	10— 0	12— 8
ಕೆಂಗರಿಗೋಣಿ ೧ಕ್ಕೆ ...	14— 0	14— 8
ಕೊಂಗರಿಬೇಳೆ ಗೋಣಿ ೧ಕ್ಕೆ ...	18— 0	25— 0
ಉದ್ದು ಗೋಣಿ ೧ಕ್ಕೆ ...	13— 8	14 — 0
ಹೆಸರುಗೋಣಿ ೧ಕ್ಕೆ ...	12 - 0	14 - 8
ಊರು ಬೆಲ್ಲ ಖಂಡಿ ೧ಕ್ಕೆ ...	50— 0	55— 8
ಉಪ್ಪು ಗೋಣಿ ೧ಕ್ಕೆ ...	4—10	5— 4
ಕೊಬ್ರಿ ಖಂಡಿ ೧ಕ್ಕೆ ...	130 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	30— 0	40 - 0
ಎಳ್ಳಿಂಡಿ ಖಂಡಿ ೧ಕ್ಕೆ ...	37— 8	46— 4
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8— 2	9— 2
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8— 4
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	7— 2	8 0
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	4 - 7
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6—10	6 12
ಸಾಸಿವೆ ಮುಡಿ ೧ಕ್ಕೆ ...	8— 0	8 - 2
ಕೊತ್ತಂಬರಿ ಮುಡಿ ೧ಕ್ಕೆ ...	6— 8	7— 4
ಕಾಫಿ ಖಂಡಿ ೧ಕ್ಕೆ ...	365— 0	309-- 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ...	170- 0	210-- 0
ಕಾಳುಮೆಣಸು ಖಂಡಿ ೧ಕ್ಕೆ ...	520- 0	-
ಯಾಲಕ್ಕಿ ಮುಡಿ ೧ಕ್ಕೆ ೧ ...	65— 0	80— 0
ಗೇರುಬೀಜ [illegible] ೧ಕ್ಕೆ ...	3—12	3—13
ಅಕ್ಕಿ [illegible] ಖಂಡಿ ೧ಕ್ಕೆ ...	37— 8	40— 0
ತಾಂಬ್ರ ತಗಡು ಮುಡಿ ೧ಕ್ಕೆ ...	15— 0	16 - 8
ತಾಂಬ್ರ ಪಾತ್ರಗಳ ಮುಡಿ ೧ಕ್ಕೆ	20— 0	21 -
ಚೀನಿ ಬೆಳ್ಳಿ ಸೇರು ೧ಕ್ಕೆ ...	15— 0	-
ಹಿತ್ತಾಳೆ ತಗಡು ಮುಡಿ ೧ಕ್ಕೆ ...	15— 0	16— 8
ಪವನು	13— 8	13 - 9

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಬ್ರಹ್ಮ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರುಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲಿಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses

For Particulars pply to:

The Manager,
SWADESHABHIMANI,
MANGALORE.

Diamonds ವಜ್ರಗಳು Diamonds.

BOLA MANGESH ROW & CO.,
MANGALORE.

Agents & Direct importers of Superior Diamonds of Antwerp.

ಯೇಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

10-8-'28 ಮಂಗಳೂರು

THE CANARA BANK LTD, MANGALORE.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

NOTICE: ನೋಟಿಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಈಡಿನ ಮೇಲೆ ಪಡದ ಮೊಬಲಗನ್ನಾಗಲಿ ವ ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವದರಿಂದ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟಿಸು ಸಹಾ ವಾಪಾಸು ಬಂದಿರುವದರಿಂದ ಸದರಿಯವರ ನಗಗಳು ಇದೇ ತಿಂಗಳ ತಾ. 25-5-28ನೇ ಶುಕ್ರವಾರ ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು.

1. ನಾಗಪ್ಪ ಸೆಟ್ಟಿ ಮ್ಯಾಲ ಚಾಟ ಅಳಿಯ; ಈಡಿಟ್ಟ ತಾರೀಕು 23-4-'27, ಸಾಲದ ಮೊಬಲಗು 40-0-0; ಬಡ್ಡಿ ವಗೈರೆ 2-8-7.

2. ಹಮ್ಮಬ್ಬ ಬ್ಯಾರಿ ಚಯ್ಯಬ್ಬ ಬ್ಯಾರಿ ಮಗ; ಈಡಿಟ್ಟ ತಾರೀಕು 8-10-1924, ಸಾಲದ ಮೊಬಲಗು 225ರ ಪೈಕಿ ಬಾಕಿ ರೂಪಾಯಿ 197-14-0, ಬಡ್ಡಿ ವಗೈರೆ 8-13-8.

ಈ ನೋಟೀಸು ಖಚಿರ್ ಸಹಾ.

The Canara Bank, Ltd., Mangalore 2-5-1928. } K. VENKAT RAO, *Secretary.*

ತೌಳವದೇಶದಲ್ಲಿ ಸ್ಥಾಪಿಸಬೇಕಾದ ಸಾರ್ವಜನಿಕ ಪುಸ್ತಕ ಭಂಡಾರ.

ಒಂದು ದೇಶವು ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿ ಮುಂದರಿಸಬೇಕಾದರೆ ಆ ದೇಶವು ವಿದ್ಯಾಭ್ಯಾಸದಲ್ಲಿಯೂ ಮುಂದರಿಸಿದವರಾಗಿ ಭೂಲೋಕದ ಬೇರೆ ಬೇರೆ ದೇಶಗಳ ಅಭಿವೃದ್ಧಿಯ ವಿಷಯ ತಿಳಿದವರಾಗಿರಬೇಕು. ಈ ರೀತಿಯಲ್ಲಿ ಮುಂದರಿಸಬೇಕಾದರೆ ದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಾಥಮಿಕ ಶಾಲೆಗಳೂ, ಸೆಕೆಂಡರಿ ಮತ್ತು ಕೊಲೇಜು ವಿದ್ಯಾಭ್ಯಾಸವೂ ಪ್ರಸರಣೆಯಾಗಬೇಕು. ಬರಹ ತಿಳಿಯದ ಪ್ರಾಯಬಂದವರಿಗೆ ವಿದ್ಯೆಯನ್ನು ಕೊಡಲಿಕ್ಕಾಗಿ ರಾತ್ರಿಶಾಲೆಗಳನ್ನು ಸ್ಥಾಪಿಸಬೇಕು.

ಆಂಧ್ರದೇಶ, ತಮಿಳುದೇಶ, ಮಳೆಯಾಳ ದೇಶಗಳು ತುಳುದೇಶಕ್ಕಿಂತಲೂ ಹೆಚ್ಚು ಮುಂದರಿಸಿವೆ. ಈ ದೇಶಗಳಲ್ಲಿ ಶಾಲೆಯಲ್ಲಿ ಕಲಿಸುವ ಭಾಷೆಯೂ ಮನೆಗಳಲ್ಲಿ ಮಾತನಾಡುವ ಭಾಷೆಯೂ ಒಂದೇಯಾಗಿದೆ. ಆದುದರಿಂದ ಈ ದೇಶಗಳು ಎಲ್ಲಾ ವಿಧಗಳಲ್ಲಿಯೂ ಬೇಗನೇ ಅಭಿವೃದ್ಧಿಯನ್ನು ಹೊಂದುತ್ತಿವೆ. ತುಳುದೇಶದಲ್ಲಿ ಅನ್ಯ ಜಿಲ್ಲೆಗಳಿಂದ ಬಂದು ಉಳುಕೊಂಡ ಗೌಡಸಾರಸ್ವತರೂ, ಸಾರಸ್ವತರೂ, ಹವೀಕರೂ, ಚಿತ್ರಪಾವನರೂ, ಕಾಡ್ಸೆಕಾರರೂ, ಬಾಳೋಳಿಕಾರರೂ, ಚಪಟೆಕಾರರೂ, ವಾಣ್ಯರ ಜಾತಿಯವರೂ, ಸೋನಾರರೂ, ವೈಶ್ಯ ಬ್ರಾಹ್ಮಣರೂ (ಹರಿಶೆಟ್ಟು) ಕೊಂಕಣಿ ಭಾಷೆಯನ್ನು ಆಡುತ್ತಲಿದ್ದಾರೆ. ತುಳುದೇಶದಲ್ಲಿ ಮುಂಚಿನಿಂದ ವಾಸವಾಗಿದ್ದ ನಾಡವ ಬಂಟರೂ, ಬಿಲ್ಲವರೂ, ಕುಂಬಾರರೂ, ಗಾಣಿಗರೂ, ಮೊಯಿಲಿಗಳೂ, ಕ್ಷೌರಿಕರೂ, ಅಗಸರೂ ತುಳು ಭಾಷೆಯನ್ನು ಆಡುತ್ತಲಿದ್ದಾರೆ. ದ್ರಾವಿಡ ಬ್ರಾಹ್ಮಣರೂ, ಶಿವಬ್ರಾಹ್ಮಣರೂ ಕನ್ನಡ ತುಳು ಮಿಶ್ರಭಾಷೆಯನ್ನು ಆಡುತ್ತಲಿದ್ದಾರೆ. ರೋಮನ್ ಕೆಥೋಲಿಕರೂ ಕೊಂಕಣಿ ಭಾಷೆಯನ್ನು ಆಡುತ್ತಲಿದ್ದಾರೆ. ಪ್ರೊಟೆಸ್ಟಾಂಟರು ತುಳು ಭಾಷೆಯನ್ನು ಆಡುತ್ತಲಿದ್ದಾರೆ. ಕಂಚಿಗಾರರೂ, ರಾಮರಾಜ ಕ್ಷತ್ರಿಯರೂ ಕನ್ನಡ ಭಾಷೆಯನ್ನು ಆಡುತ್ತಲಿದ್ದಾರೆ. ಕನ್ನಡ ಕುಂಬಾರರೂ ತೆಲುಗು ಭಾಷೆಯನ್ನು ಆಡುತ್ತಾರೆ.

ಮೇಲಿನ ಎಲ್ಲಾ ಜನರು ಮಾತನಾಡುವ ಭಾಷೆಗಳಲ್ಲಿ ಕನ್ನಡ ಒಂದನ್ನು ಬಿಟ್ಟು ಉಳಿದ ಎಲ್ಲಾ ಭಾಷೆಗಳಿಗೆ ಅಕ್ಷರಮಾಲೆಯೂ ಇಲ್ಲ, ಗ್ರಂಥಗಳೂ ಇಲ್ಲ. ಆದುದರಿಂದ ಎಲ್ಲರೂ ಈ ದೇಶವನ್ನು ಸಾವಿರಾರು ವರುಷಗಳಿಂದ ಈ ತುಳು ದೇಶವನ್ನು ಆಳುತ್ತಿದ್ದ ಕನ್ನಡ ರಾಜರ ಭಾಷೆಯನ್ನೇ ಇಂಗ್ಲಿಷು ಭಾಷೆಯನ್ನು ಕಲಿತ ರೀತಿಯಲ್ಲಿಯೇ ಕಲಿಯುತ್ತಲಿದ್ದಾರೆ. ಹಲವು ವರುಷಗಳ ವರೆಗೆ ಶಾಲೆಗಳು ಪಟ್ಟಣಗಳಲ್ಲಿಯೇ ಸ್ಥಾಪಿಸಲ್ಪಟ್ಟಿರುವುದರಿಂದ ಕನ್ನಡ ಭಾಷೆಯು ಪಟ್ಟಣಗಳಲ್ಲಿ ಮಾತ್ರವೇ ಪ್ರಚಾರಕ್ಕೆ ಬಂದಿದೆ. ಹಳ್ಳಿಗಳಲ್ಲಿ ಇನ್ನೂ ಈ ಭಾಷೆಯು ಪ್ರಚಾರಕ್ಕೆ ಬರಲಿಲ್ಲ.

ಪಾಶ್ಚಿಮಾತ್ಯ ಜನರು ಈ ದೇಶಕ್ಕೆ ಕಾಲಿಟ್ಟು ಹಲವು ವರುಷಗಳಾದರೂ ನಾಗರೀಕತೆಯು ಅಷ್ಟು ಮುಂದರಿಸಲಿಲ್ಲ. ೧೯೦೫ರ ಬಂಗಾಳಿ ಸ್ವದೇಶಿ ಚಳವಳದ ನಂತರ ದೇಶೋದ್ಧಾರದ ಚಳವಳವು ಈ ದೇಶದಲ್ಲಿಯೂ ತಲೆದೋರಿತು. ಜಾತಿ ಮತ ಭೇದಗಳು ಮೂಲೆಗೆ ಒತ್ತಲ್ಪಟ್ಟು ಭಾರತ ವರ್ಷದ ಅಭಿವೃದ್ಧಿಯೇ ಎಲ್ಲರ ಮನಸ್ಸಿನಲ್ಲಿ ಮೂಡಿತು, ನಿದ್ರೆಯಿಂದ ಎಚ್ಚತ್ತರು. ಅಂದಿನಿಂದ ವಿದ್ಯೆ, ಕೈಗಾರಿಕೆ, ರಾಜಕೀಯ ಸಂಗತಿಗಳು, ಸಾಮಾಜಿಕ ಸಂಗತಿಗಳು ಅಭಿವೃದ್ಧಿಗೆ ಬಂದವು. ತುಳುದೇಶದ ಎಲ್ಲಾ ಭಾಗಗಳಲ್ಲಿಯೂ ನಾಡವರ ಸಂಘವು, ದ್ರಾವಿಡ ಬ್ರಾಹ್ಮಣರ ಸಂಘಗಳೂ, ಬಿಲ್ಲವರ ಸಮಾಜಗಳೂ, ಗಾಣಿಗರ ಸಂಘಗಳೂ, ಮೊಯಿಲಿಗರ ಸಂಘಗಳೂ, ಕುಂಬಾರರ ಸಂಘಗಳೂ, ರಾಮರಾಜ ಕ್ಷತ್ರಿಯರ ಸಂಘಗಳೂ ಇನ್ನೂ ಇತರ ಜಾತಿಯವರ ಸಂಘಗಳೂ ಸ್ಥಾಪಿಸಲ್ಪಟ್ಟು ಜನರೆಲ್ಲರೂ ಕಣ್ಣುತೆರೆದು ನೋಡಲಾರಂಭಿಸಿದರು.

ಹಲವು ಶಾಲೆಗಳು ಸ್ಥಾಪಿಸಲ್ಪಟ್ಟವು. ಈ ರೀತಿ ಮುಂದರಿಸುವಾಗ ಸಂಘಗಳ ಕಡೆಯವರು ಛಾಪಖಾನೆಗಳನ್ನು ಸ್ಥಾಪಿಸಿದರು. ಪ್ರೆಸ್ಸಿಗೊಂದರಂತೆ ವರ್ತಮಾನ ಪತ್ರಿಕೆಗಳು ಪ್ರಕಟಿಸಲ್ಪಟ್ಟವು. ಈಗ ತುಳುದೇಶದಲ್ಲಿ ಮಿಶನ್‌ಪ್ರೆಸ್ ಅವರದೊಂದು ಪತ್ರಿಕೆ, ಕೆನರಾ ಪ್ರೆಸ್ ಅವರದೊಂದು ನಾಡವರ ಸಂಘದ ನವಯುಗವೆಂಬ ಪತ್ರಿಕೆ, ಶಾರದಾ ಪ್ರೆಸ್ಸ್ ಇವರದೊಂದು ಸ್ವದೇಶಾಭಿಮಾನಿ ಪತ್ರಿಕೆ, ಕೊಡಿಯಾಲ್‌ಬೈಲ್ ಪ್ರೆಸ್ಸಿನ ಕೊಂಕಣ ದಿರ್ವೆ, ಸರಸ್ವತಿ ಪ್ರೆಸ್ಸಿನ ಕಂಠೀರವ ಪತ್ರಿಕೆ, ಕೊಹಿನೂರ್ ಪ್ರೆಸ್ಸಿನ ಮಂಗಳೂರು ಮೈಲ್, ಸದಾನಂದ ಪ್ರೆಸ್ಸಿನ ಸಹಕಾರಿ, ಇನ್ನು ಇತರ ಪ್ರೆಸ್ಸುಗಳಲ್ಲಿ ರಾಷ್ಟ್ರಬಂಧು, ಸತ್ಯಾಗ್ರಹಿ, ಕಾರ್ಕಳ ಮಾರುತಿ, ಶಕ್ತಿ, ಹರಿಹರದ ಕರ್ಣಾಟಕ ಕೇಸರಿ, ಇನ್ನು ಉದಯಭಾರತ, ಕೋಗಿಲೆ ಮುಂತಾದ ಹಲವು ಪತ್ರಿಕೆಗಳು ಇವೆ.

ಸದಾನಂದ ಪ್ರೆಸ್ಸಿನವರು ಬಾಲಸಾಹಿತ್ಯ ಮಂಡಲ ಸ್ಥಾಪಿಸಿ, ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಲಿರುವರು. ಶಾರದಾ ಪ್ರೆಸ್ಸಿನವರೂ ಹಲವು ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಲಿರುವರು. ಇವರಿಂದ ಸಾಹಿತ್ಯದ ವಿಷಯ ಶೋಧನೆಯು ನಡಿಯುತ್ತಲಿರುವದು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸವು ಪ್ರಕಟಿಸಲ್ಪಟ್ಟಿದೆ. ಇದರ ವಿಷಯ ಇನ್ನೂ ಶೋಧನೆಗಳು ನಡಿಯುತ್ತಲಿವೆ.

ಇನ್ನು ದೇಶವು ಅಭಿವೃದ್ಧಿಯಾಗಬೇಕಾದರೆ ಸಾರ್ವಜನಿಕ ಪುಸ್ತಕ ಭಂಡಾರಗಳು ಸ್ಥಾಪಿಸಲ್ಪಡಬೇಕು. ಹಲವು ವರುಷಗಳ ಹಿಂದೆ ಮೂಡಬಿದರೆ ಗುರುಬಸದಿಯ ಪುಸ್ತಕ ಭಂಡಾರ, ವಾರಂಗ ಪುಸ್ತಕ ಭಂಡಾರ, ಬಸರೂರು ಭುವನೇಂದ್ರ ತೀರ್ಥರ ಪುಸ್ತಕ ಭಂಡಾರ, ವೈಕುಂಠ ಭಕ್ತರ ಪುಸ್ತಕ ಭಂಡಾರ, ಕಾಸರಗೋಡು, ಉಡುಪಿ, ಪುತ್ತೂರು ತಾಲೂಕು ಬೋರ್ಡು ಪುಸ್ತಕ ಭಂಡಾರಗಳು ಸ್ಥಾಪಿಸಲ್ಪಟ್ಟಿವೆ. ಇವುಗಳಲ್ಲಿ ಬಹಳ ಅಮೂಲ್ಯವಾದ ಪುಸ್ತಕಗಳು ಅಚ್ಚಾಗದೆ ಹಾಗೆಯೇ ಉಳಿದಿವೆ.

ಇನ್ನು ದೇಶವು ಅಭಿವೃದ್ಧಿಯಾಗಬೇಕಾದರೆ ಪ್ರತಿ ಒಂದು ಹಳ್ಳಿಯಲ್ಲಿಯೂ ಒಂದೊಂದು ಪುಸ್ತಕ ಭಂಡಾರವು ಸ್ಥಾಪಿಸಲ್ಪಡಬೇಕು. ಇಲ್ಲವಾದರೆ ಹಳ್ಳಿಗಳು ಅಭಿವೃದ್ಧಿಯಾಗಲಾರವು. ರಾಜಕೀಯ ವಿಷಯಗಳಲ್ಲಿ ದೂರವಾಗಿಯೇ ಇರುವರು.

ಪುಸ್ತಕ ಭಂಡಾರ ಮತ್ತು ವಾಚನಾಲಯಗಳನ್ನು ಪ್ರತಿ ಶಾಲೆಗಳಲ್ಲಿಯೂ ಸ್ಥಾಪಿಸಬೇಕು. ಹಳ್ಳಿಯ ಜನರು ಅಲ್ಲಿಗೆ ಬಂದು ಓದುವಂತೆ ಉಪಾಯಗಳನ್ನು ಮಾಡಬೇಕು.

ಎಲ್ಲಾ ಜಾತಿಮತಗಳವರಿಗೆ ಬೇಕಾದ ಪತ್ರಗಳನ್ನೂ ಪುಸ್ತಕಗಳನ್ನೂ ಈ ಭಂಡಾರದಲ್ಲಿ ಇರಿಸುವಂತೆ ಅನುಕೂಲತೆಯಾಗಬೇಕು. ವಿದ್ಯಾವಂತರು ಹಳ್ಳಿಯವರನ್ನು ತಾತ್ಸಾರ ಮಾಡದೆ ಅವರ ಏಳಿಗೆಯನ್ನೇ ಚಿಂತಿಸುತ್ತಿರಬೇಕು. ಈ ರೀತಿ ಮುಂದರಿಸಿದರೆ ತುಳುದೇಶವು ಅಭಿವೃದ್ಧಿಯಾಗಿ ತೌಳವ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವುದು.

ಉಡುಪಿ:— ಇಲ್ಲಿಯ ತಾಲೂಕ ಬೋರ್ಡಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ... (Temporary) ... [illegible] ... (Point of order) ... [illegible] ... (Motion) ... [illegible]

[illegible]

ಕಾಸರಗೋಡು:— [illegible]

ಕಲ್ಲಡ್ಕ:— [illegible]

ಮೂಲ್ಕಿ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ... [illegible]

ಪತ್ರವ್ಯವಹಾರ.

[illegible]

ಹಳೆ ರೋಗಿಯೂ ಹೊಸ ವೈದ್ಯರೂ.

[illegible]

೭) ನಿಜವಾದ ವೈದ್ಯರೆಂದರೆ ಯಾರು? ಈ ಪರಿಷತ್ತುಗಳು ಈ ತನಕ ಯಾವ ಯಾವ ಸುಧಾರಣೆಗಳನ್ನು ಮಾಡಿರುತ್ತವೆ.

೮) ಆಯುರ್ವೇದದಲ್ಲಿ ಜನರಿಗೆ ನಂಬಿಕೆಯನ್ನು ಹುಟ್ಟಿಸುವ, ಇದರ ಪ್ರಚಾರವು ಹಬ್ಬುವ ಏರ್ಪಾಡುಗಳೇನು?

೯) ಪ್ರದರ್ಶನಗಳಲ್ಲಿ ಔಷಧಗಳ ಯೋಗ್ಯತೆಯಾಗುವುದೇ? ಅವುಗಳು ನಿಜವಾದ ಸಿದ್ಧೌಷಧಗಳೋ ಯಾ ಅಲ್ಲವೋ ಎಂಬದಾಗಿ ಆಸವ, ಅರಿಷ್ಟ, ಭಸ್ಮ, ರಸ, ಗುಟಿಕಾ ಅವಲೇಹಗಳ ನಿರ್ಣಯವನ್ನು ಉತ್ತಮ ಗುಣ, ಹೀನಗುಣಗಳ ತತ್ವಗಳನ್ನು ಕಂಡುಹಿಡಿಯುವ ಗುರಿಯೇನು?

೧೦) ಆಯುರ್ವೇದ ಚಿಕಿತ್ಸಕರಲ್ಲಿರುವ ದೋಷಗಳನ್ನು ನಿವಾರಿಸದೆ ಗುಣಗಳನ್ನು ವೃದ್ಧಿಸುವ ಬಗೆ ಹೇಗೆ?

೧೧) ನಮ್ಮ ದಕ್ಷಿಣ ಕನ್ನಡದಲ್ಲಿ ಪ್ರಧಾನವಾದ ಮಂಗಳೂರಿನಲ್ಲಿ ಶಾಸ್ತ್ರೀಯವಾದ ಸ್ವತಃ ತಯಾರಿಸಿದ ಸಿದ್ಧೌಷಧಗಳು ತಮ್ಮ ತಮ್ಮ ದವಾಖಾನೆಯಲ್ಲಿಯೇ ಆಗುವ ಔಷಧಾಲಯಗಳೂ ವೈದ್ಯರೂ ಎಷ್ಟು ಜನರಿರಬಹುದು?

೧೨) ಚಿಂತಾ ಮತ್ತು ಚಿತಾ ಇವೆರಡು ಶಬ್ದಗಳಲ್ಲಿ ಅಂಧ್ಯಾಕ್ಷರಗಳು ಒಂದೇಯಾಗಿದ್ದರೂ ನಡುವಿನ ಬಿಂದುವಿನಿಂದಲೇ ಅರ್ಥವು ಬೇರೆಯಾಗುವಂತೆ ಶಾಸ್ತ್ರ ಮತ್ತು ಶಸ್ತ್ರಗಳಲ್ಲಿಯೂ ದೀರ್ಘೋನತೆಯಾಗಿ— ಶಾಸ್ತ್ರಕ್ಕೆ ತಪ್ಪಿದ ಶಾಸ್ತ್ರಿಯೇ ಶಸ್ತ್ರಾಕರನಲ್ಲೇ? ಎಂಬೊಬ್ಬ ಕವಿಯ ಮಾತಿನಂತೆ ಆಯುರ್ವೇದ ಶಾಸ್ತ್ರಕ್ಕೆ ತಪ್ಪಿನಡೆಯುವ ವೈದ್ಯರಿಂದಲೇ ಆಯುರ್ವೇದಕ್ಕೆ ಹಾನಿಯುಂಟಾಗುವುದರಿಂದ ರೋಗಿಗಳು ದೌರ್ಭಾಗ್ಯರಾಗುವರಲ್ಲವೇ?

ಈ ವಿಷಯಗಳನ್ನು ನಮ್ಮ ಮಂಗಳೂರಿನಲ್ಲಿ ನೆರೆಯಲಿರುವ ಪರಿಷತ್ತು ಗಮನಿಸುವುದೇ?

ವೈದ್ಯ ಮಹಾಶಯರೇ ನಾನು ಮೇಲು ಅವನು ಕೀಳೆಂಬದನ್ನು ಬಿಡಿ - ಇದಕ್ಕೆ ಉತ್ತರ ಕೊಡಿ.

ಒಬ್ಬ ಹಳೆರೋಗಿ.

ಮೂಲಿಕೆಗೆ ಒಂದು ಹ್ಯಾಸ್ಕೂಲ್ ಮತ್ತು ಡಿಪ್ಯುಟಿ ತಹಶೀಲುದಾರರ ಖಚೇರಿ ಅಗತ್ಯವಿದೆ.

ಸಾಧಾರಣವಾಗಿ ಮಂಗಳೂರು ತಾಲೂಕಿನಲ್ಲಿರುವ ದೊಡ್ಡ ಊರುಗಳಲ್ಲಿ ಬಂಟವಾಳ ೧ನೇದು, ೨ನೇದು ಮೂಲಿಕೆ. ಬಂಟವಾಳವು ವ್ಯಾಪಾರದಲ್ಲಿ ದೊಡ್ಡದು, ಮೂಲಿಕೆಯು ಐಶ್ವರ್ಯವುಳ್ಳದ್ದು. ಮೂಲಿಕೆಯು—ಪುರಾತನ ಕಾಲದಲ್ಲಿ ಸಾವಂತರ ರಾಜಧಾನಿ, ದೊಡ್ಡ ವ್ಯಾಪಾರ ಸ್ಥಳ. ಪೋರ್ತುಗೀಸರ ಬಾಧೆಯನ್ನು ತಡೆಯಲಾರದೆ ಇಕ್ಕೇರಿ ವೆಂಕಟಪ್ಪ ನಾಯಕನು ಇಲ್ಲಿ ಕೋಟಿಕೇರಿಯಲ್ಲಿ ದೊಡ್ಡ ಕೋಟೆಯನ್ನು ಕಟ್ಟಿಸಿರುವನು. ಈಗ ಇದು ಮಿಶನ್ ಕಂಪೌಂಡಾಗಿದೆ ಮೂಲಿಕೆ ಸೀಮೆಯು ಪಾವಂಜೆ ಹೊಳೆಯಿಂದ ಮೂಲಿಕೆ ಹೊಳೆ ವರೆಗೆ ವಿಸ್ತರಿಸಿಕೊಂಡಿರುವ ೯ ಮಾಗಣೆಗಳಿಂದ ಕೂಡಿದೆ. ಜನಭರಿತವಾದ ಸೀಮೆ. ಗ್ರಾಮಗಳಲ್ಲಿ ದೊಡ್ಡ ದೊಡ್ಡ ಶ್ರೀಮಂತರಿರುವರು. ನಾಗರೀಕತೆಯಲ್ಲಿ ಪಾಶ್ಚಿಮಾತ್ಯ ಊರುಗಳಷ್ಟೇ ಮುಂದರಿಸಿಯದೆಂದು ಈ ಸಾರಿಯ ತಾಲೂಕು ಬೋರ್ಡು ಚುನಾವಣೆಯಿಂದ ತಿಳಿದುಬಂದದೆ. ಮತದಾರರು ಓಟು ಕೊಡುವುದು ಮಾತ್ರವಲ್ಲ, ಮೆಂಬರರೂ ಪ್ರೆಸಿಡೆಂಟರೂ ದೇಶಹಿತಕ್ಕಾಗಿ ಕೆಲಸ ಮಾಡುತ್ತಾರೋ ಅಥವಾ ತಮಗೆ ಮೆಂಬರಿಕೆ ಸಿಕ್ಕಿದ ಮೇಲೆ ಮನಬಂದಂತೆ ನಡೆಯುತ್ತಾರೋ ಎಂದು ಕಾಯುತ್ತಲೇ ಇದ್ದಾರೆ. ಇವರ ಕೆಲಸವನ್ನು ಪತ್ರಿಕೆಗಳಲ್ಲಿ ವಿಮರ್ಶೆಮಾಡುತ್ತಲೇ ಇದ್ದಾರೆ. ಮೆಂಬರರೂ ಪ್ರೆಸಿಡೆಂಟರೂ ಪತ್ರವ್ಯವಹಾರಗಳನ್ನು ಕಾಯುತ್ತಲಿದ್ದು ಅವುಗಳಿಗೆ ತಕ್ಕ ಉತ್ತರಗಳನ್ನು ಬರದು ಖಂಡಿಸುತ್ತಲೂ ಇದ್ದಾರೆ. ಇದರಿಂದ ಪಾಶ್ಚಿಮಾತ್ಯ ನಾಗರೀಕತೆಯು ಇಲ್ಲಿ ಪೂರ್ಣ ಹೆಜ್ಜೆ ಇಟ್ಟಿದೆ

ಆದರೆ ಈ ನಾಗರೀಕತೆಯು ಇನ್ನಷ್ಟು ಮುಂದರಿಸಬೇಕಾದರೆ ಇಲ್ಲಿಯ ಜನರಿಗೆ ವಿದ್ಯಾದಾನವನ್ನು ಕೊಡುವ ಒಂದು ಬೋರ್ಡ್ ಹ್ಯಾಸ್ಕೂಲ್ ಅಗತ್ಯವಾಗಿ ಇಡಬೇಕಾಗಿದೆ. ಬೋರ್ಡು ಹ್ಯಾಸ್ಕೂಲುಗಳು ಸಾರ್ವಜನಿಕ ಸಂಸ್ಥೆಗಳಾಗಿವೆ. ಅನ್ಯದೇಶದ ಮಿಶನೆಗಳು ಇಟ್ಟರೆ ಅದರಿಂದ ಯಾವ ಪ್ರಯೋಜನವೂ ಸಿಕ್ಕಲಾರದು. ಊರ ನಿವಾಸಿಕರಿಗೆ ಅಂಥಾ ಶಾಲೆಗಳ ಮೇಲೆ ಈಗಿನ ಕಾಲದಲ್ಲಿ ಯಾವ ತರದ ಪ್ರೀತಿಯೂ ಇರಲಿಕ್ಕಿಲ್ಲ. ಈಗ ಮುಂದಕ್ಕೆ ಕಲಿಯುವ ಹುಡುಗರೂ ಹುಡುಗಿಯರೂ, ಉಡುಪಿಗೂ ಮಂಗಳೂರಿಗೂ ಹೋಗಿ ಕಲಿಯುತ್ತಿದ್ದಾರೆ. ಇದಕ್ಕಾಗಿ ಬಹಳ ಹಣವೂ ಖರ್ಚಾಗುತ್ತಲಿದೆ. ಇಲ್ಲಿ ಹ್ಯಾಸ್ಕೂಲ್ ಇಟ್ಟರೆ ಮಕ್ಕಳು ಪರೀಕ್ಷೆಗಳಲ್ಲಿ ಸಿಕ್ಕುವುದರಲ್ಲಿ ಸಂದೇಹವಿಲ್ಲ. ಮಕ್ಕಳೂ ರಜಾದಿನಗಳಲ್ಲಿ ತಮ್ಮ ತಮ್ಮ ಮನೆಗಳಿಗೆ ವಾರಕ್ಕೊಂದಾವರ್ತಿ ಏನೂ ಖರ್ಚಿಲ್ಲದೆ ಹೋಗಿ ಬರಬಹುದು. ಮಕ್ಕಳ ಸೌಖ್ಯಕ್ಕೂ ಅನುಕೂಲ, ಸಮುದ್ರದ ಗಾಳಿಯದೆ. ಇಲ್ಲಿ ಒಂದು ಹ್ಯಾಸ್ಕೂಲ್ ಇಡದೆ ಇದ್ದರೆ ರುಂಡಯಿಲ್ಲದ ಮುಂಡದಂತೆ ಆಗುವುದು. ಆದುದರಿಂದ ಡಿಸ್ಟ್ರಿಕ್ಟ ಬೋರ್ಡಿನವನು ಬರುವ ಜೂನ್ ತಿಂಗಳಲ್ಲಿಯೇ ಹ್ಯಾಸ್ಕೂಲನ್ನು ತೆರೆದರೆ ಉತ್ತಮವಿತ್ತು.

ಮೂಲಿಕೆ ಊರು ಮಂಗಳೂರಿನಿಂದ ೧೮ ಮೈಲು ದೂರವಿದೆ. ಸುತ್ತಮುತ್ತಲಿನ ಹಳ್ಳಿಗಳು ಮತ್ತೂ ದೂರವಿವೆ. ಇಲ್ಲಿಯ ಕ್ರಿಮಿನಲ್ ಸಂಬಂಧಗಳಿಗಾಗಿ ಜನರು ಮಂಗಳೂರಿಗೆ ಓಡಬೇಕಾಗುತ್ತದೆ. ಮಂಗಳೂರಲ್ಲಿ ಕ್ರಿಮಿನಲ್ ಕೋರ್ಟುಗಳು ಅನೇಕ ಇವೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಖಚೇರಿ ಇದೆ, ಡಿವಿಜನಲ್ ಮೆಜಿಸ್ಟ್ರೇಟರ ಖಚೇರಿ ಇದೆ, ಫಸ್ಟ ಕ್ಲಾಸ್ ಬೆಂಚ್‌ಕೋರ್ಟು ಇದೆ, ಸ್ಟೇಶನರಿ ಮೆಜಿಸ್ಟ್ರೇಟರ ಖಚೇರಿ ಇದೆ, ಟೌನ್ ಡಿಪ್ಯುಟಿ ತಹಶೀಲದಾರರ ಖಚೇರಿ ಇದೆ. ಸೆಕೆಂಡ್ ಕ್ಲಾಸ್ ಬೆಂಚ್ ಕೋರ್ಟು ಇದೆ. ಇಷ್ಟು ಖಚೇರಿಯನ್ನು ಮಂಗಳೂರಲ್ಲಿ ಇಟ್ಟು ಮೂಲಿಕೆ ಸೀಮೆಯ ಜನರನ್ನು ಕಷ್ಟದಲ್ಲಿ ಮುಳುಗಿಸಿ ಏನೊಂದೂ ಪ್ರಯೋಜನವಿಲ್ಲ.

ಈ ಮೊದಲು ಒಂದು ಸಾರಿ ಟೌನ್ ಡಿಪ್ಯುಟಿ ತಹಶೀಲದಾರರ ಖಚೇರಿಯನ್ನು ಈ ಊರಿನಲ್ಲಿ ವರ್ಗಾಯಿಸಿದ್ದರು. ಜನರಿಗೆ ಸ್ವಲ್ಪ ಸುಖ ಸಿಕ್ಕಿತು. ತಿರಗಿ ಖಚೇರಿಗೆ ವರ್ಗವಾಯಿತು. ಆದ್ದರಿಂದ ಮಂಗಳೂರು ಟೌನ್ ಡಿಪ್ಯುಟಿ ತಹಶೀಲದಾರರ ಖಚೇರಿಯನ್ನು ಮೂಲಿಕೆಗೆ ನೈಯುವುದು ಒಳ್ಳೇದು. ಕಟ್ಟೋಣವು ಬಾಡಿಗೆಗೆ ಸಿಕ್ಕೀತು. ಖಚೇರಿಯನ್ನು ಇಲ್ಲಿ ತೆರೆದರೆ ಊರು ಬಹಳ ಅಭಿವೃದ್ಧಿಯಾದೀತು. ಜೈಲನ್ನು ಮಂಗಳೂರಿನಲ್ಲಿಟ್ಟರೆ ಸಾಕು.

"ನಿವಾಸಿಕ"

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಧ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸಕರಿಗೆ "ಅರ್ಶಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಶರಾಪು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಕಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ- ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನೆಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangulore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲಸ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ದೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೬೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೩೬ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಡಿಪೊಗೆ ಮಾತ್ರ.

ಹಿಂದೂಸ್ಥಾನದ
ಸ್ತ್ರೀಯರಿಗೆ

ಹೆಚ್ಚಿನ ಆರೋಗ್ಯ

ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿನ ಸ್ತ್ರೀಯರಿಗೆ ಫೆಲೂನಾ ಮಾತ್ರೆ ಹೆಂಗಸರಿಗೆ ಮಾತ್ರ ಇವುಗಳು ದೊರಕುವಂತೆ ವಿಲೇವಾರಿಯು ಈಗ [illegible] ಉಪಯೋಗಕ್ಕೆ ತರಲ್ಪಟ್ಟಿವೆಯೊ, ಅಲ್ಲಿ ಅವುಗಳ ಫಲಕಾರಿತೆಯು ತಕ್ಷಣವೇ ಕಂಡುಬಂದಿದೆ. [illegible] ಈ ಔಷಧಿಯನ್ನು ಮುಟ್ಟುದೋಷಗಳನ್ನು ನಿವಾರಿಸಿ, ಹೊಸದಾದ ಉತ್ತಮ ರಕ್ತವನ್ನು ಹುಟ್ಟಿಸಿ, [illegible] ಶಕ್ತಿಯನ್ನೂ ಕೊಡುವ, ಇತ್ತೀಚೆಗಿನ ಅತ್ಯಂತ ಮಹತ್ವದ ವೈದ್ಯಕೀಯ ಶೋಧವಾಗಿ [illegible] ದೊರಕಲಾಗುವಂತೆ, ಅದರ ಬೆಲೆಯೂ ಕಡಿಮೆಯಾಗಿ ನಿಶ್ಚಯಿಸಲ್ಪಟ್ಟಿರುವುದು.

ಇಷ್ಟು ವರ್ಷಗಳಿಗೆ [illegible] ಶಕ್ತಿಹೀನತೆ ಮತ್ತು ರೋಗಗಳ ವಿಷಯವಾಗಿ [illegible] ರೋಗಗಳ ಚಿಕಿತ್ಸೆಯಲ್ಲಿ ಸಾಮಾನ್ಯ ಔಷಧಗಳು [illegible] ವಾಗಿ ಕಂಡುಬಂದಿತು. ಸ್ತ್ರೀಯರ ಗರ್ಭಕೋಶ ಮತ್ತು [illegible] ಅವಯವಗಳಲ್ಲಿ [illegible] ವನ್ನು ತೆಗೆದು, ಅವುಗಳ ರೋಗವನ್ನು ಗುಣಪಡಿಸಿ [illegible] ಮಾಡುವಂತೆ ಮಾಡಿ, ಶಕ್ತಿಕಾರಕ ಪರಿಣಾಮವನ್ನುಂಟುಮಾಡುವ [illegible] ಒಂದರಲ್ಲಿಯೇ ಕೂಡಿರುವ ಒಂದು ಔಷಧಿಯನ್ನು [illegible] ಸಿದವು. ಹಲವು ಔಷಧಿಗಳನ್ನು ತಯಾರಿಸಿ ಪ್ರಯೋಗಿಸಿದೆವು. [illegible] ಗಳು ತೃಪ್ತಿಕರವಾದ ರೀತಿಯಲ್ಲಿ ಫಲಕಾರಿಯಾಗಲಿಲ್ಲ. [illegible] ತಿಂಗಳುಗಳ ವರೆಗೆ ಮುಂದರಿಸಲ್ಪಟ್ಟು ಪುನಃ ಪುನಃ ಪ್ರಯೋಗಗಳು ನಡೆಸಲ್ಪಟ್ಟವು. ಸಿಕ್ಕಿದ ಫಲಗಳು ಜಾಗ್ರತೆಯಿಂದ ಬರೆಯಲ್ಪಟ್ಟು, [illegible] ನಮ್ಮ ಪ್ರಯತ್ನಗಳು ವಿಜಯಯುತವಾದುವು. ಸಾವಿರಾರು ಹೆಂಗಸರು [illegible] ಜೀವನದಲ್ಲಿಯೂ ಮನೆಗಳಲ್ಲಿಯೂ ಆರೋಗ್ಯವನ್ನು ಸುಖವನ್ನು [illegible] ಫೆಲೂನಾ ಮಾತ್ರೆಗಳು ಸ್ತ್ರೀಯರಿಗೆ ಮಾತ್ರ ಎಂಬ ಔಷಧಿಯನ್ನು ತಯಾರಿಸಿರುವೆವು.

ಫೆಲೂನಾ ಮಾತ್ರೆಗಳ ಸೇವನೆಯಿಂದ, ರಜಸ್ವಲೆಯಾಗಲಿರುವ ಹುಡುಗಿಯರಿಗೆ [illegible] ಅವರಿಗೆ ಈ ಶಕ್ತಿಕಾರಕ ಔಷಧದ ರಕ್ತವನ್ನು ಹೆಚ್ಚಿಸುವ [illegible] ಉಂಟುಮಾಡುವ ಸಹಾಯವು ಅಗತ್ಯವಿದೆ. ಫೆಲೂನಾ ಮಾತ್ರೆಗಳಲ್ಲಿ [illegible] ಬಹುದಾದ ರೂಪದಲ್ಲಿ ಕಬ್ಬಿಣವಿದೆ. ಮೈಯಲ್ಲಿ ರಕ್ತವಿಲ್ಲದ [illegible] ಫೆಲೂನಾ ಮಾತ್ರೆಗಳ ಸೇವನೆಯ ನಂತರ ತನ್ನ ಮುಖದಲ್ಲಿ ಬೀರಿಬರುವ [illegible] ಫೆಲೂನಾ ಮಾತ್ರೆಗಳ ರಕ್ತರಚನೆಯ ಶಕ್ತಿಯು ರಕ್ತವನ್ನು ಅಭಿವೃದ್ಧಿ [illegible] ತೋರಿಸಿಕೊಳ್ಳುವಳು. ಪ್ರಾಯಶಃ, ಪ್ರಸವ ಸಮಯ [illegible] ಅಲಕ್ಷ್ಯದಿಂದ ಉಂಟಾದ ನೋವುಗಳಿಂದ ಜೀವನದಲ್ಲಿ ಬೇಸರಿಕೆ [illegible] ಉಂಟಾದವರಾಗಿ, ಗೃಹಕರ್ತವ್ಯಗಳೂ ಸಂಸಾರದ ತಾಪತ್ರಯ [illegible] ಹೊರೆಯಾಗಿ ಕಾಣುವ ಹೆಂಡಂದಿರೂ ತಾಯಂದಿರೂ ಫೆಲೂನಾ [illegible] ಶಕ್ತಿಕಾರಕ ಅನುಭವವನ್ನು ಪಡೆಯುವರು. ಮತ್ತು ಪ್ರಾಯ ಹೆಚ್ಚಿ [illegible] ಜೀವನ ಪರಿವರ್ತನೆ [illegible] ಸಮಯ ಬರುವಾಗ, ಈ ಸಮಯದಲ್ಲಿ ಸರ್ವಸಾಮಾನ್ಯವಾಗಿ ಉಂಟಾಗುವ ಮೈಬೆವರುವಿಕೆ, ತಲೆತಿರುಗುವಿಕೆ, ಸ್ಮೃತಿ ತಪ್ಪುವಿಕೆ ಮತ್ತು ಇತರ [illegible] ಫೆಲೂನಾ ಮಾತ್ರೆಗಳನ್ನು ವಿರಾಮಕರವೂ ಪ್ರಶಾಂತವೂ ಆದ ಆರೋಗ್ಯಕರ [illegible] ಉಪಯೋಗಿಸಿದ್ದಲ್ಲಿ ಖಂಡಿತವಾಗಿ ತಲೆದೋರಲಾರವು.

ಫೆಲೂನಾ ಮಾತ್ರೆಗಳು

ಶುಚಿಮಾಡುವುದು, ಗುಣಮಾಡುವುದು, ರೋಗನಿವಾರಣೆ ಮಾಡುವುದು, [illegible] ಸರಿಯಾದ ಕ್ರಮಕ್ಕೆ ತರುವುದು.

ಅಶಕ್ತಿ	ಪಂಡಿವಾತ
ಮಲಬದ್ಧತೆ	ಸೊಂಟ ನೋವು
ಧಾತುನಷ್ಟ	ದೌರ್ಬಲ್ಯ
ರಕ್ತಹೀನತೆ	ಕೈಕಾಲು ನೋವು
ತುರಿಸುವಿಕೆ	ಉತ್ಸಾಹಹೀನತೆ
ಅಶುದ್ಧರಕ್ತ	ಅರಸಿನ ಮುಖಛಾಯೆ
ತಲೆ ತಿರುಗ ವಿಕೆ	ಹೊಲಸು ಉಸಿರು
ಮೂರ್ಛೆಹೋಗುವಿಕೆ	ತಲೆನೋವು
ದೃಷ್ಟಿಗೆಡುವಿಕೆ	ಬೆನ್ನು ನೋವು
ಚುಚ್ಚುವ ಬೇನೆ	ಅಂಗಾಯಾಸ
ಅಜೀರ್ಣ	ಮುಟ್ಟಿನ ಅಕ್ರಮಗಳು
ಕಣ್ಣುಗಳ ಜಡತ್ವ	ಮುದ್ದತ

ಈ ಮೇಲಿನ ರೋಗಗಳಲ್ಲಿ ಯಾವುದಾದರೂ ನಿಮಗೆ ಬಾಧಿಸುವುದಾದರೆ, ಫೆಲೂನಾ ಮಾತ್ರೆಗಳು ಕಾರಣವನ್ನು ಹುಡುಕಿ, ವಿಷವನ್ನು ನಿವಾರಿಸಿ, ಸ್ನಾಯುಗಳನ್ನು ಘಟ್ಟಿಪಡಿಸಿ, ಆರೋಗ್ಯ ಕ್ರಮವನ್ನು ಭದ್ರಪಡಿಸಿ, ಅವಯವಗಳನ್ನು ಬಲಮಾಡಿ, ಹೊಸ ತೇಜಸ್ಸೀ ರಕ್ತವನ್ನು ಕೊಟ್ಟು ಜೀವನವೆಂದರೊಂದು ಆನಂದದ ಅನುಭೂತಿಯಾಗಿ ಮಾಡುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ—ಇವುಗಳು ನೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ, ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲೆಲ್ಲಿಯೂ ದೊರಕುವುವು.

ಹೆಚ್ಚಿನ ಮಾಹಿತಿಗಾಗಿ ಕಾಗದಗಳನ್ನು ವಿ. ಪಿ. ಮೂಲಕ ಕಳುಹಿಸಲಿಕ್ಕೆ ಆರ್ಡರುಗಳನ್ನು

ಮೆಸ್ಸರ್ಸ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

(ಪೋಸ್ಟ ಆಫೀಸು ಬೊಕ್ಸ 838) ಅಥವಾ ಕಲ್ಕತ್ತಾ (ಪೋಸ್ಟ ಆಫೀಸು ಬೊಕ್ಸ 620)

ಇವರ ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು.

Product of Graham Remedies Ltd, Cape Town, South Africa. 93

Edited Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ ೨—೦—೦. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೨. ಮಂಗಳೂರು, ತಾ. ೧೧ನೇ ಶುಕ್ರವಾರ ಮೇ ೧೯೨೮. ಸಂಚಿಕೆ ೧೯

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid-up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ಬೇಂಕಿನ ಹೆಡ್ಡ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ಬಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ವೇದನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರಕುತ್ತದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಅಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ, ಕಜ್ಜಿ, ತುರಿಕೆ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಕುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.
249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

...rations Cover All Your Needs.
...MERIT HAS MADE FAMOUS.
...ಸಿದ್ಧವಾದ ಬಾಟ್ಲಿವಾಲಾ ಇವರ
...ದ್ಧ ಔಷಧಗಳು.
...ಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
...ರಾಣ. ರೂ. ೧.
... ಪುಷ್ಟಿ ಕೊಡುವ ಔಷಧ ಆಣೆ ೧೩.
...ತ, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
...—೦. ರೂ. ೧—೪—೦. ೧—೧೨—೦.
...—೦
...—೦. LIBERAL DISCOUNT TO TRADE
...PUR, BOMBAY.
...ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...Road, P. O. Cadell Road, Bombay. No. 14.

...ರ ಲೋಧ್ರ
...ರೋಗನಿವಾರಿಣಿ.
...ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...ವಾಗಿ ಹೊಗಳುತ್ತಿರುವರು.
...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ
... ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ...ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ವಾಗಿ ಗುಣವಾಗುವುವು.
...ವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

...ಸರೀ ಕುಟೀರಂ,
... P. B: 752. ಎಗ್ಮೋರು, ಮದರಾಸು.
...ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
... ಹಂಪನಕಟ್ಟಾ, ಮಂಗಳೂರು.



...ಟೇಬಲ್ ಟೈಂಪೀಸ್ ಇನಾಂ.
...ರೆಕ್ಸ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

...ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ... ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ...) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನ ...ವು. ಮತ್ತು ಖರಾರು ಗಂಟೆಯನ್ನೂ ತೋರಿಸುವವು. ...ದಾರರಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ...ದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ ...ವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟ್ಯಾಂಪೀಸ್ ...ವಾಗಿ ಕೊಡುವೆವು. ಗಡಿಯಾರವನ್ನು ತರಿಸಿಕೊಳ್ಳು... ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.
...ಇನಾಂ ಟೇಬಲ್ ಟ್ಯಾಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.
...ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋಸ್ಟ್ ಬಾಕ್ಸ್ ನಂ. 165, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ವೈಶಾಖ ಬ॥ ೭ರಿಂದ ಶನಿವಾರದಿಂದ ವಿಭವ ಸಂ॥ರದ ವೈಶಾಖ ಬ॥ ೧೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ವೃಷಭ (ದೇಶ)

ತಾರೀಖು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರಮಾನ	ಸೂರ್ಯ ಉ	ಸೂರ್ಯ ಅಸ್ತ
12	ಶನಿ	೭	೧೧.೩೧	ಶ್ರವಣ	೧೫.೨	೩೦	6. 8	6.46
13	ರವಿ	೮	೯. ೪೪	ಧನಿಷ್ಠಾ	೧೪.೫೯.	೩೧	6. 8	6.46
14	ಸೋಮ	೯	೭. ೨	ಶತಭಿಷಾ	೧೩.೪೬	೧	6. 8	6.46
15	ಕುಜ	೧೦	೩ ೧೪	ಪೂ. ಭಾ.	೧೧.೪೪	೨	6. 8	6.46
16	ಬುಧ	೧೨	೫೩. ೧	ಉ. ಭಾ.	೮.೪೬	೩	6. 7	6.47
17	ಗುರು	೧೩	೪೭.೧೬	ರೇವತೀ	೫. ೩೨	೪	6. 7	6.47
18	ಶುಕ್ರ	೧೪	೪೧.೧೪	ಅಶ್ವಿನೀ	೧. ೪೫	೫	6. 7	6.47

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
4	92— 9	81— 8	—	0-1-0
5	93 4	80— 8	—	—
6	92— 3	80— 9	—	0-0-4
7	91— 8	82— 1	—	—
8	92— 3	81— 2	—	—
9	92— 3	82— 8	—	—
10	92— 3	81— 5	—	—
				138-15

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕಿ		7- 8	8— 2
ಹೊಸ ಗುಡ್ಡು	...	6—10	7— 2
ಸಗ್ಗಿ	...	6— 4	6- 15
ಹೊಸ ರಾಶಿ	...	6— 1	6— 8
ಊರ ಅವ್ವಲ್ ಬೆಳ್ತಿಗೆ	...	7— 4	8— 4
ರಂಗೂನು ಬೆಳ್ತಿಗೆ ಗೋಣಿ ೧	...	12—10	13— 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	6— 0	7— 4
ಗೋದಿ ಗೋಣಿ ೧ಕ್ಕೆ	...	16— 8	18— 8
ಹುರುಳಿಗೋಣಿ ೧ಕ್ಕೆ	...	8—14	10— 8
ಕಡಲೆಗೋಣಿ ೧ಕ್ಕೆ	...	11—. 8	12— 8
ತೊಗರಿಗೋಣಿ ೧ಕ್ಕೆ	...	14— 0	14— 8
ತೊಗರಿಬೇಳೆ ಗೋಣಿ ೧ಕ್ಕೆ	...	18— 8	27— 0
ಉದ್ದು ಗೋಣಿ ೧ಕ್ಕೆ	...	13— 8	14— 0
ಹೆಸರುಗೋಣಿ ೧ಕ್ಕೆ	...	12— 0	14 - 8
ಊರು ಬೆಲ್ಲ ಖಂಡಿ ೧ಕ್ಕೆ	...	50— 0	60— 0
ಉಪ್ಪು ಗೋಣಿ ೧ಕ್ಕೆ	...	4—10	5— 4
ಕೊಬ್ಬರಿ ಖಂಡಿ ೧ಕ್ಕೆ	...	130- 0	-
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	...	40— 0	40— 8
ಎಳ್ಳಿಂಡಿ ಖಂಡಿ ೧ಕ್ಕೆ	...	37— 8	46— 4
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	...	8— 2	9— 2
ಎಳ್ಳೆಣ್ಣೆ ಮುಡಿ ೧ಕ್ಕೆ	...	8— 0	8— 4
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ		7— 2	8 0
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	4— 8	4 - 9
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	6—10	6 12
ಸಾಸಿವೆ ಮುಡಿ ೧ಕ್ಕೆ	...	8— 0	8 - 2
ಕೊತ್ತುಂಬರಿ ಮುಡಿ ೧ಕ್ಕೆ	...	6— 8	7— 4
ಕಾಫಿ ಖಂಡಿ ೧ಕ್ಕೆ	...	365-.0	400-- 0
ಬೆಳೆಗೋಟು ಅಡಿಕೆ ಖಂಡಿ ೧ಕ್ಕೆ	...	170- 0	210-- 0
ಕಾಳುಮೆಣಸು ಖಂಡಿ ೧ಕ್ಕೆ	...	510- 0	515-
ಯಾಲಕ್ಕಿ ಮಣ ೧ಕ್ಕೆ ೧	...	65— 0	80— 0
ಗೇರುಬೀಜ ಮುಡಿ ೧ಕ್ಕೆ	...	3—12	3—13
ಚಕ್ಕೆ ಖಂಡಿ ೧ಕ್ಕೆ	...	37— 8	40— 0
ತಾಂಬ್ರ ತಗಡು ಮಣ ೧ಕ್ಕೆ	...	15- 0	16— 8
ತಾಂಬ್ರ ಪಾತ್ರಗಳು ಮಣ ೧ಕ್ಕೆ		20— 0	21 -
ಚೀನಿ ಬೆಳ್ಳಿ ಸೇರು ೧ಕ್ಕೆ	...	15— 0	-
ಹಿತ್ತಾಳೆ ತಗಡು ಮಣ ೧ಕ್ಕೆ	...	15— 0	16— 8
ಪವನು		13— 8	13.10-6

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ಪಡಪೆ!

ಆಭರಣಗಳನ್ನು ತಯಾರುಮಾಡುವವರು.

ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು
ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು
ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮೀ, ಸರಸ್ವತಿ ವಿಗ್ರಹಗಳು ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಧಾವಣೆ ವಗೈರೆಗೆ ಬರೆಯಿರಿ. ಕೊಡಲ್ಪಡುತ್ತವೆ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
ಅವಿನ್ಯೂ ರೋಡು, ಬೆಂಗಳೂರು ಸಿಟಿ.

(6—5)

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಭೃಹ್ಮ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾತ್' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷದಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೂ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes
of India's Masses
For Particulars pply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೇಜಂಟ್ರಾಗಿ, ಯಾಂಟ್ವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28 ಮಂಗಳೂರು.

ಡೈರೆಕ್ಟರ್ ಓಫ್ ಸರ್ವೆ ಮತ್ತು ಅವರ ಶಿಬಂದಿ.

— ಇವರ ಮುಖ್ಯ ಸಹಾಯಕ ಅಧೀಸರರು ಕಳೆದ ತಾರೀಕು ೨-೩ರಲ್ಲಿ ತಲ್ಪಾಡಿ ಕೋಟೆಕಾರ್ ಗ್ರಾಮಗಳನ್ನು ಸಂದರ್ಶಿಸಿದಲ್ಲಿ ಅವರಿಗೆ ಮಾವರಿ ಸಂಕಷ್ಟಗಳನ್ನು ಭೂಮಾಲೀಕರ ಸಂಘದ ಪರವಾಗಿ ಕಾಣಿಸಲಾಯಿತು. ಮತ್ತು ಸರಕಾರಕ್ಕೆ ಹೋಗುವ ಮೆಮೋರಿಯಲ್ ಅರ್ಜಿ ನಕಲು ಕೂಡ ಅವರ ವಶಕ್ಕೆ ಕೊಡಲ್ಪಟ್ಟಿತು. ಕಟ್ಟುಪುಣಿಗಳನ್ನೂ ಪರಂಬೋಕಿಗೆ ಸೇರಿಸಿದ ಕಾರಣ ಅನ್ಯಾಯವೆಂತ ಒಪ್ಪಿಕೊಂಡರು. ತಾವು ರೂಲು ಪ್ರಕಾರ ಮಾಡಿದ್ದೇವೆಂದು ಸಾಧಿಸಿದರೂ, ಈ ರೂಲುಗಳು ಇತರ ಜಿಲ್ಲೆಯ ಭೂಸ್ಥಿತಿಗೆ ಸರಿಯಾಗಿ ಮಾಡಿದ್ದರಿಂದ, ಈ ಜಿಲ್ಲೆಯ ಸ್ಥಿತಿಗೆ ಮಾರ್ಪಡಿಸುವದು ಅಗತ್ಯವೆಂದು ಒಪ್ಪಿಕೊಂಡರು. ಮತ್ತು ಈ ವಿಷಯ ಸರಕಾರಕ್ಕೆ ತಾನು ಬರೆಯುವೆನೆಂದು ಹೇಳಿದರು. ಈಗ ವಸೂಲಾಗುವ ಕುತ್ತಿಕಾಣಿಕೆ, ಗತ ಶೀರ್ವೆ, ಈ ರೀಸರ್ವೆಯಿಂದ ಹೊರಟದರಿಂದ ಸಟ್ಟಮೆಂಟು ಇಲಾಖೆಯವರು ವಸೂಲು ಮಾಡುವುದಾದರೂ ರೀಸರ್ವೆಯಿಂದಲೇ ಹೊರಟದ್ದರಿಂದ ಇವುಗಳಿಂದ ಬಂದ ಕಷ್ಟಗಳನ್ನು ಒಪ್ಪಬೇಕಾಯಿತು. ಜೊತೆಪಟ್ಟಿಗಳನ್ನು ಪ್ರತ್ಯೇಕ ಪಡಿಸುವ ವಿಷಯ ತಮ್ಮ ಶಿಬಂದಿಗಳನ್ನು ಮೂರು ನಾಲ್ಕು ಗ್ರಾಮಗಳಲ್ಲಿ ನಡುವೆ ಮೊಕ್ಕಾಮು ಮಾಡಿ ಗಡಿಗಳು, ಯಾ ಅನುಭೋಗದ ಚಿಹ್ನೆಗಳು ರೈತರು ವಿಂಗಡಿಸಿದ್ದಲ್ಲಿ ತಾವು ಪ್ರತ್ಯೇಕ ಡಿವಿಜನ್ ಮಾಡುವವೆಂದು ಒಪ್ಪಿದರು. ರೂಲಿಗೆ ವಿರೋಧವಾಗಿ ಪ್ರತ್ಯೇಕಿಸಬೇಕಾದಲ್ಲಿ ಜೊತೆಯನ್ನು ಮಾಡಿಸಿದ್ದೂ, ಜೊತೆ ಮಾಡಬೇಕಾಗಿದ್ದಲ್ಲಿ ಪ್ರತ್ಯೇಕಿಸಿದ್ದೂ ಮುಂತಾದ ಸರ್ವೆ ತಪ್ಪುಗಳು ತೋರಿಸಲ್ಪಟ್ಟವು. ಮತ್ತು ಅನಾವಶ್ಯಕವಾಗಿ ಗೋಡೆ ಹೊರಗೆ ಇದ್ದ ಕಲ್ಲುಗಳನ್ನು ಒಳಗೆ ಹಾಕಿದ್ದ ಅನೇಕ ನಿದರ್ಶನಗಳನ್ನು ಕಾಣಿಸಲಾದವು. ಇವುಗಳ ವಿಷಯ ಅಪೀಲು ಕೊಟ್ಟಲ್ಲಿ ತಾವು ದುರುಸ್ತಿಪಡಿಸುವೆವೆಂತ ಸೂಚಿಸಿದರು. ಪಟ್ಟಿ ಸ್ಥಳವನ್ನು ಒಂದು ಎಕ್ರೆ ಮಟ್ಟಿಗೆ ಕಳೆದ ಸರ್ವೆ ತಪ್ಪಿನಿಂದ ಈಗಲೂ ಡಬ್ಬಲ್ ತಪ್ಪು ಮಾಡಿದ ಸರ್ವೇ ಉದಾಹರಣೆಗಳನ್ನು ಸ್ಥಳ ಪರೀಕ್ಷೆಯಿಂದ ಸಂಘದವರು ತೋರಿಸಿದರು.

ಮರುದಿವಸ ಜಿಲ್ಲಾ ಅಭಿವೃದ್ಧಿ ಸಂಘದ ಪರವಾಗಿ ಕೂಡ ತಿರುವೈಲ್ ಗ್ರಾಮಕ್ಕೆ ಇವರೆಲ್ಲರೂ ಹೋಗಿ ಇಲಾಖೆಯವರು ಈಗಿನ ರಿಸರ್ವೆ ಭೂಸ್ಥಿತಿಗೆ ಸರಿಯೆಂತ ವಾದಿಸಿದರು. ಆದರೆ ಮುಂಚಿನ ಹಳೆ ಕಲ್ಲುಗಳನ್ನು ಕಿತ್ತು ತೆಗೆದದ್ದರಿಂದ ಕಳೆದ ಸರ್ವೆ ಪೂರಾ ತಪ್ಪೆಂತ ಸಾಬೀತಪಡಿಸಲು ಆಗಲಿಲ್ಲ. ದೃಷ್ಟಾಂತರೂಪವಾಗಿ ರಿಸರ್ವೆ ಆಗದ ಒಂದು ಗ್ರಾಮದ ಅಂಶವನ್ನು ರಿಸರ್ವೆ ಮಾಡಿ ಹಳೇ ಕಲ್ಲುಗಳನ್ನು ಕೀಳದೆ ಪ್ರದರ್ಶನೆಮಾಡಿದ್ದಲ್ಲಿ ರಿಸರ್ವೆ ಪ್ರಯೋಜನಕರವುಂಟೆಂತ ಒಪ್ಪಬಹುದು. ಆದರೆ ರಿಸರ್ವೆಯು ಶಾಸ್ತ್ರ ರೀತಿಗೆ ಸರಿಯಿರಬಹುದಾದರೂ ರೈತರ ಭೂಹಕ್ಕುಗಳನ್ನು ಹೆಚ್ಚಾಗಿ ನಾಶಪಡಿಸುವದರಿಂದ ಭೂಮಾಲಿಕರ ಸಂಘದವರು ರೈತರ ಪರವಾಗಿ ತಮಗೆ ರಿಸರ್ವೆ ಅಗತ್ಯವಿಲ್ಲವೆಂದು ಸೂಚಿಸಿದರು. ರೈತರು ಒಮ್ಮನಸ್ಸಿನಿಂದ ತಮಗೆ ರಿಸರ್ವೆ ಒಳ್ಳೇದಾಗಬಹುದಾದರೂ ಕೂಡ ಅಗತ್ಯವಿಲ್ಲವೆಂದು ಸೂಚಿಸಿದರೆ ತಾವು ಒತ್ತಾಯಪಡಿಸುವದಿಲ್ಲವೆಂದು ಇಲಾಖೆಯವರು ಸೂಚಿಸಿರುತ್ತಾರೆ. ಆದ್ದರಿಂದ ರೈತರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ಅಲ್ಲಲ್ಲಿ ಸಭೆಗಳನ್ನು ಮಾಡಿ ಏರ್ಪಡಿಸಿ ಇವುಗಳ ಮುಖಾಂತರ ಜಿಲ್ಲಾ ಭೂಮಾಲಿಕರ ಸಂಘದ ಮುಖಾಂತರ ಸರಕಾರಕ್ಕೆ ಸೂಚಿಸುವದು ಅಗತ್ಯವೆಂತ ಕಾರ್ಯದರ್ಶಿಗಳು ತಿಳಿಸಿರುತ್ತಾರೆ. ಈ ಎರಡೂ ಸಂಘದ ಪರವಾಗಿ ಕೋಟೆಕಾರಿನಲ್ಲಿ ಕಾರಾಂತರು, ಕಮನಾಡರು ಮತ್ತು ಕಾರ್ಯದರ್ಶಿ ಶಂಕರನಾರಾಯಣರಾಯರು ತಿರುವೈಲಿನಲ್ಲಿ ಅಭಿವೃದ್ಧಿ ಸಂಘದ ಪರವಾಗಿ ಕಾರ್ಯದರ್ಶಿ ರಂಗನಾಥ ಪೂಂಜರು, ಎ. ಬಿ. ಶೆಟ್ಟಿ ಸಲ್ಡಾನರು ಮಿಸೆಸ್ ಕ್ರೇಸ್ತಾ ಇದ್ದರು. ಗ್ರಾಮದ ರೈತರೆಲ್ಲರೂ ತಿರುವೈಲ್ ಶಾಲೆಯಲ್ಲಿ ಕೂಡಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಪ್ರಕಟಣೆ.

ಮಂಗಳೂರು ತಾಲೂಕು ಮಂಜಿಗ್ರಾಮದ ಮಂಚಿ ಕುಕ್ಕಿಂಜೆ ಎಲಿಮೆಂಟರಿ ಶಾಲೆಯ ಉಪಾಧ್ಯಾಯ ಅನಂತ ನಾಯಕರ ಮಗ ಎಸ್. ತಿಮ್ಮಪ್ಪ ನಾಯಕನು ಸರ್ವ ಜನರಿಗೆ ತಿಳಿಸುವುದೇನಂದರೆ—

ಇದೇ ಮಂಚಿ ಗ್ರಾಮದ ಸುಳ್ಯದಲ್ಲಿರುವ ನನ್ನ ಖಾಸಾ ಅಣ್ಣ, ಅಣ್ಣಪ್ಪನಾಯಕರು ನಮ್ಮ ಪಿತ್ರಾರ್ಜಿತದ ಬಾಬ್ತು ಹಣಗಳನ್ನು ಹೊರಕುಲಗಳಿಗೆ ಪ್ರೋಮಿಸರಿ ನೋಟು ವಗೈರೆ ಆಧಾರದ ಮೇಲೆ ಕೊಟ್ಟಿರುವದರಿಂದ ಆ ಹಣಗಳಲ್ಲಿ ನನಗೆ ಸಮ ಅರ್ಧಾಂಶದ ಹಕ್ಕು ಇರುವದರಿಂದ ಆ ಹಣಗಳನ್ನು ಖಾಸಗಿಯಿಂದ ಸಾಲಗಾರರು ಯಾರೂ ಸಲ್ಲಿಸಿದರೆ ಆ ದೆಸೆಯಿಂದ ನನಗೆ ಉಂಟಾಗಬಹುದಾದ ಸಕಲ ನಷ್ಟಕ್ಕೂ ಅವರೇ ಜವಾಬ್ದಾರರಾಗಿರಬೇಕಾದೀತುಯೆಂಬ ಸಂಗತಿ ತಿಳಿದಿರತಕ್ಕದ್ದು.

ಮಂಚಿ ಕುಕ್ಕಿಂಜೆ
ಎಲಿಮೆಂಟರಿ ಸ್ಕೂಲ್,
ತಾ. 23—4—28 } S. Thimmappa Naik.

DON'T HAVE AN OPERATION!

ಓಪರೇಶನನ್ನು ಮಾಡಿಕೊಳ್ಳಬೇಡಿರಿ

...ಮಾಡುತ್ತಿರುವಳು.

... ಪರೀಕ್ಷೆ ಮತ್ತು ಚಿಕಿತ್ಸೆಯಿಂದಲೂ ಗುಣವಾಗದ ಶರೀರ ... ದಿಂದ ಹೇಳುವೆವು.

... ಸೇವನೆಯಿಂದ ಕಲ್ಮಶವನ್ನು ನಿವಾರಿಸುವ, ಗುಣಕಾರಕ,

...ಮವನ್ನುಂಟುಮಾಡುತ್ತಿವೆ.

... ಆರೋಗ್ಯವತಿಗಳೂ ಸುಖಿಗಳೂ ಆದ ಸ್ತ್ರೀ ವೃಂದವನ್ನು ... ಜೀವನದಲ್ಲಿ ಒಂದು ನವೀನಾನುಭವವನ್ನು ಮಾಡಿಕೊಳ್ಳು... ಚೇತನವನ್ನು ಅನುಭವಿಸುವರು. ಮನೆಗೆಲಸವು ಮತ್ತೆ ... ಬೇಸತ್ತು ಮನಶ್ಶಾಂತಿ ಕಳೆದ ಸ್ತ್ರೀಯು ಕಾರ್ಯಾಸಕ್ತಳಾಗಿ ... ಆರೋಗ್ಯವು ಅವಳ ಸುಧಾರಿತ ದೈಹಿಕ ಸ್ಥಿತಿಯಿಂದ ...

... ಅಕ್ರಮಗಳು

... ಕೆಲವು ಕಡೆಗಳಲ್ಲಿ ಹಲವು ವರ್ಷಗಳು ದಾಟಿದರೂ ಆ ... ಆರೋಗ್ಯಾಭಿವೃದ್ಧಿಯು ಶಿಶು ಸ್ವೀಕಾರಕ್ಕೆ ಅಗತ್ಯವಾದ ... ನಿರೋಗಪಡಿಸಿ ಗುಣಪಡಿಸಿದುವು, ಅವಯವಗಳಿಗೆ ಶಕ್ತಿ ... ಸಹಾಯಮಾಡಿದುವು.

ಹೆಂಗಸರ ಫೆಲೂನಾ ಮಾತ್ರೆಗಳು ... ಅಥವಾ ತಾತ್ಕಾಲಿಕ ಪರಿಣಾಮಕೊಡುವ ಸಾಮಾನ್ಯ ... ಸ್ತ್ರೀಯರ ವ್ಯಾಧಿಗಳ ... ಮತ್ತು ಕೂಡಲೇ ತೋರುವಂತಹುದು; ಮತ್ತು ಅದು ... ಅವಳದಾಗಿರುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ— ... ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲೆಲ್ಲಿಯೂ ದೊರಕುವವು.

... ಮೂಲಕ ಕಳುಹಿಸಲಿಕ್ಕೆ ...

ಮೆಸ್ಸರ್ಸ್ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

(ಪೋಸ್ಟ್ ಆಫೀಸು ಬೊಕ್ಸ 838) ... (ಪೋಸ್ಟ್ ಆಫೀಸು ಬೊಕ್ಸ 620)

... ಇವರು ಹಿಂದೂಸ್ಥಾನ, ಬರ್ಮ ಮತ್ತು ... ನೇಮಿಸಲ್ಪಟ್ಟಿರುವರು.

Product of Graham Remedies Ltd., Cape Town, South Africa.   92

ಸ್ಫುಟ ವಿಚಾರಗಳು.

ಚೀನಿ-ಜಪಾನ್ ಯುದ್ಧ.

ಜಪಾನ್ ರಾಜತಂತ್ರವು ಪೌರ್ವಾತ್ಯ ಸ್ವಾರ್ಥಪರತೆಯ ನಿದರ್ಶನವಾಗಿಯೇ ಬೆಳೆಯುತ್ತಿದೆಯಲ್ಲದೆ, ಪಾಶ್ಚಾತ್ಯರ ಯುಕ್ತಿ ಯುಕ್ತತೆಯ ಅನುಕರಣವಾಗಿ ತೋರಿಬರುವುದಿಲ್ಲ. ಜಪಾನ್ ದೇಶವು ಪಾಶ್ಚಾತ್ಯ ರಾಷ್ಟ್ರಗಳೊಡನೆ ಬೆರೆಯಬಹುದಾದರೆ ಅದು ಜಪಾನಿನ ರಾಜತಂತ್ರದ ಪ್ರತಿಭೆಯ ಕಾರಣದಿಂದಲ್ಲ. ಅಂತರ್ರಾಷ್ಟ್ರೀಯ ರಾಜಕಾರಣಗಳಲ್ಲಿ ಉಂಟಾದ ಸಂದರ್ಭಗಳೇ ಜಪಾನಿಗೆ ಈ ತರದ ಶ್ರೇಷ್ಠತೆಯನ್ನು ಕೊಟ್ಟಿದ್ದುವು. ಇಂತಹ ಸಂದರ್ಭಗಳ ಸಹಾಯದಿಂದಲಾದರೂ ಜಪಾನು ತನ್ನ ಶ್ರೇಷ್ಠತೆಗೆ ಶಾಶ್ವತವಾದ ಅಡಿಗಟ್ಟನ್ನು ಹಾಕಲು ಶಕ್ತವಾಗಿಲ್ಲವೆಂಬುದೇ ದುಃಖದ ವಿಷಯ. ಪಾಶ್ಚಾತ್ಯರು ಲೀಗ್ ಒಫ್ ನೇಶನ್ಸ್, ಪಾನ್ ಅಮೇರಿಕನ್ ಕಾಂಗ್ರೆಸ್ ಮೊದಲಾದ ಪ್ರಬಲವಾದ ಸಂಸ್ಥೆಗಳಿಂದ ಪಾಶ್ಚಾತ್ಯ ರಾಷ್ಟ್ರಗಳನ್ನು ಒಟ್ಟುಗೂಡಿಸಿ ಪೌರ್ವಾತ್ಯರ ಮೇಲೆ ಅಧಿಕರಿಸಲೆತ್ನಿಸುತ್ತಾರೆ. ಈ ಬಿಳೇತನದ ಧೋರಣದಲ್ಲಿ ಜಪಾನಿನ ಮೇಲೆ ಕೂಡ ಆಗಾಗ ತಿರಸ್ಕಾರವು ಪ್ರಕಟಿಸಲ್ಪಡುವುದುಂಟು. ಅಲ್ಲದೆ ಜಪಾನ್ ಯಾವಾಗ ನಿರ್ಬಲವಾದೀತೆಂದೇ ಎಲ್ಲಾ ಬಿಳೇ ರಾಷ್ಟ್ರಗಳು ನಿರೀಕ್ಷಿಸುತ್ತಾ ಇವೆ. ಇಂತಹ ಸಂದರ್ಭದಲ್ಲಿ ಜಪಾನು ಪಾಶ್ಚಾತ್ಯ ಜನಾಂಗಗಳನ್ನು ಒಟ್ಟುಗೂಡಿಸಿ ಪೌರ್ವಾತ್ಯ ಹಿತವನ್ನು ಸಾಧಿಸುವುದು ಕರ್ತವ್ಯವಿತ್ತು. ಆದರೆ ಪೌರ್ವಾತ್ಯ ನೆರೆ ಜನಾಂಗಗಳ ಸೌಹಾರ್ದವನ್ನು ಹೊಂದುವುದಕ್ಕಿಂತ ಪೌರ್ವಾತ್ಯ ಜನಾಂಗಗಳ ಮೇಲೆ ಅಧಿಕರಿಸಲೆಂಬ ಆಶೆಯೇ ಜಪಾನಿಗೆ ಹೆಚ್ಚಾಗಿದೆ. ಚೀನಿಯರೊಡನೆ ಜಪಾನು ಈ ವರೆಗೆ ನಡೆಸುತ್ತಿದ್ದ ಧೋರಣವು ಚೀನಿಯರಿಗೆ ಮಾತ್ರವಲ್ಲದೆ ಜಪಾನೀಯರಿಗೂ ಹಾನಿಕರವಿದೆ. ಚೀನಾ ದೇಶವು ಎಂದಾದರೂ ಜಪಾನ ಅಧಿಕಾರಕ್ಕೆ ಒಳಗಾದೀತೆಂದು ನೆನಸಲಾಗುವುದಿಲ್ಲ. ಅಮೇರಿಕಾ, ಇಂಗ್ಲೀಷ್ ಮುಂತಾದ ಬಿಳೇ ರಾಷ್ಟ್ರಗಳೂ ಇದು ಸಾಧ್ಯವಾಗಲು ಬಿಡಲಾರವು. ಆದುದರಿಂದ ಜಪಾನು ಚೈನಾದೊಡನೆ ಯುದ್ಧವನ್ನೂ ಶತ್ರುತ್ವವನ್ನೂ ಕಟ್ಟಿಕೊಂಡು ಬಹಳ ಸಹಾಯಕ ಸ್ನೇಹಿತನೊಬ್ಬನನ್ನು ಕಳೆದುಕೊಂಡಿತು. ಚೀನಿಯರ ಸಹಾಯವೂ ಸ್ನೇಹವೂ ಇದ್ದುದಾದರೆ ಜಪಾನು ಇಷ್ಟರೊಳಗೆ ಲೋಕದ ರಾಜಕಾರಣಗಳಲ್ಲಿ ಒಳ್ಳೇ ಗೌರವವನ್ನು ಪಡೆಯುತ್ತಿತ್ತು. ಆದರೆ ಜಪಾನಿನ ಈ ಸ್ವಾರ್ಥವು ಪೌರ್ವಾತ್ಯರ ಅಭ್ಯುದಯವನ್ನು ಸಾಧ್ಯವಾಗಿ ಮಾಡುವುದಿಲ್ಲ. ಆದುದರಿಂದ ಈಗಿನ ಚೀನಿ-ಜಪಾನಿನ ಯುದ್ಧವು ಪೌರ್ವಾತ್ಯರ ಹಿತಕ್ಕೆ ಬಹಳವಾಗಿ ಹಾನಿಕರವಾಗಿರುವುದು.

ಬರ್ಡೋಲಿ ಸತ್ಯಾಗ್ರಹ.

ಬರ್ಡೋಲಿ ಸತ್ಯಾಗ್ರಹವು ದಿನ ದಿನವೂ ತೀಕ್ಷ್ಣವಾಗುತ್ತಾ ಬರುತ್ತಿದೆ. ಬರ್ಡೋಲಿಯ ಜನತೆಯು ಸರ್ವತರದ ಸಹನೆಗೂ ಸಿದ್ಧತೆಯನ್ನು ಮಾಡಿಕೊಂಡಿರುತ್ತದೆ. ಅಲ್ಲಿಯವರ ಆಸ್ತಿಗಳು ಏಲಮ್ಮಿಗೆ ಇಡಲ್ಪಡುವ ಯೋಜನೆಯು ಸರಕಾರದಿಂದ ನಡೆದಿದೆ. ಜನರು ಅಹಿಂಸಾಪರರಾಗಿ ಸರಕಾರೀ ವರ್ತಾಯವನ್ನು ನಿರೋಧಿಸುವ ಬಗ್ಗೆ ಧುರೀಣತ್ವವನ್ನು ವಹಿಸಿಕೊಂಡವರನ್ನು ಒಬ್ಬೊಬ್ಬರನ್ನಾಗಿ ಸರಕಾರವು ಜೈಲಿಗೆ ಕೊಂಡೊಯ್ಯುತ್ತದೆ. ಈ ಇಡೀ ಚಳವಳಿಗೆ ಮುಖ್ಯರಾದ ವಲ್ಲಭ ಭಾಯಿ ಪಟೇಲರನ್ನೂ ಸರಕಾರವು ಜೈಲಿಗೆ ಕೊಂಡೊಯ್ಯುವ ಸೂಚನೆಗಳು ಕಾಣುತ್ತಿವೆ. ಈ ಸಂದರ್ಭದಲ್ಲಿ ಯಾರು ಧುರೀಣತ್ವವನ್ನು ತೆಗೆದುಕೊಳ್ಳುವರೆಂಬುದು ಇನ್ನೂ ನಿಶ್ಚಯಿಸಲ್ಪಟ್ಟಿಲ್ಲ. ಆದರೆ ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ಮುಂದೆ ಬರಬಹುದೆಂದು ನೆನಸಲಾಗಿದೆ. ಆದರೆ ಸರಕಾರವು ತನ್ನ ಸ್ವಭಾವಕ್ಕೆ ಸರಿಯಾಗಿ ಸ್ಥಿರನಿರ್ಧಾರದಿಂದ ದಬ್ಬಾಳಿಕೆಯನ್ನು ಪ್ರಾರಂಭಿಸಿರುತ್ತದೆ. ಸರಕಾರದ ಈ ಹೃದಯಹೀನ ವರ್ತಾಯಗಳು ಹಿಂದೀಯ ನೌಕರರ ಮೂಲಕವೇ ಸಾಗುತ್ತಿವೆಯೆಂಬುದೇ ಅತ್ಯಂತ ದುಃಖದ ಸಂಗತಿಯಾಗಿದೆ. ಈ ನೌಕರರು ತಮ್ಮ ಈ ದಬ್ಬಾಳಿಕೆಯಲ್ಲಿ ಅಭಿಮಾನ ತಾಳುವುದೂ ಇದೆ! ಆದರೆ ಜನತೆಯ ದೃಢಮನಸ್ಸಿನ ಮುಂದೆ ಸರಕಾರವು ಎಷ್ಟು ಹೊತ್ತು ದಬ್ಬಾಳಿ ಇರಬಹುದೆಂದು ನೋಡಬೇಕು. ಇಂತಹ ಮಹತ್ವದ ಚಳವಳಿವು ಒಂದು ಕಡೆ ನಡೆಯುವಾಗ ಇತರ ಕಡೆಯವರು ಆ ಕಡೆಗೆ ಲಕ್ಷ್ಯಕೊಡದಿರುವುದು ಆಶ್ಚರ್ಯಕರ. ನಾಗಪೂರದಲ್ಲಿ ಬರೇ ಸಾಮಾನ್ಯ ಸತ್ಯಾಗ್ರಹವು ನಡೆದಾಗ ಅಖಿಲ ಭಾರತವೇ ಉತ್ಸಾಹಿತವಾಗಿದ್ದಿತು. ಆದರೆ ಬರ್ಡೋಲಿಯ ಈ ಕಾರ್ಯಕಾರಿ ಸತ್ಯಾಗ್ರಹಕ್ಕಾಗಿ ಬರ್ಡೋಲಿಯಲ್ಲದೆ ಇತರರು ಯಾರೂ ಚಿಂತಿತರಿರುವುದು ಕಾಣುವುದಿಲ್ಲ. ಕಾಂಗ್ರೆಸ್ಸು ಕೂಡ ಈ ಕಡೆಗೆ ಸರಿಯಾದ ಧೋರಣವನ್ನು ಪ್ರಕಟಿಸಿಲ್ಲ. ಬರ್ಡೋಲಿಯ ಪರಿಸ್ಥಿತಿಯು ಇಷ್ಟು ತೀಕ್ಷ್ಣವಿರುವುದರಿಂದ ಇನ್ನಾದರೂ ಇತರರು ತಮ್ಮ ಸಹಕಾರವನ್ನು ಕೊಡುವರೆಂದು ಆಶಿಸುವೆವು.

ಬಾಲಿಕೆಯರ ವಿವಾಹ ವಯಸ್ಸು.

ಈ ವಯಸ್ಸನ್ನು ನಿರ್ಣಯಿಸುವ ಬಗ್ಗೆ ಶ್ರೀ ಸಾರದಾರವರ ಮಸೂದೆಯು ಎಸೆಂಬ್ಲಿಯಲ್ಲಿಯೂ, ಶ್ರೀಮತಿ ಮುತ್ತುಲಕ್ಷ್ಮಿ ಅಮ್ಮರವರ ಮಸೂದೆಯು ಮದ್ರಾಸು ಕೌನ್ಸಿಲಿನಲ್ಲಿಯೂ ಇವೆ. ಈ ಮಸೂದೆಯು ಬೇಕು ಬೇಡವೆಂಬದರ ವಿಷಯದಲ್ಲಿ ಅಸಂಖ್ಯ ಸಭೆಗಳೂ ಅಭಿಪ್ರಾಯಗಳೂ ಪ್ರಕಟಿಸಲ್ಪಟ್ಟಿವೆ. ಈ ಮಸೂದೆಗೆ ದಕ್ಷಿಣ ಹಿಂದೂಸ್ಥಾನದಲ್ಲಿರುವಷ್ಟು ನಿಷೇಧವು ಉತ್ತರ ಹಿಂದೂಸ್ಥಾನದಲ್ಲಿ ಕಾಣುವದಿಲ್ಲ. ಅದರಲ್ಲಿಯೂ ತಮಿಳರ ನಿಷೇಧವು ಎಲ್ಲರ ನಿಷೇಧಕ್ಕಿಂತಲೂ ಬಲವಾಗಿರುವುದು. ಇದರ ವಿಷಯ ಎಷ್ಟೇ ಅಭಿಪ್ರಾಯ ಭೇದವಿರಬಹುದಾದರೂ, ಆರೇಳು ವರ್ಷಗಳೊಳಗೇನೇ ಹುಡುಗಿಗೆ ಮದುವೆ ಮಾಡಲೆಂದು ಸೂಚಿಸುವ ಮತವನ್ನೂ ಮತಸಾಂಪ್ರದಾಯವನ್ನೂ ಮಾನಿಸಲಾಗುವದಿಲ್ಲವೆಂದು ಎಲ್ಲರೂ ಒಪ್ಪಬೇಕಾಗಿದೆ. "ಅಷ್ಟ ವರ್ಷಾ ಭವೇತ್ ಕನ್ಯಾ" ಎಂಬ ಮಾತು ಶಾಸ್ತ್ರದಲ್ಲಿ ಕಂಡರೂ ಕಾರ್ಯದಲ್ಲಿ ಸಾಧಾರವಾಗಿರಲಾರದು. ಅಲ್ಲದೆ ಎಷ್ಟೇ ಪೂರ್ವ ಸಾಂಪ್ರದಾಯದವರಾದರೂ ಹತ್ತನೇ ವರ್ಷಕ್ಕಿಂತ ಪೂರ್ವದಲ್ಲಿಯೇ ವಿವಾಹವನ್ನು ಮಾಡಿಬಿಡುವಷ್ಟು ಕಾಠಿಣ್ಯವು ಇನ್ನೂ ಜನತೆಯಲ್ಲಿದೆಯಾಗಿ ಕಾಣುವುದಿಲ್ಲ. ಈಗಿನ ಮುಖ್ಯ ಪ್ರಶ್ನೆಯು ರಜೋ ಪೂರ್ವದಲ್ಲಿ ವಿವಾಹವಾಗಬೇಕೋ ಇಲ್ಲವೇ ಆ ಮೇಲೆ ಆಗಬಹುದೋ ಎಂಬುದೇ ಪ್ರಕೃತದ ಸಾಂಪ್ರದಾಯವಾದಿಗಳ ಸಮಸ್ಯೆಯಾಗಿದೆ. ಆದರೆ ಈ ಪ್ರಾಯವು ಬಾಲಿಕೆಯರಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ತೆರವಿರುತ್ತದೆ. ವಿವಾಹ ವಿಷಯದಲ್ಲಿ ಲಕ್ಷಿಸಬೇಕಾದುದು ಮಾನಸಿಕತೆ. ಎಷ್ಟಾದರೂ ಹದಿನೆರಡು ಹದಿಮೂರು ವರ್ಷವೆಂದರೆ ಇನ್ನೂ ಶೈಶವದ ಶೇಷಾಂಶವು ಇದ್ದೇ ಇರುತ್ತದೆ. ಪ್ರೌಢ ವಿವಾಹಗಳು ಪ್ರೇಮ ವಿವಾಹಗಳಾಗುವ ಆವಶ್ಯಕತೆಯಿರುವುದರಿಂದಲೂ, ತತ್ಕಾಲಕ್ಕೆ ಹಿಂದೂ ಸಮಾಜವು ಅಂತಹ ವಿವಾಹಗಳನ್ನು ಇಚ್ಛಿಸಲಾರದುದರಿಂದಲೂ ವಿವಾಹವು ಪ್ರೌಢಪ್ರಾಯಕ್ಕಿಂತಲೂ ಮೊದಲೇ ಆಗುವುದು ಉತ್ತಮವಿರುತ್ತದೆ. ಸರಿಯಾಗಿ ನೋಡಿದರೆ ಹುಡುಗಿಗೆ ಹದಿನಾಲ್ಕು ವರ್ಷವೇ ವಿವಾಹಕ್ಕೆ ಉತ್ತಮ ವಯಸ್ಸಾಗಿದೆ. ಆದುದರಿಂದ ಶ್ರೀ ಸಾರದರವರ ಮಸೂದೆಗೆ ನಿರೋಧಿಸುವುದು ಸಮಾಜಹಿತಕ್ಕೆ ಕೆಟ್ಟದ್ದಾಗಿದೆ.

ಶರೀರ ವ್ಯಾಯಾಮದ ಆವಶ್ಯಕತೆ.

"ನೀವು ಕಲ್ಕತ್ತಾ ವಿಶ್ವವಿದ್ಯಾಲಯವನ್ನು ಐದು ವರ್ಷಗಳಿಗಾಗಿ ಮುಚ್ಚಿಬಿಟ್ಟರೆ, ಅದರಿಂದ ಬಂಗಾಳಕ್ಕೆ ಯಾವ ಬಾಧಕವೂ ಉಂಟಾಗಲಾರದು. ಶಾಲಾ ವಿದ್ಯಾಭ್ಯಾಸ ಪಡೆದವರು ಅವಶ್ಯವಿರುವುದಕ್ಕಿಂತಲೂ ಬಹಳ ಹೆಚ್ಚಿಗೆ ಇರುವರು. ನಾವು ಶರೀರ ವ್ಯಾಯಾಮದ ಕಡೆಗೆ ಪೂರ್ಣ ಲಕ್ಷ್ಯಕೊಡಬೇಕು" ಎಂದು ಬಂಗಾಳದ ಡ್ಯಾರೆಕ್ಟರ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನರಾದ ಮಿ. ಸ್ಟೇಪಲ್ಟನ್ನರವರು ಹೇಳಿದರು. ಹೇಳಿದವರು ಪಾಶ್ಚಾತ್ಯರಾದರೂ ಅವರ ಮಾತು ಅಕ್ಷರಶಃ ನಿಜವಾಗಿದೆ. ನಮ್ಮೊಳಗೆ ವಿದ್ಯಾವಂತರಾದವರು, ಮುಖ್ಯವಾಗಿ ಪ್ರೌಢವಿದ್ಯಾಭ್ಯಾಸ ಹೊಂದಿದವರು ಆವಶ್ಯವಿದ್ದುದಕ್ಕಿಂತಲೂ ಹೆಚ್ಚಾಗಿರುವರು. ಈ ಪ್ರೌಢ ವಿದ್ಯಾಭ್ಯಾಸವು ಕೈಗೆಲಸದ ಅಭ್ಯಾಸವನ್ನು ತೆಗೆದು ಹಾಕಿ ಒಂದು ಪ್ರತ್ಯೇಕ ತರದ ದರ್ಪವನ್ನು ಕಲಿತವರಲ್ಲಿ ಪ್ರೇರಿಸುವುದರಿಂದ, ಈ ವಿದ್ಯಾಭ್ಯಾಸ ಹೊಂದಿದ ಮೇಲೆ ನೌಕರಿಯಲ್ಲದೆ ಬೇರೆ ಯಾವ ಕೆಲಸವನ್ನೂ ಮಾಡಲಿಕ್ಕಾಗುವುದಿಲ್ಲ. ಆದರೆ ಕಲಿತವರಾಗಲಿ, ಕಲಿಯದವರಾಗಲಿ, ಹಿಂದೀಯರೆಲ್ಲರೊಳಗೂ ಶಾರೀರಿಕ ಕ್ಷೀಣಗತಿಯು ಸ್ಪಷ್ಟವಾಗಿ ತೋರಿಬರುತ್ತಿದೆ. ಪಾಶ್ಚಾತ್ಯ ದೇಶೀಯರ ಶಾರೀರಿಕ ಧಾರ್ಢ್ಯದೊಡನೆ ಹಿಂದೀಯರ ದೇಹಧಾರ್ಢ್ಯವನ್ನು ಸರಿಹೋಲಿಸಿದರೆ ಹಿಂದೀಯರ ಪರಿಸ್ಥಿತಿಯು ಎಷ್ಟು ಕೆಟ್ಟದಿದೆಯೆಂದು ತಿಳಿದು ಬರುವುದು. ಶಾಲಾ ವಿದ್ಯಾರ್ಥಿಗಳಲ್ಲಿ ಶರೀರ ವ್ಯಾಯಾಮದ ಕಡೆಗಿನ ಆವಶ್ಯಕತೆಯು ಹೆಚ್ಚಾಗಿ ಇರಬೇಕು. ವಿದ್ಯಾವಂತ ಮಂಡಳಿಯಲ್ಲಿ ಸ್ವತಂತ್ರವರ್ತನೆಗೂ, ಸ್ವತಂತ್ರವಾದ ಜೀವನೋಪಾಯವನ್ನು ಹೊಂದಲಿಕ್ಕೂ ಬಾಧೆ ಕೊಡುವುದು ದೇಹ ಧಾರ್ಢ್ಯದ ಅಭಾವವಾಗಿದೆ.

ನೋಟಗಳು.

NOTE...S.

ನಮ್ಮ ನೂತನ ಬಂಧುವಿಗೆ ಸ್ವಾಗತವೀಯುವೆವು. "ಪತ್ರಿಕೆಗಳಲ್ಲಿ ಆದರ್ಶ ಸ್ಥಾನವನ್ನು ಪಡೆಯಬೇಕೆಂಬ ಕುತೂಹಲದಿಂದ" ಮುಂದೆ ಬಂದಿದ್ದ ಈ ನಮ್ಮ ರಾಷ್ಟ್ರ ಬಂಧುವು, ತನ್ನ ಆಶಯವನ್ನು ನೆರವೇರಿಸಿ ಕರ್ನಾಟಕಕ್ಕೆ ಕೀರ್ತಿತರಲೆಂದು ಆಶಿಸುತ್ತೇವೆ.

• • • •

ಇದ್ದವುಗಳನ್ನೇ ಕೇಳುವವರಿಲ್ಲ; ಇಲ್ಲದವುಗಳನ್ನು ಯಾರು ಗಣನೆಗೆ ತರುತ್ತಾರೆ? ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವ ಪ್ರಯತ್ನದಲ್ಲಿ ರಾಷ್ಟ್ರ ಬಂಧುವು ಅನ್ಯ ಪತ್ರಿಕೆಗಳ ಅವಹೇಳನಕ್ಕೆ ಬಾಯಿ ಹಾಕುವುದಿಲ್ಲವೆಂಬುದು ಸ್ತುತ್ಯವಾದುದು. ಆದರೆ ಈ ಉತ್ತರದಲ್ಲಿ ಅವಹೇಳನದ ಅಂಶವೊಂದು ಇದೆಯೊ ಎಂಬ ಸಂದೇಹ ಮಾತ್ರ ರಾಷ್ಟ್ರ ಬಂಧುವು ಉಂಟುಮಾಡಿರುವನು.

• • • •

"ಇರುವವುಗಳು (ಪತ್ರಿಕೆಗಳು) ಉಸಿರುಗಟ್ಟಿ ಹೇಗೋ ಜೀವ ಹಿಡಿದಿವೆ." ಎಂದು ಬಂಧುವು ಹೇಳುವನು. ಇರುವವುಗಳಲ್ಲಿ "ದ್ರವ್ಯಸಹಾಯವೂ, ಅದಕ್ಕಿಂತ ಅನರ್ಘವಾದ ಪ್ರೋತ್ಸಾಹವೂ" ಇಲ್ಲದವುಗಳೇ ಅಧಿಕವಿವೆ ಎಂಬುದು ನಿಜವಾದರೂ ಉಸಿರುಗಟ್ಟದೆ ಜೀವ ಹಿಡಿದುಕೊಂಡವುಗಳೂ ಇವೆ ಎಂಬುದನ್ನು ಪ್ರಪಂಚದ ಬೆಳಕನ್ನು ಹೊಸತಾಗಿ ನೋಡುವ ನಮ್ಮ ಚಿಕ್ಕ ತಮ್ಮನಿಗೆ ಅನುಭವಾರ್ಥ ಹೇಳುವೆವು.

• • • •

ಒಂದು ವಕೀಲರ ಪರಿಷತ್ತಿನಲ್ಲಿ ಹೊನರರಿ ಮೆಜಿಸ್ಟ್ರೇಟರ ಕ್ರಮವನ್ನು ನಿಲ್ಲಿಸಬೇಕಾಗಿ ಠರಾವು ಮಂಜೂರಾಯಿತು. ಪ್ರಾಯಶಃ ಇವರು ಕ್ರಿಮಿನಲ್ ವಕೀಲರಾಗಿರಬೇಕು. ಇನ್ನು ಸಿವಿಲ್ ವಕೀಲರು ಗ್ರಾಮ ಮುನ್ಸಿಫ್ ಕೋರ್ಟುಗಳನ್ನು ತೆಗೆದುಹಾಕಬೇಕೆಂದರೆ ಸರಿ. ಕೆಲ ವಕೀಲರಿಗಾದರೂ ಕೆಲಸ ಸಿಕ್ಕೀತು.

• • • •

Wiving and hanging goes by destiny ಎಂದು ಶೇಕ್ಸಪಿಯರನು ಹೇಳಿದನು. ಇಯೆತ್ಮಾಲ್ ಎಂಬಲ್ಲಿಯ ಒಬ್ಬ ಮದುವಣಿಗನು ಇದನ್ನು ನಿಜಮಾಡಿದನು. ದಿಬ್ಬಣವನ್ನು ಮುಂದೆ ಕಳುಹಿಸಿ ವಿಷ ತಿಂದು ಪ್ರಾಣ ಕಳಕೊಂಡನು. ಇದನ್ನು ಕೇಳಿ ತಾಯಿಯು ಕೊರಳಿಗೆ ಹಗ್ಗ ಕಟ್ಟಿ ಸತ್ತಳು.

• • • •

ಇಂಗ್ಲೀಷರೂ ಫ್ರೆಂಚರೂ ಅಮೀರ ಅಮನುಲ್ಲಾರವರನ್ನು ಆತಿಥ್ಯದಿಂದ ಒಲಿಸಲು ಯತ್ನಿಸುತ್ತಿರುವಾಗ, ಅಮೇರಿಕನರೂ ಆತಿಥ್ಯದ ಮಾತೇ ಇಲ್ಲದೆ ಮೆಲ್ಲನೆ ಎಣ್ಣೆಯ ಹಕ್ಕುಗಳನ್ನು ಪಡೆದು ಹೋದರು!

• • • •

"ನಾನು ನಾಗಪೂರದಲ್ಲಿ ೧೫೦೦ ಜನರನ್ನು ಜೈಲಿಗೆ ಕಳುಹಿಸಿದ್ದೇನೆ. ನನ್ನದೇ ಊರಾದ ಬರ್ಡೋಲಿಯಲ್ಲಿ ನನಗೆ ಜನರು ಕಡಿಮೆಯಾಗಲಾರರು" ಎಂದು ವಲ್ಲಭಭಾಯಿ ಪಟೇಲರು ಬರ್ಡೋಲಿ ಸತ್ಯಾಗ್ರಹದ ವಿಷಯದಲ್ಲಿ ಮೊನ್ನಿನ ಭಾಷಣದಲ್ಲಿ ಹೆಗ್ಗಳಿಸಿಕೊಂಡರು. ಈ ಕೀರ್ತಿಯ ಬಗ್ಗೆ ಹಲವು ಮೆಜಿಸ್ಟ್ರೇಟರು ಪ್ರಯತ್ನಿಸುತ್ತಿರುವರಾದರೂ ಇಷ್ಟರ ಮಟ್ಟಿಗೆ ಹೆಸರು ಹೋಗಲು ಸಾಧ್ಯವಾಗಿಲ್ಲವೆಂದು ವಿಷಾದಿಸುವರು.

• • • •

ಆಯುರ್ವೇದ ಸಮ್ಮೇಲನವು ಸಮೀಪಿಸಿತು. ವೈದ್ಯರೆಲ್ಲರೂ ತಾ. ೨೧, ೨೨, ೨೩ಕ್ಕೆ ಕೂಡುವರು. ಆಯುರ್ವೇದ ಔಷಧಿಗಳ ಪ್ರದರ್ಶನ ನಡೆಯಲಿಕ್ಕಿದೆ. ಅನೇಕ ಊರುಗಳಿಂದ ಅನೇಕ ಔಷಧಿಗಳನ್ನು ಅನೇಕ ಆಯುರ್ವೇದ ವಿದ್ವಾಂಸರು ತರುವವರಿದ್ದಾರೆ. ಮಂಗಳೂರಿನವರಿಗಂತೂ ಪುರುಸೊತ್ತೇ ಇಲ್ಲ. ಬಹುಮಾನದ ಬಿರುದುಗಳ ಹಂಚುವಿಕೆ ನೋಡಲಿಕ್ಕಿದೆ.

• • • •

ನಮ್ಮ ಮಂಗಳೂರಿಗೆ ಶುಭದಿನಗಳು ಹತ್ತಿರವಾಗುತ್ತಾ ಬಂದವು. ಮದ್ರಾಸಿನಿಂದ ಟೌನ್ ಪ್ಲೆನಿಂಗ್ ಇನ್ಸ್‌ಪೆಕ್ಟರರು ಬಂದಿರುವರು. ತನಿಕೆ ಜೋರಾಗಿ ನಡೆಯುತ್ತಿದೆ.

• • • •

ಕಳೆದ ವಾರದಲ್ಲಿ ಇಲ್ಲಿಯ ತೋಟಿಗಳ ಮುಷ್ಕರ ಬಾಳಿದ್ದು ನಾಲ್ಕೇ ದಿವಸ.

• • • •

ನಮ್ಮ ಕೆನರಾ ಹೈ ಸ್ಕೂಲ್ ಸೋಧ್ಸಿಗೆ ಎಲ್ಲರೂ ಸಹಾಯ ಮಾಡುವಂತೆ ಕಾಶಿಮಠ ಸ್ವಾಮಿಯವರ ರಾಯಸ ಬಂದಿರುವದು.

ಅನುಕ್ರಮಣಿಕೆ.

ಅಗ್ರಲೇಖ,
ಸ್ವಾಮನ್ ಕಮಿಶನ್ನು
ವಿದೇಶ ವರ್ತಮಾನ
ಸ್ಫುಟವಿಚಾರಗಳು
[illegible]
ವರ್ತಮಾನ ಸಂಗ್ರಹಗಳು
[illegible]
ದಕ್ಷಿಣ ಕನ್ನಡ — ಮಂಗಳೂರು [illegible]
[illegible]

ಸ್ವದೇಶಾಭಿಮಾನಿ

ಸ್ವಾಮನ್ ಕಮಿಶನ್

ಸ್ವಾ[illegible]

[illegible]

... ಬಹುಮತಕ್ಕಾಗಿ ಶಕ್ತಿಹೀನವಾಗಿದೆ. ಇತ್ತ ಬಂಗಾಳದಲ್ಲಿಯೂ ಪಕ್ಷಗಳು ಪುನಃ ತಮ್ಮ ತಮ್ಮಲ್ಲಿ ನೂತನ ವ್ಯವಸ್ಥೆಗಳನ್ನು ಮಾಡಿಕೊಂಡು ಮುಂದಿನ ಕೌನ್ಸಿಲ್ ಸೆಶ್ಶನಿಗೆ [illegible] ಮಾಡುತ್ತಿದ್ದಾರೆ. ಇದರಿಂದ ಸರಕಾರೀ ಪಕ್ಷದ ಕೌನ್ಸಿಲ್ ಮಂತ್ರಿಗಳಿಗೆ ಸ್ವಲ್ಪ ಯೋಚನೆಗೆ ಕಾರಣವಾಗಿರುತ್ತದೆ.

ಸರಕಾರದ ಕಷ್ಟಗಳು ಈ ರೀತಿಯಲ್ಲಿರುವಾಗ ಜನತೆಯ ರಾಜಕೀಯ ಸ್ಥಿತಿಯಾದರೂ ಇದಕ್ಕಿಂತ ಉತ್ತಮವಾಗಿಲ್ಲ. ಸರಕಾರವು ವಿಚಕ್ಷಣ ರಾಜತಂತ್ರ ಸಂಪನ್ನರೆಂಬುದನ್ನು ನಾವು ಮರೆಯಲಾಗುವುದಿಲ್ಲ. ಅವರ ಕುಟಿಲ ನೀತಿಯು ಹಿಂದೂಸ್ಥಾನದ ರಾಜಕೀಯ ರಂಗದೊಳಗಿನ ಎಷ್ಟೋ ಸಂದಿಗ್ಧ ಸಮಯಗಳಲ್ಲಿ ಪೂರ್ಣ ಜಯಕಾರಿಯಾಗಿಯದೆ ಎಂಬುದನ್ನೂ ನಾವು ಮರೆಯಲಾಗುವುದಿಲ್ಲ. ಬಹಿಷ್ಕಾರದ ಠರಾವು ಮಂಜೂರು ಮಾಡಿರುವ ಮದ್ರಾಸು, ಮಧ್ಯಪ್ರಾಂತ, ಸಂಯುಕ್ತಪ್ರಾಂತದ ಕೌನ್ಸಿಲುಗಳಲ್ಲಿಯೇ ಕೌನ್ಸಿಲ್ ಮೆಂಬರರೊಳಗೆ ಭೇದಗಳುಂಟಾಗಿವೆ. ಪುನಃ ಕೌನ್ಸಿಲು ಕೂಡಿಸಿ ಪುನಃ ಬಹಿಷ್ಕಾರದ ಠರಾವನ್ನು ಓಟಿಗೆ ಹಾಕಿದರೆ ಹ್ಯಾಗೆ ನಿಲ್ಲಬಹು...

[illegible] ಹೊಸ ನೇಮಕ [illegible] ಯುಕ್ತಿ [illegible] ಹೊಂಡಿಯದೆ. [illegible] ಸ್ವರಾಜ್ಯ [illegible] ಹಾಗೆಯೇ [illegible] ಕಚ್ಚಾಟವು [illegible] ಧುರೀ[illegible] ಭೇದ [illegible] ಕಚ್ಚಾ[illegible] ಎಸೆಂಬ್ಲಿ [illegible] ತಿಳಿಯುವುದಿಲ್ಲ. [illegible] ಮನಸ್ಸಿ[illegible] ಹೊಸ [illegible] ತಂದರೆ [illegible]

[illegible] ರೆಂದು ನಾವು ನೆನಸುವದಿಲ್ಲ.

ಆದುದರಿಂದ [illegible] ಸ್ವಾಮನ್ ಕಡೆಗಿನ [illegible] ಪರಿವರ್ತನ [illegible] ಹೊಂದಲಿದೆ ಯೆಂದು ಹೇಳಲಾಗುವುದಿಲ್ಲ. ಆದರೆ ಸ್ವಾರ್ಥ ಸಾಧಕರು [illegible] ಬಹಿಷ್ಕಾರಕ್ಕಾಗಿಯೋ ಕೆಲಸ ಮಾಡುವರೆಂದು ನಂಬಿಗೆಯದೆ. ಬಹಿಷ್ಕಾರವು [illegible] ಹಿಂದೂಸ್ಥಾನದ ಮುಂದಿನ ರಾಜಕೀಯ ಅಭಿವೃದ್ಧಿಗೆ ಬಹಳ ಸಹಾಯವಿದೆ.

ವಿದೇಶ ವರ್ತಮಾನ.

— [illegible] ಬ್ರಿಟಿಷ [illegible] ಬಜೇಟಿನಲ್ಲಿ ಸಂಕಲ್ಪ [illegible] ಸಬ್ ಮೆರಿನುಗಳನ್ನು ಕಟ್ಟುತ್ತಿದ್ದರು. ಅವುಗಳಲ್ಲಿ ಎಚ್. ಎಮ್. ಎಸ್. ಒಡಿನ್ ಎಂಬ ಹೆಸರಿನ ಒಂದು ಸಬ್ ಮೆರಿನನ್ನು ಮೊನ್ನೆ ತಾನೆ ನೀರಿಗಿಳಿಸಿದರು.

— ಬಟ್ಲರ್ ಕಮಿಟಿಯವರು ಈಗ ವಿಲಾಯತಿಗೆ ಹೋಗಿ ತಲಪಿರುವರು.

— ಬಗದಾದಿನ ಒಂದು ಮರುಭೂಮಿಯನ್ನು ದಾಟಿ ಹೋಗುವಾಗ ಒಂದು ಯಾತ್ರಿಕರ ಸಂಗಡವು ದಾರಿತಪ್ಪಿಹೋಗಿ ೩೦ ಜನ ಯಾತ್ರಿಕರು ಹೊಟ್ಟೆಗಿಲ್ಲದೆ ಸತ್ತುಹೋದರು.

— ಇಂಗ್ಲೆಂಡಿನ ಪ್ರಸಿದ್ಧ ಕಾದಂಬರಿ ಕರ್ತರಾದ ಮಿ: ಬೆಂಪ್ಸೆನರೆಂಬವರು ಮೃತಪಟ್ಟರು.

— ಲಂಡನಿನಲ್ಲಿ ಸುಡುತ್ತಿರುವ ಒಂದು ವಿಮಾನದಲ್ಲಿ ನರಳುತ್ತಿದ್ದ ಪಿಲಟನನ್ನು ನಾಲ್ಕು ಜನ ವಿದ್ಯಾರ್ಥಿಗಳು ಕಷ್ಟಪಟ್ಟು ಹೊರಗೆ ಎಳೆದು ಬದುಕಿಸಿದರು. ಆತನೀಗ ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿರುವನು.

— ಕಳೆದ ಸಪ್ಟಂಬರದಲ್ಲಿ ಕೆಪ್ಟನ್ ಕೊರ್ಟನಿ ಎಂಬವನು ಅಟ್ಲಾಂಟಿಕ್ ಸಾಗರವನ್ನು ವಿಮಾನದಿಂದ ದಾಟಬೇಕೆಂದು ಪ್ರಯತ್ನಿಸಿ ಸೋತುಹೋಗಿದ್ದನು. ಆದರೆ ಆತನು ಇನ್ನೊಮ್ಮೆ ಪ್ರಯತ್ನಿಸಬೇಕೆಂದು ನಿಶ್ಚಯಿಸಿರುವನು. ಅವನು ಈ ತಡವೆ ಉಪಯೋಗಿಸುವ ವಿಮಾನವು ಜರ್ಮನ ಮಾದರಿಯದ್ದಾಗಿ, ಇಟಲಿಯಲ್ಲಿ ನಿರ್ಮಿಸಲ್ಪಟ್ಟದ್ದು. ವಾಯರ್‌ಲೆಸಿನ ಸಂಬಂಧವೂ ಈ ವಿಮಾನಕ್ಕಿದೆ.

— ಲೋರ್ಡ ಬರ್ಕನ್ ಹೆಡ್ಡರು ಒಕ್ಸ್‌ಫೋರ್ಡಿನ ಚೆನ್ಸಲರ್ ಪದ್ದವಿಗೆ ಉಮೇದುವಾರರಾಗಿರುವರು. ಇವರ ಎದುರಾಗಿ ಲೋರ್ಡ್ ಸೆಲಿಸ್ ಬರಿಯವರೂ ಉಮೇದುವಾರರಾಗಿರುವರು.

— ಇಟಲಿಯಾ ಎಂಬ ಹೆಸರಿನ ವಾಯುವಿಮಾನವು ಪಿಟ್ಸಬರ್ಗಗೆ ಬಂದಿರುವದು.

— ಜೆರುಸಲೆಮಿನ "ಸೆಡೆ ಎಲ್ ಆರಬ್" ಎಂಬ ಪತ್ರಿಕೆಯು ಸರಕಾರಕ್ಕೆ ವಿರುದ್ಧವಾಗಿ ಬರೆದ ಕಾರಣ, ಆ ಪತ್ರಿಕೆಯನ್ನು ತೆಗೆದು ಹಾಕಿ ಅದರ ಸಂಪಾದಕನನ್ನು ಕೈದುಮಾಡಿರುವರು.

— ಬೆರನ್‌ಹ್ಯುನೆಫೆಲ್ಡನೆಂಬವರು ಬ್ರಿಮೆನ್ ಎಂಬ ವಿಮಾನದ ಸಹಾಯದಿಂದ ಅಮೇರಿಕದಿಂದ ಯುರೋಪದ ವರೆಗೆ ಹಾರಿದ್ದಕ್ಕಾಗಿ ಸ್ಟೋಕ ಹೊಮಿನ ಅಲ್ಬೆನ್ನರ್ ಗ್ರೇನ್ ಎಂಬವರು ಅವರಿಗೆ ೧೨,೫೦೦ ಡೊಲ್ಲರುಗಳನ್ನು ಇನಾಮಾಗಿ ಕೊಟ್ಟರು. ಆದರೆ ಇವರು ಆ ಹಣವನ್ನು ವಿಮಾನವನ್ನು ಕಟ್ಟಿದ ಜಂಕರನಿಗೆ ಅದನ್ನು ಕೊಡಬೇಕೆಂದು ಅವರ ಮಗಳ ಕೂಡೆ ಕೊಟ್ಟು ಬಿಟ್ಟು ತನ್ನ ಉದಾರತೆಯನ್ನು ವ್ಯಕ್ತಗೊಳಿಸಿದರು.

— ಅಫಘಾನದ ಅಮೀರ ಅಮಾನುಲ್ಲಾರವರು ರಸ್ಯಾದಲ್ಲಿರುವರು. ಅಮೇರಿಕದಲ್ಲಿ ನೂತನ ತರದ ವಿಮಾನದ ರಚನೆಯನ್ನು ಕಂಡು ಹಿಡಿದ ಬೂನ್ಸಿ ಎಂಬವನು ತಾನು ಮಾಡಿದ ವಿಮಾನದ ಪರೀಕ್ಷೆಗಾಗಿ ಹಾರುತ್ತಿರುವಾಗ ಕೆಳಕ್ಕೆ ಬಿದ್ದು ಸತ್ತುಹೋದನು.

ರಸ್ಯದ ಸೋವಿಯಟ್ ಡೆಲಿಗೇಶನಿನವರಿಬ್ಬರು ಒಂದು ಮೋಟಾರ ಕಾರಿನಲ್ಲಿ ಕುಳಿತು ಹೋಗುತ್ತಿರುವಾಗ್ಗೆ, ಒಂದು ಪಿಸ್ತೂಲಿನಿಂದ ಅವರ ಮೇಲೆ ಒಬ್ಬನು ಗುಂಡು ಹಾರಿಸಿದನು. ಇದರಿಂದ ಅವರಲ್ಲೊಬ್ಬನಿಗೆ ಗಾಯವಾಯಿತು. ಗುಂಡು ಹೊಡೆದವನನ್ನು ಕೈದುಮಾಡಿರುವರು.

ಮೆಂಚೆಸ್ಟರಿನ ಹತ್ತಿ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಗಳ ಸಂಬಳವನ್ನು ಶೇಕಡಾ ೧೨॥ಯಷ್ಟು ಕಡಿಮೆ ಮಾಡಬೇಕೆಂದು ಆಲೋಚಿಸಿರುವರು.

— ಇಂಗ್ಲಿಷ್ ಕಾಲುವೆಯಲ್ಲಿ ಒಂದು ಗ್ರೀಕ್ ಸ್ಟೀಮರ್ ಮತ್ತು ಒಂದು ಮೆಡಿಟರೇನಿಯನ್ ಸ್ಪೆನ್ನದ ಸ್ಟೀಮರು ಒಂದಕ್ಕೊಂದು ತಾಗಿ ಗ್ರೀಕ್ ಸ್ಟೀಮರು ಮುಳುಗಿ ಹೋಯಿತು. ಅದರಲ್ಲಿದ್ದ 22 ಜನ ಪ್ರಯಾಣಿಕರನ್ನು ಇನ್ನೊಂದು ಸ್ಟೀಮರಿನಲ್ಲಿಯೇ ಸೇರಿಸಿಕೊಂಡರು. ಆದರೆ ಅದು ಕೂಡ ಈಗ ಮೆಲ್ಲನೆ ಮುಳುಗುತ್ತಿದೆಯಂತೆ. ಅದರಲ್ಲಿನ ಪ್ರಯಾಣಿಕರು ಬೇರೆ ಹಡಗುಗಳ ಮೂಲಕ ತಪ್ಪಿಸಿಕೊಂಡಿರುವರು.

ಜಪಾನದ ಅತೀ ದೊಡ್ಡ ಪ್ರಯಾಣದ ವಿಮಾನವು ಪ್ರಥಮದ ಹಾರಾಟದಲ್ಲಿಯೇ ಕೆಳಕ್ಕೆ ಬಿದ್ದು ನುಚ್ಚುನೂರಾಯಿತು. ಪಿಲಟನೇ ಮೊದಲಾದ ಏಳು ಜನರು ಆಗಲೇ ಸತ್ತುಹೋದರು.

— ಜಪಾನದ ಹೋಮ್ ಮಿನಿಸ್ಟರರಾದ ಸುಜುಕಿಯವರು ತನ್ನ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು.

— ಕ್ವಿಬೆಕಿನ ಗವರ್ನರ ಜನರಲರ ನಿವಾಸಸ್ಥಾನವನ್ನು ದುರುಸ್ತಿ ಮಾಡಿಸುವ ಬಗ್ಗೆ ಹೌಸ್ ಓಫ್ ಕೋಮನ್ಸಿನವರು ೧೫೫,೦೦೦ ಡೊಲ್ಲರುಗಳನ್ನು ಸೆಂಕ್ಷನ್ ಮಾಡಿರುವರು.

— ೧೯ನೇ ಇಸವಿಯಲ್ಲಿ ಸೈಂಟ್ ಪಿಟರ್ಸ್ ಬರ್ಗನಲ್ಲಿ ಜರ್ಮನ್ ರಾಜಪ್ರತಿನಿಧಿಯಾಗಿದ್ದ ಕೌಂಟ್ ಪೋರ್ಟಲಿಸ್ ಎಂಬವನು ಮೃತಪಟ್ಟನು.

— ಜಪಾನ ಮಂತ್ರಿಸಭೆಯಲ್ಲಿ ಮಂತ್ರಿಗಳು ರಾಜಿ ಕೊಟ್ಟದ್ದರಿಂದ ಮಂತ್ರಿಗಳ ಕೆಲಸವನ್ನು ಮುಖ್ಯ ಮಂತ್ರಿಯೇ ನೋಡುತ್ತಿರುವನು.

— ಬಲ್ಗೇರಿಯಾ ದೇಶದಲ್ಲಿ ಕಠಿಣತರದ ಭೂಕಂಪವಾಗಿ ನೆರೆ ಬಂದು ೩೦೦೦ ಕುಟುಂಬಗಳು ನಿರಾಶ್ರಿತವಾಗಿರುವವು.

ರುಮೆನಿಯಾ ದೇಶದಲ್ಲಿ ೩ನೇ ತಾರೀಕಿನಲ್ಲಿ ಒಂದು ಕೋಳಿಮೊಟ್ಟೆಯಷ್ಟು ದೊಡ್ಡ ಹಿಮದ ಕಲ್ಲುಗಳು ಬಿದ್ದು ೬ ಮಂದಿ ಸತ್ತರು. ೧೦ ಮಂದಿಗೆ ಜಖಂ ಆಗಿದೆ.

— ಟರ್ಕಿಯ ಕೊನ್ಸಟೆಂಟಿನೋಪಲ್ ಪಟ್ಟಣದಲ್ಲಿ ಮಧ್ಯರಾತ್ರಿ ಭೂಕಂಪವಾಯಿತು.

— ಕಾಬೂಲಿನಿಂದ ರಶ್ಯದಲ್ಲಿರುವ ಟಶ್‌ಖಾಂಡಿಗೆ ವಿಮಾನ ಸರ್ವಿಸು ನಡಿಯಬಹುದೆಂದು ರಶ್ಯಾ ಮತ್ತು ಅಫಗಾನ ಸರಕಾರಕ್ಕೆ ಕರಾರಾಯಿತು. ರಶ್ಯದಲ್ಲಿ ಟರ್‌ಮೆಟ್, ಸಾಮಸುನ್ ಸೆಮಾರ್‌ಖಾಂಡ್, ಮತ್ತು ಟಶ್‌ಖಾಂಡ ಊರುಗಳಲ್ಲಿ ಅಫಗಾನ ವಿಮಾನಗಳು ಇಳಿದು ನಿಲ್ಲಲಿಕ್ಕೆ ಸ್ಥಳವನ್ನು ರಶ್ಯಾ ಸರಕಾರವು ಒಪ್ಪಗಿಸಿರುವುದು. ಟಶ್‌ಖಾಂಡ್ ಮತ್ತು ಟರ್‌ಮೆಟ್ ಊರುಗಳಲ್ಲಿ ವೈಮಾನಿಕರಿಗೆ ಉಳುಕೊಳ್ಳಲಿಕ್ಕೆ ಬಂಗ್ಲೆಗಳು ತಯಾರಿಸಲ್ಪಟ್ಟಿವೆ. ಅಫಗಾನ ಸರಕಾರದವರು ರಶ್ಯಾ ದೇಶದ ವಿಮಾನಗಳು ಬಂದು ನಿಲ್ಲಲಿಕ್ಕೆ ಮಜರಿ ಶರಿಫ್, ಮತ್ತು ಕಾಬೂಲಿನಲ್ಲಿ ಬಂಗ್ಲೆಗಳನ್ನು ತಯಾರಿಸಿರುವರು. ಮೇಲಿನ ಎಲ್ಲಾ ಸ್ಥಳಗಳಲ್ಲಿಯೂ ವಿಮಾನಗಳಿಗೆ ಬೇಕಾದ ಪೆಟ್ರೋಲನ್ನು ಅಸಲು ಕ್ರಯಕ್ಕೆ ಮಾರುವರು. ವೈಮಾನಿಕರಿಗೆ ಒಂದು ವರುಷ ಅವಧಿಯ ಪಾಸ್ ಪೋರ್ಟುಗಳು ಕೊಡಲಾಗುವವು.

ಒಳದೇಶ ವರ್ತಮಾನ.

— ಸೆಕೆಕಾಲದ ಪ್ರಾರಂಭದಿಂದ ಡಾ। ರವೀಂದ್ರನಾಥ ಠಾಗೋರರ ಆರೋಗ್ಯವು ಬಹಳ ಕೆಟ್ಟಿರುವದು. ಆದಕಾರಣ ಡಾಕ್ಟರರು ಅವರು ಸಮುದ್ರ ಪ್ರಯಾಣವನ್ನು ಮಾಡಬೇಕೆಂದು ಹೇಳಿರುವರು. ಅವರೊಂದಿಗೆ ರಾ। ಸಿ. ಎಫ್. ಎಂಡ್ರ್ಯುಸರೂ ಹೋಗಲಿರುವರು. ಅವರ ಪ್ರವಾಸದ ಸಮಯದಲ್ಲಿಯೇ ಅವರೊಂದು ಪುಸ್ತಕ ಬರೆಯುವರು.

— ಕಲಕತ್ತದಲ್ಲಿ ಜೋರಿನ ಮಳೆಗಾಳಿ ಬಂದು ಹಲವು ಮಾರ್ಗಗಳಲ್ಲಿ ನೆರೆ ಬಂದಿತು.

— ಪಂಡಿತ ಇಂದ್ರರು ಜೈಲಿನಲ್ಲಿದ್ದು ಸೌಖ್ಯದಲ್ಲಿಲ್ಲವೆಂಬುದು ಗೊತ್ತಿರುವುದಷ್ಟೆ. ಅವರನ್ನು ಪರೀಕ್ಷಿಸಲು ಡಾ। ಅನ್ಸಾರಿಯವರಿಗೆ ಜೈಲಿನ ಇನ್‌ಸ್ಪೆಕ್ಟರ್ ಜನರಲರಿಂದ ಅಪ್ಪಣೆ ದೊರಕಿರುವದು. ಆದ ಕಾರಣ ಡಾ। ಅನ್ಸಾರಿಯವರು ಫಿರೋಜಪುರಕ್ಕೆ ತೆರಳಿದರು.

— ಕಳೆದ ಜನವರಿಯಲ್ಲಿ ಡಿಲ್ಲಿಯಲ್ಲಿ ನಡೆದ ಐ. ಸಿ. ಎಸ್. ಪರೀಕ್ಷೆಯಲ್ಲಿ ಆರು ಜನರೂ ಮಾತ್ರ ಉತ್ತೀರ್ಣರಾಗಿರುವರು.

— ಮೈಸೂರು ರಾಜ್ಯದ ಕಂಕನಹಳ್ಳಿ ಎಂಬಲ್ಲಿ ಒಂದು ಕಾಡಿನ ಮಧ್ಯದಲ್ಲಿ ಗಂಧದ ಮರಗಳ ದಟ್ಟವಾದ ಒಂದು ಕಾಡಿದೆಯಂತೆ ಇದನ್ನು ಮೊನ್ನೆ ತಾನೆ ಕಂಡುಹಿಡಿದಿರುವರು. ಈ ಕಾಡಿನಲ್ಲಿ ೬ ಲಕ್ಷ ರೂಪಾಯಿ ಕ್ರಯ ಬಾಳುವ ೬ ಟನ್ ಗಂಧದ ಕೊರಡುಗಳು ಸಿಕ್ಕುವವು.

— ವಿಕರಾಬಾದಿನಿಂದ ಬಿಡಾರದ ವರೆಗೆ ನಿಜಾಮ ಸರಕಾರದವರು ಒಂದು ರೈಲ್ವೆಯನ್ನು ಕಟ್ಟಿಸಬೇಕೆಂದು ಇಂಡಿಯಾ ಸರಕಾರದವರು ಹುಕುಂ ಕೊಟ್ಟಿರುವರು. ಈ ರೈಲ್ವೆ ಲ್ಯಾನಿನ ಉದ್ದ ೫೬.೩೧ ಮೈಲುಗಳು.

— ಮೈಸೂರಿನ ಡಿಸ್ಟ್ರಿಕ್ಟ್ ಟ್ರೆಜರಿಯಿಂದ ಬಹಳ ಕಳವಾಗಿಯದೆ. ತನಖಿ ಮಾಡಿ ನೋಡಲಾಗಿ ರೂಪಾಯಿ ೩೫೫೦ ರೂಪ್ಯಾ ಬೆಲೆಬಾಳುವ ಚೀಟುಗಳೂ ಟಸೆ ಕಾಗದಗಳೂ ಇರುವುದಿಲ್ಲ. ಟಸೆ ಕಾಗದಗಳನ್ನು ಮಾರುತ್ತಿದ್ದ ಮನುಷ್ಯನು ತನಿಖೆಯ ಮೊದಲನೇ ದಿನ ಆತ್ಮಹತ್ಯವನ್ನು ಮಾಡಿದ ಕಾರಣ ಕಳವು ಆತನಿಂದಲೇ ನಡೆಯಿತೆಂದು ನಂಬಲು ಬಲವಾದ ಆಧಾರವಿದೆ. ಕಳವಾದ ಟಸೆ ಕಾಗದಗಳ ಮೌಲ್ಯವನ್ನು ಖಜಾನ್ಜಿಯು ತನ್ನ ಕೈಯಿಂದ ತುಂಬಿಸಬೇಕಾಗಿದೆ,

— ಮದರಾಸಿನ ಲೆಜಿಸ್ಲೇಟಿವ್ ಕೌನ್ಸಿಲಿನ ಆಫೀಸನ್ನು ಸೆಕೆಕಾಲದ ಸಂಬಂಧ ಮುಕುಫ್ ಮಾಡುವರು. ಮೇ ಮತ್ತು ಜೂನ್ ತಿಂಗಳುಗಳಲ್ಲಿ ಆಫೀಸನ್ನು ಮುಕುಫ್ ಮಾಡುವರಾದರೂ ಅತ್ಯಗತ್ಯದ ಕೆಲಸವಿರುವಾಗ ಮಾತ್ರ ಸೆಕ್ರೆಟರಿಯವರು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವರು.

— ಮಗನ್‌ಲಾಲ್ ಗಾಂಧಿಯವರ ಅಕಾಲ ಮರಣದ ಕುರಿತು ಬನಾರಸಿನ ಮುನಿಸಿಪಲ್ ಬೋರ್ಡಿನವರು ಒಂದು ದುಃಖಸೂಚಕವಾದ ಠರಾವನ್ನು ಅಂಗೀಕರಿಸಿದರು.

— ಕಾಶಿಯ ಭಾರತಧರ್ಮ ಮಹಾಮಂಡಲದ ಒಬ್ಬ ಬೋಧಕ ಸ್ವಾಮಿಜಿಯವರನ್ನು ಅವರ ಒಬ್ಬ ಶಿಷ್ಯನೇ ಹೊಡೆದಿರುವನು. ಶಿಷ್ಯನು ಮದ್ರಾಸದವನು. ಅವನು ಅಲ್ಲಿಂದ ಪಲಾಯನ ಮಾಡಿರುವನು. ಇದಕ್ಕೆ ಕಾರಣವೇನೆಂದು ಗೊತ್ತಿಲ್ಲ.

— ಸುಭಾಸಚಂದ್ರಬೋಸರು ಸಬರಮತಿ ಆಶ್ರಮಕ್ಕೆ ಬಂದು ಮಹಾತ್ಮಾಜಿಯವರೊಡನೆ ಇರುವರು.

— ಮುಂಬಾಯಿಯ ಚಿಂಚ ಬಂದರದಲ್ಲಿ ಕಳೆದ ಆದಿತ್ಯವಾರ ದಿನ ಸಂಜೆ ಬೆಂಕಿತಾಗಿ ಹತ್ತಿಯನ್ನು ದಾಸ್ತಾನು ಮಾಡಿಟ್ಟ ಒಂದು ಕಟ್ಟೋಣವು ಪೂರ್ಣ ಸುಟ್ಟು ಭಸ್ಮವಾಯಿತು.

— ನಮ್ಮ ವ್ಯಾಸರಾಯರು ಸಿಮ್ಲಾವಿಗೆ ಹೋಗಿರುವರು.

— ಬೆನಾರಸಿನಲ್ಲಿ ವಾಂತಿಬೇಧಿ ಮತ್ತು ಪ್ಲೇಗ್ ರೋಗವು ವಿಪರೀತವಾಗಿ ಅಭಿವೃದ್ಧಿ ಹೊಂದಿ ಹಲವರು ಸಾಯುತ್ತಿರುವರು.

— ಪ್ರೊಫೆಸರ್ ರಾಮಮೂರ್ತಿಯವರು ಈಗ ತನ್ನ ಸರ್ಕಸ್ ಆಟವನ್ನು ಪರ್ಮ್ ಕೊಟ್ಟಾದಲ್ಲಿ ಪ್ರದರ್ಶಿಸುತ್ತಿರುವರು. ಒಂದು ದಿನ ಅವರು ಒಂದು ಫೋರ್ಡ್ ಕಾರನ್ನು ಬಿಡುತ್ತಿರುವಾಗ ಅದನ್ನು ನಿಲ್ಲಿಸಿದರು. ಇದರಿಂದ ತೃಪ್ತರಾಗದ ಜೈಲ್ ಸುಪರಿಂಟೆಂಡೆಟರು ಮರು ದಿನ ರಾತ್ರೆ ಎರಡು ಕಾರುಗಳನ್ನು ತಂದರು, ಒಂದು ಫೋರ್ಡ್ ಮತ್ತೊಂದು ಶವರ್‌ಲೆಟ್ ಕಾರುಗಳನ್ನು ಅಚೆ ಈಚೆ ನಿಲ್ಲಿಸಿ ನಡುವೆ ಪ್ರೊಫೆಸರರನ್ನು ನಿಲ್ಲಿಸಿದರು. ಎರಡು ಕಾರುಗಳ ಇಂಜಿನುಗಳನ್ನು ಒಮ್ಮೆಯೇ ಕೆಲಸ ಮಾಡಲು ಪ್ರಾರಂಭಿಸಿ ಚೆನ್ನಾದ ರಭಸದಿಂದ ಓಡಿಸತೊಡಗಿದರು. ಪ್ರೊಫೆಸರರು ಅವುಗಳ ಹಿಂದಕ್ಕೆ ಕಟ್ಟಿದ ಹಗ್ಗಗಳಿಂದ ಅವುಗಳನ್ನು ಜಗ್ಗಿ ನಿಲ್ಲಿಸಿದರು. ಇದನ್ನು ನೋಡಿ ಎಲ್ಲರೂ, ಅವರ ಶಾರೀರಿಕ ಶಕ್ತಿಯು ಅಮೋಘವಾದುದು ಎಂದು ಆಶ್ಚರ್ಯಪಟ್ಟು ಹೊಗಳಿದರು.

— ಮುಂಬಾಯಿಯಲ್ಲಿ ಪ್ರಾರಂಭವಾಗಿರುವ ಕೂಲಿಗಳ ಮುಷ್ಕರವು ಇನ್ನೂ ಶಾಂತವಾಗಿಲ್ಲ. ಮುಷ್ಕರ ಹಾಕಿದ ಕೂಲಿಗಳಿಗೆ ಜೀವನ ನಡೆಸುವದೇ ಕಷ್ಟವಾಗಿ ಪರಿಣಮಿಸಿಯದೆ. ಅವರು ಹಳ್ಳಿಗೇಗೆ ಹೋಗಿ ದುಡಿದು ತಿನ್ನಬೇಕು ಅಥವಾ ಮುಂಬಾಯಿ ನಗರಿಯಲ್ಲಿ ಸಾಲವನ್ನು ಪಡೆದು ಊಟಮಾಡಬೇಕು ಎಂದು ಒಂದು ಸಭೆ ಕೂಡಿ ನಿಶ್ಚೈಸಿದರು.

— ಮೊನ್ನೆ ನಡೆದ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನಲ್ಲಿ, ಬ್ರಿಟಿಷ ವಸ್ತುಬಹಿಷ್ಕಾರವನ್ನು ಪ್ರತಿಯೊಬ್ಬರು ಆಚರಿಸಬೇಕೆಂದು ಅಧ್ಯಕ್ಷರಾದ ಸುಬಾಸ ಚಂದ್ರಭೋಸರು ಒತ್ತಿ ಹೇಳಿದರು.

— ಸಿಲೋನಿನಲ್ಲಿ ಒಂದು ಏರೋಕ್ಲಬ್ಬನ್ನು ಪ್ರಾರಂಭಿಸಿ ಕೆಲವು ವಾಯುವಿಮಾನಗಳನ್ನು ಇಡುವರು.

— ಡಾ। ಅನ್ಸಾರಿಯವರು ಪ್ರೊಫೆಸರ ಇಂದ್ರರನ್ನು ಪರೀಕ್ಷಿಸಿ ಅವರು ಆದಷ್ಟು ಬೇಗನೆ ಒಂದು ಎತ್ತರವಾದ ಸ್ಥಳಕ್ಕೆ ಹವಾ ಬದಲಾವಣೆಗೆ ಹೋಗಬೇಕೆಂದು ಹೇಳಿರುವರು. ಅವರ ಶರೀರದಲ್ಲಿ ವಿಶೇಷ ತರದ ಜ್ವರವಿದೆ. ಜೈಲಿಗೆ ಅವರನ್ನು ಸೇರಿಸಿದ ಮೇಲೆ ಭಾರದಲ್ಲಿ ಅವರು ಬಹಳ ಕಡಿಮೆಯಾಗಿರುವರು ಎಂದು ಡಾ। ಅನ್ಸಾರಿಯವರು ಅಭಿಪ್ರಾಯಪಡುವರು.

— ರಾವಲ್‌ಪಿಂಡಿಯಲ್ಲಿ ಮದುವೆಯ ಸಮಯದಲ್ಲಿ ಒಂದು ಕಡೆಯಲ್ಲಿ ಧೀಪಗಳನ್ನು ಉರಿಸುವಾಗ ಮನೆಗೆ ಬೆಂಕಿ ತಾಗಿ ಚಪ್ಪರ ಮೊದಲಾದವುಗಳಲ್ಲಿ ಹಬ್ಬಿ ೧೯ ಜನರು ಸತ್ತುಹೋದರು. ೫೦ ಜನರಿಗೆ ಜಖಮಾಗಿರುತ್ತದೆ. ಮದುಮಗನ ಜೊತೆನೂ, ಸಹೋದರನೂ, ಸತ್ತಿರುವರು.

— ಚಂಪ್ರೋರಿನಲ್ಲಾದ ಶಿವಾಜಿ ಜನ್ಮದಿನಾಚರಣೆಯ ಸಂಬಂಧದ ಹಿಂದೂ ಮುಸಲ್ಮಾನರ ಕಲಹದಲ್ಲಿ ಇದು ವರೆಗೆ ೧೫ ಜನ ಮುಸಲ್ಮಾನರನ್ನು ಹಿಡಿದು ಕೈದುಮಾಡಿರುವರು.

— ಮದರಾಸು ಲೋ ಮೆಂಬರರು ಸಂಚಾರದಲ್ಲಿರುವರು. ಅವರು ಮೊನ್ನೆ ಮಲಬಾರನ್ನು ಸಂದರ್ಶಿಸಿದರು.

— ಕಾಶ್ಮೀರದ ಮಹಾರಾಜರು ಇದೇ ೨೧ನೇ ದಿನ ಇಂಗ್ಲೆಂಡಿಗೆ ಹೊರಟುಹೋಗುವರು. ಅವರ ಗೈರಹಾಜರಿಯಲ್ಲಿ ರಾಜ್ಯದ ಆಡಳಿತೆಯು ಮೂರು ಜನ ಮಂತ್ರಿಗಳ ಸಮ್ಮೇಳನದಿಂದ ನಡೆಯುವದು.

— ಮದರಾಸಿನಿಂದ ಡಿಲ್ಲಿಗೆ ಹೋಗುವದಾದರೆ ಮುಂಬಾಯಿಗೆ ಹೋಗಿ ಹೋಗಬೇಕಿತ್ತು. ಈಗ ನಾಗಪುರ ದಾರಿಯಾಗಿ ಖಾಜಿ ಪೇಟ ಬಾಲರ ಶಾ,ರ್ಟಲುವೇ ಲ್ಯಾನನ್ನು ಹಾಕಿದ್ದರಿಂದ ಮದರಾಸಿನಿಂದ ನೆಟ್ಟಗೆ ನಾಗಪುರ ದಾರಿಯಾಗಿ ಡಿಲ್ಲಿಗೆ ಹೋಗಲು ಅನುಕೂಲವಾಯಿತು.

— ರಾಜಕೋಟೆ ಸರಕಾರದವರು ತಮ್ಮ ರಾಜ್ಯದಲ್ಲಿ ಆಗುವ ವಸ್ತುಗಳನ್ನೇ ಉಪಯೋಗಿಸಬೇಕೆಂದೂ ಅಂಥಾ ವಸ್ತುಗಳು ಸಿಕ್ಕದೆ ಇದ್ದರೆ ಮಾತ್ರವೇ ಪರದೇಶಿ ವಸ್ತುಗಳನ್ನು ಉಪಯೋಗಿಸಬೇಕೆಂದು ಹುಕುಂ ಕೊಟ್ಟಿರುವರು.

— ಎಲ್ಲಾ ಶಾಲೆಗಳಲ್ಲಿಯೂ ಮಕ್ಕಳ ದೇಹಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಮದರಾಸು ಸರಕಾರದವರು ಒಂದು ಕಮಿಟಿಯನ್ನು ನೇಮಿಸುವರು.

— ಬಂಗಾಳದಲ್ಲಿ ಖರಗ್‌ಪುರ ಎಂಬಲ್ಲಿ ಬಿರುಗಾಳಿಯು ಬೀಸಿ ಹೆಚ್ಚು ಹಾವಳಿಯನ್ನು ಉಂಟುಮಾಡಿಯದೆ. ಮರಗಳು ಕಿತ್ತು ಬಿಸಾಡಲ್ಪಟ್ಟಿವೆ. ಅನೇಕ ಮನೆಗಳು ಬಿದ್ದುಹೋಗಿಯವೆ.

— ಈಗ ಹಲವು ಯಜಮಾನರ ಕೈಕೆಳಗೆ ಮದರಾಸು ಸಂಸ್ಥಾನದಲ್ಲಿರುವ ಹಲವು ಎಲಿಮೆಂಟರಿ ಶಾಲೆಗಳನ್ನು ಒಂದೇ ಆಡಳಿತೆಯಲ್ಲಿ ತರುವುದಕ್ಕೆ ಅನುಕೂಲತೆಯನ್ನು ಮಾಡಬೇಕೆಂದು ಮದರಾಸು ಸರಕಾರದವರು ವಿದ್ಯಾ ಇಲಾಖಾ ಡ್ಯಾರೆಕ್ಟರರಿಗೆ ಹುಕುಂ ಕೊಟ್ಟಿರುವರು. ಈಗಿನ ಕ್ರಮದ ಪ್ರಕಾರ ಆದಿದ್ರಾವಿಡ ಶಾಲೆಗಳು ಲೇಬರ್ ಇಲಾಖೆಯ ಕೈಕೆಳಗೆ ಗಿವೆ, ಮೀನು ಹಿಡಿಯುವ ಜಾತಿಯವರ ಶಾಲೆಗಳು ಫಿಶರಿ ಇಲಾಖೆಯ ಕೈಕೆಳಗಿವೆ. ಪಂಚಾಯತರ ಕೈಕೆಳಗಿರುವ ಶಾಲೆಗಳು ಪಂಚಾಯತುಗಳ ರಿಜಿಸ್ಟ್ರಾರ ಜನರಲರವರ ಕೈಕೆಳಗಿವೆ. ಕೆಲವು ಜಾತಿಗಳ ಮಕ್ಕಳನ್ನು ಶಾಲೆಗಳಲ್ಲಿ ದಾಖಲು ಮಾಡಲಿಕ್ಕೆ ಶಾಲೆಗಳ ಮೆನೆಜಮೆಂಟಿನವರು ಒಪ್ಪದೆ ಇದ್ದರೆ ಸರಕಾರದಿಂದ ಸಿಕ್ಕುವ ಗ್ರೆಂಟು ಅಂಥಾ ಶಾಲೆಗಳಿಗೆ ಸಿಕ್ಕಲಿಲ್ಲವೆಂದು ಗ್ರೆಂಟ್ ಇನ್ ಎಯಿಡ್ ಕೋಡಿನಲ್ಲಿ ಬದಲಾವಣೆಗಳು ಆಗಲಿಕ್ಕಿವೆ. ಇದಕ್ಕಾಗಿ ಮೆನೆಜ್‌ಮೆಂಟಿನವರಿಗೆ ಸ್ವಲ್ಪ ಆಲೋಚಿಸುವುದಕ್ಕಾಗಿ ಸಮಯವು ಕೊಡಲ್ಪಡುವುದು.

— ರವೀಂದ್ರನಾಥ ಠಾಕೂರರಿಗೆ ದೇಹಾಲಸ್ಯ ಸುರುವಾದ್ದರಿಂದ ಸಮುದ್ರ ಪ್ರಯಾಣ ಮಾಡಲಿಕ್ಕೆ ಕಲ್ಕತ್ತದಿಂದ ಹೊರಟಿರುವರು. ಮದರಾಸಿಗೆ ಬರುವರು.

— ಜೈಲಿನಲ್ಲಿದ್ದ ಪ್ರೊಫೆಸರ್ ಇಂದ್ರರವರನ್ನು ನಿನ್ನೆಯ ದಿನ ಬೆಳಿಗ್ಗೆ ೧೦ ಘಂಟೆಗೆ ಬಿಡುಗಡೆ ಮಾಡಿದರು. ಡಾ। ಅನ್ಸಾರಿಯವರ ಸೂಚನೆಯಂತೆ ಅವರು ಒಂದು ಹಿಲ್‌ಸ್ಟೇಶನಿಗೆ ಹೋಗುವರು.

— ಈ ವರುಷ ಈ ಸಂಸ್ಥಾನದಲ್ಲಿ ೬೬ ರೂರಲ್ ಆಸ್ಪತ್ರೆಗಳನು ಹೆಚ್ಚಿಸಬೇಕೆಂದು ಬಜೇಟಿನಲ್ಲಿ ಸೆಂಕ್ಷನಾಗಿರುತ್ತದೆ. ಈ ಕುರಿತು ಜಿಲ್ಲಾ ವೈದ್ಯ ಅಧಿಕಾರರ ಕೂಡೆ ವಿಚಾರಿಸಿ, ಪ್ರತಿ ತಾಲೂಕುಬೋರ್ಡಿನವರು ಬೇಕೋ ಯಾ ಬೇಡವೋ ಎಂಬವನ್ನು ಶೀಘ್ರದಲ್ಲಿಯೇ ಸರಕಾರಕ್ಕೆ ತಿಳಿಸಬೇಕಂತೆ.

— ಅಜಮಿರ ಹುಡುಗಿಯರ ಶಾಲೆಯಲ್ಲಿ ಪ್ರಾರಂಭವಾಗಿದ್ದ ಮುಷ್ಕರವು ಈಗ ಶಾಂತವಾಗಿರುತ್ತದೆ.

— ಸೈಯದರಾಜಾ ಎಂಬಲ್ಲಿ ಈಸ್ಟ್‌ಯಿಂಡಿಯನ್ ರೈಲ್ವೆಯ ೯ ಗಾಡಿಗಳು ಕಂಬಿಯಿಂದ ತಪ್ಪಿ ಹೋಗಿ ೬ ಘಂಟೆಗಳ ವರೆಗೆ ರೈಲು ಚಲಾವಣೆಯಾಗಲಿಲ್ಲ. ಆದರೆ ಯಾರಿಗೂ ಅಪಾಯವು ತಟ್ಟಲಿಲ್ಲ.

— ಮಾಯಾವರದಲ್ಲಿ ಒಬ್ಬನ ಹೊಸಮನೆಗೆ ಕಳ್ಳರು ಕನ್ನಹಾಕಿ ರೂಪಾಯಿ ೩೬೨೮ನ್ನು ಕದ್ದುಕೊಂಡು ಹೋಗಿರುವರು.

— ಅಲ್ಲಿಪ್ಪಿ ಎಂಬಲ್ಲಿ ಮೂವರು ಹುಡುಗಿಯರು ಒಂದು ನದಿಯಲ್ಲಿ ಸ್ನಾನ ಮಾಡಲು ಹೋಗಿದ್ದರು. ಮೊದಲು ಒಬ್ಬ ಹುಡುಗಿಯು ನೀರಿನಲ್ಲಿ ಇಳಿದು ಈಜಾಡುತ್ತಾ ಸ್ನಾನಮಾಡುವಾಗ ದಣಿದು ದಡಕ್ಕೆ ಬರಲಾರದಾದಳು. ಅವಳ ಸಹಾಯಕ್ಕೆಂದು ಇನ್ನೊಬ್ಬಳು ಹೋಗಲು ಅವಳು ಕೂಡ ಸಹಾಯವನ್ನು ಮಾಡಲು ಶಕ್ತಳಾಗಲಿಲ್ಲ. ಮೂರನೆಯವಳೂ ನೀರಿಗೆ ಇಳಿದು ಸೋತುಹೋದಳು. ಇದನ್ನೆಲ್ಲಾ ನೋಡುತ್ತಿದ್ದ ಒಬ್ಬ ಯುವಕನು ಹಾರಿ ಬಂದು ಮತ್ತೆ ನೀರಿಗೆ ಇಳಿದ ಇಬ್ಬರು ಹುಡುಗಿಯರನ್ನು ಬದುಕಿಸಿದನು. ಮೊದಲಿನವಳು ಸಿಕ್ಕಲೇ ಇಲ್ಲ. ಅವಳ ಶವವು ಮರು ದಿನ ಕಾಣಸಿಕ್ಕಿತು.

ಕುಂಭಕೋಣದ ಕೆಲವು ಆದಿದ್ರಾವಿಡರೊಳಗೆ ಕಠಿಣವಾದ ಜಗಳವಾಗಿ ಒಬ್ಬನು ಮರಣೋನ್ಮುಖನಾಗಿ ಆಸ್ಪತ್ರೆಯಲ್ಲಿರುವನು.

— ಕಲಕತ್ತದ ರಾಜರಾಜೇಶ್ವರಿ ಅಮ್ಮನರ ಪ್ರತಿಮೆಯನ್ನು ನದಿಸ್ನಾನಕ್ಕಾಗಿ ಕೊಂಡುಹೋಗುತ್ತಿರುವಾಗ, ಮುಸಲ್ಮಾನರು ಕಲ್ಲು ಬಿಸಾಡಿದ ಕಾರಣ ಹಿಂದೂ ಮುಸಲ್ಮಾನರೊಳಗೆ ಸ್ವಲ್ಪ ಜಗಳವಾಗಿ ತೊಂದರೆಯಾಯಿತು.

— ಹಿಂದೂ ಹುಡುಗಿಯರಿಗಾಗಿ ಒಂದು ಕೋಲೇಜನ್ನು ಸ್ಥಾಪಿಸಬೇಕೆಂದೂ, ಅಸ್ಪೃಶ್ಯರಿಗೆ ವಿಧ್ಯಾಭ್ಯಾಸವನ್ನು ಮಾಡಿಸುವದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಸೆಂಕ್ಷನ್ ಮಾಡಬೇಕೆಂದೂ ಬರುವ ಎಸೆಂಬ್ಲಿಯ ಅಧಿವೇಶನದಲ್ಲಿ ಲಾಲಾಜಿಯವರು ಒಂದು ಠರಾವನ್ನು ಮುಂದಕ್ಕೆ ತರಲಿಕ್ಕಿರುವರು. ಅಸ್ಪೃಶ್ಯರು ಮಾತ್ರವಲ್ಲದೆ ಪತಿತ ಜನಾಂಗದವರು ಯಾರ್‍ಯಾರೆಂದು ಲಾಲಾಜಿಯವರು ಎಸೆಂಬ್ಲಿಯಲ್ಲಿ ಚರ್ಚಿಸಲಿರುವರು,

— ಬಿಹಾರದ ಒಂದು ಹಳ್ಳಿಯಯಲ್ಲಿ ಹಿಂದೂ ಮುಸಲ್ಮಾನರೊಳಗೆ ಜಗಳವಾಯಿತು. ಇದರಿಂದ ೯ ಜನ ಮಹಮ್ಮದೀಯರೂ ೩ ಜನ ಹಿಂದೂಗಳೂ ಜಖಮು ಹೊಂದಿದರು. ಪೋಲೀಸರು ಇದು ವರೆಗೆ ೧೫ ಜನ ಹಿಂದೂಗಳನ್ನೂ ೧೬ ಜನ ಮಹಮ್ಮದೀಯರನ್ನೂ ಸೆರೆಹಿಡಿದಿರುವರು. ಮುಸಲ್ಮಾನರ ಮಸೀದಿಯ ಮುಂದುಗಡೆ ಗಾಯನವನ್ನು ಮಾಡಿದುದೇ ಕಲಹಕ್ಕೆ ಕಾರಣ.

— ಡಾ। ರವೀಂದ್ರನಾಥ ಠಾಗೋರರ ೬೭ನೇ ಜನ್ಮದಿನಚರಣೆಯು ಅವರ ಕಲಕತ್ತಾ ನಿವಾಸಮಂದಿರದಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಹೂವಿನ ಮಳೆ ಸುರಿದಂತೆ ಹೂ ಸುರಿದಿದ್ದರು. ಗಾಯನ ಶಂಖವಾದ್ಯ ಮೊದಲಾದವೂ ಇದ್ದವು. ಈ ಸಮಾರಂಭದಲ್ಲಿ ಶ್ರೀಯುತರುಗಳಾದ ಜಾದುನಾಥ ಸರಕಾರ, ರಮಾನಂದ ಚಟ್ಟರ್ಜೀ ಮೊದಲಾದ ಹಲವು ಪ್ರತಿಷ್ಠಿತ ಮಹನೀಯರು ಇದ್ದರು.

ದಕ್ಷಿಣ ಕನ್ನಡ.

ಮಂಗಳೂರು: — ಮಂಗಳೂರಿನ ಹೋಟೆಗಳು ತಮ್ಮ ೧೨॥ ರೂಪಾಯಿ ಸಂಬಳವನ್ನು ೧೫ರೂಪಾಯಿಗಳನ್ನಾಗಿಯೂ, ಮೋಟರ್ ಲೋರಿಯ ಹೋಟೆಗಳಿಗೆ ೧೮ರೂಪಾಯಿಯನ್ನಾಗಿಯೂ ಮಾಡಬೇಕೆಂದು ಕಳೆದ ಶನಿವಾರದಿಂದ ತಮ್ಮ ಕೆಲಸಕ್ಕೆ ಮುಷ್ಕರವನ್ನು ಹಾಕಿದ ಕಾರಣ ಮೂರು ನಾಲ್ಕು ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾಯಿತು. ತಾ. ೭ನೇ ದಿನ ಮುನಿಸಿಪಲ್ ಚೆಯರ್‌ಮೇನರ ಮನೆಯಲ್ಲಿ ಕೆಲವು ಕೌನ್ಸಿಲರರು ಕೂಡಿ ವಿಚಾರಿಸಿ ಅಲ್ಲಿ ನೆರೆದ ಹೋಟೆಗಳೊಡನೆ ಚರ್ಚಿಸಿ, ಸಾಮಾನ್ಯ ಹೋಟೆಗಳಿಗೆ ರೂಪಾಯಿ ೧೩-೮ನ್ನಾಗಿಯೂ, ಮೋಟರ್ ಲೋರಿಯ ಹೋಟೆಗಳಿಗೆ ೧೫ ರೂಪಾಯಿಯನ್ನಾಗಿಯೂ, ತಿಂಗಳ ಸಂಬಳವನ್ನು ನಿರ್ಣಯಿಸಿದರು. ಆ ಮೇಲೆ ತಾರೀಕು ೮ನೇ ದಿನ ಹೋಟೆಗಳು ಪುನಃ ಕೆಲಸವನ್ನು ಪ್ರಾರಂಭಿಸಿದರು.

ಮೊನ್ನೆ ತಾನೆ ನಡೆದ ಮಂಗಳೂರು ಮುನಿಸಿಪಾಲಿಟಿಯ ಮೀಟಿಂಗಿನಲ್ಲಿ ಸ್ವಾಮನ್ ಕಮಿಶನನ್ನು ಬಹಿಷ್ಕರಿಸಬೇಕೆಂದು ನಿರ್ಣಯವಾಯಿತು.

ಈ ತಿಂಗಳಲ್ಲಿ ಇಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ಅಧ್ಯಕ್ಷರು ಅಹಮ್ಮದ ನಗರದ ವೈದ್ಯ ಪಂಚಾನನ ಗೋಪಾಲಶಾಸ್ತ್ರಿ ಗುಣೆಯವರೆಂದು ತಿಳಿದುಬರುತ್ತದೆ.

ಬುದ್ಧಜಯಂತಿಯ ಆಚರಣೆಯು ಕಳೆದ ಶುಕ್ರವಾರ ಸಂಜೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಥಿಯೊಸೊಫಿಕಲ್ ಸೊಸೈಟಿಯವರಿಂದ ಜರಗಿಸಲ್ಪಟ್ಟಿತು.

ಪುತ್ತೂರು ಡಿವಿಜನಿನ ಎಕ್ಸೈಜ್ ಎಡ್ವೈಸರಿ ಕಮಿಟಿಯವರ ಸಭೆಯು ಪುತ್ತೂರಿನಲ್ಲಿ ನಡೆಯಿತು. ಬಲನಾಡಿನ ಶರಾಬು ಅಂಗಡಿಯು ಶಾಲೆಯ ಸಮೀಪವಿರುವದರಿಂದ ಅದನ್ನು ಅಲ್ಲಿಂದ ತೆಗೆಯಬೇಕೆಂಬ ತಾಲೂಕು ಬೋರ್ಡ ಪ್ರೆಸಿಡೆಂಟರ ಸೂಚನೆಯನ್ನು ಬರುವ ಸಭೆಯಲ್ಲಿ ಚರ್ಚಿಸುವದೆಂದೂ, ಶಾಲೆ ಯಾ ಅಂಗಡಿಯನ್ನು ಅಲ್ಲಿಂದ ತೆಗೆಯಬೇಕೆಂದು ತಹಶೀಲದಾರರಿಗೆ ತಿಳಿಸಬೇಕೆಂದೂ ನಿರ್ಣಯವಾಯಿತು.

ಇದೇ ತಿಂಗಳ ತಾ. ೨೫ ಮತ್ತು ೨೬ಕ್ಕೆ ಧಾರವಾಡದಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ಜರಗಲಿಕ್ಕೆ ಇದೆ. ನಮ್ಮ ಜಿಲ್ಲೆ ಇತರ ಪ್ರತಿನಿಧಿಗಳಾಗಿ ಹೋಗಲಿಕ್ಕೆ ಇಚ್ಛಿಸುವ ಕಾಂಗ್ರೆಸು ಮೆಂಬರರು ತಾಲೂಕು ಕಮಿಟಿಗಳ ಮೆಂಬರರಾಗಿದ್ದರೆ ಸಂಬಂಧಪಟ್ಟ ತಾಲೂಕು ಕಮಿಟಿಯ ಕಾರ್ಯದರ್ಶಿಯರ ಮೂಲಕ ಜಿಲ್ಲೆಯ ಪ್ರತ್ಯಕ್ಷ ಸದಸ್ಯರು ಪ್ರಕಟನೆಯ ತಮ್ಮ ಮನವಿಯನ್ನು ಈ ತಿಂಗಳ ತಾ. ೧೮ರ ವಳಗೆ ತಮ್ಮ ಕಚೇರಿಗೆ ತಲ್ಪುವ ಹಾಗೆ ಕಳುಹಿಸತಕ್ಕದ್ದು. ತಮ್ಮ ಮನವಿಯಲ್ಲಿ ತಾವು ಕಾಯಂ ಆಗಿ ಹಿಂದೂ ದೇಶದಲ್ಲಿ ಮಾಡಿದ ಕೈನೂಲಿನಿಂದ ಹಾಗೂ ಕೈಮಗ್ಗದಿಂದ ಮಾಡಿದ ಖಾದಿಯನ್ನು ಧರಿಸುವವರೂ ಯಾ ಅಲ್ಲವೊ ಎಂಬವರ ವಿಷಯ ಧೃಢೀಕರಿಸಿ ದಸ್ಕತು ಹಾಕಿ ಕಳುಹಿಸತಕ್ಕದ್ದು. ಎಂದು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಾರೀಕು ೫-೫-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೬ ಮರಣಗಳೂ, ೩೧ ಜನನಗಳೂ ಆದವು. ಈ ಪೈಕಿ ೫ ಶಿಶು ಮರಣಗಳು.

ಇಲ್ಲಿಯ ಪೋಸ್ಟ್‌ಮಾಸ್ತರರಾಗಿದ್ದ ಮಿ। ಎ. ಡಿ. ಐರನ್‌ರವರಿಗೆ ಕೊಚ್ಚಿಗೆ ವರ್ಗವಾಗಿರುತ್ತದೆ. ಅವರ ಬದಲಿಗೆ ಮಿ। ಕೆ. ಎನ್. ಕುಂಞಾಂಬುರವರು ಮಂಗಳೂರಿಗೆ ಬಂದಿರುವರು.

ಕುಂಬಳೆ: — ಸ್ವಾಮಿ ನಿತ್ಯಾನಂದ ಸಾಧುವರ್ಯರು ಇಲ್ಲಿಯ ರೈಲ್ವೆ ಸ್ಟೇಶನಿನ ಬಳಿ ಒಂದು ಸ್ಥಳವನ್ನು ಕ್ರಯಕ್ಕೆ ಪಡೆದು ಧರ್ಮಸಾಲೆ ಬಾವಿ ಕೂಡ ಮಾಡಿಸುತ್ತಿರುವರು. ಇದಕ್ಕೆ ತಗಲುವ ಸುಮಾರು ರೂಪಾಯಿ ೧೦೦೦ಕ್ಕಿಂತ ಮಿಕ್ಕಿದ ದ್ರವ್ಯಸಹಾಯವು ಅವರು ನಿರೀಕ್ಷಿಸಿದಕ್ಕಿಂತ ಮುಂಚಿತವಾಗಿ ಬೇರೆಬೇರೆಯವರಿಂದ ಸಹಾಯವಾಗಿ ಕೊಡಲ್ಪಟ್ಟಿರುವದಂತೆ. ಸ್ತುತ್ಯ!

ಇದೇ ಕಳೆದ ಎಪ್ರಿಲ್ ತಾ. ೩೦ನೆಯ ತಾಲೂಕು ಬೋರ್ಡು ಸಭೆಯಲ್ಲಿ ಇಲ್ಲಿ ಒಂದು ರೂರಲ್ ಡಿಸ್ಪೆನ್ಸರಿ ಇಡುವದೆ ಸೆಂಕ್ಷನ್ ಆಗಿರುವದಂತೆ. ಮೊದಲು ಇಲ್ಲಿರುತ್ತಿದ್ದ ಲೋಕಲ್ ಫಂಡ್ ಡಿಸ್ಪೆನ್ಸರಿಯು ಆ ಕಾಲದ ವೈದ್ಯ ಉದ್ಯೋಗಸ್ಥರ ಆಕ್ಷೇಪಣೆ ಸಮ್ಮಂಧ ಮಂಜೂರಾಗದೆ ತೆಗದುಹಾಕಿದ್ದರಿಂದ ಸಾರ್ವಜನಿಕ ಉಪಯೋಗಕ್ಕಿರುವ ಈ ನೂತನ ಆಸ್ಪತ್ರೆಗೆ ಮಾನ್ಯ ಪ್ರೆಸಿಡೆಂಟರು ತಕ್ಕ ವೈದ್ಯ ಉದ್ಯೋಗಸ್ಥರನ್ನು ಒದಗಿಸಿಕೊಡುವದು ಮುಖ್ಯ ಕರ್ತವ್ಯವಾಗಿದೆ. ವ್ಯಾಪಾರ ಉದ್ಯೋಗ ಸಮ್ಮಂಧ ಹೇರಳ ಜನ ಆಮದರಫ್ತಾಗುತ್ತಿದ್ದು ಒಳ್ಳೇ ಹವೆಯುಳ್ಳ ಈ ಬಂದರ ಶಹಾರಿಗೆ ಬರುವರೆ ಯಾವ ವೈದ್ಯ ಉದ್ಯೋಗಸ್ಥರೂ ನಿರಾಕರಿಸಲಾರರು.

ಇಲ್ಲಿಯ ರೈಲ್ವೆ ಸ್ಟೇಶನಿನಲ್ಲಿ ಈ ಮೊದಲು ಸಾಮಾನಿನ ಪಾಸ್ ಪುಸ್ತಕವು ಕಳವಾಗಿದ್ದು ಇಲ್ಲಿಯ ವ್ಯಾಪಾರಸ್ಥರೊಬ್ಬರು ಆ ಪುಸ್ತಕದಿಂದ ಕೆಲವು ಸೃಷ್ಟನೆ ಪಾಸುಗಳನ್ನು ಮಾಡಿ ಮಂಗಳೂರಿಂದ ಸುಮಾರು ರೂಪಾಯಿ ೩೦೦೦ಕ್ಕೆ ಮಿಕ್ಕಿದ ಹಣ ಪಡಕೊಂಡು ಪರಾರಿಯಾಗಿರುವದಾಗಿಯೂ ಈ ಕುರಿತು ತನಿಖೆ ನಡೆಯುತ್ತದಾಗಿ ಸಹಾ ವರ್ತಮಾನವಿದೆ.

ರಟ್ಟಾಡಿ: — ಹಲವು ವರ್ಷಗಳ ಹಿಂದೆ ಹಾಲಾಡಿಯಿಂದ ಕಳಕುಂಕಕ್ಕೆ ಹೋಗುವ ಮಾರ್ಗವು ಹಾಳುಬಿದ್ದು ಅಮಾಸೆಬೈಲು ರಟ್ಟಾಡಿ ಮಚ್ಚಟ್ಟು ಗ್ರಾಮಗಳಿಂದ ಸಾಮಾನುಗಳನ್ನು ಬಂದರಕ್ಕೆ ಕೊಂಡುವೊಯುವರೆಯೂ ಮತ್ತು ಬಂದರದಿಂದ ಸಾಮಾನುಗಳನ್ನೇರುವರೆಯೂ ಕೂಡ ಬಹಳ ಅನಾನುಕೂಲವಾದ್ದರಿಂದ ರೈತರು ಬಹಳ ಸಂಕಷ್ಟಪಡುತ್ತಿದ್ದರು. ಆದಾಗ್ಯೂ ಈ ಸಂಕಷ್ಟಗಳ ಕುರಿತು ಮಾನ್ಯ ಕುಂದಾಪುರ ತಾಲೋಕು ಬೋರ್ಡಿನವರು ಲಕ್ಷ್ಯಕ್ಕೆ ತಂದು ಈಗ ಸದರಿ ರಸ್ತೆಯನ್ನು ೩ ಮೈಲು ದೂರದ ವರೇಗೆ ದುರಸ್ತು ಪಡಿಸಿರುತ್ತಾರೆ. ಇನ್ನು ಈ ರಸ್ತೆಯನ್ನು ಘಾಟಿಯ ವರೇಗೆ ದುರಸ್ತು ಮಾಡುವ ಹಾಗೆ ಸೃಷ್ಟಿಕರ್ತನಾದ ದೇವರು ತುಂಬಾ ಬುದ್ಧಿ ಕೊಡಲಿಯೆಂಬದಾಗಿ ಮನಃಪೂರ್ವಕ ರೈತರ ವಿಜ್ಞಾಪನೆ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರ ಬಸ್ಸುಗಳು [illegible] (M. S. M. Railway) [illegible]

[illegible]

(2) [illegible]

(3) [illegible]

[illegible]

ಫಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವ.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಪದಕವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು. ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದು ಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟು ಜನ ಸ್ತ್ರೀಯರಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಲ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಕೆಲವೇ ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಶಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚು ಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚಾತುರ್ಯಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚಾತುರ್ಯವು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಆಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇವನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಳವಾಗಿಯೂ ಅತ್ಯಂತ ಕಾಮರಸಭರಿತವಾದ ಶೃಂಗಾರದಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ, ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್, ಪ್ರಭು ಬುಕ್ ಡಿಪೋ, ಬಳ್ಳಾರಿ.

ಸುರತ್ಕಲ್:— ಇಲ್ಲಿಯ ಇದ್ದ ವಿದ್ಯಾದಾಯಿನೀ ಶಾಲೆಯ ಹನ್ನೊಂದನೇ ವರ್ಷ ವರ್ಧಂತಿ ಮಹೋತ್ಸವವು ಇದೇ ಕಳೆದ ತಾರೀಕು ೨೯-೪-'೨೮ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ರಾವ್ ಸಾಹೇಬ್ ಮಹಾಬಲ ಹೆಗ್ಡೆ ಬಿ. ಎ. ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಬಾಲಕರಿಂದ ಪ್ರಾರ್ಥನಾಗೀತವು ಹಾಡಲ್ಪಟ್ಟೊಡನೆ ರಾ. ಯು. ಸೀತಾರಾಮಾಚಾರ್ಯರವರು ಶಾಲಾಭಿನಂದನ ಕಾರ್ಯಭಾಗವನ್ನು ನೆರವೇರಿಸಿದರು. ಆ ಬಳಿಕ ಚಿಕ್ಕ ಮಕ್ಕಳ ಕೋಲಾಟ ಬಾಲಕನೊಬ್ಬನ ಇಂಗ್ಲೀಷ್ ಪದ್ಯ ಹಾಡುವಿಕೆ, ವಿದ್ಯಾರ್ಥಿಗಳ ನಾಟಕಾಭಿನಯ ಇತ್ಯಾದಿ ಕಾರ್ಯಕ್ರಮಗಳು ಜರಗಿದ ತರುವಾಯ ಶಾಲಾ ಮುಖ್ಯೋಪಾಧ್ಯಾಯರು ಗತವರ್ಷದ ವರದಿಯನ್ನು ಓದಿದರು. ಆ ನಂತರ ವಿದ್ಯಾರ್ಥಿಗಳಿಗೆ ಇನಾಮುಗಳು ಹಂಚಲಾದವು. ಕೆಲವು ಸಭಿಕ ಮಹನೀಯರು ಶಾಲಾಭ್ಯುದಯವನ್ನು ಹಾರೈಸಿ ಮಾತನಾಡಿದರು. ಕೊನೆಗೆ ಮಾನ್ಯ ಸಭಾಧ್ಯಕ್ಷರು ಶಾಲೆಯ ಈಗಣ ಕ್ರಮನಡವಳಿಕೆಗಳನ್ನು ಕೊಂಡಾಡಿ ಅದು ಹೆಚ್ಚಿನ ಶ್ರೇಯಸ್ಸನ್ನು ಪಡೆಯಲೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಕೃತಜ್ಞತಾ ವಂದನೆಗಳು ಅರ್ಪಿಸಲ್ಪಟ್ಟ ಒಡನೆಯೇ ಮಂಗಳಗೀತವು ಹಾಡಲ್ಪಟ್ಟು ಅಂದಿನ ಸಮಾರಂಭವು ಮುಕ್ತಾಯವಾಯಿತು.

ಅದೇ ದಿನ ರಾತ್ರಿ ಇ. ವಿ. ಎಮೆಚ್ಯುರ್ಸ್‌ರು ಶಾಲಾ ಉಪಕಾರಾರ್ಥವಾಗಿ 'ಕಂಸವಧೆ' ಎಂಬ ನಾಟಕವನ್ನು ಅಭಿನಯಿಸಿ ನೆರೆದ ಸಭಿಕರನ್ನು ಮಹದಾನಂದಗೊಳಿಸಿದರು.

ಇಲ್ಲಿ ಒಂದು ಪಂಚಾಯತ ಕೋರ್ಟು ಇರುತ್ತದೆ. ಆದರೆ ಪಂಚಾಯತ ಮೆಂಬರರು ಮೊದಲಾದವರು ತಾವು ಮಾಡಬೇಕಾದ ಕೆಲಸವಿಂಥದೇ ಎಂಬದನ್ನು ಇನ್ನೂ ತಿಳಕೊಂಡಿಲ್ಲ. ಹಳ್ಳಿಯ ಜನರಿಗೆ ಹಿತವಾಗಬೇಕೆಂದು ಸ್ಥಾಪಿಸಿದ ಈ ಕೋರ್ಟಿನಿಂದ ಅಹಿತವೇ ಆಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಲಕ್ಷ್ಯಕೊಡುವದುತ್ತಮ.

ಉಡುಪಿ:— ಮು. ಎಸ್. ರಾಜಗೋಪಾಲಕೃಷ್ಣರಾವ್ ಮತ್ತು ಕೆ. ಜಗನ್ನಾಥ ಬಲ್ಲಾಳರು ಉಡುಪಿ ತಾಲೂಕು ಬೋರ್ಡ್ ಮೆಂಬರಿಕೆಗೆ ರಾಜಿನಾಮೆ ಕೊಟ್ಟ ಸಮ್ಮಂಧ ಸದರಿ ಮೆಂಬರಿಸ್ಥಾನಗಳಿಗೆ ೧೯೨೦ನೇ ಇಸವಿ ೧೪ನೇ ಮದ್ರಾಸ್ ಸ್ಥಳೀಕ ಬೋರ್ಡ್ ಆಕ್ಟಿಗೆ ಅನುಸಾರವಾಗಿ ಆಗತಕ್ಕ ಉಡುಪಿ ತಾಲೂಕು ಬೋರ್ಡ್ ಮೆಂಬರರ ಚುನಾವಣೆಯು ಜೂನ್ ತಾರೀಕು ೯ನೇ ಶನಿವಾರ ದಿವಸ ಜರಗುವದೆಂತ ಈ ಮೂಲಕ ತಿಳಿಸೋಣಾಗುತ್ತದೆ.

೩೦—೪—'೨೮.

ಸದರಿ ತಾಲೂಕು ಬೋರ್ಡಿನ ಅಧಿವೇಶನವು ಅವಸರನಿಮಿತ್ತದ್ದೆಂದೂ ವಿಶೇಷತೆಯುಳ್ಳದ್ದೆಂದೂ ಕೊಂಚ ಸಮಯದ ನೋಟೀಸು ಮೂಲಕ ಕರೆಯಲ್ಪಟ್ಟ ಮೇರೆಗೆ ಈ ದಿನ ಅಪರಾಹ್ನ ಗಂಟೆ ೩ಕ್ಕೆ ಸದರಿ ಬೋರ್ಡು ಆಫೀಸಿನಲ್ಲಿ ಕೂಡಿತು. ಹೊಸ ಪ್ರೆಸಿಡೆಂಟರವರು ಮುಂಚಿತವಾಗಿಯೇ ಅಗ್ರಾಸನದಲ್ಲಿ ಕೂತಿದ್ದರು. ಮೆಂಬರರ ಪೈಕಿ ಕೆಲವರು ಗೈರಹಾಜರಿಯಾಗಿದ್ದರು. ಮೀಟಿಂಗಿನ ಉದ್ದೇಶವು ಕುಂದಾಪುರ ರೆವಿನ್ಯೂ ಡಿವಿಜನ್ ಅಬ್ಕಾರಿ ಆಲೋಚನಾ ಸಭೆಗೆ ತಾಲೂಕು ಬೋರ್ಡು ಪರವಾಗಿ ಓರ್ವ ಮೆಂಬರರನ್ನು ಆರಿಸುವ ಬಗ್ಗೆ ಎಂದು ಜಾಹೀರುಮಾಡೋಣಾಗಿತ್ತು. ಸಭಾಪ್ರಾರಂಭವು ಅಪರಾಹ್ನ ಘಂಟೆ ೩ಕ್ಕೆ ಎಂದು ಖಂಡೋಕ್ತವಾಗಿ ನೋಟೀಸಿನಲ್ಲಿ ನಮೂದಿಸಲ್ಪಟ್ಟಾಗ್ಯೂ ಪ್ರೆಸಿಡೆಂಟರು ನಿಯಮಿತ ಸಮಯದ ಮೊದಲೇ ಪೀಠವನ್ನು ಅಲಂಕರಿಸಿಕೊಂಡಿದ್ದಾಗ್ಯೂ ಮೆಂಬರರ ಪೈಕಿ ಕ್ಲುಪ್ತಸಮಯಕ್ಕೆ ಬಾರದೆಯೂ ಹೊರಗೆ ವಾಹನಗಳ ಮೇಲೆ ಬಂದವರು ಒಳಗೆ ಪ್ರವೇಶಿಸದೆ ಹೊರಗಿನಿಂದಲೇ watch ಮಾಡುವ ಬಾಬಿನಲ್ಲಿ ಅವರನ್ನು ಹೇಗಾದರೂ ಮೋಹಿಸಿ ಸಭೆಗೆ ತರುವ ಪ್ರಯತ್ನಕ್ಕಾಗಿ ಕೆಲವು ಮೆಂಬರರು ಪ್ರೆಸಿಡೆಂಟರಿಂದ ಪುರುಸತ್ತು ಪಡಕೊಂಡು ಹೋದ ಸಮ್ಮಂಧ ಸಭೆಯು ಘಂಟೆ ೮-೩೦ರ ವರೇಗೆ ಪ್ರಾರಂಭವೇ ಆಗಲಿಲ್ಲ. ಪ್ರಾರಂಭವಾದ ಕೂಡಲೆ ಮ. ರಾ. ರಾ. ಪಡುಬಿದ್ರೆ ಆದಿರಾಜ ಅರಸು ಕಿನ್ನಿಕ್ಕ ಬಲ್ಲಾಳರು ರಾಜನಿಷ್ಠೆಯ ಪ್ರಮಾಣವನ್ನು ಕ್ರಮದಂತೆ ತಕ್ಕೊಂಡು ಪ್ರೆಸಿಡೆಂಟರ ಹಸ್ತಲಾಘವವಾಯಿತು. ಇದಾದ ನಂತರ ಈ ದಿನ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರವರು ರೈಲ್ವೆ ಬಾಬಿನಲ್ಲಿ ಪಡುಬಿದ್ರೆಗೆ ಹೋಗುವದರಿಂದ ಅವರನ್ನು ಸಂದರ್ಶಿಸುವಗೋಸ್ಕರ ಕೂಡಲೆ ಹೊರಟುಹೋಗಬೇಕಾಗಿಯೂ ವಗೈರೆ ಸಂಗತಿಗಳನ್ನು ಸೂಚಿಸಿ ಮ. ರಾ. ರಾ. ಪಡುಬಿದ್ರೆ ಬಲ್ಲಾಳರು ಸಭೆಯಿಂದ ಎದ್ದು ನಿಲ್ಲುವಾಗ ಇನ್ನು ಸ್ವಲ್ಪ ಸಮಯವಾದರೂ ಕೂತುಕೊಂಡು ಸಭಾ ಕಾರ್ಯಗಳಿಗೆ ಭಾಗಿಯಾಗಬೇಕೆಂದು ಪ್ರೆಸಿಡೆಂಟರಿಂದಲೂ ಇನ್ನೂ ಅನೇಕ ಇತರ ಮೆಂಬರರಿಂದಲೂ ಕೇಳಲ್ಪಟ್ಟರು.

ಅಬ್ಕಾರಿ ಆಲೋಚನಾ ಸಭೆಗೆ ವಕೀಲ್ ಮಹಮ್ಮದ್ ಉಸ್ಮಾನ್ ಸಾಹೇಬ್ ಬಹದ್ದೂರರವರು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು.

ತಾರೀಕು ೨೪ರಲ್ಲು ಜರಗಿದ ಬೋರ್ಡು ಮೀಟಿಂಗಿನಲ್ಲಿ ಎತ್ತಲ್ಪಟ್ಟ point of order ವಗೈರೆ ಕುರಿತು ವ್ಯವಹರಣೆಗಳು ನಡೆಯಲಿಕ್ಕಿವೆ ಎಂದು ಅಲ್ಲಲ್ಲಿ ಮಾತುಕಥೆ ನಡಿಯುತ್ತದೆ.

ವಿವಿಧ ಸಮಾಚಾರಗಳು.

ಭೂಲೋಕದಲ್ಲಿ ಅತೀ ದೊಡ್ಡದಾದ ತೇಲಾಡುವ ಡೋಕ್.

ಸಿಂಗಾಪುರ ನೌಕಾ ಬಂದರದಲ್ಲಿ ನಿಲ್ಲಿಸುವುದಕ್ಕಾಗಿ ಒಂದು ದೊಡ್ಡದಾದ ತೇಲಾಡುವ ಡೋಕನ್ನು ಇಂಗ್ಲೆಂಡಿನಲ್ಲಿ ಟ್ಯಾನ್ ನದಿಯಲ್ಲಿ ಕಟ್ಟುತ್ತಿರುವರು. ಇಲ್ಲಿಂದ ಸಿಂಗಾಪುರಕ್ಕೆ ಸೂವೆಜ್ ಕಾಲುವೆಯ ದಾರಿಯಾಗಿ ೮೬೦೦ ಮೈಲು ದೂರವಿದೆ. ಇದನ್ನು ಸಿಂಗಾಪುರಕ್ಕೆ ಕೊಂಡುಹೋಗಲಿಕ್ಕೆ ೪ ತಿಂಗಳ ಸಮಯ ಬೇಕಾಗುವುದು. ಇದನ್ನು ಸ್ವಾನ್‌ಹಂಟರ್ ಕಂಪೆನಿಯವರು ಕಟ್ಟುತ್ತಿರುವರು. ಇದನ್ನು ಕಟ್ಟುವುದು ಆಶ್ಚರ್ಯವಲ್ಲ. ವಾದರೂ ಸಿಂಗಾಪುರಕ್ಕೆ ಕೊಂಡುಹೋಗುವುದು ವಿಶೇಷ ಸಂಗತಿಯಾಗಿದೆ. ಈ ಡೋಕನ್ನು ಎರಡು ತುಂಡುಮಾಡಿ ಚೌಕಾಕಾರದಲ್ಲಿರುವ ಎರಡು ತುಂಡುಗಳನ್ನು ಉದ್ದಕ್ಕೆ ಜೋಡಿಸಿ ಹಿಡಿಸಿಕೊಂಡು ಹೋಗುವರು. ಬಹಳ ಭಾರವಾದ ಯಂತ್ರಸಾಧನೆಗಳು ಮಧ್ಯದಲ್ಲಿ ಇಡಲ್ಪಟ್ಟಿವೆ. ಇದನ್ನು ಎಳೆದುಕೊಂಡು ಹೋಗಲಿಕ್ಕೆ ಎರಡು ಹಡಗಗಳನ್ನು ಕಟ್ಟುವರು. ಹಿಂದಿನಿಂದ ದೂಡಿಕೊಡುವುದಕ್ಕಾಗಿ ಎರಡು ಹಡಗುಗಳನ್ನು ಕಟ್ಟುವರು. ಇವುಗಳು ಸುವೆಜ್ ಕಾಲುವೆಗೆ ಬರುವಾಗ ಇತರ ಹಡಗಗಳ ಸಂಚಾರವು ನಿಲ್ಲಿಸಲ್ಪಡುವುದು. ಸೂವೆಜ್ ಕಾಲುವೆ ದಾಟಲಿಕ್ಕೆ ಒಂದು ವಾರ ಬೇಕಾಗುವುದು. ಈ ಕಾಲುವೆಯ ಎರಡು ಕಡೆಗಳಲ್ಲಿ ಮೂರು ಮೂರು ಅಡಿ ಸ್ಥಳ ಮಾತ್ರವೇ ಉಳಿಯುವುದು. ಇದನ್ನು ಸಿಂಗಾಪುರದಲ್ಲಿ ಕೂಡಿಸುವಾಗ ಇದಕ್ಕೆ ೬೦ ಅಡಿ ಆಳ ನೀರು ಬೇಕಾಗುವುದು. ಈಗಿರುವ ಬಹಳ ದೊಡ್ಡದಾದ ಹಡಗಗಳನ್ನು ಇದರಲ್ಲಿ ದುರುಸ್ತಿ ಮಾಡಲಿಕ್ಕೆ ತಂದರೂ ಹಿಂದೆ ಮುಂದೆ ೩೦ ಅಡಿ ಸ್ಥಳವು ಬಾಕಿ ಉಳಿಯುವುದು. ೫೦ ಸಾವಿರ ಟನ್ ಭಾರ ಎತ್ತುವ ಶಕ್ತಿಯು ಈ ಡೋಕಿಗೆ ಇರುವುದು. ಈ ಡೋಕ್ ೮೫೫ ಫೀಟ್ ಉದ್ದವೂ ೧೭೨ ಫೀಟ್ ಅಗಲವೂ, ೭೫ ಫೀಟ್ ಆಳವೂ ಇದೆ. ಇದರಲ್ಲಿರುವ ನೀರನ್ನು ಖಾಲಿಮಾಡುವ ಯಂತ್ರಕ್ಕೆ ಗಂಟೆಗೆ ೩೦ಸಾವಿರ ಟನ್ ನೀರು ತೆಗಿಯುವ ಶಕ್ತಿ ಇದೆ.

§ § § §

೧೩೩ ವರುಷ ಪ್ರಾಯದ ಗಂಡನೂ ೧೧೦ ವರುಷದ ಹೆಂಡತಿಯೂ.

ತಿರುವಾಂಕೂರು ರಾಜ್ಯದ ವಂಡನಮೆಟ್ಟು ಮತ್ತು ಕುಮಿಲಿ ಎಂಬ ಊರುಗಳ ಮಧ್ಯದಲ್ಲಿರುವ ಅನಕಾರಾ ಎಂಬಲ್ಲಿ ಮಲ ಅತಿಯಾನ್ ಜಾತಿಗೆ ಸೇರಿದ ೧೩೩ ವರುಷ ಪ್ರಾಯದ ಒಬ್ಬ ಮುದುಕನು ಇರುವನು. ಇವನು ಆರೋಗ್ಯದಿಂದ ಇದ್ದು ದೃಢಕಾಯನಾಗಿರುವನು. ಇವನ ಹೆಂಡತಿಗೆ ೧೧೦ ವರುಷ ಪ್ರಾಯ. ಇವನು ೮೦ ವರ್ಷ ಪ್ರಾಯದ ವರೆಗೆ ಹಿಂದುವಾಗಿದ್ದನು ನಂತರ ಇವನು ಕ್ರೈಸ್ತನಾದನು. ಇವನ ಹಿಂದೂ ಹೆಸರು ಚೊಲ್ಲಂಡಿ, ಇವನ ಈಗಿನ ಕ್ರೈಸ್ತ ಹೆಸರು ಏಸುದಾಸ. ಇವನಿಗೆ ೫೦ ವರುಷದ ನಂತರ ಮದುವೆ ಆಗಿತ್ತಂತೆ.

ಈ ಮನುಷ್ಯನು ೧೮೦೯-೧೮೧೯ರ ವರೆಗೆ ಕರ್ನಲ್ ಮನ್ರೋ (ದಕ್ಷಿಣ ಕನ್ನಡ ಜಿಲ್ಲೆಯ ಮೊದಲನೇ ಕಲೆಕ್ಟರ್) ತಿರುವಾಂಕೂರಿನ ರೆಸಿಡೆಂಟ ಮತ್ತು ದಿವಾನ ಆಗಿದ್ದ ಕಾಲದಲ್ಲಿ ಅವರ ಚಾಕರಿಯವನಾಗಿದ್ದನಂತೆ. ೧೮೧೦ರಲ್ಲಿ ದೇವಿಕುಳಂ ಮತ್ತು ಕುಮಿಲಿ ಗಡಿಯನ್ನು ನಿರ್ಣಯಿಸುವಾಗ ಇವನು ಕಾಡು ಕಡಿಯುವ ಕೂಲಿಯವನಾಗಿದ್ದನಂತೆ. ನಂತರ ಇವನನ್ನು ಚೊಕ್ರ (ಬೋಯಿ)ನಾಗಿ ನೇಮಿಸಿದರು.

§ § § §

ಚೀನಾದೇಶದ ವಾರ್ತೆ.

ಚೀನಾದೇಶದಲ್ಲಿ ಜಪಾನಿಯವರಿಗೂ ಚೀನದ ನೆಶನಲಿಸ್ಟರಿಗೂ ೭ ತಾಸುಗಳ ವರೆಗೆ ಸಿನಾನ್‌ಫೂ ಎಂಬಲ್ಲಿ ಯುದ್ಧವಾಯಿತು. ಜಪಾನಿಸ್ ಸೈನ್ಯದಲ್ಲಿ ೫ ಮಂದಿ ಸತ್ತರು ೨೦ ಮಂದಿಗೆ ಗಾಯವಾಗಿದೆ. ಚೀನಿಯರ ಸೈನ್ಯದಲ್ಲಿ ೮೦೦ ಮಂದಿ ಸತ್ತಿರುವರು. ಸೈನಿಕರಲ್ಲದ ಇತರ ಅನೇಕ ಜಪಾನಿಸರು ಸತ್ತಿರುವರು. ಸಿಂಗಟೂ ಬಂದರಕ್ಕೆ ಜಪಾನಿನಿಂದ ೨೩೦೦ ಸೈನ್ಯವು ಬರುತ್ತಲಿದೆ. ಜಪಾನಿಸರು ಮೆಶಿನ್‌ಗನ್ನುಗಳಿಂದ ಹೊಡೆದುದರಿಂದ ಚೀನಿಯರಲ್ಲಿ ಹೆಚ್ಚು ಮಂದಿ ಸಾಯಲು ಕಾರಣವಾಯಿತು. ಈ ಕಲಹವಾಗಲು ನೆಶನೆಲಿಸ್ಟರು ಸಿನಾನ್‌ಫೂನಲ್ಲಿರುವ ಜಪಾನಿಸರ ಮನೆಗಳನ್ನು ಲುಟಾಯಿಸಿದ್ದೇ ಕಾರಣವೆಂದು ಜಪಾನಿಸರು ಹೇಳುತ್ತಿರುವರು. ಆದರೆ ಈ ಕಲಹವನ್ನು ಚೀನಿ ಸೈನ್ಯಾಧಿಪತಿಯು ನಿಲ್ಲಿಸಿದನ ಆದರೂ ಚೀನಿ ಶಿಪಾಯರು ತಿರಿಗಿ ಗುಂಡುಹಾರಿಸಿದರಂತೆ.

ಚೀನಿಯರು ಇದಕ್ಕೆ ಹೇಳುವ ಕಾರಣವೇ ಬೇರೆ. ಜಪಾನಿಸರು ಒಬ್ಬ ಚೀನಿ ನೆಶನೆಲಿಸ್ಟ ಆಫೀಸರನನ್ನು ಕೊಂದರಂತೆ, ಮಾರ್ಗಗಳಲ್ಲಿ ಭಾಷಣ ಕೊಡುವ ನೆಶನೆಲಿಸ್ಟರನ್ನು ತಡೆದರಂತೆ, ಚೀನಿ ಸೈನಿಕರ ಆಯುಧಗಳನ್ನು ಎಳಕೊಂಡರಂತೆ. ಸಿನಾನ್‌ಫೂವಿನಲ್ಲಿ ಈಗ ೩೦೦೦ ಜಪಾನ್ ಸೈನ್ಯವೂ ೪೦ ಸಾವಿರ ಚೀನಿಯರ ನೆಶನೆಲಿಸ್ಟ ಸೈನ್ಯವೂ ಇದೆಯಂತೆ. ಜಪಾನ ಸರಕಾರವು ಚೀನಾದೇಶದ ಯಾವ ಯಾವ ಬಂದರಗಳಲ್ಲಿ ಜಪಾನಿಸರು ಇರುವರೋ ಆ ಬಂದರಗಳ ರಕ್ಷಣೆಗಾಗಿ ಯುದ್ಧದ ಹಡಗಗಳನ್ನು ಕಳುಹಿಸುತ್ತಿರುವರು. ಸಿಂಗಟೂ ಬಂದರಕ್ಕೆ ೪ ಡಿಸ್ಟ್ರಾಯರುಗಳು ಬಂದಿವೆ. ತಾನ್‌ಟಂಗಿಗೆ ವಿಮಾನ ಸೈನ್ಯವೂ ಬಂದದೆ. ಜಪಾನು ಸೈನ್ಯಕ್ಕೆ ಬೇಕಾದ ಮದ್ದು ಗುಂಡು ಖರ್ಚಾಗಿಯದಂತೆ. ವಾಯರ್‌ಲೆಸ್ ನಡಿಯುವದಿಲ್ಲವಂತೆ. ಯುನೈಟೆಡ್ ಸ್ಟೇಟ್ಸಿನ ಒಂದು ಯುದ್ಧದ ಹಡಗವೂ ೬ ಸಬ್‌ಮೆರಿನುಗಳೂ ಬಂದಿವೆಯಂತೆ.

ಸೀನಾನ್‌ಫೂನದಲ್ಲಿದ್ದ ಚೀನಾಸರಕಾರದ ಅನ್ಯದೇಶಗಳೊಡನೆ ಪತ್ರವ್ಯವಹಾರ ನಡಿಸುವ ಕಮಿಶನನನ್ನು ಜಪಾನ್ ಸೈನಿಕರು ಕೊಂದುಹಾಕಿದ್ದೇ ಈ ಕಲಹಕ್ಕೆ ಮುಖ್ಯ ಕಾರಣವೆಂದು ಚೀನಾ ಸರಕಾರವು ಹೇಳುತ್ತಿದೆ.

§ § § §

ಅಮೇರಿಕನರ ಸ್ವಾರ್ಥಪರಾಯಣತೆ.

ಅಮೇರಿಕವು ಒಳ್ಳೆಯ ದೇಶವೆಂದು ಅವರ ಕೀರ್ತಿಯು ಜನಜನಿತವಾಗಿದೆ. ಆದರೆ ಒಮ್ಮೊಮ್ಮೆ ಅವರು ಮಾಡುವಂತಹ ನಿಂದ್ಯಕರ್ಮಗಳನ್ನು ಕೇಳಿದರೆ ತಾನೆ ಅವರ ಮೇಲಿನ ನಮ್ಮ ಸಿಟ್ಟು ಉರಿದೇಳುವುದು. ಅಮೇರಿಕನರು ಹಿಂದೂಸ್ಥಾನಕ್ಕೆ ಬರಲು ಅವರಿಗೆ ಸದಾ ಸ್ವಾತಂತ್ರ್ಯವಿದೆಯಂತೆ. ಹಿಂದೂಗಳು ಅಮೇರಿಕವನ್ನು ಪ್ರವೇಶಿಸಲು ಅವರಿಗೆ ಎಡೆಯಿಲ್ಲ. ಹಾಗೆಯೇ ಅಲ್ಲಿ ಕಲಿಯುತ್ತಿದ್ದ ಪಂಜಾಬದ ಮೇನಾರಸಿಂಗ ಕೈತರೆಂಬವರನ್ನು ಅಮೇರಿಕನರು ಅಲ್ಲಿಂದ ಹೊರಕ್ಕೆ ತಳ್ಳಿಬಿಟ್ಟರು. ಇನ್ನು ಒಂದೆರಡು ವರ್ಷಗಳ ವರೆಗೆ ಅವರು ಅಲ್ಲಿ ಇದ್ದುದಾದರೆ ಅವರ ವಿದ್ಯಾಭ್ಯಾಸವು ಪೂರ್ತಿಯಾಗುತ್ತಿದ್ದಿತು. ಆದರೆ ಕಠಿಣ ಹೃದಯರಾದ ಅಮೇರಿಕನರು ಹಾಗೆ ಮಾಡಲು ಬಿಡಲಿಲ್ಲ.

ಇವರು ೧೯೨೦ನೇ ಇಸವಿಯಲ್ಲಿ ಕಲಿಯುವ ಸಲುವಾಗಿ ಅಮೇರಿಕಕ್ಕೆ ತೆರಳಿದರು. ಮನೆಯಿಂದ ಧನಸಹಾಯವು ಸಿಕ್ಕುತ್ತಿದ್ದಿಲ್ಲವಾದರೂ ಹಗಲೆಲ್ಲಾ ದುಡಿದು ರಾತ್ರಿ ಅವರು ಕಲಿಯುತ್ತಿದ್ದರು. ಮೊದಲು ಅಮೇರಿಕದಲ್ಲಿ ಎಲ್ಲಾ ಜಾತಿಯವರಿಗೆ ಕಲಿಯಲು ಅನುವು ಇದ್ದಿತೆಂದೇ ಇವರು ಕೂಡ ಅಲ್ಲಿಗೆ ಹೋದುದು. ಇವರು ಪಂಜಾಬದ ಜುಲುಂದುರದಲ್ಲಿ ಹುಟ್ಟಿ ಯುದ್ಧದ ಸಮಯದಲ್ಲಿ ಮೆಸೊಪೊಟೋಮಿಯದಲ್ಲಿ ನಾಲ್ಕು ವರ್ಷ ಸ್ಟೋರ್‌ಕೀಪರ್‌ರಾಗಿದ್ದರು. ಇದಕ್ಕಾಗಿ ಅವರಿಗೆ ಎರಡು ಮೆಡಲುಗಳು ಸಿಕ್ಕಿವೆ.

ಅಮೇರಿಕಕ್ಕೆ ಹೋಗಿ ತಿನ್ನಲಿಕ್ಕೆ ಕಷ್ಟಪಟ್ಟು ವಿದ್ಯೆಯನ್ನು ಸಂಪಾದಿಸಬೇಕಾಯಿತು. ಹಗಲಿನಲ್ಲಿ ಕ್ಲಾರ್ಕನಂತೆ ಸಂಪಾದಿಸಿ ರಾತ್ರಿ ಧೈರ್ಯದಿಂದ ವಿದ್ಯಾಭ್ಯಾಸ ಮಾಡಿದ ಕಾರಣ ಇವರ ವಿದ್ಯಾಭ್ಯಾಸವು ಬೇಗನೇ ಪೂರ್ತಿಯಾಗಲಿಲ್ಲ. ಕಳೆದ ಮಳೆಗಾಲದಲ್ಲಿ ಇವರು ಪಿಟ್ಸಬರ್ಗ ಯುನಿವರ್ಸಿಟಿಯಲ್ಲಿರುವಾಗ ಇಮಿಗ್ರೇಶನ್ ಆಫೀಸರರು ಇವರು ೨೪ ತಾಸುಗಳೊಳಗೆ ಅಮೇರಿಕವನ್ನು ಬಿಟ್ಟುಹೋಗಬೇಕೆಂದರು. ರಾತ್ರಿ ಕಲಿಯುತ್ತಿದ್ದನೆಂದೂ, ಹಿಂದೂಸ್ಥಾನದವನೆಂದೂ ಅವರು ಹಾಗೆ ಹೇಳಲು ಕಾರಣವಾಯಿತು. ಹೊರಡುವಾಗ ತನ್ನ ಅಮೇರಿಕನ ಹೆಂಡತಿಯನ್ನೂ ಬಿಡಬೇಕಾಯಿತು. ಇವರು ಕ್ರಿಶ್ಚಿಯನರಾಗಿದ್ದರಿಂದ ಕ್ರಿಶ್ಚನರು ಸಹಾಯವನ್ನು ಮಾಡುವರೆಂದು ನಂಬಿದರು. ಆದರೆ ಕ್ರಿಶ್ಚನರು ಯಾವ ಸಹಾಯವನ್ನೂ ಮಾಡಲಿಲ್ಲ. ಸಹಾಯ ಮಾಡಿದವರೆಂದರೆ ಅಲ್ಲಿದ್ದ ಸ್ವಾಮಿ ಯೋಗಾನಂದರವರು. ಇವರು ಇನ್ನು ತನ್ನ ಹಿರಿಯರ ಸಿಕ್ಖಮತವನ್ನೇ ಅವಲಂಬಿಸುವರು. ಅಮೇರಿಕನರ ದುರ್ಬುದ್ಧಿಯು ಇಲ್ಲಿ ಸರಿಯಾಗಿ ವ್ಯಕ್ತವಾಗದಿರದು. ಮಿಸ್. ಮೆಯೋಳ ಪುಸ್ತಕದಿಂದಲೇ ತಿಳಿದಿರುತ್ತದೆ. ಇದರಿಂದ ಇನ್ನಷ್ಟು ತಿಳಿದಂತಾಯಿತು.

§ § § §

ವಿದ್ಯಾರ್ಥಿಗಳಿಗೆ ಮಿಲಿಟರಿ ತರಬೇತಿ.

ಪಂಜಾಬ ಕೌನ್ಸಿಲಿನಲ್ಲಿ ಇದೊಂದು ಠರಾವು ರಾಯಸಾಹೇಬ ಗಂಗಾರಾಮರಾವರಿಂದ ಮುಂದಕ್ಕೆ ತರಲ್ಪಟ್ಟಿತು. ಸರಕಾರಿ ಕೋಲೆಜುಗಳಲ್ಲಿ ಮಿಲಿಟರಿ ಡ್ರಿಲ್ ಕಲಿಸುವದು, ಗುಂಡು ಬಿಡಲು ಕಲಿಸುವದು, ಇವುಗಳಿಂದ ವಿದ್ಯಾರ್ಥಿಗಳ ಶಾರೀರಕ ಬಲವು ಹೆಚ್ಚುವದೆಂದೂ ಅವಶ್ಯಕದ ಸಮಯದಲ್ಲಿ ಆ ವಿದ್ಯಾರ್ಥಿಗಳೇ ಸರಕಾರದವರಿಗೆ ಸಿಕ್ಕಲು ಯೋಗ್ಯರಾಗುವರೆಂದೂ ಅವರು ಚರ್ಚಿಸಿದರು. ಪಂಜಾಬದ ಕೋಲೆಜುಗಳಲ್ಲಿಯೇ ಇದನ್ನು ಆಚರಣೆಗೆ ತರುವುದರಿಂದ ಉಳಿದ ದೇಶಗಳ ಕೋಲೆಜುಗಳಲ್ಲಿ ಇದನ್ನು ಅವಲಂಬಿಸುವರೆಂದೂ, ಹೀಗೆ ಮಿಲಿಟರಿ ತರಬೇತಿಯನ್ನು ಹೊಂದಿದವರು ದೇಶಮಾತೆಯ ಕೂಗಿನ ಸಮಯದಲ್ಲಿ ಮುಂದಕ್ಕೆ ಬಾರದಿರರೆಂದೂ, ರಾ। ಉಜ್ವಲ ಸಿಂಗರು ಹೇಳಿದರು. ವಿದ್ಯಾರ್ಥಿಗಳಿಗೆ ವಿಧೇಯತೆ, ಕ್ರಮ ಮೊದಲಾದವುಗಳನ್ನು ಕಲಿಸಲು ಇದು ಅಗತ್ಯ. ಆಯುಧಗಳನ್ನು ಹಿಡಿಯಬಾರದೆಂದು ಸರಕಾರದವರು ಕಾನೂನು ಮಾಡಿದ ಕಾರಣವೇ ಹಿಂದೂಗಳು ಹೇಡಿಗಳಾದರು. ಈಗ ಸರಕಾರದವರೇ ಆ ಕಾನೂನನ್ನು ತೆಗೆದುಹಾಕುವಂತೆ ಮಾಡಬೇಕು, ಎಂದು ಮೊದಲಾಗಿ ಹಲವು ಸದಸ್ಯರು ಚರ್ಚಿಸಿ ತಮ್ಮ ಠರಾವೇ ಬಹುಮತವನ್ನು ಹೊಂದುವಂತೆ ಮಾಡಿದರು. ಜಾತಿಭೇದವಿಲ್ಲದೆ ಹಿಂದೂಗಳಿಗೆ ಪ್ರತಿ ಶಾಲೆಯಲ್ಲಿ ಮಿಲಿಟರಿ ತರಬೇತಿಯನ್ನು ಮಾಡಿ ಹಿಂದೂಗಳನ್ನು ಬಲಶಾಲಿಗಳನ್ನಾಗಿ ಮಾಡಬೇಕೆಂದು ಕೊನೆಗೆ ಮಂಜೂರಾಯಿತು.

§ § § §

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು.

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಕಳೆದ ವಾರ ಪೂನೆಯಲ್ಲಿ ಸುಭಾಸ ಚಂದ್ರಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು. ಅದರಲ್ಲಿ ಮಂಜೂರಾದ ಮುಖ್ಯ ಠರಾವುಗಳೆಂದರೆ ಮದ್ಯಪಾನ ನಿಷೇಧ ಮತ್ತು ಬ್ರಿಟಿಷ್ ವಸ್ತುಬಹಿಷ್ಕಾರ. ಸುಭಾಸ ಚಂದ್ರಬೋಸರು ತನ್ನ ಕೊನೆಯ ಭಾಷಣದಲ್ಲಿ ಹೇಳಿದುದೇನೆಂದರೆ "ಮಹಾರಾಷ್ಟ್ರದಲ್ಲಿ ಐಕ್ಯವನ್ನುಂಟುಮಾಡಲು ತಕ್ಕದಾದ ಈ ಪರಿಷತ್ತನ್ನು ನಡೆಯಿಸಿದವರಿಗೆ ನನ್ನ ಅಭಿನಂದನೆಗಳು, ಹೀಗೆ ಪರಿಷತ್ತುಗಳನ್ನು ಜರಗಿಸುವುದರಿಂದ ದೇಶದಲ್ಲಿ ಐಕ್ಯವುಂಟಾಗುವುದು. ಈ ಪರಿಷತ್ತಿನಲ್ಲಿ ಯುವಕ ಯುವತಿಯರ ಸಾಹಸವು ಸಾಧಾರಣ ತರದ್ದಲ್ಲ. ಆದಕಾರಣ ಅವರಿಗೆ ಸದ್ಯದಲ್ಲಿಯೇ ಸ್ವಾತಂತ್ರ್ಯವು ಲಭಿಸುವಂತೆ ನಾನು ಹಾರೈಸುತ್ತೇನೆ

ಸ್ಯಾಮನ್ ಕಮಿಶನಿನ ಬಹಿಷ್ಕಾರವು ಬಿದ್ದುಹೋಗುವದೆಂದು ವಿಲಾಯತಿಯಲ್ಲಿ ಈಗ ತಿಳಿದಿರುವರು. ಮುಂದಿನ ಸಲ ಸ್ಯಾಮನ್ ಸಪ್ತಕರು ಹಿಂದೂದೇಶಕ್ಕೆ ಬಂದಾಗ ಹಿಂದೂಗಳು ಅವರಿಗೆ ಆನಂದದ ಸ್ವಾಗತ ನೀಡುವರೆಂದು ಅವರು ಭಾವಿಸಿರುವರು. ಅದರ ಪ್ರತಿಯಾಗಿ ಮೊದಲು ಅವರಿಗೆ ಹಾಕಿದ ಬಹಿಷ್ಕಾರವನ್ನು ನಾವು ಬಲಪಡಿಸಬೇಕು. ಎರಡನೆಯದಾಗಿ ಬ್ರಿಟಿಷ ವಸ್ತ್ರ, ವಸ್ತುಗಳನ್ನು ಕೂಡ ಪೂರ್ಣ ಬಹಿಷ್ಕರಿಸಬೇಕು. ಅವರ ವಸ್ತ್ರಗಳನ್ನು ಬಹಿಷ್ಕರಿಸಿ ಬದಲಿಗೆ ಸ್ವದೇಶಿ ವಸ್ತ್ರಗಳನ್ನು ಕೊಂಡುಕೊಳ್ಳಬೇಕು" ಎಂದು ಅವರು ಸ್ಫೂರ್ತಿದಾಯಕ ಭಾಷಣವನ್ನಿತ್ತರು.

ಈ ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳನ್ನು ಪ್ರತಿಯೊಬ್ಬ ಮರಾಠಾ ಯುವಕನು ತಪ್ಪದೆ ಅನುಸರಿಸಬೇಕೆಂದು ಅವರು ಮತ್ತೆ ಮತ್ತೆ ಒತ್ತಿ ಹೇಳಿದರು. ಅವರ ಉದಾರತೆಯನ್ನು ತಾನು ಬಂಗಾಳದಲ್ಲಿ ವಿಸ್ತರಿಸಿ ಅಲ್ಲಿಯ ಜನರು ಮಹಾರಾಷ್ಟ್ರದ ಜನರೊಡನೆ ಕೈ ಕೈ ಹಿಡಿದು ನಡಿಯುವಷ್ಟು ಸ್ನೇಹವನ್ನು ಅವರಲ್ಲಿ ಬಿತ್ತುವೆನೆಂದು ಹೇಳಿದರು. ಮಹಾರಾಷ್ಟ್ರದವರು ಈ ಪರಿಷತ್ತನ್ನು ಜರಗಿಸಿ ತಮ್ಮ ರಾಜ್ಯದಲ್ಲಿ ಐಕ್ಯವನ್ನು ಸಾಧಿಸಿದುದು ಮಾತ್ರವಲ್ಲದೆ, ಬಂಗಾಳದವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ ಬಂಗಾಳದವರೊಡನೆಯೂ ಆಪ್ತಸ್ನೇಹವನ್ನು ಸಾಧಿಸಿದರು.

ಚತುರ್ಥ ಕರ್ನಾಟಕಾಯುರ್ವೇದ ಸಮ್ಮೇಳನ ಮಂಗಳೂರು.

ವಾಚಕಮಹಾಶಯರೇ! ವೈದ್ಯ ಸಹೋದರರೇ! ಸ್ವಾಗತ, ಸಮಿತಿ ಮತ್ತು ಕಾರ್ಯಕಾರಿ ಮಂಡಲಿಯವರೇ! ಚತುರ್ಥ ಕರ್ನಾಟಕಾಯುರ್ವೇದ ಸಮಾವೇಶವು ಮೇ ತಾ ೨೧ ೨೨ ೨೩ ಈ ದಿನಗಳಲ್ಲಿ ನಡೆಯುವುದಾಗಿ ಅಧ್ಯಕ್ಷರನ್ನಾರಿಸದೆಯೇ ನಿಮಂತ್ರಣವನ್ನು ಪ್ರಸಿದ್ಧಿಮಾಡಿರುವುದು ಸರಿಯಷ್ಟೆ? ಅಧ್ಯಕ್ಷರಿಲ್ಲದೆ ನಿಮಂತ್ರಣವನ್ನು ಹಂಚುವುದು ನಿಯಮಾವಳಿಗೆ ವಿರುದ್ಧವಾದರೂ ಕಾರ್ಯಕಾರಿ ಮಂಡಳಿಯವರನ್ನು ವಿಚಾರಿಸದೆಯೇ ಸ್ವಾಗತ ಸಮಿತಿಯವರೇ ಸ್ವತಂತ್ರಿಸಿ ಕನ್ನಡ ತಿಳಿಯದವರನ್ನು ಅಧ್ಯಕ್ಷಪದವಿಗೆ ತರುವರೆಂದು ನಮಗೆ ಬರುವ ಪತ್ರಗಳಿಂದ ತಿಳಿಯಬರುತ್ತದೆ.

ಇದು ನಿಜವಾಗಿದ್ದಪಕ್ಷದಲ್ಲಿ ಖಂಡಿತವಾಗಿಯೂ ಕನ್ನಡ ಬಲ್ಲವರನ್ನೇ ಆರಿಸಬೇಕೆಂದು ನನ್ನ ಸವಿನಯ ವಿನಂತಿ ಇದೆ. ಹಾಗೂ ಮದ್ರಾಸಿನ ದಿ ಆನರೆಬಲ್ ಡಾ। ಯು. ರಾಮರಾವ್ ಇವರನ್ನಾಗಲಿ ಮೈಸೂರು ರಾಷ್ಟ್ರೀಯ ಸಮ್ಮೇಳನದ ವರ್ತಮಾನ ಕಾಲದ ಅಧ್ಯಕ್ಷರಿರುವ ಡಾ। ಸಿ. ಬಿ. ರಾಮರಾವ್, ಎಂ. ಡಿ. ಬೆಂಗಳೂರು ಇವರನ್ನಾಗಲಿ ಆರಿಸುವುದು ಯುಕ್ತವಾಗಿದೆ. ಇಲ್ಲವೆ ಕನ್ನಡ ತಿಳಿದು ಆಯುರ್ವೇದದಲ್ಲಿ ತಕ್ಕಮಟ್ಟಿಗಾದರೂ ಪರಿಶ್ರಮವಿದ್ದ ಆಂಗ್ಲೇಯ ಡಾಕ್ಟರರಾದರೂ ಆಗಬಹುದು ಹೊರತಾಗಿ ಕನ್ನಡ ಗಂಧವನ್ನೇ ಅರಿಯದವರನ್ನು ಅಧ್ಯಕ್ಷರನ್ನಾಗಿ ಮಾಡಲು ಯಾರೂ ಮತಕೊಡಬಾರದೆಂದು ನನ್ನ ಸವಿನಯ ಪ್ರಾರ್ಥನೆ. ಶ್ರೀಮಾನ್ ಆಯುರ್ವೇದ ಭೂಷಣ. ಎಂ. ವಿ. ಶಾಸ್ತ್ರಿಗಳೇ ಮೊದಲಾದವರು ಈ ಸೂಚನೆಯನ್ನು ಅಂಗೀಕರಿಸುವರೆಂದು ನಂಬಿರುವ,

ವೈದ್ಯ ವಿದ್ವಾನ್ ಡಿ. ಎಚ್. ಎಂ. ಪಂಡಿತ್ A. M. S.
ಚಿತ್ರದುರ್ಗ.

ವಾಚನಾಲಯಗಳೂ ಪ್ರೌಢ ವಿದ್ಯಾಭ್ಯಾಸವೂ.

[illegible]

ಇಜಿಪ್ತದ ವಿದ್ಯಾಭ್ಯಾಸ.

ಇಜಿಪ್ತದಲ್ಲಿ ಈಗ ಪಾಶ್ಚಿಮಾತ್ಯರ ರೀತಿಯ ವಿದ್ಯಾಭ್ಯಾಸವನ್ನು [illegible] ಸರಕಾರಿ ಶಾಲೆಗಳಲ್ಲಿ ಕೊಡಲ್ಪಡುವ ವಿದ್ಯಾಭ್ಯಾಸವು [illegible] ೧೯೨೭ರ ವರೆಗೆ ಪಾಶ್ಚಿ[illegible] ಜ್ಞಾನವನ್ನು [illegible] ಈ ವಿದ್ಯಾಭ್ಯಾಸ [illegible] ಎಂದು ಮೂರು [illegible] ಇಂಜಿನಿಯರಿಂಗ್ [illegible] ಮೊದಲಾದವುಗಳನ್ನು [illegible] ಸ್ಪೆಶಿಯಲ್ ಶಾಲೆ [illegible] ತರಬೇತು ಮಾಡು [illegible] ಕಲಿಸಲು ಹಲವು [illegible] ಎಡ್ಯುಕೇಶನಲ್ [illegible] ಹೆಂಗಸರು ಕೂಡ [illegible] ಉಪಾಧ್ಯಾಯರ [illegible] ಶಾಲೆ, ಔದ್ಯೋಗಿಕ, [illegible] ಕೌನ್ಸಿಲಿನವರು [illegible]

[illegible]

ರಷ್ಯದ ಆಧುನಿಕ ಸ್ಥಿತಿ.

ಹಿಂದೆ ರಷ್ಯಾದೇಶದ ಮಾರ್ಗಗಳಲ್ಲಿ ಗುಂಪುಕೂಡಿ ಸಂಚರಿಸುತ್ತಿದ್ದ ಮನುಷ್ಯರು ಬಹಳ ಅಮೂಲ್ಯವಾದ ಉಡಿಗೆಯನ್ನುಡುತ್ತಿದ್ದರು. ಆದರೆ ಈಗ ಮಾತ್ರ ಹಾಗಿಲ್ಲ. ಅಮೌಲ್ಯವಾದ ಉಡಿಗೆಯನ್ನುಟ್ಟವರು ಕಾಣಸಿಕ್ಕುವದು ಅತಿ ವಿರಳ. ಅವುಗಳನ್ನು ಹೆಂಗಸರು ಮಾತ್ರವೇ ತೊಟ್ಟುಕೊಳ್ಳುವರು. ಸಾಧಾರಣವಾಗಿ ಗಂಡಸರು ಬಡತನವನ್ನು ವ್ಯಕ್ತಗೊಳಿಸುವಷ್ಟು ಸಾಮಾನ್ಯ ಉಡಿಗೆಯನ್ನೇ ಧರಿಸುವರು. ಹೆಂಗಸರು ತಲೆಗೆ ವಸ್ತ್ರವನ್ನು ಕಟ್ಟಿಕೊಳ್ಳುವರು. ಅಥವಾ ಹೇಟುಗಳನ್ನು ಇಡುವರು. ಒಮ್ಮೊಮ್ಮೆ ಗಂಡಸರ ಟೊಪ್ಪಿಗಳನ್ನೂ ಇಡುವುದುಂಟು. ಮನುಷ್ಯರ ಉಡಿಗೆಯನ್ನು ನೋಡಿದ ಮಾತ್ರದಿಂದ ಅವರ ವೃತ್ತಿ ಮೊದಲಾದ ಸಂಗತಿಗಳನ್ನು ನಿರ್ಣಯಿಸಲಾಗುವದಿಲ್ಲ. ಮೊದಲಾದರೆ ಉಡಿಗೆಯನ್ನು ನೋಡಿದ ಮಾತ್ರದಿಂದಲೇ ವಿದ್ಯಾರ್ಥಿ, ಪಂಡಿತ, ಧನಿಕ, ಬಡವ ಎಂಬುದನ್ನು ನಿಶ್ಚಯಿಸಬಹುದಾಗಿದ್ದಿತು. ಈಗ ಎಲ್ಲರ ಉಡಿಗೆಯೂ ಒಂದೇ ರೀತಿಯದಾಗಿದೆ. ಮುಖಭಾವದಲ್ಲಿಯೂ ಕೂಡ ಅವರೊಳಗೆ ಹೆಚ್ಚಿನ ವ್ಯತ್ಯಾಸವು ಕಂಡುಬರುವುದಿಲ್ಲ.

ಒಕ್ಕಲಿಗರ ಮತ್ತು ಕೂಲಿಯಾಳುಗಳ ಉಡಿಗೆಯಲ್ಲಿ ವ್ಯತ್ಯಾಸವೇ ಇರುವುದಿಲ್ಲ. ಮೊದಲು ಒಕ್ಕಲಿಗರು ಮನೆಯಲ್ಲಿಯೇ ತಯಾರಿಸಿದ ದಪ್ಪವಾದ ವಸ್ತ್ರವನ್ನುಡುವ ಪದ್ಧತಿಯಿದ್ದಿತು. ಆದರೆ ಈಗ ಹಳ್ಳಿಗಳಲ್ಲಿಯೂ ಕೂಡ ಪೇಟೆಯ ವಸ್ತ್ರವನ್ನೇ ಉಪಯೋಗಿಸುವರು. ಒಟ್ಟಾರೆ ನೋಡಿದರೆ ಪಟ್ಟಣಿಗರಿಗಿಂತಲೂ ಹಳ್ಳಿಯವರೇ ಉತ್ತಮ ಉಡುಪನ್ನು ಉಡುವರು.

ಪಟ್ಟಣಗಳಲ್ಲಿ ಈಗಲೂ ಕೂಡ ಮೋಸ ಕೃತ್ಯಗಳು ನಿಂತಿಲ್ಲ. ಅಲ್ಲಲ್ಲಿ ಕಳ್ಳತನಗಳು ಆಗುತ್ತಲೇ ಇರುತ್ತವೆ. ಒಮ್ಮೊಮ್ಮೆ ರೈಲು ಬಂಡಿಗಳಲ್ಲಿ ಕೂಡ ಸುಲಿಗೆಯಾಗುವದುಂಟು. ಈಗಲೂ ಕೂಡ ರೈಲು ಹೋಗುತ್ತಿರುವಾಗ ಗಾರ್ಡರು ಪ್ರತಿ ಕೋಣೆಗೆ ಹೋಗಿ ಪ್ರಯಾಣಿಕರಿಗೆ ಧೈರ್ಯ ಹೇಳಿ ಅವರು ಜಾಗ್ರತೆಯಿಂದಿರುವಂತೆ ಅವರನ್ನು ಎಚ್ಚರಿಸುವರು. ರೈಲು ಗಾಡಿಗಳಲ್ಲಿನ ಒಳಗಣ ಕದಗಳನ್ನು ತೆರೆದಿಟ್ಟು ಒಂದು ಮೂಲೆಯಿಂದ ಇನ್ನೊಂದು ಮೂಲೆಯ ವರೆಗೂ ಥಟ್ಟನೆ ಹೋಗುವಂತೆ ಮಾಡುವರು.

ಮುಖ್ಯ ಪಟ್ಟಣವಾದ ಮೊಸ್ಕೊವಿನಲ್ಲಿ ಭಿಕ್ಷುಕರನೇಕರಿರುವರಾದರೂ ಚಿಂದಿ ಬಟ್ಟೆಯನ್ನುಡುವವರು ಒಬ್ಬರೂ ಇರುವುದಿಲ್ಲ.

ಹಿಂದಿನ ಮೊಸ್ಕೊ ಜನರು ಕ್ರಮವನ್ನರಿಯದ ಮೂಢ ಜನರಾಗಿದ್ದರು. ಆದರೆ ಈಗಿನವರು ಗುಣನಡತೆಗಳನ್ನು ಬಲ್ಲವರೂ, ಕೆಟ್ಟತನವನ್ನು ದೂಷಿಸುವವರೂ ಆಗಿರುವರು. ಈಗಲೂ ಇರುವ ದುರಾಚಾರಗಳು ಪೂರ್ವ ಕಾಲದ ಕಟ್ಟಳೆಗಳ ಶೇಷ ಮಾತ್ರವೆಂದು ತಿಳಿಯಲ್ಪಡುವವು. ಒಬ್ಬರಿಗಿಂತ ಒಬ್ಬನು ಶ್ರೇಷ್ಠನು ಎಂಬ ದುರಹಂಕಾರವು ಒಬ್ಬರಲ್ಲಿಯೂ ಇರುವದಿಲ್ಲ. ಸರ್ವರೂ ಏಕಪ್ರಕಾರ ಅಧಿಕಾರವುಳ್ಳವರು. ಸಹೋದರರಂತೆ ತಿಳಿದುಕೊಳ್ಳುವರು.

ಹೆಚ್ಚಿನ ಬದಲಾವಣೆಯಾದುದು ಮಕ್ಕಳಲ್ಲಿ. ಮಕ್ಕಳು ಹಿಂದಿನಂತೆ ಲಜ್ಜಾಸ್ಪದರಾಗಿಲ್ಲ. ಶಾಲಾ ಬಾಲಕರು ಮೊದಲಿಗಿಂತ ಉತ್ತಮ ಉಡಿಗೆಯನ್ನು ಉಟ್ಟು ಆರೋಗ್ಯಶಾಲಿಗಳೆಂದು ನೋಡಿದ ಮಾತ್ರದಿಂದಲೇ ತಿಳಿಯುವದು. ಅವರಲ್ಲಿ ಸಣ್ಣ ಪ್ರಾಯದಲ್ಲಿಯೇ ಸ್ವಾತಂತ್ರ್ಯದ ಚೇತನವು ತುಂಬಿಕೊಂಡಿದೆ. ಪರಕೀಯರ ಎದುರಿನಲ್ಲಿ ಅವರು ಹೆದರುವದಿಲ್ಲ.

ಬಾಹ್ಯ ಸೌಂದರ್ಯದಲ್ಲಿ ಪಟ್ಟಣಗಳು ಒಂದನೇ ತರಗತಿಯವುಗಳು. ಸ್ವಚ್ಛವಾದ ರಾಜಮಾರ್ಗಗಳು, ವಿದ್ಯುಚ್ಛಕ್ತಿಯ ದೀಪ, ಟ್ರಾಮು ಗಾಡಿಗಳು ಮೊದಲಾದವುಗಳು ಯೋಗ್ಯರೀತಿಯಲ್ಲಿವೆ. ಆದರೆ ಈ ಸ್ಥಿತಿಯು ಪಟ್ಟಣದ ಮಧ್ಯಭಾಗದಲ್ಲಿ ಮಾತ್ರ. ಹೊರಭಾಗಗಳಲ್ಲಿ ಹೊಲಸು ಇರುವುದು.

ಇನ್ನು ಮನೆಗಳ ವಿಷಯದಲ್ಲಿ ಅಲ್ಲಿ ಸ್ವಲ್ಪ ಅಡಚಣೆ. ಮನೆಗಳು ಅಗ್ಗದಲ್ಲಿಯೇ ಸಿಕ್ಕುವವು. ಕೆಲವೇ ಸಾವಿರ ನಾಣ್ಯಗಳನ್ನು ಕೊಟ್ಟರೆ ಮನೆಯೂ, ಕೆಲವೇ ನೂರು ನಾಣ್ಯಗಳನ್ನು ಕೊಟ್ಟರೆ ಒಂದು ಕೋಣೆಯೂ ಸುಲಭವಾಗಿ ಸಿಕ್ಕುವವು. ಆದರೆ ಕೂಲಿಗಳಿಗೆ ಇರಲು ಅಲ್ಲಿ ಒಳ್ಳೆಯ ಸ್ಥಳವಿಲ್ಲ. ಕೂಲಿಗಳಿಗೆ ಹೆಚ್ಚಾಗಿ ಲಭಿಸುವದು ಒಂದೇ ಒಂದು ಕೋಣೆ. ಆ ಒಂದೇ ಕೋಣೆಯಲ್ಲಿ ನಾಲ್ಕೈದು ಜನರು ವಾಸಿಸಬೇಕಾಗುವದು. ನಾಲ್ಕೈದು ಕೋಣೆಗಳಿರುವ ಮನೆಯಲ್ಲಿ ಇಪ್ಪತ್ತರಿಂದ ಇಪ್ಪತ್ತೈದರ ವರೆಗೆ ನಿವಾಸಿಕರಿರುವರು. ಮನೆಯಲ್ಲಿ ಎಲ್ಲರಿಗೂ ಅಡಿಗೆ ಮಾಡಿ ಬಡಿಸಲು ಒಬ್ಬಳೇ ಅಲ್ಲ. ಅವರವರಿಗೆ ಅವರವರೇ ಮಾಡಿ ತಿನ್ನುವರು.

ಅಲ್ಲಿ ಈಗ ಇರುವ ಮನೆಗಳು ಬೆಳೆಯುತ್ತಿರುವ ಜನಸಂಖ್ಯೆಗೆ ಸಾಕಾಗಲಾರವು. ಅಂಗಡಿಗಳನ್ನು ಮನೆಗಳಾಗಿ ಮಾರ್ಪಡಿಸಿರುವರು. ಕೂಲಿಗಳು ವಾಸಿಸುವ ಕೋಣೆಯು ಜೈಲು ಎಂದು ಕರೆಯಲ್ಪಡಲು ಯೋಗ್ಯವಾಗಿರುವದು. ನೆಲದ ಚದರಳತೆಯು ಹೆಚ್ಚಾದರೆ ೧೬ ಚಚ್ಚೌಕ ಮೀಟರುಗಳು. ಇಂತಹ ಒಂದೊಂದು ಕೋಣೆಯಲ್ಲಿ ಒಮ್ಮೊಮ್ಮೆ ಎರಡು ಕುಟುಂಬದವರು ವಾಸಿಸುವದೂ ಉಂಟು. ರಾತ್ರಿ ಮಲಗುವಾಗ ಕೋಣೆಯಲ್ಲಿರುವ ಕುರ್ಚಿಗಳನ್ನು ಮಾಡಿಗೆ ತೂಗಾಡಿಸಿ ಬಿಡುವರು.

ಮೊಸ್ಕೊವಿನಲ್ಲಿ ಇರುವ ಮನೆಗಳಲ್ಲಿ ವಾಸಿಸುವಾಗ ಗೇಸದೀಪದ ಸೆಕೆಗಿಂತ ಹೆಚ್ಚಿನ ಸೆಕೆಯು ಮೈಯಿಂದ ಹೊರಡುವದು. ಮನೆಗೊಂದು ಬಚ್ಚಲು ಕೋಣೆಯು ಕೂಡ ಇರುವುದಿಲ್ಲ. ಸುಮಾರು ೨೫೦ ನಾಣ್ಯಗಳನ್ನು ತಿಂಗಳಿಗೆ ಸಂಪಾದಿಸುವವನು ಮಾತ್ರವೇ ಒಂದು ಕೋಣೆಯನ್ನು ಬಾಡಿಗೆಗೆ ಪಡಕೊಳ್ಳಲು ಶಕ್ತನಾಗುತ್ತಾನೆ. ಕೂಲಿಯಾಳುಗಳಿಗೆ ಕೂಡ ಅಲ್ಲಿ ತಿಂಗಳಿಗೆ ೫೦ರಿಂದ ೬೦ರ ವರೆಗೆ ನಾಣ್ಯಗಳು ಸಂಪಾದನೆಯಾಗುವವು. ಎಲ್ಲರ ಸಂಪಾದನೆಯು ಸರಾಸರಿಯನ್ನು ತೆಗೆದರೆ ಒಬ್ಬೊಬ್ಬನಿಗೆ ಸುಮಾರು ನೂರರಿಂದ ನೂರಇಪ್ಪತ್ತರ ವರೆಗೆ ನಾಣ್ಯಗಳು ಬೀಳಬಹುದು. ವಾಸಿಸುವದಕ್ಕೆ ಬಹಳ ಹಣಬೇಕಾಗುವದು. ಆಹಾರ ಪದಾರ್ಥವೇ ಜರ್ಮನ್ ಲಂಡನ್ ಮುಂತಾದ ದೇಶಗಳಲ್ಲಿ ಸಿಕ್ಕುವ ಆಹಾರಕ್ಕಿಂತ ದುಬಾರಿ ಕ್ರಯದ್ದಾಗಿದೆ. ಇನ್ನು ವಸ್ತ್ರ ಮತ್ತು ಚರ್ಮದ ಸಾಮಾನುಗಳು ಮೂರು ನಾಲ್ಕು ಪಾಲು ವಿಶೇಷ ಬೆಲೆಯವುಗಳಾಗಿವೆ.

ಗಳಿಂದ ಮುಸಲ್ಮಾನ ಪತ್ರಿಕೆಗಳು ಬಹಳ ಹೆಚ್ಚು ಬೆಳೆದಿವೆ. ಈ ಪತ್ರಿಕೆಗಳು ಸಮಾಜಕ್ಕೆ ಎಷ್ಟು ಹಿತಕರವಾಗಿವೆಯೋ, ವಿದ್ಯಾರ್ಥಿಗಳಿಗೂ ಅಷ್ಟೇ ಹಿತಕರವಾಗಿವೆ. ಇವುಗಳಲ್ಲಿ ಮುಖ್ಯವಾದವುಗಳು 'ಅಲ್‌ಲಿವಾ' ಮತ್ತು 'ಅಲ್‌ಮೊಕತ್ತಾಮ್' ಎಂಬವುಗಳು—ಕೈರೋ ಮತ್ತು ಅಲೆಕ್ಸಾಂಡ್ರಿಯದಿಂದ ಹೊರಡುವ ಇಂಗ್ಲಿಷು ಮತ್ತು ಫ್ರೆಂಚ ಪತ್ರಿಕೆಗಳಲ್ಲಿ ರಾಜಕೀಯ ಕಾರಣದಲ್ಲಿ ವಿಶೇಷ ಉತ್ಸಾಹವನ್ನು ವಹಿಸಿಕೊಳ್ಳುವದಿಲ್ಲ. ಇದೇ ಈಗಿನ ಇಜಿಪ್ತದ ವಿದ್ಯಾಭ್ಯಾಸದ ಸ್ಥಿತಿಯಾಗಿದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶ್ಮಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 8—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0/ ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆಯುರ್ವೇದ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಶರಾಫು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವೂ ಧನವೂ ಸುಖವೂ ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ-ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ, ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವಾಯಿದೆ ಆಗುವ್ವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangulore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು. ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಜೂಲಸ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೩—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ,
ಮಂಗಳೂರು ಟವನ ಮಾತ್ರ.



DUNLOP

ಟ್ರಿಪ್ಪಲ್ ಸ್ಟಡ ಸ್ಟಾಕಲ್ ಟಾಯರು.

ಶಾಸ್ತ್ರೋಕ್ತವಾಗಿ ತಯಾರಿಸಿದ ಟಾಯರು ಕೊಡುವ

ಎಲ್ಲಾ ಭದ್ರತೆಯು ಇದರಿಂದ ದೊರಕುವಂತೆ ಇದು ತಯಾ

ರಿಸಲ್ಪಟ್ಟಿರುತ್ತದೆ. ಇಳಿಜಾರಿನಲ್ಲಿ ಫಕ್ಕನೆ ಜಾರಿಹೋಗದಿರು

ವಿಕೆಯು. ಇದರ ಅನೇಕ ಗುಣಗಳಲ್ಲಿ ಒಂದೇ ಒಂದಾಗಿದೆ.

ಶ್ರೇಷ್ಠತಮ ಟಾಯರು.

fit Dunlop
and be satisfied

ದಿ. ಡನ್ಲೋಪ್ ರಬ್ಬರ್ ಕಂಪೆನಿ (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌ, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೂಹತೀ, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೮ನೇ ಶುಕ್ರವಾರ ಮೇ ೧೯೨೮. ಸಂಚಿಕೆ ೨೦

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ದೇಂಕಿನ ಹೆಡ್ಡ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ಮಾಯುದೆ ಠೇವಣಾತಿಗಳ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ಕಡ್ಡಿಸೋಣಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಷ್ಟಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮುಳುಗಿಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
[illegible], ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS
ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

...Preparations Cover All Your Needs.
...MERIT HAS MADE FAMOUS.

...ವ ಸಿದ್ಧವಾದ ಬಾಟ್ಲಿವಾಲಾ ಇವರ

...ಸಿದ್ಧ ಔಷಧಗಳು.

...ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ಜ್ವರ ನಿವಾರಣ, ರೂ. ೧.
... ತೃಪ್ತಿ ಕೊಡುವ ಔಷಧ ಆಣೆ ೧೩.
... ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ೧–೨–೦. ರೂ. ೧–೪–೦. ೧–೧೨–೦.
... ೦–೬–೦
... ೦–೬–೦. LIBERAL DISCOUNT TO TRADE
...WASHAPUR, BOMBAY.
... ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
...yani Road, P. O. Cadell Road, Bombay. No. 14.

...ವ ರ ಲೋ ಧ್ರ

... ರೋಗನಿವಾರಿಣಿ.

... ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ವಾನವಾದುದು' ಎಂದೂ, ಇನ್ನು ಕೆಲವರು ರತ್ನಖಚಿತವಾದ ...ಗೆಯಾಗಿ ಹೊಗಳುತ್ತಿರುವರು.

... ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

...ಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟು ನಾನಾ ಬಣ್ಣ ..., ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ, ಮೊದಲಾದ ..., ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಶೇಷವಾಗಿ ಗುಣವಾಗುವುವು.

...ಗುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

...ಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:– 18 ಬಳೆಪೇಟೆ, ಬೆಂಗಳೂರು.

...ಜೆಂಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಮ.

23 ಕ್ಯಾರೆಕ್ಟ್ ರೋಲ್ಡ್ ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 6 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7–0–0.

ವಿಳಾಸ:– ವಿ. ಎಸ್. ವಾಚ್ ಕಂಪೆನಿ.

ಪೋಸ್ಟ್ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂವತ್ಸರದ ವೈಶಾಖ ಬ. ೧೫ರಿಂದ ಶನಿವಾರದಿಂದ ವಿಭವ ಸಂವತ್ಸರದ ಜ್ಯೇಷ್ಠ ಬ. ೬ ಶುಕ್ರವಾರದ ವರೆಗಿನ ಪಂಚಾಂಗ

(೧೯೨೮ನೆಯ ವೃಷಭ (ಮೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಸೂರ್ಯ ಅಸ್ತ
19	ಶನಿ	●	೩೫.೧೫	ಕೃತ್ತಿಕಾ	೫೨.೩೨	೬	6. 7	6.47
20	ರವಿ	೧	೨೯.೩೧	ರೋಹಿಣೀ	೫೦.೧೪	೭	6. 7	6.48
21	ಸೋಮ	೨	೨೩.೪೩	ಮೃಗಶಿರಾ	೪೬.೧೬	೮	6. 6	6.48
22	ಕುಜ	೩	೧೮.೪೬	ಆರ್ದ್ರಾ	೪೩.೧೪	೯	6. 6	6.48
23	ಬುಧ	೪	೧೪.೧೪	ಪುನರ್ವಸೂ	೪೧. ೨	೧೦	6. 6	6.49
24	ಗುರು	೫	೧೦.೩೨	ಪುಷ್ಯಾ	೪೦. ೦	೧೧	6. 6	6.49
25	ಶುಕ್ರ	೬	೮. ೧	ಆಶ್ಲೇಷಾ	೩೯.೪೬	೧೨	6. 6	6.50

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
11	92— 8	82— 9	—	—
12	91 3	78— 0	—	—
13	92— 6	78— 6	—	—
14	93— 2	78— 1	—	—
15	93— 3	78— 2	—	—
16	92— 5	80— 8	—	—
17	92— 2	79— 3	—	—
				138–15

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕಿ ...	7– 8	8– 4
ಹೊಸ ಗುಡ್ಡು ...	6–10	7– 4
ಸ.ಗ್ಗಿ ...	6– 4	7– 0
ಹೊಸ ರಾಶಿ ...	6– 1	6–10
ಊರ ಅಸ್ಸಲ್ ಬೆಳ್ತಿಗೆ ...	7– 4	8– 4
ರಂಗೂನು ಬೆಳ್ತಿಗೆ ಗೋಣಿ ೧ ...	12–10	13– 0
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	6– 0	7– 4
ಗೋದಿ ಗೋಣಿ ೧ಕ್ಕೆ ...	16– 8	18– 8
ಹುರುಳಿಗೋಣಿ ೧ಕ್ಕೆ ...	8– 8	10– 8
ಕಡಲೆಗೋಣಿ ೧ಕ್ಕೆ ...	10– 8	12– 8
ತೊಗರಿಗೋಣಿ ೧ಕ್ಕೆ ...	14– 0	14– 8
ತೊಗರಿಬೇಳೆ ಗೋಣಿ ೧ಕ್ಕೆ ...	18– 8	27– 0
ಉದ್ದುಗೋಣಿ ೧ಕ್ಕೆ ...	12– 8	14– 0
ಹೆಸರುಗೋಣಿ ೧ಕ್ಕೆ ...	12– 0	14– 8
ಊರು ಬೆಲ್ಲ ಖಂಡಿ ೧ಕ್ಕೆ ...	55– 0	62– 8
ಉಪ್ಪು ಗೋಣಿ ೧ಕ್ಕೆ ...	4–10	5– 4
ಕೊಬ್ರಿ ಖಂಡಿ ೧ಕ್ಕೆ ...	130– 0	–
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	39– 0	40– 0
ಎಳ್ಳಿಂಡಿ ಖಂಡಿ ೧ಕ್ಕೆ ...	37– 8	45– 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8– 2	9– 2
ಎಳ್ಳೆಣ್ಣೆ ಮುಡಿ ೧ಕ್ಕೆ ...	8– 0	8– 4
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	7– 2	8– 0
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4– 6	4– 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6–10	7– 0
ಸಾಸಿವೆ ಮುಡಿ ೧ಕ್ಕೆ ...	8– 0	8– 4
ಕೊತ್ತುಂಬರಿ ಮುಡಿ ೧ಕ್ಕೆ ...	6– 8	7– 8
ಕಾಫಿ ಖಂಡಿ ೧ಕ್ಕೆ ...	365– 0	400– 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ...	170– 0	210– 0
ಕಾಳುಮೆಣಸು ಖಂಡಿ ೧ಕ್ಕೆ ...	510– 0	515–
ಯಾಲಕ್ಕಿ ಮಣ ೧ಕ್ಕೆ ...	65– 0	80– 0
ಗೇರುಬೀಜ ಮುಡಿ ೧ಕ್ಕೆ ...	3–12	3–13
ಕಳ್ಳಿಹ ಖಂಡಿ ೧ಕ್ಕೆ ...	37– 8	40– 0
ತಾಂಬ್ರ ತಗಡು ಮಣ ೧ಕ್ಕೆ ...	15– 0	16– 8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	20– 0	21–
ಚೀನಿ ಬೆಳ್ಳಿ ಸೇರು ೧ಕ್ಕೆ ...	15– 0	–
ಹಿತ್ತಾಳೆ ತಗಡು ಮಣ ೧ಕ್ಕೆ ...	15– 0	16– 8
ಪವನು	13– 8	13.10-6

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ವಜನೆ! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು

ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು. ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಕೊಡಲ್ಪಡುತ್ತವೆ. ಧಾರಣೆ ವಗೈರೆಗೆ ಬರೆಯಿರಿ.

ಕೆ. ವಿ. ರಾಘವೇಂದ್ರಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

(6–5) ಅವಿನ್ಯೂ ರೋಡು, ಬೆಂಗಳೂರು ಸಿಟಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಬೃಹ್ಮ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷದಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes
of India's Masses

For Particulars pply to:

The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೇಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

10-8-'28 ಮಂಗಳೂರು.

೩ನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

ಧಾರವಾಡ.

ಪತ್ರಿಕೆ ನಂ. ೧

ಕಳೆದ ೨ನೇ ಕರ್ನಾಟಕ ಪ್ರಾಂತಿಕ ಪರಿಷತ್ತು ೧೯೨೬ನೇ ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ನಡೆಯಿತು ಮುಂದಿನ ಪರಿಷತ್ತನ್ನು ಧಾರವಾಡ ಜಿಲ್ಲೆಯವರು ಆಮಂತ್ರಿಸಿ ಅದನ್ನು ಗದಗಿನಲ್ಲಿ ನೆರೆಯಿಸಬೇಕೆಂದು ಗೊತ್ತುಮಾಡಿದ್ದರು. ಆದರೆ ಕಳೆದ ವರ್ಷ ಗದಗಿನಲ್ಲಿ ಮತ್ತು ಕರ್ನಾಟಕ ಪ್ರಾಂತದಲ್ಲೆಲ್ಲ ಬರಗಾಲ. ಹಾಗೂ ಗದಗಿನಲ್ಲಿ ಪ್ಲೇಗು ಮುಂತಾದವುಗಳಿದ್ದದರಿಂದ ಅದನ್ನು ಜರಗಿಸಲಿಕ್ಕಾಗಲಿಲ್ಲ. ಎಷ್ಟೋ ಮಹತ್ವದ ಹಾಗೂ ಅಗತ್ಯದ ವಿಷಯಗಳ ಬಗ್ಗೆ ಕರ್ನಾಟಕವು ತನ್ನ ಅಭಿಪ್ರಾಯವನ್ನು ಗೊತ್ತುಪಡಿಸಿ ಕಾರ್ಯಕ್ಕೆ ಹತ್ತಬೇಕಾಗಿದ್ದರಿಂದ ಇನ್ನು ಮಾತ್ರ ಪರಿಷತ್ತನ್ನು ಮುಂದಿಡುವ ಹಾಗಿಲ್ಲ. ಅದ್ದರಿಂದ ಸ್ವಲ್ಪ ಲಗುಬಗೆ ಯಾವದೂ ಚಿಂತೆಯಿಲ್ಲ, ಇದೇ ಮೇ ೨೬ ಹಾಗೂ ೨೭ನೇ ತಾ ಗೆ ಧಾರವಾಡದಲ್ಲಿ ಈ ಪರಿಷತ್ತನ್ನು ಕೂಡಿಸಬೇಕೆಂದು ನಿರ್ಣಯವಾಗಿದೆ.

ಮುಂಬಯಿ ಕಾಯಿದೇ ಮಂಡಲದ ಸಭಾಸದರಾದ ಶ್ರೀ. ಜೋಗ ವಿಶ್ವನಾಥರಾಯರ ಅಧ್ಯಕ್ಷತೆಯಲ್ಲಿ ಒಂದು ತಾತ್ಪೂರ್ತಿಕ ಸ್ವಾಗತ ಸಭೆಯೂ ಏರ್ಪಟ್ಟಿದೆ. ಜಿಲ್ಲಾ ಕಾಂಗ್ರೆಸ ಮಂಡಲದವರು ಸದ್ಯಕ್ಕೆ ಎಲ್ಲ ವ್ಯವಸ್ಥೆಯನ್ನು ಕೈಕೊಂಡಿದ್ದಾರೆ. ಸ್ವಾಗತ ಮಂಡಲದ ಮೊದಲನೇ ಸಭೆಯು ಇದೇ ೧೩ನೇ ತಾ. ಗೆ ಸೇರಿ ಪರಿಷತ್ತಿನ ಅಧ್ಯಕ್ಷರನ್ನು ಗೊತ್ತುಪಡಿಸುವದು.

ಅಖಿಲ ಹಿಂದೂಸ್ಥಾನಕ್ಕೂ ಸಂಬಂಧಪಟ್ಟ ಮಹತ್ವದ ವಿಷಯುಗಳೊಂದಿಗೆ ಕರ್ನಾಟಕದ ಅತ್ಯಂತ ಮಹತ್ವದ ವಿಷಯಗಳ ವಿಚಾರವೂ ಪರಿಷತ್ತಿನಲ್ಲಿ ಒಬ್ಬ ಯೋಗ್ಯ ಮುಂದಾಳುವಿನ ಅಧ್ಯಕ್ಷತೆಯಲ್ಲಿ ನಡೆಯುವದು. ಪರಿಷತ್ತಿನ ಸಮಯದಲ್ಲಿ ಒಂದು ಖಾದೀ ಪ್ರದರ್ಶನವೂ ಏರ್ಪಡುವದು. ೨ನೇ ಅಖಿಲ ಕರ್ನಾಟಕ ಹಿಂದೀ ಸಮ್ಮೇಲನವಾದರೂ ಅದೇ ವಾರದಲ್ಲಿ ನಡೆಯಬೇಕೆಂದು ಅಪೇಕ್ಷಿಸಲಾಗಿದೆ. ಕರ್ನಾಟಕ ಯುವಕರ ಪರಿಷತ್ತನ್ನಾದರೂ ಮುಂಬಯಿಯ ಪ್ರಸಿದ್ಧ ಮುಂದಾಳುಗಳಾದ ಶ್ರೀ. ಕೆ. ಎಫ್. ನರಿಮಾನ್ನರ ಅಧ್ಯಕ್ಷತೆಯಲ್ಲಿ ಆಗ ನಡೆಯಿಸಬೇಕೆಂದು ಚಾಲಕರ ಮನಸ್ಸಿನಲ್ಲಿದೆ. ಇಷ್ಟು ದಿನ ಮುಂದೆ ಬಿದ್ದ ಕರ್ನಾಟಕ ಏಕೀಕರಣ ಪರಿಷತ್ತನ್ನೂ ಅದೇ ಸಮಯದಲ್ಲಿ ನೆರೆಯಿಸಬೇಕೆಂದು ಎಷ್ಟೋ ಜನರು ಸೂಚಿಸಿದ್ದಾರೆ.

ಇದರಿಂದ ಮೇ ತಿಂಗಳ ಕೊನೆಯ ವಾರವು ಧಾರವಾಡದಲ್ಲಿ ಪರಿಷತ್ತುಗಳ ವಾರವಾಗಿಯೇ ಪರಿಣಮಿಸಬೇಕೆಂದು ತೋರುತ್ತದೆ. ತನ್ನ ಸಂಪನ್ನ ಹಾಗೂ ಆರೋಗ್ಯಕರವಾದ ಹವೆಯಿಂದಲೂ ಮನೋಹರವಾದ ನೋಟಗಳಿಂದಲೂ ಧಾರವಾಡವು ಆಗ ಎಲ್ಲಾ ಕರ್ನಾಟಕಸ್ಥರನ್ನು ಆಕರ್ಷಿಸಲೆಂದು ಹಾರೈಸುತ್ತೇವೆ.

ಧಾರವಾಡ	ರಾ. ಶ್ರೀ. ಹುಕ್ಕೇರಿಕರ ಎಂ. ಎ.
	ರಂ. ರಾ. ದಿವಾಕರ ಎಂ. ಎ. ಎಲ್. ಎಲ್. ಬಿ.
೬–೫–೨೮.	ಗೋ. ಗು. ಗುತ್ತಲ ಬಿ. ಎ. ಎಲ್. ಎಲ್. ಬಿ.
	ತಾತ್ಪೂರ್ತಿಕ ಸ್ವಾಗತ ಸಭೆಯ ಕಾರ್ಯದರ್ಶಿಗಳು.

ಪ್ರಥಮ ಕರ್ನಾಟಕ ಖಾದೀ ಪರಿಷತ್ತು.

ಧಾರವಾಡ.

ಧಾರವಾಡದಲ್ಲಿ ಇದೇ ಮೇ ತಿಂಗಳ ೨೬ ಅಥವಾ ೨೮ನೆಯ ತಾರೀಖಿನ ದಿವಸ ಪ್ರಥಮ ಕರ್ನಾಟಕ ಖಾದೀ ಪರಿಷತ್ತನ್ನು ಕೂಡಿಸುವದು ಗೊತ್ತಾಗಿದೆ. ಕರ್ನಾಟಕದಲ್ಲಿ ಇದು ವರೆಗೆ ಆದ ಖಾದಿಯ ಕಾರ್ಯ, ಇನ್ನು ಮುಂದೆ ಅದನ್ನು ಹೆಚ್ಚಿಸುವ ಅವಶ್ಯಕತೆ, ಹಾಗೆ ಹೆಚ್ಚಿಸುವ ಮಾರ್ಗಗಳು ಮುಂತಾದ ವಿಷಯಗಳು ಚರ್ಚಿಸಲಾಗುವವು. ನಿಸ್ಸೀಮ ಖಾದೀ ಭಕ್ತರೂ, ದೇಶಸೇವಕರೂ ಆದ ಕೆಲವು ಸದ್ಗೃಹಸ್ಥರಿಗೆ ಅಧ್ಯಕ್ಷಪದವನ್ನು ಸ್ವೀಕರಿಸಲಿಕ್ಕೆ ಬಿನ್ನವಿಸಲಾಗಿದೆ. ಅವರು ಅಧ್ಯಕ್ಷಪದವನ್ನು ಸ್ವೀಕರಿಸಿದ ಕೂಡಲೆ ಪ್ರಸಿದ್ಧಪಡಿಸುವೆವು.

ಕರ್ನಾಟಕದಲ್ಲಿಯ ಖಾದಿಯ ಎಲ್ಲ ಭಕ್ತರು ಈ ಮಹತ್ವದ ಪರಿಷತ್ತಿಗೆ ಬಂದು ವಿಚಾರ ವಿನಿಮಯ ಮಾಡಿ ಖಾದಿಯ ಕಾರ್ಯಕ್ಕೆ ಪ್ರೋತ್ಸಾಹ ಕೊಡಬೇಕೆಂದು ನಾವು ಬಿನ್ನವಿಸುತ್ತೇವೆ.

ಈ ಪರಿಷತ್ತಿನ ವ್ಯವಸ್ಥೆ ಮಾಡುವದಗೋಸುಗ ಸ್ವಾಗತ ಮಂಡಲಿಯ ಮೊದಲನೆಯ ಸಭೆಯು ೧೩–೫–೨೮ಕ್ಕೆ ಶ್ರೀ. ಕಟ್ಟಾರವರ (ರಾಯಿಟರಗಲ್ಲಿ ಧಾರವಾಡ) ಅಟ್ಟದ ಮೇಲೆ ಸಂಜೆ ೭ ಘಂಟೆಗೆ ಕೂಡುವದು,

ಶ್ರೀನಿವಾಸ ಆತ್ಮಾರಾಮ ಜೋಗ.
ರಂಗನಾಥ. ರಾ. ದಿವಾಕರ.

ಲೋಕಲ್ ಬೋರ್ಡು ಆಕ್ಟಿನಲ್ಲಿ ಮಾಡಬೇಕಾದ ಹೊಸ ಬದಲಾವಣೆಗಳು.

ಮದರಾಸು ಸಂಸ್ಥಾನದ ಲೋಕಲ್ ಬೋರ್ಡು ಆಕ್ಟನ್ನು ಬದಲಾಯಿಸುವ ಆಲೋಚನೆಯು ಮದರಾಸು ಸರಕಾರಕ್ಕೆ ಇರುವುದರಿಂದ ಒಂದು ಬಿಲ್ ತಯಾರಾಗಿ ಎಲ್ಲಾ ಲೋಕಲ್ ಬೋರ್ಡುಗಳ ಆಲೋಚನೆಯನ್ನು ತೆಗೆದುಕೊಳ್ಳುವುದಕ್ಕಾಗಿ ಈ ಬಿಲ್ಲಿನ ಒಂದೊಂದು ಪ್ರತಿಯನ್ನು ಈ ಬೋರ್ಡುಗಳಿಗೆ ಮದರಾಸು ಸರಕಾರದವರು ಕಳುಹಿಸಿರುವರು. ಇವರ ಅನುಭವವನ್ನು ಪಡೆದ ಮೇಲೆ ಈ ಬಿಲ್ಲು ಜನಸಾಮಾನ್ಯರಿಗೆ ತಿಳಿಸುವುದಕ್ಕಾಗಿ ಪ್ರಕಟಿಸಲ್ಪಡುವದು ಎಂದು ಸರಕಾರಿ ಹುಕುಂ ಪ್ರಕಟವಾಗಿದೆ.

ಲೋಕಲ್ ಬೋರ್ಡು ಆಕ್ಟಿನಲ್ಲಿ ಮಾಡಬೇಕಾದ ಕೆಲವು ತಿದ್ದುಪಡಿಗಳ ವಿಷಯ ಈ ಕೆಳಗಿನ ಸೂಚನೆಗಳನ್ನು ಕೊಟ್ಟಿದೆ.

ಮತದಾರರು. ಈಗ [illegible] ಕೊಡುವವರಿಗೂ ೫೦ ರೂಪಾಯಿ ಬಾಡಿಗೆ [illegible] ಇರುವವರಿಗೂ ೮ ಆಣೆ ವೃತ್ತಿತೆರಿಗೆ [illegible] ರಿಗೂ ಮಾತ್ರವೇ ವೋಟು ಕೊಡಲಿಕ್ಕೆ [illegible] ಹಕ್ಕಿದೆ. [illegible] ವೋಟು ಕೊಡುವ ಹಕ್ಕು ಇರುವುದಿಲ್ಲ.

ಇನ್ನು ಮುಂದೆ ಎಲ್ಲಾ [illegible] ವರುಷ ಪ್ರಾಯ [illegible] ವೋಟು ಕೊಡುವ ಮತ್ತು ಮೆಂಬರರಾಗುವ ಹಕ್ಕನ್ನು ಕೊಡಬೇಕು.

ನೋಮಿನೇಶನ್ ಸೀಟುಗಳನ್ನು [illegible] ತೆಗೆದು ಹಾಕಲಿಕ್ಕೆ ಸಾಧ್ಯವಿಲ್ಲದಿದ್ದರೆ, [illegible] ಜಾತಿಯವರೇ ತಮ್ಮ ಪ್ರತಿನಿಧಿಯನ್ನು [illegible] ವಂತೆ ಏರ್ಪಡಿಸಬೇಕು. [illegible] ಚಿಂತಕರೆಂದು [illegible] ಮಿಶನ್, [illegible] ಸಮಾಜ, ಬಾಸೆಲ್ ಮಿಶನ್, [illegible] ಓಫ್ ಇಂಡಿಯಾ ಸೊಸೈಟಿ, [illegible] ದರ ಪ್ರತಿನಿಧಿಗಳಾಗಿ ನೇಮಿಸುವಂತೆ ಕಾನೂನು ಮಾಡಬೇಕು.

ಡಿಸ್ಟ್ರಿಕ್ಟ್ ಬೋರ್ಡು.

ಮೆಂಬರರು. ಈಗಿರುವ ಮೆಂಬರರ ಸಂಖ್ಯೆಯು ಸಾಧಾರಣವಾಗಿ ೩೨ ಇದೆ. ಅದರ [illegible] ಬಹುದೆಂದು ಇದೆ. ಇನ್ನು ಮುಂದೆ ಆಗಲಿಕ್ಕಿರುವ ಆಕ್ಟಿನಲ್ಲಿ ಮೆಂಬರರ ಸಂಖ್ಯೆಯು ಕಡಿಮೆಯಾದರೆ [illegible] ಯಾಕೆಂದರೆ ಇರುವ ಎಲ್ಲಾ ಜಾತಿಯವರಿಗೆ ಪ್ರತಿನಿಧಿಗಳು ಇರುವಂತೆ ಮಾಡುವುದು. ಇವರಲ್ಲಿ [illegible] ಅಂದರೆ ೪೫ ಮಂದಿ ಮೆಂಬರರನ್ನು ಚುನಾಯಿಸಿದರೆ [illegible] ೧೫ ಮೆಂಬರಿಕೆಗಳನ್ನು ಓಟಿಗೆ ನಿಲ್ಲಲು [illegible] ಸಾಲದ ಜಾತಿಯವರನ್ನು ನೇಮಿಸಲು ಸಾಧ್ಯವಾಗುವುದು. ಮುಸಲ್ಮಾನರಿಗೆ ಅವರೊಳಗಿಂದಲೇ ಮೆಂಬರರನ್ನು ಚುನಾಯಿಸುವ ಹಕ್ಕನ್ನು ಕೊಟ್ಟರೆ ಇವರನ್ನು ನೋಮಿನೇಟ್ ಮಾಡುವ ಅಗತ್ಯವೂ ಇಲ್ಲ. ತಮಗೆ ಮೆಂಬರಿಕೆ ಸಿಕ್ಕಲಿಲ್ಲವೆಂದು ದೂರಲಿಕ್ಕೂ ಇಲ್ಲ. ಇದೇ ರೀತಿಯಲ್ಲಿ ರೋಮನ್ ಕೆಥೋಲಿಕರಿಗೂ, ಪ್ರೊಟೆಸ್ಟಾಂಟ್ ಕ್ರೈಸ್ತರ ಮೆಂಬರರನ್ನು ಚುನಾಯಿಸಬಹುದು. ಇನ್ನು ಹಿಂದುಳಿದ ಹಿಂದೂ ಜಾತಿಯವರು ತಮ್ಮ ತಮ್ಮ ಜಾತಿಯ ಪರವಾಗಿ ಒಬ್ಬೊಬ್ಬರನ್ನು ಚುನಾಯಿಸಲಿಕ್ಕೂ ಆದಿದ್ರಾವಿಡರಲ್ಲಿ ಅವರೇ ಅವರ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ಕೊಟ್ಟು ಯಾರೂ ತಮಗೆ ಮೆಂಬರಿಕೆ ಸಿಕ್ಕಲಿಲ್ಲವೆಂದು ದೂರದಂತೆ ಮಾಡಬೇಕು.

ರೋಮನ್ ಕೆಥೋಲಿಕರ ಪರವಾಗಿ ಅನ್ಯದೇಶದ ಕ್ರೈಸ್ತ ಪಾದರಿಗಳನ್ನು ಚುನಾಯಿಸದೆ ಇದೇ ದೇಶದ ರೋಮನ್ ಕೆಥೋಲಿಕರನ್ನೇ ಚುನಾಯಿಸಬೇಕು. ಪ್ರೊಟೆಸ್ಟಾಂಟರಲ್ಲಿಯೂ ಊರಿನವರನ್ನೇ ಚುನಾಯಿಸ ಬೇಕು. ಮುಸಲ್ಮಾನರಲ್ಲಿ ತುರುಕರು, ನವಾಯತರು, ಮಾಪಿಳ್ಳೆಯವರು, ಪುಲಿಯ ಇಸ್ಲಾಮ್, ರಾವುತರು ಇವರ ಪ್ರತ್ಯೇಕ ಪ್ರತಿನಿಧಿಗಳು ಇರಬೇಕು.

ಚುನಾವಣೆ. ಈಗ ತಾಲೂಕು ಬೋರ್ಡುಗಳ ಮೆಂಬರರನ್ನೇ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ತಾಲೂಕು ಬೋರ್ಡಿನವರೇ ಚುನಾಯಿಸುವರು. ಇನ್ನು ಮುಂದೆ ಈ ಕ್ರಮವನ್ನು ರದ್ದು ಪಡಿಸಿ ಒಂದೊಂದು ಜಿಲ್ಲೆಯನ್ನು ಸರ್ಕಲುಗಳಾಗಿ ಮಾಡಿ ಆ ಸರ್ಕಲುಗಳಿಂದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ಚುನಾಯಿಸಬೇಕು. ಆಗ ಜಿಲ್ಲೆಯ ಓಟರರ ಹಂಗು ಮೆಂಬರರಿಗೆ ಇರುವುದು. ಈಗ ತಾಲೂಕು ಬೋರ್ಡು ಮೆಂಬರುಗಳು [illegible] ಮಾಡಿಕೊಂಡು ಮೆಂಬರಿಕೆಗೆ [illegible]. ಇದರಿಂದ ಮೆಂಬರಿಕೆಗಳು ಸುಲಭವಾಗಿ ಸಿಕ್ಕುತ್ತವೆ. [illegible] ಮೆಂಬರಿಕೆಗೆ ಬೆಲೆಯೂ ಕಡಿಮೆ, ಜಿಲ್ಲೆಯವರ ಹಂಗೇ ಇರುವುದಿಲ್ಲ.

ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆ. ಈಗ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೇ ಚುನಾಯಿಸುವರು. ಇನ್ನು ಮುಂದೆ ಈ ಕ್ರಮವನ್ನು ತೆಗೆದು ಹಾಕಿ ಪ್ರೆಸಿಡೆಂಟರನ್ನು ಜಿಲ್ಲೆಯ ವೋಟರುಗಳು ಚುನಾಯಿಸುವಂತೆ ಕಾನೂನು ತಿದ್ದುಪಡಿಯಾಗಬೇಕು. ಆಗ ಪ್ರೆಸಿಡೆಂಟರಿಗೆ ಜಿಲ್ಲೆಯ ಓಟರರ ಹಂಗು ಇರುವುದು. ಇವರು ಮೆಂಬರುಗಳ ಕೈಯಲ್ಲಿರುವ ಆಟದ ಗೊಂಬೆಗಳಂತೆ ಆಗುವದಿಲ್ಲ. ಇವರನ್ನು ಕಳೆಯುವ ಹಕ್ಕು ಮೆಂಬರರಿಗೂ ಇರುವುದು. [illegible] ವೋಟರರಿಗೂ ಇರುವುದು.

ಕೆಲವು ವಿಧ ಬೇರೆ ಬೇರೆ ಕೆಲಸಗಳಿರುವವರನ್ನು ಪ್ರೆಸಿಡೆಂಟರಾಗಿ ಚುನಾಯಿಸಿದರೆ [illegible] ಡಿಸ್ಟ್ರಿಕ್ಟ್ ಬೋರ್ಡಿನ [illegible] ಆಗದೆ ಕೆಲಸವು ಬಾಕಿ [illegible] ತಿಳಿಯುತ್ತ [illegible] ಮಾಹಿತಿಯು ಸಿಕ್ಕದೆ [illegible] ನಡಿಸಬೇಕಾಗುವುದು. ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಇತರ ಯಾವ [illegible] ಕಾನೂನಿನಲ್ಲಿ ತಿದ್ದು ಪಡಿಯಾಗಬೇಕು.

[illegible] ಈ ಬೋರ್ಡುಗಳ [illegible] ಮುಖ್ಯವಾದ ಕರ್ತವ್ಯಗಳು, ಅವು [illegible] ಈ ಮಾರ್ಗಗಳ [illegible], ಸಾಲು ಮರಗಳು [illegible] ಬೋರ್ಡು ಆಗುವ [illegible].

[illegible] ಕೈಯಲ್ಲಿ [illegible].

[illegible] ಇರ [illegible].

[illegible] ಡಿಸ್ಟ್ರಿಕ್ಟ್ [illegible] ತಾಲೂಕು ಹೆಡ್ [illegible] ಆಸ್ಪತ್ರೆ [illegible] ತೆಗೆದುಕೊಂಡರೂ [illegible] ಇವುಗಳ [illegible] ಸಾಧ್ಯವಿಲ್ಲದ್ದರಿಂದ ಈ [illegible] ಆಸ್ಪತ್ರೆಗಳ [illegible] ಬೋರ್ಡಿನ ಕೈಕೆಳಗೆ ಬರಬೇಕು.

ತಾಲೂಕು ಬೋರ್ಡುಗಳು. ಈಗಿನ ಆಕ್ಟು [illegible] ಆಸ್ಪತ್ರೆಗಳು, ಶಾಲೆಯ [illegible] ಇವರ ಸ್ವಾಧೀನ [illegible] ಹೊಸತಾಗಿ [illegible] ಡಿಸ್ಟ್ರಿಕ್ಟ್ ಬೋರ್ಡುಗೂ [illegible] ಮಾರ್ಕೆಟುಗಳನ್ನೂ [illegible] ಗ್ರಾಮ ಪಂಚಾಯತುಗಳಿಗೂ ವಹಿಸಿಕೊಟ್ಟರೆ ತಾಲೂಕು ಬೋರ್ಡುಗಳಿಗೆ ಯಾವ ತರ ಕೆಲಸಗಳೂ ಇಲ್ಲದ್ದರಿಂದ ತಾಲೂಕು ಬೋರ್ಡುಗಳನ್ನು ತೆಗೆದು ಹಾಕುವುದರಿಂದ ದೇಶಕ್ಕೆ ಯಾವ ತರ ನಷ್ಟವೂ ಇರಲಿಕ್ಕಿಲ್ಲ. ಈಗಿರುವ ತಾಲೂಕು ಬೋರ್ಡುಗಳು ಯಾವ ತರದ ದೇಶೋದ್ಧಾರದ ಕೆಲಸಗಳನ್ನು ಮಾಡಿದ್ದು ಕಂಡು ಬರುವುದಿಲ್ಲ. ಎಲ್ಲಿ ನೋಡಿದರೂ ಬೋರ್ಡಿನೊಳಗೆ ಕಲಹಗಳೇ ಇರುವುದರಿಂದ ದೇಶೋದ್ಧಾರದ ಕಡೆಗೆ ಮನಸ್ಸನ್ನು ಕೊಂಡುಹೋಗಲು ಸಮಯವೇ ಸಿಕ್ಕುವುದಿಲ್ಲ. ಕೆಲವು ಕಡೆಗಳಲ್ಲಿ ಫುಟ್‌ಬಾಲ್ ಕೆಲವು ಕಡೆಗಳಲ್ಲಿ ನೋಕೋನ್ಫಿಡೆನ್ಸ್ ಇದೇ ನಡೆಯುವುದು ಕಾಣುತ್ತದೆ. ಆದುದರಿಂದ ಇಂಥಾ ನಿಷ್ಪ್ರಯೋಜನಕರವಾದ ಈ ಸಂಸ್ಥೆಯನ್ನು ತೆಗೆದು ಹಾಕಿದರೆ ಯಾವ ತರದ ಹಾನಿಯೂ ಉಂಟಾಗಲಾರದು.

ಮುನಿಸಿಪಾಲಿಟಿಗಳು. ಇವರ ಚೆಯರ್ ಮೇನರನ್ನು ಮುನಿಸಿಪಾಲಿಟಿ ಸರಹದ್ದಿನೊಳಗಿರುವ ವೋಟರರೇ ಚುನಾಯಿಸಬೇಕು. ಇದರಿಂದ ಮುನಿಸಿಪಾಲಿಟಿಯ ಪ್ರತಿ ಒಬ್ಬ ಕೌನ್ಸಿಲರರಿಗೆ ಚೆಯರ್ ಮೇನರ ಹುದ್ದೆಗೆ ಉಮೇದುವಾರರಾಗಲು ಸಾಧ್ಯವಾಗುವುದು. ನಿಜವಾಗಿ ಒಳ್ಳೇ ಕೆಲಸ ಇರಬೇಕಾದರೆ ಈ ಚೆಯರ್ ಮೇನರಾಗುವವರಿಗೆ ಇತರ ಹಲವು ಸಂಸ್ಥೆಗಳ ಚೆಯರ್ ಮೇನ್‌ಶಿಪ್ ಇರಬಾರದು.

ಈಗಿನ ಕ್ರಮದ ಪ್ರಕಾರ ಕೌನ್ಸಿಲ್ ಮೆಂಬರರು ಚೆಯರ್ ಮೇನರ ಮೇಲೆ ನೋಕೋನ್ಫಿಡೆನ್ಸ್ ಎಂಬ ಠರಾವು ತಂದೊಡನೆ ಚೆಯರ್ ಮೇನರು ತನ್ನ ಕೆಲಸಕ್ಕೆ ರಾಜೀ ಕೊಡಬೇಕೆಂತ ಕಾನೂನಿಲ್ಲ. ಇನ್ನು ಮುಂದೆ ಠರಾವು ಪಾಸಾದೊಡನೆಯೇ ಚೆಯರ್ ಮೇನರು ಹುದ್ದೆಯನ್ನು ಬಿಡುವಂತೆ ಕಾನೂನು ತಿದ್ದುಪಡಿಯಾಗಬೇಕು.

ರಶ್ಯಾದೇಶದಲ್ಲಿರುವ ಈಗಿನ ಜೈಲು ಕ್ರಮಗಳು.

ರಶ್ಯಾದೇಶದಲ್ಲಿ ಈಗಿನ ಸೋವಿಯಟ್ ಸರಕಾರದವರು ಜನರ ಗುಣ ನಡತೆಗಳನ್ನು ಜೈಲುಗಳಲ್ಲಿ ತಿದ್ದುಪಡಿ ಮಾಡಿ ಅವರು ಜೈಲಿನಿಂದ ಹೊರಗೆ ಬಂದ ಮೇಲೆ ಸುಖವಾಗಿ ಇರುವಂತೆ ಮಾಡುವುದಕ್ಕಾಗಿ ಹೊಸ ರೀತಿಯಲ್ಲಿ ಕೈದಿಗಳನ್ನು ನಡಿಸುತ್ತಿರುವರು.

ಕಠಿಣತರದ ತಪ್ಪಿತಗಳನ್ನು ಮಾಡಿದವರನ್ನು ಇಟ್ಟಿರುವ ಮೊಸ್ಕೊ ಜೈಲು.

ಜೈಲಿನ ಕಟ್ಟೋಣವು ವಿಶೇಷ ಅಂದವಾಗಿರುವುದಿಲ್ಲ. ಜೈಲಿನ ದ್ವಾರದಿಂದ ಒಳಗೆ ಪ್ರವೇಶಿಸಿದೊಡನೆ ಮಧ್ಯದಲ್ಲಿ ಅಂಗಳವಿದ್ದು ಎರಡು ಸಾಲಿನಲ್ಲಿ ಕೈದಿಗಳಿರುವ ಕೋಣೆಗಳಿವೆ. ಇವುಗಳಿಗೆ ೩ ಮಾಳಿಗೆಗಳು ಇವೆ. ಜೈಲಿನ ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಒಬ್ಬ ಗವರ್ನರರು ಇರುತ್ತಾರೆ. ಕೋಣೆಗಳು ಇಕ್ಕಟ್ಟಾಗಿ, ವಾಸವಾಗಿರಲಿಕ್ಕೆ ಅಷ್ಟು ಯೋಗ್ಯವಾದವುಗಳಲ್ಲ. ಒಂದೊಂದು ಕೋಣೆಯಲ್ಲಿ ಎರಡು ಮೂರು ಮಂಚಗಳಿವೆ. ವಾಯು ಸಂಚಾರವು ಸರಿಯಾಗಿರುವುದಿಲ್ಲ. ಅಲ್ಲಿ ಚಳಿಯು ಹೆಚ್ಚಾಗಿರುವುದರಿಂದ ಈ ರೀತಿ ಕಟ್ಟಡವನ್ನು ಕಟ್ಟಿರುವರು. ಕೋಣೆಗಳು ಅಷ್ಟೊಂದು ಸ್ವಚ್ಛವಾಗಿಯೂ ಚೊಕ್ಕಟವಾಗಿಯೂ ಇರುವುದಿಲ್ಲ. ಕೋಣೆಗಳಲ್ಲಿ ಓದಲಿಕ್ಕೆ ಬೇಕಾದ ಪುಸ್ತಕಗಳು ಇವೆ. ಕೆಲವು ಕೋಣೆಗಳಲ್ಲಿ ಕೈದಿಗಳು ತಮ್ಮ ಸ್ವಂತ ಖರ್ಚಿನಿಂದ ಪಡಕೊಂಡ ರೆಡಿಯೊ ಸೆಟ್ಟುಗಳು ಇವೆ.

ಈ ಜೈಲಿನಲ್ಲಿ ಸಾಧಾರಣ ೪೫೦ ಕೈದಿಗಳಿಗೆ ಬೇಕಾದ ಸ್ಥಳವಿದೆ. ಇದರಲ್ಲಿ ೧೦ ವರುಷಗಳ ಶಿಕ್ಷೆ ವಿಧಿಸಲ್ಪಟ್ಟ ಕೈದಿಗಳು ಇರುವರು. ಇವರು ಒಳ್ಳೇರೀತಿಯಲ್ಲಿ ನಡೆದರೆ ಶಿಕ್ಷೆಯು ಎರಡು ಮೂರು ವರುಷಕ್ಕೆ ಕಡಿಮೆಯಾಗುತ್ತದೆ. ಜೈಲಿನ ಮೇಲು ತನಿಖಿ ನೋಡಲಿಕ್ಕೆ ೫೩ ಮಂದಿ ನೌಕರರು ಇರುವರು. ಇವರಲ್ಲಿ ಒಬ್ಬರು ಗವರ್ನರರು, ಒಬ್ಬರು ಸರ್ಜನರು, ಕೆಲವರು ಇವರ ಸಹಾಯಕರು. ಇವರು ಮೂರು ತಂಡಗಳಾಗಿ ವಿಭಾಗಿಸಲ್ಪಟ್ಟು ಒಂದೊಂದು ತಂಡವು ೮ ಗಂಟೆಗಳ ಸರ್ತಿಪ್ರಕಾರ ಕೆಲಸ ಮಾಡುತ್ತಿರುವರು. ಈ ರೀತಿಯಲ್ಲಿ ಒಂದು ಸರ್ತಿಯಲ್ಲಿ ೧೭-೧೮ ಮಂದಿ ಕೆಲಸದಲ್ಲಿರುವರು. ಬಂದಿವಾನರನ್ನು ನೋಡಲಿಕ್ಕೆ ಪ್ರತ್ಯೇಕ ವಾರ್ಡರು ಇರುವುದಿಲ್ಲ. ಬಂದಿವಾನರಲ್ಲಿ ಒಳ್ಳೇ ಗುಣವಂತರನ್ನು ವಾರ್ಡರರಾಗಿ ನೇಮಿಸಿರುವರು. ಈ ವಾರ್ಡರರ ಕೈಯಲ್ಲಿ ಆಯುಧಗಳೂ ಇರುವುದಿಲ್ಲ. ಬೆತ್ತಗಳು ಸಹ ಇರುವುದಿಲ್ಲ. ಹೆಬ್ಬಾಗಿಲನ್ನು ಕಾಯುವ ಇಬ್ಬರು ಪಹರೆಯವರ ಕೈಯಲ್ಲಿ ಮಾತ್ರವೇ ಬಾಯನೆಟುಗಳು ಇರುವವು.

ಕೈದಿಗಳನ್ನು ಶಿಕ್ಷಿಸಿ ಇತರರು ತಪ್ಪುಮಾಡದಂತೆ ಮಾಡುವುದೂ, ಜೈಲುಗಳ ಉದ್ದಿಶ್ಯವಲ್ಲವಂತೆ; ಜೈಲಿನಿಂದ ಅವರು ಹೊರಗೆ ಹೋದಮೇಲೆ ಇವರು ಒಳ್ಳೇ ನಡತೆಯಿಂದ ಇದ್ದು ಸಮಾಜಕ್ಕೆ ಒಳ್ಳೇದನ್ನು ಮಾಡುವಂತೆ ಕಲಿಸುವುದೇ ಮುಖ್ಯ ಉದ್ದಿಶ್ಯವಾಗಿದೆಯಂತೆ. ಜೈಲುಗಳಿಗೆ ಜೈಲುಗಳೆಂಬ ಹೆಸರನ್ನು ಸಹ ಇಡುವುದು ಸರಿಯಲ್ಲವೆಂದು ಅವರ ಅಭಿಪ್ರಾಯವಾಗಿದೆ.

ಬಂದಿವಾನರಿಗೆ ನಂಬ್ರಗಳನ್ನು ಕೊಟ್ಟಿರುವುದಿಲ್ಲ. ಇವರಿಗೆ ಪ್ರತ್ಯೇಕ ದುಸ್ತು ಇರುವುದಿಲ್ಲ. ಬಂದಿವಾನರು ತಮ್ಮ ೮ ಗಂಟೆಯ ಕೆಲಸ ಮುಗಿದೊಡನೆ ಜೈಲಿನ ಅಂಗಳದಲ್ಲಿ ತಮ್ಮ ಒಳ್ಳೇ ದುಸ್ತನ್ನು ಹಾಕಿ ಬೇರೆ ಬೇರೆ ಆಟಗಳನ್ನು ಆಡುತ್ತಿರುವರು. ಕೋಳಗಳನ್ನು ಉಪಯೋಗಿಸುವುದಿಲ್ಲ. ಕೋಳಗಳನ್ನು ಮ್ಯೂಜಿಯಮಿನಲ್ಲಿ ಇಟ್ಟಿರುವರು. ಬಂದಿವಾನರನ್ನು ಹೊರಗೆ ತೆಗೆದುಕೊಂಡು ಹೋಗುವಾಗಲೂ ಕೋಳಗಳನ್ನು ಹಾಕುವುದಿಲ್ಲ.

ಬಂದಿವಾನರ ಕೆಲಸಗಳು. ಪ್ರತಿ ಒಬ್ಬ ಬಂದಿವಾನನು ದಿನಕ್ಕೆ ೮ ಗಂಟೆ ಕೆಲಸ ಮಾಡಬೇಕು. ಬೇರೆ ಬೇರೆ ಕೆಲಸ ತಿಳಿದವರಿಂದ ಆಯಾ ಕೆಲಸಗಳನ್ನು ಮಾಡಿಸುವರು. ಉಳಿದವರೆಲ್ಲರೂ ನೇಯಿಗೆ ಕೆಲಸವನ್ನು ಮಾಡುವರು. ಜೈಲಿನ ಒಂದು ಭಾಗದಲ್ಲಿ ನೂಲು ಮಾಡುತ್ತಿರುವರು. ಇನ್ನೊಂದು ಭಾಗದಲ್ಲಿ ವಸ್ತ್ರ ನೇಯುತ್ತಿರುವರು. ಈ ನೇಯಿಗೆ ಕಾರ್ಖಾನೆಯನ್ನು ನೋಡಿದರೆ ಜೈಲಿನ ನೇಯಿಗೆ ಕಾರ್ಖಾನೆ ಎಂದು ತಿಳಿಯುವುದೇ ಇಲ್ಲ. ಒಂದೊಂದು ಹೋಲಿನ ಹೆಬ್ಬಾಗಲಲ್ಲಿ ಮಾತ್ರವೇ ಆಯುಧಪಾಣಿಯಾದ ಒಬ್ಬ ಕಾವಲುಗಾರನು ಇರುವನು. ಇವನು ಬಾಗಲನ್ನು ಬೀಗಹಾಕಿ ಮುಚ್ಚಿ ಕಾಯುತ್ತಿರುವನು.

ಸ ಶೇ ಷ.

ಸ್ಫುಟವಿಚಾರಗಳು.

ತಾಲೂಕು ಬೋರ್ಡು ಆಸ್ಪತ್ರೆಗಳು.

ಈ ಆಸ್ಪತ್ರೆಗಳನ್ನು ಮದ್ರಾಸು ಕೌನ್ಸಿಲಿನ ಕಳೆದ ಬಜ್ಜೆಟಿನಲ್ಲಿ ನಿರ್ಣಯಿಸಿದಂತೆ ಸರಕಾರವು ತನ್ನ ಆಡಳಿತೆಯಲ್ಲಿ ತೆಗೆದುಕೊಳ್ಳುವುದು. ಇದರಿಂದ ಆಸ್ಪತ್ರೆಗಳೊಳಗಿನ ಸೌಕರ್ಯಗಳು ಹೆಚ್ಚಿ ಬಡವರಿಗೆ ಹೆಚ್ಚು ಸಹಾಯವಾಗಬಹುದೆಂದು ನಿರೀಕ್ಷಿಸಲಾಗಿದ್ದಿತು. ಆದರೆ ಈಗ ನೋಡಿದರೆ ಸರಕಾರವು ಆಸ್ಪತ್ರೆಯನ್ನು ಅಭಿವೃದ್ಧಿಗೆ ತರುವ ಬದಲು ಖರ್ಚು ಕಡಿಮೆ ಮಾಡುವ ಪ್ರಯತ್ನದಲ್ಲಿರುವಂತೆ ಕಾಣುತ್ತಿದೆ. ಆಸ್ಪತ್ರೆಗಳನ್ನು ತಮ್ಮ ಕೈಕೆಳಗೆ ತೆಗೆದುಕೊಳ್ಳುವುದರ ಚಿಹ್ನೆಯಾಗಿ ಪ್ರಥಮತಃ ಅಲ್ಲಿಯ ಬಡ ನೌಕರರಿಗೆಲ್ಲಾ! ಸಂಬಳ ಕಡಿಮೆಯಾಗುವುದಾಗಿ ನಾವು ತಿಳಿಯುತ್ತೇವೆ. ಹೆಚ್ಚು ಸಂಬಳವಿರುವ ಡಾಕ್ಟರರಿಗೆ ಮೊದಲಿಂದಲೂ ಪ್ರಾಂತಿಕ ಖಜಾನೆಯಿಂದಲೆ ಸಂಬಳ ಸಲ್ಲುತ್ತಿತ್ತಾದುದರಿಂದ ಅವರಿಗೆ ಯಾವ ಬಾಧಕವೂ ಇರಲಾರದು. ಆದರೆ ಕಡಿಮೆ ಸಂಬಳದ ಕಂಪೌಂಡರ್, ನರ್ಸ್, ಮಿಡ್ ವೈಫ್ ಮೊದಲಾದವರು ತಾಲೂಕು ಬೋರ್ಡಿನಿಂದ ಸಿಕ್ಕುತ್ತಿದ್ದ ಸಂಬಳ ಕೂಡ ಇನ್ನು ಹೊಂದಲಾರರೆಂದರೆ ಬಡ ನೌಕರರಿಗೆ ಕಠಿಣವಾದ ಪ್ರಸಂಗವೇ ಸರಿ. ತಾಲೂಕು ಬೋರ್ಡಿನ ಕೈಕೆಳಗೆ ಹಲವು ವರ್ಷಗಳ ವರೆಗೆ ಕೆಲಸಮಾಡಿ ಸಂಸಾರ ಬೆಳೆದು ಸಿಕ್ಕಿದ ಸಂಬಳ ಸಾಲಲಾರದೆ ಬಳಲುತ್ತಿರುವವರಿಗೆ ಈ ಪುನಃ ಆರಂಭದ ಸ್ಕೇಲಿನ ಪ್ರಕಾರ ಸಂಬಳ ತೆಗೆದುಕೊಂಡು ಕೆಲಸಮಾಡಬೇಕೆಂದರೆ ಈ ತರದ ಅನ್ಯಾಯದ ಕಷ್ಟವು ಅವರ ಯಾವ ಪಾಪಕ್ಕಾಗಿಯೆಂದು ತಿಳಿಯುವುದಿಲ್ಲ. ಸರಕಾರದವರು ಈ ವಿಷಯದಲ್ಲಿ ಸರಿಯಾದ ಔದಾರ್ಯದಿಂದ ವರ್ತಿಸುವುದು ಆವಶ್ಯವಿದೆ.

ಪತ್ತೇದಾರಿ.

ಕಳ್ಳನನ್ನು ಹಿಡಿಯಲಿಕ್ಕೆಂದು ಒಬ್ಬನನ್ನು ಕಳ್ಳನಾಗಿ ಮಾಡಿ ಕಳುಹಿಸುವುದರ ವಿಚಕ್ಷಣತೆಯು ಪ್ರಶಂಸನೀಯವಾಗಿರಬಹುದಾದರೂ, ಹಿಂದೀ ಸರಕಾರದ ಸಿ. ಐ. ಡಿ. ಯವರ ಈ ಕುಟಿಲೋಪಾಯದ ಮೇಲೆ ಹಿಂದೀಯರಾರಿಗೂ ವಿಶ್ವಾಸ ವುಂಟಾಗುವಂತಿಲ್ಲ. ಈ ಪತ್ತೇದಾರರು ಬಂಗಾಳದಲ್ಲಿ ಎಂತಹ ದುರ್ವರ್ತನಗಳನ್ನು ಮಾಡಿರುವರೆಂಬುದು ಅಲ್ಲಿಯ ಓರ್ಡಿನೆನ್ಸ ಎಕ್ಟಿನ ಕೈದಿಗಳ ಇತಿಹಾಸವನ್ನು ಬಲ್ಲವರಿಗೆ ಗೊತ್ತಿದೆ. ಎಷ್ಟು ನಿರಪರಾಧಿಗಳು ಅನ್ಯಾಯವಾಗಿ ಜೈಲಿನ ಮೃತಜೀವನದಲ್ಲಿ ಕಾಲಕಳೆಯುತ್ತಿರುವರೊ! ಏಕೆ? ತಮ್ಮ ಹೊಟ್ಟೆ ಹೊರಕೊಳ್ಳಬೇಕಾದ ಕೆಲವು ಸಿ. ಐ. ಡಿ.ಗಳ ಬುದ್ಧಿವಂತಿಕೆಯ ಪ್ರದರ್ಶನಕ್ಕಾಗಿ ಇವರ ಮಾತೆಂದರೆ ಮತ್ತೆ ಬೇರೆ ಸಾಕ್ಷ್ಯವೆ ಬೇಕಾಗಿಲ್ಲ. ಶ್ರೀಯುತ ಸುಭಾಸ್ ಚಂದ್ರಬೋಸರೇ ಈ ಸಿ. ಐ. ಡಿಯವರ ಆತಿಥ್ಯಕ್ಕೆ ಪಾತ್ರರಾಗಿ ಮಂಡಲೆಯ ಭೇಟಿ ಮಾಡಿಕೊಂಡು ಕ್ಷಯರೋಗವನ್ನು ಆವಾಹಿಸಿಕೊಂಡರು. ಈ ಸಿ. ಐ. ಡಿ.ಗಳಿಗೆ ತೃಪ್ತಿಪಡಿಸಬೇಕಾದ ಹೊಟ್ಟೆಯೊಂದಿದೆ; ಸಂತೋಷಪಡಿಸಬೇಕಾದ ಮೇಲಧಿಕಾರಿಯೊಬ್ಬನಿದ್ದಾನೆ. ಇವುಗಳ ಪ್ರೇರಣೆಯಲ್ಲಿ ನ್ಯಾಯಾನ್ಯಾಯಗಳ ವಿವೇಚನೆಯು ಅವನಿಗಿಲ್ಲ. ಮಿ. ಬೆನರ್ಜಿಯೆಂಬವರೊಬ್ಬರ ಪರಿಸ್ಥಿತಿಯು ಅದೇ. ಆದರೆ ಮಿ. ಬೆನರ್ಜಿಯವರು ಇತರ ಹಿಂದೀ ಸಿ. ಐ. ಡಿ.ಗಳಷ್ಟು ಭಾಗ್ಯವಂತರಾಗಿರಲಿಲ್ಲ. ಅವರು ಸಂಯುಕ್ತ ಪ್ರಾಂತದ ಸಿ. ಐ. ಡಿ.ಯವರಿಂದ ಪ್ರೇರಿತರಾಗಿ ಪಂಜಾಬಿನ ರಾಜದ್ರೋಹಿಗಳ ಪತ್ತೆಗಾಗಿ ಪಂಜಾಬಿಗೆ ಹೋದರು. ರಾಜದ್ರೋಹಿಗಳೆಂಬ ಆರೋಪವಿದ್ದವರೊಡನೆ ಸೇರಿ ತಿರುಗಲಾರಂಭಿಸಿದರು. ಇವರೊಡನೆ ಲೈಸನ್ಸ ಇಲ್ಲದ ಪಿಸ್ತೂಲು ಇದ್ದಿತು. ಪಂಜಾಬ ಪೋಲೀಸರಿಗೆ ಇದು ತಿಳಿಯದೆ, ಅವರು ಬೆನರ್ಜಿಯನ್ನು ಕೈದು ಮಾಡಿ ಲೈಸೆನ್ಸು ಇಲ್ಲದುದಕ್ಕಾಗಿ ವಿಚಾರಣೆಗೆ ಗುರಿಮಾಡಿದರು. ಪಾಪ! ಐದು ವರ್ಷ ಶಿಕ್ಷೆ ವಿಧಿಸಲ್ಪಟ್ಟಿತು. ಆ ಜೈಲಿನ ಗರ್ಭದಿಂದ ತನ್ನ ಹೀನಾವಸ್ಥೆಯ ವಿಷಯ ಅವರು ಮೀರತಿನ ಸುಪರಿಂಟೆಂಟರೊಡನೆ ಮೊರೆಯಿಟ್ಟರು. ಸರಕಾರಕ್ಕೆ ಕಡೆಗೆ ಇದೆಲ್ಲಾ ತಿಳಿದು ಅವನನ್ನು ಬಿಟ್ಟುಬಿಟ್ಟರು. ಈಗ ಪ್ರಶ್ನೆಯೆಂದರೆ, ಈ ತರದ ಕುಹಕ ಸಾಧನೆಗಳಿಂದ ಅಪರಾಧದ ಆರೋಪವಾದರೆ, ಮತ್ತು ವಿಚಾರಣೆಯಿಲ್ಲದೆ ಆರೋಪಿತ-ಅಪರಾಧಿಯು ಶಿಕ್ಷೆಗೆ ಗುರಿಯಾದರೆ ನ್ಯಾಯವು ಎಲ್ಲಿ ಉಳಿಯುವುದು? ಎಂದು ತಮ್ಮ ಪ್ರಯತ್ನಗಳ ಸಾಫಲ್ಯಕ್ಕಾಗಿ ನಿರಪರಾಧಿಯಾದರೂ ಅಪರಾಧಿಯಾಗಿ ಏಕೆ ಅವರು ತೋರಿಸಬಾರದು? ಎಂದು.

ಕೂಲಿ ಮುಷ್ಕರಗಳು.

ಮುಂಬ್ಯಾ, ಅಲ್ಲೊಮಾ, ಮೊದಲಾದ ಹಲವು ಕಡೆಗಳಲ್ಲಿ ಲಕ್ಷಾವಧಿ ಕೂಲಿಗಳು ಮುಷ್ಕರಹಾಕಿದುದು ಹಿಂದೂಸ್ಥಾನದ ಸಾಂಪತ್ತಿಕ ಅಭಿವೃದ್ಧಿಗೆ ಹಿತಕರವಾದುದಲ್ಲ. ಅದು ಬಡತನದ ತೀಕ್ಷ್ಣತೆಯನ್ನು ಹೆಚ್ಚಿಸಿ, ಕೂಲಿಗಳೊಳಗೆ ದುರ್ವರ್ತನವನ್ನು ಪ್ರೇರಿಸುವುದು. ಸಾವಿರಾರು ಕುಟುಂಬಗಳು ಉಪವಾಸದ ಸಂಕಷ್ಟದಲ್ಲಿ ಬಳಲಬೇಕಾಗುವುದು. ಹಿಂದೀ ಕೂಲಿಗಳ ಪರಿಸ್ಥಿತಿಯು ಪಾಶ್ಚಾತ್ಯದೇಶದೊಳಗಿನಂತಲ್ಲ. ಪಾಶ್ಚಾತ್ಯರ ದಿನಂಪ್ರತಿ ಕೂಲಿಯು ಇಲ್ಲಿಯವರಿಗಿಂತ ಎಷ್ಟೋ ಪಾಲು ಹೆಚ್ಚಾಗಿದೆ. ಅವರೊಳಗೆ ಪ್ರಬಲವಾದ ಸಂಘಟನವಿದೆ; ಅವರೊಡನೆ ತಮ್ಮದೇ ಎನ್ನುವ ಧನಸಂಗ್ರಹವಿದೆ; ಅವರ ಜನರು ಉದಾರ ಸಹಾಯವನ್ನು ಮಾಡಬಲ್ಲವರಾಗಿದ್ದಾರೆ; ಅಲ್ಲದೆ, ಅವರಿಗೆ ಅಂತರಾಷ್ಟ್ರೀಯ ಸಹಾಯವು ಸುಲಭವಾಗಿ ಸಿಕ್ಕುತ್ತಿದೆ. ಆದರೂ ಪಾಶ್ಚಾತ್ಯ ಕೂಲಿಗಳ ಮುಷ್ಕರವು ಅಷ್ಟು ವಿಜಯಿಯಾಗುವುದಿಲ್ಲ. ಅಂದ ಮೇಲೆ ನಮ್ಮ ಕೂಲಿಗಳೊಳಗೆ ಇಷ್ಟೆಲ್ಲಾ ಅಭಾವಗಳಿರುವಾಗ ಅವರು ಎಷ್ಟು ಎಚ್ಚರಿಕೆಯಿಂದ ಮುಷ್ಕರಗಳಲ್ಲಿ ಕೈಹಾಕಬೇಕೆಂಬುದು ತಿಳಿದು ಬರುವುದು. ಕೂಲಿಗಳ ಮುಖಂಡರೆಂದು ಕೆಲವು ಜವಾಬ್ದಾರಿಯಿಲ್ಲದ ಜನರು ಕೂಲಿಗಳನ್ನು ಈ ಕಠಿಣ ಪರಿಸ್ಥಿತಿಗೆ ತರುವುದು ಹೆಚ್ಚಾಗಿದೆ. ಈಗ ಅಲ್ಲಲ್ಲಿ ನಡೆಯುವ ಮುಷ್ಕರಗಳು ಈ ತರದವುಗಳಾಗಿ ಒಂದು ಕಡೆಯಿಂದ ಧಂಡವಾಳಗಾರರಿಗೂ ಇನ್ನೊಂದು ಕಡೆಯಿಂದ ಮಜೂರರಿಗೂ, ಮತ್ತೊಂದು ಕಡೆಯಿಂದ ದೇಶಕ್ಕೂ ಹಾನಿತರುವಂತಹವುಗಳಾಗಿವೆ. ಆದುದರಿಂದ ಹಿಂದೂಸ್ಥಾನವು ಸ್ವತಂತ್ರವಾಗಿ ಇತರದೇಶಗಳೊಡನೆ ಸ್ಪರ್ಧಿಸಲು ಶಕ್ತಿ ಹೊಂದುವವರೆಗಾದರೂ ಧಂಡವಾಳಗಾರರೂ ಕೂಲಿಗಳೂ ಪರಸ್ಪರ ಸೌಹಾರ್ದದಿಂದಿರುವುದು ಉತ್ತಮವಾಗಿದೆ.

ಕರ್ನಾಟಕ ಪರಿಷತ್ತುಗಳು.

ಇದೇ ತಿಂಗಳ ಆಖೈರಿ ವಾರದಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು, ಕರ್ನಾಟಕ ಖಾದಿ ಪರಿಷತ್ತು ಮತ್ತು ಕರ್ನಾಟಕ ಏಕೀಕರಣ ಪರಿಷತ್ತುಗಳು ಕೂಡುವವು. ಇವುಗಳಲ್ಲಿ ಪ್ರಾಂತಿಕ ಪರಿಷತ್ತು ಮುಂಬ್ಯಾಯಿ ಎಲ್ಲಾ ಪಕ್ಷದವರ ಪರಿಷತ್ತಿನ ನಿರ್ಧಾರಗಳನ್ನು ಲಕ್ಷಿಸಿ ಅವುಗಳಿಗೆ ಯೋಗ್ಯವಾದ ಪ್ರಾಮುಖ್ಯತೆಯನ್ನು ಕೊಡುವುದಾಗಿ ನೆನಸುತ್ತೇವೆ. ಸ್ಯಾಮನ್ ಕಮಿಶನ್ನಿನ ಬಹಿಷ್ಕಾರ ಮತ್ತು ಬ್ರಿಟಿಷ ವಸ್ತ್ರ ಬಹಿಷ್ಕಾರವೂ ಮುಖ್ಯವಾದ ವಿಷಯಗಳಾಗುವುವೆಂದು ತಿಳಿಯತ್ತೇವೆ. ಆದರೆ ಬ್ರಿಟಿಷ ವಸ್ತ್ರ ಬಹಿಷ್ಕಾರವನ್ನು ಬ್ರಿಟಿಷ ವಸ್ತು ಬಹಿಷ್ಕಾರಕ್ಕೆ ವಿಶಾಲ ಮಾಡುವುದೊಳ್ಳೆಯದೆಂದು ನಮ್ಮ ಸೂಚನೆ. ಖಾದಿ ಪರಿಷತ್ತಿನಲ್ಲಿ ಯಾವ ತರದ ಕಾರ್ಯಕ್ರಮವು ಅನುಸರಿಸಲ್ಪಡುವುದೆಂದು ಈಗ ಹೇಳಲಾಗುವುದಿಲ್ಲ. ಆದರೆ ಬರೇ ಠರಾವಿನ ಪ್ರದರ್ಶನಮಾತ್ರವಾಗದೆ ಅಲ್ಲಿ ಫಲಕಾರಿಯಾದ ಕಾರ್ಯಕ್ರಮವೊಂದು ರಚಿಸಲ್ಪಡುವುದು ಅವಶ್ಯವಿದೆ. ಕರ್ನಾಟಕ ಏಕೀಕರಣ ಪರಿಷತ್ತು ತಕ್ಕ ಮಟ್ಟಿಗೆ ಉತ್ಸಾಹಕವೂ ಉತ್ತೇಜಕವೂ ಆಗಬಹುದಾಗಿ ಕಾಣುತ್ತದೆ. ಏಕೆಂದರೆ ಬೆಳಗಾಂವಿಯಲ್ಲಿ ಮರಾಠಾ ಪರಿಷತ್ತನ್ನು ಸೇರಿಸುವ ಯೋಜನೆಯು ಉತ್ತರಕರ್ನಾಟಕೀಯರಲ್ಲಿ ಬಹಳ ನಿಷೇಧಗಳನ್ನು ಹೊರಡಿಸಿಯದೆ. ಬೆಳಗಾಂವಿಯಲ್ಲಿ ಮರಾಠಾ ಸಾಹಿತ್ಯ ಪರಿಷತ್ತನ್ನು ಕೂಡಿಸುವುದು ಒಂದು ನಿಶ್ಚಿತ ಧೋರಣದ ಚಿಹ್ನೆಯಲ್ಲದೆ ಬೆಳಗಾಂವಿನ ಮರಾಠಿಗರ ಬರೇ ಅಭಿಮಾನದ ಆತಿಥ್ಯವಲ್ಲವೆಂದು ಸ್ಪಷ್ಟವಾಗಿ ಕಾಣುವುದು. ಆದರೆ ಇದರ ಕಡೆಗಿನ ನಿಷೇಧವು ಉತ್ತರಕರ್ನಾಟಕ ಪತ್ರಿಕೆಗಳಲ್ಲದೆ ಮೈಸೂರಾಗಲಿ ನಮ್ಮ ಜಿಲ್ಲೆಯ ಪತ್ರಿಕೆಗಳಲ್ಲಿ ತೋರಿಬರುವುದಿಲ್ಲ. ಪ್ರಾಯಶಃ ನಮಗೆ ಮರಾಠಿಗರ ಸಂಸ್ಪರ್ಶವಿಲ್ಲದೆಯೂ ಏನೋ ಆ ಸಮಸ್ಯೆಯ ಕಠಿಣತ್ವವು ತಿಳಿದುಬರುವುದಿಲ್ಲ. ಕರ್ನಾಟಕ ಏಕೀಕರಣ ಪರಿಷತ್ತು ಒಳ್ಳೇ ವಿಚಾರದಿಂದ ಈ ಸಮಸ್ಯೆಗಳ ತೀರ್ಮಾನ ಮಾಡುವುದಾಗಿ ಆಶಿಸುವೆವು.

ಮಂಗಳೂರಿನಲ್ಲಿ ಸ್ತ್ರೀ ವಿದ್ಯಾಭ್ಯಾಸ.

ಮಂಗಳೂರಿನಲ್ಲಿನ ಹಲವು ಕೆಥೊಲಿಕ್ ವಿದ್ಯಾ ಸಂಸ್ಥೆಗಳಿಗಾಗಿ ಕೆಥೊಲಿಕರನ್ನು ನಾವು ಪ್ರಶಂಸಿಸುವೆವಾದರೂ, ಈ ಶಹರಿನ ಅಧಿಕ ಸಂಖ್ಯಾಕರಾಗಿರುವ ಹಿಂದೂ ಬಾಲಿಕೆಯರ ವೈಶಿಷ್ಟ್ಯಕ್ಕೆ ಇವು ವಿರೋಧಿಗಳಾಗಿವೆ ಎಂಬುದನ್ನು ಸೂಚಿಸದಿರಲಾರೆವು. ಈ ಕೆಥೋಲಿಕ ಶಾಲೆಗಳಲ್ಲಿ ಸಿಕ್ಕುವ ಆಂಗ್ಲೇಯ ವಿದ್ಯಾಭ್ಯಾಸವು ಉಪಯೋಗಕರವಾಗಲಿ, ಅನುಪಯೋಗಕರವಾಗಲಿ, ಹಿಂದೂ ಬಾಲಿಕೆಯರನ್ನು ಆಕರ್ಷಿಸಿಯದೆಂಬುದು ನಿರ್ವಿವಾದವಾಗಿದೆ; ಅಂತಹ ಪ್ರೌಢ ವಿದ್ಯಾಭ್ಯಾಸದ ಅವಶ್ಯಕತೆಯೂ ದಿನದಿನವೂ ಬೆಳೆಯುತ್ತಾ ಬಂದಿರುತ್ತದೆ; ಅಲ್ಲದೆ ಈ ಶಾಲೆಗಳ ಉಪಯೋಗವನ್ನು ಹಿಂದೂಗಳು ಸಾಧ್ಯವಿದ್ದಷ್ಟು ಮಾಡಿಕೊಳ್ಳುತ್ತಾ ಇದ್ದಾರೆ. ಕೆಥೋಲಿಕರು ಎಲ್ಲಾ ಜಾತಿಗಳಿಗೂ ತಮ್ಮ ಶಾಲೆಯಲ್ಲಿ ಪ್ರವೇಶಕೊಡುವರಾದರೂ ಅವರು ತಮ್ಮ ಮತಾಭಿಮಾನವನ್ನೂ ಮತಶ್ರದ್ಧೆಯನ್ನೂ ಹಿಂದೂಗಳ ಹಾಗೆ ಕಳಕೊಳ್ಳುವರಾಗಿಲ್ಲ. ಅಂತೆ ಅವರ ವಿದ್ಯಾಭ್ಯಾಸ ಕ್ರಮವೂ, ವಿದ್ಯಾವಾತಾವರಣವೂ ರಚಿಸಲ್ಪಟ್ಟಿದೆ. ಆದುದರಿಂದ ಹಿಂದೂ ಮತಾಭಿಮಾನದಿಂದಲಾದರೂ ಹಿಂದೂಗಳೂ ಅದೇ ರೀತಿಯಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಕೊಡುವ ವಿದ್ಯಾಸಂಸ್ಥೆಗಳನ್ನು ರಚಿಸುವುದು ಅಗತ್ಯವಿದೆ. ಈಗ ಒಂದೆರಡು ಸಣ್ಣ ಬಾಲಿಕಾ ಶಾಲೆಗಳಿದ್ದುವು ಈ ಉದ್ದೇಶಕ್ಕೆ ಸಾಕಾಗಿಲ್ಲ. ರಾಷ್ಟ್ರೀಯ ಬಾಲಿಕಾ ಪಾಠಶಾಲೆಯೂ ಚೆನ್ನಾಗಿ ಅಭಿವೃದ್ಧಿಹೊಂದಲಿಲ್ಲ. ಇನ್ನಾದರೂ ಹಿಂದೂಗಳು ಒಟ್ಟಟ್ಟು ಕೂಡಿ ಪ್ರೌಢವಿದ್ಯಾಭ್ಯಾಸ ಕೊಡುವ ಯೋಜನೆಯನ್ನು ಮಾಡುವುದು ಅವಶ್ಯವಿದೆ.

ನೋಟಗಳು.
NOTE...S.

ಇಂದೊರಿನ ಮಾಜಿ ಮಹಾರಾಜರ ಈಗಿನ ಪತ್ನಿ ಮಿಸ್ ಮಿಲ್ಲರಳು ಪೆರಿಸಿನಲ್ಲಿ ಹಿಂದೂ ಮತಕ್ಕೆ ಜನರನ್ನು ಮತಾಂತರಗೊಳಿಸಲು ಆರಂಭಿಸಿರುವಳಂತೆ. ಹೀಗೆ ಮತಾಂತರ ಹೊಂದಲಿಕ್ಕೆ ಮದುವೆಮಾಡಿಕೊಳ್ಳಲು ರಾಜವಂಶೀಯ ಹಿಂದೀಯರು ಸಾಕಷ್ಟಿರುವರೆಂದು ಆಶಿಸುವೆವು.

• • • •

'ನವಜೀವನ'ದಲ್ಲಿ ಶ್ರೀಯುತ ಎ. ಜಿ. ಕೃಷ್ಣಪ್ಪರೆಂಬವರು ನಮ್ಮ ಕಡೆಗೆ ಲಕ್ಷ್ಯವನ್ನು ಕೊಟ್ಟಿರುವರು. ತಾವು ಮಾತ್ರವೇ ಅಲ್ಲ, ಮೈಸೂರು ಪತ್ರಿಕೆಗಳ ಲಕ್ಷ್ಯವನ್ನೂ ಎಳೆದಿರುವರು. ಆದರೆ ಶ್ರೀಯುತರು ಮನಸ್ಸಿನಲ್ಲಿಲ್ಲದ 'ವಿಶ್ವಭಾರತ'ದ ಮಾತನ್ನೆತ್ತುವ ಬದಲಿಗೆ, ಉದ್ದಿಷ್ಟ "ವಿಕಟ ವಿನೋದಿನಿ"ಯ ಸಂಬಂಧದ ನಮ್ಮ ಟೀಕೆಯನ್ನು ಟೀಕಿಸಿದರೆ ಉತ್ತಮವಿತ್ತು.

• • • •

ಈ ಸುಂದರ ವಸಂತಋತುವು ಆಖೈರಿಯಾಗುವ ಮೊದಲೇ ಅಜ್ಞಾತದಲ್ಲಿದ್ದ "ವಸಂತನು" ತನ್ನ "ಕಾಣಿಕೆ"ಯೊಡನೆ ಮುಂದೆ ಬಂದನು. ಈ ಹಸುಗೂಸಿಗೆ ನಮ್ಮ ಪ್ರೇಮದ ಸ್ವಾಗತವಿದೆ.

• • • •

ಇತ್ತೀಚೆಗೆ ಹಲವು ನೂತನ ಪತ್ರಿಕೆಗಳು ಜನನಕ್ಕೆ ಬಂದವು. ಕರ್ನಾಟಕ ಸಂಪಾದಕ ಮತ್ತು ಪ್ರಕಾಶಕರ ವರ್ಗವು ಬೆಳೆಯುತ್ತಾ ಬಂದದೆ. ಇನ್ನಾದರೂ ಪತ್ರಿಕಾ ಪರಿಷತ್ತನ್ನು ಕೂಡಿಸಬಾರದೆ? ಎಂಬುದೊಂದು ಪ್ರಶ್ನೆಯು ನಮ್ಮ ಮನಸ್ಸಿನಲ್ಲುಂಟಾಗುತ್ತಿದೆ.

• • • •

ಕಟ್ಟಕಡೆಗೆ ನಮ್ಮ ಜಿಲ್ಲೆಯ ಮಟ್ಟಿಗಾದರೂ ಒಂದು ಪರಿಷತ್ತನ್ನು ಕೂಡಿಸಲು ಹೆಚ್ಚು ಕಷ್ಟವಾಗಬಾರದು.

• • • •

ಸ್ವದೇಶಾಭಿಮಾನಿಯಲ್ಲಿ ತಿಂಗಳಿಗೊಂದು ಎರಡು ಪುಟಗಳ ಪ್ರತ್ಯೇಕ ಸಾಹಿತ್ಯ ಸಂಚಿಕೆಯೊಂದನ್ನು ಹೊರಡಿಸಬೇಕಾಗಿ ಇಚ್ಛೆಯುದೆ. ಸಾಹಿತ್ಯ ಲೇಖಕರು—ಸಣ್ಣ ಕತೆಗಳನ್ನು, ಕಾವ್ಯಗಳನ್ನು, ಉಪನ್ಯಾಸಗಳನ್ನು ಕಳುಹಿಸಿದ್ದಲ್ಲಿ ಆದರದಿಂದ ಸ್ವೀಕರಿಸಲಾಗುವದಲ್ಲದೆ, ಬೇಕಾದವುಗಳನ್ನು ಪ್ರಕಟಿಸಿ, ಬೇಡವಾದವುಗಳನ್ನು ಬೇಗನೆ ವಾಪಾಸು ಕಳುಹಿಸುವಂತೆ ಮಾಡಲಾಗುವುದು. ಸಾಹಿತ್ಯ ಲೇಖಕರು ಇದಕ್ಕಾಗಿ ನಮ್ಮೊಡನೆ ಸಹಕರಿಸಿದ್ದಲ್ಲಿ ಬಹಳ ಉಪಕೃತರಾಗುವೆವು.

• • • •

ಒಂದು ಬಾರಿ ಸರಕಾರದ ಸ್ನೇಹದಲ್ಲಿದ್ದ ಅನ್ನಿಬೆಸೆಂಟಮ್ಮನವರು ಪುನಃ ರಾಷ್ಟ್ರೀಯ ಚಳವಳವನ್ನು ಸೇರಿದಳೆಂದ ಕೂಡಲೇ ಸರಕಾರದ ಶತ್ರುವಾಗಿ ಪರಿಣಮಿಸಿದರು. ಈಗ ಅವರಿಗೆ ಬರುವ ಪತ್ರಗಳೆಲ್ಲಾ ಒಡೆಯಲ್ಪಟ್ಟು ಸರಕಾರದಿಂದ ದ್ರೋಹಕರವೇನುಂಟು ಎಂದು ಶೋಧಿತವಾಗಿ ಬರುತ್ತಿವೆ!

• • • •

ಇಂಗ್ಲೆಂಡು ಐಗುಪ್ತ್ಯವನ್ನು ಯುದ್ಧ ನಾವೆಗಳಿಂದ ಬೆದರಿಸುವಾಗ ಕೇಳುವವರಿಲ್ಲ; ಜಪಾನು ಚೀನ ದೇಶವನ್ನು ಹೊಕ್ಕು ಹತ್ಯಾಕಾಂಡವನ್ನೆಬ್ಬಿಸುವಾಗ ಕೇಳುವವರಿಲ್ಲ. ಮತ್ತೆ ಜನಾಂಗವೇಕೆ? ಸಣ್ಣ ಜನಾಂಗಗಳನ್ನು ಹೆದರಿಸಲಿಕ್ಕೆ ಮಾತ್ರ.

• • • •

ಯುದ್ಧವನ್ನೇ ಕಾನೂನಿಗೆ ವಿರೋಧವಾಗಿ ಮಾಡುವ ಉಪಾಯ! ಯುನೈಟೆಡ್ ಸ್ಟೇಟ್ಸಿನ ಪ್ರಯತ್ನ. ಬ್ರಿಟಿಷರದೂ ಒಪ್ಪಿಗೆ; ಜರ್ಮನರದೂ ಒಪ್ಪಿಗೆ; ಫ್ರಾನ್ಸಿನದ್ದೂ ಒಪ್ಪಿಗೆ. ಆದರೆ ಶರ್ತಗಳಿವೆ. ಆ ಶರ್ತಗಳನ್ನು ನೋಡಿದರೆ ಮಾತ್ರ ಈ ಯುದ್ಧವಾಗದಂತೆ ತೆಗೆದುಕೊಳ್ಳುವ ಗುಟ್ಟು ರಟ್ಟಾಗುವುದು.

• • • •

ಇವೆಲ್ಲಾ ಪ್ರತ್ಯೇಕ ಪ್ರಯತ್ನಗಳ ಮಧ್ಯದಲ್ಲಿ ಜನಾಂಗ ಸಂಘದ ಕರ್ತವ್ಯವೇನೆಂಬುದು ಮಾತ್ರ ಸರಿಯಾಗಿ ತಿಳಿಯುವುದಿಲ್ಲ. ಪ್ರಾಯಶಃ ಯುದ್ಧವನ್ನು ಕಾನೂನಿಗೆ ಅನುಸಾರವಾಗಿ ಪ್ರಯತ್ನಮಾಡುವುದೇ ಅದರ ಕರ್ತವ್ಯವಾಗಿರಬಹುದು.

• • • •

ಲಂಡನಿನ ಫ್ಲೀಟ್ ಸ್ಟ್ರೀಟ್ ಎಂದರೆ ಲಂಡನಿನ ಎಲ್ಲಾ ಪತ್ರಿಕೆಗಳೂ ಪ್ರಕಟವಾಗುವ ಕೇಂದ್ರ, ಅಲ್ಲಿ ನಮ್ಮ ಸ್ಯಾಮನ್ ಸಾಹೇಬರ ಭಾಷಣವಾಯಿತು.

• • • •

ಪಾರ್ಲಿಮೆಂಟಿನಲ್ಲಿ ಸಭ್ಯತನದಿಂದಿರುವ ತೊಂಬತ್ತು ಸದಸ್ಯರಿಗಿಂತಲೂ, ಆ ಪಾರ್ಲಿಮೆಂಟ್ ಅಧ್ಯಕ್ಷನನ್ನು ಅವಮಾನಿಸಿದ ಒಬ್ಬ ಸದಸ್ಯನಿಗಾಗಿ ಫ್ಲೀಟ್ ಸ್ಟ್ರೀಟಿನಲ್ಲಿ ಉತ್ಸಹವು ಉಂಟಾಗುತ್ತಿದೆ, ಎಂದು ಸ್ಯಾಮನ್ ಸಾಹೇಬರು ಹೇಳಿದರು.

ಅನುಕ್ರಮಣಿಕೆ.

ಅಗ್ರಲೇಖ,
ಡಿಸ್ಟ್ರಿಕ್ಟ ಬೋರ್ಡು ಎಕ್ಟಿನಲ್ಲಿ ಬದಲಾವಣೆಗಳು ೬
ವಿದೇಶ ವರ್ತಮಾನ [illegible]
ಸ್ಫುಟವಿಚಾರಗಳು [illegible]
ನೋಟಗಳು [illegible]
ವರ್ತಮಾನ ಸಂಗ್ರಹಗಳು
ಒಳದೇಶ ೬-೭
ದಕ್ಷಿಣ ಕನ್ನಡ— ಮಂಗಳೂರು, ಸುರತ್ಕಲ್ ಕಾರ್ಕಳ, ಸಂಪಾಜೆ ೭
ವಿವಿಧ ಸಮಾಚಾರಗಳು ೭
ಪತ್ರವ್ಯವಹಾರ, ೧, ೨ [illegible]
ಮೂರನೆಯ ಕರ್ನಾಟಕ ಏಕೀಕರಣ ಪರಿಷತ್ತು ಧಾರವಾಡ [illegible]
ಅಯರ್‌ಲೆಂಡಿನಲ್ಲಿ ವಿದ್ಯಾಭ್ಯಾಸ [illegible]
ಮುಂಬಾಯಿ ಕರ್ನಾಟಕ ಆಯುರ್ವೇದ [illegible]
[illegible] ಕರ್ನಾಟಕ ಪ್ರಾಂತಿಕ ಪರಿಷತ್ತು ಧಾರವಾಡ [illegible]
ಪ್ರಥಮ ಕರ್ನಾಟಕ ಖಾದೀ ಪರಿಷತ್ತು ಧಾರವಾಡ [illegible]
ಲೋಕಲ್ ಬೋರ್ಡು ಆಕ್ಟಿನಲ್ಲಿ ಮಾಡಬೇಕಾದ [illegible]
ಬದಲಾವಣೆಗಳು
ದಕ್ಷಿಣದೇಶದಲ್ಲಿರುವ ಈಗಿನ [illegible] ಕ್ರಮಗಳು

ಸ್ವದೇಶಾಭಿಮಾನಿ.

ಶಕ ೧೮೫೦ ವೈಶಾಖ ಬ ೧೪ನೆಯ ಶುಕ್ರವಾರ.

ಡಿಸ್ಟ್ರಿಕ್ಟ್ ಬೋರ್ಡು ಎಕ್ಟಿನಲ್ಲಿ ಬದಲಾವಣೆಗಳು.

ಡಿಸ್ಟ್ರಿಕ್ಟ್ ಬೋರ್ಡು ತಾಲೂಕು ಬೋರ್ಡು [illegible] ಲಾದ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳಲ್ಲಿ ಬದಲಾವಣೆಗಳ ಆವಶ್ಯಕತೆಯು ಹಲವು ಸಮಯದಿಂದಲೂ ಅನುಭವವಾಗುತ್ತಿತ್ತು. ಈ ಸಂಸ್ಥೆಗಳು ಯಾವ ಕಾರ್ಯಕಾರಿತೆಯಿಂದ ಕೆಲಸಮಾಡಬೇಕಿದ್ದಿತೊ ಅಷ್ಟು ಕಾರ್ಯಕಾರಿತೆಯು ಅವುಗಳಿಂದುಂಟಾಗುತ್ತಿರಲಿಲ್ಲವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದ್ದಿತು. ಆದುದರಿಂದ ಮದ್ರಾಸು ಸರಕಾರವು ಈ ಸಂಸ್ಥೆಗಳಲ್ಲಿ ಬದಲಾವಣೆಗಾಗಿ ಮುಂದೆ ತಂದ ಉಪಸೂಚನೆಗಳನ್ನು ನಾವು ಸ್ವಾಗತಿಸಿ ಕರಿಸಿ ಬಹಳ ಎಚ್ಚರಿಕೆಯಿಂದ ವಿಮರ್ಶಿಸಬೇಕಾಗುತ್ತದೆ.

ಈಗಿನ ತಾಲೂಕು ಬೋರ್ಡುಗಳಿಗೆ ಇರುವ ಅಧಿಕಾರವನ್ನೂ ಅವುಗಳು ಮಾಡುತ್ತಿದ್ದ ಕೆಲಸವನ್ನೂ ನೋಡಿದರೆ ತಾಲೂಕು ಬೋರ್ಡುಗಳ ಆವಶ್ಯಕತೆಯು ಇಲ್ಲವೆಂದು ತಿಳಿದುಬರುವುದು. ನಿಜವಾಗಿಯೂ ಇವುಗಳು ಚುನಾವಣೆಗಳಲ್ಲಿ ಬರೇ ಸ್ಥಳೀಕ ಭೇದಗಳನ್ನೂ, ದ್ವೇಷಾಸೂಯೆಗಳನ್ನೂ ಹೆಚ್ಚಿಸುವುದರಲ್ಲಿಯೇ ಪರಿಣಮಿಸಿದೆಯಲ್ಲದೆ, ಗ್ರಾಮೋದ್ಧಾರಕ್ಕಾಗಿಯಾಗಲಿ, ಸಾಮಾಜಿಕ ಅಭಿವೃದ್ಧಿಗಾಗಲಿ, ಜನತೆಯ ವಿದ್ಯಾಭ್ಯಾಸಕ್ಕಾಗಲಿ ವಿಶೇಷವೇನನ್ನೂ ಪ್ರಯೋಜನವನ್ನು ಮಾಡಿಕೊಡಲಿಲ್ಲ. ಆದುದರಿಂದ ಈಗಿನ ಹೊಸ ಬದಲಾವಣೆಗಳಲ್ಲಿ ತಾಲೂಕು ಬೋರ್ಡುಗಳನ್ನು ತೆಗೆದು ಹಾಕಲು ನಿರ್ಣಯಿಸಿರುದು ಈ ದೃಷ್ಟ್ಯಾ ಹಿತಕರವೇ ಎನ್ನಬಹುದು. ಅಲ್ಲದೆ ಈವರೆಗೆ ಡಿಸ್ಟ್ರಿಕ್ಟ ಬೋರ್ಡುಗಳಿಗೆ ತಾಲೂಕು ಬೋರ್ಡುಗಳೇ ಚುನಾವಣೆ ಮಾಡುತ್ತಿದ್ದುದರಿಂದ, ಈ ಚುನಾವಣೆಗಳು ಹೆಚ್ಚಾಗಿ ಪಕ್ಷ ಭೇದಗಳಿಂದಲೂ, ಬೇರೆ ಬೇರೆ ವ್ಯಕ್ತಿಗಳ ಸ್ವಾರ್ಥಪರ ಆಶಯಗಳಿಂದಲೂ ನಡೆದು, ಯೋಗ್ಯರೂ, ಕಾರ್ಯದಕ್ಷರಾದವರೂ ಡಿಸ್ಟ್ರಿಕ್ಟ ಬೋರ್ಡನ್ನು ಸೇರುವುದು ಕಷ್ಟವಾಗು[illegible]ದರಿಂದ ಡಿಸ್ಟ್ರಿಕ್ಟ ಬೋರ್ಡಿನ ಸದಸ್ಯ ವರ್ಗವು ಅದು ನಿ[illegible]ಹಿಸಬೇಕಾದ ಕೆಲಸಕ್ಕೆ ಯೋಗ್ಯವಾಗಿರುವುದು ಕಷ್ಟತರ ದ್ದಿತು. ಈಗಿನ ಬದಲಾವಣೆಗಳ ಪ್ರಕಾರ, ಸದಸ್ಯರನ್ನು ಮತದಾರರೇ ಚುನಾಯಿಸಿದರೆ ಮೇಲಿನ ದೋಷವು ಕಡಿಮೆಯಾಗಲು ಸಾಧ್ಯವಿದೆ. ಡಿಸ್ಟ್ರಿಕ್ಟ ಬೋರ್ಡುಗಳಿಗೆ ಸರಕಾರೀ ನೇಮಕಗಳನ್ನು ತೆಗೆದುಹಾಕುವ ಸೂಚನೆಯೂ ಬಹಳ ಉತ್ತಮವಾದ್ದಾಗಿದ್ದು, ಡಿಸ್ಟ್ರಿಕ್ಟ ಬೋರ್ಡುಗಳ ಕಾರ್ಯನಿರ್ವಾಹದಲ್ಲಿ ಸದಸ್ಯರಲ್ಲಿಯೂ, ಮತದಾರರಲ್ಲಿಯೂ ಸ್ವಾತಂತ್ರ್ಯವು ಉಂಟಾಗಲು ಸಾಧ್ಯವುಂಟು. ಈ ಬದಲಾವಣೆಗಳಿಂದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ನಡೆಯುವ ಚರ್ಚೆಗಳು ಹೆಚ್ಚು ಪರಿಣಾಮಕಾರಿಯಾಗಿ ಡಿಸ್ಟ್ರಿಕ್ಟ ಬೋರ್ಡಿಗೆ ಪ್ರಜಾಭಿಪ್ರಾಯದ ಮೇಲೆ ಹೆಚ್ಚು ಗೌರವವುಂಟಾಗುವುದು.

ಇನ್ನೊಂದು ಬಹಳ ಮುಖ್ಯವಾದ ಸೂಚನೆಯೆಂದರೆ ಡಿಸ್ಟ್ರಿಕ್ಟ ಬೋರ್ಡು [illegible] ಆಫೀಸರರನ್ನು ನೇಮಿಸುವುದು. [illegible] ಇಂತಹ ಸಂಸ್ಥೆಗಳ ಅಧ್ಯಕ್ಷ ಚುನಾವಣೆಯು [illegible] ಯೋಗ್ಯತೆಯ ಮೇಲೆ ಹೊಂದಿಕೊಂಡಿರುವುದಿಲ್ಲ. [illegible] ಗೌರವದ್ದಾಗಿರುವುದರಿಂದಲೂ ಸದಸ್ಯರೊಳಗೆ ಹೆಚ್ಚಿನ ಜವಾಬ್ದಾರಿ ಇಲ್ಲದಿರುವುದರಿಂದಲೂ ಈ ಚುನಾವಣೆಯು ಬರೇ ದಾಕ್ಷಿಣ್ಯದ ಮೇಲೆ ಹೊಂದಿರುತ್ತದೆಯಲ್ಲದೆ ವಿಚಾರದ ಮೇಲೆ ಹೊಂದಿಕೊಂಡಿರುವುದಿಲ್ಲ. ಒಂದೊಂದು ಬಾರಿ ಅಕ್ಷರ ಜ್ಞಾನವಿಲ್ಲದವರು ಕೂಡ ಅಧ್ಯಕ್ಷರಾಗಿ ಚುನಾಯಿಸಲ್ಪಡುವುದು ಎಲ್ಲರಿಗೂ ತಿಳಿದೆ ಇದ್ದ ಸಂಗತಿ. ಹಲವು ತಾಲೂಕು ಬೋರ್ಡು ಪ್ರೆಸಿಡೆಂಟರನ್ನು ನೋಡಿದರೆ ಇದು ಸ್ಪಷ್ಟವಾಗುವುದು. ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರು [illegible] ಗೌರವವುಳ್ಳವರು; [illegible] ಇವರಿಗಿರುತ್ತದೆ. [illegible] ಮುಂತಾದ ಕಠಿಣ [illegible] ಈ ನಮ್ಮ [illegible] ಸದಸ್ಯರಿಗೆ ತಮ್ಮ [illegible] ಚುನಾಯಿಸಲ್ಪಡುವರು. [illegible] ದರಿಂದಲೂ [illegible] ಕೊಡಲಾಗು [illegible] ದ್ವೇಷಾಸೂಯೆಗಳ [illegible] ನಿಷ್ಪಕ್ಷಪಾತವಾಗಿ [illegible] ಬೋರ್ಡಿನ ಎಲ್ಲಾ [illegible] ಜವಾ[illegible] ನಿರ್ವಹಿಸಲ್ಪಡುವಂತೆ [illegible] ಅತೀ [illegible]

[illegible] ರವಿಸಿದಂತೆ [illegible] ಈಗಿನ ಬೋಲ್ [illegible] ಕೊಂದರೆ [illegible] ಸೂಚನೆಯಿಂದ [illegible]

[illegible] ಉಪಯೋಗ [illegible] ಇವುಗಳು [illegible]

ವಿದೇಶ ವರ್ತಮಾನ.

[illegible]

— ಬೆಂಟ್ಲಿ ಎಂಬವನು ಮದುವೆಯಾಗುವ ಸಲುವಾಗಿ ಲಂಡನಿನಿಂದ ಹೊರಟು ಸಣ್ಣ ವಿಮಾನದಲ್ಲಿ ಸುಮಾರು ೮೦೦೦ ಮೈಲು ದೂರವಿರುವ ಕೇಪ್ ಟೌನಿಗೆ ಹಾರಿದ್ದನು. ಅತನು ಮದುವೆಯಾಗಿ ಮೊನ್ನೆ ತಾನೆ ಹೆಂಡತಿಯಿಂದ ಕೂಡಿ ಪುನಃ ಲಂಡನಿಗೆ ಹಿಂತಿರುಗಿದನು. ಬರುವಾಗ ಹಾದಿಯಲ್ಲಿಯೇ ಅವನ ಪತ್ನಿಯು ವಿಮಾನ ನಡಿಸುವಿಕೆಯನ್ನು ಕಲಿತುಕೊಂಡಿರುವಳು.

— ಅಮೇರಿಕದಲ್ಲಿ ಸ್ಕೊಟ್‌ಲೆಂಡಿನ ನಾಟಕದವರು ಹೋಗಿ ನಾಟಕವನ್ನಾಡಿ ಹೆಚ್ಚಿನ ಬಹುಮಾನವನ್ನು ಪಡೆದಿರುವರು.

— ಹಾವ್ರೆಯಲ್ಲಿ ಧಕ್ಕೆಯ ಮೇಲೆ ಕೆಲಸಮಾಡುತ್ತಿದ್ದ ೧೨೦೦ ಕೂಲಿಗಳೂ ೬೦೦ ಲೋರಿ ಡ್ರ್ಯಾವರರೂ ಸಂಬಳ ಸಾಕಾಗುವುದಿಲ್ಲವೆಂದು ಕೆಲಸವನ್ನು ನಿಲ್ಲಿಸಿರುವರು.

ಇಸ್ಟ್ ಇಂಡಿಸಿನ ಲೇಸಾನಿಂಬರ್ ಎಂಬಲ್ಲಿ ಭೂಕಂಪವುಂಟಾಗಿ ಜ್ವಾಲಾಮುಖಿಯೆದ್ದಿತು. ಕಲ್ಲುಗಳೂ ಬೂದಿಯೂ ಆಕಾಶದಲ್ಲಿ ೬೦ ಫೀಟು ಎತ್ತರದ ವರೆಗೆ ಹಾರಿದವು. ಲಾವಾದ ಪ್ರವಾಹವು ಬಂದು ೧೬ ಮನೆಗಳು ನಾಶವಾಗಿ ಒಬ್ಬ ಮನುಷ್ಯನು ಸತ್ತುಹೋದನು.

— ಬುಕಾರೆಸ್ಟಿನ ಸಮೀಪ ಹದಿನೆರಡು ಪೆಟ್ರೋಲಿಯಮ್ ಬಾವಿಗಳಿಗೆ ಬೆಂಕಿ ತಾಗಿ ಸುಟ್ಟುಹೋದವು. ಮೂವರು ಕೆಲಸಗಾರರು ಸತ್ತಿರುವರು. ನಷ್ಟವು ಸುಮಾರು ೧೨೫ ಸಾವಿರ ಪವನುಗಳಷ್ಟಾಗಬಹುದು.

— ಎಪ್ರಿಲ್ ತಿಂಗಳಲ್ಲಿ ಬ್ರಿಟನಿನಿಂದ ಆದ ರಫ್ತು ಒಟ್ಟು ಪೌಂಡು ೫೫,೨೬೮೦೦೦ರಷ್ಟು ಮತ್ತು ಆಮದು ಪೌಂಡು ೯೬,೬೯೬೦೦೦ರಷ್ಟು ಮಾರ್ಚ ತಿಂಗಳಲ್ಲಿ ಆಮದು ಪೌಂಡು ೧೩,೬೦೪೦೦೦ ಮತ್ತು ರಫ್ತು ಪೌಂಡು ೯,೬೫೦,೦೦೦ ಇಷ್ಟು ಹೆಚ್ಚಾಗಿತ್ತು.

— ಉತ್ತರ ಧ್ರುವವನ್ನು ಕಂಡುಹಿಡಿಯಬೇಕೆಂದು ಹಾರಿದ ಇಟಲಿಯಾ ಎಂಬ ವಿಮಾನವು ದಪ್ಪವಾದ ಮೈಂದಿನ ಕಾರಣ ಹಿಂತಿರುಗಿರುವದು.

— ಪೋರ್ಟ ಸಯ್ಯದೆಂಬಲ್ಲಿಗೆ ಹೋಗುತ್ತಿದ್ದ ಟಪ್ಪಾಲಿನ ಮೈಲು ಗಾಡಿಯ ಟಪ್ಪಾಲು ಕೋಣೆಗೆ ಬೆಂಕಿ ತಾಗಿ ೧೪೦ ಟಪ್ಪಾಲು ಚೀಲಗಳು ಸುಟ್ಟು ಭಸ್ಮವಾದವು. ಇವರಲ್ಲಿ ಮುಖ್ಯವಾದ ಅನೇಕ ಕಾಗದಗಳಿದ್ದುವಂತೆ.

— ಸಿಲೋನಿನಲ್ಲಿ ಒಂದು ಮೈಲು ಗೋಡ್ಸ್‌ಟ್ರೈನಿಗೆ ಬಡೆದ ಕಾರಣ ಬಹಳ ಜಖಮಾಗಿರುತ್ತದೆ.

— ಮೇ ತಾರೀಖು ೭ನೇ ದಿನ ಬ್ರಿಟನಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ೧,೧೦೩,೮೦೦. ಕಳೆದ ವರ್ಷಕ್ಕಿಂತ ಇದು ೧೦೫,೫೫೫ ಹೆಚ್ಚು. ಆದರೆ ಕಳೆದ ವಾರಕ್ಕಿಂತ ೩೨,೩೦೩ ಕಡಿಮೆ.

— ಮಿಸ್ ಮೆಯೋಳ ಮದರ್ ಇಂಡಿಯಾ ಪುಸ್ತಕವು ಆದರಣೀಯವೋ, ಇಲ್ಲವೇ ಅನಾದರಣೀಯವೋ, ಎಂಬುದನ್ನು ನಿರ್ಣಯಿಸುವ ಗೋಸುಗ ಕೆಲಿಫೋರ್ನಿಯದಲ್ಲಿ ಒಂದು ಸಭೆ ನಡೆಯಿತು. ಒಂದು ಪಾಲು ಜನರು ಆದರಣೀಯವೆಂದು ಹೇಳಿದರೂ, ಮೂರು ಪಾಲು ಜನರು ಅನಾದರಣೀಯವೆಂದು ವಾದಿಸಿದರು. ಕಳೆದ ಕ್ರಿಸ್‌ಮಸಿನಿಂದ ಇದುವರೆಗೆ, ಅಮೇರಿಕದಲ್ಲಿ ಈ ಕುರಿತು ೧೬ ಸಭೆಗಳು ನಡೆದುವಂತೆ.

— ಇಸ್ಟ್ ಇಂಡಿಸಿನ ಕ್ರಕಟೂ ಎಂಬ ದ್ವೀಪದಲ್ಲಿ, ೨೪ ತಾಸುಗಳೊಳಗೆ ಜ್ವಾಲಾಮುಖಿಯು ೬೦೦ ಸಲ ಹೊರಹೊಮ್ಮಿತು.

ಒಳದೇಶವರ್ತಮಾನ.

— ಸುಕೂರಿನಲ್ಲಿ ಇಬ್ಬರು ಕೂಲಿಗಳು ಮುಳುಗಿ ಸತ್ತುಹೋದರು.

— ಕಲಕತ್ತಾ ಯುನಿವರ್ಸಿಟಿಯಲ್ಲಿ ಜಪಾನೀ ಭಾಷೆಯನ್ನು ಕಲಿಸುವ ಒಂದು ಕ್ಲಾಸನ್ನು ತೆರೆಯುವ ಸ್ಕೀಮನ್ನು ತಯಾರಿಸಿರುವರು.

— ಕಲಕತ್ತಾ ಹ್ಯಾಕೋರ್ಟಿನ ಜಡ್ಜರಾಗಿ ರಾ॥ ನಳಿನೀಕಂಠ ಬಸುಗಳವರು ನೇಮಿಸಲ್ಪಟ್ಟಿರುವರು.

— ಇಂದೋರಿನ ಮಾಜಿ ಮಹಾರಾಜರಾದ ಸರ್ ತುಕೋಜಿರಾಯರು ಮಾರ್ಸೆಲಿಸಿಗೆ ತಲಪಿರುವರು.

— ಕಾಬೂಲಿನಲ್ಲಿದ್ದ ಅಫ್‌ಘಾನ ಅಮೀರರ ಸಿನೆಮಾ ಮಂದಿರವು ಸುಟ್ಟುಹೋಯಿತು. ಅಮೀರರು ಹಿಂದೂ ದೇಶದಲ್ಲಿ ಸಂಚರಿಸುವದನ್ನು ತೋರಿಸುವುದಕ್ಕಾಗಿ ತೆಗೆದ ಎರಡು ಫಿಲ್ಮುಗಳು ಸುಟ್ಟುಹೋದವು.

— ಮುಂಬಾಯಿಯ ದಟ್ಟವಾದ ಜನಸಂಖ್ಯೆ ಇರುವ ಮುಲ್ ಬಜಾರದ ಹಲವು ಅಂಗಡಿಗಳು ಸುಟ್ಟುಹೋದವು. ಸುಮಾರು ಒಂದು ಲಕ್ಷ ರೂಪಾಯಿಯಷ್ಟು ನಷ್ಟವಾಯಿತು. ಬೆಂಕಿಯನ್ನು ನಂದಿಸಲಿಕ್ಕೆ ಒಬ್ಬನೇ ಒಬ್ಬ ಫಾಯರ್‌ಮೇನನು ಬಂದಿದ್ದ ಕಾರಣ ಆತನು ಮೂರ್ಛೆಹೋದನು. ಆತನನ್ನು ಅಸ್ಪತ್ರೆಗೆ ಕೊಂಡೊಯ್ದರು.

— ನಾರಾಯಣಗಂಜದ ಮುನಿಸಿಪಾಲಿಟಿಯ ಕಾರ್ಯದರ್ಶಿಯಾದ ಜೋಗೇಂದ್ರಕುಮಾರಸೇನರೆಂಬವರು, ಆಫೀಸಿನಿಂದ ರಾತ್ರೆ ಮನೆಗೆ ಮರಳುತ್ತಿರುವಾಗ ಹರಿತವಾದ ಒಂದು ಆಯುಧದಿಂದ ಯಾರೋ, ಅವರ ತಲೆಯ ಮೇಲೆ ಹೊಡೆದ ಕಾರಣ ಅವರು ತಕ್ಷಣವೇ ಸತ್ತುಹೋದರು.

— ಬರುವ ರಾಷ್ಟ್ರೀಯ ಅಧಿವೇಶನವು ಕಲಕತ್ತದಲ್ಲಿ ಕೂಡಲಿದೆಯಷ್ಟೇ, ಅವರ ಸ್ವಾಗತಮಂಡಳದವರ ಸಭೆಯೊಂದು ಮೊನ್ನೆ ತಾನೆ ನಡೆದು, ಜೆ. ಎಮ್. ಸೇನಗುಪ್ತರನ್ನು ಸ್ವಾಗತಮಂಡಳದ ಅಧ್ಯಕ್ಷರನ್ನಾಗಿಯೂ, ಗೋಸ್ವಾಮಿ, ಎನ್. ಸಿ. ಚಂದ್ರ, ಅಬ್ದುಲ್ ಕಲಮ್ ಆಜದ್, ಮೌಲ್ವಿ ಮುಜಿಬಾರ್, ರಹಮನ್, ಅಖಿಲಚಂದ್ರ ದತ್ತ, ಶ್ಯಾಮಸುಂದರ ಚಕ್ರವರ್ತಿ ಲಲಿತಮೋಹನದಾಸ, ಇವರುಗಳನ್ನು ವೈಸ್‌ಪ್ರೆಸಿಡೆಂಟರನ್ನಾಗಿಯೂ, ಡಾ॥ ವಿಧಾನಚಂದ್ರರಾಯರನ್ನು ಸಾಮಾನ್ಯ ಕಾರ್ಯದರ್ಶಿಯನ್ನಾಗಿಯೂ ನೇಮಿಸಲಾಯಿತು. ಒಂದೊಂದು ಕೆಲಸಕ್ಕೆ ಒಂದೊಂದು ಕಮಿಟಿಯನ್ನು ಏರ್ಪಡಿಸಲಾಯಿತು.

— ಕ್ರಿಸ್‌ಮಸ್ ಸಮಯದಲ್ಲಿ ಕಲಕತ್ತದ ಇಂಡಿಯನ್, ಇಂಡಸ್ಟ್ರಿಯಲ್ ಮತ್ತು ಕಮರ್ಸಿಯಲ್ ಕಾಂಗ್ರೆಸು ನಡೆಯಲಿರುವದು. ಅದನ್ನು ವ್ಯಾಸರಾಯರೇ ತೆರೆಯುವರು. ಇದಕ್ಕೆ ಇಂಡಿಯಾ ಸರಕಾರದ ಹಲವು ಮೆಂಬರರು ಬರುವರಂತೆ.

— ಬಾಬಾಗುರುದತ್ತಸಿಂಗರು ಒಂದು ಭಾಷಣದಲ್ಲಿ ತಪ್ಪು ಮಾಡಿದರೆಂದು ಅವರನ್ನು ಕೈದುಮಾಡಲಾಗಿತ್ತು. ಆದರೆ ಕಲಕತ್ತದ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅವರನ್ನು ಬಿಟ್ಟುಬಿಟ್ಟರು.

— ವಿಲ್ಲುಪುರದಲ್ಲಿ ರೈಲು ಹೋಗುತ್ತಿರುವಾಗ ೫೦ ಸಾಮಾನಿನ ಗಾಡಿಗಳು ಕಂಬಿಯಿಂದ ತಪ್ಪಿಹೋದವು. ಆದರೆ ಅಪಾಯ ಯಾರಿಗೂ ಉಂಟಾಗಲಿಲ್ಲ.

— ಡಾ॥ ರವೀಂದ್ರನಾಥ ಠಾಗೋರರು ಮದರಾಸಿನಲ್ಲಿರುವರು. ಅವರ ಆರೋಗ್ಯವು ಸ್ವಲ್ಪ ಕೆಟ್ಟಸ್ಥಿತಿಯಲ್ಲಿರುವದರಿಂದ ಅವರು ಸದ್ಯಕ್ಕೆ ಯುರೋಪಿಗೆ ಹೋಗದೆ ನಂದಿದುರ್ಗಕ್ಕಾಗಲಿ, ಉಟಕಮಂಡಿಗಾಗಲಿ ಹೋಗುವರು. ಜೂನ್ ತಿಂಗಳಲ್ಲಿ ಯುರೋಪಿಗೆ ಹೊರಟುಹೋಗುವರು.

— ಪಂಡಿತ ಮಾಲವೀಯರವರು, ಮುಂಬಾಯಿಯಲ್ಲಿ ನಡೆಯುವ ಆಲ್‌ಪಾರ್ಟಿ ಕಾನ್ಫರೆನ್ಸಿಗೆಂದು ಕಾಶಿಯಿಂದ ಹೊರಟರು. ಅವರು ಸಂಸ್ಕೃತದಲ್ಲಿ 'ಮಂತ್ರಮಹಿಮಾ' ಎಂಬ ಕವಿತೆಯನ್ನು ರಚಿಸುವದರಲ್ಲಿಯೇ ನಿರತರಾಗಿರುವರು.

— ಮಧುರೆಯ ಹಲವು ಪ್ರತಿಷ್ಠಿತ ಗೃಹಸ್ಥರು ಸ್ಯಾಮನ್ ಕಮಿಶನು ಮುಂದೆ ಹಿಂದೂದೇಶಕ್ಕೆ ಬಂದಾಗ ಅದನ್ನು ಮನಃಪೂರ್ವಕವಾಗಿ ಬಹಿಷ್ಕರಿಸುವೆವೆಂದು ಸಹಿಕೊಟ್ಟು ಪ್ರಕಾಶ ಮಾಡಿರುವರು.

— ಕೈಲಸಿನ ಸಮೀಪ ಸಮುದ್ರದಲ್ಲಿ ಮೀನು ಹಿಡಿಯಲಿಕ್ಕೆಂದು ಹೋಗಿದ್ದ ಮೂರು ದೋಣಿಗಳು ಪುನಃ ದಡವನ್ನು ಸೇರಿಲ್ಲ. ಮೂರು ದೋಣಿಗಳಲ್ಲಿ ಮೂವತ್ತು ಜನರೂ ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಬಲೆ ಮೊದಲಾದ ಸಾಮಾನುಗಳೂ ಇದ್ದವು. ಇತರ ಬೆಸ್ತರು ಅವರ ಶೋಧವನ್ನು ಚೆನ್ನಾಗಿ ಮಾಡುತ್ತಿರುವರು.

— ಅಲ್ಲೆಪ್ಪಿಯ ಕೂಲಿಗಳು ದೊಡ್ಡ ಸಭೆಕೂಡಿ ಇನ್ನು ಮುಂದೆ ತಾವು ಧನಿಕರ ಕೆಲಸವನ್ನು ಮಾಡಬಾರದೆಂದು, ತಾವು ೨೦,೦೦೦ ಕೂಲಿಗಳಿರುವುದರಿಂದ ಪ್ರತಿಯೊಬ್ಬನು ಐದೈದು ರೂಪಾಯಿಗಳಂತೆ ಹಣ ಹಾಕಿ ಒಂದು ಲಕ್ಷ ರೂಪಾಯಿಯನ್ನು ಒಟ್ಟು ಮಾಡಿ ಒಂದು ಜಮಖಾನೆ ಚಾಪೆ ಮೊದಲಾದವುಗಳನ್ನು ತಯಾರಿಸುವ ಕಾರಖಾನೆಯನ್ನು ಪ್ರಾರಂಭಿಸಿ ತಾವೇ ಕೆಲಸಮಾಡಬೇಕೆಂದೂ ನಿರ್ಣಯಿಸಿದರು. ಪರದೇಶಗಳಿಗೆ ಕೂಡ ಸಾಮಾನುಗಳನ್ನು ಇವರೇ ಕಳುಹಿಸುವರಂತೆ.

— ತ್ರಾವನ್ಕೋರಿನ ಹುಡುಗಿಯರ ಕೊಲೆಜಿನಲ್ಲಿ ಬಿ. ಎ. ಕ್ಲಾಸನ್ನು ತೆರೆಯುವರು.

— ಬಂಗಾಳ ಪೋಲೀಸ್ ಇನ್ಸಪೆಕ್ಟರನೊಬ್ಬನ ಸಹೋದರನಾದ ಸಯ್ಯದ ಜಹಾರಸೇನನೆಂಬವನು ಕಲಕತ್ತದಲ್ಲಿ ಗುಂಡು ಹೊಡೆದು ಕೊಲ್ಲಲ್ಪಟ್ಟಿರುವನು. ಇನ್ಸ್‌ಪೆಕ್ಟರನ ಮಗನಿಗೆ ಗುಂಡಿನ ಪೆಟ್ಟುಗಳು ತಾಗಿದ ಕಾರಣ ಅಸ್ಪತ್ರೆಗೆ ದಾಖಲು ಮಾಡಿರುವರು.

— ಮುಂಬಾಯಿಯ ವೆಸ್ಟರ್ನ ಇಂಡಿಯಾ ಟರ್ಫ ಕ್ಲಬ್ಬಿನಲ್ಲಿ ರೂಪಾಯಿ ೫೮,೨೮೩ ಕಾಣೆಯಾದುದರ ಸಲುವಾಗಿ ಕೇಶಿಯರನ ಮೇಲೆ ನಂಬ್ರವಾಗಿತ್ತು. ನಂಬ್ರವು ಎರಡನೆ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಹೋದಾಗ ತಾನೂ ಕ್ಲಬ್ಬಿನ ಮೆಂಬರನಾದ್ದರಿಂದ ಈ ನಂಬ್ರವನ್ನು ವಿಚಾರಿಸದೆ ಸೆಶ್ಶನಿಗೆ ದಾಖಲು ಮಾಡುವೆನೆಂದು ಹೇಳಿದರು. ಅಪಾದಿತನ ಕಡೆಯ ವಕೀಲರು ಸಮಯ ಕೊಡಬೇಕೆಂದು ಕೇಳಿಕೊಂಡಿರುವರು.

— ಕಳೆದ ಆದಿತ್ಯವಾರ ರಂಗೂನಿನಲ್ಲಿ ದೊಡ್ಡ ಮಳೆ ಗಾಳಿ ಬಂದಿತು. ಪಟ್ಟಣದ ಹಲವು ಕಟ್ಟೋಣಗಳ ಮಾಡುಗಳು ಹಾರಿಹೋದವು. ಮನೆಗಳು ಕುಸಿದು ಬಿದ್ದುದರಿಂದ ಹಲವರಿಗೆ ಜಖಮಾಗಿರುತ್ತದೆ. ಹಲವರ ಪತ್ತೆಯೇ ಆಗಿಲ್ಲ.

— ಬರ್ಡೋಲಿಯ ಸತ್ಯಾಗ್ರಹ ಚಳವಳದ ಸಹಾಯಕ್ಕಾಗಿ ವಲ್ಲಭಭಾಯಿ ಪಟೇಲರು ಏರ್ಪಡಿಸಿದ ಫಂಡಿಗೆ ಉದಾರತೆಯಿಂದ ಹಣಸಹಾಯವನ್ನು ಮಾಡಬೇಕೆಂದು ಮಹಾತ್ಮಾಜಿಯವರು ಅಪೇಕ್ಷಿಸುತ್ತಾರೆ.

— ಪರಚಿನಾರ್ ಎಂಬಲ್ಲಿ ಅಫಘಾನರ ಒಂದು ವಿಮಾನವು ಬಿದ್ದು ಪುಡಿಯಾಯಿತು, ಒಳಗಿದ್ದ ಇಬ್ಬರು ಪ್ರಯಾಣಿಕರಿಗೆ ಏನೂ ಜಖಮಾಗಲಿಲ್ಲ. ಎಯರ್‌ಮೆನರು ಕೋಹಾತಿಗೆ ಹೋಗಿರುವರು. ಅವರಿಗೆ ಇಂಗ್ಲಿಷು ಮಾತನಾಡಲು ಬರುವುದಿಲ್ಲವಾದರೂ, ಅವರ ಮ್ಯಾಪನ್ನು ನೋಡುವಾಗ ಅವರು ಟರ್ಮಜಿನಿಂದ ಹೊರಟು ಕಾಬೂಲಿಗೆ ಹೋಗತಕ್ಕವರೆಂದು ವಿಶದವಾಗಿ ತಿಳಿಯುವದು.

— ಪಂಜಾಬದ ಒಂದು ಹಳ್ಳಿಯಲ್ಲಿ ಎರಡು ಪಂಗಡಗಳೊಳಗೆ ಜಗಳವಾಗಿ ಒಬ್ಬನು ಮೃತಪಟ್ಟನು, ಹಲವರಿಗೆ ಜಖಮಾಗಿರುತ್ತದೆ.

— ಇಂಡಿಯಾದ ಇಂಟರ್ ಯುನಿವರ್ಸಿಟಿ ಬೋರ್ಡಿಗೆ ಆಗ್ರಾ ಯುನಿವರ್ಸಿಟಿಯನ್ನು ಸೇರಿಸಿರುವರು.

— ಬರ್ಮಾ ಲೆಜಿಸ್ಲೇಟಿವ್ ಕೌನ್ಸಿಲಿನ ಹೊಸ ಮೆಂಬರರ ಚುನಾವಣೆಯು ಬರುವ ನವಂಬರದಲ್ಲಿ ಜರಗುವದು.

— ಸೆಂಟ್ರಲ್‌ಇಂಡಿಯಾಸ್ಟೇಟ್ಸ್‌ಸಬ್‌ಜೆಕ್ಟ್ ಕಾನ್ಫರೆನ್ಸು ಜಾವಸಿಯಲ್ಲಿ, ಜೂನ್, ೧೯, ೨೦ರಲ್ಲಿ ಜರಗುವದು, ಸ್ವಾಗತಮಂಡಳದವರು 'ಉತ್ಸಾಹ' ಪತ್ರಿಕೆಯ ಸಂಪಾದಕರಾದ ಪಂಡಿತ ಕೃಷ್ಣಗೋಪಾಲ ಶರ್ಮರನ್ನು ಚೆಯರ್‌ಮೇನರನ್ನಾಗಿಯೂ, ನರ್ಮದಪ್ರಸಾದ ಸಿಂಗರನ್ನು ಪ್ರೆಸಿಡೆಂಟರನ್ನಾಗಿಯೂ ಆರಿಸಿರುವರು.

ದಕ್ಷಿಣ ಕನ್ನಡ.

ಮಂಗಳೂರು:— ಇಲ್ಲಿಯ ಡಿಸ್ಟ್ರಿಕ್ಟ್ ಹೆಲ್ತ ಆಫೀಸರರಾದ ರಾ॥ ಬಿ. ಜಿ. ಪ್ರಭುಗಳವರು ರಜೆ ಪಡೆಯುವದರಿಂದ, ಕಲಕತ್ತದ ಸ್ಕೂಲ್ ಓಫ್ ಟ್ರೋಪಿಕಲ್ ಮೆಡಿಶನ್ ಇದರಲ್ಲಿ ಟ್ರೈನಿಂಗ್ ಪಡೆದ ರಾ॥ ಬಿ. ಸುಬ್ರಾಯ ಬಾಳಿಗ, ಎಲ್. ಎಮ್. ಎಂಡ್. ಎಸ್. ಇವರು ಬಂದು ಚಾರ್ಜು ವಹಿಸಿಕೊಳ್ಳುವರು,

ಮಿಸ್ಟರ್ ಇ. ಡಬ್ಲ್ಯು. ಡ್ಯಾಗ್, ಐ. ಸಿ. ಎಸ್. ಇವರು, ರಜೆ ಮುಗಿದು ಬಂದು ಈ ಜಿಲ್ಲೆಯ ಕುಂದಾಪುರ ಡಿವಿಜನಿನ ಅಸಿಸ್ಟಾಂಟ್ ಕಲೆಕ್ಟರ ಮತ್ತು ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಮಂಗಳೂರು ತಾಲೂಕು ಬೋರ್ಡು ಮೆಂಬರರ ಸಾಧಾರಣ ಸಭೆಯು ಇದೇ ಬರುವ ತಾರೀಖು ೨೮ನೇ ಸೋಮವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವದು.

ತಾರೀಖು ೧೨—೫—೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೯ ಮರಣಗಳಾದವು. ಈ ಪೈಕಿ ಅತಿಸಾರದಿಂದ ೧, ಶ್ವಾಸಕೋಶದ ರೋಗದಿಂದ ೯, ಇತರ ಎಲ್ಲಾ ಕಾರಣಗಳಿಂದ ೯, ಜನನ ಸಂಖ್ಯೆಯು ಒಟ್ಟು ೩೦.

ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಕಮಿಶನರರಾದ ರಾ॥ ಸೂರ್ಯರಾವ್ ಗಾರು, ಬಿ. ಎ, ಬಿ. ಯಲ್. ಇವರು ಈ ಕೆಳಗಿನಂತೆ ಸರ್ಕಿಟು ಮಾಡುವರು. ಅವರ ಕೂಡೆ ಕೆಲಸವಿದ್ದವರು ಆಯಾಯ ಸ್ಟೇಶನಿನಲ್ಲಿ ಪ್ರತಿ ದಿನ ಮಧ್ಯಾಹ್ನ ಘಂಟೆ ೧೨ರಿಂದ ಘಂಟೆ ೫ರ ವಳಗೆ ಅವರನ್ನು ಕಾಣಬಹುದು. ಜೂನ್ ೨, ಮತ್ತು ೩ರಲ್ಲಿ ಪಾಲಘಾಟ. ೪ ಮತ್ತು ೫ ಎರ್ನಾಕುಳಮ್, ೬ ಮತ್ತು ೭ ಗುರುವಾಯುರ್. ೭ ಮತ್ತು ೮ ಚಿರುಪ್ಪುಳೇರಿ, ೯ ಮತ್ತು ೧೦ ಪೆರುಂಬ್ರಮ್, ೧೧ರಿಂದ ೧೫ರ ವರೆಗೆ ಕಲ್ಲಿಕೋಟೆ, ೧೫ಮತ್ತು ೧೬ರಲ್ಲಿ ತಲಚೇರಿ, ೧೬ ಮತ್ತು ೧೭ರಲ್ಲಿ ಕಾನ್ಹಂಗಾಡ (ಹೊಸದುರ್ಗ) ೧೭ ಮತ್ತು ೧೮ರಲ್ಲಿ ಮಂಗಳೂರು, ೧೯ ಮತ್ತು ೨೦ರಲ್ಲಿ ಉಡುಪಿ, ೨೦ ಮತ್ತು ೨೧ರಲ್ಲಿ ಪುನಃ ಮಂಗಳೂರು ೨೧ರಲ್ಲಿ ಕಲಿಕೋಟೆ ೨೨ ಮತ್ತು ೨೩ರಲ್ಲಿ ಮಂಜೇರಿ, ೨೩ ಮತ್ತು ೨೪ರಲ್ಲಿ ಕಲಿಕೋಟೆ, ೨೫ನೇ ತಾರೀಕಿನ ಬಳಿ ಮದರಾಸಿಗೆ ತಲಪುವರು.

ಧಾರವಾಡದಲ್ಲಿ ಇದೇ ತಿಂಗಳ ತಾರೀಖು ೨೩ ಮತ್ತು ೨೪ಕ್ಕೆ ಕರ್ನಾಟಕ ಪ್ರಾಂತಿಕ ಪರಿಷತ್ತು ಜರಗಲಿಕ್ಕಿರುವುದು. ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಕೆ. ಎಫ್. ನರಿಮನರನ್ನೂ, ಸ್ವಾಗತ ಮಂಡಲಿಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಪಿ. ಎನ್. ಜೋಗ್, ಎಂ. ಎಲ್. ಸಿ. ಯವರನ್ನೂ ಆರಿಸಲಾಗಿಯದೆ.

ಇದೇ ಸಮಯದಲ್ಲಿ ಅಲ್ಲಿ ಜರಗುವ ಪ್ರಥಮ ಕರ್ನಾಟಕ ಖಾದಿ ಪರಿಷತ್ತಿಗೆ ಬ್ರಹ್ಮಚಾರಿ ಮಂಜಪ್ಪ ಹರ್ಡೇಕರರು ಅಧ್ಯಕ್ಷರಾಗಿಯೂ ಶ್ರೀ ವಿ. ಬಿ ಆಲೂರರು ಸ್ವಾಗತ ಮಂಡಳಿಯ ಅಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟಿರುವರು.

ನಮ್ಮ ಜಿಲ್ಲೆಯಿಂದ ಪ್ರತಿನಿಧಿಗಳಾಗಿ ಹೋಗಲಿಕ್ಕೆ ಇಚ್ಛಿಸುವ ಕಾಂಗ್ರೆಸು ಸದಸ್ಯರು ಇದೇ ತಿಂಗಳ ತಾರೀಖು ೨೦ರ ವರೆಗೆ ಇಲ್ಲಿಗೆ ತಲ್ಪುವ ಹಾಗೆ ತಮ್ಮ ಮನವಿಯನ್ನು ಬರಹ ಮೂಲಕ ಕಳುಹಿಸಬೇಕಾಗಿ ವಿನಂತಿ. ತಾವು ಕೈನೂಲಿನಿಂದ ಹಾಗೂ ಕೈಮಗ್ಗದಿಂದ ಮಾಡಿದ ಖಾದಿಯನ್ನು ಕಾಯಂ ಆಗಿ ಧರಿಸುವವರೇ ಎಂಬ ವಿಷಯ ತಮ್ಮ ಮನವಿಯನ್ನು ಸೂಚಿಸುವದಲ್ಲದೆ ತಾವು ಜಿಲ್ಲೆಯ ಪ್ರತ್ಯಕ್ಷ ಸದಸ್ಯರಾಗಿರದೆ ತಾಲೂಕು ಕಮಿಟಿಗಳ ಈ ವರ್ಷದ ಸದಸ್ಯರಾಗಿದ್ದರೆ ಹಾಗೆ ಸದಸ್ಯರಾದ ಬಗ್ಗೆ ಖಾದಿ ಧರಿಸುವ ವಿಷಯದಲ್ಲೂ ಸಂಬಂಧ ಪಟ್ಟ ತಾಲೂಕು ಕಾರ್ಯದರ್ಶಿಯಿಂದ ದೃಢ ಪತ್ರವನ್ನು ಕೂಡಾ ಕಳುಹಿಸತಕ್ಕದ್ದು. ೨೦ನೇ ತಾರೀಕಿನ ನಂತರ ಮುಟ್ಟುವ ಮನವಿಗಳಿಗೆ ಕೂಡಾ ಸಾಧ್ಯವಿದ್ದಷ್ಟು ಮಟ್ಟಿಗೆ ಗಮನ ಕೊಡಲಾದೀತು. ಎಂದು ರಾ. ಅ. ಭೋಜರಾಯರು ತಿಳಿಸುತ್ತಾರೆ.

ತಾ. ೨೧, ೨೨. ೨೩ರಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದೊಳಗೆ ನಡೆಯುವ ಕರ್ನಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ ಸಮ್ಮೇಲನ ಮತ್ತು ವಸ್ತುಪ್ರದರ್ಶನದ ಕಾರ್ಯಕ್ರಮವು ಈ ರೀತಿಯಾಗಿರುತ್ತದೆ.

ತಾ. ೨೧—೫—'೨೮, ಪ್ರಾತಃಕಾಲ ೭ರಿಂದ ೧೨॥ ವರೆಗೆ 1. ವಸ್ತುಪ್ರದರ್ಶನ. 2. ರಾಷ್ಟ್ರಗೀತಾ. 3. ಸ್ವಾಗತ ಸಮಿತಿಯ ಮತ್ತು ಸಮ್ಮೇಲನದ ಅಧ್ಯಕ್ಷರ ಭಾಷಣ. ಸಾಯಂಕಾಲ ೩ರಿಂದ ೬॥ ತನಕ 1. ವಿಷಯವಿಮರ್ಶನೆ ಸಮಿತಿಯ ಅಧಿವೇಶನ ಮತ್ತು ವಿಷಯ ನಿರ್ವಾಚನ. ತಾ. ೨೨—೫—'೨೮, ಪ್ರಾತಃಕಾಲ ೭ರಿಂದ ೧೦॥ ತನಕ 1. ಉಪನ್ಯಾಸಗಳನ್ನು ವಾಚಿಸುವದು. ಸಾಯಂಕಾಲ ೩॥ಯಿಂದ ೬॥ ತನಕ 1. ಕರ್ನಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ ಸಮ್ಮೇಲನ ತಾ. ೨೩—೫—'೨೮, ಪ್ರಾತಃಕಾಲ ೭ರಿಂದ ೧೨॥ ತನಕ 1. ಪ್ರಾಚೀನ ಮತ್ತು ಅರ್ವಾಚೀನ ವೈದ್ಯಕೀಯ ವಿಷಯಗಳಲ್ಲಿ ಪ್ರವಚನ ಮತ್ತು ವ್ಯಾಖ್ಯಾನಗಳು. ಸಾಯಂಕಾಲ ೩॥ಯಿಂದ ೬॥ ತನಕ 1. ಪ್ರಶಸ್ತಿಕಾ ಪತ್ರಿಕೆಗಳನ್ನು ಕೊಡುವದು. 2. ವಿದ್ಯಾರ್ಥಿಗಳಿಗೆ ಹಿತೋಪದೇಶ. 3. ಉಪಸಂಹಾರ ಭಾಷಣ. 4. ಧನ್ಯೋಕ್ತಿಗಳು. 5. ಮಂಗಲೋಕ್ತಿಗಳು.

ಇದೇ ತಾ॥ ೧೨ನೇ ಅಪರಾಹ್ನ ೩ ಘಂಟೆಗೆ ಮಿಲಾಗ್ರಿಸ್ ಇಗರ್ಜಿಯಲ್ಲಿ ಕಾಥಿ ಪ್ಲೆಂಟರ್ ಎಸ್. ಎಲ್. ಮಥಾಯಸರಿಗೆ ಮಂಗಳೂರಿನ ಹೊಸ ಬಿಶೋಪರು ಸೈಟ್ ಪದವಿಯನೀಯುವ ಸಮಾರಂಭ ನಡಿಸಿದರು. ಸಭಿಕರಿಗೆಲ್ಲಾ ಮೆ. ಮಥಾಯಸರ ಮನೆಯಲ್ಲಿ ಟೀಪಾರ್ಟಿ ಇದ್ದಿತಲ್ಲದೆ, ಬಡಬಗ್ಗರಿಗೆ ಅಕ್ಕಿ ಹಂಚಲಾಗಿದ್ದಿತು.

ಕಾರ್ಕಳ:— ಸಂ ೧೯೨೮ನೇ ಇಸವಿ ಎಪ್ರಿಲ್ ತಾರೀಕು ೧೯ರಲ್ಲಿ ಕಾರ್ಕಳ ಕ್ಲಬ್ಬಿನಲ್ಲಿ ಕಾರ್ಕಳ ತಾಲೂಕು ಭೂಮ್ಯಾಲಿಕರ ಸಭೆಯು ಮ. ರಾ. ರಾ. ವಕೀಲ್ ಕೆ. ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಸಭೆಯಲ್ಲಿ ಆದ ನಿರ್ಣಯಗಳ ಪ್ರಕಾರ ಕಾರ್ಕಳದಲ್ಲಿ ಸ್ಥಾಪಿಸಲ್ಪಟ್ಟ ಭೂಮ್ಯಾಲಿಕರ ಸಂಘದ ಉದ್ದೇಶವನ್ನು ತಾಲೂಕಿನ ಭೂಮ್ಯಾಲಿಕರಿಗೆ ಪ್ರಕಟಿಸಿ ಸಂಘಕ್ಕೆ ಸಾಧ್ಯವಿದ್ದಷ್ಟು ಸದಸ್ಯರನ್ನು ಸೇರಿಸುವುದರಲ್ಲಿ ಕಾರ್ಯದರ್ಶಿಯವರಿಗೆ ಸಹಾಯಮಾಡುವ ಬಗ್ಗೆ ಈ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರ ಒಂದು ಕಾರ್ಯನಿರ್ವಾಹಕ ಕಮಿಟಿಯು ನೇಮಿಸಲ್ಪಟ್ಟಿತು.

೧. ಕೆ. ಸದಾಶಿವ ಭಟ್ಟರು ೨ ಎನ್. ನಂಜಪ್ಪ ಶೆಟ್ಟರು, ೩ ಕೆ. ಪದ್ಮನಾಭ ಶಮ್ಮರು, ೪ ಎಸ್. ಮಂಜಪ್ಪ ಅಧ್ಯಂತಾಯರು ೫ ಸಾಂತಪಯ್ಯ ಶಮ್ಮರು, ೬ ಕಾಬೆಟ್ಟು ಶಿವಪ್ಪ ಹೆಗಡೆರು, ೭ ಕೆ. ಮಹಾಬಲ ಹೆಗಡೆರು ೮ ತಿಂಗಳೆ ಸಂಕಪ್ಪ ಹೆಗಡೆರು, ೯ ಕಾಡೂರು ಶ್ರೀನಿವಾಸ ಹೆಗಡೆರು ೧೦ ಕರಂಜೆ ತಾಮರ್ಣಾಯರು ೧೧ ಪಟ್ಲ ಶೆಟ್ಟಿ ಪದ್ಮನಾಭ ಶೆಟ್ಟಿ ೧೨ ಅಚ್ಚಬ್ಯಾರಿಗಳು ೧೩ ಹೊಸಂಗಡಿ ಬೋಜಪ್ಪ ಅರ್ಧ ಬಿನ್ನಾಣಿಗಳು ೧೪ ನೆಲ್ಲಿಕಾರು ಚಂದಪ್ಪ ಶೆಟ್ಟಿ, ೧೫ ಮರ್ಣೆಡಗುತ್ತು ರಾಮಣ್ಣ ಶೆಟ್ಟಿ.

ಸದರಿ ಸಂಘದ ಕಾರ್ಯಕ್ರಮಗಳನ್ನು ಮಂಜೂರು ಮಾಡುವ ಬಗ್ಗೆ ಇದೇ ಮೇ ತಿಂಗಳ ಅಖೈರಿನ ಒಳಗೆ ಒಂದು ಮಹಾಸಭೆಯನ್ನು ಕಾರ್ಯದರ್ಶಿಯವರು ಸೇರಿಸಬೇಕೆಂತ ಸಹಾ ನಿರ್ಣಯಿಸಲಾಯಿತು.

ವಕೀಲ್ ಸಾಮೂರು ವಾಸುದೇವ ಉಪಾಧ್ಯಾಯ ಕಾರ್ಯದರ್ಶಿ ಮೇಲಿ ಬರೆದ ಮಹಾಸಭೆಯು ಇದೇ ತಿಂಗಳ ತಾರೀಖು ೧೭ನೇ ಬೆಳಗ್ಗೆ ಘಂಟೆ ೮-೩೦ಕ್ಕೆ ಜರಗುವದಾಗಿ ತಿಳಿಸಿರುತ್ತಾರೆ. ಉಪ್ಪಂಗಡಿಯಲ್ಲಿ ಒಂದು ಯುನಿಯನ್ ಸ್ಥಾಪಿಸುವ ಬಗ್ಗೆ ರೈತರ ಯಾ ಭೂಮ್ಯಾಲಿಕರ ಸಭೆಯು ಸದ್ಯದಲ್ಲಿಯೇ ಜರಗುವದು. ಈ ಬಗ್ಗೆ ಸಾಹುಕಾರ ನರಸಿಂಗ್ ನಾಯ್ಕ ಅಧ್ಯಕ್ಷರಾಗಿಯೂ ಮತ್ತು ಬಿ. ವೆಂಕಪ್ಪ ರೈಗಳು ಕಾರ್ಯದರ್ಶಿಯಾಗಿಯೂ ಕೆಲಸ ನಡಿಸುವರೇ ಕೈಗೊಂಡಿರುತ್ತಾರೆ. ಮೆಂಬರು ಆಗಲಿಕ್ಕೆ ಅಪೇಕ್ಷಿಸುವವರು ವೆಂಕಪ್ಪ ರೈಗಳ ಬಳಿಗೆ ಹೋಗಿ ಮೆಂಬರಿಕೆಗೆ ಅರ್ಜಿಯನ್ನು ಕೊಡತಕ್ಕದ್ದು. ಮುಂಡಾಜೆ ಗ್ರಾಮದಲ್ಲಿ ಇದೇ ತಾರೀಕು ೧೪ನೇ ಸೋಮವಾರ ೧೦ ಗ್ರಾಮಸ್ಥರ ಒಂದು ಯುನಿಯನ್ ಮಹಾಸಭೆಯು ಕೆ. ಆರ್. ಕಾರಂತ ಎಮ್. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ ಜರಗಿತು ಮುಂಡಾಜೆಯಲ್ಲಿ ೧೦ ಗ್ರಾಮಸ್ಥರ ಒಂದು ಯುನಿಯನ್ ಸ್ಥಾಪಿಸಲಾಯಿತು. ಈ ಯುನಿಯನ್ ಸಭೆಯ ಪ್ರೊಸಿಡಿಂಗ್ಸುಗಳು ಹಿಂದಿನಿಂದ ಕೊಡಲ್ಪಡುವುವು.

ಸಂಪಾಜೆ:—

ನಮ್ಮ ಸಂಪಾಜೆ ಪ್ರಾಂತ್ಯಕ್ಕೊಂದು ಅಸ್ಪತ್ರೆಯು ಅಗತ್ಯವೆಂದು ಈ ಪ್ರಾಂತ್ಯದ ಬಡ ರೈತರಾದ ನಾವು ಹಲವು ವರುಷಗಳಿಂದ ಮೊರೆಯಿಡುತ್ತಿದ್ದೆವು. ನಮ್ಮ ಪುತ್ತೂರು ತಾಲೂಕು ಬೋರ್ಡಿನ ಮಾನ್ಯ ಪ್ರೆಸಿಡೆಂಟರಾದ ಮೊಳಹಳ್ಳಿ ಶಿವರಾಯರು ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರ ಸಹಾಯಪಡೆದುಕೊಂಡು ಒಂದು ಅಸ್ಪತ್ರೆಯನ್ನು ಬರುವ ಜೂನು ತಿಂಗಳ ತಾ. ೧೫ರ ಒಳಗೆ ತೆರೆಯುವುದಾಗಿ ಅಪ್ಪಣೆಕೊಟ್ಟಿರುವರು. ಅಸ್ಪತ್ರೆಯನ್ನು ಪ್ರಕೃತ ಕನ್ನಡ ಜಿಲ್ಲೆ ಸಂಪಾಜೆಯಲ್ಲಿರುವ ಪ್ರಯಾಣಿಕರ ಬಂಗ್ಲೆಯಲ್ಲಿ ತೆರೆಯುವುದೆಂತಲೂ, ಬಂಗ್ಲೆಯಲ್ಲಿ ಅಗತ್ಯವಿರುವ ರಿಪೇರಿಗಳನ್ನು ಶ್ರೀಯುತ ಕೀಲಾರು ರಾಮಚಂದ್ರಯ್ಯನವರು ತನ್ನ ಸ್ವಂತ ಖರ್ಚಿನಿಂದ ಮಾಡಿಸಿಕೊಡುವುದೆಂತಲೂ ನಿಶ್ಚಯವಾಗಿದೆ. ಡಾಕ್ಟರರಿಗೂ ಮತ್ತು ಕಂಪೌಂಡರರಿಗೂ ಉಳಕೊಳ್ಳುವುದಕ್ಕೆ ಮನೆಗಳನ್ನು ಕೊಡುವಂತೆ ಶ್ರೀಯುತ ರಾಮಚಂದ್ರಯ್ಯನವರೇ ಉದಾರ ಮನಸ್ಸಿನಿಂದ ಒಪ್ಪಿಕೊಂಡಿರುವರು.

ಸುರತ್ಕಲ್:— ಇಲ್ಲಿಯ ಪಂಚಾಯತು ಕೋರ್ಟು ಎಂಬುದು ದ್ರಾವಿಡ ಬ್ರಾಹ್ಮಣ ಕೋರ್ಟು ಎಂತ ಕರೆಯಲು ಯೋಗ್ಯವಾಗಿರುವುದಲ್ಲದೆ, ಇತರ ಕೋರ್ಟುಗಳಂತೆ ಪಂಚಾಯತ ಕೋರ್ಟು ಎಂತ ಮಾತ್ರ ಕರೆಯಲು ತಕ್ಕುದಾಗಿಲ್ಲ. ಹಳ್ಳಿಯ ಜನರಿಗೆ ಉಪಯೋಗವಾಗಬೇಕೆಂತ ದಯಾಳುಗಳಾದ ಗವರ್ನಮೆಂಟಿನವರು ಭಾವಿಸುವುದಾದರೆ ಮುಖ್ಯವಾಗಿರುವ ಎಲ್ಲಾ ಜಾತಿಯವರಿಂದಲೂ ಅವರವರ ಜಾತಿಯ ಪ್ರಮುಖ ಮತ್ತು ಯೋಗ್ಯರಾಗಿರುವವರಿಗೆ ಓಟು ಕೊಡಿಸಿ, ಪ್ರತಿಯೊಂದು ಜಾತಿಯಿಂದಲೂ ಒಬ್ಬೊಬ್ಬ ಮೆಂಬರರನ್ನು ಆರಿಸಲ್ಪಟ್ಟು ನಂತರ ಅವರವರೊಳಗೆ ಓಟು ಕೊಡಿಸಿ ಪ್ರೆಸಿಡೆಂಟರನ್ನು ಚುನಾಯಿಸಲ್ಪಡುವುದಂತಾದರೆ ಮಾತ್ರ ಈ ಪ್ರಾಂತ್ಯಕ್ಕೆ ಸರಕಾರದವರು ನ್ಯಾಯವನ್ನು ದಯಪಾಲಿಸಿದಾರೆಂತ ಎಣಿಸಲ್ಪಡಬಹುದಲ್ಲದೆ ಬಹುಕಾಲದಿಂದ ಇರುವವರನ್ನೇ ಅಧಿಕಾರದ ಮೇಲೆ ಇರಗೊಡಿಸಿ ಧಣಿ ಒಂದೇ ವರ್ಗದವರ ಒಗ್ಗಟ್ಟಿನಿಂದ ಸ್ವಾರ್ಥಕ್ಕೆ ಅಸ್ಪದವಾಗಿ ನಡಿಸಲ್ಪಡುವ ಈ ಕೋರ್ಟಿನಿಂದ ಊರಿನ ಬಡಜನರಿಗೆ ಹೆಚ್ಚಿನ ಸಂಕಷ್ಟಕ್ಕೆ ಕಾರಣವಲ್ಲದೆ ಹಿತವಾಗಲಾರದೆಂಬುದನ್ನು ಸಂಬಂಧ ಪಟ್ಟ ಅಧಿಕಾರಿಗಳು ಚಿತ್ತಕ್ಕೆ ತೆಗೆದುಕೊಂಡಾರೆಂತ ಹಾರೈಕೆ.

ವಿವಿಧ ಸಮಾಚಾರಗಳು.

ಸ್ಯಾಮನ್ ಬಹಿಷ್ಕಾರ.

ಸ್ಯಾಮನ್ ಕಮಿಶನಿನ ಮೆಂಬರರ ಹುಚ್ಚು ಪ್ರಯತ್ನದಿಂದಲೂ ತಡೆಗಟ್ಟಲ್ಪಡದೆ ಬಹಿಷ್ಕಾರವು ದಿನೇ ದಿನೇ ಬಲಗೊಳ್ಳುತ್ತಾ ಬರುತ್ತಿದೆ. ಇದು ವರೆಗೆ ಸ್ಯಾಮನ್ ಕಮಿಶನನ್ನು ಹೊಗಳಿ ಅವರ ಆಶ್ರಯವನ್ನು ಆಶಿಸಿಕೊಂಡಿದ್ದವರು ಕೂಡ ಮೆಲ್ಲನೆ ತಮ್ಮ ನಿರ್ಧಾರವನ್ನು ಬದಲಾಯಿಸುವರು. ಇನ್ನು ವಿದ್ಯಾಭ್ಯಾಸದ ಮಟ್ಟಿಗೆ ಕಮಿಶನಿನವರಿಗೆ ಸಹಾಯ ಮಾಡಲು ಮದರಾಸಿನಲ್ಲಿ ಎಜ್ಯುಕೇಶನಲ್ ಲೀಗುಗಳನ್ನು ಸ್ಥಾಪಿಸಲು ಪ್ರಯತ್ನವು ನಡೆಯುತ್ತದೆ. ಮುಂಬಾಯಿಯಲ್ಲಿ ಜೂನ್ ತಿಂಗಳ ಅಂತ್ಯದಲ್ಲಿ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು, ಲೋಕಲ್ ಬೋರ್ಡು, ಗ್ರಾಮಪಂಚಾಯತು ಇವುಗಳೆಲ್ಲ ಒಟ್ಟುಕೂಡಿ ಒಂದು ಪರಿಷತ್ತು ನಡೆಯುವುದು. ಆಗ ಮುಂಬಾಯಿಯು ಮದರಾಸಿನ ಹಾದಿಯನ್ನೇ ಅವಲಂಬಿಸುವದುತ್ತಮವು. ಸ್ಯಾಮನ್ ಕಮಿಶನಿನೊಂದಿಗೆ ಯಾವ ವಿಧದಲ್ಲಿಯೂ ಸಹಕರಿಸಲಾಗುವುದಿಲ್ಲವೆಂಬ ಒಂದೇ ಠರಾವನ್ನು ಈ ಪರಿಷತ್ತಿನಲ್ಲಿ ಅಂಗೀಕರಿಸಬೇಕು. ಅವರು ಹೀಗೆ ಮಾಡುವರೆಂದು ತುಂಬಾ ಧೈರ್ಯಪಡುವೆವು. ಸ್ಯಾಮನ್ ಕಮಿಶನಿನೊಂದಿಗೆ ಸಹಕರಿಸಬೇಕೆಂದು ಇದುವರೆಗೆ ನೆನಸಿಕೊಂಡಿದ್ದವರು ಇನ್ನಾದರೂ ಆ ಭಾವನೆಯನ್ನು ಬಿಟ್ಟು ಸರ್ವವಿಧದಿಂದಲೂ ಅವಕ್ಕೆ ಬಹಿಷ್ಕಾರವನ್ನು ಸಾರಿ ತಮ್ಮ ದೇಶಪ್ರೇಮವನ್ನು ವ್ಯಕ್ತಗೊಳಿಸಬೇಕು.

ಪಿತೃಹತ್ಯೆ.

ಪಾಲಘಾಟದಿಂದ ೬ ಮೈಲು ದೂರವಿರುವ ಮುಂಡೂರು ಎಂಬೊಂದು ಹಳ್ಳಿಯಲ್ಲಿ ಒಬ್ಬ ತಂದೆಯೂ ೫ ಜನ ಮಕ್ಕಳೂ ವಾಸಿಸಿಕೊಂಡಿದ್ದರು. ಇವರು ಧನಿಕರು ಮತ್ತು ಮಾನವಂತರಾಗಿದ್ದರು. ಇವರು ಸಮೀಪದ ವ್ಯವಸಾಯಕ ತೋಟದಲ್ಲಿ ಕೃಷಿ ಮಾಡುತ್ತ ಇದ್ದರು ೨೨ ವರುಷದ ಆತನ ಹಿರೇ ಮಗನೂ, ಅತನೂ ಒಬ್ಬ ಹುಡುಗಿಯ ಕೂಡೆ ಸ್ನೇಹವನ್ನು ಬೆಳೆಸಿದ್ದರು. ತಂದೆಯು ಗುಪ್ತಕಾರ್ಯವು ಮಗನಿಗೆ ತಿಳಿದಿದ್ದಿಲ್ಲ, ಮಗನ ಈ ರಹಸ್ಯವು ತಂದೆಗೆ ಗೊತ್ತಿರಲಿಲ್ಲ. ಹೀಗೆಯೇ ಆರು ತಿಂಗಳುಗಳು ಕಳೆದುಹೋದವು. ಒಂದು ದಿನ ಆ ಹುಡುಗಿಯ ಮನೆಯಲ್ಲಿ ತಂದೆಯೂ ಮಗನೂ ಒಟ್ಟಾದರು, ತಂದೆಯು ಸಿಟ್ಟುಗೊಂಡು ಇನ್ನು ಮುಂದಕ್ಕೆ ಅಲ್ಲಿ ಕಾಲಿಡಲಾಗದೆಂದೂ, ಹುಡುಗಿಯ ನೆನಪನ್ನು ಮರೆತು ಬಿಡಬೇಕೆಂದೂ ತಂದೆಯು ಮಗನಿಗೆ ಬುದ್ಧಿ ಹೇಳಿದನು. ಇದರಿಂದ ಮಗನಿಗೆ ತಂದೆಯ ಮೇಲೆ ಸಿಟ್ಟು ಉಂಟಾಗಿ ಬೆಳೆಯತೊಡಗಿತು. ಕಳೆದ ೭ನೇ ತಾರೀಕಿನ ದಿನ ತಂದೆಯು ಆ ಹುಡುಗಿಯ ಮನೆಯ ಜಗಲಿಯ ಮೇಲೆ ಸುಖವಾಗಿ ಮಲಗಿಕೊಂಡಿದ್ದನು. ಆಗ ಈ ಮಗನು ಅಲ್ಲಿಗೆ ಹೋಗಿ ಒಂದು ಗುಂಡಿನಿಂದ ತಂದೆಯನ್ನು ಹೊಡೆದುಬಿಟ್ಟನು. ತಂದೆಯು ತಕ್ಷಣವೇ ಸತ್ತುಹೋದನು. ತಂದೆಯನ್ನು ಹೊಡೆದಾದ ಮೇಲೆ ಮಗನು ಹುಡುಗಿಯ ಮನೆಯನ್ನು ಪ್ರವೇಶಿಸಿದನು. ಆದರೆ ಗುಂಡಿನ ಶಬ್ದವನ್ನು ಕೇಳಿ ಹುಡುಗಿಯು ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದಳು. ಅಷ್ಟರಲ್ಲಿ ಸಬ್ ಇನ್ಸ್‌ಪೆಕ್ಟರರು ಪೋಲೀಸ್ ದಳದೊಂದಿಗೆ ಆ ಸ್ಥಳಕ್ಕೆ ಬಂದರು. ಇದು ಮೊದಲೇ ಗೊತ್ತಾದ ಮಗನು ತನ್ನ ಹಳ್ಳಿಗೆ ಹೋಗಿ ಆತ್ಮಹತ್ಯವನ್ನು ಮಾಡಿಕೊಂಡನು.

ಹೊಸ ನಮೂನೆಯ ಚುನಾವಣೆಯ ಕ್ರಮಗಳು.

ಬರುವ ೨೦ನೇ ತಾರೀಕಿನ ದಿನ ಜರ್ಮನಿಯ ಬರ್ಲಿನಲ್ಲಿ ನಡೆಯಲಿರುವ ಚುನಾವಣೆಗೆ ಮತದಾರರನ್ನು ತಮ್ಮ ಕಡೆ ಸೇರಿಸಿಕೊಳ್ಳಲು ಉಮೇದುವಾರರು ಹೊಸ ಹಂಚಿಕೆಗಳನ್ನು ಕಂಡುಕೊಂಡಿರುವರು. ಸಾಬೂನುಗಳನ್ನು ಧರ್ಮಾರ್ಥವಾಗಿ ಹಂಚಿ ಅವುಗಳೊಂದಿಗೆ 'ಓಟನ್ನು ನಮಗೆ ಕೊಡಿರಿ' ಎಂದು ಅಂದವಾದ ಪ್ರಾಸದಿಂದ ರಚಿಸಲ್ಪಟ್ಟ ಪದಗಳುಳ್ಳ ಕಾಗದಗಳನ್ನು ಹಂಚಿ ಮತದಾರರನ್ನು ಒಲಿಸುವದು. ಇನ್ನು ಕಾರುಗಳಲ್ಲಿ ಕುಳಿತು ಗ್ರಾಮಫೋನ್ ಇಟ್ಟು ಒಳ್ಳೊಳ್ಳೆ ಪದಗಳನ್ನು ಹಾಡಿಸುವದು, ಸಿನೆಮಾ ಪ್ರದರ್ಶನಗಳನ್ನು ಮಾಡುವದು, ಮಾರ್ಕೆಟು ಸ್ಥಳಗಳಲ್ಲಿ ನಾಟ್ಯ ಮಾಡುವದು, ಇವೇ ಮೊದಲಾದ ಉಪಾಯಗಳಿಂದಲೂ ಜನರ ಮನಸ್ಸನ್ನು ಒಲಿಸಿಕೊಳ್ಳುವರು.

ಇನ್ನು ಮತದಾರರಿಗೆ ಟೆಲಿಫೋನ್ ಮುಖಾಂತರ ತಮಗೆ ಮತ ಕೊಡಲು ತಿಳಿಸುವದು, ತಮ್ಮಲ್ಲಿಗೆ ಫಲಾಹಾರಕ್ಕೆ ಬರಬೇಕೆಂದು ಆಮಂತ್ರಣ ಪತ್ರಿಕೆಗಳನ್ನು ಕಳುಹಿಸಿ ಅವರು ಬಂದ ಮೇಲೆ ತಮ್ಮವರನ್ನಾಗಿ ಮಾಡುವದು, ಇವೇ ಮೊದಲಾದ ನೂತನ ಪದ್ಧತಿಗಳು ಪ್ರಾರಂಭವಾಗಿರುವವು.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಪೇಕ್ಷೆಯಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ಳಂಗಡಿಗೆ ಮಧ್ಯಾಹ್ನ 1 ಗಂಟೆ [illegible] ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ [illegible] ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ [illegible] ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ [illegible] ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ [illegible] ಏರ್ಪಾಡಿಸಿರುತ್ತೆ.

ಮೋಟರಿನ ಬಸ್ಸುಗಳು [illegible] ವಿವರ.

(2) ಕಡೂರಿನಿಂದ [illegible] ಪ್ರಯಾಣಿಕರ ವಿಶ್ರಾಂತಿಗೆ [illegible] ಗಂಟೆ ಅವಕಾಶ ಕೊಟ್ಟು [illegible] ಮೂಡಿಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] ಬಸ್ಸಿನಲ್ಲಿ 12-30ಕೆ ಚಾರ್ಮಾಡಿಗೂ ಸೇರಿ, [illegible] 1-30ಕೂ ಬೆಳ್ಳಂಗಡಿಗೆ 1-45ಕ್ಕೆ [illegible] ಮಂಜೇಶ್ವರಂ, ಕಾಸರಗೋಡು, [illegible]

(3) [illegible] ಲಿಮಿಟೆಡ್ [illegible] ಸ್ಟೇಶನಿಗೂ [illegible]

ವಿಶೇಷ ಮಾಹಿತಿಗೆ [illegible]

ಪ್ರೊಪ್ರೈಟರ್.

ಫಾಟಿಯಲಿಯಾ ಕೂಡ ಪಿ. ಸಿ. ಕಂಪನಿಯವರ ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ [illegible]

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕಾದರೆ [illegible] ಉಡುಪಿಗೆ [illegible] ರಚಿತವಾದ, 37 ಫೀಟು ಉದ್ದವಾದ ಏಕಶಿಲೆಯ [illegible]

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಸಮಯದಲ್ಲಿ [illegible]

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible]

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅವಕ್ಕೆ ಅತ್ಯಂತ ಸಮೀಪವಾದ ಉಪ್ಪಿನಂಗಡಿಗೆ ಬೇಗನೆ ತಲ್ಪಬಹುದು.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲಿನ ಹಕ್ಕಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶಂಕರ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾ ಶಾಸ್ತ್ರೀಯ ವಿವರಣ

ಕಾಮ ಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಲ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢಕರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಸಂಗತಿಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಬಾರ್ಡೋಲಿಯ ಸತ್ಯಾಗ್ರಹ.

ಬರ್ಡೋಲಿಯಲ್ಲಿ ಜನರು ಸರಕಾರಕ್ಕೆ ವಿರೋಧವಾಗಿ ಸತ್ಯಾಗ್ರಹವನ್ನು ಹೂಡಿರುವ, ಸರ್ವರ ಮನಸ್ಸನ್ನು ಆ ಕಡೆಗೆ ಎಳೆಯುವಂತಹದಾಗಿದೆ. ಜನರಿಗೆ ಸರಕಾರದವರಿಂದ ಎಂತಹ ಕಠಿಣ ಶಿಕ್ಷೆಯೊದಗಿದರೂ ಕೂಡ ಅಲ್ಲಿನವರು ಹೆದರುವ ಹಾಗಿಲ್ಲ. ಕಂದಾಯವನ್ನು ಕೊಡುವುದೇ ಇಲ್ಲವೆಂದು ಅವರು ಖಂಡಿತವಾದ ನಿರ್ಧಾರವನ್ನು ಮಾಡಿರುವರು. ಪ್ರಜೆಗಳೊಡನೆ ಸಹಕರಿಸದ ಸರಕಾರಿ ಉದ್ಯೋಗಿಗಳು ಕೂಡ ಪ್ರಜೆಗಳಿಂದ ಯಾವ ಸಹಾಯವನ್ನೂ ಪಡೆಯಲಾರರು. ಸರಕಾರದವರು ಮಾಡುತ್ತಿರುವ ಜಪ್ತಿಗೆ ಕೂಡ ವಿರೋಧಿಸಬೇಕೆಂದು ಸ್ವಯಂಸೇವಕ ಧುರೀಣರು ಸಾರುತ್ತಿರುವರು. ಇದು ಸರಕಾರದಿಂದ ಅನ್ಯಾಯವೆಂದು ಭಾವಿಸಲ್ಪಟ್ಟು, ಇದಕ್ಕಾಗಿ ಶ್ರೀ ರವಿಶಂಕರ ಮತ್ತು ಚಿನ್ನೊ ಇವರ ಮೇಲೆ ಕಠಿಣ ಶಿಕ್ಷೆಯು ಹೊರಿಸಲ್ಪಟ್ಟಿರುವವು. ಇಡೀ ದೇಶವೇ ಬರ್ಡೋಲಿಯನ್ನೂ ಅದರ ಧುರೀಣರಾದ ವಲ್ಲಭಭಾಯಿ ಪಟೇಲರನ್ನೂ ಬಿಟ್ಟುಹಾಕಲಾರದೆಂಬುದನ್ನು ಸರಕಾರವು ತಿಳಿಯಬೇಕಾಗಿದೆ. ಈಗ ಇರುವ ಒಬ್ಬೊಬ್ಬ ಬರ್ಡೋಲಿ ಮನುಷ್ಯನ ಬದಲಾಗಿ ಸ್ವಲ್ಪ ಸಮಯದೊಳಗೆ ನೂರು ನೂರು ಜನರು ಉದ್ಭವಿಸುವರು. ಆದಕಾರಣ ಅನ್ಯಾಯದಿಂದ ಬರ್ಡೋಲಿ ರಾಜ್ಯವನ್ನು ಆಳುವುದೇ ಕಷ್ಟಕರವಾಗಿ ಪರಿಣಮಿಸುವದು

ಬಾಲ್ಯವಿವಾಹ ನಿಷೇಧ ಮಸೂದೆ.

ಕಳೆದ ಶನಿವಾರ ಈ ಮಸೂದೆಯನ್ನು ಸಮರ್ಥಿಸುವದಕ್ಕಾಗಿ ಮದರಾಸಿನಲ್ಲಿ ಯುವತಿಯರ ಒಂದು ಸಭೆ ಕೂಡಿತು. ಸಭೆಗೆ ಡಾ। ಮುತ್ತುಲಕ್ಷ್ಮಿ ಅಮ್ಮ ಮೊದಲಾದ ಹಲವು ಮಹಿಳೆಯರು ಬಂದಿದ್ದರು. ಮಾತನಾಡಿದವರು ಬಾಲ್ಯವಿವಾಹದಿಂದಾಗುವ ಕೆಡುಕುಗಳನ್ನು ಚೆನ್ನಾಗಿ ವಿವರಿಸಿ, ಆದಷ್ಟು ಬೇಗನೆ ಈ ಮಸೂದೆಯನ್ನು ಜ್ಯಾರಿಗೆ ತಂದು, ಬಾಲ್ಯವಿವಾಹವನ್ನು ಸಂಪೂರ್ಣ ನಿಲ್ಲಿಸಬೇಕೆಂದು ಹೇಳಿದರು. ಬಾಲ್ಯವಿವಾಹವನ್ನು ನಿಲ್ಲಿಸುವದರಿಂದ, ಬಾಲ್ಯ ಮರಣಗಳು ನಿಲ್ಲುವವು. ಬಾಲ್ಯವಿಧವೆಯರ ಸಂಖ್ಯೆಯು ಕಡಿಮೆಯಾಗುವದು. ಶಿಶುಮರಣಕ್ಕೆ ತಾಯಂದಿರೇ ಕಾರಣರು. ತಾಯಂದಿರಿಂದ ಅಂತಹ ಶಿಶು ಮರಣಗಳು ಸಂಭವಿಸದಂತೆ ಅವರಿಗೆ ವಿದ್ಯಾಭ್ಯಾಸವನ್ನು ಸುಲಭವಾಗಿ ಕೊಡಬೇಕು. ಸಮಾಜದ ಆರೋಗ್ಯದ ವಿಷಯದಲ್ಲಿ ಹೆಂಗಳೆಯರನ್ನು ತರಬೇತಿ ಮಾಡಲು ಬಹು ಕಷ್ಟವಿದೆ. ಆದರೂ ಅದನ್ನು ಪ್ರಯತ್ನಿಸಿ ಸಾಧಿಸಬೇಕು ಎಂದು ಮೊದಲಾಗಿ ಹಲವರು ಮಸೂದೆಯನ್ನು ಸಮರ್ಥಿಸಿ ಮಾತನಾಡಿದ ತರುವಾಯ ಸಭೆಯು ಕೊನೆಗೊಂಡಿತು.

ಆಂಧ್ರಾ ಎಲಿಮೆಂಟರಿ ಉಪಾಧ್ಯಾಯರ ಪರಿಷತ್ತು.

ಗುಂಟೂರಿನಲ್ಲಿ ನಡೆದ ಆಂಧ್ರಾ ದೇಶದ ಎಲಿಮೆಂಟರಿ ಉಪಾಧ್ಯಾಯರ ಪರಿಷತ್ತಿನಲ್ಲಿ ಈ ಕೆಳಗಿನ ಠರಾವುಗಳು ಮಂಜೂರಾತಿಯನ್ನು ಹೊಂದಿದವು. "ಸರಕಾರದವರು ಈ ಕೆಳಗಣವುಗಳಿಗೆ ತಮ್ಮ ಲಕ್ಷ್ಯವನ್ನು ಕೊಡಬೇಕು. ಒಂದೊಂದು ಜಿಲ್ಲೆಗೆ ಒಂದೊಂದೇ ಸ್ಕೂಲ್ ಕಮಿಟಿ ಇರತಕ್ಕದ್ದು. ಅದರಲ್ಲಿ ನೋಮಿನೇಟೆಡ್ ಮೆಂಬರರಿರಬಾರದು. ಈ ಕಮಿಟಿಗೆ ಮೆಂಬರರನ್ನು ಎಲಿಮೆಂಟರಿ ಉಪಾಧ್ಯಾಯರೇ ಆರಿಸಬೇಕು. ಇನ್ನು ಬೇರೆ ಬೇರೆ ಸಂಸ್ಥೆಗಳ ಪ್ರತಿನಿಧಿಗಳಿರಬಹುದು, ಪ್ರೆಸಿಡೆಂಟರನ್ನೂ ವೈಸ್ ಪ್ರೆಸಿಡೆಂಟರನ್ನೂ ಕಮಿಟಿ ಮೆಂಬರರು ತಮ್ಮೊಳಗನೇ ಆರಿಸತಕ್ಕದ್ದು. ಶಾಲೆಯನ್ನು ಮಂಜೂರು ಮಾಡುವುದಾಗಲಿ, ಮಂಜೂರು ಮಾಡದೆ ಇರುವುದಾಗಲಿ ಈ ಕಮಿಟಿಯ ಹಕ್ಕಿನೊಳಗಿರಬೇಕು. ಆದರೆ ಎಜ್ಯುಕೇಶನಲ್ ಡಿಪಾರ್ಟಮೆಂಟಿನಿಂದ ಇದಕ್ಕಾಗಿ ಸಮ್ಮತಿಯನ್ನು ಪಡೆಯಬೇಕು, ನಾಲ್ಕನೇ ತರಗತಿಯ ವರೆಗೆ ಹುಡುಗಿಯರಿಗೂ ಹುಡುಗರಿಗೂ ಬೇರೆ ಬೇರೆ ಎಲಿಮೆಂಟರಿ ಶಾಲೆಗಳ ಆವಶ್ಯಕತೆ ಇರುವುದಿಲ್ಲ, ಒಂದೊಂದು ಹಳ್ಳಿಗೆ ಒಂದೊಂದು ಎಲಿಮೆಂಟರಿ ಶಾಲೆಯು ಸಾಕಾಗುವದು, ಆದರೆ ಆ ಶಾಲೆಯನ್ನು ಸ್ಥಾಪಿಸಬೇಕಾದರೆ ಹಳ್ಳಿಯ ವಿಸ್ತಾರ, ಜನಸಂಖ್ಯೆ, ಇವುಗಳನ್ನೇ ಗಮನಿಸಬೇಕಲ್ಲದೆ ಜಾತಿಬೇಧ, ಮತಬೇಧ, ಮೊದಲಾದವುಗಳನ್ನು ಗಮನಿಸಬಾರದು.

ಇನ್ನು ಎಲಿಮೆಂಟರಿ ಉಪಾಧ್ಯಾಯರ ಸಂಬಳ, ರಜೆ, ಪ್ರಾವಿಡೆಂಟ್ ಫಂಡ್, ಮೊದಲಾದವುಗಳ ಕುರಿತು ಹಲವು ಠರಾವುಗಳಾದವು. ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಮಕ್ಕಳಿಗೆ ಮೇಲಿನ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿ ಕೊಡುವರೆ ಸರಕಾರದವರನ್ನು ಕೇಳಿಕೊಳ್ಳಬೇಕೆಂದಾಯಿತು. ಇವೆಲ್ಲವುಗಳನ್ನು ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದಕ್ಕೆ ತರುವಗೋಸ್ಕರವಾಗಿ ಐದು ಮೆಂಬರರ ಒಂದು ಸಬ್ ಕಮಿಟಿಯನ್ನು ನೇಮಿಸಲಾಯಿತು.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ತೌಳವ ದೇಶದಲ್ಲಿ ಸ್ಥಾಪಿಸಬೇಕಾದ ಸಾರ್ವಜನಿಕ ಪುಸ್ತಕ ಭಂಡಾರ.

(ರಾಷ್ಟ್ರಬಂಧುವಿಗೆ ಒಂದು ಪ್ರತ್ಯುತ್ತರ)

ಈ ಲೇಖನವನ್ನು ಬರೆದ ಮೂಲ ಉದ್ದೇಶವು ಕನ್ನಡ ಭಾಷೆಯನ್ನು ತೌಳವ ದೇಶದ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಒಂದು ಗ್ರಾಮದಲ್ಲಿಯೂ ಪ್ರಚಾರಕ್ಕೆ ತರಲು ಸುಲಭವಾಗುವಂತೆ ಪ್ರತಿ ಒಂದು ಗ್ರಾಮದಲ್ಲಿಯೂ ಒಂದೊಂದು ಪುಸ್ತಕ ಭಂಡಾರವನ್ನು ಸ್ಥಾಪಿಸಬೇಕೆಂಬುದೇ ಆಗಿರುತ್ತದೆ. ಈ ಲೇಖನಗಾರರು ಯಾರ ಮೇಲೆಯಾದರೂ ದ್ವೇಷಾಸೂಯೆಗಳನ್ನು ತೋರಿಸಲಿಕ್ಕೆ ಈ ಲೇಖನವನ್ನು ಬರೆಯಲಿಲ್ಲ. ಆ ಜಾತಿ ಉದ್ಧಾರ ಈ ಜಾತಿ ಉದ್ಧಾರ ಮುಂತಾದ್ದನ್ನು ವ್ಯಕ್ತಪಡಿಸಲಿಕ್ಕಾಗಿ ಬರೆದದ್ದು ಅಲ್ಲ.

ಪ್ರತಿ ಒಂದು ಗ್ರಾಮದಲ್ಲಿ ಪುಸ್ತಕ ಭಂಡಾರಗಳನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂಬ ಸೂಚನೆಗೆ ಯಾವ ಆಧಾರಗಳೂ ಬೇಡ. ಬಾಯಾರಿಕೆಯಾದವನು ಕುಡಿಯಲಿಕ್ಕೆ ನೀರು ಕೊಡಿರಿ ಎಂದು ಕೇಳಿದರೆ ಬಾಯಾರಿಕೆ ಆಗಿದೆ ಎಂಬುದಕ್ಕೆ ಆಧಾರ ಕೊಡಿ ಎಂದು ಹೇಳಿದರೆ ಪ್ರಯೋಜನವಿಲ್ಲ.

ಕರ್ನಾಟಕ ದೇಶವನ್ನು ರಚಿಸುವುದಕ್ಕೆ ಪುಸ್ತಕ ಭಂಡಾರದ ಲೇಖಕರು ಅಡ್ಡಬರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯು ಕನ್ನಡ ಭಾಷೆಯ ನೆಲೆವೀಡು ಎಂದು ಹೇಳಲು ಎಷ್ಟುಮಾತ್ರ ಸಾಧ್ಯವಿಲ್ಲ. ಕನ್ನಡ ಭಾಷೆಯನ್ನು ಕಲಿತ ಹಲವರು ಹಲವು ಪುಸ್ತಕಗಳನ್ನು ಬರೆದಿರಬಹುದು. ಆದರೆ ಶುದ್ಧ ಕನ್ನಡವನ್ನು ಮಾತೃಭಾಷೆಯಾಗಿ ಮಾತನಾಡುವ ಜಾತಿ ಮತದವರು ಈ ತೌಳವ ದೇಶದಲ್ಲಿ ಶೇಕಡಾ 10-20ರಷ್ಟು ಇರಬಹುದು. ದ್ರಾವಿಡ ಬ್ರಾಹ್ಮಣರು (ಅವರಲ್ಲಿ ಎಷ್ಟು ಬೇಧಗಳು ಇರಬಹುದು.) ಮಾತನಾಡುವ ಮಾತೃಭಾಷೆಯು ಕನ್ನಡ ಭಾಷೆಯಾಗಿ ಗಣಿಸಬಹುದೆಂದು ಎಣಿಸಲಾಗುವುದಿಲ್ಲ.

ಕನ್ನಡ ರಾಜರು ಈ ತುಳು ದೇಶವನ್ನು ಆಳುತ್ತಿದ್ದುದರಿಂದಲೇ ಈ ದೇಶದಲ್ಲಿ ಕನ್ನಡ ಭಾಷೆಯು ಪ್ರಚಾರಕ್ಕೆ ಬಂದದ್ದಾಗಿರುತ್ತದಲ್ಲದೆ ತೌಳವ ದೇಶವನ್ನು ಕರ್ನಾಟಕ ದೇಶವೆಂದು ಕರಿಯಲು ಸಾಧ್ಯವಿಲ್ಲ. ಈ ದೇಶಕ್ಕೆ ತೌಳವ ದೇಶವೆಂಬ ಹೆಸರು ಬಹಳ ಪುರಾತನ ಕಾಲದಿಂದಲೇ ಇತ್ತೆಂದು ಕೇರಳಮಹಾತ್ಮೆಯಿಂದಲೂ ಸಹ್ಯಾದ್ರಿಖಂಡದಿಂದಲೂ ಕಂಡುಬರುತ್ತದೆ. ಇದಕ್ಕೆ ಕರ್ನಾಟಕವೆಂಬ ಹೆಸರು ಕಾಣುವದಿಲ್ಲ.

ದ್ರಾವಿಡ ಭಾಷೆಗಳಲ್ಲಿಯೂ ತೆಲುಗು, ತಮಿಳು, ಕರ್ನಾಟಕ, ಮಲೆಯಾಳ, ತುಳು, ಕೊಡಗು ಎಂಬ ಭಾಷೆಗಳು ಅಡಕವಾಗಿವೆ ಎಂದು ಸರಿಯಾಗಿ ಕಾಣುತ್ತದೆ. ತುಳು ಭಾಷೆಯ ಗ್ರಂಥಗಳು ಇಲ್ಲದಿದ್ದರೂ ಈ ಭಾಷೆಯನ್ನು ಈ ತುಳು ದೇಶದವರು ಆಡುತ್ತಲಿದ್ದಾರೆ. ಈ ತುಳು ದೇಶವನ್ನು ೧೬ ಮಂದಿ ತುಳು ಜೈನ ರಾಜರು ಆಳಿಕೊಂಡಿದ್ದರು. ತೌಳವ ದೇಶವನ್ನು ಸತ್ಯಪುತ್ರರು ಆಳುತ್ತಿದ್ದರೆಂದು ಅಶೋಕನ ಕಾಲದ ಸಿದ್ಧಾಪುರದ ಶಾಸನದಿಂದ ಕಾಣುತ್ತದೆ. ಕದಂಬರು, ಚಾಲುಕ್ಯರು, ಹೊಯ್ಸಳ ಬಲ್ಲಾಳರು, ವಿಜಯನಗರ ಕೆಳದಿ ನಾಯಕರ ಕಾಲದಲ್ಲಿಯೂ ತೌಳವ ದೇಶವು ತೌಳವ ರಾಜರಿಂದ ಆಳಲ್ಪಟ್ಟು ಮೇಲಿನ ರಾಜರಿಗೆ ಕಪ್ಪಕೊಡಲ್ಪಡುತ್ತಿತ್ತು. ಪ್ರತಿ ಒಂದು ದೇಶದಲಿ, ಹುಟ್ಟಿದವರಿಗೂ ತಮ್ಮ ಮಾತೃಭೂಮಿಯ ಮೇಲೆ ಪ್ರೀತಿಯು ಇದ್ದೇಯಿದೆ. ನಮ್ಮ ಗ್ರಾಮವಾಸಿಗೆ ಆ ಸ್ವಾಭಿಮಾನ ಯಿಲ್ಲದಿದ್ದುದು ವಿಷಾದಕರವಾಗಿದೆ. ಕೊಡಗು ದೇಶವು ಪ್ರತ್ಯೇಕವಾಗಿ ಇಲ್ಲವೇ?

ಪುಸ್ತಕ ಭಂಡಾರದ ಲೇಖನದ ವಿಷಯು ಈಗಲೆ ಹಣ್ಣಾಗಿ ಚಿನ್ನದಂತೆ ಹೊಳೆಯುತ್ತಲಿದೆ. ಹಣೆಗೆ ಕಟ್ಟಲಿಕ್ಕೆ ಒಂದು ಚೈನ್ ಮತ್ತು ಒಂದು ಫೋಟ ಕಟ್ಟಿಸಿದರೆ ದಾರಿ ನಡೆಯುವಾಗ ದಾರಿಗಳಲ್ಲಿ ಗಂಟೆ ನೋಡಲಿಕ್ಕೆ ಸುಲಭವಾದೀತು. ಹೊಸ ಫೆಶನೂ ಆದಂತಾಯಿತು. ಬಳಿಗಳ ಬದಲಾಗಿ ದೇಶಸೇವೆಗಾಗಿ ಎರಡು ಚೈನುಗಳನ್ನು ಮೊದಲೇ ಕೊಡಿಸಿರುವರು.

ಆಂಧ್ರದೇಶ, ತಮಿಳು ದೇಶ, ಮಲೆಯಾಳ ದೇಶಗಳು ತುಳು ದೇಶಕ್ಕಿಂತ ಹೆಚ್ಚು ಮುಂದರಿಸಿಯವೆ ಎಂಬುವರಲ್ಲಿ ಸಂದೇಹವಿಲ್ಲ. ಈ ದೇಶಗಳಲ್ಲಿ ಬರೆಯಲ್ಪಟ್ಟ ಸಾವಿರಾರು ಗ್ರಂಥಗಳಿವೆ. ಅವರು ಕೈಗಾರಿಕೆಗಳಲ್ಲಿಯೂ ಬಹಳ ಮುಂದರಿಸಿರುವರು. ಆಂಧ್ರರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವರು. ತಮಿಳು ವಿಶ್ವವಿದ್ಯಾಲಯಕ್ಕೆ ತಯಾರಿಯು ನಡಿಯುತ್ತಲಿದೆ. ಕೇರಳಕ್ಕೂ ತಯಾರಾಗಿದೆ. ತುಳು ದೇಶವಲ್ಲಿ ಅನ್ಯದೇಶದ ಕ್ರೈಸ್ತ ಮಿಶನೇರಿಗಳು ಬಂದು ಸ್ಥಾಪಿಸಿದ ಕೊಲೇಜುಗಳೂ ಹೈಸ್ಕೂಲುಗಳೂ, ಎಲಿಮೆಂಟರಿ ಶಾಲೆಗಳೂ ಹಲವು ಇವೆ. ಅನ್ಯ ದೇಶದಿಂದ ಬಂದು ಇಲ್ಲಿ ನೆಲೆಸಿಂತ ಗೌಡ ಸಾರಸ್ವತರೂ, ಸಾರಸ್ವತರೂ ಸ್ಥಾಪಿಸಿದ ಹೈಸ್ಕೂಲುಗಳೂ ಎಲಿಮೆಂಟರಿ ಶಾಲೆಗಳೂ ಇವೆ. ಆದರೆ ಕರ್ನಾಟಕ ಉದ್ಧಾರಕರಾದ ಗ್ರಾಮ ವಾಸಿಗಳು ಸ್ಥಾಪಿಸಿದ ಸಂಸ್ಥೆಗಳೇನೂ ಕಂಡುಬರುವುದಿಲ್ಲ. ನಾಡವರ ಸಂಘದವರು ಸ್ಥಾಪಿಸಿದ ನವಯುಗ ಮತ್ತು ಕೆನರಾ ಛಾಪಖಾನೆ ಮಾತ್ರವೇ ತೌಳವ ದೇಶದವರು ಸ್ಥಾಪಿಸಿದ ಸಂಸ್ಥೆಯಾಗಿದೆ. ಪುಸ್ತಕಭಂಡಾರಗಳ ಲೇಖನವೂ ಪ್ರತ್ಯುತ್ತರವೂ ಕನ್ನಡದಲ್ಲಿಯೇ ಬರೆಯಲ್ಪಟ್ಟಿದೆ.

ಶುದ್ಧಿ ಚಳವಳ ಕ್ರೈಸ್ತ ಚಳವಳ, ಬ್ರಹ್ಮಸಮಾಜ ಚಳವಳ, ಆರ್ಯಸಮಾಜ ಚಳವಳ, ಬೌದ್ಧ ಚಳವಳ ಇವುಗಳಿಂದ ಕರ್ನಾಟಕ ರಾಜ್ಯ ಸ್ಥಾಪನೆಗೆ ಅಡ್ಡಿಯಾಗಲಿಕ್ಕಿಲ್ಲ. ಕರ್ನಾಟಕ ಪ್ರಾಂತ್ಯರಚನೆಯಾದರೂ ತೌಳವದೇಶವನ್ನು ಕರ್ನಾಟಕದ ವಿಭಾಗವಾಗಿ ಮಾಡಿದರೂ ತುಳು ಭಾಷೆಯನ್ನಾಡುವವನ್ನು ಬಲಾತ್ಕಾರದಿಂದ ಮಾತನಾಡದಂತೆ ಮಾಡಲು ಸಾಧ್ಯವಿಲ್ಲ. ಇಡೀ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯ ವಿರಬೇಕೆಂಬ ಕಾನೂನು ಇಲ್ಲ. ಮೈಸೂರು ವಿಶ್ವವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯವಲ್ಲವೇ? ಇನ್ನೊಂದು ವಿಶ್ವವಿದ್ಯಾಲಯದ ಅಗತ್ಯವಿದೆಯೇ? ಅದು ಅಗತ್ಯವಿದ್ದರೆ ತೌಳವ ವಿಶ್ವವಿದ್ಯಾಲಯದ ಅಗತ್ಯವು ಇದೆ. ತಮಿಳು ವಿಶ್ವವಿದ್ಯಾಲಯಕ್ಕೆ ತಯಾರಿಯಾದರೂ ಚಿದಂಬರಮಿನಲ್ಲಿ ಒಂದು ಮಧುರೆಯಲ್ಲಿ ಒಂದು ಹೀಗೆ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಿಕ್ಕೆ ದ್ರವ್ಯಸಹಾಯಮಾಡಲಿಲ್ಲವೇ? ಹಣವಿದ್ದರೆ ಎಷ್ಟೋ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬಹುದು. ಈಗಿರುವ ಕೆನರಾ ಹೈಸ್ಕೂಲನ್ನು ಕ್ರಮೇಣ ಕೊಂಕಣಿ ವಿಶ್ವವಿದ್ಯಾಲಯವಾಗಿ ಮಾಡಿದರೆ ತೌಳವ ದೇಶಕ್ಕೆ ಕೀರ್ತಿ ಬಂದಂತಾಗುವುದು. ಇದರಿಂದ ಗ್ರಾಮವಾಸಿಗೆ ಏನೊಂದೂ ನಷ್ಟವಿಲ್ಲ.

ಕನ್ನಡ ಭಾಷೆಯು ಎಲ್ಲಾ ಹಳ್ಳಿಗಳಲ್ಲಿಯೂ ಪ್ರಚಾರದಲ್ಲಿ ಇಲ್ಲದೆ ಇರುವುದರಿಂದಲೇ ಪ್ರತಿ ಒಂದು ಗ್ರಾಮದಲ್ಲಿಯೂ ಪುಸ್ತಕಭಂಡಾರಗಳನ್ನು ವಾಚನಾಲಯಗಳನ್ನು ಸ್ಥಾಪಿಸಬೇಕೆಂದು ಈ ಲೇಖನವನ್ನು ಬರೆದದ್ದಾಗಿರುತ್ತದೆ. ಪುಸ್ತಕ ಭಂಡಾರಗಳ ಸ್ಥಾಪನೆಯಿಂದ ಕರ್ನಾಟಕ ದೇಶಸ್ಥಾಪನೆಗೆ ಸಹಕಾರವಾದೀತಲ್ಲದೆ, ಅಡ್ಡಿಯಾಗಲಿಕ್ಕಿಲ್ಲ. ಕನ್ನಡ ಭಾಷಾಭಿವೃದ್ಧಿಗೂ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ಚತುರ್ಥ ಕರ್ನಾಟಕಾಯುರ್ವೇದ ಸಮ್ಮೇಲನಾವಸರ.

ತಾ. ೧೧-೫-೨೮ರ ಸ್ವದೇಶಾಭಿಮಾನಿಯಲ್ಲಿ ವೈದ್ಯವಿದ್ವಾನ್ ಡಿ. ಯಚ್. ಎಂ. ಪಂಡಿತ್ A. M. S. ಚಿತ್ರದುರ್ಗ ಇವರು ಈ ಸಮ್ಮೇಲನದ ಅಧ್ಯಕ್ಷರ ಕುರಿತು ಆಕ್ಷೇಪವೆತ್ತಿ ಬರೆದ ಲೇಖನವು ಅಕ್ಷರಶಃ ನಿಜವಾಗಿರುತ್ತದೆ. ಈಗ ಚುನಾವಣೆ ಹೊಂದಿರುವ ಅಧ್ಯಕ್ಷರು ಯಾರೋ ಒಬ್ಬಿಬ್ಬರ ಸಮರ್ಥನೆಯ ಮತ್ತು ಔತ್ತರೇಯರೇ ಆಗಿರಬೇಕು. ದಾಕ್ಷಿಣಾತ್ಯರಿಗೆ ಸ್ವಲ್ಪವೂ ಸಾಲದೆಂಬವರ ಮತವಾಗಿರಬಹುದೆಂತ ನಾನು ತಿಳಕೊಳ್ಳುತ್ತೇನೆ. ಕರ್ನಾಟಕದ ಪರಿಷತ್ತಿಗೆ ಕನ್ನಡಬಲ್ಲ ವೈದ್ಯ ವಿದ್ಯಾಪಾರಂಗತರನ್ನೇ ಆರಿಸಬೇಕಲ್ಲದೆ ಕಳೆದ ಸಭೆಗಳಲ್ಲಿ ನಡೆದ ಅಧ್ಯಕ್ಷರ ಭಾಷಣಗಳಂತೆ ತರ್ಜುಮೆಯ ಅಗತ್ಯವೇಳದೆ ಸಭಾಭಾಗಿಗಳಾದ ಸರ್ವರಿಗೂ ಸಮಾನತೆಯುಳ್ಳದ್ದಾಗಿರಬೇಕು. ಮತ್ತು ಅಧ್ಯಕ್ಷರ ಚುನಾವಣೆಯು ಸರ್ವಸಮ್ಮತದಿಂದ ಸಭೆಯಲ್ಲಿಯೇ ನಡೆದು ತೀರ್ಮಾನವಾಗಬೇಕಲ್ಲದೆ ಆಯುರ್ವೇದ ಸಮ್ಮೇಲನವು ಒಬ್ಬಿಬ್ಬರ ಕೈಗೊಂಬೆಯೂ ಜೋಳಿಗೆಯ ಭಂಡಾರವೂ ಆಗಿರಬಾರದು. ಈಗಿನ ವರ್ತನೆಯಿಂದ ಜನರಿಗೆ ಇದರಲ್ಲಿ ನಂಬಿಕೆಯು ದಿನೇ ದಿನೇ ಕುಂದುತ್ತಾ ಬರುತ್ತದೆ. ಹೆಸರಿಗೇನೂ ಮಂಗಳೂರಲ್ಲಿ ಕಡಿಮೆಯಿಲ್ಲ. ಹೆಸರುಳಿಸಲು ಕಡಿಮೆ ಸಂಖ್ಯೆಯವರ ಪ್ರಯತ್ನಗಳೇ ಈಗ ಸಾಕ್ಷಾತ್ತಾಗಿ ಕಂಡುಬರುತ್ತವೆ. ಕಾರಣ ಅಧ್ಯಕ್ಷರ ಚುನಾವಣೆ ಮೊದಲ್ಗೊಂಡು ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಾರ್ವಜನಿಕ ಕಾರ್ಯಗಳೂ ಸಭೆಯ ಮುಂದೆ ಪ್ರತ್ಯಕ್ಷವಾಗಿಯೇ ನಿರ್ವಹಿಸತಕ್ಕದ್ದಾಗಿರುವುದರಿಂದ ಏಕಪಕ್ಷವಾಗಿ ಜನತೆಯ ಮುಖಭಂಗವೆಂಬಂತೆ ಚುನಾಯಿಸುವ ಪದ್ಧತಿಗೆ ಅಭಿಮಾನಶಾಲಿಗಳಾದ ಕನ್ನಡಿಗರ್ಯಾರೂ ಮತವನ್ನು ಕೊಡಲಾರರೆಂದು ನನ್ನ ನಂಬಿಕೆ.

ಕವಿಭೂಷಣ ಕೆ. ಪಿ. ವಿ. ಶೆಟ್ಟಿ.

೧೪-೫-೨೮ನೇ "ರಾಷ್ಟ್ರಬಂಧು"ವಿನ ಪಾನು ೧೧ರಲ್ಲಿ ಆಯುರ್ವೇದಾಭಿಮಾನಿ ಎಂಬ ಹೆಸರಿನಿಂದ ಬರೆದಿರುವ ಲೇಖನವನ್ನು ನೋಡಿದರೆ ಇದರಲ್ಲಿರುವ ತಲೆತಿರುಕ ವಾಚಕಗಳು ಕಂಡುಬರುವವು. ಕರ್ನಾಟಕ ಆಯುರ್ವೇದ ಮಹಾಮಂಡಲದ ವಿದ್ಯಾಪೀಠದ ಪರೀಕ್ಷೆಯನ್ನು ನಿಲ್ಲಿಸಬೇಕೆಂದು ಹಿಂದೊಮ್ಮೆ ಹೋರಾಡಿದ ವೈದ್ಯರೊಬ್ಬರ ಲೇಖನವು ಇದಕ್ಕೆ ಪ್ರತಿಯಾಗಿ ಬರೆದ ಪತ್ರವ್ಯವಹಾರಗಳೂ, ನವಯುಗ ಪತ್ರಿಕೆಯಲ್ಲಿಯೂ, ಕಂಠೀರವ ಪತ್ರಿಕೆಯಲ್ಲಿಯೂ ಚರ್ಚಿಸಲ್ಪಟ್ಟ ವಿಷಯವು ಅದನ್ನು ಓದಿದವರಿಗೆ ಮರೆತುಹೋಗಿರಲಿಕ್ಕಿಲ್ಲ. ಈ ವೈದ್ಯವಿದ್ವಾನ್ ಪರೀಕ್ಷೆಯು ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ, ಸರಕಾರಿ ಪರೀಕ್ಷೆಗಳಂತೆಯೇ ಮಾನ್ಯ ವಿದ್ಯಾವಂತರ ಹಾಗೂ ಸದ್ಗೃಹಸ್ಥರ ಸಮಕ್ಷಮದಿಂದಲೇ ವಿದ್ಯಾಪೀಠದವರಿಂದ ನಡೆಸಲ್ಪಟ್ಟಿರುತ್ತದೆ. ಇದರ ಪ್ರಶ್ನಾ ಪತ್ರಿಕೆಗಳನ್ನು ಬೆಂಗಳೂರು, ಬೆಳಗಾಂವ್, ಮುಂತಾದ ಪ್ರಾಂತ್ಯಗಳಿಂದ ನಿಯೋಜಕರಾದ ವೈದ್ಯ ವಿದ್ಯಾವಂತರೇ ಕಳುಹಿಸಿಕೊಟ್ಟಿರುವರು. ಮತ್ತು ಅವುಗಳನ್ನು ಪ್ರಶ್ನಾಪತ್ರಿಕೆಗಳ ನಿಯಾಮಕದ ಕ್ರಮದಿಂದಲೇ ಅವಧಿಯಲ್ಲಿಯೇ ಉಮೇದ್ವಾರರಿಂದ ಪಡಕೊಂಡು ರಿಜಿಸ್ಟ್ರಿಮಾಡಿ ಅದನ್ನು ನೋಡತಕ್ಕ ಅಧಿಕಾರಿಗಳಿಗೆ ಟಪ್ಪಾಲುದ್ವಾರ ಇಲ್ಲಿಂದ ಕಳುಹಿಸಿಕೊಟ್ಟಿರುತ್ತಾರೆ. ಇದರಲ್ಲಿ ಯಾರ್ಯಾರು ಉತ್ತೀರ್ಣರಾಗಿದ್ದಾರೆಂಬುದು ಈ ತನಕ ಗೊತ್ತಾಗಲಿಲ್ಲ. ಆಯುರ್ವೇದಾಭಿಮಾನಿಗಳು ಹೇಳುವಂತೆ ಇಲ್ಲಿ ೬ ಜನರು ಸೇರಿದ ಒಂದು ಕಮಿಟಿಯೂ, ಮೀಟಿಂಗೂ ಸ್ಥಾಪಿತವಾದದ್ದು 'ಆಯುರ್ವೇದಾಭಿಮಾನಿ'ಗಳಿಗೆ ಒಬ್ಬರಿಗಲ್ಲದೆ ಬೇರೆಯಾರಿಗೂ ಈ ತನಕ ಗೊತ್ತಿರುವುದಿಲ್ಲ. ಮತ್ತು ರೂ. ೧೦/- ಕಾಣಿಕೆಯೂ ಟೀಪಾರ್ಟಿಯೂ ಈ ಸರ್ಟಿಫಿಕೇಟುಗಳನ್ನು ಕೊಡುವ ಕಮಿಟಿಗೆ ಕೊಟ್ಟರೆ ಯಾವ ಇಲಾಖೆಯ ಡಿಗ್ರಿಗಳೂ, ಮೆಡಲುಗಳೂ ಕೊಡಲಾಗುವದೆಂಬ ಲೇಖಕರ ಮಾತನ್ನು ನೋಡಿದರೆ ಇದು ವಿಕಲತೆಯ ಅಥವಾ ಸ್ಪೃಹೆಯ ಪರಿಣಾಮವಲ್ಲದೆ, ಇಂಥಾ ಸುಳ್ಳು ಲೇಖನಗಳನ್ನು ಸಾರ್ವಜನಿಕ ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕೆ ಇವರು ನಾಚಿಕೆಯನ್ನು ಯಾಕೆ ಪಡುವುದಿಲ್ಲವೆಂಬುದೇ ವಿಷಾದಕರವಾದ ಸಂಗತಿಯಾಗಿದೆ. ಲೇಖಕರು ಹೇಳುವ ರೀತಿಯು ಒಂದು ಕಂಪನಿಯು ಕಲ್ಕತ್ತದಲ್ಲಿ ಇತ್ತು. ಆದರೆ ಈಗ ಅದು ಸಹ ದಿವಾಳಿಯಾಗಿರುತ್ತದೆ. ಇಲ್ಲವಾದರೆ ಲೇಖಕರಿಗಾದರೂ ಒಂದು ಡಿಗ್ರಿಯನ್ನು ದೊರಕಿಸಿಕೊಳ್ಳಬಹುದಾಗಿತ್ತು. ಇವರ ಲೇಖನದ ಸಂಗತಿಯು ನಿಜವಾಗಿದ್ದರೆ, ಆ ಕಮಿಟಿಯು ಎಲ್ಲಿ? ಅದರ ಮೆಂಬರರು ಯಾರು? ಕಾಣಿಕೆ ಟೀಪಾರ್ಟಿಗಳನ್ನು ಕೊಟ್ಟವರು ಯಾರು? ಯಾರಿಗೆ ಈ ರೀತಿ ಡಿಗ್ರಿಯು ಕೊಡಲ್ಪಟ್ಟಿದೆ? ಎಂಬುದನ್ನು ವಿವರಿಸುತ್ತಿದ್ದರೆ ಲೇಖಕರು ಧನ್ಯರಾಗುತ್ತಿದ್ದರು. ಅಲ್ಲದೆ ಲೇಖನಕ್ಕೆ ಕಿಂಚಿತ್ ಮರಿಯಾದೆಯೂ ದೊರೆಯುತ್ತಿತ್ತು. ಹಾಗಲ್ಲದೆ ವೃಥಾ ಅಲರ್ಕಗಳಂತೆ ಗಲಭೆ ಹೊಡಿಯುವುದರಿಂದ ಪ್ರಯೋಜನವೇನು? ಇಲ್ಲಿ ನಡೆದ ಪರೀಕ್ಷೆಯ ಮೇಲ್ವಿಚಾರವನ್ನು ಶ್ರೀಯುತರುಗಳಾದ ಉಳ್ಳಾಲ ಮಂಗೇಶ ರಾವ್, ಪಿ. ರಾಮಕೃಷ್ಣಯ್ಯ, ಡಾಕ್ಟರ್ ಕೆ. ಆರ್. ಕಿಣಿ, ಎನ್. ಎಮ್. ಸೆಟ್ಟಿ, ಜೆ. ಕೆ. ಪದ್ಮನಾಭ ಶರ್ಮ ಕೆ. ಪಿ. ವೆಂಕಪ್ಪ ಸೆಟ್ಟಿ, ಎಮ್. ವಿ. ಶಾಸ್ತ್ರಿ, ಯಂ. ಕೆ. ವೈದ್ಯರ್ ಗೋವಿಂದ ಶರ್ಮ ಇವರ ನೇತೃತ್ವದಿಂದಲೂ ಮೇಲ್ವಿಚಾರಣೆಯಿಂದಲೂ ಪ್ರತ್ಯಕ್ಷ ಪರೀಕ್ಷೆಯಿಂದಲೂ ನಡೆದಿದೆ. ಟೀಪಾರ್ಟಿಯನ್ನೂ ೧೦ರೂಪಾಯಿ ಕಾಣಿಕೆಯನ್ನೂ ಪಡಕೊಂಡು ಯಾವ ಇಲಾಖೆಯ ಡಿಗ್ರಿಗಳನ್ನು ಕೊಡುವ ಕಮಿಟಿಯೂ, ಮೀಟಿಂಗೂ ಇವರದೇ ಆಗಿರಬಹುದೇ? ಈ ಕಮಿಟಿಯಲ್ಲಿ ವೈದ್ಯಮಹಾಶಯರೊಬ್ಬರು ಇಲ್ಲದಿರುವುದರಿಂದ ಇದು ಹೀಗಾಗಿರಬಹುದೇ? ಲೇಖಕರ ಅಭಿಪ್ರಾಯದಂತೆ ಡಿಗ್ರಿಯು ಅಗತ್ಯವಿಲ್ಲವೆಂತಾದರೆ, ನಿ. ಭಾ. ಆ. ಮಹಾಮಂಡಲದಲ್ಲಿ ಭಿಷಕ್, ವಿಶಾರದ, ಆಚಾರ್ಯ ಈ ಡಿಗ್ರಿಗಳುಳ್ಳ ಪರೀಕ್ಷೆಗಳನ್ನು ಏರ್ಪಡಿಸಿದ್ದೇಕೆ? ಈ ಲೇಖಕರಷ್ಟು ಪ್ರಜ್ಞಾಶಾಲಿಗಳು ಆ ಮಂಡಲದಲ್ಲಿ ಇರಲಿಲ್ಲವೇ? ಬರೇ ಒಂದು ತಿಂಗಳ ಅಭ್ಯಾಸದಿಂದ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು, ಈ ಪರೀಕ್ಷೆಯ ಗೌರವವನ್ನೂ ಯೋಗ್ಯತೆಯನ್ನೂ ಸ್ಪಷ್ಟಪಡಿಸುತ್ತಿದೆ. ಎಂಬ ಲೇಖಕರ ಅಂಬೋಣಕ್ಕೆ ಬೆಲೆ ಏನು? ಹಾಗೆ ಅಭ್ಯಾಸವನ್ನು ಮಾಡಿದವರೂ, ಉತ್ತೀರ್ಣರಾದವರೂ ಡಿಗ್ರಿಯನ್ನು ಪಡೆದವರೂ ಯಾರು? ಅವರ ಹೆಸರನ್ನೊಮ್ಮೆ ಲೇಖಕರು ಹೇಳಬಲ್ಲರೇ? ಪರೀಕ್ಷೆಯಾಗದೆ ೪-೬ ವರುಷ ಶಾಸ್ತ್ರೀಯ ವೈದ್ಯವನ್ನು ಅಭ್ಯಾಸಮಾಡಿದವರ ಮುಂದೆ ಇಂಥಾ ಡಿಗ್ರಿಗಳುಳ್ಳ ವೈದ್ಯರು ನಿಂದೆಗೂ, ತಿರಸ್ಕಾರಕ್ಕೂ ಕಾರಣರಾಗಿರುತ್ತಾರೆ. ಅವರ ವ್ಯತ್ಯಾಸವು ತಾರತಮ್ಯವು ತಿಳಿಯದೆ ಜನರು ಸಂಕಷ್ಟಕ್ಕೆ ಗುರಿಯಾಗುವರು ಎಂಬ ಲೇಖನದ ಅರ್ಥದಿಂದ ಸಂಕಷ್ಟಕ್ಕೆ ಒಳಗಾಗುವದು, ಅಂದರೇನು? ಇಂಜೆಕ್ಷನ್ ಕೊಟ್ಟೋ? ಅಥವಾ ಪಾಶ್ಚಾತ್ಯವೈದ್ಯರ ನಡುವೆ ಕಾಲಸಾದಿ ಚೂರ್ಣವೂ, ಆಯುರ್ವೇದ ವೈದ್ಯರ ನಡುವೆ ಕ್ವೀನಿನ್‌ಮಿಶ್ರಣವೂ ಉಪಯೋಗಿಸಿ ಪಕ್ಷಿಗಳ ಮುಂದೆ ಮೃಗವು ಮೃಗಗಳ ಮುಂದೆ ಪಕ್ಷಿಯೂ ಆಗುವ ಬಾವಲಿಯ ನಾಣ್ಣುಡಿಯನ್ನು ಅನುಸರಿಸುವುದರಿಂದ ಗೊತ್ತಾಗಲಾರದು. ಸ್ವತಂತ್ರ ಉಮೇದ್ವಾರನಾಗಿ ಪ್ರಶ್ನಾ ಪತ್ರಿಕೆಗೂ ಪ್ರತ್ಯಕ್ಷ ಪರೀಕ್ಷೆಗೂ ಸರಿಯಾದ ಉತ್ತರವನ್ನು ಕೊಟ್ಟು ಉತ್ತೀರ್ಣನಾದ ವಿದ್ಯಾರ್ಥಿಯು, ದಿನ, ವಾರ, ಪಕ್ಷ, ಮಾಸ, ಋತು, ಅಯನ, ಸಂವತ್ಸರಗಳು ಕಲಿಯಬೇಕೆಂದು ಅಥವಾ ೪—೫ ವರ್ಷ ಕಲಿತು ಉತ್ತೀರ್ಣನಾಗಲೇ ಬೇಕೆಂದೂ ಎಲ್ಲಾದರೂ ನಿಯಮವಿದೆಯೇ? ಇದ್ದರೆ, ಲೇಖಕರು ಅದನ್ನೊಮ್ಮೆ ತೋರಿಸಿಕೊಡುವರೇ? ವೃಥಾ "ತಾನು ಕಳ್ಳನಾದರೆ ಪರರನಂಬ" ಎಂಬ ಗಾದೆಯಂತೆ ಬರೆಯುವ ಲೇಖಕರಿಗೆ ಯಾವ ಬೆಲೆಯೂ ದೊರೆಯಲಾರದು. ಲೇಖಕರ ಲೇಖನದ ಯೋಗ್ಯತೆಯು ಇರುವಂತೆಯೇ ಅವರ ಹೆಸರಿನ ಯೋಗ್ಯತೆಯು ಇರಬಹುದೆಂತ ನಂಬಬೇಕಾಗಿಯದೆ. ಇವರೊಮ್ಮೆ ತಮ್ಮ ಹೆಸರನ್ನಾದರೂ ಕೊಟ್ಟು ತನ್ನ ಲೇಖನದ ಉದ್ದೇಶ್ಯವನ್ನು ಸಾಕ್ಷಾತ್ತಾಗಿ ರುಜುಪಡಿಸುತ್ತಿದ್ದರೆ ಸಾರ್ವಜನಿಕವಾದ ಈ ಸಂಸ್ಥೆಗೆ ತುಂಬಾ ಉಪಕಾರವನ್ನು ಮಾಡಿದಂತಾಗುತ್ತಿತ್ತು. ಇಲ್ಲವಾದರೆ ಸಿಂಗಾರವೇಶಕ್ಕೆ ಮಂಗಳಾರತಿಯಿಲ್ಲವೇ?

ಇತಿ

ಡೋಂಗಿ ಕುಠಾರಿ.

ಜಾಹಿರಾತು

ಅತೀ ಮಹತ್ವದ ಸೋಡ್ತಿ.

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್

ಇವುಗಳ ಸಹಾಯಾರ್ಥವಾಗಿ

[illegible] ಸೋಡ್ತಿಯಿಂದ [illegible] ಸಾಲದೆ ಹೋದ್ದ [illegible] ಕೌನ್ಸಿಲ್ ಮೆಂಬರರು [illegible] ತೆಗೆಯುವರೇ [illegible] ಸದ್ಗ್ರಹಸ್ತರಿಂದ [illegible]

[illegible] ಧನವನ್ನು [illegible] ಇಕ್ಕಟ್ಟಾಗಿರುವ [illegible] ತೆಗೆದಿಟ್ಟು [illegible] ಬಹು [illegible]

[illegible] 5,000; [illegible] 6; [illegible] 100; [illegible]

ಮೂರನೆಯ ಕರ್ನಾಟಕ ಏಕೀಕರಣ ಪರಿಷತ್ತು [illegible]

[illegible] ಬಳ್ಳಾರಿಯಲ್ಲಿ [illegible] ಬೆಳಗಾವಿ [illegible]

ಈ ಪರಿಷತ್ತಿನ ವ್ಯವಸ್ಥೆಯನ್ನು ಮಾಡುವದಕ್ಕೆ [illegible] ಮಂಡಲವು ನೇಮಿಸಲ್ಪಟ್ಟಿದೆ. [illegible] ಕರ್ನಾಟಕ ಏಕೀಕರಣವನ್ನು [illegible] ಸ್ವಾಗತ ಮಂಡಲದ ಸಭಾಸದರಾಗುವರು. ಧಾರವಾಡ [illegible] ಏಕೀಕರಣದ ಭಕ್ತರೆಲ್ಲರು ವಿಳಂಬ ಮಾಡದೆ ಸಭಾಸದರಾಗಬೇಕೆಂದು ನಮ್ಮ ಬಿನ್ನಹವಿದೆ. ಬುಧವಾರ (೧೬-೫-೨೮) ಸಾಯಂಕಾಲಕ್ಕೆ ೬ ಗಂಟೆಗೆ ಸ್ವಾಗತ ಮಂಡಲದ ಮೊದಲನೆಯ ಸಭೆಯು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸೇರುವದು. ಆಗ ಸ್ವಾಗತಾಧ್ಯಕ್ಷರೂ, ಕಾರ್ಯನಿರ್ವಾಹಕರೂ, ಅನ್ಯ ಅಧಿಕಾರಿಗಳೂ ಆರಿಸಲ್ಪಡುವರು.

ಮದ್ರಾಸ ಸರಕಾರದ ನಿವೃತ್ತಪ್ರಧಾನರಾದ ಬಳ್ಳಾರಿಯ ಶ್ರೀ. ರಂಗನಾಥ ಮುದಲಿಯಾರರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಬೇಕಾಗಿ [illegible] ನಡೆದದೆ. ಎಲ್ಲಾ ಸದ್ಗೃಹಸ್ಥರೂ ಪರಿಷತ್ತಿಗೆ ಬಂದು ಏಕೀಕರಣ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ನಮ್ಮ ಬೇಡಿಕೆಯು.

ಧಾರವಾಡ
ತಾ. ೧೧-೫-೧೯೨೮

ರಂಗನಾಥ ದಿವಾಕರ
ಶಿವಮೂರ್ತಿ ಸ್ವಾಮಿ ಹಿರೇಮಠ
ಶಾಂತೇಶ ಕಮಲಾಪೂರ
ಸೀ. ಕೆ. ಒಡೇರ

[illegible] ವಿದ್ಯಾಭ್ಯಾಸ.

[illegible]

ಮುಂಬಾಯಿ ಕರ್ನಾಟಕ ಆರ್ಯಸಮಾಜದ ಚಳವಳಿ.

ತಾ. ೨೫-೪-'೨೮ರಲ್ಲಿ ಮುಂಬಾಯಿ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಹರಿಪ್ರಸಾದ ಕಳ್ಳಾಡರವರ ಸಹೋದರರವರ ಪುತ್ರ ಬಾಲ ಬ್ರಹ್ಮಚಾರಿ ರಾಮಚಂದ್ರನ ಉಪನಯನ ಸಂಸ್ಕಾರವು ವೈದಿಕ ರೀತಿಯಲ್ಲಿ ಶ್ರೀ ಸ್ವಾಮಿ ಪರಮಾನಂದಜೀ ಶ್ರೀ ವಿಜಯಶಂಕರಜೀ ಶ್ರೀ ಸ್ನಾತಕಪ್ರತಾಪ ಸಿಂಹ, ಶ್ರೀ ಸತ್ಯಾರ್ಥಿ ಸಿದ್ಧಾಂತ ವಿಶಾರದ (ಆರ್ಯೋಪದೇಶಕ) ಮತ್ತು ಶ್ರೀ ರಾಮಚಂದ್ರ ನಾಯ್ಕರು ಮುಂತಾದವರ ಪೌರೋಹಿತ್ಯದಲ್ಲಿ ಜರಗಿಸಲ್ಪಟ್ಟಿತು.

ತಾ. ೩-೫-'೨೮ರಲ್ಲಿ ರಾತ್ರಿ ಗಂಟೆ ೮ಕ್ಕೆ ಕರ್ನಾಟಕ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಆತ್ಮಾನಂದಾರ್ಯರ ವಿವಾಹ ಸಂಸ್ಕಾರವು ಶ್ರೀಮತಿ ಲಕ್ಷ್ಮೀದೇವಿಯೊಡನೆ ವೈದಿಕ ರೀತಿಯಲ್ಲಿ ಪಂಡಿತ ದ್ವಿಜೇಂದ್ರನಾಥ ಶರ್ಮ ಸಿದ್ಧಾಂತ ಶಿರೋಮಣಿ ಶ್ರೀ ಬಿ. ಮೋಹನಪ್ಪ ತಿಂಗಳಾಯರು ಶ್ರೀ ಎಚ್. ಎಸ್. ಮಂದಣ್ಣಾರ್ಯರು, ಶ್ರೀ ಸತ್ಯಾರ್ಥಿ ಸಿದ್ಧಾಂತ ವಿಶಾರದ (ಆರ್ಯೋಪದೇಶಕ) ಮುಂತಾದ ಆರ್ಯಧರ್ಮ ಪ್ರಸಾರಕರ ಪೌರೋಹಿತ್ಯದಲ್ಲಿ ಅತೀ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಸಮಾಜ ಮಂದಿರವು ಉತ್ಸಾಹಿ ಪ್ರೇಕ್ಷಕರಿಂದ ತುಂಬಿ ತುಳುಕಿತ್ತು. ಈ ಸಂದರ್ಭದಲ್ಲಿ ಶ್ರೀ ಆತ್ಮಾನಂದರ ಆಫೀಸಿನ ಕ್ಲಾರ್ಕ ಬಂಧುವರ್ಗದವರು ರೂಪಾಯಿ ೧೦೦-೦-೦ರ ಕ್ರಯದ ಬಂಗಾರದ ಸರವೊಂದನ್ನು ವಧೂವರರಿಗೆ ಇನಾಮಾಗಿ ಕೊಟ್ಟರು. ತದನಂತರ ಪಂಡಿತ ದ್ವಿಜೇಂದ್ರನಾಥ ಶರ್ಮರೂ ಶ್ರೀ ತಿಂಗಳಾಯರೂ ಪ್ರೌಢವಿವಾಹ ಮತ್ತು ಗ್ರಹಸ್ಥಧರ್ಮದ ಕುರಿತು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು. ಶ್ರೀ ಆತ್ಮಾನಂದಾರ್ಯರು ವೈದಿಕಧರ್ಮದ ಮಹತ್ವವನ್ನು ತಿಳಿದು ತನ್ನ ಜಾತಿಯಲ್ಲಿ ಅಂಟಿಕೊಂಡಿರುವ ಅವೈದಿಕ ಪದ್ಧತಿಗಳಿಗೆ ಒಳಬೀಳದೆ, ಧೈರ್ಯದಿಂದ ಅಂಥಾ ಜಾತಿಬಂಧನವನ್ನು ಮುರಿದು ಇತರ ಆರ್ಯರಿಗೆ ಉದಾಹರಣೆ ತೋರಿಸಿದಗೋಸ್ಕರ ಸಮಾಜದ ಕಾರ್ಯದರ್ಶಿ ವಿ. ಸತ್ಯಾರ್ಥಿಯವರು ವಧೂವರರಿಗೆ ಧನ್ಯವಾದಗಳನ್ನರ್ಪಿಸಿದರು. ಮೊಗವೀರ ಜಾತಿಯ ವಿವಾಹಕಟ್ಟುಗಳ ಯಾವ ಸಂಬಂಧವೂ ಇಲ್ಲದೆ ಆರ್ಯಸಮಾಜಿಕ ವೈದಿಕ ಧರ್ಮವಿಧಿಯಂತೆ ಮಾಡಲ್ಪಟ್ಟದ್ದು ಇದು ಪ್ರಥಮ ವಿವಾಹವಾಗಿದೆ. ಮತ್ತು ಮುಂಬಾಯಿ ಕರ್ನಾಟಕ ಆರ್ಯಸಮಾಜದಲ್ಲಿ ನಡೆದ ಇದು ಪ್ರಥಮ ವಿವಾಹಸಂಸ್ಕಾರವಾಗಿದೆ. ಈ ವಿವಾಹಸಮಯದಲ್ಲಿ ಡಾ॥ ಅಮರನಾಥ ಆರ್ಯ (ಡಾ. ಮುರೇ)ಯವರು ಹಾಜರಿದ್ದರು.

ಅಂತರ್ಜಾತೀಯ ವಿವಾಹ.

ತಾ. ೫-೫-'೨೮ರಲ್ಲಿ ಮುಂಬಾಯಿ ಆರ್ಯಸಮಾಜ ಮಂದಿರದಲ್ಲಿ ಕರ್ನಾಟಕ ಆರ್ಯಸಮಾಜದ ಗತವರ್ಷದ ಕಾರ್ಯದರ್ಶಿಯವರೊಲ್ಲಬ್ಬರೂ ಉತ್ಸುಕ ಆರ್ಯರೂ ಆದ ಶ್ರೀ ಹರಿಪ್ರಸಾದ ಕಳ್ಳಾಡರವರ ವಿವಾಹಸಂಸ್ಕಾರವು ಶ್ರೀ ಎಚ್. ಸುಬ್ಬರಾಯರ ಪುತ್ರಿ ಶ್ರೀಮತಿ ಸುಮಿತ್ರಾದೇವಿಯವರೊಡನೆ, ಶ್ರೀ ಪಂಡಿತ ದ್ವಿಜೇಂದ್ರನಾಥ ಶರ್ಮ ಸಿದ್ಧಾಂತ ಶಿರೋಮಣಿ ಶ್ರೀ ನವರತ್ನ ವಿದ್ಯಾಲಂಕಾರ ಶ್ರೀ ವಿಜಯಶಂಕರಜೀ ಶ್ರೀ ಬಿ. ಮೋಹನಪ್ಪ ತಿಂಗಳಾಯ, ಶ್ರೀ ಎಚ್. ಎಸ್ ಮಂದಣ್ಣಾರ್ಯ ಶ್ರೀ ಸತ್ಯಾರ್ಥಿ, ಆರ್ಯೋಪದೇಶಕ, ಮುಂತಾದ ಆರ್ಯಪುರೋಹಿತರ ಪೌರೋಹಿತ್ಯದಲ್ಲಿ ನಡೆಯಿತು. ಕರ್ನಾಟಕ ಆರ್ಯಸಮಾಜ (ಮುಂಬಾಯಿ)ದ ಸದಸ್ಯರುಗಳ ಪೈಕಿ ಆದ ಇದು ಪ್ರಥಮ ಅಂತರ್ಜಾತೀಯ ವಿವಾಹವಾಗಿದೆ. ವಧುವು ನಾಯಕರ ಕುಟುಂಬಕ್ಕೂ ವರನು ಕ್ಷತ್ರಿಯ ಕುಟುಂಬಕ್ಕೂ ಸೇರಿದವರಾಗಿರುತ್ತಾರೆ. ಶ್ರೀ ಹರಿಪ್ರಸಾದರು ಜಾತೀಯ ಬಂಧನವನ್ನು ಮುರಿದು ಇಂಥಾ ಅಂತರ್ಜಾತೀಯ ವಿವಾಹ ಸಂಬಂಧಕ್ಕೆ ಪ್ರೋತ್ಸಾಹ ದೊರೆಯುವಂತೇ ಮಾಡಿ ತೋರಿಸಿದ ಉದಾಹರಣೆಯು ಪ್ರಶಂಸನೀಯವಾಗಿದೆ.

ತಾ. ೨೮-೪-'೨೮ರಲ್ಲಿ ಕೆನರಾ ವಿದ್ಯಾದಾಯಿನೀ ಶಾಲೆಯಲ್ಲಿ ಈಗ ನವಯುವಕರಲ್ಲಿ ಅಂಟಿಕೊಂಡಿರುವ ಬೀಡಿ, ಸಿಗರೇಟು, ಮದ್ಯ ಮುಂತಾದ ಮಾದಕ ದ್ರವ್ಯಗಳಿಂದುಂಟಾಗುವ ಕೇಡುಗಳ ವಿಷಯವಾಗಿ ಅರ್ಥಗರ್ಭಿತವಾದ ಭಾಷಣವನ್ನು ಶ್ರೀಯುತ ಬಿ. ಮೋಹನಪ್ಪ ತಿಂಗಳಾಯರು ಕೊಟ್ಟು ಪ್ರಭಾವಬೀಳುವಂತೆ ಮಾಡಿದರು.

ತಾ. ೬-೫-'೨೮ರಲ್ಲಿ ಕರ್ನಾಟಕ ಆರ್ಯಸಮಾಜ ಮಂದಿರದಲ್ಲಿ ಶ್ರೀ ಬಿ. ಮೋಹನಪ್ಪ ತಿಂಗಳಾಯರು ಶ್ರೀ ರಾಮಚಂದ್ರನ ಆದರ್ಶ ಆರ್ಯಜೀವನದ ವಿಷಯವಾಗಿ ಚಲೋ ಭಾಷಣವನ್ನಿತ್ತು ಜನರಲ್ಲಿರುವ ತಪ್ಪಭಿಪ್ರಾಯವನ್ನು ಹೋಗಲಾಡಿಸಿದರು. ನಂತರ ಶ್ರೀ ಎಚ್. ಎಸ್. ಮಂದಣ್ಣಾರ್ಯರು ಶ್ರೀ ತಿಂಗಳಾಯರನ್ನು ಸ್ವಾಗತೀಕರಿಸಿ ಅವರು ಈ ವರೆಗೆ ಆರ್ಯಸಮಾಜದ ಮೂಲಕವಾಗಿ ಮೊಗವೀರರಲ್ಲಿ ಸುಧಾರಣೆಯ ಜಾಗ್ರತಿಯನ್ನುಂಟುಮಾಡಿದ ಕುರಿತು ಮಾತಾಡಿದ ತರುವಾಯ ಕಾರ್ಯದರ್ಶಿ ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರು ಶ್ರೀ ತಿಂಗಳಾಯರು ಮನೋಹ್ಲಾಸವಾದ ಭಾಷಣವನ್ನು ಕೊಟ್ಟು ಸಭಿಕರಲ್ಲಿ ಜಾಗ್ರತಿ ಹುಟ್ಟಿಸಿದುದಕ್ಕಾಗಿ ಧನ್ಯವಾದಗಳನ್ನರ್ಪಿಸಿದ ತರುವಾಯ ಅವರು ಈ ವರೆಗೆ ಮಾಡಿರುವ ಸಾಹಸ ಧೈರ್ಯ, ಸಹನತ್ಯಾಗ, ಈ ವಿಷಯವಾಗಿ ವಿವರಿಸಿ, ಈ ತನಕ ಅವರಿಂದುಂಟಾದ ಅಸದಳದಾದ ಕಾರ್ಯಕಲಾಪಗಳ ಕುರಿತು ಪ್ರಶಂಸಿಸಿದ ತರುವಾಯ ಸಭೆಯು ವಿಸರ್ಜಿಸಲ್ಪಟ್ಟಿತು.

ತಾ. ೬-೫-'೨೮ರಲ್ಲಿ ಮುಂಬಾಯಿ ಥಾಕರ್ಸಿಮೂಲೀ ಹೋಲಿನಲ್ಲಿ ಶ್ರೀಯುತ ಬಿ. ಮೋಹನಪ್ಪ ತಿಂಗಳಾಯರು 'ಜಗದ್ಗುರು ಚರಿತ್ರೆ'ಯೆಂಬ ಕಥೆಯನ್ನು ಹರಿಕಥೆಯ ರೂಪವಾಗಿ ಹಾಡಿತೋರಿಸಿದರು. ಇದರಲ್ಲಿ ಇತರ ಪೌರಾಣಿಕ ಮಿತ್ರರು ಶ್ರೀ ಕೃಷ್ಣನಿಗೆ ವ್ಯಭಿಚಾರಿ ಇತ್ಯಾದಿ ಕಳಂಕ ಹಚ್ಚಿ ಹೊಗಳುವ ತಪ್ಪಭಿಪ್ರಾಯವನ್ನು ಪ್ರಮಾಣಪೂರ್ವಕವಾಗಿ ಖಂಡಿಸಿ ಶ್ರೀ ಕೃಷ್ಣನ ಗುರುಕುಲ ವಿದ್ಯಾಭ್ಯಾಸದ ಮತ್ತು ವೈದಿಕ ಆದರ್ಶ ಆರ್ಯಜೀವನದ ವಿಷಯವಾಗಿ ವ್ಯಾಖ್ಯಾನಿಸಿ ಅವನೇ ಜಗದ್ಗುರುವೆಂದು ಕರೆಯಲರ್ಹನೆಂದು ವಿಶದಪಡಿಸಿದರು.

ತಾ. ೧೦-೫-'೨೮ರಲ್ಲಿ ಮುಂಬಾಯಿ ಕರ್ನಾಟಕ ಆರ್ಯಸಮಾಜ ಮಂದಿರದಲ್ಲಿ ಶ್ರೀ ಮೋಹನಪ್ಪ ತಿಂಗಳಾಯರು 'ಸಾಮಾಜಿಕ ಕೇಡುಗಳು' ಎಂಬ ವಿಷಯವಾಗಿ ಸ್ಫೂರ್ತಿದಾಯಕಭಾಷಣವನ್ನಿತ್ತರು. ತದನಂತರ, ಕರ್ನಾಟಕ ಆರ್ಯಸಮಾಜದ ಕಾರ್ಯದರ್ಶಿ ಶ್ರೀ ಮಂದಣ್ಣಾರ್ಯರನ್ನು ಮತ್ತು ಹಟ್ಟಿನ ಸಾಹಸ, ಧೈರ್ಯದಿಂದ ತನ್ನ ಜಾತಿಯವರಿಂದ ತನಗಾಗುವ ಯಾವ ಕೇಡುಗಳನ್ನು ಗಣನೆಗೆ ತಾರದೆ, ಜಾತಿಯೆಂಬ ಗೋಡೆಗಳನ್ನು ಮುರಿದು ಅಂತರ್ಜಾತೀಯ ವಿವಾಹವನ್ನೆಸಗಿದ ಶ್ರೀ ಹರಿಪ್ರಸಾದ ಕಳ್ಳಾಡರನ್ನು ಸತ್ಕರಿಸುವ ಸಭೆಯ ಪ್ರಧಾನಾಸನವನ್ನು ಶ್ರೀ ತಿಂಗಳಾಯರು ವಹಿಸಿ, ಶ್ರೀ ಕಳ್ಳಾಡರು ಮಾಡಿದ ಕಾರ್ಯವನ್ನು ಕೊಂಡಾಡಿಸಿ ತರುವಾಯ ಶ್ರೀ ಮಂದಣ್ಣಾರ್ಯರು ಮತ್ತು ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರು ವಿವಾಹದಲ್ಲಿರುವ ಜವಾಬ್ದಾರಿಕೆಯ ವಿಷಯ ವ್ಯಾಖ್ಯಾನಿಸಿದರು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸಾ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫ್ ವ್ಯಾಪಾರ,

24-8-'28. ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವೂ ಧನವೂ ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ-ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,

ಆತಂಕನಿಗ್ರಹ ಅವುಷಧಾಲಯ,
ನಂ. 96, ಬ್ರಾಡ್ವೇ, ಮದರಾಸು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years; 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಶಂಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವರ್ ಹತ್ತಿರ.



for the WOMEN of INDIA

...ಚಿನ ಆರೋಗ್ಯ

...ಹೆಂಗಸರಿಗೆ ಮಾತ್ರ ಇವುಗಳು ದೊರಕುವಂತೆ ...ಕ್ಕೆ ತರಲ್ಪಟ್ಟಿವೆಯೊ, ಅಲ್ಲಿ ಅವುಗಳ ಫಲಕಾರಿ ...ನ್ನು ಮುಟ್ಟುದೋಷಗಳನ್ನು ನಿವಾರಿಸಿ, ಹೊಸ ... ಕೊಡುವ, ಇತ್ತೀಚೆಗಿನ ಅತ್ಯಂತ ಮಹತ್ವದ ...ದೊರಕಲಾಗುವಂತೆ, ಅದರ ಬೆಲೆಯೂ ಕಡಿಮೆ

... ಸೇವನೆಯಿಂದ, ರಜಸ್ವಲೆಯಾಗಲಿರುವ ಹುಡುಗಿಯರಿಗೆ ... ಅವರಿಗೆ ಈ ಶಕ್ತಿಕಾರಕ ಔಷಧದ ರಕ್ತವನ್ನು ಹೆಚ್ಚಿಸುವ ...ಪಡಿಸುವ ಸಹಾಯವು ಅಗತ್ಯವಿದೆ. ಫೆಲೂನಾ ಮಾತ್ರೆಗಳಲ್ಲಿ ...ಬಹುದಾದ ರೂಪದಲ್ಲಿ ಕಟ್ಟಿಣವಿದೆ. ಮೈಯಲ್ಲಿ ರಕ್ತವಿಲ್ಲದ ...ಮಾತ್ರೆಗಳ ಸೇವನೆಯ ನಂತರ ತನ್ನ ಮುಖದಲ್ಲಿ ದೀರಿಬರುವ ...ಫೆಲೂನಾ ಮಾತ್ರೆಗಳ ರಕ್ತರಚನೆಯ ಶಕ್ತಿಯು ರಕ್ತವನ್ನು ಅಧಿ... ತೋರಿಸಿಕೊಳ್ಳುವಳು. ಪ್ರಾಯಶಃ, ಪ್ರಸವ ಸಮಯ ...ದಿಂದ ಉಂಟಾದ ನೋವುಗಳಿಂದ ಜೀವನದಲ್ಲಿ ಬೇಸರಿಕೆ ...ಉಂಟಾದವರಾಗಿ, ಗೃಹಕರ್ತವ್ಯಗಳೂ ಸಂಸಾರದ ತಾಪತ್ರಯ ...ಯಾಗಿ ಕಾಣುವ ಹೆಂಡಂದಿರೂ ತಾಯಂದಿರೂ ಫೆಲೂನಾ ...ತರ ಅನುಭವವನ್ನು ಪಡೆಯುವರು. ಮತ್ತು ಪ್ರಾಯ ಹೆಚ್ಚಿ... ಸಮಯ ಬರುವಾಗ, ಈ ಸಮಯದಲ್ಲಿ ಸರ್ವಸಾಮಾನ್ಯ ...ವಿಕೆ, ತಲೆತಿರುಗುವಿಕೆ, ಸ್ಮೃತಿ ತಪ್ಪುವಿಕೆ ಮತ್ತು ಇತರ ...ಮಾತ್ರೆಗಳನ್ನು ವಿರಾಮಕರವೂ ಪ್ರಶಾಂತವೂ ಆದ ಆರೋಗ್ಯಕರ ...ಸಿದ್ದಲ್ಲಿ ಖಂಡಿತವಾಗಿ ತಲೆದೋರಲಾರವು.

...ಯಾದ ಕ್ರಮಕ್ಕೆ ತರುವುದು.

ಈ ಮೇಲಿನ ರೋಗಗಳಲ್ಲಿ ಯಾವುದಾದರೂ ನಿಮಗೆ ಬಾಧಿಸುವುದಾದರೆ, ಫೆಲೂನಾ ಮಾತ್ರೆಗಳು ಕಾರಣವನ್ನು ಹುಡುಕಿ, ವಿಷವನ್ನು ನಿವಾರಿಸಿ, ಸ್ನಾಯುಗಳನ್ನು ಘಟ್ಟಿಪಡಿಸಿ, ಆರೋಗ್ಯ ಕ್ರಮವನ್ನು ಭದ್ರಪಡಿಸಿ, ಅವಯವಗಳನ್ನು ಬಲಮಾಡಿ, ಹೊಸ ತೇಜಸ್ಸೀ ರಕ್ತವನ್ನು ಕೊಟ್ಟು ಜೀವನವೆಂದರೊಂದು ಆನಂದದ ಅನುಭೂತಿಯಾಗಿ ಮಾಡುವುದು.

... ಒಂದರಲ್ಲಿ 36 ಮಾತ್ರೆಗಳಂತೆ,ರೂ. 2—4—0ರಂತೆ

(... ಆಫೀಸು ಬೊಕ್ಸ 620)

... ಏಜಂಟರಾಗಿ ನೇಮಿಸಲ್ಪಟ್ಟಿರುವರು.

Product of Graham Remedies Ltd., Cape Town, South Africa.

Edited Printed & Published by V. S. Kamath at the M. F. A. Sharada Press, Mangalore.

ಚಂದಾನಿರ್ಣಯ — ವರ್ಷ ಒಂದಕ್ಕೆ ರೂಪಾಯಿ 2—0—0.   Registered: No. M. 498.   ಟಪ್ಪಾಲು ಹಾಸಿಲು ಸೇರಿ ರೂಪಾಯಿ 2—13—6

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨.   ಮಂಗಳೂರು, ತಾ. ೧೮ನೇ ಶುಕ್ರವಾರ ಮೇ ೧೯೨೮.   ಸಂಚಿಕೆ ೨೧

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid-up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡ್ ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ಇಳಿಸಲಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಕಳಾವಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂಬಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS
ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

...rations Cover All Your Needs.
...MERIT HAS MADE FAMOUS.
...ಸಿದ್ಧವಾದ ಬಾಟ್ಲಿವಾಲಾ ಇವರ

...ಸಿದ್ಧ ಔಷಧಗಳು.

...ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ನಿವಾರಣ. ರೂ. ೧.
... ಶಕ್ತಿ ಕೊಡುವ ಔಷಧ ಆಣೆ ೧೩.
... ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೪.
... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
...—೨—೦. ರೂ. ೧—೪—೦. ೧—೧೨—೦.
...—೬—೦
...—೩—೦. LIBERAL DISCOUNT TO TRADE
...ASHAPUR, BOMBAY.
... ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
... Road, P. O. Cadell Road, Bombay. No. 14.

...ರ ಲೋಧ್ರ

...ರೋಗನಿವಾರಿಣಿ.

...ಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ವಾಗಿ ಹೊಗಳುತ್ತಿರುವರು.

...ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

...ಸ್ರವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ವಾಗಿ ಗುಣವಾಗುವುವು.

...ವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

...ಸರೀ ಕುಟೀರಂ,
...ಶಾಲಾ, P. B: 752. ಎಗ್ಮೋರು, ಮದರಾ...
ಬ್ರಾಂಚ್:— 18 ಬಳೆಪೇಟೆ, ಬೆಂಗ್ಳ...
...ರ್ಕ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾ...

...22 ಕ್ಯಾರೆಕ್ಟ್ ರೋಲ್ಡ್ ಗೋಲ್ಡ್ ರಿಸ್ಟ್ ವಾಚುಗಳು

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ...ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಕ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನ ...ವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ...ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ...ದಾರರೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್ ವಾಚನ್ನು ಕರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ...ನಾಮವಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳು...ವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್ ವಾಚ್
1ಕ್ಕೆ 7—0—0.

ವಿಳಾಸ:— ಎ. ಎಸ್. ವಾಚ್ ಕಂಪೆನಿ.
ಪೋ॥ ಬಾಕ್ಸ್ ನಂ. 105, ಮದರಾಸು.

(18-11-27)

ಅಂಬಾ ...

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ಜ್ಯೇಷ್ಠ
ಶು ೭ ಶನಿವಾರದಿಂದ ವಿಭವ ಸಂವತ್ಸರದ ಜ್ಯೇಷ್ಠ
ಶು ೧೩ ಶುಕ್ರವಾರದ ವರೆಗಿನ ಪಂಚಾಂಗ

(೧೯೨೮ನೆಯ ವೃಷಭ (ದೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ: ಉ	ಅಸ್ತ
26	ಶನಿ	೬	೬.೫೯	ಮಘಾ	೪೦.೪೪	೧೩	6. 5	6.50
27	ರವಿ	೭	೬.೩೦	ಹುಬ್ಬಾ	೪೩.೦	೧೪	6. 5	6.50
28	ಸೋಮ	೯	೭.೩೧	ಉತ್ತರಾ	೪೬.೩೧	೧೫	6. 5	6.51
29	ಕುಜ	೧೦	೯.೪೨	ಹಸ್ತಾ	೫೧.೧೪	೧೬	6. 5	6.51
30	ಬುಧ	೧೧	೧೩.೧೪	ಚಿತ್ರಾ	೫೬.೪೪	೧೭	6. 5	6.51
31	ಗುರು	೧೨	೧೭.೧೫	ಸ್ವಾತೀ	೬೦.೦	೧೮	6. 5	6.52
1	ಶುಕ್ರ	೧೩	೨೨.೧೪	ಸ್ವಾತೀ	೩.೨	೧೯	6. 5	6.52

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಅಧಿಕತಮ	Minimum ಅಲ್ಪತಮ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
18	92— 7	79— 5	—	—
19	93 0	79— 7	—	—
20	92— 2	81— 8	—	—
21	93— 1	80— 2	—	—
22	93— 6	81— 5	—	—
23	93— 5	79— 1	0—11	—
24	93— 8	82— 7	—	—
				4—47

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
[illegible]		7— 8	8— 4
ವ್ಯಾಸ್ಯ...	...	6—10	7— 4
...ಷ್ಟು	...	6— 4	7— 0
ತಗ್ಗಿಸ...	...	6— 1	6— 10
Off. ಬೆಳ್ತಿಗೆ	...	7— 8	8— 8
U... ಗೋಟ ೧	...	12—10	13— 4
... ಮುಡಿ ೧ಕ್ಕೆ	...	7— 4	7— 8
... ೧ಕ್ಕೆ	...	16— 8	18— 8
...ಟ ೧ಕ್ಕೆ	...	8— 8	10— 8
...ಟ ೧ಕ್ಕೆ	...	10— 0	12— 8
...ರಿಗೋಟ ೧ಕ್ಕೆ	...	14— 4	14— 12
ತೊಗರಿಬೇಳೆ ಗೋಟ ೧ಕ್ಕೆ	...	18— 8	27— 0
ಉದ್ದು ಗೋಟ ೧ಕ್ಕೆ	...	13— 8	14— 0
ಹೆಸರುಗೋಟ ೧ಕ್ಕೆ	...	12— 0	14— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	62— 8
ಉಪ್ಪು ಗೋಟ ೧ಕ್ಕೆ	...	4—10	5— 4
ಕೊಬ್ರಿ ಖಂಡಿ ೧ಕ್ಕೆ	...	130— 0	—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	38— 8	39— 8
ಎಳ್ಳಿಂಡಿ ಖಂಡಿ ೧ಕ್ಕೆ	...	35— 0	45— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8—54	9— 4
ಎಳ್ಳೆಣ್ಣೆ ಮುಡಿ ೧ಕ್ಕೆ	...	8— 0	8— 4
ಹಿಪ್ಪೆ ಎಣ್ಣೆ ಪಟ್ಟಿಗೆ ೧ಕ್ಕೆ	...	7— 2	8 0
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	4— 6	4 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	6— 4	6 12
ಹಾಸಿಪ ಮುಡಿ ೧ಕ್ಕೆ	...	3— 0	3— 4
ಕೊತ್ತಂಬರಿ ಮುಡಿ ೧ಕ್ಕೆ	...	6— 8	7— 8
ಕಾಫಿ ಖಂಡಿ ೧ಕ್ಕೆ	...	365— 0	400— 0
ಅಡಿಗೋಟು ಅಡಿಕೆ ಖಂಡಿ ೧ಕ್ಕೆ	...	170— 0	210— 0
ಕಾಳುಮೆಣಸು ಖಂಡಿ ೧ಕ್ಕೆ	...	510— 0	515—
ಯಾಲಕ್ಕಿ ಮಣು ೧ಕ್ಕೆ	...	65— 0	80— 0
ಗೇರುಬೀಜ ಮುಡಿ ೧ಕ್ಕೆ	...	3—12	3—13
ಅಕ್ಕಿಯ ಖಂಡಿ ೧ಕ್ಕೆ	...	37— 8	40— 0
ತಾಂಬ್ರ ತಗಡು ಮಣ ೧ಕ್ಕೆ	...	15— 0	16— 8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	20— 0	21—
ಚೀನ ಬೆಳ್ಳಿ ಸೇರು ೧ಕ್ಕೆ	...	15— 0	—
ಹಿತ್ತಾಳೆ ತಗಡು ಮಣ ೧ಕ್ಕೆ	...	15— 0	16— 8
ಪವನ		13— 8	13— 9
ಬೆಳ್ಳಿ ತೊಲೆ		75— 0	85— 0

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್.

ನಿಖರವಾದ ವಹಿವಾಟು! ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

ಬಹುಮಾನ ಕೊಡಲು ಯೋಗ್ಯವಾದ ಕಪ್ಪುಗಳು, ಮೆಡಲುಗಳು ಮತ್ತು
ಪೂಜಾ ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು
ಎಷ್ಟು ಬೆಲೆಯಲ್ಲಿ ಬೇಕಾದರೂ ದೊರೆಯುತ್ತವೆ.

ಉಡುಪಿ ಕೃಷ್ಣ, ಕಾಳಿಂಗ ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ವಿಗ್ರಹಗಳು ಮತ್ತು ಪಟಗಳು (ಎಲ್ಲಾ ದೇವರದು) ದೊರೆಯುತ್ತವೆ.

ಬಂಗಾರದ ವಿಗ್ರಹಗಳು ಸಹಾ ಆರ್ಡರಿಗೆ ತಯಾರಿಸಿ ಕೊಡಲ್ಪಡುತ್ತವೆ. ಧಾರಣೆ ವಗೈರೆಗೆ ಬರೆಯಿರಿ.

ಕೆ. ವಿ. ರಾಘುವೇಂದ್ರಯ್ಯ ಆಂಡ್ ಬ್ರದರ್ಸ್,
ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,
(6—5) ಅವಿನ್ಯೂ ರೋಡು, ಬೆಂಗಳೂರು ಸಿಟಿ.

ಪ್ರಕಟಣೆ.

ಉಡ್ಪಿ ತಾಲೂಕು ಸಾಂತೂರು ಗ್ರಾಮದಲ್ಲಿರುವ ಸಂಕಪ್ಪ ನ್ಯಾಕನ ಮಗ ಚಡ್ಪು ನ್ಯಾಕನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ:—

ಸಾಂತೂರು ಗ್ರಾಮದ ಸೀಮನಾಡಿ ಗುತ್ತು ಬೊಮ್ಮಯ ಸೆಟ್ಟಿ ಅಳಿಯಂದಿರು ನಂದ್ಯಪ್ಪ ಸೆಟ್ಟಿ 1 ಕೃಷ್ಣ ಸೆಟ್ಟಿ 1 ಶಿವಪ್ಪ ಸೆಟ್ಟಿ 1 ಮತ್ತು ನಂದಿಕೂರು ಗ್ರಾಮದಲ್ಲಿರುವ ಕುಂಜುರು ಮನೆ ಕಾಳಪ್ಪ ಸೆಟ್ಟಿರ ಮೊಮ್ಮಗ ಲೋಕಯ್ಯ ಸೆಟ್ಟಿ 1 ಕೂಡಾ 4 ಜನರು ತಾ. 21—4—'28ರಲ್ಲು ನನಗೆ ಬರಕೊಟ್ಟ ರೂಪಾಯಿ 72—8—0ರ ಡಿಮಾಂಡ ನೋಟಿನ ಹಣ ನನಗೆ ಕೊಡುವದಾಗಿ ಹೇಳಿ ಅವರ ಪೈಕಿ ನಂದ್ಯಪ್ಪ ಸೆಟ್ಟಿ 1 ಕೃಷ್ಣ ಸೆಟ್ಟಿ 1 ಕೂಡಾ 2 ಜನರು ನನ್ನನ್ನು ಕಾಪಿಪೇಟೆಗೆ ಕರಕೊಂಡು ಹೋಗಿ ನನಗೆ ಎಷ್ಟನ್ನಾದರೂ ಹಣ ಕೊಡದೆ ನನ್ನ ಎಡಹೆಬ್ಬೆಟ್ಟಿನ ಮುದ್ರೆಗಳನ್ನು 3 ಕಾಗದಗಳಿಗೆ ಬಲತ್ಕಾರದಿಂದ ತೆಗೆದುಕೊಂಡಿರುತ್ತಾರೆ. ಆದ ಕಾರಣ ಸದರಿ ಕಾಗದಗಳಲ್ಲಿ ಅವರು ಏನಾದರೂ ಪ್ರಪ್ಪನೆ ನೋಟು ರಶೀದಿ ವಗೈರೆ ಮಾಡಿದರೆ ಅವುಗಳು ಸಿಂಧಾಗತಕ್ಕವುಗಳಲ್ಲ. ವ ನನ್ನ ಮೇಲೆ ಬಾಧಿಸತಕ್ಕವುಗಳು ಅಲ್ಲ. ಎಂಬದನ್ನು ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಿರುತ್ತೇನೆ.

ತಾ. 5—5—1928.

||| ಈ ಗೆರೆ ವ ಎಡಹೆಬ್ಬೆಟ್ಟಿನ ಮುದ್ರೆ
ಚಡ್ಪು ನ್ಯಾಕನ ರುಜು.

MUNICIPALITY OF MANGALORE.

NOTICE.

A vacant plot near the Municipal Petroleum Store building at Bunder is available for being leased out on long term lease. Persons desirous to have it may obtain information as regards its extent, terms of the lease. &c., on application at the Municipal office. The Chairman is prepared to consider any offer received by the end of June 1928.

Municipal office. MANGALORE, 22-5-28, P. S. } Nellikai Venkat Rao.
Chairman, M. C.

ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸಿನಲ್ಲಿ.

ತಾರೀಖು ೧೫—೫—'೨೮ರಲ್ಲು ಜರಗಿದ ಎಕ್ಸಾಯಿ ಎಡವೈಜರಿ ಕಮಿಟಿಯ ಸಭೆಯಲ್ಲಿ ಆದ ಠರಾವುಗಳು.

ಹಾಜರು ಮ॥ ರಾ॥ ರಾ॥ ಯಂ. ಯಸ್. ಬ್ಯಾಸ್ ಅವರ್ಗಲ್, ಬಿ. ಎ. ಮತ್ತು ಇತರ ೬ ಜನ ಮೆಂಬರರು.

ಬರುವ ಶೇಂದಿ ಗುತ್ತೆಯ ಬಾಬ್ತು ಜಿಲ್ಲಾ ಕಲೆಕ್ಟರ ದೊರೆಗಳವರಿಂದ ತಲ್ಪಿದ ಶೇಂದಿ ಅಂಗಡಿಗಳ ಪಟ್ಟಿಯನ್ನು ಓದಲಾಯಿತು.

ಬಗ್ಗ, ಪದವು ಮತ್ತು ಮೂಡು ಶೆಡ್ಡೆ ಗ್ರಾಮಗಳಲ್ಲಿ ಶೇಂದಿ ಅಂಗಡಿಗಳು ಇರುವ ಕಾರಣ ಪಚ್ಚನಾಡಿ ಶೇಂದಿ ಅಂಗಡಿಯನ್ನು ಬರುವ ಗುತ್ತೆ ಬಗ್ಗೆ ತೆಗೆದುಹಾಕಬೇಕಾಗಿದೆ. ಡಾ. ಜೆ. ರೇಗರು ಸೂಚಿಸಿದರು. ಈ ಸೂಚನೆಯನ್ನು ಮ॥ ರಾ॥ ರಾ॥ ಬಿ. ಯಂ. ಡಿಸೋಜರು ಅನುಮೋದಿಸಿದರು. ಮೆಂಬರರ ಪೈಕಿ ೫ ಮಂದಿಯು ಸದರಿ ಪಚ್ಚನಾಡಿ ಶೇಂದಿ ಅಂಗಡಿಯನ್ನು ಮುಚ್ಚಬೇಕಾಗಿ ಅಭಿಪ್ರಾಯಪಟ್ಟರು. ಸದರಿ ಅಭಿಪ್ರಾಯ ಮಂಜೂರು ಮಾಡಲಾಯಿತು.

ಕುಡುಪು ಶೇಂದಿ ಅಂಗಡಿಯನ್ನು ಮುಚ್ಚಬೇಕಾಗಿ ಮ॥ ರಾ॥ ರಾ॥ ಬಿ. ಯಂ. ಡಿಸೋಜರು ಸೂಚಿಸಿದರು. ಡಿ. ಫಾ. ರೇಗರು ಸದರಿ ಸೂಚನೆಯನ್ನು ಅನುಮೋದಿಸಿದರು. ಕುಡುಪು ಶೇಂದಿ ಅಂಗಡಿಯು ದೇವಸ್ಥಾನದ ಬಳಿಯಲ್ಲಿಯೂ, ಪದವು ಶೇಂದಿ ಅಂಗಡಿ ಬಳಿಯಲ್ಲಿಯೂ ಇರುತ್ತದೆ, ಅವರ ಬಳಿ ಒಂದು ಶಾಲೆಯು ಇದೆ. ಈ ಕಾರಣದಿಂದ ಕುಡುಪು ಶೇಂದಿ ಅಂಗಡಿಯನ್ನು ಮುಚ್ಚಿ, ಇರುವೈಲು ಶೇಂದಿ ಅಂಗಡಿಯನ್ನು ಕುಡುಪು ಗ್ರಾಮದ ಸಮೀಪ ಯಾವದಾದರೊಂದು ನಿರಾಕ್ಷೇಪಕರವಾದ ಸ್ಥಳದಲ್ಲಿ ಇಡಬೇಕೆಂತ ಮ॥ ರಾ॥ ರಾ॥ ಪಿ. ರಾಮಚಂದ್ರರಾಯರು ಈ ಸೂಚನೆಯನ್ನು ಅನುಮೋದಿಸಿದರು. ೫ ಮಂದಿ ಮೆಂಬರರು ಇದಕ್ಕೆ ಸಮ್ಮತಿಸಿದರು. ಸೂಚನೆಯು ಸಭೆಯಲ್ಲಿ ಮಂಜೂರಾಯಿತು.

ಮೇಲಿನ ಠರಾವುಗಳಿಗೆ ಒಳಪಟ್ಟು ಕಲೆಕ್ಟರು ದೊರೆಗಳಿಂದ ಕಳುಹಿಸೋಣಾದ ಪಟ್ಟಿಯು ಪ್ರಕಟಿಸೋಣಾಗುವುದೆಂದು ನಿರ್ಣಯಿಸಲಾಯಿತು.

ಮೇಲ್ಗಡೆ ಸಮೂದಿಸಿದ ಠರಾವುಗಳನ್ನು ವಿರೋಧಿಸುವವರು ವಿರೋಧ ಮತದ ಅರ್ಜಿಗಳನ್ನು ತಾರೀಖು ೨—೬—'೨೮ರ ವಳಗೆ ಮಂಗಳೂರು ತಹಸಿಲ್ದಾರರವರ ಮುಂದೆ ದಾಖಲುಮಾಡಬಹುದು. ಈ ಬಗ್ಗೆ ಅಗತ್ಯವಿರುವ ನೋಟೀಸುಗಳನ್ನು ಈ ಕೆಳಗಿನ ಆಫೀಸುಗಳ ನೋಟೀಸು ಬೋರ್ಡುಗಳಲ್ಲಿ ಹಚ್ಚಬೇಕಾಗಿ ನಿರ್ಣಯಿಸಲಾಯಿತು.

ಜಿಲ್ಲಾ ಕಲೆಕ್ಟರ ಕಚ್ಚೇರಿ. ಡಿಪ್ಯುಟಿ ಕಲೆಕ್ಟರ ಕಚ್ಚೇರಿ. ತಾಲೂಕು ಕಚ್ಚೇರಿ, ಬಂಟ್ವಾಳ ಡಿಪ್ಯುಟಿ ತಹಸಿಲ್ದಾರರವರ ಕಚ್ಚೇರಿ, ಅಬ್ಕಾರಿ ಆಫೀಸು, ಜಿಲ್ಲಾ ಬೋರ್ಡು ಆಫೀಸು, ತಾಲೂಕು ಬೋರ್ಡು ಆಫೀಸು ಪೋಲಿಸು ಸ್ಟೇಶನುಗಳು.

ಮುಂದಿನ ಸಭೆಯು ತಾ. ೭—೬—'೨೮ರಲ್ಲು ಅಪರಾಹ್ನ ೩ ಘಂಟೆಗೆ ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸಿನಲ್ಲಿ ಜರಗಬೇಕಾಗಿ ನಿರ್ಣಯಮಾಡಿ ಸಭೆಯು ಮುಕ್ತಾಯವಾಯಿತು.

(Signed) ಯಂ. ಎಸ್. ಬ್ಯಾಸ್,
ಅಧ್ಯಕ್ಷ ಮತ್ತು ರೆ. ಡಿ. ಆಫೀಸರರು

ಭೂಮಾಲಿಕರ ಸಭೆ.

ಪುತ್ತೂರು ತಾಲೂಕಿನ ಕಲ್ಮಂಜ, ಮುಂಡಾಜೆ, ಚಾರ್ಮಾಡಿ, ಚಿಬಿದ್ರೆ, ಬಂಗಾಡಿ, ಮಿತ್ತಬಾಗಿಲು, ತೋಟತಾಡಿ ಕದಿರುದ್ಯಾವರ ಉಜಿರೆ, ಮತ್ತು ನೆರಿಯಾ ಮುಂತಾದ ಹಳ್ಳಿಗಳ ಭೂಮಾಲಿಕರ ಸಭೆಯು ಕಳೆದ ೧೯ನೇ ತಾರೀಕಿನ ದಿನ ಮುಂಡಾಜೆಯಲ್ಲಿ, ವಕೀಲ ರಾ. ಕೆ. ಆರ್. ಕಾರಾಂತರ ಅಧ್ಯಕ್ಷತೆಯಲ್ಲಿ ಜರಗಿತು. ಭೂಮಾಲಿಕರ ಸಂಘದ ಒಂದು ಶಾಖೆಯನ್ನು ಸ್ಥಾಪಿಸಿ, ಒಂದು ಕಾರ್ಯಕಾರಿಮಂಡಳಿಯನ್ನು ನೇಮಿಸಲಾಯಿತು. ಇದಕ್ಕೆ ರಾ. ಗುಂಡಿ ಮಹಾದೇವ ಪದ್ಮನಾಭ ಕಡಿಲ್ಕರ್ ಇವರು ಅಧ್ಯಕ್ಷರು, ರಾ. ಅನಂತಭಟ್ಟ ಗೋರೆಯವರೇ ಕಾರ್ಯದರ್ಶಿ ಮತ್ತು ಖಜಾನ್ಚಿಯವರು ತೆಂಗೆಯು ಹೆಚ್ಚಾದ್ದರಿಂದಲೂ, ರಿಸರ್ವ್ ಕಾಡುಗಳನ್ನು ಇರಿಸಿದ್ದರಿಂದಲೂ, ಬೆಳೆಗೆ ಆಗುವ ತೊಂದರೆಗಳನ್ನು ವಿವರಿಸಿ ಹಲವು ಸಭಿಕರು ಮಾತನಾಡಿದರು. ರಾ. ಕಾರಾಂತರು ತನ್ನ ಭಾಷಣದಲ್ಲಿ ರೈತರಿಗೆ ಉಂಟಾಗುತ್ತಿರುವ ಸಂಕಷ್ಟಗಳು ತನಗೆ ತಿಳಿದಿರುವವೆಂದೂ, ಅವುಗಳನ್ನು ಸರಕಾರದವರಿಗೆ ಸ್ವತಃ ತಿಳುಹಿಸಿ, ಹೋಗಲಾಡಿಸುವಂತೆ ಪ್ರಯತ್ನಿಸುವೆನೆಂದೂ ಹೇಳಿದರು. ಈ ಕೆಳಗಿನ ಠರಾವುಗಳು ಮಂಜೂರಾದವು "ಜಿಲ್ಲೆಯಲ್ಲಿ ಉಳಿದ ಭಾಗಗಳಿಗೆ ರಿಸರ್ವೆಯು ಅಗತ್ಯವಿಲ್ಲ. ಕಳೆದ ಸರ್ವೆಯಲ್ಲಿ ಹೊರಿಸಿದ ತೆಂಗೆಯೇ ಹೆಚ್ಚು, ಒಮ್ಮೆಗೆ ರಿಸರ್ವೆಯನ್ನು ಮಾಡುವದಾದರೂ, ಕಲ್ಮಂಜ, ಮುಂಡಾಜೆ, ಚಾರ್ಮಾಡಿ, ಚಿಬಿದ್ರೆ, ತೋಟತಾಡಿ, ಬಂಗಾಡಿ, ಮಿತ್ತಬಾಗಿಲು, ಉಜಿರೆ, ಕದಿರುದ್ಯಾವರ, ಮತ್ತು ನೆರಿಯ ಈ ಹಳ್ಳಿಗಳಲ್ಲಿ ಮೊದಲು ನಿರ್ಣಯಿಸಿದ ತೆಂಗೆಯನ್ನು ಸರಕಾರದವರು ಇಳಿಸಬೇಕು. ಹಾಗೆ ಮಾಡದಿದ್ದರೆ ರೈತರಿಗೆ ಕೇವಲ ಅನ್ಯಾಯವನ್ನೇ ಮಾಡಿದಂತಾಗುವದು. ಮುಂಡಾಜೆ ಮೊದಲಾದ ಸ್ಥಳಗಳಲ್ಲಿ ರಿಸರ್ವ್ ಕಾಡುಗಳ ಇರಿಸುವಿಕೆಯಿಂದ ಮಲೇರಿಯಾ ಜ್ವರವು ಹಬ್ಬಿ ಜನ ಸಂಖ್ಯೆಯು ಕಡಿಮೆಯಾಗಿ ವ್ಯವಸಾಯ ಮಾಡಲು ಕಷ್ಟವಾಗಿ ಭೂಮಿಯು ಬಂಜರು ಬೀಳುತ್ತದೆ. ಜನರ ಐಶ್ವರ್ಯವೂ ಕಡಿಮೆಯಾಗುತ್ತಿದೆ. ಆದಕಾರಣ ಈ ವಿಚಾರಗಳನ್ನು ವಿಚಾರಿಸಿ ತಿಳಕೊಳ್ಳುವದಕ್ಕಾಗಿ ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿ, ಬೇಕಾದ ಏರ್ಪಾಡುಗಳನ್ನು ಮಾಡಬೇಕು. ಈ ಠರಾವನ್ನು ಸಂಬಂಧಪಟ್ಟ ಅಧಿಕಾರಿಗಳಿಗೂ, ಸರಕಾರದವರಿಗೂ ತಿಳಿಸಲು ಸಭೆಯು ಅಧ್ಯಕ್ಷರನ್ನು ಪ್ರಾರ್ಥಿಸಲಾಯಿತು. ಧನ್ಯವಾದಗಳನ್ನು ಅರ್ಪಿಸಿ, ಸುಮಾರು ರಾತ್ರೆ ೭ ಘಂಟೆ ಸಮಯಕ್ಕೆ ಸಭೆಯು ಮುಕ್ತಾಯವಾಯಿತು.

ತಯಾರಾಗಿವೆ! ತಯಾರಾಗಿವೆ!!

ಶಾಲಾ ಹುಡುಗರಿಗೆ ಬೇಕಾದ

ಗೆರೆಹಾಕಿದ ಮತ್ತು ಗೆರೆ ಹಾಕದ ಎಕ್ಸರ್‌ಸೈಜ್ ಪುಸ್ತಕಗಳೂ, ಡ್ರೈಯಿಂಗ್ ಪುಸ್ತಕಗಳೂ, ಮ್ಯಾಪ್‌ಡ್ರೈಯಿಂಗ್ ಪುಸ್ತಕಗಳೂ, ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಶಾರದಾ ಛಾಪಖಾನೆ, SHARADA PRESS,
ರಥಬೀದಿ, ಮಂಗಳೂರು. MANGALORE.

DON'T HAVE AN OPERATION!

ಓಪರೇಶನನ್ನು ಮಾಡಿಕೊಳ್ಳಬೇಡಿರಿ

ಮೊದಲು ಹೆಂಗಸರ ಫೆಲೂನಾ ಮಾತ್ರೆಗಳನ್ನು

... ಮಾಡುತ್ತಿರುವಳು.

... ಪರೀಕ್ಷೆ ಮತ್ತು ಚಿಕಿತ್ಸೆಯಿಂದಲೂ ಗುಣವಾಗದ ಶರೀರ ... ಯದಿಂದ ಹೇಳುವೆವು.

... ಸೇವನೆಯಿಂದ ಕಲ್ಮಶವನ್ನು ನಿವಾರಿಸುವ, ಗುಣಕಾರಕ,

... ಮವನ್ನುಂಟುಮಾಡುತ್ತಿವೆ.

... ಆರೋಗ್ಯವತಿಗಳೂ ಸುಖಿಗಳೂ ಆದ ಸ್ತ್ರೀ ವೃಂದವನ್ನು ... ಜೀವನದಲ್ಲಿ ಒಂದು ನವೀನಾನುಭವವನ್ನು ಮಾಡಿಕೊಳ್ಳು ... ಚೇತನವನ್ನು ಅನುಭವಿಸುವರು. ಮನೆಗೆಲಸವು ಮತ್ತೆ ... ಬೇಸತ್ತು ಮನಶ್ಶಾಂತಿ ಕಳೆದ ಸ್ತ್ರೀಯು ಕಾರ್ಯಾಸಕ್ತಳಾಗಿ ... ಶಾರೀರಿಕ ಆರೋಗ್ಯವು ಅವಳ ಸುಧಾರಿತ ದೈಹಿಕ ಸ್ಥಿತಿಯಿಂದ ... ಬೀರುವ ಸಮುತ್ಸಾಹದಿಂದಲೂ ಪ್ರತಿಬಿಂಬಿಸಲ್ಪಡುವುದು ... ಮನೆಯು ಸುಖಕರವಾಗಲಾರದು. ಫೆಲೂನಾ ಮಾತ್ರೆಗಳ ... ಕಾಲದಲ್ಲಿ ರೋಗಗಳ ವೇದನೆಯಿಂದ ಬಳಲುತ್ತಿದ್ದ ಹೆಂಡ ... ತಂದು, ಗೃಹಸ್ಥಿತಿಯನ್ನು ನವೀನಾನಂದಕ್ಕೆ ಪರಿವರ್ತಿಸಿ ... ಒಂದು ದೈವೀಕವರವಾಗಿಯೂ ಪರಿವರ್ತಿಸಿರುವುವಾಗಿ

... ರೋಗಚಿಹ್ನೆಗಳು ... ಯುಳ್ಳದಾಗಿವೆ:—

ಕೊಲಸು ಉಸಿರು

ತಲೆನೋವು

ಬೆನ್ನುನೋವು

... ಆಯಾಸ

ಮುಟ್ಟಿನ ಅಕ್ರಮಗಳು

... ಕೆಲವು ಕಡೆಗಳಲ್ಲಿ ಹಲವು ವರ್ಷಗಳು ದಾಟಿದರೂ ಆ ... ಆರೋಗ್ಯಾಭಿವೃದ್ಧಿಯು ಶಿಶು ಸ್ವೀಕಾರಕ್ಕೆ ಅಗತ್ಯವಾದ ... ನರೋಗಪಡಿಸಿ ಗುಣಪಡಿಸಿದುವು, ಅವಯವಗಳಿಗೆ ಶಕ್ತಿಯನ್ನು ಸಾಮರ್ಥ್ಯವನ್ನು ಕೊಟ್ಟವು ... ಸಹಾಯಮಾಡಿದುವು.

ಹೆಂಗಸರ ಫೆಲೂನಾ ಮಾತ್ರೆಗಳು ... ಅಥವಾ ತಾತ್ಕಾಲಿಕ ಪರಿಣಾಮಕೊಡುವ ಸಾಮಾನ್ಯ ... ಗುಣವು ಮತ್ತು ಕೂಡಲೇ ತೋರುವಂತಹುದು; ಮತ್ತು ಅದು ಸ್ತ್ರೀಯರ ... ಅವಳದಾಗಿರುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ— ... ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲೆಲ್ಲಿಯೂ ದೊರಕುವುವು.

ಹೆಚ್ಚಿನ ಮಾಹಿತಿಗಾಗಿ ಕಾಗದಗಳನ್ನು ...

ಮೆಸ್ಸರ್ಸ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್‌ಸ್ಟ್ರೀಟ್, ಮುಂಬಾಯಿ.

(ಪೋಸ್ಟ ಆಫೀಸು ಬೋಕ್ಸ 838) ಅಥವಾ ಕಲ್ಕತ್ತಾ, (ಪೋಸ್ಟ ಆಫೀಸು ಬೋಕ್ಸ 620)

ಇವರು ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು.

Product of Graham Remedies Ltd , Cape Town, South Africa. 92

ಸ್ಫುಟ ವಿಚಾರಗಳು.

ಮಜೂರಪಕ್ಷದ ಉಪಕಾರ.

ಮಜೂರ ಪಕ್ಷವು ಇಂಗ್ಲೆಂಡಿನಲ್ಲಿ ಪುನಃ ಸ್ಥಿರವಾದ ಅಧಿಕಾರವನ್ನು ಹೊಂದಿದರೆ ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಹೊಂದುವ ಕೆಲಸವು ಸುಲಭವಾಗುವುದೆಂದು ಹೇಳಿಕೊಳ್ಳುವ ಹಿಂದೀಯರು ಇನ್ನೂ ಇರುವರು. ಇವರು ಇದನ್ನು ಮನಃಪೂರ್ವಕವಾಗಿ ನಂಬುವದಾದರೆ ಇವರು ಬಹಳ ಆಶ್ಚರ್ಯಕರ ವಿಶ್ವಾಸದ ಜನರಾಗಿರುವರೆಂದು ನೆನಸಬೇಕಾಗುತ್ತದೆ. ಸ್ಯಾಮನ್ ಕಮೀಶನಿನ ನಂತರ ಮಜೂರಪಕ್ಷದಲ್ಲಿ ಸ್ಪಷ್ಟವಾಗಿ ತೋರಿಬರುವ ಮಾನಸಿಕತೆಯನ್ನು ನೋಡಿದರೆ ಇಂತಹ ಆಶಾವಾದಿಗಳು ಕೂಡ ಆಶಿಸುವ ವಿಷಯವೇನೂ ಕಾಣುವುದಿಲ್ಲ. ಒಂದು ಸಮಯದಲ್ಲಿ ಸರಕಾರದಿಂದ ಬಹಿಷ್ಕೃತವಾಗುವಂತಹ ಪುಸ್ತಕವನ್ನು ಬರೆದಿದ್ದ ರಾಮ್ಸೆಮೆಕ್ಡೊನಾಲ್ಡರು ಇಂಗ್ಲೆಂಡಿನ ಪ್ರಧಾನ ಮಂತ್ರಿಪದದ ಸವಿಯುಂಡಂದಿನಿಂದ ಬೇರೆ ಜನರಾಗಿಯೇ ಹೋಗಿದ್ದಾರೆ. ಅಲ್ಲದೆ ಬ್ರಿಟಿಷ ಸರಕಾರವು 'ಸಾಮ್ರಾಜ್ಯವಾದದ ಅಭಿಮಾನವನ್ನು ಪ್ರತಿ ಆಂಗ್ಲೇಯನಲ್ಲಿಯೂ ಪ್ರೇರಿಸುತ್ತಿದ್ದು, ಈಗ ಮಜೂರನಾದರೂ ಈ ಲೋಕವನ್ನು ದಬ್ಬಾಳುವ ಶಕ್ತಿಯನ್ನು ತಮ್ಮ ಮುಖಂಡರಲ್ಲಿ ಕಂಡು ಹಿಗ್ಗಳಿಸಿಕೊಳ್ಳುವರು. ಇದೀಗ ಪ್ರಕೃತ ಇಂಗ್ಲೆಂಡಿನ ದೊಡ್ಡವರ ಮತ್ತು ಬಡವರ ಮಾನಸಿಕತೆಯಾಗಿರುತ್ತದೆ. ಇದು ಇತ್ತೀಚೆಗೆ ಮತ್ತೂ ವಿಸ್ತಾರಿತವಾಗುತ್ತಾ ಬರುತ್ತಿದೆ. ಸ್ಯಾಮನ್ ಕಮೀಶನ್ನಿನ ಮಜೂರ ಪಕ್ಷದ ಪರವಾಗಿ ನೇಮಿಸಲ್ಪಟ್ಟ ಮೆಂಬರರಾದ ಮಿ. ಹಾರ್ಟ್ಸ್‌ಹೋರ್ನ ಎಂಬವರು ಹಿಂದೀ ಮಜೂರ ಹಿತಕ್ಕಾಗಿ ಎಂಬ ಹೊರವೇಷದಿಂದ ಉಚ್ಚರಿಸಿದ ಕೆಲವು ಅಭಿಪ್ರಾಯಗಳನ್ನು ನೋಡಿದರೆ ಈ ಮಜೂರ ಪಕ್ಷದ ಉದಾರ ಧೋರಣದ ಗುಟ್ಟು ಬಯಲಾಗುವುದು. ಹಿಂದೂಸ್ಥಾನದ ಭಾಗ್ಯವಿಧಾತನ ಸೂತ್ರವನ್ನು ಕೈಯಲ್ಲೆತ್ತಿಕೊಂಡಿರುವ ಈ ಮಹಾಶಯರು ಮಜೂರರ ದೀನಸ್ಥಿತಿಯನ್ನು ವಿವರಿಸುವುದರಲ್ಲಿ ನಮ್ಮದೇನೂ ಅಡ್ಡಿಯಿರದು. ಆದರೆ ಯಾವುದೊಂದೂ ಪರಿಶೋಧನೆಯಿಲ್ಲದ ಹಿಂದೀ ಮಜೂರರ ಹೀನಸ್ಥಿತಿಯನ್ನು ಅತಿಶಯೋಕ್ತಿಯಲ್ಲಿ ವರ್ಣಿಸಿ ಅದಕ್ಕಾಗಿ ಹಿಂದೀ ಧಾಂಡವಲಗಾರರನ್ನು ಜವಾಬ್ದಾರಿಕೆಯ ಸ್ಪರ್ಶವಿಲ್ಲದ ಮಾತುಗಳಿಂದ ಹಳಿದು, ಈ ಮೂಲಕ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ತಮ್ಮ ಜನತೆಯ ತುಚ್ಛೀಕಾರಕ್ಕಾಗಿ ತಯಾರಿಸುವುದು ಈ ಹಾರ್ಟ್ಸಹೋರ್ನರ ತುತೂರಿಯ ಉದ್ದೇಶವಾಗಿರುತ್ತದೆ. ಇವರ ದೃಷ್ಟಿಯಲ್ಲಿ ತಾತಾ ಕಂಪೆನಿಯವರು ಮಜೂರರ ಪಕ್ಷದಲ್ಲಿ ಮಹತ್ಪಾಪಕ್ಕೆ ಪಾತ್ರರು, ಆದರೆ ಬಿಳೇಯವರ ಬಂಗಾಳ ನಾರಿನ ಗಿರಣಿ, ಅಸ್ಸಾಮಿನ ಚಾದೋಟ, ಮೊದಲಾದ ಸಂಸ್ಥೆಗಳ ಮಜೂರರ ಪರಿಸ್ಥಿತಿಯನ್ನು ನೋಡಿದ್ದಾದರೆ ಇವರಿಗೆ ಹಿಂದೀಯರ ಕಣ್ಣಿಗೆ ಹೋಗುತ್ತಿರಲಿಲ್ಲ. ನಿಷ್ಪಕ್ಷಪಾತದ ಬೇಜ(badge)ನ್ನು ಹಾಕಿರುವ ಈ ಸ್ಯಾಮನ್ ಕಮಿಶನ್ನಿನ ಸದಸ್ಯರು ಅದರಿಂದ ಇಂತಹ ದೋಷದೃಷ್ಟಿಯವರನ್ನು ಹೊರತಳ್ಳುವುದರ ಅವಶ್ಯಕತೆಯು ಕಾಣಬರುವುದು. ಆದರೆ ಆಳರಸರು ಅದಕೊಪ್ಪಲಾರರು.

ನಮ್ಮ ಜಿಲ್ಲೆಯಲ್ಲಿ ರಿಸರ್ವೇ.

ನಮ್ಮ ಜಿಲ್ಲೆಯೊಳಗೆ ಬೇಗನೇ ಆಗಲಿಕ್ಕಿರುವ ರಿಸರ್ವೇಯ ವಿಷಯವಾಗಿ ಈ ಪತ್ರಿಕೆಯಲ್ಲಿ ಈ ಮೊದಲು ಪ್ರತ್ಯೇಕ ಲೇಖನಗಳು ಕೊಡಲ್ಪಟ್ಟಿವೆಯಲ್ಲದೆ ಈಗ ಪ್ರಚಲಿತವಿರುವ ಭೂಕಂದಾಯದ ಪರಿಸ್ಥಿತಿಯನ್ನು ವಿಮರ್ಶಿಸಿ ಲೇಖನಗಳು ಕೊಡಲ್ಪಟ್ಟಿವೆ. ಇದೇ ಸಂಬಂಧದಲ್ಲಿ ಕಳೆದ ತಾ. ೧೪ರಲ್ಲು ಒಂದು ವರ್ಗವಾರರ ಸಭೆಯು ಮುಂಡಾಜೆಯಲ್ಲಿ ಸೇರಿದ್ದಿತಾಗಿಯೂ ಅಲ್ಲಿ ರಿಸರ್ವೇಯ ಅನಾವಶ್ಯಕತೆ ಮತ್ತು ಮಲೆ ಪ್ರದೇಶಗಳ ಸಾಂಪತ್ತಿಕ ಮತ್ತು ಆರೋಗ್ಯದ ಸ್ಥಿತಿಯನ್ನು ಪರೀಕ್ಷಿಸುವ ಬಗ್ಗೆ ಒಂದು ಕಮಿಟಿಯ ನೇಮಕವನ್ನು ಸೂಚಿಸಿ ಎರಡು ಠರಾವುಗಳು ಮಂಜೂರಾದುವು ಎಂದೂ ತಿಳಿದು ಬರುತ್ತಿದೆ. ರಿಸರ್ವೆಯೆಂದರೆ ಭೂಕಂದಾಯವನ್ನು ಹೆಚ್ಚಿಸುವುದೆಂದಲ್ಲದೆ ಕಡಮೆಮಾಡುವ ಅರ್ಥವೇ ಅದರಲ್ಲಿಲ್ಲ; ಹಿಂದೂಸ್ಥಾನದಲ್ಲಿ ಈಗ ಸರಕಾರವು ತೆಗೆದುಕೊಳ್ಳುವ ಭೂಕಂದಾಯವು ಬಹಳ ಹೆಚ್ಚಾಗಿರುತ್ತದೆಂಬುದನ್ನು ಎಲ್ಲರೂ ಬಲ್ಲರು. ಸರಕಾರವು ಕ್ಷಾಮ ನೆರೆಗಳ ಸಮಯದಲ್ಲಿ ಕೂಡ ಜನರಿಗೆ ಯಾವುದೊಂದು ರಿಯಾಯತಿ ತೋರಿಸದೆ ತನ್ನ ಪಾಲನ್ನು ಅಲ್ಲಿ ಇರಲಿ ಇಲ್ಲದಿರಲಿ, ಹೇಗೂ ಮಾಡಿಕೊಂಡು ಹೋಗುತ್ತದೆ. ಸ್ಥಿತಿಯು ಹೀಗಿದ್ದು, ಕಂದಾಯವು ಕಡಮೆಯಿಲ್ಲದೆ ಇರುವಾಗ ರಿಸರ್ವೇ ಎಂಬುದೊಂದು ಬರುತ್ತದೆನ್ನುವಾಗ ಎಲ್ಲರೂ ಹೆದರುವ ಸಮಯವಾಗುತ್ತದೆ. ಅಲ್ಲದೆ ಮೇಲಿನ ಸಭೆಯಲ್ಲಿ ಸೂಚಿಸೋಣಾದಂತೆ ಕೆಲವು ಮಲೆ ಪ್ರದೇಶಗಳಲ್ಲಿ ಅನಾರೋಗ್ಯದ ಕಾರಣದಿಂದ ಜನವಸತಿಯೇ ಕಡಮೆಯಾಗಿ ಬಂದು, ಹೊರಿಸಲ್ಪಟ್ಟ ಕಂದಾಯವೇ ಹೆಚ್ಚಾಗಿರುತ್ತದೆ. ಶ್ರೀಯುತ ಕಾರಂತರು ಹೇಳಿದಂತೆ ಒಳಪ್ರದೇಶಗಳಲ್ಲಿ ಜನರು ಬಹಳ ಕಷ್ಟದಲ್ಲಿರುವರು. ಕೌನ್ಸಿಲ್ ಮೆಂಬರರಾದ ಶ್ರಿ ಕಾರಂತರು ಇದನ್ನು ಸರಿಯಾಗಿ ಪರಿಶೋಧಿಸಿ ಸರಕಾರದ ಲಕ್ಷ್ಯಕ್ಕೆ ತರಲು ನಿರ್ಧರಿಸಿದುದೂ ಅಭಿನಂದನೀಯವಿದೆ. ಈ ಒಳ ಪ್ರದೇಶಗಳ ಜನತೆಯ ದಿನನಿತ್ಯದ ಸಂಕಷ್ಟಗಳ ರಾಶಿಯು ಯಾರಿಗೂ ಹೊರಗಿನವರಿಗೆ ತಿಳಿಯುವುದು ಕಷ್ಟವಿದೆ. ಆದುದರಿಂದ ಇವೆಲ್ಲಾ ಸಂಗತಿಗಳನ್ನು ಯೋಗ್ಯ ಅಧಿಕಾರಿಗಳ ಮುಂದೆ ಅದಷ್ಟು ತ್ವರ್ಯದಲ್ಲಿ ತಂದು ಜನರ ಕಷ್ಟ ನಿವಾರಣೆಮಾಡಬೇಕಾಗಿದೆ.

ಹಿಂದೀ ಮಜೂರರಿಗೆ ಎಚ್ಚರಿಕೆ!

ಬ್ರಿಟಿಷ ಮಜೂರ ಧುರೀಣರು ಇತ್ತೀಚೆಗಿನ ವರ್ತನವನ್ನು ನೋಡಿದರೆ ಇವರು ಗೋಮುಖ ವ್ಯಾಘ್ರವೆನ್ನಲಿಕ್ಕೆ ಸಂದೇಹ ತೋರುವುದಿಲ್ಲ. ಕೆಲವು ಬ್ರಿಟಿಷ ಮಜೂರರು ಹಿಂದೂಸ್ಥಾನಕ್ಕೆ ಬಂದಂದಿನಿಂದ ಈಗ ಹಲವು ಕಡೆಗಳಲ್ಲಿ ಸಾವಿರಾರು ಜನರು ಮುಷ್ಕರ ಹಾಕಿ ಕಷ್ಟದಲ್ಲಿರುವರು. ಹಿಂದೀ ಕೈಗಾರಿಕೆಗಳನ್ನು ಕೆಡಿಸಿ ಇಂಗ್ಲೆಂಡಿನ ಮಜೂರರ ನಿರುದ್ಯೋಗ (unemployment)ವನ್ನು ನಿವಾರಿಸುವ ಉಪಾಯವೂ ಇದು ಎಂದು ಸಂದೇಹಿಸಬೇಕಾಗುತ್ತದೆ. ಮಧ್ಯದಲ್ಲಿ ಹಿಂದೀ ಮಜೂರರನ್ನು ರಾಷ್ಟ್ರೀಯ ಚಳವಳದಿಂದ ದೂರ ಮಾಡಲಿಕ್ಕೂ ಇಂಗ್ಲೆಂಡಿನ ಟ್ರೇಡ್ ಯೂನಿಯನ್ನಿನ ಪ್ರಯತ್ನಗಳು ನಡೆಯುತ್ತಿವೆಯಾಗಿಯೂ ತಿಳಿದು ಬರುತ್ತಿದೆ. ಇದು ನಿಜವಾದರೆ ಹಿಂದೂಸ್ಥಾನದ ರಾಜಕೀಯ ಮತ್ತು ಸಾಂಪತ್ತಿಕ ಅಭಿವೃದ್ಧಿಯನ್ನು ಕೆಡಿಸಲು ಗುಟ್ಟಿನ ಪ್ರಯತ್ನಗಳನ್ನು ಬ್ರಿಟಿಷ ಮಜೂರರು ಮಾಡುತ್ತಿರುವರಾಗಿ ಅನ್ನಬಹುದು. ಆದುದರಿಂದ ಹಿಂದೀಯರು ದೊಡ್ಡವರೂ ಬಡವರೂ ಕೂಡಿ ಇಂಗ್ಲೆಂಡನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಂಡಿರಬೇಕು. ಅದರ ಹಿಂದೀ ಹಿತದ ಪಯತ್ನಗಳಲ್ಲಿ ಹಿಂದೀ ಲಾಭವು ತಿಲಾಂಶವಾದರೂ ಇರುವುದಿಲ್ಲವೆಂಬುದನ್ನು ಪ್ರತಿ ಒಬ್ಬರೂ ತಿಳಿಯಲೇಬೇಕು. ಹಿಂದೀ ಮಜೂರರನ್ನು ಹಿಂದೀ ರಾಷ್ಟ್ರೀಯತ್ವದಿಂದ ದೂರ ವಿರಿಸಲು ಯತ್ನಿಸಿ ಬ್ರಿಟಿಷ ಮಜೂರರು ಹಿಂದೀ ಆಶಯಗಳಿಗೆ ವಿರೋಧವನ್ನು ತೋರಿಸುವರು. ಆದುದರಿಂದ ಹಿಂದೀಯರ ಆಶಯಗಳ ಮಟ್ಟಿಗೆ ಬ್ರಿಟಿಷರ ಯಾವ ಪಕ್ಷವಾದರೂ ಒಂದೇ ಎಂದು ನಾವು ಎಷ್ಟು ಬೇಗ ತಿಳಿಯುವೆವೊ ಅಷ್ಟು ಉತ್ತಮವಿದೆ.

ಯುದ್ಧವನ್ನು ನಿವಾರಿಸುವುದು.

ಯುದ್ಧವು ಆಗದಂತೆ ಮಾಡಲಿಕ್ಕಾಗಿ ಅಮೇರಿಕವು ಸೂಚಿಸಿದ ಒಪ್ಪಂದವೂ, ಫ್ರಾನ್ಸು ತನಗೆ ಅನುಕೂಲವಾಗುವಂತೆ ಸೂಚಿಸಿದ ಒಪ್ಪಂದವೂ, ಬ್ರಿಟಿಷರು ಒಪ್ಪುವೆವೆನ್ನುವ ಒಪ್ಪಂದವೂ ಹೀಗೆ ಮೂರು ರಾಷ್ಟ್ರಗಳು ಸೂಚಿಸಿದ ಮೂರು ಒಪ್ಪಂದಗಳೂ ಪ್ರಕಟವಾಗಿವೆ. ಅವುಗಳನ್ನು ನೋಡಿದರೆ ಈ ಯುದ್ಧ ನಿವಾರಣೋಪಾಯವು ಬರೇ ಕಣ್ಣುಕಟ್ಟಿನ ಪ್ರಯತ್ನವೆಂದು ತೋರುವುದು. ಪ್ರತಿ ಒಬ್ಬರೂ ತಾವು ಈ ಲೋಕದ ಒಂದಂಶವೆಂದು ತಿಳಿಯದೆ, ತಮ್ಮ ಜನಾಂಗ, ತಮ್ಮ ಗೌರವ ಮತ್ತು ತಮ್ಮ ಹಕ್ಕುಗಳೆಂದು ಒಬ್ಬರಿಗೊಬ್ಬರು ವಿರೋಧವಾಗುವಂತಹ ಸ್ವಾರ್ಥಹಿತಗಳ ಕಡೆಗೆ ಲಕ್ಷಿಸಿಯೇ ಇರುವರೋ ಆ ವರೆಗೆ ಯುದ್ಧವನ್ನು ದೇಶಾಯುದೇಶೀರಾಗಿ ಮಾಡುವುದೆಂದರೆ ಅರ್ಥವಿಲ್ಲದ ಮಾತು. ಪ್ರತಿ ಒಬ್ಬರಿಗೂ ತಮ್ಮ ಪ್ರತ್ಯೇಕ ಹಿತವನ್ನು ಕಾಯಲಿಕ್ಕೆ ಇದ್ದೇ ಇದೆ. ಹೀಗಿರುತ್ತ ಯುದ್ಧನಿವಾರಣೆಯ ಈ ಪ್ರಯತ್ನವು ಯಾರನ್ನು ಮೋಸಗೊಳಿಸಲಿಕ್ಕೆಂದು ತಿಳಿದುಬರುವುದಿಲ್ಲ. ಈಗ ಸೂಚಿಸೋಣಾದ ಒಪ್ಪಂದದಲ್ಲಿ ಗುಟ್ಟಿನ ಒಪ್ಪಂದಗಳ ಗತಿ ಏನೆಂದು ತಿಳಿದು ಬರುವುದಿಲ್ಲ, ಕಳೆದ ಮಹಾಯುದ್ಧದಲ್ಲಿ ಗುಟ್ಟಿನ ಒಪ್ಪಂದಗಳೇ ಬಹಳ ಹಾನಿಮಾಡಿದ್ದುವು. ಲೀಗ್ ಒಫ್ ನೇಶನ್ಸು ಸ್ಥಾಪಿತವಾದರೂ ಜನಾಂಗಗಳೊಳಗಿನ ಈ ಕ್ರಮವು ಹೋಗಿಲ್ಲ. ಇಂತಹ ಒಪ್ಪಂದಗಳು ಶಾಂತಿಸಮಯದಲ್ಲಿ ಅನುಭೂತಪೂರ್ವಕವಾಗಿ ಆಲೋಚಿಸಬಹುದೇ ಹೊರತು, ರಾಜತಂತ್ರಜ್ಞರು ಕೋಪಾಯಮಾನರಾಗಿ ಅಲ್ಟಿಮೇಟಮ್ (ultimatum)ಗಳು ಹಾಂಕಿಡುವಾಗ ಯಾವ ಪ್ರಯೋಜನವೂ ಆಗಲಾರದು.

ನೋಟಗಳು.

NOTE....S.

ಆಯುರ್ವೇದ ಪರಿಷದಧ್ಯಕ್ಷರಿಗೆ ಕನ್ನಡ ಗೊತ್ತಿಲ್ಲ. ಆದರೆ ಆ ಕಾರಣದಿಂದ ಅವರು ಅಧ್ಯಕ್ಷ ಪದವಿಗೆ ಅನರ್ಹರೇ? ಆಯುರ್ವೇದ ಪರಿಷತ್ತು ಸಾಹಿತ್ಯ ಪರಿಷತ್ತಲ್ಲ; ಅದು ವಿಜ್ಞಾನ ಪರಿಷತ್ತು. ಸಾಹಿತ್ಯ ಪರಿಷತ್ತಾದರೂ ಪರಭಾಷೆಯ ವಿಜ್ಞರಿಗೆ ಅಧ್ಯಕ್ಷಪದವಿಯನ್ನು ಕೊಟ್ಟು ಪ್ರಯೋಜನ ಹೊಂದಲಿಕ್ಕೆ ಸಾಧ್ಯವಾಗುತ್ತಿದೆ. ಹಾಗಿರುವಾಗ ಇಂತಹ ವೈಜ್ಞಾನಿಕ ಪರಿಷತ್ತುಗಳ ಅಧ್ಯಕ್ಷರಿಗೆ ಭಾಷಾ ನಿರ್ಬಂಧವನ್ನಿಡುವುದು ಬರೇ ಸಂಕುಚಿತ ಮಾನಸಿಕತೆಯನ್ನು ತೋರಿಸುವುದು.

• • • •

ನಮ್ಮ ಆಯುರ್ವೇದ ಪರಿಷತ್ತಿನ ಅಧಿವೇಶನವೂ, ಇಂಗ್ಲಿಷಿನಲ್ಲಿ ಅನ್ನುವಂತೆ ಬಹಳ Livelyಯಾಗಿತ್ತಂತೆ. ಸಣ್ಣದೊಂದು ಬಿರುಗಾಳಿಯೂ ಬೀಸಿದ್ದಿತಂತೆ. ವಿಶೇಷ ನಷ್ಟವೇನೂ ಸಂಭವಿಸಲಿಲ್ಲವೆಂಬುದು ಸಮಾಧಾನಕರವಾದುದು.

• • • •

ಕರ್ನಾಟಕ ಚಳವಳದೊಡನೆ ಕೆಲವರ ಕೌಳವಾಭಿಮಾನವೂ ಕೊಂಕಣಿಯ ಅಭಿಮಾನವೂ ಒಮ್ಮೆಂದೊಮ್ಮೆ ಜಾಗೃತವಾಗಿ ಹೋಗಿಯದೆ. ಸ್ವದೇಶಾಭಿಮಾನಿ ಪತ್ರಿಕೆಯು ಈ ನೂತನ ವಿಭಜನೆಯನ್ನೊಪ್ಪದಿರುವಾಗ ಜನತೆಯೊಳಗಿನ ವಿಚಾರ ಕ್ರಮವನ್ನು ಎಲ್ಲರ ಅವಗಾಹನೆಯ ಬಗ್ಗೆ ಕೊಡದಿರಲಾರದು.

• • • •

ಕರ್ನಾಟಕ ಆಯುರ್ವೇದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ "ವೈದ್ಯ" ಬಿರುದು ಸಾಕಾಗಿಲ್ಲವಂತೆ. ಈ ಬಾರಿಯ ಆಯುರ್ವೇದ ಸಮ್ಮೇಳನದ ಅಧ್ಯಕ್ಷರು ಅದನ್ನು "ಭಿಷಕ್" ಆಗಿ ಮಾಡಿರುವರಂತೆ. ಇನ್ನು "ವಿದ್ವಾನ್" ಎಂದರೆ ದೊಡ್ಡ ಪಂಡಿತರಾಗುತ್ತಾರೋ "ಭಿಷಕ್" ಎಂದರೆ ದೊಡ್ಡವರಾಗುವರೊ ನೋಡಬೇಕು.

• • • •

ಗುಲಾಬಿ ಹೂವನ್ನು ಯಾವ ಹೆಸರಿನಿಂದ ಕರೆದರೂ ಅದರ ಸುವಾಸನೆಯು ಹೆಚ್ಚುಕಡಿಮೆಯಾಗಲಾರದೆಂದು ಶೇಕ್ಸಪಿಯರರು ಬರೆದರು. ನಮ್ಮ ನೂತನ ವೈದ್ಯರಿಗೆ ಈ ವಿಷಯದಲ್ಲಿ ಪ್ರತ್ಯೇಕ ಅಭಿಪ್ರಾಯಗಳನ್ನು ಕೊಡಲಿಂಬಹುದು.

• • • •

ಕರ್ನಾಟಕ ಸಾಹಿತ್ಯ ಸಮ್ಮೇಲನವು ಗುಲಬರ್ಗಾದಲ್ಲಿ ನಡೆಯುವುದು. ಬೆಳಗಾಂವಿಗೆ ಕರೆದ ಮರಾಠಾ ಸಾಹಿತ್ಯ ಸಮ್ಮೇಲನಕ್ಕೆ ಕನ್ನಡಿಗರ ತಿರಸ್ಕಾರ ಹೆಚ್ಚೊ, ಅಥವಾ ಗುಲಬರ್ಗಾದಲ್ಲಿ ಕೂಡುವ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ಪುರಸ್ಕಾರ ಹೆಚ್ಚೊ ನೋಡಬೇಕು.

• • • •

ಶ್ರೀ|| ಬೇಂದ್ರೆ ಮೊದಲಾದವರಿಗೆ ಮರಾಠಾ ಸಾಹಿತ್ಯ ಸಮ್ಮೇಲನಕ್ಕೆ ತಮ್ಮ ನಿಷೇಧಗಳನ್ನು ವ್ಯಕ್ತಗೊಳಿಸಲಿಕ್ಕೆ ಅಷ್ಟು ದೂರ ಹೋಗಲಿಕ್ಕೆ ಸಾಧ್ಯವಿರುವಾಗ ಕಳೆದ ಮಂಗಳೂರು ಸಾಹಿತ್ಯ ಸಮ್ಮೇಲನಕ್ಕೆ ಅವರಿಗಾಗಲಿ, ಇತರರಿಗಾಗಲಿ ಬರಲಿಕ್ಕಾಗದುದು ಚಿಂತನೀಯವಿದೆ.

• • • •

ಹೊರಗಿನ ಆಘಾತಗಳನ್ನು ಪ್ರತಿರೋಧಿಸುವುದರಲ್ಲಿ ಉತ್ಸಾಹಕರಾಗುವಾಗ ಕನ್ನಡಿಗರು ಒಳಗಿನ ಬಲವನ್ನು ಬೆಳೆಯಿಸಲಿಕ್ಕೆ ಅಲಕ್ಷಿಸಬಾರದು.

• • • •

ಮಜೂರರನ್ನು ಕೆಟ್ಟ ರೀತಿಯಲ್ಲಿ ನಡಿಸಲಿಕ್ಕೆ ತಾತಾ ಕಂಪೆನಿಯವರಷ್ಟು ಕಠಿಣರು ಮತ್ತಾವ ಧಾಂಡವಲಗಾರರೂ ಇಲ್ಲವೆಂದು ಸ್ಯಾಮನ್ ಕಮಿಶನ್ನಿನ ಮೆಂಬರರಾಗಿರುವ ಹಾರ್ಟ್ಸಹೋರ್ನರ ಅಂಬೋಣ. ಈಗಲಾದರೂ ತಾತಾ ಕಂಪೆನಿಯು ಸ್ಯಾಮನ್ ಕಮಿಶನನ್ನು ಬಹಿಷ್ಕರಿಸುವರೇ?

• • • •

ಮನೆಯ ಪಕಾಶಿಗಳನ್ನು ಲೆಕ್ಕಮಾಡುವುದೆಂಬ ಮಾತಿರುತ್ತದೆ. ಸ್ಯಾಮನ್ ಕಮಿಶನು ಹಿಂದೂಸ್ಥಾನವನ್ನು ಸುಧಾರಿಸಲಿಕ್ಕೆ ಮನೆ ಪರೀಕ್ಷಿಸುವೆವೆಂದು ಬಂದವರು ಈಗಲೆ ಪಕಾಶಿಗಳ ಲೆಕ್ಕವನ್ನು ಆರಂಭಿಸಿರುವರು. ಹಿಂದೀಯರಿಗೆ ಎಚ್ಚರಿಕೆ!

• • • •

ಶಿರಹಟ್ಟಿಯವರು ತಮ್ಮ ನಾಟಕಗಳಿಂದ ಬಯಲಾಟಗಳೊಡನೆ ಸ್ಪರ್ಧಿಸುವರೇ? ಬಯಲಾಟದವರು ಕೋಳಿಕೂಗಿದಾಗ ತಮ್ಮ ಆಟಗಳನ್ನು ಮುಗಿಸಲಿಚ್ಛಿಸುವರು. ಇವರ ಸಂಪೂರ್ಣ ರಾಮಾಯಣವು ಅದಕ್ಕಿಂತಲೂ ಮೀರುತ್ತಿರುವದು.

• • • •

ಇದೀ ರಾತ್ರಿ ನಾಟಕವು ಹಳ್ಳಿಗಾರರಿಗೆ ಬಹಳ ಅಗ್ಗವಾಗಿ ತೋರಬಹುದೇನೋ. ಆದರೆ ಅದು ರಂಗಭೂಮಿಯ ಅಭಿರುಚಿಗೆ ಹಿತಕರವಾಗಿಲ್ಲ.

ಗಳನ್ನು ಈ ವಿಷಯದಲ್ಲಿ ...

ರಚನೆ ಮತ್ತು ಕೌನ್ಸಿಲ್ ಸ್ಥಾನಗಳ... ಪ್ರತ್ಯೇಕಿಸುವುದನ್ನು ತೆಗೆದುಹಾಕಿ ... ವನ್ನು ಹೊಂದಲು ಇತರ ಉಪಾಯಗಳನ್ನು ... ವುದು, ಇವುಗಳಿಗಾಗಿ ಎರಡು ಕಮಿಟಿಗಳ ... ದ್ದುವು. ಆದರೆ ಈ ಕಮಿಟಿಗಳ ವರದಿಯು ... ವನ್ನು ಉಪಯೋಗಕರವಲ್ಲವಾಗಿ ಕಾಣುವುದು ... ಗಳಲ್ಲಿ ಒಂದೇ ಅಭಿಪ್ರಾಯವು ಉಂಟಾಗದೆ ... ನೆಗಳೂ ಕೊಡಲ್ಪಟ್ಟಿಲ್ಲ. ಸಾಂಕೇತಿಕವಾಗಿ, ... ದಲ್ಲಿ ಥಲ್ಲಿಯಲ್ಲಿ ಯಾವ ಸ್ಥಿತಿಯಲ್ಲಿದ್ದೆವೋ ಅದೇ ಸ್ಥಿತಿಯಲ್ಲಿಯೇ ಈ ಎಲ್ಲಾ ಪಕ್ಷಗಳ ಪರಿಷತ್ತು ಇರುವುದಾಗಿ ಡಾ। ಅನ್ಸಾರಿಯವರು ಸೂಚಿಸಿದರು. "ನಾವು ನಮ್ಮೊಳಗೆನೇ ಜಗಳವಾಡುತ್ತಾ ಸಮಯವನ್ನು ಅನಾವ್ಯಯಗೊಳಿಸುವಾಗ ನಮ್ಮ ವಿರೋಧಿಗಳು ನಮ್ಮ ಪ್ರತಿಯಾಗಿ ಅಭಿಪ್ರಾಯಗಳನ್ನು ಹುಟ್ಟಿಸುತ್ತಾ, ನಮ್ಮ ದೇಶದ ಧ್ಯೇಯಕ್ಕೆ ಪ್ರತಿರೋಧಗಳನ್ನುಂಟುಮಾಡುವರು" ಎಂದು ಅವರು ಹೇಳಿದುದನ್ನು ಪ್ರತಿಬ್ಬರೂ ಚೆನ್ನಾಗಿ ಆಲೋಚಿಸುವುದು ಅಗತ್ಯವಿದೆ.

ಹಿಂದೂಸ್ಥಾನಕ್ಕಾಗಿ ಆಶಿಸಲ್ಪಡುವಂತಹ ಸಂಸ್ಕಾರ ರಚನೆಯನ್ನು (constitution) ಮಾಡುವುದೇ ಪ್ರಕೃತದ ಈ ಎಲ್ಲಾ ಪಕ್ಷಗಳ ಪರಿಷತ್ತಿನ ಉದ್ದೇಶವಾಗಿದ್ದಿತು. ಆ ಪ್ರಕಾರ ಡಾ। ಅನ್ನಿ ಬಿಸೆಂಟಮ್ಮನವರು ಇಂತಹ ರಚನೆಯನ್ನು ತಯಾರಿಸುವ ಬಗ್ಗೆ ...

ವಿವೇಕ ಅಥವಾ ವಿಹಿತವಲ್ಲವೆಂದು ಸ್ವಾಗತಾಧ್ಯಕ್ಷರು ಹೇಳಿದುದರೊಡನೆ ಇಡೀ ಸಮ್ಮೇಲನವೂ ಅಹುದೆನ್ನುವುದೆಂದು ನೆನಸುವೆವು. ಆಯುರ್ವೇದರೀತ್ಯಾ ರೂರಲ್ ಡಿಸ್ಪೆನ್ಸರಿಸ್ ಗಳನ್ನು ತೆರೆಯುವುದು, ದೇಶೀಯ ವೈದ್ಯಕೀಯ ಶಾಲೆಯನ್ನು ಕೋಲೇಜಾಗಿ ಮಾಡುವುದು, ಮುಂತಾದ ಸೂಚನೆಗಳು ಅನುಸರಣೀಯವಿವೆ.

ಅಧ್ಯಕ್ಷರಾದ ವೈದ್ಯಪಂಚಾನನ ಗಂಗಾಧರ ಶಾಸ್ತ್ರಿಗುಣೇ ಇವರ ಭಾಷಣವು ಸ್ವಲ್ಪಮಟ್ಟಿಗೆ ದೀರ್ಘವಿದೆ. ಅಧ್ಯಕ್ಷರ ವಿದ್ವತ್ತು ಮತ್ತು ಪಾಶ್ಚಾತ್ಯ ಪೌರ್ವಾತ್ಯ ವೈದ್ಯ ಕ್ರಮಗಳ ಜ್ಞಾನವೂ ಚೆನ್ನಾಗಿದೆ. ಅಲ್ಲದೆ ಪಾಶ್ಚಾತ್ಯ ಪೌರ್ವಾತ್ಯ ಪದ್ಧತಿಗಳೊಳಗಿನ ಸಮಾನತೆಗಳನ್ನು ಅವರು ಬಹಳ ಚೆನ್ನಾಗಿ ತೋರಿಸಿದ್ದಾರೆ. Thyroid ಮೊದಲಾದ ಕೆಲವು ಪಾಶ್ಚಾತ್ಯ ಆಧುನಿಕ ಶೋಧಗಳನ್ನು ಕೂಡ ಅವರು ಆಯುರ್ವೇದದಲ್ಲಿ ಕಾಣಬಲ್ಲವರಾಗಿದ್ದಾರೆ. ಅವರ ಭಾಷಣವು ವೈದ್ಯ ಮಂಡಳಿಗೆ ಅತ್ಯಂತ ಉತ್ತೇಜಕವೂ ಉಪಕಾರಿಯೂ ಆಗಲು ಕಾರಣವಿದೆ.

ಆದರೆ ಅಧ್ಯಕ್ಷರು ತಮ್ಮ ಭಾಷಣವನ್ನು ಆಯುರ್ವೇದ ಶಾಸ್ತ್ರದ ಮೇಲಿನ ಉಪನ್ಯಾಸವಾಗಿ ಮಾಡುವುದಕ್ಕಿಂತ ಆಯುರ್ವೇದದ ಪುನರ್ವ್ಯವಸ್ಥೆ, ಅದರಲ್ಲಿ ಉಂಟುಮಾಡಬೇಕಾಗಿದ್ದ ಸುಧಾರಣೆಗಳು, ಅದರ ಮುಂದಿನ ಅಭಿವೃದ್ಧಿ ಬಗ್ಗೆ ಕೈಕೊಳ್ಳತಕ್ಕ ಮಾರ್ಗಗಳು ಇತ್ಯಾದಿಗಳ ಕಡೆಗೆ ಹೆಚ್ಚಿನ ಲಕ್ಷ್ಯಕೊಟ್ಟಿದ್ದರೆ ಉತ್ತಮವಿದ್ದಿತು. ಏಕೆಂದರೆ ಆಯುರ್ವೇದದಲ್ಲಿ ಏನುಂಟು? ಎಂಬುದು ಪ್ರಕೃತದ ಪ್ರಶ್ನೆಯಲ್ಲ. ಅದನ್ನು ಆಸಕ್ತರಾದವರು ತಿಳಿಯಲೇ ಬೇಕು; ಮತ್ತು ಆಗಾಗ ಉತ್ತಮ ಗ್ರಂಥ ಪ್ರಕಟನಗಳಿಂದ ಅದು ತಿಳಿಯಲು ಸಾಧ್ಯವಾಗುವುದು. ಇಂತಹ ಸಮ್ಮೇಲನಗಳ ಉದ್ದೇಶವು ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸುವುದಾಗಿದೆ. ಈ ದೃಷ್ಟ್ಯಾ ಅಧ್ಯಕ್ಷರ ಭಾಷಣವು ತೃಪ್ತಿಕರವಿರಲಿಲ್ಲವೆನ್ನಬಹುದು.

ಠರಾವುಗಳೂ ಸಂಬಂಧಪಟ್ಟ ವಿಷಯಗಳ ಮಟ್ಟಿಗೆ ಬಹಳ ಉಪಕಾರಿಯಾಗಬಹುದಾದರೂ ಸಮ್ಮೇಲನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವಷ್ಟು ಮಹತ್ವದ ಒಂದು ಠರಾವಾದರೂ ಅಲ್ಲಿ ಮಂಜೂರಾಗಲಿಲ್ಲ. ಆಯುರ್ವೇದದಲ್ಲಿ ನವಜೀವನವನ್ನು ತುಂಬುವ ಕಾರ್ಯಕ್ರಮವು ಅಲ್ಲಿ ರಚಿಸಲ್ಪಡಲಿಲ್ಲ. ಅಷ್ಟೊಂದು ವಿಶೇಷವಲ್ಲದ ಠರಾವುಗಳಿಗಾಗಿಯೇ ಅನಾವಶ್ಯಕ ಭೇದಗಳು ತಲೆದೋರಿದಂತೆ ಕಾಣುವುದಲ್ಲದೆ, ಆಯುರ್ವೇದವನ್ನು ಈಗಿನ ನಾಗರಿಕತೆಯ ಮಹತ್ವಕ್ಕೆಬ್ಬಿಸುವ ಪ್ರಯತ್ನಗಳು ಅಲ್ಲಿ ನಡೆಯಲಿಲ್ಲ.

ಮುಖ್ಯವಾಗಿ ತೃಪ್ತಿಕರ ವಿಷಯವೆಂದರೆ ಒಂದೇ. ಆಯುರ್ವೇದವು ನೂತನ ವಿಕಾಸಗಳಿಗೆ ತಲೆ ಬಗ್ಗಿ ನೂತನ ಸುಧಾರಣೆಗಳನ್ನು ಒಪ್ಪಲು ತಯಾರಿದ್ದುದೇ ಈ ಸಮ್ಮೇಲನದ ಸಮಾಧಾನಕರವಾದ ಕಾರ್ಯನಿರ್ವಾಹದಲ್ಲಿ ಸಮಾಧಾನ ಕರವಾದ ಶುಭಚಿಹ್ನೆಯಾಗಿದೆ.

ವಿದೇಶ ವರ್ತಮಾನ.

— ಅಮೇರಿಕದ ಲೇಬರ್ ಲೀಡರರಾದ ಮಿ. ವಿಲ್ಲಿಯಮ್ ಹೇವುಡ ಮೃತಪಟ್ಟರು. ಅಮೇರಿಕವು ಯುದ್ಧಕ್ಕಿಳಿದಾಗ ಇವರು ... ದ್ದ ಕಾರಣ ಇವರ ಮೇಲೆ ಶಿಕ್ಷೆಯನ್ನು ವಿಧಿಸಿದ್ದರು. ಆದರೆ ರಷ್ಯಾದೇಶಕ್ಕೆ ಓಡಿ ಹೋಗಿ ಶಿಕ್ಷೆಯಿಂದ ತಪ್ಪಿಸಿಕೊಂಡರು. ಇವರ ... ಯಂತೆ ಇವರ ಶವದ ಬೂದಿಯ ಅರ್ಧವನ್ನು ಅಮೇರಿಕದಲ್ಲಿಯೂ, ... ರಷ್ಯಾದೇಶದಲ್ಲಿಯೂ ಹೂಗಿಯುವರು.

— ಲೇಡಿ ಹೀತ್ ಎಂಬವರು ಕೇಪ್ ಟೌನಿನಿಂದ ಲಂಡನಿನ ವರೆಗೆ ... ಮೇಲೆ ಕುಳಿತು ಸೀದಾ ಹಾರಿ ಬಂದಿರುವರು. ಎರಡು ಸ್ಥಳ ... ಸುಮಾರು ೧೧,೦೦೦ ಮೈಲುಗಳು.

— ಮೊಸ್ಕೊ ಪಟ್ಟಣದಲ್ಲಿರುವ ಅಫಘಾನ ಅಮೀರ ಅಮಾನುಲ್ಲಾ ... ಭೇಟಿಯನ್ನು ಪಡಕೊಳ್ಳುವದಕ್ಕಾಗಿ ತುರ್ಕಿ ಸ್ಥಾನದಿಂದ ಸರ... ಹಲವರು ಬಂದಿದ್ದರು. ಬಂದವರನ್ನು ಮರ್ಯಾದಿಸುವ ... ಅಮೀರರು ಒಂದು ಔತಣವನ್ನು ಮಾಡಿಸಿದರು.

— ಡೊವರಿನಿಂದ ಕೆಲೆಯ ವರೆಗೆ ಒಂದು ವಿಮಾನ ಸರ್ವಿಸನ್ನು ... ಸುವರು. ಇದರಿಂದ ಇಂಗ್ಲಿಷ್ ಚೆನಲನ್ನು ಹಲವೇ ನಿಮಿಷಗಳೊಳಗೆ ದಾಟಲು ಸಾಧ್ಯವಾಗುವದು. ಬೋಟಿನ ಮೇಲೆ ಪ್ರಯಾಣ ... ಸಮುದ್ರ ರೋಗವು ಜನರಿಗೆ ತಗಲುವ ಹೆದರಿಕೆ ಇರುವುದರಿಂದ ಆ ಹೆದರಿಕೆಯು ಈಗ ತಪ್ಪಿದಂತಾಯಿತು. ಒಂದೊಂದು ... ಇಬ್ಬರು ಯಾ ಮೂವರು ಪ್ರಯಾಣಿಕರನ್ನು ಕೊಂಡೊಯ್ಯು...

— ಲಂಡನಿನಲ್ಲಿ ಮೋಟರ್ ಓಡಿಸುವುದರ ಸ್ಪರ್ಧೆಯು ನಡೆದು ... ಓಕ್ ಹಡಗದಲ್ಲಿ ಲೆಫ್ಟಿನೆಂಟನಾಗಿರುವ ಒಬ್ಬನಿಗೆ ಮೊದಲನೇ ... ೫೦೦ ಪವನುಗಳೂ, ಮಳೆಗಾಲದಲ್ಲಿ ಬಟಾಟೆಯನ್ನು ಬೇಗನೆ ... ಎಸನ್ನು ಮಾರುತ್ತಿದ್ದ ಸ್ಟೆಫೋರ್ಡ್ ಶಾಯರಿನ ಒಬ್ಬನಿಗೆ ... ಬಹುಮಾನವಾದ ನೂರು ಪವನುಗಳೂ ಸಿಕ್ಕಿದುವು.

— ಪೆನ್ಸಿಲ್‌ವೇನಿಯದಲ್ಲಿ ಒಂದು ಗಣಿಯೊಳಗೆ ಎಕ್ಸ್‌ಪ್ಲೋಜನ್ ಆಗಿ ಇದು ವರೆಗೆ ೩೦ ಜನರು ಸತ್ತುಹೋದರು. ಆ ಸಮಯದಲ್ಲಿ ನೂರೈವತ್ತು ಜನರು ಗಣಿಯ ಒಳಗಿದ್ದರು.

ಒಳದೇಶವರ್ತಮಾನ.

ಗಂಟೂರಿನಿಂದ ೩೦ ಮೈಲು ದೂರದಿರುವ ಚಿಲಕಾಲೂರಿಪೇಟೆ ಎಂಬಲ್ಲಿ ಇರುವಂಥ ನೆಲಗಡಲೆಯ ಕಾರಖಾನೆಗೆ ಬೆಂಕಿ ಬಿದ್ದು ಸಾವಿರಾರು ಗೋಣಿ ನೆಲಕಡಲೆ ಸುಟ್ಟು ಭಸ್ಮವಾಯಿತು. ಸಮೀಪದಲ್ಲೆಲ್ಲಿಯೂ ನೀರಿಲ್ಲದುದರಿಂದ ಅಗ್ನಿಯ ಪ್ರತಾಪವು ಹೆಚ್ಚಿ, ಸುಮಾರು ೫೦,೦೦೦ ರೂಪಾಯಿಗಳಷ್ಟು ನಷ್ಟವನ್ನುಂಟುಮಾಡಿತು. ಅದೇ ದಿನ ತಾಡೆಪಲ್ಲಿ ಎಂಬಲ್ಲಿ ಕೂಡ ಸುಮಾರು ನೂರು ಮನೆಗಳು ಸುಟ್ಟುಹೋಗಿ ಸಾವಿರಾರು ಜನರು ಉಳಕೊಳ್ಳಲು ಮನೆಯಿಲ್ಲದೆ ನಿರ್ಗತಿಕರಾಗಿ ಅಲೆದಾಡುತ್ತಿರುವರು.

— ಇಂಡಿಯದ ಎಯರೊ ಕ್ಲಬ್ಬಿನವರು ಎಂಟು 'ಮೋತ್' ವಿಮಾನಗಳಿಗೆ ಆರ್ಡರ್ ಕೊಡಲಿಕ್ಕಿರುವರು.

— ಕಲಕತ್ತದ ನಾರಿನ ಗಿರಣಿಯ ಕೂಲಿಗಳು ತಮ್ಮ ಸಂಬಳವನ್ನು ಶೇಕಡಾ ೨೫ರಷ್ಟು ಹೆಚ್ಚಿಸದೆ ಕೆಲಸಮಾಡುವದಿಲ್ಲವೆಂದು ಮುಷ್ಕರ ಹಾಕಿರುವರು. ವಾರಕ್ಕೆ ೫ ದಿನ ಮಾತ್ರ ಕೆಲಸವನ್ನಿಡದೆ ೬ ದಿನಗಳವರೆಗೂ ಕೆಲಸವನ್ನು ಮಾಡಿಸಬೇಕೆಂದು ಕೂಡ ಇವರನ್ನುತ್ತಿರುವರು.

— ಊಟಾಕಮುಂಡಿನ ಕೋಡರೆಂಬ ಪರ್ವತ ಪ್ರಾಂತದ ನಿವಾಸಿಗಳಿಗೆಂದು ಸರಕಾರದವರು ೫,೦೦೦ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು. ಅವರು ಮಾಡಿರುವ ಸಾಲಗಳನ್ನು ಸಲಾಯಿಸುವುದಕ್ಕಾಗಿ ಬೇರೆ ೬,೫೦೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು. ಇದರ ಹೊರತು ವ್ಯವಸಾಯವನ್ನು ಮಾಡಲು ಅವರಿಗೆ ಧರ್ಮಾರ್ಥವಾಗಿ ಬಟಾಟಿ ಮೊದಲಾದವುಗಳನ್ನು ಹಂಚಿರುವರು. ಗವರ್ನರ ಧೊರೆಗಳು ಇವರನ್ನು ಕಂಡು ಸಂತೋಷಪಡುವವರಿಂದ, ಬೇಗನೇ ಇವರ ನಿವಾಸ ಸ್ಥಳಕ್ಕೆ ಹೋಗಿ ಹಣದ ಉಪಯೋಗವನ್ನು ಹೇಗೆ ಮಾಡಿರುವರೆಂಬುದನ್ನು ವಿಚಾರಿಸುವರಂತೆ.

— ಶಿಶಾಪ ಡಿಪಾರ್ಟಮೆಂಟಿನ ಅಭಿವೃದ್ಧಿಗಾಗಿ ಸರಕಾರದವರು ಒಂದು ಕಮಿಟಿಯನ್ನು ನೇಮಕಮಾಡಿ ಅವರ ಅಭಿಪ್ರಾಯದಂತೆ ವರ್ತಿಸುವರು.

— ಪರ್ಲಿಕಾಮೇದಿಯ ಅರಸರು ಎಗ್ರಿಕಲ್ಚರಲ್ ಕಮಿಶನಿನ ಮೆಂಬರನಾಗಿದ್ದಾಗ ತನಗೆ ಸಿಕ್ಕಿದ ಸಂಬಳವನ್ನೂ, ಭತ್ತೆಯನ್ನೂ, ಎಗ್ರಿಕಲ್ಚರಿಗೆ ಸಂಬಂಧಿಸಿದ ಸತ್ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮದರಾಸಿನ ಗವರ್ನರ ಧೊರೆಗಳ ಕೂಡೆ ಕೊಟ್ಟಿರುವರು.

— ಮೈಸೂರು ಸರಕಾರದವರೂ ಮಹಾರಾಜರೂ ಬೇಸಾಯಗಾರರಿಗೆ ಬಡ್ಡಿಯಿಲ್ಲದ ಸಾಲವನ್ನು ಕೊಡುವ ಕಾನೂನನ್ನು ಕೈಕೊಂಡಿರುವರು. ೧೯೩೦ರ ವರೆಗೆ ಪಡಕೊಳ್ಳುವ ಸಾಲಗಳ ಮೇಲೆ ಮೂರು ವರುಷಗಳ ತನಕ ಬಡ್ಡಿ ಇರುವುದಿಲ್ಲ. ಸಾಲದ ಮರುಪಾವತಿಗೆ ಮೂರರಿಂದ ಐದು ವರುಷಗಳ ವರೆಗಿನ ವಾಯಿದೆ ಇರುವದು. ಒಟ್ಟಾರೆ ಸಾಲಕ್ಕಾಗಿ ೧೦,೦೦೦ ರೂಪಾಯಿಗಳನ್ನು ಇಟ್ಟು, ಹೆಚ್ಚಾದರೆ ಒಬ್ಬೊಬ್ಬನಿಗೆ ಮೂರು ಸಾವಿರ ರೂಪಾಯಿಗಳ ಸಾಲವನ್ನಾದರೂ ಕೊಡುವರು.

— ಪಂಜಾಬಿನಲ್ಲಿ ಒಂದು ರೈಲು ಇಂಜನು ಮೇಲಿನಿಂದ ಕೆಳಕ್ಕೆ ಬಿದ್ದು ಇಡೀ ರೈಲು ಪುಡಿಪುಡಿಯಾಗಿರುವದು. ರೈಲಿನೊಳಗೆ ಕೆಲವು ಕೂಲಿಗಳೂ ಸಾಮಾನುಗಳೂ ಇದ್ದುವಂತೆ.

— ಸಿಲೋನಿನಲ್ಲಿ ಕೃಷಿಯನ್ನು ಅಭಿವೃದ್ಧಿಗೊಳಿಸುವದಕ್ಕಾಗಿ, ಸಿಲೋನನ್ನು ೬ ಭಾಗಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ಭಾಗಕ್ಕೆ ಒಂದೊಂದು ಡೆಮೊನ್ಸ್ಟ್ರೇಶನ್ ಗದ್ದೆಯನ್ನೂ ತೋಟವನ್ನೂ ಇಡುವರು. ಈ ಸ್ಕೀಮು ಬಹು ಖರ್ಚಿನದಾಗಿದ್ದು ಸುಮಾರು ೧೦ ಲಕ್ಷ ರೂಪಾಯಿಗಳು ಬೇಕಾಗುವವಂತೆ.

ಕಾನಪುರದಲ್ಲಿ ೨೮ ವರ್ಷ ಪ್ರಾಯದ ಒಬ್ಬ ಬಂಗಾಳಿ ಯುವಕನು ಗಂಗಾನದಿಯಲ್ಲಿ ಸ್ನಾನಕ್ಕಿಳಿದು ಪ್ರವಾಹಕ್ಕೆ ತುತ್ತಾಗಿ ಮುಳುಗಿ ಸತ್ತನು. ಈಜಾಡಲು ಅವನಿಗೆ ತಿಳಿಯುತ್ತಿದ್ದಿಲ್ಲವಾದರೂ, ತುಂಬಾ ನೀರಿದ್ದಲ್ಲಿಯೇ ಅವನು ಇಳಿದನಂತೆ. ಆತನ ಶವವು ಇನ್ನೂ ಸಿಕ್ಕಿಲ್ಲ.

— ಅಮೃತಸಾರಿನ ಒಂದು ಭಂಡಸಾಲೆಗೆ ಬೆಂಕಿ ಬಿದ್ದು, ದಾಸ್ತಾನು ಮಾಡಿಟ್ಟಿದ್ದ ಎಣ್ಣೆ, ಅಕ್ಕಿ, ಹಿಟ್ಟು ಮೊದಲಾದವುಗಳು ಸುಟ್ಟುಹೋದವು. ಒಟ್ಟಾರೆ ನಷ್ಟವು ಒಂದು ಲಕ್ಷ ರೂಪಾಯಿಗಳಷ್ಟು. ಆದರೆ ಇವುಗಳನ್ನು ಇನ್ಶೂರು ಮಾಡಿದ್ದರು.

— ಮುಂಬಾಯಿಯ ಒಬ್ಬ ಸರಾಫನು ಸುಮಾರು ೩೦,೦೦೦ ರೂಪಾಯಿ ಬೆಲೆ ಬಾಳುವ ಕಳವಿನ ಆಭರಣಗಳನ್ನು ಕೊಂಡುಕೊಂಡನೆಂಬ ಆರೋಪಣೆಯಿಂದ ಆತನನ್ನು ಕೈದುಮಾಡಿದರು. ಜಾಮೀನಿನ ಮೇಲೆ ಬಿಡಲು ಮೆಜಿಸ್ಟ್ರೇಟರು ಒಪ್ಪದೆ ಆತನ ವಿಚಾರಣೆಯು ನಡೆಯುತ್ತಿದೆ.

— ಬಿಕಾನಿರದ ಮಹಾರಾಜರು ಒಪರೇಶನು ಮಾಡಿಸಿ ಈಗ ಮೆಲ್ಲನೆ ಗುಣಹೊಂದುತ್ತಾ ಬರುತ್ತಿರುವರು.

— ಮುಂಬಾಯಿಯ ವಿಕ್ಟೋರಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಲ್ಲಿ ಕಲಿಯುವ ವಿದ್ಯಾರ್ಥಿಗಳ ಪೈಕಿ ಏಳು ಜನರಿಗೆ ಸರಕಾರದವರು ಸ್ಕೋಲರ್‌ಶಿಪ್ಪನ್ನು ಈ ವರ್ಷ ಕೊಡಲಿರುವರು. ಈ ಸ್ಕೊಲರ್ ಶಿಪ್ಪಿಗಾಗಿ ಸುಮಾರು ನೂರಕ್ಕೆ ಮಿಕ್ಕಿದ ವಿದ್ಯಾರ್ಥಿಗಳಿಂದ ಅರ್ಜಿಗಳು ಬಂದಿರುವವಂತೆ.

— ಮದರಾಸಿನ ಹೆಂಗಸೊಬ್ಬಳು ಆಕಸ್ಮಾತ್ತಾಗಿ ಮದ್ದೆಂದು ತಿಳಿದು ವಿಷದ ಬಾಟ್ಲಿಯಲ್ಲಿದ್ದ ದ್ರವವನ್ನು ಕುಡಿದುದರಿಂದ ಸತ್ತುಹೋದಳು.

— ರಂಗೂನ್ ಕಾಲೇಜಿನ ಪ್ರೊಫೆಸರರಾಗಿದ್ದ ೨೩ ವರ್ಷ ಪ್ರಾಯದವನೊಬ್ಬನು ತಿರುಚಿನಾಪಳ್ಳಿಯಲ್ಲಿ ಕಾವೇರಿ ನದಿಯಲ್ಲಿ ಮಿಯುತ್ತಿರುವಾಗ ಆಕಸ್ಮಾತ್ತಾಗಿ ಮುಳುಗಿ ಸತ್ತುಹೋದನು. ಆತನಿಗೆ ೧೦ ವರ್ಷ ಪ್ರಾಯದ ಹೆಂಡತಿಯೂ, ಹೆತ್ತವರೂ ಇರುವರು.

— ಬಂಕೂರಾ ಎಂಬಲ್ಲಿ ಕ್ಷಾಮದ ಹಾವಳಿಯು ವಿಪರೀತವಾಗಿದೆ. ಅಲ್ಲಿಯ ಜನರ ಪಾಪಭೀತ್ಯವನ್ನೆಣಿಸಿ ಸಹಾಯಮಾಡುವದು ಇತರ ದೇಶದ ಜನರ ಮುಖ್ಯ ಕರ್ತವ್ಯವಾಗಿಯದೆ.

ಬೆಂಗಳೂರಿನ ಲಿಂಗಾಯತ ಪುರೋಹಿತನೋರ್ವನು ಮದುವೆಯ ಚಪ್ಪರದಿಂದ ಮನೆಗೆ ಹಿಂತಿರುಗುತ್ತಿರುವಾಗ ಹಾದಿಯಲ್ಲಿ ಬಿದ್ದು ತಕ್ಷಣವೇ ಮೃತಪಟ್ಟನು.

— ಸೈದಾಪೇಟೆಯ ದೇವಸ್ಥಾನದ ರಥದ ಕೊಟ್ಟಿಗೆಗೆ ಬೆಂಕಿ ಹಿಡಿದು ರಥವು ಸುಟ್ಟು ಪೂರ್ಣ ಭಸ್ಮವಾಗಿ, ಸುಮಾರು ೨೫,೦೦೦ ರೂಪಾಯಿಗಳಷ್ಟು ನಷ್ಟವಾಯಿತು.

— ನೀಲಗಿರಿಯಲ್ಲಿ ಜೂನ್ ೯ನೇ ತಾರೀಕಿನ ದಿನ ಗವರ್ನರ ಧೊರೆಗಳ ಅಪೇಕ್ಷೆಯಂತೆ ಒಂದು ಪುಷ್ಪ ಪ್ರದರ್ಶನವನ್ನು ಜರಗಿಸುವರು.

ಮೌಲಾನಾ ಮಹಮ್ಮದ್ ಅಲಿಯವರು ಜೂನ್ ೩ನೇ ತಾರೀಕಿನ ದಿನ ಯುರೋಪಿಗೆ ಹೊರಟು ಹೋಗುವರು. ಅವರಿಗೆ ಯಾವದೋ ಒಂದು ತರದ ರೋಗವು ಇರುವುದರಿಂದ ಅದನ್ನು ಲಂಡನಿನಲ್ಲಿ ಗುಣಪಡಿಸುವರು.

— ಆಯರ್‌ಲೇಂಡಿನ ಮಿಸ್ ಸುಜೇನ್ ಫ್ಲಿನ್ ಎಂಬ ಹುಡುಗಿಯೋರ್ವಳು ಹಿಂದೂತ್ವಕ್ಕೆ ಮತಾಂತರ ಹೊಂದಿ ಕಲಕತ್ತಾ ಯುನಿವರ್ಸಿಟಿಯ ಭಾಷಣಕಾರನಾದ ರಾ। ಎನ್. ಪಿ. ಚಕ್ರವರ್ತಿಯೆಂಬವರನ್ನು ಮದುವೆಯಾಗಿರುವಳು. ಇವರನ್ನು ಅವಳು ಕೆಂಬ್ರಿಜಿನಲ್ಲಿ ಕಂಡು ಇವರಿಬ್ಬರೂ ಸ್ನೇಹಿತರಾದರು. ಮಿಸ್. ಮಿಲ್ಲರಳ ತರುವಾಯ ಮತಾಂತರ ಹೊಂದಿದವರಲ್ಲಿ ಇವಳು ಮೂರನೆಯವಳು.

೧೯೨೬ನೇ ಇಸವಿಯ ಆಗೋಸ್ತಿನಲ್ಲಿ ಪಿಲ್‌ಬಿತ್‌ನಲ್ಲಿ ಹಿಂದೂ ಧುರೀಣರಾದ ರಾಯಬಹದೂರ್ ಸಿಂಗನೆಂಬವನನ್ನು, ಕಲ್ಲು ಎಂಬ ಮುಸಲ್ಮಾನ ಯುವಕನು ಕೊಂದು ಓಡಿಹೋಗಿದ್ದನು. ಅಲ್ಲಹಾಬಾದ್ ಹ್ಯಾಕೋರ್ಟಿನವರು ಆ ಯುವಕನಿಗೆ ಮೊನ್ನೆ ಫಾಸಿ ಶಿಕ್ಷೆಯನ್ನು ವಿಧಿಸಿದರು.

— ತಿರುಪತಿಯಲ್ಲಿ ವಾಂತಿಬೇಧಿ ರೋಗವು ವಿಪರೀತವಾಗಿ ಬೆಳೆದಿರುವದರಿಂದ ಯಾತ್ರಿಕರು ಜಾಗ್ರತೆಯಿಂದಿರುವುದು ಉತ್ತಮ. ನೀರು ಸಿಕ್ಕುವದು ಕೂಡ ಅಲ್ಲಿ ಕಷ್ಟವಾಗಿಯದೆ.

ರಾ। ಸುಭಾಸ ಚಂದ್ರಬೋಸರು ಯುವಕರನ್ನುದ್ದೇಶಿಸಿ ಮುಂಬಾಯಿಯಲ್ಲಿ ಒಂದು ಭಾಷಣವನ್ನು ಮಾಡಿದರು. 'ನೀವು ನಿಮ್ಮಲ್ಲಿರುವ ನಂಬಿಗೆಯನ್ನು ಕಳಕೊಂಡು ಮಾತೃಋಣವನ್ನು ಮರೆತಿರುವಿರಿ. ಚೀನಾ, ಟರ್ಕಿ, ಜರ್ಮನಿ, ಮುಂತಾದ ದೇಶಗಳ ಯುವಕರು ನಿಮ್ಮಂತಿರುವದಿಲ್ಲ. ಮಾತೃಭೂಮಿಗಾಗಿ ನಿರಂತರ ಕಾದಾಡುತ್ತಿರುವರು. ನೀವು ಕೂಡ ಸ್ವರಾಜ್ಯಕ್ಕಾಗಿ ಉರಿದೇಳುವ ಸಮಯವು ಬಂದೇ ಬರುವದು.' ಎಂದು ಹೇಳಿದರು.

ಬಂಗಾಳದ ಕೆಲವೆಡೆಗಳಲ್ಲಿ ವಿಪರೀತವಾದ ಮಳೆಗಾಳಿ ಬಂದು ನೆರೆನಿಂತು ಕೃಷಿಗೆ ಬಹಳ ಬಾಧೆಯುಂಟಾಗಿದೆ. ಇಂತಹ ಮಳೆಗಾಳಿಯು ಕಳೆದ ಐವತ್ತು ವರ್ಷಗಳಿಂದೀಚೆ ಬಂದದ್ದಿಲ್ಲವೆಂದು ಅಲ್ಲಿಯ ಜನರು ಅಭಿಪ್ರಾಯಪಡುವರು.

— ಪಂಡಿತ ಮದನಮೋಹನ ಮಾಲವೀಯರು ಸರ್ವ ಪಕ್ಷೀಯ ಪರಿಷತ್ತಿಗೆ ಹೋಗಬೇಕೆಂದು ನಿರ್ಧರಿಸಿದ್ದರು. ಅವರ ಆರೋಗ್ಯವು ಥಕ್ಕನೆ ಕೆಟ್ಟ ಕಾರಣ ತನ್ನ ನಿರ್ಧಾರವನ್ನು ನಿಲ್ಲಿಸಿದರು. ಆದರೆ ಅವರಿಗೆ ಮೋತಿಲಾಲನೆಹರು ಮೊದಲಾದವರಿಂದ ವತ್ತಾಯದ ತಂತಿ ಬಂದ ಕಾರಣ ಮುಂಬಾಯಿಗೆ ಹೊರಟುಹೋದರು.

ಈಗ ಸೆಖೆಕಾಲವಾದುದರಿಂದ ಮದರಾಸು ಸರಕಾರವು ಉಟಾಕಮಂಡಿನಲ್ಲಿದೆ. ಅಲ್ಲಿಂದ ಹಲವು ವಿಷಯಗಳು ಹೊರಡುತ್ತಲಿವೆ.

ಗವರ್ನರ ಧೊರೆಗಳವರು ೬೦೦ ಮಂದಿಗೆ ಒಂದು ಗಾರ್ಡನ ಪಾರ್ಟಿಯನ್ನು ಮಾಡಿಸಿದರು. ಇದಕ್ಕೆ ಮೈಸೂರು ಜೋಧಪುರ, ಜೈಪುರ ಮಹಾರಾಜರೂ ಅನೇಕ ಮಂದಿ ಹುದ್ದೇದಾರರೂ ಭಾಗಿಗಳಾಗಿದ್ದರು.

ಪಬ್ಲಿಕ್ ಎಕೌಂಟ ಕಮಿಟಿಯವರ ಸಭೆಯು ಮೇ ೨೮ರಲ್ಲಿ ನಡಿಯುವದು. ಇವರು ಕಳದ ವರುಷದ ಒಡಿಟ ರಿಪೋರ್ಟನ್ನು ತನಿಖಿ ಮಾಡುವರು.

— ಮೈಸೂರು ದಿವಾನರಾದ ಮಿ। ಮಿರ್ಜಾ. ಎಮ್. ಇಸ್ಮಯೇಲರು ಕಾವೇರಿ ನದಿಯ ನೀರಿನ ವಿಷಯ ಮದರಾಸು ಮತ್ತು ಮೈಸೂರು ಸರಕಾರಕ್ಕಿರುವ ಚರ್ಚೆಯ ವಿಷಯ ಮದರಾಸು ಗವರ್ನರರೊಡನೆ ಭೇಟಿಕೊಟ್ಟು ಮಾತನಾಡಿದರು.

— ಮದರಾಸು ಗವರ್ನರರು ಎಕ್ಸ್ಯಿಕ್ಯೂಟಿವ ಕಮಿಟಿಗೆ ಆರೋಗ್ಯಸಾಮಿ ಮುದಲಿಯಾರ್ ಮತ್ತು ಸಿ. ಇ. ವುಡ್‌ರವರ ಬದಲಿಗೆ ಮಿ। ಎಸ್. ಮುತ್ತಯ್ಯ ಮುದಲಿಯಾರರನ್ನು ಸರ್. ಜೇಮ್ಸ ಸಿಮ್ಸನ್‌ರವರನ್ನು ನೇಮಿಸಿರುವರು.

— ನೀಲಗಿರಿಯಲ್ಲಿರುವ ಚಾ ಬೆಳೆಸುವ ಬಡಗರಿಗೂ ಬೇಸಾಯ ಮಾಡುವ ಬಡಗರಿಗೂ ಧನಸಹಾಯಕ್ಕಾಗಿ ಒಂದು ಬೇಂಕನ್ನು ಸ್ಥಾಪಿಸಬೇಕೆಂದು ಡೆವಲಪ್‌ಮೆಂಟ ಮಿನಿಸ್ಟರರು ಸಭೆಕೂಡಿ ಆಲೋಚಿಸಿರುವರು.

— ಮಿ। ಕೆ. ರಾಮುನ್ನಿ ಮೆನೋನರವರನ್ನು ಮದರಾಸು ಯುನಿವರ್ಸಿಟಿಯ ವ್ಯಾಸಚಾನ್ಸಲರರಾಗಿ ನೇಮಿಸಿರುವುದರಿಂದ ಅವರ ಬದಲಿಗೆ ಸಿಂಡಿಕೇಟಿನ ಮೆಂಬರರಾಗಿ ಲೋ. ಕೋಲೇಜಿನ ಪ್ರಿನ್ಸಿಪಾಲರಾದ ಮಿ। ಎಮ್. ರತನ್ ಸಾಮಿಯವರನ್ನು ನೇಮಿಸಿರುವರು.

ಸ್ಯಾಮನ್ ಕಮಿಶನಿಗಾಗಿ ಮದರಾಸು ಸರಕಾರದ ಕಡೆಯಿಂದ ಮೆಮೊರೆಂಡಮ್ ತಯಾರಿಸಲಿಕ್ಕೆ ಮಿ। ಜೆ ಟಿ. ಬೊಯೆಗ್ ಮತ್ತು ರಾಮಮೂರ್ತಿಯವರನ್ನು ಮದರಾಸು ಸರಕಾರದವರು ಸ್ಪೆಶಿಯಲ್ ಆಫೀಸರರಾಗಿ ನೇಮಿಸಿರುವರು.

— ಕೈಗಾರಿಕೆ ಇಲಾಖೆಯಿಂದ ನೇಯಿಗೆ ಇಲಾಖೆಯನ್ನು ಪ್ರತ್ಯೇಕ ಮಾಡುವ ವಿಷಯ ಸರಕಾರದ ಆಲೋಚನೆಯು ನಡಿಯುತ್ತದೆ.

— ಲೇಬರ್ ಇಲಾಖೆಯ ಅಭಿವೃದ್ಧಿಯ ವಿಷಯ ಆಲೋಚಿಸುವುದಕ್ಕಾಗಿ ಲೇಬರ್ ಮೆಂಬರರಾದ ಮಿ। ಉಸ್ಮಾನ್ ಸಾಹೇಬರು ಸಭೆ ಕೂಡಿ ಆಲೋಚಿಸುವರು.

— ಮಿ। ಟಿ. ಜಿ. ರದರ್ ಫೋರ್ಡರು ಲೋಕಲ್ ಬೋರ್ಡ ಮತ್ತು ಮುನಿಸಿಪಾಲಿಟಿಗಳ ಇನ್ಸ್‌ಪೆಕ್ಟರಾಗಿಯೂ ಪಂಚಾಯತುಗಳ ರಿಜಿಸ್ಟ್ರಾರ್ ಜನರಲರಾಗಿಯೂ ನೇಮಿಸಲ್ಪಟ್ಟಿರುವರು.

ದಕ್ಷಿಣ ಕನ್ನಡ.

ಮಂಗಳೂರು:— ಮದರಾಸು ಸರಕಾರದವರು ಮಂಗಳೂರಿನಲ್ಲಿ ಸನ್ನಿದಲ್ಲಿಯೇ ಒಂದು ಔದ್ಯೋಗಿಕ ಶಾಲೆ (Industrial School)ಯನ್ನು ತೆರೆಯಬೇಕೆಂದು ಸೆಂಕ್ಷನ್ ಮಾಡಿರುವರೆಂದು ಕೇಳುತ್ತೇವೆ.

ಇದೇ ಬರುವ ೨೭ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೭-೩೦ಕ್ಕೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಇದೇ ಬರುವ ೩೧ನೇ ಗುರುವಾರ ಶ್ರೀ ಮಹಾಲಕ್ಷ್ಮೀ ಪ್ರಸಾದಿತ ಶಿರಹಟ್ಟಿ ಸಂಗೀತ ನಾಟಕ ಮಂಡಳಿಯವರು ಹಿಂದೂಸ್ಥಾನಿ ಸೇವಾದಲದ ಬಾಗಲಕೋಟೆಯ ಕರ್ನಾಟಕ ಶಿಬಿರದ ಸಹಾಯಾರ್ಥವಾಗಿ 'ಮಹಾನಂದಾ' ಎಂಬ ನಾಟಕವನ್ನು ಅಭಿನಯಿಸಿ ತೋರಿಸುವರು. ಶ್ರೀಯುತ ಪಂಡಿತ ಜವೇರಿಲಾಲನೆಹರು ಇವರು ಅಧ್ಯಕ್ಷತನವನ್ನು ಸ್ವೀಕರಿಸಲಿಕ್ಕಾಗಿ ಬರುವರು. ತಾರೀಕು ೨೮ಕ್ಕೆ ಶ್ರೀಯುತರಾದ ಕೌಜಲಗಿ ಶ್ರೀನಿವಾಸರಾಯರೂ, ಡಾ। ಹರ್ಡೀಕರರೂ, ರಾ। ಹೊಸಕೊಪ್ಪ ಕೃಷ್ಣರಾಯರೂ ಬರುವರು. ಎಲ್ಲರೂ ಪ್ರೋತ್ಸಾಹಿಸಬೇಕಾಗಿ ದಲದ ಕಡೆಯಿಂದ ವಿನಂತಿ ಬಂದಿರುತ್ತದೆ.

ತಾರೀಕು ೧೯-೫-೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೮ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೨, ಶ್ವಾಸಕೋಶದ ರೋಗದಿಂದ ೬, ಇತರ ಎಲ್ಲಾ ಕಾರಣಗಳಿಂದ ೯, ಜನನ ಸಂಖ್ಯೆಯು ಒಟ್ಟು ೨೫.

ಚತುರ್ಥ ಕರ್ನಾಟಕಾಯುರ್ವೇದ ಸಮ್ಮೇಳನವು ಶ್ರೀ। ವೈದ್ಯ ಪಂಚಾನನ ಗಂಗಾಧರ ಶಾಸ್ತ್ರಿ ಗುಣೆ, ಅಹಮ್ಮದ ನಗರ ಇವರ ಅಧ್ಯಕ್ಷತೆಯಲ್ಲಿ ತಾ. ೨೧, ೨೨, ೨೩, ಈ ದಿನಗಳಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರವೇರಿತು. ಇದರ ಸಮಗ್ರ ವೃತ್ತಾಂತವನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು.

ಮಂಗಳೂರು ಇತಿಹಾದುಲ್ ಇಸ್ಲಾಮ್ ಸಂಘದವರ ಒಂದು ಮಹಾಸಭೆಯು ಇದೇ ಬರುವ ೨೭ನೇ ಆದಿತ್ಯವಾರ ದಿನ ಸಾಯಂಕಾಲ ಘಂಟೆ ೪ಕ್ಕೆ ಗೋಳಿಕಟ್ಟೆ ಬಜಾರಿನಲ್ಲಿರುವ ಇತಿಹಾದುಲ್ ಇಸ್ಲಾಮ್ ಸಂಘದ ಮಂದಿರದಲ್ಲಿ ಜರಗುವದು. ಜನಾಬ್ ಮೌಲ್ವಿ ಅರಬಿ ಬೆಮ್ಮಾಡ್ ಸಾಹೇಬರವರು ಅಧ್ಯಕ್ಷರಾಗುವರು. ಸರ್ವರಿಗೂ ಸುಸ್ವಾಗತವಿರುವುದು.

ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಒಂದನೇ ಸಹಾಯಕ ಉಪಾಧ್ಯಾಯರೂ ದಿವಂಗತ ರಾ। ಮುಂಡಪ್ಪ ಬಂಗೇರರ ಅಳಿಯಂದಿರೂ ಆದ ಶ್ರೀ। ಎಮ್. ಬಾಬು B. A. L. T. ಇವರು ತನ್ನ ೫೦ನೇ ವಯಸ್ಸಿನಲ್ಲಿ ಕಳದ ಮಂಗಳವಾರ ಮುಂಜಾನೆ ಅಕಾಲಮೃತ್ಯುವಿಗೆ ತುತ್ತಾದರೆಂಬುದನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಇವರು ಕೆಲವು ದಿನಗಳಿಂದ ಪಾರ್ಶ್ವಶೂಲೆಯಿಂದ ಹಾಸಿಗೆ ಹಿಡಿದಿದ್ದರು. ಸುಮಾರು ೧೧ ವರ್ಷಗಳಿಂದ ಟ್ರೈನಿಂಗ್ ಶಾಲೆಯಲ್ಲಿದ್ದು ತನ್ನ ಉಪಾಧ್ಯಾಯ ವೃತ್ತಿಯಲ್ಲಿ ನಿಷ್ಪಕ್ಷಪಾತದಿಂದಲೂ, ಸರಳ ಮನಸ್ಸಿನಿಂದಲೂ ಕೆಲಸ ಮಾಡಿ, ಹಲವರ ಪ್ರೀತಿಗೆ ಪಾತ್ರರಾಗಿದ್ದರು. ಕನ್ನಡದಲ್ಲಿ ಹಲವು ಪುಸ್ತಕಗಳನ್ನು ಬರೆದುದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸವನ್ನು ಶೋಧಿಸುವ ಸಲುವಾಗಿ ತುಂಬಾ ಶ್ರಮಪಟ್ಟವರು. ಇವರ ಶವ ಸಂಸ್ಕಾರವು ನಂದಿಗುಡ್ಡೆಯಲ್ಲಿರುವ ಸ್ಮಶಾನದಲ್ಲಿ ಜರಗಿತು. ಈ ಸಮಯದಲ್ಲಿ ರಾ। ಉಳ್ಳಾಲ ಮಂಗೇಶರಾಯರೂ, ರಾ। ಕಾರ್ನಾಡ ಸದಾಶಿವರಾಯರೂ ಬಂದು ತಮ್ಮ ದುಃಖವನ್ನು ವ್ಯಕ್ತಪಡಿಸಿ, ಮೃತರ ದುಃಖಿ ಕುಟುಂಬದೊಡನೆ ಸಹಾನುಭೂತಿಯನ್ನು ತೋರಿಸಿದರು.

— ಕಳೆದ ೧ನೇ ತಾರೀಕಿನಿಂದ ಕುಂದಾಪುರ, ಉಡುಪಿ, ಪುತ್ತೂರು ಕಾಸರಗೋಡು ಈ ಸ್ಥಳಗಳಲ್ಲಿರುವ ಲೋಕಲ್ ಫಂಡ್ ಆಸ್ಪತ್ರೆಗಳ ಆಡಳಿತೆಯ ಹಕ್ಕನ್ನು ಸರಕಾರದವರೇ ಪಡಕೊಂಡಿರುವರು.

ಅರಳ:— ಇಲ್ಲಿಯ ಶ್ರೀ ಚಂದ್ರನಾಥ ಬಸದಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ಇದೇ ಮೇ ತಿಂಗಳ ತಾ. ೭-೫-೨೮ನೇ ಸೋಮವಾರ ಅಪರಾಹ್ನ ಘಂಟೆ ೨ಕ್ಕೆ ಸದರಿ ಶಾಲಾ ಮಂದಿರದಲ್ಲಿ ಮ. ರಾ. ರಾ. ಪಂಜೆ ಮಂಗೇಶರಾವ್ ಬಿ. ಎ, ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು. ಶಾಲಾ ಮಂದಿರವು ತೋರಣ ಪತಾಕೆಗಳಿಂದ ಅಲಂಕರಿಸಲ್ಪಟ್ಟಿತ್ತು. ಈ ದಿನದ ಸಮಾರಂಭಕ್ಕೆ ಊರ ಮತ್ತು ಪರವೂರ ಮಹಾಜನರೂ ಸುತ್ತುಮುತ್ತಣ ಶಾಲೆಗಳ ಬಾಲ ಬಾಲಕಿಯರೂ ನೆರೆದಿದ್ದರು. ಕಾರ್ಯಕ್ರಮ ಪಟ್ಟಿಯಂತೆ ಪ್ರಾರ್ಥನೆ, ಅಧ್ಯಕ್ಷರನ್ನಾರಿಸುವಿಕೆ ಇತ್ಯಾದಿ ಕಾರ್ಯಗಳು ಪೂರೈಸಿದ ಬಳಿಕ ಅರಳ ಸೆಂಟರಿನ ಉಪಾಧ್ಯಾಯರ ಸಂಘದ ೧೧ನೇ ಸಮ್ಮೇಳನವು ಜರಗಿಸಲಾಯಿತು. ಅನಂತರ ಶಾಲಾ ಮುಖ್ಯೋಪಾಧ್ಯಾಯರಾದ ಮ. ರಾ. ರಾ ಬಿ. ವೆಂಕಟ್ರಾಯರು ಶಾಲೆಯ ಗತವರ್ಷದ ವರದಿಯನ್ನು ಓದಿ ಮುಗಿಸಿದ ಬಳಿಕ ಶಾಲೆಯ ಹಿತೈಷಿಗಳಲ್ಲೊರ್ವರಾದ ಶ್ರೀಯುತ ಬಡಕಬೈಲು ಪರಮೇಶ್ವರಯ್ಯನವರು ಶಾಲಾಭಿನಂದನವನ್ನು ಮಾಡಿ ಕೀರ್ತಿಶೇಷ ದಿವಂಗತ ಎ. ಗುಮ್ಮಣ್ಣ ಶೆಟ್ಟರು ಪರೋಪಕಾರಕ್ಕಾಗಿ ಸ್ಥಾಪಿಸಿದ ಯಾವತ್ತು ಸಂಸ್ಥೆಗಳನ್ನು ಧರ್ಮವೃತ್ತಿಯಿಂದ ಪಾಲಿಸುವ ಅವರ ಸತ್ಪುತ್ರರಾದ ಮ। ರಾ। ರಾ। ಎ. ಧರ್ಮಪಾಲ ಶೆಟ್ಟರಿಗೆ ಶ್ರೀ ಭಗವಂತನು ಆಯುರಾರೋಗ್ಯವನ್ನು ಕರುಣಿಸಲೆಂದು ಬಯಸಿ ಭಾಷಣವನ್ನು ಪೂರೈಸಿದರು. ಆ ಮೇಲೆ ಶಾಲಾ ಬಾಲಕಿಯರಿಗೆ ಇನಾಮು, ತಿಂಡಿ ಹಂಚೋಣ ತರುವಾಯ ಸನ್ಮಾನ್ಯ ಸಭಾಧ್ಯಕ್ಷರು ಶಾಲೆಯ ನೈತಿಕ, ಶಾರೀರಿಕ ಮತ್ತು ಔದ್ಯೋಗಿಕ ವಿಷಯಗಳಲ್ಲಿ ಹೆಚ್ಚಿನ ಗಮನವಿಟ್ಟು ಕೆಲಸ ನಡಿಸುವುದನ್ನು ಕಂಡು ತನಗಾದ ಆನಂದವನ್ನು ವ್ಯಕ್ತಪಡಿಸಿದ್ದಲ್ಲದೆ ಈ ಪುಣ್ಯಸ್ಥಳವು ಯಾವತ್ತು ಕಲಾಕೌಶಲಗಳಿಗೆ ತವರುಮನೆಯಾಗಿದೆ ಎಂದೂ ದಿವಂಗತ ಎ. ಗುಮ್ಮಣ್ಣ ಶೆಟ್ಟರ ಕೀರ್ತಿವಿಶೇಷತೆಯು ಇನ್ನೂ ಬೆಳಕಿಗೆ ಬರುವರೆ ತುಂಬಾ ಆಸ್ಪದಗಳಿವೆ ಎಂದೂ, ಮಹನೀಯರಿಂದ ಇನ್ನೂ ಹೆಚ್ಚಿನ ಪ್ರೋತ್ಸಾಹವು ದೊರೆತು ಈ ಶಾಲೆಯು ಚಿರಾಯುವಾಗಿ ಪೊರೆಯಲ್ಪಡಲೆಂದು ಹೇಳಿ ತಮ್ಮ ಸರಸವಾದ ಭಾಷಣವನ್ನು ಮುಗಿಸಿದರು. ಅದೇ ದಿನ ರಾತ್ರೆ ಶಾಲಾ ಉಪಾಧ್ಯಾಯರು ಮತ್ತು ಮಕ್ಕಳು 'ಕಾಳಿದಾಸ' ಎಂಬ ನಾಟಕವನ್ನು ಪ್ರೇಕ್ಷಕರಿಗೆ ಆನಂದವನ್ನುಂಟುಮಾಡುವ ರೀತಿಯಲ್ಲಿ ಅಭಿನಯಿಸಿದರು.

ಸುಳ್ಯ:— ಇಲ್ಲಿಯ ಕೋ ಓಪರೇಟಿವ್ ಯೂನಿಯನ್ ೨ನೇ ಮಹಾಸಭೆಯು ಇದೇ ತಿಂಗಳ ತಾ. ೨೬-೨೭ನೇ ತಾರೀಕುಗಳಲ್ಲಿ ಸುಳ್ಯ ಸಹಕಾರಿ ಸಂಘದ ಕಟ್ಟಡದಲ್ಲಿ ಜರಗಿಸುವರೆ ನಿಶ್ಚಯಿಸಿರುವದರಿಂದಲೂ ಸದರಿ ಸಭೆಗೆ ಡಿಸ್ಟ್ರಿಕ್ಟ ಕೌನ್ಸಿಲು ಪ್ರತಿನಿಧಿಗಳು ಬಂದು ಸಂಘಗಳನ್ನು ನಡಿಸುವ ಮ ವಾಯಿದೆ ದಾಟಿದ ಸಾಲಗಳ ವಸೂಲಿ ವಿಷಯ ಮಾಡಬೇಕಾದ ಕೆಲಸಗಳ ಅನುಭವ ಕೊಡುವದರಿಂದ ಸಂಘದ ಪ್ರತಿನಿಧಿಗಳೂ ಸಂಘಗಳ ಚಾಲಕರು ಕೂಡಾ ಆ ೨ ದಿವಸಗಳಲ್ಲಿ ಜರಗುವ ಸಭೆಗೆ ತಪ್ಪದೆ ಬರಬೇಕಾಗಿ ಅಪೇಕ್ಷೆ.

ಜ್ವರದ ಹಾವಳಿಯು, ಕಾಲಿಗೆ ಒಂದು ತರದ ಹುಣ್ಣು ವಿಶೇಷವಾಗಿಯದೆ.

ಮಳೆಯು ಬಾರದೆ ಬೇಸಾಯಗಾರರು ಬಹಳ ಕಷ್ಟದಲ್ಲಿದ್ದಾರೆ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ ಮೋಟಾರ ಸರ್ವಿಸ್

[illegible]

...Conveyance.

[illegible] (M. S. M. [illegible]

[illegible] 12-30ಕ್ಕೆ [illegible] 1-30ಕ್ಕೂ [illegible]

[illegible]

THE CANARA PUBLIC CONVEYANCE CO., LTD., MANGALORE.

ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ [illegible]

[illegible]

Secretary

The Canara Public Conveyance Co., Ltd., Mangalore, S. K.

ಡಾಂಪತ್ಯದ ಗುಟ್ಟು ಎಂಬ ಸಚಿತ್ರ ಕಾಮಶಾಸ್ತ್ರ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಕೇವಲಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಆಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚು ಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚಾತ್ರ್ಯಿಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತ. ಪತಿವ್ರತಾ ಸ್ತ್ರೀಯರು ಆಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೧-೮-೦ ಟ. ಹಾಸಲು ೬ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಧಾರವಾಡ.

ಹೊಸಪಟ್ಟಣ:— ಈ ಡಿವಿಜನ್ ಅಮ್ಮಾಬಂದಿಯು ಜಮಾಬಂದಿ ಚಲ್ಲಾ ಕಲೆಕ್ಟರ ದೊರೆಗಳವರಿಂದ ಮುಗಿಸಲಾಯಿತು. ದೊರೆಗಳವರ ಸವಾರಿಯು ಇಲ್ಲಿಯ ಆದಿದ್ರಾವಿಡ ಶಾಲೆಗೆ ಚಿತ್ತೈಸಿ ಶಾಲೆಯ ವಿಷಯ ಹೆಚ್ಚಿನ ಆನಂದಪಟ್ಟರಾಗಿ ಕಾಣುತ್ತದೆ. ಈ ಸಂದರ್ಭದಲ್ಲಿ ಮೊದಲು ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರಾಗಿದ್ದ ಜಮೀನದಾರ ಮ. ರಾ. ರಾ. ಎ. ಸಿ. ಚಾಕುಕುಟ್ಟಿ ನಾಯರರು ಈ ಶಾಲಾ ಮಕ್ಕಳಿಗೆ ಅಕ್ಕಿ ವಸ್ತ್ರ ವ ತಿಂಡಿ ಸಾಮಾನುಗಳನ್ನು ಹಂಚಿದರು. ಗ್ರೂಪ ಫೋಟೋ ಸಹಾ ತೆಗೆಯಲಾಗಿಯದೆ. ಶಾಲಾ ಅಧ್ಯಾಪಕರ ಅಭಿವೃದ್ಧಿಯು ಶ್ಲಾಘನೀಯವಾದದ್ದು.

ಪುತ್ತೂರು ಡಿವಿಜನಲ್ ಆಫೀಸರರು ಇಲ್ಲಿ ಮೊಕ್ಕಾಂ ಮಾಡಿರುತ್ತಾರೆ.

ಇಲ್ಲಿ ಸಮೀಪದ ಚಿತ್ತಾರಿಯಲ್ಲಿ ಒಬ್ಬ ಮಾಪಿಳೆ ಇರುಗೋಳಿಯಿಂದ ಮೀನಿನ ಶಿಕಾರಿ ಮಾಡಿ ಸಿಕ್ಕಿದ ಮೀನಿನ ಪೈಕಿ ಒಂದಕ್ಕೆ ತನ್ನ ಬಾಯಿಯಿಂದ ಚಚ್ಚಿಕೊಳ್ಳಲಿಕ್ಕೆ ಯತ್ನಿಸುವಾಗ ಜೀವದಾಸೆಯಿಂದ ಸದರಿ ಮೀನು ಮಾಪಿಳೆಯ ಬಾಯಿ ಒಳಗೆ ನುಗ್ಗಿ ಗಂಟಲಲ್ಲಿ ಸಿಕ್ಕಿಕೊಂಡಿತು. ಮಾಪಿಳೆಯನ್ನು ಆಸ್ಪತ್ರೆಯಲ್ಲಿ ತಂದು ಸಿಕ್ಕಿಕೊಂಡ ಮೀನು ಹೊರಗೆ ತೆಗೆಯಲಾಗಿಯದೆ. ಮೀನು ಶಿಕಾರಿಯವರು ಅವಶ್ಯವಾಗಿ ಜಾಗ್ರತೆ ತೆಗೆದುಕೊಳ್ಳ ತಕ್ಕಂತಿದೆ.

ಬಂಟವಾಳ:— ಈ ಸೆಂಟರಿನ ಉಪಾಧ್ಯಾಯ ಸಂಘದ ಸಭೆಯು ಬಂಟವಾಳ ಬೋರ್ಡು ಹುಡುಗರ ಶಾಲೆಯಲ್ಲಿ ಇದೇ ತಿಂಗಳ ತಾರೀಕು [illegible] ಮಧ್ಯಾಹ್ನ ಎರಡು ಗಂಟೆಗೆ ಜರಗುವದು.

ಇಲ್ಲಿಯ [illegible] ಮಾಸ್ತರರಾದ ರಾ. ಕೆ. ಸಂಜೀವರಾಯರಿಗೆ ಬಡ್ತಿಯ ಮೇಲೆ ಮಲಬಾರು ಜಿಲ್ಲೆಯ ಮಂಜೇರಿ ಎಂಬಲ್ಲಿಗೆ ವರ್ಗವಾಗಿಯದೆ.

ಉಡುಪಿ:— ಉಡುಪಿ ತಾಲೂಕು ಬೋರ್ಡಿನಿಂದ ಡಿಸ್ಟ್ರಿಕ್ಟ ಬೋರ್ಡು ಮೆಂಬರರ ಚುನಾವಣೆಯು ಕಳೆದ ೨೨ನೇ ತಾರೀಕಿನ ದಿನ ತಾಲೂಕು ಬೋರ್ಡು ಸಭೆಯಲ್ಲಿ ಜರಗಿತು. ಪ್ರತಿಯೊಬ್ಬರಿಗೆ ಸಿಕ್ಕಿದ ವೋಟುಗಳ ಸಂಖ್ಯೆ ಈ ರೀತಿಯಾಗಿತ್ತು. ಶ್ರೀಗಳಾದ ಪಿ. ಎಸ್. ಕಾರತ್ ೮, ಡಾ। ಯು. ರಾಮಚಂದ್ರರಾವ್ ೮, ಬಳ್ಳಂಜೆ ಕೃಷ್ಣರಾಯ ಹೆಗಡೆ ೮, ಕೆಂಚ ಮನೆ ಚಂದಯ್ಯ ಸೆಟ್ಟಿ ೮, ಕೆ. ನರಸಿಂಹ ಪೈ. ೭, ಆದಿರಾಜ ಅರಸು ಕಿನಿಕ್ಕ ಬಳ್ಳಾಳ ೫, ಕೆ. ಸುಬ್ಬಣ್ಣ ಹೆಗ್ಗಡೆ ೫, ಕೆ. ಸನ್ನಯ್ಯ ಹಂಡೆ ೪, ಎ. ಕಾಳಿಂಗ ಹೆಬ್ಬಾರ್ ೩; ಆದಕಾರಣ ಮೊದಲಿನ ನಾಲ್ಕು ಜನರು ಆರಿಸಲ್ಪಟ್ಟರು. ಒಟ್ಟಾರೆ ೧೪ ಜನ ಮೆಂಬರರು ಹಾಜರಿದ್ದು ಅವರಲ್ಲಿ ೯ ಜನರು ಡಿಸ್ಟ್ರಿಕ್ಟ ಬೋರ್ಡು ಸದಸ್ಯತನಕ್ಕೆ ಉಮೇದುವಾರರಾಗಿದ್ದರು.

ಉಡುಪಿ ಸರ್ಕಲಿನ ಚುನಾವಣೆಗೆ ಉಮೇದುವಾರರಾಗಿ ನಿಂತಿದ್ದ ವಕೀಲ್ ರಾ। ಎ. ಫೆರ್ನಾಂಡಿಸರು ತನ್ನ ಉಮೇದುವಾರಿಕೆಯನ್ನು ಹಿಂತೆಗೆದ ಕಾರಣ, ಖಾಲಿಬಿದ್ದಿರುವ ಒಂದು ಸ್ಥಾನಕ್ಕೆ ರಾ। ಕೃಷ್ಣರಾವ್ ಗಡಹದ್ ಮತ್ತು ರಾ, ರುಡೋಲ್ಫ್ ಎ. ಸ್ಯಾಮನ್ಸ್ ಇವರಿಬ್ಬರೇ ಉಮೇದುವಾರರಾಗಿರುವರು.

ಕಾಪು ಸರ್ಕಲಿನ ಉಮೇದುವಾರರಲ್ಲಿ ಒಬ್ಬರಾಗಿದ್ದ ರಾ। ವಿಶ್ವನಾಥಯ್ಯ ಎಂಬವರು ರಾ। ಮುದ್ದಣ್ಣ ಸೆಟ್ಟರ ಪರವಾಗಿ ತನ್ನ ಉಮೇದುವಾರಿಕೆಯನ್ನು ಹಿಂತೆಗೆದರು. ಆದರೆ ಇದು ನಿಶ್ಚಿತ ಸಮಯದೊಳಗೆ ಮಾಡಲ್ಪಡಲಿಲ್ಲವಾದ ಕಾರಣ, ಅವರ ಉಮೇದುವಾರಿಕೆಯು ರದ್ದಾಗಿಲ್ಲ.

ವಿವಿಧ ಸಮಾಚಾರಗಳು.

ಪ್ರೊಫೆಸರ ಇಂದ್ರರ ಜೈಲಿನ ಅನುಭವ.

ಪ್ರೊಫೆಸರ್ ಇಂದ್ರರು ಜೈಲಿನಿಂದ ಬಿಡುಗಡೆ ಹೊಂದಿ ಸಿಮ್ಲಾಕ್ಕೆ ಹೋಗಿ, ಆರ್ಯಸಮಾಜದವರ ಅತಿಥಿಗಳಾಗಿ ಉಳಕೊಂಡಿರುವರು. ತನ್ನ ಜೈಲಿನ ಅನುಭವದ ಕುರಿತು ಕೆಳಗಿನಂತೆ ಅಭಿಪ್ರಾಯಪಡುವರು. 'ಮೊದಲು ನಾನು ಡಿಲ್ಲಿಯ ಜೈಲಿನಲ್ಲಿ ಬಂಧಿಸಲ್ಪಟ್ಟೆನು. ಆ ಜೈಲು ನರಕವೆಂದೇ ಹೇಳಬೇಕು. ಜನವರಿಯಲ್ಲಿ ನನ್ನನ್ನು ಫಿರೋಜಪುರದ ಜೈಲಿಗೆ ಕೊಂಡೊಯ್ದರು. ಪಂಜಾಬದಲ್ಲಿ ಇದರಷ್ಟು ಉತ್ತಮ ಸ್ಥಿತಿಯ ಜೈಲು ಬೇರೊಂದಿರುವುದಿಲ್ಲ. ಅಲ್ಲಿ ಕೈದಿಗಳನ್ನು ದಯೆಯಿಂದ ಕಾಣುವರು. ಆಹಾರವನ್ನು ಸರಿಯಾಗಿ ಕೊಡುವರು. ಆ ಜೈಲಿನಲ್ಲಿ ಒಂದು ಪುಸ್ತಕ ಭಂಡಾರವಿರುವುದರಿಂದ ಕೈದಿಗಳಿಗೆ ಬಹಳ ಉಪಯುಕ್ತವಾಗಿದೆ. ಆದರೆ ಜೈಲಿನ ಆಸ್ಪತ್ರೆಯ ಆಡಳಿತೆಯು ಮಾತ್ರ ಚೆನ್ನಾಗಿಲ್ಲ. ನನಗೆ ಅಲ್ಲಿದ್ದ ೫ ತಿಂಗಳುಗಳ ಅನುಭವವು ಬಂದಿರುತ್ತದೆ. ನನಗೆ ೩ ವರುಷಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದ್ದರೂ ಸೆಷನ್ ಜಡ್ಜರು ಅದನ್ನು ಸಾದಾ ಶಿಕ್ಷೆಯನ್ನಾಗಿ ಮಾಡಿದರು. ನನಗೆ ಯಾವ ಕೆಲಸವನ್ನೂ ಕೊಟ್ಟಿದ್ದಿಲ್ಲ. ಆದರೆ ಡಿಸ್ಟ್ರಿಕ್ಟ್ ಜಡ್ಜರ ಅಭಿಪ್ರಾಯದಂತೆ ನನ್ನ ಆರೈಕೆಯನ್ನು ಮಾಡಿದ್ದಿಲ್ಲ. ನನ್ನ ಮೇಲಿನ ಆರೋಪಣೆ ನನ್ನನ್ನು ಜೈಲಿಗೆ ಕೊಂಡೊಯ್ಯುವಿಕೆ. ಸ್ಪೆಶಲ್ ಕ್ಲಾಸ್ ಆರೈಕೆಯನ್ನು ಮಾಡದಿರುವಿಕೆ ಇವೆಲ್ಲವುಗಳನ್ನು ನೆನಸುವಾಗ ಸರಕಾರವು ನನ್ನ ಮೇಲೆ ಘೋರ ವೈರವಿಟ್ಟಿತ್ತೆನ್ನಬೇಕು. ನನಗೆ ಕಠಿಣ ಶಿಕ್ಷೆಯನ್ನು ಕೊಟ್ಟಿದ್ದಿಲ್ಲವಾದರೂ, ಸಾವನ್ನು ಆಹಾರವನ್ನೇ ಕೊಡುತ್ತಿದ್ದ ಕಾರಣ ಅಂಗಸಾಧನೆಯನ್ನು ಮಾಡಬೇಕಾಗಿತ್ತು. ನನ್ನ ದೇಹಸ್ಥಿತಿಗೆ ಇದು ಸರಿಬೀಳುತ್ತಿರಲಿಲ್ಲ. ಆದಕಾರಣ ಎಪ್ರಿಲ್ ತಿಂಗಳೊಳಗೆ ನನ್ನ ಭಾರವು ಬಹಳ ಕಡಿಮೆಯಾಯಿತು. ಜೈಲು ರೋಗಗಳ ಆಗರವಾಗಿದ್ದುದರಿಂದ ನನಗೂ ಅವು ತಪ್ಪಿಹೋಗಲಿಲ್ಲ. ನನ್ನನ್ನು ಆಸ್ಪತ್ರೆಗೆ ಒಯ್ದರು. ಆಸ್ಪತ್ರೆಯಲ್ಲಿ ನಾನು ಒಂದು ತಿಂಗಳ ವರೆಗೆ ಇದ್ದೆನು. ಆದರೆ ಅಲ್ಲಿ ನನ್ನ ಆರೈಕೆಯು ಮಾತ್ರ ಸರಿಯಾಗಿರಲಿಲ್ಲ. ನನಗೆ ಮಾತ್ರವಲ್ಲ, ಪ್ರತಿಯೊಬ್ಬನಿಗೂ ಅದೇ ತರದ ಆರೈಕೆಯಾಗುತ್ತಿತ್ತು. ಒಂದೇ ಒಂದು ತಿಂಗಳೊಳಗೆ ನನ್ನ ಶರೀರ ಪ್ರಕೃತಿಯು ಬಹು ಕ್ಷೀಣವಾಗಿ ನನ್ನ [illegible] ದೇಹದ ತೂಕವೂ ಕಡಿಮೆಯಾದೆನು. ಈ ಸಮಯದಲ್ಲಿ ಡಾಕ್ಟರ [illegible] ಡಾಕ್ಟರ್ [illegible] ಜೈಲಿಗೆ ಬಂದರು. [illegible] ನನಗೆ [illegible] ಬಂದರು. [illegible] ನನ್ನ ವಿಷಯದಲ್ಲಿ [illegible] ನನ್ನ ಸ್ಥಿತಿಯು [illegible] ಎಂದು ಪ್ರೊಫೆಸರ್ ಇಂದ್ರರವರು ತಮ್ಮ ಜೈಲಿನ ಅನುಭವವನ್ನು ವ್ಯಕ್ತಗೊಳಿಸಿರುವರು.

ಬರ್ದೋಲಿಯ ವೀರರು.

ಬರ್ದೋಲಿಯ ಸತ್ಯಾಗ್ರಹವು ದಿನೇ ದಿನೇ ಅಭಿವೃದ್ಧಿಹೊಂದುತ್ತಾ ಬರುತ್ತಿದೆಯಲ್ಲದೆ ಕುಂದುವ ಸೂಚನೆಯೇ ತೋರುವುದಿಲ್ಲ. ಇದಕ್ಕಾಗಿ ಸರಕಾರದವರು ಹಲವರನ್ನು ಕಾರಾಗೃಹಕ್ಕೆ ಕಳುಹಿಸುತ್ತಾ ಇರುವರು. ಜೈಲಿಗೆ ಕಳುಹಿಸುವಾಗ ಮುಖ್ಯವಾಗಿದ್ದವರನ್ನು ಮೊದಲು ಆರಿಸಿ ತೆಗೆಯುವರು. ನಂತರ ಅವರ ಮೇಲೆ ಆರೋಪಗಳನ್ನು ಹೊರಿಸಿ ಅವರನ್ನು ಕಠಿಣ ತರದ ಶಿಕ್ಷೆಗೆ ಒಳಪಡಿಸುವರು. ಹಿಂದೂಗಳ ಸ್ವಾತಂತ್ರ್ಯದ ಹೋರಾಟದ ಇತಿಹಾಸದ ಪುಟಗಳಲ್ಲಿ ಈ ವೀರರ ಹೆಸರುಗಳು ಅಚ್ಚಳಿಯದೆ ಉಳಿದು ಹೊಳೆಯುವವೆಂದು ನಿರ್ವಿವಾದವಾಗಿ ಹೇಳಬಹುದು. ಬೇಸಾಯಗಾರರ ದನಕರುಗಳನ್ನೂ, ಆಸ್ತಿಪಾಸ್ತಿಗಳನ್ನೂ ಅವರ ಕಣ್ಣೆದುರಿನಲ್ಲಿಯೇ ಮಾರಿ ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವರು.. ಈ ಕ್ರೂರ ಕೆಲಸಕ್ಕೆ ಹಲವು ಪಠಾಣರನ್ನೂ ನೇಮಿಸಿರುವರು. ಪಠಾಣರ ಸ್ವಭಾವವನ್ನಂತೂ ಹೇಳಬೇಕಾಗಿಲ್ಲ. ಅದು ಸರ್ವರಿಗೂ ಗೊತ್ತಿದ್ದುದೇ. ಒಟ್ಟಾರೆ ಹೇಳುವದಾದರೆ ಬರ್ದೋಲಿಯಲ್ಲಿ ನ್ಯಾಯವೇ ಮಾಯವಾಗಿದೆಯನ್ನಬಹುದು. ಈ ಸತ್ಯಾಗ್ರಹದಲ್ಲಿ ಕಾಲಿಟ್ಟು ಮುಂದರಿಸುವ ವೀರರೇ ಧನ್ಯರು! ಸ್ವಾತಂತ್ರ್ಯದ ಬೀಜವನ್ನು ಬಿತ್ತಿ ಕಷ್ಟಪಟ್ಟಾದರೂ ಅದನ್ನು ಸಾಧಿಸಬೇಕೆಂಬ ಅವರ ಮಹತ್ವಾಕಾಂಕ್ಷೆಯು ನಿಜವಾಗಿಯೂ ಸ್ತುತ್ಯ.

ಮದರಾಸು ಲೋಕಲ್ ಬೋರ್ಡು ಆಕ್ಟು.

ಈ ಆಕ್ಟಿನ ವಿಷಯ ಕೆಲವು ಸೂಚನೆಗಳನ್ನೂ ವಿಮರ್ಶೆಯನ್ನೂ ಕಳೆದ ಸಂಚಿಕೆಯಲ್ಲಿ ಕೊಟ್ಟಿದೆ. ಈ ಸಾರಿ ಆಕ್ಟಿನ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

ಲೋಕಲ್ ಬೋರ್ಡು ಆಕ್ಟನ್ನು ೭ ವರುಷಗಳ ಹಿಂದೆ ಇಂಡಿಯಕ್ಕೆ ರಿಫೋರ್ಮುಗಳನ್ನು ಕೊಡುವ ಮುಂಚೆ ಇದ್ದ ನ್ಯಾಯವಿಧಾಯಕ ಸಭೆಯವರು ಮಾಡಿದ್ದಾಗಿರುತ್ತದೆ. ನಂತರ ಇವುಗಳಲ್ಲಿ ಹಲವು ತರದ ತಿದ್ದುಪಡಿಗಳನ್ನು ಮಾಡಬೇಕೆಂಬ ಅಗತ್ಯವು ಕಂಡುಬಂತು. ೧೯೨೭ನೇ ಇಸವಿಯಲ್ಲಿ ಎಲ್ಲಾ ತರದ ತಿದ್ದುಪಡಿಗಳನ್ನು ಮಾಡಿ ಒಂದು ಬಿಲ್ಲನ್ನು ಎಲ್ಲಾ ಲೋಕಲ್ ಬೋರ್ಡುಗಳ ಅನುಭವವನ್ನು ಕೇಳುವುದಕ್ಕಾಗಿ ಪ್ರಕಟಿಸಲಾಯಿತು. ನಂತರ ಮೆಂಬರರು ಕೆಲವು ಚಿಲ್ಲರೆ ಬದಲಾವಣೆಗಳನ್ನು ಮಾಡಿಸಿದರು. ಈ ಆಕ್ಟಿನ ಪ್ರಕಾರ ಕೆಲಸ ನಡಿಸುವುದರಲ್ಲಿ ಹಲವು ತರದ ಕಷ್ಟಗಳು ಬಂದುದರಿಂದ ಈಗ ಸರಕಾರದವರು ಹಲವು ತರದ ಹೊಸ ಬದಲಾವಣೆಗಳನ್ನು ಮಾಡಿ ಈ ಆಕ್ಟನ್ನು ತಯಾರಿಸಿರುವರು.

ಈ ಆಕ್ಟಿನಲ್ಲಿ ಅದರ ಉದ್ದಿಷ್ಟ ಮತ್ತು ಕಾರಣಗಳನ್ನು ಈ ರೀತಿಯಲ್ಲಿ ಕೊಟ್ಟಿದೆ.

ತಾಲೂಕು ಬೋರ್ಡುಗಳನ್ನು ತೆಗೆದು ಹಾಕುವುದು. ಈ ಆಕ್ಟಿನಲ್ಲಿ ಮಾಡಿದ ಹೊಸ ಬದಲಾವಣೆಯಲ್ಲಿ ತಾಲೂಕು ಬೋರ್ಡುಗಳನ್ನು ತೆಗೆದುಹಾಕಬೇಕೆಂಬುದೇ ಮುಖ್ಯವಾಗಿದೆ. ಕೆಲವು ತಾಲೂಕು ಬೋರ್ಡುಗಳಿಗೆ ಧನಸಹಾಯವು ಕಡಿಮೆಯಾಗಿ ತಾಲೂಕು ಬೋರ್ಡುಗಳು ಯಾವ ಉದ್ದಿಷ್ಟಕ್ಕಾಗಿ ಸ್ಥಾಪಿಸಲ್ಪಟ್ಟವೆಯೋ ಆ ದೇಶೋದ್ಧಾರದ ಕೆಲಸಗಳನ್ನು ಮಾಡಲು ಅವುಗಳಿಗೆ ಸಾಧ್ಯವಾಗಲಿಲ್ಲ. ಕೆಲವು ತಾಲೂಕು ಬೋರ್ಡುಗಳ ಲೆಕ್ಕ ಪತ್ರಗಳೇ ಸರಿ ಇಲ್ಲ. ಕೆಲವುಗಳ ಆಡಳಿತೆ ಸರಿ ಇಲ್ಲ. ತಾಲೂಕು ಬೋರ್ಡುಗಳು ಈಗ ಮಾಡುವ ಎಲ್ಲಾ ಸಾರ್ವಜನಿಕ ಕೆಲಸಗಳನ್ನು ಡಿಸ್ಟ್ರಿಕ್ಟ ಬೋರ್ಡಿನವರು ಕಮಿಟಿಗಳನ್ನು ಮಾಡಿ ನಡಿಸಲು ಸಾಧ್ಯವಿದೆ. ಒಂದೇ ಪ್ರದೇಶದಲ್ಲಿ ತಾಲೂಕು ಬೋರ್ಡಿನವರೂ ಡಿಸ್ಟ್ರಿಕ್ಟ ಬೋರ್ಡಿನವರೂ ಅಧಿಕಾರ ನಡಿಸುವುದು ಸರಿಕಾಣುವುದಿಲ್ಲ. ತಾಲೂಕು ಬೋರ್ಡಿಗೆ ಬೇರೆ ಶಿಬಂದಿ, ಡಿಸ್ಟ್ರಿಕ್ಟ ಬೋರ್ಡಿಗೆ ಬೇರೆ ಈ ರೀತಿಯಲ್ಲಿ ಅನಾವಶ್ಯಕವಾಗಿ ಸಾರ್ವಜನಿಕ ಉಪಯೋಗಕ್ಕೆ ಬೀಳುವ ಹಣವು ವ್ಯರ್ಥವಾಗಿ ಹಾಳಾಗುತ್ತದೆ. ಆಸ್ಪತ್ರೆಗಳನ್ನು ಇಡುವುದು, ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಿ ನಡಿಸುವುದು. ಈ ಕೆಲಸ ಮಾಡಲು ಡಿಸ್ಟ್ರಿಕ್ಟ ಬೋರ್ಡಿಗೆ ಸಾಧ್ಯವಿದೆ. ಧನದ ಅಭಾವವೂ ಇರುವುದಿಲ್ಲ. ಜಿಲ್ಲೆಗಳು ಬಹಳ ದೊಡ್ಡದಾಗಿರುವ ಪಕ್ಷದಲ್ಲಿ ಜಿಲ್ಲೆಗೆ ಹೆಚ್ಚು ಡಿಸ್ಟ್ರಿಕ್ಟ ಬೋರ್ಡುಗಳನ್ನು ಸ್ಥಾಪಿಸಲಿಕ್ಕೆ ಈ ಆಕ್ಟಿನಲ್ಲಿ ಯಾವ ತರದ ಅಡ್ಡಿಯೂ ಇರುವುದಿಲ್ಲ.

ಮೆಂಬರರನ್ನು ಚುನಾಯಿಸುವ ಕ್ರಮ—ತಾಲೂಕು ಬೋರ್ಡುಗಳನ್ನು ತೆಗೆದುಹಾಕುವುದರಿಂದ ಡಿಸ್ಟ್ರಿಕ್ಟ ಬೋರ್ಡಿಗೆ ಮೆಂಬರರನ್ನು ವೋಟರರೇ ಚುನಾಯಿಸುವ ಅಗತ್ಯವಿದೆ. ನೋಮಿನೇಟೆಡ್ ಮೆಂಬರರ ಚುನಾವಣೆಯೂ ಅದೇ ರೀತಿಯಲ್ಲಿ ಆಗಲೇಬೇಕು. ಈಗಿನ ಕ್ರಮ ಪ್ರಕಾರ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ತಾಲೂಕು ಬೋರ್ಡು ಪ್ರೆಸಿಡೆಂಟರೂ ತಾಲೂಕು ಬೋರ್ಡು ಮೆಂಬರರೂ, ಡಿಸ್ಟ್ರಿಕ್ಟ ಬೋರ್ಡಿನ ಮೆಂಬರರಾಗಿರುವರು. ಹೊಸ ಆಕ್ಟಿನಲ್ಲಿ ಡಿಸ್ಟ್ರಿಕ್ಟ ಬೋರ್ಡು ಮೆಂಬರರನ್ನು ಚುನಾಯಿಸುವ ಅಧಿಕಾರವು ಇಷ್ಟರ ವರೆಗೆ ತಾಲೂಕು ಬೋರ್ಡು ಮೆಂಬರರನ್ನು ಚುನಾಯಿಸುವದು ವೋಟರರಿಗೆನೇ ಕೊಡಲ್ಪಟ್ಟಿದೆ.

ಹುದ್ದೆಗಳನ್ನು ತೆಗೆದುಹಾಕುವುದು—ಡಿಸ್ಟ್ರಿಕ್ಟ ಬೋರ್ಡಿನ ನೋಮಿನೇಟೆಡ್ ಮೆಂಬರುಗಳನ್ನು ನೇಮಕ ಮಾಡುವಾಗ ಹಲವು ತರದ ಅನ್ಯಾಯಗಳು ನಡೆದಿವೆ. ಇನ್ನು ಮುಂದೆ ಡಿಸ್ಟ್ರಿಕ್ಟ ಬೋರ್ಡಿಗೆ ಮೆಂಬರರನ್ನು ನೇಮಕ ಮಾಡುವ ಹೆಚ್ಚಿನ ಅಧಿಕಾರವನ್ನು ತೆಗೆದುಹಾಕಿಯದೆ. ಡಿಸ್ಟ್ರಿಕ್ಟ ಮತ್ತು ಯೂನಿಯನ್ ಬೋರ್ಡುಗಳಿಗೆ ಎಲ್ಲಾ ಮೆಂಬರರನ್ನು ಚುನಾಯಿಸಬೇಕೆಂದೇ ಮಾಡಿಯದೆ. ಆದರೆ ಮದರಾಸು ಸಂಸ್ಥಾನದಲ್ಲಿ ಮಹಮ್ಮದೀಯರೂ, ಕ್ರೈಸ್ತರೂ, ಆದಿದ್ರಾವಿಡರೂ, ಆದಿ ಆಂಧ್ರರೂ ಅಲ್ಪ ಸಂಖ್ಯಾಕರಾಗಿರುವುದರಿಂದ ಅವರನ್ನು ಮಾತ್ರವೇ ನೋಮಿನೇಟ್ ಮಾಡುವ ಅಧಿಕಾರವನ್ನು ಇಟ್ಟಿದೆ. ಇತರ ಅಲ್ಪ ಸಂಖ್ಯಾಕ ಜಾತಿಯವರನ್ನು ನೋಮಿನೇಟ್ ಮಾಡುವ ಅಧಿಕಾರವನ್ನು ತೆಗೆದುಹಾಕಿಯದೆ. ಈ ನೋಮಿನೇಟೆಡ್ ಸೀಟುಗಳಿಗೂ ಮೆಂಬರರನ್ನು ಜಿಲ್ಲೆಯ ವೋಟರರೇ ಚುನಾಯಿಸುವಂತೆ ಕಾನೂನು ಮಾಡಿಯದೆ. [illegible] ಮೆಂಬರರನ್ನು ಆಯಾ ಜಾತಿಯವರೇ ಚುನಾಯಿಸದೆ ಎಲ್ಲಾ ವೋಟರರೇ ಚುನಾಯಿಸುವುದರಿಂದ ಕಲಹಗಳು [illegible] ಯುರೋಪಿಯನರು ಮತ್ತು ಎಂಗ್ಲೋ ಇಂಡಿಯನರ ವಿಷಯ ಈ ರೀತಿ ಮಾಡಲು ಸಾಧ್ಯವಿಲ್ಲ. [illegible] ಸರಕಾರಿ ಹುದ್ದೆದಾರರನ್ನು ಡಿಸ್ಟ್ರಿಕ್ಟ ಬೋರ್ಡು ಸಭೆಯಲ್ಲಿ ಹೆಚ್ಚು ಪ್ರಯೋಜನ [illegible] ನೋಮಿನೇಟೆಡ್ ಮೆಂಬರರಲ್ಲಿ ಒಬ್ಬರಾದರೂ ಹುದ್ದೆದಾರಿ ಮೆಂಬರರು ಇರಬೇಕೆಂದು ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರೇ ಹಲವು ಸಾರಿ [illegible] ಇದು ಅಗತ್ಯ ಕಾಣುತ್ತದೆ. ಇದ [illegible]

ಕ್ಕಾಗಿ ಯುರೋಪಿಯನ್, ಎಂಗ್ಲೊ ಇಂಡಿಯನ್, ಮತ್ತು ಹುದ್ದೆದಾರರು ಈ ಮೂವರನ್ನು ನೇಮಿಸುವ ಅಧಿಕಾರವನ್ನು ಸರಕಾರಕ್ಕೆ ಕೊಟ್ಟಿದೆ. ಇವರಲ್ಲಿ ಇಬ್ಬರು ಮೆಂಬರರಿಗೆ ಎಲ್ಲಾ ಅಧಿಕಾರವು ಇದೆ. ಹುದ್ದೆದಾರಿ ಮೆಂಬರರು ಮಾತ್ರ ಪ್ರೆಸಿಡೆಂಟರಾಗಲೂ, ವೈಸ್ ಪ್ರೆಸಿಡೆಂಟರಾಗಲೂ ಕೂಡದು.

ಮೂರು ವರುಷಗಳ ಚುನಾವಣೆ—ಈಗಿರುವ ಆಕ್ಟಿನ ಪ್ರಕಾರ, ಗೆಜೆಟಿನಲ್ಲಿ ಪ್ರಕಟವಾದ ಮೂರು ವರುಷಗಳ ವರೆಗೆ ಪ್ರತಿ ಒಬ್ಬ ಚುನಾಯಿಸಲ್ಪಟ್ಟ ಮೆಂಬರನಿಗೆ ಅವಧಿಯು ಇದೆ. ಆದರೆ ಕೆಲವು ಪ್ರೆಸಿಡೆಂಟರು ತನ್ನ ಮೂರು ವರುಷಗಳ ಅವಧಿಯು ತೀರುವ ಎರಡು ಮೂರು ತಿಂಗಳ ಮೊದಲೇ ತನ್ನ ಮೆಂಬರಿಕೆಗೆ ರಾಜಿಕೊಟ್ಟು ತಿರಿಗಿ ಹೊಸದಾಗಿ ಚುನಾಯಿಸಲ್ಪಟ್ಟು ಇನ್ನು ಮೂರು ವರುಷಗಳ ವರೆಗೆ ಪ್ರೆಸಿಡೆಂಟರಾಗಿ ಮುಂದರಿಸುವರು. ಇದನ್ನು ತಪ್ಪಿಸುವುದಕ್ಕಾಗಿ ಪ್ರತಿ ಮೂರು ವರುಷಗಳಿಗೊಮ್ಮೆ ಎಲ್ಲಾ ಮೆಂಬರರ ಅವಧಿಯು ಮುಗಿಯಲೇ ಬೇಕು ಎಂಬ ಕಾನೂನನ್ನು ಹೊಸ ಆಕ್ಟಿನಲ್ಲಿ ಮಾಡಿಯದೆ. ಮಧ್ಯದಲ್ಲಿ ಖಾಲಿ ಬಿದ್ದ ಸ್ಥಳಗಳಿಗೆ ಹೊಸ ಚುನಾವಣೆಯಾದರೂ, ಮೂರು ವರುಷದ ಅವಧಿಯೊಡನೆ ಅವರ ಮೆಂಬರಿಕೆಯು ರದ್ದಾಗುವುದು.

ಚುನಾವಣೆಗಳನ್ನು ಇಷ್ಟರ ವರೇಗೆ ತಾಲೂಕು ಬೋರ್ಡಿನವರೇ ಮಾಡುತ್ತಿದ್ದರು. ಆದರೆ ಇದರಲ್ಲಿ ಅನ್ಯಾಯಗಳು ನಡೆದುದರಿಂದ ಇನ್ನು ಮುಂದೆ ಚುನಾವಣೆ ಮಾಡುವ ಅಧಿಕಾರವನ್ನು ರೆವಿನ್ಯೂ ಇಲಾಖೆಯವರಿಗೆ ಕೊಟ್ಟಿದೆ. ಈ ಕೆಲಸವನ್ನು ಜಿಲ್ಲಾ ಕಲೆಕ್ಟರರೂ, ಡಿವಿಜನಲ್ ಆಫೀಸರರೂ ಮಾಡುವರು.

ಸ್ಟೆಂಡಿಂಗ್ ಕಮಿಟಿಗಳು—ತಾಲೂಕು ಬೋರ್ಡುಗಳನ್ನು ತೆಗೆದು ಹಾಕಿರುವುದರಿಂದ ಡಿಸ್ಟ್ರಿಕ್ಟ ಬೋರ್ಡಿನವರ ಕೆಲಸವು ಹೆಚ್ಚಾಗುವುದು. ಈ ಕೆಲಸವು ಸುಲಭವಾಗಿ ನಡಿಯುವಂತೆ ಡಿಸ್ಟ್ರಿಕ್ಟ ಬೋರ್ಡಿಗೆ ೪ ಸ್ಟೆಂಡಿಂಗ್ ಕಮಿಟಿಗಳನ್ನು ಮಾಡುವರು. ಒಂದು ಟೆಕ್ಸೆಶನ್ ಮತ್ತು ಫೈನೆನ್ಸ ಕಮಿಟಿ, ಇದರ ಅಧಿಕಾರವು ಪ್ರೆಸಿಡೆಂಟರಿಗಿರುವುದು. ಎರಡನೇದು ಮೆಡಿಕಲ್ ಕಮಿಟಿ, ಇದರ ಅಧಿಕಾರವು ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರ ಕೈಕೆಳಗಿರುವುದು. ಆರೋಗ್ಯ ಕಮಿಟಿ ಇದರ ಅಧಿಕಾರ ಹೆಲ್ತ ಆಫೀಸರರಿಗಿರುವುದು. ಪಬ್ಲಿಕ್ ವರ್ಕ್ಸ ಕಮಿಟಿ, ಇದರ ಅಧಿಕಾರ ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರರಿಗಿರುವುದು. ಪ್ರತಿ ಒಂದು ಕಮಿಟಿಯವರು ತಮ್ಮ ಚೆಯರ್‌ಮೇನರನ್ನು ಚುನಾಯಿಸುವ ಅಧಿಕಾರವನ್ನು ಪಡೆದಿರುವರು. ಸ್ಟೆಂಡಿಂಗ್ ಕಮಿಟಿಯ ಮೀಟಿಂಗನ್ನು ಆಯಾ ಕಮಿಟಿಯ ಅಧಿಕಾರಿಗಳು ಕರೆಯುವರು. ಮೀಟಿಂಗನ್ನು ಕರೆಯುವವರು ಕಮಿಟಿಯ ಸೆಕ್ರೆಟರಿಯವರಾಗಿರುವರು. ಆದರೆ ಇವರು ಕಮಿಟಿಯ ಮೆಂಬರರಾಗಿರಬಾರದು. ಈ ಕಮಿಟಿಯವರು ಹೊರಗಿನ ಇತರ ಮೆಂಬರರನ್ನು ಚುನಾಯಿಸುವ ಅಧಿಕಾರವು ಈ ಕಮಿಟಿಗಿರುವುದು, ಈ ಕ್ರಮವನ್ನು ೧೯೧೯ನೇ ಇಸವಿಯ ಮದರಾಸು ಸಿಟಿ ಮುನಿಸಿಪಾಲಿಟಿಯ ಕ್ರಮಕ್ಕನುಸಾರವಾಗಿ ಮಾಡಿರುವರು.

ಡಿಸ್ಟ್ರಿಕ್ಟ ಬೋರ್ಡಿನ ಎಕ್ಸಿಕ್ಯೂಟಿವ್ ಆಫೀಸರರು—ಈಗಿರುವ ಆಕ್ಟಿನ ೨೧ (೧)ನೆ ಸೆಕ್ಷನ್ ಪ್ರಕಾರ ಎಲ್ಲಾ ಕಾರ್ಯಗಳನ್ನು ನಡಿಸುವ ಅಧಿಕಾರವು ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗಿರುವದು. ಹೊಸ ಕ್ರಮದ ಪ್ರಕಾರ ಬೋರ್ಡಿನ ಕೆಲಸವು ಬಹಳ ಹೆಚ್ಚಾಗಿರುವುದರಿಂದ ಕಂದಾಯ ಮತ್ತು ಟೇಕ್ಸುಗಳನ್ನು ಕೂಡಿಸುವ ಅಧಿಕಾರವೂ ಬರುತ್ತದೆ. ತಾಲೂಕು ಬೋರ್ಡುಗಳನ್ನು ತೆಗೆದುಹಾಕುವುದರಿಂದ ಕೆಲಸವು ಮತ್ತಷ್ಟು ಹೆಚ್ಚಾಗುವುದು, ಚುನಾಯಿಸಲ್ಪಟ್ಟ ಮೆಂಬರರಿಗೂ ಪ್ರೆಸಿಡೆಂಟರಿಗೂ ತೆರಿಗೆ, ಕಂದಾಯಗಳನ್ನು ಹೊರಿಸುವುದಕ್ಕೆ ಬಹಳ ಕಷ್ಟಗಳು ಬಂದಿವೆ ಎಂದು ಈಗಿನ ಅನುಭವದಿಂದ ತಿಳಿದುಬಂದಿದೆ, ಚುನಾಯಿಸಲ್ಪಟ್ಟ ಪ್ರೆಸಿಡೆಂಟರು ಇರುವ ಡಿಸ್ಟ್ರಿಕ್ಟ ಬೋರ್ಡುಗಳಿಗೆ ಕಾರ್ಯಭಾರವನ್ನು ನಡಿಸುವುದಕ್ಕೆ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸುವರು. ಈ ಅಧಿಕಾರಿಯು ಡಿಸ್ಟ್ರಿಕ್ಟ ಬೋರ್ಡ ಆಫೀಸಿನ ಶಿಬಂದಿಯನ್ನು ನಡಿಸುವುದು. ಕೊರ್ಪೊರೇಶನಿನ ಕಮಿಶನರ ಅಧಿಕಾರವೇ ಈ ಅಧಿಕಾರಿಗೆ ಇರುವುದು. ಈ ಹುದ್ದೆಗೆ ಸರಕಾರದ ಅನುಮತಿಯನ್ನು ಪಡೆದು ಡಿಸ್ಟ್ರಿಕ್ಟ ಬೋರ್ಡಿನವರು ಡಿಪ್ಯುಟಿ ಕಲೆಕ್ಟರರ ಗ್ರೇಡಿನವರನ್ನು ನೇಮಿಸುವರು.

ಬೋರ್ಡು ನೌಕರರಾದ ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರರು, ಹೆಲ್ತ ಆಫೀಸರರು ಮುಂತಾದವರನ್ನು ನೇಮಿಸುವುದಕ್ಕಾಗಿ ಪ್ರತ್ಯೇಕ ಕಾನೂನು ಮಾಡಿಯದೆ.

ಎರಡು ಬೋರ್ಡುಗಳೊಳಗೆ ಯಾವದಾದರೂ ಜಗಳಗಳು ಉಂಟಾದರೆ ಅಂಥಾದನ್ನು ತೀರ್ಮಾನ ಮಾಡುವುದಕ್ಕಾಗಿ ಕಮಿಟಿಯನ್ನು ನೇಮಿಸುವ ಅಧಿಕಾರವನ್ನು ಸರಕಾರಕ್ಕೆ ಕೊಡಲ್ಪಟ್ಟಿದೆ.

ಟೇಕ್ಸ್‌ಗಳೂ ಟೋಲ್‌ಗೇಟುಗಳೂ—ಮನೆತೆರಿಗೆ, ಕಂಪೆನಿ ತೆರಿಗೆ, ವೃತ್ತಿ ತೆರಿಗೆ, ಯಾತ್ರಿಕರ ಮೇಲಿನ ತೆರಿಗೆ, ಟೋಲ್‌ಗೇಟುಗಳಿಂದ ಸುಂಕ ವಸೂಲಿ ಇವುಗಳ ಕ್ರಮಗಳಲ್ಲಿ ಬದಲಾವಣೆ ಮಾಡಿಯದೆ. ಇಷ್ಟರ ವರೆಗೆ ಮನೆತೆರಿಗೆಯನ್ನು ವರುಷಕ್ಕೊಂದಾವರ್ತಿ ವಸೂಲಿ ಮಾಡುತ್ತಿದ್ದರು. ಇನ್ನು ಮುಂದೆ ಅದನ್ನೇ ಎರಡು ಅಂಶಗಳಾಗಿ ಮಾಡಿ ವರುಷಕ್ಕೆ ಎರಡು ಕಂತಿನಿಂದ ವಸೂಲು ಮಾಡುವರು. ಕಂಪೆನಿಗಳ ಸುಂಕದ ವಿಷಯ ಈಗಿನ ಆಕ್ಟು ಪ್ರಕಾರ ವಸೂಲಿಯಲ್ಲಿ ಸ್ವಲ್ಪ ಕಷ್ಟಗಳು ಇರುವುದರಿಂದ ಆದರಲ್ಲಿ ಇನ್ನು ಮುಂದೆ ಕಂಪೆನಿಯ ಧಂಡವಾಳದ ಮೇಲೆ ಸುಂಕವನ್ನು ವಿಧಿಸದೆ ಕಂಪೆನಿಯವರ ಆದಾಯದ ಮೇಲೆ ಸುಂಕವನ್ನು ವಿಧಿಸುವರು. ಯಾವದಾದರೂ ಫರ್ಮನ್ನು ಸರಕಾರದವರು ಕಂಪೆನಿಯೆಂದು ನಿರ್ಣಯಿಸಿದರೆ ಅಂಥಾ ಫರ್ಮುಗಳು ಟೇಕ್ಸನ್ನು ಕೊಡಬೇಕಾಗುವುದು. ನಾಲ್ಕನೇ ಶೆಡ್ಯೂಲಿನಲ್ಲಿ ಕಾಣಿಸಿದ ಟೇಕ್ಸಿನ ದರಗಳನ್ನು ಬದಲಾಯಿಸುವರು. ಯಾತ್ರಿಕರಿಂದ ಯಾತ್ರಾತೆರಿಗೆಯನ್ನು ಒಂದೇಸಾರಿ ವಸೂಲು ಮಾಡುವರು. ಅದನ್ನು ಯಾತ್ರಾಸ್ಥಳದಿಂದ ಹೊರಡುವ ಸಮಯ ರೈಲ್ವೆ ಸ್ಟೇಶನಿನಲ್ಲಿ ವಸೂಲುಮಾಡುವರು. ಅಥವಾ ಸ್ಟೇಶನಿಗೆ ಹೋಗುವ ದಾರಿಯಲ್ಲಿ ವಸೂಲುಮಾಡುವರು. ಒಂದೇಸಾರಿ ವಸೂಲು ಮಾಡುವುದರಿಂದ ಯಾತ್ರಾ ತೆರಿಗೆಯನ್ನು [illegible] ಮಾಡಿಯದೆ. ಹೊಸ [illegible] ರೈಲು ಟಿಕೇಟಿನಲ್ಲಿಯೂ ಟೇಕ್ಸನ್ನು ಹೊಸದಾಗಿ ವಿಧಿಸಿಯದೆ.

ಟೋಲ್‌ಗೇಟುಗಳ ವಿಷಯ ಮುನಿಸಿಪಾಲಿಟಿಗಳಿಗೂ ಬೋರ್ಡುಗಳಿಗೂ ಗೇಟುಗಳನ್ನು ಇಡುವ ವಿಷಯದಲ್ಲಿಯೂ ಅವುಗಳಿಂದ ಸಿಕ್ಕುವ ಹಣವು ಯಾರಿಗೆ ಎಷ್ಟು ಸಲ್ಲಬೇಕು ಎಂಬ ವಿಷಯದಲ್ಲಿಯೂ ಹೆಚ್ಚು ಜಗಳಗಳು ಇಷ್ಟರ ವರೆಗೆ ಬರುತ್ತಿರುವುದರಿಂದ ಇನ್ನು ಮುಂದೆ ಗೇಟುಗಳನ್ನು ಇಡುವ ಅಧಿಕಾರವನ್ನು ಯಾರಿಗೆ ಎಷ್ಟು ಹಣ ಸಲ್ಲಬೇಕೆಂಬುದರ ವಿಷಯವಾಗಿಯೂ ನಿರ್ಣಯಿಸುವ ಹಕ್ಕನ್ನು ಸರಕಾರವೇ ಇಟ್ಟುಕೊಂಡಿದೆ. ಇನ್ನು ಮುಂದೆ ೬೦ ಮೈಲಿಗೆ ಒಂದು ಟೋಲ್‌ಗೇಟಿನ ಪ್ರಕಾರ ಮಾತ್ರವೇ ಇರುವುವು.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

...ಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

...ಮ್ಮ ಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

...ಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.

210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಖಾತ್ರಿಯಾಗುವದು!!

...ಮ್ಮಕತ್ತು ಅಗ್ಗ ... ಫಲತೃಪ್ತಿಕರ

...ಸದುರ್ಗ ಅಮೃತ್ತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

...ಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

...ಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ...ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತ್ರಿ ಶ್ರೀ ವೈದ್ಯ ...ನೇಶ್ವರ ಮುಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ...ಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆ... ಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗ... ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆ... ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ...ಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ... ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ...ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾ... ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ... ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ...ಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ...ಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ... ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ...ಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ...ಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅವಾನ... ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ... ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ...ಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾ... ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸ... ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ... ವ್ಯವಹಾರ ನಡಿಸಬಹುದು.

...ಪ್ರತಿ ರವಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ...

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ADVERTISE IN OUR WEELKY

To Reach the Hearths & Homes of India's Masses

For Particulars pply to:

The Manager,

SWADESHABHIMANI,

MANGALORE.

Diamonds. ವಜ್ರಗಳು Diamonds.

BOLA MANGESH ROW & Co.,

MANGALORE.

Agents & Direct importers of Superior Diamonds of Antwerp.

...ಂಟ್ವರ್ಪ್‌ನಿಂದ ತರಿಸುವ ವಜ್ರಗಳು ...ದೊರೆಯುತ್ತವೆ.

ಬೋಳ ಮಂಗೇಶ ರಾವ್,

ಮಂಗಳೂರು.



ಚತುರ್ಥ ಕರ್ನಾಟಕ ಆಯುರ್ವೇದೀಯ ಪ್ರಾಂತಿಕ ಸಮ್ಮೇಲನ, ಮಂಗಳೂರು.

ಅಧ್ಯಕ್ಷರ ಭಾಷಣ.

ಮಾನ್ಯರಾದ ಸ್ವಾಗತಾಧ್ಯಕ್ಷರೇ, ಸದಸ್ಯರೇ, ವೈದ್ಯವಿದ್ಯಾ ಕೋವಿದ ಬಂಧುಭಗಿನಿಯರೇ!

ಇಂದಿನ ಈ ಪ್ರಾಂತೀಯ ವೈದ್ಯಸಮ್ಮೇಲನದ ಸಭಾಪತಿತ್ವದ ಬಹುಮಾನವನ್ನು ನನಗೆ ಕೊಟ್ಟಿರುವುದಕ್ಕೆ ತಮ್ಮೆಲ್ಲರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ವಸ್ತುತಃ ಈ ಸನ್ಮಾನವು ವ್ಯಕ್ತಿಶಃ ನನಗೆ ಸಲ್ಲದು; ಆದರೆ, ಯಾವ ಆಯುರ್ವೇದಕ್ಷೇತ್ರದಲ್ಲಿ ನಾನು ಅಲ್ಪಸ್ವಲ್ಪ ಸೇವೆಯನ್ನು ಮಾಡುತ್ತಲಿರುವೆನೊ ಈ ಸನ್ಮಾನವು ಅದಕ್ಕೇ ಸಲ್ಲತಕ್ಕದು. ಅದುಕಾರಣ, ತಾವು ಒಪ್ಪಿಸಿರುವ ಈ ಗೌರವವನ್ನು ನಾನು ಆಯುರ್ವೇದರೂಪಿಯಾದ ಶ್ರೀಪರಮೇಶ್ವರನಿಗೇ ಸಮರ್ಪಿಸುತ್ತೇನೆ. ಸ್ವತಃ ನಾನು ಯಾವನೊಬ್ಬ ತ್ರಿಖಂಡಪಂಡಿತನಾಗಿಲ್ಲ. ಹಿಂದಣ ಸಭಾಪತಿಗಳು ಈ ಪದವಿಯಿಂದ, ವಿದ್ವತ್ತಿಕೆಯಿಂದ ಮೆರೆವಂತಹ ಎಷ್ಟೋ ಆದೇಶಗಳನ್ನು ತಮಗೆ ಕೊಟ್ಟಿರುವರು. ಈಗ ನಾನು ತಮ್ಮ ಮುಂದೆಯೂ, ತಮ್ಮ ಮುಖಾಂತರವಾಗಿ ಇಡೀ ರಾಷ್ಟ್ರದ ಮುಂದೆಯೂ, ಕಿಂಬಹುನಾ ಇಡೀ ಜಗತ್ತಿನ ಮುಂದೆಯೂ, ಆಯುರ್ವೇದದ ಪರವಾಗಿ ಇಡತಕ್ಕ ಕೆಲ ವಿಷಯಗಳನ್ನು ಕುರಿತಾಗಿ ನಾಲ್ಕು ಮಾತುಗಳನ್ನು ಮಾತ್ರ ಇಲ್ಲಿ ಶ್ರುತಪಡಿಸುವುದಕ್ಕಾಗಿ ಉದ್ಯುಕ್ತನಾಗುವೆನು.

ಆಯುರ್ವೇದವು ಎಂದರೆ ಜೀವಿತವಿಜ್ಞಾನವು (Science of Life) ಇದು ಬಹು ಪುರಾತನವಾದ ಶಾಸ್ತ್ರವಾಗಿದೆ. ಇದಕ್ಕೆ ಸ್ವಾಸ್ಥ್ಯಾನುವೃತ್ತಿಕರವೆಂಬುದೊಂದು ರೋಗೋಚ್ಛೇದಕವೆಂಬುದೊಂದು, ಹೀಗೆ ಎರಡು ಭಾಗಗಳಿವೆ. ಹೇತು, ಲಕ್ಷಣಗಳು, ಔಷಧೀವಿಜ್ಞಾನ ಎಂಬೀ ಮೂರು ಸ್ಕಂದಗಳಿವೆ. ಈ ದೆಸೆಯಿಂದ ಆಯುರ್ವೇದವನ್ನು ತ್ರಿಸ್ಕಂಧ ಆಯುರ್ವೇದವೆನ್ನುತ್ತಾರೆ. ಇದರಲ್ಲಿ ಶರೀರ ವಿಷಯಕವಾಗಿ ಗಂಭೀರವೂ ಸಮರ್ಪಕವೂ ಕಲ್ಯಾಣಕರವೂ ಆದ ವಿಚಾರಗಳಿವೆ. ಕೇವಲವಾಗಿ ಶರೀರಾವಯವಗಳ ವಿಸ್ತೃತ ಅಥವಾ ಸೂಕ್ಷ್ಮಭಾಗಗಳ ವರ್ಣನೆಯಿಂದ ಮಾತ್ರ ಶರೀರವಿಷಯಕ ಕಲ್ಪನೆಯು ಸಾಕಲ್ಯವಾಗಿ ಉಂಟಾಗಲಾರದು. ಜೀವಿತದ ಮುಖ್ಯ ಅಧಿಷ್ಠಾನವೆ ಶರೀರವು. ಶರೀರವಿಷಯಕವಾದ ಭಾವನೆಗಳು ಸಾಕಲ್ಯವಾಗಿರದಿದ್ದಲ್ಲಿ, ಜೀವಿತೌಘವನ್ನು ದೀರ್ಘಕಾಲದ ತನಕ ಬಾಳುವಂತೆ ಮಾಡಲು ಸಾಧ್ಯವಾಗಲಾರದು. ಯಾವ ಶಾಸ್ತ್ರವು ಶರೀರದ ಸಂಪೂರ್ಣ ಮಾಹಿತಿಯನ್ನು ಕೂಲಂಕುಷವಾಗಿ ಪ್ರತಿಪಾದಿಸಿರುವುದೊ ಆ ಶಾಸ್ತ್ರವೇ ನಿಜವಾದ ಜೀವಿತಶಾಸ್ತ್ರವಾಗಿದೆ. ಅದನ್ನೆ ಜೀವಿತವಿಜ್ಞಾನವೆಂದು ಪರಿಗ್ರಹಿಸಲು ಅದು ಯೋಗ್ಯವಾಗಿದೆ. ಯಾವನಿಂದ್ದ ಈ ಶರೀರ ಶಾಸ್ತ್ರವು ಸಂಪೂರ್ಣವಾಗಿ ತಿಳಿದುಕೊಳ್ಳಲಾಗಿರುವುದೊ, ಅವನೆ ಮಾತ್ರ ಜೀವಿತವಿಜ್ಞಾನವನ್ನು ಉತ್ತಮವಾಗಿ ತಿಳಿದಿರುವವನು ಎನ್ನಬಹುದು.

> ಶರೀರಂ ಸರ್ವಥಾ ಸರ್ವಂ ಸರ್ವದಾವೇದಯೋಭಿಷಕ್ ।
> ಆಯುರ್ವೇದಂ ಸ ಕಾರ್ತ್ಸ್ನ್ಯೇನ ವೇದಲೋಕಸುಖಪ್ರದಂ ॥
>
> (ಚ. ಶಾ. ೬,೧೯.)

ಇದು ಚರಕಾಚಾರ್ಯರ ಸ್ಪಷ್ಟ ಮಾತು. ಶರೀರದ ಸಾಕಲ್ಯವಿಚಾರವೆಂಬುದನ್ನು ತಿಳಿದುಕೊಳ್ಳುವ ಮೊದಲು, 'ಶರೀರ' ಎಂಬುದರ ವ್ಯಾಖ್ಯೆಯನ್ನಾದರೂ ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ, ಈ ವ್ಯಾಖ್ಯೆಯ ಮೇಲೆಯೆ ಶರೀರವಿಷಯಕವಾದ ಸಂಪೂರ್ಣ ವಿಚಾರಗಳು ಅವಲಂಬಿಸಿಕೊಂಡಿರುತ್ತವೆ. 'ತತ್ರ ಶರೀರಂ ನಾಮಚೇತನಾಧಿಷ್ಠಾನಭೂತಮ್ । ಪಂಚಮಹಾಭೂತವಿಕಾರಸಮುದಾಯಾತ್ಮಕಮ್ ಸಮಯೋಗವಾಹಿ' (ಚ. ಶಾ. ೫.) ಎಂದು ಆಯುರ್ವೇದವು ಶರೀರದ ವ್ಯಾಖ್ಯೆಯನ್ನು ಮಾಡಿಟ್ಟಿದೆ. ಪಂಚಮಹಾಭೂತವಿಕಾರ ಸಮುದಾಯಾತ್ಮಕವೂ ಚೇತನಾಧಿಷ್ಠಾನಭೂತವೂ ಆಗಿರುವುದೇ ಶರೀರವು; ಎಂದರೆ ಶರೀರ, ಇಂದ್ರಿಯಗಳು, ಮನಸ್ಸು, ಮತ್ತು ಆತ್ಮ ಇವು ನಾಲ್ಕು ಸೇರಿ ಶರೀರವು ಆಗುವುದು. ಇವೇ ನಾಲ್ಕರ ಸಂಯೋಗಕ್ಕೆ 'ಜೀವಿತ' ಅಥವಾ 'ಆಯುಷ್ಯ' ಎಂಬ ಸಂಜ್ಞೆ ಇದೆ. (ಶರೀರೇಂದ್ರಿಯ ಸತ್ವಾತ್ಮಸಂಯೋಗೋಧಾರಿ ಜೀವಿತಮ್ (ಚ. ಸೂ. ೧.)

ಶರೀರವು ಮತ್ತು ಇಂದ್ರಿಯಗಳು ಪಂಚಮಹಾಭೂತವಿಕಾರಗಳ ಸಮುದಾಯಾತ್ಮಕವಾಗಿವೆ. ಪಂಚಭೂತವಿಕಾರ ಸಮುದಾಯವೂ ಮನಸ್ಸೂ ಸೇರಿದಲ್ಲಿ ಚೇತನಾಧಿಷ್ಠಾನಭೂತವಾದ ಶರೀರವು ಉಂಟಾಗುವುದು. ಹೀಗೆ ವಿಚಾರಿಸಲು, ಪಂಚಮಹಾಭೂತವಿಕಾರ ಸಮುದಾಯಾತ್ಮಕವಾದ ಅದೊಂದು ಎಂದರೆ ಸ್ಥೂಲ ಶರೀರವೆಂಬುದರ; ಚೇತನಾಧಿಷ್ಠಾನಭೂತವಾದ ಅದೊಂದು ಎಂದರೆ ಸೂಕ್ಷ್ಮಶರೀರವೆಂಬುದರ:— ಅಂತು, ಇವೆರಡೂ ಶರೀರಗಳ ವಿಚಾರವನ್ನು ಮಾಡಿದಲ್ಲಿ ಅದು ಶರೀರವಿಷಯಕವಾದ ಸಾಕಲ್ಯವಿಚಾರ ಎಂದಾಯಿತು.

ಇವೆರಡು ಶರೀರಗಳು ಬೇರೆ ಬೇರೆ ದ್ರವ್ಯಗಳಿಂದ ಉಂಟಾಗಿರುವುವು. ಪಂಚಮಹಾಭೂತವಿಕಾರ ಸಮುದಾಯಾತ್ಮಕವಾದ ಶರೀರವು (ಸ್ಥೂಲಶರೀರವು) ಪಂಚಮಹಾಭೂತಗಳಿಂದ ರಚಿತವಾದ ಬೇರೆ ಬೇರೆ ದ್ರವ್ಯಗಳಿಂದುಂಟಾಗಿದೆ. ಇದರಲ್ಲಿ ಶರೀರದ ವಿವಿಧ ಅಂಗ-ಪ್ರತ್ಯಂಗಗಳ ಅಂತರ್ಭಾವವುಂಟಾಗುವುದು. ಶರೀರಾವಯವದ ಕೊನೆಯದಾದ ಚಿತ್ ಅಂಶವು ಪರಮಾಣುವಾಗಿದೆ. ಆಯುರ್ವೇದದೊಳಗಣ ಪರಮಾಣುವೆಂಬುದು ಆಧುನಿಕರು ಶರೀರಶಾಸ್ತ್ರಗಳಲ್ಲಿ ಬಣ್ಣಿಸುವ Cell ನಂತೆ ಇದೆ. ಅನೇಕ ಪರಮಾಣುಗಳು ಸೇರಿ, ಶರೀರಾವಯವಗಳಾದ ಕರ್ಮೇಂದ್ರಿಯಗಳೂ ಜ್ಞಾನೇಂದ್ರಿಯಗಳೂ ಉಂಟಾಗಿವೆ. ಜ್ಞಾನೇಂದ್ರಿಯಗಳು ಪಂಚಮಹಾಭೂತವಿಕಾರಗಳಿಂದಲೆ ಉಂಟಾಗಿವೆಯಾದರೂ ಇವುಗಳು ಮನಸ್ಸಿಗೆ ಸಂಲಗ್ನವಾಗಿರುವ ಕಾರಣ, ಕರ್ಮೇಂದ್ರಿಯಗಳಿಗಿಂತ ಅವುಗಳ ಕಾರ್ಯವ್ಯಾಪ್ತಿಯು ಕೊಂಚ ಬೇರೆಯಾಗಿದೆ. ಮನಸ್ಸು ಮತ್ತು ಆತ್ಮನು ಸೇರಿ—ಚೇತನಾ ಶರೀರ ಅಥವಾ ಚೇತನಾಧಿಷ್ಠಿತ (ಚೇತನಾಧಿಷ್ಠಾನಭೂತ)ವಾದ ಶರೀರವುಂಟಾಗಿದೆ.

ಆಧುನಿಕಶಾಸ್ತ್ರಗಳಿಗೂ ಶರೀರದೊಳಗಣ ಕೊನೆಯ ಚಿದಂಶವಾದ ಪರಮಾಣುವೂ ಗ್ರಾಹ್ಯವೇ ಆಗಿದೆ. ಇದರಿಂದ ಸಮಸ್ತ ಶರೀರಾವಯವಗಳೂ ರಚಿತವಾಗಿವೆ. ಎಂದೂ ಅವುಗಳ ವ್ಯಾಪಾರವೂ ಪಂಚಮಹಾಭೂತವಿಕಾರ ಸಮುದಾಯಾತ್ಮಕ (Physico-Chemical) ವಾಗಿದೆ. ಎಂದೂ ಆಯುರ್ವೇದವು ಹೇಳುವುದನ್ನು ಆಧುನಿಕ ವಿಜ್ಞಾನಶಾಸ್ತ್ರವೂ ಇಂದ್ರಿಯವಿಜ್ಞಾನಶಾಸ್ತ್ರವೂ ಸಮ್ಮತಿಸುತ್ತಿವೆ. ಶರೀರದ ವಿವಿಧ ವ್ಯಾಪಾರಗಳೂ ರಸಾಯನಶಾಸ್ತ್ರದ ಹಾಗೂ ಪದಾರ್ಥವಿಜ್ಞಾನ ಶಾಸ್ತ್ರದ ನಿಯಮಗಳನುಸಾರವಾಗಿ ನಡೆಯುತ್ತಲಿದೆ. ಇಷ್ಟೇ ಅಲ್ಲ. ಜೀವನ ವ್ಯಾಪಾರದ ಸಮಸ್ತ ಸಮಸ್ಯೆಗಳನ್ನೂ ಇವೇ ಶಾಸ್ತ್ರಗಳ ಸಹಾಯದಿಂದ ಬಿಡಿಸಬರುತ್ತಿದೆ. ಈ ಕಾರಣ, ಜೀವನತತ್ವ (ಆತ್ಮ)ವನ್ನು ಬೇರೆಯಾಗಿ ಗ್ರಹಿಸಿಕೊಳ್ಳುವ ಅಗತ್ಯವಿರುವುದಿಲ್ಲ. ಹಿಟ್ಟನ್ನೂ ನೀರನ್ನೂ ಒಂದಾಗುವಂತೆ ಬೆರಸಿದ ಬಳಿಕ, ಅದರಲ್ಲಿ ಮೂರನೆಯದೊಂದು ಮದ್ಯಶಕ್ತಿಯು ಹೇಗೆ ಉಂಟಾಗುತ್ತಿದೆಯೋ ಹಾಗೆಯೇ ಅನೇಕ ದ್ರವ್ಯಗಳೊಳಗೆ ಪರಸ್ಪರವಾದ ಮೂರ್ಛನಾರೂಪ ವ್ಯಾಪಾರವುಂಟಾಗಿ ಅದರಿಂದ ಆತ್ಮಶಕ್ತಿ (Consciousness)ಯು ಉಂಟಾಗುವುದು. ಅದುಕಾರಣ, ಆತ್ಮಶಕ್ತಿಯು ಬೇರೆಯಾಗಿದೆ. ಎನ್ನಲು ಕಾರಣವೂ ಇಲ್ಲ. ಅದರ ಸ್ವರೂಪ ಗುಣ, ಕರ್ಮ ಮೊದಲಾದುವುಗಳನ್ನು ಕುರಿತು ಆಧುನಿಕ ಶಾಸ್ತ್ರಗಳಲ್ಲಿಲ್ಲಿಯೂ ಉಲ್ಲೇಖಿಸಿದುದಿಲ್ಲ.

ಇಷ್ಟೇ ಏಕೆ! ಮನಸ್ಸಿನ ಸಂಬಂಧವಾಗಿಯಾದರೂ ಇಂದ್ರಿಯವಿಜ್ಞಾನವು ಸಹ ಮುಗ್ಧತೆಯನ್ನು ತಳೆದಿರುವದು, ಮಾನಸಶಾಸ್ತ್ರವೆಂಬುದೊಂದು ಸ್ವತಂತ್ರವಾಗಿ ಉಂಟಾಗಿದ್ದು ಬೆಳೆಯುತ್ತಲಿದೆ. ಅದರಂತೆ ಮಾನಸಚಿಕಿತ್ಸಾಪದ್ಧತಿಗಳೂ ಸ್ವತಂತ್ರವಾಗಿ ವಿಕಾಸಹೊಂದುತ್ತಲಿವೆ. ಹೀಗಿದ್ದರೂ ಶಾಸ್ತ್ರೀಯವೈದ್ಯಕದ ಅಭಿಮಾನಿಗಳಾಗಿರುವ ಶಾಸ್ತ್ರಜ್ಞರು ಮನಸ್ಸಂಬಂಧವಾಗಿ ಬರೆವಾಗ, ಹೆಚ್ಚಾದರೆ ಅದೊಂದು Unitary Entity ಎಂದೆಂದುಕೊಂಡು ತಮಗಿನ್ನು ಇಂದ್ರಿಯ ವಿಜ್ಞಾನ ದೃಷ್ಟಿಯಲ್ಲಿ ಈ ವಿಷಯ ಬರೆಯಲು ಉಳಿದಿಲ್ಲವೆಂದು ಸುಮ್ಮನಾಗುವರು. (See Hallipurton's Physiology) ಅಂತೂ ಮನಸ್ಸು-ಆತ್ಮ ಇವುಗಳ ವಿಷಯವಾಗಿ ಆಧುನಿಕ ವೈದ್ಯಕದ ಅಭಿಮತವು ಅನಿಶ್ಚಿತವಾಗಿದೆ; ಅದುಕಾರಣವೇ ತತ್ಸಂಬಂಧವಾದ ಯಾವ ವಿವೇಚನೆಯೂ ಆಧುನಿಕ ವೈದ್ಯಕದಲ್ಲಿ ಕಂಡು ಬರುವುದಿಲ್ಲ.

ಚಿತ್‌ಪರಮಾಣುವು (Cell) ಶರೀರದ ಅವಿಭಾಜ್ಯವಾದ ಕೊನೆಯ ಅಂಶವು; ಇದು ಇಡೀ ಶರೀರದಲ್ಲಿ ತುಂಬಿಕೊಂಡಿದೆ. ಶರೀರದ ವ್ಯಾಪಾರಗಳೆಲ್ಲವೂ ರಾಸಾಯನಿಕ ಪದ್ಧತಿಯಿಂದಲೇ ಸಾಗುತ್ತಲಿವೆ. ಹೀಗಿರುವಾಗ, ಚಿತ್‌ಪರಮಾಣುವು ಯಾವುದರಿಂದ ಮತ್ತು ಹೇಗೆ ಉಂಟಾಗುತ್ತಿದೆ? ಅದರ ವ್ಯಾಪಾರಗಳು ಹೇಗೆ ನಡೆಯುತ್ತಿವೆ. ಎಂಬೊಂದು ಪ್ರಶ್ನೆಯು ಹಾಗೆಯೇ ಉಳಿಯುವಂತಾಯಿತು. ಈ ಪ್ರಶ್ನೆಯ ಕಡೆಗೆ ಆಧುನಿಕಶಾಸ್ತ್ರಜ್ಞರ ಲಕ್ಷ್ಯವು ಸೆಳೆಯಲ್ಪಟ್ಟು, ಚಿತ್‌ಪರಮಾಣುಗಳ ಅಂತಸ್ಥವ್ಯಾಪಾರಗಳ ಹಾಗೂ ಘಟನೆಗಳ ಸಂಬಂಧವಾಗಿ ಶೋಧಹಚ್ಚಲು ಶಾಸ್ತ್ರಜ್ಞರು ಮಗ್ನರಾಗಿರುವರು. ಆಯುರ್ವೇದವಾದರೂ ಪರಮಾಣುವನ್ನೇ ಶರೀರಾವಯವಗಳ ಕೊನೆಯ ವಿಭಾಗವೆಂದು ಅಂಗೀಕರಿಸಿಕೊಂಡಿರುವದು. (ಶರೀರಾವಯವಸ್ತು ಪರಮಾಣುಭೇದೇ ನಾಪರಿಸಂಖ್ಯೇಯಾಭವಂತಿ ಅತಿಸೂಕ್ಷ್ಮತ್ವಾತ್ ಅತಿಬಹುತ್ವಾತ್ ಅತೀಂದ್ರಿಯತ್ವಾತ್ಚ ॥ ಚ. ಶಾ. ೭) ಅಂತೆಯೆ, ಈ ಪರಮಾಣುಗಳ ಸ್ವರೂಪವು ಅತಿಸೂಕ್ಷ್ಮವೂ ಅತೀಂದ್ರಿಯವೂ ಆಗಿದ್ದು, ಇವು ವಿಪುಲವಾಗಿವೆ ಎಂದು ಹೇಳಲಾಗಿದೆ. ಇಷ್ಟರ ಮಟ್ಟಿಗೆ ಆಯುರ್ವೇದವೂ ಆಧುನಿಕಶಾಸ್ತ್ರಗಳೂ ಒಂದೇ ಅಭಿಮತದವು. ಪರಂತು, ಈ ಪರಮಾಣುವನ್ನು ಆಧುನಿಕರೆನ್ನುವಂತೆ ಸ್ವತಂತ್ರವೆಂದು ಆಯುರ್ವೇದವು ಮನ್ನಿಸುವುದಿಲ್ಲ. ಇದನ್ನು ಮೀರಿ, ಶರೀರದೊಳಗೆ ಇನ್ನಾವ ದ್ರವ್ಯವೂ ಇರಲಾರದೆಂದು ಆಯುರ್ವೇದವು ಅಭಿಪ್ರಾಯಪಡುವುದಿಲ್ಲ. ಆದರೆ ಈ ಪರಮಾಣುವಿನ ಸಂಯೋಗ-ವಿಭಾಗಗಳನ್ನುಂಟುಮಾಡುವ ಕಾರಣಗಳನ್ನು ಆಯುರ್ವೇದವು ಹೇಳುತ್ತಿದೆ. (ತೇಷಾಂ ಸಂಯೋಗವಿಭಾಗೇ ಪರಮಾಣೂನಾಂ ಕಾರಣಂ ವಾಯುಃ ಕರ್ಮಸ್ವಭಾವಶ್ಚ. ಚ. ಶಾ. ೭) ಕರ್ಮಸ್ವಭಾವಪರಿಗ್ರಹೀತವಾಗಿ ವಾಯುವಿನ ದೆಸೆಯಿಂದಾಗಿ ಪರಮಾಣುಗಳ ಸಂಯೋಗ ವಿಭಾಗಗಳು ಉಂಟಾಗುತ್ತಿವೆ ಎಂದರ್ಥ.

ಪರಂತು, ಶರೀರವಿಷಯಕವಾದ ವಿಚಾರಗಳು ಆಯುರ್ವೇದದಲ್ಲಿ ಇಷ್ಟರಲ್ಲೆ ಕೊನೆಗಂಡಿಲ್ಲ. ಪಂಚಮಹಾಭೂತವಿಕಾರ ಸಮುದಾಯಗಳಿಂದುಂಟಾದ ಶರೀರದ ವಿಚಾರವನ್ನು ಮಾಡಿ, ಮುಂದೆ ಮನಸ್ಸೆಂಬುದು ಒಂದು ಸ್ವತಂತ್ರ, ಅಣು ಮತ್ತು ಏಕದ್ರವ್ಯ (ತತ್ವ) (ಅಣುತ್ವಮಥಚೈಕತ್ವಮ್) ಎಂಬುದಾಗಿ ಆಯುರ್ವೇದವೆನ್ನುತ್ತಿದೆ. ವಿಚಾರಮಾಡುವಿಕೆ ವಿಶೇಷಾಲೋಚನೆ ಮಾಡುವಿಕೆ, ಬಾಹ್ಯಜ್ಞಾನವನ್ನೊಳಕೊಂಡು ಅದರ ಮೇಲೆ ನಿಶ್ಚಿತಾಭಿಪ್ರಾಯವನ್ನು ಮಾಡಿಕೊಳ್ಳುವಿಕೆ, (ಮನಸಸ್ತು ಚಿಂತ್ಯಮರ್ಥಃ ಚಿಂತ್ಯಂ ವಿಚಾರಮೂಹ್ಯಂಚಧ್ಯೇಯಂ ಸಂಕಲ್ಪಮೆಂವಚ) ಸ್ವತಃದ ಮತ್ತು ಇಂದ್ರಿಯಗಳ ನಿಗ್ರಹ ಮಾಡುವಿಕೆ ಮೊದಲಾದುವು ಮನಸ್ಸಿನ ಕರ್ಮಗಳಾಗಿವೆ. ರಜ ಮತ್ತು ತಮ (ಚಂಚಲಾವಸ್ಥೆ ವ ಅಜ್ಞಾನಾವಸ್ಥೆ) ಇವೆರಡು ಮನಸ್ಸಿನ ಗುಣಗಳಾಗಿವೆ. ಹೀಗಿರುವುದರಿಂದ,—ಮನಸ್ಸೆಂಬುದು ಒಂದು ಸ್ವತಂತ್ರ ದ್ರವ್ಯವೆಂದಾಯಿತು; ಅದರ ಗುಣ-ಕರ್ಮಗಳನ್ನು ಸಹ ಸ್ವತಂತ್ರ ರೀತಿಯಲ್ಲಿ ಹೇಳಲಾಗಿದೆ. ಚೇತನ ಅಥವಾ ಸ್ವಯಂಸ್ಫೂರ್ತಿ ಎಂಬೀ ಗುಣವು ಇತರ ಅಚೇತನ ದ್ರವ್ಯಗಳಲ್ಲಿ ಕಾಣಸಿಗದು. ದ್ರವ್ಯವಿನ್ನಲ್ಲಿ ಶಕ್ತಿಯಿದೆಯಾದರೂ ಚೇತನ (Consciousness) ಇಲ್ಲ. ಆ ಚೇತನ ದ್ರವ್ಯಗಳ ಕಾರ್ಯಗಳು ಕಾಣಬರಬಹುದಾದರೂ ಅವನ್ನು ಅವು ಸ್ವತಃ ತಮ್ಮ ಅಂತಸ್ಥ ಬುದ್ಧಿಯಿಂದಲೇ ಮಾಡಲಾರವು; ಕರ್ಮಶಕ್ತಿಯಿಂದ ಎಷ್ಟಾಗಬಹುದೊ ಅಷ್ಟೆ ಮಾತ್ರ. ಅವುಗಳ ಕರ್ಮಗಳ ವಿಶಿಷ್ಟವ್ಯಾಪ್ತಿಯು ಇಂತಿಷ್ಟೆ ಎಂದು ನಿಶ್ಚಿತವಾಗಿದ್ದು ಅಷ್ಟರೊಳಗೆ ಅವುಗಳ ಕರ್ಮವು ಸಾಗುತ್ತಿದೆ ಅಚೇತನದ್ರವ್ಯಗಳಲ್ಲಿ ತಿಳಿವಿನ ಆಧಾರದಿಂದಾಗತಕ್ಕ ಕರ್ಮಗಳು ಸಾಗಲಾರವು. ಸ್ವಯಂಸ್ಫೂರ್ತಿ (ಚೇತನ) ಎಂಬೀ ಗುಣವು ಸಚೇತನ ದ್ರವ್ಯಗಳಲ್ಲಿ ಸ್ಪಷ್ಟವಾಗಿ ಕಾಣಬರುತ್ತಿದೆ. ಸಚೇತನ ಶರೀರದಲ್ಲಂತೂ ಈ ಗುಣವು ವ್ಯಕ್ತವೇ ಆಗಿದೆ. ಇದೇ ಆತ್ಮದ ಅಥವಾ 'ಪುರುಷ'ನ ಗುಣವು ಚೇತನಾವಾನ್ ಪರಸ್ಯಾತ್ಮಾ ಸತ್ವಭೂತಗುಣೈಂದ್ರಿಯೈಃ ಚೈತನ್ಯೇ ಕಾರಣಮ್ ಎಂದು ಆಯುರ್ವೇದವೆನ್ನುವುದು.

ಇಲ್ಲಿ ಒಂದು ಪ್ರಶ್ನೆಯುಂಟಾಗಬಹುದು: ಚೇತನ ಎಂಬೀ ಗುಣವು ಸಚೇತನ ಪ್ರಾಣಿಗಳಲ್ಲಿ ಕಂಡುಬಂದರೂ, ಸಚೇತನ ಪ್ರಾಣಿಗಳಲ್ಲಿನ ದ್ರವ್ಯಸಂಯೋಗದ ಫಲವಿದು, ಉತ್ಕಟಫಲವಿದು,—ಎಂದೇತಕ್ಕೆ ಮನ್ನಿಸಲ್ಪಡಲಾಗದು? ಬೇರೆ ಬೇರೆ ಅನೇಕ ಯಂತ್ರಗಳನ್ನು ಕುಶಲತೆಯಿಂದ ಜೋಡಿಸಿಟ್ಟು, ಅವುಗಳೊಳಗೆ ಯಾವುದೊಂದು ಬಗೆಯ ಕರ್ಮಶಕ್ತಿ (ವಿದ್ಯುತ್, ಅಗ್ನಿ, ವಾಯು, ಇತ್ಯಾದಿ) ಯನ್ನು ಪ್ರಯೋಗಿಸಿ ಹೇಗೆ ನಾವು ಯಂತ್ರಗಳನ್ನು ನಡೆಯಿಸುತ್ತೇವೆಯೋ ಹಾಗೆಯೆ. ಶರೀರವೆಂಬದನ್ನು ಅತ್ಯಂತ ಕುಶಲತೆಯಿಂದ ರಚಿಸಿರುವ ಒಂದು ಯಂತ್ರವೆಂದೂ ಅದರಲ್ಲಿ ತೋರಿಬರುವ ಚೇತನವನ್ನು ಅತ್ಯಂತ ತೇಜಸ್ವಿಯಾದ ಕರ್ಮಶಕ್ತಿಯೆಂದೂ ಭಾವಿಸಿ ಅವುಗಳ ಸಂಯೋಗದಿಂದ ಶರೀರವ್ಯಾಪಾರಗಳು ಸಾಗುತ್ತಲಿವೆ, ಎಂದೇಕೆ ನಾವು ಪರಿಭಾವಿಸಲಾಗದು? ಇದಕ್ಕೆ ಉತ್ತರವು ಹೀಗಿದೆ:—ಯಂತ್ರವು ಕೆಲಸಮಾಡುತ್ತಿರುವಾಗ ಅದೆಷ್ಟೇ ಕುಶಲತೆಯದಾಗಿರಬಹುದಾದರೂ, ಅದಕ್ಕೊಬ್ಬ ಪ್ರೇರಕನು ಅಥವಾ ನಿಯಾಮಕನು, ಸ್ವಯಂವೇದನ ಅಥವಾ ಅರಿವುಳ್ಳ ಮನುಷ್ಯನು ಇದ್ದೇ ಇರಬೇಕಾಗುವುದು. ಆತನೇ ಯಂತ್ರವೆಲ್ಲಕ್ಕೂ ಪ್ರೇರಣೆಯನ್ನುಂಟುಮಾಡುವಾತನು. ತನ್ನ ಬುದ್ಧಿಬಲದ ಪ್ರಯೋಗದಿಂದ ಆತನು ಆ ಯಂತ್ರದಿಂದ ಕೆಲಸಮಾಡಿಸಿಕೊಳ್ಳುವನು. ಯಂತ್ರಕ್ಕೆ ಬುದ್ಧಿಯುಲ್ಲ, ಅರಿವಿಲ, ಸ್ಫೂರ್ತಿಯುಲ್ಲ ಏಕೆಂದರೆ ಜಡ ಅಥವಾ ಅಚೇತನ ದ್ರವ್ಯಗಳಿಗೆ ಈ ಗುಣಗಳೇ ಇರಲಾರವು.

ಕ್ರಮಶಃ

'Fools Rush in where angels fear to tread'

'ಎಲ್ಲರೂ ಮಲಗಿರುವಾಗ ಕುಳಿತಿರುವವನೇ ಕಳ್ಳ' ಎಂಬಂತೆ ಇದ್ದದ್ದನ್ನು ಇದ್ದ ಹಾಗೆ ಹೇಳಿದ ವಿಷಯದಲ್ಲಿ, ಮೈಸೂರು ನಾಡಿನ ಪತ್ರಿಕೆಗಳೆಲ್ಲವೂ 'ಗಾಢನಿದ್ರಾ ಪರವಶ'ವಾಗಿರುವಾಗ [ರಾ] ವಿ. ಜಿ ಕೃಷ್ಣಪ್ಪನವರು ಮಾತ್ರ ಕಣ್ಣೊರಸಿಕೊಂಡು ಎದ್ದು ಬಂದು ತಮ್ಮ ಕೌಶಲವನ್ನು ನವಜೀವನ ಪತ್ರಿಕೆಯಲ್ಲಿ ತೋರಿಸಿದ್ದು ಹ್ಯಾಗಿದೆ ಎಂದು ವಾಚಕರೇ ಯೋಚಿಸಲಿ. ಇನ್ನು 'ಶಾತಯ್ಯನು ಸಮ್ಮಗಿರುವ'ನೆಂದು 'ಮೊಮ್ಮಗನ ದೂರು. 'ದುಷ್ಪುತ್ರ ಕುಲನಾಶಾಯ ವೃದ್ಧಾಪ್ಯಂ......' ಎಂಬಂತೆ ಆ ಪೂಜ್ಯರಿಗೆ ಇಂತಹ ಮೊಮ್ಮಕ್ಕಳ ಲಭ್ಯದಿಂದಲೇ ಹೊರನಾಡಿನ ಪತ್ರಿಕೆಗಳಿಗೆ ಆಗಾಗ ಆಹಾರ ದೊರೆಯುತ್ತಿರುವುದು. ಮಿತ್ರನು (ಸೂರ್ಯ ಸ್ನೇಹಿತ) ಪಾತಾಳದಲ್ಲಿ ಮುಳುಗಿ ಮೇಲಕ್ಕೆ ಬಂದರೇನೇ ರಾತ್ರಿ ಹಗಲು ಎಂಬ ಕಾರಣವ್ನು ವಿರುವುದೆಂದೂ, ಪಾತಾಳದಲ್ಲಿರುವ ಮಹಾಶೇಷನ ಅಭಿಮಾನಪೂರ್ವಕವಾದ ಆಧಾರದಿಂದಲೇ ಮೇಲಿನ ಭೂಮಿಯು ಹಾರಾಟವೆಂಬುದನ್ನು ಆ ತರುಣ ಮಹನೀಯರು ಕನಸುಮನಸ್ಸಿನಲ್ಲಿ ನೆನಸಿದ್ದನ್ನು ಬರೆಯಲು ಹಿಂತೆಗೆದರೇನೋ!

ಇರಲಿ - ನಿದ್ದೆಯಿಂದೆದ್ದು, ಮನೆಯಲ್ಲಿ ತಿಂಡಿಮಾಡಿದರೆ ಪತ್ನೀಪುತ್ರರಿಗೂ ಕೊಡಬೇಕಾಗಿ ಖರ್ಚು ಜಾಸ್ತಿಯಾಗುವದೆಂಬ ಆಶೆಯಿಂದ ತಿಕ ಮುಖ ತೊಳೆಯದೇನೇ ಓಡಿಬಂದು 'ಇಡ್ಲಿ, ಮಸಾಲೆದೋಸೆ, ಪೂರಿ ಸಾರು ಇವನ್ನು ತಿಂದು ತೇಗಿ ಆ ಮೇಲೆ ಕಾಸಿಗೆ ಜಗಳವಾಗಿ ಪೋಲೀಸಿನವರಿಂದ ಪಾರಾಗುವ ಜಿರಿರುಮಾಲಿನ ಕಲಾಬತ್ತು ಪಂಚೆಯ ಉಂಡಮಾನೆಗೆರಡನ್ನು ಬಗೆವ ಮೊಮ್ಮಕ್ಕಳೆಷ್ಟೋ! ಧೈರ‍್ಯ ಇದೆಯೋ!

'ಇನ್ನು ವಾಷಿಂಗ್ ಏಜನ್ಸಿ, ಶೇವಿಂಗ್ ಸೆಲೂನು, ಇವುಗಳನ್ನು ಬರೆಯುವಾಗ ಕುಂಕುಮ ಭಸ್ಮಧಾರಣಗಳೆಂಬ ಕುಲೀನತೆಯ ತೆರೆಯಿಂದ ಮುಚ್ಚಲ್ಪಟ್ಟು ಕಿರುನಗೆ ಎಂಬ 'Sign Board'ಗಳಿಂದ ಪ್ರಕಾಶಮಾನವಾಗಿರುವ ಪೂರ್ವಾಚಾರ ಬದ್ಧರಾದ ನವಜೀವಿನಿಗಳ 'ಏಜನ್ಸಿ'ಗಳನ್ನೂ ಸಾಲಾಗಿ ಬರದುಕೊಂಡು ಈ ನಮ್ಮ ಪೂಜ್ಯ ಮಹನೀಯರೇ ಇರುವ ತನುಧನಗಳ ಧ್ವಂಸಾತ್ಮಕವೇ ಅಲ್ಲ ಮುಂದಣ ಯೋಜಂಟರುಗಳ ರಚನಾತ್ಮಕವೇ ಎಂದು ಉತ್ತರಕೊಡಲಿ!

ಇನ್ನು ಇವರ ಭಾಷಾಜ್ಞಾನ:— ತಲಕ್ಕಾಯಿಮಚ್ಚು—' ಎಂದರೆ ತಲೆಗೆ ಕೈಮಣ್ಣು ಹಚ್ಚುವುದೋ! ಅಲ್ಲ ತಲೆಯಿಂದ ಕಾಲಿನ ತನಕ ಮಣ್ಣೋ! ಇದಕ್ಕೂ ಒಂದು ಉತ್ತರ ಬರೆಯಲಿ. ಇನ್ನು ಕನ್ನಡಕ್ಕೆ ಮೈಸೂರೇ ಮಾತೃಸ್ಥಾನವೆಂದು ತಿಳಿದು ಹೀಗಾಡುವದಾದರೆ ಕನ್ನಡದೇಶದ ಮಂಗಳೂರೇ ಪಿತೃಸ್ಥಾನವೆಂದು ಇನ್ನಾದರೂ ತಿಳಿದಿರಲಿ!

ಪ್ರಿಯರೆ, ನವೀನ ಕಾಲಕ್ಕೆ ಸರಿಯಾಗಿ ಕೈಲಾದಮಟ್ಟಿಗೆ ಭಾಷಾಸೇವೆಯನ್ನೂ, ಸಮಾಜಸೇವೆಯನ್ನೂ, ಮಾಡುತ್ತಿರುವ ಪತ್ರಿಕೆಗಳನ್ನು ದಯವಿಟ್ಟು ಇಂತಹ ಹಾಳು ದುರ್ನುಡಿಗಳಲ್ಲಿ ದೂಷಿಸುತ್ತಿರುವುದಕ್ಕಿಂತಲೂ ಆ ಸಮಯಗಳಲ್ಲಿ ಕೃಷಿ, ಕೈಗಾರಿಕೆ, ವಿದ್ಯಾಭ್ಯಾಸಾದಿ ಸದ್ವಿಷಯಗಳಲ್ಲಿ ತಮ್ಮ ಕೌಶಲವನ್ನು ತೋರಿಸಿ ಉಪನ್ಯಾಸಗಳನ್ನು ಬರೆದು ಪ್ರಕಟಿಸಿದ್ದಾದರೆ ಈ 'Unemployment' ಕಾಲದಲ್ಲಿ ಸಮಾಜಸೇವೆಯನ್ನು ಎಷ್ಟೋ ಒಂದು ಮಾಡಿದಂತಾಗುವುದು, ಮತ್ತು ಅಂತಹ ಉತ್ತಮ ವಿಷಯಗಳ ಅಡಿಯಲ್ಲಿ ತಮ್ಮ ಹೆಸರು ಬರೆದು ಬರುವುದೇ ಮೇಲಲ್ಲದೆ ಹೀಗೆ ನಿಂದ್ಯ ವಚನಗಳಡಿಯಲ್ಲಿ ಬರೆದು ನೀವೂ ನಿಂದ್ಯರಾಗುವದು ಯುಕ್ತವಲ್ಲ. ಅಖಿಲ ಭಾರತವೂ ಏಕೀಕರಣ ಪ್ರಯತ್ನಕ್ಕೆ ಕೈಹಚ್ಚಿರಲು ಮಹನೀಯರಾದ ತಾವು ಮಾತ್ರ ಮೇಲೆ ಕೆಳಗೆ ಮಾಡುವುದು ಯುಕ್ತವಲ್ಲ.

"ಮೈಸೂರಿಯನ್"

ಕೊಂಕಣ ಪ್ರಾಂತ.

ಕಂಠೀರವನ ಕಳೆದ ಸಂಚಿಕೆಯಲ್ಲಿ ತುಳುತನಯರೊಬ್ಬರು ತುಳು ಭಾಷೆಯನ್ನು ಕಲಿಯುವ ಆವಶ್ಯಕತೆ, ತೌಳವ ಅಭಿಮಾನವನ್ನು ತಾಳುವದರ ಆವಶ್ಯಕತೆ, ತೌಳವ ಪ್ರಾಂತರಚನೆಯ ಹಿತಕಾರಿತೆ, ಇತ್ಯಾದಿ ವಿಚಾರಗಳನ್ನು ಕೊಟ್ಟಿರುವರು. ಪ್ರಶ್ನಾರೂಪದಲ್ಲಿ ವಿಚಾರಗಳಿರುವುದರಿಂದ ಲೇಖಕರಿಗೆ ಯಾವುದೊಂದು ನಿಶ್ಚಿತ ಅಭಿಪ್ರಾಯವಿಲ್ಲವೆಂದು ಊಹಿಸಬೇಕಾಗುತ್ತದೆ.

ಕರ್ನಾಟಕ ಪ್ರಾಂತರಚನೆಗಿರುವ ಅಭ್ಯಂತರಗಳೂ, ವಿರೋಧಗಳೂ ಒಂದು ಕಡೆ, ತೌಳವ ಪ್ರಾಂತವು ಬಹು ಚಿಕ್ಕದಾಗಿರುವುದರಿಂದ ತೌಳವ ಪ್ರಾಂತದ ಅಸಾಧ್ಯತೆ, ಇತ್ಯಾದಿಗಳನ್ನು ಆಲೋಚಿಸುವಾಗ ಇನ್ನೊಂದು ಸುಲಭವಾದ ಬೇರೆ ಉಪಾಯವಿದೆಯೆಂದು ನನಗೆ ತೋರುತ್ತಿದೆ.

ಮುಂಬಾಯಿಯಿಂದ ಮಲಬಾರು ವರೆಗಿನ ಕರಾವಳಿ ಪ್ರಾಂತದ ಭೂರಚನೆಯೂ, ಜನತೆಯ ಪರಸ್ಪರ ಸಂಬಂಧಗಳೂ ಇದನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಲಿಕ್ಕೆ ಹೆಚ್ಚು ಉತ್ತೇಜನವನ್ನು ಕೊಡುತ್ತಿವೆ. ಬಹು ಕಾಲದ ಪೂರ್ವದಲ್ಲಿ ಇದು ಪ್ರತ್ಯೇಕ ಪ್ರಾಂತ್ಯವಾಗಿತ್ತೆಂಬುದಕ್ಕೆ ಆಧಾರಗಳೂ ಇವೆ. ಈ ಪ್ರಾಂತ್ಯಕ್ಕೆ ಸರ್ವಸಾಮಾನ್ಯವಾದ ಭಾಷೆಯೊಂದು ಇದ್ದಿತ್ತು. ಈಗಲಾದರೂ ಆ ಭಾಷೆಯು ಇದ್ದೇ ಇದೆ.

ಆದುದರಿಂದ ಮುಂಬಾಯಿ ಶಹರಿನ ದಕ್ಷಿಣದಲ್ಲಿರುವ ಪ್ರದೇಶಗಳಿಂದ ನಮ್ಮ ಜಿಲ್ಲೆಯ ಆಚೆಯ ವರೆಗೆ, ಕರಾವಳಿಯಿಂದ ಘಟ್ಟಗಳ ವರೆಗೆ ವಿಸ್ತರಿಸಿರುವ ಈ ಪ್ರಾಂತ್ಯವನ್ನು ಕೊಂಕಣ ಪ್ರಾಂತ್ಯವಾಗಿ ಮಾಡಿ ಕೊಂಕಣಿ ಭಾಷೆಗೆ ಪ್ರಾಧಾನ್ಯವನ್ನು ಕೊಟ್ಟು ಪ್ರಾಂತರಚನೆಯನ್ನು ಮಾಡುವುದು ಸುಲಭವೂ, ಸ್ವಾಭಾವಿಕವೂ ಆಗಿದೆ. ಇದಕ್ಕೆ ಕೊಂಕಣಭಾಷೆಯೇ ದೇಶಭಾಷೆಯಾಗಿರುವ ಒಂದು ವಿಶ್ವವಿದ್ಯಾಲಯವನ್ನು ರಚಿಸಲು ಅನುಕೂಲವಾಗುತ್ತದೆ. ಅಲ್ಲದೆ ಕರ್ನಾಟಕ ಮತ್ತು ತೌಳವ ಪ್ರಾಂತರಚನೆಗಳಿಗಿರುವ ಎಷ್ಟೋ ಪ್ರತಿಬಂಧಕಗಳು ಇದಕ್ಕೆ ಇರುವುದಿಲ್ಲ.

"ಕೊಂಕಣ ಕುವರ"

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಘಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಬೇಕಾದವರಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

Estd. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ-ಇದು ವರವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years; 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮೌಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವುನ್ ಮಾತ್ರ.

'Fools Rush in where angels fear to tread'

'ಎಲ್ಲರೂ ಮಲಗಿರುವಾಗ ಕುಳಿತಿರುವವನೇ ಕಳ್ಳ' ಎಂಬಂತೆ ...ದ್ದನ್ನು ಇದ್ದ ಹಾಗೆ ಹೇಳಿದ ವಿಷಯದಲ್ಲಿ ಮೈಸೂರು ನಾಡಿನ ಪತ್ರಿಕೆ...ಲ್ಲವೂ 'ಗಾಢನಿದ್ರಾ ಪರವಶ'ವಾಗಿರುವಾಗ್ರಾ! ವಿ. ಜೆ. ಕೃಷ್ಣಪ್ಪ ...ನರು ಮಾತ್ರ ಕಣ್ಣೊರಸಿಕೊಂಡು ಎದ್ದುಬಂದು ತಮ್ಮ ಕೌಶಲವನ್ನು ...ಜೀವನ ಪತ್ರಿಕೆಯಲ್ಲಿ ತೋರಿಸಿದ್ದು ಹ್ಯಾಗಿದೆ ಎಂದು ವಾಚಕರೇ ಯೋಚಿ... ಇನ್ನು 'ಶಾತಯ್ಯನು ಸದ್ಯಗಿರುವ'ನೆಂದು 'ಮೊಮ್ಮಗನ ದೂರು ...ಪುತ್ರ ಕುಲನಾಶಾಯ ವೃದ್ಧಾ ಸ್ಯಂ......' ಎಂಬಂತೆ ಆ ಪೂಜ್ಯರಿಗೆ ...ಹ ಮೊಮ್ಮಕ್ಕಳ ಲಭ್ಯದಿಂದಲೇ ಹೊರನಾಡಿನ ಪತ್ರಿಕೆಗಳಿಗೆ ಆಗಾಗ ...ರ ದೊರೆಯುತ್ತಿರುವುದು. ಮಿತ್ರನು (ಸೂರ್ಯ ಸ್ನೇಹಿತ) ಪಾತಾಳ ...ಮುಳುಗಿ ಮೇಲಕ್ಕೆ ಬಂದರೇನೇ ರಾತ್ರಿ ಹಗಲು ಎಂಬ ತಾರತಮ್ಯ ...ವುದೆಂದೂ, ಪಾತಾಳದಲ್ಲಿರುವ ಮಹಾಶೇಷನ ಅಭಿಮಾನಪೂರ್ವಕ ಆಧಾರದಿಂದಲೇ ಮೇಲಿನ ಭೂಮಿಯು ಹಾರಾಟವೆಂಬುದನ್ನು ಆ ಮಹನೀಯರು ಕನಸುಮನಸ್ಸಿನಲ್ಲಿ ನೆನಸಿದ್ದನ್ನು ಬರೆಯಲು ...ಗಿದರೇನೋ?

...ಇರಲಿ – ನಿದ್ದೆಯಿಂದೆದ್ದು, ಮನೆಯಲ್ಲಿ ತಿಂಡಿಮಾಡಿದರೆ ಪತ್ನಿ...ಗೂ ಕೊಡಬೇಕಾಗಿ ಖರ್ಚು ಜಾಸ್ತಿಯಾಗುವದೆಂಬ ಆಶೆಯಿಂದ ...ಖ ತೊಳಿಯದೇನೇ ಓಡಿಬಂದು 'ಇಡ್ಲಿ, ಮಸಾಲೆದೋಸೆ, ಪೂರಿ ...ಇವನ್ನು ತಿಂದು ತೇಗಿ ಆ ಮೇಲೆ ಕಾಸಿಗೆ ಜಗಳವಾಗಿ ಪೋಲೀಸಿನವ...ರಾಗುವ ಜರಿರುಮಾಲಿನ ಕಲಾಬತ್ತು ಪಂಚೆಯ ಉಂಡಮಾನಿ... ಬಗೆವ ಮೊಮ್ಮಕ್ಕಳೆಷ್ಟೋ! ಧೈರಿ ಇದೆಯೋ?

...ಇನ್ನು ವಾಷಿಂಗ್ ಏಜನ್ಸಿ, ಶೇವಿಂಗ್ ಸೆಲೂನು, ಇವುಗಳನ್ನು ...ಾಗ ಕುಂಕುಮ ಭಸ್ಮಧಾರಣಗಳೆಂಬ ಕುಲೀನತೆಯ ತೆರೆಯಿಂದ ...ಟ್ಟು ಕಿರುನಗೆ ಎಂಬ 'Sign Board'ಗಳಿಂದ ಪ್ರಕಾಶಮಾನ ...ಪೂರ್ವಾಚಾರ ಬದ್ಧರಾದ ನವಜೀವಿನಿಗಳ 'ಏಜನ್ಸಿಗಳೆನ್ನೊ ...ಬರದುಕೊಂಡು ಈ ನಮ್ಮ ಪೂಜ್ಯ ಮಹನೀಯರೇ ಇರುವ ...ಗಳ ಧ್ವಂಸಾತ್ಮಕವೇ ಅಲ್ಲ ಮುಂದಿನ ಯೋಜಂಟರುಗಳ ರಚನಾ...ಎಂದು ಉತ್ತರಕೊಡಲಿ!

...ನ್ನು ಇವರ ಭಾಷಾಜ್ಞಾನ: – ತಲಕ್ಕಾಯಿಮಣ್ಣು – ಎಂದರೆ ...ಮಣ್ಣು ಹಚ್ಚುವುದೋ? ಅಲ್ಲ ತಲೆಯಿಂದ ಕಾಲಿನ ತನಕ ... ಇದಕ್ಕೂ ಒಂದು ಉತ್ತರ ಬರೆಯಲಿ. ಇನ್ನು ಕನ್ನಡಕ್ಕೆ ...ಮಾತೃಸ್ಥಾನವೆಂದು ತಿಳಿದ್ದು ಹೀಗಾಡುವದಾದರೆ ಕನ್ನಡದೇಶದ ...ಲೇ ಪಿತೃಸ್ಥಾನವೆಂದು ಇನ್ನಾದರೂ ತಿಳಿದಿರಲಿ!

...ರೆ, ನವೀನ ಕಾಲಕ್ಕೆ ಸರಿಯಾಗಿ ಕೈಲಾದಮಟ್ಟಿಗೆ ಭಾಷಾ..., ಸಮಾಜಸೇವೆಯನ್ನೂ, ಮಾಡುತ್ತಿರುವ ಪತ್ರಿಕೆಗಳನ್ನು ದಯೆ ...ತ ಹಾಳು ದುರ್ನುಡಿಗಳಲ್ಲಿ ದೂಷಿಸುತ್ತಿರುವುದಕ್ಕಿಂತಲೂ ...ಗಳಲ್ಲಿ ಕೃಷಿ, ಕೈಗಾರಿಕೆ, ವಿದ್ಯಾಭ್ಯಾಸಾದಿ ಸದ್ವಿಷಯ ... ಕೌಶಲವನ್ನು ತೋರಿಸಿ ಉಪನ್ಯಾಸಗಳನ್ನು ಬರೆದು ಪ್ರಕಟಿಸಿ 'Unemployment' ಕಾಲದಲ್ಲಿ ಸಮಾಜಸೇವೆಯನ್ನು ಮಾಡಿದಂತಾಗುವುದು, ಮತ್ತು ಅಂತಹ ಉತ್ತಮ ವಿಷಯ...ಲ್ಲಿ ತಮ್ಮ ಹೆಸರು ಬರೆದು ಬರುವುದೇ ಮೇಲಲ್ಲದೆ ಹೀಗೆ ...ಗಳಡಿಯಲ್ಲಿ ಬರೆದು ನೀವೂ ನಿಂದ್ಯರಾಗುವದು ಯುಕ್ತವಲ್ಲ. ...ರತವೂ ಏಕೀಕರಣ ಪ್ರಯತ್ನಕ್ಕೆ ಕೈಹಚ್ಚಿರಲು ಮಹನೀಯ...ಮಾತ್ರ ಮೇಲೆ ಕೆಳಗೆ ಮಾಡುವುದು ಯುಕ್ತವಲ್ಲ.

"ಮೈಸೂರಿಯನ್"

ಕೊಂಕಣ ಪ್ರಾಂತ.

...ವನ ಕಳೆದ ಸಂಚಿಕೆಯಲ್ಲಿ ತುಳುತನಯರೊಬ್ಬರು ತುಳು ...ಲಿಯುವ ಆವಶ್ಯಕತೆ, ತೌಳವ ಅಭಿಮಾನವನ್ನು ತಾಳುವ ..., ತೌಳವ ಪ್ರಾಂತರಚನೆಯ ಹಿತಕಾರಿತೆ, ಇತ್ಯಾದಿ ವಿಚಾ...ತ್ತಿರುವರು. ಪ್ರಶ್ನಾರೂಪದಲ್ಲಿ ವಿಚಾರಗಳಿರುವುದರಿಂದ ...ಯಾವುದೊಂದು ನಿಶ್ಚಿತ ಅಭಿಪ್ರಾಯವಿಲ್ಲವೆಂದು ಊಹಿಸ...

...ಕ ಪ್ರಾಂತರಚನೆಗಿರುವ ಅಭ್ಯಂತರಗಳೂ, ವಿರೋಧಗಳೂ ...ತೌಳವ ಪ್ರಾಂತವು ಬಹು ಚಿಕ್ಕದಾಗಿರುವುದರಿಂದ ತೌಳವ ...ಯುಕ್ತತೆ, ಇತ್ಯಾದಿಗಳನ್ನು ಆಲೋಚಿಸುವಾಗ ಇನ್ನೊಂದು ...ರೆ ಉಪಾಯವಿದೆಯೆಂದು ನನಗೆ ತೋರುತ್ತಿದೆ.

...ಯಿಯಿಂದ ಮಲಬಾರು ವರೆಗಿನ ಕರಾವಳಿ ಪ್ರಾಂತದ ...ಜನತೆಯ ಪರಸ್ಪರ ಸಂಬಂಧಗಳೂ ಇದನ್ನು ಪ್ರತ್ಯೇಕ ...ಮಾಡಲಿಕ್ಕೆ ಹೆಚ್ಚು ಉತ್ತೇಜನವನ್ನು ಕೊಡುತ್ತಿವೆ. ಬಹು...ದಲ್ಲಿ ಇದು ಪ್ರತ್ಯೇಕ ಪ್ರಾಂತ್ಯವಾಗಿತ್ತೆಂಬುದಕ್ಕೆ ಆಧಾರ ... ಈ ಪ್ರಾಂತ್ಯಕ್ಕೆ ಸರ್ವಸಾಮಾನ್ಯವಾದ ಭಾಷೆಯೊಂದು ...ಗರಾದರೂ ಆ ಭಾಷೆಯು ಇದ್ದೇ ಇದೆ.

...ದ ಮುಂಬಾಯಿ ಶಹರಿನ ದಕ್ಷಿಣದಲ್ಲಿರುವ ಪ್ರದೇಶ ...ಜಿಲ್ಲೆಯ ಅಷ್ಟೆರಿ ವರೆಗೆ, ಕರಾವಳಿಯಿಂದ ಘಟ್ಟಗಳ ...ರುವ ಈ ಪ್ರಾಂತ್ಯವನ್ನು ಕೊಂಕಣ ಪ್ರಾಂತ್ಯವಾಗಿ ಮಾಡಿ ...ಗೆ ಪ್ರಾಧಾನ್ಯವನ್ನು ಕೊಟ್ಟು ಪ್ರಾಂತರಚನೆಯನ್ನು ...ಲಭವೂ, ಸ್ವಾಭಾವಿಕವೂ ಆಗಿದೆ. ಇದಕ್ಕೆ ಕೊಂಕಣಿ ...ಭಾಷೆಯಾಗಿರುವ ಒಂದು ವಿಶ್ವವಿದ್ಯಾಲಯವನ್ನು ರಚಿ...ಲವಾಗುತ್ತದೆ. ಅಲ್ಲದೆ ಕರ್ನಾಟಕ ಮತ್ತು ತೌಳವ ...ಗಿರುವ ಎಷ್ಟೋ ಪ್ರತಿಬಂಧಕಗಳು ಇದಕ್ಕೆ ಇರುವುದಿಲ್ಲ.

"ಕೊಂಕಣ ಕುವರ"

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ಪಕ್ಷಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವರ್ ಹತ್ತಿರ.



DUNLOP

ಟಾಯರು.

ಗಟ್ಟಿ

fit Dunlop
and be satisfied

ದಿ ಡನ್ಲೋಪ್ ರಬ್ಬರ್ ಕಂಪೆನಿ ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೋ, ಲಾಹೋರು, ರಾವಲ್ಪಿಂಡಿ,
ಕರಾಚಿ, ಕಲ್ಕತ್ತಾ, ಗೊಹತಿ, ರಂಗೂನು, ಮಂಡಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

Registered: No. M. 498

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ ೩—೦—೦. | ಟಪ್ಪಾಲು ಹಾಸಲು ಸೇರಿ ರೂಪಾಯಿ 3—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರಿಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ. ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. | ಮಂಗಳೂರು, ತಾ. ೧ನೇ ಶುಕ್ರವಾರ ಜೂನ್ ೧೯೨೮. | ಸಂಚಿಕೆ ೨೨

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

Authorised Capital	Rs. 3,50,000.
Subscribed „	2,25,000.
Paid up „	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6½% and 2 years deposits to 7% from 1—2—1928:—

ದೇಂಕೆನ ಹೆಡ್ಡ್ ಆಫೀಸಿನಲ್ಲಿಯೂ ಬ್ರ್ಯಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗೇ ಮೇಲೆ ಶೇಕಡಾ 6½ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸೋಣಾಗಿದೆ.

Office of the Corporation,
UDIPI, 21—1—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾತ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರಕುತ್ತದೆ. ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಠಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ, ಕಜ್ಜಿ, ಕಡ್ಡಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

ರಾಗದ ಪೆಟಿಗೆಗಳು



Batliwalla's Preparations Cover All Your Needs.
A NAME THAT MERIT HAS MADE FAMOUS.
... ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ
ಲೋಕಪ್ರಸಿದ್ಧ ಔಷಧಗಳು.
... ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ಮಲೇರಿಯಾ ಜ್ವರ ನಿವಾರಣ. ರೂ. ೧.
... ಹೆಂಗಸರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
... ಹಲ್ಲಿನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟಿಕಿಗಳು ಇರುತ್ತವೆ.
... ರೂ. ೧—೨—೦. ರೂ. ೧—೪—೦. ೧—೧೨—೦.
ರೂ. ೦—೬—೦
ರೂ. ೦—೬—೦. LIBERAL DISCOUNT TO TRADE
...-CAWASHAPUR, BOMBAY.
... ಎಚ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

...ಯವರ ಲೋಧ್ರ
...ಗರ್ಭಾಶಯ ರೋಗನಿವಾರಣಿ.
... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹಲವು ಬಗೆಯಾಗಿ ಹೊಗಳುತ್ತಿರುವರು.
... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...
... ಋತುಸ್ರಾವವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಗರ್ಭಪಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.
... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...
ಕೇಸರೀ ಕುಟೀರಂ,
... ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
... ಮಾರ್ಟ್, ಹಂಪನಕಟ್ಟಾ, ಮಂಗಳೂರು.

... ಬಹಳ ಸುಲಭಬೆಲೆಗೆ ...
ಎ. ಆರ್. ಖಲೀಲ್
18-11-27)

'ಅಂಬಾ ತಾಯಿತ್'
ನಿಮ್ಮ ಸುಖವನ್ನು ಕೆಡಿಸುವ ... ದಿಂದ ನಿಮಗೆ ಬರುವ ಕಷ್ಟವನ್ನು ... ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ' ನಂಬಿಕೆ ... ಮಾಡಿರುತ್ತದೆ.
೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.
ಶಿವರಾಮ ಭಟ್ಟ ತೆಂಗಿನಮನೆ,
೦—೯—೨೭



... ಬಂಗಾರದ ... ಇದ ... ಆಗಿ ... ಪೀಸ್

ಟೇಬಲ್ ಟೈಂಪೀಸ್ ಇನಾಂ.
22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನೂ ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.
ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.
ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಕನ್ನಡ ಸಾಹಿತ್ಯ.

ಪಂಡರಿ ಮಹಾತ್ಮೆ.

ಈ ಕಾವ್ಯದಲ್ಲಿ ೫ ಅಧ್ಯಾಯಗಳು ಇವೆ. ಈ ಗ್ರಂಥವನ್ನು ರಚಿಸಿದ ಕವಿಯು ೫ನೇ ಅಧ್ಯಾಯದ ೪೦ನೇ ಪದ್ಯದಲ್ಲಿ ಕಾಣುವ ಪ್ರಕಾರ ಗೋಪಾಲ ಬೋಧಕನೆಂದು ಕಾಣುತ್ತದೆ. ಶೀಲ ಗುಣ ಸಂಪನ್ನ ಶ್ರೀ ಗೋ | ಪಾಲ ಬೋಧಕನಿದನು ರಚಿಸಿದ | ಮೂಲ ಕಥನವನಿಂತು ಕನ್ನಡದಲ್ಲಿ ತಿಳಿವಂತೆ || ಲಾಲಿಸುವ ಸುಜನರ್ಗೆ ಭಕ್ತಿ ಎ | ಕಾಲಕರಿಗರುಹಿದೆನು ಶ್ರೀ ಹರಿ | ಲೀಲೆಗಳ ಕೇಳುವರು ಸರ್ವಾರಿಷ್ಟ ಪರಿಹರವು || ೪೦ || ಇದರಿಂದ ಕವಿಯ ಹೆಸರು ಗೋಪಾಲ ಬೋಧಕ ಅಂದರೆ ಗೋಪಾಲ ಉಪಾಧ್ಯ ಎಂದು ತಿಳಿಯಬಹುದು. ಮಾತ್ರೆ ಗಣಕ್ಕೆ ಸರಿಬರುವಂತೆ ಉಪಾಧ್ಯ ಎಂಬುದನ್ನು ಬೋಧಕ ಎಂದು ಬರೆದಿರಬಹುದು. ಈ ಕವಿಯು ಮಾಧ್ವಮತದವನೆಂದು ಕಾಣುತ್ತದೆ. ಎರಡನೇ ಅಧ್ಯಾಯದ ಅಂತ್ಯದಲ್ಲಿಯೂ ೫ನೇ ಅಧ್ಯಾಯದ ಅಂತ್ಯದಲ್ಲಿಯೂ, ಮಧ್ವಪತಿ ಕೃಷ್ಣ ಎಂದು ಮುದ್ರಿಕೆ ವಾಕ್ಯಗಳು ಇವೆ. ಈ ಕಾವ್ಯವನ್ನು ಕವಿಯು ಸ್ಕಂದಪುರಾಣದಲ್ಲಿ ಈಶ್ವರನು ಪಾರ್ವತಾದೇವಿಗೆ ಪಂಡರಿಯ ಮಹಾತ್ಮೆಯನ್ನು ಹೇಳಿದ ರೀತಿಯಲ್ಲಿ ರಚಿಸಲ್ಪಟ್ಟಿದೆ. ಮರಾಠಿ ಭಾಷೆಯಲ್ಲಿ ರಚಿಸಲ್ಪಟ್ಟ ಪಂಡರಿಮಹಾತ್ಮೆಯು ಪದ್ಮಪುರಾಣದಲ್ಲಿ ರಚಿಸಲ್ಪಟ್ಟಂತೆ ರಚಿಸಲ್ಪಟ್ಟಿದೆ.

ಈ ಕಾವ್ಯದ ೨ನೇ ಅಧ್ಯಾಯದ ೪೫ನೇ ಪದ್ಯದಲ್ಲಿ;

ಸ್ಕಂದಪೌರಾಣದಲಿ ಶಿವ ಗಿರಿ ನಂದನೆಗೆ ಪೇಳಿರುವ ಲೋಕಾನಂದ
ಮಯ ಸಂವಾದ ವಿದರೊಳು ನುಡಿಗೆ ತಪ್ಪಿರಲು ಅಂದವಿಡುತಲಿ
ಕವಿಗಳಿದ ಮುದದಿಂದ ತಿದ್ದುವುದೊಲಿದು ಸಜ್ಜನ ವೃಂದಕೇಳು
ತಲಧಿಕ ಭಕ್ತಿಯೊಳೀ ಮಹಾತ್ಮೆಯನೂ || ೪೫ ||

ಈ ಕಾವ್ಯವನ್ನು ಯಾವಾಗ ರಚಿಸಿದ್ದೆಂದು ಈ ಕಾವ್ಯದಿಂದ ತಿಳಿದು ಬರುವುದಿಲ್ಲ. ಆದರೆ ಕವಿಯು ೫ನೇ ಅಧ್ಯಾಯದ ೪೨ನೇ ಪದ್ಯದಲ್ಲಿ "ಮುದ್ದುವಿಠ್ಠಲನೆನಲು ದೋಷವು | ಹೊದ್ದದಿದರೊಳು ಸಂಶಯವು ಗುರುಮಧ್ವದಾಸನ ವಚನ ರಚನಾನಂದ ಸುಜನರ್ಗೆ || ೪೨ || ಇದರಿಂದ ಈ ಗೋಪಾಲ ಉಪಾಧ್ಯನೆಂಬ ಕವಿಯು ಮಧ್ವಾಚಾರ್ಯರ ನಂತರ ಹುಟ್ಟಿದವನೆಂದು ಹೇಳಬಹುದು. ಕವಿಗೆ ಮಧ್ವದಾಸನೆಂಬ ಹೆಸರೂ ಇದೆ. ಇವನು ಶ್ರೀ ಧರ್ಮಸ್ಥಳದಲ್ಲಿದ್ದು ಹಲವು ಕಾವ್ಯಗಳನ್ನು ಬರೆದಂತೆ ಕಾಣುತ್ತದೆ. ಈ ಕವಿಯು ಬರೆದ ಕಾವ್ಯದ ಮುದ್ರಿಕೆ ಪದಗಳಲ್ಲಿ ಕುಡ್ಮಪುರೇಶ ಎಂದು ಇದೆ. ಧರ್ಮಸ್ಥಳ ಎಂಬದು ಊರಿನ ಹೆಸರು. ಕುಡ್ಮ ಎಂಬದು ಗ್ರಾಮದ ಹೆಸರು.

ಈ ಪಂಡರಿಮಹಾತ್ಮೆಯಲ್ಲಿ ೧೯೨ ಪದ್ಯಗಳು ಇವೆ. ಭಾಮಿನಿ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ.

ಶ್ರೀ ಪಂಡರಿ ಮಹಾತ್ಮೆ.

ಒಂದನೇ ಅಧ್ಯಾಯ.

|| ಸೂಚನೆ || ನಾಮದೇವನೆನಿಪ್ಪ ಪೆಸರಿನೊಳಾ ಮಹಾವುದ್ಧವನು ಜನಿಸಿಯು | ಭೀಮರಥಿಯೊಳು ಪ್ಲವಿಸಿಬರೆ ದಾಮಾಜಿ ಸಲಹಿದನು ||

ಶ್ರೀ ಶರಣಸಂರಕ್ಷಕರುಣಾ | ವಾಸ ವಾಸುಕಿಶಯನ ಲೋಕಾ | ಧೀಶ ಕೇಶವ ಸತತ ಸತ್ಯಾಧಾರ ಭವದೂರಾ || ಈಶ ವಂದಿತ ಕರುಣನಿಧಿ ಸ | ರ್ವೇಶ ದೀನಾನಾಥ ಸಜ್ಜನ | ಪೋಷ ಕುಡ್ಮಪುರೇಶ ಚಿನ್ಮಯ ನೀಡು ಸನ್ಮತಿಯಾ || ೧ || ಆರಡಿಗಳಿಂದೆಸವ ಮೂವ | ತ್ತಾರು ಕವಿಕಂಗಳಲಿ ಬೆಳಗುವ | ಮೂರು ದೇಹ ಮುಖಂಗಳೊಂಭತ್ತರಲಿ ರಂಜಿಸುವಾ || ಬೇರೆದೊಪ್ಪುವದೊಂದರಿಂದಲಿ | ತೋರುತಿಹ ಪ್ರತ್ಯಕ್ಷ ಹಂಸಾ | ಕಾರ ನಾರಾಯಣನು ಪಾಲಿಪುದೆಮಗೆ ಸನ್ಮತಿಯಾ || ೨ || ಪರಮ ಮಂಗಲ ಸಿದ್ಧಿದಾಯಕ | ವರವಿನಾಯಕ ದೇವ ದೈವಾ | ತುರ ಮನೋಹರ ಗೋತ್ರರಿಪು ಸದ್ವಿನುತ ನುತಿಪಾತ್ರ || ಕರಚತುಷ್ಟಯ ಮೋದಕಾಂಕುಶ | ಪರಶುಪಾಶ ಧೃತಕರಾವಳ | ಶರಪುರ ಸ್ಥಿರವಾಸ ಮಂಗಲ ನೀಡು ವಿಘ್ನೇಶಾ || ೩ || ವಾದಿ ಮದಗಜಸಿಂಹ ಮಾಯಗಾ | ವಾದಿ ಮಸ್ತಕಶೂಲ ದುರ್ಧರ | ವಾದಿ ಘೋರಾರಣ್ಯದಘಸಂಹಾರ ಜಗದೀಶಾ || ವಾದಿಕುಲ ತಿಮಿರಾರ್ಕ ಬಹು ದು | ರ್ವ್ಯಾಧಿಗಂಟಲಿಗಳವರಜನ | ವಾದಿ ಪಾಲಿಸುಗೆಮ್ಮ ಮಧ್ವಾಚಾರ್ಯ ಗುರುವರ್ಯಾ || ೪ || ಪರಮ ಪುಣ್ಯ ಪವಿತ್ರ ಮಂಗಲ | ವರ ಮಹಾದೈಶ್ವರ್ಯ ಸಾಧನ | ಮೆರೆವ ಪಂಡರಿ ವಿಠಲದೇವನ ದಿವ್ಯಚಾರಿತ್ರಾ || ದುರಿತ ದುಃಖ ವಿದೂರನೈದು | ದ್ಧರಿಸುವುದು ತವ ಪದದ ಭಕ್ತಿಯು | ಕರವ ಧರಿಸಿ ಸ್ವಚಿತ್ತ ತಾಪತ್ರಯವನುರೆ ಜರೆದೂ || ೫ || ಕಲಿಯುಗವು ಪ್ರಾರಂಭವಾಗಲು | ಮಲಿನವಾದುದು ವಿಪ್ರ ಧರ್ಮವು | ಕುಲವಿಚಾರವು ಬಿಟ್ಟು ಪೋದುದು ಕ್ಷತ್ರಿವಂಶದಲಿ || ಹಲವು ವಿಧದಲಿ ದುರಳತನವೇ | ಬಲಿತು ಪೋದುದು ನೀತಿಮಾರ್ಗದ | ಸಲುವಳಿಯು ತಾನಡಗಿ ಪಾಪವು ವಿಸ್ತರಿದುದು ಮಿತವಾ || ೬ || ಹರಿಯು ವೈಕುಂಠದಲಿ ಭಕ್ತರ | ಕರದು ಶೇಷನ ಸಂಖ್ಯವಾಗಿಯೆ | ಧರೆಯೊಳೆಲ್ಲಾ ಜನರು ಪಾಪದಿ ನಿರತರಾಗಿಹರೂ || ಅರಿಯೆ ನಿನ್ನೇನೆಸಗಲೆಂಬುದ | ನರುಹಿ ನೀವೆಂದೆನಲು ಭಕುತರು | ಕರವ ಮುಗಿದರುಹಿದರು ತವೊಮ್ಮೆಳು ತೋರಿದಭಿಮತವಾ || ೭ || ಏನನಾದರದೊಂದು ಮಾರ್ಗವ | ನೀನರುಹಿ ನಮ್ಮೆಲ್ಲ ಜನರ ನಿ | ಧಾನದಿಂ ಕಳುಹಿದರೆ ನಾವಾತೆರದೊಳೆಸಗುವೆವು || ನೀನೆ ನಮ್ಮಯ ಒಡೆಯ ಬಡತನ | ಹಾನಿಯನು ಪರಿಹರಿಸುವದಕೆನು | ಮಾನವೇನಿಲ್ಲವೆನೆ ಹರಿ ತಾ ನುಡಿದನೆಲ್ಲರೊಳು || ೮ || ಹಿಂದೆ ನಾನವತಾರ ಮಾಡಿಯೆ | ಕೊಂದೆ ದೈತ್ಯಾಧಮರನೆಲ್ಲರ | ಇಂದು ನಾ ಬೌದ್ಧಾವತಾರದಿ ಮೌನದಿಂದಿಹೆನೂ || ಮುಂದೆ ಎನ್ನಯ ಕ್ಷೇತ್ರವಿಪ್ರೋ | ದ್ಧಂದು ಕಡೆಯೊಳಗೋರ್ವರೊರ್ವರು | ಚಂದದಿಂ ಹರಿಭಕ್ತಿ ಪೇರ್ಚಿಪುದೆಂದು ವಿವರಿಸಿದಾ || ೯ || ಚಾರುಪಂಡರಿ ಕ್ಷೇತ್ರವಹದಿಂ | ಧೀರವನದೊಳಗುದ್ಧವನು ಅವ | ತಾರಗೊಂಬುದು ನಾಮದೇವನೆನಿಪ್ಪ ನಾಮದಲಿ || ಭೂರಿಭಕ್ತಿಯ ದಕ್ಷಿಣದಿ ನರ | ನಾರಿಯರಿಗುಪದೇಶವಿತ್ತು | ದ್ಧಾರವನು ಮಾಡೆಂದು ತಾನಾಗಪ್ಪಣೆಯನಿತ್ತಾ || ೧೦ || ಅದರೊಳುದ್ಧವ ಶುಕಮುನಿಪ ಹರಿ | ಪದಕೆ ನಮಿಸುತ ನುಡಿದ ನಾವಾತ್ತ | ಯದರ ದುರ್ಗಂಧದಲಿ ಜನಿಸದ ತೆರದೊಳನ್ಯತ್ರಾ || ವಿಧದಿ ಭುವಿಯೊಳು ಬೆಳೆದು ನಿಮ್ಮಯ | ಪದದ ಭಕ್ತಿಯ ನಗಲದಂದದಿ | ಮುದದಿ ವರವಿತ್ತೆಮ್ಮ ಕಳುಹುವದೆಂದು ಕೈಮುಗಿದಾ || ೧೧ || ಆಗ ಶಿಶುಗಳ ಮಾಡು ತಾಪಯ | ಸಾಗರದ ತಡಿಯಿರ್ದ ಮೌಕ್ತಿಕ | ನೀಗಿದಾ ಚಿಪ್ಪಿನಲಿ ಇರಿಸಿಯೆ ಮುಚ್ಚಳವ ಬಿಗಿದೂ || ಆಗಸದಿ ವಗೆಯಲ್ಕೆ ಆ ಶುಕ | ಯೋಗಿ ಜಿಸ್ರದು ಗಂಗೆಗೆರಗಿತು | ಮೇಗೆ ಪ್ಲವಿಸುತ ರಾಮನಾಮವ ಭಜಿಸುತಿರುತಿತ್ತು || ೧೨ || ಅತ್ತಲೋರ್ವನಪಿಂದ ಸಾಲಿಗ | ವಸ್ತ್ರ ನೇಯುವ ಗಂಗೆಯಲಿ ಪ್ಲವಿ | ಸುತ್ತಿರಲು ಮನೆಗೊಯ್ದುದನು ವಿಸ್ತರಿಸುವೆನು ಮೇಲೆ || ಇತ್ತ ಶಿಂಪಿಗಕುಲಜನಾದವ | ನುತ್ತಮನು ದಾಮಾಜಿ ಎಂಬವ | ಭಕ್ತಿಯಲಿ ಭೀಮರಥಿ ನದಿಯಲಿ ಸ್ನಾನ ಮಾಡುತ್ತಾ || ೧೩ || ನಿತ್ಯ ನಿತ್ಯದಿ ಪಾಂಡುರಂಗನ | ಮೂರ್ತಿಯನು ಪೂಜಿಸುತಲೀರ್ದನು | ಮತ್ತವನ ಸತಿ ಶೀಲವತಿ ಗೋಣಾಬಾಯಿಯೆಂಬವಳು || ಸತ್ಯವಂತೆಯು ಪತಿಯ ಭಕುತಿಯು | ಉತ್ತಮಳು ಸತ್ಪ್ರಿಯಗತಮು | ಪ್ರೌಪ್ತಿ ಬಂದುದು ಸತಿಪತಿಯರಿಗೆ ಸುತರು ಇರದಿರಲು || ೧೪ || ಇವರು ಈರ್ವರು ಪಾಂಡುರಂಗನ | ನವವಿಧದ ಭಕ್ತಿಯಲಿ ಭಜಿಪರು | ಯುವತಿಯೊಂದಿನ ಚಿಂತೆಯಿಂದಲಿ ಪತಿಯೊಳುಸುರಿದಳೂ || ಧವನೆ ನಮಗೀವರೆಗೆ ಸುತಸಂ | ಭವವು ತೋರಿದುದಿಲ್ಲ ವಿನ್ನೀ | ಯುವತಿ ಜನ್ಮ ನಿರರ್ಥವ್ಯಾತೆಂದೆನುತ ಮರುಗಿದಳೂ || ೧೫ || ಸರ್ವ ಭಾಗ್ಯಕ್ಕಿಂತ ಮಕ್ಕಳ | ಹೆರ್ವಭಾಗ್ಯವೇ ದೊಡ್ಡಿತಹುದಂ | ತೀರ್ವಭಾಗ್ಯವಿಹೀನವಾದುದು ನೀವು ಭಕ್ತಿಯಲಿ || ಸರ್ವಕಾಲವು ವಿಠಲಮೂರ್ತಿಯ | ಪೂರ್ವದಾರಭ್ಯದಲಿ ಭಜಿಪಿರಿ | ಓರ್ವ ಬಾಲನ ಬೇಡ ಬಾರದೆ ಕೊಡನೆ ಎಂದೆನಲು || ೧೬ || ಆಗಲೇ ದಾಮಾಜಿ ನಿನ್ನನು | ರಾಗವನು ವಿಠಲಂಗೆ ಸೂಚಿಪೆ | ಮೇಗೆ ನನ್ನಯ ಪುಣ್ಯವಿದ್ದಂತಹುದು ಯೆಂದೆನುತಾ || ಬೇಗ ಸ್ನಾನಾದಿಗಳ ರಚಿಸುತ | ಪೋಗಿ ದೇವಾಲಯದಿ ತಾ ತಲೆ | ಬಾಗಿ ವಿಠಲನ ಚರಣಕಮಲಕ್ಕೆರಗಿ ಬಲವಂದೂ || ೧೭ || ಪುತ್ರರೆಮಗಿಲ್ಲೆಂದು ಎನ್ನಯ | ಪತ್ನಿ ಅತಿ ದುಃಖದಲಿ ಇರುವಳು | ಪುತ್ರನೋರ್ವನನಿತ್ತು ನಮ್ಮನು ಸಲಹಬೇಕೆನುತಾ || ಭಕ್ತಿಯಿಂಸ್ತುತಿಸುತ್ತಲತಿಶಯ | ಚಿತ್ತವಿಠ್ಠಲ ಧ್ಯಾನನಿದ್ರೆಯು | ಹತ್ತಲಾಕ್ಷಣ ಪಾಂಡುರಂಗನು ನುಡಿದನವನೊಡನೆ || ೧೮ || ಭಕ್ತವರನೇ ನೀನು ಬಯಸಿದೆ | ಪುತ್ರನೋರ್ವನ ನದರಿನಿಂ ನಿನಗಿತ್ತೆನೀ ಭೀಮರಥಿನದಿಯಲಿ ಸ್ನಾನ ಮಾಡುತಿರೆ || ಮುತ್ತಿನಾ ಚಿಪ್ಪೊಂದು ತಾ ಪ್ಲವಿ | ಸುತ್ತ ಬಪ್ಪಂದದನು ಪಡೆಯಲು | ಪಥ್ಯ ನೊಂದಿಹುದುದ್ಧವನದವತಾರ ಮೂರುತಿಯೂ || ೧೯ || ಆ ಶಿಶುವ ನೀ ತಂದು ಸಾಕಿಕೊ | ಲೇಸಹುದು ಮುಂದಕ್ಕೆ ನಿನ್ನಯ | ವಂಶವನು ಬೆಳಗುವನು ಪಾವನ ಮೂರ್ತಿಯಾಗುವನೂ || ಈಸು ನುಡಿ ನುಡಿದಡಗೆ ನಿದ್ರಾ | ವಾಸದಿಂದೆಚ್ಚರಿತು ವಿಠಲನೆ | ವಾಸುದೇವನೆ ಸುತನ ನೀಡಿದೆಯೆಂದು ಹರುಷಿಸುತಾ || ೨೦ || ಆ ತರುಣಿಗಿದನರುಹಿ ಮರುದಿನ | ಪ್ರಾತಃಕಾಲದೊಳೆದ್ದು ಸಂತಸ | ವೋತು ನದಿಯಲಿ ಮಿಂದನುಷ್ಠಾನವನು ಮಾಡುತಿರೆ || ಆ ತತೂಕ್ಷಣ ಪ್ಲವಿಸಿ ಮೇಲ್ಮೊಗ | ವಾತು ಬರಲದು ಕಂಡು ಬೇಗದಿ | ತಾ ತೆಗೆದು ಮುಚ್ಚಳವ ಬಿಚ್ಚಲು ದಿವ್ಯ ಶಿಶುವಿತ್ತು || ೨೧ || ನಗವು ಗೋಚರನೆನಗೆ ಕೊಟ್ಟನು | ಮಗನನೆನ್ನುತ ಬಂದು ಮನೆಯೊಳು | ಒಗುವ ಕಾಂತೆಯ ಕರದು ಕೊಟ್ಟನು ಚೆಲ್ವಕುವರಕನಾ || ಮೃಗನಯನೆ ಕುವರನನು ನೋಡುತ | ಒಗುಮಿಗೆಯ ಹರುಷದಲಿ ಕುವರನ | ನೆಗಹಿ ಮುದ್ದಿಸಿ ಸಲಹುತಿರ್ದಳು ಹರಿಕಟಾಕ್ಷದಲಿ || ೨೨ || ಕಂದನವನನು ಕೊಂಡು ಸಂತಸ | ದಿಂದಲೆದೆಗೊತ್ತಿಕೊಳೆ ತತ್ಕುಚದ್ವಂದದಿಂ ಪಾಲ್ಸುರಿಯಲಾ ಶಿಶುವಿಂಗೆ ಊಡಿದಳೂ || ಕಂದನನು ವಿಠ್ಠಲನು ಕೊಟ್ಟಪುದ | ರಿಂದವನ ನಾಮವನು ಸ್ಮರಿಪುದರಿಂದವಗೆ ನಾಮಾಯನುತ ಪೆಸರಿಟ್ಟರವರಂದೂ || ೨೩ || ಬಳಿಕಲಾ ದಾಮಾಜಿ ಸತಿಸಹ | ಸಲುಹುತಿರೆ ಪ್ರೀತಿಯಲಿ ನಾಮನು | ಬೆಳಬೆಳದು ಯವ್ವನವದೇರುತ ಬಂದುದಾತಂಗೆ || ಲಲನೆಯೋರ್ವಳ ಮದುವೆಯನು ಮಾ | ಡಲಿಕೆ ಕನ್ಯೆಯನಾಡೊಳರಸುತ | ಸುಲಲಿತ ಸುಲಕ್ಷಣದ ಕನ್ನಿಕೆಯೋರ್ವಳನು ನೋಡಿ || ೨೪ || ಸಹಚರೀ ಸೌಭಾಗ್ಯ ಮಾಂಗ | ಲ್ಯಹ ಸುಯೋಗದ ಸತ್ಕುಲೋದ್ಭವೆ | ಯಹ ಸುರೂಪಿಣಿಯಾದ ರಾಜಾಬಾಯಿ ಎಂಬವಳಾ || ಬಹಳ ಸಂಭ್ರಮದಿಂದ ಪಿತ ವೈವಹವ ಮಾಡಿಸಿದನು ಕುಮಾರಗೆ | ಮಹಭಕುತ ನಾಮನಲಿ ಜನಿಸಿದನೋರ್ವ ಸತ್ಕುವರಾ || ೨೫ || ನಾಮದೇವನು ಸರ್ವಕಾಲದಿ | ನೇಮದಿಂದಲಿ ವಿಠಲನಾಮ ಸು | ಪ್ರೇಮದಿಂ ಸಂಕೀರ್ತನಾದಿಯ ನೆಸಗಿಕೊಂಡಿರಲು || ನಾಮದೇವನ ಭೇಟಿ ಮಾಡುವ | ಪ್ರೇಮದಿಂದಲಿ ಜ್ಞಾನದೇವನು | ಆ ಮಹಾ ಪಂಡರಿಯ ದೇವರ ಗುಡಿಯನೊಳಪೊಕ್ಕು || ೨೬ || ಹರುಷದಲಿ ದೇಗಲದಿ ಜ್ಞಾನನು | ಹರಿಯು ಪ್ರೀತಿಯ ಭಕ್ತನಾಮಗೆ | ದರುಶನವಿ ತಾ ತೀರ್ಥಯಾತ್ರೆಗೆ ಕರೆಯಲಾ ನಾಮಾ || ತಿರಿಯರ ಸನಕಜ್ಞಾನುಸಾರದಿ | ಹೊರಡಲೀರ್ವರು ದಾರಿಯೊಳಗಾ | ಹರಿಯ ಭಕ್ತನು ಮನದಿ ಚಿಂತಿಸುತೆಂದನಿಂತೆಂದೂ || ೨೭ || ಮುಗಿಸಿ ಯಾತ್ರೆಯ ನಾಮಜ್ಞಾನರು | ಸೊಗಸಿನಿಂ ಬರೆ ಪಂಢರಾಪುರ | ರುಗುಮಿಣೀ ವರಗಾದ ಹರುಷವಸೇನ ಬಣ್ಣಿಪೆನೂ || ಬಗೆಬಗೆಯಸ್ತುತ್ಯದಲಿ ದೂರದೊ | ಳಗೆ ಪಂಡರಿಯ ಕಲಶವೀಕ್ಷಿಸಿ | ಮಗುಳೆ ಸಾಷ್ಟಾಂಗದೊಳಗುದ್ದಂಡದಲಿ ವಂದಿಸಲೂ || ೨೮ ||

(ಮುಂದರಿಯುವುದು.)

ರಶ್ಯಾ ದೇಶದಲ್ಲಿರುವ ಈಗಿನ ಜೈಲು ಕ್ರಮಗಳು.

(೧೮ನೇ ಸಂಚಿಕೆಯಿಂದ ಮುಂದುವರಿದುದು)

ಹೊರಗೆ ಇತರಕಾರ್ಖಾನೆಗಳಲ್ಲಿ ಕೆಲಸಗಾರರ ಸಂಘದ ಕ್ರಮಗಳೇ ಈ ಕಾರ್ಖಾನೆ ಕೆಲಸಗಾರರಲ್ಲಿಯೂ ಜಾರಿಯಲ್ಲಿರುವವು. ಈ ಹೊರಗಿನ ಸಂಘದ ಪ್ರತಿನಿಧಿಗಳು ಬಂದು ಈ ಕೆಲಸಗಾರರನ್ನು ನೋಡಿ ಹೋಗುತ್ತಿರುವರು. ಹೊರಗಿನ ಕಾರ್ಖಾನೆಗಳಲ್ಲಿ ಕೂಲಿಕಾರರಿಗೆ ಕೊಡುವ ಸಂಬಳದ ಶೇಕಡಾ ೩೦-೫೦ರಷ್ಟು ಸಂಬಳವನ್ನು ಈ ಕೆಲಸಗಾರರಿಗೆ ಕೊಡುತ್ತಿರುವರು. ಈ ಸಂಬಳದ ಮೂರನೇ ಎರಡು ಅಂಶವನ್ನು ಜೈಲಿನ ಅಧಿಕಾರಿಗಳು ಇಟ್ಟುಕೊಂಡು ಮೂರನೇ ಒಂದಂಶವನ್ನು ಬಂದಿವಾನರಿಗೆ ಅವರ ಸುಖಸಂತೋಷದ ಖರ್ಚಿಗಾಗಿ ಕೊಡುವರು. ಬಂದಿವಾನರ ಶಿಕ್ಷೆಯ ಅವಧಿಯು ಮುಗಿದೊಡನೆ ಅವರ ಹೆಸರಲ್ಲಿ ಜಮೆಯಾದ ಹಣವನ್ನು ಅವರಿಗೆ ಜೈಲಿನ ಅಧಿಕಾರಿಗಳು ಕೊಡುವರು. ಜೈಲಿನಲ್ಲಿ ಒಂದು ಸ್ಟೋರ್ ಇದೆ. ಇದರಲ್ಲಿ ಸಿಗರೇಟುಗಳೂ, ತಿಂಡಿ ಪದಾರ್ಥಗಳೂ, ಸಾಬೂನು, ಸೆಂಟು ಮುಂತಾದ್ದು ಇರುವುದು. ಈ ಸ್ಟೋರನ್ನು ಒಬ್ಬ ಬಂದಿವಾನನು ತನ್ನ ಖರ್ಚಿನಿಂದಲೇ ಇಟ್ಟಿರುವನು. ಪುಸ್ತಕಗಳೂ ಮಾರಾಟಕ್ಕೆ ಸಿಕ್ಕುತ್ತವೆ. ಇವುಗಳನ್ನು ಕೊಂಡುಕೊಳ್ಳುವುದಕ್ಕೆ ಬಂದಿವಾನರ ಕೈಗೆ ಕೊಡುವುದಿಲ್ಲ. ಇವರ ದಸ್ಕತಿನ ರಶೀದಿಯನ್ನು ಜೈಲ ಅಧಿಕಾರಿಗಳಿಗೆ ಕೊಟ್ಟಕೂಡಲೆ ಅವರು ಹಣವನ್ನು ಅಂಗಡಿಗಾರನ ಲೆಕ್ಕಕ್ಕೆ ಬರೆಯುವರು. ಸ್ನೇಹಿತರೂ ಸಮ್ಮಂಧಿಕರೂ ಬಂದಿವಾನರಿಗೆ ಹಣವನ್ನೂ ಇತರ ವಸ್ತುಗಳನ್ನೂ ಕಳುಹಿಸಬಹುದು.

ಬಂದಿವಾನರು ಯಾವ ಸಮಯದಲ್ಲಿಯಾದರೂ ಸಿಗರೇಟ್ ಸೇದಬಹುದು. ಒಬ್ಬರ ಹತ್ತಿರ ಇನ್ನೊಬ್ಬರು ಮಾತನಾಡಬಹುದು. ಒಬ್ಬ ಬಂದಿವಾನನು ತನ್ನ ಸ್ವಂತ ಖರ್ಚಿನಿಂದ ಒಂದು ಕ್ಷೌರ ತೆಗಿಯುವ ಅಂಗಡಿಯನ್ನು ಇಟ್ಟಿರುವನು. ಇದು ಜೈಲಿನ ಹೊರಗಿರುವ ಅಂಗಡಿಯಷ್ಟೇ ಒಳ್ಳೇದಾಗಿದೆ. ಇದರಿಂದ ಸಿಕ್ಕಿದ ಮುನಾಫೆಯು ಈ ಬಂದಿವಾನನಿಗೆ ಸಿಕ್ಕುತ್ತದೆ. ಬಂದಿವಾನರು ತಮ್ಮ ಸ್ವಂತ ಹಣ ಕೊಟ್ಟು ಕ್ಷೌರ ತೆಗಿಸುತ್ತಿರುವರು. ಕ್ಷೌರ ತೆಗಿಸಿ ಆದೊಡನೆ ಪರಿಮಳದ್ರವ್ಯವನ್ನು ಚಿಮುಕಿಸುತ್ತಿರುವರು.

ಚಿಲ್ಲರೆ ತಪ್ಪಿತಸ್ಥರ ಜೈಲು. ಈ ಜೈಲುಗಳಲ್ಲಿರುವ ಬಂದಿವಾನರು ಪಹರೆಯವರೊಡನೆ ತಮ್ಮ ಮನೆಗಳಿಗೆ ಹೋಗಬಹುದು. ಬೇಸಾಯಗಾರರನ್ನು ಬೇಸಾಯದ ಸಮಯ ಮತ್ತು ಬೆಳೆ ಕೊಯ್ಯುವ ಸಮಯ ಅವರವರ ಮನೆಗಳಿಗೆ ಕಳುಹಿಸುತ್ತಿರುವರು. ರಾಜದ್ರೋಹಿಗಳನ್ನು ಮಾತ್ರ ಸ್ವಲ್ಪ ಕಠಿಣ ರೀತಿಯಲ್ಲಿ ನಡಿಸುತ್ತಿರುವರಂತೆ. ಈಗ ಅಕ್ರಮವೂ ಕಡಿಮೆಯಾಗುತ್ತಾ ಬಂದದೆ.

... ನಾರಾಯಣ ಜೂಯಲರಿ ಹಾಲ್.

... ಆಭರಣಗಳನ್ನು ತಯಾರುಮಾಡುವವರು. ನ್ಯಾಯವಾದ ಬೆಲೆ!!

... ಯೋಗ್ಯವಾದ ಕಪ್ಪುಗಳು, ಪೈಡಲುಗಳು ಮತ್ತು

... ಯೋಗ್ಯವಾದ ಚೊಕ್ಕ ಬೆಳ್ಳಿ ವಿಗ್ರಹಗಳು

... ದೊರೆಯುತ್ತವೆ.

... ಕೃಷ್ಣ, ಶ್ರೀನಿವಾಸ ಶ್ರೀ ಸತ್ಯನಾರಾಯಣ, ಲಕ್ಷ್ಮಿ, ಸರಸ್ವತಿ ... (ಎಲ್ಲಾ ದೇವರದು) ದೊರೆಯುತ್ತವೆ

... ಆರ್ಡರಿಗೆ ತಯಾರಿಸಿ ಧಾವನೆ ವಗೈರೆಗೆ ಬರೆಯಿರಿ.

... ವೆಂಪಯ್ಯ ಅಂಡ್ ಬ್ರದರ್ಸ್,

ಶ್ರೀ ಸತ್ಯನಾರಾಯಣ ಜೂಯಲರಿ ಹಾಲ್,

ಅವಿನ್ಯೂ ರೋಡು, ಬೆಂಗಳೂರು ಸಿಟಿ.

MUNICIPALITY OF MANGALORE.

NOTICE.

A vacant plot near the Municipal Petroleum Store building at Bunder is available for being leased out on long term lease. Persons desirous to have it may obtain information as regards its extent, terms of the lease, &c., on application at the Municipal office. The Chairman is prepared to consider any offer received by the end of June 1928.

Municipal office.
MANGALORE,
22-5-28, P. S

Nellikai Venkat Rao.
Chairman, M. C.

ತಯಾರಾಗಿವೆ! ತಯಾರಾಗಿವೆ!!

ಶಾಲಾ ಹುಡುಗರಿಗೆ ಬೇಕಾದ

ಗೆರೆಹಾಕಿದ ಮತ್ತು ಗೆರೆ ಹಾಕದ ಎಕ್ಸರ್‌ಸೈಜ್ ಪುಸ್ತಕಗಳೂ, ಡ್ರೊಯಿಂಗ್ ಪುಸ್ತಕಗಳೂ, ಮೇಪ್‌ಡ್ರೊಯಿಂಗ್ ಪುಸ್ತಕಗಳೂ, ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. SHARADA PRESS, MANGALORE.

ಸೋಮವಾರ ಪೇಟೆಯಲ್ಲಿ ಜರಗಿದ ವರ್ಗದಾರರ ಸಭೆಯಲ್ಲಿ ಕೊಡಗು ರಾಜ್ಯದಲ್ಲಿ ಮಾಡಲಿಕ್ಕೆ ನಿರ್ಣಯಿಸಿದ ಠರಾವುಗಳು.

(೧) ಚೀಫ್ ಕಮಿಶನರಿಗೆ ಕೊಡಗು ರಾಜ್ಯಾಡಳಿತೆಯಲ್ಲಿ ಈಗಿನ ಅಧಿಕಾರಗಳು ಇರಬಾರದು. ಬ್ರಿಟಿಷ ಸಾಮ್ರಾಜ್ಯದ ಡೊಮಿನಿಯನ್‌ಗಳ ಗವರ್ನರುಗಳಿಗೆ ಇರುವ ಅಧಿಕಾರ ಮಾತ್ರವೇ ಕೊಡಗು ಚೀಫ್ ಕಮಿಶನರಿಗಿರಬೇಕು. (೨) ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರರೊಳಗಿಂದ ಒಬ್ಬರು ಅಥವಾ ಇಬ್ಬರನ್ನು ಮಂತ್ರಿಗಳಾಗಿ ಚೀಫ್ ಕಮಿಶನರು ನಿರ್ಣಯಿಸಬೇಕು. ನ್ಯಾಯವಿಧಾಯಕ ಮೆಂಬರರಿಗೆ ಈ ಮಂತ್ರಿಗಳ ಮೇಲೆ ನಂಬಿಕೆ ತಪ್ಪುವ ವರೆಗೆ ಇವರು ಮಂತ್ರಿಗಳಾಗಿರಬಹುದು. (೩) ನ್ಯಾಯವಿಧಾಯಕ ಸಭೆಯವರು ತಮ್ಮೊಳಗಿಂದ ಒಬ್ಬರನ್ನು ಕೌನ್ಸಿಲಿನ ಪ್ರೆಸಿಡೆಂಟನಾಗಿ ಚುನಾಯಿಸುವಂತೆ ಮಾಡಬೇಕು. (೪) ಜ್ಯುಡಿಶಿಯಲ್ ಮತ್ತು ಎಕ್ಸಿಕ್ಯುಟಿವ್ ಅಧಿಕಾರಗಳನ್ನು ಬೇರೆ ಬೇರೆ ಮಾಡಬೇಕು. (೫) ಜ್ಯುಡಿಶಿಯಲ್ ಹುದ್ದೆದಾರರಾಗಿ ಚುನಾಯಿಸುವ ಅಧಿಕಾರವನ್ನು ಮಿನಿಸ್ಟರರಿಗೆ ಕೊಡಬೇಕು. ಈ ಮಿನಿಸ್ಟರರು ಇದಕ್ಕಾಗಿ ಒಂದು ಪಬ್ಲಿಕ್ ಸರ್ವಿಸ್ ಕಮಿಶನನ್ನು ನೇಮಿಸಬೇಕು. ಈಗಿರುವ ಕೋರ್ಟುಗಳ ಮೇಲಿರುವ ಜ್ಯುಡಿಶಿಯಲ್ ಅಧಿಕಾರವನ್ನು ಚೀಫ್ ಕಮಿಶನರು ಸಂಪೂರ್ಣವಾಗಿ ಮದರಾಸು ಹೈಕೋರ್ಟಿಗೆ ಬಿಟ್ಟು ಕೊಡಬೇಕು. (೬) ಜಡ್ಜರಿಗೆ ತಿಂಗಳಿಗೆ ರೂ. ೧೦೦೦ ಗಿಂತ ಹೆಚ್ಚು ಸಂಬಳವಿರಬಾರದು. (೭) ಕೊಡಗು ರಾಜ್ಯದಲ್ಲಿ ಕಾಯಂ ವಾಸ್ತವ್ಯ ಮಾಡಿರುವ ೨೧ ವರುಷ ಪ್ರಾಯದ ಪ್ರತಿ ಒಂದು ಗಂಡಸಿಗೂ ಹೆಂಗಸಿಗೂ ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವ ಹಕ್ಕನ್ನು ಕೊಡಬೇಕು. (೮) ಕೌನ್ಸಿಲಿನಲ್ಲಿ ೩೦ ಮಂದಿ ಚುನಾಯಿಸಲ್ಪಟ್ಟ ಮೆಂಬರರಿರಬೇಕು. ಒಫಿಶಿಯಲ್ ಮೆಂಬರರಾಗಲೀ ನೊಮಿನೇಟೆಡ್ ಮೆಂಬರರಾಗಲಿ ಇರಕೂಡದು. (೯) ಹಣದ ಸಂಪೂರ್ಣ ಅಧಿಕಾರವನ್ನು ನ್ಯಾಯವಿಧಾಯಕ ಸಭೆಗೆ ಕೊಡಬೇಕು. ಎಲ್ಲಾ ಕಾನೂನು ಮಾಡುವ ಸಂಪೂರ್ಣ ಅಧಿಕಾರ ಕೌನ್ಸಿಲಿಗೆ ಇರಬೇಕು. (೧೦) ಇಂಡಿಯದ ಇತರ ಸಂಸ್ಥಾನಗಳಿಗಿರುವ ಅಧಿಕಾರಗಳೆಲ್ಲಾ ಕೊಡಗಿಗೂ ಇರಬೇಕು. (೧೧) ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಕೊಡಗು ರಾಜ್ಯದ ಪ್ರತಿನಿಧಿಗಳಾಗಿ ಇಬ್ಬರು ಮೆಂಬರರಿರಬೇಕು. (೧೨) ಕರ್ನಾಟಕ ಸಂಸ್ಥಾನ ಮಾಡುವದಿದ್ದರೂ ಕೊಡಗನ್ನು ಆ ಸಂಸ್ಥಾನದ ಒಂದು ಪ್ರತ್ಯೇಕ ಭಾಗವಾಗಿ ಮಾಡಬೇಕು. (೧೩) ಕುಡಿಕತನವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. (೧೪) ಖಾದಿಯನ್ನು ಎಲ್ಲರೂ ಉಟ್ಟುಕೊಳ್ಳುವಂತೆ ನಿರ್ಧರಿಸಬೇಕು. (೧೫) ಅಸ್ಪೃಶ್ಯತೆಯನ್ನು ತೆಗೆದುಹಾಕಬೇಕು. (೧೬) ಕಳೆದ ಮೂವತ್ತು ವರುಷಗಳಿಂದ ಕೊಡಗಿನಿಂದ ಕೊಟ್ಟ ಕಪ್ಪವನ್ನು ಹಿಂತಿರುಗಿ ಕೊಡಗು ಸರಕಾರಕ್ಕೆ ಕೊಡಬೇಕು.

ಸ್ಫುಟ ವಿಚಾರಗಳು.

ಮೈಸೂರು ಕೊಂಗ್ರೆಸು

ಕಳೆದ ತಾ ೨೯ರಲ್ಲು ಮೈಸೂರಿನಲ್ಲಿ ಮೈಸೂರು ಕಾಂಗ್ರೆಸ್ಸು ಸೇರಿತು. ಈ ಕಾಂಗ್ರೆಸ್ಸನ್ನು ಶ್ರೀ ಸತ್ಯಮೂರ್ತಿಯವರು ತೆರೆದರು. ಮೈಸೂರು ಕಾಂಗ್ರೆಸ್ಸೆಂಬುದು ಈ ಬಾರಿ ಹೊಸದಾಗಿ ಆರಂಭಿಸಲ್ಪಟ್ಟದ್ದಾಗಿದೆ. ಮೈಸೂರು ಸರಕಾರವು ಸುಧಾರಿತವಾಗಿ, ದಕ್ಷರಾದ ಮಂತ್ರಿಗಳ ಕೈಕೆಳಗೆ ಸರ್ವತರದಲ್ಲಿಯೂ ಅಭ್ಯುದಯವನ್ನು ಹೊಂದಿದಂತೆ, ಮೈಸೂರ ಜನತೆಯೂ ಎಚ್ಚತ್ತು ಉತ್ತಮವಾದ ಜವಾಬ್ದಾರ ಸರಕಾರವಿದ್ದರೆ ಯಾವ ಲಾಭವನ್ನು ಹೊಂದಬಹುದೆಂಬುದನ್ನು ತಿಳಿದುಕೊಂಡದೆ. ಅಪರಿಮಿತ ಸಹಾನುಭೂತಿಯುಳ್ಳ ಈಗಿನ ಶ್ರೀ ಮನ್ಮಹಾರಾಜರ ಕೈಕೆಳಗೆ ಮೈಸೂರು ಅನೇಕ ಸುಧಾರಣೆಗಳನ್ನು ಹೊಂದಿತು. ಆದರೆ ಶ್ರೀ. ವಿಶ್ವೇಶ್ವರಯ್ಯನವರು ಹೇಳಿದಂತೆ—ಶ್ರೇಷ್ಠತನವನ್ನು ಅವರ ಭೂತಕಾಲದ ಪರಿಸ್ಥಿತಿಯನ್ನು ವರ್ತಮಾನದೊಡನೆ ಸರಿಹೋಲಿಸಿ ನಿರ್ಣಯಿಸುವುದಲ್ಲ; ವರ್ತಮಾನಕಾಲದ ಇತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಡನೆ ಸರಿಹೋಲಿಸಿ ನಿರ್ಣಯಿಸಬೇಕು. ಹಾಗೆಯೆ ಮೈಸೂರು ಹಿಂದಿನ ತನ್ನ ಸ್ಥಿತಿಗಿಂತ ಬಹಳ ಸುಧಾರಿಸಿ ಅಭಿವೃದ್ಧಿಗೆ ಬಂದದೆ ಎಂಬುದರಲ್ಲಿ ಯಾವ ಅಭಿಪ್ರಾಯ ಭೇದವೂ ಇರುವುದಿಲ್ಲ. ಆದರೆ ಈಗಿನ ಇತರ ಅಭಿವೃದ್ಧಿಗೆ ಬಂದ ರಾಷ್ಟ್ರಗಳೊಡನೆ ಸರಿಹೋಲ್ಚಿಸಿದರೆ ಮೈಸೂರು ಎಲ್ಲಿ ನಿಲ್ಲುವುದೆಂಬುದೇ ವಿಚಾರಣೀಯವಾಗಿರಬೇಕು. ಈ ಮಾನದಿಂದ ನೋಡಿದರೆ ಮೈಸೂರು ಮತ್ತೂ ಸುಧಾರಿಸಲ್ಪಡಲಿದೆ ಎಂದು ತೋರುವುದು. ಮೈಸೂರು ಕಾಂಗ್ರೆಸ್ಸಿನ ಕರ್ತವ್ಯವು ಈ ಸುಧಾರಣೆಯನ್ನು ಹೊಂದುವುದಾಗಿರಬೇಕು. ಆದರೆ ಇದು ಸರಕಾರಕ್ಕೆ ವಿರೋಧ ಚಳವಳವನ್ನೆಬ್ಬಿಸುವಂತಹುದುದಾಗಿರಬಹುದೊ? ಎಂಬ ಸಂದೇಹವು ಹಲವರಲ್ಲಿ ಈಗಲೇ ತೋರಿದಂತೆ ಕಾಣುವುದು. ಆದರೆ ದೇಶೀ ರಾಜರುಗಳ ಆಡಳಿತವು ಎಷ್ಟೇ ಸುಧಾರಿಸಿದರೂ ಸ್ಥಿರವಾದ ವಿಷಯವಲ್ಲ. ಏಕೆಂದರೆ ಒಬ್ಬ ರಾಜರ ನಂತರ ಇನ್ನೊಬ್ಬರು ಎಷ್ಟು ಜವಾಬ್ದಾರಿಯನ್ನು ತಿಳಕೊಂಡವರು ಬರುವರೆಂಬುದನ್ನು ಹೇಳಲಾಗುವುದಿಲ್ಲ. ಆದುದರಿಂದ ಜನತೆಯ ಅಭಿಪ್ರಾಯಗಳನ್ನು ಘಟ್ಟಿಮಾಡಿ, ಸರಕಾರದಲ್ಲಿ ಜನತೆಗೆ ಹೆಚ್ಚಿನ ಜವಾಬ್ದಾರಿಯು ಸಿಕ್ಕುವಂತೆ ಮಾಡಲಿಕ್ಕೆ ಇಂತಹ ಕಾಂಗ್ರೆಸು ಅಗತ್ಯವೆಂಬುವುದು ನಿಸ್ಸಂದೇಹವಾದುದು. ಮೈಸೂರಿನವರು ಇದನ್ನು ಪ್ರಬಲವಾದ ಸಂಸ್ಥೆಯಾಗಿ ಮಾಡುವರೆಂದು ಆಶಿಸುತ್ತೇವೆ.

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರ ಭಾಷಣ.

ಪ್ರಥಮ ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾಗಿ ಎಂ. ಮಾಣಿಕವೇಲು ಮುದಲಿಯಾರರಿಗಿಂತ ಯೋಗ್ಯರು ಇನ್ನೊಬ್ಬರಿರಲಿಕ್ಕಿಲ್ಲವೆಂದು ಅವರ ಭಾಷಣದಿಂದ ತಿಳಿಯುವುದು. ಈ ಹೊಸ ಕಾಂಗ್ರೆಸ್ ಸಂಸ್ಥೆಯ ಮೇಲೆ ಪೂರ್ಣ ಅಭಿಮಾನ, ಮೈಸೂರಿನ ಮೇಲೆ ಅತಿಶಯ ಪ್ರೇಮ, ಮೈಸೂರು ಸರಕಾರದ ಕಡೆಗೆ ಉದಾರ ಸಹಕಾರ, ಮೈಸೂರು ಮಹಾರಾಜರ ಮೇಲೆ ಮನಃಪೂರ್ವಕವಾದ ರಾಜಭಕ್ತಿ, ಮೈಸೂರು ಅಭ್ಯುದಯಕ್ಕಾಗಿ ಕಾರ್ಯಕಾರಿ ಸೂಚನೆಗಳು, ಇವೇ ಆ ಭಾಷಣದ ಪ್ರಮುಖ ಲಕ್ಷಣಗಳಾಗಿದ್ದುವು. ದೇಶದಲ್ಲಿ ಹಲವು ಇತರ ರಾಜಕೀಯ ಸಂಸ್ಥೆಗಳಿದ್ದರೂ ಇದೊಂದರ ಅವಶ್ಯಕತೆ ಏನೆಂದು ಅವರು ಸ್ಪಷ್ಟವಾಗಿ ತೋರಿಸಿದರು. ಅವರು ಕಾಂಗ್ರೆಸ್ಸಿನ ಧ್ಯೇಯವನ್ನೂ ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದರು. ಜನತೆಗೆ ಜವಾಬ್ದಾರನಾದ ಸರಕಾರವನ್ನು ಸ್ಥಾಪಿಸುವುದೇ ತಮ್ಮ ಧ್ಯೇಯವಾಗಿರಬೇಕೆಂದು ಅವರು ಸೂಚಿಸಿದರು. ಇನ್ನು ರಾಷ್ಟ್ರದ ಅಭಿವೃದ್ಧಿ ಬಗ್ಗೆ ಅವರು ಕೊಟ್ಟ ಸಲಹೆಗಳೂ ಉತ್ತಮವಿದ್ದುವು. ಹಿಂದೀ ಸರಕಾರಕ್ಕೆ ಕೊಡುವ ಕರವನ್ನು ನಿಲ್ಲಿಸುವುದು ಮಾತ್ರವಲ್ಲದೆ, ಹಿಂದೀ ಸರಕಾರಕ್ಕೆ ಟಪ್ಪಾಲು ತಂತಿ ಇಲಾಖೆಯಿಂದ ಮತ್ತು ಸುಂಕಗಳಿಂದ ವಸೂಲಾಗುವ ಆಯದಲ್ಲಿ ಮೈಸೂರು ಜನರಿಂದ ಸಿಗಬಹುದಾದ ಅಂಶವನ್ನು ಮೈಸೂರಿಗೇ ಕೊಡಬೇಕೆಂದು ಸೂಚನೆಯನ್ನು ಕೊಟ್ಟರು. ಜನತೆಯು ಬಹಳ ಹಿಂದುಳಿದಿದೆಯೆಂದೂ, ಅದು ಮುಂದೆ ಬರುವ ಅವಶ್ಯಕತೆಯನ್ನು ತೋರಿದರು. ರಾಜ್ಯದ ಕೈಗಾರಿಕೆಗಳ ಕಡೆಗೆ ಕೆಲವರು ತೋರಿರುವ ಅನ್ಯಾಯದ ಖಂಡನೆಯನ್ನು ಅವರು ಖಂಡಿಸದಿರಲಿಲ್ಲ. ಮತ್ತು ಕೃಷ್ಣರಾಜ ಸಾಗರ ಅಣೆಕಟ್ಟು, ಗಣಿಗಳ ಉತ್ಪನ್ನ, ಗಂಧದ ಮಂದ ಉತ್ಪತ್ತಿ, ಭದ್ರಾವತಿ ಕಾರ್ಖಾನೆ, ರೈಲ್ವೆ ವಿಸ್ತಾರ ಮೊದಲಾದ ಕೈಗಾರಿಕೆಗಳ ಸಂಬಂಧದಲ್ಲಿ ರಚನಾತ್ಮಕ ಉಚ್ಚತರದ ವಿಚಾರಗಳನ್ನು ಅವರು ಕೊಟ್ಟಿರುವರು. ಭದ್ರಾವತಿ ವಿಷಯದಲ್ಲಿ—ಎರಡು ಕೋಟಿ ಖರ್ಚು ಮಾಡಿದ ಮೇಲೆ ಅದನ್ನು ಮುಚ್ಚುವ ಆಲೋಚನೆಯನ್ನು ಮಾಡಲಾಗುವುದಿಲ್ಲ; ಅದನ್ನು ಇನ್ನೂ ವಿಸ್ತರಿಸಿ ಲಾಭಕರವಾಗಿ ಮಾಡಬೇಕೆಂದು ಸೂಚಿಸಿ, ಇಂತಹ ಎಲ್ಲಾ ವಿಸ್ತಾರಗಳಿಗಾಗಿ ಮೂರು ಕೋಟಿಯ ಸಾಲವೆತ್ತುವ ಅವಶ್ಯಕತೆಯನ್ನು ಅಧ್ಯಕ್ಷರು ಸೂಚಿಸಿದರು. ಈ ಅಧ್ಯಕ್ಷ ಭಾಷಣವು ಕಾಂಗ್ರೆಸ್ಸಿನ ಕಾರ್ಯನಿರ್ವಾಹದಲ್ಲಿ ಬಹಳ ಉಪಯೋಗಕರವಾಗಬಹುದಾಗಿ ನಾವು ನೆನಸುತ್ತೇವೆ.

ಜವಾಹರಲಾಲನೆಹರು.

ಅಖಿಲ ಕರ್ನಾಟಕದ ಮುಂದಾಳುಗಳಾದ ಪಂಡಿತ ಮೋತಿಲಾಲನೆಹರುರವರ ಮಗಂದಿರಾಗಿರುವ ಶ್ರೀಯುತ ಜವಾಹರಲಾಲನೆಹರುರವರು ನಿನ್ನೆ ದಿನ ಮಂಗಳೂರಿಗೆ ಬಂದು ಈ ದಿನ ಉಡುಪಿಗೆ ಹೋದರು. ಹಿಂದುಸ್ಥಾನದ ತರುಣ ಮಂಡಳಿಯಲ್ಲಿ ಇಷ್ಟು ಉತ್ಸಾಹಿಗಳೂ ಅವಿಶ್ರಾಂತ ಪ್ರವಾಸಿಗಳೂ ಆದವರು ಇನ್ನೊಬ್ಬರಿಲ್ಲ. ಕೆಲವೇ ಸಮಯದ ಹಿಂದೆ ಇವರು ಯುರೋಪಿನಿಂದ ಹಿಂದಿರುಗಿ ಬಂದಿದ್ದರು. ಯುರೋಪಿನಲ್ಲಿ ಅನೇಕ ಅಂತರ್ರಾಷ್ಟ್ರೀಯ ಚಳವಳಿಗಳನ್ನು ನೋಡಿ ಅದರೊಡನೆ ಬೆರೆತುಕೊಳ್ಳುವ ಸುಯೋಗವು ಇವರಿಗೆ ಒದಗಿತ್ತು. ಬೆಲ್ಜಿಯಮಿನಲ್ಲಿ ನಡೆದ ಅಂತರ್ರಾಷ್ಟ್ರೀಯ ಮಜೂರ ಪರಿಷತ್ತನ್ನು ಸೇರಿ ಅಲ್ಲಿ ತಮ್ಮ ಭಾಷಣವನ್ನು ಕೊಟ್ಟು ಯುರೋಪನ್ನು ಸಂಚರಿಸಿದರು. ಇವರು ಮಜೂರ ರಾಜ್ಯವಾದ ರಶ್ಯಾದೇಶವನ್ನು ಸೇರಿ ಅಲ್ಲಿಯ ಕ್ರಮ ಕಟ್ಟಳೆಗಳನ್ನು ತಿಳಿದು ಬಂದಿರುವರು. ಆದುದರಿಂದ ಅವರ ಭಾಷಣಗಳು ಪಕ್ವವಾದ ಅನುಭವದಿಂದ ಕೊಟ್ಟವುಗಳೆಂದು ತಿಳಿಯಬಹುದು. ಅವರ ನಿರ್ದಾಕ್ಷಿಣ್ಯವೂ ಸ್ವತಂತ್ರವೂ ಆದ ಅಭಿಪ್ರಾಯಗಳ ವಿಷಯದಲ್ಲಿ ನಾವು ಆಗಿಂದಾಗ್ಯೆ ಬರೆದುದು ವಾಚಕರ ನೆನಪಿನಲ್ಲಿರಬಹುದು. ಕಾಂಗ್ರೆಸ್ಸಿನಲ್ಲಿ ಸ್ವತಂತ್ರದ ಠರಾವನ್ನು ಮಂಜೂರುಮಾಡಲು ಇವರು ಪ್ರಬಲವಾದ ಕಾರಣರಾಗಿದ್ದರು. ಮಂಗಳೂರಿನವರು ಇವರನ್ನು ಸ್ವಾಗತೀಕರಿಸಿ ಇವರ ಅನುಭವಗಳ ಪ್ರಯೋಜನವನ್ನು ಹೊಂದಿರಬಹುದು. ಇಂಗ್ಲೆಂಡಿನ ಒಳಗೊಳಗಿನ ಕಠಿಣವಾದ ದುಸ್ಥಿತಿಯನ್ನು ಮುಂದೆ ನಡೆಯಬಹುದಾದ ಯುದ್ಧದ ವರ್ತಮಾನವನ್ನೂ ಅವರು ಹೇಳಿದುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಂತಹ ಸಮಯದಲ್ಲಿ ಹಿಂದೂಸ್ಥಾನವು ತಟಸ್ಥವಾಗಿರಬೇಕೆಂಬುದು ಕಳೆದ ಯುದ್ಧದೊಳಗಿನ ಹಿಂದೀಯ ಸಹಕಾರದ ಅನುಭವ ಮಾತ್ರವಾಗಿದೆ. ಯುರೋಪಿನ ರಾಜಕೀಯ ತಂತ್ರಗಳ ಬಾಹ್ಯರೂಪವನ್ನು ನೋಡಿದರೆ ಒಳಗೊಳಗೆ ಏನೊ ಕೆಟ್ಟದಿರಬೇಕೆಂದು ಬೋಧೆಯಾಗುತ್ತಿದೆ. ರಶ್ಯಾ—ಇಂಗ್ಲೆಂಡ್ ಸಂಬಂಧವೂ, ಬಾಲ್ಕಾನ್ ಪರಿಸ್ಥಿತಿಯೂ, ಫ್ರಾನ್ಸಿನ ಸ್ವಾರ್ಥಗಳೂ ಮುಂದಿನ ದುಷ್ಪರಿಣಾಮಗಳ ಚಿಹ್ನೆಯಾಗಿದೆ. ಮುಂದಿನ ಸಂದರ್ಭಗಳಲ್ಲಿ ಹಿಂದೂಸ್ಥಾನವು ಹೇಗೆ ವರ್ತಿಸಬೇಕೆಂದು ಈಗಲೇ ನಿಶ್ಚಯಿಸುವುದು ಜಾಣತನವಾಗಿರುತ್ತದೆ. ಏಕೆಂದರೆ ಅಂತಹ ಸಂದರ್ಭಗಳಿಂದಲ್ಲದೆ ಬರೇ ಬ್ರಿಟಿಷ ಕೃಪಾಕಟಾಕ್ಷದಿಂದ ಹಿಂದೂಸ್ಥಾನಕ್ಕೆ ಸ್ವರಾಜ್ಯವು ಲಾಭವಾಗಲಾರದು.

~~~~~

ಮಂಗಳೂರು ಸರ್ಕಲ್ ಇನ್ಸಪೆಕ್ಟರರಿಗೆ ಪಾಲ್ಘಾಟಿಗೆ ವರ್ಗ, ಉಡುಪಿಯವರಿಗೆ ಮಂಗಳೂರಿಗೆ ವರ್ಗ, ಮದರಾಸಿನ ಒಬ್ಬ ದೊರೆಯವರಿಗೆ ಉಡುಪಿಗೆ ವರ್ಗ, ಇನ್ನು ಸಬ್ ಇನ್ಸಪೆಕ್ಟರ ವರ್ಗಾವರ್ಗಿ ನೋಡಲಿದೆ.

• • • •

ಬಸ್ಸು ಕಂಪೆನಿಗಳಿಗೆ ಮಾತ್ರ ನಮ್ಮ ದ. ಕ. ಬೋರ್ಡಿನವರ ರೋಡ್ ರೂಲ್ಸ್ ಜಾರಿಗಿತ್ತು. ಇನ್ನು ಮುಂದಕ್ಕೆ ಬಡ ಒಂದು ಕಾರನ್ನೂ ಟೆಕ್ಸಿಯನ್ನೂ ಇಟ್ಟ ಮಾಲಿಕರ ಮೇಲೂ ಬಂತು ರೋಡು ಸೆಸ್. ಇನ್ನು ಕೆಲವರ್ಷದ ಮೇಲೆ ಪ್ರೈವೆಟ್ ಕಾರುಗಳ ಮೇಲೂ ಬರಲಿರುವದೋ ಏನೋ!

• • • •

ಉಟಾಕಮಂಡಿನಲ್ಲಿದ್ದ ಹಲವು ಆಸ್ತಿಗಳನ್ನೂ ಅಂದವಾದ ಕಟ್ಟಡಗಳನ್ನೂ ಹಿಂದೂಸ್ಥಾನದ ಕೆಲವು ರಾಜ್ಯಗಳ ಅಧಿಪತಿಗಳು ಕ್ರಯಕ್ಕೆ ಪಡಕೊಳ್ಳುವರಂತೆ.

• • • •

ಬೊಬ್ಬಿಲಿಯ ರಾಜರು 'ಶೋರ್ ಹೆಮ್ ಪೆಲೆಸ್'ನ್ನು ಒಂದುವರೆ ಲಕ್ಷಕ್ಕೆ ಪಡೆದು ಇನ್ನಷ್ಟು ಹಣ ಖರ್ಚುಮಾಡಿ ಅದನ್ನು ದುರುಸ್ತಿಪಡಿಸುವರು. ಇತ್ತ ವಿಜಯ ನಗರದ ಮಹಾರಾಣಿಯವರು 'ದಿಲ್‌ಕುಶ್. ಮಹಾಲ್'ನ್ನು ಪಡಕೊಂಡು ಅದನ್ನು ಈಗಿನ ಪೆಶನಿಗೆ ಸರಿಯಾಗಿ ಮಾಡುವರು. ಇನ್ನು ಇತರ ಹಲವು ರಾಜರು, ರಾಣಿಯರು ಕೆಲವು ಸ್ಥಳಗಳನ್ನು ಪಡಕೊಂಡು ನೀರಿನಂತೆ ಹಣ ಖರ್ಚುಮಾಡುವರು.

• • • •

ಪ್ರಜೆಗಳ ಕಷ್ಟದ ದುಡ್ಡಿರುವಾಗ ಇವರಿಗೇನು ಯೋಚನೆ.

ನೋಟಗಳು.

NOTE...S.

ಲೋಕಮಾನ್ಯ ತಿಲಕರ ಮಗನು ರೈಲ್ ಗಾಡಿಯ ಅಡಿಗೆಬಿದ್ದು ಪ್ರಾಣಹತ್ಯ ಮಾಡಿಕೊಂಡನು. ಆ ಮಹಾತ್ಮನ ಕೀರ್ತಿಗೂ ಈ ಮಗನ ಜೀವಮಾನಕ್ಕೂ ಎಷ್ಟು ತಾರತಮ್ಯ!

• • • •

ತುರ್ಕಿಯೂ ಅಫಘಾನಿಸ್ಥಾನವೂ ಒಪ್ಪಂದವನ್ನು ಮಾಡಿಕೊಂಡರು. ತುರ್ಕಿಗೂ ಪರ್ಶಿಯಾ ದೇಶಕ್ಕೂ ಈ ಮೊದಲೇ ಒಪ್ಪಂದವಿದೆ. ತುರ್ಕಿ, ಪರ್ಶಿಯಾ, ಅಫಘಾನಿಸ್ಥಾನ ಇವು ಒಂದು ಏಸ್ಯಾಖಂಡದ ಪಂಗಡವಾದುವೆಂದು ಯುರೋಪಿಯ ರಾಷ್ಟ್ರಗಳಿಗೆ ದಿಗಿಲು ಬಿದ್ದಿದೆ.

• • • •

ಈ ಯುರೋಪಿಯ ರಾಷ್ಟ್ರಗಳು Balance of Power ನ ರಾಜನೀತಿಯನ್ನು ಮುಂದೆ ಹೇಗೆ ರಚಿಸುವರೆಂದು ನೋಡಲಿದೆ.

• • • •

ಅಮೇರಿಕದ ಒಬ್ಬ ದೊಡ್ಡ ಧಂಡವಾಳಗಾರನು ಒಬ್ಬ ದರೋಡೆಖೋರನನ್ನು ತನ್ನ ಪಾಲುಗಾರನಾಗಿ ಮಾಡಿಕೊಂಡಿರುವನು. ಹೀಗೆ ಮಾಡಿಕೊಳ್ಳುವ ಮುಂಚೆ ಅವನ ಪೀಡೆಯು ಸಹಿಸಲಾಗದಷ್ಟಿದ್ದಿತು. ಪೋಲೀಸರಿಂದ ಅವನಿಗೆ ಯಾವ ಉಪಕಾರವೂ ಆಗದೆ ಕಡೆಗೆ ನಿರಾಶೆಯಿಂದ ಅವನನ್ನೇ ಪಾಲುಗಾರನಾಗಿ ಮಾಡಿಕೊಂಡನು. ಈಗ ದರೋಡೆಯವನ ತೊಂದರೆ ಇಲ್ಲವಂತೆ!

• • • •

ನಾಗರಿಕ ರಾಜ್ಯಗಳಲ್ಲಿಯ ಅವಸ್ಥೆ ಇದು!

• • • •

ನ್ಯೂಯೋರ್ಕಿನಲ್ಲಿ ಕೆಲವು ಕಳ್ಳರು ನಾಲ್ಕು ಟೆಕ್ಸಿಡ್ರೈವರರನ್ನು ಗುಂಡುಹಾಕಿ ಕೊಲ್ಲುವೆವೆಂಬ ಹೆದರಿಕೆ ಹುಟ್ಟಿಸಿ ತಾವು ಸುಲಿಗೆ ಮಾಡುವ ಮನೆಯ ಹೊರಗೆ ಕಾದು ನಿಲ್ಲುವಂತೆ ಮಾಡಿದರು. ನೆರೆಕರೆಯ ಜನರು ಇವರೇ ಕಳ್ಳರೆಂದು ಹೊಡೆಯಲು ಬಂದರು. ಇವರು ಕಾಲಿಗೆ ಬುದ್ಧಿ ಹೇಳಿದರು. ಪೋಲಿಸರು ಇವರ ಮೇಲೆ ಗುಂಡುಹಾರಿಸಿದರು. ಒಬ್ಬನು ಸತ್ತು ಇಬ್ಬರು ಪ್ರಾಣಾಂತಿಕ ಸ್ಥಿತಿಯಲ್ಲಿ ಬಿದ್ದರು. ಉಳಿದವರನ್ನು ಹಿಡಿಯುವಷ್ಟರಲ್ಲಿ ಅವನು ಇದ್ದ ಸಂಗತಿ ಹೇಳಿದನು. ಕಳ್ಳರು ಇಷ್ಟರೊಳಗೆ ತಮ್ಮ ಸುಲಿಗೆ ಹಿಡಿದು ಪರಾರಿಯಾಗಿದ್ದರು.

• • • •

ನಾಗರಿಕ ತನದ ಸುಲಿಗೆ!

• • • •

ಪತ್ರಿಕೆಗಳು ತಮ್ಮ ಹಳೆ ಸಂಚಿಕೆಗಳನ್ನು ಬಹಳ ಜಾಗ್ರತೆಯಿಂದ ಇಟ್ಟುಕೊಂಡರೆ ಮುಂದೆ ಉಪಯೋಗಕ್ಕೆ ಬೀಳುತ್ತದೆ. ಎಂಟು ಹತ್ತು ವರ್ಷಗಳ ಮೇಲೆ ಪುನಃ ಅದೇ ಉಪನ್ಯಾಸಗಳಿಂದ ತುಂಬಿಸಲಾಗದ ಪತ್ರಿಕಾಪುಟಗಳನ್ನು ತುಂಬಿಸಬಹುದಾಗುತ್ತದೆ. ಅಷ್ಟು ಹಿಂದಿನ ನೆನಪು ಯಾರೊಬ್ಬರಿಗೂ ಇರಲಾರದುದರಿಂದ ಉಪನ್ಯಾಸದ ನೂತನತೆಗೆ ಭಂಗ ಬರುವುದಿಲ್ಲ.

• • • •

ಈ ಉಪಾಯವನ್ನು ಕಂಡುಕೊಂಡ ಒಂದು ಪತ್ರಿಕೆಯನ್ನು ನಾವು ಅಭಿನಂದಿಸುವೆವು.

• • • •

ಓಟಿನ ಗೌಜಿ ನಿಲ್ಲುವಾಗ ಪ್ರಾರಂಭವಾಗಿದೆ, ಉಪಾಧ್ಯಾಯ ಉಪಾಧ್ಯಾಯಿನಿಯವರ ವರ್ಗಾವರ್ಗ. ಉಡುಪಿ ತಾಲೂಕಿನಲ್ಲಂತೂ ಜೋರಾಗಿದೆ.

• • • •

ನಮ್ಮ ಜಿಲ್ಲೆಯಲ್ಲಿ, ಜಿಲ್ಲೆಯವರು ಬಸ್ಸು ಕಂಪೆನಿಗಳನ್ನಿಟ್ಟು ಹೆಚ್ಚು ಹಣ ಸಂಪಾದಿಸುವುದರಿಂದ ಜಿಲ್ಲೆಯ ಹೊರಗಿನವರಿಗೆ ಇನ್ನು ಮುಂದಕ್ಕೆ ಲೈಸನ್ಸ್ ಕೊಡೋಣಾಗುವುದು ಎಂದು ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರ ರೂಲ್ಸು ಜಾರಿಗೆ ಬರುತ್ತಲಿದೆ.

• • • •

ಮಂಗಳೂರು ಮೈಲ್ ಪತ್ರಿಕೆಯಲ್ಲಿ ಕೆಲವು ಆಗದ ಹೋಗದ ಸುದ್ದಿಗಳು ಪ್ರಕಟವಾಗಲು ಪ್ರಾರಂಭವಾಗಿದೆ. ಪ್ರಾಯಶಃ ಇದು ಬಿಳಿ ಇದ್ದ ಕಾಗದ ಕಪ್ಪು ಮಾಡುವುದೆಂದು ಕಾಣುತ್ತೆ.

• • • •
~~~~~

ಅನುಕ್ರಮಣಿಕೆ.

[illegible]

ಸ್ವದೇಶಾಭಿಮಾನಿ.

[illegible]

ಭಾಷಣವನ್ನು [illegible] ನಲ್ಲಿ ಕೊಟ್ಟ [illegible] ಭಾಷಾಂತರಿಸಿ [illegible] ಭಾಷೆಗೊಂದು ಗೌರವವನ್ನು [illegible] ಣದ ಪ್ರತಿಯನ್ನು [illegible] ಅಭಿನಂದನೀಯವಾಗಿದೆ.

ಶ್ರೀ ನರಿಮನರು ಕರ್ನಾಟಕ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಪತ್ರಿಕಾರಚನೆ ಮೊದಲಾದ ಕರ್ನಾಟಕ ಸಮಸ್ಯೆಗಳನ್ನು ತರ್ಕಿಸಲಿಲ್ಲದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಕರ್ನಾಟಕದ ಯಾವುದೊಂದು ಸಂಸರ್ಗವು ಅವರಿಗೆ ಈ ವರೆಗೆ ಇರದೆ ಹೋಗಿದ್ದುದರಿಂದ ಅವರು ಆ ವಿಷಯಗಳಲ್ಲಿ ಹೇಗೆ ಅಭಿಪ್ರಾಯಗಳನ್ನು ಕೊಟ್ಟಾರು? ಆದರೂ ಆ ಸಮಸ್ಯೆಗಳನ್ನು ಅವರು ಮನಸ್ಸಿಗೆ ತಾರದೆ ಇಲ್ಲ. ಮತ್ತು ಹಲವು ವಿಧವಾಗಿ ಹಂಚಿಹೋದ ಕರ್ನಾಟಕವನ್ನು ಒಟ್ಟುಗೂಡಿಸುವುದರ ಪ್ರಬಲ ಕಷ್ಟಗಳು ಅವರಿಗೆ ಮನೋಗತವಾಗದೆ ಹೋಗಲಿಲ್ಲ. ಇದಕ್ಕೆ ತಾತ್ಕಾಲಿಕ ಉಪಾಯವಾಗಿ ಒಂದೇ ಕಾಂಗ್ರೆಸ್ ಸಂಸ್ಥೆಯಿಂದ ಈ ಎಲ್ಲಾ ಕರ್ನಾಟಕ ವಿಭಾಗಗಳನ್ನಾಳುವುದು, ವಿಶ್ವವಿದ್ಯಾಲಯವನ್ನು ರಚಿಸುವುದು ಮೊದಲಾಗಿ ಅವರು ಸೂಚಿಸಿದುದು ಅವರು ಆ ಸಮಸ್ಯೆಗಳ ಸ್ಥೂಲ ಅನುಭವವನ್ನು ಸಾಕಷ್ಟು ಚೆನ್ನಾಗಿ ಪಡೆಕೊಂಡಂತೆ ತೋರಿಸುವುದು.

ಈಗಿನ ರಾಜಕೀಯ ಪರಿಸ್ಥಿತಿಯನ್ನು ಸಮಾಲೋಚಿಸುವಾಗ ಮಿ. ನರಿಮನರು ಬ್ರಿಟಿಷ ಆಡಳಿತದ ಅಧಿಕಾರವನ್ನೇ ಪರಿಶೋಧಿಸಿ ಈಗಿನ ಧೋರಣಕ್ಕೂ ಬ್ರಿಟಿಷ ಸಾಮ್ರಾಜ್ಯ ಸ್ಥಾಪನೆಯಾಗಲು ಕಾರಣವಾದ ಧೋರಣಕ್ಕೂ ಇದ್ದ ಅತ್ಯಂತ ಹತ್ತಿರದ ಸಂಬಂಧವನ್ನು ತೋರಿಸಿರುವರು. "ಸ್ಥಾಪನ್ನವಾಗಿ ಆಳಬೇಕು ಮತ್ತು ಹೆಚ್ಚು ಹಣವನ್ನು ಕಳುಹಿಸಬೇಕು; ನಿರ್ದಾಕ್ಷಿಣ್ಯವಾದ ನ್ಯಾಯವನ್ನು ಆಚರಿಸಬೇಕು, ಆದರೆ ಹೆಚ್ಚು ಹಣವನ್ನು ಕಳುಹಿಸಬೇಕು." ಈಸ್ಟ ಇಂಡಿಯಾ ಕಂಪೆನಿಯ ಆಡಳಿತದ [illegible] ಧೋರಣವು ಇದಾಗಿದ್ದಿತು. ಬ್ರಿಟಿಷ ಸರಕಾರದ ಅನ್ಯೋದ್ದೇಶ ಧ್ಯೇಯವಾದರೂ ಇದೇ ಆಗಿದೆ. "ಹಿಂದೀಯರನ್ನು ನಾಗರಿಕರನ್ನಾಗಿ ಮಾಡಿ, ಮತ್ತು ಹೆಚ್ಚು ಹಣವನ್ನು ಇಂಗ್ಲೆಂಡಿಗೆ ಕಳುಹಿಸಿ; ಹಿಂದೀಯರಿಗೆ ಶಾಂತತೆಯನ್ನು ಕೊಡಿ ಮತ್ತು ಹೆಚ್ಚು ಹಣವನ್ನು ಕಳುಹಿಸಿ; ಹಿಂದೀಯರ ಅಭ್ಯುನ್ನತಿ ನೋಡಿ ಮತ್ತು ಹೆಚ್ಚು ಹಣವನ್ನು ಕಳುಹಿಸಿ." ಯಾವ ಕಾಲದಲ್ಲಿಯೂ [illegible] ಅದೇ—"ಹೆಚ್ಚು ಹಣವನ್ನು ಕಳುಹಿಸಿ" ಎಂದು.

ಬ್ರಿಟಿಷರ [illegible] ಹಿಂದೀ ಸರಕಾರವು ಏಕೆ [illegible] ಅವರ ಈ ಮಾನಸಿಕತೆ [illegible] ಬ್ರಿಟಿಷರು ಬ್ರಿಟಿಷರೇ; ಏದು [illegible] ನೆಲಸಿದ ಮಾತ್ರದಿಂದ [illegible] ಹಿಂದೀಯರಿಗೆ ಲೋಕದಲ್ಲಿ [illegible] ಇಂದಿನವರೆಗೆ ಪರ [illegible] ಒಪ್ಪಲಾರರು. [illegible] ಅವರು ಇತರ ದೇಶ [illegible] ಇಲ್ಲಿ [illegible] ವೃಷ್ಟಿಯು [illegible] ಜ್ಞಾನ್ [illegible] ಹಿಂದೀ ಸರ [illegible] ಸಾಧ್ಯ [illegible] ಸರಕಾರದ [illegible] ಕಡೆಗೂ [illegible]

[illegible]

ಭಾಷಣವು, ಸಂಕ್ಷೇಪವಾಗಿ ಹೇಳುವುದಾದರೆ, ಇತರ ಇಂತಹ ಅಧ್ಯಕ್ಷ ಭಾಷಣಗಳಂತೆ ಬರಿಯ ಬೇಸರವನ್ನುಂಟು ಮಾಡುವಂತಹದಾಗಿರದೆ, ಪ್ರತಿಯಾಗಿ ಉತ್ಸಾಹವನ್ನೇ ಉಂಟುಮಾಡುತ್ತಿದ್ದಿತು. ಅದರಲ್ಲಿ ದೇಶಪ್ರೇಮದ ತೀಕ್ಷ್ಣ ಜ್ವಾಲೆಯು ಉರಿದು ಎಲ್ಲರನ್ನೂ ಪ್ರೇರಿಸುವಂತಿದ್ದಿತು. ಸರಕಾರದ ಕೆಲವು ಕೃತ್ಯಗಳ ನಿರ್ದಾಕ್ಷಿಣ್ಯ ಖಂಡನವು ಅಲ್ಲಿ ಕಾಣುತ್ತಿದ್ದಿತು. ಕರ್ನಾಟಕದ ತಾರುಣ್ಯಕ್ಕೆ ತನ್ನ ಕರೆಯನ್ನು ಕೊಟ್ಟು ಅಧ್ಯಕ್ಷರು ತಮ್ಮ ಭಾಷಣವನ್ನು ಸಮಾಪನಗೊಳಿಸಿದರು. ಕರ್ನಾಟಕದ ತರುಣರಕ್ತವು ಈ ಕರೆಯಿಂದ ಎಚ್ಚರಗೊಳ್ಳುವುದಾಗಿ ಆಶಿಸುವೆವು.

ವಿದೇಶ ವರ್ತಮಾನ.

(ಲಂಡನ್ ಪತ್ರ.)

ತಾ. ೪—೫—'೨೮.

ಅಮೇರಿಕದಲ್ಲಿ ಮೊನ್ನೆ ತಾನೆ ಒಂದು ಮೋಟರ್ ಸ್ಪರ್ಧೆಯಾಯಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ ೭,೦೦೦ ಪವನುಗಳ ಇನಾಮು ಕೊಡುವದೆಂದು ನಿಶ್ಚಯವಾಗಿತ್ತು. ಯುನೈಟೆಡ್ ಸ್ಟೇಟ್ಸಿನ ಮೋಟರ್ ಮಾಡುವವನಾದ ಮೊಸ್ಕೊವಿಸರು, ಅಮೇರಿಕನ್ ಕಾರು ಯಾವದಾದರೂ ಯೂರೋಪಿಯನ್ ಕಾರನ್ನು ಸೋಲಿಸಬಲ್ಲದು ಎಂದು ಹೇಳಿದರು. ಇದನ್ನು ನೋಡಿಯೇ ತೀರಬೇಕೆಂದು ಪೆರಿಸಿನ ವೇಮೋನರೆಂಬವರು ಹಟ ಹಿಡಿದು ಸ್ಪರ್ಧೆಗಿಳಿದರು.

ಪೆರಿಸಿನ ವೇಮೋನರು ಇಟೆಲಿಯನ್ ಕಾರೊಂದನ್ನು ಆರಿಸಿ ತೆಗೆದರು. ಅದಕ್ಕೆ ಬ್ರಿಟಿಷ ರಬ್ಬರ ಟಾಯರುಗಳನ್ನೇ ಹಾಕಿದರು. ಕಾರನ್ನು ತೆಗೆದುಕೊಂಡು ಫ್ರಾನ್ಸಿನಿಂದ ಯುನೈಟೆಡ್ ಸ್ಟೇಟ್ಸಿಗೆ ಹೋಗಿ, ೨೪ ತಾಸುಗಳವರೆಗೆ ಮೋಟರನ್ನೋಡಿಸಿ ಸ್ಪರ್ಧೆಗೆ ನಿಂತರು. ಮೊಸ್ಕೊವಿಸರು ಅಮೇರಿಕನ್ ಕಾರನ್ನು ತಂದಿದ್ದರು. ಅಮೇರಿಕನ್ ಕಾರನ್ನು ಜೋರಾಗಿ ಓಡಿಸಿದರು. ೧೧೭೩ ಮೈಲು ಮುಗಿಯುವಷ್ಟರೊಳಗೆ ಆ ಕಾರಿಗೆ ೨೦ ಟಾಯರುಗಳನ್ನು ಹಾಕಬೇಕಾಯಿತು. ಆದರೆ ಇಟೆಲಿಯನ್ ಕಾರು ೨೧೭೩ ಮೈಲು ಓಡುವಾಗ ಅದಕ್ಕಿದ್ದ ಡನ್ಲೋಪ್ ಟಾಯರನ್ನು ಒಂದೇ ಒಂದು ಸಲ ಬದಲಾಯಿಸಿದ್ದರು. ಸವೆದ ಟಾಯರುಗಳನ್ನು ತೆಗೆಯುತ್ತಾ ಹೊಸ ಟಾಯರುಗಳನ್ನು ಹಾಕುವಾಗ ಬಹು ಸಮಯವು ಕಳೆದುಹೋದುದರಿಂದ ದಿನದ ಅಂತ್ಯದಲ್ಲಿ ಅಮೇರಿಕನ್ ಕಾರು ಇಟೆಲಿಯನ್ ಕಾರಿಗಿಂತ ೬೦೦ ಮೈಲುಗಳಿಗೆ ಹಿಂದಕ್ಕೆ ಬಿದ್ದಿತು. ಡನ್ಲೋಪು ಟಾಯರಿನ ಯೋಗ್ಯತೆಯು ಇಲ್ಲೀಗ ಸರಿಯಾಗಿ ವ್ಯಕ್ತವಾಗುವುದು.

— ಆಂಗ್ಲೊ ಪರ್ಸಿಯನ್ ಆಯಿಲ್ ಕಂಪೆನಿಯವರು ಪರ್ಸಿಯದಲ್ಲಿ ಇನ್ನೆರಡು ಎಣ್ಣೆ ಭಾವಿಗಳನ್ನು ಕೊಂಡಿರುವರು. ದಿನಕ್ಕೆ ಒಂದರಲ್ಲಿ ೧೪೮,೦೦೦, ಇನ್ನೊಂದರಲ್ಲಿ ೩೦೦,೦೦೦ ಗೆಲನು ಎಣ್ಣೆಯು ಉತ್ಪತ್ತಿಯಾಗುವವಂತೆ.

— ಪರ್ಸಿಯದ ಯುದ್ಧದ ಆಫೀಸಿಗಾಗಿ ೯೪,೬೭೩,೦೦೦ ನಾಣ್ಯಗಳನ್ನು ಸೆಂಕ್ಷನ್ ಮಾಡಿರುವರು.

— "ಇಟೆಲಿಯಾ" ವಿಮಾನವು ಧ್ರುವದಿಂದ ಹಿಂತಿರುಗುವಾಗ ಬಲವಾದ ಬಿರುಗಾಳಿಯಿಂದ ತಡೆಗಟ್ಟಲ್ಪಟ್ಟಿತು. ಈಗ ಅದರ ಸುದ್ದಿಯೇ ಇಲ್ಲ.

— ಅಫಘಾನ ಅಮೀರ ದಂಪತಿಗಳು ತುರ್ಕಿಸ್ಥಾನದ ಅಂಗೋರದಿಂದ ಹೊರಟು ಕಾನ್‌ಸ್ಟಂಟಿನೋಪಲಿಗೆ ಹೋದರು. ಅಂಗೋರದಲ್ಲಿ ಕೆಮಾಲ್ ಪಾಶಾರು ಅವರನ್ನು ಚೆನ್ನಾಗಿ ಸತ್ಕರಿಸಿದರು.

— ಲಂಡನಿನ ಪಾರ್ಲಿಮೆಂಟ್ ಲೇಬರ್ ಮೆಂಬರರು ಮಿಸ್. ಮೇಯೋಳಿಗೆ ಒಂದು ಔತಣವನ್ನು ಕೊಟ್ಟು ಸತ್ಕರಿಸಿದರು. ತನ್ನ ಮನೋನಿರ್ಧಾರವು ಕಿಂಚಿತ್ತಾದರೂ ಪರಿವರ್ತನೆಯಾಗಿಲ್ಲವೆಂದು ಸೂಚಿಸಿ ಅವಳು ಒಂದು ಭಾಷಣವನ್ನು ಮಾಡಿದಳು.

ಉಗಂಡಾ ಎಂಬಲ್ಲಿ ಒಬ್ಬ ಯುವಕನು ಆನೆಗಳ ಶಿಕಾರಿಗಾಗಿ ಹೋಗಿದ್ದನು. ಐದು ಆನೆಗಳ ಗುಂಪು ಬರುತ್ತಿರುವದನ್ನು ಕಂಡು ತನ್ನ ಗುಂಡನ್ನು ಕೆಳಗಿಟ್ಟು ಅವುಗಳ ಫೋಟೊ ತೆಗೆಯಲುದ್ಯೋಗಿಸಿದನು. ಆದರೆ ಅಷ್ಟರಲ್ಲಿ ಸಮೀಪದ ಪೊದರಿನಿಂದೊಂದು ಆನೆಯು ಬಂದು ಈತನನ್ನು ತುಳಿದು, ದೂರಕ್ಕೆ ಅಪ್ಪಳಿಸಿ ಕೆಳಕ್ಕೆ ಹಾಕಿತು. ಆದರೆ ಅರೆಜೀವದಿಂದ ಈತನು ಏಳುವದನ್ನು ಕಂಡು ಆನೆಯು ಪುನಃ ಹಿಂತಿರುಗಿ ಬಂದು ಕಾಲಿನಿಂದ ಒದ್ದು ಆ ಬಡ ಮನುಷ್ಯನನ್ನು ಕೊಂದು ಹಾಕಿತು.

— ಲೀಡ್ಸಿನ ಇಗರ್ಜಿಯಲ್ಲಿ ಪ್ರಾರ್ಥನೆಗಾಗಿ ಬಂದ ಜನರು ತಮ್ಮ ಹೆಂಡ್ ಬೇಗುಗಳನ್ನು ಹೊರಗೆ ಇಟ್ಟು ಒಳಗೆ ಹೋಗುತ್ತಿದ್ದರು. ಆದರೆ ಪ್ರಾರ್ಥನೆ ಮುಗಿದು ಹೊರಗೆ ಬಂದು ನೋಡುವಾಗ ಹೆಂಡು ಬೇಗುಗಳೇ ಇರುತ್ತಿದ್ದಿಲ್ಲ. ಮೊನ್ನೆ ಇದನ್ನು ಶೋಧಿಸಿ ನೋಡಲಾಗಿ, ಇದೆಲ್ಲವನ್ನು ಮಾಡುವವಳು ೫೫ ವರ್ಷದ ಒಬ್ಬ ಮುದುಕಿಯೆಂದು ತಿಳಿಯಿತು. ಅವಳನ್ನು ಹಿಡಿದು ಕೈದುಮಾಡಿರುವರು.

— ಮೇರಿ ರಾಣಿಯವರ ೬೧ನೇ ಜನ್ಮದಿನಾಚರಣೆಯು ಕಳೆದ ಆದಿತ್ಯವಾರ ನಡೆಯಿತು. ಅವರಿಗೆ ರಾಜ್ಯದ ಸರ್ವ ಕಡೆಗಳಿಂದಲೂ ಅಭಿನಂದನೆಯ ತಂತಿಗಳು ಬಂದಿದ್ದವು.

— ಹಿಂದೂಸ್ಥಾನದ ಕುರಿತು ಚರ್ಚಿಸುವ ಸಲುವಾಗಿ ರಾ। ಸಕಲತ್ವಾಲರು ಹಾರ್ಟ್ಸ್‌ಹೊರ್ನರ ಬೇಟಿ ಮಾಡುವರು.

— ತುರ್ಕಿ ಮತ್ತು ಅಫಘಾನಿಸ್ಥಾನ ಇವುಗಳೊಳಗೆ ರಾಜಿಯು ಕರಾರಾಗಿದೆ.

— 'ಮರ್ವೈಡ್' ಎಂಬ ಒಂದು ಜಾತಿಯ ಮೃಗಗಳು ಏಡನಿನ ಸಮುದ್ರ ಕರಾವಳಿಯಲ್ಲಿ ನೆರೆಯ ಸಮಯ ಬಂದು ಬಿದ್ದವಂತೆ. ಗಂಡು ೯ ಅಡಿ ಉದ್ದವಾಗಿದ್ದು ೩೬ ಮಣಕ್ಕಿಂತಲೂ ಹೆಚ್ಚು ಭಾರವಿದೆ. ಹೆಣ್ಣು ಕೂಡ ಅಷ್ಟೇ ದೊಡ್ಡದಿದೆ.

— ಜರ್ಮನಿಯಲ್ಲಿ ೭೦ ಸಾವಿರ ಕೊಮ್ಯುನಿಷ್ಟರು ಒಟ್ಟಾಗಿ ಸಭೆ ಕೂಡಿದರು. ಪೋಲೀಸರು ಅಪ್ಪಣೆ ಕೊಟ್ಟರೂ, ಇವರು ಚದರಿಹೋಗದ ಕಾರಣ ಪೋಲೀಸರು ತಮ್ಮ ಬಲವನ್ನುಪಯೋಗಿಸಿ ಹಲವರನ್ನು ಜಖಮ್ ಗೊಳಿಸಿದರು.

— ಕಾಡುಗಳ ಮೇಲಿನ ಹಕ್ಕುಗಳ ವಿಷಯವಾಗಿ ಮಲಯಿಗಳು ಪೋಲೀಸರೊಡನೆ ಕಾದಾಡಿದರು. ಪೋಲೀಸರು ಗುಂಡು ಬಿಟ್ಟು ಹಲವರನ್ನು ಗಾಯಗೊಳಿಸಿದರು.

— ಅಮೇರಿಕದ ರಬ್ಬರು ಸಾಹುಕಾರರು ಒಟ್ಟು ಕೂಡಿ ರಬ್ಬರ್ ಇನ್ಸ್ಟಿಟ್ಯೂಟ್ ಎಂಬ ಹೆಸರಿನ ಒಂದು ಕಮಿಟಿಯನ್ನು ಸ್ಥಾಪಿಸಿರುವರು. ಇದರಿಂದ ಅವರೊಳಗಿದ್ದ ಸ್ಪರ್ಧೆಯು ಕಡಿಮೆಯಾದಂತಾಯಿತು.

— ಆಫ್ರಿಕದ ಟೋಂಟಿನ ಸಮೀಪವಿರುವ ಒಂದು ಹಳ್ಳಿಯಲ್ಲಿ ಬೆಂಕಿಯುಂಟಾಗಿ ಸುಮಾರು ೫೦೦ ಮನೆಗಳು ಸುಟ್ಟುಹೋದವು.

— ಅಮೀರ ದಂಪತಿಗಳು ಕಾನ್‌ಸ್ಟಂಟಿನೋಪಲಿನಿಂದ ಹೊರಟು ಕಾಬೂಲಿಗೆ ಬರುತ್ತಿರುವರು.

— ಕೊರಿಯದಲ್ಲಿ ಸೋಮವಾರ ದಿನ ಎರಡು ಭೂಕಂಪಗಳುಂಟಾದವು.

— ಮೆಂಚೆಸ್ಟರ್ ಗಾರ್ಡಿಯನಿನ ಡೈರೆಕ್ಟರರಾದ ಸಿ. ಇ. ಮೊಂಟೆಗ್ಯೂರವರು ಮೃತಪಟ್ಟರು.

ಒಳದೇಶ ವರ್ತಮಾನ.

ಮೀನಿನ ಇಲಾಖೆಯ ಅಭಿವೃದ್ಧಿಗಾಗಿ ಸರಕಾರದವರು ಈ ಮೊದಲು ನೇಮಿಸಿದ ಕಮಿಟಿಯವರ ಸಭೆಯು ಇದೇ ಜೂನ್ ೪ನೇ ದಿನ ಮದರಾಸಿನಲ್ಲಿ ಕೂಡುವದು. ಡೆವೆಲಪ್‌ಮೆಂಟ್ ಮಿನಿಸ್ಟರರಾದ, ರಾ। ಸೇತುರತ್ನಮ್ ಅಯ್ಯರ್ ಇವರೇ ಅಧ್ಯಕ್ಷರಾಗುವರು. ಈ ಕಮಿಟಿಗೆ ಒಟ್ಟು ೮ ಜನ ಮೆಂಬರರಿರುವರು.

— ಲೆಜಿಸ್ಲೇಟಿವ್ ಎಸೆಂಬ್ಲಿಯ ಪ್ರೆಸಿಡೆಂಟರಾದ ವಿ. ಜೆ. ಪಟೇಲರು ಸಿಮ್ಲಕ್ಕೆ ಬಂದು ತಲಪಿರುವರು.

— ಜೂನ್ ಒಂದನೇ ತಾರೀಕಿನಿಂದ ಮದರಾಸು ಸದರ್ನ ಮರಾಠಾ ರೈಲ್ವೆ ಕಂಪೆನಿಯವರು ಗೊಬ್ಬರಕ್ಕೆ ಒಂದು ಮಣಕ್ಕೆ ಒಂದು ಮೈಲಿಗೆ ಹತ್ತನೇ ಒಂದು ಪೈಯಂತೆ ರೈಲ್ವೇ ಚಾರ್ಜನ್ನು ಕಡಿಮೆ ಮಾಡಿರುತ್ತಾರೆ.

— ಮುಂಬಾಯಿಯಲ್ಲಿ ಒಬ್ಬ ಮೋಟಾರ ಡ್ರೈವರನು ತನ್ನ ಮೋಟಾರನ್ನು ೨೫ ಮೈಲು ವೇಗಕ್ಕಿಂತಲೂ ಹೆಚ್ಚಾಗಿ ಓಡಿಸಿದ ಕಾರಣ ಆತನಿಗೆ ಮೆಜಿಸ್ಟ್ರೇಟರು ೩೦ ರುಪಾಯಿ ಜುರುಮಾನೆಯನ್ನು ವಿಧಿಸಿರುವರು.

— ಜಮಶೆದಾಪುರದ ಟಾಟಾ ಮಿಲ್ಲಿನ ಜನರು ೨೪ ತಾಸುಗಳ ಹರತಾಳವನ್ನಾಚರಿಸಿದರು. ಕೆಲಸವೇ ನಡೆಯಲಿಲ್ಲ.

— ಬಂಗಾಳದ ಬಂಕೂರಾ ಎಂಬಲ್ಲಿ ಉಂಟಾದ ಕ್ಷಾಮದಿಂದ ಪೀಡಿತರಾದ ಜನರ ಸಹಾಯಾರ್ಥವಾಗಿ ಗವರ್ನರ ಧೊರೆಗಳು ಅಲ್ಲಿಗೆ ಹೋಗಿದ್ದರು. ಅವರ ಉಪಯೋಗಕ್ಕಾಗಿ ಧೊರೆಗಳು ೪೦೦೦ ರೂಪಾಯಿಗಳ ದಾನವನ್ನು ಮಾಡಿದರು.

— ಬಂಗಾಳದ ಬಾಲೂರ ಘಾಟಿಯಲ್ಲಿ ಕ್ಷಾಮವುಂಟಾದ ಕಾರಣ ಹೆತ್ತವರು ಮಕ್ಕಳನ್ನು ಐದಾರು ರೂಪಾಯಿಗಳಿಗೆ ಮಾರುತ್ತಿರುವರು.

— ಮದರಾಸಿನ ಧಕ್ಕೆಯಲ್ಲಿ ಕೆಲಸ ಮಾಡುತ್ತಿದ್ದ ೨೦ ವರ್ಷ ಪ್ರಾಯದ ಕೂಲಿಯವನೊಬ್ಬನು ೨೦ ಫೀಟ್ ಆಡಿಯಲ್ಲಿರುವ ನೆಲದ ಮೇಲೆ ಬಿದ್ದು ಮೃತಪಟ್ಟನು.

— ಹಿಂದೂ ವೈದ್ಯ ಶಾಲೆಯೊಂದನ್ನು ತೆರೆಯಬೇಕೆಂದು ಮದರಾಸು ಸರಕಾರದವರು ಸೆಂಕ್ಷನ್ ಮಾಡಿರುವರು. ಈ ಶಾಲೆಯಲ್ಲಿ ಎರಡು ವರುಷಗಳ ತರಬೇತಿಯು ಕೊಡಲಾಗುವದು. ಪಾಶ್ಚಾತ್ಯ ವೈದ್ಯಕ್ರಮದಲ್ಲಿ ಅನುಭವಹೊಂದಿದವರಿಗೆ ಮಾತ್ರವೇ ಈ ಶಾಲೆಯಲ್ಲಿ ಪ್ರವೇಶಿಸಲು ಅಧಿಕಾರವಿದೆ.

— ಮೋಟಾರು ಡ್ರೈವರರು ಉದ್ದವಾದ ಕ್ರೋಪನ್ನು ಬೆಳೆಸುವದರಿಂದ ಗಾಳಿ ಬರುವಾಗ ಕೂದಲುಗಳು ಕಣ್ಣಿಗೆ ಹಾರಿ ಕಾಣದೆ ಅಪಘಾತಗಳುಂಟಾಗುವ ಸಂಭವವಿರುವುದರಿಂದ, ಅವರು ಕೂದಲನ್ನು ಹದವಾಗಿ ಕತ್ತರಿಸಿ ಬಾಚಿಕೊಂಡಿರಬೇಕೆಂದು ಸಿಲೋನಿನಲ್ಲಿ ಒಂದು ಠರಾವು.

— ರಂಗೂನಿನ ಕಾರಖಾನೆಯೊಂದರ ೩೦೦ ಜನರು ಕೆಲಸಕ್ಕೆ ಮುಷ್ಕರ ಹಾಕಿರುವರು, ಮಧ್ಯಾಹ್ನದ ಹೊತ್ತಿನಲ್ಲಿ ಅವರನ್ನು ಹೊರಗೆ ಹೋಗಲು ಬಿಡದಿದ್ದುದೇ ಇದಕ್ಕೆ ಕಾರಣವಂತೆ. ಅವರು ಕೆಲಸವನ್ನು ಪ್ರಾರಂಭಿಸದಿದ್ದರೆ ಬೇರೆಯವರನ್ನು ಆ ಕೆಲಸಕ್ಕೆ ನೇಮಿಸಲಾದೀತೆಂದು ಯಜಮಾನರು ಅವರನ್ನು ಗದರಿಸಿರುವರು.

— ಮುಂಬಾಯಿಯಲ್ಲಿ ಐದು ಜನ ಬ್ರಿಟಿಷ ಸೈನಿಕರು ಒಂದು ಗಡಿಯಾರದ ಅಂಗಡಿಗೆ ಹೋಗಿ ಒಂದನ್ನು ಕಳವುಮಾಡಿ ತಂದು ಅಡಗಿಸಿಟ್ಟರು. ಇದು ತಿಳಿದ ಕಾರಣ ಅವರು ಕೈದುಮಾಡಲ್ಪಟ್ಟರು.

— ರಾವಲಪಿಂಡಿಯ ಮೆಟ್ರಿಕ್ ಕ್ಲಾಸಿನ ವಿದ್ಯಾರ್ಥಿಯಾದ ಹಂಸರಾಜನೆಂಬವನು ತನ್ನ ಸಹಾಧ್ಯಾಯಿಗಳಿಗೆ ವಿಷ ಮಿಶ್ರಿತ ಮಿಠಾಯಿಯನ್ನು ತಿನ್ನಗೊಟ್ಟನು. ಇದರಿಂದ ಒಬ್ಬ ಹುಡುಗಿಯು ಸತ್ತುಹೋದಳು. ಆತನನ್ನು ಹಿಡಿದು ಕೈದುಮಾಡಿ ನಾಲ್ಕು ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು.

— ಈ ವರುಷದ ದಸರೆಯ ಸಮಯದಲ್ಲಿ ಮೈಸೂರಿನಲ್ಲಿ ಒಂದು ಅಖಿಳಭಾರತೀಯ ಪ್ರದರ್ಶನವು ನಡೆಯಲಿರುವದು. ಇದಕ್ಕೊಂದು ಕಮಿಟಿಯನ್ನು ನೇಮಿಸಿರುವರು.

— ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕಿರುವ ವಾಯರ್‌ಲೆಸ್ ಟೆಲಿಗ್ರಾಫಿಯಲ್ಲಿ ವಾರ ಒಂದಕ್ಕೆ ೧೧೫,೦೦೦ ವಾರ್ತೆಗಳು ಅಚೆ ಈಚೆ ಹೋಗುವವಂತೆ.

— ಬೆಜವಾಡದಲ್ಲಿ ಬೆಂಕಿಯ ಅನಾಹುತದಿಂದ ನೂರು ಮನೆಗಳು ಸುಟ್ಟು ಹೋಗಿ ೧೦೦೦ ಜನರು ನಿರ್ಗತಿಕರಾಗಿರುವರು. ಬೆಂಕಿ ನೊಂದಿಸುವ ಇಂಜನುಗಳು ಇಲ್ಲದಿರುವುದರಿಂದ ಬೆಂಕಿಯು ಬಹು ಹೆಚ್ಚಾಗಿ ಉರಿದು ತುಂಬಾ ನಷ್ಟವನ್ನುಂಟುಮಾಡುವರೆ ಕಾರಣವಾಯಿತು.

— ಪುದುಕೋಟೆಯ ರಾಜರು ಮೃತಪಟ್ಟರು.

— ಬಾರ್ಡೋಲಿಯ ಸತ್ಯಾಗ್ರಹಿಗಳೊಡನೆ ಏಕ ಮನಸ್ಸಿನಿಂದ ಸಹಕರಿಸಬೇಕೆಂದು ಪಂಡಿತ ಮದನಮೋಹನ ಮಾಲವೀಯರು ಮುಂಬಾಯಿಯಲ್ಲಿ ಸ್ಫೂರ್ತಿಪರ ಭಾಷಣವನ್ನಿತ್ತರು.

— ಕಾಶೀಮಠದ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರು ಇಷ್ಟು ದಿವಸ ಆಲೆಪ್ಪಿಯಲ್ಲಿದ್ದರು. ಅಲ್ಲಿಂದ ಅವರು ಶೃಂಗನೂರಿಗೆ ಹೊರಟು ಹೋದರು.

— ಮೂವತ್ತೈದು ವರುಷ ಪ್ರಾಯಕ್ಕಿಂತ ಮೊದಲೇ ಕ್ಯಾನು ಭೋಗ ವೃತ್ತಿಗೆ ಸೇರುವವರಿಗೆ ಟ್ರೈನಿಂಗ್ ಅಗತ್ಯವೆಂದೂ, ಮೂವತ್ತೈದು ವರುಷ ದಾಟಿದವರಿಗಾದರೆ ಅದು ಅಷ್ಟು ಅಗತ್ಯವಿಲ್ಲವೆಂದೂ ಮೈಸೂರು ಸರಕಾರದವರು ನಿರ್ಣಯಿಸಿರುವರು.

— ಭೂಕಂಪದ ಬರದಿಂದ ಪೀಡಿತರಾದ ಜನರಿಗಾಗಿ ತ್ರಿಪುರದ ಮಹಾರಾಜರು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

— ನೋಖಾಲಿ ಜಿಲ್ಲೆಯಲ್ಲಿ ಕುಡಿಯಲು ನೀರಿಲ್ಲದಿರುವುದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಬಂಗಾಳ ಸರಕಾರದವರೊಡನೆ ಒಂದು ಲಕ್ಷ ರೂಪಾಯಿಯ ಸಾಲವನ್ನು ಕೇಳಿರುವರು. ಈ ಸಾಲವನ್ನು ಕೊಂಡಾದರೂ ಜನರಿಗೆ ಸಹಾಯವಾಗುವಂತೆ ಮಾಡುವರು.

— ಗವರ್ನರ ಧೊರೆಗಳನ್ನು ೫೦ ರೂಪಾಯಿಯ ಕುರಿತು ಮೋಸಗೊಳಿಸಬೇಕೆಂದು ಪ್ರಯತ್ನಿಸಿದ ೧೭ ವರ್ಷದ ಒಬ್ಬ ಕ್ರೈಸ್ತ ಯುವಕನಿಗೆ ಲಖ್ನೋವಿನ ಮೆಜಿಸ್ಟ್ರೇಟರು ಒಂದುವರೆ ವರುಷಗಳ ಶಿಕ್ಷೆಯನ್ನು ವಿಧಿಸಿರುವರು.

ದಕ್ಷಿಣ ಕನ್ನಡ.

ಮಂಗಳೂರು:—ಇದೇ ಕಳೆದ ತಾರೀಕು ೨೬ನೇ ಶನಿವಾರ ಇಲ್ಲಿಯ ಕೋಲೇಜು ವಿದ್ಯಾರ್ಥಿ ಮಂಡಳಿಯವರು ಜೆಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾಭಿವೃದ್ಧಿ ಫಂಡಿನ ಸಹಾಯಾರ್ಥವಾಗಿ ಯಂ. ಸಂಜೀವರಾಯರಿಂದ ರಚಿತವಾದ "ಒಂದೇ ಗುಟುಕು" ಎಂಬ ಬೋಧಪ್ರದವಾದ ಸಾಮಾಜಿಕ ನಾಟಕವನ್ನು ಅತೀ ಮನೋಹರವಾಗಿ ಅಭಿನಯಿಸಿದರು. ಈ ಕಥಾ ಪುಸ್ತಕವನ್ನು ನಮ್ಮೂರಿನ ಕರ್ನಾಟಕ ರಂಗಭೂಮಿಯ ಸೇವಾ ಧುರೀಣರಾದ ಶ್ರೀಯುತ ಹೈಗೆ ಕೃಷ್ಣಪ್ಪ ತಿಂಗಳಾಯರಿಗೆ ಶ್ರೀ ಕೃಷ್ಣಚೈತನ್ಯ ಥಿಯೇಟ್ರಿಕಲ್ ಕಂಪೆನಿಯಲ್ಲಿ ಆಡುವರೆ ಹಕ್ಕು ಸಮೇತ ಅರ್ಪಿಸಿರುವರು.

ಇಲ್ಲಿಯ ನೇಶನಲ್ ಹುಡುಗಿಯರ ಶಾಲೆಯು ರಜೆ ಕಳೆದು ಇದೇ ೫ನೇ ತಾರೀಕಿನ ದಿನ ತೆರೆಯಲ್ಪಡುವದು. ೧೯೨೭ನೇ ಇಸವಿಯ ಜೂನ್ ತಿಂಗಳಿನಿಂದ ಥಿಯೊಸೊಫಿಕಲ್ ಲೋಜಿನವರು ಇದರ ಆಡಳಿತವನ್ನು ವಹಿಸಿಕೊಂಡುದರಿಂದ, ಶಾಲೆಯ ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚಿ ಕೀರ್ತಿಯು ಬೆಳೆದಿರುತ್ತದೆ. ಆದೀಗ ಮಂಜೂರಾತಿಯನ್ನು ಹೊಂದಿದ ಶಾಲೆಯಾಗಿದ್ದು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನಿಂದ ಗ್ರೇಂಟನ್ನು ಪಡೆಯುತ್ತಿದೆ. ಜೂನ್ ತಿಂಗಳಿನಿಂದ ೭ನೇ ತರಗತಿಯನ್ನು ತೆರೆಯುವರು. ಕಿಂಡರ್ ಗಾರ್ಟನ್ ವಿಭಾಗವು ಏರ್ಪಡಿಸಲ್ಪಟ್ಟು, ಬನಾರಸ್ ಮೊಂತೆಸ್ಸೋರಿ ಹೊಮ್ ಎಂಡ್ ಸ್ಕೂಲ್' ಇದರಲ್ಲಿ ವಿಶೇಷ ತರಬೇತಿಯನ್ನು ಹೊಂದಿದ ಶ್ರೀಮತಿ ರಮಾಬ್ಬಾ ಮಾಧವರಾವ್ ಇವರು ಅದರ ಚಾರ್ಜನ್ನು ವಹಿಸಿಕೊಳ್ಳುವರು. ಗಾಯನ, ಸೈಗೆ, ಹೊಲಿಗೆ ಜರಿ ಕೆಲಸ, ಕಸೂತಿ, ಅಡಿಗೆಯ ಕ್ರಮ ಮೊದಲಾದವುಗಳನ್ನು ಕಲಿಸುತ್ತಾ ಬರುವರು. ಗೌರವ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ಲಲಿತಾ ಪೂಂಜ, ಇವರು ಶಾಲೆಯ ಉನ್ನತಿಯನ್ನು ಬಯಸಿ ಇನ್ನೊಂದು ವರುಷ ಕೆಲಸ ನಡೆಸಲು ಸಮ್ಮತಿಸಿರುವರು. ಮಹಾಜನರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಿ ಉದಾರಾಶ್ರಯವನ್ನೀಯುವರೆಂದು ನಂಬಲಾಗಿದೆ.

ಒಂದು ವರುಷದಿಂದ ಇಲ್ಲಿಯ ಹೊಗೆಬಜಾರಿನಲ್ಲಿ ಜುಗಾರಾಟವು ಮಿತಿಮೀರಿ ಬೆಳೆದಿರುವುದು. ರಾತ್ರಿ ಹಲವರು ಮದ್ಯಪಾನ ಮಾಡಿ ಜುಗಾರಾಟವಾಡುತ್ತಾ ಹಾದಿಯಲ್ಲಿ ಹೋಗುವವರಿಗೆ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಇದಲ್ಲದೆ ಸಣ್ಣ ಪುಟ್ಟ ಕಳವುಗಳೂ ನಡೆಯುತ್ತಿವೆ. ಪೋಲಿಸ್ ಅಧಿಕಾರಿಗಳು ಈ ಕಡೆಗೆ ಲಕ್ಷ್ಯವನ್ನು ಕೊಟ್ಟರೆ ಉತ್ತಮವಿತ್ತು.

ಮುಂಬಾಯಿ ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಮೊಗವೀರ ಕ್ಲಾರ್ಕ್ ಯೂನಿಯನಿನ ೧೯೨೬ ಮತ್ತು ೧೯೨೭ನೇ ಇಸವಿಗಳ ವರ್ಷಾವಧಿ ಮಹಾಸಭೆಯು ಇದೇ ಜೂನ್ ತಿಂಗಳ ತಾರೀಕು ೧೦ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಡಾಕ್ಟರ್ ಎ. ಎಸ್. ಪೈ., ಎಲ್. ಎಮ್. ಎಂಡ್ ಎಸ್. ಇವರ ಅಧ್ಯಕ್ಷತೆಯಲ್ಲಿ ಮುಂಬಾಯಿ ಕೋಟೆಯೊಳಗಣ ಸರ್. ಕಾವಾಸ್ಜಿ ಜಹಾಂಗೀರ್ ಸಾರ್ವಜನಿಕ ಹೋಲಿನಲ್ಲಿ ಜರಗಲಿಕ್ಕಿರುವದು. ಸರ್ವರಿಗೂ ಸುಸ್ವಾಗತವಿದೆ.

ಸುಪ್ರಸಿದ್ಧ ದೇಶಭಕ್ತರೂ ಅಖಿಲ ಹಿಂದೀ ರಾಷ್ಟ್ರ ಮಹಾಸಭೆಯ ಕಾರ್ಯದರ್ಶಿಯರೂ ಆಗಿರುವ ಪಂಡಿತ ಜವಾಹಿರಲಾಲ್ ನೆಹರು ಇವರು ಇದೇ ೩೧ನೇ ಗುರುವಾರ ದಿನ ಬೆಳಗ್ಗೆ ಶಟಲ್ ಟ್ರೈನಿನಲ್ಲಿ ಮಂಗಳೂರಿಗೆ ಬಂದಿಳಿದರು. ಸಾಯಂಕಾಲ ಘಂಟೆ ೪-೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಶ್ರೀ ಸ್ವಾಮಿ ಶ್ರದ್ಧಾನಂದರವರ ತೈಲಚಿತ್ರವನ್ನು ಅನಾವರಣಗೈದರು. ಈ ಸಂದರ್ಭದಲ್ಲಿ, ಸ್ವಾಮಿಜಿಯವರು ಉದ್ದೇಶಿಸಿದ ಕರ್ತವ್ಯ, ಶಾಂತಿಸ್ಥಾಪನೆಗಾಗಿ ಅವರು ಪಟ್ಟ ಸಾಹಸ ಇವುಗಳನ್ನವರು ವಿವರಿಸಿ ಹೇಳಿದರು.

ಸುಮಾರು ಘಂಟೆ ೬ಕ್ಕೆ ಲೈಟ್ ಮೈದಾನಿನಲ್ಲಿ ಮುನಿಸಿಪಲ್ ಚೆಯರ್‌ಮೇನರಾದ ರಾ। ನೆಲ್ಲಿಕ್ಕಾ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಒಂದು ಭಾಷಣವನ್ನು ಮಾಡಿದರು. ಹಿಂದೂದೇಶವು ಇತರ ಎಲ್ಲಾ ದೇಶಗಳಿಗಿಂತ ಕೀಳುಸ್ಥಿತಿಯಲ್ಲಿದೆ, ಅದಕ್ಕೆ ಹಿಂದೂ ದೇಶದ ಬಡತನವೇ ಕಾರಣ. ಬಡತನವು, ಹಿಂದೂ ದೇಶದಿಂದ, ಅಪಾರ ಐಶ್ವರ್ಯವು ಹೊರಗೆ ಹೋಗುತ್ತಿರುವ ಕಾರಣದಿಂದ ಬಂದಿರುವದು. ಇನ್ಶೂರೆನ್ಸ್‌ಗಾಗಿ, ವಸ್ತ್ರಕ್ಕಾಗಿ, ಕೋಟ್ಯಾವಧಿ ಹಣವು ಪರದೇಶಕ್ಕೆ ಹೋಗುತ್ತಿರುವದು. ಬ್ರಿಟಿಷರು ನಮ್ಮ ಐಶ್ವರ್ಯವನ್ನು ಸಾಕಷ್ಟು ಸೆಳಕೊಂಡಿರುವರು. ನಮ್ಮ ಧ್ಯೇಯವೇ ಸ್ವಾತಂತ್ರ್ಯವಾಗಿರಬೇಕು. ಸ್ವಾತಂತ್ರ್ಯವನ್ನು ಕೊಡಬೇಕು ಎಂದು ನಾವು ಬ್ರಿಟಿಷರೊಡನೆ ಅತ್ತು ಬೇಡಿ ಹೇಳಿದರೂ, ಅವರು ಕೊಡಲಾರರು. ಅವರು ಸ್ವಾತಂತ್ರ್ಯವನ್ನು ನಮಗೆ ಕೊಡುವಂತೆ ನಾವು ಬೇರೆ ಉಪಾಯಗಳಿಂದಲೇ ಸಾಧಿಸಬೇಕು. ಅದಕ್ಕಾಗಿ ನಾವು ಸಾಕಷ್ಟು ಮಾನಸಿಕ ಬಲವನ್ನು, ಧೈರ್ಯವನ್ನು, ಸಂಪಾದಿಸಬೇಕು. ಇಂಗ್ಲಾಂಡಿನ ಸ್ಥಿತಿಯು ಮುಂಚಿನಂತಿಲ್ಲ; ಎಲ್ಲವೂ ಕಡಿಮೆಯಾಗುತ್ತ ಬರುತ್ತಿದೆ. ಅಲ್ಲಿನ ಕೈಗಾರಿಕೆಯು ಇಳಿದಿದೆ. ನಾವೆಯು ಕಡಿಮೆಯಾಗಿದೆ. ಅವರಿಗೆ ಸಿಕ್ಕುವ ಲಾಭವೆಂದರೆ ಅವರು ಪರದೇಶಗಳಲ್ಲಿ ಭಂಡವಾಳವನ್ನು ತಂದು ಹಾಕಿ ಮಾಡುವ ವ್ಯಾಪಾರದಿಂದ. ಹಿಂದುಸ್ಥಾನದಲ್ಲಿ ಅಂತಹ ವ್ಯಾಪಾರವೇ ನಡೆಯದಂತೆ ಮಾಡಬೇಕು. ಇನ್ನು ಸದ್ಯದಲ್ಲಿಯೇ ಒಂದು ಘೋರ ಯುದ್ಧವು ನಡೆಯುವದೆನ್ನಬಹುದು. ಆ ಸಮಯದಲ್ಲಿ ನಾವು ಬ್ರಿಟಿಷರಿಗೆ ಸಹಾಯವನ್ನು ಮಾಡದೆ ಸುಮ್ಮನಿರಬೇಕು. ಬ್ರಿಟಿಷರು ರಷ್ಯನರ ಎದುರಾಗಿ ಕಾದಾಡಬಹುದು. ಮದರಾಸು ಕಾಂಗ್ರೆಸಿನಲ್ಲಿಯೂ ಇದೇ ಠರಾವು ಮಂಜೂರಾಗಿರುತ್ತದೆ.

ನಮ್ಮಲ್ಲಿ ಬೇರೆ ಬೇರೆ ಸಂಸ್ಥೆಗಳನ್ನು ಏರ್ಪಡಿಸಬೇಕು. ಇಂತಹ ಸಂಸ್ಥೆಗಳ ಏರ್ಪಾಟದಿಂದ ಹಿಂದೂ ಮುಸಲ್ಮಾನರೊಳಗೆ ಐಕ್ಯವನ್ನು ಸಾಧಿಸಿ, ಒಂದೇ ಮನಸ್ಸಿನಿಂದ ಇರಬೇಕು. ಕಾಂಗ್ರೆಸಿಗೆ ಸೇರಬೇಕು. ಬ್ರಿಟಿಷರ, ಸಾಧ್ಯವಾದರೆ ವಿದೇಶಿ ವಸ್ತ್ರವನ್ನೇ ಬಹಿಷ್ಕರಿಸಬೇಕು. ಬದಲಾಗಿ ದೇಶೀಯ ವಸ್ತ್ರವನ್ನೆ ಧರಿಸಬೇಕು. ದೇಶೀಯ ವಸ್ತ್ರವೆಂದು ಗಿರಣಿಗಳಲ್ಲಿ ತಯಾರಾದ ವಸ್ತ್ರವನ್ನು ಉಪಯೋಗಿಸಬಾರದು. ಯಾಕೆಂದರೆ ಗಿರಣಿ ಮ್ಹಾಲಿಕರು ನಮ್ಮೊಡನೆ ಸಹಕರಿಸಲು ಒಪ್ಪುವದಿಲ್ಲ. ಖಾದಿಯನ್ನುಡುವುದರಿಂದ ಬಡವರಿಗೆ ಕೆಲಸ ಕೊಟ್ಟಂತಾಗುವದು. ನಮ್ಮ ಧನವನ್ನು ನಮ್ಮ ದೇಶದಲ್ಲಿಯೇ ಇರಗೊಟ್ಟಂತಾಗುವದು. ಸದ್ಯದಲ್ಲಿಯೇ ಸ್ಯಾಮನ್ ಕಮಿಶನು ಬರಲಿರುವದು. ಆಗ ನಾವು ಅವರಿಗೆ ಮುಷ್ಕರವನ್ನು ಹಾಕಬೇಕು. ಅವರಿಗೆ ವಿನೀತರಾಗಿ ಬೇಕಾದವುಗಳನ್ನು ಅವರಿಂದ ಪಡೆಯುವದಕ್ಕಿಂತಲೂ, ಹೆಚ್ಚಿಗೆ ಪ್ರಯೋಜನಗಳನ್ನು ಅವರಿಗೆ ಧೈರ್ಯದಿಂದ "ಎದೆಯೊಡ್ಡಿ ಪಡೆಯಬಹುದು." ಎಂಬುದೇ ಅವರ ಭಾಷಣದ ಮುಖ್ಯ ಸಾರಾಂಶವಾಗಿದ್ದಿತು. ಅವರು ಭಾಷಣವನ್ನು ಇಂಗ್ಲಿಷಿನಲ್ಲಿಯೇ ಮಾಡಿದ್ದರು.

ಅನಂತರ ಡಾ। ಹರಡೀಕರರು ಮುಂದಕ್ಕೆ ಬಂದು, ರಾ। ನೆಹರುರವರ ನುಡಿಗಳನ್ನು ತಪ್ಪದೆ ಅನುಸರಿಸಬೇಕೆಂದೂ, ಬಾಗಲಕೋಟೆಯಲ್ಲಿ ತೆರೆಯುವ ಹಿಂದೂಸ್ಥಾನಿ ಸೇವಾದಲದ ವ್ಯಾಯಾಮ ಮಂದಿರಕ್ಕೆ ಸಹಾಯ ಮಾಡಬೇಕೆಂದೂ ಹೇಳಿದರು. ಅವರ ಅಪೇಕ್ಷೆಯಂತೆ ರಾ। ನೆಹರುರವರು ಪುನಃ ಹಿಂದೀಯಲ್ಲಿ ಭಾಷಣ ಮಾಡಿದರು.

ಕೊನೆಗೆ ರಾ। ಜೆ ಎ. ಸಾಲ್ದಾನರು ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ ತರುವಾಯ ನೆರೆದ ಸಭೆಯು ಕೊನೆಗಂಡಿತು.

ರಾತ್ರಿ ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಶಿರಹಟ್ಟಿ ನಾಟಕ ಮಂಡಳಿಯವರು ಅವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯ ಹಿಂದೂಸ್ಥಾನಿ ಸೇವಾದಲದ ಕರ್ನಾಟಕ ಶಿಬಿರದ ವ್ಯಾಯಾಮ ಮಂದಿರದ ಸಹಾಯಾರ್ಥವಾಗಿ "ಮಹಾನಂದಾ" ಎಂಬ ನಾಟಕವನ್ನಾಡಿ ತೋರಿಸಿದರು.

ಮಂಗಳೂರು ಅಂಜುಮನ್ ಇತ್ತಿಹಾದುಲ್ ಇಸ್ಲಾಂ ಸಂಘದವರ ವಾರ್ಷಿಕ ಮಹಾಸಭೆಯು ತಾ. ೨೭—೫—೨೮ನೇ ಆದಿತ್ಯವಾರ ದಿನ ಮಧ್ಯಾಹ್ನ ೪॥ ಘಂಟೆಗೆ ಸರಿಯಾದ ಗೋಳಿಕಟ್ಟೆ ವಾರ್ಡಿನ ಬೈಲ್ ಅಬ್ದುಬ್ಯಾರಿಗಳ ಮನೆಯ ಬಡಗು ದಿಕ್ಕಿನಲ್ಲಿ ತಯಾರಿಸಿದ ಪೆಂಡೋಲಿನಲ್ಲಿ ನೆರೆದು ಬಂತು. ಸಭೆಗೆ ಕಾಸರಗೋಡಿನ ಜನಾಬ್ ಮೌಲಿ ಅರಬಿ ಚೆಮ್ನಾಡ್ ಸಾಹೇಬ್ ಬಹದ್ದೂರರವರು ಅಧ್ಯಕ್ಷರಾಗಿದ್ದರು. ಸಭೆಯು ಜನಸ್ತೋಮದಿಂದ ಕಿಕ್ಕಿರಿಯುತ್ತಿತು. ಸಭೆಗಾಗಿ ಪರದೇಶಗಳಿಂದಲೂ ಅನೇಕ ಮಹನೀಯರು ಚಿತ್ತೈಸಿದ್ದರು. ಅನೇಕ ಮಹನೀಯ ಹಿಂದೂ ಸಹೋದರರೂ ಬಂದಿದ್ದರು. ಸಭಾಮಂಟಪವು ಬಹಳ ಅಲಂಕಾರವಾಗಿ ತಳಿರ್ತೋರಣಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಸಭೆಯು ಅಪರಾಹ್ನ ಘಂಟೆ ೪-೩೦ಕ್ಕೆ ಪ್ರಾರಂಭವಾಗಿ ಸಭಾಮಂಟಪದಲ್ಲಿ ದೇವತಾ ಪ್ರಾರ್ಥನೆಯನ್ನು ಮಾಡಿ ಸೆಕ್ರೆಟರಿಯವರಿಂದ ಸಂಘವು ಒಂದು ವರುಷದಲ್ಲಿ ಮಾಡಿದ ಕಾರ್ಯ ವರದಿಯನ್ನು ಓದಲಾಯಿತು. ತರುವಾಯ ಜನಾಬ್ ಕೆ. ಇಬ್ರಾಹಿಮ್ ಕುಟ್ಟಿ ಮೌಲವಿಯವರು ಜನಾಬ್ ಮೌಲಿ ಸೈದ್ ಅಸದುಲ್ಲಾ ಸಾಹೇಬ್, ಹಾಜಿ ಕುಂಞ ಮೌಲನಿ ಸಾಹೇಬ್ ಮೊದಲಾದವರು ಇತ್ತಿಹಾದ್ ಎಂಬ ಏಕತ್ವದ ಕುರಿತು ಅನೇಕ ಕುರಾನಿನ ಆಧಾರಗಳಿಂದ ಸುರಸ ಭಾಷಣಗಳನ್ನು ಮಾಡಿದರು. ಇವರ ಭಾಷಣವು ಮುಗಿಯುವಾಗ ೬॥ ಘಂಟೆಯಾದುದರಿಂದ ಸಾಯಂಕಾಲದ ನಿಮಾಜಿಗಾಗಿ ಸಭೆಯನ್ನು ಸಾಯಂಕಾಲ ೭ ಘಂಟೆಗೆ ಮುಂದುವರಿಸಿಡಲಾಯಿತು.

ಗಣಪತಿ ಸೆಕೆಂಡರಿ ಶಾಲೆಯ ಸೋಡ್ತಿಯ ವಿಷಯ ಟಿಕೇಟು ಪಡಕೊಂಡವರಲ್ಲಿ ಗಲಿಬಿಲಿಯನ್ನು ಉಂಟುಮಾಡಿರುವುದರಿಂದ ಇದರ ಚಾಲಕರು ಸೋಡ್ತಿ ತೆಗೆಯುವ ದಿನವು ಯಾವದೆಂದು ವಾರ್ತಾಪತ್ರಿಕೆಯ ಮೂಲಕ ತಿಳಿಸಿದರೆ ಉತ್ತಮವಿತ್ತು.

ಕಾಪು:—ಈ ಸಲದ ತಾಲೂಕು ಬೋರ್ಡು ಚುನಾವಣೆಗೆ ಕಾಪು ಸರ್ಕಲಿನ ಪರವಾಗಿ ಕಾಪು ಪಟೇಲ ಶ್ರೀಧರ ಶ್ಯಾನುಭಾಗರು ಉಮೇದುವಾರರಾಗಿರುವರು. ಇವರು ಈ ಮೊದಲಿನಿಂದಲೂ ದೇಶ ಸೇವೆಯಲ್ಲಿ ನಿರತರಾಗಿದ್ದರಲ್ಲದೆ ಇನ್ನೂ ತನ್ನಿಂದ ಆದಷ್ಟು ಮಟ್ಟಿಗೆ ದೇಶ ಸೇವೆಯನ್ನು ಮಾಡಬೇಕಾಗಿ ಈ ಸಾರಿಯ ಚುನಾವಣೆಗೆ ನಿಂತಿರುವರು. ಇವರು ಈ ಮೊದಲು ಇಲ್ಲಿಯ ಪಂಚಾಯತ ಕೋರ್ಟು ಪ್ರೆಸಿಡೆಂಟರಾಗಿದ್ದು ತನ್ನ ಕಾಲದಲ್ಲಿ ಈ ಪಂಚಾಯತನ್ನು ನ್ಯಾಯರೀತಿಯಿಂದಲೂ ಬಹಳ ಶ್ರದ್ಧೆಯಿಂದಲೂ ನಡಿಸಿರುವರು. ಇವರು ಗ್ರಾಮದ ಪಟೇಲರಾಗಿದ್ದು ಎಲ್ಲರ ಪ್ರೀತಿಗೂ ಪಾತ್ರರಾಗಿರುವರು. ಇಲ್ಲಿ ಗ್ರಾಮ ಪಂಚಾಯತ ಇಲ್ಲದಿದ್ದರೂ ಗ್ರಾಮದ ರಾಜ ರಸ್ತೆಯನ್ನು ದಿನಾಲೂ ಗುಡಿಸುವ ಏರ್ಪಾಡನ್ನು ಈ ಮೊದಲು ಹಲವು ವರ್ಷಗಳಿಂದ ಊಂಟುಮಾಡಿರುವರು. ಇವರು ಒಂದು ಒಳ್ಳೆ ಮನೆತನದವರಾಗಿರುವುದರಿಂದ ತನ್ನ ಇಂಥ ಕೆಲಸಗಳಲ್ಲಿ ಬಹಳ ಶ್ರದ್ಧೆಯನ್ನು ಇಟ್ಟು ಕೆಲಸ ಮಾಡುವುದರಲ್ಲಿ ಏನೂ ಸಂಶಯವಿರುವುದಿಲ್ಲ. ಆದುದರಿಂದ ಈ ಸರ್ತಿಯ ಚುನಾವಣೆಯಲ್ಲಿ ನಾವು ಇವರನ್ನೇ ನಮ್ಮ ಸರ್ಕಲಿನ ಪರವಾಗಿ ಚುನಾಯಿಸಿ ಇವರ ಮೂಲಕ ನಮ್ಮ ಸರ್ಕಲಿಗೆ ಬೇಕಾಗುವ ಎಲ್ಲಾ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕಾಗಿ ಅತಿ ದೈನ್ಯದಿಂದ ಪ್ರಾರ್ಥಿಸುವ.

ಬ್ರಾಹ್ಮಣೇತರ ವೋಟರರಲ್ಲೊಬ್ಬ.

ಫರಂಗಿಪೇಟೆ:—ಮಾನ್ಯ ಮದ್ರಾಸು ವಿದ್ಯಾ ಇಲಾಖೆಯವರ ಪ್ರೋತ್ಸಾಹದಿಂದ ಪರೀಕ್ಷಾರ್ಥವಾಗಿ ಈ ಜಿಲ್ಲೆಯಲ್ಲಿ ಇದೊಂದೇ ಸೆಂಟರಿನಲ್ಲಿ ಯುವಕ ವಿದ್ಯಾವರ್ಧಕ ಕ್ಲಾಸುಗಳು ತಾ. ೨೦-೫-'೨೮ನೇ ಆದಿತ್ಯವಾರ ದಿನ ಶ್ಯಾಮ ಘಂಟೆ ೬-೩೦ಕ್ಕೆ ರಾಜಶ್ರೀ ಮಂಗಳೂರು ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರವರ ಸಮಕ್ಷಮ ತೆರೆಯಲ್ಪಟ್ಟವು. ಸುಮಾರು ೨೫ ಯುವಕರು ಹಾಜರು ಇದ್ದರು. ಈ ಕ್ಲಾಸುಗಳಲ್ಲಿ ಆಬಾಲವೃದ್ಧರಿಗೆ ಕನ್ನಡ ಓದು ಬರಹ ಲೆಕ್ಕಗಳನ್ನೂ ಇಂಗ್ಲಿಷ್ ಭಾಷೆಯ ಮಾಹಿತಿ ಯಕ್ಷಗಾನ ಇತ್ಯಾದಿ ವಿಷಯಗಳು ತಿಂಗಳಿಗೆ ಎರಡಾವರ್ತಿ ರಾಮಾಯಣ ಭಾರತಗಳಿಂದ ವಾಚಕರ ಉಪನ್ಯಾಸಗಳು ಕೊಡಲ್ಪಡುವದಲ್ಲದೆ ಓದಲಿಕ್ಕೆ ಯೋಗ್ಯವಾದ ಲ್ಯಾಬ್ರರಿ ಪುಸ್ತಕಗಳೂ ವಾರ ಪತ್ರಿಕೆ ಮಾಸ ಪತ್ರಿಕೆ ಇತ್ಯಾದಿಗಳೂ ಪುಕಸಾಟೆಯಾಗಿ ದೊರೆಯುವವು. ಆಗಾಗ್ಯೆ ಗ್ರಾಮಉದ್ಧಾರಣೆಗೆ ಬೇಕಾಗುವ ಕೃಷಿ—ಸಹಕಾರ—ಜಾನುವಾರುಗಳ ಚಿಕಿತ್ಸೆ—ಆರೋಗ್ಯ ರಕ್ಷಣೆ ಇವುಗಳ ಕುರಿತು ಯೋಗ್ಯರಾದವರಿಂದ ಭಾಷಣಗಳೂ, ಮಾಯಾಲಾಂದ್ರದ ಮೂಲಕ ತೋರಿಸಲ್ಪಡುವವು.

ಕ್ಲಾಸುಗಳು ಆದಿತ್ಯವಾರ ಹೊರತು ಇತರ ದಿವಸಗಳಲ್ಲಿ ಸಾಯಂಕಾಲ ೬-೩೦ರಿಂದ ೮-೩೦ರ ವರೇಗೆ ಫರಂಗಿಪೇಟೆ ಶ್ರೀರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯ ಹೋಲಿನಲ್ಲಿ ನಡಿಸಲ್ಪಡುವವು.

ನಾನಾ ಚಟುವಟಿಕೆಗಳ ಮೂಲಕ ವಿದ್ಯಾ ಪ್ರಸರಣವು ಹಳ್ಳಿಹಳ್ಳಿಗಳಲ್ಲಿ ಆಗುವಂತೆ ಮಾಡಿದ ಸರಕಾರದ ನೂತನ ವರ್ತನವು ಜಯಶಾಲಿಯಾಗಲೆಂದು ಹಾರೈಸಲ್ಪಡುತ್ತದೆ.

ಇಲ್ಲಿ ೯-೬ನೇ ಮೈಲು ಬಳಿ ರಸ್ತೆಯು ಗದ್ದೆಗಳಿಂದ ಸುಮಾರು ೨೦ ಅಡಿ ಎತ್ತರಕ್ಕೆ ಕಟ್ಟಲ್ಪಟ್ಟು ಗಾಡಿಗಳ ಚಲಾವಣೆಗೆ ಯೋಗ್ಯವಾಗಿ ಮಾಡಿಯದೆ. ಆದರೆ ಅಷ್ಟೊಂದು ಎತ್ತರವಾದ ಮಾರ್ಗಕ್ಕೆ ಎರಡು ಬದಿಗಳಲ್ಲಿಯೂ ಆವರಣವಿಲ್ಲದೆ ಖಾಲಿ ಬಿಟ್ಟದ್ದು ಬಹಳ ಅಪಾಯಕರ. ರಾತ್ರಿಯಲ್ಲಿ ಗಾಡಿಗಳು ಮಾರ್ಗದ ಅಗಲವನ್ನು ಅರಿಯದೆ ಬದಿಗೆ ಹೋಗಿ ಕೆಳಗೆ ಬೀಳುವ ಸಂಭವ ಉಂಟು. ಅಲ್ಲದೆ ಮಳೆಗಾಲದಲ್ಲಿ ಮಕ್ಕಳು ನೆರೆಯನ್ನು ನೋಡುವ ಆಶೆಯಿಂದ ಜಾರಿ ಬೀಳುವ ಸಂಭವವು ಇರಬಹುದು. ಆದ್ದರಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಆವರಣವನ್ನು ಹಾಕಿಸಿ ಜನರನ್ನು ಅಪಾಯದಿಂದ ತಪ್ಪಿಸುವ ಏರ್ಪಾಡು ಶೀಘ್ರದಲ್ಲಿಯೇ ಮಾಡುವರಾಗಿ ನಂಬಲ್ಪಟ್ಟಿದೆ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವೀಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ [illegible] ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗೆ [illegible] ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ [illegible] ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ [illegible] ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ [illegible] ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ [illegible] ಏರ್ಪಡಿಸಿರುತ್ತೆ.

[illegible]

(2) ಕಡೂರಿನಿಂದ ಬೆಳಗ್ಗೆ [illegible] ವಿಶ್ರಾಂತಿಗೆ 1½ ಗಂಟೆ ಅವಕಾಶ [illegible] 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] 12-30ಕ್ಕೆ ಚಾರ್ಮಾಡಿಗೂ ಸೇರಿ, [illegible] 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ [illegible] ಕಾಪರ ಗೋಡು, ಮಲಬಾರು, [illegible] ಬಹುದು.

(3) ಇದೇ [illegible] ಲಿಮಿಟೆಡ್ [illegible]

ವಿಶೇಷ ಮಾಹಿತಿಗೆ ಮೇಲಿನ [illegible] ತಿಳಿದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, [illegible] ಶೆಟ್ಟಿ,

[illegible]

[illegible]

ಟಿಕ್ಕೆಗಳ ಬದಲಿಗೆ ಬಸ್ಸು [illegible]

THE CANARA PUBLIC CONVEYANCE CO., LTD., MANGALORE.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ್ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ [illegible] ಮತ್ತು ಉತ್ತರ [illegible]

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವವರ ಪ್ರತಿದಿನವೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು [illegible] ಶಿರಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗ [illegible] ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಸಲೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲುಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರಿಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರಿ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವ.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟುನಾ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ತೀರಾಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. , ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿವರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೧—೮—೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು, ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ತೆಕ್ಕಾರು ಬಾಗ್ಲೋಡಿ:— ಇಲ್ಲಿಯ ಬೋರ್ಡು ಶಾಲೆಯ ವಾರ್ಷಿಕ ವರ್ಧಂತಿಯು ಉತ್ಸವವೂ, ಕಲ್ಲಡ್ಕ ಸೆಂಟರಿನ ಉಪಾಧ್ಯಾಯರ ಸಭೆಯೂ, ಇದೇ ಮೇ ತಿಂಗಳ ೧೯ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಮ॥ ರಾ॥ ರಾ॥ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ಕಕ್ಕುಂಜೆ ಸದಾಶಿವ ಅಡಿಗ ಬಿ. ಎ. ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ಸದರಿ ಶಾಲಾ ಕಟ್ಟೋಣದಲ್ಲಿ ಜರಗಿತು. ಶಾಲಾ ಕಟ್ಟೋಣವನ್ನು ತಳಿರು ತೋರಣಗಳಿಂದಲೂ ಪುಷ್ಪಮಾಲಿಗೆಳಿಂದಲೂ ಅಲಂಕರಿಸಿದ್ದರು. ಮ॥ ರಾ॥ ರಾ॥ ಬಾಗ್ಲೋಡಿ ಅನಂತರಾಮಶರ್ಮರು ಸಭಿಕರಿಗೆ ಸ್ವಾಗತವನ್ನಿತ್ತ ಬಳಿಕ ಪ್ರಾರ್ಥನೆಯೊಡನೆ ಸದರಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಎ. ಭುಜಂಗ ಶೆಟ್ಟರು ಶಾಲಾ ವರದಿಯನ್ನು ಓದಿದರು. ತರುವಾಯ ಶಾಲಾ ಮಕ್ಕಳಿಗೆ ಇನಾಮು ಹಂಚೋಣಾಯಿತು. ಸಂಘದ ಸೆಕ್ರೆಟರಿಯವರು ಗತಮೀಟಿಂಗಿನ ವರದಿಯನ್ನು ಓದಿದ ಬಳಿಕ ಕಲ್ಲಡ್ಕ ಬೋರ್ಡು ಹಾಯ್ಯರ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಬಿ. ಜನಾರ್ದನ ಶೆಟ್ಟರು ೩ನೇ ದರ್ಜೆಗೆ ದುರ್ನೀತಿಯ ಹೊಲೆತನ ಎಂಬ ಪದ್ಯ ಪಾಠವನ್ನು ಕೊಟ್ಟರು. ಸಂಘದ ಸೆಕ್ರೆಟರಿಯವರು ಗತ ಮೀಟಿಂಗುಗಳಲ್ಲಿ ಪಾಸಾದ ಠರಾವುಗಳನ್ನೆಲ್ಲಾ ಓದಿ ಹೇಳಿದ ನಂತರ ಮುಂದಿನ ಸಭೆಯನ್ನು ಕಲ್ಲಡ್ಕ ಬೋರ್ಡು ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವದೆಂತ ನಿರ್ಣಯಿಸಲಾಯಿತು. ಸಭಾಧ್ಯಕ್ಷರು ಒಂದು ಸರಸವಾದ ಭಾಷಣವನ್ನಿತ್ತ ತರುವಾಯ ಸೆಕ್ರೆಟರಿಯವರು ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು ಬಳಿಕ ಫಲಾಹಾರ, ಫೋಟೊ ತೆಗೆಯುವಿಕೆ ಇತ್ಯಾದಿಗಳೊಡನೆ ಸಭೆಯು ಮುಕ್ತಾಯವಾಯಿತು

ವಿವಿಧ ಸಮಾಚಾರಗಳು.

ಬಾರ್ಡೋಲಿಯ ಸತ್ಯಾಗ್ರಹ.

ಕಳೆದ ವಾರದಲ್ಲಿ ತಪತೀ ನದಿಯ ದಡದಲ್ಲಿ ಶ್ರೀ ದಯಾಳಜಿಯವರ ಅಧ್ಯಕ್ಷತೆಯಲ್ಲಿ ಬಾರ್ಡೋಲಿಯ ಸತ್ಯಾಗ್ರಹದ ವಿಷಯವಾಗಿಯೇ ಚರ್ಚಿಸಲೋಸುಗ ಒಂದು ಸಭೆಯು ನಡೆಯಿತು. ಸಭೆಯಲ್ಲಿ ಬಾವಾಜೀರಿನ ಇಮಾಮ್ ಸಾಹೇಬರೂ, ಮಣಿಲಾಲ್ ಕೋಠಾರಿಯವರೂ ಅಲ್ಲಿಯ ಚಳವಳದ ಕುರಿತು ಮಾತನಾಡಿದರು. "ಸರಕಾರದವರು ಮಾಡಿದ ತಪ್ಪಿನ ಸಲುವಾಗಿ ಬಾರ್ಡೋಲಿಯ ಹಿಂದೂ-ಮುಸಲ್ಮಾನರು ಕೈ ಕೈ ಹಿಡಿದು ಸತ್ಯಾಗ್ರಹವನ್ನು ಆಚರಿಸಿದುದು ತೃಪ್ತಿಕರವಾಗಿದೆ. ಇದರಿಂದ ಬಾರ್ಡೋಲಿಯ ಜನರಿಗೆ ಮಾತ್ರ ಜಯವು ಸಿಕ್ಕುವುದಲ್ಲ, ಹಿಂದೂ-ಮುಸಲ್ಮಾನರ ಐಕ್ಯದ ಕುರಿತು ಇಡೀ ಹಿಂದೂದೇಶಕ್ಕೆ ಪಾಠವನ್ನು ಕಲಿಸಿದಂತಾಗುವುದು"—ಎಂದು ಮೊದಲನೆಯವರ ಭಾಷಣದ ಸಾರಾಂಶವಾಗಿದ್ದಿತು. "ಜಪ್ತಿಗೆ ವಿರೋಧವಾಗಿ ನಿಂತು ಶೂರತನವನ್ನು ತೋರಿಸಿದ ದೇಶಭಕ್ತರ ಮೇಲೆ ಸರಕಾರದವರು ಕರುಣಾಹೀನರಾದುದರಿಂದ ಅಲ್ಲಿಯ ಸತ್ಯಾಗ್ರಹವು ಇಂತಹ ಕಠಿಣ ಸ್ಥಿತಿಗೆ ಬಂದಿತು. ವಲ್ಲಭ್ಭಾಯಿ ಪಟೇಲರೇ ನಾಯಕರಾಗಿರುವಾಗ ಜನರು ಎಷ್ಟು ಕರ್ತವ್ಯದಕ್ಷರಾಗುವರೆಂಬುವದನ್ನು ಬೇರೆ ಹೇಳಬೇಕಾಗಿಲ್ಲ. ಸರಕಾರದವರು ಮಧ್ಯ ಮಧ್ಯದಲ್ಲಿ ಜನರನ್ನು ಕೈದುಮಾಡಿ ಜೈಲಿಗೆ ಕಳುಹಿಸಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಉದ್ದೇಶಿಸುವರು. ಆದರೆ ದೈವವಶಾತ್ ಹೀಗೆ ಮಾಡುವುದರಿಂದ ಸತ್ಯಾಗ್ರಹವು ಬಿಕ್ಕುವುದೇ ವಿನಹ ಕಡಿಮೆಯಾಗಲಾರದು. ಇನ್ನಾದರೂ ಸರಕಾರದವರು ಮಾಡಬೇಕಾದ ಕೆಲಸವನ್ನು ಮಾಡದೆ ಇದ್ದರೆ ಇದರ ಪರಿಣಾಮವು ಸಾಧಾರಣ ಸ್ಥಿತಿಯಲ್ಲಿಯೇ ಕೊನೆಗಾಣಲಾರದು." ಎಂದು ವಿವರವಾಗಿ ಎರಡನೆಯವರು ಭಾಷಣವನ್ನು ಮಾಡಿದರು. ಇನ್ನು ಸತ್ಯಾಗ್ರಹಿಗಳ ಸಹಾಯಾರ್ಥವಾಗಿ ವಂತಿಗೆಯನ್ನು ಕೊಡುವದು ಎಲ್ಲರ ಕರ್ತವ್ಯವಾಗಿದೆಯೆಂದು ಸೂಚನೆಯು ಹೊರಟೊಡನೆ ಸರ್ವರೂ ಉದಾರ ಮತಿಯಿಂದ ವಂತಿಗೆ ಹಾಕಿ ಸುಮಾರು ೧೫೦೦ ರೂಪಾಯಿಗಳು ಅಲ್ಲಿಯೇ ಜಮೆಯಾದವು.

§ § § §

ಲೋಕಮಾನ್ಯರ ಪುತ್ರರ ಭಯಂಕರ ಮರಣ!

ದಿವಂಗತ ಲೋಕಮಾನ್ಯರ ಎರಡನೇ ಮಗನಾದ ಶ್ರೀಧರ ಬಳವಂತ ಟಿಳಕರ ಶರೀರವು ಪೂನೆಯ ಸಮೀಪ ರೈಲುವೇ ಹಾದಿಯಲ್ಲಿ ರೈಲುಗಾಡಿಯಿಂದ ನುಚ್ಚುನೂರು ಮಾಡಲ್ಪಟ್ಟು ಇದ್ದಿತು. ಇವರು ರೈಲು ಬರುವಾಗ ಹಾರಿ ಕಳೆದ ೨೫ನೇ ತಾರೀಕಿನ ದಿನ ಆತ್ಮಹತ್ಯವನ್ನು ಮಾಡಿದರಂತೆ. ಅವರ ರುಂಡವು ಚೂರಾಗಿದ್ದಿತು ಬಲಬಾಹು ಮೂರು ತುಂಡುಗಳಾಗಿ ವಿಭಾಗಿಸಲ್ಪಟ್ಟಿತ್ತು. ಎರಡೂ ಕಾಲುಗಳು ಮೊಳಕಾಲಿನ ಸಮೀಪ ತುಂಡಾಗಿದ್ದವು. ಎಡಕೈಗೆ ಏನೂ ಜಖಮಾಗದೆ ಕಟ್ಟಿದ್ದ ಭಂಗಾರದ ಗಡಿಯಾರವು ಸರಿಯಾಗಿ ಕೆಲಸವನ್ನು ಮಾಡುತ್ತಿತ್ತು.

ಇವರು ರೈಲುಹಾದಿಯ ಮೇಲೆ ಇರುವುದನ್ನು ಕಂಡು ರೈಲು ಡ್ರೈವರನು ದೂರದಿಂದಲೇ ಶಬ್ದಮಾಡಲು ಇವರು ಹಾದಿಯಿಂದ ಎದ್ದು ಹೋದರು. ಆದರೆ ರೈಲು ಸಮೀಪಕ್ಕೆ ಬಂದೊಡನೆ ಪುನಃ ಹಾರಿಯೇ ಬಿಟ್ಟರು. ಇವರ ಸಂಸ್ಕಾರಕಾರ್ಯದ ಸಮಯದಲ್ಲಿ ಬಹು ಜನರು ಕೂಡಿದ್ದರು ಅಸಹಕಾರದ ಸಮಯದಲ್ಲಿ ಇವರು ಬಹುವಾಗಿ ಕೆಲಸ ಮಾಡಿ ಬಳಲಿದವರು. ಅಸ್ಪೃಶ್ಯತಾ ನಿವಾರಣೆಗಾಗಿ ಇವರು ತುಂಬಾ ಹೋರಾಡಿದವರು

ಅಂದು ಮೃತರು ೫॥ ಘಂಟೆಗೆ ಎಂದಿನಂತೆ ಮನೆಯಿಂದ ಹೊರಟು ಹತ್ತು ಗಂಟೆಯ ವರೆಗೂ ಹಿಂತಿರುಗದೆ ಇದ್ದುದನ್ನು ಕಂಡು ಹೆದರಿ ಇವರ ಅಣ್ಣನು ಶೋಧನೆಗೆ ಪ್ರಾರಂಭಿಸಿದರು. ಮರಾಠಾ ಕೇಸರಿಯ ವಿಷಯದಲ್ಲಿ ಕೋರ್ಟುವ್ಯಾಜ್ಯವಾಗಿ, ಅದರಿಂದಲೇ ಜೀವದ ಮೇಲೆ ಇವರಿಗೆ ಒಂದುತರದ ವೈರಾಗ್ಯವು ಹುಟ್ಟಿ ಇವರು ಆತ್ಮಹತ್ಯವನ್ನು ಮಾಡಿಕೊಂಡರು.

§ § § §

ಪುದುಕೋಟೆ ರಾಜರ ಮರಣ.

ಪುದುಕೋಟೆಯ ಮಹಾರಾಜರು ಹೊಟ್ಟೆಯೊಳಗೆ ಒಪರೇಶನು ಮಾಡಿಸಬೇಕೆಂದು ಪೆರಿಸಿಗೆ ಹೋಗಿ ಅಲ್ಲಿಯ ಆಸ್ಪತ್ರೆಯಲ್ಲಿ ಒಪರೇಶನು ಮಾಡಿಸಿ ಗುಣಹೊಂದುವ ಸೂಚನೆಯನ್ನು ತೋರಿಸಿದರಾದರೂ ಕಳೆದ ೨೭ನೇ ತಾರೀಕಿನ ದಿನ ಬೆಳಗ್ಗೆ ಮೃತಪಟ್ಟರು. ರಾಣಿಯವರೂ ಅವರ ಸಮೀಪದಲ್ಲಿದ್ದರು. ಅವರ ಮಗನೂ ಕೂಡ ಪ್ರಾತಃಕಾಲದ ವರೆಗೆ ಅವರೊಡನೆ ಮಾತನಾಡುತ್ತಾ ಕುಳಿತಿದ್ದರು. ಅವರ ಮೃತದೇಹಕ್ಕೆ ಅಲ್ಲಿಯೇ ಸಂಸ್ಕಾರವನ್ನು ಮಾಡದೆ ಅದನ್ನು ಹಿಂದೂಸ್ಥಾನಕ್ಕೆ ತರುವರಂತೆ, ಅವರ ಮರಣ ವಾರ್ತೆಯನ್ನು ಕೇಳಿ ಪುದುಕೋಟೆಯ ನಿವಾಸಿಗಳು ದುಃಖದಿಂದ ಆವೃತರಾಗಿರುವರು. ಪಟ್ಟಣಿಗರು ಕೆಲಸವನ್ನು ನಿಲ್ಲಿಸಿ, ಅಂಗಡಿಗಳನ್ನು ಮುಚ್ಚಿ ತಮಗಾದ ದುಃಖಾತಿರೇಕವನ್ನು ವ್ಯಕ್ತಗೊಳಿಸಿದರು. ಅವರ ಮೃತದೇಹವನ್ನೂ, ರಾಣಿಯವರನ್ನೂ, ಯುವರಾಜರನ್ನೂ ವಿಮಾನದಲ್ಲಿ ಕಳುಹಿಸಿಕೊಡಬೇಕೆಂದು ಪುದುಕೋಟೆಯ ಜನರು ಲೋರ್ಡ್ ಬರ್ಕನ್ ಹೆಡ್ಡರಿಗೆ ತಂತಿಯನ್ನು ಕಳುಹಿಸಿರುವರು

ಮಹಾರಾಜರು ೧೮೭೫ನೇ ಇಸವಿಯಲ್ಲಿ ಜನಿಸಿದರು. ಮೊದಲಿನ ಮಹಾರಾಜರ ಮಗಳ ಮಗನಾದ ಇವರನ್ನು ರಾಜರು ದತ್ತಕ್ಕೆ ಪಡೆಕೊಂಡರು ೧೮೮೬ರಲ್ಲಿ ಇವರು ಪಟ್ಟವನ್ನೇರಿದರು. ಇವರ ಬಾಲ್ಯದಲ್ಲಿ ದಿವಾನರು ರಾಜ್ಯದಾಡಳಿತವನ್ನು ಮಾಡಿಕೊಂಡಿದ್ದರು. ಕಳದ ೧೮೯೮ನೇ ಇಸವಿಯಿಂದ ಇವರು ಪ್ರತಿ ವರ್ಷವೂ ಯುರೋಪಿಗೆ ಹೋಗುತ್ತಿದ್ದರು. ೧೯೧೫ನೇ ಇಸವಿಯಲ್ಲಿ ಸಿಡ್ನಿಯಲ್ಲಿ ಇವರು ಮಿಸ್ ಮುಲ್ಲ ಎಂಬವಳನ್ನು ಮದುವೆಯಾಗಿ ಒಬ್ಬ ಪುತ್ರನನ್ನು ಪಡೆದರು. ಆತನ ಹೆಸರು ಸಿಡ್ನಿ ಮಾರ್ತಾಂಡನೆಂದು. ಆತನು ಇಂಗ್ಲಾಂಡಿನಲ್ಲಿ ವಿದ್ಯೆಯನ್ನು ಅಭ್ಯಾಸಿಸುತ್ತಿರುವನು. ೧೯೨೦ರಿಂದ ಇವರು ಕೆಲವು ರಾಜಕೀಯ ಕಾರಣಗಳಿಂದ ಯುರೋಪಿನಲ್ಲಿಯೇ ಉಳಕೊಂಡರು. ಅವರು ಇಡೀ ವಿಶ್ವವನ್ನು ಸಂಚರಿಸಿದವರು ಶಿಕಾರಿಯಲ್ಲಿ ನಿಪುಣರು. ಇವರು ದಯಾಳುವೂ ದಾನಶೂರರೂ ಆಗಿದ್ದು ಪ್ರಜೆಗಳನ್ನು ಕರುಣೆಯಿಂದ ಆಳಿಕೊಂಡಿದ್ದು ಅವರ ಭಕ್ತಿಯನ್ನೂ ಪ್ರೀತಿಯನ್ನೂ ಬಹಳವಾಗಿ ಸಂಪಾದಿಸಿದ್ದರು. ಇವರ ನಿಧನವು ಬಹಳ ದುಃಖದಾಯಕವಾಗಿದೆ.

• • • §

ವಿಭವ ಸಂವತ್ಸರದ ರಾಜಕೀಯ ಸ್ಥಿತಿ.

ಹಾವೇರಿಯ ಜ್ಯೋತಿರ್ಮಾರ್ತಾಂಡ ಪಂಡಿತ ಶಂಕರ ಶಾಸ್ತ್ರಿಯವರು ವಿಭವ ಸಂವತ್ಸರದ ರಾಜಕೀಯ ಸ್ಥಿತಿಯನ್ನು ಈ ರೀತಿಯಾಗಿ ಬರೆದಿಟ್ಟಿರುವರು.

ನಮ್ಮ ಮಹಾರಾಜರಿಗೆ ಈ ವರುಷವು ಶುಭವರುಷವಾಗಿ ಕಂಡು ಬರುವದು. ಎಪ್ರಿಲ್ ತಿಂಗಳಲ್ಲಿ ಯುವರಾಜರು ಸಂಚಾರಕ್ಕಾಗಿ ಹೋಗುವರು. ಯೋರ್ಕಿನ ಡ್ಯೂಕರು ರಾಜ್ಯದ ಯಾವದಾದರೂ ಒಂದು ಭಾಗಕ್ಕೆ ಪ್ರಯಾಣ ಬೆಳೆಸುವರು. ಸೆಂಟ್ರಲ್ ಆಸ್ಯ, ಜಪಾನ್, ಫ್ರಾನ್ಸ್, ಇಂಗ್ಲಾಂಡ್, ಚೀನಾ ಮತ್ತು ಉತ್ತರ ಅಮೇರಿಕ ಈ ದೇಶಗಳಿಗೆ ಪಂಚಭೂತಗಳ ಬಾಧೆಯಿರುವದು. ಅಮೇರಿಕಾ, ಇಂಗ್ಲಾಂಡ್, ಇಟೆಲಿ, ಸ್ವಿಡನ್ ಮತ್ತು ಜ್ಯಾನಾ ಈ ದೇಶಗಳಲ್ಲಿ ನೆರೆಬರುವದು. ಮುಷ್ಕರಗಳು ರೈಲು ಮತ್ತು ಗಣಿಗಳ ಅಪಘಾತಗಳು ಹೆಚ್ಚುವವು. ಯುರೋಪು ಮತ್ತು ಆಸ್ಯದಲ್ಲಿ ಅಕಾಲ ಮಳೆ ಬಂದು ಬೆಳೆಯು ಹಾಳಾಗುವದು.

ಹಿಂದೂಸ್ಥಾನದ ಮಳೆ—ವಾಯುವ್ಯ ಗಡಿಪ್ರಾಂತ್ಯ, ಸೂರತ್, ಬನಾರಸ್, ರಾಜಪುತಾನ, ಕಟಕ್ ಮತ್ತು ಮದರಾಸಿನ ನಡುವಣ ಪ್ರಾಂತ, ಒರಿಸ್ಸ, ಗುಜರಾತ, ಬಂಗಾಳ, ಮೈಸೂರು, ಪಾಟ್ನಾ, ಪೂನಾ, ಕೊಲ್ಹಾಪುರ, ಬರೋಡಾ, ಕೊಂಕಣ ಮಾಳವ, ಮತ್ತು ಸಿಂಧ ಈ ಪ್ರಾಂತಗಳಲ್ಲಿ ಚೆನ್ನಾದ ಮಳೆಯಿದೆ. ದಕ್ಷಿಣ ಬೀಹಾರ, ನಿಜಾಮ ರಾಜ್ಯದ ವಾಯುವ್ಯ ಪ್ರಾಂತ್ಯ ಮುಂಬಾಯಿ ಸಂಸ್ಥಾನದ ಪಶ್ಚಿಮ ಪ್ರಾಂತ, ಕಾಶ್ಮೀರ, ಥೀರತ್, ಪಂಜಾಬ, ದ್ರಾವಿಡ, ಆಂಧ್ರಾ, ಮತ್ತು ಕರ್ನಾಟಕ ಈ ಸ್ಥಳಗಳಲ್ಲಿ ಸಾಧಾರಣ ಮಳೆ ಬರುವದು. ಉಜ್ಜಯಿನಿ, ವಿಂಧ್ಯಾ ಪರ್ವತದ ದಕ್ಷಿಣ ಭಾಗ, ಈ ಸ್ಥಳಗಳಲ್ಲಿ ಮಳೆ ಬಹು ಕಡಿಮೆ. ಪಾಟ್ನಾ, ಕುರುಕ್ಷೇತ್ರ, ನಿಜಾಮ ರಾಜ್ಯದ ಕೆಲವು ಭಾಗಗಳಲ್ಲಿ ವಿಪರೀತವಾದ ಮಳೆ ಬರುವದು.

ರಾಜಕೀಯ ಸ್ಥಿತಿ—ರಾಜಕೀಯ ಪರಿಸ್ಥಿತಿಯಲ್ಲಿ ಮಹಾತ್ಮಾಜಿಯವರು ಹೆಚ್ಚಿನ ಭಾಗವನ್ನು ವಹಿಸಿಕೊಳ್ಳುವರು. ಮನೋವೈಷಮ್ಯವನ್ನು ತ್ಯಜಿಸಿ, ಬೇರೆ ಬೇರೆ ಧುರೀಣರು ಕಲಕತ್ತಾ ಕಾಂಗ್ರೆಸಿನಲ್ಲಿ ಒಟ್ಟು ಕೂಡುವರು. ಕಾಂಗ್ರೆಸು ಜಯಪ್ರದವಾಗಿ ನಡೆಯುವದು. ಹಿಂದುಗಳು ಒಟ್ಟಾಗುವರು. ಲೆಜಿಸ್ಲೇಟಿವ್ ಕೌನ್ಸಿಲುಗಳು ಕಣ್ಣು ತೆರೆಯುವವು. ಸ್ವರಾಜ್ಯದ ನಿಜವಾದ ಹಾದಿಯು ಆ ಕಾಂಗ್ರೆಸ್ಸಿನಲ್ಲಿ ಗೊತ್ತುಮಾಡಲ್ಪಡುವದು. ಸ್ಯಾಮನ್ ಕಮಿಶನು ಮತ್ತು ರಿಸರ್ವ ಬೇಂಕ ಮಸೂದೆ ಇವು ವ್ಯಾಸರಾಯರಿಗೆ ಕಠಿಣ ಸಮಸ್ಯೆಯಾಗಿ ತೋರಿದರೂ, ಅವರು ಅವುಗಳನ್ನು ಬಿಡಿಸದಿರರು. ಹಿಂದೂಸ್ಥಾನಕ್ಕೆ ಹೆಚ್ಚಿನ ರಾಜಕೀಯ ಸ್ವಾತಂತ್ರ್ಯವು ಲಭಿಸುವದು.

ವ್ಯಾಪಾರ—ಪ್ರಾರಂಭದಲ್ಲಿ ಪರದೇಶ ವ್ಯಾಪಾರವು ಕುಗ್ಗುವದು. ಅಂತ್ಯದಲ್ಲಿ ಪರದೇಶ ವ್ಯಾಪಾರದಿಂದ ಲಾಭವಾಗುವದು. ಅಕ್ಕಿ ಮತ್ತು ಗೋದಿಯ ಬೆಲೆ ಏರುವದು. ಧುರೀಣರ ಉತ್ಸಾಹದಿಂದ ಖಾದಿ ಮೊದಲಾದ ದೇಶೀಯ ವ್ಯಾಪಾರವು ಲಾಭಪ್ರದವಾಗುವದು. ಎಪ್ರಿಲ್, ಜೂನ್, ಆಗಸ್ಟ್ ಮತ್ತು ಒಕ್ಟೋಬರ್ ತಿಂಗಳುಗಳಲ್ಲಿ ಹತ್ತಿಯ ಬೆಲೆ ಹೆಚ್ಚುವದು. ಅಮೇರಿಕನ್ ಹತ್ತಿಯ ವ್ಯಾಪಾರವು ಇಳಿಯುವದು.

ಹಿಂದೂ ರಾಜರಿಗೂ ಹುದ್ದೇದಾರರಿಗೂ ಇದು ಒಳ್ಳೆಯ ವರುಷವು. ಆದರೆ ಉತ್ತರ ಭಾಗದ ಕೆಲವು ರಾಜ್ಯಗಳಿಗೆ ಕಷ್ಟವಿದೆ. ಹಿಂದೂ ಮುಸಲ್ಮಾನರ ಐಕ್ಯವು ಸುಲಭದಿಂದಾಗುವದು ಶುದ್ಧಿ ಚಳವಳದ ಕುರಿತು ಸರ್ವರೂ ಆಲೋಚಿಸುವರು. ಹಿಂದು ಮತವು ವಿಸ್ತರಿಸುವುದು. ಸಾಮಾಜಿಕ ಅಭಿವೃದ್ಧಿಯಾಗುವದು. ಸ್ತ್ರೀ ಸಂಸ್ಥೆಗಳಿಗೆ ಇದು ಬಹಳ ಉತ್ತಮ ವರ್ಷವಾಗಿದೆ.

ದುಃಖಸೂಚಕ ಸಭೆ.

ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಪ್ರಮುಖ ಉಪಾಧ್ಯಾಯರಾದ ಶ್ರೀಯುತ ಎಮ್. ಬಾಬು ಬಿ. ಎ. ಎಲ್. ಟಿ.ಯವರು ಅಕಾಲನಿಧನ ಹೊಂದಿದ ಅತ್ಯಂತ ವಿಷಾದ ವಾರ್ತೆಯು ತಲುಪಲು ತಾ. ೨೮—೫—'೨೮ನೇ ಬೆಳಗ್ಗೆ ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ, ಮತ್ತು ಶ್ರೀ ದುರ್ಗಾಪರಮೇಶ್ವರಿ ಲೋವರ್ ಎಲಿಮೆಂಟರಿ ಶಾಲೆಗಳಲ್ಲಿ ದುಃಖಸೂಚಕ ಸಭೆಗಳು ಜರಗಿದವು. ಶ್ರೀ ಕೆ. ಗಣಪಯ್ಯ ಸೆಟ್ಟಿ ದಿವಂಗತರ ಭಾವಚಿತ್ರವನ್ನು ಸಭೆಯ ಮುಂದಿಟ್ಟು, ಅವರಲ್ಲಿ ಮೂರ್ತಿಮಂತಾಗಿದ್ದ, ಕರ್ತವ್ಯದಕ್ಷತೆ, ಸರಳಹೃದಯ, ನಗುಮೊಗ, ಸ್ನೇಹಭಾವ, ಸಾಹಿತ್ಯಸೇವೆ, ಇವೇ ಮೊದಲಾದ ಗುಣಪ್ರಶಂಸೆಯನ್ನು ಮಾಡಿದ್ದಲ್ಲದೆ, ನನ್ನ ತರಬೇತಿ ವಿದ್ಯಾರ್ಥಿ ದಸೆಯ ಲಾಗಾಯತು ಅವರು ತನ್ನ ಮೇಲಿಟ್ಟಿರುವ ನಿಸ್ಸೀಮ ಪ್ರೇಮವನ್ನೂ, ತನ್ನ ಶಾಲೆಗಾಗಿ ಮಾಡಿರುವ ಅನಂತ ಉಪಕಾರಗಳನ್ನೂ, ಶಾಲಾ ಜನಕರಂತಿದ್ದ ಮಹಾಶಯರ ಅಂತರ್ಧಾನದಿಂದ ತನಗೂ ತನ್ನ ಶಾಲೆಗೂ ಪ್ರಾಪ್ತವಾದ ಅಪಾರ ನಷ್ಟಗಳನ್ನೂ ವಿವರಿಸಿದರು. ತರುವಾಯ ಮೆನೇಜರರ ಸೂಚನೆಯಂತೆ ಎಲ್ಲರೂ ಎದ್ದು ನಿಂತು ದಿವಂಗತರ ಪವಿತ್ರ ಆತ್ಮಕ್ಕೆ ಚಿರಶಾಂತಿಯನ್ನು ದುಃಖಿತ ಬಂಧುಬಳಗಕ್ಕೆ ಚಿತ್ತಶಾಂತಿಯನ್ನು ಅನುಗ್ರಹಿಸಬೇಕಾಗಿಯೂ, ಮೃತರ ಪವಿತ್ರಾತ್ಮದ ದಿವ್ಯಾಶೀರ್ವಾದವು ಎಂದಿನಂತೆ ಮುಂದಕ್ಕೂ ಈ ಶಾಲೆಯ ಮೇಲಿರಲಿ ಎಂಬದಾಗಿಯೂ, ಶ್ರೀಭಗವಂತನನ್ನು ಪ್ರಾರ್ಥಿಸಿ, ಶಾಲಾ ಮಾತೆಯಂತಿದ್ದ ಗುರುಪತ್ನಿಯರ ಅಪಾರ ದುಃಖದಲ್ಲಿ ಸಹಾನುಭೂತಿಯನ್ನು ಸೂಚಿಸಬೇಕಾಗಿ ನಿರ್ಣಯಿಸಿ, ಅತ್ಯಂತ ಸಂತಾಪ ಸೂಚನಾರ್ಥವಾಗಿ ೨ ಶಾಲೆಗಳಿಗೂ ಇಂದು ಒಂದುದಿನದ ರಜೆಯನ್ನು ಕೊಡಲಾಯಿತು.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಅಯ್ಯಾ ಸ್ವದೇಶಾಭಿಮಾನಿಯ ಸಂಪಾದಕರೇ,

ಹಲವು ಸಾರಿ ಇತರ ಪತ್ರಿಕೆಗಳ ಮೂಲಕ ನಮ್ಮೂರ ಟಪ್ಪಾಲ ಕಟ್ಟೆಯ ವಿಷಯ ಅದನ್ನು ಮೊದಲಿದ್ದ ಪೇಟೆಗೆ ವಯ್ಯಬೇಕಾಗಿ ಸಾಧಿಸಿದರೂ ಏನೂ ಪ್ರಯೋಜನಕ್ಕೆ ಬಾರದೆ ಹೋಯಿತು. ಆದುದರಿಂದ ಈ ನಮ್ಮ ಹಳ್ಳಿಯ ಟಪ್ಪಾಲು ಕಟ್ಟೆಯ ವಿಷಯ ತಮ್ಮ ಸ್ವದೇಶಾಭಿಮಾನಿಯ ಮೂಲಕವಾದರೂ ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತರುವ ಗೋಸ್ಕರ ಈ ಚಿಕ್ಕ ಬಾತ್ಮಿಯನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಈ ಅಂಚೆಕಟ್ಟೆಯು ಸ್ಥಾಪಿತವಾದಂದಿನಿಂದಲೂ ನಮ್ಮ ಪೇಟೆಯಲ್ಲಿಯೇ ಇತ್ತು. ಇತ್ತಲಾಗಿ ಒಂದು ವರ್ಷದಿಂದ ಈ ಟಪ್ಪಾಲು ಆಫೀಸನ್ನು ಪೇಟೆಯಿಂದ ಒಂದುವರೆ ಮೈಲು ದೂರ ಇರುವ ಉಳಿಯಾರ ಗೋಳಿಗ್ರಾಮಕ್ಕೆ ವಯ್ದಿರುವರು. ಇದು ಇಲಾಖೆಯವರ ಅಪ್ಪಣೆ ಮೇರೆಗೋ ಅಥವಾ ಈಗಿನ ಪೋಸ್ಟು ಮಾಸ್ತರಂಗೆ ಪೇಟೆಗೆ ಬರಲಿಕ್ಕೆ ದೂರವಾಗುವ ಕಾರಣದಿಂದಲೋ ಟಪ್ಪಾಲು ಆಫೀಸನ್ನು ಪೇಟೆಯಿಂದ ದೂರ ಇಟ್ಟದೆಂದು ತಿಳಿಯುವುದಿಲ್ಲ. ಪೋಸ್ಟು ಮಾಸ್ತರರ ಸಮ್ಮಂಧಿಕರ ಸ್ವಂತವಾದ ಚಲೋ ಕಟ್ಟೋಣವು ನಮ್ಮ ಪೇಟೆಯ ನಡುಮಧ್ಯದಲ್ಲಿರುವುದು. ಹೀಗಿರುತ್ತಾ ಈ ಪೋಸ್ಟು ಮಾಸ್ತರರು ಟಪ್ಪಾಲು ಆಫೀಸನ್ನು ಉಳಿಯಾರಗೋಳಿಗೆ ವಯ್ಯಲು ಕಾರಣವೇನು? ಇದರಲ್ಲಿ ನಾವರೂ ಮರ್ಮ ಇರಬಹುದೇ?

ಮೊದಲು ಈ ಟಪ್ಪಾಲು ಆಫೀಸು ನಾಲ್ಕು ಊರುಗಳಿಗೂ ಸರಿಸಮಾನ ಮಧ್ಯದಲ್ಲಿತ್ತು. ಈಗ ಇದು ಕಟ್ಟಪಾಡಿ ಪೋಸ್ಟು ಆಫೀಸಿಗೆ ೧॥ ಮೈಲು ಹತ್ತಿರವಾಯಿತು (ಅಂದರೆ ಇನ್ನು ಇಲ್ಲಿಂದ ೨॥ ಮೈಲು ಮಾತ್ರ ಇರುವದು) ಎರ್ಮಾಳ ಪೋಸ್ಟು ಆಫೀಸಿಗೆ ೧॥ ಮೈಲು (ದೂರವಾಗಿಯೂ (ಆಫೀಸಿನಿಂದ ೬ ಮೈಲುದೂರ) ಶಿರ್ವ ಪೋ. ಆಫೀಸಿನಿಂದ ೬॥ ಮೈಲು ದೂರದಲ್ಲಿಯೂ ಇರುವುದು. ಹೀಗಿರುವಾಗ ಕಾಪು ಪೋಸ್ಟು ಎಂತ ಹೆಸರಿಗೆ ತಕ್ಕ ಇರುವ ಈ ಆಫೀಸು ಈಗ ಮತ್ತು ಇನ್ನು ಮುಂದಕ್ಕೆ ಕ್ಷೀಣಾವಸ್ಥೆಗೆ ಬರಲು ಕಾರಣವಾಯಿತು. ಇದು ಮೊದಲು ಸರಿಸಮಾನ ಮಧ್ಯದಲ್ಲಿದ್ದು ೨ ಮೈಲು ಸುತ್ತಲಿರುವ ಜನರು ಕಾಪು ಪೋಸ್ಟಾಫೀಸಿಗೆ ಬರುತ್ತಿದ್ದರು. ಈಗ ಕಾಪಿಯಿಂದ ೧ ಮೈಲು ದಕ್ಷಿಣಕ್ಕೆ ಇರುವ ಜನರು ಎರ್ಮಾಳ ಪೋಸ್ಟು ಆಫೀಸಿಗೆ ಹೋಗಿ ಚೀಟು ಕವರು ಮೊದಲಾದವುಗಳನ್ನು ಪಡಕೊಳ್ಳುವರು. ಹೀಗಾಗಿ ಕಾಪು ಪೋಸ್ಟಾಫೀಸಿನ ವಹಿವಾಟವು ದಿನೇ ದಿನೇ ಕಮ್ಮಿ ಆಗುತ್ತಾ ಬರುವುದು.

ಈಗ ಕೆಲವು ವರ್ಷಗಳಿಂದ ಕಾಪು ಪೋಸ್ಟಾಫಿಸನ್ನು ಸಬ್ ಪೋಸ್ಟ್ ಆಫೀಸಾಗಿ ಮಾರ್ಪಡಿಸಬೇಕೆಂದು ಇಲಾಖೆಯರ ಇರಾದೆಯಾಗಿತ್ತು. ಈ ಟಪ್ಪಾಲು ಕಟ್ಟೆಯು ಈಗ ಇರುವ ಸ್ಥಳದಲ್ಲಿಯೇ ಇದ್ದರೆ ಇನ್ನು ಅನೇಕ ಯುಗಗಳ ವರೇಗೆ ಸಬ್ ಆಫೀಸು ಆಗುವ ಸಂಭವ ಇರಲಿಕ್ಕಿಲ್ಲ.

ಕಾಪು ಪೇಟೆಯಲ್ಲಿರುವ ಆಫೀಸನ್ನು ದೂರದಲ್ಲಿರುವ ಈ ಹಳ್ಳಿಗೆ ವಯ್ದ ಕಾರಣ ಶಿರ್ವ ಅತ್ತ ಕಡೆಯಿಂದ ಬರುವ ಟಪ್ಪಾಲು ಹಲವು ಸಾರಿ ಮಂಗಳೂರಿಗೆ ಬರುವ ಟಪ್ಪಾಲಿಗೆ ಸಿಕ್ಕದೆ ರನ್ನರನು ತನ್ನ ಖರ್ಚಿನಿಂದ ಮೋಟರ ಟಿಕೇಟನ್ನು ಪಡೆದು ಆ ಶಿರ್ವ ಟಪ್ಪಾಲನ್ನು ಮುಲ್ಕಿ ಆಫೀಸಿಗೆ ತಲ್ಪಿಸಬೇಕಾಗುತ್ತದೆ. ಹೀಗೆ ತಿಂಗಳಲ್ಲಿ ಇದು ಅನೇಕ ಸಾರಿ ನಡೆಯುವುದು. ಅಲ್ಪ ಸಂಬಳದ ಈ ನೌಕರನ ನಷ್ಟ ನೋಡಿದರೆ ಕನಿಕರವಾಗುವುದು. ಹಳ್ಳಿ ಬಟವಾಡೆ ಪೇದೆಯೂ ಸಹಾ ಇದೇ ರೀತಿಯಲ್ಲಿ ಗುಣುಗುಟ್ಟುವನು. ಈತನು ತನ್ನ ಮನೆಯನ್ನು ಪೇಟೆಯಲ್ಲಿಯೇ ಮಾಡಿರುವನು. ಹೀಗೆ ಆತಗೆ ಆಫೀಸಿಗೆ ಹೋಗಲಿಕ್ಕೆ ತೊಂದರೆ ಆಗುವುದು.

ಇನ್ನು ವ್ಯಾಪಾರಸ್ಥರ ಅವಸ್ಥೆ ಹೇಳಿ ತೀರದು. ಮುಖ್ಯವಾಗಿ ಟಪ್ಪಾಲು ಕಟ್ಟೆಯು ವ್ಯಾಪಾರಸ್ಥರ ಅನುಕೂಲತೆಗಾಗಿ ಇಟ್ಟಿರುವರು. ಇಲ್ಲಿಗೆ ಬರುವ ಕಾಗದಗಳು ೧ ದಿವಸದ ವಿಳಂಬವಾಗಿ ಬರುವವು. ಟಪ್ಪಾಲಿಗೆ ಹೋಗುವ ಕಾಗದಗಳನ್ನು ಒಬ್ಬ ಕೂಲಿಯವನನ್ನು ಮಾಡಿ ಟಪ್ಪಾಲು ಆಫೀಸಿಗೆ ಕಳುಹಿಸಬೇಕಾಗುವುದು. ಹೀಗೆ ವ್ಯಾಪಾರಸ್ಥರಿಂಗೆ ಸ್ವಲ್ಪ ನಷ್ಟಕ್ಕೆ ಹಾಕಿದಂತಾಗುವುದು.

ನಮಗೊಂದು ಟಪ್ಪಾಲು ಕಟ್ಟೆ ಇದ್ದರೂ 'ದೇವರು ಕೊಟ್ಟರೆ ಪೂಜಾರಿ ಬಿಡ' ಎಂಬ ನಾಣ್ಣುಡಿಯಂತೆ ಅದನ್ನು ಸಹಾ ದೂರದಲ್ಲಿ ಇಟ್ಟಿರುವರು. ಈ ವಿಷಯದಲ್ಲಿ ಇಲಾಖಾ ಅಧಿಕಾರಿಗಳಿಗೆ ಅನೇಕ ಅರ್ಜಿಗಳನ್ನು ಮಾಡಿದ್ದಾಯಿತು. ಅದು ಅವರಿಗೆ ತಲ್ಪಿರಬಹುದು. ಆದರೆ ಇಷ್ಟು ಅರ್ಜಿಗಳನ್ನು ಮಾಡಿದ್ದಾಗ್ಯೂ ಕೂಡಾ ಅದು ತನ್ನಿಗೆ ಬಾರದೆ ಇರುವುದು ತುಂಬಾ ಆಶ್ಚರ್ಯದ ಸಂಗತಿ. ಟಪ್ಪಾಲು ಇಲಾಖೆಯಲ್ಲಿ ಒಂದು ಸಣ್ಣ ಚೀಟು ಬರೆದರೂ ಅದಕ್ಕೆ ಕೂಡಲೇ ಉತ್ತರವು ಸಿಕ್ಕುವುದು. ಆದರೆ ನಾವು ಮಾಡಿರುವ ಅರ್ಜಿಗಳು ಇಲಾಖಾಧಿಕಾರಿಗಳ ಗಮನಕ್ಕೆ ಬಾರದೆ ಇದ್ದದ್ದು ನಮ್ಮ ದುರಾದೃಷ್ಟವೇ ಸರಿ.

ಇನ್ನಾದರೂ ಇದಕ್ಕೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ತಕ್ಕವಾದ ವಿಚಾರಣೆಯನ್ನು ನಡಿಸಿ ಈಗ ೧॥ ಮೈಲು ದೂರ ಇರುವ ಆಫೀಸನ್ನು ಪೇಟೆಗೆ ವಯ್ದು ಇದರಿಂದ ಕಷ್ಟನಷ್ಟಕ್ಕೀಡಾದ ಪ್ರಜೆಗಳನ್ನು ಪಾಲಿಸಬೇಕಾಗಿಯೂ ಇದು ಎಷ್ಟಕ್ಕೂ ಸಾಧ್ಯವಾಗದೆ ಇದ್ದಲ್ಲಿ ಉಳಿಯಾರಗೋಳಿಯಲ್ಲಿ ಈಗ ಇರುವ ಆಫೀಸನ್ನು ಅಲ್ಲಿಯೇ ಕಾಯಂ ಮಾಡಿ ಕಾಪು ಊರಿಗೊಂದು Experimental ಪೋಸ್ಟು ಆಫೀಸನ್ನು ತೆರೆಯಬೇಕಾಗಿ ಅಪೇಕ್ಷಿಸುವ,

ಕಾಪು, ತಾ. 29—5—'28. } ಊರ ನಿವಾಸಿ.

WHEN MOTHER IS ILL

ತಾಯಿಯು ಅನಾರೋಗ್ಯದಲ್ಲಿರುವಾಗ

[illegible]

ಅಂತಹ ಸಂದರ್ಭದಲ್ಲಿ ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ [illegible]

[illegible]



[illegible] ರೂ. 2-4-0 [illegible]

ಉತ್ತಮ ಫೆಲೂನಾ ಮಾತ್ರೆಗಳು [illegible]

Product of Graham Remedies Ltd., Cape Town, S. A.

೫ನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

೨೬ನೇ ಮೇ ೧೯೨೮

ಸ್ವಾಗತಾಧ್ಯಕ್ಷ:—ಶ್ರೀ. ವಿಶ್ವನಾಥರಾವ ಜೋಗ, ಧಾರವಾಡ ಇವರ ಭಾಷಣ.

ಬಂಧು ಭಗಿನಿಯರೇ—

೧. ಧಾರವಾಡ ಜಿಲ್ಲೆಯ ಪರವಾಗಿ ತಮ್ಮೆಲ್ಲರಿಗೂ ಸ್ವಾಗತವನ್ನೀಯಲಿಕ್ಕೆ ನನಗೆ ಬಹಳೇ ಆನಂದವಾಗುತ್ತದೆ. ಮೊದಲನೆಯ ಕರ್ನಾಟಕ ಪರಿಷತ್ತು ಸನ್ ೧೯೨೦ನೇ ಇಸ್ವಿಯಲ್ಲಿ ಧಾರವಾಡದಲ್ಲಿ ನೆರೆದದ್ದು ತಮಗೆ ಗೊತ್ತಿದ್ದ ಸಂಗತಿಯು. ರಾಷ್ಟ್ರೀಯ ಸಭೆಯು ಭಾಷಾವಾರು ತತ್ವದಿಂದ ನಮ್ಮದೊಂದು ಸ್ವತಂತ್ರ ಪ್ರಾಂತವನ್ನು ನಿರ್ಮಾಣಮಾಡಿದಂದಿನಿಂದ ಈ ಪರಿಷತ್ತು ಮಂಗಳೂರ, ವಿಜಾಪುರ, ಗೋಕರ್ಣ ಮತ್ತು ಬಳ್ಳಾರಿಗಳಲ್ಲಿ ಕೂಡಿತ್ತು. ಈ ಐದನೆಯ ಪರಿಷತ್ತನ್ನು ನೆರೆಯಿಸಿ ತಮ್ಮೆಲ್ಲರಿಗೆ ಸ್ವಾಗತವನ್ನೀಯುವ ಸುದೈವವು ಧಾರವಾಡಸ್ಥರಾದ ನಮಗೆ ಒದಗಿರುವದು. ಈ ಪರಿಷತ್ತು ಕರ್ನಾಟಕದ ರಾಷ್ಟ್ರೀಯ ಆಂದೋಲನದ ಇತಿಹಾಸದಲ್ಲಿ ಒಳ್ಳೇ ಮಹತ್ವದ್ದಾಗುವದೆಂಬುದು ನಿರ್ವಿವಾದವಾದ ಮಾತು. ಎಲ್ಲರ ವಿಶ್ವಾಸಕ್ಕೆ ಪಾತ್ರರೂ ಮತ್ತು ದೇಶಹಿತಕ್ಕಾಗಿ ಹೋರಾಡುವವರೂ ಆದ ಶ್ರೀ. ಕೆ. ಎಫ್. ನರಿಮನ್, ಎಮ್. ಎಲ್. ಸಿ.ಯವರಂಥ ದೇಶದಾಸರು ನಮ್ಮ ಪರಿಷತ್ತಿನಲ್ಲಿ ಜರಗುವ ಚರ್ಚೆಯಲ್ಲಿ ನಮ್ಮ ಮಾರ್ಗದರ್ಶಕರಾಗಿ ದೊರೆತಿರುವದು ನಮ್ಮ ಭಾಗ್ಯವೇ ಸರಿ.

೨. ಕರ್ನಾಟಕದ ಬೌದ್ಧಿಕ ಮತ್ತು ರಾಜಕೀಯ ಕಾರ್ಯದಿಶೆಗಳಲ್ಲಿ ಯಾವಾಗಲೂ ಧಾರವಾಡವು ಮುಂದಾಳುತನವನ್ನು ಕೈಕೊಳ್ಳುತ್ತಿರುವದೆಂಬವನ್ನು ಹೇಳಲು ನನಗೆ ಅಭಿಮಾನವೆನಿಸುತ್ತದೆ. ಧಾರವಾಡದ ಇತಿಹಾಸವು ಬಹು ಪುರಾತನ ಕಾಲವನ್ನೂ ಮತ್ತು ವಿಧವಿಧವಾದ ಸಂಗತಿಗಳಿಂದ ಕೂಡಿದ್ದೂ ಇರುತ್ತದೆ. ೧ನೇ ಶತಕದಲ್ಲಿ ದೊರೆಯುವ ಕನ್ನಡ ಶಿಲಾಲೇಖದಲ್ಲಿ ಮೊಟ್ಟಮೊದಲು ಧಾರವಾಡದ ಉಲ್ಲೇಖವಿರುವದು. ಬಹು ಪುರಾತನ ಕಾಲದಿಂದ ನಮ್ಮ ಬೆಳವಲನಾಡು ಕನ್ನಡಭಾಷೆ ಮತ್ತು ಸಾಹಿತ್ಯಗಳ ತವರೂರೆಂಬ ಹೆಸರು ವಾಸಿಯಾಗಿದೆ. ಪಂಪನಂಥ ಕವಿಗಳು ಈ ಜಿಲ್ಲೆಯಲ್ಲಿ ಬೀರಿದ ಪಾವಿತ್ರ್ಯದ ಸುವಾಸನೆಯು ಎಷ್ಟೋ ಶತಮಾನಗಳು ಗತಿಸಿಹೋಗಿದ್ದರೂ ಇನ್ನೂ ಗಮಗಮಿಸುತ್ತಿರುವದು. ಉತ್ತರ ಕರ್ನಾಟಕ ಪರರಾಷ್ಟ್ರೀಯ ರಾಜಕೀಯ ಧೋರಣವನ್ನು ನಿಶ್ಚಯಿಸುವ ಮಾನವು ಧಾರವಾಡಕ್ಕೆ ಸಲ್ಲಿತು. ಭಾಷೆ ಮತ್ತು ಸಾಹಿತ್ಯ ಇವುಗಳ ಬಗ್ಗೆ [illegible]

[illegible]

೩. [illegible] ಜನರ ಕೈಯಲ್ಲಿ ಕೊಡಲಿಕ್ಕೆ ವಚನಬದ್ಧರಾದ ಬ್ರಿಟಿಷ ಸಂಸತ್ತು ತನ್ನ ವಚನವನ್ನು ಪಾಲಿಸಲು ಒಪ್ಪುವದಿಲ್ಲ. [illegible] ಹಿಂದುಸ್ಥಾನಕ್ಕೆ ಸ್ವರಾಜ್ಯದ ಎಷ್ಟು ಹಕ್ಕು ಮತ್ತು [illegible] ತಕ್ಕದ್ದೆಂಬವನ್ನು ವಿಚಾರಿಸಲು [illegible] ಹಿಂದುಸ್ಥಾನದ ಅಪಮಾನ ಮಾಡಿರುತ್ತದೆ. [illegible] ಭಕ್ತರೂ ಆದ ತರುಣರನ್ನು ನ್ಯಾಯವಿಚಾರಣೆಯಿಲ್ಲದೆ ಕಾರಾಗೃಹದಲ್ಲಿ ಸೇರಿಸಿ ಆಳರಸರು ಹುಣ್ಣಿನ ಮೇಲೆ ಬರೆಕೊಟ್ಟಂತೆ ಮಾಡಿರುವರು. ಹಿಂದೀ ರಾಷ್ಟ್ರದ ಪ್ರತಿನಿಧಿಗಳು ಒಮ್ಮನಸ್ಸಿನಿಂದ ಕೇಳಿದ ಬೇಡಿಕೆಗಳು ಸಂಪೂರ್ಣವಾಗಿ ದುರ್ಲಕ್ಷಿಸಲ್ಪಟ್ಟಿರುತ್ತವೆ. ಕಾಲವು ಕಠಿಣವಾಗಿದೆ. ಆದರೆ ವೀರವೃತ್ತಿಯ ಜನರು ಬೆದರದೆ ಸಂಕಟಗಳ ಬಿರುಗಾಳಿಗೆ ಎದೆಗೊಟ್ಟು ಮುಂದರಿದು ಕಾರ್ಯಮಾಡಲು ಆನಂದಪಡುತ್ತಾರೆ. ನಮಗೆ ಒದಗಿದ ಈ ಪ್ರಸಂಗದಲ್ಲಿ ನಮ್ಮೀ ಭರತಖಂಡವು ಎದೆಗುಂದೀತೆಂದು ನನಗೆ ತಿಲಮಾತ್ರವೂ ಭಯವಿಲ್ಲ.

೪. ಸ್ವಾತಂತ್ರ್ಯದ ವಾತಾವರಣವು ಎಲ್ಲೆಡೆಯಲ್ಲಿಯೂ ಪಸರಿಸದೆ. ತನ್ನ ಮಾತೃಭೂಮಿಯ ಸಲುವಾಗಿ ಕಡುತರ ಕಷ್ಟಗಳನ್ನು ಸಹಿಸುವವರಲ್ಲಿ ಬಂಗಾಲೀ ತರುಣರು ತೋರಿಸಿದ ತತ್ಪರತೆಯೂ, ಸರಕಾರದವರು ಬಾರ್ಡೋಲಿ ಮತ್ತು ಪೇಣ ತಾಲೂಕುಗಳ ರೈತರ ಮೇಲೆ ಹೇರಲಿಚ್ಛಿಸುವ ಕಂದಾಯವು ಒತ್ತಾಯವನ್ನೂ ಮತ್ತು ಅನ್ಯಾಯವನ್ನೂ ಇರುವದೆಂದು ಆಯಾ ತಾಲೂಕಿನ ಜನರು ಅದನ್ನು ಕೊಡಲು ಒಪ್ಪದೆ ವ್ಯಕ್ತಪಡಿಸುತ್ತಿರುವ ಧೈರ್ಯವೂ, ಹಿಂದೀ ರಾಷ್ಟ್ರೀಯ ಸಭೆಯಲ್ಲಿಯೂ, ಬಂಗಾಲ ಸಂಯುಕ್ತಪ್ರಾಂತ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತುಗಳಲ್ಲಿಯೂ 'ಸ್ವಾತಂತ್ರ್ಯ'ದ ನಿರ್ಣಯವನ್ನು ಸ್ವೀಕರಿಸುವಾಗ್ಗೆ ತೋರಿಸಿದ ಜನರ ಉತ್ಸಾಹವೂ, ಡಾ. ಹರ್ಡೀಕರರು ನಡಿಸಿದ ಸ್ವಯಂಸೇವಕರ ಸಂಸ್ಥೆಗಳಲ್ಲಿ ಅವರಿಗೆ ದೊರೆಯುತ್ತಿದ ಯಶವೂ ಇತ್ಯಾದಿ ಸಂಗತಿಗಳು ರಾಷ್ಟ್ರದ ಬೆಳಗಿನ ಚಿಹ್ನೆಗಳಾಗಿರುವವು. ಹಿಂದೀ ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆಯ ಪವಿತ್ರಕಾರ್ಯದಲ್ಲಿ ಸ್ವಾರ್ಥತ್ಯಾಗಪೂರ್ವಕ ಕೆಲಸಮಾಡಲಿಚ್ಛಿಸುವ ಜನರಿಗೆ ಈಗಿನ ಕಾಲವು ಆಶಾಜನಕವಾಗಿದೆ.

೫. ದೇಶದ ಮುಂದಿರುವ ರಾಜಕೀಯ ಪ್ರಶ್ನೆಗಳನ್ನು ಬಿಡಿಸಲು ಕರ್ನಾಟಕವು ಎಲ್ಲ ಬಗೆಯಿಂದ ಯತ್ನಿಸಲಿಕ್ಕೆ ಸಿದ್ಧವಿರುವದೆಂಬುದು ತಮಗೆ ಗೊತ್ತಿದ್ದ ಮಾತು. ದುರ್ದೈವದಿಂದ ಕರ್ನಾಟಕವು ಛಿನ್ನವಿಚ್ಛಿನ್ನವಾಗಿರುವದು. ಆದ್ದರಿಂದ ರಾಷ್ಟ್ರಕಾರ್ಯಕ್ಕಾಗಿ ತನ್ನ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಲು ಅದಕ್ಕೆ ಸಾಧ್ಯವಿಲ್ಲ.

ಒಂದೊಂದು ಕಾಲದಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯ ಸಂದರ್ಭದಲ್ಲಿ ವೈಭವಶಿಖರಕ್ಕೆ ಮುಟ್ಟಿ ಗೋದಾವರೀ ಮತ್ತು ಕಾವೇರಿ ತೀರಗಳ ಮೇಲೆ ತನ್ನ ದಂಡಿನ ಪಾಳ್ಯವನ್ನಿಟ್ಟು ಜಯಪತಾಕೆಯನ್ನು ಮೆರೆಸಿದ ಕರ್ನಾಟಕವು ಈಗ ಮೂರು ಬೇರೆ ಬೇರೆ ಆಡಳಿತಗಳಿಗೆ ಒಳಗಾಗಿದೆ. ಇವುಗಳಲ್ಲೊಂದು ಕನ್ನಡ ಅರಸನ ಅಧಿಪತ್ಯವಾಗಿರುವದೆಂಬುದು ಅದರಲ್ಲಿಯೇ ಆನಂದದ ಸಂಗತಿಯು. ಹಿಂದುಸ್ಥಾನದ ಎಲ್ಲ ಭಾಗಗಳಿಂದ ಶಿವಿಕ್ರೇಷ್ಠರನ್ನು ಮತ್ತು ಕಲಾಕೋವಿದರನ್ನೂ ಇಲ್ಲಿಗೆ ಬರಮಾಡಿದ ಸಂಸ್ಕೃತಿಗಳು, ಉಚ್ಚತರವಾದ ವಾತಾವರಣವು, ದುರ್ದೈವದಿಂದ ಈಗ ನಾಶಯವಾಗಿವೆ. ಕನ್ನಡಿಗರು ತಮ್ಮ ಪೂರ್ವೇತಿಹಾಸವನ್ನು ಮರೆತುಬಿಟ್ಟಿರುವರು. ಮತ್ತು ಪಂಜರದೊಳಗಿನ ಗಿಳಿಯು ತನ್ನ ಪೂರ್ವಸ್ವಾತಂತ್ರ್ಯವನ್ನು ಮರೆಯುವಂತೆ ಭೂತಕಾಲದಲ್ಲಿ ತಾನು ಪಡೆದ ಹೆಚ್ಚಳ ಮತ್ತು ಮುಂದೆ ಪಡೆಯಲು ಶಕ್ಯವಿರುವ ವೈಭವ ಇವುಗಳ ಅರಿವು ಕರ್ನಾಟಕಕ್ಕೆ ಇರುವದಿಲ್ಲ. ನಮ್ಮ ಇತಿಹಾಸದ ರೂಪರೇಷೆಯು ಸಹ ನಮಗೆ ಅತಿಶಯೋಕ್ತಿಯಿಂದ ತುಂಬಿದಂತ ಕಥೆಗಳಂತೆ ತೋರುತ್ತಿರುವದು ಎಂಥ ದುರ್ದೈವದ ಸಂಗತಿಯು! ಆದರೆ ನಮ್ಮ ಸಂಸ್ಕೃತಿಯ ಉತ್ಕರ್ಷವನ್ನು ಪಡೆಯುವ ಶಕ್ತಿಯಾಗಿ ನಮ್ಮಲ್ಲಿ ಇಂದಿಗೂ ಬೀಜರೂಪದಿಂದ ಇದ್ದೇ ಇರುವದೆಂದು ನನ್ನ ಶ್ರದ್ಧೆ. ಕರ್ನಾಟಕ ಏಕೀಕರಣದ ಆಂದೋಲನಕ್ಕೆ ಎಲ್ಲ ಜಾತಿ, ಪಂಗಡಗಳಿಂದ ದೊರೆತ ಸಹಾನುಭೂತಿಯೂ, ರಾವಸಾಹೇಬ ಹಳಕಟ್ಟಿ ಮೊದಲಾದ ಮುಖಂಡರ ಮುಖಾಂತರವಾಗಿ ಲಿಂಗಾಯತ ಮತ್ತು ಉಳಿದ ಪ್ರಾತಿನಿಧಿಕ ಸಮಾಜಗಳಿಂದಲೂ, 'ಕರ್ನಾಟಕ ಟಾಯಿಮ್ಸ್,' ಕರ್ಮವೀರ ಕಂಠೀರವ, ಲೋಕಮತ, ನವಕರ್ನಾಟಕ, ಕರ್ನಾಟಕ ವೈಭವ, ನವಯುಗ ಮೊದಲಾದ ಮೇಲ್ತರದ ವೃತ್ತ ಪತ್ರಿಕೆಗಳಿಂದ ಅದಕ್ಕೆ ದೊರೆತ ಪುಷ್ಟಿಯೂ, 'ವಿದ್ಯಾವರ್ಧಕಮಂದಿರ' 'ಮಾಲಮೂರುತಿ ಸಂಸ್ಥೆ' 'ಗೆಳೆಯರ ಗುಂಪು' ಆಲವಟ್ಟಿಯ 'ವೀರಶೈವಾಶ್ರಮ' ಮಂಗಳೂರಿನ 'ಶಾಂತಿ—ಶಿಬಿರ' ಬೆಂಗಳೂರಿನ 'ಕರ್ನಾಟಕ ಸಂಘ' ಎಂಬೀ ಸಂಸ್ಥೆಗಳ ಏಳ್ಗೆಯೂ ಕರ್ನಾಟಕವು [illegible] ಸಂಜೀವನವನ್ನು ಪಡೆಯಲಿಚ್ಛಿಸುತ್ತಿರುವದೆಂಬವನ್ನು ತೋರಿಸುವ ಕುರುಹುಗಳಾಗಿರುವವು.

೬. ಬಂಧುಭಗಿನಿಯರೇ ನಮ್ಮ ಮುಂದಿರುವ ಯಾವತ್ತು ಪ್ರಶ್ನೆಗಳ ನಿರ್ಣಯವನ್ನು ಮಾಡುವ ಆಕಾಂಕ್ಷೆಯು ನನಗಿಲ್ಲ. ಆದರೆ ಕನ್ನಡ ವಾಙ್ಮಯಕ್ಕೆ ಉತ್ತೇಜನ ಕೊಡುವದಕ್ಕೋಸ್ಕರ ಒಳ್ಳೇ ಜೋರಿನ ಪ್ರಯತ್ನಗಳಾಗಬೇಕೆಂದು ನಾನು ಮನಃಪೂರ್ವಕವಾಗಿ ಇಚ್ಛಿಸುತ್ತೇನೆ. ಅದರಂತೆಯೇ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿರುವ ಬುದ್ಧಿಶಾಲಿಗಳ ನಿಕಟ ವಿನಿಮಯವಾಗಬೇಕೆಂದೂ ನನ್ನ ಕೋರಿಕೆಯಿದೆ. ಪ್ರತಿಯೊಬ್ಬ ತರುಣ ಕನ್ನಡಿಗನಿಗೆ ಆತನ ಪೂರ್ವವೈಭವದ ಮತ್ತು ಪ್ರಯತ್ನಪಟ್ಟರೆ ಆಗುವ ಭಾವೀಭಾಗ್ಯೋದಯದ ಅರಿವಾಗುವಂತೆ ಹೆಚ್ಚಿನ ಪ್ರಯತ್ನಗಳು ಮಾಡಲ್ಪಡಬೇಕು. ಕೂಪಮಂಡೂಕ ವೃತ್ತಿಯ ಸಂಕುಚಿತ ದೋಷವು ನೀಗುವಂತೆ ಕರ್ನಾಟಕದ ಪೂರ್ವ ವೈಭವದ ಬಗ್ಗೆಯೂ ಮತ್ತು ಈಗಿನ ಪ್ರಗತಿಯ ಬಗ್ಗೆಯೂ, ಯೋಗ್ಯವಾದ ಅಭಿಮಾನವನ್ನು ಕರ್ನಾಟಕಸ್ಥರು ತಾಳುವಂತೆ ನಾವು ಯತ್ನಿಸಬೇಕು. ನೆರೆಹೊರೆಯ ಪ್ರಾಂತಗಳ ಭಾಷೆ ಮತ್ತು ಸಂಸ್ಕೃತಿಗಳಿಗೆ ಎಡರಾಗದೆ ಕರ್ನಾಟಕ ವಾಙ್ಮಯ ಹಾಗೂ ಸಂಸ್ಕೃತಿ ಇವುಗಳ ಪ್ರಸಾರಕ್ಕಾಗಿ ನಾವು ಒಳ್ಳೇ ಮುಂಜೋರಿನ ಆಂದೋಲನವನ್ನು ಕೈಕೊಳ್ಳತಕ್ಕದ್ದು. ಅನ್ಯ ಸಂಸ್ಕೃತಿಗಳ ದಾಳಿಗಳಿಂದ ಬೆಳಗಾಂವಿ ಮತ್ತು ಬಳ್ಳಾರಿಯಂಥ ನಮ್ಮ ಗಡಿನಾಡನ್ನು ನಾವು ಎಚ್ಚರಿಕೆಯಿಂದ ಕಾಯ್ದುಕೊಳ್ಳಬೇಕು. ಮತ್ತು ಅದರಂತೆಯೇ ಕರ್ನಾಟಕದಲ್ಲಿ ವಾಸವಾಗಿದ್ದ ಬೇರೆ ಬೇರೆ ಭಾಷೆಯನ್ನಾಡುವ ಮತ್ತು ಭಿನ್ನ ಭಿನ್ನ ಪಂಥಗಳ ಜನರಲ್ಲಿ ಐಕ್ಯಭಾವವುಂಟಾಗುವಂತೆ ನಾವು ಯತ್ನಿಸಬೇಕು. ನಮ್ಮ ಮಾರ್ಗದಲ್ಲಿ ಎಡರುಗಳು ಬಂದೇ ಬರುವವು. ಆದರೆ ಅವುಗಳಿಗೆ ಅಂಜಿದರೆ ಸಾಗುವಂತಿಲ್ಲ. ಸಂಕುಚಿತಭಾವವನ್ನು ತೊರೆದು ಉದಾರದೃಷ್ಟಿಯನ್ನು ತಾಳಿ ಈ ವಿಘ್ನಗಳನ್ನು ದೂರಮಾಡಬೇಕು. ಸಂಸ್ಕೃತಿಯ ಮತ್ತು ರಾಜಕೀಯ ಏಕೀಕರಣದ ಪ್ರಶ್ನವು ಕಠಿಣವಾದದ್ದಿರುತ್ತದೆ. ಆದರೆ ನಮ್ಮ ಪ್ರಗತಿಯನ್ನು ಮಾಡಿಕೊಳ್ಳಬೇಕಾದರೆ ನಾವು ಈ ಪ್ರಶ್ನವನ್ನು ಬಿಡಿಸಲೇ ಬೇಕು.

೭. ಉಳಿದ ಎಲ್ಲ ಪ್ರಯತ್ನಗಳಾಗಿರಲು ಮುಖ್ಯವಾಗಿ ಕೆಳಗಿನ ಪ್ರಶ್ನೆಗಳ ವಿಷಯವಾಗಿ ವಿಚಾರಮಾಡುವದರಲ್ಲಿ ಹಿಂದೀ ರಾಷ್ಟ್ರಭಕ್ತರ ಮನಸ್ಸು ವ್ಯಗ್ರವಾಗಿರುತ್ತದೆಂದು ನನ್ನ ತಿಳುವಳಿಕೆಯಿದೆ. ಇವುಗಳಲ್ಲಿ ಮೊದಲನೆಯ ಪ್ರಶ್ನೆಯೆಂದರೆ, ಹಿಂದೀ ರಾಷ್ಟ್ರೀಯ ಆಂದೋಲನದ ಅಂತಿಮಧ್ಯೇಯವನ್ನು ನಿಶ್ಚಯಿಸಿರುವದು. ಈಗ ಇದು ಕಲ್ಪನಾಮಯ ವಾದವಿವಾದ ವಿಷಯವೆಂದು ಎಣಿಸಬಹುದು. ಆದರೆ ನಮ್ಮ ಅಂತಿಮ ಧ್ಯೇಯವನ್ನು ಸ್ಪಷ್ಟವಾಗಿ ನಿಶ್ಚಯಿಸುವದರಿಂದ ಹಿಂದವಾಸಿಗಳ ಮನೋಭೂಮಿಕೆಯ ಮೇಲೆ ಪರಿಣಾಮವಾಗುವದಲ್ಲದೆ ಅದರ ವ್ಯಾವಹಾರಿಕ ಉಪಯೋಗವಾದರೂ ಇರುವದೆಂದು ನನಗೆ ಅನಿಸುತ್ತದೆ. ಯಾವದೇ ಪರಕೀಯ ರಾಷ್ಟ್ರದಿಂದ ಅನಿಯಂತ್ರಿತವಾದ ಪೂರ್ಣ ಸ್ವಾತಂತ್ರ್ಯವೇ ನಮ್ಮ ಎಲ್ಲ ರಾಜಕೀಯ ಚಟುವಟಿಕೆಗಳ ಹೆಗ್ಗುರಿಯೆಂದು ನನ್ನ ತಿಳುವಳಿಕೆ. ಹಿಂದುಸ್ಥಾನದ ಸ್ವಾತಂತ್ರ್ಯದ ವಿಷಯವಾಗಿ ನಿರಂತರವಾಗಿ ಪ್ರಯತ್ನಮಾಡಿ ಪ್ರಸಂಗ ಒದಗಲು ಆತ್ಮಾರ್ಪಣವನ್ನು ಮಾಡಿದಂಥ ಅನೇಕ ದೇಶಭಕ್ತರ ಅಂತಃಕರಣದಲ್ಲಿ ಬಚ್ಚಿದ ಧ್ಯೇಯವಾದರೂ ಇದೇ.

(ಸಶೇಷ)

೫ನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

ಅಧ್ಯಕ್ಷರ ಭಾಷಣ.

ಸ್ವಾಗತ ಕಮಿಟಿಯ ಅಧ್ಯಕ್ಷರೆ, ಭಗಿನಿಯರೇ ಬಂಧುಗಳೇ ಮತ್ತು ಸ್ನೇಹಿತರೆ,

ಪ್ರಾಸಂಗಿಕ

ನೀವು ನನ್ನನ್ನು ನಿಮ್ಮ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿರುವದಕ್ಕಾಗಿ ನಿಮ್ಮನ್ನು ಅಭಿವಂದಿಸುತ್ತೇನೆ. ನನ್ನಲ್ಲಿರುವ ದೋಷಅಭಾವಗಳೆಲ್ಲವನ್ನೂ ನಾನು ಬಲ್ಲೆನಾದರೂ, ನಿಮ್ಮೆಲ್ಲರ ಸಹಾಯ ಸಹಕಾರಗಳಿಂದ ನಾನು ಮಾಡಬೇಕಾದ ಕರ್ತವ್ಯಗಳನ್ನು ಮಾಡಲು ಸೌಲಭ್ಯವು ಉಂಟಾಗುವುದಾಗಿ ನಾನು ನಿರೀಕ್ಷಿಸಿ ಈ ಅಧ್ಯಕ್ಷಪದವಿಯ ಗೌರವವನ್ನು ಸ್ವೀಕರಿಸಿದ್ದೇನೆ.

ನಾನು ಈ ಪದವಿಯನ್ನು ಸ್ವೀಕರಿಸಿದುದರ ಒಂದು ಕಾರಣವೆಂದರೆ ಈ ರಾಜಕೀಯ ಸಂಸ್ಥೆಗಳಲ್ಲಿ ಜಾತೀಯ ಭಾವಗಳೇ ಹೆಚ್ಚಾಗಿವೆ ಎಂಬ ಆರೋಪವನ್ನು ಸುಳ್ಳೆಂದು ತೋರಿಸಲಿಕ್ಕಾಗಿದೆ. ನಿಮ್ಮಲ್ಲಿ ಒಬ್ಬನಾದರೂ ಪಾರ್ಸಿ ಜಾತಿಯವನಿಲ್ಲದೆ ನನ್ನನ್ನು ಏಕಮತದಿಂದ ನೀವು ಚುನಾಯಿಸಿದಿರೆಂಬುದೇ ಈ ಅಪವಾದದ ಪ್ರತ್ಯಕ್ಷ ಖಂಡನವಾಗಿದೆ. ಮುಂಬಯಿಯ ಸರ್ವಜಾತಿಯವರನ್ನೊಳಗೊಂಡ ಹಲವು ಚುನಾವಣೆಗಳಲ್ಲಿಯೂ, ಎಲ್ಲರ ಓಟುಗಳಿಂದಲೆ ನಾನು ಪ್ರಥಮಸ್ಥಾನದಲ್ಲಿ ಚುನಾಯಿಸಲ್ಪಟ್ಟಿರುವೆನು. ಆದುದರಿಂದ ಜಾತೀಯತೆಯನ್ನು ಹಿಂದೀಯರು ಮೀರಿ ನಿಸ್ವಾರ್ಥವಾಗಲಾರರೆಂಬ ದುರಾರೋಪವನ್ನು ನಾವು ಇನ್ನು ಕೇಳಕೂಡದು.

ಹಿಂದೀ ರಾಷ್ಟ್ರೀಯ ಸಭೆಯೆಂದರೆ ಲೆಜಿಸ್ಲೇಟಿವ್ ಎಸೆಂಬ್ಲಿಯಂತೆಯೂ, ಅದರ ಅಧ್ಯಕ್ಷರು ವ್ಹಾಯಿಸರಾಯರಂತೆಯೂ, ಪ್ರಾಂತಿಕ ಸಭೆಗಳು ಲೆಜಿಸ್ಲೇಟಿವ್ ಕೌನ್ಸಿಲುಗಳಂತೆಯೂ, ಅವುಗಳ ಅಧ್ಯಕ್ಷರು ಗವರ್ನರರಂತೆಯೂ, ಇರುವರು. ಈ ಸಮಾನತೆಗಳೊಳಗಿನ ಮಹತ್ವದ ವಿಷಯವೆಂದರೆ, ಇಂತಹ ಸರಕಾರೀ ಗೌರವಗಳಲ್ಲಿ ದುಡ್ಡಿಗಾಗಿಯೂ ಒತ್ತಾಯದಿಂದಲೂ ಕೆಲಸಗಳು ನಡಿಯುವಾಗ, ರಾಷ್ಟ್ರೀಯ ಸಭೆಯೊಳಗಿನ ಗೌರವಗಳು ಸ್ವೇಚ್ಛೆಯಿಂದ ನಿಸ್ವಾರ್ಥವಾಗಿ ಸ್ನೇಹೋತ್ಸಾಹದಿಂದ ಕೊಡಲ್ಪಡುತ್ತಿವೆ. ಇದರಿಂದ ಜನತೆಯು ಸಾರ್ವಜನಿಕ ಹಿತಸಾಧಕರಾದ ಧುರೀಣರ ಕಡೆಗೆ ಮತ್ತು ಸರಕಾರದ ದಂಡಧಾರಿಗಳಾದ ಅಧಿಕಾರಿಗಳ ಕಡೆಗೆ ತೋರುವ ಮಾನಸಿಕತೆಯ ತಾರತಮ್ಯವು ಕಾಣುವುದು.

ಕರ್ನಾಟಕದ ಸಮಸ್ಯೆಗಳು.

ನಾನು ಕರ್ನಾಟಕಕ್ಕೆ ತೀರಾ ಅಪರಿಚಿತನಿರುವುದರಿಂದ ಅದರ ಸಮಸ್ಯೆಗಳನ್ನು ತರ್ಕಿಸಲು ನಾನು ಸಮರ್ಥನಲ್ಲ. ಆದುದರಿಂದ ಈ ಸಮಸ್ಯೆಗಳನ್ನು ಈ ಭಾಷಣದಲ್ಲಿ ಸ್ಪರ್ಶಿಸಿ ಬಿಡುವಾಗ ನೀವು ಇದನ್ನು ಮನಸ್ಸಿನಲ್ಲಿಟ್ಟು, ನಿಮ್ಮಲ್ಲಿ ನನ್ನ ಅಭಿಪ್ರಾಯಗಳ ವಿಷಯ ತಪ್ಪು ಭಾವನೆಯಾಗದಂತೆ ನೋಡಿಕೊಳ್ಳಬೇಕು.

ನನಗೆ ಗೊತ್ತಿದ್ದ ಮಟ್ಟಿಗೆ ಏಕೀಕರಣವೇ ಇಲ್ಲಿಯ ಪ್ರಧಾನ ಸಮಸ್ಯೆಯಾಗಿರುತ್ತದೆ. ಪ್ರಾಯಶಃ ಇದರಂತೆ ವಿಭಾಜಿಸಲ್ಪಟ್ಟು ಮೂರು ನಾಲ್ಕು ಪ್ರತ್ಯೇಕ ಭಾಗಗಳಲ್ಲಿ ಹಂಚಿಹೋದ ಪ್ರಾಂತವು ಇನ್ನೊಂದಿರದು. ಈ ಪರಿಸ್ಥಿತಿಯು ಪ್ರಾಂತದ ನೈಸರ್ಗಿಕ ಅಭಿವೃದ್ಧಿಗೂ, ಬೆಳವಣಿಗೆಗೂ ಅಭ್ಯಂತರವಾಗಿರುತ್ತದೆ. ಈ ವಿಷಯದಲ್ಲಿ ಸ್ಥಳೀಕ ಮುಂದಾಳುಗಳೆಲ್ಲರೂ ಒಟ್ಟಾಗಿ, ಯಾವ ಜಾತಿಗಾಗಲಿ, ಪಂಗಡಕ್ಕಾಗಿಯಾಗಲಿ ಬಾಧಕ ಬಾರದಂತೆ, ಒಂದು ಕಾರ್ಯಕ್ರಮವನ್ನು ರಚಿಸುವರಾಗಿ ಆಶಿಸುತ್ತೇನೆ. ಅಲ್ಲದೆ ಇದೇ ಉದ್ದೇಶದಿಂದ ಪ್ರತ್ಯೇಕ ಒಂದು ಪರಿಷತ್ತು ಕೂಡುವದಾಗಿ ತಿಳಿಯುತ್ತೇನೆ. ಮತ್ತು ಅದು ತನ್ನ ಉದ್ದೇಶ ಸಾಧನೆಯಲ್ಲಿ ಕೃತಕೃತ್ಯರಾಗಲೆಂದು ಆಶಿಸುತ್ತೇನೆ.

ಈ ಏಕೀಕರಣವು ಬೇರೆ ಬೇರೆ ಬ್ರಿಟಿಷ ಪ್ರಾಂತಗಳೊಳಗಿನ ತುಂಡುಗಳನ್ನು ಒಂದೇ ಮಾಡುವಂತೆ ಮಾತ್ರ ಇರುವಷ್ಟು ಸಾಮಾನ್ಯವಾಗಿರದೆ, ಮೈಸೂರು, ಹೈದರಾಬಾದು ಸಂಸ್ಥಾನಗಳಿಂದಲೂ ಭಾಗಗಳನ್ನು ಒಟ್ಟು ಮಾಡಬೇಕಾಗಿದ್ದು, ತೀರ್ಮಾನಿಸಲು ಬಹಳ ಕಷ್ಟವಾಗಿದೆ. ಆದರೆ ಇವುಗಳಿಗೆಲ್ಲಾ ಒಂದೇ ಕಾಂಗ್ರೆಸ್ ಪ್ರಾಂತಿಕ ಕಮಿಟಿ ಮಾಡಿದುದರಿಂದ ರಾಜಕೀಯ ಐಕ್ಯವು ಚೆನ್ನಾಗಿ ಸಾಧಿಸಲ್ಪಡುವಂತೆ ತೋರುತ್ತಿದೆ. ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಯೂ ಈ ಏಕೀಕರಣವನ್ನು ಸಾಧಿಸಬಹುದು. ಆದರೆ ಈ ಮೊದಲೇ ಸೂಚಿಸಿದಂತೆ ಈ ಸಮಸ್ಯೆಯನ್ನು ಸ್ಥಳೀಕ ಧುರೀಣರಿಗೆ ಬಿಟ್ಟುಕೊಟ್ಟು, ದೇಶದೊಳಗಿನ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿಚಾರಿಸಲು ಪ್ರಯತ್ನಿಸುವೆನು.

ಬ್ರಿಟಿಷ್ ಸಾಮ್ರಾಜ್ಯದ ಜನನ.

ಈಗಿನ ರಾಜಕೀಯ ಪರಿಸ್ಥಿತಿಯನ್ನು ತಿಳಿಯುವ ಮೊದಲು ಬ್ರಿಟಿಷ ಸಾಮ್ರಾಜ್ಯವು ಉಂಟಾದುದು ಹೇಗೆಂದು ತಿಳಿದುಕೊಳ್ಳುವುದು ಅವಶ್ಯವಿದೆ. ಹಿಂದೂಸ್ಥಾನದ ಕರಾವಳಿಯಲ್ಲಿ ಕಾಲಿಟ್ಟ ಪರದೇಶಿಯರ ಪ್ರಥಮ ತಂಡವು ಹಿಂದೀ ಜನರನ್ನುದ್ಧರಿಸುವೆವೆಂದ ಆತ್ಮೋದಾರ ಭಾವನೆಯಿಂದಲೂ ಅನಂತ ಆತ್ಮಯಜ್ಞದ ಪ್ರೇರಣೆಯಿಂದಲೂ ಬಂದ ಮಿಶನರಿಗಳಾಗಿರಲಿಲ್ಲ; ತಮ್ಮ ಉದ್ದೇಶವನ್ನು ಗುಟ್ಟಿನಲ್ಲಿಡದೆ, ಬರೇ ದುಡ್ಡನ್ನು ಗಳಿಸಲಿಕ್ಕಾಗಿ ಬಂದ ಈಸ್ಟ ಇಂಡಿಯ ಕಂಪೆನಿಯೆಂಬ ವರ್ತಕ ಮಂಡಳಿಯೇ ಈ ದೇಶವನ್ನು ಮೊದಲು ಸೇರಿತು. ಲೋರ್ಡ ಮೆಕೊಲೆಯು ಕೂಡ ಹೇಳುತ್ತಾನೆ:—

> ದೇಶೀಯರ ಕೈಯಿಂದ ಒಂದೆರಡು ಲಕ್ಷ ಪವನುಗಳನ್ನು ಸುಲಿದು ತನ್ನ ದೇಹಸ್ವಾಸ್ಥ್ಯವು ಕೆಡುವ ಮೊದಲೇ ಊರಿಗೆ ಹಿಂತಿರುಗಿ, ಓರ್ವ ಲೋರ್ಡ ಮನೆತನದ ಹುಡುಗಿಯನ್ನು ಮದುವೆಮಾಡಿಕೊಳ್ಳುವುದೂ, ಕಾರ್ನವಾಲಿನಲ್ಲಿ ಒಂದು ದೊಡ್ಡ ಆಸ್ತಿಯನ್ನು ಕ್ರಯಕ್ಕೆ ಕೊಳ್ಳುವುದೂ, ಸ್ನೇಹಿತರಿಗೆ ಔತಣ ನೃತ್ಯಗಳನ್ನು ಕೊಡುವುದೂ ಕಂಪೆನಿಯ ನೌಕರನ ಪ್ರಧಾನ ಕರ್ತವ್ಯವಾಗಿರುತ್ತದೆ.

ಗವರ್ನರನಾದ ವಾರನ್ ಹೆಸ್ಟಿಂಗ್ಸನಿಗೆ ಕಂಪೆನಿ ಡ್ಯಾರೆಕ್ಟರರು ಬರೆದಿದ್ದರು "ಉದಾರಭಾವದಿಂದ ಆಳು, ಮತ್ತು ಹಣವನ್ನು ಹೆಚ್ಚು ಕಳುಹಿಸು. ಕಠಿಣವಾದ ನ್ಯಾಯವನ್ನೇ ಆಚರಿಸು. ಆದರೆ ಹಣವನ್ನು ಹೆಚ್ಚು ಕಳುಹಿಸು." ಹೀಗೆ ಯಾವ ರೀತಿಯಲ್ಲಾದರೂ ದುಡ್ಡನ್ನು ಕೂಡಿಸಿ ಕಳುಹಿಸಬೇಕೆಂಬುದೇ ಅವರ ಪ್ರಧಾನ ತತ್ವವಾಗಿದ್ದಿತು.

ಈ ರೀತಿಯ ಸುಲಿಗೆಯು ೧೮೫೭ರ ವರೆಗೆ ಮುಂದರಿಯಿತು. ಆ ಮೇಲೆ ಈಸ್ಟ ಇಂಡಿಯಾ ಕಂಪೆನಿಯ ಅಧಿಕಾರವು ತೆಗೆಯಲ್ಪಟ್ಟು ಪಾರ್ಲಿಮೆಂಟು ಆ ಆಡಳಿತೆಯನ್ನು ತೆಗೆದುಕೊಂಡಿತು. ಈ ಬದಲಾವಣೆಯು ಹಿಂದೂಸ್ಥಾನದ ಮೇಲಿನ ಕನಿಕರದಿಂದ ಮಾಡಿದುದಲ್ಲ. ಕಂಪೆನಿಯೊಂದೇ ಲಾಭ ತಿನ್ನುತ್ತಿದೆ ಎಂಬ ಮತ್ಸರದಿಂದ ಈ ಬದಲಾವಣೆಯು ಮಾಡಲ್ಪಟ್ಟಿತು. ಇದರಿಂದ ಸುಲಿಗೆಯು ಕಡಿಮೆಯಾಗಲಿಲ್ಲ. ಕಂಪೆನಿಯು ತನ್ನ ಉದ್ದೇಶವನ್ನು ಮುಚ್ಚುಮರೆ ಮಾಡದೆ ಹಣವನ್ನು ಒಯ್ಯುತ್ತಿತ್ತು; ಆದರೆ ಈಗ ಬ್ರಿಟಿಷ ಜನಾಂಗದ ಮಾನಕ್ಕೆ ಹಾನಿಯಾಗದ ರೀತಿಯಲ್ಲಿ ಹೆಚ್ಚು ಗೌರವಕರ ರೂಪದಲ್ಲಿ ಈ ಸುಲಿಗೆಯು ನಡೆಯುತ್ತಿದೆ. ಈ ವಿಷಯದಲ್ಲಿ ಇಂಡಿಯಾ ಸರಕಾರದಲ್ಲಿ ಜವಾಬ್ದಾರ ಹುದ್ದೆಯಲ್ಲಿದ್ದ ಜ್ಹೊನ್ ಸ್ಟ್ರೇಟಿಯವರು ಹೇಳುತ್ತಾರೆ:—

> "ಇಂಡಿಯದ ಹಿತವನ್ನು ಮೊದಲಾಗಿ ಎಣಿಸುವುದು ಇಂಡಿಯಾ ಸರಕಾರದ ಕರ್ತವ್ಯ. ಮೆಂಚೆಸ್ಟರಿನ ಹಿತಕ್ಕೆ ಬಾಧೆಬಂದರೆ ಅದರ ಗೋಜಿನಮಗಿಲ್ಲೆಂದೂ ನಮಗೆ ಕೆಲವರು ಹೇಳುವರು. ನಾನು ಹೇಳುವುದಾದರೆ ನಾನು ಈ ತತ್ವವನ್ನು ಸಂಪೂರ್ಣವಾಗಿ ನಿಷೇಧಿಸುತ್ತೇನೆ. ಇಂಡಿಯಾ ಸರಕಾರದ ಮೆಂಬರನಾದೆನೆಂಬ ಮತ್ತು ಹಿಂದೂಸ್ಥಾನದಲ್ಲಿ ಹೆಚ್ಚಿನ ಸಮಯ ಜೀವಿಸಿದ್ದೆನೆಂಬ ಕಾರಣದಿಂದ ನನ್ನ ಬ್ರಿಟಿಷತನವು ಹೋಗಿಲ್ಲ. ಮೆಂಚೆಸ್ಟರಿನ ಹಿತವು ಹತ್ತಿಯ ಕೈಗಾರಿಕೆಯಲ್ಲಿದ್ದವರ ಹಿತವಷ್ಟೇ ಅಲ್ಲದೆ, ಮಿಲಿಯಾವಧಿ ಇಂಗ್ಲೀಷರ ಹಿತವೂ ಅದರಲ್ಲಿದೆ. ಅದನ್ನು ಹೇಳಲಿಕ್ಕೆ ನನಗೆ ನಾಚಿಕೆಯಿಲ್ಲ. ನನ್ನ ದೇಶದ ಕಡೆಗೆ ನಾನು ಮಾಡಬೇಕಾದುದಕ್ಕಿಂತ ದೊಡ್ಡ ಕರ್ತವ್ಯವು ಇನ್ನೊಂದಿಲ್ಲ.

ಇದು ಸ್ಪಷ್ಟ ವ್ಯಕ್ತತೆಯಿಂದ ಬರ್ಕನ್ ಹೆಡ್, ವಿಂಟರ್‌ಟನ್ ಎಂಡ್ ಕೋರವರ ಮಿಥ್ಯಾಚಾರವು ಬಯಲಾಗುವುದು. ಅದೇ ನೌಕರನು ಹೇಳುವ ಪ್ರಕಾರ ಬ್ರಿಟಿಷ ಸಂಬಂಧದಿಂದ ಹಿಂದೂಸ್ಥಾನಕ್ಕೆ ವರ್ಷಾವಧಿ ೩೦ ಮಿಲಿಯ ಪವನು ನಷ್ಟವಿದೆ. ಕಳೆದ ನೂರು ವರ್ಷಗಳಲ್ಲಿ ಹಿಂದೂಸ್ಥಾನಕ್ಕೆ ಎಷ್ಟು ನಷ್ಟವಾಗಿರಬೇಕೆಂದು ಇದರಿಂದ ತಿಳಿಯುವುದು. ಆದುದರಿಂದ ಬ್ರಿಟಿಷರ ಈ ದಬ್ಬಾಳಿಕೆಯ ಅಡಿಯಲ್ಲಿ ವನ ಉಪವಾಸದ, ಅಸಹಾಯತೆಯ ಮತ್ತು ಬಡತನದ ಕಾರಣವು ತಾನಾಗಿ ಗೊತ್ತಾಗುವುದು.

ಬ್ರಿಟಿಷ ಆಳುವಿಕೆಯ ಆಶೀರ್ವಾದಗಳು.

ನಂಬ್ರ ೧ ರೈತರು.

ಬ್ರಿಟಿಷ ಆಡಳಿತದಿಂದ ಹಿಂದೂಸ್ಥಾನಕ್ಕೆ ಲಾಭವಾದ ಮಹತ್ವದ ಪ್ರಯೋಜನಗಳ ವಿಷಯ ನಾವು ಆಗಿಂದಾಗ್ಗೆ ಕೇಳುತ್ತೇವೆ. ಆದರೆ ಕೆಲವು ಸಂಖ್ಯಾ ಪರಿಶೀಲನೆಗಳು ಇದರ ಸತ್ಯಸ್ಥಿತಿಯನ್ನು ತೋರಿಸುವವು. ಹಿಂದೂಸ್ಥಾನದ ಭೂಕಂದಾಯವು ಸರಕಾರದ ಪೂರ್ಣ ಆಯದ ಶೇಕಡಾ ೧೮ರಷ್ಟಿದೆ. ಇಂಗ್ಲೆಂಡಿನಲ್ಲಿ ಇದು ಬರೇ ಶೇಕಡಾ ೧ರಷ್ಟಿದೆ. ರೈತರ ಗೋಳಿನ ಕಾರಣವು ಇದರಿಂದಲಾದರೂ ತಿಳಿದುಬರುವುದು. ಹಿಂದೂಸ್ಥಾನದಲ್ಲಿ ಬೇಸಾಯಕ್ಕೆ ಯೋಗ್ಯವಾಗಿದ್ದರೂ ಬೆಳೆಸಲ್ಪಡದ ೧೧॥ ಕೋಟಿ ಎಕ್ರೆ ಜಮೀನು ಇರುತ್ತದೆ.

ಮದ್ರಾಸಿನ ಗ್ರಾಮವಾಸಿಗಳ ಸಾಲವು ೪೫ಕೋಟಿಯಾಗಿದ್ದಿತು. ಮುಂಬಾಯಿಯಲ್ಲಿ ಕಾಲುವಾಸಿ ರೈತರು ತಮ್ಮ ಇದ್ದ ಸೊತ್ತನ್ನು ಕಳೆದುಕೊಂಡಿರುವರು; ಪಂಜಾಬಿನ ರೈತರ ಸಾಲವು ೯೨ ಕೋಟಿಯಷ್ಟಾಗಿರುತ್ತದೆ. ಸರಕಾರವು ವ್ಯವಸಾಯಕ್ಕಾಗಿ ಎಕ್ರೆಗೆ ಅರ್ಧಾಣೆಯಷ್ಟು ಖರ್ಚು ಮಾಡುತ್ತಿದೆ! ಇಂಗ್ಲೆಂಡಿನಲ್ಲಿ ಸರಕಾರವು ೧೦೦೦ ಎಕ್ರೆಗೆ ೧೩೫೦ ರೂಪಾಯಿಯಂತೆ ಖರ್ಚುಮಾಡುವಾಗ ಇಂಗ್ಲೆಂಡಿನಲ್ಲಿ ಅಷ್ಟೇ ವಿಸ್ತಾರಕ್ಕೆ ೫೬ರಿಂದ ೭೫ರ ವರೆಗೆ ಖರ್ಚುಮಾಡುತ್ತಿದೆ.

ನಂಬ್ರ ೨ ವಿದ್ಯಾಭ್ಯಾಸ.

ಹೀಗೆಯೇ ಬ್ರಿಟಿಷರ ಎರಡನೇ ಉಪಕಾರವನ್ನು ವಿಚಾರಿಸಬೇಕು. ಅವರು ಹಿಂದೂಸ್ಥಾನದ ಜನರಿಗೆ ಕೊಟ್ಟಿರುವ ವಿದ್ಯಾಭ್ಯಾಸದ ಪರಿಮಾಣವೇ ಅವರ ಆಳುವಿಕೆಯ ಖಂಡನೆಯಾಗಿರುತ್ತದೆ. ೧೮೭೦ರಲ್ಲಿಯೇ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವು ಪ್ರತಿ ಮಗುವಿನ ಜನ್ಮಸಿದ್ಧಹಕ್ಕಾಗಿ ಪಾರ್ಲಿಮೆಂಟ್ ಎಕ್ಟಿನ ಮೂಲಕವೆ ಸ್ಥಾಪಿಸಲ್ಪಟ್ಟಿದ್ದಿತು. ಆದರೆ ಹಿಂದೂಸ್ಥಾನದಲ್ಲಿ ಅವಿದ್ಯಾವಂತರ ಸಂಖ್ಯೆಯು ಶೇಕಡಾ ೯೧॥ರಷ್ಟು ಇದ್ದು ನಾಚಿಕೆಗೇಡಿತನಕ್ಕೆ ಕಾರಣವಾಗಿದೆ. ಸರಕಾರವು ಪ್ರಯತ್ನಮಾಡಲಿಲ್ಲ. ಮಾತ್ರವಲ್ಲದೆ ದೇಶಪ್ರೇಮಿಗಳಾದ ಹಿಂದೀ ಧುರೀಣರು ಪ್ರಯತ್ನಿಸುವಾಗ ಅವರೊಡನೆ ಸಹಕರಿಸುವ ಬದಲಿಗೆ ಅವರಿಗೆ ಪ್ರತಿಬಂಧಕಗಳನ್ನೊಡ್ಡಿದರು. ೧೯೧೧ರಲ್ಲಿ ಗೋಖಲೆಯೂ ೧೯೧೭ರಲ್ಲಿ ಪಟೇಲರೂ ಕಡ್ಡಾಯ ಶಿಕ್ಷಣಕ್ಕಾಗಿ ಎಸೆಂಬ್ಲಿಯಲ್ಲಿಯೂ ಮುಂಬಾಯಿ ಕೌನ್ಸಿಲಿನಲ್ಲಿಯೂ ಠರಾವನ್ನು ತಂದರೂ ಸರಕಾರಿ ವಿರೋಧದಿಂದ ಅದು ಬಿದ್ದು ಹೋಯಿತು. ಹೀಗೆ ವಿದ್ಯಾಭ್ಯಾಸವನ್ನು ನಿರಾಕರಿಸಿ, ಅದನ್ನೆ ಸರಕಾರವು ಸ್ವರಾಜ್ಯಕ್ಕೆ ನಮ್ಮ ಅನರ್ಹತೆಯಾಗಿ ಸೂಚಿಸುತ್ತಿದೆ ಆದರೆ ಸಾರ್ವಜನಿಕ ವಿದ್ಯಾಭ್ಯಾಸವನ್ನು ವಿಸ್ತರಿಸಲಾರದುದರಿಂದಲೇ ಅವರು ನಮ್ಮನ್ನಾಳುವ ಹಕ್ಕನ್ನು ಕಳಕೊಂಡು ನಾಗರಿಕಲೋಕದ ಮುಂದೆ ಅಪರಾಧಿಗಳಾಗಿರುವರು.

ಮೂರನೇ ಉಪಕಾರವು ತಮ್ಮ ಆಳುವಿಕೆಯನ್ನು ಭದ್ರಪಡಿಸಬೇಕೆಂಬ ಉದ್ದೇಶದಿಂದ ಅವರು ಅನುಸರಿಸಿದ ಹೇಡಿ ಉಪಾಯವಾಗಿದೆ. ಆರ್ಮ್ಸ ಎಕ್ಟನ್ನು ಜ್ಯಾರಿಗೆ ತಂದು ಅವರು ಜನರೊಳಗಿನ ನಿರೋಧ ಶಕ್ತಿ ಎಲ್ಲವನ್ನೂ ನಾಶಪಡಿಸಿದ್ದಾರೆ. ಬಹಳ ಚಳವಳ ನಡಿಸಿದ ಮೇಲೆ ಈ ಸೈನ್ಯದಲ್ಲಿ ಹಿಂದೀಯರನ್ನು ಸೇರಿಸುವ ಹೊಸ ಉಪಾಯವನ್ನು ಕಲ್ಪಿಸಿದ್ದಾರೆ. ಇದರಿಂದ, ಮಧ್ಯದಲ್ಲಿ ಬೇರಾವ ಅಪಾಯ ಬಾರದಿದ್ದ ಹಿಂದೀ ಸೈನ್ಯವು ೫೦೦ ವರ್ಷಗಳ ನಂತರ ಹಿಂದೀಯರದಾಗುವುದು.

ಇವರ ಉಪಕಾರಗಳ ದೊಡ್ಡ ಪಟ್ಟಿಯಲ್ಲಿ ಇವರ ಅಬಕಾರಿ ಧೋರಣವನ್ನು ಮರೆಯಲಾಗುವುದಿಲ್ಲ. ಪರದೇಶೀಯರ ಪ್ರವೇಶವಲ್ಲದಿದ್ದರೆ ಈ ದೇಶವು ಮದ್ಯಪಾನ ನಿಷೇಧವನ್ನು ಬಹು ಕಾಲದ ಹಿಂದೆಯೇ ಜಾರಿಗೆ ತರುತ್ತಿತ್ತು, ಆದರೆ ನಮ್ಮ ಸರಕಾರದ ಧೋರಣವು ಈಸ್ಟ ಇಂಡಿಯಾ ಕಂಪೆನಿಯವರು ಹೇಳಿದಂತೆ ಹಣ, ಹೆಚ್ಚಿನ ಹಣ ನ್ಯಾಯದಿಂದಾಗಲಿ ಅನ್ಯಾಯದಿಂದಾಗಲಿ ಪಡಕೊಳ್ಳುವುದಾಗಿದೆ.

ಸ್ವಾತಂತ್ರ್ಯಕ್ಕೆ ಅರ್ಹತೆ.

ಆಡಳಿತದಲ್ಲಿ ನಮಗಿಂತ ಅವರೇ ಮೇಲಾಗಿರುವರೆಂಬ ಊಹೆಯಿಂದಲೂ, ನಾವು ನಮ್ಮನ್ನಾಳಿಕೊಳ್ಳಲು ಅರ್ಹರಲ್ಲವೆಂಬ ಊಹೆಯಿಂದಲೂ ನಮ್ಮ ಸರಕಾರವು ಹೊರಗಿನ ಕಾರಣ ತೋರಿಸಿ ನಮಗೆ ಸ್ವಾತಂತ್ರ್ಯವನ್ನು ಕೊಡಲೊಪ್ಪುವುದಿಲ್ಲ. ಹಿಂದೂಸ್ಥಾನದಲ್ಲಿ ಪ್ರವಾಸವನ್ನು ಬೆಳಸಿದ ಬ್ರಿಟಿಷರೊಬ್ಬರು ಈ ವಿಷಯ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. ತಾನು ಎಸೆಂಬ್ಲಿ ನೋಡಿದಾಗ ಅಲ್ಲಿನ ಸರಕಾರೀ ಪ್ರತಿನಿಧಿಗಳು ಬರೇ ಸಾಮಾನ್ಯರಾಗಿ ತಾನು ಕಂಡೆನೆಂದೂ, ಹಿಂದೀ ಪ್ರತಿನಿಧಿಗಳನ್ನು ಲೋರ್ಡ ಬರ್ಕನ್ ಹೆಡ್ಡರು ಕಂಡದ್ದಾದರೆ ಅವರಿಗೆ ಪ್ರಥಮ ಬಹುಮಾನವನ್ನು ಕೊಡುತ್ತಿದ್ದರೆಂದೂ, ಹಿಂದೂಸ್ಥಾನಕ್ಕೆ ದೊಡ್ಡ ಅಧಿಕಾರಿಗಳಾಗಿ ಬಂದ ಬ್ರಿಟಿಷರಿಗೆ ಇಂಗ್ಲೆಂಡಿನಲ್ಲಾದರೆ ಒಬ್ಬ ಸಿವಿಲ್ ಸರ್ವೆಂಟ್, ಅಥವಾ ಒಬ್ಬ ಪ್ರೈವೇಟ್ ಸೆಕ್ರೆಟರಿ. ಅಥವಾ ಒಬ್ಬ ಉತ್ತಮ ತರಗತಿಯ ಕ್ಲಾರ್ಕನಿಗಿಂತ ದೊಡ್ಡ ಕೆಲಸವು ಸಿಕ್ಕುತ್ತಿರಲಿಲ್ಲವೆಂದೂ, ಸರಿಯಾಗಿ ನೋಡಿದರೆ ಹಿಂದೀಯರನ್ನು ಆಳಲು ಇಂಗ್ಲೀಷರಿಗಿಂತ ಹಿಂದೀಯರೇ ಎಷ್ಟೋ ಪಾಲು ಮೇಲೆಂದೂ ಆ ಬ್ರಿಟಿಷರು ಹೇಳಿರುವರು.

ಕಾಂಗ್ರೆಸ್ಸಿನ ಜನನ.

ಆದರೆ ಇಷ್ಟು ಕಠಿಣವಾದ ದಬ್ಬಾಳಿಕೆಯಲ್ಲಿದ್ದರೂ, ಹಿಂದೂಸ್ಥಾನದಲ್ಲಿ ಬಹು ಸಮಯದ ವರೆಗೆ ಯಾವ ತರದ ರಾಜಕೀಯ ಸಂಸ್ಥೆಯೂ ಜನರ ಹಕ್ಕುಗಳನ್ನು ಸಂರಕ್ಷಿಸಲಿಕ್ಕೆ ಏರ್ಪಟ್ಟಿರಲಿಲ್ಲ. ಆದರೆ ೧೮೫೮ರ ರಾಣಿಯ ಜ್ಯಾಹೀರಾತಿನಲ್ಲಿ ಸರಕಾರಿ ನೌಕರರ ನೇಮಕದಲ್ಲಿ ಯಾವುದೊಂದು ತರದ ಜಾತಿ ಅಥವಾ ವರ್ಣಭೇದಗಳು ಮಾಡಲ್ಪಡುವುದಿಲ್ಲವೆಂಬ ಅಭಯವಿದ್ದುದಾದರೂ, ಕೆಲವು ಒಳ್ಳೇ ವಿದ್ಯಾವಂತ ಮತ್ತು ಗೌರವಸ್ಥ ಹಿಂದೀಯರಿಗೆ ಸರಕಾರವು ಕೆಲವು ನೇಮಕಗಳನ್ನು ಕೊಡಲು ನಿರಾಕರಿಸಿದುದರಿಂದ ೧೮೮೫ರಲ್ಲಿ ಹಿಂದೀ ರಾಷ್ಟ್ರೀಯ ಸಭೆಯು ಜನನವಾಯಿತು. ಆದರೆ ಈ ವರ್ಣಭೇದವು ಇನ್ನೂ ನಡಿಸಲ್ಪಡುತ್ತಲೇ ಇದೆ.

ಕೆಲವು ವರ್ಷಗಳ ವರೆಗೆ ಈ ಕಾಂಗ್ರೆಸು ಕ್ರಿಸ್‌ಮಸ್ ರಜೆಯ ಕಾಲಹರಣದ ಒಂದು ಸುಖದ ವಿಷಯವಾಗಿಯೇ ಇದ್ದಿತು. ಆ ಕಾರಣದಿಂದ ಈ ದೇಶದ ರಾಜಕೀಯ ಶತ್ರುಗಳೂ, ಸರಕಾರವೂ ಇದನ್ನು ತೀರಾ ಅಲಕ್ಷಿಸಿಯೇ ಬಿಟ್ಟಿದ್ದರು. ಏಕೆಂದರೆ ಕಾಂಗ್ರೆಸ್ಸಿನ ಠರಾವುಗಳ ಹಿಂದೆ ಯಾವ ಪರಿಣಾಮಕಾರಿಯಾದ ಕಾರ್ಯಕ್ರಮವೂ ಇರಲಿಲ್ಲ.

(ಮುಂದರಿಯುವುದು.)

ಮದ್ರಾಸು ಸರಕಾರವೂ ಡಾ। ಅನ್ನಿಬಿಸೆಂಟಮ್ಮನವರೂ

ಡಾಕ್ಟರ್ ಅನ್ನಿಬಿಸೆಂಟಮ್ಮನವರ ಪತ್ರವ್ಯವಹಾರಗಳನ್ನು ಪೋಲೀಸರ ಮುಖಾಂತರ ಒಡೆದು ಓದಿನೋಡಿದ ಸಲುವಾಗಿ, ಅನ್ನಿಬಿಸೆಂಟಮ್ಮನವರು 'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಸರಕಾರದವರನ್ನು ದೂಷಿಸಿ ಬರೆದಿರುವರು. ಅಂತಹ ದೂಷಣೆಯ ಕಾರಣಗಳನ್ನೂ, ಅವರು ಮಾಡಿದ ತಪ್ಪಿನ ವಿವರವನ್ನೂ ತಿಳಿಸುವದಕ್ಕಾಗಿ ಸರಕಾರದವರು ಅವರನ್ನು ಆಮಂತ್ರಿಸಿರುವರು.

ಡಾ। ಅನ್ನಿಬಿಸೆಂಟಮ್ಮನವರು ಸರಕಾರದವರನ್ನು ದೂಷಿಸಲು ಇವೇ ಕಾರಣಗಳಾಗಿವೆ. ೧) ಒಬ್ಬ ಮುಸಲ್ಮಾನ ಗೃಹಸ್ಥನು ಅವರಿಗೆ ಒಂದು ಚೆಕ್ಕನ್ನು ಕಳುಹಿಸಿದ್ದರೂ ಅದು ಅವರಿಗೆ ತಲಪಿದಿಲ್ಲ. ೨) ಫೆಬ್ರವರಿಯಲ್ಲಿ ಡಿಲ್ಲಿಯಿಂದ ಅನ್ನಿಬಿಸೆಂಟಮ್ಮನವರು ಕಳುಹಿಸಿದ ಪತ್ರಗಳು ಅಡ್ಯಾರ ಮತ್ತು ಮದರಾಸಿನಲ್ಲಿ ಎಂದಿನಂತೆ ತಲಪದೆ ತಡವಾಗಿ ತಲಪಿದವು. ಈ ಕಾರಣಗಳ ಮೇಲೆ ಪೋಲೀಸರು ಅವರ ಪತ್ರವನ್ನು ಒಡೆದು ನೋಡುವರೆಂದು ಸರಕಾರದವರು ನಂಬುವದಿಲ್ಲ. ಅನ್ನಿಬಿಸೆಂಟಮ್ಮನವರ ದೂಷಣೆಗಳಿಗೂ ಕಿವಿಕೊಡುವ ಹಾಗಿಲ್ಲ.

೧

ಮದರಾಸು ಸರಕಾರದ ಚೀಫ್ ಸೆಕ್ರೆಟರಿಯವರು ಈ ಕುರಿತು ಅನ್ನಿಬಿಸೆಂಟಮ್ಮನವರಿಗೆ ಬರೆದ ಪತ್ರದ ಪ್ರತಿಯು ಈ ರೀತಿಯದೆ.

ಮೇ ೮ ೧೯೨೮, ಉಟಾಕ್‌ಮಂಡ್.

"ನೀವು 'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಬರೆದಂತೆ ಪೋಲೀಸಿನವರು ನಿಮಗೆ ಬರುವ ಪತ್ರಗಳನ್ನೂ, ಹಣವನ್ನೂ ತಡೆಗಟ್ಟುವರೆಂಬುದನ್ನು ಸರಕಾರದವರು ಅರಿತಿಲ್ಲವೆಂದು ನಾನು ತಿಳಿಸಬೇಕಾಗಿದೆ. ನಿಮ್ಮ ವಿಳಾಸಕ್ಕೆ ಬರೆದ ಪತ್ರವನ್ನಾಗಲಿ, ಕಳುಹಿಸಿದ ಹಣವನ್ನಾಗಲಿ ಪೋಲೀಸರು ಮಧ್ಯದಲ್ಲಿ ತಡೆಗಟ್ಟಿ ಅಕೃತ್ಯವನ್ನು ಮಾಡಿರುವ ಪ್ರತಿಯೊಂದು ಸಂದರ್ಭದ ಸರಿಯಾದ ವಿವರವನ್ನು ಸೂಚಿಸಿದುದಾದರೆ, ಸರಕಾರದವರು ಅವುಗಳನ್ನು ವಿಚಾರಿಸಲು ಸಿದ್ಧರಿರುವರು."

೨

ಮದರಾಸು ಸರಕಾರದ ಚೀಫ್ ಸೆಕ್ರೆಟರಿಯವರಿಗೆ ಡಾ। ಅನ್ನಿಬಿಸೆಂಟಮ್ಮನವರು ಬರೆದು ಕಳುಹಿದ ಪ್ರತ್ಯುತ್ತರ.

೧೫ನೇ ಮೇ ೨೮೨೮ ಮದರಾಸು.

"ನ್ಯೂ ಇಂಡಿಯಾ" ಪತ್ರಿಕೆಯು ಎಪ್ರಿಲ್ ೨೩ನೇ ಸಾಯಂಕಾಲದ ಮತ್ತು ೨೪ನೇ ಬೆಳಿಗ್ಗಿನ ಸಂಚಿಕೆಗಳಲ್ಲಿ ಪ್ರಕಟಿಸಿದ ವಿಷಯವು ಈ ರೀತಿಯಾಗಿದೆ ಪಬ್ಲಿಕ್ ಪರ್ಪಸಸ್ ಫಂಡಿನ ಸಹಾಯಾರ್ಥವಾಗಿ ಒಬ್ಬ ಮುಸಲ್ಮಾನ ಗೃಹಸ್ಥನು ಒಂದು ಚೆಕ್ಕನ್ನು ಮೊದಲಿನ ದಿನ ಕಳುಹಿಸಿ ಮರುದಿನ ತಾನು ಸ್ವತಃ ಬಂದು ಚೆಕ್ಕು ಬಂದದೋ ಎಂದು ವಿಚಾರಿಸಿದನು. ಆದರೆ ಚೆಕ್ಕು ಬಂದಿರಲಿಲ್ಲ. ತಕ್ಷಣವೇ ಆತನು ಬೇಂಕಿಗೆ ಹೋಗಿ ಆ ಚೆಕ್ಕಿಗೆ ಹಣಕೊಡದಂತೆ ಮಾಡಿದನು.

ಡಿಲ್ಲಿಯಲ್ಲಿ ಗವರ್ನಮೆಂಟ್ ಒಫ್ ಇಂಡಿಯದ ಫ್ಯಾನೆನ್ಸ ಡಿಪಾರ್ಟಮೆಂಟಿನ ಡಿಪ್ಯುಟಿ ಸೆಕ್ರೆಟರಿಯವರಾದ ರಾ। ಬಿ. ರಾಮರಾಯರ ಮನೆಯಲ್ಲಿ ನಾನಿರುವಾಗ 'ನ್ಯೂ ಇಂಡಿಯಾ' ಪತ್ರಿಕೆಗೆ ನಾನು ಬರೆದು ಕಳುಹಿಸುತ್ತಿದ್ದ ಲೇಖನಗಳ ಕಾಗದಗಳು ರಾಯರ ಕಾಗದಗಳೊಂದಿಗೆ ನನ್ನ ಕಾಗದವನ್ನೂ ಅವರ ಆಳು ಈಸ್ಟರ್ನ ಹೋಟೆಲಿನ ಟಪ್ಪಾಲು ಕಟ್ಟೆಯಲ್ಲಿ ಹಾಕುತ್ತಿದ್ದನು. (ಮದರಾಸಿಗೆ ಹೋಗುವ ಬೆಳಿಗ್ಗಿನ ಟಪ್ಪಾಲಿಗೆ ಅನುಕೂಲವಾಗುವಂತೆ) ನಾನು ಪ್ರತಿವಾರ ಲೇಖನವನ್ನು ಕಳುಹಿಸಿಕೊಡುತ್ತಿದ್ದೆನು.

"ಪೀಸ್ ಓರ್ ವೊರ್" ಎಂಬುದರ ಕುರಿತಾಗಿ ಬರೆದ ಲೇಖನವು ಫೆಬ್ರವರಿ ೨೨ನೇ ತಾರೀಕಿನ ದಿನ ಸಾಯಂಕಾಲ ವಿಳಾಸದಾರರಿಗೆ ತಲಪಿಸಲ್ಪಟ್ಟಿತು. ಬಾಕಿ ಕಾಗದಗಳು ಆ ದಿನ ಬೆಳಗ್ಗೆ ೧೦ ಘಂಟೆಯೊಳಗೆ ಅದೇ ವಿಳಾಸದಾರರಿಗೆ ತಲಪಿಸಲ್ಪಟ್ಟಿದ್ದವು. ಬೇರೆ ಬೇರೆ ಟಪ್ಪಾಲುಗಳಿಂದ ಉಂಟಾದ್ದೆಂದು ಹೇಳುವರೆ ಆ ದಿನ ಬರುವಂಥಾದ್ದು ಒಂದೇ ಟಪ್ಪಾಲಾಗಿತ್ತು.

ಇದು ಮಾತ್ರವಲ್ಲ, ಅನೇಕ ಲೇಖನಗಳು ಹೀಗೆ ತಡಮಾಡಿ ತಲಪಿಸಲ್ಪಡುತ್ತಿದ್ದವು.

ಇದ್ದೇ ಇವೆ. ಏಕ ಪೇಶೀಮಯುಗಳ ಅಷ್ಟು ಸೂಕ್ಷ್ಮವಾದ ಶರೀರದೊಳಗಣ ಸಮಸ್ತ ವ್ಯಾಪಾರಗಳೂ ತ್ರಿಧಾತುಗಳ ದೆಸೆಯಿಂದಲೇ ಸಾಗುತ್ತಿವೆ. ದೊಡ್ಡ ಎಂದರೆ ಅನೇಕಾವಯುಗಳಿರುವ ಪ್ರಾಣಿಗಳ ಶರೀರಗಳೊಳಗಣ ವ್ಯಾಪಾರಗಳು ಇವುಗಳು ವಿದ್ಯಮಾನವಾಗಿದ್ದು ಶ್ರಮವಿಭಾಗವನ್ನು ನಡೆಸುವುದರಿಂದ ತಾನೆ ನಡೆಯುತ್ತಿವೆ. ಏಕ ಪೇಶೀಮಯ ಪ್ರಾಣಿಯ ಶರೀರದೊಳಗಣ ಚಲನವಲನ, ಪಚನ, ಉತ್ಸರ್ಗ ಮೊದಲಾದೆಲ್ಲ ಕಾರ್ಯಗಳೂ ಅದೇ ಚಿಕ್ಕ ದೇಹದೊಳಗಣ ತ್ರಿಧಾತುಗಳ ದೆಸೆಯಿಂದ ಅಲ್ಪಾವಕಾಶದಲ್ಲಿ ಸಾಗುತ್ತಿವೆ. ಅನೇಕಾವಯವೀ ಪ್ರಾಣಿಯಲ್ಲಿ ಈ ತ್ರಿಧಾತುಗಳ ಕಾರ್ಯಗಳು ಬೇರೆ ಬೇರೆ ಸ್ಥಳಗಳಲ್ಲಿ (ಅವಯುವಗಳಲ್ಲಿ) ನಡೆಯುತ್ತಿವೆ. ಪ್ರತಿ ಒಂದೊಂದು ಪರಮಾಣುವಿನಲ್ಲಿಯೂ ಈ ಮೂರು ಧಾತುಗಳಿರುವುವಾದರೂ ಇವುಗಳಿಗೆ ಸ್ಥಾನಭೇದಗಳೂ ಇದ್ದೇ ಇವೆ. ವಾಯುವಿನ ಐದು ಭೇದಗಳು, ಪಿತ್ತದ ಐದು ಭೇದಗಳು, ಕಫದ ಐದು ಭೇದಗಳು ಹೇಳಲ್ಪಟ್ಟಿವೆ ಮಾತ್ರವಲ್ಲದೆ, ಇವುಗಳಲ್ಲಿ ಪ್ರತಿಯೊಂದೊಂದರ ಸ್ಥಾನಗಳ ಗುಣಗಳೂ, ಕರ್ಮ ಪ್ರಕಾರಗಳೂ ವರ್ಣಿತವಾಗಿವೆ.

ಶರೀರ ಸ್ವಾಸ್ಥ್ಯವು ತ್ರಿಧಾತುಗಳ ಸಾಮ್ಯಾವಸ್ಥೆಯ ಮೇಲೆ ಅವಲಂಬಿಸಿ ಇದೆ. ಅವು ವಿಕೃತವಾದರೆ ಶರೀರವೂ ವಿಕೃತಿ ಹೊಂದುತ್ತಿದೆ. ಅವು ಸಮಸ್ಥಿತಿಯಲ್ಲಿದ್ದರೆ ಎಂದರೆ ಅವಿಕೃತ ಸ್ಥಿತಿಯಲ್ಲಿದ್ದರೆ ಶರೀರವೂ ಅವಿಕೃತವಾಗಿ ನಿಲ್ಲುತ್ತದೆ. (ವಿಕೃತಾ ಸವಿಕೃತಾ ದೇಹಂ ದನಂತಿ ತೇ ವರ್ಧಯಂತಿ ಚ । ಯುವಿವ ದೇಹಸ್ಯ ಸಮಾವಿ ವೃದ್ಧ್ಯೈ । ತ ಏವ ದೋಷಾ ಸ್ತ್ರಿವಮಾನಧಾಯ) ಅವು ಸಮಸ್ಥಿತಿಯಲ್ಲಿರುವಾಗ ಅವುಗಳಿಗೆ ಧಾತು ಎಂಬ ಸಂಜ್ಞೆ ಇದೆ; ವೈಷಮ್ಯವುಂಟಾದಾಗ ಅವುಗಳಿಗೆ ದೋಷ ಎಂಬ ಸಂಜ್ಞೆ ಬರುತ್ತಿದೆ. (ದೂಷಣಾ ದ್ದೋಷಾಃ) ಧಾತು ಕ್ರಿಯೆಯು ಪ್ರಾರಂಭಿಸುವಾಗಲೇ ದೋಷಗಳೂ ಉತ್ಪನ್ನವಾಗುತ್ತಿವೆ. ಶರೀರ ವ್ಯಾಪಾರಗಳೆಲ್ಲವೂ ಸಮಾನವಾಗಿ ಪ್ರಾರಂಭಿಸುವ ಕಾರಣ, ಧಾತು ಕ್ರಿಯೆಯಲ್ಲಿ ಹೆಚ್ಚು ಕಡಿಮೆ ದೋಷಗಳು ಉತ್ಪನ್ನವಾಗಲು ಕಾರಣವಾಗುತ್ತಿದೆ. ಶರೀರವು ಸ್ವಾಸ್ಥ್ಯ ಪ್ರವೃತ್ತಿಯದಾದಲ್ಲಿ ದೋಷಗಳೇ ತಪ್ಪದಿರಬಹುದು. ಆದರೂ ಶಾಸ್ತ್ರಜ್ಞರು 'ಧಾತು' ವ 'ದೋಷ' ಇವೆರಡೂ ಪದಗಳನ್ನು ಸಮಾನವಾಚಕಗಳಾಗಿ ಬಳಸುವರು; ಈ ಕಾರಣ ತ್ರಿಧಾತುಗಳನ್ನು ತ್ರಿದೋಷಗಳೆಂದೂ ಕರೆವರು. (ದೋಷ ಸಾಮ್ಯವರೋಗ ಅ, ಸೂ.)

ದೋಷಗಳು ಅತಿಶಯವಾಗಿ ಬೆಳೆದು, ಅವುಗಳ ಪ್ರಕೋಪ ಹೆಚ್ಚಿದಲ್ಲಿ, ಅವುಗಳಲ್ಲಿಯಾಗಲಿ ಶರೀರ ವ್ಯಾಪಾರದಲ್ಲಿ (ಧಾತು ಕ್ರಿಯೆ)ಯಾಲಿ ಉತ್ಪನ್ನವಾಗುವ ನಿರುಪಯೋಗಕರವಾದ ದ್ರವ್ಯಗಳನ್ನು 'ಮಲ' ಎಂದು ಕರೆವರು (ಮಲಿನೀಕರಣಾನ್ಮಲಾಃ) ಹೀಗೆ 'ದೋಷ ಧಾತು ಮಲಮೂಲಂ ಹಿ ಶರೀರಂ' ಎಂಬ ಆಯುರ್ವೇದದ ಸಿದ್ಧಾಂತವಿದೆ. 'ಸಾಮ್ಯಂ ಪ್ರಕೃತಿರುಚ್ಯತೇ' ಧಾತು ಸಾಮ್ಯವಿದ್ದರೆ ಶರೀರವು ಸ್ವಸ್ಥವೂ ನೀರೋಗವಾಗಿಯೂ ಇರುವುದು; ಧಾತು ವೈಷಮ್ಯವುಂಟಾದರೆ ಶರೀರವು ವಿಕೃತಗೊಳ್ಳುವುದು. (ವಿಕಾರೋ ಧಾತು ವೈಷಮ್ಯಮ್) ಈ ಉಪಪತ್ತಿಯ ಮೇಲೆ, ಆಯುರ್ವೇದದೊಳಗಣ ಇಂದ್ರಿಯ ವಿಜ್ಞಾನ, ಸ್ವಸ್ಥವೃತ್ತ, ರೋಗ ವಿಜ್ಞಾನ, ಚಿಕಿತ್ಸಾ ಶಾಸ್ತ್ರ ಮೊದಲಾದುವೆಲ್ಲವೂ ಸ್ಥಾಪಿತವಾಗಿವೆ. ಚಿಕಿತ್ಸಾ ಶಾಸ್ತ್ರದ ಮುಖ್ಯೋದ್ದೇಶವು ಧಾತುಸಾಮ್ಯ ಕ್ರಿಯೆಯೇ ಆಗಿದೆ. (ಧಾತುಸಾಮ್ಯ ಕ್ರಿಯಾ ಪ್ರೋಕ್ತಾ ತಂತ್ರಸ್ಯಾಸ್ಯ ಪ್ರಯೋಜನಮ್.)

ಶರೀರದೊಳಗಣ ಬೇರೆ ಬೇರೆ ಅವಯವ ಸಮೂಹಗಳಲ್ಲಿ ನಡೆಯುವ ರಕ್ತಾಭಿಸರಣ, ಪಚನ, ಪೋಷಣ, ಉತ್ಸರ್ಗ ಚಲನವಲನ ಇತ್ಯಾದಿ ಕ್ರಿಯೆಗಳು ಆಯಾ ಅವಯವ ಸಮೂಹಗಳಲ್ಲಿ ನಡೆಯುತ್ತಲಿವೆಯಾದರೂ, ಪ್ರತಿಯೊಂದರಲ್ಲೂ ತ್ರಿಧಾತುಗಳ ಕಾರಣದಿಂದಲೇ ಈ ಕ್ರಿಯೆಗಳು ನಡೆಯುತ್ತಲಿರುವುವು. 'ವಾಯು' ಎಂಬುವ ಪ್ರಸಾದ ಧಾತುವು ವಿದ್ಯಮಾನವಾಗಿರುವುದರಿಂದ ವಾತ ವಾಹಿನಿಗಳೂ ಕೇಂದ್ರಗಳೂ ಸ್ನಾಯು ಧಮನಿಗಳೂ ಇವುಗಳ ಸಹಾಯದಿಂದ ಶರೀರದಲ್ಲಿ ಚಲನವಲನಾದಿ ವ್ಯಾಪಾರಗಳೂ ನಡೆಯುತ್ತಿರುವುವು. ಕೆಲ ಆಧುನಿಕ ವಿದ್ವಾಂಸರು ವಾತವಹಮಂಡಲ (Nervous system)ವಾಗಿರುವ ಇದಕ್ಕೆ 'ವಾತ' ಸಂಜ್ಞೆಯನ್ನೆ ಬಳಸುವರು. ಪರಂತು, ಇದು ಸರಿಯಾಗಿಲ್ಲ. ವಾತವಹ ಮಂಡಲದಿಂದ ವಾಯುವು ವಹಿಸುವ (ಪ್ರಸ್ಪಂದ ನೋದ್ವಹನ ವಿವೇಕ ಪೂರಣ, ಲಕ್ಷಣೋ ವಾಯುಃ ಸು. ಸೂ.) ಕಾರ್ಯವು ಜರುಗುವುದು. ಆದರೆ ಇತಸ್ತತಃ ಪರಿಭ್ರಮಣವನ್ನುಂಟು ಮಾಡುವ ವಾಯುವೂ ಮತ್ತದರ ವಹನ ಕಾರ್ಯವು ನಡೆಯುತಿರುವ ವಾತವಾಹಿನಿಯೂ ಒಂದೇ ಎನಿಸುವುದೆಂತು?

ಕ್ರಮಶಃ

(Bio-psychic)

(Bio-plasmic or Biochemic)

(Physicochemical)

cellular)

(unicellular)

(Multi-cellular)

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅವ್ಯಕ್ತಾಂಕುಶವು ತೈಲಃ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶಃ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯುಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಪತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಚಿಕಿತ್ಸಾ ಮಾಹಿತಿಗೆ "ಆರ್ಷಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0
Reserve and other sinking Funds „ 338,500-0-0
of which amount invested on G. P. Notes Rs. 228,898-2-0
Rates of interest on fixed deposits at Head Office 6½% for 2 Years
6% „ 1 Year
Season deposits of Rs. 1000/- & above terminable by the end of June are received at 6½% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೨—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವನಿಗೆ ಮಾತ್ರ.

ದಿ ಕೆನರಾ ವಾಚ್ ಹೌಸ್ ಉಡುಪಿ ದ. ಕ.



ಮೋತಿಲಾಲ ತ್ರಿಭುವನದಾಸ ಮತ್ತು ಕಂಪೆನಿ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವುಗಳ ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆಯಿರಿ.

ಸನ್ ೧೯೨೭-೨೮ರಲ್ಲಿ ಹೊಸತಾಗಿ ತಯಾರಾದ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್



ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆಯಿಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿ ಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ

ಗುಲಾಮಹುಸೇನ್ ಆಲ್ಲಿಭಾಯಿ ಎಂಡ್ ಸನ್ಸ್.
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲ್ಪಡುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಲುಕಿನಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸವಿದ್ದರೆ ಆ ವಿವರ, ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ತಪಸೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ, ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲ್ಪಡುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಸಾಹಿತ್ಯಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses

For Particulars pply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.
ಯೋಜಂಟ್ರ್ಯಾಗಿ, ಯೆಂಟವರ್ಪನಿಂದ ತರಿಸುವ ವಜ್ರಗಳು ಮಾಂಟಿಕ್ಕಿವೆ.

ಬೋಳ ಮಂಗೇಶ ರಾವ್,
108-'28 ಮಂಗಳೂರು.

Edited Printed & Published by V. S. Kamath at the M. F. A. SHARADA PRESS, MANGALORE.

Registered: No. M. 498.
ಚಂದಾನಿರ್ಣಯ- ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಖರ್ಚು ಸೇರಿ ರೂಪಾಯಿ 2-18-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗೆದರಿಂ? ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೮ನೇ ಶುಕ್ರವಾರ ಜೂನ್ ೧೯೨೮. ಸಂಚಿಕೆ ೨೩.

THE CANARA BANKING CORPORATION,
UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid up "	1,99,650.
Reserve and other Funds as on 31—12—1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and 2 years deposits to 7% from 1—2—1928:—

ಬ್ಯಾಂಕಿನ ಹೆಡ್ಡಾಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲ್ಪಟ್ಟಾಗಿದೆ.

Office of the Corporation,
UDIPI, 21-1-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಠಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂಬಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

Batliwala's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

... ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ಮಲೇರಿಯಾ ಜ್ವರ ನಿವಾರಣ. ರೂ. ೧.
... ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
... ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
... ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ರೂ. ೧—೨—೦. ರೂ. ೧—೪—೦. ೧—೧೨—೦.
ರೂ. ೦—೬—೦
ರೂ. ೦—೬—೦. LIBERAL DISCOUNT TO TRADE
...-CAWASHAPUR, BOMBAY.
... ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

... ಪ್ರದರ ಲೋಧ್ರ

... ರೋಗನಿವಾರಿಣಿ.

... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಗಳೂ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...

ಕೇಸರೀ ಕುಟೀರಂ,
... ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರ್ಯಾಂಚ್:— 18 ಬಳೆಪೇಟೆ, ಬೆಂಗಳೂರು.
... ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನೂ ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ಜ್ಯೇಷ್ಠ
ಬ ೬ ಶನಿವಾರದಿಂದ ವಿಭವ ಸಂವತ್ಸರದ ಜ್ಯೇಷ್ಠ
ಬ ೧೨ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೮ನೆಯ ವೃಷಭ (ಬೇಶ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಶೌರಮಾನ.	ಸೂರ್ಯ. ಉ	ಅಸ್ತ
9	ಶನಿ	೬	೩೯.೪೬	ಧನಿಷ್ಠಾ	೩೪.೪೪	೨೭	6. 5	6.54
10	ರವಿ	೭	೩೬.೪೪	ಶತಭಿಷಾ	೩೩.೪೬	೨೮	6. 5	6.54
11	ಸೋಮ	೮	೩೩. ೨	ಪೂ. ಭಾ.	೩೨. ೦	೨೯	6. 5	6.55
12	ಕುಜ	೯	೨೮.೩೧	ಉ. ಭಾ.	೨೯.೩೧	೩೦	6. 5	6.55
13	ಬುಧ	೧೦	೨೩.೨೯	ರೇವತೀ	೨೬.೧೬	೩೧	6. 6	6.55
14	ಗುರು	೧೧	೧೭.೪೪	ಅಶ್ವಿನೀ	೨೨.೧೪	೩೨	6. 6	6.55
15	ಶುಕ್ರ	೧೨	೧೧.೪೩	ಭರಣೀ	೧೮.೧೬	೧	6. 6	6.55

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ, (ಕಾವು) Maximum ಹೆಚ್ಚಾದದ್ದು	Minimum ಅಲ್ಪವಾದ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
1	91— 5	78— 4	0—84	—
2	89 1	77— 7	0—19	—
3	88— 7	74— 6	2—59	—
4	85— 9	77— 0	0—08	—
5	84— 5	74— 9	4—10	—
6	84— 1	73— 3	2—26	—
7	85— 0	72— 7	3—03	—
				18—23

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ	7- 8	8— 4
ಹೊಸ ಗುಡ್ಡು ...	6—10	7— 6
ಸುಗ್ಗಿ ...	6— 4	6- 15
ಹೊಸ ರಾಶಿ ...	6— 0	6- 10
ಊರ ಅಮ್ಮರ್ ಬೆಳ್ತಿಗೆ ...	7-- 8	8— 8
ರಂಗೂನು ಬೆಳ್ತಿಗೆ ಗೋಣಿ ೧ ...	12—10	13— 4
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7— 4	7— 8
ಗೋಧಿ ಗೋಣಿ ೧ಕ್ಕೆ ...	16— 8	18— 8
ಹುರುಳಿಗೋಣಿ ೧ಕ್ಕೆ ...	8— 8	10— 8
ಕಡಲೆಗೋಣಿ ೧ಕ್ಕೆ ...	10— 0	12— 8
ತೊಗರಿಗೋಣಿ ೧ಕ್ಕೆ ...	14— 4	14— 12
ತೊಗರಿಬೇಳೆ ಗೋಣಿ ೧ಕ್ಕೆ ...	18— 8	27— 0
ಉದ್ದು ಗೋಣಿ ೧ಕ್ಕೆ ...	13— 8	14— 0
ಹೆಸರುಗೋಣಿ ೧ಕ್ಕೆ ...	12— 0	14— 8
ಊರು ಬೆಲ್ಲ ಖಂಡಿ ೧ಕ್ಕೆ ...	62— 8	65— 0
ಉಪ್ಪು ಗೋಣಿ ೧ಕ್ಕೆ ...	4—10	5— 4
ಕೊಬ್ರಿ ಖಂಡಿ ೧ಕ್ಕೆ ...	130- 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	37— 8	38— 8
ಎಳ್ಳಿಂಡಿ ಖಂಡಿ ೧ಕ್ಕೆ ...	35— 0	43— 12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—10	9— 6
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	8— 4
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	7— 2	8 0
ಬೋಂಬಾಯಿ ಸಕ್ಕರೆ ಮುಡಿ ೧ಕ್ಕೆ ...	4— 6	4 - 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	4— 8	6 12
ಸಾಸಿವೆ ಮುಡಿ ೧ಕ್ಕೆ ...	8— 0	8— 4
ಕೊತ್ತುಂಬರಿ ಮುಡಿ ೧ಕ್ಕೆ ...	6— 8	7— 2
ಕಾಫಿ ಖಂಡಿ ೧ಕ್ಕೆ ...	365— 0	400— 0
ಹೊಗೆಸೊಪ್ಪು ಅಡಿಕೆ ಖಂಡಿ ೧ಕ್ಕೆ ...	170— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	510— 0	515-
ಹವಲಕ್ಕಿ ... ೧ಕ್ಕೆ ...	65— 0	80— 0
ಗೇರುಬೀಜ ... ೧ಕ್ಕೆ ...	4— 0	4— 1
ಕಲ್ಲುಪ್ಪು ಖಂಡಿ ೧ಕ್ಕೆ ...	37— 8	40— 0
ತಾಂಬ್ರ ತಗಡು ಮಣ ೧ಕ್ಕೆ ...	16— 0	16— 8
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	20— 0	21 -
ಚೀ ... ಸೇರು ೧ಕ್ಕೆ ...	15— 0	-
ಹಿತ್ತಾಳೆ ತಗಡು ಮಣ ೧ಕ್ಕೆ ...	15— 0	16— 8
ಪವನು	13— 8	13— 9
ಹುಣಿಸೆ ಹಣ್ಣು	75— 0	85 — 0

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉಚ್ಚತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಶಿಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆಯಾಗಿ ಕಳುಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್	ಸ್ಥಾಪಿತವಾದದ್ದು	ಟೆಲಿಫೋನ್ ನಂ.
99 ನಾಗಾದೇವಿ ರಸ್ತೆ.	1909	23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ. ಬೊಂಬೈ—1.

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘದ ಮಹಾಸಭೆ.

ಈ ಸಭೆಯು ತಾ ೨-೬-'೨೮ರಲ್ಲು ಅಪರಾಹ್ನ ಘಂಟೆ ೨ಕ್ಕೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಕಟ್ಟೋಣದಲ್ಲಿ ಸಂಘದ ಪ್ರೆಸಿಡೆಂಟರಾದ ಕುರ್ಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರ್ ಶಾಲೆಯ ಮೆನೇಜರರಾದ ಶ್ರೀಯುತ ಕೆ. ಗಣಪಯ್ಯ ಸೆಟ್ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ವಾರ್ಷಿಕ ವಂತಿಗೆಯನ್ನು ಪಾವತಿ ಮಾಡಿದ ಮೆಂಬರರಿಗೆ, (ಓಟರರಿಗೆ) ಈ ಮೊದಲೇ ನೋಟೀಸು ಕೊಟ್ಟ ಮೇರಿಗೆ ಪುತ್ತೂರು ಕುಂದಾಪುರ ವಿನಹ ಇತರ ಎಲ್ಲಾ ತಾಲೂಕಿನ ಪ್ರತಿನಿಧಿಗಳು ಸಭೆಗೆ ಹಾಜರಿದ್ದರು. ಅಧ್ಯಕ್ಷರು ಸಭೆಗೆ ಸ್ವಾಗತವನ್ನು ಬಯಸಿ ಸಂಘದ ಈ ವರೆಗಿನ ಗೋಶ್ವಾರೆ ವರದಿಯನ್ನೂ ತಾ. ೬-೧-೨೮ರಲ್ಲು ಜರಗಿದ ಮಹಾಸಭೆಯ ಕಾರ್ಯವೃತ್ತಾಂತವನ್ನೂ ತಾ ೧೪-೫-೨೮ರಲ್ಲು ಜರಗಿದ ಕಾರ್ಯನಿರ್ವಾಹಕ ಮಂಡಳಿಯ ನಿರ್ಣಯಗಳನ್ನೂ ಮತ್ತು ಇಲಾಖೆಯವರ ಸೂಚನೆ ಮೇರಿಗೆ ಇಂದು ಸಭೆ ಜರಗಿಸಿದ ಉದ್ದಿಶ್ಯವನ್ನೂ ಸಂಕ್ಷೇಪವಾಗಿ ವಿವರಿಸಿದ ತರುವಾಯ ಈ ಕೆಳಗಿನ ನಿರ್ಣಯಗಳು ಮಂಜೂರು ಮಾಡಲ್ಪಟ್ಟವು.

(೧) ಟ್ರೈನಿಂಗ್ ಶಾಲೆಯ ಅಧ್ಯಾಪಕರಾದ ದಿವಂಗತ ಶ್ರೀ ಯಮ್ ಬಾಬು ಬಿ. ಎ. ಯಲ್ ಟಿ. ಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಅಧ್ಯಕ್ಷರು ವಿವರಿಸಿ ಮೃತರ ಸ್ಮಾರಕವನ್ನು ಸ್ಥಾಪಿಸುವ ಠರಾವು ಮಂಜೂರು ಮಾಡಲ್ಪಟ್ಟು ಆ ಬಗ್ಗೆ ಮುಂದಿನ ಕಾರ್ಯರಚನೆಗಾಗಿ ಪ್ರತಿ ತಾಲೂಕಿನಿಂದ ಒಬ್ಬೊಬ್ಬರಂತೆಯೂ ಉಡುಪಿ ತಾಲೂಕಿನ ಕುರ್ಕಾಲು ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರ್ ಕೆ. ಗಣಪಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ನಾಲ್ಕು ಮಂದಿ ಇರುವ ಒಂದು ಸಬ್ ಕಮಿಟಿಯು ಏರ್ಪಡಿಸಲ್ಪಟ್ಟು ದಿವಂಗತರ ಪವಿತ್ರ ಆತ್ಮಕ್ಕೆ ಚಿರಶಾಂತಿ ಅನುಗ್ರಹಿಸಬೇಕಾಗಿ ಭಗವಂತನಿಗೆ ಪ್ರಾರ್ಥಿಸಲಾಯಿತು.

(೨) ಟೀಚರ್ ಮೆನೇಜರರ ಪ್ರತಿನಿಧಿ ಮೆಂಬರರಿಗೆ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ಮೀಟಿಂಗುಗಳಿಗೆ ಹಾಜರಾದ ಬಗ್ಗೆ ಪ್ರಯಾಣ ಬತ್ತೆಯನ್ನು ಕೊಡಬಹುದಾಗಿ ಮ. ಡೈರೆಕ್ಟರ್ ದೊರೆಗಳವರಿಂದ ನಂಬ್ರ ೧೪೪೫/೨೬-೩-೨೮ನೇ ಹುಕುಮನ್ನು ಓದಿಹೇಳಿ ಆ ಬಗ್ಗೆ ಸರಕಾರಕ್ಕೆ ಧನ್ಯವಾದಗಳನ್ನು ಸಮರ್ಪಿಸಲಾಯಿತು.

(೩) ಮದರಾಸು ಪ್ರೊವಿನ್ಸಿಯಲ್ ಟೀಚರ್ ಮೆನೇಜರರ ಸಂಘದ ಮಹಾಸಭೆಯ ಬಗ್ಗೆ ಈ ಜಿಲ್ಲೆಯಿಂದ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕಾಗಿ ಇಲಾಖೆಯವರ ಮುಖಾಂತರ ಬಂದ ಆಮಂತ್ರಣವನ್ನು ಓದಿಹೇಳಿ ಸದರಿ ಪರಿಷದದಲ್ಲಿ ಪಾಸಾಗಲಿಕ್ಕಿರುವ ನಿರ್ಣಯಗಳಿಗೆ ಸಹಾನುಭೂತಿಯನ್ನು ಸೂಚಿಸಿ ಪರಿಷದವು ಜಯಪ್ರದವಾಗುವಂತೆ ಈ ಸಭೆಯಿಂದ ಪತ್ರವನ್ನು ಕಳುಹಿಸಬೇಕಾಗಿ ನಿರ್ಣಯಿಸಲಾಯಿತು

(೪) ಕಳೆದ ತಾ. ೬-೧-೨೮ರಲ್ಲು ನೆರೆದ ಮಹಾಸಭೆಯಲ್ಲಿ ಪಾಸಾದಂತೆ ಪ್ರತಿ ತಾಲೂಕು ಸಂಘದಲ್ಲಿ ವಸೂಲಾದ ವಂತಿಗೆಯಲ್ಲಿ ಅರೆವಾಸಿಯನ್ನು ತಾ. ೩೧-೫-೨೮ರ ವಳಗೆ ಜಿಲ್ಲಾ ಸಂಘಕ್ಕೆ ಕಳುಹಿಸಬೇಕೆಂಬ ನಿಯಮದ ಮೇರಿಗೆ ಮಂಗಳೂರು, ಉಡುಪಿ, ಕಾರ್ಕಳ, ಈ ಮೂರು ತಾಲೂಕುಗಳು ಮಾತ್ರ ವಸೂಲಾದ ಹಣದಲ್ಲಿ ಅರೆವಾಸಿಯಂತೆ ಅಷ್ಟಲು ಹಣವನ್ನು ಜಿಲ್ಲಾ ಸಂಘಕ್ಕೆ ಪಾವತಿ ಮಾಡಿರುವುದರಿಂದ ಈ ತಾಲೂಕುಗಳು ವ ಇತರ ತಾಲೂಕುಗಳು ಸಹ ಎಲ್ಲಾ ಟೀಚರ್ ಮೆನೇಜರರಿಂದ ಆದಷ್ಟು ಬೇಗನೆ ವಾರ್ಷಿಕ ವಂತಿಗೆಯನ್ನು ವಸೂಲು ಮಾಡಿ ಅರೆವಾಸಿ ಹಣವನ್ನು ಬರುವ ಮಹಾಸಭೆಯ ವಳಗೆ ಜಿಲ್ಲಾ ಸಂಘಕ್ಕೆ ಪಾವತಿಮಾಡಬೇಕಾಗಿ ನಿರ್ಣಯಿಸಲಾಯಿತು.

(೫) ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನಿಂದ ಕೊನೆಗೆ ತಿದ್ದುಪಡಿಯಾಗಿ ಬಂದ ಇಲೆಕ್ಷನ್‌ರೂಲ್ಸುಗಳನ್ನೂ ಜಿಲ್ಲಾ ಓಟರರ ಪಟ್ಟಿಯನ್ನೂ ಓದಿಹೇಳಿ ರಿಕಾರ್ಡು ಮಾಡೋಣಾಯಿತು.

(೬) ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೆ ನೋಮಿನೇಶನ್ ಅರ್ಜಿಯು ತಾ. ೪-೬-೨೮ಕ್ಕೆ ಕಳುಹಿಸಬೇಕಾದ್ದರಿಂದ ಟೀಚರ್ ಮೆನೇಜರರ ಪ್ರತಿನಿಧಿ ಮೆಂಬರರನ್ನು ಆರಿಸುವ ಠರಾವು ಸಭೆಯ ಮುಂದೆ ಬರಲು ಸಂಘಸ್ಥಾಪಕರೂ, ಸಂಘದ ಅಧ್ಯಕ್ಷರೂ ಆಗಿರುವ ಉಡುಪಿ ತಾಲೂಕು ಶ್ರೀ ಕೆ. ಗಣಪಯ್ಯ ಸೆಟ್ರು ಸಂಘಕ್ಕೋಸ್ಕರ ಮಾಡಿದ ಸೇವೆಯನ್ನು ಕಾರ್ಕಳ ತಾಲೂಕು ನಕ್ರೆ ಶಾಲೆಯ ಟೀಚರ್ ಮೆನೇಜರ್ ಯನ್. ದೂಮಣ್ಣ ನಾಯ್ಕರು ವಿವರಿಸಿ ಹೇಳಿ ಸಾಣೂರು ಶಾಲೆಯ ಟೀಚರ್ ಮೆನೇಜರ್, ಯಸ್, ಜೋಸೆಫ್ ಫಿಂಟೋರವರಿಂದ ಅನುಮೋದಿಸಲ್ಪಟ್ಟ ಮೇರೆಗೂ ಇನ್ನೊಂದುಸ್ಥಾನಕ್ಕೆ ಸಂಘದ ಸೆಕ್ರೆಟರಿಯಾಗಿದ್ದು ವಿಶೇಷ ಕಾರ್ಯಗಳನ್ನು ನಡಿಸುತ್ತಿದ್ದ ಮಂಗಳೂರು ತಾಲೂಕು ಕೋಟೆಕಾರ್ ಹಾಯರ್ ಎಲಿಮೆಂಟರಿ ಶಾಲೆಯ ಟೀಚರ್ ಮೆನೇಜರ್, ಶ್ರೀ ಕೆ. ಸುಬ್ಬಣ್ಣಯ್ಯನವರನ್ನು, ಕಾಸರಗೋಡು ತಾಲೂಕು ನಾಯ್ಕಪ್ ಶಾಲೆಯ ಟೀಚರ್ ಮೆನೇಜರ್ ಪಿ. ಯನ್. ಮಾಧವ ಭಟ್ಟರುಸೂಚಿಸಲು ಪಾದಿ ಶಾಲೆಯ ಟೀಚರ್ ಮೆನೇಜರ್ ಡಿ. ವಿಷ್ಣುಮೂರ್ತಿ ಹೊಳ್ಳರಿಂದ ಅನುಮೋದಿಸಲ್ಪಟ್ಟ ಮೇರೆಗೂ ಸರ್ವಾನುಮತದಿಂದ ಒಪ್ಪಿಕೊಳ್ಳೋಣಾಗಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೆ ಅವರಿಬ್ಬರ ನೋಮಿನೇಶನ್ ಅರ್ಜಿಗಳನ್ನು ಕಳುಹಿಸಲಾಯಿತು.

(೭) ಬರುವ ಮಹಾಸಭೆಯನ್ನು ಮುಂದಿನ ಕ್ರಿಸ್‌ಮಸ್ ರಜೆಯಲ್ಲಿ ಮಂಗಳೂರಲ್ಲಿ ಜರಗಿಸಬೇಕಾಗಿ ನಿರ್ಣಯಿಸಿದ ಬಳಿಕ ಅಧ್ಯಕ್ಷರ ಕೃತಜ್ಞತೆಗಳೂ ಸಭಿಕರ ಧನ್ಯವಾದಗಳೂ ಸಮರ್ಪಿಸಲ್ಪಟ್ಟು ಸಭೆಯು ಕೊನೆಗೊಂಡಿತು.

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರ್ ಸಂಘದ ತಾರೀಕು 2—6—'28ರ ಮಹಾಸಭೆಯಲ್ಲಿ ದಿವಂಗತ ಎಮ್. ಬಾಬು ಬಿ.ಎ.ಎಲ್.ಟಿ.ಯವರ ಸ್ಮಾರಕ ಫಂಡಿನ ಕಾರ್ಯರಚನೆಯ ಬಗ್ಗೆ ಚುನಾಯಿಸಲ್ಪಟ್ಟ ಸಬ್ ಕಮಿಟಿಯವರು ತಾರೀಕು 3—6—'28ರಲ್ಲು ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಸಭೆ ನೆರೆದು ಮಾಡಿದ ನಿಬಂಧನೆಗಳು.

೧ ಸ್ಮಾರಕ ಫಂಡಿನ ಕಮಿಟಿಗೆ ಕುರ್ಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರ್ ಶ್ರೀ ಕೆ. ಗಣಪಯ್ಯ ಸೆಟ್ರನ್ನು ಪ್ರೆಸಿಡೆಂಟರನ್ನಾಗಿಯೂ ಕೋಟೆಕಾರ್ ಹಾಯರ್ ಎಲಿಮೆಂಟರಿ ಶಾಲಾ ಮೆನೇಜರ್ ಶ್ರೀ ಕೆ. ಸುಬ್ಬಣ್ಣಯ್ಯನವರನ್ನು ಸೆಕ್ರೆಟರಿಯನ್ನಾಗಿಯೂ ನೇಮಿಸಲಾಯಿತು. ೨ ಈ ದ್ರವ್ಯಸಂಚಯಕ್ಕೆ ದಿವಂಗತ "ಎಮ್. ಬಾಬು ಸ್ಮಾರಕ ಫಂಡ್" ಎಂಬ ಹೆಸರಿರತಕ್ಕದ್ದು. ೩ ಸ್ಮಾರಕ ಫಂಡಿಗೆ ಉಪಾಧ್ಯಾಯರೂ, ದಿವಂಗತರಲ್ಲಿ ಭಕ್ತಿವಿಶ್ವಾಸಗಳಿರುವ ಮಾನ್ಯ ಗೃಹಸ್ಥರೂ ದ್ರವ್ಯಸಹಾಯವನ್ನು ಮಾಡಬಹುದು. ೪ ಈ ನಿಧಿಗೆ ಸಹಾಯ ಮಾಡಲಿಚ್ಛಿಸುವವರು ಕನಿಷ್ಠಪಕ್ಷ ೦-೪-೦ಆಣೆಗಿಂತ ಕಡಿಮೆಯಾಗದ ಮೊಬಲಗನ್ನು ತೆರತಕ್ಕದ್ದು. ೫ ತಾ. ೩೧-೧೨-೧೯೨೮ರ ವಳಗೆ ಸ್ಮಾರಕ ನಿಧಿಗೆ ಕನಿಷ್ಠಪಕ್ಷ ರೂ. ೨೫೦/ಯಾದರೂ ಹಣ ಸಂಗ್ರಹ ಮಾಡತಕ್ಕದು. ೬ ಸಂಗ್ರಹವಾದ ಹಣದಲ್ಲಿ ದಿವಂಗತರ ಜ್ಞಾಪಕಾರ್ಥವಾಗಿ ರೂ. ೭೫-೦-೦ ಅಂದಾಜಿನ ತೈಲಚಿತ್ರವನ್ನು ತಯಾರುಮಾಡಿಸಿ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ೧೯೨೯ನೇ ಇಸವಿಯ ವರ್ಧಂತ್ಯುತ್ಸವದ ದಿನ ಅದರ ಅನಾವರಣ ಮಾಡಿಸಿ ಟ್ರೈನಿಂಗ್ ಶಾಲೆಯಲ್ಲಿ ಇಡುವುದು. ೭ ಸ್ಮಾರಕ ನಿಧಿಯಲ್ಲಿ ಉಳಿದ ರೂ. ೧೭೫-೦-೦ ಶಾಶ್ವತ ಧನವಾಗಿ ಬೇಂಕಿನಲ್ಲಿಟ್ಟು ಅದರ ಬಡ್ಡಿಯಿಂದ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಯೋಗ್ಯ ಸ್ಟುಡೆಂಟರಿಗೆ ದಿವಂಗತರ ಹೆಸರಿನಿಂದ ಪಾರಿತೋಷಕವನ್ನು ಕೊಡಿಸಬೇಕು. ೮ ಸಾರ್ವಜನಿಕ ಪ್ರೋತ್ಸಾಹದಿಂದ ಸ್ಮಾರಕ ನಿಧಿಯು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿಗೆ ಸಂಗ್ರಹಿಸಲ್ಪಟ್ಟರೆ ಮಿಕ್ಕುಳಿದ ದ್ರವ್ಯವನ್ನು ಮಹಾಸಭೆಯ ಸೂಚನೆಯಂತೆ ದಿವಂಗತರ ಹೆಸರಿನಲ್ಲಿ ಇತರ ಸದ್ವಿನಿಯೋಗಕ್ಕೆ ನಡಿಸಬೇಕು. ಸ್ಮಾರಕ ಫಂಡಿನ ಹಣ ವಸೂಲಿ ಬಗ್ಗೆ ಪುಸ್ತಕ ಒಂದರ ೨೫ರಂತೆ ೫೦೦ ರಶೀದಿಗಳುಳ್ಳ ೨೦ ಪುಸ್ತಕಗಳನ್ನು ಛಾಪಿಸಬೇಕು. ೧೦ ಈ ರಶೀದಿ ಪುಸ್ತಕಗಳನ್ನು ಹಣ ವಸೂಲಿಯ ಬಗ್ಗೆ ತಾಲೂಕು ಟೀಚರ್ ಮೆನೇಜರ್ ಸಂಘದ, ತಾಲೂಕು ಉಪಾಧ್ಯಾಯರ ಸಂಘದ, ಸೆಂಟರಿನ ಉಪಾಧ್ಯಾಯರ ಸಂಘದ ಮತ್ತು ಟ್ರೈನಿಂಗ್ ಶಾಲೆಯ ಸ್ಟುಡೆಂಟರ ಸಂಘದ ಚಾಲಕರಿಗೂ ಇತರ ಸದ್ಗೃಹಸ್ಥರಿಗೂ ಕಳುಹಿಸಬೇಕು. ೧೧ ಈ ಫಂಡಿಗೆ ಆಗಾಗ್ಗೆ ವಸೂಲಾದ ಹಣವನ್ನೂ ಹೆಸರುಗಳನ್ನೂ ಕೂಡಲೇ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವಂತೆ ಹಣ ವಸೂಲು ಮಾಡಿದವರು ಸಹಾಯ ಕೊಟ್ಟವರ ಸರಿಯಾದ ವಿಳಾಸವನ್ನೂ, ಹಣವನ್ನೂ ಸ್ಮಾರಕ ಫಂಡಿನ ಕಮಿಟಿಯ ಪ್ರೆಸಿಡೆಂಟರಿಗಾಗಲಿ ಸೆಕ್ರೆಟರಿಯವರಿಗಾಗಲಿ ಆದಷ್ಟು ಬೇಗನೇ ರವಾನಿಸತಕ್ಕದ್ದು. ೧೨ ರಶೀದಿ ಪುಸ್ತಕ ಪಡಕೊಂಡವರು ಮೂಲಪ್ರತಿಗಳಿರುವ ವ ಖರ್ಚಾಗದೆ ಉಳಿದ ರಶೀದಿಗಳ ಸಮೇತವಿರುವ ಪುಸ್ತಕವನ್ನು ತಾ. ೩೧-೧೨-೨೮ರ ಮೊದಲು ತಪ್ಪದೆ ಸ್ಮಾರಕ ಫಂಡಿನ ಕಮಿಟಿಯ ಪ್ರೆಸಿಡೆಂಟರ ಯಾ ಸೆಕ್ರೆಟರಿಯವರ ವಶಕ್ಕೆ ಕಳುಹಿಸತಕ್ಕದ್ದು.

ದಿವಂಗತ ಯಮ್. ಬಾಬು ಬಿ.ಎ.ಎಲ್.ಟಿ.ಯವರ ಸ್ಮಾರಕ ಫಂಡಿಗೆ ವಸೂಲಾದ ದ್ರವ್ಯಸಹಾಯ.

ಉಡುಪಿತಾಲೂಕು ಕುರ್ಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರ್ ಕೆ. ಗಣಪಯ್ಯ ಸೆಟ್ರಿಂದ ರೂ. ೫; ಮಂಗಳೂರು ತಾಲೂಕು ಕೋಟೆಕಾರ್ ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರ್ ಕೆ. ಸುಬ್ಬಣ್ಣಯ್ಯನವರಿಂದ ರೂ. ೫; ಕಾರ್ಕಳ ತಾಲೂಕು ನಕ್ರೆ ಶಾಲೆಯ ಮೆನೇಜರ್ ಯನ್. ದೂಮಣ್ಣ ನಾಯ್ಕರಿಂದ ರೂ. ೨-೦-೦ ಜುಮ್ಲಾ ರೂ. ೧೨-೦-೦.

ಕೆ. ಗಣಪಯ್ಯ ಸೆಟ್ರು, ಪ್ರೆಸಿಡೆಂಟ್,
ದಿವಂಗತ 'ಎಮ್. ಬಾಬು ಸ್ಮಾರಕ ಫಂಡ್' ಕಮಿಟಿ.

ಹಿಂದೂಸ್ಥಾನದ

ಸ್ತ್ರೀಯರಿಗೆ

ಹೆಚ್ಚಿನ ಆರೋಗ್ಯ

[illegible] ಫೆಲೂನಾ ಮಾತ್ರೆ ಹೆಂಗಸರಿಗೆ ಮಾತ್ರ ಇವುಗಳು ದೊರಕುವಂತೆ [illegible] ಉಪಯೋಗಕ್ಕೆ ತರಲ್ಪಟ್ಟವೆಯೊ, ಅಲ್ಲಿ ಅವುಗಳ ಫಲಕಾರಿತೆಯು ತಕ್ಷಣವೇ [illegible] ಈ ಔಷಧಿಯನ್ನು ಮುಟ್ಟುದೋಷಗಳನ್ನು ನಿವಾರಿಸಿ, ಹೊಸದಾದ ಉತ್ತಮ ರಕ್ತವನ್ನು [illegible] ಶಕ್ತಿಯನ್ನೂ ಕೊಡುವ, ಇತ್ತೀಚಿಗಿನ ಅತ್ಯಂತ ಮಹತ್ವದ ವೈದ್ಯಕೀಯ ಶೋಧನವಾಗಿ [illegible] ಎಲ್ಲರಿಗೂ ದೊರಕಲಾಗುವಂತೆ, ಆದರ ಬೆಲೆಯೂ ಕಡಿಮೆಯಾಗಿ ನಿಶ್ಚಯಿಸಲ್ಪಟ್ಟಿರುವುದು.

[illegible]

ಫೆಲೂನಾ ಮಾತ್ರೆಗಳ ಸೇವನೆಯಿಂದ, ರಜಸ್ವಲೆಯಾಗಲಿರುವ ಹುಡುಗಿಯರಿಗೆ [illegible] ಅವರಿಗೆ ಈ ಶಕ್ತಿಕಾರಕ ಔಷಧದ ರಕ್ತವನ್ನು ಹೆಚ್ಚಿಸುವ [illegible] ಕ್ರಮಪಡಿಸುವ ಸಹಾಯವು ಅಗತ್ಯವಿದೆ. ಫೆಲೂನಾ ಮಾತ್ರೆಗಳಲ್ಲಿ [illegible] ಹೀರಿಕೊಳ್ಳಬಹುದಾದ ರೂಪದಲ್ಲಿ ಕಬ್ಬಿಣವಿದೆ. ಮೈಯಲ್ಲಿ ರಕ್ತವಿಲ್ಲದ [illegible] ಫೆಲೂನಾ ಮಾತ್ರೆಗಳ ಸೇವನೆಯ ನಂತರ ತನ್ನ ಮುಖದಲ್ಲಿ ಬೀರಿಬರುವ [illegible] ಫೆಲೂನಾ ಮಾತ್ರೆಗಳ ರಕ್ತರಚನೆಯ ಶಕ್ತಿಯು ರಕ್ತವನ್ನು ಅಭಿ[illegible] ತೋರಿಸಿಕೊಳ್ಳುವಳು. ಪ್ರಾಯಶಃ, ಪ್ರಸವ ಸಮಯ [illegible] ಅಲಕ್ಷ್ಯದಿಂದ ಉಂಟಾದ ನೋವುಗಳಿಂದ ಜೀವನದಲ್ಲಿ ಬೇಸರಿಕೆ [illegible] ಉಂಟಾದವರಾಗಿ, ಗೃಹಕರ್ತವ್ಯಗಳೂ ಸಂಸಾರದ ತಾಪತ್ರಯಗಳೂ [illegible] ಹೊರೆಯಾಗಿ ಕಾಣುವ ಹೆಂಡಂದಿರೂ ತಾಯಂದಿರೂ ಫೆಲೂನಾ ಮಾತ್ರೆಗಳ [illegible] ಶಕ್ತಿಕಾರಕ ಅನುಭವವನ್ನು ಪಡೆಯುವರು. ಮತ್ತು ಪ್ರಾಯ ಹೆಚ್ಚಿ [illegible] ಪರಿವರ್ತನೆಯ ಸಮಯ ಬರುವಾಗ, ಈ ಸಮಯದಲ್ಲಿ ಸರ್ವಸಾಮಾನ್ಯ [illegible] ನೈಬೆವರುವಿಕೆ, ತಲೆತಿರುಗುವಿಕೆ, ಸ್ಮೃತಿ ತಪ್ಪುವಿಕೆ ಮತ್ತು ಇತರ [illegible] ಫೆಲೂನಾ ಮಾತ್ರೆಗಳನ್ನು ವಿರಾಮಕರವೂ ಪ್ರಶಾಂತವೂ ಆದ ಆರೋಗ್ಯಕರ [illegible] ಉಪಯೋಗಿಸಿದ್ದಲ್ಲಿ ಖಂಡಿತವಾಗಿ ತಲೆದೋರಲಾರವು.

ಫೆಲೂನಾ ಮಾತ್ರೆಗಳು

ಶುಚಿಮಾಡುವುದು, ಗುಣಮಾಡುವುದು, ರೋಗನಿವಾರಣೆ ಮಾಡುವುದು, ದೇಹವನ್ನು ಸರಿಯಾದ ಕ್ರಮಕ್ಕೆ ತರುವುದು.

ಅಶಕ್ತಿ	ಹರಿವಾತ
ಮಲಬದ್ಧತೆ	ಸೊಂಟ ನೋವು
ಧಾತುನಷ್ಟ	ದೌರ್ಬಲ್ಯ
ರಕ್ತಹೀನತೆ	ಕೈಕಾಲು ನೋವು
ತುರಿಸುವಿಕೆ	ಉತ್ಸಾಹಹೀನತೆ
ಅಶುದ್ಧರಕ್ತ	ಅರಸಿನ ಮುಖಛಾಯೆ
ತಲೆ ತಿರುಗುವಿಕೆ	ಹೊಲಸು ಉಸಿರು
ಮೂರ್ಛೆಹೋಗುವಿಕೆ	ತಲೆನೋವು
ಧೃತಿಗೆಡುವಿಕೆ	ಬೆನ್ನು ನೋವು
ಚುಚ್ಚುವ ಬೇನೆ	ಅಂಗಾಯಾಸ
ಅಜೀರ್ಣ	ಮುಟ್ಟಿನ ಅಕ್ರಮಗಳು
ಕಣ್ಣುಗಳ ಜಡತ್ವ	ಮುಪ್ಪಿನ

ಈ ಮೇಲಿನ ರೋಗಗಳಲ್ಲಿ ಯಾವುದಾದರೂ ನಿಮಗೆ ಬಾಧಿಸುವುದಾದರೆ, ಫೆಲೂನಾ ಮಾತ್ರೆಗಳು ಕಾರಣವನ್ನು ಹುಡುಕಿ, ವಿಷವನ್ನು ನಿವಾರಿಸಿ, ಸ್ನಾಯುಗಳನ್ನು ಘಟ್ಟಿಪಡಿಸಿ, ಆರೋಗ್ಯಕ್ರಮವನ್ನು ಭದ್ರಪಡಿಸಿ, ಅವಯವಗಳನ್ನು ಬಲಮಾಡಿ, ಹೊಸ ತೇಜಸ್ವೀ ರಕ್ತವನ್ನು ಕೊಟ್ಟು ಜೀವನವೆಂದರೊಂದು ಆನಂದದ ಅನುಭೂತಿಯಾಗ ಮಾಡುವುದು.

ಫೆಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ—ಇವುಗಳು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ, ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ ಎಲ್ಲಿಯೂ ದೊರಕುವುವು.

ಹೆಚ್ಚಿನ ಮಾಹಿತಿಗಾಗಿ ಕಾಗದಗಳನ್ನೂ ವಿ. ಪಿ. ಮೂಲಕ ಕಳುಹಿಸಲಿಕ್ಕೆ ಆರ್ಡರುಗಳನ್ನೂ

ಮೆಸ್ಸರ್ಸ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

(ಪೋಸ್ಟ ಆಫೀಸು ಬೊಕ್ಸ 838) ಅಥವಾ ಕಲ್ಕತ್ತಾ (ಪೋಸ್ಟ ಆಫೀಸು ಬೊಕ್ಸ 620)

ಇವರು ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು.

Product of Graham Remedies Ltd , Cape Town, South Africa. 92

ಸ್ಫುಟ ವಿಚಾರಗಳು.

ಮೈಸೂರು ಮುಸ್ಸೊಲೀನಿ.

ಬ್ರಿಟಿಷ ರಾಜತಂತ್ರಕ್ಕೂ ಹಿಂದೀ ರಾಜತಂತ್ರಕ್ಕೂ ಇರುವ ತಾರತಮ್ಯವನ್ನು ಮೈಸೂರು ಎಸೆಂಬ್ಲಿಯಲ್ಲಿ ಸ್ಪಷ್ಟವಾಗಿ ಕಂಡಂತಾಯಿತು. ಆಡಳಿತ ವಿಷಯದಲ್ಲಿ ಪ್ರಜಾಪ್ರತಿನಿಧಿಗಳು ಪ್ರಶ್ನೆಹಾಕುವುದೂ, ಸರಕಾರದವರು ಅದಕ್ಕೆ ತಕ್ಕುದಾದ ಉತ್ತರವನ್ನು ಕೊಡುವುದೂ ನಾಗರಿಕ ಸರಕಾರದ ಸಲ್ಲಕ್ಷಣವಾಗಿರುತ್ತದೆ. ಒಂದು ಪ್ರಶ್ನೆಗೆ ಉತ್ತರಕೊಡಲಿಕ್ಕೆ ಸರಕಾರಕ್ಕೆ ತೊಂದರೆಯಾಗುವುದೆಂದು ಅದನ್ನು ನಿರಾಕರಿಸಲಾಗುವುದಿಲ್ಲ. ಸರಕಾರವು ತನ್ನ ಪ್ರತ್ಯುತ್ತರದಲ್ಲಿಯೇ ತನ್ನ ಪ್ರತಿಬಿಂಬವನ್ನು ಕಾಣಬೇಕೆಂಬ ಉದ್ದೇಶದಿಂದಲೇ ಈ ಕ್ರಮವು ಅನುಸರಿಸಲ್ಪಡುತ್ತಿದೆ. ಹಿಂದೀ ಲೆಜಿಸ್ಲೇಟಿವ್ ಕೌನ್ಸಿಲುಗಳಲ್ಲಿಯೂ ಎಷ್ಟೋ ತರದ ಪ್ರಶ್ನೆಗಳು ಕೇಳಲ್ಪಡುತ್ತಿವೆ. ಒಂದೊಂದು ಬಾರಿ ಸರಕಾರವು ಪ್ರತ್ಯುತ್ತರವನ್ನೇ ಕೊಡಲೊಪ್ಪುವುದಿಲ್ಲ ನಿಜ. ಆದರೆ ಕಳೆದ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ದಿವಾನರು ಯುಕ್ತಿ ತಪ್ಪಿದಂತೆ ಹಿಂದೀ ಎಸೆಂಬ್ಲಿಯಲ್ಲಿ ಬ್ರಿಟಿಷ ರಾಜತಂತ್ರಜ್ಞ ಯುಕ್ತಿ ತಪ್ಪದು ಅಪರೂಪವಾಗಿದೆ. ಸರಿಯಾದ ಉತ್ತರವನ್ನು ಕೊಡುವ ಬದಲಿಗೆ "ಉತ್ತರ ಕೊಡುವುದಿಲ್ಲ; ಕೂಡ್ರಿ ಸುಮ್ಮನೆ; ಇಲ್ಲವಾದರೆ ಎದ್ದು ಹೋಗಿ"—ಎಂದು ದಿವಾನರು ಅಪ್ಪಣೆಕೊಟ್ಟು ಸರಕಾರದ ಮೇಲಿನ ವಿಶ್ವಾಸವನ್ನು ಕಳೆಕೊಂಡಂತಾಯಿತೇ ಹೊರತು ಪ್ರಶ್ನೆಯಿಂದ ಮೇಲೆ ಬಂದ ಸಂದೇಹಗಳನ್ನು ನಿವಾರಿಸಿದಂತಾಗಲಿಲ್ಲ. ಸಂಬಂಧಪಟ್ಟ ಸದಸ್ಯರು, ಅವರ ಪಕ್ಷೀಯರೂ ಹೊರಗೆ ಹೋಗುವಾಗ ಸಂತೋಷದಿಂದ ದಿವಾನರ ಧೈರ್ಯವು ದೊಡ್ಡದಿರಬಹುದಾದರೂ ಅವರನ್ನು ಅದಕ್ಕಾಗಿ ಅಭಿನಂದಿಸಲಾರೆವು. ಇಟೇಲಿಗೊಬ್ಬ ಮುಸೊಲೀನಿಯು ವಿಜಯಿಯಾಗಿದ್ದಿರಬಹುದು. ಆದರೆ ಮೈಸೂರಿನಲ್ಲೂ ಮುಸೋಲಿನಿಗೊಬ್ಬನಿಗೆ ಸ್ಥಾನವಿದೆಯಾಗಿ ನಾವು ತಿಳಿಯುವುದಿಲ್ಲ.

ಕರ್ನಾಟಕ ಏಕೀಕರಣ ಪರಿಷತ್ತು.

ಧಾರವಾಡದಲ್ಲಿ, ಕರ್ನಾಟಕ ಏಕೀಕರಣದ ಪರಿಷತ್ತಿನ ಅಧ್ಯಕ್ಷರಾಗಿದ್ದ ರಾ| ಸಾ| ಪಿ. ಜಿ ಹಳಕಟ್ಟಿ, ಇವರ ಅಧ್ಯಕ್ಷ ಭಾಷಣವು ಈ ಕಠಿಣ ಸಮಸ್ಯೆಗೆ ಪ್ರಕೃತದ ಪರಿಸ್ಥಿತಿಗಿಂತಲೂ ಹೆಚ್ಚಿನ ಸುಧಾರಣೆಯನ್ನುಂಟುಮಾಡಲು ಸಹಕಾರಿಯಾಗಿರುವುದಿಲ್ಲ. ಕರ್ನಾಟಕ ಏಕೀಕರಣದ ಆವಶ್ಯಕತೆ ಮತ್ತು ಅದರಲ್ಲಿ ಕಾಣುವ ಹಲವು ತಡೆಗಳ ವಿಷಯ ಸ್ವದೇಶಾಭಿಮಾನಿಯು ಹಲವು ಬಾರಿ ತನ್ನ ವಿಚಾರಗಳನ್ನು ಕೊಟ್ಟಿದೆ. ಅಲ್ಲದೆ ಆಗಾಗ ಪ್ರಕಟವಾಗುತ್ತಿರುವ ಇತರರ ಲೇಖಗಳನ್ನೂ ಪರಿಶೀಲಿಸಿಯದೆ. ಆದರೆ ಏಕೀಕರಣವು ಅಷ್ಟೊಂದು ಸುಲಭವಾದುದಲ್ಲವೆಂದೂ ಅದರ ತೀರ್ಮಾನದ ಬಗ್ಗೆ ಈ ವರೆಗೆ ಸಮರ್ಪಕವಾದ ಉಪಾಯವನ್ನು ಯಾರೂ ಮುಂದೆ ತರಲಿಲ್ಲವೆಂದೂ ನಾವು ಹೇಳಬೇಕಾಗುತ್ತದೆ. ಏಕೀಕರಣ ಪರಿಷತ್ತಿನ ಅಧ್ಯಕ್ಷ ಭಾಷಣವು ಈ ಕಡೆಗೆ ಸಹಾಯಮಾಡಬಹುದೆಂದು ಆಶಿಸಲಾಗಿತ್ತು. ಆದರೆ ಈ ವರೆಗೆ ಹಲವು ಕೊಡಲ್ಪಟ್ಟ ಸೂಚನೆಗಳ ಹೊರತಾಗಿ ಏಕೀಕರಣಕ್ಕಾಗಿ ನಿಜವಾಗಿ ಎದುರು ನಿಲ್ಲುವ ಕಠಿಣ ಪ್ರತಿಬಂಧಕದ ಬಗ್ಗೆ ಏನು ಮಾಡಬಹುದೆಂಬುದರ ಬಗ್ಗೆ ಅಧ್ಯಕ್ಷರು ಯಾವ ಅಭಿಪ್ರಾಯವನ್ನೂ ಪ್ರಕಟಿಸಿಲ್ಲ. ಏಕೀಕರಣಕ್ಕೋಸ್ಕರ ಕಾಂಗ್ರೆಸ್ ಪ್ರಾಂತರಚನೆ, ಗಡಿನಾಡುಗಳಲ್ಲಿ ಪ್ರಚಾರಕಾರ್ಯ ಮೊದಲಾದ ಪ್ರಯತ್ನಗಳನ್ನು ಸೂಚಿಸಿದರು; ಮುಂದೈ ಸರಕಾರದ ಸಹಾನುಭೂತಿಯ ಅಭಾವವನ್ನು ಖಂಡಿಸಿದರು; ಸ್ವಾಮನ್ ಬಹಿಷ್ಕಾರದ ಆವಶ್ಯಕತೆಯನ್ನು ತೋರಿಸಿ[illegible]ರು; ಪ್ರಾಂತದ ಆಯವ್ಯಯ ಸರಿದೂಗಬಹುದೆಂದು ತೋರಿಸಿ [illegible]ವಲಂಬಿಯಾಗಲಿಕ್ಕೆ ತೊಂದರೆ ಇಲ್ಲವೆಂದರು; ಶಾಲಾ[illegible]ನೆ, ಲ್ಯಾಬ್ರರಿ ಸ್ಥಾಪನೆ, ಕ್ರಮಿಕ ಪುಸ್ತಕಗಳ ಪ್ರಕಟಣೆ, [illegible]ಯೇತಿಹಾಸಗಳ ಶೋಧನೆ, ಭಾಷೆಯ ವ್ಯವಹಾರ [illegible] ಮೊದಲಾದ ಉಪಾಯಗಳಿಂದ ಕರ್ನಾಟಕತ್ವದ[illegible]ನ್ನು ರೂಪಿಸಿದರು; ಕೌನ್ಸಿಲು ಪ್ರಯತ್ನ, ನಿಷ್ಫಲ[illegible]ತ ಪಾರ್ಲಿಮೆಂಟು ವರೆಗೆ ನಿಯಮಬದ್ಧ ಪ್ರಯತ್ನ[illegible]ವು ತಿಳಿಸಿದರು; ಏಕೀಕರಣ ಸಂಘದ ಪರಿಣಾಮ[illegible]ವನ್ನು ಮಾಡಬೇಕೆಂದರು; ಅಲ್ಪ ಸಂಖ್ಯಾಕ[illegible] ವಿಶ್ವಾಸವನ್ನು ನೆಲಸುವ ಆವಶ್ಯಕತೆಯನ್ನು [illegible]ದರೆ ಮೈಸೂರಿನ ಸುತ್ತು ಹಲವು ಸರಕಾರ[illegible] ಹಂಚಿಹೋದ ಕರ್ನಾಟಕವನ್ನು ಒಟ್ಟು[illegible]ಬುದಕ್ಕೆ ಯಾವ ಉತ್ತರವನ್ನೂ ಕೊಡ[illegible]ಳವಳದಲ್ಲಿ ಈ ಅತ್ಯಂತ ಮುಖ್ಯವೂ ಆದರ ಸಾಧ್ಯತೆಗೆ ಬಹಳ ದೊಡ್ಡ ತೊಡಕೂ ಆದ ಈ ಪ್ರಶ್ನೆಗೆ ಎಲ್ಲಿಯೂ ಸಮರ್ಪಕವಾದ ಉತ್ತರವು ಕಾಣುವುದಿಲ್ಲ.

ಮಂಗಳೂರು ಮಲ್ಪೆ ಹಾದಿ.

ಮಂಗಳೂರು ಮಲ್ಪೆ ರೈಲುಹಾದಿಯು ಯಾವ ಮಾರ್ಗವಾಗಿ ಹೋಗಬೇಕೆಂಬುದರ ವಿಷಯ ಈಗ ಬಹಳ ಆಲೋಚನೆ ನಡಿಯುತ್ತಲಿದೆ. ಮೊದಲು ಕರಾವಳಿ ಮಾರ್ಗವು ಸರ್ವೇ ಮಾಡಲ್ಪಟ್ಟು ಸರ್ವೇ ಅಧಿಕಾರಿಗಳು ಹಿಂದೆ ಹೋಗುವ ಮೊದಲು ಕಾರ್ಕಳ ಜನರು ಸರಕಾರಕ್ಕೆ ಮನವಿಮಾಡಿ, ಅದು ಕಾರ್ಕಳ ಮಾರ್ಗವಾಗಿ ಹೋಗಬೇಕೆಂದು ಪ್ರಯತ್ನಿಸಿ, ಈಗ ಕಾರ್ಕಳ ಮಾರ್ಗವು ಸರ್ವೇ ಆಗಲು ಪ್ರಾರಂಭವಾಗಿಯದೆ. ಆದರೆ ಮೂಲ್ಕಿಯಲ್ಲಿ ಕರಾವಳಿ ಮಾರ್ಗವಾಗಿ ರೈಲು ಹಾದಿ ಹೋಗಬೇಕೆಂಬುದಾಗಿ ಪ್ರಯತ್ನ ನಡಿಯುವುದಾಗಿ ತಿಳಿಯುತ್ತೇವೆ. ಈಗ ರೈಲು ಹಾದಿಯನ್ನು ಕಟ್ಟುವ ಖರ್ಚನ್ನು ನೋಡಿದರೆ ಕರಾವಳಿ ಮತ್ತು ಕಾರ್ಕಳ ಮಾರ್ಗಗಳಲ್ಲಿ ಖರ್ಚು ಅಷ್ಟೊಂದು ಹೆಚ್ಚು ಕಡಿಮೆಯಾಗಲಾರದು. ಮಾತ್ರವಲ್ಲದೆ ಕರಾವಳಿಯ ಸಮಪ್ರದೇಶವನ್ನು ಬಿಟ್ಟು ಕಾರ್ಕಳದ ಏರುತಗ್ಗುಗಳಿಂದ ಹಾದುಹೋಗುವುದರಿಂದ ರೈಲ್ ವ್ಯವಹಾರಕ್ಕೆ ಚೆನ್ನಾಗಿರುವುದಿಲ್ಲ. ಮಲಬಾರ ಕರಾವಳಿಯಲಿ ರೈಲು ಕರಾವಳಿಯಿಂದಲೇ ಹಾದು ಹೋಗುವುದರಿಂದ ಈ 37 ಮೈಲುಗಳಿಗೆ ಬದಲಾವಣೆಯ ಅಗತ್ಯ ತೋರುವುದಿಲ್ಲ. ವ್ಯಾಪಾರ ವ್ಯವಹಾರಗಳಿಗೆ ಕರಾವಳಿಯಷ್ಟು ಸಹಾಯಕ ಸ್ಥಳವು ಇನ್ನೊಂದಿಲ್ಲ. ಕಾಡು ಉತ್ಪನ್ನಗಳನ್ನು ಸಾಗಿಸಲಿಕ್ಕೆ ಕಾರ್ಕಳವು ಒಳ್ಳೆಯದೆನ್ನುವುದಾದರೂ, ಇದಕ್ಕೆ ಸಂಬಂಧಪಟ್ಟ ಕಾಡು ಉತ್ಪನ್ನವು ಬಹಳ ಸ್ವಲ್ಪವೇ ಆಗಿದೆ. ಹುಲ್‌ಕಲ್, ಆಗುಂಬೆ ಶಿರಾಡಿ ಘಾಟಿಗಳ ಮಾರ್ಗಗಳ ಮತ್ತು ವ್ಯವಹಾರಗಳ ಸುಧಾರಣೆಯೊಂದಿಗೆ ಕಾಡು ಉತ್ಪನ್ನಕ್ಕೆ ಮಂಗಳೂರೇ ಹೆಚ್ಚು ಪ್ರಾಮುಖ್ಯವನ್ನು ಹೊಂದಿರುವುದರಿಂದ, ಅದಕ್ಕಾಗಿ ಕಾರ್ಕಳ ಕಡೆಗೆ ರೈಲು ಹಾದಿಯನ್ನು ತೆಗೆದುಕೊಂಡು ಹೋಗುವ ಆವಶ್ಯಕತೆಯಿಲ್ಲ. ಆದುದರಿಂದ ರೈಲ್ವೆ ಅಧಿಕಾರಿಗಳು ಕರಾವಳಿ ಮಾರ್ಗವಾಗಿ ರೈಲು ಮಾರ್ಗವನ್ನು ಹಾಕುವರಾಗಿ ನೆನಸುವೆವು.

ಚೈನಾದಲ್ಲಿ.

ನೇಶನಲಿಸ್ಟ ಪಕ್ಷದ ಪೆಕಿಂಗ್ ಪ್ರದೇಶದೊಡನೆ ಚೀನಾದೇಶದ ಅಂತಃ ಕಲಹಗಳು ಕೊನೆಗಾಣುವುವೋ ಎಂಬಾಸೆಯು ಉಂಟಾಗುತ್ತಿದ. ಅದರಲ್ಲೂ ಉತ್ತರ ಸೈನ್ಯಗಳ ಅಧಿಪತಿಯಾಗಿದ್ದ ಚಾಂಗ್‌ತ್ಸೊಲೀನನು ಬೊಂಬ್ ಅತ್ಯಾಚಾರದಿಂದ ಮರಣಹೊಂದಿದನೆಂಬ ವಾರ್ತೆಯು ಅತ್ಯಾಚಾರಿಗಳ ಕಡೆಗೆ ತಿರಸ್ಕಾರವನ್ನುಂಟುಮಾಡುವುದಾದರೂ, ಚೀನೀಯ ಅಂತಃ ಕಲಹದ ಆಖೈರಿಯ ಕೃತ್ಯವೆಂದು ನೆನಸುವಂತಾಗಿದೆ ಪೌರ್ವಾತ್ಯಮಾನಸಿಕತೆಯನ್ನು ಚೆನ್ನಾಗಿ ಅಳೆಯಲಾಗುವುದಿಲ್ಲ. ಆದರೆ ಚೀನೀಯರು ಜಾಪಾನಿನಿಂದ ಘಾತವನ್ನು ಹೊಂದಿರುವರಾದರೆ ಚೀನದ ಭವಿಷ್ಯತ್ತಿನ ವಿಷಯದಲ್ಲಿ ಹೆಚ್ಚಿನ ಸಂದೇಹವಿರಲಾರದು. ಚೀನದ ನೇಶನಲಿಸ್ಟ ಪಕ್ಷಗಳ ಮೂಲ ಸೂತ್ರಗಳು ಉಚ್ಚಧ್ಯೇಯದಿಂದಲೂ, 'ಸನ್‌ಯತ್‌ಸೇನ್'ನಂತಹ ದೇಶಪ್ರೇಮಿಯ ಸ್ವಾರ್ಥತ್ಯಾಗದಿಂದಲೂ ರಚಿಸಲ್ಪಟ್ಟವುಗಳಾದುದರಿಂದ ಇನ್ನಾದರೂ ಚೀನವೂ ರಚನಾತ್ಮಕ ಕಾರ್ಯಕ್ರಮಕ್ಕೆ ತೊಡಗಿ ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸಿ, ಜನಾಂಗದ ಅಭಿವೃದ್ಧಿಯಲ್ಲಿ ತೊಡಗಿ, ಪರದೇಶೀಯರ ಬಲಾತ್ಕಾರದ ಕೈಗಳನ್ನು ಹೊರದೂಡಿ ಲೋಕದ ಪ್ರಮುಖ್ಯ ರಾಷ್ಟ್ರಗಳಲ್ಲಿ ಒಂದಾಗುವುದೆಂದು ನೆನಸುವೆವು. ಚೀನಾದೇಶವು ಈ ವರೆಗೆ ಬಹಳ ಕಷ್ಟಗಳನ್ನು ಅನುಭವಿಸಿಯದೆ. ತನ್ನ ಮುಖಂಡರೆನ್ನಿಸಿಕೊಳ್ಳುವವರ ಸ್ವಾರ್ಥದ ಝುಂಝಾಟ ಒಂದುಕಡೆ ಪರದೇಶೀಯರ ಅತ್ಯಾಚಾರದ ಸುಲಿಗೆ ಇನ್ನೊಂದೆಡೆ; ಇವುಗಳಿಂದ ಬಳಲಿದ ಚೀನಕ್ಕೆ ಇನ್ನಾದರೂ ಅಭಿವೃದ್ಧಿಯ ಹಾದಿಯು ದೊರೆಯಲೆಂದು ಆಶಿಸುತ್ತೇವೆ.

ವನೊಡನೆ ಜಗಳದ ಕಾರಣ ಕೇಳಿದ. "ಅವನು ನನ್ನ ಹೆಂಡತಿಗೆ ತಿರುಕುಳಿ ಎಂದು ಹೇಳಬಹುದೋ" ಎಂದು ಅವನು ಹೇಳಿದ. ಬಿಡಿಸಿದವನು "ನಿನಗೆ ಮದುವೆಯಾಗಲಿಲ್ಲವಲ್ಲ" ಎಂದ. ಅದಕ್ಕೆ ಪ್ರತಿಯಾಗಿ ಅವನು—ಆಗದಿದ್ದರೇನು! ಅದರ ಅವಮಾನ ನೋಡು" ಎಂದ.

• • • •

ತಮ್ಮ ಧ್ಯೇಯಕ್ಕಾಗಿ ಜಗಳವಾಡುವವರು ಇಂತಹರು ಎಷ್ಟು ಮಂದಿ ಇಲ್ಲ.

ನೋಟಗಳು.

NOTE...S.

ರಾಷ್ಟ್ರಬಂಧುವು ಅನ್ನುತ್ತಾನೆ—ಆಯುರ್ವೇದ ಪರಿಷತ್ತಿನಲ್ಲಿ ಸಂಸ್ಕೃತ ಮಾತಾಡಿದರೆ ಆಕ್ಷೇಪಿಸಬೇಕು. ಇಂಗ್ಲೀಷ್‌ ಮರಾಠಿ ಇನ್ನಾವುದು ಬೇಕೋ ಅದನ್ನು ಮಾತಾಡಿದರೆ ಮನ್ನಿಸಬೇಕು. ಇದು ಸಂಕುಚಿತ ಮಾನಸಿಕತೆಯುಲ್ಲ. ವಿಶಾಲ ಮಾನಸಿಕತೆ.

• • • •

ಕುಂಬಳ ಕಾಯಿಯ ಬೂದಿ ನಮ್ಮ ಹೆಗಲ ಮೇಲಿದ್ದರೂ ರಾಷ್ಟ್ರಬಂಧು ಎತ್ತಿತೋರಿಸುವ ಈ ದೊಡ್ಡ ಕುಂಬಳ ಕಾಯಿಯು ನಮ್ಮ ಹೆಗಲ ಮೇಲಿನದಲ್ಲವೆಂದು ಸೂಚಿಸಬೇಕಾಗುತ್ತದೆ.

• • • •

ಕುಂಬಳ ಕಾಯಿ ಪತ್ತೇದಾರಿಯಲ್ಲಿ ರಾಷ್ಟ್ರಬಂಧುವು ಬಹಳ ಚತುರನಿರಬಹುದು. ಆದರೆ ಪತ್ರವ್ಯವಹಾರಗಳ ಪ್ರಕಟನೆಯಲ್ಲಿ ಪತ್ರಿಕೆಗೂ ಒಂದು ಪ್ರತ್ಯೇಕ ಜವಾಬ್ದಾರಿ ಇದೆ ಎಂದು ರಾಷ್ಟ್ರಬಂಧುವು ತಿಳಕೊಂಡರೆ ಈ ಪತ್ತೇದಾರಿ ಕೆಲಸದ ಆವಶ್ಯಕತೆ ಇರುತ್ತಿರಲಿಲ್ಲ.

• • • •

ಕರ್ನಾಟಕ ಏಕೀಕರಣವಾಗಬೇಕೆಂದು ಎಲ್ಲರೂ ಹೃತ್ಪೂರ್ವಕವಾಗಿ ಪ್ರಯತ್ನಿಸುವಾಗ ಇಂತಹ ಪತ್ರವ್ಯವಹಾರಗಳ ಭಿನ್ನಸೂಚನೆಗಳನ್ನು ಪ್ರಕಟಿಸಿದರೆ, ಆ ಉದ್ದೇಶಕ್ಕೆ ಭಂಗ ಬರುವುದು ಸಾಧ್ಯವಿದೆ, ಆದುದರಿಂದ ಏಕೀಕರಣಕ್ಕಾಗಿ ಮನಃಪೂರ್ವಕ ಚಿಂತಿಸುವ ಪತ್ರಿಕೆಗಳು ಇಂತಹ ಪತ್ರವ್ಯವಹಾರಗಳನ್ನು ಸಾಕಷ್ಟು ಕಾರಣಗಳಿಲ್ಲದೆ ಪ್ರಕಟಿಸುವುದು ಉಚಿತವಲ್ಲ.

• • • •

ವಿಕಟ ವಿನೋದಿನಿಯು ತನ್ನ ವಿಕಟ ಸ್ವರೂಪವನ್ನು ಸ್ವದೇಶಾಭಿಮಾನಿಗೆ ತೋರಿಸುತ್ತಿದೆ. ಸ್ವದೇಶಾಭಿಮಾನಿಯ ಕೆಲ ಪಂಕ್ತಿಗಳ ಉತ್ತರ ವಿಕಟ ಸ್ವರೂಪದಲ್ಲಿಯೇ ತೋರಿಸಿರುವದು.

• • • •

ಆಯುರ್ವೇದ ಪರಿಷತ್ತು ಇನ್ನೂ ಮುಗಿದಿಲ್ಲ. ರಾಷ್ಟ್ರಬಂಧುವಿನಲ್ಲಿ ತುಪ್ಪದ ಡಬ್ಬಿಗಳ ಖರ್ಚು ಪಟ್ಟಿಗಳು ಪ್ರಕಟವಾಗಿವೆ, ಪರಿಷತ್ತು ಮುಗಿದು ಈಗ ಖರ್ಚಿನ ಪಟ್ಟಿಗಳ ಪತ್ರವ್ಯವಹಾರ.

• • • •

ಮುಲ್ಕಿಗೊಂದು ಹಾಯ್‌ಸ್ಕೂಲ್ ತೆರೆಯಬೇಕಾಗಬೇಕೆಂದು ಹಲವು ವರುಷಗಳಿಂದ ಮನವಿ ಮಾಡಿದಲ್ಲಿ, ಈ ವರ್ಷ ರೂಪಾಯಿ ಇಲ್ಲ ಎಂದು ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರ ಉತ್ತರ.

• • • •

ಮೋಟರ್ ಅವಘಡಗಳು ಕಮ್ಮಿಯಾಗುವ ದಿವಸಗಳು ಹತ್ತಿರವಾಗುತ್ತಲೇ ಬರುತ್ತಿವೆ. ಕೌನ್ಸಿಲುಗಳಲ್ಲಿ ಭಾಷಣ, ಬೇಗನೆ ತಕ್ಕ ಏರ್ಪಾಡನ್ನು ಮಾಡುವದೆಂದು ಉತ್ತರವು ದೊರಕಿರುವುದು.

• • • •

New Broom Sweeps Well. ಎಂಬಂತೆ, ನಮ್ಮ ಬಂಧುವು ಸಿಕ್ಕಿದವರ ಮೇಲೆ ಟೀಕೆಯನ್ನು ಪ್ರಾರಂಭಿಸಿರುವದು. ಇದು ಬಹುಶಃ ಹಣದ ಗೌರವ. ಇದಕ್ಕೆ ದೃಷ್ಟಾಂತ ನಮ್ಮ ಬಂಧುವು ತನ್ನ ಮೊದಲನೇ ಸಂಚಿಕೆಯಲ್ಲಿ ಕೊಟ್ಟಿರುವದು.

• • • •

ಇದು ಅಮೇರಿಕದಲ್ಲಿಯೇ—ಮಿಸ್. ಮೆಯೊಳ ನೆರೆಹೊರೆಯಲ್ಲಿ—೭೦ ವರ್ಷದ ತರುಣನೂ, ೨೦ ವರ್ಷದ ಹುಡುಗನೂ, ೨೦ ವರುಷದ ಹುಡುಗಿಯ ಪ್ರೇಮಕ್ಕಾಗಿ ದ್ವಂದ್ವವನ್ನಾಡಿದುದು!

• • • •

ಈ ಬಾರಿ ಕರ್ನಾಟಕದಲ್ಲಿ ಪರಿಷತ್ತುಗಳ ಸುಗ್ಗಿ! ಠರಾವುಗಳಿಗೆ ಮಿತಿಯಿಲ್ಲ! ಭಾಷಣಗಳಿಗೆ ತಡೆಯೇ ಇಲ್ಲ! ಕಾರ್ಯವೇನೋ ದೇವರೇ ಬಲ್ಲ!

• • • •

ಬರ್ಡೋಲಿಯಲ್ಲಿ ಸತ್ಯಾಗ್ರಹ. ನಾಗಪೂರ ಸತ್ಯಾಗ್ರಹಕ್ಕೆ ತೋರಿಸಿದ ಅಖಿಲಭಾರತೀಯ ಉತ್ಸಾಹವು ಇದಕ್ಕಾಗಿ ತೋರುವುದಿಲ್ಲ. ಆಗ ಒಂದು ಧ್ಯೇಯಕ್ಕಾಗಿ, ಈಗ ಅಸ್ತಿತ್ವಕ್ಕಾಗಿ! ಪ್ರಾಮುಖ್ಯತೆ ಯಾವುದಕ್ಕೂ ನೋಡಿ.

• • • •

ಇಬ್ಬರು ಬಹಳವಾಗಿ ಜಗಳವಾಡುತಿದ್ದರಂತೆ. ಅವರ ಸ್ನೇಹಿತನು ಅವರನ್ನು ಬಿಡಿಸಿ, ಅದರಲ್ಲಿ ಬಹಳ ಕೋಪದಿಂದಿದ್ದ

[illegible]

... ಎಂದು ಅವರು ಹೇಳಿ ... ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರವೆಂದರೆ ಇಂಗ್ಲೆಂಡಿ ... ಕೊಡಲಿಯನ್ನಿಟ್ಟಂತಾಗುವುದು. ಹಿಂದೀ ಸಾಮ್ರಾ ... ಸಾಮ್ರಾಜ್ಯದಲ್ಲಿ ಅತ್ಯಮೂಲ್ಯವಾದ ರತ್ನವಾಗಿದೆ ಎಂದು ... ಕೇವಲ ನಿಜಸ್ಥಿತಿಯಾಗಿದೆ. ... ಅಕ್ಷಯಪಾತ್ರಗಳಂತೆಯೇ ಹಿಂದೂಸ್ಥಾನವು ಅಮೂಲ್ಯವಾಗಿದೆ. ಆ ಅಮೂಲ್ಯತೆಯಿಂದ ತೆಗೆದಷ್ಟು ... ಹಿಂದೂಸ್ಥಾನದ ಈ ಅಕ್ಷಯ ... ಬಿಟ್ಟುಕೊಡುವರೆಂಬ ... ಹಿಂದೂಸ್ಥಾನದಲ್ಲಿ ... ತಿಳುವಳಿಕೆಯು ಶಕ್ತಿಗೆ ಅವಮಾನ ...

... ಅಂದಂತೆ, ಸ್ವತಂತ್ರ ಹಿಂದೂ ... ಕಾಣಿಲಾರದು. ಅದು ... ಇಂಗ್ಲೆಂಡಿನ ಹಿತಕ್ಕೆ ಬಾಧಕ ... ಇಂಗ್ಲೆಂಡಿನ ಹಿತಕ್ಕೆ ತೊಡ ... ಸರಕಾರವು ಹಿಂದೂಸ್ಥಾನಕ್ಕೆ ... ವೈರಾಗಿಯಾಗಿರ ... ಹಿಂದೀ ... ಹನಸಲಾಗಿತ್ತು. ಆದರೆ ... ಮುಂದಾಳು ... ಅನುಭವಿಸಿದಂದಿನಿಂದ ... ತ್ಯಾಗವೆಂಬುದನ್ನು

... ಸರಕಾರವು ಏರ್ಪಟ್ಟ ... ಆರಂಭವಾಗು ... ಸಂಧಾರಿಸಿ ಅವುಗಳು ... ಮಾಡಬೇಕಾಗು ... ಬ್ರಿಟಿಷರೂ ಅನ್ಯ ... ಅವರ ಮಾನಸಿ ... ಹಿಂದೂ ... ಹಿಂದೂ ... ಬೇಕಾಗು ... ಅನುದಿನ ದೇಶ ...

... ಪರಿಮಾಣ ... ಮತ್ತು ಯೋಗ್ಯತೆ ... ಹಿಂದೂಸ್ಥಾನದಲ್ಲಿ ಮೇಲಿನ ... ಸಂದೇಹವಿಲ್ಲ. ... ತಿಳಿಯದೆ ... ಬ್ರಿಟಿಷ ಮಜೂರರ ... ಬ್ರಿಟಿಷ ಮಜೂರರೂ ... ಹಿಂದೂ ... ಕೈಗಾರಿ ... ಹಿಂದೂಸ್ಥಾನದ ಭೂ- ... ಸಂಪತ್ತಿಯೂ, ... ಸಹಕಾರಿಯಾಗಿರು ... ಸಾಧ್ಯತೆಯು ... ಒಂದು ಮಾತ್ರ ... ಕಾರ್ಯದಲ್ಲಿ ... ಹಿಂದೂಸ್ಥಾನವು ... ಪರಿಣಮಿಸುವುದು.

ಜೊನ್ ಸೈಮನರು "ಇಂಡಿಯಾ ಸರಕಾರದ ಮೆಂಬರ ನಾದೆನೆಂಬ ಕಾರಣದಿಂದ ನನ್ನ ಬ್ರಿಟಿಷತನವು ಹೋಗಿಲ್ಲ. ಮೆಂಚೆಸ್ಟರಿನ ಹಿತವು ಹತ್ತಿಯ ಕೈಗಾರಿಕೆಯಲ್ಲಿದ್ದವರ ಹಿತವಷ್ಟೇ ಅಲ್ಲದೆ ವಿಲಾಯತಿಯ ಇಂಗ್ಲೀಷರ ಹಿತವೂ ಅದರಲ್ಲಿದೆ. ಅದನ್ನು ಹೇಳಲಿಕ್ಕೆ ನನಗೆ ನಾಚಿಕೆಯಿಲ್ಲ. ನನ್ನ ದೇಶದ ಕಡೆಗೆ ನಾನು ಮಾಡಬೇಕಾದುದಕ್ಕಿಂತ ದೊಡ್ಡ ಕರ್ತವ್ಯವು ಇನ್ನೊಂದಿಲ್ಲ" ಎಂದು ಹೇಳಿದ ಕರ್ತವ್ಯದ ಮಾನವೇ ಹಿಂದೀ ಸರಕಾರದೊಳಗೂ ಬ್ರಿಟಿಷ ಧೋರಣವಾಗಿದೆ. ಬ್ರಿಟಿಷ ರಾಷ್ಟ್ರೀಯ ಹಿತದ ದೃಷ್ಟಿಯಿಂದ ಇದರಲ್ಲಿ ಅನ್ಯಾಯವಾಗಲಿ, ನಾಚಿಕೆಪಡುವಂತಹುದೇನೂ ಇಲ್ಲ. ಇದಕ್ಕಿಂತ ಹೆಚ್ಚಿನದನ್ನು ಬ್ರಿಟಿಷರಿಂದ ನಾವು ನಿರೀಕ್ಷಿಸಲಿಕ್ಕೂ ಆಗುವುದಿಲ್ಲ. ಏಕೆಂದರೆ ಹಿಂದೂಸ್ಥಾನಕ್ಕೆ ಬರುವ ಬ್ರಿಟಿಷರು ಬರೇ ಅಲ್ಪ ಸಮಯ ಕ್ಕಾಗಿ ಮಾತ್ರವಿದೆ. ಅವರ ಸರ್ವಸ್ವವೂ ಇಂಗ್ಲೆಂಡಿನಲ್ಲಿಯೇ ಇದೆ. ಮಾನವನ ಸಾಮಾನ್ಯ ಸ್ವಾರ್ಥವನ್ನು ನೋಡಿದರೂ ಈ ಬ್ರಿಟಿಷ ಧೋರಣದಲ್ಲಿ ಅಮಾನುಷವಾದುದೇನೂ ಇರುವುದಿಲ್ಲ.

ಆದರೆ ಬ್ರಿಟಿಷರಿಗೆ ಬ್ರಿಟಿಷ ಕರ್ತವ್ಯವೆಂಬುದು ಹೇಗಿದೆಯೋ ಹಿಂದೀಯರಿಗೆ ಹಿಂದೀ ಕರ್ತವ್ಯವೆಂಬುದಿದೆ. ಮಿಲಿಯಗಟ್ಟಲೆ ಜನರ ಜವಾಬ್ದಾರಿಯು ಹಿಂದೀಯ ಪ್ರತಿ ಒಬ್ಬನ ಮೇಲೂ ಇದೆ. ಉನ್ನತಿಗೆ ಬರಬಲ್ಲ, ಸಾಹಸ್ಯ ಕಷ್ಟಗಳನ್ನು ತೆಗಿಯಬಲ್ಲ, ಕಷ್ಟಪಟ್ಟು ಸಂಪನ್ನವಾಗಬಲ್ಲ, ಈ ವಿಶಾಲ ಜನತೆಯು ಈಗ ಅತ್ಯಂತ ನಿಕೃಷ್ಟಾವಸ್ಥೆಯಲ್ಲಿದೆ. ಬ್ರಿಟಿಷ ಸುಖದ ಬಗ್ಗೆ ಇವರು ತಮ್ಮ ಸರ್ವಸುಖವನ್ನು ಕಳೆದು ಸದಾ ಕಾಲವೂ ತ್ಯಾಗಿಗಳಾಗಿಯೇ ಇರಬೇಕೇ?

Survival of the Fittest, ಯೋಗ್ಯರಾದವರೇ ಬಾಳುವರು, ಎಂಬುದು ಡಾರ್ವಿನನ ತತ್ವವಾಗಿದೆ. ಡಾರ್ವಿನನ ಇತರ ತತ್ವಗಳೊಡನೆ ನಾವು ಒಪ್ಪಬಹುದು, ಇಲ್ಲವೇ ಅದನ್ನು ನಿರಾಕರಿಸಬಹುದು. ಆದರೆ ಈ ಮೇಲಿನ ತತ್ವವು ಅಕ್ಷರಶಃ ನಿಜವಾಗಿದೆ. ಪ್ರತಿ ಒಬ್ಬನ ಕರ್ತವ್ಯವೂ ತನ್ನ ಅಸ್ತಿತ್ವವನ್ನು ಭದ್ರಪಡಿಸುವುದರ ಕಡೆಗಿದೆ. ಹಿಂದೀ ವ್ಯಕ್ತಿಯ ಅಸ್ತಿತ್ವವು ಹಿಂದೀ ಜನಾಂಗದ ಅಸ್ತಿತ್ವದಲ್ಲಿ ಸಮ್ಮಿಳಿತವಾಗಿದೆ. ಆದುದರಿಂದ ಹಿಂದೀಯರ ವೈಯಕ್ತಿಕ ಸುಖಕ್ಕಾಗಿಯೂ ರಾಷ್ಟ್ರೀಯ ಅಸ್ತಿತ್ವಕ್ಕಾಗಿಯೂ ನಾವು ಸ್ವರಾಜ್ಯವನ್ನು ಹೊಂದುವುದರಲ್ಲಿ ಬದ್ಧಕಂಕಣರಾಗಬೇಕು. ಮತ್ತು ಅದು ಹೊಂದುವ ಪ್ರಯತ್ನದಲ್ಲಿ ಬ್ರಿಟಿಷರು ತಮ್ಮ ದಾನ ಶೂರತ್ವದಿಂದ ಕೊಡುವರೆಂಬ ಭಾವನೆಯನ್ನು ಸಂಪೂರ್ಣವಾಗಿ ಮರೆತುಬಿಡಬೇಕು. ಬ್ರಿಟಿಷ ದ್ವೀಪಗಳಲ್ಲಿ ಒಬ್ಬನಾದರೂ ಹಿಂದೀ ಸ್ವಾತಂತ್ರ್ಯವನ್ನು ಇಚ್ಛಿಸುವವನಿಲ್ಲವೆಂದೂ, ಯಾವ ಬಿಳೀ ಜನಾಂಗವೂ ಹಿಂದೂಸ್ಥಾನದ ಮೇಲೆ ಸಹಾನುಭೂತಿಯುಳ್ಳದಾಗಿಲ್ಲವೆಂದೂ, ನಮ್ಮ ಸ್ವರಾಜ್ಯ ಸಾಧನೆಯನ್ನು ನಾವು ಒಬ್ಬರಾಗಿಯೇ ಸಾಧಿಸಬೇಕೆಂದೂ ಮೇಲಿನ ವಿಷಯಗಳಿಂದ ತಿಳಿಯದಿರದು.

ವಿದೇಶ ವರ್ತಮಾನ.

— ಅಟ್ಲಾಂಟಿಕ್ ಸಿಟಿಯಲ್ಲಿ ೩೦ ವರುಷ ಪ್ರಾಯದ ಮೇರಿ ಕ್ರೈಸ್ ಎಂಬ ಓರ್ವ ಸುಂದರಿ ಯುವತಿಗಾಗಿ ಅಜ್ಜನೂ, ಮೊಮ್ಮಗನೂ ಕಾದಾಡಿದರು. ಮೊದಲವರು ದ್ವಂದ ಯುದ್ಧವನ್ನು ಮಾಡಿ ಇಬ್ಬರೂ ಸೋಲದೆ ಸರಿಸಮಾನರಾದರು. ಕೊನೆಗೆ ಗುಂಡು ಹೊಡೆದು ಕಾದಾಡುವದೆಂದು ನಿಶ್ಚಯವಾಗಿ, ನೂರು ಹೆಜ್ಜೆಗಳ ಅಂತರದಲ್ಲಿ ನಿಂತುಕೊಂಡು ಅಸ್ತಮಾನದ ಸಮಯ ಗುಂಡು ಹೊಡಕೊಂಡರು. ಅಜ್ಜನು ಹೊಡೆದ ಗುಂಡು ಮೊಮ್ಮಗನ ಬಾಹುವಿಗೂ ಹೊಟ್ಟೆಗೂ ತಾಗಿ ಆತನನ್ನು ಆಸ್ಪತ್ರೆಗೆ ಕೊಂಡೊಯ್ದರು. ಆದರೆ ಅಜ್ಜನಿಗೆ ಯಾವ ಅಪಾಯವೂ ಸಂಭವಿಸಲಿಲ್ಲ. ಪ್ರೇಮದ ಪರಮಾವಧಿ ಇದು.

— ಉತ್ತರ ಧ್ರುವವನ್ನು ಕಂಡುಹಿಡಿಯಬೇಕೆಂದು ಹಾರಿಹೋಗಿದ್ದ 'ಇಟಲಿಯಾ' ಎಂಬ ಹೆಸರಿನ ವಿಮಾನದ ಸುದ್ದಿಯೇ ಇಲ್ಲದಿರುವದು ಆಶ್ಚರ್ಯಕರವಾಗಿದೆ. ನೋರ್ವೆ, ಸ್ವಿಡನ್, ಜಾಪಾನ್, ಈ ಸರಕಾರದವರು ಐಕ್ಯದಿಂದ ಅವರ ಇರುವಿಕೆಯನ್ನು ಗೊತ್ತುಪಡಿಸುವುದಕ್ಕಾಗಿ ಇನ್ನೊಂದು ವಿಮಾನವನ್ನು ಕಳುಹಿಸಲಿಕ್ಕಿರುವರು. ೧೯೨೬ನೇ ಇಸವಿಯಲ್ಲಿ ಉತ್ತರ ಧ್ರುವದ ವರೆಗೆ ಹಾರಿ ಬಂದಿದ್ದ ಚತುರ ವೈಮಾನಿಕ ನೋರ್ವನೇ ಈಗಲೂ ಹೋಗಲು ಸಿದ್ಧನಿರುವನಂತೆ.

— ಬೆಲ್‌ಗ್ರೇಡಿನ ವಿದ್ಯಾರ್ಥಿಗಳು ಶಾಂತತಾಭಂಗವನ್ನೆಸಗಿದುದರ ಪ್ರತಿಫಲವಾಗಿ ೫೦ ಜನ ವಿದ್ಯಾರ್ಥಿಗಳನ್ನು ಹದಿನೈದು ದಿನಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು.

— ರೋಮಿನ ಗವರ್ನರರೂ, ಯುವರಾಜರೂ ಬರುವ ವಾರ ಇಂಗ್ಲೆಂಡನ್ನು ಸಂದರ್ಶಿಸುವರು. ನಮ್ಮ ಮಹಾರಾಜರು ಅವರನ್ನು ಬಕ್ಕಿಂಗ್ ಹಾಮ್ ಅರಮನೆಯಲ್ಲಿ ಎದುರುಗೊಳ್ಳುವರು.

— ಟೆಹರಾನಿಗೆ ಅಫಘಾನದ ಅಮೀರರು ಸಂದರ್ಶನವನ್ನು ಕೊಡುವದರಿಂದ ಅವರನ್ನು ಸ್ವಾಗತೀಕರಿಸುವುದಕ್ಕಾಗಿ ಟೆಹರಾನಿನಲ್ಲಿ ತಯ್ಯಾರಿಯು ಈಗಲೇ ಭರದಿಂದ ನಡೆಯುತ್ತಿದೆ. ೯ನೇ ತಾರೀಕಿನ ದಿನ ಅಮೀರರು ಅಲ್ಲಿಗೆ ಹೋಗುವರು. ಮಾರ್ಗಗಳನ್ನು ಅಗಲ ಮಾಡುವದು, ಆರ್ಕುಗಳನ್ನು ಕಟ್ಟುವದು ಇವೇ ಮೊದಲಾದ ಕೆಲಸಗಳು ಚೆನ್ನಾಗಿ ನಡೆಯುತ್ತಿವೆ. ಮುನಿಸಿಪಾಲಿಟಿಯೊಳಗಿನ ಮಾರ್ಗದ ಸಮೀಪದ ಮನೆಗಳನ್ನೆಲ್ಲಾ ಬಿಳಿ ಸುಣ್ಣದಿಂದ ಸಾರಣೆ ಮಾಡುತ್ತಿರುವರು.

— ಮೇಜರ್ ಸಿನ್‌ಕ್ಲೇರ್ ಮತ್ತು ಕೆಪ್ಟನ್ ಕೋಲಮೆನ್ ಎಂಬಿಬ್ಬರು ಹಿಂದುಸ್ಥಾನದಿಂದ ಕಳೆದ ಫೆಬ್ರವರಿಯಲ್ಲಿ ಒಂದು ಮೋರಿಸ್ ಒಕ್ಸ್‌ಫೋರ್ಡ್ ಕಾರಿನಲ್ಲಿ ಕುಳಿತು ಪ್ರಯಾಣ ಮಾಡುತ್ತಾ ಮೊನ್ನೆ ತಾನೆ ಇಂಗ್ಲೆಂಡಿಗೆ ತಲಪಿದರು. ಅವರು ಪ್ರಯಾಣಮಾಡಿದ ಮೈಲುಗಳ ಸಂಖ್ಯೆಯು ೭,೦೦೦. ಮಾರ್ಗವು ಬಹು ಕಷ್ಟತರವಾಗಿದ್ದರೂ ಅವರು ಹೆವರದೆ ಸೀದಾ ಮೋಟಾರು ನಡೆಸಿಕೊಂಡು ಹೋಗಿದ್ದರು. ಹಾದಿಯಲ್ಲೆಲ್ಲಿಯೂ ಮೋಟಾರು ಹಾಳಾಗಿ ನಿಂತದ್ದಿಲ್ಲವಂತೆ.

— 'ಸದರ್ನ್ ಕ್ರೊಸ್' ಎಂಬ ವಿಮಾನವು ಅಮೇರಿಕದ ಹೊನೊಲುಲು ಎಂಬಲ್ಲಿಂದ ಹೊರಟು ಹವಾಯ ದ್ವೀಪಗಳಿಗೆ ಬಂದು ತಲಪಿರುವದು. ಅಲ್ಲಿಂದ ಅದು ೩೦೦೦ ಮೈಲುಗಳ ದೂರವನ್ನು ಒಂದೇ ಸಲ ಹಾರಿ ಸೋವಾ ಎಂಬಲ್ಲಿಗೆ ಹೋಗುವದು.

— ಶ್ಲಾಚಾ ಡೆಲುಂಕಾ ಎಂಬಲ್ಲಿ ಬಂಧಿಸಿದ್ದ ಒಂದು ಮೃಗವೆತ್ತನ್ನು ಯಾರೋ ಒಬ್ಬನು ಬಿಡಿಸಿ ಬಿಟ್ಟುಬಿಟ್ಟನು. ಅದು ಮದೋನ್ಮತ್ತವಾಗಿ ಓಡಿ ಬಂದು ಜನರನ್ನೆಲ್ಲ ಕೊಲ್ಲಲಾರಂಭಿಸಿತು. ಆದರೆ ಜಿಟಿಟಿಂಟೋ ಎಂಬವನೋರ್ವನು ಆ ಎತ್ತನ್ನು ಎದುರಿ, ಅದರೊಡನೆ ಧೈರ್ಯದಿಂದ ಕಾದತೊಡಗಿದನು. ಅಷ್ಟರೊಳಗೆ ಎತ್ತನ್ನು ಬಂಧಿಸಿದ ಗುಡಿಸಲಿನ ಕಾವಲುಗಾರರು ಬಂದು ಅದನ್ನು ಪುನಃ ಬಂಧಿಸಿ ಕೊಂಡೊಯ್ದರು.

— ಅರಸರ ಜನ್ಮದಿನದ ಸಂತೋಷಕ್ಕಾಗಿ, ಸರ್. ಆಲ್‌ಫ್ರೆಡ್ ಮೊಂಡ್, ಸರ್. ರೋವ್‌ಲೆಂಡ್ ಬ್ಲೇಡ್, ಮತ್ತು ಸರ್. ಜೇಮ್ಸ್ ರೆಮ್‌ನೆಂಟ್ ಇವರು ಪಿಯರರಾಗಿ ನೇಮಿಸಲ್ಪಟ್ಟಿರುವರು.

— ವಿಯನ್ನದ ಎಕೆಡೆಮಿ ಓಫ್ ಸಾಯನ್ಸ್ ಇವರ ಕರೆಸ್ಪೊಂಡಿಂಗ್ ಮೆಂಬರರಾಗಿ ಸರ್ ಜಗದೀಶ ಚಂದ್ರಬೋಸರು ನೇಮಿಸಲ್ಪಟ್ಟಿರುವರು.

— ಪ್ರಿನ್ಸ್ ಓಫ್ ವೇಲ್ಸರು ಸೈಂಟ್ ಜೇಮ್ಸ್ ಅರಮನೆಯಲ್ಲಿ ಆಸ್ಟ್ರೇಲಿಯಾ, ಕೆನಡಾ, ಸೌತ್ ಆಫ್ರಿಕಾ, ನ್ಯೂಜಿಲೇಂಡ್, ಮತ್ತು ಮೆಸೊಪೊಟೋಮಿಯಾ ಈ ದೇಶಗಳ ೬೦ ಜನ ಕೃಷಿಕರ ಭೇಟಿ ಪಡೆಕೊಂಡರು. ಇವರು ಕೃಷಿಯ ವಿಷಯ ಹೆಚ್ಚಿನ ಸಂಗತಿಗಳನ್ನು ಅಭ್ಯಾಸಿಸುವದಕ್ಕಾಗಿ ವಿಲಾಯತಿಗೆ ಬಂದಿದ್ದರು. ಆಸ್ಟ್ರೇಲಿಯಾದಲ್ಲಿರಲು ತನಗೆ ಬಹು ಸಂತೋಷವೆಂದೂ, ಇನ್ನೊಮ್ಮೆ ಆಸ್ಟ್ರೇಲಿಯವನ್ನು ತಾನು ಸಂದರ್ಶಿಸಲಿರುವೆನೆಂದೂ, ಯುವರಾಜರು, ಅವರೆಲ್ಲರಿಗೂ ವಿವರಿಸಿ ಹೇಳಿದರು. ಪ್ರತಿಯೊಬ್ಬರೊಡನೆಯೂ, ಅವರು ಮಾತನಾಡಿ ಸರ್ವರನ್ನು ಸಂತೋಷಗೊಳಿಸಿದರು.

— ಸೀರಿಯದ ಮುಂದಿನ ರಾಜ್ಯಭಾರದ ಕುರಿತು ವಿಚಾರಿಸುವದಕ್ಕಾಗಿ ರಾಜಕೀಯ ಧುರೀಣರು ಸಭೆ ಕೂಡಿ ಚರ್ಚಿಸಿದರು. ಈಗಿನ ಅರಸರ ಮಗನಾದ ಇಬ್ನಸೋಡ ಎಂಬವರು ಮುಂದೆ ಸಿಂಹಾಸನವನ್ನೇರಬೇಕೆಂದು ನಿಶ್ಚಯಿಸಿ, ಅರಸರ ಒಪ್ಪಿಗೆಯನ್ನು ಪಡೆದು, ಅವರನ್ನು ಕರೆಸುವರಂತೆ.

— ಜರ್ಮನಿಯ ಮುಖ್ಯ ಪಟ್ಟಣದಲ್ಲಿ, ಪೋಲೀಸರಿಗೂ, ಕೊಮ್ಯುನಿಸ್ಟರಿಗೂ, ಮಾರಾಮಾರಿಯಾಗಿ ಒಬ್ಬ ಕೊಮ್ಯುನಿಸ್ಟನು ಮೃತಪಟ್ಟನು. ಆತನ ಶವವನ್ನು, ಕೊಮ್ಯುನಿಸ್ಟರೆಲ್ಲರೂ ಕೂಡಿ ಸ್ಮಶಾನಕ್ಕೆ ಕೊಂಡೊಯ್ಯುತ್ತಿರುವಾಗ, ಪುನಃ ಪೋಲೀಸರು ಬಂದು ತೊಂದರೆಯನ್ನು ಕೊಡಹತ್ತಿದರು. ಅಷ್ಟರೊಳಗೆ ಪೋಲೀಸರ ವೈಸ್ ಪ್ರೆಸಿಡೆಂಟರು ಬಂದು, ಜಗಳವನ್ನು ನಿಲ್ಲಿಸಬೇಕೆಂದು ಹುಕುಮನ್ನು ಕೊಟ್ಟರು. ಆದರೆ ಪೋಲೀಸರು ಇವರನ್ನು ಗುರುತಿಸಲಾರದೆ, ಇವರನ್ನು ಆಕ್ರಮಿಸಿ ಹೊಡೆಯತೊಡಗಿದರು. ಇವರು ತಾನು ಪೋಲೀಸ್ ವೈಸ್ ಪ್ರೆಸಿಡೆಂಟನೆಂದು ಎಷ್ಟು ಬೊಬ್ಬೆ ಹೊಡೆದರೂ ಅವರಿಗೆ ಕೇಳಿಸಲಿಲ್ಲ.

— ಲಂಡನಿನ ಒಂದು ನಾಟಕ ಶಾಲೆಯಲ್ಲಿ, ಮಿ. ಚಾರ್ಲ್ಸ್ ಬೆನ್ನೆಟನೆಂಬವನು ರಚಿಸಿದ 'ಬ್ಲೇಕ್ ಮೈಲ್' ಎಂಬ ನಾಟಕವನ್ನು ಅಭಿನಯಿಸುತ್ತಿದ್ದರು. ನಾಟಕ ಕರ್ತನೇ ಪಾತ್ರವನ್ನು ವಹಿಸಿದ್ದನು. ಆತನನ್ನು ಹೊಡಯಲಿಕ್ಕಿರುವ ಒಂದು ದೃಶ್ಯದಲ್ಲಿ, ವಾಯೊಲೆಟ್ ಹವರ್ಡಳೆಂಬ ಹೆಂಗಸೊಬ್ಬಳು ನಿಜವಾಗಿಯೂ, ಆತನನ್ನು ಚೂರಿಯಿಂದ ತಿವಿದಳು. ತಿವಿದಾದ ಮೇಲೆ 'ಅಯ್ಯೋ ದೇವರೆ! ನಾನು ನಿನ್ನನ್ನು ಕೊಂದೆನಲ್ಲಾ' ಎಂದು ಪಶ್ಚಾತ್ತಾಪ ಪೂರ್ವಕವಾದ ನಿಟ್ಟುಸಿರುಬಿಟ್ಟಳು. ಕವಿಯನ್ನು ಆಸ್ಪತ್ರೆಗೆ ಕೊಂಡೊಯ್ದರು. ಹೊಡೆದವಳು ಮೂರ್ಛಿತಳಾಗಿ ಬಿದ್ದುಬಿಟ್ಟಳು.

— ಅಮೀರರು ಟೆಹರಾನನ್ನು ಸಂದರ್ಶಿಸಿದಾಗ, ಟರ್ಕೊ, ಪರ್ಸಿಯನ್ ಫ್ರೆಂಟಿಯರ್ ಎಗ್ರಿಮೆಂಟು ನಡೆಯುವದು. ಇದಕ್ಕಾಗಿ ಒಂದು ತಿಂಗಳಿನಿಂದ ಕೆಲಸವು ನಡೆಯುತ್ತಲೇ ಇದೆ.

— ಗ್ರೀಕಿನ ಹೊಸ ಮಂತ್ರಿಮಂಡಲದ ಕುರಿತು ಗ್ರೀಕ್‌ಚೇಂಬರು ಕೊನ್ಫಿಡೆನ್ಸ್ ಠರಾವನ್ನು ಮಂಜೂರು ಮಾಡಿರುತ್ತದೆ.

— ಮುಸ್ಸೋಲಿನಿಯವರು ಇಟಲಿಯ ಪ್ರೆಸ್ಸಿನಲ್ಲಿ ಸರಿಯಾಗಿ ವರ್ತಿಸದ ಕಾರಣ, ಅಮೇರಿಕನ್ ನೇಶನಲ್ ಪ್ರೆಸ್ ಕ್ಲಬ್ಬಿನ, ಮೆಂಬರಿಕೆಗೆ ಅವರು ಅನರ್ಹರೆಂದು ನಿರಾಕರಿಸಲ್ಪಟ್ಟಿರುವರು.

ಚೈನಾ ರಿಪಬ್ಲಿಕಿನ ಮಾಜಿ ಪ್ರೆಸಿಡೆಂಟರಾದ ಲಿಯುವಾನ್ ಹಂಗ್, ಎಂಬವರು ಮೃತಪಟ್ಟರು.

'ಇಟೆಲಿಯಾ' ವಿಮಾನದಿಂದ ಸಹಾಯದ ಬಗ್ಗೆ ಕೊಡಲ್ಪಟ್ಟ ಒಂದು ವಾಯರ್‌ಲೆಸ್ ವಾರ್ತೆಯು, ಪೊಜಿನ್‌ಸನ್‌ಸ್ಕಿಗೆ ತಲಪಿರುವದು. ಇದರಿಂದ ಇಟಲಿಯವು ಬದುಕಿ ಇರುವುದೆಂದಾಯಿತು.

ಒಳದೇಶ ವರ್ತಮಾನ.

ಪಾಟಿಯಾಲದ ಮಹಾರಾಜರು ಪುತ್ರರನ್ನೊಡಗೂಡಿ ಫ್ರಾನ್ಸಿನ ಮಾರ್ಸೆಲಿಸಿಗೆ ತಲಪಿರುವರು.

— ಅಲಿಘಾರ ಜಿಲ್ಲೆಯ ಬಾರ್ಲಾ ಎಂಬಲ್ಲಿ ಹಿಂದೂ ಮುಸಲ್ಮಾನರೊಳಗೆ ಜಾತೀಯ ಕಲಹವೆದ್ದುದರಿಂದ, ಪೋಲೀಸರು ಬಂದು ಗುಂಡು ಹೊಡೆದು ಒಬ್ಬನನ್ನು ಕೊಂದುಬಿಟ್ಟರು.

ಬಕ್ರಿದ್ ಹಬ್ಬದ ಕಡೆಯ ದಿನದಲ್ಲಿ ಡಿಲ್ಲಿಯಲ್ಲಿ ಏನಾದರೊಂದು ಕಲಹವೇಳುವದೆಂದು ಹಿಂದೂ ಮುಸಲ್ಮಾನರು ಸಿದ್ಧರಾಗಿದ್ದರು. ಆ ದಿನ ಒಂದು ದನವನ್ನು ಮುಸಲ್ಮಾನರು ಪಳ್ಳಿಯಿಂದ ಹೊರಡಿಸಿ, ಅದನ್ನು ಕೊಲ್ಲುವ ಸ್ಥಳಕ್ಕೆ ಡೋಲಿನಿಂದ ಕರೆದೊಯ್ಯತೊಡಗಿದರು. ಆದರೆ ಆ ದನವು ಮುಂದಕ್ಕೆ ಅಡಿಯಿಡಲು ಕೇಳಲಿಲ್ಲ. ದನವನ್ನು ಗಾಡಿಯಲ್ಲಿ ಕುಳ್ಳಿರಿಸಿ ಹೋಗಲು ಅಪ್ಪಣೆಯನ್ನೀಯಬೇಕೆಂದು ಮುಸಲ್ಮಾನರು ಮಜಿಸ್ಟ್ರೇಟರೊಡನೆ ಹುಕುಂ ಕೇಳಲು, ಅವರು ನಿರಾಕರಿಸಿದರು. ಆದಕಾರಣ ಗೋವಧೆಯನ್ನು ನಿಲ್ಲಿಸಬೇಕಾಯಿತು. ಬಕ್ರಿದ ಹಬ್ಬವು ಶಾಂತಿಯಿಂದ ಕೊನೆಗಂಡಿತು.

— ಅಂಬಾಲಾ ಜಿಲ್ಲೆಯ ಮಲಿಕಾಪುರದಲ್ಲಿ ಜಿಲ್ಲಾಧಿಕಾರಿಗಳ ಹುಕುಮನ್ನು ಪಡೆದು ಮುಸಲ್ಮಾನರು ಗೋವಧೆಯನ್ನು ಮಾಡಲುದ್ಯೋಗಿಸಿದರು. ಆದರೆ ಶಿಕ್ಕರು ಆ ವಧೆಯನ್ನು ನಿಲ್ಲಿಸಬೇಕೆಂದು ಬಹುವಾಗಿ ಪ್ರಯತ್ನಿಸಿದರು. ಇಬ್ಬರೊಳಗೆ ಜಗಳವಾಗಿ ಫಲತಃ ೬ ಜನ ಸಿಕ್ಕರು ಮೃತಪಟ್ಟರು. ಇಬ್ಬರು ಮುಸಲ್ಮಾನರೂ ಸತ್ತುಹೋದರು. ಜಗಳವು ಸಮಾಧಾನವಾದ ತರುವಾಯ ಒಬ್ಬ ಸಿಕ್ಕ ವೀರನು ಮನೆಗೆ ಹಿಂತೆರಳುತ್ತಿರುವಾಗ ಹಾದಿಯಲ್ಲಿ ಮುಸಲ್ಮಾನರು ಆತನನ್ನು ಹಿಡಿದು ಗುದ್ದಿ ಕೊಂದು ಹಾಕಿದರು.

— ಬಟ್ಲರ್ ಕಮಿಟಿಯವರಿಗೆ ಇದು ವರೆಗೆ ೨೦ ಹಿಂದೂ ರಾಜರು ತಮ್ಮ ಸೂಚನೆಗಳನ್ನು ಕಳುಹಿಸಿರುವರು. ಇವರಲ್ಲಿ ಮೈಸೂರು ಮತ್ತು ಹೈದರಾಬಾದ್ ರಾಜರುಗಳು ಸೇರಿರುವರು. ಸುಮಾರು ೧೬೦ ಜನರು ರಾಜರುಗಳು ಸುಮ್ಮನೆ ಕುಳಿತಿರುವರು. ಹೀಗೆ ಸುಮ್ಮನೆ ಕುಳಿತ ರಾಜರಲ್ಲಿ ಕಾಶ್ಮೀರ, ಗ್ವಾಲಿಯರ, ಭೋಪಾಲ, ಬಿಕಾನೀರ ಮತ್ತು ಪಾಟಿಯಾಲ ಈ ರಾಜ್ಯಗಳ ರಾಜರು ಇರುವರು. ಆದರೆ ಚೇಂಬರ್ ಓಫ್ ಪ್ರಿನ್ಸೆಸ್ ಇವರ ಸ್ಟೆಂಡಿಂಗ್ ಕಮಿಟಿಯ ಪರವಾಗಿ ಸರ್ ಲೆಸ್ಲಿಸ್ಕೋಟರು ಅಭಿಪ್ರಾಯಗಳನ್ನು ಕಮಿಟಿಯವರಿಗೆ ಸೂಚಿಸಲಿರುವರಂತೆ.

— ಮಿ. ಹಾರ್ಟ್ಸ್‌ಹೋರ್ನರು ಸೈಮನ್ ಕಮಿಶನಿನಿಂದ ನಿವೃತ್ತರಾಗುವರೆಂದು ಒಂದು ವದಂತಿಯಿದ್ದಿದ್ದರೂ, ಅದು ಸುಳ್ಳೆಂದೂ, ತಾನು ಎಂದಿಗೂ ಸೈಮನ್ ಕಮಿಶನನ್ನು ಬಿಟ್ಟು ಹೋಗಲಿಕ್ಕಿಲ್ಲವೆಂದೂ ಅವರು ಈಗ ಹೇಳುತ್ತಿರುವರು.

— ಮುಂಬಾಯಿಯ ಸ್ಟೆಂಡಾರ್ಡ್ ಆಯಿಲ್ ಕಂಪೆನಿಯವರ ಎಣ್ಣೆ ಭಾವಿಗೆ ಕಳೆದ ವಾರದಲ್ಲಿ ಒಮ್ಮಿಂದೊಮ್ಮೆ ಬೆಂಕಿ ಹಿಡಿದು ದೊಡ್ಡ ಶಬ್ದದಿಂದ ಭಾವಿಯು ಮೇಲಕ್ಕೆ ಹಾರಿ ಕೆಳಕ್ಕುರುಳಿತು. ಬೆಂಕಿಯ ಜ್ವಾಲೆಗಳು ಆಕಾಶವನ್ನು ಸಮೀಪಿಸುವಂತೆ ಉರಿದವು. ರಶ್ಯದಿಂದ ಮೊದಲಿನ ದಿನವೇ ಬಂದಿದ್ದ ೧೩ ಲಕ್ಷ ಗೆಲನು ಎಣ್ಣೆಯನ್ನು ಆ ಭಾವಿಯಲ್ಲಿ ತುಂಬಿಸಿಟ್ಟಿದ್ದರು. ಸುಮಾರು ೫ ಲಕ್ಷ ಗೆಲನು ಎಣ್ಣೆಯು ಸುಟ್ಟುಹೋಯಿತು. ಬೆಂಕಿಯನ್ನು ನಂದಿಸಲಿಕ್ಕೆ ಯಾರಿಂದಲೂ ಸಾಧ್ಯವಾಗಲಿಲ್ಲ.

— ನೀಲಗಿರಿಯಲ್ಲಿ ಮಾಡುವ ಯುಕೆಲಿಪ್ಟಸ್ ಎಣ್ಣೆಯ ಕೈಗಾರಿಕೆಯು ಬಹು ಲಾಭಪ್ರದವಾಗಿದೆಯಂತೆ. ಈ ಕೈಗಾರಿಕೆಗೆ ಭಂಡವಾಳವು ಕಡಿಮೆ, ಲಾಭವು ಶೇಕಡಾ ೩೦೦ರಿಂದ ೫೦೦ರಷ್ಟು. ತಿಂಗಳಿಗೆ ಸರಾಸರಿ ರೂಪಾಯಿ ೧೫೦೦೦ರ ಎಣ್ಣೆಯು ಉತ್ಪತ್ತಿಯಾಗುವದು.

— ಹಾನರೇಬಲ್ ಡಾಕ್ಟರ್ ಮಿ. ಸುಬ್ಬರಾಯನರು ವೆಲ್ಲಾಲಾ ಯುವಕ ಸಮಾಜವನ್ನು ಇದೇ ೯ನೇ ತಾರೀಕಿನ ದಿನ ತೆರೆಯುವರು. ಅಲ್ಲಿಂದ ಅವರು ಸಂಚರಿಸುತ್ತಾ ಹೋಗಿ ಕಡಪ, ಅದೋನಿ, ಕರ್ನೂಲು ಇವುಗಳನ್ನು ಸಂದರ್ಶಿಸುವರು. ಕರ್ನೂಲಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಕಟ್ಟಡದ ಶಂಕು ಸ್ಥಾಪನೆಯನ್ನು ಇವರು ಮಾಡಲಿಕ್ಕಿರುವರು.

ತಾರೀಕು ೨ನೇ ದಿನ ಸಾಯಂಕಾಲ ಕುಂಭಕೋಣದಲ್ಲಿ ಜಡಿಮಳೆಯೂ, ಬಿರುಗಾಳಿಯೂ ಬಂದವು. ಬಿರುಗಾಳಿಯು ಸುಮಾರು ಒಂದು ತಾಸಿನ ಸಮಯ ಬೀಸಿ ಬಹಳ ಹಾವಳಿಯನ್ನುಂಟುಮಾಡಿತು. ಮರಗಳೂ ತಂತಿ ಕಂಬಗಳೂ ಬಿದ್ದು ಹೋದವು. ಮರಗಳು ಮಾರ್ಗದಲ್ಲಿ ಅಡ್ಡ ಬಿದ್ದುಹೋದ ಕಾರಣ ಮೋಟರ್ ಚಲಾವಣೆಯು ನಿಂತು ಒಂದು ದಿನದ ವರೆಗೆ ಬಹು ತೊಂದರೆಯಾಯಿತು. ಮಾರ್ಗದ ಬದಿಯಲ್ಲಿರುವ ಮನೆಗಳಿಗೆ ಬಹಳ ಜಖಮಾಗಿರುತ್ತದೆ.

— ಮಾದರಾಸು ಸರಕಾರದವರು ಸೈಮನ್ ಕಮಿಶನಿನ ವಿಷಯವಾಗಿ ತಯಾರಿಸುವ ಮೆಮೊರಾಂಡಮು ಈಗ ತಾನೆ ತಯ್ಯಾರಾಗಿರುತ್ತದೆ. ಈಗಿರುವ ಸರಕಾರದ ಸ್ಥಿತಿ, ವಿದ್ಯಾಭ್ಯಾಸದ ಅಭಿವೃದ್ಧಿ, ರಿಪ್ರಸೆಂಟೇಟಿವ್ ಇನ್ಸ್ಟಿಟ್ಯೂಶನುಗಳ ಬೆಳವಣಿಗೆ, ಇವುಗಳ ಕುರಿತು ಮೆಮೊರಾಂಡಮಿನಲ್ಲಿ ಚೆನ್ನಾಗಿ ವಿವರಿಸಿ ಬರೆದಿರುವರಂತೆ.

— ಪುದುಕೋಟೆಯ ಮಹಾರಾಜರ ಮರಣದ ಕುರಿತು ತಮಗಾದ ಮಹತ್ಸಂತಾಪವನ್ನು ಸೂಚಿಸುವುದಕ್ಕಾಗಿ ಪುದುಕೋಟೆಯ ಪಟ್ಟಣಿಗರು ಒಂದು ಸಭೆ ಕೂಡಿ, ಒಂದು ದುಃಖಸೂಚಕ ಠರಾವನ್ನು ಮಂಜೂರು ಮಾಡಿದರು.

— ಬಾರ್ಡೋಲಿಯ ವೀರರು ಸರಕಾರಕ್ಕೆ ವಿರೋಧವಾಗಿ ವರ್ತಿಸಿ, ಸತ್ಯಾಗ್ರಹವನ್ನಾಚರಿಸಿದುದರಿಂದ ಅವರನ್ನು ಆಧರಿಸಬೇಕೆಂದು ಮುಂಬಾಯಿಯ ಯುವಕರನೇಕರು, ರಾ। ನರಿಮೇನರ ಅಧ್ಯಕ್ಷತೆಯಲ್ಲಿ ಸಭೆಕೂಡಿದರು. ಇವರಿಗಾಗಿ ಹಣ ಕೊಡಿಸುವುದರ ಸಲುವಾಗಿ, ರಾ। ನರಿಮೇನರ ಅಧ್ಯಕ್ಷತೆಯಲ್ಲಿಯೇ ಒಂದು ಕಮಿಟಿಯನ್ನು ನೇಮಿಸಲಾಯಿತು. ಬಾರ್ಡೋಲಿಯನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿ ಅಲ್ಲಿಯ ಸ್ಥಿತಿಯನ್ನು ಚೆನ್ನಾಗಿ ಮನವರಿತುಕೊಂಡವರೇ ಭಾಷಣಗಳನ್ನು ಮಾಡಿ ಸ್ವರಾಜ್ಯ ಧ್ವಜಗಳನ್ನು ಎತ್ತಿ ಹಿಡಿದು, ಬಾರ್ಡೋಲಿಯ ಜನರಿಗೆ ಸಹಾಯಮಾಡಬೇಕೆಂದು ಕೇಳಿಕೊಂಡರು. ಇನ್ನು ರಾ। ಸತ್ಯಪಾಲರ ಅಧ್ಯಕ್ಷತೆಯಲ್ಲಿ ಇದೇ ಉದ್ದೇಶದ ಒಂದು ಸಭೆಯು ಖಾನಪುರದಲ್ಲಿಯೂ ನಡೆಯಿತು.

— ಬಾರ್ಡೋಲಿಯಲ್ಲಿ ಸರಕಾರದವರ ಅನಾಚಾರದ ಸಲುವಾಗಿ, ಮಿ. ಕೆ. ಎಫ್. ನರಿಮನ್, ಮಿ. ನಾರಾಯಣದಾಸ ಆನಂದಜಿ, ಮಿ. ಬಲುಭಾಯಿ ದೇಸಾಯಿ ಈ ಮೂವರು ಮುಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟಿರುವರು.

— ಬಿಹಾರದಲ್ಲಿ ಬಕ್ರಿದಿನ ಸಮಯದಲ್ಲಿ ಹಿಂದೂ ಮುಸಲ್ಮಾನರೊಳಗೆ ಜಗಳವಾಗುವ ಸಂಭವವಿದೆಯೆಂದು ಪೋಲೀಸರು ಸಜ್ಜಾಗಿಯೇ ಇದ್ದರು. ಸಾರೋನಾ ಎಂಬ ಜಿಲ್ಲೆಯಲ್ಲಿ ಹಿಂದುಗಳ ಗುಂಪೊಂದು ಮುಸಲ್ಮಾನರ ಮನೆಗಳನ್ನು ಮುತ್ತಿದರೂ, ಸಕಾಲದಲ್ಲಿ ಪೋಲೀಸರು ಬಂದುದರಿಂದ ಜಗಳವು ಬೆಳೆಯಲಿಲ್ಲ. ಅದರೂ ಅಲ್ಲಲ್ಲಿ ಸಣ್ಣ ಸಣ್ಣ ಜಗಳಗಳು ಆಗದೆ ಇರಲಿಲ್ಲ. ಜಗಳಗಳಾದರೂ ಅವು ವಿಪರೀತವಾಗಿ ಪರಿಣಮಿಸದಿದ್ದುದೇ ಆನಂದದ ಸಂಗತಿಯಾಗಿದೆ.

— ಲಾಲಾ ಲಜಪತರಾಯರು ಕಾಶ್ಮೀರದ ಶ್ರೀನಗರದಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರದ ಕುರಿತು ಚೆನ್ನಾದ ಒಂದು ಭಾಷಣವನ್ನು ಮಾಡಿದರು. ವಿದೇಶಿ ವಸ್ತ್ರವನ್ನುಡುವವರು ದೇಶಪ್ರೀತಿಯುಳ್ಳವರಲ್ಲವೆಂದೂ ಅದರಿಂದ ಹಿಂದುಸ್ಥಾನದಲ್ಲಿ ಹಬ್ಬಿರುವ ನಿರುದ್ಯೋಗ ಸಮಸ್ಯೆಯು ಇನ್ನಷ್ಟು ಬೆಳೆಯುವದೆಂದೂ ಹೇಳಿದರು.

— ಉಟಾಕ ಮಂಡಿನಲ್ಲೊಂದು ರಾಜ ಔತಣವು ಜರಗಿತು, ಸುಮಾರು ೬೦ ಜನ ಅತಿಥಿಗಳು ಬಂದಿದ್ದರು. ಅತಿಥಿಗಳಲ್ಲಿ ಹೆಚ್ಚಿನವರು ಹಿಂದೂರಾಜರುಗಳಾಗಿದ್ದರು.

— ವ್ಯಾಸರಾಯರು ಬರ್ಮವನ್ನು ಸಂದರ್ಶಿಸಲು ಅಪೇಕ್ಷಿಸುವರು. ನವಂಬರ ತಿಂಗಳ ಮಧ್ಯದಲ್ಲಿ ಅವರಲ್ಲಿಗೆ ಚಿತ್ತೈಸಲಿರುವರು.

— ಮದರಾಸಿನಿಂದ ಕಲಕತ್ತಕ್ಕೆ ಹೋಗುವ ರೈಲುವೆಯ ಮೊದಲನೆ ತರಗತಿಯಲ್ಲಿದ್ದ ವೆಂಕಟನರಸಿಂಹ ರಾಜ ಎಂಬವರೊಡನಿದ್ದ ಚಿನ್ನಾಭರಣಗಳೆಲ್ಲವನ್ನು ಗೋದಾವರಿಯ ಸಮೀಪ ಕಳ್ಳರು ದೋಚಿಕೊಂಡು, ಇವರನ್ನು ಹೊಡೆದು ಕೆಡವಿ ಓಡಿಹೋದರು. ಅವರನ್ನೀಗ ಆಸ್ಪತ್ರೆಯಲ್ಲಿರಿಸಿರುವರು.

— ಕರಾಚಿಯಲ್ಲಿ ಒಂದು ರೈಲು, ಒಂದು ಇಂಜಿನಿಗೆ ಬಡಿದು ೧೫ ಜನರಿಗೆ ಜಖಮಾಗಿರುತ್ತದೆ. ಆದರೆ ಯಾರೂ ಸಾಯಲಿಲ್ಲ.

ಸರ್ ಫ್ರೆಡರಿಕ್ ಸ್ಟಾಯ್ಸ್ ಇವರು ಮುಂಬಾಯಿಯ ಗವರ್ನರರಾಗಿ ನೇಮಿಸಲ್ಪಟ್ಟಿರುವರು.

— ಸೈಮನ್ ಕಮಿಶನಿನೊಂದಿಗೆ ಕುಳಿತುಕೊಳ್ಳಲು ಹಿಂದುಗಳ ಸಭೆಯಿರುವದು ಯೋಗ್ಯವೆಂದು, ಪಂಜಾಬದ ಹಿಂದು ಸಭೆಯವರು ನಿರ್ಣಯಿಸಿರುವರು.

ದಕ್ಷಿಣ ಕನ್ನಡ.

ಮಂಗಳೂರು: — ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸಿದ ಸೋಡ್ತಿಯು ಇದೇ ಜೂನ್ ತಿಂಗಳ ತಾರೀಕು ೨೫ಕ್ಕೆ ಖಂಡಿತವಾಗಿಯೂ ತೆಗೆಯೋಣಾಗುವದಾಗಿ, ಅದರ ಕಾರ್ಯದರ್ಶಿಗಳು ನಮಗೆ ತಿಳಿಸುತ್ತಾರೆ.

ದಕ್ಷಿಣ ಕನ್ನಡಾ ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ರಾ। ಬಿ. ಮಹಾಬಲ ಹೆಗ್ಡೆಯವರಿಗೆ ರಾವ್‌ಬಹದೂರ್ ಎಂಬ ಬಿರುದೂ, ನಮ್ಮ ಜಿಲ್ಲೆಯವರಾಗಿದ್ದು ಮುಂಬಾಯಿಯ ಮುನಿಸಿಪಲ್ ಕೊರ್ಪೊರೇಶನಿನ ಮೆಂಬರರೂ, ಡಿಸ್ಟ್ರಿಕ್ಟ್ ಸ್ಕೌಟ ಕಮಿಶನರೂ ಆಗಿರುವ, ರಾವ್‌ಬಹದೂರ್ ಅನಂತ ಕೃಷ್ಣ ಪೈ, ಇವರಿಗೆ ದಿವಾನಬಹದೂರ್ ಎಂಬ ಬಿರುದೂ, ನಮ್ಮ ಚಕ್ರವರ್ತಿಗಳ ಜನ್ಮದಿನದ ಸ್ಮಾರಕಕ್ಕಾಗಿ ದೊರಕಿದುದು ಅಭಿನಂದನೀಯವಿದೆ.

ಕಳೆದ ವಾರದಿಂದ ಮಳೆಯು ಪ್ರಾರಂಭವಾಗಿ, ದಿನನಿತ್ಯವೂ ಬಹು ಜೋರಿನ ಮಳೆ.

ತಾರೀಕು ೨-೬-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೬ ಮರಣಗಳಾದವು. ಈ ಪೈಕಿ ಜ್ವರ ರೋಗದಿಂದ ೨, ಶ್ವಾಸಕೋಶದ ರೋಗದಿಂದ ೬, ಇತರ ಎಲ್ಲಾ ಕಾರಣಗಳಿಂದ ೮. ಜನನ ಸಂಖ್ಯೆಯು ಒಟ್ಟು ೩೬.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು, ಇದೇ ಬರುವ ೧೫ನೇ ತಾರೀಕಿನ ಶುಕ್ರವಾರ ದಿನ ಅಪರಾಹ್ನ ೪ಂಟೆ ೩ಕ್ಕೆ ಮಂಗಳೂರಿನಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಜರಗುವದು.

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ಸಹಾಯಾರ್ಥವಾಗಿ ತೆರೆಯೋಣಾದ ಸೋಡ್ತಿಯ ವಿಷಯದಲ್ಲಿ, ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರಿಗೆ, ವಿನಂತಿ ಪತ್ರವನ್ನು ಬರಕೊಂಡಿತ್ತು. ಅದಕ್ಕೆ ಉತ್ತರವಾಗಿ ಅವರಿಂದ ಬಂದ ರಾಯಸವನ್ನು ಈ ಕೆಳಗೆ ತಿಳಿಸಿರುತ್ತದೆ.

ಕ್ರಮಾಂಕ ೧೩.

ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದೈಃ.

ನಮ್ಮ ಪರಮ ಪ್ರಿಯ ಶಿಷ್ಯರಾದ ಮಂಗಳೂರು ಪೇಟೆಯಲ್ಲಿರುವ ಮಂಗಳೂರು ಶ್ರೀನಿವಾಸ ಪೈಗಳವರ ಮಗ ಗಣೇಶ ಪೈಗಳವರಿಗೆ ಕೃತಾನೇಕ ಶ್ರೀಮನ್ನಾರಾಯಣ ಸ್ಮರಣಾನಿ, ಅದ್ಯ ವಿಭವ ನಾಮಸಂವತ್ಸರದ ವೈಶಾಖ ಬ। ೩ಗೆ ಯು ಕುಜವಾರದ ವರೇಗೆ ನಾವು ತರವೂರ ಶ್ರೀ ತಿರುಮಲ ದೇವರ ತಥಾ ಶ್ರೀ ವ್ಯಾಸ ರಘುಪತಿ ದೇವರ ಸನ್ನಿಧಿಯಲ್ಲಿ ಸ್ವಾತ್ರಮೋಪಯುಕ್ತಾನುಷ್ಠಾನ ವ್ಯಾಖ್ಯಾನ ಪ್ರವಚನಾದಿಗಳನ್ನು ಮಾಡುತ್ತಾ ನಿಮಗೆಲ್ಲರಿಗೆ ನಿರಂತರ ಕಲ್ಯಾಣವನ್ನು ಇಚ್ಛಿಸುತ್ತಾ ಶ್ರೀ ದೇವಗುರು ಅನುಗ್ರಹದಿಂದ ಯೋಗಕ್ಷೇಮದಲ್ಲಿದ್ದೇವೆ. ನಿಮ್ಮೆಲ್ಲವರ ಸುಖಕ್ಷೇಮ ವರ್ತಮಾನಕ್ಕೆ ಸಂಸ್ಥಾನ ವಾತ್ಸಲ್ಯಪೂರ್ವಕ ಪದೇಪದೇ ಬರಕೊಳ್ಳುತ್ತಾ ಇರುವದು. ತರುವಾಯ ನೀವು ಈ ಇದೇ ವಿಭವ ಸಂ।ದ ಚೈತ್ರ ಶು। ೧೧ರಲ್ಲಿ ಬರಕೊಂಡ ವಿನಂತಿ ಪತ್ರವು ತಪ್ಪಿ ನೇಮ್ಯವಾಯಿತು. ನೀವು ಕೂಡಾ ೬ ಜನ ಸ್ವಜಾತಿ ಗೃಹಸ್ಥರ ಆಡಳಿತೆ ಒಳಗಿರುವ ಕೆನರಾ ಹ್ಯಾಸ್ಕೂಲ ಎಂಬ ವಿದ್ಯಾ ಸಂಸ್ಥೆಯು ಯಾವ ರೀತಿಯಲ್ಲಿ ನಮ್ಮ ಪರಮಗುರುಗಳ ಮತ್ತು ಗುರುಗಳ ಪ್ರೀತಿಗೆ ಪಾತ್ರವಾಗಿತ್ತೋ ಅದೇ ರೀತಿ ನಮ್ಮ ಅಂತಃಕರಣಕ್ಕೆ ಕೂಡಾ ಪಾತ್ರವಾಗಿಯದೆ ಎಂಬ ವಿಷಯ ಸಂಶಯಬೇಡ. ಸರ್ವದಾನಗಳಲ್ಲಿ ಮಹತ್ವಾದ ವಿದ್ಯಾದಾನವನ್ನು ಕೊಟ್ಟು ಅನೇಕ ಸ್ವಜಾತಿ ವಿದ್ಯಾರ್ಥಿಗಳನ್ನು ಉಚ್ಛಸ್ಥಿತಿಗೆ ತಂದ ಈ ಸಂಸ್ಥೆಗೆ ಈಗ ಅಗತ್ಯ ಬಿದ್ದಿರುವ ಧನಸಹಾಯವನ್ನು ಪಡೆಯಲೋಸುಗ ನೀವು ಏರ್ಪಡಿಸಿದ ಸೋಡ್ತಿಗೆ ನಮ್ಮ ಸಂಪೂರ್ಣ ಅನುಗ್ರಹ ಇರುತ್ತದೆ. ಶ್ಲಾಘನೀಯವಾದ ಈ ನಿಮ್ಮ ಕಾರ್ಯದಲ್ಲಿ ನಮ್ಮ ಶಿಷ್ಯವರ್ಗದೆಲ್ಲವರು ನಿಮಗೆ ಸಹಾಯವನ್ನು ಕೊಟ್ಟು ಕಾರ್ಯವನ್ನು ಜಯಪಡಿಸ್ಯಾರೆಂಬುದಾಗಿ ಪೂರ್ಣ ಅಭಿಪ್ರಾಯಪಡುತ್ತೇವೆ.

ಶ್ರೀ ವ್ಯಾಸ ರಘುಪತಿ ದೇವರನ್ನು ಪ್ರಾರ್ಥಿಸಿ ಇದರೊಂದಿಗೆ ಶ್ರೀ ಮುಡಿ ಗಂಧಪ್ರಸಾದ ಮಂತ್ರಾಕ್ಷತೆಯನ್ನು ರವಾನಿಸಿರುತ್ತದೆ. ಸ್ವೀಕರಿಸುವದು.

ಮೊಕ್ಕಾಂ ತರವೂರು

ಉಡುಪಿ: — ಶ್ರೀಯುತ ಎಂ. ಬಾಬಾಬಿ, ಎ, ಎಲ್. ಟಿ ಯವರ ಅಕಾಲ ನಿಧನದ ದುಃಖಸೂಚನಾರ್ಥವಾಗಿ ತಾ. ೩೦-೫-'೨೮ರಲ್ಲಿ ಇಲ್ಲಿಯ ಅನಂತೇಶ್ವರ ಶಾಲೆಯು ಒಪ್ಪೊತ್ತು ಮುಚ್ಚಲ್ಪಟ್ಟಿತು. ಆ ದಿನ ಬೆಳಗ್ಗೆ ಶಾಲಾ ಮೆನೇಜರ್ ರಾ। ಲಕ್ಷ್ಮೀನಾರಾಯಣ ಕಮ್ತಿರ ನೇತೃತ್ವದಲ್ಲಿ ಶಾಲೆಯ ಎಲ್ಲಾ ಉಪಾಧ್ಯಾಯರ ಮತ್ತು ಎಲ್ಲಾ ವಿದ್ಯಾರ್ಥಿಗಳ ಒಂದು ಸಭೆಯು ಶಾಲೆಯಲ್ಲಿ (ಅನಂತೇಶ್ವರ ದೇವಸ್ಥಾನದ ಮೊಗಸಾಲೆಯಲ್ಲಿ) ನೆರೆದು ಬಂದಿತು.

ಇಲ್ಲಿಗೆ ಒಂದು ಹೊಸ ನಾಟಕ ಮಂಡಳಿ ಬಂದಿದೆ. ಅದರ ಹೆಸರು ಮಾತ್ರ ತುಸು ಉದ್ದ. ಸಂಗಮೇಶ್ವರ ಕೃಪಾಪೋಷಿತ ಬಾಲ ಕಲಾ ವಿವರ್ಧಿನೀ ನಾಟಕ ಸಭಾ, ಮೈಸೂರು, ಎಂದು, ಹೆಸರಿನಂತೆ ಪ್ರತಿಯೊಂದೂ ಉದ್ದವಾಗಿರಬೇಕೆಂದು ಹಲವರ ನಿರ್ಧಾರ. ಹೆಟ್ಟಾರೆ ಅವರು ಬರುವ ಶನಿವಾರ ದಿನ ಅಭಿನಯಿಸುವ ಪ್ರಥಮಾಭಿನಯವನ್ನು ಕಂಡರೆ ಏನೆಂದು ಗೊತ್ತಾದೀತು.

ಈ ಬಾರಿ ತಾ. ಬೊ. ಪುಸ್ತಕ ಭಂಡಾರಕ್ಕೆ ರೂ. ೫೦ಕ್ಕೆ ಮಿಕ್ಕಿದ ಹೊಸ ಪುಸ್ತಕಗಳನ್ನು ತರಿಸಿದುದು ಸಂತೋಷಕರವಾದರೂ ಕನ್ನಡ ಪುಸ್ತಕಗಳ ಕಡೆಗೆ ಸ್ವಲ್ಪ ವಕ್ರದೃಷ್ಟಿ ಬಿದ್ದುದಕ್ಕೆ ವಿಷಾದವಿದೆ.

Service.

ಸರ್ವಿಸ್

Conveyance.

(M. S. M

...ಮಾರ್ಗವಾಗಿ ...ಕಂಪೆನಿಯಾದ ...ನಕೆರೆ, ಉಪ್ಪಿನಂಗಡಿ ...ನಕೆರೆ, ಮೂಡ ...ಬಂಟವಾಳ ... ಏರ್ಪಡಿಸಿರುತ್ತೆ.

...ವಿಶ್ರಾಂತಿಗೆ ...ಗೆ 9 ಗಂಟೆಗೆ. ...12-30ಕ್ಕೆ ... 1-30ಕ್ಕೂ ...ಕಾಸರ ...

...ಲಿಮಿಟೆಡ್ ...ಸ್ಟೇಶನಿಗೂ ...ಕ್ಕೂ ...ಗಳೂರಲ್ಲಿ ...ಗಳೂರಿನಿಂದ ...ಕಡೂರಿನ ...ಪಂಡರ್ಪೂರ್ ...

...ಸೇರಿ ...ಕಡೆಗ ...ಏರ್ಪಡಿಸಿರುತೆ

THE CANARA ... MANGALORE.

ಕೆನರಾ ... ಲಿಮಿಟೆಡ್,

...

ಪಶ್ಚಿಮ ಘಟ್ಟ ... ಹೋಗುವರೆ,

ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ...

... ಮಾರ್ಗವಾಗಿ ...

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ] ದೊಡ್ಡ ಗ್ರಂಥವು.

ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು.

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸಿ ಪುರುಷರು ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೊಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು, ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ, ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಫರಂಗಿಪೇಟೆ:— ಈ ಸಂಟರಿನ ೨ನೇ ಉಪಾಧ್ಯಾಯರ ಸಂಘದ ಸಭೆಯು ತಾ. ೨-೬-'೨೮ನೇ ದಿನ ಫರಂಗಿಪೇಟೆ ಶ್ರೀರಾಮ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಮೇರಮಜ್ಜು ಶಾಲಾ ಮಾಸ್ತರ್ ಕೆ. ಅನಂತ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸೆಕ್ರೆಟರಿಗಳಾದ ಎ. ರಾಮಚಂದ್ರ ಹೆಗ್ಡೆಯವರು ಗತ ಮೀಟಿಂಗಿನ ಪ್ರೊಸಿಡಿಂಗ್ಸುಗಳನ್ನು ಓದಿದ ನಂತರ ಲೋವರ್ ಗ್ರೇಡ್ ಅಸಿಸ್ಟೆಂಟ್ ಉಪಾಧ್ಯಾಯರ ಗ್ರೇಂಟಿನ ದರವನ್ನು ಇತರ ಉಪಾಧ್ಯಾಯರಂತೆಯೇ ತಿಂಗಳು ೧೮ ರೂಪಾಯಿ ೨ರಂತೆ ಆರಿಸಬೇಕಾಗಿ ಶಿಪಾರಸು ಮಾಡುವಂತೆ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರವರಿಗೆ ವಿನಂತಿ ಮಾಡಬೇಕಾಗಿ ನಿರ್ಣಯಿಸಲಾಯಿತು. ಬೊಂದಂತಿಲ ಶಾಲಾ ಹೆಡ್ ಮಾಸ್ಟರ್ ಬಿ. ದೂಮಪ್ಪನವರು ಬೇರುಗಳ ಜಾತಿ ಎಂಬದರ ಕುರಿತು ೩ನೇ ಕ್ಲಾಸಿಗೆ ಒಂದು ಮಾದರಿ ಪಾಠವನ್ನು ಕೊಟ್ಟು ಆ ಕುರಿತು ವಿಮರ್ಶೆ ಮಾಡಲಾಯಿತು. ವಿದ್ಯಾರ್ಥಿಗಳು ಕ್ಲಾಸಿನಲ್ಲಿ ನಕ್ಲು ತೆಗೆಯದಂತೆಯೂ ಸುಳ್ಳಾಡದಂತೆಯೂ ಹೊತ್ತಿಗೆ ಸರಿಯಾಗಿ ಬರುವಂತೆಯೂ ಮಾಡುವ ಉಪಾಯಗಳುಯಾವುವು ಎಂಬದರ ಕುರಿತು ಒಂದು ಉಪನ್ಯಾಸವನ್ನು ಹರೇಕಳ ಶಾಲಾ ಹೆಡ್ ಮಾಸ್ಟರ್ ಕೆ. ವೆಂಕಪ್ಪ ರೈಗಳು ಓದಿದ ಬಳಿಕ ಆ ಕುರಿತು ಮೇರಮಜ್ಜು ಸೈಂಟ್ ಜೋಸೆಫ್ ಹಾಯ್ಯರ್ ಎಲಿಮೆಂಟರಿ ಶಾಲಾ ಅಧ್ಯಾಪಕ ಅಂತೋನ್ ಡಿಸೋಜರೂ, ಫರಂಗಿಪೇಟೆ ಶಾಲಾ ಅಧ್ಯಾಪಕರು ಬಿ ಕೊರಗಪ್ಪ ಸುವರ್ಣ ಎನ್. ಕೃಷ್ಣಭಟ್ಟರೂ ಭಾಷಣ ಮಾಡಿದರು. ಹಲವು ಮಂದಿ ಉಪಾಧ್ಯಾಯರ ಗುರುಗಳಾದ ಇತ್ತಲಾಗೆ ದಿವಂಗತರಾದ ರಾ। ಎನ್. ಬಾಬುರವರ ಅಕಾಲ ಮರಣಕ್ಕಾಗಿ ದುಃಖವನ್ನು ಪ್ರದರ್ಶಿಸಿದ್ದಲ್ಲದೆ ಅವರ ಆತ್ಮಕ್ಕೆ ನಿತ್ಯ ಶಾಂತಿ ಉಂಟಾಗಲೆಂದು ಪ್ರಾರ್ಥಿಸಿ ಮಹಾದುಃಖಕ್ಕೀಡಾದ ಅವರ ಕುಟುಂಬದೊಂದಿಗೆ ಸಹಾನುಭೂತಿಯನ್ನು ತೋರಿಸಬೇಕಾಗಿ ನಿರ್ಣಯಿಸಲಾಯಿತು. ಮುಂದಿನ ಸಭೆಯನ್ನು ತಾ. ೧-೯-'೨೮ರಲ್ಲಿ ಫರಂಗಿಪೇಟೆಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಿ, ಅಧ್ಯಕ್ಷರ ಕಾಲೋಚಿತ ಭಾಷಣವಾದ ಬಳಿಕ ರಾಜಗೀತದೊಂದಿಗೆ ಸಭೆಯು ಮುಕ್ತಾಯವಾಯಿತು.

ಮೂಲ್ಕಿ:— ಇಲ್ಲಿಯ 'ಯೂನಿಯನ್ ಕ್ಲಬ್ಬಿ'ನ ವಾರ್ಷಿಕೋತ್ಸವವೂ ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರರಾದ ಕೆ. ಸದಾಶಿವ ಅಡಿಗ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಇದೇ ಜೂನ್ ತಿಂಗಳ ೧೬ನೇ ಶನಿವಾರ ನೆರವೇರಿಸಬೇಕಾಗಿ ನಿಶ್ಚಯಿಸಿರುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ರಾಷ್ಟ್ರಬಂಧುವಿಗೆ!

ಪಂಡಿತ ಜವಾಹಿರಲಾಲ ನೆಹರುರವರು ದ್ರಾವಿಡ ಬ್ರಾಹ್ಮಣರಲ್ಲವಾಗಿದ್ದರೆ ಅದು ನಮ್ಮ ತಪ್ಪಲ್ಲ. ಅದಕ್ಕೆ ರಾಷ್ಟ್ರಬಂಧುವು ಮತ್ಸರಿಸುವುದೇಕೆಂದು ನಮಗೆ ತಿಳಿಯುವುದಿಲ್ಲ. ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಮಾಸಿಕ ಪತ್ರಿಕೆಯ ಕಲ್ಪನೆಯು ಈಗ ಸಾಪ್ತಾಹಿಕವಾಗಿ ರೂಪುಗೊಂಡಿರಬಹುದು, ಆ ಕಾರಣದಿಂದ ರಾಷ್ಟ್ರಬಂಧುವು ಸ್ವಜಾತಿ ಹಿತವನ್ನು ಬಯಸಲೂ ಬಹುದು. ಆದರೆ ಆ ಬಗ್ಗೆ ಅದು ಪರಜಾತಿಯ ಕಡೆಗೆ ತನ್ನ ನಿಂದೆಯನ್ನೇಕೆ ಸೂಚಿಸಬೇಕೆಂದು ನಮಗೆ ತಿಳಿಯುವುದಿಲ್ಲ. ರಾಷ್ಟ್ರಬಂಧುವು ರಾಷ್ಟ್ರ ಸೇವೆಯನ್ನೇ ಲಕ್ಷಿಸಲಿಚ್ಛಿಸಿರುವುದು. ಜಾತಿಜಾತಿಗಳೊಳಗಿನ ಸೌಹಾರ್ದ ಬೆಳಸುವುದು ಅದರ ಉದ್ದೇಶವೂ ಸಾಧನೆಯೂ ಆಗಿರಬೇಕು. ಅದರ ಬದಲಿಗೆ ಹಾನಿಕರವಾದ ಈ ನಿಂದೆಯ ಉಪಯೋಗವೇಕೆ? ಜವಾಹಿರಲಾಲರನ್ನು ತಮ್ಮ ಜಾತಿಯವರೆಂದ ಕೂಡಲೇ ರಾಷ್ಟ್ರಬಂಧುವಿಗೆ ಮತ್ಸರವೇಕೆ ತೋರಬೇಕು? ಜಾತಿಯವರಾದರೆ ಆಗಿರಲಿ; ಅಲ್ಲವಾದರೆ ಅಲ್ಲವೆಂದು ರಾಷ್ಟ್ರಬಂಧು ತೋರಿಸಲಿ, ಅದರ ಬದಲಿಗೆ ಜಾತಿನಿಂದೆಯನ್ನಾರಂಭಿಸಲು ಹೊರಟುದು ದೇಶದ ಹಿತದೃಷ್ಟ್ಯಾ ರಾಷ್ಟ್ರಬಂಧುವಿಗೆ ಒಪ್ಪುವುದೇ? ಜಿಲ್ಲೆಯ ಸಮಾಜ ಜೀವನಕ್ಕಿದು ಉಚಿತವೇ? ಸೌಂದರ್ಯ, ವಾಗ್ಮಿ, ಧೈರ್ಯಶಾಲಿ, ಖ್ಯಾತಿವಂತ, ಶ್ರೀಮಂತ ಮೊದಲಾದ ಗುಣವಾಚಕಗಳಿಂದ ಸಂಬಂಧಪಟ್ಟ ಜಾತಿಗೆ ಜಾತಿಬಾಂಧವರನ್ನು ಹೊಂದಿಕೊಳ್ಳುವ ಆವಶ್ಯಕತೆಯಿಲ್ಲ. ಅದರ ಅಭಿವೃದ್ಧಿಯಿಂದಲೇ ಈ ಗುಣವಾಚಕಗಳಿರುವ ಸುಪುತ್ರರು ಅದರಲ್ಲಿ ಒಬ್ಬಿಬ್ಬರಲ್ಲ, ಅನೇಕರಿರುವರು. ಇನ್ನಾದರೂ ರಾಷ್ಟ್ರಬಂಧುವು ಈ ವಾಚಸ್ಪತಿಯ ಕುತರ್ಕವನ್ನು ಕಡಿಮೆ ಮಾಡಲಿ.

ನೆಹರುಗಳ ಜಾತಿಯವ.

ಪ್ರಕಟಣೆ.

ಮಂಗಳೂರು, ಶಂಕರ್ ವಿಠಲ್ ಮೋಟರ್ ಕಂಪೆನಿಯ ಪಾಲುಗಾರರಾಗಿದ್ದ ಮ. ರಾ. ರಾ. ಗಳಾದ 1. ಕ್ರಾಸಿವಿಠಲ ರಾವ್ 2. ನಾಗ್ರಮಠ ಗೌರಿ ಶಂಕರ್ ರಾವ್ 3. ಪದ್ಯಾನ ಭೀಮ ಭಟ್ಟರು, ಇದೇ ಕಳೆದ ತಾ. 31—5—1928ಕ್ಕೆ ತಮ್ಮ ಪಾಲುಗಳನ್ನು ಬಿಟ್ಟಿರುವದಾಗಿಯೂ ಅದೇ ತಾರೀಕು ಲಾಗ್ಯಾತು ಮ. ರಾ. ರಾ. ಗಳಾದ 1. ಕುರ್ಯಾಡಿ ವೆಂಕಟ್ರಮಣಾಚಾರ್ಯರು 2. ಪಿಲಿಗುಂಡೆ ರಾಮಚಂದ್ರ ಬನ್ನಿಂತಾಯರು 3. ಕಾಂತಿಗೋಡು ಸುಬ್ರಾಯ ತೋಲ್ಪಾಡಿತ್ತಾಯ ಮತ್ತು 4. ವಿಠಯಾಳ ಶ್ರೀನಿವಾಸ ಪಡ್ಡಿಲ್ಲಾಯರು ಸದರಿ ಕಂಪೆನಿಯಲ್ಲಿ ಹೊಸ ಪಾಲುಗಾರರಾಗಿ ಸೇರಿರುವದಾಗಿಯೂ ಈ ಮೂಲಕ ಸರ್ವರಿಗೂ ತಿಳಿಸಲಾಗುತ್ತದೆ.

ಮಂಗಳೂರು, ತಾ. 1-6-'28 } ನೂಜಿಬೈಲು ಶಂಕರ ಭಟ್ಟ, ಮೆನೇಜಿಂಗ್ ಡೈರೆಕ್ಟರ್, ಶಂಕರ್ ವಿಠಲ್ ಮೋಟರ್ ಕಂಪೆನಿ.

ವಿವಿಧ ಸಮಾಚಾರಗಳು.

ಗೋವೆಯ ಶುದ್ಧಿ ಚಳವಳ.

ರಾ। ಕೇಳಕರ ಮತ್ತು ಡಾಕ್ಟರ್ ಮುಂಜೆಯವರ ಕೈಕೆಳಗೆ ಗೋವೆಗೆ ಹೋಗಿದ್ದ ಹಿಂದೂ ಮಹಾಸಭೆಯವರ ಡೆಪ್ಯುಟೇಶನಿನಿಂದ, ಗೋವೆಯ ಶುದ್ಧಿ ಚಳವಳದಲ್ಲಿ ಹೊಸ ಕ್ರಮವೇ ಉಂಟಾಗಿದೆಯೆನ್ನಬೇಕಾಗುವದು.

ಅಂದು ಪೋರ್ಚುಗೀಸ್ ಕ್ರಿಶ್ಚನ್ ಮಿಶನರಿಗಳು ತಮ್ಮ ರಾಜರ ಅಧಿಕಾರದಿಂದ ಬಲಗೊಂಡವರಾಗಿ, ಅಸಂಖ್ಯಾತ ಹಿಂದುಗಳನ್ನು ರಾಜದಂಡದ ಹೆದರಿಕೆಯನ್ನು ಹುಟ್ಟಿಸಿ ಬಲಾತ್ಕಾರದಿಂದ ಕ್ರಿಸ್ತೀ ಮತಕ್ಕೆ ಸೇರಿಸಿದ್ದರು. ಶಾಂತತಾ ಬೋಧಕರಾದ ಈ ಮಿಶನರಿಗಳು ಅಂದು ಮಾಡಿದ ಅತ್ಯಾಚಾರಗಳು ಅಷ್ಟಿಷ್ಟಲ್ಲ. ಕ್ರಿಸ್ತೀ ಮತದ ಮೇಲೆ ಇದು ಒಂದು ಕಪ್ಪು ಕಲೆಯನ್ನೇ ಮಾಡಿರುವುದು. ಮೇಜರ್ ಬಸುಗಳವರು ಈ ಸಂಗತಿಯೆಲ್ಲವನ್ನೂ ವಿವರವಾಗಿ ತನ್ನ ಪುಸ್ತಕದಲ್ಲಿ ಬರೆದಿರುವರು. ಇವರ ಬೆದರಿಕೆಗಳಿಗೆ ಹೆದರಿ ಕ್ರಿಸ್ತಿಯರಾದ ಆ ಜನರು ಪುನಃ ಹಿಂದೂಗಳಾಗಬೇಕೆಂಬ ಅತ್ಯಾಶೆಯಿಂದ ಸೊರಗುತ್ತಿದ್ದರು. ಕ್ರಿಸ್ತೀ ಮತಕ್ಕೆ ಮತಾಂತರಗೊಳಿಸಲ್ಪಟ್ಟಿದ್ದರೂ, ಹಿಂದೂ ಕಟ್ಟಳೆಗಳನ್ನು ತ್ಯಜಿಸದೆ ಹಿಂದುಗಳಂತೆಯೇ ವರ್ತಿಸುತ್ತಿದ್ದರು. ಹಿಂದೂ ದೇವ ಪ್ರತಿಮೆಗಳನ್ನು ಪೂಜಿಸುತ್ತಿದ್ದರು. ಆದರೆ ಮದುವೆ ಮತ್ತು ಮರಣದ ಸಂದರ್ಭಗಳಲ್ಲಿ ಕ್ರಿಸ್ತ ಪಾದರಿಗಳನ್ನೆ ನಂಬಿಕೊಂಡಿರಬೇಕಾಗುತ್ತಿತ್ತು. ಅಂತಿರುವಾಗ, ಶ್ರೀ ವಿನಾಯಕ ಮಹಾರಾಜರು ಇವರನ್ನು ಪುನಃ ಶುದ್ಧೀಕರಿಸುವರೆಂಬುವುದನ್ನು ತಿಳಿದೊಡನೆ ಅವರು ಹಿಂದೂ ಮತಕ್ಕೆ ಸೇರಲು ಸಿದ್ಧರಾದರು. ಹಿಂದೂ ಮತವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದ ಮಸೂರದ ಬ್ರಹ್ಮಚರ್ಯಾಶ್ರಮವನ್ನು ಹೊಗಳಬೇಕಾಗಿದೆ. ಶಾಂತಿಯಿಂದ ತಮ್ಮ ಕೆಲಸವನ್ನು ಮಾಡಲು ಅವರಿಗೆ ಗವರ್ನರರ ಹುಕುಮು ದೊರೆತಿದ್ದಿತು. ಗೋವೆಯಲ್ಲಿ ಹಿಂದೂ ಸಭೆಯ ಒಂದು ಶಾಖೆಯನ್ನು ನಿರ್ಮಿಸಿ ಅವರ ಪರವಾಗಿ ಅಲ್ಲಿನ ಹಿಂದೂಗಳು ಕೆಲಸಮಾಡುತ್ತಿರುವರು. ಗೋವೆಯಲ್ಲಿ ಮೊದಲಾಗಿ ಮತಾಂತರಗೊಳಿಸಿದ ಸ್ಥಳದಲ್ಲಿ ಒಂದು ಗೋಪುರವನ್ನು ಕಟ್ಟುವರು. ಅದಕ್ಕಾಗಿ ಹಣವೂ ಕೊಡಿಸಲ್ಪಟ್ಟಿರುವದು.

§ § § §

ಮುಂಬಾಯಿಯ ಹೊಸ ಗವರ್ನರರು.

ಮುಂಚಿನ ಮುಂಬಾಯಿಯ ಗವರ್ನರರು ಡಿಸೆಂಬರದಲ್ಲಿ ತೆರಳುವ ಕಾರಣ, ಅವರ ಬದಲಿಗೆ ಆ ಪದವಿಗೆ, ಮೇಜರ್ ಜನರಲ್ ಸರ್ ಫ್ರೆಡರಿಕ್ ಸೈಕ್ಸ್, ಜಿ. ಬಿ. ಇ., ಕೆ. ಸಿ. ಬಿ, ಸಿ. ಎಮ್. ಜಿ., ಎಮ್. ಪಿ., ಇವರು ನೇಮಿಸಲ್ಪಟ್ಟಿರುವರು. ಇವರು ೧೮೭೭ನೇ ಇಸವಿಯ ಜೂನ್ ತಿಂಗಳಲ್ಲಿ ಹುಟ್ಟಿದರು. ೧೯೨೦ನೇ ಇಸವಿಯಲ್ಲಿ ಇವರು ಮದುವೆಯಾದರು. ೧೯೦೧ರಲ್ಲಿ ಸೈನ್ಯಕ್ಕೆ ಕೂಡಿ, ೧೯೦೩—೪ ರಲ್ಲಿ ಪಶ್ಚಿಮ ಆಫ್ರಿಕದ ರೆಜಿಮೆಂಟಿನಲ್ಲಿದ್ದರು. ೧೯೦೫—೬ರಲ್ಲಿ ಹಿಂದೂಸ್ಥಾನದ ಇಂಟೆಲಿಜೆನ್ಸ್ ಬ್ರೆಂಚಿನಲ್ಲಿದ್ದರು. ೧೯೧೪ರಲ್ಲಿ ವೈಮಾನಿಕರ ಅಧಿಪತಿಗಳಾಗಿ ನೇಮಿಸಲ್ಪಟ್ಟರು. ೧೯೧೯ನೇ ಇಸವಿಯಲ್ಲಿ ಸಿವಿಲ್ ಎವಿಯೇಶನಿನ ಕಂಟ್ರೋಲ್ ಜನರಲರಾದರು. ವಿಲಾಯತಿಯಲ್ಲಿ ಇವರಿಗೆ ಇನ್ನೂ ಬಹಳ ಹುದ್ದೆಗಳಿದ್ದವು. ಇವರು ಒಂದು ಪುಸ್ತಕವನ್ನು ಕೂಡ ಬರೆದಿರುವರು. ಇವರನ್ನು ಕಳೆದ ಸೋಮವಾರ ದಿನ ಪಿಯರರನ್ನಾಗಿ ಮಾಡಿದರು.

ಇವರು ತನ್ನ ಕರ್ತವ್ಯದಿಂದ ಬೆಳಗಿ, ಜನರಿಗೆ ಸಂತೋಷವನ್ನುಂಟು ಮಾಡುಕೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ವೈಮಾನಿಕತ್ವದಲ್ಲಿ ಅವರಿಗೆ ಹೆಚ್ಚಿನ ಅನುಭವವಿರುವುದರಿಂದ ಇದರ ಅಭಿವೃದ್ಧಿಯನ್ನು ಹಿಂದೂಸ್ಥಾನದಲ್ಲಿ ಅವರು ಮಾಡುವರು. ಅವರ ಪತ್ನಿಯವರು ಕೂಡ ರಾಜಕಾರಣದಲ್ಲಿ ನಿಪುಣರಾಗಿರುವರು. ಮುಂಬಾಯಿಗೆ ಇಂತಹ ಗವರ್ನರ ದೊರೆಗಳು ಸಿಕ್ಕಿದುದು ನಿಜವಾಗಿಯೂ, ಸಂಸ್ಥಾನದ ಪುಣ್ಯವೆನ್ನಬೇಕಾಗುವದು.

§ § § §

ಯುವಕರ ಪರಿಷತ್ತು.

ಇಡೀ ವಿಶ್ವದ ಯುವಕರ ಪರಿಷತ್ತು ಈ ವರುಷ ಹೊಲೆಂಡಿನ ಇರೀಡ್ ಎಂಬಲ್ಲಿ ಸೇರಲಿರುವದು. ಅದರ ವ್ಯವಸ್ಥಾಪಕರು ಈ ಕೆಳಗಿನಂತೆ ಸೂಚನೆಗಳನ್ನು ಕೊಡುತ್ತಿರುವರು.

೧೯೨೫ನೇ ಇಸವಿಯಲ್ಲಿ ಯುರೋಪದ ಮತ್ತು ಅಮೇರಿಕದ ಯುವಕ ಸಮಾಜದವರು ಒಂದು ಪರಿಷತ್ತನ್ನು ಜರಗಿಸಬೇಕೆಂದೂ ಅದಕ್ಕಾಗಿ ಒಂದು ಅಂದವಾದ ಕಟ್ಟಡವನ್ನು ಕಟ್ಟಿಸಿ ಶಾಂತಿಸ್ಥಾಪನೆ ಮಾಡಬೇಕೆಂದೂ ನಿಶ್ಚಯಿಸಿದ್ದರು. ಇಂಥ ಪರಿಷತ್ತನ್ನು ಜರಗಿಸುವದರಿಂದ ಬೇರೆ ಬೇರೆ ದೇಶಗಳ ಯುವಕ ಸಮಾಜದ ಪ್ರತಿನಿಧಿಗಳು ಒಂದೇ ಸ್ಥಳದಲ್ಲಿ ಒಟ್ಟಾಗುವರು. ಅವರು ಯುವಕ ದಳವ, ಆರ್ಥಿಕ, ಧಾರ್ಮಿಕ, ನೈತಿಕ, ಮತ್ತು ವಿದ್ಯಾ ಬೆಳವಣಿಗೆಯ ಸಲುವಾಗಿ ಚರ್ಚಿಸಿ ತಮ್ಮ ತಮ್ಮ ಯುವಕ ಸಮಾಜದ ಅಭಿವೃದ್ಧಿಯನ್ನುಂಟುಮಾಡುವರು.

ಜಗತ್ತಿನ ಬೇರೆ ಬೇರೆ ಕಡೆಗಳಿಂದ, ಯುವಕ ಸಮಾಜಗಳ ಪ್ರತಿನಿಧಿಗಳು ಈ ಪರಿಷತ್ತಿಗೆ ಬರಲಿರುವರೆಂದು ವಾರ್ತೆಯು ಮೊದಲೇ ಬಂದಿರುತ್ತದೆ. ಇದರಿಂದ ಬೇರೆ ಬೇರೆ ದೇಶದವರೊಳಗೆ ಪರಸ್ಪರ ಪ್ರೀತಿಯುದ್ಭವಿಸಿ, ಸಹೋದರ ಭಾವವು ತೋರಿಬರುವದು ಶಾಂತಿಯು ಎಲ್ಲೆಲ್ಲಿಯೂ ನೆಲೆಗೊಳ್ಳುವದು. ವೈಮನಸ್ಸು ಮಾಯವಾಗುವದು. ಒಟ್ಟಾರೆ ಹೇಳುವದಾದರೆ, ಇದರಿಂದ ಅಸಂಖ್ಯಾತ ಪ್ರಯೋಜನಗಳುಂಟಾಗುವವು. ಈ ಪರಿಷತ್ತು ಆಗಸ್ಟ ತಿಂಗಳ ೧೭ನೇ ತಾರೀಕಿನಿಂದ ೨೬ನೇ ತಾರೀಕಿನ ವರೆಗೆ ಜರಗುವದು. ಸುಮಾರು ೫೦೦ ಪ್ರತಿನಿಧಿಗಳು ಇದಕ್ಕಾಗಿ ಬರಲಿರುವರು. ಎಲ್ಲಾ ಜಾತಿಯ, ಎಲ್ಲಾ ಮತಗಳ ಯುವಕರು ಅಲ್ಲಿ ಸೇರುವರು. ಇದರಿಂದ ದೇಶದಲ್ಲಿ ಸ್ಥಿರವಾದ ಶಾಂತಿಯೂ, ಬಂಧು ಪ್ರೇಮವೂ ನೆಲೆಗೊಳ್ಳುವದು ಎಂದು ದೃಢವಾಗಿ ನಂಬಬಹುದು.

೫ನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

೨೬ನೇ ಮೇ ೧೯೨೮

ಸ್ವಾಗತಾಧ್ಯಕ್ಷ:—ಶ್ರೀ ವಿಶ್ವನಾಥರಾವ ಜೋಗ, ಧಾರವಾಡ ಇವರ ಭಾಷಣವು,

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಜನತೆಯ ಎದುರಿನಲ್ಲಿರುವ ಎರಡನೆಯ ಮಹತ್ವದ ಪ್ರಶ್ನೆಯೆಂದರೆ ಸಾಯಮನ್ನ ಕಮಿಶನ್ನ ಬಹಿಷ್ಕಾರವು. ಈ ವಿಷಯದಲ್ಲಿರುವ ಜನರ ಐಕ್ಯಮತ್ಯವು ಅಭೂತಪೂರ್ವವಾದದ್ದು. ಆ ಕಮಿಶನ್ನು ಬಹಿಷ್ಕರಿಸುವ ಬಗ್ಗೆ ಎಲ್ಲ ರಾಜಕೀಯ ಪಂಗಡಗಳಲ್ಲಿ ಒಮ್ಮತವಿರುತ್ತದೆ. ಈ ಸಂದರ್ಭದಲ್ಲಿ ರಾಷ್ಟ್ರಾಭಿಮಾನಕ್ಕೆ ಯೋಗ್ಯವಾದ ಧೋರಣವನ್ನೇ ಅವರು ಸ್ವೀಕರಿಸಿರುವರು. ಅನ್ಯಾಯ ಪೀಡಿತವಾದ ಹಿಂದೀ ರಾಷ್ಟ್ರದ ಸಮ್ಮತಿಯಿಲ್ಲದೆ ಅದರ ಮೇಲೆ ಹೊರಿಸಿದ ಈ ಕಮಿಶನ್ನಿನ ಕೂಡ ಸಹಕಾರ ಮಾಡುವದಕ್ಕೆ ಯಾವ ಸ್ವಾಭಿಮಾನಿಯಾದ ಹಿಂದವಾಸಿಯೂ ಒಪ್ಪಲಿಕ್ಕಿಲ್ಲೆಂದು ನನ್ನ ಮನವರಿಕೆಯದೆ. ನಮ್ಮ ಸುದೈವದಿಂದ ಈ ಬಹಿಷ್ಕಾರದ ವಿಷಯದಲ್ಲಿ ಕರ್ನಾಟಕದ ಎಲ್ಲ ಪಕ್ಷೀಯ ಜನರದೂ ಒಂದೇ ಅಭಿಪ್ರಾಯವಿರುತ್ತದೆ. ರಾವಬಹದ್ದೂರ ಕಂಬಳಿ, 'ನವಕರ್ನಾಟಕ'ದ ಸಂಪಾದಕರಾದ ರಾವಸಾಹೇಬ ಹಳಕಟ್ಟಿ, ರಾವಬಹದ್ದೂರ ಅಂಗಡಿ, ಶ್ರೀ ಪಂಡಿತ ರಾಯಪ್ಪಾ ಚಿಕ್ಕೋಡಿಯವರಂಥ ರಾಷ್ಟ್ರೀಯ ಸಭೆಯಲ್ಲಿಲ್ಲದ ಜನರೂ ಲೋಕಮತ, ಕರ್ನಾಟಕ ಟಾಯಿಮ್ಸ್, 'ನವಕರ್ನಾಟಕ' ಇವುಗಳಂಥ ವೃತ್ತಪತ್ರಗಳ ಸಂಪಾದಕರು ಸಹ ಬಹಿಷ್ಕಾರಕ್ಕೆ ಬೆಂಬಲವನ್ನಿತ್ತಿರುತ್ತಾರೆ. ಆದರೆ ಕರ್ನಾಟಕ ಏಕೀಕರಣದ ನೆವದಿಂದ ಹಲ ಕೆಲವು ಜನರು ಈ ಐಕ್ಯದಲ್ಲಿ ಒಡಕು ಹುಟ್ಟಿಸುತ್ತಿರುವದನ್ನು ಕಂಡು ನನಗೆ ವಿಷಾದವೆನಿಸುತ್ತದೆ. ಈ ಮಹನೀಯರ ಮನಸ್ಸಿನಲ್ಲಿ ಸದ್ಬುದ್ಧಿಯು ತೋರಿ ದೇಶಹಿತದ ಪ್ರವಾಹಕ್ಕೆ ವಿರುದ್ಧವಾಗಿ ನಡೆಸಿದ ಆತ್ಮಘಾತಕ ಪ್ರಯತ್ನಗಳನ್ನು ಅವರು ಬಿಡಬಹುದೆಂದು ನನ್ನ ಬಲವಾದ ಆಶೆ.

ಬಾರಡೋಲಿ ಮತ್ತು ಪೇಣ ತಾಲೂಕುಗಳಲ್ಲಿ ಹೆಚ್ಚಿಸಿದ ಕಂದಾಯವನ್ನು ಕೊಡಲಿಕ್ಕೆ ರೈತರು ಒಪ್ಪದಿರುವದರಿಂದ ಉಂಟಾದ ಪರಿಸ್ಥಿತಿಯು ಸರ್ವಸಾಧಾರಣವಾದದ್ದಲ್ಲ. ಅದರಲ್ಲಿ ಒಂದು ಹೆಚ್ಚಿನ ತತ್ವವು ಅಡಕವಾಗಿದ್ದು ಅದು ಸಾರ್ವರಾಷ್ಟ್ರೀಯ ಮಹತ್ವದ ಪ್ರಶ್ನವಾಗಿರುತ್ತದೆ. ಬಡತನದಿಂದ ಬಳಲುತ್ತಿರುವ ಅನಾಥ ರೈತರಿಗೆ ತಮ್ಮ ಕೈಯಲ್ಲಿದ್ದ ಕೊನೆಯ ಉಪಾಯವನ್ನು ಕೈಕೊಳ್ಳಹಚ್ಚಿದ್ದರಲ್ಲಿ ಸರಕಾರವು ತೋರಿಸಿದ ಅಚಾತುರ್ಯವು ಗರ್ಹಣೀಯವಾದದ್ದು. ಭೂಕಂದಾಯವನ್ನು ಹೆಚ್ಚಿಸುವದೆಂದರೆ ಜುಲುಮೆಯು. ಆದರೆ ಹೀಗೆ ಹೆಚ್ಚಿಸಿದ ತೆರಿಗೆಯನ್ನು ಒತ್ತಾಯದಿಂದ ವಸೂಲಮಾಡುವದೆಂದರಂತೂ ಅದಕ್ಕೂ ಹೆಚ್ಚಿನ ಜುಲುಮೆಯು. ಯಾವದೊಂದು ಧೋರಣವನ್ನು ಸ್ವೀಕರಿಸುವ ಮೊದಲು ಅದಕ್ಕೆ ಸಂಬಂಧಿಸುವ ಜನರೊಡನೆ ಆಲೋಚಿಸುವ ಮಾರ್ಗವನ್ನು ಕೈಕೊಂಡರೆ ಸುಖಶಾಂತಿಗಳು ನೆಲೆಗೊಳ್ಳುವವು. ಅತ್ಯಂತ ಕಠಿಣವಾದ ಪ್ರಸಂಗದಲ್ಲಿ ತಮ್ಮ ಭೂಮಿ, ದನಕರುಗಳಿಗೆ ಎರವಾಗಿ ಬಳಲುವ ರೈತರಿಗೆ, ಜುಲುಮೆಯ ಆಳರಸರ ಕೂಡ ಅವರು ನಡೆಸಿದ ಹೋರಾಟದಲ್ಲಿ, ನಾವು ಎಲ್ಲ ಬಗೆಯಿಂದ ಸಹಾಯಮಾಡುವದು ನಮ್ಮ ಕರ್ತವ್ಯವಾಗಿದೆ.

ದೇಶದ ಮುಂದಾಳುಗಳು ಹಿಂದು ಮುಸಲ್ಮಾನರ ಐಕ್ಯದ ವಿಷಯದಲ್ಲಿ ಸಾಕಷ್ಟು ಲಕ್ಷವನ್ನು ಪೂರೈಸುತ್ತಿರುವರು. ಎರಡು ಪಕ್ಷದ ಧರ್ಮಾಂಧತೆಯನ್ನು ನಾವು ನಿಷೇಧಿಸಲೇ ಬೇಕು. ಇನ್ನು ಹಿಂದೀ ರಾಜ್ಯಘಟನೆಯ ಬಗ್ಗೆ ಹೇಳಬೇಕೆಂದರೆ ಆವಶ್ಯವೆನಿಸುವ ವರೆಗೆ ಅಲ್ಪ ಸಂಖ್ಯಾಕರಾದ ಕೆಲವು ಜನಾಂಗಗಳ ಸಲುವಾಗಿ ಸ್ಥಳಗಳನ್ನು ಕಾದಿಟ್ಟು ಸಂಯುಕ್ತ ಮತದಾರರ ಸಂಘಗಳನ್ನು ಏರ್ಪಡಿಸಿರುವದರಿಂದ ಈಗಿನ ತೊಡಕು ಬಿಡುವದೆಂದು ನನ್ನ ನಂಬಿಕೆ. ಈ ಯೋಜನೆಯಿಂದ ಜಾತಿಜಾತಿಗಳ ಎಲ್ಲರ ಕಷ್ಟನಷ್ಟಗಳು ಒಂದೇ ಎಂಬ ಭಾವನೆ ಹುಟ್ಟಿ ಪರಸ್ಪರರ ಸಹಾನುಭೂತಿಯು ಬೆಳೆದು ದೇಶದಲ್ಲಿ ಐಕ್ಯಾಭಿವೃದ್ಧಿಯಾಗುವದು.

ಬಂಧುಭಗಿನಿಯರೇ

ಕರ್ನಾಟಕ ಯುವಕರ ಸಂಘೀಕರಣ ಹಿಂದುಸ್ಥಾನದ ಅಂತಿಮ ಧ್ಯೇಯವು ಪೂರ್ಣ ಸ್ವಾತಂತ್ರ್ಯವು. ಸಾಯಮನ್ ಸಂಸತ್ತಕರ ಸಮಿತಿಯ ಬಹಿಷ್ಕಾರ, ಕರ್ನಾಟಕದ ಏಕೀಕರಣ, ಪರದೇಶೀ ಸರಕುಗಳ ಬಹಿಷ್ಕಾರ ಇವೇ ಮುಂತಾದ ಮಹತ್ವದ ವಿಷಯಗಳು ತಮ್ಮ ಮುಂದೆ ಚರ್ಚೆಗಾಗಿ ಬರತಕ್ಕವಿವೆ. ಅದರಂತೆಯೇ ಕಾಣಲು ಸಣ್ಣವಾದರೂ ಕರ್ನಾಟಕದಲ್ಲಿಯ ಬಹು ಜನರ ಹಿತಾಹಿತವನ್ನೊಳಗೊಂಡ ಉಳಿದ ವಿಷಯಗಳೂ ತಮ್ಮೆದುರಿಗೆ ಬರುವವಿವೆ ತಾವೆಲ್ಲರೂ ಅವುಗಳನ್ನು ಶಾಂತ ರೀತಿಯಿಂದ ವಿಚಾರ ಮಾಡಿ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸಬೇಕು. ತಾವು ಮಾರ್ಗದರ್ಶಕರಾಗಲು ಬೇಕು. ತಾವು ತೋರಿದ ದಾರಿಯಿಂದ ನಮ್ಮ ಉತ್ಸಾಹೀ ಕರ್ನಾಟಕದ ಯುವಕರು ಮುಂದರಿಯುವದದೆ. ಕಾರ್ಯವು ಕಠಿಣವಾದದ್ದು. ಆದರೂ ತಮ್ಮ ಮೇಲಿನ ಹೊಣೆಯನ್ನು ತಾವು ಪೂರೈಸುವಿರೆಂದು ನನ್ನ ಪೂರ್ಣ ನಂಬಿಗೆ.

ಹಳೇ ವಿಕಲ್ಪನೆಗಳು ಮುಗ್ಗಹತ್ತಿವೆ ಜಾತಿಮತ್ಸರವು ಕುಗ್ಗಹತ್ತಿದೆ. ಬ್ರಾಹ್ಮಣ ಬ್ರಾಹ್ಮಣೇತರ ಯುವಕರೆಲ್ಲರೂ ಒಮ್ಮನಸಿನಿಂದ ಮಾತೃಭೂಮಿಯ ಸೇವೆಗಾಗಿ ಹಾತೊರೆಯುವ ಚಿಹ್ನೆಗಳು ತೋರಹತ್ತಿವೆ. ಈ ಸಮಯದಲ್ಲಿ ನಾವೆಲ್ಲರು ಉತ್ಸಾಹದಿಂದಲೂ ದೃಢನಿಶ್ಚಯದಿಂದಲೂ ಧೈರ್ಯದಿಂದಲೂ ಮುಂದೆ ಸಾಗುವಾ.

ಬಂಧುಭಗಿನಿಯರೇ, ತಮ್ಮೆಲ್ಲರಿಗೂ ಸ್ವಾಗತವು ಸುಸ್ವಾಗತವು. ದೇಶದ ಮುಂದಣ ಸದ್ಯದ ಅತಿ ಬಿಕ್ಕಟ್ಟು ಪ್ರಶ್ನೆಗಳ ವಿಚಾರವನ್ನು ಮಾಡಲು ನೆರೆದ ತಮ್ಮೆಲ್ಲರಿಗೂ ಸ್ವಾಗತವನ್ನೀಯುವ ಈ ಸುಸಂಧಿಯೆಂದರೆ ನನ್ನ ಆಯುಷ್ಯದ ಆನಂದದ ಕಪಿಲಾಷಷ್ಠಿ ಯೋಗವು. ಸ್ವಾಗತ ಸಮಿತಿಯವರು ತಮ್ಮೆಲ್ಲರ ಆದರಾತಿಥ್ಯದ ವಿಷಯದಲ್ಲಿ ತಮ್ಮ ಕೈಲಾದಷ್ಟು ಏರ್ಪಾಡು ಮಾಡಿದ್ದಾರೆ. ಈ ವಿಷಯದಲ್ಲಿ ಕುಂದುಕೊರತೆಗಳು ಇರುವದೇನೋ ನಿಜ. ಅವುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಸುಹೃದಯರಾಗಿ ತಾವುಗಳು ಇವುಗಳನ್ನೆಲ್ಲ ಹೊಟ್ಟೆಯಲ್ಲಿ ಹಾಕಿಕೊಳ್ಳತಕ್ಕದ್ದು. ಅಲ್ಪಾವಧಿಯಲ್ಲಿಯೇ ತಾವೆಲ್ಲರು ಅತ್ಯಂತ ಪರಿಶ್ರಮಪಟ್ಟು ಅನೇಕ ತೊಂದರೆಗಳನ್ನು ಸಹಿಸಿ ದೇಶಕಾರ್ಯವನ್ನು ಲಕ್ಷಿಸಿ ಇಲ್ಲಿಯವರೆಗೆ ಬಂದದ್ದಕ್ಕಾಗಿ ನಾವು ತಮಗೆ ಕೃತಜ್ಞರಾಗಿರುವೆವೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಸ್ವಾತಂತ್ರ್ಯ ದೇವಿಯನ್ನು ಧ್ಯಾನಿಸುತ್ತ ಭರದಿಂದ ಸಾಗಿರುವ ವೀರರು ತಮಗೊದಗುವ ಅಲ್ಪ ಸ್ವಲ್ಪ ನ್ಯೂನತೆಗಳನ್ನು ಲೆಕ್ಕಿಸದಿರುವದು ಅವರ ಸ್ವಭಾವಗುಣವಲ್ಲದೆ ಮತ್ತೇನು? ಬಂಧುಭಗಿನಿಯರೇ ತಮ್ಮೆಲ್ಲರಿಗೆ ಸ್ವಾಗತವು; ಸಾದರದ ವಂದನೆಗಳು.

...ಂತಿಕ ಮಂಡಲದವರಿಗೆ ಕರ್ನಾಟಕದಲ್ಲಿ ನಿಧಿಯನ್ನು ...ತ್ನವನ್ನು ಮಾಡಬೇಕೆಂದೂ ಗುಜರಾಥಕ್ಕೆ ಕಳಿಸಲು ...ನ್ನು ಸಿದ್ಧಮಾಡಿ ಇಡಬೇಕೆಂದು ಕರ್ನಾಟಕ ದಲದವರಿಗೆ ... ಈ ಪರಿಷತ್ತು ಬಿನ್ನವಿಸುತ್ತದೆ.

...ಗಾಧರರಾಯರು, ಅ.—ಆಲೂರ ವೆಂಕಟರಾಯರು.

...ದಕ ಪದಾರ್ಥಗಳ ಘೂರ್ಣಬಂದಿಯ ಧೋರಣದ ವಿಷಯ ...ಸರಕಾರದವರು ತೋರಿಸುತ್ತಿರುವ ಅನಿಷ್ಟವೃತ್ತಿಯನ್ನು ...ಷೇಧಿಸುತ್ತದೆ. ಮತ್ತು! ಘೂರ್ಣಬಂದಿಯೇ ಯೋಗ್ಯ ...ಮಾರ್ಗವೆಂದು ಈ ಸಭೆಯ ಸ್ಪಷ್ಟವಾದ ಮತವಿದೆ.

...—ಶ್ರೀ. ವಿಶ್ವನಾಥರಾವ ಜೋಗ, ಅ. ಮೊ. ಮುದ ...ಯರು.

...ಬಾಯಿ ಸರಕಾರದವರು ನ್ಯಾಯದ ಮತ್ತು ಪ್ರಚಾರ ... ತನ್ನ ಜಿ. ಆರ್. ನಂ. ೯೬ ೩೦ ೩೪/೧೯೩೭ರಿಂದ ... ಸೇತ್‌ಸನದಿಯರವತನ ಭೂಮಿಗಳ ಮೇಲಿನ ಅಧಿ...ತ್ತಿವಕ್ಕೆ ಪ್ರಯತ್ನಿಸುತ್ತಿರುವದನ್ನು ಈ ಸಭೆಯು ನಿಷೇಧಿ... ಈ ಪ್ರಾಂತದ ಅವಿದ್ಯಾವಂತರಾದ ಬಡ ಸೇತಸನದಿ...ನ್ನು ಕಾಯಲು ಸಹಾಯಕರಾಗಬೇಕೆಂದು ಈ ಸಭೆಯು ...ಸಾಜನರನ್ನು ಬೇಡುತ್ತದೆ.

...ಕೃಷ್ಣರಾಯರು, ಅ.—ಕೌಜಲಗಿ ಹಣಮಂತರಾಯರು

...ಯ ಕೌನ್ಸಿಲದಲ್ಲಿ ಸದ್ಯಕ್ಕೆ ಬಂದ (Consoli-...ll holdings Bill) ಭೂಮಿಯ ಸಣ್ಣ ತುಕುಕು...ಷಯದ ಕಾಯಿದೆಯು ರೈತರ ಹಕ್ಕುಗಳಿಗೆ ಬಾಧಕ ... ಪರಿಷತ್ತಿಗೆ ತೋರುವದರಿಂದ ಲೋಕನಿಯುಕ್ತ ... ರೈತರ ಹಕ್ಕುಗಳನ್ನು ಕಾಯುವ ಯತ್ನಮಾಡ...ಪಿಸುತ್ತದೆ. ಮತ್ತು ಈ ಬಗ್ಗೆ ರೈತರಲ್ಲಿ ಚಳವಳಿ ... ನಿರ್ಣಯಿಸುತ್ತದೆ.

... ಹನುಮಂತರಾಯರು, ಅ.-ಜೀವಪ್ಪಾ ಆನೆಗುಂದಿ.

... ಸಂಸ್ಥಾನಗಳ ಅಂತರಿಕ ರಾಜ್ಯವ್ಯವಹಾರಗಳಲ್ಲಿ ... ಪ್ರತ್ಯಕ್ಷ ಭಾಗತೆಗೆದುಕೊಳ್ಳಲು ಆಸ್ಪದವನ್ನು ... ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಆವಶ್ಯಕ ...ಳನ್ನು ಮಾಡಬೇಕೆಂದು ಈ ಸಭೆಯು ಅಖಿಲ ...ಭೆಯ ಸಮಿತಿಯನ್ನು ಪ್ರಾರ್ಥಿಸುತ್ತದೆ.

...ರಾನಾಥ,ಶಾಸ್ತ್ರಿ ಅ.—ಹುಲ್ಯಾಳಕರ.

...ವನ್ನನುಭವಿಸುವ ಹಿಂದುಸ್ಥಾನದ ಭಾಗ ಮತ್ತು ...ಂಬಂಧವು ಯಾವ ಬಗೆಯದ್ದಿರಬೇಕೆಂಬದರ ಬಗ್ಗೆ ... ನಿಶ್ಚಯಿಸದೆ ಹೋದರೆ ಭಾವೀ ಹಿಂದೀ ರಾಜ್ಯ ... ಉಳಿಯುವದೆಂದು ಈ ಪರಿಷತ್ತಿನ ಅಭಿಪ್ರಾಯ ... ವಿಷಯವನ್ನು ಸರ್ವಪಕ್ಷೀಯ ಪರಿಷತ್ತಿನ ಎದುರಿ...ಖಿಲ ಭಾರತ ಮಂಡಲದವರಿಗೆ ಈ ಪರಿಷತ್ತು

...ಷ್ಣ ಕೃಷ್ಣರಾಯರು, ಅ.—ಅಶ್ವತ್ಥರಾಯರು.

... ಗಾಝೇಟದಲ್ಲಿ ಪ್ರಸಿದ್ಧವಾದ ಮುಂದಿನ ... ಬರತಕ್ಕ ಲ್ಯಾಂಡ ರೇವಿನ್ಯೂ ಕೋಡದ ಸುಧಾರ...ಶಂಕವೃತ್ತಿಯಿಂದ ನೋಡುತ್ತದೆ. ಮತ್ತು ...ದ ಕಂದಾಯ ಹೇರುವ ತತ್ವವನ್ನು ಬಲವಾಗಿ

...ಶ್ವನಾಥರಾಯರು, ಅ — ಮೋಹರೆ ಹನುಮಂತ

...ಯ ಸಭೆಯ ಘಟನೆಯಂತೆ ಕರ್ನಾಟಕ ಪ್ರಾಂ...ರೂ ಸದ್ಯದ ವ್ಯವಸ್ಥೆಯು ಮೇರೆಗೆ ಬೇರೆ ಪರ...ನಾಟಿಗಳ ಅಧಿಕಾರಕ್ಕೆ ಒಳಗಾದ ಕರ್ನಾಟಕದ ...ರ್ನಾಟಕ ಪ್ರಾಂತಕ್ಕೆ ಸೇರಿಸುವ ಎಲ್ಲ ಪ್ರಯತ್ನ ...ಂತಿಕ ಮಂಡಳದವರು ಕೈಕೊಳ್ಳಬೇಕೆಂದು ಈ ...ದಾಗಿ ಸೂಚಿಸುತ್ತದೆ.

...ಕರ ಕೃಷ್ಣರಾಯರು ಅ — ಪುರೋಹಿತ

... ಕರ್ನಾಟಕದ ಭಾಗಗಳಲ್ಲಿ ಜನಗಳಿಗೆ ಇರತಕ್ಕ ...ನ್ನು ಸರಕಾರದವರು ಕೃತಿಯಲ್ಲಿ ತಾರದೇ ಈಗ ...ಗಳು ಅಪೂರ್ಣವಿರುವವೆಂದು ಈ ಪರಿಷತ್ತಿನ

...ಂಕರರಾಯರು, ಅ.— ಶ್ರೀ ಮಾಜಿ ಗಂಗಾ

...ಷ್ಟ್ರೀಯ ಪ್ರಗತಿಯ ಕಾಲದಲ್ಲಿ ಅಸ್ಪೃಶ್ಯತಾ ...ಗಿರುವದರಿಂದಲೂ ಹಿಂದುಗಳೆಲ್ಲ ಅದನ್ನು ಕಿತ್ತಿ...ತ್ತಿನ ಸ್ಪಷ್ಟವಾದ ಮತವದೆ.

...ಲ್ಲಿ ರಾಷ್ಟ್ರೀಯ ಸಭೆಯು ಸಭಾಸದರನ್ನು ...ನ್ನೂ ಬೇರೆ ಬೇರೆ ಭಾಗಗಳಲ್ಲಿ ಶಿಬಿರಗಳನ್ನು ...ಡುವ ಕಾರ್ಯವನ್ನೂ ಕೈಕೊಂಡದ್ದಕ್ಕಾಗಿ ... ಪರಿಷತ್ತು ಅಭಿನಂದಿಸುತ್ತದೆ. ಆಗಸ್ಟ ಮೊದ...ಾಗಲಕೋಟೆಯಲ್ಲಿ ತೆರೆಯತಕ್ಕ ವ್ಯಾಯಾಮ ... ಹಸ್ತದಿಂದ ಸಹಾಯಮಾಡಬೇಕೆಂದು ಕರ್ನಾ...ದೆ.

...ದಾರರು ನೌಕರಿಯನ್ನು ಮಾಡಲಿಕ್ಕೆ ಸಿದ್ಧ ...ವರನ್ನು ನಿಯಮಿಸಿರುವ ವಂಶಪರಂಪರ ಅಧಿ...ದಾರರಿಂದ ಜಿ. ಆರ್. ನಂ, ೮೩೩೩/೨೫ ...ಕಸಿದುಕೊಳ್ಳಬೇಕೆಂಬ ಸರಕಾರದ ನಿಶ್ಚಯ...ಗಿ ನಿಷೇಧಿಸುತ್ತದೆ.

...ಯರು, ಅ. — ಕಲ್ಯಾಪುರ ದೇಸಾಯರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರ್ಹೆವಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲಿಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೊನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕುಂದಿರುವವರಿಗಾದರೂ ಸ್ವಲ್ಪದಲ್ಲೇ — ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7–8–0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.

ಸ್ವತಂತ್ರ ಉದ್ಯೋಗ



ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸರ್ಸ್

ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,
ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ.

ಇವರ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್



ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ.
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯವಿಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧೃಹ್ಮ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಶ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ವಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧನಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars pply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಬೆಲ್‌ಜಿಯಂ ದೇಶದ, ಯಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
108—28 ಮಂಗಳೂರು.

ಮಂಡಲದವರಿಗೆ ಕರ್ನಾಟಕದಲ್ಲಿ ನಿಧಿಯನ್ನು
ನ್ನು ಮಾಡಬೇಕೆಂದೂ ಗುಜರಾಥಕ್ಕೆ ಕಳಿಸಲು
ನ್ಯಮಾಡಿ ಇಡಬೇಕೆಂದು ಕರ್ನಾಟಕ ದಲದವರಿಗೆ
ಷತ್ತು ಬಿನ್ನವಿಸುತ್ತದೆ.

ರಾಯರು, ಅ.—ಆಲೂರ ವೆಂಕಟರಾಯರು.

ದಾರ್ಥಗಳ ಪೂರ್ಣಬಂದಿಯ ಧೋರಣದ ವಿಷಯ
ರದವರು ತೋರಿಸುತ್ತಿರುವ ಅನಿಷ್ಟವೃತ್ತಿಯನ್ನು
ತ್ತದೆ. ಮತ್ತು ಪೂರ್ಣಬಂದಿಯೇ ಯೋಗ್ಯ
ವೆಂದು ಈ ಸಭೆಯು ಸ್ಪಷ್ಟವಾದ ಮತವಿದೆ.
ವಿಶ್ವನಾಥರಾವ ಜೋಗ್, ಅ. ನೊ. ಮುದ

ಸರಕಾರದವರು ನ್ಯಾಯದ ಮತ್ತು ಪ್ರಚಾರ
ಜಿ. ಆರ್. ನಂ. ೯೬ ೨೦ ೨೪/೧೯೨೭ರಿಂದ
ಸನದಿಯರವತನ ಭೂಮಿಗಳ ಮೇಲಿನ ಅಧಿ
ಪ್ರಯತ್ನಿಸುತ್ತಿರುವದನ್ನು ಈ ಸಭೆಯು ನಿಷೇಧಿ
ಪ್ರಾಂತದ ಅವಿದ್ಯಾವಂತರಾದ ಬಡ ಸೇತಸನದಿ
ಯಲು ಸಹಾಯಕರಾಗಬೇಕೆಂದು ಈ ಸಭೆಯು
ರನ್ನು ಬೇಡುತ್ತದೆ.

ಯರು, ಅ.—ಕೌಜಲಗಿ ಹಣಮಂತರಾಯರು

ಕೌನ್ಸಿಲದಲ್ಲಿ ಸನ್ಮುಖ ಬಂದ (Consoli-
oldings Bill) ಭೂಮಿಯ ಸಣ್ಣ ತುಣುಕು
ದ ಕಾಯಿದೆಯು ರೈತರ ಹಕ್ಕುಗಳಿಗೆ ಬಾಧಕ
ತ್ತಿಗೆ ತೋರುವದರಿಂದ ಲೋಕನಿಯುಕ್ತ
ತರ ಹಕ್ಕುಗಳನ್ನು ಕಾಯುವ ಯತ್ನಮಾಡ
ತ್ತದೆ. ಮತ್ತು ಈ ಬಗ್ಗೆ ರೈತರಲ್ಲಿ ಚಳವಳಿ
ಯಸುತ್ತದೆ.

ಮಂತರಾಯರು, ಅ.-ಜೀವಪ್ಪಾ ಆನೆಗುಂದಿ.

ಸ್ಥಾನಗಳ ಅಂತರಿಕ ರಾಜ್ಯವ್ಯವಹಾರಗಳಲ್ಲಿ
ತ್ಯಕ್ಷ ಭಾಗತೆಗೆದುಕೊಳ್ಳಲು ಆಸ್ಪದವನ್ನು
ಯ ಸಭೆಯು ಘಟನೆಯಲ್ಲಿ ಅವಶ್ಯಕ
ಮಾಡಬೇಕೆಂದು ಈ ಸಭೆಯು ಅಖಿಲ
ಸಮಿತಿಯನ್ನು ಪ್ರಾರ್ಥಿಸುತ್ತದೆ.

ನಾಥ, ಅ.—ಹುಲ್ಯಾಳಕರ.

ನುಭವಿಸುವ ಹಿಂದುಸ್ಥಾನದ ಭಾಗ ಮತ್ತು
ಧವು ಯಾವ ಬಗೆಯದ್ದಿರಬೇಕೆಂಬದರ ಬಗ್ಗೆ
ಯಸದೆ ಹೋದರೆ ಭಾವೀ ಹಿಂದೀ ರಾಜ್ಯ
ಯುವದೆಂದು ಈ ಪರಿಷತ್ತಿನ ಅಭಿಪ್ರಾಯ
ವುವನ್ನು ಸರ್ವಪಕ್ಷೀಯ ಪರಿಷತ್ತಿನ ಎದುರಿ
ಭಾರತ ಮಂಡಲದವರಿಗೆ ಈ ಪರಿಷತ್ತು

ಷ್ಣರಾಯರು, ಅ.— ಅಶ್ವತ್ಥರಾಯರು.

ಾಯೀಟದಲ್ಲಿ ಪ್ರಸಿದ್ಧವಾದ ಮುಂದಿನ
ಕ್ಕ ಲ್ಯಾಂಡ ರೇವಿನ್ಯೂ ಕೋಡದ ಸುಧಾರ
ಕವೃತ್ತಿಯಿಂದ ನೋಡುತ್ತದೆ. ಮತ್ತು
ಂದಾಯ ಹೇರುವ ತತ್ವವನ್ನು ಬಲವಾಗಿ

ರರಾಯರು, ಅ — ಮೋಹರೆ ಹನುಮಂತ

ಭೆಯ ಘಟನೆಯಂತೆ ಕರ್ನಾಟಕ ಪ್ರಾಂ
ತ್ಯದ ವ್ಯವಸ್ಥೆಯು ಮೇರೆಗೆ ಬೇರೆ ಪರ
ಳ ಅಧಿಕಾರಕ್ಕೆ ಒಳಗಾದ ಕರ್ನಾಟಕದ
ಪ್ರಾಂತಕ್ಕೆ ಸೇರಿಸುವ ಎಲ್ಲ ಪ್ರಯತ್ನ
ಮಂಡಳದವರು ಕೈಕೊಳ್ಳಬೇಕೆಂದು ಈ
ಸೂಚಿಸುತ್ತದೆ.

ಕೃಷ್ಣರಾಯರು ಅ — ಪುರೋಹಿತ

ಟಕದ ಭಾಗಗಳಲ್ಲಿ ಜನಗಳಿಗೆ ಇರತಕ್ಕ
ರಕಾರದವರು ಕೃತಿಯಲ್ಲಿ ತಾರದೇ ಈಗ
ಅಪೂರ್ಣವಿರುವವೆಂದು ಈ ಪರಿಷತ್ತಿನ

ರಾಯರು, ಅ.— ಶ್ರೀ ಮಾಜಿ ಗಂಗಾ

ಯ ಪ್ರಗತಿಯ ಕಾಲದಲ್ಲಿ ಅಸ್ಪೃಶ್ಯತಾ
ದರಿಂದಲೂ ಹಿಂದುಗಳೆಲ್ಲ ಅದನ್ನು ಕಿತ್ತಿ
ಸ್ಪಷ್ಟವಾದ ಮತವದೆ.

ರಾಷ್ಟ್ರೀಯ ಸಭೆಯು ಸಭಾಸದರನ್ನು
ಬೇರೆ ಬೇರೆ ಭಾಗಗಳಲ್ಲಿ ಶಿಬಿರಗಳನ್ನು
ಕಾರ್ಯವನ್ನೂ ಕೈಕೊಂಡದ್ದಕ್ಕಾಗಿ
ಅಭಿನಂದಿಸುತ್ತದೆ. ಆಗಷ್ಟು ನೊತ
ಕೋಟೆಯಲ್ಲಿ ತೆರೆಯತಕ್ಕ ವ್ಯಾಯಾಮ
ಂದ ಸಹಾಯಮಾಡಬೇಕೆಂದು ಕರ್ನಾ

ನೌಕರಿಯನ್ನು ಮಾಡಲಿಕ್ಕೆ ಸಿದ್ಧ
ನಿಯಮಿಸಿರುವ ವಂಶಪರಂಪರ ಅಧಿ
ಂದ ಜಿ. ಆರ್. ನಂ. ೮೩೨೨/೨೮
ಕೊಳ್ಳಬೇಕೆಂಬ ಸರಕಾರದ ನಿಶ್ಚಯ
ಷೇಧಿಸುತ್ತದೆ.
ಅ. — ಕಲ್ಯಾಪುರ ದೇಸಾಯರು.

The Kanara Watch House Udipi, S. K.

ಗ್ಯಾರಂಟಿ ಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕೊಂಡಿರುವವರಿಗಾದರೂ ಸ್ಥೈರ್ಯದಲ್ಲೇ
— ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7—8—0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ.,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.



ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ
ಮೆಸರ್ಸ್
ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,
ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ.
ಇವರ
ಸೋಡಾ ವಾಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವಾಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ
'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.



ದಯಮಿಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇನೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಕಿಮ್ಮತ್ತು ಅಗ್ಗ
ಖಾತ್ರಿಯಾಗುವದು!! ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಧೃಷ್ಟ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮುಖ್ಯ ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಏಗು ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars pply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.
ಯೇಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
ಮಂಗಳೂರು.

108—28

ಭಕ್ತಜನರ್ಗೆ ನಿರ್ಜರ | ಧೇನು ಕಲ್ಪದ್ರುಮನು ಏಕ್ಯ | ಕ್ಸೇನ ಬಿಸ್ಕಹ ಲಾಲಿಸೆಂದನು ನಾಮದೇವಕನೂ ‖ ೩೭ ‖ ದೇವ ರಾಯನೆ ಪರಿಕಿಸೆನ್ನಯ | ಭಾವದೊಳು ಸಂದೇಹವೊಂದಿದು | ತೀವಿಕೊಂಡಿದೆ ಕೇಳಿ ನಿಶ್ಚಿಂತನನು ನೆರೆಮಾಡಿ ‖ ಕಾವುದೆನ್ನನು ಭಕ್ತಜನ ಸಂ | ಜೀವ ಲೋಕೋದ್ಧಾರ ಮಹಿಮನೆ | ಈ ವಿಶಿಷ್ಟ ಸ್ಥಳಮಹಾತ್ಮೆಯದೆಂತು ಪೇಳೆಂದಾ ‖ ೩೮ ‖ ಊರ್ವಿ ಇಪ್ಪತ್ತೆಂಟು ಯುಗದಿಂ | ದೀರ್ವ ದೇವನು ಬಂದು ನಿಂದುದ | ಸರ್ವಜನರಿದ ಬಲ್ಲರೈ ಸದ್ಭಕ್ತಿಯುಳ್ಳವರೂ ‖ ಸರ್ವಲೋಕವ ತಾರಿಯುರ್ಬುದ | ಗರ್ವವರ್ಜಿತರಿಂಗೆ ಲೀಲೆಯ | ಸರ್ವತೋದಿರ್ೀ ತೀರ್ಥಮಹಿಮೆಯ ಜ್ಞಾನಿಜನರೆಲ್ಲಾ ‖ ೩೯ ‖ ಆದಡಿಪ್ಪತ್ತೆಂಟು ಯುಗಗಳ | ನಾದಿಕಥೆಗಳ ಕರುಣದಿಂದಲಿ | ಬೋಧಿಸೆಂದನು ನಾಮದೇವನು ಭಕ್ತಿರಸವೆರಸಿ ‖ ಆಧರಿಸಿ ನಸುನಗುತ ವಿಠಲ ಕೃ | ಪೋನಯದೊಳೊಪ್ಪಿದನು ಮಾತಿನ | ಸ್ವಾದವನು ನೆರೆ ತಿಳಿದು ಮನದಿ ನಿವಾಳಿಸುತ ಮುದದಿ ‖ ೪೦ ‖ ಆರರೆ ಧನ್ಯನಲಾ ಜಗತ್ರಯ | ಕರಿತೆನರಿತೆನು ಮಗನೆ ನಿನ್ನಯ | ಸರಿಯದಾರೈ ನೀನು ಕುಲಕೋಟಿಗಳನುದ್ಧರಿಸಿ ‖ ಮರಳಿ ಜಗಕುಪಕಾರ ಕೋಸುಗ | ಸರಸದಿಂದೀ ಪ್ರಶ್ನೆಯನು ವಿ | ಸ್ತರಿಸಿ ಕೇಳಿದು ದೆನ್ನೊಳಲಿ ಮಝಭಾಪು ಭಳಿರೆಂದೂ ‖ ೪೧ ‖ ತಂದೆ ಕೇಳು ಪರೋಪಕಾರವ | ಬಿಂದು ಮಾತ್ರದೊಳೆಸಗಿದವಂ | ನಂದ ಭರಿತರು ಧರೆಗೆಮಾನ್ಯರು ಜಗಕೆ ಪಾವನರೂ ‖ ಅಂದವಡದೀ ತೀರ್ಥಯಾತ್ರೆಗ | ಳಂದವಿದು ಮಾಡುವುದು ಯಾತ | ಕ್ಕೆಂದಿಗಾದರು ಮುಕ್ತರವ ತೀ ಭಾರತನಗೆಂದಾ ‖ ೪೨ ‖ ಪೇಳುವೆನು ಭವತಾರಕನೆ ನೀ | ಕೇಳಿದಿಪ್ಪತ್ತೆಂಟು ಯುಗಗಳ | ಮೂಲ ಗೂಢ ಮಹಾತ್ಮೆಗಳನೆಲ್ಲವನು ಚೆನ್ನಾಗಿ ‖ ಲಾಲಿಸೆನಲಾ ನಾಮದೇವನು | ಶ್ರಿ ಲಲಾಮನ ನುಡಿಗೆ ಹರುಷ ರ | ಸಾಳಿಯಲಿ ತಾ ತುಳುಕೆ ಪರವಶದಿಂದ ನಿಂದಿರ್ದಾ ‖ ೪೩ ‖ ಸೃಷ್ಟಿಯಲಿ ಬರೆದೋದಿ ಕೇಳ್ದ ವಿ | ಶಿಷ್ಟ ಜನರಿಗೆ ಸಕಲ ಭಾಗ್ಯವ ‖ ಕೊಟ್ಟು ಕರುಣದಿ ಪಾಂಡುರಂಗನು ಬಿಡದಲನುದಿನದಿ ‖ ನಿಷ್ಠೆಯಲಿ ಸಲಹುವನು ಲೋಕೋತ್ಕೃಷ್ಟನಾಗಿಹೆ ಮಧ್ವಪತಿ ಶ್ರೀ | ಕೃಷ್ಣ ವಿಠ್ಠಲನಿಹಪರದಿ ತನ್ನವರನೆಂದೆನುತಾ ‖ ೪೪ ‖ ಸ್ಕಂದ ಪೌರಾಣದಲಿ ಶಿವ ಗಿರಿ | ನಂದನೆಗೆ ಪೇಳಿರುವ ಲೋಕಾ | ನಂದಮಯ ಸಂವಾದವಿದರೊಳು ನುಡಿಗೆ ತಪ್ಪಿರಲು ‖ ಅಂದವಿಡುತಲಿ ಕವಿಗಳಿದ ಮುದ | ದಿಂದ ತಿದ್ದುವುದೊಲಿದು ಸಜ್ಜನ | ವೃಂದ ಕೇಳುತಲಧಿಕ ಭಕ್ತಿಯೊಳೀ ಮಹಾತ್ಮೆಯನೂ ‖ ೪೫ ‖

‖ ಒದನೇ ಅಧ್ಯಾಯ ಸಂಪೂರ್ಣ ‖

ದ್ವಿತೀಯ ಅಧ್ಯಾಯ.

‖ ಸೂಚನೆ ‖ ಶರಣು ಜನರ ಶಿಖಾಮಣಿಗೆ ವಿ | ಸ್ತರಿಸಿದನು ವಿಠ್ಠಲನು ಪಾವನ | ತರ ಮಹೋನ್ನತ ಚಂದ್ರಭಾಗಸು ತೀರ್ಥವಾದುದನೂ ‖

ಕೇಳಿದೈ ಭೂದಿವಿಜನದಿಕ ವಿ | ಶಾಲ ಮತಿಯುತ ನಾಮದೇವನು | ಲಾಲಿಸುತ ಹರಿವಚನವತ್ಯಾನಂದಮಯನಾಗಿ ‖ ಮೇಲುಭಕ್ತಿಯೊಳೆರಗಿ ನಿಂದಿರೆ | ಪೇಳತೊಡಗಿದ ವಿಠಲನದ ತ | ನ್ಮೂಲವಾಂತಿನ್ನೇಸುಧನ್ಯನೊ ನಾಮದೇವಕನೂ ‖ ೧ ‖ ಚಾರುಚಂದ್ರನ ಕಿರಣಗಳನು ಚ | ಕೋರ ಬಯಸುವ ತೆರದಿ ಭ್ರಮರವು | ವಾರಿಜದ ಮಕರಂದಕೆಳಸುವ ತೆರನೊಳೆಳೆಗರುವೂ ‖ ಚಾರುಕ್ಷೀರವ ಬಯಸುವಂದದಿ | ಚಾರುಮುಕ್ತಾಹಾರ ಹಂಸ ವಿ | ಚಾರಿಪಂದದಿ ನೋಡುತಿದ್ದನು ಹರಿಯ ಸಮ್ಮುಖವಾ ‖ ೨ ‖ ಸಲ್ಲಲಿತ ಘನ ಭಕ್ತಿಯುತ ಮನ | ದುಲ್ಲಸದಿ ನಿಂದಿರ್ದ ಭಕ್ತನ | ಫುಲ್ಲಲೋಚನ ನೀಕ್ಷಿಸುತ ಸಂತೋಷಚಿತ್ತದಲಿ ‖ ನಿಲ್ಲದಾಜ್ಞಾಪಿಸಿದನೀಜಗ | ವೆಲ್ಲ ಪಾವನವಪ್ಪತೆಂದಿಂ | ಸೊಲ್ಲು ಸೊಲ್ಲಿಗೆ ಶ್ರುತಿಯು ಕುಣಿದಾಡಿದವೆ ಪೇಳೆಂದಾ ‖ ೩ ‖ ಕಂದ ಕೇಳೈ ವರುಣ ದೇವನು | ಹಿಂದೆ ಪರಮೇಶ್ವರನ ಪೂಜೆಯ | ನಂದದಲಿ ಮಾಡುವರೆ ಮನದಲಿ ನೆನ ಪಟ್ಟಣವಾ ‖ ಚಂದದಲಿ ಶೃಂಗರಿಸಿ ತಾ ಶಶಿ | ಕಂಧರನ ಧ್ಯಾನಿಸಲು ಶಿವ ತಾ | ನಂದಿವಾಹನನಾಗಿ ಪೊರಟನು ಗಿರಿಜೆಯೊಳ ಸಹಿತಾ ‖ ೪ ‖ ಎನಲು ಕೇಳುತ ನಾಮದೇವನು | ವಿನಯದಲಿ ಬೆಸಗೊಂಡನಭವನ | ನೆನೆದು ಪೂಜಿಸಲೇನು ಫಲವದನೊರೆಯಬೇಕೆನಲು ‖ ಮನಸಿಜನ ಪಿತನುಸುರಿದನ್ನುಡಿ | ಯನಘ ಮಹಿಮನು ಶಿವನ ಪೂಜೆಯ | ನನುಪಮಿತ ಪುಣ್ಯವದನೇನಿನ್ನೊರೆವೆಜಗದೊಳಗೆ ‖ ೫ ‖ ಶಿವನನರ್ಚಿಸಿ ಮೆಚ್ಚಿಸಿದ ಮಾ ನವನಿಗಿಲ್ಲವು ಭವಭಯವು ಪರ | ಶಿವನ ಮೆಚ್ಚಿಸಿ ಪೂಜೆಸಿದ ಫಲವಹುದು ಧ್ರುವಸದೃಶಾ ‖ ಭವಭವಾಂತದೊಳೈತರುವ ಪು | ಣ್ಯವನು ಮಾಡಿದ ಪುರುಷಗಲ್ಲದೆ | ಶಿವನ ಭಕ್ತಿಯು ದೊರಕದಿದು ಮೂಜಗದಿ ದುರ್ಲಭವೂ ‖ ೬ ‖ ನಗಭೂಷಣಗರ್ಚಿಸಿದ ಫಲ | ತಹಗಲಧಿಕಾಗಿರುವುದದು ಸಂ | ಯೋಗದಗಣಿತ ಪುಣ್ಯವೆಂದನು ನಾಮದೇವನಿಗೆ ‖ ಭೋಗಿ ಭೂಷನ ಪೂಜಿಸುವ ಮನ | ವಾಗಲದರಿಂ ವರುಣನಿಗೆ ದಯ | ವಾಗಿ ಬರುತಿರೆ ಪಥದೆ ಕೃಪೆಯುದ್ಭವಿಸಿತಗಸುತೆಗೆ ‖ ೭ ‖

ಸಶೇಷ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಬರುತ್ತೇವೆ. ನೀಡಿಸಿವ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ; ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ತಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,37,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,

ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ‖ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 48 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ದಿನ್ನಿನ ವರಗಳು ಸೀಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟೌನ್ ಮಾತ್ರ.

ಡನ್ಲೊಪ ಟಾಯರುಗಳನ್ನೇ ಉಪಯೋಗಿಸಿರಿ.



DUNLOP

DUNLOP

ದಿ ಡನ್ಲೋಪ ರಬ್ಬರ ಕಂಪೆನಿ (ಇಂಡಿಯಾ) ಲಿಮಿಟೆಡ್,

ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌ, ಲಾಹೋರು, ರಾವಲ್‌ಪಿಂಡಿ,

ಕರಾಚಿ, ಕಲ್ಕತ್ತಾ, ಗೋಹತ್ತೀ, ರಂಗೂನು, ಮಂಡಲೇ, ಮದ್ರಾಸು,

ಬೆಂಗಳೂರು, ಅಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. Registered No. M. 498 ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಮತ್ತೆ ವಿಷ್ವದ ಸುದುಕ ಬರುತಿರುವ ॥

ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೧೫ನೇ ಶುಕ್ರವಾರ ಜೂನ್ ೧೯೨೮. ಸಂಚಿಕೆ ೨೪

THE CANARA BAIKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು—ಉಡುಪಿ.

Branches:—C ONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Authorised Capital	Rs. 3,50,000.
Subscribed "	2,25,000.
Paid-up "	1,99,650.
Reserve and other Funds as on 31—12-1927	83,000.
Investment on G. P. Notes	1,85,931—13—0.

Rates of interest on Fixed Deposits at Head Office and Branches are reduced on 1 year deposits to 6¼% and years deposits to 7% from 1—2—1928:—

ಬೇಂಕಿನ ಹೆಡ್ಡು ಆಫೀಸಿನಲ್ಲಿಯೂ ಬ್ರಾಂಚ್ ಆಫೀಸುಗಳಲ್ಲಿಯೂ ತಾ. 1—2—1928ರಿಂದ 1 ವರ್ಷ ವಾಯಿದೆ ಠೇವಣಾತಿಗಳ ಮೇಲೆ ಶೇಕಡಾ 6¼ರ ವ 2 ವರ್ಷದ ಠೇವಣಾತಿಗಳ ಮೇಲೆ ಶೇಕಡಾ 7ರ ಬಡ್ಡಿಗೆ ತಗ್ಗಿಸಲಾಗಿದೆ.

Office of the Corporation,
UDIPI, 21—1—'28.

N. NANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧವಾದ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ನಿದ್ರೆಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮುಕ್ಕತ ಯತ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ವಿಕ್ರಯಕ್ಕಿದೆ. ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ ಕಜ್ಜಿ, ಕಜ್ಜಿಗುಳ್ಳೆ ಬಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ, ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

24 ಗ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.

Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.



Batliwalla's Preparations Cover All Your Needs.
A NAME THAT MERIT HAS MADE FAMOUS.
೪೨ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ಮಲೇರಿಯಾ ಜ್ವರ ನಿವಾರಣ, ರೂ. ೧.
ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಕರೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಕಾಲರಾ ಜ್ವರಗಳಿಗೆ ಅತ್ಯುತ್ಕೃಷ್ಟವಾದ ಔಷಧ. ಆಣೆ ೧೪
ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ರೂ. ೧—೩—೦ ರೂ, ೧—೪—೦. ೧—೧೨—೦
ರೂ. ೦—೬—೦
ರೂ. ೦—೬—೦. LIBERAL DISCOUNT TO TRADE
—CAWASHAJUR, BOMBAY.
ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Rad, P. O. Cadell Road, Bombay, No. 14.

... ರಿ ಯ ವ ರ ಲೋ ಧ್ರ

ಗರ್ಭಾಶಯ ರೋಗನಿವಾರಿಣಿ.

...ದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ...ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಎಂದೂ ...ಲವು ಬಗೆಯಾಗಿ ಹೊಗಳುತ್ತಿರುವರು.

...ಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಋತುಸ್ರಾವವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ... ...ತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ...ಗುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ...ಗಳೂ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ...

ಕೇಸರೀ ಕುಟೀರಂ,
...ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೇಪೇಟೆ, ಬೆಂಗಳೂರು.
...ಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕ್ಕೆ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ ಬಾಕ್ಸ್ ನಂ. 105, ಮದರಾಸು.

ಪಂಢರಿ ಮಹಾತ್ಮೆ

(ಕಳದ ಸಂಚಿಕೆಯಿಂದ ಮುಂದುವರಿದುದು)

ತಡೆಯಲಾರೆನು ತೃಷೆಯನೆಲೆ ಜಗ | ದೊಡೆಯ ಪಾಲಿಸು ಜಲವನೆಂದಡೆ | ಮೃಢನು ತಾ ಧರೆಗೀಳಿದು ತೆಗೆದಿಟ್ಟನು ತ್ರಿಶೂಲವನೂ || ಪಡದು ಮಂದಾಕಿನಿಯು ಕಾಶಿಯು | ಜಡಿವ ಭೋಗಾವತಿಯು ಸಹಿತಲೆ | ಪೊಡವಿಯುಂದುದ್ಭವಿಸಿದಳು ಪಾಲುಕ್ಕಿ ದಂದದಲೀ || ೮ || ಮೃಢನು ನೋಡುತ ಹರುಷದಲಿ ನಿಜ | ಮಡದಿಗೆಂದನು ಜಲವ ಕೊಳ್ಳೆನೆ | ವಡನೆ ಕೊಂಡಳು ಜಲವ ನಂದಾ ಪರ್ವತಾತ್ಮಜೆಯೂ || ನಡದರಿಬ್ಬರು ನಗುತ ನಂದಿಯು | ಪಡರಿ ಪಶ್ಚಿಮ ನಾಥನಲ್ಲಿಗೆ | ಸಡಗರದಿ ಬಲು ಪೂಜೆಗೈದರು ಭಾವಶುದ್ಧಿಯಲಿ || ೯ || ಹರನು ಬಲು ಸಂತಸದೊಳಾದಿನ | ಪರಮ ಹರುಷಿತನಾಗುತಿತ್ತಾ | ವರ ಮಹಾ ತೀರ್ಥವನು ಸೇವಿಸಿ ಸಕಲ ಪ್ರಾಣಿಗಳೂ || ತಂತರದ ವನಚರ ವಿಹಂಗವು | ಮೆರೆವ ಮದಗಜ ಸೂಕರಂಗಳು | ಹೊರಳಿ ಕ್ರೀಡೆಯನಾಡು ತಾಡುತ ಕೊಳವ ನೆಸಗಿದವೂ || ೧೦ || ಮೆರೆವ ಹುಲಿ ಕಪಿ ಕರಡಿ ಮೊದಲಾ | ಗಿರುವ ಜೀವಿತ ಜಂತು ಸರ್ವಗ | ಳರದೆ ಕುಡಿದವು ಜಲವ ನಾಶ್ರೈಸುತ ನಿರಂತರದಿ || ತೆರಳಿದವು ವೈಕುಂಠ ಪದವಿಗೆ | ಪರಮ ತೀರ್ಥ ಮಹಾತ್ಮೆಯಿಂದೀ | ಪರಿಯೊಳಗ ಣಿತ ಕಾಲ ಕಳೆವುತ್ತೀರ್ದುದೇನೆಂಬೆ || ೧೧ || ಇಂತು ಬಲುತರ ಜೀವರಾಶಿಗೆ | ಯಂತಕನ ಭಯವಿಲ್ಲದಿರೆ ಸತಿ | ಚಿಂತಿಸುತ ದಿಂಡಾಗಿ ಕಾಂತನೊಳುಸುರಲಿಂತಿದನೂ || ಕಂತುಹರನಿಂದಾದ ತೀರ್ಥವು | ತಂತು ಮಾತ್ರದಿ ಕಾಣದಂದದಿ | ನಿಂತು ಕಲ್ಗಳ ಹಾಕಿ ಮುಚ್ಚುವದೆಂದ ದೂತರಿಗೆ || ೧೨ || ಅರಿಯರಂಗಲು ತೀರ್ಥವನು ಋಷಿ | ವರಿಯರಮರರು ನರರಲೀ ಗತಿ | ಧರದಿ ಮರೆಮಾಡಿದಡೆ ಬಹಳ ಗುಣಾಂಶ ನಮಗಿಹುದೂ || ಸುರರ ವಲ್ಲಿಯ ಬ್ಬುದವತರಿದಡೆ | ಮರಳಿ ಫಲ ಬಹುದುಂಟೆ ಕಳಲೆಯು | ಮುರಿದಡದು ಬಿದಿರಾಗಬಲ್ಲುದೆ ಎಂದು ನೇಮಿಸಿದಾ || ೧೩ || ನುಡಿಯ ಕೇಳ್ದಾಕ್ಷಣವೇ ಯಮಭಟ | ರೊಡನೆ ಕಲ್ಗಳ ತಂದು ಹಾಕಲು | ಶಿಡಿದವಂಗೋಪಾಂಗದೊಳಗಾ ತೀರ್ಥ ಬಿಂದುಗಳೂ || ಬಿಡದೆ ನಿರ್ಮಳರಾದರೆನುತಲೆ | ಪಿಡಿದವರ ವೈಕುಂಠ ಕೈದರು | ವಡೆಯ ನಚ್ಚುತನಾಜ್ಞೆಯಾಂತಾ ದೂತರತಿ ಮುದದೀ || ೧೪ || ಕೇಳುತಲೆ ಮರುಗಿದನು ದುಬ್ಬು ಜ | ಡಾಳಿ ಸಿತ್ತೆಮನಿಂಗೆ ತನ್ನಯ | ಬಾಳುವೆಯು ನೆರೆ ಕೆಟ್ಟುದಕಟೆಂದೆನುತ ಯೋಚಿಸುತಾ || ಆಳುಗಳು ವೈಕುಂಠ ನಗರಿಗೆ | ದಾಳಿ ಇಟ್ಟರು ತನ್ನ ಕೆಲಸವ | ಹಾಳುಮಾಡಿದನಗಜೆಯರಸನು ತೀರ್ಥವನು ರಚಿಸಿ || ೧೫ || ತೀರ್ಥವಿದು ವಿಷವ್ಯಾತು ಯಮಗೆ ನಿ | ರರ್ಥಕನುವಾಗುತಲಿ ಬದುಕಲು | ಸ್ವಾರ್ಥವಿಲ್ಲವು ತನುವ ವಹ್ನಿಗೆ ಕೊಡುವೆನೆನುತಿರಲು || ಇತ್ತಲಾ ತೀರ್ಥದಲಿ ಸ್ನಾನವ | ನರ್ಥಿಯಲಿ ವಿರಚಿಸುತ ಹರಿ ಸ | ರ್ವೋತ್ತುಮನ ಕಡೆಯವರು ಕಾದೀರ್ದರು ವಿಲಾಸದಲಿ || ೧೬ || ಬಳಿಕ ಯಮ ತಾ ಚಿಂತೆಯಲಿ ಬಂ | ದಳುತ ವೈಯುಕ್ಕಿದನು ಬಳಿಕಾ | ತುಳ ಮಹೇಶ್ವರಗಾಗಲಾ ಕೈಲಾಸ ಪರ್ವತದೀ || ಬಲು ವಿಚಿತ್ರದ ತೀರ್ಥವದನೀ | ನೆಳೆಗೆ ನಿರ್ಮಿಸಿ ವರ ತ್ರಿಶೂಲದಿ | ಹಲವು ಕರ್ಮಿಗಳಿಂಗೆ ನೆರೆಮನೆಯ್ಯಾತು ವೈಕುಂಠಾ || ೧೭ || ಇನ್ನು ಪೇಳುವದೇನು ಸ್ವಗೃಹ | ವನ್ನು ಪಾವಕಗಿತ್ತು ಕಾವ ಪ್ರ | ಸನ್ನ ನೀನಿಂತೆಸಗಿದಡೆ ತಾನಾರಿಗುಸುರುವೆನೂ || ಬಣ್ಣಗೇಡ್ಯಾತೆನಲು ಕೇಳುತ | ಕಣ್ಣೆವಲಿ ಕಿಡಿಮಸಗೆ ರುದ್ರಗೆ | ಬಣ್ಣಿಸುವೆನೇನದನು ಪ್ರಳಯವೆ ಬಂದುದೆಂಬುದನೂ || ೧೮ || ಹೂಂಕರಿಸುತಡಿಯಿಡುತ ನಡುಜಡೆ | ಯಿಂ ಕೆದರಿ ಧರೆಗಿಡಲು ರಣ ನಿಃಶ್ಯಂಕನುದುಭವಿಸಿದನು ಚಂದ್ರೇಶಾಭಿದಾನದಲಿ || ಶಂಕರನೊಳಪ್ಪಣೆಯ ಕೇಳಿದನೇಂ ಕೆಲಸ ಬೆಸಸೆಂದಡಾತನ | ಕೊಂಕನಟ್ಟಿದನಚ್ಚುತನ ಕಿಂಕರರನಟ್ಟೆನುತಾ || ೧೯ || ಮುಸಲ ಮುದ್ಗರ ಪಿಂಡಿವಾಳಗ | ಳಸಮ ತೋಮರ ಕುಂತಗಳ ಪಟ | ಹಸ ಮುಸುಂಡಿ ಕೃಪಾಣ ಡೆಂಕಣಿ ಹರಿಗೆ ಹಲಗೆಗಳಾ || ಎಸೆವ ಪಾಶ ತ್ರಿಶೂಲಗಳು ಸಹ | ಪ್ರಸರ ಬತ್ತೀಸಾಯುಧಂಗಳ | ನಸುನಂತಾರ್ಥಟಿಸಿ ಬಂದನು ರಿಪು ಭಯಂಕರನೂ || ೨೦ || ಮೃಢನೊಳಪ್ಪಣೆ ಗೊಂಡು ದೈತ್ಯನು | ಘುಡುಘುಡಿಸಿ ಧರೆಗಿಳಿದು ಪ್ರಳಯದ | ಶಿಡಿಲೆರಗುವಂದದಲಿ ರಥಸಕೆ ನೆಲವು ಬಾಧ್ಯಿಪಡಲೂ || ಪೊಡವಿ ಕುಸಿದುದು ಘರ್ಜಿಸುತ್ತಿರ | ಲಡಗಿದರು ಸುರವರರು ಭಯದಲಿ | ನಡುಗುತೀರ್ದುದು ಜಗವದೇನೆಂಬೆನು ಮಹಾದ್ಭುತವಾ || ೨೧ || ಬಂದನಾವರ ದೆಸೆಗೆ ಕೇಳ್ವದ | ನಂದು ಚೋದ್ಯದೊಳಿರಲು ನೀವಾ | ರೆಂದು ಭೀಕರಿಸುತ್ತ ಭೀತಿಯೊಳ್ವಿಷ್ಣುದೂತರಿಗೆ || ಮುಂದಮತಿ ಇವನ್ಯಾರೆನುತ ಗೋ | ವಿಂದ ಕಿಂಕರರವನ ಕೇಳಲು | ಇಂದುಧರನಟ್ಟಿದನು ನೀವಾರೆಂದನಾ ಖಳನೂ || ೨೨ || ಹರನ ತೀರ್ಥದೊಳಖಿಳ ದುಷ್ಟರ | ನೆರವಿಯನು ವೈಕುಂಠ ನಗರಿಗೆ | ಕರದು ವೈವಧಿಕಾರ ಕೊಟ್ಟವರ್ಯಾರು ನಿಮಗೆಂದೂ || ತಿರವಗೋಜಿಪು ಬಿಡೆನೆನುತ ಹುಂ | ಕರಿಸಿ ಮಾರಾಂತರೆ ಮಹೋಗ್ರದಿ | ತರುಬಿನಿಂದಲಿ ದೂತದೈತ್ಯರು ಜೊಯ್ದರುರವಣಿಸಿ || ೨೩ || ಪೇಳಲೇನದುಭುತವ ಬಲುತರ | ಕಾಳಗಗಳ್ಯಾತಂದು ಬಳಿಕಾ | ಖೂಳನಿಂಗೊರವಿರುವುದೆನುತಚ್ಚುತನ ಕಿಂಕರರು || ದಾಳಿಯುಟ್ಟಿಬುಜಾಯತಾಕ್ಷನಿ | ಗೋಳಿಗವನೊಪ್ಪಿಸುವೆವೆನುತ ವಿ | ಶಾಲಬಲಕೈಕಂವರನುಪಮ ಕ್ಷೀರಸಾಗರಕೆ || ೨೪ || ಆ ಸಮಯದಲಿ ಶ್ರೀ ಸಹಿತ ಸ | ರ್ವೇಶನೊಪ್ಪಿರ್ದನು ವಿಲಾಸದಿ | ಶೇಷಶಯನದೊಳಖಿಳ ವೈಭವದಿಂದ ಸ್ತೋತ್ರದಲಿ || ಕ್ಲೇಶದಲಿ ಬಂದೀರ್ಪ ದೂತರ | ವಾಸುದೇವನು ಕೇಳ್ದನೇನಿದು | ದೂಷಣೆಯ ನಿಮಗಾರು ಗೈದರು ಪೇಳಿರೆಂದೆನುತಾ || ೨೫ || ಹರಿಯ ನುಡಿಯನು ಕೇಳ್ದ ದೂತರು | ಚರಣಕಾನತರಾಗಿ ಪೇಳ್ದರು | ಪರಮ ಪಾವನ ತೀರ್ಥವನು ನಿರ್ಮಿಸಿದ ಶಿವನಿಳೆಗೆ || ಸ್ವರೂಪವನು ನೆರೆ ಮಾಡಿದಾಕ್ಷಣ | ತೆರಳುವರು ವೈಕುಂಠ ಪದವಿಗೆ | ಧರಣಿಯೊಳಗೆಣೆಯಿಲ್ಲವೆಂದರು ತೀರ್ಥದದುಭುತವಾ || ೨೬ || ನೋಡಿ ನಾವದರಲ್ಲಿ ನಿತ್ಯದಿ | ಕ್ರೀಡಿಸುತಲಾಡುತ್ತಿರಲು ಶಿವ | ಜೂಡಗಿದನರುಹಿದನು ಕಾಲನು ಬಹಳ ಚಿಂತೆಯಲಿ || ಆದಿದುಕ್ತಿಯ ಕೇಳಿ ವೃಷಧಾ | ರೂಢ ಕೋಪಿಸಿ ಖಳನ ನಿರ್ಮಿಸಿ ಗಾಢದಿಂದಟ್ಟಿದನು ಚಂದ್ರೇಶಾಖ್ಯ ದಾನವನಾ || ೨೭ || ಆ ಧನುಜನೈತರಲು ಕಂಡೆವು | ಕಾದಿದೆವು ಬ್ಬುವರ ಬಲೀಶನು | ಶೋಧನೆಯನರಿತಾಗ ಬಂದೆವು ತಮ್ಮ ಸನ್ನಿಧಿಗೆ || ಆದರಿಸಿ ಭಕ್ತಾವಲಂಬ ಕೃಪೋದಯನು ದೈತ್ಯಾಗ್ರಗಣ್ಯನ | ಭೇದಿಸಲ್ಕನುಕೂಲಗೈದನು ಕಪಟನಾಟಕನೂ || ೨೮ || ಆದಿ ವಿಷ್ಣುವ ದೊಂದರಿಂ ಬಳಿ | ಕಾದುದೈ ಬಹುಮೂರ್ತಿಗಳು ಧರೆ | ಗಾದುದ್ನೆ ಹದಿನಾರು ಮೂರ್ತಿಗಳಧಿಕ ಕೇಳೆಂದಾ || ಮೇಧಿನಿಯೊಳತಿ ಮುಖ್ಯ ಕೇಶವ | ನಾದಿ ಕಾಶಿಯೊಳೊಂದು ಬದರಿಯೊ | ಳಾದಿ ನಾರಾಯಣ ಸುಮೂರುತಿ ಯೆರಡನೆಯದೆಂದಾ || ೨೯ || ಬಳಿಕ ಕೇಳು ಪ್ರಯಾಗೆಯಲಿ ನಿ | ರ್ಮಲಿನ ಮಾಧವನಾದಿಯಲಿ ಸು | ಲಲಿತನಾತ್ಮ ಗಧಾಧರನು ವರ ದ್ವಾರಕಾ ಪುರದಿ || ಚಲುವ ಚೆನ್ನಿಗ ವಿಜಯಕೃಷ್ಣನು | ಖಳವಿನಾಶನಯೋಧ್ಯೆಯಲಿ ರಘು | ಕುಲ ಶಿಖಾಮಣಿ ರಾಮಚಂದ್ರನು ತಾನು ಕೇಳೆಂದಾ || ೩೦ || ಮೆರೆವ ಕೇತಾರದಿ ತ್ರಿವಿಕ್ರಮ | ಧರೆಗೆ ರಂಗಕ್ಷೇತ್ರದಲಿ ಶ್ರೀ | ವರದ ಮಧುಸೂದನನು ಶೇಷಾದ್ರಿಯಲಿ ವೆಂಕಟನೂ || ಅರಿವದಿಳೆಯೊಳನಂತ ಶಯನದಿ | ವರಗುತಿರುವನನಂತ ಕಾಯಿಯ | ವರ ಮಹಾ ಮಧುರೆಯಲಿ ದಾಮೋದರನು ತಾನೆಂದಾ || ೩೧ || ಇರ್ದನನುಪಮ ಧರ್ಮಪುರಿಗನಿ | ರುದ್ಧ ಜಯವಟ್ಟೆಳೆಯೊಳಚ್ಯುತ | ವರ್ಧಿಸುವ ವಗ್ನಿಯಲಿ ತಾನೆ ಜನಾರ್ಧನನು ಧರೆಗೆ || ಭದ್ರಗಂಡಿಗೆಯೊಳಗೆ ಶ್ರೀಹರಿ | ರುದ್ರ ತಾನೆಂದೆನಿಸುತಿಹನು ಸು | ಬದ್ರುಮನು ತಾನಾದೆ ಸುಜನರಿಗೆಂಟು ದಿಕ್ಕಿನಲಿ || ೩೨ || ಸಕಲ ತೀರ್ಥಂಗಳಿಗೆ ತ್ಯಾಮನೆ | ಸಕಲಭಿಷ್ಟವ ಜಗಕೆ ಸರ್ವವು | ಪ್ರಕಟಿಸುವ ಪಂಢರಿಯೊಳ್ವಿಠಲನು ದೇವ ತಾನೆಂದಾ || ನಿಖಿಳ ಬಾಹು ಬಲಾಢ್ಯ ಬಹುಮದ | ಮುಖ ಸುರಾರಿಯ ತರಿಯಲೋಸುಗ | ಭಕತ ಕೇಳಾ ಮೂರ್ತಿ ತೇಜೋ ರಾಶಿ ಬಂತೆಂದೂ || ೩೩ || ಕಂಡು ಜಗದುದ್ದಂಡ ದೈತ್ಯನು | ದಿಂಡುವರಿವ ವಿಲಾಸದಲಿ ಹರಿ | ಕೊಂಡುಬರೆ ಚಂದ್ರೇಶ ಧನುಜನು ನೋಡಿ ಘರ್ಜಿಸಿದಾ || ಕೆಂಡಗಳ ಕಂಗಳಲಿ ಕೆದರಿ ಅ | ಚಾಂಡಗೋಳಿಡುವಂತೆ ಮತ್ತಾ | ತಾಂಡಲಿದೆ ನಿಧ ಸಿಂಹರಾಜನ ಕೆಣಕುವಂದದಲಿ || ೩೪ || ದುರುಳನಾರ್ಭಟಿಯನ್ನು ನೋಡುತ | ಅರಿಭಯಂಕರ ದೇವ ನುಡಿದನು | ಧುರದಿ ನಿನಗೆ ಸಮಾಪ್ತಿ ಕಾಲವು ಬಂತು ನೋಡೆನುತಾ || ಪರಿಪರಿಯ ಯುದ್ಧದಲಿ ದೈತ್ಯನ | ಧರೆಗೆ ಪಿಡಿದಪ್ಪಳಿಸಿ ನಿಂದನು | ಹರಿ ಹಿರಣ್ಯಾಕ್ಷಾದಿ ಮೂರುತಿ ಜಗದೊಳುಪಕೃತಿಗೆ || ೩೫ || ಖೂಳ ಖಳ ಚಂದ್ರೇಶ ದೈತ್ಯನ | ಶೀಳಿಡಲು ಯಮನೇಕ ಚಿತ್ತದಿ | ಹೇಳಿ ಚಿಂತಿಸುತೀರ್ದವಿಠ್ಠಲಂ ಮುಂದಿನಾಗಮವಾ || ಪೇಳುವೆನು ನಿನಗೆನುತ ಲಕ್ಷ್ಮೀ | ಲೋಲನಾಕ್ಷಣ ನಾಮದೇವನ | ಮೇಲೆ ಕರುಣವ ಮಾಡಿ ನುಡಿದನು ಭಕ್ತವತ್ಸಲನೂ || ೩೬ || ತರಣಿ ಶಶಿಗಳ ಗ್ರಹಣಕಾಲದಿ | ಧರಣಿಯಮರಾವಳಿಗೆ ಶತ ಸಾ | ವಿರದ ಗೋದಾನಗಳ ಮಾಡಿದ ಪುಣ್ಯ ಫಲರಾಶಿ || ದೊರಕುವುದು ಬರೆದೋದಿ ಕೇಳಿದ | ಪರಮ ಭಕ್ತ ಜನರ್ಗೆ ಶ್ರೀ ಪಂ | ಢರಿಯ ತೀರ್ಥ ಮಹಾತ್ಮೆಯೊಳಗೊಂದಕ್ಷರಕ್ಷರವಾ || ೩೭ || ಕೋವಿದರು ತಿದ್ದುವದು ಕೃತಿಯನು | ಭಾವಿಕರು ಕೇಳುವುದು ನಿಮ್ಮದಿ | ಸೇವಕನು ಮತಿಶೂನ್ಯನದರಿಂ ಮಣಿವೆ ಸಜ್ಜನಕೆ || ಈ ವಿಧದ ಕಥನದಲಿ ತಪ್ಪಿರ | ಲಾವ ಕೊರತೆಯು ತಿದ್ದುತಿಹ ಕವಿ | ದೇವ ಜನರನು ಪೊರೆವ ನಿರತದಿ ಮಧ್ವಪತಿ ಕೃಷ್ಣಾ || ೩೮ ||

ಎರಡನೆ ಅಧ್ಯಾಯ ಸಂಪೂರ್ಣ.

ಮೂರನೆ ಅಧ್ಯಾಯ

|| ಸೂಚನೆ || ಲೋಹದಂಡಕ್ಷೇತ್ರವಾದ ಕು | ತೂಹಲದ ಕಥೆಗಳನು ಖಗಪತಿ | ವಾಹನನು ಪೇಳಿದನು ನಿರ್ಮಲ ನಾಮದೇವನಿಗೆ ||

ಇದು ಸಮಸ್ತ ಫಲದ ಭೀಷಣ | ಇದು ಸಮಸ್ತವು ಮನಕೆ ಭೂಷಣ | ಇದು ಸುಜನಕುಲ ಕೋಟಿ ಪೋಷಣ ವಿಶ್ವ ಪಾವನವೂ || ಇದು ದರಿದ್ರಾವಸ್ಥೆ ನಾಶನ | ಇದು ಮುನೀಂದ್ರರ ತಪ್ಪ ಭೂಷಣ | ಇದನು ಕೇಳೆಂದನು ರಮೇಶನು ವಡನೆ ಭಕ್ತನಿಗೆ || ೧ || ಚಂದ್ರಭಾಗ ಸುತೀರ್ಥ ಕಥೆಗಳ | ಚಂದದಿಂ ಕೇಳಿದೆಯಲಾ ಭವ | ಬಂಧವನು ಪರಿಹರಿಸುತಿಹುದೀ ಸತ್ಕಥಾಮೃತವೂ || ಮುಂಜೆ ಮುಂದತಿಶಯಂಗಳೆನಿಪಾ | ನಂದ ಪುಣ್ಯಕ್ಷೇತ್ರ ಮಹಿಮೆಯ | ನೊಂದು ಳಿಯದೆಂತುಸುರ್ವೆ ನಿನಗದನೀಗ ನಿರ್ಮಲದೀ || ೨ || ತರಣಿ ಶರರಸನೆ ಕೇಳು ಗುರುವಿನ | ತರುಣಿಯನು ನೆರೆದಘ ನಿಮಿತ್ತದಿ ಕಿರಣ ಕೆಟ್ಟುದು ಚಂದ್ರನಿಗೆ ಭಗವ್ಯಾತು ದೇಹದಲಿ || ಸೊರಗಿದನು ದಿನದಿನಕೆ ಹಿಮಕರ | ನುರವಣೆಯು ಮಿಗೆ ನಿಂತು ಬಂದುದು || ಪರಿಕಿಸಲು ಗುರಿಯಾದ ಭಾಜನನಾದ ಮೂಜಗಕೆ || ೩ || ನಿಂದ್ಯದಲಿ ಭವನಾಯ್ತು ಮಾನವು | ಕುಂದಿತಖಿಳೈಶ್ವರ್ಯವಳಿದುದು | ನಿಂದ್ಯ ಮಾರ್ಗವ ಮೆಟ್ಟಲಾಗದು ಕುಜನರದರಿಂದಾ || ನಿಂದ್ಯವದು ಮಾಡುವದಧೋಗತಿ | ಗೆಂದಿಗಾದರು ಪರ ಸತಿಯರವ | ರಿಂದ ತನ್ನಯ ಜನನಿಯೆಂದೇ ಭಾವಿಸುವುದೆಂದಾ || ೪ || ಬಳಿಕ ಚಂದ್ರೋದ್ಧಾರಕೋಸುಗ | ತಿಳಿದು ಸಕಲಾಮರರು ಗುರು ಸಹಿ | ತೊಲಿದು ಕೊಟ್ಟರು ಲೋಹದಂಡವನೆಸಗಿ ಹಸ್ತದಲಿ || ಇಳೆಯೊಳಿಪ್ಪ ಸಮಸ್ತ ತೀರ್ಥಾ | ವಳಿಯ ಭ್ರಮಣವ ಮಾಡಿ ನೋಡಿದ | ವಳಿಯದಾಯಿತು ಲೋಹದಂಡವು ತೇಲಿದಾಸ್ಥಳದಿ || ೫ || ಮುಳುಗಿ ಸ್ನಾನವ ಮಾಡು ತೀರ್ಥಂಗಳ | ವಿಶಿಷ್ಟವ ಶ್ರೇಷ್ಠನಾಗಿಹ | ಖಲುಮನವ ತೆಗೆದಿಡಲು ಉಳಿಯದು ಮಾಯಧಗವೆನಲೂ || ತಳುವದಾ ಸುರಗುರು ವಿನಂಪ್ರೀ | ತಳದೊಳಾನತನಾಗಿ ವಿಧು ಭೂ | ತಳಕಿಳಿದು ನಡೆತಂದ ಚಂದ್ರನು ವಿಧಿಯ ಕೇಳೆಂದಾ || ೬ || ಹಿಮಕರನು ತಾ ಬಂದು ತೀರ್ಥ | ಭ್ರಮಣವನು ಮಾಡಿದನು ಕ್ಷೇತ್ರೋ | ತ್ತಮಗಳಲಿ ನವಖಂಡ ಸಪ್ತದ್ವೀಪಗಳ ತೊಳಲಿ || ಅಮಿತ ತೀರ್ಥದಿ ತೊಲಗದಿರೆ ಮ | ತ್ತಮಿತ ಲಜ್ಜಾಭಾರದಲಿ ತ | ತ್ಕುಮುದ ಸಖ ಮೈದೋರದಿರ್ದನು ಬಹಳ ಚಿಂತೆಯಲಿ || ೭ || ಬರಬರುತ ಕಂಡನು ತ್ರಿಶೂಲದಿ | ವಿರಚಿಸಿದ ತೀರ್ಥವನು ತನ್ನಯ | ಕರದೊಳಿರುತಿಹ ಲೋಹದಂಡವನಿಡಲು ತೇಲಿದುದೂ || ಹರ ಮಹಾದೇವೆಂದು ಸ್ನಾನವ | ವಿರಚಿಸಲು ಶುಭದೇಹವಾದುದು | ಸುರರು ಪೂಮಳೆಗರೆದರಧ್ರದಿ ತೀರ್ಥಸನ್ನಿಧಿಗೆ || ೮ || ಧಾತ್ರಿಯೊಳಗದು ಲೋಹದಂಡಕ್ಷೇತ್ರ ಪುಣ್ಯಪವಿತ್ರವೆನುತಲಿ | ಸ್ತೋತ್ರವನು ಮಾಡಿದನು ಲೋಕದಿ ಪ್ರಕಟವ್ಯಾತಾಗಾ || ಧಾತ್ರಿಯೊಳಗಿಹ ಸಕಲ ತೀರ್ಥವ | ವ್ಯರ್ಥ ತಿರುಗಿದೆನೆನುತ ಕುಮುದ ಸು | ಮಿತ್ರ ಸಾಷ್ಟಾಂಗದಲಿ ನಮಿಸಿದ ತೀರ್ಥವನು ಪೊಗಳಿ || ೯ || ಜಯ ಜಯ ಮಹಾ ಪುಣ್ಯತೀರ್ಥನೆ | ಜಯಜಯತು ಸರ್ವಾರ್ಥ ಸಾಧನ | ಜಯವೆನುತ ಸ್ತುತಿಗೈದು ತೆರಳಿದನಂದು ಚಂದ್ರಮನೂ || ಜಯತು ಕವಿಜನ ಜಾಲ ವರ್ಧಿತೋ | ದ್ಭಯನಿವಾರಣ ಸಕಲ ತೀರ್ಥಾ | ಸ್ವಯದೊಳುತ್ತಮ ಚಂದ್ರಭಾಗ ಸುತೀರ್ಥ ಧರೆಗ್ಯಾತು || ೧೦ || ಇಂತು ಚಂದ್ರ ಪವಿತ್ರನಾದಾ | ನಂತರದ ಮುಂಗಥೆಯನೊರೆವೆನು | ಪಿಂತೆ ಪೌಂಡ್ರಕನೆಂಬ ವಿಪ್ರನು ಪುತ್ರರಿಲ್ಲೆಂದೂ || ಚಿಂತಿಸುತ ಹರಿಚಂದ್ರಭಾಗೆಮ | ಹಾಂತ ತೀರ್ಥದ ಸನ್ನಿಧಾನದಿ | ನಿಂತು ಭಜಿಸಿದನಾದಿ ನಾರಾಯಣನ ಪಾದಗಳಾ || ೧೧ || ಪುತ್ರನಿಲ್ಲದೆ ಸ್ವರ್ಗವಿಲ್ಲವ | ಪುತ್ರಕನು ತಾನಾದೆ ಪಾಲಿಸು | ಪುತ್ರನನು ಜಗದಾತ್ಮರಾತ್ಮನೆ ಕರುಣದಿಂದೊಲಿದೂ || ಪುತ್ರನನು ಬಯಸುವೆನು ಶಿವ ಸ | ದ್ಭೋತ್ರನಾಗಿಹೆ ಲೋಕದಲಿ ಕೊಡು | ಪುತ್ರನಿಂಕುಲಕೋಟಿ ಪಾವನವೆಂದನಾ ದ್ವಿಜ || ೧೨ || ದೇವರಿಲ್ಲದ ಗುಡಿಯು ಲೋಕದಿ | ಭೂವರನು ತಾ ನಿಲ್ಲದರಮನೆ | ಊರ್ವಿಸುರರಿಲ್ಲದಿಹ ಗ್ರಾಮವು ವ್ಯರ್ಥವಾರ್ತೆಗಳಾ || ಭಾವವರಿಯದೆ ದ್ವಿಜನು ಕನಕ ಪ್ರ | ಭಾವವಿಲ್ಲದ ರತ್ನ ತುಳಸೀ | ದೇವಿ ರಹಿತದ ವೃಂದವನವದು ವ್ಯರ್ಥ ಲೋಕದಲಿ || ೧೩ || ಇಂತು ಪೌಂಡ್ರಕ ಭೂಸುರನು ತಂ | ನಂತರಂಗದಿ ಭಾವಿಸುತ ಕಾ | ಮಾಂತಕನು ಕೈಲಾಸವಾಸನ ಧ್ಯಾನದೊಳಗಿರ್ದಾ || ಸಂತು ಸಾವಿರ ವರುಷವಾತಗೆ | ಕಂತುಹರನದನರಿತು ಬಂದು ಮ | ಹಾಂತ ದಯದಿಂದುಸುರಿದನು ವಾಂಛಿತಗಳೇನೆಂದೂ || ೧೪ || ಪುತ್ರದಾನವ ಕೊಟ್ಟು ಜಗದಿ ಪ | ವಿತ್ರನಾಗುತ ಮಾಳ್ಪುದೆನ್ನನು | ಮಿತ್ರ ಶಶಿ ಶಿಖಿನೇತ್ರ ನಿನ್ನಾರಾಧಿಸಿದೆನದಕೆ || ಚಿತ್ತದೊಳು ಬೇರಿಲ್ಲ ನೀದಯ | ವೆತ್ತು ಮತ್ಕುಲ ಕೋಟಿ ಬಳಗವ | ದುತ್ತರೋತ್ತರವೆಸಗುವಂಥಾ ಸುತನ ನೀಡೆಂದಾ || ೧೫ || ನಿರತ ತ್ಯಾತಂದೆಗಳ ಭಕ್ತಿಯು | ಭರಿತನಾಗಿರಬೇಕು ಲಕ್ಷ್ಮೀ | ವರನು ಬರಬೇಕೊಲಿದು ಆತನ ಭಕ್ತಿ ದೃಢತನಕೆ || ಪರಮ ಗುಣವಿನಿತುಳ್ಳ ಭಕ್ತನ | ಕರುಣಿಸೆನಲವನಿಂಗೆ ಪರಮೇ | ಶ್ವರನು ವರದಾನವನು ಕೊಟ್ಟನು ಕೊಟ್ಟೆನೆಂದೆನುತಾ || ೧೬ || ಆತನಿಂಗೆಹೆ ಯಾರು ಲೋಕದಿ | ವ್ರಾತದಲಿ ಲೋಕತ್ರಯಕೆ ಪುಂ | ಖ್ಯಾತಿಶಯವೆಂದೆನುತಲವತರಿಸಿದನು ಗಿರಿಜೇಶಾ || ಜಾತನವನುದ್ಭವಿಸಿ ದೀಕ್ಷಿಸಿ | ಪ್ರೀತಿಯಿಂದಲಿ ನಾಮಕರಣವ | ನಾತಗಿಟ್ಟನು ಪುಂಡಲೀಕನು ಯೆನುತ ಮೋಹದಲಿ || ೧೭ || ಬಳಿಕ ಬಲು ತರವೇದ ಮಂತ್ರಂ | ಗಳನು ಕಲಿಸಿದನವಗೆ ಮತವೆ | ಗ್ಗಳಿಸಿತಗಣಿತವವಗೆ ನಾನಾ ಪರಿಯ ವಿದ್ಯೆಗಳಾ || ಬೆಳೆವುತಿರೆ ತದಹದಿ ಹಂಕೃತಿ | ಬೆಳೆದುದಾತನ ಮನದಿ ಸರ್ವವು | ತಿಳಿದೆನೆಂಬುದರಿಂದ ಮರೆತನು ತಾಯಿತಂದೆಗಳಾ || ೧೮ ||

ಸಶೇಷ

ಟ್ರೇಡ್ ಮಾರ್ಕ್ "ಬಿಲ್ಕೊ"

ತಯಾರಾದ ದೀಪವು ಸೂರ್ಯ
ಬೆಳಗಾವಿನಲ್ಲಿ ನಡೆದ
ನವ್ಮ ಈ ದೀಪಗಳ
ಪದಕವನ್ನು ಕೊಟ್ಟಿರುವರು.
ಕೊಳ್ಳುವ ಮೊದಲು
ಪಟ್ಟಿಯನ್ನು ಇಕ್ಕಟಿ



ಬಹು ಉತ್ತಮವಿದೆ.
ಟೆಲಿಫೋನ್ ನಂ. 23374
ಕಂಪೆನಿ,
ನಂಬ್ರ 288,
ಬೊಂಬೈ—1.

ಪಾಟನಾದಲ್ಲಿ ಸೇವಾದಲದ ಶಿಕ್ಷಣ ಶಿಬಿರವು.

ಬಿಹಾರ ವಿದ್ಯಾಪೀಠದ ಆಮಂತ್ರಣದ ಪ್ರಕಾರ ದಲದ ವತಿಯಿಂದ ಶಿಕ್ಷಣ ಶಿಬಿರವು ಪಾಟನಾದಲ್ಲಿ ೧೯೩೮ನೇಯ ಎಪ್ರಿಲ್ ೧೬ನೇ ತಾರೀಕಿನ ದಿವಸ ಗಂಗಾನದಿಯ ತೀರದಲ್ಲಿರುವ ಸದಾಕಟಾಶ್ರಮದಲ್ಲಿ ಪ್ರಾರಂಭಿಸಲ್ಪಟ್ಟಿತು. ಈ ಶಿಬಿರಕ್ಕೆ ಅಶೋಕಶಿಬಿರವೆಂದು ಹೆಸರು ಕೊಡಲ್ಪಟ್ಟಿತು. ಬಿಹಾರ ಪ್ರಾಂತದಲ್ಲಿ ಸೇವಾದಲ ಶಿಬಿರವೆಂದರೆ ಇದೇ ಮೊದಲನೆಯದು. ಶಿಬಿರವನ್ನು ನಡೆಯಿಸಲು ಮತ್ತು ಶಿಕ್ಷಣ ಕೊಡಲು ದಲದ ಮುಖ್ಯ ಕಚೇರಿ (ಹುಬ್ಬಳ್ಳಿ)ಯಿಂದ ಶ್ರೀ ಏಕಂಬರಯ್ಯರರೂ ಮತ್ತು ಸಂಯುಕ್ತ ಪ್ರಾಂತದ ಸೇವಾದಲದ ಕಾರ್ಯದರ್ಶಿಗಳಾದ ಶ್ರೀ ನಂದಕುಮಾರ ದೇವ ವಾಸಿಷ್ಠರವರೂ ಹೋಗಿದ್ದರು.

ಈ ಶಿಬಿರದಲ್ಲಿ ಬಿಹಾರ ವಿದ್ಯಾಪೀಠದ ೩೦ ವಿದ್ಯಾರ್ಥಿಗಳೂ [illegible] ಅಧ್ಯಾಪಕರೂ ಶಿಕ್ಷಣ ಹೊಂದಿದರು. ಪ್ರತಿ ದಿವಸದ ಕಾರ್ಯಕ್ರಮವು ಸೇವಾದಲದ ಪದ್ಧತಿಯಂತೆ ಬೆಳಗಿನ ನಾಲ್ಕು ಘಂಟೆಯಿಂದ ರಾತ್ರಿ [illegible] ಘಂಟೆಯ ವರೆಗೆ ನಡೆಯುತ್ತಿತ್ತು. ಭಾರತೀಯರ ದುರ್ದೈವದಿಂದ ಮೊನ್ನೆ ಮೊನ್ನೆ ಸ್ವರ್ಗವಾಸಿಗಳಾದ ಕೈ ಮಗನಲಾಲ ಗಾಂಧಿಯವರು ಪಾಟನಾದಲ್ಲಿಯೇ ಅಸ್ವಸ್ಥರಾಗಿ ಮಲಗಿದ್ದರಷ್ಟೇ. ಆ ಕಾಲದಲ್ಲಿ ಅವರ ಶುಶ್ರೂಷೆಯನ್ನು ಅಶೋಕ ಶಿಬಿರದ ಸ್ವಯಂಸೇವಕರು ಮನಃಪೂರ್ವಕವಾಗಿ ಮಾಡಿದರು. ಶ್ರೀ ಜಮನಾಲಾಲ ಬಜಾಜ, ಶ್ರೀ ಬ್ರಜಕಿಶೋರ ಪ್ರಸಾದ ಶ್ರೀ ಸಿದ್ಧೇಶ್ವರ ಪ್ರಸಾದ ಸಿಂಹ ಎಮ್. ಎಲ್. ಎ. ಮತ್ತು ಪ್ರೊ ರುದ್ರದೇವ ಶಾಸ್ತ್ರಿ ಮೊದಲಾದವರು ಶಿಬಿರವನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ಉಪದೇಶ ಮಾಡಿ ಪ್ರೋತ್ಸಾಹಿಸಿದರು

ಅಶೋಕ ಶಿಬಿರದ ಸಮಾಪ್ತಿ ಸಮಾರಂಭವು ಮೇ ೩ನೇ ತಾರೀಕಿನ ದಿವಸ ನಾಮದಾರ ಅನುಗ್ರಹ ನಾರಾಯಣ ಸಿಂಹ (ಕೌನ್ಸಿಲ್ ಆಫ್ ಸ್ಟೇಟ್ ಮೆಂಬರರು) ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ದಿವಸ ಸಭೆಗೆ ಶ್ರೀ ಬ್ರಜಕಿಶೋರ ಪ್ರಸಾದ ಶ್ರೀ ಸಿದ್ಧೇಶ್ವರ ಪ್ರಸಾದ ಗಯಾ ಎಮ್. ಎಲ್. ಎ. ಶ್ರೀಕೃಷ್ಣ ವಲ್ಲಭ ಸಹಾಯ ಎಮ್. ಎಲ್. ಸಿ. ಮೊದಲಾದವರು ಬಂದಿದ್ದರು. ಸಮಾರಂಭದಲ್ಲಿ ಶಿಬಿರದ ವರದಿಯನ್ನು ಓದುವದು. ಹುಡುಗರು ಕಲಿತ ಲಾಠಿ, ಭಾಲಾ, ಜಂಬಿಯಾ, ಲಕಡಿ ಹಿಂದೀ ಕವಾಯತ ಮುಂತಾದವುಗಳ ಪ್ರದರ್ಶನ ಮತ್ತು ಅಧ್ಯಕ್ಷರ ಭಾಷಣ ಇವೇ ಮೊದಲಾದ ಕಾರ್ಯಕ್ರಮಗಳು ನಡೆದವು.

ವಿದ್ಯಾಪೀಠದ ರಿಜಿಸ್ಟರರಾದ ಶ್ರೀ ಬದ್ರಿನಾಥ ವರ್ಮಾರವರೂ ಪ್ರೊ. [illegible] ಸಹಾ ಮತ್ತು ಶ್ರೀ ಬಲದೇವ ನಾರಾಯಣರೂ ದಲದ ಶಿಕ್ಷಣ ಪಡೆದಿಲ್ಲದೆ ಶಿಬಿರವನ್ನು ನಡೆಯಿಸಲು ದಲದವರಿಗೆ ಪೂರ್ಣ ಸಹಾಯ ಮಾಡಿದ್ದಕ್ಕಾಗಿ ಅವರ ಆಭಾರವನ್ನು ಮನ್ನಿಸುವೆವು. ಬಿಹಾರದಲ್ಲಿ ಇನ್ನೂ ಅನೇಕ ಶಿಬಿರಗಳನ್ನು ತೆರೆಯಲು ಸೇವಾ ದಲದವರಿಗೆ ಆಮಂತ್ರಣಗಳಿದ್ದವು. ಆದರೆ ಮಳೆಗಾಲದ ಮೂಲಕ ಈ ಕಾರ್ಯವು ಮುಂದಕ್ಕೆ ಹಾಕಬೇಕಾಯಿತು.

ಇವಲ್ಲದೆ ಬಿಹಾರದಲ್ಲಿ ಆದ ದಲದ ಉಳಿದ ಕಾರ್ಯಗಳೆಂದರೆ ಎಪ್ರಿಲ್ ೨೯ನೇ ತಾರೀಕಿನ ದಿವಸ ಸದಾಕಟಾಶ್ರಮದಲ್ಲಿ ಬಿಹಾರ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಕೂಡಿ ಶ್ರೀ ಮಥುರಾ ಪ್ರಸಾದ ಇವರನ್ನು ಬಿಹಾರದಲ್ಲಿ ಹಿಂದುಸ್ಥಾನ ಸೇವಾ ದಲದ ಶಾಖೆಯನ್ನು ಸ್ಥಾಪಿಸಲು ಮತ್ತು ಅದರ ಸಲುವಾಗಿ ಹಣವನ್ನು ಕೂಡಿಸಲು ನಿಯಮಿಸಿತು.

ಪಾಟನಾದಲ್ಲಿ ಮೇ ೧೩ನೇ ತಾರೀಕಿನ ದಿವಸ ಶ್ರೀ ಸುಭಾಸ ಚಂದ್ರ ಬೋಸರವರ ಭಾಷಣ ನಡೆದಾಗ ಅಶೋಕ ಶಿಬಿರದ ಸ್ವಯಂಸೇವಕರು ಒಳ್ಳೇ ಶಿಸ್ತಿನಿಂದ ಕೆಲಸ ಮಾಡಿದರು. ಅದನ್ನು ಕಂಡು ಶ್ರೀ ಬೋಸರವರು ಬಹಳ ಆನಂದಪಟ್ಟರು.

೩. ವಿದ್ಯಾಪೀಠದಲ್ಲಿ ಇನ್ನು ಮುಂದೆ ಪ್ರತಿ ದಿವಸದಲ್ಲಿಯೂ ರಾಷ್ಟ್ರೀಯ ಧ್ವಜಾರೋಹಣ ಮತ್ತು ಅವರೋಹಣಗಳ ಸಮಾರಂಭವನ್ನು ದಲದ ಪದ್ಧತಿಯಂತೆ ಮಾಡಬೇಕೆಂದೂ ಲಾಠಿ ಮೊದಲಾದ ಶಿಕ್ಷಣದ ವಿಷಯವನ್ನು ತಮ್ಮ ವಿದ್ಯಾಪೀಠದ ಅಭ್ಯಾಸ ಕ್ರಮದಲ್ಲಿ ಸೇರಿಸಬೇಕೆಂದೂ ನಿಶ್ಚಯಿಸಿದ್ದಾರೆ.

ಹುಬ್ಬಳ್ಳಿ, ತಾ. ೭-೬-'೩೮.

ರಾ. ವೆ. ಕರಗುದರಿ,
ಹಿಂದುಸ್ಥಾನೀ ಸೇವಾದಲ.

ಸ್ಫುಟ ವಿಚಾರಗಳು.

ಹಿಂದೀ ಮುಸಲ್ಮಾನರ ಪರದೇಶ ಪ್ರೇಮ.

ಹಿಂದೀ-ಮುಸಲ್ಮಾನರಿಗೆ ಮುಸಲ್ಮಾನ ರಾಜ್ಯಗಳ ಮೇಲಿನ ಭಕ್ತಿಯು ಇನ್ನೂ ಕಡಿಮೆಯಾಗಿಲ್ಲ. ತುರ್ಕಿಯ ಪಾಠವು ಅವರಿಗೆ ಮರೆತೇ ಹೋಗಿರುವಂತೆ ಕಾಣುತ್ತಿದೆ. ಬಹಳ ವರ್ಷಗಳ ಚಳವಳವನ್ನು ನಡಿಸಿ ನಡಿಸಿ ಹಿಂದೀ ಮುಸಲ್ಮಾನರಿಗೆ ಖಿಲಾಫತ್ತನ್ನು ರಕ್ಷಿಸಲಾಗಲೇ ಇಲ್ಲ. ಖಿಲಾಫತ್ತನ್ನು ಬ್ರಿಟಿಷರ ಕೈಯಿಂದ ಅವರು ರಕ್ಷಿಸಿದರೂ ಏನೊ! ಅದರಲ್ಲೂ ತರುಣ ತುರ್ಕಿಯ ಸಾಹಸವಲ್ಲದಿದ್ದರೆ ಖಿಲಾಫತ್ತಿನ ಅವಸ್ಥೆಯೋ ಬೇರೆಯಾಗುತ್ತಿತ್ತು. ಈ ಹಿಂದೀ ಮುಸಲ್ಮಾನರ ಆಕಾಂಕ್ಷೆಯನ್ನು ಪೂರೈಸುವೆನೆಂದು ಬ್ರಿಟಿಷರು ಖಲೀಫನನ್ನು ತೋರಿಕೆಗೆ ಸ್ವತಂತ್ರನನ್ನಾಗಿಯೂ ಕಾರ್ಯದಲ್ಲಿ ತಮ್ಮ ದಾಸನನ್ನಾಗಿಯೂ ಮಾಡುತ್ತಿದ್ದರು. ಹಿಂದೀ ಮುಸಲ್ಮಾನರ ಮತಾಭಿಮಾನಿ ಚಳವಳದ ಫಲವು ಇಷ್ಟು ಅವಮಾನಕರವಿರುತ್ತಿದ್ದಿತು. ತರುಣ ತುರ್ಕಿಯು ಹಿಂದೀ ಮುಸಲ್ಮಾನರಂತೆ ಅಂಧಮತಶ್ರದ್ಧೆಯನ್ನು ತೋರಿಸ ಹೋಗಲಿಲ್ಲ. ಪ್ರಬಲವಾದ ರಾಷ್ಟ್ರೀಯತ್ವವೇ ಅವರ ಜನಾಂಗರಚನೆಗೆ ಅಗತ್ಯವಿದ್ದಿತು. ಶತಮಾನಗಳ ಮತಶ್ರದ್ಧೆಯು ದೇಶದ ಅಭಿವೃದ್ಧಿಯನ್ನು ತಡೆಗಟ್ಟಿ, ವಿಚಾರವನ್ನು ಮಂದೀಕರಿಸಿ, ಪಾಶ್ಚಾತ್ಯರ ಸ್ವೇಚ್ಛೆಯ ಪ್ರವರ್ತನಕ್ಕೆ ಅಧೀನವಿರಿಸಿದ್ದಿತು. ರಾಷ್ಟ್ರಸಮಸ್ಯೆಗಳಲ್ಲಿ ಮತವಿಚಾರಗಳಿಂಬಾರದೆಂದು ತರುಣ ತುರ್ಕಿಯು ಮೊದಲಾಗಿ ತಿಳಿದುಕೊಂಡು ಖಲೀಫನನ್ನು ಹೊರಗೆ ಕಳುಹಿಸಿ ಮತವನ್ನು ರಾಷ್ಟ್ರೀಯತ್ವಕ್ಕೆ ಅಧೀನವಾಗಿ ಮಾಡಿತು. ಆ ಕಾರಣದಿಂದಲೇ ತುರ್ಕಿಯು ಯುದ್ಧದಲ್ಲಿ ವಿಜಯಿಯಾಯಿತು ಮಾತ್ರವಲ್ಲದೆ, ಇಷ್ಟು ಕ್ಷಿಪ್ರದಲ್ಲಿಯೇ ಅದು ಪಾಶ್ಚಾತ್ಯ ರಾಷ್ಟ್ರಗಳೊಡನೆ ಸರಿಸಮಾನತೆಯನ್ನು ಹೊಂದಿ ಗೌರವಿತವಾಯಿತು. ಇಲ್ಲಿ ಮತ ಹಾಳಾಯಿತೆಂದು ಬೊಬ್ಬೆ ದೀಳಬಹುದಾದ ಹಲವು ನೂತನ ಕ್ರಮಗಳು ತುರ್ಕಿಯಲ್ಲಿ ಜಾರಿಗೆ ಬಂದುವು. ಆದರೆ ಹಿಂದೀಯ ಮುಸಲ್ಮಾನರು ಈ ಖಿಲಾಫತ್ತಿನ ವಿಷಯ ಏನನ್ನೂ ಮಾತನಾಡಲಾರರಾದರೂ ಹೆಜ್ಜಾಜಿನ ವಿಷಯ ಬಹಳ ವ್ಯಸ್ತರಾಗಿರುವರು. ಅಲ್ಲಿ ಆಳಿಕೊಂಡಿರುವ ಇಬ್ನಸೌದನ ವಿಷಯದಲ್ಲಿ ವಿರೋಧವನ್ನು ಪ್ರಕಟಿಸಿರುವರು. ಅವನನ್ನು ಅಲ್ಲಿಂದ ಅಧಿಕಾರದಿಂದ ತಪ್ಪಿಸಲು ಗುಟ್ಟಿನ ಪ್ರಯತ್ನಗಳನ್ನು ಮಾಡುವರು. ತಮ್ಮ ದೇಶದ ಉದ್ಧಾರವನ್ನು ಮೊದಲು ನೋಡಬೇಕಾಗಿದ್ದ ಈ ಮುಸಲ್ಮಾನರಿಗೆ ಈ ಹೊರಗಿನ ವಿಷಯವನ್ನೆಲ್ಲಾ ಸುತ್ತಿಕೊಳ್ಳುವ ಆವಶ್ಯಕತೆ ಇಲ್ಲ. ಇವರು ಇಲ್ಲಿ ಏನೇನು ಪ್ರಯತ್ನಮಾಡಿದ್ದೇ ಬರುತ್ತದಲ್ಲದೆ, ಅಲ್ಲಿ ಆಗುವುದು ಆಗಿಯೇ ಹೋಗುತ್ತದೆ. ಇವರನ್ನು ಅಲ್ಲಿಯವರು ಯಾರೂ ಲಕ್ಷ್ಯಮಾಡುವುದಿಲ್ಲ. ಅಲ್ಲಿಯ ಪಕ್ಷಗಳು ತಮ್ಮ ತಮ್ಮ ಸ್ವಾರ್ಥಕ್ಕೆ ಅನುಸಾರವಾಗಿ ನಡೆಯುತ್ತಿವೆಯೇ ಹೊರತು ಹಿಂದೀ ಮುಸಲ್ಮಾನರು ತೋರಿಸಲಿಚ್ಛಿಸುವ ಆ ಮತಾಭಿಮಾನವು ಅವರಲ್ಲಿರುವುದಿಲ್ಲ.

ಕರ್ನಾಟಕಕ್ಕೆ ಮೈಸೂರು ವಿಶ್ವವಿದ್ಯಾಲಯ.

ಧಾರವಾಡದಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾಲಯವು ಅಖಿಲ ಕರ್ನಾಟಕದ ವಿಶ್ವವಿದ್ಯಾಲಯವಾಗುವಂತೆ ಏರ್ಪಡಿಸಬೇಕೆಂಬುದೊಂದು ಠರಾವು ಮಂಜೂರಾಯಿತು. ಅಖಿಲ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯ ಅಗತ್ಯವಿದೆಯೆಂಬುದೇನೊ ನಿಜ. ಆದರೆ ಮೈಸೂರು ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕದ ವಿಶ್ವವಿದ್ಯಾಲಯವಾಗಿ ಪರಿವರ್ತಿಸುವ ಬಗ್ಗೆ ಮಾಡಿದ ಸುಲಭ ಶಬ್ದಗಳ ಠರಾವನ್ನು ನೋಡಿದರೆ, ಈ ಸ್ವೀಕಾರದ ಜವಾಬ್ದಾರಿಗಳು ಸರಿಯಾಗಿ ತರ್ಕಿಸಲ್ಪಡಲಿಲ್ಲವೆನ್ನಬೇಕಾಗುತ್ತದೆ. ಮೈಸೂರ ವಿಶ್ವವಿದ್ಯಾಲಯವು ಕನ್ನಡ ವಿಶ್ವವಿದ್ಯಾಲಯವೊ ಎಂಬ ಮಹತ್ವದ ಪ್ರಶ್ನೆ ಇನ್ನೂ ತೀರ್ಮಾನವಾಗಲಿಲ್ಲ. ಅದರಲ್ಲಿ ಕರ್ನಾಟಕಕ್ಕೆ ಕೊಟ್ಟ ಪ್ರಾಮುಖ್ಯತೆಯು ಮೈಸೂರಿನವರಲ್ಲಿಯೇ ಹಲವು ಜನರಿಗೆ ತೃಪ್ತಿಯನ್ನುಂಟುಮಾಡಿಲ್ಲ. ಮೇಲಾಗಿ ಮೈಸೂರು ವಿಶ್ವವಿದ್ಯಾಲಯವು ಮೈಸೂರು ಸರಕಾರದ ಅಧೀನವಾಗಿದ್ದು ಅದರ ಕಾರ್ಯಕಲಾಪಗಳಲ್ಲಿ ರಾಜಕೀಯ ಆವಶ್ಯಕತೆಗಳೇ ಹೆಚ್ಚಿನ ಪ್ರಧಾನ್ಯವನ್ನು ಹೊಂದುವುವಾದುದರಿಂದ, ಇತರ ಪ್ರಾಂತಗಳು ಮೈಸೂರಿನೊಡನೆ ಸಮ್ಮಿಳಿತವಾಗದಿದ್ದರೆ ಈ ವಿಶ್ವವಿದ್ಯಾಲಯದವರು ಇವರಿಗೆ ಉಪಕಾರಿಯಾಗಲಾರರು. ಮತ್ತೊಂದು ವಿಷಯವೆಂದರೆ ಮೈಸೂರು ಜನರ ಸಾಮಾನ್ಯ ಮಾನಸಿಕತೆ. ಕರ್ನಾಟಕವೇನೊ ಮೈಸೂರು ಕನ್ನಡನಾಡೆಂದು ಹೆಗ್ಗಳಿಸಿಕೊಳ್ಳುವುದಾದರೂ, ಬ್ರಿಟಿಷ, ನಿಜಾಮು ಮತ್ತು ಮೈಸೂರು ಕರ್ನಾಟಕ ಜನತೆಯೊಳಗೆ ಆಗಬೇಕಾದ ಸಮ್ಮಿಲನವಾಗಿಲ್ಲ. "ಮೈಸೂರು ಮೈಸೂರಿಗೆ" ಎಂಬ ಧ್ವನಿಯು ಪ್ರಾಂತಿಕ ಅಭಿಮಾನವನ್ನು ತೋರಿಸಿ ಆ ಮಟ್ಟಿಗೆ ಪ್ರಶಂಸನೀಯವಾದರೂ, ಕರ್ನಾಟಕ ಪ್ರಾಂತಗಳ ಜೋಡಣೆಗೆ ಇದು ಒಂದು ಅಭ್ಯಂತರವಾಗಿರುತ್ತದೆ; ಮತ್ತು ಮೈಸೂರು ಮಾನಸಿಕತೆಯು ಇದಕ್ಕಿಂತ ವಿಶಾಲವಾಗುವ ವರೆಗೆ ಇತರ ಕರ್ನಾಟಕ ಭಾಗಗಳು ತಮ್ಮ ಹಿತಗಳನ್ನು ಮೈಸೂರು ವಿಶ್ವವಿದ್ಯಾಲಯದ ಆರೈಕೆಯಲ್ಲಿ ಕೊಡುವ ಮೊದಲು ಹೆಚ್ಚು ಆಲೋಚನೆ ಮಾಡಬೇಕಾಗುತ್ತದೆ. ನಾವು ಹಲವು ಬಾರಿ ತೋರಿಸಿದಂತೆ ಏಕೀಕರಣ ಚಳವಳವು ಬರೇ ಉತ್ತೇಜಕತೆಯ ಆಧಾರದ ಮೇಲೆಯೇ ನಡಿಯುತ್ತಿದೆಯಲ್ಲದೆ ಜವಾಬ್ದಾರ ವಿಚಾರದ ಮೇಲೆ ನಡಿಯುವುದಿಲ್ಲವೆಂಬುದಕ್ಕೆ ನಾವು ಮೇಲೆ ಹೇಳಿದ ಠರಾವೇ ಸಾಕ್ಷಿಯಾಗಿದೆ. ಮೈಸೂರು ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವಾಗಿ ಮಾಡಲಿಕ್ಕೆ ಸಾಧ್ಯವಾದರೆ ನಮಗೂ ಸಂತೋಷವೇ. ಆದರೆ, ಆ ಬಗ್ಯೆ ಅದರ ಆಡಳಿತವನ್ನು ಸಮಗ್ರ ಕರ್ನಾಟಕಕ್ಕೆ ಒಪ್ಪಿಸಿಕೊಡಲು ಸಾಧ್ಯವಿದೆಯೇ ಎಂಬುದು ನಮ್ಮ ಪ್ರಶ್ನೆ. ಕರ್ನಾಟಕದ ವಿಶ್ವವಿದ್ಯಾಲಯವು ಕಾಶೀ ಹಿಂದೂ ವಿಶ್ವ ವಿದ್ಯಾಲಯದಷ್ಟು ಸ್ವತಂತ್ರವಿರತಕ್ಕದ್ದು. ಅದು ಸಾಧ್ಯವಾದರೆ ಅದನ್ನು ಅಖಿಲ ಕರ್ನಾಟಕಕ್ಕಾಗಿ ಸ್ವೀಕರಿಸಬಹುದು.

ನಮ್ಮ ಜಿಲ್ಲೆಗೆ ಬಂದರು.

ಭಟ್ಕಳ ಬಂದರವನ್ನು ಮೈಸೂರಿಗೆ ಸೇರಿಸಲು ಪ್ರಯತ್ನಗಳಾದಂದಿನಿಂದ ಈ ಬಂದರದ ಸಮಸ್ಯೆಯು ಬಹಳ ತರ್ಕಿಸಲ್ಪಟ್ಟಿದೆ. ಮೈಸೂರಿನ ಬಂದರಗಳ ಶೋಧದಲ್ಲಿ ಮಲಪೆಯೂ ಒಂದಾಗಿದೆ. ಆದರೆ ಮೈಸೂರಿನ ಚುನಾವಣೆಯೂ, ಬ್ರಿಟಿಷ ಸರಕಾರದ ಒಪ್ಪಿಗೆಯೊ ಅದರ ಪಾಲಿಗೆ ದೀಳಲಿಲ್ಲ. ಭಟ್ಕಳವಾದರೂ ಮೈಸೂರಿನ ಕಡೆಯ ಪ್ರಯತ್ನಗಳು ಕಡಿಮೆಯಾಗಿಯೊ ಬ್ರಿಟಿಷ ನಿರಾಕರಣೆಯು ಸ್ಥಿರವಾಗಿಯೊ ಅದರ ಪ್ರಸ್ತಾಪವು ಈಗ ಕಡಿಮೆಯಾಗಿದೆ. ಆದರೂ ಕರ್ನಾಟಕಕ್ಕೊಂದು ಬಂದರು ಬೇಕೆಂಬ ಚಳವಳವು ಕರ್ನಾಟಕ ಏಕೀಕರಣದೊಡನೆಯೇ ಮುಂದೆ ಬಂದಿದೆ. ಕರ್ನಾಟಕದ ಬಂದರ ಭಟ್ಕಳವೊ ಕಾರವಾರವೊ? ಎಂಬ ಲೇಖವೊಂದು "ಕರ್ಮವೀರ" ಪತ್ರಿಕೆಯಲ್ಲಿ ಬಂದಿದೆ. ಮತ್ತು ಅಖಿಲ ಕರ್ನಾಟಕದ ದೃಷ್ಟ್ಯಾ ಈ ಬಂದರ ರಚನೆಯ ಸುಯೋಗವು ಸಿಕ್ಕುವುದಾದರೆ ಭಟ್ಕಳ ಮತ್ತು ಕಾರವಾರದೊಳಗೊಂದಕ್ಕೇನೇ ಎಂದು ಕಾಣುತ್ತಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಆತ್ಮೀಯ ಹಿತವೊಂದು ಇದರಲ್ಲಿ ಅಂತರ್ಗತವಾದುದರಿಂದ ನಮ್ಮ ಜಿಲ್ಲೆಯು ನಮ್ಮ ಜಿಲ್ಲೆಯ ಹಿತದ ಬಗ್ಯೆ ಬೇಗನೆ ಎಚ್ಚರವಾಗಬೇಕು. ನಮ್ಮ ಜಿಲ್ಲೆಗೂ ತನ್ನ ಸಾಧನೆಯನ್ನು ಸಾಧಿಸಿಕೊಳ್ಳುವ ಯೋಗವು ಒದಗಲಾರಂಭಿಸಿದಂತೆಯೂ ತೋರುವುದು. ನಮ್ಮ ಜಿಲ್ಲೆಗೆ ಅನುಕೂಲವಾದ ಬಂದರವು ಇಲ್ಲದೆ, ಭಟ್ಕಳವಾಗಲಿ, ಕಾರವಾರಕ್ಕೆ ಬಂದರವು ರಚಿಸಲ್ಪಡುವುದಾದರೆ ದಕ್ಷಿಣ ಕನ್ನಡ ವ್ಯಾಪಾರವು ತತ್ಕ್ಷಣವೆ ಕುಂದಲು ಆರಂಭಿಸುವುದರಲ್ಲಿ ಸಂದೇಹವಿಲ್ಲ. ಪಶ್ಚಿಮ ಕರಾವಳಿಯಲ್ಲಿ ಮಂಗಳೂರಿಗೆ ಈಗ ಇರುವ ಪ್ರಾಮುಖ್ಯತೆಯು ಮೇಲಿನ ಬಂದರುಗಳ ಏರ್ಪಾಡಿನ ಮೇಲೆ ಆ ಬಂದರಗಳಿಗೆ ಸ್ಥಳಾಂತರವಾಗುವುದು. ಇದರಿಂದ ಮಂಗಳೂರಿಗೆ ಮಾತ್ರವೇ ನಷ್ಟವಲ್ಲದೆ ಇಡೀ ಜಿಲ್ಲೆಗೇನೇ ನಷ್ಟವು ಸಂಭವಿಸಿ ಅದರ ಈಗಿನ ಅಭಿವೃದ್ಧಿಯು ತಡೆಹೊಂದುವುದು. ಈಗ ಮಂಗಳೂರಿನ ಮೂಲಕ ರಫ್ತಾಗುವ ಕಾಡುತ್ಪತ್ತಿಯ ಅಧಿಕಾಂಶವು ಮೇಲಿನ ಬಂದರುಗಳ ಮೂಲಕ ಒಯ್ಯಲ್ಪಡುವಂತಾಗಿ ಅವುಗಳ ವ್ಯಾಪಾರವು ಅಲ್ಲಿಗೆ ಬದಲಾಯಿಸಲ್ಪಡುವುದು. ಆದುದರಿಂದ ನಮ್ಮ ಜಿಲ್ಲೆಗೆ ಈ ತರದ ಆಪತ್ತು ಉಂಟಾಗುವ ಮೊದಲೇ ಒಂದು ಬಂದರವನ್ನು ರಚಿಸಲು ಪ್ರಯತ್ನಿಸಬೇಕು. ಮಂಗಳೂರಿನಿಂದ ಉಡ್ಪಿಗೆ ರೈಲು ಹಾದಿ ಹಾಕುವುದರ ಕಾರಣದಿಂದ ಮಲ್ಪೆಯನ್ನು ಬಂದರಾಗಿ ಪರಿವರ್ತಿಸಲು ಉತ್ತಮ ಕಾರಣವೂ ಆಗಿದೆ. ಮತ್ತು ಮಲ್ಪೆಯ ಬಂದರಿನೊಡನೆ, ಶಿರಾಡಿ, ಚಾರ್ಮಾಡಿಯತ್ತ ಕಡೆಗಳಿಂದ ಬರುವ ಕಾಡುತ್ಪತ್ತಿಗಳಲ್ಲದೆ, ಉತ್ತರ ಕಡೆಯ ಕಾಡುತ್ಪತ್ತಿಗಳೂ ನಮ್ಮ ಜಿಲ್ಲೆಯ ಮೂಲಕ ರಫ್ತಾಗುವಂತಾಗಿ ಜಿಲ್ಲೆಯ ವ್ಯಾಪಾರವು ಮತ್ತಷ್ಟು ಅಭಿವೃದ್ಧಿಯಾಗುವುದರಲ್ಲಿ ಏನೂ ಸಂದೇಹವಿಲ್ಲ. ನಮ್ಮ ಜಿಲ್ಲೆಯವರು ಈ ಬಗ್ಯೆ ಎಚ್ಚರಿಸಿಕೊಳ್ಳುವುದು ಉತ್ತಮ.

ಕನ್ನಡಿಗರೂ ಮರಾಠಿಗರೂ.

ಮರಾಠಿಗರ ಇಷ್ಟು ದೂರದಲ್ಲಿದ್ದು ಕನ್ನಡ ಪತ್ರಿಕೆಗಳಿಂದ ತಿಳಿದುಕೊಳ್ಳುವ ಮಟ್ಟಿಗೆ ಕನ್ನಡ ಮರಾಠಿ ಸಂಬಂಧವು ಬಹಳ ಕಡಿದಾಟ ಸ್ಥಿತಿಯಲ್ಲಿದೆಯೆಂದು ತೋರುವುದು. ಮರಾಠವು ಹಿಂದೂಸ್ಥಾನದಲ್ಲಿ ಪ್ರಕೃತ ಪ್ರಬಲವಾದ ಕೆಲವೇ ಪ್ರಾಂತಗಳಲ್ಲಿ ಒಂದಾಗಿದೆ. ಅವರ ಅಭಿವೃದ್ಧಿಯು ಸರ್ವ ವಿಷಯದಲ್ಲಿಯೂ ಒಂದೇ ರೀತಿಯಲ್ಲಿ ಮುಂದರಿದಿದೆ. ಕನ್ನಡವು ಹಲವು ನಿಸ್ವಾರ್ಥ ಕನ್ನಡ ಪುತ್ರರ ಅವಿಶ್ರಾಂತ ಸಾಹಸದಿಂದ ವಿಕಾಸಹೊಂದುತ್ತಿದೆ ಮಾತ್ರ. ಆದುದರಿಂದ ಮರಾಠಿಗರು ತಮ್ಮ ಕ್ಷುದ್ರವೂ ಕ್ಷುಲ್ಲಕವೂ ಆದ ಸ್ವಾರ್ಥಗಳನ್ನು ಬದಿಗೊತ್ತಿ ಕರ್ನಾಟಕಕ್ಕೆ ಕೈಕೊಟ್ಟು ಸೌಹಾರ್ದವನ್ನು ಪ್ರಕಟಿಸುವುದು ನೆರೆಹೊರೆಯ ಸೌಜನ್ಯವನ್ನೂ ರಾಷ್ಟ್ರೀಯತೆಯ ಭಾವವನ್ನೂ ತೋರಿಸಿದಂತಾಗುತ್ತಿದ್ದಿತು. ಆದರೆ ಕರ್ನಾಟಕ ಮಹಾರಾಷ್ಟ್ರ ಸಂಬಂಧವೂ ಪರಸ್ಪರ ಸಂಶಯಗಳಿಂದಲೇ ಬೆಳೆಯಬೇಕಾದುದು ವಿಷಾದಕರವಿದೆ. ಕೆಲವು ಸಮಯದ ಹಿಂದೆ ಮರಾಠಾ ಸಾಹಿತ್ಯ ಸಮ್ಮೇಲನಕ್ಕೆ ಕನ್ನಡಿಗರಿಗೆ ಮರಾಠಿಗರು ಆಮಂತ್ರಣವನ್ನು ಕೊಟ್ಟೂ, ಅತಿಥಿಗಳನ್ನು ಉಪಚರಿಸಿದ ಕ್ರಮವನ್ನು ನೋಡಿದರೆ ಇಂತಹ ಸಣ್ಣ ವಿಷಯದಲ್ಲಿ ಕೂಡ ಮರಾಠಿಗರ ಮಾನಸಿಕತೆಯು ಉದಾರವಾಗಲಾರದೆಂಬುದೂ ಅವರ ಉದ್ದೇಶವು ಕಲಂಕಿತವಿದೆಯೆಂದೂ ತೋರುವುದು. ಆ ಮೇಲೆ ಬೆಳಗಾಂವಿಯಲ್ಲಿ ಅವರು ತಮ್ಮ ಸಾಹಿತ್ಯ ಪರಿಷತ್ತನ್ನು ಕೂಡಿಸಲು ನಿರ್ಣಯಿಸಿದುದೂ ಅವರಿಗೆ ಗೌರವದ ವಿಷಯವಲ್ಲ. ಬೆಳಗಾಂವಿಯು ಕನ್ನಡವೊ ಮರಾಠಿಯೋ? ಎಂಬುದರಲ್ಲಿ ಸಂದೇಹವಿದ್ದರೆ ಅದನ್ನು ಮೊದಲು ನಿರ್ಣಯಿಸಬಹುದಿತ್ತು. ಆದರೆ ಬೆಳಗಾಂವಿಯ ಕರ್ನಾಟಕವೆಂದು ಈ ಮೊದಲೇ ಸ್ಥಿರೀಕೃತವಾಗಿದೆಯಲ್ಲದೆ, ಮರಾಠಿಗರೂ, ಕೇಸರಿಕಾರರು ಕೂಡ ಒಪ್ಪುವರು. ಹೀಗಿರುವಾಗ, ಅದರಲ್ಲೂ ಬೆಳಗಾಂವಿಯು ಕರ್ನಾಟಕವೆಂದ ಮೇಲೆ ಅದನ್ನು ಪೂರ್ಣ ಕರ್ನಾಟಕವಾಗಿ ಮಾಡಲು ಕರ್ನಾಟಕೀಯರು ಪ್ರಯತ್ನಿಸುವಾಗ, ಅಲ್ಲಿಯೇ ಮರಾಠಿ ಪರಿಷತ್ತನ್ನು ಕರೆಯಿಸಲು ಉದ್ಯಮಗಳನ್ನು ನಿಯೋಜಿಸಿದುದರಲ್ಲಿ ಸತರ್ಕತೆಯು ಕಾಣುವುದಿಲ್ಲ. ಭಾಷೆಗಾಗಿ ರಾಜ್ಯವಿಸ್ತಾರ ಮಾಡುವಂತಹ ಕ್ಷಾತ್ರಭಾವವು ಭಾಷಾ ಪ್ರೇಮದಲ್ಲಿ ಅಡಗಿಕೊಂಡದೆ ಎಂದು ನಾವು ತಿಳಿದಿರಲಿಲ್ಲ. ಭಾಷೆಯು ಯಾವಾಗಲೂ ಸಾಹಿತ್ಯದ ಮೂಲಕ ಅತ್ಯುದಾರ ತತ್ವಗಳನ್ನು ಪ್ರಸರಿಸುವಂತಹುದುದ್ದಾಗಿದೆ. ಆದರೆ ಮರಾಠಾ ಸಾಹಿತ್ಯ ಸೇವಕರಲ್ಲಿ ಈ ತರದ ಸಂಕುಚಿತ ವರ್ತನವು ಉಂಟಾದುದು ಆಶ್ಚರ್ಯ. ಪ್ರಾಯಶಃ ಅದು ಅವರ ರಾಷ್ಟ್ರೀಯ ಸ್ವಭಾವವೇನೋ, ಯಾವ ಸ್ವಾರ್ಥವು ಪೇಶ್ವೆಯ ಗದ್ದಿಗೆಯನ್ನು ಛಿನ್ನವಿಚ್ಛಿನ್ನವಾಗಿ ಮಾಡಿ ಪರದೇಶೀಯನ ಕೈಯಲ್ಲಿ ಕೊಟ್ಟು ಬಿಟ್ಟಿತೊ ಅದೇ ಸ್ವಾರ್ಥದ ಛಾಯೆಯು ಇನ್ನೂ ಮರಾಠಾ ಹೃದಯದಿಂದ ಇಳಿದು ಹೋಗಿಲ್ಲ. ಈ ತರದ ಪರಸ್ಪರ ಅವಿಶ್ವಾಸಗಳು ಇತ್ತಂಡಕ್ಕೂ ಹಾನಿಕರವಿರುವುದರಿಂದ ಸಂಧಾನದ ಮೂಲಕ ಇವುಗಳ ತೀರ್ಮಾನವಾಗಲಾರದೇತೊ ಎಂದು ಕನ್ನಡಿಗರು ಒಂದು ಬಾರಿ ಪ್ರತ್ಯೇಕವಾಗಿ ಪ್ರಯತ್ನಿಸಿದರೆ ಆಗ ಬಹುದಿತ್ತು.

ನೋಟಗಳು.
NOTE...S.

'ನೆಹರುಗಳ ಜಾತಿಯವರಿಗೆ ನೆಹರುಗಳು ಅವರ ಜಾತಿಯವರೆಂದು ಹೇಳುವಷ್ಟು ದೃಷ್ಟಿಶುದ್ಧಿಯು ಈಗ ಉಂಟಾದುದು ಕುತರ್ಕಿಗಳಿಗಾದರೂ ಉತ್ತಮ ಅನುಭವವೇ! 'ಆದ್ದರಿಂದ ಅವರು ನಮ್ಮ ಜಾತಿಯವರು' ಅಲ್ಲವೆಂದು ಕುತರ್ಕಿಗಳಿಗೇನಾದರೂ ಸಂಕೋಚತೆಯುಂಟಾಗದಷ್ಟೆ! ಅವರ 'ವಿಶಾಲ ಮಾನಸಿಕತೆಗೆ ಇನ್ನು ಸಂಕೋಚವಿರದು.

• • • •

ಅಲ್ಲಹಾಬಾದಿನಲ್ಲಿ ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣಳಾದ ಮಹಿಳೆಯೂ ನೆಹರುಗಳ ಸೋದರಿ. ಇದರಲ್ಲೂ ಕುತರ್ಕಿಗಳಿಗೆ 'ನಮ್ಮ ಜಾತಿಯವರೆನ್ನಲೂ ಸಂಕೋಚವೋ ವಿಕಾಸವೋ ತಿಳಿದಿಲ್ಲ.

• • • •

'ಲೌಕಿಕರು ಸಂಪಾದಕರೊಟ್ಟಿಗಿರಬಾರದೇಕೆ' ಎಂಬುದು ಒಂದು ಪ್ರಶ್ನೆ. 'ಸಂಪಾದಕರು ಕುತರ್ಕಶಾಸ್ತ್ರಿಗಳಾಗಿರಬಾರದೇಕೆ?' ಎಂಬುದು ಇನ್ನೊಂದು ಪ್ರಶ್ನೆ.

• • • •

ನಮ್ಮ ಆಯುರ್ವೇದ ಪರಿಷತ್ತಿನ ತುಪ್ಪದ ವಾಸನೆ ಮಂಗಳೂರು ಮೈಲ್ ಹತ್ತಿ ಎಲ್ಲೆಲ್ಲೋ ಸಂಚರಿಸಿ ಬಿಟ್ಟಿದೆ. 'ಹಾಲಿನ ಅಭಾವ' ದೆಸೆಯಿಂದ ಹಿಂದಣ ರಾತ್ರಿಯ ಹಾಲು ಮರುದಿನ ಮಧ್ಯಾಹ್ನದ ತನಕವೂ ಬಿದ್ದೇ ಇತ್ತು. ಸೆಕ್ರೆಟರಿಗಳು (ಮೂವರಿದ್ದರೂ ಉತ್ತರ ಕೊಡುವುದಕ್ಕಾಗಿ ಜವಾಬುದಾರಿ ಹೊತ್ತು) ಆನಂದರಾಯರು ತಾವೇನೂ ಇದಕ್ಕೆ ಕಾರಣರಲ್ಲವೆನ್ನುವರು. ಇವರನ್ನು ಕೇಳಿದವರು ಯಾರು?

• • • •

ಅದು ಹೇಗಿದ್ದರೂ ೩೫ ಮಂದಿ ಸ್ವಯಂಸೇವಕರ ೩ ದಿನಗಳ ಖರ್ಚಿಗಿಂತ ೧೪ ಮಂದಿ (ಡೆಲಿಗೇಟರ) ಪ್ರತಿನಿಧಿಗಳು ಐದು ಊಟಗಳ ಖರ್ಚು—ಐದು ಪಾಲಿನಷ್ಟಾಗಿದೆ ಎಂದು ಸುದ್ದಿ. ಪಾಪ! (ವೊಲಂಟಿಯರು) ಸ್ವಯಂಸೇವಕರು ಹಗಲೂ ರಾತ್ರಿ ದುಡಿದು ೫೦ ರೂಪಾಯಿ ಮೌಲ್ಯದ ಆಹಾರ ತಿಂದರೆನ್ನುವ. ಪ್ರತಿನಿಧಿಗಳಲ್ಲಿ ಪ್ರತಿಯೊಬ್ಬರೂ ನಿಧಿಗಳಾಗಿಯೇ ಆಹಾರ ತಿಂದರೆಂದು ಈ ಲೆಕ್ಕವು ಸತ್ಯವಾದರೆ ತೋರಿಬಂದೀತು.

ಅನುಕ್ರಮಣಿಕೆ.

ಅಗ್ರಲೇಖ
ಬರ್ಡೋಲಿಯಲ್ಲಿ
ವಿದೇಶ ವರ್ತಮಾನ
ಸ್ಫುಟವಿಚಾರಗಳು
ಸೂಚನೆಗಳು
ವರ್ತಮಾನ ಸಂಗ್ರಹಗಳು
ಒಳದೇಶ
ದಕ್ಷಿಣ ಕನ್ನಡ — ಮಂಗಳೂರು, [illegible]
[illegible]
ಕುಂಬಳೆ
ವಿವಿಧ ಸಮಾಚಾರಗಳು
[illegible]

ಸ್ವದೇಶಾಭಿಮಾನಿ.

ತಾರೀಕು ೧೫ನೇ ಶುಕ್ರವಾರ ಜೂನ್ ೧೯೨೮

ಬರ್ಡೋಲಿಯಲ್ಲಿ

ಬರ್ಡೋಲಿಯ ಸತ್ಯಾಗ್ರಹ ಸಮರದ [illegible] ಹಿಂದೂಸ್ಥಾನದಲ್ಲಿ ಪ್ರತಿಧ್ವನಿಸಲಾರಂಭಿಸಿರುವುದು [illegible] ೧೨ನೇ ಬರ್ಡೋಲಿ ದಿನವಾಗಿ ಸಮಸ್ತ ಹಿಂದೂಸ್ಥಾನವೇ ಆಚರಿಸಿತು. [illegible] ಬರ್ಡೋಲಿಯ ಈ ಸಮರ [illegible] ಸರ್ವರಿಗೂ ತಿಳಿಯುವಂತಿದ್ದಿತು.

ಈ ಬಾರಿ ಬರ್ಡೋಲಿಯು [illegible] ಮೊದಲು ತಯಾರಿಸಲ್ಪಟ್ಟಂತೆ [illegible] ಸತ್ಯಾಗ್ರಹಕ್ಕೆ ಇಳಿದುದಲ್ಲ. [illegible] ಹಿಂದೂಸ್ಥಾನದ ಮಟ್ಟಿಗೆ ಈ ಪ್ರಚಂಡ ಚಳವಳಿ [illegible] ಮುಗಿದಿಲ್ಲ. ಸತ್ಯಾಗ್ರಹದ [illegible] ಹಿಂದೂಸ್ಥಾನದಲ್ಲಿ ಈ ವರೆಗೆ ನಡೆದುದಿಲ್ಲ. ದಕ್ಷಿಣ ಆಫ್ರಿಕದ ಹಿಂದಿನ ಘಟನೆಗಳು ಮಾತ್ರವೇ ಈ ಸತ್ಯಾಗ್ರಹದ [illegible] ವನ್ನು ಸಾರುತ್ತಿದ್ದುವು ಅಲ್ಲದೆ ಹಿಂದೂಸ್ಥಾನಕ್ಕೆ ಅದರ ಪ್ರತ್ಯೇಕ ಅನುಭವವಿದ್ದಿರಲಿಲ್ಲ.

ಬರ್ಡೋಲಿಯ ಜನತೆಯು ಈ ಭಯಂಕರ ಆತ್ಮಯಜ್ಞಕ್ಕೆ ಉತ್ಸಾಹದಿಂದ ಇಳಿದಿರುವುದೇ ಈ ಚಳವಳಿಯ ಅತ್ಯಂತ [illegible] ವಿಷಯ. ಈ ಸತ್ಯಾಗ್ರಹವು [illegible] ದರಿಂದ ತನ್ನದಿದ್ದುದನ್ನೆಲ್ಲಾ ಕಳೆದುಕೊಳ್ಳುವ ಸಂದರ್ಭಗಳು ಬರುತ್ತಿವೆ; ಅತ್ಯಂತ ದುಸ್ಸಹ ಆಪ್ಪ ಯಾತನೆಗಳನ್ನನುಭವಿಸುವ ಆವಶ್ಯಕತೆಯು ಒದಗುತ್ತಿದೆ; ಕಡೆಗೆ ಸರಕಾರೀ ಜೈಲುಖಾನೆಗಳನ್ನು ಸೇರುವಂತೆಯೂ ಆಗುತ್ತದೆ. ಹೀಗೆ ದಾರಿದ್ರ್ಯದ ದೀಕ್ಷೆಯನ್ನು ವಹಿಸಿ ಇದನ್ನು ಸೇರಬೇಕಾಗುತ್ತದೆ. ಬರ್ಡೋಲಿಯ ಜನರು ಇವೆಲ್ಲಕ್ಕೂ ಸಿದ್ಧರಾಗಿ ಈ ಚಳವಳಿಯನ್ನು ಕೈಗೊಂಡುದು ಅವರ ಅಪೂರ್ವ ಸ್ವಾರ್ಥತ್ಯಾಗವನ್ನೇ ತೋರಿಸುತ್ತಿದೆ.

ಮುಂಬೈ ನ್ಯಾಯವಿಧಾಯಕ ಸಭೆಯ ಹಲವು ಮೆಂಬರರು ಸರಕಾರದ ಅನ್ಯಾಯಗಳನ್ನು ನೋಡಿ, ಅವುಗಳನ್ನು ತಿದ್ದಲೆತ್ನಿಸಿ ಕೃತಕಾರ್ಯರಾಗದೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದರು. ಇತ್ತ ಬರ್ಡೋಲಿಯ ಪಟೇಲರಾದರೂ ಜನತೆಯ ಮೇಲಿನ ಸಹಾನುಭೂತಿಯಿಂದಲೂ ಸರಕಾರದ ಮೇಲಿನ ತಾತ್ಸಾರದಿಂದಲೂ ತಮ್ಮ ನೌಕರಿಗೆ ರಾಜೀನಾಮೆಯನ್ನು ಕೊಟ್ಟರು. ಕಂದಾಯವನ್ನು ನಿರಾಕರಿಸುವ ಈ ಸತ್ಯಾಗ್ರಹೀ ಜನತೆಯಿಂದ ವಸೂಲಿಯು ದಿನಗಳೆದ ಹೈಕ್ಕೆ ಮತ್ತಷ್ಟು ಕಠಿಣವಾಗುತ್ತದೆ. ಜಪ್ತಿಗೆ ಹೋಗಲಿಕ್ಕೆ ಜನರೇ ಸಿಕ್ಕದೆ ಸರಕಾರವು ಪಠಾಣರನ್ನು ತೆಗೆದುಕೊಂಡು ಹೋಗಬೇಕಾಯಿತು. ಜಪ್ತಿ ನಡೆದರೂ, ಜಪ್ತಿಯಾದ ಸಾಮಾನುಗಳನ್ನು ಕೊಂಡುಕೊಳ್ಳುವವರಿಲ್ಲ. ಹೀಗಾಗಿ ಸರಕಾರಕ್ಕೂ ಈ ಸತ್ಯಾಗ್ರಹವೆಂದರೆ ಬಹಳ ಯೋಚನೆಯ ವಿಷಯವಾಗಿರುವುದು. ಆದರೆ ಮುಂಬೈ ಗವರ್ನರರು ಶ್ರೀ ಮುನ್ಶಿಯವರಿಗೆ ಬರೆದಂತೆ—"ಸರಕಾರದ ಅಧಿಕಾರಗಳನ್ನು ಖಾಸಗಿ ವ್ಯಕ್ತಿಗಳು ಅಪಹರಿಸುವುದನ್ನು ಯಾವ ಸರಕಾರವೂ ಒಪ್ಪಲಾರದು, ಮತ್ತು [illegible] ಯಾವ ಸರಕಾರವೂ ಸರಕಾರವೆನಿಸಿಕೊಳ್ಳಲು ಯೋಗ್ಯವಲ್ಲ" ಎಂಬ ಅಧಿಕಾರ ದರ್ಪದ ಮಾನಸಿಕತೆಯೇ ಈ ಚಳವಳಿಯ ಕಡೆಗಿನ ಸರಕಾರೀ ಧೋರಣೆಯನ್ನು ನಿಶ್ಚಯಿಸುತ್ತಿರುವುದು.

ಆದರೆ ಸರಕಾರವೆಂದರೆ ಜನತೆಯಿಂದ ಪ್ರತ್ಯೇಕವಾಗಿಲ್ಲ, [illegible]

[illegible]

ಅತ್ತ [illegible] ಬರ್ಡೋಲಿ [illegible]

ಬರ್ಡೋಲಿಯಲ್ಲೇ ಹಿಂದೂಸ್ಥಾನದ ಚಳವಳಿಗಳ [illegible] ನಾವು [illegible] ಸತ್ಯಾಗ್ರಹವೆಂದರೆ ಈ ವರೆಗೆ ಪರೀಕ್ಷಿಸಲ್ಪಡದ ಬೆದರಿಕೆ ಮಾತ್ರವಾಗಿದ್ದಿತು. ಅದು ಬರೇ ಬೆದರಿಕೆ ಅಲ್ಲದೆ ಕಾರ್ಯಕಾರಿಯಾದುದಲ್ಲವೆಂದು ಒಂದು ಬಾರಿ ಸಿದ್ಧವಾಗಿ ಹೋದರೆ ಆ ಮೇಲೆ ಹಿಂದೂಸ್ಥಾನದ ಯಾವ ಚಳವಳಿಗಳಿಗೂ ಬೆಲೆಯಿರಲಾರದು. ಜನರು ಸರಕಾರದ ಎಲ್ಲಾ ತರದ ದಬ್ಬಾಳಿಕೆಗಳನ್ನೂ ಸಹಿಸಲೇ ಬೇಕಾಗುವುದು. ಆ ಕಾರಣದಿಂದ ಬರ್ಡೋಲಿಯ ಚಳವಳಿಯ ವಿಜಯವು ಬರೇ ಬರ್ಡೋಲಿ ಜನತೆಯದಾಗಿರದೆ ಇಡೀ ಹಿಂದೂಸ್ಥಾನದ್ದೇ ಆಗಿರುತ್ತದೆ. ಅದರ ವಿಜಯದಲ್ಲಿಯೇ ಕಾಂಗ್ರೆಸ್ಸಿನ ಧ್ಯೇಯದ ಕಾರ್ಯಕಾರಿತೆಯೂ, ಕಾಂಗ್ರೆಸ್ಸಿನ ಭಾವೀ ಗೌರವವೂ ಅಡಗಿದೆ. ಆದುದರಿಂದ ಬರ್ಡೋಲಿಯ ಕಡೆಗೆ ಇಡೀ ರಾಷ್ಟ್ರಪಕ್ಷದ ದೃಷ್ಟಿಯು ತಿರುಗಿದೆ. ಬರ್ಡೋಲಿಯನ್ನು ವಿಜಯಯಾಗಿ ಮಾಡುವುದು ಪ್ರತೀ ಹಿಂದೀಯನ ಕರ್ತವ್ಯವಾಗಿದೆ.

ವಿದೇಶ ವರ್ತಮಾನ.

— ಅಮೇರಿಕದ ಕೆಲಿಫೋರ್ನಿಯದಿಂದ ಆಸ್ಟ್ರೇಲಿಯದ ವರೆಗೆ ನಿಲ್ಲದೆ ಓಡಬೇಕೆಂದು ನಿಶ್ಚಯಿಸಿದ ಸದರ್ನ್‌ಕ್ರೋಸ್ ಎಂಬ ವಿಮಾನವು ಆಸ್ಟ್ರೇಲಿಯದ ಬ್ರಿಸ್‌ಬೇನಿಗೆ ತಲಪಿರುವದು.

— ರೋಮಿನ ಗವರ್ನರರು ತನ್ನ ಪುತ್ರಿಯನ್ನೊಡಗೂಡಿ ಲಂಡನಿನ ಮಯೋರರ ಅಪೇಕ್ಷೆಯಂತೆ ಲಂಡನನ್ನು ಸಂದರ್ಶಿಸಿದರು.

— ಸಿಲೋನಿನಲ್ಲಿ "ಎಂಟರ್ ಪ್ರೈಸ್" ಎಂಬ ಒಂದು ವಾಯುವಿಮಾನವು ಮೇಲಿನಿಂದ ಕೆಳಕ್ಕೆ ಬಿದ್ದು ಜಖಂ ಹೊಂದಿತು. ಪಿಲಟನು ಸ್ವಲ್ಪ ಗಾಯಹೊಂದಿ ಹೇಗಾದರೂ ತಪ್ಪಿಸಿಕೊಂಡನು.

— ಹೋಲೆಂಡಿನಿಂದ ಡಚ್ ಇಂಡಿಸಿನ ವರೆಗೆ ವಿಮಾನ ಸರ್ವಿಸನ್ನು ಆದಷ್ಟು ಬೇಗನೆ ಇಡುವರು. ತಾವು ಇಗಲೇ ಇಡದೆ ಹೋದರೆ ಇಂಗ್ಲೀಷರು ಇಡಬಹುದೆಂಬ ಹೆದರಿಕೆಯು ಹೋಲೆಂಡದ ಸರಕಾರದವರಿಗೆ ಹುಟ್ಟಿರುತ್ತದೆ.

— ಆಸ್ಟ್ರೇಲಿಯದ ಮರಿನುಗಳ ಅಡಿಗೆಯವರೆಲ್ಲರೂ ಮುಷ್ಕರ ಹಾಕಿರುವ ಕಾರಣ ಮರಿನುಗಳ ಚಲಾವಣೆಯೇ ನಿಂತುಹೋಗಿರುತ್ತದೆ.

— ಆಫ್ರಿಕದ ಪ್ರಸಿದ್ಧ ಎಸ್ಟ್ರೊನೊಮರನಾಗಿದ್ದು ಅನೇಕ ಗ್ರಹಗಳನ್ನೂ ನಕ್ಷತ್ರಗಳನ್ನೂ ಗೊತ್ತು ಹಿಡಿದಿದ್ದ ವಿಲ್ಲಿಯಮ್ ರೈಡನೆಂಬವನು ಮೃತಪಟ್ಟನು.

— ಜಪಾನಿನ ಪ್ರೈಮಿಯರರು ಟೋಖಿಯೊವಲ್ಲಿ ನಡೆಯುತ್ತಿದ್ದ ಒಂದು ಪಾರ್ಟಿ ಕಾನ್ಸರೆನ್ಸಿಗೆಂದು ಹೋಗಲು ರೈಲುವೇ ಸ್ಟೇಶನಿಗೆ ಬಂದಾಗ ಒಬ್ಬ ಕೂಲಿಯವನು ಬರ್ಚಿಯಿಂದ ತಿವಿದು ಅವರನ್ನು ಕೊಲ್ಲಲೆಳಸಿದನು. ಆದರೆ ಪ್ರಿಮಿಯರರ ಅಂಗ ರಕ್ಷಕರು ಅವರಿಗೆ ಗಾಯವಾಗದಂತೆ ಜಾಗ್ರತೆಯಿಂದ ಕಾಪಾಡಿದರು.

— ರಾ। ಎಸ್. ಶ್ರೀನಿವಾಸ ಅಯ್ಯಂಗಾರರು ಪೆರಿಸಿನಲ್ಲಿ ಹಿಂದೂಸ್ಥಾನದ ವಿಷಯವಾಗಿ ಒಂದು ಭಾಷಣವನ್ನು ಮಾಡಿದರು. ಸ್ವಾತಂತ್ರ್ಯವೇ ಹಿಂದೂಸ್ಥಾನದ ಧ್ಯೇಯವಾಗಿರಬೇಕೆಂದೂ, ಹಿಂದೂಸ್ಥಾನದ ಜನಸಮಾಜದಲ್ಲಿ ವ್ಯವಸ್ಥೆಯು ಅಗತ್ಯವೆಂದೂ ಅವರು ಹೇಳಿದರು.

— ಕೋರಿಂತಿನಲ್ಲಿ ಭೂಕಂಪವುಂಟಾಗಿ ಹಲವು ಮನೆಗಳು ಬಿದ್ದುಹೋದವು.

ಸದರ್ನ್ ಕ್ರೋಸ್ ವಿಮಾನಕ್ಕೆ ಖರ್ಚಿಗಾಗಿ ೨೫೦೦ ಪವನುಗಳನ್ನು ಕೊಡಬೇಕೆಂದು ನ್ಯೂಸೌತ್ ವೇಲ್ಸಿನವರು ನಿಶ್ಚಯಿಸಿರುವರು.

— ಜರ್ಮನಿಯಲ್ಲಿರುವ ಇಟಲಿಯ ರಾಜ ಪ್ರತಿನಿಧಿಯ ನಿವಾಸಕ್ಕೆ ಜರ್ಮನ್ ಯುವಕರು ಮುತ್ತಿ ಕಲ್ಲುಗಳನ್ನೆಸೆದು ಕಿಟಿಕಿಬಾಗಲು ಮುಂತಾದವುಗಳನ್ನು ಹೊಡೆದು ಹಾಕಿದರು. ಪ್ರತಿನಿಧಿಯು ಕುಳಿತುಕೊಳ್ಳುತ್ತಿದ್ದ ಒಳಗಿನ ಕೋಣೆಯಲ್ಲಿಯೂ ಕೂಡ ಕಲ್ಲುಗಳು ಬಂದು ಬಿದ್ದಿದ್ದವಂತೆ.

— ಬೆಲ್‌ಗ್ರೇಡಿನ ಪಾರ್ಲಿಮೆಂಟ್ ಸಭಾಸದನವು ಯಾವಾಗಲೂ ಮೌನದಿಂದಿರುತಿದ್ದರೂ ಮೊನ್ನೆ ಒಂದು ಜಗಳದ ಕಾರಣದಿಂದ ಕೊಂಚ ಗಲಭೆಯುಂಟಾಯಿತು. ಮೂರು ಸಭೆಗಳಿಗೆ ಬರಲಾಗದೆಂದು ಸಸ್ಪೆನ್ಡ್ ಮಾಡಲ್ಪಟ್ಟ ಎಂಟು ಜನ ವಿರೋಧಿ ಮೆಂಬರುಗಳು ಬಲತ್ಕಾರದಿಂದ ಬಂದು ಕುಳಿತು ಹೋಗಲೊಪ್ಪಲಿಲ್ಲ. ಆದರಿಂದ ಪೋಲೀಸರು ಬಂದು ಬಲವನ್ನುಪಯೋಗಿಸಿ ಅವರನ್ನೆಬ್ಬಿಸಬೇಕಾಯಿತು.

— ಬೆವೇರಿಯದಲ್ಲಿ ಒಂದುಮೈಲು ರೈಲು ಕಂಬಿಗಳಿಂದ ತಪ್ಪಿಹೋದ ಕಾರಣ ಹದಿನೈದು ಜನರು ಮೃತಪಟ್ಟರು.

— ೧೯೧೯ನೇ ಇಸವಿಯಲ್ಲಿ ನ್ಯೂಯೋರ್ಕಿನಲ್ಲಿ ಸ್ಟಾನ್ ಫೋರ್ಡ್ ವ್ಯಾಟ್ ಎಂಬವನನ್ನು ಕೊಂದಿದ್ದ ಮಿಲಿಯಾಧಿಪತಿ ಮಿ. ಹೆರ್ರಿಥೊ ಎಂಬವನು ಒಂದು ಹಡಗದಲ್ಲಿ ಕುಳಿತು ಇಂಗ್ಲೆಂಡಿಗೆ ಬಂದನು. ಆದರೆ ಆತನನ್ನು ಇಂಗ್ಲೆಂಡಿಗೆ ಬರಲು ಇಂಗ್ಲೆಂಡಿನವರು ಬಿಡಲಿಲ್ಲ. ಆತನು ಬಂದಿದ್ದ ಹಡಗದಲ್ಲಿಯೇ ಉಳಕೊಂಡು ಪುನಃ ಅದೇ ಹಡಗದಲ್ಲಿ ಬಂದ ಹಾಗೆಯೇ ಹಿಂದಕ್ಕೆ ಹೋದನು.

ಒಳದೇಶ ವರ್ತಮಾನ.

— ಪಂಡಿತ ಶ್ಯಾಮಲಾಲನೆಹರುಗಳ ಮಗಳೂ, ಜವಹರಲಾಲನೆಹರುಗಳ ತಂಗಿಯೂ ಆಗಿರುವ ಶ್ರಿಮತಿ ಶ್ಯಾಮ ಕುಮಾರಿನೆಹರು ಇವರು ವಿಶ್ವವಿದ್ಯಾಲಯದಲ್ಲಿ ತನ್ನ ಶಿಕ್ಷಣವನ್ನು ಮುಗಿಸಿ, ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಉತ್ತೀರ್ಣರಾಗಿರುವರು. ಇವರು ಅಲ್ಲಹಾಬಾದ್ ಹೈಕೋರ್ಟು ಬಾರಿಗೆ ಸೇರಿ ತರಬೇತಿಯನ್ನು ಹೊಂದುವರು. ಉತ್ತರ ಹಿಂದೂಸ್ಥಾನದಲ್ಲಿ ಸ್ತ್ರೀವಕೀಲರಲ್ಲಿ ಇವರೇ ಮೊದಲನೆಯವರು.

— ರಾಜಕೋಟೆದ ಅರಸರ ದ್ವಿತೀಯ ಪುತ್ರನು ಕ್ಷಯರೋಗದ ಕಾರಣ ಮೃತಪಟ್ಟರು. ಇವರು ವಿಲಾಯತಿಯ ಹೆಂಪ್‌ಸ್ಟೆಡ್ಡಿನಲ್ಲಿ ವಾಸವಾಗಿದ್ದರು.

— ಈ ಸಂಸ್ಥಾನದ ಶಾರೀರಿಕ ಶಿಕ್ಷಣೆಯ ಕುರಿತು ತನಿಖಿಯನ್ನು ನಡಿಸಲಿಕ್ಕೂ, ಶಾರೀರಿಕ ಶಕ್ತಿಯ ಅಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಜನರಿಗೆ ಕೊಡಲಿಕ್ಕೂ, ಮದರಾಸು ಸರಕಾರದವರು ಒಂದು ಕಮಿಟಿಯನ್ನು ನೇಮಿಸಿರುವರು.

— ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಹ್ರಾವಣ್ಕೋರಿನ ಅಧಿಕಸಂಖ್ಯೆಯ ವಿದ್ಯಾರ್ಥಿಗಳು ಉತ್ತೀರ್ಣರಾಗದೆ ಹೋದ ಕಾರಣ, ಲೆಜಿಸ್ಲೇಟಿವ್ ಕೌನ್ಸಿಲಿನ ಮಾಜಿ ಮೆಂಬರರಾದ ಮಿ. ನಾರಾಯಣ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡಿತು. ಎಸ್. ಎಸ್. ಎಲ್. ಸಿ. ಬೋರ್ಡಿನಲ್ಲಿ ಏನೋ ಕುಂದುಗಳಿರುವುದರಿಂದ ವರ್ಷ ವರ್ಷವೂ ಹೆಚ್ಚು ಹುಡುಗರು ಫೈಲಾಗುತ್ತಿರುವರೆಂದೂ, ಈ ವಿಷಯವನ್ನು ಸರಕಾರದವರಿಗೆ ತಿಳಿಸಬೇಕೆಂದೂ, ನಿರ್ಣಯವಾಯಿತು.

— ಸರ್. ಟಿ. ಸದಾಶಿವ ಅಯ್ಯರರ ಸ್ಮಾರಕಕ್ಕಾಗಿ ಸ್ಥಾಪಿಸಿದ ಫಂಡಿಗೆ ಇದು ವರೆಗೆ ೪೭೫ ರೂಪಾಯಿಗಳು ಜಮೆಯಾಗಿರುವವು.

— ಪುದುಕೋಟೆಯ ಮುಂದಿನ ಅರಸರು ಯಾರಾಗುವರೆಂಬುದರ ಕುರಿತೂ, ಮೃತರಾಜರ ಸಂಸ್ಕಾರ ಸಮಾರಂಭಗಳನ್ನು ಯಾರು ಜರಗಿಸುವರೆಂಬುದರ ಕುರಿತೂ, ರಾ। ನಾಗರತ್ನಮ್ ಅಯ್ಯರರು ತನ್ನ ತಮಿಳು ವಾರಪತ್ರಿಕೆಯಲ್ಲಿ ಲೇಖನಗಳನ್ನು ಬರೆದಿದ್ದರು. ಇದರಿಂದ ಶಾಂತತಾಭಂಗವಾಗುವುದೆಂದು ಮೆಜಿಸ್ಟ್ರೇಟರು ಸಂಪಾದಕರನ್ನು ಬೆದರಿಸಿ ಹುಕುಂ ಕೊಟ್ಟಿರುವರು.

— ಶೈದಾಂದಿಯ ಜೈಲಿನಲ್ಲಿ ಬಂಧಿಸಲ್ಪಟ್ಟ ಒಬ್ಬ ಅಪರಾಧಿಯು ಆತ್ಮಹತ್ಯೆಗೆಳಸಿದದು ಬಹಳ ಆಶ್ಚರ್ಯದ ಸಂಗತಿಯಾಗಿದೆ. ಆತನು ತನ್ನ ಮಾವನ ಮೂವರು ಮಕ್ಕಳನ್ನು ಕೊಂದ ಆರೋಪದ ಮೇಲೆ ಆತನನ್ನು ಜೈಲಿನಲ್ಲಿರಿಸಿದ್ದರು. ಒಂದು ದಿನ ಆತನು ಮಲವಿಸರ್ಜನೆಗಾಗಿ ಹೊರಗೆ ಹೋಗಲು ಬಯಸಿದನು. ಪೋಲೀಸನು ಒಪ್ಪಿ ಆತನನ್ನು ಹೊರಕ್ಕೆ ಕೊಂಡೊಯ್ದು ತಾನು ಸ್ವಲ್ಪ ದೂರದಲ್ಲಿ ನಿಂತುಕೊಂಡನು. ಅಪರಾಧಿಯು ಈ ಸುಸಂದರ್ಭವನ್ನು ಸಾಧಿಸಿ ಸಮಿಾಪದ ಬಾವಿಗೆ ಹಾರಿದನು. ಬಾವಿಯಲ್ಲಿ ಎರಡೇ ಅಡಿ ನೀರಿದ್ದಿತು. ಒಂದು ಕುರ್ಚಿಯನ್ನು ಕೆಳಗಿಳಿಸಿ ಆತನನ್ನು ಮೇಲಕ್ಕೆ ತೆಗೆದರು. ಸುಮಾರು ಎರಡು ತಾಸುಗಳ ತರುವಾಯ ಆತನು ಪ್ರಜ್ಞೆಗೆ ಬಂದನು. ಆತನ ನಂಬ್ರದ ವಿಚಾರಣೆಯು ಬರುವ ೨೫ನೇ ತಾರೀಕಿನ ದಿನ ನಡೆಯುವದಂತೆ.

— ಕೋಲಾರದಲ್ಲಿ ಕೆಲವು ವಾರಗಳ ಹಿಂದೆ ಅಮ್ಮಣ್ಣಿ ಮತ್ತು ಮರಿಮುತ್ತು ಎಂಬ ಇಬ್ಬರು ಹೆಂಗಸರು ಜಗಳವಾಡಿದರು. ಅಮ್ಮಣ್ಣಿಯು ಮರಿಮುತ್ತುವಿನ ಕಿವಿಯ ಮೇಲೆ ಬಲವಾದ ಒಂದು ಗುದ್ದನ್ನು ಕೊಟ್ಟಳು. ಈ ಪೆಟ್ಟು ಬಲು ಅಪಾಯಕಾರಕವಾದ್ದರಿಂದ, ಮೆಜಿಸ್ಟ್ರೇಟರು ಅಮ್ಮಣ್ಣಿಗೆ ಮೂರು ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

— ತಲಚೇರಿಯಲ್ಲಿ ಒಬ್ಬ ಸಾಹುಕಾರನು ಹೊಸದಾದ ಅರಮನೆಯಂತಹ ಒಂದು ಮನೆಯನ್ನು ಕಟ್ಟಿಸುತ್ತಿದ್ದನು. ಮನೆಯ ಕೆಲಸವು ಪೂರ್ಣವಾಗದೆ ಸ್ವಲ್ಪ ಬಾಕಿ ಉಳಿದಿದ್ದಿತು. ಮೊನ್ನೆಯ ದಿನ ರಾತ್ರಿ ಬಹು ಜೋರಿನ ಮಳೆಗಾಳಿ ಬಂದು ಇಡೀ ಕಟ್ಟೋಣವು ಕೆಳಕ್ಕೆ ಕುಸಿದು ಬಿದ್ದಿತು. ನಷ್ಟವು ಸುಮಾರು ೧೫,೦೦೦ ಎಂದು ಅಂದಾಜು ಮಾಡಲಾಗಿದೆ.

— ಮಲೆಗಾಮಿನ ಒಂದು ಬೆಂಕಿಪೆಟ್ಟಿಗೆ ತಯಾರಿಸುವ ಕಾರಖಾನೆಗೆ ಬೆಂಕಿತಾಗಿತು. ಮೆಶಿನಿನ ಕೋಣೆಯಲ್ಲಿ ಉಂಟಾದ ಬೆಂಕಿಯು ವಿಸ್ತರಿಸಿ ಮಾಡಿಗೆ ಹಿಡಿಯಿತು. ನಷ್ಟವು ಸುಮಾರು ೨೫೦೦೦ ರೂಪಾಯಿಗಳಷ್ಟು.

— ಸೌತ್ ಇಂಡಿಯನ್ ರೈಲುವೇ ಕಂಪೆನಿಯವರು ತಂಜಾವೂರಿನಿಂದ ಮದರಾಸಿನ ವರೆಗೆ ಹೊಸ ರೈಲುವೇ ಸರ್ವಿಸೊಂದನ್ನು ಪ್ರಾರಂಭಿಸಿರುವರು. ಇದು ಮದುವೆ ಮತ್ತು ಉತ್ಸವಗಳ ಸಲುವಾಗಿ ತೆರೆಯಲ್ಪಟ್ಟಿದೆಯಂತೆ.

— ಹೈದರಾಬಾದಿನ ಸ್ಕೌಟ್ ದಳದವರು ಸ್ಯಾಕಲಿನ ಮೇಲೆ ಕುಳಿತು ಮೈಸೂರಿಗೆ ಬಂದು ಮಹಾರಾಜರ ಅತಿಥಿಗಳಾಗಿ ಉಳಕೊಂಡಿದ್ದರು. ಮಹಾರಾಜರು ಸಂತೋಷಪಟ್ಟು ಪ್ರತಿ ಒಬ್ಬನಿಗೆ ಒಂದೊಂದು ಬೆಳ್ಳಿಯ ಬಟ್ಟಲನ್ನು ಪಾರಿತೋಷಕವಾಗಿ ಕೊಟ್ಟರು.

ಕಲಕತ್ತದ ಕೇಶರಮ್ ಹತ್ತಿ ಕಾರಖಾನೆಯಲ್ಲಿ ಮುಷ್ಕರವು ಪ್ರಾರಂಭವಾಗಿತ್ತು. ತಿಂಗಳುಗಟ್ಟಲೆ ಸಂಬಳವನ್ನು ವಜಾ ಮಾಡಿ, ನೆಯ್ದ ವಸ್ತ್ರದ ಅಳತೆಗೆ ಸರಿಯಾಗಿ ಸಂಬಳವನ್ನು ಕೊಡುವದಾಗಿ ಒಂದು ಕರಾವು ಮುಂದೆ ಬಂದುದೇ ಮುಷ್ಕರಕ್ಕೆ ಕಾರಣವಾಯಿತು. ಆದರೆ ಕೂಲಿಗಳು ಇದಕ್ಕೆ ಒಪ್ಪದ ಕಾರಣ ಹೊಸ ಕರಾವನ್ನೇ ರದ್ದುಪಡಿಸಿ ಹಳೇ ಕ್ರಮವನ್ನು ಅನುಸರಿಸಬೇಕಾಯಿತು.

— ಪಂಜಾಬಿನ ಒಂದು ಹಳ್ಳಿಯಲ್ಲಿ ಭಯಂಕರ ರೀತಿಯ ದರೋಡೆಯಾಗಿ ಮೂರು ಮನುಷ್ಯರಿಗೂ ಮೂರು ಹೆಂಗಸರಿಗೂ ಕಠಿಣ ತರದ ಜಖಮಾಯಿತು. ಸುಮಾರು ೨೦ ಜನ ಪೋಲೀಸರೆ ಒಟ್ಟಾಗಿ ಒಬ್ಬನ ಮನೆಯನ್ನು ಹೊಕ್ಕು ಸುಲಿಗೆ ಮಾಡಿದರು. ಬಾಗಿಲನ್ನು ತೆಗೆಯದೆ ಇದ್ದದ್ದನ್ನು ನೋಡಿ ಗೋಡೆಗೆ ತೂತು ತೆಗೆದು ಒಳಗೆ ಪ್ರವೇಶಿಸಿ, ಮನೆಯವರನ್ನು ಹಿಂಸಿಸಿ, ೧೦,೦೦೦ರೂಪಾಯಿಗಳಿಗೆ ಮಿಾರಿದ ಚಿನ್ನಾಭರಣ ಮತ್ತು ನಗದು ಹಣವನ್ನು ದೋಚಿಕೊಂಡು ಹೋದರು.

— ಮಧುರೆಯಲ್ಲಿ ಒಬ್ಬ ರೈಲುವೇ ಪ್ರಯಾಣಿಕನು ರೈಲು ಹತ್ತಿದೊಡನೆ ರೈಲು ಬಿಡಲಾಗಿ ಆತನ ಹಣದ ಚೀಲವು ಸ್ಟೇಶನಿನಲ್ಲಿಯೇ ಉಳಿದ ಸಂಗತಿಯು ಆತನ ನೆನಪಿಗೆ ಬಂದಿತು. ಚೀಲದಲ್ಲಿ ೧೦೮ ರೂಪಾಯಿಗಳಿದ್ದವು. ಒಡನೆ ಆತನು ಅಪಾಯಸೂಚಕ ಸರಪಳಿಯನ್ನೆಳೆದು ರೈಲು ನಿಲ್ಲುವಂತೆ ಮಾಡಿದನು. ರೈಲು ಗಾರ್ಡನು ಬಂದು ಆತನನ್ನು ಹಿಡಿದು ಬೆದರಿಸಿ ಆತನ ಮಾತನ್ನು ಕೇಳದೆ ಆತನನ್ನು ಸ್ಟೇಶನ್ ಮಾಸ್ತರ ವಶಕ್ಕೆ ಕೊಟ್ಟನು. ಆತನಿಗೆ ಮಧುರೆಯ ಎರಡನೇ ತರಗತಿಯ ಮೆಜಿಸ್ಟ್ರೇಟರು ೩೦ ರೂಪಾಯಿ ಜುರುಮಾನೆಯ ಅಥವಾ ಒಂದು ತಿಂಗಳ ಸಾದಾ ಶಿಕ್ಷೆಯ ದಂಡನೆಗೆ ಒಳಪಡಿಸಿದರು. ಆತನು ಮಧುರೆಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ಅಪಿಲುಮಾಡಲಾಗಿ, ಆತನ ಅಪರಾಧವಿಲ್ಲವೆಂದು ಮೆಜಿಸ್ಟ್ರೇಟರು ಆತನನ್ನು ಬಿಟ್ಟು ಬಿಟ್ಟರು.

ದಕ್ಷಿಣ ಕನ್ನಡ.

ಮಂಗಳೂರು: — ಮಂಗಳೂರು ತಾಲೂಕು ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು ಮಂಗಳೂರಿನ ತಾಲೂಕು ಬೋರ್ಡು ಆಫೀಸಿನಲ್ಲಿ ಇದೇ ಬರುವ ೨೨ನೇ ಶುಕ್ರವಾರ ಸಾಯಂಕಾಲ ಘಂಟೆ ೩ಕ್ಕೆ ಕೂಡುವದು. ೧೯೨೬-೨೭ರ ಆಡಳಿತೆ ರಿಪೋರ್ಟನ್ನು ಈ ಸಭೆಯು ಮುಂದಕ್ಕಿಡುವರು. ತಾಲೂಕು ಬೋರ್ಡು ಸದಸ್ಯರ ವಿಶೇಷ ಸಭೆಯೊಂದು ಅದೇ ದಿನ ಅಪರಾಹ್ನ ಘಂಟೆ ೨ಕ್ಕೆ ಆಫೀಸಿನಲ್ಲಿಯೆ ಜರಗುವುದು. ಈ ಸಭೆಯಲ್ಲಿ ತಾಲೂಕು ಬೋರ್ಡಿಗೆ ಒಬ್ಬ ವೈಸ್ ಪ್ರೆಸಿಡೆಂಟರನ್ನೂ ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರರನ್ನೂ ಆರಿಸುವರು.

ತಾ. ೯-೬-೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಒಟ್ಟು ೧೩ ಮರಣಗಳಾದವು. ಈ ಪೈಕಿ ಉದರ ರೋಗದಿಂದ ೧, ಶ್ವಾಸಕೋಶದ ರೋಗದಿಂದ ೪, ಇತರ ಎಲ್ಲಾ ಕಾರಣಗಳಿಂದ ೮, ೫ ಶಿಶುಮಾರಣಗಳು. ಜನನ ಸಂಖ್ಯೆಯು ಒಟ್ಟು ೩೩.

ಇದೇ ಬರುವ ೧೭ನೇ ಆದಿತ್ಯವಾರ ಬೆಳಗ್ಗೆ ೭॥ ಘಂಟೆಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀ ಕಾರ್ನಾಡ ಸದಾಶಿವ ರಾಯರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

'ಬರ್ಡೋಲಿ ದಿನ'ವನ್ನು ಆಚರಿಸುವ ಸಲುವಾಗಿ ಕಳೆದ ೧೨ನೇ ಮಂಗಳವಾರ ದಿನ, ಸಾಯಂಕಾಲ ೫ ಘಂಟೆಗೆ ಮಂಗಳೂರಿನವರು ಲೈನ್‌ಮ್ಯೆದಾನಿನಲ್ಲಿ ಕಟ್ಟಿಸಿದ ಶಿರಹಟ್ಟಿ ನಾಟಕ ಮಂಡಳಿಯವರ ಭವ್ಯವಾದ ಥಿಯೇಟರಿನಲ್ಲಿ, ಸಭೆಕೂಡಿ ಧನಸಂಗ್ರಹವನ್ನು ಮಾಡಿದರು.

ಕಳೆದ ಮಂಗಳವಾರ ದಿನ ಇಲ್ಲಿ 'ಬಾರ್ಡೋಲಿ ದಿನಾಚರಣೆಯ ಸಲುವಾಗಿ, ಲೈನ್ ಮೈದಾನಿನಲ್ಲಿ ಶಿರಹಟ್ಟಿ ನಾಟಕ ಮಂಡಳಿಯವರ ಥಿಯೇಟರಿನಲ್ಲಿ ರಾ। ಗೆಂಗೊಳ್ಳಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಊರ ಜನರ ಒಂದು ಮಹಾಸಭೆಯು ಜರಗಿತು. ಬಾರ್ಡೋಲಿಯಲ್ಲಿ ಧರ್ಮಯುದ್ಧವನ್ನು ಮಾಡುವ ಜನರೊಂದಿಗೆ ಸಹಾನುಭೂತಿಯನ್ನು ತೋರಬೇಕೆಂದು ರಾ। ಕಾರ್ನಾಡ ಸದಾಶಿವರಾಯರು ಒಂದು ಸೂಚನೆಯನ್ನು ಮುಂದಕ್ಕೆ ತರಲು, ರಾ। ಕಾರಂತರು ಅದನ್ನು ಅನುಮೋದಿಸಿದರು. ಕಂದಾಯ ವಸೂಲಿಯನ್ನು ವಿಚಾರಿಸುವದಕ್ಕಾಗಿ ಒಂದು ಕಮಿಟಿಯನ್ನು ನಿರ್ಮಿಸುವದು ಅಗತ್ಯವೆಂದು ರಾ। ಎಮ್. ಎಸ್. ಮಾಧವರಾಯರನ್ನಲು, ;ರಾ। ಎಮ್. ಮಾಧವರಾಯರು ಅದನ್ನು ಸಮರ್ಥಿಸಿದರು. ಕೊನೆಗೆ ಶ್ರೀ ಧರ್ಮದೇವ ವಿದ್ಯಾ ವಾಚಸ್ಪತಿಯವರು ಹಣ ಸಹಾಯದ ಸಲುವಾಗಿ ಮಾಡಿದ ಸೂಚನೆಯನ್ನು ರಾ। ಭಿಡೆ ಶೇಷ ಭಟ್ಟರು ಅನುಮೋದಿಸಲಾಗಿ ಸುಮಾರು ೨೦ ರೂಪಾಯಿಗಳು ಜಮೆಯಾದವು.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ನಿಂತ ಕೆನರಾ ಹ್ಯಾಸ್ಕೂಲಿನ ೫೨ ವಿದ್ಯಾರ್ಥಿಗಳ ಪೈಕಿ ೨೬ ವಿದ್ಯಾರ್ಥಿಗಳೂ ಗಣಪತಿ ಹ್ಯಾಸ್ಕೂಲಿನ ೩೮ ವಿದ್ಯಾರ್ಥಿಗಳ ಪೈಕಿ ೧೯ ವಿದ್ಯಾರ್ಥಿಗಳಿಗೂ, ಮಿಶ್ಯನ್ ಹ್ಯಾಸ್ಕೂಲಿನ ೨೮ ವಿದ್ಯಾರ್ಥಿಗಳ ಪೈಕಿ, ೧೮ ವಿದ್ಯಾರ್ಥಿಗಳೂ, ಗವರ್ನಮೆಂಟ್ ಕೊಲೇಜಿನ ೨೪ ವಿದ್ಯಾರ್ಥಿಗಳಲ್ಲಿ ೬ ವಿದ್ಯಾರ್ಥಿಗಳೂ, ಸೈಂಟ್ ಎಲೊಸಿಯಸ್ ಕೊಲೇಜಿನ ೧೧೨ ವಿದ್ಯಾರ್ಥಿಗಳಲ್ಲಿ ೭೪ ವಿದ್ಯಾರ್ಥಿಗಳೂ, ಸೆಂಟ್ ಆಗ್ನೆಸ್ ಹ್ಯಾಸ್ಕೂಲಿನ ೨೪ ವಿದ್ಯಾರ್ಥಿನಿಯರಲ್ಲಿ ೨೦ ವಿದ್ಯಾರ್ಥಿನಿಯರೂ ಉತ್ತೀರ್ಣರಾಗಿರುವರೆಂದು ತಿಳಿದುಬಂದಿರುತ್ತದೆ.

೧೮೭೭ನೇ ಇಸವಿಯಲ್ಲಿ ಪಾದರಿಯಾಗಿ, ೧೯೨೭ನೇ ಇಸವಿಯಲ್ಲಿ ತನ್ನ ೫೦ನೇ ವರ್ಷದ ಗೋಲ್ಡನ್ ಜ್ಯುಬಿಲಿ ಸಮಾರಂಭವನ್ನು ಜರಗಿಸಿದ್ದ, ರಿವರೆಂಡ್ ಮೊನ್‌ಸಿಗ್ನೊರ್ ಫ್ರೆಂಕ್ ಎಸ್. ಪಿರೇರಾ ಇವರು ನಿನ್ನೆ ಪ್ರಾತಃಕಾಲ, ದೈವಾಧೀನರಾದರೆಂಬುದು ಬಹು ದುಃಖದಾಯಕವಾದ ಸಂಗತಿಯಾಗಿದೆ. ಇವರು ಸುಮಾರು ೭೪ ವರ್ಷ ಪ್ರಾಯದ ಮುದುಕರು, ೨೩ನೇ ವರ್ಷದಲ್ಲಿ ಪಾದರಿಯಾಗಿ, ಮಂಗಳೂರು ಮಿಲಾಗ್ರಿಸ್ ಮತ್ತು ಕಾರ್ಕಳ ಇಗರ್ಜಿಗಳಲ್ಲಿ ಗುರುಗಳಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಶ್ರೀ ವಿ. ಕೆ. ರಾಜಗೋಪಾಲ ತಂಬಿನರು ಉತ್ತರ ಆರ್ಕಾಟಿನ ಪೋಲಿಸ್ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುವರು.

ಮೂಲಿಕೆ: — ಮಂಗಳೂರಿನಿಂದ ಮಲ್ಪೆಗೆ ಹಾಕಿಸುವ ರೈಲು ಮಾರ್ಗದ ಸರ್ವೆ ಆಗಿ ಮೂಲಿಕೆಯ ಹತ್ತಿರದಿಂದ ಕೊಂಡುಹೋಗದೆ ಸುಮಾರು ೨ ಮೈಲು ಪೂರ್ವದಿಂದ ಪ್ಲ್ಯಾನ ನೋಡಿರುತ್ತಾರೆ. ಮೂಲಿಕೆಯು ಪ್ರಸಿದ್ಧಿ ಪಡೆದ ಯಾತ್ರಾ ಸ್ಥಳ. ಇಲ್ಲಿ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನವಿದೆ. ಇವರ ಉತ್ಸವಕ್ಕೆ ಜನರು ಸಾವಿರ ಗಟ್ಲೆಯಿಂದ ಕೂಡಿಬರುತ್ತಾರೆ. ಇಲ್ಲಿಯ ನರಸಿಂಹ ದೇವಸ್ಥಾನವೂ ಬಹಳ ಅನಾದಿಕಾಲದಿಂದ ಇದ್ದ ದೇವಸ್ಥಾನವಾಗಿದ್ದು ವರ್ಷದ ೧೨ ತಿಂಗಳಲ್ಲಿಯೂ ದೇವರಿಗೆ ಕಾಣಿಕೆ ಒಪ್ಪಿಸುವುದಕ್ಕಾಗಿ ಜನರು ಬರುತ್ತಿರುವರು. ಅದಲ್ಲದೆ ಈ ಊರಿನ ಸ್ವಲ್ಪ ದೂರದಲ್ಲಿ ಕಬತ್ತಾರು ಎಂಬಲ್ಲಿ ಶಿರಿಯ ದೈವಸ್ಥಾನವಿದೆ. ಇಲ್ಲಿಯೂ ಜನರು ಸಾವಿರ ಗಟ್ಲೆಯಿಂದ ಬರುತ್ತಿರುವರು. ಮೂಲಿಕೆಯು ಜನಭರಿತವಾದ ಊರು. ಸುತ್ತಮುತ್ತಲಿರುವ ಗ್ರಾಮಗಳೂ ಜನಭರಿತವಾಗಿವೆ. ಈ ಶೀಮೆಯು ಫಲಭರಿತವಾದ ಶೀಮೆ. ವ್ಯಾಪಾರದ ಮಧ್ಯ ಸ್ಥಳ. ಇಷ್ಟೆಲ್ಲಾ ತಿಳಿದು ಬಂಜರು ಪ್ರದೇಶವಾದ ಕಾರ್ಕಳ ತಾಲೂಕಿನವರ ಅಪೇಕ್ಷೆ ಮೇರೆಗೆ ರೈಲುವೆ ಪ್ಲ್ಯಾನನ್ನು ಮಂಗಳೂರು ಗುರುಪುರ ಮೂಡಬಿದರೆ ಕಾರ್ಕಳ ದಾರಿಯಾಗಿ ಕೊಂಡುಹೋಗುವುದಕ್ಕಾಗಿ ತಿರಿಗಿ ಸರ್ವೆ ಆಗುವುದು ಪರಮಾಶ್ಚರ್ಯವಾಗಿದೆ. ಈ ದಾರಿಯಾಗಿ ಕೊಂಡುಹೋದರೆ ರೈಲುವೇ ಕಂಪೆನಿಯವರಿಗೆ ಯಾವದೊಂದು ಲಾಭವೂ ಸಿಕ್ಕಲಿಕ್ಕಿಲ್ಲ. ದಾರಿಯಲ್ಲಿ ಹಾಳುಬಿದ್ದ ಊರುಗಳು ಇವೆ. ದಾರಿಯಲ್ಲಾ ಬಂಜರಾಗಿದೆ. ಯಾವ ತರದ ವ್ಯಾಪಾರದ ಸರಕುಗಳೂ ಈ ದಾರಿಯಲ್ಲಿ ಸಿಕ್ಕಲಾರವು. ಮರಮಟ್ಟಿನ ವ್ಯಾಪಾರ ನಡಿಯಬಹುದೆಂದರೆ ಕಾರ್ಕಳ ತಾಲೂಕಿನಲ್ಲಿ ಸುಳ್ಯ ಸಂಪಾಜೆ, ಶಿರಾಡಿ, ಬೈಲಂಗಡಿ, ಕುಂದಾಪುರ ತಾಲೂಕಿನ ಪೂರ್ವಭಾಗದಲ್ಲಿರುವ ನಮೂನೆಯ ಕಾಡುಗಳೇ ಇರುವುದಿಲ್ಲ. ಯಾವ ವಿಧದಲ್ಲಿಯಾದರೂ ಪ್ರಯೋಜನವು ಇರುವುದಿಲ್ಲ. ಮೂಲಿಕೆ ದಾರಿಯಾಗಿ ಮಲ್ಪೆಗೆ ಕೊಂಡುಹೋದರೆ ಜನಭರಿತವಾಗಿಯೂ ಫಲಭರಿತವಾಗಿಯೂ ಇರುವ ಪಣಂಬೂರು ಸುರತಕಲ್ಲು, ಹಳೆಅಂಗಡಿ, ಮೂಲಿಕೆ, ಹೆಜಮಾಡಿ, ಪಡುಬಿದರೆ, ಎರ್ಮಾಳ, ಕಾಪು, ಕಟ್ಟಪಾಡಿ, ಉದ್ಯಾವರ, ಕಿನ್ನಿಮೂಲಿಕೆ ಊರುಗಳು ಸಿಕ್ಕುತ್ತವೆ. ಆದುದರಿಂದ ಕಾರ್ಕಳ ದಾರಿಯಾಗಿ ಸರ್ವೆ ಮಾಡುವುದನ್ನು ರದ್ದು ಪಡಿಸಿ ಈ ಮೊದಲು ರೈಲುವೇ ಬೋರ್ಡಿನವರು ಸೆಂಕ್ಷನ್ ಮಾಡಿದ್ದಂತೆಯೇ ಮೂಲಿಕೆ ದಾರಿಯಾಗಿಯೇ ಮಲ್ಪೆಗೆ ಕೊಂಡು ಹೋದರೆ ರೈಲು ಕಂಪೆನಿಗೆ ಬೇಕಾದಷ್ಟು ಹಣವು ಸಿಕ್ಕುವುದರಲ್ಲಿ ಏನೂ ಸಂದೇಹವಿರಲಿಕ್ಕಿಲ್ಲ.

ಇಲ್ಲಿ ಒಂದು ಹ್ಯಾಸ್ಕೂಲನ್ನು ಇಡಲು ಜಿಲ್ಲಾ ಬೋರ್ಡಿನಲ್ಲಿ ಹಣವಿಲ್ಲವಂತೆ. ಇಲ್ಲಿಯ ದೇವಸ್ಥಾನದವರಿಗೆ ವ್ಯಾಜ್ಯಕ್ಕಾದರೆ ಬೇಕಾದಷ್ಟು ಹಣವಿದೆ. ವಿದ್ಯೆಗಾಗಿ ಅನ್ಯದೇಶದ ಮಿಶ್ಯನಿನವರ ಮೇಲೆಯೇ ಇನ್ನೂ ಆಧರಿಸಿಕೊಂಡಿರಬೇಕಂತೆ. ಇಷ್ಟು ಐಶ್ವರ್ಯವಂತರಾದ ವರ್ಗದಾರರೂ, ದೇವಸ್ಥಾನಗಳೂ ಇದ್ದು ಮಕ್ಕಳ ವಿದ್ಯೆಗಾಗಿ ಅನ್ಯದೇಶದವರ ಮೇಲೆ ಆಧರಿಸಿರುವುದು ನಾಚಿಕೆಯಲ್ಲವೇ. ಇನ್ನಾದರೂ ನಿದ್ರೆಯಿಂದ ಎಚ್ಚತ್ತು ಊರಿನಲ್ಲಿ ಒಂದು ಹ್ಯಾಸ್ಕೂಲನ್ನು ಸ್ಥಾಪಿಸಬಾರದೇ? ಇಷ್ಟು ಅಸಡ್ಡೆ ಏಕೆ?

ದೇವಕ್ಯಪಡೂರು: — ಇಲ್ಲಿಯ ಗ್ರಾಮಸ್ಥರು ಹೊಸದಾಗಿ ಕಟ್ಟಿಸಿದ ಬೋರ್ಡು ಎಲಿಮೆಂಟರಿ ಶಾಲೆಯ ಕಟ್ಟೋಣದ ಪ್ರವೇಶ ಸಮಾರಂಭವು ಇದೇ ತಿಂಗಳ ತಾರೀಕು ೨೫ನೇ ಸೋಮವಾರ ದಿವ ಬೆಳಗ್ಗೆ ೧೦ ಗಂಟೆಗೆ ಜರಗುವುದು. ಸುತ್ತಮುತ್ತಲಿನ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳಿಗೂ ಆಮಂತ್ರಣಗಳು ಕಳುಹಿಸಲ್ಪಟ್ಟಿವೆ.

ಪಾಣೆಮಂಗಳೂರು: — ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯು ಜೂನ್ ೧ಕ್ಕೆ ತೆರಿಯುವಾಗಲೇ ಒಬ್ಬ ಮಿಸ್ಟ್ರೆಸ್ ಮಾತ್ರವೇ ಇದ್ದರು. ಇಷ್ಟರ ವರೆಗೆ ಶಾಲೆಯಲ್ಲಿ ೪ನೇ ದರ್ಜೆಯ ವರೆಗೆ ಕ್ಲಾಸುಗಳಿದ್ದವು. ಈ ವರುಷ ೫ನೇ ಕ್ಲಾಸು ತೆರೆಯಲ್ಪಟ್ಟಿದೆ. ಒಬ್ಬ ಉಪಾಧ್ಯಾಯಿನಿಯು ೫ ಕ್ಲಾಸುಗಳ ಮಕ್ಕಳನ್ನು ಯಾವ ರೀತಿಯಲ್ಲಿ ಕಲಿಸುವದೆಂಬುದು ವಿಷಾದಕರವಾಗಿದೆ. ಬೋರ್ಡಿನವರು ಈ ರೀತಿಯಲ್ಲಿ ಈ ಶಾಲೆಯನ್ನು ನಡಿಸಿದರೆ ಶಾಲೆಯು ಎಷ್ಟು ಅಭಿವೃದ್ಧಿಯಾದೀತು. ಪಾಣೆಮಂಗಳೂರು ಸುತ್ತಮುತ್ತಲಿನ ಶಾಲೆಗಳನ್ನು ಸಂದರ್ಶಿಸಿದ ರಾಜೇಶಿ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಈ ಶಾಲೆಯನ್ನು ಸಹ ಸಂದರ್ಶಿಸಿದ್ದರೆ ಅವರಿಗೆ ನಿಜಸ್ಥಿತಿಯು ತಿಳಿಯುತ್ತಿತ್ತು. ಆದುಪರಿಂದ ಮಾನ್ಯ ಪ್ರೆಸಿಡೆಂಟರು ಈ ಶಾಲೆಯು ಒಳ್ಳೆ ಸ್ಥಿತಿಯಲ್ಲಿರಬೇಕೆಂಬ ಮನಸ್ಸಿದ್ದರೆ ಈ ಶಾಲೆಗೆ ಇನ್ನು ಇಬ್ಬರು ಮಿಸ್ಟ್ರೆಸುಗಳನ್ನು ಕಳುಹಿಸುವುದು ಅತೀ ಅಗತ್ಯವಾಗಿದೆ. ನೆರೆಯ ಮುಂಚಿ ಶಾಲೆಯಲ್ಲಿ ಮೂವರು ಉಪಾಧ್ಯಾಯಿನಿಯರು ಇದ್ದರು. ಉಪಾಧ್ಯಾಯಿನಿಯರ ಇಸಮನ್ನು ಬೋರ್ಡಿನವರು ಹೊಸತಾಗಿ ಸೆಂಕ್ಷನ ಮಾಡುವ ಅಗತ್ಯ ತೋರುವದಿಲ್ಲ.

ಬರಿಮಾರು: — ಇಲ್ಲಿಯ ಬೋರ್ಡು ಶಾಲೆಯನ್ನು ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಸಂದರ್ಶಿಸಲಿಕ್ಕೆ ಹೋದಾಗ ಇರುವ ಒಬ್ಬ ಉಪಾಧ್ಯಾಯರು ಇಲ್ಲದೆ ಶಾಲೆಯು ಮುಚ್ಚಿತ್ತಂತೆ. ಶಾಲೆಗಳಿಗೆ ಒಬ್ಬ ಉಪಾಧ್ಯಾಯನನ್ನು ಇಟ್ಟುದರ ಫಲಿತಾಂಶ. ಉಪಾಧ್ಯಾಯರಿಗೆ ಫಕ್ಕನೆ ಮನೆಯಲ್ಲಿ ತಾಪತ್ರಯಗಳು ಬಂದರೆ ಶಾಲೆ ಮುಚ್ಚದೆ ಬೇರೆ ದಾರಿಯೇ ಇಲ್ಲ.

ಸಿದ್ಧಕಟ್ಟೆ: — ಈ ಉರು ಮೂಡಬಿದರೆ, ವೇಣೂರು, ಬಂಟವಾಳಕ್ಕೆ ಮಧ್ಯದಲ್ಲಿದೆ. ಇಲ್ಲಿ ಒಂದು ಪ್ರಯಾಣಸ್ಥರ ಬಂಗಲೆ, ಒಂದು ಇಗರ್ಜಿ ಒಂದು ಎಲಿಮೆಂಟರಿ ಶಾಲೆ. ಒಂದು ಟಪ್ಪಾಲು ಕಟ್ಟೆ ಒಂದು ಬಲವಾದ ಸಂತೆ ಕಟ್ಟೆ ಇದೆ. ಸುತ್ತಮುತ್ತಲೂ ಜನಭರಿತವಾದ ಗ್ರಾಮಗಳು ಇವೆ. ಆದುದರಿಂದ ಸರಕಾರದವರು ಇಲ್ಲಿ ಒಂದು ಡಿಸ್‌ಪೆನ್ಸರಿಯನ್ನು ತೆರಿಯುವುದು ಅತೀ ಅಗತ್ಯವಾಗಿದೆ.

ಕುಚ್ಚಿಪಳ್ಳ: — ಇಲ್ಲಿಯ ರೈಲ್ವೆ ಸ್ಟೇಶನಿನ ಹೆಸರು ಕುಚ್ಚಿಪಳ್ಳ ಎಂಬುದರ ಬದಲಿಗೆ ಮಂಗಲಪಾಡಿ ಎಂತ ಬದಲಾಯಿಸಿಯದೆ. ಸ್ಟೇಶನಿಗೆ ಗೂಡ್ಸ್ ಶೆಡ್ ಇಲ್ಲದುದರಿಂದ ವ್ಯಾಪಾರಸ್ಥರು ಹೆಚ್ಚಿನ ಮಾಲು ರೈಲಿನಲ್ಲಿ ತರುವರೆ ಹೆದರುತ್ತಾರೆ. ರೈಲ್ವೆ ಅಧಿಕಾರಿಗಳು ಸದ್ಯದಲ್ಲೇ ಇನ್ನೊಂದು ಲ್ಯಾನ್ ಇಟ್ಟು ಗೂಡ್ಸ್ ಶೆಡ್ ತೆರದರೆ ಕಂಪೆನಿಯವರಿಗೂ ಆದಾಯವಾದೀತಲ್ಲದೆ ವ್ಯಾಪಾರಸ್ಥರಿಗೂ ಸೌಕರ್ಯವಿರುತ್ತದೆಂಬುವದಕ್ಕೆ ಸಂದೇಹವಿಲ್ಲ.

ಸ್ಥಳೀಯ ಪೋಸ್ಟಾಫೀಸಿನ ಹೆಸರನ್ನು ಸ್ವಹಾ ತಿದ್ದಿಲು ಮಾಡಿ ಮಂಗಲಪಾಡಿ ಎಂತ ಇಡುವದು ಲೇಸು. ಟಪ್ಪಾಲ ಅಧಿಕಾರಿಗಳು ಈ ಕಡೆ ನಿಗಾ ಕೊಡಬೇಕಾಗಿದೆ.

ಕುಂಬಳೆ: — ಇಲ್ಲಿಯ ಕೈಪಾಡಿ ಪಂಚಾಯಿತ ಕೋರ್ಟಿಗೆ ಸರಕಾರಿ ರಜೆ ದಿನವಾದರೂ ರಜೆ ಕೊಡುವ ಪದ್ಧತಿ ಇಲ್ಲ. ಈ ಕೋರ್ಟು ನ್ಯಾಯಪರಿಪಾಲನೆಗೆ ಇಟ್ಟಿದ್ದೋ ಯಾ ಕಕ್ಷಿಗಾರರಿಗೆ ಸೂರೆ ಮಾಡಲು ಇಟ್ಟಿದ್ದೋ ಎಂಬ ಪ್ರಶ್ನೆ ಹಲವರ ಬಾಯಿಯಿಂದ ಬರುತ್ತದೆ. ನ್ಯಾಯಕ್ಕೆ ವಿರುದ್ಧವಾಗಿ ಕಕ್ಷಿಗಾರರಿಂದ ಫೀಸು ವಸೂಲು ಮಾಡಲು ಈ ಕೋರ್ಟು ಪ್ರಥಮ ಸ್ಥಾನವನ್ನಲಂಕರಿಸಿಯದೆ. ಇದನ್ನು ಒಮ್ಮೆ ಸರಿಪಡಿಸಲಾರರೇ?

ಬಂಟವಾಳ: — ಈ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಬಂಟವಾಳ ಬೋರ್ಡ ಹುಡುಗರ ಶಾಲೆಯಲ್ಲಿ ಬಿ. ಪಕೀರ ಮಾಸ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ದೇವರ ಪ್ರಾರ್ಥನೆಯಾದೊಡನೆ ಎಲ್ಲಾ ಉಪಾಧ್ಯಾಯರು ಎದ್ದು ನಿಂತು ಮಂಗಳೂರು ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ। ಎಮ್. ಬಾಬು ಬಿ. ಎ. ಎಲ್. ಟಿ. ಇವರ ನಿಧನದ ಕುರಿತು ಒಂದು ದುಃಖಸೂಚಕ ಠರಾವು ಪಾಸು ಮಾಡಲಾಯಿತು. ನಂತರ ಲೋಕಲ್ ಬೋರ್ಡು ಆಕ್ಟಿನಲ್ಲಿ ಉಂಟಾಗುವ ಹೊಸ ಬದಲಾವಣೆಗಳ ವಿಷಯ ಒಂದು ಭಾಷಣವಾಯಿತು. ಸೆಕ್ರಿಟೆರಿಯವರ ಚುನಾವಣೆಯಾಯಿತು. ಮುಂದಿನ ಸಭೆಯನ್ನು ಬಂಟವಾಳ ಬೋರ್ಡು ಹುಡುಗಿಯರ ಶಾಲೆಯಲ್ಲಿ ಜೂನ್ ೧೬ನೇ ತಾರೀಕಿನಲ್ಲಿ ಜರಗಿಸುವದೆಂದು ನಿರ್ಣಯಿಸಲಾಯಿತು. ರಾಜಗೀತ ಹಾಡಿ ಸಭೆಯು ಮುಗಿಯಿತು.

ಕಾಫಿ ಕುಡಿಯಬಾರದು ಏಕೆ?

೧ ನಮ್ಮ ದೇಶದ ವಾಯುಗುಣಕ್ಕೆ ಒಳ್ಳೆಯದಲ್ಲ. ನಮ್ಮ ತಾತ ಮುತ್ತಾತಂದಿರು ಕುಡಿಯಲಿಲ್ಲ;

೨ ಚಳಿದೇಶದಲ್ಲಿ ಜನರು ಮಲಬದ್ಧ ರೋಗದಿಂದ ನರಳುವರು. ಆದುದರಿಂದ ಅಲ್ಲಿ ಕುಡಿಯಬೇಕಾದೀತು.

೩ ಪಾನವು ಭೋಗ್ಯವಸ್ತು ಮಾತ್ರವಲ್ಲ; ಅನಾರೋಗ್ಯವೂ ಆಹುದು. ಅಜೀರ್ಣ ರೋಗಗಳಿಗಿದು ತವರುಮನೆ.

೪ ಚಿಕ್ಕಂದಿನಲ್ಲಿ ಈ ಪಾನದ ಕೆಡುಕು ಕಾಣಬರುವುದಿಲ್ಲ; ಏಕೆಂದರೆ ಆಗ ದೇಹದಾರ್ಢ್ಯವು ಬಲವಾಗಿರುತ್ತದೆ; ವಯಸ್ಸಾಗುತ್ತ ಆಗುತ್ತ ಇದರ ಪ್ರಭಾವವು ಚೆನ್ನಾಗಿ ಕಂಡುಬರುತ್ತದೆ.

೫ ಈ ಪಾನ ಮಾಡುವ ಹೆಂಗಸರಿಗೆ ಎದೆಹಾಲಿರುವುದಿಲ್ಲ. ಅವರ ಮಕ್ಕಳ ಬಾಯಿಗೆ ಮಣ್ಣೇ.

೬ ಬಾಲಕ ಬಾಲಕಿಯರು ಇದನ್ನು ಕುಡಿಯೋಣದರಿಂದ ಸರಿಯಾಗಿ ಅವರು ಊಟ ಮಾಡುವದಿಲ್ಲ. ಆದಕಾರಣ ವಯಸ್ಸಿಗೆ ತಕ್ಕಂತೆ ಬೆಳೆಯುವುದಿಲ್ಲ.

೭ ಕಾಫಿ ಕುಡಿಯೋಣದರಿಂದ ಮನುಷ್ಯನ ಆದಾಯದ ಆರರಲ್ಲಿ ಒಂದು ಭಾಗವು ಇದಕ್ಕೆ ವೆಚ್ಚವಾಗುತ್ತದೆ. ಮದುವೆಗಳ ಊಟಉಪಚಾರ ವೆಚ್ಚದಲ್ಲಿ ಶೇಕಡ ೨೫ ಕಾಫಿಗೇ ಆಗುತ್ತದೆ.

೮ ಈ ಪಾನದಿಂದ ಸುಸೂತ್ರವಾಗಿ ಸಂಸಾರ ಮಾಡುತ್ತಿದ್ದವರೂ ನಿರ್ಗತಿಕರಾಗಿ ವರ್ಷವರ್ಷವೂ ಅವರ ಸಾಲಸೋಲಗಳು ಹೆಚ್ಚುವವು.

೯ ಇದರಿಂದ ಹಾಲು ಮೊಸರು, ತುಪ್ಪಕ್ಕೆ ಗಸಿಬಿತ್ತು.

೧೦ ತುಪ್ಪದಕ್ಷಾಮ. ಧಾರಣೆ ಹೆಚ್ಚು. ಅದರಿಂದ ಜನರ ಮೇಧಾಶಕ್ತಿಯು ಕಡಮೆಯಾಗಿ ಹೋಯಿತು.

೧೧ ಸುರಾಪಾನಕ್ಕೂ ಕಾಫೀ ಪಾನಕ್ಕೂ ಏನೂ ಭೇಧವಿಲ್ಲ. ಹೆಂಡ ಹೆಚ್ಚಾಗಿ ಕುಡಿದರೆ ನ್ಯಾಯಸ್ಥಾನದಲ್ಲಿ ಶಿಕ್ಷೆಯಾಗುತ್ತೆ. ಕಾಫಿ ಹೆಚ್ಚಾಗಿ ಕುಡಿದರೆ ವೈದ್ಯರ ಬಳಿ ಶಿಕ್ಷೆಯಾಗುತ್ತೆ.

೧೨ ಕಾಫಿ ಕುಡಿತ ಹೆಚ್ಚಿದಷ್ಟು, ಹಾಲಿನ ಗಿರಾಕಿ ಹೆಚ್ಚು; ಹಾಲಿನ ಗಿರಾಕಿ ಹೆಚ್ಚಿದಷ್ಟು ಕಸಾಯಿಗರ ಹಣದಾಸೆ ಹೆಚ್ಚು; ಅಂದರೆ ಕರುಗಳ ಬಾಯಿಗೆ ಮಣ್ಣು. ಅಂದರೆ ದನಕರುಗಳ ವಿನಾಶ. ವ್ಯವಸಾಯದ ತವರ್ಮನೆಯಾದ ಭರತಖಂಡಕ್ಕೆ ಇದರಿಂದಾಗಬಹುದಾದ ಅನಾಹುತವನ್ನು ಊಹಿಸಿ ನೋಡಿ.

ವಿ. ಕೆ.

Chikmagalur Public Conveyance Motor Service.
CHIKMAGALUR.

THE CANARA PUBLIC CONVEYANCE CO., LTD., MANGALORE.

Secretary,
The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಪಠೇಶಾತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿ ಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಜಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿ ಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನ ಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮ ಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹತನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನ ...

ಅಂಚೆ ಕೂಲಿ ...

೫೦೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

...

೫೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ನೀಚರಿತ್ರೆ.

...

ವಿಳಾಸ:— ಕೆ. ಎಸ್. ಪ್ರಭು ಅಂಡ್ ಬ್ರದರ್, ಪುಸ್ತಕ ಬುಕ್ ಡಿಪೋ, ...

ವಿವಿಧ ಸಮಾಚಾರಗಳು.

ಒಂದು ಲಕ್ಷ ರೂಪಾಯಿಯ ವಜ್ರ

ಅಫಘಾನಿಸ್ತಾನದ ರಾಜಕುಮಾರನದೆಂದು ಅನ್ನಿಸಿಕೊಳ್ಳುವ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಒಂದು ವಜ್ರವು ದೊರಕಿದುದು, ಲಾಹೋರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಲ್ಲಿ ಒಂದು ಆಶ್ಚರ್ಯಕರವಾದ ವ್ಯಾಜ್ಯಕ್ಕೆ ಎಡೆ ಕೊಟ್ಟಿರುವುದು. ...

ಬರ್ದೋಲಿ ದಿನಾಚರಣೆ

...

'ದೇಶೋಪಕಾರಿ' ಪತ್ರಿಕೆಯ ವ್ಯವಸ್ಥಾಪಕರು.

...

ಬಾರ್ಡೋಲಿಯ ಸಮಾಚಾರ.

ಕಾಂಗ್ರೆಸ್ ಪ್ರೆಸಿಡೆಂಟರಾದ ಡಾ| ಅನ್ಸಾರಿಯವರು ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಗೆ "ಬರ್ದೋಲಿ ದಿನ"ದಲ್ಲಿ ಸಭೆ ಕೂಡಿ ಹಣ ಸಂಗ್ರಹಿಸಬೇಕೆಂದು ತಂತಿಮಾಡಿದ್ದರು. ಅದಲ್ಲದೆ, ಜಾತಿ ಬೇಧ, ಮತ ಬೇಧವನ್ನು ತ್ಯಜಿಸಿ, ಅಂದಿನ ದಿನ ಸರ್ವರೂ ಒಟ್ಟಿಗೆ ಏಕ ಮನಸ್ಸಿನಿಂದ ಬಾರ್ಡೋಲಿಯ ಜನರೊಡನೆ ಸಹಾನುಭೂತಿಯನ್ನು ತೋರಿ, ಅವರಿಗಾಗಿ ಉದಾರಭಾವನೆಯಿಂದ ಕೈಲಾದಷ್ಟು ಸಹಾಯವನ್ನು ಮಾಡ ಬೇಕೆಂದು ಅವರು ಅಂದಿದ್ದರು. ಬಾರ್ಡೋಲಿಯ ಜನರು ನಮಗೆ ಮಾರ್ಗದಾಯಕರು. ನಾವು ಮನಸ್ಸಿನಲ್ಲಿಯೇ ಎಣಿಸುವ ಕೆಲಸವನ್ನು ಅವರು ಕಾರ್ಯತಃ ಮಾಡಿ ಕೀರ್ತಿ ಪಡೆದಿರುವರು.

ಅಂದು ಬಾರ್ಡೋಲಿಯಲ್ಲಿ ಇಬ್ಬರು ಸ್ವಯಂಸೇವಕರೂ, ೧೩ ಜನ ಕೃಷಿಕರೂ ಅನ್ಯಾಯಾಚರಣೆಯನ್ನು ಮಾಡಿದರೆಂದು, ಅವರ ಕುರಿತು ವಿಚಾರಣೆಯಾಗುತ್ತಿದ್ದಿತು. ಅವರಲ್ಲಿ ೧೦ ಜನರನ್ನು ಮೆಜಿಸ್ಟ್ರೇಟರು ೬ ತಿಂಗಳ ಕಠಿಣ ಸಜೆಗೆ ಗುರಿಪಡಿಸಿರುವರು. ... ಸತ್ಯಾಗ್ರಹ ಫಂಡಿನಲ್ಲಿ ಇದು ವರೆಗೆ ೬೦,೦೦೦ ರೂಪಾಯಿ ಜಮೆಯಾಗಿರುವದು.

ಬಾರ್ಡೋಲಿಯನ್ನು ಸಂದರ್ಶಿಸಿದವರೊಬ್ಬರು ತಾನು ಪ್ರತ್ಯಕ್ಷವಾಗಿ ಕಂಡ ಸಮಾಚಾರಗಳನ್ನು ಈ ರೀತಿಯಾಗಿ ಹೇಳುತ್ತಿರುವರು. ...

— ಮೂಡಬಿದರೆ. —

ಮೂಡಬಿದರೆ ಎಂಬ ಹೆಸರು ಪೋರ್ತುಗೀಸರಿಂದ ಬಂತು. 'ಬಿದರೆ' ಅಂದರೆ ಕೋಟೆ. ಮೂಡಬಿದರೆಯಲ್ಲಿ ಪೋರ್ತುಗೀಸರು ಕೋಟೆಕಟ್ಟಿದ್ದಾರೆ. ಮೂಡಬಿದರೆಯ ಪಶ್ಚಿಮಕ್ಕಿರುವ ಪಡುಬಿದರೆಗೆ ಅದೇ ರೀತಿಯಲ್ಲಿ ಹೆಸರು ಬಂದದೆ ಎಂದು ... ಕನ್ನಡ ಜಿಲ್ಲೆಯ ಭೂಗೋಳ ಶಾಸ್ತ್ರದ ಎರಡನೆ ಭಾಗದಲ್ಲಿ ಬರೆದಿದೆ. ಇದು ಸರಿಯಲ್ಲ. ಮೂಡಬಿದರೆ ಮತ್ತು ಪಡುಬಿದರೆ ಎಂಬ ಊರುಗಳು ಅದೇ ಹೆಸರಿನಿಂದ ಪೋರ್ತುಗೀಸರು ಬರುವದಕ್ಕಿಂತ ಮೊದಲಿನಿಂದಲೂ ಇದ್ದವು. ...

ಅಮುದರಿಂದ ಪೋರ್ತುಗೀಸರಿಂದ ಮೂಡಬಿದರೆ ಎಂಬ ಹೆಸರು ಬಂತೆಂದೂ ಪಡು ಬಿದರೆಗೆ ಪಡುಬಿದರೆ ಎಂಬ ಹೆಸರು ಬಂತೆಂದೂ ಹೇಳುವುದು ಸರಿಯಲ್ಲ.

NoTICE.

IN THE COURT OF THE DISTRICT MUNSIFF OF MANGALORE.

S. C. No. 885/1927.

Between:—

Motisham Mahamad Meera Saheb, Plaintiff.

and

P. Yusuf Kuthi & Brother Near Ottopalam, Court House, Ottopalam, South Malabar } Defendants

The above named plaintiff has filed the said suit against the defendants— aforesaid, and that the same will come on for hearing at 11 A. M. on 28—6—1928 before the abovementioned Court. The— defendants may appear either in person or by pleader and Contest the suit, failing which the same will be heard and decided in their absence.

Mangalore 14—6—1928.

B. Vaikunta Baliga,
Vakil for Plaintiff

[illegible]

ಶ್ರೀಮನ್ ಮಧ್ವಾಚಾರ್ಯರು ರಜತಪೀಠದಲ್ಲಿ ಮಠಗಳನ್ನು ಸ್ಥಾಪಿಸಿರುವರು. ಈ ಮಹಾಕಾಯರು ತುಳುವದೇಶೀಯರೇ ಆಗಿರುತ್ತಾರೆ.

ವಿಜಯ ನಗರ ಅರಸರ ಕಾಲದಲ್ಲಿಯೂ ತೌಳವ ಅರಸರು ಕಪ್ಪ ಕೊಟ್ಟು ಆಳುತ್ತಿದ್ದರು. ಸಾವಿರಕಂಬದ ಬಸದಿಯ ಪ್ರತಿಷ್ಠೆಗೂ, ಕಾರ್ಕಳ ಗೋಮಟೇಶ್ವರ ಸ್ವಾಮಿಯ ಪ್ರತಿಷ್ಠೆಗೂ ವಿಜಯನಗರದ ದೇವರಾಯ ಮಹಾರಾಯನು ಬಂದಿರುವನು. ತುಳುದೇಶದ ದೇವಸ್ಥಾನಗಳಿಗೆ ಈ ವಿಜಯ ನಗರದ ಅರಸರು ವಿಶೇಷ ತರದಲ್ಲಿ ಉಂಬಳಿ ಬಿಟ್ಟ ಶಾಸನಗಳು ಸಾವಿರಾರು ಇವೆ. ಆ ಸಮಯದಲ್ಲಿ ತುಳುರಾಜರ ಮೇಲುವಿಚಾರಕ್ಕಾಗಿ ಒಬ್ಬ ದಂಡನಾಯಕ (ಧಣಾಯಕ)ನೂ ಬಾರಕೂರಿನಲ್ಲಿ ಒಬ್ಬ ಒಡೆಯರೂ, ಮಂಗಳೂರಿನಲ್ಲಿ ಒಬ್ಬ ಒಡೆಯರೂ ಇದ್ದರು. ಅಲ್ಲಲ್ಲಿರುವ ಶಾಸನಗಳೇ ಇದಕ್ಕೆ ಆಧಾರ. ವಿಜಯನಗರ ಅರಸನಾದ ಸಳುವ ನರಸಿಂಹನ ತುಳುರಾಜ್ಯದ ಸೇನಾಧಿಪತಿಗಳಾಗಿ ತುಳು ತಿಮ್ಮನಾಯಕನೂ ಅವನ ಮಗ ಈಶ್ವರ ನಾಯಕ ಮತ್ತು ನರಸಿಂಹ ಇವರಿಬ್ಬರಿದ್ದರು.

ಕೃಷ್ಣದೇವರಾಯನ ಕಾಲದಲ್ಲಿ ಇಕ್ಕೇರಿ ಸದಾಶಿವರಾಯ ನಾಯಕನು ದಂಗೆ ಎಬ್ಬಿಸಿದ ತುಳು ರಾಜ್ಯರನ್ನು ತಲೆಯೆತ್ತದಂತೆ ಮಾಡಿ ಕಾಸರಗೋಡಿನಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು. ನಂತರ ಬಂದ ವೆಂಕಟಪ್ಪ ನಾಯಕನು ತುಳು ಅರಸರನ್ನು ತಲೆ ಎತ್ತದಂತೆ ಮಾಡಿದನು. ನಂತರದ ಅರಸರು ತುಳುರಾಜರ ರಾಜ್ಯಗಳನ್ನೇ ಸ್ವಾಧೀನಪಡಿಸಿಕೊಂಡರು.

ತುಳು ರಾಜ್ಯವನ್ನಾಳಿದ ಜೈನ ರಾಜಕುಟುಂಬಗಳು ಈಗಲೂ ಇವೆ.

ಮೇಲಿನ ಎಲ್ಲಾ ಸಂಗತಿಗಳಿಂದ ತುಳುದೇಶವೆಂಬುದು ಇತ್ತು. ಇದನ್ನು ತುಳುರಾಜರು ಆಳುತ್ತಿದ್ದರೆಂದೂ ಕರ್ನಾಟಕ ರಾಜರು ಇವರನ್ನು ಆಗಾಗ್ಗೆ ತಮಗೆ ಕಪ್ಪಕೊಡುವಂತೆ ಮಾಡುತ್ತಿದ್ದರೆಂದೂ ಕಾಣುತ್ತದೆ. ಇನ್ನು ಮುಂದೆಯೂ ಕರ್ನಾಟಕ ಸಂಸ್ಥಾನವು ಪ್ರತ್ಯೇಕವಾಗುವ ಕಾಲವು ಬಂದರೆ ತೌಳವವೂ ಅದರ ಒಂದಂಶವಾಗಿರಲಿ.

"ಉಪಾಧ್ಯಾಯ"

ಕಾಸರಗೋಡ ತಾಲೂಕಿನ ಕ್ಯೊಪಾಡಿ ಪಂಚಾಯತ ಕೋರ್ಟಿನಲ್ಲಿ ಇತ್ತೀಚೆಗೆ ಹಲವು ವಿಧದಲ್ಲಿ ಕಕ್ಷಿಗಾರರಿಂದ ಫೀಸು ವಸೂಲು ಮಾಡುತ್ತಾರೆ. ಕೈಪೇಟಿನಲ್ಲಿ ಒಬ್ಬನೇ ಪ್ರತಿವಾದಿ ಇದ್ದರೆ ೪ ಆಣೆ, ಇಬ್ಬರಿದ್ದರೆ ೧೨ ಆಣೆ. ಡಿಕ್ರಿಯ ನಕಲಿಗೆ ೬ ಆಣೆ, ರಿವಿಜನ ಅರ್ಜಿಗೆ ೪ ಆಣೆ ಯಾವ ಆಕ್ಟಿನಲ್ಲೂ ಕಾಣದ ಈ ಫೀಸು ಈ ಕೋರ್ಟಿಗೆ ಮಾತ್ರ ಯಾರ ಹುಕುಂಪ್ರಕಾರ ಜಾರಿಗೆ ಬಂದದೆಂತ ತಿಳಿಯುವುದಿಲ್ಲ. ಹಣ ವಸೂಲು ಮಾಡುವ ಅಧಿಕಾರವು ಗ್ರಾಮ ಮುಖ್ಯಸ್ಥರಿಗೆ ಕೊಡಲ್ಪಟ್ಟಿದೆ. ಹಣ ವಸೂಲಾತಿ ಕುರಿತು ರಶೀದಿ ಕೊಡಬೇಕಾಗಿ ಮನಸ್ಸಿಲಿನಿಂದ ಕಂಡುಬರುತ್ತದೆ. ರಶೀದಿ ಕೊಡುವ ಪದ್ಧತಿಯು ಇನ್ನೂ ಜಾರಿಗೆ ಬಂದಿಲ್ಲ. ಪ್ರೆಸಿಡೆಂಟರಾದರೋ ಮಾಜಿ ಪಟೇಲರು. ಸರಕಾರಿ ಕಾನೂನುಗಳನು ಕಲಿತು ಅಕ್ಷ್ಯ ಪಾಸಾಗಿರುವ ಈ ಮುಖ್ಯಸ್ಥರೇ ಈ ರೀತಿ ಸೂರೆಮಾಡಿದರೆ ಬೇಲಿಯೇ ಹೊಲಮೇದಂತೆ ಆಗುವುದು. ತನ್ಮಧ್ಯೆ ಬರಹಾನ್ನೆ ಕಸಬಿನವರೊಬ್ಬರು ವಕೀಲರಾಗಿ ಬರುವರು. ೩ ೪ ಜನ ಜನ ಪಟೇಲರಿರುವ ಈ ಕೋರ್ಟಿನಲ್ಲಿ ಈ ರೀತಿ ವಸೂಲು ಮಾಡುವದು ತುಂಬಾ ವ್ಯಸನಕರವಾಗಿದೆ. ಮಾನ್ಯ ಕಲೆಕ್ಟರ್ ಧೊರೆಗಳವರು ಈ ಕಡೆ ಹಿನಾಕೊಟ್ಟು ಇದನ್ನು ನಿವೃತ್ತಿಪಡಿಸಿ ಯಾವ್ಯಾವ ದರದಲ್ಲಿ ಫೀಸು ವಸೂಲು ಮಾಡಬೇಕೆಂಬುದರ ಕುರಿತು ಒಂದು ಪಟ್ಟಿಯನ್ನು ಬಹಿರಂಗವಾಗಿ ತೂಗಾಡಿಸುವಂತೆ ಈ ಕೋರ್ಟಿಗೆ ಕೂಡಲೇ ಹುಕುಂ ಕೊಡುವದಲ್ಲದೆ ವಸೂಲಾದ ಫೀಸಿನ ಕುರಿತು ಕಾನೂನಿಗೆ ತಕ್ಕಂತೆ ಕಕ್ಷಿಗಾರರಿಗೊಂದು ರಶೀದಿಯನ್ನು ಕೋರ್ಟಿನವರು ಅತೀ ಅಗತ್ಯವಾಗಿ ಕೊಡಬೇಕೆಂದು ವಿಧಿಸದಿರಲಾರರೆಂದು ಕೋರುವ,

ಕುಂಬಳೆ, ತಾ. ೧೨-೬-'೨೮. "ಕಕ್ಷಿಗಾರರ ಹಿತೈಷಿ"

ದಕ್ಷಿಣ ಕನ್ನಡ ಕ್ಷತ್ರಿಯ ಗಾಣಿಗ ಸೆಟ್ಟಿಗಳ ಶ್ರೀ ಗೋಪಾಲಕೃಷ್ಣ ಯುವಕ ಸಂಘ.

ಈ ಸಂಘವು ತಾ. ೧೬ - ೪ - '೨೮ರಲ್ಲು ಮಂಗಳೂರಲ್ಲಿ ಜಿಲ್ಲಾ ರಿಜಿಸ್ಟ್ರಾರರ ಸಮಕ್ಷಮ ರಿಜಿಸ್ಟ್ರಿ ಮಾಡಿಸಲ್ಪಟ್ಟಿತು. ಪ್ರಾತಃಕಾಲದ ಬಾಲಸೂರ್ಯನು ಪೂರ್ವಾದ್ರಿಯನ್ನೇರುತ್ತಲೇ ಕಾರ್ಮುಗಿಲು ಆವರಿಸಿದಂತಾಗಿದೆ. ಸಂಸ್ಥೆಯ ಸಮುದ್ದೇಶಗಳನ್ನರಿಯದಿರುವ ಸ್ವಜಾತಿ ಸದ್ಗೃಹಸ್ಥರು ಊರಿದ ಕಾಲನ್ನು ಹಿಂದೆಗೆದಿರುವರು. ಅಷ್ಟರಿಂದಲೇ ತೃಪ್ತಿಯಾಗದೆ ಸಂಘದ ಅವನತಿಯನ್ನು ಸದಾ ಬಯಸುತ್ತಲೂ ಇರುವರು. 'ಇಲ್ಲದ ಊರಿಗೆ ಉಳಿದವನೇ ಗೌಡ' ಆದರೆ ನಮ್ಮ ಊರಿಗೆ (ಜಾತಿಗೆ) ಎಲ್ಲರೂ ಗೌಡರಿರುವರು. ಅವರು ಸ್ವಜಾತಿಯಿಂದ ಪೂಜ್ಯರಾದರೂ ವಿಚಾರದಲ್ಲಿ ಪೂಜ್ಯ (ಸೊನ್ನೆ)ವಾಗಿರುವರು. ಉಳಿದ ಮಹನೀಯರ ವಿಚಾರವಾದರೋ 'ಶ್ವಾನನ ಗಾನಕ್ಕೆ ಗಾರ್ದಭನ ನರ್ತನದಂತೆಯೇ' ಆಗಿರುವುದು. ಆದರೆ ಸಂಘೋನ್ನತಿಯನ್ನು ಬಯಸಲು ಮನಸ್ಸಿರುವ ಮಹಾಪುರುಷರ ಸ್ಥಿತಿಯು 'ಹಂದಿ ಬೆದರಿಸಿದಾತನು ಹರಿಗೆ ಬೆಚ್ಚಿಬಿದ್ದ' ಹಾಗಾಗಿದೆ. ಅಂಥವರು ಗೌಡರಿಂದ ಹಿಂದೆ ಹೊಂದಿದ ಭಂಗವನ್ನು ನೆನಪಿಗೆ ತಂದುಕೊಂಡು ಸಂಘವನ್ನು ತಾತ್ಸಾರ ದೃಷ್ಟಿಯಿಂದ ಕಾಣುತ್ತಿರುವರು. ಇರಲಿ, ಆ ಗೌಡರು ರಾವಣ ಸನ್ಯಾಸಿಗಳನ್ನು ಪ್ರಕೃತ ವಿಚಾರದ ಪ್ರಥಮ ಸೋಪಾನದಲ್ಲಿ ಇರಿಸೋಣ. ಉಳಿದ ಮಹನೀಯರಾದರೂ ಸಂಘದ ಸದಸ್ಯರಾಗಿ ಸ್ವಜಾತಿಯಲ್ಲಿ ಸಹಾನುಭೂತಿಯನ್ನು ತೋರಿಸದೆ ಹೋದರೆ ಅಂಥವರು ಮುಂದೆ ದೇಶೋನ್ನತಿಯನ್ನು ಬಯಸುವರೆಂಬ ಭರವಸೆಯು 'ಬೆಕ್ಕಿನ ಕೈಯಲ್ಲಿ ಕೊಟ್ಟ ಬೆಣ್ಣೆ'ಯಂತೆಯೇ ಸರಿ. ಆದುದರಿಂದ ಸ್ವಜಾತಿಯ ಪ್ರತಿಯೊಬ್ಬ ಮಹನೀಯರೂ ವ್ಯಕ್ತಿದ್ವೇಷಕ್ಕೆ ಬಹಿಷ್ಕಾರವನ್ನಿತ್ತು, ಉದಾರ ಬುದ್ಧಿಯಿಂದ ಕೈಲಾದ ಧನಸಹಾಯವನ್ನು ಮಾಡಿ, ಸಂಘವನ್ನು ಉದ್ಧರಿಸಲು ಯತ್ನಿಸುವಂತೆ ಅನುಗ್ರಹಿಸಲೆಂದು, ಶ್ರೀ ಗೋಪಾಲಕೃಷ್ಣನನ್ನು ಪ್ರಾರ್ಥಿಸುವ,

'ಸಮಾಜದವ'

The Kanara Watch House Udipi, S. K.



ಗ್ಯಾರಂಟಿಯುಳ್ಳ ವ್ಯಾಚು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವೋಚುಗಳೂ; ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ.—ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ತ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕುಂದಿರುವವರಿಗಾದರೂ ತ್ವರ್ಯದಲ್ಲೇ

— ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7-8-0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.



ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸ್ಸರ್ಸ

ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್; ಮುಂಬಾಯಿ.

ಇವರ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ

ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. - ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಪಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಬೃಹತ್ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಳ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲ್ಲಕ್ಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಶಿಗರೇಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars pply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೇಜಂಟ್ಯಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-28. ಮಂಗಳೂರು

ಚತುರ್ಥ ಕರ್ನಾಟಕ ಆಯುರ್ವೇದೀಯ ಪ್ರಾಂತಿಕ ಸಮ್ಮೇಲನ, ಮಂಗಳೂರು.

ಅಧ್ಯಕ್ಷರ ಭಾಷಣ

(ಕಳೆದ ಸಂಚಿಕೆಯಿಂದ ಮುಂದುವರಿದುದು)

[illegible]

ವೃದಾದಕಾರಣ, ಇವೆರಡೂ ದೋಷಮಯವಾಗುವುವು. 'ಕಾಲಾರ್ಥಕರ್ಮಣಾಂಯೋಗಿ ಹೀನಮಿಥ್ಯಾತಿಮಾತ್ರಕಾಃ । ಸಮ್ಯಗೋಗಶ್ಚ ವಿಜ್ಞೇಯೋ ರೋಗಾರೋಗ್ಯೈಕ ಕಾರಣಂ' ॥ (ಅ. ಹೃ. ಸೂ.) ಇದರಲ್ಲಿ ಹಿಂದೆ ಹೇಳಿದ ಎಲ್ಲ ವಿವೇಚನೆಗಳ ಸಾರವುಂಟು.

ರೋಗಗಳು ಹುಟ್ಟಲು ಅವಶ್ಯ ಕಾರಣಗಳಾದ ದೋಷ ದೂಷಣವನ್ನುಂಟುಮಾಡುವ ನಿಮಿತ್ತ ಕಾರಣಗಳೇ ಇವು ಮೂರು. ದೋಷಗಳ ದುಷ್ಟಭಾವವು ಸಮವಾಯಿ ಕಾರಣ ಅಥವಾ ನಿಶ್ಚಿತಕಾರಣವೆನಿಸುವುದು. ಇದಲ್ಲದೆ,—ವಿಷಗಳು ಕೃತ್ರಿಮ ವಿಷಗಳು, ಕ್ರಿಮಿಗಳು ಮೊದಲಾದ ಬಾಹ್ಯ ಕಾರಣ

[illegible]

ದಾಗಿದೆ.

ಜಂತುವಿಗೂ ಒಂದು ಶರೀರವಿದೆಯಷ್ಟೆ. ಅದಷ್ಟೇ ಸೂಕ್ಷ್ಮಶರೀರವಾದರೂ ತ್ರಿಧಾತುಮಯವಾದ ಸಜೀವ ಸೇಂದ್ರಿಯ ದ್ರವ್ಯಗಳೂ ಅದರಲ್ಲಿವೆಯಷ್ಟೆ. ಇವುಗಳಿಗೂ ಘಟನಾಗುಣವಿಶೇಷಗಳೂ ಸ್ವಭಾವವಿಶೇಷಗಳೂ ಇದ್ದೇ ಇವೆ. ಜಂತುಗಳು ಯಾವ್ಯಾವ ಗುಣಸ್ವಭಾವ ವಿಶೇಷಗಳನ್ನುಳ್ಳವಾಗಿಬೆಯೋ ಅವನ್ನೇ ಉಳ್ಳಶರೀರಾವಯವಗಳೊಳಗೆ ಮಾತ್ರ ಇವು ಬೆಳೆಯುತ್ತವೆ. ಜಂತುಗಳಿಗೆ ಬೇಕಾಗಿರುವ ಖಾದ್ಯಾದಿಗಳು ಶರೀರದೊಳಗೆ ಎಲ್ಲಿ ದೊರೆಯಬಹುದೋ ಅಲ್ಲಿಗೆ ಮಾತ್ರ ಈ ಜಂತುಗಳು ನುಗ್ಗುತ್ತವೆ; ಅಲ್ಲೇ, ಇವು ಬೆಳೆಯುವುವು; ಅಲ್ಲಿಯೆ ತಮ್ಮ ಸರ್ವ ವ್ಯವಹಾರಗಳನ್ನು ನಡೆಸುವವು; ಎಂದರೆ ರೋಗವನ್ನುಂಟುಮಾಡುವವು. ಮಲೇರಿಯದ ಜಂತುವು ರಕ್ತದಲ್ಲಿ ಬೆಳೆಯುತ್ತದೆ; ಕ್ಷಯದ ಅಥವಾ ಫುಪ್ಫುಸ ಸನ್ನಿಪಾತದ ಜಂತುವು ಕಫಸ್ಥಾನದಲ್ಲಿ ಬೆಳೆಯುತ್ತದೆ. ಆಂತ್ರಿಕಸನ್ನಿಪಾತದಲ್ಲಿ ಕಾಣಸಿಗುವ ಜಂತುವು ಅಂತ್ರಗಳಲ್ಲೇ ಬೆಳೆಯುತ್ತದೆ. ಹೀಗೆ,—ಬೇರೆ ಬೇರೆ ಸ್ವಭಾವಗುಣಗಳುಳ್ಳ ಈ ಸೂಕ್ಷ್ಮ ಜಂತುಗಳು ತಂತಮ್ಮ ಗುಣಸ್ವಭಾವಗಳಿಗೆ ಅನುಕೂಲವಾದ ಸ್ಥಾನವನ್ನು ಹುಡುಕಿಕೊಂಡು, ಅವನ್ನೇ ಸೇರಿ, ಅಲ್ಲೇ ಬೆಳೆಯುತ್ತವೆ. (They select a suitable medium of growth).

(೪) ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ, ಶುಕ್ರ, ಇವು ಏಳು ಸ್ಥೂಲ ಧಾತುಗಳು ದೂಷ್ಯಗಳೆನಿಸಿಕೊಳ್ಳುತ್ತವೆ. ತ್ರಿಧಾತುಗಳ ವಿದ್ಯಮಾನದಿಂದ ಇವು ಹುಟ್ಟುತ್ತವೆ, ವ್ಯವಸ್ಥೆಗೊಳ್ಳುತ್ತವೆ; ದೋಷಸ್ಪರ್ಶವುಂಟಾದ ಬಳಿಕ ಇವುಗಳಿಂದಲೆ ದುಷ್ಟಿಯುಂಟಾಗುತ್ತದೆ ಎಂಬೀ ಕಾರಣದಿಂದ ಇವುಗಳಿಗೆ 'ದೂಷ್ಯ' ಎಂಬೀ ಸಂಜ್ಞೆಯು ಬರುವುದು. ಜಂತುಗಳ ಬೆಳವಣಿಗೆಯೂ ಇವುಗಳಲ್ಲಾಗುತ್ತದೆ. ದೋಷದುಷ್ಟವಾದ ದೂಷ್ಯಗಳಲ್ಲಿ ಜಂತುಗಳು ಸುಲಭವಾಗಿ ಬೆಳೆಯಲು ಶಕ್ತವಾಗುತ್ತವೆ, ಸ್ವೇಚ್ಛೆಯಾಗಿ ಚಳವಳಿಸಿ ಬೇಕಾದಂತೆ ವರ್ತಿಸುತ್ತವೆ. ಇದಕ್ಕೆ ರೋಗವೆಂದು ಹೆಸರು. ಆಯುರ್ವೇದದಲ್ಲಿ ರೋಗದ ಉಪಪತ್ತಿ ಎಂಬುದು ಇಷ್ಟು ವ್ಯಾಪಕವಾಗಿದೆಯಾದುದರಿಂದಲೇ ಹೊಸ ಹೊಸ ಉಪಪತ್ತಿಗಳನ್ನು ತೋರಿಸಿಕೊಡುವುದೂ ಯುಕ್ತವಲ್ಲದಿದ್ದಲ್ಲಿ ಅವನ್ನು ತ್ಯಜಿಸುವುದೂ ಆಯುರ್ವೇದಕ್ಕೆ ಅಗತ್ಯವಿರುವುದಿಲ್ಲ. ಧಾತುವೈಷಮ್ಯ ಎಂಬೀ ಒಂದೇ ಉಪಪತ್ತಿಯ ನಿಶ್ಚಲವಾದ ಧ್ರುವದ ಮೇಲೆ ಲಕ್ಷ್ಯವಿಟ್ಟು, ಈ ವಿಷಯ ವಿಚಾರಗಳನ್ನು ಮಾಡಿದರೆ, ಆಯುರ್ವೇದೀಯರ ಬುದ್ಧಿವಂತಿಕೆಯ ಪ್ರತಿಭೆಯ ಹಾಗೂ ಸೂಕ್ಷ್ಮದರ್ಶಿತೆಯ ಕೌತುಕವುಂಟಾಗುವುದು. ಮಹಾಶಯರೆ! ಈ ವಿಚಾರವನ್ನು ಮಾಡುತ್ತಲಿರುವಂತೆ ಮನಸ್ಸಿನಲ್ಲಿ ಆನಂದವು ಉಕ್ಕೇರಿಬರುತ್ತ ತಲ್ಲೀನಗೊಳಬೇಕಾಗುತ್ತದೆ; ಈ ವಿಷಯವಾಗಿಯೇ ಭಾಷಣ ಮಾಡುತ್ತಿರಬೇಕೆನಿಸುತ್ತದೆ. ಪರಂತು, ಇನ್ನೂ ಕೆಲ ಬೇರೆ ವಿಷಯಗಳಲ್ಲಿ ಉಲ್ಲೇಖಿಸಬೇಕಾಗಿರುವುದರಿಂದ ಈ ರೂಪರೇಷೆಯನ್ನು, ಈ ದಿಗ್ದರ್ಶನವನ್ನು ಇನ್ನೊಂದೇ ವಿಷಯ ವಿಚಾರದಲ್ಲಿ ಮುಗಿಸುವೆನು.

ಅಂತಃಸ್ರಾವಕಪಿಂಡಗಳಲ್ಲಿ ಉಂಟಾಗುವ ಸ್ರಾವಗಳ ವೈಗುಣ್ಯ ವ ಆ ದೆಸೆಯಿಂದಾಗಿ ಉಂಟಾಗುವ ರೋಗೋತ್ಪತ್ತಿ, ಇದೊಂದು ವಿಷಯವು ಆಧುನಿಕ ಶಾಸ್ತ್ರಜ್ಞರ ಇದಿರಲ್ಲಿ ಪ್ರಾಮುಖ್ಯತೆಯನ್ನು ತಳೆದಿದ್ದು ಶಾಸ್ತ್ರಜ್ಞರೂ ಈ ಭಾಗದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿಕೊಂಡಿರುವರು; ಈ ವಿಷಯವನ್ನೇ ಆಯುರ್ವೇದವು ತ್ರಿಧಾತುಮೀಮಾಂಸೆಯ ದೀಪತೇಜೋವಲಯದಲ್ಲಿ ಸಮಾವಿಷ್ಟವನ್ನಾಗಿ ಎಂದೋ ಮಾಡಿಟ್ಟುಕೊಂಡಿದೆ! ತ್ರಿಧಾತುಗಳ ಕ್ಷಯವೃದ್ಧಿಗಳಿಂದಲೇ ಧಾತು ವೈಷಮ್ಯವುಂಟಾಗುವುದು. ಕ್ಷಯಜನ್ಯಧಾತುವೈಷಮ್ಯಗಳಲ್ಲಿ ಸ್ರಾವವೈಗುಣ್ಯ ಜನ್ಯವಿಕಾರ (Deficiency deseases) ಗಳು ಸಮಾವಿಷ್ಟವಾಗುವುವು; ಕೆಲವು ವೃದ್ಧಿಜನ್ಯವಿಕಾರಗಳಲ್ಲಿ ನಿಕಂಠಮಣಿವೈಗುಣ್ಯಜ (Thyroid deficiency) ವಿಕಾರಗಳೂ ಸೇರಿವೆ. ಇವುಗಳ ವಿಷಯವಾಗಿ ಆಯುರ್ವೇದವು ಸ್ಥಾಪಿಸಿರುವ ತ್ರಿಧಾತುಮೀಮಾಂಸೆಯನ್ನು ಕಂಡೊಡನೆ ಮನಸ್ಸು ಆಶ್ಚರ್ಯದಿಂದ ತಟಸ್ಥವಾಗುತ್ತದೆ. ಇದೇ ಸ್ಥಿತಿಯು ಇತರ ವಿಕಾರಗಳ ವಿಷಯವಾಗಿಯೂ ಉಂಟಾಗುವುದು.

ರೋಗ ಕಾರಣಗಳ ಭಿನ್ನಪ್ರಕಾರಗಳನ್ನೂ ಆಯುರ್ವೇದದಲ್ಲಿ ಬಣ್ಣಿಸಲಾಗಿದೆ. ವಿಸ್ತಾರಭಯದಿಂದ ಅವನ್ನಿಲ್ಲಿ ವಿವರಿಸುವುದಿಲ್ಲ. ದೇಹದೇಶ ಮನೋದೇಶಗಳೊಳಗೆ ಸಮತೆಯನ್ನು ಕಾಪಾಡುವ ಉಪಪತ್ತಿಯನ್ನು ಆಯುರ್ವೇದವು ಶೋಧಿಸಿ, ಅದನ್ನೆ ಸರ್ವಶಃ ವ್ಯವಹಾರಕ್ಕೆ ತಂದುಕೊಂಡಿದೆ. ರೋಗಬೀಜಗಳು ಎಲ್ಲಿ ಬೆಳೆವುವೊ ಆ ಕ್ಷೇತ್ರವು ರೋಗಬೀಜಗಳಿಗೆ ನಿರುಪಯೋಗಿಯಾಗುವಂತೆ ಮಾಡುವ ವಿಚಾರವನ್ನೆ ಆಯುರ್ವೇದವು ಗಣನೆಗೆ ತಂದುಕೊಂಡದ್ದು. ರೋಗಬೀಜಗಳನ್ನು ಬೆನ್ನಟ್ಟದೆ, ಶರೀರವನ್ನು ಸ್ವಸ್ಥವಾಗಿಯೂ ಸಮಧಾತುಮಯವಾಗಿಯೂ ಇರಗೊಳಿಸಲು ಅಗತ್ಯವಾದ ಸಾಧನೆಮಾಡುವುದರಲ್ಲೇ ಆಯುರ್ವೇದವು ವ್ಯಸ್ತವಾಗಿದೆ. ಹೀಗೆ ಮಾಡಿದಲ್ಲಿ ರೋಗಬೀಜಗಳಿಗೆ ಆಸ್ಪದವೇ ಸಿಗಲಾರದಷ್ಟೆ; ಅವುಗಳು ಅಲ್ಲಿಗೆ ನುಗ್ಗಿದರೂ ಪರಿಣಾಮವೇನೂ ಉಂಟಾಗಲಾರದು. ಸಾತ್ಮ್ಯೇಂದ್ರಿಯಾರ್ಥ ಸಂಯೋಗದಿಂದ ಮೇಲೆ ಹೇಳಿರುವ ರೋಗಕಾರಣಗಳ ಪರಿಣಾಮಗಳು ಶರೀರದ ಮೇಲೆ ಉಂಟಾಗುತ್ತಿವೆ, ಮನಸ್ಸು, ಇಂದ್ರಿಯಗಳು, ತತ್ಸನ್ನಿಧವಾಗಿರುವ ತ್ರಿಧಾತುಗಳು ಇವುಗಳ ಮೇಲೆ ಪ್ರಥಮತಃ ಪರಿಣಾಮವುಂಟಾಗುವುದು. ಆದರಿಂದ ಇವುಗಳಲ್ಲಿ ವೈಷಮ್ಯವು ಪ್ರಾರಂಭಿಸುತ್ತಿದೆ. ವೈಷಮ್ಯವು ಉಂಟಾದ ಕೂಡಲೆ ವೈಷಮ್ಯ ಉತ್ಪತ್ತಿಯು ಬೆಳೆಯದಂತೆ ಸಾಧಿಸುವ ಹೋರಾಟವೂ ಶರೀರದಲ್ಲಿ ಒಡನೆಯೆ ಪ್ರಾರಂಭಗೊಳ್ಳುತ್ತಿದೆ. (ಸಶೇಷ)

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಹಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಯುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹರಾವು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮ ಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ— ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು.

ಆತಂಕನಿಗ್ರಹ ಅವುಷಧಾಲಯ,
ನಂ. 28, ದ್ವಾಕ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ್ವರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ್ಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟಿವಟಗೆ ಮಾತ್ರ.

ERATION!

...ತ್ತಿರುವಳು.

...ಕ್ಷೆ ಮತ್ತು ಚಿಕಿತ್ಸೆಯಿಂದಲೂ ಗುಣವಾಗದ ಶರೀರ ...ಂದ ಹೇಳುವೆವು.

...ನೆಯಿಂದ ಕಲ್ಮಶವನ್ನು ನಿವಾರಿಸುವ, ಗುಣಕೇಶರಕ,

...ನ್ನುಂಟುಮಾಡುತ್ತಿವೆ.

...ಆರೋಗ್ಯವತಿಗಳೂ ಸುಖಿಗಳೂ ಆದ ಸ್ತ್ರೀ ವೃಂದವನ್ನು ...ತನದಲ್ಲಿ ಒಂದು ನವೀನಾನುಭವವನ್ನು ಮಾಡಿಕೊಳ್ಳು ...ತನವನ್ನು ಅನುಭವಿಸುವರು. ಮನೆಗೆಲಸವು ಮತ್ತೆ ...ತ್ತು ಮನಶ್ಶಾಂತಿ ಕಳೆದ ಸ್ತ್ರೀಯು ಕಾರ್ಯಾಸಕ್ತಳಾಗಿ ... ಆರೋಗ್ಯವು ಅವಳ ಸುಧಾರಿತ ದೈಹಿಕ ಸ್ಥಿತಿಯಿಂದ ...ರುವ ಸಮುತ್ಸಾಹದಿಂದಲೂ ಪ್ರತಿಬಿಂಬಿಸಲ್ಪಡುವುದು. ...ಯು ಸುಖಕರವಾಗಲಾರದು. ಫೆಲೂನಾ ಮಾತ್ರೆಗಳ್ ...ಲದಲ್ಲಿ ರೋಗಗಳ ವೇದನೆಯಿಂದ ಬಳಲುತ್ತಿದ್ದ ಹೆಂಡ ...ನು, ಗೃಹಸ್ಥಿತಿಯನ್ನು ನವೀನಾನಂದಕ್ಕೆ ಪರಿವರ್ತಿಸಿ, ...ಂದು ದೈವೀಕವರವಾಗಿಯೂ ಪರಿವರ್ತಿಸಿರುವುವಾಗಿ

...ನೆ:—

...ಸಿರು

...ಮಗಳು

...ವು ಕಡೆಗಳಲ್ಲಿ ಹಲವು ವರ್ಷಗಳು ದಾಟಿದರೂ ಆ ...ರೋಗ್ಯಾಭಿವೃದ್ಧಿಯು ಶಿಶು ಸ್ವೀಕಾರಕ್ಕೆ ಅಗತ್ಯವಾದ ...ರೋಗಪಡಿಸಿ ಗುಣಪಡಿಸಿದುವು, ಅವಯವಗಳಿಗೆ ಶಕ್ತಿ ...ಯುವು.

...ಅಥವಾ ತಾತ್ಕಾಲಿಕ ಪರಿಣಾಮಕೊಡುವ ಸಾಮಾನ್ಯ ...ತ್ತು ಕೂಡಲೇ ತೋರುವಂತಹುದು; ಮತ್ತು ಅದು ...ರುವುದು.

...ಮಾತ್ರೆಗಳಂತೆ, ರೂ. 2—4—0ರಂತೆ

...620)

...ಲ್ಪಟ್ಟಿರುವರು.

93

...PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. Registered: No. M. 498 ಟಪ್ಪಾಲು ಹಾಸಲು ಸೇರಿ ರೂಪಾಯಿ. 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೨ನೇ ಶುಕ್ರವಾರ ಜೂನ್ ೧೯೨೮. ಸಂಚಿಕೆ ೨೫

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—C ONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

STATEMENT OF AFFAIRS AS ON 16 JUNE, 1928.

CAPITAL AND LIABILITIES.		PROPERTY AND ASSETS.	
1 Paid up Capital	Rs. 1,99,650-0-0	1 Premises Furniture &c. Rs.	9,400-3-0.
2 Reserve Fund and other funds	„ 96,600-0-0	2 Investments on G. P. Notes	2,40,234-5-0.
3 Deposits	„ 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	„ 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	„ 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12.7.

Office of the Corporation,
UDIPI, 18—6—'28.

N. ANANDA RAO,
Secretary.

ಅಮೃತಾಂಜನ.

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಆಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ, ಕಜ್ಜಿ, ಕಚ್ಚಿಗೂ, ನಂಬಿಗೆಯ ಮತ್ತು ಖಂಡಿತವಾದ ಔಷಧಿಯಾಗಿದೆ, ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

249 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street. MANGALORE.



Batliwala's Preparations Cover All Your Needs.
NAME THAT MERIT HAS MADE FAMOUS.
ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

...ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... ಜ್ವರ ನಿವಾರಣ, ರೂ. ೧.
... ಪುಷ್ಟಿ ಕೊಡುವ ಔಷಧ ಆಣೆ ೧೩.
... ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
... ಎಂಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... ೧–೩–೦. ರೂ. ೧–೪–೦. ೧–೧೨–೦.
ರೂ. ೦–೬–೦
ರೂ. ೦–೬–೦. LIBERAL DISCOUNT TO TRADE

...WASHAPUR, BOMBAY.
ಎಚ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಶಿವರಿಯ ವರ ಲೋಧ್ರ

ರೋಗನಿವಾರಿಣಿ.

... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಕಲವು-ಜಗೆಯಾಗಿ ಹೊಗಳುತ್ತಿರುವರು.

... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಕವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

... ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

... ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಈ ನಕ್ಷೆಯಲ್ಲಿ ...

... 11 ಕ್ಯಾರೆಟ್ ಭಂಗಾರದಿಂದ ... ರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೆನ್ನವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು.

ಟೈಂಪೀಸ್ ಸಹಿತ ಪೆನ್ನ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,

ಪೋ. ಬಾಕ್ಸ್ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. ಕೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ. ಬಾಕ್ಸ್ ನಂ. 105, ಮದರಾಸು.

18-11-27)

'ಅಂಬಾ ತಾಯಿತ್'

ನಮ್ಮ ... ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ... ಬಾಲಗ್ರಹ ಬಾಧೆಯಿಂದ ಉಂಟಾಗುವ ... ತಪ್ಪಿಸುವದು. ... ವದು. ಅನೇಕರಿಗೆ ನಮ್ಮ 'ತಾಯಿತ' ನಂಬಿಕೆ ... ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ... ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ...

ಶಿವರಾಮ ಭಟ್ಟ ತೆಂಗಿನಮನೆ,

೦–೯–೨೭ ... ಪೋಸ್ಟು, ಕನ್ನಡ ಡಿಸ್ಟ್ರಿಕ್ಟ್

ಪಂಡರಿ ಮಹಾತ್ಮೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅರ್ಥಮದವು ಸ್ರಾಯದ ಸದಾ । ನಿಷ್ಠ ನಿಷ್ಠೆಯ ಮದವು ಮೋಹದ । ಪುಷ್ಟ ದೇಹದ ಮದವು ಜ್ಞಾನಿಯು ಎಂಬ ಗರ್ವ ಮದ ॥ ಮತ್ತೆ ಬಹಳ ಪ್ರವೀಣ ಮದತನ । ಪೆತ್ತು ಲೋಕದ ಜನರು ಕಾಲನ । ಪತ್ತನವ ವಸತಿಯನು ಮಾಳ್ಪರು ಭಕ್ತ ಕೇಳೆಂದಾ ॥ ೧೯ ॥ ಇಂತು ಘನ ವಿದ್ಯಾಭಿಮಾನಿಗೆ । ಅಂತು ಹಂಕೃತಿಯಾಗೆ ಬಳಿಕವ । ತಂತುಮಾತ್ರದಿ ಕೇಳದಾದನು ತಾಯಿತಂದೆಗಳಾ ॥ ಚಿಂತಿತಾರ್ಥದಕಲ್ಪ ಭೂರುಹ । ವಂತೊರೆದು ಭಿಕ್ಷವನು ಮಾಡುವ । ನಂತೆ ಜಗದೊಳು ಭಾಗ್ಯ ಮನು ಜರಿದೇನು ಫಲವೆಂದಾ ॥ ೨೦ ॥ ಕಾಮಧೇನುವ ಬಿಟ್ಟು ಕತ್ತೆಯ । ಕಾಮುಕದೊಳುತ್ಕೃಷ್ಟ ಸುಧೆಯನು । ಕಾಮುಕದೊಳೊದಗುವದು ಮೃಗಜಲ ಬಯಸುವಂದದಲಿ ॥ ಪ್ರೇಮದಿಂದೀ ಕ್ಷೇಮನಿಧಿಯನು । ತಾ ಮರತು ಜಾಡ್ಯಾಂಧಕನು ಖಲು । ಗ್ರಾಮ ಸಂಚಾರವನು ಮಾಡುವ ತೆಂದಿ ಮನನಾದಾ ॥ ೨೧ ॥ ಮಾತೆಯೇ ನಿಜಗಂಗೆ ಪಿತನು ಮ । ಹಾತಿಶಯದಲಿ ಕಾಶಿ ಕ್ಷೇತ್ರದ । ಧಾತ್ರಿತರೆನಿಸುವ ತೀರ್ಥರಾಶಿಯೆ ಪ್ರಿಯಕೆ ಗುರುಸಿದ್ಧಾ ॥ ಈ ತೆರದಿ ನಿಜವರಿತು ಸತ್ಯಾ । ಚ್ಚ್ಯಾತಿಶಯದೆಲಿ ವೊಂದು ಸ್ಥಾನವ । ಪ್ರೀತಿಯಲಿ ಮಾಳ್ಪವನೆ ಶತ್ಕುಲ ಕೋಟಿ ಪಾವನನೂ ॥ ೨೨ ॥ ಸತತವಿಂತಾಚರಿಸುತಧ್ಯಾ । ಗತರಗೋ ಬ್ರಾಹ್ಮಣರ ಪೂಜೆಯು । ನತಿಶಯದೊಳೆಸಗುತ್ತ ಭೂತದಯಾಪರತ್ವದಲಿ ॥ ಹಿತದಿ ಕನ್ಯಾದಾನವನ್ನಪ । ಪ್ರತಿದಿನದೊಳನುಕರಿಸುತಲಿ ಪರ । ಸತಿಯರನ್ನೆಯರೆಂದು ಬಗೆವನೆ ತೀರ್ಥಗಳತರಸಾ ॥ ೨೩ ॥ ಈ ಪರಿಯ ಗುಣವಿರಲು ತೊರೆದು ಸ । ಮೊಪ ಕಾಶಿಯ ಮರೆದು ಶಿವನ ಸ್ವ । ರೂಪನಾಗಿಹ ಪುಂಡರೀಕ ದ್ವಿಜ ಶಿರೋಮಣಿಯೂ ॥ ತಾ ಪಿಂದು ನೆನನೆನದು ತೀರ್ಥಕ । ಲಾಪ ವೀಕ್ಷಿಸಬೇಕೆನುತ ಲ । ಕ್ಷ್ಮೀಪತಿಯ ಧ್ಯಾನದಲಿ ಪೊರಟನು ತನ್ನ ಮಂದಿರವಾ ॥ ೨೪ ॥ ಕಾಶಿಯಾತ್ರೆಯ ನೆಸಗಬೇಕೆಂ । ದಾಸೆಮರ್ಥನು ಗ್ರಹಿಸಿಕೊಂಡು ವಿ । ಲಾಸದಿಂ ಬರುತೀರ್ದನಾಗತ ಮಧುರ ತಳಿ ತಳಿದೂ ॥ ಬೇಸರಿಲ್ಲದೆ ಕೃಷ್ಣಲಕ್ಷ್ಮಿ ನಿ । ವಾಸನುದ್ಧರಿಸೆನುತ ಬಂದನು । ಭೂಸುರೋತ್ತಮ ಕುಕ್ಕುಟೇಶ್ವರನೆಂಬವನ ಮನೆಗೆ ॥ ೨೫ ॥ ಸಾಧು ಜನರಾಗಮವೆ ಪುಣ್ಯಾ ಘ । ಲೋದಯವು ಪಾವನವು ನಿಶ್ಚದಿ । ಸಾಧು ಜನರಾಶ್ರಯವೆ ವರ ವೈಕುಂಠ ನೋಡಲಿಕೆ ॥ ಸಾಧುಗಳ ದರ್ಶನವು ಪೂರ್ವದೊ । ಳಾದ ಸುಕೃತದಿ ದೊರೆವುದಲ್ಲದೆ । ಸಾಧಿಸಿದಡದು ಸಿಕ್ಕದೆಂದನು ನಾಮದೇವನಿಗೆ ॥ ೨೬ ॥ ಅದು ನಿಮಿತ್ತದಿ ಕುಕ್ಕುಟೇಶ್ವರ । ಬುಧನ ಗೃಹದೊಳು ವಸತಿಯಾದನು । ತ್ರಿದಶ ವಂದಿತ ಪುಂಡಲೀಕನಿಗಂದು ರಾತ್ರಿಯಲಿ ॥ ಮುದದಿ ತ್ಯಾತಂದೆಗಳ ಭಕ್ತಿಯ । ವಿಧದಿ ಗುರು ಉಪದೇಶವಿತ್ತರಿ । ಪದಮಲವ ಮಾಡುವನು ದಾಸೋತ್ತಮನೆ ಕೇಳೆಂದಾ ॥ ೨೭ ॥

ಮೂರನೇ ಅಧ್ಯಾಯ ಸಂಪೂರ್ಣ.

ನಾಲ್ಕನೇ ಅಧ್ಯಾಯ.

॥ ಸೂಚನೆ ॥ ಕೋಪದಿಂದಾ ಕುಕ್ಕುಟೇಶ್ವರ । ಭೂಸುರನೊಳುಪದೇಶಗೊಂಡು ವಿ । ಲಾಸ ಚಿತ್ತದಿ ಪೊರಟ ತ್ಯಾತಂದೆಗಳ ಸೇವೆಯಲಿ ॥

ವಾರಣಾಸಿಗೆ ದಕ್ಷಿಣದಿ ಎಂಗೆ । ತೋರುತಿಹುದಾ ಕುಕ್ಕುಟೇಶ್ವರ । ಧಾರುಣೀಸುರ ಪೊಂಟನಾಶ್ರಮವುಳಿದು ಯಾತ್ರೆಯಲಿ ॥ ದಾರಿಯಲ್ಲೊಂದೊಂದು ಪಯಣವು । ದಾರಕಾಶಿಯ ನರಿಯನಾತನು । ಭೂರಿ ಭಕ್ತಿಯೊಳಿರ್ದ ಮಾತಾಪಿತರ ಸೇವೆಯಲಿ ॥ ೧ ॥ ಕಂದ ಕೇಳುಪದೇಶವಿಂತೆನ । ಲಂದು ಕೇಳ್ದನು ಪುಂಡಲೀಕನು । ಮುಂದೆ ಕಾಶಿಯ ದೇಶ ದೂರದೊಳಿಹುದೊ ಪೇಳೆನುತಾ ॥ ತಂದೆ ಕೇಳಾ ಕಾಸಿಗೀಸಿಯ । ನೊಂದನರಿಯೆನದಾವ ದೇಶಕೆ । ಹೊಂದಿಹುದೊ ಯೆನೆ ಕೇಳಿ ವಿಸ್ಮಿತನಾದ ಮನದೊಳಗೆ ॥ ೨ ॥ ಅರರೆ ಬಲುಪಾತಕಿ ಸಮೀಪದೊಳಿರುವ ಕಾಶಿಯನರಿಯದೀತನು । ಬರಿಯ ವಸತಿಯನೆಸಗಿ ಕೊಂಡಿಹನಿವನ ಮಂದಿರದಿ ॥ ಹರ ಮಹಾದೇವೆಂದು ಚಿತ್ತದಿ ಕರಗುತೀರ್ದನು ಪುಂಡಲೀಕನು । ಧರಣಿಯೊಳಗತಿ ದ್ರೋಹಿ ತಾನಿದನರಿಯದಿಲ್ಲೆಂದಾ ॥ ೩ ॥ ಕ್ಷೋಣಿವಳಯದೊಳಿಪ್ಪ ಮನುಜರು । ಸಾನುರಾಗದಿ ಬಂದು ಕಾಶಿಯ । ಸ್ನಾನವನು ಮಾಡುವರು ಸುಕೃತಿಗಳಾಗುವರು ಬಿಡದೆ ॥ ಯೇನಪೇಳುವೆ ನಿವಗೆ ಗಂಗಾ । ಸ್ನಾನವಿಲ್ಲವು ಜಗದಿ ದೈವಾ । ಧೀನವೆಂದನು ಪುಂಡಲೀಕನು ತನ್ನ ಚಿತ್ತದಲಿ ॥ ೪ ॥ ಇಂತು ಹಲವನು ಯೋಚಿಸುತ್ತಿರ । ಲಂತರಂಗವ ತಿಳಿದು ಪೇಳ್ದನು । ಕುಂತಿರುವವನ ಕುಕ್ಕುಟೇಶ್ವರ ಪುಂಡಲೀಕನನೂ ॥ ಚಿಂತಿಸಿದ ನಿನ್ನಿವರೊಳೆಂದು ಮ । ಹಾಂತ ಮಾತಾ ಪಿತೃಗಳಿಹರೋ । ಮುಂತೆ ಪಡಗತಿ ಗೈದಿದರೊ ಪೇಳೆಂದ ಪ್ರೀತಿಯಲೀ ॥ ೫ ॥ ಮಾತೃ ಪಿತೃಗಳ ಬಿಟ್ಟು ಮನೆಯೊಳು । ಯಾತ್ರೆ ಗೆಂದೈತಪ್ಪ ಮೂಢರ । ವಕ್ತ್ರವನು ನೆರೆ ನೋಡಲಾಗದು ದುಷ್ಟ ಜನ್ಮದದೂ ॥ ಧಾತ್ರಿ

ನವರತಿ ಧಾರರವರು ವಿ । ಧಾತ್ರನ್ಯಾತಕೆ ಸೃಷ್ಟಿಸಿದನೊ । ಶಾಸ್ತ್ರದಲಿ ತ್ಯಾತಂದೆ ಮುಂದಿನ್ನೆಂಟೆ ತೀರ್ಥಗಳು ॥ ೬ ॥ ಸತಿಯರೊಳಗುತ್ತಮಳು ತನ್ನಯ । ಪತಿಯೆ ಪರದೇವತೆಯಡೆನುತಲಿ । ಸತತವಾತನ ಸೇವೆಮಾಡುವಳಧಿಕ ಭಕ್ತಿಯಲಿ ॥ ಅತಿಶಯದ ತೀರ್ಥಗಳ ನೋಡಲು । ವ್ರತ ಸುನೇಮಾದಿಗಳ ಮಾಡಲು । ಪತಿಯೆ ತನ್ನಯ ದೇವನೆಂಬಳು ಜಗಳೆ ಪಾವನಳೂ ॥ ೭ ॥ ಅವಳ ಸಂದರ್ಶನವಗೈದರೆ । ಭವ ಭವಾಂತರ ದಘವಿನಾಶನ । ನವ ವಿಧಂಗಳ ಭಕ್ತಿ ಬರುವುದು ಮುಕ್ತಿ ಸಾಧನವೂ ॥ ಅವಳ ದರ್ಶನಕಖಿಳ ತೀರ್ಥ । ಪ್ರವರವ್ಯಾಪಿಸಿಗುವುದು ತಾ । ದವನು ಕಾಣುತ ಸಕಲ ಸೇವೆಯ ನೆಸಗೆ ಕೇಳೆಂದಾ ॥ ೮ ॥ ತನುಧನಂಗಳು ಮನವ ಸದ್ಗುರು । ವಿನ ಪದಾಂಬುಜ ಕೊಪ್ಪಿಸುತವಿಂಗೆ । ನೆನವ ಶಿಷ್ಯನು ಪಾವನನು ಪಿತೃಕುಲವ ಸಲಹುವನು ॥ ಅನವರತವಾತಂಗೆ ಗುರುವಿಗೆ । ಘನತರಾಮಳ ತೀರ್ಥರಾಶಿಯು । ಮನಳೆ ಪರದೇವತೆಯ ಬೇರಿಲ್ಲೆಂದನಾ ದ್ವಿಜನೂ ॥ ೯ ॥ ಪರಮ ಮಾತಾಪಿತೃಗಳನು ಸ । ದ್ಗುರುವ ನೆರೆತಾ ಮರೆದು ತೀರ್ಥವ । ಚರಿಸುವಾತನು ಭ್ರಾಂತಮನುಜಾಧಮನು ಲೋಕದಲಿ ॥ ಪರಿಕಿಸಲು ಯೆನಗಖಿಳ ತೀರ್ಥದ । ನೆರವಿಯನ್ನಯ ತಾಯಿತಂದೆಗಳಿರಲು ಮತ್ತೊಂದರಿಯೆನೆಂದನು ಪುಂಡಲೀಕನಿಗೆ ॥ ೧೦ ॥ ಇಪ್ಪರುಹೆ ವಾಗ್ವಾದ ದಸ್ತ್ರಗ । ಳಟ್ಟಿಸಿದುವಜ್ಞಾನ ರಾಶಿಯ । ಸುಟ್ಟುದಿನ್ನೇನೆಂಬೆ ನರೆಕ್ಷಣದೊಳಗೆ ದೃಢಮನದಿ ॥ ಘಟ್ಟಿ ಕಟ್ಟಿತು ಸಾಧು ಸಂಗದಿ । ನಿಷ್ಠನಾದನು ತಾಯಿ ತಂದೆಯ । ಬಿಟ್ಟು ಬಂದೆನು ವ್ಯರ್ಥವೆಂದಳಲಿದನು ರಾತ್ರಿಯಲಿ ॥ ೧೧ ॥ ಜಾಮ ನಿಶಿಯಿರಲಾಗ ಬಂದರು । ಕೋಮಲಾಂಗಿಯರೊಲಿದು ಮೂವರು । ಹೇಮ ಕುಂಭವನಾಂತು ಷಡ್ಮಾರ್ಜನವ ನೆಸಗಲಿಕೆ ॥ ರಾಮಣೀಯಕ ರೂಪೆಯರು ಶತ । ಸೋಮ ಸೂರ್ಯ ಕಲಾಪೆಯರು ಸು । ಪ್ರೇಮದಲಿ ಬಂದುದನು ಕಂಡನು ಪುಂಡಲೀಕ ಮುನಿ ॥ ೧೨ ॥ ಬಂದು ಷಡ್ಮಾರ್ಜನವ ನೆಸಗುವ । ಸುಂದರಾಂಗಿಯರೊಡನೆ ಕೇಳ್ದನು । ಬಂದುದೆಲ್ಲಿಂದಾರು ನಿಮ್ಮಯ ನಾಮವೇನೆನುತಾ ॥ ಇಂದುವದನೆಯರೊಲಿದು ಪೇಳುವ । ದೆಂಪಡಾತನ ಮನವ ನೋಡುತ । ಮುಂದಗೆ ಮನೆಯರುಸುರಿದರು ನಿಜ ನಾಮಕರಣಗಳಾ ॥ ೧೩ ॥ ಪೆಸರು ಭಾಗೀರಥಿ ಸರಸ್ವತಿ । ಯೆಸೆವ ಯಮುನೆಯರೆನುತ ಸರ್ವರು । ಕುಶಲದಲಿ ಪೇಳಿದರು ಎಂದರು ಕುಕ್ಕುಟೇಶ್ವರನಾ ॥ ವಸತಿ ಶುಭವ್ಯಾತೆನುತ ಸೇವೆಯ । ನೆಸಗುವೆವು ಬಲು ಪುಣ್ಯ ಫಲ ಕೈ । ವಶವು ಶ್ರಮಗಾಗುವುದು ನಾವಿವನಿಂದ ಪಾವನರೂ ॥ ೧೪ ॥ ನಿರತ ತ್ಯಾತಂದೆಗಳ ಸೇವೆಯ । ವಿರಚಿಸುವನತಿ ಧನ್ಯನೀತನ । ದರುಶನವ ಮಾಳ್ಪವರು ಮುಕ್ತರು ಜಗಳೆ ಪಾವನರೂ ॥ ಧರೆಯ ಜನರೆಮ್ಮಿಂದ ಪಾಪವ । ಪರಿಹಂವನೆಸಗುವರು ವರ ಸಂ । ದರುಶಣವನಾವೆಸಗಿ ಕಳೆವೆವು ದೋಷವಿವನಿಂದಾ ॥ ೧೫ ॥ ಎಂದ ಮಾತಿಗೆ ಪುಂಡಲೀಕನು । ನೊಂದು ಪೇಳಿವನಮಮ ಧನ್ಯನು । ತಂದೆತ್ಯಾಗಳ ಸೇವೆಯನ್ನಿವ ಮಾಳ್ಪನದರಿಂದಾ ॥ ಮಂದ ಬುದ್ಧಿಯೊಳರಿಯದಾದೆನು । ಯೆಂದು ಪ್ರಾತಃಕಾಲದಲಿ ಪದ । ದ್ವಂದ್ವಕಾನತನಾಗಿ ಪೇಳ್ದನು ಭಾವ ಭಕ್ತಿಯಲಿ ॥ ೧೬ ॥ ನೀನು ಯೆನ್ನಯ ಗುರು ಶಿರೋಮಣಿ । ನೀನು ಯೆನ್ನಯ ಗುರುಕುಲಾಗ್ರಣಿ । ನೀನೆ ಮತ್ಕುಲದೇವನೆನುತಲ್ಲಿಂದ ಮರಳಿದನೂ ॥ ಯೇನನೆಂಬೆನು ಗುರುವು ಹೊರತು ಸು । ಜ್ಞಾನವಿಲ್ಲವು ಮೋಕ್ಷವಿಲ್ಲ ನಿ । ಧಾನವೆಂದನು ಮುಖ್ಯಗುರುವೆನುತಾಗ ಮನದೊಳಗೆ ॥ ೧೭ ॥ ಬಂದನವ ತ್ಯಾತಂದೆಗಳಿಗಧಿ । ವಂದಿಸುತಲೇಕಾಗ್ರ ಚಿತ್ತದಿ । ನಿಂದನವರಲಿ ಸೇವೆಗಳ ಮಾಡುತ್ತಲನುದಿನದಿ ॥ ಹೊಂದಿದಗಣಿತ ಪುಣ್ಯರಾಶಿಗ । ಳಂದು ಗಗನವ ಭೇದಿಸಿತು ತಪ । ದಿಂದ ತರಹರಿಸಿದನು ತಾನಾ ಜ್ವಾಲೆಯಲಿ ಸುರಪಾ ॥ ೧೮ ॥ ಆರು ಪದದಲಿ ತನ್ನ ಪದವಿಯು । ಸೂರೆಗೊಂಬರೊ ಯೆನುತಲಿಂದ್ರನು । ಭೂರಿ ಚಿಂತಾಕ್ರಾಂತನಾಗಿರಲಧಿಕ ತೇಜದಲಿ ॥ ನಾರದನು ನಡೆತರಲು ತತ್ಪದ । ವಾರಿಜಕ್ಕಭಿನಮಿಸಿ ಸುರಪನ । ಮೋರೆಯನು ನೆರೆನೋಡಿ ಪೇಳಿದ ದೇವಋಷಿ ನಗುತಾ ॥ ೧೯ ॥ ಯೇನು ಚಿಂತೆಯೊ ನಿನಗೆ ಬಂದುದು । ನೀನು ಸಕಲಾಮರರಗರಸನು । ಹಾನಿಯೇನೆನಲಿಂದ್ರನಾಗಲೆ ಋಷಿಯ ಪದಕೆರಗಿ ॥ ಮೌನಿಸಾಗ್ರಣಿ ಕೇಳು ಮರ್ತ್ಯದಿ । ಮಾನವರೊಳಿನ್ನಾರೊ ತಪಸಿಯು । ತಾನದೇಕೋ ಚಿತ್ತದಿಂದಲೆ ತಪವ ವಿರಚಿಪನೂ ॥ ೨೦ ॥ ಪುಣ್ಯಕೋಟಿಗಳೊರಗಿ ಭೇದಿಸು । ವುನ್ನತೋನ್ನತ ಗಗನವನು ತಾ । ತಿಣ್ಣ ತೇಜೋರಾಶಿ ಸುಡುತಿದೆ ಭುವನ ಮಂಡಲವಾ ॥ ಬಣ್ಣಿಸುವದೇನದನು ಧಿಟನಿ । ವಿಣ್ಣವಹು ದಾಧುವನವರ ಕಾ । ರುಣ್ಯನಿಧಿನೀ ಕಾಯಬೇಕೆಂದೆರಗಿದನು ಪದಕೆ ॥ ೨೧ ॥ ಕೇಳಿದನು ನಾರದನು ಧೈರ್ಯವ । ಪೇಳಿದನು ಸುರಪತಿಗೆ ತಪಸಿಯ । ನೇಳಿಸುವೆ ನಿನಗವನ ಭಯ ಬೇಡಿನ್ನು ಸ್ವರ್ಗದಲಿ ॥ ಬಾಳಿಸುವೆನೆನುತಾಗ ಶಾಚಿಪ । ಮೌಳಿ ಬಂದಾಗಿಳೆಯೊಳೀಪರಿ । ಯೂಳಿಗಂಗಳ ಘನವ ನಾರದ ಮುನಿಗೆ ಮೂಜಗದಿ ॥ ೨೨ ॥ ನೋಡಿದನು ತ್ಯಾತಂದೆ ಸೇವೆಯ । ಮಾಡುತೀರ್ಪ ಮಹಾತ್ಮನನು ಘಾ । ಪಾಡಿಸಿ ದಣವ ನುಡಿಯುದಿರ್ದನು ದೃಢಮನಸ್ಸಿಂದಾ ॥ ರೂಢಿಯೊಳಗವ

ತರಿಸಿದನು ಶಶಿ । ಜೂಡ ನಿವ ಸಾಮಾನ್ಯನಲ್ಲವು । ಗೂಢದಿಂ ಪಿತೃಮಾತೃ ಭಜನೆಯ ನೆಸಗುವನು ಬಿಡದೆ ॥ ೨೩ ॥ ಉಪಮೆಯಲ್ಲೀ ಸ್ಥಳಕೆ ದೇವಾ । ಧಿಪರಿಗಿದು ದುರ್ಲಭವು ಲೋಕದೊಳಪರಿಮಿತ ಫಲಪ್ರಾಪ್ತ ಪುಣ್ಯಕ್ಷೇತ್ರವಿದು ದಿಟವು ॥ ಸಫಲವಿದು ನೋಳ್ಪವರು ಭೂಮಿಗೆ । ವಿಪುಲತರ ವೈಕುಂಠವೆನುತಲಿ । ತಪಸಿಗಳ ಕುಲತಿಲಕ ತಲೆದೂಗಿದನು ತನ್ನೊಡನೆ ॥ ೨೪ ॥ ಇಂತು ಮನದಿ ನಿಧಾನಿಸುತ ವೇ । ದಾಂತವೇದ್ಯನ ಶ್ರಿಬಳಿಗೆ ನಡದನು । ಶಾಂತವಕದಿಂದಬುಜಸಂಭವನಣುಗವೇಗದಲಿ ॥ ಕಂತು ಜನಕಂಗೆರಗಿ ದಿವ್ಯಾ । ಸ್ವಾಂತದಿಂದಜನಗಣಾಗ ಸಂತಸವಾಂತು ವೀಣೆಯ ನುಡಿಸಿ ನುತಿಸಿದ ಹರಿಯ ಭಕ್ತಿಯಲಿ ॥ ೨೫ ॥ ನಾರದನ ಕಾಣುತಲಿ ಹರುಷಾ । ಪೂರಿತದೊಳೊಲಿದಾಗ ಹರಿಯು ವಿ । ಚಾರಿಸಿದನೆಲ್ಲಿಂದ ಬಂದಿರಿದೇನು ವಾರ್ತೆಗಳಾ ॥ ತೋರುತಿದೆ ಘನಚಿಹ್ನೆ ಮುಖದಲಿ । ಸಾರವಹುದೇನೆನಲು ಜಗದೋ । ದ್ಧಾರನಾಲಿಪುದೆಂದು ಪೇಳ್ದನು ಜಲಜಭವಸುತನೂ ॥ ೨೬ ॥ ಭಕ್ತಜನ ನಿಜಬಂಧು ನಿರುಪಮ । ಭಕ್ತ ನಿಜ ಸಂಜೀವದೇವನೆ । ಭಕ್ತಜನ ಹೃದಯಾಬ್ಧಿವಾಸನೆ ಭಕ್ತ ವತ್ಸಲನೆ ॥ ಭಕ್ತ ಕಲ್ಪದ್ರುಮನೆ ಸಂತತ । ಭಕ್ತದೇಹಿಕ ಸ್ವಾಮಿತವಘನ । ಭಕ್ತರರಸನ ಕಂಡೆನೋರ್ವನ ಭೂಮಿಯೊಳಗಿಂದೂ ॥ ೨೭ ॥ ಧಾತ್ರಿಯೊಳಗಿಹ ಲೋಹದಂಡ । ಕ್ಷೇತ್ರದಲಿ ದೃಢಮನದೊಳಿರುವನು । ಮಾತೃಪಿತೃಗಳ ಸೇವೆಗಳ ಮಾಡುತ ನಿರಂತರದಿ ॥ ಧಾತ್ರಿಯಮರರ ಕುಲದೊಳೀಪರಿ । ಪುತ್ರರನು ನಾ ಕಾಣೆ ನಮಮ ವಿ । ಚಿತ್ರ ಪುರುಷನು ಪುಂಡಲೀಕನು ನಾಮರಂಜಿತನೂ ॥ ೨೮ ॥ ದೇವ ಮೊದಲವತಾರದಲಿ ನೀ । ನಾವಿಶಿಷ್ಟದ ಶ್ರುತಿಯುಗಳಿಸಿದೆ । ಠೀವಿಯಲಿ ವರ ಬ್ರಹ್ಮದೇವಗೆ ಜನಕ ಜನನಿಯರಾ ॥ ಸೇವೆಗಳ ನವಮಾಡಲಲ್ಲ ಕೃ ಪಾವಲೋಕನನಾದೆ ಜಗತಿಗೆ । ದೇವತೆಗಳಿಂಗಾಗಿ ಪಿಡಿದೆ ನೀ ಮಂದರಾಚಲವಾ ॥ ೨೯ ॥ ರೂಢಿಯನು ಕದ್ದೊಯ್ದ ದೈತ್ಯನ । ನೀಡಿರಿದು ಭೂಮಂಡಲವ ನಿಜ । ದಾಡೆಯಿಂದಲಿ ನೆಗಹಿ ಕ್ಯಾದಿಹೆ ಪರಮ ಹರುಷದಲಿ ॥ ಗೂಢದಿಂದಲಿ ಕಂಭ ಮಧ್ಯದಿ । ಮೂಡುತಲಿ ಕನಕಶಿಪುವನು ಹತ । ಮಾಡಿ ಪ್ರಹ್ಲಾದನನು ಸಲಹಿದೆ ದೇವ ಶೀಘ್ರದಲಿ ॥ ೩೦ ॥ ಚಲುವ ವಾಮನನಾಗಿ ಭೂಮಿಯ । ನಳದು ಗಂಗೆಯ ಪಡದೆ ಚರಣದಿ । ಬಳಿಕ ಭಕ್ತಿಗೆ ಬಲಿಯ ಬಾಗಿಲ ಕ್ಯಾದು ಕೊಂಡಿದ್ದೆ ॥ ತಲೆಯಗೊಂಡೆ ಬ್ಬಿಸಿದೆ ಜನನಿಯ । ನೊಲಿದು ಶ್ರೀ ರಾಮಾವತಾರದಿ । ಫಲುಬಿಸಿದೆ ತ್ಯಾತಂದೆಗಳ ಭೂಭಾರವಳಿವುದಕೆ ॥ ೩೧ ॥ ದೇವಕಿಯ ತನುಭವ ಯಶೋದಾ । ದೇವಿಯುಳ ಮೊಲೆಪಾಲನುಣ್ಣುತ । ಗೋವುಗಳನುರೆ ಕ್ಯಾದು ಗೋಕುಲದಲ್ಲಿ ಬೆಳವುತಲಿ ॥ ಧಾವೆಯರ ವ್ರತವಳಿದೆ ನೀನು ದ । ಶಾವತಾರದಿ ತಾಯಿತಂದೆಯ । ಸೇವೆಗಳನನುಕರಿಸಲಿಲ್ಲವು ಪೇಳಲರಿದೆನಗೆ ॥ ೩೨ ॥ ಅದು ನಿಮಿತ್ತದಿ ತಾಯಿ ತಂದೆಯ । ಮುದದಿ ಸೇವೆಯ ಮಾಡುತಿಹನೋ । ಹದ ಸುಪುತ್ರನ ದರ್ಶನಾರ್ಥಿಯೊಳೇಳಬೇಕೆಂದಾ ॥ ಮಧುವಿನಾಶಕ ಮೆಚ್ಚಿದನು ನಾ । ರದನ ಮಾತಿಗೆ ಬಹಳ ಕಾರು । ಣ್ಯದಲಿ ಭಕತನ ಕಾಣಬೇಕೆಂದುಸುರಿದನು ಮುನಿಗೆ ॥ ೩೩ ॥ ಧರೆಯ ಬಾರವ ಕಳೆಯಲೋಸುಗ । ತರುಣಿ ದೇವಕಿಯಣುಗನೆಂದವ । ತರಿಸಿದೆನು ಕೃಷ್ಣಾವತಾರದಿ ಧರೆಯೊಳಾಪರಿಯ ॥ ಅರಿಯದವನೇ ನೀನು ಪೋಗ । ಲ್ಲಿರುವ ಗೋವ್ಗಳ ಗೋವಳರಸರ । ವೆರಸಿ ಭಕ್ತನ ದರ್ಶನಾರ್ಥವೆ ತೆರಳಬೇಕೆಂದಾ ॥ ೩೪ ॥ ಎನೆ ಹಸಾದವೆನುತ್ತ ನಾರದ । ಮುನಿಪ ವೀಣೆಯ ನುಡಿಸಿನಲಿವುತ । ಘನವಿಲಾಸದಿ ಬಂದನಾ ದ್ವಾರಕಿಯ ಸನ್ನಿಧಿಗೆ ॥ ವನಜನಾಭನ ಕಂಡು ತತ್ಪದ । ವನಜ ಕಾನತನಾಗಿ ನಿಂದಿರೆ । ಮನವರಿತು ಋಷಿವರನೊಳೆಂದನದೇನ ನರಿಯದೊಲು ॥ ೩೫ ॥ ಏನು ಬಂದಿರಿ ಯೆನಲು ಬಳಿಕ ಮು । ಹಾನುಭಾವನಿಗೊರದೆನಿಲ್ಲಿಹೆ । ಧೇನುವತ್ಸಾದ್ಯಖಿಳ ಗೋಪಾಲಕರ ನೊಡಗೊಂಡು ॥ ಸಾನುರಾಗದಿ ಪೋಗಬೇಕು ನಿ । ದಾನವರಿಯುವದಖಿಳ ಭಕ್ತಾ । ಧೀನ ನೀನೀಕ್ಷಣದಿ ಭಕ್ತನ ದರ್ಶನಾರ್ಥಿಯಲಿ ॥ ೩೬ ॥ ಧಾತ್ರಿಯುತ್ತಮ ಲೋಹದಂಡ । ಕ್ಷೇತ್ರದಲಿ ರಂಜಿಸುತಲೀರ್ಪನು । ಮಾತೃಪಿತೃಗಳ ಸೇವೆಯಿಂದಲಿ ಪುಂಡಲೀಕಾಖ್ಯ ॥ ಗೋತ್ರರಿಪು ಮೊದಲಾದ ಸುರರು ವಿ । ಚಿತ್ರ ತಪದುರಿಯಿಂದ ಬೆಂದರು । ಸ್ತೋತ್ರವನು ತಾ ಮಾಡಲೇನತಿ ಧನ್ಯನವನೆಂದಾ ॥ ೩೭ ॥ ತಂದೆತ್ಯಾಗಳ ಸೇವೆಗಳ ತಾ । ಬಿಂದುಮಾತ್ರದಿ ಮಾಡಲಿಲ್ಲವು । ಇಂದು ಮಾತಾಪಿತೃಗಳನ್ನು ಪೂಜಿಸುವ ಭಕ್ತನನೂ ॥ ಸಂದರುಶಣವ ಮಾಡಬೇಕೆಂ । ದಂದು ಗೋ ಗೋವಳರು ಸಹಿತ ಮು । ಕುಂದ ಪೊರಟನು ಭಕ್ತರೆಂಘನವೊ ಮಹಾತ್ಮಂಗೆ ॥ ೩೮ ॥ ಮೋರತೂಕ ಸುವರ್ಣವನು ಭಾ । ಗೀರಥಿಯ ತೀರದಲಿ ದೃಢಮನ । ವೇರಿ ಭಕ್ತಿ ವಿಶೇಷದಲಿ ಬಲು ನೇಮನಿಷ್ಠೆಯಲಿ ॥ ವೀರ ವಿಠಲಾರ್ಪಣವ ನಾ ದ್ವಿಜ । ವಾರಿಗಿತ್ತ ಸುಪುಣ್ಯಗಳು ಕೈ । ಸೇರುವವು ಪಂಡರಿಯ ಕಥೆಯುರೆಘಳಿಗೆ ಕೇಳ್ದರಿಗೆ ॥ ೩೯ ॥ ಭರಿತ ಭಕ್ತಿಯೊಳೋದುತಲಿ ವಿ । ಸ್ತರಿಸಿ ಲೋಕದಿ ಮೆರೆವುತಿಹ ನಿಜ । ಶರಣರಿಗೆ ಸುಜ್ಞಾನ ಭಾಗ್ಯಂಗಳನು ಪಾಲಿಸುತ ॥ ಶರಚಿ ಚಂದ್ರಮರುಳ್ನಕ ದಯ । ವೆರಸಿ ಪೊರೆವನು ಮಧ್ವಪತಿ ಕರಿ । ವರದ ಶ್ರೀ ವಿಠಲೇಶ ಕೃಷ್ಣನು ನಿರುತ ಚಿಂದಿದದಿ ॥ ೪೦ ॥

ನಾಲ್ಕನೇ ಅಧ್ಯಾಯ ಸಂಪೂರ್ಣ.

ಮಾರ್ಕ್ "ಬಿಲ್ಕೊ"

ದೀಪವು ಸೂರ್ಯ ... ಬೆಳಗಾಮಿನಲ್ಲಿ ನಡೆದ ... ನಮ್ಮ ಈ ದೀಪಗಳ ... ಪದಕವನ್ನು ಕೊಟ್ಟಿರುವರು. ... ಕೊಂಡುಕೊಳ್ಳುವ ಮೊದಲು ... ಪಟ್ಟಿಯನ್ನು ಬಿಕ್ಕಟಿ

... ಬಹು ಉತ್ತಮವಿದೆ.

ಟೆಲಿಫೋನ್ ನಂ. 23374



ಕಂಪೆನಿ, ... ನಂಬ್ರ 288, ... ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ
ರೋಗವೆಂಬ ವಿಧಿಆಪತ್ತನ್ನು ═ ಪರಿಹರಿಸಿಕೊಳ್ಳನೋಡಿ

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಬಂಧುಗಳೇ! ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.
...–8 ಟಿನ್ನಿನ ಬಾಟ್ಲಿ 1ಕ್ಕೆ 1–8–0, ½ ಡಜನ್ ರೂ. 8–8–0; ಡಜನ್ 16–8–0

ಭಗಿನಿಗಳೇ!
ಸೊರಗಿರುವ ಶಿಶುವಿನ ನೋಟವು
...ತ್ರವರಿಗೆ ಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ

ನಿಮ್ಮ ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?
...ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ...ಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ... ನರನಾಡಿ ಗಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಟಿನ್ನಿನ ಬಾಟ್ಲಿ 1ಕ್ಕೆ 1–4–0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆ ... ವರ್ಣರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,
ನಂಬ್ರ 2. ಮಂಗಳೂರು ದ. ಕ.

22628

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ,
ಓ. ಪಿ. ನಂಬ್ರ 49/1928

ಸುಬ್ಬಣ್ಣ ಕ್ಯಾನುಭಾಗ, ಕೃಷ್ಣಯ್ಯ ಕ್ಯಾನುಭಾಗರ ಮಗ ಉಡುಪಿ ತಾಲೂಕು ಬಡಾಗ್ರಾಮ—ಅರ್ಜಿದಾರ.

ಮತ್ತು

1 ಅನಂತಯ್ಯ ಕ್ಯಾನುಭಾಗಾ, ರಂಗೈಯ್ಯ ಕ್ಯಾನುಭಾಗರ ಮಗ ಮಂಗಳೂರು ತಾಲೂಕು ಬೈಕಂಪಾಡಿ ಗ್ರಾಮದಲ್ಲಿ ... 2 ರಾಮರಾಯ, ಅಣ್ಣಯ್ಯಕ್ಯಾನುಭಾಗರ ಮಗ ... ತಾಲೂಕು ನಂದಳ್ಕೆ ಬೋರ್ಡುಶಾಲಾ ಮಾಸ್ತರು—ರಿಸ್ಪಾಂಡೆಂಟರು,

ಮಂಗಳೂರು ತಾಲೂಕು ಬೈಕಂಪಾಡಿ ಗ್ರಾಮದಲ್ಲಿರುವ 1ನೇ ರಿಸ್ಪಾಂಡೆಂಟ ಅನಂತಯ್ಯ ಕ್ಯಾನುಭಾಗರ ಪ್ಪಾನರ ಮಕ್ಕಳು ಶಂಭು ಯಾನೆ ಗಿರಿಜಾ 1, ಭುಜಂಗ 1, ಕೂಡಾ 2 ಜನರ ದೇಹದ ವ ಆಸ್ತಿಗೆ ಕೂಡಾ ಅರ್ಜಿದಾರಗೆ ಪ್ರಾಪ್ತ ವಯಸ್ಸು ಬರುವರೆಗೆ ಗಾರ್ಡಿಯನ್ ನೇಮಕವಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರನು ಮೇಲ್ಕಂಡ ಅರ್ಜಿಯನ್ನು ದಾಕ್ಲು ಮಾಡಿರುತ್ತಾನೆ, ಸದರಿ ಅರ್ಜಿಯು ತಾರೀಕು 30—6—'28ನೇ ಮಧ್ಯಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಕ್ಕೆಗೆ ಇಟ್ಟಿರುತ್ತದೆ. ಸದರಿ ಅರ್ಜಿಗೆ ಆಕ್ಷೇಪಿಸುವವರು ಮೇಲ್ಕಂಡ ಕೋರ್ಟಿನಲ್ಲಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದು; ತಪ್ಪಿದರೆ ಕೋರ್ಟಿನವರಿಗೆ ಯುಕ್ತಕಂಡ ರೀತಿ ಹುಕುಂ ಆದೇಶವು ಸಂಗತಿ ಈ ಮೂಲಕ ಸರ್ವ ಜನರಿಗೂ ತಿಳಿಯುವ ಹಾಗೆ ಪ್ರಕಟಿಸಲಾಗಿಯದೆ.

ಮಂಗಳೂರು,
ತಾ. 7–6–'28.

Bola Nagesha Rao,
Vakil for Petitioner.

ಸ್ಫುಟ ವಿಚಾರಗಳು.

ದೇಶಬಂಧು ದಾಸರು.

"ದೇಶದ ಸ್ವಾತಂತ್ರ್ಯ ಸಾಧನೆಗೆ ಸಹಕಾರಿಯಾಗುವ ಯಾವ ಉಪಾಯವೂ ಅಪವಿತ್ರವಾಗಲಾರದು; ದೇಶದ ಸ್ವಾತಂತ್ರ್ಯ ಸಾಧನೆಗೆ ಅಡ್ಡಕಟ್ಟುವ ಯಾವ ಉಪಾಯವೂ ಪವಿತ್ರವಾಗಲಾರದು." ಈ ವೀರ ವಾಕ್ಯಗಳಿಂದ ಫೋರ್ವರ್ಡ ಪತ್ರಿಕೆಯ ಪ್ರಥಮಾಗ್ರಲೇಖವು ಪ್ರಾರಂಭವಾಯಿತು. ಆಗ ದೇಶಬಂಧುಗಳು ಸಂಪಾದಕರಾಗಿದ್ದರು. ಪ್ರಾಯಶಃ ಈ ವಾಕ್ಯಗಳೇ ಈ ಕರ್ಮಯೋಗಿಯ ಅಂತರ್ಯವನ್ನು ಶೋಧಿಸುವುದು; ಅವನ ಜೀವನದ ರಹಸ್ಯವನ್ನೂ ತೋರಿಸುವುದು. ಈ ವಾಕ್ಯಗಳು ಈ ಮಹಾಪುರುಷನಲ್ಲಿ ಉಕ್ಕಿ ಬರುತ್ತಿದ್ದ ನಿಸ್ಸೀಮ ದೇಶಪ್ರೇಮವನ್ನೂ ತೋರಿಸುವವು. ಮತ್ತು ಈ ವಾಕ್ಯಗಳೇ ಮಹಾತ್ಮಾ ಗಾಂಧಿ ಮತ್ತು ದೇಶಬಂಧು ದಾಸರೊಳಗಿನ ಭೇದವನ್ನು ತೋರಿಸುವವು. ಮಹಾತ್ಮಾಜೀಯವರಿಗೆ ಉದ್ದೇಶಕ್ಕಿಂತಲೂ ಉಪಾಯವೇ ಮಹತ್ವದ್ದಾಗಿದೆ. ದೇಶದ ಸ್ವಾತಂತ್ರ್ಯಕ್ಕಿಂತಲೂ ಅದನ್ನು ಹೊಂದಲು ಉಪಯೋಗಿಸುವ ಸಾಧನೆಗಳು ಮಹತ್ವದ್ದಾಗಿವೆ. ದುರುಪಾಯಗಳಿಂದಾಗಲಿ ದುಸ್ಸಾಧನೆಯಿಂದಾಗಲಿ ಒಂದು ಐಚ್ಛಿಕ ವಿಷಯವು ಸಿಕ್ಕುವುದೆಂದು ಖಂಡಿತವಿದ್ದರೂ ಕೂಡ ಅವರು ಅದನ್ನು ಅನುಸರಿಸಲಾರರು. ದೇಶಬಂಧು ದಾಸರು ಹಾಗಲ್ಲ; ಅವರು ದುರುಪಾಯ ಮತ್ತು ದುಸ್ಸಾಧನೆಗಳನ್ನು ಮಾನಿಸುವವರೆಂದಲ್ಲ. ಆದರೆ ಒಂದು ಉದ್ದೇಶವನ್ನು ಮುಂದಿಟ್ಟು ಅದನ್ನು ಹೊಂದಲೇಬೇಕೆಂದು ಅವರು ಸಾಧಿಸುವವರಾಗಿರುವರು. ಐಹಿಕ ಸಾಧನೆಗಳಲ್ಲಿ ಉಪಾಯಗಳ ಮಟ್ಟಿಗೆ ಬಹಳ ಸೂಕ್ಷ್ಮದೃಷ್ಟಿಯಿಂದ ನ್ಯಾಯಾನ್ಯಾಯವನ್ನು ನಿರ್ಣಯಿಸಲಾಗುವುದಿಲ್ಲ. ಪರಸ್ಪರ ಹಿತಗಳು ಒಂದಕ್ಕೊಂದು ವಿರೋಧವಿದ್ದು ಒಂದು ಸಾಧಿಸಲ್ಪಡುವಾಗ ಇನ್ನೊಂದಕ್ಕೆ ಅನ್ಯಾಯವಾಗಲೇಬೇಕು. ಆದುದರಿಂದ ಮಹಾತ್ಮಾಜೀಯವರ ಮಾನಸಿಕತೆಯು ನೈತಿಕದೃಷ್ಟ್ಯಾ ಮಹತ್ವದ್ದಾಗಿರುವುದಾದರೂ ಕಾರ್ಯಕ್ಷೇತ್ರದಲ್ಲಿ ದೇಶಬಂಧುಗಳ ಕಾರ್ಯಕ್ರಮವೇ ಮಹತ್ವದ್ದಾಗಿದೆ. ದೇಶಬಂಧುಗಳ ಸ್ಮಾರಕ ದಿನವು ಕಳೆದ ಶನಿವಾರ ದಿನ ಆಚರಿಸಲ್ಪಟ್ಟಿತು. ಅವರ ಮಹತ್ವದ ಸ್ವಾರ್ಥತ್ಯಾಗವೂ, ಅವರ ನಿಸ್ಸೀಮ ದೇಶಭಕ್ತಿಯೂ ನೆನಪಿಗೆ ತರಲ್ಪಟ್ಟಿತು. ಅವರ ಮೇಲಿನ ಸೂತ್ರವನ್ನೂ ಎಲ್ಲರೂ ನೆನವರಿಕೆಗೆ ತಂದಿರಬಹುದೆಂದು ನೆನಸುವೆವು.

ಚಾತೋಟದ ಕೂಲಿಗಳು.

ಇಂಗ್ಲೆಂಡಿನ ಮಜೂರ ಪಕ್ಷದ ಕಡೆಯಿಂದ ಹಿಂದುಸ್ಥಾನಕ್ಕೆ ಬಂದಿದ್ದ ಒಂದು ಸಮಿತಿಯು ಇಲ್ಲಿಯ ಮಜೂರರ ದೀನಾವಸ್ಥೆಯನ್ನು ವಿವರಿಸಿದ್ದಾರೆ. ಆದರೆ ಈ ಬ್ರಿಟಿಷ ಮಜೂರರು ಹಿಂದೀಯರಿಗೆ ಮಾಡುವ ಹಿತಗಳು ನಮಗೆ ಗೊತ್ತೇ ಇವೆ. ಹಿಂದೀ ಮಜೂರರ ಹಿತವು ಈ ಪರಕೀಯರಿಂದ ಆಗುವುದಕ್ಕಿಂತಲೂ ಹಿಂದೀಯರಿಂದಲೇ ಆಗುವುದು ಉತ್ತಮವಿದೆ. ಇವರು ಬರೀ ಗೋಮುಖ ವ್ಯಾಘ್ರಗಳಂತೆ ಹಿಂದೂಸ್ಥಾನಕ್ಕೆ ಬಂದು ಹಿಂದೂಸ್ಥಾನದ ಬಡವರ ಹಿತವನ್ನುದ್ದೇಶಿಸಿ ಹಿಂದೀಯ ರಾಷ್ಟ್ರೀಯ ವಿಘಾತವನ್ನೇ ಸಾಧಿಸುವವರಾಗಿದ್ದಾರೆ. ಹಿಂದೂಸ್ಥಾನದಲ್ಲಿ ಈಗ ಎಲ್ಲೆಲ್ಲಿಯೂ ಪ್ರಸರಿಸಿರುವ ಕೂಲಿ ಮುಷ್ಕರಗಳಿಗೆ ಬ್ರಿಟಿಷ ಮಜೂರ ಪ್ರತಿನಿಧಿಗಳು ಎಷ್ಟು ಜವಾಬ್ದಾರರಿರುವರೆಂದು ಹೇಳಲಾಗುವುದಿಲ್ಲ. ಆದರೆ ಅವರು ಹಿಂದೂಸ್ಥಾನದ ಮಜೂರರ ಸ್ಥಿತಿಯ ವಿಷಯದಲ್ಲಿ ಹೇಳಿದುದೆಲ್ಲಾ ಅಸತ್ಯವೆನ್ನಲಾಗುವುದಿಲ್ಲ. ಅವರು ಚಾತೋಟದ ಕೂಲಿಗಳ ದುಸ್ಥಿತಿಯನ್ನು ವರ್ಣಿಸಿ ಇಂಗ್ಲೆಂಡಿನ ತಮ್ಮ ಟ್ರೇಡ್ ಯೂನಿಯನ್ನಿಗೆ ರಿಪೋರ್ಟು ಮಾಡಿದ್ದಾರೆ. ಚಾತೋಟಗಳ ಕೂಲಿಗಳ ದುಸ್ಥಿತಿ, ಅವರ ಮೇಲೆ ಬ್ರಿಟಿಷ ತೋಟಗಾರರು ನಡಿಸುವ ಅತ್ಯಾಚಾರಗಳು ಮೊದಲಾದುವುಗಳ ಕುರಿತು ಪತ್ರಿಕೆಗಳಲ್ಲಿ ಆಗಾಗ ವರ್ತಮಾನಗಳು ಬರುತ್ತಾ ಇವೆ. ವಿಷಯವೇನೂ ನೂತನವಲ್ಲ. ಆದರೆ ಇಂಡಿಯನ್ ಟೀ ಎಸೋಸಿಯೇಶನ್ ಎಂಬ ಹೆಸರಲ್ಲಿ ಸಂಘವನ್ನು ಸ್ಥಾಪಿಸಿರುವ ಬ್ರಿಟಿಷ ತೋಟಗಾರರು ಈ ಅತ್ಯಾಚಾರಗಳು ತಮ್ಮ ತೋಟಗಳಲ್ಲಿ ಇಲ್ಲವೇ ಇಲ್ಲವೆಂದೂ, ತಮ್ಮ ತೋಟಗಳ ಕೂಲಿಗಳು ಒಳ್ಳೆಯ ಸ್ಥಿತಿಯಲ್ಲಿರುವರೆಂದೂ ಹೇಳಿ, ಅಷ್ಟರಲ್ಲಿಯೇ ಸುಮ್ಮನಿರದೆ, ಈ ಬ್ರಿಟಿಷ ಮಜೂರ ಪ್ರತಿನಿಧಿಗಳು ಪ್ರಾಯಶಃ ಹಿಂದೀಯರ ತೋಟವನ್ನು ನೋಡಿದ್ದಿರಬೇಕೆಂದು, ಕೂಲಿಗಳನ್ನು ಗೋಳಾಡಿಸುವ ಅಪಕೀರ್ತಿಯನ್ನು ಈ ಬ್ರಿಟಿಷರು ಹಿಂದೀಯರ ಹೆಗಲ ಮೇಲಿರಿಸಲು ಪ್ರಯತ್ನಿಸುವರು. ಹಿಂದೀಯರ ಚಾ ತೋಟಗಳಲ್ಲಿ ಕೂಲಿಗಳ ಸ್ಥಿತಿಯು ಒಳ್ಳೆಯದಾಗಿರದೆ ಇರಬಹುದು. ಆದರೆ ಬ್ರಿಟಿಷ ತೋಟಗಳಲ್ಲಿ ಅದು ಒಳ್ಳೆಯದೆಂದು ಹೇಳುವುದು ಮಾತ್ರ ಸತ್ಯವನ್ನು ಧಿಕ್ಕರಿಸಿದಂತಾಗುವುದು. ನಿಜವಾಗಿ ನೋಡಿದರೆ, ಆಳರಸರ ಜಾತಿಯವರೆಂದು ಈ ಬ್ರಿಟಿಷ ತೋಟಗಾರರು ನ್ಯಾಯನೀತಿಗಳನ್ನು ವಿೂರಿಯೇ ನಡೆಯುತ್ತಿರುವರಲ್ಲದೆ, ಹಾಗೆ ನಡೆಯುವ ಸಂಗತಿಯು ಕೋರ್ಟಿನ ಲಕ್ಷ್ಯಕ್ಕೆ ಬಂದರೂ ಹೆಚ್ಚು ಲುಕ್ಸಾನಿಲ್ಲದೆ ಕೋರ್ಟಿನಿಂದ ತಪ್ಪಿ ಬರುವರು. ಮತ್ತು ಆ ಧೈರ್ಯದಿಂದ ಮಜೂರರನ್ನು ಮತ್ತಷ್ಟು ಕಠಿಣವಾಗಿ ಪೀಡಿಸುವರು. ಸರಕಾರವು ಈ ಅತ್ಯಾಚಾರಗಳ ಶೋಧವನ್ನು ಮಾಡದಿರುವುದೇ ವಿಷಾದಕರವಿದೆ.

ಮೋಟಾರ ಅವಘಡಗಳು.

ಮದ್ರಾಸ್ ಶಹರಿನಲ್ಲಿಯೂ ಇನ್ನಿತರ ಕಡೆಗಳಲ್ಲಿಯೂ ವರ್ಷವರ್ಷವೂ ಮೋಟಾರ ಅವಘಡಗಳು ಹೆಚ್ಚುತ್ತಾ ಬರುವದು ಬಹಳ ಯೋಚನೆಗೆ ಕಾರಣವಾಗಿದೆ. ಮದ್ರಾಸ ಸರಕಾರದ ಲಕ್ಷ್ಯವು ಇತ್ತ ಕಡೆಗೆ ಎಳೆಯಲ್ಪಟ್ಟಿದೆ; ಮತ್ತು ಸರಕಾರವೂ ಇವುಗಳನ್ನು ಕಡಿಮೆಮಾಡುವ ಬಗ್ಗೆ ಹೊಸ ಕಾನೂನುಗಳನ್ನು ಮಾಡುವ ಆಲೋಚನೆಯಲ್ಲಿದೆ. ಮೋಟರ ಡ್ರ್ಯಾವರರಲ್ಲಿ ಬಹಳವಾದ ಅಲಕ್ಷ್ಯವು ಇರುತ್ತದೆ. ಹೆಚ್ಚಾಗಿ ಡ್ರ್ಯಾವಿಂಗ್ ವೃತ್ತಿಯವರು ಅವಿದ್ಯಾವಂತ ಮಂಡಳಿಯಿಂದ ಬರುವರಾದುದರಿಂದ ಅವರಲ್ಲಿ ಸ್ವಲ್ಪ ವಿಶೃಂಖಲತೆಯೂ ಇರುತ್ತಿದೆ. ಆ ಮಟ್ಟಿಗೆ ಡ್ರ್ಯಾವರರ ಮೇಲೂ ಮ್ಹಾಲೀಕರ ಮೇಲೂ ಹೆಚ್ಚು ನಿರ್ಬಂಧವನ್ನಿಡಬೇಕಾಗುತ್ತದೆ. ಆದರೆ ಡ್ರ್ಯಾವರರಾದರೂ ಯಂತ್ರಾಧೀನರಾದುದರಿಂದ ಪ್ರತಿ ಒಂದು ಅವಘಡವೂ ಡ್ರ್ಯಾವರರ ಅತ್ಯಾಚಾರವೆನ್ನಲಾಗುವುದಿಲ್ಲ. ಅವಘಡಗಳಲ್ಲಿ ಹೆಚ್ಚಾಗಿ ಮೋಟರ ಸಂಚಾಲಕನಿಗಿಂತಲೂ ಅಪಾಯ ಹೊಂದಿದವರ ಮೇಲೆ ಜನತೆಯ ಸಹಾನುಭೂತಿ ಇರುವುದು ಸಹಜ. ಆದರೆ ಕಾಲು ನಡೆಯಲ್ಲಿ ಹೋಗುವವರೂ, ಇತರ ಮೆಲ್ಲನೆ ಚಲಿಸುವ ವಾಹನಗಳೂ ನಡಿಗೆಯ ಕ್ರಮವನ್ನು ಅನುಸರಿಸದೆ ಎಷ್ಟೋ ಅವಘಾತಕಗಳಾಗುವವೆಂಬುದನ್ನೂ ಈ ಅವಘಡಗಳನ್ನು ನಿವಾರಿಸಲು ಆಲೋಚಿಸುವಾಗ ಮರೆಯಬಾರದು. ಕಾಲು ನಡಿಗೆಯವರು ತೋರಿಸುವ ಅಸಡ್ಡೆಯೂ ಅಲಕ್ಷ್ಯವೂ ಮೋಟರನ್ನು ಸ್ವತಃ ಓಡಿಸುವವರಿಗೆ ಅನುಭವವಿದ್ದೇ ಇರುತ್ತದೆ. ಮಧ್ಯಮಾರ್ಗದಲ್ಲಿ, ಹಲವು ಮಾರ್ಗಗಳು ಕೂಡುವಲ್ಲಿ ಇಬ್ಬರು ಮೂವರಾಗಿ ಮಾತನಾಡುತ್ತ ನಿಲ್ಲುವುದು, ಎಷ್ಟು ಹೊರ್ನ್ ಮಾಡಿದರೂ ಕದಲದೆ ಇರುವುದು, ಕಟ್ಟಕಡೆಗೆ ಮೋಟರ ಡ್ರ್ಯಾವರನು ಮೋಟರನ್ನು ಹತ್ತಿರ ತಂದು 'ಏಳಿರಣ್ಣ' ಎಂದು ಸಂಯಮಿತ ಕೋಪದಿಂದ ಕೇಳುವುದು, ಇದು ಸಾಧಾರಣದ ಘಟನೆಯಾಗಿದೆ. ಮಳೆಗಾಲದಲ್ಲಿ ಹೊರ್ನ್ ಕೇಳುವ ಮೊದಲೇ ಮುಂಚಿತವಾಗಿಯೇ ಮೈಮೇಲೆ ಬೀಳುವ ಕೆಸರು ನೀರನ್ನು ತಪ್ಪಿಸಲಿಕ್ಕೆ ದೂರ ಓಡುವವರು ಇತರ ಸಮಯದಲ್ಲಿ ಮೋಟರ ಹತ್ತಿರ ಬಂದರೂ ಅವಸರ ಪಡದೆ ಸ್ವಂತ 'ಪುರಸತ್ತಿ'ನಲ್ಲಿಯೇ ಹಾದಿ ಬಿಟ್ಟು ಕೊಡುವ ಎಷ್ಟೋ ಉದಾಹರಣೆಗಳನ್ನು ಕಾಣಬಹುದು. ಇನ್ನೂ ಕೆಲವರು ಮೋಟರ ಹತ್ತಿರ ಬಂದಾಗಲೇ ಹೆದರಿಕೆ ತಟ್ಟಿ ಅಡ್ಡ ಓಡುವರು. ಆದುದರಿಂದ ಮೋಟರ ಅವಘಡಗಳನ್ನು ಆಲೋಚಿಸುವಾಗ ಡ್ರ್ಯಾವರ್ ಅಪರಾಧಿಗಳು ಮಾತ್ರವಲ್ಲದೆ, ಮಾರ್ಗದ ಮೇಲಿನ ಇತರ ವ್ಯವಹಾರಗಳ ಸುಧಾರಣೆಯನ್ನೂ ಲಕ್ಷಿಸುವುದು ಅವಶ್ಯವಿದೆ.

ಇಟಲಿಯಲ್ಲಿ ನ್ಯಾಯವಿತರಣೆಯೂ ಬ್ರಿಟಿಷರೂ.

ಮಿಲಾನಿನ ಬೊಂಬ ಅತ್ಯಾಚಾರದಲ್ಲಿ ಅಪರಾಧಿಗಳಾಗಿ ಹಿಡಿಯಲ್ಪಟ್ಟವರನ್ನು ಗುಟ್ಟಿನಲ್ಲಿ ವಿಚಾರಣೆ ನಡಿಸಿ ಶಿಕ್ಷೆಗೆ ಗುರಿಮಾಡಬೇಕೆಂದು ಇಟಲಿಯ ಮಂತ್ರಿಯಾದ ಮುಸ್ಸೊಲೀನಿಯು ವಿಧಿಸಿರುವನು. ಇದರ ನ್ಯಾಯಾನ್ಯಾಯವನ್ನು ನಾವು ಇಲ್ಲಿ ಚರ್ಚಿಸುವುದಿಲ್ಲ. ಆದರೆ ಇದನ್ನು ಕೇಳಿದ ಕೂಡಲೇ ಬ್ರಿಟಿಷ ಮಜೂರ ಪಕ್ಷವು ತಮ್ಮ ನ್ಯಾಯ ಪಕ್ಷಪಾತದ ಪ್ರದರ್ಶನವನ್ನು ಮಾಡಿದುದು ಹಿಂದೀಯರ ದೃಷ್ಟ್ಯಾ ವಿಶೇಷವಿದ್ದಿದೆ. ಇಟಲಿಯಲ್ಲಿ ನಡದ ಬೊಂಬ ಅತ್ಯಾಚಾರವು ಬಹಳ ಕಠಿಣತರದ್ದಾಗಿದ್ದಿತು; ಅಲ್ಲದೆ ಅಪರಾಧಿಗಳಿಗೆ ಗುಟ್ಟಿನದ್ದಾದರೂ ಒಂದು ವಿಚಾರಣೆ ಇದೆಯೆಂದಾದರೂ ಆಯಿತು. ಆದರೆ ಹಿಂದೂಸ್ಥಾನದಲ್ಲಿ ವಿಚಾರಣೆ ಇಲ್ಲದೇನೇ ಜೈಲಿನಲ್ಲಿ ಕೊಳೆಯುವ ಹಿಂದೀ ತರುಣರ ಪರವಾಗಿ ಇವರಿಗೆ ಹೇಳಲೇನಿದೆ? ಮಜೂರ ಪಕ್ಷವು ಅಧಿಕಾರದಲ್ಲಿ ಇದ್ದ ಸಮಯದಲ್ಲಿ ಅವರ ಒಪ್ಪಿಗೆಯಿಂದಲೇ ಈ ನಿರಪರಾಧಿಗಳನ್ನು ಶಿಕ್ಷಿಸುವ ಕಾನೂನು ಜ್ಯಾರಿಗೆ ಬಂದಿತು. ಹಿಂದೂಸ್ಥಾನದ ರತ್ನಪ್ರಾಯರಾದ ಹಲವು ತರುಣರು, ಸುಭಾಸ್ ಚಂದ್ರಬೋಸರಂತಹರು ಒಮ್ಮೆಯೇ ಜೈಲಿಗೆ ಒಯ್ಯಲ್ಪಟ್ಟರು. ಆಗ ತಮ್ಮ ನಿಷೇಧವನ್ನು ಪ್ರಕಟಗೊಳಿಸಲಿಕ್ಕೆ ಎಷ್ಟು ಮಂದಿ ಮುಂದೆ ಬಂದರು? ಹಿಂದೂಸ್ಥಾನದಲ್ಲಿ ವಿಚಾರಣೆಯಿಲ್ಲದೆ ಜೈಲಿನಲ್ಲಿ ಬಿದ್ದುಕೊಂಡಿರುವವರು ಇನ್ನೂ ಹಲವರಿರುವರು. ಇವರಿಗಾಗಿ ಈ ಮಜೂರಪಕ್ಷದವರೇನುಮಾಡಿರುವರು? ಇಟೇಲಿದ್ದು ಬರೀ ಇಬ್ಬರು ಅಪರಾಧಿಗಳ ವಿಷಯ; ನಮ್ಮ ದೇಶದಲ್ಲಿ ಎಷ್ಟೋ ಜನರು ಜೈಲಿನಲ್ಲಿದ್ದಾರೆ. ಸ್ವಂತ ಕಾಲಕೆಳಗಿನ ಕುಂಬಳಕಾಯಿಯನ್ನು ಬಿಟ್ಟು ಇತರರ ಸಾಸಿವೆಗೆ ಕೈಹಾಕುತ್ತಾರಲ್ಲ—ಈ ಬ್ರಿಟಿಷ ನ್ಯಾಯ ಸಾಧಕರು!

ನೋಟಗಳು.
NOTE...S.

ಆಯುರ್ವೇದ ಪರಿಷತ್ತಿನಲ್ಲಿ ನವವರ್ಷಕ್ಕಾಗಿ 'ಚುನಾಯಿತ'ರಾದವರನ್ನು ಸ್ವಲ್ಪದಲ್ಲೇ 'ನವಾಯಿತ'ರೆನ್ನಬೇಕು. ಇವರ ಉದ್ಯೋಗ, ರಾಜೀನಾಮೆ ಕೊಡುವುದು, ಪತ್ರವ್ಯವಹಾರಗಳಿಗೆ ಎಡೆಕೊಡುವುದು. ಇವರೊಡನೆ ಸಿಕ್ಕದ ಬಿರುದು ಬೇಡವೆಂದು ಹಿಂತೆಗೆವ ಉಮೇದುವಾರ ಬಿರುದುಕಾರರೂ ಇರುವರು.

• • • •

ಸ್ವಯಂಸೇವಕರ ಮೇಲೆ ಸ್ವಾರ್ಥಸೇವಕರ ಒಂದು ಗದೆ. ದುಡ್ಡು ಕೊಟ್ಟು, ಟಿಕೇಟು ಪಡೆದು, ದುಡಿದರೂ ಅವರಿಗೆ ವೋಟು ಇಲ್ಲ.

• • • •

ಆಹಾರದ ಮಟ್ಟಿಗೆ ಅಂತೂ ಜಠರಾಗ್ನಿ ಪ್ರಜ್ವಲಿಸಿತು. ಆದರೆ ಮಹಾಶಯರೊಳಗೆ ಹೊಟ್ಟೆಕಿಚ್ಚೆಂಬ ಆ ಉದರಾಗ್ನಿಯೂ ಹೆಚ್ಚಿತೆಂತಾದರೆ, ವೈದ್ಯರು ತ್ರಿದೋಷಗಳ ಸಾಮ್ಯತ್ವ ಸ್ಥಾಪನೆಗೆ ಬಗೆದೋರದೆ ರಾಜೀನಾಮೆಯೇ!

• • • •

ಚಿಕ್ಕಮಗಳೂರಿನಲ್ಲಿ ಒಬ್ಬ ಮಹಾ ಗುರುಗಳು ಬಂದಿರುವರು. ರಾತ್ರಿಹಗಲು ಜನರು ಇವರನ್ನು ನೋಡಲು ಬರುತ್ತಿರುವರು. ಇವರ ಬಾಯಿಯಿಂದ ಹೊರಟ ಮಾತೇ ದೇವವಾಕ್ಯವಂತೆ.

• • • •

ರಾತ್ರೆಹಗಲು ಭಜನೆ, ಊಟ ಇತ್ಯಾದಿ ಅಲ್ಲಿಯ ಬ್ರಾಹ್ಮಣರಿಂದ ನಡಿಸಲ್ಪಡುತ್ತಿದೆ. ಮಳೆಗಾಲದಲ್ಲಿ ಇದೊಂದು ಔತಣ!

• • • •

ಗುರುಗಳಿಗೆ ಸ್ತ್ರೀಯರಲ್ಲಿ ಬಹಳ ಪ್ರೇಮ. ಸಾಯಂಕಾಲ ಪ್ರಾರಂಭವಾಗಲು ಕೃಷ್ಣಲೀಲೆಯ ಆಟ, ಭಜನೆ. ಮಧ್ಯಾಹ್ನ; ಊಟ; ಅಂತೂ, ಚಿಕ್ಕಮಗಳೂರಿನಲ್ಲಿ ಔತಣ ದಿವಸಗಳು ಹಬ್ಬಗಳು ಬರುವ ಮುಂಚೆಯೇ ಬಂದಿರುವವು.

• • • •

ಉಡುಪಿ ತಾಲೂಕು ಬೋರ್ಡಿನ ಇನ್ನೊಬ್ಬ ಮೆಂಬರರು ರಾಜೀನಾಮೆಯನ್ನು ಕೊಡಲಿದ್ದಾರಂತೆ. ಇವರು ರಾಜೀನಾಮೆಯನ್ನು ಕೊಟ್ಟರೆ ಇನ್ನು ಮೂರು ಜನ ಉಮೇದುವಾರರಿರುವರು.

• • • •

ಒಟ್ಟಾರೆ ವೋಟರರ ಪುಣ್ಯ. ಈಗಿನ ವೋಟರರನ್ನು ಪುಳಕಾಯಿಸುವ ಹೊಸದೊಂದು ಉಪಾಯವನ್ನು ಉಮೇದುವಾರರು ಹುಡುಕಿ ತೆಗೆದಿರುವರು. ಕಾಫಿ ಫಲಹಾರದಿಂದ ಈಗ ಊಟ ಫಲಾಹಾರಕ್ಕೆ ಬಂದಿರುತ್ತದೆ. ವೋಟಿನ ದಿವಸ ವೋಟರರಿಗೆ ಊಟ ದಕ್ಷಿಣೆ ದಾನ ಮೊದಲಾದವುಗಳು.

• • • •

ತನ್ಮೂಲಕ ಉಮೇದುವಾರರು ಇಲೆಕ್ಷನಿಗೆ ನಿಂತ ಸಂಬಂಧ ಅವರ ಪಾಪಪುಣ್ಯಗಳು ನಶಿಸಿಹೋಗುವವು. ಹೀಗೆ ಎರಡೂ ಸಾಧನೆ ಮಾಡಿದಂತಾಯಿತು. ಇಹದ್ದೊಂದು ಪರದ್ದೊಂದು.

• • • •

ಎಸ್. ಎಸ್ ಎಲ್. ಸಿ. ಪರೀಕ್ಷೆಗೆ ಎಪ್ಪಿಯರ್ ಆದ ಬಡ ವಿದ್ಯಾರ್ಥಿಗಳ ಗೋಳನ್ನು ಕೇಳುವವರಿಲ್ಲವೇ? ಎಂಬ ಮನನೊಂದವನ ಪತ್ರವು ನಮ್ಮಲ್ಲಿಗೆ ಬಂದಿರುತ್ತದೆ.

• • • •

ಪರೀಕ್ಷೆಗೆ ನಿಲ್ಲುವ ಹುಡುಗರಲ್ಲಿ ಹೆಚ್ಚಿನವರು ಸರಿಯಾಗಿ ಕಲಿಯದೆ ಅಮೂಲ್ಯವಾದ ಸಮಯವನ್ನು ಹಾಳುಮಾಡಿದರೆ, ಮುಂದೆ ಬೋರ್ಡಿನವರನ್ನು ದೂರಿ ಫಲವೇನು?

• • • •

ಈ ಮನನೊಂದವನು ಮನಸ್ಸಿಟ್ಟು ಕಲಿತು ನೋಡಲಿ.

ಇಂತಹ ಕಠಿಣವಾದ ಪರಿಸ್ಥಿತಿಯು ದೇಶಕ್ಕೆ ಬರಗಾವುದಾದರೂ ಸರಕಾರವು ಕೈಕಟ್ಟಿ ನಿಂತು ತಮಾಷೆಯನ್ನು ನೋಡುತ್ತಿದೆ. ಈ ಮುಷ್ಕರಗಳ ಕೂಲಂಕಷ ವಿಚಾರಗಳನ್ನು ಮಾಡಿಕೊಳ್ಳುವ ಆವಶ್ಯಕತೆ ಇನ್ನೂ ಸರಕಾರಕ್ಕೆ ತಿಳಿದುಬಂದಿಲ್ಲ. ಇಂಗ್ಲೆಂಡಿನಲ್ಲಿ ಜನರಲ್ ಸ್ಟ್ರೈಕ್ (General Strike) ಆದಾಗ್ಯೆ ಇಂಗ್ಲೆಂಡಿನ ಕೆಬಿನೆಟ್ಟಿಗೆ (ಮಂತ್ರಿಮಂಡಲಕ್ಕೆ) ಬೇರೆ ಕೆಲಸವೇ ಇರಲಿಲ್ಲ. ಪ್ರತಿದಿನವೆಂಬಂತೆ ಮಜೂರ ಮುಂದಾಳುಗಳನ್ನೂ, ಧಾಂಡವಲಗಾರರ ಪ್ರತಿನಿಧಿಗಳನ್ನೂ ಕರೆಸಿ ವಿಷಯವನ್ನು ಚರ್ಚಿಸುವುದೇ ಆಗಿನ ಅವರ ಕೆಲಸವಾಗಿತ್ತು. ಸಾಮಾನ್ಯ ಕೂಲಿಮುಷ್ಕರಗಳಲ್ಲಿ ಕೂಡ ಸರಕಾರವು ಅವುಗಳನ್ನು ಹೇಗೆ ತೀರ್ಮಾನಿಸಲೆಂದು ಬಹಳ ಯೋಚನೆ ಪಡೆಯುತ್ತಿದೆ. ಇದೆಲ್ಲಾ ತಮ್ಮ ಸ್ವಂತದ ದೇಶಕ್ಕಾಗಿ. ಹಿಂದೂಸ್ಥಾನದಲ್ಲೇನು ನಡೆದರೂ ಬ್ರಿಟಿಷರಿಗೆ ಅದೊಂದು ದೊಡ್ಡದಲ್ಲ.

ವಿದೇಶ ವರ್ತಮಾನ.

—ಲಂಡನಿನ ಒಲಿಂಪಿಯ ಎಂಬ ಸ್ಥಳದಲ್ಲಿ ಒಂದು ಅತೀ ದೊಡ್ಡ ಪ್ರದರ್ಶನವನ್ನು ಜರಗಿಸುವರು. ಇಂತಹ ಪ್ರದರ್ಶನವು ಇದು ವರೆಗೆ ಎಲ್ಲಿಯೂ ನಡೆದುದಿಲ್ಲವೆನ್ನಬಹುದು. ಇದು ಜುಲಾಯಿ ೧೯ಕ್ಕೆ ಪ್ರಾರಂಭಿಸಿ, ಆಗೋಸ್ತು ಒಂದನೇ ತಾರೀಕಿನ ದಿನ ಕೊನೆಗಾಣುವದು. ಪ್ರದರ್ಶಕ ವಸ್ತುಗಳ ಬೆಲೆಯು ಹಲವು ಮಿಲಿಯ ಪವನುಗಳಿಗೆ ಏರಬಹುದಂತೆ.

—ಪಂಜಾಬದಲ್ಲಿ ಫಾಶಿ ಶಿಕ್ಷೆ ವಿಧಿಸಲ್ಪಟ್ಟ ಮೂವರು, ಪ್ರಿವಿಕೌನ್ಸಿಲಿಗೆ ಅಪೀಲು ಮಾಡಿದ್ದರು. ಆದರೆ ಅವರ ಮನವಿಯನ್ನು ಕೇಳಲು ಪ್ರಿವಿಕೌನ್ಸಿಲಿನವರು ನಿರಾಕರಿಸಿರುವರು.

—ರಗ್ಬಿಯ ಪ್ರಸಿದ್ಧಪಟ್ಟ ಕೃತಕ ಸಿಲ್ಕು ತಯಾರಿಸುವ ಕಾರಖಾನೆಯ ಒಬ್ಬ ಮೆಂಬರನಾದ ಸ್ಯಾಮುವೆಲ್ಲ ಕೊರ್ಟೊಲ್ಡನು ಒಂದು ಆಸ್ಪತ್ರೆಯನ್ನು ಕಟ್ಟಿಸುವದಕ್ಕೆಂದು ೩೦,೦೦೦ ಸಾವಿರ ಪವನುಗಳನ್ನು ದಾನವಾಗಿ ಕೊಟ್ಟಿರುವನು.

—ಇದು ವರೆಗೆ ಪೆಕಿಂಗ್ ಪಟ್ಟಣವು ಚೀನಾ ರಾಜ್ಯದ ರಾಜಧಾನಿಯಾಗಿದ್ದಿತು. ಇನ್ನು ಅಲ್ಲಿನ್ನ ಸರಕಾರ ಆಫೀಸುಗಳೆಲ್ಲವನ್ನು ನೆನಕಿಂಗಿಗೆ ಕಳಿಸಿ, ಮುಂದೆ ನೆನಕಿಂಗನ್ನು ಮುಖ್ಯ ಪಟ್ಟಣವಾಗಿ ಮಾಡುವರು.

—ಇಂಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಟಪ್ಪಾಲನ್ನು ವಿಮಾನಗಳ ಮೂಲಕ ಒಯ್ಯುವರಂತೆ. ಹೀಗೆ ಮಾಡಿದರೆ ಇಂಗ್ಲೆಂಡಿನಿಂದ ಕರಾಚಿಗೆ ೭ ದಿನಗಳೊಳಗೂ, ಕಲಕತ್ತಕ್ಕೆ ಒಂಭತ್ತು ದಿನಗಳೊಳಗೂ ಟಪ್ಪಾಲು ಬಂದು ತಲಪಿದಂತಾಗುವದು.

—ಇಡೀ ವಿಶ್ವದ ಮೋಟಾರ ಟ್ರಾನ್ಸ್‌ಪೋರ್ಟ್ ಕಾಂಗ್ರೆಸಿನ ಬರುವ ಅಧಿವೇಶನವು ಸಪ್ಟಂಬರ ತಿಂಗಳಲ್ಲಿ ರೋಮಿನಲ್ಲಿ ಜರಗುವದು.

—ಫ್ರಾನ್ಸಿನಲ್ಲಿ ಹಾರಾಡುತ್ತಿದ್ದ ೨೪ ವಿಮಾನಗಳು ಮಳೆಗಾಳಿಗೆ ಸಿಕ್ಕಿದ ಕಾರಣ ನಾಲ್ಕೇ ವಿಮಾನಗಳು ಅಪಾಯವನ್ನು ತಪ್ಪಿಸಿಕೊಂಡು ಸ್ಥಾನ್ಯವನ್ನು ತಲಪಿರುವವು. ೧೦ ವಿಮಾನಗಳು ಜಖಂ ಹೊಂದಿ ಬಿದ್ದುಬಿಟ್ಟವು. ೧೦ ವಿಮಾನಗಳ ಪತ್ತೆಯೇ ಇರುವುದಿಲ್ಲ.

—ರೈಲು ಪ್ರಯಾಣ ಮತ್ತು ವಿಮಾನ ಪ್ರಯಾಣ ಇವೆರಡರಲ್ಲಿ ಯಾವುದು ಸುಖಪ್ರದವಾದ ಪ್ರಯಾಣವೆಂಬುದನ್ನು ಪರೀಕ್ಷಿಸುವುದಕ್ಕಾಗಿ "ಸಿಟಿ ಓಫ್ ಗ್ಲಾಸ್‌ಗೊ" ಎಂಬ ವಿಮಾನದಲ್ಲಿ ೨೧ ಜನರೂ, "ಫ್ಲಾಯಿಂಗ್ ಸ್ಕಾಟ್ಸ್‌ಮೆನ್" ಎಂಬ ರೈಲಿನಲ್ಲಿ ಹಲವರು ಕುಳಿತು ಕ್ರೊಯ್ಡನಿನಿಂದ ಹೊರಟು ಎಡಿನ್‌ಬರ್ಗಿಗೆ ತೆರಳಿದರು. ವಿಮಾನವು ೯೦ ಮೈಲಿನಂತೆಯೂ, ರೈಲು ೫೦ ಮೈಲಿನಂತೆಯೂ ಓಡಿದವು. ವಿಮಾನವು ಅಲ್ಲಲ್ಲಿ ನಿಲ್ಲುತ್ತಾ ಪೆಟ್ರೋಲ ತೆಗೆದುಕೊಳ್ಳುತ್ತಾ ಓಡಿ ೮೭೮ ಮೈಲುಗಳ ಪ್ರಯಾಣವನ್ನು ಮಾಡಿತು. ಆದರೆ ರೈಲು ಸೀದಾ ಓಡಿ ೩೯೨ ಮೈಲುಗಳ ಪ್ರಯಾಣವನ್ನು ಜರಗಿಸಿತು. ಪ್ರಯಾಣದ ಸಮಯದಲ್ಲಿ ಇವೆರಡಕ್ಕೂ ವಾಯರ್‌ಲೆಸ್ ಟೆಲಿಗ್ರಾಫಿಯ ಜೋಡಣೆಯಿದ್ದಿತು.

—ವಿನರೆಕ್ಸಿನಲ್ಲಿ ಸಮುದ್ರ ಕರಾವಳಿಯಲ್ಲಿ ಕ್ರಿಸ್ಪನ್ ಎಂಬ ಹೆಸರಿನ ಫ್ರೆಂಚನೊರ್ವನು ತನ್ನ ನಾಯಿಯೊಂದಿಗೆ ಸಂಚರಿಸುವಾಗ, ನಾಯಿಯು ಥಕ್ಕನೆ ನೀರಿಗೆ ಬಿದ್ದಿತು. ನಾಯಿಯನ್ನು ರಕ್ಷಿಸುವದಕ್ಕಾಗಿ ಅವನೂ ನೀರಿಗಿಳಿದನು. ನೀರಿನಲ್ಲಿ ಆಧಾರ ತಪ್ಪಿ ಬಿದ್ದ ಸಾಯುವ ಸ್ಥಿತಿಯನ್ನು ನೋಡಿ, ಮೇರಿ ಲಿಜರ್ ಎಂಬ ೧೯ ವರ್ಷ ಪ್ರಾಯದ ಇಂಗ್ಲಿಷ ಯುವತಿಯೊರ್ವಳು ಕಂಡು, ಆತನನ್ನು ಬದುಕಿಸಬೇಕೆಂದು ತಾನೂ ನೀರಿಗಿಳಿದಳು. ಅಕಸ್ಮಾತ್ತಾಗಿ ನೀರಿನ ಪ್ರವಾಹವು ಅವರಿಬ್ಬರನ್ನೂ ಎಳಕೊಂಡು ಹೋಗಿ ಬಿಟ್ಟಿತು. ಇದೆಲ್ಲವನ್ನು ನೋಡುತ್ತಿದ್ದ ಅವಳ ತಾಯಿಯು ತಾನೂ ಆತ್ಮಹತ್ಯವನ್ನು ಮಾಡಬೇಕೆಂದು ಮುಂದರಿದಾಗ ಇತರರು ಆಕೆಯನ್ನು ತಡೆದರು.

—ಯುವರಾಜರೂ, ಗ್ಲೌಸೆಸ್ಟರಿನ ಡ್ಯೂಕರೂ ಕೂಡಿ ನಾಲ್ಕು ತಿಂಗಳಿನ ಆಫ್ರಿಕಾ ಸಂಚಾರವನ್ನು ಮಾಡುವರು. ಒಟ್ಟಾರೆ ಹತ್ತು ಯಾ ಹನ್ನೆರಡು ಜನರು ಸಪ್ಟಂಬರ ತಿಂಗಳಲ್ಲಿ ಹೊರಟು ಮೊಂಬಾಸಕ್ಕೆ ಹೋಗುವರು. ಹೋಗುವಾಗ ಐದು ಮೋಟಾರುಕಾರುಗಳನ್ನು ಕೊಂಡು ಹೋಗುವರು. ಅಲ್ಲಿಯ ಸ್ಥಿತಿಯನ್ನು ಕಂಡು ಹಿಡಿಯುವದು, ಅನಾಗರಿಕ ಪ್ರದೇಶವನ್ನು ಸಂದರ್ಶಿಸುವದು ಇವೇ ಅವರ ಮುಖ್ಯ ಧ್ಯೇಯ. ರೊಡೆಷ್ಯದಲ್ಲಿ ಸಂಚರಿಸುತ್ತಾ ಹೋಗಿ ನವಂಬರ ತಿಂಗಳಲ್ಲಿ ಕೇಪ ಟೌನಿಗೆ ತಲಪುವರು.

—ಅಫಘಾನ ಅಮೀರ ದಂಪತಿಗಳು ಟೆಹೆರಾನಿನಿಂದ ಹೊರಟು ತಮ್ಮ ರಾಜಧಾನಿಗೆ ಬರುತ್ತಿರುವರು. ಇಲ್ಲಿಗೆ ಅವರ ಯುರೋಪು ಸಂಚಾರವು ಮುಗಿದಂತಾಯಿತು. ಜರ್ಮನ್ ಸರಕಾರದವರು ಅಮೀರರಿಗೆ ಹತ್ತು ಜನರು ಕುಳಿತುಕೊಳ್ಳಬಹುದಾದ ಒಂದು ವಿಮಾನವನ್ನು ಕೊಟ್ಟಿರುವರು. ಇದಲ್ಲದೆ ಅಮೀರರು ಇನ್ನೆರಡು ವಿಮಾನಗಳನ್ನು ಕ್ರಯಕ್ಕೆ ಕೊಂಡಿರುವರು.

—ಕಿಂಗ್ ಎಡ್ವರ್ಡ್ ಆಸ್ಪತ್ರೆಯ ಫಂಡಿಗೆ ಯಾವನೋ ಒಬ್ಬನು ೧೦,೦೦೦ ಪವನುಗಳನ್ನು ಕಳುಹಿರುವನು. ಆದರೆ ತನ್ನ ಹೆಸರನ್ನು ತಿಳಿಸದೆ ಗೋಪ್ಯವಾಗಿ ಇಟ್ಟಿರುವನು.

—ಕೆನಡಾದಿಂದ ಆಸ್ಟ್ರೇಲಿಯಕ್ಕೆ ವಾಯರ್‌ಲೆಸ್ ಟೆಲಿಗ್ರಾಫಿ ಯನ್ನು ಪ್ರಾರಂಭಿಸಿರುವರು. ಅಲ್ಲಿಯ ಅರಸರೂ ಇಲ್ಲಿಯ ಮುಖ್ಯಾಧಿಕಾರಿಗಳೂ ಮಾತನಾಡಿಕೊಂಡಿರುವುದರಿಂದ, ಹಲವು ವರ್ಷಗಳಿಂದ ಎರಡೂ ದೇಶದವರು ಮಾಡುತ್ತಿದ್ದ ಪ್ರಯತ್ನವು ಸಫಲವಾದಂತಾಯಿತು.

—ಪರ್ಶಿಯದ ಅರಮನೆಯಲ್ಲಿ ಕೆಲಸಕ್ಕಿರುವ ಜರ್ಮನಿಯವನೊಬ್ಬನು ನೆಲವನ್ನು ಅಗಿಸುತ್ತಿರುವಾಗ, ಒಂದು ದೊಡ್ಡ ಅರಮನೆಯ ರುವಿನವನ್ನು ಕಂಡು ಹಿಡಿದಿರುವನು. ಈ ಅರಮನೆಯು ಈಗಿನ ಪರ್ಶಿಯದ ಅರಮನೆಗಿಂತ ವಿಶಾಲವಾಗಿರುವದಂತೆ. ಇನ್ನು ಒಂದು ಕಲ್ಲಿನ ಪ್ರತಿಮೆಯೂ ದೊರಕಿರುವದು "ಸ್ಸಾರಸ್ ಧಿ ಗ್ರೇಟ್" ಎಂದು ಪ್ರತಿಮೆಯ ಮೇಲೆ ಹೆಸರು ಕೆತ್ತಲ್ಪಟ್ಟಿರುವದು.

—ರಾಜಕುವರಿ ಮೇರಿಯವರ ಇರುವಿಕೆಯಿಂದ ಬಹು ಸಂಭ್ರಮದಿಂದ ಲಂಡನಿನ ಗ್ರೊಸ್‌ವೆನೊರ್ ಅರಮನೆಯಲ್ಲಿ ರಾತ್ರಿ ನರ್ತನವು ನಡೆಯುತ್ತಿತ್ತು. ಆದರೆ ಈ ಸಮಾರಂಭವನ್ನು ನೋಡಲು ಮಾಳಿಗೆಯ ಮೇಲೆ ಕುಳಿತಿದ್ದ ಇಬ್ಬರು ಯುವತಿಯರು ಅಕಸ್ಮಾತ್ತಾಗಿ ಕೆಳಗೆ ಬಿದ್ದು ಒಬ್ಬಳು ಸತ್ತೇ ಹೋದಳು.

—ಡಾ॥ ಅನ್ನಿಬೆಸೆಂಟಮ್ಮನವರು ವಿಲಾಯತಿಗೆ ತಲಪಿ, ಅಲ್ಲಿ ಹಿಂದೂದೇಶದ ಕುರಿತಾಗಿ ಭಾಷಣಗಳನ್ನು ಕೊಡುತ್ತಿರುವರು.

ಒಳದೇಶ ವರ್ತಮಾನ.

ಇಂದೋರಿನ ಮಾಜಿಮಹಾರಾಜ ಸರ್ ತುಕೋಜಿರಾಯರ ಹೊಸ ರಾಣಿಯವರಾದ ಮಿಸ್. ನೆನ್ಸಿ ಮಿಲ್ಲರಳು ಒಪರೇಶನು ಮಾಡಿಸಿಕೊಳ್ಳುವದಕ್ಕಾಗಿ ಪೆರಿಸಿನಿಂದ ಲಂಡನಿಗೆ ಹೋಗುವರು. ನೆವಿಲ್ಲಿಯಲ್ಲಿ ಅಮೇರಿಕನ್ ಹೊಸ್ಪಿಟಲಿನಲ್ಲಿ ಮಹಾರಾಜನಿಗೂ, ರಾಣಿಗೂ, ಅವರ ಸೇವಕರಿಗೂ, ಇರಲು ಸಾಕಷ್ಟು ಸ್ಥಳವಿಲ್ಲದ ಕಾರಣ ಅವರು ಲಂಡನಿಗೆ ತೆರಳುವರು. ಅವರ ಪರಿವಾರದವರು ಎಷ್ಟಿರಬಹುದೆಂಬವನ್ನು ಇದರಿಂದಲೇ ಗೊತ್ತುಮಾಡಿಕೊಳ್ಳಬಹುದು.

—ಬರುವ ದಶಂಬರ ತಿಂಗಳಲ್ಲಿ ಕಲಕತ್ತದಲ್ಲಿ ನೆರವೇರಲಿರುವ ಅಖಿಲ ರಾಷ್ಟ್ರೀಯ ಅಧಿವೇಶನಕ್ಕೆ ರಾ॥ ಪಂಡಿತ ಮೋತಿಲಾಲನೆಹರುರವರು ಅಧ್ಯಕ್ಷರಾಗಬೇಕೆಂದು ಹಲವರ ಸೂಚನೆ ಇರುತ್ತದೆ. ಇವರು ಹಿಂದೂಗಳಲ್ಲಿ ಐಕ್ಯವಾಗಬೇಕೆಂದು ಸಾಧಿಸಿದವರು. ಚೆನ್ನಾಗಿ ತಿಳುವಳಿಕೆಯುಳ್ಳವರು. ಇವರು ಈ ಪದವಿಯನ್ನು ಸ್ವೀಕರಿಸಲು ಒಪ್ಪಿದರೆ ಬಹಳ ಉತ್ತಮವಿದ್ದಿತು.

—ಮೊನ್ನೆ ತಾನೆ ಮೃತಪಟ್ಟ ಶ್ರೀಮತಿ ವಿರಜ ಬೋಸರು ಧರ್ಮಕಾರ್ಯಗಳಿಗೆಂದು ಹತ್ತು ಸಾವಿರ ರೂಪಾಯಿಗಳನ್ನು ಬಿಟ್ಟಿರುವರು.

—ಪೂನೆಯಲ್ಲಿ ಕಳೆದ ೧೬ನೇ ತಾರೀಕಿನ ದಿನ ಶಿವಾಜಿ ಮಹಾರಾಜರ ಒಂದು ದೊಡ್ಡ ಹಿತ್ತಾಳಿ ಪ್ರತಿಮೆಯ ಅನಾವರಣ ಸಮಾರಂಭವನ್ನು ಜರಗಿಸಿದರು. ೧೬ ಅಡಿ ಎತ್ತರವುಳ್ಳ ಒಂದು ಪೀಠದ ಮೇಲೆ ಆ ಪ್ರತಿಮೆಯನ್ನು ಇರಿಸಬೇಕಾದರೆ ಸ್ಟೀಮ್ ರೋಲರುಗಳೂ ಕ್ರೇನುಗಳೂ ಉಪಯೋಗಿಸಲ್ಪಟ್ಟವು. ಪ್ರತಿಮೆಯು ೧೦ ಟನ್ (೪೦೦ ಮಣ) ಭಾರವಿದ್ದಿತಂತೆ.

—ಖಾನಪುರದ ನಯನಗಂಜದಲ್ಲಿ ಮಾರ್ಗದ ಬದಿಯಲ್ಲಿರುವ ಅಂಗಡಿಯ ಸಾಹುಕಾರನೊರ್ವನು ರಾತ್ರಿ ಒಂಭತ್ತು ಘಂಟೆಯ ಸಮಯದಲ್ಲಿ ತನ್ನ ಲೆಕ್ಕವನ್ನು ಮುಗಿಸಿ, ಸಿಲ್ಕು ಹಣವು ಸರಿಯಿದೆಯೋ ಎಂಬುವನ್ನು ಪರೀಕ್ಷಿಸುತ್ತಿದ್ದನು. ಒಡನೆ ಇಬ್ಬರು ಅಂಗಡಿಯನ್ನು ಹೊಕ್ಕು ಹಣವನ್ನೆಲ್ಲ ತಮಗೆ ಕೊಡಬೇಕೆಂದರು. ಒಬ್ಬನು ತನ್ನ ಪಿಸ್ತೂಲಿನಿಂದ ಗುಂಡು ಹಾರಿಸಲಾಗಿ ಉಳಿದೊಬ್ಬನು ಬೀರಿಯವರನ್ನು ಕರತಂದು, ಸಾಹುಕಾರನೊಡನಿದ್ದ ೨,೦೦೦ ರೂಪಾಯಿಯ ನೋಟುಗಳನ್ನು ಅಪಹರಿಸಿದನು.

—ಬಂಗಾಳ, ಬಿಹಾರ, ಒರಿಸ್ಸಾ ಮತ್ತು ಮಧ್ಯಪ್ರಾಂತ, ಈ ಸ್ಥಳಗಳಲ್ಲಿರುವ ಕಲ್ಲಿದ್ದಲಿನ ಗಣಿಗಳಲ್ಲಿಯೂ, ಪಂಜಾಬದ ಉಪ್ಪಿನ ಗಣಿಗಳಲ್ಲಿಯೂ, ಹೆಂಗಸರು ಕೆಲಸಮಾಡಲಾಗದೆಂಬ ಒಂದು ಠರಾವು ಇಂಡಿಯಾ ಸರಕಾರದವರು ಪ್ರಕಟಿಸಿರುವರು. ಬರುವ ವರುಷದಿಂದ ಯಾವ ಹೆಂಗಸೂ ಯಾವ ಗಣಿಯಲ್ಲಿಯೂ ಕೆಲಸಮಾಡಬಾರದೆಂದೂ, ಮುಖ್ಯ ಇನ್ಸ್‌ಪೆಕ್ಟರನ ಹುಕುಮಿದ್ದರೆ ಮಾತ್ರ ಒಮ್ಮೆಗೆ ಗಣಿಯನ್ನು ಪ್ರವೇಶಿಸಬಹುದೆಂದೂ ಕಾನೂನು ಮಾಡುವರು.

—ಮುಂಬಾಯಿಯ ೧೫ ವರ್ಷ ಪ್ರಾಯದ, ತರುಣನೊರ್ವನು ಕೀರ್ತಿ ಹೊಂದಬೇಕೆಂಬ ಮಹದಭಿಲಾಷೆಯಿಂದ ಮುಂಬಾಯಿಯಿಂದ ಹೊರಟು ಸ್ಕಾಕೆಲು ಪ್ರಯಾಣದಿಂದ ೧೦೦೦ ಮೈಲಿನ ಅಂತರದಲ್ಲಿರುವ ಲಕ್ನೋವನ್ನು ಇಪ್ಪತ್ತೇ ದಿನಗಳಲ್ಲಿ ತಲಪಿದನು. ಆಶ್ಚರ್ಯಕರವಾದ ಸಂಗತಿ.

—ಮುಸುರಿಯಲ್ಲಿ ಭಯಂಕರವಾದ ಬೆಂಕಿಯಿಂದ ೨೫೦ ಮನೆಗಳು ಸುಟ್ಟು ಹೋಗಿ, ಹಲವು ಜನರಿಗೆ ಅಪಾಯ ಸಂಭವಿಸಿರುವದು. ಅಲ್ಲಿಯ ಸಬ್ ಕಲೆಕ್ಟರರು ನಿರ್ಗತಿಕರಾದ ಜನರ ಸಹಾಯಾರ್ಥವಾಗಿ ಒಂದು ರಿಲೀಫ್ ಫಂಡನ್ನು ಪ್ರಾರಂಭಿಸಿರುವರು.

—ಸರಕಾರದವರ ವರ್ತನೆಯನ್ನು ಅನುಮೋದಿಸಲಾರದೆ, ಅನ್ಯಾಯವೆಂದು ಕಂಡುಹಿಡಿದು ಇದು ವರೆಗೆ ಬಾರ್ಡೋಲಿಯಲ್ಲಿ ೬೯ ಪೋಲೀಸ ಪಟೇಲರು ತಮ್ಮ ಕೆಲಸಕ್ಕೆ ತಿಲಾಂಜಲಿಯನ್ನು ಕೊಟ್ಟಿರುವರು. ಮುನ್ನೂರು ಜನ ಸೈನಿಕರಿಂದ ಕೂಡಿದ ಒಂದು ಸೈನ್ಯವನ್ನು ಸರಕಾರದವರು ಬಾರ್ಡೋಲಿಗೆ ತರುವರಂತೆ. ಅವರಲ್ಲಿ ಹಲವರನ್ನು ಸೂರತಿನಲ್ಲಿ ನಿಲ್ಲಿಸಿರುವರು. ಬಾರ್ಡೋಲಿ ತಾಲೂಕಿನ ಹಲವು ಸ್ಥಳಗಳಲ್ಲಿಯೂ ಸೈನಿಕರನ್ನು ನಿಲ್ಲಿಸುವರು. ಕಲೆಕ್ಟರರ ಸಹಿಯುದ್ದ "ಶಾಂತಿಯೊದಗಬೇಕಾದರೆ ಕಂದಾಯವನ್ನು ಕೊಡಿರಿ" ಎಂದು ಬರೆದಿರುವ ಕರಪತ್ರಗಳನ್ನು ಹಂಚುತ್ತಿರುವರು. ಸತ್ಯಾಗ್ರಹನಿಧಿಗೆ ಈ ವರೆಗೆ ಒಟ್ಟು ೧ ಲಕ್ಷ ರೂಪಾಯಿ ಜಮೆಯಾಗಿರುತ್ತದೆ.

—ಅಲಿಸಹೋದರರ ಒಬ್ಬಳೇ ಒಬ್ಬ ಸಹೋದರಿಯಾದ ಬೇಗಮ್ ಯುಸುಫ್ ಅಲಿ ಎಂಬವಳು ಕಳೆದ ಆದಿತ್ಯವಾರ ರಾಮಪುರದಲ್ಲಿ ಮೃತಪಟ್ಟಳು.

—ಪೂನೆಯ ಕೊಲೆಜಿಗೆ ಜಮಖಂಡಿಯ ಅರಸರು ೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಈ ಕೊಲೆಜಿಗೆ ಅರಸರ ಜನಕನ ಹೆಸರಾದ ಸರ್, ಪರಶುರಾಮ್ ಭಾವು ಕೊಲೆಜ್ ಎಂದು ಹೆಸರಿಡುವರು. ಜಮಖಂಡಿಯ ೫೦ ವಿದ್ಯಾರ್ಥಿಗಳನ್ನು ಧರ್ಮಾರ್ಥವಾಗಿ ಸೇರಿಸಿಕೊಳ್ಳುವರು.

—ಅಲವಾರದ ಆಸ್ಥಾನದಲ್ಲಿದ್ದ ರಮಾನಾಥನೆಂಬವನೊಬ್ಬನು ಹಿಮಾಲಯ ಪರ್ವತವನ್ನು ದಾಟಲು ಪ್ರಯತ್ನಿಸಿರುವನು. ಆತನು ೧೮ ಸಾವಿರ ಅಡಿ ಎತ್ತರವಿರುವ ಸ್ಥಳಕ್ಕೆ ಇಪ್ಪರಲ್ಲಿ ಹೋಗಿರುವನಂತೆ.

—ಬಾರ್ಡೋಲಿಯಲ್ಲಿ ಸರಕಾರದವರ ಅನಾಚರಣೆಯ ಫಲುವಾಗಿ ಶ್ರೀ. ಮುನ್ಶಿಯವರು ಕೌನ್ಸಿಲ್ ಮೆಂಬರಿಕೆಗೆ ರಾಜಿಯನ್ನು ಕೊಟ್ಟಿರುವರು.

—ತಿರುವಲೂರಿನಲ್ಲಿ ೪೦ ಅಡಿ ಎತ್ತರವುಳ್ಳ ಒಂದು ತೆಂಗಿನ ಮರವನ್ನು ಹತ್ತಿ ಒಬ್ಬನು ತೆಂಗಿನಕಾಯಿಗಳನ್ನು ತೆಗೆಯುತ್ತಿರುವಾಗ ಥಕ್ಕನೆ ಜಾರಿ ಬಿದ್ದು ಮೃತಪಟ್ಟನು.

—ಬಂಗಾಳದಲ್ಲಿ ಎರಡು ರೈಲುಗಾಡಿಗಳು ಒಂದಕ್ಕೊಂದು ಬಡಿದು ಒಬ್ಬ ಡ್ರ್ಯಾವರನು ಮೃತಪಟ್ಟನು. ಒಬ್ಬ ಗಾರ್ಡನೂ, ಫಾಯರ್ ಮೇನನೂ ಕಾಣಸಿಕ್ಕಿರುವದಿಲ್ಲ.

—ಬನಾರಸಿನಲ್ಲಿ ಒಬ್ಬನು ಒಂದು ಮಗುವನ್ನು ಇಟ್ಟಿಗೆಯಿಂದ ಹೊಡೆದು ಕೊಂದು ಶವವನ್ನು ನದಿಯಲ್ಲಿ ಬಿಸಾಡಿದನು. ತಂದೆತಾಯಿಗಳಿಗೆ ಇದು ತಿಳಿಯದೆ ಅವರು ಮಗುವನ್ನು ಹುಡುಕುತ್ತಾ ಇದ್ದರು. ರಾತ್ರಿ ಎಂಟು ಘಂಟೆಯ ಸಮಯ ಕೊಲೆಪಾತಕಿಯು ಪೋಲೀಸ್ ಸ್ಟೇಶನಿಗೆ ಹೋಗಿ ತಾನು ಮಗುವನ್ನು ಕೊಂದಿದ್ದೇನೆಂದು ಹೇಳಿ ತನ್ನನ್ನು ಕೈದು ಮಾಡಿಸಿಕೊಂಡನು.

ದಕ್ಷಿಣ ಕನ್ನಡ.

ಮಂಗಳೂರು:—ಇದೇ ಬರುವ ತಾರೀಕು ೨೪ನೇ ಆದಿತ್ಯವಾರ ದಿನ ಬೆಳಗ್ಗೆ ೭॥ ಗಂಟೆಗೆ ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಕಾರ್ನಾಡ ಸದಾಶಿವ ರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಇಲ್ಲಿಯ ಪೋಲಿಸ್ ಸುಪರಿಂಟೆಂಡೆಂಟರಾದ ರಾ. ವಿ. ಕೆ. ಥಂಬನರಿಗೆ ಉತ್ತರ ಆರ್ಕಾಟಿಗೆ ವರ್ಗವಾಗಿತ್ತಾದರೂ ಸದ್ಯಕ್ಕೆ ಈ ಹುಕುಮನ್ನು ಸದ್ಯಕ್ಕೆ ಮನ್ನಾ ಮಾಡೋಣಾಗಿರುತ್ತದೆ.

ಇಲ್ಲಿಯ ಸುಪ್ರಸಿದ್ಧ ವಕೀಲರಾದ ರಾ. ಎಮ್. ಎನ್. ಪ್ರಭುಗಳ ತೀರ್ಥರೂಪರವರು ಕಳೆದ ಮಂಗಳವಾರ ದಿನ ಸಂಜೆ ದೈವಾಧೀನರಾದರು ಅವರು ಇಲ್ಲಿಯ ಕೆನರಾ ಹೈಸ್ಕೂಲಿಗೆ ಬಹಳ ಸಹಾಯವನ್ನು ಮಾಡಿದವರಾದ ಕಾರಣ ಬುಧವಾರ ದಿನ ಕೆನರಾ ಹೈಸ್ಕೂಲ್ ಮುಕುಫ್ ಮಾಡೋಣಾಗಿತ್ತು.

ಜಿಲ್ಲೆಯ ಬಿಲ್ಲವ ವಿದ್ಯಾರ್ಥಿಗಳಿಗಾಗಿ ಬೆಂಟ್‌ಲೇಂಡ್ ಪೇಟೆಯಲ್ಲಿ ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯವರಿಂದ ಕಟ್ಟಿಸೋಣಾದ ಸೂಟರ್ ವಿದ್ಯಾರ್ಥಿ ಭವನವು ಇದೇ ತಿಂಗಳ ತಾರೀಕು ೧೦ರಿಂದ ತೆರೆಯಲ್ಪಟ್ಟಿರುತ್ತಾ ಸ್ಪಶ್ಯತ ೧ ಫೋರ್ಮಿನಿಂದ ಎಫ್. ಎ. ವರೇಗೆ ಅಂದರೆ ಈಗಿನ ಇಂಟರ್ ಮಿಡ್ಯೇಟು ಕ್ಲಾಸಿನ ವರೇಗೆ ವಿದ್ಯಾಭ್ಯಾಸ ಮಾಡುವ ೧೦ ಮಂದಿ ವಿದ್ಯಾರ್ಥಿಗಳು ಭವನವನ್ನು ಸೇರಿರುತ್ತಾರೆ. ವಿದ್ಯಾರ್ಥಿಗಳ ಮೇಲ್ವಿಚಾರವನ್ನು ಮ. ರಾ. ಉರ್ವ ಜಾರಪ್ಪನವರು ಭವನದ ಪಾಲಕ (warder)ರಾಗಿಯೂ ಮ. ರಾ. ತಲವಾರ್ ನಾಗಪ್ಪನವರು ಇವರ ಸಹಾಯಕರಾಗಿಯೂ ನೋಡುತ್ತಲಿದ್ದಾರೆ. ಹೆಚ್ಚಿನ ವಿದ್ಯಾರ್ಥಿಗಳು ವಿದ್ಯಾರ್ಥಿ ಭವನದ ಆಶ್ರಯವನ್ನು ಮರೆಹೊಕ್ಕುವ ಅಪೇಕ್ಷೆಯಲ್ಲಿರುತ್ತಾರೆಂಬುವಕ್ಕೆ ಶುಭಸೂಚನೆಗಳು ವಿದ್ಯಾರ್ಥಿಭವನದ ಸಮಿತಿಯವರ ಸಾಹಸಗಳಿಂದಲೇ ವ್ಯಕ್ತವಾಗುತ್ತದೆ.

ಶಾಲಾ ಅಧಿಕಾರಿಗಳಿಂದ ವಿದ್ಯಾರ್ಥಿಭವನಕ್ಕೆ ಬರತಕ್ಕ ಸಹಾಯದ ಕುರಿತು ಕಮಿಟಿಯವರು ಪ್ರತಿಯೊಂದು ಶಾಲಾ ಅಧಿಕಾರಿಗಳಿಗೂ ಪತ್ರಗಳನ್ನು ಬರೆದಿರುತ್ತಾರೆ. ಶಾಲಾ ಅಧಿಕಾರಿಗಳು ಅದಕ್ಕೆ ಸಮ್ಮತಿಸಿರುತ್ತಾರೆ. ಈತರದ್ದೊಂದು ಭವನವು ಇದ್ದುದು ವಿದ್ಯಾರ್ಥಿಗಳ ಭಾಗ್ಯವೇ ಸರಿ. ಇಂಥಾದ್ದೊಂದು ಅಪೂರ್ವ ಸಂದರ್ಭವನ್ನು ಹೋಗಲಾಡಿಸದಿರುವದು ವಿದ್ಯಾರ್ಥಿಗಳನ್ನೆ ಹೊಂದಿರುತ್ತದಲ್ಲದೆ ವಿದ್ಯಾರ್ಥಿ ಭವನದ ಕಮಿಟಿಯವರು ಮಾಡತಕ್ಕದ್ದೇನೂ ಬಂದಿರುವದಿಲ್ಲ.

ಇಲ್ಲಿ ಇತ್ತಲಾಗೆ ಸ್ಥಾಪಿತವಾದ ಮೂಲ್ಕಿರ ಶ್ರೀರಾಮ ಸೇವಾ ಸಮಿತಿಯಲ್ಲಿ ವಸೂಲಾದ ರೂಪಾಯಿಯಲ್ಲಿ ಖರ್ಚು ಕಳೆದು ಉಳಿದ ರೂಪಾಯಿ ೩೨—೦—೦ನ್ನು ಇದೇ ತಿಂಗಳ ತಾರೀಕು ೧೮ನೇ ಸೋಮವಾರ ದಿನ ಇಲ್ಲಿಯ ಜಯಲಕ್ಷ್ಮಿ ಬೇಂಕಿನಲ್ಲಿ ಸದರಿ ಸಮಿತಿಯ ಕಮಿಟಿ ಮೆಂಬರರ ಒಪ್ಪಿಗೆ ಮೇರೆಗೆ ಡಿಪೋಜಿಟ್ ಇಡೋಣಾಗಿಯದೆ. ಸ್ವಜಾತಿಯ ಮಾನ್ಯ ಗೃಹಸ್ಥರೆಲ್ಲರೂ ಪ್ರೋತ್ಸಾಹವನ್ನಿತ್ತು ನಮ್ಮ ಜಾತಿಯಭ್ಯುದಯವನ್ನು ಹಾರೈಸಬೇಕಾಗಿ ವಿನಂತಿ.

ತಾರೀಕು ೨೧, ೨೨, ೨೩-೫-೨೮ರಲ್ಲಿ ಮಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ್ಯದ ಚತುರ್ಥ ಆಯುರ್ವೇದ ಸಮ್ಮೇಲನದಲ್ಲಿ ಪ್ರಬಂಧ ಬರೆದವರೊಳಗೆ ಮ. ರಾ. ರಾ. ಕೆ. ರಾಮಸ್ವಾಮಿ ಅಯ್ಯರ್ ೧ನೇ ಗ್ರೇಡ್ ಪ್ಲೀಡರ್ ಒಂದನೇ ತರಗತಿಯಲ್ಲಿಯೂ ಮ. ರಾ. ರಾ.ಗಳಾದ ಯಸ್. ಆರ್. ಹದ್ವಾರ್ ಡಿ. ರಾಮಚಂದ್ರಾಚಾರ್ಯ ಜಿ. ಎ. ಅಯ್ಯ ಕೆ. ಸುಬ್ರಾಯ ಆಯುರ್ವೇದ ವಿದ್ವಾನ್ ವೈ ಯನ್. ಶ್ಯಾಮಣ್ಣ ಇವರುಗಳು ದ್ವಿತೀಯ ತರಗತಿಯಲ್ಲಿಯೂ ಜಯಶೀಲರಾಗಿರುತ್ತಾರೆ.

ಇದೇ ಬರುವ ಆದಿತ್ಯವಾರ ದಿನ ಘಂಟೆ ೫ಕ್ಕೆ ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ಮಂದಿರದಲ್ಲಿ, ಭರತಪುರ ಮಹಾರಾಜರ ಆಸ್ಥಾನಗಾಯಕರಾದ ರಾ॥ ಪ್ರೊಫೆಸರ್ ಟಿ. ಆರ್. ಸಿಂಗರ ಗಾಯನವಿರುವದು. ಇವರು ತಮ್ಮ ಗಾಯನದಿಂದ, ಪಾಟಿಯಾಲ, ಕಾಶ್ಮೀರ, ಕಪುರ್ತಾಲಾ ರಾಜ್ಯಗಳ ರಾಜರುಗಳನ್ನೂ, ಬರೋಡಾ, ಗ್ವಾಲಿಯರ್ ರಾಜ್ಯಗಳ ಮಹಾರಾಣಿಯವರನ್ನು, ಸಂತೋಷಪಡಿಸಿದವರಾಗಿರುತ್ತಾರೆ.

ಹೊಸದುರ್ಗ:—ಇಲ್ಲಿಯ ಪಂಚಾಯತ ಕೋರ್ಟು ಕಕ್ಷಿಗಾರರ ಮೇಲೆ ಹೂಡಿದ ಕ್ರಿಮಿನಲ್ ನಂಬ್ರದಲ್ಲಿ ೪೦ ರೂಪಾಯಿ ಜುರುಮಾನೆ ಸಂಗತಿ ವಾಚಕವೃಂದಕ್ಕೆ ಗೊತ್ತಿರುವದಷ್ಟೆ. ಅಪೀಲು ನಂಬ್ರದಲ್ಲಿ ಸದರಿ ಜುರುಮಾನೆ ತೀರ್ಪು ರದ್ದಾಗಿಯದೆ.

ತಾಲೂಕು ಕಚೇರಿಯಿಂದ ಕಸೆ ವೆಂಡರರಿಗೆ ಇಂಡೆಂಟ ಪ್ರಕಾರ ಕೊಡೋಣಾಗುವ ಕಸೆ ಪೈಕಿ ಇಲ್ಲಿಯ ವೆಂಡರರೊಬ್ಬರ ಕಸೆಯು ಗೈರವಿಲೆಯಾಗಿ ದೊಡ್ಡ ಗೊಂದಳ ಎದ್ದಿತ್ತು. ಸದರಿ ಕಸೆಯು ಈಗ ವೆಂಡರರ ಕೈಸೇರಿಯದೆ.

ನಮ್ಮ ಊರಿನಲ್ಲಿ ತಂತಿ ಸಮಾಚಾರವು ಈ ಮೊದಲು ರೈಲ್ವೆ ಇಲಾಖೆ ಮುಖಾಂತರ ಸಾಗಬೇಕಿತ್ತು. ಈಗ ಟೆಲಿಗ್ರಾಫ ಡಿಪಾರ್ಟಮೆಂಟಿನಿಂದಲೇ ಸಾಗುವಂತೆ ಇಲ್ಲಿಯ ಪೋಸ್ಟ್ ಆಫೀಸಿನಲ್ಲಿ ಬೇಗನೆ ತರೆಯೋಣಾಗುವದಾಗಿ ವಾರ್ತೆ ಕೇಳಬರುತ್ತದೆ. ತಂತಿ ಸಮಾಚಾರದಲ್ಲಿ ತರ್ಬೇತುಹೊಂದಿದ ಪೋಸ್ಟಮಾಸ್ತರರು ಹೊಸಬರು ಇಲ್ಲಿಗೆ ನೇಮಕವಾಗಬೇಕಾದೀತು.

ಕಾಪು:—ಸಾಧಾರಣ ೨ ತಿಂಗಳ ಮುಂಚೆ ರೈಲ್ವೆ ಕಂಪೆನಿಯವರು ಇಲ್ಲಿ ಬಂದು ೧ ತಿಂಗಳು ನಿಂತು ಇಲ್ಲಿಯ ಪ್ಲ್ಯಾನು ನೋಡಿ ಹೋಗಿದ್ದಾರೆ. ಈಗ ಕಾರ್ಕಳ ಮಾರ್ಗವಾಗಿ ಮಲ್ಪೆಗೆ ಬರುತ್ತದೆ ಎಂತ ವದಂತಿ.

ಎಲ್ಲಾ ವಿಷಯಕ್ಕೂ ಮೊದಲು ನೋಡಿದ ಪ್ಲ್ಯಾನು ಒಳ್ಳೆದಾಗಿರುವದು. ಕರಾವಳಿ ಮಾರ್ಗವು ಒಳ್ಳೆ ವ್ಯಾಪಾರಸ್ಥರ ಸ್ಥಳವಾಗಿಯೂ ಆಮದುರಫ್ತಾಗುವ ಸ್ಥಳವಾಗಿಯೂ ಮೀನಿನ ವ್ಯಾಪಾರಕ್ಕೆ ಪ್ರಖ್ಯಾತಿಪಟ್ಟ ಸ್ಥಳವಾಗಿಯೂ ಇರುವದಲ್ಲದೆ ಜನಸಂಖ್ಯೆಯು ಹೆಚ್ಚಾಗಿ ಚಲಾವಣೆಯಾಗುವುದರಿಂದ ರೈಲ್ವೆ ಕಂಪೆನಿಯವರಿಗೆ ಬಹಳ ಆದಾಯಕರ. ಆದ ಪ್ರಯುಕ್ತ ರೈಲ್ವೆ ಕಂಪೆನಿಯವರು ಕರಾವಳಿ ಮಾರ್ಗವಾಗಿಯೇ ಇಟ್ಟರೆ ಎಲ್ಲಾ ಜನರಿಗೂ ಉಪಕಾರವಾಗಿ ರೈಲ್ವೆ ಕಂಪೆನಿಯವರಿಗೆ ಹೆಚ್ಚಿನ ಲಾಭವು ಆಗುವುದು.

ಮೂಲ್ಕಿ:—ಇಲ್ಲಿಯ 'ದಿ ಯೂನಿಯನ್ ಕ್ಲಬ್ಬಿನ' ವರ್ಷವರ್ಧಂತ್ಯುತ್ಸವವೂ, 'ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ' ಜನ್ಮದಿನಾಚರಣೆಯ ಸಮಾರಂಭವೂ ಇದೇ ತಾ. ೧೬—೬—'೨೮ನೇ ಶನಿವಾರ ಅಪರಾಹ್ನ ಘಂಟೆ ೪ಕ್ಕೆ 'ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ ಹೋಲಿನಲ್ಲಿ' ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮಾನ್ಯ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ, ಮಂಗಳೂರು ಸರ್ಕಲ್ ದೇವಸ್ಥಾನಗಳ ಕಮಿಟಿಯ ಅಧ್ಯಕ್ಷರೂ ಆಗಿರುವ, ಮ. ರಾ. ರಾ. ಕೆ. ಸದಾಶಿವ ಅಡಿಗ, ಅವರ್ಗಳ್ ಬಿ ಎ ಬಿ, ಎಲ್.ರವರು ಅಗ್ರಾಸನವನ್ನು ವಹಿಸಿದ್ದರು. ಕ್ಲಬ್ಬಿನ ಕಟ್ಟಡವು ತಳಿರು ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಪರಿಶೋಭಿತವಾಗಿತ್ತು. ಪ್ರಥಮತ ಅಧ್ಯಕ್ಷರ ಚುನಾವಣೆಯಾದ ನಂತರ, ಸನ್ಮಾನ್ಯ ಅಧ್ಯಕ್ಷರು ಕ್ಲಬ್ಬಿನ ಹೊಸ ಕಟ್ಟೋಣದ ಅನಾವರಣದ ಕಾರ್ಯಭಾಗವನ್ನು ನೆರವೇರಿಸಿ, ತಮಗಾಗಿ ಏರ್ಪಡಿಸಲ್ಪಟ್ಟ ಗದ್ದುಗೆಯನ್ನು ಏರಿದರು. ನಂತರ ರಾ. ಕೆ. ಯು. ಪೈ, ಬಿ. ಎ. ರವರು 'ದಿವಂಗತ ಡಾಕ್ಟರ್ ಶ್ಯಾಮರಾಯರ 'ಸಂಕ್ಷಿಪ್ತ ಜನ್ಮಚರಿತ್ರೆ'ಯನ್ನು ಓದಿ ಹೇಳಿ, ಅವರಲ್ಲಿ ಅಡಕವಾಗಿದ್ದ ಸದ್ಗುಣಗಳನ್ನು ಪ್ರಶಂಸಿಸಿ, ಚಲೋ ಭಾಷಣವನ್ನು ಕೊಟ್ಟರು. ರಾ. ಟಿ. ನಾರಾಯಣ ಶ್ಯಾನುಭಾಗರು ಇದನ್ನೇ ಸಮರ್ಥಿಸಿ, 'ಬೋಳಾಕಾರ' ಕುಟುಂಬದವರು ಮಾಡಿದ, ವ, ಮಾಡುತ್ತಿರುವ ಸಾರ್ವಜನಿಕ ಕಾರ್ಯಗಳನ್ನು ಒಂದೊಂದಾಗಿ ವಿವರಿಸಿ, ಹೇಳಿ, ಸದರಿ ಕುಟುಂಬಕ್ಕೆ ದೇವರು ಉತ್ತರೋತ್ತರವನ್ನುಂಟು ಮಾಡಲೆಂದು ಪ್ರಾರ್ಥಿಸಿ, ತಮ್ಮ ಅಮೂಲ್ಯವಾದ ಭಾಷಣವನ್ನು ಅಂತ್ಯಪಡಿಸಿದರು. ಇದಾಗಲು ರಾ॥ ವಿ. ಗೋಪಾಲ ಕಾಮತ್‌ರವರು ಅರ್ಥಗರ್ಭಿತವಾದ ಮತ್ತು ಸುರಸವಾದ ಮಾತುಗಳಿಂದ ಕ್ಲಬ್ಬಿನ ಅಭಿನಂದನವನ್ನು ಸೂಚಿಸಿ ಬಹಳವಾಗಿ ಕೊಂಡಾಡಿ, ಕ್ಲಬ್ಬಿನ ಶ್ರೇಯೋಭಿವೃದ್ಧಿಯನ್ನು ಬಯಸಿ ಕೂಡಿದ ಸಭಿಕರನ್ನು ಸಂತೋಷಗೊಳಿಸಿದರು. ನಂತರ ಕ್ಲಬ್ಬಿನ ಗೌರವ ಕಾರ್ಯದರ್ಶಿ ರಾ. ಬಿ. ಭೋಜರಾಯರು ಇದೇ ಕಳೆದ ಮೇ ತಾ ೩೧ಕ್ಕೆ ಅಂತ್ಯವಾದ ಕ್ಲಬ್ಬಿನ ವಾರ್ಷಿಕ ವರದಿಯನ್ನು ಓದಿ ಹೇಳಲು, ಇದು ಸರ್ವಸಮ್ಮತದಿಂದ ಮಾನ್ಯವಾಗಿ ಅಂಗೀಕರಿಸಲಾಯಿತು. ಆ ಮೇಲೆ ಕಬ್ಬಿನ ಅಭಿವೃದ್ಧಿಯಲ್ಲಿ ಮುಂದೆ ಮಾಡಬೇಕಾದ ಕಾರ್ಯಭಾರಗಳು, ಇತ್ಯಾದಿ ವಿಷಯಗಳು ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟವು. ಪರಊರುಗಳಿಂದ ಹಲಕೆಲವು ಮಹನೀಯರುಗಳಿಂದ ಬಂದ ಸ್ವಸ್ತಿ ವಾಚನಾ ಪತ್ರಗಳು ಅಧ್ಯಕ್ಷ ಮಹಾಶಯರಿಂದ ಓದಲ್ಪಟ್ಟು, ವಂದನಾಪೂರ್ವಕ ರಿಕಾರ್ಡು ಮಾಡಲ್ಪಟ್ಟವು ಅನಂತರ ಮುಂದಿನ ವರ್ಷದ ಆಡಳಿತೆ ಮಂಡಳಿ, ಇತ್ಯಾದಿಗಳ ಚುನಾವಣೆಗಳು ನಡೆಯಲ್ಪಡಲು, ಸನ್ಮಾನ್ಯ ಅಧ್ಯಕ್ಷ ಮಹಾಶಯರು ಕ್ಲಬ್ಬಿನ ಸುವ್ಯವಸ್ಥೆಯನ್ನು, ಸರಾಗವಾದ ಮತ್ತು ನಿರಾತಂಕವಾದ ಹಾಗೂ ಸರ್ವತೋಮುಖವಾದ ಬೆಳವಣಿಗೆಯನ್ನು ನೋಡಿ ತಾನು ಆತ್ಮಾನಂದ ಹೊಂದಿದೆನೆಂದೂ, ಯಾವ ಭಾಗದಲ್ಲೂ ತಾನು ಅಭಾವದ ಕೊರತೆಯನ್ನು ಕಾಣೆನೆಂದೂ, ಇವೇ ಮೊದಲಾದ ವಿಷಯಗಳನ್ನು ಅಮೋಘವಾದ ದೂರುಗಳಿಂದ ವಿಶದಪಡಿಸಿ, ಕ್ಲಬ್ಬಿನ ಆಡಳಿತೆಯ ಸುಪರಿಣಾಮಗಳನ್ನು ಒತ್ತಿ ಹೇಳಿ, ತಮ್ಮ ಗಂಭೀರವಾದ ಮತ್ತು ಸರಳವಾದ ಹಾಗೂ ನಯವಾದ ವಾಕ್ಸರಣಿಯಿಂದ ತಮ್ಮ ಉದಾತ್ತವಾದ ಭಾಷಣವನ್ನು ಮುಗಿಸಲು, ರಾ॥ ಎ. ವಜೀರ್‌ಖಾನ್ ಸಾಹೇಬರವರು ಅಧ್ಯಕ್ಷರನ್ನು ಹೂವಿನ ಹಾರದಿಂದ ಉಪಚರಿಸಿಯಾದ ಮೇಲೆ, ಕ್ಲಬ್ಬಿನ ಗೌರವ ಕಾರ್ಯದರ್ಶಿಯವರು ಕೂಡಿದ ಎಲ್ಲಾ ಮಹನೀಯರಿಗೂ, ಸನ್ಮಾನ್ಯ ಅಧ್ಯಕ್ಷರಿಗೂ ಪ್ರೇಮಪೂರ್ವಕ ಧನ್ಯವಾದವನ್ನರ್ಪಿಸಲು, ಫಲಾಹಾರ, ತಾಂಬೂಲಾದಿ ಉಪಚಾರಗಳಿಂದ ಸಮಸ್ತ ಸಭ್ಯ ಮಹಾಶಯರನ್ನೂ ಸತ್ಕರಿಸಲು, ಅಂದಿನ ಸಂತೋಷ ಸಮಾರಂಭವು ಮುಕ್ತಾಯವಾಯಿತು.

ವಿವಿಧ ಸಮಾಚಾರಗಳು.

ಸಂಯುಕ್ತ ಪ್ರಾಂತದ ಗವರ್ನರರ ಮರಣ!

ಸಂಯುಕ್ತ ಪ್ರಾಂತದ ಗವರ್ನರರಾಗಿದ್ದ ಸರ್ ಅಲೆಕ್ಸಾಂಡರ್ ಮುಡ್ಡಿಮೇನರು ಕಳೆದ ಆದಿತ್ಯವಾರ ಮಧ್ಯಾಹ್ನ ಹೃದಯರೋಗದಿಂದ ಮರಣಹೊಂದಿದರು. ಕಳೆದ ಎರಡು ವಾರಗಳಿಂದ ಇವರು ದೇಹಸ್ವಾಸ್ಥ್ಯವಿಲ್ಲದೆ ತನ್ನ ಕೆಲಸಗಳೆಲ್ಲವನ್ನೂ ಮುಂದರಿಸಿಟ್ಟಿದ್ದರು. ಆದರೆ ಕಳೆದ ಆದಿತ್ಯವಾರ ಸ್ವಲ್ಪ ಸೌಖ್ಯತೋರಿದ ಕಾರಣ ಗೃಹಸ್ಥರೊಂದಿಗೆ ಊಟಮಾಡಲು ಬಂದಿದ್ದರು. ಊಟವಾದೊಡನೆ ಕೆಲವು ನಿಮಿಷಗಳ ವರೆಗೆ ಆಡ್ಡಾಡಿ ಥಕ್ಕನೆ ಮರಣಕ್ಕೆ ತುತ್ತಾದರು! ಯಾವ ವೈದ್ಯಕೀಯ ಸಹಾಯವನ್ನು ಒದಗಿಸಲೂ ಆಗ ಸಾಧ್ಯವಾಗಲಿಲ್ಲ. ಇವರು ೧೮೭೪ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ಜನಿಸಿದರು. ಇವರು ಎಂಬೊರ್ನ ಶಾಲೆಯಲ್ಲಿ ಶಿಕ್ಷಣವನ್ನು ಹೊಂದಿ ೧೮೯೭ನೇ ಇಸವಿಯಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿಗೆ ಸೇರಿ ಬಿಹಾರದಲ್ಲಿದ್ದರು. ೧೯೦೩ರಲ್ಲಿ ಇವರು ಸರಕಾರದ ಅಂಡರ್ ಸೆಕ್ರೆಟರಿಯಾಗಿ ಬಂಗಾಳಕ್ಕೆ ಕಳುಹಲ್ಪಟ್ಟರು. ೧೯೦೫ರಲ್ಲಿ ಕಲಕತ್ತಾ ಹೈಕೋರ್ಟಿನ ರಿಜಿಸ್ಟ್ರಾರರಾದರು. ೧೯೧೫ರಲ್ಲಿ ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನ ಎಡಿಶನಲ್ ಮೆಂಬರರಾಗಿ ನೇಮಿಸಲ್ಪಟ್ಟರು. ಇವರ ಆಡಳಿತೆಯು ಬಹು ತೃಪ್ತಿಕರವಾಗಿ ಕಂಡುಬಂದ ಕಾರಣ ಇಂಡಿಯಾ ಸರಕಾರದ ಲೆಜಿಸ್ಲೇಟಿವ್ ಇಲಾಖೆಯಲ್ಲಿ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ೧೯೧೯ನೇ ಇಸವಿಯಲ್ಲಿ ಲೋ ಮೆಂಬರರಾಗಿ ತದನಂತರ ಕೌನ್ಸಿಲ್ ಓಫ್ ಸ್ಟೇಟಿನ ಪ್ರೆಸಿಡೆಂಟರಾಗಿ ತನ್ನ ಪಾಲಿನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದರು. ೧೯೨೪ನೇ ಇಸವಿಯಲ್ಲಿ ಇಂಡಿಯಾ ಸರಕಾರದ ಹೋಮ್ ಮೆಂಬರರೂ, ಎಸೆಂಬ್ಲಿಯ ಲೀಡರರೂ ಆದರು. ಮುಡ್ಡಿಮೇನ ಕಮಿಟಿಯೆಂದು ಹಿಂದೂಸ್ಥಾನದ ಸುಧಾರಣೆಯನ್ನು ವಿಚಾರಿಸುವುದಕ್ಕಾಗಿ ನೇಮಿಸಲ್ಪಟ್ಟ ಕಮಿಟಿಯ ಅಧ್ಯಕ್ಷರಾಗಿದ್ದರು. ಕೊನೆಯಲ್ಲಿ ಇವರು ಸಂಯುಕ್ತ ಪ್ರಾಂತದ ಗವರ್ನರರಾಗಿ ನೇಮಿಸಲ್ಪಟ್ಟರು. ಇವರ ಅಕಾಲ ಮರಣದಿಂದ ಪ್ರಾಂತ್ಯಕ್ಕೆ ಹೇರಳ ನಷ್ಟವುಂಟಾದುದಲ್ಲದೆ ಸುಗುಣಿಯಾದ ಒಬ್ಬ ಪುರುಷನು ಸಂದುಹೋದಂತಾಯಿತು. ಇವರ ಆತ್ಮಕ್ಕೆ ಶಾಂತಿಯೊದಗಲಿ!

ದಾಂಪತ್ಯದ ಗುಟ್ಟು ಎಂಬ ನಿಸರ್ಗ ಶಾಸ್ತ್ರೀಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟುಸಾರೆ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆ ಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪವೇ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸಿಪುರುಷರು ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯೂ ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು,ಕ್ರಯ ಪ್ರತಿ ೧ಕ್ಕೆ೨-೮-೦ ಟಿ. ಹಾಸಲು ೬ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್, ಪ್ರಭು ಬುಕ್ ಡಿಪೋ, ಬಳ್ಳಾರಿ.

ದೇಶಬಂಧುಗಳ ದಿನಾಚರಣೆ.

"ನಮ್ಮಲ್ಲಿ ನೊಂದಿಹೋಗುತ್ತಿದ್ದಂಥ ದೇಶಪ್ರೇಮವೆಂಬ ದಿವ್ಯ ಜ್ವಾಲೆಯನ್ನು ಜಾಗ್ರತಗೊಳಿಸಿದವರೇ ದೇಶಬಂಧು ಚಿತ್ತರಂಜನ ದಾಸರವರು. ರಾಷ್ಟ್ರವು ಅಳಿಯಬಾರದೆಂಬ ಭಾವನೆಯು ನಮ್ಮಲ್ಲಿ ಅಂಕುರಿಸುವಂತೆ ಮಾಡಿದವರೇ, ಈ ಉಜ್ವಲ ರಾಷ್ಟ್ರಭಕ್ತರು. ಅವರು ಜಾಗ್ರತಗೊಳಿಸಿದ ಆ ಜ್ವಾಲೆಯನ್ನು ನಂದಿಹೋಗಲು ಬಿಡದೆ, ಅವರು ಮಾಡಲು ಉಳಿದಿರುವ ಕೆಲಸವನ್ನು ನಾವು ಪೂರಯಿಸಿದುದಾದರೆ, ನಮ್ಮ ಧ್ಯೇಯವು ಸುಲಭಸಾಧ್ಯವಾಗುವದು" ಎಂದು ಕಲಕತ್ತದಲ್ಲಿ, ದೇಶಬಂಧು ದಿನಾಚರಣೆಯ ದಿನ ಜರಗಿದ ಮಹಾಸಭೆಯ ಅಧ್ಯಕ್ಷರಾದ ಶ್ರೀ ಜೆ. ಎನ್. ಬಸುಗಳವರು ಒತ್ತಿಹೇಳಿದರು. ಕಳೆದ ೧೬ನೇ ಆದಿತ್ಯವಾರವೇ ಈ ದಿನವು ಕಲಕತ್ತದಲ್ಲಿ ಇದು ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸಾವಿರಾರು ಸ್ವಯಂಸೇವಕರು ರಾಷ್ಟ್ರೀಯ ಧ್ವಜಗಳನ್ನೂ, ದೇಶಬಂಧುಗಳ ಪಟಗಳನ್ನೂ ಎತ್ತಿಹಿಡಿದು ಮೆರವಣಿಗೆಯನ್ನು ರಚಿಸಿ ದೇಶಬಂಧುಗಳಲ್ಲಿ ತಮಗಿದ್ದ ಭಕ್ತಿಯನ್ನು ವ್ಯಕ್ತಗೊಳಿಸಿದರು. ಸಭೆಯು 'ಆಲ್ಬರ್ಟ ಹೋಲಿ'ನಲ್ಲಿ ಜರಗಿತು. ಅಲ್ಲಿ ಶ್ರೀ ಆಚಾರ್ಯ ರೇಯವರು ಈಗ ದೇಶವು ಜಾತೀಯ ಕಲಹದಲ್ಲಿಯೂ, ಪಕ್ಷಭೇದಗಳಿಂದಲೂ ಆವರಿಸಲ್ಪಟ್ಟಿರುವದು. ದೇಶಬಂಧುಗಳ ಸ್ಮಾರಕಕ್ಕಾಗಿ ಮಾಡುವ ಕೆಲಸವೆಂದರೆ ಐಕ್ಯ. ಅವರ ಸ್ವಾತಂತ್ರ್ಯದ ಧ್ಯೇಯವನ್ನು ಕಾರ್ಯತಃ ಆಚರಿಸಬೇಕು. ಜಗತ್ತಿನಲ್ಲಿ ಇತರ ಎಲ್ಲಾ ರಾಜ್ಯಗಳು ಸ್ವತಂತ್ರವಾಗಿರುವವು. ಆದರೆ ಹಿಂದೂಸ್ಥಾನವು ಮಾತ್ರ ಬಂಧನದಲ್ಲಿದೆ. ಈ ಬಂಧನವನ್ನು ಚಿತ್ತರಂಜನರ ಸೂತ್ರಗಳನ್ನವಲಂಬಿಸಿ ಕಳಚಿಬಿಡಬಹುದು ಎಂದು ಭಾಷಣವನ್ನು ಮಾಡಿದರು. ಶ್ರೀಗಳಾದ ಶ್ಯಾಮಸುಂದರ ಚಕ್ರವರ್ತಿ, ಬಾಬೂ ಗುರದತ್ತಸಿಂಗ, ಜಕರ್ ಅಲಿ, ಶ್ರೀಮತಿ ನಿಸ್ತರಿಣಿದೇವಿ, ಇವರುಗಳು ಈ ಸಂದರ್ಭದಲ್ಲಿ ಭಾಷಣಗಳನ್ನು ಮಾಡಿದರು. ಇದರಂತೆಯೇ ದೇಶಬಂಧು ದಿನವು ಹಲವು ಕಡೆಗಳಲ್ಲಿಯೂ ಆಚರಿಸಲ್ಪಟ್ಟಿತು.

ಬಾರ್ಡೋಲಿ ಸತ್ಯಾಗ್ರಹ

ಬಾರ್ಡೋಲಿಯಲ್ಲಿ ತಮ್ಮ ಹುದ್ದೆಗಳಿಗೆ ರಾಜಿನಾಮೆಯನ್ನು ಕೊಟ್ಟು ಹೆಸರುಪಡೆದ ಪಟೇಲರು ಈ ರೀತಿಯಾಗಿ ಬರೆದಿರುವರು. "ನಾವು ರಾಜೀನಾಮೆಯನ್ನು ಕೊಟ್ಟದರ ವಿಷಯವಾಗಿ ಮುಂಬಾಯಿಯ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಫೋರ್ಮೆಶನ್ ಇವರು ಬಾರ್ಡೋಲಿಯ ಮಾಮ್ಲತ್‌ದಾರರಿಗೆ ಬರೆದುದನ್ನು ನೋಡಿ ಈ ಕೆಳಗಿನ ಸಂಗತಿಗಳನ್ನು ಜನರೆಲ್ಲರಿಗೆ ಪ್ರಕಟಪಡಿಸಲು ನಿಶ್ಚೈಸಿರುವೆವು. ನಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ, ಇತರರ ಒತ್ತಾಯಕ್ಕೊಳಪಟ್ಟು ನಾವು ಕೆಲಸವನ್ನು ಬಿಟ್ಟಿದ್ದಲ್ಲ. ಕಲೆಕ್ಟರ್ ದೊರೆಗಳು ಬರ್ಡೋಲಿಯನ್ನು ಸಂದರ್ಶಿಸಿದಾಗ ನಮ್ಮಲ್ಲಿ ಒಬ್ಬನಾದರೂ ಅವರನ್ನು ಕಾಣಲಿಲ್ಲ. ಅದುಕಾರಣ ಅವರೊಡನೆ ಮಾತನಾಡುವ ಸಂದರ್ಭವು ನಮಗೆ ಒದಗಿದ್ದಿಲ್ಲ. ಸರಕಾರದವರ ನೀಚವರ್ತನೆಯನ್ನು ಕಂಡು ಮನಕರಗಿ, ಸಹಿಸಲಾರದೆ ನಾವು ರಾಜೀನಾಮೆಯನ್ನು ಕೊಟ್ಟದು. ಒಬ್ಬ ಪಟೇಲನು ಸ್ವತಹ ಕಲೆಕ್ಟರರನ್ನು ಎದುರುಗೊಂಡು ಅಸಹಕಾರಿಗಳಿಂದುಂಟಾಗುವ ತೊಂದರೆಗಳನ್ನು ಅಳುತ್ತಾ ವಿವರಿಸಿದನೆಂದು ಅವರ ಪತ್ರದಲ್ಲಿರುವುದು ತೀರಾ ಸುಳ್ಳು. ಯಾವನೊ ಒಬ್ಬನು ಪಟೇಲನ ವೇಷವನ್ನು ಧರಿಸಿ ಹಾಗೆ ಮಾಡಿದ್ದಿರಬೇಕು. ನಮ್ಮಲ್ಲಿ ಯಾವನೂ ಅವರನ್ನು ಸಂದರ್ಶಿಸದಿರುವಲ್ಲಿ ಕಲೆಕ್ಟರರು ಈ ರೀತಿ ಹೇಳಲು ಅದೊಂದೆ ಕಾರಣವಲ್ಲದೆ ಬೇರೆ ಕಾರಣವಿರಲಾರದು" ಎಂದು ಬರೆದಿರುವರು. ಬರ್ಡೋಲಿಯ ಜನರೊಡನೆ ನಿಸ್ವಾರ್ಥ ಬುದ್ಧಿಯಿಂದ ಸಹಕರಿಸಬೇಕೆಂದು ಪೂನೆಯ ಸಾರ್ವಜನಿಕ ಸಭೆಯವರೂ ಕಳೆದ ಅಧಿವೇಶನದಲ್ಲಿ ನಿರ್ಣಯಿಸಿರುವರು.

ಉಪವಾಸದ ಅವಧಿಯು.

ಮನುಷ್ಯನು ಆಹಾರದ ಹೊರತು ಎಷ್ಟು ದಿನಗಳ ವರೆಗೆ ಜೀವಿಸಿರಬಹುದೆಂಬದನ್ನು ಖಂಡಿತವಾಗಿ ಹೇಳುವದಕ್ಕೆ ಆಗುವದಿಲ್ಲ. ಕೆಲವರು ಅನ್ನುವದೇನೆಂದರೆ ಹವೆಯು ಇಲ್ಲದೆ, ೫ ಮಿನಿಟುಗಳ ವರೆಗೆ, ನೀರು ಇಲ್ಲದೆ ೬ ದಿನಗಳ ವರೆಗೆ ಹಾಗು ನಿದ್ರೆಯಿಲ್ಲದ ೧೦ ದಿನಗಳ ವರೆಗೆ ಮನುಷ್ಯನು ಜೀವ ಹಿಡಿದುಕೊಂಡಿರಬಹುದೆಂಬದನ್ನು ಹೇಳುವಂತೆ ಇಲ್ಲ. ಕೆಲವು ಪುರುಷರು ಎರಡು ಮೂರು ತಿಂಗಳು ಇಲ್ಲವೆ ಅದಕ್ಕೂ ಹೆಚ್ಚು ಕಾಲ ಆಹಾರವಿಲ್ಲದೆ ಇದ್ದವರು ಇದು ವಿಶೇಷ ಸಂಗತಿಯು. ಸಾಮಾನ್ಯವಾಗಿ ಮನುಷ್ಯನು ಆಹಾರವಿಲ್ಲದೆ ೧೨ ದಿನಗಳ ವರೆಗೆ ಬದುಕುವನು.

ಪಕ್ಷಿಗಳು ಆಹಾರವಿಲ್ಲದೆ ೯ ದಿನಗಳ ವರೆಗೆ ಜೀವಿಸುವವು, ನಾಯಿಗಳು ನಮಗಿಂತ ಹೆಚ್ಚು ಕಾಲ ಅಂದರೆ ೨೦ ದಿನಗಳ ವರೆಗೆ ಆಹಾರವಿಲ್ಲದೆ ಬದುಕುವವು. ಮೀನುಗಳೂ ಹಾವುಗಳೂ ನಿರಾಹಾರಿಯಾಗಿ ಹೆಚ್ಚು ಕಾಲ ಬದುಕುವವು. ಅಂದರೆ ಮೀನು ೧೦೦೦ ದಿನಗಳ ವರೆಗೂ ಹಾವುಗಳು ೮೦೦ ದಿನಗಳ ವರೆಗೂ ಆಹಾರವಿಲ್ಲದೆ ಜೀವಿಸುವವು. ಕಪ್ಪೆಗಳು ೧ ವರ್ಷ ಇಲ್ಲವೆ ೫೦೦ ದಿನಗಳ ವರೆಗೆ ಜೀವಿಸುವವು.

ಈ ಪ್ರಕಾರ ನೋಡಲು ಪಕ್ಷಿಯೊಂದನ್ನು ಬಿಟ್ಟು ಮನುಷ್ಯನು ಆಹಾರದ ಬಗ್ಗೆ ಮುಂದೆ ಇರುವನೆಂದು ತಿಳಿಯುವದು. ಆದ್ದರಿಂದಲೇ ಜೀವಸಾರ್ಥವಾಗಿ ಭೂಮಿಯ ಮೇಲೆ ಬಹಳ ಗಡಿಬಿಡಿಯನ್ನು ಮಾಡುತ್ತಿರುವನು. 'ಬುಭುಕ್ಷಿತಃ ಕಿಂನ ಕರೋತಿ ಪಾಪಮ್!'

—ಪ್ರೇಮ.

ಭೂಮಂಡಲದಲ್ಲಿ ದೊಡ್ಡ ಹೆಂಗಸು.

ಯಾವದೇ ಅದರೂ ಪ್ರಾತಿಪಾದಿಕದ ನೆಟ್ಟಗಿಲ್ಲ. ಅತಿ ಬಡಕನಾಗುವದೂ ನೆಟ್ಟಗಿಲ್ಲ. ಹಾಗೆಯೇ ಅತಿ ಗಡುತರವಾಗುವದೂ ನೆಟ್ಟಗಿಲ್ಲ. ಈ ಸಮಯದಲ್ಲಿ ಮಿಸ್. ಮೇರಿ ಹಾಲ್ಡ ಎಂಬ ಹೆಂಗಸಿನ ಸರಕಸಿನ ರಾಣಿಯ ಉದಾಹರಣೆಯನ್ನು ಕೊಡಬಹುದು. ಇವಳು ಸ್ತ್ರೀಜಾತಿಯಲ್ಲಿ ಸ್ಥೂಲಕಾಯದ ಹಾಗು ಎತ್ತರ ಹೆಂಗಸು ಎಂದು ಹೆಸರಾಗಿದ್ದಾಳೆ. ಆಕೆಯ ಮೈತೂಕವು ೪೬೮ ಪೌಂಡ್ (ಬಂಗಾಲಿ ೫ ಮಣ ೩೪ ಸೇರು) ಇರುವದು. ಇವಳು ೬ ಅಡಿ ಎತ್ತರವುಳ್ಳವಳಾಗಿದ್ದಾಳೆ. ೩೨ ಇಂಚು ಅಗಲವಾಗಿದ್ದಾಳೆ. ಹುಟ್ಟಿದಾಗ ಇವಳ ತೂಕವು ೧೨ ಪೌಂಡು ಇತ್ತು. ೮ ವರ್ಷದವಳಿದ್ದಾಗ ೧೧೦ ಪೌಂಡು ಆಯಿತು. ಇವಳೊಮ್ಮೆ ದಾರಿಯ ಮೇಲೆ ನಿಂತುಕೊಂಡಾಗ ಹಿಂದಿನಿಂದ ಒಂದು ಮೋಟರವು ಬಂತು. ಇವಳಿಗೆ ತೀವ್ರವಾಗಿ ಅಲ್ಲಿಂದ ಸರಿಯುವದಾಗಲಿಲ್ಲ. ಅಷ್ಟರಲ್ಲಿ ಮೋಟರವು ಬಂದು ಅವಳಿಗೆ ತಾಗಿತು. ಹಾಗು ಮುಂದೆ ಹೋಗದೆ ಅಲ್ಲಿಯೇ ನಿಂತುಬಿಟ್ಟಿತು. ಈ ಪ್ರಕಾರವಾಗಿ ಮಿಸ್. ಮೇರಿ ಹಾಲ್ಡಳಿಗೆ ಒಮ್ಮೆ ಅನುಭವವು ಬಂತು. ಮೋಟರಿನಲ್ಲಿದ್ದ ಸಾಹೇಬನು ಇವಳಿಗೆ ಏನಾಯಿತೆಂದು ಕೇಳಲು, ಇವಳು—'ನನಗೇನೂ ಆಗಿಲ್ಲ. ನನ್ನ ಧಕ್ಕೆಯಿಂದ ಮೋಟರದ ಭಾಗವು ಕೆಟ್ಟಿದ್ದೀತೆಂದು ಅನ್ನಿಸುತ್ತದೆ' ಎಂದು ಉತ್ತರ ಕೊಟ್ಟಳಂತೆ!

ಈ ಹೆಂಗಸು ಇಷ್ಟು ಗಡುತರಳಾಗಿದ್ದರೂ ಬಹಳ ಉದ್ಯೋಗಿಯಾಗಿದ್ದಾಳೆ. ತಾರುಣ್ಯದಲ್ಲಿದ್ದಾಗ ಇವಳು ಕುಣಿಯುತ್ತಿದ್ದಳು. ಈಗ ಇವಳು ನೀರಿನಲ್ಲಿ ಬಹಳ ಈಸುತ್ತಾಳೆ. ತಾನೊಮ್ಮೆ ಹವೆಯ (ವಿಮಾನ) ದಲ್ಲಿ ಕುಳಿತುಕೊಂಡು ತಿರುಗಾಡಬೇಕೆಂದು ಮಾಡಿದಳು. ಆದರೆ ಕಡಿಮೆ ಶಕ್ತಿಯ ಆ ಯಂತ್ರಕ್ಕೆ ಇವಳನ್ನು ಕೊಡ್ರಿಸಿಕೊಂಡು ಹಾರುವದಕ್ಕೆ ಆಗಲಿಲ್ಲ. ಡ್ರಾಯವರನು ನಾಚಿಕೆಪಟ್ಟು ಇವಳಿಗೆ ಇಳಿಯಹೇಳಿದನು.

—ಸುಧಾರಕ.

ಮಂಗಳೂರು ಮಲ್ಪೆ ರೈಲ್ವೆ.

(ಕರಾವಳಿ ಮಾರ್ಗವನ್ನೇ ಸ್ಥಿರಗೊಳಿಸುವಿಕೆ)

ಮೂಲ್ಕಿ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಮಹಾಜನರ ಸಭೆಯೊಂದು, ಮಂಗಳೂರಿನಿಂದ ಮಲ್ಪೆಗೆ ಕಟ್ಟಲ್ಪಡುತ್ತಿರುವ ರೈಲುವೇಲ್ಯಾನನ್ನು ಈಗ ಸರ್ವೇ ಮಾಡಿದಂತೆ ಮುಲ್ಕಿಯಿಂದಲೇ ಒಯ್ಯುವದರ ಕುರಿತು ಅಧಿಕಾರಿಗಳಿಗೆ ಸೂಚಿಸುವದಕ್ಕಾಗಿ ಮೂಲ್ಕಿ ಯೂನಿಯನ್ ಕ್ಲಬ್ಬಿನವರ ಆಶ್ರಯದಲ್ಲಿ ಶ್ಯಾಮರಾವ್ ಮೆಮೋರಿಯಲ್ ಹೋಲಿನಲ್ಲಿ, ತಾರೀಕು ೧೬ನೇ ಆದಿತ್ಯವಾರ ಬೆಳಗ್ಗೆ ೮ ಘಂಟೆಗೆ, ಜರಗಿತು

ಸಭೆಗೆ ಆಮಂತ್ರಿತರಾದ ಮಂಗಳೂರು ವಕೀಲ್ ಎಮ್. ಶಂಕರನಾರಾಯಣ ರಾಯರು ಸೂಚಿಸಿಯೂ, ರಾ। ಕೆ. ಉಪೇಂದ್ರ ಪೈ ಬಿ. ಎ. ಇವರು ಅನುಮೋದಿಸಿಯೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ, ಜಮೀನುದಾರರೂ, ಪ್ರತಿಷ್ಠಿತ ಗೃಹಸ್ಥರೂ ಆದ ಬೋಳ ಮಾಧವರಾಯರು ಅಂದಿನ ಸಭಾಧ್ಯಕ್ಷತೆಯನ್ನು ವಹಿಸಿದರು.

ಸಭೆಯನ್ನು ಜರಗಿಸಿದುದರ ಕಾರಣವನ್ನೂ, ರೈಲುವೇ ಅಧಿಕಾರಿಗಳಿಗೆ, ಮೂಲ್ಕಿ ಮಾರ್ಗವಾಗಿಯೇ ರೈಲು ಮಾರ್ಗವನ್ನು ಕೊಂಡೊಯ್ಯುವದರಿಂದ ಕಾರ್ಕಳ ಮಾರ್ಗದಲ್ಲಿ ಕೊಂಡೊಯ್ಯುವದಕ್ಕಿಂತ ಉಂಟಾಗುವ ಹೆಚ್ಚಿನ ಲಾಭವನ್ನು ಕುರಿತು ಅಧ್ಯಕ್ಷರು ಮೊದಲಾಗಿ ವಿವರಿಸಿದ ತರುವಾಯ ಈ ಕೆಳಗಿನ ಠರಾವುಗಳು ಮಂಜೂರಾದವು.

(೧) ಕರಾವಳಿಯ ಮಾರ್ಗವು, ಈ ಜಿಲ್ಲೆಯಲ್ಲಿ ದಟ್ಟವಾದ ಜನಸಂದಣಿ ಇರುವ ಮತ್ತು ರಫ್ತು ಮಾಡಲು ಅರ್ಹವಾದ ಬೆಳೆ ಬೆಳೆಯುವ ಪ್ರದೇಶದಲ್ಲಿ ಹಾದುಹೋಗುವದು. ಆದರೆ ಕಾರ್ಕಳ ಮಾರ್ಗವಾಗಿ ಕಟ್ಟುವ ಹಾದಿಯು, ಬರೇ ಬಂಜರು ಮತ್ತು ನಿರ್ಜನವಾದ ಪ್ರದೇಶದಿಂದ ಹಾದು ಹೋಗುವದು. ಆದುದರಿಂದ ಕರಾವಳಿ ಮಾರ್ಗವಾಗಿಯೇ ರೈಲು ಹಾದಿ ಕಟ್ಟಬೇಕೆಂದು ರೈಲ್ವೇ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

(೨) ಕಾರ್ಕಳ ಹಾದಿಯ ದೂರವು ಕರಾವಳಿಯ ಹಾದಿಗಿಂತ ಒಂದೂವರೆ ಪಾಲಷ್ಟು ಹೆಚ್ಚಾಗಿರುವದರಿಂದಲೂ, ಆ ಹಾದಿಯನ್ನು ಕಟ್ಟಲು, ಏರು ತಗ್ಗುಗಳಿಂದ, ಅಧಿಕಾರಿಗಳಿಗೆ ಮಿತಿಯಿಲ್ಲದ ಹಣವು ಬೇಕಾದುದರಿಂದಲೂ, ಹಾದಿಗೆ ತಗಲುವ ಖರ್ಚಿನ ಪ್ರಮಾಣದಲ್ಲಿ ಪ್ರಯಾಣದ ಸಾಮಾನು ಕೊಂಡೊಯ್ಯುವದರ ಫೀಸನ್ನು ನಿರ್ಣಯಿಸುವ ಕಾರಣ, ಪ್ರಯಾಣಿಕರಿಗೆ ಕರಾವಳಿಯ ಹಾದಿಯೇ ಉತ್ತಮವಾಗಿರುವುದು. ಇದರಿಂದ ಅಧಿಕಾರಿಗಳಿಗೆ ಕರಾವಳಿ ಮಾರ್ಗವೇ ಸುಲಭವಾಗಿ ಮಲ್ಪೆ ಬಂದರವನ್ನು ಅಭಿವೃದ್ಧಿಪಡಿಸಿದಂತಾಗುವದು.

(೩) ಮೈಸೂರು ಕನ್ನಡಾ ಜಿಲ್ಲೆಗಳೊಳಗಣ ಸ್ವಾಭಾವಿಕ ವ್ಯಾಪಾರದ ದಾರಿಯು, ಹಾಸನ ಮಂಗಳೂರು ರೈಲುವೇ ಮಾರ್ಗವೇ ಆಗಿರುವುದರಿಂದ, ಇದಕ್ಕೆ ಕಾರ್ಕಳವು ದೂರವಾಗಿದ್ದು ಕರಾವಳಿಯ ಮಾರ್ಗ ಸುಲಭವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

(೪) ಈಗ ನಿಶ್ಚಯಿಸಿರುವ ಕಮಿಟಿಯವರಿಗೆ ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವ ಸಲುವಾಗಿಯೂ, ಪ್ರಕಟಿಸುವ ಬಗ್ಗೆ ಛಾಪಖಾನೆಗೆ ಕಳುಹಿಸಿಕೊಡುವ ಬಗ್ಗೆಯೂ, ಅಗತ್ಯವಿರುವಾಗ ಯೋಗ್ಯ ಸನ್ನಹಸ್ಥರ ಅಭಿಪ್ರಾಯವನ್ನು ತಿಳಕೊಳ್ಳುವದಕ್ಕಾಗಿಯೂ ಅಧಿಕಾರ ಕೊಡೋಣಾಯಿತು.

ಬಂಟವಾಳ ಸೆಂಟರಿನ ಉಪಾಧ್ಯಾಯ ಸಂಘದ ಸಭೆಯ ವರದಿ.

ಬಂಟವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾರೀಕು ೧೬ನೇ ಶನಿವಾರ ಮಧ್ಯಾಹ್ನ ೨ ಗಂಟೆಗೆ ಬಂಟವಾಳ ಬೋರ್ಡು ಹುಡುಗಿಯರ ಶಾಲೆಯಲ್ಲಿ ಬಂಟವಾಳ ಟೆಂಪಲ್ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ಬಿ. ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ೧೦ ಮಂದಿ ಉಪಾಧ್ಯಾಯರೂ ೫ ಮಂದಿ ಉಪಾಧ್ಯಾಯಿನಿಯರೂ ಹಾಜರಿದ್ದರು. ಬಂಟವಾಳ ಬೋರ್ಡು ಹುಡುಗಿಯರ ಶಾಲಾ ಹೆಮ್ಮಕ್ಕಳು ದೇವರ ಪ್ರಾರ್ಥನೆಯ ಹಾಡನ್ನು ಹಾಡಿದರು. ನಂತರ ಸೆಕ್ರೆಟೇರಿಯವರಾದ ಬಿಗಳ್ ಗಣಪತಿರಾಯರು ಗತ ಮಿಟಿಂಗಿನ ರಿಪೋರ್ಟನ್ನು ಓದಿದರು. ನಂತರ ಮೂಡಗೋಡಿನ ಬಳಿ, ಬೋರ್ಡು ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ಬಿ. ಶಂಕರನಾರ್ಯಣಯ್ಯನವರು ಹಳ್ಳಿಯ ಆರೋಗ್ಯ ಎಂಬುದರ ವಿಷಯ ಒಂದು ಭಾಷಣವನ್ನು ಕೊಟ್ಟರು. ಅನಂತರ ಪಾಣೆಮಂಗಳೂರು ವಿಠಲ ಸ್ವಾಮಿ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ನ. ವಾಸುದೇವರಾಯರು ತಯಾರಿಸಿದ ಭಾರತಮಾತೆಯ ಸ್ತುತಿಯನ್ನು ಬಂಟವಾಳ ಬೋರ್ಡು ಹುಡುಗಿಯರ ಶಾಲಾ ಹುಡುಗಿಯರು ಹಾಡಿದರು. ಇದಾದ ಮೇಲೆ ವೆಂಕಟರಮಣ ಸ್ವಾಮಿ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ। ಪಕೀರ ಮಾಸ್ತರರು ವಾಕ್ಯಕಪತ್ರವರಿಗೂ ಉಪಾಧ್ಯಾಯರಿಗೂ ಇರಬೇಕಾದ ಸಹಕಾರ ಎಂಬುದರ ವಿಷಯ ಒಂದು ಭಾಷಣವನ್ನು ಕೊಟ್ಟರು. ಎಂ. ಜಿ. ಬಿಗಳರು ಬರುವ ಆಗೋಸ್ತು ೧ನೇ ತಾರೀಕಿನಿಂದ ಸರಕಾರದವರು ಶಾಲೆಗಳಿಲ್ಲದ ಸ್ಥಳಗಳಲ್ಲಿ ಹೊಸತಾಗಿ ಸ್ಥಾಪಿಸಲಿಕ್ಕಿರುವ ಹುಡುಗರ, ಹುಡುಗಿಯರ ಮತ್ತು ಮಹಮ್ಮದಿಯ ಶಾಲೆಗಳನ್ನು ತೆರಿಯುವುದಕ್ಕಾಗಿ ಸೆಂಕ್ಷನ್ ಮಾಡಿದುದರ ವಿಷಯವಾಗಿಯೂ, ಗ್ರಾಮ ಪಂಚಾಯತುಗಳಿಗೆ ಹೊಸತಾಗಿ ಶಾಲೆಗಳನ್ನು ತೆರಿಯುವ ವಿಷಯವಾಗಿಯೂ ಹೊರಟ ಗವರ್ನಮೆಂಟ ಒರ್ಡರುಗಳ ವಿಷಯವಾಗಿಯೂ ಉಪಾಧ್ಯಾಯರಿಗೆ ತಿಳಿಸಿದರು. ದೇವಕ್ಕಪಡೂರು ಬೋರ್ಡು ಶಾಲೆಯ ಪ್ರವೇಶ ಸಮಾರಂಭದ ಕುರಿತು ಸಂಘಕ್ಕೆ ಬಂದ ಆಮಂತ್ರಣ ಪತ್ರವನ್ನು ಓದಿಹೇಳಲಾಯಿತು. ಮಳೆಗಾಲವು ಪ್ರಾರಂಭವಾದ್ದರಿಂದ ಮುಂದಿನ ಸಭೆಯನ್ನು ಸಪ್ಟಂಬರ ೧ನೇ ತಾರೀಕಿನಲ್ಲಿ ಮೂಡಗೋಡಿನ ಬಳಿ ಶಾಲೆಯಲ್ಲಿ ಜರಗಿಸಬೇಕೆಂದು ನಿರ್ಣಯಿಸಲಾಯಿತು. ಈ ಸಭೆಯಲ್ಲಿ ಬಂಟವಾಳ ಅಗ್ರಹಾರ ಚರ್ಚ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ। ಜೆ ಡಿ. ಸೋಜರು ಕುಮಾರಿ ಸಾಗುವಳ್ಳಿಯ ವಿಷಯವೂ, ಪಾಣೆಮಂಗಳೂರು ಬೋರ್ಡು ಮಾಪಿಳ್ಳಾ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ರತನಸಿಂಗರು ಟಪ್ಪಾಲ ಇಲಾಖೆಯ ವಿಷಯವೂ ಭಾಷಣಗಳನ್ನು ಕೊಡಬೇಕೆಂದೂ, ಅಗ್ರಹಾರ ಚರ್ಚ ಚಿತ್ರಬೆಟ್ಟು ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ। ಬಿ. ಸೋಮಯ್ಯನವರು ೧ನೇ ದರ್ಜೆಗೆ ಕಥೆ ಪಾಠವನ್ನು ಕೊಡಬೇಕೆಂದೂ, ಬಂಟವಾಳ ಬೋರ್ಡು ಹುಡುಗರ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ। ಕೊರಗಮೊಂಡನರವರು ೪ನೇ ದರ್ಜೆಗೆ ವ್ಯಾಕರಣ ಪಾಠವನ್ನು ಕೊಡಬೇಕೆಂದೂ ನಿರ್ಣಯವಾಯಿತು. ಅಧ್ಯಕ್ಷರು ಸಂಘದ ಅಭಿವೃದ್ಧಿಯ ವಿಷಯವೂ ಸಂಘಕ್ಕೆ ಸೇರಿದ ಪ್ರತಿ ಒಂದು ಶಾಲೆಯಲ್ಲಿ ಐದನೇ ದರ್ಜೆಯ ವರೆಗೆ ಕ್ಲಾಸುಗಳು ಇರುವಂತೆ ಸಾಧಿಸಬೇಕೆಂದೂ, ಗ್ರಾಮದ ಎಲ್ಲಾ ಮಕ್ಕಳು ಶಾಲೆಗಳಿಗೆ ಬರುವಂತೆ ಪ್ರತಿಯಲ್ಲಿ ಮನೆಮನೆಗೆ ಹೋಗಿ ಸಾಧಿಸಬೇಕೆಂದೂ ಗ್ರಾಮಸ್ಥರು ಆಗಾಗ್ಗೆ ಶಾಲೆಗಳಿಗೆ ಬಂದು ನೋಡುವಂತೆ ಶಾಲೆಗಳಲ್ಲಿ ಬೇರೆ ಬೇರೆ ತರದ ಉಪಾಯಗಳನ್ನು ಮಾಡಿ ಗ್ರಾಮಸ್ಥರ ಪ್ರೀತಿಯು ಶಾಲೆಯ ಮೇಲೆ ಇರುವಂತೆ ಮಾಡಬೇಕೆಂದೂ ಗ್ರಾಮದ ಎಲ್ಲಾ ತರದ ಅಭಿವೃದ್ಧಿಯ ವಿಷಯ ಶಾಲೆಯನ್ನು ಮಧ್ಯ ಸ್ಥಳವಾಗಿ ಮಾಡಬೇಕೆಂತಲೂ ಮುಂತಾಗಿ ಒಂದು ಯೋಗ್ಯವಾದ ಭಾಷಣವನ್ನು ಕೊಟ್ಟರು. ತಾಂಬೂಲಾದಿ ಸತ್ಕಾರಗಳಾದ ಮೇಲೆ ಮಂಗಲಹಾಡು ರಾಷ್ಟ್ರಗೀತ ಹಾಡಿ ಸಭೆಯು ಅಂತ್ಯವಾಯಿತು.

ಶ್ರೀ ಸಾಯಂ. ಸಂಸ್ಕೃತ ಶಾಲೆಯ — ವರದಿ. —

ಎರಡನೆಯ ವರ್ಷ. 15—6—೨೮ರ ವರೆಗಿನ

ಶ್ರೀ ಸಾಯಂ ಸಂಸ್ಕೃತ ಶಾಲೆಯು ಇದೀಗಲಾದರೂ ಪ್ರಾಯವಾಗಿ ಮೂರನೆಯ ಅಬ್ದಕ್ಕೆ ಕಾಲಿಟ್ಟಿರುವುದು. ಆರಂಭದಲ್ಲಿ ಎರಡು ವಿಭಾಗಗಳಿದ್ದು ೨೦ ವಿದ್ಯಾರ್ಥಿಗಳು ವಾಚಕರಾಗಿ ೧೭, ೧೮ರಂತೆ ಸರಾಸರಿ ಹಾಜರಿ ಇತ್ತು. ೧೮೪ ದಿವಸದಿಂದಲೂ ಪ್ರಚಲಿತವಾಗಿ ಇತ್ತು. ಶಾಲಾ ಸಮಯವು ಹಿಂದಣ [illegible] ತಾಸಿನಿಂದ ೭ ತಾಸಿನ ತನಕ. ಶಾಲೆಯ ಮಂದಿರವು ಮೊದಲು ಮಹಾ[illegible]ಯಲ್ಲಿ ಒಂದು ಮಾಳಿಗೆಯಾಗಿ ಇದ್ದಿತು. ೧೯೨೮ ಫೆಬ್ರವರಿ[illegible] ಮಾನ್ಯ ಮಿಶನ್ ಶಾಲಾ ಹೆಡ್ಮಾಸ್ಟರರವರು ತಮ್ಮ ಮಿಶನ್[illegible] ಸಾಯಂಕಾಲದ ಈ ಶಾಲೆಗಾಗಿ ಬಾಡಿಗೆ ಇಲ್ಲದೆ ಸ್ಥಳವ[illegible]ವರು. ಈಗ ಶಾಲೆಯು ಮಿಶನ್ ಶಾಲೆಯ ಇದಿರಿನ[illegible] ನಡಿಸಲ್ಪಡುತ್ತಿರುವದು. ಇಷ್ಟರತನಕ ೧೪೦ ಮಂದಿ [illegible] ಶಾಲೆಗೆ ವಾರ್ಷಿಕವಾಗಿ ಸಹಕರಿಸಲು ಬದ್ಧಪ್ರತಿಜ್ಞರಾಗಿರುವ[illegible] ಕಳೆದ ಮೇ ಅಂತ್ಯದ ವರೆಗೆ ೧೦೦ ಮಂದಿ ಮಹನೀಯ[illegible] ದ್ರವ್ಯವು ಕೈಸೇರಿರುವದು. ನೂತನವಾಗಿ ಪ್ರವೇಶಿಸುವ ವಿದ್ಯಾ[illegible] ೮ ಆಣೆ ಪ್ರವೇಶ ವೇತನವಾಗಿ ಪಡಕೊಳ್ಳುವೆವಲ್ಲದೆ ಬೇರೆ ಸ[illegible] ಪಡಕೊಳ್ಳುವದಿಲ್ಲ.

ಈ ವರುಷದಲ್ಲಿ ೩ ವಿಭಾಗಗಳಿರುವವು. ಮದರಾಸು [illegible] ವಿಶ್ವವಿದ್ಯಾಲಯದ ಸಂಸ್ಕೃತ ಪ್ರವೇಶ ಪರೀಕ್ಷೆಗೆ ೬ ವರ್ಷದ [illegible]ರ್ಥಿಗಳನ್ನು ಕಳುಹಿಸುವ ಉದ್ದೇಶದಿಂದ ವಿಶ್ವವಿದ್ಯಾಲಯದ [illegible] ಕ್ರಮಣಿಕೆಯಂತೆ ಯಥಾಕ್ರಮವಾಗಿ ವಿಭಾಗಕ್ಕನುಸರಿಸಿ ಪ[illegible]ಗಳನ್ನು ಈ ವರ್ಷದಿಂದ ಕಲ್ಪಿಸಿ ಇರುವೆವು. ಸಂಸ್ಕೃತವೂ [illegible] ಪರೀಕ್ಷೆಗೆ ಅನುಕೂಲಿಸುವಂತೆಯೇ ಕಲಿಸಲ್ಪಡುವದು. ಈ ನೂತ[illegible] ಸೌಕರ್ಯವು ವಿದ್ಯಾಭಿಲಾಷಿಗಳಿಗೆ ಹಾಗೂ ವಿದ್ಯಾಭಿಮಾನಿಗಳಿಗೆ [illegible]ಹವಾಗಿಯೂ ಮಹೋಪಕಾರವನ್ನು ಎಂದಿಗೂ ಮಾಡದೆ ಬಿಡ[illegible] ನಂಬಿರುತ್ತೇನೆ. ಈ ಸುಯೋಗವನ್ನು ವ್ಯರ್ಥಗೊಳಿಸದೆ ದುರ್ಲ[illegible] ಈ ಗೀರ್ವಾಣ ಭಾಷೆಯು ಅಚಿಂತ್ಯವಾಗಿ ಸುಗಮವಾಗಿರುವಾಗ [illegible] ಮಿಸಿದ ಕಾಲಕ್ಕೆ ಪಶ್ಚಾತ್ತಾಪ ಪಡದೆ, ತಮ್ಮ ತಮ್ಮ ಬಾಲಕರನ್ನು [illegible] ದಿಂದ ಶ್ರೀ ಸಾಯಂ ಸಂಸ್ಕೃತ ಶಾಲೆಗೆ ಕಳುಹಿಸಿ ಪಾಂಡಿತ್ಯವನ್ನು [illegible] ವಂತೆ ಮಾಡಿರೆಂದೂ ದ್ರವ್ಯರೂಪದಿಂದ ಸಹಕರಿಸಿ ಶಾಲೆಯ ಮೇಲ್ಮೆ[illegible]ಯನ್ನು ಬಯಸಿರೆಂದೂ ಪ್ರೀತಿಪುರಸ್ಸರವಾಗಿ ವಿಜ್ಞಾಪಿಸುತ್ತೇನೆ. ಏವಂಚ ಶಾಲಾ ಪ್ರೇರಕನಾದ ಆ ಭಗವಂತನಲ್ಲೂ, ಶಾಲೆಗೆ ಸ್ಥಳವನ್ನಿತ್ತಿರ[illegible] ಮಾನ್ಯ ಯಸ್. ಎ. ಫುರ್ಟಾದೋ ಅವರ್ಗಳಲ್ಲೂ, ವಾರ್ಷಿಕವಾಗಿ ಸ[illegible]ಕರಿಸುತ್ತಿರುವ ಮಹನೀಯರಲ್ಲೂ, ಉಚಿತದಾನವನ್ನಿತ್ತ ಮ[illegible]ನೀಯರಲ್ಲೂ, ವಿದ್ಯಾರ್ಥಿಗಳನ್ನು ಕಳುಹಿಸಿ ಭಾಷಾದೇಶೋನ್ನತಿಯನ್ನು ಬಯಸುತ್ತಿರುವ ಪ್ರಿಯ ಮಾನ್ಯ ಪಟ್ಟಣಿಗರಲ್ಲೂ ಕೃತಜ್ಞತೆಯನ್ನೂ ಅಭಿನಂದನೆಯನ್ನೂ ಅರ್ಪಿಸುತ್ತೇನೆ.

ಆಯ ವ್ಯಯಗಳ ವಿವರ.

ಆದಾಯ—೧೯೨೬ ಜೂನಿನಿಂದ ೧೯೨೮ ಮೇ ತನಕದ ಆದಾಯ ೪೬೮-೧೨-೦, ಕಳೆದ ವರುಷದ ಮಿಗ್ತೆ ಹಣ ೧-೭-೧೦, ಒಟ್ಟು ಜಮೆ ೪೭೦-೩-೧೦.

ವ್ಯಯ—೧೯೨೬ ಜೂನಿನಿಂದ ೧೯೨೮ ಮೇ ತನಕದ ಒಂದು ವರ್ಷದ ಉಪಾಧ್ಯಾಯರ ವೇತನ ೨೪೦-೦-೦, ವಿದೇಶಗಳ ಪಯಣ ೭೯-೧೪-೦, ಸ್ಥಳದ ಬಾಡಿಗೆ ೪೬-೮-೦, ಬೋರ್ಡು ೫-೧೫-೦, ಗಡಿಯಾರ ೮-೧೨-೦, ಕಾಗದ ವಗೈರೆ ಚಿಲ್ಲರೆ ಖರ್ಚು ೮-೫-೧; ಒಟ್ಟು ವ್ಯಯವಾದ ಧನ ೩೮೯-೬-೧.

ಮಿಗ್ತೆ ಹಣ ೪೭೦-೩-೧೦ — ೩೮೯-೬-೧ = ೮೦-೧೩-೯ ಮಾತ್ರ.

ಅಧ್ಯಕ್ಷ—ಶ್ರೀ ಸಾ. ಸಂಸ್ಕೃತ ಶಾಲಾ, ಮಂಗಳೂರು. } ವಿ. ಬಿ. ಶಾಸ್ತ್ರೀ, ೨೦—೬—'೨೮.

ಅತೀ ಮಹತ್ವದ ಸೋಡ್ತಿ.

ಕೆನರಾ ಹ್ಯಾಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್ ... ಇವುಗಳ ಸಹಾಯಾರ್ಥವಾಗಿ

[illegible]

ಪ್ರಕಟನೆ.

ಈ ಮೂಲಕ ಎಲ್ಲಾ ಜನರಿಗೂ ತಿಳಿಯ ಪಡಿಸುವದೇನಂದರೆ:—

ಕಳೆದ ತಿಂಗಳ ತಾರೀಕು ೩೬-೫-'೨೮ರಲ್ಲು ನಾನು ವಿಟ್ಲ ರಿಜಿಸ್ಟ್ರೀ ಆಫೀಸಿನಲ್ಲಿ ಕಡಂದೇಲ ವೆಂಕಟ್ರಮಣ ಭಟ್ಟರಿಂದ ಅವರು ತಾರೀಕು ೧೫-೫-೧೮ರಲ್ಲು ನೈಚಾಲ ಕೇಶವ ಭಟ್ಟರಿಂದ ಮಾಡಿಕೊಂಡ ಕ್ರಯ ಚೀಟನ್ನು ನನ್ನ ಹೆಸರಿನಲ್ಲಿ ಮಾಡಿಕೊಳ್ಳುವ ಸಮಯದಲ್ಲಿ ಸದರಿ ಕಡಂದೇಲ ವೆಂಕಟ್ರಮಣ ಭಟ್ಟರು ರಿಜಿಸ್ಟ್ರಾರರ ಸಮಕ್ಷಮ ನನಗೆ ಕೊಟ್ಟ ಅವರ ಮೊದಲಿನ ಕ್ರಯ ಚೀಟು ವ ಅದರೊಂದಿಗಿರುವ ಬಿಳಿರಿಕಾರ್ಡು ಕೂಡಾ ನಾನು ವಿಟ್ಲ ಶಂಕರನಾರಾಯಣ ತುಂಗ ಇವರ ಊಟದ ಹೋಟೆಲಿನಲ್ಲಿ ಊಟತೀರಿಸಿ, ನನ್ನ ಸ್ವಂತ ಮನೆಯಾದ ಕಾಟುಕುಕ್ಕೆಗೆ ಹೋಗಿ ನೋಡಲಾಗಿ ಸದರಿ ಕ್ರಯ ಚೀಟು ವ ಬಿಳಿರಿಕಾರ್ಡು ಕೂಡಾ ಗೈರು ವಿಲೆಯಾಗಿ ಹೋಗಿರುತ್ತದೆ. ಸದರಿ ರಿಕಾರ್ಡು ಯಾರಿಗಾದರೂ ಕೈಸೇರಿದರೆ ಅದನ್ನು ನನ್ನ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟಲ್ಲಿ ಯಾ ನನಗೆ ತಂದುಕೊಟ್ಟಲ್ಲಿ ರೂಪಾಯಿ ೧೫ನ್ನು ಸದರಿಯವರಿಗೆ ಇನಾಮಾಗಿ ಕೊಡುವರೆ ನಾನು ಈ ಮೂಲಕ ವಾಗ್ದಾನ ಮಾಡಿರುತ್ತೇನೆ.

ತಾ. ೨೨-೬-'೨೮ } ನೆಚ್ಚಾಲ ಗಣಪತಿ ಭಟ್ಟ, ಕಾಟುಕುಕ್ಕೆ ಗ್ರಾಮ ಕಾಸರಗೋಡು ಪೋಸ್ಟು.

ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ವಿದ್ಯಾರ್ಥಿವೇತನ.

ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದಿಂದ ವಿದ್ಯಾರ್ಥಿವೇತನವ (Scholarship)ನ್ನು ಅಪೇಕ್ಷಿಸುವ ಗೌಡಸಾರಸ್ವತ ಬ್ರಾಹ್ಮಣ ವೃಂದದ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲಾ ಮುಖ್ಯ ಉಪಾಧ್ಯಾಯರ ಮತ್ತು ತಮ್ಮ ತಮ್ಮ ಸ್ಥಳೀಕ ಗ್ರಹಸ್ಥರ ಶಿಫಾರಸು ಪತ್ರಗಳ ಸಮೇತ, ತಮ್ಮ ತಮ್ಮ ಮನವಿಗಳನ್ನು ಇದೇ ಬರುವ ಜುಲಾಯಿ ತಿಂಗಳ 15ನೇ ತಾರೀಕಿನ ಒಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಮಂಜೇಶ್ವರ ತಾ. 21-6-'28 } M VAIKUNTA BHAKTA, *Trustee.* Sri Madananteshwar Temple, MANJESWHAR, S. KANARA

ಒಂದಿಷ್ಟು ಸ್ವಾಭಿಮಾನವೂ ಇಲ್ಲದೆ ಹೋಗಿ ಕರ್ನಾಟಕೀಯರ ಹರಕಂಗಿಗಳನ್ನು ಸಾಲ ಕೊಳ್ಳುವುದರಲ್ಲಿಯೇ ಇದ್ದೇವಲ್ಲಾ! ಎಂಬ ಸಂತಾಪವು ಉಂಟಾಗುತ್ತಿದೆ. 'ಕೊಂಕಣಿಗನೆಂಬುದು ಕರ್ನಾಟಕದಲ್ಲಿ ತಿರಸ್ಕಾರದ ಶಬ್ದವಾಗಿದೆ. ಕರ್ನಾಟಕದ ವಾಙ್ಮಯದಲ್ಲಿ 'ಕೊಂಕಣಿಗರು ವಹಿಸಿದ ಭಾಗವನ್ನು ಮಾನಿಸಲಿಕ್ಕೆ ಯಾರು ತಯ್ಯಾರಿಲ್ಲ. ... Stateless ... "ಕೊಂಕಣ ಕುವರ."

[illegible]

... ಮಾನಿಸಿರಲಿಲ್ಲ. ಆದುದರಿಂದ ನಾವು ಕೊಂಕಣ ಪ್ರಾಂತರಚನೆಗೆ ವಿರೋಧವಾಗಿ ಇದ್ದರೆ ಅದು ಎಂದಿಗೂ ನಾವು ಒಂದು ಸಲ ಹೊರಡಿಸಿದ ಸಾರಸ್ವತದ ಧೋರಣಕ್ಕೆ ವಿರೋಧವಾಗಲಾರದು, — ಸಂ)

ಬಡ ಮಾಸ್ತರರ ಸಂಕಷ್ಟ.

ಮಂಗಳೂರು ತಾಲೂಕು ಬೋರ್ಡಿನ ಈಗಿನ ದಯಾಳು ಪ್ರೆಸಿಡೆಂಟರು ಬಡ ಮಾಸ್ತರುಗಳ ಸಂಕಷ್ಟಗಳನ್ನು ಗಮನಕ್ಕೆ ತಂದು ಬಾಕಿ ಇರುವ ಇಂಕ್ರಿಮೆಂಟನ್ನು ಬೇಗನೇ ಕೊಡಬೇಕೆಂದು ಮನಸ್ಸು ಮಾಡುತ್ತಿರುವಾಗ್ಗೆ ಆಫೀಸ್ ಗುಮಾಸ್ತರುಗಳು ಪಟ್ಟಿ ತಯಾರಿಸುವ ಉದಾಸೀನತೆಯಿಂದ ಹಿಂದೆ ಹಾಕಿದ್ದಾರೆ ಎಂಬ ವದಂತಿ. 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂಬ ಗಾದೆಯು ಇಲ್ಲಿ ಸರಿಯಾಯಿತು. ಪಟ್ಟಿ ತಯಾರಿಸಲಿಕ್ಕೆ ಗುಮಾಸ್ತರಿಗೆ ಉದಾಸೀನವಾಗುತ್ತದೆಯಾದರೆ ಮಾಸ್ತರರು ತಿಂಗಳು ಗಟ್ಲೆ ಸಂಬಳದ ಬಿಲ್ಲು ಮಾಡುವ ಹಾಗೆ ಅವರಿಗೆ ಸಲ್ಲಬೇಕಾದ ಇಂಕ್ರಿಮೆಂಟಿನ ಬಿಲ್ಲು ಮಾಡಲಿಕ್ಕೆ ಸರ್ಕಾರು ಕೊಟ್ಟು ಈಗ ಇರುವ ಪದ್ಧತಿ ಪ್ರಕಾರ ಬಿಲ್ಲು ಚೆಕ್ಕುಮಾಡಬಹುದಲ್ಲವೇ? ಈ ಗುಮಾಸ್ತರರ ಅಸಡ್ಡೆಯಿಂದ ಇತ್ತಲಾಗೆ ಒಂದು-ಒಂದುವರೆ ತಿಂಗಳ ನಂತರ ಬಡ ಮಾಸ್ತರರ ಸಂಬಳ ಕೈಸೇರಲಿಕ್ಕೆ ತೊಡಗಿದೆ. ಗುಮಾಸ್ತರರಿಗೆ ಮಾತ್ರ ೧ನೇ ತಾರೀಕಿಗೆನೇ ಸಂಬಳ ಸಿಗಬೇಕು, ಮಾಸ್ತರರಿಗೆ ಯಾವಾಗ ಸಿಕ್ಕಿದರೆ ಅವರಿಗೇನು? ಪ್ರೆಸಿಡೆಂಟರು ಹೊಸಬರಾಗಿಯೋ ಅಥವಾ ಗುಮಾಸ್ತರರ ಅಸಡ್ಡೆಯಿಂದಲೋ ಇಲ್ಲವೇ ಬಡ ಮಾಸ್ತರರ ದುರಾದೃಷ್ಟದಿಂದಲೋ ಹೀಗೆ ಆಗಲು ಕಾರಣ ಎಂಬುದು ಗೊತ್ತಾಗುವದಿಲ್ಲ. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯಾದರೂ ಮಾಡಬೇಡವೇ? 'ಪಾಪಿ ಹೋದಲ್ಲಿ ಮೊಳಕಾಲ ವರೆಗೆ ನೀರ್'ಂತೆ. ಬಡ ಮಾಸ್ತರರ ಸಂಕಷ್ಟಗಳನ್ನು ಕೇಳುವವರೇ ಇಲ್ಲವೇ? ಈ ವಿಷಯದಲ್ಲಿ ಸಂಬಂಧಪಟ್ಟ ಮೇಲಾಧೀಸರರು ಸ್ವಲ್ಪ ಪ್ರವೇಶ ಆಗುತ್ತಿದ್ದರೆ ಧನ್ಯಗಳಸಿಕೊಂಡಂತೆ ಆಗುತ್ತಿತ್ತು.

ಬಡ ಉಪಾಧ್ಯಾಯ.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸ್ ...

Secretary,
The Canara Public Conveyance Co., Ltd., Mangalore

WHEN MOTHER IS ILL

ತಾಯಿಯು ಅನಾರೋಗ್ಯದಲ್ಲಿರುವಾಗ

ಮನೆಯ ಸುಖಸಂತೋಷವು ಹೆಚ್ಚಾಗಿ ತಾಯಂದಿರ ಒಳ್ಳೆಯ ಆರೋಗ್ಯದ ಮೇಲೆ ಅವಲಂಬಿಸಿಕೊಂಡಿರುವುದು. ತಾಯಿಯು ಅಸ್ವಸ್ಥದಲ್ಲಿ ಬಿದ್ದೊಡನೆ, ಸಂತೋಷವು ಮಾಯವಾಗಿ ಮನೆಯು ಸ್ಮಶಾನದಂತಾಗುವದು. ಸಾಧಾರಣವಾಗಿ ತಾಯಿಯ ಅನಾರೋಗ್ಯವು ಶಕ್ತಿಹೀನತೆಯಿಂದಲೂ, ಅದಕ್ಕೆ ಸಂಬಂಧಿಸಿದ ಇತರ ಕಾರಣಗಳಿಂದಲೂ, ಉಂಟಾಗುವವು. ಗರ್ಭಿಣಿಯಾಗಿರುವಾಗಲೂ, ಪ್ರಸವಕಾಲದಲ್ಲಿಯೂ, ಅಲಕ್ಷಿಸುವಿಕೆ, ಕ್ರಮ ತಪ್ಪಿ ನಡೆಯುವಿಕೆ, ಮತ್ತು ಬೇಗನೆ ಚಿಕಿತ್ಸೆ ಮಾಡಲು ಅರ್ಹವಾದಂಥ ಶಕ್ತಿಹೀನ ಶರೀರ ಪ್ರಕೃತಿಯಿಂದಲೂ ಕೆಲವು ವೇಳೆ ಅನಾರೋಗ್ಯವು ಉಂಟಾಗುವದು.

ಅಂತಹ ಸಂದರ್ಭದಲ್ಲಿ **ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ** ಪ್ರಯೋಜನಕಾರಿಯಾಗುವವು. ಶರೀರದೊಳಗಿನ ರಚನೆಯ ಮೇಲೆ ಬಹು ಉಪಕಾರವಾಗುವ ಪರಿಣಾಮವನ್ನುಂಟುಮಾಡುವವು. ಈ ಮಾತ್ರೆಗಳು ಶರೀರದೊಳಗಿನ ಇಂದ್ರಿಯಗಳನ್ನು ಶುಚಿಪಡಿಸಿ, ಸರಿಪಡಿಸಿ, ಶಕ್ತಿಯನ್ನು ವರ್ಧಿಸಿ ರಕ್ತವನ್ನು ಹೆಚ್ಚಿಸುವವು. ಈ ಮಾತ್ರೆಗಳ ಸೇವನೆಯಿಂದ ಗುಣವನ್ನು ಹೊಂದಿದ ತಾಯಂದಿರಿಂದ ಬಂದ ಅನೇಕ ಪತ್ರಗಳು ನಮ್ಮಲ್ಲಿದ್ದು ನಮ್ಮ ಮಾತ್ರೆಯ ಯೋಗ್ಯತೆಯನ್ನು ಪ್ರಕಟೀಕರಿಸುವವು. ತಮ್ಮ ಹೆಂಡಂದಿರು ಉತ್ತಮ ಆರೋಗ್ಯಸುಖವನ್ನು ಅನುಭವಿಸುವಂತೆ ಅವರಿಗೆ ಶಕ್ತಿ ತುಂಬಿಸಿದ ಈ ಮಾತ್ರೆಗಳ ಉಪಕಾರ ಸ್ಮರಣೆಯನ್ನು ಮಾಡಿ, ತಮ್ಮ ಸಂಸಾರವು ಸುಖಪ್ರದವಾದ ಸಂಸಾರವೆಂದು ಎಷ್ಟೋ ಗಂಡಂದಿರು ನಮಗೆ ಬರೆದಿರುವರು.

ತಲೆನೋವು, ಬೆನ್ನುನೋವು, ಮೊಣಕಾಲು ಮತ್ತು ಸೊಂಟನೋವು. ಕಿಬ್ಬೊಟ್ಟೆಯನೋವು, ರಕ್ತಹೀನತೆ, ವಿವರ್ಣ ಮುಖಛಾಯೆ, ಮಲಿನರಕ್ತ, ಅಜೀರ್ಣ, ಧಾತುನಷ್ಟ, ಪಿತ್ತದೋಷಗಳು ಮೊದಲಾದ ಭಯಂಕರ ಸ್ತ್ರೀ ವ್ಯಾಧಿಗಳನ್ನು ಗುಣಪಡಿಸುವದಕ್ಕಾಗಿಯೇ ಈ ಮಾತ್ರೆಗಳು ರಚಿಸಲ್ಪಟ್ಟಿವೆ. ಶೋಭೆಯುಳ್ಳ ಕಣ್ಣುಗಳು, ಕೆಂಪುಗಲ್ಲಗಳು, ಸ್ವಚ್ಛವಾದ ಚರ್ಮ, ಮತ್ತು ಸುಖಕರವಾದ ಮತ್ತು ಮಂದಹಾಸವುಳ್ಳ ಮುಖಛಾಯೆ, ಇವುಗಳೇ ಆರೋಗ್ಯದ ಸೂಚನೆಗಳು.

ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿನಲ್ಲಿ ಎಲ್ಲಾ ಕೆಮಿಸ್ಟರಿಂದಲೂ ಸಂಗ್ರಹಿಸಿ ಮಾರಲ್ಪಡುವವು, ಬಾಟಲಿಯೊಂದಕ್ಕೆ ರೂ. 2-4-0. ಅಥವಾ ಮುಖ್ಯ ಏಜಂಟರುಗಳಾದ **ಪಟೇಲ್ ಮತ್ತು ಧೊಂಡಿ, ಪೋಸ್ಟು ಬಾಕ್ಸ್ 888 ಬೊಂಬಾಯಿ.**
— ಇವರಿಂದ ಸೀದಾ ತರಿಸಬಹುದು. — ಪಿ. ಓ. ಬಾಕ್ಸ್ 62 ಕಲಕತ್ತಾ.
ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 82.

NOTICE.

The Bombay Life Assurance Co. Ltd., Bombay.

The Claimant under the Company's policy No. 5684 having notified that the said Policy has been lost or misplaced and having applied for the issue of a duplicate thereof, notice is hereby given that a duplicate policy will be issued by the Company should there be no objection recorded in our Office to our doing so within three weeks of the issue of this notice.

S. B. Cardmaster,
Manager, The Bombay Life Assurance Co, Ltd.,

The Bombay Life Assurance Co. Ltd., Bombay.

U. Anthappa holder of our Policy No. 9302 having notified that he has either lost or misplaced his Policy and having requested us to issue a duplicate there of in his favour notice is hereby given that a duplicate Policy will be issued to him by the Co. should there be no objection recorded in our Office to our doing so within a month of the issue of this notice.

Dated 15-6-'28.

S. B. Cardmaster,
Manager, The Bombay Life Assurance Co, Ltd.,

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

ಒ. ಪಿ. ನಂಬ್ರ 49/1928.

ಪರಮೇಶ್ವರಿ ಯಾನೆ ಗುಬ್ಬಕ್ಕ ಅರ್ಜಿದಾರಳು

ಮೇಲ್ಕಂಡ ಅರ್ಜಿದಾರಳು ಮೃತಪಟ್ಟ ಕೃಷ್ಣ, ಕೇಳತ್ತಯಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವ ಬಗ್ಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರಳು ಮನವಿಮಾಡಿಕೊಂಡಿದ್ದಾಳೆ. ಆ ಕುರಿತು ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ತಾರೀಕು 5-7-1928ರ ಪೂರ್ವಾಹ್ನ ಘಂಟೆ 10ಕ್ಕೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು.

ಮೊಂಕ್ಯಾ ಪುತ್ತೂರು, ತಾ. 16-6-'28. } ದಿ. ಶಿವರಾಮ ಹೊಳ್ಳ, ವಕೀಲ್.

ಪ್ರಕಟಣೆ.

ಮಂಗಳೂರು ಮುನಿಸಿಪಾಲಿಟಿ ವಳಪಟ್ಟ ಕೊಡಿಯಾಲಬೈಲು ವಾರ್ಡಿನಲ್ಲು ಮಣ್ಣಗುಡ್ಡೆ ಶಾಲಾ ಮುಂದುಗಡೆ ಇರುವ T. S. No. 624/2ನೇ ಭಾಗ್ಯಾತು ಸ್ಥಳದ ವಿಸ್ತೀರ್ಣ ಸೆಂಟ್ಸ್ 99, ಇದರ ಗಡಿ ಪೂರ್ವ ಕೂಳೂರು ರಾಜಮಾರ್ಗ; ದಕ್ಷಿಣ ಪಶ್ಚಿಮ ಸರ್ಕಾರಿ ಪೋಲೆ, ಉತ್ತರ ಕಲ್ಲಿನ ಪಾಗಾರ, ಈ ಮಧ್ಯೆ ಇರುವ ದೊಡ್ಡ ಹಂಚುಹಾಕಿದ ಮನೆಗಳು, ಭಾವಿ, ಹಟ್ಟಿ, ಕೊಟ್ಟಿಗೆ, ಸ್ನಾನಕಾನೆ ಇತ್ಯಾದಿ ಸರ್ವಾದಿಯನ್ನೂ ಖಂಡಿತ ಕ್ರಯಕ್ಕೆ ಮಾರಾಟ ಮಾಡುವರೆ ಆಲೋಚಿಸಿರುತ್ತದೆ. ಕ್ರಯಕ್ಕೆ ಪಡಕೊಳ್ಳುವ ಗಿರಾಕಿಗಳೂ ಇದರ ಹೆಚ್ಚಿನ ಮಾಹಿತಿಯನ್ನು ತಿಳಕೊಳ್ಳುವ ಅಪೇಕ್ಷೆಯುಳ್ಳವರೂ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು;—

ತತ್ವಾಡಿ ರಾಮರಾಯ,
(4—1) ಮಣ್ಣಗುಡ್ಡೆ, ಮಂಗಳೂರು.

ಶ್ರೀ ಶಿವಾಜಿ ಮಹಾರಾಜರ ಪ್ರತಿಮಾಸ್ಥಾಪನೆ.

ಪೂನೆಯಲ್ಲಿ ಕಳೆದ ಶನಿವಾರ ದಿನ ಶ್ರೀ ಶಿವಾಜಿ ಮಹಾರಾಜರ ಒಂದು ಹಿತ್ತಾಳೆಯ ಪ್ರತಿಮೆಯನ್ನು ಸ್ಥಾಪಿಸಿ, ಅದನ್ನು ಬಹು ವಿಜೃಂಭಣೆಯಿಂದ ಅನಾವರಣಗೈದರು. ಈ ಸಂದರ್ಭದಲ್ಲಿ ದಕ್ಷಿಣದ ದೊಡ್ಡ ದೊಡ್ಡ ಹುದ್ದೇದಾರರೂ, ಕೊಲ್ಹಾಪುರದ ಮಹಾರಾಜರೂ ಬಂದಿದ್ದರು. ಮಳೆಯ ಬಾಧೆಯಿಲ್ಲದಿದ್ದುದು ಅತ್ಯಂತ ಉಪಕಾರವಾಯಿತು. ಮುಂಬಾಯಿಯ ಗವರ್ನರ ಧೊರೆಗಳವರು ಸಪತ್ನೀಕರಾಗಿ ಸಂಭ್ರಮದ ಮೆರವಣಿಗೆಯಿಂದ ಬಂದು ತಲಪಿದೊಡನೆ ಅವರನ್ನು ಹಿಂದೂ ರಾಜರುಗಳು ಸತ್ಕರಿಸಿದರು.

ಭಾಷಣಗಳೆಲ್ಲವೂ ನಡೆದ ಮೇಲೆ ಗವರ್ನರರು ಕೊಲ್ಹಾಪುರ ಮಹಾರಾಜರನ್ನೊಡಗೊಂಡು ಪ್ರತಿಮೆಯ ಸಮೀಪವನ್ನೈದಿ ಅನಾವರಣವನ್ನು ಜರಗಿಸಿದರು. ಈ ಸಂದರ್ಭದಲ್ಲಿ ೧೯ ಗುಂಡುಗಳು ಹಾರಿಸಲ್ಪಟ್ಟವು.

ಈ ಪ್ರತಿಮೆಯು ೧೦ ಟನ್ (೪೦ ಖಂಡಿ) ಭಾರವಿರುವುದು. ೧೭ ಅಡಿ ಎತ್ತರವಿರುವ ಒಂದು ಪೀಠದ ಮೇಲೆ ಅದನ್ನು ನಿಲ್ಲಿಸಿರುವರು. ಶಿವಾಜಿಯು ಭವಾನಿಯಿಂದ ಖಡ್ಗವನ್ನು ಪಡಕೊಳ್ಳುವಂತೆ ಪ್ರತಿಮೆಯು ನಿರ್ಮಿಸಲ್ಪಟ್ಟಿದೆ. ಇದಕ್ಕೆ ಒಟ್ಟು ೬೦,೦೦೦ ರೂಪಾಯಿಗಳು ಖರ್ಚಾಗಿವೆಯಂತೆ. ಈ ಪ್ರತಿಮೆಯ ಹೊರತು ಶಿವಾಜಿಯ ಸ್ಮಾರಕಕ್ಕಾಗಿ ಒಂದು ವಸ್ತು ಸಂಗ್ರಹಾಲಯವನ್ನೂ, ವಾಚನಾಲಯವನ್ನೂ ಸ್ಥಾಪಿಸುವರು. ಪ್ರತಿಮೆಯ ಸುತ್ತಲೂ ಅಂದವಾದ ಕಟ್ಟಡಗಳನ್ನು ಕಟ್ಟುವರು. ಈ ಕಟ್ಟಡಗಳಿಗಾಗಿ ಹಿಂದೂ ಮುಸಲ್ಮಾನರು ಐಕ್ಯದಿಂದ ವಂತಿಗೆಯನ್ನು ಕೊಟ್ಟಿರುವರು. ಕಟ್ಟಡಗಳನ್ನು ಕಟ್ಟಿ ಉಳಿದ ಹಣವನ್ನು ಐತಿಹಾಸಿಕ ಸಂಶೋಧಗಳಿಗಾಗಿ ವಿನಿಯೋಗಿಸುವರು.

ಕೊಲ್ಹಾಪುರ ಮಹಾರಾಜರ ಭಾಷಣ—"ಶಿವಾಜಿಯ ಸ್ಮಾರಕವನ್ನು ತೆರೆಯುವ ಚಳವಳವು ಯುವರಾಜರು ಇಲ್ಲಿಗೆ ಬಂದಾಗ (೧೯೨೧) ಪ್ರಾರಂಭವಾಗಿದ್ದರೂ, ಬಹು ಕಷ್ಟಕರವಾದ ಕಾರಣ ಪ್ರತಿಮೆಯನ್ನು ಸ್ಥಾಪಿಸಲು ಇಷ್ಟು ವರ್ಷಗಳು ಕಳೆದುಹೋದುವು. ಮುಂಬಾಯಿಯ ...

[illegible]

[illegible]

ರೋಗಿ ... (ಅಥವಾ ನಿದಾನ) ಮಾಡು... ಎಂದು ಎಲ್ಲಿ ಉಂಟಾಯಿತು. ... ಕಾರಣವೇನು, ದೋಷವು ಎಲ್ಲಿ ದುಷ್ಟವಾಯಿತು ... ವಿಚಾರಕ್ಕೆ ತಂದುಕೊಳ್ಳಬೇಕಾಗಿದೆ. ಲಕ್ಷಣಗಳನ್ನು ... ಸೂಕ್ಷ್ಮವಾಗಿ ವಿಚಾರಿಸಿಕೊಂಡು, ದೋಷದ ... ರವನ್ನು ನಿಶ್ಚಯಿಸಿಕೊಂಡು ರೋಗನಿದಾನವನ್ನು ಮಾಡಿ ಬಳಿಕ, ರೋಗಿಯ ಹಾಗೂ ರೋಗದ ಚಿಕಿತ್ಸೆಯನ್ನು (ಉಪಕ್ರಮ) ಮಾಡಬೇಕಾಗಿದೆ. (ರೋಗ ಮಾದೌ ಪರೀಕ್ಷ್ಯೇತ ತತೋಽನಂತರ ಮೌಷಧಮ್) ದೋಷದ ಅನುರೋಧದಿಂದ ಚಿಕಿತ್ಸೆ (ಔಷಧಯೋಜನ) ಮಾಡುವುದು ದೋಷ ಪ್ರತ್ಯನಿಕ ಚಿಕಿತ್ಸೆ ಎನಿಸುವುದು; ಮತ್ತು ವ್ಯಾಧಿ (ರೋಗ ಅತಿಸಾರ ಸಂಗ್ರಹಣಿ ಇತ್ಯಾದಿ) ನಿಶ್ಚಯ ಮಾಡಿಕೊಂಡು ಅದರ ಅನುರೋಧದಲ್ಲಿ ವಿಪರೀತ ಚಿಕಿತ್ಸೆಮಾಡುವುದಕ್ಕೆ 'ವ್ಯಾಧಿ ಪ್ರತ್ಯನಿಕ ಚಿಕಿತ್ಸೆ' ಎನ್ನುವರು. ವ್ಯಾಧಿಯ ನಿಶ್ಚಯವನ್ನು ಮಾಡುವಾಗ ಸಹ, ಅದರ ಮೂಲ ಕಾರಣವಾದ ದೋಷವು ಯಾವುದೋ ಅದನ್ನೂ ವಿಚಾರಮಾಡಿಯೇ ತೀರಬೇಕಾಗಿದೆಯಾದ್ದರಿಂದ ಆಯುರ್ವೇದದಲ್ಲಿ ದೋಷಪ್ರತ್ಯನಿಕ ಚಿಕಿತ್ಸೆಯೇ ಮುಖ್ಯವೆಂದೆಣಿಸಲಾಗಿದೆ; ಚಿಕಿತ್ಸೆಯ ಈ ಬಗೆಯೇ ಆಯುರ್ವೇದದ ಉತ್ತಮಧ್ಯೇಯವು. ಈ ಚಿಕಿತ್ಸೆಯ ವಿಷಯವಾಗಿ, ಸಂಕ್ಷೇಪವಾಗಿ ವಿವೇಚಿಸಿಕೊಂಡು, ನನ್ನ ಭಾಷಣವನ್ನಿನ್ನು ಮುಗಿಸುವೆನು.

[illegible]

... ಇವುಗಳಲ್ಲಿ ತಾನೆ ... ಅದರ ದೆಸೆಯಿಂದಾಗಿ ಅಭಿನಿವೇಶ, ಇದರ ದೆಸೆಯಿಂದಾಗಿ ... ಕಾರಣದಿಂದಲೇ ವೃಥಾ ವಾದವಿವಾದಗಳು, ... ಹಿಂದೆ ಹೇಳಲಾದ ಪದಾರ್ಥ ... ತತ್ವದ ಪ್ರಯೋಜನಗಳನ್ನು ಆಧುನಿಕ ಶಾಸ್ತ್ರೀಯ ವೈದ್ಯಕವು (Allopathy) ಪಡೆಯುತ್ತಲಿದೆ; ಇದೇ ತತ್ವದ ಪ್ರಯೋಜನವನ್ನು ಸಮವೈದ್ಯಕ (Homeopathy) ಪಡೆಯುತ್ತಿದೆ. ಅದನ್ನೇ ಸಹ ನಿರೀಂದ್ರಿಯಘಟಕಗಳ ವಿಚಾರವನ್ನು ಮಾಡುವ ಜೀವನರಸಾಯನೀ (Bio-Chemistry) ವೈದ್ಯಕವೂ ಲಭಿಸಿಕೊಂಡಿದೆ; ಜಲವೈದ್ಯಕ (Hydropathy) ವರ್ಣವೈದ್ಯಕ (Chromopathy)ವೂ ಮಾನಸಚಿಕಿತ್ಸಾಪದ್ಧತಿಯೂ ಮೊದಲಾಗಿ ಯಾವತ್ತೂ ಪದ್ಧತಿಗಳು ಇವೇ ಆ ನಿಸರ್ಗನಿಯಮದ ಉಪಯೋಗವನ್ನು ಮಾಡಿಕೊಂಡಿವೆ. ಆದರೆ ದುಃಖಕರವಾದ ಸಂಗತಿಯಿದೇ; ನಾಲ್ವರು ಕುರುಡರು ಆನೆಯೊಂದರ ಒಂದೊಂದೇ ಅವಯವವನ್ನು ಮುಟ್ಟಿ ನೋಡಿ, ಅದು ಕದಳೀ ದಂಡಿನಂತಿದೆ, ಗಿರಸೆಯಂತಿದೆ, ಶೂಲದಂತಿದೆ, ಇದೇ ಮೊದಲಾಗಿ ಆನೆಯ ಏಕಾಂಗಜ್ಞಾನದಿಂದ ಆನೆಯ ಸ್ವರೂಪಸರ್ವವೂ ಹೀಗೆಯೇ ಇರುವುದಾಗಿ ಭಾವಿಸಿ ವ್ಯರ್ಥಜ್ಞಾನವನ್ನು ಸಂಪಾದಿಸಿಕೊಂಡು ತಮ್ಮ ಮನಸ್ಸನ್ನು ಸಮಾಧಾನಮಾಡಿಕೊಂಡಂತೆ, ವೈದ್ಯಕದಲ್ಲೂ ಇದೇ ಸ್ಥಿತಿಯುಂಟಾಗಿರುವುದು. ಆಯುರ್ವೇದದ ಮೂಲಕ ಎಲ್ಲಾ ಭಾಗಗಳ ಸಂಪೂರ್ಣ ಪರಿಜ್ಞಾನವನ್ನು ಸಂಪಾದಿಸಿಕೊಂಡಿರುವವರಿಂದ ಮಾತ್ರ ಮೇಲೆ ಪ್ರತಿಪಾದಿಸಿದ ತತ್ವಗಳ ಯಥಾರ್ಥ ಪ್ರಯೋಜನವನ್ನು ಪಡೆದುಕೊಳ್ಳಲು ಸಾಧ್ಯವಿರುವುದು. ದೋಷಪ್ರತ್ಯನಿಕ ಚಿಕಿತ್ಸೆಯನ್ನು ಮಾಡುವವರು, ಮೂಲದೋಷವನ್ನು ಮೇಲೆ ಹೇಳಿದ ಪದ್ಧತಿಯಿಂದಲೇ ನೋಡಬೇಕಾಗಿದೆ. ಏಕೆಂದರೆ ದೋಷಧರ್ಮಗಳನ್ನು ತಿಳಿದುಕೊಂಡ ಬಳಿಕ, ಧಾತುಗುಣಗಳನ್ನು ತ್ವರೆಯಲ್ಲಿ ಪ್ರಸ್ಥಾಪನೆ ಮಾಡಲು ಬರುತ್ತಿದೆ. ದೋಷಗಳ ಅಧಿಷ್ಠಾನವಿಚಾರವನ್ನು ಸಹ ಆಗಲೆ ಮಾಡಿಕೊಳ್ಳಬೇಕಾಗುತ್ತದೆ. ಶರೀರವು ತ್ರಿಧಾತುಗಳಿಂದ ತುಂಬಿರುವುದು ನಿಜವಾದರೂ, ತ್ರಿಧಾತುಗಳ ಸಹಾಯದಿಂದ ಪ್ರತ್ಯೇಕ ಅವಯವ, ರಸಾದಿ ಧಾತು ಮತ್ತು 'ತ್ರಿಧಾತುಕ್ರಿಯೆ' ನಡೆವಾಗ ಉಂಟಾಗುವ ಮಲ, ಇವುಗಳಿಗೆ ನಿಶ್ಚಿತ ರೂಪವು ಪ್ರಾಪ್ತವಾದ ಬಳಿಕ ಅವುಗಳಿಗೆ ಸ್ವತಂತ್ರವಾದ ಅಸ್ತಿತ್ವವು ತಾನಾಗಿಯೆ ಉಂಟಾಗಬೇಕಾದುದು. ದೋಷ, ಮತ್ತು ದೋಷಸಂಯೋಗ ಇವುಗಳನ್ನಲ್ಲದೆ, ಚಿಕಿತ್ಸೆಮಾಡುವಾಗ ರಸಕ್ರಿಯಾದಿಧಾತು ಸ್ಥೂಲಧಾತುಗಳ ವಿಚಾರ ಮಾಡಬೇಕಾಗುವುದು. ದೋಷಗಳ ಗುಣಗಳಲ್ಲಿ ಯಾವುವು ಬೆಳದಿವೆ, ಯಾವುವು ದೂಷ್ಯಗಳಲ್ಲಿ ಸ್ಥಿತವಾಗಿವೆ ಎಂಬೀ ವಿಚಾರವನ್ನು ಅಗತ್ಯವಾಗಿಯೂ ಮಾಡಬೇಕಾಗುತ್ತದೆ. ಇದಲ್ಲದೆ, ರೋಗಿಯ ಬಲ, ಕಾಲ, ಅನಲ, ಪ್ರಕೃತಿ, ವಯ, ಮನೋರಂಜನೆ, ಅವನಿಗೆ ಒಪ್ಪುವುದ್ಯಾವುದು; ಒಪ್ಪದುದ್ಯಾವುದು, ಅವನ ಆಹಾರವು ಎಂತಹದು, ಎಷ್ಟು, ರೋಗಿಯ ವಿವಕ್ಷಿತ ಅವಸ್ಥೆಗಳೆಂತಹವು, ಇವೆಲ್ಲವನ್ನು ಅತ್ಯಂತ ಸೂಕ್ಷ್ಮರೀತಿಯಲ್ಲಿ ನೋಡಿ, ದೋಷದೂಷ್ಯಾದಿಗಳನ್ನು ನಿಶ್ಚಯಿಸಿಕೊಂಡು, ಅನಂತರವೇ ಚಿಕಿತ್ಸೆಯನ್ನು ಮಾಡಬೇಕಾಗಿರುವುದು. ಹೀಗೆ ಮಾಡಿದ ಚಿಕಿತ್ಸೆಗಳು ಎಂದಿಗೂ ನಿರರ್ಥಕವಾಗಲಾರವು—ಎಂದೇ ಆಯುರ್ವೇದದ ಸಿದ್ಧಾಂತವಾಗಿದೆ. ಇವುಗಳಲ್ಲಿ ಪ್ರತಿಯೊಂದೂ ವಿಷಯದ ಮೇಲೆ ಬೇರೆ ಬೇರೆ ವಿಸ್ತಾರ ವ್ಯಾಖ್ಯಾನಗಳನ್ನು ಮಾಡಬಹುದಾಗಿದೆ.

ಚಿಕಿತ್ಸೆಗಳಲ್ಲಿ ದ್ರವ್ಯಭೂತ ಮತ್ತು ಅದ್ರವ್ಯಭೂತ ಎಂದು ಎರಡು ಬಗೆಯ ಚಿಕಿತ್ಸೆಗಳಿವೆ. ಔಷಧ, ಆಹಾರ, ಬೀಡು, ಶಸ್ತ್ರ, ಯಂತ್ರ ಮೊದಲಾದವು ದ್ರವ್ಯಭೂತ ಚಿಕಿತ್ಸೆಯ ಪ್ರಕಾರಗಳು. ಆಶ್ವಾಸನ, ಸೂಚನ, ಮಂತ್ರ ಮರ್ದನ, ಪೀಡನ, ಭಯಪ್ರದರ್ಶನ, ಲಂಘನ (ಉಪವಾಸ) ಇವು ಅದ್ರವ್ಯಭೂತ ಚಿಕಿತ್ಸೆಯ ಭೇದಗಳು, ಇವೆರಡೂ ಬಗೆಯ ಚಿಕಿತ್ಸೆಗಳನ್ನಾದರೂ ದೋಷಪ್ರತ್ಯನಿಕ ಪದ್ಧತಿಯಿಂದಲೇ ನಡೆಸಬೇಕು. ಶಸ್ತ್ರಕ್ರಿಯೆ (Surgery) ಅಥವಾ ಶಲ್ಯ ಚಿಕಿತ್ಸೆ, ಶಾಲಾಕ್ಯ ಚಿಕಿತ್ಸೆ, ಕಾಯ, ಬಾಲಗ್ರಹ ಊರ್ಧ್ವಾಂಗ, ದಂಷ್ಟ್ರಾ, ಜರಾ, ವೃಷ ಇವೆಂಟು ಚಿಕಿತ್ಸೆಯ ಅಂಗಗಳಾಗಿವೆ. ಇವಿಷ್ಟರೊಳಗೆ ಚಿಕಿತ್ಸಾಶಾಸ್ತ್ರ ಎಂಬುದೆಷ್ಟಿದೆಯೋ ಅಷ್ಟೂ ಅಡಕವಾಗಿಯೇ ಇದೆ.

ದ್ರವ್ಯಭೂತ ಚಿಕಿತ್ಸೆಯನ್ನು ಮಾಡುವಾಗ, ದ್ರವ್ಯ (ಅನ್ನ ಮತ್ತು ಔಷಧಿ ಮೊದಲಾದುವು)ದ ವಿವಿಧವಾದೆಷ್ಟೋ ಕಲ್ಪಗಳನ್ನು ಉಪಯೋಗಕ್ಕೆ ತರಲಾಗಿದೆ. ಸ್ವರಸ ಹಿಮ, ಫಾಂಟ, ಕಷಾಯ, ಆಸವ, ಘೃತ, ತೈಲ, ಕ್ಷಾರ, ಸತ್ವ, ಭಸ್ಮ, ಗುಟಿಕಾ, ವಟಿಕಾ, ಸಿದ್ಧರಸಾಯನ, ಮೊದಲಾದ ಸಾವಿರಗಟಲೆಯ ಕಲ್ಪಗಳ ವಿಸ್ತಾರವನ್ನು ನೋಡಿದರೆ, ಚಿಕಿತ್ಸೆಗಳ ಅಗಾಧವ್ಯ ವಿಸ್ತಾರವು ಕಣ್ಣಮುಂದೆ ಬಂದರೆ, ಮನಸ್ಸಿನಲ್ಲಿ ಬಗೆಬಗೆಯ ಭಾವನೆಗಳ ತರಂಗಗಳು ಉತ್ಪನ್ನವಾಗುತ್ತಿವೆ. ಮನೆಯಲ್ಲಿ ಕಾಮಧೇನುವಿದ್ದು ಬೊಸರಿಗಾಗಿ ಭಿಕ್ಷೆ ಬೇಡುತ್ತಿರುವವನ ಸ್ಥಿತಿಯಂತೆ, ಈಗಣವರಾಗಿರುವ ನಮ್ಮ ಸ್ಥಿತಿಯಾಗಿದೆ. ಇದನ್ನು ಭಾವಿಸಿದರೇ ಎದೆಯೊಡೆಯುತ್ತಿದೆ. ಕಾಮಧೇನುವಿನಂತೆ, ಸರ್ವವನ್ನೂ ದಾನಮಾಡುವಂತಹುದಾದ ನಿದಾನವಿರುವಾಗ, ಒಡೆದ ಮಡಕೆಯನ್ನು ಕೈಯಲ್ಲಿತ್ತಿಕೊಂಡು, ಮನೆಮನೆಗೆ ಬೊಸರಿಗಾಗಿ ಭಿಕ್ಷೆ ಬೇಡುವ ಪಾಮರನಂತೆ, ನಾವಾಗಿರುವೆವು! ಹೃದಯವನ್ನುಳ್ಳ ಯಾವನಾದರೂ ಈ ದುಃಸ್ಥಿತಿಯನ್ನು ನೆನೆದೊಡನೆಯೆ ವಿಧ್ವನಾಗದಿರನು.

ಸಶೇಷ

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ - ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಪಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಬೆಳ್ಳಿ ... ಕೂಟಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವ್ ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,
24-8-28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯ್ಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ-ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0
Reserve and other sinking Funds „ 338,500—0—0
of which amount invested on G. P. Notes Rs. 228,898—2—0
Rates of interest on fixed deposits at Head Office 6¼% for 2 Years
6% „ 1 Year
Season deposits of Rs. 1000/- & above terminable by the end of June are received at 6¼% p. a.

ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6.
ಜೂನ್ ಅಂತ್ಯದ ವಳಗೆ ವ್ಯಾದಿ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1-0-0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವುನ್ ಹಾಲ್ ಹತ್ತಿರ.



ಸೋಡಾ ಫೌಂಟನ್ ಯಂತ್ರಗಳು, ...

ಸನ್ ೧೯೨೮- ...

'ಸೂರ್ಯ' ಗುರುತು ... ...

ರಿಜಿಸ್ಟರ್ಡ್ — ಟ್ರೇಡ್ ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ... ಒಂದು ... ಅತಿ ಕಡಿಮೆಯೆಂದರೆ ಒಂದು ಡಜನ್ ... ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.



ದಯೆ ಇಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
310, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಬ್ರಹ್ಮ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಶ್ಯಾಣ ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧ ಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ, ಹಿಂದೆ ನಡಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ಖಬರೂ, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೋಜಂಟ್ರಾಗಿ, ಯಂಟವರ್ಪನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28. ಮಂಗಳೂರು.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. Registered: No. M. 1498 ಟಪ್ಪಾಲು ಹಾಸಲು ಸೇರಿ ರೂಪಾಯಿ 2-12

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ! ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೯ನೇ ಶುಕ್ರವಾರ ಜೂನ್ ೧೯೨೮. ಸಂಚಿಕೆ ೨೬.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು — ಉಡುಪಿ.

Branches:—COONDAPOOR.
" Mangalore.
ಶಾಖೆ: — ಕುಂದಾಪುರ.
" ಮಂಗಳೂರು.

STATEMENT OF AFFAIRS AS ON 16 JUNE, 1928.

CAPITAL AND LIABILITIES.		PROPERTY AND ASSETS.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	" 96,600-0-0	2 Investments on G. P. Notes	2,40,234-5-0.
3 Deposits	" 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	" 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	" 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12-7.

Office of the Corporation,
UDIPI, 18—6—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ತರದ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕಜ್ಜಿ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ ಇವರ ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

Batliwala's Preparations Cover All Your Needs.

A NAME THAT MERIT HAS MADE FAMOUS.

ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಜ್ವರ ನಿವಾರಣ. ರೂ. ೧.

ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.

ನಾಕ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩

ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ರೂ. ೧—೨—೦. ರೂ. ೧—೪—೦. ೧—೧೨—೦.

ರೂ. ೦—೬—೦

ರೂ. ೦—೬—೦. LIBERAL DISCOUNT TO TRADE

CAWASHAPUR, BOMBAY.

ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

... ಪ ರ ಲೋ ದ್ರ

... ರೋಗನಿವಾರಿಣಿ.

... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ... ಹಲವು ಬಗೆಯಾಗಿ ಹೊಗಳುತ್ತಿರುವರು.

... ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

... ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ಗಳೂ ನಿಶ್ಶೇಷವಾಗಿ ಗುಣವಾಗುವುವು.

... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

... ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

... ಮಾರ್ಟ್, ಹಂಪನಕಟ್ಟಾ, ಮಂಗಳೂರು.

18-11-27) ... ಬೆಂಗಳೂರು ...

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು— ... ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ... ಬಾಲಗ್ರಹ ಬಾಧೆಯಿಂದ ಉಂಟಾಗುವ ... ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ ... ನಂಬಿಕೆ ... ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ... ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

... ಸೌತ್ ಕೆನರಾ ಡಿಸ್ಟ್ರಿಕ್ಟ್,

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿ ಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋಸ್ಟ್ ಬಾಕ್ಸ್ ನಂ. 105, ಮದರಾಸು.

ಟೈಂಪೀಸ್ ಸಹಿತ ಬೆಲೆ 1ಕ್ಕೆ 2—8—0.

ವಿಳಾಸ:— ... ವಾಚ್ ಕಂಪನಿ,

... ನಂ. 27, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂವತ್ಸರದ ಆಷಾಢ ಶು ೧೩ ಶನಿವಾರದಿಂದ ವಿಭವ ಸಂವತ್ಸರದ ಆಷಾಢ ಬ ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ವೃಷಭ (ದೇಶ)

ತಾರೀಕು	ವಾರ	ತಿ.	ಘಟಿ.	ನಕ್ಷತ್ರ	ಘಟಿ	ಯೋಗ	ಸೂರ್ಯ ಉ	ಸೂರ್ಯ ಅಸ್ತ
30	ಶನಿ	೧೩	೬೦. ೦	ಅನುರಾಧಾ	೩೪. ೦	೧೨	6. 9	6.59
1	ರವಿ	೧೩	೧. ೦	ಜ್ಯೇಷ್ಠಾ	೪೦. ೦	೧೬	6 9	6.59
2	ಸೋಮ	೧೪	೫. ೨	ಮೂಲಾ	೪೫.೧೬	೧೮	6.10	6.59
3	ಕುಜ	⊙	೮ .೧೪	ಪೂ. ಷಾ.	೪೯.೧೪	೧೯	6 10	6.59
4	ಬುಧ	೧	೧೦.೧೬	ಉ. ಷಾ.	೫೨.೧೬	೨೦	6. 10	6.59
5	ಗುರು	೨	೧೦.೧೪	ಶ್ರವಣಾ	೫೪. ೦	೨೦	6. 11	6.59
6	ಶುಕ್ರ	೩	೧೦.೪೬	ಧನಿಷ್ಠಾ	೫೪.೨೯	೨೨	6.11	7. 0

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
22	88— 2	74— 8	0—06	—
23	83— 0	72— 2	0—18	—
24	85— 3	74— 3	1—52	—
25	84— 2	74— 3	0—78	—
26	86— 8	73— 8	0—99	—
27	84— 5	74— 3	0—59	—
28	87— 2	75— 3	0—01	—
				30—79

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ...	7- 8	8— 4
ಹೊಸ ಗುಡ್ಡು ...	6—10	7— 6
ಸುಗ್ಗಿ ...	6— 4	7- 0
ಹೊಸ ರಾಶಿ ...	6— 2	6- 14
ಊರ ಅವ್ವಲ್ ಬೆಳ್ತಿಗೆ ...	7— 8	8— 8
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—10	13 . 4
ಎಲ್ಲೂರು-ಬೆಳ್ತಿಗೆ ಮುಡಿ ೧ಕ್ಕೆ ...	7— 8	7—10
ಗೋದಿ ಗೋಣಿ ೧ಕ್ಕೆ ...	16— 8	18— 8
ಹುರುಳಿ ಗೋಣಿ ೧ಕ್ಕೆ ...	8— 8	10— 8
ಕಡಲೆ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	14— 4	14 - 12
ತೊಗರಿಬೇಳೆ ಗೋಣಿ ೧ಕ್ಕೆ ...	18— 8	27— 0
ಉದ್ದು ಗೋಣಿ ೧ಕ್ಕೆ ...	13— 8	14 - 0
ಹೆಸರು ಗೋಣಿ ೧ಕ್ಕೆ ...	13— 0	14 8
ಊರು ಬೆಲ್ಲ ಖಂಡಿ ೧ಕ್ಕೆ ...	62— 8	65— 0
ಉಪ್ಪು ಗೋಣಿ ೧ಕ್ಕೆ ...	4—10	5— 4
ಕೊಬ್ರಿ ಖಂಡಿ ೧ಕ್ಕೆ ...	130- 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	39— 8	40— 0
ಎಳ್ಳಿಂಡಿ ಖಂಡಿ ೧ಕ್ಕೆ ...	32— 8	46— 0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—12	9 - 12
ಎಳ್ಳೆಣ್ಣೆ ಮಣ ೧ಕ್ಕೆ ...	8— 4	8— 6
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 2	8 - 0
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 4	4 - 6
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4— 8	6 12
ಸಾಸಿವೆ ಮುಡಿ ೧ಕ್ಕೆ ...	8— 0	8 - 4
ಕೊತ್ತಂಬರಿ ಮುಡಿ ೧ಕ್ಕೆ ...	6— 8	7— 6
ಕಾಫಿ ಖಂಡಿ ೧ಕ್ಕೆ ...	365— 0	400— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ...	170- 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	510- 0	515-
ಹವಲಕ್ಕಿ ಮಣ ೧ಕ್ಕೆ ...	70— 0	80— 0
ಗೇರುಬೀಜ ಮುಡಿ ೧ಕ್ಕೆ ...	4— 6	4— 8
ಕಳ್ಳಿಣ ಖಂಡಿ ೧ಕ್ಕೆ ...	37— 8	40— 0
ತಾಂಬ್ರ ತಗಡು ೧ಕ್ಕೆ ...	15- 0	16 - 8
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	20— 0	21 -
ಜೀನಿಬೆಳ್ಳಿ ಸೇರು ೧ಕ್ಕೆ ...	15— 0	- -
ಹಿತ್ತಾಳೆ ತಗಡು ಮಣ ೧ಕ್ಕೆ ...	15— 0	16— 8
ಹವನು ೧ಕ್ಕೆ ...	13— 8	13— 8
ಹುಣಸೆ ಹುಳಿ ಖಂಡಿ ೧ಕ್ಕೆ ...	75— 0	90 - 5

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೊ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ಗ್ಯೊ ಮಿಕ್ಸ್ಚರ್, ಮುಲಾಮು, ಸರಬತ್ತು, ಬಾಮ ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, ಡ್ರಗ್ಸ್, ಕೆಮಿಕಲ್ಸ್, ಬಾಟಲಿಗಳು, ಬಣ್ಣಗಳು, ಪೆಪರಮಿಟ, ಕ್ರಿಸ್ಟಲ್ ಮತ್ತು ಹೀಕೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1-8-0. ಮಾದರಿ ಪರಿಮಳದ ಸಗಾರ್ಡಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದ್ದಲ್ಲಿ ಪ್ರವಾನಿಸಲಾದೀತು

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ. ಡಿ. ಜಿ. ಗೋರೆ,

15628 ಮಂಗಳದಾಸ ರೋಡ, ಮುಂಬಯಿ ನಂಬ್ರ ೨.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ

ರೋಗವೆಂಬ ವಿಧಿಆಪತ್ತನ್ನು

ಪರಿಹರಿಸಿಕೊಳ್ಳನೋಡಿ

ಮಲೇರಿಯಾನ

ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ:—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.

ಭಗಿನಿಗಳೇ!

ಸೊರಗಿರುವ ಶಿಶುವಿನ ನೋಟವು

ಹೆತ್ತವರಿಗೆ ಯಮಕೊಂಡಾ

ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು

ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?

ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ಮಾರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,

22628 ನಂಬ್ರ 2. ಮಂಗಳೂರು ದ. ಕ.

ಪ್ರಕಟಣೆ.

ಮಂಗಳೂರು ಮುನಿಸಿಪಾಲಿಟಿ ವಳಪಟ್ಟೆ ಕೊಡಿಯಾಲಬೈಲು ವಾರ್ಡಿನಲ್ಲಿ ಮಣ್ಣಗುಡ್ಡೆ ಶಾಲಾ ಮುಂದುಗಡೆ ಇರುವ T. S. No. 624/2ನೇ ಭಾಗ್ಯಾತು ಸ್ಥಳದ ವಿಸ್ತೀರ್ಣ ಸೆಂಟ್ಸು 99, ಇದರ ಗಡಿ ಪೂರ್ವ ಕೂಳೂರು ರಾಜಮಾರ್ಗ; ದಕ್ಷಿಣ ಪಶ್ಚಿಮ ಸರ್ಕಾರಿ ವೋಣಿ, ಉತ್ತರ ಕಲ್ಲಿನ ಪಾಗಾರ, ಈ ಮಧ್ಯೆ ಇರುವ ದೊಡ್ಡ ಹಂಚುಹಾಕಿದ ಮನೆಗಳು, ಭಾವಿ, ಹಟ್ಟಿ ಕೊಟ್ಟಿಗೆ, ಪ್ಯಾಕಾನೆ ಇತ್ಯಾದಿ ಸರ್ವಾದಿಯನ್ನೂ ಖಂಡಿತ ಕ್ರಯಕ್ಕೆ ಮಾರಾಟ ಮಾಡುವರೆ ಆಲೋಚಿಸಿರುತ್ತದೆ. ಕ್ರಯಕ್ಕೆ ಪಡಕೊಳ್ಳುವ ಗಿರಾಕಿಗಳೂ ಇದರ ಹೆಚ್ಚಿನ ಮಾಹಿತಿಯನ್ನು ತಿಳಕೊಳ್ಳುವ ಅಪೇಕ್ಷೆಯುಳ್ಳವರೂ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು;—

ತತ್ವಾಡಿ ರಾಮರಾಯ,

(4—2) ಮಣ್ಣಗುಡ್ಡೆ, ಮಂಗಳೂರು.

ಮೈಸೂರಿನ ತಡಸಲುಗಳು.

ದಕ್ಷಿಣ ಹಿಂದೂಸ್ಥಾನದ ರಮಣೀಯವಾದ ನೋಟಗಳಲ್ಲಿ ಗೆರಸಪ್ಪೆ ಮತ್ತು ಶಿವಸಮುದ್ರಮ್ ತಡಸಲುಗಳು ಸೇರಿವೆ, ಸೌಂದರ್ಯದಲ್ಲಿ ಇವುಗಳಿಗೆ ಮಿಗಿಲಾದ ಸ್ಥಳಗಳು ಬೇರೆಯಿಲ್ಲವೆನ್ನಬಹುದು.

ಶಿವಸಮುದ್ರವೆಂಬುದು ಕಾವೇರಿ ನದಿಯ ಎರಡು ಸಣ್ಣ ಶಾಖೆಗಳಿಂದ ಸುತ್ತುವರಿಯಲ್ಪಟ್ಟ ಒಂದು ಸಣ್ಣ ದ್ವೀಪವಾಗಿದ್ದು ಅಲ್ಲಿ ಮೋಹನರಂಗ ಎಂದು ಕರೆಯಲ್ಪಡುವ, ಶ್ರೀರಂಗನಾಥ ದೇವಸ್ಥಾನವಿದೆ. ಇದಕ್ಕೆ ಮಧ್ಯರಂಗ ಎಂಬ ಹೆಸರೂ ಇದೆ. ಮೈಸೂರಿನ ಸಮೀಪದ ಶ್ರೀರಂಗಪಟ್ಟಣವು ಅಂತ್ಯರಂಗವೆಂದೂ ತಿರುಚಾನಾಪಳ್ಳಿಯ ಸಮೀಪದ ಶ್ರೀರಂಗಪಟ್ಟಣವು ಆದಿರಂಗವೆಂದೂ ಕರೆಯಲ್ಪಡುವವು. ಈ ಮೂರು ದ್ವೀಪಗಳು ಕಾವೇರಿ ನದಿಯಿಂದ ಸುತ್ತುವರಿಯಲ್ಪಟ್ಟದು ಮಾತ್ರವಲ್ಲದೆ ಪ್ರತಿ ಒಂದರಲ್ಲಿಯೂ ರಂಗನಾಥ ಸ್ವಾಮಿಯ ದೇವಳವಿರುವುದು. ಶಿವಸಮುದ್ರ ತಡಸಲಿನ ಸಮೀಪ, ಮುಸಲ್ಮಾನರಿಗೆ ಪವಿತ್ರ ಗುರುವಾದ ಪೀರಾ ಸಾಹೇಬನೆಂಬವನ ಗೋರಿಯಿರುವುದು, ಈ ಸ್ಥಳವು ಬೆಂಗಳೂರಿನಿಂದ ೭೫ ಮೈಲು ದೂರದಲ್ಲಿಯೂ, ಮೈಸೂರಿನಿಂದ ೬೦ ಮೈಲು ದೂರದಲ್ಲಿಯೂ ಇರುವುದು. ಶಿವಸಮುದ್ರದಿಂದ ಎರಡು ಮೈಲು ದೂರವಿರುವ ಬ್ಲಫ್ ಎಂಬ ಸ್ಥಳದಲ್ಲಿ ಇಲೆಕ್ಟ್ರಿಕ್ ಪವರ್ ಕೆಲಸದ ಆಪೀಸರರೂ, ಕೆಲಸಗಾರರೂ ಇರುವುದರಿಂದ ಅಲ್ಲಿಯ ವರೆಗೆ ಬಸ್ಸುಗಳು ಓಡಾಡುವವು.

ಶಿವಸಮುದ್ರದಿಂದ ಸ್ವಲ್ಪ ದೂರದಲ್ಲಿ ಕಾವೇರಿ ನದಿಯು ಎರಡು ಕವಲುಗಳಾಗಿ ಒಡೆದು ಕಲ್ಲುಗಳಿಂದ ಕೂಡಿದ ಹಾದಿಯಿಂದ ಹಾದುಹೋಗಿ ಎತ್ತರವಾದ ಸ್ಥಳದಿಂದ ಕೆಳಕ್ಕೆ ಬೀಳುವುದು. ಎಡಕವಲಿನ ನೀರು ಮೈಸೂರು ಭಾಗದಲ್ಲಿ ಬಿದ್ದು ಗಗನಚುಕ್ಕಿತಡಸಲು ಎಂದೂ, ಬಲಕವಲಿನ ನೀರು ಕೊಯಂಬುತ್ತೂರು ಭಾಗದಲ್ಲಿ ಬಿದ್ದ ಭಾರಚುಕ್ಕಿ ಎಂದೂ ಕರೆಯಲ್ಪಡುವವು. ಇವುಗಳಲ್ಲಿ ಯಾವುದು ನೋಡಲಿಕ್ಕೆ ಅಂದವಾದುದೆಂದು ಹೇಳಲಾಗುವುದಿಲ್ಲ. ಬೇಸಿಗೆ ಕಾಲದಲ್ಲಿ ಹದವಾದ ನೀರಿರುವುದರಿಂದ ಆ ವೇಳೆಯಲ್ಲಿಯೇ ಈ ತಡಸಲುಗಳನ್ನು ಸಂದರ್ಶಿಸಬೇಕಲ್ಲದೆ ಮಳೆಗಾಲದಲ್ಲಲ್ಲ. ಗಗನಚುಕ್ಕಿ ತಡಸಲು ಕಲ್ಲುಗಳಿಂದ ವಿಭಾಗಿಸಲ್ಪಡುವುದರಿಂದ, ಬೇರೆ ಬೇರೆ ಕಡೆಗಳಲ್ಲಿ ಬೀಳುತ್ತ ಒಂದು ವಿಶೇಷ ಸೌಂದರ್ಯವನ್ನು ತೋರ್ಪಡಿಸುವದು. ಈ ತಡಸಲಿನ ಸರಿಯಾದ ನೋಟವನ್ನು ಹೊಂದಬೇಕಾದರೆ ಮೇಲೆ ನಿಂತು ಕೆಳಗೆ ಬೀಳುವದನ್ನು ನೋಡದೆ, ತಡಸಲಿನ ಸಮಾನಾಂತರವಾಗಿ ದೂರದಲ್ಲಿ ಕಲ್ಲುಗಳ ಹಾದಿಯನ್ನು ಕೆಳಗಿಳಿದು ನಿಂತು ಅದನ್ನೇ ನೋಡುತ್ತಿರಬೇಕು. ಈ ತಡಸಲು ೩೦೦ ಅಡಿ ಎತ್ತರದಿಂದ ಬೀಳುವುದು. ನೀರು ಓಡಿಬಂದು ಒಂದೆಡೆಯಲ್ಲಿ ದೊಡ್ಡ ಪ್ರವಾಹವಾಗಿಯೂ, ಇನ್ನೊಂದೆಡೆಯಲ್ಲಿ ಸಣ್ಣ ತೋಡಿನಂತೆಯೂ ಕೆಳಕ್ಕಿರುಳುವಾಗ ಚಿತ್ತಾಕರ್ಷಕವಾದ ಶಬ್ದ ಉಂಟಾಗುವದು. ನೀರು ಕೆಳಕ್ಕೆ ಒಂದು ಹಸುರಾದ ಹಳ್ಳದಲ್ಲಿ ಬೀಳುವಾಗ ನೊರೆಯು ದಪ್ಪವಾಗಿ ಉಕ್ಕಿಬರುವದು. ಹಳ್ಳದ ನೀರು ಕೆಳಕ್ಕಿಳಿದು ಎತ್ತಲೋ ಹೋಗುವದು.

ಭಾರಚುಕ್ಕಿ ತಡಸಲನ್ನು ನೋಡುವುದಕ್ಕಾಗಿ ಕುಳಿತುಕೊಳ್ಳಲು ಸರಿಯಾದ ಸ್ಥಳವು ಸಿಗುವುದಿಲ್ಲ. ಮಳೆಗಾಲದಲ್ಲಿ ಈ ತಡಸಲು ಸುಮಾರು ಒಂದು ಫರ್ಲಾಂಗಿನಷ್ಟು ಅಗಲವಾಗಿದ್ದು ಇನ್ನೊಂದರಷ್ಟೇ ಎತ್ತರದಿಂದ ಕೆಳಕ್ಕುರುಳುವುದು, ಬೇಸಿಗೆ ಕಾಲದಲ್ಲಿ ನೀರು ಕಡಿಮೆಯಾಗಿರುವ ಕಾರಣ ತಡಸಲು ಸಣ್ಣ ಸಣ್ಣ ತೊರೆಗಳಾಗಿ ವಿಭಾಗಿಸಲ್ಪಡುವದು. ನೇರಳೆ ಮತ್ತು ಕಪ್ಪು ಬಣ್ಣದ ಕಲ್ಲುಗಳು, ಹಸುರು ಬಣ್ಣದ ಮರಗಿಡಗಳು ಬಿಳಿಬಣ್ಣದ ನೊರೆ, ನೀಲ ಬಣ್ಣದ ಆಕಾಶ ಇವೆಲ್ಲವುಗಳನ್ನು ಆಸಕ್ತಿಯಿಂದ ನೋಡಿ ಆನಂದಪಡುವ ಮನುಷ್ಯನಿಗೆ ಇದರ ನೆನಪು ಎಂದಿಗೂ ಮರೆಯಲಾರದು.

ಇದರಷ್ಟೇ ಆನಂದದಾಯಕವಾದುದೆಂದರೆ—ಮೈಸೂರು ಸರಕಾರದವರು ನಿರ್ಮಿಸಿದ ಎಲೆಕ್ಟ್ರಿಕ್ ಪವರ್ ವರ್ಕ್ಸ್ ಹೌಸ್ ಎಂಬುದು.—ಬ್ರಿಟಿಷ್ ಹಿಂದೂಸ್ಥಾನದಲ್ಲಿ ಇದು ಪ್ರಥಮತಃ ಸ್ಥಾಪಿಸಲ್ಪಟ್ಟದಲ್ಲದೆ ಇಷ್ಟು ದೊಡ್ಡ ಕಂಪೆನಿಯು ಇನ್ನೆಲ್ಲಿಯೂ ಇರುವುದಿಲ್ಲ. ಕಳೆದ ಶತಮಾನದ ಅಂತ್ಯದಲ್ಲಿ ಈ ಕೆಲಸವನ್ನು ಮೈಸೂರು ದಿವಾನರಾದ ಕೆ. ಶೇಷಾದ್ರಿ ಅಯ್ಯರರು ಮಾಡಿಸಿದರು. ೧೮೯೦ರಲ್ಲಿ ಹಿಡಿದ ಕೆಲಸವು ೧೯೦೨ರಲ್ಲಿ ಕೊನೆಗೊಂಡಿತು. ೧೯೦೨ನೇ ಇಸವಿಯ ಜುಲೈ ೧೬ನೇ ತಾರೀಕಿನ ದಿನ ಎಲೆಕ್ಟ್ರಿಕ್ ಶಕ್ತಿಯನ್ನು ಹುಟ್ಟಿಸಲು ಪ್ರಾರಂಭವಾಯಿತು. ಸರ್. ಎಮ್. ವಿಶ್ವೇಶ್ವರಯ್ಯನವರು ಇದನ್ನು ದುರುಸ್ತಿಮಾಡಿ ಘಟ್ಟಿಮಾಡಿದರು. ಅನಂತರ ಹಲವು ಸುಧಾರಣೆಗಳಾಗಿ ಈಗ ಅದು ನಿಪುಣ ಹಿಂದೂಗಳ ಮೇಲ್ವಿಚಾರಣೆಯಲ್ಲಿದೆ. ಕೃಷ್ಣರಾಜ ಸಾಗರ ಅಣೆಕಟ್ಟನ್ನು ಹಾಕಿದ ಕಾರಣ ಬೇಸಿಗೆ ಕಾಲದಲ್ಲಿಯೂ ಬೇಕಾದಷ್ಟು ನೀರು ದೊರಕಿ ಮತ್ತಷ್ಟು ಇಲೆಕ್ಟ್ರಿಕ್ ಪವರನ್ನು ಹುಟ್ಟಿಸಲು ಅನುಕೂಲವಾಗಿದೆ. ಇದರಿಂದ ಎಲೆಕ್ಟ್ರಿಕ್ ಪವರು ಅಗ್ಗವಾಗಿಯೇ ದೊರಕಿ ರಾಜ್ಯಕ್ಕೆ ಲಾಭವಾಗುವುದು. ನದಿಗೆ ಎತ್ತರದ ದಂಡೆಗಳನ್ನು ಹಾಕಿ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳ ಮೂಲಕ ನೀರನ್ನು ಮೊದಲು ಒಂದು ದೊಡ್ಡ ಲೋಹದ ಕೃತಕ ಕೆರೆಗೆ ಕೊಂಡೊಯ್ಯುವರು. ಈ ಕೆರೆಯಲ್ಲಿ ನೀರಿನಲ್ಲಿದ್ದ ಕೊಳಕು ಪದಾರ್ಥವು ಬೇರೆಯಾಗುವದು. ಈ ಕೆರೆಯ ಅಡಿಗೆ ದೊಡ್ಡ ದೊಡ್ಡ ನಳಿಗೆಗಳನ್ನು ಜೋಡಿಸಿರುವರು. ನೀರು ಈ ನಳಿಗೆಗಳ ಮೂಲಕ ಜೋರಿನ ರಭಸದಿಂದ ಕೆಳಗಿಳಿಯುವದು, ನಳಿಗೆಗಳ ಅಡಿಯಲ್ಲಿಯೇ ಇಂಜಿನುಗಳಿರುವವು. ಈ ಇಂಜಿನುಗಳು ನೀರಿನ ರಭಸದಿಂದ ತಿರುಗಿಸಲ್ಪಟ್ಟು ಎಲೆಕ್ಟ್ರಿಕ್ ಪವರು ಹುಟ್ಟುವದು. ಇಲ್ಲಿಯೂ ಕೂಡ ನೀರಿನ ಶಬ್ದವು ಕಿವಿಯನ್ನು ಕಿವುಡು ಮಾಡುವುದು.

ಇಲ್ಲಿಂದ ಪವರು ಮೈಸೂರು, ಬೆಂಗಳೂರು ಕಡೆಗೆ ಒಯ್ಯಲ್ಪಡುವದು. ಈ ಎರಡೂ ನಗರಗಳಲ್ಲಿ ರಾತ್ರಿ ಉರಿಯುವ ಇಲೆಕ್ಟ್ರಿಕ್ ದೀಪಗಳನ್ನು ನೋಡುವಾಗ ಶಿವಸಮುದ್ರದಲ್ಲಿ ಆಗುವ ಕೆಲಸವನ್ನು ಯಾರೂ ಪ್ರಶಂಸಿಸದಿರರು, ಇನ್ನು ಇಲ್ಲಿಂದ ೯೨ ಮೈಲು ದೂರದಲ್ಲಿರುವ ಕೋಲಾರಿನ ಚಿನ್ನದ ಗಣಿಗಳಿಗೆ ಎಲೆಕ್ಟ್ರಿಕ್ ಪವರು ಒಯ್ಯಲ್ಪಡುವದು. ಕೋಲಾರದಲ್ಲಿ ಪರದೇಶೀಯರು ಬಂದು ಮೈಸೂರು ರಾಜರ ಅಪ್ಪಣೆಯಿಂದ ಕೆಲಸಮಾಡುವರು. ಇದರಷ್ಟು ದೊಡ್ಡ ಗಣಿಯು ಹಿಂದೂಸ್ಥಾನದಲ್ಲಿ ಬೇರೊಂದಿಲ್ಲ.

ಹಿಂದೂಸ್ಥಾನದ ಸ್ತ್ರೀಯರಿಗೆ

ಹೆಚ್ಚಿನ ಆರೋಗ್ಯ

... ಹೆಂಗಸರಿಗೆ ಮಾತ್ರ ಇವುಗಳು ದೊರಕುವಂತೆ ... ಉಪಯೋಗಕ್ಕೆ ತರಲ್ಪಟ್ಟಿವೆಯೊ, ಅಲ್ಲಿ ಅವುಗಳ ಫಲಕಾರಿತೆಯು ತಕ್ಷಣವೇ ಕಂಡುಬಂದಿದೆ. ... ಈ ಔಷಧಿಯನ್ನು ಮುಟ್ಟುದೋಷಗಳನ್ನು ನಿವಾರಿಸಿ, ಹೊಸದಾದ ಉತ್ತಮ ರಕ್ತವನ್ನು ಹೆಚ್ಚಿಸಿ, ... ಶಕ್ತಿಯನ್ನೂ ಕೊಡುವ, ಇತ್ತೀಚಿಗಿನ ಅತ್ಯಂತ ಮಹತ್ವದ ವೈದ್ಯಕೀಯ ಶೋಧವಾಗಿ ಸ್ವಾಗತೀಕರಿಸಿದ್ದುವು. ... ದೊರಕಲಾಗುವಂತೆ, ಅದರ ಬೆಲೆಯೂ ಕಡಿಮೆಯಾಗಿ ನಿಶಯಿಸಲ್ಪಟ್ಟಿರುವುದು.

... ಫಲೂನಾ ಮಾತ್ರೆಗಳ ಸೇವನೆಯಿಂದ, ರಜಸ್ವಲೆಯಾಗಲಿರುವ ಹುಡುಗಿಯರಿಗೆ ... ಅವರಿಗೆ ಈ ಶಕ್ತಿಕಾರಕ ಔಷಧದ ರಕ್ತವನ್ನು ಹೆಚ್ಚಿಸುವ ... ಕ್ರಮಪಡಿಸುವ ಸಹಾಯವು ಅಗತ್ಯವಿದೆ. ಫಲೂನಾ ಮಾತ್ರೆಗಳಲ್ಲಿ ... ರೂಪದಲ್ಲಿ ಕಬ್ಬಿಣವಿದೆ. ಮೈಯಲ್ಲಿ ರಕ್ತವಿಲ್ಲದ ... ಫಲೂನಾ ಮಾತ್ರೆಗಳ ಸೇವನೆಯ ನಂತರ ತನ್ನ ಮುಖದಲ್ಲಿ ಬೀರಿಬರುವ ... ಫಲೂನಾ ಮಾತ್ರೆಗಳ ರಕ್ತರಚನೆಯ ಶಕ್ತಿಯು ರಕ್ತವನ್ನು ಅಧಿ... ಬಲಪಡಿಸುವುದನ್ನು ತೋರಿಸಿಕೊಳ್ಳುವಳು. ಪ್ರಾಯಶಃ ಪ್ರಸವ ಸಮಯ ... ಅಲಕ್ಷ್ಯದಿಂದ ಉಂಟಾದ ನೋವುಗಳಿಂದ ಜೀವನದಲ್ಲಿ ಬೇಸರಿಕೆ ... ಉಂಟಾದವರಾಗಿ, ಗೃಹಕರ್ತವ್ಯಗಳೂ ಸಂಸಾರದ ತಾಪತ್ರಯ ... ಹೊರೆಯಾಗಿ ಕಾಣುವ ಹೆಂಡಂದಿರೂ ತಾಯಂದಿರೂ ಫಲೂನಾ ಮಾತ್ರೆಗಳ ... ಶಕ್ತಿಕಾರಕ ಅನುಭವವನ್ನು ಪಡೆಯುವರು. ಮತ್ತು ಪ್ರಾಯ ಹೆಚ್ಚಿ ... ಸಮಯ ಬರುವಾಗ, ಈ ಸಮಯದಲ್ಲಿ ಸರ್ವಸಾಮಾನ್ಯ ... ಮೈಬೆವರುವಿಕೆ, ತಲೆತಿರುಗುವಿಕೆ, ಸ್ಮೃತಿ ತಪ್ಪುವಿಕೆ ಮತ್ತು ಇತರ ... ಫಲೂನಾ ಮಾತ್ರೆಗಳನ್ನು ವಿರಾಮಕರವೂ ಪ್ರಶಾಂತವೂ ಆದ ಆರೋಗ್ಯಕರ ... ಉಪಯೋಗಿಸಿದ್ದಲ್ಲಿ ಖಂಡಿತವಾಗಿ ತಲೆದೋರಲಾರವು.

ಫಲೂನಾ ಮಾತ್ರೆಗಳು

ಶುಚಿಮಾಡುವುದು, ಗುಣಮಾಡುವುದು, ರೋಗನಿವಾರಣೆ ಮಾಡುವುದು, ದೇಹವನ್ನು ಸರಿಯಾದ ಕ್ರಮಕ್ಕೆ ತರುವುದು.

ಈ ಮೇಲಿನ ರೋಗಗಳಲ್ಲಿ ಯಾವುದಾದರೂ ನಿಮಗೆ ಬಾಧಿಸುವುದಾದರೆ, ಫಲೂನಾ ಮಾತ್ರೆಗಳು ಕಾರಣವನ್ನು ಹುಡುಕಿ, ವಿಷವನ್ನು ನಿವಾರಿಸಿ, ಸ್ನಾಯುಗಳನ್ನು ಭದ್ರಪಡಿಸಿ, ಆರೋಗ್ಯ ಕ್ರಮವನ್ನು ಭದ್ರಪಡಿಸಿ, ಅವಯವಗಳನ್ನು ಬಲಮಾಡಿ, ಹೊಸ ತೇಜಸ್ವೀ ರಕ್ತವನ್ನು ಕೊಟ್ಟು, ಜೀವನವೆಂದರೊಂದು ಆನಂದದ ಅನುಭವವಾಗಿ ಮಾಡುವುದು.

ಫಲೂನಾ ಮಾತ್ರೆಗಳು, ಸ್ತ್ರೀಯರಿಗೆ ಮಾತ್ರ—ಇವುಗಳು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ, ಒಂದರಲ್ಲಿ 36 ಮಾತ್ರೆಗಳಂತೆ, ರೂ. 2—4—0ರಂತೆ. ಎಲ್ಲಲ್ಲಿಯೂ ದೊರಕುವುವು.

ಹೆಚ್ಚಿನ ಮಾಹಿತಿಗಾಗಿ ಕಾಗದಗಳನ್ನು ವಿ. ಪಿ. ಮೂಲಕ ಕಳುಹಿಸಲಿಕ್ಕೆ ಆರ್ಡರುಗಳನ್ನು

ಮೆಸ್ಸರ್ಸ್ ಪಟೇಲ್ ಮತ್ತು ಧೊಂಡಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

(ಪೋಸ್ಟ ಆಫೀಸು ಬೊಕ್ಸ 838) ಅಥವಾ ಕಲ್ಕತ್ತಾ (ಪೋಸ್ಟ ಆಫೀಸು ಬೊಕ್ಸ 620)

ಇವರು ಕಡೆಗೆ ಕಳುಹಿಸಬೇಕು. ಇವರು ಹಿಂದೂಸ್ಥಾನ, ಬರ್ಮಾ ಮತ್ತು ಸಿಲೋನಿಗೆ ಮುಖ್ಯ ಏಜಂಟರಾಗಿ ನೇಮಿಸಲ್ಪಟ್ಟಿರುವರು.

Product of Graham Remedies Ltd , Cape Town, South Africa. 93

ಸ್ಫುಟ ವಿಚಾರಗಳು.

ಬರ್ಡೋಲಿ ಸತ್ಯಾಗ್ರಹ.

ಬರ್ಡೋಲಿಯ ಸತ್ಯಾಗ್ರಹವನ್ನು ಅಬ್ಯೈರಿಪಡಿಸುವ ವಿಷಯದಲ್ಲಿ, ಸತ್ಯಾಗ್ರಹದ ಮುಂದಾಳುಗಳಾದ ವಲ್ಲಭಭಾಯಿ ಪಟೇಲರಿಗೂ ಗವರ್ನರರಿಗೂ ನಡೆದ ಸಂಧಿಪ್ರಸ್ತಾಪವು ಯಾವುದೊಂದು ತೀರ್ಮಾನಕ್ಕೂ ಬಾರದೆ ಬಿದ್ದುಹೋಯಿತು. ಸರಕಾರವು ಬಹಳ ಕ್ರೂರವಾದ ನಿರ್ಧಾರಕ್ಕೆ ಬಂದುದ್ದು ಬಹಳ ವಿಷಾದಕರವಿದೆ. ಬರ್ಡೋಲಿಯ ಆತ್ಮಯಜ್ಞವು ಪರಮಾವಧಿಗೆ ಬಂದಿದೆ; ಈ ಸಹನೆಯನ್ನು ಬರ್ಡೋಲಿಯ ಜನರು ಇನ್ನೆಷ್ಟು ಕಾಲ ಅನುಭವಿಸಬೇಕೊ ಹೇಳಲಾಗುವುದಿಲ್ಲ. "ನೈತಿಕ ವಿಜಯ"ವೆಂದು ತಾತ್ವಿಕ ವಿಜಯಗಳಲ್ಲಿಯೇ ಇಂತಹ ಚಳವಳಗಳು ತೃಪ್ತವಾಗಲಾರವು. ಒಂದು ಕೇವಲ ಐಹಿಕ ಉದ್ದೇಶದಿಂದ ಹೊರಡಿಸಲ್ಪಟ್ಟ ಸತ್ಯಾಗ್ರಹವು, ಆ ಉದ್ದೇಶವನ್ನು ಹೊಂದಲಾರದಾದರೆ ಅದು ನಿಕೃಷ್ಟ ಪರಾಜಯವನ್ನೇ ಹೊಂದಿದಂತಾಗುವದಲ್ಲದೆ ಅದರಲ್ಲಿ ಅಭಿನಂದನೀಯವಾದುದೇನೂ ಇರಲಾರದು. ಆದುದರಿಂದ ಈ ಸತ್ಯಾಗ್ರಹ ಚಳವಳದಲ್ಲಿ ನೈತಿಕ ವಿಜಯವನ್ನು ಮರೆತು ಉದ್ದಿಷ್ಟ ಐಹಿಕ ಉದ್ದೇಶಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕಾಗಿದೆ. ಆತ್ಮಶಕ್ತಿಯು ಮಹತ್ವದ್ದಾಗಿದೆ. ಆದರೆ ಸತ್ಯಾಗ್ರಹದ ಆತ್ಮಶಕ್ತಿಯಿಂದ ಆಳರಸರನ್ನು ಎಷ್ಟು ಪತ್ತಾಯದಿಂದ ಬಗ್ಗಿಸಲಿಕ್ಕೆ ಸಾಧ್ಯವಿದೆಯೆಂದು ಬರ್ಡೋಲಿಯ ಸಮರಾಂಗಣವು ತೋರಿಸಬೇಕು. ಬರ್ಡೋಲಿ ಜನತೆಯ ಧೈರ್ಯಕ್ಕೂ, ವೀರತೆಗೂ, ಸಾಹಸಕ್ಕೂ, ಸಹನೆಗೂ ನಮ್ಮ ಸರ್ವ ಸಹಾನುಭೂತಿಯೂ ಇದೆ. ಆದರೆ ಅದು ಪ್ರಯೋಜನವಿಲ್ಲದೆ ಹೋದರೆ ಸತ್ಯಾಗ್ರಹವನ್ನು ಉಪಯೋಗಿಸುವುದರಲ್ಲಿಯೂ ಮಿತಿ ಇದೆ ಎಂಬುದನ್ನು ಅನುಭವದಿಂದ ತಿಳಿದುಕೊಳ್ಳಬೇಕು. ಬರ್ಡೋಲಿಯ ಸತ್ಯಾಗ್ರಹದ ವಿಜಯವು ಇತರ ಹಿಂದೀಯರ ಮೇಲೂ ಹೊಂದಿಕೊಂಡಿದೆ. ಮತ್ತು ಅದರ ವಿಜಯದ ಮೇಲೆಯೇ ಸತ್ಯಾಗ್ರಹದ ಉಪಕಾರಿತೆಯ ನಿರ್ಣಯವೂ ಆಗುವುದು.

ಸಂಯುಕ್ತ ಪ್ರಾಂತಕ್ಕೆ ಗವರ್ನರರು.

ಸಂಯುಕ್ತ ಪ್ರಾಂತ್ಯಕ್ಕೆ ಗವರ್ನರರಾಗಿದ್ದ ಅಲೆಕ್ಸಾಂಡರ್ ಮುಡ್ಡಿ ಮೇನರವರು ಮರಣಹೊಂದಿದ ಮೇಲೆ ಆ ಸ್ಥಾನದ ನೇಮಕವು ಇನ್ನೂ ಮಾಡಲ್ಪಟ್ಟಿಲ್ಲ. ಸಂಯುಕ್ತ ಪ್ರಾಂತದ ಗವರ್ನರರ ನೇಮಕವು ಮದ್ರಾಸ, ಮುಂಬಾಯಿ, ಬಂಗಾಳ ಇವುಗಳ ಗವರ್ನರರ ನೇಮಕದಂತೆ ಇಂಗ್ಲೆಂಡಿನಲ್ಲಿರುವ ಇಂಡಿಯಾ ಆಫೀಸಿನ ಸ್ವತಂತ್ರ ನೇಮಕವಾಗಿರದೆ, ಅದನ್ನು ಹಿಂದೀ ವ್ಯಾಸರಾಯರ ಅಭಿಪ್ರಾಯದೊಡನೆ ಆಗತಕ್ಕದಾಗಿದೆ. ಆದುದರಿಂದ ಈ ಗವರ್ನರ ಪದವಿಗೆ ಹಿಂದೀಯರು ಯಾರಾದರೂ ನೇಮಕಹೊಂದಬಹುದೋ ಎಂದು ಹಲವರು ಕಾದಿರುವರು. ಆದರೆ ಇತ್ತೀಚೆಗಿನ ವರ್ತಮಾನಗಳನ್ನು ನೋಡಿದರೆ ಈ ಗವರ್ನರ ನೇಮಕವು ಹಿಂದೀಯರಿಗೆ ಸಿಕ್ಕುವ ಭರವಸೆ ಇಲ್ಲ. ಸರ್, ಮಾಲ್ಕೊಮ್ ಹೆಯ್ಲಿಯವರು ಇದಕ್ಕೆ ನೇಮಿಸಲ್ಪಡಬಹುದೆಂದು ಊಹಿಸಲಾಗಿಯದೆ. ಹಿಂದೀಯರೊಳಗಿಂದ ಗವರ್ನರರಾದವರೆಂದರೆ ಲೋರ್ಡ ಸಿಂಹರೊಬ್ಬರೇ. ಆದರೆ ಅವರು ಹೆಚ್ಚು ಕಾಲ ತಮ್ಮ ಪದವಿಯನ್ನು ಇಟ್ಟುಕೊಳ್ಳಲಾರರಾದರು; ಕೆಲವು ಸಮಯದಲ್ಲಿಯೇ ಅನಾರೋಗ್ಯದ ಕಾರಣದಿಂದ ಇವರು ರಾಜಿಕೊಟ್ಟು, ಕೆಲಸದಿಂದ ನಿವೃತ್ತರಾದರು. ಇವರ ರಾಜಿನಾಮೆಗೆ ಬರೇ ಅನಾರೋಗ್ಯವೇ ಕಾರಣವಲ್ಲದೆ, ಇತರ ಕಾರಣಗಳೂ ಇದ್ದುವು ಎಂದು ಅಲ್ಲಲ್ಲಿ ಮಾತುಗಳಿದ್ದವು. ಲೋರ್ಡ ಸಿಂಹರು ತಮ್ಮ ಗವರ್ನರ ಅಧಿಕಾರದ ಅನುಭವವನ್ನು ಮರಣಹೊಂದುವ ಮುಂಚೆ ಕೊಟ್ಟಿದ್ದಾದರೆ, ಹಿಂದೀ ರಾಜಕೀಯ ವಿಚಾರಗಳಿಗೆ ಬಹಳ ಉಪಕಾರಿಯಾಗುತ್ತಿತ್ತು. ಲೋರ್ಡ ಸಿಂಹರು ತಮ್ಮ ಉತ್ತಮ ಅನುಭವವನ್ನಾಗಲೀ ಕಷ್ಟ ಅನುಭವಗಳನ್ನಾಗಲೀ, ಒಂದನ್ನೂ ಕೊಡದೆ ಗವರ್ನರ ಪದವಿಯ ಅನುಭವವನ್ನು ಗೋಪ್ಯವಾಗಿಯೇ ಇಟ್ಟುದು ಸಂದೇಹಕ್ಕೆ ಕಾರಣವಾಗಿಯದೆ. ಅವರು ಅಪ್ರತಿಮ ಬ್ರಿಟಿಷ ಭಕ್ತರಾದುದೇ ಅವರ ಈ ತರದ ವರ್ತನಕ್ಕೆ ಕಾರಣವಾಯಿತೇನೊ. ಅಂತೂ ಸರಕಾರದ ಅನುಭವವೂ ಹಿಂದೀಯರನ್ನು ಗವರ್ನರರಾಗಿ ನೇಮಿಸಲಿಕ್ಕೆ ಉತ್ತೇಜನ ಕೊಡುವಂತಹುದುದಾಗಿಲ್ಲವೆಂದು, ಸರಕಾರವು ಈಗ ಒಂದಾದರೂ ಹಿಂದೀ ನೇಮಕವನ್ನು ಮಾಡಲೊಪ್ಪದಿರುವುದನ್ನು ನೋಡಿದರೆ ವ್ಯಕ್ತವಾಗುವುದು. ಸಿವಿಲಿಯನರ ಈ ಬ್ರಿಟಿಷ ಸಾಮ್ರಾಜ್ಯದ ಸ್ಟೀಲ್ ಫ್ರೇಮು ಹಿಂದೀ ಆಡಳಿತಕ್ಕೆ ಒಪ್ಪದಿರುವದೇ ಇದಕ್ಕೊಂದು ಕಾರಣವಾಗಿರಬಹುದೆಂದು ಊಹಿಸಬೇಕಾಗುವುದು.

ಬಾಲ್ಯವಿವಾಹ ಮಸೂದೆ.

ಈ ಮಸೂದೆಗೆ ಇತ್ತೀಚೆಗೆ ನಿಷೇದವನ್ನು ಸೂಚಿಸಲಿಕ್ಕೆ ಹಲವು ಸಭೆಗಳು ಸೇರಿದಂತೆ ಪತ್ರಿಕೆಗಳಲ್ಲಿ ವರ್ತಮಾನ ಬರುತ್ತಿದೆ. ಎಂಡೋವಮೆಂಟ್ ಬಿಲ್ಲಿನ ಸಮಯದಲ್ಲಿ ಪತ್ರಿಕೆಗಳಲ್ಲಿ ಹಲವು ಕಾಲ್ಪನಿಕ ನಿಷೇಧ ಸಭೆಗಳ ವರದಿಯು ಪ್ರಕಟಿಸಲ್ಪಟ್ಟಂತೆ, ಈ ವರ್ತಮಾನಗಳೂ ಎಷ್ಟು ಕಾಲ್ಪನಿಕವಿವೆ ಎಂದು ಹೇಳಬರುವುದಿಲ್ಲ. ಆದರೆ ಹಿಂದೂ ಸಮಾಜದ ಪ್ರತಿ ಒಂದು ಆವಶ್ಯಕ ಸುಧಾರಣೆಯನ್ನು ಮಾಡುವಾಗ ಮತವಾದವನ್ನು ಅದರೊಡನೆ ತಂದು ತಮ್ಮ ನಿಷೇಧವನ್ನು ಬಲಪಡಿಸಲು ಯತ್ನಿಸುವುದು ಸಾಂಪ್ರದಾಯ ವಾದಿಗಳ ಹಳ್ಳೇ ಯುಕ್ತಿಯಾಗಿರುತ್ತದೆ. ಸಾಂಪ್ರದಾಯ ವಾದಿಗಳೇ ಎಷ್ಟುಮಟ್ಟಿಗೆ ಮತಕ್ರಮಗಳನ್ನು ಅನುಸರಣ ಮಾಡುವರೆಂದು ನೋಡಿದರೆ, ಆವಶ್ಯಕ ವಿಷಯಗಳಲ್ಲಿ ಮತವನ್ನು ಮರೆತು ಬರೇ ವಾದ ಬೆಳೆಸಲಿಕ್ಕೆ ಮಾತ್ರವೇ ಇವರು ಮತದ ಮಾತನ್ನೆತ್ತುವರೆಂದು ಕಾಣುವುದು. "ಯಾರೂ ಸಂಸ್ಕೃತ ಶಾಲೆಗೆ ಹೋಗದೆ ಇಂಗ್ಲೀಷ ಶಾಲೆಯಲ್ಲಿಯೇ ಕಲಿಯಬೇಕು" ಎಂದು ಯಾರಾದರೂ ಕಾನೂನು ಮಾಡಲಿಚ್ಛಿಸಿದರೆ ಧರ್ಮ ಮುಳುಗಿತೆಂದು ಬೊಬ್ಬೆ ಬೀಳುತ್ತಿತ್ತು. ಆದರೆ ಮೆಲ್ಲನೆ ಮತಾನುಯಾಯಿಗಳ ವಿಶೃಂಖಲತೆಯಿಂದ ಧರ್ಮಗ್ಲಾನಿಯು ಹೆಚ್ಚುವಾಗ ಅದಕ್ಕಾಗಿ ಯಾವ ನಿಷೇಧವೂ ಇಲ್ಲ. ವಿವಾಹ ವಿಷಯದಲ್ಲಿ ಯಾದರೂ ಸಂದರ್ಭಗಳ ಆವಶ್ಯಕತೆಗೆ ಅನುಸಾರವಾಗಿ ಪ್ರಾಯ ಹೆಚ್ಚಿ ಮದುವೆ ಆದರೂ ಕೇಳುವವರಿಲ್ಲ. ಅದರೆ ಅಂತಹ ಘಟನೆಯು ಸಮಾಜಕ್ಕೆ ಸಹಜವಾಗಿಯೂ ಸ್ವಾಭಾವಿಕವಾಗಿಯೂ ಮಾಡಲೆಂದರೆ ಈ ಮತಾಭಿಮಾನಿಗಳ ಮತ ಪ್ರೀತಿಗೆ ಎಲ್ಲೆಯೇ ಇಲ್ಲ. ಈ ನಿಷೇಧದ ಪರಿಣಾಮವು ಹೇಗಾಗಬಹುದೆಂದು ಹೇಳಲಾರೆವು. ಈ ಮಸೂದೆಯಿಂದ ಸರಕಾರದ ಯಾವ ಉದ್ದೇಶಕ್ಕೂ ಸಾಧಕ ಬಾಧಕಗಳಿಲ್ಲದಿರುವುದರಿಂದ, ಯಾವ ಸಾರ್ವಜನಿಕ ಅಭಿಪ್ರಾಯದ ಶಬ್ದವು ದೊಡ್ಡದಿರುವುದೊ ಅದೇ ಜಯಪ್ರದವಾಗುವುದು. ಆದುದರಿಂದ ಬಾಲ್ಯವಿವಾಹ ಮಸೂದೆಯು ಮಂಜೂರಾದೀತೆಂದು ಹೇಳಬರುವುದಿಲ್ಲ.

ವೈಮಾನಿಕ ವಿಕಾಸ.

ಯುದ್ಧದ ನಂತರ ಈ ವರೆಗಿನ ಕೆಲವು ವರ್ಷಗಳು ವಿಮಾನಗಳ ಇತಿಹಾಸದಲ್ಲಿ ಬಹಳ ಪ್ರಾಮುಖ್ಯತೆಯುಳ್ಳವುಗಳಾಗಿವೆ. ಈ ಹತ್ತು ವರ್ಷಗಳ ಇತಿಹಾಸವು ಸುವರ್ಣಾಕ್ಷರಗಳಿಂದ ಬರೆಯಲ್ಪಡಲು ಯೋಗ್ಯವಾಗಿವೆ. ವಿಮಾನದಿಂದ ಮುಂದಿನ ಯುದ್ಧಗಳಲ್ಲಿ ಎಷ್ಟು ಹಾನಿಯಾಗುವುದು, ಅದರಿಂದ ಯುದ್ಧಕ್ಕೆ ಎಷ್ಟು ಪ್ರೋತ್ಸಾಹವು ದೊರೆಯುವುದು, ಮತ್ತು ಆ ಕಾರಣದಿಂದ ಮಾನುಷತ್ವವು ಎಷ್ಟು ಕಲ್ಬುದ್ಧವಾಗುವುದು ಎಂದು ವಿಚಾರಿಸಿ ಪ್ರಯೋಜನವಿರದು. ಏಕೆಂದರೆ ಮಾನವನ ಯುದ್ಧದ ತೃಷೆಯು ಆಧುನಿಕ ವಿಜ್ಞಾನದಿಂದ ಆರಂಭವಾದುದಲ್ಲ, ಒಂದು ರೀತಿಯಲ್ಲಿ ನೋಡಿದರೆ ಯುದ್ಧದ ಆಶಯವು ಇರಬಹುದಾದರೂ, ಆ ಆಶಯದ ಸಂಯಮವು ಹಿಂದಿಗಿಂತಲೂ ಎಷ್ಟೋ ಪಾಲು ಹೆಚ್ಚಾಗಿರುತ್ತದೆ. ತೈಮೂರಲೇನನಿಗೆ ಹಿಂದೂಸ್ಥಾನದಲ್ಲಿ ದಾಳಿ ಮಾಡಲಿಕ್ಕೆ Liquid Fireನ ಆವಶ್ಯಕತೆ ಬೀಳಲಿಲ್ಲ; ಮದ್ದು ಗುಂಡುಗಳು ಬೇಕಾಗಲಿಲ್ಲ. ಕೈಗೆಲಸದ ಖಡ್ಗಗಳೂ, ಚಕ್ಕುಮುಕ್ಕಿ ಕಲ್ಲಿನ ಬೆಂಕಿಯೂ ಸಾವಿರಾರು ಪ್ರಾಣಗಳನ್ನು ನಾಶಮಾಡಲು ಸಾಕಾದವು. ಆದುದರಿಂದ ವಿಮಾನಗಳಿಂದ ಎಷ್ಟೇ ಹಾನಿಯು ಸಾಧ್ಯವಿರಬಹುದಾದರೂ, ಅದರ ವಿಕಾಸದ ಕಡೆಗೆ ನಮ್ಮ ಪ್ರಶಂಸಾ ಪೂರ್ಣ ದೃಷ್ಟಿಯು ಹೋಗದಿರದು. ಅದರ ವಿಕಾಸಕ್ಕಾಗಿ ಆತ್ಮವನ್ನು ಬಲಿಯಿತ್ತ ಆ ವೀರ ಸ್ತ್ರೀ ಪುರುಷರ ಕಡೆಗೆ ನಮ್ಮ ಪೂಜ್ಯ ಭಾವನೆಯನ್ನು ತೋರಿಸದಿರಲಾರೆವು. ದಿನದಿನವೂ ಮೃತ್ಯುವನ್ನು ಎದುರಿಸಿ ವಿಮಾನ ಸಂಚಲನವನ್ನು ಸಾಧ್ಯವಾಗಿ ಮಾಡುವ ಆ ಆತ್ಮಯಜ್ಞ ಮಾಡುವವರೇ ಇತಿಹಾಸದಲ್ಲಿ ಪ್ರಸಿದ್ಧರಾಗಿರತಕ್ಕವರು. ಅವರು ಮಾನವನ ಶ್ರೇಷ್ಠತೆಗೆ ಸ್ಥಿರವಾದ ನಿದರ್ಶನವಾಗಿರುವರು. ಈ ವೈಮಾನಿಕ ವಿಕಾಸದ ಕಾಹಿನಿಗಳು ಪಾಶ್ಚಾತ್ಯರ ಪ್ರಚಂಡ ಸಾಹಸದ ಮತ್ತು ಧೈರ್ಯದ ಸ್ಮಾರಕವಾಗಿರುವುವು. ಪೌರ್ವಾತ್ಯರು ಇವುಗಳಿಂದ ಕಲಿಯಬೇಕಾದುದು ಬಹಳವಿದೆ. ಅಟ್ಲಾಂಟಿಕ ಸಾಗರೋಲ್ಲಂಘನ, ಪೋಲಾರ ಭ್ರಮಣಗಳು ಈ ಕಾಹಿನಿಯಲ್ಲಿ ಮಹತ್ವದ್ದಾಗಿವೆ.

ಪಂಚಾಯತ ಕೋರ್ಟ ಮೆಂಬರರನ್ನು ಕೇಳುವವರೇ ಇಲ್ಲ. ಅವರು ಆಡಿದ್ದೇ ನ್ಯಾಯ; ಮಾಡಿದ್ದೇ ತೀರ್ಪು.

• • • •

ಇವರಿಗೆ ಗೊತ್ತೇ ಉಂಟು. ಇವರು ಮಾಡಿದ ತೀರ್ಪು ನೀರಿನಲ್ಲಿ ಮುಳುಗುವುದಿಲ್ಲ, ಬೆಂಕಿಯಲ್ಲಿ ಸುಡುವುದಿಲ್ಲ.

• • • •

ಅಂದರೆ, ಇದರ ಅಪೀಲು ಹ್ಯಾಕೋರ್ಟ ವಿನಹ ಪರಿಹರಿಸುವರೆ ಸಾಧ್ಯವಿಲ್ಲ.

ನೋಟಗಳು.

NOTE....S.

ಮೈಸೂರು ವಿಶ್ವವಿದ್ಯಾಲಯವನ್ನು ಕರ್ನಾಟಕದ ವಿಶ್ವವಿದ್ಯಾಲಯವಾಗಿ ಮಾಡಲಿಚ್ಛಿಸುವ ಕರ್ನಾಟಕ ಏಕೀಕರಣಾಭಿಲಾಷಿಗಳಿಗೆ;—ಎಸೆಂಬ್ಲಿ ಮಂದಿರದಲ್ಲಿ ಮೈಸೂರೇತರ (ರಾಷ್ಟ್ರಬಂಧು) ಪತ್ರಿಕೆಯ ಪ್ರತಿನಿಧಿಗೆ ಪ್ರವೇಶ ಸಿಕ್ಕಲಿಲ್ಲ.

• • • •

ಮೈಸೂರು ಮೈಸೂರಿಗೆ; ಇತರರಿಗೇಕೆ ಅಧಿಕ ಪ್ರಸಂಗ? ಎಂದು ಅವರಿಗನ್ನಿಸುತ್ತಿದೆ.

• • • •

ಏಕೀಕರಣವಾದಿಗಳು ಇದಕ್ಕೇನನ್ನುವರು? ಮೈಸೂರು ವಿಶ್ವವಿದ್ಯಾಲಯದಲ್ಲಿ ಮೈಸೂರೇತರರಿಗೆ ಯಾವ ತರದ ಸ್ವಾಗತ ಸಿಕ್ಕೀತು? ಕಲ್ಪಿಸಿಕೊಳ್ಳಿರಿ.

• • • •

ಮಂಗಳೂರಿನಲ್ಲಿ ಮೋಟರ್ ಬಸ್ಸ್ ಕಂಪೆನಿಗಳೊಳಗೆ ಟಿಕೇಟು ದರಗಳಲ್ಲಿ ಜಟಾಪಟಿ ಇತ್ತು. ಇತ್ತಲಾಗೆ ಇಲ್ಲಿಯ ಬೇಂಕುಗಳಲ್ಲಿ ಬಡ್ಡಿಯ ದರದಲ್ಲಿ ಜಟಾಪಟಿ ಬಿದ್ದಿರುತ್ತದೆ. ವ್ಯಾಪಾರಸ್ಥರ ಪುಣ್ಯ!

• • • •

ಬೇಂಕಿನವರ ಮೇಲಾಟ ವ್ಯಾಪಾರಸ್ಥರಿಗೆ ಹಿತಕರ. ಆದರೆ ಈ ಮೇಲಾಟವು ಮಳೆಗಾಲ ದಾಟುವ ವರೆಗೆ.

• • • •

ಹೊಸ ಟ್ರೇಫಿಕ್ ಕಂಟ್ರೋಲ್ ಎಕ್ಟ ಅಚ್ಚಾಗಿ ಬಂದಿರುತ್ತದಂತೆ. ಜ್ಯಾರಿಗೆ ತರಲು ಅಧಿಕಾರಿಗಳು ಕಮ್ಮಿಯಾಗಿರುವರು.

• • • •

ಮಂಗಳೂರು ಮುನಿಸಿಪಾಲಿಟಿಯಲ್ಲಿ ಮಾರ್ಗದ ಬದಿಯಲ್ಲಿರುವ ಮರಗಳಿಗೆ ಶೇವಿಂಗ್ ಮತ್ತು ಕ್ರೋಪನ್ನು ಮಾಡುವ ಕೆಲಸವು ಬಹಳ ಜೋರಾಗಿ ನಡೆಯುತ್ತಿ. ಕಾರಣ, ಊರಿನವರಿಗೆ ಸವುದೆ ಕಮ್ಮಿಯಾದ್ದಕ್ಕೆ.

• • • •

ಕೆಲವು ತಿಂಗಳ ಹಿಂದೆ ಬಂದ ದಿ. ಮಲಬಾರ್ ಗ್ರೇಟ್ ಇಂಡಿಯನ್ ಸರ್ಕಸ್ ಕಂಪೆನಿಯವರು ಬಂಟವಾಳ ಮುಸಾಫರಿ ಬಂಗ್ಲೆಯಲ್ಲಿ ನಿಂತು ಬಂಗ್ಲೆಯ ಬಾಡಿಗೆ ಕೊಡದೆ ಹೋಗಿದ್ದರು. ಇವರ ವಿಳಾಸ ನಮ್ಮ ಡಿ. ಬೋರ್ಡಿಗೆ ತಿಳಿಯಲು ಟಪ್ಪಾಲು ಆಫೀಸಿನ ಹೆಸರೇ ಸಿಕ್ಕಲಿಲ್ಲ !

• • • •

ವಿಳಾಸ ಹುಡುಕಲು ಬಹು ಪ್ರಯಾಸವಾದ್ದರಿಂದ ಕಳೆದ ಡಿ. ಬೋರ್ಡ ಮೀಟಿಂಗಿನಲ್ಲಿ ಸರ್ಕಸ್ ಕಂಪೆನಿಯವರಿಂದ ಬರತಕ್ಕ ಹಣವನ್ನು ನಷ್ಟಕ್ಕೆ ಬರೆದಿರುವರು.

• • • •

ಉಡುಪಿ ತಾಲೂಕಿನಲ್ಲಿ ವರ್ಗಾ ವರ್ಗದ ವಿಷಯ 'ಮುರಿಯೊ' ಎಂತ ಬೊಬ್ಬೆ ಬಿದ್ದಿರುತ್ತದೆ. ಹಲವು ಉಪಾಧ್ಯಾಯರು ಪ್ರೆಸಿಡೆಂಟರಿಗೆ ಮನವಿಮಾಡುತ್ತಿರುವರು. ಪ್ರೆಸಿಡೆಂಟರು ದೀರ್ಘಾಲೋಚನೆಯಲ್ಲಿ ಬಿದ್ದಿರುವರು.

• • • •

ಮದ್ರಾಸಿನಿಂದ ಉಡುಪಿ ಸರ್ಕಲಿಗೆ ವರ್ಗಾಯಿಸಲ್ಪಟ್ಟ ದೊರೆಯವರಿಗೆ ಉಡುಪಿ ಹವೆ ತಾಗಲಿಕ್ಕಿಲ್ಲವೆಂದು ದೊರೆಗಳು ಬರಲು ಕೇಳಲಿಲ್ಲ. ಬದಲಿಗೆ ಇಲ್ಲಿಯ ಸ್ಟೇಶನ್ ಹೌಸ್ ಆಫೀಸರರನ್ನು ಟೆಂಪರರಿಯಾಗಿ ನೇಮಿಸಿರುವರು.

• • • •

ಡಿಸ್ಟ್ರಿಕ್ಟ ಬೋರ್ಡಿನಿಂದ ಮೋಟರ ಕಂಪೆನಿಗಳವರಿಗೆ ಒಂದು ಹುಕುಂ. "ಸ್ಪೆಶಲ್ ಸರ್ವೀಸುಗಳನ್ನು ಓಡಿಸಬೇಕಾದರೆ ಮಾನ್ಯ ಡಿ. ಬೋರ್ಡ ಪ್ರೆಸಿಡೆಂಟರಿಗೆ ಕನಿಷ್ಠ ೭ ದಿವಸದ ಮೊದಲೇ ಅರ್ಜಿಮಾಡಿ ಹುಕುಂ ಪಡಕೊಳ್ಳಬೇಕೆಂದು."

• • • •

"೭ ದಿವಸಗಳ ಮುಂಚೆ ಸ್ಪೆಶಲ್ ಸರ್ವೀಸು" ಇರಬಹುದೆಂತ ಬಡ ಮೋಟರ ಕಂಪೆನಿಗಳವರಿಗೆ ಗೊತ್ತಾಗುವ ಬಗೆ ಹೇಗೆ?

• • • •

ಹೀಗೆ ಸ್ಪೆಶಲ್ ಸರ್ವಿಸುಗಳು ಇಂಥಾ ದಿವಸಕ್ಕೆ ಇರುವುವು ಎಂದು ನಿರ್ಣಯಿಸುವರೆ ಡಿ. ಬೋರ್ಡಿನಿಂದ ಒಬ್ಬ ಜೋತಿಷ್ಯಗಾರನನ್ನು ನೇಮಿಸಿದರೆ ಬಹಳೇ ಉತ್ತಮವಿತ್ತು.

• • • •

ಈ ಉದ್ಯೋಗಸ್ಥನ ಸಂಬಳವೆಂತೂ ರೋಡ್ ಸೆಸ್ಸಿನಿಂದ ಕೊಡಿಸಬಹುದು ಮತ್ತು ಟ್ರೆವಲಿಂಗಿನ ಬಗ್ಗೆ ಒಂದು ಫ್ರೀಪಾಸ್ ಕೊಡಿರೆಂದು ಬಸ್ಸ್ ಕಂಪೆನಿಯರಿಗೆ ಹುಕುಂ ಕೊಡಿಸಿದರಾಯಿತು. ಹೀಗೆ ಮಾಡಿದ್ದಲ್ಲಿ ಈ '೭ ದಿವಸದ ಮುಂಚೆಯೇ' ಎಂಬ ರೂಲು ಬಹಳ ಸುಲಭದಲ್ಲಿ ಜ್ಯಾರಿಗೆ ತರಬಹುದು.

• • • •

[illegible]

ಸ್ವದೇಶಾಭಿಮಾನಿ

[illegible]

ಪ್ರಯತ್ನಿಸಿದರು. [illegible] ಸ್ವಾಭಿಮಾನ [illegible] ಲೊಪ್ಪಿದರು. [illegible] ತಿಳಿದಿದ್ದಿರಬೇಕು.

— ಪಂಜಾಬ ಕಮಿಟಿಯು, ದೇಶದ [illegible] ಅಭಿಪ್ರಾಯಕ್ಕೆ ವಿರೋಧವಾಗಿ ತನ್ನ ಕಮಿಟಿಯನ್ನು [illegible] ಸಿತು. ಪಂಜಾಬ ಗವರ್ನರು ತನ್ನ ರಾಜತಂತ್ರದ [illegible] ಕ್ಕಾಗಿ ತನ್ನನ್ನು ತಾನೇ ಅಭಿನಂದಿಸುವ [illegible] ಟಿಯು ಸಮಾನತೆಯ ಹೊಸ ಶರ್ತವನ್ನು ಸಹಕಾರಕ್ಕಾಗಿ ಕೊಟ್ಟುದನ್ನು ನೋಡಿ ಅವರಿಗೆ ನಿರಾಶೆಯಾಗಿದ್ದಿರಬೇಕು. ಸ್ವಾಮನ ಕಮಿಶನರು ಇಂಗ್ಲೆಂಡಿಗೆ ಹೋಗಿ ಬಹಿಷ್ಕಾರವೆ ಭಿದ್ದುಹೋಗುತ್ತಿದ್ದೆಯೆಂದು ಜಗ್ಗಳಿಸಿಕೊಳ್ಳುವ ಸಮಯ ದಲ್ಲಿಯೇ ಇದೊಂದು ನೂತನ ಪರಿಸ್ಥಿತಿಯುಂಟಾದುದು ಅವ ರಿಗೆ ಉಭಯ ಸಂಕಟಕ್ಕಿಟ್ಟಿದ್ದಿರಬೇಕು.

ಸ್ವಾಮನ್ ಕಮಿಶನ್ನಿಗೆ ಬೇರೆ ಉಪಾಯವಿರಲಿಲ್ಲ. ತಮ್ಮ ಧೋರಣವು ತಮ್ಮನ್ನೆಲ್ಲಿಗೆ ಕೊಂಡುಹೋಗುವುದೆಂಬ ಪ್ರಬಲ ಸಂಶಯವು ಅವರಿಗೆ ಉಂಟಾಗಿದ್ದಿರಬೇಕು. ಸಿಕ್ಕು ವುದೆಂಬ ಆ ಕಿಂಚಿತ್ ಸಹಕಾರವೂ ಬರೇ ಆಕಾಶಕುಸುಮವೇ! ಎಂಬ ಹೆದರಿಕೆಯು ಅವರಿಗುಂಟಾಗಿರಬೇಕು. ಪಂಜಾಬ ಕಮಿಟಿಯ ಕೇಳಿಕೆಯ ನಿರಾಕರಣೆಯಿಂದ ಬಹಿಷ್ಕಾರವನ್ನು ಪೂರ್ಣಮಾಡುವುದು ಒಂದು ಕಡೆ; ಬೇರೆ ಸ್ವೀಕಾರದಿಂದ ಅವರ ಸಹಕಾರವನ್ನೂ, ಒಂದು ನೆವನಕ್ಕಾಗಿ ಕಾದಿದ್ದ 'ಜೋಹುಕುಂವಾಲಾ'ರವರ ಸಹಕಾರವನ್ನೂ ಲಾಭ ಮಾಡಿ ವಿರೋಧ ಪಕ್ಷದಲ್ಲಿ ಇಬ್ಬಣಗಳನ್ನುಂಟುಮಾಡಿ ಬಹಿಷ್ಕಾರದ ಬಲವನ್ನು ಕುಂದಿಸುವುದು ಇನ್ನೊಂದು ಕಡೆ. ಇವೆರಡುಗಳಲ್ಲಿ ಯಾವುದನ್ನು ಮಾಡಬೇಕೆಂಬುದೇ ಸ್ವಾಮನರು ನಿರ್ಧರಿಸ ಬೇಕಾಗಿತ್ತು. ಸ್ವಾಮನರು ಕುಶಲಿಗಳಾದ ರಾಜತಂತ್ರಜ್ಞರು; ಮೇಲಾಗಿ ಬ್ರಿಟಿಷರು. ಸೂಕ್ಷ್ಮ ದೃಷ್ಟಿಯೂ ದೂರ ದೃಷ್ಟಿಯೂ ಇದ್ದವರು. ಅವರು ಸಹಜವಾಗಿಯೇ ಎರಡನೆಯ ಸ್ಥಿತಿಯೇ

ಉತ್ತಮವೆಂದು ತಿಳಿದು ಪಂಜಾಬ ಕಮಿಟಿಯ ಶರ್ತಗಳನ್ನೊಪ್ಪಿ [illegible] ನ್ಯಾಯವಾಗಿರದೆ [illegible] ಕೊಡಲ್ಪಟ್ಟಿದ್ದೆಂದು ನಾವು ತಿಳಿದರೆ ಈ [illegible] ಲಾಭಗಳು [illegible]

ಸ್ವಾಮನರು ಹಿಂದೀ ಕಮಿಟಿಗಳಿಗೆ ಸಮಾನತೆಯ ಗೌರ ವವನ್ನು [illegible] ಈ ಸಮಾನತೆಯು [illegible] ಯಾವ ಲಾಭ [illegible] ಅವಶ್ಯಕತೆಯು [illegible] ಸಮಾನತೆ [illegible] ಇಲ್ಲವೆಂದು [illegible] ತಿಳಿದುಬರುವುದು. [illegible] ಸ್ವಾಮನ್ [illegible] ಕಮಿ [illegible]

[illegible]

ಬಂದಿದೆ. ಈ ವರೆಗೆ ಸ್ವಾಭಿಪ್ರಾಯಗಳನ್ನು ಕೊಡದೆ ಉಸಿರು ಕಟ್ಟಿ ಇದ್ದವರು ಈಗಲಾದರೂ ಧೈರ್ಯದಿಂದ ಉಸಿರು ಬಿಡು ವಂತಾಯಿತು.

ವಿದೇಶ ವರ್ತಮಾನ.

— [illegible] ತಮ್ಮ [illegible] ದಿನವನ್ನು ಕಳೆದ ಶನಿವಾರ ದಿನ ಆಚರಿಸಿದರು.

— [illegible] ಯನ್ನು [illegible] ಕಟ್ಟಿದರು.

— ಬರುವ ಆಗಸ್ಟ ತಿಂಗಳಲ್ಲಿ ಜರ್ಮನಿಯ ಬರ್ಲಿನ್ ನಗರದಲ್ಲಿ ೨೬ನೇ ಇಂಟರ್‌ನೇಶನಲ್ ಇಂಟರ್ ಪಾರ್ಲಿಮೆಂಟರಿ ಪರಿಷತ್ತು ಜರಗುವದು. ಇದರ ಆಮಂತ್ರಣವನ್ನು ಬ್ರಿಟಿಷ ಇಂಡಿಯಾ ಶಾಸನ ಸಭೆಯವರಿಗೂ ಕಳುಹಿಸಿರುವರು.

— ಲಿವರಪೂಲಿನಲ್ಲಿ ಮರ್ಸಿ ನದಿಯ ಕೆಳಗೆ ಒಂದು ಸುರಂಗ ವನ್ನು ಕಟ್ಟುವದಕ್ಕಾಗಿ ಕೆಲಸವನ್ನು ಮುಂದರಿಸ್ತರಿನ ಒಂದು ಕಂಪೆನಿಯವ ರಿಗೆ ವಹಿಸಿಕೊಟ್ಟಿರುವರು. ಈ ಸುರಂಗವನ್ನು ಕಟ್ಟಲು ಸುಮಾರು ಒಂದೂವರೆ ಮಿಲಿಯ ಪವನುಗಳು ಬೇಕಾಗುವವಂತೆ. ನಾಲ್ಕು ಸಾವಿರ ಜನರಿಗೆ ಎರಡು ವರ್ಷಗಳ ಕೆಲಸವಿರುವದಂತೆ.

— ನೆಲಸನ್ ಡಿಸ್ಟ್ರಿಕ್ಟಿನಲ್ಲಿ ಹತ್ತಿಯ ಕಾರಖಾನೆಯು ಒಬ್ಬ ನೇಕಾರನನ್ನು ಕೆಲಸದಿಂದ ನಿವೃತ್ತಿಪಡಿಸಿದುದಕ್ಕಾಗಿ ೧೪,೦೦೦ ಕೆಲಸ ಗಾರರು ಒಮ್ಮೆಯೇ ಮುಷ್ಕರಹಾಕಿರುವರು. ಉಳಿದ ೩,೦೦೦ ಕೆಲಸ ಗಾರರಿಂದ ಕಾರಖಾನೆಯು ನಡಿಸಲ್ಪಡಲು ಅಶಕ್ಯವಾದ ಕಾರಣ ಕಾರಖಾನೆಯು ಬಂದುಮಾಡಲ್ಪಟ್ಟಿತು.

— ಫ್ರಾನ್ಸಿನಲ್ಲಿ ೧೯೧೯ನೇ ಇಸವಿಯಲ್ಲಿ ವಿಮಾನಗಳ ಕೆಲಸ ದಿಂದ ನಿವೃತ್ತಿಪಡಿಸಲ್ಪಟ್ಟ ನೊಯೆಲ್ ಎಂಬವನು ತನಗೆ ಸಿಕ್ಕುತ್ತಿದ್ದ ಪೆನ್‌ಶನವನ್ನು ಹೆಚ್ಚಿಸಬೇಕೆಂದು ಅರ್ಜಿಮಾಡಿದ್ದನು. ಅದಕ್ಕೆ ಜಡ್ಜರು ಇದಕ್ಕೊಪ್ಪಲಿಲ್ಲ. ಕೋರ್ಟಿನೊಳಗೆ ತಾನು ಸ್ವತಃ ಹೋಗಿ ವಾದಿಸ ಲಿರುವ ಕಾರಣ ಕೋರ್ಟಿನೊಳಗೆ ಹೋಗಲು ಅಪ್ಪಣೆ ಪಡೆದು ಒಳಗೆ ಹೋಗಿ ಜಡ್ಜರ ಎದುರು ನಿಂತು ತನ್ನ ಪಿಸ್ತೂಲನ್ನು ಜಡ್ಜರ ಎದುರು ಹಿಡಿದು ಎರಡು ಸಲ ಗುಂಡುಬಿಟ್ಟನು. ಅಷ್ಟರಲ್ಲಿ ಕ್ಲಾರ್ಕನು ಓಡಿ ಬಂದು ಆತನನ್ನು ಹಿಡಿದುದರಿಂದ ನೋಟವು ತಪ್ಪಿಹೋಯಿತು. ಆತನ ವಿಚಾರಣೆಯು ನಡೆಯುತ್ತಿದೆ.

— ಸ್ಪೇನ್‌ಸ್ಪಿನಾ ಎಂಬಲ್ಲಿ ಪೆಸೆಂಟ ಪಾರ್ಟಿಯವರ ಡೆಪ್ಯುಟಿ ಗಳನ್ನು ಕೊಂದಿದ್ದು ಅವರ ಶವಸಂಸ್ಕಾರವಾಗುವಾಗ ೫೦,೦೦೦ ಜನರು ಬಂದು ನೆರೆದಿದ್ದರು.

— ಅಮೀರ ಅಮನುಲ್ಲಾ ಧೊರೆಗಳವರು ತಮ್ಮ ಯುರೋಪು ಸಂಚಾರವನ್ನು ಮುಗಿಸಿ ಹೀರತಿಗೆ ಬಂದಿದ್ದರು. ಅಲ್ಲಿ ಅವರನ್ನು ಪ್ರಜೆ ಗಳು ಬಹು ಸಂಭ್ರಮದಿಂದ ಸತ್ಕರಿಸಿದರು.

— ಬೆಲ್ಜಿಯಮಿನ ರಾಜದಂಪತಿಗಳು ಆಫ್ರಿಕದಲ್ಲಿರುವ ಬೆಲ್ಜಿಯನ್ ಕೊಂಗೊವನ್ನು ಸಂದರ್ಶಿಸಲಿಕ್ಕೆ ಹೋಗಿದ್ದರು.

— ಯುನೈಟೆಡ್ ಸ್ಟೇಟ್ಸಿನಿಂದ ಇಂಗ್ಲೆಂಡಿನ ಸೌತ್ ಹೆಂಪ್‌ಟನಿಗೆ ಬಂದ ಟಪ್ಪಾಲಿನ ಹಡಗನಲ್ಲಿ, ಸುಮಾರು ೧೦೦,೦೦೦ ಪವನಿಗೆ ಮಿಕ್ಕಿದ ಸಾಮಾನುಗಳು ಕಳವಾಗಿರುವವು. ಇದು ಹಡಗವು ಸೌತ್ ಹೆಂಪಟನಿಗೆ ಬಂದ ಮೇಲೆಯೇ ಗೊತ್ತಾಯಿತು. ಟಪ್ಪಾಲು ಚೀಲಗಳ ಕಳವು ನ್ಯೂಯೋರ್ಕಿನಲ್ಲಿ ಖಂಡಿತವಾಗಿಯೂ ಆದದ್ದಿಲ್ಲವೆಂದು ಅಲ್ಲಿಯ ಇನ್ಸ್ ಪೆಕ್ಟರರು ಧೈರ್ಯದಿಂದ ಹೇಳುವರು. ಚೀಲಗಳಿಗೆ ಹಾಕಿದ ಮೊಹರು ಗಳು ಹಾಗೆಯೇ ಭದ್ರವಾಗಿ ಇರುವವಾದರೂ, ಚೀಲದೊಳಗಿನ ಹಣ ಮೊದಲಾದವುಗಳು ಇರುವುದೇ ಇಲ್ಲ. ಅದು ಕಾರಣ ಕಳವು ನ್ಯೂಯೋರ್ಕಿ ನಲ್ಲಿ ನಡೆದಿತ್ತೆಂದು ಸಂಶಯಪಡಬೇಕಾಗಿದೆ.

— ಬ್ರಿಟನಿನಲ್ಲಿ ನಾಲ್ಕು ವರ್ಷಗಳ ಹಿಂದೆ ಇದ್ದುದಕ್ಕಿಂತ ಈ ವರ್ಷ ೫೩೫,೦೦೦ ಹೆಚ್ಚಿನ ಜನರಿಗೆ ಈಗ ಕೆಲಸವಿದೆಯಂತೆ. ೧೯೨೬ನೇ ಇಸವಿಯಲ್ಲಿ ಇಷ್ಟು ಜನರು ಕೆಲಸವಿಲ್ಲದೆ ತಿರುಗಾಡುತ್ತಿದ್ದರು.

— ಇಟೆಲಿಯ ಬೇಂಕಿನ ಡಿಸ್ಕೌಂಟನ್ನು ಶೇಕಡಾ ೬.೦೦ದ ೫॥ಗೆ ಇಳಿಸಿರುವರು.

— ಗ್ರೀಸಿನ ತಂಬಾಕು ಕೆಲಸಗಾರರು ಬ್ರಿಟಿಷರ ಮತ್ತು ಅಮೇರಿ ಕನರ ಉದಾಹರಣೆಯನ್ನನುಸರಿಸಿ ಹಲವು ದಿವಸಗಳಿಂದ ಕೆಲಸಕ್ಕೆ ಮುಷ್ಕರ ಹಾಕಿರುವರು. ಭಾಂಡವಲಗಾರರಿಗೂ ಈ ಕೂಲಿಗಳಿಗೂ ರಾಜಿಯಾಗುವ ಸಂಭವವೇ ತೋರುವುದಿಲ್ಲ.

— ಹಿಂದೂ ಸೈನ್ಯದ ಮಾಜಿ ಕೆಪ್ಟನನಾಗಿದ್ದ ಮೊರಿಸ್ ವಾಲ್ಕರ್ ನೆಂಬವನು ಏನೋ ರೋಗಪೀಡಿತನಾಗಿದ್ದ ಕಾರಣ ತಲೆಗೆ ಗುಂಡುಹೊಡೆದು ಆತ್ಮಹತ್ಯಮಾಡಿಕೊಂಡನು.

— ಅಫಘಾನದ ಒಬ್ಬ ರಾಜಪುತ್ರನೆನ್ನಿಸಿಕೊಳ್ಳುವ ಓಮರ್‌ಸೈದ್ ನೆಂಬವನು ಹೊಸ ಎಂಡ್‌ಕಲ್ಲರ್ ಎಂಬ ವ್ಯಾಪಾರಿಗಳನ್ನು ಮೋಸಗೊಳಿ ಸಿದುದಕ್ಕಾಗಿ, ಆತನನ್ನು ಕೈದುಮಾಡಲು ವಾರಾಂಟನ್ನು ಕಳುಹಿಸಿರು ವರು. ಮೊದಲಿನ ಸಲ ಆತನನ್ನು ಜಾಮೀನಿನ ಮೇಲೆ ಬಿಟ್ಟಿದ್ದರು.

— ಡೆಮಸ್ಕಸಿನಲ್ಲಿ ಒಬ್ಬ ಸ್ತ್ರೀ ಧುರೀಣಳು ಬಂದಿರುವಳು. ಅವಳು ಡಾಕ್ಟರ್ ಅಬ್ದುಲ್‌ರಹಮಾನ್ ಶಾಬಂದರ್ ಇವರ ಪತ್ನಿ. ಅವಳು ಬಂದಂದಿನಿಂದ ಅವಳಿಗೆ ಹಲವು ಡಿಪ್ಯುಟೇಶನು ಬಂದವು.

— ಲಂಡನನ್ನು ಸಂದರ್ಶಿಸುವ ಹಿಂದುಗಳಿಗಾಗಿ ನೋರ್‌ವೆಸ್ಟ್ ಲಂಡನ್ ಹೋಮ್ ಎಂಬ ಮಂದಿರವನ್ನು ಸರ್ ಅತುಳ ಚಟರ್ಜಿಯವರು ತೆರೆದರು. ಈ ಮಂದಿರವನ್ನು ತೆರೆದ ಕಾರಣ ಹಿಂದೂಸ್ಥಾನದ ಮತಾಭಿ ಮಾನಿಗಳಾದ ಹಿಂದೂಗಳೂ ಪರದೇಶ ಸಂಚಾರವನ್ನು ಮಾಡಲು ಅನು ಕೂಲಿಸಿಕೊಟ್ಟಂತಾಯಿತು. ಈ ಮಂದಿರದ ಸಮೀಪ ಒಂದು ಹಿಂದೂ ದೇವಾಲಯವನ್ನು ತೆರೆಯಬೇಕೆಂದು ಪ್ರಯತ್ನಗಳು ನಡೆಯುತ್ತಲಿವೆ.

— ಸರ್ ಜಗದೀಶ ಚಂದ್ರಬೋಸರು ಈಗ ವಿಯನ್ನಾದಲ್ಲಿರುವರು. ಅಲ್ಲಿ ಅವರನ್ನು ಎದುರುಗೊಳ್ಳಲು ನಿಪುಣರಾದ ವಿಜ್ಞಾನಶಾಸ್ತ್ರಜ್ಞರು, ರಸಾಯನ ಶಾಸ್ತ್ರಶೋಧಕರು, ಇನ್ನೂ ಹಲವು ಪ್ರತಿಷ್ಠಿತ ಪುರುಷರು ಬಂದಿ ದ್ದರು. ಬೋಸರು ತಮ್ಮ ಅನುಭವದ ಕುರಿತು ಅಲ್ಲಿ ಒಂದು ಭಾಷಣ ವನ್ನು ಮಾಡಿದರು.

— ಸಂಯುಕ್ತ ಪ್ರಾಂತ್ಯಕ್ಕೆ ಹಿಂದೂ ಗವರ್ನರರನ್ನು ನೇಮಿಸ ಬಹುದೋ ಎಂದು ಹೌಸ್ ಓಫ್ ಕೊಮನ್ಸಿನಲ್ಲಿ ಚರ್ಚೆಯು ನಡೆಯಿತು. ಕೊನೆಗೆ ಲೊರ್ಡ್ ಬರ್ಕನ್ ಹೆಡ್ಡರು ಇದನ್ನು ಚಕ್ರವರ್ತಿಗಳಿಗೆ ತಿಳಿಸಿ ನಿರ್ಣ ಯಿಸಬೇಕೆಂದು ನಿಶ್ಚಯವಾಯಿತು.

ಒಳದೇಶ ವರ್ತಮಾನ.

— ಮುಲ್ತಾನಿನಲ್ಲಿ ಕಳೆದ ಗುರುವಾರ ದಿನ ಹಿಂದೂ ಮುಸಲ್ಮಾನರ ಒಂದು ಮೆರವಣಿಗೆಯು ಜರಗಿತು. ಅಸಹಕಾರವು ಪ್ರಾರಂಭವಾದಂದಿ ನಿಂದ ಇಂತಹ ಮೆರವಣಿಗೆಯು ನಡೆದುದು ಮೊದಲನೆಯ ಸಲ. ಮೆರ ವಣಿಗೆಯಾದ ಮೇಲೆ ಒಂದು ಮಹಾಸಭೆಯು ಜರಗಿ, ಹಿಂದೂ ಮುಸಲ್ಮಾ ನರು ಸದಾಕಾಲವೂ ಐಕ್ಯದಿಂದಿದ್ದು ಶಾಂತಿಯನ್ನು ಕಾಪಾಡಬೇಕೆಂದು ಭಾಷಣಗಳಾದವು.

— ಬಾಲೂರಘಾಟಿನಲ್ಲಿ ಬರದಿಂದ ಪೀಡಿತರಾದ ಜನರು ಸತ್ಯಾ ಗ್ರಹವನ್ನು ಆಚರಿಸಲು ತೊಡಗಿರುವರು. ನೀಂಪ ವಿನಹ ಬೇರೆ ಏನನ್ನೂ ತಿನ್ನಲಾರೆವೆಂದು ಪ್ರತಿಜ್ಞೆ. ಬಹು ರಭಸದಿಂದ ಮಳೆ ಬರುವಾಗ ಮಳೆಗೆ ನಿಂತುಕೊಳ್ಳುವದು, ಬಲವಾದ ಉಪವಾಸ ಮಾಡುವದು, ಇವೇ ನೊದ ಲಾದ ಕೆಲಸಗಳನ್ನು ಪ್ರಾರಂಭಿಸಿರುವರು.

— ಜಾನಪುರದ 'ತಿಲಕ ಪುಸ್ತಕಾಲಯ' ಎಂಬ ಒಂದು ಪುಸ್ತಕ ಸಂಗ್ರಹಾಲಯದಲ್ಲಿ ರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಹಲವು ಪುಸ್ತಕಗಳಿದ್ದವು. ಪೋಲೀಸರು ಈ ಪುಸ್ತಕಾಲಯವನ್ನು ಹೊಕ್ಕು ಪುಸ್ತಕ ಗಳನ್ನು ಸೂರೆಗೈದರು.

— ಪಂಡಿತ ಗೋಪಬಂಧುದಾಸರ ಮರಣದಿಂದ ತಮಗಾದ ಹೇರಳ ನಷ್ಟವನ್ನೂ ದುಃಖವನ್ನೂ ಪ್ರಕಟೀಕರಿಸುವದಕ್ಕಾಗಿ ಕಲಕತ್ತೆಯ ಒರಿಯಾ ಸಮಾಜದವರು ಮೆರವಣಿಗೆಯನ್ನು ಜರಗಿಸಿ, ತದನಂತರ ಒಂದು ಸಭೆ ಯನ್ನು ಏರ್ಪಡಿಸಿದರು.

ರಾವಲ್‌ಪಿಂಡಿಯ ರೈಲ್ವೆ ಆಫೀಸರನ ಮನೆಯನ್ನು ದರೋಡೆ ಕಳ್ಳರು ಹಗಲು ಹೊತ್ತಿನಲ್ಲಿ ಪ್ರವೇಶಿಸಿ, ಅಮೂಲ್ಯವಾದ ವಸ್ತುಗಳೆಲ್ಲ ವನ್ನು ದೋಚಿ, ಮನೆಯನ್ನು ಬೆಂಕಿಯಿಂದ ಹೊತ್ತಿಸಿ ಓಡಿ ಹೋದರು. ಬಹು ಆಶ್ಚರ್ಯ.

— ಕಲಕತ್ತದಲ್ಲಿ ನಡೆಯಲಿರುವ ರಾಷ್ಟ್ರೀಯ ಅಧಿವೇಶನಕ್ಕೆ "ಲಾಲಾ ಲಜಪತರೈ"ಯವರು ಅಧ್ಯಕ್ಷರಾಗುವದು ಉತ್ತಮವೆಂದು ಹಿಂದೂಸ್ಥಾನ ಟೈಮ್ಸ್ ಎಂಬ ಪತ್ರಿಕೆಯು ಸೂಚಿಸುತ್ತಿದೆ. ಪಂಜಾಬಿ ಗಳು ಇಮವರೆಗೆ ಕಾಂಗ್ರೆಸ್ ಅಧ್ಯಕ್ಷರಾಗಿಲ್ಲವೆಂದು ಪಂಜಾಬಿಗಳೊಳ ಗಿರುವ ವ್ಯಸನವು ಇದರಿಂದ ಹೋದಂತಾಗುವದು.

— ಎಲಿಮೆಂಟರಿ ಶಾಲೆಗಳಲ್ಲಿ ಅಜಾತಿ ಈಜಾತಿಯೆಂದು ಹಲವ ರನ್ನು ಸೇರಿಸಿಕೊಳ್ಳುವದಿಲ್ಲ. ಅಂತಹ ಶಾಲೆಗಳಿಗೆ ಗ್ರೇಂಟನ್ನು ಕೊಡ ಬಾರದೆಂದು ಎಜ್ಯುಕೇಶನ್ ಮಂತ್ರಿ ಮಂಡಳದವರು ಒಂದು ಹೊಸ ಕಾನೂನನ್ನು ಮಾಡಿರುವರು. ಇದರ ಕುರಿತು ಆಕ್ಷೇಪವಿದ್ದರೆ ಅಂತಹ ಆಕ್ಷೇಪಗಳನ್ನು ಜುಲಾಯಿ ೧೫ರೊಳಗೆ ಮಂತ್ರಿಮಂಡಲದವರಿಗೆ ಕಳುಹಿಸಿ ದರೆ ವಿಚಾರಿಸಲಾಗುವುದು.

— ಓಲ್ ಇಂಡಿಯಾ ಮೊಸ್ಲೆಮ್ ಲೀಗ್‌ನವರು ಸ್ವಾಮನ್ ಕಮಿ ಶನಿಗೆ ಸಹಾಯಕವಾಗಿ ತಮ್ಮ ಮೆಮೊರಾಂಡಮನ್ನು ತಯಾರಿಸಿದ ಕಾರಣ ಅದರ ಸೆಕ್ರೆಟರಿಗಳು ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು.

— ಕಲಕತ್ತದ ನಾರಿನ ಕಾರಖಾನೆಯಲ್ಲಿ ಪ್ರಾರಂಭಿಸಿದ ಮುಷ್ಕ ರದ ವಿಷಯದಲ್ಲಿ ಮುಷ್ಕರದ ನಾಯಕನಾದ ಬಂಕಿಮ್ ಮುಖರ್ಜಿ ಎಂಬ ವನನ್ನು ಪೋಲೀಸರು ಕೈದುಮಾಡಿರುವರು.

— ಡಿಲ್ಲಿಯ ಒಂದು ಸೋಡಾ ಕಾರಖಾನೆಯಲ್ಲಿ ಕಾರ್ಬೋನಿಕ್ ಎಸಿಡ್ ಗೆಸನ್ನು ತುಂಬಿಸಿಟ್ಟ ಪೀಪವು ಬಿಸಿಯಾಗಿ ಗೇಸು ಹೆಚ್ಚಿ ಪೀಪವು ದೊಡ್ಡ ಶಬ್ದದಿಂದ ಹೊಡೆದುಹೋಗಿ, ಚೂರುಗಳು ಹಾರಿ ಮೂವರಿಗೆ ಜಖಮಾಯಿತು.

— ಬನಾರಸಿನಲ್ಲಿ ಒಂದು ಹೊಸ ಫಿಲ್ಮ್ ಕಂಪೆನಿಯು ಸ್ಥಾಪಿಸಲ್ಪ ಟ್ಟಿರುವದು. ಇದರ ಮೂಲಧನವು ೨೦ ಲಕ್ಷ ರೂಪಾಯಿಗಳು. ಮುಂಬಾಯಿ, ಮದರಾಸು, ಲಾಹೋರ್ ಮತ್ತು ಕೊಲೊಂಬೊಗಳಲ್ಲಿ ಇದರ ಶಾಖೆಗಳನ್ನು ತೆರೆಯುವರು.

— ನೀಲಗಿರಿಯಲ್ಲಿ ಒಬ್ಬ ಯುರೋಪಿಯಾನನು ಬಂದು, ಬಿಹಾರ ದಲ್ಲಿ ತಾನು ಒಬ್ಬ ಪ್ಲೇಂಟರನೆಂದೂ, ೨೦೦ ಎಕ್ರೆ ಆಸ್ತಿಯ ಮ್ಹಾಲಿಕ ನೆಂದೂ ಹೇಳಿ, ಸಾಹುಕಾರರುಗಳಿಂದ ಅಪಾರ ಹಣವನ್ನು ಸಾಲವಾಗಿ ಪಡೆದು, ಸಾಲ ತೀರಿಸದೆ ಓಡುವ ಹವಣಿಕೆಯಲ್ಲಿದ್ದನು. ಆತನ ನಿಜತ್ವವು ತಿಳಿದುಬಂದುದರಿಂದ ಹಿಡಿದು ಕೈದುಮಾಡಿ, ವಿಚಾರಣೆಯು ನಡೆಯುತ್ತಲೇ ಇದೆ.

— ಡೆಕ್ಕಾದ ಈಗಿನ ನವಾಬರ ತಮ್ಮನ ಮೇಲೆ ಒಂದು ಕ್ರಿಮಿ ನಲ್ ಮೊಕದ್ದಮೆಯಾಗಿರುವದು. ಇವರು ಪೋಕರಿ ಸ್ವಭಾವದವರಾಗಿದ್ದು ಬಹು ಕೆಟ್ಟ ಕೆಲಸಗಳನ್ನು ಮಾಡಿದ್ದರಂತೆ.

— ರಾಯಪುರದ ಪೋಸ್ಟ್ ಆಫೀಸ್ ಸುಪರಿಂಟೆಂಡೆಂಟನ ಪತ್ನಿ ಯಾದ ಇ. ಎಮ್. ಡೊಸ್ ಎಂಬ ಯುರೋಪಿಯನ್ ತರುಣಿಯು ತನ್ನ ಮೋಟಾರುಕಾರನ್ನು ಅಸಡ್ಡೆಯಿಂದ ಬಹು ವೇಗವಾಗಿ ಓಡಿಸುವಾಗ, ಹುಸೇನನೆಂಬವನ ಮೈಮೇಲೆ ಹೋಗಿ ಆತನು ಮೃತಪಟ್ಟನು. ಆಕೆಯ ಮೇಲೆ ಕ್ರಿಮಿನಲ್ ಮೊಕದ್ದಮೆಯಾಗಿದೆಯಾದರೂ, ತಾನು ಮೋಟಾರನ್ನು ಮೆಲ್ಲನೆ ನಡಿಸುತ್ತಿದ್ದೆನೆಂದೂ ತನ್ನ ತಪ್ಪಿಲ್ಲವೆಂದೂ ಅವಳನ್ನುತ್ತಿರುವಳು.

— ರಂಗೂನಿನ ಸಮೀಪವಿರುವ ಟವ್ಯೊ ಎಂಬಲ್ಲಿ ಇಬ್ಬರು ಯುರೋ ಪಿಯನರು ತಾವು ಕೆಲವು ಲೋಹಗಳನ್ನು ಪಡಕೊಳ್ಳುವೆವೆಂದು ಒಬ್ಬ ವ್ಯಾಪಾರಿಗೆ ಮಾತುಕೊಟ್ಟು ಮತ್ತೆ ತಪ್ಪಿಸಿಕೊಂಡುದಕ್ಕಾಗಿ ಅವರ ಮೇಲೆ ವ್ಯಾಜ್ಯವಾಗಿ, ವಿಚಾರಣೆಗಾಗಿ ಅವರು ರಂಗೂನಿಗೆ ಕಳುಹಲ್ಪಟ್ಟಿರುವರು.

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ೨೩ನೇ ತಾರೀಕಿನ ದಿನ ಅಪ ರಾಹ್ನ ಘಂಟೆ ೩ಕ್ಕೆ ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಮೆಂಬರರ ಒಂದು ವಿಶೇಷ ಸಭೆಯು ಜರಗಿತು. ಬೋರ್ಡಿಗೆ ಒಬ್ಬ ವೈಸ್ ಪ್ರೆಸಿಡೆಂಟರನ್ನೂ, ಡಿಸ್ಟ್ರಿಕ್ಟ್ ಬೋರ್ಡಿಗೆ, ಒಬ್ಬ ಮೆಂಬರರನ್ನೂ ಆರಿಸುವದೇ ಈ ಸಭೆಯ ಉದ್ದೇಶವಾಗಿತ್ತು. ಮೊದಲಿನ ವೈಸ್ ಪ್ರೆಸಿ ಡೆಂಟರಾದ ರಾ॥ ಪಿ. ಎಮ್. ಡಿಸೋಜರೇ ಪುನಃ ಉಮೇದುವಾರರಾಗಿ ನಿಂತಿದ್ದ ಕಾರಣ ಅವರೇ ಎಲ್ಲರಿಂದಲೂ ಪುನಃಪುನಃ ವೈಸ್‌ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು. ಡಿಸ್ಟ್ರಿಕ್ಟ್ ಬೋರ್ಡು ಮೆಂಬರಿಕೆಗೆ ನರಿಕೊಂಬು ರಾಮ ರಾವ್ ಮತ್ತು ರಾ॥ ಎಚ್. ಎಸ್. ಏಕಾಂಬರರಾವ್ ಇವರೊಳಗೆ ಮತ ತೆಗೆಯಲಾಗಿ, ಮೊದಲನೆಯವರಿಗೆ ೮ ವೋಟುಗಳೂ ಎರಡನೆಯವರಿಗೆ ೫ ವೋಟುಗಳೂ ದೊರೆತವು. ಆದ ಕಾರಣ, ಶ್ರೀ ನರಿಕೊಂಬು ರಾಮ ರಾಯರೇ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರಾಗಿ ಚುನಾಯಿಸಲ್ಪಟ್ಟರು. ತರುವಾಯ ಪ್ರೆಸಿಡೆಂಟರು ೧೯೨೬-೨೭ನೇ ಆಡಳಿತೆಯ ರಿಪೋರ್ಟನ್ನು ಮುಂದಕ್ಕೆ ಇಟ್ಟರು. ಸ್ವಲ್ಪ ಚರ್ಚೆಯಾಗಿ ರಿಪೋರ್ಟು ಅಂಗೀಕರಿಸಲ್ಪ ಟ್ಟಿತು. ಡಿಸ್ಟ್ರಿಕ್ಟ್ ಬೋರ್ಡಿನ ಮುಖಾಂತರ ರಿಪೋರ್ಟನ್ನು ಸರಕಾರದ ವರಿಗೆ ಕಳುಹಿಸಿಕೊಡಬೇಕೆಂದು ನಿರ್ಣಯವಾಯಿತು.

ಮಂಗಳೂರಿನಲ್ಲಿ ಸ್ಥಾಪಿತವಾದ ದಕ್ಷಿಣ ಕನ್ನಡಾ ಭೂಮಾಲಿಕರ ಸಂಘದ ಕಾರ್ಯದರ್ಶಿಯವರು ಮೂಲ್ಕಿಯಲ್ಲಿ ಒಂದು ಸಭೆ ಜರಗಿಸಿ, ಸಂಘದವರ ಉದ್ದೇಶವನ್ನು ಜನರಿಗೆ ತಿಳಿಯಪಡಿಸಿ, ರಾ॥ ಬೋಳ ಮಾಧವ ರಾಯರ ಅಧ್ಯಕ್ಷತೆಯಲ್ಲಿ, ಈ ಸಂಘಕ್ಕೆ ಮೂಲ್ಕಿಯಲ್ಲಿ ಒಂದು ಶಾಖೆ ಯನ್ನು ತೆರೆದರು.

ಮಂಗಳೂರು ಮ್ಯುನಿಸಿಪಾಲಿಟಿಯವರಿಂದ ಬೋಳೂರಿನ ಬೊಕ್ಕ ಪಟ್ಣದಲ್ಲಿ ಕಳೆದ ಆಗಸ್ಟ ೧ನೇ ತಾರೀಕಿನ ದಿನ ಸ್ಥಾಪಿಸಲ್ಪಟ್ಟ ಆಯು

ವೇದೀಯ ವೈದ್ಯಾಲಯದಲ್ಲಿ ಕಳೆದ ಮಾರ್ಚ ಅಖೈರಿನ ವರೆಗಿನ ಎಂಟು ತಿಂಗಳುಗಳ ಅವಧಿಯಲ್ಲಿ ಒಟ್ಟು ೬,೩೫೦ ರೋಗಿಗಳು ಗುಣಪಡಿಸಲ್ಪ ಟ್ಟರು. ರೋಗಿಗಳ ದಿನವಹಿ ಸರಾಸರಿ ಹಾಜರಿಯು ೧೫೫.೭ ಆಗಿತ್ತು. ಇದು ಯೋಗ್ಯ ಫಲಿತಾಂಶವೇ ಆಗಿದ್ದು, ಇಲ್ಲಿ ವೈದ್ಯರಾಗಿದ್ದ ಆಯು ರ್ವೇದ ವಿಶಾರದ ಮತ್ತು ಭಿಷಗ್ರತ್ನ ಡಾಕ್ಟರ್ ಐ. ಕೆ. ಪದ್ಮನಾಭ ಶರ್ಮರ, ಪ್ರಯತ್ನವೇ ಇದರ ಕಾರಣವೆನ್ನಲು ಸಂತೋಷಪಡುತ್ತೇವೆ.

ಇದೇ ಬರುವ ೩೦ನೇ ಆದಿತ್ಯವಾರ ಬೆಳಿಗ್ಗೆ ೭॥ ಘಂಟೆಗೆ ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀ ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಇಲ್ಲಿಯ ಗಣಪತಿ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸೋಣಾದ ಸೋಡ್ತಿಯು ಈ ದಿವಸ ತೆಗಿಯಲಾಯಿತು. ಸೋಡ್ತಿಯ ತೆಗಿಯುವಿಕೆಯು ಘಂಟೆ ೧೧ರ ವರೆಗೆ ಮುಗಿಯಿತು. ಸೋಡ್ತಿ ಫಂಡಿನ ಒಂದು ಲಕ್ಷದಲ್ಲಿ, ರೂಪಾಯಿ ೯೧೦೮ ವಸೂಲಾಗಿ ಅದ ರಲ್ಲಿ ರೂ. ೩೫೦೦ನ್ನು ೨೫೨ ಇನಾಮುಗಳಾಗಿ ಹಂಚೋಣಾಗಿದೆ:- ನಂಬ್ರ B. ೫೩೬ನೇ ಟಿಕೇಟಿಗೆ ರೂಪಾಯಿ ೧೦೦೦ದ I ಕ್ಲಾಸ್ ಸಿಕ್ಕಿದೆಯಾಗಿಯೂ ನಂಬ್ರ C. ೩೬೭೭ನೇ ಟಿಕೇಟಿಗೆ ರೂಪಾಯಿ ೫೦೦ ಸಿಕ್ಕಿದೆಯಾಗಿಯೂ ತಿಳಿದುಬರುತ್ತದೆ. ಕ್ಲಾಸ್‌ಹಂಚಿ ಉಳಿದ ಹಣದಲ್ಲಿ ರೂಪಾಯಿ ೧೦೦೦ ಹೈಸ್ಕೂಲಿಗೆ ಕೊಡೋಣಾಯಿತು. ಮತ್ತು ಮಿಗ್ಗೆ ಹಣವು ಸೋಡ್ತಿಯ ಖರ್ಚಿಗೂ 'ಸಾರಸ್ವತ ಎಜ್ಯುಕೇಶನಲ್ ಫಂಡಿಗೂ' ಉಪಯೋಗಿಸುವ ರಾಗಿಯೂ ತಿಳಿದುಬರುತ್ತದೆ. I ಕ್ಲಾಸ್ ಪುತ್ತೂರಲ್ಲಿರುವ ಸಾಹುಕಾರ ಪಿ. ಕೋಸ್ತರಿಗೆ ಸಿಕ್ಕಿದೆಯಾಗಿಯೂ, ಎರಡನೇ ಇನಾಮು ಮುಂಬಾಯಿಯ ವಿಕ್ಟರ್ ಜ್ಯುಬಿಲಿ ಇನ್ಸ್ಟಿಟ್ಯುಟಿನಲ್ಲಿ ಕಲಿಯುವ ಒಬ್ಬ ವಿದ್ಯಾರ್ಥಿಗೂ III ಕ್ಲಾಸ್ ರೂಪಾಯಿ ೨೫೦ ಮುಲ್ಕಿಯ ಒಬ್ಬ ಹುಡುಗಿಗೂ ಸಿಕ್ಕಿದೆಯಾಗಿ ವರ್ತಮಾನ.

ಅಜೆಕಾರು— ಇಲ್ಲಿಯ ಸ್ಥಳೀಕ ಬೋರ್ಡು ಶಾಲೆಯು ಮಳೆಗಾಲದ ರಜೆ (Monsoon vacation) ಸಮ್ಮಂಧ ತಾರೀಕು ೧೫-೬-೩೦ರಿಂದ ಮುಚ್ಚಲ್ಪಟ್ಟಿದೆ. ತಾ. ೧೫-೭-೩೦ನೇ ಬುಧವಾರ ಪುನಃ ಪ್ರಾರಂಭವಾಗುವುದು. ಅಷ್ಟರೊಳಗೆ ಅಧ್ಯಾಪಕರ ವರ್ಗಾವರ್ಗಿಯು ಹೇಗಾಗುವುದೋ ನೋಡಲಿದೆ! ಅಂತೂ ಮಾನ್ಯ ಕಾರ್ಕಳ ತಾಲೂಕು ಬೋರ್ಡು ಪ್ರೆಸಿಡೆಂಟರು ಇದನ್ನು ಚೆನ್ನಾಗಿ ಪರ್ಯಾಲೋಚಿಸಿ ಮಾಡುವ ರೆಂದು ಹಾರೈಸೋಣಾಗುತ್ತದ.

ಇಲ್ಲಿಂದ ಮೂರು ಮೈಲು ದೂರವಿರುವ ಮುನಿಯಾಲಿನಲ್ಲಿ ಒಂದು Experimental Post Officeನ್ನು ಸದ್ಯದಲ್ಲೇ ತೆರೆಯುತ್ತಾರಾಗಿ ವದಂತಿ ಇದೆ. ರೋಯಲ ಮೈಲ್ ಕಂಟ್ರಾಕ್ಟರ್‌ರು ಅಜೆಕಾರು ಮತ್ತು ಮುನಿಯಾಲಿನ ಮೈಲ್ ಪಡೆದರೆ, ಆಫೀಸಿನ ಉತ್ಪತ್ತಿಯು ಹೆಚ್ಚು ವುದರಲ್ಲಿ ಏನು ಸಂಶಯ?

ಈಗ ಇಲ್ಲಿ ಬಿಸಿಲೂ ಮಳೆಯೂ ಒಂದನ್ನೊಂದನ್ನು ಹಿಂಬಾಲಿಸು ತ್ತದೆ. ಬೇಸಾಯವಂತೂ ಇನ್ನೂ ಕೆಲವು ಕಡೆಗಳಲ್ಲಿ ಪ್ರಾರಂಭವಾಗಲೇ ಇಲ್ಲ. ಆದರೂ ನಿಷ್ಪ್ರಯೋಜನ. ಬಡ ಒಕ್ಕಲಿಗರ ಗೋಳು ಹೇಳ ತೀರದು. ಇದೀಗ ವಿಭವದ ವೈಭವಲ್ಲವೇ?

ಕಾಪು— ಇಲ್ಲಿ ಕಳೆದ ಮಂಗಳವಾರ ಮತ್ತು ಬುಧವಾರ ಇಲ್ಲಿಯ ಶ್ರೀ ಹಳೇ ಮಾರಿಗುಡಿಯಲ್ಲಿ ಹೆಜಮಾಡಿ ಮುದಲಗಿರಿ ವಿಟ್ಟಪ್ಪ ಶ್ಯಾನುಭಾಗರು ಶ್ರೀದೇವಿ ಪೂಜೆಯನ್ನು ಬಹಳ ವಿಜೃಂಭಣೆಯಿಂದ ನಡೆ ಯಿಸಿದರು. ಈ ಪೂಜೆಗೆ ಸುಮಾರು ರೂ. ೨೫೦೦/- ಖರ್ಚು ತಗಲಿರು ತ್ತದೆ. ಮಂಗಳವಾರ ದಿವಸ ಹೆಜಮಾಡಿಯಿಂದ ವಿಟ್ಟಪ್ಪ ಶ್ಯಾನು ಭಾಗರು ಮತ್ತು ೧೦೦೦ಕ್ಕೆ ಮಿಕ್ಕಿ ಜನರು ಮೆರವಣಿಗೆಯಿಂದ ಕಾಪಿಗೆ ಬಂದು ಗಂಟೆ ೧೧ಕ್ಕೆ ಮಾರಿಗುಡಿಗೆ ತಲ್ಪಿದರು. ಪೂಜೆ ಮಾಡಿಸಿದವರು ಶ್ರೀದೇವಿಗೆ ೧೦೦ ಪವನುಗಳ ಒಂದು ಸರವನ್ನೂ, ೧೦೦ ತೊಲೆ ಬೆಳ್ಳಿ ಯನ್ನೂ ಸುಮಾರು ರೂ. ೨೦೦ ಕ್ರಯಬಾಳುವ ಒಂದು ಬನಾರಸ್ ಸೀರೆಯನ್ನೂ ಒಪ್ಪಿಸಿದರು.

ಪಾಣೆಮಂಗಳೂರು:— ಇಲ್ಲಿಯ ಬೋರ್ಡು ಹುಡುಗಿ ಯರ ಶಾಲೆಗೆ ಟ್ರೈನ್ಡ ಆದ ಒಬ್ಬ ಗೌಡಸಾರಸ್ವತ ಉಪಾಧ್ಯಾಯಿನಿಯನ್ನು ಸಹಾಯಕ ಉಪಾಧ್ಯಾಯಿನಿಯರನ್ನು ಕಳುಹಿಸಿರುವರು. ಇನ್ನೊಬ್ಬ ಉಪಾಧ್ಯಾಯಿನಿಯನ್ನು ಬೇಗನೇ ಕಳುಹಿಸಿದರೆ ಒಳ್ಳೆದಿತ್ತು.

ಸುರತಕಲ್— ಇದೇ ಕಳೆದ ತಾ. ೧೬-೬-೩೦ನೇ ದಿನ ಇಡ್ಯ ವಿದ್ಯಾದಾಯಿನೀ ಶಾಲೆಯಲ್ಲಿ ಸುರತ್‌ಕಲ್ ಸೆಂಟರಿನ ಉಪಾಧ್ಯಾ ಯರ ಸಂಘವು ಸಭೆಸೇರಿ, ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಪೂರ್ಣ ಪರಿಶ್ರಮದಿಂದ ಕಾರ್ಯನಿರ್ವಹಿಸುತ್ತಿದ್ದ ದಿವಂಗತ ಮ॥ ರಾ॥ ಯಂ. ಬಾಬು ಮಾಸ್ತರರ ಅಕಾಲ ಮರಣಕ್ಕೆ ವಿಷಾದವಿಟ್ಟು ಅವರ ಆತ್ಮಕ್ಕೂ, ಪತ್ನೀಪುತ್ರರಿಗೂ, ಸರ್ವಶಾಂತಿಯನ್ನು ಅನುಗ್ರಹಿಸುವಂತೆ ಶ್ರೀ ದೇವರನ್ನು ಪ್ರಾರ್ಥಿಸಿ, ಅವರ ಸ್ಮಾರಕ ನಿಧಿಗೆ ಸಂಘದ ಕಡೆಯಿಂದ ರೂ. ೧೦ನ್ನು ಕೊಡುವುದಾಗಿ ನಿರ್ಣಯಿಸಿರುತ್ತದೆ.

ಬಾರ್ಕೂರಿನ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಟೆಂಪಲ್ ವ್ಯೂ, ೨೧-೬-೩೦.

ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ಕ್ಷಣಸ್ಥಾಯಿ (acting) ಮುಖ್ಯ ಅಧ್ಯಾಪಕರಾಗಿದ್ದ ಸೆಟ್ಟಿರವರಿಗೆ ಸ್ಥಾನಾಂತರ ವಾಯಿತು. ಈಗ ತನಗೆ ಪ್ರಮುಖ ಅಧ್ಯಾಪಕತನವು ಬೇಡವೇ ಬೇಡ ವೆಂದು ಬರೆದುಕೊಟ್ಟಿರುವ ಶ್ರೀ ಗೋವಿಂದ ನಾಯ್ಕರವರೇ ಮುಖ್ಯ ಅಧ್ಯಾಪಕರಾಗಬೇಕೆಂದು ಉಡ್ಪಿ ತಾಲೂಕು ಬೋರ್ಡಿನ ಅಧ್ಯಕ್ಷವರ್ಯರಾದ ಶ್ರೀ ಯಚ್. ಆರ್. ಸೆಟ್ಟಿರವರ ಆಜ್ಞೆ. ಆಜ್ಞೆಗನುಸಾರವಾಗಿ ಶ್ರೀ ನಾಯ್ಕರವರು ಕಾರ್ಯಭಾರವನ್ನು ವಹಿಸಿಕೊಳ್ಳಲು ಸಿದ್ಧರಾಗಿರುವರು. ಕಿಂತು ಸ್ಥಾನಾಂತರಿತರಾದ ಅಧ್ಯಾಪಕ ಸೆಟ್ಟಿರವರು ಆಜ್ಞೆಯು ಹೊರ ಟಂದಿನಿಂದ ಅಗೋಚರರಾಗಿರುವರಂತೆ. ಶಾಲೆಯ ಚಾರ್ಜನ್ನು ಇನ್ನೂ ವಹಿಸಿಕೊಡಲಿಲ್ಲವೆಂಬದಾಗಿ ಒಂದು ವಾರ್ತೆಯು ಬಂದಿರುವುದು. ಇದು ನಿಜವೆಂದಾದರೆ ಇವರ ಈ ವರ್ತನಕ್ಕೆ ಏನೆಂದು ಹೆಸರಿಡಬಹುದು? ಆಜ್ಞಾ ಉಲ್ಲಂಘನೆಯೇ?

ಉಡ್ಪಿ ತಾಲೂಕಿನ 'ಅಧ್ಯಾಪಕ ಸಂಘ'ವೆಂಬ ಹೆಸರಿನಿಂದ ಹತ್ತಿ ಪ್ಪತ್ತು ಮಂದಿ ಉಪಾಧ್ಯಾಯರು ಸೇರಿ ಇದುವಿನ ದಿನಗಳಲ್ಲಿ ಉಡ್ಪಿಯಲ್ಲಿ ಕೆಲವು ವಿಚಿತ್ರವಾದ ನಿರ್ಣಯಗಳನ್ನು ಮಾಡುತ್ತಿರುವರು. ಇವರು ಆರಿಗಾಗಿ ಈ ನಿರ್ಣಯವನ್ನು ಮಾಡುತ್ತಿರುವರೆಂಬುದು ನಮಗೆ ಇನ್ನೂ ತಿಳಿಯಲಿಲ್ಲ. ಇವರಲ್ಲಿಯೂ "ಸಬ್ಜೆಕ್ಟ್-ಕಮಿಟಿ" ಎಂಬ ಘನವಾದ ನಾಮದ ಒಂಭತ್ತು ಮಂದಿಗಳ ಒಂದು ಕೂಟವಿದೆಯಂತೆ. ಈ ನವ ವ್ಯಕ್ತಿಗಳ ಹೆಸರನ್ನು ಇಲ್ಲಿ ಉಲ್ಲೇಖಿಸುವ ಇಚ್ಛೆಯು ನಮಗಿಲ್ಲ! ಇಷ್ಟೇ ಅಲ್ಲ. ಇನ್ನೂ ಮೂರು ಮಂದಿಗಳೊಂದಾಗಿ ತಾಲೂಕು ಬೋರ್ಡಿನವರ ಅಧ್ಯಕ್ಷರೊಡನೆ ನೇರಾಗಿ ತಮ್ಮ ವರ್ಗಾವರ್ಗಿಗಳ ವಿಷಯ ಚರ್ಚಿಸುವ ಬಗ್ಗೆ "ಡೆಪ್ಯುಟೇಶನ್" ಎಂಬ ಮಹತ್ವಾದ ನಾಮವನ್ನಿಟ್ಟು ಒಂದು ಪಂಗಡವನ್ನು ಕಲ್ಪಿಸಿಕೊಂಡಿರುವರಂತೆ! ಇದರ ಅರ್ಥವೇನು? ನೌಕರರ ವರ್ಗಾವರ್ಗಿಗಳ ವಿಷಯ ಯಜಮಾನರೊಡನೆ ನೌಕರರೇ ಹೋಗಿ ಚರ್ಚಿ ಸುವದಂತೆ! ಇದಕ್ಕೀಗ 'ಕೊಮ್ಯುನಿಸ್ಟ್ ಸ್ಪಿರಿಟ್' ಅಥವಾ "ಸಾಮ್ಯವಾದ" ವೆನ್ನುವರು. ಈ ಉಡುಪಿ ತಾಲೂಕಿನಲ್ಲಿ ಸಾಧಾರಣ ೫೦೦ ಅಧ್ಯಾಪಕ ರಿರುವಾಗ ಈ ಬರೇ ಇಪ್ಪತ್ತು ಮುವ್ವತ್ತು ಮಂದಿಗಳೊಂದಾಗಿ ಮಾಡಿದ ನಿರ್ಣಯಗಳಿಗೆ ಗಮನಕೊಡುವವರಾರೋ ನಾವರಿಯೆವು. "ಸಬ್ಜೆಕ್ಟ್ ಕಮಿಟಿ" ಕೂಟದ ಈ ನವ ವ್ಯಕ್ತಿಗಳು ಅರಿಗೆ ಪ್ರತಿನಿಧಿಗಳಾಗಿರುವ ರೆಂಬುದೂ ನಮಗೆ ತಿಳಿದಿಲ್ಲ. "ಡೆಪ್ಯುಟೇಶನ್"ಗೆ ಸೇರಿದ ಮೂರು ಮಂದಿ ಅಧ್ಯಾಪಕರೂ ನಮಗೆ ಪರಿಚಿತರಾಗಿರುವುದರಿಂದ ಇವರ ವಿಷಯ ಹೆಚ್ಚೇನೂ ಬರೆಯಲು ನಾವು ಇಚ್ಛಿಸುವುದಿಲ್ಲ. ಆದರೆ ಈ 'ಡೆಪ್ಯುಟೇಶ ನ'ನ್ನು ಅರಿಗೋಸ್ಕರ ಇವರು ಕೊಂಡುಹೋಗುವರೆಂಬುದನ್ನು ಮಾತ್ರ ನಮಗೆ ತಿಳಿಯಬೇಕಾಗಿದೆ. ನಿರಪರಾಧಿಗಳಾದ ಅಧ್ಯಾಪಕರನ್ನು ನಿಮ್ಮ ಈ ಗಡಿಬಿಡಿಯಲ್ಲಿ ಎಷ್ಟುಮಾತ್ರಕ್ಕೂ ಬಲಿಕೊಡಬಾರದಾಗಿ ಇಲ್ಲೇ ನಮ್ಮ ದೊಂದು ಸಣ್ಣ ಸೂಚನೆಯಿರಲಿ.

ಇಲ್ಲಿಯ 'ವಿದ್ಯಾರ್ಥಿಗಳ ಸಾಹಿತ್ಯಸಂಘ' (Student Literary Society)ದ 'ಪ್ರಮುಖ ಕಾರ್ಯದರ್ಶಿ'ಯ ಮತ್ತೂ 'ಉಪ ಕಾರ್ಯದರ್ಶಿ'ಯ ನಿರ್ವಾಚನವು ರಾ॥ ಜೆ. ಎವ್. ಸಿಲ್ವರವರ ಅಧ್ಯಕ್ಷತೆ ಯಲ್ಲಿ ಮುಗಿದುಹೋಯಿತು. ಪ್ರಮುಖ ಕಾರ್ಯದರ್ಶಿಯಾಗಿ ಎಂಟನೇ ತರಗತಿಯ ವಿದ್ಯಾರ್ಥಿಯಾದ ಅನಂತಕೃಷ್ಣಪೈಯು ಚುನಾವಣೆ ಹೊಂದಿ ದನು. ಉಪಕಾರ್ಯದರ್ಶಿಯ ಸ್ಥಾನಕ್ಕೆ ಅದೇ ತರಗತಿಯ ಫ್ರೆಡ್ರಿಕ್ ಸಿಲ್ವ ಎಂಬ ವಿದ್ಯಾರ್ಥಿಯು ಆರಿಸಲ್ಪಟ್ಟನು. ಈ ಕಾರ್ಯಗಳಾದೊಡ ನೆಯೇ ಬರುವ 'ಸಾಹಿತ್ಯಕೂಟ'ವು ಜುಲಾಯಿ ತಿಂಗಳ ೫ನೇ ತಾರೀಕಿ ನಲ್ಲಿ ಕೂಡಬೇಕೆಂಬುದಾಗಿಯೂ ಅಂದಿನ ದಿನದ ಸಭೆಯಲ್ಲಿ ವಾಚನದ ಬಗ್ಗೆ ರಾಮದಾಸ ಪೈ ಮತ್ತು ಅನಂತಕೃಷ್ಣಪೈ ಇವರಿಬ್ಬರೂ ಒಂದೊಂದು ಪ್ರಬಂಧವನ್ನು ಉಲ್ಲೇಖಿಸಿ ತರಬೇಕೆಂಬದಾಗಿಯೂ ನಿಶ್ಚಿತವಾದ ಬಳಿಕ ರಾಜಗೀತದೊಡನೆ ಸಭೆಯು ಚದರಿತು.

ಉಡುಪಿ ತಾಲೂಕು ಬೋರ್ಡಿನ ಮಾಸಿಕ ಸಭೆಯು ಇದೇ ತಿಂಗಳ ತಾ. ೩೦ರಲ್ಲಿ ಕೋಟದಲ್ಲಿ ಜರುಗುವುದಂತೆ. ಹಲವು ಗಹನವಾದ ವಿಷಯಗಳು ಅಂದಿನ ಸಭೆಯಲ್ಲಿ ಚರ್ಚಿಸಲ್ಪಡುವುವೆಂಬುದಾಗಿ ತಿಳಿದು ಬಂದಿದೆ. ನೋಡಬೇಕು.

ವಿವಿಧ ಸಮಾಚಾರಗಳು.

ಬ್ರಿಟಿಷ ವಸ್ತ್ರ ಬಹಿಷ್ಕಾರ.

ಕಳೆದ ೧೫ನೇ ತಾರೀಕಿನ ದಿನ ಬ್ರಿಟಿಷ ವಸ್ತ್ರ ಬಹಿಷ್ಕಾರದ ಸಬ್ ಕಮಿಟಿಯವರ ಸಭೆಯೊಂದು ಮದರಾಸಿನಲ್ಲಿ ಕೂಡಿ, ವಸ್ತ್ರ ಬಹಿಷ್ಕಾರ ವನ್ನು ಸುಲಭದಲ್ಲಿ ಪೂರಯಿಸಲಿಕ್ಕಾಗುವಂತೆ ಈ ಠರಾವುಗಳು ಮಂಜೂ ರಾದವು.

(೧) ಹಿಂದೂಸ್ಥಾನದಲ್ಲಿ ತಯಾರಾಗುವ ಎಲ್ಲಾ ತರದ ವಸ್ತ್ರಗಳ ಮಾದರಿ ತುಂಡುಗಳನ್ನು ತರಿಸಿ ಪರೀಕ್ಷಿಸಿ ನೋಡಬೇಕು. (೨) ರಾ॥ ರತ್ನ ಸಭಾಪತಿ ಮುದಲಿಯಾರರು ಸ್ವದೇಶಿ ವಸ್ತುಗಳ ಒಂದು ಡೈರೆಕ್ಟ ರಿಯನ್ನು ತಯಾರಿಸುವಂತೆ ಅವರನ್ನು ಪ್ರಾರ್ಥಿಸಿಕೊಳ್ಳಬೇಕಲ್ಲದೆ ಅವರ ಪ್ರಯಾಣದ ಖರ್ಚನ್ನು ಸಭೆಯಿಂದ ಕೊಡಿಸಬೇಕು. (೩) ರಾಷ್ಟ್ರೀಯ ಪತ್ರಿಕೆಗಳು ಸ್ವದೇಶಿ ವಸ್ತುಗಳ ಪ್ರಕಟಣೆಯನ್ನು ಧರ್ಮಾರ್ಥವಾಗಿ ಪ್ರಕ ಟಿಸಬೇಕು. ಇದರಿಂದ ಸ್ವದೇಶಿ ವಸ್ತುಗಳ ಪರಿಚಯವು ಸರ್ವರಿಗೂ ಆಗಿ, ಅವುಗಳ ವಿಕ್ರಿತವು ಬೆಳೆಯುವದು. (೪) ಸಭೆಯವರ ಆಶ್ರಯ ದಲ್ಲಿ ಮದರಾಸಿನಲ್ಲೊಂದು ಸ್ವದೇಶಿ ಸ್ಟೋರ್ಸ್ ಎಂಬ ಅಂಗಡಿಯನ್ನು ತೆರೆದು ಅಲ್ಲಿ ಎಲ್ಲಾ ಸ್ವದೇಶಿ ವಸ್ತು ಮತ್ತು ವಸ್ತ್ರಗಳನ್ನು ಸಂಗ್ರಹಿಸಿ ಕಡಿಮೆ ಬೆಲೆಗೆ ಮಾರುವದು. ಇವೇ ಮೊದಲನೇ ಠರಾವಿಗೆ ಸರಿಯಾಗಿ ಹಲವು ಹಿಂದೂಸ್ಥಾನದ ಸಾಹುಕಾರರು ಸ್ವದೇಶಿ ವಸ್ತ್ರಗಳ ಮಾದರಿ ತುಂಡು ಗಳನ್ನೂ, ಕ್ರಯದ ಪಟ್ಟಿಯನ್ನೂ ಸಭೆಯವರಿಗೆ ಕಳುಹಿರುವರು. ನಮ್ಮ ದೇಶದಲ್ಲಿಯೇ ಉಂಟಾಗಿ ಪರದೇಶೀ ಮಾಲುಗಳಷ್ಟೇ ಯೋಗ್ಯತೆಯುಳ್ಳ ವಸ್ತುಗಳ ಪಟ್ಟಿಯೊಂದನ್ನು ಕಮಿಟಿಯವರು ತಯಾರಿಸುವರು. ಬರುವ ಪ್ರಾಂತಿಕ ಪರಿಷತ್ತಿನ ಸಮಯ ಸ್ವದೇಶಿ ವಸ್ತುಗಳ ಒಂದು ಪ್ರದರ್ಶನ ವನ್ನು ಜರಗಿಸುವರು. ನಿತ್ಯದಲ್ಲಿ ಒಂದು ಸಣ್ಣ ವ್ಯಾಪಾರದ ಅಂಗಡಿ ಯನ್ನು ತೆರೆಯುವರು. ಇದೇ ರೀತಿಯನ್ನು ಇತರ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಅವಲಂಬಿಸಿದರೆ, ಮೇಲಿನ ಠರಾವುಗಳನ್ನು ಮಾನಿಸಿದರೆ ಬ್ರಿಟಿಷ ವಸ್ತ್ರ ಬಹಿಷ್ಕಾರವು ಸುಲಭ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲ.

ಅಫಘಾನಿಸ್ಥಾನದ ಅಭಿವೃದ್ಧಿ.

ಅಫಘಾನ ಅಮೀರ ದಂಪತಿಗಳು ಯುರೋಪು ಸಂಚಾರವನ್ನು ಮುಗಿಸಿ ಪುನಃ ರಾಜಧಾನಿಯನ್ನು ಸೇರಿದೊಡನೆ ಅಲ್ಲಿ ಬಹಳ ಸುಧಾರಣೆ ಯಾಗಲಿದೆಯಂತೆ. ವಿದ್ಯಾಭ್ಯಾಸವು ಈಗಲೇ ಕಡ್ಡಾಯವಾಗಿರುವದು. ಇನ್ನು ಪ್ರಥಮ ತರಗತಿಯ ಈಗಿನ ರೀತಿಯ, ವಿಶ್ವವಿದ್ಯಾಲಯವೊಂದು ತೆರೆಯಲ್ಪಡುವದು. ಮೋಟಾರುಗಳಿಗೆ ಈಗ ಕಡಿಮೆಯಿಲ್ಲ. ಇನ್ನೂ ಹೆಚ್ಚುವವು ಟೆಲಿಫೋನ್, ವಾಯರ್‌ಲೆಸ್, ಇವುಗಳೂ ಬೆಳೆಯುವವು. ಇದುವರೆಗೆ ಕರೆನ್ಸಿ ನೋಟುಗಳು ಅಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರದೆ ನಾಣ್ಯ ಗಳೇ ಚಲಾವಣೆಯಲ್ಲಿದ್ದವು. ಅಮೀರರು ಹಿಂತಿರುಗಿದೊಡನೆ ನೋಟು ಗಳ ಪ್ರಚಾರವು ಪ್ರಾರಂಭವಾಗುವದು. ಕ್ರಮವು ಅಲ್ಲಿ ಹಿಂದೂಸ್ಥಾನ ದಂತೆಯೇ ಇರುತ್ತದೆ. ಬೇಕೆಂದು ಕೆಲವರು, ಬೇಡವೆಂದು ಕೆಲವರು. ವಿದ್ಯಾವತಿಯರಾದ ಮುಸಲ್ಮಾನರ ಹೆಂಗಸರು ಕೆಲವು ಸಂದರ್ಭಗಳಲ್ಲಿ ಘೋಷೆಯನ್ನು ಉಪಯೋಗಿಸುವದೇ ಇಲ್ಲ. ಉತ್ತಮ ತರಗತಿಯವ ರಲ್ಲಿಯೂ ಇದೇ ರೀತಿ ಘೋಷಾಪದ್ಧತಿಯು ಹಿಂದಕ್ಕೆ ಸರಿಯುತ್ತಾ ಬರು ತ್ತಿದೆ. ಒಟ್ಟಾರೆ ಹೇಳುವದಾದರೆ ಹಿಂದೂಸ್ಥಾನದಲ್ಲಿರುವಷ್ಟು ಘೋಷಾ ಪ್ರಚಾರವು ಅಫಘಾನಿಸ್ಥಾನದಲ್ಲಿರುವುದಿಲ್ಲ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಚಿಕ್ಕಮಗಳೂರು. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) [illegible] (M. S. M Railway) [illegible] 12 [illegible]

ಮೋಟರ್ ಬಸ್ಸುಗಳ ಪ್ರಯಾಣದ ಪ್ರಾಂಸಿಗೆ ಬಿಡುವ [illegible]

(2) [illegible]

(3) [illegible]

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆದರೆ ತಿಳಿಸಲ್ಪಡುವುದು.

ಬಿ. ಎನ್. ಹನುಮಂತಪ್ಪ, ಪ್ರೊಪ್ರೈಟರ್ [illegible]

ಪ್ರೊಪ್ರೈಟರ್.

ಸೂಟುಮಲ್ಲಿಯೂ ಕೂಡ ಬಿ. ಬಿ. ಸಿ. ಕಂಪೆನಿಯವರ

ಟಿಕ್ಕಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡಾ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಾರ್ಕಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಹನ್ನೆರಡು ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಚಿತ್ರಕಾಮಶಾಸ್ತ್ರದ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರಜ್ಞಾನ ವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಬಿದ್ದು [illegible] ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಪಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ತ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು [illegible] ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೆ ಸದಾಕಾಲದಲ್ಲಿಯೂ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ನಾ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ. ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ತೀರಾಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ-ಗ್ರಂಥವು

ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯೂ ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಬಾರ್ಡೋಲಿಯ ಸಮಾಚಾರ.

ಬಾರ್ಡೋಲಿಯ ಸತ್ಯಾಗ್ರಹದ ಸಂಬಂಧದಿಂದ ಮುಂಬಾಯಿ ಕೌನ್ಸಿಲಿನಲ್ಲಿ ಪಾಲಿಟಿಕ್ಸ್ ಮೆಂಬರರುಗಳಿಗೆ ರಾಜೀನಾಮೆಯನ್ನು ಕೊಟ್ಟವರೇ ಪುನಃ ಅರ್ಜಿಗಳನ್ನು ಹಾಕಿರುವರೆಂದು ವರ್ತಮಾನ. ಅವರ ಚುನಾವಣೆಯು ನಿಸ್ಸಂಶಯವಾಗಿಯೂ ನಡೆಯುವದು. ರಾ। ವಲ್ಲಭ್ಭಾಯಿಪಟೇಲರು ಮುಂಬಾಯಿಗೆ ಬಂದಿರುವರು. ಸನ್ನದಲ್ಲಿಯೇ ನ್ಯಾಯ ರೀತಿಯಲ್ಲಿ ರಾಜಿಯಾಗುವದೆಂಬದು ಖಂಡಿತವು. ಆದರೆ ಶರ್ತುಗಳೇನು ಎಂಬ ಸಂಗತಿ ಬಹು ರಹಸ್ಯವಾಗಿ ಇಡಲ್ಪಟ್ಟಿರುವದು. ಇನ್ನೂ ಐದು ಜನ ಪಟೇಲರು ರಾಜಿನಾಮೆಯನ್ನು ಕೊಟ್ಟಿರುವರು. ರಾಜಿನಾಮೆಯನ್ನು ಕೊಟ್ಟ ಪಟೇಲರ ಸಂಖ್ಯೆ ಇದು ವರೆಗೆ ೬೪. ಬಾರ್ಡೋಲಿಯ ಬಡ ರೈತರಿಗೆ ಹಿತವಾಗುವಂತಹ ಯಾವ ಶರ್ತುಗಳ ಮೇಲೆಯಾದರೂ ಸರಕಾರದವರೊಡನೆ ರಾಜಿ ಮಾಡುವದು ಉತ್ತಮವೂ ತಮಗೆ ತೃಪ್ತಿಕರವೂ ಆಗಿರುವದೆಂದು ರಾ। ಪಟೇಲರೂ ಮಹಾತ್ಮಾಜಿಯವರೂ ಅನ್ನುತ್ತಿರುವರು. ಬಾರ್ಡೋಲಿ ತಾಲೂಕಿನ ಜನರೊಳಗೂ ಸರಕಾರದವರೊಳಗೂ ಉಂಟಾಗಿರುವ ಈ ಕಠಿಣ ದ್ವಂದವನ್ನು ಕೊನೆಗಾಣುವ ದಿವಸವನ್ನು ಎಂದು ನೋಡಬಹುದು ಎಂದು ಮುಂಬಾಯಿಯ ಗವರ್ನರರು ಬಹಳ ಉತ್ಸುಕರಾಗಿರುವರಂತೆ. ಅವರು ಮರ್ಚೆಂಟ್ಸ್ ಚೆಂಬರಿನ ಪ್ರತಿನಿಧಿಗಳಿಗೆ ಭೇಟಿಕೊಟ್ಟಾಗ ಇದನ್ನು ತಿಳಿಸಿದರು. ಆದಷ್ಟು ಬೇಗನೆ ಸಮಾಧಾನವಾಗಿ ಶಾಂತಿಯು ನೆಲೆಗೊಳ್ಳುವಂತೆ ಧುರೀಣರು ಚಟುವಟಿಕೆಯಿಂದ ಕೆಲಸವನ್ನು ಮಾಡುತ್ತಿರುವರು. ಗವರ್ನರ ದೊರೆಗಳು ಪ್ರತಿನಿಧಿಗಳನ್ನು ಸಂತೋಷದಿಂದ ಎದುರುಗೊಂಡರು. ಸತ್ಯಾಗ್ರಹವು ನಿಂತು, ಆದಷ್ಟು ತ್ವರೆಯಲ್ಲಿಯೇ ಸರಕಾರದವರೂ ಬಾರ್ಡೋಲಿಯ ಜನರೂ ಒಳ್ಳೆಯ ಮನಸ್ಸಿನಿಂದ ಇರಬೇಕೆಂಬುವದನ್ನು ಗವರ್ನರ ದೊರೆಗಳು ಅತಿಯಾಗಿ ಬಯಸುತ್ತಿರುವರು.

ಬರ್ಡೋಲಿಯ ಸತ್ಯಾಗ್ರಹ.

ಬರ್ಡೋಲಿಯ ಸತ್ಯಾಗ್ರಹವು ನಿಂತು ಸರಕಾರದವರೊಡನೆ ಒಪ್ಪಂದವಾಗಲಾರದೆಂದು ಈಗ ತಾನೆ ತಿಳಿದುಬಂದಿರುತ್ತದೆ. ಇಂಡಿಯನ್ ಮರ್ಚೆಂಟ್ಸ್ ಚೆಂಬರಿನ ಪ್ರೆಸಿಡೆಂಟರಾದ ಮಿ. ಮೋದಿಯವರನ್ನು ಕಾಣಲಿಕ್ಕೆಂದು ಮಿ. ವಲ್ಲಭಭಾಯಿಪಟೇಲರವರು ಮುಂಬಾಯಿಗೆ ಹೋಗಿದ್ದರಷ್ಟೆ. ಆದರೆ ಒಡಂಬಡಿಕೆಯು ನಡೆಯಲಾರದೆಂದು ತಿಳಿದು ಅವರು ಪುನಃ ಬಾರ್ಡೋಲಿಗೆ ಹಿಂತಿರುಗಿರುವರು. ಮುಂಬಾಯಿಯ ಸಭೆಯಲ್ಲಿ ಸರಿಯಾಗಿ ನಡೆದುದೇನೆಂದು ವಿವರವಾಗಿ ತಿಳಿದಿಲ್ಲವಾದರೂ ಒಡಂಬಡಿಕೆಯ ಶರ್ತುಗಳಿಗೆ ಮಿ। ಪಟೇಲರು ಸಂತೋಷದಿಂದ ಒಪ್ಪಲಾರದೆ ಹೋದರು.

ಸರಕಾರದ ಶರ್ತುಗಳು ಈ ರೀತಿಯಾಗಿದ್ದುವಂತೆ (೧) ಮೊದಲಿನ ದರದಲ್ಲಿ ಕಂದಾಯವನ್ನು ಮೊದಲು ಕೊಟ್ಟುಬಿಡಬೇಕು. (೨) ಹೆಚ್ಚಿಸಿದ ಕಂದಾಯಕ್ಕೆ ಸರಿಯಾಗುವ ಹಣವನ್ನು ಮುಂಬಾಯಿಯ ಬೇಂಕರರ ಕೂಡ ಠೇವಣಾತಿಯಾಗಿಡಬೇಕು. (೩) ಇದರ ಕುರಿತು ವಿಚಾರಣೆ ನಡಿಸುವದಕ್ಕಾಗಿ ಸರಕಾರದವರು ಒಬ್ಬ ಆಫೀಸರರನ್ನು ನೇಮಿಸುವರು. (೪) ಈ ನಿರ್ಣಯಕ್ಕೆ ಎರಡು ಪಾರ್ಟಿಗಳವರೂ ವಿಧೇಯರಾಗಿರಬೇಕು. ಎಂಬವುಗಳೇ. ಆದರೆ ಮಿ. ಪಟೇಲರು ಮಾತ್ರ ಶರ್ತುಗಳಿಗೆ ಒಪ್ಪಲಿಲ್ಲ. ಸತ್ಯಾಗ್ರಹವನ್ನು ಮಾಡಿ ಧೈರ್ಯದಿಂದ ಸರಕಾರದವರಿಗೆ ಎದೆಯೊಡ್ಡುವದೇ ಮೇಲಲ್ಲದೆ, ಹೀಗೆ ನ್ಯಾಯಸಮ್ಮತವಲ್ಲದ ಶರ್ತುಗಳಿಗೆ ಒಪ್ಪುವದಲ್ಲವೆಂದು ಹೇಳಿದರು. ಆದ ಕಾರಣ ಒಪ್ಪಂದದ ಮಾತೇ ಅಳಿದು ಹೋಗಿ, ಸತ್ಯಾಗ್ರಹವು ಮುಂದರಿಯುವದಂತೆ.

ಕಲಕತ್ತದ ಜಾಡಮಾಲಿಗಳ ಮುಷ್ಕರ.

ಕಲಕತ್ತದ ಜಾಡಮಾಲಿಗಳು ಪುನಃ ಮುಷ್ಕರವನ್ನು ಪ್ರಾರಂಭಿಸಿರುವರು. ಮಾಜಿ ಮೆಯೊರರಾದ ರಾ। ಜೆ. ಎಮ್. ಸೇನಗುಪ್ತರು ಒಪ್ಪಿದ ಶರ್ತುಗಳಿಗೆ ಕೊರ್ಪೊರೇಶನಿನವರು ಒಪ್ಪದಿದ್ದುದೇ ಇದಕ್ಕೆ ಕಾರಣವಂತೆ. ಕಳೆದ ಮುಷ್ಕರವು ಮಾರ್ಚ ೪ನೇ ತಾರೀಕಿನ ದಿನ ಪ್ರಾರಂಭಿಸಿ ೯ನೇ ತಾರೀಕಿನ ದಿನ ರಾ। ಜೆ. ಎಮ್. ಸೇನಗುಪ್ತರು ಎಪ್ರಿಲ್ ತಿಂಗಳಿನಿಂದ ಪ್ರತಿಯೊಬ್ಬೊಬ್ಬನಿಗೆ ಎರಡೆರಡು ರೂಪಾಯಿ ಸಂಬಳವನ್ನು ಹೆಚ್ಚಿಗೆ ಕೊಡಲು ಕೊರ್ಪೊರೇಶನಿನವರಿಗೆ ತಿಳಿಸುವೆನೆಂದು ಹೇಳಿದ ಕಾರಣ ಮುಷ್ಕರವು ಕೊನೆಗಂಡಿತು. ಮಾರ್ಚ ತಿಂಗಳಲ್ಲಿ ಇದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿದರಾದರೂ ಇದುವರೆಗೆ ಕಮಿಟಿಯವರು ಮಾಡಿದ ವಿಶೇಷ ಕೆಲಸವೇನೂ ಎದುರಿಗೆ ಬಂದಿಲ್ಲ. ಶರ್ತುಗಳ ಮೇಲೆ ಅಂದಿನ ಮುಷ್ಕರವು ಶಾಂತಿ ಹೊಂದಿತಾದರೂ ಆ ಶರ್ತುಗಳು ಪೂರಯಿಸಲ್ಪಡಲಿಲ್ಲ. ಮುಷ್ಕರಹಾಕಿದವರ ಮೇಲೆ ಆದ ಮೊಕದ್ದಮೆಗಳೂ ಹಿಂತೆಗೆಯಲ್ಪಡಲಿಲ್ಲ. ಯೂನಿಯನಿನವರು ಕೊರ್ಪೊರೇಶನಿಗೆ ತಿರಿಗಿ ಪ್ರತಿನಿಧಿಗಳನ್ನು ಕಳುಹಿಸಿದರೂ ಪ್ರಯೋಜನವೇನೂ ಉಂಟಾಗಲಿಲ್ಲ. ಆದ ಕಾರಣ ಕಳೆದ ೨೫ನೇ ತಾರೀಕಿನಿಂದ ಪುನಃ ಮುಷ್ಕರವು ಪ್ರಾರಂಭವಾಗಿಯದೆ. ಕಲಕತ್ತದ ಉತ್ತರ ಭಾಗದಲ್ಲಿ ಮುಷ್ಕರವು ಪೂರ್ಣಸ್ಥಿತಿಯಲ್ಲಿದೆ. ಮಾರ್ಗಗಳು ಬಲು ಕೊಳಕಾಗಿದ್ದು ಅಲ್ಲಿಗೆ ಹೋಗುವವರನ್ನು ಅಸಹ್ಯಗೊಳಿಸುವವು. ಇನ್ನಾದರೂ ಕೊರ್ಪೊರೇಶನಿನವರು ಈ ಕುರಿತು ಸರಿಯಾಗಿ ಆಲೋಚಿಸದಿದ್ದರೆ ಮುಷ್ಕರವು ಇನ್ನಷ್ಟು ಬೆಳೆದು ಬಹು ತೊಂದರೆಯಾಗಬಹುದು.

ಲಕ್ಷಾಪತಿ-ಭಿಕ್ಷಾಪತಿಯಾದುದು.

"ಬ್ಯೂಕ ಮೋಟಾರ ಕಂಪನಿ" ಎಂಬ ಮೋಟಾರ ಕಂಪನಿಯನ್ನು ಎಲ್ಲರೂ ಬಲ್ಲರು. ಈ ಕಂಪನಿಯ ೨ ಲಕ್ಷ ಮೋಟಾರು ಬಂಡಿಗಳ್ ಓಡಾಡುತ್ತಿವೆ. ಈ ಕಂಪನಿಯನ್ನು ಸ್ಥಾಪಿಸಿದ ಮಿ। ಡೆವಿಡ್ ಬ್ಯೂಕರೆಂಬವರ ಅವಸ್ಥೆಯನ್ನು ಈಗ ಬಣ್ಣಿಸಲು ಕಠಿಣ. ಈಗ ಇವರು ಅಮೇರಿಕೆಯ ಡಿಟ್ರೊಯಿಡ್ ಗ್ರಾಮದಲ್ಲಿದ್ದಾರೆ ಇವರ ಪ್ರಾಯವು ೭೪ ವರುಷ. ಒಂದು ಶಾಲೆಯಲ್ಲಿ ಅಧ್ಯಾಪಕ ಕೆಲಸ ಮಾಡಿ ಸಂಸಾರ ಸಾಗಿಸುತ್ತಾರೆ. ಮುದುಕರ ಪೂರ್ವವೈಭವವನ್ನು ಬಲ್ಲಾದ ಒಬ್ಬ ವರ್ತಮಾನ ಪತ್ರಿಕೆಯ ಪ್ರತಿನಿಧಿಗಳು ಮಿ। ಡೆವಿಡ್ ಬ್ಯೂಕರವರ ಮುಲಾಖತನ್ನು ಪಡೆದರು. ಇವರು ಹುಟ್ಟಿದ್ದು ಸ್ಕಾಟಲಂಡದೇಶದಲ್ಲಿ. ಕೂಸಾಗಿರುವಾಗಲೇ ಅಮೇರಿಕೆಗೆ ರವಾನೆಯಾದರು. ೪೦ನೇ ವರುಷ ಪ್ರಾಯದಲ್ಲಿ ಇವರ ವೈಭವವನ್ನು ನೋಡಲಾಗುತ್ತಿದ್ದಿಲ್ಲ. ಆ ಕಾಲಕ್ಕೆ ಕುದುರೆಯ ಗಾಡಿಗಳಿದ್ದವು. ಗಾಡಿಗಳಿಗೆ ಕೋಲೆಗಳನ್ನು ಇವರು ಮಾಡಿಕೊಡುತ್ತಿದ್ದರು. ಇದರ ಮೇಲಿಂದ ಮೋಟಾರ ಮಾಡಿಕೊಡುವ ಕಲ್ಪನೆ ಹುಟ್ಟಿ ೧೯೦೩ನೇ ಇಸವಿಯಲ್ಲಿ 'ಬ್ಯೂಕ್' ಗಾಡಿಗಳನ್ನು ತಯಾರಿಸಿದರು. ಮಿ। ಡೆವಿಡ್‌ರವರಿಗೆ ಸೆಳೆಗೆ ಪುರುಸತ್ತು ಇರಲಿಲ್ಲ. ೭ ವರುಷಗಳ ತನಕ ಸತತವಾಗಿ ಇವರು ದುಡಿಯುತ್ತಿದ್ದರು. ದಿನಾ ೧೮ ತಾಸುಗಳ ತನಕ ಅವರು ದುಡಿದದ್ದು ಉಂಟು. ಹಬ್ಬ-ಹುಣ್ಣಿಮೆಗಳೆಂಬುದು ಇವರಿಗೆ ಗೊತ್ತೇ ಇದ್ದಿಲ್ಲ. ಕ್ರಿಸ್ತ ಯುಗಾದಿಗಳನ್ನು ಇವರಿಂದ ಪಾಲಿಸಲಾಗಲಿಲ್ಲ. ೧೯೧೦ನೇ ಇಸವಿ ಬೆಳಗಿತು. ಅಸ್ವಸ್ಥತೆಯುಂಟಾಯಿತು. ಕಂಪನಿ ಬಿಟ್ಟು ಕೆಲಿಫೋರ್ನಿಯಕ್ಕೆ ತೆರಳಿದರು. ದ್ರವ್ಯಾಭಾವದ ಮೂಲಕ ಕಂಪನಿಯನ್ನು ಮಾರಿದರು. ಈಗ ಬಹಳ ದೈನ್ಯಪ್ರಾಪ್ತವಾಗಿದೆ. ಮೈಮುರಿದು ದುಡಿದರೆ ಹೊಟ್ಟೆತುಂಬ ಅನ್ನ ಸಿಗುತ್ತದೆ. ಮಿ। ಡೆವಿಡ್‌ರವರ ಮಿತ್ರರಲ್ಲಿ ಅನೇಕರು ಲಕ್ಷಾಪತಿಗಳಿದ್ದಾರೆ. ಅವರ ಬಳಿ ಹೋಗಿ ತಮಗೆ ಏನಾದರೊಂದು ಕೆಲಸ ಕೊಡಬೇಕಾಗಿ ಅವರು ಹೇಳಿದರಂತೆ! "ನನಗೆ ಭಿಕ್ಷಾಧಾನ ಬೇಡ. ನಾನು ಸಶಕ್ತನಿದ್ದೇನೆ. ನಾನು ದುಡಿಯಲಾಪೆ. ಆದರೆ, ನಿಶ್ಚಿತ ಉತ್ಪನ್ನವಿರುವ ಕೆಲಸ ದೊರೆತರೆ ಈ ಪ್ರಾಯದಲ್ಲಿ ನನಗೆ ಸುಖ" ಹೀಗೆ ಬ್ಯೂಕ್‌ರವರು ಹೇಳುತ್ತಾರೆ, "ದೀರ್ಘೋದ್ಯೋಗದಿಂದ ಯಶಸ್ಸು ಪ್ರಾಪ್ತಿಯಾಗುತ್ತದೆ ಈಗಿನ ಅವಸ್ಥೆಯ ಬಗ್ಗೆ ನಾನು ಮರುಗುವದಿಲ್ಲ. ಒತ್ತಟ್ಟಿಗೆ ಕೂತುಕೊಂಡು ಹಿಂದಿನ ವೈಭವವನ್ನೇ ನಾನು ಮನಸ್ಸಿನಲ್ಲಿ ಚಿಂತಿಸುತಿರುವದಿಲ್ಲ. ಹುರುಪಿನಿಂದ ಇಂದೇನು ಮಾಡತಕ್ಕದೆಂದು ಆಲೋಚಿಸುತ್ತಿದ್ದೇನೆ. ಇಂಥ ಸ್ಥಿತಿಯಲ್ಲಿ ನಾನು ಏಕೆ ಮರುಗುತ್ತಿರಬೇಕು? ದುಡಿಯುತ್ತಿರಬೇಕಾದ ದೇಹವಿದು. ದುಡಿದ ಸಂಸಾರ ನೀಗಿಸಬಲ್ಲೆ" ಇತ್ಯಾದಿ ಪತ್ರಕರ್ತರ ಪ್ರತಿನಿಧಿಗಳ ಬಳಿಗೆ ನುಡಿದ್ ಬ್ಯೂಕರವರು ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ಜನರು ಸಂತೋಷದಿಂದಿರಬಲ್ಲರೆಂದು ಸಿದ್ಧಗೊಳಿಸಿದ್ದಾರೆ.

ಬರ್ಡೋಲಿ ಸಮಾಚಾರ.

(ಗವರ್ನರರಿಗೆ ಶ್ರೀ। ಮುನ್ಶಿಯವರ ಪತ್ರ)

ಬರ್ಡೋಲಿಯಲ್ಲಿ ಸರಕಾರದವರು ಮಾಡಿದ ಅನಾಚಾರಗಳ ಸಲುವಾಗಿ ರಾ। ಕೆ. ಎಮ್. ಮುನ್ಶಿಯವರು ಮುಂಬಾಯಿ ಕೌನ್ಸಿಲಿನ ಮೆಂಬರಿಕೆಗೆ ರಾಜಿನಾಮೆಯನ್ನು ಕೊಡುವಾಗ, ಮುಂಬಾಯಿ ಗವರ್ನರರಿಗೆ ಬರೆದ ಪತ್ರದ ಸಾರಾಂಶವು ಈ ರೀತಿ ಇದೆ—

"ಬರ್ಡೋಲಿಯ ತೆರಿಗೆ ವಸೂಲಿಯ ಕುರಿತು ಮುಂಬಾಯಿ ಕೌನ್ಸಿಲಿನ ಗುಜರಾಥಿ ಮೆಂಬರರು ಪುನರ್ವಿಚಾರಣೆಯು ಅಗತ್ಯವೆಂದೂ ಪುನರ್ವಿಚಾರಣೆಯಲ್ಲಿ ಮೊದಲು ನಿಶ್ಚಯಿಸಿದ ತೆರಿಗೆಯು ನ್ಯಾಯಸಮ್ಮತವಾದುದಾದರೆ ತಮಗೂ ಒಪ್ಪಿಗೆಯೆಂದೂ ಸೂಚಿಸಲು ಸರಕಾರದವರು ನಿರ್ಬಲರಾದ ಜನರ ಮೇಲೆ ಇಂತಹ ದಬ್ಬಾಳಿಕೆಯನ್ನು ತೋರಿಸಿದುದು ಆಶ್ಚರ್ಯಕರವಾಗಿದೆ.

ಬರ್ಡೋಲಿ ತಾಲೂಕಿನ ಜನರ ಅಪೇಕ್ಷೆಯೂ ಇದೇ. ಅವರು ತಾವಾಗಿ ಇಂತಹ ರಾಷ್ಟ್ರೀಯ ಕಾರ್ಯಕ್ಷೇತ್ರಕ್ಕಿಳಿಯದೆ ಸರಕಾರದ ವರ್ತನೆಯಿಂದ ಇಳಿಸಲ್ಪಟ್ಟಿರುವರು! ಇದೇ ಸೂಚನೆಯನ್ನು ಬಲಪಡಿಸಿದ ಅಸಹಕಾರಿಗಳನ್ನು ಕುಗ್ಗಿಸುವದರಿಂದ ಸರಕಾರದವರು ಸಾವಿರಾರು ಕುಟುಂಬಗಳನ್ನೇ ನಿರ್ಗತಿಕರನ್ನಾಗಿ ಮಾಡಿದಂತಾಗುವದು. ಹಾಗಿರುವಾಗ ವಿವೇಕಿಯಾದ ಮನುಷ್ಯನು ಅವರ ಸಹಾಯಕನಾಗಿ ಸರಕಾರಕ್ಕೆ ವಿರೋಧವಾಗಿಯೇ ನಿಲ್ಲಬೇಕಾಗುವುದು. ಆದಕಾರಣ ಈ ಸಂದರ್ಭದಲ್ಲಿ ತಮ್ಮ ನ್ಯಾಯಪಾಲನೆಯಲ್ಲಿ ಜನರ ನಂಬಿಗೆಯನ್ನು ಸಂಪಾದಿಸುವಂತೆ ಸರಕಾರದವರು ಪ್ರಯತ್ನಿಸಬೇಕಲ್ಲದೆ ಬೆದರಿಸುವದಲ್ಲ. ಬೆದರಿಸದರೆ ಇದು ವರೆಗೆ ಸಹಿಸಿಕೊಂಡಂತೆ ಅವರು ಇನ್ನಷ್ಟು ಧೈರ್ಯದಿಂದ ಸಹಿಸಲು ಸಿದ್ಧರಿರುವರು. ಇದರಿಂದ ಸರಕಾರದವರ ಪ್ರತಿಷ್ಠೆಯೇ ನಾಶವಾಗುವದು. ಕೊಂಚ ತೆರಿಗೆಯನ್ನೇ ಕೊಡಲು ಅಶಕ್ತನಾದ ಮನುಷ್ಯನ ಆಸ್ತಿಪಾಸ್ತಿಗಳೆಲ್ಲವನ್ನೂ ಜಪ್ತಿಯ ಮೂಲಕ ಸೂರೆ ಮಾಡಿ ಆತನನ್ನು ಪೂರ್ಣ ನಿರ್ಗತಿಕನನ್ನಾಗಿ ಮಾಡುವದು ಸರಕಾರದವರಿಗೆ ಶೋಭಿಸದು. ಸಣ್ಣ ವಿಷಯವಾದ ಕಂದಾಯ ವಸೂಲಿಗೆ ಪಠಾಣರನ್ನು ತಂದು, ಅದರಿಂದಲೂ ಜಯವು ದೊರಕದ ಸರಕಾರದವರ ವರ್ತನಕ್ಕೆ ಏನನ್ನಬೇಕು?

ಬರ್ಡೋಲಿಯಲ್ಲಿ ಒಟ್ಟು ೮೦ ಸಾವಿರ ಜನರಿರುವರು. ನಾಲ್ವತ್ತು ಸಾವಿರ ಕೋಣಗಳಿರುವವು. ಇವರುಗಳೆಲ್ಲವರು ಜಪ್ತಿಯ ಹೆದರಿಕೆಯಿಂದ ಮೂರು ತಿಂಗಳುಗಳಿಂದ ಸಣ್ಣ ಸಣ್ಣ ಮನೆಗಳೊಳಗೆ ಅಡಗಿ ಕುಳಿತಿರುವರು. ನಾನು ಅಲ್ಲಿಗೆ ಹೋದಾಗ ಯಾವ ಮಾರ್ಗದಲ್ಲಿಯೂ ಜನಸಂಚಾರವಿರಲಿಲ್ಲ. ಕೇವಲ ಬರಡಿನ್ನ ನಾಡಿನಂತೆ ಬರ್ಡೋಲಿಯ ಸ್ಥಿತಿ ಇದ್ದಿತು. ಅನಾರೋಗ್ಯಕರವಾದ ಅಂತಹ ಚಿಕ್ಕ ಮನೆಗಳಲ್ಲಿ ಮುಚ್ಚಿಕೊಂಡಿದ್ದರಿಂದ ಅವರ ಆರೋಗ್ಯವು ಭಂಗವಾಗಿ ಮಕ್ಕಳುಮರಿಗಳು ಬಡವಾಗಿ ಕಂದಿಹೋಗಿದ್ದವು. ಜಪ್ತಿ ಎಂಬುದರ ಕುರಿತು ಆಲೋಚಿಸುವಾಗಲೇ ಹೆಂಗಸರು ಮಕ್ಕಳು ಎಷ್ಟು ಹೆದರುತಿದ್ದರೆಂಬುದನ್ನು ನನ್ನಿಂದ ವರ್ಣಿಸಲಾಗುವುದಿಲ್ಲ. ಅಲ್ಲಿಯ ಶಿಕ್ಷೆ, ನ್ಯಾಯ ಇವುಗಳಿಗೆ ತುದಿಮೊದಲಿಲ್ಲ. ಒಮ್ಮೆ ಕಲೆಕ್ಟರರು ಅಲ್ಲಿ ಬಿಡಾರ ಮಾಡಿದಾಗ ದೂರದಲ್ಲಿ ಮೂವರು ಹುಡುಗರು ಒಂದು ಮರದಡಿಯಲ್ಲಿ ಕುಳಿತಿದ್ದರು. ಅವರು ಸರಕಾರಿ ನೌಕರರ ಹೋಗಬರುವಿಕೆಯನ್ನು ನಿರೀಕ್ಷಿಸಲು ಕುಳಿತಿದ್ದರೆಂಬ ಆರೋಪಣೆಯ ಮೇಲೆ ಒಬ್ಬೊಬ್ಬನಿಗೆ ೨ ತಿಂಗಳುಗಳ ಶಿಕ್ಷೆ ಮತ್ತು ೫೦ ರೂಪಾಯಿಗಳ ಜುರುಮಾನೆ. ಜೈಲಿನಲ್ಲಿ ಹುಡುಗರು ಕಷ್ಟಗಳನ್ನು ಅನುಭವಿಸುವಾಗ, ಜುರುಮಾನೆ ಹಣದ ಸಲುವಾಗಿ ಅವರ ಹೆತ್ತವರ ಪಶು, ಸೊತ್ತು ಮೊದಲಾದವುಗಳ ಜಪ್ತಿ—ಇದೆಂತಹ ಕಠಿಣ ವರ್ತನೆ!

ಅಲ್ಲಿಗೆ ಹೋಗಿ ಅಲ್ಲಿಯ ಸ್ಥಿತಿಯನ್ನು ಸ್ವತಹ ತಿಳಿಯುವ ಮೊದಲು ಯಾವುದಕ್ಕೂ ನಾನು ಪ್ರಾಮುಖ್ಯತೆಯನ್ನು ಕೊಟ್ಟಿದ್ದಿಲ್ಲ. ಆದರೆ ನಾನು ಸ್ವತಹ ನೋಡಿದಾಗ ಯಾವ ನಾಗರಿಕ ಸರಕಾರಕ್ಕೂ ಈ ತರದ ಕೆಲಸವು ಒಪ್ಪುವಂತಹುದಲ್ಲವೆಂದು ನಿಶ್ಚಯಿಸಿದೆನು.

ಸರಕಾರದ ಇಂತಹ ಧೋರಣದ ಸಲುವಾಗಿ ಪುನರ್ವಿಚಾರಣೆಯು ಅಗತ್ಯವಿದ್ದೇ ಇದೆ. ಸರಕಾರದವರು ನ್ಯಾಯದಿಂದ ಹೇಗೆ ವರ್ತಿಸಬೇಕೊ ಹಾಗೆಯೇ ಪ್ರಜೆಗಳು ನ್ಯಾಯವನ್ನು ಅನುಭೋಗಿಸಲು ಹಕ್ಕುಳ್ಳವರು. ಆದಕಾರಣ ಇದರ ಕುರಿತು ವಿಚಾರಣೆಯು ಮಾಡಲ್ಪಡಲ್ಪಡಲೇಬೇಕು. ಇದರಿಂದ ಇದುವರೆಗಿನ ಸಂಗತಿಗಳೆಲ್ಲವೂ ಪ್ರಕಟವಾಗುವವು.

ಜೊಯಿಂಟ್‌ಪಾರ್ಲಿಮೆಂಟರಿ ಕಮಿಟಿಯವರು ಭೂಕಂದಾಯವನ್ನು ನಿರ್ಣಯಿಸುವ ಹಕ್ಕನ್ನು ಲೆಜಿಸ್ಲೇಟಿವ್ ಕೌನ್ಸಿಲಿಗೆ ಕೊಡಬೇಕೆಂದು ನಿಶ್ಚಯಿಸಿದರು. ೧೯೨೪ನೇ ಇಸವಿಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲು ಬಹುಪಕ್ಷವಾಗಿ ಅಂತಹ ಕಾನೂನನ್ನು ಜಾರಿಗೆ ತಂದ ವಿನಹ ಹೊಸ ತೀರ್ವೆಯನ್ನು ವಸೂಲುಮಾಡಲಾಗದೆಂದು ನಿಶ್ಚಯಿಸಿತು. ೧೯೨೭ರಲ್ಲಿಯೂ ಇದನ್ನೇ ಅನುಮೋದಿಸಿತು. ರೆವಿನ್ಯು ತೀರ್ವೆಯ ಕಮಿಟಿಯು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಂದು ಬೋಧನಾಮಂಡಲವನ್ನು ರಚಿಸಲು ಸೂಚಿಸಿರುವದು. ಹಾಗಿರುವಾಗ ಎಂಡರ್‌ಸನರ ತಪ್ಪಾದ ವರದಿಯ ವಿಷಯದಲ್ಲಿ ಕೌನ್ಸಿಲಿನ ಸೂರತ್ ಮೆಂಬರರು ಆಕ್ಷೇಪಣೆಯೆತ್ತಲು ಅವರ ಮಾತುಗಳನ್ನು ನಡೆಯಗೊಡಲಿಲ್ಲ. ಇದಕ್ಕೆ ಸರಕಾರದ [illegible]

ಸುಮಾರು ೫೦೦ ಜನ [illegible] ಕಳುಹಿಸಲ್ಪಡುವದರಿಂದ ಕೇಳಿದರು. ನಾಲ್ಕು ಜನ ಸ್ಪೆಶಿಯಲ್ ಮಜಿಸ್ಟ್ರೇಟರೂ ಒಬ್ಬ ಸ್ಪೆಶಲ್ ಸುಪರಿಂಟೆಂಡೆಂಟರೂ ನೇಮಿಸಲ್ಪಟ್ಟರು. [illegible] ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಒಬ್ಬನೇ ಹಿಂದೂ ಮೆಂಬರನಿದ್ದಾಗ್ಯೂ, ಇಂತಹ ರೆವಿನ್ಯು ವಿಷಯಗಳಲ್ಲಿ ವಿಚಾರಣೆಯನ್ನು ಮಾಡದೇ ಅವರು ಮಾಡಿದ ಸೂಚನೆಗಳು ಜಾರಿಗೆ ಬರಲಿಲ್ಲ. [illegible] ಹೀಗೆಯೇ ನಡೆದಿದ್ದರೆ ಅದು ನನ್ನ ಮೆಂಬರರಾಗಿರುವದು ವಿಫಲವೇ ಸರಿ. [illegible] ಕಾರದೊಡನೆ ನನ್ನ ಪ್ರಯತ್ನಗಳು ನಿಷ್ಫಲಕರವಾದವು. ಬಹು ಪಕ್ಷದವರ ನಿರ್ಣಯಕ್ಕೆ ಮುಂಬಾಯಿ ಸರಕಾರದವರು ಬೆಲೆಯನ್ನು ಕೊಡದಿರಲು, ಈಗ ನನ್ನ ಕರ್ತವ್ಯವು [illegible] ಕೊಟ್ಟು ನನ್ನ ಸ್ಥಾನವನ್ನು ಜನತೆಗೆ ಬಿಟ್ಟು ಕೊಡಲು ನಿಶ್ಚಯಿಸಿದೆನು. ನನ್ನ ಮೆಂಬರಿಕೆ [illegible] ದಲ್ಲಿ ಸಂಸ್ಥಾನದ ಪ್ರತಿಷ್ಠೆಯು ಮನುಷ್ಯನ ಅಭಿಪ್ರಾಯಕ್ಕಿಂತ ಹೆಚ್ಚಿನದಾಗಿದೆ. ಬಾರ್ಡೋಲಿಯ ಜನರ ಕೈ ಹಿಡಿದು ನಡೆದ ನನ್ನ ವಿನಂತಿಯು [illegible] ಆದರೆ ಜನರ ಅಪೇಕ್ಷೆಯು ಹೀಗೆ ನಿಷ್ಫಲವಾಯಿತು. ಹೀಗೆಯೇ ಸರಕಾರದ ಮುಖ್ಯ ಆಫೀಸರರ ಸಹಾನುಭೂತಿಯೂ ಪ್ರಯೋಜನಕಾರಿಯಾಗದುದು ದುಃಖದಾಯಕವಾಗಿದೆ."

ಪುತ್ತೂರು ತಾಲೂಕು ಶಿವಳ್ಳಿ ಮತಸ್ಥಾಪನೆಗಳ ಕಮಿಟಿ ಮೆಂಬರರ ಆಫೀಸಿನಿಂದ.

ದಕ್ಷಿಣ ಕನ್ನಡಾ ಜಿಲ್ಲಾ ಪುತ್ತೂರು ತಾಲೂಕಿಗೆ ಸಂಬಂಧಪಟ್ಟಿರುವ ಶಿವಳ್ಳಿ ಮತಸ್ಥಾಪನೆಗಳ ಎಲ್ಲಾ ಮೊಕ್ತೇಸರರಿಗೆ ತಿಳಿಯಪಡಿಸುವದೇನೆಂದರೆ ಇತ್ತಲಾಗಿನಿಂದ ಉಂಟಾದ ಹಿಂದು ರಿಲೀಜಿಯಸ್ ಎಂಡೊಮೆಂಟ್ ಎಂಬ ಆಕ್ಟುಮೇರೆ ರೂಪಾಯಿ ೨೫೦ಕ್ಕೆ ಮೀರಿದ ಎಲ್ಲಾ ಸ್ಥಾಪನೆಗಳನ್ನು ನಮ್ಮ ಕಮಿಟಿಯಿಂದ ಪ್ರತ್ಯೇಕಿಸಿ ಸದರಿ ಬೋರ್ಡಿನವರು ಸ್ವಾಧೀನಪಡಿಸಿ ಹೊಸ ವಿಲೆವಾರಿಯೆಂಬುವದನ್ನು ಮಾಡಿದ್ದು ಸರ್ವರೂ ತಿಳಿದಿರುವ ಸಂಗತಿಯಷ್ಟೆ.

ರೂಪಾಯಿ ೨೫೦ಕ್ಕೆ ಕಡಿಮೆ ಇರುವ ಸ್ಥಾಪನೆಗಳ ತಸದೀಕು ಕೂಡಾ ಎಲ್ಲಾ ಸ್ಥಾಪನೆಗಳ ಬಗ್ಗೆ ಸಲ್ಲುತ್ತಿದ್ದುದನ್ನು ಕೊಡಕೂಡದಾಗಿಯೂ ಮೊಕ್ತೇಸರಿಕೆ ರದ್ದೆಂತಲೂ ಕಮಿಟಿಯು ೨ನೆ ಚುನಾವಣೆಯಾಗುವ ವರೆಗೆ ತಸದೀಕು ಬಾಕಿಮಾಡಬೇಕಾಗಿ ವಗೈರೆ ಹಜ್ರತ್ ಜಿಲ್ಲಾ ಕಲೆಕ್ಟರ್ ಧೊರೆಗಳವರ ಹುಕುಂ ಈ ಮುಂಚೆಯೇ ಎಲ್ಲಾ ಗ್ರಾಮ ಉದ್ಯೋಗಸ್ಥರಿಗೆ ತಲಪಿದ ಕಾರಣ ಈ ವರುಷದ ತಸದೀಕು ಯಾರೊಬ್ಬರಿಗೂ ಸಿಕ್ಕದೆ ವಿನಿಯೋಗಾದಿಗಳಿಗೆ ಅಭ್ಯಂತರ ಉಂಟಾಯಿತೆಂಬದು ಸರಿಯಷ್ಟೆ.

ಇದರ ಕುರಿತು ನಾವು ಸೀದಾ ಜಿಲ್ಲಾ ಕಲೆಕ್ಟರ್ ಧೊರೆಗಳಿಗೆ ಹಾಗೆ ಕೊಟ್ಟ ಹುಕುಂ ಸರಿಯಲ್ಲವೆಂಬುದು ಮತ್ತು ನಮ್ಮ ಕಮಿಟಿ ರದ್ದಾಗದ ವಿನಹಾ ಆ ಸಣ್ಣ ಸ್ಥಾಪನೆಗಳಿಗಿದ್ದ ಮೊಕ್ತೇಸರಿಕೆ ಹಕ್ಕು ಎಂದೂ ಹೋಗತಕ್ಕದ್ದಲ್ಲವಾದರಿಂದ ತಸದೀಕು ಬಾಕಿ ಪಡಿಸಲು ಕೊಟ್ಟ ಹುಕುಂ ಸ್ಥಾಪನೆಗಳ ವಿನಿಯೋಗಾದಿಗಳ ಬಗ್ಗೆ ಅಭ್ಯಂತರ ಉಂಟಾಗಿದೆ ಎಂತ ನಾವು ಬರಕೊಂಡ O. R. No. ೩೨೭/೨೮ನೇ ರಿಪೋರ್ಟಿನ ಬಗ್ಗೆ ಈ ಮೊದಲಿದ್ದ ಕಮಿಟಿಯವರೇ ಆಡಳ್ತೆಯನ್ನು ನಡಿಸತಕ್ಕದ್ದೆಂಬ ನಂಬ್ರ ೧೫೮೪೨೮ನೇ ತಾಲೂಕು ಹುಕುಂ ತಲಪಿರುವದರಿಂದ ಅಂಥಾ ಸ್ಥಾಪನೆಗಳಿಗೆ ಈ ಮೊದಲು ಇರುತ್ತಿದ್ದ ಮೊಕ್ತೇಸರರು ಬಾಕಿಯಾದ ತಸದೀಕು ಪಡಕೊಳ್ಳುವರೆ ಕೂಡಲೇ ತಾಲೂಕಿಗೆ ಮನವಿಮಾಡಿಕೊಂಡಲ್ಲಿ, ಬಾಕಿಯಾ ಮುಂದಿನ ತಸದೀಕು ಕೂಡಾ ಮೊದಲಿನಂತೆ ಸಿಕ್ಕುವಲ್ಲಿ ಯಾವ ಆಕ್ಷೇಪವೂ ಇರುವದಿಲ್ಲ. ನಮ್ಮ ಕಮಿಟಿಯೂ ರದ್ದಾಗಿರುವದಿಲ್ಲ. ಆದ್ದರಿಂದ ಹಾಗೆ ಬರಕೊಳ್ಳುವ ಮುಕ್ತೇಸರರು ಪ್ರಯಾಣ ಖರ್ಚು ಅನಾವಶ್ಯಕ ಹಿಮ್ಮ ಅಲ್ಪ ತಸದೀಕುಗಳಲ್ಲಿ ನಷ್ಟ ಬೀಳುವದೆಂತ ಕಂಡರೆ ತಾಲೂಕಿಗೆ ಬರಕೊಳ್ಳುವ ಅರ್ಜಿಯಲ್ಲಿ ಸದರಿ ತಸದೀಕಿನ ಹಣದಿಂದಲೇ ಮಣಿಯಾರ್ಡರು ಮೂಲಕ ಕಳುಹಿಸಬೇಕೆಂತ ಬರಕೊಳ್ಳಬಹುದು ಎಂಬ ಸಂಗತಿಯನ್ನು ಎಲ್ಲಾ ಮೊಕ್ತೇಸರರಿಗೂ ತಿಳಿಯಪಡಿಸೋಣಾಗುತ್ತದೆ.

Camp, Date 23-6-'28. } ಪುತ್ತೂರು ತಾಲೂಕು ಶಿವಳ್ಳಿ ಮತ ಸ್ಥಾಪನೆಗಳ ಕಮಿಟಿ ಮೆಂಬರ,

ಆಲೆಟ್ಟಿ ರಾಮಣ್ಣ ಶಗ್ರಿತ್ತಾಯ

ಪತ್ರವ್ಯವಹಾರ.

ಪತ್ರೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಗೌಡ ವಿದ್ಯಾಸಂಘದ ವೇತನ.

ಅಯ್ಯಾ ಸ್ವದೇಶಾಭಿಮಾನಿಯೇ,

ನವೀನ ರಾಷ್ಟ್ರಬಂಧುವಿನಲ್ಲಿ ದ. ಕ. ಗೌಡ ವಿದ್ಯಾಸಂಘದವೇತನ ವಿಷಯವಾಗಿ ಹೆಸರಿಲ್ಲದ ಮಹನೀಯರ ನವೀನವಾದ ಒಂದು ಪ್ರಕಟಣೆ ಹೊರಟಿರುವುದನ್ನು ನೋಡಿ ಒಂದೆರಡು ಮಾತುಗಳನ್ನು ಆಡುವ ಸಂಗಬಂತು. ಹೆಸರಿಲ್ಲದ ಮಹನೀಯರು ಕಳೆದ ಮಹಾಸಭೆಯ ನಿರ್ಣಯಗಳನ್ನು ಚೆನ್ನಾಗಿ ಅರಿತುಕೊಳ್ಳಲಿಲ್ಲವೆಂದು ತಿಳಿಯಬೇಕಾಗಿದೆ. ಯಾತಕೆಂದರೆ ಕೊಲೇಜಿನಲ್ಲಿ ಕಲಿಯತಕ್ಕ ಇಬ್ಬರು ವಿದ್ಯಾರ್ಥಿಗಳಿಗೆ ನೂರು ನೂರು ರೂಪಾಯಿಗಳ ಎರಡು ನಿಬಡ್ಡಿ ಸಾಲವೆಂತಲೂ 'ಬಡವರು ಯೋಗ್ಯರೂ' ಆದ ಇಬ್ಬರು ವಿದ್ಯಾರ್ಥಿಗಳಿಗೆ ಐವತ್ತೈವತ್ತು ರೂಪಾಯಿಗಳ ಎರಡು ವೇತನವೆಂತಲೂ ನಿರ್ಣಯವಿರುವುದೆ ವಿನಾ ವೇತನಗಳು ಹ್ಯಾಸ್ಕೂಲಿನ ವಿದ್ಯಾರ್ಥಿಗಳಿಗೆನೆ ಕೊಡಬೇಕೆಂಬ ನಿರ್ಣಯವಿಲ್ಲ. ಅದು ಮಾತ್ರವಲ್ಲದೆ ಕಳೆದ ಮಹಾಸಭೆಯವರೇ ಕೊಲೇಜಿನ ಒಬ್ಬ ವಿದ್ಯಾರ್ಥಿಗೆ ಆ ವೇತನವನ್ನು ಕೊಟ್ಟಿರುತ್ತಾ ಈ ತರದ ಪ್ರಕಟಣೆ ಹೊರಡಿಸಿದನ್ನು ನೋಡಿ ಆಶ್ಚರ್ಯಪಡಬೇಕಾಗಿದೆ. ಕೊಲೇಜಿನ ಗೌಡ ವಿದ್ಯಾರ್ಥಿಗಳು ರಾಷ್ಟ್ರಬಂಧುವಿನಲ್ಲಿ ರತಕ್ಕ ಪ್ರಕಟಣೆಯನ್ನು ಕಂಡು ಮೋಸಹೋಗದೆ ಕೂಡಲೇ ಕಾರ್ಯದರ್ಶಿಯವರಿಗೆ ವೇತನದ ವಿಷಯವಾಗಿಯೂ ಅರ್ಜಿ ಬರೆದುಕೊಳ್ಳಬಹುದು.

ಸಂಪಾಜೆ, ತಾ. 27-6-'28. ಯನ್. ಸಣ್ಣಯ್ಯ ಗೌಡ, ಆಡಳಿತ ಮೆಂಬರ.

ಚತುರ್ಥ ಕರ್ನಾಟಕ ಆಯುರ್ವೇದೀಯ

[illegible]

೧೯-೧೦೬-೧೧೧೪ ರಾತ್ರಿ ಪರ್ಯಂತ ಇರಿತು. ಪ್ರಾರಂಭ ದಿಂದಲೂ ಕೊನೆಯ ತನಕ ಬೇರೇನೂ ಔಷಧವನ್ನು ಕೊಟ್ಟಿ ದಿಲ್ಲ. ಈಗ ರೋಗಿಯು ಸ್ವಸ್ಥನಾಗಿ ದೇಶಕಾರ್ಯಕ್ಕಾಗಿ ಪುನರುದ್ಯುಕ್ತನಾಗಿರುವನು.

ಕಷ್ಟಸಾಧ್ಯ ತರಗತಿಯ ಮತ್ತೊಬ್ಬ ರೋಗಿಯ ಪ್ರಸ್ತಾಪ ವನ್ನೆತ್ತುವೆನು. ಇವನಿಗೆ ಮೊದಲು ಪೂಯಶುಕ್ರ (Gonorhoea) ನಂತರ ಮೂತ್ರಾಶಯಗಳನ್ನೂ (Protate gland) ಮೂತ್ರವಾಹಿಗಳೆಲ್ಲ ವ್ರಣಯುಕ್ತವಾಗಿ ಕೀವು ಉಂಟಾಗಿ ಮೂತ್ರ ತುಂಬಿದ್ದಿತು. ಇತರ ಚಿಕಿತ್ಸೆಗಳ ತರು ವಾಯದಲ್ಲಿ, ರೋಗಿಯು ಚಿಕಿತ್ಸಾ ಮಂದಿರದಲ್ಲೇ ಪ್ರವೇಶ ಹೊಂದಿದನು. ಆತನಿಗೆ ಕ್ಷೀರೀ ವೃಕ್ಷ ಕಷಾಯದಿಂದ, ಉತ್ತರ ಬಸ್ತಿಯಲ್ಲಿ ಕೊಟ್ಟು ತೊಳೆದು, ವ್ರಣ ಶೋಧನ ತೈಲ ವನ್ನು ಬಸ್ತಿಗೂ ಮೂತ್ರ ನಳಿಗೆಗೂ ಹಚ್ಚಿ ದೋಷದೂಷ್ಯ ವಿವೇಕದಿಂದ ಚಂದ್ರ ಪ್ರಭಾವಟಿ, ಸುವರ್ಣ ವಂಗೇಶ್ವರ ಔಷಧಿ ಗಳನ್ನು ಕೊಡಲು ರೋಗಿಯು ಉತ್ತಮವಾಗಿ ಗುಣಹೊಂದಿ ದನು.

ದೋಷಪ್ರತ್ಯನಿಕ ಚಿಕಿತ್ಸೆಯಲ್ಲಿ ತಮಗೆ ವಿಶ್ವಾಸವ ಹುಟ್ಟುವಂತಾಗಲೆಂದು ತಾನ ಈ ರೋಗಿಗಳ ಪ್ರಸಂಗವನ್ನೆತ್ತಿ ದೆನು. ಶರೀರವನ್ನು ಆಯುರ್ವೇದವು ಸಾಕಲ್ಯವಾಗಿ ವಿಚಾರ ಮಾಡಿರುವುದರಿಂದ, ರುಗ್ಣಸ್ಥಿತಿಯಲ್ಲಿದ್ದಾಗಲೂ ಆಯುರ್ವೇದ ಸಹಾಯದಿಂದ ರೋಗಸ್ಥಿತಿಯ ವಿಚಾರ ಮಾಡಲಾಗುತ್ತಿದೆ. ಶರೀರ ವ್ಯಾಪಾರಗಳು ಸೇಂದ್ರಿಯ ಸಜೀವಧಾತುಗಳ ಯೋಗ ದಿಂದ ಸಾಗುತ್ತಿವೆ, ಅವರಂತೆ ತದ್ಗುಣಧಾತುಗಳ ಯೋಗದಿಂದ ಶರೀರದಲ್ಲಿ ವಿಕೃತಿಯುಂಟಾಗುತ್ತಿದೆ. ಹಾಗೆ ಉಂಟಾದ ವಿಕೃತಿಯನ್ನು ಇಲ್ಲದಂತೆ ಮಾಡಲು, ಧಾತುಸಾಮ್ಯವನ್ನು ಪ್ರಸ್ಥಾಪಿಸೈದರೆ, ದೋಷ ಧರ್ಮಗಳು ಇಲ್ಲದಂತಾಗಿ ಧಾತು ಗುಣವು ಪ್ರಸ್ಥಾಪಿತವಾಗುತ್ತದೆ, ಧಾತುಸಾಮ್ಯವು ಪ್ರಸ್ಥಾಪಿತ ವಾದೊಡನೆ ಶರೀರವು ನಿರೋಗಿಯಾಗುತ್ತಿದೆ. ಧಾತುವು ಸೇಂದ್ರಿಯವಾಗಿರುವ ಕಾರಣ, ಸೇಂದ್ರಿಯ ದ್ರವ್ಯಗಳಿಂದಲೂ, ಮಾನಸಿಕ ವ್ಯಾಧಿಗಳಲ್ಲಿ ಮನಃ ಪ್ರಸನ್ನತೆಯಿಂದಲೂ ಧಾತು ಸಾಮ್ಯವನ್ನು ಪ್ರಸ್ಥಾಪನೆಮಾಡಬರುತ್ತಿದೆ. ಧಾತುಸಾಮ್ಯವೇ ಚಿಕಿತ್ಸೆಯ ಮರ್ಮವು. ಅದುಕಾರಣವೇ ಆಯುರ್ವೇದವನ್ನು ಆಯುಷ್ಯವಿಜ್ಞಾನ (Science of Life) ಅಥವಾ ಧಾತು ಸಾಮ್ಯಕರ ವೈದ್ಯಕ (Bio-psycho-therapy) ಎನ್ನ ಬಹುದು.

ಆಯುರ್ವೇದದ ತತ್ವವಾದ ಕಾಲ್ಪನಿಕ ವಿಚಾರಗಳ ಮೇಲೆ (Speculation) ಆಧರಿಸಿದೆ ಎಂದೂ, ಅದೊಂದು ಶಾಸ್ತ್ರ (Science) ವೇ ಅಲ್ಲವೆಂದೂ ಹೇಳುವವರು ಇನ್ನೂ ಕೆಲವರಿರುವರು. ಪರಂತು, ಶಾಸ್ತ್ರೀಯ ಪ್ರಮಾಣಗಳ ಎಂದರೆ ಪ್ರತ್ಯಕ್ಷ ಅನುಮಾನ ವ ಆಪ್ತವಾಕ್ಯ ಇವುಗಳ ಪರೀಕ್ಷೆ ಯಿಂದಲೂ ಆಯುರ್ವೇದವು ಉತ್ತೀರ್ಣವಾಗುತ್ತಿದೆಂಬುದನು ಸಿದ್ಧಾಂತಗೊಳಿಸಬಹುದಾಗಿದೆ. ಬರೇ ಮೇಲ್ಮೇಲೆಯಾಗಿಯೆ ವಿಚಾರಮಾಡುವವರು ಸ್ವಾರ್ಥ ಬುದ್ಧಿಯಿಂದ ಈ ಆಕ್ಷೇಪ ಆಯುರ್ವೇದದ ಮೇಲೆ ತಂದೊಡ್ಡಿರುವರು. ಅಂಥವರ ಕಡೆಗೆ ವಿಶೇಷ ಲಕ್ಷ್ಯವನ್ನಿಡಲು ಕಾರಣವೇನೂ ತೋರುವುದಿಲ್ಲ.

ಆಯುರ್ವೇದವು ಅಪಾರವೂ ಉತ್ತಮ ಶಾಸ್ತ್ರವೂ ಆಗಿದೆ. ಅದಕ್ಕೆ ಶಾರೀರ ಇಂದ್ರಿಯವಿಜ್ಞಾನ, ಸ್ವಸ್ಥವೃತ್ತ, ರಸಾಯನ, ಪದಾರ್ಥವಿಜ್ಞಾನ, ರಸತಂತ್ರ, ಔಷಧೀತಂತ್ರ, ಶಲ್ಯತಂತ್ರ, ಮೊದಲಾದ ಶಾಖೋಪಶಾಖೆಗಳಿವೆ. ಈ ವೈದ್ಯಕ ನಿದಾನವು ಆಧುನಿಕ ವೈದ್ಯಕನಿದಾನದಿಂದ ಎಳ್ಳಷ್ಟೂ ಕಡಿಮೆ ಯಾಗಿಲ್ಲ. ಪರಂತು, ಆಯುರ್ವೇದವು ಇಷ್ಟು ಉತ್ತಮ ವಾಗಿದೆಯಾದರೂ, ಅದರಲ್ಲಿ ಸಂಶೋಧನೆಯ ಮೂಲಕ ವಿಕಾಸ ವನ್ನು ಹುಡುಕುವ ಅವಶ್ಯಕತೆ ಇದೆ. ಆಯುರ್ವೇದಜ್ಞರು ಶಸ್ತ್ರಕರ್ಮ ವಿಧಾನವನ್ನು ಸುಮ್ಮನೆ ಮರೆತು ಕುಳಿತಿರುವರು. ಆಧುನಿಕ ವೈದ್ಯಕದಲ್ಲಿರುವ ಸಮ್ಮೋಹನಕಲೆ, ರೋಗಪ್ರತಿಬಂಧಕಲೆ, ಅಲ್ಲದೆ ಶಸ್ತ್ರಚಿಕಿತ್ಸೆ, ವ ಇತರ ನವೀನ ಶೋಧನಗಳನ್ನೂ ಆಯುರ್ವೇದವು ತನ್ನವನ್ನಾಗಿ ಮಾಡಿಕೊಂಡು ಪುಷ್ಟತೆಯನ್ನು ಹೊಂದಬೇಕು; ಇದರ ಹೊರತು ಗತ್ಯಂತರವಿಲ್ಲ. ಹೊಸದಾಗಿ ಪ್ರವಹಿಸಿ ಬರುತ್ತಿರುವ ಸಂಸ್ಕೃತಿಯ ನೆರೆಯಲ್ಲಿ ಆಯುರ್ವೇದೀ ಯರು ತಲೆಯುಡಗಿಸಿ ಮುಳುಗಿಹೋಗದಂತೆ, ಆ ಸಂಸ್ಕೃತಿ ಯನ್ನು ಜೀರ್ಣಿಸಿಕೊಂಡು ಪುಷ್ಟಿಹೊಂದುವುದೇ ನಿಜವಾದ ಪುರುಷಾರ್ಥವು. ಇದನ್ನು ಆಯುರ್ವೇದೀಯರು ಸಾಧಿಸ ಬೇಕು.

ಆಧುನಿಕ ವೈದ್ಯಕಕೋವಿದರೂ ಆಯುರ್ವೇದದ ಕಡೆಗೆ ತಿರಸ್ಕಾರ ದೃಷ್ಟಿಯಿಂದ ನೋಡುತ್ತಿರದೆ, ಅಭ್ಯಾಸೀದೃಷ್ಟಿ ಯಿಂದ ನೋಡುತ್ತಿರಬೇಕು. ಆಯುರ್ವೇದದಿಂದ ಅವರು ಕಲಿತುಕೊಳ್ಳಬೇಕಾಗಿರುವುದೆಷ್ಟೋ ಇದೆ. ಇತ್ತೀಚೆಗೆ ಆಧುನಿ ಕರ ದೃಷ್ಟಿಯು ನಿರ್ಮಲವಾಗುತ್ತಲಿದೆ. ಆಯುರ್ವೇದದ ಉತ್ಕರ್ಷಕ್ಕಾಗಿ ಇವರೆಷ್ಟೋ ಮಂದಿ ಸಾಧಕರಾಗಿ ಮುಂದೆ ಬಂದಿರುವರು; ಆಯುರ್ವೇದವನ್ನು ಅಭ್ಯಾಸಿಸುವವರ ಮಂಡ ಳಿಗಳೂ ಇವೆ. ಇವರೂ ಆಯುರ್ವೇದವನ್ನು ತುಂಬ ಆಸ್ಥೆ ಯಿಂದ ಅಭ್ಯಾಸ ಮಾಡುತ್ತಿರುವರು. ಸಶೇಷ.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕುಂದಿರುವವರಿಗಾದರೂ ಸ್ಥೈರ್ಯದಲ್ಲೇ — ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7-8-0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.



ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸ್ಸರ್ಸ್

ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ.

ಇವರ

ಸೋಡಾ ವಾಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವಾಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್-೧೯೨೭-೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ಕೃಷ್ಟವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು, ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮುಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಶ್ಯಾಣ ಕಣ್ಣ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೋಜಂಟ್ರಾಗಿ, ಯೆಂಟವರ್ಪನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-28. ಮಾಲಿಗರು

ದೇವಶ್ಯಪಡೂರು ಗ್ರಾಮದ ಬೋರ್ಡ್ ಶಾಲೆಯ. ಹೊಸ ಕಟ್ಟೋಣದ ಪ್ರವೇಶ ಸಮಾರಂಭ.

ಈ ಗ್ರಾಮದಲ್ಲಿ ಬೋರ್ಡ್ ಶಾಲೆಯು ಸ್ಥಾಪನೆಯಾಗಿ ೧೨ ವರುಷಗಳಾದವು. ಈ ಮೊದಲು ಗ್ರಾಮದವರು ಕೂಡಿ ಶಾಲೆಗೆ ಒಂದು ಕಟ್ಟೋಣವನ್ನು ಕಟ್ಟಿಸಿಕೊಟ್ಟಿದ್ದರು. ಆದರೆ ಈ ಕಟ್ಟೋಣವು ಜೀರ್ಣವಾಗಿತ್ತು. ಅದಲ್ಲದೆ ಈ ಶಾಲೆಯಲ್ಲಿ ಸಾಹಸದಿಂದ ಕೆಲಸ ಮಾಡುವ ಉಪಾಧ್ಯಾಯರು ಇಲ್ಲದೆ ಇದ್ದುದರಿಂದ ಶಾಲಾ ಮಕ್ಕಳ ಸಂಖ್ಯೆಯು ಬರೇ ೫ಕ್ಕೆ ಇಳಿಯಿತು. ಇದನ್ನು ನೋಡಿ ಯೋಗ್ಯರಾದ ಉಪಾಧ್ಯಾಯರನ್ನು ಕಳುಹಿಸಬೇಕೆಂದು ಗ್ರಾಮಸ್ಥರು ಬೋರ್ಡಿಗೆ ಮನವಿ ಮಾಡಿದರು. ಪ್ರೆಸಿಡೆಂಟರು ಒಳ್ಳೆ ಸಾಹಸದಿಂದ ಕೆಲಸ ನಡಿಸುವವರಾಗಿಯೂ ಒಳ್ಳೇ ಕಲಿತವರಾಗಿಯೂ ಇರುವ ಮೂಡಬಿದರೆ ನರಶಿಂಗರಾಯರನ್ನು ಈ ಶಾಲೆಗೆ ಮುಖ್ಯ ಉಪಾಧ್ಯಾಯರನ್ನಾಗಿ ಕಳುಹಿಸಿದರು. ಈ ಉಪಾಧ್ಯಾಯರೂ, ಈ ಮಾಗಣೆಯ ಶ್ಯಾನಭಾಗರಾದ ಚಿಕ್ಕಯ್ಯನವರೂ ಮನೆಮನೆಗೆ ಹೋಗಿ ಶಾಲೆಗೆ ಮಕ್ಕಳು ಬರುವಂತೆ ಮಾಡಿ ಶಾಲಾ ಮಕ್ಕಳ ಸಂಖ್ಯೆಯು ೬೦ಕ್ಕೆ ಏರಿತು.

ಮಕ್ಕಳ ಸಂಖ್ಯೆಯು ಏರಿದಾಗ್ಯೂ ಶಾಲೆಗೆ ಯೋಗ್ಯವಾದ ಕಟ್ಟೋಣ ಇಲ್ಲದ್ದರಿಂದ ಈ ಉಪಾಧ್ಯಾಯರೂ ಶಾನುಭಾಗ ಚಿಕ್ಕಯ್ಯನವರೂ ಗ್ರಾಮದ ವರ್ಗದಾರರಾದ ಕೇದಗೆ ಶಿವರಾಯರೂ, ಪಟೇಲ ಈಶ್ವರಪ್ಪಯ್ಯನವರೂ ಮರಾಯಿತೊಟ್ಟು ಶಾಂತಿರಾಜ ಬಲಿಪನವರೂ ಪೆರಿಯಾರ ಮಂಜಪ್ಪ ಕಾಜವರೂ, ಪೆರ್ಲ ಚೆಂದಯ್ಯ ಪುವಣಿಯವರೂ, ಭವಂತಿಬೆಟ್ಟು ಅಪ್ಪಯ್ಯ ಪೆಂಗ್ರ್ಯರವರೂ, ಕೇದಗೆ ಅಣ್ಣಿಶೆಯ್ಯನವರೂ, ಲಗ್ಗಿ ವರ್ಗದಾರರಾದ ಆಲಂಫುರಿ ತಿಮ್ಮಯ್ಯ ಅರಿಗರೂ ಮುಂತಾದವರು ಕಮಿಟಿಯನ್ನು ಮಾಡಿಸಿದರು. ಕಮಿಟಿಯವರು ಕೇದಗೆಶಿವರಾಯರನ್ನು ಕಮಿಟಿ ಅಧ್ಯಕ್ಷರನ್ನಾಗಿ ಮಾಡಿ ಶಾಲೆಯನ್ನು ಕಟ್ಟಿಸುವಂತೆ ಮಾಡಿದರು.

ಈ ಶಾಲಾ ಪ್ರವೇಶ ಸಮಾರಂಭವು ಇದೇ ತಿಂಗಳ ತಾರೀಕು ೨೫ನೇ ಸೋಮವಾರ ಬೆಳಿಗ್ಗೆ ೮ ಘಳಿಗೆ ಸಮಯಕ್ಕೆ ನಡಿಯಿತು. ಮಕ್ಕಳ ಮತ್ತು ಉಪಾಧ್ಯಾಯರ ಉಪಾಧ್ಯಾಯಿನಿಯರ ಮೆರವಣಿಗೆಯು ಪಾಣಿಂದಿಲ ಬಸ್ತಿಯಿಂದ ವಾದ್ಯದೊಡನೆ ಹೊರಟು ರಾ. ಕೇದಗೆ ಶಿವರಾಯರ ಮನೆಯ ವರೆಗೆ ಹೋಯಿತು. ಅಲ್ಲಿ ಗ್ರಾಮದ ಮಹನೀಯರೆಲ್ಲರೂ ಅಂದಿನ ಸಭೆಗೆ ಅಧ್ಯಕ್ಷರಾದ ಮಂಗಳೂರು ತಾಲೂಕು ಬೋರ್ಡ್ ಮೆಂಬರರಾದ ಬಂಟವಾಳ ವೆಂಕಟ್ರಾಯ ಪ್ರಭುಗಳನ್ನು ಕರಕೊಂಡು ಮೆರವಣಿಗೆಯು ಮುಂದರಿಸಿತು.

ಮೆರವಣಿಗೆಯು ಶಾಲಾ ಬಾಗಲಿಗೆ ತಲಪಿದೊಡನೆ ರಾ. ಶಿವರಾಯರು ಅಧ್ಯಕ್ಷರಿಗೆ ಹೂಮಾಲೆಯನ್ನು ಹಾಕಿ ಕರಕೊಂಡು ಶಾಲಾ ಪ್ರವೇಶವಾಯಿತು. ಶಾಲಾ ಹುಡುಗಿಯರು ದೇವರ ಪ್ರಾರ್ಥನೆಯನ್ನು ಮಾಡಿದರು. ಮುಖ್ಯ ಉಪಾಧ್ಯಾಯರಾದ ರಾ। ಮೂ। ನರಶಿಂಗರಾಯರು ಶಾಲಾ ವರದಿಯನ್ನು ಓದಿದರು. ನಂತರ ಭಾರತ ಮಾತೆಯ ಸ್ತುತಿಯ ಹಾಡು ಹಾಡಲಾಯಿತು; ಗ್ರಾಮ ಪುನರ್ನಿರ್ಮಾಣದ ವಿಷಯ ಎಂ. ಜಿ. ಐಗಳರು ಒಂದು ಭಾಷಣವನ್ನು ಕೊಟ್ಟು ಗ್ರಾಮಾಭಿವೃದ್ಧಿಗೆ ಶಾಲೆಯನ್ನು ಮಧ್ಯ ಸ್ಥಳವನ್ನಾಗಿ ಮಾಡುವುದಕ್ಕಾಗಿ ಶಾಲೆಯಲ್ಲಿ ವಾಚನಾಲಯವನ್ನು ಪುಸ್ತಕ ಭಂಡಾರವನ್ನೂ, ಹೊಸ ರೀತಿಯಲ್ಲಿ ಕಾಯಿಪಲ್ಯ ಬೆಳಸುವ ಒಂದು ತೋಟವನ್ನೂ ಹೆಮ್ಮಕ್ಕಳು ಶಾಲೆಗೆ ಹೆಚ್ಚಾಗಿ ಬರುವಂತೆ ಹೂದೋಟವನ್ನೂ ತೆರೆದು ಗ್ರಾಮದ ಬಡ ಜನರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಕೋಲೆರಾ, ಅತಿಸಾರ, ರಕ್ತಾತಿಸಾರ, ಜ್ವರ ಮುಂತಾದ ಗ್ರಾಮಗಳ ಜನರನ್ನು ಪೀಡಿಸುವ ರೋಗಗಳಿಗೆ ಬೇಕಾಗುವ ಮದ್ದುಗಳನ್ನು ಶಾಲೆಯಲ್ಲಿ ಇಡಬೇಕೆಂದೂ ಮುಂತಾಗಿ ಕೆಲವು ಸೂಚನೆಗಳನ್ನು ಕೊಟ್ಟರು.

ಇದಾದ ಮೇಲೆ ಪೆರಿಯಾರ ರಾ। ಮಂಜಪ್ಪ ಕಾಜವರ ಲೆಕ್ಕಕ್ಕೆ ಮಕ್ಕಳಿಗೂ ಸಭಿಕರಿಗೂ ತಿಂಡಿಗಳು ಹಂಚಲಾದವು. ರಾ। ಕೇದಗೆ ಶಿವರಾಯರು ಬಂದ ಉಪಾಧ್ಯಾಯ ಉಪಾಧ್ಯಾಯಿನಿಯರನ್ನು ಊಟ ಉಪಚಾರಗಳಿಂದ ಸತ್ಕರಿಸಿದರು. ಊಟವಾದ ಮೇಲೆ ಹಿತಚಿಂತಕರ ಭಾಷಣಗಳಾದವು. ಬಂದ ಹಲವು ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರೂ ಕಾಡುಬೆಟ್ಟು ಪಟೇಲರೂ ಶಾಲಾ ಅಭಿವೃದ್ಧಿಯ ವಿಷಯ ಹಲವು ಸೂಚನೆಗಳನ್ನು ಕೊಟ್ಟರು.

ಅಧ್ಯಕ್ಷರ ಭಾಷಣವಾಯಿತು. ಶಾಲಾ ಬಡ ಮಕ್ಕಳಿಗಾಗಿ ಆಲಂಫುರಿ ರಾ। ತಿಮ್ಮಯ್ಯ ಅರಿಗರು ೧೨ ಸ್ಲೇಟುಗಳನ್ನೂ ಭವಂತಿಬೆಟ್ಟು ಅಪ್ಪಯ್ಯ ಪೆಂಗ್ರ್ಯನವರು ಕೆಲವು ಬೇಂಚುಗಳನ್ನೂ ಶಾನುಭಾಗ ಚಿಕ್ಕಯ್ಯನವರು ಪುಸ್ತಕ ಭಂಡಾರದ ಮೂಲ ಪುಸ್ತಕಗಳಾಗಿ ಕೆಲವು ಪುಸ್ತಕಗಳನ್ನೂ ಕೊಟ್ಟರು. ನಂತರ ಗ್ರಾಮ ಪರಗ್ರಾಮದ ಮಹನೀಯರಿಗೂ ಬಂದ ಉಪಾಧ್ಯಾಯ ಉಪಾಧ್ಯಾಯಿನಿರಿಗೂ ಶಾಲಾ ಅಲಂಕಾರವನ್ನು ಮಾಡುವುದಕ್ಕಾಗಿ ಹಲವು ತರದ ಕಾಗದದ ಹೂಗಳನ್ನು ಮಾಡಿಕೊಟ್ಟದ್ದಕ್ಕಾಗಿ ಬಂಟವಾಳ ಬೋರ್ಡ್ ಹುಡುಗಿಯರ ಶಾಲೆಯ ಉಪಾಧ್ಯಾಯಿನಿಯರಿಗೂ ಮಕ್ಕಳಿಗೂ ಧನ್ಯವಾದಗಳು ಕೊಡಲಾದವು. ನಂತರ ರಾಷ್ಟ್ರಗೀತ, ರಾಜಗೀತ ಮಂಗಲ ಪದಗಳು ಹಾಡಿ ಸಮಾರಂಭವು ಮುಗಿಯಿತು. ನಂತರ ಬಂದವರೆಲ್ಲರಿಗೂ ಮರಾಯಿತೊಟ್ಟು ಮನೆತನದವರ ಲೆಕ್ಕಕ್ಕೆ ಉತ್ತಮ ರೀತಿಯ ಫಲಾಹಾರವಾಯಿತು.

ಭೂಮಂಡಲದಲ್ಲಿ ಅತೀ ದೊಡ್ಡ ವಾಯು ವಿಮಾನ.

ಲಂಡನಿನಲ್ಲಿ ಒಂದು ಬಹು ದೊಡ್ಡ ವಿಮಾನವನ್ನು ತಯಾರಿಸಿರುವರು, ಅದು ಪೂರ್ಣ ತಯಾರಾಗಿ ಕಳೆದ ೨೮ನೇ ತಾರೀಕಿನ ದಿನ ಒಮ್ಮೆ ವಾಯು ಮಂಡಲದಲ್ಲಿ ಹಾರಿಯಹೂ ಆಯಿತು. ಇದರ ಒಟ್ಟು ಭಾರವು ೧೮ ಟನ್ (೫೬ ಖಂಡಿ), ಇದರ ಇಂಜಿನುಗಳು ೨೧೦೦ ಕುದುರೆ ಶಕ್ತಿಯುಳ್ಳವುಗಳು. ಇದು ೭೫ ಅಡಿ ಉದ್ದವಾಗಿದ್ದು, ಇದರ ರೆಕ್ಕೆಯು ೧೫೦ ಅಡಿ ಉದ್ದವಾಗಿದೆ. ಇದನ್ನು ಲೋಹದಿಂದಲೇ ತಯಾರಿಸಿರುವರು. ಮಾತ್ರವಲ್ಲದೆ ಅಡಿಯಲ್ಲಿರುವ ಎರಡು ಚಕ್ರಗಳು ಏಳೇಳು ಫೀಟು ಎತ್ತರವಾಗಿವೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ [illegible]—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಚಿಕ್ಕಿತ್ಸಾ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ-ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಆಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರಲ್ಲೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1 ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೌಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವುನ್ ಹಾಲ್ ಹತ್ತಿರ.

...ಟುವಾಡುವ

DP

IED

...ND CEYLON

"ಬಿಲ್ಕೊ"



Registered: No. M. 498

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. | ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ‖
ಗರಲಕವರಂಜಿದರೆ ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. | ಮಂಗಳೂರು, ತಾ. ೬ನೇ ಶುಕ್ರವಾರ ಜುಲಾಯಿ ೧೯೨೮. | ಸಂಚಿಕೆ ೨೭

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

STATEMENT OF AFFAIRS AS ON 16 JUNE, 1928.

CAPITAL AND LIABILITIES.		PROPERTY AND ASSETS.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	„ 96,600-0-0	2 Investments on G. P. Notes	2,40,234-5-0.
3 Deposits	„ 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	„ 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	„ 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total.	Rs. 18,76,832-12.7.

Office of the Corporation,
UDIPI, 18-6-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚಳಿಯಿಂದ ಕಷ್ಟಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರಕುತ್ತದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ.

ವಿ. ಸೂ.—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಗಳಿಗೂ, ಕಜ್ಜಿಗೂ, ತಂದಿಗೆಯು ಮತ್ತು ಬಿಂಡಿಕೆವಾದಿ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ನೆವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬೆಳ್ಳಗಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ರಾಗದ ಪೆಟ್ಟಿಗಗಳು.

ನಾಟಕಿ ಸಾಮಾನು:—ತಬಲೆ, ಡಕ್ಕೆ ವಗ್ಯೆರೆ.

(ಪೆಟ್ಟಿಗೆ ... ರೂ. ೬.)

ಗೋಪಾಳ ಸಖಾರಾಮ ಮತ್ತು ಕಂಪೆನಿ,

ತಯಾರಾಗಿವೆ! ತಯಾರಾಗಿವೆ

ಶಾಲಾ ಹುಡುಗರಿಂಗೆ ಬೇಕಾದ

ಶಾರದಾ ಛಾಪಖಾನೆ, SHARADA PRESS. MANGALORE.

ಮಿತವಾದ ಬೆಲೆಗೆ ಅಪಿತವಾದ ...

300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್‌ಗಳು, ಸ್ಟೌಗಳು, ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಕರೆಯು ಗುಂಡಿಗಳು, ... ಹುಸ್ಸಿಗೆ ಹುರಿಯುಗಳು, ... ಬೀಡಿ ಮತ್ತು ಸಿಗರೆಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳ ಬಿಡಿ ಭಾಗಗಳಿಗೆ ಬೇಕಾಗುವ ಸಾಮಾನುಗಳು ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ವಗ್ಯೆರೆ ಪಡೆಯಲಿಕ್ಕೆ ಈ ವಿಳಾಸಕ್ಕೆ ಬರೆಯಿರಿ.

ಎ. ಆರ್. ಖಲೀಲ್,

ಕೈನಿಕರ್, ಸ್ಟೌ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟುಮಾಡಿರುತ್ತದೆ.

೧ನೇ ನಂಬ್ರ ೧೩ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

೦-೯-೨೭ ಸಳ್ಳಿಬೈಲ್ ಪೋಸ್ಟ ಕಡೂರ ಡಿಸ್ಟ್ರಿಕ್ಟ

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರಿತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಟಾನ್ ಆರ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲರ ಕೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೈನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦

ಬಾಟ್ಲಿವಾಲರ ಹೊಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

... ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ..., ..., 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ... ಯೋಗ್ಯವಾಗಿದೆ.

..., ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ..., ... ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ಇತರ ದುರ್ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

... ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 8 ರೂಪಾಯಿ; ಚಿಕ್ಕದು ರೂ. 1—10—.

ವಿಳಾಸ:— ಕೇಸರೀ ಕುಟೀರಂ,

TELEGRAMS:—KESARI ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

ಈ ಪೆನ್ನಿಯಲ್ಲಿ ಕಾಣುವ ಫೌಂಟೆನ್‌ಪೆನಾವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟ ಭಂಗಾರದಂತೆ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು.

ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,

ಪೋ. ಬಾಕ್ಸ ನಂ. 27, ಮದರಾಸು.

ಟೇಬಲ್ ಟೈಂಪೀಸ್ ಇನಾಂ.

22 ಕ್ಯಾರೆಟ್ಟ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್‌ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಕ್ರ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.

ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್

1ಕ್ಕೆ 7—0—0.

ವಿಳಾಸ:— ವಿ. ಎಸ್. ವಾಚ್ ಕಂಪೆನಿ.

ಪೋ. ಬಾಕ್ಸ ನಂ. 105, ಮದರಾಸು.

The Kanara Watch House Udipi, S. K.



ಗ್ಯಾರಂಟಿಯುಳ್ಳ ನಮ್ಮೂಲು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ.—ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳಕೊಂಡಿರುವವರಿಗಾದರೂ ಸ್ಥೈರ್ಯದಲ್ಲೀ

— ಕೊಡುವುದು..—

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7—8—0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,

(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.

ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸರ್ಸ

ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ.

ಇವರ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ

ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಟೆನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,

28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗ್ಯೆರೆ ಬೇಟೆಯ ಹತ್ಯಾರುಗಳು.



ದಯೆ ಇಟ್ಟು ಮೇಲಣಸಾಮಾನುಗಳನ್ನು ಕೊಂಡುಕೊಳ್ಳುವ—ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು! ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಕೋವಿಗಳನ್ನು ಧಾರಾಳವಾಗಿ ಆಮದುಮಾಡುವವರು

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.

210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧೃಷ್ಟ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಕ್ತ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷದಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ,-ಪ್ರಾಯ, ಪಥ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವನೋ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

Diamonds. ವಜ್ರಗಳು Diamonds.

BOLA MANGESH ROW & Co.,

MANGALORE.

Agents & Direct importers of Superior Diamonds of Antwerp.

ಯೋಜಂಟ್ವಾರ್ಪ್ ದಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

10-8-28. ಮಂಗಳೂರು

ಸ್ಫುಟ ವಿಚಾರಗಳು.

ಇಂಗ್ಲೆಂಡಿನಲ್ಲಿ ಭಾಷಾ ಸಾಹಿತ್ಯ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಭಾಷಾ ಅಭಿವೃದ್ಧಿಯ ಬಗ್ಗೆ ಎಷ್ಟು ಉತ್ಸಾಹಪಡುತ್ತಾರೆಂಬುದು ಇಂಗ್ಲೆಂಡಿನಲ್ಲಿ ಒಕ್ಸ್‌ಫೊರ್ಡ ಡಿಕ್ಶನರಿ ಮುಗಿಸಿದ ದಿನವನ್ನು ಆಚರಿಸಿದ ಕ್ರಮವನ್ನು ನೋಡಿದರೆ ತಿಳಿಯುವುದು. ಈ ಒಂದು ನಿಘಂಟುವಿಗಾಗಿ ಹಲವು ಸಂಪಾದಕರು, ಉಪಸಂಪಾದಕರು, ಸಹಾಯಕರು ಇತ್ಯಾದಿ [illegible] ಇವರು ರಚಿಸಿದರು. [illegible]

[illegible]

ಪತ್ರಿಕಾ ಕರ್ತರ ಪರಿಷತ್ತು.

[illegible]

ನಾವೂ ಕೋರುವೆವು. ನಮ್ಮ ಜಿಲ್ಲೆಯಲ್ಲಿ ಹಲವು ಪತ್ರಿಕೆಗಳಿದ್ದು ಒಂದು ಸಣ್ಣ ಪರಿಷತ್ತನ್ನು ಜರಗಿಸುವುದು [illegible] ಸಾಧ್ಯವಾದುದರಿಂದ, ಮೇಲಿನ ಪರಿಷತ್ತಿನ ಮುಂದಾಗಿ ನಮ್ಮ ಜಿಲ್ಲೆಯದೊಂದು ಪರಿಷತ್ತನ್ನು ಜರಗಿಸಿ, ಅಗತ್ಯ ವಿಷಯಗಳನ್ನು ಚರ್ಚಿಸಿ ಜಿಲ್ಲೆಯ ಪರವಾಗಿ ಕೆಲವು ಪ್ರತಿನಿಧಿಗಳನ್ನು ಮೇಲಿನ ಪರಿಷತ್ತಿಗೆ ಕಳುಹಿಸಲು ಸಾಧ್ಯವಿದ್ದುದಾದರೆ ಉತ್ತಮವಿತ್ತು.

ಅಮೀರ ಅಮಾನುಲ್ಲಾ ಖಾನರವರು.

ಅಫಘಾನಿಸ್ಥಾನದ ಅಮೀರರು ಜುಲಾಯಿ ತಾ. ೧ಕ್ಕೆ [illegible] ತಮ್ಮ ವಿಲಾಯತಿ ಪ್ರವಾಸವನ್ನು ಮುಗಿಸಿ ಹಿಂದೆ ಬಂದು ಮುಟ್ಟಿದರು. ಪ್ರಜೆಗಳು ಬಹಳ ಉತ್ಸಾಹದಿಂದ ಸ್ವಾಗತವನ್ನು ಕೊಟ್ಟರು. ಅಮಾನುಲ್ಲಾಖಾನರ ವಿಲಾಯತಿ ಪ್ರವಾಸವನ್ನೂ, ಅವರು ಪ್ರಜೆಗಳ ಕಡೆಗೆ ತೋರುವ ಪ್ರೇಮವನ್ನೂ ಅವರಿಗಾಗಿ ಪಡುವ ಪಂಶ್ರಮವನ್ನೂ ನೋಡಿದರೆ ನಮ್ಮ ಹಿಂದೀ ರಾಜರ [illegible] ನಮ್ಮ ರಾಜರು ವಿಲಾಯತಿ ಪ್ರವಾಸಕ್ಕೆ ಹೊರಟರೆ, ತಮ್ಮ ವಜ್ರವೈಢೂರ್ಯಗಳ ಪ್ರದರ್ಶನ ಮಾಡುವುದರಲ್ಲಿಯೇ ನಿರತರು; ಬಳಹ ಬೆಲೆ ಬಾಳುವ ಮೋಟರು [illegible] ಕ್ರಯಕ್ಕೆ ಪಡೆದು ತಮ್ಮ ಶ್ರೀಮಂತಿಕೆಯನ್ನು ತೋರಿಸುವುದರಲ್ಲಿ ಚಿಂತಿ [illegible] ವಿಲಾಸ ಪ್ರಮತ್ತರಾಗುವುದ [illegible] ಬಂದರೆ ಬರಿದಾದ ಭಂಡಾರ [illegible] ಹುಡುಕುವರು. ಇದರ [illegible] ನೋಡಿರಿ:— [illegible] ಬಹಳ ತಪ್ತಮಾನಸನಾಗಿ [illegible] ಅಭಿವೃದ್ಧಿಯನ್ನು ನೋಡಿ ತನ್ನ [illegible] ಹುಡುಕಿ ತಿಳಕೊಳ್ಳ [illegible] ಸಮಾಧಾನವನ್ನುಂಟುಮಾಡಿತು. [illegible] ಮಾಡಿದ್ದಲ್ಲ; ಅಫ [illegible] ಮಂತ್ರಿಗಳ [illegible] ಅಭಿವೃದ್ಧಿಯ [illegible] ನದೊಡನೆ ಮೈತ್ರಿ [illegible] ಒಪ್ಪಿರುವವು. ಆದರೆ [illegible] ಈಗಿನ ದೊಡ್ಡ [illegible] ಅಮೀರರು ಹೇಳಿ [illegible] ಸಿಪಾ [illegible] ಗನನ್ನೂ [illegible] ಸೌಹಾರ್ದ [illegible] ಹಿಂದೀ [illegible] ಅಷ್ಟು

[illegible]

ಬೊಲ್ಶೆವಿಜಮ್ ಎಂದರೆ ನಡುಗುವ ಬ್ರಿಟಿಷರ ಸಹಾನುಭೂತಿ

ನೋಟಗಳು.

NOTE...S.

ಬಾರ್ಡೋಲಿಯಲ್ಲಿ ಸತ್ಯಾಗ್ರಹ, ಮುಂಬಾಯಿಯಲ್ಲಿ ಕೌನ್ಸಿಲು ಮೆಂಬರ ರಾಜಿ, ರಾಜಿಯ ಫಲಿತಾಂಶ, ಇನ್ನೂ ಬಾಲ್ಯಾವಸ್ಥೆಯಲ್ಲಿ ಇದೆ.

• • • •

ಬಾರ್ಡೋಲಿ ಆತ್ಮಯಜ್ಞದಲ್ಲಿ ೭೯ ಪಟೇಲರು ಸರಕಾರದವರು ಮಾಡಿಸುವ ಅನಾಹುತಗಳನ್ನು ಸಹಿಸಲಾರದೆ ತಮ್ಮ ಹುದ್ದೆಗಳಿಗೆ ತಿಲಾಂಜಲಿಯನ್ನು ಕೊಟ್ಟಿರುವರು.

• • • •

ಅಲ್ಲಿಯ ಕಲೆಕ್ಟರವರು ತಮ್ಮ ಮರ್ಯಾದೆಯನ್ನು ತಾವೇ ಕಾಯುತ್ತಿರುವರು. ಅವರು ಹೀಗೆ ಬರೆಯುತ್ತಿರುವರು:—'ಪಟೇಲರು ಅಸಹಕಾರಿಗಳ ಪತ್ಯಾಯಕ್ಕಾಗಿ, ರಾಜಿ ಕೊಟ್ಟಿದ್ದು' ಎಂದು.

• • • •

ಅದಕ್ಕೆ ಪ್ರತಿಯಾಗಿ ಪಟೇಲರು 'ನಾವು ಯಾರ ಒತ್ತಾಯಕ್ಕೂ ಬಲಿಬೀಳಲಿಲ್ಲ. ಸರಕಾರದವರ ಈ ಅಸಹನೀಯ ಕಾರ್ಯಗಳನ್ನು ನೋಡಿ ತಾವಾಗಿಯೇ ತಮ್ಮ ಹುದ್ದೆಗೆ ರಾಜಿಯನ್ನು ಕೊಟ್ಟಿರುವೆವು' ಎಂದು ಬರೆದಿರುವರು. ಈ ಉತ್ತರಕ್ಕೆ ಕಲೆಕ್ಟರಂ ಜವಾಬೇ ಇಲ್ಲ.

• • • •

ಬರ್ಡೋಲಿಯಲ್ಲಿ ಸರಕಾರದವರು ಒಂದು ಲಕ್ಷ ಮೂವತ್ತು ಸಾವಿರ ರೂಪಾಯಿ ತೀರ್ವೆಯನ್ನು ಇಷ್ಟರ ವರೆಗೆ ವಸೂಲು ಮಾಡಿರುವರೆಂದು ಸರಕಾರದ ಪ್ರಕಟಣೆ. ಅವರ ಅದೃಷ್ಟ ಇಷ್ಟು ಚೆನ್ನಾಗಿದ್ದರೆ ಅವರಿಗೆ ಒಳ್ಳೆಯದೇ ಇತ್ತು.

• • • •

ಮುನಿಸಿಪಾಲಿಟಿಯವರಿಂದ ಸೆಂಟಲೆಂಡ್ ಪೇಟೆಯಲ್ಲಿರುವ ಮಾರ್ಗದ ಬದಿಯಲ್ಲಿರುವ ಮರಗಳ ಕೊಂಬೆಗಳನ್ನು ಕಡಿಸಿ ಇನ್ನು ಮಾರ್ಗಗಳಿಗೆ ಮರದ ಕೊಂಬೆಗಳಿಂದ ಬೀಳುವ 'ತಟಪಟ ಹನಿಯಪ್ಪ'ನ ಬಾಧೆಯಿಂದ ತಪ್ಪಿಸಿದರು.

• • • •

ಚಾರ್ಮಾಡಿ ಘಾಟಿ ರಸ್ತೆಯ ನಾದುರಸ್ತಿಯ ವಿಷಯ ಹಲವು ಪತ್ರವ್ಯವಹಾರಗಳು ಬಂದಿರುವವು. ಪತ್ರಿಕೆಯಲ್ಲಿ ಸ್ಥಳ ಸಂಕೋಚ ಆದ್ದರಿಂದ ಚಿತ್ರದ ಮೂಲಕ ವರ್ಣಿಸಿರುತ್ತದೆ.

• • • •

ವೇಣೂರು ಸಂಕದ ಕೆಲಸವು ಮ್ಯಾನಸ್ ಜೀರೊ ಸ್ಪೀಡಿನಲ್ಲಿ ನಡೆಯುತ್ತದೆ. ನೆರೆಯು ಬಂದು ಮುಗಿಯಿತು ವರುಷ ಐದು. ಸಂಕದ ಕೆಲಸ ಇನ್ನೂ ಮುಗಿಯಲಿಲ್ಲ. ಕಾರಣ, ಪ್ರಜೆಗಳ ಗ್ರಹಚಾರ ಕೆಟ್ಟದು.

• • • •

ಮೈಸೂರಲ್ಲಿ ವೃತ್ತ ಪತ್ರಿಕೆಗಳ ಕಾನೂನು ತೆಗೆದುಹಾಕಿದ್ದರೂ ಕಣಿಯರ ಪತ್ರಿಕೆಯ ಮೇಲಿನ ಕಾನೂನು ಇನ್ನೂ ಮುಗಿದಿಲ್ಲ.

• • • •

'ಸುದ್ದಿಯ ಮುದ್ದಣ್ಣ'ನ ನ್ಯೂಸುಗಳನ್ನು ಬಹಳ ಅಂದವಾಗಿ ಬಣ್ಣಿಸಿ ಬರೆಯುವನು, ಇವನನ್ನು Reuter Agency ಆಫೀಸಿಗೆ ಕಳುಹಿಸುತ್ತಿದ್ದರೆ ಇಂಗ್ಲೀಷ್ ಪತ್ರಿಕೆಗಳ ವಾಚಕ ವೃಂದದವರು ಸಹಾ ಈತನ ನ್ಯೂಸುಗಳನ್ನು ಓದಿ ಆನಂದ ಸಾಗರದಲ್ಲಿ ತೇಲುತಿದ್ದರು!

ಇದಕ್ಕೆ ದೊರಕದಂತೆ ಮಾಡುವುದೂ ಇವರ ಉದ್ದೇಶವಾಗಿದೆ. ಆದರೆ ಚಳವಳವು ಕೂಲಿಕಾರರದಾಗಲಿ, ಬಡವರದಾಗಿರದೆ, ಭಂಡವಾಳಗಾರರಿಗೆ ವಿರೋಧವಿರದೆ, ಜರೇ ಕಂದಾಯ ಬಡಾವಣೆಯ ವಿರೋಧವಿರುವುದರಿಂದ ಈ ರಿಪೋರ್ಟರರ ಸುಳ್ಳು ಕಲ್ಪನೆಯು ಹೊರತೋರದಿರದು. ರಿಪೋರ್ಟರರು ಬರ್ಡೋಲಿಗೆ ಹೋಗಿ ಅಲ್ಲಿಯ ಸತ್ಯಾಗ್ರಹಿಗಳ ಉಪ್ಪನ್ನ ತಿಂದು, ಅವರ ಸಹಾಯದಿಂದ ಊರು ತಿರುಗಿ ಅಲ್ಲಿಯ ದೀನಸ್ಥಿತಿಯ ಅನುಭವಮಾಡಿಕೊಂಡು, ತನ್ನ ಕನಿಕರವನ್ನು ವ್ಯಕ್ತಪಡಿಸಿ ಬಂದಿದ್ದರೆಂದು ವಲ್ಲಭಾಯಿ ಪಟೇಲರು ಅವರ ಈ ರಿಪೋರ್ಟಿನ ವಿಷಯದಲ್ಲಿ ಮಾತಾಡುವಾಗ ಹೇಳಿದರು. ಇಷ್ಟು ಉಪಕೃತರಾದರೂ ಈ ರಿಪೋರ್ಟರರು ಹೊರ ಬಂದು ಸತ್ಯಾಗ್ರಹಿಗಳ ಮೇಲೂ ಜನತೆಯ ಮೇಲೂ ಸುಳ್ಳು ಅಪವಾದಗಳನ್ನು ಹೊರಿಸಲು ಹಿಂಜರಿಯಲಿಲ್ಲ. ರೈತರು ಬಡವರಲ್ಲ, ಇವರ ಹತ್ತಿರ ತುಂಬಾ ಹಣವಿದೆಯೆಂದೂ, ಸತ್ಯಾಗ್ರಹಿಗಳು ದೈನ್ಯದ ಜೀವನವನ್ನು ನಡಿಸುವರಾದರೂ ಹಣವನ್ನು ದುರ್ವ್ಯಯಪಡಿಸುವರೆಂದೂ ಇವರು ಸೂಚಿಸುವರು. ಇವರ ರಿಪೋರ್ಟಿನೊಳಗಿನ ಅಸಂಬದ್ಧತೆಗಳೇ ಇವರ ಸುಳ್ಳುತನಕ್ಕೆ ಸಾಕ್ಷಿಯಾಗಿವೆ.

ಶಾಲಿವಾಹನಶಕ ೧೮೫೦ನೆಯ ವಿಭವ ಸಂ|ದ ಆಷಾಢ ಬ| ೪ ಶನಿವಾರದಿಂದ ವಿಭವ ಸಂ|ರದ ಆಷಾಢ ಬ| ೧೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ವೃಷಭ (ದೇಶ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ	ಸೂರ್ಯ ಅಸ್ತ
7	ಶನಿ	೪	೯.೨	ಶತಭಿಷಾ	೫೪.೨	೨೩	6.11	7.0
8	ರವಿ	೫	೬.೧೬	ಪೂ. ಭಾ.	೫೨.೧೬	೨೪	6.11	7.0
9	ಸೋಮ	೬	೨.೩೦	ಉ. ಭಾ	೪೯.೩೦	೨೫	6.12	7.0
10	ಮಂಗಳ	೮	೫೨.೩೧	ರೇವತೀ	೪೬.೩೨	೨೬	6.12	7.0
11	ಬುಧ	೯	೪೬.೪೬	ಅಶ್ವಿನೀ	೪೨.೪೬	೨೭	6.12	7.0
12	ಗುರು	೧೦	೪೦.೪೪	ಭರಣೀ	೩೮.೪೪	೨೮	6.12	7.0
13	ಶುಕ್ರ	೧೧	೩೪.೩೨	ಕೃತ್ತಿಕಾ	೩೪.೩೨	೨೯	6.12	7.0

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
29	88—2	74—8	0—06	—
30	88—0	72—2	0—18	—
1	85—3	74—3	1—52	—
2	84—2	74—3	0—78	—
3	86—8	73—8	0—99	—
4	84—5	74—3	0—59	—
5	87—2	75—3	0—01	—
				30—79

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ತುರಿ ...	7—8	8—4
ಹೊಸ ಗುಡ್ಡು ...	6—10	7—6
ಸುಗ್ಗಿ ...	6—4	7—1
ಹೊಸ ರಾಶಿ ...	6—4	6—14
ಊರ ಅನ್ನಲ್ ಬೆಳ್ತಿಗೆ ...	7—8	8—8
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—10	13—4
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7—8	7—10
ಗೋದಿ ಗೋಣಿ ೧ಕ್ಕೆ ...	16—8	18—8
ಹುರುಳಿ ಗೋಣಿ ೧ಕ್ಕೆ ...	8—8	10—8
ಕಡಲೆ ಗೋಣಿ ೧ಕ್ಕೆ ...	10—0	12—8
ತೊಗರಿ ಗೋಣಿ ೧ಕ್ಕೆ ...	14—4	14—12
ತೊಗರಿಬೇಳೆ ಗೋಣಿ ೧ಕ್ಕೆ ...	18—8	27—0
ಉದ್ದು ಗೋಣಿ ೧ಕ್ಕೆ ...	13—8	14—0
ಹೆಸರು ಗೋಣಿ ೧ಕ್ಕೆ ...	13—0	14—8
ಊರು ಬೆಲ್ಲ ಖಂಡಿ ೧ಕ್ಕೆ ...	65—8	70—0
ಉಪ್ಪು ಗೋಣಿ ೧ಕ್ಕೆ ...	4—10	5—4
ಕೊಬ್ರಿ ಖಂಡಿ ೧ಕ್ಕೆ ...	130—0	—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	40—0	40—8
ಎಳ್ಳಿಂಡಿ ಖಂಡಿ ೧ಕ್ಕೆ ...	32—8	40—0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—12	9—12
ಎಳ್ಳೆಣ್ಣೆ ಮಣ ೧ಕ್ಕೆ ...	8—4	8—6
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7—2	8—0
ಮೋರಿಸ ಸಕ್ಕರೆ ಮಣ ೧ಕ್ಕೆ ...	4—4	4—5
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4—8	6—12
ಸಾಸಿವೆ ಮುಡಿ ೧ಕ್ಕೆ ...	8—0	8—4
ಕೊತ್ತಂಬರಿ ಮುಡಿ ೧ಕ್ಕೆ ...	6—8	7—6
ಕಾಫಿ ಖಂಡಿ ೧ಕ್ಕೆ ...	375—0	410—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ...	170—0	210—0
ಕಾಳುಮೆಣಸು ಖಂಡಿ ೧ಕ್ಕೆ ...	510—0	515—
ಪವಲಕ್ಕಿ ಮಣ ೧ಕ್ಕೆ ...	70—0	80—0
ಗೇರುಬೀಜ ಮುಡಿ ೧ಕ್ಕೆ ...	4—6	—
ಕಬ್ಬಿಣ ಖಂಡಿ ೧ಕ್ಕೆ ...	37—8	40—0
ತಾಂಮ್ರ ತಗಡು ೧ಕ್ಕೆ ...	15—0	16—8
ತಾಂಮ್ರ ಪಾತ್ರೆಗಳು ಮಣ ೧ಕ್ಕೆ ...	20—0	21—
ಚೀನಿಬೆಳ್ಳಿ ಸೇರು ೧ಕ್ಕೆ ...	15—0	—
ಹಿತ್ತಾಳೆ ತಗಡು ಮಣ ೧ಕ್ಕೆ ...	15—0	16—8
ಸವನು ೧ಕ್ಕೆ ...	13—8	13—8
ಹುಣಸೆ ಹುಳಿ ಖಂಡಿ ೧ಕ್ಕೆ ...	75—0	91—5

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ || ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ದಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"



ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾಮಿನಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉಚ್ಚತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಶಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಫುಕ್ಕಟೆಯಾಗಿ ಕಳುಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್	ಸ್ಥಾಪಿತವಾದದ್ದು	ಟೆಲಿಫೋನ್ ನಂ.
99 ನಾಗಾದೇವಿ ರಸ್ತೆ.	1909	23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ. ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!
ರೋಗವೆಂಬ ವಿಧಿಆಪತ್ತನ್ನು ಪರಿಹರಿಸಿಕೊಳ್ಳನೋಡಿ!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಬಂಧುಗಳೇ, ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.
ಕ್ರಯ—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.

ಭಗಿನಿಗಳೇ!
ಸೊರಗಿರುವ ಶಿಶುವಿನ ನೋಟವು
ಹೆತ್ತವರಿಗೆ ಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?

ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ಮಾರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
22628 ನಂಬ್ರ 2. ಮಂಗಳೂರು ದ. ಕ.

ಹಾತ್ತಾತಾಳ್ವತಿ ಪೊಳೊಚ್ಯಾಕ ಕಾನ್ನಡಿ ಇತ್ಯಾಕ?
ಏಕಪಂತ ಅಮ್ಮೆಲ್ಯಾಗಿ ವ್ಯಾಪಾರು ಕೆಲ್ಯಾರಿ ಕಳ್ಳಾವೆ?

ಎಲ್ಲಾ ತರದ ಕವಿರಾಜರ ಔಷಧ, ಸುಗಂಧ ದ್ರವ್ಯಗಳು, ರಬ್ಬರ್ ಚಡ್ಡಿ, ಕ್ಷೌರದ ಸಾಮಗ್ರಿ, ಆಡುವ ಸಾಮಾನು, ಹಾರ್ಮೋನಿಯಮ್, ಶುದ್ಧ ಕಸ್ತೂರಿ, ಬೂಟೀಸು, ಬನಿಯನು, ಬಾಚಣಿಗೆ, ಮತ್ತು ಎಲ್ಲಾ ತರದ ಜವುಳಿ ಇತ್ಯಾದಿ ಸರ್ವಜನೋಪಯುಕ್ತ ವಸ್ತುಗಳು ಮಾರಾಟಕ್ಕಿವೆ. ಕೆಟಲಾಗಿಗೆ ಇವತ್ತೆ ಬರೆಯಿರಿ. ಅಥವಾ ಸ್ಟೋರ್ಸನ್ನು ಸಂದರ್ಶಿಸಿರಿ.

— 24 ತಾಸಿನ ಒಳಗೆ ಮುಟ್ಟುವಂತೆ ಔಷಧ ಇತ್ಯಾದಿಗಳನ್ನು ಕಳುಹಿಸುತ್ತೇವೆ. —

ಕವಿರಾಜರ ಮದ್ದಿಗೆ ಪ್ರತಿ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ಸರ್ವ ಕರ್ನಾಟಕಕ್ಕೆ ನಾವು ಪ್ರಧಾನ ಆಯುರ್ವೇದ ಔಷಧ ಏಜಂಟರು,

ದಿ ಉಡುಪಿ ಸ್ಟೋರ್ಸ್,
ಕುಂಬಳೆ ರಾಘವೇಂದ್ರರಾವ್
2628 ಉಡುಪಿ, ದ. ಕನ್ನಡ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ
O. P. No. 60/1928.

ವಾಸುದೇವ—ಮ್ಯಾನರ
1. ಶ್ರೀನಿವಾಸಪ್ರಭು, 2. ಗೌರಮ್ಮ—ಅರ್ಜಿದಾರರು.

ಮೇಲ್ಕಂಡ ಮ್ಯಾನರನ ಆಸ್ತಿಯ ವ ದೇಹದ ಗಾರ್ಡಿಯನನಾಗಿ 1ನೇ ಅರ್ಜಿದಾರನನ್ನು ನೇಮಕ ಮಾಡಬೇಕೆಂತ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ಕೊಟ್ಟ ಅರ್ಜಿಯನ್ನು ತನ್ನಿ ಬಗ್ಗೆ ತಾ. 10—7—28ಕ್ಕೆ ಪೂರ್ವಾಹ್ನ 11 ಗಂಟೆಗೆ ಇಟ್ಟಿರುತ್ತದೆ. ಆಕ್ಷೇಪಯುದ್ಧವರು ಅವರವರ ಆಕ್ಷೇಪಗಳನ್ನು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಹ್ಯಾಜಿರುಮಾಡಿಕೊಳ್ಳತಕ್ಕದ್ದು.

Mangalore, 28—6—1928. } M. Ramakrishnachar, Vakil for Petr.

— ವಿಶ್ವವಿದ್ಯಾಲಯಗಳಲ್ಲಿ ಮಿಲಿಟರಿ ಶಿಕ್ಷಣವನ್ನು ಪ್ರಾರಂಭಿಸುವ ದಕ್ಕಾಗಿ ಇನ್ನೂ ಚರ್ಚೆಯು ನಡೆಯುತ್ತಲಿದೆ. ಇನ್ನೂ ಅದು ನಿಶ್ಚಯ ವಾಗಿಲ್ಲ.

— ಪಂಜಾಬಿನ ಕುಲುರಾಜ್ಯದಲ್ಲಿ ಕೊಲೆರಾ ರೋಗವು ಪ್ರಾರಂಭ ವಾಗಿ ಇದು ವರೆಗೆ ೮೪೭ ಜನರು ಮೃತಪಟ್ಟರು. ಒಟ್ಟಾರೆ ಕೊಲೆರಾ ರೋಗವು ತಟ್ಟಿದುದು ೧೩೬೦ ಜನರಿಗೆ.

— ಅಖಿಲ ಭಾರತೀಯ ಹಿಂದೀ ಪರಿಷತ್ತು ಮಜಾಫರಪುರದಲ್ಲಿ ನಡೆಯಿತು. ಪ್ರಾರಂಭದಲ್ಲಿ ಹಿಂದೀ ಉರ್ದು ಭಾಷೆಗಳೊಳಗೆ ವ್ಯತ್ಯಾಸ ವಿಲ್ಲವೆಂದೂ, ಅಕ್ಷರಗಳು ಮಾತ್ರ ಬೇರೆ ಬೇರೆಯೆಂದೂ ಅಧ್ಯಕ್ಷರು ವಿವ ರಿಸಿದರು. ಈ ಸಮಯದಲ್ಲಿ ಒಂದು ಚಿಕ್ಕ ನಾಟಕವನ್ನಾಡಲು ತಯಾ ರಾಗಿತ್ತು. ಆದರೆ ನಟ ವರ್ಗದವರಲ್ಲಿ ಕಲಹವಾಗಿ ಆರು ಜನರು ಗಾಯ ಹೊಂದಿದ ಕಾರಣ ನಾಟಕವನ್ನು ಅಭಿನಯಿಸದೆ ಇರಬೇಕಾಯಿತು.

— ಮದರಾಸಿನಲ್ಲಿ ಜನಸಂದಣಿಯು ದಟ್ಟವಾದ ಸ್ಥಳಗಳಲ್ಲಿ ಘಂಟೆಗೆ ೧೦ ಮೈಲಿನಂತೆಯೂ, ಜನರ ಸಂಖ್ಯೆಯು ವಿರಳವಾಗಿರುವ ಸ್ಥಳಗಳಲ್ಲಿ ಘಂಟೆಗೆ ೧೫ ಮೈಲಿನಂತೆಯೂ ಬಸ್ಸುಗಳನ್ನೋಡಿಸಬೇಕೆಂದು ಸರಕಾರದವರ ಹುಕುಂ ಹೊರಟಿರುತ್ತದೆ.

— ಅಮೀರರು ಕಳೆದ ೨೯ನೇ ತಾರೀಕಿನ ದಿನ ಪತ್ನಿಯನ್ನೊಡ ಗೂಡಿ ಕೆಂದಹಾರಿಗೆ ಬಂದು ತಲಪಿದರು. ಅವರು ಬಂದೊಡನೆ ೩೧ ಗುಂಡು ಗಳು ಹಾರಿಸಲ್ಪಟ್ಟವು. ಪ್ರೇಕ್ಷಕರು ಹೂವುಗಳನ್ನು ಸುರಿದರು. ಅಮೀ ರರು ಮೊದಲು ದೇವಾಲಯವನ್ನು ಸಂದರ್ಶಿಸಿ ಅನಂತರ ಫಲಾಹಾರವನ್ನು ಮಾಡಿದರು. ಅವರೂ ಅವರ ಪತ್ನಿಯರೂ ಸಂತೋಷದಿಂದಿದ್ದರು. ಇತರ ರಾಜ್ಯಗಳಲ್ಲಿ ಆದ ಆಡಳಿತೆಯ ಅಭಿವೃದ್ಧಿಯನ್ನು ಕಲಿಯುವುದ ...

— ಕಲೆಕ್ಟರರ ಪರಿಷತ್ತು ಕಳೆದ ಸೋಮವಾರ ದಿನ ಉದಕಮಂಡಲ ದಲ್ಲಿ ಪ್ರಾರಂಭಿಸಿತು. ಚರ್ಚಿಸಲೋಸುಗ ೩೦ ವಿಷಯಗಳು ಮುಂದಕ್ಕೆ ತರಲ್ಪಟ್ಟಿದ್ದವಂತೆ. ಈ ಪರಿಷತ್ತಿಗೆ ಸಂಸ್ಥಾನದ ಮುಖ್ಯ ಮುಖ್ಯ ಜಿಲ್ಲೆ ಗಳ ಕಲೆಕ್ಟರರುಗಳು ಬಂದಿದ್ದರು.

ದಕ್ಷಿಣ ಕನ್ನಡ.

ಮಂಗಳೂರು: — ಇದೇ ಬರುವ ೮ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಮಂಗಳೂರು ಗಣಪತಿ ಹ್ಯಾಸ್ಕೂಲಿನ ಸಭಾಸದನ ದಲ್ಲಿ, ದಕ್ಷಿಣ ಕನ್ನಡ ಭಾರತ ಯುವಕ ಮತ್ತು ಯುವತಿ ಸಂಘಗಳ ಆಶ್ರಯದಲ್ಲಿ ಜಿಲ್ಲಾ ಸರ್ಜನ್ ಲೆಫ್ಟಿನೆಂಟಕರ್ನಲ್ ಡಿ. ಗಣಪತಿ ಐ. ಎಮ್. ಎಸ್. ರವರು "ಯುವಕ ಜೀವಿತಾದರ್ಶಗಳು" ಎಂಬುದರ ಕುರಿತು ಒಂದು ಭಾಷಣವನ್ನು ಕೊಡುವರು. ಈ ಸಂದರ್ಭದಲ್ಲಿ ಶ್ರೀ ಎ. ಬಿ. ಶೆಟ್ಟರು, ಅಧ್ಯಕ್ಷರಾಗಲು ಒಪ್ಪಿರುವರು.

ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಕಳೆದ ತಾರೀಕು ೧ನೇ ಆದಿತ್ಯವಾರ ಒಂದು ವಿವಾಹವು ನಡೆಯಿತು. ವರನು, ಸೆಟ್ಟಿಗಾರ ಜಾತಿಯ ೨೩ ವರುಷ ಪ್ರಾಯದ ಶ್ರೀಯುತ ಯಂ. ಗೋವಿಂದಾರ್ಯರು. ವಧುವು ಮೊಗವೀರ ಜಾತಿಯ ೧೬ ವರುಷ ಪ್ರಾಯದ ನಾಗಮ್ಮ ಎಂಬ ವಳು. ಪೌರೋಹಿತ್ಯವನ್ನು ಶ್ರೀಯುತರುಗಳಾದ ಮೋಹನಪ್ಪ ತಿಂಗಳಾ ಯರೂ ಲಕ್ಷ್ಮಣ ನಾಯ್ಕರೂ ಜರಗಿಸಿದರು.

ಇಲ್ಲಿಯ ಸ್ಟೇಶನ್ ಹೌಸ್ ಆಫೀಸರರಾದ ಶ್ರೀ ಕೆ. ಪದ್ಮಪ್ಪನವರು ...

ಕುರ್ಚಿಪಳ್ಳಿ: — ಇಲ್ಲಿಯ ರೈಲ್ವೆ ಸ್ಟೇಶನಿಗೆ ಸದ್ಯದಲ್ಲೇ ಕೆಲವು ದುರುಸ್ತಿ ನಡೆಯುತ್ತದಂತೆ. ಆ ಕಾಲದಲ್ಲೇ ಇನ್ನೊಂದು ಲ್ಯಾಂಡು ಇರಗೊಡಿಸಿ ಗೂಡ್ಸ್ ಶೆಡ್ಡನ್ನು ಕಟ್ಟಲಾರರೇ?

ವಿವಿಧ ಸಮಾಚಾರಗಳು.

ಮುಂಬಾಯಿಯಿಂದ ಲಂಡನಿಗೆ ಮೋಟರ್ ಪ್ರಯಾಣ!

ಮೇಜರ್ ಸಿನ್‌ಕ್ಲೇರ್ ಮತ್ತು ಕೆಪ್ಟನ್ ಕೋಲ್‌ಮೇನ್ ಎಂಬಿಬ್ಬರು ಮೋಟಾರಿನ ಮೇಲೆ ಕುಳಿತು ಮುಂಬಾಯಿಯಿಂದ ಹೊರಟು ಸೀದಾ ಪ್ರಯಾಣ ಮಾಡಿ ಮೊನ್ನೆತಾನೆ ಲಂಡನಿಗೆ ತಲಪಿರುವರು. ಅವರೊಡ ನಿದ್ದುದು ೧೫-೯ ಕುದುರೆ ಶಕ್ತಿಯ ಸಣ್ಣ ಮೋರಿಸ್ ಒಕ್ಸ್‌ಫೋರ್ಡ್ ಕಾರು. ಫೆಬ್ರುವರಿ ತಿಂಗಳ ನಡುವಿನಲ್ಲಿ ಅವರು ಮುಂಬಾಯಿಯಿಂದ ಹೊರಟರು. ಮೊದಲವರು ಪೇಶಾವರಕ್ಕೆ ಹೋಗಿ ಖೈಬರ್ ಕಣಿವೆ ಯನ್ನು ಹಾದು ಅಫಘಾನ ರಾಜ್ಯದ ಗಡಿಗೆ ತಲಪಿದರು. ಗಡಿಯ ಮಾರ್ಗ ವಾಗಿಯೇ ದಕ್ಷಿಣಕ್ಕೆ ತಿರುಗಿ ದೇರಾಇಸ್ಮಾಯಿಲ್‌ಖಾನ್‌ನ್ನು ಸೇರಿ, ಅಲ್ಲಿಂದ ಮರುಭೂಮಿಯನ್ನು ದಾಟಿ, ಮುಲ್ತಾನನ್ನು ಸಂದರ್ಶಿಸಿ, ಕ್ವೆಟ್ಟಾ ಪಟ್ಟಣಕ್ಕೆ ಹೋದರು. ಅಲ್ಲಿಂದ ಪರ್ಶಿಯಕ್ಕೆ ಹೋಗಬೇಕಾದರೆ, ಹಾದಿಯಲ್ಲಿ ಹಲವು ನದಿಗಳಿದ್ದ ಕಾರಣ ರೈಲಿನಲ್ಲಿ ಹೋಗಬೇಕಾಯಿತು. ಪರ್ಶಿಯದಲ್ಲಿ ಪ್ರಯಾಣಮಾಡಲು ಅವರಿಗೆ ಬಹಳ ತೊಂದರೆಯಾಯಿತು. ಆದರೂ ಅವರು ಎದೆಗುಂದಲಿಲ್ಲ. ಎತ್ತರದ ಕಣಿವೆಗಳು, ಮೊನಲೇ ಕಾರಿನಷ್ಟು ಅಗಲವಾಗಿಲ್ಲ, ಮಾತ್ರವಲ್ಲದೆ ಹಾದಿಯಲ್ಲಿ ಒಂಟೆ ಪ್ರಯಾಣಿ ಕರು ಅವರನ್ನು ತಡೆಗಟ್ಟುತ್ತಿದ್ದರು. ಅವರೊಡನೆ ಮೆಲ್ಲನೆ ಸಮಾಧಾನ ...

Chikmagalur Public Conveyance Motor Service
CHIKMAGALUR.

THE CANARA PUBLIC CONVEYANCE CO. LTD., MANGALORE.

ಇದು ದಕ್ಷಿಣ ಕನ್ನಡ ಜಿಲ್ಲೆಯ ...

ಮಧ್ವಾಚಾರ್ಯರ ಜನ್ಮಸ್ಥಾನವಾದ ...

ಕೊಲ್ಲೂರು ಮೂಕಾಂಬಿಕಾ ದೇವಿಯು

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ...

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ...

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Publi cConveyance Co., Ltd., Mangulore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾತಾತ್ಪರ್ಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಅನೇಕವನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾರಿ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವುದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ. ಮರ ಚಾಂಚಲ್ಯವುಳ್ಳ ಸ್ತ್ರೀಯಳು ಪರಪುರುಷರನ್ನು ಅಪೇಕ್ಷಿಸದಂತೆ ಮಾಡುವ ಕ್ರಮ,- ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಶೀಘ್ರಾಸ್ಖಲವಾಗುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೭ಆಣೆ.

೧೨೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿಪ್ರನ್ಯಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ಸಿಕ್ಕುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸಭರಿತವಾದ ೧೨೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಗಳೆಯುವದಕ್ಕೊಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳುವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೭ಆಣೆ.

೧೦೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀಚರಿತ್ರೆ.

ಇದರಲ್ಲಿರುವ ಯಾವತ್ತೂ ಚಂತ್ರಿಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚಂತ್ರಿಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀಯರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ಕುಟ್ಟಿಣಿಯರು ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೆ ಗಂಡನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ವೇಶ್ಯಾಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುವ ಅನೇಕ ಅದ್ಭುತ ಉಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಹಾಸ್ಯರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಮಾಡುವಾಗಲೂ ಅವರ ಕಾರು ಹಾದಿಯಲ್ಲಿ ಒಮ್ಮೆಯಾದರೂ ಹಾಳಾದ್ದಿಲ್ಲ, ನಿಂತುಹೋದುದಿಲ್ಲ. ಇವರ ಧೈರ್ಯವಾದರೊ ಅಸಾಮಾನ್ಯ ರೀತಿಯದಾಗಿದೆ.

• • • •

ಖರಗಪುರದ ಭೀಕರವಾದ ದೊಂಬಿ.

ಕಳೆದ ಶುಕ್ರವಾರ ಮತ್ತು ಶನಿವಾರ ದಿನ ಖರಗಪುರದಲ್ಲಿ ಭಯಂಕರವಾದ ಒಂದು ದೊಂಬಿಯು ನಡೆಯಿತು. ದೊಂಬಿಯ ಒಂದು ಪಕ್ಷದವರು ಸಿಕ್ಕರು ಮತ್ತು ಹಿಂದುಗಳು; ಇನ್ನೊಂದು ಪಕ್ಷದವರು ಮುಸಲ್ಮಾನರು. ಫಲತಃ ೧೫ ಜನರು ಮೃತಪಟ್ಟು ೨೫ ಜನರು ವಿಶೇಷವಾಗಿ ಗಾಯಹೊಂದಿರುವರು. ಮೊಹರಮಿನ ಮೆರವಣಿಗೆಯ ಸಮಯದಲ್ಲಿ ಹಿಂದೂ ದೇವಾಲಯಗಳ ಎದುರು ಮುಸಲ್ಮಾನರು ಗಾಯನ ಹಾಡಬಾರದೆಂದು ಹಿಂದುಗಳ ಮತವಾದ ಕಾರಣ, ಅಧಿಕಾರಿಗಳು ಅದೇ ಪ್ರಕಾರ ಮುಸಲ್ಮಾನರಿಗೆ ಹುಕುಮನ್ನು ಕೊಟ್ಟರು. ಮುಸಲ್ಮಾನರೂ ಅದಕ್ಕೆ ಒಪ್ಪಿದರು. ಸಿಕ್ಕರ ಗುರುದ್ವಾರದ ಸಮೀಪವಿರುವ ಪಳ್ಳಿಯಲ್ಲಿ ಶುಕ್ರವಾರ ದಿನ ಸಂಜೆ ಮುಸಲ್ಮಾನರು ಒಟ್ಟಾಗಿ, ದೇವಸ್ಥಾನದ ಎದುರಿನಿಂದ ಒಂದು ಶವವನ್ನು ಕೊಂಡೊಯ್ಯಲು ಹವಣಿಸಲು ಸಿಕ್ಕರು ಅದನ್ನು ತಡೆದರು. ಪೋಲೀಸರು ಕೂಡ ಮೆರವಣಿಗೆಯಾಗದಂತೆ ಹುಕುಮನ್ನು ಕೊಟ್ಟರು. ಇದಾದೊಡನೆ ಸಿಕ್ಕರು ಮತ್ತು ಹಿಂದುಗಳು ಸಮೀಪದ ಬಯಲಿನಲ್ಲಿ ಸಭೆಕೂಡಿದರು. ಸಮೀಪದಲ್ಲಿಯೇ ಮುಸಲ್ಮಾನರ ಸಭೆಯೊಂದೂ ನಡೆಯಿತು. ಕಲ್ಲುಗಳ ಬಿಸಾಟವು ಪ್ರಾರಂಭವಾಗಿ ಕೊನೆಗವರು ಕೈಗೆ ಕೈಹತ್ತಿ ಕಾದಾಡತೊಡಗಿದರು. ಇವನ್ನು ನಿಲ್ಲಿಸಲು ಸರಕಾರಿ ಅಧಿಕಾರಿಗಳು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಅಂದು ಉಂಟಾದ ಮರಣಗಳು ೯ ಮಾತ್ರ.

ಮರುದಿನವೂ ಕಲಹವು ಮುಂದರಿಯಿತು. ಮುಸಲ್ಮಾನರ ಮನೆಯನ್ನು ಸಿಕ್ಕರೂ, ಸಿಕ್ಕರ ಮತ್ತು ಹಿಂದುಗಳ ಮನೆಯನ್ನು ಮುಸಲ್ಮಾನರೂ ಪ್ರವೇಶಿಸಿ ಹಲವು ಹೆಂಗೆಸು ಮಕ್ಕಳನ್ನು ಕೊಂದುಹಾಕಿದರು. ಆದರೆ ಅಂದೇ ಮಿಲಿಟರಿ ಸೈನ್ಯವು ಅಲ್ಲಿಗೆ ಬಂದಕಾರಣ ದೊಂಬಿಯು ಶಾಂತತೆಯನ್ನು ಹೊಂದಿತು. ಸೈನ್ಯವು ಬಾರದೆ ಇರುತ್ತಿದ್ದರೆ ಇನ್ನಷ್ಟು ಭಯಂಕರ ಕೊಲೆಗಳು ನಿಸ್ಸಂಶಯವಾಗಿ ನಡೆಯುತ್ತಿದ್ದವು.

• • • •

ಐಯರ್‌ಲೆಂಡಿನಲ್ಲಿ ಎಸ್. ಶ್ರೀನಿವಾಸ ಅಯ್ಯಂಗಾರರು.

ಕಳೆದ ವಾರದಲ್ಲಿ ರಾ। ಎಸ್. ಶ್ರೀನಿವಾಸ ಅಯ್ಯಂಗಾರರು ಆಯರ್‌ಲೆಂಡನ್ನು ಸಂದರ್ಶಿಸಿದರು. ಅಲ್ಲಿ ಎಲ್ಲಾ ಪಕ್ಷಗಳ ಜನರೂ ಬಹುವಾಗಿ ಅವರನ್ನು ಸತ್ಕರಿಸಿದರು. ರಿಪಬ್ಲಿಕಿನ ಲೀಡರರೂ, ಫ್ರೀ ಸ್ಟೇಟ್ ಆಫೀಸಿಯಲರೂ ಅವರನ್ನು ತಮ್ಮವರೆಂದೇ ಎಣಿಸಿ ಸನ್ಮಾನಿಸಿದರು. ಗವರ್ನರ ಜನರಲರಾದ ಮೆಕ್‌ನೈಟ್ ಮತ್ತು ಅವರ ಪತ್ನಿಯವರು ಕೂಡ ಇವರನ್ನು ಆದರಾತಿಥ್ಯದಿಂದ ಸತ್ಕರಿಸಿ ಸರಕಾರಿ ಗೃಹದಲ್ಲಿ ಔತಣಕ್ಕೆ ಆಮಂತ್ರಿಸಿದರು. ಔತಣದ ಸಮಯದಲ್ಲಿ ಪರಸ್ಪರರೊಳಗೆ ಬಹಳ ಸಂಭಾಷಣೆಯು ನಡೆದು—ಸಂಭಾಷಣೆಯ ಮುಖ್ಯಾಂಶವಾದರೂ ಹಿಂದೂದೇಶದ ವಿಷಯವಾಗಿಯೇ ಇದ್ದಿತು—ತದನಂತರ ಶ್ರೀ। ಅಯ್ಯಂಗಾರರು ಕೊಸಗ್ರೇವರ ಭೇಟಿಯನ್ನು ಪಡೆದು, ಅವರೊಡನೆಯೂ ಹಿಂದೂದೇಶದ ವಿಷಯವಾಗಿ ಬಹುವಾಗಿ ಚರ್ಚಿಸಿದರು. ಹೀಗೆಯೇ ಅವರು ಅನೇಕರನ್ನು ಭೇಟಿಯಾಗಿ ಸಂಭಾಷಿಸಿದರು. ಪ್ರತಿಯೊಬ್ಬರೂ ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟಕ್ಕಾಗಿ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಕೊನೆಯಲ್ಲಿ ಶ್ರೀ। ಅಯ್ಯಂಗಾರರು ರಿಪಬ್ಲಿಕಿನ ನಾಯಕರಾದ ಡಿವೇಲೆರಾರವರನ್ನು ಸಂದರ್ಶಿಸಿ ಅವರೊಡನೆ ಬಹಳ ಹೊತ್ತು ಸಂಭಾಷಣೆಯನ್ನು ಮಾಡಿದರು. ಇಂಗ್ಲೆಂಡಿನಲ್ಲಿ ಇವರು ಒಂದು ತಿಂಗಳು ಇದ್ದರು ಆಯರ್‌ಲೆಂಡಿನಲ್ಲಿ ಅವರಿದ್ದುದು ಕೇವಲ ಎರಡೇ ದಿನಗಳು ಮಾತ್ರ. ಆದರೆ ಅಷ್ಟು ಸಣ್ಣ ಅವಧಿಯಲ್ಲಿ ಅವರು ಆಯರ್‌ಲೆಂಡಿನಲ್ಲಿ ಹಲವರೊಡನೆ ಸ್ನೇಹವನ್ನು ಸಂಪಾದಿಸಿದರು. ಆದರೆ ಇಂಗ್ಲೆಂಡಿನಲ್ಲಿ ಅವರಿಗೆ ಅಷ್ಟು ಜನರು ಮಿತ್ರರುಗಳು ಲಭಿಸಲಿಲ್ಲ. ಒಟ್ಟಾರೆ ಹೇಳುವದಾದರೆ ಹಿಂದೂದೇಶಕ್ಕೆ ಅಭೇದ್ಯ ಸ್ವಾತಂತ್ರ್ಯವು ಲಭಿಸಬೇಕೆಂದು ಆಯರ್‌ಲೆಂಡಿನವರು ಹಾತೊರೆಯುತ್ತಿರುವರೆಂದು ಶ್ರೀಯುತ ಅಯ್ಯಂಗಾರರು ಕಂಡುಹಿಡಿದು ಆನಂದಪಡುತ್ತಿರುವರು.

• • • •

ಅಫಘಾನ ಅಮೀರರ ಪುನರಾಗಮನ.

ಅಫಘಾನ ಅಮೀರರಾದ ಅಮಾನುಲ್ಲರವರು ತನ್ನ ಯುರೋಪು ಸಂಚಾರವನ್ನು ಮುಗಿಸಿ ಕಾಬೂಲಿಗೆ ಬರುವಾಗ ಅವರನ್ನು ಎದುರುಗೊಳ್ಳಲು ಮಾಡಿದ ತಯಾರಿಯು ಬಹು ಉಚ್ಚತರವಾಗಿದೆ. ಕಾಬೂಲಿನಲ್ಲಿ ಮಾತ್ರವಲ್ಲ, ಕಂದಹಾರ, ಘಜನಿ ಮೊದಲಾದ ಸ್ಥಳಗಳಲ್ಲಿಯೂ ಇದೇ ರೀತಿ ತಯಾರಿಯು ಭರದಿಂದ ನಡೆದಿರುತ್ತದೆ. ಪ್ರತಿಯೊಂದು ಅಂಗಡಿಗೆ ಪಟ್ಟಿ ರಂಗನ್ನು ಬಳಿದು, ಪ್ರತಿಯೊಂದರಲ್ಲಿಯೂ ಅಮೀರರು ಬಂದಾಗ ಹದಿನೆರಡು ದೀಪಗಳಿಗಿಂತ ಕಡಿಮೆ ಹಚ್ಚಬಾರದೆಂದು ಮುನಿಸಿಪಾಲಿಟಿಯವರ ಅಪ್ಪಣೆಯಾಗಿರುವುದು. ಕಾಬೂಲಿನಲ್ಲಿ ಮಾರ್ಗಗಳಲ್ಲಿ ಕಮಾನುಗಳನ್ನು ಅಲ್ಲಲ್ಲಿ ಕಟ್ಟಿಸಿರುವರು. ಹೆಂಗಸರ ಪರವಾಗಿಯೂ, ಒಂದು ಸುಂದರವಾದ ಕಮಾನನ್ನು ಕಟ್ಟಿಸಿರುವರು. ದೇಶದ ಧುರೀಣರು ಪ್ರತಿಷ್ಠಿತ ಮನುಷ್ಯರೂ ಅಮೀರರನ್ನು ಎದುರುಗೊಳ್ಳುವ ಸಲುವಾಗಿ ಕಾಬೂಲಿಗೆ ಬಂದು ಸೇರುತ್ತಿರುವರು. ಘಜನಿಯಲ್ಲಿ ಅಮೀರರನ್ನು ಮಂತ್ರಿಗಳ ಒಂದು ಡೆಪ್ಯುಟೇಶನು ಎದುರುಗೊಳ್ಳುವುದು. ಅಲ್ಲಿಂದ ಅವರು ಕಾಬೂಲಿಗೆ ಬರುವ ತನಕ ಮೇಲಿನಿಂದ ವಿಮಾನಗಳನ್ನು ಹಾರಿಸಿ ಅಮೀರ ದಂಪತಿಗಳ ಮೇಲೆ ಎಡೆಬಿಡದೆ ಹೂಮಳೆಯನ್ನು ಸುರಿಸುವರು. ಅಮೀರರು ಬರುವ ಹಾದಿಯಲ್ಲಿ ಕಟ್ಟಿಸಿದ ಕಮಾನುಗಳಲ್ಲಿ ಮೊದಲನೆಯದು ರಾಜ್ಯದ ಪರವಾಗಿ, ಎರಡನೆಯದು ಸರಕಾರದ ಪರವಾಗಿ, ಮೂರನೆಯದು ವಿದ್ಯಾ ಇಲಾಖೆಯವರದು. ನಾಲ್ಕನೆದು ಹೆಂಗಸರದು. ಐದನೆಯದು ಮುನಿಸಿಪಾಲಿಟಿಯದು. ಆರನೆ ಮತ್ತು ಏಳನೆಯ ಕಮಾನುಗಳು ಮಂತ್ರಿಮಂಡಲದವರದು. ಈ ಕಮಾನುಗಳಿಗೆ ಧ್ವಜಗಳನ್ನು ಕಟ್ಟುವರು. ಹೆಂಗಸರ ಕಮಾನಿಗೆ ನಾನಾ ಬಣ್ಣಗಳ ವಸ್ತ್ರಗಳನ್ನು ಕಟ್ಟುವರು ದಿಲ್‌ಕುಶ್ ಅರಮನೆಯಲ್ಲಿ ಅಮೀರರಿಗೆ ಪ್ರಥಮ ಔತಣವಾಗುವುದು, ಮಾರುದಿನ ವಿದ್ಯಾಮಂತ್ರಿ ಮಂಡಲದವರಿಂದ ಒಂದು ಔತಣವು ಕೊಡಲ್ಪಡುವದು, ಮೂರನೆಯ ದಿನ ಕಾಬೂಲು ಮುನಿಸಿಪಾಲಿಟಿಯವರ ಸಂಭ್ರಮದ ಔತಣವಾಗುವುದು.

ಇದರಂತೆಯೇ ಸೊರಿಯಾ ರಾಣಿಯನ್ನು ಎದುರುಗೊಳ್ಳುವುದಕ್ಕಾಗಿ ಸ್ತ್ರೀಯರು ಒಳ್ಳೆಯ ತಯಾರಿಯನ್ನು ಮಾಡಿರುವರು. ರಾಣಿಯವರಿಗೂ ಕೂಡ ಹೆಂಗಸರಿಂದ ಒಂದೆರಡು ಔತಣಗಳು ಕೊಡಲ್ಪಡುವವು.

ಬರ್ಡೋಲಿ ರೈತರ ಅಸಾಮಾನ್ಯ ಧೈರ್ಯ.

ಸತ್ಯಾಗ್ರಹ ಪಬ್ಲಿಸಿಟಿ ಆಫೀಸಿನ ಸೆಕ್ರೆಟರಿಯವರು ಈ ರೀತಿ ಪ್ರಕಟಿಸಿರುವರು. "ಬರ್ಡೋಲಿ ಸತ್ಯಾಗ್ರಹಿಗಳೊಡನೆ ಸಹಾನುಭೂತಿಯನ್ನು ತೋರಿಸಿದ ಕಾರಣ ಅಲ್ಲಿಯ ಉಪಾಧ್ಯಾಯರನ್ನು ಹಲವು ಕಡೆಗೆ ಟ್ರಾನ್ಸ್‌ಫರ್ ಮಾಡಿರುವುದು ಸರ್ವರಿಗೂ ತಿಳಿದಿದ್ದ ವಿಷಯ. ಸುರತ್ ಶಾಖೆಯ ಡಿಪ್ಯುಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರು ಬಂದು, ಉಪಾಧ್ಯಾಯರುಗಳಿಂದ ಬರಬೇಕಾದ ತೆರಿಗೆಯನ್ನು ಕೂಡಲೇ ವಸೂಲು ಕೊಡಬೇಕೆಂದು ನೋಟೀಸು ಕೊಟ್ಟಿದ್ದರು. ನೋಟೀಸಿನ ಸಾರಾಂಶವಾದರೂ ಈ ರೀತಿಯಾಗಿತ್ತು. "ನಿಮ್ಮಿಂದ ಬರಬೇಕಾದ ತೆರಿಗೆಯನ್ನು ಕೂಡಲೇ ಕೊಡಬೇಕೆಂದು ಕಲೆಕ್ಟರರ ಹುಕುಮಿನಿಂದ ಈ ನೋಟೀಸು ಕಳುಹಿಸಲ್ಪಟ್ಟಿರುತ್ತದೆ. ಸೂಚಿಸಿದ ಅವಧಿಯೊಳಗೆ ನೀವು ತೆರಿಗೆಯನ್ನು ಕೊಡದೆ ಹೋದರೆ ನಿಮ್ಮ ಆಸ್ತಿಯನ್ನು ಕಳಕೊಳ್ಳಬೇಕಾಗುವದರಿಂದ ಅದನ್ನು ಬೇಗನೆ ಕೊಟ್ಟುಬಿಡಿರಿ!" ಈ ನೋಟೀಸಿಗೆ ಹೆದರಿ ಮನೇಲಿಪುರದಲ್ಲಿ ಒಬ್ಬರು ತೆರಿಗೆಯನ್ನು ಕೊಟ್ಟು ಅದನ್ನು ಅದಷ್ಟು ರಹಸ್ಯವಾಗಿಡಲು ಪ್ರಯತ್ನಿಸಿದರು. ರಹಸ್ಯವು ಪ್ರಕಟವಾದೊಡನೆ ತನ್ನ ನೀಚ ಕೃತ್ಯಕ್ಕಾಗಿ ಕ್ಷಮೆಯನ್ನು ಬೇಡಿದರು. ಪಶ್ಚಾತ್ತಾಪವು ಹೆಚ್ಚಿ ತನ್ನ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟು ಸತ್ಯಾಗ್ರಹ ನಿಧಿಗೆ ೧೫ ರೂಪಾಯಿ ವಂತಿಗೆಯನ್ನೂ ಕೊಟ್ಟರು. ರೈತರು ಸರಕಾರದವರಿಗೆ ಸೊಪ್ಪುಹಾಕುವಂತಿಲ್ಲ. ಆದರೂ ಜಪ್ತಿ ಆಫೀಸರರ ಕೆಲವು ಕೃತ್ಯಗಳು ಅವರಿಗೆ ಕಷ್ಟತರವಾಗುವವು. ಇಸ್ರೋಲಿಯ ಮಾಧವಜಿತ್ತು ಎಂಬವನೋರ್ವನು ತೆರಿಗೆಯನ್ನು ಕೊಡಲಿಲ್ಲವೆಂದು ೧೨೫ ರೂಪಾಯಿ ಕ್ರಯಬಾಳುವ ಆತನ ಒಂದು ಜೋಡು ಎತ್ತನ್ನು ಬರೇ ೧೫ ರೂಪಾಯಿಗಳಿಗೆ ಏಲಂ ಹಾಕಿ ಆ ರೂಪಾಯಿಗಳನ್ನು ಆತನ ತೆರಿಗೆಯ ಲೆಕ್ಕಕ್ಕೆ ಜಮಾ ಬರೆದು ಆತನಿಗೊಂದು ರಶೀದಿಯನ್ನು ಕಳುಹಿಸಿದರು. ಇದರಿಂದ ಕುಪಿತನಾದ ಆತನು ಒಂದು ಪತ್ರದೊಡನೆ ಆ ರಶೀದಿಯನ್ನೂ ವಾಪಾಸು ಕಳುಹಿಸಿದನು. ಪತ್ರವು—"ನೀವು ೧೨೫ ರೂಪಾಯಿ ಕ್ರಯಬಾಳುವ ಒಂದು ಜೋಡು ಎತ್ತುಗಳನ್ನು ಬರೇ ೧೫ ರೂಪಾಯಿಗಳಿಗೆ ಮಾರಿ ರಶೀದಿಯನ್ನು ಕಳುಹಿಸಿರುವದನ್ನು ನೋಡಿದರೆ, ನಿಮ್ಮ ವರ್ತನಕ್ಕೆ ಏನೆನ್ನಬೇಕೆಂದು ನನಗೆ ಹೊಳೆಯುವುದಿಲ್ಲ. ಇದು ಮಾನವಂತನಾದ ರೈತನನ್ನು ಅಪಮಾನಗೊಳಿಸಿದಂತೆಯೇ ಸರಿ. ಅಷ್ಟೇ ಅಲ್ಲದೆ ಆ ಹಣವನ್ನು ನನ್ನ ಒಪ್ಪಿಗೆ ಇಲ್ಲದೆ ನೀವಾಗಿ ತೆರಿಗೆಯ ಲೆಕ್ಕಕ್ಕೆ ಜಮಾಬರಕೊಳ್ಳುವಿರಿ. ಆದರೆ ನನಗೆ ಈ ರಶೀದಿಯನ್ನು ಸ್ವೀಕರಿಸಲು ಮನಸೊಪ್ಪದ ಕಾರಣ ಅದನ್ನು ನಿರಾಕರಿಸಿರುತ್ತೇನೆ" ಎಂದಿತ್ತು.

ಬರ್ಡೋಲಿಯನ್ನು ಸಂದರ್ಶಿಸಿದ ಹೃದಯನಾಥ ಕುಂಜ್ರುರವರು ಹೇಳುವರು—"ಎಲ್ಲಿ ಹೋದರೂ ಗಂಡಸರಾಗಲಿ, ಹೆಂಗಸರಾಗಲಿ, ಮಗುವಾಗಲಿ, ದುಃಖದ ಸೂಚನೆಯನ್ನು ತೋರ್ಪಡಿಸುವದಿಲ್ಲ. ಅವರ ಮುಖದ ಮೇಲೆ ವೀರತ್ವವು ಒಡೆದು ತೋರುವುದು. ಅವರಂತೆಯೇ ಹಿಂದೂಸ್ಥಾನದ ಎಲ್ಲಾ ಜನರು ಅಷ್ಟೇ ವೀರರಾಗಿ ಧೈರ್ಯದಿಂದಲೂ ಒಕ್ಕಟ್ಟಿನಿಂದಲೂ ಇರತೊಡಗಿದರೆ ಸ್ವರಾಜ್ಯದೊರಕಲು ಹೆಚ್ಚು ಹೆಣಗಾಡಲು ಅವಶ್ಯವಿಲ್ಲ" ಎಂದು. ನಿಜವಾಗಿಯೂ ಬರ್ಡೋಲಿಯ ರೈತರು ಸರಕಾರದವರಿಗೆ ಧೈರ್ಯದಿಂದ ಎದೆಯೊಡ್ಡಿ ನಿಂತುದು ಪ್ರತಿಯೊಬ್ಬನಲ್ಲಿಯೂ ಅವರ ಕುರಿತು ಗೌರವವನ್ನು ಹುಟ್ಟಿಸುವದು.

ಪಂಡರಿ ಮಹಾತ್ಮೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಯೇಕಚಂದ್ರನೆ ಸಾಕು ಸೃಷ್ಟಿಗ । ನೇಕ ನಕ್ಷತ್ರಂಗಳ್ಯಾತಕೆ । ಯೇಕ ಪುತ್ರ ಗುಣಾಢ್ಯ ಸಾಲನೆ ಬೇರೆ ಮಾತೇನು ॥ ಯೇಕ ಪತ್ನಿಯು ವ್ರತದೊಳಿರುತಿರ । ಲ್ಯಾಕೆ ಮಿಕ್ಕಿಹ ಸ್ತ್ರೀಯರೆಲ್ಲರು । ಯೇಕ ಸಾಧುವೆ ಸಾಕು ಲೋಕಕೆ ಹಿತವನೆಸಗಲಿಕೆ ॥ ೨೪ ॥ ಘನ್ನ ಘಾತಕ ಚೋರ ಕರುಪರ । ರನ್ನು ಬಾಧಿಸುತಿಹ ದುರಾತ್ಮರು । ತನ್ನನೇ ತಾ ನರಿಯದಾ ಹಂಕಾರದಲಿ ನಡದು॥ ಯೆನ್ನ ನೆಲೆಗಳ ನರಿವರೆಲೆಗುಣ । ವರ್ಣಿಸಲಿಕತಿ ಭಕ್ತರಲ್ಲದೆ । ಇನ್ನು ಪೇಳುವದೇನೆನಗೆ ನಿಜಭಕ್ತರೇ ಮುಖ್ಯಾ ॥೨೫॥ ಭಕ್ತರೆನಗಾಧೀನರನುಪಮ । ಭಕ್ತರೆನಗತಿ ಪಾವನರು ನಿಜ । ಭಕ್ತರೆನ್ನಯ ಜೀವನರು ಮಮಬಂಧು ಬಾಂಧವರೂ ॥ ಭಕ್ತರೆನ್ನಯ ಆತ್ಮರಾಮರು । ಭಕ್ತರೆನ್ನಯ ದೇವದೇವರು । ಭಕ್ತರಿಲ್ಲದೆ ನಿಲ್ಲಲಿಕೆ ತಾವಿಲ್ಲವೆನಗೆಂದಾ ॥ ೨೬ ॥ ಭಕ್ತರೊಳಗೆ ಮಹೋತ್ತಮೋತ್ತಮ । ಭಕ್ತವರ ತ್ರೈಲೋಕ್ಯರಾಜಿಪ । ಭಕ್ತನೀನೇ ಪುಂಡರೀಕ ಪುರಾಣ ಸಿದ್ಧದಲಿ ॥ ಭಕ್ತರರಸನೆ ಬಾರೆನುತಸ । ಪ್ರೋತ್ತಮಾಚ್ಯುತನಪ್ಪಿದನು ಸುಜ । ನೋತ್ತಮರೊಳಿನ್ನೇನು ಧನ್ಯನೊ ಪುಂಡಲೀಕಮುನಿ ॥ ೨೭ ॥ ನೋಡಲಿನ್ನೇನ್ ಪುಂಡಲೀಕಗೆ । ಕೂಡಿದೈಶ್ವರ್ಯಕ್ಕೆ ಸರಿಯು । ಲ್ಲಾಡುವರು ನವಲಕ್ಷಗೋಪಾಲಕರುಗಳ ಸಹಿತಾ ॥ ಕೂಡೆ ನಲಿದನು ವಿಠಲನನು ಕೊಂ । ಡಾಡುವಾಶ್ರಿತರಿದಿರೆ ಸಾರಿಯ । ಮಾಡುತಿಹನೀ ಪರಿಯ ಪಂಚಕ್ರೋಶದೊಳಗೊಲಿದೂ ॥ ೨೮ ॥ ಪಂಚಕ್ರೋಶದೊಳೆಸವ ತೀರ್ಥಪ್ರ । ಪಂಚಮಹಿಮೆಯ ವರ್ಣಿಸಲ್ಕೆ ವಿ ।ರಿಂಚಿ ಮೊದಲಾದವರಿಗರಿದು ಮಹಾತುಮನ ಲೀಲೆ ॥ ಪಂಚಕ್ರೋಶದೊಳಿರುವ ಶಿಲೆ ತೃಣ । ಕಿಂಚಿತದ ವೃಕ್ಷಾದಿಗಳು ಸುರ । ಸಂಚಯಾಕೃತಿಯಲ್ಲದಿಲ್ಲವು ಕ್ರಿಮಿಕುಲವು ಸಹಿತಾ ॥ ೨೯ ॥ ಯೆಸೆವ ಮೊಸರನ್ನಗಳನುಣುತಲಿ । ಕುಶಲದಲಿ ಗೋವಳರು ಸಹಿತಲಿ । ಕುಸುಮನಯನನೊಳಾಡುತಾಡುತ ಬಾಲಕೇಳಿಯಲಿ ॥ ಪಶುಗಳನು ಕಾದಿರ್ಪನನುದಿನ । ಮಿಸುನಿಕೊಳಲೋದುತಲಿ ಮಿಗೆ ರಂ । ಜಿಸುವ ನಕ್ಷತ್ರದಲಿ ಬಲುತರ ಬಾಲಲೀಲೆಯಲಿ ॥ ೩೦ ॥ ಧರಣಿಯುಟ್ಟಂಗಿಯಲಿ ರೂಪವ । ಧರಿಸಿ ನೆಲಸಿರುತಿಹನು ವರ ಶ್ರೀ । ಹರಿಯತಿ ಸಮಚರಣದಲಿ ಕಟಿಯೊಳಗಿಟ್ಟು ಕರವೆರಡಾ ॥ ಮೆರೆವ ಘನಲಾವಣ್ಯದಲಿ ಸುರ । ವರನರೋರಗರಲ್ಲಿ ಸೇವೆಯ । ಬರುತ ಮಾಡುತಲಿಪ್ಪರುರುತರ ನಾಮಕೇಳೆಂದಾ ॥ ೩೧ ॥ ಇದು ಪುರಾತನ ಕಥೆಗಳನು ಶ್ರೀ । ಮದಲಿ ವರ್ಣಿಸದೇಕನುತ ಜಿ । ತ್ತದಲಿ ತಪಗಿರುತಿರ್ದದದಕತಿ ಪಾತ್ರನೀವೆಂದೂ ॥ ವದರಿದೆಯ ನೀ ಧನ್ಯನೆನುತಲಿ । ಪದುಮಲೋಚನನಪ್ಪಿದನು ವೋ । ಹದಲಿ ಮುದ್ದಿಸಿ ನಾಮದೇವನನಧಿಕ ಕರುಣದಲಿ ॥ ೩೨ ॥ ಚೋದವಕ್ಕಿಯೊಳೊರತೆ ಪುಟ್ಟಿತು । ಮೋದಮಯನಾನಂದಭಾಷ್ಪದಿ । ಸಾಧು ಜನರೀಕ್ಷಿಸುತ ಬೆರಗಾದರು ಪುರಂತರದೀ ॥ ಶ್ರೀಧರಾಚ್ಯುತ ಜಯವೆನುತ ಹರು । ಷೋದಯದಿ ಪೂ ಮಳೆಯ ಬರಿಸಿದ । ರಾದಿ ವಿಠ್ಠಲದೇವನಂಗದೊಳಮರರಭ್ರದಲಿ ॥ ೩೩ ॥ ಬಳಿಕ ಮತಿಯುತ ನಾಮದೇವನು । ನಳಿನನಾಭನ ಚರಣದಲಿ ನಿ । ರ್ಮಳ ಮನಸ್ಸಿಲಿ ಶಿರವನಿಟ್ಟೇಕಾಗ್ರಚಿತ್ತದಲಿ ॥ ಕಳಕಳಿಸು ತೀರ್ದನು ಸಮಸ್ತರು । ತಿಳಿದುಕೇಳುತಲಿರ್ದ ಶ್ರೀ ವಿ । ಠ್ಠಲನು ಭಕ್ತರಿಗೊಲಿದನೆಂಬೀ ಪಾವನದ ಕಥೆಯಾ ॥ ೩೪ ॥ ಧರೆಗೆ ಪಾವನವೆನಿಸುತತಿ ಪಂ । ಢರದಿ ನಿರ್ಮಾಣವನು ಮಾಡಿದ । ನರಿತು ತನಾಶ್ರಿತರಿಗೆಂದನು ಮೂಲವಿಸ್ತರದಾ ॥ ತರಣಿ ಚಂದ್ರಮರಿರುವ ತನಕವು । ಸ್ಥಿರವು ತ್ರೈಲೋಕಕ್ಕೆ ತಾರಕ । ಪರಮಹಾ ಪಂಡರಿಯ ಕ್ಷೇತ್ರಮಹಾತ್ಮೆಯದುಭುತವೂ ॥ ೩೫ ॥ ಇದು ಸದಾಭಕ್ತರಿಗೆ ಜೀವನ । ಇದು ನಿರಂತರ ಪತಿತಪಾವನ । ಇದು ಮಹಾಮೋಕ್ಷಕ್ಕೆ ಸಾಧ್ಯ ಕಳಂಕನಾಶನವೂ ॥ ಇದುವೆ ಜನ್ಮದಿ ಬಂದ ಪ್ರಾಣಿಗ । ಳೊದಗಿ ಬಂದೀ ಯಾತ್ರೆಗೈದರೆ । ಮುದದಿ ಸಾಯುಜ್ಯಕೆ ನಿಶಾನಿಯನಿಟ್ಟು ಬಾಳುವರೂ ॥ ೩೬ ॥ ಭಾಗವತರಿಗೆ ತವರು ಮನೆ ಭವ । ರೋಗಿ ಮುಖ್ಯರಿಗಳುವು ಪರಿಹರ । ವಾಗುವದು ಬಂದೊಮ್ಮೆ ಕಂಡವನೆಲ್ಲ ಸಂಸಾರಾ ॥ ಯೋಗಿ ಜನರುತ್ತಮರು ಬಲ್ಲಿದ । ರಾಗಮದ ಮೋಕ್ಷಗಳು ಮಿಗೆ ಘನ । ಯೋಗಿ ಸಾಧನ ಜನಕೆ ದಕ್ಷಿಣ ದ್ವಾರಕಾಪುರವೂ ॥ ೩೭ ॥ ಜ್ಞಾನ ರತ್ನಸುರೌಘಕೆನಿಪ ನಿ । ದಾನ ಸಂಜೀವನದ ಮಣಿ ಸೂ । ತ್ರಾಣಿ ನಕ್ಷತ್ರಗಳವರ ಕಟ್ಟಾಣಿ ಕಲ್ಯಾಣಿ ॥ ದೀನ ಚಿಂತಾಮಣಿಯು ಘನಗುಣ । ಹೀನ ಜಿಂಪ್ಪದ ವಾಣಿನಿಧ ಕ । ಟ್ಯಾಣಿ ನಿಧಿ ಪಂಡರಿಯ ಕ್ಷೋಣಿ ಪವಿತ್ರ ಸತ್ರಾಣಿ ॥ ೩೮ ॥ ವಿಪುಲ ಪೃಥ್ವೀಧ್ರಮಣವ್ಯಾತಕೆ । ಜಪತಪಾನುಷ್ಠಾನವ್ಯಾತಕೆ । ಗುಪಿತದಲಿ ಗಿರಿಗುಹೆಗಳಲ್ಲಿರಲೇಕೆ ಮೌನದಲಿ ॥ ಕಪಟನಾಟಕ ಸೂತ್ರಧಾರನು । ಅಪರಿಮಿತ ಗುಣಭರಿತ ಮೋಕ್ಷಾಧಿಪತಿ ಪಂಡರಿ ಪಾಂಡುರಂಗನ ದರ್ಶನವೆ ಸ್ವರ್ಗಾ ॥ ೩೯ ॥ ಶೀಲಗುಣ ಸಂಪನ್ನ ಶ್ರೀಗೋಪಾಲಬೋಧಕನಿದನು ರಚಿಸಿದ । ಮೂಲಕಥನವನರಿತು ಕನ್ನಡದಲ್ಲಿ ತಿಳಿವಂತೆ ॥ ಲಾಲಿಸುವ ಸುಜನರ್ಗೆ ಭಕ್ತಿ ವಿ । ಶಾಲಕರಿಗರುಹಿದೆನು ಶ್ರೀ ಹರಿ। ಲೀಲೆಗಳ ಕೇಳುವುದು ಸರ್ವಾರಿಷ್ಟ ಪರಿಹರವೂ ॥ ೪೦ ॥ ಪ್ರಾಸಪದಗಣಯತಿಗಳನು ಧಿಟ । ಪ್ರಾಸುಲಕ್ಷಣಗಳನು ।ನಾನಿಂ। ನ್ನೇಸನರಿಯೆನು ನಾಮವೊಂದೇಬಲವು ಭಕ್ತರಿಗೆ ॥ ದೂಷಕರು ಕಂಡಿದನು ಲುಬ್ಧಾ । ವೇಶದಲಿ ನಿಂದಿಸಿದರೇನಹ । ದಾಸನಾತನ ವಿಠಲ ದೇವನ ಚರಿತೆಗೆಣೆಯುಂಟೇ ॥ ೪೧ ॥ ತಿದ್ದುವುದು ಕವಿಜನರು ಭಕ್ತರು । ಶ್ರದ್ಧೆಯಲಿ ಕೇಳುವುದು ಭಾವತೆ । ಯೋದ್ಧೆ ಸಕಲಿಷ್ಟಾರ್ಥಗಳ ಪಾಲಿಸುವುದೀ ಕಥನಾ॥ ಮುದ್ದು ವಿಠ್ಠಲನೆನಲು ದೋಷವು । ಹೊದ್ದದಿದರೊಳು ಸಂಶಯವು ಗುರು । ಮಧ್ವದಾಸನ ವಚನರಚನಾನಂದ ಸುಜನರ್ಗೆ ॥ ಶರಣಚರಣದ ಕಿರಣವನು ಧಾ । ಸುರಮಣಿ ಪ್ರಚಯವನು ಲೋಕದೊ । ಳರಿಯದವ ನಾಲಗೆಯ ಮಾಡಲು ಹಿಂದು ಮುಂದಾಗೀ ॥ ಧರೆಯೊಳಧಿಕ ಪರೀಕ್ಷೆಗಾರರು । ಮೆರೆವ ರತ್ನಂಗಳನು ಸೋಲಿಸು । ವರೆ ಹರಿಯ ಕಥೆದೊಡ್ಡಿತಲ್ಲದೆ ಯವನ ಘನವೇನೂ ॥ ೪೩ ॥ ಚಂದ್ರಭಾಗಸುತೀರ್ಥವನುಗುಣ । ಸಾಂದ್ರವಿಠ್ಠಲನಂಘ್ರಿಯನು ಬುಧ । ಚಂದ್ರನಾದ ಶ್ರೀ ಪುಂಡರೀಕನ ಪಾದಯುಗಳವನೂ ॥ ನಿಂದಿರುವ ನವಲಕ್ಷ ಗೋವ್ಗಳ । ವೃಂದ ಗೋಪಾಲಕರ ಸಹ ನೆನೆ । ದೊಂದು ಬಾರಿ ನಮೋಯೆನಲು ಕೃತಕೃತ್ಯರಾಗುವರೂ ॥ ೪೪ ॥ ಪಂಡರೀರಾಯನ ಮಹಾತ್ಮೆಯ । ಪಂಡಿತರು ಬರೆದೋದಿ ಕೇಳಲು । ದಂಡಿಸುವ ದುರಿತಾಳಿ ಕಡೆಯಿಂ ಕೆಡದು ಕರುಣದಲಿ ॥ ಕಂಡು ಸಕಲಿಷ್ಟಾರ್ಥವಿತ್ತು । ದ್ದಂಡ ಗುರು ಮಧ್ವೇಂದ್ರ ಕೃಷ್ಣ ಪ್ರ । ಚಂಡ ವಿಠ್ಠಲದೇವ ನೊಲಿದುದ್ಧರಿಸಿ ಸಲಹುವನೂ ॥ ೪೫ ॥ ಶರಧಿಯೊಳು ಸಂಚರಿಸಿ ಶೈಲವ । ಧರಿಸಿ ಭೂಮಿಯ ನೆಗಹಿ ಕಂಭದಿ । ಭರದಿ ಬಂದಾ ಬಲಿಯ ಗರ್ವವ ಮುರಿದು ಕ್ಷತ್ರಿಯರಾ ॥ ತರಿದು ಶರಧಿಯ ಕಟ್ಟಿ ಪಶುಗಳ । ಪೊರೆದು ಸತಿಯರ ವ್ರತವ ಭಂಗಿಸಿ । ತುರಗವೇರಿದ ಕಲ್ಕಿವಿಠ್ಠಲನೆಂದು ಪೊಗಳುವುದೂ ॥ ೪೬ ॥ ಪುಂಡರೀಕಾಕ್ಷಂಗೆ ಮಂಗಲ । ಚಂಡದೈತ್ಯಾಂತಕಗೆ ಮಂಗಲ । ಪುಂಡಲೀಕನಿಗೊಲಿದ ವಿಠಲಗೆ ನಿರತ ಮಂಗಲವೂ ॥ ಖಂಡಪರಶು ಪ್ರಿಯಗೆ ಮಂಗಲ । ಕುಂಡಲೀಶಾಧಿಪಗೆ ಮಂಗಲ । ಪಂಡಜಧ್ವಜ ಮಧ್ವಪತಿ ಕೃಷ್ಣಗೆ ಸುಮಂಗಲವೂ ॥ ೪೭ ॥

ಐದನೇ ಅಧ್ಯಾಯ ಸಂಪೂರ್ಣ.

[ಪಂಡರಿ ಮಹಾತ್ಮೆ ಸಂಪೂರ್ಣ.]

ಯೋಗಕ್ಕೆ ಬರುವಂತಾಗಬೇಕು. ಈ ವಿಷಯಗಳಲ್ಲಿ ಅಗಾಧ ಪರಿಶ್ರಮ ಮಾಡುವ ಅಗತ್ಯವು ನಮಗಿದೆ.

ತಾವೆಲ್ಲ ಆಯುರ್ವೇದಜ್ಞರು ಇಲ್ಲಿ ಉಪಸ್ಥಿತರಾಗಿರುವಿರಿ. ಆಯುರ್ವೇದದ ಪುನರುಜ್ಜೀವನಕ್ಕಾಗಿ ಶ್ರೇಷ್ಠತಮ ವಿಚಾರಗಳನ್ನು ಮಾಡಲು ನೆರೆದು ಬಂದಿರುವಿರಿ. ಉಭಯ ಲೋಕಹಿತಕಾರಕವಾದ ಆಯುರ್ವೇದದ ಪರವಾಗಿ ತಮ್ಮ ಸನ್ನಿಧಿಯಲ್ಲಿ ನಾನು ಹೇಳಿಕೊಳ್ಳಬೇಕಾಗಿರುವುದನ್ನು ಹೇಳಿಕೊಂಡೆನು. ಆಯುರ್ವೇದದ ಅಧ್ಯಯನವೇ ನಮಗೆ ತರ ಹೋಪಾಯವು. ಆಯುರ್ವೇದದಿಂದಲೇ ನಮಗೆ ಚಿರಂತನ ಆರೋಗ್ಯವು. ಇದೇ ಪುಣ್ಯತಮವೇದವು. ದೀರ್ಘದರ್ಶಿಯರೂ ದಿವ್ಯದೃಷ್ಟಿಯುಳ್ಳವರೂ ಆದ ಯಾವ ಋಷಿಗಳು ಮನುಷ್ಯಮಾತ್ರರೊಳಗೆ ಸುಖವನ್ನು ಹೆಚ್ಚಿಸುವ ಈ ವೇದವನ್ನು ನಮಗಾಗಿ ನಿರ್ಮಿಸಿಟ್ಟಿರುವರೋ, ಆ ಋಷಿಗಳೇ ಧನ್ಯರು. ಅವರ ಋಣವೆಂದೆನಿಸಿ, ನಮ್ಮ ಸುಖಕ್ಕಾಗಿ ನಮ್ಮ ಆರೋಗ್ಯಕ್ಕಾಗಿ ರೋಗ ಹರಣಕ್ಕಾಗಿ, ಮತ್ತು ಕೊನೆಯದಾಗಿ ಪುಣ್ಯಸಾಧನವೆಂದಾದರೂ ನಾವು ಆಯುರ್ವೇದದ ಪಠನ ಬೋಧನ ಅನುಷ್ಠಾನಗಳನ್ನು ಮಾಡಲೇ ಬೇಕಾಗಿದೆ.

ಕೊನೆಯದಾಗಿ, ಆಯುರ್ವೇದ ಚಿಕಿತ್ಸೆಯ ಧ್ಯೇಯವನ್ನು ಆ ಮಹಾತ್ಮರ ಮಾತುಗಳಲ್ಲೇ ಹೇಳಿ ನನ್ನ ಈ ಸುದೀರ್ಘವಾದ ಭಾಷಣವನ್ನು ಮುಗಿಸುತ್ತೇನೆ.

ನಾತ್ಮಾರ್ಥಂ ನಾಪಿಕಾರ್ಯಾರ್ಥಂ ಅಥ ಭೂತದಯಾಂ ಪ್ರತಿ ।
ಯೋ ವರ್ತತೇ ಚಿಕಿತ್ಸಾಯಾಂ ಸ ಸರ್ವ ಮತಿವರ್ತತೇ ॥

(ಶ್ರೀ ಮಚ್ಛಂಕರಾಚಾರ್ಯ)

ಯತ್ರ ಯೋಗೇಶ್ವರೋ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋರ್ಭೂತಿ ಧ್ರುವಾನೀತಿರ್ಮತಿರ್ಮಮ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಕರುವಿನ ಮೊರೆ.

(ಗೋವಿನ ಕಥೆಯ ಮಟ್ಟು.)

ಹುಟ್ಟಿ ಬಂದೆನು ಪೆಟ್ಟು ತಿಂದೆನು ।
ಕೆಟ್ಟ ಜನರಲಿ ನೊಂದೆನು ॥
ಬಟ್ಟೆವರಿಯನು ಕಟ್ಟಿ ಕೊರಳನು ।
ಇಟ್ಟರೆನ್ನನು ಬಂಧನ ॥ ೧ ॥

ದೂರ ಪೋಯ್ವರು ನಾರಿ ಬೈದರು ।
ಸೇರಗೊಡರೂ ತಾಯನು ॥
ನಾರಿ ಮೊಲೆಯನು ಹೀರಿ ಹಾಲನು ।
ಹಾರಿ ಬಂದರು ತಡೆಯಲು ॥ ೨ ॥

ಹೊಡೆದರೆನ್ನನು ಬಡೆದು ಬೆನ್ನನು ॥
ಕಡೆಗೆ ಕಂಬಕೆ ಬಿಗಿದರು ॥
ತಡೆಯಲಾರದೆ ನಡೆಯಲಾರದೆ ॥
ಒಡನೆ ಕರೆದೆನು ತಾಯನು ॥ ೩ ॥

ಆಗ ಬಂದಳು ಸಾಗಿತಂದಳು ।
ನಾಗು ತಂಬಿಗೆಯೊಂದನು ॥
ಬೇಗ ಬಿಟ್ಟಳು ಹೋಗಕೊಟ್ಟಳು ।
ಹೇಗೆ ಹುಟ್ಟಿತೊ ಕರುಣೆಯು ॥ ೪ ॥

ಹರುಷಗೊಂಡೆನು ಸರಿದು ಕಂಡೆನು ॥
ಕರೆವ ತಾಯಿಯ ಮುಖವನು ॥
ಸುರಿಯ ಬಿಟ್ಟಳು ಹರುಷ ಪಟ್ಟಳು ॥
ತ್ವರದೆ ಕೊಟ್ಟಳು ಹಾಲನು ॥ ೫ ॥

ಅಕ್ಕರಿಂದಲಿ ಚೊಕ್ಕದಿಂದಲಿ ।
ನೆಕ್ಕುತ್ತಿದ್ದಳು ಬೆನ್ನನು ॥
ಪಕ್ಕ ರಕ್ಕಸಿ ಹೊಕ್ಕು ಸಿಕ್ಕಿಸಿ ।
ಸೊಕ್ಕಿ ಬಿಗಿದಳು ನನ್ನನು ॥ ೬ ॥

ನೋಡಲಾರದೆ ಬೇಡಲಾರದೆ ।
ಕಾಡಲಾರದೆ ತಾಯಿಯು ॥
ಗಾಢ ಗತಿಯಲಿ ಮೂಢ ಮತಿಯಲಿ ।
ಅಡಿಸಿದಳಾ ಕಾಲನು ॥ ೭ ॥

ಶಿರಕೆ ತಾಗಿತು ತರುಣಿ ಕೂಗಿತು ।
ಗರುವನೇರಿತು ಹೆಚ್ಚಿತು ॥
ಕೊಂಡ ಹಿಡಿದಳು ಭರದಿ ಬಡಿದಳು ।
ಕರುಣೆಯಡಗಿತು ತಗ್ಗಿತು ॥ ೮ ॥

ಕುಡಿಯಗೊಡರೂ ನಡೆಯಗೊಡರೂ ।
ಪಡೆಯ ಬಿಡರೂ ಹಾಲನು ॥
ಪಿಡಿದು ಕಟ್ಟುತ ಹೊಡೆದು ಕುಟ್ಟುತ ।
ಕುಡಿದು ಜನರೇ ಬಿಡುವರು ॥ ೯ ॥

ಯಾವ ನೀತಿಯೊ? ಯಾವ ರೀತಿಯೊ? ।
ಯಾವ ನ್ಯಾಯವೊ ದೇವನೆ ॥
ನೋವು ಇಲ್ಲವು ಸಾವು ಇಲ್ಲವು ।
ಕಾವು ಕೇಳುತ ನೊರೆಯನು ॥ ೧೦ ॥

ಕಟಪಾಡಿ ಹೊನ್ನಯ ಶೆಟ್ಟಿ.

ನಿಮ್ಮ ಕನಸು ನಿಜವಾಗುವುದು,

ಮಾತೃಪ್ರೇಮದ ಅನುಭವವನ್ನು ಪಡೆಯಬೇಕೆಂದು ಕುತೂಹಲಿಗಳಾಗಿರುವ ಹೆಂಡಂದಿರು ಸಾವಿರಾರು ಇರುವರು. ಮಗುವಿನ ಕೋಮಲ ಕರಗಳು ತನ್ನ ಮೈ ಮೇಲೆ ಆಡುತ್ತಿರಬೇಕೆಂದು ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಬಹಳ ಅಭಿಲಾಷೆ ಇದ್ದೇ ಇರುವುದು. ಆದರೆ, ಒಮ್ಮೊಮ್ಮೆ ಹೆಂಡಂದಿರಲ್ಲಿ ಅನಾರೋಗ್ಯವಿದ್ದರೆ ಅವರ ಈ ಅಭಿಲಾಷೆಯು ಫಲಿಸಲಾರದು. ಅನಾರೋಗ್ಯವನ್ನು ಹೋಗಲಾಡಿಸಿದರೆ ಅವರ ಕನಸು ನಿಜವಾಗುವದು. ಮದುವೆಯಾಗಿ ಹಲವು ವರ್ಷಗಳ ವರೆಗೆ ಮಕ್ಕಳಿಲ್ಲದೆ ಸೊರಗುತ್ತಿದ್ದು ಕೊನೆಗೆ ಮಕ್ಕಳಾದ ತಾಯಂದಿರಿಂದ ಹಲವು ಪತ್ರಗಳು ನಮಗೆ ಬಂದಿರುತ್ತವೆ. **ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳನ್ನು** ಉಪಯೋಗಿಸಿ ಪ್ರತಿಫಲವಾಗಿ ದೊರಕಿದ ಆರೋಗ್ಯವೇ ಇದಕ್ಕೆ ಕಾರಣವೆಂದು ಅವರೆನ್ನುವರು.

ಈ ಕೆಳಗಿನ ಪತ್ರವನ್ನು ಪ್ರಕಟಿಸಲು ನಾವು ಅಧಿಕಾರಹೊಂದಿರುತ್ತೇವೆ.

"ಫೆಲೂನಾ ಮಾತ್ರೆಗಳನ್ನು ಉಪಯೋಗಿಸಿ ನನ್ನ ಪತ್ನಿಗೆ ಲಭಿಸಿದ ಉಪಕಾರವನ್ನು ನಾನು ಎಂದಿಗೂ ಮರೆಯೆನು. ಅದನ್ನು ಉಪಯೋಗಿಸಲು ಪ್ರಾರಂಭಿಸಿದಂದಿನಿಂದ ಆವಳ ಜೀವನದಲ್ಲಿ ಒಂದು ಪರಿವರ್ತನೆಯೇ ಉಂಟಾಗಿ, ಅವಳು ಒಂದು ಅಂದವಾದ ಸುಖಿಯಾದ ಶಿಶುವನ್ನು ಪ್ರಸವಿಸಿರುವಳೆಂದು ತಿಳಿಸಲು ನಾನು ಸಂತೋಷಪಡುತ್ತೇನೆ. ಆಕೆಯು ಎಂದಿಗೂ ತಾಯಿಯಾಗಳೆಂದು ನಾನು ತಿಳಿದಾಗ, ನೀವು ಇಂತಹ ಗುಣಕಾರಿಯಾದ ಔಷಧಿಯನ್ನು ಒದಗಿಸುದುದಕ್ಕಾಗಿ ನನ್ನ ಕೃತಜ್ಞತೆಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ"

(ಸಹಿ) ಪಿ. ಇರೆಸ್ಮಸ್.

(ವಿಳಾಸ) ಪಿ. ಜಿ. ಪಾರ್‌ವಿವ್, ಮೌಂಟ್ ಪ್ಲೆಜಂಟ್, ಸಿ. ಪಿ.

ಹೆಂಗಸರಿಗೆ ಹೆಚ್ಚಾಗಿ ಇರುವ ನೋವು, ಬೇನೆಗಳನ್ನು ಹೋಗಲಾಡಿಸಬೇಕಾದರೆ, ಮತ್ತು ದಣುವಾಗುವದನ್ನು ನಿಲ್ಲಿಸಬೇಕಾದರೆ ಈ ಔಷಧಿಯನ್ನು ಸೇವಿಸಬೇಕು. ಇದರಿಂದ ಒಳ್ಳೆಯ, ಕಾಂತಿಯುಕ್ತವಾದ, ಉತ್ಕೃಷ್ಟವಾದ ಆರೋಗ್ಯವು ಲಭಿಸುವದು.

ಇಂಡಿಯಾ, ಬರ್ಮಾ, ಸಿಲೋನ ಎಲ್ಲಾ ಕೆಮಿಷ್ಟರಿಂದಲೂ ಸ್ಟೋರ್ಸ್ಸರಿಂದಲೂ ದೊರಕುವವು.



ಬಾಟಲಿಗೆ ರೂ. 2/4.

ಮುಖ್ಯ ಏಜಂಟರು—
ಪಟೇಲ್ ಮತ್ತು ಧೊಂಡಿ
ಪೋಸ್ಟ್ ಆಫೀಸು
ಬೊಕ್ಸ 838,
ಮುಂಬಾಯಿ.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 78.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್‌ಕಾಸ್ ನಂಬ್ರ 283/1928.

ಉಡುಪಿ ಶ್ರೀ ಶ್ರೀರೂರು ಮಠದ ಆಡಳಿತೆದಾರರಾದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಯರು, ಇವರ ಬಗ್ಗೆ ಜನರಲ್ ಏಜಂಟ್ ಪಿ. ನಾರಾಯಣಾಚಾರ್ಯ—ವಾದಿರು.

ಮತ್ತು

ಕುಲುಸುಂಬಿ ಶ್ಯಾಬುದ್ದಿನ್ ಸಾಹೇಬರ ಮಗಳು, ಉಡಿಪಿ ತಾಲೂಕು ಪಡುತೋನ್ಸೆ ಗ್ರಾಮದ ತಿಮ್ಮಣ್ಣ ಕುದ್ರುಲ್ಲಿರುವವಳು—ಪ್ರತಿವಾದಿಳು.

ಇವರೊಳಗೆ

ವಾದಿರು ಪ್ರತಿವಾದಿಳ ಮೇಲೆ ಮೂಲಗೇಣಿ ಗೇಣಿಬಾಕಿ ಬಡ್ಡಿ ವಗೈರೆ ರೂಪಾಯಿ 253—6—3ಕ್ಕೆ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 23—7—1928ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದಲ್ಲಿ ಉದಾಹರಣೆ ಕೊಡುವ ಬಗ್ಯೆ ಪ್ರತಿವಾದಿಳು ಸ್ವತಃ ವ ವಕೀಲರ ಮೂಲಕವಾಗಿ ತಾರೀಕು 23—7—1928ನೇ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದರೆ ಪ್ರತಿವಾದಿಳ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾಗುವದು.

ಉಡುಪಿ, ತಾ. 2—7—1928. (By order of Court)
Sd/ K. L. Narayana Rao,
Vakil for Plaintiff.

ನೋಟೀಸು.

ತಾರೀಕು 1—6—1928ರಲ್ಲು ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಆಸಾಮಿಯ ಬಾಬ್ತು ಆಭರಣಗಳು ಮಿಜಾರ ಗಣೇಶಪೈಗಳ ಆಫೀಸಿನ ಎದುರುಗಡೆಯಲ್ಲಿ ತಾರೀಕು 30—6—1928ರಲ್ಲು ಏಲಂಮಾಡಿ ಹುಟ್ಟಿಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳೆದು ಉಳಿಯುವ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಸದ್ರಿ ಐವೇಜನ್ನು ಈ ದಿನ ಮಣಿಯಾರ್ಡರು ಮಾಡಿ ಕಳುಹಿಸಿರುತ್ತದೆ.

ತಾ. 12—6—1927ರಲ್ಲು ವ 24—7—1927ರಲ್ಲು ಪದವು ಬಿಕರ್ನಕಟ್ಟೆ ಮೇಗಿನ ಮನೆಯಲ್ಲಿರುವ ಮಂಜಣ್ಣ ಸೆಟ್ಟಿ ಅಳಿಯ ಶೈಲ ಲಕ್ಷ್ಮಣ್ಣಳುವಾ—ಸಾಲದ ಮೊಬಲಗು 2 ಐಟಂಮ್‌ಗಳ ಬಾಬ್ತು ಅಸಲು ಬಡ್ಡಿ ವ ಇತರ ಖರ್ಚು ಕೂಡಾ ರೂಪಾಯಿ 511—0—6—ಏಲಂಮಿನಿಂದ ಹುಟ್ಟಿ ಬಂದ ಮೊಬಲಗು 2 ಐಟಂಮ್‌ಗಳ ಬಾಬ್ತು ರೂಪಾಯಿ 516—4—6—ಬಾಕಿ ಸಲತಕ್ಕ ಮೊಬಲಗು ರೂಪ್ಯಾ 5—4—0ರಲ್ಲಿ 2 ಅಣೆ ಮಣಿಯಾರ್ಡರು ಕಮಿಶನ್ ತೆಗೆದು ರೂ. 5—2—0ನ್ನು ಈ ಆಸಾಮಿಗೆ ಮಣಿಯಾರ್ಡರುಮಾಡಿ ಕಳುಹಿಸಿಯದೆ. ಇನ್ನು ಈತಗೆ ಯಾವ ವಿಧದಿಂದಲೂ ಏನೂ ಸಲ್ಲತಕ್ಕದಿಲ್ಲಾ.

ಮಿಜಾರು ತಿಮ್ಮಪ್ಪೈ.
ತಾ. 3—7—1928.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. No. 61/1928.

1. ಟಿ. ರಾಮಚಂದ್ರ ರಾವ್, 2. ಸುಮಿತ್ರ ರಾವ್—ಮ್ಯಾನರ ಈತನ ಕ್ಷೇಮಚಿಂತಕ ಅಣ್ಣ 1ನೇ ರಾಮಚಂದ್ರ ರಾವ್=ಅರ್ಜಿದಾರರು.

ಮತ್ತು

ಕೆಪ್ಟನ್ ಟಿ. ಪಾಂಡುರಂಗ ರಾವ್ ರೆಸ್‌ಪೊಂಡೆಂಟ

ತಾ. 9—1—1928ರಲ್ಲು ಮಂಗಳೂರು ಶ್ಯಾಹಾರಲ್ಲಿ ಮೃತಪಟ್ಟ ತೊನ್ಸೆ ನಾರಾಯಣರಾಯರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲುಮಾಡುವ ಬಗ್ಯೆ 1ನೇ ಅರ್ಜಿದಾರಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 10—7—1928ಕ್ಕೆ ತನ್ಕಿಗೆ ಇಟ್ಟಿದೆ. ಆ ಬಗ್ಯೆ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ವ್ಯಾದೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರುಪಡಿಸತಕ್ಕದೆಂತ ಈ ಮೂಲಕ ತಿಳಿಸಿರುತ್ತದೆ.

ಮಂಗಳೂರು ತಾ. 4—6—'28. **K. B. Shanker Rao,**
Vakil for Petr.

ನೋಟೀಸು.

ಕಳೆದ ತಾ. 26—6—'28ರಲ್ಲಿ ಕೊಲ್ಲೂರು ಶ್ರೀ ಮುಕಾಂಬಿಕಾ ಅಮ್ಮನವರ ಅರ್ಚಕರು ಮತ್ತು ಮೆನೇಜರರಾದ ಕೆ. ರಾಮಚಂದ್ರ ಅಡಿಗಳೆಂಬವರ ಮನೆಯಲ್ಲಿರತಕ್ಕ ಸದ್ರಿಯವರ ತಮ್ಮನ ಹೆಂಡತಿ ವಿಧವೆ ಫಣಿಯಮ್ಮಯೆಂಬವಳು ಬಹಳ ಸಾಧು, ಮತ್ತು ಸತ್ಯವಂತಳು. ಇವಳಿಗೆ ಪ್ರಾಯ ಸುಮಾರು ವರ್ಷ ೩೭ ಆಗಬಹುದು. ಈ ಫಣಿಯಮ್ಮನಿಗೆ ರಾಮಚಂದ್ರ ಅಡಿಗಳಿಗೆ ವಿರೋಧ ನಡಿಸತಕ್ಕ ನೆರಮನೆವಾಸಿ ಮಾವಿನಕಾರು ಮಂಜುನಾಥ ಭಟ್ಟನೆಂಬವನು ಒಬ್ಬಳು ಕೆಲಸದ ಹೆಂಗಸಿನ ಮುಖಾಂತರ ಒಂದು ಆಲಸ್ಯಕ್ಕೆ ಮುಟ್ಟಿಸುಮಾಡಿ ಹುಶಾರು ಮಾಡುತ್ತೇನೆಂತ ದುರ್ಬೋಧಿಸಿ ಮನೆಯಲ್ಲಿ ಬರಮಾಡಿಕೊಂಡು ನಂಬಿಸಿ ಎರಡು ಖಾಲಿಕಾಗದದಲ್ಲಿ ಎಡದ ಹೆಬ್ಬೆಟ್ಟಿನ ಮೊಹರವನ್ನು ಹಾಕಿಸಿ ಯಾರ ಹತ್ತರವೂ ಹೇಳಬಾರದೆಂತ ಹೇಳಿ ವಾಪಾಸು ಕಳುಹಿಸಿರುತ್ತಾನೆ. ಈ ಫಣಿಯಮ್ಮನು ಇದುವರೇಗೆ ಯಾವದಕ್ಕೂ ದಸ್ಕತು ವಗೈರೆ ಹಾಕಿದವಳೂ ಅಲ್ಲ. ದಸ್ಕತು ಹ್ಯಾಗೆಂಬದನ್ನು ತಿಳಿದವಳೂ ಅಲ್ಲ. ಒಟ್ಟಾರೆ ಮಂಜುನಾಥ ಭಟ್ಟನು ಫಣಿಯಮ್ಮನ ಮೇಲೆ ಯಾ ರಾಮಚಂದ್ರ ಅಡಿಗಳ ಮೇಲೆ ಏನೋ ತೋಹಮತ್ತು ನಡಿಸಬೇಕೆಂತ ಈ ರೀತಿ ಮಾಡಿದ್ದಾಗಿ ತಿಳಿಯುತ್ತದೆ. ಈ ಸಂಗತಿ ಸಕಲರಿಗೂ ತಿಳಿದಿರಬೇಕು.

ಕೆ. ರಾಮಚಂದ್ರ ಅಡಿಗ.

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೇನೇಜರರಲ್ಲಿ ವಿನಂತಿ.

ತಾರೀಕು ೩—೬—೧೯೨೮ರಲ್ಲು ಜರಗಿದ ಜಿಲ್ಲಾ ಸಂಘದ ಮೆಂಬರರ ಮಹಾಸಭೆಯಲ್ಲಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೆ ಟೀಚರ್ ಮೇನೇಜರರ ಪ್ರತಿನಿಧಿ ಮೆಂಬರರಾಗಿ ನಮ್ಮಿಬ್ಬರನ್ನು ಸರ್ವ ಸಮ್ಮತದಿಂದ ಚುನಾಯಿಸಿ, ನೋಮಿನೇಶನ್ ಅರ್ಜಿ ಕೊಡಿಸಿದ ಮೇರೆಗೆ ನಮ್ಮ ಸಭ್ಯ ಮೆಂಬರಿಕೆಯು ಗವರ್ನ್ಮೆಂಟಿನಿಂದ ಮಂಜೂರಾತಿಯಾಗಿ ಆ ಸಮ್ಬಂಧವಾದ ಹುಕುಂ ನಮಗೆ ತಲಪಿರುತ್ತದೆ. ಈ ವಿಷಯದಲ್ಲಿ ಮಹಾಸಭೆಯವರನ್ನೂ ಜಿಲ್ಲಾ ಟೀಚರ್ ಮೆನೇಜರರನ್ನೂ ನಾವು ಕೃತಜ್ಞತೆಯಿಂದ ಅಭಿನಂದಿಸುತ್ತೇವೆ.

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ಹುಕುಂ ಮೇರೆಗೆ ಸಂಘಕ್ಕೆ ವಾರ್ಷಿಕ ವಂತಿಗೆಯನ್ನು ಪ್ರಾಪ್ತಿಮಾಡಿದ ಟೀಚರ್ ಮೇನೇಜರರು ಮಾತ್ರ ಸಂಘದ ಮೆಂಬರರೆನ್ನಿಸಿಕೊಳ್ಳಲ್ಪಡುತ್ತಾರೆ. ತಾ. ೧೫—೫—೧೯೨೮ರ ವರೆಗೆ ಉಡ್ಪಿ ತಾಲೂಕಿನಲ್ಲಿ ೨೫, ಮಂಗಳೂರು ತಾಲೂಕಿನಲ್ಲಿ ೧೩, ಕಾಸರಗೋಡು ತಾಲೂಕಿನಲ್ಲಿ ೧೨, ಕಾರ್ಕಳ ತಾಲೂಕಿನಲ್ಲಿ ೭ ಕೂಡಾ ೫೭ ಮಂದಿ ಮಾತ್ರ ವಾರ್ಷಿಕ ವಂತಿಗೆಯನ್ನು ತೆತ್ತು ಸಂಘದ ಮೆಂಬರರಾಗಿರುತ್ತಾರೆ. ಇತರ ಟೀಚರ್ ಮೆನೇಜರರೂ ಕೊನೆಯ ಪಕ್ಷ ಈ ವರುಷಾಂತ್ಯದೊಳಗೆ ಗ್ರಾಂಟಿನ ರೂಪಾಯಿ ೧ಕ್ಕೆ ಪೈ ೧ರಂತೆ ಆಗುವ ಮೊಬಲಗನ್ನು ವಾರ್ಷಿಕ ವಂತಿಗೆಯಾಗಿ ಸಂಘಕ್ಕೆ ದಯಮಾಡಿ ತೆತ್ತು ಸಂಘದ ಮೆಂಬರರಾಗಬೇಕಾಗಿ ಪ್ರಾರ್ಥಿಸುತ್ತೇವೆ.

— ಸಂಘದ ಮೆಂಬರರ ನ್ಯಾಯವಾದ ಬೇಡಿಕೆಗಳಿಗೂ ಸಂಘದ ನಿರ್ಣಯಗಳಿಗೂ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲು ದಯೆದೋರುವಂತೆ ನಮ್ಮಿಂದ ಸಾಧ್ಯವಾದಷ್ಟು ತಮ್ಮಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡುವೆವೆಂದು ನೇಮ್ಮದಿಸಿಕೊಂಡಿದ್ದೇವೆ.

ಇತಿ ಜಿಲ್ಲಾ ಸಂಘದ ಸೇವಕರಾದ,

(ಸಹಿ) ಕುರುಕಾಲು ಗಣಪಯ್ಯ ಸೆಟ್ಟಿ, (ಪ್ರೆಸಿಡೆಂಟ.)
(ಸಹಿ) ಕೋಟಿಕಾರ್ ಸುಬ್ಬಣ್ಣಯ್ಯ, (ಸೆಕ್ರಿಟರಿ.)

ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಮೆಂಬರರು.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೊ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಆದರಂತೆಯೇ ಬಾಲಾಮೃತ, ಎಗ್ನ್ಯೂ ಮಿಕ್ಸ್ಚರ್, ಮುಲಾಮು, ಸಂಬತ್ತು, ಬಾಮ ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, ಡ್ರಗ್ಸ, ಕೆಮಿಕಲ್ಸ, ಬಾಟಲಿಗಳು, ಬಣ್ಣಗಳು, ಪೆಪರಮಿಟ, ಕ್ರಿಸ್ಟಲ್ ಮತ್ತು ಹೀಕೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1—8—0. ಮೂವರಿ ಪರಿಮಳದ ಸಗಾರ್ಡಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದ್ದಲ್ಲಿ ರವಾನಿಸಲಾದೀತು.

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,
15628 ಮಂಗಳದಾಸ ರೋಡ, ಮುಂಬಯಿ ನಂಬ್ರ ೨.

ಪ್ರಕಟಣೆ.

ಮಂಗಳೂರು ಮುನಿಸಿಪಾಲಿಟಿ ವಳಪಟ್ಟ ಸೊಡಿಯಾಲದೈಲು ವಾರ್ಡಿಲ್ಲು ಮಣ್ಣಗುಡ್ಡೆ ಶಾಲಾ ಮುಂದುಗಡೆ ಇರುವ T. S. No. 624/2ನೇ ಭಾಗ್ಯಾತು ಸ್ಥಳದ ವಿಸ್ತೀರ್ಣ ಸೆಂಟ್ಸು 99, ಇದರ ಗಡಿ ಪೂರ್ವ ಕೂಳೂರು ರಾಜಮಾರ್ಗ; ದಕ್ಷಿಣ ಪಶ್ಚಿಮ ಸರ್ಕಾರಿ ಪೋಣಿ, ಉತ್ತರ ಕಲ್ಲಿನ ಪಾಗಾರ, ಈ ಮಧ್ಯೆ ಇರುವ ದೊಡ್ಡ ಹೆಂಚುಹಾಕಿದ ಮನೆಗಳು, ಧಾವಿ, ಹಟ್ಟಿ ಕೊಟ್ಟಿಗೆ, ಪ್ಯಾಕಾನೆ ಇತ್ಯಾದಿ ಸರ್ವಾದಿಯನ್ನೂ ಖಂಡಿತ ಕ್ರಯಕ್ಕೆ ಮಾರಾಟ ಮಾಡುವರೆ ಆಲೋಚಿಸಿರುತ್ತದೆ. ಕ್ರಯಕ್ಕೆ ಪಡಕೊಳ್ಳುವ ಗಿರಾಕಿಗಳೂ ಇದರ ಹೆಚ್ಚಿನ ಮಾಹಿತಿಯನ್ನು ತಿಳಕೊಳ್ಳುವ ಅಪೇಕ್ಷೆಯುಳ್ಳವರೂ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು;—

ತತ್ತಾಡಿ ರಾಮರಾಯ

(4—3) ಮಣ್ಣಗುಡ್ಡೆ, ಮಂಗಳೂರು.

ತೌಳವ ದೇಶದ ಸ್ತ್ರೀಯರು.

(ಹಿಂದಿನ ಸಂಚಿಕೆಯಿಂದ)

[illegible]

ದೇವದಾಸಿ ಪದ್ಧತಿ.

[illegible]

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಅಯ್ಯಾ,

ಇತ್ತೀಚೆಗೆ "ರಾಷ್ಟ್ರಬಂಧು"ವಿನಲ್ಲಿ "ಸುದ್ದಿಯ ಮುದ್ದಣ್ಣ"ನ ವಾರ್ತೆಗಳು ಬರುತ್ತಿವೆಯಷ್ಟೆ. ಅವುಗಳಲ್ಲಿ ಕೆಲವು ಭಾಗಗಳು ನಮ್ಮನ್ನು ತೀರಾ ಬೇಸರಗೊಳಿಸಿವೆ. ಪತ್ರಕರ್ತರಿಗೆ ಬಾತಮಿದಾರರ ಜವಾಬುದಾರಿಯು ಇಲ್ಲವೆಂಬುದು ನಿಜವಾದರೂ ಸುದ್ದಿಗಾರರ ಜವಾಬುದಾರಿಯು ಇದ್ದೇ ಇದೆಯೆಂದು ತಿಳಿದಿರುವೆವು. ಆದರೆ 'ರಾಷ್ಟ್ರಬಂಧು'ವಿನ ಸಂಪಾದಕರು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಮರೆತಿದ್ದರೆಂದು ನಾವು ವಿಷಾದಿಸಬೇಕಾಗಿದೆ. ಒಟ್ಟಾರೆ ಪತ್ರವು ಹಾಸ್ಯಪ್ರದವಾದರೆ ಜನಪ್ರೀತವಾಗುವದೆಂಬ ನಂಬಿಕೆಯಿಂದ ಅವರು ಮುದ್ದಣ್ಣನ ಅಲ್ಲದಸಲ್ಲದ ಹರಟೆಗಳಿಗೆ ಅವಕಾಶ ಕೊಟ್ಟಂತೆ ಕಾಣುತ್ತದೆ. ಅವರ ಚತೆಯಲ್ಲಿ ಅದು ಪತ್ರಕರ್ತರ ಮನೋಭಾವವನ್ನು ವ್ಯಕ್ತಪಡಿಸುತ್ತದೆಂದೂ ಅರ್ಥವಾಗದೆ? ಇನ್ನು ಸುದ್ದಿಗಾರರಿಗೂ ಪತ್ರಕರ್ತರಿಗೂ ಸಂಬಂಧವಿಲ್ಲವೆಂದು ಅವರು ತಿಳಿಯುವುದಾದರೆ, ಸುದ್ದಿಯ ಮುದ್ದಣ್ಣನಾದರೂ ಇದರ ವಿಚಾರವನ್ನು ಮಾಡಲಿ. ಕಳೆದ ವಾರದ (ತಾ. ೧೮ನೇ) ರಾಷ್ಟ್ರಬಂಧುವಿನ ಉಡುಪಿಯ ಪತ್ರದಲ್ಲಿ ಈ ಎರಡು ವಿಷಯಗಳಿದ್ದುವು. (೧) ಒಬ್ಬ ಬಾಲಕನ ಆಕಸ್ಮಿಕ ಮರಣದ ವಿಚಾರ, (೨) ಸಂಗಮೇಶ್ವರ ನಾಟಕ ಮಂಡಳಿಯ ನಾಟಕ ಶಾಲೆಯು ಮುರಿದು ಬಿದ್ದ ವಿಚಾರ. ಈ ಎರಡು ಅಪತ್ತುಗಳು ದುಃಖಪ್ರದವಾದವು. ಬಾಲಕನ ಆಕಸ್ಮಿಕ ಮರಣವಾಗಲಿ, ಪರಊರ ಒಂದು ಸಂಸ್ಥೆಯು ಇಂಥ ಆಪತ್ತನ್ನು ಅನುಭವಿಸಿ ಉಪವಾಸವಿರಬೇಕಾಗಿ ಬಂದ ಪ್ರಸಂಗವಾಗಲಿ ಎಲ್ಲರ ಕನಿಕರಕ್ಕೆ ಪಾತ್ರವಾದ ಸಂಗತಿಗಳು. ಇಂಥ ವಿಷಯವನ್ನು ಸುದ್ದಿಗಾರನು ಬಣ್ಣಿಸುವ ವಿಧಾನವನ್ನು ನೋಡಿದರೆ ಮದುವೆಯನ್ನು ಬಣ್ಣಿಸಿದಂತೆ! ಇಂಥ ಸುದ್ದಿಗಾರರು, ಕ್ಷಾಮಪೀಡಿತ ಊರಿಗೆ ಹೋದರೆ ಹೇಗೆ ಬಣ್ಣಿಸುತ್ತಿದ್ದರೋ? ಪರರ ಆಪತ್ತನ್ನು ಕಂಡು ನಗುವ ಬುದ್ಧಿಯನ್ನು ಪ್ರೇರಿಸುವುದೆಂದರೆ ಅದು ನೀಚ ಮನೋವೃತ್ತಿಯೆಂದೇ ತಿಳಿಯಬೇಕು. ಇಂಥ ಸುದ್ದಿಗಳು ಹಾಸ್ಯಪ್ರದವೆಂದು ತಮ್ಮ ಪತ್ರಿಕೆಯಲ್ಲಿ ಅವಕಾಶವನ್ನು ಕೊಟ್ಟ ಧೋರಣವಾದರೂ ರಾಷ್ಟ್ರಬಂಧುವಿಗೆ ಶೋಭಿಸುವುದಿಲ್ಲವೆಂದೇ ನಮ್ಮ ನಂಬುಗೆ. ಈ ನಮ್ಮ ಸೂಚನೆಯನ್ನು ಸಂಬಂಧಿಸಿದವರು ಸ್ವೀಕರಿಸಲೆಂದೇ ನಮ್ಮ ಬೇಡಿಕೆ. ಇತಿ,

ಹಿತಕಾಂಕ್ಷಿ.

ಅಯ್ಯಾ ಸ್ವದೇಶಾಭಿಮಾನಿ ಪತ್ರಿಕಾಕರ್ತರೇ,

ಈ ವರ್ಷ ಪ್ರಯಾಣಿಕರಿಗೆ ಸೌಕರ್ಯವಂತೆ, ಮಳೆಗಾಲದಲ್ಲಿ ಕೂಡ ಮಂಜೇಶ್ವರ ಕುರ್ಚಿಪಳ್ಳ ಮತ್ತು ಕುಂಬಳೆ ಲ್ಯಾನಿಗೆ ಕೂಡಾ ಬಸ್ಸು ಚಾಲು ಬಗ್ಗೆ ಲೈಸನ್ಸು ದೊರಕಿಯದೆ. ರೋಡ್‌ಸೆಸ್ ಬೋರ್ಡಿನವರು ಮೊದಲೆ ವಸೂಲುಮಾಡಿರುವರು. ಹಣಕಂಡರೆ ಹೆಣ ಕೂಡ ಬಾಯಿಬಿಡುವದು. ಬಸ್ಸಿನವರು ಹಳೆ ಮಾರ್ಗದಲ್ಲಿ ಬರಬೇಕಂತೆ. ದುರುಸ್ತಿಯೆಂದರೆ ಹೊಂಡ ಇದ್ದಲ್ಲಿ ಮಣ್ಣು ಹಾಕಿ ಕೆಸರು ಮಾಡುವದು! ಜಲ್ಲಿ ಹಾಕಿಸಲು ಹುಕುಂ ಇಲ್ಲವಂತೆ. ಬಸ್ಸಿನಲ್ಲಿ ಕೂತವರ ಮೈಗೆ ತುಂಬಾ ಮಣ್ಣಿನ ನೀರೇ. ಮನೆಯಿಂದ ಹೊರಡುವಾಗ ರಾಮ ವೇಷವಾದರೂ ಕೆಳಗೆ ಇಳಿಯುವಾಗ ರಾವಣವೇಷವಾಗುವದು; ಬಸ್ಸು ಕೆಸರಿನಿಂದ ಬರಬೇಕು. ಈ ಟೌನಿಗೆ ಅದೊಂದು ಶಾಪವಂತೆ. ಬಂಟವಾಳ ಪುತ್ತೂರು ಮಾರ್ಗಕ್ಕೆ ಜಲ್ಲಿಯಾದರೂ ಬಾಕಿ ರಸ್ತೆಗಳ ಪ್ರಯಾಣಿಕರು ಬಡವರಾದ್ದರಿಂದ ಅವರಿಗೆ ಮಣ್ಣಂತೆ, ಇದು ಕೇವಲ ಅನ್ಯಾಯ. ಮಾರ್ಗ ಅನೇಕ ಕಡೆಯಲ್ಲಿ ಇಕ್ಕಟ್ಟಾಗಿದೆ. ಕೆಲವುಕಡೆಗಳಲ್ಲಿ ಮತ್ಸ್ಯಾವತಾರ ತಾಳಿ ನೀರು ದಾಟಬೇಕಾಗುವುದು. ಕೆಸರು ಮಾಡಿದರೆ ಬಸ್ಸು ನಡೆಯಲು ಅಸಾಧ್ಯವಂತೆ. ಕೆಲವು ಕಡೆಯಲ್ಲಿ ಪ್ರಯಾಣಿಕರು ಕೆಳಗಿಳಿದು ತಮ್ಮ ಶಕ್ತಿಯನ್ನು ತೋರಿಸುವರೆ ಬಸ್ಸು ದೂಡಿಕೊಡುವ ಪ್ರಸಂಗವೂ ಬರುವದು. ಈ ಮಾರ್ಗಗಳಿಗೆ ಮಣ್ಣೇ ಗತಿಯಾದರೆ ಮಳೆಗಾಲ ನಿಂತ ನಂತರ ಹಾಕಬಹುದಲ್ಲವೆ? ಇದು ಸದ್ಯದಲ್ಲೆ ತೀರ್ಮಾನವಾಗಬೇಕಾಗಿದೆ. ಮೇಲಾಫೀಸರರು ಒಮ್ಮೆ ಬಂದು ನೋಡಿದರೆ ಉತ್ತಮ.

ತಾ. ೪-೭-೨೮. 'ಪ್ರಯಾಣಿಕ'

ಅಭಿಮಾನವಿದೆಮನಗೆ
ನಮ್ಮ ದೇಶದ
ಮೇಲೆ।
ಕಟ್ಟಿಸಿದೆ ಅದು ರಸ್ತೆಯ।
ಅಭಿಮಾನದಿಂದ ನಾನದ
ರಲ್ಲಿ ಸಂಚರಿಸೆ।
ಮುಟ್ಟಿಸುವುದದು
ಮುಕ್ತಿಯ.॥



ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಘಂಚನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರೋಗ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

Estd. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,
24-8-28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವೂ ಧನವೂ ಸುಖವೂ, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ತಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರಲ್ಲೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6 .
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—

ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಕಾಯಂ ಠೇವಣಾತಿಗಳು „ 7,33,880/-

ಹೊರಗೆ ಒಟ್ಟು ಸಾಲ ಬಾಕಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6½ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾವು, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಮ್ಮಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಬೇಂಕಿನ ಅಫೀಸು, ಉಡ್ಪಿ,
ತಾ. 18-2-'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೩೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವುನ್ ಹಾಲ್.



DUNLOP

ಟ್ರಿಪಲ್ ಸ್ಟಡ್ ಸ್ಟಾಲ್ ಟಾಯರು.

ಶಾಸ್ತ್ರೋಕ್ತವಾಗಿ ತಯಾರಿಸಿದ ಟಾಯರು ಕೊಡುವ
ಎಲ್ಲಾ ಉಪಯೋಗ ಇದರಿಂದ ದೊರಕುವಂತೆ ಇದು ತಯಾ
ರಿಸಲ್ಪಟ್ಟಿರುತ್ತದೆ. ಇಳಿಜಾರಿನಲ್ಲಿ ಜಾರಿಹೋಗದಿರು
ವಿಕೆಯು, ಇದರ ಅನೇಕ ಗುಣಗಳಲ್ಲಿ ಒಂದೇ ಒಂದಾಗಿದೆ.

fit Dunlop and be satisfied

ದಿ ಡನ್ಲೋಪ್ ರಬ್ಬರ್ ಕಂಪೆನಿ (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. Sharada Press, Mangalore.

Registered No. M. 498

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-12

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗೆದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. ಮಂಗಳೂರು, ತಾ. ೧೩ನೇ ಶುಕ್ರವಾರ ಜುಲಾಯಿ ೧೯೨೮. ಸಂಚಿಕೆ ೨೮

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR. „ Mangalore.
ಶಾಖೆ:—ಕುಂದಾಪುರ. „ ಮಂಗಳೂರು.

STATEMENT OF AFFAIRS AS ON 16 JUNE, 1928.

Capital and Liabilities.	
1 Paid up Capital	Rs. 1,99,650-0-0
2 Reserve Fund and other funds	„ 96,600-0-0
3 Deposits	„ 13,47,824-11-8
4 Amonnt overdrawn from Bankers	„ 1,32,698-7-8
5 Sundry Persons' A/C as per Contra	„ 9,589-3-0
6 Sundry items	90,470-6-3
Total	18,76,832-12-7

Property and Assets.	
1 Premises Furniture &c.	Rs. 9,400-3-0.
2 Investments on G. P. Notes	2,40,234-5-0.
3 Investments on approved Securities	15,45,131-12-0.
4 Bills for collection as per Contra.	9,589-3-0.
5 Sundry items.	55,182-3-1.
6 Cash in hand & with Bankers.	17,295-2-6.
Total.	Rs. 18,76,832-12-7.

Office of the Corporation,
UDIPI, 18-6-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಕಳಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

…Preparations Cover All Your Needs.
…MERIT HAS MADE FAMOUS.
…ಸಿದ್ಧವಾದ ಬಾಟ್ಲಿವಾಲಾ ಇವರ
…ಸಿದ್ಧ ಔಷಧಗಳು.
…ಯೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.
… ರೂ. ೧.
… ಕೊಡುವ ಔಷಧ ಆಣೆ ೧೩.
…, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
… ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
… ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
…೨—೦. ರೂ. ೧—೪—೦. ೧—೧೨—೦.
LIBERAL DISCOUNT TO TRADE
…ASHAPUR, BOMBAY.
…ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
…Road, P. O. Cadell Road, Bombay. No. 14.

…ರ ಲೋಧ್ರ
…ರೋಗನಿವಾರಿಣಿ.
…ಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು …ವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ …ವಾಗಿ ಹೊಗಳುತ್ತಿರುವರು.
…ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ
…ವು ಹೆಚ್ಚುಕಮ್ಮಿಯಾಗುವುದು, ಋತುವು ನಾನಾ ಬಣ್ಣ… ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ… ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, …ವಾಗಿ ಗುಣವಾಗುವುವು.
…ಸುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು
…ಸರೀ ಕುಟೀರಂ,
…ಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
…ರ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಮ್.
22 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚುಗಳು.

ಈ ಚಿತ್ರದಲ್ಲಿ ಕಾಣುವ ರೋಲ್ಡ್‌ಗೋಲ್ಡ್ ಭಂಗಾರದ ರಿಸ್ಟ್ ವಾಚುಗಳು ಬಹು ಮೇಲಾದ ಗಟ್ಟಿ ಸಾಮಾನುಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇದರ ಬಣ್ಣವು ಭಂಗಾರಕ್ಕೆ ಸಂಸಮಾನವಾಗಿರುವವು. ಮತ್ತು ಖರಾರು ಗಂಟೆಯನ್ನು ತೋರಿಸುವವು. ಈ ಗಡಿಯಾರಗಳಿಗೆ ಖಾತ್ರಿಯಾದ 5 ವರುಷ ಗ್ಯಾರಂಟಿ ಕೊಡುವೆವು. ಈ ವಾರದೊಳಗೆ ಈ ಚಿತ್ರದಲ್ಲಿ ಕಾಣುವ ರಿಸ್ಟ್‌ವಾಚನ್ನು ತರಿಸಿಕೊಳ್ಳುವವರಿಗೆ ಪ್ರತಿ 1 ಗಡಿಯಾರಕ್ಕೊಂದು ಟೇಬಲ್ ಟೈಂಪೀಸ್ ಇನಾಮವಾಗಿ ಕೊಡುವೆವು. ಕ್ರೈ ಗಡಿಯಾರವನ್ನು ತರಿಸಿಕೊಳ್ಳುವವರು ಬೇಕಾದ ಗಡಿಯಾರದ ನಂಬರನ್ನು ತಿಳಿಸಿ ಬರೆಯಿರಿ.
ಇನಾಂ ಟೇಬಲ್ ಟೈಂಪೀಸ್ ಸಹಿತ ರಿಸ್ಟ್‌ವಾಚ್
1ಕ್ಕೆ 7—0—0.
ವಿಳಾಸ:— ವಿ. ಎಸ್. ವಾಚ್ ಕಂಪೆನಿ.
ಪೋ. ಬಾಕ್ಸ್ ನಂ. 105, ಮದರಾಸು.

ಶಾಲಿವಾಹನಶಕ ೧೮೫೦ನೆಯ ವಿಭವ ಸಂದ ಆಷಾಢ ಬ|| ೧೦ ಶನಿವಾರದಿಂದ ವಿಭವ ಸಂ||ರದ ಆಷಾಢ ಬ|| ೩ ಶುಕ್ರವಾರದ ವರೆಗಿನ ಪಂಚಾಂಗ.
(೧೯೨೮ನೆಯ ಕರ್ನಾಟಕ (ಅಟಿ)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ ಘ.	ಸೂರ್ಯ. ಉ	ಸೂರ್ಯ. ಅಸ್ತ.
14	ಶನಿ	೧೨	೨೮.೩೧	ರೋಹಿಣೀ	೩೦.೪೬	೩೦	6.13	6 59
15	ರವಿ	೧೩	೨೨.೪೬	ಮೃಗಶಿರಾ	೨೬. ೨	೩೧	6 13	6 59
16	ಸೋಮ	೧೪	೧೬.೩೧	ಆದ್ರಾ	೨೩.೪೬	೧	6.13	6 59
17	ಕುಜ	●	೧೩. ೧	ಪುನರ್ವಸು	೨೧.೧೪	೨	6 13	6,59
18	ಬುಧ	೧	೯.೪೪	ಪುಷ್ಯಾ	೧೯.೩೧	೩	6 14	6.59
19	ಗುರು	೨	೬.೩೨	ಆಶ್ಲೇಷಾ	೧೮.೪೬	೪	6.14	6 59
20	ಶುಕ್ರ	೩	೪.೪೪	ಮಘಾ	೧೯.೧೪	೫	6.14	6.59

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆಯದು	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
6	81— 5	72— 8	0—54	—
7	85— 2	76— 3	—	—
8	86— 8	79— 2	—	—
9	87— 7	75— 1	2—24	—
10	82— 5	72— 8	5—68	—
11	82— 2	72— 2	1—82	—
12	81— 7	73— 8	3—71	—
				70—51

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮಸ್ಕತಿ ...	7- 12	8— 8
ಹೊಸ ಗುಡ್ಡು ...	6—12	7— 6
ಸುಗ್ಗಿ ...	6— 8	7- 2
ಹೊಸ ರಾಶಿ ...	6— 4	6- 14
ಊರ ಆವ್ವಲ್ ಬೆಸ್ತಿಗೆ ...	7-- 8	8— 8
ರಂಗೂನು ಬೆಸ್ತಿಗೆ ಗೋಣಿ ೧ಕ್ಕೆ ...	12—10	13— 8
ಎಲ್ಲೂರು ಬೆಸ್ತಿಗೆ ಮುಡಿ ೧ಕ್ಕೆ ...	7— 8	7—10
ಗೋದಿ ಗೋಣಿ ೧ಕ್ಕೆ ...	15— 8	16 — 8
ಹುರುಳಿ ಗೋಣಿ ೧ಕ್ಕೆ ...	8— 8	11— 0
ಕಡಲೆ ಗೋಣಿ ೧ಕ್ಕೆ ...	11— 8	14— 0
ತೊಗರಿ ಗೋಣಿ ೧ಕ್ಕೆ ...	14— 4	14—12
ತೊಗರಿಬೇಳೆ ಗೋಣಿ ೧ಕ್ಕೆ ...	19— 0	27— 0
ಉದ್ದು ಗೋಣಿ ೧ಕ್ಕೆ ...	13— 8	14— 0
ಹೆಸರು ಗೋಣಿ ೧ಕ್ಕೆ ...	13— 0	14— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	70— 0
ಉಪ್ಪು ಗೋಣಿ ೧ಕ್ಕೆ ...	4—10	5— 4
ಕೊಬ್ರಿ ಖಂಡಿ ೧ಕ್ಕೆ ...	130- 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	40— 0	41— 0
ಎಳ್ಳಿಂಡಿ ಖಂಡಿ ೧ಕ್ಕೆ ...	32— 8	40 — 0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—11	9—12
ಎಳ್ಳೆಣ್ಣೆ ಮಣ ೧ಕ್ಕೆ ...	8— 4	8— 6
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 2	8— 0
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 4	-
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4— 8	6—12
ಸಾಸಿವೆ ಮುಡಿ ೧ಕ್ಕೆ ...	8— 0	8— 4
ಕೊತ್ತಂಬರಿ ಮುಡಿ ೧ಕ್ಕೆ ...	6— 0	7— 8
ಕಾಫಿ ಖಂಡಿ ೧ಕ್ಕೆ ...	375- 0	410-- 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ...	170- 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	510- 0	550-
ಯಾಲಕ್ಕಿ ಮಣ ೧ಕ್ಕೆ ...	70— 0	80 — 0
ಗೇರುಬೀಜ ಮುಡಿ ೧ಕ್ಕೆ ...	4— 6	4 —7
ಶಿಬ್ಬಿ ಖಂಡಿ ೧ಕ್ಕೆ ...	37 — 8	40— 0
ಕಾಂಚ್ಯ ತಗಡು ೧ಕ್ಕೆ ...	15- 0	16— 8
ಕಾಂಚ್ಯ ಪಾತ್ರೆಗಳು ಮಣ ೧ಕ್ಕೆ ...	20— 0	21 -
ಚೀನಿಬೆಳ್ಳಿ ಸೇರು ೧ಕ್ಕೆ ...	15— 0	-
ಹಿತ್ತಾಳಿ ತಗಡು ಮಣ ೧ಕ್ಕೆ ...	15— 0	16— 8
ಪವನು ೧ಕ್ಕೆ ...	13— 8	13— 8
ಹುಣಸೆ ಹುಳಿ ಖಂಡಿ ೧ಕ್ಕೆ ...	75— 0.	90 —5

ಒಂದೇ ದಾರಿ
ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —
ಕ್ರಯವಾಗಲಿ ¶ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ
ವೈದ್ಯವಿದ್ಯ
ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು
ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ
ಮದನಮಂಜರಿ ಮಾತ್ರೆಗಳು
ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.
ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ದಿ. ಜೂಲಸ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"



ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉತ್ಕೃಷ್ಟತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಶಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆಯಾಗಿ ಕಳುಹಿಸುವೆವು.
ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್	ಸ್ಥಾಪಿತವಾದದ್ದು	ಟೆಲಿಫೋನ್ ನಂ.
99 ನಾಗಾದೇವಿ ರಸ್ತೆ.	1909	23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ. ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!
ರೋಗವೆಂಬ ವಿಧಿಆಪತ್ತನ್ನು ═ ═ ಪರಿಹರಿಸಿಕೊಳ್ಳನೋಡಿ!
ಮಲೇರಿಯಾನ ಸರ್ವಜ್ವರಸಂಹಾರಿಣಿ
ಬಂಧುಗಳೇ ನಿಮ್ಮನ್ನು ಮಲೈಜರವು
ಕಾಡುತ್ತಿದೆಯೇ?
ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.
ಕ್ರಯ:—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.
ಭಗಿನಿಗಳೇ!
ಸೊರಗಿರುವ ಶಿಶುವಿನ ನೋಟವು
ಹೆತ್ತವರಿಗೆ ಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ.
ಬೇಬಿ ಟೋನ
ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?
ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ಹೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.
ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.
ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ವಾಪ್ತದ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮಲೇರಿಯಾನ ಕಂಪೆನಿ,
22628 ನಂಬ್ರ 2. ಮಂಗಳೂರು ದ. ಕ.

ಹಾತ್ತಾತಾಳ್ಯತಿ ಪೊಳೊಚ್ಯಾಕ ಕಾನ್ನಡಿ ಇತ್ಯಾಕ?
ವಿಕಪೆಂತ ಅಮ್ಗೆಲ್ಯಾಗಿ ವ್ಯಾಪಾರು ಕೆಲ್ಯಾರಿ ಕಳ್ಳಾವೆ?
ಎಲ್ಲಾ ತರದ ಕವಿರಾಜರ ಔಷಧ, ಸುಗಂಧ ದ್ರವ್ಯಗಳು, ರಬ್ಬರ್ ಚಡ್ಡಿ, ಕ್ಷೌರದ ಸಾಮಗ್ರಿ, ಆಡುವ ಸಾಮಾನು, ಹಾರ್ಮೋನಿಯಮ್, ಶುದ್ಧ ಕಸ್ತೂರಿ, ಬೂಟೀಸು, ಬನಿಯನು, ಬಾಚಣಿಗೆ, ಮತ್ತು ಎಲ್ಲಾ ತರದ ಜವುಳಿ ಇತ್ಯಾದಿ ಸರ್ವಜನೋಪಯುಕ್ತ ವಸ್ತುಗಳು ಮಾರಾಟಕ್ಕಿವೆ. ಕೆಟಲಾಗಿಗೆ ಇವತ್ತೆ ಬರೆಯಿರಿ. ಅಥವಾ ಸ್ಟೋರ್ಸನ್ನು ಸಂದರ್ಶಿಸಿರಿ.
— 24 ತಾಸಿನ ಒಳಗೆ ಮುಟ್ಟುವಂತೆ ಔಷಧ ಇತ್ಯಾದಿಗಳನ್ನು ಕಳುಹಿಸುತ್ತೇವೆ. —
ಕವಿರಾಜರ ಮದ್ದಿಗೆ ಪ್ರತಿ ಹಳ್ಳಿಗಳಲ್ಲಿಯೂ
ಏಜಂಟರು ಬೇಕು.
ಸರ್ವ ಕರ್ನಾಟಕಕ್ಕೆ ನಾವು ಪ್ರಧಾನ ಆಯುರ್ವೇದ ಔಷಧ ಏಜಂಟರು.
ದಿ ಉಡುಪಿ ಸ್ಟೋರ್ಸ್,
ಕುಂಬಳೆ ರಾಘವೇಂದ್ರರಾವ್
2628 ಉಡುಪಿ, ದ. ಕನ್ನಡ.

ಪ್ರಕಟಣೆ.

ಮಂಗಳೂರು ಮುನಿಸಿಪಾಲಿಟಿ ವಳಪಟ್ಟ ಕೊಡಿಯಾಲ ಬೈಲು ವಾರ್ಡಲ್ಲು ಮಣ್ಣಗುಡ್ಡೆ ಶಾಲಾ ಮುಂಡುಗಡೆ ಇರುವ T. S. No. 624/2ನೇ ಭಾಗ್ಯಾತು ಸ್ಥಳದ ವಿಸ್ತೀರ್ಣ ಸೆಂಟ್ಸು 99, ಇದರ ಗಡಿ ಪೂರ್ವ ಕೂಳೂರು ರಾಜಮಾರ್ಗ, ದಕ್ಷಿಣ ಪಶ್ಚಿಮ ಸರ್ಕಾರಿ ಮೋಣಿ. ಉತ್ತರ ಕಲ್ಲಿನ ಪಾಗಾರ, ಈ ಮಧ್ಯೆ ಇರುವ ದೊಡ್ಡ ಹೆಂಚುಹಾಕಿದ ಮನೆಗಳು, ಭಾವಿ, ಹಟ್ಟಿ ಕೊಟ್ಟಿಗೆ, ಪ್ಯಾರಾನೆ ಇತ್ಯಾದಿ ಸರ್ವಾದಿಯನ್ನೂ ಖಂಡಿತ ಕ್ರಯಕ್ಕೆ ಮಾರಾಟ ಮಾಡುವದೆ ಆಲೋಚಿಸಿರುತ್ತದೆ. ಕ್ರಯಕ್ಕೆ ಪಡಕೊಳ್ಳುವ ಗಿರಾಕಿಗಳೂ ಇದರ ಹೆಚ್ಚಿನ ಮಾಹಿತಿಯನ್ನು ತಿಳಕೊಳ್ಳುವ ಅಪೇಕ್ಷೆಯುಳ್ಳವರೂ ಕೆಳಗಿನ ವಿಳಾಸಕ್ಕೆ ಬಕೊಳ್ಳಬಹುದು;—
ತತ್ವಾಡಿ ರಾಮರಾಯ
ಮಣ್ಣಗುಡ್ಡೆ, ಮಂಗಳೂರು.
(4—4)

ಸ್ಫುಟ ವಿಚಾರಗಳು.

ಇನ್ನೊಂದು ಸ್ಯಾಮನ್ ಕಮಿಟಿಯು.

ನಾವು ಈ ಮೊದಲು ಊಹಿಸಿದಂತೆ ಒಂದೊಂದೇ ಕೌನ್ಸಿಲಿನಲ್ಲಿ ಸ್ಯಾಮನ್ ಕಮಿಶನ್ನಿನೊಡನೆ ಸಹಕರಿಸುವ ಬಗ್ಗೆ ಕಮಿಟಿಗಳು ಚುನಾಯಿಸಲ್ಪಡುತ್ತಾ ಬರುತ್ತಿವೆ. ಈ ಕಮಿಟಿಗಳ ನೇಮಕಗಳ ಬಗ್ಗೆ ಸರಕಾರವು ಯಾವ ಸಾಧನೆಗಳನ್ನು ಪಯೋಗಿಸಲಿಕ್ಕೂ ಹಿಂಜರಿಯಲಾರವು ಎಂಬುದನ್ನು ಸಂಯುಕ್ತ ಪ್ರಾಂತದ ಮತ್ತು ಮದ್ರಾಸಿನ ಕೌನ್ಸಿಲಿನ ಮಂತ್ರಿಗಳನ್ನು ಗವರ್ನರರು ಹೊರಹಾಕಿದ ರೀತಿಯನ್ನು ನೋಡಿದರೆ ತಿಳಿಯುವುದು. ಬಂಗಾಳದಲ್ಲಿಯೂ ಮೊನ್ನೆ ಕೌನ್ಸಿಲು ಕೂಡಿ ಕೌನ್ಸಿಲು ಕಮಿಟಿಯನ್ನು ಚುನಾಯಿಸುವ ಠರಾವು ಮಂಜೂರಾಯಿತು. ಇತರ ಪ್ರಾಂತಗಳ ಗವರ್ನರರಂತೆ ಸರ್. ಸ್ಟೇನ್ಲಿ ಜಾಕ್ಸನರು ಇದರ ಚುನಾವಣೆಯಲ್ಲಿ ತಮ್ಮ ವಿಚಕ್ಷಣೆಯನ್ನೂ ಯುಕ್ತಿಸಾಮರ್ಥ್ಯವನ್ನೂ ತೋರಿಸಿರುವರು. (Divide and rule) ನೀತಿಯು ಬಂಗಾಳದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಒಂದು ಸಮಯದಲ್ಲಿ ಇನ್ನು ದ್ವಿದಳ ರಾಜನೀತಿಗೆ ಉಳಿಗಾಲವಿಲ್ಲವೆಂದೆನ್ನಿಸಿದ ಬಂಗಾಳ ಕೌನ್ಸಿಲಿನಲ್ಲಿಯೇ ಈ ಠರಾವಿಗೆ ೬೦ ಅನುಕೂಲ ಮತಗಳೂ ೫೦ ಪ್ರತಿಕೂಲ ಮತಗಳೂ ಸಿಕ್ಕಿದುವು. ಹಿಂದೂ ಮುಸಲ್ಮಾನ ಭೇದಗಳು ಮೆಲ್ಲನೆ ಹಿಂದೀ ರಾಷ್ಟ್ರೀಯತೆಯಲ್ಲಿ ಕಡಿಮೆಯಾಗುತ್ತಾ ಬರುತ್ತಿದ್ದಾಗ, ಸರಕಾರವು ಕೆನಗದಿಂದು ಬಂದ ಆಪತ್ತನ್ನು ತಿಳಿದು ಯುಕ್ತಿಯಿಂದ ಅದನ್ನು ಚಿರಸ್ಥಾಯಿಯಾಗಿ ಮಾಡಿತು. ಬಂಗಾಳದಲ್ಲಿ ಹಿಂದೂ-ಮುಸಲ್ಮಾನ ಐಕ್ಯವು ಪೂರ್ಣವಾಗಿದ್ದಲ್ಲಿ ಈ ಕಮಿಟಿಯ ನೇಮಕವು ಸಾಧ್ಯವಾಗುತ್ತಿರಲಿಲ್ಲ. ಅವಿದ್ಯಾವಂತ ಮುಸಲ್ಮಾನರಿಗಿಂತ ವಿದ್ಯಾವಂತ ಮುಸಲ್ಮಾನರೇ ಅಂಧ ಅಭಿಮಾನದಿಂದ ರಾಷ್ಟ್ರೀಯತೆಯನ್ನು ತಿರಸ್ಕರಿಸುವುದು ಚಿಂತಾಜನಕವಾಗಿದೆ. ಅಂತೂ ಬಂಗಾಳವು ಪಂಜಾಬಿನ ಹಿಂದೆ ಅಡಿಯಿಟ್ಟಿತು. ಇನ್ನು ಮುಂಬಯಿ ಸಂಯುಕ್ತಪ್ರಾಂತ, ಮದ್ರಾಸು ಒಂದೊಂದಾಗಿ ತಮ್ಮ ಕಮಿಟಿಗಳನ್ನು ನೇಮಿಸಿರುವುವು. ಮಧ್ಯಪ್ರಾಂತದಲ್ಲಿ ಬಹಿಷ್ಕಾರವಿನ್ನೂ ನೆಲಗಟ್ಟಿರುವ ಆ ಕೌನ್ಸಿಲಿನಲ್ಲಿ ಏನು ನಡಿಯುವುದೋ ಎಂದು ನೋಡಬೇಕು. ಸ್ವರಾಜ್ಯಪಕ್ಷದವರು ಅಂಗ್ಲಂಡಿಗೆ ಹೋಗಿ ಬಹಿಷ್ಕಾರವು ಮುರಿಯುವುದೆಂದು ಸಾರಿಸಿದ ತುತೂರಿಯು ನಿಜವಾಗುವುದೇ ಸರಿಯೆಂದು ಕಾಣುತ್ತದೆ. ಇದು ಹಿಂದೀ ರಾಜಕೀಯ ಮುಮುಂದಿನ ವಿಷಯದಲ್ಲಿ ಅಲ್ಪಾಭಿಪ್ರಾಯವನ್ನುಂಟುಮಾಡುವುದು.

ಡಿಸ್ಟ್ರಿಕ್ಟ ಬೋರ್ಡು ಮಾರ್ಗಗಳು.

ನಮ್ಮ ಜಿಲ್ಲೆಯಲ್ಲಿ ಮಾರ್ಗಗಳ ಸ್ಥಿತಿಯು ಬಹಳವಾಗಿ ಸುಧಾರಿಸಲ್ಪಟ್ಟಿದೆಯೆನ್ನಬಹುದಾದರೂ ಮಾರ್ಗಗಳ ದುರುಸ್ತಿಯು ಆಗಬೇಕಾದಷ್ಟು ಆಗಿಲ್ಲವೆಂದು ಹೇಳಲೇ ಬೇಕಾಗುತ್ತದೆ. ಹಲವು ಫಸ್ಟ್‌ಕ್ಲಾಸ್ ರಸ್ತೆಗಳ ರಿಪೇರಿಯು ಚೆನ್ನಾಗಿಯೇ ನಡಿಯುತ್ತದೆ. ಆದರೆ ಕರಾವಳಿ ರಸ್ತೆ, ಮುಖ್ಯವಾಗಿ ಮಂಗಳೂರಿನಿಂದ ಮೂಲ್ಕಿ ವರೆಗೆ ತೀರಾ ತಿರಸ್ಕರಿಸಲ್ಪಟ್ಟೇ ಇದೆ. ಈ ರಸ್ತೆಯ ನೈಯು ಸಂನಗಾಡಲಿಕ್ಕಿದೆಯಲ್ಲದೆ ಹಲವು ಕಡೆಗಳಲ್ಲಿ ರಸ್ತೆಯನ್ನು ಅಗಲಮಾಡಲಿಕ್ಕಿದೆ. ಜಿಲ್ಲೆಯಲ್ಲಿ ಕರಾವಳಿ ರಸ್ತೆಯು ಹೆಚ್ಚು ಪ್ರಾಮುಖ್ಯತೆಯಿರುವುದಾದುದರಿಂದ ಬೋರ್ಡಿನ ಲಕ್ಷ್ಯವು ಇನ್ನಾದರೂ ಇತ್ತಕಡೆ ಹೋಗಲಾಗಿ ನಾವು ಆಶಿಸುವೆವು. ಇತರ ಸೆಕೆಂಡ್‌ಕ್ಲಾಸ್ ಥರ್ಡ್‌ಕ್ಲಾಸ್ ರಸ್ತೆಗಳ ಸ್ಥಿತಿಯು ಮಳೆಗಾಲದಲ್ಲಿ ಅತ್ಯಂತ ಶೋಚನೀಯವಾಗಿರುತ್ತದೆ. ಅಲ್ಲಲ್ಲಿ ದುರುಸ್ತಿ ಬಗ್ಗೆ ಹಾಕಿದ ಮಣ್ಣೇ ನೀರಲ್ಲಿ ಕೂಡಿ ಕೆಸರಾಗಿ ನಡಿಯಲಿಕ್ಕೂ ವಾಹನಗಳನ್ನು ನಡಿಸಲಿಕ್ಕೂ ಅಸಾಧ್ಯವಾಗಿ ಮಾಡುತ್ತದೆ. ಮಾರ್ಗದಲ್ಲಿಯೇ ಅಡ್ಡ ತೋಡುಗಳು (Open drains) ಹರಿದು ವ್ಯವಹಾರಕ್ಕೆ ಬಹಳ ಕಷ್ಟಗಳುಂಟಾಗುತ್ತಿವೆ. ಜಿಲ್ಲೆಯ ಬೆಳೆಯುವ ವ್ಯವಹಾರಗಳ ಕಾರಣದಿಂದ ರಸ್ತೆಗಳ ರಕ್ಷಣೆಯ ಆವಶ್ಯಕತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಜಿಲ್ಲೆಯ ನಾಗರಿಕತನಕ್ಕೆ ಅದರಲ್ಲಿ ಹಾದುಹೋಗುವ ರಸ್ತೆಗಳ ಸ್ಥಿತಿಯೇ ಒಂದು ಪ್ರತ್ಯಕ್ಷ ಸಾಕ್ಷ್ಯವಾಗಿರುತ್ತದೆ. ನಮ್ಮ ಜಿಲ್ಲೆಯು ಮಾರ್ಗಗಳ ದುರುಸ್ತಿಯನ್ನು ಸರಿಯಾಗಿ ಮಾಡಿ ವ್ಯವಹಾರ ಸೌಕರ್ಯಗಳನ್ನು ಕಲ್ಪಿಸಿ ತನ್ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಕಾರಣವಾಗುವುದು.

ಉಡುಪಿಯಿಂದ ಕಾರ್ಕಳಕ್ಕೆ ಹೋಗುವಾಗ ೧೭ ಮೈಲು ೫ ಫರ್ಲಾಂಗಿನ ಹತ್ತಿರ ಎರಡು ಬಹಳ ಅಪಾಯಕರವಾದ ಡೊಂಕುಗಳಿಂದ ಹೋಗುತ್ತದೆ. ಈ ಡೊಂಕನ್ನು ತಿದ್ದುವ ಬಗ್ಗೆ ಒಂದು ಡ್ಯಾವರ್‍ಶನ್ (Diversion) ಅರ್ಧ ಕಟ್ಟಲ್ಪಟ್ಟು ಹಾಗೇ ಉಳಿದದೆ. ಮಾರ್ಗವನ್ನು ನೆಟ್ಟಗೆ ಮಾಡುವ ಈ ಒಳ್ಳೆ ಡ್ಯಾವರ್‍ಶನ್ನು ಹಲವು ಸಮಯದಿಂದ್ಲ ಹೀಗೆ ಇದ್ದದ್ದು ಬಹಳ ಆಶ್ಚರ್ಯವೆ; ಈ ಸ್ಥಳದಲ್ಲಿ ಕೆಲವು ವರ್ಷಗಳ ಹಿಂದೆ ಅಪಘಾತಗಳುಂಟಾದುದಿದೆಯೆಂದು ಕೇಳುತ್ತೇವೆ. ಮೋಟರ ವ್ಯವಹಾರವು ಹೆಚ್ಚಿದಂತೆ ಈಗಿನ ಮಾರ್ಗದ ಅಪಾಯವೂ ಹೆಚ್ಚಿರುತ್ತದೆ. ಆದರೂ ಈ ಡ್ಯಾವರ್‍ಶನನ್ನು ಡಿಸ್ಟ್ರಿಕ್ಟ್ ಬೋರ್ಡು ಏಕೆ ತಿರಸ್ಕರಿಸಿಯದೆಂದು ತಿಳಿದು ಬರುವುದಿಲ್ಲ. ಇದರ ಚಿಕ್ಕಾರ ದುರಸ್ತಿ ಬಗ್ಗೆ ಬರೇ ೮೦೦ ರೂಪಾಯಿಗಿಂತ ಹೆಚ್ಚು ತಗಲಲಿಕ್ಕಿಲ್ಲ. ಆದುದರಿಂದ ಈ ಕಡೆಗೂ ನಾವು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಲಕ್ಷವನ್ನೆಳೆಯುವೆವು.

ಲೋಕಲ್ ಬೋರ್ಡು ಬದಲಾವಣೆಗಳು.

ಈ ಬದಲಾವಣೆಗಳನ್ನು ಸೂಚಿಸಿ ಸರಕಾರವು ತಯಾರಿಸಿದ ಮಸೂದೆಯ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ಈ ಮೊದಲೇ ನಾವು ಕೊಟ್ಟಿರುವೆವು. ಈ ಮಸೂದೆಯು ಲೋಕಲ್ ಬೋರ್ಡು ಪ್ರೆಸಿಡೆಂಟರ ಅಭಿಪ್ರಾಯಗಳ ಬಗ್ಗೆ ಕಳುಹಿಸಲಾಗಿದ್ದಿತು. ಈ ಮಸೂದೆಯಿಂದ ಪ್ರೆಸಿಡೆಂಟರಿಗೆ ಹಲವು ತರದ ಅಧಿಕಾರಗಳು ಕಡಿಮೆಯಾಗುವುದರಿಂದ ಬೋರ್ಡು ಪ್ರೆಸಿಡೆಂಟರು ಇದನ್ನು ಅನುಮೋದಿಸಲಿಕ್ಕಿಲ್ಲವೆಂಬುದು ಸಹಜವಾಗಿದೆ. ಹಲವು ಕಡೆಗಳಲ್ಲಿ ಬೋರ್ಡು ಮೀಟಿಂಗುಗಳಲ್ಲಿಯೂ ನಿಷೇಧದ ಠರಾವು ಮಂಜೂರು ಮಾಡಲ್ಪಟ್ಟಿವೆ. ಮಸೂದೆಯು ಇನ್ನೇ ನಿಷೇಧದಿಂದ ಬಿದ್ದು ಹೋಗುವುದಾದರೆ ಲೋಕಲ್ ಬೋರ್ಡು ಸುಧಾರಣೆಯು ಒಂದು ಹೆಜ್ಜೆಯು ಹಿಂದಾದಂತಾಗುವುದು. ಇದರಿಂದ ತಾತ್ಕಾಲಿಕ ಜನಕ್ಕೆ ಕೆಲವು ಅಧಿಕಾರಗಳು ತಪ್ಪಿಹೋದರೂ, ಅಂತಹ ಅಧಿಕಾರಗಳಿಂದ ಉಂಟಾಗುವ ಹಾನಿಯೂ ತಪ್ಪಿ ಬೋರ್ಡು ಆಡಳಿತವು ಒಳ್ಳೆಯದಾಗುತ್ತಿದ್ದಿತು. ಈ ಮಸೂದೆಯನ್ನು ಅನುಮೋದಿಸಿ ಸಾರ್ವಜನಿಕ ಪ್ರೋತ್ಸಾಹವು ಪ್ರಕಟಿಸಲ್ಪಟ್ಟರೆ ಉತ್ತಮವಿತ್ತು.

ಪತ್ರಿಕಾ ಪರಿಷತ್ತು.

ನಮ್ಮ ಜಿಲ್ಲೆಗೊಂದು ಪರಿಷತ್ತು ಕೂಡಿಸುವ ವಿಷಯದಲ್ಲಿ ರಾಷ್ಟ್ರಬಂಧುವೇ ತನ್ನ ಸಮ್ಮತಿಯನ್ನು ಸೂಚಿಸಿಯದೆ. ಇತರ ಪತ್ರಿಕೆಗಳೂ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರೆ ಅಂತಹ ಪರಿಷತ್ತನ್ನು ವ್ಯವಸ್ಥೆಗೊಳಿಸಲು ಅನುಕೂಲವಿತ್ತು. ಪತ್ರಿಕೆ ಪತ್ರಿಕೆಗಳಲ್ಲಿ ಭಿನ್ನಾಭಿಪ್ರಾಯಗಳು ಇರುವುದು ಸಹಜ. ಆದರೆ ಅಂತಹ ಭಿನ್ನತೆಗಳು ಪರಿಷತ್ತಿನಂತಹ ಪರ್ಣರಿಗೂ ಉಪಯುಕ್ತವಾದ ಸಂಸ್ಥೆಯನ್ನು ರಚಿಸಲು ವಿರೋಧವಾಗಲಾರವು. ಇತರ ಪತ್ರಿಕೆಗಳೂ ಈ ವಿಷಯದಲ್ಲಿ ಉತ್ಸಾಹಿಸವಾಗಲೆಂದು ಆಶಿಸುವೆವು.

ಈ ಹರ್ಕೆ ಟೊಪ್ಪಿಯ ಉದ್ದೇಶವೇನು? ಈ ಕೃತ್ಯವು ಮುಸಲ್ಮಾನನಿಂದಲೇ ನಡೆದುದೆಂದು ಬಹಿರಪಡಿಸಲಿಕ್ಕೋನೇ? ಹಾಗೆ ಬಹಿರಪಡಿಸುವುದರ ಉದ್ದೇಶವೇನು? ಹಿಂದೂ-ಮುಸಲ್ಮಾನ ಕಲಹಗಳನ್ನು ಎಬ್ಬಿಸಲಿಕ್ಕೇ? ಈ ಕಲಹಗಳ ಲಾಭ ಯಾರಿಗೆ? ಸರಕಾರಕ್ಕೆ? ವಿಚಾರವಂತರು ವಿಚಾರಿಸಲಿ.

ಬಾಲ್ಯವಿವಾಹ ಮಸೂದೆಯು ಮಂಜೂರಾಗಬಾರದಾಗಿ ಉಡುಪಿ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ಸ್ತ್ರೀಯರ ಒಂದು ಸಭೆಯು ಜರಗಿತಂತೆ! ಇಲ್ಲಿ ಇದರ ಪೂರ್ವದಲ್ಲಿ ಎಂಡೋಮೆಂಟ್ ಬಿಲ್ಲಿಗಾಗಿ ಹಲವು ದೊಡ್ಡ ದೊಡ್ಡ ಸಭೆಗಳು ನೆರದಿದ್ದುವು, ನೆರೆಯದೆ ಇದ್ದಿರಬಹುದಾದರೂ, ನೆರೆದಿದ್ದುವು ಎಂದು ಹಿಂದೂ ಪತ್ರಿಕೆಯಲ್ಲಿ ಉದ್ದ ಉದ್ದ ವರ್ತಮಾನಗಳು ಬರುತ್ತಿದ್ದುವು.

ಸಣ್ಣ ಮಕ್ಕಳನ್ನು ಮದುವೆ ಮಾಡಿದುದರಿಂದ ಹಿಂದೂ ಮತವು ಉದ್ಧಾರಹೊಂದುವುದನ್ನು ಈಗಿನ ನಾಸ್ತಿಕರು ತಿಳಿಯಬಲ್ಲರು ಹೇಗೆ?

ಸುದ್ದಿಯ ಮುದ್ದಣ್ಣನ ನ್ಯೂಸಿನ ಶ್ಲಾಘನೆಯಲ್ಲಿ ರಾಷ್ಟ್ರಬಂಧುವು ವಿಕಲ್ಪಾರ್ಥವನ್ನು ಮಾಡಿಕೊಂಡಿರುವುದು. ಮುದ್ದಣ್ಣನ ಮಡಲಣ್ಣ ಬಿದಿರಣ್ಣನವರ ಮೇಲಿನ ಆ ಗದ್ಯಕಾವ್ಯದ ಕಡೆಗಿನ ನಮ್ಮ ಪ್ರಶಂಸೆಯು ಅನ್ಯಾಭಿಪ್ರಾಯವನ್ನುಂಟು ಮಾಡುವುದಾದರೆ ಇದೇ ನಮ್ಮ ಎಪೊಲೊಜಿ (apology).

ನೋಟಗಳು.

NOTE...S.

ಸತ್ಯಾಗ್ರಹವು ಬರ್ಡೋಲಿಯಲ್ಲಿ ಮಾತ್ರವಲ್ಲ; ಸೌತ್ ಇಂಡಿಯನ್ ರೈಲ್ವೆ ಕಂಪೆನಿಯ ಮಜೂರರೂ ಸತ್ಯಾಗ್ರಹ ಕೈಕೊಂಡಿದ್ದಾರೆ. ಸತ್ಯಾಗ್ರಹವು ಇನ್ನು ಯಾವಯಾವ ಉಪಯೋಗಕ್ಕೆ ಬೀಳಲಿದೆಯೋ!

• • • •

ಕಾಶ್ಮೀರದ ಅರಸರು ಹರಿಸಿಂಗರವರು ಇಂಗ್ಲೆಂಡಿಗೆ ಹೋಗಿದ್ದಾರೆ; ಮಿಡ್ಲೆಂಡ್ ಬೇಂಕಿನ ಮಿಸ್ಟರ್ ಎ ಯಾಗಿಲ್ಲವೆಂದು ನಾವು ಭಾವಿಸುತ್ತೇವೆ.

• • • •

ಬ್ರಿಟಿಷ ಹಿಂದೂಸ್ಥಾನಕ್ಕೆ ಹೆಚ್ಚು ಸ್ವಾತಂತ್ರ್ಯ ಕೊಡುವರೊ ಎಂದು ನೆನಸಿಯೇ ಹಿಂದೀ ಅರಸರಿಗೆ ದಿಗಿಲು ಬಿದ್ದಿದೆ. ತಮ್ಮ ಪ್ರಜೆಗಳನ್ನು ದಬ್ಬಾಳಿಸಿ ದುಡ್ಡು ಕೂಡಿಸಿ ವಿಲಾಯತಿಯಲ್ಲಿ ಖರ್ಚುಮಾಡಲಿಕ್ಕೆ ತೊಂದರೆ ಬರುವುದೆಂದೇನೊ!

• • • •

ಕಾಶ್ಮೀರದ ಅರಸರು ಬ್ರಿಟಿಷ ರಾಜರ ಕಡೆಗಿನ ತಮ್ಮ ಮಿತಿಯಿಲ್ಲದ ರಾಜಭಕ್ತಿಯನ್ನು ತೋರಿಸಲು ಮರೆಯಲಿಲ್ಲ. ಭಕ್ತಿಯೇ ಮುಕ್ತಿಯ ಮಾರ್ಗ.

• • • •

ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ಆಯರ್ಲ್ಯಾಂಡಿಗೆ ಹೋಗಿದ್ದರು. ಅಲ್ಲಿನ ಪ್ರೆಸಿಡೆಂಟ ಕೊಸಗ್ರೇವ್, ಡಿ ವೆಲೆರಾ ಮೊದಲಾಗಿ ಎಲ್ಲರೂ ಹಿಂದೀಯರ ಸ್ವಾತಂತ್ರ್ಯದ ಪ್ರಯತ್ನಗಳೊಡನೆ ಸಹಾನುಭೂತಿಯನ್ನು ತೋರಿದರಂತೆ.

• • • •

"ಐರ್ಲ್ಯಾಂಡಿನಲ್ಲಿ ನಾನು ಪ್ರವಾಸ ಮಾಡಿದ ಎರಡು ದಿನಗಳಲ್ಲಿ, ಇಂಗ್ಲೆಂಡಿನಲ್ಲಿ ಒಂದು ತಿಂಗಳು ಪ್ರವಾಸ ಮಾಡಿದಾಗ ಮಾಡಿಕೊಂಡ ಮಿತ್ರರಿಗಿಂತಲೂ ಹೆಚ್ಚು ಮಿತ್ರರನ್ನು ನಾನು ಮಾಡಿಕೊಂಡೆನು" ಎಂದು ಶ್ರೀ. ಐಯ್ಯಂಗಾರರು ಹೇಳುವರು.

• • • •

ಸಹಜ, ಪ್ರಭು—ದಾಸರೊಳಗೆ ಸ್ನೇಹವೆಲ್ಲಿಂದ? ಇಂಗ್ಲಿಷರು ತಾವು ಪ್ರಭುವೆಂದೇ ತಿಳಿದುಕೊಂಡಿರುವರು, ಹಿಂದೀಯರು ಸ್ವತಂತ್ರರಾದರೆ ತಾನಾಗಿಯೇ ಸ್ನೇಹಿತ ವೃಂದವೂ ಹೆಚ್ಚುವುದು!

• • • •

ಅಮೀರ ಅಮಾನುಲ್ಲಾ ಖಾನರನ್ನು ನೋಡಿ, ಅಫಘಾನಿಸ್ಥಾನವು ಬ್ರಿಟಿಷ ದುಡ್ಡಿನ ಹಂಗಿನಲ್ಲಿದ್ದಾಗ ಲೋಕಕ್ಕೆ ಅದು ಇದೆಯೊ ಇಲ್ಲವೊ ಎಂದು ಗೊತ್ತೇ ಇರಲಿಲ್ಲ. ಈಗ! ಅವರನ್ನು ಸತ್ಕರಿಸಿ ಉಪಚರಿಸಲಿಕ್ಕೆ ಯುರೋಪಿಯ ರಾಷ್ಟ್ರಗಳೊಳಗೆ ಮೇಲಾಟ!

• • • •

ಮುಂಬ್ಯಾ ಶಮದಾಸಾನಿ ಎಂಬವರು ಮುಂಬಾಯಿಯವರಿಗೆ ಚಿರಪರಿಚಿತರು, ಅವರಿಗೆ ಹಲವು ಕಂಪೆನಿಗಳಲಿ ಶೇರುಗಳಿವೆ. ಜಗಳವೆತ್ತುವುದೆಂದರೆ ಅವರಲ್ಲಿ ಅಸಾಮಾನ್ಯ ಪ್ರತಿಭೆಯಿದೆ. ಹಲವು ಕಂಪೆನಿಗಳನ್ನು ಅವರು ಕೋರ್ಟಿಗೆ ಎಳೆದಿದ್ದಾರೆ.

• • • •

ತಾತಾ ಕಂಪೆನಿಯ ವಿರೋಧವಾಗಿ ಪ್ರಿವಿ ಕೌನ್ಸಿಲಿನ ವರೆಗೂ ಅವರದೊಂದು ತಕರಾರು. ಪ್ರಿವಿ ಕೌನ್ಸಿಲಿನ ನ್ಯಾಯಾಧಿಪತಿಗಳಾದ ಲೋರ್ಡರಿಗೆ ಬೇಸರಹುಟ್ಟುವಷ್ಟು. ಅವರ ಬಾಯಿ ಮುಚ್ಚಿಸಲಿಕ್ಕೆ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥ. ಲೋರ್ಡರು ಕಟ್ಟಕಡೆಗೆ ವಾಕ್ ಅವುಟ್, walk outನ್ನು ಆಚರಿಸುವ ಆವಶ್ಯಕತೆ ಬಿತ್ತು!

• • • •

ಶಿವಾಜಿ ದೇವಸ್ಥಾನದಲ್ಲಿ (ಪೂನಾ) ಶಿವಾಜಿ ಮೂರ್ತಿಗೆ ಯಾರೋ ದುರಾತ್ಮರು ಸೆಗಣಿ ಹಾಗಿಸಿ, ಒಂದು ಜೋಡು ಮೆಟ್ಟನ್ನು ಇಟ್ಟು ಹೋಗಿರುವರಂತೆ. ಹತ್ತಿರ ಒಂದು ತುರ್ಕಿ ಟೊಪ್ಪಿಯೂ ಇತ್ತಂತೆ.

• • • •

ಶಿವಾಜಿಯು ಈ ಶುದ್ಧೀಕರಣವನ್ನು ಸ್ವೀಕರಿಸಿ, ಅವರ ಚಿರಸಂಚಾರದ ಜೀವನಕ್ಕೆ ಮೆಟ್ಟಿನ ಜೋಡಿನ ಅವಶ್ಯಕತೆಯನ್ನು ಕಂಡು ಅದನ್ನೂ ಸ್ವೀಕರಿಸಿ, ಇವುಗಳ ಉದಾರದಾತಾರರಿಗೆ ಕೃತಜ್ಞರಾಗಿರಬೇಕು. ಇದರಲ್ಲಿ ಅಪವಿತ್ರತೆಯನ್ನು ಕಾಣುವಷ್ಟು ಶಿವಾಜಿಯು ಸಂಕುಚಿತ ಚಿತ್ತದವನಾಗಿರಲಾರನು.

• • • •

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಚಿಕ್ಕ ಚಿ ದೂಚಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮೊದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹಂಚಾವು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿವಸವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898-2-0	ಇದರ್‌ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲಿ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪ್ಯಾ 2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಕಾಯಂ ಠೇವಣಾತಿಗಳು „ 7,38,880/-

ಹೊರಗೆ ಒಟ್ಟು ಸಾಲ ದೇಣಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6¾ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ಪಟ್ಟಾ?, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಮ್ಮಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ,
ತಾ. 18-2-'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಣಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೬೦೦ ಮಾತ್ರೆಗಳ ತ್ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜೆಂಟರು:—

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್ಸು, ಸೀತಾರಾಘವ ವೈದ್ಯಶಾಲಾ, ಮೈಸೂರು.

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಪಾಲಿಗೆ ಮಾಕ್ಕೆ.

[illegible]

ವಾಗಬಹುದು. ಈ ರೊಯಲ್ ಕಮಿಶನ್ನಿನ ರಿಪೋರ್ಟು ಸರಕಾರದ ಮಾನಸಿಕತೆಯ ಮೇಲೆ ಯಾವ ಪರಿಣಾಮವನ್ನುಂಟುಮಾಡಬಹುದೆಂದು ಇನ್ನು ನೋಡಬೇಕು.

ವಿದೇಶ ವರ್ತಮಾನ.

— ಲಂಡನಿನಲ್ಲಿ ಕರ್ನಲ್ ಮೈನರ್ಟ್ಜಹೆಗನ್ ಮತ್ತು ಆತನ ಪತ್ನಿ ಇವರಿಬ್ಬರು ಪಿಸ್ತೂಲಿನಿಂದ ಸಂತೋಷಕ್ಕಾಗಿ ಗುಂಡುಗಳನ್ನು ಹಾರಿಸುತ್ತಾ ಆಡುತ್ತಿದ್ದರು. ಆದರೆ ಆಕಸ್ಮಾತ್ತಾಗಿ ಒಂದು ಗುಂಡು ಹೆಂಡತಿಯ ತಲೆಗೆ ತಗಲಿದ ಕಾರಣ ಆಕೆಯು ಕೂಡಲೇ ಮೃತಪಟ್ಟಳು.

— ಕೊಲೊಂಬೊವಿನಲ್ಲಿ ಮಹಾರರು ದಂಗೆಯೆದ್ದು ಹಲವು ಯುರೋಪಿಯಾನರ ಮೇಲೆ ಕೈಮಾಡಿದರು. ಈ ದಂಗೆಯ ಮೂಲಪುರುಷರಾದ ಮೂವರು ಮಹಾರರನ್ನು ಸರಕಾರದವರು ಹಿಡಿದು ಕೈದುಮಾಡಿ, ಒಬ್ಬೊಬ್ಬನಿಗೆ ಏಳೇಳು ವರುಷಗಳ ಕಠಿಣ ಸಜೆಯನ್ನು ವಿಧಿಸಿರುವರು. ಅವರ ವರ್ತನೆಯು ಬಹು ಅನ್ಯಾಯದ್ದೆಂದೂ, ಸಹಿಸಲಸಾಧ್ಯವಾದುದೆಂದೂ ಜಡ್ಜರ ಅಂಬೋಣ.

ಅಟ್ಲಾಂಟಿಕ್ ಸಾಗರವನ್ನು ವಿಮಾನದ ಮೇಲೆ ಕುಳಿತು ದಾಟಿದವರಲ್ಲಿ, ಮಿಸ್. ಇಯರ್‌ಹಾರ್ಟ್ ಎಂಬವಳು ಮೊದಲನೆಯವಳು. ಇವಳು ಮೊನ್ನೆ ತಾನೆ ಸೌತ್‌ಹೆಂಪಟನಿಗೆ ಬಂದು ಇಳಿದಳು.

— ಕೊಮನ್‌ವೆಲ್ತ್ ಲೇಬರ್ ಕಾನ್ಫರೆನ್ಸಿನ ಬರುವ ಅಧಿವೇಶನವು ಲಂಡನಿನಲ್ಲಿ ೧೯೩೦ನೇ ಇಸವಿಯಲ್ಲಿ ಜರಗುವದು.

— ಲಂಡನಿನಿಂದ ಹೊರಟು ಚೈನಾ ದೇಶಕ್ಕೆ ಹೋಗುತ್ತಿದ್ದ ಒಂದು ಉಗಿ ಹಡಗವು ತೇಮ್ಸ್ ನದಿಯಲ್ಲಿದ್ದಾಗ ಅದಕ್ಕೆ ಬೆಂಕಿ ತಗಲಿತು. ಒಡನೆ ಅದನ್ನು ನಿಲ್ಲಿಸಿ ಪ್ರಯಾಣಿಕರೆಲ್ಲರನ್ನು ಸಮೀಪದ ಬಂದರದಲ್ಲಿ ಇಳಿಸಲಾಯಿತು. ಮತ್ತು ಬಹು ಪ್ರಯತ್ನದಿಂದ ಬೆಂಕಿಯನ್ನು ನೊಂದಿಸಿದರು.

— ಏತೆನ್ಸ್‌ನಲ್ಲಿ ಉಂಟಾದ ಹೊಗೆಸೊಪ್ಪು ಕೆಲಸಗಾರರ ಮುಷ್ಕರವು ಶಾಂತವಾಗುತ್ತಾ ಬರುತ್ತಿದೆ.

— ನ್ಯೂಯೋರ್ಕಿನಲ್ಲಿ ಒಂದು ಕಟ್ಟಡದ ನಾಲ್ಕನೇ ಮಾಳಿಗೆಯ ಕಿಟಿಕಿಯಿಂದ ಮನೆಯ ಯಜಮಾನನು ಕೆಳಕ್ಕೆ ಉರುಳುತ್ತಿರುವುದನ್ನು ನೋಡಿ, ಸೇವಕಿಯು ಬೇಗನೇ ಓಡಿಹೋಗಿ ಆತನ ಕಾಲನ್ನು ಹಿಡಿದುಕೊಂಡಳು. ಕಾಲು ಸೇವಕಿಯ ಕೈಯಲ್ಲಿದ್ದ ಕಾರಣ ಯಜಮಾನನು ಕಿಟಿಕಿಯ ಹೊರಗಡೆ ನೇತಾಡುತ್ತಿದ್ದನು. ಸೇವಕಿಯು ಬೊಬ್ಬೆ ಹಾಕಿದ ಕಾರಣ ಜನರು ಕೆಳಗೆ ಕೂಡಿ ಕಿಟಿಕಿಯ ಸರಿಯಾಗಿಯೇ ನೆಲದ ಮೇಲೆ ಹಾಸಿಗೆಗಳನ್ನು ಹಾಸಿ ಇಟ್ಟರು. ಸೇವಕಿಯು ಬಲವು ಕುಂದಿದೊಡನೆ ಅವಳು ಕೈಬಿಟ್ಟಳು. ಯಜಮಾನನು ಕೆಳಕ್ಕೆ ಬಿದ್ದರೂ ಹಾಸಿಗೆಗಳಿದ್ದ ಕಾರಣ ಅವನಿಗೆ ಪೆಟ್ಟು ಆಗಲಿಲ್ಲ.

— ಪೆರಿಸಿನಲ್ಲಿ ಸೆನೆಟಿನವರು ೧೯೨೮ನೇ ಇಸವಿಯಿಂದ ೧೯೩೩ನೇ ಇಸವಿಯ ಒಳಗೆ ೮೫ ಮಿಲಿಯ ಸ್ಟರ್ಲಿಂಗುಗಳನ್ನು ಖರ್ಚುಮಾಡಿ ೨೦೦,೦೦೦ ಸಣ್ಣ ಮನೆಗಳನ್ನು ೬೦,೦೦೦ ದೊಡ್ಡ ದೊಡ್ಡ ಮನೆಗಳನ್ನೂ ಕಟ್ಟಿಸುವರು.

— ಅಮೇರಿಕದ ಜ್ಯಾಲಿನವರ "ಎಂಗೆನೋಸ್" ಎಂಬೊಂದು ಉಗಿ ಹಡಗವು ಸಮುದ್ರದಲ್ಲಿ ಮುಳುಗಿ ಹೋಗಿ ೨೨ ಜನರು ಸತ್ತುಹೋದರು. ಹಡಗದ ಕೆಪ್ಟನನು ತಾನಾಗಿಯೇ ಆತ್ಮಹತ್ಯವನ್ನು ಮಾಡಿಕೊಂಡನು. ನಾಲ್ಕು ಜನರು ಈಜಾಡಿಕೊಂಡು ಏಳು ಮೈಲು ದೂರವಿರುವ ದಡವನ್ನು ಸೇರಿದರು. ಹಡಗದಲ್ಲಿ ತುಂಬಾ ಕಲ್ಲಿದ್ದಲ್ಲನ್ನು ತುಂಬಿಸಿದ್ದರು.

— ಬಲ್ಗೇರಿಯದ ಮೆಸಡೋನಿಯನ್ ರಿವೊಲ್ಯೂಶನರಿ ಕಮಿಟಿಯ ನಾಯಕನಾದ ಪ್ರೊಟೊಗ್ಯೆರೊಫ್ ಎಂಬವನನ್ನೂ, ಆತನ ಮಿತ್ರನನ್ನೂ, ಮೂವರು ಅಪರಿಚಿತರು ಗುಂಡು ಹೊಡೆದು ಕೊಂದು ಓಡಿ ಹೋಗಿರುವರು. ನಾಯಕನು ೬೫ ವರುಷ ಪ್ರಾಯದ ಮುದುಕನು.

— ಲಂಡನಿನಲ್ಲಿ ಒಬ್ಬ ಯುವಕನು ಸೈಕಲಿನ ಮೇಲೆ ಕುಳಿತು ೧೦೦ ಮೈಲುಗಳ ದೂರವನ್ನು ೪ ಘಂಟೆ ೧೪ ಮಿನಿಟುಗಳಲ್ಲಿ ಓಡಿ ತೀರಿಸಿದನು. ಇಷ್ಟು ಚೆನ್ನಾಗಿ ಇದು ವರೆಗೆ ಯಾರೂ ಸೈಕಲನ್ನು ಓಡಿಸಿದುದಿಲ್ಲವಂತೆ.

— ಕಳೆದ ಮಾರ್ಚ ೩೧ನೇ ತಾರೀಕಿನ ದಿನ ಆಸ್ಟ್ರೇಲಿಯದ ಜನಸಂಖ್ಯೆಯು ೬,೨೩೩,೦೦೦ ಆಗಿತ್ತು. ೧೯೨೦ನೇ ಎಪ್ರಿಲ್‌ನಿಂದ ಇದು ೮,೨೬,೦೦೦ ಹೆಚ್ಚಾಗಿದೆ.

— ಇಟಲಿಯಾ ವಿಮಾನಕ್ಕೆ ಬೆಂಕಿ ತಾಗಿ ಸುಟ್ಟುಹೋಗಿರಬಹುದೆಂದು ಈಗ ಒಂದು ಸಂಶಯವು ಉತ್ಪನ್ನವಾಗಿರುತ್ತದೆ. ಹೀಗೆ ಭಾವಿಸಲು ಹಲವು ಕಾರಣಗಳೂ ಇವೆಯಂತೆ. ಬಹುಶಃ ನಿಜವಾಗಿರಲೂ ಬಹುದು.

— ಜಂಕರ ಮತ್ತು ಜಮ್ಮರ ಎಂಬವರಿಬ್ಬರು ವಿಮಾನದಲ್ಲಿ ಕುಳಿತು ೫೦೦೦ ಮೈಲುಗಳ ಪ್ರಯಾಣವನ್ನು ನಿಲ್ಲದೆ ಮಾಡಿದರು. ಒಟ್ಟು ೬೫ ಘಂಟೆ ಮತ್ತು ೨೬ ಮಿನಿಟುಗಳ ಸಮಯದಲ್ಲಿ ಅವರು ವಾಯುಮಂಡಲದಲ್ಲಿಯೇ ಇದ್ದರು.

— ಲಂಡನಿನಲ್ಲಿ ಎರಡು ರೈಲು ಬಂಡಿಗಳು ಒಂದಕ್ಕೊಂದು ತಾಗಿ ಜಖಮಾಗಿ ಒಬ್ಬನು ಸತ್ತುಹೋದನು. ಹತ್ತು ಜನರಿಗೆ ಘಾಯವಾಯಿತು. ಇವರಲ್ಲಿ ನಾಲ್ಕು ಜನರ ಸ್ಥಿತಿಯು ಸಂಶಯಾಸ್ಪದ.

— ಲೇಡಿ ಇರ್ವಿನರು ಸಪ್ಟಂಬರ ೨೦ನೇ ತಾರೀಕಿನ ದಿನ ಲಂಡನಿನಿಂದ ಹೊರಟು ಒಕ್ಟೋಬರ ೫ಕ್ಕೆ ಮುಂಬಾಯಿಗೆ ತಲಪಿ, ೬ನೇ ತಾರೀಕಿನ ದಿನ ಸಿಮ್ಲಾಕ್ಕೆ ತಲಪುವರು.

— ಅಮೇರಿಕನ್ ಮಿಲಿಯಾಧಿಪತಿಯಾದ ವಿಲ್ಲಿಯಮ್ ಲೀಡ್ಸ್‌ನೊಂದಿಗೆ ಪ್ರಸಿದ್ಧ ನಟಿಯೂ, ನರ್ತಕಿಯೂ ಆದ ಎಡೆಲೆಎಸ್ಟೈರೆಯು ವಿಹಾರಕ್ಕಾಗಿ ಮೋಟರ್ ಬೋಟನ್ನು ಹತ್ತಿ ಹೋಗುತ್ತಿದ್ದರು. ಥಕ್ಕನೆ ಬೋಟಿಗೆ ಬೆಂಕಿ ತಗಲಿತು. ಆದರೂ ಅವರಿಬ್ಬರೂ ದಡಕ್ಕೆ ಹಾರಿ ಬದುಕಿಕೊಂಡರು. ಶರೀರವು ಸ್ವಲ್ಪ ಸ್ವಲ್ಪ ಸುಟ್ಟುಹೋಗಿದೆಯಂತೆ.

— ಜರ್ಮನಿಗೆ ಬ್ರಿಟಿಷ ಪ್ರತಿನಿಧಿಯಾಗಿ ಸರ್ ಹೊರೆಸ್ ರಂಬೊಲ್ಡರನ್ನು ನೇಮಿಸಿರುವರು.

ಮೊಸ್ಕೊ ಪಟ್ಟಣದಲ್ಲಿ ಒಂದು ಜೋಂಬು ಒಡೆದುಹೋಗಿ ಒಬ್ಬ ಸೈನಿಕನು ಮೃತಪಟ್ಟನು. ಇನ್ನೊಬ್ಬ ಮನುಷ್ಯನೂ ಸತ್ತುಹೋದನು.

ಒಳದೇಶ ವರ್ತಮಾನ.

— ಮುಂಬಾಯಿಯ ಎಕೌಂಟಂಟ್ ಜನರಲರ ಆಫೀಸಿನಲ್ಲಿ ಕೇಶಿಯರನಾಗಿದ್ದ ೨೫ ವರುಷ ಪ್ರಾಯದ ಸವಾಕ್ಷಗೋಳ್ವಾಲಾ ಎಂಬ ಯುವಕನು ಕಳೆದ ಮಾರ್ಚನಿಂದ ಜೂನ್ ತಿಂಗಳಿನ ವರೆಗೆ ೮೦೦ ರೂಪಾಯಿಗಳನ್ನು ಅನ್ಯಾಯವಾಗಿ ತಿಂದುಹಾಕಿದನೆಂದು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅವನಿಗೆ ಮೂರು ತಿಂಗಳುಗಳ ಕಠಿಣ ಶಿಕ್ಷೆಯನ್ನೂ ೫೦೦ ರೂಪಾಯಿಗಳ ಜುರುಮಾನೆಯನ್ನೂ ವಿಧಿಸಿದರು. ಪೆನ್‌ಶನಿಗೆ ಅರ್ಜಿಮಾಡಿದವರ ನಾಲ್ಕು ಬಿಲ್ಲುಗಳಿಗೆ ಫೋರ್ಜರಿ ದಸ್ಕತು ಹಾಕಿ ಹಣವನ್ನು ತಾನು ತಿಂದುಹಾಕಿದ್ದನಂತೆ.

— ಕಲಕತ್ತದಲ್ಲಿ ಒಬ್ಬ ಯುರೋಪಿಯಾನನ ಕಾರು ಒಬ್ಬ ಹಿಂದುವಿನ ಮೋಟಾರಲೋರಿಗೆ ಢಕ್ಕೆಹೊಡೆದು ಕಾರಿಗೆ ಬಹಳ ಜಖಮ್ ಆಗಿ ಒಳಗೆ ಕುಳಿತಿದ್ದವರಿಗೆ ವಿಶೇಷ ತರದ ಗಾಯವಾಯಿತು. ಅದುಕಾರಣ ಅವರೆಲ್ಲರನ್ನೂ ಆಸ್ಪತ್ರೆಗೆ ಒಯ್ಯೋಣಾಯಿತು.

— ತಿನ್ನವೆಲ್ಲಿಯಲ್ಲಿ ಒಬ್ಬ ಖೂನಿಗಾರನನ್ನು ಹಿಡಿದು ರೈಲಿನಲ್ಲಿ ಕೊಂಡೊಯ್ಯುತ್ತಿರುವಾಗ, ರೈಲು ಓಡುವಾಗಲೇ ಆತನು ಕಿಟಿಕಿಯಿಂದ ಹೊರಗೆ ದುಮುಕಿದನು. ಪೆಟ್ಟು ಚೆನ್ನಾಗಿ ತಾಗಿದ ಕಾರಣ ಆತನು ಬದುಕಲಿಲ್ಲ. ಆತನನ್ನು ಕಾಯುತ್ತಿದ್ದ ಇಬ್ಬರು ಪೋಲೀಸರು ತಮ್ಮ ಕೆಲಸದ ಕಡೆಗೆ ಸರಿಯಾಗಿ ಲಕ್ಷ್ಯವನ್ನು ಕೊಡಲಿಲ್ಲವೆಂಬ ಆರೋಪದ ಮೇಲೆ ಅವರಿಬ್ಬರನ್ನು ಕೈದುಮಾಡಿ ಈಗ ಅವರ ವಿಚಾರಣೆಯು ನಡೆಯುತ್ತಿದೆ.

— ಕಲ್ಕತ್ತದಲ್ಲಿ ನಡೆಯಲಿರುವ ರಾಷ್ಟ್ರೀಯ ಮಹಾಸಭೆಯ ಅಧಿವೇಶನಕ್ಕೆ ಅಧ್ಯಕ್ಷರಾಗಲು ಆಂಧ್ರಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ಕೆಳಗಿನ ಹೆಸರುಗಳನ್ನು ಸೂಚಿಸಿರುವರು. ೧. ಪಂಡಿತ ಮೋತಿಲಾಲನೆಹರು, ೨. ಪಂಡಿತ ಜವಾಹಿರಲಾಲನೆಹರು, ೩. ವಲ್ಲಭ್ಭಾ ಪಟೇಲು, ೪. ಕೊಂಡಾ ವೆಂಕಟಪ್ಪಯ್ಯ, ೫. ಟಿ. ಪ್ರಕಾಶಮ್ ಇವರು.

— ಬಂಗಾಳದ ಹಲವು ಕಡೆಗಳಲ್ಲಿಯೂ ಮತ್ತು ಜಬಲಪುರ ಜಿಲ್ಲೆಯಲ್ಲಿಯೂ ಬೆಳೆಬೆಳೆಯದೆ ಇರುವ ಕಾರಣ ಜನರಿಗೆ ತಿನ್ನಲು ಸಾಕಷ್ಟು ಆಹಾರವಿರುವದಿಲ್ಲ. ಆದ ಕಾರಣ ಅಲ್ಲಿಯ ಜಮೀನುದಾರರು ಸದ್ಯಕ್ಕೆ ತಿಂಗೆಯನ್ನು ಕೊಡುವದು ಅಗತ್ಯವಿಲ್ಲವೆಂದು ಸರಕಾರದವರ ಸೂಚನೆ. ಒಕ್ಕಲುಗಳಿಂದ ಈ ಜಮೀನುದಾರರು ಗೇಣಿಯನ್ನು ವಸೂಲು ಮಾಡಲೇ ಬಾರದೆಂದು ಸರಕಾರದವರು ಹುಕುಮು ಕೊಟ್ಟಿರುವರು.

— ಕಲಕತ್ತದ ಒಂದು ಪತ್ರಿಕೆಯ ಸಂಪಾದಕನನ್ನೂ, ಛಾಪಕನನ್ನೂ, ತಪ್ಪು ಬರೆಯುವರೆಂಬ ಆರೋಪದ ಮೇಲೆ ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟುಬಿಟ್ಟರು.

ಸ್ವಿಜರ್‌ಲೇಂಡಿನ ಒಬ್ಬ ಧನಿಕನು ತಾನೆಂದು, ಒಬ್ಬ ಅಪರಿಚಿತ ವ್ಯಕ್ತಿಯು ಸಿಮ್ಲಾಕ್ಕೆ ಬಂದು ಅಲ್ಲಿ ಹಲವು ಭಾಷಣಗಳನ್ನು ಕೊಟ್ಟು ಜನರನ್ನು ಮರುಳುಗೊಳಿಸಿದನು. ಅಲ್ಲಿ ತನ್ನ ತಂದೆಯು ಸತ್ತನೆಂದು ವರ್ತಮಾನ ಬಂದ ಕಾರಣ ತಾನು ಯುರೋಪಿಗೆ ಹಿಂತಿರುಗಬೇಕೆಂದು, ಕರಾಚಿಗೆ ಹೋಗಲು ಸ್ಪೆಶಲ್ ಟ್ರೈನನ್ನು ಬಿಡಲು ರೈಲ್ವೆ ಅಧಿಕಾರಿಗಳಿಗೆ ತಿಳಿಸಿ ಅವರಿಗೊಂದು ಚೆಕ್; ಕರಾಚಿಯ ಎರೋಪ್ಲೇನ್ ಸರ್ವಿಸಿನವರಿಗೆ ಸ್ಪೆಶಲ್ ಎರೋಪ್ಲೇನನ್ನು ಯುರೋಪಿಗೆ ಬಿಡುವ ಬಗ್ಗೆ ತಿಳಿಸಿ ಅವರಿಗೊಂದು ಚೆಕ್ ಮತ್ತು ಸ್ಟೀಮರ್ ಆಫೀಸಿನವರು ಸ್ಪೆಶಲ್ ಕೆಬಿನನು ತನಗಾಗಿ ತಯಾರಿಸುವ ಬಗ್ಗೆ ಅವರಿಗೂ ಒಂದು ಚೆಕ್; ಹೀಗೆ ಹಲವು ಚೆಕ್ಕುಗಳನ್ನು ಹಲವರಿಗೆ ಕೊಟ್ಟಿದ್ದನು. ಕಾರಣಾಂತರದಿಂದ ಈತನ ಗುಟ್ಟೆಲ್ಲವೂ ರಟ್ಟಾಯಿತು. ಚೆಕ್ಕುಗಳೆಲ್ಲವೂ ಬೆಲೆಯಿಲ್ಲದವುಗಳಾದವು. ಆತನನ್ನು ಹುಡುಕಿ ಹಿಡಿದು ಚೆಕ್ಕುಮಾಡಿ ಕೈದುಮಾಡಿರುವರು.

— ಭಾವಾನಗರ ರಾಜ್ಯದಲ್ಲಿ ಜೈನರ ಒಂದು ಕ್ಷೇತ್ರವನ್ನು ಸಂದರ್ಶಿಸಲಿಕ್ಕಾಗಿ ಹೋಗುತ್ತಿದ್ದ ೧೮ ಯಾತ್ರಿಕರ ಒಂದು ದೋಣಿಯು ಶತ್ರುಂಜಿ ನದಿಯಲ್ಲಿ ಕವಚಿಬಿದ್ದು ೧೬ ಜನರು ಮುಳುಗಿಹೋದರಂತೆ. ಒಬ್ಬ ಹುಡುಗನೂ, ಒಬ್ಬ ಸೇವಕನೂ ಜೀವ ಉಳಿಸಿಕೊಂಡರು. ದೋಣಿ ನಡಿಸುತ್ತಿದ್ದ ನಾಲ್ಕು ಜನರೂ ಪ್ರಾಣವನ್ನು ಉಳಿಸಿಕೊಂಡರು. ಭಾವಾನಗರ ರಾಜ್ಯದವರು ಸಾಹಸಪಟ್ಟು ಶೋಧನೆಗಳನ್ನು ನಡೆಸುತ್ತಿರುವರು.

— ಮುಂಬಾಯಿಯ ಕಲ್ಯಾಣದ ಕೋರ್ಟಿನಲ್ಲಿ ಪೆನ್‌ಶನ್ ಹೊಂದಿದ ರಾ. ಎನ್. ಸಿ. ಚಪೇಕಾರರನ್ನು ಪ್ರತಿವಾದಿಯನ್ನಾಗಿ ಮಾಡಿ, ಬ್ರಾಹ್ಮಣೇತರ ಪಕ್ಷದ ರಾ. ಡಿ. ಎನ್. ಜವಳಕರರು ಒಂದು ವ್ಯಾಜ್ಯವನ್ನು ಹೂಡಿರುವರು. ಪ್ರತಿವಾದಿಯು ಒಂದು ಮರಾಠಿ ಪುಸ್ತಕವನ್ನು ಬರೆದು ತನ್ನನ್ನೂ ಮಹಾತ್ಮಾ ಗಾಂಧಿಯವರನ್ನೂ ಸರಿಹೋಲಿಸಿರುವರಂತೆ. ಈ ವ್ಯಾಜ್ಯದಲ್ಲಿ ಮಹಾತ್ಮಾಜಿಯವರೇ ಸಾಕ್ಷಿ ಹೇಳಲು ಬರಬೇಕಾಗುವದೋ ಏನೋ.

— ಸೌತ್ ಇಂಡಿಯಾ ರೈಲ್ವೆ ಕಂಪೆನಿಯಲ್ಲಿ ಕೆಲಸ ಮಾಡುವ ಕ್ಲಾರ್ಕರ ಸಂಬಳವನ್ನು ಹೆಚ್ಚಿಸುವರು. ೨೫ಕ್ಕಿಂತ ಕಡಿಮೆ ಸಂಬಳ ಸಿಕ್ಕುವವರಿಗೆ ರೂಪಾಯಿ ೨೮. ೨೫ರಿಂದ ೨೬-೮-೦ ಸಂಬಳ ಸಿಕ್ಕುವವರಿಗೆ ೨೮-೮-೦; ಈಗ ೨೫ರಿಂದ ೩೦ರ ವರೆಗೆ ಸಿಕ್ಕುವವರಿಗೆ ೩೧ ರೂಪಾಯಿಗಳು. ಇದು ಜುಲೈ ಒಂದನೇ ತಾರೀಕಿನಿಂದಾಗಿದೆ.

— ದೇವದಾಸಿಗಳು ಚಿಕ್ಕ ಹುಡುಗಿಯರನ್ನು ದತ್ತಕ್ಕೆ ಪಡೆದುಕೊಂಡು ಅವರ ನಡತೆಯನ್ನು ಹಾಳುಮಾಡುವ ಕಾರಣ, ಈ ತರದ ಅಭ್ಯಾಸವನ್ನು ನಿಲ್ಲಿಸಬೇಕೆಂದು ಸರಕಾರದವರು ಪ್ರತಿ ಜಿಲ್ಲೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೂ ಪೊಲೀಸ್ ಆಫೀಸರರಿಗೂ ಹುಕುಂ ಕೊಟ್ಟಿರುವರು.

— ಬಾರ್ಡೋಲಿಯ ಸತ್ಯಾಗ್ರಹಿಗಳನ್ನು ಅಭಿನಂದಿಸಿ ಬೆಳ್ಗಾಂವಿಯ ನಿವಾಸಿಕರ ಒಂದು ಸಭೆಯು ಕಾಂಗ್ರೆಸ್ ಕಮಿಟಿಯವರ ಆಶ್ರಯದಲ್ಲಿ ನಡೆಯಿತು. ಅವರ ಸಹಾಯಕ್ಕಾಗಿ ಹಣ ಸಂಗ್ರಹಿಸಲು ಒಂದು ಕಮಿಟಿಯನ್ನು ನಿರ್ಮಿಸಲಾಯಿತು. ಆಗಲೇ ನೂರು ರೂಪಾಯಿಗಳು ಸಂಗ್ರಹಿಸಲ್ಪಟ್ಟವು.

— ಕುಂಭಕೋಣದಲ್ಲಿ ಒಬ್ಬ ೧೬ ವರ್ಷ ಪ್ರಾಯದ ಹುಡುಗನ ಮೇಲೆ ಒಂದು ಬಸ್ಸು ಓಡಿ ಆತನು ಮೃತಪಟ್ಟನು.

— ಮುಂಬಾಯಿಯ ಮಾಜಿ ಗವರ್ನರರಾದ ಸರ್. ಲೆಸ್‌ಲಿವಿಲ್ಸನರ ಸ್ಮಾರಕಕ್ಕಾಗಿ ಒಂದು ಆಸ್ಪತ್ರೆಯನ್ನು ತೆರೆಯುವರು. ಇದಕ್ಕಾಗಿ ಇದು ವರೆಗೆ ರೂಪಾಯಿ ೧೫೦೨೩, ೬೦೭-೧-೯ ಜಮೆಯಾಗಿರುತ್ತದೆ. ಇನ್ನೂ ಬಹಳ ಜಮೆಯಾಗಲಿದೆ.

ಪೂನೆಯ ಅಂಗಡಿಯಲ್ಲಿ ಒಂದು ವಿಚಿತ್ರತರದ ಜಗಳವು ನಡೆಯಿತು. ಅಂಗಡಿಯ ಪ್ರೊಪ್ರೈಟರನು ಇನ್‌ಕಮ್‌ಟೆಕ್ಸ್ ಆಫೀಸರರಿಗೆ ಕಳುಹಿಸುವದಕ್ಕಾಗಿ ಒಂದು ಲೆಕ್ಕದ ಪಟ್ಟಿಯನ್ನು ತಯಾರಿಸಿ, ಮೆನೇಜರನಿದ್ದಲ್ಲಿಗೆ ಬಂದು ಅದಕ್ಕೆ ದಸ್ಕತು ಹಾಕಲು ಹೇಳಿದನು. ಆದರೆ ಪಟ್ಟಿಯು ತಪ್ಪೆಂದು ಮೆನೇಜರನಿಗೆ ತಿಳಿದು ಬಂದ ಕಾರಣ ಆತನು ದಸ್ಕತು ಹಾಕಲು ಒಪ್ಪಲಿಲ್ಲ. ಒಡನೆ ಪ್ರೊಪ್ರೈಟರನು ಆತನನ್ನು ಬೆದರಿಸಿ, ಬೈದು, ಹೊಡೆದು ಜಗಳವನ್ನು ಮಾಡಿದನು. ಅದರ ಕುರಿತು ವ್ಯಾಜ್ಯವಾಗಿ ಪೂನೆಯ ಕೋರ್ಟಿನಲ್ಲಿ ಈಗ ವಿಚಾರಣೆಯು ನಡೆಯುತ್ತಿದೆ.

ದಕ್ಷಿಣ ಕನ್ನಡ.

ಮಂಗಳೂರು:— ಮುಂಬಾಯಿ ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಕ್ಲಾರ್ಕ್ಸ್ ಯೂನಿಯನಿನ ಸಂಘದ ೧೯೨೭-೨೮ನೇ ಇಸವಿಗಳ ವರ್ಷಾವಧಿ ಮಹಾಸಭೆಯು ಇದೇ ಕಳೆದ ಜೂನ್ ತಾರೀಕು ೧೦ನೇ ರವಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಸರ್ ಕಾವಾಸ್ಜಿ ಜಹಾಂಗೀರ ಹೋಲಿನಲ್ಲಿ, ಡಾಕ್ಟರ್, ಎ. ಎಸ್. ಪೈ ಯಲ್. ಯಮ್. ಎಂಡ್. ಎಸ್. ಇವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಇದರ ವಿಸ್ತಾರವಾದ ವರದಿಯು ನಮಗೆ ಬಂದಿರುತ್ತದಾದರೂ ಈ ಸಲ ಸ್ಥಳಾಭಾವದ ದೆಸೆಯಿಂದ ಪ್ರಕಟಿಸಲಾಗಲಿಲ್ಲ.

ಇಲ್ಲಿಯ ವಿದ್ಯಾರ್ಥಿ ಭವನದಲ್ಲಿ ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಸ್ಥಾಯಿಕ ಕಮಿಟಿಯ ಸಭೆಯು ಇದೇ ತಾರೀಕು ೮ನೇ ಆದಿತ್ಯವಾರ ಶ್ರೀಮಾನ್ ಕಲ್ಯಾಡಿ ಲಕ್ಷ್ಮೀನಾರಾಯಣ ರಾವ್ ಬಿ. ಎ. ಬಿ. ಯಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೆಂಬರರ ಪೈಕಿ ಮಂಗಳೂರಿನ ಶ್ರೀ ಪಿ. ವಾಸುದೇವ ರಾಯರೂ, ಪಿ. ಸೀತಾರಾಮಾಚಾರ್ಯರೂ, ಕೆ. ರಾಮಚಂದ್ರಾಚಾರ್ಯರೂ, ಕಾರ್ಕಳದ ಇಡ್ಯ ವಾಸುದೇವರಾಯರೂ, ಇನ್ನು ಇತರರೂ, ಹಾಜರಿದ್ದರು. ಬಡ ವಿದ್ಯಾರ್ಥಿಗಳಿಗೆ ಈ ವರ್ಷಕ್ಕೆ ಎಂಟು ನೂರು ರೂಪಾಯಿಗಳನ್ನೂ, ಸಂಸ್ಕೃತ ಶಾಲೆಗಳಿಗೆ ೨೦೦ ರೂಪಾಯಿಗಳನ್ನೂ, ಹಾಗೂ ಜುಮ್ಲಾ ೧೦೦೦ ರೂಪಾಯಿಗಳ ವಿದ್ಯಾರ್ಥಿವೇತನವನ್ನೆ ಫಂಡಿನಿಂದ ಕೊಡುವುದಾಗಿ ಮಂಜೂರು ಮಾಡಿರುವರೆಂದು ತಿಳಿದುಬರುತ್ತದೆ.

ತಾರೀಕು ೬-೬-೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೩ ಮರಣಗಳೂ ೪೧ ಜನನಗಳೂ ಆದವು. ಮರಣಗಳ ಪೈಕಿ, ಸನ್ನಿಪಾತದಿಂದ ೧, ಮಲೇರಿಯಾ ಜ್ವರದಿಂದ ೧, ಶ್ವಾಸಕೋಶದ ರೋಗದಿಂದ ೧, ಇತರ ಎಲ್ಲಾ ಕಾರಣಗಳಿಂದ ೨೧, ಶಿಶುಮರಣ ೧.

ಕಳೆದ ಮಂಗಳವಾರ ಪ್ರಾತಃಕಾಲ ಮೀನು ಹಿಡಿಯುವ ಸಲುವಾಗಿ ಇಲ್ಲಿಯ ಬೋಳೂರು ಎಂಬಲ್ಲಿ ವಾಸಿಸುವ ಏಳು ಜನ ಮೊಗೇರರು ದೋಣಿಯಲ್ಲಿ ಕುಳಿತು, ನೇತ್ರಾವತಿ ನದಿಯಲ್ಲಿ ದೋಣಿಯೋಡಿಸಿ, ಸಮುದ್ರದ ಕಡೆಗೆ ಹೋಗುತ್ತಿದ್ದರು. ಅಕಸ್ಮಾತ್ತಾಗಿ ಉಳ್ಳಾಲದ ಸಮೀಪದ ಅಳಿವೆಬಾಗಿಲಿನಲ್ಲಿ ಒಂದು ಸುಳಿಗೆ ಸಿಕ್ಕಿ ದೋಣಿಯು ಕವಚಿಬಿದ್ದು ೭ ಜನರೂ ನೀರುಪಾಲಾದರು. ಅವರಲ್ಲಿ ಐದುಜನರು ಮಾತ್ರ ಪ್ರಯಾಸಪಟ್ಟು ದಡವನ್ನು ಸೇರಿದರು. ಉಳಿದಿಬ್ಬರು ಯುವಕರು ಮೃತಪಟ್ಟರು. ಅವರ ಮೃತದೇಹಗಳು ಮರುದಿನ ಸಿಕ್ಕಿದವು

ಮಂಗಳೂರಿನ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ವರುಷ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಗೆ ಪಂಡಿತ ಮೋತಿಲಾಲನೆಹರೂರವರ ಹೆಸರನ್ನು ಸೂಚಿಸಿರುವರೆಂದು ತಿಳಿದು ಬಂದಿರುತ್ತದೆ.

ತಿರುಪತಿ ಯಾತ್ರೆಗೆ ಹೋಗಿ ವಾಪಾಸು ಬಂದಂತಾ ಒಬ್ಬ ಯಾತ್ರಿಕನಿಗೆ ಕೊಲೆರವು ತಗಲಿ, ಉಡುಪಿ ತಾಲೂಕು - ಹಿರಿಯಡ್ಕ ಸಮೀಪದಲ್ಲಿರುವ ತನ್ನ ಮನೆಗೆ ಬಂದು ಮೃತಪಟ್ಟನು. ಅನಂತರ ಈ ಅಂಟುರೋಗವು ಈ ಗ್ರಾಮದಲ್ಲಿ ಹಬ್ಬಿರುತ್ತದೆ. ಮುದಾನಿದಂಬರಿನಲ್ಲಿಯೂ ಕುತ್ಯಾಡಿಯಲ್ಲಿಯೂ ಮಲ್ಪೆಯಲ್ಲಿಯೂ ಪ್ರಾರಂಭವಾಗಿರುತ್ತದೆ. ಅದರಿಂದ ಪರಊರಿನವರು ಈ ಪ್ರದೇಶಗಳಿಗೆ ಈಗ ಪ್ರಯಾಣ ಬೆಳಸದೆ ಇರುವುದು ಬಹಳ ಲೇಸು. ಒಂದು ವೇಳೆ ಬಂದದ್ದೇ ಆದರೆ ಬಹಳ ಜಾಗ್ರತೆಯಿಂದ ಇರತಕ್ಕದ್ದು. ತಪ್ಪಿದ್ದೇ ಆದರೆ ಈ ರೋಗವನ್ನು ಅಂಟಿಸಿಕೊಂಡು ತಮ್ಮ ಊರಿನಲ್ಲಿ ಕೂಡ ಹರಡಿಸುವ ಸಂದರ್ಭವು ಬಂದೀತು. ಜಾಗ್ರತೆ ಇರಲಿ ಎಂದು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರು ತಿಳಿಸುತ್ತಾರೆ.

ಪಾಣೆಮಂಗಳೂರು — ಈ ಊರಿನ ಜನರ ಅಪೇಕ್ಷೆ ಮೇರೆ ಇಲ್ಲಿಯ ಹುಡುಗಿಯರ ಶಾಲೆಗೆ ಮೂವರು ಉಪಾಧ್ಯಾಯಿನಿಯರನ್ನು ಕೊಟ್ಟಿರುವರು. ಬೋರ್ಡಿನವರು ಕೆಲವು ಬೆಂಚುಗಳನ್ನು ಒದಗಿಸುತ್ತಿದ್ದರೆ ಒಳ್ಳೇದಿತ್ತು. ಹುಡುಗಿಯರ ಸಂಖ್ಯೆಯು ಹೆಚ್ಚಾಗಿ ಕುಳಿತುಕೊಳ್ಳಲಿಕ್ಕೆ ಬೆಂಚುಗಳು ಇರುವುದಿಲ್ಲ.

ವಿವಿಧ ಸಮಾಚಾರಗಳು.

ಅಮೀರರ ಆಗಮನ.

ಕಳೆದ ಜುಲಾಯಿ ೧ನೇ ತಾರೀಕಿನ ದಿನ ಅಫಘಾನ ಅಮೀರ ಅಮಾನುಲ್ಲಾ ದೊರೆಗಳವರು ತನ್ನ ಯುರೋಪ ಸಂಚಾರವನ್ನು ಮುಗಿಸಿ ಕಾಬೂಲಿಗೆ ಬಂದು ತಲಪಿದರು. ಅವರ ಆಗಮನದ ಸಲುವಾಗಿ ಅಫಘಾನಿಸ್ಥಾನದಲ್ಲಿ ತಾರೀಕು ೧, ೨ ಮತ್ತು ೩ ಈ ಮೂರು ದಿನಗಳು ರಜಾದಿನವಾಗಿ ಆಚರಿಸಲ್ಪಟ್ಟವು. ಅಮೀರ ದಂಪತಿಗಳು ಸುಖವಾಗಿ ಬಂದು ತಲಪಿದ ಸಲುವಾಗಿ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದ್ದ ಹಲವು ಕೈದಿಗಳ ಬಿಡುಗಡೆ ಮಾಡಲ್ಪಟ್ಟರು. ಕಾಬೂಲಿನಲ್ಲಿ ಕೆಲವು ದಿನಗಳ ವರೆಗೆ ವಿಶ್ರಾಂತಿಯನ್ನು ಹೊಂದಿ ತದನಂತರ ಅಫಘಾನ ಸ್ಥಾನದ ಪಶ್ಚಿಮ ಪ್ರಾಂತವನ್ನವರು ಸಂದರ್ಶಿಸುವರು. ಅವರನ್ನು ಎದುರುಗೊಳ್ಳುವ ಸಲುವಾಗಿ ಜಲಾಲಾಬಾದ್ ಮತ್ತು ಸಿಮ್ಲಾ ಈ ಸ್ಥಳಗಳಲ್ಲಿ ತಯಾರಿಯು ಈಗಲೇ ನಡೆಯುತ್ತಿದೆ.

— ನಮ್ಮ ವ್ಯಾಸರಾಯರು ಅಮೀರರಿಗೆ ಅಭಿವಂದನೆಯ ವಾರ್ತೆಯನ್ನು ಕಳುಹಿಸಿರುವರು. 'ಏಳು ತಿಂಗಳ ಸಂಚಾರವನ್ನು ಮುಗಿಸಿ ನೀವು ಪುನಃ ರಾಜಧಾನಿಗೆ ಬಂದು ತಲಪಿದುದಕ್ಕಾಗಿ ನಿಮಗೆ ಅಭಿನಂದನೆಗಳು ಪೂಜಿಸಿ ಸುಖವಾದ ಭವಿಷ್ಯತ್ತನ್ನು ಬಯಸುವೆನು. ನೀವು ಮುಂಬಾಯಿಗೆ ಬಂದಾಗ ನಿಮ್ಮನ್ನು ಎದುರಗೊಳ್ಳುವ ಸುಸಂದರ್ಭವನ್ನು ನನ್ನ ಅಸೌಖ್ಯತೆಯ ಕಾರಣದಿಂದ ನಾನು ಕಳೆದುಕೊಂಡೆನೆಂದು ವ್ಯಸನಪಡುವೆನು. ನಿಮ್ಮ ಐತಿಹಾಸಿಕ ಪ್ರಯಾಣದ ವಿಷಯವನ್ನು ನಾನು ಗಂಭೀರವಾದ ಆಸಕ್ತಿಯಿಂದ ತಿಳಿಯಲಪೇಕ್ಷಿಸುವೆನಲ್ಲದೆ ನಿಮ್ಮ ಪ್ರಜೆಗಳು ಇಂದು ನಿಮ್ಮನ್ನು ಎಂತಹ ಆನಂದದಿಂದ ಮತ್ತು ಎಷ್ಟು ಸಂಭ್ರಮದಿಂದ ಸ್ವಾಗತವಿತ್ತಿರುವರೆಂಬುದನ್ನು ಕಲ್ಪಿಸಿಕೊಳ್ಳಬಲ್ಲೆನು' ಎಂದು. ಅದಕ್ಕೆ ಅಮೀರರು ಈ ರೀತಿಯ ಪ್ರತ್ಯುತ್ತರವನ್ನು ಕಳುಹಿದರು. 'ನಿಮ್ಮ ತಂತಿ ಬಂದು ತಲಪಿತು. ನಾವು ಊರಿಗೆ ಸುಖವಾಗಿ ಬಂದು ತಲಪಿದುದರ ಸಲುವಾಗಿ ನೀವು ಅಭಿನಂದಿಸಿದುದಕ್ಕಾಗಿ ನಮ್ಮ ಕೃತಜ್ಞತೆಗಳು. ನಾವು ಮುಂಬಾಯಿಗೆ ಬಂದಾಗ ನಿಮ್ಮನ್ನು ಸ್ವತಃ ನೋಡಬೇಕೆಂದಿದ್ದರೂ ದೈವವಶಾತ್ ಆ ಸುಸಂಧಿಯೊದಗಿ ಬರಲಿಲ್ಲ. ಹಾಗೆ ಆದುದರಲ್ಲಿ ನಮ್ಮ ಅಧಿಕಾರವೇನೂ ಇರದೆ, ಕೇವಲ ದೈವಸಂಕಲ್ಪವಾಗಿದೆ. ಹಿಂದುಸ್ಥಾನದಲ್ಲಿ ನಾನು ಸಂಚರಿಸುವಾಗ ಗವರ್ನರರೂ ಹಿಂದೂ ರಾಜರೂ ನನಗೆ ತೋರಿದ ಆತಿಥ್ಯಗಳಿಗಾಗಿ ನನ್ನಲ್ಲಿ, ಅತ್ಯಂತ ಪೂಜ್ಯ ಭಾವನೆಯು ಉತ್ಪನ್ನವಾಗಿರುತ್ತದೆ' ಎಂದು. ಈ ತರದ ಪ್ರವಾಸವು ಎಲ್ಲಾ ಜನರಲ್ಲಿಯೂ ರಾಜರುಗಳಲ್ಲಿಯೂ ಅವರ ಕುರಿತು ಸಮಾನವಾದ ಗೌರವವನ್ನು ಉಂಟುಮಾಡಿಯದೆ ಎಂದು ಬರೆದರೆ ಅತಿಶಯೋಕ್ತಿಯಾಗಲಾರದು.

• • • •

ಕೃಶವಾಗುವದೆಂತು?

ಮನುಷ್ಯನು ಸ್ಥೂಲಕಾಯವುಳ್ಳವನಾದಾಗ ತನ್ನ ಶರೀರವನ್ನು ಕೃಶಮಾಡಿ ಭಾರವನ್ನು ಇಳಿಸಲು ಉಪವಾಸ ಮಾಡುವದು ಒಳ್ಳೇಯದೆಂದು ಹಲವರ ಅಭಿಪ್ರಾಯ. ಆದರೆ ಈ ಉಪಾಯವು ತೀರ ತಪ್ಪು ಉಪಾಯವು. ಅಪಾಯಕರವಾದ ಉಪಾಯವು. ಸರಿಯಾಗಿ ಆಲೋಚಿಸಿ ನೋಡಿದರೆ ಕಾರಣವು ವಿಶದವಾಗಿ ತಿಳಿಯುವದು.

ಉಪವಾಸವನ್ನು ಆಗಾಗ್ಗೆ ಮಾಡುವದರಿಂದ ಭಾರವು ಕಡಿಮೆಯಾಗುವದೆಂಬುದೇನೋ ನಿಜ. ಆದರೆ ಉಪವಾಸ ಮಾಡುವದನ್ನು ಬಿಟ್ಟುಬಿಟ್ಟರೆ ಕಡಮೆಯಾದ ಭಾರವು ತಿರಿಗಿ ಹೆಚ್ಚುವದು. ಮಾತ್ರವಲ್ಲದೆ, ಮನುಷ್ಯನು ಮೊದಲಿಗಿಂತ ಹೆಚ್ಚು ಭಾರ ಶರೀರವುಳ್ಳವನಾಗಿರಬಹುದು.

ಜಾಪಾನಿನಲ್ಲಿ ಹೆಂಗಸರು ತೋರವಾಗಿ ಬೆಳೆಯುವದು ಪಾಪಕರವೆಂದು ಎಣಿಸಲಾಗಿದೆ. ಹಾಗೆ ಬೆಳೆಯದಿರಲು ಅವರು ಮೊದಲೇ ಉಪಾಯಗಳನ್ನು ಮಾಡುವರು. ಒಮ್ಮೆ ಬೆಳೆದುಹೋಗಿ ಬಿಟ್ಟರೆ ಭಾರವನ್ನಿಳಿಸಲು ಅವರು ಉಪವಾಸವನ್ನು ಮಾಡುವದಿಲ್ಲ. ಜಾಪಾನಿ ಹೆಂಗಸರು ಮನಸ್ಸಿದ್ದಾಗ ಊಟಮಾಡುವರು. ಮನಸ್ಸಿದ್ದುದನ್ನು ತಿನ್ನುವರು. ಆದರೆ ಅವರು ಸ್ಥೂಲ ಬೆಳೆಯುವದಿಲ್ಲ. ಸುಲಭವಾಗಿ ಆಚರಿಸಬಹುದಾದ ಕೆಲವು ಕ್ರಮಗಳನ್ನವಲಂಬಿಸಿ ಅವರು ನಡೆಯುವದೇ ಇದಕ್ಕೆ ಕಾರಣವಾಗಿದೆ.

ಮೊದಲಾಗಿ ಅವರು ಉಣ್ಣುವಾಗ ನೀರು ಕುಡಿಯಲಾರರು. ಉಣ್ಣುವಾಗ ನೀರನ್ನು ಕುಡಿಯುವುದರಿಂದ ಮಾಂಸವು ಬೆಳೆಯುವದು. ಜೀರ್ಣ ಶಕ್ತಿಗೂ ಹೀಗೆ ನೀರನ್ನು ಕುಡಿಯುವುದರಿಂದ ಕೆಡುಕಿದೆ. ಅಜೀರ್ಣ ಉಂಟಾಗುವ ಮನುಷ್ಯನು ಸಪೂರವಾಗಿರುವನೆಂದು ತಿಳಿಯುವುದು ತಪ್ಪು. ಅಜೀರ್ಣವಾದೊಡನೆ ಮನುಷ್ಯನ ಶರೀರವು ಸ್ಥೂಲವಾಗುವದು. ಆದಕಾರಣ ಉಣ್ಣುವಾಗ ನೀರು ಕುಡಿಯದಿರುವ ಅಭ್ಯಾಸವನ್ನು ಮಾಡಬೇಕು

ಪ್ರತಿ ದಿನವೂ ಕಡಿಮೆಪಕ್ಷ ಒಂದು ಕುತ್ತಿಯಷ್ಟಾದರೂ ಸೋಸಿದ ನೀರನ್ನು ಕುಡಿಯಬೇಕು. ಸಾಧ್ಯವಿದ್ದರೆ ಹೆಚ್ಚಿಗೆ ಕುಡಿಯಬಹುದು. ಒಂದು ಊಟವಾಗಿ ಇನ್ನೊಂದು ಊಟವನ್ನು ಮಾಡಬೇಕಾದರೆ ನಡುವಿನಲ್ಲಿ ನೀರನ್ನು ಕುಡಿಯುವದು ಒಳ್ಳೇಯದು. ಹೀಗೆ ಮಾಡಲು ಪ್ರಾರಂಭಿಸಿದ ಐದಾರು ವಾರಗಳೊಳಗೆ ಫಲವು ತಾನಾಗಿಯೇ ಕಂಡುಬರುವದು. ಸ್ಥೂಲವಿದ್ದ ಶರೀರವು ಕೃಶವಾಗುವದು. ಕಣ್ಣುಗಳು ಪ್ರಕಾಶಮಯವಾಗುವವು. ಮುಖಛಾಯೆಯು ನಿರ್ಮಲವಾಗುವದು. ಮಾನಸಿಕ ಮತ್ತು ಶಾರೀರಿಕ ಸೌಖ್ಯವು ಒದಗಿಬರುವದು.

ಪ್ರತಿಯೊಂದು ಊಟದ ಅರ್ಧ ಗಂಟೆಯ ಮೊದಲು ಅರ್ಧ ಕುದುತೆ ನೀರಿನಲ್ಲಿ ಒಂದಿಷ್ಟು ನಿಂಬೆಯ ರಸವನ್ನು ಬೆರಸಿ ಕುಡಿಯುವದು ಒಳ್ಳೇಯದು. ಇದರಿಂದ ಶರೀರವು ಕೃಶವಾಗುವದು

ಬಿಸಿನೀರಿನ ಸ್ನಾನವನ್ನು ಕ್ರಮಕ್ಕೆ ಸರಿಯಾಗಿ ಮಾಡುವದು ಬಹಳ ಸಹಕಾರಿಯಾಗಿದೆ. ಇದರಿಂದ ಆರೋಗ್ಯ ಹಾನಿಯುಂಟಾಗಲಾರದು. ಹೆಚ್ಚಾಗಿ ರಾತ್ರೆ ಸಮಯದಲ್ಲಿ ಬಿಸಿನೀರು ಸ್ನಾನವನ್ನು ಮಾಡುವದುತ್ತಮ. ನೀರಿನೊಂದಿಗೆ ಈ ಶರೀರವನ್ನು ಕೃಶಮಾಡುವ ಉಪ್ಪುಗಳನ್ನು ಆ ನೀರಿನಲ್ಲಿ ಕರಗಿಸಿದರೆ ಇನ್ನಷ್ಟು ಒಳ್ಳೇಯದು. ನೀರಿನ ಕಾವು ಕಡಿಮೆಯಾಗುತ್ತಿರುವಷ್ಟಕ್ಕೆ ಅದನ್ನು ಬಿಸಿ ಮಾಡಬೇಕು. ಒಂದು ಪೀಪದಲ್ಲಿ ಬಿಸಿನೀರನ್ನು ತುಂಬಿಸಿ ೨೦ ಮಿನಿಟುಗಳ ವರೆಗೆ ಅದರಲ್ಲಿ ನಿಂತುಕೊಳ್ಳಬೇಕು. ಸ್ನಾನವಾದೊಡನೆ ಒಂದು ತಟ್ಟೆ ನೀರಿನಲ್ಲಿ ಲಿಂಬೆ ರಸವನ್ನು ಕಲಸಿ ಕುಡಿದು ಅನಂತರ ಮಲಗಿಕೊಳ್ಳಬೇಕು.

• • • •

ಮುಂಬಾಯಿ ಡಾಕ್ಟ್ರರ ಅನಾಚಾರಗಳು.

ಮುಂಬಾಯಿಯ ಪಾರ್ಸಿ ಡಾಕ್ಟರನೋರ್ವನು ೧೮ ವರ್ಷ ಪ್ರಾಯದ ಮಿಸ್. ಎಮ್. ಕರ್ಕೆರಿಯಾ ಎಂಬ ಪಾರ್ಸಿ ಯುವತಿಯ ಮೇಲೆ ಅನ್ಯಾಯಾಚಾರವನ್ನು ಮಾಡಿದ ಸಲುವಾಗಿ ಆತನ ಮೇಲೆ ಮೊಕದ್ದಮೆ ನಡೆದು ವಿಚಾರಣೆಯಾಗುತ್ತಲಿದೆ.

ಯುವತಿಯು ತನ್ನ ತಂದೆಯೊಂದಿಗೆ ಬಲರಾಮ ಮಾರ್ಗದಲ್ಲಿ ವಾಸಿಸುತ್ತಿದ್ದಳು. ಕಣ್ಣುಬೇನೆಯೆದ್ದುದರಿಂದ ಬೇರೊಬ್ಬ ಡಾಕ್ಟರನ ಬಳಿಗೆ ಹೋಗಿ ಪರೀಕ್ಷೆಮಾಡಿ ಕನ್ನಡಕಕ್ಕಾಗಿ ಆತನು ಕೊಟ್ಟ ಪ್ರಿಸ್ಕ್ರಿಪ್ಶನನ್ನು ತೆಗೆದುಕೊಂಡು ಕನ್ನಡಕವನ್ನು ಪಡೆಯಲು ಈ ಡಾಕ್ಟರನಲ್ಲಿಗೆ ಬಂದು ಕನ್ನಡಕವನ್ನು ತಯಾರಿಸಿಡಲು ಹೇಳಿದಳು. ಆತನ ಹೆಸರು ಜೆ. ಬಾಟ್ಲಿವಾಲನೆಂದು. ಮರವಾನಜಿ ಜಹಾಂಗಿರಜಿ ಕರ್ಕೇರಿಯಾ ಎಂಬವನಿಗೆ ಅವಳನ್ನು ಕೊಟ್ಟು ಮದುವೆಯಾಗುವದಾಗಿ ನಿಶ್ಚಯವು ಮೊದಲೇ ನಡೆದಿದ್ದು ವರನು ಕೊಟ್ಟ ಮುದ್ರಿಕೆಯನ್ನು ಅವಳ ಕೈಬೆರಳಿನಲ್ಲಿ ತೊಟ್ಟುಕೊಳ್ಳುತ್ತಿದ್ದಳು. ಮರುದಿವಸ ಡಾಕ್ಟರನ ಅಂಗಡಿಗೆ ಹೋಗಿ

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) [illegible] ಕಡೂರು (M. S. M Railway) [illegible] 12 [illegible] ಚಿಕ್ಕಮಗಳೂರು, ಮೂಡಿಗೆರೆ, [illegible] ಮಾರ್ಗವಾಗಿ [illegible] 1 [illegible] ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ [illegible] ಗುರುವಾಯನಕೆರೆ, ಉಪ್ಪಿನಂಗಡಿ [illegible] ಗುರುವಾಯನಕೆರೆ, ಮೂಡ [illegible] ಬಂಟವಾಳ [illegible] 4—30 [illegible] ಮಂಗಳೂರಿಗೆ [illegible]

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ [illegible] ವಿಶ್ರಾಂತಿಗೆ 1½ ಗಂಟೆ [illegible] 9 ಗಂಟೆಗೆ [illegible] 12-30ಕ್ಕೆ [illegible] 10-30ಕ್ಕೆ [illegible] 1-30ಕ್ಕೂ [illegible]

(3) [illegible]

ವಿಶೇಷ ಮಾಹಿತಿಗೆ ಮೇಲಿನ [illegible]

ಬಿ. ಎಸ್. [illegible]

ಪ್ರೊಪ್ರೈಟರು.

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ [illegible] ಮಾರ್ಗವಾಗಿಯೂ ಎರಡಾವರ್ತಿ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹನಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾತಾತ್ಪರ್ಯ ವಿವರಣ

ಕಾಮಶಾಸ್ತ್ರವು

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರ ಜಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪವೇ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ.

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ, ಆದರೆ ಸಿ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಅಂಶಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೩-೮-೦ ಟ. ಹಾಸಲು ೮ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವ ಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು
ಬುಕ್ ಡಿಪೋ, ಬಳ್ಳಾರಿ.

ತಾನು ಮೊದಲೇ ಹೇಳಿದ ಪ್ರಕಾರ ಕನ್ನಡಕವು ತಯಾರಾಗಿದೆಯೋ ಎಂದು ವಿಚಾರಿಸಿದಳು. ಡಾಕ್ಟರನು ಮರುಮಾತನಾಡದೆ ಕನ್ನಡಕವನ್ನು ತರುವಂತೆ ತನ್ನ ಕಂಪೌಂಡರನಿಗೆ ಕರೆದು ಹೇಳಿದನು. ಕಂಪೌಂಡರನು ಒಳಗೆ ಹೋದಾಗ, ಡಾಕ್ಟರನು ಹುಡುಗಿಯೊಡನೆ ಆಕೆಯ ವಿದ್ಯೆಯನ್ನೂ ವಾಸಸ್ಥಾನವನ್ನೂ ಆಕೆಯು ಹೋಗುತ್ತಿರುವ ಶಾಲೆಯ ಹೆಸರನ್ನೂ ಕೇಳಲು ಪ್ರಾರಂಭಿಸಿದನು. ಅವಳ ಕೈಯಲ್ಲಿದ್ದ ಕೈಗಡಿಯಾರವನ್ನು ಕಂಡು ಅದು ಬಹು ಅಂದವಾಗಿದೆಯೆಂದು ಅವಳ ಕೈಹಿಡಿದನು. ಕೈ ಹಿಡಿದು ಅದು ಹಿಂದೂ ದೇಶದಲ್ಲಿ ತಯಾರಾದುದೇ ಎಂದು ಕೇಳಿದನು. ಆಕೆಯ ಕೈಯಿಂದ ತೆಗೆದಿದ್ದ ಗಡಿಯಾರವನ್ನು ತಾನೇ ಪುನಃ ತೊಡಿಸುವೆನೆಂದು ಹಟಮಾಡಲಾಗಿ ಅವಳು ನಿರಾಕರಿಸಿದಳು. ಕಣ್ಣುಗಳನ್ನು ಪರೀಕ್ಷಿಸುವೆನೆಂದು ಕತ್ತಲೆಯ ಕೋಣೆಗೆ ಕರೆದೊಯ್ದು ಪರೀಕ್ಷೆಗಾಗಿ ಕಣ್ಣುಗಳನ್ನು ಕಟ್ಟಿದಾಗ ಮೆಲ್ಲನೆ ಅವಳ ಗಲ್ಲಗಳನ್ನು ಸ್ಪರ್ಶಿಸಿದನು. ಆದರೂ ಆಕೆಯು ಭರಾಮೋಶಿಯಿಂದ ಹೀಗಾಯಿತೆಂದು ಎಣಿಸಿ ಸುಮ್ಮನಿದ್ದಳು. ಅನಂತರ ಡಾಕ್ಟರನು ತನ್ನ ಪೆಟ್ಟಿಗೆಯಿಂದ ಒಂದು ಜೋಡು ಬಳೆಗಳನ್ನೂ ಒಂದು ಉಂಗುರವನ್ನೂ ತೆಗೆದು ಆಕೆಗೆ ಕೊಡಲು, ತಾನು ಬೇರೆಯವನಿಗೆ ಹೆಂಡತಿಯಾಗಲು ಮಾತುಕೊಟ್ಟ ಕಾರಣ ಉಂಗುರವನ್ನು ಸ್ವೀಕರಿಸೆನೆಂದು ಗಟ್ಟಿಯಾಗಿ ಹೇಳಿದಳು. ಆಗ ಡಾಕ್ಟರನು, 'ಪ್ರಿಯೇ! ಕೋಪಿಸಬೇಡ' ಎಂದು ಇಂಗ್ಲೀಷಿನಲ್ಲೇ ಹೇಳಿದನು. ಅವನನ್ನು ಮದುವೆಯಾದುದಾದರೆ ಅವಳನ್ನು ಇಂಗ್ಲಾಂಡಿಗೆ ಕರೆದುಕೊಂಡು ಹೋಗಿ ಸುಖವನ್ನನುಭವಿಸುವಂತೆ ಮಾಡುವೆನೆಂದು ಹೇಳಿ ನೀಚ ಡಾಕ್ಟರನು ಥಟ್ಟನೆ ಅವಳನ್ನಾಲಂಗಿಸಿದನು. ನಿರ್ದೋಷಿಯಾದ ಆಕೆಯು ಬಿಡಿಸಲು ಪ್ರಯತ್ನಿಸಿದಾಗ ಅವಳ ಬಾಯಿಯನ್ನು ಕೈಯಿಂದ ಬಿಗಿದು ಹಿಡಿದನು. ಮತ್ತು ಆಕೆಯನ್ನು ಹಲವು ಸಲ ಚುಂಬಿಸಿದನು. ಇನ್ನೂ ಹೆಚ್ಚಿನ ಅನ್ಯಾಯವನ್ನು ಮಾಡಿದನು. ಇವನ್ನು ನೋಡಿ ಕಂಪೌಂಡರನಿಗೂ ಕೂಡ ಅಳು ಬಂದಿತಂತೆ.

ಹೇಗಾದರೂ ಆತನಿಂದ ಬಿಡಿಸಿಕೊಂಡು ಮಾರ್ಗಕ್ಕಿಳಿದು ಹುಡುಗಿಯು ಓಡತೊಡಗಿದಳು. ಆತನ ಅನಾಚಾರಗಳನ್ನು ತನ್ನ ಅಣ್ಣನಿಗೆ ಹೇಳುವೆನೆಂದಳು. ಮನೆಯವರಿಗೆ ಈ ಸಂಗತಿಯು ತಿಳಿದೊಡನೆ ಆಕೆಯ ತಾಯಿಯು ಡಾಕ್ಟರನಲ್ಲಿಗೆ ಹೋಗಿ ಆತನನ್ನು ಗದರಿಸಿ ಮಗಳೊಂದಿಗೆ ಪೋಲೀಸ್ ಸ್ಟೇಶನಿಗೆ ಹೋಗಿ ದೂರುಕೊಟ್ಟಳು. ಇದರ ಮೊಕದ್ದಮೆಯಾಗಿ ವಿಚಾರಣೆಯು ಇನ್ನೂ ನಡೆಯುತ್ತಲಿದೆ.

ವಿಶೇಷ ವರ್ತಮಾನ!

ಮದುವೆಯ ಮಂದಿರದಲ್ಲಿ ಮದುಮಗನ ಮರಣ.

ಕುಂಭಕೋಣದಲ್ಲಿ ಮೊನ್ನೆ ತಾನೆ ಒಂದು ಮದುವೆಯು ಜರಗಿತು. ಮದುಮಗನ ಪ್ರಾಯ ೫೦, ಮದುಮಗಳ ಪ್ರಾಯ ೧೬. ಮಂಗಲಸೂತ್ರವನ್ನು ವಧುವಿನ ಕೊರಳಿಗೆ ಕಟ್ಟಿ ಭೋಜನವಾದೊಡನೆ ವರನಿಗೆ ಸ್ವಲ್ಪ ನೆಗಡಿಯಾಯಿತು. ಮರುಕ್ಷಣದಲ್ಲಿಯೇ ಸತ್ತು ಬಿದ್ದನು. ಇದರಿಂದ ವರನ ಕಡೆಯವರು ವಧುವಿನ ಕಡೆಯವರ ಮೇಲೆ ಸಂಶಯಗ್ರಸ್ತರಾದರು. ಶವವನ್ನು ಹಾಗೆಯೇ ಇಟ್ಟುಬಿಟ್ಟರು. ಇನ್ನೊಂದು ದಿನವೂ ಶವವನ್ನು ಇಟ್ಟದುದಾದರೆ ಮದುವೆಯ ಕಾಲದಲ್ಲಿ ಸಂತೋಷದಿಂದ ತಿಂದ ಭಕ್ಷ್ಯಭೋಜ್ಯಾದಿಗಳನ್ನು ಕೊಳೆತ ಶವದ ವಾಸನೆಯಿಂದ ಕಾರುವಂತಾಗುತಿತ್ತು. ಈ ಮೇಲಿನ ವರ್ತಮಾನವೆಂದರೆ 'ವರನು ತನ್ನ ನೆಂಟರ ಮನೆಗೆ ಹೋಗಿ ಊಟಮಾಡಿ ಬಂದಿದ್ದನೆಂದೂ ವಿಷಪ್ರಯೋಗವಾಗಲಿ ನಡೆದುದಿಲ್ಲವೆಂದೂ'—ವರನ ಕಡೆಯವರು ವಧುವಿನ ಕಡೆಯವರನ್ನು ಸಂತಯಿಸುವುದಕ್ಕಾಗಿ ೫೦೦ ರೂಪಾಯಿಗಳನ್ನು ವಧುವಿಗೆ ಕೊಟ್ಟರಂತೆ. ವಧುವಿಗೆ ಪುನರ್ವಿವಾಹವನ್ನು ಮಾಡಿಬಿಟ್ಟರೆ ಸಿಕ್ಕಿದ ಎಂಟುನೂರು ರೂಪಾಯಿಗಳು ಬಗಲಿಗೆ.

ಜುಗಾರಿಯ ಪ್ರತಿಫಲ.

ಕಾನಪುರ ಪಟ್ಟಣದಲ್ಲಿ ೧೮ ಜನರು ಸೇರಿದ್ದ ಒಂದು ಜುಗಾರಾಟದ ಮಂಡಲಿಯನ್ನು ಅಲ್ಲಿಯ ಪೋಲೀಸರು ಥಕ್ಕನೆ ಬಂದು ಕೈದುಮಾಡಿ ಅವರ ಹತ್ತಿರವಿದ್ದ ರೂ. ೩೦೦ನ್ನು ತೆಗೆದುಕೊಂಡಿರುವರು. ಇಲ್ಲಿಯೂ ಅನೇಕ ಕಡೆಗಳಲ್ಲಿ ಜುಗಾರಾಟಗಳು ನಡೆಯುವವು. ಇವರನ್ನು ಕೈದು ಮಾಡಲಿಕ್ಕೆ ಇಲ್ಲಿಯ ಪೋಲೀಸರಿಂದಾಗಲಿಕ್ಕಿಲ್ಲ. ಪ್ರಯತ್ನಿಸಿದರೆ ಸಾವಿರ ಗಟ್ಟಲೆ ಹಣವು ಸಿಕ್ಕುವುದರಲ್ಲಿ ಸಂದೇಹವಿಲ್ಲ.

ಸ್ತ್ರೀ ವಕೀಲಳು.

ಶ್ರೀ ಗೋಖಲೆಯವರ ಸೊಸೆಯಾದ ಮಿಸ್. ಚಂದ್ರಾಬಾಯಿ ಪೆಂಕ್ಸೆ ಎಂಬವಳು ಪೂನೆಯ ಕೋರ್ಟಿನಲ್ಲಿ ವಕೀಲತನವನ್ನು ನಡೆಸಲು ಮುಂಬಾಯಿ ಹ್ಯಾಕೋರ್ಟಿನಿಂದ ಅಧಿಕಾರವನ್ನು ಹೊಂದಿರುವಳು. ಇವಳು ಮರಾಠಿಯರಲ್ಲಿ ಮೊದಲನೇ ಸ್ತ್ರೀ ವಕೀಲಳು. ನಮ್ಮ ಜಿಲ್ಲೆಯ ಸ್ತ್ರೀಯರು ವಕೀಲರಾಗುವ ಸುದಿನವು ಎಂದು ಉದಯಿಸುವುದೋ?

ಬುದ್ಧನ ಜನ್ಮಭೂಮಿ.

ಬುದ್ಧನು ಹುಟ್ಟಿದುದು ನೇಪಾಳದ ಟೆರಾಯಿ ಎಂಬಲ್ಲಿ ಎಂದು ಉರಿಸ್ಸದ ಭುವನೇಶ್ವರದಲ್ಲಿ ಸಿಕ್ಕಿದ ಅಶೋಕನ ಕಾಲದ ಒಂದು ಶಾಸನದಲ್ಲಿದೆ. ಮೊದಲೊಮ್ಮೆ ಇಂತಹದೇ ಶಾಸನವು ಸಿಕ್ಕಿತ್ತು. ಚರಿತ್ರಕಾರರಿಗೆ ಈಗ ಬುದ್ಧನ ಜನ್ಮಸ್ಥಾನವು ಯಾವುದೆಂದು ಸರಿಯಾಗಿ ತಿಳಿಯಲಾಯಿತು.

ಒಂದು ಲಕ್ಷದ ವಜ್ರ.

ಇದು ಒಬ್ಬ ಪಠಾಣ ಸೈನಿಕನ ಕೈಗೆ ಸಿಕ್ಕಿ ಅದನ್ನು ಆತನು ೬೦,೦೦೦ ರೂಪಾಯಿಗಳಿಗೆ ಒಬ್ಬ ಲಾಹೋರಿನ ವ್ಯಾಪಾರಿಗೆ ಮಾರಿದನು. ಇಷ್ಟು ಕ್ರಯಬಾಳುವ ವಜ್ರವು ಆತನ ಕೈಗೆ ಸಿಕ್ಕುವ ಸಂದರ್ಭವು ಇರಲಿಕ್ಕಿಲ್ಲವಾಗಿ ಅಲ್ಲಿಯ ಪೋಲೀಸರು ತಿಳಿದು ಈ ಪಠಾಣನನ್ನು ಕೈದು ಮಾಡಿರುವರಷ್ಟೆ. ಈಗ ಆ ವಜ್ರವನ್ನು ಸರಕಾರವು ತಮ್ಮ ಸ್ವಾಧೀನ ಇಟ್ಟುಕೊಂಡು ಅದರ ಕಥಾನುಸಾರವನ್ನು ತಿಳಿದೊಡನೆ ಆತನನ್ನು ಬಿಟ್ಟರು. ಈ ವಜ್ರವು ಅಫಘಾನ ಸರಕಾರದವರದೆಂದು ತಿಳಿದೊಡನೆ ಅದರ ಸವಿಸ್ತಾರ ಸಾಕ್ಷ್ಯವನ್ನು ಕೊಡಬೇಕೆಂದು ಅವರಿಗೆ ತಿಳಿಸಿ ಅಫಘಾನ ಸರಕಾರದ ಸಾಕ್ಷ್ಯವನ್ನು ಕೇಳಲಿಕ್ಕೆ ನಂಬ್ರವು ಮುಂದರಿಸಿಟ್ಟಿರುತ್ತಾರೆ. ಒಟ್ಟಾರೆ ಎರಡು ಬೆಕ್ಕುಗಳು ಬೆಣ್ಣೆಯನ್ನು ಕದ್ದು ತಂದು ಮಂಗನ ಹತ್ತರ ಪಾಲುಮಾಡಲಿಕ್ಕೆ ಕೊಟ್ಟಂತೆ ವಜ್ರವು ನಮ್ಮ ಸರಕಾರದ ಕೈಗೆ ಸಿಕ್ಕಿದರೆ ಅದು ಪುನಃ ಹೊರಗೆ ಬರುವ ಹಾಗೆ ಇದೆಯೋ ಎಂದು ವಾಚಕರು ಊಹಿಸಲಿ.

ಬರ್ದೋಲಿ ಸಮರ

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಬರ್ದೋಲಿ ತಾಲೂಕಿನಲ್ಲಿ ಸರಕಾರದ ಕೈಯಿಂದ ಪೆನ್‌ಶನ್ ತಿನ್ನುವಂತವರಿಗೆ 'ನೀವು ಸರಕಾರದಿಂದ ದರ್ಮಾರ್ಥವಾಗಿ ಹಣವನ್ನು ತಿನ್ನುತ್ತೀರಿ. ನಿಮ್ಮಿಂದ ಸಲ್ಲತಕ್ಕ ಭೂಮಿಯ ತೀರ್ವೆಯನ್ನು ಕೊಡದೆ ಇದ್ದಲ್ಲಿ ನಿಮ್ಮ ಪೆನ್‌ಶನ್ ಇನ್ನು ಮುಂದಕ್ಕೆ ಕೊಡಲಾಗದು' ಎಂದು ಹುಕುಂ ಕೊಟ್ಟಿರುವರು. ಈ ಹುಕುಮಿಗೆ ಹೆದರಿ ಇತ್ತೀಚೆಗೆ ಸರ್ವಿಸಿನಿಂದ ಪೆನ್‌ಶನ್ ಆದವರು ತಮ್ಮ ತೀರ್ವೆಯನ್ನು ಕೊಡಲಿಕ್ಕೆ ಪ್ರಾರಂಭಮಾಡಿರುವರು. ಆದರೆ ಅನೇಕ ವರ್ಷಗಳಿಂದ ಪೆನ್‌ಶನ್ ತಿನ್ನುತ್ತಾ ಬಂದಿದ್ದ ಮುದುಕರು ಏನು ಮಾಡಲಿಕ್ಕಿರುವರೋ ನೋಡಬೇಕು!

ಜಮ್‌ಶೆದ್‌ಪುರದ ಮುಷ್ಕರ.

ಇಲ್ಲಿ ಆಗುವ ಮುಷ್ಕರದಲ್ಲಿ ಸರಕಾರವು ಪ್ರವೇಶಿಸುವುದಿಲ್ಲವಾಗಿ ಡಿಪ್ಯುಟಿ ಕಮಿಶನರವರ ಮುಖಾಂತರ ಮುಷ್ಕರದ ಮುಂದಾಳುಗಳಿಗೆ ತಿಳಿಸಿರುವರು. ಬಹುಶಃ ಇದರಿಂದ ಸರಕಾರಕ್ಕೆ ಲಾಭವೇನೂ ಇರಲಿಕ್ಕಿಲ್ಲವೆಂದು ಭಾವಿಸಬಹುದು.

ಯುರೋಪಿಯನ್ ಸ್ತ್ರೀಯ ಮತ್ಸರ.

ಕಳೆದ ವಾರ ಡಾ! ಅನ್ನಿಬಿಸೆಂಟಮ್ಮನವರು ಲಂಡನಿನ ಕ್ವೀನ್ಸ ಹೋಲಿನಲ್ಲಿ ಇಂಡಿಯದ ಸ್ವಾತಂತ್ರ್ಯದ ವಿಷಯದಲ್ಲಿ ಭಾಷಣಮಾಡಿದರು. ಅವರ ಹೇಳಿಕೆಯು ನ್ಯಾಯವಾದುದೆಂದೆ ಅಲ್ಲಿ ನೆರೆದವರಲ್ಲಿ ಹಲವರು ಅಭಿಪ್ರಾಯಪಟ್ಟರು. ಆದರೆ ಈ ಭಾಷಣಕ್ಕೆ ಬಂದಿದ್ದ ಒಬ್ಬಾಕೆಗೆ ಮಾತ್ರ ಇವರ ಭಾಷಣವನ್ನು ಕೇಳಿ ಸಿಟ್ಟುಬಂದು "ನೀನು ಈಗ ಹಿಂದೂಸ್ಥಾನದಲ್ಲಿಲ್ಲ. ಲಂಡನಿನಲ್ಲಿರುವೆಯೆಂಬುವನ್ನು ಚೆನ್ನಾಗಿ ತಿಳಿದುಕೋ" ಎಂದಳಂತೆ! ಇದರಿಂದ ಇಂಗ್ಲೆಂಡಿನ ಹೆಂಗಸರು ಕೂಡ ಇಂಡಿಯಕ್ಕೆ ಸ್ವಾತಂತ್ರ್ಯವು ಸಿಕ್ಕಬಾರದೆಂದು ಹವಣಿಸುವರೆಂದು ಖಚಿತವಾಗುವುದು.

ವಿದ್ಯುಚ್ಛಕ್ತಿಯಿಂದಾದ ಮರಣ.

ಪಾಟನಾ ಕೋಲೆಜಿನ ಪ್ರೊಫೆಸರ್‌ಸೋರ್ವನು, ಎಡಗೈಯಲ್ಲಿ ಇಲೆಕ್ಟ್ರಿಕ್ ಟೇಬಲ್ ಲೇಂಪ್ (Table Lamp) ಒಂದನ್ನು ಹಿಡಿದಿದ್ದಂತೆಯೇ ಮೃತಪಟ್ಟಿದ್ದನು. ವಿದ್ಯುಚ್ಛಕ್ತಿಯ ಪ್ರವಾಹವು ಆತನ ಮೈಯನ್ನು ಪ್ರವೇಶಿಸಿ ಆತನನ್ನು ಕೊಂದುಬಿಟ್ಟಿತಂತೆ. ಇವನು ಬ್ರಹ್ಮಚಾರಿಯಾಗಿದ್ದನು. ಆದಕಾರಣ ಇವನ ಮರಣಕ್ಕಾಗಿ ಅಷ್ಟೊಂದು ವ್ಯಥೆಪಡಬೇಕಾಗಿಲ್ಲ.

ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು.

ಮೂರನೇ ಕ್ಲಾಸಿನ ಟಿಕೇಟು ದರವನ್ನು ಕಡಿಮೆ ಮಾಡಿರುವರು. ಆದರೆ ಇದು ಒಕ್ಟೋಬರ ೧ನೇ ತಾರೀಕಿನಿಂದ ಮಾತ್ರವಂತೆ. ಮೈಲು ಟ್ರೈನುಗಳಲ್ಲಿ ಒಂದರಿಂದ ನೂರು ಮೈಲುಗಳ ವರೆಗೆ ಮೈಲಿಗೆ ನಾಲ್ಕು ಪೈಯಂತೆಯೂ ೧೦೧ರಿಂದ ೩೦೦ ಮೈಲುಗಳ ವರೆಗೆ ಮೈಲಿಗೆ ೩½ ಪೈಯಂತೆಯೂ ಮುನ್ನೂರು ಮೈಲಿಗೆ ಮಿಕ್ಕಿದ ದೂರಕ್ಕೆ ಮೈಲಿಗೆ ೩ ಪೈಯಂತೆಯೂ ಮಾಡಿರುವರು. ಇತರ ಟ್ರೈನುಗಳಿಗೆ ೧ರಿಂದ ೫೦ ಮೈಲುಗಳ ವರೆಗೆ ೩½ ಪೈ, ೫೧ರಿಂದ ಮುನ್ನೂರು ಮೈಲುಗಳಿಗೆ ಮಿಕ್ಕಿದ ದೂರಕ್ಕೆ ಮೈಲಿಗೆ ೩ ಪೈಗಳ ಪ್ರಕಾರವಾಗಿದೆ. ದೂರದೇಶಗಳಿಗೆ ಪ್ರಯಾಣ ಮಾಡುವವರು ತಾಳ್ಮೆಯಿಂದ ಒಕ್ಟೋಬರಿನ ವರೆಗೆ ನಿಂತು ಬಿಟ್ಟರೆ ಬಹಳ ಲಾಭವಿದೆ

ಸ್ಕಾಕಲ್ ಸವಾರರು.

ಬೆನಾರಿಸ್ ಹಿಂದೂ ಯುನಿವರ್ಸಿಟಿಯ ಇಂಜಿನಿಯರಿಂಗ್ ಕ್ಲಾಸಿನಲ್ಲಿ ಕಲಿಯುವ ಇಬ್ಬರು ಹುಡುಗರು ಬೆನಾರಿಸಿನಿಂದ ಹೊರಟು ಸ್ಕಾಕಲಿನ ಮೇಲೆ ಕುಳಿತು ಮುಂಬಾಯಿಗೆ ಬಂದು ತಲಪಿರುವರು. ಅವರು ಬೆನಾರಸಿನಿಂದ ಮೇ ತಾ. ೧೩ನೇ ದಿನ ಹೊರಟಿದ್ದರಂತೆ. ಅಲ್ಲಿಂದ ಇಲ್ಲಿಗೆ ದೂರ ೧೩೩೪ ಮೈಲುಗಳು. ಒಂದು ವಾರದ ವರೆಗೆ ಮುಂಬಾಯಿಯಲ್ಲಿ ವಿಶ್ರಾಂತಿಪಡೆದು ಪುನಃ ಬೆನಾರಸಿಗೆ ಹಿಂದಿರುಗುವರಂತೆ. ಹಿಂದುಗಳಿಗಿದು ಅಭಿಮಾನಾಸ್ಪದವಾದ ಸಂಗತಿ.

ಮುಂಬಾಯಿ ಗಿರಣಿಯಾಳುಗಳ ಮುಷ್ಕರ.

ಮುಷ್ಕರ ಹಾಕಿದವರ ಕುಟುಂಬಿಕರೆಲ್ಲರೂ ಉಪವಾಸವಿದ್ದು ಸಾಯುವರೆಂದೂ, ಅದರಿಂದ ಜನರ ಆರೋಗ್ಯಕ್ಕೆ ಹಾನಿಯದೆಯೆಂದೂ ಅದ್ದರಿಂದ ಮುಷ್ಕರವು ನಿಲ್ಲುವ ವರೆಗೆ ದಿನಕ್ಕೆ ಒಂದು ಸಾವಿರ ರೂಪಾಯಿಗಳಂತೆ ಮುಷ್ಕರದವರಿಗೆ ಹಾಲು, ಅನ್ನಕ್ಕಾಗಿ ಹಂಚಿಕೊಡಬೇಕೆಂದೂ ಮುಂಬಾಯಿ ಕೋರ್ಪೋರೇಶನಿನವರು ಸಭೆಕೂಡಿ ಚರ್ಚಿಸಿದರು. ಹೊರಗಡೆ ೫ ಸಾವಿರ ಜನ ಮುಷ್ಕರ ಹಾಕಿದ ಕೂಲಿಗಳು ನೆರೆದು ಫಲಿತಾಂಶವನ್ನು ಎದುರುನೋಡುತ್ತಿದ್ದರು. ಆದರೆ ಬಹುಪಕ್ಷವಾಗಿ ಅವರಿಗೆ ಸಹಾಯಮಾಡಲಾಗದೆಂದೇ ನಿರ್ಣಯವಾಯಿತು. ಆದಕಾರಣ ತಮಗೆ ಎದುರಾಗಿ ಮತಕೊಟ್ಟವರನ್ನು ಮುಷ್ಕರಗಾರರು ಹಿಂಸೈಸಿದರು.

— ಒಂದಿಷ್ಟು ನಗು. —

ಅಭ್ಯಾಗತನು, ಮನೆಯ ಯಜಮಾನನು ಆಲೋಚಿಸುತ್ತಾ ಕೂತಿರುವುದನ್ನು ನೋಡಿ
"ನೀನೇತಕ್ಕೆ ಇಷ್ಟು ದುಃಖಿಸುತ್ತಿರುವೆ?"
ಯಜಮಾನ—"ಒಬ್ಬ ಜೋತಿಷ್ಯನು ಬಂದು ನನ್ನ ಹೆಂಡತಿಯು ಕೆಲವೇ ದಿನಗಳೊಳಗೆ ಸಾಯುವಳೆಂದು ಹೇಳಿದನು."
ಅಭ್ಯಾಗತ—"ಅದಕ್ಕಾಗಿ ಸುಮ್ಮನೆ ವ್ಯಥೆಪಡಬೇಡ. ಅವರ ಹೇಳಿಕೆಯು ನಿಜವಾಗುವುದೇ ಇಲ್ಲ"
ಯಜಮಾನ—"ಅದು ನನಗೆ ತಿಳಿದ ಕಾರಣವೇ ನಾನು ದುಃಖಿಸುತ್ತಿರುವೆನು".

ಕುರುಡ—ನನ್ನ ಮನೆಯಲ್ಲಿ ನಡೆಯುವ ಅಕೃತ್ಯಗಳನ್ನು ಕಂಡು ಸಹಿಸಲಾರದೆ ನಾನು ಕಣ್ಣು ಮುಚ್ಚಿಕೊಂಡೇ ಇರುವೆನು.
ಮೂಕನಾದ ಕಿವುಡ—ನಾನೂ ಕೂಡ ಹಾಗೆಯೇ ಕೇಳಿದುದನ್ನು ಕೇಳದ ಹಾಗೆ ಮಾಡಿ, ಮೌನವಾಗಿರುವೆನು.

ಪಥಿಕ—(ದಾರಿಯಲ್ಲೊಬ್ಬನು ವ್ಯಸನದಿಂದ ನಿಟ್ಟುಸಿರು ಬಿಡುತ್ತಾ ಹೋಗುತ್ತಿರುವುದನ್ನು ಕಂಡು) ನಿನಗೇನಾಗಿರುವುದಪ್ಪಾ! ನಿನ್ನನ್ನು ನಿನ್ನ ಹೆಂಡತಿಯಿದ್ದಲ್ಲಿಗೆ ಕರಕೊಂಡು ಹೋಗಲೋ.
ದುಃಖಿತನಾದವನು—ಬೇಡವಪ್ಪಾ, ಹೆಂಡತಿಯಿದ್ದ ಸ್ಥಳದಿಂದಲೇ ನಾನೀಗಲೇ ಬಂದಿರುವೆನು.

ಅತಿಥಿ—"ನಾನೀ ಹಾಳು ದೋಸೆಯನ್ನು ತಿನ್ನಲಾರೆನು. ನಿನ್ನ ಯಜಮಾನನನ್ನು ಕರೆ."
ಹೊಟೆಲಿನ ಆಳು—"ನಮ್ಮ ಯಜಮಾನನು ಕೂಡ ಅದನ್ನು ತಿನ್ನಲಾರನು"

ಎರಡು ಮಾರ್ಗಗಳು ಕೂಡುವಲ್ಲಿ ನಿಂತಿದ್ದ ಪೋಲೀಸನ ಸುತ್ತು ತೆಗೆಯದೆ ಇದ್ದುದಕ್ಕಾಗಿ ಮೋಟಾರ್‌ಕಾರಿನ ಡ್ರೈವರನನ್ನು ಪೋಲೀಸನು ತಡೆದು "ಇನ್ನೆಯೂ ನೀನು ಈ ರೀತಿ ನನ್ನ ಸುತ್ತುತೆಗೆಯದೆ ಹೋದೆ. ನಿನ್ನನ್ನೀಗಲೆ ಸ್ಟೇಶನಿಗೆ ಕರಕೊಂಡು ಹೋಗುವೆನು."
ಡ್ರೈವರ—"ಆದರೆ ನಿನ್ನೆ ನಾನು ಇಲ್ಲಿಗೆ ಬಂದಾಗ ನೀನಿಲ್ಲಿರಲೇ ಇಲ್ಲವಲ್ಲ."
ಪೋಲಿಸ್—ನಿನ್ನನ್ನೀಸಲ ಕ್ಷಮಿಸುವೆನು. ನಾಳೆಯಿಂದ ನಾನಿಲ್ಲಿರುವಾಗಲೂ ಇಲ್ಲದಿರುವಾಗಲೂ ನನ್ನ ಸುತ್ತು ತೆಗೆಯಲು ಮಾತ್ರ ಮರೆಯಬೇಡ."

ದುಂದುಗಾರನಾದ ಒಬ್ಬನನ್ನು ಕುರಿತು ಪಾದರಿಯು—"ನಿನಗೆ ಸಿಕ್ಕುವ ಸಂಬಳವನ್ನೆಲ್ಲ ನೀನು ಯಾವಾಗಲೂ ಖರ್ಚು ಮಾಡಬಾರದು, ಕಂಡೆಯಾ?"
ದುಂದುಗಾರ—"ಇಲ್ಲ. ನಾನು ನನಗೆ ಸಿಕ್ಕಿದುದರ ಮೂರನೇ ಎರಡಂಶವನ್ನು ಮಾತ್ರ ಖರ್ಚುಮಾಡುವೆನು"
ಪಾದರಿ—"ಹಾಗಾದರೆ ಉಳಿದ ಮೂರನೇ ಒಂದಂಶವನ್ನು ಅಂಚೆ ಮನೆಯಲ್ಲಿ ಕೇವಡಾತಿಯಾಗಿಡುವೆಯಾ?"
ದುಂದುಗಾರ—"ಇಲ್ಲ. ಗೃಹಕೃತ್ಯಕ್ಕಾಗಿ ಹೆಂಡತಿಯೊಡನೆ ಕೊಡುವೆನು."

ಒಬ್ಬ ಹೆಂಗಸು—"ನನ್ನ ಮಗನು ೨೪ ವರುಷದವನಾಗುವದರೊಳಗೆ ೧೪ ಜನರನ್ನು ಕೊಂದಿರುವನು."
ಒಬ್ಬ ಗಂಡಸು 'ಹಾಗಾದರೆ ಆತನು ಓಡಿಸುವ ಕಾರು ಯಾವ ಜಾತಿಯದು?'

ನಾಲ್ಕು ವರುಷ ಪ್ರಾಯದ ಮಗುವು ಸಿಗರೇಟು ಎಳೆಯುತ್ತಿರುವುದನ್ನು ನೋಡಿ,
ಪೋಲಿಸ್ - 'ಇಲ್ಲಿ ಸಿಗರೇಟು ಎಳೆಯಬಾರದೆಂದು ತೂಗಹಾಕಿದ ಬೋರ್ಡನ್ನು ನೀನು ನೋಡಿಲ್ಲವೆ?'
ಮಗು—"ನೋಡಿರಬಹುದು. ಆದರೆ ನನಗೆ ಓದಲುಬರುವುದಿಲ್ಲ."

ಶ್ಯಾಮಾ, ನೀನು ನೆರೆಮನೆಯ ಸುಬ್ಬು ಇದ್ದಲ್ಲಿಗೆ ಹೋಗಿ ಆಡಕೂಡದು ಅವನು ಬರೆ ತುಂಟ ಹುಡುಗನು.' ಎಂದು ತಾಯಿ ತನ್ನ ಹುಡುಗನನ್ನು ಗದರಿಸಿ ಎಚ್ಚರಿಸಿದಳು.
ಐದು ನಿಮಿಷಗಳ ನಂತರ ಶ್ಯಾಮಣ್ಣನು ಸುಬ್ಬುವನ್ನು ಕರೆದು 'ಅಮ್ಮನು ನಾನು ನಿನ್ನೊಡನೆ ಆಡಕೂಡದೆನ್ನುತ್ತಾಳೆ. ನೀನು ತುಂಟ ಹುಡುಗನು. ಆದುದರಿಂದ ನೀನೇ ನಮ್ಮ ಮನೆಗೆ ಬಂದು ನನ್ನೊಡನೆ ಆಡು. ನಾನು ತುಂಟನಲ್ಲ' ಎಂದನು.

ಶಾಸ್ತ್ರಿ—ಏನಮ್ಮಾ, ಕಾಶಿಗೆ ಹೋದಾಗ ಏನು ಬಿಟ್ಟು ಬರುತ್ತೀರಿ ನೀವು?
ಮುತ್ತೈದೆ—ಏನು ಬಿಟ್ಟು ಬರಬೇಕು?
ಶಾಸ್ತ್ರಿ—ನಿಮಗಿಷ್ಟವಾದ್ದನ್ನು.
ಮುತ್ತೈದೆ—ಹಾಗಾದರೆ, ನನ್ನ ಯಜಮಾನ್ರನ್ನ (ಗಂಡನನ್ನು) ಬಿಟ್ಟುಬರಬೇಕೆ?

ಒಂದೂರಿನಲ್ಲಿ ಒಬ್ಬ ಯುರೋಪಿಯನ್ ಮನುಷ್ಯನಿಗೆ ಮದುವೆಯಾಗಬೇಕಾಗಿತ್ತು. ಆಗ ಗಂಡಹೆಂಡಿರು ಒಬ್ಬರಿಗೊಬ್ಬರು ಬಹುಮಾನಗಳನ್ನು ಕೊಡಬೇಕೆಂದು ನಿಶ್ಚಯಿಸಿಕೊಂಡರು. ಹೆಂಡತಿಗೆ ಉದ್ದವಾದ ಮತ್ತು ಕೋಮಲವಾದ ಕೂದಲು ಇತ್ತು. ಆದರೆ ಬಾಚಿಕೊಳ್ಳುವುದಕ್ಕೆ ಬಾಚಣಿಗೆ ಇರಲಿಲ್ಲ. ಗಂಡನ ಹತ್ತಿರ ಒಂದು ಬೆಳ್ಳಿ ಗಡಿಯಾರವಿತ್ತು; ಅದಕ್ಕೆ ಸರಪಣಿ ಇರಲಿಲ್ಲ. ಗಂಡನು ಹೆಂಡತಿಗೆ ಬಾಚಣಿಗೆ ಕೊಡಬೇಕೆಂದೂ ಹೆಂಡತಿಯು ಗಂಡನಿಗೆ ಸರಪಣಿ ಕೊಡಬೇಕೆಂದೂ ನಿಶ್ಚಯಿಸಿಕೊಂಡರು. ಹೆಂಡತಿಯು ತನ್ನ ಕೂದಲನ್ನು ಮಾರಿ ಸರಪಣಿಯನ್ನು ತಂದಳು. ಗಂಡನು ಗಡಿಯಾರವನ್ನು ಮಾರಿ ಒಂದು ಚಿನ್ನದ ಬಾಚಣಿಗೆಯನ್ನು ತಂದನು. ಗಂಡನು ಬಾಚಣಿಗೆಯನ್ನು ತಂದು ಕೊಟ್ಟಾಗ ಅವಳ ತಲೆಯಲ್ಲಿ ಕೂದಲು ಇರಲಿಲ್ಲ. ಹೆಂಡತಿಯು ಸರಪಣಿಯನ್ನು ಕೊಟ್ಟಾಗ ಅವನ ಹತ್ತಿರ ಗಡಿಯಾರವು ಇರಲಿಲ್ಲ.

ಸೇವಕನಾದ ಲಕ್ಷ್ಮಣನು.

ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಕ್ಕಾಗಿ ನದೀ ತೀರಕ್ಕೆ ಬಂದ ಕೃಷ್ಣಸ್ವಾಮಿಗೆ ಜಗತ್ತು ಇಂದು ವಿಶೇಷ ಸೌಂದರ್ಯಮಯವಾಗಿ ತೋರಿತು. ಮೋಡಗಳಿಲ್ಲದೆ ನಿರ್ಮಲವಾದ ಆಕಾಶದಲ್ಲಿ ಸಂಧ್ಯಾಕಾಲದ ಸೂರ್ಯನ ಬಂಗಾರದ ಕಿರಣಗಳ ಪ್ರಕಾಶವು ವಿಸ್ತರಿತವಾಗಿದ್ದಿತು. ಸಜೀವವಾದ ನೀಲರತ್ನಗಳ ಸಮುಚ್ಚಯವನು ತುಂಬಿಸಿಟ್ಟಂತೆ ಆ ನದಿಯ ನೀರು ಆತನಿಗೆ ಭಾಸವಾಯಿತು. ನದಿಯ ಹೃದಯತಳವನ್ನು ಆಶ್ರಯಿಸಿ ಸಂಪೂರ್ಣ ಶಾಂತಿಸುಖವನ್ನೇ ಅನುಭವಿಸಬೇಕೆಂದು ದೃಢಮನಸ್ಸುಮಾಡಿ ಬಂದಿದ್ದ ಆತನಿಗಾದರೂ ಒಮ್ಮೆ ಮನಸ್ಸು ಚಂಚಲವಾಯಿತು. ತಾನು ಅತ್ಯಂತವಾಗಿ ಪ್ರೀತಿಸುತ್ತಿದ್ದ ತನ್ನ ಆತ್ಮೀಯರ ಹಿತದ ಸಲುವಾಗಿ ಈ ರೀತಿಯ ಮನೋನಿಶ್ಚಯವನ್ನು ಮಾಡಿಕೊಂಡಿದ್ದ ಕಾರಣ, ಅದನ್ನು ನೆರವೇರಿಸಲೇಬೇಕೆಂದು ಒಮ್ಮೆ ನಿಶ್ಚಯಿಸಿಕೊಂಡನು.

ತನ್ನೊಬ್ಬನ ಸಾವಿನಿಂದ ತನ್ನವರೆಲ್ಲರಿಗೆ ಸುಖವುಂಟಾಗುವ ಕಾರಣ, ಆ ಸಾವೇ ತನಗೆ ಅತ್ಯಂತ ಪ್ರಿಯಕರವೆಂದೇ ನಿರ್ಣಯಿಸಿದನು. ಆದರೆ, ನೀರಿಗಿಳಿದು ಸ್ವಲ್ಪ ದೂರ ಹೋಗುವಷ್ಟರೊಳಗೆ ಆತನ ಸಮೀಪಕ್ಕೆ ಏನೋ ಬರುತ್ತಿದ್ದಂತೆ ತೋರಿತು. ಅದು ಒಬ್ಬ ಮನುಷ್ಯನ ದೇಹವಾಗಿದ್ದಿತು. ಆತನ ಹೃದಯದಲ್ಲಿ [illegible] ದರೂ ಉಪಾಯದಿಂದ ಆತನನ್ನು ಬದುಕಿಸಬೇಕೆಂದು ಕೃಷ್ಣಸ್ವಾಮಿಯು ತನ್ನ ನಿಶ್ಚಯವನ್ನು ಮರೆತು ಆ ದೇಹವನ್ನು ದಡಕ್ಕೆ ತಂದನು. ಆದರೆ ದೇಹವು ನಿರ್ಜೀವವಾಗಿದ್ದಿತು.

ಆ ದೇಹವನ್ನು ದಡದ ಮೇಲೆಯೇ ಬಿಟ್ಟು ತನ್ನ ಉದ್ದೇಶವನ್ನು ನೆರವೇರಿಸಲು ಒಮ್ಮೆ ಕೃಷ್ಣಸ್ವಾಮಿಯು [illegible]. ಆದರೆ, ಆ ದೇಹವು ತನ್ನಷ್ಟೇ ಉದ್ದ ಅಗಲವಾಗಿದ್ದು, ಅದರ ಮುಖ ಲಕ್ಷಣವು ತನ್ನ ಮುಖಲಕ್ಷಣವನ್ನೇ ಹೋಲುತ್ತಿದ್ದ ಕಾರಣ ಚಮತ್ಕೃತನಾಗಿ ಅಲ್ಲಿಯೇ ಕಟಸ್ಥನಾಗಿ ನಿಂತುಬಿಟ್ಟನು. ಆಗಲಾತನು ಭಾವಿಸಿದನು. "ನಾನು ಸಾಯದೆ ಬದುಕಿದು ನನ್ನ ಕುಟುಂಬಿಕರು ಸುಖಿಗಳಾಗಬೇಕು. ಹೀಗಾಗಲು ಭಗವಂತನು ಸಂದರ್ಭವನ್ನು ಒದಗಿಸಿಕೊಟ್ಟಿರುವನು" ಎಂದು.

ಕೃಷ್ಣಸ್ವಾಮಿಯು ತನ್ನ ಉಡುಪನ್ನು ಶವಕ್ಕೆ ತೊಡಿಸಿ, ತೆಳುವಾದ ಚರ್ಮದ ತುಂಡಿನಿಂದ ಬಿಗಿಯಲ್ಪಟ್ಟ ಸಣ್ಣ ಒಂದು ಗಂಟನ್ನು ಶವದ ಅಂಗಿಯ ಒಳಗಡೆಯ ಜೇಬಿನಲ್ಲಿ ಸಿಕ್ಕಿಸಿ, ಬೇಗ ಬೇಗನೆ ದಡದಿಂದ ನಡೆದು ಹೋದನು.

ಆ ಸಣ್ಣ ಗಂಟಿನಲ್ಲಿ ತನ್ನ ಉದ್ದೇಶವನ್ನು ವಿವರಿಸಿ ಬರೆದ ಪತ್ರವಿದ್ದಿತು. ಸಾಲದುದಕ್ಕೆ ಆತನು ಒಂದು ಪತ್ರವನ್ನು ಬರೆದು ತನ್ನ ಪತ್ನಿಯ ವಿಳಾಸವನ್ನು ಮೇಲೆ ಬರೆದು ಟಪ್ಪಾಲಿಗೆ ಹಾಕಿದ್ದನು. ಗಂಟಿನಲ್ಲಿದ್ದ ಪತ್ರವು, "ನಾನು ಮದರಾಸಿನ ಒಂದು ಮಳಿಗೆಯಲ್ಲಿ ಕೆಲಸಕ್ಕಿದ್ದ ಕೃಷ್ಣಸ್ವಾಮಿಯು. ನಾನು ಬದುಕಿರುವದಕ್ಕಿಂತಲೂ ಸತ್ತರೆ ನನ್ನ ಕುಟುಂಬಿಕರಿಗೆ ಸುಖವಾಗುವ ಕಾರಣ, ನಾನು ಆತ್ಮ ಸಂತೋಷದಿಂದ ಈ ರೀತಿ ಪ್ರಾಣಹತ್ಯೆಯನ್ನು ಮಾಡಿಕೊಂಡಿರುವೆನು. ನನ್ನ ಶವವು ಯಾರಿಗಾದರೂ ಸಿಕ್ಕಿದುದಾದರೆ, ಜೋರ್ಜ್ ಟೌನಿನಲ್ಲಿ ವಾಸಿಸುವ ನನ್ನ ಪತ್ನಿ ಪಾರ್ವತಿಗೆ ಸಂಸ್ಕಾರಕ್ಕಾಗಿ—ತಲುಪಿಸತಕ್ಕದ್ದು. ಅದಕ್ಕಾಗಿ ಸಾಕಷ್ಟು ಹಣವನ್ನು ನಾನಿದರೊಂದಿಗೆ ಇಟ್ಟಿರುವೆನು" ಎಂದಿದ್ದಿತು.

ತನ್ನ ಮರಣದ ವಾರ್ತೆಯು ಪತ್ರಿಕೆಗಳಲ್ಲಿ ಮರುದಿನವೇ ಪ್ರಕಟವಾಗುವದೆಂದು ಕೃಷ್ಣಸ್ವಾಮಿಯು ತಿಳಿದಿದ್ದನು. ತಾನು ಸತ್ತ ನಂತರ ಆಗುವ ಸಂಗತಿಗಳನ್ನು ಬದುಕಿಕೊಂಡೇ ಕಾಣುವಂತಾಯಿತೆಂದು ಆತನು ಹರ್ಷಿತನಾದನು. ತಾನು ಸತ್ತುದು ಖಚಿತವೆಂದಾದ ಮೇಲೆ, ಹೆಂಡತಿ ಮಕ್ಕಳಿಗೆ ತನ್ನ ಮರವೆಯಾದ ತರುವಾಯ, ಒಮ್ಮೊಮ್ಮೆ ಮದರಾಸಿಗೆ ಬಂದು ವೇಷಾಂತರದಿಂದ ತನ್ನ ಹೆಂಡತಿ ಮಕ್ಕಳನ್ನು ನೋಡುತ್ತಿರಬೇಕೆಂದು ನಿಶ್ಚಯಿಸಿಕೊಂಡನು: ತಾನು ಸಾಯುವದು ಭಗವಂತನಿಗೆ ಸರಿತೋರಲಿಲ್ಲನೆಂದೂ, ಬದುಕಿಕೊಂಡೇ ಇದ್ದು ನಡೆಯುವದನ್ನೆಲ್ಲಾ ತಾನು ತಿಳಿಯುವದಕ್ಕಾಗಿಯೇ ಭಗವಂತನು ಇಂತಹ ಪ್ರಸಂಗವನ್ನು ಒದಗಿಸಿದನೆಂದೂ ಸಮಾಧಾನ ಹೊಂದಿದನು. ಈ ತರದ ಹಲವು ಯೋಚನಾತರಂಗಗಳು ಆತನಲ್ಲಿ ಒಂದು ಮೇಲೊಂದು ಏಳುತ್ತಿದ್ದವು. ತಾನು ಬದುಕಿಲ್ಲವೆಂದು ಸೃಷ್ಟಿ ಕರಿಸುವ ಒಂದು ಜೀವನವನ್ನು ತಾನು ಕೈಕೊಳ್ಳಬೇಕೆಂದು ತಿಳಿದುಕೊಂಡು ಮುಂದಕ್ಕೆ ನಡೆಯತೊಡಗಿದನು: ಆದರೆ ತಾನು ಎಲ್ಲಿಗೆ ಹೊರಡಲಿ, ಯಾವ ಜೀವನವನ್ನು ತೊಡಗಲಿ ಎಬುದು ಆತನಿಗೆ ಹೊಳೆಯಲಿಲ್ಲ. ಕೊನೆಗೆ ತಾನು ಸನ್ಯಾಸಿಯಾಗಿ, ಹಿಮಾಲಯ ಪ್ರಾಂತ್ಯದಲ್ಲಿ ವಾಸಿಸಿದರೆ ತನ್ನ ನೆಲೆಯು ಯಾರಿಗೂ ತಿಳಿಯದೆಂದು, ಅಂದೇ ರಾತ್ರೆ ಹೊರಡು ತ್ತಿದ್ದ ರೈಲು ಹತ್ತಿ ಹರಿದ್ವಾರಕ್ಕೆ ತಲಪಿದನು.

• • •

ಕೃಷ್ಣಸ್ವಾಮಿಗೆ ಆಗ ನಡೆಯುತ್ತಿದ್ದುದು ಮೂವತ್ತೇಳನೇ ವರುಷ. ಒಂದು ಹಿಂದೂ ಮಳಿಗೆಯಲ್ಲಿ ಆತನು ೧೨ ವರುಷಗಳಿಂದ ಕೆಲಸಕ್ಕಿದ್ದನು. ಮೇಲಿನ ಸಂಗತಿಯು ನಡೆದ ಮೂರು ದಿನಗಳ ಹಿಂದೆ, ಒಂದು ಕೆಲಸಕ್ಕಾಗಿ ಪರವೂರಿಗೆ ಹೋಗಬೇಕೆಂದು ಆತನು ಮನೆಯಿಂದ ಹೊರಟು ಬಂದಿದ್ದನು. ಕೊಲೆ ಜ್ಯೆನಲ್ಲಿ ಕಲಿಯುತ್ತಿದ್ದಾಗ ಆತನು ಉತ್ತಮತರದಲ್ಲಿ ತೇರ್ಗಡೆ ಹೊಂದಿದೊಡನೆ, ಆತನಿಗೆ ಜೀವನವು ಬಹು ಸಂತೋಷಪ್ರದವಾಗಿ ಕಂಡಿತು. ಅಂತೆಯೇ ಕೆಲಸಕ್ಕೆ ಸೇರಿ ಕೆಲವು ವರುಷಗಳ ವರೆಗೆ ಆತನಿಗೆ ಸುಖವಲ್ಲದೆ ಕಷ್ಟವೆಂದರೇನೆಂಬುದರ ಅನುಭವವಿರಲಿಲ್ಲ. ಆದರೆ ಮನುನೆಯವರ ಸಂಸಾರವು ಬೆಳೆಯ ತೊಡಗಿದೊಡನೆ, ಆತನಿಗೆ ಸಿಕ್ಕುತ್ತಿದ್ದ ಸಂಬಳವು ಸಾಕಾಗದೆ, ಆಗ ತಾನೆ ಆತನನ್ನು ಚಿಂತೆಯು ಆಕ್ರಮಿಸಿ ಬಿಟ್ಟಿತು. ಸಂಸಾರ ಪೋಷಣೆಯು ಆತನಿಗೆ ಅತ್ಯಂತ ಕಠಿಣವಾಗಿ ತೋರಿತು. ಆದರೂ ಆತನು ಎದೆಗುಂದದೆ, ತನ್ನ ದುಃಖವನ್ನು ಹೆಂಡತಿಗಾಗಲಿ, ಯಜಮಾನನಿಗಾಗಲಿ ತೋರ್ಪಡಿಸುತ್ತಿದ್ದಿಲ್ಲ. ಅನ್ಯಾಯದ ಹಾದಿಯನ್ನು ಹಿಡಿದು ಸಂಪಾದನೆಯನ್ನು ಹೆಚ್ಚಿಸುವ ಆಲೋಚನೆಯು ಆತನಿಗೆ ಹುಟ್ಟಲಿಲ್ಲ. ಸ್ವಾಭಾವಿಕವಾಗಿಯೇ ಆತನು [illegible] ಒಬ್ಬರೆದುರು ನಿಂತು [illegible] ಮಾತನಾಡುವ ಧೈರ್ಯವು ಆತನಿಗಿದ್ದಿಲ್ಲ. ಬೇರೆ [illegible] ಗುಣಗಳು [illegible] ಧೈರ್ಯವೊಂದರ [illegible]ದಿಂದ, ಆತನು ಹದಿನೆಂಟು ವರುಷಗಳಿಂದಲೂ ಒಂದೇ ಕೆಲಸವನ್ನು ಮಾಡುತ್ತಿದ್ದರೂ [illegible] ದೊಡ್ಡ ಪದವಿಯು ಆತನಿಗೆ ಲಭಿಸಲಿಲ್ಲ. ಆತನಿಗಿಂತಲೂ ಕಡಿಮೆ ಯೋಗ್ಯತೆಯವರು, ದೊಡ್ಡ ದೊಡ್ಡ ಹುದ್ದೆಗೆ ಬಂದ ಕಾರಣ, ಒಂದೆಡೆ [illegible] ಅವಮಾನವೂ, ಒಂದೆಡೆಯಲ್ಲಿ ಹಣದ ಅಡಚಣೆಯೂ, [illegible] ಆತ್ಮಹತ್ಯೆಯೇ ತನ್ನ ಪಾಲಿಗೆ ಉಳಿದ ಕರ್ತವ್ಯವೆಂದು ಆತನು ನಿಶ್ಚಯಿಸಿಕೊಂಡನು.—ತನ್ನ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೇ ಮುಂದಾಲು ಅತ್ತಕಡೆಗೆ ಹೋಗಿ, ಅಲ್ಲಿಯ ಒಂದು ನದಿಯಲ್ಲಿ ಪ್ರಾಣಹತ್ಯೆಮಾಡಲುದ್ಯೋಗಿಸಿದ್ದನು. [illegible]

ಆತನ [illegible] ಸುದ್ದಿಯು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಆದರೆ ಕೃಷ್ಣಸ್ವಾಮಿಯು ಹಿಮಾಲಯ ಪ್ರಾಂತ್ಯದಲ್ಲಿ ಸನ್ಯಾಸಿಗಳ ಸಂಸರ್ಗದಲ್ಲಿ ಸುಖಮಯವಾದ ಜೀವನದ ಅನುಭವವನ್ನು ಪಡೆಯಲು ಪ್ರಯತ್ನಿಸುತ್ತಿದ್ದನು. ಸ್ವಾಮಿ [illegible] ಆತನ ಗುರುಗಳು. ಆದರೆ ಕೃಷ್ಣಸ್ವಾಮಿಗೆ ಈ ಜೀವನವು ಕಷ್ಟತರವಾಗಿ ತೋರಿತು. ಸನ್ಯಾಸಿಗಳಂತೆ ಆಹಾರವನ್ನು ತ್ಯಜಿಸಿ, ಭಗವಂತನ ಧ್ಯಾನದಲ್ಲಿ ತಲ್ಲೀನನಾಗಿರುವುದು ಆತನಿಗೆ ಸುಲಭ ಸಾಧ್ಯವಾಗಿ ತೋರಲಿಲ್ಲ. ಆತನಿಗಿಂತಲೂ ಮತ್ತೆ ಬಂದು ಸನ್ಯಾಸವನ್ನು ಕೈಕೊಂಡವರು ಸುಲಭದಿಂದ ಜಯಹೊಂದಿದರು. ಗುರುವಿನ ಬೋಧನೆಯಿಂದ ಕೃಷ್ಣಸ್ವಾಮಿಗೂ, ಯೋಗ ಮತ್ತು ತತ್ವಗಳ ಜ್ಞಾನವು ಸಾಧಾರಣ ರೀತಿಯಲ್ಲಿ ಉಂಟಾಯಿತು. ತನ್ನ ಹಿಂದಿನ ಸಂಸಾರದ ನೆನಪನ್ನು ಇಟ್ಟುಕೊಂಡರೆ ಸನ್ಯಾಸಿಯಾಗಲು ಸಾಧ್ಯವಿಲ್ಲವೆಂದೂ ಅದನ್ನು ಮರೆತುಬಿಡಬೇಕೆಂದೂ ಗುರುಗಳು ಆತನಿಗೆ ಬೋಧಿಸಿದ ಕಾರಣ, ಆತನು ಪ್ರಯತ್ನಪಟ್ಟು ಹಿಂದಿನ ಸಂಗತಿಗಳನ್ನು ಮರೆಯ ತೊಡಗಿದನು. ಅದು ವರೆಗೆ ಆತನು ಬಹಿರಾಕಾರದಲ್ಲಿ ಮಾತ್ರ ಸನ್ಯಾಸಿಯಾಗಿದ್ದನಲ್ಲದೆ ಅಂತರ್ಯದಲ್ಲಿ ಆಗಿರಲಿಲ್ಲ. ಆದರೆ ಆತನು ವನಸ್ಪತಿಗಳ ಉಪಯೋಗವನ್ನು ಕಲಿತುಕೊಂಡು ವೈದ್ಯಕೀಯ ಅನುಭವವನ್ನು ಚೆನ್ನಾಗಿ ಪಡೆದಿದ್ದನು. ಹೆಂಡತಿ ಮಕ್ಕಳನ್ನು ಪ್ರೀತಿಸುವುದರಿಂದಲೇ ಭಗವಂತನ ಅನುಗ್ರಹವನ್ನು ಸಂಪಾದಿಸುವದೆಂದು ತಿಳಿದು ತೃಪ್ತನಾಗಿದ್ದನು.

ಆತನು ಸನ್ಯಾಸವನ್ನವಲಂಬಿಸಿ ಹತ್ತು ವರ್ಷಗಳು ಕಳೆದುಹೋದವು. ಹೆಂಡತಿ ಮಕ್ಕಳನ್ನು ನೋಡಬೇಕೆಂಬ ಆಸೆಯು ಆತನಲ್ಲಿ ಬಲವತ್ತರವಾಯಿತು. ಆತನ ಸಂಗಡಿಗರಾದ ಸನ್ಯಾಸಿಗಳೂ, ಗುರುವೂ, ಇನ್ನಷ್ಟು ಎತ್ತರವಾದ ಸ್ಥಳದಲ್ಲಿ ಆಶ್ರಮವನ್ನು ಕಟ್ಟಿ ವಾಸಿಸಬೇಕೆಂದು ಮುಂದರಿದು ಹೋದರು. ಇಂದ್ರಿಯ ನಿಗ್ರಹವನ್ನು ಮಾಡಿದ ಆ ಸನ್ಯಾಸಿಗಳಿಗೆ ಅದರಿಂದ ಯಾವ ಕಷ್ಟವೂ ಉಂಟಾಗಲಿಲ್ಲ.

• • •

ಈ ಹತ್ತು ವರ್ಷಗಳ ಅವಧಿಯಲ್ಲಿ ಕೃಷ್ಣಸ್ವಾಮಿಯ ಕುಟುಂಬದಲ್ಲಿ ಹಲವು ವಿಶೇಷದ ಸಂಗತಿಗಳು ನಡೆದುಹೋದುವು. ಕೃಷ್ಣಸ್ವಾಮಿಯು ತನ್ನನ್ನು ಇನ್ಸೂರು ಮಾಡಿದ್ದ ಕಾರಣ ಆತನ ಮರಣಾನಂತರ ಅಪಾರ ಧನವು ಆತನ ಕುಟುಂಬಕ್ಕೆ ದೊರಕಿತು. ಆದರೆ ಗಂಡನ ಮರಣದಿಂದ ಸಿಕ್ಕಿದ ಧನದ ಸೌಖ್ಯವನ್ನು ತಾನು ಅನುಭವಿಸಲೊಪ್ಪದೆ ಪಾರ್ವತಿಯು ಅದನ್ನು ಸ್ವೀಕರಿಸಲು ನಿರಾಕರಿಸಿದಳು. ಪರಕೀಯರ ಉಪದೇಶದಿಂದಲೂ ತನ್ನ ಮಕ್ಕಳ ಭವಿಷ್ಯತ್ತನ್ನು ವಿಚಾರಿಸಿಯೂ ಅವಳು ಹಣವನ್ನು ಸ್ವೀಕರಿಸಿದಳು. ಇನ್ಸೂರಿನ ಹಣವು ಒಟ್ಟು ೫೦ ಸಾವಿರವಾಗಿದ್ದ ಕಾರಣ ಬಡತನದಿಂದ ನರಳುತ್ತಿದ್ದ ಆ ಕುಟುಂಬವು ಸಂಪತ್‌ಸಮೃದ್ಧವಾದುದರಲ್ಲಿ ಆಶ್ಚರ್ಯವಿಲ್ಲ. ಹಿರಿಯ ಮಗನಾದ ರಂಗನಾಥನು ಹಣವನ್ನು ವ್ಯಯಿಸಿ ಕಲಿತು ಡಾಕ್ಟರನಾಗಿ ತನ್ನ ಕುಶಲತೆಯಿಂದ ಪಟ್ಟಣಿಗರೆಲ್ಲರ ಪ್ರೀತಿಯನ್ನು ಸಂಪಾದಿಸಿದನು. ಆತನ ಇಬ್ಬರು ಸಹೋದರಿಯರಿಗೆ, ಧನಿಕ ಕುಟುಂಬದವರಿಗೆ ಕೊಟ್ಟು ಮದುವೆಯಾಯಿತು. ಚಿಕ್ಕ ಹುಡುಗಿಯರಿಬ್ಬರು ಶಾಲೆಯಲ್ಲಿ ಕಲಿಯುತ್ತಿದ್ದರು. ಗಂಡನ ಮರಣ ದುಃಖದಿಂದ ಸೊರಗಿಹೋದ ಪಾರ್ವತಿಯು ಇವರೆಲ್ಲರನ್ನೂ ಪೋಷಿಸುತ್ತಿದ್ದಳು. ತಮ್ಮ ಹಳೆ ಸಣ್ಣ ಮನೆಯನ್ನು ತ್ಯಜಿಸಿ ಈಗ ಅವರು ದೊಡ್ಡ ಮನೆಯಲ್ಲಿ ವಾಸಿಸುತ್ತಿದ್ದರು.

ಅವರ ಸಂಸಾರ ಜೀವನವು ಸುಖಮಯವಾಗಿದ್ದಿತು. ಅವರ ಸೇವಕನಾಗಿದ್ದ ಮನುಷ್ಯನು ಅಮೃತಸರಿನಲ್ಲಿ ಖೂನಿ ನಂಬ್ರವನ್ನು ಮಾಡಿದ್ದಾನೆಂದು ತಿಳಿದುಬಂದೊಡನೆ ಆತನನ್ನು ಕೆಲಸದಿಂದ ನಿವೃತ್ತಿಪಡಿಸಲಾಯಿತು. ಅದೇ ಸಮಯದಲ್ಲಿ ಮದರಾಸಿಗೆ ಬಂದಿದ್ದ ಒಬ್ಬ ವೃದ್ಧನನ್ನು ವೈದ್ಯಗ್ರಹದ ಮತ್ತು ಮನೆಯ ದಾಸ್ಯಕ್ಕೆ ನೇಮಿಸಲಾಯಿತು. ಹೊಸ ಸೇವಕನು ತನ್ನ ಪಾಲಿನ ಕೆಲಸವನ್ನು ಬಹಳ ಶ್ರದ್ಧೆಯಿಂದ ಪೂರಯಿಸುತ್ತಿದ್ದ ಕಾರಣ ಮನೆಯವರೆಲ್ಲರೂ ಆತನನ್ನು ಪ್ರೀತಿ ವಿಶ್ವಾಸಗಳಿಂದ ಕಾಣತೊಡಗಿದರು. ಲಕ್ಷ್ಮಣನು (ಇದೇ ಆ ಸೇವಕನ ಹೆಸರು) ಆ ಕುಟುಂಬದ ಯಾವ ಕೆಲಸದಲ್ಲಿಯೂ ಸಂತೋಷದಿಂದ ನೆರವಾಗುವನು. ಕೇವಲ ಸೇವೆಯಲ್ಲಿಯೇ ತೃಪ್ತನಾಗದೆ ತನಗೆ ಸಾಧ್ಯವಾದಷ್ಟು ಮನೆಕೆಲಸಗಳನ್ನು ಭಕ್ತಿಪುರಸ್ಸರವಾಗಿ ಮಾಡುವನು. ಹುಡುಗಿಯರನ್ನು ಪ್ರಾತಃಕಾಲ ಶಾಲೆಗೆ ಕರದೊಯ್ದು, ಸಾಯಂಕಾಲ ಪುನಃ ಶಾಲೆಗೆ ಹೋಗಿ ಮನೆಗೆ ಕರತರುವನು.

ರಂಗನಾಥನು ಸದಾ ತನ್ನ ಕೆಲಸದಲ್ಲಿಯೇ ನಿರತನಾಗಿದ್ದುದರಿಂದ ಈ ವೃದ್ಧ ದಾಸನ ಗೊಡವೆಗೆ ಬರುತ್ತಿರಲಿಲ್ಲ. ಆದರೆ ಆತನ ಚಿಕ್ಕ ತಂಗಿಯರು ಈ ವೃದ್ಧನನ್ನು ಬಹುವಾಗಿ ಪ್ರೀತಿಸುತ್ತಿದ್ದರು, ಗಂಡನ ಮರಣಾನಂತರ ವೈರಾಗ್ಯವನ್ನು ಪಡೆದು ನಿಸ್ಸಾರ ಜೀವನವುಳ್ಳ ಪಾರ್ವತಿಯೂ, ಈ ವೃದ್ಧ ಸೇವಕನಿಂದ ಹೇಳಲ್ಪಡುವ ನೀತಿಪರ ಕಥೆಗಳನ್ನೂ, ತತ್ವೋಪದೇಶವನ್ನೂ ಆಲಿಸಲು ಆಶಿಸುತ್ತಿದ್ದಳು. ಒಂದು ದಿನ ಹುಡುಗಿ ಕಮಲೆಯು ವೃದ್ಧನೊಡನೆ—"ಲಕ್ಷ್ಮಣಾ, ನಮ್ಮ ತಂದೆಯು ಈಗ ಇದ್ದುದಾದರೆ ನಿನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದನು" ಎಂದಳು.

ಲಕ್ಷ್ಮಣ:—"ತಾಯಿ, ನಿನ್ನ ತಂದೆಯನ್ನು ನೀನು ತಿಳಿದಿರುವೆಯಾ, ಆತನು ಸಾಯುವಾಗ ನೀನು ಚಿಕ್ಕ ಮಗುವಾಗಿದ್ದಿಯಂತೆ".

ಕಮಲೆ:—"ನನಗೆ ತಿಳಿದಿದೆ. ನನ್ನ ಅಪ್ಪನು ನನ್ನ ಕನಸಿನಲ್ಲಿ ಬಂದು ನಿನ್ನೊಡನೆ ಒಳ್ಳೆಯವಳಾಗಿ ಇರಬೇಕೆಂದು ನನಗೆ ಹೇಳುವನು".

ಚಿಕ್ಕ ಹುಡಗಿಯು ಈ ಪಾಪರಹಿತವಾದ ಮಾತುಗಳನ್ನು ಕೇಳಿದೊಡನೆ ಪಾರ್ವತಿಯ ಕಣ್ಣಿನಿಂದ ಒಂದೆರಡು ನೀರಹನಿಗಳು ಸುರಿದವು. ಇದನ್ನು ನೋಡಿ ಲಕ್ಷ್ಮಣನ ಕಣ್ಣುಗಳೂ ಅಶ್ರುಪೂರ್ಣವಾದವು.

ಲಕ್ಷ್ಮಣನು ಮತ್ತೂ ಕೇಳಿದನು—"ಮಗೂ, ಕಮಲೆ, ನಿನ್ನ ತಂದೆಯು ಯಾವ ರೀತಿಯಲ್ಲಿರುವನು ಮತ್ತು ನಿನ್ನೊಡನೆ ಆತನು ಇನ್ನೇನು ಹೇಳುತ್ತಿರುವನು"?

ಕಮಲೆ:—"ಆತನು ಮುದುಕನಾಗಿ, ಬಡವಾಗಿ, ಬಳಲಿದವನಂತೆ ತೋರುವನು. ಆತನು ಮಾತನಾಡುವಾಗ ಕಣ್ಣೀರಿಡುವನು. ತಾನು ಸಾಯಲಿಲ್ಲವೆಂದು ಹೇಳುವನು. ಎಲ್ಲಿರುವೆ ಎಂದು ಕೇಳಿದಾಗ ಬಹು ದೂರದಲ್ಲಿರುವನೆಂದೂ ಆತನು ಬರಬೇಕೆಂದು ನಮಗೆಲ್ಲರಿಗೂ ಮನಸ್ಸಿದೆಯಾದರೆ ತಾನು ಬರುವೆನೆಂದೂ ಆತನು ಹೇಳುತ್ತಿರುವನು".

• • •

ಇಂದು ಕೃಷ್ಣಸ್ವಾಮಿಯ ವಾರ್ಷಿಕ ಶ್ರಾದ್ಧದ ದಿನ; ಮದುವೆಯಾದ ಆತನ ಇಬ್ಬರು ಹುಡುಗಿಯರೂ ತಮ್ಮ ಚಿಕ್ಕ ಮಕ್ಕಳೊಂದಿಗೆ ತಂದೆಯ ಶ್ರಾದ್ಧಕ್ಕಾಗಿ ಬಂದಿದ್ದರು. ವೈದೀಕರು ಬಹು ಸಂಭ್ರಮದಿಂದ ಒಳಗೆ ಹೋಗುತ್ತಾ ಹೊರಗೆ ಬರುತ್ತಾ ಇದ್ದರು. ಇಬ್ಬರು ಹುಡುಗಿಯರೂ ಪತಿಗೃಹದಿಂದ ಬಂದಿದ್ದ ಕಾರಣ ಲಕ್ಷ್ಮಣನಿಗೆ ಆ ದಿನ ಕೆಲಸ ಹೆಚ್ಚು. ಆತನು ಬ್ರಾಹ್ಮಣನಲ್ಲವಾದುದರಿಂದ ಮನೆಯೊಳಗೆ ಹೋಗಿ ಸಮಾರಂಭವನ್ನು ಪ್ರತ್ಯಕ್ಷ ಕಾಣಲು ಮಾತ್ರ ಆತನಿಗೆ ಅಧಿಕಾರವಿರಲಿಲ್ಲ. ಕುಟುಂಬದವರೆಲ್ಲರೂ ಒಟ್ಟಾಗಿದ್ದ ಕಾರಣ ಆ ದಿನವು ಅತ್ಯಂತ ಸಂತೋಷದ ದಿನವೆಂದು ಪರಿಗಣಿಸಲ್ಪಟ್ಟಿತು.

(ಇನ್ನೂ ಹೆಚ್ಚಿಗೆ ಮುಂದುವರಿಸಲ್ಪಡುವದು)

ನೋಟೀಸು.

ಶ್ರೀ ವೆಂಕಟರಮಣ ದೇವಸ್ಥಾನ, ಮಂಗಳೂರು.

ಸ್ವಜಾತಿಯ ಬಡವ ಚತುರ ವಿದ್ಯಾರ್ಥಿಗಳಿಗೆ ಈ ದೇವಳ ಭಂಡಾರದಿಂದ ಶಾಲಾ ವೇತನ ಯಾನೆ ಸ್ಕೊಲರಶಿಫ್‌ಗಳು ಕೊಡಲ್ಪಡುವವು. ಉಮೇದ್ವಾರರು ಇದೇ ಜುಲ್ಯಾ ತಿಂಗಳ ತಾರೀಕು 21ರ ವಳಗೆ ತಮ್ಮ ಅರ್ಜಿಗಳನ್ನು ಈ ದೇವಳ ಆಫೀಸಿನಲ್ಲಿ ದಾಖಲು ಮಾಡತಕ್ಕದ್ದು. ಅರ್ಜಿಯು ಈ ಕೆಳಗಣ ಶಿರನಾಮೆಗಳು ಇರುವ ಫೋರ್ಮಿನಲ್ಲಿ ಇರತಕ್ಕದ್ದು, ಮತ್ತು ಅರ್ಜಿಯು ಉಮೇದ್ವಾರನ ಮತ್ತು ಆತನ ತಂದೆ ಯಾ ರಕ್ಷಕನ ದಸ್ಕತು ಹಾಕಿಸಿ ಇಬ್ಬರು ಯೋಗ್ಯ ಮತ್ತು ಮಾನ್ಯ ಗ್ರಹಸ್ಥರ ಶಿಪಾರಸು ಸಮೇತ ಕೊಡತಕ್ಕದ್ದು.

ತಾ. 11-7-1928
ಮಂಗಳೂರು.

M. Ramakrishna Pai,
Managing Moktessar,
Shri Venkatramana Temple
Mangalore.

Application for Scholarship from S. V. Temple Mangalore.

1 Name.... ....
2 Father's Name ....
3 Address ....
4 Occupation of the father
5 Date of Birth ....
6 Class in which the applicant is reading ....
7 School in which the applicant studies ....
8 Whether applicant holds any other scholarship, if so of what value ....
9 The monthly schoolfees he has to pay ....
10 The occupation of the applicant's brother, or of any other near relative ....
11 The percentage of the marks, the applicant secured in the previous annual School Examination ....

Date 192 .

ಹಿಂದೂಸ್ಥಾನೀ ಸೇವಾದಲದ

ವ್ಯಾಯಾಮ ವಿದ್ಯಾಪೀಠದ

ಅನಾವರಣ ಸಮಾರಂಭವು

ಅಗಸ್ಟ ೧ನೇ ತಾರೀಕಿಗೆ, ಬಾಗಲಕೋಟೆಯಲ್ಲಿ ಜರಗುವದು.

ಅದೇ ಕಾಲಕ್ಕೆ

(೧) ಸೇವಾದಲದ ಪರಿಷತ್ತು, (೨) ರೈತರ ಪರಿಷತ್ತು, (೩) ವರ್ತಕರ (ವ್ಯಾಪಾರಿ) ಪರಿಷತ್ತು, (೪) ವೃತ್ತಪತ್ರಕರ್ತರ ಪರಿಷತ್ತು.

(೧) ವ್ಯಾಯಾಮ ಉಪಕರಣಗಳ ಪ್ರದರ್ಶನ, (೨) ಒಕ್ಕಲತನದ ಪ್ರದರ್ಶನ, (೩) ಸ್ವದೇಶೀ ವಸ್ತುಗಳ ಪ್ರದರ್ಶನ, (೪) ವೃತ್ತಪತ್ರಿಕೆಗಳ ಪ್ರದರ್ಶನ, (೫) ಖಾದೀ ಪ್ರದರ್ಶನ, (೬) ಐತಿಹಾಸಿಕ ವಸ್ತು ಪ್ರದರ್ಶನ.

ಇವೇ ಮುಂತಾದವುಗಳು ಬಹು ವಿಜೃಂಭಣೆಯಿಂದ ಆಗುವವು.

ನೀರೋಗಿಯಾದ ತಾಯಿಯಿಂದ ಸಂಸಾರವೇ ಸುಖಮಯವಾಗುವದು

ನೀರೋಗಿಯಾದ ತಾಯಿಯು ಗಲ್ಲಗಳ ಮೇಲೆ ಸುಖಸೂಚಕವಾದ ಹೊಳವು, ಕಣ್ಣುಗಳಲ್ಲಿ ಪ್ರಕಾಶ ಇದ್ದು ಪ್ರತಿ ಕೆಲಸದಲ್ಲಿಯೂ ಅವಳು ಚುರುಕಾಗಿರುವಳು. ಅವಳ ಪ್ರತಿಯೊಂದು ಅಂಗವು ಕ್ರಮವಾಗಿ ಕೆಲಸಮಾಡಿ ಅವಳ ಆರೋಗ್ಯವನ್ನು ಹೆಚ್ಚಿಸುವದು. ಆಗಾಗ ಕಾಹಿಲೆಯಾಗುವದೆಂಬುದು ಅವಳ ಅನುಭವಕ್ಕೆ ಬಾರದೆ ಯಾವಾಗಲೂ ಸುಖಿಯಾಗಿಯೇ ಇರುವಳು. ಯಾವಾಗಲೂ ಸುಖಿಯಾಗಿರುವ ಕಾರಣ, ಸದಾ ಕರ್ತವ್ಯನಿರತಳಾಗಿ, ಬಳಲುವಿಕೆಯೆಂದರೇನೆಂದು ತಿಳಿಯದೆ ನಿರಂತರ ಸುಖವನ್ನನುಭವಿಸುವಳು.

ಆದರೆ ಹಲವು ಹೆಂಗಸರ ಜೀವನಕ್ರಮವೇ ಬೇರೆಯಾಗಿದೆ. ನಿತ್ಯದ ಕೆಲಸಕ್ಕೆ ತೊಡಗುವ ಮೊದಲು ಅದರ ಆಲೋಚನೆಯೇ ಅವರ ಧೈರ್ಯವನ್ನು ಅಪಹರಿಸುವದು. ಇದರಿಂದ ಸಂಸಾರವೇ ದುಃಖಮಯವಾಗಿ ಒಬ್ಬಳಿಂದ ಹಲವರು ವ್ಯಥೆಪಡಬೇಕಾಗುವದು. ಅವಕ್ಕೆ ತಕ್ಕಕಾಲದಲ್ಲಿ ಔಷಧಿಯನ್ನು ಸೇವಿಸದಿದ್ದರೆ ಅವರ ರೋಗವು ದಿನಹೋದಷ್ಟಕ್ಕೆ ಬೆಳೆಯುತ್ತಾ ಬರುವದು.

ಫೆಲೂನಾ ಮಾತ್ರೆಗಳು
ಹೆಂಗಸರಿಗೆ ಮಾತ್ರ

ಸ್ತ್ರೀಯರ ಅವ್ಯವಸ್ಥೆಗಳನ್ನು ಸರಿಪಡಿಸುವುದಕ್ಕಾಗಿಯೇ ನಿರ್ಮಿಸಲ್ಪಟ್ಟಿವೆ. ಯಾವ ಸಾಮಾನ್ಯ ಔಷಧವೂ ಅವುಗಳಂತೆ ಗುಣಕಾರಿಯಾಗದು. ಈ ಮಾತ್ರೆಗಳ ಉಪಯೋಗದಿಂದ ಗುಣ ಸಿಕ್ಕಿದುದಕ್ಕಾಗಿ ನಮಗೆ ಬಂದ ಹಲವು ಕೃತಜ್ಞತಾಪತ್ರಗಳೇ ಇವಕ್ಕೆ ಸಾಕ್ಷಿಯಾಗಿವೆ. "ತಾಯಿಯು ಸುಖಿಯಾದ ಕಾರಣ" ಸಂಸಾರವೇ ಸುಖಮಯವಾಗಿದೆ ಎಂಬ ಮನೆಯ ಯಜಮಾನರುಗಳನೇಕರು ನಮಗೆ ಬರೆದಿರುವರು.

ಪರರ ಅನುಭವವು
ನಿಮಗೂ ನಿಜವೆನ್ನಿಸುವುದು

ಸ್ತ್ರೀಯರಿಗೆ ಸಾಮಾನ್ಯವಾಗಿ ಉಂಟಾಗತಕ್ಕ ನೋವು ಮೊದಲಾದವುಗಳನ್ನು ಹೋಗಲಾಡಿಸುವರೆ ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ ಖಂಡಿತವಾದ ಔಷಧಿಯಾಗಿದೆ. ಅಸೌಖ್ಯಕ್ಕೆ ಮೂಲವಾದ ಇಂದ್ರಿಯದ ಮೇಲೆ ಅವು ತಮ್ಮ ಶಕ್ತಿಯನ್ನು ಪ್ರಯೋಗಿಸಿ ಇಂದ್ರಿಯವನ್ನು ಶುಚಿಪಡಿಸಿ ಸರಿಗೊಳಿಸುವವು. ನವೀನವಾದ ಮತ್ತು ಸಾರಯುಕ್ತವಾದ ರಕ್ತವು ಬೇಗನೆ ಆರೋಗ್ಯದ ಹೊಳಪನ್ನು ಗಲ್ಲಗಳ ಮೇಲೆ ತರುವದು.

ಸಾವಿರಾರು ಹೆಂಗಸು ಮಕ್ಕಳು ಇದರ ಸೇವನೆಯಿಂದ ಸುಖವನ್ನು ಅನುಭವಿಸುತ್ತಿರುವಾಗ ನೀವು ಮಾತ್ರ ನರಳುತ್ತಿರುವಿರೇ? ಹಾಗಾದರೆ ಇಂದೇ **ಫೆಲೂನಾ ಮಾತ್ರೆಗಳನ್ನು** ಸೇವಿಸತೊಡಗಿರಿ. ನಿಮ್ಮ ಭವಿಷ್ಯತ್ತು, ಪ್ರಕಾಶಮಯವೂ, ಸುಖಮಯವೂ, ಸಂತೋಷಮಯವೂ ಆಗುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಷ್ಟರಿಂದಲೂ ಸ್ಟೋರ್ಸ್‌ರಿಂದಲೂ ಮಾರಲ್ಪಡುವವು.

ಬಾಟಲಿಗೆ ರೂ. 2/4.

ಮುಖ್ಯ ಏಜಂಟರು—
ಪಟೇಲ್ ಮತ್ತು ಧೊಂಡಿ
ಪೋಸ್ಟ್ ಆಫೀಸು ಬೊಕ್ಸ 838,
ಮುಂಬಾಯಿ.

ಮದರಾಸು ಸಂಸ್ಥಾನಕ್ಕೆ—
ದಾದಾ ಎಂಡ್ ಕೊ.,
260 ಚ್ಯಾನಾ ಬಜಾರ್ ರೋಡ್, ಮದರಾಸು.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 86.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಡಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಡಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರಿಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಿಸರ್ಚ್‌ಗಾರ್ಡನ್ಸ್, ಕಾಪು ದ. ಕ. — C/o ಕೆ. ವಾಮನ ಶೆಣೈ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.
131028

ಜಂಗೀಕುಸ್ತಿಗಳೂ ಆಟನೋಟಗಳೂ,
ಆಗತಕ್ಕವುಗಳಿರುತ್ತವೆ.

ಈ ಎಲ್ಲ ಪರಿಷತ್ತುಗಳಲ್ಲಿಯೂ, ಪ್ರದರ್ಶನಗಳಲ್ಲಿಯೂ, ಕುಸ್ತಿ ಹಾಗೂ ಆಟನೋಟಗಳಲ್ಲಿಯೂ, ಕರ್ನಾಟಕದ ಮತ್ತು ಅಖಂಡ ಹಿಂದೂಸ್ತಾನದ ಮುಂದಾಳುಗಳು ಭಾಗ ತೆಗೆದುಕೊಳ್ಳುವವರಿದ್ದಾರೆ.

ಕರ್ನಾಟಕದ ಎಲ್ಲಾ ಭಾಗದಿಂದ ಬರತಕ್ಕ ಸ್ವಯಂಸೇವಕರು ತಮ್ಮ ತಮ್ಮ ಪ್ರೇಕ್ಷಣೀಯ ಆಟಗಳನ್ನು ಆಡಿತೋರಿಸುವರು.

ಕನ್ಯಾ ಶಾಲೆಗಳ ಬಾಲಿಕೆಯರಾದರೂ ಆಟಗಳೊಳಗಿನ ತಮ್ಮ ಕೌಶಲ್ಯವನ್ನು ತೋರಿಸುವರು. ಮಹನೀಯರೆಲ್ಲರೂ ಬರಬೇಕಾಗಿ ವಿನಂತಿ.

ತಾ. ೪-೩-೨೮ ಬಾಗಲಕೋಟೆ, } ಕಾರ್ಯದರ್ಶಿ, ಹಿ. ಸೇ. ದಲದ ವ್ಯಾಯಾಮ ವಿದ್ಯಾಪೀಠ.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೊ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ರ್ಯೂ ಮಿಕ್ಸ್ಚರ್, ಮಲಾಮು, ಸರಬತ್ತು, ಬಾಮ ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ಪರ್ಫ್ಯೂಮ್ಸ್, ಅರ್ಕ, ಆಯಿಡ್‌ಗಳು, ಡ್ರಗ್ಸ್, ಕೆಮಿಕಲ್ಸ್, ಬಾಟಲಿಗಳು, ಬಣ್ಣಗಳು, ಪೆಪರಮಿಟ, ಕ್ರಿಸ್ಟಲ್ ಮತ್ತು ಹೀಲಿಯೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವುವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮ ಒಳ್ಳೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1–8–0. ಮಾದರಿ ಪರಿಮಳದ ಸಾಂಪಲುಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದ್ದಲ್ಲಿ ರವಾನಿಸಲಾದೀತು.

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,
ಮುಂಗಳದಾಸ ರೋಡ, ಮುಂಬಯಿ ನಂಬ್ರ ೨.
15028

೧೧ನೇ ಪುಟದಿಂದ ಮುಂದುವರಿಸಿದ್ದು

ಮುದ್ದು ಕಮಲೆಗೆ ಶೀತವು ಹಿಡಿದು ಅದು ಜ್ವರವಾಗ ತೊಡಗಿತು. ಕೆಮ್ಮು ಪ್ರಾರಂಭವಾಯಿತು. ದಿನೇ ದಿನೇ ಅವಳು ಕೃಶಳಾಗುತ್ತಾ ಬಂದಳು. ಕ್ಷಯರೋಗವೆಂದು ಡಾಕ್ಟರರು ಅಭಿಪ್ರಾಯಪಟ್ಟರು.

ಕಮಲೆಯು ಎಲ್ಲರಿಗೂ ಪ್ರಿಯಕರಳಾದ ಬಾಲಕಿಯಾದ ಕಾರಣ ಮನೆಯಲ್ಲೆಲ್ಲವೂ ದುಃಖವು ಆಕ್ರಮಿಸಿತು. ಕಮಲೆಯು ಹಾಸಿಗೆ ಹಿಡಿದಳು. ಲಕ್ಷ್ಮಣನು ಆ ಚಿಕ ಹುಡುಗಿಯ ಆರೈಕೆಯನ್ನು ಪಾರ್ವತಿಗಿಂತಲೂ ಹೆಚ್ಚಾದ ದಕ್ಷತೆಯಿಂದ ಮಾಡುತ್ತಿದ್ದನು. ಯಾವಾಗಲೂ ಕಮಲೆಯ ಪಕ್ಕದಲ್ಲಿಯೇ ಇರುವನು. ಅವಳನ್ನು ಗುಣಪಡಿಸುವಂತೆ ಭಗವಂತನನ್ನು ಪ್ರಾರ್ಥಿಸುವನು. ಕಮಲೆಯು ಒಮ್ಮೆ ಗುಣವಾಗುವ ಸೂಚನೆಯನ್ನು ತೋರಿದಳಾದರೂ, ಪುನಃ ರೋಗವು ಪ್ರಬಲಿಸಿತು. ದಿನಗಳೆದಷ್ಟಕ್ಕೆ ಅವಳು ಹೆಚ್ಚು ಕುಂದುತ್ತಾ ಬಂದಳು.

ನಿಪುಣರಾದ ಡಾಕ್ಟರರು ಬಂದು ತಮ್ಮ ಕೈಲಾದಷ್ಟು ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ. ಪುಕ್ಕ ಸ್ವಭಾವದ ಲಕ್ಷ್ಮಣನು ಧನಿಯಾದ ರಂಗನಾಥನನ್ನು ಕಂಡು ಒಮ್ಮೆ ತನ್ನ ಔಷಧವನ್ನು ಕಮಲೆಗೆ ಕೊಟ್ಟು ನೋಡುವೆನೆಂದನು. ಆದರೆ ರಂಗನಾಥನು ಒಪ್ಪಿಕೊಳ್ಳಲಿಲ್ಲ. ಒಂದು ದಿನ ಲಕ್ಷ್ಮಣನು ಕಮಲೆಗೆ ತನ್ನ ಔಷಧಿಯನ್ನು ಕುಡಿಯ ಕೊಟ್ಟಿದ್ದನ್ನು ಕಂಡು ರಂಗನಾಥನು ರೋಷಾವೇಶದಿಂದ, ಮುಂದಕ್ಕೆ ಲಕ್ಷ್ಮಣನು ಕಮಲೆಯ ಕೋಣೆಯನ್ನು ಪ್ರವೇಶಿಸಲಾಗದೆಂದು ಅಪ್ಪಣೆ ಇತ್ತನು. ಲಕ್ಷ್ಮಣನ ಅಗಲುವಿಕೆಯಿಂದ ಹುಡುಗಿಯ ಆರೈಕೆಗೆ ಭಂಗಬರುವುದೆಂದು ಅವನಿಗೆ ತಿಳಿದಿತ್ತಾದರೂ, ಅದರಿಂದಾಗಬಹುದಾದ ದುಷ್ಪರಿಣಾಮವು ಆತನಿಗೆ ಹೊಳೆಯಲಿಲ್ಲ.

ಕಮಲೆಯ ಅಗಲುವಿಕೆಯು ಲಕ್ಷ್ಮಣನಿಗೆ ಸಹಿಸಲು ಸಾಧ್ಯವಾಗಲಿಲ್ಲ. ಆತನು ಅಂದಿನಿಂದ ಬಹು ದುಃಖಿತನಾಗಿದ್ದಾನೆಂದು ಎಲ್ಲರೂ ತಿಳಿದರು. ಆದರೂ ಆತನು ಕುಟುಂಬದ ಸೇವೆಯಲ್ಲಿ ಬಿಂದಿಷ್ಟು ವಂಚಿಸಲಿಲ್ಲ. ಮೊದಲಿಗಿಂತಲೂ ಹೆಚ್ಚಾದ ಕೆಲಸವನ್ನು ಮಾಡತೊಡಗಿದನು. ಆದರೆ ಆತನ ಮುಖದ ಮೇಲೆ ಮಾತ್ರ ಮೊದಲಿನಂತೆ ಸಂತೋಷವು ತೋರ ಹೊಮ್ಮುತ್ತಿರಲಿಲ್ಲ.

ಒಂದು ದಿನ ಲಕ್ಷ್ಮಣನು ಹಾಸಿಗೆಯಿಂದ ಏಳುತ್ತಿರುವಾಗ, ಒಳಗಿನ ಕೊಠಡಿಯಿಂದ ಪಾರ್ವತಿಯ ಅಳುವಿನ ಧ್ವನಿಯು ಕೇಳಬಂದಿತು. ಒಡನೆ ಇತರರೂ ಅಲ್ಲಿಗೆ ಬಂದು ರೋದಿಸತೊಡಗಿದರು. ಲಕ್ಷ್ಮಣನು ಇದನ್ನು ಕೇಳಿದೊಡನೆ ನಡೆದಿರಬಹುದೇನೆಂದು ಆತನಿಗೆ ತಿಳಿಯಿತು. ದುಃಖಾತಿರೇಕದಿಂದ, ತಾನು ಅಂಗಿ ಹಾಕದುದನ್ನು ಸ್ಮರಿಸದೆ ಆತನು ಕಮಲೆಯ ಕೋಣೆಗೆ ಓಡಿಹೋದನು. ಆದರೆ ಮುದ್ದು ಕಮಲೆಯ ಪ್ರಾಣವು ಜಡಶರೀರವನ್ನು ತ್ಯಜಿಸಿ, ಚಿರವಾದ ಅಂತರಿಕ್ಷದಲ್ಲಿ ವಿಲೀನವಾಗಿ ಹೋಗಿದ್ದಿತು.

ಲಕ್ಷ್ಮಣನು ದುಃಖದಿಂದ ಹುಚ್ಚನಾದನು. ಧೊಪ್ಪನೆ ನೆಲದ ಮೇಲೆ ಬಿದ್ದು ದೊಡ್ಡ ಸ್ವರದಿಂದ ಅತ್ತು ಹೊರಳತೊಡಗಿದನು. ಪರಕೀಯನಾದ ಈ ಸೇವಕನು ತನ್ನ ಮಗಳ ಮರಣಕ್ಕಾಗಿ ದುಃಖಿಸುತ್ತಿರುವುದನ್ನು ಕಂಡು ಪಾರ್ವತಿಗೆ ಆಶ್ಚರ್ಯವಾಗದಿರಲಿಲ್ಲ. ತನ್ನ ದುಃಖವನ್ನು ಗಣಿಸದೆ ಲಕ್ಷ್ಮಣನನ್ನು ಸಮಾಧಾನಪಡಿಸುವ ಸಲುವಾಗಿ ಪಾರ್ವತಿಯು ಆತನಿದ್ದೆಡೆಗೆ ಹೋದಾಗ ಲಕ್ಷ್ಮಣನು ಅಂಗಿಯನ್ನು ತೊಡದೆ ಇರುವ ಕಾರಣ ಆತನ ಬಲಬದಿಯಲ್ಲಿರುವ ಅಂಗೈಯಷ್ಟು ಗಾತ್ರದ ಮಚ್ಚೆಯು ಅವಳ ಕಣ್ಣಿಗೆ ಬಿದ್ದಿತು. ಒಡನೆ ಲಕ್ಷ್ಮಣನ ಕಣ್ಣುಗಳನ್ನು ನಿರೀಕ್ಷಿಸಿದಳು.—ಹೌದು, ಅವನೇ ಮೃತಪಟ್ಟ ಕೃಷ್ಣಸ್ವಾಮಿಯು, ಈಗ ಅವಳು ಲಕ್ಷ್ಮಣನನ್ನು ಗುರುತಿಸಿ, ರಂಗಾ, ಸರಳಾ ನೋಡಿರಪ್ಪಾ, ನಿಮ್ಮ ಜನಕನೇ ಈ ಲಕ್ಷ್ಮಣನು" ಎಂದಳು.

ರಂಗನಾಥನೂ ಆತನ ತಂಗಿಯಾದ ಸರಳೆಯೂ ಬಂದು ನೋಡಿದರು. ಆದರೆ ಬಡ ಲಕ್ಷ್ಮಣನ ದುಃಖವು ಉಕ್ಕಿಬಂದುದರಿಂದ ಮಾತನಾಡಲಾರದಾದನು. ಆತನು ನಿಂತುಕೊಂಡನು. ಆದರೆ ಥಕ್ಕನೆ ನೆಲಕ್ಕುರುಳುವಂತಾದನು. ಪಾರ್ವತಿಯು ಆತನನ್ನು ತನ್ನ ಬಾಹುಪಾಶಗಳಲ್ಲಿ ಅಪ್ಪಿ ಹಿಡಿದು ಆಧರಿಸಿದಳು. ಅಷ್ಟರಲ್ಲಿ ಲಕ್ಷ್ಮಣನ ಪ್ರಾಣವಾಯುವು ಎತ್ತಲೋ ಹಾರಿಹೋಗಿ ಆತನ ನಿಶ್ಚೇತನವಾದ ಶರೀರ ಮಾತ್ರವೇ ಪಾರ್ವತಿಯ ಕರಗಳಲ್ಲುಳಿಯಿತು.

ಮೊಸ್ಕೋ ಪಟ್ಟಣದ ಈಗಿನ ಸ್ಥಿತಿ.

(ಪಂಡಿತ ಜವಾಹಿರಲಾಲನೆಹರುರವರು ಮೊಸ್ಕೊ ಪಟ್ಟಣಕ್ಕೆ ಹೋಗಿದ್ದಾಗ ಅಲ್ಲಿನ ಸ್ಥಿತಿಗಳೆಲ್ಲವನ್ನು ಪ್ರತ್ಯಕ್ಷ ಕಂಡು ಬರೆಯುತ್ತಿರುವರು).

ಈ ಪಟ್ಟಣದ ಮಾರ್ಗಗಳು ಕಾಲುನಡಿಗೆಯಿಂದಲೇ ಹೋಗುತ್ತಿರುವ ಪಥಿಕರಿಂದ ತುಂಬಿ ತುಳುಕುತ್ತಿರುವುವು. ಮಾರ್ಗಗಳಲ್ಲಿ ಜನಸಂಖ್ಯೆಯು ಬಹು ವಿಶೇಷ ಇರುವುದಾದರೂ ಅವರು ಕಾನೂನಿಗೆ ವಿರೋಧವಾಗಿ ವರ್ತಿಸುವುದಿಲ್ಲ. ಮಾರ್ಗರಕ್ಷಕರಾದ ಪೋಲೀಸರು ತಮ್ಮ ಕರ್ತವ್ಯವನ್ನು ಅತಿ ದಕ್ಷತೆಯಿಂದ ಮಾಡುವರು. ವಾಹನಗಳ ಸಂಚಾರವು ಅಲ್ಲಿ ಕಡಿಮೆಯಾದ ಕಾರಣ ಪೋಲೀಸರಿಗೆ ಕಷ್ಟವೇನೂ ಇರುವುದಿಲ್ಲ. ಮೋಟಾರು, ಟಿಕ್ಸಿ, ಟ್ರೇನು ಇವು ಬರುತ್ತಿವೆಯಾದರೂ, ಇತರ ದೊಡ್ಡ ಪಟ್ಟಣಗಳಂತೆ ಗಲಭೆಯುಂಟಾಗುವುದಿಲ್ಲ.

ಪಟ್ಟಣದ ಎಲ್ಲಾ ಮಾರ್ಗಗಳು ಒಂದೇ ರೀತಿಯಾಗಿರದೆ ಬೇರೆ ಬೇರೆ ರೀತಿಯವುಗಳಾಗಿವೆ. ಅಗಲವಾದ ಮಾರ್ಗಗಳು, ವಿಶಾಲವಾದ ಮೈದಾನುಗಳು, ಅಸಂಖ್ಯಾತ ಇಗರ್ಜಿಗಳು, ಗೋಪುರಗಳು ಇವು ಅದರ ಸೊಬಗನ್ನು ಹೆಚ್ಚಿಸುವವು. ಇಡೀ ಪಟ್ಟಣದಲ್ಲಿ ಓಟ್ಟು ೧೬೦೦ ಇಗರ್ಜಿಗಳಿರುವುವಂತೆ. ಇಗರ್ಜಿಗಳಿಗೆ ಹೋಗುವುದರ ಕುರಿತು ಹೆಚ್ಚಿನ ಆಕ್ಷೇಪಗಳು ಅಲ್ಲಿರುವುದಿಲ್ಲ. ಕ್ರೆಮ್‌ಲಿನ್ ಎಂಬಲ್ಲಿರುವ ಕನ್ಯಾ ಮೇರಿಯ ಇಗರ್ಜಿಯು ಬಹು ಪ್ರಸಿದ್ಧಿ ಹೊಂದಿದ್ದು ಬಹು ದೂರದ ಜನರಾದರೂ ವರ್ಷಕ್ಕೊಮ್ಮೆ ಅದನ್ನು ಸಂದರ್ಶಿಸದಿರರು.

ಪಶ್ಚಿಮ ದೇಶದ ಎಲ್ಲಾ ಪಟ್ಟಣಗಳಲ್ಲಿಯೂ ಒಂದೇ ರೀತಿಯ ಆಚಾರಗಳು ವಾಡಿಕೆಯಲ್ಲಿರುವವು. ಆದರೆ ಮೊಸ್ಕೊ ಪಟ್ಟಣದಲ್ಲಿ ಹಾಗಲ್ಲ, ಯುರೋಪಿಯನರ ಪದ್ಧತಿಯೂ ಇದೆ; ಏಷ್ಯದವರ ಪದ್ಧತಿಯೂ ಇದೆ. ಬಡತನ ಐಶ್ವರ್ಯಗಳೊಳಗೆ ಅಲ್ಲಿ ಅಂತರವು ಕಾಣುವುದಿಲ್ಲ. ಬಡವರು ಮತ್ತು ಧನಿಕರ್ ಎಂಬ ಭೇದವೂ ಇರುವುದಿಲ್ಲ. ಜಾತಿಭೇದವೂ ಇರುವುದಿಲ್ಲ. ಒಬ್ಬನಿಗೆ ಹೆಚ್ಚು ಸಂಬಳವು ಸಿಕ್ಕಿದ ಮಾತ್ರದಿಂದ ಆತನ ಮಾನವು ಅಲ್ಲಿ ಬೆಳೆಯುವುದಿಲ್ಲ. ಬುದ್ಧಿಗೆ ಪ್ರಾಮುಖ್ಯತೆಯೇ ಇಲ್ಲವೆಂದರೆ ಮುಗಿಯಿತು. ಕೊಮ್ಯೂನಿಷ್ಟ ಪಾರ್ಟಿಯ ಉಚ್ಚ ತರಗತಿಯ ಮೆಂಬರನಿಗೆ ಸಿಕ್ಕುವ ಹೆಚ್ಚಿನ ಸಂಬಳವೆಂದರೆ ೨೫೦ ರುಬುಲುಗಳು, (೩೦೦ ರೂಪಾಯಿಗೆ ಸರಿಯಾಗುವದು.) ರಶ್ಯನ್ ಯೂನಿಯನ್ನಿನ ಪ್ರೆಸಿಡೆಂಟನಿಗೂ ಸಂಬಳವಿಷ್ಟೇ. ಆತನ ಕಾರಕೂನನಿಗೆ ಸಿಕ್ಕುವ ಸಂಬಳ ಬಹಳ ಕಡಿಮೆಯಾಗಿಲ್ಲ. ಇದಕ್ಕಿಂತ ಕೆಲವೇ ನಾಣ್ಯಗಳಿಗೆ ಕಡಿಮೆಯಾಗಿರಬಹುದು. ಆದರೆ ಪ್ರೆಸಿಡೆಂಟನಿಗೆ ವಾಸಿಸಲು ಕೆಲವು ಕೋಣೆಗಳು, ಒಂದು ಮೋಟಾರಕಾರು, ಇನ್ನು ಕೆಲವು ಸೌಕರ್ಯಗಳು ಇವೆ. ಹಳ್ಳಿಯಿಂದ ಬಂದ ರೈತನೂ, ಕಾರಖಾನೆಯಿಂದ ಬಂದ ಕೂಲಿಯೂ, ಆತನನ್ನು ಎದುರುಗೊಳ್ಳಲು ಬಹು ಕಷ್ಟಪಡಬೇಕಾಗಿಲ್ಲ. ತಮ್ಮವನನ್ನು ಕಾಣುವಂತೆಯೇ ಸಲಿಗೆಯಿಂದ ಅವರನ್ನು ಎದುರುಗೊಳ್ಳುವರು. ಆದರೆ ಪ್ರೆಸಿಡೆಂಟನು ತಮಗಿಂತಲೂ ಹೆಚ್ಚು ಬುದ್ಧಿಯುಳ್ಳವನೂ, ತಿಳುವಳಿಕೆಯುಳ್ಳವನೂ ಎಂದು ಮಾತ್ರ ಸಾಮಾನ್ಯ ಜನರು ತಿಳಿದುಕೊಳ್ಳುವರು.

ಸ್ವಂತವಾಗಿ ಯಾರೊಬ್ಬನಿಗೂ ಮೋಟಾರಕಾರುಗಳಾಗಲೀ, ಚಿನ್ನಗಳಾಗಲೀ ಇರುವುದಿಲ್ಲ. ಅಲ್ಲಿ ಓಡಾಡುವ ಕಾರುಗಳು, ಸರಕಾರ ಅಥವಾ ಇನ್ನಾವುದಾದರೂ ಸಂಸ್ಥೆ, ವ್ಯಾಪಾರಿ ಸಂಸ್ಥೆ, ಸಹಕಾರಿ ಸಂಸ್ಥೆ, ಕಾರಖಾನೆ ಇವುಗಳವು. ಇತರ ಪಟ್ಟಣಗಳಲ್ಲಿರುವಂತೆಯೇ ದೊಡ್ಡ ದೊಡ್ಡ ಅಂಗಡಿಗಳೂ, ಮಳಿಗೆಗಳೂ ಇರುವವು. ದೊಡ್ಡ ದೊಡ್ಡ ಅಂಗಡಿಗಳು ಸರಕಾರಕ್ಕೆ ಸಂಬಂಧಿಸಿದವುಗಳು, ಸಣ್ಣ ಸಣ್ಣವುಗಳು ಮಾತ್ರ ಬೇರೆ ಬೇರೆ ಜನರಿಂದ ಸ್ಥಾಪಿಸಲ್ಪಟ್ಟ ಅಂಗಡಿಗಳು. ಇನ್ನು ಹಲವು ಸಾಮಾನುಗಳನ್ನು ತೆರೆದ ಪೆಟ್ಟಿಗೆಯೊಂದರಲ್ಲಿ ತುಂಬಿಸಿ ಮಾರ್ಗದಿಂದ ಮಾರ್ಗಕ್ಕೆ ಅಲೆದಾಡಿ, ಮಾರಿ ಜೀವಿಸುವವರೂ ಹಲವರಿರುವರು. ಒಂದು ಪ್ರಾಮುಖ್ಯವಾದ ವಿಷಯವೆಂದರೆ ಅಲ್ಲಿ ಮಾರಾಟಕ್ಕಿರುವ ಮಾಲುಗಳು ಬೇರೆ ಕಡೆಗಳಲ್ಲಿರುವಂತೆ ಠಕಾರಿಯಾಗಿರದೆ ಅತ್ಯುತ್ತಮವಾದವುಗಳೇ.

ಉಡಿಗೆ ತೊಡಿಗೆಯ ವಿಷಯ ಮೊಸ್ಕೊ ಪಟ್ಟಣದ ನಿವಾಸಿಗಳು ಅಷ್ಟು ಜಾಗರೂಕರಾಗಿರುವಂತೆ ಕಾಣುವುದಿಲ್ಲ. ಉತ್ತಮ ಉಡಿಗೆಯನ್ನು ನವನಾಗರಿಕತೆಗೆ ಅನುಕೂಲವಾಗಿ ತೊಟ್ಟುಕೊಳ್ಳುವುದರಲ್ಲಿ ಸಮಯವು ನಿರರ್ಥಕವಾಗಿ ಹಾಳಾಗುವದೆಂದು ಅವರು ತಿಳಿಯುವರು. ಹಣವೂ ಇದರಿಂದ ದುರುಪಯೋಗಗೊಳಿಸಲ್ಪಡುವದಂತೆ.

ಸರಕಾರಿ ನಾಟಕ ಮಂದಿರವು ಬಹು ಅಂದವಾದ ಕಟ್ಟಡವಾಗಿದ್ದು ಮೊದಲು ಅರಸನಾಗಿದ್ದ 'ಕ್ಸಾರಿನ' ಸಮಯದಲ್ಲಿ ನಿರ್ಮಿಸಲ್ಪಟ್ಟಿತು. ಈಗಲೂ ಈ ಮಂದಿರದಲ್ಲಿ ವಿನೋದಗಳು, ನಾಟಕಗಳು, ಸಭೆಗಳು ಮತ್ತು ಭಾಷಣಗಳು ನಡೆಯುತ್ತಿರುವ ನರ್ತನಕ್ಕೆ ಅಲ್ಲಿ ಹೆಚ್ಚಿನ ಪ್ರಾಮುಖ್ಯತೆಯು ಕೊಡಲ್ಪಡುವುದು. ಅಲ್ಲಿನ ಜನರಂತೆ ಕುಣಿಯಲು ಇತರ ಯಾವ ಜನರಿಗೂ ಅಸಾಧ್ಯವೆನ್ನಬಹುದು.

ಇನ್ನು ಹಲವು ಸಿನೆಮಾ ಮಂದಿರಗಳಿವೆ. ಅಲ್ಲಿ ಪ್ರದರ್ಶಿಸಲ್ಪಡುವ ಫಿಲ್ಮುಗಳು ಬಹು ರಮಣೀಯವಾಗಿದ್ದು ಚಿತ್ತಾಕರ್ಷಕವಾಗಿರುವವು. ಅಂತಹ ಪ್ರದರ್ಶನಗಳು ನಮ್ಮ ದೇಶದಲ್ಲಿ ಇದು ವರೆಗೂ ನಡೆದುದು ಇಲ್ಲ. ಇನ್ನು ನಡೆಯುವದೂ ಸುಲಭವಲ್ಲ. ಅಲ್ಲಿ ಪ್ರದರ್ಶಿಸಲ್ಪಡುವ ಫಿಲ್ಮುಗಳು ರಾಜಕೀಯ ಚರಿತ್ರೆಗೇಗೆ ಸಂಬಂಧಿಸಿರುವವಾದರೂ ಅವುಗಳಿಗೆ ನಿರೋಧವಿರುವುದಿಲ್ಲ.

ಮೊದಲು ಇಂಗ್ಲಿಷ ಕ್ಲಬ್ ಇದ್ದ ಕಟ್ಟೋಣದಲ್ಲಿ ಈಗ ವಸ್ತು ಸಂಗ್ರಹವಿದೆ; ಈ ಸಂಗ್ರಹದಲ್ಲಿ ನೋಡತಕ್ಕಂತಹ ಹಲವು ವಸ್ತುಗಳು ಇರುವುವಲ್ಲದೆ ಏಸ್ಯಾ ಖಂಡದಿಂದಲೂ ತುರ್ಕಿಸ್ಥಾನದಿಂದಲೂ ತರಲ್ಪಟ್ಟ ಹಲವು ಸಾಮಗ್ರಿಗಳು ಇವೆ.

ರಿವೊಲ್ಯೂಶನಿನಿಂದ ಅಲ್ಲಿ ಅನೇಕ ಪರಿವರ್ತನೆಗಳುಂಟಾಗಿವೆ. ಆದರೆ ಕುದುರೆಯಿಂದ ಎಳೆಯಲ್ಪಡುವ ನಾಲ್ಕು ಚಕ್ರದ ಗಾಡಿಯೊಂದು ಶಾಶ್ವತವಾಗಿ ಉಳಿದಿರುತ್ತದೆ. ಈ ಗಾಡಿಯಲ್ಲಿ ಒಬ್ಬನೇ ಒಬ್ಬನು ಕುಳಿತುಕೊಳ್ಳುವಷ್ಟು ಸ್ಥಳವಿರುವುದು. ಸಪೂರವಾದ ಮನುಷ್ಯರಾದರೆ ಇಬ್ಬರು ಕುಳಿತುಕೊಳ್ಳಬಹುದು. ಹೆಚ್ಚಾಗಿ ಓಡಿಸಿದರೆ ಗಂಟೆಗೆ ಆರೇ ಮೈಲು ಓಡುವುದು.

ಭಿಕ್ಷೆ ಬೇಡುವದೂ ಕಡಿಮೆಯಾಗಿಲ್ಲ. ಭಿಕ್ಷುಕರು ಬಹಳ. ಚಿಕ್ಕ ಹೆಂಗಸರು ಮಕ್ಕಳನ್ನು ಕಂಕುಳಲ್ಲಿ ಹಿಡಿದು ಬೇಡಲು ಹೋಗುವರು. ಕೆಲವು ವರ್ಷಗಳ ಹಿಂದೆ ಈ ಅಭ್ಯಾಸವು ಇನ್ನೂ ಬಲವಾಗಿತ್ತಂತೆ. ಪೂರ್ವದಿಂದಲೂ ನಡೆದು ಬಂದ ಈ ಪದ್ಧತಿಯನ್ನು ತ್ಯಜಿಸಲು ಭಿಕ್ಷುಕರು ಒಪ್ಪುವದಿಲ್ಲವಂತೆ.

ಒಟ್ಟಾರೆ ಅಲ್ಲಿಯ ಜನರನ್ನು ಸಂದರ್ಶಿಸಿದಾಗ ಅವರನ್ನು ಬಿಟ್ಟು ಬರುವ ಮನಸ್ಸಾಗದೆ ಅಲ್ಲಿಯೇ ಇರಬೇಕೆಂದು ಪ್ರೇಕ್ಷಕರಿಗೆ ಮನಸ್ಸಾಗುವದು.

ಸಂಗ್ರಹ.

ಹುಚ್ಚರಿಗೆ ಸಂಗೀತದಿಂದುಂಟಾಗಬಹುದಾದ ಗುಣಗಳು.

ಕವಿತೆಗಳಲ್ಲಿಯೂ, ಪೂರ್ವಿಕರ ಇತಿಹಾಸಗಳಲ್ಲಿಯೂ ವರ್ಣಿಸಿರುವ ಸಂಗೀತದ ಉಪಶಮನ ಶಕ್ತಿಯನ್ನು ಕಂಡು ಹುಚ್ಚರನ್ನು ಚಿಕಿತ್ಸೆಮಾಡುವುದಕ್ಕಾಗಿ "ಇಲಿನಾಯ್ಸ್" ಎಂಬ ಪಟ್ಟಣದಲ್ಲಿ ಈಗ ಅದನ್ನೇ ಚಿಕಿತ್ಸೆಗಾಗಿ ಉಪಯೋಗಿಸುತ್ತಿರುವರು. ಈಗಲೇ ಕಳೆದ ವಾರದಲ್ಲಿ ಡನ್ನಿಂಗ್ ಹುಚ್ಚಾಸ್ಪತ್ರೆ ೨೦೦೦ ಸಾವಿರ ಹುಚ್ಚರಿಗೆ ವ್ಯಾಧಿಶಾಂತಿಗಾಗಿ ಸಂಗೀತವಾದ್ಯಗಳ ಮೇಳಗಳನ್ನಿಟ್ಟರು. ಹೀಗೆ ಮಾಡುವುದರಲ್ಲಿ ಇದು ಆರನೆಯ ಸಾರಿ.

ಈ ವಿಷಯವಾಗಿ ಏಲಿಯನ್ಸ್ ಎ. ಎಸ್. ಹೆಪ್‌ಫೀಲ್ಡ ರವರು ಹೀಗೆಂದು ಹೇಳಿರುವರು. "ಉತ್ತಮವಾದ ಗಾನವು ಮತಿಭ್ರಮೆಯುಳ್ಳವರ ಮನೋವಿಕಾರಗಳನ್ನು ಶಾಂತಪಡಿಸುವುದು ಮಾತ್ರವಲ್ಲದೆ, ಅವರ ಮನಸ್ಸಿನಲ್ಲಿ ಒಂದು ವಿಧವಾದ ಉಲ್ಲಾಸವನ್ನುಂಟು ಮಾಡುವುದೆಂದೂ ಕಂಡುಬಂದಿದೆ. ಅದಲ್ಲದೆ ಸಂಗೀತವು ಅವರಿಗೆ ಸ್ಮರಣೆಗೆ ಬಾರದ ಅವರ ಪೂರ್ವ ವೃತ್ತಾಂತವನ್ನು ಜ್ಞಾಪಿಸುತ್ತದೆ.

ಆದುದರಿಂದ ಮಾನಸಿಕ ವ್ಯಥೆಗೂ, ಬುದ್ಧಿ ಭ್ರಮೆಗೂ ಸಂಗೀತದಿಂದ ಚಿಕಿತ್ಸೆಮಾಡಬಹುದೆಂಬ ನಮ್ಮ ಅಭಿಪ್ರಾಯವು ಅಕಾರಣವಾದುದಲ್ಲ. ಮತ್ತಾವ ವಿದ್ಯೆಯೂ ನಮ್ಮ ಮನೋವಿಕಾರಗಳ ಮೇಲೆ ಅಷ್ಟು ಅಧಿಕ ಫಲವನ್ನುಂಟುಮಾಡಲಾರದು.

ಮನಸ್ಸಿನಲ್ಲಿ ಭೀತಿ, ಚಿಂತೆ, ವ್ಯಥೆ ಚಿತ್ತಭ್ರಮೆ ಮುಂತಾದ ಕೆಟ್ಟ ವಿಕಾರಗಳನ್ನೆಲ್ಲಾ ಮರೆಸಿ, ಮನುಷ್ಯನನ್ನು ಉತ್ಸಾಹವಂತನನ್ನಾಗಿ ಮಾಡುವುದಕ್ಕೆ ಸಂಗೀತವು ಉತ್ತಮ ಸಾಧನವೆಂಬುದಕ್ಕೆ ಸರ್ಕಸ್ಸಿನಲ್ಲಿ ನುಡಿಸುವ ಬ್ಯಾಂಡುವಾದ್ಯಗಳೂ, ಯುದ್ಧಭಟರ ಮುಂದೆ ನುಡಿಸುವ ಮಿಲಿಟರೀ ವಾದ್ಯಗಳೂ, ಇನ್ನೂ ಮಹಾ ಸಭೆಗಳಲ್ಲಿ ಉದ್ಘೋಷಿಸಲ್ಪಡುವ ದೇಶೀಯ, ಗಾನ, ರಾಜಾಶೀರ್ವಾದ ಮುಂತಾದ ಒಳ್ಳೇ ನಿದರ್ಶನಗಳಾಗಿವೆ ಎಂಬುದು ಅವರವರಿಗೆ ಅನುಭವವೇದ್ಯವಾಗಿದೆ".

ಆರೋಗ್ಯಚಂದ್ರಿಕೆ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಮಾನ್ಯ ಸಂಪಾದಕರೇ,

ಈ ಕೆಳಗೆ ಬರೆದ ಕೆಲವು ಸಂಗತಿಗಳನ್ನು ಮುನಿಸಿಪಲ್ ಹೆಲ್ತ್ ಆಫೀಸರರ ಗಮನಕ್ಕೆ ತರುವಗೋಸ್ಕರ ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಸ್ವಲ್ಪ ಎಡೆಕೊಡುವಿರಾಗಿ ನಂಬಿ ಈ ಲೇಖನವನ್ನು ಬರೆಯುವೆನು.

ನಾನು ಮಂಗಳೂರಲ್ಲಿಯ ಪುತ್ತು ಪ್ರಭುಗಳ ಓಣಿಯಲ್ಲಿ ವಾಸವಾಗಿರುವವನು. ಮುನಿಸಿಪಾಲಿಟಿಯಲ್ಲಿ ಎಲ್ಲರೂ ಕೊಡುವ ರೀತಿಯಲ್ಲಿಯೇ ತೆರಿಗೆಯನ್ನು ತೆರುತ್ತೇನೆ. ಆದರೆ ರಾಜರಸ್ತೆಗಳಲ್ಲಿ ಏರ್ಪಡಿಸಿದ ಆರೋಗ್ಯ ಸೂತ್ರಗಳು ಇಲ್ಲಿಯೂ ಯಾಕೆ ಏರ್ಪಡಿಸಬಾರದಾಗಿ ನನ್ನ ಕೇಳಿಕೆ. ಈ ರಸ್ತೆಯು ಅನಾರೋಗ್ಯಕ್ಕೆ ಕೇಂದ್ರ ಸ್ಥಳವಾಗಿರುತ್ತದೆ. ಮಹಾ ರೋಗ ಮುಂತಾದ ಹಲವು ರೋಗಗಳ ಎಲ್ಲ ಕಡೆಗಳಲ್ಲಿ ಪ್ರಸಾರವಾಗುವ ಮೊದಲು ಇಲ್ಲಿಂದ ಹೊರಡುವುವು. ಇಲ್ಲಿಯ ಮಾರ್ಗಗಳಲ್ಲಿ ಇರುವ ಕೊಳಕು ಇಲ್ಲಿ ಬರೆಯಲಾರದಷ್ಟು ಹೇಯವಾಗಿರುವುವು. ದುರ್ಗಂಧವು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಅಲ್ಲದೆ ಅದನ್ನು ಬರೆಯಲು ಶಬ್ದಗಳೇ ದೊರೆಯಲಾರವು. ಈ ರಸ್ತೆಯು ಮಹಾ ರೋಗಗಳಿಗೆ ತವರುಮನೆಯಾಗಿರುತ್ತದೆ. ಡೊಂಗರಕೇರಿ ರಸ್ತೆಗೆ ಇದು ಹತ್ತಿರದ ದಾರಿಯಾದರೂ ಜನರು ಈ ಮಾರ್ಗವಾಗಿ ಹೋಗಲು ಅಂಜುತ್ತಾರೆ. ಈ ರಸ್ತೆಯಲ್ಲಿಯೇ ವಾಸವಾಗಿರುವವರೇ ಈ ವಠಾರವನ್ನು ಇಂತಹ ದುಸ್ಥಿತಿಗೆ ತಂದಿರುತ್ತಾರೆಂಬುದು ಸರಿ, ಆದರೆ ಇಂತಹ ಅನಾರೋಗ್ಯಕ್ಕೆ ಎಡೆಕೊಡದ ಹಾಗೆ ಮಾಡುವ ಕರ್ತವ್ಯವು ಮುನಿಸಿಪಲ್ ಹೆಲ್ತ್ ಆಫೀಸರರದ್ದಾಗಿರುತ್ತದೆ. ಮಾರ್ಗಗಳಲ್ಲಿ ಹಾಗೆ ಕೊಳಕು ಪದಾರ್ಥಗಳನ್ನು ಬಿಸಾಡುವವರಿಗೆ ಜುರುಮಾನೆಯನ್ನು ವಿಧಿಸಿ ಇನ್ನು ಮುಂದಕ್ಕೆ ಹಾಗೆ ಮಾಡದ ಹಾಗೆ ನೋಡಿಕೊಳ್ಳುವುದು ಉತ್ತಮ. ಹೆಲ್ತ್ ಆಫೀಸರರು ವಾರಕ್ಕೆ ಒಂದಾವರ್ತಿಯಾದರೂ ತಮ್ಮ ದಿವ್ಯ ದೃಷ್ಟಿಯನ್ನು ಇತ್ತ ಕಡೆಗೆ ತಿರುಗಿಸುತ್ತಿದ್ದರೆ ನಾವು ಇಲ್ಲಿ ವಾಸವಾಗಿರುವವರು ತೆರಿಗೆ ಕೊಟ್ಟದ್ದಕ್ಕೆ ಸಾರ್ಥಕವಾಗುತಿತ್ತು. ಮತ್ತು ಈ ರಸ್ತೆಯು ಪಟ್ಟಣದ ಮಧ್ಯ ಸ್ಥಳವಾಗಿದ್ದು ಜನಸಂದಣಿಯು ಹೆಚ್ಚಾಗಿರುತ್ತದೆ. ಮಹಾರೋಗಗಳು ಪ್ರಾರಂಭವಾದರೆ ಹೇಳಬೇಕೆ. ಇಲಿಗಳ ಹಾಗೆ ಸಾಯಬೇಕಾಗುವುದು. ಇದು ಮಧ್ಯಸ್ಥಳವಾದ ಕಾರಣ ಇದನ್ನು ಆದಷ್ಟು ಬೇಗನೇ ಸ್ವಚ್ಛವಾಗಿರಿಸುವುದು ಉತ್ತಮ.

ಇದು ಅಲ್ಲದೆ ಬೊಂಬಾಯಿ ರಿಸ್ಟೋರೆಂಟಿನ ಎದುರುಗಡೆಯಲ್ಲಿರುವ ಮುನಿಸಿಪಲ್ ಬಾವಿಯ ಹತ್ತಿರ ಹಾಕುವ ಹೊಲಸುಗಳನ್ನು ನೋಡಿದರೆ, ಅತೀ ಅಸಹ್ಯವಾಗುತ್ತದೆ. ಈ ಅಸಹ್ಯಗಳನ್ನು ಆದಷ್ಟು ಬೇಗನೆ ಒಯ್ಯುವಗೋಸುಗ ಮೋಟರ ವಾಹನಗಳೇ ಮುನಿಸಿಪಾಲಿಟಿಯವರಿಂದ ಇಡೋಣಾಗಿವೆ. ಆದ ಪ್ರಯುಕ್ತ ಈ ಹೊಲಸುಗಳ ರಾಶಿಯನ್ನು ಅನೇಕ ದಿವಸಗಳ ವರೆಗೆ ದಾಸ್ತಾನು ಇಡುವ ಕಾರಣವು ತಿಳಿಯಬರುವುದಿಲ್ಲ. ಇಂಥಾ ಹೊಲಸುಗಳ ರಾಶಿಯನ್ನು ಪಟ್ಟಣದ ಮಧ್ಯದಲ್ಲಿ ಇಡುವುದೆಂದರೆ ಅದು ಒಂದು ರೋಗಗಳಿಗೆ ಎಡೆಕೊಟ್ಟಂತಾಗುವುದು. ಆದ ಪ್ರಯುಕ್ತ ಇನ್ನಾದರೂ ಈ ಹೊಲಸುಗಳ ರಾಶಿಯನ್ನು ದಿನಂಪ್ರತಿ ಒಯ್ಯುವಂತೆ ಏರ್ಪಡಿಸಿದರೆ ಉತ್ತಮವಿತ್ತು.

ಈ ರಸ್ತೆಗಳಲ್ಲದೆ ಇನ್ನು ಹಲವು ರಸ್ತೆಗಳು ಇರುವುವು. ಮುಖ್ಯವಾಗಿ ವೆಂಕಟರಮಣ ದೇವಸ್ಥಾನದ ಎಡಪಾರ್ಶ್ವದಿಂದ ಮೀನಿನ ಮಾರ್ಕೆಟಿಗೆ ಹೋಗುವ ರಸ್ತೆಯೂ, ಹೂವಿನ ಮಾರ್ಕೆಟಿನಿಂದ ಹಾದುಹೋಗುವ ಬ್ರಾಹ್ಮಣರ ಕೇರಿ ಮುಂತಾದ ರಸ್ತೆಗಳೂ ಸಹ ಇದೇ ರೀತಿಯಲ್ಲಿವೆ. ಆದಕಾರಣ ಹೆಲ್ತ್ಆಫೀಸರರು ವಾರಕ್ಕೊಂದು ವರ್ತಿಯಾದರೂ ಈ ರಸ್ತೆಗಳನ್ನು ಸಂದರ್ಶಿಸಿ ಆದಷ್ಟು ತ್ವರ್ಯದಲ್ಲಿಯೇ ಶುಚಿಯಾಗಿ ಇಡಿಸುವಂತೆ ಏರ್ಪಡಿಸಿದರೆ ರೋಗಗಳು ಆದಷ್ಟು ದೂರಹೋಗುವುದರಲ್ಲಿ ಸಂದೇಹವಿಲ್ಲ.

'ಹಿರಿ-ಅಣ್ಣ'

ಅಯ್ಯಾ ಸಂಪಾದಕರೇ

ಈ ವರ್ಷ ಮಳೆಗಾಲವು ಪ್ರಾರಂಭವಾಗುವ ಕಾಲಕ್ಕೆ ಮಳೆಯು ಇಲ್ಲದಿದ್ದರೂ ಈ ಕಾಲದಲ್ಲಿ ನಡೆಯ ಸಣ್ಣಪುಟ್ಟ ಕಳವುಗಳು ಪ್ರಾರಂಭವಾಗಿರುವುವು. ರಾತ್ರಿಕಾಲದಲ್ಲಿ ಪ್ರತಿ ರಸ್ತೆಗಳಲ್ಲಿಯೂ ಅಲ್ಲದೆ ಪೆಂಟಲೆಂಡ್ ಪೇಟೆಯಲ್ಲಿಯೂ ಬಂದೋಬಸ್ತು ಮಾಡುವ ಪೋಲೀಸು ಜವಾನರು ಇರುತ್ತಿರುವರು. ಆದರೆ ಈ ಸಣ್ಣ ಪುಟ್ಟ ಕಳವುಗಳು ಪೋಲೀಸರೂ ಇದ್ದರೂ ಅತೀ ಧೈರ್ಯದಿಂದ ನಡೆಯುತ್ತಿವೆ. ಕೆಲವು ದಿವಸಗಳ ಹಿಂದೆ ಪೆಂಟ್‌ಲೆಂಡ್ ಪೇಟೆಯಲ್ಲಿರುವ ಒಂದೆರಡು ಮನೆಗಳಲ್ಲಿ ತೆಂಗಿನಮರದ ಸೀಯಾಳಗಳೂ, ಹಲಸಿನ ಮರದ ಹಲಸಿನ ಹಣ್ಣುಗಳೂ ಕದ್ದು ತಿಂದಿರುವರು. ಈ ವಸ್ತುಗಳು ಕದ್ದು ಹೋದ ಮನೆಯು ಮಾರ್ಗಕ್ಕೆ ಅತೀ ಸಮೀಪವಾಗಿಯೂ, ಪೋಲೀಸರು ಬೀಟು ಮಾಡುವ ರಸ್ತೆಯಾಗಿರುತ್ತಾ ಅಷ್ಟು ಧೈರ್ಯದಿಂದ ಕಳವುಗಳು ಆಗುತ್ತವೆಂದ ಮೇಲೆ ಪೋಲೀಸರ ಸಹಾಯವು ಇದಕ್ಕೆ ಉಂಟೋ ಎಂದು ಭಾವಿಸಬೇಕಾಗುತ್ತದೆ. ಅದು ಹಾಗೆ ಅಲ್ಲವಾದರೆ ಬೀಟಿನ ಪೋಲೀಸರು ಬಂದೋಬಸ್ತಿಗೆಂತ ಬಂದು ಎಲ್ಲಿಯಾದರೂ ನಿದ್ರೆಮಾಡುತ್ತಿರುವರೋ ಎಂತ ತಿಳಿಯುವುದಿಲ್ಲ.

ಕಳ್ಳರು ಒಬ್ಬಿಬ್ಬರು ಎಂತ ಹೇಳಲಿಕ್ಕೆ ಬರುವುದಿಲ್ಲ. ಮಾರ್ಗದ ಬದಿಯಲ್ಲಿ ಒಂದು ಮನೆಯ ಕಂಪೌಂಡಿನ ವಳಗೆ ಇರುವ ತೆಂಗಿನ ಮರದಿಂದ ಸುಮಾರು ೩೦ ಸಿಯಾಳಗಳನ್ನು ತೆಗೆದು ಅಲ್ಲಿಯೇ ಕುಡಿದು ಬಿಸಾಡಿ ಹೋಗಿರುತ್ತಾರೆ. ಇನ್ನೊಂದು ಮನೆಯಿಂದಲೂ ಹಾಗೇ ಸಿಯಾಳಗಳೂ, ಮತ್ತೊಂದು ಮನೆಯಿಂದ ೫-೬ ಹಲಸಿನ ಹಣ್ಣುಗಳು ಕಾಣೆಯಾದ್ದನ್ನು ನೋಡಿದರೆ ಈ ಕಳ್ಳರ ಗುಂಪಿನಲ್ಲಿ ಸುಮಾರು ಆರಿಂದ ೧೦ಕ್ಕೆ ಮಿಕ್ಕಿದ ಕಳ್ಳರು ಇರಬಹುದೆಂತ ನೆನಸಬಹುದು. ಮಳೆ ಇಲ್ಲದ ಸಮಯದಲ್ಲಿ ಹೀಗೆ ಕಳವುಗಳಾದರೆ ಇನ್ನು ಮಳೆಗಾಲ ಪ್ರಾರಂಭವಾದುದರಿಂದ ಕಳವುಗಳು ಇನ್ನೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಆದ ಪ್ರಯುಕ್ತ ಈ ಕಳವುಗಳು ಆದ ಮನೆಗಳಲ್ಲಿ ವಿಚಾರಿಸಿ ಈ ಕಳ್ಳರನ್ನು ಹಿಡಿಯುವ ಕೆಲಸ ಇಷ್ಟರಲ್ಲಿಯೇ ಪ್ರಾರಂಭಿಸದಿದ್ದರೆ ಇನ್ನು ಮನೆಯ ಜಗಲಿಯ ಮೇಲೆ ಒಣಗಲಿಕ್ಕೆ ಹಾಕಿದ ವಸ್ತ್ರಗಳ ಕಳವುಗಳು ಸಹಾ ಆಗಲಿಕ್ಕೆ ಇವೆ. ಆದುದರಿಂದ ಈ ಸಂಗತಿಗಳನ್ನು ಪೋಲೀಸ್ ಮೇಲಾಧಿಕಾರಿಗಳು ಕೂಡಲೇ ಗಮನಕ್ಕೆ ತಂದು ಈ ವಿಷಯದಲ್ಲಿ ಕೂಡಲೇ ತನಿಖೆ ನಡಿಸಿ ಈ ಕಳವುಗಳು ಆಗದ ಹಾಗೆ ಶೀಘ್ರದಲ್ಲಿ ಬಂದೋಬಸ್ತು ಇಡುವಂತೆ ಏರ್ಪಡಿಸಬೇಕಾಗಿ ಪ್ರಾರ್ಥಿಸುವ

ಪೆಂಟ್‌ಲೆಂಡ್‌ಪೇಟೆ ನಿವಾಸಿ.

ಕೊಂಕಣದೇಶವು ಬಹಳ ಪುರಾತನ ಕಾಲದಿಂದ ಇತ್ತು ಎಂಬುದಕ್ಕೆ ಆಧಾರಗಳು.

ಭರತ ಖಂಡವನ್ನು ಬಹಳ ಪುರಾತನ ಕಾಲದಲ್ಲಿ ಅಂಗ, ವಂಗ, ಕಳಿಂಗ, ಕಾಂಭೋಜ, ಗೌಳ, ಮಗಧ, ಬರ್ಬರ, ಸಿಂಧು, ನೇಪಾಳ, ಆಂಧ್ರ, ವಿದೇಹ, ಮಲಿಯಾಳ ಮತ್ಸ, ತಿಗರ್ತ ವಿದರ್ಭ, ಕರ್ಣಾಟಕ, ಮಾಳವ, ಚೋಳ ಪಾಂಡ್ಯ ಕೊಡಗ, ಕೊಂಕಣ, ಗೌಳವ, ಮಹಾರಾಷ್ಟ್ರ, ಕರಾಡ, ಕೊಂಗ ಮುಂತಾದ ಹಲವು ದೇಶಗಳಾಗಿ ವಿಭಾಗಿಸಿದ್ದರು. ಈ ದೇಶಗಳನ್ನು ಆಯಾ ದೇಶದ ಅರಸುಗಳು ಆಳುತ್ತಲಿದ್ದರು. ಇವುಗಳಲ್ಲಿ ಕೊಂಕಣ ದೇಶವು ಬಹಳ ಪುರಾತನ ಕಾಲದಿಂದಲೂ ಇತ್ತು ಎಂಬುದಕ್ಕೆ ಕೆಲವು ಆಧಾರಗಳನ್ನು ಇಲ್ಲಿ ಕೊಟ್ಟಿದೆ. ಗೌಳದೇಶವು ಇತ್ತೆಂಬುದಕ್ಕೆ ಸ್ವದೇಶಾಭಿಮಾನಿಯಲ್ಲಿ ಸ್ವಲ್ಪ ಸಮಯದ ಹಿಂದೆ ಯಾರೋ ಒಬ್ಬ ಉಪಾಧ್ಯಾಯರು ಚರಿತ್ರಾಧಾರಗಳನ್ನು ಕೊಟ್ಟು ಬರೆದಿದ್ದರು. ಗೌಳದೇಶದ ವಿಷಯ ಹಲವು ಲೇಖನಗಳೂ ಪತ್ರವ್ಯವಹಾರಗಳೂ ರಾಷ್ಟ್ರಬಂಧುವಿನಲ್ಲಿಯೂ ಸ್ವದೇಶಾಭಿಮಾನಿಯಲ್ಲಿಯೂ ನಡೆದವು. ರಾಷ್ಟ್ರಬಂಧು ಈ ತರದ ಚರ್ಚೆ ಸಾಕೆಂದು ನಿಲ್ಲಿಸಿತು. ಈಗ ಕಂಠೀರವದಲ್ಲಿ ಈ ತರದ ಲೇಖನಗಳು ಬರಲು ಆರಂಭವಾಗಿವೆ. ಈ ಲೇಖನಗಳಲ್ಲಿ ಕೊಂಕಣ ದೇಶದ ವಿಷಯ ಕೆಲವು ಮಾತುಗಳು ಬರಲಾರಂಭಿಸಿವೆ.

ಈ ತುಳುರಾಜ್ಯದಲ್ಲಿ ಕೊಂಕಣಿಗರು, ಕಾವೇರಿ ಕೊಂಕಣಿಗರು, ಕಾಡು ಕೊಂಕಣಿಗರು (ನಿವೇಸ್‌ಕಾರರು ಅಥವಾ ಪೆಡ್ನೆಕಾರರೂ) ಗಾಳದ ಕೊಂಕಣಿಗರು, (ವೈಶ್ಯ ಕೊಂಕಣಿಗರು) ಬಾಳೋಕಾರರು (ರಾಜಾಪುರಿ) ಮುಂತಾದ ಹಲವು ಜಾತಿಯ ಕೊಂಕಣಿಗರು ಇರುವುದರಿಂದ ಕೊಂಕಣ ದೇಶವು ಪುರಾತನ ಕಾಲದಿಂದ ಇತ್ತು ಎಂಬುದನ್ನು ತುಳುತನಯರಿಗೆ ತೋರಿಸುವ ಸಂದರ್ಭವು ಒದಗಿದೆ. ಅವರವರ ದೇಶವಾತ್ಸಲ್ಯವು ಅವರವರಿಗೆ ಇದ್ದೇ ಇರುವುದು. ಅವರು ತಮ್ಮ ಸ್ವದೇಶದಿಂದ ಎಷ್ಟು ದೂರದಲ್ಲಿದ್ದರೂ ತಮ್ಮ ಸ್ವದೇಶ ಪ್ರೀತಿಯು ಮಾಯವಾಗಲಾರದು

ಕೊಂಕಣ ಎಂಬ ಶಬ್ದವನ್ನು ಮುಂಬಾಯಿ ಸಂಸ್ಥಾನದ ಕರಾವಳಿಯ ಒಂದು ಭಾಗಕ್ಕೆ ಉಪಯೋಗಿಸಿದರೂ ನಿಜವಾದ ಕೊಂಕಣ ಎಂಬ ಹೆಸರನ್ನು ಸಹ್ಯಾದ್ರಿಯ ಪಶ್ಚಿಮಕ್ಕೂ, ಅರಬಿ ಸಮುದ್ರಕ್ಕೂ ನಡುವೆ ಇರುವ ಇಂಡಿಯದ ಪಶ್ಚಿಮ ಕರಾವಳಿಗೆನೇ ಉಪಯೋಗಿಸುತ್ತಾರೆ. ಪಶ್ಚಿಮ ಗಟ್ಟಗಳು ಗುಜರಾಥ ದೇಶದ ದಕ್ಷಿಣದಲ್ಲಿರುವ ತಪತಿ ನದಿಯ ಬಯಲು ಪ್ರದೇಶದಿಂದ ಆರಂಭವಾಗಿ ಕನ್ಯಾಕುಮಾರಿ ಭೂಶಿರದ ವರೆಗೆ ಚಾಚಿಕೊಂಡಿವೆ. ಪುರಾತನ ಕಾಲದಲ್ಲಿ ಕೊಂಕಣವನ್ನು ೭ ವಿಭಾಗಗಳಾಗಿ ವಿಭಾಗಿಸಿದ್ದರು. ಇವುಗಳನ್ನು ಸಪ್ತಕೊಂಕಣವೆಂದು ಕರೆಯುತ್ತಿದ್ದರು. (ಇಂಡಿಯನ್ ಎಂಟಿಕ್ವೆರಿಯ ೮ನೇ ಸಂಚಿಕೆಯ ೧೪ನೇ ಪುಟ) ೧, ಕೇರಳ; ೨, ಗೌಳವ; ೩ ಗೋವರಾಷ್ಟ್ರ (ಗೋವಾ); ೪, ಕೊಂಕಣ; (ರತ್ನಾಗಿರಿ ಮತ್ತು ಥಾನಾ ಜಿಲ್ಲೆಗಳು) ೫, ಕರಾಡ; ೬, ವರಾಡ; ೭, ಬರ್ಬರ, ಎಂಬ ೭ ವಿಭಾಗಗಳಿದ್ದವು. ಡೊಕ್ಟರ್ ಹಲ್ಟಜ್‌ರು ಈ ರೀತಿಯಲ್ಲಿ ಹೇಳುತ್ತಾರೆ— ಕರಾಡಂಚ ವಿರಾಡಂಚ ಮರಾಟಂ ಕೊಂಕಣಂ ತಥಾಹವ್ಯಗಂ ಗೌಳವಂಚ ಏವ ಕೇರಳಂಚ ಇತಿ ಸಪ್ತಕಂ ॥ ಪ್ರೊಫೆಸರ್ ವಿಲ್ಸನರ ಪಟ್ಟಿಯ ಪ್ರಕಾರವೂ ಮೇಲಿನ ಶ್ಲೋಕದ ಪ್ರಕಾರವೂ ಕೇರಳ ಅಥವಾ ಮಲಿಯಾಳವೂ ಗೌಳವ ಅಥವಾ ದಕ್ಷಿಣ ಕನ್ನಡ ಜಿಲ್ಲೆಯೂ ಕೊಂಕಣದ ಏಳು ವಿಭಾಗಗಳಿಗೆ ಸೇರುತ್ತವೆ. ಈ ಶ್ಲೋಕದಲ್ಲಿ ಹವ್ಯಗ ಎಂಬ ಭಾಗವೂ ಕಂಡುಬರುತ್ತದೆ. ಹವ್ಯಗ ಅಂದರೆ ಈಗಿನ ಉತ್ತರ ಕನ್ನಡಾ ಜಿಲ್ಲೆಯಾಗಿದೆ. ಈ ದೇಶಗಳನ್ನು ಪರಶುರಾಮನು ಸಮುದ್ರರಾಜನಿಂದ ಪಡೆದನೆಂದು ಪುರಾಣಗಳಿಂದ ಕಂಡುಬರುತ್ತದೆ. ಹವ್ಯಗದ ಉತ್ತರದಲ್ಲಿ ಕೊಂಕಣ ೯೦೦ ರಾಜ್ಯವಿತ್ತು. ಇದು ಈಗಿನ ಗೋವಾ; ಇದಕ್ಕೆ ಅಹೊಳೆಯ ಶಾಸನದಲ್ಲಿ ರೇವತಿ ದ್ವೀಪವೆಂಬ ಹೆಸರಿದೆ. ಈ ಶಾಸನವು ಕ್ರಿ. ಶ. ೬೩೪-೩೫ರದ್ದಾಗಿದೆ. ಗೋವೆಯ ಉತ್ತರದಲ್ಲಿ ಇರಿದಿಗೆ ದೇಶವಿದೆ. ಈ ದೇಶಕ್ಕೆ ಮಹಾಸಪ್ತಕವೆಂಬ ಹೆಸರಿದೆ; (ಇಂಡಿಯನ್ ಎಂಟಿಕ್ವೆರಿ ೯ನೇ ಸಂಚಿಕೆ, ಪುಟಗಳು ೧೪೫ ಮತ್ತು ೧೩೬) ಇದರಲ್ಲಿ ಸಾವಂತವಾಡಿ ರಾಜ್ಯವೂ ರತ್ನಾಗಿರಿ ಜಿಲ್ಲೆಯೂ ಸೇರಿದೆ. ಇದರ ಉತ್ತರಕ್ಕೆ ಕೊಂಕಣ ೧೪೦೦ರ ದೇಶವಿದೆ. ಈ ಪ್ರದೇಶವು ಕೊಲಾಬಾ ಜಿಲ್ಲೆಯ ಚೌರ್ ಅಥವಾ ಚಿಮುಲ್ ಎಂಬಲ್ಲಿಂದ ಆರಂಭವಾಗಿ ಇಡೀ ಕೊಲಾಬಾ ಮತ್ತು ಥಾನಾ ಜಿಲ್ಲೆಗಳನ್ನು ಆವರಿಸಿಕೊಂಡಿದೆ. ಇದಕ್ಕೆ ಕಪರ್ಧಿಕ ದ್ವೀಪ ಅಥವಾ ಕಾವಡಿ ದ್ವೀಪ ಎಂಬ ಹೆಸರೂ ಇತ್ತು. ಇದರಲ್ಲಿ ಒಂದು ಕಾಲು ಲಕ್ಷ ಊರುಗಳಿದ್ದವು. ಇದರ ಉತ್ತರದಲ್ಲಿ ಲಾಟದೇಶವಿತ್ತು. ಇದರಲ್ಲಿ ಈಗಿನ ಸುರತ ಜಿಲ್ಲೆಯ ಭಾಗಗಳೂ, ಇದರಲ್ಲಿ ಸೇರಿರುವ ಬರೋಡಾ ರಾಜ್ಯದ ಭಾಗಗಳೂ ಸೇರಿದ್ದವು. ಈ ರೀತಿಯಲ್ಲಿ ಕೊಂಕಣದ ೭ ಭಾಗಗಳನ್ನು ಗಣಿಸಬಹುದು. ಇನ್ನು ಕೊಚ್ಚಿ ಮತ್ತು ತಿರುವಾಂಕೂರನ್ನು ಕೊಂಕಣಕ್ಕೆ ಕೂಡಿಸುವದಾದರೆ ಅಥವಾ ಮಲಿಯಾಳ, ತಿರುವಾಂಕೂರು, ಕೊಚ್ಚಿ ಈ ಮೂರನ್ನು ಕೂಡಿಸಿ ಕೇರಳವೆಂದು ಗಣಿಸಿದರೆ ಕೊಂಕಣದ ೭ ವಿಭಾಗಗಳಿಗೆ ಈ ಕೆಳಗಿನ ಈಗಿನ ವಿಭಾಗಗಳು ಸೇರುತ್ತವೆ. ೧, ತಿರುವಾಂಕೂರು ಮತ್ತು ಕೊಚ್ಚಿ, ೨, ಮಲಬಾರ್, ೩ ದಕ್ಷಿಣ ಕನ್ನಡ, ೪ ಉತ್ತರ ಕನ್ನಡ, ೫ ಗೋವಾ, ೬, ರತ್ನಾಗಿರಿ, ೭ ಕೊಲಾಬಾ, ಥಾನಾ ಮತ್ತು ಸುರತ್ ಜಿಲ್ಲೆಗಳು, ಇದರಿಂದ ಕೃತಾಯುಗದ ಅಥವಾ ಪರಶುರಾಮನ ಕಾಲದಲ್ಲಿ ಕೊಂಕಣವು ಇತ್ತೆಂದು ನಿರ್ಧಾರವಾಯಿತು.

ರಾಮಾಯಣ ಕಾಲದಲ್ಲಿಯೂ ಕೊಂಕಣ ದೇಶವು ಇತ್ತೆಂದು ಕಾಣುತ್ತದೆ. ರಾಮನು ಪಂಚವಟಿಯಲ್ಲಿ ಸೀತೆಯನ್ನು ಕಳಕೊಂಡು ಕಿಷ್ಕಿಂಧಾ ರಾಜ್ಯಕ್ಕೆ ಬಂದು ತನಗೆ ಬಂದ ಕಷ್ಟವನ್ನು ಆ ದೇಶದ ರಾಜನಾದ ಸುಗ್ರೀವನಿಗೆ ತಿಳಿಸಲಾಗಿ ಅವನು ಸೀತೆಯನ್ನು ಹುಡುಕಲಿಕ್ಕೆ ತನ್ನ ಕಪಿ ಸೇನಾನಾಯಕರನ್ನು ಮೂರು ದಿಕ್ಕುಗಳಿಗೆ ಕಳುಹಿಸಿದರ ವಿಷಯ ರಾಮಾಯಣದ ಕಿಷ್ಕಿಂಧಾ ಕಾಂಡದ ೧೧ನೇ ಸಂಧಿಯಲ್ಲಿ ಸ್ಪಷ್ಟವಾಗಿ ಬರೆದಿದೆ.

ವಿಮಲ ಗಂಗಾಸಾಗರದ ಸಂ। ಗಮದ ಸ್ಪೈವಳೆವಿಡುವವಸುಧಾ । ರಮಣಿಯನು ಪಡಿತಳಿಸಿ ಪಂಚಮಹಾಸರಿತ್ತುಗಳ ॥ ಸಮುಚಿತೆಯ ಸೌರಾಷ್ಟ್ರ ಗುಜ್ಜರ । ವಿಮಲ ಕಾಶ್ಮೀರಾಂಧ್ರ ಗೌಳ । ಪ್ರಮುಖ ದೇಶಂಗಳನು ನೋಡುತ ತಿರುಗಿದುದು ಸೇನೆ ॥ ೨ ॥ ಉರುತಿ ಕೊಂಡರಸುಗಳ ಗರ್ವದ । ಮುರಿದು ಮಾರಾಂತವರ ಪುರಗಳ । ವರಸೆಗಳ ಜೊಯ್ಯೆತ್ತಿ ಬರಸಿತು ತಿರುಗಿ ಗೌಳವಳ ॥ ಉರಿಣ ಭಟ್ಟಾವಳಿಯ ಪುರಗಳ । ಉರಿಸಿ ಪಡುವಣ ಕಡಲಪಡುವಣ । ಕುರವಗಳ ಕೈದೊಳಸಿ ತಿರುಗಿತು ಸೇನೆ ಕೊಂಕಣಕೆ ॥ ೩ ॥ ಮಣಿಯುದವಸೀ ಪಾಲಕರ ಪಟ್ಟಣವ ಸೂರೆಯಗೊಳುತ ಬಂದರು । ವರಸಕುರ್ಕಾದಿಗಳ ಹಿಡಿದಾಳರಿಸಿ ಬಸಗೊಳುತ ॥ ಪ್ರಣಿತರನು ತಲೆಕಾಯ್ದು ಬಿಡುತ । ಟ್ಮಣಿಸಿ ಕಾವೇರಿಯ ತಟಾಕವ । ಕಣೆಯವಿಡಿಕೈತಂದು ಹೊಕ್ಕರು ಪಾಂಡ್ಯಮಂಡಲವ ॥ ೪ ॥ ಇದರಿಂದ ರಾಮಾಯಣ ಕಾಲದಲ್ಲಿ ಕೊಂಕಣವು ಇತ್ತೆಂದು ನಿಶ್ಚಯಿಸಿದ ಹಾಗಾಯಿತು.

ದ್ವಾಪರಾ ಯುಗದಲ್ಲಿ ಮಹಾಭಾರತದ ಕಾಲದಲ್ಲಿಯೂ ಕೊಂಕಣವು ಇತ್ತೆಂದು ಭಾರತದಲ್ಲಿ ಕಾಣುತ್ತದೆ. ಧರ್ಮರಾಯನು ರಾಜಸೂಯ ಯಾಗವನ್ನು ಮಾಡಲಿಕ್ಕೆ ಆರಂಭಿಸಿ ನಾಲ್ಕು ದಿಕ್ಕಿನ ಅರಸರಿಂದ ಕಪ್ಪವನ್ನು ತರುವುದಕ್ಕಾಗಿ ತನ್ನ ನಾಲ್ಕು ಮಂದಿ ತಮ್ಮಂದಿರನ್ನು ಇಂಡಿಯದ (ಭಾರತ ವರ್ಷದ) ನಾಲ್ಕು ದಿಕ್ಕುಗಳಿಗೆ ಸೈನ್ಯದೊಡನೆ ಕಳುಹಿಸಿದನು. ಇವರಲ್ಲಿ ಸಹದೇವನು ದಕ್ಷಿಣ ದಿಕ್ಕಿಗೆ ಬಂದನು. ಈ ವಿಷಯವು ಮಹಾಭಾರತದ ಸಭಾಪರ್ವದ ೫ನೇ ಸಂಧಿಯ ೧೯ನೇ ಮತ್ತು ೨೦ನೆಯ ಪದಗಳಲ್ಲಿ ಹೇಳಿಯದೆ.

ತೆತ್ತನವ ಸರ್ವಸ್ವವನು ತಾ । ನೆತ್ತಿ ಬಂದನು ಕೊಡೆ ಬಳಿಕೆನೊ । ಉತ್ತರೋತ್ತರವಾಯ್ತು ಸಹದೇವನಿಗೆ ದಿಗ್ವಿಜಯ ॥ ಮತ್ತೆ ಸಹ್ಯಾಚಲವ ಕೊಳ್ಳದ । ಗುತ್ತರಿನ ಭೂಪರ ವಿಭಾಡಿಸಿ । ಸುತ್ತ ಬಂದಾಳರಿಸಿದನು ತದ್ಗಿರಿ ನಿವಾಸಿಗಳ ॥ ೧೯ ॥ ಇಳಿದು ಕೊಂಕಣ ಗೌಳವರ ಕೇ । ರಳರ ಸದೆದು ಮಹಾರ್ಘ ರತ್ನಾ । ವಳಿಯ ಹೇಂಸಿದನು ಸುಚಿತ್ರಾಂಬರವಿಳೇಪನವಾ ॥ ಜಲದಿಯಂತರ್ದ್ವೀಪ ಪತಿಗಳ । ಕುಲವ ಶೋಧಿಸಿ ಚೋಳಪಾಂಡ್ಯರ । ದಳವ ಘಟ್ಟಿಸಿಕೊಂಡನನುಪಮ ಸಾರವಸ್ತುಗಳಾ ॥ ೨೦ ॥

ಅದಲ್ಲದೆ ಮಹಾಭಾರತ ಯುದ್ಧಕಾಲದಲ್ಲಿ ಕೊಂಕಣದರಸರೂ ಯುದ್ಧಕ್ಕೆ ಬಂದಿದ್ದರು. ಮಹಾಭಾರತ ಯುದ್ಧದ ಸಮಯ ಸೈನ್ಯದಲ್ಲಿ ಯಾವ ಯಾವ ಅರಸರು ಇದ್ದಾರೆಂದು ಕೌರವನು ಭೀಷ್ಮಾಚಾರ್ಯರೊಡನೆ ಕೇಳಿದಾಗ ಅವರು ಹೀಗೆ ಹೇಳುತ್ತಾರೆ—

ಈತಮಾಳವ ನೀತಕೊಂಕಣ । ನೀತ ಗುಜ್ಜರ ನೀತಕೋಸಲ । ನೀತಬರ್ಬರ ನೀತಚೀನಕ ನೀತಹಂಮೀರಾ ॥ ಈತಕೇರಳ ನೀತ ಸಿಂಹಳ । ನೀತಚೀನಿಜ ನೀತಚೋಟಿಕ । ನೀತಮಾಗಧ ನೀತಗೌಳ ನೃಪಾಲನೋಡೆಂದಾ ॥ ೧೪ ॥

ಮಹಾಭಾರತ ಯುದ್ಧವು ಮುಗಿದ ಮೇಲೆ ಅವರವರ ಗಂಡಂದಿರು ಸತ್ತುದಕ್ಕಾಗಿ ಸ್ತ್ರೀಯರು ದುಃಖಪಡುವಲ್ಲಿ ಕೊಂಕಣ ಮುಂತಾದ ಸ್ತ್ರೀಯರುಗಳ ದುಃಖದ ವಿಷಯ ಹೇಳಿಯದೆ.

ಗದಾಪರ್ವದ ಅಂತ್ಯದಲ್ಲಿ ೧೩ನೇ ಸಂಧಿಯಲ್ಲಿ ಧರ್ಮರಾಯನಿಗೆ ಪಟ್ಟಾಭಿಷೇಕದ ಸಮಯದಲ್ಲಿ ಭರತಖಂಡದ ಎಲ್ಲಾ ಅರಸರು ಬಂದಿದ್ದರು. ಈ ವಿಷಯ ಹಲವು ಪದ್ಯಗಳಿವೆ. ಇವುಗಳಲ್ಲಿ ಒಂದನ್ನು ಇಲ್ಲಿ ಕೊಟ್ಟಿದೆ.

ಗೌಳ ಬರ್ಬರ ಮಗಧ ಸಿಂಧು ನೇ । ಪಾಳ ವಾಂಧ್ರ ವಿದೇಹಕು ಮಲಿ । ಯಾಳ ವತ್ಸ ತಿಗರ್ತ ಮತ್ಸ ವಿದರ್ಭ ಕರ್ಣಾಟಕ ॥ ಮಾಳವಂಗ ಕಿರಾತ ಥಲ ಬಂ । ಗಾಳ ಜೋನೆಗ ಚೀನಖರ್ಪರ । ಚೋಳ ಕೊಡಗ ನೃಪಾಲ ಕೊಂಕಣ ಕುರುಪ ಮಹರಾಷ್ಟ್ರ ॥ ೧೪ ॥

ಮೇಲಿನ ಸಂಗತಿಗಳಿಂದ ಕೊಂಕಣವು ದ್ವಾಪರಾ ಯುಗದಲ್ಲಿತ್ತೆಂದು ಸ್ಪಷ್ಟವಾಯಿತು.

ಮಹಾಭಾರತದ ಕಾಲದ ನಂತರ ಕೊಂಕಣ ದೇಶವನ್ನು ಯಾರು ಆಳುತ್ತಿದ್ದರೆಂದು ತಿಳಿಯಬೇಕಾಗಿದೆ.

ಅಶೋಕನ ಕಾಲದ ಸಿದ್ಧಾಪುರದ ಕ್ರಿ. ಪೂ. ೨೬೩ನೆಯ ವರ್ಷದ ಶಾಸನದಿಂದ ಕೊಂಕಣದೇಶವು ಇತ್ತೆಂದು ಕಾಣುತ್ತದೆ. ನರ್ಮದಾ ನದಿಯ ವರೆಗೆ ಇರುವ ರಾಜ್ಯಗಳನ್ನು ಅಶೋಕನ ಅಧಿಕಾರಿಗಳು ಆಳುತ್ತಿದ್ದರು. ನರ್ಮದಾನದಿಯ ದಕ್ಷಿಣ ದಿಕ್ಕಿನ ರಾಜ್ಯಗಳನ್ನು ಅಶೋಕನಿಗೆ ಕಪ್ಪಕೊಡುವ ಅರಸರು ಆಳುತ್ತಿದ್ದರು. ಕೊಂಕಣವನ್ನು ಭೋಜಕಾಲದ ಅರಸರು ಆಳುತ್ತಿದ್ದರು. ರಾಷ್ಟ್ರಿಕರು ಆಂಧ್ರರು ಇವನ ಅಧೀನರಾಗಿಯೇ ಇದ್ದರು. ಗೌಳವ, ಕೇರಳ, ಪಾಂಡ್ಯ, ಚೋಳ ಅರಸರು ಸ್ವತಂತ್ರರಾಗಿಯೇ ಇದ್ದರು.

ಒಂದು ಕಾಲದಲ್ಲಿ ಕೊಂಕಣವನ್ನು ಮೌರ್ಯರು ಆಳುತ್ತಿದ್ದರೆಂದು ಅಹಿ ಹೊಳೆಯ ಶಾಸನದಿಂದ ಕಂಡುಬರುತ್ತದೆ. ಇವರು ಪಾಟಲಿ ಪುತ್ರದ ಮೌರ್ಯ ವಂಶದವರ ಒಂದು ವಿಭಾಗಕ್ಕೆ ಸಮ್ಮಂಧ ಪಟ್ಟವರು. ಇವರನ್ನು ಚಾಲುಕ್ಯ ವಂಶದ ೨ನೇ ಪುಲಿಕೇಶಿಯು ಜಯಿಸಿದನು. ಸಮುದ್ರ ತೀರದಲ್ಲಿರುವ ಪುರಿಯು ಆ ಸಮಯದಲ್ಲಿ ಕೊಂಕಣದ ರಾಜಧಾನಿಯಾಗಿತ್ತು.

ಅನಂತರ ಕೊಂಕಣವನ್ನು ಕರಾಡವನ್ನು ಸಿಲಾರ ವಂಶದವರು ಆಳುತಿದ್ದರು. ಈ ಸಮಯದಲ್ಲಿ ಕೊಂಕಣವು ಉತ್ತರ ಕೊಂಕಣ, ದಕ್ಷಿಣ ಕೊಂಕಣ, ಕರಾಡ ಎಂಬ ಮೂರು ವಿಭಾಗಗಳಾಗಿ ವಿಭಾಗಿಸಲ್ಪಟ್ಟಿತ್ತು. ಈ ಸಿಲಾರರು ಜೀಮೂತ ವಾಹನನ ವಂಶಕ್ಕೆ ಸೇರಿದವರು. ಜೀಮೂತ ವಾಹನನೆಂದರೆ ಒಬ್ಬ ವಿದ್ಯಾಧರನು. ಇವರ ಮೂಲಸ್ಥಾನವು ತಗರ ಎಂಬ ಪಟ್ಟಣ. ಇವರಿಗೆ ಭಂಗಾರದ ಗರುಡಧ್ವಜವಿತ್ತು. ಈ ಮೂರು ಕುಟುಂಬಗಳಲ್ಲಿ ದಕ್ಷಿಣ ಕೊಂಕಣವನ್ನು ಆಳಿದ ಕುಟುಂಬವೇ ಮೊದಲನೆಯದು ಇವರ ಮೊದಲನೇ ಅರಸನು ಸಾಮುಲ್ಲನು. ಇವನ ಆಳ್ವಿಕೆಯು ಕ್ರಿ. ಶ. ೭೬೫ರಲ್ಲಿ ಆರಂಭವಾಯಿತು. ಕ್ರಿ. ಶ. ೧೦೦೮ರಲ್ಲಿ ಆಳಿದ ರಟ್ಟ ರಾಜನು ಪಶ್ಚಿಮ ಚಾಲುಕ್ಯರರಸನಾದ ಇರಿವ ಭೇದಾಂಗ ಸತ್ಯಾಶ್ರಯನ ಮಾಂಡಲೀಕನಾಗಿದ್ದನು. ಇವನು ಶಕ ೯೩೦ನೇ ಕೀಲಕ ಸಂವತ್ಸರದ ಜ್ಯೇಷ್ಠ ಮಾಸದಲ್ಲಿ ಅವ್ವೇಶ್ವರ ದೇವಸ್ಥಾನಕ್ಕೆ ಬಿಟ್ಟ ಉಂಬಳಿಯ ಶಾಸನದಿಂದ ಇವನು ಗೋವಾಸಾವಂತವಾಡಿ ರಾಜ್ಯ ಮತ್ತು ರತ್ನಾಗಿರಿ ಜಿಲ್ಲೆಗಳನ್ನು ಆಳುತ್ತಿದ್ದನೆಂದು ಕಾಣುತ್ತದೆ. ರಟ್ಟರಾಜನ ತರುವಾಯ ದಕ್ಷಿಣ ಕೊಂಕಣವು ಉತ್ತರ ಕೊಂಕಣವನ್ನು ಆಳಿದ ಅರಿಕೇಸರಿಯ ವಂಶಕ್ಕೆ ಕ್ರಿ.ಶ ೧೦೨೭ರಲ್ಲಿ ಬಂತೆಂದು ತೋರುತ್ತದೆ.

ಸಶೇಷ.

ಕಾಡು ಕೊಂಕಣಿಗ.

...ನಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ವ್ಯೇಲಣಸಾಮಾನುಗಳನ್ನು ಕೊಂಡುಕೊಳ್ಳುವ— ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ, ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

...ಮುಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

...ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

...ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.

210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

...! ಖಾತ್ರಿಯಾಗುವದು!!

...ಮತ್ತು ಅಗ್ಗ ಫಲತೃಪ್ತಿಕರ

...ದುರ್ಗ ಅಮೃತೇಶ್ವರಂ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

...ಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

...ರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ...ಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಧೃಹ್ಮ ಶ್ರೀ ವೈದ್ಯ...ಸ್ತ್ರರ ಮೂಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ...ಯಾದ ಕಲ್ಯಾಣ ಕಲ್ಲ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆ... ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗ...ಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆ...ಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ...ಔಷದಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ... ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ...ವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾ...ತ್ತಿ ಶಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ... ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ...ಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಸೀಲು, ...ಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ...ತರ ತಿಳಿಸಿವಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ... ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಲಾಸಕ್ಕೆ ... ನಡಿಸಿವಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಆಸಾಮು...ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ... ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ...ಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾ...ಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸ...ವ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ...ವಹಾರ ನಡಿಸಬಹುದು.

...ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ...

ಮೇನೇಜರ್,
ಅಮೃತೇಶ್ವರಂ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

...RTISE IN OUR WEELKY

...ch the Hearths & Homes of India's Masses

...culars Apply to:

The Manager,
SWADESHABHIMANI,
MANGALORE.

...nds. ವಜ್ರಗಳು Diamonds.

...A MANGESH ROW & Co.,
MANGALORE.

...& Direct importers of Superior Diamonds of Antwerp.

...ಅಂಟ್ವಾರ್ಗಿ, ಯೆಂಟೆವರ್ಪನಿಂದ ತರಿಸುವ ವಜ್ರಗಳು ...ತ್ತವೆ.

ಬೋಳ ಮಂಗೇಶ ರಾವ್,
ಮಂಗಳೂರು

...28.

...ESS, MANGALORE.

Registered No. M. 498

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ ೨-೦-೬ ... ಟಪ್ಪಾಲು ಹಾಸಲು ಸೇರಿ ರೂಪಾಯಿ ೨-18-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೨. ಮಂಗಳೂರು, ತಾ. ೨೦ನೇ ಶುಕ್ರವಾರ ಜುಲಾಯಿ ೧೯೨೮. ಸಂಚಿಕೆ ೨೯

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

STATEMENT OF AFFAIRS AS ON 16 JUNE, 1928.

CAPITAL AND LIABILITIES.		PROPERTY AND ASSETS.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	" 96,600-0-0	2 Investments on G. P. Notes	2,40,234-5-0.
3 Deposits	" 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	" 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	" 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12-7.

Office of the Corporation,
UDIPI, 18-6-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಕಳ್ಳಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕ್ಕೂ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಗೊಳ್ಳುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ಪತ್ರವ್ಯವಹಾರ.

[illegible]

ಕಾಡು ಕೊಂಕಣಿಗ.

ಸಂಪಾದಕ ಮಹಾಶಯರೇ,

ನಮ್ಮ ಮುನಿಸಿಪಾಲಿಟಿಯವರು ಆರೋಗ್ಯ ರಕ್ಷಣೆಗೋಸ್ಕರ ಒಂದು ಇಲಾಖೆಯನ್ನು ಏರ್ಪಡಿಸಿರುವರೆಂಬುದು ಎಲ್ಲರಿಗೂ ತಿಳಿದ ಸಂಗತಿಯೇ. ಅದರಂತೆ ಜಟ್ಕಾ ಗಾಡಿಗಳು ನಿಲ್ಲುವಗೋಸ್ಕರ ಜಟ್ಕಾ ಸ್ಟೆಂಡು (Hackney Stands) ಗಳನ್ನೂ ಸಹ ನಿರ್ಮಿಸಿರುತ್ತಾರೆ. ಮುನಿಸಿಪಲ್ ಸರಹದ್ದಿನೊಳಗಿರುವ ಬಾಡಿಗೆಯ ಜಟ್ಕಾ ಗಾಡಿಗಳನ್ನು ಸವಾರಿ ಇಲ್ಲದ [illegible]

[illegible] ಮಾಡುವ ವಿಷಯವಾಗಿ.

ಈ ಶಾಲೆಯನ್ನು ಸಂದರ್ಶಿಸಿದ [illegible]

ಮೇಲೆ ಹೇಳಿದ ಎಲ್ಲಾ ಸಂಗತಿಗಳನ್ನು [illegible] ಎಲಿಮೆಂಟರಿ ಶಾಲೆಗೆ ವರ್ಗಾಯಿಸಲ್ಪಟ್ಟ ಈ ಮೊದಲಿನ ಇಲ್ಲಿಯ ಮುಖ್ಯೋಪಾಧ್ಯಾಯರನ್ನು [illegible] ಕೆಲಸಕ್ಕೆ ನೇಮಿಸಬೇಕಾಗಿ ನಮ್ಮ ಸವಿನಯ ಪ್ರಾರ್ಥನೆ.

(Sd.) P. Krishna and 20 others.

The Wrong Window.

"A little nonsense now and then
Is cherished by the wisest of men."

Thus has your contemporar y introduced the illustrious writings of the I. C. and we shall also cherish with the same "spirit of humour and joke" that your contemporary requires of us—the new nonsense that I. C. has induldged himself into. For, humorous as has been the caricature published by the *Swadeshabhimani*, the expression of the inveterate rage that the I. C. has lashed himself into over it, causes in us no less humour, We quite appreciate his concern for the good name of the District Board; and that does not mean that one should refrain from any reasonable comment. But in his enthusiasm to exhibit the beauty of his wealth of epithets and his knowledge of diction, for which we certainly give him due credit, he has forgotten himself and created a picture for himself, out of which he has chosen to detect incredible falsehoods, scurrilous attacks, and pictorial libels. For certainly none except a hideously perverted sense can find out so much monstrosity out of a picture which is no more than a mild caricature of a lifeless road. Further comment is useless. But to pay him in his own coin, let us say—Hats off • • to this pretender of a protector of the good name of the District Board. • • • • Decency does not permit us to repeat the rest of the high compliment.

Reader.

ಅಯ್ಯಾ,

ಮಂಗಳೂರು ತಾಲೂಕಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಈ [illegible] ಇನ್ಸ್‌ಪೆಕ್ಟರವರಿಂದ ಒಂದು ಸರ್ಕ್ಯುಲಾರು ಹೊರಡಿರುವದಂತೆ. ಅದರಲ್ಲಿ ಎಲ್ಲಾ ಉಪಾಧ್ಯಾಯರು ಟ್ರೈನಿಂಗ್ ಶಾಲೆಯ ಮಾದರಿ ನೋಟ್ಸ್ ಓಫ್ ಲೆಸನ್ಸ್ ಪ್ರತಿ ದಿನ ತಯಾರು ಮಾಡಿ ಶಾಲೆಯಲ್ಲಿ ಪಾಠ ಮಾಡಬೇಕಂತೆ. ಇದು ಕಾನೂನು ಮೇರೆಗೆ ಹೌದಾದದ್ದು. ಆದಾಗ್ಯೂ [illegible] ಟ್ರೈನಿಂಗ್ ಶಾಲೆಯಲ್ಲಿ ೨ ವರುಷ ಕಲಿಸುವ ಕ್ರಮಗಳೆಲ್ಲಾ ಕಲಿತು ಪಾಸಾದ ಮೇಲೆ ದಿನವಹಿ ಈ ಕೆಲಸ ಮಾಡಲಿಕ್ಕೆ ಟ್ರೈನಿಂಗ್ ಶಾಲೆಯ ಮಾದರಿ ನೋಟ್ಸ್ ಅಗತ್ಯವೋ? ಅಥವಾ ಆಯಾ ದಿನ ಪಾಠದ ಮುಖ್ಯ ಮುಖ್ಯ ಉದ್ದಿಷ್ಟಗಳನ್ನು ಸಂಕ್ಷೇಪವಾಗಿ ತಯಾರಿಸಿಕೊಂಡರೆ ಸಾಲದೇ? ಒಂದು ಶಾಲೆಯಲ್ಲಿ ಎರಡು ಮೂರು ಕ್ಲಾಸುಗಳಿಗೆ ಒಬ್ಬ [illegible] ಉಪಾಧ್ಯಾಯರಾದರೆ ಅವನ ಆಯುಷ್ಯಕಾಲವೆಲ್ಲಾ ಪ್ರತಿ ಒಂದು ಪಾಠದ ನೋಟ್ಸ್ ಬರಿಯಲಿಕ್ಕೆ ಆಯಿತು. ಹೊಟ್ಟೆಗೂ ಬಟ್ಟೆಗೂ ಸರಿಯಿಲ್ಲದ ಬಡಉಪಾಧ್ಯಾಯರು ಶಾಲೆಯಲ್ಲಿ ೫ ತಾಸು ಬೊಬ್ಬೆಹೊಡೆದು ಕಲಿಸುವದೇ ಅರ್ಧಆಯುಷ್ಯದ ಕೆಲಸ. ಇನ್ನು ರಾತ್ರೆ ಹಗಲು ನೋಟ್ಸು ಬರೆದರೆ ಅಂಥಾ ಉಪಾಧ್ಯಾಯರ ಗತಿ ಏನೋ; ಹಾಗಾದರೆ ಟ್ರೈನಿಂಗ್ ಶಾಲೆಯ [illegible] ಕ್ರಮವನ್ನು ಜ್ಯಾರಿಗೆ ತಂದರೆ ಉಪಾಧ್ಯಾಯರ ಕಷ್ಟದ ಫಲ [illegible] ಆಫೀಸರರುಗಳ ಅವಗಾಹನೆಗೆ ಬರುತ್ತಿತ್ತು. ಯಾವದೆಂದರೆ ಪ್ರತಿ ದಿನ, ಉಪಾಧ್ಯಾಯನು ಕಲಿಸುವ, ದರ್ಜೆ, ಪಾಠ, ಪಿರ್ಯಡು, ಕಲಿಸಿದ ಪಾಠ ಎಲ್ಲಿಂದ ಎಲ್ಲಿವರೆಗೆ, ಬರಿಯುವ ಡೈರಿ ಕ್ರಮವನ್ನು [illegible] ಪ್ರತಿ ಶಾಲೆಯಲ್ಲಿ ಅಗತ್ಯವಾಗಿ ಜಾರಿಗೆ ತಂದರೆ ಎಲ್ಲಾ ಕೆಲಸಗಳು ನೆಟ್ಟಗಾಗುತ್ತಿದ್ದವು. ಆದರೆ ಅಧಿಕಾರಿಗಳಿಗೆ ಬಡ ಉಪಾಧ್ಯಾಯರ ಹೊಟ್ಟೆ ಬಟ್ಟೆಯ ನೆನಪಿರಲಿ.

ಬಡ ಉಪಾಧ್ಯಾಯ.

ಉಡುಪಿ ತಾಲೂಕು ಬೋರ್ಡು.

ಸದರಿ ತಾಲೂಕು ಬೋರ್ಡಿನ ಮೆಂಬರರ ಬರುವ ಸಭೆಯಲ್ಲಿ ಈ ಕೆಳಗಿನ ಠರಾವುಗಳನ್ನು ತರುವದಾಗಿ ಮ॥ ರಾಜಾಧಿರಾಜ ಅರಸರಾದ ಕಿನ್ನಿಕಂಬ ಬಲ್ಲಾಳರು ಪ್ರೆಸಿಡೆಂಟರಿಗೆ ನೋಟೀಸು ಕೊಟ್ಟಿರುತ್ತಾರೆ.

ಠರಾವುಗಳು—೧ ಈ ತಾಲೂಕು ಬೋರ್ಡು ಮೆಂಬರರ ಸಭೆಯನ್ನು ತಿಂಗಳಿಗೊಂದಾವರ್ತಿ ಜರಗಿಸುವುದು ಅಗತ್ಯವೆಂದೂ, ೨ ಈ ತಾಲೂಕು ಬೋರ್ಡಿನಿಂದ ಗವರ್ನಮೆಂಟಿಗೆ ರವಾನಿಸಲ್ಪಡಬಹುದಾದ ಬಾಬ್ತು ವಿನಹಾ ಬೋರ್ಡಿನ ಪರವಾಗಿ ಮಾಡಲ್ಪಡಬಹುದಾದ ನಡವಳಿಕೆಗಳು, ಪತ್ರವ್ಯವಹಾರ ವ ಅಂದಾಜು ಪಟ್ಟಿಗಳು ಮತ್ತು ಇಡಲ್ಪಡಬಹುದಾದ ಲೆಕ್ಕಗಳು, ಪುಸ್ತಕ (ರಿಜಿಸ್ತ್ರಿ) ಗಳು ವಗೈರೆ ಯಾವತ್ತು ಕನ್ನಡ ಭಾಷೆಯಲ್ಲಿ ಆಗುವುದು ಅಗತ್ಯವೆಂದೂ; ೩ ಈ ತಾಲೂಕು ಬೋರ್ಡಿನವರ ಅಡಳ್ತೆಯಲ್ಲಿರುವ ಎಲ್ಲಾ ತರಗತಿಯ ಶಾಲೆಗಳ ಪರಿಸ್ಥಿತಿಗಳನ್ನು ವಿಚಾರಿಸಿ ತನ್ನಿಮಿತ್ತ ಬೋರ್ಡಿಗೆ ರಿಪೋರ್ಟು ಮಾಡುವರೆ ಈ ಬೋರ್ಡು ಮೆಂಬರರ ಒಂದು ಕಮಿಟಿಯನ್ನು ಕೂಡಲೇ ಏರ್ಪಡಿಸುವುದು ಅವಶ್ಯವೆಂದೂ; ೪ ಈ ತಾಲೂಕು ಬೋರ್ಡಿನ ಅಡಳ್ತೆಯಲ್ಲಿರುವ ಎಲ್ಲಾ ತರಗತಿ ಶಾಲೆಗಳ ಶಿಬಂದಿಯವರ ತಿಂಗಳುಗಟ್ಲೆ ಪಗಾರಗಳನ್ನು ಮರುತಿಂಗಳ ೫ರ ವಳಗಾದರೂ ಬಟವಾಡೆ ಮಾಡುವುದು ಅಗತ್ಯವೆಂದೂ; ೫ ಈ ತಾಲೂಕು ಬೋರ್ಡು ಅಡಳ್ತೆ ಒಳಗಿರುವ ಯಾವತ್ತು ಶಿಬಂದಿಯವರ ಬಾಬಿನಲ್ಲಿ, ಬೋರ್ಡಿನವರ ಪರವಾಗಿ ಮಾಡಲ್ಪಡಬಹುದಾದ ನೇಮಕ್ಕಾತಿಗಳ, ಬಡ್ತಿಗಳ ವರ್ಗಾವರ್ಗಿಗಳ ಮತ್ತು ವಿಧಿಸಲ್ಪಡಬಹುದಾದ ಶಿಕ್ಷೆಗಳ ಕುರಿತು ಒಂದು ತಖ್ತೆಯನ್ನು ಬೋರ್ಡು ಮೆಂಬರರ ಪ್ರತಿ ಸಭೆಯಲ್ಲಿಯೂ ಮೇಜಿನ ಮೇಲೆ ಇಡುವುದು ಅಗತ್ಯವೆಂದೂ—ಆಗಿರುತ್ತದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಪಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾವಣಿ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರೆವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರಲ್ಲಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1 ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಕಾಯಂ ಠೇವಣಾತಿಗಳು „ 7,38,880/-

ಹೊರಗೆ ಒಟ್ಟು ಸಾಲ ದೇಣಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ॥ ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6¾ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾವು, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ,
ತಾ. 18-2-'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಚಾರಾಗುತ್ತಿದ್ದರೆ, ಬೆನ್ನಿನ ನರಗಳು ಸೆಳೆದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಇವರಿಗೆ ಮಾತ್ರ.

ಸ್ಫುಟ ವಿಚಾರಗಳು.

ಬರ್ಡೋಲಿ ಸತ್ಯಾಗ್ರಹ.

[illegible]

ಬಂಗಾಳದ ರೈಲು ಅಪಘಾತ.

[illegible]

ಕೂಲಿಮುಷ್ಕರವು ಹಬ್ಬುತ್ತಿದೆ.

[illegible] ಹೆಚ್ಚುತ್ತಾ ಬರುತ್ತಿದೆ. [illegible] ದೇಶದ ಉನ್ನತಿಗೆ ಹಿತಕರವಾಗದು. ಕೂಲಿಮುಷ್ಕರಗಳು ಮುಂಬಯಿಯಿಂದ ಆರಂಭವಾಗಿ [illegible] ದೇಶದ ಸಾಂಪತ್ತಿಕ ಪರಿಸ್ಥಿತಿಯ ಮೇಲೆ ಇದರ ಪರಿಣಾಮವು ಬಹಳ ಕೆಟ್ಟದಾಗಿ ಬರಲಿದೆ. ಧಾಣಿವಳಗಾರರು ಬರೇ ತಮ್ಮ ಲಾಭದ ಮೇಲೆ ದೃಷ್ಟಿಯನ್ನಿಡದೆ ಕೂಲಿಗಳ ಹಿತದ ಕಡೆಗೂ ಲಕ್ಷ್ಯಕೊಡಬೇಕು. ಅದರ [illegible]

ಕೂಲಿಯಾಳುಗಳೂ ಧಾಣಿವಳಗಾರರಿಗೆ ದೊಡ್ಡ ಜವಾಬ್ದಾರಿ [illegible]

[illegible]

Our caricature of a [illegible] road has been a red rag to the wild bull of an I. C. We wish him better temper next time.

If the caricature of a road sends I. C. into such a vitriolic temper, we do not know how hysterical he ought to be if he sees so many acid caricatures drawn in Punch, Times of India, etc., to represent even the highest personalities.

We are glad he has not seen them, and wish that he does not see them to save himself from that bad consequence.

ನೋಟಗಳು.

NOTE...S.

ಕೆಲವು ದಿನಗಳ ಹಿಂದೆ ಹಿಂದೂ ಪತ್ರಿಕೆಯಲ್ಲಿ ಒಬ್ಬ ವಕೀಲರು, ವಕೀಲರ ಸಂಖ್ಯೆಯು ಹೆಚ್ಚಾಗಿ ವಕೀಲರ ಸಂಪಾದನೆ ಕಡಿಮೆಯಾಗಿ ಹೋಗಿರುವುದರಿಂದ ಲೋ ಕೊಲೇಜನ್ನೇ ಕೆಲವು ವರ್ಷಗಳ ಮಟ್ಟಿಗೆ ಮುಚ್ಚಿಡಬೇಕೆಂದು ಸೂಚಿಸಿದ್ದರು. ಈ ಹೊಸ ಆಲೋಚನೆಗಾಗಿ ಎಷ್ಟು ವಕೀಲರು ಇವರಿಗೆ ಕೃತಜ್ಞರಾಗಬೇಕೊ!

• • • •

ನಮ್ಮ ಡಾಕ್ಟ್ರರ ಬಂಧುಗಳು ಮೆಡಿಕಲ್ ಕೊಲೇಜನ್ನೂ ಈ ರೀತಿಯಲ್ಲಿ ಮುಚ್ಚಿಸುವ ಆಲೋಚನೆ ಇನ್ನೂ ಮಾಡಿಲ್ಲ. ವಕೀಲರ ಈ Originality ಗಾಗಿ ಡಾಕ್ಟ್ರರರೂ ಅವರನ್ನು ಅಭಿನಂದಿಸಬಹುದು. ಇದೇ ಉಪಾಯವನ್ನು ಅನುಕರಿಸುತ್ತ ಹೋದರೆ ಮದ್ರಾಸ ವಿಶ್ವವಿದ್ಯಾಲಯಕ್ಕೆ ಕೆಲವು ವರ್ಷಗಳ ರಜೆಯನ್ನು ಕೊಟ್ಟರೆ, ಆಯಾಯ ವೃತ್ತಿಯವರು ತಮ್ಮ ವೃತ್ತಿಯನ್ನು ಸುಧಾರಿಸಿಕೊಳ್ಳಬಹುದು. ಆಲೋಚನೆಯೇನೋ ಸ್ತುತ್ಯವಾದುದು! ಎಷ್ಟಾದರೂ ವಕೀಲರ ಆಲೋಚನೆಯಲ್ಲವೇ?

• • • •

ಮೆಕ್ಸಿಕೊ ದೇಶದಲ್ಲಿ ಕೊಲ್ಲುವುದೊಂದು ಆಟವಾಗಿ ಹೋಗಿಯದೆ. ಅಲ್ಲಿ ರಾಜಕೀಯ ಕಾರಣಗಳಿಂದ ನಡೆಯುವಷ್ಟು ಹತ್ಯೆಗಳು ಇನ್ನೆಲ್ಲಿಯೂ ನಡೆಯುವುದಿಲ್ಲ. ಇತ್ತೀಚೆಗೆ ಹೊಸದಾಗಿ ಆರಿಸಲ್ಪಟ್ಟ ಪ್ರೆಸಿಡೆಂಟರನ್ನೇ ಒಬ್ಬರು ಕೊಂದುಬಿಟ್ಟರು.

• • • •

ಅಂತಃಕಲಹಗಳಿಲ್ಲದ ಸ್ವತಂತ್ರ ಚೀನಾ ದೇಶವೆಂದರೇನೆಂದು ಇತರ ಜನಾಂಗಗಳಿಗೆ ಅನುಭವಕ್ಕೆ ಬರಲು ಆರಂಭಿಸಿಯದೆ. ಎಲ್ಲಾ ಜನಾಂಗಗಳೂ ಚೀನಾ ಬಂದರುಗಳಿಂದ ತಮ್ಮ ಯುದ್ಧನಾವೆಗಳನ್ನು ಹಿಂದೆ ಕರೆಯಿಸಬೇಕೆಂದು ಅವರು ಈಗ ಹೇಳಿಕೊಂಡಿದ್ದಾರೆ.

• • • •

ಚಿಕ್ಕಪ್ರಾಯದ ಹುಡುಗರು ಸಿಗರೇಟ ಸೇದದ ಹಾಗೆ ಒಂದೂ ಕಾನೂನು ಹೊಸ ಚೀನಾ ದೇಶವು ಜಾರಿಗೆ ತಂದದೆ. ಸಿಗರೇಟನ್ನು ಮಾರುವ ರಾಜ್ಯಗಳು ಇದಕ್ಕಾಗಿ ನಿಷೇಧವನ್ನೆದ್ದಿಸಲಿಕ್ಕಿಲ್ಲವೆಂದು ನೆನಸುತ್ತೇವೆ.

• • • •

ತಾರೀಪಿನ ಬೋರ್ಡಿ (Tariff Board)ನಲ್ಲೊಂದು ತಾರೀಪು—ಬೋರ್ಡಿನ ಲೆಕ್ಕಕ್ಕೆ. ಅಮೇರಿಕನ್ ಕಂಪೆನಿಗೂ ಡಚ್ಚ ಕಂಪೆನಿಗೂ ಸೀಮೆ ಎಣ್ಣೆಗಾಗಿ ತಗಲಿದ ಯುದ್ಧದಲ್ಲಿ ಬರ್ಮಾದ ಬ್ರಿಟಿಷ ಕಂಪೆನಿಗಳು ಡಚ್ಚ ಕಂಪೆನಿಯೊಡನೆ ಸೇರಿ, ಅಮೇರಿಕಕ್ಕೆ ಬುದ್ಧಿಗಲಿಸಬೇಕೆಂದು, ಹೊರದೇಶದ ಎಣ್ಣೆಗೆ ಕರ ಹಾಕಿ ದೇಶದ ಎಣ್ಣೆಗೆ ಪ್ರೊಟೆಕ್ಷನ್ (Protection) ಕೊಡಬೇಕೆಂದು ಕೇಳಿದರು. ಬೋರ್ಡು ಊರೆಲ್ಲಾ ಸುತ್ತಿ, ಉದ್ದದ ವಿಚಾರಣೆ ನಡೆಸಿ, ತಮ್ಮ ಮಹತ್ವದ ಪರಿಶ್ರಮವನ್ನು ರಿಪ್ಪೋರ್ಟು ಮೂಲಕ ರೂಪಿಸುವಾಗಲೇ, ಈ ಬರ್ಮಾ ಕಂಪೆನಿಗಳ ನಿರಾಕರಣೆ—ಪ್ರೊಟೆಕ್ಷನ್ ಬೇಡವೆಂದು. ಏಕೆಂದರೆ ಅವರವರೊಳಗೆ ಈಗ ರಾಜಿಯಾಗಿದೆ.

• • • •

ಪಾಶ್ಚಾತ್ಯರ ವ್ಯಾಪಾರೀ ಮೇಲಾಟವೆಂದರೆ ಇದೇ. ಮೇಲಾಟ ಮಾಡಲಿಕ್ಕೂ ಗೊತ್ತು; ರಾಜಿಯಾಗಲಿಕ್ಕೂ ಗೊತ್ತು. ಹುಂಜಗಳ ವೀರತ್ವವು ನಮ್ಮ ಜನರಲ್ಲಿ ಮಾತ್ರ.

• • • •

ಮಧ್ಯದಲ್ಲಿ, ಇಕ್ಕಡೆಗಳ ನ್ಯಾಯ ನೋಡಲಿಕ್ಕೆ ಹೋದ ತಾರೀಪಿನ ಬೋರ್ಡಿಗೊಂದು ತಾರೀಪು! ರಿಪ್ಪೋರ್ಟು ಏನೆಂದು ಮಾಡುವುದು?

• • • •

ಓಡಿದರು. ಸಿಮ್ಲಾಕ್ಕೆ. ಮುಂಬಯಿ ಗವರ್ನರರು ವ್ಯಾಸರಾಯರ ಹತ್ತಿರ ಮೊಕ್ತಾ ಮಾತನಾಡಲಿಕ್ಕೆ. ಗುಟ್ಟಿನಲ್ಲಿ ಮಾತನಾಡಿದರು. ಬಾರ್ಡೋಲಿಯ ಸತ್ಯಾಗ್ರಹದ ಕುರಿತು ರಾಜಿ ಪಂಚಾಯಿತಿ ಮಾಡುವುದಾಗಿ ಠರಾವನ್ನು ಇಬ್ಬರೂ ನಿರ್ಣಯಿಸಿ ಗವರ್ನರರು ಹಿಂತೆರಳಿದರು.

• • • •

ತಾ. ೧೮ಕ್ಕೆ ಸೂರತ್ತಿನಲ್ಲಿ ಎರಡೂ ಪಕ್ಷದವರೂ ಸಭೆ ಸೇರಿದರು. ಗವರ್ನರರು ತಮ್ಮ ಶರ್ತಗಳನ್ನು ಹೇಳಿದರು. ಕಡೆಗೆ ವಿ. ವಲ್ಲಭಾಯಿ ಪಟೇಲರು ತಮ್ಮ ಕಡೆಯವರ ಹತ್ತಿರ ಮಾತನಾಡಿ ತಮ್ಮ ಶರ್ತಗಳನ್ನು ಹೇಳಿದರು.

• • • •

ಒಳದೇಶ ವರ್ತಮಾನ

— ಕಲಕತ್ತದ ಸಮೀಪದಿರುವ ಕಿದ್ದಪುರ ಧಕ್ಕೆಗಳಲ್ಲಿ ಭೂತಗಳು ಬರುವವಂತೆ. ಧಕ್ಕೆಯ ಮೇಲೆ ಕಾವಲಿದ್ದ ಪೋಲೀಸರು ಈ ಭೂತಗಳನ್ನು ಕಂಡು ಹೆದರಿ ಮನೆಗಳಿಗೆ ಹಿಂತಿರುಗಿರುವರು. ಅವು ಬಂದು ಇಬ್ಬರ ಮುಖದ ಮೇಲೆ ಹೊಡದ ಕಾರಣ ಆ ಇಬ್ಬರು ಆಸ್ಪತ್ರೆಯಲ್ಲಿರುವರು. ಒಂದು ದಿನ ಯಾವ ಸಮಯದಲ್ಲಿ ಬರುವವೋ ಮರುದಿನವೂ ಅದೇ ಸಮಯದಲ್ಲಿ ಪುನಃ ಬರುವವು. ಇವರ ನಿಜಸ್ಥಿತಿಯನ್ನು ಕಂಡುಕೊಳ್ಳಲಿಕ್ಕಾಗಿ ಒಂದು ದಿನ ಆಯುಧಪಾಣಿಗಳಾದ ಹಲವು ಸೈನಿಕರು ದಕ್ಕೆಯ ಸಮೀಪದ ಸ್ಮಶಾನಭೂಮಿಯಲ್ಲಿ ರಾತ್ರಿ ಕಾದು ಕುಳಿತುಕೊಂಡರು. ಆದರೆ ಒಂದು ಭೀತವಾದ ಆಡು ಮಾತ್ರ ಕಾಣಸಿಕ್ಕಿತಲ್ಲದೆ, ಯಾವ ಭೂತಗಳೂ ಬಂದಿರಲಿಲ್ಲ.

— ವ್ಯಾಪಾರಿ ಬೋರ್ಡಿನ ವರದಿಯಿಂದ ಜೂನ್ ತಿಂಗಳಲ್ಲಿ ಆಮದು ೯೯,೩೬೯,೦೦೦ ಪೌಂಡುಗಳಷ್ಟಾಯಿತೆಂದೂ, ರಫ್ತು ೫೯,೪೭೨,೦೦೦ ಪೌಂಡುಗಳಷ್ಟಾಯಿತೆಂದೂ ಕಂಡು ಬರುತ್ತದೆ.

— ಖರಗಪುರದ ಬಂಗಾಳ ನಾಗಪುರ ರೈಲ್ವೆಯ ಮುಷ್ಕರಗಾರರ ನಾಯಕನಾದ ನ್ಯಾಡು ಎಂಬವನನ್ನು ಕೆಲಸದಿಂದ ಹೊರಗೆಹಾಕಿರುವರು. ಆದರೆ ವರ್ಕ್‌ಶೋಪಿನ ಜನರು, ನ್ಯಾಡುವನ್ನು ಪುನಃ ಸೇರಿಸಿಕೊಳ್ಳದೆ ಇದ್ದರೆ ಸತ್ಯಾಗ್ರಹವನ್ನು ಆಚರಿಸುವರೆಂದು ಹಟಹಿಡಿದಿರುವರು.

— ತುತಿಕೋಡಿನಲ್ಲಿ ಒಂದು ಖಾದಿ ಪ್ರದರ್ಶನವು ನಡೆಯಿತು. ಇದನ್ನು 'ಇಸ್ಲಾಮ್ ವಾಲಿಯನ್' ಎಂಬ ಪತ್ರಿಕೆಯ ಸಂಪಾದಕರು ತೆರೆದರು. ಪ್ರದರ್ಶನವನ್ನು ನೆರವೇರಿಸುವ ಕಮಿಟಿಯವರು, ಒಂದು ಸಭೆ ಕೂಡಿ ಹಲವು ಠರಾವುಗಳನ್ನು ಮಂಜೂರು ಮಾಡಿದರು. ಇವುಗಳಲ್ಲಿ ಸ್ಯಾಮನ್ ಕಮಿಶನ್ ಬಹಿಷ್ಕಾರದ ಠರಾವು ಒಂದು.

— ಕಾನಪುರದ ಮುನಿಸಿಪಲ್ ಬೋರ್ಡಿನಲ್ಲಿ ಆದ ಠರಾವಿನ ಮೇರೆಗೆ ಟೌನ್ ಹೋಲಿನ ಮೇಲೆ ರಾಷ್ಟ್ರೀಯ ಧ್ವಜವನ್ನು ಬಹು ವಿಜೃಂಭಣೆಯಿಂದ ಏರಿಸಿದರು. ಈ ಧ್ವಜವನ್ನು ಕಾಂಗ್ರೆಸ್ ಕಮಿಟಿಯವರು ಕೊಟ್ಟಿದ್ದರು. ಕಮಿಟಿ ಆಫೀಸಿನಿಂದ ಧ್ವಜವನ್ನು ಎತ್ತಿಹಿಡಿದು ಮೆರವಣಿಗೆಯಿಂದ ಟೌನ್ ಹೋಲಿಗೆ ಬಂದರು. ಈ ಸುಸಂದರ್ಭದಲ್ಲಿ ಹಲವು ಕೌನ್ಸಿಲು ಮೆಂಬರರೂ ಇತರರೂ ಉತ್ತಮವಾದ ಭಾಷಣಗಳನ್ನಿತ್ತರು.

— ಅಲ್ಮೋಡಾ ಎಂಬಲ್ಲಿ ಒಬ್ಬ ನಾಯರನ ಮನೆಗೆ ನಡುಮಧ್ಯಾಹ್ನದಲ್ಲಿ ಬೆಂಕಿತಾಗಿತು. ಸಮೀಪದಲ್ಲಿ ಬೇರೆಯಾರ ಮನೆಯೂ ಇದ್ದಿಲ್ಲ. ಗಟ್ಟಿಯಾಗಿ ಬೊಬ್ಬೆಹಾಕಿದುದನ್ನು ಕೇಳಿ ದೂರದಿಂದ ಜನರು ಓಡಿಬರುವಷ್ಟರೊಳಗೆ ಮನೆಯು ಮಾಡೆಲ್ಲವೂ ಸುಟ್ಟು ಹೋಗಿದ್ದಿತು.

— ಬನಾರಸಿನಲ್ಲಿ ರಾಮಪ್ರಸಾದನೆಂಬವನೊಬ್ಬನು ರಘುವೀರನೆಂಬ ಪೋಲೀಸ್ ಕೊನ್ಸ್‌ಟೇಬಲನನ್ನು ಕತ್ತಿಯಿಂದ ಹೊಡೆದು ಗಾಯಗೊಳಿಸಿದುದಕ್ಕಾಗಿ ಆತನ ಮೇಲೆ ಮೊಕದ್ದಮೆಯಾಗಿ ನಂಬ್ರವು ವಿಚಾರಣೆಯಾಗುತ್ತಲಿದೆ.

— ಕಲಕತ್ತದಲ್ಲಿ ಈ ವರುಷ ನಡೆಯಲಿರುವ ರಾಷ್ಟ್ರೀಯ ಮಹಾಸಭೆಗೆ ವಿ. ವಲ್ಲಭಾಯಿ ಪಟೇಲರಾಗಲಿ, ಪಂಡಿತ ಮೋತಿಲಾಲನೆಹರುಗಳಾಗಲಿ ಅಧ್ಯಕ್ಷರಾಗಬೇಕೆಂದು ಬರ್ಮಾ ಕಮಿಟಿಯವರು ಸೂಚಿಸಿರುವರು.

— ಜಮಶೆದಪುರದಲ್ಲಿ ಕೂಲಿಯಾಳುಗಳಲ್ಲಿ ಇನ್ನೂ ೧೫೦೦ ಜನರು ಕೆಲಸಕ್ಕೆ ಸೇರಿರುವರು. ಒಟ್ಟಾರೆ ಈ ಕೆಲಸದಲ್ಲಿರುವ ಕೂಲಿಗಳ ಸಂಖ್ಯೆ ಮೂರು ಸಾವಿರ.

— ಮದರಾಸು ಗವರ್ನರರು ಬಳ್ಳಾರಿ, ಅದೋನಿ, ಅತ್ತ ಕಡೆಯ ಪ್ರಾಂತಗಳನ್ನು ಸಂದರ್ಶಿಸಿದರು. ಹೋದಲ್ಲೆಲ್ಲ ಅವರನ್ನು ಬಹಳವಾಗಿ ಸತ್ಕರಿಸಿದರು. ಮಾನಪತ್ರಗಳನ್ನು ಸಮರ್ಪಿಸಿದರು. ಈ ಮಾನಪತ್ರಗಳೆಲ್ಲದಕ್ಕೂ ಗವರ್ನರ ಧೊರೆಗಳು ಯೋಗ್ಯವಾದ ಉತ್ತರವನ್ನು ಕೊಡುತ್ತಿದ್ದರು.

— ದೇವಿಯ ಗುಡಿಗಳಲ್ಲಿ ಮಾಡುವ ಪ್ರಾಣಿ ವಧೆಯನ್ನು ಮರೆಯಲ್ಲಿ ಮಾಡಬೇಕೆಂದೂ, ಅದು ಜಾತ್ರೆಗಾಗಿ ನೆರೆದ ಜನರ ಕಣ್ಣಿಗೆ ಬೀಳಬಾರದೆಂದೂ ಮೈಸೂರು ಸರಕಾರದವರು ಒಂದು ಕಾನೂನು ಮಾಡಿರುವರಂತೆ.

— ಯುವರಾಜರ ಹಿರಿಯ ಮಗನಾದ ಜಯಚಾಮರಾಜವಡೆಯರ ಜನ್ಮದಿನವು ಮೈಸೂರು ಅರಮನೆಯಲ್ಲಿ ಕಳದ ೮ನೇ ತಾರೀಕಿನ ದಿನ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಬೆಳಗ್ಗೆ ಒಂದು ದರ್ಬಾರು ನಡೆಯಿತು. ದೇವಾಲಯಗಳಲ್ಲಿ ಪೂಜಾವಿನಿಯೋಗಾದಿಗಳು ನಡೆದುವು.

— ಮೈಸೂರಿನ ಮಂಡಿಪೇಟೆಯ ಮಹಮ್ಮದೀಯರ ಪಳ್ಳಿಯಲ್ಲಿ ಹಿಂದೂ ಮುಸಲ್ಮಾನರು ಒಟ್ಟು ಕೂಡಿದಾಗ ಸ್ವಾಮಿ ಸರ್ವಾನಂದರವರು ಹಿಂದೂ ಮುಸಲ್ಮಾನರ ಐಕ್ಯದ ಕುರಿತು ಭಾಷಣವನ್ನು ಮಾಡಿದರು. ಮುಸಲ್ಮಾನರ ಪಳ್ಳಿಯಲ್ಲಿ ಹಿಂದುಗಳು ಕೂಡಿದುದೂ, ಹಿಂದುವು ಭಾಷಣವನ್ನು ಮಾಡಿದುದೂ, ಇದೇ ಮೊದಲು.

— ಬೆಂಗಳೂರಿನಲ್ಲಿ ಒಬ್ಬ ನಾಲ್ವತ್ತೈದು ವರುಷ ಪ್ರಾಯದ ಮನುಷ್ಯನೊಡನೆ ಹದಿನಾರು ವರುಷ ಪ್ರಾಯದ ಹುಡುಗಿಯೊರ್ವಳು ಗಂಡು ವೇಷದಿಂದ ಭಿಕ್ಷೆ ಬೇಡುತ್ತಿದ್ದಳಂತೆ. ಸಂಶಯವಾದುದರಿಂದ ಅವಳನ್ನು ಪರೀಕ್ಷಿಸಲಾಗಿ ಅವಳು ಸ್ತ್ರೀಯೆಂದು ಗೊತ್ತಾಯಿತು.

— ಕುಲ್ನಾ ಎಂಬಲ್ಲಿ ಬರ ದಿನ್ನ ಕಾರಣ ಇದು ವರೆಗೆ ೪೦ ಸಾವಿರ ಜನರು ಕಷ್ಟಕ್ಕೀಡಾಗಿರುವರು. ಇವರಲ್ಲಿ ಸುಮಾರು ೧೦ರಿಂದ ೧೫ ಸಾವಿರ ಜನರಿಗೆ ಗತಿಯೇ ಇರುವುದಿಲ್ಲ. ವ್ಯವಸಾಯಕ್ಕಾಗಿ ಸರಕಾರದವರು ಒಟ್ಟು ೫೪ ಸಾವಿರ ರೂಪಾಯಿಗಳನ್ನು ಅವರೊಳಗೆ ಹಂಚಿರುವರು. ಒಂದು ಸಾವಿರದಿಂದ ಎರಡು ಸಾವಿರ ವರೆಗಿನ ಹೆಂಗಸು ಮಕ್ಕಳು ಉಪವಾಸ ಬಿದ್ದು ಇದು ವರೆಗೆ ಬಳಲಿರುವರು. ಸರಕಾರದವರು ದಿನದಿನವೂ ಸುಮಾರು ೯೦೦ ಜನರಿಗೆ ಅನ್ನ ಹಾಕುತ್ತಿರುವರು.

— ರಾವಲ್ ಪಿಂಡಿಯಲ್ಲಿ ಕುದುರೆ ಜೂಟಿಗೆ ಒಬ್ಬ ಮಹಮ್ಮದೀ ಜಮೀನುದಾರನು ಟಿಕೇಟು ಪಡಕೊಂಡು ಬಂದಿದ್ದನು. ಆತನು ನಿಂತಿದ್ದಾಗ, ಯುರೋಪಿಯಾನ ಸೈನಿಕನೊರ್ವನು ಅಲ್ಲಿಗೆ ಬಂದು ಹಿಂದಕ್ಕೆ ಸರಿಯಬೇಕೆಂದು ಜಮೀನುದಾರನೊಡನೆ ಹೇಳಲು ಆತನು ಒಪ್ಪಲಿಲ್ಲ. ಅದಕ್ಕಾಗಿ ಸೈನಿಕನು ಕೋಪದಿಂದ ಗುಂಡುಹೊಡೆದು ಆ ಜಮೀನುದಾರನನ್ನು ಕೊಂದು ಬಿಟ್ಟನು. ಈ ಕುರಿತು ನ್ಯಾಯ್ಯವಾಗಿ ವಿಚಾರಣೆಯಾಗುತ್ತಲಿದೆ.

ದಕ್ಷಿಣ ಕನ್ನಡ.

ಸ್ವೀಕಾರ:—ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಇಪ್ಪತ್ತನೇ ವಾರ್ಷಿಕ ವರದಿ, ಬಡ ವಿದ್ಯಾರ್ಥಿ ಸಹಾಯಕ ಫಂಡಿನ ವರದಿ, ಮತ್ತು ಮಹಾಸಭೆಯ ವೃತ್ತಾಂತವು ನಮ್ಮ ಕೈಸೇರಿರುವದನ್ನು ಅತ್ಯಾನಂದದಿಂದ ನಾವು ಸ್ವೀಕರಿಸುವೆವು. ಇದರ ವಿಮರ್ಶೆಯನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಮಂಗಳೂರು:—ಇಲ್ಲಿಯ ಪಾಂಡೇಶ್ವರ ದೇವಸ್ಥಾನದ ಚಾವಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಯರ ಯಾನೆ ಕುಲಾಲರ ಜಾತ್ಯಭ್ಯುದಯ ಸಂಘದ ಸಭೆಯು ರಾ। ಹೂವಯ್ಯನವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾರೀಕು ೧೪ನೇ ಶನಿವಾರ ಮಧ್ಯಾಹ್ನ ಜರಗಿತು. ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಇತ್ತಲಾಗೆ ರಿಜಿಸ್ತ್ರಿ ಮಾಡಿ ಅಚ್ಚು ಹಾಕಿಸಿದ ಸಂಘದ ನಿಬಂಧನೆಗಳು ಸಭೆಯ ಮುಂದೆ ಕಾರ್ಯದರ್ಶಿಗಳಾದ ರಾ। ಅತ್ತಾವರ ತನಿಯಪ್ಪ ಬಂಗೇರರಿಂದ ಓದಿ ಹೇಳಲಾದವು. ಸಂಘಕ್ಕೆ ಮುಂದಿನ ಮೂರು ವರುಷಗಳಿಗೆ ೨೪ ಮಂದಿ ಡೈರೆಕ್ಟರರನ್ನು ನೇಮಿಸಲಾಯಿತು. ರಾ। ಹೂವಯ್ಯ ಬಂಗೇರರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ರಾ। ಅತ್ತಾವರ ತನಿಯಪ್ಪ ಬಂಗೇರರನ್ನು ಕಾರ್ಯದರ್ಶಿಯರನ್ನಾಗಿಯೂ, ಮಂಜೇಶ್ವರ ರಾ। ಅನಂತ ಮಾಸ್ತರರನ್ನು ಕೋಶಾಧ್ಯಕ್ಷರಾಗಿಯೂ ನೇಮಿಸಲಾಯಿತು. ಜಿಲ್ಲೆಯಲ್ಲಿರುವ ಜಾತಿಗೃಹಸ್ಥರಿಂದ ಆದಷ್ಟು ಬೇಗನೇ ಹಣ ವಂತಿಗೆ ಮಾಡಿ ಬರುವ ಜೂನ್ ತಿಂಗಳಲ್ಲಿ ಶಾಲೆಗಳಲ್ಲಿ ಕಲಿಯುವ ಜಾತಿಯ ವಿದ್ಯಾರ್ಥಿಗಳಿಗೆ ವೇತನ ಕೊಡಲಿಕ್ಕಾಗುವಂತೆ ಸಾಧಿಸಬೇಕೆಂದೂ ನಿರ್ಣಯಿಸಲಾಯಿತು.

ತಾರೀಕು ೧೪—೭—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೩ ಮರಣಗಳೂ, ೫೪ ಜನನಗಳೂ ಆದವು. ಇವುಗಳಲ್ಲಿ ಶಿಶು ಮರಣಗಳು ೯.

ರಸ್ತೆಗಳ ದುರುಸ್ತಿ ಸಂಬಂಧ ಇದೇ ತಿಂಗಳ ತಾರೀಕು ೧೯ರಿಂದ ೨೪ನೇ ತಾರೀಕಿನ ವರೇಗೆ ಕೆಥೋಲಿಕ್ ಕ್ಲಬ್ಬಿನಿಂದ ಸ್ಟೀವನ್ ಎಂಡ್ ಸನ್ಸ್ ಇವರ ಬಿಸ್ಕೆಟ್ ಕಾರಖಾನೆಯ ವರೇಗಿನ ರಸ್ತೆಯೂ ಮತ್ತು ತಾ. ೨೫ರಿಂದ ತಾ. ೩೧ರ ವರಗೆ ಅಲ್ಲಿಂದ ವಿ. ಜೆ. ಸಾಲ್ಡಾಂಞ M. L. C. ಇವರ ಮನೆಯ ತನಕದ ರಸ್ತೆಯೂ ಕೂಡಾ ಮುಚ್ಚಲ್ಪಡುವುವು. ಬಂಟವಾಳ ಅತ್ತಕಡೆ ಹೋಗುವ ಬಸ್ಸುಗಳು ಫಲನೀರ ಮಾರ್ಗವಾಗಿ ಹೋಗಬೇಕಾಗಿ ಮುನಿಸಿಪಲ್ ಚಾಯರ್‌ಮ್ಯಾನರು ತಿಳಿಸುತ್ತಾರೆ.

ಮಂಗಳೂರು ರೇಂಜಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಚತುರ್ಥ ಸಭೆಯು ರಾ। ಕೆ. ಗೋಪಾಲರಾವ್, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಕಳದ ಜೂನ್ ತಿಂಗಳ ತಾರೀಕು ೩೦ನೇ ಶನಿವಾರ ದಿನ ಅಪರಾಹ್ನ ಘಂಟೆ ೩ಕ್ಕೆ ಬೆಂದೂರಿನ ಸ್ಯಾಂಟ್ ಸೆಬೆಸ್ತಿಯನ್ಸ್ ಶಾಲೆಯಲ್ಲಿ ಜರಗಿತು. ಮೇಲ್ಕಾಣಿಸಿದ ಶಾಲೆಯ ಪ್ಯಾಸ್ ಮೆನೇಜರರು, ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ ಉಪಾಧ್ಯಾಯರಾದ ರಾ। ಕೆ. ಗೋಪಾಲರಾವ್, ಬಿ. ಎ. ಎಲ್. ಟಿ. ಇವರು ಅಲ್ಲದೆ ೬೨ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರಿದ್ದರು.

ಕಾರ್ಯಕ್ರಮ:-(೧) ಬೋಳೂರು ಕೆಥೋಲಿಕ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆದ ತೃತೀಯ ಸಭೆಯ ವರದಿಯನ್ನು ಓದಲಾಯಿತು. (೨) ಸ್ಯಾಂಟ್ ಸೆಬೆಸ್ತಿಯನ್ಸ್ ಶಾಲಾ ಉಪಾಧ್ಯಾಯಿನಿಯರಾದ ಸಿಸ್ಟರ್ ಎ. ಮಥಾಯಸ್ ಇವರು ೨ನೇ ದರ್ಜೆಗೆ ಇಂಗ್ಲಿಷ್ ಸಂಭಾಷಣೆಯ ಪಾಠವನ್ನು ಹೊಸ ಶಿಕ್ಷಣ ಪದ್ಧತಿಗಳಿಗನುಸಾರವಾಗಿ ಮಾಡಿದರು. (೩) ರಾ। ಪೇಜಾವರ ಸರ್ವೋತ್ತಮರಾಯರು 'ಶಾಲೆಯನ್ನು ಹೇಗೆ ಅಲಂಕರಿಸಬೇಕು? ಮತ್ತು ಏಕೆ?' ಎಂಬುದರ ವಿಷಯ, ಮತ್ತು ರಾ। ಎಮ್. ಲಕ್ಷ್ಮೀನಾರಾಯಣ ಇವರು 'ಕಿಂಡರ್ ಗಾರ್ಟನ್ ಪದ್ಧತಿ'ಯ ಕುರಿತು ಉಪನ್ಯಾಸಗಳನ್ನು ಮಾಡಿದರು. (೪) ಕಡೆಗೆ ಅಧ್ಯಕ್ಷರು ಮೇಲ್ಕಾಣಿಸಿದ ಎರಡು ವಿಷಯಗಳ ಕುರಿತು ಮತ್ತು ಕೆಲವು ಅಭಿಪ್ರಾಯಗಳನ್ನು ಸೂಚಿಸಿ, ಅನಂತರ ಸ್ವರ್ಗಸ್ಥರಾದ ರಾ। ಎಮ್. ಬಾಬು ಬಿ. ಎ. ಎಲ್. ಟಿ. ಇವರ ಕುರಿತು ಒಂದೆರಡು ಮಾತುಗಳನ್ನು ಹೇಳಿದರು.

ರಾಜಶ್ರೀ ಕೆ. ಗೋಪಾಲರಾಯರು ಉದಾರಾಶ್ರಯವನ್ನಿತ್ತು ಅಧ್ಯಕ್ಷ ಸ್ಥಾನವನ್ನು ವಹಿಸಿದುದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಸಭಾವಿಸರ್ಜನೆಯಾಯಿತು.

ಈ ಜುಲಾಯಿ ತಿಂಗಳ ಸಭೆಯು ಬರುವ ೨೮ನೇ ತಾರೀಕು ಶನಿವಾರ ದಿನ ಸ್ಯಾಂಟ್ ಸೆಬೆಸ್ತಿಯನ್ಸ್ ಶಾಲೆಯಲ್ಲೇ ಜರಗುವದು.

ಮಂಗಳೂರು ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಕಳೆದ ಎಪ್ರಿಲ್ ತಿಂಗಳಲ್ಲಿ ೩೭೬ ಹಿಂದೂ, ೨೭೫ ಕ್ರಿಸ್ತಾನ್ ಮತ್ತು ೫೪ ಮಹಮ್ಮದೀಯ ಹೊಸ ರೋಗಿಗಳು ಸೇರಿ ೭೦೫ ವ್ಯಾಧಿಗ್ರಸ್ತರು ಚಿಕಿತ್ಸೆಯನ್ನು ಹೊಂದಿದ್ದರು. ದಿನವಹಿ ಸರಾಸರಿ ಹಾಜರು ೧೦೮ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ. ೨೭—೪—'೨೮ರಲ್ಲಿ ಹೆಚ್ಚಾಗಿ ಹಾಜರಾದ ರೋಗಿಗಳ ಸಂಖ್ಯೆ ೧೩೩.

ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ವಿಶೇಷ ಮಹಾಸಭೆಯು ಬರುವ ಆಗೋಸ್ತು ತಿಂಗಳ ತಾ. ೫ನೇ ಆದಿತ್ಯವಾರ ಅಪರಾಹ್ನ ಗಂಟೆ ೩ಕ್ಕೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಕಾರ್ಯಕ್ರಮ:-೧. ದಕ್ಷಿಣ ಕನ್ನಡ ಜಿಲ್ಲಾ ೮ನೇ ಪರಿಷತ್ತಿನ ಅಧ್ಯಕ್ಷರನ್ನು ಚುನಾಯಿಸುವುದು ವ ಸಂಬಂಧಪಟ್ಟ ಇತರ ಕೆಲಸಗಳು. ೨. ಬರುವ ಮುನಿಸಿಪಲ್ ಚುನಾವಣೆಗೆ ನಮ್ಮ ಕಡೆಯಿಂದ ಉಮೇದುವಾರರನ್ನು ಕಳುಹಿಸುವ ವಿಷಯ. ೩. ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ಬರಬಹುದಾದ ಇತರ ವಿಷಯಗಳು, ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಳ್ಳಿಗೆ ಪಚ್ಚಡಿ—ಮೊಸಂಕಾವು ಇಗರ್ಜಿಯ ಗುರುಗಳು ಇಲ್ಲಿ ಒಂದು ಹೊಸ ಶಾಲೆಯನ್ನು ತೆರೆದಿರುವರು. ಸುಮಾರು ೫೦-೬೦ ಮಕ್ಕಳಿರುವರು. ಈ ಪ್ರಾಂತ್ಯದ ಮಕ್ಕಳಿಗೆ ಹತ್ತಿರ ಒಂದು ಶಾಲೆಯಾದರೂ ಇರಲಿಲ್ಲ.

ಕಳ್ಳಿಗೆ ಪೆರೋಡಿ—ಇಲ್ಲಿ ನೇತ್ರಕೆರೆಯೆಂಬಲ್ಲಿ ತೆರೆದ ಶಾಲೆಯೂ ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿದ್ದು ಒಳ್ಳೇ ಚುರುಕಾಗಿ ಚೆನ್ನಾಗಿ ಕಲಿತ ಉಪಾಧ್ಯಾಯರೂ ಇರುವರು. ಶಾಲೆಯಲ್ಲಿ ೫೦ರ ಮೇಲೆ ಮಕ್ಕಳಿರುವರು. ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನವರು ಇದನ್ನು ಮಂಜೂರು ಮಾಡಿದರೆ ಒಳ್ಳೇದಿತ್ತು.

ಕಾವಳಕಟ್ಟೆ—ಎಲ್ಲಾ ಕಡೆಗಳಲ್ಲಿರುವಂತೆ ಇದೂ ಒಂದು ಉಪಾಧ್ಯಾಯರ ಸಂಘದ ಸೆಂಟರಾಗಿದೆ. ಎಲಿಮೆಂಟರಿ ವಿದ್ಯಾಭ್ಯಾಸವನ್ನು ಹಳ್ಳಿಗಳಲ್ಲಿ ಅಭಿವೃದ್ಧಿಗೆ ತರಬೇಕು; ಉಪಾಧ್ಯಾಯರ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸಬೇಕು, ವಿದ್ಯಾ ಇಲಾಖೆಯಲ್ಲಿ ಉಂಟಾದ ಹೊಸ ಹೊಸ ಬದಲಾವಣೆಗಳನ್ನು ತಿಳಿಯಲಿಕ್ಕೆ ಒಂದು ದಾರಿಯಾಗಬೇಕು ಎಂಬ ಉದ್ದೇಶದಿಂದ ಉಪಾಧ್ಯಾಯರ ಸಂಘಗಳನ್ನು ಸ್ಥಾಪಿಸುವುದರ ಮೂಲ ಉದ್ದಿಷ್ಟವಾಗಿದೆ. ಈ ಊರು ಒಂದು ಬರೇ ಹಳ್ಳಿಯಾಗಿರುವುದರಿಂದ ಉಪಾಧ್ಯಾಯರಿಗೆ ಯಾವ ತರದ ಅನುಭವಗಳನ್ನು ಪಡೆಯಲು ಸಾಧ್ಯವೇ ಇಲ್ಲ. ಒಟ್ಟಾರೆ ಈ ಸೆಂಟರಿನಿಂದ ಉಪಾಧ್ಯಾಯರಿಗೆ ಏನೊಂದೂ ಪ್ರಯೋಜನವಿದೆಯೆಂದು ಕಾಣುವುದಿಲ್ಲ. ಆದುದರಿಂದ ಈ ಸೆಂಟರನ್ನು ತೆಗೆದುಹಾಕಿ ಪುಂಜಾಲಕಟ್ಟೆಯಲ್ಲಿ ಉಪಾಧ್ಯಾಯರ ಸೆಂಟರನ್ನು ತೆರೆದರೆ ಸಂಘದ ಮೂಲ ಉದ್ದಿಷ್ಟಗಳು ಈಡೇರಿದಂತಾಗುವುದು.

ಉಪ್ಪಿನಂಗಡಿ—ಕಳೆದ ದೊಡ್ಡ ನೆರೆಯ ನಂತರ ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯನ್ನು ಮುಚ್ಚಿದ್ದರು. ಅನಂತರ ಇಲ್ಲಿ ಆಸ್ಪತ್ರೆ ತೆರೆಯಬೇಕಾಗಿ ಎಷ್ಟೋ ತರದಿಂದ ಸಬಂಧಪಟ್ಟವರಿಗೆ ಮನವಿ ಮಾಡಿಕೊಂಡಲ್ಲಿ ಯಾವ ತರದ ಪ್ರಯೋಜನವೂ ಸಿಕ್ಕದೆ ಕಡೆಗೆ ಮಾನ್ಯ ತಾಲೂಕು ಬೋರ್ಡು ಪ್ರೆಸಿಡೆಂಟ ಮ। ರಾ। ಮೊಳಹಳ್ಳಿ ಶಿವರಾಯರನ್ನು ಕೇಳಿಕೊಂಡು ಅವರು ತನ್ನಿಂದೆ ಆದಷ್ಟು ಪ್ರಯತ್ನಪಟ್ಟು ಇದೇ ತಾರೀಕು ೭ರಿಂದ ಒಂದು ರೂರಲ್ ಅಂದರೆ ಹಳ್ಳಿ ಆಸ್ಪತ್ರೆಯನ್ನು ತೆರೆದಿರುತ್ತಾರೆ. ಸದರಿ ಆಸ್ಪತ್ರೆಗೆ ಇಲ್ಲಿಯೇ ಖಾಸ್ಗಿ ಆಸ್ಪತ್ರೆ ಇಟ್ಟುಕೊಂಡಿದ್ದ ಮ। ರಾ। ಬಿ. ಜಿ. ಬಾಳಿಗರನ್ನು ಮೆಡಿಕಲ್ ಆಫೀಸರರಾಗಿ ನೇಮಕಮಾಡಿರುತ್ತಾರೆ. ಈ ಬಗ್ಗೆ ನಾವು ಪ್ರೆಸಿಡೆಂಟ ರಾ। ಶಿವರಾಯರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಎಲ್ಲಾ ಇತರ ಕೆಲವು ಗ್ರಾಮಗಳಿಗೆ 'ಗ್ರಾಮ ಪಂಚ್ಯಾತ್' ಸ್ಥಾಪಿಸಿದಂತೆ ನಮ್ಮ ಗ್ರಾಮಕ್ಕೂ ಕೂಡ ಕಳೆದ ನವಂಬರ ತಿಂಗಳಿಂದ ಗ್ರಾಮ ಪಂಚ್ಯಾತ ಸ್ಥಾಪನೆ ಮಾಡಿರುತ್ತಾರೆ. ಆದರೆ ಪ್ರತಿ ತಿಂಗಳಲ್ಲಿ ಜವಾನನಿಗೆ ಸಂಬಳ ಕೊಟ್ಟದ್ದು ಕಾಣುತ್ತವಲ್ಲದೆ ಬೇರೆ ಯಾವ ತರದ ಗ್ರಾಮವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡಿದ್ದು ಕಾಣುವುದಿಲ್ಲ. ಪೂರ್ಣ ನಿದ್ರಾವಸ್ಥೆಯಲ್ಲಿಯೇ ಇದೆ. ಆದ್ದರಿಂದ ಇನ್ನಾದರೂ ಎಲ್ಲಾ ಮೆಂಬರರು ಕೂಡಿ ಗ್ರಾಮಕ್ಕೆ ಬೇಕಾದ ಸ್ವಲ್ಪ ಸ್ವಲ್ಪ ಸೌಕರ್ಯಗಳನ್ನು ಮಾಡುವರಾಗಿ ಹಾರೈಕೆ.

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ। ಶಂಕರನಾರಾಯಣಪ್ಪಯ್ಯನವರಿಂದ ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ ಆದ ಮ। ರಾ। ಸರಾಫ ವೈಕುಂಠ ನಾಯ್ಕರ ಮನೆಯಲ್ಲಿ ಕೆಲ ದಿನ ಹಿಂದೆ 'ಕೌಸಲ್ಯಾ ಪರಿಣಯ'ವೆಂಬ ಹರಿಕೀರ್ತನೆ ಇತ್ತು. ಕೀರ್ತನೆಯನ್ನು ಬಹಳ ಚಲೋ ರೀತಿಯಲ್ಲಿ ಆಡಿತೋರಿಸಿದರು. ಇವರಿಗೆ ಶ್ರೀ ದೇವರು ಇನ್ನೂ ಹೆಚ್ಚು ಶಕ್ತಿಯನ್ನು ಕೊಟ್ಟು ಆಯುರಾರೋಗ್ಯ ಕೊಟ್ಟು ಸಲಹಲೆಂದು ನಮ್ಮ ಕೋರಿಕೆ.

ಸುಳ್ಯ—ಇಲ್ಲಿ ಕೋಪೊಪರೇಟಿವ್ ಯೂನಿಯನ್ ಸಹಕಾರ ದಿನ ಮಹೋತ್ಸವದ ಸಲುವಾಗಿ ತಾ. ೭—೭—೨೮ನೇ ದಿವಸ ಹುಡುಗರ ಹುಡುಗಿಯರ ಬೋರ್ಡು ಶಾಲೆಗಳು, ಸಂಘದ ಆಫೀಸು, ಅಂಗಡಿ, ಮನೆಗಳು ತಳಿರುತೋರಣಗಳಿಂದ ಅಲಂಕರಿಸಿದಲ್ಲದೆ ಮಂಗಳೂರು ಮಡಿಕೇರಿ ರಸ್ತೆಗೆ ಅಡ್ಡವಾಗಿ ಸುಮಾರು ೨ ಮೈಲು ದೂರದ ವರೆಗೆ ಶೃಂಗಾರ ಮಾಡಿದ ನಂತರ ಬೆಳಗ್ಗೆ ಆ ದಿವಸ ಸುಮಾರು ೧೦ ಘಂಟೆಗೆ "ಎಲ್ಲರೂ ಕೇಳಿ ಈ ದಿವಸ ಸೊಸೈಟಿ ಹಬ್ಬವೆಂತಲೂ ಆದ್ದರಿಂದ ನೀವೆಲ್ಲರೂ ಹಬ್ಬ ಮಾಡಬೇಕೆಂತಲೂ ಸದರಿ ಹಬ್ಬದ ಸಮ್ಬಂಧ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡುವ ಸಭೆಗೆ ಅಪರಾಹ್ನ ೧ ಘಂಟೆಗೆ ಬರಬೇಕೆಂತ" ಬೀದಿ ಬೀದಿ ಹೇಳ್ಸಿತ್ತು.

ಸಭೆಕೂಡುವ ಹಾಯರ್ ಎಲಿಮೆಂಟರಿ ಶಾಲೆಯು ಸಹಕಾರಿಗಳ ಫೋಟೋಗಳಿಂದಲೂ ದೊಡ್ಡದಾದ ಅಕ್ಷರಗಳಿಂದ ಮಾಡಿಸಿದ ಸಹಕಾರ ಧ್ಯೇಯ ವಾಕ್ಯಗಳಿಂದಲೂ ತಳಿರುತೋರಣಗಳಿಂದಲೂ ನೋಟಕರಿಗೆ ಅಂದವಾಗುವಂತೆ ಶೃಂಗರಿಸಲ್ಪಟ್ಟಿದ್ದರಲ್ಲಿ ಸಭೆಕೂಡಿ ಕೂಡಲೇ ಯಾವತ್ತು ಜನರೊಂದಿಗೆ ಮೆರವಣಿಗೆ ಹೊರಟಿತು. ಅದರಲ್ಲಿ ಮುಖ್ಯವಾಗಿ ಸಹಕಾರದ ನಿಶಾನಿಗಳು ಅಂದರೆ ಸದರಿ ನಿಶಾನಿಗಳಲ್ಲಿ "ಸಹಕಾರವೇ ದೇಶದ ಏಳ್ಗೆ" 'ಸಹಕಾರವೇ ಸಂಪತ್ತಿನ ಮೂಲ' ಮುಂತಾದವುಗಳಿಂದ ಬರೆದಂಥವುಗಳಾಗಿರುತ್ತವೆ. ಇವುಗಳ ಮಧ್ಯದಲ್ಲಿ ಪಟ್ಟೆ ಎಲವಸ್ತ್ರದಲ್ಲಿ ಕಟ್ಟಿ ಹೂಮಾಲೆಗಳಿಂದ ಶೃಂಗಾರ ಮಾಡಿದ ಸಂಘದ ದಸ್ತರನನ್ನು ಹೊತ್ತುಕೊಂಡು ಸಹಕಾರಿಗಳ ಫೋಟೋ ಸಮೇತ ಚಲೋದಾದ ಮೆರವಣಿಗೆಯು ಹೊರಟು "ಸಹಕಾರಕ್ಕೆ ಜೈ, ಸಹಕಾರಕ್ಕೆ ಜೈ" ಎಂದು ಘೋಷಮಾಡುತ್ತಾ ಅಪರಾಹ್ನ ೫ ಘಂಟೆಗೆ ಹಾಯರ್ ಎಲಿಮೆಂಟರಿ ಶಾಲೆಗೆ ಸೇರಿತು. ಕೂಡಲೆ ಕೂಡಿದ ಎಲ್ಲಾ ಜನರಿಗೆ ತಿಂಡಿ ಪಾನ ವಗೈರೆ ಕೊಟ್ಟು ಶಾಲಾ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಿತು. ತದನಂತರ ಮಂಗಳೂರು ಸೆಕ್ಷನು ಕೋಪೊಪರೇಟಿವ್ ಅಸಿಸ್ಟಾಂಟ ರಿಜಿಸ್ಟ್ರಾರರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಸಹಕಾರಿ ತತ್ವ ಎಂಬುದರ ಕುರಿತು ಭಾಷಣಗಳಾದವು. ತದನಂತರ ಯೂನಿಯನ್ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಿ ಕೂಡಿದ ನೂರಾರು ಜನರಿಗೆ ತಿಂಡಿ ಚಾ ತಾಂಬೂಲಾದಿಗಳಿಂದ ಸತ್ಕರಿಸಿ ಉತ್ಸವದ ಕೆಲಸವು ನೆರವೇರಿತು. ಬಳಿಕ ಈ ಯೂನಿಯನ್ ಮಹಾಸಭೆಯು ಕೂಡ ಕೆ. ಸುಬ್ರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಸುರತ್ಕಲ್:—ಇಲ್ಲಿ ಇತ್ತೀಚೆಗೆ ಆಶ್ಚರ್ಯಕರವಾದ ಎರಡು ಕಳವುಗಳು ನಡೆದಿವೆ. ಇದು ವರೆಗೂ ಪತ್ತೆಯೇ ಇಲ್ಲ. ಇವುಗಳಲ್ಲೊಂದು ರಾತ್ರಿಕಳವು. ಇನ್ನೊಂದು ಹಗಲು ಕಳವು.

ಒಂದು ರಾತ್ರೆ ಇಲ್ಲಿಯ ಮಾರಿಗುಡಿಗೆ ನುಗ್ಗಿ ದೇವಿಮೂರ್ತಿಯಲ್ಲಿ ಇದ್ದ ಒಂದು ಖಡ್ಗವನ್ನು ಅಪಹರಿಸಿ, ಅಂದೇ ಧರ್ಮಶಾಲಾಬಳಿಯ ಗಣಪತಿ ಕಾಮತರ ಮನೆಹೊಕ್ಕು ಕೆಲವಸ್ತ್ರಗಳನ್ನೆಲ್ಲಾ ಬಚ್ಚಲಕೊಟ್ಟಿಗೆಯಲ್ಲಿಟ್ಟು ಕೊನೆಗೆ ಆಭರಣದ ಪೆಟ್ಟಿಗೆ ಜೊರಗೆ ತರುವಾಗಲೇ ನೆರೆಯಾಳಿಕೂಗು ಕೇಳಿ ಓಡಿದರು. ಒಡನೆಯೇ ಮನೆಯವರು ಎಚ್ಚತ್ತು ನೋಡಿದಲ್ಲಿ ಆಭರಣದ ಪೆಟ್ಟಿಗೆ ವಿನಹಾ ಇತರ ವಸ್ತುಗಳೂ, ಮಾರಿಗುಡಿಯ ಖಡ್ಗವೂ ಮಾತ್ರ ಬಚ್ಚಲಲ್ಲಿದ್ದುವು.



'ಅಂಟಾ ತಾಯಿತ್'

ಶಿವರಾಮ ಭಟ್ಟ ತೆಂಗಿನಮನೆ,

Batliwalla's Preparations Cover All Your Needs.
A NAME THAT MERIT HAS MADE FAMOUS.

ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ವೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಕೊಡುವ ಔಷಧ ಆಣೆ ೧೩.

ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩

ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ರೂ. ೧—೪—೦. ೧—೧೨—೦.

LIBERAL DISCOUNT TO TRADE

GAWASHAPUR, BOMBAY.

ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಕೇಸರಿ ಯ ಪ್ರದರ ಲೋಧ್ರ

ರೋಗನಿವಾರಿಣೀ.

ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಬಗೆಯಾಗಿ ಹೊಗಳುತ್ತಿರುವರು.

ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ

ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ನಿಶ್ಶೇಷವಾಗಿ ಗುಣವಾಗುವುವು.

ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,

P. B: 752. ಎಗ್ಮೋರು, ಮದರಾಸು.

ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಹಂಪನಕಟ್ಟಾ, ಮಂಗಳೂರು.





18-11-27)

ಟ್ರೈಂಪೀಸ್ ಸಹಿತ ಪೇಸ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,

ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ.

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅನುಕೂಲವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ್ ಮೂಮೆಂಟ್ ಮಾಡಿರುವದು. ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌನ್ಟನ್ ಪೇನಾ 1, ಹೇರಾಯಿಲ್ ಬಾಟಲ್ 1, ವಜ್ರದ ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಣಿ 1, ಸುವಾಸನೆ ಸೋಪು 1, ಪೇನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.

THE ENGLISH EMPORIUM,

P. O. box 105 MADRAS.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತರಹರಿಯ, ವೋಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ದಿ. ಸೂ.— ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಯ್ಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ, ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಛಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ತ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕುಂದಿರುವವರಿಗಾದರೂ ತ್ವರಿತದಲ್ಲೇ

— ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7—8—0 ಮಾತ್ರ.

ಆರ್. ಛೋಟಾಲಾಲ್ ಎಂಡ್ ಕೋ,

(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.

ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸರ್ಸ್

ಮೊತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ.

ಇವರ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ

ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಟಿನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,

28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದು ಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

ಹಿಂದಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಣ್ಣೂರ ಕಣ್ಣ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ, ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಸಂಶಯಗಳು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಔಷಧಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ವೈದ್ಯರುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes
of India's Masses
For Particulars Apply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & CO.,
MANGALORE.

Agents & Direct importers of Superior Diamonds of Antwerp.

ಯೋಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

10-8-'28. ಮಂಗಳೂರು.

— ನಮ್ಮ ಚಕ್ರವರ್ತಿಯವರ ನಾಲ್ಕನೇ ಮಗನಾದ ಜೋರ್ಜ್ ಎಂಬವರು ರಾಯಲ್ ನಾಕೆಯಲ್ಲಿ ಲೆಪ್ಟಿನೆಂಟರಾಗಿದ್ದರು. ೨೮ನೇ ಜುಲಾಯಿಯಿಂದ ಅಮೇರಿಕನ್ ವೆಸ್ಟ್ ಇಂಡಿಸಿನಲ್ಲಿ 'ಡರ್ಬನ್' ಎಂಬ ಕ್ರ್ಯೂಸರಿಗೆ ನೇಮಕ ಹೊಂದಿರುವರು.

— ಏಜಿಯನ್ ಸಮುದ್ರದಲ್ಲಿ ಒಂದು ಯುದ್ಧದ ಹಡಗವು ಗೊತ್ತಿಲ್ಲದ ಕಲ್ಲಿಗೆ ಬಡೆದು ಸ್ವಲ್ಪ ಜಖಮಾಯಿತು. ಹಡಗದ ಕೆಲವು ಕೋಣೆಗಳೊಳಗೆ ನೀರು ಪ್ರವೇಶಿಸಿತು.

— ಲಂಡನಿನ ಬಿಗ್‌ಬೆನ್ ಗೋಪುರದ ತುದಿಯಲ್ಲಿ ಹಲವು ದಿನಗಳಿಂದ ಒಂದು ಪಕ್ಷಿಯು ಬಂದು ಕುಳಿತುಕೊಂಡಿದ್ದಿತು. ಇದನ್ನು ರಣಘಾತಪಕ್ಷಿಯೆಂದು ತಿಳಿದು ಪ್ರತಿದಿನವೂ ಜನರು ಅಲ್ಲಿಗೆ ಬಂದು ಪಕ್ಷಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಮೊನ್ನೆ ತಾನೆ ಆ ಪಕ್ಷಿಯು ಓಡಿಹೋದ ಕಾರಣ ಅಲ್ಲಿ ಮಾರ್ಗದಲ್ಲಿ ನಿಲ್ಲುತ್ತಿದ್ದ ಪೋಲೀಸನಿಗೆ ಸ್ವಲ್ಪ ಉಸಿರು ಬಿಡುವಂತಾಯಿತು. ಈ ಪಕ್ಷಿಯನ್ನು ನೋಡುವ ಸಲುವಾಗಿ ಮೋಟಾರ್ ಕಾರುಗಳ ಡ್ರ್ಯಾವರರೂ ಕೂಡ ತಲೆಯೆತ್ತಿ ಹಲವು ಜನರನ್ನು ಕೊಂದುಹಾಕಿದ್ದರಂತೆ. ಅಲ್ಲಿ ಕೂಡುತ್ತಿದ್ದ ಜನರ ಸಂದಣಿಯನ್ನು ಕಾನೂನಿಗೆ ಸರಿಯಾಗಿ ವರ್ತಿಸುವಂತೆ ಮಾಡಲು ಪೋಲಿಸರಿಗೆ ಸಾಧ್ಯವಾಗುತ್ತಿರಲಿಲ್ಲ.

— ಇಟಲಿಯಾ ವಿಮಾನದಿಂದ ಇದುವರೆಗೂ ಯಾವ ವರ್ತಮಾನವೂ ಬಂದಿಲ್ಲ. ಅದನ್ನು ಹುಡುಕ ಹೋದವರು ಹಿಂದಿರುಗಿಮದಿಲ್ಲ.

— ಅಮೇರಿಕದ ಬ್ರೂಕ್‌ವಿಲ್ಲೆ ಎಂಬಲ್ಲಿ ಒಂದು ಮೂರು ವರುಷದ ಮಗುವು ಆಕಸ್ಮಾತ್ತಾಗಿ ನದಿಯ ನೆರೆಗೆ ಬಿದ್ದಿದ್ದಿತು. ಮೂರು ಗಂಟೆಗಳ ಸಮಯವು ದಾಟಿದ ಮೇಲೆ ಮಗುವಿನ ತಂದೆಗೆ ಈ ಸಂಗತಿಯು ತಿಳಿದು ಕೂಡಲೇ ಆತನು ನದೀ ತೀರಕ್ಕೆ ಹೋದನು. ಅಲ್ಲಿ ಮಗುವು ಜೀವಿಸಿಕೊಂಡಿತ್ತಲ್ಲದೆ ಸತ್ತು ಹೋಗಿರಲಿಲ್ಲ. ಮಗುವು ನೀರಿಗೆ ಬಿದ್ದೊಡನೆ ಯಾವುದೋ ಕಲ್ಲಿಗೆ ತಲೆತಾಗಿ ಹೃದಯ ಕಮಲದ ಕೆಲಸವೇ ನಿಂತು ಹೋದ ಕಾರಣ ಅದು ಮುಳುಗಲಿಲ್ಲವೆಂದು ಡಾಕ್ಟರರು ಅಭಿಪ್ರಾಯಪಡುವರು.

— 'ಇಂಗ್ಲಿಷ್ ರಿವ್ಯೂ' ಎಂಬ ಪತ್ರಿಕೆಯ ಸಂಪಾದಕನಾಗಿಯೂ ಪುಸ್ತಕಗಳನ್ನು ಬರೆಯುವವನಾಗಿಯೂ ಇದ್ದ ಮಿ. ಒಸ್ಟಿನ್ ಹೆಂಸನ್ ಎಂಬುವನು ಮೃತಪಟ್ಟನು.

— ಸ್ವಿಜರ್‌ಲೆಂಡಿನಲ್ಲಿ ಒಂದು ಪರ್ವತವನ್ನೇರಿ ಹೋಗಲು ಹಲವು ವರುಷಗಳಿಂದ ಪ್ರಯತ್ನಿಸುತ್ತಿದ್ದ ಜನರಲ್ಲಿ ನಾಲ್ವರು ಮೇಲಿನಿಂದ ಜಾರಿ [illegible] ಅಡಿ ಕೆಳಗಿರುವ ತಗ್ಗಿಗೆ ಹೊರಳಿಬಿದ್ದರು. ಅವರ ಮೃತ ದೇಹಗಳು ಇನ್ನೂ ದೊರಕಿಲ್ಲವಂತೆ.

— ಇಂಗ್ಲೆಂಡಿನ ಧನಿಕ ಕಾದಂಬರಿ ಕರ್ತನಾದ ಸ್ಟೇನಲಿ ವೇಮೇನ ಎಂಬವನು, ೯೯೫೦೦ ಸ್ಟರಲಿಂಗುಗಳುಳ್ಳ ಧನಿಕನು. ಇಷ್ಟು ಹಣವು [illegible] ಯಾರ ಕೂಡೆಯೂ ಇರುವುದಿಲ್ಲವಂತೆ.

— ಇಂಗ್ಲೀಷ್ ಕಾಲುವೆಯಲ್ಲಿ ಒಂದು ಜರ್ಮನಿಯ ಹಡಗವು ಒಂದು ಇಟೆಲಿಯ ಹಡಗಕ್ಕೆ ಬಡೆದು ಜರ್ಮನಿಯ ಹಡಗಕ್ಕೆ ಜಖಮಾಗಿರುತ್ತದೆ.

— ಜರ್ಮನಿಯ ವರ್ಜ್‌ಬರ್ಗಿನಲ್ಲಿ ಕೋವಿಮದ್ದನ್ನು ತಯಾರಿಸುವ ಒಂದು ಕಾರಖಾನೆಗೆ ಬೆಂಕಿ ಬಿದ್ದು ದೊಡ್ಡ ಅಪಘಾತವುಂಟಾಯಿತು. ನೂರಾರು ನೂರು ಜನರು ಮೃತಪಟ್ಟರು. ಹಲವು ಕಟ್ಟೋಣಗಳು ಬಿದ್ದುಹೋಗಿರುವವು.

— ಅಮೇರಿಕನರು ಹೊಸ ನಮೂನೆಯ ಒಂದು ಪಿಸ್ತೂಲನ್ನು ತಯಾರಿಸಿರುವರು. ಇದರಿಂದ ಮಿನಿಟಿಗೆ ೩೫ ಗುಂಡುಗಳನ್ನು ಹಾರಿಸಬಹುದು. ಇದಕ್ಕಾಗಿ ಬ್ರಿಟಿಷ ಸರಕಾರದವರು ೩೦೦೦ ಪೌಂಡುಗಳನ್ನು ಬಹುಮಾನವಾಗಿ ಕೊಟ್ಟಿರುವರು. ಕೋವಿಮದ್ದು ಇದರಲ್ಲಿ ತನ್ನಷ್ಟಕ್ಕೆನೇ ತುಂಬಿಕೊಳ್ಳುವುದು.

— ನಮ್ಮ ಚಕ್ರವರ್ತಿಯವರು ಕಳೆದ ಮಂಗಳವಾರದಿನ ಪೋರ್ಟ್ಸ್‌ಮೌತನ್ನು ಸಂದರ್ಶಿಸಿದರು. ಅಲ್ಲಿ ಅಸ್ಟ್ರೇಲಿಯದ ಹೊಸ ಕ್ರ್ಯೂಸರುಗಳನ್ನು ಪರೀಕ್ಷಿಸಿದರು. ಇನ್ನು ೧೬೫ನೇ ಇಸವಿಯಲ್ಲಿ ನೀರಿಗಿಳಿಸಲ್ಪಟ್ಟ 'ವಿಕ್ಟರಿ' ಎಂಬ ಹಡಗವನ್ನು ಸಂದರ್ಶಿಸುವರು. ಈ ಹಡಗಕ್ಕೆ ೧೬೫ ವರುಷಗಳ ಸರ್ವಿಸು ಆಯಿತು.

— ಲಂಡನಿನಿಂದ ಹಿಂದೂಸ್ಥಾನಕ್ಕೆ ಹೊರಡುತ್ತಿದ್ದ 'ಮಸೂಲಾ' ಎಂಬ ಸಾಮಾನುಗಳ ಹಡಗಿಗೆ ಬೆಂಕಿತಾಗಿದರೂ ಅರ್ಧಗಂಟೆಯೊಳಗೆ ಬೆಂಕಿಯನ್ನು ನೊಂದಿಸಿ ನಷ್ಟವುಂಟಾಗದಂತೆ ಮಾಡಿದರು.

— ಇಟೆಲಿಯ ಒಂದು ನಾಟಕ ಶಾಲೆಯ ಮಾಡು ಮುರಿದು ಬಿದು ಹಲವರು ಮೃತಪಟ್ಟರು. ಆಸ್ಪತ್ರೆಗೆ ಒಯ್ಯಲ್ಪಟ್ಟ ಜನರನ್ನು ಸದರ್ಶಿಸುವದಕ್ಕಾಗಿ ರಾಣಿಯವರು ಸ್ವತಃ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿ ರಾಣಿಯವರಿರುವಾಗಲೇ ಒಬ್ಬಿಬ್ಬರು ಮೃತಪಟ್ಟರು.

— ತಂಬಾಕ ನದಿಯು ಸಮುದ್ರಕ್ಕೆ ಕೂಡುವಲ್ಲಿ ಒಂದು ಕಠಿಣವಾದ ಸುಳಿ ಇದ್ದಿತು. ಒಂದು ಉಗಿಹಡಗವು ಈ ಸುಳಿಗೆ ಸಿಕ್ಕಿ ಕಲ್ಲಿಗೆ ಹೊಡೆಯಲ್ಪಟ್ಟಿತು. ಹಡಗವು ಮುಳುಗಿ ೪೦ ಜನರು ಅದರೊಂದಿಗೆ ನೀರು ಪಾಲಾದರು.

— ಬ್ರಿಟನಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಈಗ ಮೊದಲಿನವಕ್ಕಿಂತಲೂ ಇಪ್ಪತ್ತು ಸಾವಿರಕ್ಕೆ ಕಡಿಮೆಯಾಗಿದೆ. ಈಗ ಕೆಲಸವಿಲ್ಲದವರು ಒಂದು ಮಿಲಿಯ, ೨೩೩ ಸಾವಿರ ಜನರು. ಇವರಲ್ಲಿ ೯೮೪ ಸಾವಿರ ಜನರು ಗಂಡಸರು ಉಳಿದವರು ಹೆಂಗಸರು.

— ರಸ್ಯಾ ದೇಶದಲ್ಲಿ ಕಠಿಣ ತರದ ಬರವು ಬಿದ್ದಿರುತ್ತದೆ. ತಿನ್ನುವುದಕ್ಕೆ ಆಹಾರವು ಸಿಕ್ಕುವದಿಲ್ಲ. ಆದ ಕಾರಣ ಎಂಟು ಮಿಲಿಯ ಬುಶೆಲು ಗೋದಿಯನ್ನು ಕೆನಡಾ ರಾಜ್ಯದಿಂದ ತರಿಸಿರುವರು.

— ರಾಣಿ ಅಲೆಕ್ಸಾಂಡ್ರಾರವರ ಸ್ಮಾರಕಕ್ಕಾಗಿ ಏರ್ಪಡಿಸಿದ ನಿಧಿಯಲ್ಲಿ ಒಟ್ಟು ಇನ್ನೂರ ಮೂವತ್ತಮೂರು ಸಾವಿರ ಸ್ಟರ್ಲಿಂಗುಗಳು ಜಮೆಯಾಗಿರುವವು. ಇದಕ್ಕಾಗಿ ಹಲವು ರಾಜ್ಯಗಳಿಂದ ವಂತಿಗೆಯು ಬಂದಿದ್ದಿತು.

— ೧೯೨೯ನೇ ಇಸವಿಯ ಎಪ್ರಿಲ್ ತಿಂಗಳಿಂದ ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ವಿಮಾನ ಸರ್ವಿಸು ಪ್ರಾರಂಭವಾಗುವದು.

ಇನ್ನೊಂದು ದಿನ ನಡುಹಗಲಲ್ಲಿ ಕಾಯಕೋಟ್ಟು ರಂಗಪ್ಪಯ್ಯನವರು ತನ್ನ ಹೆಂಡತಿ ಸಹಿತ ಹತ್ತಿರ ಎಲ್ಲೋ ಹೋಗಿದ್ದಾಗ ಅವರ ಮನೆಹೊಕ್ಕು ಆಭರಣಗಳ ಕರಡಿಗೆ ಅಪಹರಿಸಿರುವರು; ಹತ್ತಿರ ಇತರ ಮನೆಗಳಿರುತ್ತಾ ಹಗಲಲ್ಲಿ ನಡೆದ ಕಳವು ಪ್ರಸಿದ್ಧ ಹಗಲು ಕಳ್ಳರಿಂದಲೇ ಸರಿ. ಅಂತೂ ಇಂತಹ ಕಳವುಗಳಾಗುತ್ತಿರುವುದನ್ನೆಣಿಸಿದರೆ, ಸುರತಕಲ್ಲಲ್ಲಿ ಒಂದು 'ಕಳ್ಳರಕೂಟವು ಬೆಳೆಯುತ್ತಿದೆ, ಎಂದು ತಿಳಿಯಬಹುದು. ಈ 'ಕಳ್ಳರಕೂಟದ ಶೋಧಕ್ಕಾಗಿ ಸಂಬಂಧ ಪಟ್ಟ ಅಧಿಕಾರಿಗಳು 'ಸಮರ್ಥಪತ್ತೇದಾರ'ರೆಂದೆನ್ನಿಸಿರುವವರನ್ನೇ ನಿಯಮಿಸಿದುದಾದರೆ ಲೋಕಕ್ಕೆ ಮಹೋಪಕಾರವು.

ಉಜಿರೆ:— ಇಲ್ಲಿ ಸುಮಾರು ಎರಡು ವರುಷಗಳಿಂದ ಇದ್ದ ಡಾಕ್ಟರ್ ಎವ್. ರಂಗಪ್ಪ ಕಾಮತರವರಿಗೆ ಬಡ್ತಿಯಾಗಿ ಸಂಪಾಜೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಮೆಡಿಕಲ್ ಅಫೀಸರರಾಗಿ ವರ್ಗವಾಗಿಯದೆ. ಇವರು ಬರೇ ಎರಡು ವರ್ಷಗಳಲ್ಲಿ ಇಲ್ಲಿಯ ಆಸ್ಪತ್ರೆಯನ್ನು ಬಹಳ ಯೋಗ್ಯ ಸ್ಥಿತಿಗೆ ತಂದು ಎಲ್ಲಾ ಜಾತಿಯವರ ಪ್ರೀತಿಗೆ ತುಂಬಾ ಪಾತ್ರರಾಗಿ ಯೋಗ್ಯ ಹೆಸರನ್ನು ಪಡೆದಿದ್ದರು. ಇವರು ಇಲ್ಲಿಯ ಜನರಿಗೆ ತುಂಬಾ ಸಹಾಯಕರಾಗಿದ್ದು ಬೇರೆ ಕಡೆಗೆ ವರ್ಗವಾದದ್ದು ನಮ್ಮ ಊರಿನವರ ದುರಾದೃಷ್ಟವೇ ಸರಿ. ಅವರ ಹೊಸ ಕೆಲಸದಲ್ಲಿ ದೇವರು ಅವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ!

ಕೆಲವು ಸಮಯದಿಂದ ಮಳೆ ಚೆನ್ನಾಗಿ ಬಾರದೆ ಕೃಷಕರಿಗೆ ತುಂಬಾ ಕಷ್ಟವಾಗಿತು. ಈಗ ಎರಡು ದಿವಸಗಳಿಂದ ಒಳ್ಳೆಯ ಮಳೆ ಸುರಿಯುತ್ತದೆ. ಬೆಟ್ಟುಗದ್ದೆಗೆಂದ್ಲವರ ಪುಣ್ಯ.

ಇಲ್ಲಿಯ ಬಂಗ್ಲೆಯಲ್ಲಿ ಓವರ್ಸಿಯರರ ಆಫೀಸು ಆಗಿಯದೆ. ಇನ್ನು ಮುಂದೆ ಜನರು waterfallನ ನೀರು ಹಾಳುಮಾಡಲಿಕ್ಕಿಲ್ಲವೆಂದು ಭಾವನೆ.

ಕಾಪು— ಕೋಟೆ ಸರ್ಕಲಿನಲ್ಲಿ ಜರಗಿದ ಉಡ್ಪಿ ತಾಲೂಕು ಬೋರ್ಡಿನ ಮೀಟಿಂಗಿನಲ್ಲಿ, ಈ ಊರಲ್ಲಿಯೂ ಒಂದು ರೂರಲ್ ಡಿಸ್ಪೆನ್ಸರಿಯಾಗಬೇಕೆಂದು ಪಾಸಾಯಿತಂತೆ. ಆದಷ್ಟಂತೆ ಬೇಗ ಮಾಡಲುಪಕ್ರಮಿಸಿದರೆ ಅದೆಷ್ಟೊ ಸಂತೋಷವಲ್ಲವೆ?

ಕಾಪು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ S. L.C. ಪರೀಕ್ಷೆಗೆ ನಿಂತ ೧೨ ಮಂದಿಯಲ್ಲಿ ೮ ಮಂದಿಗೆ ಯೋಗ್ಯತಾಪತ್ರಗಳು ದೊರಕಿವೆಯಂತೆ. ಇದು ಬಹಳ ಸ್ತುತ್ಯವೇ ಸರಿ.

ಈ ವರ್ಷವೂ ಕಾಲುನೋವಿನ ರೋಗವು ಜೋರಾಗಿಯದೆ. ಆಸ್ಪತ್ರೆಗೆ ಹೋಗುವ ಜನರಿಗೇನೂ ಕಮ್ಮಿಯಿಲ್ಲ.

ವಿವಿಧ ಸಮಾಚಾರಗಳು.

ಕಾಲುನಡಿಗೆಯಿಂದ ಭೂಪ್ರಯಾಣ.

ಅಮೇರಿಕನ್ ಸೈನಿಕನಾದ ವಿಲಿಯಮ್ ವುಲ್ಫನೆಂಬವನೋರ್ವನು ಒಂದು ಪಂಥದ ಸಲುವಾಗಿ ಕಾಲು ನಡಿಗೆಯಿಂದಲೇ ಭೂಪ್ರಯಾಣವನ್ನು ಏಳು ವರ್ಷಗಳಲ್ಲಿ ಮುಗಿಸುವನೆಂದು ಹೊರಟವನು, ಮೊನ್ನೆ ತಾನೆ ಮದರಾಸಿಗೆ ಬಂದಿದ್ದನು. ಈ ಪಂಥದಲ್ಲಿ ಗೆದ್ದರೆ ಆತನಿಗೆ ೫೦೦ ಪವನುಗಳ ಬಹುಮಾನವು ಲಭಿಸುವದಂತೆ. ಒಟ್ಟು ಆತನು ನಡೆಯಬೇಕಾದ ದೂರ ಒಂದು ಲಕ್ಷ ಮೈಲುಗಳು. ಸಿಲೋನಿನಿಂದ ಆತನು ಮದರಾಸಿಗೆ ಬಂದು ತಲಪಿದನು. ಈತನು ೧೯೨೫ನೇ ಇಸವಿಯಲ್ಲಿ ಲೊಸ್ ಎಂಗೆಲಿಸ್ ಪಟ್ಟಣದಿಂದ ಹೊರಟು ಇದು ವರೆಗೆ ಸುಮಾರು ೬೩,೦೦೦ ಮೈಲುಗಳಷ್ಟು ನಡೆದು ತೀರಿಸಿರುವನು. ಇನ್ನು ಮೂರು ವರುಷಗಳ ಅವಧಿಯಲ್ಲಿ ತನ್ನ ಪ್ರಯಾಣವನ್ನು ಮುಗಿಸುವನೆಂದು ಧೈರ್ಯವಾಗಿ ಹೇಳುತ್ತಿರುವನು. ಇದುವರೆಗೆ ಅವನು ಸಂಚರಿಸಿದ ದೇಶಗಳ್ಯಾವುವೆಂದರೆ ಮೆಕ್ಸಿಕೊ, ಯುನೈಟೆಡ್ ಸ್ಟೇಟ್ಸ್, ಕೆನಡಾ, ಹವಾಯಿ ದ್ವೀಪಗಳು ದಕ್ಷಿಣ ಸಮುದ್ರ ದ್ವೀಪಗಳು, ನ್ಯೂಜಿಲೇಂಡ್, ಆಸ್ಟ್ರೇಲಿಯಾ, ನ್ಯೂಗಿನಿಯಾ, ಫಿಲಿಫ್ಫಾನ್ಸ್, ಜಪಾನ್ ದ್ವೀಪ. ಈ ದೇಶಗಳಲ್ಲಿ ತನಗಾದ ಸಂಗತಿಗಳ ಅನುಭವವನ್ನು ಆತನು ಮದ್ರಾಸಿನಲ್ಲಿ ವಿವರಿಸಿದನು. ಮೆಕ್ಸಿಕೊವಿನಲ್ಲಿ ಕಳ್ಳರ ಕೂಟದಲ್ಲಿದ್ದು ಇವನು ಕೆಲವು ದಿನಗಳನ್ನು ಕಳೆದನಂತೆ. ಆಂಗ್ಲೇಯ ನಾಗರಿಕತೆಯು ಇನ್ನೂ ಪ್ರವೇಶಿಸದಿರುವ ನ್ಯೂಗಿನಿಯ ದೇಶದಲ್ಲಿ ಜನರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಸಣ್ಣ ಸಣ್ಣ ಅರಸರಿಂದ ಆಳಲ್ಪಟ್ಟು ಸುಖವಾಗಿರುವರೆಂದು ಇವನು ಅನ್ನುತ್ತಿರುವನು. ಅವನು ತಿನ್ನುವುದೆಂದರೆ ನೈಸರ್ಗಿಕವಾದ ಆಹಾರ. ಅಂದರೆ ಫಲಗಳು ಮತ್ತು ಮಾಂಸ. ಕಳೆದ ವರುಷದ ಅಂತ್ಯದ ಏಳು ತಿಂಗಳುಗಳನ್ನು ಚೀನಾ ರಾಜ್ಯದ ಒಳದೇಶಗಳನ್ನು ಸಂಚರಿಸುವುದರಲ್ಲಿಯೇ ಕಳೆದನು. ಚೀನದ ಜನರು ಅತಿಥಿಗಳನ್ನು ಸತ್ಕರಿಸುವರೆಂದೂ, ಉದ್ಯೋಗಪ್ರಿಯರೆಂದೂ ಇವನ ಅಂಬೋಣ. ಇವನು ಮದರಾಸಿನಲ್ಲಿ ಕೆಲವು ದಿನಗಳ ವರೆಗೆ ನಿಂತು ಅಲ್ಲಿಂದ ಮುಂದರಿದು ಹೋಗುವನು. ಹೋದಲ್ಲೆಲ್ಲ ಚೆನ್ನಾದ ಅಮೇರಿಕನ್ ಗಾಯನವನ್ನು ಹಾಡಿ ಅವನು ಜನರನ್ನು ಮರುಳುಗೊಳಿಸುವನು. ಹಿಂದೂದೇಶದ ಸಂಚಾರವನ್ನು ಮುಗಿಸಿ, ಪರ್ಸಿಯಾ, ಅರೇಬಿಯಾ, ಇಜಿಪ್ತ, ಟರ್ಕಿ, ರಸ್ಯಾ, ಯುರೋಪಿನ ರಾಜ್ಯಗಳು ಮೊದಲಾದುವುಗಳನ್ನು ಸಂಚರಿಸಿ, ಅಲ್ಲಿಂದ ಇಂಗ್ಲೆಂಡಿಗೆ ಹೋಗಿ, ಹಡಗದಲ್ಲಿ ಕುಳಿತು ತನ್ನ ಊರಿಗೆ ಹೋಗುವನು.

• • • •

ಸ್ಯಾಮನ್ ಬಹಿಷ್ಕಾರದ ಠರಾವು.

ಮದರಾಸಿನ ಇಂಡಿಯನ್ ಕ್ರಿಶ್ಚನರ ಒಂದು ಸಭೆಯು ಬಹಿರಂಗವಾಗಿ ನಡೆಯಿತು. ಸ್ಯಾಮನ್ ಕಮಿಶನು ಹಿಂದೂಸ್ಥಾನಕ್ಕೆ ಬಂದಾಗ ಹೇಗೆ ವರ್ತಿಸಬೇಕೆಂಬುದನ್ನು ನಿರ್ಣಯಿಸಿತು. ಈ ಸಂದರ್ಭದಲ್ಲಿ ದಿವಾನ್‌ಬಹದೂರ್ ಆರೋಗ್ಯಸ್ವಾಮಿ ಮುದಲಿಯಾರರೇ ಅಧ್ಯಕ್ಷರಾಗಿದ್ದರು. ಜನಸಂಖ್ಯೆಯಾದರೋ ಬಹಳವಾಗಿದ್ದಿತು. ಸರಿಯಾಗಿ ವಿಚಾರಿಸದೆ ಎಕ್ಸಿಕ್ಯೂಟಿವ್ ಕಮಿಟಿಯವರು ತಮ್ಮ ಮೆಮೊರಾಂಡಮನ್ನು ಕೊಟ್ಟುದು ತಪ್ಪೆಂದೂ, ಸ್ಯಾಮನ್ ಕಮಿಟಿಯನ್ನು ಬಹಿಷ್ಕರಿಸಬೇಕೆಂದೂ ನಿರ್ಣಯಗಳಾದವು. 'ಸ್ಯಾಮನ್ ಕಮಿಶನಿನ ಕುರಿತು ಇದುವರೆಗೆ ಮದರಾಸಿನಲ್ಲಿ ರೋಮನ್ ಕೆಥೊಲಿಕರ ಸಭೆ ನಡೆದುದಿಲ್ಲ. ಕೆಥೊಲಿಕ್ ಯೂನಿಯನಿನ ಎಕ್ಸಿಕ್ಯೂಟಿವ್ ಕಮಿಟಿಯವರು ತಮ್ಮ ಮೆಮೊರಾಂಡಮನ್ನು ಕಮಿಟಿಗೆ ಇಷ್ಟರೊಳಗೆ ಕೊಟ್ಟಿರುವರು. ಆದರೆ ಕಮಿಟಿಯು ಕ್ರಮಕ್ಕನುಸಾರವಾಗಿ ಈ ಕುರಿತು ಜನರಲ್ ಬೋಡಿಯ ವಿಚಾರವನ್ನು ಅವರು ತಿಳಿಯುವದು ಅಗತ್ಯವಿದ್ದಿತು ಆದರೆ ಅವರು ಹಾಗೆ ಮಾಡದಿದ್ದುದು ಅವರ ತಪ್ಪಾಗಿದೆ' ಎಂದು ಅಧ್ಯಕ್ಷರು ತಮ್ಮ ಸೂಚನೆಯನ್ನು ತಿಳಿಸದಿರಲಿಲ್ಲ. ಮಿ. ಡಿ. ಕೆಲಿಂದೆಯವರು ಕೊನೆಗೆ ಬಹಿಷ್ಕಾರದ ಠರಾವನ್ನು ಈ ರೀತಿಯಲ್ಲಿ ಮುಂದಕ್ಕೆ ತಂದರು.

'ನಮ್ಮ ದೇಶಕ್ಕೆ ಉಂಟುಮಾಡಿರುವ ಅಸಂಖ್ಯಾತ ಅನ್ಯಾಯಗಳನ್ನು ಗಣಿಸಿಯೂ, ಸ್ವರಾಜ್ಯವು ಪ್ರತಿಯೊಂದು ರಾಜ್ಯದ ಜನ್ಮಸಿದ್ಧವಾದ ಹಕ್ಕೆಂದೂ, ಸ್ಯಾಮನ್ ಕಮಿಶನು ಹಿಂದೂಸ್ಥಾನವನ್ನು ಬಿಗಿಹಿಡಿಯಲು ಬಂದಿರುವ ಬ್ರಿಟಿಷರೇ ಆಗಿರುವುದರಿಂದಲೂ, ಮದರಾಸಿನಲ್ಲಿ ವಾಸಿಸುವ ಕ್ರಿಸ್ತರ ಈ ಸಭೆಯು, ದೇಶದ ಇತರ ಹಲವು ಪಕ್ಷದವರ ನಿರ್ಣಯವನ್ನನುಸರಿಸಿ ಸ್ಯಾಮನ್ ಕಮಿಶನನ್ನು ಬಹಿಷ್ಕರಿಸಬೇಕೆಂದೂ, ಅವರೊಡನೆ ಯಾವ ಸಂಬಂಧವನ್ನು ಬೆಳೆಸಬಾರದೆಂದೂ ನಿರ್ಣಯಿಸಿರುವರು.' ಈ ಠರಾವನ್ನು ಸ್ವಾಮಿ ಮುದಲಿಯಾರರು ಅನುಮೋದಿಸಿದರು. ಮತ್ತು ಬಹುಮತವಾಗಿ ಮಂಜೂರಾಯಿತು. ಒಬ್ಬಿಬ್ಬರು ಇದನ್ನು ವಿರೋಧಿಸಿದರೂ ಬಹುಪಕ್ಷವು ಬಹಿಷ್ಕಾರದ ಕಡೆಗೇನೇ ಇದ್ದ ಕಾರಣ ಪ್ರಯೋಜನವಾಗಲಿಲ್ಲ.

• • • •

ಪರದೇಶಗಳಲ್ಲಿ ಖಾದಿಯ ಉಡುಪು.

ಪರದೇಶಗಳಿಗೆ ಹೋಗುವ ಹಿಂದುಗಳು ಖಾದಿಯನ್ನು ಉಡಬಹುದೋ, ಉಡಬಾರದೋ ಎಂಬ ಪ್ರಶ್ನೆಯು ಇನ್ನೂ ತೀರ್ಮಾನಿಸಲ್ಪಡದೆ ಉಳಿದಿರುತ್ತದೆ. ಈ ಕುರಿತು ದಿನೇ ದಿನೇ ಹೆಚ್ಚು ಹೆಚ್ಚು ಪ್ರಶ್ನೆಗಳೂ ಬರತೊಡಗಿವೆ. ಇನ್ನು ಪರಊರಿನಲ್ಲಿ ಸಂಚರಿಸ ಹೋದ ಹಲವು ಹಿಂದೀಯರು ಖಾದಿಯನ್ನೇ ಉಟ್ಟು ಪರದೇಶ ಭ್ರಮಣವನ್ನು ಮುಗಿಸಿರುವರು. ಅಹಮದಾಬಾದದ 'ಖಾದಿ ಪತ್ರಿಕೆ'ಯು ಇಂತಹ ಹಲವು ನಿದರ್ಶನಗಳನ್ನು ಕೊಡುವದು.

ಶ್ರೀಯುತ ರಾಮಜಿ ಹಂಸರಾಜರೆಂಬವರು ಇಂಗ್ಲೆಂಡಿಗೆ ಹೋಗುವಾಗ ತನ್ನ ಎಲ್ಲಾ ಉಡುಪನ್ನು ಖಾದಿಯಿಂದಲೇ ತಯಾರಿಸಿದರು. ಆದರೆ ಕೊನೆಯಲ್ಲಿ ಮಾತ್ರ ಅವರು ವಿದೇಶಿ ವಸ್ತ್ರದ ಒಂದು ಉಡುಪನ್ನು ಮಾಡಿಸಿದರು. ಆದರೆ ಅಷ್ಟೇ ಉತ್ತಮವಾದ ಖಾದಿಯನ್ನು ಕಳುಹಿಸಿಕೊಡುವ ಸಲುವಾಗಿ ಅವರು ಹಿಂದೂಸ್ಥಾನಕ್ಕೆ ಬರೆದಿದ್ದರು. ಕಳೆದ ತಿಂಗಳಲ್ಲಿ ಬಾಬು ರಾಜೇಂದ್ರ ಪ್ರಸಾದರೆಂಬವರು ಪೂರ್ಣ ಖಾದಿ ಉಡುಪಿನಿಂದ ಇಂಗ್ಲಾಂಡಿಗೆ ಹೊರಟುಹೋದರು.

ಇನ್ನು ಶ್ರೀಯುತ ನೀಲಕಂಠ ಮಶ್ರುವಾಲಾರೆಂಬವರು ತನ್ನ ಕುಟುಂಬದೊಡನೆ ಸ್ವಲ್ಪ ಕೆಲಸಕ್ಕಾಗಿ ಜಪಾನಿಗೆ ಹೋಗಿದ್ದರು. ಅವರ ಉಡಿಗೆಯೆಲ್ಲವೂ ಖಾದಿಯಿಂದಲೇ ತಯಾರಿಸಲ್ಪಟ್ಟಿದ್ದಿತು. ಅಲ್ಲಿ ಅವರು ಉಳಕೊಂಡಾಗ ಹಿಂದೂಸ್ಥಾನದಿಂದ ಬೇಕಷ್ಟು ಖಾದಿಯನ್ನು ಅವರು ತರಿಸಿಕೊಳ್ಳುತ್ತಿದ್ದರು. ಜಾಪಾನಿನಲ್ಲಾದರೂ ಇವರು ಬಿಳೀ ಖಾದಿ ಟೊಪ್ಪಿಯನ್ನೇ ಧರಿಸಿಕೊಳ್ಳುತ್ತಿದ್ದರು.

ಒಬ್ಬ ಪಾರ್ಸಿ ಗೃಹಸ್ಥರಾದ ಶೇಟ್ ಮೆಹರ್‌ಜಿಭಾ ನವ್ರೋಜಿ ಎಂಬವರು ಖಾದಿಯನ್ನುಟ್ಟೇ ಚೀನಾ ದೇಶಕ್ಕೆ ಹೋಗಿದ್ದರು.

ಈಗಲೂ ಕೂಡ ಲಂಡನ್, ಅಮೇರಿಕಾ, ಆಫ್ರಿಕಾ, ಅರೇಬಿಯಾ, ಮಲಯಾ, ಉತ್ತರ ಬೋರ್ನಿಯಾ, ಸಿಂಗಪುರ ಮೊದಲಾದ ಕಡೆಗಳಿಂದ ಖಾದಿಗೆ ಆರ್ಡರು ಬರುತ್ತಲೇ ಇದೆಯಂತೆ.

• • • •

ಗವರ್ನರರ ಸಿಮ್ಲಾ ಪ್ರಯಾಣ.

ಬಾರ್ಡೋಲಿಯ ಸತ್ಯಾಗ್ರಹದ ವಿಷಯವಲ್ಲಿ ಯಾವ ರೀತಿಯಲ್ಲಿ ನಡೆಯಬೇಕೆಂಬದನ್ನು ವ್ಯಾಸರಾಯರೊಡನೆ ವಿಚಾರಿಸುವ ಸಲುವಾಗಿ ಮುಂಬಾಯಿಯ ಗವರ್ನರರು ಸಿಮ್ಲಾಕ್ಕೆ ಹೋಗಿ ಹಿಂತೆರಳಿದರು, ಸುರತಿಗೆ ತಲಪಿ, ಅಲ್ಲಿನವರ ಸಂಗಡ ಈ ಕುರಿತು ಚರ್ಚಿಸುವರು. ಗವರ್ನರರು ವ್ಯಾಸರಾಯರೊಡನೆ ನಡೆಸಿದ ಸಂಭಾಷಣೆಯು ಪ್ರಕಟವಾಗಿಲ್ಲ. ಬರ್ಡೋಲಿಯ ಸ್ಥಿತಿಯಿಂದ ಗವರ್ನರರಿಗೆ ಬಹಳ ಬೇಜಾರಾಗಿಯದೆಂಬುದು ನಿಜ. ಶಾಂತಿಯಿಂದ ಒಪ್ಪಂದವು ನಡೆಯಬೇಕೆಂದು ಅವರೆಷ್ಟು ಉತ್ಸುಕರಾಗಿರುವರೋ, ವ್ಯಾಸರಾಯರೂ ಅಷ್ಟೇ ಉತ್ಸುಕರಾಗಿರುವರು. ಸರಕಾರದವರು ಮುಂದೆ ಬರ್ಡೋಲಿಯಲ್ಲಿ ಹೇಗೆ ವರ್ತಿಸುವರೆಂಬದನ್ನು ತಿಳಿದರೆ, ಅವರಿಬ್ಬರ ಸಂಭಾಷಣೆಯು ಏನಾಗಿದ್ದಿತೆಂಬುದನ್ನು ಕಲ್ಪಿಸಬಹುದು. ಒಪ್ಪಂದ ನಡೆಸಲು ವ್ಯಾಸರಾಯರ ಪೂರ್ಣ ಸಮ್ಮತಿಯು ಅವರಿಗೆ ದೊರೆತಿರುವದೆಂಬುದು ನಿಸ್ಸಂಶಯ.

ಗವರ್ನರರನ್ನು ಎದುರುಗೊಳ್ಳಲು ಸುರತಿಗೆ ಬರಬೇಕೆಂದು ಮಿ. ವಲ್ಲಭ್ಭಾ ಪಟೇಲರಿಗೆ ಗುಜರಾತಿನ ಕಮಿಶನರರ ಪತ್ರವು ಬಂದಿರುತ್ತದೆ. ಆದ ಕಾರಣ ತೊಂದರೆಗಳೆಲ್ಲವೂ ಕಳೆದು ಹೋದುವೆಂದು ಭಾವಿಸಬೇಕು.

ನಾನ್ ಅಫೀಸಿಯಲ್ ವಿಚಾರಣಾ ಕಮಿಟಿಯವರು ಪುನಃ ಆದಿತ್ಯವಾರ ತಮ್ಮ ಕರ್ತವ್ಯವನ್ನು ಪ್ರಾರಂಭಿಸಿದರು. ಹಲವು ಸಾಕ್ಷಿಗಾರರನ್ನು ಪ್ರಶ್ನಿಸಿ, ಅವರ ಹೇಳುವಿಕೆಯನ್ನು ಬರೆದುಕೊಂಡರು. ಮಧ್ಯಾಹ್ನದಿಂದ ೫ ಘಂಟೆಯ ತನಕ ಈ ರೀತಿಮಾಡಿ ಸಾಯಂಕಾಲ ಮೆಂಬರರು ಮುಂಬಾಯಿಗೆ ತೆರಳಿದರು.

ಮಹಾತ್ಮಾ ಗಾಂಧಿಯವರು ನವಜೀವನದಲ್ಲಿ ಬರೆಯುವರೇನೆಂದರೆ:- ಸರಕಾರದವರು ಇನ್ನೂ ಕಠಿಣೋಪಾಯಗಳನ್ನು ಕೈಕೊಳ್ಳುವ ಸಲುವಾಗಿ ಸದ್ಯಕ್ಕೆ ಜಪ್ತಿಯನ್ನು ನಿಲ್ಲಿಸಿರುವರೆಂದು ವರ್ತಮಾನವಿದೆ. ಆದರೆ ಸರಕಾರದವರ ಉಪಾಯಗಳಿಂದ ಸತ್ಯಾಗ್ರಹಿಗಳಿಗೆ ಬಾಧೆಯಿರಲಾರದು. ಸತ್ಯಾಗ್ರಹಿಗಳು ಇನ್ನಷ್ಟು ಧೈರ್ಯದಿಂದ ಎದುರಾಗಿ, ಸರಕಾರದವರಿಗೆ ಸೊಪ್ಪುಹಾಕಬಾರದು' ಎಂದು. ಇಷ್ಟೇ ಅಲ್ಲದೆ ಅವರು ಸತ್ಯಾಗ್ರಹಿಗಳನ್ನು ಚೆನ್ನಾಗಿ ಅಭಿನಂದಿಸುವರು.

ವಿಶೇಷ ವರ್ತಮಾನ!

ದರೋಡೆಕಾರರನ್ನು ದಬ್ಬಾಳಿಸಿದ್ದು.

ಬರ್ಮಾದೇಶದ ಮೋಬಿನ್ ಎಂಬ ಸ್ಥಳದ ಉತ್ತರ ದಿಕ್ಕಿನಲ್ಲಿರುವ ಒಂದು ಹಳ್ಳಿಯ ನಿವಾಸಿಕನೋರ್ವನ ಮನೆಗೆ ಡಕಾಯಿತರು ನುಗ್ಗಿದರು. ಡಕಾಯಿತರು ಬಂದು ಬಾಗಿಲನ್ನು ಒಡೆದು ಒಳಕ್ಕೆ ನುಗ್ಗಿದೊಡನೆ ಮನೆಯ ಯಜಮಾನನೂ ಆತನ ಮೂವರು ಹೆಣ್ಣು ಮಕ್ಕಳೂ, ಒಬ್ಬ ಗಂಡು ಮಗನೂ, ಮೊಮ್ಮಕ್ಕಳೂ ಅವರಿಗೆ ಎದುರಾಗಿ ಕಾದಾಡಿದರು. ಯಜಮಾನನು ಹಣ್ಣು ಹಣ್ಣು ಮುದುಕನು; ಆತನ ಮಕ್ಕಳ ಪ್ರಾಯವೇ ೬೦ ವರ್ಷಗಳಿಗೆ ಏರಿದ್ದಿತಂತೆ. ಡಕಾಯಿತರೊಡನಿದ್ದುದು ಕೋವಿಗಳು; ಆದರೆ ಮನೆಯವರೊಡನೆ, ಈಟಿ ಬರ್ಚಿ ಮೊದಲಾದವುಗಳು. ಗಾಯಗಳಾದರೂ ಲಕ್ಷಿಸದೆ ವೀರ ಮನೆಯಾಳುಗಳು ಧೈರ್ಯದಿಂದ ಅವರೊಡನೆ ಕಾದಾಡುವದನ್ನು ಕಂಡು ಡಕಾಯಿತರು ಬರಿಕೈಯಿಂದ ಕಾಲಿಗೆ ಬುದ್ಧಿ ಹೇಳಿದರು. ಹಳ್ಳಿಯ ಇತರರು ಬಂದು ಗಾಯಹೊಂದಿದವರನ್ನು ಆಸ್ಪತ್ರೆಗೆ ಕೊಂಡೊಯ್ದರು. ಗವರ್ನರ ಧೊರೆಗಳು ಕೂಡ ಈ ವೀರಪುರುಷರ ಸಾಹಸಕ್ಕೆ ಮೆಚ್ಚಿ ಅಭಿನಂದನೆಯ ವಾರ್ತೆಯನ್ನು ಕಳುಹಿಸಿರುವರಂತೆ. ನಿಜವಾಗಿಯೂ ಧನ್ಯರಿವರು.

ಮಿ. ಹಾರ್ನ್ಸ್ ಹೋರ್ನರು ಕ್ಷಮೆ ಬೇಡಿದರು.

ಮಿ| ಹಾರ್ನ್ಸ್ ಹೋರ್ನರು ತಾತಾ ಕಂಪೆನಿಯ ಮಜೂರರ ಕುರಿತಾಗಿ ಮಾತನಾಡಿರುವುದರಿಂದ ಹಿಂದೂಗಳಿಗೆ ಮನೋವೇದನೆಯನ್ನು ಉಂಟುಮಾಡಿಯದೆಂಬುದನ್ನು ಅವರೀಗ ತಿಳಿದಿರುವರು. ತಾನು ಸರಿಯಾಗಿ ಪರೀಕ್ಷಿಸದೆ ಹಾಗೆ ಮಾತನಾಡಿದುದೆಂದೂ, ಅವರ ಮೊದಲನೆ ಹೇಳಿಕೆಯು ನಿಜವಾಗಿಲ್ಲವೆಂದೂ, ಅವರು ಬಹಳ ಪಶ್ಚಾತ್ತಾಪ ಪಡುತ್ತಿರುವರು. ಅಂದು ತಾನು ಹೇಳಿದ ಮಾತುಗಳನ್ನು ಈಗ ಹಿಂತೆಗೆಯುವರಂತೆ. ಮೊದಲಿನ ಸಲ ಅವರ ಆ ವಿಮರ್ಶೆಯನ್ನು ಹೇಗೆ ಹಿಂದೂಸ್ಥಾನದ ಪ್ರೆಸ್ಸಿನ ಜನರು ಪ್ರಕಟಗೊಳಿಸಿದರೊ ಹಾಗೆಯೇ ಈ ಸಲವೂ ಅವರು ಕ್ಷಮೆಬೇಡಿ ಪಶ್ಚಾತ್ತಾಪ ಪಡುವದನ್ನು ಸರ್ವರಿಗೂ ತಿಳಿಯಪಡಿಸಬೇಕೆಂದು ಅವರ ಅರಿಕೆ. ಆದರೂ ತಾತಾ ಕಂಪೆನಿಯವರು ಹೂಡಿದ ವ್ಯಾಜ್ಯವು ಮುಂದುವರಿಯುವುದು. ಅವಿಚಾರದಿಂದ ಹಿಂದುಗಳ ಮೇಲೆ ದೋಷಾರೋಪಣೆ ಮಾಡುವವರು ಅವಮಾನಕ್ಕೀಡಾಗುವರೆಂದು ಇನ್ನಾದರೂ ವಿದೇಶೀಯರು ಚೆನ್ನಾಗಿ ತಿಳಿದುಕೊಳ್ಳಲಿ!

ಮುಂಬಾಯಿ ಗಿರಣಿಯಾಳುಗಳ ಮುಷ್ಕರ.

ಮುಂಬಾಯಿಯ ಕೆಲವು ಗಿರಣಿಗಳಲ್ಲಿ ಕೆಲಸವು ಪುನಃ ಪ್ರಾರಂಭವಾಗುವುದೆಂದೂ ಮುಷ್ಕರಕ್ಕಿಂತ ಮೊದಲು ಕೂಲಿಗಳಿಗೆ ಕೊಡುತ್ತಿದ್ದ ಸಂಬಳವನ್ನು ಕೊಡುವರೆಂದೂ ಒಂದು ವರ್ತಮಾನ. ಎಲ್ಲಾ ಗಿರಣಿಗಳಲ್ಲಿಯೂ ಒಂದೇ ಸಲ ಕೆಲಸವು ಪ್ರಾರಂಭವಾಗಬೇಕೆಂದು ಮುಷ್ಕರ ಹಾಕಿದವರೆಲ್ಲರೂ ಸಭೆಕೂಡಿದರು. ಅಂತೆಯೇ ಗಿರಣಿಗಾರರೂ ಸಭೆ ಕೂಡಿ ಒಪ್ಪಂದದ ಹೊಸ ಶರ್ತಗಳ ಕುರಿತು ಚರ್ಚಿಸಿದರು.

ರೈಲುವೇ ಕೆಲಸಗಾರರು.

ಮುಂಬಾಯಿಯ ಜಿ. ಐ. ಪಿ. ರೈಲುವೇ ಕೆಲಸಗಾರರು ಕಲ್ಯಾಣದಲ್ಲಿ ಒಂದು ಸಭೆಕೂಡಿ, ಇದೇ ರೈಲುವೇ ಕಂಪೆನಿಯ ಕೆಲಸಗಾರರು ಭೂಸ್ವಾಲದಲ್ಲಿ ಸಭೆಕೂಡಿ ಅಂಗೀಕರಿಸಿದ ಠರಾವುಗಳನ್ನೇ ಇವರೂ ಮಂಜೂರುಮಾಡಿದರು. ಸೆಕ್ಯೂರಿಟಿ, ವೈದ್ಯಪರೀಕ್ಷೆ, ಕಡಿಮೆಯಾದರೆ ಎಷ್ಟು ಸಂಬಳ, ದಿನಕ್ಕೆ ೮ ಗೆಂಟೆಗಳ ಕೆಲಸ, ಜುರುಮಾನೆ ವಿಧಿಸುವಿಕೆಯ ಕಾನೂನನ್ನು ತೆಗೆದುಹಾಕುವಿಕೆ, ಮೊದಲಾಗಿ ನಿರ್ಣಯಿಸಿದರು. ಇದನ್ನು ಅಧಿಕಾರಿಗಳು ಲಕ್ಷಿಸದಿದ್ದರೆ, ಮುಂದೆ ಮಾಡಬೇಕಾದುದನ್ನು ಮಾಡಿಯೇ ತೀರಿಸುವರಂತೆ. ಮಾಡುವದೇನು? ಸತ್ಯಾಗ್ರಹ. ಎಲ್ಲರೂ ಸತ್ಯಾಗ್ರಹ ಮಾಡುವಾಗ ಇವರೇಕೆ ಸುಮ್ಮನಿರುವರು?

ನಿರ್ದಯಾತ್ಮಕ ಮನುಷ್ಯನು.

ಬೆಂಗಳೂರಿನಲ್ಲಿ ಒಬ್ಬ ಬಡಗಿಯು ಇನ್ನೊಬ್ಬ ಬಡಗಿಯ ಮನೆಯಲ್ಲಿ ವಾಸವಾಗಿದ್ದನು. ಎರಡನೆಯ ಬಡಗಿಯ ಮಗಳನ್ನು ಮದುವೆಮಾಡಿಕೊಳ್ಳಬೇಕೆಂದು ಈತನಿಗೆ ಮನಸ್ಸಿದ್ದರೂ ಆಕೆಯನ್ನು ಬೇರೊಬ್ಬನಿಗೆ ಕೊಡುವದೆಂದು ನಿಶ್ಚಯವಾಗಿ ಹೋಗಿದ್ದಿತು. ಆ ಹುಡುಗಿಯೊಡನೆ ಬಡಗಿಯು ಅನೇಕ ವಿಧದಲ್ಲಿ ಕೇಳಿಕೊಂಡರೂ ಆಕೆಯು ತನ್ನ ನಿಶ್ಚಯವನ್ನು ಮುರಿಯಲೊಪ್ಪಲಿಲ್ಲ. ಅದಕ್ಕಾಗಿ ಈ ಸೇಡು ತೀರಿಸಲು ಆ ಕಠಿಣ ಹೃದಯದವನು ರಾತ್ರೆ ಮಲಗಿದಾಗ ಆಕೆಯ ಕುತ್ತಿಗೆಯನ್ನು ಕಡಿದು ಓಡಿಹೋದನು. ಮರುದಿನ ಎಲ್ಲಿ ಹುಡುಕಿದರೂ ಆತನು ಸಿಕ್ಕಲಿಲ್ಲ; ಸಾಯಂಕಾಲ ತಾನಾಗಿಯೇ ಪೋಲೀಸ್ ಸ್ಟೇಶನಿಗೆ ಬಂದು ತನ್ನ ತಪ್ಪನ್ನು ಒಪ್ಪಿಕೊಂಡನು.

ಪ್ರಕಟಣೆ.

ದ. ಕ. ಜಿಲ್ಲಾ ಸಬೋರ್ಡಿನೇಟು ಕೋರ್ಟಿನಲ್ಲಿ
S. C. ನಂಬ್ರ 106/1928.
ರಾಮಕೃಷ್ಣ ಮಂಜೇಶ್ವರರಾವ್ ಕ್ಷದೆಕರ್—ವಾದಿ
ಮತ್ತು
1. ವಿಠಪ್ಪಶೆಟ್ಟಿ, 2. ಜಾರಪ್ಪಶೆಟ್ಟಿ, 3. ಅಮ್ಮುಶೆಟ್ಟಿ
4. ಸುಬ್ಬಯ್ಯಶೆಟ್ಟಿ, 5. ಲಕ್ಷ್ಮಿ, 6. ಕೊರಗ,
7. ಚಿಕ್ಕಯ್ಯ. } ಪ್ರತಿವಾದಿರು

ಮೇಲೆ ಕಾಣಿಸಿದ ವಾದಿಯು ಪ್ರತಿವಾದಿರ ಮೇಲೆ ಹುಟ್ಟುವಳಿ ವಗೈರೆ ಬರಮಾಡಿಕೊಳ್ಳುವರೆ ದಾಖಲ್ಲು ಮಾಡಿರುವ ವ್ಯಾಜ್ಯವು ತಾ. 30—7—1928ಕ್ಕೆ ತನ್ನಿಗೆ ಇಟ್ಟದೆ. ಪ್ರತಿವಾದಿರು ಆ ದಿನ ಸ್ವತಹ ಅಥವಾ ವಕೀಲರ ಮುಖಾಂತರ್ತ ತಮಗಿರುವ ಆಕ್ಷೇಪಣೆ ಹೇಳಿಕೊಳ್ಳಬಹುದು.

K. R. Achar.
Vakil for Pltf.

Chikmagalur Public Conveyance Motor Service.

CHIKMAGALUR.

ಚಿಕ್ಕಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವೀಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) [illegible] ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 [illegible] ಮೂಡಿಗೆರೆ, [illegible] ಮಾರ್ಗವಾಗಿ [illegible] ಮಧ್ಯಾಹ್ನ 1 ಗಂಟೆ [illegible] ಪ್ರಧಾನ ಕಂಪೆನಿಯಾದ [illegible] ಉಪ್ಪಿನಂಗಡಿ [illegible] ಗುರುವಾಯನಕೆರೆ, ಮೂಡ ಬಿದರೆ, [illegible] ಬಂಟವಾಳ [illegible]

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ [illegible] 4 ಗಂಟೆ [illegible] ವಿಶ್ರಾಂತಿಗೆ 1½ ಗಂಟೆ [illegible] ಮೂಡಿಗೆರೆಗೆ 9 ಗಂಟೆಗೆ, [illegible] 10 [illegible] 12-30ಕ್ಕೆ [illegible] 1-30ಕ್ಕೂ [illegible] ಮಂಜೇಶ್ವರ, [illegible]

(3) [illegible] ಲಿಮಿಟೆಡ್ [illegible] ಸ್ಟೇಶನಿಗೂ 12 ಘಂಟೆಗೆ [illegible] 12-30ಕ್ಕೆ [illegible] 2-30ಕ್ಕೆ [illegible] ಚಿಕ್ಕಮಗಳೂರಲ್ಲಿ [illegible] ಚಿಕ್ಕಮಗಳೂರಿನಿಂದ [illegible] ಕಡೂರಿನ [illegible] ಪಂಡರಪೂರ್ [illegible]

ಚಿಕ್ಕಮಗಳೂರಿನಿಂದ [illegible] 10 ಘಂಟೆಗೆ ಕಡೂರಿಗೆ ಸೇರಿ [illegible] ಕಡೆಗ [illegible] 8-30ಕ್ಕೆ [illegible]

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ [illegible] ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, [illegible] ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ

ಟಿಕ್ಕಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ, ಪ್ರತಿದಿನವೂ ಮೂರಾವರ್ತಿ ಕಂಬಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangulore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾಶಾಸ್ತ್ರೀಯ ವಿವರಣ

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮ ವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿ ಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀ ಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿ ಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನ ಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖ ಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮ ಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನ ವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯೂ ದೇಹದಾರ್ಢ್ಯವುಂಟಾಗುವಂತೆ ತೆಗೆದು ಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗ ಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯ ರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ನಾ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲ ದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾ ಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರ ಹಾಂತ ದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷೆಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. [ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೬ಆಣೆ

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗ ದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂತ ಚಾತುರ್ಯವಾದ ವಿನೋದರಸ ಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವ ಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯು ವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚುಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನು ಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು.

ಕ್ರಯ ೧ಕ್ಕೆ ೨—೦—೦ ಟಪ್ಪಾಲು ಹಾಸಲು ೬ಆಣೆ.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ ಸಚಿತ್ರ ಸ್ತ್ರೀ ಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದು ಕೊಳ್ಳಬಹುದು. ಸ್ತ್ರೀಯರ ಅದ್ಭುತಚಾತುರ್ಯವು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸ್ತ್ರೀ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರು ವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರು ತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯ ಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕಾಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡು ತ್ತಿರುವ ಅನೇಕ ಅದ್ಭುತ ಉಂಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯ ದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇವನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯೂ ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವುದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦ ಟಿ. ಹಾಸಲು ೬ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರ ವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು ಶಿವ ಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದ ವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಆರೋಗ್ಯಶಾಲಿಯಾದ ಹುಡುಗಿಯು ಸುಖಿಯಾದ ತಾಯಿಯಾಗುವಳು.

ಇಂದಿನ ಹುಡುಗಿಯೇ ಮುಂದಿನ ತಾಯಿಯು. ಸಣ್ಣ ಹುಡುಗಿ ಯಾಗಿದ್ದು, ಹೆಂಗಸಾಗಲು ತೊಡಗುವಾಗಲೇ ಆರೋಗ್ಯ ಸೂತ್ರಗಳಿಗನು ಸಾರವಾಗಿ ವರ್ತಿಸಿದರೆ ಮುಂದಕ್ಕೆ ಸುಖಿಯಾಗಿ ಬಾಳಬಹುದು. ತಾವು ಮದುವೆಯಾದೊಡನೆ ಸಣ್ಣವರಾಗಿರುವಾಗ "ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ" ದೊರೆಯಲಿಲ್ಲವೆಂದು ಪಶ್ಚಾತ್ತಾಪಪಟ್ಟು ಹಲವು ಸ್ತ್ರೀಯರು ನಮಗೆ ಪತ್ರಬರೆದಿರುವರು. ಈ ವಿಷಯವನ್ನು ಚೆನ್ನಾಗಿ ನೆನಪಿಗೆ ತಂದು ಹೆತ್ತವರು ತಮ್ಮ ಮಕ್ಕಳು ಚಿಕ್ಕವರಾಗಿರುವಾಗಲೇ ಜಾಗರೂಕ ರಾಗಿರಬೇಕು.

ಫೆಲೂನಾ ಮಾತ್ರೆಗಳು

ಹೆಂಗಸರಿಗೆ ಮಾತ್ರ, ಎಲ್ಲೆಡೆಯಲ್ಲಿಯೂ, ಹೆಂಗ ಸರ ನಂಬಿಗೆಯನ್ನು ಗಳಿಸಿದೆ. ಎಲ್ಲಾ ಪ್ರಾಯದ(ಚಿಕ್ಕವರು, ನಡು ಪ್ರಾಯದವರು, ವೃದ್ಧರು) ಸ್ತ್ರೀಯರಿಂದ ಬರುವ ಅಸಂಖ್ಯಾತ ಕೃತಜ್ಞತಾ ಪತ್ರಗಳಿಂದ, ಅವುಗಳಿಂದಾಗುವ ಆಶ್ಚರ್ಯ ಪರಿಣಾಮವು ವಿಶದವಾಗುವದು. ಸೌಖ್ಯತೋರುವ ಆಶೆಯನ್ನೇ ತೊರೆದಿರುವಾಗ ಈ ಮಾತ್ರೆಗಳು ಮಾಡಿದ ವಿಶೇಷ ಸೌಖ್ಯತೆ ಯನ್ನು ವಿವರಿಸಲು ಸಾಧ್ಯವಿಲ್ಲ.

ಸ್ತ್ರೀಯರ ಔಷಧಿಯು.

ಸ್ತ್ರೀಯರ ಕೋಮಲ ಇಂದ್ರಿಯಗಳನ್ನು ಸಂಪಡಿಸಿ, ಬಲ ಪಡಿಸುವವು. ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ. ಹೆಂಗಸಿನ ಆ ಪ್ರಾಯ, ಈ ಪ್ರಾಯಕ್ಕೆಂದು ಮಾಡಲ್ಪಡದೆ ಚಿಕ್ಕಂದಿನಿಂದ ಕಡೆಯ ವರೆಗೂ ಸೇವಿಸಲು ಅನು ಕೂಲವಾಗಿ ಮಾಡಲ್ಪಟ್ಟಿವೆ. ಅವು ಸಂಸಾರ ಜೀವನದಲ್ಲಿ ಹೆಂಗ ಸನ್ನು, ಸುಸಜ್ಜಿತಳನ್ನಾಗಿಯೂ ಸುಖಿಯಾಗಿಯೂ ಮಾಡುವವಲ್ಲದೆ ಭವಿಷ್ಯಜ್ಜೀವನದಲ್ಲಿ ಅವಳೊಂದಿಗೆ ಇದ್ದು ಉತ್ಸಾಹಿತ, ಸಂತೋಷ ಪೂರ್ಣ, ಮತ್ತು ಸ್ಥಿರವಾದ ಆರೋಗ್ಯವನ್ನು ಒದಗಿಸುವವು.

ಸ್ತ್ರೀ ಜಾತಿಗೆ ಸರ್ವಸಾಧಾರಣವಾಗಿ ಇದ್ದೇ ಇರುವ ಕಾಹಿಲೆಯಿಂದ ಪೀಡಿತರಾದ ಸ್ತ್ರೀ ವಾಚಕರು, ಇವುಗಳನ್ನು ಉಪಯೋಗಿಸುವುದರಿಂದ ತ್ವರಿತ ಗುಣವನ್ನು ಹೊಂದುವರು. ಫೆಲೂನಾ ಮಾತ್ರೆಗಳು ಹುಡುಗಿಯ ಗಲ್ಲಗಳ ಮೇಲೆ ಗುಲಾಬಿ ಬಣ್ಣವನ್ನು ತಂದು ತಾಯಿಯಾಗಬೇಕೆಂದು ಆತುರಳಾದ ಅವಳ ಮನೋರಥವನ್ನು ಪೂರಯಿಸಿ, ಪುಷ್ಟ ಳನ್ನಾಗಿ ಮಾಡಿ ಸಂತೋಷಮಯವಾದ ಆರೋಗ್ಯವನ್ನು ಕೊಟ್ಟು, ಸುಖಿಯನ್ನಾಗಿ ಮಾಡುವವು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್‌ಗಳಿಂದಲೂ ದೊರಕುವವು.

ಬಾಟಲಿಗೆ ರೂ. 2/4.

ಮುಖ್ಯ ವಿತರಕರು— ಪಟೇಲ್ ಮತ್ತು ಧೋಂಡಿ ಪೋಸ್ಟ್ ಆಫೀಸು ಬೊಕ್ಸ 538, ಮುಂಬಾಯಿ.

ಮದರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೊ.,
260 ಬ್ರಾಡ್ವೇ ಬಜಾರ್ ರೋಡ್, ಮದರಾಸು.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 85.

ರೂಪಾಯಿ 35 ಮತ್ತು ಅದಕ್ಕೆ ಮೀರಿದ ಎಸ್. ಬಿ. ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 33 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವೊಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನು ಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು.

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,
331 ಅಬ್ದುರ್ ರಹಿಮಾನ್ ರಸ್ತೆ,
ಮುಂಬಾಯಿ 3.

WANTED.

"CANARA BANK SHARES"

Intending sellers please communicate stating their lowest quotations to—

D. R. Rau,
Civil Surgeon, TRICHUR.

Morris Cowly four seater in good order for sale, owner purchasing bigger car. Any reasonable offer accepted.

D. R. RAU,
Civil Surgeon, TRICHUR.

ಬಾಗಲಕೋಟೆಯಲ್ಲಿ ರನೆಯ ಆಗಸ್ಟದಲ್ಲಿ ಜರಗುವ ಅಖಿಲ ಕರ್ನಾಟಕ ವ್ಯಾಪಾರಿ ಪರಿಷತ್ತಿನಿಂದಾಗುವ

ಲಾಭಗಳೇನು?

ಪ್ರಕಟನಾ ನಂಬರ ೨.

ಅಖಂಡ ಕರ್ನಾಟಕ, ಸಂಯುಕ್ತ ಕರ್ನಾಟಕ, ಅಖಿಲ ಕರ್ನಾ ಟಕ ಎಂಬೀ ಶಬ್ದಗಳು ನಮ್ಮಲ್ಲಿ ಅತ್ತಿತ್ತ ರೂಢವಾಗಿವೆಯಷ್ಟೆ! ಆದರೆ ಕರ್ನಾಟಕ ಏಕೀಕರಣದ ಈ ದ್ಯೋತಕವು ಕೇವಲ ರಾಜಕೀಯ ರಣಾಂಗ ಣದಲ್ಲಿ ಉಳಿಯದೇ ನಮ್ಮ ಸಾಮಾಜಿಕ, ಉದ್ಯೋಗೀಕ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಹರಡಿಕೊಳ್ಳಲೇಬೇಕಾಗಿದೆ. ಸರಕಾರದವರು ನಮ್ಮ ಪ್ರಾಂತವನ್ನು ಪ್ರತ್ಯೇಕವಾಗಿ ಮಾಡುವ ವರೆಗೆ ನಾವು ಕೈಲಾಗದವರಂತೆ ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲವೆಂಬ ಮಾತಿಗೆ ತಾವು ಒಪ್ಪುವ ರಾಗಿ ನನ್ನ ವಿಶ್ವಾಸವಿದೆ. ಆದುದರಿಂದ ನಮ್ಮ ಜೀವಿತಕ್ಕೆ ಸಂಬಂಧಪಟ್ಟ ಪ್ರತಿಯೊಂದರಲ್ಲಿಯೂ ಅಖಂಡ ಕರ್ನಾಟಕದ ಭಾವನೆಯೂ ಅದರ ಫಲಗಳೂ ನಮಗೆ ದೊರೆಯುವಂತೆ ನಾವೀಗ ಪ್ರಯತ್ನಿಸಬೇಕಾಗಿದೆ.

ಇದರಿಂದಾಗುವ ಲಾಭಗಳು.

೧ ಕರ್ನಾಟಕದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಪದಾರ್ಥಗಳು ಹುಟ್ಟುತ್ತವೆಂಬುದು ಗೊತ್ತಾಗುವುದು; ಇದರಿಂದ ಕರ್ನಾ ಟಕದ ವ್ಯಾಪಾರಕ್ಕೆ ಅನುಕೂಲವಾಗುವುದು.

೨ ಅಖಿಲ ಕರ್ನಾಟಕಕ್ಕಾಗಿ ವರ್ತಕರ (Chamber of commerce)ವನ್ನು ಸ್ಥಾಪಿಸಲನುವಾಗುತ್ತದೆ.

೩ ವರ್ತಕ ಸಂಘಗಳ ವತಿಯಿಂದ ಮುಂಬೈ, ಮದ್ರಾಸ, ಕೊಡಗು ದಿಲ್ಲಿಗಳಲ್ಲಿಯ ನ್ಯಾಯವಿಧಾಯಕ ಸಭೆಗಳಿಗೆ ಕರ್ನಾಟಕದ ಪ್ರತಿನಿಧಿ ಗಳನ್ನು ಕಳಿಸಲು ಮಾರ್ಗವಾಗುತ್ತದೆ.

೪ ಬಂದರವನ್ನು ಸ್ಥಾಪಿಸಿ ರೈಲ್ವೆಯ ಅನುಕೂಲತೆಗಳ ಬಗ್ಗೆ ಸರಕಾರವನ್ನು ಒತ್ತಾಯಪಡಿಸಲಿಕ್ಕೆ ಬರುತ್ತದೆ.

೫ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಒಂದೇ ಬಗೆಯ ಅಳತೆ ತೂಕಗಳು ನಡೆಯುವಂತೆ ಏರ್ಪಡಿಸಲು ಅನುವಾಗುತ್ತದೆ.

೬ ಕರ್ನಾಟಕದ ವಿಮಾ ಕಂಪನಿ, ಕರ್ನಾಟಕದ ಬ್ಯಾಂಕುಗಳನ್ನು ಸ್ಥಾಪಿಸುವದು; ಕರ್ನಾಟಕದಲ್ಲಿ ವ್ಯಾಪಾರ ಬೆಳೆಸುವದು; ಕರ್ನಾಟಕದ ಉದ್ಯೋಗದ ಉನ್ನತಿಯನ್ನು ಸಾಧಿಸುವದು; ಇವೇ ಮೊದಲಾದ ಸಾಂಪತ್ತಿಕ ಸುಧಾರಣೆಗಳನ್ನು ಮಾಡಲು ಅವಕಾಶವಾಗುತ್ತದೆ.

ಅದ್ದರಿಂದ ಕರ್ನಾಟಕದ ವರ್ತಕರೇ, ತಾವು ಸ್ವತಃ ಬಾಗಲಕೋ ಟೆಯ ಈ ಪರಿಷತ್ತಿಗೆ ದಯಮಾಡಿಸಲು ಅಭಿವಚನವನ್ನೀಯುವದಲ್ಲದೆ ತಮ್ಮಲ್ಲಿಯ ಇತರ ವರ್ತಕರೂ ಬರುವಂತೆ ಮಾಡಿ ನಮಗೆ ಸಂಪೂರ್ಣ ಬೆಂಬಲವನ್ನು ಕೊಟ್ಟು, ಕರ್ನಾಟಕವು ಎಚ್ಚರಿಯುತ್ತಲಿದೆಂಬುದನ್ನು ಸಿದ್ಧಮಾಡಿಕೊಡಬೇಕಾಗಿ ಬಿನ್ನಹವಿದೆ.

ಮುರಗೆಯಪ್ಪ-ಸೋಮಯ್ಯಾ ಜಿಂಗಿನ ಅವೇ ವ್ಯಾಪಾರಸ್ಥರು,
ಬಾಗಲಕೋಟೆ, [illegible] ಕಾರ್ಯದರ್ಶಿ,
ಅಖಿಲ ಕರ್ನಾಟಕ ಉದ್ಯೋಗಿಕ ಹಾಗೂ ವ್ಯಾಪಾರಿಕ ಗಣೆಯ ಪರಿಷತ್ತು.

ಕರ್ನಾಟಕ ಖಾದಿ ಸಂಘದಿಂದ ಹೊರಡುವ

ಖಾದೀ — ವಿಜಯ.

ನಿಜ ಶ್ರಾವಣ ಶು. ೧. (ತಾ. ೧೬-೮-೧೯೨೮)ಯಿಂದ ಹೊರ ಡುವದು.

ಮುಖ್ಯ ಸಂಪಾದಕರು:—ಶ್ರೀ ಹರ್ಡೇಕರ ಮಂಜಪ್ಪನವರು.

ಉಪಸಂಪಾದಕರು:—ಶ್ರೀ ರಂಗನಾಥ ದಿವಾಕರ,

ರಾವಸಾಹೇಬ ಹಳಕಟ್ಟಿಯವರ ಹಿತಚಿಂತಕ ಪ್ರೆಸ್ಸಿನಲ್ಲಿ ಮುದ್ರಿ ಸಲ್ಪಟ್ಟು ಆಲಮಟ್ಟಿಯ ವೀರಶೈವಾಶ್ರಮದಲ್ಲಿ ಪ್ರಕಟಿಸಲ್ಪಡುವದು.

ಕರ್ನಾಟಕದಲ್ಲಿಯ ಮತ್ತು ಹಿಂದೂಸ್ಥಾನದಲ್ಲಿಯ ಖಾದಿಯ ಎಲ್ಲಾ ಚಟವಟಿಕೆಗಳ ಬಗ್ಗೆ ಮತ್ತು ಖಾದಿಯ ಮಹತ್ವದ ಬಗ್ಗೆ ಲೇಖ ಗಳು ಬರುವವು.

ಆಕಾರ:—ಡೆಮಿ ಅಷ್ಟಾಂಶ ೩೨ ಪುಟ.

ಚಂದಾ:—ವರ್ಷಕ್ಕೆ ೨—೪—೦

ವಿಳಾಸ:—'ಖಾದೀ-ವಿಜಯ,'
ವೀರಶೈವ ವಿದ್ಯಾಲಯ ಆಲಮಟ್ಟಿ,
ಪೋಸ್ಟ ಚಿಮ್ಮಲಗಿ,
ಜಿಲ್ಲಾ ವಿಜಾಪುರ

ನೋಟೀಸು.

ಈ ಮೂಲಕ ಸರ್ವರಿಗೂ ತಿಳಿಸುವುದೇನಂದರೆ:-

ಕಾಸರಗೋಡು ತಾಲೂಕು ಪುತ್ತಿಗೆ ಗ್ರಾಮದಲ್ಲಿರುವ ಪುತ್ತಿಗೆ ಶ್ರೀ ಸುಬ್ರಾಯ ದೇವಾ ವ ತೆನ್ನಿಮಾಣಿ ದೈವ ಸ್ಥಾಪನೆ ಗಳಿಗೆ ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟು ಕೋರ್ಟ ಕ್ರಮ ನಂಬ್ರ 76/23ನೇ ವ್ಯಾಜ್ಯದಲ್ಲಿ ಆದ ಸ್ಕೀಮು ಡಿಕ್ರಿ ಶರ್ತ ಪ್ರಕಾರ ಚುನಾಯಿಸಿ ನೇಮಿಸಲ್ಪಟ್ಟ ಮೊಕ್ತೇಸರರ ಪೈಕಿ ಚಕ್ಕನಿಕೆ ಅಚ್ಯುತ ಭಟ್ಟ 1. ಅಧಿಕಾರಿ ಕೃಷ್ಣಯ್ಯ, ಮುಂಡ ಕಾನ ನಾರಾಯಣ ಭಟ್ಟ, ಮುಂಗಿಲವೆಂಕಟೇಶ ಭಟ್ಟ ಮತ್ತು ದೊಡ್ಡ ಗುತ್ತು ದೂಮಣ್ಣರೈ ಇವರ ಮೊಕ್ತೇಸರಿಕೆಯ ಮ್ಯಾದೆಯು ಇದೇ 1928ನೇ ಇಸವಿ ಆಗೋಸ್ತು ತಾರೀಕು 10ಕ್ಕೆ ಗುಜಾ ರಾಗುವದರಿಂದ ಸದ್ರಿ ಸ್ಕೀಮು ಡಿಕ್ರಿ ಶರ್ತ ಪ್ರಕಾರ ಹೊಸ ಮೊಕ್ತೇಸರರ ಚುನಾವಣೆಯನ್ನು ತಾ 10—8—1928ರಲ್ಲು ಸದ್ರಿ ಪುತ್ತಿಗೆ ಶ್ರೀ ಸುಬ್ರಾಯ ದೇವಸ್ಥಾನದಲ್ಲಿ ಪೂರ್ವಾಹ್ನ ಘಂಟೆ 11ರಿಂದ 4ರ ವರೇಗೆ ನಡಿಸುವದಾಗಿ ನಿಶ್ಚಯಿಸಿರುತ್ತದೆ. ಆದುದರಿಂದ ಸದ್ರಿ ಸ್ಥಾಪನೆಗಳಿಗೆ ಮೊಕ್ತೇಸರರಾಗುವರೆ ಕಬೂಲಿಯಿರುವ ಉಮೇದ್ವಾರರು ತಮ್ಮ ಮನವಿಗಳನ್ನು ಸದ್ರಿ ಸ್ಥಾಪನೆಯ ಅಧ್ಯಕ್ಷರಾದ ಚಕ್ಕನಿಗೆ ಅಚ್ಯುತ ಭಟ್ಟರ ವಶಾ ತಾರೀಕು 5-8-'28ರ ಒಳಗೆ ತಲಪಿಸಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ. ಸಬ್‌ಕೋರ್ಟ ಡಿಕ್ರಿ ಮತ್ತು ಸ್ಕೀಮಿನ ಶರ್ತ ವಗೈರೆ ಎಲ್ಲಾ ಮಾಹಿತಿಗಳನ್ನು ಸದ್ರಿ ಸ್ಥಾಪನೆಯ ಕಾರ್ಯದರ್ಶಿಯಾದ ಅಧಿಕಾರಿ ಕೃಷ್ಣಯ್ಯನಿಂದ ಪಡಕೊಳ್ಳ ಬಹುದು.

ಮೊಕ್ಕಾಂ—ಪುತ್ತಿಗೆ — ಚಕ್ಕನಿಕೆ ಅಚ್ಯುತ ಭಟ್ಟ.
ಅಧ್ಯಕ್ಷ
13 – 7 – 1928. — ಶ್ರೀ ಸುಬ್ರಾಯ ದೇವಸ್ಥಾನ.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೋ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೊಲೋನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ಲೊ ಮಿಕ್ಸ್ಚರ್, ಮುಲಾಮು, ಸಂಬತ್ತು, ಬಾಮು ಮೊದಲಾದವು ಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ಪರ್ಫ್ಯೂಮ್ಸ, ಅರ್ಕ, ಆಸಿಡ್‌ಗಳು, ಡ್ರಗ್ಸ, ಕೆಮಿಕಲ್ಸ, ಬಾಟಲಿಗಳು, ಬಣ್ಣಗಳು, ಪೆಪರಮಿಂಟ, ಕ್ರಿಸ್ಟಲ್ ಮತ್ತು ಹೀಲಿಯೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮ ಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1-8-0. ಮಾದರಿ ಪರಿಮಳದ ಗಾರ್ಡುಗಳನ್ನು (4 ಆಣೆಯ) ಟಪ್ಪಾಲು ಚೀಟುಗಳನ್ನು ಕಳಹಿಸಿದಲ್ಲಿ ರವಾನಿಸಲಾದೀತು.

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,
15628 — ಮಂಗಳವಾರ ರೋಡ, ಮುಂಬಯಿ ನಂಬ್ರ ೨.

ಶಾಲಿವಾಹನಶಕೆ ೧೮೫೦ನೆಯ ವಿಭವಸಂ॥ದ ಆ. ಶ್ರಾವಣ ಶು॥ ೪ ಶನಿವಾರದಿಂದ ವಿಭವ ಸಂ॥ರದ ಆ. ಶ್ರಾವಣ ಶು॥ ೧೦ ಶುಕ್ರವಾರದ ವರೆಗಿನ ಪಂಚಾಂಗ

(೧೯೩೦ರನೆಯ ಕರ್ಣಾಟಕ (ಅಕ್ರ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರಮಾಸ	ಸೂರ್ಯ ಉ.	ಸೂರ್ಯ ಅಸ್ತ
21	ಶನಿ	೪	೪.೫೧	ಹುಬ್ಬ	೨೧. ೨	೬	6.15	6.58
22	ರವಿ	೫	೫.೧೩	ಉತ್ತರಾ	೨೯. ೧	೭	6.15	6.58
23	ಸೋಮ	೬	೬.೩೩	ಹಸ್ತ	೨೮.೧೬	೮	6.15	6.58
24	ಮಂಗಳ	೭	೧೦.೪೮	ಚಿತ್ತಾ	೪೩.೦೪	೯	6.16	6.58
25	ಬುಧ	೮	೧೫.೧೯	ಸ್ವಾತಿ	೪೭.೧೩	೧೦	6.16	6.58
26	ಗುರು	೯	೧೯.೩೧	ವಿಶಾಖಾ	೫೩.೩೩	೧೧	6.16	6.57
27	ಶುಕ್ರ	೧೦	೨೯.೧೩	ಅನುರಾಧಾ	[illegible]	೧೨	6.16	6.57

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಶಾಖ) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
13	84—2	74—1	0—45	—
14	80—9	72—6	0—49	—
15	83—2	73—4	2—82	—
16	83—5	71—8	1—14	—
17	81—0	74—2	0—74	—
18	80—3	72—7	1—30	—
19	83—2	73—5	1—54	—
				78—59

ಮಂಗಳೂರಿನ ಪೇಟೆ ಧಾರಣೆ.

ಜೀನಸು.	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕತಿ	7—10	8—6
ಹೊಸ ಗುಡ್ಡ	6—12	7—6
ಸುಗ್ಗಿ	6—5	7—2
ಹೊಸ ರಾಶಿ	6—4	6—14
ಊರ ಅಸ್ಲರ್ ಬೆಳ್ತಿಗೆ	7—8	8—12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	12—10	13—8
ಎಲ್ಲರ ಬೆಳ್ತಿಗೆ ಮುಡಿ ೧ಕ್ಕೆ	7—8	7—10
ಗೋಧಿ ಗೋಣಿ ೧ಕ್ಕೆ	6—8	10—8
ಹುರುಳಿ ಗೋಣಿ ೧ಕ್ಕೆ	8—8	11—0
ಕಡಲೆ ಗೋಣಿ ೧ಕ್ಕೆ	11—8	14—0
ತೊಗರಿ ಗೋಣಿ ೧ಕ್ಕೆ	14—4	14—12
ತೊಗರಿಬೇಳೆ ಗೋಣಿ ೧ಕ್ಕೆ	19—0	27—0
ಉದ್ದು ಗೋಣಿ ೧ಕ್ಕೆ	13—8	14—0
ಹೆಸರು ಗೋಣಿ ೧ಕ್ಕೆ	13—0	14—8
ಊರು ಬೆಲ್ಲ ಖಂಡಿ ೧ಕ್ಕೆ	60—0	65—8
ಉಪ್ಪು ಗೋಣಿ ೧ಕ್ಕೆ	4—10	5—4
ಕೊಬ್ಬರಿ ಖಂಡಿ ೧ಕ್ಕೆ	130—0	—
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	40—0	41—0
ಎಳ್ಳಿಂಡಿ ಖಂಡಿ ೧ಕ್ಕೆ	32—8	40—0
ಕೊಬ್ಬರಿ ಎಣ್ಣೆ ಮಣ ೧ಕ್ಕೆ	8—8	9—10
ಎಳ್ಳೆಣ್ಣೆ ಮಣ ೧ಕ್ಕೆ	8—4	8—0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	7—2	8—0
ಮೋರಿಸ ಸಕ್ಕರೆ ಮಣ ೧ಕ್ಕೆ	4—4	4—6
ಊರ ಮೆಣಸಿನ ಕಾಯಿ ಮಣ ೧ಕ್ಕೆ	4—8	6—12
ಸಾಸಿವೆ ಮುಡಿ ೧ಕ್ಕೆ	8—0	8—4
ಕೊತ್ತಂಬರಿ ಮುಡಿ ೧ಕ್ಕೆ	6—0	7—8
ಕಾಫಿ ಖಂಡಿ ೧ಕ್ಕೆ	375—0	410—0
ಬೆಳಿಗೋಟು ಅಡಿಕೆ ಖಂಡಿ ೧ಕ್ಕೆ	170—0	210—0
ಕಾಳುಮೆಣಸು ಖಂಡಿ ೧ಕ್ಕೆ	510—0	550—
ಚೋಲಕ್ಕಿ ಮಣ ೧ಕ್ಕೆ	70—0	80—0
ಗೇರುಬೀಜ ಮುಡಿ ೧ಕ್ಕೆ	4—4	4—7
ಕಬ್ಬಿಣ ಖಂಡಿ ೧ಕ್ಕೆ	37—8	40—0
ತಾಂಬ್ರ ತಗಡು ೧ಕ್ಕೆ	15—0	16—8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	20—0	21—
ಚೀನಿಬೆಳ್ಳಿ ಸೇರು ೧ಕ್ಕೆ	15—0	—
ಹಿತ್ತಾಳೆ ತಗಡು ಮಣ ೧ಕ್ಕೆ	15—0	16—8
ಪವನು ೧ಕ್ಕೆ	13—8	13—8
ಹುಣಸೆ ಹುಳಿ ಖಂಡಿ ೧ಕ್ಕೆ	75—0	90—5

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರನ್ನಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ದಿ. ಊಲನ್‍ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ ೧೯೨೪ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉತ್ಕೃಷ್ಟತೆಯನ್ನು ನೋಡಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಕಳಪೆ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮಲ್ಲಿಗೆ ಬರೆದು ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆ ಕಳುಹಿಸುವೆವು.

ಹಳ್ಳಿ ಪಟ್ಟಣಗಳ ಮಂದಿಯ ಉಪಯೋಗಕ್ಕೆ ಬಹು ಉತ್ತಮವಿದೆ.

ಸ್ಥಾಪಿತವಾದದ್ದು 1909 ಟೆಲಿಫೋನ್ ನಂ. 23374



ದಿ ಬೊಂಬೇ ಇನ್‍ಕೆಂಡೆಸೆಂಟ್ ಲೈಟ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂಬ್ರ 288,

ಜಿ. ಪಿ. ಓ, ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!

ರೋಗವೆಂಬ ವಿಧಿಆಪತ್ತನ್ನು ಪರಿಹರಿಸಿಕೊಳ್ಳನೋಡಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲ್ಪಜ್ವರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ—8 ಔನ್ಸ ಬಾಟ್ಲಿ 1ಕ್ಕೆ 1—3—0, ½ ಡಜನ್ ರೂ. 8—8—0; ಡಜನ್ 16—8—0

ಭಗಿನಿಗಳೇ!

ಸೊರಗಿರುವ ಶಿಶುವಿನ ನೋಟವು ಹೆತ್ತವರಿಗೆ ಯಮಸಂಕಟ.

ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು ಮಾತಾಪಿತರಿಗೆ ವೈಕುಂಠ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿದ್ದಾರೆಯೇ?

ಹಾಗಾದರೆ ಒಡನೆ ಹಸುಳೆಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಚೋಲುದಿನ್ನ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ಮಾರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,

22628 ನಂಬ್ರ 2. ಮಂಗಳೂರು ದ. ಕ.

ಹಾತ್ತಾತಾಳ್ವತಿ ಪೊಳೊಚ್ಯಾಕ ಕಾನ್ನಡಿ ಇತ್ಯಾಕ? ಏಕಪಂತ ಅನ್ನೆಲ್ಯಾಗಿ ವ್ಯಾಪಾರು ಕೆಲ್ಯಾರಿ ಕಳ್ಳಾವೆ?

ಎಲ್ಲಾ ತರದ ಕವಿರಾಜರ ಔಷಧ, ಸುಗಂಧ ದ್ರವ್ಯಗಳು, ರಬ್ಬರ್ ಚಡ್ಡಿ, ಕ್ಷೌರದ ಸಾಮಗ್ರಿ, ಆಡುವ ಸಾಮಾನು, ಹಾರ್ಮೋನಿಯಮ್, ಶುದ್ಧ ಕಸ್ತೂರಿ, ಬೂಟೀಸು, ಬನಿಯನು, ಬಾಚಣಿಗೆ, ಮತ್ತು ಎಲ್ಲಾ ತರದ ಜವುಳಿ ಇತ್ಯಾದಿ ಸರ್ವಜನೋಪಯುಕ್ತ ವಸ್ತುಗಳು ಮಾರಾಟಕ್ಕಿವೆ. ಕೆಟಲಾಗಿಗೆ ಇವತ್ತೆ ಬರೆಯಿರಿ. ಅಥವಾ ಸ್ಟೋರ್ಸನ್ನು ಸಂದರ್ಶಿಸಿರಿ.

— 24 ತಾಸಿನ ಒಳಗೆ ಮುಟ್ಟುವಂತೆ ಔಷಧ ಇತ್ಯಾದಿಗಳನ್ನು ಕಳುಹಿಸುತ್ತೇವೆ. —

ಕವಿರಾಜರ ಮದ್ದಿಗೆ ಪ್ರತಿ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ಸರ್ವ ಕರ್ಣಾಟಕಕ್ಕೆ ನಾವು ಪ್ರಧಾನ ಆಯುರ್ವೇದ ಔಷಧ ಏಜಂಟರು,

ದಿ ಉಡುಪಿ ಸ್ಟೋರ್ಸ್,

ಕುಂಬಳೆ ರಾಘವೇಂದ್ರರಾವ್

2628 ಉಡುಪಿ, ದ. ಕನ್ನಡ.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಡಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವುವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯದ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‍ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಿಸರ್ಚ್‍ಗಾರ್ಡನ್ಸ್, ಕಾರ್ಕಳ ದ.ಕ. C/o ಕೆ. ವಾಮನ ಶೆಣೈ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

131028

ತಾಲೂಕು ಬೋರ್ಡುಗಳನ್ನು ಅಗತ್ಯವಾಗಿ ತೆಗೆದು ಹಾಕಲೇ ಬೇಕು.

ಈಗಿರುವ ತಾಲೂಕು ಬೋರ್ಡುಗಳು ಯಾವ ವಿಧದಲ್ಲಿಯಾದರೂ ದೇಶೋದ್ಧಾರದ ಕೆಲಸಗಳನ್ನು ಮಾಡಿದ್ದು ಕಂಡುಬರುವುದಿಲ್ಲ. ಯಾವ ತಾಲೂಕು ಬೋರ್ಡಿನ ಸ್ಥಿತಿಯನ್ನು ನೋಡಿದರೂ ಮೆಂಬರರೊಳಗೂ ಪ್ರೆಸಿಡೆಂಟರೊಳಗೂ ಜಗಳಗಳೂ ನಂಬ್ರಗಳೂ ಇದ್ದೇ ಇವೆ. ದೇಶ ಹಿತಕ್ಕಾಗಿ ಕೆಲಸ ಮಾಡುವುದರ ಬದಲಾಗಿ ಸಮಯವು ಜಗಳಗಳಲ್ಲಿಯೇ ಕಳೆದು ಹೋಗುತ್ತದೆ. ಮೆಂಬರರಿಗೆ ಪ್ರೆಸಿಡೆಂಟರುಗಳ ಮೇಲಿನ ದ್ವೇಷವು ಎಲ್ಲಾ ಕಡೆಗಳಲ್ಲಿಯೂ ಕಂಡುಬರುತ್ತದೆ. ಪ್ರೆಸಿಡೆಂಟರು ತಮ್ಮ ಕೆಲಸಕ್ಕೆ ರಾಜಿ ಕೊಟ್ಟ ವಿನಹ ತಾಲೂಕು ಬೋರ್ಡು ಸಂಬಂಧವಾದ ಯಾವ ಕೆಲಸಕ್ಕೂ ಕೈಹಚ್ಚುವುದಿಲ್ಲವೆಂದು ನೊಕೊನ್ನಿಡೆನ್ಸ ಮೊಶನುಗಳು ಪಾಸಾಗುತ್ತಲೇ ಇವೆ. ವೋಟು ಕೊಟ್ಟು ಮೆಂಬರರಾಗಿ ಕಳುಹಿಸುವ ವರೆಗೆ ಮಾತ್ರವೇ ಮೆಂಬರರಿಗೆ ವೋಟರರ ಗುರ್ತವಿದೆಯಲ್ಲದೆ ನಂತರ ಮೆಂಬರರಿಗೆ ವೋಟರರ ಗುರ್ತವೇ ಇರುವುದಿಲ್ಲ. ಆಯಾ ಸರ್ಕಲುಗಳಿಂದ ಚುನಾಯಿಸಿ ಕಳುಹಿಸಲ್ಪಟ್ಟ ಮೆಂಬರರು ತಮ್ಮ ತಮ್ಮ ಸರ್ಕಲುಗಳಲ್ಲಿ ಯಾವ ತರದ ಅಭಿವೃದ್ಧಿಯಾಗಬೇಕೆಂದು ಸರ್ಕಲುಗಳಿಗೆ ಸಂಬಂಧಪಟ್ಟ ಗ್ರಾಮಗಳನ್ನು ಸಂಚರಿಸಿ ಅವುಗಳ ವಿಷಯ ತನಖಿಮಾಡಲಿಕ್ಕೆ ಅವರಿಗೆ ಸಮಯವೇ ಇಲ್ಲ. ಗ್ರಾಮಸ್ಥರು ಅಥವಾ ಊರಿನವರು ಇತರ ಮುಖಾಂತರ ಅರ್ಜಿ ಮಾಡಲಿಕ್ಕೆ ಆಲೋಚಿಸಿದರೆ ಅದನ್ನು ನೆಟ್ಟಗೆ ಪ್ರೆಸಿಡೆಂಟರಿಗೇನೆ ಕಳುಹಿಸಿದಿಡಿರಿ ಎಂದು ಹೇಳುವ ಸಂದರ್ಭಗಳು ಹೆಚ್ಚಾಗಿವೆ. ಪ್ರೆಸಿಡೆಂಟರಿಗೆ ಕಳುಹಿಸಿದರೆ ಅವರು ಮೆಂಬರರ ಬಳಿಗೆ ತನಖಿ ಬಗ್ಗೆ ಕಳುಹಿಸುವ ವಾಡಿಕೆ ಇದೆ. ಮೆಂಬರರು ಅವುಗಳನ್ನು ಕೆಲವು ತಿಂಗಳುಗಳ ವರೆಗೆ ಮೂಲೆಗೆ ಹಾಕುವ ವಾಡಿಕೆಯೂ ಇದೆ. ಗ್ರಾಮದಲ್ಲಿ ಸಂಚರಿಸಿ ನೋಡಲಿಕ್ಕೆ ಉದಾಸೀನವಾಗಿ ಮನೆಯಲ್ಲಿಯೇ ಕುಳಿತು ರಿಪೋರ್ಟು ಬರಿಯುವ ವಾಡಿಕೆಯೂ ಇದೆ. ಬೋರ್ಡು ಕೆಲಸಗಳಿಗಿಂತ ತಮ್ಮ ಸ್ವಂತ ಖಾಸಗಿ ಕೆಲಸಗಳೇ ಹೆಚ್ಚಾಗಿರುವುದರಿಂದ ಬೋರ್ಡು ಸಂಬಂಧವಾದ ಕೆಲಸಗಳಿಗೆ ಸಮಯ ಸಿಕ್ಕುವುದೇ ಕಡಿಮೆ.

ಪ್ರೆಸಿಡೆಂಟರು ದೊಡ್ಡ ದೊಡ್ಡ ವಕೀಲರೂ ಜಮೀನುದಾರರೂ ಆಗಿರುವುದರಿಂದ ಅವರಿಗೆ ಗ್ರಾಮಗಳಲ್ಲಿ ಸಂಚರಿಸಲಿಕ್ಕೆ ಸಮಯವೇ ಸಿಕ್ಕುವುದಿಲ್ಲ. ಎಲ್ಲಿಯಾದರೂ ಗ್ರಾಮಸ್ಥರು ವಂತಿಗೆಯಿಂದ ಶಾಲಾ ಕಟ್ಟೋಣ ಮುಂತಾದ್ದನ್ನು ಕಟ್ಟಿಸಿ ಅದರ ಪ್ರವೇಶ ಸಮಾರಂಭಕ್ಕೆ ಬರಬೇಕೆಂದು ವಿನಂತಿಪೂರ್ವಕ ಆಮಂತ್ರಣ ಕಳುಹಿಸಿದರೆ ಆ ದಿವಸ ಅಗತ್ಯ ಕೆಲಸವಿರುವುದರಿಂದಲೂ ಅಥವಾ ಕೆಲವು ಸಂದರ್ಭದಲ್ಲಿ ಸೀಕ್ ಆಗುವುದರಿಂದಲೂ ಬರಲಿಕ್ಕೆ ಸಾಧ್ಯವಿಲ್ಲವೆಂದೂ ನೀವು ಮಾಡಿದ ಕೆಲಸಕ್ಕೆ ದೇವರ ಆಶೀರ್ವಾದ ಇರಲಿ ಎಂದೂ ಮುಂತಾಗಿ ನವನಾಗರಿಕತೆಯ ನಮೂನೆಯಲ್ಲಿ ಉತ್ತರ ಬರಿಯುವುದುಂಟು. ಒಂದೊಂದು ಸಾರಿ ಬರುತ್ತೇನೆಂದು ಬರದರೂ ಮೋಟರು ತಪ್ಪುವ ಸಂದರ್ಭವೂ ಒದಗುತ್ತದೆ.

ತಾಲೂಕು ಬೋರ್ಡಿಗೆ ಮುಖ್ಯವಾಗಿ ಇರುವ ಕೆಲಸಗಳು ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಿ ಅವುಗಳನ್ನು ನಡಿಸುವುದು. ಆಸ್ಪತ್ರೆಗಳನ್ನು ಇಟ್ಟು ಅವುಗಳನ್ನು ನಡಿಸುವುದು. ಮಾರ್ಗಗಳನ್ನು ಮಾಡಿಸುವುದು. ಊರುಗಳಲ್ಲಿ ಕಸಬಳಿಯುವುದಕ್ಕೆ ತೋಟಿಗಳನ್ನು ನೇಮಿಸುವುದು. ಬೆಳಕಿಗಾಗಿ ಮಾರ್ಗದ ಲಾಟೆನುಗಳನ್ನು ಇಡಿಸುವುದು. ಹೆರಿಸುವುದಕ್ಕಾಗಿ ಶೂಲಗಿತ್ತಿಯರನ್ನು ನೇಮಿಸುವುದು ಮುಂತಾದ ಕಾರ್ಯಗಳು ಇವೆ.

ಇವುಗಳಲ್ಲಿ ತಾಲೂಕು ಬೋರ್ಡುಗಳ ಶಾಲೆಗಳ ಉಪಾಧ್ಯಾಯರು ಪಡುವ ಕಷ್ಟಗಳನ್ನು ಹೇಳಿ ತೀರದು. ಮೊದಲನೇದಾಗಿ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಮನಬಂದಂತೆ ವರ್ಗಾವರ್ಗಿ; ಒಂದೇ ಜಿಲ್ಲೆಯ ಒಂದೊಂದು ತಾಲೂಕು ಬೋರ್ಡಿನಲ್ಲಿ ಒಂದೊಂದು ವಿಧದ ಸಂಬಳದ ಸ್ಕೇಲು. ಕೆಲವು ತಾಲೂಕು ಬೋರ್ಡುಗಳಲ್ಲಿ ಉಪಾಧ್ಯಾಯರಿಗೆ ಅನ್ನ, ಉಪ್ಪು, ಮೆಣಸಿಗೆ ಬೇಕಾಗುವಷ್ಟೇ ಸಂಬಳ. ಕೆಲವು ತಾಲೂಕು ಬೋರ್ಡುಗಳಲ್ಲಿ ಗ್ರೇಡು ಪ್ರಕಾರ ಸಂಬಳ, ಕೆಲವು ತಾಲೂಕು ಬೋರ್ಡುಗಳಲ್ಲಿ ಟ್ಯಾಮಸ್ಕೇಲು ಸಂಬಳ. ಒಬ್ಬೊಬ್ಬ ಪ್ರೆಸಿಡೆಂಟರಿಗೆ ೩ ವರ್ಷದ ಅವಧಿ. ಒಬ್ಬ ಪ್ರೆಸಿಡೆಂಟರು ಹೋಗಿ ಇನ್ನೊಬ್ಬ ಪ್ರೆಸಿಡೆಂಟರು ಬಂದೊಡನೆ ಮೊದಲಿನ ಗ್ರೇಡೂ ಹೋಯಿತು. ಟ್ಯಾಮಸ್ಕೇಲೂ ಹೋಯಿತು. ಮೊದಲಿನ ಪ್ರೆಸಿಡೆಂಟರು ಹೆಚ್ಚಿಗೆ ಸಂಬಳದ ಸ್ಕೇಲು ಕೊಟ್ಟಿದ್ದರೆ ಅದನ್ನು ರದ್ದುಮಾಡಿ ಆ ಸಂಬಳದ ಅಂಶವನ್ನು ತಿರಿಗಿ ಉಪಾಧ್ಯಾಯರಿಂದ ಪಡಿಯುವದೂ ಉಂಟು. ಕೆಲವು ತಾಲೂಕು ಬೋರ್ಡುಗಳಲ್ಲಿ ೩ ತಿಂಗಳಿಗೊಬ್ಬರು ಆರು ತಿಂಗಳಿಗೊಬ್ಬರು, ಪ್ರೆಸಿಡೆಂಟರು ಆಗುವ ಸಂದರ್ಭವೂ ಇದೆ. ಇಂಥಾ ಸಮಯಗಳಲ್ಲಿ ಉಪಾಧ್ಯಾಯರಿಗೆ ೩—೪ ತಿಂಗಳಿಗೊಮ್ಮೆ ಸಂಬಳ ಸಿಕ್ಕುವುದೂ ಕಷ್ಟವಾಗುತ್ತದೆ. ಬಟ್ವಾಡೆ ಇತರ ಇಲಾಖೆಗಳಲ್ಲಿ ಸಿಕ್ಕುವಂತೆ ಸರಿಯಾಗಿ ತಿಂಗಳಿಗೊಮ್ಮೆ ಸಂಬಳ ಸಿಕ್ಕುವದೇ ದುರ್ಲಭ. ಉಪಾಧ್ಯಾಯರುಗಳಿಗೆ ಅಂಗಡಿಕಾರರ ದೂಷಣೆಮಾತು ಕೇಳಿ ಕೇಳಿ ಸಾಕು ಸಾಕಾಯಿತು.

ಸರಕಾರದವರು ಉಪಾಧ್ಯಾಯರಿಗೆ ಹೆಚ್ಚಿಗೆ ಸಂಬಳ ಕೊಡಬೇಕೆಂದು ತಾಲೂಕು ಬೋರ್ಡಿಗೆ ಹಣ ಕೊಡುತ್ತಲೇ ಇರುವರು. ತಾಲೂಕು ಬೋರ್ಡಿನವರು ಸಂಬಳವನ್ನು ಕಡಿಮೆ ಮಾಡುತ್ತಲೇ ಬರುತ್ತಿರುವರು. ಒಬ್ಬ ಪ್ರೆಸಿಡೆಂಟರು ೨೦ರ ಸ್ಕೇಲು ಮಾಡಿದರೆ ಮತ್ತೊಬ್ಬ ಪ್ರೆಸಿಡೆಂಟರು ಬಂದೊಡನೆಯೆ ಆ ಸ್ಕೇಲು ರದ್ದಾಗಿ ೧೫ರ ಸ್ಕೇಲು ಪ್ರಾರಂಭವಾಗುತ್ತದೆ. ಇನ್ನೊಬ್ಬ ಪ್ರೆಸಿಡೆಂಟರು ಬಂದೊಡನೆ ೧೨ರ ಸ್ಕೇಲು ಆರಂಭವಾಗುತ್ತದೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡಬೇಕೆಂದು ಗೋಖಲೆಯವರ ಕಾಲದಿಂದಲೇ ಚಳವಳ ನಡಿಯುತ್ತಲಿದೆ. ಆದರೂ ಇನ್ನೂ ಈ ತಾಲೂಕು ಬೋರ್ಡುಗಳು ಈ ಕೆಲಸಗಳನ್ನು ಮಾಡಲಿಲ್ಲ. ಕೆಲವು ತಾಲೂಕು ಬೋರ್ಡುಗಳು ೮ನೇ ದರ್ಜೆಯ ವರೆಗೆ ಮಾಫಿಯಾಗಿ ಕಲಿಸುತ್ತವೆ ಕೆಲವು ಶಾಲೆಗಳಲ್ಲಿ ೨-೩ನೇ ದರ್ಜೆಗಳ ವರೆಗೆ ಮಾತ್ರವೇ ಮಾಫಿ ಮಾಡಿರುವರು. ಒಂದೇ ಶಾಲೆಯಲ್ಲಿ ಎರಡು ಕ್ರಮ, ಅದರಲ್ಲಿಯೂ ಬೇಕುವರ್ದಿಗೆ ಸಂಬಳವಿಲ. ಫೋರವರ್ದಿಗೆ ಸಂಬಳವಿದೆ. ಆದರೆ ನಿಜಸ್ಥಿತಿ ನೋಡಿದರೆ ಇಂಥಾ ಶಾಲೆಗಳಲ್ಲಿ ಮಕ್ಕಳು ಸಂಬಳ ಕೊಡದೆ ಅವರ ಪಕ್ಕೆ ಅವರು ಧರ್ಮಾರ್ಥವಾಗಿ ಕಲಿಯುತ್ತಲಿದ್ದಾರೆ. ಇತ್ತ ಉಪಾಧ್ಯಾಯರು ತಮ್ಮ ಹೊಟ್ಟೆಪಾಡಿಗಾಗಿ ಶಾಲಾ ಮಕ್ಕಳು ಕಡಿಮೆಯಾಗದಂತೆ ತಮಗೆ ಸಿಕ್ಕುವ ಅಲ್ಪ ಸ್ವಲ್ಪ ಸಂಬಳದಲ್ಲಿ ತಾಲೂಕು ಬೋರ್ಡಿಗೆ ತಲಪಿಸಬೇಕಾದ ಹಣವನ್ನು ಕಳುಹಿಸುವದೂ ಇದೆ.

ಎಲಿಮೆಂಟರಿ ಶಾಲೆಗಳಲ್ಲಿರುವ ಉಪಾಧ್ಯಾಯರ ಸಂಖ್ಯೆ ನೋಡಿದರೆ ೨-೩-೪ ಕ್ಲಾಸುಗಳಿಗೆ ಒಬ್ಬರು, ತಪ್ಪಿದರೆ ಇಬ್ಬರು ಮಾತ್ರವೇ ಇರುವರು. ಕೆಲವು ಶಾಲೆಗಳಲ್ಲಿ ಒಬ್ಬೊಬ್ಬರೇ ಉಪಾಧ್ಯಾಯರಿರುವರು. ಈ ರೀತಿಯಲ್ಲಿ ಉಪಾಧ್ಯಾಯರಿದ್ದರೆ ಅವರು ಸಿಲೆಬಸ್ ಪ್ರಕಾರ ಎಲ್ಲಾ ಕ್ಲಾಸುಗಳಿಗೆ ಪಾಠಗಳನ್ನು ಸರಿಯಾಗಿ ಮಾಡುವುದು ಹೇಗೆಂದು ಪರಮಾತ್ಮನೇ ಬಲ್ಲ. ಅವರ ಮಧ್ಯದಲ್ಲಿ ಟ್ರೈನಿಂಗ ಶಾಲೆಗಳ ನಮೂನೆಯಲ್ಲಿ (ನೋಟ್ಸ್ ಒಫ್ ಲೆಸ್ಸನ್ಸ) ಬರಿಯಬೇಕೆಂದು ಸರ್ಕಿಲಾರುಗಳು ಹೊರಡುತ್ತಲಿವೆ.

ಮೇಲಿನ ಎಲ್ಲಾ ಸಂಗತಿಗಳನ್ನು ನೋಡಿದರೆ ರಿಫೋರ್ಮು ಆಕ್ಟು ಆಗಿ ನೊನ್ ಅಫಿಶಿಯಲ್ ಪ್ರೆಸಿಡೆಂಟರಾದಂದಿನಿಂದ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಈಗಿರುವ ತಾಲೂಕು ಬೋರ್ಡುಗಳು ಮಾಡಿದ ಯಾವ ತರದ ಅಭಿವೃದ್ಧಿಯೂ ಕಂಡುಬರುವುದಿಲ್ಲ. ಆದುದರಿಂದ ಯಾವ ವಿಧದಿಂದಲಾದರೂ ಎಲಿಮೆಂಟರಿ ಶಾಲೆಗಳನ್ನು ತಾಲೂಕು ಬೋರ್ಡುಗಳ ಕೈಯಿಂದಲೂ ಪಂಚಾಯತುಗಳಿಂದಲೂ ಇನ್ನು ಇತರ ಈ ತರದ ಸಂಸ್ಥೆಗಳ ಕೈಯಿಂದಲೂ ತಪ್ಪಿಸಿ ಪ್ರಾಥಮಿಕ ವಿದ್ಯಾಭ್ಯಾಸದ ಕೆಲಸವನ್ನು ಮಾತ್ರವೇ ನಡಿಸುವ ಒಂದು ಹೊಸ ಸಂಸ್ಥೆಯನ್ನು ಮದರಾಸು ಸರಕಾರದವರು ಏರ್ಪಡಿಸುವುದು ದೇಶದ ಅಭಿವೃದ್ಧಿಗೆ ಅಗತ್ಯವಾಗಿದೆ.

ಇನ್ನು ಆಸ್ಪತ್ರೆಗಳ ವಿಷಯ ಹೇಳಿ ಪ್ರಯೋಜನವಿಲ್ಲ. ಗ್ರಾಮಸ್ಥರಿಗೆ ಬೇಕಾದ ವೈದ್ಯ ಸಹಾಯವು ಸರಿಯಾಗಿ ವದಗಿಸಲ್ಪಟ್ಟದ್ದೇ ಕಂಡುಬರುವುದಿಲ್ಲ. ೩೦-೪೦ ಗ್ರಾಮಗಳಿಗೆ ಒಂದರಂತೆ ಆಸ್ಪತ್ರೆಗಳಿವೆ. ಇದ್ದ ಆಸ್ಪತ್ರೆಗಳಲ್ಲಿಯೂ ಜನರಿಗೆ ವದಗಿಸುವಷ್ಟು ಮದ್ದುಗಳಿಲ್ಲದೆ ದಾಕ್ತಾರರು ಬಂದ ರೋಗಿಗಳಿಗೆ ಶೋಪಿನಿಂದ ಮದ್ದು ತರಲಿಕ್ಕೆ ಚೀಟುಕೊಡುವ ಸಂದರ್ಭವು ಎಷ್ಟೊ ಕಡೆಗಳಲ್ಲಿ ಒದಗುತ್ತದೆ. ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಸರಿಯಾದ ಆಹಾರ ಒದಗಿಸಲಿಕ್ಕೆ ಹಣವಿಲ್ಲ. ಅವರು ಊಟಮಾಡುವ ಮಣ್ಣಿನ ಪಾತ್ರೆಗಳನ್ನೂ, ಅಡಿಗೆ ಪಾತ್ರೆಗಳನ್ನೂ, ಅಡಿಗೆಯವನ ಉಡಿಗೆಯನ್ನೂ ನೋಡಿದರೆ ರೋಗಿಗಳಿಗೆ ಇನ್ನೊಂದು ಹೊಸ ರೋಗ ಬರಲಿಕ್ಕೂ ಆಸ್ಪದವಿದೆ. ಮೆಟರ್ನಿಟಿ ವಾರ್ಡುಗಳು ಇರುವುದು ಅಪರೂಪ. ಬೇಕಾದ ನರ್ಸುಗಳು ಇಲ್ಲ. ತರಬೇತಾದ ಶೂಲಗಿತ್ತಿಯರ ಸಂಖ್ಯೆ ಕಡಿಮೆ. ವೈದ್ಯ ಉದ್ಯೋಗಸ್ಥರ ಸಂಬಳವೂ ಕಡಿಮೆ ಕಡಿಮೆ ಆಗುತ್ತಾ ಬರುತ್ತದೆ. ಕಂಪೌಂಡರ್, ವಾರ್ಡಕೂಲಿ, ಅಡಿಗೆಯವ ಮುಂತಾದವರ ಸಂಬಳದ ಅವಸ್ಥೆಯನ್ನು ಹೇಳಿತೀರದು. ಮೇಲಿನ ಸಂಗತಿಗಳನ್ನು ಆಸ್ಪತ್ರೆಗಳನ್ನು ಸಹ ತಾಲೂಕು ಬೋರ್ಡಿನವರು ಯೋಗ್ಯರೀತಿಯಲ್ಲಿ ನಡಿಸಲಿಲ್ಲವೆಂದು ಹೇಳಬಹುದು.

ಹಳ್ಳಿ ಮಾರ್ಗಗಳ ಸ್ಥಿತಿಯ ವಿಷಯ ಹೇಳುವ ಅಗತ್ಯವಿಲ್ಲ. ಮಾರ್ಗಗಳಿದ್ದ ಹಳ್ಳಿಗಳೇ ಕಡಿಮೆ. ಪ್ರತಿ ಹಳ್ಳಿಗಳಿಂದಲೂ ಲೆಂಡಸೆಸ್ಸ್, ವೃತ್ತಿ ತೆರಿಗೆ ಮುಂತಾದ್ದು ವಸೂಲು ಆಗುತ್ತಲೇ ಇದೆ. ತೋಡುಗಳಿಗೆ ಸೇತುವೆಗಳಿಲ್ಲ. ಮಾರ್ಗ ಮಾಡಿಸಲಿಕ್ಕೆ ಹಣವೇ ಇಲ್ಲ.

ಹಳ್ಳಿಗಳಲ್ಲಿ ಬಡಜನರು ಹೊಂಡಗಳ ನೀರನ್ನು ಕುಡಿದು ನಾನಾ ತರದ ರೋಗ ಪೀಡಿತರಾಗಿ ಸಾಯುತ್ತಿರುವರು. ಇವರಿಗಾಗಿ ಶುದ್ಧ ನೀರನ್ನು ಒದಗಿಸುವುದಕ್ಕಾಗಿ ಬಾವಿಗಳನ್ನು ಹಳ್ಳಿಗಳಲ್ಲಿ ತೋಡಿಸಿದ್ದು ಬಹಳ ಅಪರೂಪ. ದೊಡ್ಡ ಹೆದ್ದಾರಿಗಳ ಬದಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಮಾತ್ರವೇ ಬಾವಿಗಳು ಕಾಣುತ್ತವೆ. ಈ ವಿಷಯದಲ್ಲಿಯೂ ಹಳ್ಳಿಗಳ ಅಭಿವೃದ್ಧಿಯಾಗಲಿಲ್ಲ. ಇದ್ದ ಮಾರ್ಗಗಳ ದುರುಸ್ತಿಯೂ ಸರಿಯಾಗಿ ನಡಿಯುವುದಿಲ್ಲ.

ಮೇಲಿನ ಎಲ್ಲಾ ಸಂಗತಿಗಳಿಂದ ಮದರಾಸು ಸರಕಾರದವರು ಈಗ ತಂದಿರುವ ಹೊಸ ಬಿಲ್ಲಿನ ಪ್ರಕಾರ ತಾಲೂಕು ಬೋರ್ಡುಗಳನ್ನು ಆದಷ್ಟು ಬೇಗನೇ ತೆಗೆದುಹಾಕಿ, ವಿದ್ಯಾ ಇಲಾಖೆಗೆ ಒಂದು ಪ್ರತ್ಯೇಕ ಕಮಿಟಿ, ಆರೋಗ್ಯ ಇಲಾಖೆಗೆ ಒಂದು ಕಮಿಟಿ, ವೈದ್ಯ ಇಲಾಖೆಗೆ ಒಂದು ಕಮಿಟಿ, ಈ ರೀತಿ ಕಮಿಟಿಗಳನ್ನು ಮಾಡಿ ಆಯಾ ಇಲಾಖಾ ಉದ್ಯೋಗಸ್ಥರು ಸರಿಯಾಗಿ ಕೆಲಸ ನಡಿಸುವಂತೆ ಅವರಿಗೆ ಪೂರ್ಣ ಅಧಿಕಾರವನ್ನು ಕೊಟ್ಟು ಇವರೆಲ್ಲರೂ ಸರಿಯಾಗಿ ಕೆಲಸ ನಡಿಸುವಂತೆ ಜಿಲ್ಲಾ ಕಲೆಕ್ಟರರುಗಳಿಗೆ ಈ ಇಲಾಖೆಗಳ ಮೇಲೆ ಸರಿಯಾದ ಮೇಲುವಿಚಾರ ಇಡುವಂತೆ ಮಾಡುವುದು ದೇಶಾಭಿವೃದ್ಧಿಗೆ ಉತ್ತಮವಾದ ದಾರಿಯಾಗಿದೆ. ಅಫೀಸಿನ ಕೆಲಸವು ಸರಿಯಾಗಿ ನಡಿಯುವಂತೆ ಒಬ್ಬ ಡಿಪ್ಯುಟಿ ಕಲೆಕ್ಟರರ ಗ್ರೇಡಿನ ಹುದ್ದೆದಾರರನ್ನು ನೇಮಿಸುವದು ಅತೀ ಅಗತ್ಯವಾಗಿದೆ. ಇಲ್ಲದಿದ್ದರೆ ಅಫೀಸಿನಲ್ಲಿ ಕೆಲಸವು ಸರಿಯಾಗಿ ನಡಿಯದೆ ಎಲ್ಲಾ ತರದ ರಿಕಾರ್ಡು ಲೆಕ್ಕಪತ್ರಗಳೂ ಯೋಗ್ಯ ರೀತಿಯಲ್ಲಿ ಇರಲು ಆಸ್ಪದವೇ ಇಲ್ಲ.

ತಾಲೂಕು ಬೋರ್ಡುಗಳನ್ನು ಇಡಬೇಕೊ ತೆಗಿಯಬೇಕೊ ಎಂದು ಸರಕಾರದವರು ತಾಲೂಕು ಬೋರ್ಡುಗಳನ್ನು ಕೇಳಿರುವರು. ತಮಗೆ ಅಧಿಕಾರ ತೋರಿಸಲಿಕ್ಕೆ ಆಸ್ಪದ ಇರುವ ಒಂದು ಸಂಸ್ಥೆಯನ್ನು ತೆಗಿಯಲಿಕ್ಕೆ ಇವುಗಳು ಎಷ್ಟಕ್ಕೂ ಒಪ್ಪಲಿಕ್ಕಿಲ್ಲ. ೧೮೮೪ನೇ ಇಸವಿಯಲ್ಲಿ ಲೋರ್ಡರಿಪ್ಪನರು ವೈಸರಾಯರಾಗಿರುವಾಗ ಲೋಕಲ್ ಸಲ್ಫ್ ಗವರ್ನಮೆಂಟ ಆಕ್ಟನ್ನು ಸರಕಾರದವರೇ ಮಾಡಿದ್ದಾಗಿರುತ್ತದೆ. ಈಗ ಲೋಕಲ್ ಬೋರ್ಡುಗಳಲ್ಲಿ ಒಂದಂಶವಾದ ತಾಲೂಕು ಬೋರ್ಡುಗಳನ್ನು ತೆಗೆದುಹಾಕಿ ಅವರು ನಡಿಸುತ್ತಲಿದ್ದ ಇಲಾಖೆಗಳನ್ನು ನಡಿಸಲು ಯೋಗ್ಯವಾದ ಇನ್ನೊಂದು ಸಂಸ್ಥೆಯನ್ನು ೧೯೩೦ರಲ್ಲಿ ತಯಾರಿಸುವಾಗ ತಾಲೂಕು ಬೋರ್ಡುಗಳು ಅಡ್ಡಬಂದು ಪ್ರಯೋಜನವೇ ಇಲ್ಲ. ಆದುದರಿಂದ ಸರಕಾರದವರು ಈ ಹೊಸ ಬಿಲ್ಲನ್ನು ಪಾಸು ಮಾಡಿ ಆಕ್ಟಾಗಿ ಮಾಡುವುದು ಒಳ್ಳೇದು.

ಈಜು ಬಂದವರಿಗೆ ಕೆಲವು ಎಚ್ಚರಿಕೆಗಳು.

(1) ನಿಮಗೆ ಹೃದಯರೋಗವಿದ್ದರೆ ಈಜುವುದಕ್ಕೆ ಹೋಗಬೇಡಿರಿ.

(2) ಒಬ್ಬಂಟಿಗರಾಗಿ ಎಂದಿಗೂ ಈಜುವುದಕ್ಕೆ ಹೋಗಬೇಡಿರಿ.

(3) ದೇಹದಲ್ಲಿ ಉಷ್ಣವು ಹೆಚ್ಚಿದಾಗಲೂ, ಬಹಳ ಆಯಾಸವಿದ್ದಾಗಲೂ ಈಜಬೇಡಿರಿ.

(4) ಹೊಟ್ಟೆತುಂಬಿದ್ದಾಗ ಎಂದಿಗೂ ಈಜಬಾರದು. ಕೊನೇಪಕ್ಷ ಊಟವಾದ ಮೇಲೆ ಎರಡು ಗಂಟೆಗಳ ಕಾಲ ಅವಕಾಶವನ್ನು ಬಿಡಬೇಕು.

(5) ನೀರಿನ ಆಳವನ್ನು ತಿಳಿದಿದ್ದರೆ ಮಾತ್ರವೇ ಅಂತಹ ಜಲಾಶಯಗಳಲ್ಲಿ ಈಜುವ ಪ್ರಯತ್ನವನ್ನು ಮಾಡಿರಿ.

(6) ಬಹಳ ದಣಿವಾಗುವ ವರೆಗೆ ಈಜುತ್ತಿರಬೇಡಿರಿ. ಒಂದು ವೇಳೆ ಈಜುತ್ತಿರುವಾಗ ನಿಮಗೆ ಆಯಾಸವು ತೋರಿದರೆ ಒಡನೆಯೇ ಅಂಗತ್ತನಾಗಿ ಸ್ವಲ್ಪ ಹೊತ್ತು ವಿಶ್ರಾಂತಿಯಲ್ಲಿದ್ದು ಆ ಮೇಲೆ ದಡಕ್ಕೆ ಬಂದು ಸೇರಿರಿ.

(7) ಪ್ರವಾಹವೇಗದಲ್ಲಿಯಾಗಲಿ, ಸುಳಿಯಲ್ಲಿಯಾಗಲಿ ಸಿಕ್ಕದಂತೆ ಎಚ್ಚರ ತೆಗೆದುಕೊಳ್ಳಿರಿ. ಒಂದು ವೇಳೆ ಪ್ರವಾಹದ ವೇಗದಲ್ಲಿ ಸಿಕ್ಕಿಬಿದ್ದರೆ ಅದು ತಾನಾಗಿ ನಿಮ್ಮನ್ನು ಜಲದ ಮಟ್ಟಕ್ಕೆ ತರುವುದು. ಆಗ ನೀವು ಥಟ್ಟನೆ ದಡದ ಕಡೆಗೆ ತಿರುಗುವ ಪ್ರಯತ್ನ ಮಾಡಿರಿ.

(8) ಇಂತಹ ಜಲಗಂಡಗಳಲ್ಲಿ ಜನಗಳ ಪ್ರಾಣ ರಕ್ಷಣೋಪಾಯಗಳನ್ನೂ, ಶ್ವಾಸಕಲ್ಪನೆಯ ಮಾರ್ಗಗಳನ್ನೂ ಪ್ರತಿಯೊಬ್ಬರೂ "ರೆಡ್‍ಕ್ರಾಸ್" ಪದ್ಧತಿಯ ಮೂಲಕ ಕಲಿತಿದ್ದು ಅಪಾಯ ಸಂಭವಗಳಲ್ಲಿ ನಿಮ್ಮನ್ನೂ ಇತರರನ್ನೂ ಕಾಪಾಡುವ ಪ್ರಯತ್ನಮಾಡಿರಿ.

ಆರೋಗ್ಯ ಚಂದ್ರಿಕೆ.



DUNLOP

ಬೇಟ್ಸ್‌ಕೋರ್ಡ್ ಸ್ಸಾಕಲ್ ಟಾಯರು.

ಈ ಟಾಯರು ಶಾಸ್ತ್ರೀಯವಾದ ಮತ್ತು ಸಮಂಜಸವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಉತ್ತಮ ತರಗತಿಯ ಮತ್ತು ಬೇಗನೆ ಸವೆದುಹೋಗದಿರುವಿಕೆಯಲ್ಲಿ ಪ್ರಸಿದ್ಧಿಪಟ್ಟ ಗಟ್ಟಿ ರಬ್ಬರ್ ಉಪಯೋಗಿಸಿದ

ಶ್ರೇಷ್ಠತಮ ಟಾಯರು.

fit Dunlop and be satisfied

ದಿ. ಡನ್ಲೋಪ್ ರಬ್ಬರ್ ಕಂಪೆನಿ. (ಇಂಡಿಯಾ) ಲಿಮಿಟೆಡ್,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌ, ಲಾಹೋರು, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೊಹತೀ, ರಂಗೂನು. ಮಂಡಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.

Edited Printed & Published by V. S. Kamath at the M. T. A. SHARADA PRESS, MANGALORE.

Registered No. M. 498

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೭ನೇ ಶುಕ್ರವಾರ ಜುಲಾಯಿ ೧೯೨೮. ಸಂಚಿಕೆ ೩೦

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore
ಶಾಖೆ:—ಕುಂದಾಪುರ.
" ಮಂಗಳೂರು.

STATEMENT OF AFFAIRS AS ON 16 JUNE, 1928.

CAPITAL AND LIABILITIES.		PROPERTY AND ASSETS.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	" 96,600-0-0	2 Investments on G. P. Notes	2,40,234-5-0.
3 Deposits	" 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	" 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	" 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12-7.

Office of the Corporation,
UDIPI, 18-6-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕಿದೆ, ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ಎ. ಸೂ:—ಕಳಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ-ಕಜ್ಜಿ, ಕಜ್ಜಿಗಳು, ನಂಬಿಗೆಯ ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street. MANGALORE.

ಪತ್ರವ್ಯವಹಾರ.

[illegible]

ಸ್ವಸವಿದ್ಯೇಯ, ಕೊಂಕಣಿಗ.

The Wrong Window.

I. C. continues to play the role of the Pretender. I have again taken up the caricature and studied it along with I. C.'s denunciation and am at a loss to understand what exactly this gentleman might mean. The repeated invocation to the District Board is very significant, and reveals an extremely sinister object. I regret that the journalism in our District cannot rise above personal vindicativeness and cannot refrain from blackmail and slander. I know far too well the District Board to think that it will be easily taken in by such despicable means, and I know that it is endowed with far better intelligence than this Pretender will like it to have. I have moved in better circles, and even well connected District Board members and authorities would find nothing more than a quiet humour and a sound satire in the caricature. I. C.'s vapourings are self-condemned. As for style, I have left it altogether to the I. C. (with a definite article) to furnish the model, which God forbid that anyone should copy.

Reader.

We do not propose to carry this wastefull discussion further. This correspondence will cease here. *Editor.*

ಚಲಚ್ಚಿತ್ರ. (ಸಿನೆಮಾ)

(ಗೋವಿನ ಕಥೆಯ ಮಟ್ಟು.)

ಬೆರಗುಗೊಳಿಪುದು ಹರುಷಗೊಳಿಪುದು |
ಅರಿವು ಬರುವುದು ಸಿನೆಮದಿ ||
ಸರುವ ಕಥೆಯನು ತೋರಿಸ್ಮಥೆಯನು |
ಒರಸಿ ಬಿಡುವುದು ನಿಮಿಷದಿ || ೧ ||

ಎಲೆಲೆ! ಮಾನವ! ಒಲಿದು ಜ್ಞಾನವ |
ಕಲಿಪುದಲ್ಲವೆ ಸರ್ವವ? ||
ಬೆಲೆಯ ಕೊಟ್ಟರು ಸಮಯ ಕೆಟ್ಟರು |
ಚೆಲುವ ನೋಡಲು ಹೋಗುವ || ೨ ||

ಕಳ್ಳ ಕಾಣುವ ಸುಳ್ಳ ಹೇಳುವ |
ಕನ್ನ ಹಾಕುವ ದಾರಿಯೂ ||
ಹಳ್ಳಿ ಜನರಿಗೆ ನೋಡಲಿಲ್ಲವು |
ಎಲ್ಲ ಸುಖಗಳು ಪೇಟೆಯಾ || ೩ ||

ಅರಸ ಬರುವನು ಅರಸಿ ಬರುವಳು |
ಹರುಷಗೊಳಿಸರು ಜನರನು ||
ಸುರಸನರ್ತನ! ಸುರಸವರ್ತನ |
ವಿರಿಸಿ ಅಭಿನಯ ಸಾರ್ವರು || ೪ ||

ಏನು ಚೋದ್ಯವು! ಏನು ಮಾನ್ಯವು! |
ಏನು ಸಾಹಸ ನೋಡಲು ||
ಏನು ಪ್ರೀತಿಯು! ಏನು ಭ್ರಾಂತಿಯು |
ಏನು ಭಕ್ತಿಯು ನುಡಿಯಲು || ೫ ||

ಸತಿಯ ಮರ್ಮವ ಪತಿಯ ಕರ್ಮವ |
ಸುತನ ಧರ್ಮವ ಸಾಧುತ |
ಕಥೆಯು ಸಾಗ್ವದು ಮತಿಯು ಅರಳ್ವದು |
ಅತುಳ ವೈಭವ ನೋಡುತ || ೬ ||

ದುಷ್ಟ ಜನರಿಗು ಶಿಷ್ಟ ಜನರಿಗು |
ಸೃಷ್ಟಿಸುತ್ತಲೆ ಬುದ್ಧಿಯಾ ||
ನಷ್ಟವಿಲ್ಲದೆ ಕಷ್ಟವಿಲ್ಲದೆ |
ಸ್ಪಷ್ಟ ಎಲ್ಲವ ತೋರ್ಪುದು || ೭ ||

ಕಟ್ಟು ಕಥೆಗಳ ಹುಟ್ಟಿಸುತ್ತಲೆ |
ಅಟ್ಟಹಾಸದಿ ಮೆರೆವುದು ||
ಇಟ್ಟು ಮನವನು ಕೊಟ್ಟು ಧನವನು |
ಕೆಟ್ಟದೊಂದೇ ನುಡಿಯದು || ೮ ||

ಕಟಪಾಡಿ ಹೊನ್ನಯ ಶೆಟ್ಟಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ,

O. P. 64/1928.

1. ಸುಂಗಂಧ 2. ಪ್ರೇಮ 3. ಸರೋಜಾ 4. ಪುಷ್ಪಾವತಿ—ಮ್ಯಾನರರು.

ಗಾರ್ಡಿಯಾನಳು ತಾಯಿ ಯಮ್. ಲೀಲಾಬಾಯಿ,

ಮೇಲೆ ಹೆಸರು ಕಾಣಿಸಿದ ಮ್ಯಾನರ್ ಮಕ್ಕಳಿಗೆ ತನ್ನನ್ನು ಗಾರ್ಡಿಯಾನಳಾಗಿ ನೇಮಿಸಬೇಕೆಂತ ಸದರಿ ಮ್ಯಾನರರ ತಾಯಿಯಾದ ಲೀಲಾಬಾಯಿಯು ಕೊಟ್ಟ ಸದರಿ ಅರ್ಜಿಯು ತನ್ನ ಬಗ್ಗೆ ತಾ. 4—8—1928ಕ್ಕೆ ಸದರಿ ಕೋರ್ಟಿನಲ್ಲಿ ಇಟ್ಟಿರುತ್ತದೆ.

ಮಂಗಳೂರು ತಾ. 13-7-'28 } G. Upendra Prabhu, *Vakil for Petitioner.*

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ,

O. P. 70/1928.

ಪದ್ಮಾವತಿ ಅಮ್ಮ—ಇಜ್ಜ ಅನಂತಯ್ಯನವರ ವಿಧವೆ, ಮಂಗಳೂರು ತಾಲೂಕು ಬಂಟವಾಳ ಕಸಬಾ, ಮಾಣಿ ಗ್ರಾಮದಲ್ಲಿರುವವಳು—ಅರ್ಜಿದಾರಳು.

ಮಂಗಳೂರು ತಾಲೂಕು ಬಂಟವಾಳ ಕಸಬಾ, ಮಾಣಿ ಗ್ರಾಮದ ಮೃತಪಟ್ಟ ಇಜ್ಜ ಅನಂತಯ್ಯನ ಮ್ಯಾನರ ಮಗ ಶಾಂತಾರಾಮನ ದೇಹದ, ವ ಆಸ್ತಿಯ ಗಾರ್ಡಿಯನಳಾಗಿ ತನ್ನನ್ನು ನೇಮಿಸಬೇಕಾಗಿ ಮೇಲ್ಕಂಡ ಅರ್ಜಿದಾರಳು ಅರ್ಜಿ ಕೊಟ್ಟಿರುತ್ತಾಳೆ. ಸದರಿ ಅರ್ಜಿಯು ತಾ. 10—8—'28ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಸಮ್ಮಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತ್ಯ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗಳೂರು, ತಾ. 23-7-'28 } P. Sanjiva M. A. B. L. *Vakil for Petitioner.*

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಪಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ, ಕೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳಿನ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ" ಇದು ವರಿವಿಗೂ 14,37,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್. ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 888,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6½% for 2 Years 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½%, 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪ್ಯಾ 2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಕಾಯಂ ಠೇವಣಾತಿಗಳು „ 7,38,880/-

ಹೊರಗೆ ಬಿಟ್ಟ ಸಾಲ ದೇಣಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ। ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6¾ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾ, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಮ್ಮಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಿಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ, ತಾ. 18-2-'28. } ಪಾಂಗಾಳ ಪರಮೇಶ್ವರ ನಾಯಕ್, ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟಿವಿಗೆ ಹತ್ತಿ.

ಸ್ಫುಟ ವಿಚಾರಗಳು.

ಹಿಂದೀ ರಾಜರೂ ರಾಷ್ಟ್ರೀಯ ಚಳವಳವೂ.

"ಬ್ರಿಟಿಷ ಇಂಡಿಯದ ದೊಡ್ಡ ದೊಡ್ಡ ರಾಷ್ಟ್ರೀಯ ಧುರೀಣರಂತೆ ನಾವೂ ಬ್ರಿಟಿಷ ಸಂಬಂಧದಲ್ಲಿ ಸ್ಥಿರವಾದ ವಿಶ್ವಾಸವುಳ್ಳವರಾಗಿದ್ದೇವೆ. ಆದರೆ ಆ ಸಂಬಂಧದೊಡನೆ, ಹಿಂದೀಯರಿಗೆ ತಮ್ಮ ಆಡಳಿತದಲ್ಲಿ ತಮಗೆ ಈಗಿರುವ ಅಧಿಕಾರಕ್ಕಿಂತಲೂ ಹೆಚ್ಚಿನ ಅಧಿಕಾರವಿರುವುದು ಸಂಪೂರ್ಣ ಯೋಗ್ಯವಾಗಿದೆ" ಎಂದು ಪಟಿಯಾಲಾ ಮಹಾರಾಜರು ಅನ್ನುತ್ತಾರೆ. ಹಿಂದೀಯ ಸ್ವಾತಂತ್ರ್ಯದಿಂದ ಬ್ರಿಟಿಷ ಹಿಂದೂಸ್ಥಾನ ಮತ್ತು ಹಿಂದೀ ರಾಜರುಗಳ ಸಂಬಂಧವು ಬಹಳ ತೊಂದರೆಗಳಿಗೆ ಕಾರಣವಾಗಬಹುದೆಂದು ಬ್ರಿಟಿಷರು ತೋರಿಸುವ ಬೆದರಿಕೆಯು ನಿಷ್ಕಾರಣವಾದುದೆಂದು ಮೇಲಿನ ಮಾತುಗಳಿಂದ ತಿಳಿಯುವುದು. ಹಿಂದೂಸ್ಥಾನದಲ್ಲಿ ಹಿಂದೀ ಫೆಡರೇಶನ್ "ಹಿಂದೀ ಸಂಯುಕ್ತ ರಾಷ್ಟ್ರ"ವೆಂಬುದೊಂದು ಇರಬೇಕೆಂದು ಅರಸು ರಾಜಪುತ್ರರೂ ಒಪ್ಪಿರುತ್ತಾರೆ" ಎಂಬ ಮಾತು ಈ ಸಮಸ್ಯೆಯ ಅಪ್ಪಟ ತೀರ್ಮಾನವನ್ನು ತೋರುತ್ತಿದೆ. ಬ್ರಿಟಿಷ ಹಿಂದೂಸ್ಥಾನವು ಚಿರಕಾಲವೂ ಬ್ರಿಟಿಷರ ಆಳಿಕೆಯಲ್ಲಿಯೇ ಇರಲಾರದು; ಅದು ಒಂದು ಸಮಯದಲ್ಲಿ ಪ್ರತ್ಯೇಕ ರಾಷ್ಟ್ರವಾಗಿ ಬೆಳೆಯಲಿದೆ ಎಂಬುದನ್ನು ಸಂಸ್ಥಾನದ ಪ್ರಭುಗಳು ಇಷ್ಟರೊಳಗೆ ಚೆನ್ನಾಗಿ ತಿಳಿದುಕೊಂಡು, ತಮ್ಮ ಅಸ್ತಿತ್ವವೂ, ತಮ್ಮ ಗೌರವವೂ,—ಅಂತಹ ವಿಶಾಲ ಪರಿವರ್ತನದೊಳಗೆ ಅಂತರ್ಗತವಾಗುವುದರಲ್ಲಿಯೇ ಇದೆ ಎಂದು ತಿಳಿದಿರುವರು. ಹಿಂದೀ ರಾಜರು ಇನ್ನೂ ಅತ್ಯಂತ ಮಹತ್ವದ ಧ್ಯೇಯವನ್ನು ಆಶ್ರಯಿಸುವ ಅಗತ್ಯವಿದೆ. ತಮ್ಮ ಪ್ರಜೆಗಳ ನಾಗರಿಕ ಪ್ರಯೋಜನತೆಯು ಅಭಿವೃದ್ಧಿಯು ಹೊಂದಿಕೊಂಡಿದೆಯೆಂದೂ, ಅವರ ಉತ್ಥಾನಪತನದಲ್ಲಿಯೇ ತಮ್ಮ ಉನ್ನತಿ ಅವನತಿಗಳು ಇವೆಯೆಂದೂ ಭಾವಿಸಿದರೆ ಈ ರಾಜಪುತ್ರರ ಸಂಗದಿಂದ ರಾಷ್ಟ್ರೀಯ ಚಳವಳಕ್ಕೆ ಯಾವ ಬಾಧೆಯೂ ಬಾರದು. ಆಧುನಿಕ ನಾಗರಿಕತೆಯು ವಿಚಾರಕ್ರಾಂತಿಗೆ ಹಿಂದೀ ರಾಜರು ಅನುಗುಣವಾಗಿ ನಡೆದುಕೊಂಡರೇನೇ ಹಿಂದೀ ರಾಜಪುತ್ರರಿಗೆ ಲೋಕದಲ್ಲಿ ಅಸ್ತಿತ್ವವಿರುವುದು. ಅಲ್ಲದೆ ಶತಮಾನಗಳ ಹಿಂದಿನ ಆ ನಿರಂಕುಶ ಪ್ರಭುತ್ವವನ್ನೇ ಅವರು ಆಶಿಸುವುದಾದರೆ ಇಂದಲ್ಲ ನಾಳೆ ನೂತನ ವಿಚಾರಗಳ ಹೊಯ್ಲಿಗೆ ಕೊಚ್ಚಿಕೊಂಡು ಹೋಗಬೇಕಾಗುವುದು. ಆದುದರಿಂದ ಪಟಿಯಾಲಾ ಮಹಾರಾಜರ ಈ ಸಂದೇಶವು ಸಾಮಯಿಕವಾಗಿದ್ದು ಸ್ಯಾಯಮನ್ ಕಮಿಶನ್ನಿಗೂ ಬಟ್ಲರ್ ಕಮಿಟಿಗೂ ಹೊಸ ವೇಷವನ್ನು ತೋರಿಸುವಂತಹುದಾಗಿರಬೇಕು.

ಬರ್ದೋಲಿಯ ಪ್ರಾಮುಖ್ಯತೆ.

ಮುಂಬೈ ಕೌನ್ಸಿಲಿನಲ್ಲಿ ಮುಂಬೈ ಗವರ್ನರರು ಬರ್ದೋಲಿ ಪರಿಸ್ಥಿತಿಯ ಮೇಲೆ ತಮ್ಮ ಅಪ್ಪಟ ಮಾತನ್ನು ಹೇಳಿಬಿಟ್ಟರು. ಮುಖ್ಯವಾಗಿ ಸರಕಾರವು ಜನರ ಸತ್ಯಾಗ್ರಹಕ್ಕೆ ಬಗ್ಗುವಂತಿಲ್ಲವೆಂಬುದೇ ಆ ಮಾತಿನ ತಾತ್ಪರ್ಯವು. ಸತ್ಯಾಗ್ರಹವು ಆರಂಭವಾಗಿ ಬಹಳ ಸಮಯವಾಯಿತು. ಹಲವರ ಮನೆಮಾರುಗಳು ಕಾಸು ದುಗ್ಗಾಣಿಗೆ ಏಲಂ ಆಗಿ ಸರಕಾರವು ತನ್ನ ಅಂಶವನ್ನು ಹೊಂದಲೆತ್ನಿಸಿತು. ಆದರೆ ಗವರ್ನರರ ಈಗಿನ ಧೋರಣವನ್ನು ಲಕ್ಷಿಸುವಾಗ, ಅದು ಬರೇ ಸ್ಥಳೀಕ ಪ್ರಶ್ನೆಯಾಗಿರದೆ, ಅಖಿಲ ಹಿಂದೂಸ್ಥಾನದ ಭಾವೀ ರಾಷ್ಟ್ರೀಯ ಚಳವಳವನ್ನೇ ಉದ್ದೇಶಿಸುತ್ತಿದೆಯೆಂದು ಕಾಣುತ್ತಿದೆ. ಸತ್ಯಾಗ್ರಹವು ಒಂದು ಸಮಯದಲ್ಲಿ ನಮ್ಮ ದೇಶದ ಇಂಪೀರಿಯಲ್ ಸರಕಾರ ನಿದ್ರೆಯನ್ನೇ ಕೆಡಿಸಿತ್ತೆಂಬುದನ್ನೂ ಬರ್ದೋಲಿಯು ಅಖಿಲ ಹಿಂದೂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದ ರಂಗಭೂಮಿಯಾಗಿಯೇ ತಯಾರಿಸಲ್ಪಟ್ಟಿದ್ದಿತ್ತೆಂಬುದನ್ನೂ ನಾವು ಮರೆಯಬಾರದು. ಆದುದರಿಂದ ಈ ಬಾರಿ ಬರ್ದೋಲಿ ಸತ್ಯಾಗ್ರಹವು ನಿಷ್ಫಲವಾಯಿತೆಂದರೆ, ಮಹಾತ್ಮಾ ಗಾಂಧಿಯವರ ಸುಖಸ್ವಪ್ನವೊಂದು ನಿರ್ವಾಣ ಹೊಂದಿತೆಂದು ತಿಳಿಯಬೇಕು; ಸತ್ಯಾಗ್ರಹದ ಉಪಯುಕ್ತತೆಯ ವಿಷಯದಲ್ಲಿ ನಿಸ್ಸಂದೇಹವಾದ ತೀರ್ಮಾನವು ಕೊಡಲ್ಪಟ್ಟಿತೆಂದು ತಿಳಿಯಬೇಕು; ಹಿಂದೀ ಸ್ವರಾಜ್ಯವನ್ನು ಹೊಂದಲಿಕ್ಕೆ ಸತ್ಯಾಗ್ರಹವನ್ನು ಉಪಯೋಗಿಸುವ ಆಲೋಚನೆಯನ್ನೇ ಚಿರಕಾಲಕ್ಕಾಗಿ ಬಿಟ್ಟುಬಿಡಬೇಕು. ಈ ಉದ್ದೇಶದಿಂದಲೇ ಮುಂಬೈ ಗವರ್ನರರೂ ಬರ್ದೋಲಿ ಕಡೆಗಿನ ತಮ್ಮ ಅಭಿಪ್ರಾಯಗಳನ್ನು ಅಷ್ಟು ಗಟ್ಟಿಮಾಡಿಕೊಂಡಿರುವರು. ಅದು ಸರಕಾರದ ಗೌರವ (Prestige)ದ ವಿಷಯವಾಗಿಲ್ಲ; ಅದು ರಾಷ್ಟ್ರೀಯ ಸಮಸ್ಯೆಯಾಗಿ ಅವರು ತಿಳಕೊಂಡಿಲ್ಲ. ಆದುದರಿಂದ ಹಿಂದೀ ರಾಷ್ಟ್ರೀಯ ಚಳವಳವು ಬರ್ದೋಲಿಯಲ್ಲಿ ಕೇಂದ್ರಿಕರಿಸಲ್ಪಡುವುದು ಅಗತ್ಯವಿದೆ. ಹಾಗಾದರೆ ಬರ್ದೋಲಿಯು ಇನ್ನೊಂದು ಚಿರಳಾ—ಪೇರಳಾವಾಗುವುದಾದರೆ ಸತ್ಯಾಗ್ರಹಕ್ಕೆ ನಮ್ಮ ಕಡೆಯ ವಿದಾಯವನ್ನೀಯಬೇಕು.

ಹಾರ್ಟ್ನರ್ ಹೊರ್ನರರು ತಪ್ಪನ್ನೊಪ್ಪಿದರು.

ಹಿಂದೂಸ್ಥಾನದ ಭವಿತವ್ಯವನ್ನು ಸ್ಥಿರೀಕರಿಸಲಿಕ್ಕೆ ಬಂದಿರುವ ಭಾಗ್ಯವಿಧಾತರು ಇವರು! ನಿಷ್ಪಕ್ಷಪಾತ ಬುದ್ಧಿಯಿಂದ ಮಜೂರ ಪಕ್ಷದ ಉದಾರ ಭಾವನೆಯಿಂದ ಹಿಂದೂಸ್ಥಾನದ ಸ್ವರಾಜ್ಯಕ್ಕೆ ಅರ್ಹತೆಯನ್ನು ನಿರ್ಣಯಿಸಲು ಬಂದವರ ಪೈಕಿ ಒಬ್ಬ ಜವಾಬ್ದಾರ ಮೆಂಬರರು. ಇವರೇ ತಮ್ಮ ಅಯೋಗ್ಯತೆಯನ್ನು ಈಗ ತಾನೇ ಕಂಡುಕೊಂಡರು. ಹಿಂದೀ ಭಾಂಡವಳಗಾರರನ್ನು ಪಾಶ್ಚಾತ್ಯ ಭಾಂಡವಳಗಾರರೊಡನೆ, ಹೋಲಿಸಿ ಹೇಳಲು ತೊಡಗಿದ ಇವರು ತಮ್ಮ ಪ್ರಥಮದ ತೀರ್ಮಾನವು ನಿರಾಧಾರವಾದುದು ಎಂದು ಈಗ ತಾನೇ ಒಪ್ಪಿದರು. ಆಧಾರವಿಲ್ಲದೆ ತೀರ್ಮಾನವನ್ನು ಸುಲಭವಾಗಿ ಕೊಡುವರೆಂಬುವುದನ್ನು ತಾನಾಗಿ ಒಪ್ಪಿದ ಮೇಲೆ ಯಾವ ಅರ್ಹತೆಯಿಂದ ಇವರು ಹಿಂದೀ ಒಂದು ಜನಾಂಗದ ಭವಿತವ್ಯತೆಯ ಮೇಲೆ ತೀರ್ಮಾನವನ್ನು ಕೊಡಲು ಯೋಗ್ಯರಾದಾರು? ಹಾರ್ಟ್ನರ್ ಹೊರ್ನರಿಗೆ ತಮ್ಮ ತಪ್ಪನ್ನು ಕೂಡಲೇ ಒಪ್ಪುವಷ್ಟು ಸಭ್ಯತೆಯು ಸಹಾ ಇರದೆ ಹೋಯಿತು, ಬರ್ಗೆ ಒಂದನೆ ಸಲಕ್ಕೆ ನಿರೋಧಗಳು ಪ್ರಕಟವಾದ ಮೇಲೆ, ಎರಡನೆ ಬಾರಿ ಪುನಃ ಬಹಳ ವೀರತೆಯಿಂದ ತಮ್ಮ ಮೊದಲಿನ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಈ ಕರದ ಮುಂಬಯಿಗಿರಣಿಗಳಿಂದ ಅನ್ಯಾಯ ಹೊಂದಿದ ಟಾಟಾ ಕಂಪೆನಿಯವರು ಸಾರ್ವಜನಿಕವಾಗಿ ಮೊಕದ್ದಮೆಗೆ ಕರೆದ ಮೇಲೆಯೇ ಹಾರ್ಟ್ನರ್ ಹೊರ್ನರಿಗೆ ತಮ್ಮ ತಪ್ಪಿನ ಅನುಭವವಾಯಿತು, ತಾವು ಹೇಳಿದುದು ತಪ್ಪಾಯಿತು, ತಮಗೆ ಆ ಸಂಗತಿಯ ಪೂರ್ಣ ಜ್ಞಾನವಿರಲಿಲ್ಲ. ಆದುದರಿಂದ ತನ್ನ ಮೊದಲಿನ ಅಭಿಪ್ರಾಯವನ್ನು ಹಿಂತೆಗೆದುಕೊಂಡಿದ್ದೇನೆ. ಈ ತನ್ನ ಕ್ಷಮಾಯಾಚನೆಯನ್ನು ಹಿಂದೀ ಪತ್ರಿಕೆಗಳೆಲ್ಲವೂ ಬಹಿರಂಗ ಪ್ರಕಟಣೆಯನ್ನು ಕೊಡಬೇಕು ಎಂದು ಕೇಳಿಕೊಂಡಿರುವರು. ಈ ಘಟನೆಯ ನಂತರವಾದರೂ ಇವರಿಗೆ ಸ್ಯಾಯಮನ್ ಕಮಿಶನ್ನಿನ ಮೆಂಬರಿಕೆಗೆ ರಾಜೀನಾಮೆ ಕೊಡುವಷ್ಟು ಸಭ್ಯತನವಿದ್ದುದಾದರೆ ಒಳ್ಳೆಯದಿತ್ತು.

ರೈಲ್ವೆ ಮುಷ್ಕರ.

ಸೌತ್ ಇಂಡಿಯನ್ ರೈಲ್ವೆ ಮುಷ್ಕರವು ಇನ್ನೂ ಮುಗಿದಿಲ್ಲ. ಅಲ್ಲಲ್ಲಿ ಮಜೂರರು ಮಾಡಿದ ಅತ್ಯಾಚಾರಗಳ ಕಾರಣದಿಂದ ಹಲವು ಅಪಘಾತಗಳೂ ಸಂಭವಿಸಿ ಪ್ರಾಣ ನಷ್ಟವು ಉಂಟಾಗಿದೆ. ಮಜೂರ ಧುರೀಣರು ಈ ಮುಷ್ಕರದ ವಿಷಯದಲ್ಲಿ ಸಾಕಷ್ಟು ಮುಂಜಾಗ್ರತೆಯನ್ನು ತೆಗೆದುಕೊಂಡಿರುವುದಾಗಿ ತಿಳಿಯುವುದಿಲ್ಲ. ಅಲ್ಲದೆ ಧುರೀಣರು ಜನರಲ್ ಸ್ಟ್ರೈಕಿನಿಂದ ತಮ್ಮ ಮೇಲೆ ಬರುವ ದೊಡ್ಡ ಜವಾಬ್ದಾರಿಯನ್ನು ತಿಳಿದುಕೊಂಡಿಲ್ಲ. ಮುಷ್ಕರದ ಇತಿಹಾಸವನ್ನು ನೋಡಿದರೆ ಇದರ ಮುಂದಾಳುಗಳು ಅನಾವಶ್ಯಕ ಅವಸರವನ್ನು ತೋರಿಸಿದಂತೆ ಕಾಣುತ್ತಿದೆ. ಸಾವಿರಾರು ಬಡವರ ಸುಖ ದುಃಖಗಳ ವಿಷಯವಾದ ಈ ಮುಷ್ಕರದ ಕಡೆಗೆ ಮಜೂರ ಮುಂದಾಳುಗಳೆನ್ನಿಸಿಕೊಳ್ಳುವವರು ಇಷ್ಟು ಸ್ವೇಚ್ಛೆಯಿಂದ ನಡೆದುಕೊಳ್ಳುವುದು ವಿಷಾದಕರವಿದೆ. ಮುಷ್ಕರದಿಂದ ಕಂಪೆನಿಗೆ ನಷ್ಟವಾಗುವುದಾದರೂ ಅದರೊಡನೆ ಸಾರ್ವಜನಿಕ ಹಿತಕ್ಕೂ ಬಾಧಕ ಬರುವುದರಿಂದ ಇಂತಹ ಮುಷ್ಕರಗಳನ್ನು ವ್ಯವಸ್ಥೆಗೊಳಿಸುವ ಮೊದಲು ಇತರ ಎಲ್ಲಾ ಉಪಾಯಗಳನ್ನು ಮಾಡಿ ತಮ್ಮ ಉದ್ದಿಷ್ಟವನ್ನು ಹೊಂದಲು ಯತ್ನಿಸಬೇಕು. ಅಲ್ಲದೆ ಅಂತಹ ಎಲ್ಲಾ ಉಪಾಯಗಳೂ ವ್ಯರ್ಥವಾಗುವುದಾದರೆ, ಮುಂದೆ ಬರುವ ಮುಷ್ಕರದ ಎಚ್ಚರವನ್ನು ಸಾರ್ವಜನಿಕ ಲಕ್ಷ್ಯಕ್ಕೆ ಮೊದಲಾಗಿ ತಂದುಕೊಟ್ಟು, ತಮ್ಮ ಕೇಳಿಕೆಗಳ ನ್ಯಾಯವನ್ನೂ ಅವಶ್ಯಕತೆಗಳನ್ನೂ ಚೆನ್ನಾಗಿ ಅಂಕಿಸಿ ಸಾರ್ವಜನಿಕ ಸಹಾನುಭೂತಿಯನ್ನೂ ಪಡಕೊಳ್ಳಬೇಕು. ಮುಷ್ಕರದ ಮುಂದಾಳುಗಳು ಇದಕ್ಕಾಗಿ ಪ್ರಯತ್ನಿಸಲೇ ಇಲ್ಲ. ಬದಲಾಗಿ ಮುಷ್ಕರಗಾರರನ್ನು ಸಂಯಮಿಸಲು ಶಕ್ತರಾಗದೆ ಸಾರ್ವಜನಿಕ ಅಹಿತವನ್ನೇ ಮಾಡಿದರು. ರೈಲ್ವೆ ಕಂಪೆನಿಯ ಏಜಂಟರು ಮಜೂರ ಯೂನಿಯನ್ನಿನೊಡನೆ ನಡಿಸಿದ ಪತ್ರಗಳು ಸೌಮ್ಯತರದವುಗಳಾಗಿದ್ದು ಮಜೂರರು ಅವರ ಸಹಾನುಭೂತಿಯನ್ನು ಪಡೆಯಲಾಗುವಂತಹುದಿದ್ದುವು. ಮಜೂರ ಧುರೀಣರು ಇನ್ನಾದರೂ ತಮ್ಮ ಜವಾಬ್ದಾರಿಕೆಯನ್ನು ತಿಳಿದು ಮುಷ್ಕರವನ್ನು ಅಪ್ಪೈಸಪಡಿಸುವಂತಾಗಿ ನೆನಸುತ್ತೇವೆ.

ನೋಟಗಳು.
NOTE...S.

ರೈಲ್ವೆ ಮಜೂರ ಮುಷ್ಕರಗಳು ಬರುತ್ತಲೇ ಇವೆ. ಬಂಗಾಳದಿಂದ ದಕ್ಷಿಣ ಹಿಂದೂಸ್ಥಾನಕ್ಕೆ ಬಂದ ಈ ಗಾಳಿಯು ಮುಂಬೈಯತ್ತಕಡೆ ಹೋಗುವಂತಿದೆ. ಜಿ. ಐ. ಪಿ. ರೈಲ್ವೆ ಮಜೂರರಿಗೂ ಮುಷ್ಕರದ ಉಮೇದು ಉಂಟಾಗಿಯದೆ.

• • • •

ರೈಲ್ವೆಗಳಿಂದ ಹಿಂದೂಸ್ಥಾನದ ಮೇಲೆ ಪರದೇಶೀಯರ ನಿರ್ಬಂಧವು ಹೆಚ್ಚಿತೆಂದೂ, ಅವುಗಳಿಂದ ದೇಶದ ಬಡತನವು ಮತ್ತಷ್ಟು ತೀಕ್ಷ್ಣವಾಯಿತೆಂದೂ, ಕೆಲವು ರಾಷ್ಟ್ರೀಯ ಚಳವಳಗಾರರ ಅಂಬೋಣ ಪ್ರತಿ ರೈಲ್ವೆಯ ಕೆಲಸಗಾರರೂ ಮುಷ್ಕರ ಹಾಕಿದರೆ ಮತ್ತೆ ಸ್ವರಾಜ್ಯವು ಹತ್ತಿರವೇ ಆಯಿತು!

• • • •

ಮಜೂರ ಧುರೀಣ (ಗಿರಣಿ ಕೂಲಿಗಳ) ನೆನ್ನಿಸಿಕೊಳ್ಳುವ ಮುಂಬೈಯ ಜಾಬ್‌ವಾಲಾ ಎಂಬವನು "ನಾವು ಮುಷ್ಕರವನ್ನು ಹಿಂದೆಗೆಯಲಾರೆವು. ಉಪವಾಸದ ವತ್ತಾಯದಿಂದ ಮುಷ್ಕರಗಾರರು ಕೆಲಸಕ್ಕೆ ಸೇರಿದರೆ ಮೂರು ತಿಂಗಳೊಳಗೆ ಅವರು ನಿಶ್ಚಯವಾಗಿಯೂ ಹೊರಗೆ ಬರುವರು" ಎಂದು ಹೇಳುವನು.

• • • •

ಜಾಬ್‌ವಾಲಾರವರಿಗೆ ಉಪವಾಸದ ವತ್ತಾಯವಿರಲಿಕ್ಕಿಲ್ಲ. ಸ್ಟ್ರೈಕರ್ಸ ಫೋಂಡು (Striker's Fund) ಇವರ ನಿರ್ಧಾರಕ್ಕೆ ಒಳ್ಳೇ ಬೆಂಬಲ ಕೊಟ್ಟಿರಬೇಕು.

• • • •

ಆದರೆ ಗಿರಣಿ ಮ್ಹಾಲಿಕರು ಮಜೂರರ ಸಂಬಳವನ್ನೇರಿಸಿದರೆ ಮುಂದೆ ಸ್ಟ್ರೈಕ್ ಮಾಡಲಿಕ್ಕೂ, ಉಪವಾಸದ ವತ್ತಾಯದಿಂದ ಕೆಲಸಕ್ಕೆ ಸೇರಿದಾಗ ಮೂರರ ಬದಲಿಗೆ ಎರಡೇ ತಿಂಗಳೊಳಗೆ ಹೊರಗೆ ಬರಲಿಕ್ಕೂ ಸಹಾಯವಾಗುವುದು.

• • • •

ಬ್ರಿಟಿಷರು ಐಗುಪ್ತ್ಯದಲ್ಲಿ ಯುದ್ಧನಾವೆಗಳಿಂದ ಮಾಡಲಾಗದುದನ್ನು ಬರೇ ಪುಸಲಾಯಿಸುವಿಕೆಯಿಂದ ಮಾಡಿಕೊಂಡಿರುವರು. ಐಗುಪ್ತ್ಯದಲ್ಲಿ ಪಾರ್ಲಿಮೆಂಟೇ ಈಗ ಮುಚ್ಚಲ್ಪಟ್ಟಿದೆ.

• • • •

ಇದಕ್ಕಾಗಿ ಐಗುಪ್ತ್ಯದ ಆ ನೂತನ ಮಂತ್ರಿಗಳನ್ನೂ ಆ ಹಳೇ ರಾಜನನ್ನೂ ದೂರಿ ಪ್ರಯೋಜನವಿಲ್ಲ. ಇದಕ್ಕಾಗಿ, ಶತಮಾನಗಳಿಂಥ ತರಬೇತುಹೊಂದಿದ ಬ್ರಿಟಿಷ ರಾಜತಂತ್ರವನ್ನು ಪ್ರಶಂಸಿಸಬೇಕು.

• • • •

ಈ ದಿನ ಪತ್ರಿಕಾ ಪರಿಷತ್ತು—ನಮ್ಮ ಜಿಲ್ಲೆಯದು—ಮಂಗಳೂರಿನಲ್ಲಿ ಕೂಡುವುದು. ಸಹಿ ಹಾಕಿದವರಿಗಿಂತ ಕಡಿಮೆ ಸಂಖ್ಯೆಯ ಹಾಜರಿ ಇರಲಿಕ್ಕಿಲ್ಲವಷ್ಟೇ! ನೋಡಬೇಕು.

• • • •

ಪರಿಷತ್ತನ್ನು ಕೂಡಿಸುವ ಪ್ರಯತ್ನವು ಹಳತಾದುದು. ಹರಿಯದವರು ಪ್ರಯತ್ನಿಸಿ ಮಾಡಿದುದೇನು? ಹೊಸಬರು ಮಾಡುವುದೇನು? ಎಂದು ಕೆಲವು ಒಂದೂಕಾಲು ಬುದ್ಧಿವಂತಿಕೆಯವರ ಬುದ್ಧಿವಾದದ ಮಾತು. , ಆದರೆ ಊರಿಗೆ ಬುದ್ಧಿ ಸಾರುವ ವೃತ್ತಿಯಲ್ಲಿರುವ ಪತ್ರಿಕಾಕರ್ತರು ತಮಗೆ ತಾವೇ ಯಾವ ಬುದ್ಧಿ ಹೇಳಿಕೊಳ್ಳುವರೊ, ನೋಡಲಿದೆ.

• • • •

ಇಂಗ್ಲೆಂಡಿನಲ್ಲಿ ಒಂದು ಮಿಲಿಯ ನಿರುದ್ಯೋಗಿಗಳಿವೆಯೆಂದು ಪಾರ್ಲಿಮೆಂಟಿನಲ್ಲಿ ಗದ್ದಲ. ಹಿಂದೂಸ್ಥಾನದಲ್ಲಿ ಹಲವು ಮಿಲಿಯ ನಿರಾಹಾರಿಗಳಿದ್ದರೂ ಕೇಳುವವರಿಲ್ಲ.

• • • •

ಇನ್ನೊಂದು ತಾರತಮ್ಯ—ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳಿಗೆ— ಇಂಗ್ಲೆಂಡಿನ ನಿರುದ್ಯೋಗಿಗಳು ನಿರಾಹಾರಿಗಳಲ್ಲ, ಅವರಿಗೆ ಸರಕಾರದ ಭತ್ತೆ ಇದೆ—ಹೊರದೇಶದಲ್ಲಿ ನೆಲಸಲು ಕಳುಹಿಸಲಿಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಬ್ರಿಟಿಷ ಸಾಮ್ರಾಜ್ಯವು ಇವರಿಗಾಗಿಯೇ ಇದೆ. ಹಿಂದೂಸ್ಥಾನವು, ಬ್ರಿಟಿಷ ಸಾಮ್ರಾಜ್ಯದ ಪಾಲುಗಾರಿಕೆಯ ಗೌರವದೊಡನಿದ್ದರೂ, ಅದರ ನಿರಾಹಾರಿಗಳು ಸಾಮ್ರಾಜ್ಯದ ಇತರ ಯಾವ ಭಾಗಕ್ಕೆ ಹೋಗುವುದಾದರೂ ಅಲ್ಲಿ ಬಾಗಿಲು ಮುಚ್ಚಿಯೇ ಇದೆ.

• • • •

ಹಿಂದೂಸ್ಥಾನವು ಬ್ರಿಟಿಷ ಸಾಮ್ರಾಜ್ಯಾಂತರ್ಗತವಾದುದರಿಂದಾದ ಲಾಭವಿದು. ಹಿಂದೂಸ್ಥಾನದಿಂದ ಬ್ರಿಟಿಷರಿಗೆ ಲಾಭವಾದ ಸಂಪತ್ತಿನ ಫಲವಿದು.

• • • •

ಎಲ್ಲಾ ಪಕ್ಷಗಳ ಪರಿಷತ್ತಿನ ಕಮಿಟಿಯು ಹಿಂದೂಸ್ಥಾನಕ್ಕೆ ಬೇಕಾದ ಸ್ವರಾಜ್ಯಸರಕಾರದ ರಚನೆಯನ್ನು ತಯಾರಿಸಿರುವರು. ಇದನ್ನು ಚರ್ಚಿಸುವರೆ ಆಗೋಸ್ತು ತಾ. ೨೮ಕ್ಕೆ ಎಲ್ಲಾ ಪಕ್ಷಗಳ ಪರಿಷತ್ತು ಕೂಡುವುದು.

• • • •

ಈ ಪರಿಷತ್ತಿಗೆ ಎಷ್ಟು ಪಕ್ಷಗಳು ಹೋಗಲಿವೆ ಎಂದು ನೋಡಲಿದೆ. ಹೆದರಿಕೆಯೆಂದರೆ ಹಿಂದೆ ಬರುವಾಗ ಪಕ್ಷಗಳ ಸಂಖ್ಯೆಯು, ಹೋಗುವಾಗ ಇದ್ದುದಕ್ಕಿಂತಲೂ ಹೆಚ್ಚಾಗುವುದೊ ಎಂದು.

ಶಾಲಿವಾಹನಶಕೆ ೧೮೫೦ನೆಯ ವಿಭವಸಂದ ಆ. ಶ್ರಾವಣ ಶು|೧೧ ಶನಿವಾರದಿಂದ ವಿಭವ ಸಂ|ರದ ಆ. ಶ್ರಾವಣ ಬ| ೨ ಶುಕ್ರವಾರದ ವರೆಗಿನ ಪಂಚಾಂಗ. (೧೯೨೮ನೆಯ ಕರ್ಕಾಟಕ (ಆಟಿ)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರ ತಾರೀಕು	ಸೂರ್ಯ ಉ	ಸೂರ್ಯ ಅಸ್ತ
28	ಶನಿ	೧೧	೫೯.೧೪	ಜ್ಯೇಷ್ಠಾ	೫೮.೨	೧೩	6.17	6.57
29	ರವಿ	೧೨	೩೩.೧೮	ಮೂಲಾ	೬೦.೦	೧೪	6 17	6 56
30	ಸೋಮ	೧೩	೩೬.೩೨	ಮೂಲಾ	೩.೩೨	೧೫	6.17	6.56
31	ಮಂಗಳ	೧೪	೩೮.೪೬	ಪೂ. ಷಾ.	೯.೦೪	೧೬	6 17	6.56
1	ಬುಧ	○	೪೯.೪೬	ಉ. ಷಾ.	೧೧.೧೬	೧೭	6.18	6.55
2	ಗುರು	೧	೪೯.೦೪	ಶ್ರವಣ	೧೩.೨	೧೮	6.18	6.55
3	ಶುಕ್ರ	೨	೪೬.೫೬	ಧನಿಷ್ಠಾ	೧೩.೩೨	೧೯	6.18	6.55

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜುಮಲಾ ಮಳೆ.
20	85—8	73—8	1—85	—
21	86—4	74—8	0—74	—
22	86—4	75—0	0—21	—
23	86—6	75—3	0—15	—
24	88—0	77—1	0—18	—
25	87—5	74—7	0—33	—
26	86—8	74—7	0—33	—
				62—48

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ...	7—10	8—6
ಹೊಸ ಗುಡ್ಡು ...	6—12	7—6
ಸುಗ್ಗಿ ...	6—5	7—2
ಹೊಸ ರಾಶಿ ...	6—4	6—14
ಊರ ಅವ್ವಲ್ ಬೆಳ್ತಿಗೆ ...	7—8	8—12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—12	13—14
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7—8	7—10
ಗೋಧಿ ಗೋಣಿ ೧ಕ್ಕೆ ...	15—8	16—8
ಹುರುಳಿ ಗೋಣಿ ೧ಕ್ಕೆ ...	8—8	11—0
ಕಡಲೆ ಗೋಣಿ ೧ಕ್ಕೆ ...	13—8	14—0
ತೊಗರಿ ಗೋಣಿ ೧ಕ್ಕೆ ...	14—4	14—12
ತೊಗರಿಬೇಳೆ ಗೋಣಿ ೧ಕ್ಕೆ ...	19—0	27—0
ಉದ್ದು ಗೋಣಿ ೧ಕ್ಕೆ ...	14—8	14—4
ಹೆಸರು ಗೋಣಿ ೧ಕ್ಕೆ ...	13—0	14—8
ಊರು ಬೆಲ್ಲ ಖಂಡಿ ೧ಕ್ಕೆ ...	65—0	75—0
ಉಪ್ಪು ಗೋಣಿ ೧ಕ್ಕೆ ...	4—8	5—0
ಬೊಬ್ಬ ಖಂಡಿ ೧ಕ್ಕೆ ...	130—0	—
ಬೊಬ್ಬ ಹಿಂಡಿ ಖಂಡಿ ೧ಕ್ಕೆ ...	42—0	43—0
ಎಳ್ಳಿಂಡಿ ಖಂಡಿ ೧ಕ್ಕೆ ...	35—0	42—8
ಬೊಬ್ಬ ಎಣ್ಣೆ ಮಣ ೧ಕ್ಕೆ ...	8—8	9—10
ಎಳ್ಳೆಣ್ಣೆ ಮಣ ೧ಕ್ಕೆ ...	8—4	8—6
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7—2	8—0
ಮೋರಿಸ ಸಕ್ಕರೆ ಮಣ ೧ಕ್ಕೆ ...	4—4	4—5
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4—0	6—0
ಸಾಸಿವೆ ಮುಡಿ ೧ಕ್ಕೆ ...	8—0	8—4
ಕೊತ್ತಂಬರಿ ಮುಡಿ ೧ಕ್ಕೆ ...	6—0	7—8
ಕಾಫಿ ಖಂಡಿ ೧ಕ್ಕೆ ...	400—0	410—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ...	170—0	210—0
ಕಾಳುಮೆಣಸು ಖಂಡಿ ೧ಕ್ಕೆ ...	510—0	520—
ಹುಣಿಸೆ ಮಣ ೧ಕ್ಕೆ ...	70—0	80—0
ಗೇರುಬೀಜ ಮುಡಿ ೧ಕ್ಕೆ ...	4—4	4—5
ಕೊಬ್ಬರಿ ಖಂಡಿ ೧ಕ್ಕೆ ...	37—8	40—0
ತಾಂಬ್ರ ತಗಡು ೧ಕ್ಕೆ ...	15—0	16—8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ ...	20—0	21—
ಚೀನಿಬೆಳ್ಳಿ ಸೇರು ೧ಕ್ಕೆ ...	15—0	—
ಹಿತ್ತಾಳೆ ತಗಡು ಮಣ ೧ಕ್ಕೆ ...	15—0	16—8
ಸತುವು ೧ಕ್ಕೆ ...	13—8	13—8
ಹುಣಸೆ ಹುಳಿ ಖಂಡಿ ೧ಕ್ಕೆ ...	75—0	95

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ || ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ
ವೈದ್ಯವಿದ್ಯ
ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ
ಮದನಮಂಜರಿ ಮಾತ್ರೆಗಳು
ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು:
ಮಂಗಳೂರು ಏಜಂಟರು:— ದಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿನಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉತ್ಕೃಷ್ಟವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಠಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆಯಾಗಿ ಕಳಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್ 99 ನಾಗಾದೇವಿ ರಸ್ತೆ. ಸ್ಥಾಪಿತವಾದದ್ದು 1909 ಟೆಲಿಫೋನ್ ನಂ. 23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ. ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!
ರೋಗವೆಂಬ ವಿಧಿಆಪತ್ತನ್ನು = = ಪರಿಹರಿಸಿಕೊಳ್ಳನೋಡಿ

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.
ಕ್ರಯ:—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.

ಭಗಿನಿಗಳೇ!
ಸೊರಗಿರುವ ಶಿಶುವಿನ ನೋಟವು
ಸತ್ತವರಿಗೆತ್ತೆಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?
ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ, ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ಮಾರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,
22628 ನಂಬ್ರ 2. ಮಂಗಳೂರು ದ. ಕ.

ಹಾತ್ತಾತಾಳ್ಪತಿ ಪೊಳೊಬ್ಯಾಕ ಕಾನ್ನಡಿ ಇತ್ಯಾಕ?
ವಿಕಪಂತ ಅಮ್ಮೆಲ್ಯಾಗಿ ವ್ಯಾಪಾರು ಕೆಲ್ಯಾರಿ ಕೆಳ್ನಾವೆ?

ಎಲ್ಲಾ ತರದ ಕವಿರಾಜರ ಔಷಧ, ಸುಗಂಧ ದ್ರವ್ಯಗಳು, ರಬ್ಬರ್ ಚಡ್ಡಿ, ಕ್ಷೌರದ ಸಾಮಗ್ರಿ, ಆಡುವ ಸಾಮಾನು, ಹಾರ್ಮೋನಿಯಮ್, ಶುದ್ಧ ಕಸ್ತೂರಿ, ಬೂಟೀಸು, ಬನಿಯನು, ಬಾಚಣಿಗೆ, ಮತ್ತು ಎಲ್ಲಾ ತರದ ಜವುಳಿ ಇತ್ಯಾದಿ ಸರ್ವಜನೋಪಯುಕ್ತ ವಸ್ತುಗಳು ಮಾರಾಟಕ್ಕಿವೆ. ಕೆಟಲಾಗಿಗೆ ಇವತ್ತೆ ಬರೆಯಿರಿ. ಅಥವಾ ಸ್ಟೋರ್ಸನ್ನು ಸಂದರ್ಶಿಸಿರಿ.

— 24 ತಾಸಿನ ಒಳಗೆ ಮುಟ್ಟುವಂತೆ ಔಷಧ ಇತ್ಯಾದಿಗಳನ್ನು ಕಳುಹಿಸುತ್ತೇವೆ —

ಕವಿರಾಜರ ಮದ್ದಿಗೆ ಪ್ರತಿ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ಸರ್ವ ಕರ್ಣಾಟಕಕ್ಕೆ ನಾವು ಪ್ರಧಾನ ಆಯುರ್ವೇದ ಔಷಧ ಏಜಂಟರು,

ದಿ ಉಡುಪಿ ಸ್ಟೋರ್ಸ್,
ಕುಂಬಳೆ ರಾಘವೇಂದ್ರರಾವ್
2628 ಉಡುಪಿ, ದ. ಕನ್ನಡ.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಡಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಡಿಲ್ಲಾ, ಪೇರಳೆ, ಚಿತ್ರಳೆ, ದ್ರಾಕ್ಷಿ, ಅಂಜೂರ, ದಾಳಿಂಬಿ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವುವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ಬಸರ್‌ಗಾರ್ಡನ್ಸ್ ಕಾಪು ದ.ಕ. } C/o ಕೆ. ವಾಮನ ಶೆಣೈ ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ದ. ಕ.
131028

ಅನುಕ್ರಮಣಿಕೆ.

ಅಗ್ರಲೇಖ,
- ಯುದ್ಧ ನಿವಾರಣೆ ... ೬
- ವಿದೇಶ ವರ್ತಮಾನ ... ,,
- ಸ್ಫುಟವಿಚಾರಗಳು ... ೮
- ನೋಟಗಳು ... ,,

ವರ್ತಮಾನ ಸಂಗ್ರಹಗಳು
- ಒಳದೇಶ ... ೭
- ದಕ್ಷಿಣ ಕನ್ನಡ—ಮಂಗಳೂರು, ಅಜೆಕಾರು, ಉಡುಪಿ ... ,,
- ಬಾರ್ಕೂರಿನ ಪತ್ರ
- ಸೌತ್ ಇಂಡಿಯನ್ ರೈಲ್ವೆ ಮುಷ್ಕರ ... ೮
- ಬಾರ್ಡೋಲಿ ಸಮಾಚಾರ
- ಕಾರ್ಕಳ ಗೋಮಟೇಶ್ವರ [illegible] ಬರೆದ ಚಂದ್ರಮನೆಂಬ ಕೈನಿಕವಿ ... ೧೧
- ಕೃಷಿಕರಿಗೊಂದು ಸಹಾಯಕ ವೃತ್ತಿ ... ೧೨
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಸುವ ಕೊಳಕೆ ಎಂಬ ಕರೆಯಲ್ಪಡುವ ಮೂರನೇ ಬತ್ತದ ಬೆಳೆಗೆ [illegible] ಎಂಬ ರಂಜಕ [illegible] ದಿಂದುಂಟಾಗುವ ಪ್ರಯೋಜನ ... ೧೪
- ಮದರಾಸು ಸಂಸ್ಥಾನದ ಪೋಲೀಸ್ ಪಂಚಾಯತಿಗಳ [illegible] ನೇ ಇಸವಿಯ ಆಡಳಿತದ ವರದಿ
- ಪತ್ರವ್ಯವಹಾರ, [illegible] ... ೨

ಸ್ವದೇಶಾಭಿಮಾನಿ.

ತಾರೀಕು ೨೭ನೇ ಶುಕ್ರವಾರ ಜುಲಾಯಿ ೧೯೨೮.

ಯುದ್ಧ ನಿವಾರಣೆ.

ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕದ ಕೆಲ್ಲೊಗರವರ ಪ್ರಯತ್ನಗಳ ಫಲವಾಗಿ ಎಲ್ಲರೂ ಸಹಿ ಹಾಕುವ (multilateral treaty) ಸಂಧಿಯೊಂದು ಹಲವು ತಿಂಗಳ ವಾದವಿವಾದಗಳ ನಿರ್ಧಾರಿತವಾಯಿತು. ಕೆಲ್ಲೊಗರವರು ಚಿರಶಾಂತತೆಯ ಸ್ಥಾಪನೆಗಾಗಿಯೆಂದು ಈ ಸಂಧಿಯ ಶರ್ತಗಳನ್ನು ತಯಾರಿಸಿ ಯುರೋಪಿಗೆ ಕಳುಹಿಸಿದ್ದರು. ಫ್ರಾನ್ಸ್ ಮತ್ತು ಇಂಗ್ಲೆಂಡ ದೇಶಗಳೇ ಮುಖ್ಯವಾದ ತಾರ್ಕಿಕರಾದರು. ಅಖೈರಿಯಲ್ಲಿ ಈಗ ಅದಕ್ಕೆ ಸಹಿ ಹಾಕಲು ಎಲ್ಲರೂ ಒಪ್ಪಿರುವರು.

ಲೋಕದ ಜನಾಂಗಗಳನ್ನು ಒಟ್ಟುಗೂಡಿಸಲು ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕದಿಂದಲೇ ಪ್ರಥಮ ಪ್ರಯತ್ನಗಳು ನಡೆಯುತ್ತಿವೆ ಎಂಬುದು ಸ್ತುತ್ಯಾಸ್ಪದವಾದುದು. ಸ್ವಾಮಿ ವಿವೇಕಾನಂದರನ್ನು ಲೋಕದಲ್ಲೆಲ್ಲಾ ಕೀರ್ತಿವಾನರಾಗಿ ಮಾಡಿದ ಸಮಸ್ತ ಮತಗಳ ಸಮ್ಮೇಲನವು ಅಲ್ಲಿಯೇ ನಡೆದು ಮತಭೇದಗಳ ನಿವಾರಣೆಯ ಉಪಾಯಗಳು ಹೂಡಲ್ಪಟ್ಟವು. ಅಂತೆಯೇ ಮಹಾ ಯುದ್ಧವು ಲೋಕದ ಬೆಳೆಯುವ ನಾಗರಿಕತೆಯನ್ನೇ ವಿನಾಶಪಡಿಸಲು ಉದ್ಯುಕ್ತವಾದ ಆ ಸಂದರ್ಭದಲ್ಲಿ ಜನಾಂಗಗಳೊಳಗಿನ ಸಂಬಂಧವು ಬಲ—ನಿರ್ಬಲತೆಯ ತಾರತಮ್ಯದಿಂದ ರಚಿಸಲ್ಪಡುವುದಾಗಿರದೆ ನಿಸ್ವಾರ್ಥ ಸಮಾನತೆಯ ಮೇಲೆ ಹೊಂದಿರಬೇಕೆಂಬ ಆ ಉಚ್ಚ ತತ್ವವನ್ನುದ್ದೇಶಿಸಿಯೇ ಯುನೈಟೆಡ್ ಸ್ಟೇಟ್ಸ್ ಯುದ್ಧವನ್ನು ಸೇರಿತು. ಆಗ ಪ್ರೆಸಿಡೆಂಟರು ವಿಲ್ಸನರಾಗಿದ್ದರು.

ಆದರೆ ಪ್ರೆಸಿಡೆಂಟರು ಉಚ್ಚ ಆದರ್ಶದವರಾಗಿದ್ದರೂ ನಿರ್ಬಲ ಮಾನಸಿಕತೆಯವರಾಗಿದ್ದರೆಂಬುದು ಆಗಿನ ಸಂದರ್ಭದ ವಿಧಿಯ ಉಪಹಾಸ (Irony of fate)ವಾಗಿದ್ದಿತು. ಪ್ರೆಸಿಡೆಂಟರ ಯುರೋಪಿಯ ಪ್ರವಾಸವೇ ಆ ಆದರ್ಶದ ಅಖೈರಿಯಾಯಿತು. ಲೊಯಡ್ ಜೋರ್ಜರ ತಂತ್ರ ವಿಚಕ್ಷಣತೆಯೂ ಪೊಯೆನಿಕಾರರ ಪ್ರಬಲ ಯುಕ್ತಿವಾದವೂ ಪ್ರೆಸಿಡೆಂಟರ ಭಾವನೆಗಳೆಲ್ಲವನ್ನೂ ಬದಲಾಯಿಸಿ ಬಿಟ್ಟಿತು. "ಸೆಲ್ಫ ಡಿಟರ್ಮಿನೇಶನ್" ತತ್ವವನ್ನು ಪ್ರಸಾರಮಾಡಲೆಂದು ಬಂದ ಪ್ರೆಸಿಡೆಂಟ್ ವಿಲ್ಸನರು ಇಟೇಲಿ, ಫ್ರಾನ್ಸ್, ಇಂಗ್ಲೆಂಡ ಮೊದಲಾದ ರಾಷ್ಟ್ರಗಳನ್ನು ಸಂಚರಿಸಿದರೂ, ಅವರಿಗೆ ಜರ್ಮನಿಗೆ ಹೋಗಿ ಇಕ್ಕಡೆಗಳ ಪರಿಜ್ಞಾನವನ್ನೂ ಉಂಟುಮಾಡುವಷ್ಟು "ಸೆಲ್ಫ ಡಿಟರ್ಮಿನೇಶನ್" ಇಲ್ಲದೆ ಹೋಯಿತು. ಮಾತ್ರವಲ್ಲ, ತಮ್ಮ ತತ್ವದ ನಷ್ಟವಾದದ್ದು ಮಾತ್ರವಲ್ಲದೆ, ನಷ್ಟವಾದರೂ ಆಗಿಲ್ಲವೆಂದೇ ಹಟ ಹಿಡಿದರೂ ಇತಿಹಾಸವೇ ಸ್ಪಷ್ಟವಾಗಿ ಬಂಡಿಸುವ ಆ ವರ್ಸಲೇ ಸಂಧಿಯನ್ನು ಅವರು ನೋಡಿಯೂ ಅದರಲ್ಲಿ ತಮ್ಮ ಅತ್ಯುದಾರ ಹದಿನಾಲ್ಕು ಪೊಂಟುಗಳ ಸಮಾವೇಶವಾಗಿದೆಯೆಂದು ಹೇಳುತ್ತ ಅದಕ್ಕೆ ಸಹಿ ಹಾಕಿದರು.

ಲೀಗ್ ಒಫ್ ನೇಶನ್ಸ್ ಎಂಬ ಒಂದು ಸಂಸ್ಥೆಯ ನಿರ್ಮಾಣದ ಶರ್ತವೇ ಆ ಸಂಧಿಯಲ್ಲಿ ಪ್ರೆಸಿಡೆಂಟ್ ವಿಲ್ಸನರಿಗೆ ಸಾಕಷ್ಟು ತೃಪ್ತಿಯನ್ನು ಕೊಟ್ಟಿತು. ಆತ್ಮ ತೃಪ್ತಿಯಿಂದ ಇವರು ಸ್ವದೇಶಕ್ಕೆ ಹಿಂದಿರುಗಿ ಪುನಃ ಯುರೋಪಿನ ಕಡೆಗೆ ತಮ್ಮ ವಿಹಂಗಮ ನೋಟ (Bird's eye view)ವನ್ನು ಕಳುಹಿಸಿದರು. ಆ [illegible] ಜನಾಂಗಗಳ ಸೌಹಾರ್ದಕ್ಕಾಗಿ, ಲೋಕದ ಚಿರಶಾಂತತೆಗಾಗಿಯೆಂದು ಏರ್ಪಟ್ಟ ಜನಾಂಗ [illegible] ಕೂಟವಲ್ಲದೆ ಬೇರೆಯಲ್ಲವೆಂದು ಅವರಿಗೆ ಮನಸ್ಸಿನಲ್ಲಿಯೇ ಆದರೂ [illegible]

ಯುನೈಟೆಡ್ ಸ್ಟೇಟ್ಸಿನ ಸರಕಾರದಲ್ಲಿ ಸ್ವಾರ್ಥಗಳಿಲ್ಲವೆನ್ನಲಾಗುವುದಿಲ್ಲ. ಲೋಕದಲ್ಲಿ ಅವರೇ ಶ್ರೀಮಂತರಾಗಿರುವುದರಿಂದ ಅವರಿಗೆ ಮತ್ತೂ ಹೆಚ್ಚಿನ ಸ್ವಾರ್ಥವನ್ನು ಸಾಧಿಸುವ ಅವಶ್ಯಕತೆಯಿರುವುದಿಲ್ಲ. ಆದುದರಿಂದ ಲೋಕಶಾಂತತೆಯ [illegible] ಕಾರ್ಯತಃ [illegible] ಲೀಗ್ ಒಫ್ ನೇಶನ್ಸು ಯಾವ ರೂಪವನ್ನು ಹೊಂದುತ್ತಿದೆ ಎಂದು ಅವರು ಕಂಡೊಡನೆ ಇದು ಶಾಂತಿ ಸ್ಥಾಪನೆಯಲ್ಲ, [illegible] ಎಂದು ತಿಳಿದು, ತಮ್ಮ ಮನ್ರೊ ಡಾಕ್ಟ್ರಿನ್ (Monroe Doctrine)ನನ್ನು ಅನುಸರಿಸಿ ಯುರೋಪಿಯ ರಾಜಕೀಯ ಪಗಡೆಯಾಟದಿಂದ [illegible]

ಆ ಬಳಿಕ ಲಿಮಿಟೇಶನ್ಸ್ ಒಫ್ ಆರ್ಮಾಮೆಂಟ್ಸ (Limitations of Armaments) ನೌಕಾ ನಿರ್ಬಂಧದ ಚಳವಳಿಯನ್ನು ಹೂಡಿದರು. ನೌಕಾ ಪಡೆ ಇರುವವರೆಂದರೆ ಅಮೇರಿಕಾ, ಇಂಗ್ಲೆಂಡು, ಫ್ರಾನ್ಸು, ಜಪಾನು ಮತ್ತು ಇಟೇಲಿ. ಇವುಗಳಲ್ಲಿ ಪ್ರತಿ ರಾಷ್ಟ್ರಕ್ಕೂ ಪ್ರತ್ಯೇಕ ಆವಶ್ಯಕತೆಗಳಿರುತ್ತವೆ. ಒಬ್ಬರೂ ತಮ್ಮ ನೌಕೆಯನ್ನಾಗಲೀ, ಸೈನ್ಯವನ್ನಾಗಲಿ ಕಡಿಮೆ [illegible] ಪರಿಷತ್ತುಗಳು ಸೇರಿದ ನಂತರ ಆಲೋಚನೆಯೇ ಬಿದ್ದು ಹೋಯಿತು.

ಕಡೆಯದಾಗಿ ಈ ಯುದ್ಧ ನಿವಾರಣೆಯ ಸಂಧಿ. ಯುದ್ಧವು ಕಾನೂನಿಗೆ ವಿರೋಧವಾಗಿ ಮಾಡುವುದೇ ಇದರ ಉದ್ದೇಶ. ಯುದ್ಧಕ್ಕೆ ಒಂದು ರಾಷ್ಟ್ರವು ಇಳಿದರೆ ಉಳಿದ ರಾಷ್ಟ್ರಗಳು ಅದನ್ನು ಬಹಿಷ್ಕರಿಸಬೇಕೆಂಬುದೇ ಈ ಸಂಧಿಯ ತತ್ವ. ಆದರೆ ಈ ಸಾಮಾನ್ಯ ತತ್ವವೂ ಸುಲಭವಾಗಿ ಮಾನಿಸಲ್ಪಡಲಿಲ್ಲ. ಜಪಾನ ಮತ್ತು ಜರ್ಮನಿಯೂ ಫ್ರಾನ್ಸ ಮತ್ತು ಇಂಗ್ಲೆಂಡು ಏನು ಮಾಡುವುದೆಂದು ನೋಡುತ್ತ ಕಾದಿದ್ದಿತು. ಇಂಗ್ಲೆಂಡೂ, ಫ್ರಾನ್ಸೂ ಇದನ್ನು ಸುಲಭವಾಗಿ ಒಪ್ಪಲು ತಯ್ಯಾರಿರಲಿಲ್ಲ. ಆದರೆ ಅಮೇರಿಕ ತಾಳ್ಮೆಯ ಪ್ರಯತ್ನಗಳು ಹೇಗೂ ಸಫಲವಾದಂತೆ ತೋರುತ್ತಿವೆ. ಆದರೆ ಈ ಸಂಧಿಯಿಂದ ನೆನಸಿದಷ್ಟು ಪ್ರಯೋಜನವಾದೀತೇ ಎಂಬ ಚಿಂತನೆಯು ಇನ್ನೂ ಪ್ರಶ್ನಾರ್ಥಕ ಚಿಹ್ನೆಯಲ್ಲಿಯೇ ಇದೆ. ಸಂಧಿಯ ಪ್ರಯೋಜನಕಾರಿತೆಯು ಸಹಿ ಹಾಕಿದವರ ಮನಃಪೂರ್ವಕತೆಯ ಮೇಲೆ ಹೊಂದಿದೆ ಎಂದು ಮೆಂಚೆಸ್ಟರ್ ಗಾರ್ಡಿಯನಂತಹ ಬ್ರಿಟಿಷ ಪತ್ರಿಕೆಗಳೇ ಅನ್ನುವಾಗ ಈ ಸಂಧಿಯಿಂದ ಆಗುವ ಲಾಭಕ್ಕೆ ಮಿತಿಯುದೆಯೆಂದು ತೋರುವುದು.

ಪ್ರಾಯಶಃ ಈ ಸಂಧಿಯಿಂದ ಯುದ್ಧ ಸಂಭವವು ದೂರ ಮಾಡಲ್ಪಟ್ಟಿರಬಹುದು. ಆದರೆ ಯುದ್ಧವೆಂದರೇನೇ ಎಲ್ಲಾ ಸಂಧಿಗಳ ನಿರ್ಮೂಲನ ಮತ್ತು ಸ್ವಾರ್ಥದ ಏಕ ಮಾತ್ರ ಚಿಂತನವೆಂದಿರುವಾಗ ಈ ಸಂಧಿಯು ಯುದ್ಧವನ್ನು ಅಸಂಭವವಾಗಿ ಮಾಡಲಾರದೆಂದು ಒಡೆದು ಕಾಣುತ್ತಿದೆ. ಮುಖ್ಯವಾಗಿ ಯುರೋಪಿಯ ರಾಜ ತಂತ್ರಗಳು ಗುಟ್ಟಿನ ಸಂಧಿಗಳಿಂದ ನಿಬಿಡವಾಗಿದೆ. ಆದುದರಿಂದ ಮುಹೂರ್ತವು ಒದಗಿದಾದ ಪ್ರಯತ್ನಪುರಸ್ಸರವಾಗಿ ಅಮೇರಿಕವು ರಚಿಸಿದ ಈ ಸಂಧಿಯು ಅದು ಬರೆಯಲ್ಪಟ್ಟ ಕಾಗದದಷ್ಟೇ ಶಕ್ತಿಹೀನವಾಗಲಿಕ್ಕಿದೆ. ಆದರೆ ಒಂದು ಆಶೆಯಿದೆ. ಅಮೇರಿಕಕ್ಕೆ ಈಗಿರುವಷ್ಟು ಪ್ರಾಬಲ್ಯವೂ, ಶಕ್ತಿಯೂ ಇರುವ ವರೆಗೆ, ಅದು ಈ ಸಂಧಿಯನ್ನು ಅದನ್ನು ರಚಿಸಿರುವಾಗ ಇಟ್ಟ ಶ್ರದ್ಧೆಯಿಂದಲೇ ಮಾನಿಸಿದರೆ, ಮತ್ತು ಅಂತರಾಷ್ಟ್ರೀಯ ಕಲಹಗಳಲ್ಲಿ ಅಮೇರಿಕವು ಸೇರದೆ ಇದ್ದರೆ, ಈ ಸಂಧಿಯು ಅಮೇರಿಕದ ಹೆದರಿಕೆಯಿಂದಲಾದರೂ ಬಾಳಬಹುದೊ ಏನೊ? ಇಲ್ಲಿಯೂ ಸಂದೇಹದ ಚಿಹ್ನೆಯು ಇದ್ದೇ ಇದೆ.

ವಿದೇಶ ವರ್ತಮಾನ.

— ಮೆಕ್ಸಿಕೊ ಪ್ರೆಸಿಡೆಂಟನಾದ ಜನರಲ್ ಒಬ್ರಗೊನನನ್ನು ಕೊಂದವನು ಕಲಾಶಾಲೆಯ ವಿಧ್ಯಾರ್ಥಿಯಾದ ಜೊಸ್ ಡಿಲಿಯಂ ಟೋರಲ್ ಎಂಬವನೆಂದು ಕಂಡುಹಿಡಿದಿರುವರು. ಈತನು ಇಪ್ಪತ್ತು ವರ್ಷ ಪ್ರಾಯದವನು. ಗುಡಾಲಾ ಜಾರಾ ಎಂಬಲ್ಲಿಂದ ಏನಾದರೊಂದು ಕೆಲಸವನ್ನು ಹುಡುಕಿಕೊಂಡು ಆರು ತಿಂಗಳ ಹಿಂದೆ ಈತನು ಮೆಕ್ಸಿಕೊ ಪಟ್ಟಣಕ್ಕೆ ಬಂದಿದ್ದನು. ಕಳೆದ ನವಂಬರ ತಿಂಗಳಲ್ಲಿ ಅದೇ ಒಬ್ರಗೊನನನ್ನು ಕೊಲೆಮಾಡಲು ಪ್ರಯತ್ನಿಸಿ ಶಿಕ್ಷೆಗೆ ಗುರಿಯಾಗಿದ್ದ ಆಗಸ್ಟಿನ್ ಎಂಬ ಪಾದರಿಯ ಚಿತ್ರವು ಈ ಕೊಲೆಗಡಕನ ಕಿಸೆಯಲ್ಲಿದ್ದುದನ್ನು ಪೋಲೀಸರು ಕಂಡುಕೊಂಡರು.

— ಡೆಲ್ಟಾ ಎಂಬ ಹಡಗವು ಮುಂಬಾಯಿಯಿಂದ ಲಂಡನ್ನಿಗೆ ಹೋಗುತ್ತಿರುವಾಗ ಬೇರೊಂದು ಹಡಗಕ್ಕೆ ಢಿಕ್ಕೆ ಹೊಡದು ಸ್ವಲ್ಪ ಜಖಂ ಹೊಂದಿತು.

— ಕೊಲೊಂಬೊವಿನಲ್ಲಿ ದೀಪ ಹಚ್ಚುವವರ ಮುಷ್ಕರವು ನಡೆಯಿತು. ಅಲ್ಪಕಾರಣದ ಮೇಲೆ ಸುಮಾರು ಒಂದು ಸಾವಿರ ಜನರು ಕೆಲಸಕ್ಕೆ ಬಾರದೆ ಉಳಕೊಂಡರು.

— ಬುಡು ಎಂಬನೋರ್ವನು ಹಿಂದುಸ್ಥಾನದಿಂದ ಲಂಡನಿಗೆ ಹೋಗಿ ತಾನು ಊರಿಂದೂರಿಗೆ ತಿರುಗಿ ಸಣ್ಣ ಸಾಮಾನುಗಳನ್ನು ವಿಕ್ರಯಿಸಿ ಜೀವಿಸುವವನೆಂದು ಸುಳ್ಳು ಹೇಳಿ ಲೈಸನ್ಸು ಪಡದು ೧೫೩ ಪೌಂಡುಗಳನ್ನು ಸಂಪಾದಿಸಿ ಬೇಂಕಿನಲ್ಲಿಟ್ಟಿದ್ದನು. ಆದರೆ ಆತನ ಗುಟ್ಟು ತಿಳಿಯಲಾಗಿ ಇನ್ನುಮುಂದೆಯೂ ಇಂತವರು ಲಂಡನಿಗೆ ಬಾರದ ಹಾಗೆ, ಅವನನ್ನು ಅಲ್ಲಿಂದ ಹೋಗುವ ಹಡಗನಲ್ಲಿ ಹಾಕಿ ಇತ್ತ ಕಳುಹಿಸಿ ಬಿಟ್ಟರು.

— ಬ್ರುಸ್ಸೆಲಿನ ಇಂಟರ್‌ನೇಶನಲ್ ಟೆಲಿಗ್ರಾಫ್ ಪರಿಷತ್ತಿನ ಒಂದು ವಿಶೇಷ ಅಧಿವೇಶನವು ಸಪ್ಟಂಬರ ತಿಂಗಳಲ್ಲಿ ಬ್ರುಸ್ಸೇಲಿನಲ್ಲಿ ಜರಗುವದು. ಈ ಪರಿಷತ್ತಿಗೆ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಪೋಸ್ಟು ಮತ್ತು ಟೆಲಿಗ್ರಾಫಿನ ಡ್ಯಾರೆಕ್ಟರ್ ಜನರಲರಾದ ಮಿ। ಸೆಮ್ಸರೂ, ಅಸಿಸ್ಟಾಂಟ ಜನರಲರಾದ ಮಿ। ಪಿ. ಎನ್. ಸುವರ್ಣರೂ ಹೋಗುವರು. ಮೊದಲಿನವರು ರಜೆಯ ಮೇಲೆ ಈಗ ವಿಲಾಯತಿಯಲ್ಲಿರುವರು. ೧೯೨೫ನೆ ಇಸವಿನಲ್ಲಿ ಪೆರಿಸಿನಲ್ಲೂ, ೧೯೨೭ನೇ ಇಸವಿಯಲ್ಲಿ ವೊಶಿಂಗ್‌ಟನಿನಲ್ಲೂ ನಡೆದ, ಟೆಲಿಗ್ರಾಫ್ ಮತ್ತು ರೇಡಿಯೊ ಟೆಲಿಗ್ರಾಫ್ ಅಧಿವೇಶನಗಳಿಗೆ ಮಿತ್ರರವರು ಹಿಂದೂಸ್ಥಾನದ ಪ್ರತಿನಿಧಿಗಳಾಗಿ ಹೋಗಿದ್ದರು.

— ಮಿಸ್ಸೆಸ್ ಅನ್ನಿಬಿಸೆಂಟಮ್ಮನವರು ಕೆಲವು ದಿನಗಳಿಂದ ಅಸೌಖ್ಯವಾಗಿದ್ದರು. ಆದರೆ ಈಗ ಸ್ವಲ್ಪ ಸೌಖ್ಯ ಹೊಂದಿ ನಡೆದುಹೋಗಲು ಶಕ್ತಿಯುಳ್ಳವರಾಗಿರುವರು.

— ತುರ್ಕಿ ಸರಕಾರದವರು 'ಪಾಶಾ' ಎಂಬ ಬಿರುದನ್ನು ತೆಗೆದು ಹಾಕುವರೆಂದು ಒಂದು ವಾರ್ತೆ.

— ತುರ್ಕಿಸ್ಥಾನದ ಕಾನ್‌ಸ್ಟಾಂಟಿನೋಪಲಿನ ಹಿಕ್ಮೆತ್‌ಬೆ ಎಂಬವರು ಅಫಘಾನಿಸ್ಥಾನದಲ್ಲಿ ಪ್ರತಿನಿಧಿಗಳಾಗಿ ಇರುವ ಸಲುವಾಗಿ ನೇಮಕಹೊಂದಿರುವರು. ಅವರು ಕಾಬೂಲಿಗೆ ಬರಲು ಹೊರಟಿರುವರು.

— ಇಜಿಪ್ತದಲ್ಲಿ ಹಿಂದೆ ಮೂರುಸಲ ಪ್ರೀಮಾಯರರಾಗಿದ್ದ ಸಯ್ಯದ ಪಾಶಾರವರು ಮೃತಪಟ್ಟರು.

— ಲಂಡನಿನಿಂದ ನ್ಯೂಕಾಸಲಿನ ವರೆಗೆ ಓಡಾಡುವ ಮೋಟಾರು ಬಸ್ಸುಗಳಲ್ಲಿ ಬಹಳ ಸುಖವುಂಟಾಗುವ ವ್ಯವಸ್ಥೆಗಳನ್ನು ಮಾಡುತ್ತಿರುವರು. ಮಲಗಲು ಹಾಸಿಗೆಗಳು, ಮೂರನೇ ಕ್ಲಾಸು ರೈಲುಚಾರ್ಜಿಗಿಂತ ಇವರ ಚಾರ್ಜು ಕಡಿಮೆ ಇದೆಯಂತೆ.

— ಸ್ಪೈನಿನಲ್ಲಿ ಒಗಸ್ಟ ತಿಂಗಳಿಂದ ರೈಲುಪ್ರಯಾಣಿಕರು ತಮ್ಮನ್ನು ಇನ್ಶೂರುಮಾಡಿಕೊಳ್ಳಲೇಬೇಕೆಂದು ಒಂದು ಕಾನೂನು.

— ಬ್ರಿಟಿಷರ ಒಂದು ದೊಡ್ಡ ವಿಮಾನವಿದೆ. ಇದು ಛಳಿಗಾಲದಲ್ಲಿ ಉತ್ತರ ಅಮೇರಿಕದಿಂದ ಬ್ರಿಟನಿನ ವರೆಗೆ ಹಾರುವುದು. ಆ ಪ್ರಥಮ ಹಾರಾಟದ ಸಮಯ ಅದರಲ್ಲಿ ಕುಳಿತುಕೊಳ್ಳಲು ಅಪೇಕ್ಷಿಸುವ ೨೦೦ ಜನರ ಅರ್ಜಿಗಳು ಈಗ ಬಂದಿರುವುವಂತೆ. ಒಂದೊಂದು ಕೋಣೆಗೆ ಒಂದೊಂದು ಸಾವಿರ ಸ್ಟರ್ಲಿಂಗುಗಳನ್ನಾದರೂ ಕೊಡಲು ಹಲವರು ಸಿದ್ಧರಿರುವರು.

— ಜೆರುಸಲೇಮಿನ ವಿಧ್ಯಾರ್ಥಿಗಳು ಯುರೋಪಿಯನ್ ಉಡಿಗೆಯನ್ನೇ ತೊಟ್ಟುಕೊಳ್ಳಬೇಕೆಂದು ಪೆಲೆಸ್ಟಿನಿನ ಅರಬರು ನಿಶ್ಚಯಿಸಿರುವರು, ಮನೆಯೊಳಗಿರುವಾಗ ತಲೆಗೆ ಮುಂಡಾಸನ್ನು ಸುತ್ತಿಕೊಳ್ಳುವದಾಗಲಿ, ಟೊಪ್ಪಿಗಳನ್ನಿಟ್ಟುಕೊಳ್ಳುವುದಾಗಲಿ ವಿರೋಧಿಸಿದೆ.

— ಲಂಡನಿನ ಪ್ರಸಿದ್ಧ ನಟಿಯಾದ ಡೇಮ್ ಎಲೆನ್‌ಟೆರಿ ಎಂಬವಳು ಮೃತಪಟ್ಟಳು.

— ಕೆನಡಾ ದೇಶದಲ್ಲಿ ಜೋರಿನ ಮಳೆ ಬಂದು ಅದರ ಒಟ್ಟಿಗೆ ಮಂಜುಗಡ್ಡೆಗಳು ಬಿದ್ದವು. ಇದರಿಂದ ಸಾವಿರಾರು ಕುರಿಗಳೂ, ಹಲವು ಕುದುರೆಗಳೂ ಸತ್ತುಹೋದವು.

— ಜರ್ಸಿಯಲ್ಲಿ ಪೌಂಡಿಗೆ ೬ ಪೆನ್ಸ್‌ನಂತೆ ಇನ್‌ಕಮ್ ಟೇಕ್ಸ್ ಕೊಡಬೇಕೆಂದು ಪಾರ್ಲಿಮೆಂಟಿನವರು ಸಭೆಕೂಡಿ ನಿರ್ಣಯಿಸಿರುವರು.

— ಪೋರ್ಚುಗೆಲಿನಲ್ಲಿ ರಿವೊಲ್ಯೂಶನಿಗಾಗಿ ಬಹು ಜನರು ಪ್ರಯತ್ನಿಸಿದರು. ಪೋಲೀಸರ ಮತ್ತು ಇತರ ಆಫೀಸರರ ತಡೆಯಿಂದ ಸಾಧ್ಯವಾಗಲಿಲ್ಲ.

— ಲಂಡನಿನಿಂದ ಹದಿನೈದು ದಿನಗಳಿಂದ ಮಳೆಯೇ ಬಾರದೆ ಸೆಕೆಯು ವಿಪರೀತವಾಗಿ ಬೆಳೆಸಿರುತ್ತದೆ. ಆದರೆ ಅಲ್ಲಿ ಕುಡಿಯಲು ಸಾಕಷ್ಟು ನೀರಿರುವುದಂತೆ.

ಒಳದೇಶ ವರ್ತಮಾನ

— ಬ್ರಿಟಿಷ ವಸ್ತು ಬಹಿಷ್ಕಾರವನ್ನು ಸುಲಭದಲ್ಲಿ ಮಾಡುವ ಹಾಗೆ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರು ಒಂದು ಡ್ಯಾರೆಕ್ಟರಿಯನ್ನು ತಯಾರಿಸಬೇಕೆಂದು ನಿರ್ಣಯಿಸಿರುವರು. ಈ ಡ್ಯಾರೆಕ್ಟರಿಯಲ್ಲಿ ಹಿಂದೂಸ್ಥಾನದಲ್ಲಿ ತಯಾರಿಸುವ ವಸ್ತುಗಳ ಹೆಸರನ್ನೂ, ಹಿಂದೂಸ್ಥಾನದಲ್ಲಿ ತಯಾರಾಗದಿರುವ ನೋನ್ ಬ್ರಿಟಿಷ್ ವಸ್ತುಗಳ ಹೆಸರನ್ನೂ ಕೊಡಿಸುವರು.

— ಮಚಲಿಪಟ್ಟಣದಲ್ಲಿ ಗೀತಾ ಮಂಡಲವನ್ನು ಸ್ಥಾಪಿಸಿರುವರು. ಈ ಮಂಡಳದವರು ಇದುವರೆಗೆ ೩೦೦ ರೂಪಾಯಿಗಳನ್ನು ಶಾಲಾ ಬಾಲಕರಿಗೆ ಉಚಿತವಾಗಿ ಹಂಚಿ ಗೀತಾ ಪ್ರಚಾರವನ್ನು ಮಾಡುವರು.

— ಬರ್ಮಾದ ಟವ್ವು ಎಂಬಲ್ಲಿ ಕಳೆದ ವಾರ ಒಂದು ಬಿರುಗಾಳಿಯು ಬಂದು, ಒಂದು ಶಾಲೆಯ ಕಟ್ಟೋಣವು ಕುಸಿದು ಬಿದ್ದಿತು. ಮರಗಳು ಉರುಳಿ ಅಡಿಗೆ ಬಿದ್ದು ಹಲವರು ಮೃತಪಟ್ಟರು. ಒಂದು ಮನೆಯ ಮಾಡಿನ ಮೇಲೆ ಸಮೀಪದ ಮರವೊಂದು ಬಿದ್ದಾಗ ಒಳಗೆ ಮಲಗಿಕೊಂಡಿದ್ದ ಕಾಹಿಲೆಯ ಮನುಷ್ಯನೊಬ್ಬನು ಹೆದರಿಕೆಯಿಂದಲೇ ಪ್ರಾಣವನ್ನು ವಿಸರ್ಜಿಸಿದನು.

— ಕಾನಪೂರದ ಲಾಲ್ ಇಮ್ಲಿಗಿರಣಿಯ ಕೂಲಿಯೋರ್ವನು ತನಗೆ ಎದುರಾದಾಗ ನಮಸ್ಕರಿಸಲಿಲ್ಲವೆಂದು ಸೈಗೆ ಇಲಾಖೆಯ ಯಜಮಾನನಿಗೆ ಸಿಟ್ಟು ಬಂದು ಆತನನ್ನು ಚೆನ್ನಾಗಿ ಹೊಡೆದನು. ಕೂಲಿಯು ಈ ಯಜಮಾನನ ಮೇಲೆ ವ್ಯಾಜ್ಯದಾಖಲು ಮಾಡಿರುವನು. ಬಲು ವಿಚಿತ್ರ ತರದ ಮೊಕದ್ದಮೆಯಿದು.

— ಪಂಜಾಬದ ಬರುವ ರಾಜಕೀಯ ಪರಿಷದವು ಸಪ್ಟಂಬರ ೨೮, ೨೯ ಮತ್ತು ೩೦ ಈ ಮೂರು ದಿನಗಳಲ್ಲಿ ಪಂಜಾಬದ ಲ್ಯಾಲ್‌ಪುರ ಎಂಬಲ್ಲಿ ಜರಗುವದು.

— ಇದೇ ೨೫ನೇ ತಾರೀಕಿನ ದಿನ ಪೂನೆಯಲ್ಲಿ ವ್ಯವಸಾಯ ಪರಿಷತ್ತು ಜರಗಿತು. ಇದರ ಅಧ್ಯಕ್ಷರು ಪತಿತ ಸಮಾಜದ ವಿಠ್ಠಲರಾಮಜಿ ಶಿಂದೆಯವರು. ಈ ಪರಿಷದವನ್ನು ಸಮರ್ಥಿಸುವ ಸಲುವಾಗಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾಥಗಳಲ್ಲಿ ಸಭೆಗಳು ನಡೆದಿದ್ದುವು.

— ಪ್ರೊಫೆಸರ ಇಂದ್ರರವರ ಪತ್ನಿಯವರು ಮೃತಪಟ್ಟರು. ಇವರು 'ಅರ್ಜುನ್' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ತನ್ನ ಗಂಡನಿಗೆ ಜೈಲಿನ ಶಿಕ್ಷೆಯು ವಿಧಿಸಲ್ಪಟ್ಟಂದಿನಿಂದ ಇವರು ಸನ್ಯಾಸಾಶ್ರಮವನ್ನು ಅವಲಂಬಿಸಿ ಜೀವಿಸುತ್ತಿದ್ದರು. ಮೂರು ತಿಂಗಳುಗಳಿಂದ ಜ್ವರ ಬರಲು ಪ್ರಾರಂಭವಾಯಿತು. ಅವರ ಗಂಡನು ಜೈಲಿನಿಂದ ಬಂದೊಡನೆ ಚಿಕಿತ್ಸೆಗಾಗಿ ಅವರನ್ನು ಸಿಮ್ಲಕ್ಕೆ ಕರಕೊಂಡು ಹೋದರು. ಆದರೆ ದಿನ ಹೋದಷ್ಟಕ್ಕೆ ರೋಗವು ಬೆಳೆಯುತ್ತಾ ಬಂದಿತು. ಕಳೆದ ವಾರದಲ್ಲಿ ಒಂದು ಹೆಣ್ಣು ಮಗುವನ್ನು ಪ್ರಸವಿಸಿ, ಮೊನ್ನೆ ಶನಿವಾರ ದಿನ ದೈವಾಧೀನರಾದರು.

— ಅಖಿಳ ಪಕ್ಷದ ಪರಿಷತ್ತಿನ ಬರುವ ಅಧಿವೇಶನವು ೨೮ನೇ ಒಗಸ್ಟ ಶನಿವಾರ ದಿನ ಲಕ್ನೋವಿನಲ್ಲಿ ಜರಗುವದು.

— ಇನ್ನೊಂದು ಪಕ್ಷದೊಳಗಾಗಿ ಜಮಶಡ್‌ಪುರದ ಮುಷ್ಕರವು ಶಾಂತಿಯನ್ನು ಹೊಂದುವದಂತೆ. ಅಲ್ಲಿಂದ ಹಿಂತಿರುಗಿದ ರಾ. ಎನ್. ಎಮ್. ಜೋಶಿಯವರು ಹೀಗೆಂದು ಹೇಳುತ್ತಿರುವರು. ಅವರು ಸೂಚಿಸಿದ ಕೆಲವು ಸೂಚನೆಗಳಿಗೆ ಸಂತೋಷದಿಂದ ಎರಡು ಪಕ್ಷದವರೂ ಸಮ್ಮತಿಯನ್ನಿತ್ತಿರುವರಂತೆ.

— ಮುಂಬಾಯಿಯ ಲೇಬರ್ ಲೀಡರರಾದ ನಿರಜಕರರವರು ಬೊಂಬಾಯ ಗಿರಣಿಯಲ್ಲಿ ಮುಷ್ಕರ ಹಾಕಿದವರ ಒಂದು ಸಭೆಯ ಮುಂದೆ ಕೂಲಿಗಳಲ್ಲಿ ನೂರು ಜನರಿಗೆ ಆಯುಧ ಹಿಡಿಯಲು ಕಲಿಸಬೇಕೆಂದೂ ಭಾಂಡವಲಗಾರರ ಹಾವಳಿಯನ್ನು ತಪ್ಪಿಸಲು ಇದು ಅಗತ್ಯವೆಂದೂ ಹೇಳಿದ್ದರು. ಆದರೆ ಅವರು ಕೇಳಲಿಲ್ಲ.

— ಮುಷ್ಕರ ಹಾಕಿದವರ ಮಕ್ಕಳ ಪೋಷಣೆಗಾಗಿ ಮೆಯೊರ್ ಫಂಡ್ ರಿಲೀಫ್ ಕಮಿಟಿಯವರು ದಿನಕ್ಕೆ ೧೫೦೦ ರೂಪಾಯಿಗಳನ್ನು ವಿನಿಯೋಗಿಸಬೇಕೆಂದು ನಿಶ್ಚಯಿಸಿರುವರು.

— ಕರಾಚಿಯ ಒಂದು ಶಿಪ್ಪಿಂಗ್ ಕಂಪೆನಿಯಲ್ಲಿ ಸುಪರಿಂಟಂಡೆಂಟಾಗಿದ್ದ ಒಬ್ಬ ಪಾರ್ಸಿ ಯುವಕನು ಸುಮಾರು ೬೦ ಸಾವಿರ ರೂಪಾಯಿಗಳನ್ನು ವಂಚಿಸಿದನೆಂಬ ಆರೋಪದ ಮೇಲೆ ಆತನನ್ನು ಕೈದುಮಾಡಿರುವರು. ಕಂಪೆನಿಯವರಿಗೆ ಇದು ಗೊತ್ತಾಯಿತಂತೆ.

— ಡಿಲ್ಲಿಯ ಚೀಫ್‌ಕಮಿಶನರಾಗಿ ಸರ್. ಜೊನ್ ಥೊಂಪ್‌ಸನರು ಬರುವರು.

— ಕಲಕತ್ತಾ ಸಿಟಿ ಕೊಲೇಜಿನ ಮೂವರು ವಿಧ್ಯಾರ್ಥಿಗಳು ಸತ್ಯಾಗ್ರಹವನ್ನಾಚರಿಸಿದರು. ಹುಡುಗರೆಲ್ಲ ಅವರು ಕುಳಿತಲ್ಲಿ ಗುಂಪುಕೂಡಿ ಕೊಲೆಜಿನ ಕೆಲಸಕ್ಕೆ ಭಂಗವುಂಟಾಯಿತು. ಪೋಲೀಸರು ಅಲ್ಲಿಗೆ ಬಂದು ನೆರೆದ ಹುಡುಗರೆಲ್ಲರನ್ನು ಚೆದರಿಸಿ, ಇಬ್ಬರು ಸತ್ಯಾಗ್ರಹಿಗಳನ್ನು ಕೈದುಮಾಡಿಕೊಂಡು ಹೋದರು.

ದಕ್ಷಿಣ ಕನ್ನಡ

ಮಂಗಳೂರು:— ಸೌತ್ ಇಂಡಿಯನ್ ರೈಲ್ವೆ ಮುಷ್ಕರದ ಸಲುವಾಗಿ ಮದ್ರಾಸಿನಿಂದ ಬರುತ್ತಿದ್ದ ರೈಲು ಬಂಡಿಯು ದಿನಂಪ್ರತಿ ಬಹಳ ತಡವಾಗಿ ಬರುತ್ತಿರುವುದು. ರಾತ್ರಿ ಹೊರಡುವ ರೈಲು ಬಂಡಿಗಳು ನಿಲ್ಲಿಸಲ್ಪಟ್ಟಿವೆ. ೫-೧೫ ಸಾಯಂಕಾಲ ಬಿಡುವ ಸೆಟ್ಲ ಟ್ರೈನು ಕೆಲವು ದಿವಸಗಳಿಂದ ಮಧ್ಯಾಹ್ನ ೨-೩೦ ಗಂಟೆಗೆ ಬಿಡಲ್ಪಡುವುದು. ಬೆಳಿಗ್ಗೆ ಈ ಟ್ರೈನು ೧೧-೩೦ಕ್ಕೆ ಇಲ್ಲಿಗೆ ಬರುವುದು. ಮುಷ್ಕರವು ಶಾಂತವಾಗುವ ವರೆಗೆ ರೈಲು ಗಾಡಿಗಳು ಆಯಾ ಸಮಯಕ್ಕನುಸಾರವಾಗಿ ಬಿಡಲ್ಪಡುವುದಿಲ್ಲ. ಇಲ್ಲಿಯೂ ಕೆಲವು ರೈಲ್ವೆ ಕೆಲಸದವರು ಮುಷ್ಕರವನ್ನು ಆಚರಿಸಿರುವರು.

ಬಂಟ್ವಾಳ ಮಂಗೇಶ ಶ್ಯಾನುಭಾಗರ ಮಗಂದಿರಾದ ಬಿ. ನರಸಿಂಹ ರಾಯರು ತಾ. ೧೭ಕ್ಕೆ ಇಂಗ್ಲೆಂಡಿನಿಂದ ಬಂದು ಇಲ್ಲಿ ಕೆಲದಿವಸಗಳ ವರೆಗೆ ಇದ್ದು ೨೭ಕ್ಕೆ ಪುನಃ ಇಂಗ್ಲೆಂಡಿಗೆ ಹಿಂತೆರಳಿದರು.

ಇವರು ಕಳೆದ ೬-೭ ವರುಷಗಳಿಂದ ಇಂಗ್ಲೆಂಡಿನಲ್ಲಿಯೇ ವ್ಯಾಪಾರ ವೃತ್ತಿಯನ್ನು ಮಾಡಿಕೊಂಡಿರುವರು.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೨ ಮರಣಗಳೂ ೩೪ ಜನನಗಳೂ ಉಂಟಾಗಿವೆ.

ಈ ವಾರದಲ್ಲಿ ಅಷ್ಟೊಂದು ಮಳೆಯು ಇರದೆ ನಿನ್ನೆ ಬಹಳ ಮಳೆಯಿತ್ತು. ಆದರೆ ಈ ದಿನ ಮಳೆಯೇ ಇರುವುದಿಲ್ಲ.

ತಾ. ೨೩—೭—'೨೮ನೇ ಸೋಮವಾರ ಸುಮಾರು ಘಂಟೆ ೫ಕ್ಕೆ ಹಂಪನಕಟ್ಟೆಯಲ್ಲಿ ಜಟ್ಕಾಸ್ಟೆಂಡಿನ ಸಮೀಪ ಇರುವ ಹೊಟೇಲಿನ ಬಾವಿಯಲ್ಲಿ ಇಬ್ಬರು ನೀರನ್ನು ಸೇದುತ್ತಿರುವಾಗ ಅಕಸ್ಮಾತ್ತಾಗಿ ಬಾವಿಗೆ ಹಾಕಿದ ಅಡ್ಡವು ತುಂಡಾಗಿ ಇಬ್ಬರೂ ಬಾವಿಗೆ ಬಿದ್ದರು. ಒಬ್ಬನನ್ನು ಕೂಡಲೇ ಮೇಲಕ್ಕೆ ತೆಗೆದರು. ಆದರೆ ಇನ್ನೊಬ್ಬನು ಬಾವಿಯ ತಳಕ್ಕೆ ಹೋಗಿ ಮೇಲಕ್ಕೆ ಬರುತ್ತಿರುವಾಗ ಬಾವಿಯೊಳಗಿದ್ದ ಮಾಟೆಯಲ್ಲಿ ಸಿಲುಕಿ ಅಲ್ಲಿಯೇ ಮೃತಪಟ್ಟನು.

ಪ್ರಭವ ಸಂವತ್ಸರದ ಮಾರ್ಗಶಿರ ಬಹುಳ ನವಮಿಯು ಶನಿವಾರ ತಾ. ೨೪—೧೨—'೨೭ರಿಂದ ವಿಭವ ಸಂವತ್ಸರದ ಅಧಿಕ ಶ್ರಾವಣ ಶುದ್ಧ ಷಷ್ಠಿಯು ಸೋಮವಾರ ತಾ ೨೩—೭—'೨೮ರ ವರೆಗೆ ದಕ್ಷಿಣ ಕನ್ನಡಾ ಮಂಗಳೂರು ಅದ್ವೈತ ಸಮಿತಿಯ ಸದಸ್ಯರಿಂದ ವಸೂಲಾದ ಹಣದ ವಿವರ.

ಸ್ಥಾಪಕ ಸದಸ್ಯರಿಂದ ರೂ. ೧೦೦, ಅಜೀವ ಸದಸ್ಯರಿಂದ ರೂ ೧೨೨, ಸಾಮಾನ್ಯ ಸದಸ್ಯರಿಂದ ರೂ ೧೨೭—೪—೦ ಜುಮ್ಲಾ ರೂಪ್ಯಾ ೩೪೯—೪—೦.

ವಿಶೇಷ ಸೂಚನೆ:—ಹೆಚ್ಚಿನ ವಿವರವು ಸಮಿತಿಯ ಮುಂದಿನ ವಾರ್ಷಿಕ ವರದಿಯಲ್ಲಿ ಪ್ರಕಟಿಸಲ್ಪಡುವುದು.

ರೈಲ್ವೆ ಗೂಡ್ಸ್ ಸ್ಟೇಶನಿನಿಂದ ರೈಲುಮಾರ್ಗವು ರಾಜಾಮಾರ್ಗವನ್ನು ದಾಟುವಲ್ಲಿಯ ವರೆಗಿನ ನೀರೇಶ್ವಾಲ್ಯಮಾರ್ಗದ ಅಂಶವನ್ನು ಇದೇ ತಾರೀಕು ೨೫ರಿಂದ ೨೮ರ ವರೆಗೂ ಮುಲ್ಕಾನಿ ಬೇಂಕಿನಿಂದ ಗೋಳಿಕಟ್ಟೆ ಬಜಾರ ಮಾರ್ಗವು ಬಂದರದ ಮಾರ್ಗಕ್ಕೆ ಕೂಡುವ ವರೆಗಿನ ಅಂಶವನ್ನು ಇದೇ ತಾರೀಕು ೨೭ರಿಂದ ೩೦ರ ವರೆಗೂ ದುರುಸ್ತಿಬಗ್ಗೆ ಮುಚ್ಚುವರೆಂದು ಮುನಿಸಿಪಾಲಿಟಿಯ ಚೆಯರ್‌ಮೇನರು ತಿಳಿಸುತ್ತಾರೆ.

ಅಜೆಕಾರು—ಮಳೆಗಾಲದ ರಜೆಗೋಸ್ಕರ (Monsoon Vacation) ಮುಚ್ಚಲ್ಪಟ್ಟ ಸ್ಥಳೀಕ ಬೋರ್ಡು ಶಾಲೆಯು ಇದೇ ಕಳೆದ ತಾ. ೧೮—೬—೨೮ರಿಂದ ಪ್ರಾರಂಭವಾಯಿತು. ಅಧ್ಯಾಪಕರ ವರ್ಗಾವರ್ಗಿಯು ಅವರವರ ಅಭಿಮತದಂತೆ ಆದದ್ದು ನೋಡಿದರೆ ಮಾನ್ಯ ಕಾರ್ಕಳ ತಾಲೂಕು ಬೋರ್ಡು ಪ್ರೆಸಿಡೆಂಟರ ಬಡ ಉಪಾಧ್ಯಾಯರ ಮೇಲಿನ ಪ್ರೀತಿ ವಿಶ್ವಾಸವು ವ್ಯಕ್ತವಾಗುವುದು. ಅಂತೂ ಈ ಶಾಲೆಗೆ ಹೊಸತಾಗಿ ಬರುವ ಸಹಾಯಕರಲ್ಲಿ ಒಬ್ಬರು ಸೆಕೆಂಡರಿ ಗ್ರೇಡಿನವರು, ಮತ್ತೊಬ್ಬರಂತೂ ಊರಿನವರೇ. ಆದ್ದರಿಂದ ಶಾಲಾ ಅಭಿವೃದ್ಧಿಗೆ ತಕ್ಕಷ್ಟು ಆಸ್ಪದವಿದೆಯಾದರೂ ವಿಧ್ಯಾರ್ಥಿಗಳನ್ನು ಹೆಚ್ಚಿಸಿ ಶಾಲೆಯ ಏಳಿಗೆಗೆ ಎಷ್ಟು ಶ್ರಮಪಡುವರೆಂದು ನೋಡಲಿದೆ.

ದಿವಂಗತ ಶ್ರೀ ಎಮ್. ಬಾಬು ಬಿ.ಎ ಎಲ್.ಟಿ.ಯವರ ಸ್ಮಾರಕ ಫಂಡಿಗೆ ಇಲ್ಲಿಯ ಪ್ರಧಾನೋಪಾಧ್ಯಾಯರಾದ ಶ್ರೀ. ಎ. ಪಾಂಡುರಂಗ ಕಿಣಿಯವರು ತಮ್ಮ ಯಥಾನುಶಕ್ತಿ ದ್ರವ್ಯಸಹಾಯ ಮಾಡಿದರು. ಇವರಂತೆಯೇ ಏಕ್ಕ ಉಪಾಧ್ಯಾಯರು ಸದರಿ ಸ್ಮಾರಕ ನಿಧಿಗೆ ಸಹಾಯ ಮಾಡಿ ಕೀರ್ತಿಶೇಷರ ಮೇಲಿರುವ ಪ್ರೀತಿ ವಿಶ್ವಾಸವನ್ನು ಪ್ರದರ್ಶಿಸುವರಾಗಿ ಸಂಪೂರ್ಣ ಭರವಸೆ ಇದೆ.

ಉಡುಪಿ—ಈ ತಾಲೂಕು ಉಪಾಧ್ಯಾಯರ ಮಾಸಿಕ ಸಭೆಯು ಕಳೆದ ತಾ. ೭ರಲ್ಲಿ ಕುರ್ಕಾಲು ರಾಮಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟು ಕೆಳಗಿನ ನಿರ್ಣಯಗಳನ್ನು ಮಂಜೂರುಗೊಳಿಸಿತು—ಬರುವ ತಿಂಗಳ ೪ನೇ ತಾರೀಕಿಗೆ ತಾಲೂಕಿನ ಎಲ್ಲಾ ಶಾಲೆಗಳ ಉಪಾಧ್ಯಾಯರ ಮಹಾಸಭೆಯು ಜರಗಬೇಕು. ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರು ಅಧ್ಯಕ್ಷರಾಗುವಂತೆ ಪ್ರಾರ್ಥಿಸಬೇಕು. ತಾಲೂಕು ಬೋರ್ಡು ಪ್ರೆಸಿಡೆಂಟರೂ ಇನ್‌ಪೆಕ್ಟರರೂ ಈ ಸಂಘವನ್ನು ಅಭಿವೃದ್ಧಿಗೆ ತರುವಂತೆ ಅವರನ್ನು ಪ್ರಾರ್ಥಿಸಬೇಕು. ಸಂಘದ ಸಭೆಗಳು ಸರ್ಕಲಿಗೆ ಒಂದರಂತೆ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಜರಗಿಸಲ್ಪಡಬೇಕು.

ವಿಪರೀತ ಮಳೆಬರುವ ಕಾಲಕ್ಕೆ ಇಲ್ಲಿಯ ಮಧ್ವ ಸರೋವರಕ್ಕೆ ಭಾಗೀರಥಿಯು ಬಂದಿಳಿಯುವ ವಾಡಿಕೆಯಿದೆಯಂತೆ! ಕಳೆದ ತಾ. ೧೯ರಲ್ಲಿ ಭಾಗೀರಥಿಯು ಬಂದಳೆಂದು ನಗಾರಿ ಹೊಡೆಯಲ್ಪಟ್ಟಿತು. ಕೂಡಲೇ ಜನರು ನೆರೆದು ಬಂದರು! ಹಲವರು ಮಿಂದರು!! ಕೆಲವರು ಕಣ್ತೆರೆದು ಕಾಣುವಾಗ ಭಾಗೀರಥಿಯು ಬಂದಿಳಿಯಲೇ ಇಲ್ಲವಂತೆ!!! ಆಗ ಹಲವರ ಭ್ರಾಂತಿ ನಿವೃತ್ತಿಯಾದರೂ "ಕೈಗೆ ಬಂದ ತುತ್ತು ಬಾಯಿಗಿಲ್ಲ"ವೆಂದು ಅವರು ನೊಂದುಕೊಂಡರು. ಇವರ ಮಧ್ಯದಲ್ಲಿ ರಾ। ಕುಂಬಳೆ ರಾಘವೇಂದ್ರರಾಯರ ಜಾಹೀರಾತಿನಿಂದಾಗಿ ಅವರು "ಮಾಣೆಲ್" ಎಂಬ ಶಬ್ದ ಪ್ರಯೋಗ ಮಾಡಿದುದರ ಫಲವಾಗಿ ಹಲವು ತುಳುವರಲ್ಲಿ ಮನೋವೈಷಮ್ಯಗಳುಂಟಾಗಿವೆ. ಅವರವರ ಭಾಷೆಯನ್ನು ಅವರವರೇ ಆಡಬೇಕಂತೆ. ಇನೊಬ್ಬರು ಆಡಬಾರದು! ಇದೇ ಉಡುಪಿಯ ಈ ವಾರದ ಸುದ್ದಿ.

ಬಾರ್ಕೂರಿನ ಪತ್ರ.

[ನಮ್ಮ ಸ್ವಂತ ವಾರ್ತಾವಾಹಕರಿಂದ]

ಟೆಂಪಲ್‌ವ್ಯೂ, ೨೧—೭—೨೮.

ಭೀಕರ ನರಹತ್ಯೆ.

ಕಾರ್ಕಳದಲ್ಲಿ ಇತ್ತೀಚೆಗೆ ನಡೆದ ರೋಮಾಂಚಕಾರಿಯಾದ ಒಂದು ನರಹತ್ಯದಿಂದ ನಾವು ಬಹಳ ಸಂತಪ್ತರಾಗಿರುವೆವು. ಕಾರ್ಕಳದ ನಿಟ್ಟೆ ಗ್ರಾಮದ ನಿವಾಸಿಯೋರ್ವನು ಪೇಟೆಯ ಮಧ್ಯಸ್ಥಾನದಲ್ಲಿರುವ ಭೋಜನ ಗೃಹವೊಂದರಲ್ಲಿ ಭೋಜನಕ್ಕಾಗಿ ಬಂದಿದ್ದನಂತೆ! ಆ ಮಧ್ಯಸ್ಥಾನದಲ್ಲಿರುವ ಮಂದಿರವೇ ಆ ಪಾಪದ ಪ್ರಾಣಿಯ ವಧ್ಯಸ್ಥಾನವಾಯಿತು! ಅವನೋ ಒಬ್ಬ ನರರೂಪದ ಪಶುವಾದ ದಸ್ಯುವಿನ ಚೂರಿಕಾಘಾತಕ್ಕೆ ಈ ಬಡ ಪ್ರಾಣಿಯು ಬಲಿಯಾಯಿತೆಂದರೆ ಯಾವ ಮಾನವನ ಹೃದಯವು ಕಂಪಿಸಲಾರದು!!! ಇದೀಗಲೇ ದಸ್ಯುಗಳ ಶೋಧನೆಗಾಗಿ ಸಂರಕ್ಷಣಾಶಿಬಂದಿಯ ಕರ್ಮಚಾರಿಗಳು ವಿಶೇಷ ಯತ್ನಗಳನ್ನು ಮಾಡುತ್ತಿರುವ ವಾರ್ತೆಯನ್ನು ಕೇಳಿ ನಾವು ಸಂತೋಷಗೊಂಡಿರುವೆವು. ಇತ್ತಕಲ್ಲೇ ಸಂದೇಹವಶಾತ್ ಒಬ್ಬ ವ್ಯಕ್ತಿಯನ್ನು ಪೋಲೀಸು ಕರ್ಮಚಾರಿಗಳು ಬಂಧನೆಗೆ ತುತ್ತುಪಡಿಸಿರುವರಂತೆ. ಇನ್ನೆಷ್ಟು ಮಂದಿಗಳು ದೊರಕಲಿರುವರೋ ನೋಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಕಾರ್ಕಳ ತಾಲೂಕಿನಲ್ಲಿ ನಡೆದಷ್ಟು ನರಹತ್ಯಗಳು ಇನ್ನೆಲ್ಲೂ ನಡೆಯುವುದಿಲ್ಲ. ಇಲ್ಲಿ ನರಹತ್ಯಕಾರಿಗಳಾದ ಈ ಪಶುವೃತ್ತಿಯ ದಸ್ಯುಗಳಿಗೆ ಸಹಾಯಕರ್ತರಾದ ಬಡ ಪ್ರಾಣಿಗಳ ಪ್ರಾಣವು ತಿಲತುಲ್ಯವಾಗಿದೆ. ಪೋಲೀಸು ಕರ್ಮಚಾರಿಗಳ ನೈಪುಣ್ಯತೆಯಿಂದ ಕೊಲೆಪಾತಕಿಗಳ ಗುಟ್ಟು ಬಯಲಾದರೂ ಇವರು ಭೀತಿಪಡುವಂತಿಲ್ಲವೆಂಬದಾಗಿ ಬಲ್ಲವರು ಹೇಳುತ್ತಾರೆ. ಹತ್ಯದ ವಿಚಾರಣೆಯು ನ್ಯಾಯಸ್ಥಾನಗಳ ವರೆಗೆ ಹೋಯಿತೆಂದರೆ ದ್ರವ್ಯವನ್ನು ನೀರಿನಂತೆ ಚೆಲ್ಲಿ 'ನರಹತ್ಯ ಅಪವಾದ'ವನ್ನು ಹೋಗಲಾಡಿಸಿ 'ನಿರ್ದೋಷಿ'ಗಳೆಂಬದಾಗಿ ಅನ್ನಿಸಿಕೊಂಡು ಬರುವ ಸಾಮರ್ಥ್ಯವು ಇವರಲ್ಲಿದೆ ಎಂಬುದಕ್ಕೆ ಅನೇಕ ದೃಷ್ಟಾಂತಗಳು ನಮ್ಮ ಮುಂದಿವೆ. ಆದಿಯಿಂದ ಅಂತ್ಯದ ವರೇಗೆ ಬೇಕುಬೇಕಾದಷ್ಟು ದ್ರವ್ಯವನ್ನು ಚೆಲ್ಲುತ್ತಿರುವುದನ್ನು ನೋಡುವಾಗ ಈ ಭಯಂಕರ ದಸ್ಯುದಳಕ್ಕೆ ಸಹಾಯಮಾಡುವುದಕ್ಕಾಗಿ ಅವ್ಯಕ್ತವಾದ ಅವುದೋ ಒಂದು ಧನಿಕ ವ್ಯಕ್ತಿಯು ಹಿಂಭಾಗದಲ್ಲಿ ಉಪಸ್ಥಿತವಾಗುವಂತೆ ಭಾಸವಾಗುವುದು. ಇಲ್ಲವಾದರೆ ಈ ಮುಂಚೆ ಈ ತಾಲೂಕಿನಲ್ಲಿ ನಡೆದ ಅಜೆಕಾರಿನ ಹತ್ಯೆ, ಹಿರ್ಗಾನಿನ ದಂಪತಿ ಹತ್ಯ, ಕೆರ್ವಾಶೆಯ ಹತ್ಯ, ಕಬ್ಬಿನಾಲೆಯ ಹತ್ಯ, ಜಾರದ ಹತ್ಯ, ಕುಚ್ಚೂರಿನ ಗುಪ್ತ ಹತ್ಯ, ನಾರಾವಿ ಪ್ರಾಂತ್ಯದಲ್ಲಿ ನಡೆದ ಹತ್ಯ—ಈ ಎಲ್ಲಾ ನರಹತ್ಯಗಳಲ್ಲೂ ಕೃತ್ಯಗಳನ್ನು ನಡೆಯಿಸಿದ ದಸ್ಯುಗಳು ಆರೆಂಬುದು ಈ ತನಕ ನಿಶ್ಚಿತವಾಗಲಿಲ್ಲವೆಂದರೇನು? ಹತ್ಯಾಕಾರಿಗಳು ಆರೆಂಬುದು ನಿಶ್ಚಿತವಾದರೆ ಸರಕಾರವು ಅಂಥಾ ಭೀಕರ ರಕ್ಕಸರಿಗೆ ತಕ್ಕ ಶಾಸ್ತಿಯನ್ನು ಮಾಡುವುದೆಂಬುದು ಸಕಲರಿಗೂ ತಿಳಿದಿದೆ. ಮುಂಬಾಯಿಯಲ್ಲಿ ನಡೆಯಿಸಿದ 'ಬಾವ್ಲಾ ಹತ್ಯ'ದಲ್ಲೂ ಕೂಡ ದ್ರವ್ಯವು ನೀರಿನಂತೆ ಚೆಲ್ಲಲ್ಪಟ್ಟರೂ 'ಸ್ಥಾನಮಾನ'ಗಳನ್ನು ಲಕ್ಷಿಸದೆ ಸರಕಾರವು ಹತ್ಯಾಕಾರಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಿದುದಲ್ಲದೆ ಈ ಹತ್ಯಕ್ಕೆ ಸಂಬಂಧಿಸಿದ ಒಬ್ಬ ಅತ್ಯುಚ್ಚ ಪದವೀಧರನ ಪದವಿಯನ್ನು ಕಿತ್ತು ಬಿಸುಟಿರುವುದು ನಮಗೆಲ್ಲರಿಗೂ ತಿಳಿದಿದೆ. ಸರಕಾರಕ್ಕೆ ಸರ್ವರ ಪ್ರಾಣಗಳೂ ಸಮತುಲ್ಯವಾಗಿವೆ. ಇದೀಗ ಕಾರ್ಕಳದಲ್ಲಿ ನಡೆದುದು ಬಡಪ್ರಾಣಿಯ ಹತ್ಯವೆಂದಾದರೂ ಸರಕಾರವು ಅದರಲ್ಲಿ ಇನ್ನಷ್ಟು ಯತ್ನಮೂಲಕ ಶೋಧಗಳನ್ನು ನಡೆಯಿಸುವ ಏರ್ಪಾಡು ಮಾಡದಿರದು. 'ಬಾವ್ಲಾ ಹತ್ಯ'ದಂಥಾ ಕೆಲವು ಭಯಂಕರ ಹತ್ಯಗಳಲ್ಲಿ ಹತ್ಯಾಕಾರಿಗಳ ಶೋಧನೆಗಾಗಿ ಸರಕಾರವು ಯೋಗ್ಯ ಪತ್ತೆದಾರರನ್ನು (Detectives) ನಿಯಮಿಸಿ ಕೃತ್ಯಕಾರಿಗಳ ಮರ್ಮವನ್ನು ಭೇದಿಸಿಯೇ ಬಿಟ್ಟಿತು. ಅಂತೆಯೇ ಈ ಹತ್ಯದಲ್ಲೂ ಒಬ್ಬ ಗುಪ್ತಚರನ ನೇಮಕವಾದರೆ ಇದೇ ದಸ್ಯುಗಳ ದಳವನ್ನೂ ಹಿಂಭಾಗದಿಂದಲೇ ಸಹಾಯಮಾಡುವ ಧನಿಕ ವ್ಯಕ್ತಿಗಳನ್ನು ಶೋಧಿಸಿ ತೆಗೆಯಲು ಸಾಧ್ಯವಿದೆ. ಈ ದಸ್ಯುಗಳಿಗೆ ಇದೊಂದೇ ಕೃತ್ಯವಲ್ಲ. ದರೋಡೆಗಳೂ, ಸ್ತ್ರೀ ನಿರ್ಯಾತನೆಗಳೂ ಇವರ ಭಯಾನಕ ಕೃತ್ಯಗಳ ಹೊರಗಾಗಿಲ್ಲ. ಧನಿಕ ವ್ಯಕ್ತಿಯ ಸಹಾಯವಿಲ್ಲದಿದ್ದರೆ ಈ ದಸ್ಯುದಳಕ್ಕೆ ಇಂಥ ಕೃತ್ಯಗಳನ್ನು ನಡೆಯಿಸುವ ಧೈರ್ಯವಾದರೂ ಎಲ್ಲಿಂದ ಬರಬೇಕು? ಇಂಥ ಭೀಕರ ದಳಕ್ಕೆ ಸಹಾಯ ಮಾಡುವ ಈ ನರರಾಕ್ಷಸರನ್ನು ಬಂಧನಕ್ಕೆ ಗುರಿಪಡಿಸುವ ಯುಕ್ತವಾದ ಉಪಾಯವು 'ಕಾನೂನಿ'ನಲ್ಲಿದ್ದರೂ ಅಧಿಕಾರಿಗಳು ಸುಮ್ಮನಿರುವುದೇಕೊ ನಾವರಿಯೆವು. ವಂಗದೇಶದಲ್ಲಿ 'ದೇಶದ್ರೋಹಿ'ಗಳ ದಳವನ್ನೇ ಬಂಧಿಸುವುದಕ್ಕಾಗಿ ಸರಕಾರವು 'ತೃತಿಯ ಕಟ್ಟಳೆ' (Ordinance act—Regulation III) ಎಂಬ ಕಾನೂನಿನ ಪುನರುಜ್ಜೀವನ ಮಾಡಿ ಎಷ್ಟೆಲ್ಲಾ ದೇಶದ್ರೋಹಿಗಳನ್ನು ಬಂಧಿಸಿಲ್ಲ? ಈ ರೀತಿಯಲ್ಲಿ ಬಂಧನೆಗೆ ಗುರಿಯಾದ ದೇಶದ್ರೋಹಿಗಳು ಯೋಗ್ಯರೋ ಅಯೋಗ್ಯರೊ ಎಂಬುದನ್ನು ನಾವು ಇಲ್ಲಿ ಹೇಳಲಾರೆವು. ಹಿಂತು ನಿಶ್ಚಿಂತರಾಗಿ ನರಹತ್ಯವನ್ನು ಮಾಡುವ ಈ ತಾಲೂಕಿನ ದಸ್ಯುದಳದ ಮೇಲೆ 'ಕಾನೂನಿನ ಕೈ ಆಡಿಸಿ ಬಡ ಜನರ ಧನ, ಪ್ರಾಣ, ಮಾನಗಳನ್ನು ರಕ್ಷಣೆಮಾಡಬೇಕಾಗಿ' ದಯಾಲು ಸರಕಾರಕ್ಕೆ ಸೂಚಿಸುವೆವು.

ಚಿಕ್ಕ ಪೋರರ ನಾಟಕ ಮಂಡಳಿ.

ಉಡುಪಿಯಲ್ಲಿ ಈಗ ತಮ್ಮ ನಾಟಕಗಳನ್ನು ಅಭಿನಯಿಸಿ ತೋರಿಸುತ್ತಿರುವ ಶ್ರೀ ಸಂಗಮೇಶ್ವರ ನಾಟಕ ಮಂಡಳಿಯವರು ಸರ್ವರ ಮೆಚ್ಚುಗೆಗೂ ಪಾತ್ರರಾಗುತ್ತಿರುವುದು ಸಂತಸಾಸ್ಪದವಾದ ವಿಷಯವು. ಚಿಕ್ಕ ಚಿಕ್ಕ ಬಾಲಕರೇ ಭೂಮಿಕೆಗಳನ್ನು ವಹಿಸಿಕೊಂಡು ರಂಗಭೂಮಿಯಲ್ಲಿ ಬಂದು ಅಭಿನಯವನ್ನು ಮಾಡುವುದೆಂದರೆ ಅಷ್ಟೊಂದು ಸುಲಭಸಾಧ್ಯವಾದ ಕಾರ್ಯವಲ್ಲವೆಂಬುದನ್ನು ಒಂದಿಷ್ಟು ಬುದ್ಧಿಯುಳ್ಳವನಾದರೂ ಹೇಳಬೇಕಾದುದೇ. ಇದರೆಲ್ಲಿನ ವೇಷಧಾರಿಗಳು ಎಳೆಗೂಸುಗಳಾದಾಗ್ಯೂ ಅಭಿನಯದ ಹಲವು ಅಂಶಗಳು ಸಮರ್ಥರಾದ ನಟರಿಗೆ ಸರಿಯಾಗಿರುವುವೆಂಬದಾಗಿ ನಾಟಕವನ್ನು ನೋಡಿದ ಮಹನೀಯರು ಹೇಳುತ್ತಾರೆ. ಏನೊಂದೂ ಸಂಕೋಚವಿಲ್ಲದೆ 'ರಂಗಸ್ಥಾನ'ದಲ್ಲಿ ಬಂದು ತಮ್ಮ ಕೋಮಲವಾದ ಕಂಠದಿಂದ ಹಾಡಿ ಜನರನ್ನು ಮುಗ್ಧಪಡಿಸುವ ದೇವದೂತ(angels)ರಂತಿರುವ ಈ ಎಳೆ ಪೋರರು ಕನ್ನಡಿಗರಿಂದ ಅತ್ಯಗತ್ಯವಾಗಿ ಪುರಸ್ಕೃತರಾಗಲೇ ಬೇಕು. ಹಿಂತು "ಬಿಮರಣ್ಣನವರು, ಮಡಳಣ್ಣನವರು" ಎಂಬಂಥಾ ವಿಚಿತ್ರ ಅದ್ಭುತ ಪ್ರಾಸಗಳನ್ನುಳ್ಳ ಭಯಂಕರ ಅನರ್ಥಕಾರಿಯಾದ ಟೀಕೆಗೆ ಈ ಎಳೆಗೂಸುಗಳ ಮಂಡಳಿಯಲ್ಲವೆಂಬುದು 'ರಾಷ್ಟ್ರಬಂಧು'ವಿನ 'ಮುದ್ದಣ್ಣ'ನವರಿಗೆ ಮಾತ್ರ ಅದೇಕೆ ತಿಳಿಯಲಿಲ್ಲವೊ ನಾವರಿಯೆವು. ಮುದ್ದಣ್ಣನವರೇ 'ಎಳೆಯ ಕೂಸುಗಳ ಮೇಲೆ ಇನ್ನಾದರೂ ನಿಮ್ಮ ಗದೆಯನ್ನು ಎತ್ತುವುದನ್ನು ನಿಲ್ಲಿಸಿರಿ.'

ತಾಲೂಕು ಬೋರ್ಡಿನ ಕಮಾರ್ಲಯ.

ಉಡುಪಿ ತಾಲೂಕು ಬೋರ್ಡಿನ ಹೊಸ ಅಧ್ಯಕ್ಷರಾದ ಶ್ರೀಯುತ ಎಚ್. ಆರ್. ಶೆಟ್ರ ಕಾಲದಲ್ಲಿ, ಬೋರ್ಡಿನ ಅಧ್ಯಾಪಕ ವರ್ಗವು ಹೊಸ ಆಶಯಗಳಿಂದಲೂ ಉಚ್ಚತರದ ನಿರೀಕ್ಷಣೆಯಿಂದಲೂ ತುಂಬಿರುವಾಗಲೇ ತಾಲೂಕು ಬೋರ್ಡಿನ ಕಮಾರ್ಲಯದಲ್ಲಿ ಅದು ಅಲ್ಲಿಯ ಕರ್ಮಚಾರಿಗಳ ಕೈಯಲ್ಲಿ ತಾತ್ಸಾರಕ್ಕೆ ಪಾತ್ರವಾಗಿದೆ. ಭಾವೀ ಜನಾಂಗ ರಚಯಿತರಾದ ಈ ಅಧ್ಯಾಪಕ ವರ್ಗದಲ್ಲಿಯೂ ಸ್ವಾಭಿಮಾನವಿದೆಯೆಂದು ತಿಳಿದು ಈ ಕರ್ಮಚಾರಿಗಳು ಇನ್ನಾದರೂ ಇವರನ್ನು ತಮ್ಮ ಕಾರ್ಯಾಲಯದಲ್ಲಿ ಬಂದಾಗ ತಿರಸ್ಕಾರದ ಭಾವನೆಯಿಂದ ಕಾಣದೆ ಗೌರವಿಸುವರಾಗಿ ಜೆನಸುವೆವು.

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-ತಬಲೆ, ಡಕ್ಕ ವಗೈರೆ.



೧ ಕೈಪೆಟ್ಟಿಗೆ ... ರೂ. ೨೫, ೩೦, ೪೦, ೫೦, ೬೦
೨ ,, ... ,, ೪೦, ೫೫, ೫೦, ೬೦, ೧೦೦.
೩ ಕಾಲುಪೆಟ್ಟಿಗೆ ,, ,, ೬೫, ೭೫, ೧೦೦, ೧೨೫, ೧೫೦.
೪ ಪ್ಲೂಟ್ (ಕಾಪ್ಲರ ಡಕ್ಕ ಸಹಿತ) ...
೫ ಪಿಟೀಲು—ಉತ್ತಮವಾದ ... (ಪೆಟ್ಟಿಗೆಯ ಸಹಿತ) ...

ಗೋಪಾಳ ಸಖಾರಾಮ ಮತ್ತು ಕಂಪೆನಿ,

ತಯಾರಾಗಿವೆ! ತಯಾರಾಗಿವೆ

ಶಾಲಾ ಹುಡುಗರಿಗೆ ಬೇಕಾದ

ಗೆರೆಹಾಕಿದ ಮತ್ತು ಗೆರೆ ಹಾಕದ ಎಕ್ಸರ್‌ಸೈಜ್ ಪುಸ್ತಕಗಳೂ, ಡ್ರಾಯಿಂಗ್ ಪುಸ್ತಕಗಳೂ, ... ಪುಸ್ತಕಗಳೂ, ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಶಾರದಾ ಛಾಪಖಾನೆ, SHARADA PRESS,
ಕಡಿಯಾಳ, ಮಂಗಳೂರು. MANGALORE.

ಮಿತವಾದ ಬೆಲೆಗೆ ಅತ್ಯುತ್ತಮವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನುಗಳು, ಸ್ಟೌವ್‌ಗಳು, ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಸರಟು ಗುಂಡಿಗಳು, ರೋಜಾ ಹುವ್ವಿನ ತುರಾಯಿಗಳು, ಬ್ಯಾಟರಿಗಳು, ಬೆಂಕಿಕಲ್ಲದೆ ಬೀಡಿ ಮತ್ತು ಸಿಗರೇಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇತರರಿಗೆ ಬೇಕಾಗುವ ಸಾಮಾನುಗಳು ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕ್ರಯ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ಆರ್. ಖಲೀಲ್,
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

ಅಂಬಾ ತಾಯಿತ್

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕೀರ್ತಿಯನ್ನು ಕೊಡುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
೦—೯—೨೭ ಸಕ್ಲೇಶ್ಪುರ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ್.

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲಾ ... —ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲಾ ... —ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲಾ ... —ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲಾ ... —ಅಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲಾ ... —ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲಾ ... —ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲಾ ... ಔಷಧ. ರೂ. ೦—೬—೦
ಬಾಟ್ಲಿವಾಲಾ ... ರೂ. ೦—೬—೦. LIBERAL DISCOUNT TO TRADE

... —CAWASHAPUR, BOMBAY.
ಡಾ. ಹೆಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

... ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ... ಯೋಗ್ಯವಾಗಿದೆ.

... ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ರೋಗ, ... ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

... ಎಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0

ಕೇಸರೀ ಕುಟೀರಂ,
TELEGRAMS:—KESARI ಆಯುರ್ವೇದ ಔಷಧಶಾಲಾ, P. B: 752, ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು
ಮಂಗಳೂರು ಏಜಂಟರು— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.

ಈ ಚಿತ್ರದಲ್ಲಿ ಕಂಡ ಫೌಂಟೆನ್‌ಪೆನ್ನು ... ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೆನ್ನನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ನೋಡ್ಲಂಥ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೆನ್ನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,
ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ.

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ್ ಮೂಮೆಂಟ್ ಮಾಡಿರುವದು. ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ್ ಪೆನ್ನಾ 1, ಹೇರಾಯಿಲ್ ಬಾಟಲ್ 1, ವಜ್ರದ ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಣಿ 1, ಸುವಾಸನೆ ಸೋಪು 1, ಪೆನ್ನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.
THE ENGLISH EMPORIUM,
P. O. box 105, MADRAS.

ಸೌತ್ ಇಂಡಿಯನ್ ರೈಲ್ವೆ ಮುಷ್ಕರ.

ಕಟ್ಟುಪಾಕಮ್‌ನಲ್ಲಿ ಸಿಲೋನ್ ಬೋಟು ಮೈಲು ಉರುಳುವಿಕೆ.

ಇಬ್ಬರು ಸತ್ತರು, ಅನೇಕರಿಗೆ ಜಖಂ. ಪೋಲೀಸರ ಗೋಲಿಬಾರು.

ಮಂಗಳೂರು—ಸಂಬಳ ಸಾಕಾಗುವುದಿಲ್ಲವೆಂದು ಸೌತ್ ಇಂಡಿಯನ್ ರೈಲ್ವೆ ಕೆಲಸಗಾರರ ಮುಷ್ಕರವು ಮಂಗಳೂರಿನಲ್ಲಿಯೂ ಪಸರಿಸಿರುವುದು. ಕೆಲಸಗಾರರು ಕೆಲಸಕ್ಕೆ ಸರಿಯಾಗಿ ಬಾರದೆ ಪ್ರತಿದಿನವೂ ೪-೩೦ ಘಂಟೆಗೆ ಇಲ್ಲಿಗೆ ಬಂದು ತಲಪಬೇಕಾದ ಮೈಲುಬಂಡಿಯು ಬಹು ತಡವಾಗಿ ಬರುವುದು. ಶನಿವಾರ ದಿನ ರಾತ್ರೆ ೧೦ ಘಂಟೆಗೂ ಆದಿತ್ಯವಾರದ ಮೈಲುಬಂಡಿಯು ಸೋಮವಾರ ಪ್ರಾತಃಕಾಲವೂ, ಸೋಮವಾರದ ಬಂಡಿಯು ಅದೇ ರಾತ್ರೆ ಸುಮಾರು ೧೧ ಘಂಟೆಯ ಸಮಯಕ್ಕೂ ಮಂಗಳವಾರದ್ದು ಎಂಟು ಘಂಟೆಯ ಸಮಯಕ್ಕೂ ಬಂದು ತಲಪಿಸವು.

ಸಿಲೋನ್ ಬೋಟ್ ಮೈಲು ಮೊದಲಾದ ರೈಲುಗಾಡಿಗಳು ಕಂಬಿಗಳಿಂದ ತಪ್ಪಿದ ಸಲುವಾಗಿ ಮಂಗಳೂರಲ್ಲಿಯೂ ಇತರ ಕಡೆಗಳಲ್ಲಿಯೂ ಇರುವ ರೈಲುವೇ ಸ್ಟೇಶನುಗಳಲ್ಲಿ ಏಜಂಟರ ನೋಟೀಸನ್ನು ಈ ರೀತಿ ಪ್ರಕಟಿಸಿರುವರು—"ತಾ ೨೦ನೇ ದಿನ ೨೧೩-೧೫ನೇ ಮೈಲಿನಲ್ಲಿ, ನಂಬ್ರ ಎರಡನೇ ಬೋಟು ಮೈಲು; ೨೧ನೇ ತಾರೀಕಿನ ದಿನ ೨೯-೧೨ ಮೈಲಿನ ಹತ್ತಿರ ನಂಬ್ರ ಎರಡನೇ ಬೋಟುಮೈಲು; ತಾ. ೨೩ನೇ ದಿನ ಮೈಲು, ೩೨೧-೧೧ರ ಹತ್ತಿರ ನಂಬ್ರ ೨೬ನೇ ಪ್ಯಾಸೆಂಜರ ಟ್ರೈನು ಕಂಬಿಗಳಿಂದ ತಪ್ಪುವಂತೆ ಮಾಡಿದ ಅಸಾಮಿ ಅಥವಾ ಅಸಾಮಿಗಳನ್ನು ಹಿಡಿದು ಕೈದು ಮಾಡುವಂತೆ, ಅವರು ಯಾರೆಂದು ಸೂಚಿಸಿದವರಿಗೆ ಸೌತ್ ಇಂಡಿಯನ್ ರೈಲುವೇ ಕಂಪೆನಿಯವರು ಹತ್ತುಸಾವಿರ ರೂಪಾಯಿಗಳ ಇನಾಮನ್ನು ಕೊಡಲು ಸಿದ್ಧರಿರುವರು" ಎಂದು.

ಮದರಾಸು—ಸೌತ್ ಇಂಡಿಯನ್ ರೈಲುವೆಯ ಕೆಲಸಗಾರರ ಸರ್ವಸಾಮಾನ್ಯ ಮುಷ್ಕರವು ಕಳೆದ ಗುರುವಾರ ದಿನ ನಡುರಾತ್ರಿಯಲ್ಲಿ ಪ್ರಾರಂಭವಾಯಿತು. ಮರುದಿನ ಮದರಾಸು ಪಟ್ಟಣಕ್ಕೆ ರೈಲುಗಾಡಿಗಳು ಬಂದು ತಲಪುವಾಗ, ನಿಶ್ಚಯದ ಸಮಯಕ್ಕಿಂತಲೂ ಹಲವು ತಾಸುಗಳ ಸಮಯವು ದಾಟಿದ್ದಿತು. ತಿರುಚಿನಾಪಳ್ಳಿಯತ್ತಕಡೆ ಕೆಲಸಗಾರರು ಪಟ್ಟಿಗಳ ಹಾದಿಯ ಮೇಲೆ ಮಲಗಿ ರೈಲು ಹೋಗಲು ತೊಂದರೆಯನ್ನು ಕೊಡುತ್ತಿದ್ದರೆಂದು ತಿಳಿಯುವುದು.

ಮದರಾಸಿನಿಂದ ಹೊರಟ ರೈಲುಬಂಡಿಯು ಹೋಗುತ್ತಿರುವ ಹಾದಿಯಲ್ಲಿ ಹಲವು ಮುಷ್ಕರಗಾರರು ಮಲಗಿದ್ದುದರಿಂದ ರೈಲಿನಲ್ಲಿದ್ದ ಪೋಲೀಸರು ಇಳಿದು ಹೋಗಿ ಅವರು ಮೂವತ್ತು ಜನರನ್ನು ಕೈದುಮಾಡಿದರು. ಮುಷ್ಕರಗಾರರು ಗುಂಪುಕೂಡಿ ರೈಲು ಓಡುತ್ತಿರುವಾಗ ನಿಲ್ಲಿಸಿ, ಡ್ರೈವರನನ್ನು ಎಳೆದುಹಾಕುವದು, ರೈಲು ನಿಲ್ಲಿಸುವ ಸರಪಣಿಯನ್ನೆಳೆದು ರೈಲನ್ನು ಅನಾವಶ್ಯಕವಾಗಿ ನಿಲ್ಲಿಸುವದು, ಇಂತಹ ಬೇಡವಾದ ಕೆಲಸಗಳನ್ನು ಮಾಡಿದ್ದರು. ಪಟ್ಟಿಯ ಮೇಲೆ ತಡೆಗಳನ್ನಿಟ್ಟು ಸರಾಗವಾಗಿ ಓಡುವ ರೈಲನ್ನು ತಡೆಯುವುದು, ಹೀಗೆ ಚಲಾವಣೆಗೆ ಬಹಳ ತೊಂದರೆಯನ್ನುಂಟುಮಾಡಿದರು. ತಾ. ೨೦ನೇ ದಿನ ಒಬ್ಬ ಪ್ರಯಾಣಿಕನು ಅನ್ನುತ್ತಾನೆ—"ನಾನು ಮದರಾಸಿನಿಂದ ಹೊರಟು ಹೋದಾಗ ನಾನಿರುವ ಗಾಡಿಯನ್ನು ಮೂವತ್ತು ಜನ ಮುಷ್ಕರಗಾರರು ಪ್ರವೇಶಿಸಿದರು. ಕೆಲವು ಮೈಲು ದೂರ ಹೋಗಿ ಸ್ಟೇಶನಿನಲ್ಲಿ ಟ್ರೈನು ನಿಂತೊಡನೆ ಇವರು ಇಳಿದು ಮುಂದಕ್ಕೆ ಹೋಗಿ ಕಂಬಿಗಳ ಮೇಲೆ ಸಾಲಾಗಿ ಮಲಗಿ ಬಿಟ್ಟರು. ಎಷ್ಟು ಹೇಳಿದರೂ ಏಳಲಿಲ್ಲ. ಕೊನೆಗೆ ಪೋಲೀಸರು ಬಂದು ಮರದ ಕೊರಡೆಗಳಂತೆ ಮಲಗಿದ್ದ ಇವರನ್ನು ಎತ್ತಿ ಬದಿಗಿಟ್ಟು ರೈಲನ್ನು ಬಿಡಬೇಕಾಯಿತು"—ಎಂದು. ಇದೇ ರೀತಿ ಹಲವು ಕಡೆಗಳಲ್ಲಿಯೂ ನಡೆಯಿತಂತೆ.

ತಿರುಚಿನಾಪಳ್ಳಿ—ಇಲ್ಲಿಯೂ ಅಂದೇ ರಾತ್ರಿ ಹದಿನೆರಡು ಘಂಟೆಯ ಸಮಯದಲ್ಲಿ ರೈಲುವೇ ಕೆಲಸಗಾರರು ಸ್ಟೇಶನ್ ಮಾಸ್ತರರ ಕಡೆಗೆ ಬಂದು ಬೀಗದ ಕೈಗಳನ್ನು ಕೊಟ್ಟು ಕಡಿಮೆ ಸಂಬಳದ ಮೇಲೆ ತಾವು ಕೆಲಸ ಮಾಡಲಾರರೆಂದು ಹೇಳಿ ಹೊರಟುಹೋಗಿ ಬಿಟ್ಟರು. ಅದುಕಾರಣ ಅಲ್ಲಿಂದ ಹೊರಡುತ್ತಿದ್ದ ರೈಲುಗಳನ್ನು ತಡವಾಗಿ ಬಿಡಬೇಕಾಯಿತು. ಬಂದು ತಲಪುವ ರೈಲುಗಳು ತಡವಾಗಿ ಬಂದು ತಲಪಿದವು. ತಿರುಚಿನಾಪಳ್ಳಿಯ ರೈಲುವೇ ಏಜಂಟರು ಕೂಲಿಗಳು ಈ ಮುಷ್ಕರವನ್ನು ನಿಲ್ಲಿಸಿದುದಾದರೆ, ಅವರ ಕಷ್ಟಗಳನ್ನು ವಿಚಾರಿಸುವ ಸಲುವಾಗಿ ಮದರಾಸು ಸರಕಾರದ ಲೇಬರ್ ಕಮಿಶನರರಿಗೆ ತಾನು ತಿಳಿಸುವೆನೆಂದರು.

ಕೂಲಿಗಳು ಕೆಲಸಕ್ಕೆ ಬಾರದಿದ್ದರೂ ಅವರ ಬದಲಿಗೆ ಇತರರನ್ನು ಕೆಲಸಕ್ಕೆ ಸೇರಿಸಿಕೊಂಡು ಕೆಲಸವು ಮೊದಲಿನಂತೆಯೇ ನಡೆಯುವಂತೆ ಮಾಡಬೇಕೆಂದು ರೈಲ್ವೆ ಅಧಿಕಾರಿಗಳ ಅಪ್ಪಣೆ. ಪೋಲೀಸರು ಬಂದು ಸ್ಟೇಶನುಗಳಲ್ಲಿ ನಿಲ್ಲುವಂತೆ ಮಾಡಿದರು.

ತಂಜಾವೂರಿನಲ್ಲಿ—ಮುಷ್ಕರಗಾರರು ಪ್ರಯಾಣಿಕರನ್ನು ತೊಂದರೆಗೊಳಿಸಬಾರದೆಂದು ತಂಜಾವೂರಿನಲ್ಲಿ ರೈಲುವೇ ಸ್ಟೇಶನಿನಲ್ಲಿ ಪೋಲೀಸ್ ಸಿಪಾಯಿಗಳನ್ನು ನಿಲ್ಲಿಸಿದ್ದರು. ರೈಲುಗಳಲ್ಲಿ ಆಯುಧಪಾಣಿಗಳಾದ ಪೋಲೀಸರು ತಿರುಗುತ್ತಿದ್ದರು. ಕೆಲಸಕ್ಕೆ ಬರುತ್ತಿದ್ದ ಕೆಲಸಗಾರರನ್ನು ತೊಂದರೆಗೊಳಿಸದಂತೆ ಅವರು ಪೋಲೀಸ ಸಹಾಯದಿಂದ ತಿರುಗುತ್ತಿರುವರು. ತಿರುಚಿನಾಪಳ್ಳಿಯಲ್ಲಿ ಕೊಟ್ಟಂತೆಯೇ ನೋಟೀಸನ್ನು ಇಲ್ಲಿಯೂ ಕೊಟ್ಟಿದ್ದರು. ಆದರೆ ಪ್ರಯೋಜನವೇನೂ ಉಂಟಾಗಲಿಲ್ಲ. ಕೆಲವು ಕಡೆಗಳಲ್ಲಿ ಕೀಳು ಉದ್ಯೋಗಸ್ಥರ ಕೆಲಸಗಳನ್ನೂ ಸ್ಟೇಶನ್ ಮಾಸ್ತರನಾಗಲಿ ಸಹಾಯಕ ಸ್ಟೇಶನ್ ಮಾಸ್ತರನಾಗಲೀ ಕಷ್ಟಪಟ್ಟು ಮಾಡಬೇಕಾಯಿತು. ತಂಜಾವೂರಿನ ಸಮೀಪವು ಸುಮಾರು ನೂರುಜನ ಮುಷ್ಕರಗಾರರು ಕಂಬಿಗಳ ಮೇಲೆ ಮಲಗಿ ಟ್ರೈನು ಹೋಗಲು ಬಿಡಲಿಲ್ಲ. ಪೋಲೀಸರು ಬರುವರೆಂದು ವರ್ತಮಾನವಾದೊಡನೆ ಮಲಗಿದ್ದವರೆಲ್ಲರೂ ದಿನ ಎದ್ದು ಓಡಿಹೋದರು.

ತಾ. ೨೧-೭-೨೮.

ತುತಿಕೋರಿನ ಮಾಯಾವರ ಮೊದಲಾದ ಸ್ಥಳಗಳಲ್ಲಿ ಮುಷ್ಕರಗಾರರು ಲೂಟಿಮಾಡತೊಡಗಿದ ಕಾರಣ ಪೋಲೀಸರು ಗುಂಡುಹಾರಿಸಿ ಹತ್ತು ಹದಿನೆರಡು ಜನರನ್ನು ಗಾಯಪಡಿಸಿದರು. ಮುಷ್ಕರವು ಅಂದಿನ ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸಿದ್ದಿತು.

ಮದರಾಸಿನಿಂದ ಹೊರಡುವ ರೈಲುಗಳ ಸಂಖ್ಯೆಯನ್ನು ಕಡಿಮೆ ಮಾಡಿ ಕೆಲವೇ ರೈಲುಗಳು ಹೊರಡುವಂತೆ ಮಾಡಿದರು.

ಕಂಬಿಗಳಲ್ಲಿ ಮಲಗಿದುದಕ್ಕಾಗಿಯೂ, ಕಲ್ಲುಗಳನ್ನು ಬಿಸಾಡಿದುದಕ್ಕಾಗಿಯೂ ಪೋಲೀಸರು ಹಲವರನ್ನು ಹಿಡಿದು ಕೈದುಮಾಡಿದರು. ಗುಂಡುಗಳನ್ನು ಹಾರಿಸಿ ಹಲವರನ್ನು ಗಾಯಗೊಳಿಸಿದರು. ಇದಕ್ಕಾಗಿ ೩೦೦ ಜನರು ಪೋಲೀಸ್ ಸ್ಟೇಶನಿನ ಎದುರು ಸಭೆಕೂಡಿದರು. ತೊಂದರೆಗಳನ್ನುಂಟುಮಾಡಲಿಲ್ಲ. ಇದನ್ನು ಕಂಡು ಅಲ್ಲಿದ್ದ ಪೋಲೀಸರು ಹೆದರಿ ಟೆಲಿಫೋನಿನಿಂದ ಹೆಚ್ಚು ಪೋಲೀಸರನ್ನು ಬರಮಾಡಿ ಅವರೆಲ್ಲರನ್ನು ಅಲ್ಲಿಂದ ಓಡಿಸಿದರು. ಮುಷ್ಕರ ಹಾಕದವರನ್ನು ಒತ್ತಾಯಗೊಳಿಸಿದುದಕ್ಕಾಗಿ ಕೆಲವರನ್ನು ಕೈದುಮಾಡಿದರು.

"ಬೇರೆಯವರ ಮೇಲೆ ಆಗ್ರಹವನ್ನು ಮಾಡಿ ಪೋಲೀಸರ ಕೈಗೆ ಬಿದ್ದವನನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲವೆಂದು ಅವರಿಗೆ ಸಿಕ್ಕಬೇಕಾದ ಹಣವು ಜುರುಮಾನೆಯ ರೂಪದಿಂದ ಸಿಕ್ಕದಿರಬಹುದೆಂದೂ" ಏಜಂಟರು ನೋಟೀಸು ಕೊಟ್ಟರು.

ತುತಿಕೋರಿನಲ್ಲಿ—ರೈಲುವೇ ಸ್ಟೇಶನಿನಲ್ಲಿ ಜನರ್‍ಯಾರೂ ಇರದೆ ಖಾಲಿಯಾಗಿತ್ತು. ಕೆಲವು ಕಡೆಗಳಲ್ಲಿ ಕಂಬಿಗಳನ್ನು ಕೂಡ ತೆಗೆದು ಬಿಟ್ಟಿದ್ದರು. ಮುಷ್ಕರಗಾರರು ಸ್ಟೇಶನ್‌ಮಾಸ್ತರನನ್ನು ಹೆದರಿಸಿ ಓಡಿಸಿದರು. ಒಬ್ಬ ರೈಲುವೇ ಪೋಲೀಸನು ಓಡಿಯೋಡಿ ಕೊನೆಗೆ ಒಬ್ಬ ಹೆಂಗಸಿನಿಂದ ಅಡಗಿಸಲ್ಪಟ್ಟು ಪ್ರಾಣ ಉಳಿಸಿಕೊಂಡನು. ಅಲ್ಲಿಂದ ಕೆಲಸದ ಕಾರಖಾನೆಗೆ ಹೋಗಿ ಕಾವಲಿದ್ದ ಪೋಲೀಸನನ್ನು ಕಲ್ಲುಹೊಡೆದು ಹಿಂಸಿಸಿದಾಗ, ಆತನು ಗುಂಡುಹೊಡೆದು ಒಬ್ಬನನ್ನು ಕೊಂದನು. ಅದಕ್ಕಾಗಿ ಜನರು ಒಳಗೆ ನುಗ್ಗಿ ಎಣ್ಣೆಗೆ ಬೆಂಕಿಕೊಟ್ಟು ಬಹಳ ತಂಟೆಯನ್ನುಂಟುಮಾಡಿದರು. ಹೇಗೂ ಪೋಲೀಸರು ಅವರನ್ನು ಓಡಿಸಬೇಕಾದರೆ ಪ್ರಾಣಕ್ಕೆ ಬಂದಿತು.

ರೈಲುಗಾಡಿಯ ಉರುಳುವಿಕೆ—ತಾ. ೨೧ನೇ ದಿನ ಸಾಯಂಕಾಲ ಮದರಾಸಿಗೆ ಬಂದು ತಲಪಬೇಕಾದ ಸಿಲೋನ್ ಬೋಟ್ ಮೈಲು ಕಟ್ಟುಪಾಕಮ್ ಎಂಬಲ್ಲಿ ಕಂಬಿಗಳಿಂದ ತಪ್ಪಿ ಹೋಗಿ ಕೆಳಕ್ಕುರುಳಿತು. ಹತ್ತು ಹದಿನೆರಡು ಪ್ರಯಾಣಿಕರಿಗೆ ಜಖಮಾಯಿತು. ಈ ಸ್ಥಳದಲ್ಲಿ ಕಂಬಿಗಳನ್ನು ಕಳಚಿದ್ದರಿಂದ ರೈಲು ಕಂಬಿಗಳಿಂದ ತಪ್ಪಿಹೋಗಿ, ೩ನೇ ಕ್ಲಾಸಿನ ಎರಡು ಬಂಡಿಗಳು ಉರುಳಿದವು. ಅದರ ಕುರಿತು ಈ ವರ್ತಮಾನವಿದೆ:—ಈ ರೈಲುಬಂಡಿಯು ಧನುಷ್ಕೋಟಿನಿಂದ ಹೊರಟಂದಿನಿಂದ ಹಲವು ಅವಘಡಗಳನ್ನು ತಪ್ಪಿಸಿ ಬಂದು ತಂಜಾವೂರನ್ನು ದಾಟಿತು. ವಿಲ್ಲುಪುರಕ್ಕೆ ತಲಪಿದೊಡನೆ ಅಲ್ಲಿ ಬಂಡಿಯ ಎದುರು ೫-೬ ಸಾವಿರ ಜನರು ನೆರೆದರು. ಇವರು ಏಳಲೊಲ್ಲದೆ ಕಲ್ಲುಗಳನ್ನು ಬಿಸಾಡತೊಡಗಿದರು. ಪೋಲೀಸರು ಗುಂಡುಗಳನ್ನು ಹಾರಿಸಿ ಬರ್ಚಿಗಳನ್ನುಪಯೋಗಿಸಿದರು. ಅಲ್ಲಿಗೆ ಬಂದಿದ್ದ ಕಲೆಕ್ಟರರಿಗೂ ಕೂಡ ಜಖಮಾಗಿದೆ. ಬೇರೊಂದು ಇಂಜಿನಿನ ಸಹಾಯದಿಂದ ರೈಲನ್ನು ನಡಿಸಿಕೊಂಡುಹೋದರು. ಒಂದೆರಡು ಸಣ್ಣ ಸ್ಟೇಶನುಗಳು ದಾಟಿದವು. ಕಟ್ಟುಪಾಕಮಿನ ಸಮೀಪ, ಬಂಡಿಗಳು ಹಾರತೊಡಗಿ ವಿಶೇಷ ಶಬ್ದವುಂಟಾಯಿತು. ಥಕ್ಕನೆ ರೈಲು ನಿಂತು ಪ್ರಯಾಣಿಕರು ದೂಡಲ್ಪಟ್ಟರು. ಜನರು ಇಳಿದುನೋಡಲು ಇಂಜಿನು ಕೆಳಕ್ಕೆ ಉರುಳಿ ಹೋಗಿದ್ದಿತು. ಹಿಂದಿನ ಎರಡು ಗಾಡಿಗಳೂ ಬಿದ್ದಿದ್ದವು. ಸುಮಾರು ಹತ್ತು ಹದಿನೆರಡು ಜನರಿಗೆ ಕಠಿಣ ತರದ ಜಖಮಾಯಿತು. ಸಮೀಪದ ಸ್ಟೇಶನಿನಿಂದ ಅಧಿಕಾರಿಗಳು ಮದ್ದನ್ನು ತಂದು ಜಖಮಾದವರ ಗಾಯಗಳನ್ನು ಕಟ್ಟಿ ಚಿಕಿತ್ಸೆ ಮಾಡತೊಡಗಿದರು. ಅವರಲ್ಲಿ ಒಬ್ಬನು ಮಾತ್ರ ಸತ್ತುಹೋದನು.

ರಾತ್ರೆ ನಡೆಯುವ ರೈಲುಗಳನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಹುಕುಂ ಆಗಿಯದೆ. ವಿಲ್ಲುಪುರದಲ್ಲಿ ಕೆಲಸವನ್ನು ಬಿಟ್ಟು ಕೆಲಸಗಾರರು ಸುಮ್ಮನೆ ಕುಳಿತುಬಿಟ್ಟರು. ದೊಂಬಿ ಮಾಡಲುದ್ಯೋಗಿಸಲಿಲ್ಲ.

ತಾರೀಕು ೨೩—೭—೨೮.

ಇನ್ನೊಂದು ಕಡೆಯಲ್ಲಿಯೂ ಕಂಬಿಗಳಿಂದ ಬಂಡಿಯು ತಪ್ಪಿತು, ಕೊಡೈಕನಲ್ ಎಂಬಲ್ಲಿ ಕಂಬಿಗಳನ್ನೂ ಸಂದುಗಳನ್ನೂ ಕಳಚಿದ ಕಾರಣದಿಂದ ಎರಡು ಇಂಜಿನುಗಳೂ ೩ ಬಂಡಿಗಳೂ ಕೆಳಕ್ಕುರುಳಿದವು. ಇದರಿಂದ ೨೬ ಜನರಿಗೆ ಜಖಮಾಯಿತು, ಒಂದು ಹೆಂಗಸು ಸತ್ತಳು.

ತಿರುಚಿನಾಪಳ್ಳಿಯಲ್ಲಿ ಬಹಿರಂಗವಾದ ಸಭೆ—ತಿರುಚಿನಾಪಳ್ಳಿಯಲ್ಲಿ ಒಬ್ಬ ಡ್ರೈವರನ ಅಧ್ಯಕ್ಷತೆಯಲ್ಲಿ ಕೆಲಸಗಾರರ ಒಂದು ಸಭೆಯು ನಡೆಯಿತು. ತಾವು ಸಂಬಳ ಸಾಕಾಗುವದಿಲ್ಲವೆಂದು ಹೇಳಿ ಮುಷ್ಕರಹಾಕಿರುವುದು, ಹಾಗಿರುವಾಗ ಕಠಿಣೋಪಾಯಗಳಿಂದ ಲೂಟಿಮಾಡುವುದು ಅನ್ಯಾಯವೆಂದೂ, ಸುಮ್ಮನೆ ಕೆಲಸಕ್ಕೆ ಬಾರದೆ ಕುಳಿತುಕೊಂಡರೆ ಮಾತ್ರ ತಮ್ಮ ಕಷ್ಟಗಳನ್ನು ನಿವಾರಿಸಲು, ಅಧಿಕಾರಿಗಳು ಪ್ರಾರಂಭಿಸುವರೆಂದೂ ಒಬ್ಬರು ಸೂಚಿಸಿದರು. ಇದೇ ಸೂಚನೆಯನ್ನು ನೆರೆದಿದ್ದವರಲ್ಲಿ ಹಲವರು ಸಮರ್ಥಿಸಿದರು.

ತಾರೀಕು ೨೪—೭—೨೮.

ಮೆಜಿಸ್ಟ್ರೇಟರ ಹುಕುಂ—ಮದರಾಸು ಪಟ್ಟಣದ ಜನರು ಮುಷ್ಕರ ಹಾಕಿದವರ ಮೇಲೆ ಸಹಾನುಭೂತಿಯನ್ನು ತೋರಿ ಅಲ್ಲಲ್ಲಿ ಸಭೆಕೂಡಿ ಅವರಿಗೆ ಸಹಾಯವನ್ನು ಮಾಡಬೇಕೆಂದು ಅವರನ್ನು ಪ್ರೋತ್ಸಾಹಿಸುವುದರಿಂದ ಅವರು ಅಸಹನೀಯವಾದ ಅನ್ಯಾಯಗಳಿಂದ ಪ್ರಯಾಣಿಕರಿಗೆ ಪ್ರಾಣಹಾನಿಯನ್ನುಂಟುಮಾಡುವ ಕಾರಣ ಅಂತಹ ಸಭೆಗಳನ್ನು ಜರಗಿಸಬಾರದೆಂದೂ ಸಭೆಗಳಿಗೆ ಹೋಗಲೂ ಬಾರದೆಂದೂ, ಭಾಷಣಗಳನ್ನು ಕೊಡಬಾರದೆಂದೂ, ೧೪೪ನೇ C. P. C. ಪ್ರಕರಣದ ಪ್ರಕಾರ ಮೆಜಿಸ್ಟ್ರೇಟರು ಹುಕುಂ ಪ್ರಕಟಿಸಿರುವರು.

ಈ ಮುಷ್ಕರದ ಕುರಿತಾಗಿ ಬಹಿರಂಗವಾದ ವಿಚಾರಣೆಯನ್ನು ನಡೆಸಬೇಕೆಂದು ಮುಷ್ಕರದ ಕಮಿಟಿಯ ಅಧ್ಯಕ್ಷರು ಸರಕಾರದವರಿಗೆ ಬರೆದಿರುವರು. ಜಿ. ಐ. ಪಿ. ರೈಲುವೇ ಕೆಲಸಗಾರರ ಸಂಘದವರು ಇವರಿಗೆ ಸಹಾನುಭೂತಿಯನ್ನು ಕಳುಹಿಸಿ, ಸರ್ವಸಹಾಯವನ್ನು ಮಾಡುವರೆಂದು ಆಶ್ವಾಸನವನ್ನು ಕಳುಹಿಸಿರುವರು.

ತಂಜಾವೂರು, ಕಲಿಕೋಟೆ ಮೊದಲಾದ ಸ್ಥಳಗಳಲ್ಲಿ ಸಭೆಗಳು ನಡೆದು ಮುಷ್ಕರವನ್ನು ಪ್ರಾರಂಭಿಸಿದುದು ಉತ್ತಮವೇ ಆಯಿತೆಂದೂ ಆದರೆ ಪ್ರಯಾಣಿಕರಿಗೆ ಹಾನಿಯನ್ನುಂಟುಮಾಡುವಂತಹ ಕೆಲಸವನ್ನು ಮಾಡಿದರೆ ತಮ್ಮ ಉದ್ದೇಶಕ್ಕೆ ಭಂಗಬರುವುದಲ್ಲದೆ ತಮಗೂ ನಷ್ಟವಿದೆಯೆಂದೂ ನಿರ್ಣಯಗಳಾದವು.

ಬಾರ್ಡೋಲಿ ಸತ್ಯಾಗ್ರಹಿಗಳಿಗೆ ಗವರ್ನರರ ಆಖೈರಿ ಮಾತು.

ಕೌನ್ಸಿಲು ಮೆಂಬರರಿಗೆ ೧೪ ದಿವಸದ ಪುರುಸೊತ್ತು.

ಬಾರ್ಡೋಲಿ ತಾಲೂಕಿನ ರಹಿತರ ಪ್ರತಿನಿಧಿಗಳನ್ನು ಕಂಡು ಅವರೊಡನೆ ತೆರಿಗೆಯ ಕುರಿತು ವಿಚಾರಣೆಯನ್ನು ತೊಡಗುವ ಮೊದಲು, ಅವರು ಪೂರಯಿಸಬೇಕಾದ ಕೆಲವು ಶರ್ತಗಳನ್ನು ತಿಳಿಸುವ ಸಲುವಾಗಿ ಗವರ್ನರರು ಸೂರತಿಗೆ ಹೋದುದೆಂದು ಒಂದು ವರ್ತಮಾನ. ಇವುಗಳಲ್ಲಿ ಹಲವು ಶರ್ತಗಳಿಗೆ ಒಪ್ಪಿಗೆಯು ದೊರೆಯಲಿಲ್ಲ. ಆದಕಾರಣ ಸದ್ಯಕ್ಕೆ ಯಾವ ಒಪ್ಪಂದವೂ ಆಗಲಿಲ್ಲ.

ರಾ। ವಲ್ಲಭಾ ಪಟೇಲರವರು ಮುಂಬಾಯಿ ಗವರ್ನರರ ಪ್ರೈವೇಟ್ ಸೆಕ್ರೆಟೇರಿಯವರಿಗೆ ಈ ರೀತಿ ಪತ್ರವನ್ನು ಕಳುಹಿಸಿರುವರು—"ಗವರ್ನರರು ಕೊಟ್ಟ ಸೂಚನೆಯನ್ನು ನನ್ನವರೊಂದಿಗೆ ಕೂಡಿ ವಿಚಾರಿಸಿದಾಗ ಸರಿಯಾದುದೆಂದು ನಮಗೆ ತೋರುವುದಿಲ್ಲ. ಮರ್ಯಾದೆಯ ಒಂದು ಕಮಿಟಿಯವರು ನಮ್ಮ ಜನರ ಸ್ಥಿತಿಯನ್ನು ಪರಿಶೀಲಿಸಿ, ಅವರು ನ್ಯಾಯವಾಗಿ ನಿರ್ಣಯಿಸಿದ ಶರ್ತಗಳಿಗೆ ಒಪ್ಪಿಗೆಯಿದೆ. ವಿಚಾರಣೆಯವರೆಗೆ ಏರಿಸಿದ ಕರವನ್ನು ಠೇವಣಾತಿಯಾಗಿಡಬೇಕೆನ್ನುವುದರಿಂದ ನಮ್ಮ ಮೇಲೆ ನಂಬಿಕೆಯಿಲ್ಲವೆಂದು ಪ್ರಕಟವಾಗುವುದು. ಸತ್ಯಾಗ್ರಹಿಗಳು ಯಾವ ವಿಧದಿಂದಲೂ ಅನ್ಯಾಯವನ್ನು ಆಚರಿಸಿದುದಿಲ್ಲ. ವಿಚಾರಣೆಯನ್ನು ಮಾಡುವುದಾದರೆ ಕಾರಾಗೃಹದಲ್ಲಿ ಬಂಧಿಸಿದ ಸತ್ಯಾಗ್ರಹಿಗಳನ್ನು ಬಿಡುಗಡೆಮಾಡಿ ಏಲಮು ಹಾಕಿದ ಅವರ ಆಸ್ತಿಗಳನ್ನು ಅವರಿಗೆ ಮರಳಿ ಕೊಡಬೇಕು. ಪಶುಗಳನ್ನು ಅರೆವಾಸಿ ಕ್ರಯಕ್ಕೆ ಮಾರಿರುವುದರಿಂದ ಅವುಗಳ ಪೂರ್ಣ ಕ್ರಯವನ್ನು ಅವುಗಳ ಮ್ಹಾಲಿಕರಿಗೆ ಕೊಡಬೇಕು. ನ್ಯಾಯಶೀಲರಾದ ಜನರಿಗೆ ಇದುವರೆಗೆ ಬಹಳ ಕಷ್ಟಗಳನ್ನು ಕೊಟ್ಟಿರುವರೆಂಬುದನ್ನು ಸರಕಾರದವರು ಈಗ ತಿಳಿದರೆ ಮಾತ್ರವೇ ಈ ಮೇಲಿನವುಗಳು ಸಾಧ್ಯವಿವೆ. ವಿಚಾರಣೆಗಾಗಿ ನಾನ್ ಆಫೀಸಿಯಲ್ ಕಮಿಟಿಯೇ ಆಗಬೇಕೆಂದು ನಾನು ಅನ್ನುವುದಿಲ್ಲ. ಸತ್ಯಾಗ್ರಹಿಗಳು ಒಪ್ಪಬಹುದಾದ ಆಫೀಸರರ ಕಮಿಟಿಯಾದರೂ ಆಗಬಹುದು. ಆದರೆ ವಿಚಾರಣೆಯು ಪಕ್ಷಪಾತರಹಿತವೂ ಬಹಿರಂಗವೂ ಆಗಿರಬೇಕು" ಎನ್ನುವರು.

ಮಹಾತ್ಮಾಜಿಯವರು ಕೂಡ ಇದೇ ಅಭಿಪ್ರಾಯವುಳ್ಳವರಾಗಿರುವರು. ಒಪ್ಪಂದದ ಸಂಧಿಯೇ ಆಗಾಗ ಮುರಿಯುವುದನ್ನು ನೋಡಿ ಮಾತ್ರ ಅವರು ವ್ಯಥೆಪಡುತ್ತಿರುವರು. ಬಾರ್ಡೋಲಿಯ ಜನರು ಎಷ್ಟು ಹೆಚ್ಚು ಸತ್ಯಾಗ್ರಹವನ್ನು ಆಚರಿಸುವರೊ ಅಷ್ಟು ಹೆಚ್ಚು ಲಾಭವೂ ಸಿಕ್ಕುದೆಯೆಂದು ಅವರನ್ನುವರು.

ತಾ. ೨೦ನೇ ದಿನ ಶ್ರೀಯುತ ಪಟೇಲರು ಸಬರಮತಿ ಆಶ್ರಮಕ್ಕೆ ಹೋಗಿ ಮಹಾತ್ಮಾಜಿಯವರೊಡನೆ ರಹಸ್ಯವಾಗಿ ಮಾತನಾಡಿದರು.

ಬಾರ್ಡೋಲಿಯಲ್ಲಿ ಗುತ್ತಿಗೆಗಳ ಏಲಮಿಗೆ ಯಾರೂ ಹೋಗದಂತೆ ಸತ್ಯಾಗ್ರಹಿಗಳು ಮಾಡುತ್ತಿರುವರು. ಮುಂಬಾಯಿಯ ಕೌನ್ಸಿಲಿನ ಮೆಂಬರರಾದ ರಾ। ಪ್ರಧಾನರ ಸೂಚನೆಯಂತೆ ವಿಚಾರಣಾ ಕಮಿಟಿಯನ್ನು ಏರ್ಪಡಿಸುವ ಕರಾವು ಮುಂಬಾಯಿ ಕೌನ್ಸಿಲಿನಲ್ಲಿ ಮುಂದಕ್ಕೆ ಬಂದು ಅದು ಮಂಜೂರಾಗುವುದೋ ಎಂಬ ಸಂದೇಹವಿದೆ. ಅವರು ಸೂಚಿಸಿದವರಲ್ಲಿ ವಿದ್ಯಾಮಂತ್ರಿಗಳಾದ ರಾ। ಹರಿಲಾಲ ದೇಸಾಯಿಯವರೇ ಕಮಿಟಿಯ ಚೆಯರ್‌ಮೇನರು. ಇನ್ನೂ ಮೆಂಬರರಾಗಲು ಹಲವರ ಹೆಸರುಗಳನ್ನು ಅವರು ಸೂಚಿಸುವರು.

ಬಾರ್ಡೋಲಿ ಸತ್ಯಾಗ್ರಹ ನಿಧಿಗಾಗಿ ಜೋಹಾನ್ಸ್‌ಬರ್ಗಿನ ಹಿಂದೂ ಮಂಡಳಿಯವರು ೧೦೪೪ ರೂಪಾಯಿಗಳನ್ನು ಕಳುಹಿಸಿರುವರು.

ತಾ. ೨೩ನೇ ದಿನ ಮುಂಬಾಯಿಯ ಗವರ್ನರರು ನ್ಯಾಯವಿಧಾಯಕ ಸಭೆಯಲ್ಲಿ ಒಂದು ಉದ್ದವಾದ ಭಾಷಣವನ್ನು ಮಾಡಿದರು, "ನಾನು ಸ್ವತಹ ಸೂರತಿಗೆ ಹೋಗಿ ಸರಕಾರದ ಶರ್ತಗಳನ್ನು ಬಾರ್ಡೋಲಿಯ ಪ್ರತಿನಿಧಿಗಳಿಗೆ ತಿಳಿಸಿದೆನಾದರೂ, ಹೆಚ್ಚಿಸಿದ ತೆರಿಗೆಯನ್ನು ಕೊಟ್ಟಲ್ಲದೆ ವಿಚಾರಣೆಯನ್ನು ಪ್ರಾರಂಭಿಸಲು ಸರ್ವಥಾ ಸಾಧ್ಯವಿಲ್ಲೆಂದು ಹೇಳಿದೆನಾದರೂ ಅವರು ಒಪ್ಪದೆ ಇದ್ದುದು ಆಶ್ಚರ್ಯಕರ, ಒಪ್ಪಂದದ ಸಲುವಾಗಿ ಮಾಡಿದ ನನ್ನ ಪ್ರಯತ್ನಗಳೆಲ್ಲವೂ ಮುರಿದುಹೋದುವು. ಈ ಸೂಚನೆಗಳು ಇಂಡಿಯಾ ಸರಕಾರದವುಗಳು. ಒಮ್ಮೆಗೆ ತೆರಿಗೆಯನ್ನು ಕೊಟ್ಟು ಪೂರ್ಣ ಸಮಾಧಾನವು ಬಾರ್ಡೋಲಿಯಲ್ಲಿ ಉಂಟಾದುದಾದರೆ ಬಹಿರಂಗವಾದ ವಿಚಾರಣೆಯನ್ನು ಸರಕಾರದವರು ಮಾಡಲು ಸಿದ್ಧರಿರುವರು. ಬಾರ್ಡೋಲಿ ರೈತರಿಗೆ ಸುಖವಾಗಬೇಕೆಂದು ಸರಕಾರದವರು ನೆನಸುವರು. ಇದೇ ಸರಕಾರದ ಕೊನೆಯ ಸೂಚನೆಯೆಂದು ಬಾರ್ಡೋಲಿಯ ಪ್ರತಿನಿಧಿಗಳು ಈಗ ಚೆನ್ನಾಗಿ ತಿಳಿದುಕೊಳ್ಳತಕ್ಕದ್ದು. ಇವುಗಳಲ್ಲಿ ಇನ್ನು ಸರಕಾರದವರು ಬದಲಾವಣೆಗಳನ್ನು ಮಾಡಲಾರರು. ಇದನ್ನು ಚೆನ್ನಾಗಿ ವಿಚಾರಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಲು ಹದಿನಾಲ್ಕು ದಿನಗಳ ಅವಧಿಯನ್ನು ಕೊಟ್ಟಿರುತ್ತದೆ. ಇದಕ್ಕೆ ಒಪ್ಪಿ ಬೇಗನೆ ಒಪ್ಪಂದವನ್ನು ಮಾಡದೆ ಇದ್ದರೆ ಸರಕಾರದವರು ತಮಗೆ ಯುಕ್ತಕಂಡ ರೀತಿಯಿಂದ ಸಮಾಧಾನವನ್ನು ಮಾಡಿಯೇ ಮಾಡಿಸುವರು. ಸರಕಾರದವರ ಕಾನೂನಿಗೆ ಮೀರಿ ವರ್ತಿಸಲು ಎಂದಿಗೂ ಅವರು ಬಿಡಲಾರರು. ಇದು ಹೆದರಿಸುವುದಲ್ಲ; ಚೆನ್ನಾಗಿ ವಿಚಾರಿಸಬೇಕಾಗಿರುವ ಸಂಗತಿ. ತಮ್ಮ ನ್ಯಾಯಪೂರ್ಣವಾದ ಸೂಚನೆಗಳಿಗೆ ಒಪ್ಪದಿದ್ದುದು ಸರಕಾರಕ್ಕೆ ಬಹಳ ವ್ಯಸನವನ್ನುಂಟುಮಾಡಿಯದೆ. ಇದುವರೆಗೆ ನೀವು ನನ್ನ ವಚನವನ್ನು ಪಾಲಿಸಿರುವಿರಿ, ಈಗಲೂ ನಾನು ಹೇಳಿದಂತೆ ಮಾಡಿರಿ."

ಮಂದಿರದ ಹೊರಗೆ ಸಾವಿರಾರು ವಿದ್ಯಾರ್ಥಿಗಳು ನೆರೆದಿದ್ದರು. ಗವರ್ನರರ ಈ ಭಾಷಣವನ್ನು ಕೇಳಿ ಅವರು 'ಶೇಮ್ ಶೇಮ್' ಎಂದು ಬೊಬ್ಬೆಹೊಡೆದರು.

ಈ ಕುರಿತು ಲಂಡನಿನ ಹೌಸ್ ಒಫ್ ಕೋಮನ್ಸಿನಲ್ಲಿ ಅರ್ಲ್ ವಿಂಟರ್‌ಟನರು ಹೇಳಿದುದೇನೆಂದರೆ—"ಮುಂಬಾಯಿ ಕೌನ್ಸಿಲಿನಲ್ಲಿ ಗವರ್ನರರು ಹೇಳಿದುದಕ್ಕೆ ಬಾರ್ಡೋಲಿಯ ಜನರು ಒಪ್ಪದೆ ಇದ್ದರೆ ಮುಂಬಾಯಿ ಸರಕಾರಕ್ಕೆ ಇಂಡಿಯಾ ಸರಕಾರದವರು ಸಹಾಯಮಾಡಿ ಬಲಾತ್ಕಾರದಿಂದಲಾದರೂ ಅಲ್ಲಿಯ ಸತ್ಯಾಗ್ರಹವನ್ನು ನಿಲ್ಲಿಸುವಂತೆ ಮಾಡಬೇಕು."

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಕಡೂರು (M. S. M Railway) [illegible] ಮಾರ್ಗವಾಗಿ [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, [illegible] ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ [illegible] ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ [illegible] ಪಾಣೆಮಂಗಳೂರು, ಬಂಟವಾಳ ಮಾರ್ಗವಾಗಿ [illegible] ಏರ್ಪಡಿಸಿರುತ್ತೆ.

[illegible]

(2) ಕಡೂರಿನಿಂದ [illegible] ವಿಶ್ರಾಂತಿಗೆ 1 ಗಂಟೆ [illegible] 9 ಗಂಟೆಗೆ. [illegible] 12-30ಕ್ಕೆ [illegible] 1-30ಕ್ಕೂ [illegible]

[illegible]

ಇನ್ನೂ ಹೆಚ್ಚಿನ ವಿವರಗಳನ್ನು [illegible] ತಿಳಿದುಕೊಳ್ಳಬಹುದು.

[illegible]

[illegible]

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರು ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಉತ್ತರ [illegible]

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ [illegible]

[illegible]

ಶ್ರೀ ಕಾರ್ಕಳ ಗೋಮಟೇಶ್ವರನ [illegible]

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible]

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ [illegible]

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು [illegible] ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ [illegible] ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ [illegible] ಹತ್ತಲು ಸುಲಭವಾಗಿದೆ.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ತಂಕರಿ ಮಾರ್ಗವಾಗಿ ಶಿರಸ್ಸಿಗೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangulore. S. K.

ದಾಂಪತ್ಯದ ಗುಟ್ಟು ಎಂಬ ಸಚಿತ್ರಕಾಮಶಾಸ್ತ್ರೀಯ ವಿವರಣ

ಕಾಮಶಾಸ್ತ್ರವು.

[Kannada text of this column not transcribed]

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

ಖಾಸಗಿ

ಅತೀ ಮಹತ್ವದ ಸೋಡ್ತಿ.

ಕೆನರಾ ಹ್ಯಾಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್

ಇವುಗಳ ಸಹಾಯಾರ್ಥವಾಗಿ

ಕೆನರಾ ಹ್ಯಾಸ್ಕೂಲಿಗೆ ಧನಸಹಾಯವನ್ನು ಒದಗಿಸುವ ಬಗ್ಗೆ 1923ನೇ ಇಸವಿಯಲ್ಲಿ ತೆಗೆದ ಸೋಡ್ತಿಯಿಂದ [illegible] ಅಭಿವೃದ್ಧಿಯಾಗಿ ಬರುತ್ತಿರುವ ಈ ಸಂಸ್ಥೆಯ ಹೆಚ್ಚುತ್ತಾ ಬರುವ ಖರ್ಚಿಗೆ ಸಾಲದೆ ಹೋದ್ದರಿಂದ ಈ ಸಂಸ್ಥೆಯ ಬಗ್ಗೆ ಕೆನರಾ ಗರ್ಲ್ಸ್ ಸ್ಕೂಲಿನ ಬಗ್ಗೆ ಹೆಚ್ಚಿನ ಹಣವನ್ನು ಕೂಡಿಸಲಿಕ್ಕೆ ಶಾಲಾ ಕೌನ್ಸಿಲ್ ಮೆಂಬರರು ದಕ್ಷಿಣ ಕನ್ನಡಾ ಜಿಲ್ಲಾ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಪುನಃ ಈ ವರ್ಷವೂ ಇನ್ನೊಂದು ಸೋಡ್ತಿಯನ್ನು ತೆಗೆಯುವರೇ ನಿಶ್ಚಯಿಸಿರುತ್ತಾರೆ. ಈ ಸೋಡ್ತಿಯ ಆಡಳಿತೆ ಶಾಲಾ ಕೌನ್ಸಿಲ್ ಮೆಂಬರರಷ್ಟೆ ಧೋರಣೆಯುಳ್ಳ ಸದ್ಗೃಹಸ್ಥರಿಂದ ನಡಿಸಲ್ಪಡುವುದು.

ಉದ್ದೇಶ.

1. ಶಾಲೆಗಳ ಮೂಲ ಧನವನ್ನು ವೃದ್ಧಿಪಡಿಸಲಿಕ್ಕೆ.
2. ಟೀಚರ್ಸ್ಗಳ ಶಿಕ್ಷಣದ ಬಗ್ಗೆ ಈಗ ಶಾಲೆಯ ಸ್ವಾಧೀನ ಇರುವ 5000 ರೂಪಾಯಿಯ ಮೂಲ ಧನವನ್ನು ಹೆಚ್ಚಿಸಲಿಕ್ಕೆ.
3. ಎರಡು ಶಾಲೆಗಳ ಬಗ್ಗೆ ಮತ್ತು ಮುಖ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿ ಸ್ಥಳ ಇಕ್ಕಟ್ಟಾಗಿರುವ ಬಾಲಿಕಾ ಶಾಲೆಯ ಬಗ್ಗೆ ಹೆಚ್ಚಿಗೆ ಕಟ್ಟೋಣಗಳನ್ನು ಒದಗಿಸಿಕೊಡುವ ಬಗ್ಗೆ.

ಒಟ್ಟಾಗುವ ಒಂದು ಲಕ್ಷ ರೂಪಾಯಿಗಳಲ್ಲಿ ರೂಪಾಯಿ 15000ವನ್ನು ಸೋಡ್ತಿಯ ಖರ್ಚಿಗಾಗಿ ತೆಗೆದಿಟ್ಟು ಉಳಿದ ಹಣದಲ್ಲಿ ರೂಪಾಯಿ 40000ವನ್ನು ಶಾಲೆಗಳ ಉಪಯೋಗಕ್ಕಾಗಿ ಇಟ್ಟು ಉಳಿದ 45000ವನ್ನು ಈ ಕೆಳಗಿನ ಬಹುಮಾನಗಳಾಗಿ ಹಂಚಲಾಗುವದು.

1ನೇ ರೂಪಾಯಿ **12,500;** 2ನೇ ರೂಪಾಯಿ **5,000;**

ರೂಪಾಯಿ 1,000 ದರದ 2; ರೂಪಾಯಿ 500 ದರದ 8; ರೂಪಾಯಿ 250 ದರದ 6;
ರೂಪಾಯಿ 100 ದರದ 10; ರೂಪಾಯಿ 50 ದರದ 20; ರೂಪಾಯಿ 20 ದರದ 100;
ರೂಪಾಯಿ 10 ದರದ 800; ರೂಪಾಯಿ 5 ದರದ 2,100.

ಟಿಕೇಟುಗಳು 25ರ ಪುಸ್ತಕಗಳಾಗಿ ದೊರೆಯುವುವು. ಒಂದು ಇಡೀ ಪುಸ್ತಕದಲ್ಲಿ ಟಿಕೇಟುಗಳನ್ನು ಮಾರಿದವರು, ರೂ. 25ರ ಬದಲಾಗಿ 24 ರೂಪಾಯಿಗಳನ್ನು ಮಾತ್ರವೇ ಪಾವತಿ ಮಾಡಿದರೆ ಸರಿಯಾಗುವುದು; ಉಳಿದೊಂದು ರೂಪಾಯಿಯನ್ನು ಅವರ ಮೆಹನತ್ತಿನ ಬಗ್ಗೆ ಅವರು ಇಟ್ಟುಕೊಳ್ಳಬಹುದು. ಇದರಿಂದ ಟಿಕೇಟು ಮಾರುವವರು ಶಾಲೆಗಳಿಗೆ ಸಹಾಯ ಮಾಡುವುದರೊಂದಿಗೆ ಅವರು ಕೂಡಿಸಿದ ಹಣದಲ್ಲಿ ನೇಕಡಾ 4ರ ಪ್ರತಿಫಲವನ್ನು ದೊರಕಿಸಿಕೊಂಡಂತಾಗುವುದು. ಇದಲ್ಲದೆ ಅತಿ ಹೆಚ್ಚು ಸಂಖ್ಯೆಯ ಟಿಕೇಟು ಪುಸ್ತಕಗಳನ್ನು ಮಾರುವವರಿಗೆ, ಮಾರಾಟದಲ್ಲಿ ಸ್ಪರ್ಧೆಯುಂಟಾಗುವ ಹಾಗೆ, ಬೇರೆ ಬಹುಮಾನಗಳು ಪ್ರತ್ಯೇಕವಿದೆ.

ಟಿಕೇಟು ಮಾರಾಟವು 1929ನೇ ಇಸವಿ ಜನವರಿ ತಾ. 4ಕ್ಕೆ ಮುಗಿಯುವುದು. ಸೋಡ್ತಿಯನ್ನು 1929ನೆ ಇಸವಿ ಜನವರಿ ತಾ. 26 ಮತ್ತು ಅದೇ ದಿನ ಮುಗಿಯದಿದ್ದಲ್ಲಿ ಅದರ ನಂತರದ ದಿನಗಳಲ್ಲಿ ತೆಗೆಯಲಾಗುವುದು.

ಹಣವನ್ನು ಪಾವತಿಮಾಡುವುದಕ್ಕೂ, ಇತರ ಪತ್ರವ್ಯವಹಾರಕ್ಕೂ ವಿಳಾಸ:—

ಬಿ. ಮಂಜುನಾಥ ಬಾಳಿಗಾ,
ಓನರರಿ ಸೆಕ್ರಿಟರಿ, ಕ್ಲಿನಿಕ್ ಆಫೀಸು, ಪ್ರಿಂಟೋಲಿನ, ಪಲನೀರ್,
ಮಂಗಳೂರು, ದ. ಕ.

ರೂಪಾಯಿ 35 ಮತ್ತು ಅದಕ್ಕೆ ಮೀರಿದ ಎಸ್. ಬಿ. ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 33 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವಾಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನುಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು.

ಕ್ಯಾಟಲಾಗಿನ ಬಗ್ಗೆ ಬರೆಯಿರಿ.

ದಿ ಬೊಂಬೆ ಆರ್ಮರಿ,
331 ಅಬ್ದುಲ್ ರಹಿಮಾನ್ ರಸ್ತೆ,
ಮುಂಬಾಯಿ 3.

ನೋಟೀಸು.

ದಕ್ಷಿಣ ಕನ್ನಡಾ ಸಬ್ ಕೋರ್ಟಿನಲ್ಲಿ.

O. S. No. 110/1928.

ಸೇಟ್ ಫಿರ್‌ಚಂದ್ ಬೂದ್‌ಚಂದ್ ಬೇಂಕರ್ಸ್—ವಾದಿರು.

ಕಡ್ಬಿನ ಹಿತ್ಲು ಶಂಕರಭಟ್ಟ—ಈಶ್ವರ ಭಟ್ಟ ಮಗ— ವಿಟ್ಲ ಮಾಗಣೆ ಕೋಳ ಗ್ರಾಮಸ್ಥ. } 4ನೇ ಪ್ರತಿವಾದಿ.

ಸದರಿ 4ನೆ ಪ್ರತಿವಾದಿ ಕೂಡಾ 5 ಜನರ ಮೇಲೆ ವಾದಿರು ರೂಪಾಯಿ 1000ಕ್ಕೆ ಮಾಡಿದ ಸದರಿ ದಾವೆಯು ತಾರೀಕು 6—8—'28ಕ್ಕೆ ತನ್ಖಿಗೆ ಇಟ್ಟಿದೆ. ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದರಿ 4ನೆ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ತನ್ನ ಉದಾಹರಣೆಯನ್ನು ಸದರಿ ಕೋರ್ಟ ಮುಂದೆ ಕೊಡತಕ್ಕದ್ದು ತಪ್ಪಿದರೆ ಆತನ ಗೈರ ಹಾಜರಿಯಲ್ಲಿ ಸದರಿ ನಂಬ್ರವು ತೀರ್ಮಾನಮಾಡಲಾದೀತು.

ಮಂಗಳೂರು,
ತಾ. 4ನೇ ಜುಲೈ '28.

B. Venkatraya Baliga,
Vakil for Plaintiff.

WANTED.

"CANARA BANK SHARES"

Intending sellers please communicate stating their lowest quotations to—

D. R. Rau,
Civil Surgeon, TRICHUR.

Morris Cowly four seater in good order for sale, owner purchasing bigger car. Any reasonable offer accepted.

D. R. RAU,
Civil Surgeon, TRICHUR.

ಕಾರ್ಕಳ ಗೋಮಟೇಶ್ವರ ಸ್ವಾಮಿಯವರ ಚರಿತೆಯನ್ನು ಬರೆದ ಚಂದ್ರಮನೆಂಬ ಜೈನಕವಿ.

[Kannada text of this column not transcribed]

ನಿಮ್ಮ ಪ್ರತಿದಿನದ ಆರೋಗ್ಯ.

ನೀವು ಆರೋಗ್ಯವಂತರಾಗಿದ್ದರೆ ಪ್ರತಿದಿನ ಬೆಳಿಗ್ಗೆ ಏಳುವಾಗ ನಿಮಗೆ ಎಷ್ಟು ಜೀವನೋತ್ಸಾಹವು ತೋರುವುದು! ನಿಮ್ಮ ಮಲಗುವ ಮನೆಯ ಕಿಟಿಕಿಗಳಿಂದ ಸೂರ್ಯರಶ್ಮಿಯು ಪ್ರಕಾಶವು ನಿಮ್ಮ ಕಣ್ಣಿಗೆ ಬಿದ್ದೊಡನೆ ನಿಮ್ಮ ದಿನಚರ್ಯೆಯ ಕಾರ್ಯಗಳೆಲ್ಲಾ ನಿಮಗೊಂದು ಹೊಸ ಆನಂದವನ್ನು ಕೊಡುವುವು. ನಿಮಗೆ ಯಾವ ಕೆಲಸವೂ ದೊಡ್ಡದಾಗಿ ತೋರದು! ಯಾವುದರಲ್ಲಿಯೂ ಬೇಸರವಿಲ್ಲ. ನಿಮ್ಮ ಜೀವನವು ನಿಮಗೆ ಎಷ್ಟೋ ಆನಂದಕರವಾಗಿ ... ಇರುವುದು. ಇದು ಎಲ್ಲರ ಅನುಭವವು. ಲೋಕಕ್ಕೆ ಇಂತಹ ಆರೋಗ್ಯವೇ ದೊಡ್ಡ ಭಾಗ್ಯವು. ಹಾಗಿದ್ದರೂ ಸಾವಿರಾರು ಮಂದಿ ಹೆಂಗಸರೂ, ಹುಡುಗಿಯರೂ, ತಮ್ಮ ಅಲ್ಪ ಸ್ವಲ್ಪ ಅಸ್ವಸ್ಥತೆಯಲ್ಲಿ ಚಿಕಿತ್ಸೆ ಮಾಡದೆ ... ಎಡೆಬಿಡದೆ ರೋಗದಿಂದ ನರಳುತ್ತಿರುವರು.

ಸ್ತ್ರೀಯರಲ್ಲಿ ಅಂತಹ ಕೆಟ್ಟ ವ್ಯಾಧಿಚಿಹ್ನೆಗಳೇನಾದರೂ ನಿಮಗೆ ತೋರಿದಲ್ಲಿ, ಸ್ತ್ರೀಯರಿಗಾಗಿಯೇ ತಯಾರಿಸಿರುವ "ಫೆಲೂನಾ" ಮಾತ್ರೆಗಳನ್ನುಪಯೋಗಿಸಿ ...

[illegible]

ದಕ್ಷಿಣ ಆಫ್ರಿಕದ ಕೇಪ್‌ಟೌನಿನಲ್ಲಿ "ಗ್ರಹಾಮ್ ರೆಮಿಡೀಸ್ ಲಿಮಿಟೆಡ್" ಇವರಿಂದ ತಯಾರಿಸಲ್ಪಟ್ಟವು.

ಬೆಲೆ ರೂ. 2/4.

ಬೊಂ 838.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ... ಸಿಕ್ಕುವವು.

Product of Graham Remedies Ltd., Cape Town, S. Africa.

ಕೃಷಕರಿಗೊಂದು ಸಹಾಯಕ ವೃತ್ತಿ

ಮಧ್ಯಪ್ರಾಂತದ ಕೃಷಿ ಇಲಾಖೆಯ ಮಂತ್ರಿಗಳು ತಮ್ಮ ಊರಿನ ಕೃಷಕರಿಗೆ ಒಂದು ಸಹಾಯಕ ವೃತ್ತಿಯು ಅಗತ್ಯವೆಂದು ಯೋಚಿಸಿ ನೂಲುವುದೇ ಉತ್ತಮ ಸಹಾಯಕ ವೃತ್ತಿಯೆಂದು ತಾನು ನಿರ್ಧರಿಸಿಕೊಂಡುದಲ್ಲದೆ, ಹಲವರು ಅವರ ಆ ನಿರ್ಧಾರವನ್ನು ಸಮರ್ಥಿಸಿರುವರು. ಅವರು ಸೂಚಿಸುವುದೇನೆಂದರೆ:-- ನೂಲುವುದು ಬರೇ ರಾಷ್ಟ್ರೀಯ ಕೆಲಸವೆಂದು ನಾನು ಅಭಿಪ್ರಾಯ ಪಡುವುದಿಲ್ಲ. ಆರ್ಥಿಕ ದೃಷ್ಟಿಯಿಂದ ಆಲೋಚಿಸುವಾಗಲೂ ನೂಲುವುದು ಲಾಭಕರವಾದ ವೃತ್ತಿಯೆಂದು ನಾನು ಕಂಡುಕೊಂಡಿರುವೆನು. ಕೃಷಕರಿಗೆ ಕೃಷಿಕೆಲಸವಿಲ್ಲದ ಸಮಯದಲ್ಲಿ ಅವರು ನಿರರ್ಥಕವಾಗಿ ಕಳೆಯುವ ಸಮಯವು ನೂಲುವುದಕ್ಕೆ ಅನುಕೂಲವಾಗಿದೆ. ಈ ವೃತ್ತಿಯನ್ನು ಪ್ರಾರಂಭಿಸಲು ಬಹಳ ಮೂಲಧನವು ಬೇಕಾಗಿಲ್ಲ. ಇದಕ್ಕೆ ಜಾತಿವಿರೋಧವಿಲ್ಲದೆ ಯಾವ ಜಾತಿಯವರೂ ಈ ವೃತ್ತಿಯನ್ನು ಕೈಕೊಳ್ಳಬಹುದು. ಇದಕ್ಕೆ ಬೇಕಾಗುವ ಹತ್ತಿಯನ್ನು ಹಲವು ಜಿಲ್ಲೆಗಳಲ್ಲಿ ಕೃಷಕರು ಬೆಳೆಸುವದರಿಂದ ಸುಲಭವಾಗಿ ಪಡೆಯಲು ಸಾಧ್ಯವಿದೆ. ಈ ವೃತ್ತಿಯನ್ನು ಬೇಕಾದಾಗ ಮಾಡಬಹುದು ಬೇಡವಾದಾಗ ಬಿಡಲೂ ಬಹುದು. ಪ್ರಾರಂಭಿಸಿದ ಮೇಲೆ ಅನುಕೂಲವಾಗದೆ ಹೋದಾಗ ಬಿಟ್ಟರೆ ಇತರ ವೃತ್ತಿಗಳಂತೆ ನಷ್ಟವಾಗುವುದಿಲ್ಲ. ಹಳ್ಳಿಗಳ ಅಭಿವೃದ್ಧಿಯಾಗಲು ಇದೊಂದು ಸಾಧನವಾಗಿದೆಯೆಂದು ಖಂಡಿತವಾಗಿಯೂ ಹೇಳಬಹುದು. ಮನೆಯಲ್ಲಿ ಇದನ್ನು ಮಕ್ಕಳೂ ಮಾಡಬಹುದು. ಮುದುಕರೂ ಮಾಡಬಹುದು. ಉಡಿಗೆಯು ಮನುಷ್ಯನಿಗೆ ಅತ್ಯಗತ್ಯವಾದ ವಸ್ತುಗಳಲ್ಲಿ ಎರಡನೆಯದು. (ಮೊದಲನೆಯದು ಆಹಾರ) ಆದಕಾರಣ ಈ ವೃತ್ತಿಯನ್ನು ಕೈಕೊಳ್ಳುವುದು ನಮ್ಮ ಆದ್ಯಕರ್ತವ್ಯವಾಗಿದೆ. ನಮ್ಮ ಪೂರ್ವಜರು ಈ ವೃತ್ತಿಯನ್ನು ಮಾಡುತ್ತಿದ್ದರು. ಅವರ ತರುವಾಯ ಇದು ಮಾತ್ರ ಮಾಯವಾಯಿತು. ನೂಲುವುದು ಈ ಕೆಳಗಿನ ಕೆಲವು ಕಾರಣಗಳಿಂದ ಸ್ವಲ್ಪ ಕಷ್ಟಕರವಾಗಬಹುದು. 'ಕೈಯಿಂದ ಮಾಡಿದ ನೂಲು ದೊರಗು, ಗಿರಣಿಗಳಲ್ಲಿ ತಯಾರಾಗುವ ನೂಲಿನಂತೆ ನಯವಾಗಿಲ್ಲ, ಹೊಳೆಯುವುದಿಲ್ಲ. ಅದಲ್ಲದೆ ಗಿರಣಿಗಳಲ್ಲಿ ತಯಾರಾಗುವ ನೂಲಿಗಿಂತ ಕೈನೂಲಿಗೆ ಬೆಲೆ ಬಹಳ. ಗಿರಣಿ ನೂಲಿನಿಂದ ತಯಾರಾದ ಬಟ್ಟೆಯು ಕೈನೂಲಿನ ... ಹೆಚ್ಚು ಕಾಲ ಬಾಳುವುದು. ಉಡಲಿಕ್ಕೆ ಭಾರವಾಗಿ ಕೈನೂಲಿನ ಬಟ್ಟೆಯು ಸ್ವಲ್ಪ ತೊಂದರೆಯನ್ನುಂಟು ಮಾಡುವುದು' ಎಂಬೀ ಆಲೋಚನೆಗಳಿಂದ ಹಲವರು ಈ ವೃತ್ತಿಯನ್ನು ಪ್ರೋತ್ಸಾಹಿಸುವುದಿಲ್ಲ. ಆದಕಾರಣ ಇದು ಮಾತ್ರ ಈ ವೃತ್ತಿಗೆ ಒಂದು ತೊಡಕಾಗಿದೆ ಎನ್ನಬಹುದು. ದೇಶಭಕ್ತರು ಈ ಯೋಚನೆಯನ್ನು ಬಿಟ್ಟು ನಮ್ಮೂರಿನಲ್ಲೇ ತಯಾರಾಗುವ ನೂಲಿನ ಬಟ್ಟೆಯನ್ನು ಅಭಿಮಾನದಿಂದ ತೊಟ್ಟುಕೊಂಡರೆ, ಈ ವೃತ್ತಿಯನ್ನು ಕೈಕೊಳ್ಳುವವರಿಗೆ ಪ್ರೋತ್ಸಾಹವನ್ನಿತ್ತಂತಾಗುವುದು. ಈ ವೃತ್ತಿಗೆ ಪ್ರೋತ್ಸಾಹವನ್ನು ಕೊಡುವುದರಿಂದ, ಬಡವರಿಗೆ ವೇಳೆಗೆ ಸರಿಯಾಗಿ ಊಟ ಮಾಡಲು ಅನುಕೂಲವನ್ನೊದಗಿಸಿ ಕೊಟ್ಟಂತಾಗುವದು. ಹೆಚ್ಚು ಜನರು ಊಟಮಾಡ ಸುಖಪಡುವ ಸಲುವಾಗಿ, ದಪ್ಪವಾದ ಮತ್ತು ದೊರಗಾದ ವಸ್ತ್ರವನ್ನು ತೊಟ್ಟುಕೊಳ್ಳುವದು ತೊಂದರೆಯೆಂದು ಯಾರು ಭಾವಿಸಲಾರರು. ಭಾವಿಸುವವರಾದರೋ ನಿಜವಾದ ದೇಶಭಕ್ತರಲ್ಲವೆಂದು ಖಂಡಿತವಾಗಿಯೂ ಹೇಳಬಹುದು. ಬಡವರಿಗೆ ಅನ್ನವೊದಗಿಸಿದೆನೆಂಬ ಅಭಿಮಾನವುಂಟಾದುದಾದರೆ, ಉಟ್ಟ ಬಟ್ಟೆಯು ಎಷ್ಟೇ ದಪ್ಪವಾದರೂ ಅದು ನಯವಾಗಿ ಕಾಣುವದು. ಅದನ್ನುಡುವುದರಿಂದ ಸುಖವಾಗುವದಲ್ಲದೆ ಕಷ್ಟವೆಂದು ತೋರಲಾರದು.

ಕೈ ನೂಲಿನಿಂದ ತಯಾರಿಸಿದ ಬಟ್ಟೆಗೆ ಗಿರಣಿಗಳಲ್ಲಿ ತಯಾರಿಸಿದ ಬಟ್ಟೆಗಿಂತ ಹೆಚ್ಚಿಗೆ ಕ್ರಯವೆಂಬುದೇನೋ ಒಪ್ಪತಕ್ಕ ವಿಷಯವಾಗಿದೆ. ಆದರೆ ದೇಶದ ಅಭಿವೃದ್ಧಿಯ ಸಲುವಾಗಿ ಕೊಂಚ ಹೆಚ್ಚು ಕ್ರಯವನ್ನು ಕೊಡುವದು ಅಷ್ಟೊಂದು ಭಾರವಾಗಲಾರದು. ಖಾದಿಯನ್ನು ಕೊಳ್ಳುವುದರಿಂದ ದೇಶಮಾತೆಯ ಸೇವೆಯನ್ನು ಮಾಡಿದಂತಾಗುವದು. ಕೆಲಸವಿಲ್ಲದವರಿಗೆ ಕೆಲಸವನ್ನು ಒದಗಿಸಿದಂತಾಗುವುದು. ಅಂತಹ ಕಾರ್ಯದಲ್ಲಿ ಸ್ವಲ್ಪ ಕಷ್ಟವಿದ್ದೇ ಇರುವುದು. ಕಷ್ಟಗಳನ್ನು ಅನುಭವಿಸದೆ ಒಬ್ಬನು ಉಚ್ಛಸ್ಥಿತಿಗೆ ಬರುವುದಿಲ್ಲ. ಅಂತೆಯೇ ಹಲವರು ಕಷ್ಟವನ್ನನುಭವಿಸಿ, ಅವುಗಳನ್ನು ಲಕ್ಷಿಸದೆ ಧೈರ್ಯದಿಂದ ವರ್ತಿಸಿದರೆ ಮಾತ್ರವೇ ದೇಶವು ಉನ್ನತಿಯನ್ನು ಹೊಂದುವುದು. ಕಷ್ಟಪಟ್ಟರೂ ಕೂಡ ದೇಶವನ್ನು ಅಭಿವೃದ್ಧಿಗೊಳಿಸಿದ ಕೀರ್ತಿಯನ್ನು ಸಂಪಾದಿಸಬಹುದು. ಹೀಗೆ ಮಾಡಲು ಮಹತ್ವಾಕಾಂಕ್ಷೆಯು ಎಲ್ಲರಲ್ಲಿಯೂ ಇರಲೇಬೇಕು.

ಬಂಧುಗಳು ಬಳಲಿದರೂ ಚಿಂತಿಲ್ಲ. ತಾನು ಸುಖಪಡಬೇಕು. ಅಂದವಾದ ಮತ್ತು ನಯವಾದ ಬಟ್ಟೆಗಳನ್ನುಟ್ಟು ಮೆರೆಯಬೇಕೆಂದು ಭಾವನೆಯು ಇದ್ದರೆ, ಅದು ದಾಸ್ಯ ವೃತ್ತಿಯಲ್ಲಿಯೇ ನಮ್ಮನ್ನು ಇರಗೊಡಿಸುವುದಲ್ಲದೆ, ಸ್ವತಂತ್ರ ಜೀವನವನ್ನು ಮಾಡಬೇಕೆಂಬ ಆಸೆಯು ಕೂಡ ಬರುವುದಿಲ್ಲ. ದೇಶಕ್ಕೆ ಹಾನಿಯನ್ನುಂಟುಮಾಡುವಂತಹ ನಾಗರಿಕತೆಯನ್ನು ಬಯಸಬಾರದು. ಗಿರಣಿಗಳಲ್ಲಿ ತಯಾರಾಗುವ ವಸ್ತ್ರಗಳನ್ನುಡುವುದರಿಂದಲೂ, ಸಿಲ್ಕಿನ ಅಂಗಿಗಳನ್ನು ತೊಡುವುದರಿಂದಲೂ ನಾಗರಿಕತೆಯನ್ನು ಹೊಂದುವೆವೆಂಬ ಭಾವನೆಯು ಹಲವರಲ್ಲಿ ಇರಬಹುದು. ಖಾದಿ ವಸ್ತ್ರವನ್ನುಟ್ಟ ಮಾತ್ರದಿಂದ ಅದು ತಮ್ಮ ಹೆಡ್ಡತನವನ್ನು ಪ್ರಕಟಿಸುವದೆಂದು ಭಾವಿಸುವುದು ತಪ್ಪು. ಅಂತಹವರು ದೇಶಕ್ಕೂ ಸಮಾಜಕ್ಕೂ ಹಾನಿಯನ್ನುಂಟು ಮಾಡುವರು. ವಿದೇಶಿ ವಸ್ತ್ರಗಳ ಬಯಕೆಯಿಂದ ವಿಲಿಯಗಟ್ಟಿ ನಮ್ಮವರನ್ನೆ ನಿರುದ್ಯೋಗಿಗಳನ್ನಾಗಿ ಮಾಡುವಂತಾಗುವದು. ಇದರಿಂದ ದೇಶವೇ ಬಡತನಕ್ಕೆ ಇಳಿದಂತಾಗುವದು. ಅದುಕಾರಣ ದೇಶಪ್ರೇಮವುಳ್ಳವರು ಖಾದಿಯನ್ನುಡತೊಡಗಿ ನೂಲುವ ವೃತ್ತಿಗೆ ಪ್ರೋತ್ಸಾಹವನ್ನೀಯಬೇಕು.

ಬಾಳಿಕೆಯಲ್ಲಿ ಸ್ವದೇಶಿ ವಸ್ತ್ರವು ಉತ್ತಮವಲ್ಲವೆನ್ನುವದೂ ಸರಿಯಲ್ಲ. ೧೮೭೦ನೇ ಇಸವಿಯಲ್ಲಿ ವಿ. ರಿವೆಟ್ ಕರ್ನಕ್‌ರೆಂಬವರು ಹೀಗೆ ಬರೆದಿದ್ದರು:—"ಒಗೆಯುವಾಗ ಹರಿದು ಹೋಗದಿರುವ, ಬಿಸಿಲು ತಟ್ಟದಂತೆ ಛಳಿ ಹಿಡಿಯದಂತೆ ಮಾಡುವ ದಪ್ಪವಾದ ದೇಶೀಯ ಬಟ್ಟೆಗಳನ್ನುಪಯೋಗಿಸದಂತೆ ಮಾಡಲು ಗಿರಣಿ ಬಟ್ಟೆಗಳಿಗೆ ಇನ್ನೂ ಆಗಿಲ್ಲ"ವೆಂದು. ಇದರಿಂದ ದೇಶೀಯ ಬಟ್ಟೆಯು ಉಪಯೋಗಕರವಾದುದೆಂದು ಆ ವಿದೇಶಿಯರು ಕೂಡ ಒಪ್ಪಿದ್ದರೆಂದು ಖಚಿತವಾಗುವುದು.

ಸಹಾಯಕ ವೃತ್ತಿಯೊಂದನ್ನು ವಿರಾಮಕಾಲದಲ್ಲಿ ಅವಲಂಬಿಸದೆ ಇದ್ದರೆ ನಮ್ಮ ಕೃಷಕರು ಸರಿಯಾಗಿ ಜೀವನವನ್ನು ನಡೆಸಲಾರರೆಂಬುದೇನೊ ನಿಜ. ಅಂತಹ ಉತ್ತಮ ಸಹಾಯಕ ವೃತ್ತಿಯು ಈಗಿನ ಮಟ್ಟಿಗೆ ನೂಲುವ ವೃತ್ತಿಯೆಂದೇ ನಿರ್ಣಯಿಸದೆ ಇದ್ದರೆ, ನಮ್ಮ ದೇಶದ ಜನರನ್ನು ಮೊದಲನೆಯದಾಗಿ ನಿರುದ್ಯೋಗಿಗಳನ್ನಾಗಿ ಮಾಡಿದ ಹಾಗಾಗುವುದಲ್ಲದೆ, ಎರಡನೆಯದಾಗಿ, ನಮ್ಮ ದೇಶದ ಹೇರಳ ದ್ರವ್ಯವನ್ನು ಬಟ್ಟೆಗಳಿಗಾಗಿ ಪರದೇಶಕ್ಕೆ ಕಳುಹಿಸಬೇಕಾಗುವದು. ಆದಕಾರಣ ಕೃಷಕರು ಮಾತ್ರವಲ್ಲದೆ ನಿರುದ್ಯೋಗಿಗಳಾದವರೆಲ್ಲರೂ ನೂಲುವ ಕೆಲಸವನ್ನು ಅವಲಂಬಿಸಬೇಕು. ಅಂತೆಯೇ ನೇಯಿಗೆಯನ್ನೂ ಅವಲಂಬಿಸಿ, ಉಡಿಗೆಗಾಗಿ ಧನವನ್ನು ವಿದೇಶಕ್ಕೆ ಕಳುಹಿಸದೆ, ನಮ್ಮ ದೇಶದಲ್ಲಿಯೇ ಉಳಿಯುವಂತೆ ಮಾಡಬೇಕು.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ರೋ ಮಿಕ್ಶ್ಚರ್, ಮುಲಾಮು, ಸರಬತ್ತು, ಬಾಮ ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ಪರ್ಫ್ಯೂಮ್ಸ, ಅರ್ಕ, ಆಸಿಡ್‌ಗಳು, ಡ್ರಗ್ಸ, ಕೆಮಿಕಲ್ಸ, ಬಾಟಲಿಗಳು, ಬಣ್ಣಗಳು, ಪೆಪರಮಿಟ, ಕ್ರಿಸ್ಟಲ್ ಮತ್ತು ಹೀಕೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1-8-0. ಮಾದರಿ ಪರಿಮಳದ ಗಾರ್ಡುಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದಲ್ಲಿ ರವಾನಿಸಲಾದೀತು

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,

15628 ಖುಂಗಳವಾಡಿ ರೋಡ, ಮುಂಬಯಿ ನಂಬ್ರ ೨.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೆಳೆಸುವ ಕೊಳಕೆ ಎಂದು ಕರೆಯಲ್ಪಡುವ ಮೂರನೇ ಬತ್ತದ ಬೆಳೆಗೆ ಕೊನ್‌ಸೆನ್‌ಟ್ರೇಟೆಡ್ ಸುಪರ್‌ಫೋಸ್‌ಫೇಟ್ (Concentrated Super Phosphate) ಎಂಬ ರಂಜಕ ಧಾತುವಿನ ಗೊಬ್ಬರದಿಂದುಂಟಾಗುವ ಪ್ರಯೋಜನ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಗ್ಗಿ ಎಂಬ ಎರಡನೆಯ ಬತ್ತದ ಪೈರನ್ನು ಕಟಾವು ಮಾಡಿದೊಡನೆಯೆ, ನೀರು ದೊರೆಯುವ ಗ್ರಾಮಗಳಲ್ಲಿ ಹೊಲಗಳನ್ನು ಕೊಳಕೆ ಬೆಳೆಗಾಗಿ ಹೂಡಿ ತಯಾರಿಸುವರು. ಎಲ್ಲಾ ಉಳುವಿಕೆಗಳು ಮುಗಿದ ತರುವಾಯ ನೀರನ್ನು ಆರಿಸಿ ಕೊಳೆತು ಹುಡಿಯಾದ ಹಟ್ಟಿ ಗೊಬ್ಬರವನ್ನೂ ಬೂದಿಯನ್ನೂ ಬೆರಸಿ ಗದ್ದೆಯ ಮೇಲ್ಗಡೆ ಏಕಪ್ರಕಾರವಾಗಿ ಚದರಿ ದೊಡ್ಡರೆ, ಅಥವಾ ಸಮುಗ ಎಂಬ ಬತ್ತದ ಬೀಜವನ್ನು ಫೇಬ್ರವರಿ ತಿಂಗಳಲ್ಲಿ ಬಿತ್ತುತ್ತಾರೆ. ಈ ಕೊಳಕೆ ಬೆಳೆಯು ಸರ್ವ ಸಾಧಾರಣವಾಗಿ ಬಿತ್ತಿದಂದಿನಿಂದ ೧೦೦ ದಿನಗಳೊಳಗೆ ಕೊಯಿಲಿಗೆ ಬರುತ್ತದೆ. ಕೊಳಕೆ ಬೆಳೆಯು ಸುಗ್ಗಿ ಬೆಳೆಗಿಂತ ಹೆಚ್ಚಿಗೆ ಪೈರನ್ನು ಕೊಡುತ್ತದೆ. ಮಾತ್ರವಲ್ಲ, ಚೆನ್ನಾಗಿ ಗೊಬ್ಬರವನ್ನು ಹಾಕಿದ್ದಲ್ಲಿ ಕಾರ್ತಿ ಬೆಳೆಯನ್ನು ಬಿಟ್ಟು ಕೊಡುವುದಿಲ್ಲ. ನಮ್ಮ ಜಿಲ್ಲೆಯ ಮಣ್ಣಿನಲ್ಲಿ ರಂಜಕ ಧಾತುವು (Phosphate) ಕಡಿಮೆಯಾಗಿದೆ ಎಂದೂ ಎಲುಬಿನ ಪುಡಿಯನ್ನು ಗೊಬ್ಬರವಾಗಿ ಉಪಯೋಗಿಸಿದರೆ ಹೆಚ್ಚಿನ ಬೆಳೆಯು ದೊರೆಯುತ್ತದೆಂದೂ ನಾನು ಮಾಡಿದ ಕೆಲವು ಪರೀಕ್ಷೆಗಳಿಂದ ತಿಳಿಯಬಂದಿರುತ್ತದೆ. ಆದರೆ ಕೊಳಕೆ ಬೆಳೆಯು ಸುಮಾರು ೩ ತಿಂಗಳೊಳಗೆ ಕಟಾವಾಗಿರುವುದರಿಂದಲೂ, ಬೀಜವನ್ನು ಮೇಲೆ ಬಿತ್ತುವುದರಿಂದಲೂ ಬೇಗನೆ ಸಸ್ಯಾಹಾರವಾಗಿ ದೊರೆಯುವಂಥಾ ರಂಜಕ ಧಾತುವಿನ ಗೊಬ್ಬರವು ಆಗತ್ಯವೆಂದು ತೋರಿಬಂದುದರಿಂದ ಸಸಿಗಳ ಉಪಯೋಗಕ್ಕೆ ಸಿದ್ಧವಿರುವ (ಕೊನ್‌ಸನ್‌ಟ್ರೇಟೆಡ್ ಸುಫರ್ ಫೊಸ್‌ಫೇಟ್) ಎಂಬ ರಂಜಕ ಧಾತುವನ್ನು ಪ್ರಯೋಗಿಸುವ ಆಲೋಚನೆ ಮಾಡಲಾಯಿತು. ಈ ಗೊಬ್ಬರದಲ್ಲಿ ನೇಕಡಾ ೪೫ ಪಾಲು ರಂಜಕ ಧಾತುವು ಸಸ್ಯಾಹಾರವಾಗಿ ಉಪಯೋಗಿಸಲು ತಯಾರಾಗಿರುವ ರೂಪದಲ್ಲಿದೆ.

೧೯೨೭—೨೮ನೇಯ ವರುಷದಲ್ಲಿ ರಾಣಿಪೇಟೆಯಿಂದ ೨೫೦ ರಾತ್ಲ ಸುಪರನ್ನು ತರಿಸಿ ಕಾರ್ಕಳ ತಾಲೂಕಿನ ೧೪ ಗ್ರಾಮಗಳ ೩೦ ರಹಿತರಿಗೆ ಮಣ ೧ಕ್ಕೆ ೨॥ ರೂಪಾಯಿಯಂತೆ ಪ್ರಥಮತಃ ಕೊಟ್ಟಿತು.

ವಾಡಿಕೆಯಲ್ಲಿರುವ ಊರಿನ ಗೊಬ್ಬರದೊಂದಿಗೆ (ಕೊಳೆತು ಪುಡಿಯಾದ ಹಟ್ಟಿ ಗೊಬ್ಬರ ಮತ್ತು ಬೂದಿ) ಎಕರೆಗೆ ೨ರಿಂದ ೩ ಮಣದಂತೆ ಈ ಗೊಬ್ಬರವು ಹಾಕಲ್ಪಟ್ಟಿತು. ಇದನ್ನು ಬೂದಿಯೊಂದಿಗೆ ಸರಿಯಾಗಿ ಬೆರಸಿ ತಯಾರಿಸಿದ ಗದ್ದೆಯಲ್ಲಿ ಏಕ ಪ್ರಕಾರವಾಗಿ ಚೆಲ್ಲಿ ಖಾಲಿ ಹಲಿಗೆಯನ್ನು ಎಳೆದ ತರುವಾಯ ಬತ್ತದ ಬೀಜವು ಬಿತ್ತಲ್ಪಟ್ಟಿತು.

ಈ ಗೊಬ್ಬರದ ದೆಸೆಯಿಂದ ಬೆಳೆಯು ಗಾತ್ರದಲ್ಲಿಯೂ ತೆನೆಗಳ ಪರಿಮಾಣದಲ್ಲಿಯೂ ಗೊಬ್ಬರ ಹಾಕದ ಇತರ ಗದ್ದೆಗಳ ಪೈರಿಗಿಂತ ಉತ್ತಮವೆಂದು ತೋರಿ ಬಂತು.

ಇದರ ಉಪಯೋಗವು ಬಹಳ ಉತ್ತೇಜನಕರವೆಂದು ತೋರಿಬರುತ್ತದೆ. ಎಕರೆಯೊಂದರಲ್ಲಿ ರೂಪಾಯಿ ೮—೮—೦ ರಿಂದ ೨೩—೧೦—೮ರ ವರೆಗಿನ ಮುನಾಫೆಯು ದೊರೆಯಿತು. ಎಂದರೆ ೧೦ ಪಟ್ಟಿನ ಸರಾಸರಿ ಮುನಾಫೆಯು ಎಕರೆಯೊಂದಕ್ಕೆ ರೂಪಾಯಿ ೧೬—೧೨—೫ ಆಗಿರುತ್ತದೆ.

ಆದರೆ ಮೇಲೆ ಕಾಣಿಸಿದ ಮುನಾಫೆಯನ್ನು ಕಂಡು ಹಿಡಿಯುವಾಗ ಒಣ ಹುಲ್ಲಿನ ಕ್ರಯವನ್ನು ಹಿಡಿಯಲಿಲ್ಲ. ಗೊಬ್ಬರದ ಮೂಲಕ ಎಕರೆಯೊಂದರಲ್ಲಿ ರೂಪಾಯಿ ೪-೦-೦ ರಷ್ಟು ಹೆಚ್ಚಿಗೆ ಹುಲ್ಲು ಸಿಕ್ಕಲೂ ಅನುಮಾನವೇ ಇಲ್ಲ. ಆದುದರಿಂದ ಎಕರೆಯೊಂದರಲ್ಲಿ ರೂಪಾಯಿ ೧೬—೦—೦ ಬತ್ತದಿಂದಲೂ ರೂಪಾಯಿ ೪—೦—೦ ಒಣ ಹುಲ್ಲಿನಿಂದಲೂ ಮುನಾಫೆ ದೊರೆಯುತ್ತದೆ. ಹೀಗೆ ಗೊಬ್ಬರದ ಬೆಲೆಯನ್ನು ಕಳೆದು ಒಟ್ಟಿಗೆ ಎಕರೆಯೊಂದರಲ್ಲಿ ೨೦—೦—೦ ರೂಪಾಯಿ ಲಾಭ ಸಿಕ್ಕುತ್ತದೆ.

ಕೊಳಕೆ ಬೆಳೆಯಲ್ಲಿ ಉಳಿದ ಗೊಬ್ಬರದ ಸಾರಾಂಶದ ಫಲ.

ಇಷ್ಟೇ ಅಲ್ಲದೆ ಕೊಳಕೆಯಲ್ಲಿ ಈ ಗೊಬ್ಬರವನ್ನು ಹಾಕಿದ ಗದ್ದೆಗಳಲ್ಲಿ ನಂತರದ ಕಾರ್ತಿ ಬೆಳೆಯು ಎಲ್ಲರೂ ಆಶ್ಚರ್ಯಪಡುವಂತೆ ಬಹಳ ಚೆನ್ನಾಗಿ ಬಂತು. ಏಕೆಂದರೆ ರಂಜಕ ಧಾತುವು ಒಂದು ಸಲ ಮಣ್ಣಿಗೆ ಸೇರಿಕೊಂಡರೆ ಎಂದೆಂದಿಗೂ ಅದರ ಸಾರವು ಹೊರಗೆ ಹೋಗುವುದಿಲ್ಲ. ಕೊಳಕೆ ಪೈರು ಉಪಯೋಗಿಸಿ ಉಳಿದ ರಂಜಕದ ಸತ್ವವು ಅದರ ಹಿಂದೆ ಬರುವ ಕಾರ್ತಿ ಬೆಳೆಗೆ ದೊರೆಯುತ್ತದೆ.

ಕಾರ್ತಿ ಬೆಳೆಯಲ್ಲಿ ಮುಂಚಿನ ಕೊಳಕೆ ಬೆಳೆಗೆ ಹಾಕಿದ ಸುಪರಿನ ದೆಸೆಯಿಂದ ಸರಾಸರಿ ಎಕರೆಯೊಂದಕ್ಕೆ ರೂಪಾಯಿ ೩೨—೧೧—೩ ಲಾಭವು ಕಂಡುಬರುತ್ತದೆ. ಇಲ್ಲಿಯೂ ಒಣ ಹುಲ್ಲಿನ ಕ್ರಯವು ಹಿಡಿಯಲಿಲ್ಲ. ಅಕ್ಕಿ ಮುಡಿ ೧ಕ್ಕೆ ರೂಪಾಯಿ ೬—೦—೦ರ ಪ್ರಕಾರ ಮೇಲೆ ಕಾಣಿಸಿದ ಲಾಭವು ದೊರಕಿದೆ. ಅಂತೂ ಎಲ್ಲಾ ಖರ್ಚು ಹೋಗಿ ಎರಡು ಬೆಳೆಗಳಲ್ಲಿಯೂ ಸರಾಸರಿ ರೂಪಾಯಿ ೪೦—೦—೦ ಲಾಭ ಸಿಕ್ಕಿತು. ಆದರೆ ಗೊಬ್ಬರ ಹಾಕಿದ್ದು ಕೊಳಕೆ ಬೆಳೆಗೆ ಮಾತ್ರ.

ಇದಕ್ಕೆ ಮೊದಲು ಇಷ್ಟು ಸ್ವಲ್ಪ ಗೊಬ್ಬರವನ್ನು ಅಷ್ಟು ದೊಡ್ಡ ಗದ್ದೆಗೆ ಹಾಕಿದುದರಿಂದ ಏನೂ ಪ್ರಯೋಜನವಾಗಲಾರದೆಂದೂ, ಸುಫರ್ ಫೋಸ್‌ಫೇಟಿಗೆ ಕೊಟ್ಟ ಬೆಲೆಯು ಯಾವ ಪ್ರಯೋಜನಕ್ಕೆ ಬಾರದೆಂದೂ ಒಂದು ವೇಳೆ ಗೊಬ್ಬರದಿಂದ ಸ್ವಲ್ಪ ಲಾಭ ಬಂದರೂ ಅದೆಲ್ಲಾ ನೀರಿನಲ್ಲಿ ಕರಗಿ ಹರಿದು ಹೋಗಿ ಪೈರಿಗೆ ದೊರೆಯಲಾರದೆಂದೂ, ಅನೇಕ ರಹಿತರ ಅಭಿಪ್ರಾಯವಿತ್ತು. ಆದರೆ ಈ ಗೊಬ್ಬರವನ್ನು ಹಾಕಿದ ಫಲವನ್ನು ಕಂಡೊಡನೆಯೇ ಸೂರ್ಯನ ಬೆಳಕಿಗೆ ಹಿಮವು ಮಾಯವಾದಂತೆ ಅವರ ಅನುಮಾನಗಳು ದೂರವಾದುದರಿಂದ ಮರು ವರ್ಷದಲ್ಲಿ ಇನ್ನೂ ಹೆಚ್ಚು ಮಂದಿ ರಹಿತರು ೪೭೦೪ ರಾತ್ಲ ಗೊಬ್ಬರವನ್ನು ಕೊಂಡುಕೊಂಡರು. ಈಗ ಇದರ ೫—೬ ಪಾಲು ಗೊಬ್ಬರಕ್ಕೆ ಗಿರಾಕಿಗಳಿರುವರು.

ಇದರ ಫಲಗಳು ಬಹಳ ಕುತೂಹಲವನ್ನುಂಟುಮಾಡುವುದಲ್ಲದೆ ಒಬ್ಬ ಬಡ ರಹಿತನು ಹೇಗೆ ಸಾಲಗಾರನ ಬಾಯಿಯಿಂದ ತಪ್ಪಿ ಇತರ ಹೊಸ ನಮೂನೆಯ ಕೃಷಿ ಸುಧಾರಣೆಗಳನ್ನು ಮಾಡಿ ತನ್ನ ಸ್ಥಿತಿಯನ್ನೂ ರಾಷ್ಟ್ರವನ್ನೂ ಅಭಿವೃದ್ಧಿಗೆ ತರಬಹುದೆಂದು ತಿಳಿದುಬರುತ್ತದೆ.

ಹೇಗೆಂದರೆ ೨॥ ಎಕರೆ ಕೊಳಕೆ ಬೆಳೆ ಮಾಡುವ ಒಬ್ಬ ರಹಿತನು ಮೇಲೆ ಹೇಳಿದ ಗೊಬ್ಬರವನ್ನು ಹಾಕಿ, ಬೇಸಾಯದಲ್ಲಿ ಯಾವದೊಂದೂ ಅಧಿಕ ತರದ ಕಷ್ಟವನ್ನು ಮಾಡದೆ (ಎಕರೆಯೊಂದರಿಂದ ರೂಪಾಯಿ ೪೦ರಂತೆ) ಮುಂಚಿಗಿಂತ ನೂರು ರೂಪಾಯಿ ಮುನಾಫೆಯನ್ನು ಪಡೆಯಬಹುದು. ಇದು ಅವನ ಸ್ವಂತಾರ್ಜಿತ ಹಣವಾಗಿರುವುದರಿಂದ ಅದರಲ್ಲಿ ಸ್ವಲ್ಪ ಭಾಗವನ್ನಾದರೂ ಮುಂದೆ ಹಣ ಸಂಪಾದನೆಯ ದಾರಿಗೆ ಉಪಯೋಗಿಸಬಹುದು. ಇದು ಒಂದೇ ಒಂದು ತರದ ಕೃಷಿ ಸುಧಾರಣೆ. ಹೀಗೆಯೇ ಇತರ ಸುಧಾರಣೆಗಳನ್ನೂ ಸ್ವತಹ ಮಾಡಿ ಇನ್ನೂ ಹೆಚ್ಚಿನ ಮುನಾಫೆಯನ್ನು ಪಡೆಯಬಹುದು. ಹೀಗೆ ತನ್ನ ಸಾಲಗಳನ್ನು ಪರಿಹರಿಸಬಹುದು.

ಎರೆಹುಳಗಳನ್ನು ನಾಶಮಾಡುವ ಗುಣ.

ಈ ಗೊಬ್ಬರವನ್ನು ಉಪಯೋಗಿಸುವುದರಿಂದ ಹೆಚ್ಚಿನ ಬೆಳೆಯೂ ಮುನಾಫೆಯೂ ದೊರೆಯುವ ಪ್ರಯೋಜನ ಮಾತ್ರವೇ ಅಲ್ಲ. ಕಾರ್ಕಳ ತಾಲೂಕಿನಲ್ಲಿ ಎರೆಹುಳ ಎಂದು ಕರೆಯಲ್ಪಡುವ ಒಂದು ಜಾತಿಯ ಹುಳಗಳು ನೂರಾರು ಕಡೆಯಲ್ಲಿ ಗದ್ದೆಯ ಮಣ್ಣಿನೊಳಕ್ಕೆ ಸೇರಿ ತೂತುಗಳನ್ನು ಮಾಡಿ ಮಣ್ಣನ್ನು ಮೇಲಕ್ಕೆ ತರುತ್ತವೆ. ಆದುದರಿಂದ ಗದ್ದೆಯಲ್ಲಿರುವ ನೀರೆಲ್ಲಾ ಆರಿ ಹೋಗುತ್ತದೆ. ಕೊಳಕೆ ಬೆಳೆಯು ಯಾತದ ನೀರಿನಿಂದ ಬೆಳೆಯುತ್ತದೆ. ಮತ್ತು ಈ ಹುಳಗಳಿರುವ ಗದ್ದೆಗಳಲ್ಲಿ ಎಷ್ಟು ನೀರನ್ನು ಹಾಯಿಸಿದರೂ ಒಂದೇ ದಿನದಲ್ಲಿ ಆರಿ ಹೋಗಿ ಬೆಳೆಗೆ ತಗಲುವ ಖರ್ಚು ಹೆಚ್ಚಾಗುವಂತೆ ಮಾಡುತ್ತದೆ. ಈ ಉಪದ್ರವನ್ನು ಹೋಗಲಾಡಿಸಲಿಕ್ಕೆ ರಹಿತರು ಬಗೆಬಗೆಯ ಉಪಾಯ ಮಾಡಿದರೂ ಸಾಧ್ಯವಾಗುತ್ತಿರಲಿಲ್ಲ. ದೈವವಶಾತ್ ಈ ಗೊಬ್ಬರವನ್ನು ಹಾಕಿದ ಗದ್ದೆಗಳಲ್ಲಿ ಎರೆಹುಳ ಎಂಬ ಹುಳಗಳ ಕಾಟವೇ ಇರುವುದಿಲ್ಲ. ಆದುದರಿಂದ ಈ ಗೊಬ್ಬರದಿಂದುಂಟಾಗುವ ಪ್ರಯೋಜನವು ಅಷ್ಟಿಷ್ಟಲ್ಲ.

ಒಟ್ಟಾರೆ ಕೊಳಕೆ ಬೆಳೆಗೆ ಕೊನ್‌ಸನ್‌ಟ್ರೇಟೆಡ್ ಸುಫರ್ ಫೋಸ್‌ಫೇಟ್ ಎಂಬ ರಂಜಕ ಧಾತುವಿನ ಗೊಬ್ಬರವನ್ನು ಹಾಕುವುದರಿಂದ ಉಂಟಾಗುವ ಪ್ರಯೋಜನಗಳನ್ನು ಕಾರ್ಕಳ ತಾಲೂಕಿನ ಅನೇಕ ಗ್ರಾಮಗಳಲ್ಲಿ ಮಾಡಿ ತೋರಿಸಿದುದರಿಂದ ರಹಿತರು ಅದರಲ್ಲಿ ತುಂಬಾ ಸಮಾಧಾನ ಹೊಂದಿರುವರು. ಆದರೆ ಅನೇಕ ಮಂದಿ ರಹಿತರು ಬಹಳ ಬಡವರಾಗಿರುವುದರಿಂದ ನಗದಿ ಹಣವು ಇಲ್ಲದೆ ಕಳೆದ ಸಾರಿ ಗೊಬ್ಬರ ಕೊಂಡುಕೊಳ್ಳಲಾರದೆ ಹೋದರು. ಆದುದರಿಂದ ಸಹಕಾರ ಇಲಾಖೆಯವರು ಆತುರವುಳ್ಳ ರಹಿತರಿಗೆ ಚಿಕ್ಕ ವ್ಯಾದೆಯ ಸಾಲಗಳನ್ನು ಕೊಟ್ಟು ಅವರು ಗೊಬ್ಬರವನ್ನು ಪಡೆಯುವಂತೆ ಸಹಾಯ ಮಾಡುವರಾಗಿ ನಂಬಿದ್ದೇನೆ.

ಈ ಗೊಬ್ಬರವನ್ನು ಬರುವ ಕೊಳಕೆ ಬೆಳೆಗೆ ಉಪಯೋಗಿಸಲಿಚ್ಛೆಯುಳ್ಳವರು ತ್ವರ್ಯದಲ್ಲಿ ಆಯಾಯ ಉಪಸರ್ಕಲಿನ ವ್ಯವಸಾಯದ ಡಿಮೋನ್‌ಸ್ಟ್ರೇಟರಿಗೆ ಬರೆದು ತಮಗೆ ಬೇಕಾದ ಗೊಬ್ಬರವನ್ನು ಪಡಕೊಳ್ಳುವರೆಂಬ ಕೋರಿಕೆ.

ಈ ವಿಷಯದಲ್ಲಿ ಹೆಚ್ಚಿನ ಅನುಭವ ಪಡಕೊಳ್ಳಬೇಕೆಂದಿರುವವರೂ ಗೊಬ್ಬರವನ್ನು ಉಪಯೋಗಿಸಿ ಫಲ ಪಡೆದ ರಹಿತರ ಅನುಭವವನ್ನು ತಿಳಿಯಬೇಕೆಂದಿರುವವರೂ ಈ ಕೆಳಗೆ ದಸ್ಕತು ಮಾಡಿದವರಿಗೆ ಬರೆಯಬೇಕಾಗಿ ಅಪೇಕ್ಷಿಸುತ್ತೇನೆ.

ಎಸ್. ಕೃಷ್ಣನಾಯಕ್,
ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರ್,
ಮೂಡಬಿದ್ರಿ.

ಮದರಾಸು ಸಂಸ್ಥಾನದ ಫೋರೆಸ್ಟ ಪಂಚಾಯತುಗಳ ೧೯೨೭—೨೮ನೇ ಇಸವಿಯ ಆಡಳಿತೆ ವರದಿ.

ಮದರಾಸು ಸಂಸ್ಥಾನದಲ್ಲಿರುವ ಕಾಡುಗಳಲ್ಲಿ ಕೆಲವು ಅಂಶಗಳನ್ನು ಪಂಚಾಯತುಗಳಿಗೆ ವಹಿಸಿಕೊಟ್ಟಿರುವರು. ಇವುಗಳಿಗೆ ಫೋರೆಸ್ಟ ಪಂಚಾಯತುಗಳೆಂದು ಹೆಸರು. ಈ ವರ್ಷ ಈ ಪಂಚಾಯತುಗಳಲ್ಲಿ ಹಲವು ವಿಧದ ಪ್ರಯೋಜನಕರವಾದ ಬದಲಾವಣೆಗಳಾಗಿವೆ.

೧೯೨೮ನೇ ಇಸವಿ ಜನವರಿ ೧ನೇ ತಾರೀಕಿನಿಂದ ಇವುಗಳ ಮೇಲಧಿಕಾರವನ್ನು ಜಿಲ್ಲಾ ಕಲೆಕ್ಟರುಗಳಿಗೆ ವಹಿಸಿಕೊಟ್ಟಿದ್ದರು. ಇದಕ್ಕಾಗಿ ಜಿಲ್ಲಾ ಕಲೆಕ್ಟರರ ಕೈಕೆಳಗೆ ಪ್ರತ್ಯೇಕ ಉದ್ಯೋಗಸ್ಥರನ್ನು ದಕ್ಷಿಣ ಕನ್ನಡ ಜಿಲ್ಲೆ ಒಂದನ್ನು ಬಿಟ್ಟು ಬೇರೆ ಎಲ್ಲಾ ಜಿಲ್ಲೆಗಳಲ್ಲಿಯೂ ನೇಮಿಸಿದ್ದರು. ೧೯೨೮ನೇ ಇಸವಿ ಮಾರ್ಚಿ ಆಖೈರಿಗ ಈ ತರದ ಕೆಲಸ ಮಾಡುವ ೨೨ ಮಂದಿ ಪಂಚಾಯತು ಡಿಪ್ಯುಟಿ ತಹಶೀಲ್ದಾರರಿದ್ದರು. ಕಳೆದ ಎಪ್ರಿಲ್ ತಿಂಗಳಿನಿಂದ ಕಡಪಾ, ಚಿತ್ತೂರು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಮೂವರು ಡಿಪ್ಯುಟಿ ತಹಶೀಲುದಾರರನ್ನು ನೇಮಿಸಿರುವರು. ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ೧೧೩೦ ಪಂಚಾಯತುಗಳಿವೆ. ಇವರ ಕೈಕೆಳಗೆ ೩,೫೫೩ ಚದರ ಮೈಲು ಕಾಡುಗಳು ಇದ್ದವು. ಇವುಗಳಿಂದ ಸರಕಾರಕ್ಕೆ ರೂಪಾಯಿ ೧,೫೭,೨೬೬ ಸಿಕ್ಕಿಯದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೩ ಪಂಚಾಯತುಗಳು ಇವೆ. ಇವುಗಳ ಅಧೀನ ೩೩೭ ಚದರ ಮೈಲು ಕಾಡುಗಳು ಇವೆ.

ಮೂರನೇ ತರಗತಿಯ ರಿಜರ್ವ ಕಾಡುಗಳನ್ನು ಕ್ರಮಪಡಿಸಲಾಯಿತು. ಕೆಲವುಗಳ ವಿಷಯ ಕರಾರುಗಳನ್ನು ತಯಾರಿಸುವುದರಲ್ಲಿ ವಿಳಂಬವಾಯಿತು. ಕರಾರುಗಳನ್ನು ಹೊಸತಾಗಿ ಮಾಡುವ ವಿಷಯ ವರ್ಷದ ಮಧ್ಯಭಾಗದಲ್ಲಿಯೇ ಹುಕುಂ ಕೊಟ್ಟದರಿಂದ ಐದು ಜಿಲ್ಲೆಗಳ ವಿನಹ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಬದಲಾಯಿಸಲ್ಪಟ್ಟವೆ.

ಪಂಚಾಯತು ಫೋರೆಸ್ಟುಗಳಲ್ಲಿ ೬೫೫೩ ದನಕರುಗಳಿಗೆ ಮೇಯಲಿಕ್ಕೆ ಬಿಡಲಿಕ್ಕೆ ಪರ್ಮಿಟು ಕೊಟ್ಟಿತ್ತು. ಮೇಯಿಸಲಿಕ್ಕೆ ಬಿಡುವ ದರವು ೨॥ ಆಣೆಯಿಂದ ೧। ರೂಪಾಯಿ ವರೆಗೆ ವಿಧಿಸಲ್ಪಟ್ಟಿತು.

ಈ ಪಂಚಾಯತುಗಳ ಕೈಕೆಳಗೆ ೧೪೯೭ ವೋಚರರಂತೆ ಇದ್ದರು.

ಸರಾಸರಿ ೧॥। ಚದರ ಮೈಲಿಗೆ ಒಬ್ಬ ವೋಚರನಂತೆ ಇದ್ದನು. ಈ ತರದಲ್ಲಿ ವೋಚರನನ್ನು ಪಂಚಾಯತುಗಳು ನೇಮಿಸಲೇ ಬೇಕೆಂದು ರೆವಿನ್ಯೂ ಬೋರ್ಡಿನವರು ಹುಕುಂ ಕೊಟ್ಟಿದ್ದರು.

ಈ ಪಂಚಾಯತು ಕಾಡುಗಳಲ್ಲಿ ೫೯೧೨ ನಂಬ್ರಗಳು ನಡದಿವೆ. ಇವುಗಳಲ್ಲಿ ೩೪೮೬ ನಂಬ್ರಗಳು ರಾಜಿಯಿಂದ ತೀರಿಸಲಾದವು. ಇದರಿಂದ ಸರಕಾರಕ್ಕೆ ರೂಪಾಯಿ ೩೪೩೫೧ ಸಿಕ್ಕಿಯದೆ. ೩೧ ಪಂಚಾಯತುಗಳಿಗೆ ಮಾತ್ರ ರಾಜಿಯಿಂದ ನಂಬ್ರಗಳನ್ನು ತೀರ್ಮಾನುಮಾಡುವ ಅಧಿಕಾರವನ್ನು ಕೊಟ್ಟಿದೆ.

ಸಂಸ್ಥಾನದಲ್ಲಿರುವ ೧೧೩೦ ಪಂಚಾಯತುಗಳಲ್ಲಿ ೧೦೯೭ ಪಂಚಾಯತುಗಳು ತಮ್ಮ ರಿಪೋರ್ಟುಗಳನ್ನು ಸರಿಯಾಗಿ ಕಳುಹಿಸಿರುವರು. ಉಳಿದವುಗಳ ಕಳುಹಿಸಬೇಕಾದ ರಿಪೋರ್ಟುಗಳನ್ನು ಕಳುಹಿಸಲಿಲ್ಲ.

೩೦೭ ಪಂಚಾಯತುಗಳು ಹೊಸ ಬಾವಿಗಳನ್ನು ತೋಡಿಸಿರುವರು. ದೊಡ್ಡಿಗಳನ್ನು ಸರಿಪಡಿಸಿರುವರು. ಇದಕ್ಕಾಗಿ ಇವುಗಳಿಗೆ ೨೩೭೭೦ ರೂಪಾಯಿ ಖರ್ಚಾಗಿಯದೆ. ೫೫ ಪಂಚಾಯತುಗಳು ಕಾಡುಗಳಲ್ಲಿ ಬೆಳದಿರುವ ಕಾಡುಗಿಡಗಳನ್ನು ಕಡಿದುಹಾಕಿಸಿಯವೆ. ಇದಕ್ಕಾಗಿ ೨೦೪೮ ರೂಪಾಯಿ ಖರ್ಚಾಗಿಯದೆ. ರೆವಿನ್ಯೂ ಕಮಿಶನರರು ೩೭ ಪಂಚಾಯತುಗಳನ್ನು ಸಂದರ್ಶಿಸಿರುವರು. ೧೫ ಜಿಲ್ಲೆಗಳ ಕಲೆಕ್ಟರರು ೧೧೨ ಪಂಚಾಯತುಗಳನ್ನು ಸಂದರ್ಶಿಸಿರುವರು. ೨೦೦ ಪಂಚಾಯತುಗಳನ್ನು ರೆವಿನ್ಯು ಡಿವಿಜನಲ್ ಆಫೀಸರರು ಸಂದರ್ಶಿಸಿರುವರು. ಈ ವರ್ಷ ಫೋರೆಸ್ಟ ಪಂಚಾಯತು ಆಫೀಸರರು ೧೮೩ ಹೊಸ ಪಂಚಾಯತುಗಳನ್ನು ಸ್ಥಾಪಿಸಿರುವರು. ಪಂಚಾಯತು ಡಿಪ್ಯುಟಿ ತಹಶೀಲುದಾರರು ಸರಿಯಾಗಿ ಪ್ರಯಾಣ ಮಾಡಿ ಎಲ್ಲಾ ಪಂಚಾಯತುಗಳನ್ನು ಸಂದರ್ಶಿಸಿರುವರು.

ಚಂಗಲ್ಪಟ್ಟು ಜಿಲ್ಲೆಯಲ್ಲಿರುವ ಕಾಡುಗಳಲ್ಲಿ ಕಳ್ಳಿಗಿಡಗಳು ಹೆಚ್ಚಾಗಿರುವುದರಿಂದ ಆರ್ಸನಿಕ್‌ಪೆಂಟ್ ಒಕ್ಸಾಯಿಡನ್ನು ಅವುಗಳೊಳಗೆ ಇಂಜೆಕ್ಟ ಮಾಡಿ ಅವುಗಳನ್ನು ನಾಶಪಡಿಸಲು ಪರೀಕ್ಷೆಯು ನಡಿಯುತ್ತಲಿದೆ.





ಎಸ್. ನಾರಾಯಣ ಮತ್ತು ಕಂಪೆನಿ.
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

'ಸೂರ್ಯ' ಗುರುತಿನ ಪವಿತ್ರ ಕೇಶರ

ರಿಜಿಸ್ಟರ್ಡ್ — ಟ್ರೇಡ್ ಮಾರ್ಕ್

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕ್ರಯ ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಆಲ್ಲಿಭಾಯಿ ಎಂಡ್ ಸನ್ಸ್.
ಮದ್ದು ಕೋವಿಗಳನ್ನು ಧಾರಾಳವಾಗಿ ಆಮದುಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುರ್‌ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! — ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ — ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಧನ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಣ್ಣಿನ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ದ್ರಾವಕ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ, ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ, ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ADVERTISE IN OUR WEELKY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೋಜಂಟ್ರಾಗಿ, ಯೆಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-28. ಮಂಗಳೂರು

Edited Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 3-0-0. — ಟಪಾಲು ಹಾಸಿಲು ಸೇರಿ ರೂಪಾಯಿ 3-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. — ಮಂಗಳೂರು, ತಾ. ೩ನೇ ಶುಕ್ರವಾರ ಅಗೋಸ್ತು ೧೯೨೮. — ಸಂಚಿಕೆ ೩೧

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

STATEMENT OF AFFAIRS AS ON 16 JUNE, 1928.

Capital and Liabilities.		Property and Assets.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	„ 96,600-0-0	2 Investments on G. P. Notes	2,40,234-5-0.
3 Deposits	„ 13,47,824-11-8	3 Investments on approved Securities	15,45,131-12-0.
4 Amount overdrawn from Bankers	„ 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	„ 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12-7.

Office of the Corporation,
UDIPI, 18—6—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ವೇದನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧವಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ, ಕಜ್ಜಿ, ತದ್ದಿ, ತುರಿಗೆ, ನಂಜಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರು ಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ಸೊತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್, ಜಾರ್ಜ್ ಟೌನ್, ಮದ್ರಾಸು. — 249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಕಾಂಟ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ, ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.
ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street. MANGALORE.

[illegible] ಮುಂದಿನ ಅಭಿವೃದ್ಧಿಗಾಗಿ [illegible] ಮಹತ್ವವಾದ ಸೋತ್ತಿ [illegible] ಮಾಡಲಾಯಿತು. [illegible] ಈ ವರುಷವೂ ಧನ [illegible] ಮಾಡಿರುತ್ತದೆ. ತಾವೆಲ್ಲರೂ [illegible] ತಾಲಾ ಉಪಾ [illegible] ಸಹ ಈ [illegible] ಈ ವರುಷ ಕೈಕೊಂಡ [illegible] ಸಫಲ [illegible]

[illegible] ಬ್ಯಾಂಕು ಅಭಿವೃದ್ಧಿಯನ್ನು [illegible] ಇದರ ಕಾರ್ಯ [illegible] ಈ ಬೇಂಕು ಮಂಗ [illegible] ಪರವೂರುಗಳಲ್ಲಿಯೂ [illegible] ಸ್ಥಾಪಿಸಲು ಆಲೋಚನೆ [illegible]

[illegible] ಕೆನರಾ [illegible] ಇದೆ. ನಮ್ಮ [illegible] ಮಹಿಳೆಯರ ಮೇಲೆಯೇ [illegible] ಮಕ್ಕಳ ಪೋಷಣೆ [illegible] ಆ ಮಹಿಳೆ [illegible] ವ್ಯಾಪಾರ ವಹಿ [illegible] ಮನೆಯ [illegible] ಅದರಿಂದಲೇ ಉಳಿ [illegible] ವಿದ್ಯಾವಂತರಾಗಿಯಾ [illegible] ಅವರ [illegible] ವರ್ಗಗಳನ್ನೇ [illegible] ರುವರು. [illegible] ವಶರಾಗದೆ [illegible] ಆ ಮಹಿಳೆ [illegible] ಅಧೋಗತಿಗೆ [illegible] ಅವರೇ. [illegible] ತುಂಬಿ [illegible] ವರೆಗೆ ಮಾಡಿದ [illegible] ಸಾಧಿಸು [illegible] ಕುತ್ತಿದೆ [illegible]

ಮಂಜೇಶ್ವರ, ತಾ. [illegible]

ಕೆನರಾ ಗರ್ಲ್ಸ ಸ್ಕೂಲಿನ [illegible] ಅವಗಾಹನ ಬಗ್ಗೆ.

ಸ್ವಾಮಿ,

[illegible]

ಸ್ವಾಮಿ! ಈ ಸಂಸ್ಥೆಗಳನ್ನೆಲ್ಲಾ ಅವರು [illegible] ಸ್ವರ್ಗಸ್ಥರಾಗಿರುವರು. ಈ ಸಂಸ್ಥೆಗಳ [illegible] ಈಗಿನ ಚಾಲಕರಾದ ತಮ್ಮ ಕೈಯಲ್ಲಿದೆ.

ಕೆನರಾ ಹೈಸ್ಕೂಲು ಬಹಳ ಅಭಿವೃದ್ಧಿಯನ್ನು ಹೊಂದಿ ನಮ್ಮ ಜಿಲ್ಲೆಯಲ್ಲಿರುವ ಇತರ ಜಾತಿ ವೃಂದವರಿಗೆ ಆದರ್ಶನೀಯಪೂರ್ವಕವಾದ ಒಂದು ಹಿಂದೂ ಸಂಸ್ಥೆಯಾಗಿದೆ. ಇದರ ಕಟ್ಟಡಗಳು ವಿಸ್ತಾರವಾಗುತ್ತಾ ಬಂದಿವೆ. ಪುಸ್ತಕ ಭಂಡಾರದಲ್ಲಿ ಯೋಗ್ಯವಾದ ಪುಸ್ತಕಗಳು ಹೆಚ್ಚಾಗುತ್ತಾ ಬಂದಿವೆ. ಇನ್ನೂ ಆಗುತ್ತಾ ಬರುತ್ತಿದೆ. ಶಾಲೆಯಲ್ಲಿ ಕಲಿತು ಅನೇಕ ದೊಡ್ಡ ದೊಡ್ಡ ಹುದ್ದೇದಾರರಾಗಿರುವ ಮಹನೀಯರುಗಳು ಶಾಲೆಯ ವಸ್ತುಸಂಗ್ರಹಾಲಯಕ್ಕೆ ಬೇಕಾದಷ್ಟು ವಿಶೇಷ ತರದ ವಸ್ತುಗಳನ್ನು ಕಳುಹಿಸುತ್ತಿರುವರು. ಮಕ್ಕಳ ದೇಹಶಕ್ತಿಯು ಅಭಿವೃದ್ಧಿಯಾಗುವಂತೆ ಆಟವಾಡುವ ಸ್ಥಳಗಳು ಒದಗಿಸಲ್ಪಟ್ಟಿವೆ, ಇನ್ನೂ ಒದಗಿಸಲ್ಪಡುತ್ತಿವೆ.

[illegible]

[illegible] ತಂದೆ.

ಪರದೇಶೀಯ ಗೊಬ್ಬರಗಳಿಂದ ದೇಶಕ್ಕೆ ಏನೊಂದೂ ಪ್ರಯೋಜನವಿಲ್ಲ.

ಕಳೆದ ಸ್ವದೇಶಾಭಿಮಾನಿಯ ಪತ್ರಿಕೆಯಲ್ಲಿ ಮೂಡಬಿದರೆಯ ಎಗ್ರಿಕಲ್ಚರಲ್ ಡೆಮೊನ್ಸ್ಟ್ರೇಟರರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಸುವ ಕೊಳಕೆ ಬೆಳೆಗೆ ಅಂದರೆ ರೈತರು ಬಹಳ ಕಷ್ಟಪಟ್ಟು ಮಾಡುವ ಮೂರನೆ ಬೆಳೆಗೆ ಕೊನ್‌ಸೆನ್‌ಟ್ರೇಟೆಡ್ ಸುಪರ್‌ಫೊಸ್ಫೇಟ್ ಎಂಬ ರಂಜಕ ಧಾತುವಿನ ಗೊಬ್ಬರದಿಂದ ಉಂಟಾಗುವ ಪ್ರಯೋಜನ ಎಂಬುದರ ಕುರಿತು ಬರೆದ ಉಪನ್ಯಾಸನವು ದೇಶವಾತ್ಸಲ್ಯವುಳ್ಳ ಪ್ರತಿ ಒಬ್ಬ ಮನುಷ್ಯನಲ್ಲಿಯೂ ಬಹಳ ಬೇಸರ ಉಂಟುಮಾಡುವಂತಾದ್ದಾಗಿದೆ.

ಅವರು ಮೇಲೆ ಬರೆದ ಗೊಬ್ಬರವನ್ನು ಕೊಳಕೆ ಬೆಳೆಗೆ ಉಪಯೋಗಿಸಿದರೆ ಅದರ ನಂತರ ಆಗುವ ಎಣೆಲು ಬೆಳೆಗೆ ತುಂಬಾ ಪ್ರಯೋಜನವುಂಟೆಂದು ಬರೆದ ಸಂಗತಿಯು ನಿಜವಾಗಿರಬಹುದು. ಆದರೆ ಬೇಸಾಯದ ಇಲಾಖೆಯವರು ನಮ್ಮ ಜಿಲ್ಲೆಯಲ್ಲಿಯೇ ಆಗುವ ಗೊಬ್ಬರಗಳ ವಿಷಯವನ್ನೇ ಬಿಟ್ಟು ಬಿಟ್ಟು ನಮ್ಮ ಭೂಮಿಗಳ ಮಣ್ಣು, ದೇಶದ ಹವೆ ಮೊದಲಾದವುಗಳನ್ನು ಅತೀ ಜಾಗರೂಕತೆಯಿಂದ ಪರಿಶೀಲಿಸಿ ಪರದೇಶೀಯ ಗೊಬ್ಬರಗಳನ್ನು ಉಪಯೋಗಿಸುವುದು ಒಳ್ಳೇದೆಂದು ಬರೆದ ಲೇಖನದಿಂದ ತುಂಬಾ ವಿಷಾದಪಡಬೇಕಾಗಿದೆ.

ಬೆಳೆಗಳಿಗೆ ನ್ಯಾಟ್ರೆಟುಗಳೂ ಫೊಸ್ಫೇಟುಗಳೂ ಇರುವ ಗೊಬ್ಬರಗಳು ಬೇಕೆಂಬುದು ನಿಜವಾದ ಸಂಗತಿ. ನಮ್ಮ ದೇಶದಲ್ಲಿ, ಬಹಳ ಪುರಾತನ ಕಾಲದಿಂದಲೂ ತಯಾರಿಸುವ ಹಟ್ಟಿಗೊಬ್ಬರದಲ್ಲಿ ಬೇಕಾದುದಕ್ಕಿಂತಲೂ ಹೆಚ್ಚಾದ ನ್ಯಾಟ್ರೋಜನವಿದೆ. ಬೂದಿಯಲ್ಲಿ ಫೊಸ್ಪೇಟ್ ಬೇಕಾದಷ್ಟು ಇದೆ. ಎಲುಬುಗಳ ಹುಡಿಯಲ್ಲಿ ಫೊಸ್ಫರಸ್ ಕೆಲಿಸಿಯಮ್ ಬೇಕಾದಷ್ಟು ಇದೆ. ಅವಲ್ಲದೆ ಮೀನುಗೊಬ್ಬರವು ಅತೀ ಹೆಚ್ಚು ಬೆಲೆಯುಳ್ಳದ್ದು. ಮೀನುಗಳು ಸಮುದ್ರದ ಉಪ್ಪು ನೀರಿನಲ್ಲಿ ಬೆಳೆಯುವುದರಿಂದ ಅವುಗಳಿಂದ ತಯಾರಿಸುವ ಗೊಬ್ಬರದಲ್ಲಿ ಬೇಕು ಬೇಕಾದಷ್ಟು ನ್ಯಾಟ್ರೋಜನ ಮತ್ತು ಫೊಸ್‌ಫರಸ್ ಇದೆ. ಮೇಲೆ ಹೇಳಿದ ನಮ್ಮ ದೇಶೀಯ ಗೊಬ್ಬರಗಳಲ್ಲಿ ಹಟ್ಟಿಯ ಗೊಬ್ಬರವನ್ನು ತಯಾರಿಸಲಿಕ್ಕೆ ಬೇಸಾಯಗಾರರಿಗೆ ಏನೂ ಖರ್ಚು ತಗಲುವುದಿಲ್ಲ. ಸೊಪ್ಪು ಗುಡ್ಡೆಯಲ್ಲಿ ಧರ್ಮಾರ್ಥವಾಗಿ ಸಿಕ್ಕುತ್ತದೆ. ಸೆಗಣಿ, ಮೂತ್ರ ಮುಂತಾದವುಗಳು ಬೇಸಾಯಗಾರರಲ್ಲಿರುವ ದನ, ಎಮ್ಮೆ, ಕೋಣಗಳಿಂದ ಸಿಕ್ಕುತ್ತವೆ. ಸೊಪ್ಪು ಮುಂತಾದನ್ನು ಬೇಸಾಯಗಾರರೇ ಗುಡ್ಡೆಯಿಂದ ತರುವುದರಿಂದಲೂ ಗೊಬ್ಬರವು ತಯಾರಾದ ಮೇಲೆ ಹಟ್ಟಿಯಿಂದ ಆ ಗೊಬ್ಬರವನ್ನು ಅವರೇ ಹೊರಗೆ ತೆಗೆದುಕೊಂಡು ಹೋಗಿ ದಾಸ್ತಾನು ಮಾಡುವುದರಿಂದಲೂ ಅವರಿಗೆ ಈ ಹಟ್ಟಿಯ ಗೊಬ್ಬರಕ್ಕೆ ಬೆಲೆಯು ಬೀಳುವುದಿಲ್ಲ. ಬೂದಿಯನ್ನು ಅವರು ಕಮ್ಮಿ ಕ್ರಯಕ್ಕೆ ಪೇಟೆಗಳಿಂದ ತರುತ್ತಾರೆ.

ಬೇಸಾಯಗಾರರು ಬಹಳ ಬಡವರು. ಒಂದನೇ ಬೆಳೆಯನ್ನು ಬೆಳಸಬೇಕಾದರೆ ಗದ್ದೆ ಹೂಡಲಿಕ್ಕೂ ನೇಜಿ ತೆಗೆಯಲಿಕ್ಕೂ ನಡಲಿಕ್ಕೂ ಅವರು ಮಜೂರಿಗೆ ಜನರನ್ನು ತರುತ್ತಾರೆ. ಇವರಿಗೆ ಮಜೂರಿ ಕೊಡಲಿಕ್ಕೆ ಅವರ ಹತ್ತರ ಹಣವಿಲ್ಲದೆ ಅವರು ಧನಿಕರಿಂದ ಅಕ್ಕಿಯನ್ನು ಹೋಲಿಗೆ ತರುತ್ತಾರೆ. ಹೋಲಿಗೆ ತರುವುದೆಂದರೆ— ಅವರು ಜೇಷ್ಠ ಅಥವಾ ಆಷಾಢ ತಿಂಗಳಲ್ಲಿ ತಂದರೆ, ಪಶ್ಚಿಮ ವ್ಯಾದೆಗೆ ಅಂದರೆ ಮಾರ್ಗಶಿರ ಮಾಸದ ವರೆಗೆ ಒಂದು ಮುಡಿ ಅಕ್ಕಿ ತಂದರೆ, ಹಿಂತಿರುಗಿ ಕೊಡುವಾಗ ೪ ಕಳಸಿಗೆ ಅಕ್ಕಿ ಕೊಡಬೇಕಾಗುವುದು. ಅಂದರೆ ೩ ಮುಡಿ ತಂದರೆ ನಾಲ್ಕು ಮುಡಿ ಕೊಡಬೇಕಾಗುವುದು. ಮುಡಿಗೆ ರೂ. ೭ ಕ್ರಯ ಹಿಡಿದರೆ ಅಸಲಿನ ಕ್ರಯ ೨೧ ರೂಪಾಯಿ, ಬಡ್ಡಿ ೭ ರೂಪಾಯಿ ಆಗುತ್ತದೆ. ಒಂದು ವರುಷಕ್ಕೆ ೨೧ ರೂಪಾಯಿಗೆ ೧೪ ರೂಪಾಯಿ ಆಯಿತು, ಇದರಿಂದ ಧನಿಕರ ಮನೆಯಲ್ಲಿ ಮತ್ತಷ್ಟು ಐಶ್ವರ್ಯ ತುಂಬಿತು, ಬೇಸಾಯಗಾರರ ಬಡತನವು ಮತ್ತಷ್ಟು ಹೆಚ್ಚಾಯಿತು. ಕೊಳಕೆ ಬೆಳೆಯ ಹಕ್ಕು ಧನಿಗೆ ಇರುವುದಿಲ್ಲ, ಬೇಸಾಯಗಾರರಿಗೇನೇ ಇರುವುದು. ಗದ್ದೆಯನ್ನು ವಹಿಸಿಕೊಂಡವನೂ ಅವನ ಸ್ನೇಹಿತರೂ ಕೂಡಿ ಈ ಬೆಳೆಯನ್ನು ಬಹಳ ಕಷ್ಟದಿಂದ ನೀರು ಎಳೆದು ಮಾಡುವರು. ದನಕರುಗಳಿಗೆ ರೋಗವು ಬಂದು ಎಷ್ಟೋ ಕೋಣಗಳೂ ಎತ್ತುಗಳೂ ಸಾಯುತ್ತವೆ, ಸುಬ್ರಮಣ್ಯದಿಂದ ಪ್ರತಿ ವರುಷವೂ ತರಬೇಕಾಗುತ್ತದೆ. ಈ ರೀತಿಯಿಂದ ಬೇಸಾಯಗಾರರಿಗೆ ಅವರಿಂದ ಸಹಿಸಲಾರದಷ್ಟು ಕಷ್ಟಗಳು ಇವೆ. ಆದುದರಿಂದ ಇಂಥಾ ಬಡತನದಲ್ಲಿ ನರಳುತ್ತಿರುವ ಈ ಬಡ ಬೇಸಾಯಗಾರರು ನ್ಯಾಟ್ರೇಟ್ ಸೋಡಗಳನ್ನೂ, ಫೊಸ್ಫೇಟನ್ನೂ ತರಲಿಕ್ಕೆ ಹಣವೆಲ್ಲಿಯದು? ಧನಿಗಳೇನಾದರೂ ಅವರಿಗೆ ಸಹಾಯ ಮಾಡುವ ಹಾಗಿಲ್ಲ. ಬೆಳೆ ಒಳ್ಳೇದಾದರೆ ಗೇಣಿ ಕೂಡಲೇ ಏರಿಸುತ್ತಾರೆ. ಆದುದರಿಂದ ಪ್ರಯೋಜನವೆಲ್ಲವೂ ಧನಿಗೆ, ಕಷ್ಟವೆಲ್ಲವೂ ಒಕ್ಕಲಿಗೆ.

ಇನ್ನು ಮೀನಿನ ಗೊಬ್ಬರವನ್ನು ಜಪಾನಿನವರು ಇಲ್ಲಿಂದ ಜಪಾನಿಗೆ ಒಯ್ಯುತ್ತಾರೆ. ಎಲುಬುಗಳನ್ನು ಹಡಗುಗಳಲ್ಲಿ ತುಂಬಿಸಿ ಪರವೂರಿಗೆ ಕೊಂಡು ಹೋಗುತ್ತಾರೆ. ಈ ಗೊಬ್ಬರಗಳನ್ನು ಉಪಯೋಗಿಸಲಿಕ್ಕೆ ಇಲ್ಲಿಯ ರೈತರಿಗೆ ಧೈರ್ಯಸಾಲದು, ಅವರಿಗೆ ಅನುಭವವಿಲ್ಲ. ಆದುದರಿಂದ ಬೇಸಾಯದ ಇಲಾಖೆಯವರು ಮೇಲೆ ಹೇಳಿದ ದೇಶೀಯ ಗೊಬ್ಬರಗಳನ್ನೇ ಈಗಿನ ಕ್ರಮಕ್ಕಿಂತಲೂ ಚೆನ್ನಾದ ಕ್ರಮದಿಂದ ಉಪಯೋಗಿಸಿ ಬೇಸಾಯಗಾರನಿಗೆ ಮುನಾಫೆ ಉಳಿದು ಅವನ ಮನೆ ಉದ್ಧಾರವಾಗುವ ರೀತಿಯಲ್ಲಿ ಕಲಿಸಿಕೊಡುವುದು ಉತ್ತಮ.

ನಾವು ಈಗಲೇ ನಮ್ಮಲ್ಲಿ ಹೆಚ್ಚು ಹತ್ತಿ ಬೆಳೆದರೂ ವಸ್ತ್ರಕ್ಕೆ ಪರದೇಶದವರ ಮೇಲೆ ಆಧರಿಸಿಕೊಂಡಿದ್ದೇವೆ. ನಾವು ಕೂತುಕೊಳ್ಳುವ ವಾಹನಗಳು, ಕುಡಿಯುವ ಮದ್ದುಗಳು, ಯಾಕೆ ಒಂದು ಸೂಜಿ ಕೂಡ ಪರದೇಶದಿಂದ ಬರಬೇಕಾಗಿದೆ. ಇನ್ನು ನಮ್ಮಲ್ಲಿರುವ ಗೊಬ್ಬರವನ್ನು ಬಿಟ್ಟು, ದಕ್ಷಿಣ ಅಮೇರಿಕದಿಂದ ಬರುವ ಈ ನ್ಯಾಟ್ರೆಟಿಗೂ, ಈ ಫೊಸ್ಫೇಟಿಗೂ ಆಧರಿಸಿಕೊಂಡಿದ್ದರೆ ನಮ್ಮ ಬೇಸಾಯಗಾರರ ಅವಸ್ಥೆಯು ಹೇಗಾದೀತೊ ತಿಳಿಯದು.

ಒಂದು ವೇಳೆ ನಮ್ಮ ಬ್ರಿಟಿಷ ಸರಕಾರಕ್ಕೂ ದಕ್ಷಿಣ ಅಮೇರಿಕದ ರಾಜ್ಯಕ್ಕೂ ವಿವಾದ ಬಂದು ಬಿಟ್ಟರೆ ನಮ್ಮ ಗದ್ದೆಗಳು ಗೊಬ್ಬರ ಇಲ್ಲದೆ ಖಾಲಿಬಿದ್ದು ನಮಗೆ ಅನ್ನ ಸಿಕ್ಕುವುದು ಕಷ್ಟವಾದೀತು. ಆದುದರಿಂದ ಬೇಸಾಯದ ಇಲಾಖೆಯವರು ಪರದೇಶಕ್ಕೆ ಇಲ್ಲಿಂದ ಹೋಗುವ ಗೊಬ್ಬರವನ್ನು ತಡೆದು ಇಲ್ಲಿ ಬೇಸಾಯಗಾರರು ಅದನ್ನು ಉಪಯೋಗಿಸುವ ಕ್ರಮವನ್ನು ಕಲಿಸಿದರೆ ಉತ್ತಮವಿತ್ತು. ಅವರ ಅಜ್ಞಾನವೂ ಕಡಿಮೆಯಾಗುತ್ತಿತ್ತು. ಅವರ ಬಡತನವೂ ಕಡಿಮೆಯಾದೀತು.

[illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲಃ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶಃ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಪಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸನೈಪುಣ್ಯದಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ವುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಪಂಜಾಪು ವ್ಯಾಪಾರ,
24-8-'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮ ಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ತಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದುವರವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,
ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000-0-0
Reserve and other sinking Funds „ 338,500-0-0
of which amount invested on G. P. Notes Rs. 228,898-2-0
Rates of interest on fixed deposits at Head Office 6½% for 2 Years
6% „ 1 Year
Season deposits of Rs. 1000/- & above terminable by the end of June are received at 6½% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½%; 1 ವರುಷಕ್ಕೆ ಶೇ. 6.
ಜೂನ್ ಅಂತ್ಯದ ವಳಗೆ ವ್ಯಾದಿ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಬಾ.

ನಿಯಮಿತ ಮೂಲಧನ ರೂಪ್ಯಾ	2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ.	1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ.	1,50,000/-	ಕಾಯಂ ಠೇವಣಾತಿಗಳು „	7,38,880/-

ಹೊರಗೆ ಒಟ್ಟು ಸಾಲ ದೇಣೆ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6¾ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾಸಿ, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ,
ತಾ. 18-2-'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ದೇಹಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ, ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್ಜಾ, ಪ್ಲೇಗುಜ್ವರ,

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೩—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿವಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
[illegible], ಸೀತಾರಾಘವ ವೈದ್ಯಶಾಲಾ, ಮೈಸೂರು.
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು [illegible]

ವೆಂದು ಕಾಣುತ್ತಿದೆ.

ರೈಲ್ವೆ ಮುಷ್ಕರದ ಸಮಾಪ್ತಿ

ಹಲವು ದಿನಗಳ [illegible] ಆಖೈರಿ ಹೊಂದಿತು. ಈ ರೈಲು ಮುಷ್ಕರದ [illegible] ಕ್ರಮವನ್ನು ನೋಡಿದರೆ ನಾವು [illegible] ಮುಂದಾಳುಗಳು ಸಾಕಷ್ಟು ಎಚ್ಚರಿಕೆಯನ್ನಾಗಲಿ, [illegible] ವಂತಿಕೆಯನ್ನಾಗಲಿ ತೋರಿಸಿಲ್ಲವೆಂಬುವು ಸ್ಪಷ್ಟವಾಗಿದೆ. ಯಾವ ಮುಷ್ಕರವನ್ನೂ ಸಾರ್ವಜನಿಕ ಸಹಾನುಭೂತಿ [illegible] ಮಾಡಿದರೆ ಅದು ಕೃತಕೃತ್ಯವಾಗಲಾರದು. [illegible] ಟ್ರೇಡ್ ಯೂನಿಯನ್ನ (ಕೂಲಿಕಾರರ ಸಂಘ)ಗಳು ಹೊಸ ತಾದುವು. ನಮ್ಮ ಕೂಲಿಕಾರರಿಗೆ ಅವುಗಳ ಅನುಭವವೂ ನೂತನವಾದುದು. ಅವುಗಳ ಘಟನೆ, ಅವುಗಳ ಕರ್ತವ್ಯ ಮತ್ತು ಅವುಗಳ ಪ್ರಯೋಜನವು ಇನ್ನೂ ನಮ್ಮ ಮಜೂರರಿಗೆ ತಿಳಿದಿರುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಬಲಿಸಿ ಬೆಳೆದು ಬಂದ ಯೂನಿಯನ್ನುಗಳ ಸಾರವನ್ನು ನಮ್ಮವರೂ ಚೆನ್ನಾಗಿ ಮನಸ್ಸಿಗೆ ತೆಗೆದುಕೊಳ್ಳಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒಂದು ರಶ್ಯಾ ದೇಶವಲ್ಲದೆ ಬೇರೆ ಎಲ್ಲಾ ದೇಶಗಳಲ್ಲಿ ಈ ಯೂನಿಯನ್ನುಗಳು ಹಲವು ತರದ ಅನುಭವಗಳನ್ನು ಪಡೆದಿವೆ. ಇಟೇಲಿಯಲ್ಲಿ ಇವುಗಳ ಪ್ರತಿಯಾಗಿಯೇ ಫೆಸಿಸ್ಟ ನಿರ್ಮಾಣವಾಯಿತು. ಇಂಗ್ಲಂಡಿನಲ್ಲಿ ನಡೆಯುವ ಸ್ಥಿತಿಯ ಪ್ರಗತಿಯನ್ನು ನೋಡಿದರೆ ಯೂನಿಯನ್ನಿನ ಪ್ರಾಬಲ್ಯವು ಕುಂದುತ್ತಾ ಬರುತ್ತಿದೆ. ಫ್ರಾನ್ಸ—ಜರ್ಮನಿಗಳಲ್ಲಿ ಇವುಗಳಿಗೆ ಸಾಕಷ್ಟು ಸ್ವಾತಂತ್ರ್ಯವು ದೊರಕುವುದು ಕಡಿಮೆ. ಚೆನ್ನಾಗಿ ವ್ಯವಸ್ಥೆಗೊಂಡ ರಾಷ್ಟ್ರಗಳಲ್ಲಿಯೇ ಇವುಗಳ ಸ್ಥಿತಿಯು ಹೀಗಾದರೆ

ನೋಟಗಳು.

NOTE...S.

ಲೊರ್ಡ ಇಂಚ್‌ಕೇಪ್‌ರವರ ಮಗಳು ವಿಮಾನದಲ್ಲಿ ಆತ್ಲಾಂತಿಕ್ ಹಾರುವ ಪ್ರಯತ್ನದಲ್ಲಿ ಮಡಿದುಹೋಗಲು, ಅವಳ ಅಂಶವಾದ ಅರ್ಧ ಮಿಲಿಯ ಪವನನ್ನು ಸರಕಾರದ ಸಾಲ ತೀರಿಸಲಿಕ್ಕೆಂದು ಜನಾಂಗಕ್ಕಾಗಿ ದಾನಮಾಡಿದರು. ನಮ್ಮ ದೇಶದಲ್ಲಿ ಇಷ್ಟು ದ್ರವ್ಯದ ಪ್ರಶ್ನೆ ಬಂದಿದ್ದರೆ ಹ್ಯಾಕೋರ್ಟಿನಿಂದ ಪ್ರಿವಿ ಕೌನ್ಸಿಲ್ ವರೆಗೆ ಪುರುಸತ್ತೇ ಇರುತ್ತಿರಲಿಲ್ಲ.

• • • •

ಯೇಸುಕ್ರಿಸ್ತನು ಮಾಂಸಹಾರಿಯೊ ಸಸ್ಯಾಹಾರಿಯೋ? ಡಿಪ್ಯುಟಿ ಪೋಲಿಸ ಸುಪರಿಂಟೆಂಡೆಂಟರಾದ ಮಿ| ರಾಮ ಸ್ವಾಮಯ್ಯರರ ತಲೆ ಕರಡುವಮಾಡುವ ಯೇಸುಕ್ರಿಸ್ತನ ವಿಷಯವಾದ ಹಲವು ಪ್ರಶ್ನೆಗಳಲ್ಲಿ ಇದೊಂದು ಹೊಸದು. ಬ್ಯಾಬಲಿನಲ್ಲಿ ಕಾಣುವ ಮಾಂಸಾಹಾರದ ಸಂದರ್ಭಗಳು ಮತ್ತೆ ಕೂಡಿಸಲ್ಪಟ್ಟವುಗಳೆಂದೂಹಿಸಿ, ಸಸ್ಯಾಹಾರ ಭಕ್ಷಿಸಿದುದನ್ನು ಮಾತ್ರ ನೆನಪಿಗೆ ತಂದರೆ, ಮತ್ತೆ Q. E. D. ಎಂದು ಮಾತ್ರ ಹಾಕಿದರೆ ಸಾಕು.

• • • •

ಯೇಸುಕ್ರಿಸ್ತನು ತಮಿಳನೆಂದು ಹೇಗೂ ಐಯ್ಯರರು ರುಜುಮಾಡಿಬಿಟ್ಟಿರುವರು. ದಕ್ಷಿಣ ಹಿಂದೂಸ್ಥಾನದ ಪ್ರಮುಖ ಮಠಗಳ ಪೂರ್ವಜರೊಬ್ಬರೆಂಬುದನ್ನು ರುಜುಮಾಡಿದರೆ ಮತ್ತೆ ಕ್ರಿಸ್ತೀ ಮತವು ನಮ್ಮದೇ ಆಯಿತು!

• • • •

ಯೇಸುಕ್ರಿಸ್ತನಿಗೆ ಜನಿವಾರವಿತ್ತೊ ಇಲ್ಲವೊ ಎಂಬುದನ್ನು ಕಂಡುಹಿಡಿಯಲು ಇವರು ಪ್ರಯತ್ನಿಸಿರುವರೊ ಇಲ್ಲವೊ ಎಂದು ನಮಗೆ ಗೊತ್ತಿಲ್ಲ. ಈಗಿನ ಬ್ರಾಹ್ಮಣೇತರ ಚಳವಳಿಯ ಜೋರಿನ ಮಧ್ಯದಲ್ಲಿ ಜನಿವಾರವಿರಲಿಲ್ಲವೆಂದೇ ಮಾಡಿದರೆ ಉತ್ತಮ.

• • • •

ಬರ್ಡೋಲಿಯಲ್ಲಿ ಪೋಲೀಸ್ ಸುಪರಿಡೆಂಟರು ಹಿಂದೀಯರು; ಸ್ಪೆಶಲ್ ಮೆಜಿಸ್ಟ್ರೇಟರೂ ಹಿಂದೀಯರು; ಹಿಂದೀಯರೊಡನೆ ಸಹಾನುಭೂತಿಯಿಂದಿದ್ದ ಇಂಗ್ಲೀಷ ಮೆಜಿಸ್ಟ್ರೇಟರಿಗೆ ಟ್ರಾನ್ಸ್‌ಪರು; ಅನಾದಿಕಾಲದ ಸೂತ್ರ—ಮುಳ್ಳಿನಿಂದ ಮುಳು ತೆಗೆಯಬೇಕು.

• • • •

ಕಲ್ಕತ್ತದಲ್ಲಿ ಒಬ್ಬ ಹುಚ್ಚನು ಹ್ಯಾಕೋರ್ಟಿನ ಚೀಫ್ ಜಸ್ಟೀಸರ ಹತ್ತಿರದಲ್ಲಿಯೇ ಇದ್ದ ಖುರ್ಚಿಯ ಮೇಲೆ ಹೋಗಿ ಕುಳಿತು, ಕಾನೂನಿನ ವಿಷಯ ತನಗೆ ಪ್ರತ್ಯೇಕ ಅಭಿಪ್ರಾಯವಿದೆಯೆಂದೂ, ಅದನ್ನೂ ಜ್ಯೂರಿಗೆ ತರಬೇಕೆಂದೂ ಹೇಳಿದನು.

• • • •

ಒಂದೊಂದು ಬಾರಿ ಹ್ಯಾಕೋರ್ಟಿನಲ್ಲಿ ಕೊಡಲ್ಪಡುವ ತೀರ್ಮಾನಗಳನ್ನು ನೋಡಿದರೆ ಈತನಿಗೂ ಒಂದು ಟ್ರ್ಯಾಯಲ್ ಕೊಟ್ಟು ನೋಡಬಹುದೆಂದೆನ್ನಿಸುತ್ತಿದೆ.

• • • •

ಲೊರ್ಡ ಜಾಲ್ಪರರ ಎಂಭತ್ತನೆಯ ಜನ್ಮದಿನಾಚರಣೆಯ ಸಮಯದಲ್ಲಿ ಇಂಗ್ಲೆಂಡಿನ ಲೊರ್ಡರು ವಂತಿಗೆ ಹಾಕಿ ಒಂದು 'ರೊಲ್ಸರೊಯ್ಸ' ಮೋಟರಕಾರನ್ನು ಪ್ರಧಾನಮಂತ್ರಿಗಳಾಗಿರುವ ಬಾಲ್ಡವಿನ್ನರ ಕೈಯಿಂದ ಕೊಡಿಸಿದರು. ವಂತಿಗೆ ಹಾಕಿ ಹೆಚ್ಚುಳಿದ ಹಣದಿಂದ ಬೇರಾವ ಸಾಮಾನನ್ನು ಕೊಂಡು ಕೊಡುವ ಬದಲಿಗೆ ನಗದಿಯನ್ನೇ ಕಾರಿನೊಟ್ಟಿಗೆ ಕೊಟ್ಟರು. ಬಾಲ್ಡವಿನ್ನರು ಕಾರು ವೇಗವಾಗಿ ಓಡಿಸಲಿಕ್ಕೂ ನಗದಿಯ ಫ್ಯಾನುಗಳನ್ನು ತೆರಲಿಕ್ಕೂ ಕೊಡಲ್ಪಟ್ಟಿಯದೆಂದು ಹೇಳಲು ಮರೆಯಲಿಲ್ಲ.

• • • •

ಯಾರೊಬ್ಬರಿಗಾದರೂ ಒಂದು ಕಾರನ್ನು ಬಹುಮಾನವಾಗಿ ಕೊಡುವ ಸಂದರ್ಭವು ಬಂದರೆ ಮೇಲಿನ ಮುಂಜಾಗ್ರತೆಯನ್ನು ಅವರು ತೆಗೆದುಕೊಳ್ಳುವುದು ಅವಶ್ಯವಿದೆ.

• • • •

ತೋರುವುದು. ಸ್ತ್ರೀಯ ದೇಹ ವಿಕ್ರಯದಲ್ಲಿ ಯಾವ ದೇವರಾದರೂ ತೃಪ್ತಿಪಡುವನೆಂಬುದನ್ನು ನಾವು ವಿಶ್ವಾಸಪಡಲಾರೆವು; ಅಂತಹ ದೇವರನ್ನು ಯಾರಾದರೂ ಕಲ್ಪಿಸಿಕೊಳ್ಳುವುದಾದರೆ; ಆ ಕಲ್ಪನೆಯು ತಿರಸ್ಕಾರಾರ್ಹವಾಗಿದೆ. ಸಮಾಜ ಸುಧಾರಣೆಯ ಹಲವು ಸಮಸ್ಯೆಗಳಲ್ಲಿ ಇದೂ ಒಂದು ಪ್ರಮುಖವಾಗಬೇಕಾಗಿ ನಮ್ಮ ಆಶೆ ಇದೆ.

ಶಾಲಿವಾಹನಶಕೆ೧೮೫೦ನೆಯವಿಭವಸಂದ ಆ. ಶ್ರಾವಣ ಬ೩ ಶನಿವಾರದಿಂದ ವಿಭವ ಸಂ|ರದ ಆ. ಶ್ರಾವಣ ಬ| ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಕರ್ಕಾಟಕ (ಆಟಿ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಸೂರ್ಯ ಅಸ್ತ
4	ಶನಿ	೩	೩೩. ೧	ಶತಭಿಷಾ	೧೩ ೨೮	೨೦	6.18	6 54
5	ರವಿ	೪	೩೧.೩೨	ಪೂ. ಭಾ.	೧೨. ೦	೨೧	6 18	6 54
6	ಸೋಮ	೫	೨೬.೪೬	ಉ. ಭಾ.	೬.೪೯	೨೨	6.19	6 54
7	ಮಂಗಳ	೬	೨೧.೪೪	ರೇವತಿ	೬.೪೪	೨೩	6 19	6.53
8	ಬುಧ	೭	೧೯. ೦	ಅಶ್ವಿನಿ	೩. ೨	೨೪	6.19	6.53
9	ಗುರು	೮	೧೦. ೨	ಕೃತ್ತಿಕಾ	೫೫. ೧	೨೫	6.19	6.52
10	ಶುಕ್ರ	೯	೪. ೪	ರೋಹಿಣೀ	೫೦.೪೬	೨೬	6.19	6.52

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಜುಮಲಾ ಮಳೆ.
27	85— 8	73 – 8	1—85	—
28	86— 4	74— 8	0—74	—
29	86— 4	75— 0	0—21	—
30	86— 6	75— 3	0 —15	—
31	88— 0	77— 1	0—18	—
1	87— 5	74— 7	0- 33	—
2	86— 8	74— 7	0—33	—
				69—75

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ...	7- 8	8— 4
ಹೊಸ ಗುಡ್ಡು ...	6 – 10	7— 6
ಸುಗ್ಗಿ ...	6— 5	7- 2
ಹೊಸ ರಾಶಿ ...	6— 4	6- 10
ಊರ ಅನ್ವರ್ ಬೆಸ್ತಿಗೆ ...	7-- 8	8 – 12
ರಂಗೂನು ಬೆಸ್ತಿಗೆ ಗೋಣಿ ೧ಕ್ಕೆ ...	12—12	13 14
ಎಲ್ಲೂರು ಬೆಸ್ತಿಗೆ ಮುಡಿ ೧ಕ್ಕೆ ...	7— 8	7—10
ಗೋದಿ ಗೋಣಿ ೧ಕ್ಕೆ ...	5— 8	16 8
ಹುರುಳಿ ಗೋಣಿ ೧ಕ್ಕೆ ...	8— 8	11 – 0
ಕಡಲೆ ಗೋಣಿ ೧ಕ್ಕೆ ...	13— 8	14— 0
ತೊಗರಿ ಗೋಣಿ ೧ಕ್ಕೆ ...	14 – 4	14 – 12
ತೊಗರಿಬೇಳೆ ಗೋಣಿ ೧ಕ್ಕೆ ...	19— 0	27— 0
ಉದ್ದು ಗೋಣಿ ೧ಕ್ಕೆ ...	14— 8	14 4
ಹೆಸರು ಗೋಣಿ ೧ಕ್ಕೆ ...	13— 0	14 8
ಊರು ಬೆಲ್ಲ ಖಂಡಿ ೧ಕ್ಕೆ ...	65— 0	75 – 0
ಉಪ್ಪು ಗೋಣಿ ೧ಕ್ಕೆ ...	4— 8	5 – 0
ಕೊಬ್ರಿ ಖಂಡಿ ೧ಕ್ಕೆ ...	130- 0	-
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	40— 0	43— 0
ಎಳ್ಳಿಂಡಿ ಖಂಡಿ ೧ಕ್ಕೆ ...	35— 0	42— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8— 8	9 - 10
ಎಳ್ಳೆಣ್ಣೆ ಮಣ ೧ಕ್ಕೆ ...	8— 4	8— 6
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 2	8 0
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 4	4 5
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4— 0	6 - 0
ಸಾಸಿವೆ ಮುಡಿ ೧ಕ್ಕೆ ...	9— 0	8 – 4
ಕೊತ್ತಂಬರಿ ಮುಡಿ ೧ಕ್ಕೆ ...	6— 0	7-- 8
ಕಾಫಿ ಖಂಡಿ ೧ಕ್ಕೆ ...	4 0- 0	410-- 0
ಬಳಿಗೋಟು ಅಡಿಕೆ ಖಂಡಿ ೧ಕ್ಕೆ ...	170- 0	210-- 0
ಕಾಳುಮೆಣಸು ಖಂಡಿ ೧ಕ್ಕೆ ...	510- 0	520-
ಘೋಟಕ್ಕಿ ಮಣ ೧ಕ್ಕೆ ...	70— 0	80 – 0
ಗೇರುಬೀಜ ಮುಡಿ ೧ಕ್ಕೆ ...	4— 2	4 —5
ಹಬ್ಬಿನ ಖಂಡಿ ೧ಕ್ಕೆ ...	37 – 8	40 – 0
ತಾಂಬ್ರ ತಗಡು ೧ಕ್ಕೆ ...	15- 0	16 - 8
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	20— 0	21 -
ಚೀನಿಬೆಳ್ಳಿ ಸೇರು ೧ಕ್ಕೆ ...	15— 0	—
ಹಿತ್ತಾಳೆ ತಗಡು ಮಣ ೧ಕ್ಕೆ ...	15 — 0	16— 8
ಪವನು ೧ಕ್ಕೆ ...	13— 8	13— 8
ಹುಣಸೆ ಹುಳಿ ಖಂಡಿ ೧ಕ್ಕೆ ...	75— 0	95 —

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,

ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ದಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿನಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉಚ್ಚತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಕಳಾಂ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಫುಕ್ಕಟೆಯಾಗಿ ಕಳಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್ 99 ನಾಗಾದೇವಿ ರಸ್ತೆ. ಸ್ಥಾಪಿತವಾದದ್ದು 1909 ಟೆಲಿಫೋನ್ ನಂ. 23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ, ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!
ರೋಗವೆಂಬ ವಿಧಿಆಪತ್ತನ್ನು — ಪರಿಹರಿಸಿಕೊಳ್ಳನೋಡಿ

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲ್ಪೆಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.
ಕ್ರಯ:—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.

ಭಗಿನಿಗಳೇ!

ಸೊರಗಿರುವ ಶಿಶುವಿನ ನೋಟವು
ಹೆತ್ತವರಿಗೆತ್ತಿಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?

ಹಾಗಾದರೆ ಒಡನೆ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದಮಾಘಾದ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,
22628 ನಂಬ್ರ 2. ಮಂಗಳೂರು ದ. ಕ.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಡಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಡಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರಿಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಿಸರ್ಚ್‌ಗಾರ್ಡನ್ಸ್, ಕಾಪು ದ.ಕ. } C/o ಕೆ. ವಾಮನ ಶೆಣೈ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.
131028

ರೂಪಾಯಿ 35 ಮತ್ತು ಅದಕ್ಕೆ ಮೀರಿದ ಎಸ್. ಬಿ. ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 38 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವೊಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನುಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು.

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,
331 ಅಬ್ದುಲ್ ರಹಿಮಾನ್ ರಸ್ತೆ,
ಮುಂಬಾಯಿ 3.

ಅನುಕ್ರಮಣಿಕೆ.

ತಾ. ೩ರಲ್ಲು ಗಣಪತಿ ಪ್ರತಿಮೆಯು ಕಾಣೆಯಾಯಿತು; ಇದೇನೆಂದು ತನಿಖೆ ನೋಡಲಿಕ್ಕೆ ಹಿಂದೂಗಳು ಎದುರಿಗಿದ್ದ ...

ಪ್ರಹಸನದ ವಿಷಾದಾಂತ

ವಿದೇಶ ವರ್ತಮಾನ

ಅಮೇರಿಕನ್ ಯಾರ್ನ್ ಸೆಕ್ಷನಿಗೆ ಸೇರಿದವರು, ೮೦ ಸಾವಿರ ಇಜಿಪ್ಶಿಯನ್ ಯಾರ್ನ್‌ಸೆಕ್ಷನಿನವರು. ಇನ್ನು ೩೦೦,೦೦೦ ಜನರು ನೈಗೆಯವರು.

— ಯೋರ್ಕಿನ ಆರ್ಚ್‌ಭಿಷಪರು ಕೆಂಟರ್ ಬರಿಯ ಆರ್ಚ್ ಬಿಷಪರಾಗಿ ನೇಮಕಹೊಂದಿರುವರು.

— ಹಿಂದೂಸ್ಥಾನವು ತಮ್ಮ ಕೈಯಿಂದ ತಪ್ಪಿಹೋಗಲಾರದೆಂದು ಇಂಗ್ಲಿಷ್‌ಮೇನರ ಅಂಬೋಣ. ಮುಂದಕ್ಕೆ ಯಾವ ತೊಂದರೆಯು ...

ಒಳದೇಶ ವರ್ತಮಾನ

— ರಂಗೂನಿನ ಮ್ಯಾನ್ಮೊ ಎಂಬಲ್ಲಿ ಪಿಗಟೆನಿಂಬ ಯುರೋಪಿಯನನೋರ್ವನು ಮಲಗಿದ್ದಾಗ, ಆತನನ್ನು ಯಾರೋ ತಿವಿದು ಕೊಂದು ಹಾಕಿರುವರು. ಯಾರೆಂಬುದು ಇದುವರೆಗೂ ತಿಳಿದಿಲ್ಲ.

— ಮುಂಬಾಯಿಗೆ ಬಂದಿದ್ದ ಸ್ವಿಜರ್‌ಲೇಂಡಿನ ಗಡಿಯಾರಗಳ ವ್ಯಾಪಾರಿಯೋರ್ವನು ಸುಂಕವನ್ನು ಕೊಡುವಾಗ ತನ್ನೊಡನಿದ್ದ ನಾಲ್ಕು ದೊಡ್ಡ ಕಟ್ಟುಗಳ ಬೆಲೆಯನ್ನು ಸುಳ್ಳು ಹೇಳಿದನು. ಆ ಕಟ್ಟುಗಳು ಆತನು ಹೇಳಿದ ಬೆಲೆಗಿಂತಲೂ ಮೂರುಪಾಲಷ್ಟಿದ್ದವು. ಅದಕ್ಕಾಗಿ ...

... ಯಸೋಸಿಯೇಶನಿನವರ ಒಂದು ಹೊಸ್ಟಲನ್ನು ಕಟ್ಟುವದಕ್ಕಾಗಿ, ಲೇಡಿ ಇರ್ವಿನರು ಶಂಕುಸ್ಥಾಪನೆ ಮಾಡಿದರು. ಈ ಕಟ್ಟೋಣಕ್ಕೆ ಸುಮಾರು ೭೫,೦೦೦ ರೂಪಾಯಿ ತಗಲಬಹುದಾದ ಕಾರಣ, ಅದನ್ನು ವಂತಿಗೆಯ ಮೂಲಕವಾಗಿ ಸಂಗ್ರಹಿಸಬೇಕಾಗಿ ಆವರನ್ನುವರು.

ದಕ್ಷಿಣ ಕನ್ನಡ

ಮಂಗಳೂರು: — ಇದೇ ಕಳೆದ ೨೭ನೇ ಶುಕ್ರವಾರ ದಿನ ಸಂಜೆ ೫-೩ಂಕ್ಕೆ ಇಲ್ಲಿಯ ಪತ್ರಿಕಾ ಸಂಪಾದಕರ ವ ಪ್ರತಿನಿಧಿಗಳ ಒಂದು ಸಭೆಯು ಕೊಡಿಯಾಲಬೈಲಲ್ಲಿರುವ ಶ್ರೀ ಕೆ. ಆರ್. ಕಾರಾಂತರ ಕಚೇರಿಯಲ್ಲಿ ಶ್ರೀ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಭಾಗಲಕೋಟೆಯಲ್ಲಿ ಜರಗಲಿರುವ ಪತ್ರಿಕಾಪ್ರತಿನಿಧಿಗಳ ಪರಿಷತ್ತಿಗೆ ಮಂಗಳೂರಿನಿಂದ ಪ್ರತಿನಿಧಿಗಳಾಗಿ 'ವಸಂತ' ಪತ್ರಿಕೆಯ ಸಂಪಾದಕರಾದ ಶ್ರೀ ಕೋಟ ಶಿವರಾಮ ಕಾರಂತರನ್ನು ಕಳುಹಿಸಬೇಕೆಂದು ನಿರ್ಣಯವಾಯಿತು.

ಉರ್ವ ಕೆಥೋಲಿಕ್ ಚರ್ಚಿನಿಂದ ಮುಖದ ಖನಿ ಜಂಕ್ಷನಿನ ವರೆಗಿನ ಸುಲ್ತಾನ್ ಬತ್ತೇರಿ ಮಾರ್ಗದ ಅಂಶವನ್ನು ದುರುಸ್ತಿ ಬಗ್ಗೆ ಕಳೆದ ಜುಲಾಯಿ ತಾರೀಕು ೩೦ರಿಂದ ಆಗೋಸ್ತ ತಾರೀಕು ೮ರ ವರೆಗೆ ಮುಚ್ಚು ...

ಗಳಲ್ಲಿ ನೆರೆಬಂದು ಮಾರ್ಗದಲ್ಲಿ ನೀರು ಬಂದಿದೆಯೆಂದೂ ವರ್ತಮಾನವೂ ಇದೆ.

ಮಂಗಳೂರಿನಲ್ಲಿ ಕೆಲವು ದಿನಗಳಿಂದ ಮೈಸೂರು ಅತ್ತಕಡೆಯ ಅಲ್ಪ ವಯಸ್ಸಿನ ಶ್ರೀ ಕೆ. ಯಮುಗಿರಿಯಮ್ಮ ಎಂಬವರು ಬಂದು ನವರಸಭರಿತವಾದ ನವೀನ ಹರಿಕಥೆಗಳನ್ನು ಮಾಡಲು ಪ್ರಾರಂಭಿಸಿರುವರು. ಇವರಿಗೆ ಸಿಕ್ಕುವ ವಿಶೇಷ ಪ್ರೋತ್ಸಾಹವನ್ನು ನೋಡಿದರೆ ಹರಿಕಥೆಯೇನೋ ಚೆನ್ನಾಗುವದೆಂದೇ ಹೇಳಬೇಕಾಗಿದೆ. ಇದಲ್ಲದೆ ...

ಕಟ್ಟೋಣವು ಇದಕ್ಕೆ ಆವಶ್ಯ. ಈ ಸಂಗತಿಗೆ ತಾಲೂಕು ಬೋರ್ಡಿನವರ ನಿಗಾ ಮುಖ್ಯವಾಗಿರುತ್ತದೆ. ಈ ಶಾಲೆಗೆ ಬರುವ ಬಾಲಕರಿಗೆ ಅಲ್ಲದ ಸಲ್ಲದ ತಪ್ಪು ಸಂಗ್ರಹದಿಂದ ತಪ್ಪಿಸುವ ಪದ್ಧತಿ ಈಚೆಗೆ ತಲೆದೋರುತ್ತದೆ. ಇದರಲ್ಲಿ ಬೋರ್ಡಿನವರ ತನ್ನಿಯು ಬಹಳ ಅವಶ್ಯ.

ಹುಡುಗಿಯರ ಶಾಲೆಯು ಈಗಿನ ಕಟ್ಟೋಣದಿಂದ ಬೇರೆ ಕಡೆಗೆ ವಯ್ಯುವರೆ ಅಗತ್ಯವಿರುತ್ತದೆ. ಆ ವಿಷಯ ಬೋರ್ಡಿನವರ ಇತ್ಯರ್ಥವು ಬೇಗನೇ ಆಗ ಬೇಕಾಗಿರುತ್ತದೆ.

ಪಾಣೆಮಂಗಳೂರು: — ...

ಉಡುಪಿ: — ...

ಅರ್ಕುಳಪುದು: — ...

ಇರ್ಗಾಮ: — ...

ಕುಂಬಳೆ: — ...

ಉಪ್ಪಿನಂಗಡಿ: — ...

ಕುಂಜಿಪಳ್ಳ: — ...

ಮಂಜೇಶ್ವರ: — ...

ಹೊಸದುರ್ಗ: — ...

ರಾಗದ ಪೆಟ್ಟಿಗೆಗಳು

ನಾಟಕ ಸಾಮಾನು:—ತಬಲ, ಪತ್ತ ವಗೈರೆ.



ಗೋಪಾಳ ಸಖಾರಾಮ ಮತ್ತು ಕಂಪೆನಿ.

ತಯಾರಾಗಿವೆ ತಯಾರಾಗಿವೆ

ಶಾಲಾ ಹುಡುಗರಿಗೆ ಬೇಕಾದ

ಶಾರದಾ ಛಾಪಖಾನೆ, SHARADA PRESS.
ರಥಬೀದಿ, ಮಂಗಳೂರು. MANGALORE.

ಮಿತವಾದ ಬೆಲೆಗೆ ಅಮಿತವಾದ ಬೆಳಕು.



300 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನುಗಳು, ಸ್ಟೌಗಳು, ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪರಟು ಗುಂಡಿಗಳು, ರೋಜಾ ಹುವ್ವಿನ ತುರಾಯಿಗಳು, ಬ್ಯಾಟರಿಗಳು, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿ.

ಕ್ರಯ ಪಟ್ಟಿಗೆ ತಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ—
ಎ. ಆರ್. ಖಲೀಲ್,
ಟೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾ ಯಿ ತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
೧—೯—೨೭ ಸಳ್ಳೆಬೈಲ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ್.

Batliwalla's Preparations Cover All Your Needs.
A NAME THAT MERIT HAS MADE FAMOUS.
೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ
ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲಾರ ... —ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲಾ ... —ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲಾ ... —ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲಾರ ... —ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ... —ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ... ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ... ರೂ. ೦—೬—೦
ರೂ. ೦—೬—೦. LIBERAL DISCOUNT TO TRADE
...—CAWASHAPUR, BOMBAY.
... ಎಚ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯವರ ಲೋಧ್ರ
ಗರ್ಭಾಶಯ ರೋಗನಿವಾರಿಣಿ.

... ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... 'ಅಮೃತಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧವು ... ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಪ್ರತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ಮುಂತಾದ ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ... ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0

ವಿಳಾಸ:— ಕೇಸರೀ ಕುಟೀರಂ,
TELEGRAMS:—KESARI ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
ಮಂಗಳೂರು ಏಜಂಟರು:— ... ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ ಇನಾಂ.

ಈ ನಕ್ಷೆಯಲ್ಲಿ ಕಾಣುವ ... ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟ ಭಂಗಾರದ ... ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,
ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್
(15 ಬಹುಮಾನಗಳ ಸಹಿತ ರೂ. 4—8—0)
ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ.

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ ಮೂಮೆಂಟ್ ಮಾಡಿರುವದು. ಧೂಳಿ, ಧೊಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌನ್‌ಟನ್‌ಪೇನಾ 1, ಹೇರಾಯಿಲ್ ಬಾಟಲ್ 1, ವಜ್ರದ ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಣಿ 1, ಸುವಾಸನೆ ಸೋಪು 1, ಪೇನಾ ಕತ್ತಿ 1, ರೋಲ್ಡ್‌ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್‌ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.
THE ENGLISH EMPORIUM,
P.O. box 105 MADRAS.

ದರು. ಬಂದವರಿಬ್ಬರು ಹಿಂದಿನಿಂದ ಹೋದರು. ದೂರದಲ್ಲಿರುವ ಅಂಗಡಿಗೆ ಹೋಗುವಾಗ ಗಂಡನಿಲ್ಲ. ಉಗ್ರಾಣಿಗೆ ನೀನು ಹೋಗು ಎಂದು ಬಂದವರಿಬ್ಬರು ಹೇಳಿದರಂತೆ. ಉಗ್ರಾಣಿಗೆ ಅನುಮಾನವಾಯಿತು. ಅವನು ಗಂಡನು ಬರುವ ವರೆಗೆ ನಿಂತು ಆ ಹೆಂಗಸನ್ನು ಅವನ ಸ್ವಾಧೀನ ಬಿಟ್ಟು ಬಂದನು. ರಾಜೇಶ್ರೀ ಬೇಕಲ ನರಸಿಂಗರಾಯರು ಜಾಗ್ರತೆ ಮಾಡದೆ ಇದ್ದರೆ ಈ ಹೆಂಗಸಿನ ಅವಸ್ಥೆ ಏನಾಗುತ್ತಿತ್ತೋ? ಸ್ವಾಮಿ ಕಾರ್ಯ ಧುರಂಧರನಾದ ಆ ಉಗ್ರಾಣಿಯು ಮಾಡಿದ ಕೆಲಸವು ಸ್ತುತ್ಯವಾಗಿದೆ. ಗಂಡಹೆಂಡಿರಿಬ್ಬರು ಡಿಪ್ಯುಟಿ ತಹಸೀಲದಾರರಿಗೆ ಪರಮಾತ್ಮನು ಪೂರ್ಣ ಅನುಗ್ರಹವನ್ನೀಯಲಿ ಎಂದು ಹೊರಟು ಹೋದರಂತೆ. ಸ್ತುತ್ಯ.

ಮೂಲಿಕೆ:—ಕಳೆದ ನವಯುಗದಲ್ಲಿ ಪುರವಾಸಿ ಎಂಬವರು ಮಂಗಳೂರು ಮೈಲ್ ಬ್ಯಾನನ್ನು ಮುಲ್ಕಿಗೆ ಕೊಂಡುಹೋಗದೆ ಗುರುಪುರ ಪೊಳಲಿ, ಮೂಡಬಿದ್ರೆ ಕಾರ್ಕಳ ದಾರಿಯಾಗಿ ಕೊಂಡುಹೋಗಬೇಕೆಂದು ಬರೆದಿರುವರು. ಮೂಲಿಕೆ ದಾರಿಯಾಗಿ ಊರುಗಳೇ ಇಲ್ಲವಂತೆ. ಇದನ್ನು ನೋಡುವಾಗ ಇವರಿಗೆ ದಕ್ಷಿಣ ಕನ್ನಡದಲ್ಲಿ ಮಂಗಳೂರಿನಿಂದ ಮೂಲಿಕೆ ದಾರಿಯಾಗಿ ಅನೇಕ ದೊಡ್ಡ ಊರುಗಳುಂಟೆಂಬ ಸಂಗತಿ ಗೊತ್ತೇ ಇಲ್ಲವೆಂದು ಕಾಣುತ್ತದೆ. ಈ ದಾರಿಯಲ್ಲಿ ಮಂಗಳೂರಿನಿಂದ ಹೊರಟರೆ ಉಡುಪಿಯ ವರೆಗೆ ಜನ ಭರಿತವಾದ ಕೂಳೂರು, ಪಣಂಬೂರು ಸುರತ್ಕಲ್, ಹಳೆ ಅಂಗಡಿ, ಮೂಲಿಕೆ, ಪಡುಬಿದರೆ, ಹೆಜಮಾಡಿ, ಎರ್ಮಾಳ, ಕಾಪು, ಕಟ್ಟಪಾಡಿ, ಉದ್ಯಾವರ ಎಂಬ ಊರುಗಳು ಇವೆಯೆಂದು ಇವರ ಆಲೋಚನೆಗೆ ಬಾರದೆ ಇದ್ದದು ಪರಮಾಶ್ಚರ್ಯವೆಂದು ಕಾಣುತ್ತದೆ. ಅಥವಾ ತಮ್ಮ ಸ್ವಾರ್ಥಪರತೆಯಿಂದ ತಿಳಿದು ತಿಳಿಯದವರಂತೆ, ಬರೆದಿರಬಹುದು. ಆದರೆ ರೈಲುವೇ ಬೋರ್ಡಿನವರು ಈ ಪುರವಾಸಿಯ ಸೂಚನೆಯನ್ನು ಅಂಗೀಕರಿಸದೆ ಮಂಗಳೂರಿನಿಂದ ಮುಲ್ಕಿ ದಾರಿಯಾಗಿ ಉಡುಪಿ ಮೈಲಿಗೆ ಕೊಂಡು ಹೋಗುವದೇ ದೇಶದ ಅಭಿವೃದ್ಧಿಗೆ ತಕ್ಕದಾಗಿದೆ, ಕಾರ್ಕಳದಲ್ಲಿ ತಾಲೂಕು ಖಚೇರಿ ಇದ್ದರೂ ಮುನಿಸಿಫ್ ಕೋರ್ಟು ಇದ್ದರೂ ಆ ಊರಿನಲ್ಲಿ ಯಾವ ತರದ ಅಭಿವೃದ್ಧಿಯೂ ಕಂಡುಬರುವುದಿಲ್ಲ. ಯಾವ ತರದ ಆದಾಯವೂ ರೈಲ್ವೆಗೆ ಸಿಕ್ಕದೆ ಇರುವ ಈ ಕಾರ್ಕಳ ಊರಿನ ದಾರಿಯಾಗಿ ಕೊಂಡು ಹೋಗಿ ಏನೂ ಪ್ರಯೋಜನ ಸಿಕ್ಕಲಾರದು.

'ಮುಲ್ಕಿ ಊರ ನಿವಾಸಿ.'

ಉಪ್ಪಿನಂಗಡಿ:—ಕಳೆದ ತಿಂಗಳ ತಾ. ೨೭ನೇ ಶುಕ್ರವಾರ ದಿವಸ ಇಲ್ಲಿಂದ ೧೨ ಮೈಲು ದೂರವಿರುವ ಹೊಸ್ಮಾಟವೆಂಬಲ್ಲಿ ಕಡಬದಲ್ಲಿರುವ ಪೆರಾಜೆ ರಾಮಪ್ಪೈಗಳವರ ಮಗ ಶ್ರೀನಿವಾಸಪ್ಪೈಗಳೂ ಇನ್ನು ೫ ಜನರು ನದಿಯನ್ನು ದಾಟುವಾಗ ದೋಣಿಯು ನೀರಿನ ಸೆಳತಕ್ಕೆ ಸಿಲುಕಿ ಮಗುಚಿಬಿತ್ತು. ದೋಣಿಯವರಲ್ಲಿದ್ದ ಪೈಕಿ ೩ ಜನರು ಬಹಳ ಕಷ್ಟದಿಂದ ಈಜಾಡಿ ದಡವನ್ನು ಸೇರಿದರು. ಉಳಿದ ಮೂವರಿಗೆ ಈಜಾಡಲಿಕ್ಕೆ ಬಾರದೆ ಮಗುಚಿಬಿದ್ದ ದೋಣಿಯ ಮೇಲೆ ಕೂತು ದೋಣಿಯು ಮುಂದರಿಸುತ್ತಿರುವಾಗ ನದಿಯಲ್ಲಿದ್ದ ಬಂಡೆಕಲ್ಲಿಗೆ ಹೊಡೆದು ಈ ಮೂರು ಜನರು ನೀರಿನಲ್ಲಿ ಬಿದ್ದರು. ಅವರಲ್ಲಿ ಒಬ್ಬನು ಬದುಕಿರುವನು. ಇಬ್ಬರು ನೀರಿನಲ್ಲಿ ಮುಳುಗಿಹೋದರು. ಇವರಿಬ್ಬರ ಶವಗಳು ಕಳೆದ ಮಂಗಳವಾರ ಸಿಕ್ಕಿದವು.

ಉಪ್ಪಿನಂಗಡಿಯಲ್ಲಿ ಎರಡೂ ನದಿಗಳು ನೆರೆಯಿಂದ ತುಂಬಿವೆ. ಮಳೆಯೂ ಗಾಳಿಯೂ ವಿಪರೀತ ಉಂಟು. ೧೯೨೩ನೇ ಇಸ್ವಿಯ ನೆರೆ ಎಂಬಂತೆ ಕಾಣುತ್ತದೆ.

ವಿ ವಿ ಧ ಸ ಮಾ ಚಾ ರ ಗ ಳು.

ಬೆಂಗಳೂರಿನ ವಿದ್ಯಾರ್ಥಿಗಳ ಪ್ರಚಂಡ ಮುಷ್ಕರ.

ಒಂದು ಶಾಲೆಯ ಕಟ್ಟೋಣದ ಮಧ್ಯದಲ್ಲಿ ಒಂದು ಗಣಪತಿ ಪ್ರತಿಮೆಯ ವಿಗ್ರಹವಿದ್ದಿತು. ಆ ಶಾಲೆಯ ಎದುರಿನಲ್ಲಿಯೇ ಇದ್ದ ಮಸೀದಿಗೆ ವಿಗ್ರಹವು ಎದುರಾಗುವುದಾಗಿ, ಶಾಲೆಯ ಹಿಂದೂ ವಿದ್ಯಾರ್ಥಿಗಳು ಪ್ರತಿಮೆಯನ್ನು ಅಲ್ಲಿಂದ ತೆಗೆಯಬೇಕೆಂದು ಹೇಳಿದರೂ ಶಾಲಾಧಿಕಾರಿಗಳು ವಿಗ್ರಹವನ್ನು ಅಲ್ಲಿಂದ ತೆಗೆಯಲಿಲ್ಲ. ಇದರಿಂದ ಹಿಂದೂ ಮತಕ್ಕೆ ಅವಮಾನವಾಯಿತೆಂದು, ವಿಗ್ರಹವನ್ನು ಬೇರೆ ಕಡೆಯಲ್ಲಿ ಸ್ಥಾಪಿಸಬೇಕೆಂದೂ, ಹಿಂದೂ ಹುಡುಗರೆಲ್ಲರೂ ಮುಷ್ಕರವನ್ನು ಹಾಕಿದರು. ಇದೇ ಮುಷ್ಕರದ ಮೂಲ ಕಾರಣ.

ತಮ್ಮ ಮುಷ್ಕರವನ್ನು ಶಾಲೆಯಲ್ಲಿ ಮಾತ್ರವೇ ಪ್ರದರ್ಶಿಸದೆ ರಸ್ತೆಗಳಲ್ಲಿ ಚಲಾವಣೆಗೆ ಅಡ್ಡಿಯನ್ನುಂಟುಮಾಡಿದ ಕಾರಣ ಪೋಲೀಸರು ಒಬ್ಬಿಬ್ಬರನ್ನು ಹಿಡಿದು ಕೈದುಮಾಡಿದರು. ತಮ್ಮವರಲ್ಲಿ ಕೆಲವರನ್ನು ಕೈದುಮಾಡಿದುದರಿಂದ ಅವರನ್ನು ಬಿಡುಗಡೆ ಮಾಡಿದ ಹೊರತು ತಾವು ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲವೆಂದು ಪ್ರತಿಮೆಯ ಎದುರಿನಿಂದ ವಿದ್ಯಾರ್ಥಿಗಳು ಕದಲಲಿಲ್ಲ. ಮೈಸೂರಿನಿಂದಲೂ ಹಲವು ವಿದ್ಯಾರ್ಥಿಗಳು ಬಂದು ಸೇರಿರುವರು. ಒಂದೇ ಶಾಲೆಯಲ್ಲಿದ್ದ ಮುಷ್ಕರವು ಸೋಮವಾರ ದಿನ ಎಲ್ಲೆಡೆಗಳಲ್ಲಿಯೂ ಹರಡಿತು. ಮಂಗಳವಾರ ಮಧ್ಯಾಹ್ನ ವಿದ್ಯಾರ್ಥಿಗಳು ಇನ್ನು ಇತರರು ಒಟ್ಟು ಕೂಡಿ ಲಂಡನ್ ಮಿಶನ್ ಹೈಸ್ಕೂಲಿನ ಸುತ್ತಲೂ ಸೇರಿ ಶಾಲೆಯ ಮೇಲೆ ಕಲ್ಲುಗಳನ್ನು ಬಿಸಾಡಿ ತೊಂದರೆ ಗೊಳಿಸಿದರು. ಅಷ್ಟರಲ್ಲಿ ತುಮಕೂರು ಮತ್ತು ಮೈಸೂರಿನ ವಿದ್ಯಾರ್ಥಿಗಳು ಬಂದು ಸೇರಿ ಇನ್ನಷ್ಟು ಗಲಭೆಗೆ ಪ್ರಾರಂಭವಾಯಿತು. ಅವರ ಕೂಟವನ್ನು ಮೂರು ಪಂಗಡಗಳಾಗಿ ಮಾಡಿದರು. ಒಂದು ಪಂಗಡದವರು ಸೀದಾ ದಿವಾನರ ಭವನಕ್ಕೆ ಹೋಗಿ ಬಲಾತ್ಕಾರದಿಂದ ಒಳಗೆ ಪ್ರವೇಶಿಸಿದರು. ದಿವಾನರು ಬಂದು ನೋಡಲಾಗಿ ಹೊರಗೆ ಹುಡುಗರ ಗುಂಪು ವಿಶೇಷವಾಗಿ ನೆರೆದಿದ್ದುದರಿಂದ ತಾನು ಅವರೆಲ್ಲರನ್ನು ಕಬ್ಬನ್ ಪಾರ್ಕಿನಲ್ಲಿ ಕಾಣುವೆನೆಂದರು.

ಕೆಲವರು ಸೆಂಟ್ರಲ್ ಜೈಲಿನ ಕಡೆಗೆ ಹೋಗಿ ಅಲ್ಲಿ ಬಲಾತ್ಕಾರದಿಂದ ಜೈಲಿನಲ್ಲಿ ನುಗ್ಗಿದರು. ಸೈನಿಕರು ಕುದುರೆಗಳ ಮೇಲೆ ಕುಳಿತು ಬಂದರು. ಹುಡುಗರು ಅವರ ಮೇಲೆ ಕಲ್ಲುಗಳನ್ನೆಸೆದು ಹಲವರನ್ನು ಗಾಯಗೊಳಿಸಿದರು.

ಸಾಯಂಕಾಲ ದಿವಾನರ ಬಂಗಲೆಯ ಹತ್ತಿರವೇ ಹತ್ತು ಸಾವಿರ ವಿದ್ಯಾರ್ಥಿಗಳು ಸಭೆಕೂಡಿದರು. ಆದರೆ ಸೈನಿಕರು ಬಂದದ್ದನ್ನು ಕಂಡು ಕೂಡಲೇ ಚದರಿದರು. ಮುಷ್ಕರಗಾರರ ಸಂಖ್ಯೆಯು ಬೆಳೆಯುತ್ತಾ ಬಂದು ಅವರು ಕೊಡುವ ತೊಂದರೆಗಳು ಅಧಿಕವಾದುದರಿಂದ ಜೈಲಿನಲ್ಲಿ ಬಂಧಿಸಿದವರನ್ನು ಬಿಟ್ಟುಬಿಟ್ಟರು.

ಸೋಮವಾರ ದಿನ ರಾತ್ರೆ ಹಿಂದೂಮುಸಲ್ಮಾನರೊಳಗೆ ಜಗಳವಾಗಿ ೫೦ ವಿದ್ಯಾರ್ಥಿಗಳಿಗೆ ಪೆಟ್ಟಾಯಿತು. ರಾತ್ರೆ ಗಣಪತಿ ಪೂಜೆಯನ್ನು ಮಾಡಿ ಹಿಂದುಗಳು ಮೆರವಣಿಗೆ ಹೊರಟರು. ಮುಸಲ್ಮಾನರು ಬಂದು ಅವರನ್ನು ಮುತ್ತಿ ಹೊಡೆದರು. ಅಷ್ಟರಲ್ಲಿ ಮಿಲಿಟರಿಯವರು ಬಂದು ಜಗಳವನ್ನು ನಿಲ್ಲಿಸಿ ಜಖಮಾದವರನ್ನು ಆಸ್ಪತ್ರೆಗೆ ಕೊಂಡೊಯ್ದರು.

ಚಿಕ್ಕಮಗಳೂರಿನ ದಿ ಸಿ. ಪಿ. ಸಿ. ಮೋಟರ ಸರ್ವಿಸಿನ

ಕಳೆದ ೩೦ನೇ ಜೂನಿಗೆ ಅಂತ್ಯವಾಗುವ ೮ ತಿಂಗಳ ಮತ್ತು ೫ ದಿನಗಳ ಆದಾಯ ವೆಚ್ಚದ ವಿವರ.

ಆ ದಾ ಯ.

ಮೋಟಾರಿನಲ್ಲಿ ಚಲಾವಣೆಯಾದ ಜನರಿಂದ ಸಿಕ್ಕಿದ ಟಿಕೇಟು ಚಾರ್ಜು, ಲಗ್ಗೇಜು ಚಾರ್ಜು ಮೊದಲಾದವುಗಳು ೬೯,೮೬೭—೬—೧೦, ಇತರ ಜಮಾ ೮೦—೧೦—೦, ಆದಾಯ—೬೯,೯೪೮—೦—೧೦.

ವೆ ಚ್ಚ.

ಮೋಟರಿಗೆ ಪೆಟ್ರೋಲ್, ಲುಬ್ರಿಕೆಂಟ್, ರಿಪೇರಿ ವಗೈರೆ ಖರ್ಚು ರೂ. ೨೪,೮೧೩—೦—೧, ಟೋಲಗೇಟು ಫೀಸು, ಲೈಸೆನ್ಸ್ ಫೀಸು ವಗೈರೆ ೩,೮೧೭—೧೧—೪, ಸಂಬಳ ಮತ್ತು ಕಮಿಶನ್ ೧೧,೦೬೪—೧೩—೬ ಟಪ್ಪಾಲು ಖರ್ಚು, ಪ್ರಿಂಟಿಂಗ್ ಮತ್ತು ಇತರ ಖರ್ಚು ೧೬೧೭—೩—೪, ಬಾಡಿಗೆ, ಡಿಪ್ರಿಸಿಯೇಶನ ರಿಫಂಡು ಮೊದಲಾದ ಖರ್ಚಿನ ಬಗ್ಗೆ ರೂಪಾಯಿ ೧೧,೨೮೧—೧೫—೩, ವೆಚ್ಚ—೫೨,೬೦೫—೧೧—೬ ಕಳ್ದು ಒಟ್ಟಾರೆ ಲಾಭ ೧೭,೩೪೩—೫—೪,

(ಸಹಿ) ಫ್ಯುರೆಡೂನ್ ಸೊರಾಬ್, ಸೊರಾಬ್ ಎಫ್ ಸೊರಾಬ್, ಬಿ. ಎನ್. ಹನುಮಂತಪ್ಪ, ಕೆ. ಸೂರಪ್ಪ ಸೆಟ್ಟಿ—ಪ್ರೊಪ್ರೈಟರ್ಸ್.
(ಸಹಿ) ಸಿ. ಶ್ರೀಪಾದ ರಾವ್, ಅಕೌಂಟೆಂಟ್,
ದಿ. ಸಿ. ಪಿ. ಸಿ. ಮೋಟಾರ್ ಸರ್ವಿಸ್.

ಮದರಾಸು ಸರಕಾರದ ರೆವಿನ್ಯು ಮೆಂಬರರಾದ ಹೊನರೇಬಲ್ ಸರ್ ನೋರ್ಮನ್ ಮಾರ್ಜೋರಿಬೆಂಕ್ಸ್ ಕೆ. ಸಿ. ಐ. ಜಿ., ಸಿ. ಎಸ್. ಐ., ಐ. ಸಿ. ಯಸ್‌ರವರಿಗೂ ನಮ್ಮ ಜಿಲ್ಲೆಯ ಶ್ರೀಯುತ ಕೆ. ಆರ್. ಕಾರಾಂತ, ಎಮ್. ಎಲ್. ಸಿ.ಯವರಿಗೂ ನಡೆದ ಪತ್ರವ್ಯವಹಾರ.

ಕೆ. ಆರ್. ಕಾರಾಂತ ಎಮ್. ಎಲ್. ಸಿ. ಮಂಗಳೂರು,

ಜುಲಾಯಿ ತಾ. 24-7-1928.

ಅಯ್ಯಾ!

ದಕ್ಷಿಣ ಕನ್ನಡ ಭೂಮಾಲಿಕರ ಸಂಘದ ಕಾರ್ಯಕಾರಿ ಮಂಡಳಿಯವರು ಜಿಲ್ಲೆಯಲ್ಲಿ ಈಗ ನಡೆಯುತ್ತಿರುವ ರಿಸರ್ವೆಯ ಫಲಿತಾಂಶವಾಗಿ ಉಂಟಾಗುವ ಕೆಲವು ಸಂಕಟಗಳ ಕುರಿತಾಗಿ ತಮಗೆ ತಾ. ೩೦-೪-೨೮ರಲ್ಲಿ ಅರ್ಪಿಸಿದ ಮೆಮೊರಾಂಡಮಿನ ಕುರಿತು ತಾವು ಈಗ ವಿಚಾರಿಸುತ್ತಿರಬಹುದು. ಅದೇ ಸಂಬಂಧವಾಗಿ ಆ ಕುರಿತು ತಾವು ಒಂದು ನಿರ್ಣಯವನ್ನು ಮಾಡುವ ಮೊದಲು ಮದರಾಸಿನಲ್ಲಿ ಅಗಸ್ಟದಲ್ಲಿ ಫ್ಯಾನೆನ್ಸ್ ಕಮಿಟಿಯು ಕೂಡುವಾಗಾಗಲಿ ಅಥವಾ ಸಪ್ಟಂಬರದಲ್ಲಿ ಕೌನ್ಸಿಲ್ ಸೆಶ್ಶೆನಿನ ಸಮಯದಲ್ಲಾಗಲಿ ನನಗೆ ಭೇಟಿಯನ್ನು ಕೊಡುತ್ತಿದ್ದರೆ, ತಮಗೆ ಸಹಾಯಕವಾಗುತ್ತಿತ್ತು. ನಾನು ಸ್ವತಃ ಅಲ್ಲಲ್ಲಿಗೆ ಹೋಗಿ ವಿಷಯಗಳನ್ನು ತಿಳದುಕೊಂಡು ಇದರಲ್ಲಿ ಸ್ವಲ್ಪ ಆಸಕ್ತಿಯನ್ನು ತೋರುವದರಿಂದಲೇ ಹೀಗೆ ಹೇಳುತ್ತಿರುವೆನು. ಬೇರೆ ಎಲ್ಲಿಯೂ ಇಲ್ಲದ ಹಳೆ ತೆಂಗೆಯೆಂದೂ ಕಂದಾಯವೆಂದೂ (ಕಳೆದ ೨೫ ವರುಷಗಳ ಹಿಂದಿನಿಂದ ಇಂದಿನ ವರೆಗಿನ) ಬಹಳ ಹಣವನ್ನು ಸ್ವೇಚ್ಛೆಯಿಂದ ವಸೂಲು ಮಾಡುವುದರಿಂದ ನಿಜವಾಗಿಯೂ ರೈತರಿಗೆ ಆಗುವ ತೊಂದರೆಗಳನ್ನು ತಮಗೆ ಖಚಿತಗೊಳಿಸಬೇಕೆಂದಿರುವೆನು. ತಾವು ನನಗೆ ಭೇಟಿಕೊಡುವಿರೇ ಮತ್ತು ಎಲ್ಲಿ ಎಂಬುದನ್ನು ನಾನು ತಿಳಿಯಲೇ? ಇಷ್ಟರ ವರೆಗೆ ವಸೂಲುಮಾಡದ ಸ್ಥಳಗಳಲ್ಲಿ ಮಾಡಬೇಕಾದ ವಸೂಲಿಯನ್ನು ತಾವು ಕೊನೆಯ ನಿರ್ಣಯವನ್ನು ಮಾಡುವ ವರೆಗೆ ಮುಂದರಿಸಿಡಬೇಕೆಂದು ತಮ್ಮನ್ನು ಕೇಳಿಕೊಳ್ಳುವೆನು. ತಾವು ದಯಾಳು ಸ್ವಭಾವದ ಮತ್ತು ಕಷ್ಟಗಳನ್ನು ಸಹಿಸಿಯಾದರೂ ಸ್ವತಃ ಸಂಗತಿಗಳನ್ನು ತಿಳಕೊಳ್ಳಲು ಅಪೇಕ್ಷಿಸಿದ, ಮಿ॥ ಫರ್ರರನ್ನು ಇಲ್ಲಿಗೆ ಕಳುಹಿಸಿದುದರ ಸಲುವಾಗಿ ತಮಗೆ ಕೃತಜ್ಞನಾಗಿರುವೆನು.

ಇತಿ,
(ಸಹಿ) ಕೆ. ಆರ್. ಕಾರಾಂತ.

(ಉತ್ತರ)

ಸ್ಟೋನ್ ಹೌಸ್ ಹಿಲ್,
ಉದಕಮಂಡಲ, 27ನೇ ಜಲಾಯಿ 1928.

ಪ್ರಿಯಕಾರಾಂತರೆ,

ನಮ್ಮ ತಾರೀಕು 24ನೇ ಜುಲಾಯಿಯ ಪತ್ರವು ತಲಪಿತು. ದಕ್ಷಿಣ ಕನ್ನಡದಲ್ಲಿ ಆಗುವ ರಿಸರ್ವೆಯ ಅತಿಕ್ರಮದಲ್ಲಿ ಮಿ. ಫರ್ರರ ರಿಪೋರ್ಟು ಬಂದೊಡನೆ ಸರಕಾರದವರು ವಿಮರ್ಶೆಯಿಂದ ಮುಂದಿನ ಹುಕುಂ ಕೊಡುವ ವರೆಗೆ ವಸೂಲಿಯನ್ನು ನಿಲ್ಲಿಸಲು ಸೂಚನೆಯು ಕೊಡಲಾಗುವದು. ಮಿ. ಫರ್ರರು ರಿಪೋರ್ಟು ಮಾಡಿರುವರೆಂದು ತಿಳಿದು ಬಂದರೂ ಅದು ಇನ್ನು ಸರಕಾರದವರಿಗೆ ಸಿಕ್ಕಿಲ್ಲ. ನಾನು ಮದರಾಸಿಗೆ ಹಿಂತಿರುಗಿದ ಮೇಲೆ ನಿಮಗೆ ಇನ್ನೊಮ್ಮೆ ಬರೆಯುವೆನು.

ಇತಿ,
(ಸಹಿ) ಎನ್. ಮಾರ್ಜೋರಿ ಬ್ಯಾಂಕ್ಸ್.

ಬಾರ್ಡೋಲಿ ಮುಂದಾಳುಗಳ ಶರ್ತಗಳು ನಿರಾಕರಿಸಲ್ಪಟ್ಟವು.

ಮುಂದಾಳುಗಳನ್ನು ಸೆರೆಹಿಡಿದರೆ ಬಾರ್ಡೋಲಿ ಸತ್ಯಾಗ್ರಹ ನಿಲ್ಲಿಸಲ್ಪಡುವ ಹಾಗಿಲ್ಲ.

ಮುಂಬಾಯಿ ಕೌನ್ಸಿಲಿನಲ್ಲಿ, ಬಾರ್ಡೋಲಿ ಸತ್ಯಾಗ್ರಹಿಗಳನ್ನು ಬೆದರಿಸಿ ಗವರ್ನರರು ಉದ್ದವಾದ ಭಾಷಣವನ್ನು ಮಾಡಿದರೂ, ಸತ್ಯಾಗ್ರಹಿಗಳ ಮೇಲೆ ಮಾತ್ರ ಯಾವ ಪರಿಣಾಮಕಾರಿಯೂ ಆಗಲಿಲ್ಲ. ಸದ್ಯಕ್ಕೆ ಯಾವ ಒಪ್ಪಂದವೂ ನಡೆಯುವದೆಂದು ಹೇಳಲು ಕಾರಣಗಳಿರಲಿಲ್ಲ. ಆದರೆ ರಾ॥ ರಾಮಚಂದ್ರ ಭಟ್ಟರು ತನ್ನ ಸ್ವಂತ ಕೈಯಿಂದ ಏರಿಸಿದ ತೆಂಗೆಯ ಹಣವನ್ನು ಕೊಡಲೊಪ್ಪಿದ ಕಾರಣ ಸರಕಾರದವರು ಸ್ವತಂತ್ರ ಮತ್ತು ಬಹಿರಂಗವಾದ ವಿಚಾರಣೆಯನ್ನು ಮಾಡುವರು; ವಲ್ಲಭಾಯಿಯವರ ಶರ್ತಗಳಂತೆ ಕೈದಿಗಳನ್ನು ಬಿಡುವರು; ಏಲಮು ಹಾಕಿದ ಆಸ್ತಿಗಳನ್ನು ಹಿಂದಕ್ಕೆ ಕೊಡುವರು; ಕೆಲಸಕ್ಕೆ ರಾಜಿಕೊಟ್ಟವರಿಗೆ ಕೆಲಸವನ್ನು ಕೊಡಲಿಕ್ಕೆ ಸಮ್ಮತಿಸುವರು. ಆದರೆ ಚರಸೊತ್ತುಗಳ ವಿಷಯದಲ್ಲಿ ಮಾತ್ರ ಅವರು ವಿರೋಧವಾಗಿರುವರು. ಇನ್ನೊಂದು ವಾರದೊಳಗೆ ವಿಚಾರಣೆಯಾಗುವದೆಂದು ರಾಜಕೀಯ ಧುರೀಣರೆನ್ನುವರು.

ರಾಮಚಂದ್ರ ಭಟ್ಟರ ಉದಾರ ದಾನ.

ಏರಿಸಿದ ತೆಂಗೆಯನ್ನು ಕೊಡದ ವಿನಹ ವಿಚಾರಣೆಯು ತೊಡಗಲಾರದೆಂದು ಗವರ್ನರರು ಕೌನ್ಸಿಲಿನಲ್ಲಿ ಒತ್ತಿಹೇಳಿದ್ದರಿಂದಲೂ ಹಾಗೆ ಮಾಡದೆ ಇದ್ದರೆ ಸದ್ಯಕ್ಕೆ ಸಮಾಧಾನವಾಗುವದು ಇಲ್ಲವೆಂದೂ ನೆನಸಿ ಸಮಾಧಾನವು ಆದಷ್ಟು ಬೇಗನೆ ಆಗಬೇಕೆಂದು ಬಾರ್ಡೋಲಿ ಜನರಲ್ಲಿ ಸಹಾನುಭೂತಿಯನ್ನು ತೋರಿ ರಾ॥ ರಾಮಚಂದ್ರ ಭಟ್ಟರೆಂಬವರು ಏರಿಸಿದ ಕರವನ್ನು ಕೊಡಲೊಪ್ಪಿರುವರು.

ಗಾಂಧಿಯವರ ಅಂದೋಲ.

ಸತ್ಯಾಗ್ರಹಿಗಳ ಪರವಾಗಿ ನಾನು ಸರಕಾರದವರಿಗೆ ಹೇಳುವುದೇನಂದರೆ, ನ್ಯಾಯ ಮಾರ್ಗವನ್ನೇ ಅವಲಂಬಿಸಿ ವರ್ತಿಸಬೇಕೆಂದು ಮಿ॥ ವಲ್ಲಭಾ ಪಟೇಲರು ಸೂಚಿಸಿದ ಶರ್ತಗಳು ವಿಚಾರಣೀಯವಾದವುಗಳೂ ನ್ಯಾಯವಾದವುಗಳೂ ಆಗಿವೆ. ಬಾರ್ಡೋಲಿಯ ಜನರು ಇದುವರೆಗೆ ಹಲವು ಕಷ್ಟಗಳನ್ನು ಅನುಭವಿಸಿದ್ದುದು ಮಾತ್ರವಲ್ಲ, ಆಸ್ತಿಪಾಸ್ತಿಗಳನ್ನೂ ಕಳಕೊಂಡಿರುವರು. ಅಂಥವರ ಆಸ್ತಿಗಳನ್ನು ಹಿಂತಿರಿಗಿ ಕೊಡಬೇಕೆನ್ನುವುದು ನ್ಯಾಯವೇ ಆಗಿದೆ. ಏರಿಸಿದ ತೆರಿಗೆಯನ್ನು ಕೊಟ್ಟ ವಿನಹ ವಿಚಾರಣೆಯನ್ನು ತೊಡಗುವದಿಲ್ಲವೆಂದು ಸರಕಾರದವರ ಹೇಳಿಕೆ. ಸರಕಾರದವರ ದೃಷ್ಟಿಯಲ್ಲಿ ಬಾರ್ಡೋಲಿ ಜನರು ಅಪರಾಧಿಗಳೆಂದು ತೋರಬಹುದಾದರೂ, ನಿಜವಾಗಿಯೂ ಸರಕಾರದವರು ಈ ತಡವೆ ಅನ್ಯಾಯಗಾರರೆಂದು ಜಗತ್ತೇ ಸಾರುತ್ತಿದೆ. ಸರಕಾರದವರು ತಮ್ಮ ತಪ್ಪನ್ನೊಪ್ಪಬೇಕೆಂದು ಪಟೇಲರು ಆಗ್ರಹಮಾಡುವುದಿಲ್ಲ. ನ್ಯಾಯವನ್ನೂ ಅನ್ಯಾಯವನ್ನೂ ವಿಚಾರಣಾ ಕಮಿಟಿಯೊಂದು ನಿಶ್ಚಯಿಸಬೇಕೆನ್ನುವರು. ಅವರ ಕೇಳುವಿಕೆಯಲ್ಲಿ ಮುಂದರಿಸುವ ರೀತಿಯ ವಾಕ್ಯಗಳಾವವೂ ಇರುವುದಿಲ್ಲ. ಸರಕಾರದವರು ಈಗ ಎರಡು ಮಾರ್ಗಗಳಲ್ಲಿ ವರ್ತಿಸಬಹುದು. ಮೊದಲನೆಯದೆಂದರೆ ಅಖಿಲ ಹಿಂದೂಸ್ಥಾನದ ಅಭಿಪ್ರಾಯದಂತೆ ವಲ್ಲಭಾಯಿಯವರ ಶರ್ತಗಳಿಗೊಪ್ಪಿ ನಡೆಯುವದು. ಎರಡನೆಯದೆಂದರೆ ತಮ್ಮ ಅಧಿಕಾರ ಮತ್ತು ದರ್ಪಗಳನ್ನು ಪ್ರದರ್ಶಿಸುವದು. ಆದರೆ ಸತ್ಯದ ಹಾದಿಯನ್ನೇ ಅವಲಂಬಿಸುವದು ಹಿತಕರವು.

ಮುಂಬಾಯಿ ಕೌನ್ಸಿಲ್ ಮೆಂಬರರಾದ ಶ್ರೀ. ಮುನ್ಷಿಯವರು ಗವರ್ನರರನ್ನು ಕಂಡು, ಈಗ ಹೇಳುತ್ತಿರುವುದೇನಂದರೆ, ಮಹಾತ್ಮಾಜಿಯವರ ಶರ್ತಗಳಿಗೂ ಗವರ್ನರರ ಶರ್ತಗಳಿಗೂ ಬಹಳ ಭೇದವಿಲ್ಲವೆಂದು ಅವರು ಆದಷ್ಟುಬೇಗನೆ ಸಮಾಧಾನವನ್ನುಂಟುಮಾಡಲು ಉತ್ಸುಕರಾಗಿರುವರು.

ರೈತರ ಅಭಿಪ್ರಾಯ.

ಸರಕಾರದವರ ಈಗಿನ ಶರ್ತಗಳಿಂದ ಯಾವ ಒಪ್ಪಂದವೂ ಆಗದು. ವಲ್ಲಭಾಯಿಯವರನ್ನು ತೃಪ್ತಿಗೊಳಿಸದ ವಿಷಯವು ಎಂದೆಂದಿಗೂ ತಮ್ಮನ್ನು ತೃಪ್ತಿಗೊಳಿಸದು. ಇದುವರೆಗೆ ತಾಳ್ಮೆಯಿಂದ ಕಷ್ಟಗಳನ್ನು ಸಹಿಸಿಕೊಂಡಂತೆ ಸರಕಾರದವರು ಎಂದಿನ ವರೆಗೆ ವಲ್ಲಭಾಯಿಯವರ ಶರ್ತಗಳಿಗೊಪ್ಪುವದಿಲ್ಲವೋ ಅಂದಿನ ವರೆಗೆ ಅಧಿಕ ತಾಳ್ಮೆಯಿಂದ ಸಹಿಸುವರೆಂದು ಬಾರ್ಡೋಲಿಯ ರೈತರು ಹೇಳುತ್ತಿರುವರು.

ಬಾರ್ಡೋಲಿಯವರು. ಹೆದರುವದಿಲ್ಲ.

ಬಾರ್ಡೋಲಿಯು ಕ್ರೂರ ವಧೆಗಾಗಲಿ, ಗುಂಡುಗಳಿಗಾಗಲಿ, ಹೆದರಿ ಧೃತಿಗೆಡುವುದಿಲ್ಲ. ಸರಕಾರದವರ ಶರ್ತಗಳಿಗೊಪ್ಪುವ ಬದಲು ಪ್ರಾಣಾರ್ಪಣವನ್ನಾದರೂ ಮಾಡುವರು. ಅಲ್ಲದೆ ಸರಕಾರದವರ ದಬ್ಬಾಳಿಕೆಗಳಿಗೂ ಹಿಂಜರಿಯುವ ಹಾಗಿಲ್ಲ. ಸರಕಾರದವರು ಕಠಿಣೋಪಾಯಗಳನ್ನು ಕೈಕೊಳ್ಳುವಾಗ ಅದಕ್ಕೆ ಎದೆಯೊಡ್ಡಬೇಕೆಂದು ಹಲವರು ಆನಂದಭರಿತರಾಗಿರುವರು. ಭವಿಷ್ಯತ್ತಿನಲ್ಲಿ ಏನಾದರೂ ಆಗಲಿ ಎಂದು ಅವರು ಧೈರ್ಯವಾಗಿ ಇರುವರು. ಜನರ ಇಚ್ಛೆಗೆ ವಿರೋಧವಾಗಿ ರಾಮಚಂದ್ರ ಭಟ್ಟರು ಹಣವನ್ನು ಕೊಡಲು ಒಪ್ಪಿದುದಕ್ಕೆ ಮಹಾತ್ಮಾಜಿಯವರು ಪಶ್ಚಾತ್ತಾಪಪಡುತ್ತಿರುವರು. ಹಣವನ್ನು ಮುಂಬಾಯಿ ಕೌನ್ಸಿಲಿನ ಸೂರತ ಮೆಂಬರರು ತಮ್ಮ ಹೆಸರಿನಲ್ಲಿ ಠೇವಣಾತಿಯಾಗಿಡಬೇಕೆಂದು ಸರಕಾರದವರನ್ನುವದರಿಂದ ಭಟ್ಟರ ಒಪ್ಪಿಗೆಯು ಫಲಕಾರಿಯಾಗಲಾರದು. ಸೂರತಿನ ಮೆಂಬರರು ಹೀಗೆ ಮಾಡಲು ಒಪ್ಪಲಾರರು.

ಸತ್ಯಾಗ್ರಹ.

ಬಾರ್ಡೋಲಿಯವರಿಗೆ ಸಹಾನುಭೂತಿಯನ್ನು ತೋರಿಸುವ ಸಲುವಾಗಿ ಹಿಂದೂಸ್ಥಾನದಲ್ಲೆಲ್ಲ ಸತ್ಯಾಗ್ರಹವನ್ನು ಆಚರಿಸುವದುತ್ತಮವೆಂದು ಅಲ್ಲಿನ ಕಾಂಗ್ರೆಸ್ ಧುರೀಣರಾದ ಸರ್ದುಲ್‌ಸಿಂಗರೆನ್ನುವರು. ಹಲವರು ವ್ಯಕ್ತಿತರಿಗೆ ಆದಾಯ ತೆಂಗೆ ಮೊದಲಾದವುಗಳನ್ನು ಕೊಡ ಕೊಡಬಾರದೆಂದಿರುವರು.

ಬಾರ್ಡೋಲಿ ಮುಂದಾಳುಗಳ ಶರ್ತವನ್ನು ಸರಕಾರದವರು ನಿರಾಕರಿಸಿದರೆಂದು ಕೊನೆಯ ವಾರ್ತೆಯು ಬಂದಿರುತ್ತದೆ. ಅಂತೂ ಸತ್ಯಾಗ್ರಹವು ಸುಲಭದಲ್ಲಿ ಶಾಂತಿಯಾಗುವ ಸಂಭವವೇ ತೋರುವುದಿಲ್ಲ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಕಡೂರು (M. S. M Railway) ರೈಲ್ವೆ ಸ್ಟೇಷನಿನಿಂದ 12 ಗಂಟೆಗೆ [illegible] ಚಾರ್ಮಾಡಿಘಾಟ ಮಾರ್ಗವಾಗಿ [illegible] ಜಿಲ್ಲೆಯ ಪ್ರಧಾನ ಕಂಪೆನಿಯಾದ [illegible] ಗುರುವಾಯನಕೆರೆ, ಉಪ್ಪಿನಂಗಡಿ [illegible] ಗುರುವಾಯನಕೆರೆ, ಮೂಡಬಿದರೆ [illegible] ಪುಂಜಾಲಕಟ್ಟೆ, ಬಂಟವಾಳ [illegible] ಬಸ್ಸುಗಳನ್ನು ಏರ್ಪಡಿಸಿರುತ್ತೆ.

[illegible]

(2) [illegible] ಪ್ರಯಾಣಿಕರ ವಿಶ್ರಾಂತಿಗೆ [illegible] ಮೂಡಗೆರೆಗೆ 9 ಗಂಟೆಗೆ, [illegible] ಬಸ್ಸಿನಲ್ಲಿ 12-30ಕ್ಕೆ ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] ದಿವಿ 1-30ಕ್ಕೂ [illegible] ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು [illegible] ಸೇರಬಹುದು.

(3) [illegible] ಕಂಪೆನಿ ಲಿಮಿಟೆಡ್ [illegible] ಸ್ಟೇಶನಿಗೂ [illegible] 2-30ಕ್ಕೆ ಕೊಟ್ಟಿಗೆಹಾರಕ್ಕೂ 12 ಘಂಟೆಗೆ [illegible] ಚಿಕ್ಕಮಗಳೂರಲ್ಲಿ [illegible] ಚಿಕ್ಕಮಗಳೂರಿನಿಂದ [illegible] ಪ್ರಯಾಣಿಕರಿಗೆ ಕಡೂರಿನ ಸಾಯಂಕಾಲ 6-30ಕ್ಕೆ [illegible] ಗದಗ್, ಪಂಡ್ರಾಪೂರ್ ಎಕ್ಸ್‌ಪ್ರೆಸ್ ಟ್ರೈನ [illegible] ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ [illegible] 10 ಘಂಟೆಗೆ ಕಡೂರಿಗೆ ಸೇರಿ [illegible] ಮದ್ರಾಸ್ ವರೆಗೆ ಕಡೆಗೆ [illegible] ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ [illegible] ಬರೆದುಕೊಳ್ಳಬಹುದು.

[illegible] ಸಣ್ಣಪ್ಪ ಸೆಟ್ಟಿ,

ಪ್ರೊಪ್ರೈಟರ್.

ಸಾಟಿಯಿಲ್ಲದ [illegible] ಕಂಪೆನಿಯವರ

ಟಿಕ್ಕೆಟುಗಳ ಬದಲಿಗೆ ಬಸ್ಸು [illegible]

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ [illegible] ಮಾರ್ಗವಾಗಿಯೂ [illegible] ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore. S. K.

ದಾಂಪತ್ಯದ ಗುಟ್ಟು ಎಂಬ ಸಟೀಕಾತಾತ್ಪರ್ಯ ವಿವರಣ.

ಕಾಮಶಾಸ್ತ್ರವು.

ಈ ಪ್ರಪಂಚದೊಳು ಅನೇಕ ಸ್ತ್ರೀಪುರುಷರು ಶಾಸ್ತ್ರನೇಮವಿಲ್ಲದೆ ಮನ ಬಂದಂತೆ ಇಚ್ಛಾ ಪ್ರವರ್ತಕರಾಗಿ ಸಂಸಾರದಲ್ಲಿ ಸುಖಪಡದೆ ವ್ಯಭಿಚಾರದಲ್ಲಿ ಆಸಕ್ತರಾಗಿ ರೋಗದಿಂದ ನರಳುತ್ತಾ ಸಂತಾನವಿಲ್ಲದೆ ವಂಶವನ್ನೇ ಹಾಳುಮಾಡಿ ಕೊಂಡು ಅಪಕೀರ್ತಿಗೆ ಗುರಿಯಾಗುತ್ತಿರುವರು. ಈ ಅನರ್ಥಗಳಿಗೆ ಗುರಿಯಾಗ ಬಾರದೆಂದು ನಾವು ಅನೇಕ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ಬಹುನೂತನವಾಗಿ ತಯಾರು ಮಾಡಿರುತ್ತೇವೆ. ಈ ಮಹತ್ವ ಗ್ರಂಥದಲ್ಲಿ ನಾಲ್ಕು ಜಾತಿ ಸ್ತ್ರೀಪುರುಷರ ಲಕ್ಷಣಗಳು ಯಾವ ಯಾವ ತಿಂಗಳಲ್ಲಿ ಯಾವ ರೀತಿಯಾಗಿ ಸಂಭೋಗ ಮಾಡಬೇಕಾದ ಕ್ರಮಗಳು ಆಯಾಯ ದಿನಗಳಲ್ಲಿರುವ ಕಾಮಕಳೆಯನ್ನು ತಿಳಿದುಕೊಂಡು ಸ್ತ್ರೀಯರು ಅನ್ಯಪುರುಷರನ್ನು ಬಯಸದಂತೇ ಸದಾವಶರಾಗುವಂತೆ ಸುಖಸಂಭೋಗ ಮಾಡುವ ಕ್ರಮಗಳು ಸಂಭೋಗಕಾಲದಲ್ಲಿ ವೀರ್ಯವು ಜಾಗ್ರತೆಯಾಗಿ ಸ್ಖಲನವಾಗದಂತೆ ಮಾಡುವ ಕ್ರಮಗಳು ಪರಸ್ತ್ರೀಯರನ್ನು ಸಂಭೋಗ ಮಾಡುವದರಿಂದುಂಟಾಗುವ ಮಹದನರ್ಥಗಳು ರೋಗಪೀಡಾದಿಗಳ ವಿಷಯ ಸುಖಸಂತಾನವಾಗುವದಕ್ಕೆ ಮಾಡುವ ಕ್ರಮಗಳು, ಸ್ತ್ರೀಸಂಭೋಗ ಮಾಡಿದ ನಂತರ ದೇಹಕ್ಕೆ ಯಾವ ವಿಧವಾದ ರೋಗಗಳ ತೊಂದರೆ ಉಂಟಾಗದಂತೆಯು ದೇಹಧಾರ್ಢ್ಯವುಂಟಾಗುವಂತೆ ತೆಗೆದುಕೊಳ್ಳಬೇಕಾದ ಪಾನೀಯ ಪದಾರ್ಥಗಳ ವಿವರವು ಸಂಭೋಗಕಾಲದಲ್ಲಿ ಒಂದು ಕ್ರಮ ಮಾಡಿಕೊಂಡರೆ ಎಷ್ಟುಜನ ಸ್ತ್ರೀಯರನ್ನಾದರೂ ಕಾಮತೃಪ್ತರನ್ನಾಗಿ ಮಾಡಿ ಗೆಲ್ಲಬಹುದು. ಎಷ್ಟು ಸಾ ಸಂಭೋಗ ಮಾಡಿದರೂ ವೀರ್ಯವು ಸ್ಖಲನವಾಗದಂತೆ ಮಾಡಿಕೊಳ್ಳ ಬೇಕಾದ ಚಿಕಿತ್ಸಾಕ್ರಮಗಳು ಸಂಭೋಗಕಾಲದಲ್ಲಿ ತನ್ನ ಲಿಂಗವು ಬಹುದೃಢತರವಾಗಿ ಸುರತಸುಖವುಂಟಾಗುವದಕ್ಕೆ ಶರೀರಕ್ಕೆ ಲೇಪಿಸುವ ಚಿಕಿತ್ಸಾ ಕ್ರಮ, ಮರಣಾಂತದವರಿಗೂ ಸ್ತ್ರೀಯಳು ಪರಪುರುಷರನ್ನು ಅಪೇಕ್ಷಿಮಾಡದಂತೆ ಮಾಡುವ ಕ್ರಮ, ಸ್ವಸ್ತ್ರೀವಶ್ಯ ಇನ್ನೂ ಅನೇಕ ಅಪೂರ್ವ ಮರ್ಮವಿಷಯಗಳನ್ನು ಹಾಕಿರುತ್ತವೆ. ಪ್ರತಿಗಳು ಸ್ವಲ್ಪ ಉಳಿದಿರುತ್ತವೆ. ಬೇಗನೇ ತರಿಸಿಕೊಳ್ಳಿ.] ದೊಡ್ಡ ಗ್ರಂಥವು. ಕ್ರಯ ಪ್ರತಿ ೧ಕ್ಕೆ ರೂ. ೨-೮-೦, ಟಪ್ಪಾಲು ಹಾಸಲು ೦-೬-೦

೨೮೦ ಕಥೆಗಳುಳ್ಳ ಅಕಬರ ಬಾದಷಾ ಬೀರಬಲರ

ವಿನೋದ ಕಥೆಗಳು.

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದೂದೇಶದಲ್ಲಿ ಒಬ್ಬನಾದರೂ ದೊರಿಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದರಸಭರಿತವಾದ ೨೮೦ಕಥೆಗಳುಳ್ಳ ಈ ಗ್ರಂಥವನ್ನು ಓದುವರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಗಳೆಯುವದಕ್ಕೆ ಒಳ್ಳೇಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕುನಕ್ಕು ಹುಣ್ಣಾಗುವುದು. ಇಂಥ ವಿನೋದ ಪ್ರಚುರವಾದ ಗ್ರಂಥವು ಅಂದವಾದ ಮುದ್ರಣದಿಂದ ದಪ್ಪಕಾಗದದ ಮೇಲೆ ಅಚ್ಚು ಹಾಕಲ್ಪಟ್ಟಿದೆ. ಪ್ರತಿ ಒಬ್ಬ ಮನುಷ್ಯನೂ ಅವಶ್ಯವಾಗಿ ಸಂಗ್ರಹಿಸತಕ್ಕದ್ದು. ದೊಡ್ಡ ಗ್ರಂಥವು ಕ್ರಯ ೧ಕ್ಕೆ ೨-೦-೦ ಟಪ್ಪಾಲು ಹಾಸಲು ೦-೬-೦.

೮೦ ಕಥೆಗಳುಳ್ಳ ಸ್ತ್ರೀಪುರುಷರ ಮರ್ಮಗನ್ನಡಿ ಎಂಬ

ಸಚಿತ್ರ ಸ್ತ್ರೀಚರಿತ್ರೆ.

ಪ್ರಪಂಚದಲ್ಲಿರುವ ಯಾವತ್ತು ಚರಿತ್ರೆಗಳನ್ನು ಸುಲಭಸಾಧ್ಯವಾಗಿ ತಿಳಿದುಕೊಳ್ಳಬಹುದು. ಸ್ತ್ರೀಯರ ಅದ್ಭುತಚರಿತ್ರೆಯು ಅಗಾಧವಾದದ್ದು. ಈ ಸ್ತ್ರೀಯರ ಚರಿತ್ರೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸಿ ಪುರುಷರ ವ್ಯಭಿಚಾರವನ್ನು ತಪ್ಪಿಸಿ ಪ್ರತಿಒಬ್ಬರು ಸನ್ಮಾರ್ಗ ಪ್ರವರ್ತಕರಾಗಿರುವಂತೆ ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುತ್ತೇವೆ. ಈ ಮಹದ್‌ಗ್ರಂಥದಲ್ಲಿ ವ್ಯಭಿಚಾರ ಮಾಡತಕ್ಕ ಸ್ತ್ರೀಯರ ಧೈರ್ಯಸಾಹಸಗಳು ಪುರುಷರನ್ನು ಮೋಹಗೊಳಿಸಿ ವಲಿಸಿಕೊಳ್ಳುವ ಚಮತ್ಕಾರಗಳು ವ್ಯಭಿಚಾರ ಸ್ತ್ರೀಪುರುಷರಿಗೆ ಸಲಹೆ ಹೇಳತಕ್ಕ ಕುಂಟಲಗಿತ್ತಿ ಹೆಂಗಸರು ಮಾಡುವ ಸಾಹಸ ಕ್ರಮಗಳು ಕೂಡಿಸುವ ಉಪಾಯಗಳು ಮನೆಯಲ್ಲಿ ಗಂಡ ಮುಂತಾದವರಿಗೆ ತಿಳಿಯದ ಹಾಗೆ ವ್ಯಭಿಚಾರ ಮಾಡತಕ್ಕ ಕ್ರಮಗಳು ತಿಳಿದರೂ ತಾನು ತನ್ನ ವಿಟಪುರುಷನನ್ನು ತಪ್ಪಿಸಿಕೊಳ್ಳುವ ಉಪಾಯಗಳು ಪರಸ್ತ್ರೀಯರಿಂದ ಪುರುಷರು ತಮ್ಮ ಆಸ್ತಿಯನ್ನು ಕಳೆದುಕೊಂಡು ನಷ್ಟಪಡುತ್ತಿರುವ ಅನೇಕ ಅದ್ಭುತ ಉಪಕಥೆಗಳನ್ನು ವಿಶದವಾಗಿ ಬರೆದು ಇರುತ್ತೆ. ಪತಿವ್ರತಾ ಸ್ತ್ರೀಯರು ಅಕಸ್ಮಾತ್ ಪರಪುರುಷರ ಕೈಯಲ್ಲಿ ಸಿಕ್ಕಿದ ಸಮಯದಲ್ಲಿ ಉಪಾಯಗಳಿಂದ ತಮ್ಮ ಪತಿವ್ರತಾ ಧರ್ಮವನ್ನು ಕಾಪಾಡಿಕೊಂಡು ಕೀರ್ತಿವಂತರಾಗಿರುವ ಮಹತ್ವದ ಕಥೆಗಳು. ಇದನ್ನು ಪ್ರತಿ ಒಬ್ಬರು ಓದಿ ಧನ್ಯರಾಗ ತಕ್ಕದ್ದು. ಈ ಕಥೆಗಳು ಬಹು ಸರಸವಾಗಿಯು ಅತ್ಯಂತ ಕಾಮರಸಭರಿತವಾದ ಶೃಂಗಾರವಾಗಿರುತ್ತವೆ. ಇವುಗಳನ್ನು ಓದುವುದಕ್ಕೆ ಪ್ರಾರಂಭಮಾಡಿದ ಮೇಲೆ ಮುಗಿಯುವ ವರೆಗೂ ಬಿಡುವದಕ್ಕೆ ಆಗುವದಿಲ್ಲ. ದೊಡ್ಡ ಗ್ರಂಥವು ಕ್ರಯ ಪ್ರತಿ ೧ಕ್ಕೆ ೨-೮-೦. ಟಿ. ಹಾಸಲು ೦-೬-೦

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಮನೋಹರವಾದ ಚಾತುರ್ಯದ ಕಾದಂಬರಿ ಕಥೆಗಳು, ವೀರಶೈವಮತದ ಗ್ರಂಥಗಳು, ಶಿವಪುರಾಣಗಳು, ಜ್ಯೋತಿಷ್ಯ ಗ್ರಂಥಗಳು, ಕಾವ್ಯ ಗ್ರಂಥಗಳು, ನಾಟಕದ ಪುಸ್ತಕಗಳು ಮತ್ತು ಯಕ್ಷಗಾನ ಗ್ರಂಥಗಳು, ದೊರೆಯುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಿರಿ.

ವಿಳಾಸ:— ಕೆ. ಎಂ. ಪ್ರಭು ಅಂಡ್ ಬ್ರದರ್ಸ್ ಪ್ರಭು ಬುಕ್ ಡಿಪೋ, ಬಳ್ಳಾರಿ.

"ರೈಲು ದುರ್ಘಟನೆಯೂ ಸರಕಾರವೂ"

[ಲೇಖಕ— ಸಿ. ಟಿ. ಶ್ರೀ].

ಇಂಗ್ಲಿಷರ ರಾಜ್ಯದ ಉಪಕಾರ ವರ್ಣನೆಯನ್ನು ಮಾಡುವುದಾದರೆ ಭಾರತ ಇತಿಹಾಸ ಲೇಖಕರು ರೈಲು ಪಥ ವಿಸ್ತಾರದ ವಿಷಯವನ್ನು ಉಲ್ಲೇಖಿಸಲು ಎಂದೂ ಮರೆಯಲಾರರು. ಸರಕಾರಕ್ಕೆ ಕೀರ್ತಿಯನ್ನೂ ಗೌರವವನ್ನೂ ಗಳಿಸಿಕೊಳ್ಳಬೇಕೆಂದಿದ್ದರೆ ದುಷ್ಕೀರ್ತಿಯನ್ನು ಅದು ತಾಳಿಕೊಳ್ಳಲೇ ಬೇಕು.

ವಿಶೇಷ ವಿವೇಚನೆಯಿಂದ ಈ ಭಾರತ ಖಂಡದಲ್ಲಿ ರೈಲು ಪಥಗಳು ನಿರ್ಮಿತವಾಗಿರುವುದೆಂಬುದನ್ನು ಎಲ್ಲರೂ ಬಲ್ಲರು. ಈ ರೈಲುಮಾರ್ಗಗಳೆಲ್ಲವೂ ಸರಕಾರದ ಆದೇಶಾನುಸಾರವಾಗಿಯೇ ನಡೆಯುತ್ತಲಿವೆ. ರೈಲು ಕಂಪೆನಿಗಳು ಪ್ರತ್ಯೇಕವಾಗಿದ್ದರೂ ಸರಕಾರದ ಕಾನೂನಿಗೆ ಅಧೀನವಾಗಿಯೇ ಇವೆ. ಇವುಗಳು ಸಾರ್ವಜನಿಕ ಸೌಕರ್ಯಕ್ಕಾಗಿ ವ್ಯವಸಾಯವನ್ನು ಮಾಡುತ್ತಿರುವುದರಿಂದ ಸರಕಾರವು ಅವುಗಳಿಗೆ ಸರ್ವ ವಿಷಯಗಳಲ್ಲೂ ಸಹಾಯಮಾಡಬೇಕಾಗಿದೆ.

ಕೆಲವು ರೈಲುಕಂಪೆನಿಗಳು ಸಾಕ್ಷಾತ್ ಹೀಗೆದಿಂದ ಸರಕಾರದ ಕರದಲ್ಲಿ ಬಂದಿವೆ. ಅನೇಕ ರೈಲುಕಂಪೆನಿಗಳು ಇನ್ನೂ ಸ್ವಾಧೀನಭಾವದಲ್ಲಿಯೇ ಇವೆ. ಕಿಂತು ಸರಕಾರದ ರೈಲ್ವೇ ಬೋರ್ಡಿನ ದೃಷ್ಟಿಯು ಸರ್ವದಾ ಈ ಕಂಪೆನಿಗಳ ಮೇಲೆಯೇ ಇದೆ.

ಹೀಗಿದ್ದು ರೈಲುಕಂಪೆನಿಗಳು ಸ್ವೇಚ್ಛೆಯಿಂದ ನಡೆಯುತ್ತಿರುವಾಗ ಸರಕಾರವು ಮೌನವಾಗಿರುವುದು ಎಷ್ಟುಮಾತ್ರಕ್ಕೂ ಸರಿಯಲ್ಲ. ರೈಲುಕಂಪೆನಿಗಳಿಂದ ಮಾಡಲ್ಪಡಬಹುದಾದ ಅನ್ಯಾಯ ಕಾರ್ಯಗಳ ಪ್ರತೀಕಾರಕ್ಕಾಗಿ ದೇಶವಾಸಿಗಳು ಸರಕಾರದೊಡನೆ ವಿಚಾರಿಸಲೇಬೇಕಾಗುತ್ತದೆ.

ಸರಕಾರಕ್ಕೂ ರೈಲು ಕಂಪೆನಿಗಳಿಗೂ ಬದ್ಧ ಮೈತ್ರಿತ್ವವಿರುವುದಾಗಿಯೂ, ರೈಲುಕಂಪೆನಿಗಳ ಸಕಲ ಕಾರ್ಯಗಳಿಗೆ ಸಹಾಯವೂ ಸಮರ್ಥನೆಯೂ ಸರಕಾರದಿಂದಿರುವುದಾಗಿಯೂ ಈ ದೇಶದ ಜನರಲ್ಲಿ ಅಭಿಪ್ರಾಯವಿದೆ. ಈ ದೇಶದ ಜನರಲ್ಲಿ ನೆಲೆಯಾಗಿರುವ ಇಂಥ ಅಭಿಪ್ರಾಯವನ್ನು ಹೋಗಲಾಡಿಸುವುದು ಸರಕಾರದ ಕರ್ತವ್ಯವಾಗಿರುತ್ತದೆ. ಕಿಂತು ಸರಕಾರವು ಅಂಥ ಯತ್ನವನ್ನು ಈ ತನಕ ಮಾಡಲಿಲ್ಲವೆಂಬುದನ್ನು ವಿಶೇಷ ದುಃಖದಿಂದ ಉಲ್ಲೇಖಿಸಬೇಕಾಗಿದೆ.

ರೈಲುಕಂಪೆನಿಗಳ ಪ್ರಯಾಣಿಕರ ಗಾಡಿಗಳ ಅಪಘಾತಗಳು ಸಂಭವಿಸಿದರೆ ರೈಲು ನೌಕರರು ನಿಜವಾದ ಮೃತ್ಯುಸಂಖ್ಯೆಯನ್ನು ಕೊಡುವುದಿಲ್ಲವಾಗಿಯೂ, ಮೃತ ಪ್ರಯಾಣಿಕರ ಶವಗಳು ಮಾಯವಾಗುವುದಾಗಿಯೂ, ಗಾಯಪಟ್ಟವರ ಸಂಖ್ಯೆಯು ಇವರಿಂದ ಸರಿಯಾಗಿ ದೊರಕುವುದಿಲ್ಲವಾಗಿಯೂ ಇಂಥ ಸಂಖ್ಯೆಗಳನ್ನು ಕೊಟ್ಟರೆ ದುರ್ಘಟನೆಗೆ ಬಲಿಯಾದವರ ಸಂಖ್ಯೆಯು ಹೆಚ್ಚಾದಂತೆ ಅದರ ವಿಷಯದಲ್ಲಿ ಕ್ಷತಿನಿವಾರಣಕ್ಕಾಗಿ ಕಂಪೆನಿಯವರ ಮೇಲೆ ವ್ಯವಹರಣೆಯಾದರೆ ಕಂಪೆನಿಗೆ ಹೆಚ್ಚು ನಷ್ಟವಾಗುವುದೆಂಬ ಕಾರಣದಿಂದ ಸರಿಯಾದ ಸಂಖ್ಯೆಯು ಪ್ರಕಟವಾಗುವುದಿಲ್ಲವಾಗಿಯೂ, ಇನ್ನೊಂದು ತಪ್ಪು ಅಭಿಪ್ರಾಯವು ದೇಶದ ಜನರಲ್ಲಿ ಬಲವಾಗಿ ಊರಿದೆ ಎಂಬುದು ಇತ್ತೀಚೆಗೆ ನಡೆದ ಕೆಲವು ದುರ್ಘಟನೆಗಳಿಂದ ತಿಳಿದು ಬಂದಿದೆ. ಇಂಥ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಸರಕಾರವು ಯತ್ನಿಸಬೇಕು.

ಈ ಭ್ರಾಂತ ವಿಶ್ವಾಸವನ್ನು ದೂರಪಡಿಸಲು ಸರಕಾರವಾಗಲಿ ರೈಲು ಕಂಪೆನಿಗಳಾಗಲಿ ಈ ತನಕ ಯಾವ ಪ್ರಯತ್ನವನ್ನೂ ಮಾಡಿದಂತೆ ಕಂಡುಬರುವುದಿಲ್ಲ. ಆದುದರಿಂದ ಸರ್ವಜನರಲ್ಲಿಯೂ ಅಸಂತೋಷವು ವೃದ್ಧಿಯಾಗುತ್ತಲಿದೆ. ದೋಷಶೋಧನಾ ಕಮಿಟಿಯಿಂದಲೂ ಇಂಥ ಭ್ರಾಂತ ಅಭಿಪ್ರಾಯವನ್ನು ಥಟ್ಟನೆ ದೂರಗೊಳಿಸಲು ಸಾಧ್ಯವಾಗುವಂತಿಲ್ಲ. ಇದಕ್ಕಾಗಿ ಸರಕಾರವು ಅತ್ಯಗತ್ಯವಾಗಿ ವಿಶೇಷ ರೀತಿಯಿಂದ ಯತ್ನಗಳನ್ನು ನಡೆಯಿಸಿ ಜನರಲ್ಲಿ ಬಲವಾಗಿ ಊರಿರುವ ಈ ತಪ್ಪು ಭಾವನೆಗಳನ್ನು ಕೂಡಲೇ ಕಿತ್ತು ಹಾಕುವಂತೆ ಮಾಡಬೇಕು.

ಯುರೋಪು, ಅಮೇರಿಕ ಮುಂತಾದ ಸುಸಭ್ಯ ದೇಶಗಳಲ್ಲಿ ರೈಲು ದುರ್ಘಟನೆಗಳು ಬಹಳ ಕಡಿಮೆಯಾಗಿವೆ ಎಂಬುದನ್ನು ಅಲ್ಲಿಯ ಪತ್ರಿಕೆಗಳಿಂದ ತಿಳಿಯಬರುವುದು. ಆ ದೇಶಗಳ ಸಕಲ ರೈಲುಕಂಪೆನಿಗಳ ವಾರ್ಷಿಕ ವಿವರಣೆಯಲ್ಲಿ ದುರ್ಘಟನೆಗಳ ವಿವರಣೆಯು ಕಡಿಮೆಯಾದದ್ದಕ್ಕೂ ಅವುಗಳು ಪ್ರಶಂಸಾ ಪಾತ್ರವಾಗುತ್ತವೆ. ಆವ ರೈಲು ಕಂಪೆನಿಗಳಲ್ಲಿ ರೈಲು ದುರ್ಘಟನೆಗಳ ಸಂಖ್ಯೆಯು ಅಧಿಕವಾಗುವುದೋ ಅಂಥವುಗಳು ಸರ್ವ ಜನರ ನಿಂದೆಗೂ ಪಾತ್ರವಾಗುವುವು. ಸರ್ವರ ಭಯಂಕರವಾದ ನಿಂದೆಗೆ ಆ ರೈಲು ಕಂಪೆನಿಗಳು ಭೀತಿಪಡುತ್ತವೆ. ಆದರೆ ಭಾರತ ಭೂಮಿಯ ರೈಲುಕಂಪೆನಿಗಳ ವಾರ್ಷಿಕ ವಿವರಣೆಯಲ್ಲಿ ಯಥೇಷ್ಟವಾದ ದುರ್ಘಟನೆಗಳ ವಿವರಣೆಯಿದ್ದರೂ ಅವುಗಳನ್ನು ನಿಂದಿಸುವವರೂ ಇಲ್ಲ. ಮತ್ತೂ ರೈಲು ಪರಿಚಾಲಕರು ಕೂಡಾ ಅಂಥಾ ದುರ್ಘಟನೆಗಳು ಕಂಪೆನಿಯವರಿಗೆ ಲಜ್ಜಾಸ್ಪದವಾದವುಗಳು ಎಂಬದಾಗಿ ಯೋಚಿಸುವುದೂ ಇಲ್ಲ. ಹೀಗಾಗಲು ಕಾರಣವಾದರೂ ಏನು? ಈ ದೇಶದ ರೈಲು ದುರ್ಘಟನೆಗಳಲ್ಲಿ ಹೆಚ್ಚಾಗಿ ದೇಶೀಯ ಜನರ ಪ್ರಾಣಹಾನಿಯಾಗುವುದರಿಂದಲೇ.

ರೈಲುಗಾಡಿಗಳ ವಿಷಯ ಉಲ್ಲೇಖಿಸುವುದಾದರೆ, ಪ್ರಥಮ ಮತ್ತೂ ದ್ವಿತೀಯ ತರಗತಿಗಳ ಗಾಡಿಗಳು (First Class and Second Class) ಅಘಾತವಾಗದಂಥಾ ಸ್ಥಳದಲ್ಲಿ ಟ್ರೈನಿಗೆ ಜೋಡಿಸಲ್ಪಡುವುವು. ಮೂರನೇ ತರಗತಿಯ ಪ್ರಯಾಣಿಕರು (Third Class Passengers) ಕಡಿಮೆ ಬಾಡಿಗೆಯನ್ನು ಕೊಡುವರಾಗಿದ್ದಾರೆ. ಆದುದರಿಂದ ಇಂಥವರು ಆಸೀನರಾಗುವ ಗಾಡಿಗಳಿರುವುದು ಅವೆಡೆಯಲ್ಲಿ ವಿಪತ್ತು ಒದಗಿದರೆ ಅಪಘಾತವಾಗುವ ಸಂಭವವಿದೆಯೋ ಅಂಥ ಕಡೆಗಳಲ್ಲಿಯೇ.

ಸಂಭವಿಸಬಹುದಾದ ದುರ್ಘಟನೆಗಳ ನಿವಾರಣೆಗಾಗಿ ಯುರೋಪು ಮತ್ತು ಅಮೇರಿಕ ದೇಶಗಳ ರೈಲುಕಂಪೆನಿಗಳ ಪರಿಚಾಲಕರು ಸಕಲ ಉಪಾಯಗಳನ್ನು ನಿಯೋಜಿಸಿರುವರು. ಅಲ್ಲಿಯ ಕೆಲಸಗಾರರೆಲ್ಲರೂ ಸಂತುಷ್ಟರಾಗಿರುವರು. ಅಸಂತುಷ್ಟಿಯಾಯಿತೆಂದರೆ ರೈಲುಗಳನ್ನು ಒಂದು ನಿಮಿಷವಾದರೂ ಮುಂದರಿಸಲಾರದಂತೆ ಮಾಡುವ ಯುಕ್ತಿಯು ಅಲ್ಲಿಯ ಕೆಲಸಗಾರರಲ್ಲಿದೆ ಎಂಬುದು ಅವರ ಭದ್ರವಾದ ಒಕ್ಕಟ್ಟಿನಿಂದಲೇ ತೋರಬರುತ್ತದೆ. ರೈಲುಕಂಪೆನಿಗಳ ಪರಿಚಾಲಕರೂ ಇವರಿಗೆ ಅಸಂತೋಷವಾಗದಂತೆ ನಡೆಸುತ್ತಾರೆ. ಆದರೆ ನಮ್ಮ ದೇಶದ ರೈಲು ಕಂಪೆನಿಗಳು ಆ ದೇಶದ ರೈಲುಕಂಪೆನಿಗಳನ್ನೇ ಅನುಕರಿಸುವುವೋ ಇಲ್ಲವೋ ಎಂಬುದನ್ನೀಗ ತಿಳಿಯಬೇಕಾಗಿದೆ.

ದುಷ್ಟ ಜನರು ರೈಲು ಲೈನನ್ನು ಕಿತ್ತು ಇಡುವರು ಅಥವಾ ರೈಲು ಕಾರ್ಖಾನೆಯ ಕರ್ತವ್ಯದಿಂದ ದೂರಗೊಳಿಸಲ್ಪಟ್ಟ ಇಲ್ಲವೇ ಅಸಂತುಷ್ಟರಾದ ಕೆಲಸಗಾರರು ರೈಲು ಕಂಬಿಗಳ ಮೇಲೆ ತೊಡಕುಗಳನ್ನಿಟ್ಟದ್ದರು ಎಂಬದಾಗಿ ಮುಂತಾಗಿ ನಿಷ್ಪ್ರಯೋಜಕ ಕಾರಣಗಳನ್ನು ತೋರಿಸಿ ರೈಲು ಕಂಪೆನಿಗಳು ದುರ್ಘಟನೆಗಳ ಜವಾಬ್ದಾರಿಯಿಂದಲೂ, ಅಪವಾದದಿಂದಲೂ ನಿಷ್ಕೃತಿಹೊಂದಲಾರವು. ಇದರ ನಿವಾರಣೆಯಾಗುವಂತೆ ಮಾಡಬೇಕು. ಮಜೂರರು ಅತೃಪ್ತರಾಗಿದ್ದಾರೆಂಬದಾಗಿದ್ದರೆ ಅವರೇಕೆ ಅಸಂತೋಷಗೊಂಡಿರುವರೆಂಬುದನ್ನು ಕೂಲಂಕಷ ವಿಚಾರದಿಂದ ತಿಳಿದುಕೊಳ್ಳಬೇಕು. ಇದೆಲ್ಲವನ್ನು ವಿಚಾರಿಸದೆ ಹೀಗೆ ದುರ್ಘಟನೆಗಳನ್ನು ಸಂಭವಿಸುವುದಕ್ಕೆ ಬಿಟ್ಟರೆ ರೈಲು ಕಂಪೆನಿಗಳಿಗೆ ವಿವೇಚನಾ ಶಕ್ತಿಯು ಕುಂದಿಹೋಗಿರುವುದೆಂಬದಾಗಿ ಏತಕ್ಕೆ ಭಾವಿಸಬಾರದು? ದೇಶೀಯ ಜನರ ಪ್ರಾಣಗಳು ತೃಣಸಮಾನವೇ?

ಯುರೋಪು ಖಂಡದಲ್ಲಿರುವಂಥಾ ಸಕಲ ದಸ್ಯುಗಳೂ ತಸ್ಕರರೂ, ದುರ್ವರ್ತಕರೂ ನಮ್ಮ ದೇಶದ ಚೋರ ಪಿಂಡಾರಿಗಳಿಗಿಂತಲೂ ಅಧಿಕ ಕೌಶಲಗಳನ್ನರಿತವರೆಂಬುದು ಆ ದೇಶಗಳ ವಾರ್ತಾ ಪತ್ರಿಕೆಗಳನ್ನು ಓದುವವರಿಗೆ ತಿಳಿಯದ ವಿಷಯವಲ್ಲ. ರೈಲು ಕಂಪೆನಿಗಳ ಶ್ರಮಿಗಳ ಒಕ್ಕಟ್ಟು ಎಷ್ಟು ಬಲವಾಗಿರುವುದೆಂದರೆ ರೈಲುಕಂಪೆನಿಗಳು ತಮ್ಮ ಹೇಳಿಕೆಗೆ ಕಿವಿಕೊಡದಿದ್ದರೆ ರೈಲುವ್ಯವಹಾರವನ್ನೇ ನಿಲ್ಲಿಸಿ ಕಂಪೆನಿಯವರಿಗೆ ಸಾಕು ಸಾಕು ಮಾಡಿಸುವಷ್ಟಿದೆ. ಹೀಗಿದ್ದರೂ ನಮ್ಮ ದೇಶದಂತೆ ದುರ್ಘಟನೆಗಳು ಅಲ್ಲಿ ಏಕೆ ನಡೆಯುವುದಿಲ್ಲ? ಇದಕ್ಕೆ ಕಾರಣವೇ ಅಲ್ಲಿರುವ ಶ್ರಮಿಗಳಲ್ಲಿರುವ ಸಂತುಷ್ಟಿಯು. ಇವರೆಲ್ಲರ ಬಾಯಿಯಿಂದಲೂ ಹೇಗೆ ಆ ದೇಶಗಳಲ್ಲಿ ರೈಲುಕಂಪೆನಿಗಳು ಪರಿಚಾಲಿತವಾಗುವುವೋ ಹಾಗೆಯೇ ನಮ್ಮ ದೇಶದಲ್ಲೂ ಪರಿಚಾಲಿಸಲ್ಪಡಲು ಸಾಧ್ಯವಿಲ್ಲವೇ? ಯುರೋಪು ಮತ್ತು ಅಮೇರಿಕ ದೇಶಗಳಲ್ಲಿ ಎಷ್ಟೋ ರೈಲುಕಂಪೆನಿಗಳಿದ್ದಾಗ್ಯೂ ಇವುಗಳಲ್ಲಿ ಇಡೀ ವತ್ಸರದಲ್ಲಿ ಒಂದೇ ಒಂದಾದರೂ ದುರ್ಘಟನೆಯಾಗದಿರುವುದು ಅತಿ ಆಶ್ಚರ್ಯಕರವಾದ ವಿಷಯವು.

ದುಷ್ಟರೂ, ರೈಲುಕಂಪೆನಿಗಳ ದ್ರೋಹಿಗಳೂ, ಅತೃಪ್ತರಾದ ಕೆಲಸಗಾರರೂ ಇರುವರೆಂಬುದನ್ನು ಎಲ್ಲರೂ ಬಲ್ಲರು. ಆದರೆ ರೈಲುಕಂಪೆನಿಗಳು ಸಮುಚಿತ ಪ್ರಹರಿಗಳನ್ನು ನೇಮಿಸಿ ವ್ಯವಸ್ಥೆಗೊಳಿಸುವುದು ಉಚಿತವು. ಇತ್ತೀಚೆಗೆ ಸಂಭವಿಸಿದ ಕೊಡಿಕನಲ್ ದುರ್ಘಟನೆಯು ಮತ್ತು ಪಾಲುಕೆರೆಯ ರೈಲು ಸಂಘರ್ಷದ ಆದ್ಯಂತ ವಿವರಣೆಯು ನಮ್ಮ ಅವಗಾಹನೆಗೆ ಬಂದಿಲ್ಲವಾದರೂ ಇಂಥಾ ದುರ್ಘಟನೆಗಳಾಗುವಂತೆ ಎಡೆಯನ್ನು ಕೊಡುವುದು ರೈಲುಕಂಪೆನಿಗಳ ಪಾಲಿಗೆ ಕೇವಲ ನಿಂದ್ಯಾಸ್ಪದ ವಿಷಯವು. ಆದುದರಿಂದ ರೈಲುಕಂಪೆನಿಗಳು ಇಂಥಾ ನಿಂದೆಯನ್ನು ದೂರಗೊಳಿಸುವಂತೆ ಯತ್ನಿಸಬೇಕು.

ಸರಕಾರವು ಅವಿಳಂಬದಿಂದ ರೈಲುಕಂಪೆನಿಗಳಲ್ಲಿರುವ ಈ ಸರ್ವ ದೋಷಗಳನ್ನು ಪರಿಹಾರಗೊಳಿಸಲು ವ್ಯವಸ್ಥೆಗಳನ್ನು ಮಾಡಬೇಕೆಂಬದಾಗಿ ನಾವು ಪ್ರಾರ್ಥಿಸುವೆವು. ಇದನ್ನು ಶೀಘ್ರವಾಗಿ ಪರಿಹಾರಗೊಳಿಸದಿದ್ದರೆ ದೇಶದಲ್ಲಿ ವ್ಯಾಪಿಸಿರುವ ಅಸಂತೋಷವೂ ಸಂದೇಹವೂ ಇನ್ನಾವುದರಿಂದಲೂ ನಿವಾರಿತಗೊಳಿಸಲು ಸಾಧ್ಯವಾಗದು.

ಪತ್ರಕರ್ತರ ಪರಿಷತ್ತು.

ಪತ್ರಿಕೆಗಳ ಅಭಿಪ್ರಾಯ.

ಬಾಗಲಕೋಟೆಯಲ್ಲಿ ಸೇರಲಿರುವ ಪತ್ರಿಕಾಕರ್ತರ ಪರಿಷತ್ತಿಗೆ ಪ್ರತಿನಿಧಿಯನ್ನು ಕಳುಹಿಸಲು, ನಮ್ಮ ಜಿಲ್ಲೆಯ ಪತ್ರಿಕಾ ಸಂಪಾದಕರ ಸಭೆಯನ್ನು ಸೇರಿಸಬೇಕೆಂದು ಸ್ವದೇಶಾಭಿಮಾನಿಯು ಮಾಡಿದ ಸೂಚನೆಯು ನಮಗೂ ಮಾನ್ಯವಿರುತ್ತದೆ. ಬಾಗಲಕೋಟೆಯಲ್ಲಿ ಸೇರಲಿರುವ ಪರಿಷತ್ತಿಗೆ ನಮಗೆ ಅಗತ್ಯ ಕಾಣುವ ಸೂಚನೆಗಳನ್ನು ಮಾಡಲಿಕ್ಕೆ ಇದರಿಂದ ಅನುಕೂಲವಾಗಬಹುದು. ಅದರಂತೆ ಅಂಥಾ ಸೂಚನೆಗಳನ್ನು ನಾವು ಮೊದಲು ನಮ್ಮೊಳಗೆ ಚರ್ಚಿಸಿ ನಿರ್ಧಾರಮಾಡಿಕೊಳ್ಳಲಿಕ್ಕೆ ಬರುತ್ತದೆ. ಪತ್ರಕರ್ತರ ಪರಿಷತ್ತಿನಿಂದ ಅಗತ್ಯವಿರುವ ಎಲ್ಲಾ ಕಾರ್ಯಗಳನ್ನು ಈಗಲೇ ಕೈಗೂಡಿಸಲಿಕ್ಕೆ ಸಾಧ್ಯವಾಗದಿದ್ದರೂ ಇಂಥ ಒಂದು ಸಂಸ್ಥೆಯನ್ನು ಅಸ್ತಿತ್ವಕ್ಕೆ ತರುವುದರಿಂದ ಕ್ರಮೇಣ ಪ್ರಯೋಜನವಾಗದೆ ಇರಲಿಕ್ಕಿಲ್ಲ.

ಸತ್ಯಾಗ್ರಹೀ.

ಬಾಗಲಕೋಟೆಯಲ್ಲಿ ಪ್ರಥಮ ಬಾರಿಗೆ ಈ ಪರಿಷತ್ತು ನೆರವೇರಬೇಕೆಂದು ನಿಶ್ಚಯವಾಗಿದೆ. ಎಷ್ಟು ಸಮಯದಿಂದ ಇಂಥದೊಂದು ಮೈತ್ರಿಯು ಕನ್ನಡನಾಡಿನ ಪತ್ರಕರ್ತರಲ್ಲಿ ಹುಟ್ಟಬೇಕೆಂದು ಹಲವರು ಆಸೆಮಾಡಿದ್ದರು. ಹಲವರು ಯತ್ನಿಸಿದ್ದರು. ಆ ಆಸೆಯತ್ನಗಳು ತಮ್ಮ ಮೂರ್ತಿಸ್ವರೂಪವನ್ನು ಬಾಗಲಕೋಟೆಯಲ್ಲಿ ತಾಳಬೇಕಾಗಿದೆ. ಇದಕ್ಕಾಗಿ ಪತ್ರಿಕಾ ವ್ಯವಸಾಯಿಗಳು ತಕ್ಕ ಸಾಹಸಗಳನ್ನು ಮಾಡಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂದು ಹಲವು ಕನ್ನಡ ಪತ್ರಿಕೆಗಳು ಜೀವವನ್ನು ಹಿಡಿದುಕೊಂಡು ಬದುಕಿರಲಾರದಂಥ ಸ್ಥಿತಿಯಲ್ಲಿವೆ. ಈ ಪರಿಸ್ಥಿತಿಯಲ್ಲಿ ಅವುಗಳ ಬೆಳವಣಿಗೆಯು ಹೇಗಾಗಬೇಕು ಎಂಬ ವಿಚಾರವು ಎಲ್ಲವರ ಗಮನದಲ್ಲಿರಲಿ. ನಮ್ಮಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸಬೇಕಾದುದು ಪ್ರಥಮ ಕರ್ತವ್ಯ. ಎಲ್ಲಿಯ ವರೆಗೆ ವಾಚಕರಿಲ್ಲವೋ ಅಲ್ಲಿಯ ವರೆಗೆ ಪತ್ರಿಕೆಗಳಿಗೆ ನೆಲೆಯಿಲ್ಲ. ಅದಕ್ಕಾಗಿ ಅಲ್ಲಲ್ಲಿ ವಾಚನಾಲಯಗಳು ಅಸ್ತಿತ್ವಕ್ಕೆ ಬರುವಂತೆ ಮಾಡುವುದು ಸಹ ಪತ್ರಕರ್ತರ ಹೇತುಗಳಲ್ಲೊಂದಾಗಿರಬೇಕು. ಇನ್ನು ಪತ್ರಿಕೆಯಲ್ಲಿ ಜನರಿಗೆ ಅಭಿರುಚಿಯಾಗಬೇಕಾದರೆ, ಅದರ ಒಳಹೊರಗೆರಡು ರಮಣೀಯವಾಗಿರಬೇಕು. ಹಲವೊಂದು ಪತ್ರಿಕೆಗಳು ಪತ್ರಿಕೆಯ ಸೊಗಸಿನ ಕಡೆಗೆ (ಮುದ್ರಣ, ಕಾಗದ, ರೂಪು) ಗಮನವನ್ನಿರಿಸದಿರುವುದು ನಮ್ಮಲ್ಲೊಂದು ದೊಡ್ಡ ಕೊರತೆ. ಇನ್ನೆರಡನೆಯದಾಗಿ ವಾರ್ತಾ ಪತ್ರಿಕೆಗಳಿಗೆ, ಕರ್ನಾಟಕದ ಎಲ್ಲಾ ಕಡೆಗಳಿಂದಲೂ ಉತ್ತಮ ಬಾತ್ಮಿಗಳು ಸಿಗುವಂತೆ ಒಂದು ವಾರ್ತಾಪ್ರಸಾರಕ ಸಂಘವು ಆಧುನಿಕ ಉಪಕರಣಗಳ ಸಹಾಯದಿಂದ ಸ್ಥಾಪಿತವಾಗಲೇ ಬೇಕು. ಇಲ್ಲವಾದರೆ ಹಳೆಗಾಲದ ಸುದ್ದಿಯು ಓದುಗರ ಕಿವಿಯನ್ನು ಸೇರುವುದರೊಳಗೆ ಮಳೆಗಾಲವು ಸಹ ಸರಿದುಹೋಗುವುದು. ಕರ್ನಾಟಕದಲ್ಲಿ ಟಪ್ಪಾಲಿನ ಮಟ್ಟಿಗೆ ಸರಿಯಾದ ರೈಲ್ವೇ ಸಂಪರ್ಕವಿಲ್ಲ. ಇತ್ತ ಮೋಟಾರುಗಳ ಓಡಾಟವಿದ್ದರೂ, ಎಷ್ಟೋ ಕಡೆಗಳಲ್ಲಿ ಇನ್ನೂ ಟಪ್ಪಾಲುಗಳು ಇರುವೆಯಂತೆ ಸಾಗುತ್ತದೆ. ಉದಾ—ಇಂದು ಮಂಗಳೂರಿನಿಂದ ಒಂದು ಪತ್ರವನ್ನು ಬರೆದು ಶಿರ್ಸಿಗೆ ಹಾಕಿದರೆ ಅದು ದ್ರಾವಿಡ ಪ್ರಾಣಾಯಾಮವನ್ನು ಮಾಡಿ ಆ ಊರನ್ನು ಸೇರುವುದರಲ್ಲಿ ೭-೮ ದಿನಗಳು ಸರಿಯುವುವು. ಈ ಕೊರತೆಗಳನ್ನು ನಿವಾರಿಸದೆ ಹೋದರೆ, ಒಂದು ಜಿಲ್ಲೆಯಲ್ಲಿ ಹುಟ್ಟಿದ ವಾರ್ತಾ ಪತ್ರಿಕೆಯು ನೆರೆಜಿಲ್ಲೆಯನ್ನು ಕಾಣುವ ಸಂಭವವೇ ಇಲ್ಲವಾಗುವುದು. ಕಾರಣ ಅಲ್ಲಿನವರು ಈ ಹಳೆ ಸುದ್ದಿಯನ್ನು ತೆಗೆದುಕೊಂಡೇನು ಮಾಡಬೇಕು? ಅದಕ್ಕಾಗಿ ಮಂಗಳೂರು ಕಡೂರು, ಉಡ್ಪಿ ಶಿವಮೊಗ್ಗಾ, ಕುಂದಾಪುರ ಕುಮಟಾ, ಮೊದಲಾದ ಹಲವು ದಾರಿಗಳಲ್ಲಿ ಟಪ್ಪಾಲನ್ನು ಅದೇ ದಿನದಲ್ಲಿ ಮುಟ್ಟಿಸುವ ಮೋಟಾರುಗಳ ಮುಖಾಂತರವೇ ಸಾಗಿಸುವಂತೆ ಮಾಡಿದ್ದಲ್ಲಿ, ಪತ್ರಿಕೆಗಳ ಪ್ರಚಾರಪ್ರಾಂತವು ಸಹ ಬೆಳೆಯುವುದು. ಇವೇ ಮೊದಲಾದ ಹಲವು ಅಗತ್ಯದ ಸೂಚನೆಗಳನ್ನು ಈ ಪರಿಷತ್ತು ಮರೆಯದಿರಲಿ.

ವಸಂತ.

ದ್ರೌಪದಿ ಸ್ವಯಂವರದ ಕಥೆಯನ್ನು ವಿವರಿಸಿದ ನಂತರ ಹುಡುಗರು ತಿಳಕೊಂಡರೋ ಎಂದು ನೋಡಲೋಸುಗ—

ಉಪಾಧ್ಯಾಯ:—ಮಕ್ಕಳೇ, ಪಂಚ ಪಾಂಡವರಿಗೆ ದ್ರೌಪದಿಯೊಬ್ಬಳೇ ಹೆಂಡತಿಯಾಗಲಿಕ್ಕೆ ಕಾರಣವೇನು?

ಚುರುಕು ಹುಡುಗನೊಬ್ಬನೆದ್ದು:—ಆಗ ಹುಡುಗಿಯರ ಬೆಳೆಗೆ ಬರಗಾಲವಿತ್ತು, ಸರ್.

ಆಗ ತಾನೇ ವರ್ಗವಾಗಿ ಬಂದಿದ್ದ ಅಧಿಕಾರಿಯು ಮಾರ್ಗದಲ್ಲಿ ಒಬ್ಬ ಹುಡುಗನನ್ನು ನೋಡಿ—

ಅಧಿಕಾರಿ:—ಪಿಳ್ಳೆ, ಈ ಮಾರ್ಗವು ಎಲ್ಲಿ ಹೋಗುತ್ತದೆ?

ಹುಡುಗ—ನಾನು ಹುಟ್ಟಿದಂದಿನಿಂದ ಈ ಮಾರ್ಗವು ಎಲ್ಲಿಯೂ ಹೋದದ್ದು ನೋಡಲಿಲ್ಲ. ಕೇಳಲೂ ಇಲ್ಲ. ಇದರ ಮೇಲಿಂದ ಮಾತ್ರ ಜನಜಾನುವಾರುಗಳು ಹೋಗುತ್ತಾ ಬರುತ್ತಾ ಇವೆ. ತಿಳಿಯಿತೇ?

V. T.

ನಿಮ್ಮ ಕನಸು ನಿಜವಾಗುವುದು.

ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳನ್ನು ... ಪ್ರತಿಫಲವಾಗಿ ದೊರೆತ ಆರೋಗ್ಯವೇ ಇದಕ್ಕೆ ಕಾರಣವೆಂದು ...

ಕ್ರಯ ರೂ. 2/4.

ಬಾಕ್ಸ 858,

Product of Graham Remedies Ltd., Cape Town, S. A.

ಕರ್ಣಿಕ ಎಗ್ಯು ಮಿಕ್ಸ್ಚರ್.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಝಾ, ಬಹು ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ
ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು. | ಕರ್ಣಿಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಖಂ ಇಮಿಟೇಷನ್ ಸಿಲ್ಕ ಬನಾರಸ್ ಸೀರೆಗಳು.

ಈ ಇಮಿಟೇಷನ್ ರೇಷ್ಮೆ ಸೀರೆಗಳು ೧೮ ಮೊಳ ಉದ್ದವೂ 2½ ಮೊಳ ಅಗಲವೂ ಇರುವವು. ಉಡಲು ಧಡೂತಿಯಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನಸ್ಯದ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗಂಬಂಗೂ ಉಡಲು ಲಾಯಖಾದದ್ದು.

ಕ್ರಯ ರೂ. 4—12—0.

ವಿಳಾಸ:— ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109. ಜೈನಾ ಬಜಾರ್ ರೋಡ್, ಮದರಾಸು.

ಇಂಗ್ಲೀಷ್ ಹೇರ್ ಡಿಸ್ಸಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗಿಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿಸಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಒಂದೇ ಒಂದು ನಿಮಿಷದಲ್ಲಿ ಕೂದಲನ್ನು ತೆಗೆದು ಬಿಡುವುದು.

3 ಸೋಪುಗಳ ಪೆಟ್ಟಿಗೆ 1ಕ್ಕೆ ರೂ. 1—4—0.
2 ಪೆಟ್ಟಿಗೆಗಳಿಗೆ ರೂ. 2-4—0.

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪು ಮಾಡಿದರೆ ಸಾಕು. ಇದರಲ್ಲಿ ಎಷ್ಟುಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. 1ಕ್ಕೆ ರೂ. 3-0-0.

ವಿಳಾಸ— ಲೀಗಲ್ ಟ್ರೇಡಿಂಗ್ ಕಂಪೆನಿ,
ಪೋ ಬೊಕ್ಸ್ ನಂಬ್ರ 243, ಮದರಾಸು.

WANTED.

"CANARA BANK SHARES"

Intending sellers please communicate stating their lowest quotations to—

D. R. Rau,
Civil Surgeon, TRICHUR.

Morris Cowly four seater in good order for sale, owner purchasing bigger car. Any reasonable offer accepted.

D. R. RAU,
Civil Surgeon, TRICHUR.

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಸಬೋರ್ಡಿನೇಟ ಕೋರ್ಟಿನಲ್ಲಿ

ಅಸಲು ವ್ಯಾಜ್ಯದ ನಂ. 21/1928.

ಸುಜೀರ ಮಂಜುನಾಥ ನ್ಯಾಕ, ವಕೀಲ್ ಸುಜೀರ ನರಸಿಂಹ ನ್ಯಾಕರ ಮಗ, ಮಂಗಳೂರು ಕಸ್ಬಾದಲ್ಲಿ ಇರುವವ ವಾದಿ.

ಮತ್ತು

1. ಪೊಡೇರ ಮಾಮುಬ್ಯಾರಿ, ಸ್ವಾರಿಬ್ಯಾರಿಗಳ ಮಗ.
2. A. H. ಪೊಡೆಯರ, ಸದ್ರಿ ಸ್ವಾರಿಬ್ಯಾರಿಗಳ ಮಗ.
3. A. I. ಪೊಡೆಯರ, ಸದ್ರಿ ಸ್ವಾರಿಬ್ಯಾರಿಗಳ ಮಗ.
4. ಮಹಮ್ಮದಬಿನ ಮೊದಿನ್ನ ಸೂಪೆ ಅಬ್ಬುಬ್ಯಾರಿಗಳ ಮಗ.
5. ಫಾತಿಮಾಬಿ, H. ಮಹಮ್ಮದ ಯಾನೆ ಪುತ್ತೂರು ಸಾಹೇಬರ ತಾಯಿ.
6. ಫಾತಿಮಾಬಿ, ಸದ್ರಿ ಮಹಮ್ಮದ ಯಾನೆ ಪುತ್ತೂರು ಸಾಹೇಬರ ವಿಧವೆ.
7. ಶರೀಫುದ್ದಿನ. 8. ಶಂಶುದ್ದಿನ. 9. ಜುಬೈಗ್ನಿಸಾ. 10. ಶಹರಬಾನ. 11. ಮಹಮ್ಮದ, ತಾಹಿರ ಸದ್ರಿ ಮಹಮ್ಮದ ಯಾನೆ ಪುತ್ತೂರು ಸಾಹೇಬರ ಮ್ಯಾನರ ಮಕ್ಕಳು ಗಾರ್ಡಿಯನ ತಾಯಿ 6ನೇ ಪ್ರತಿವಾದಿಗಳು.

1ನೇ ಲಾಗಾಯತು 3ನೇ ವರೆಗಿನ ಪ್ರತಿವಾದಿರು ಮಂಗಳೂರು ಕ್ಯಾಹಾರ ಪೈಕಿ ಬಂದ್ರದಲ್ಲಿ ಇರುವವರು.

4ನೇಯವನು ಮಂಗಳೂರು ಕ್ಯಾಹಾರ ಪೈಕಿ ವರ್ತಕ ವಿಲಾಸದ ಬಳಿ ಇರುವವಾ.

5ನೇ ಲಾಗಾಯಿತು 11ನೇ ವರೆಗಿನವರು ಮಂಗಳೂರು ಕ್ಯಾಹಾರ ಪೈಕಿ ಬೆಂದೂರಲ್ಲಿ ಇರುವವರು.

ವಾದಿಯು ಸದ್ರಿ ಪ್ರತಿವಾದಿಯರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾಖಿಲುಮಾಡಿದ ವ್ಯಾಜ್ಯದ 1, 2 ವ 5ನೇ ಪ್ರತಿವಾದಿಯರು ನೋಟೀಸಿನ ಜ್ಯಾರಿಗೆ ಸಿಕ್ಕದೆ ಇರುವದರಿಂದ ಸದ್ರಿ ವ್ಯಾಜ್ಯವು ಇದೇ ಬರುವ ಅಗೋಸ್ತು ತಿಂಗಳ ತಾ. 9ನೇ ಗುರುವಾರ ದಿವಸ ಸದ್ರಿ ಸಬೋರ್ಡಿನೇಟ ಕೋರ್ಟಿನಲ್ಲಿ ತನಿಕೆಗೆ ನಿಶ್ಚಯಿಸಿರುತ್ತದೆ.

ತಾ. 30-7-1928.

A. Varada Rao,
Vakil for Plaintiff

Proprietor: D. C. GORE.

ಇತ್ತ ನೋಡಿರಿ!!

ಸುಗಂಧ ವಸ್ತು ಔಷಧಿಗಳ ಕಾರಖಾನೆದಾರರಿಗೆ ಅನುಕೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೋ ... ಕೋಲನ್‌ವಾಟರ, ... ಎಗ್ಯೂ ಮಿಕ್ಸ್ಚರ್ ... ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ, ... ಕೆಮಿಕಲ್ಸ, ಬಾಟಲಿಗಳು, ... ಕ್ರಿಸ್ಟಲ್ ಮತ್ತು ... ದರದಿಂದ ಸಿಗುವವು. ... ದೊರೆಯುತ್ತವೆ.

... ಪತ್ರ ಬರೆಯಿರಿ.

ಡಿ. ಜಿ. ಗೋರೆ,
15028 ಮಂಗಳವಾಸ ರೋಡ, ಮುಂಬಯಿ ನಂಬ್ರ ೨.

ರೋಲ್ಡ್ ಗೋಲ್ಡ್ ಭಂಗಾರದ ಪೆಂಡ್ಟಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ದಿಂದ ತಯಾರಿಸಿ ಸಾವರನ್ ಭಂಗಾರದಿಂದ ಲೇಪು ಕೊಟ್ಟಿದೆ. ಬಣ್ಣ ... ಕೆಂಪು, ಬಿಳಿ ಮತ್ತು ಹಸಿರು ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟು ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಉಚಿತವಾದದ್ದು. ಕ್ರಯ 1ಕ್ಕೆ ರೂ. 3-8-0.

ಕಿವಿಯಲ್ಲಿ ಹಾಕುವ 7 ಕಲ್ಲಿನ ಓಲೆ ಜೊತೆ 1ಕ್ಕೆ ,, 2—8—0.

150 ಗಜ್ಜೆ ಕಟ್ಟಿದ ಡಾಬು ,, [illegible]—8—0.

THE LEGAL TRADING Co.,
P. B. 243 Madras.

ಮೈಸೂರು ಸರಕಾರದವರು ಹಾಕಿಸುವ ರೈಲು ಮಾರ್ಗಗಳು.

ಮೈಸೂರು ಸರಕಾರದವರು ತಮ್ಮ ರಾಜಧಾನಿಯಾದ ಮೈಸೂರು ಪಟ್ಟಣವನ್ನು ವೃದ್ಧಿಗೊಳಿಸಬೇಕೆಂದು ಹಲವು ವಿಧದಿಂದ ಕೆಲಸಗಳನ್ನು ಮಾಡುತ್ತಿರುವರು. ರಾಜಧಾನಿಯು ನಾಲ್ಕು ಕಡೆಗಳಿಂದಲೂ ವಿಸ್ತರಿಸಲ್ಪಡುತ್ತಿದೆ. ವಿದ್ಯುಚ್ಛಕ್ತಿಯ ದೀಪಗಳನ್ನು ಒದಗಿಸುವರು. ನೀರಿನ ಸರಬರಾಯಿ ಮಾಡುತ್ತಿರುವರು. ವಿದ್ಯೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೈಸೂರು ಯುನಿವರ್ಸಿಟಿಯನ್ನು ಸ್ಥಾಪಿಸಿರುವರು. ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಅಲ್ಲಲ್ಲಿ ಕಾರ್ಖಾನೆಗಳನ್ನು ಏರ್ಪಡಿಸುತ್ತಿರುವರು. ಎಲ್ಲಾ ವಿಧದಲ್ಲಿಯೂ ದೇಶದ ಅಭಿವೃದ್ಧಿಗೆ ಉಪಯುಕ್ತವಾದ ಕಬ್ಬಿಣದ ಕಾರ್ಖಾನೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಿರುವರು. ಸಾಬೂನಿನ ಕಾರ್ಖಾನೆ, ಹಂಚಿನ ಕಾರ್ಖಾನೆಗಳನ್ನು ಇಟ್ಟಿರುವರು. ಪಿಂಗಾಣಿಯ ಕಾರ್ಖಾನೆಗೆ ತಯಾರಿಯು ನಡೆಯುತ್ತಿದೆ. ಎರಡು ಬೆಂಕಿಪೆಟ್ಟಿಗೆಯ ಕಾರ್ಖಾನೆಗಳಿಗೆ ಆಲೋಚನೆಯಾಗಿದೆ.

ಬರಗಾಲವು ಬಾರದಂತೆ ಅಲ್ಲಲ್ಲಿ ಕೆರೆಗಳನ್ನು ದುರಸ್ತಿ ಪಡಿಸಿರುವರು. ನದಿಗಳಿಗೆ ಅಣೆಕಟ್ಟನ್ನು ಕಟ್ಟಿ ವ್ಯರ್ಥವಾಗಿ ಸಮುದ್ರಕ್ಕೆ ಹೋಗುವ ನೀರನ್ನು ನಿಲ್ಲಿಸಿ ನದಿಗಳ ದಡಗಳಲ್ಲಿ ಕಾಲಿವೆಗಳನ್ನು ಮಾಡಿಸಿ ಬೇಸಾಯಕ್ಕೆ ಉಪಯೋಗಿಸುತ್ತಿರುವರು. ಇನ್ನು ಮಾಡಿಸುವ ಕೆಲಸವು ವರ್ಷವರ್ಷವೂ ನಡಿಯುತ್ತದೆ.

ಎಲ್ಲಾ ತರದ ಅಭಿವೃದ್ಧಿಯಾದರೂ ವ್ಯಾಪಾರ ವಹಿವಾಟದ ಸೌಕರ್ಯವು ಸರಿಯಿಲ್ಲದಿದ್ದರೆ ನಿಜವಾದ ಅಭಿವೃದ್ಧಿಯಾಗಲಿಕ್ಕಿಲ್ಲವೆಂದು ಹಳ್ಳಿಗಳಲ್ಲಿ ಮಾರ್ಗಗಳನ್ನು ಮಾಡಿಸುತ್ತಿರುವರು. ಹಳ್ಳಿಮಾರ್ಗಗಳನ್ನು ರೈಲುಸ್ಟೇಷನುಗಳಿಗೆ ಕೂಡಿಸುತ್ತಿರುವರು. ಆದರೆ ಮೈಸೂರು ರಾಜ್ಯದ ವಿಸ್ತೀರ್ಣವನ್ನು ನೋಡಿದರೆ ನವನಾಗರಿಕತೆ ಹೊಂದಿದ ಪಾಶ್ಚಿಮಾತ್ಯ ದೇಶಗಳಲ್ಲಿರುವಷ್ಟು ರೈಲುಮಾರ್ಗಗಳು ಈಗ ಮೈಸೂರಲ್ಲಿ ಇರುವುದಿಲ್ಲ. ಈಗ ಮೈಸೂರಿನಿಂದ ಬೆಂಗಳೂರಿಗಾಗಿ ಮದರಾಸಿಗೆ ಹೋಗುವ ಒಂದು ರೈಲುಮಾರ್ಗವಿದೆ. ಮೈಸೂರಿನಿಂದ ಚಾಮರಾಜನಗರಕ್ಕೆ ಒಂದು ರೈಲುಮಾರ್ಗವಿದೆ. ಬೆಂಗಳೂರಿನಿಂದ ಶಿವಮೊಗ್ಗಾ ದಾರಿಯಾಗಿ ಮುಂಬಾಯಿಗೆ ಹೋಗುವ ಒಂದು ರೈಲುಮಾರ್ಗವಿದೆ. ಮೈಸೂರಿನಿಂದ ಹಾಸನದ ವರೆಗೆ ಅಲ್ಲಿಂದ ಅರಸಿಕೆರೆಗೂ ರೈಲುಮಾರ್ಗವಿದೆ.

ಶಿವಮೊಗ್ಗೆಯ ಮಾರ್ಗವನ್ನು ಭಟ್ಕಲ ಬಂದರಕ್ಕೆ ಮುಂದರಿಸಲು ಅರಸುಲು ವರೆಗೆ ಈಗ ಕೆಲಸವು ನಡಿಯುತ್ತಿದೆ. ಇನ್ನು ರಾಜಧಾನಿಯಿಂದ ಗಡಿಯಲ್ಲಿರುವ ಎಲ್ಲಾ ಗಾಟಗಳ ವರೆಗೆ ರೈಲುಮಾರ್ಗಗಳನ್ನು ಕೊಂಡುಹೋಗಿ ನಿಲ್ಲಿಸುವ ಆಲೋಚನೆ ಇದೆ. ಗಡಿಯ ಸುತ್ತಲೂ ಇಂಗ್ಲಿಷರು ಸ್ವಿತಹ ಆಳುವ ರಾಜ್ಯವಿದೆ. ಮೈಸೂರು ದೇಶದ ಅಭಿವೃದ್ಧಿಗಾಗಿ ದೇಶದ ಒಳಭಾಗದಲ್ಲಿರುವ ಎಲ್ಲಾ ಪ್ರದೇಶಗಳನ್ನು ಕೂಡಿಸಿದರೆ ರಾಜ್ಯದ ಜನರು ಸುಖಪಡೆಯುವರು. ವ್ಯಾಪಾರ ಅಭಿವೃದ್ಧಿಯಾಗುವದು ಎಂಬುದೇ ಇದರ ಉದ್ದಿಶ್ಯವಾಗಿದೆ. ಗಡಿಯಿಂದ ಮುಂದೆ ಸುತ್ತಲೂ ಇರುವ ಸರಕಾರದವರು ಮನಸ್ಸಿದ್ದರೆ ಮಾಡಿಸಲಿ ಇಲ್ಲವೆ ಬಿಡಲಿ ಎಂದು ಅವರ ಭಾವನೆಯಾಗಿರಲೂ ಬಹುದು.

ಈ ವರ್ಷ ಮೈಸೂರು ಹೊಸ ಅಗ್ರಹಾರದಿಂದ ಒಂದು ರೈಲುಮಾರ್ಗವನ್ನು ಕೊಡಗು ಸರಹದ್ದಿನ ವರೆಗೆ ಮಾಡಿಸುವರು. ನಂತರ ಗಡಿಯಿಂದ ಕೊಡಗುದೇಶದ ರಾಜಧಾನಿಯಾದ ಮಡಿಕೇರಿಗೂ ಅಲ್ಲಿಂದ ಅದರ ಗಡಿಗೂ ನಂತರ ಅಲ್ಲಿಂದ ಮಂಗಳೂರಿಗೂ ಸಂತೋಷವಿದ್ದರೆ ಮಾಡಿಸಲಿ ಎಂದು ಮುಂದಿನ ಆಲೋಚನೆಗೆ ಎಡೆ ಇಟ್ಟಿರುವರು.

ತರಿಕೆರೆಯಿಂದ ಉತ್ತರ ದಿಕ್ಕಿನ ಗಡಿಯಲ್ಲಿರುವ ರಾಯದುರ್ಗಕ್ಕೆ ಒಂದು ರೈಲುಮಾರ್ಗವು ಹೋಗುವುದು. ಈ ಮಾರ್ಗವು ತರಿಕೆರೆಯಿಂದ ಚಿತ್ರಲದುರ್ಗಕ್ಕೂ ಅಲ್ಲಿಂದ ರಾಯದುರ್ಗಕ್ಕೂ ಹೋಗುವುದು. ರಾಯದುರ್ಗವು ಬಳ್ಳಾರಿ ಜಿಲ್ಲೆಯ ಗಡಿಯಲ್ಲಿದೆ. ರಾಯದುರ್ಗದಿಂದ ಜಿಲ್ಲೆಯ ಮುಖ್ಯಪಟ್ಟಣವಾದ ಬಳ್ಳಾರಿಗೆ ಹತ್ತು ಹನ್ನೆರಡು ಮೈಲುಗಳು ಮಾತ್ರವೇ ಇವೆ. ಬಳ್ಳಾರಿಯವರು ಅಗತ್ಯವಿದ್ದರೆ ಮಾಡಿಸಲಿ ಎಂದು ಇದರ ಭಾವನೆ.

ಇಷ್ಟು ಮಾಡಿದರೂ ಮಲೆನಾಡಿನ ಗಡಿಯಲ್ಲಿರುವ ಸಕಲೇಶಪುರ, ಕೊಟ್ಟಿಗೆಹಾರ, ಆಗುಂಬೆ, ಹೈದರಗಢ, ಕೊಲ್ಲೂರು ಮುಂತಾದ ಘಾಟಿಗಳಿಗೆ ರೈಲು ಹಾಕಿಸುವ ಆಲೋಚನೆಯು ಮಾತ್ರ ಕಂಡುಬರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯವರು ನಿದ್ರಾವಸ್ಥೆಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ ಎನ್ನಬಹುದು. ಹಲವು ವರ್ಷಗಳಿಂದ ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯವರ ಹತ್ತಿರ ಕೇಳಿ ಕೇಳಿ ಸಾಕಾಯಿತು.

ಮಂಗಳೂರು ಅರಸಿಕೆರೆ ರೈಲುಹಾಕಿಸಬೇಕೆಂದು ೩೫ ವರ್ಷಗಳಿಂದ ಸಾಧಿಸಿದರು. ಆದರೆ ಈ ಜಿಲ್ಲೆಯವರು ಅದಕ್ಕೆ ಕಿವಿಗೊಡಲಿಲ್ಲ. ಮಂಗಳೂರು ಮಡಿಕೇರಿ ವರೆಗೆ ರೈಲು ಹಾಕಿಸಬೇಕೆಂದು ೧೯೧೪ರಲ್ಲಿ ತಯಾರಿಯು ಬಂಟವಾಳದ ವರೆಗೆ ನಡಿಯಿತು. ಯುದ್ಧವು ಬಂದು ಆಲೋಚನೆಯು ಮೂಲೆಗೆ ಬಿತ್ತೋ ಅಥವಾ ಬಿದ್ದುಹೋಯಿತೋ ತಿಳಿಯುವುದಿಲ್ಲ. ಮೈಸೂರಿನಿಂದ ಮಡಿಕೇರಿ ಗಡಿಯ ವರೆಗೆ ರೈಲು ಹಾಕಲು ಯೋಚನೆಯಾದ್ದರಿಂದ ಈ ಆಲೋಚನೆ ಬಿದ್ದುಹೋಗಲಿಲ್ಲವೆಂದು ಕಾಣುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಮೊದಲಿನ ಹೆಸರು ತುಳುದೇಶವೆಂದಿದೆ. ತೌಳವರೆಂದರೆ ತಣ್ಣೀರನ್ನು ತಣ್ಣಗೆ ಮಾಡಿ ಕುಡಿಯುವವರು. ಅರಸಿಕೆರೆ ಮಂಗಳೂರು ರೈಲುವೇ, ಮಂಗಳೂರು ಮಡಿಕೇರಿ ರೈಲುವೇ ಇವುಗಳನ್ನು ಮಾಡಿಸಲಿಕ್ಕೆ ಸಾಧಿಸುತ್ತಿದ್ದರು. ಈಗ ಮಂಗಳೂರು, ಮಲಪೆ ರೈಲುವೆಯನ್ನು ಸರಕಾರದವರು ಸೆಂಕ್ಶನು ಮಾಡಿರುವರು. ಅದು ಹಾಗಾಗಬೇಕು ಹೀಗಾಗಬೇಕೆಂದು ಹಟಸಾಧನೆಯು ನಡಿಯುತ್ತದೆ. ಗವರ್ನಮೆಂಟ ಕೊಲೆಜಿನಲ್ಲಿ ಒಂದು ಸಭೆ ಮಾಡಿದರು. ಮೈಸೂರು ಮಹಾರಾಜರಲ್ಲಿಗೆ ಹೋಗುತ್ತೇವೆಂದರು. ವ್ಯಾಸರಾಯರಲ್ಲಿಗೆ ಹೋಗುತ್ತೇವೆಂದರು. ಕಡೆಗೆ ಬರೇ ಗುಲ್ಲು ನಿದ್ದೆಗೇಡು ಎಂದಾಯಿತು.

ಮಂಗಳೂರು ಬಂದರದ ಅಳವೆ ಬಾಗಲಿನ ಕೆಸರು ತೆಗಿಸಿ ಹಡಗಗಳು ಬೇಕ್‌ವೋಟರಿಗೆ ಬರುವಂತೆ ಸುಲಭವಾಗಿ ಮಾಡಿಸಬಹುದು. ಕೊಚ್ಚಿ ಬೇಕ್‌ವೋಟರಿನ ಕೆಸರು ತೆಗಿಸಲಿಲ್ಲವೇ? ಅದನ್ನು ನೋಡಿದರೆ ಮಂಗಳೂರಿನ ಬೇಕ್‌ವೋಟರಿನ ಕೆಲಸ ಮಾಡಿಸಬಹುದು. ಮಲ್ಪೆಯಲ್ಲಿ ಒಂದು ಸಣ್ಣ ದಕ್ಕೆ ಕಟ್ಟಿಸಿ ಅಲ್ಲಿಂದ ಒಂದು ಪಿಯರ್ ಕಟ್ಟಿಸಿ ಪಿಯರಿನಿಂದ ಹಡಗಕ್ಕೆ ಇಳಿಯುವಂತೆ ಸುಲಭದಲ್ಲಿ ಮಾಡಬಹುದು. ಕುಂದಾಪುರದಲ್ಲಿಯೂ ಅಳವೆ ಬಾಗಲಿನ ಕೆಸರು ತೆಗಿಸಿ ಹಡಗು ಒಳಗೆ ಬರುವಂತೆ ಮಾಡಬಹುದು.

ಈ ಬಂದರುಗಳನ್ನು ಈ ರೀತಿಯಲ್ಲಿ ದುರುಸ್ತಿಮಾಡಿಸಿದರೆ ರೈಲುವೇ ಮಾರ್ಗಗಳನ್ನು ತಂದು ಈ ಬಂದರುಗಳಿಗೆ ಕೂಡಿಸಬಹುದು. ಹಾಸನದಿಂದ ಶಿರಾಡಿ ಕಣಿವೆಯ ಮಾರ್ಗವಾಗಿ ಉಪ್ಪಿನಂಗಡಿ, ಪುತ್ತೂರು, ಪಾಣೆಮಂಗಳೂರು, ಬಂಟವಾಳ ದಾರಿಯಾಗಿ ಒಂದು ಲ್ಯಾನನ್ನು ತಂದು ಮಂಗಳೂರು ಬಂದರಕ್ಕೆ ಕೂಡಿಸಬಹುದು. ಮಡಿಕೇರಿಯಿಂದ ಸಂಪಾಜೆ ಅಥವಾ ಸುಬ್ರಮಣ್ಯ ಘಾಟಿಯ ದಾರಿಯಾಗಿ ಒಂದು ಲ್ಯಾನನ್ನು ತಂದು ಪುತ್ತೂರಿಗೆ ಕೂಡಿಸಿ ಪುತ್ತೂರನ್ನು ಒಂದು ಜಂಕ್ಷನಾಗಿ ಮಾಡಬಹುದು. ಮರಮಟ್ಟುಗಳ ದೊಡ್ಡ ಕಾರ್ಖಾನೆಗಳನ್ನು ಶಿರಾಡಿ, ಸಂಪಾಜೆಗಳಲ್ಲಿ ಇಟ್ಟು ಕರಾವಳಿಯ ಪ್ರದೇಶಗಳಿಗೆ ಮರಮಟ್ಟು, ಸೌದೆ ಸಾಗಿಸಬಹುದು. ಕಾಗದ ತಯಾರಿಸುವ ಹಿಟ್ಟನ್ನು ತಯಾರಿಸಿ ರೈಲು ದಾರಿಯಾಗಿ ಪರದೇಶಕ್ಕೆ ಕಳುಹಿಸಬಹುದು. ಉಪ್ಪಿನಂಗಡಿ ತಾಲೂಕು ಅಭಿವೃದ್ಧಿಯಾಗಿ ಕರಾವಳಿಯ ಪ್ರದೇಶಕ್ಕಿಂತಲೂ ಉನ್ನತಸ್ಥಿತಿಗೆ ಬಂದೀತು. ಬರೇ ಹಳ್ಳಿ ಪಂಚಾಯತುಗಳನ್ನು ಮಾಡಿದರೆ ತಾಲೂಕು ಅಭಿವೃದ್ಧಿಯಾಗಲಿಕ್ಕಿಲ್ಲ.

ತೀರ್ಥಹಳ್ಳಿಯ ಮಾರ್ಗವಾಗಿ ರೈಲುಮಾರ್ಗವನ್ನು ಕಾರ್ಕಳಕ್ಕೆ ತಂದು ಅಲ್ಲಿಂದ ಉಡುಪಿ, ಮಲಪೆ ಬಂದರಕ್ಕೆ ಕೂಡಿಸಿ ಉಡುಪಿಯನ್ನು ಇನ್ನೊಂದು ರೈಲುವೇ ಜಂಕ್ಷನು ಮಾಡಬಹುದು.

ಈ ರೀತಿ ಮಾಡಿದರೆ ಮೈಸೂರು ದೇಶಕ್ಕೂ ದಕ್ಷಿಣ ಕನ್ನಡ ಜಿಲ್ಲೆಯ ಮುಂದಿನ ಅಭಿವೃದ್ಧಿಗೂ ದಾರಿಯನ್ನು ಮಾಡಿದಂತಾಗುವುದು.

ಚಂಡಿ ಹಿಡಿದು ಅಳುತ್ತಾ ಇದ್ದ ಮಗುವನ್ನು ಕುರಿತು—

ತಾಯಿ:—ನಿನ್ನನ್ನು ಬಾವಿಯಲ್ಲಿ ಹಾಕಿ ನಿನ್ನ ಅಳುವನ್ನು ನಿಲ್ಲಿಸುತ್ತೇನೆ ನೋಡು.

ಮಗು:—ನಂತರ ಅಳುವದು ಯಾರಮ್ಮಾ?

V. T.

ಈ ಕಾವ್ಯವನ್ನು ವಾಚಕರು ಎಷ್ಟು ಪ್ರೀತಿಯಿಂದ ಓದುವರು ಎಂಬುದನ್ನು ೧೭ನೇ ಸಂಧಿಯ ೧೩೫ನೇ ಪದ್ಯದ ಅರ್ಥ ಪದ್ಯದೊಳಗೆ ವಿವರಿಸಿ ಬಿಟ್ಟಿರುವನು.

> ಇದರೊಳು ಕೊಂಕಿರೆ ತಿದ್ದಿಕೊಂಬರು ಬಲ್ಲವರನು ತಾನಿರಲು,
> ಭೂಷಣವೇ ॥ ಸುದತಿಯ ಕಡೆಗಣ್ಣನೋಟ ಕುರುಳ್ಗುಬ್ಬ ಮುದವ
> ಪುಟ್ಟಿಸದ ಲೋಕದೊಳೂ ॥ ೧೩೬ ॥

ಮಂಗಲವು ಒಂದೇ ಪದದಲ್ಲಿ ಮುಗಿದದೆ.

> ಮಂಗಲವಾಗಲಿ ಧರೆಗೆಲ್ಲ ಭವ್ಯಭವನಗಳಭಿವೃದ್ಧಿಯಾಗಿ ॥
> ಕಂಗೊಳಿಸುವ ಜಿನಧರ್ಮ ಬೆಳಗಲಂತರಂಗದೊಳಗೆ ಭೂ
> ಭುಜರಾ ॥ ೧೩೭ ॥

ಖಗೇಶ್

ಕಾರ್ಕಳ ಗೋಮಟೇಶ್ವರ ಸ್ವಾಮಿಯವರ ಚರಿತೆಯನ್ನು ಬರೆದ ಚಂದ್ರಮನೆಂಬ ಜೈನಕವಿ.

(ಕಳದ ಸಂಚಿಕೆಯಿಂದ ಮುಂದರಿಸಿದ್ದು).

> ಕೀರ್ತ್ಯಾಚಾರ್ಯ ಶ್ರುತಸಾಗರ ಮುನಿರಾಯಾ ॥ ಸುತ ವಿದ್ಯಾ
> ಗುರುವೆನಲಿನ್ನ ಪುಣ್ಯದೊಂದತಿಶಯಕಿನ್ನೆಣೆಯುಂಟೆ ॥ ೩೬ ॥
> ಆಗಮ ಶಬ್ದ ತರ್ಕಾದಿ ಶಾಸ್ತ್ರವನನುರಾಗದಿಂದೆನಗೆ ತಿಳುಹಿದಾ ॥
> ಶ್ರೀ ಗುರು ಶ್ರುತಸಾಗರ ಯೋಗಿ ಸಾರಥಿಯಾಗಿ ನಡಸು ಕೃತಿ
> ರಥವಾ ॥ ೩೭ ॥

ಈ ಕಾವ್ಯವನ್ನು ಕಾರ್ಕಳ ಭೈರವ ಅರಸರಲ್ಲಿ ಒಬ್ಬನಾದ ಭುವನೈಕವೀರಪಾಂಡ್ಯೇಂದ್ರನ ಕಾಲದಲ್ಲಿ ಬರದನೆಂದು ಕಾಣುತ್ತದೆ. ಈ ಕಾವ್ಯದ ೧೬ನೇ ೧೭ನೇ ಸಂಧಿಗಳಲ್ಲಿ ಈ ಅರಸನು ಗೋಮಟೇಶ್ವರ ಸ್ವಾಮಿಯವರಿಗೆ ಶಾಲಿವಾಹನ ಶಕ ೧೫೦೮ನೇ (೧೬೪೬ ಕ್ರಿ. ಶ.) ನೇ ಪಾರ್ಥಿವ ಸಂವತ್ಸರದ ಫಾಲ್ಗುಣ ಶುದ್ಧ ದ್ವಾದಶಿಯಲ್ಲಿ ಮಸ್ತಕಾಭಿಷೇಕ ಪ್ರತಿಷ್ಠೆ ಮಾಡಿಸಿದನೆಂದು ಇದೇ ಕಾವ್ಯದಿಂದ ಕಂಡುಬರುತ್ತದೆ.

> ವಸು ರುತ ಶರ ಶಶಿ ಸಂಕೆಯೊಳಗೆ ವರ್ತಿಸುವ ಶಕಾಬ್ದದೊಳಂದು!
> ಎಸೆವ ಪಾರ್ಥಿವದ ಫಾಲ್ಗುನ ಶುದ್ಧವೆನಿಪ ದ್ವಾದಶಿಯೊಳು ಜಿನಗೆ
> ಪ್ರತಿಷ್ಠೆ ॥ ೬೧ ॥ ಆದುದಾ ಸಮಯದೊಳಗೆ ಭವ್ಯ
> ಸಂಘವು ಮೇದಿನಿಯೊಳು ಮೂರು ಲಕ್ಷಾ । ಆದರದಿಂದ ನೆರೆದುದಾ
> ನಂದವ ಭೇದಿಸಿ ಪೇಳಲೇನಳವೆ ॥ ೬೨ ॥

ಇದರಿಂದ ಈ ಕಾವ್ಯವನ್ನು ಈ ಅಭಿಷೇಕವಾದ ನಂತರ ಅಂದರೆ ಕ್ರಿ. ಶ. ೧೬೪೬ ನಂತರ ಬರದದ್ದೆಂದು ಅಥವಾ ಅದೇ ವರ್ಷದ್ದೆಂದೂ ಹೇಳಬಹುದು.

ಈ ಕಾವ್ಯವು ಚರಿತೆ ಪದದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೧೭ ಸಂಧಿಗಳು ಇವೆ. ೨೨೩೫ ಪದಗಳು ಇವೆ. ಇದರಲ್ಲಿ ಕನ್ನಡ ಶಬ್ದಗಳೇ ಹೆಚ್ಚಾಗಿ ಉಪಯೋಗಿಸಲ್ಪಟ್ಟಿವೆ. ಸಂಸ್ಕೃತ ಶಬ್ದಗಳು ಬಹಳ ಕಡಿಮೆ.

> ಪೊಂಬಾಳೆದೊಡೆಯ ಪೊಂಬಗರಿ ಮೊಲೆಯ ಜೆಲ್ವಿನಿಂಬಾದ ವಸ್ತ್ರ
> ದಿಂದೆಸವಾ ॥ ಕಂಬುಕಂದರೆ ಪೂರ್ಣಚಂದ್ರ ವದನೆ ಜಗದಂಬಿಕೆ
> ಸಲಹೆನ್ನನೊಲಿದೂ ॥ ೧ ॥ ಕಬ್ಬಿನೊಳಿರ್ದ ರಸವ ಬಿಟ್ಟು ಸೋ
> ಗೆಯ ಕೊಂಬದ ಕುರಿ ಸೇವಿಪಂತೆ ॥ ಕಬ್ಬದೊಳಿರ್ದ ಗುಣವ
> ಬಿಟ್ಟು ದುರ್ಜನ ಶಬ್ದದೋಷವನರಸುವಂತೆ ॥ ೨ ॥

ಹೆಂಗಸರ ವರ್ಣನೆಯಲ್ಲಿ ಈ ಕವಿಯು ಜೈಮಿನಿ ಭಾರತವನ್ನು ಬರೆದ ಲಕ್ಷ್ಮೀಶ ಕವಿಗಿಂತಲೂ ಮಿಗಿಲಾಗಿರುವನು. ಈ ಕಾವ್ಯದ ೧೨ನೇ ಸಂಧಿಯನ್ನು ಓದಿದರೆ ತಿಳಿದು ಬರುವುದು. ಲಕ್ಷ್ಮೀಶನು ಯವ್ವನಾಶ್ವನ ಪಟ್ಟಣವನ್ನು ಹೊಗಳಿ ಬರೆದಿರುತ್ತಾನೆ. ಚಂದ್ರಮನು ಕಾರ್ಕಳ ಪಟ್ಟಣವನ್ನೂ ಹೊಗಳಿ ಬರೆದಿರುತ್ತಾನೆ. ಅವನು ಸ್ತ್ರೀರಾಜ್ಯವನ್ನೂ ಇವನು ತೌಳವ ರಾಜ್ಯವನ್ನೇ ಹೊಗಳಿ ಬರೆದಿರುತ್ತಾರೆ.

ಕಾರ್ಕಳ ಗುಂಮ್ಮಟೇಶ್ವರ ಸ್ವಾಮಿಯವರ ಬಸದಿಯ ಮುಂದುಗಡೆಯಲ್ಲಿ ಬ್ರಹ್ಮದೇವರ ಖಂಭವಿದೆ. ಈ ಖಂಭದ ದಕ್ಷಿಣ ಭಾಗದ ಬುಡದಲ್ಲಿ ಒಂದು ಶಾಸನವಿದೆ. ಇದರ ಮೇಲೆ ಕುದುರೆಯ ಮೇಲೆ ಕೂತ ಒಬ್ಬನ ಚಿತ್ರವಿದೆ. ಇದನ್ನು ನೋಡಿ ಕೆಲವರು ಈ ಚಿತ್ರವು ಈ ಗೋಮಟೇಶ್ವರ ಸ್ವಾಮಿಯವರ ಬಿಂಬವನ್ನು ಮಾಡಿದ ಜಕಣಾಚಾರಿಯದೆಂದು ಹೇಳುವರು. ಈ ಚಿತ್ರವು ನಿಜವಾಗಿ ಯಾರದೆಂದು ಈ ಕೆಳಗಿನ ಪದ್ಯದಿಂದ ಸ್ಪಷ್ಟವಾಗುತ್ತದೆ. ಒಂದನೇ ಅಧ್ಯಾಯದ ೧೧, ೧೨ ಪದಗಳು-

> ಮೆಟ್ಟಿಸಿ ತುರಗದ ಖುರದಿಂದ ರಿಪುಗಳನ್ನಟ್ಟಿ ಮತ್ತೇರಿದನೆಂದೂ ॥
> ಜ್ಯೇಷ್ಠದಿನೇರಿ ಕಂಬದಿನಿಂದು ನೋಡುವ ದಿಷ್ಟ ಬ್ರಹ್ಮ
> ನಿಗೆರಗುವೆನೂ ॥ ೧೧ ॥ ನೆನದಿಷ್ಟಗಳನಿತ್ತುನೇದಿ ಜಿನ ಮತ
> ಕ್ಕನುಸಾರಿಯಾಗಿ ವರ್ತಿಸುವಾ ॥ ಜಿನಪತಿಗಳ ಕಾವಬೆಟ್ಟದ ಬ್ರಹ್ಮ
> ನೀನೆನಗೆ ಸನ್ಮತಿದೋರು ಬೇಗಾ ॥ ೧೨ ॥

ಈ ಕಾವ್ಯದ ಎರಡನೆ ಸಂಧಿಯಲ್ಲಿ ಕಾಣುವ ಪ್ರಕಾರ ಪಾಂಡ್ಯರಾಯನನ್ನು ಹೊಗಳಿ ಅನೇಕ ಪದ್ಯಗಳಿವೆ. ಅವುಗಳಲ್ಲಿ ಒಂದರಿಂದಲೇ ಅವನ ಎಲ್ಲಾ ಗುಣಗಳು ಕಂಡುಬರುತ್ತವೆ.

> ಕೊಟ್ಟ ಭಾಷೆಗೆ ತಪ್ಪನು ಸಮರದೊಳು ಹಿಮ್ಮೆಟ್ಟನು ಪರನಾರಿ
> ಯರನು ॥ ದಿಟ್ಟಿ ದೊರೆದು ನೋಡನಾ ಕೆರೆವಾಸೆಯ ಪಟ್ಟವರ್ಧನ
> ಪಾಂಡ್ಯರಾಯ॥ ೭ ॥

ಈ ಅರಸನ ಪಟ್ಟದ ರಾಣಿಯು ಮಹಾ ಪತಿವ್ರತೆಯು. ಈ ಅರಸನು ಕಾರ್ಕಳ ಮಠದ ಅಂದರೆ ತನ್ನ ಗುರುಗಳಿಗೆ ಒಂದು ಭಿಕ್ಷೆಯನ್ನು ಮಾಡಿಸುತ್ತಾನೆ. ಭಿಕ್ಷೆಯಾಗಿ ಗುರುಗಳು ಅರಮನೆಯಿಂದ ಹೊರಟು ಮಠಕ್ಕೆ ಹೋದ ಮೇಲೆ ಗುರುಗಳ ಭಿಕ್ಷೆಯ ಶೇಷಾನ್ನವನ್ನು ಪಟ್ಟದ ರಾಣಿಯೊಡನೆಯೂ ಮಕ್ಕಳುಗಳೊಡನೆಯೂ ಕುಳಿತು ಊಟ ಮಾಡುವುದು ಪುಣ್ಯಕಾರ್ಯವೆಂದು ಪಟ್ಟದ ರಾಣಿಯೊಡನೆ ಹೇಳುತ್ತಾನೆ. ಅವಳು ಕೊಟ್ಟ ಪ್ರತ್ಯುತ್ತರ:—

> ವಂದೆ ಪಂತಿಯೊಳೆಂದು ನಾಡಿನ ರಾಜಾಧಿಪಗೆಂದು ಪಟ್ಟದ ರಾಣಿ
> ಯೊಲಿದೂ ॥ ಮಂದಹಾಸದೊಳಂತೆಂದೂ ಚಿನ್ನವಿನಿನಲ್ಲೆಂದು ಭೂ
> ವರಗೆ ಕೈಮುಗಿದೂ ॥ ೧೦೩ ॥ ಯತಿಗಳ ಶೇಷಾನ್ನ ನಿಮಗೆ
> ರಾಜರ ದೇವಪತಿಯ ಶೇಷಾನ್ನವು ನಮಗೆ ॥ ಅತಿಶಯ ಭಕ್ತಿ
> ಯಿಂದಾಳಿದಳಾ ಮಹಾ ಸತಿ ಪತಿ ಭಕ್ತಿಯಿಂದಾಗ ॥ ೧೦೪ ॥

ಗ್ಯಾರಂಟಿಯುಳ್ಳ ವಾಚುಗಳು!

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಾಚ್ ದುರಸ್ತಿ ಮಾಡುವುದರಲ್ಲಿ ನಾವು ಹೆಸರು ಹೊಂದಿರುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಇನ್ನು ಹೆಚ್ಚಿನ ಕಾರಣಗಳು!

ಪೆರೆಡ್ಯಾಯ್ಸ್ ಟೋನಿಕ್ ಪಿಲ್ಸ್

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ಆರ್. ಛೋಟಾಲಾಲ್ ಎಂಡ್ ಕೊ.,
(K) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2



ಸ್ವತಂತ್ರ ಉದ್ಯೋಗ

ಅಲ್ಪ ಭಾಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸ್ಸರ್ಸ್

ಮೋತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪೀರಭಾಯಿ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್ ಮುಂಬಾಯಿ.

ಇವರ

ಸೋಡಾ ವೋಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವೋಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ.

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ

ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ' ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಧಾರಣದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ಮತ್ತೆ ಬೇಟೆಯ ಹತ್ಯಾರುಗಳು:

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದು ಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧ ಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅಶಾನುಕೂಲಸ್ಥರಾದ ಗರೀಬರಿಗೆ ಅವರ ಆಗತ್ಯದ ಮಟ್ಟಿನ ವಾಹಿತಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಆಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELKY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Diamonds of Antwerp.

ಯೋಜಿಂಟ್ರಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28. ಮಂಗಳೂರು.

Edited Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುದುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೋರಿದುದ್ದೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೦ನೇ ಶುಕ್ರವಾರ ಆಗೋಸ್ಟು ೧೯೨೮. ಸಂಚಿಕೆ ೩೨

THE CANARA BANKING CORPORATION,
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

STATEMENT OF AFFAIRS AS ON 16 JUNE, 1928.

Capital and Liabilities.		Property and Assets.	
1 Paid up Capital	Rs. 1,99,650-0-0	1 Premises Furniture &c.	Rs. 9,400-3-0.
2 Reserve Fund and other funds	„ 96,600-0-0	2 Investments on G. P. Notes	2,40,234-5-0.
3 Deposits	„ 13,47,824-11-8	3 Investments on approved Securities	15,45,131-12-0.
4 Amonnt overdrawn from Bankers	„ 1,32,698-7-8	4 Bills for collection as per Contra.	9,589-3-0.
5 Sundry Persons' A/C as per Contra	„ 9,589-3-0	5 Sundry items.	55,182-3-1.
6 Sundry items	90,470-6-3	6 Cash in hand & with Bankers.	17,295-2-6.
Total	18,76,832-12-7	Total. Rs.	18,76,832-12-7.

Office of the Corporation,
UDIPI, 18-6-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯುಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣಕಜ್ಜಿ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಯೂನಿಯನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ,—ಮುಂಬಾಯಿ.

ಏಜಂಟರು— ದಿ ಯೂನಿಯನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ತುಳುತನಯರಿಗೊಂದು ಮರುಮಾತು.

[illegible]

... ಎಂಬ ಹೆಸರುಗಳು ಇರಲಿಲ್ಲ. ಪೂರ್ವ ಸಹ್ಯಾದ್ರಿ ಖಂಡಕ್ಕೆ ಒಬ್ಬ ಅರಸು. ಉತ್ತರ ಸಹ್ಯಾದ್ರಿಗೆ ಒಬ್ಬ ಅರಸು ಈ ರೀತಿಯಲ್ಲಿದ್ದರು. ನಂತರ ಕೇರಳವನ್ನಾಳಲಿಕ್ಕೆ ಒಬ್ಬ ಅರಸು ... ಒಬ್ಬ ಅರಸು, ಗೋವಾ ರಾಷ್ಟ್ರ ... ಭಾಗಗಳಿಗೂ ಒಬ್ಬೊಬ್ಬ ... ಖಂಡದ ಅರಸರು ಪೂರ್ವ ಸಹ್ಯಾದ್ರಿ ... ಎಲ್ಲಿಯೂ ಕಂಡು ಬರುವುದಿಲ್ಲ. ... ಕಂಡು ಬರುವುದಿಲ್ಲ. ಮಹಾ ... ಕರ್ಣಪರ್ವದ ... ಹೀಗೆ ಹೇಳಿಯದೆ.

[illegible]

ನಾಲ್ವತ್ತು ಸಾವಿರ ರೂಪಾಯಿ ಮುನಾಫೆ ಸಿಕ್ಕುವದಂತೆ. ಈ ವರ್ಷದ ನಮ್ಮ ಸಿ. ಪಿ. ಸಿ. ಕಂಪೆನಿಯವರ ಆಯವ್ಯಯದ ಪಟ್ಟಿಯನ್ನು ನೋಡಿದರೆ ಅದರಲ್ಲಿ ೩೯ ಸಾವಿರ ರೂಪಾಯಿ ಮುನಾಫೆ ತೋರಿಸಿರುವರು. ಶಂಕರ ವಿಠ್ಠಲ ಕಂಪೆನಿಯವರಿಗೆ ೨೫ ಸಾವಿರ ರೂಪಾಯಿಯೂ, ಪಿಳ್ಳೆ ಸರ್ವಿಸಿನವರಿಗೆ ೧೫ ಸಾವಿರವೂ ಮುನಾಫೆ ಸಿಕ್ಕಿರುವಾಗ ಬಾಕಿ ಕಂಪೆನಿಯವರಿಗೆ ಯಾವ ರೀತಿಯಲ್ಲಿ ಸಿಕ್ಕಿರಬೇಕು? ಇದು ಒಂಭತ್ತು ಪೈಗಳ ಪ್ರತಾಪ! ಕಳೆದ ಅನೇಕ ದಿನಗಳಿಂದ ನಮ್ಮೂರಿನಿಂದ ಹಾದುಹೋಗುವ ಮೈಸೂರು ಸರ್ವಿಸಿನವರು ಮಂಗಳೂರಿಗೆ ಬರೇ ಎಂಟಾಣೆಗಳಿಗೆ ಕೊಂಡುಹೋಗುತ್ತಿರುವದನ್ನು ಕಂಡು, ಸಿ. ಪಿ. ಸಿ. ಕಂಪೆನಿಯ ಒಬ್ಬ ಪಾಲುಗಾರನಾದ ನಾನು ಸಿ. ಪಿ. ಸಿ. ಕಂಪೆನಿಯವರು ಸಹ ಮಂಗಳೂರಿಗೆ ಇಲ್ಲಿಂದ ಎಂಟಾಣೆ ದರವಿಡುವಂತೆ ವಿಜ್ಞಾಪಿಸಿಕೊಂಡೆನು. ಒಂಭತ್ತು ಪೈಯ ದರದಿಂದ ಮೂವತ್ತು ನಾಲ್ವತ್ತು ಸಾವಿರ ರೂಪಾಯಿ ಲಾಭ ಸಿಕ್ಕುವುದು. ಮೈಸೂರು ಕಂಪೆನಿಯವರಿಗೆ ಆರು ಪೈಯ ದರದಲ್ಲಿ ಪೂರೈಸುತ್ತಿರುವಾಗ ಇವರಿಗೂ ಕೂಡ ಪೂರೈಸಬಹುದೆಂದೇ ನಾನು ಕೇಳಿದುದು. ನನ್ನ ವಿನಂತಿಗೆ ಕಂಪೆನಿಯವರು ಉದಾರ ಮನಸ್ಸಿನಿಂದ ಉತ್ತರವನ್ನು ಕಳುಹಿಸಿರುವರು. ಉತ್ತರದ ಅಭಿಪ್ರಾಯವೇನೆಂದರೆ—"ಸ್ವಾಮಿ, ಅವರಂತೆ ರಿಯಾಯತಿ ದರವನ್ನಿಡಲು ನಮಗೂ ಬಹಳ ಮನಸ್ಸಿದೆ, ಆದರೆ ಮಾಡುವದೇನು? ಆಲೋಚನೆಯನ್ನು ಜ್ಯಾರಿಗೆ ತರಲು ನಮ್ಮ ಮಾಜಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಒಂದು ಬಲವಾದ ಬೀಗವನ್ನು ಹಾಕಿ ಬಿಟ್ಟಿರುವರು. ಡಿಸ್ಟ್ರಿಕ್ಟ್ ಬೋರ್ಡಿನವರು [ರೋಡ್ ಸೆಸ್ಸನ್ನು ವಸೂಲುಮಾಡತೊಡಗಿದಂದಿನಿಂದ ಯಾವ ಬಸ್ಸ್ ಕಂಪೆನಿಯವರೂ] ಮೈಲಿಗೆ ಒಂಭತ್ತು ಪೈಗಳಿಗಿಂತ ಕಡಿಮೆ ವಸೂಲು ಮಾಡಬಾರದೆಂದು ತಮ್ಮ ಮೋಟಾರು ರೂಲ್ಸುಗಳಲ್ಲಿ ಒಂದು ರೂಲನ್ನು ಸೇರಿಸಿಬಿಟ್ಟಿರುವರು. ಆದಕಾರಣ ನಿಮ್ಮ ಅಭಿಪ್ರಾಯದಂತೆ ನಿಮ್ಮೂರಿನಿಂದ ಎಂಟಾಣೆಯನ್ನಿಡಲು ಸಾಧ್ಯವಿಲ್ಲ. ನಾವು ಇನ್ನೊಮ್ಮೆ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೆ ಮನವಿ ಮಾಡಿ ನಿಮ್ಮ ಇಚ್ಛೆಯನ್ನು ಪೂರೈಸಲು ಪ್ರಯತ್ನಿಸುವೆವು." ಎಂದು ಉತ್ತರವು ಬಂದಿರುತ್ತದೆ.

ಟಿಕೇಟು ದರಗಳನ್ನು ಹೆಚ್ಚುಕಡಿಮೆ ಮಾಡುವುದು ಡಿಸ್ಟ್ರಿಕ್ಟ್ ಬೋರ್ಡಿನವರ ಕೈ ಕೆಳಗೆ ಇರುತ್ತದಾಗಿ ನನಗೆ ಕಂಪೆನಿಯವರು ಕಾಗದದ ಮೂಲಕ ತಿಳಿಸಿದುದರಿಂದ, ಮೈಸೂರು ಕಂಪೆನಿಯವರಂತೆ ನಮ್ಮ ಜಿಲ್ಲೆಯ ಕಂಪೆನಿಯವರೂ ಮೈಲಿಗೆ ಆರುಪೈಯ ದರವನ್ನಿಡುವಂತೆ ಡಿಸ್ಟ್ರಿಕ್ಟ್ ಬೋರ್ಡಿನವರು ಅವರಿಗೆ ಹುಕುಂ ಕೊಡುವ ಹಾಗೆ ಪತ್ರಿಕೆಗಳ ಮೂಲಕ ಪ್ರಕಟಿಸಲು ಸಂಪಾದಕರಿಗೆ ಬಿನ್ನವಿಸಿರುತ್ತೇನೆ. ಬೇರೊಂದು ಮನವಿಯನ್ನು ಹಲವರ ಸಹಿ ಹಾಕಿ ಪ್ರೆಸಿಡೆಂಟರಿಗೆ ಪ್ರತ್ಯೇಕವಾಗಿ ಕಳಿಸುವ ಎಲ್ಲಾ ಏರ್ಪಾಡಿಯನ್ನೂ ಮಾಡುತ್ತಾ ಇದ್ದೇನೆ. ಪ್ರಯಾಣಿಕರ ಸೌಕರ್ಯಕ್ಕಾಗಿ ದೊಡ್ಡ ದೊಡ್ಡ ರೈಲು ಕಂಪೆನಿಯವರು ಕೂಡ ತಮ್ಮ ಟಿಕೇಟುಗಳ ದರವನ್ನು ಕಡಿಮೆಮಾಡಿರುವರು. ಅವರಂತೆ ಅಧಿಕ ಲಾಭವನ್ನು ತಿನ್ನುವ ನಮ್ಮ ಜಿಲ್ಲೆಯ ಮೋಟಾರ ಕಂಪೆನಿಗಳೂ ಯಾಕೆ ದರವನ್ನು ಇಳಿಸಬಾರದು? ನಮ್ಮ ಡಿ. ಬೋ. ಪ್ರೆಸಿಡೆಂಟರು ಈ ಕಡೆ ಸ್ವಲ್ಪ ನಿಗಾ ಕೊಡಬಾರದೆ? ಮಾಜಿ ಪ್ರೆಸಿಡೆಂಟರು ಬಸ್ಸು ಕಂಪೆನಿಗಳ ಭದ್ರತೆಗಾಗಿ ಒಂಭತ್ತು ಪೈಗಳ ರೂಲನ್ನು ಜ್ಯಾರಿಗೆ ತಂದಿದ್ದರು. ಇವರ ಆಡಳಿತೆಯ ಸಮಯದಲ್ಲಿ ಒಂದೊಂದು ಬಸ್ಸಿಗೆ ಎಂಟೊಂಬತ್ತು ಸಾವಿರ ರೂಪಾಯಿ ಕ್ರಯವಿದ್ದಿತು. ಪೆಟ್ರೋಲಿಗೆ ಈಗಿನ ಕ್ರಯಕ್ಕಿಂತಲೂ ಹೆಚ್ಚಿಗೆ ಕ್ರಯವಿದ್ದಿತು. ಬಸ್ಸುಗಳ ಸಾಮಾನುಗಳಿಗೆ ಕ್ರಯವು ವಿಶೇಷವಾಗಿದ್ದಿತು. ಇದೆಲ್ಲಾ ರಾಜೇಶ್ರೀಯವರು ಕಂಡುದರಿಂದ ಬಸ್ಸುಗಳ ಕಂಪೆನಿಯವರ ಭದ್ರತೆಗಾಗಿ ಕೆಲವು ರೂಲ್ಸುಗಳನ್ನು ಜ್ಯಾರಿಗೆ ತರುವ ಆವಶ್ಯಕತೆಯೊದಗಿರಬಹುದು. ಇವರ ಆಡಳಿತೆಯ ಸಮಯದಲ್ಲಿ ಕೆಲವು ಕಂಪೆನಿಗಳು ದಿವಾಳಿಯಾಗುವದನ್ನು ರಾಜೇಶ್ರೀಯವರು ಕಣ್ಣಾರೆ ಕಂಡರು. ಇದನ್ನು ಕಂಡುದರಿಂದ ಜಿಲ್ಲೆಯವರ ಹಣವು ವೃಥಾ ನಷ್ಟವಾಗುವದನ್ನು ನಿಲ್ಲಿಸಲು ಇಂಥ ಭದ್ರತೆಯ ರೂಲ್ಸುಗಳನ್ನು ಜ್ಯಾರಿಗೆ ತಂದಿರಬಹುದು. ಆದರೆ ನಮ್ಮ ಈಗಿನ ಪ್ರೆಸಿಡೆಂಟರ ಕಾಲದಲ್ಲಿ ಬಸ್ಸು ಕಂಪೆನಿಗಳು ಅಧಿಕವಾಗುತ್ತಾ ಬರುತ್ತಿವೆ. ಬಸ್ಸುಗಳ ಕ್ರಯವಂತೂ ಒಂದಕ್ಕೆ ಕಾಲಂಶವಾಗಿದೆ. ಪೆಟ್ರೋಲು ಕೂಡ ಅಗ್ಗವಾಗಿದೆ. ಬಸ್ಸುಗಳ ಕ್ರಯವೂ ದಿನೇ ದಿನೇ ಕುಂದುತ್ತಾ ಇದೆ. ಆದುದರಿಂದ ಈಗಿನ ಪ್ರೆಸಿಡೆಂಟರು, ಮೈಲಿಗೆ ಆರು ಪೈಯ ದರವನ್ನಿಡಲು ಮೋಟಾರ್ ಕಂಪೆನಿಯವರಿಗೆ ಹುಕುಮನ್ನು ಕೊಡುತ್ತಿದ್ದರೆ ಪ್ರಯಾಣಿಕರ ಪೋಕೆಟಿನಲ್ಲಿ ಸ್ವಲ್ಪ ಹಣ ಸಂಗ್ರಹವಾಗುತ್ತಿತ್ತು. ಆರು ಪೈಯ ದರವು ಬೇರೆ ಕಡೆಗಳಲ್ಲಿಯೂ ಇರುವುದು. ಇತ್ತಲಾಗೆ ನಾನು ಮುಂಬಾಯಿ, ಮದರಾಸು, ಮೈಸೂರು ಅತ್ತಕಡೆಗೆ ಹೋಗಿದ್ದಾಗ ಅಲ್ಲಿ ಕೂಡ ಮೈಲಿಗೆ ಆರು ಪೈಯಂತೆ ವಸೂಲು ಮಾಡಿರುವುದನ್ನು ನಾನು ಕಂಡಿರುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮಾತ್ರ ಈಗಲೂ ಒಂಭತ್ತು ಪೈಯ ದರವನ್ನು ಇಟ್ಟು ಪ್ರಯಾಣಿಕರ ಚೀಲ ಖಾಲಿ ಮಾಡಿ ಬಸ್ಸು ಕಂಪೆನಿಯವರ ಟ್ರಿಜರಿಯನ್ನು ತುಂಬಿಸುವ, ಈ ಕ್ರಮವನ್ನು ಏಕೆ ಇಟ್ಟಿರುವರೆಂದು ನನಗೆ ತಿಳಿಯುವುದಿಲ್ಲ. ಬಸ್ಸು ಕಂಪೆನಿಯವರಿಗೆ ಲಾಭವಾಗಬಾರದೆಂದು ನಾನು ಅನ್ನುವುದಿಲ್ಲ. ಆರು ಪೈಯ ದರವನ್ನು ಇಟ್ಟರೆ ಅವರಿಗೆ ನಷ್ಟವಾಗುವುದೂ ಇಲ್ಲ. ಯಾಕೆಂದರೆ ಈಗ ಮೋಟಾರಿನಲ್ಲಿ ಪ್ರಯಾಣ ಮಾಡುವ ಜನರ ಸಂಖ್ಯೆಯು ಬೆಳೆದಿರುವುದು. ದಿನ ಒಂದಕ್ಕೆ ನಾಲ್ಕೈದು ಆಣೆ ಸಂಪಾದನೆಯಾಗುವ ಕೂಲಿಯವನಿಗೂ ಕೂಡ ಮೋಟಾರು ಅಗತ್ಯವಿದೆ. ದಿನ ಕಳೆದಷ್ಟಕ್ಕೆ ಮೋಟಾರ ಪ್ರಯಾಣಿಕರ ಸಂಖ್ಯೆಯು ಬೆಳೆಯುವದಲ್ಲದೆ ಇಳಿಯುವದಿಲ್ಲ. ಅದು ಕಾರಣ ಬಸ್ಸು ಕಂಪೆನಿಯವರಿಗೆ ನಷ್ಟವಾಗುವ ಸಂಭವವಿರದು. ಪ್ರೆಸಿಡೆಂಟರು ಹೊರಗಿನ ಕಂಪೆನಿಯವರಿಗೆ ನಮ್ಮ ಜಿಲ್ಲೆಯಲ್ಲಿ ಮೋಟಾರನ್ನು ಓಡಿಸಲು ಲೈಸನ್ಸು ಕೊಡುತ್ತಿರುವರಾದರೂ ನಮ್ಮ ಜಿಲ್ಲೆಯ ಹಳೆಯ ಕಂಪೆನಿಗಳಿಗೆ ಆರು ಪೈಯ ದರವನ್ನಿಡಲು ಹುಕುಂ ಕೊಡುವುದಿಲ್ಲ. ಈ ಕುರಿತು ಪ್ರೆಸಿಡೆಂಟರು ಸ್ವಲ್ಪ ವಿಚಾರಿಸುವದು ಉತ್ತಮ. ಇತಿ,

"ಪ್ರಯಾಣಿಕ"

ಸಾಂತಪ್ಪಯ್ಯನವರ ಶ್ರಾದ್ಧದ ಊಟದ ಸಮಯ ವ್ಯಸನಾಕ್ರಾಂತನಾಗಿ ಕೂತಿದ್ದ ಮಂಜಯ್ಯನನ್ನು ಕುರಿತು—

ಗೋವಿಂದ—ಏನು ಮಂಜಯ್ಯನವರೇ, ಬಿಸಿ ಬಿಸಿ ಪಾಯಸ ಬಡಿಸಿದೆ; ತಿನ್ನದೆ ಸುಮ್ಮನೆ ಯೋಚಿಸುವದೇನು?

ಮಂಜಯ್ಯ—ಸ್ವಾಮಿ ಸಾಂತಪ್ಪಯ್ಯನವರು ಜೀವದಿಂದಿರುತ್ತಿದ್ದರೆ ಇಂದಿನ ಪಾಯಸವು ಈ ರೀತಿ ಸಪ್ಪೆಯಾಗ ಬಡುತ್ತಿದ್ದಿತೆ?

V. T.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲಃ—ಇದು ಪೂರ್ವದಲ್ಲಿ ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶಃ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಂಜವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ವಿವರಗಳಿಗೆ "ಆರೋಗ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದ್ದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ವುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಚಂದಾವು ವ್ಯಾಪಾರ,
24-8-28 ಶಿವ್ಯಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವೂ, ಧನವೂ, ಸುಖವು, ಮತ್ತು ಕುಟುಂಬಸಂರಕ್ಷಣ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,37,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾಶ್ಯರು,

ಆತಂಕನಿಗ್ರಹ ಅವುಷಧಾಲಯ,
ನಂ. 36, ಜಾಕ್ಸ್‌ಪೇ. ಮದರಾಸು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years; 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼%; 1 ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಕಾಯಂ ಠೇವಣಾತಿಗಳು „ 7,33,880/-

ಹೊರಗೆ ಒಟ್ಟು ಸಾಲ ದೇಣಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6¾ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾವು, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ,
ತಾ. 18—2—'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ—ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇನ್ಫ್ಲೂಯನ್ಜಾ, ಪ್ಲೇಗುಜ್ವರ,

ಮಕ್ಕಳ—ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಿಣಿಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಸೀಸೆ ೧—೪—೦, ೧೦೦ ಸೀಸೆಗೆ ೨—೭—೦, ೫೦೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಕ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಂಭವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಂಭವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಬಂದರ ಸಮೀಪ.

ಸ್ಫುಟ ವಿಚಾರಗಳು.

ಮೈಸೂರಿನ ದಬ್ಬಾಳಿಕೆ.

ಕೆಲವು ಸಮಯದ ಹಿಂದೆ ಮೈಸೂರು ... [illegible]

ಬಂಗಾಳ ಕೌನ್ಸಿಲಿನಲ್ಲಿ

[illegible]

ಬಾಗಲಕೋಟೆಯ ಸತ್ಯಾಗ್ರಹ

[illegible]

ಪತ್ರಿಕೆಗಳ ಪರಿಷತ್ತು

[illegible]

ನೋಟಗಳು.

NOTE...S.

ಬಾರ್ಡೋಲಿಯ ಪರಿಸ್ಥಿತಿಯಲ್ಲಿ ಹದಿನಾಲ್ಕು ದಿವಸಗಳ ಮೊದಲು ಬೊಂಬಾಯಿ ಗವರ್ನರರೂ, ವ್ಯಾಸರಾಯರೂ ರುದ್ರಾವತಾರವನ್ನು ತಾಳಿದ್ದರು. "ಹದಿನಾಲ್ಕು ದಿವಸಗಳಲ್ಲಿ ಯಾವತರದಲ್ಲಿಯೂ ರಾಜಿ ಆಗದಿದ್ದರೆ 'ಭಾರತ ಯುದ್ಧ'ವನ್ನು ಪುನಃ ಪ್ರಾರಂಭಿಸಬೇಕಾಗುವುದು" ಎಂದು ಗವರ್ನರರು ತಿಳಿಸಿದ್ದರು.

• • • •

ಪ್ರಾಚೀನ ಭಾರತ ಯುದ್ಧವು ೧೮ ದಿವಸಗಳಲ್ಲಿ ಮುಗಿದಿತ್ತು. ಬಾರ್ಡೋಲಿ ಯುದ್ಧವು ಹದಿನಾಲ್ಕೇ ದಿವಸಗಳಲ್ಲಿಯೇ ಪರ್ಯವಸಾನ ಹೊಂದಿತು.

• • • •

ಶ್ರೀ ಕೃಷ್ಣ ಪರಮಾತ್ಮನು ಪಾಂಡವರಿಗೆ ಬೆಂಬಲವನ್ನು ಕೊಟ್ಟಂತೆ ವಲ್ಲಭಭಾಯಿಯವರು ಬಾರ್ಡೋಲಿಯವರಿಗೆ ಬೆಂಬಲವನ್ನು ಕೊಟ್ಟರು. ಆದರೆ ವಲ್ಲಭಭಾಯಿಯವರ ಸುದರ್ಶನವು ಯಾರನ್ನೂ ಹಿಂಸೆ ಪಡಿಸಲಿಲ್ಲ, ಆದು ತಿರುಗಿದ್ದೆ ಗೊತ್ತು. ಇದೀಗ ಈ ಸುದರ್ಶನದ ಮಹಾತ್ಮೆ.

• • • •

ವಲ್ಲಭಭಾಯಿಗಳನ್ನು ಈ ಸಂಗ್ರಾಮದಲ್ಲಿ ಎಷ್ಟು ಅಭಿನಂದಿಸಿದರೂ ತೀರದು. ಬಾರ್ಡೋಲಿಯವರೊಡನೆ ನಮ್ಮ ಸಹಾನುಭೂತಿ ಇರುವುದು.

• • • •

ಸತ್ಯಾಗ್ರಹ—ಸತ್ಯಾಗ್ರಹ, ಬೆಂಗಳೂರಿನವರದು—ಅದರಲ್ಲಿಯೂ ಶಾಲಾ ವಿದ್ಯಾರ್ಥಿಗಳದ್ದು—೧-೨-೩ನೇ ದಿವಸಗಳು ಎಷ್ಟೆಂದರೂ ವಿದ್ಯಾರ್ಥಿಗಳಲ್ಲವೆ?

• • • •

ಇಷ್ಟೆಲ್ಲಾ ಒಂದು ಗಣಪತಿಯ ಪ್ರತಿಮೆಗಾಗಿ. ಅದಕ್ಕೋಸ್ಕರವೇ ಈಶ್ವರನು ಸಹ ಈ ದೇವರಿಗೆ ಹೆದರಿ ಎಲಾ ದೇವತೆಗಳನ್ನು ಆರಾಧಿಸುವ ಮೊದಲು ಗಣಪತಿಯ ಪೂಜೆಯನ್ನು ಪ್ರಥಮ ಮಾಡಬೇಕೆಂದುದು.

• • • •

ಶೌರ್ಯ, ಧೈರ್ಯ, ಸಾಹಸಗಳಿಂದ ಬಂಟವಾಳ ಪೋಲೀಸರು ಕೇಡಿ ಸಣ್ಣ ಹಮ್ಮದೆಯನ್ನು ಎಂತೂ ಕೈದು ಮಾಡಿದುದು ತುಂಬಾ ಅಭಿನಂದನೀಯವು. ಪೋಲೀಸರಿಂದ ಹೊಡೆಯಲ್ಪಟ್ಟ ಪೆಟ್ಟುಗಳನ್ನು ಗುಣ ಮಾಡುವ ಗೋಸ್ಕರ ಆತನನ್ನು ಬಂಟವಾಳ ಆಸ್ಪತ್ರೆಯಲ್ಲಿ ನಾಲ್ಕು ಜನ ಪೋಲೀಸ ಜವಾನರೊಂದಿಗೆ ಇಟ್ಟಿದ್ದರು.

• • • •

ಸಣ್ಣ ಹಮ್ಮದೆಯು ಬಹಳ ಸಾಹಸಿ. ಗಸ್ತಿ ಪೋಲೀಸರನ್ನು ಮರೆಮಾಡಿ ಶಿವಾಜಿಯಂತೆ ಆಸ್ಪತ್ರೆಯಿಂದ ಪಾರಾದನು. ಪೋಲೀಸರ ಧೈರ್ಯ, ಸಾಹಸಾದಿಗಳು ನೀರುಪಾಲಾದವು. ಇನ್ನು ಮುಂದಿನ ಇವರ ಸಾಹಸವನ್ನು ನೋಡಲಿದೆ.

• • • •

ಬಂಟವಾಳ ಖಚೇರಿಯಲ್ಲಿ ಘಂಟೆ ಹೊಡೆಯುವ ಕ್ರಮವು ಪುರಾತನ ಕಾಲದಂತೆ. ಸ್ಟೆಂಡಾರ್ಡ ಘಂಟೆಗಿಂತ ನಾಲ್ವತು ಮೂವತ್ತು ಮಿನಿಟು ಆದ ಮೇಲೆ ಖಚೇರಿಯಲ್ಲಿ ಘಂಟೆಯ ಶಬ್ದ ಕೇಳುತ್ತದೆ. ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಈ ಘಂಟೆಯ ಪ್ರಕಾರ ಔಷಧಿಯನ್ನು ಕೊಟ್ಟರೆ, ಎರಡು ದಿವಸಗಳಲ್ಲಿ ಗುಣಹೊಂದುವ ರೋಗಿಯು ಮೂರುವರೆ ದಿವಸದಲ್ಲಿ ಗುಣಹೊಂದುವನು.

• • • •

ಮೋಟಾರು ಡ್ರೈವರುಗಳ ಮೇಲೆ ಈಗಿನ ದಿವಸಗಳಲ್ಲಿ ಪೋಲೀಸರ ದೊಡ್ಡ ಬ್ರಹ್ಮಾಸ್ತ್ರ. ಕಾನೂನು ಪ್ರಕಾರ ನ್ಯಾಯವಾಗಿ ತಪ್ಪುಗಳನ್ನು ಹುಡುಕಲು ಕೆಲ ಪೋಲೀಸರಿಗೆ ಗೊತ್ತೇ ಇಲ್ಲ.

• • • •

ಸ್ಟೇಷನಿನಿಂದ ಏಳು ಎಂಟು ಮೈಲು ದೂರವಿರುವ ಸ್ಥಳಗಳಿಗೆ ಪೋಲೀಸರಿಗೆ ಬಸ್ಸ್ ಪಾಸ್ ಸಿಕ್ಕುವುದಿಲ್ಲವಂತೆ. ಈ ಏಳು ಎಂಟು ಮೈಲು ಹೋಗಲಿಕ್ಕೆ ಪೋಲೀಸರ ಹೊಸ ಕ್ರಮ ಪ್ರಾರಂಭವಾಗಿದೆ.

• • • •

ಬಸ್ಸುಗಳು ಭರ್ತಿ ಇದ್ದಲ್ಲಿ ಅವರನ್ನು ಡ್ರೈವರನು ನಿರಾಕರಿಸಿದ್ದಲ್ಲಿ ಕೂಡಲೆ ಡ್ರೈವರನ ಮೇಲೆ ಅಲ್ಲದ ಸಲ್ಲದ ರಿಪೋರ್ಟ.

• • • •

ಇಂಥಾ ರಿಪೋರ್ಟಿನ ನಂಬ್ರಗಳು ಬಂಟವಾಳ ಕೋರ್ಟಿನಲ್ಲಿ ತಿಂಗಳಿಗೆ ಎರಡು ಮೂರರಂತೆ ಇವೆ.

ಶಾಲಿವಾಹನಶಕೆ ೧೮೫೦ನೆಯ ವಿಭವಸಂ॥ದ ಆ. ಶ್ರಾವಣ ಬ॥೧೧ ಶನಿವಾರದಿಂದ ವಿಭವ ಸಂ॥ರದ ನಿ. ಶ್ರಾವಣ ಶು॥ ೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಆಗೋಸ್ಟು (ಆಟ))

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಯೋಗ	ಸೂರ್ಯ ಉ	ಸೂರ್ಯ ಅಸ್ತ
11	ಶನಿ	೧೧	೫೬.೧೬	ಮೃಗಶಿರಾ	೪೭.೨	೨೬	6.19	6 51
12	ರವಿ	೧೨	೪೭.೧೪	ಆರ್ದ್ರಾ	೪೩.೪೬	೨೮	6 19	6 51
13	ಸೋಮ	೧೩	೪೨.೩೦	ಪುನರ್ವಸು	೪೧.೨	೨೯	6.20	6.50
14	ಕುಜ	೧೪	೩೮.೩೨	ಪುಷ್ಯಾ	೩೯.೧೬	೩೦	6 20	6,50
15	ಬುಧ	●	೩೫.೪೬	ಆಶ್ಲೇಷಾ	೩೮.೧೪	೩೧	6.20	6.49
16	ಗುರು	೧	೩೪.೧೬	ಮಘಾ	೩೮.೩೧	೩೨	6.20	6.49
17	ಶುಕ್ರ	೨	೩೩.೪೬	ಹುಬ್ಬಾ	೩೯.೪೩	೩೩	6,20	6.48

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡ್ಮೆಯದು	Rainfall ಮಳೆ ದಿನದ ಮಳೆ	ಒಟ್ಟು ಮಳೆ.
3	85—8	73—8	1—85	—
4	86—4	74—8	0—74	—
5	86—4	75—0	0—21	—
6	86—6	75—3	0—15	—
7	88—0	77—1	0—18	—
8	87—5	74—7	0—33	—
9	86—8	74—7	0—33	— 74—48

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ...	7- 8	8— 6
ಹೊಸ ಗುಡ್ಡು ...	6—10	7— 8
ಸುಗ್ಗಿ ...	6— 6	7- 2
ಹೊಸ ರಾಶಿ ...	6— 4	6- 10
ಊರ ಅವ್ವಲ್ ಬೆಳ್ತಿಗೆ ...	7-- 8	8 - 12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—12	13 - 14
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7— 5	7— 8
ಗೋದಿ ಗೋಣಿ ೧ಕ್ಕೆ ...	15— 8	18— 8
ಹುರುಳಿ ಗೋಣಿ ೧ಕ್ಕೆ ...	8— 8	11— 0
ಕಡಲೆ ಗೋಣಿ ೧ಕ್ಕೆ ...	12— 8	14— 0
ತೊಗರಿ ಗೋಣಿ ೧ಕ್ಕೆ ...	14— 4	15—12
ತೊಗರಿಬೇಳೆ ಗೋಣಿ ೧ಕ್ಕೆ ...	19— 0	28— 0
ಉದ್ದು ಗೋಣಿ ೧ಕ್ಕೆ ...	14— 8	14— 4
ಹೆಸರು ಗೋಣಿ ೧ಕ್ಕೆ ...	13— 0	14— 8
ಊರು ಬೆಲ್ಲ ಖಂಡಿ ೧ಕ್ಕೆ ...	65— 0	70— 0
ಉಪ್ಪು ಗೋಣಿ ೧ಕ್ಕೆ ...	4— 8	5— 0
ಕೊಬ್ಬರಿ ಖಂಡಿ ೧ಕ್ಕೆ ...	130- 0	-
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	40— 0	43— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ ...	8— 8	9—10
ಎಳ್ಳೆಣ್ಣೆ ಮಣ ೧ಕ್ಕೆ ...	8— 4	8— 6
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 2	8 - 0
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 0	4— 2
ಊರ ಮಣಸಿನ ಕಾಯಿ ಮಣ ೧ಕ್ಕೆ ...	4— 0	6— 0
ಸಾಸಿವೆ ಮುಡಿ ೧ಕ್ಕೆ ...	9— 0	8— 4
ಕೊತ್ತಂಬರಿ ಮುಡಿ ೧ಕ್ಕೆ ...	6— 0	7— 8
ಕಾಫಿ ಖಂಡಿ ೧ಕ್ಕೆ ...	4 0— 0	410-- 0
ಅಡಿಕೆ ... ಖಂಡಿ ೧ಕ್ಕೆ ...	170- 0	210-- 0
ಕಾಳುಮೆಣಸು ಖಂಡಿ ೧ಕ್ಕೆ ...	510- 0	520-
ಶುಂಠಿ ಮಣ ೧ಕ್ಕೆ ...	70— 0	80— 0
ನೆಲಗಡಲೆ ಮುಡಿ ೧ಕ್ಕೆ ...	4— 2	4 —4
ಅರಸಿನ ಖಂಡಿ ೧ಕ್ಕೆ ...	37— 8	40— 0
ಹೊಂಬೆ ಹಗಲು ೧ಕ್ಕೆ ...	15- 0	16— 8
ಕೊಂಬು ಪಾತ್ರೆಗಳು ಮಣ ೧ಕ್ಕೆ ...	20— 0	21 -
ಜೀನಿಬೆಳ್ಳಿ ... ೧ಕ್ಕೆ ...	16— 0	—
ಹಿತ್ತಾಳೆ ತಗಡು ಮಣ ೧ಕ್ಕೆ ...	15— 0	16— 8
ಸತುವು ೧ಕ್ಕೆ ...	13— 8	13— 9
ಹುಣಸೆ ಹುಳಿ ಖಂಡಿ ೧ಕ್ಕೆ ...	75— 0	95—

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರಿಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಧಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"



ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ 39ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉಚ್ಚತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಸಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆಯಾಗಿ ಕಳಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್	ಸ್ಥಾಪಿತವಾದದ್ದು	ಟೆಲಿಫೋನ್ ನಂ.
99 ನಾಗಾದೇವಿ ರಸ್ತೆ.	1909	23374



ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್‌ಬಾಕ್ಸ್ ನಂಬ್ರ 288,
ಜಿ. ಪಿ. ಓ. ಬೊಂಬೈ—1.

ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!

ರೋಗವೆಂಬ ವಿಧಿಆಪತ್ತನ್ನು == == ಪರಿಹರಿಸಿಕೊಳ್ಳನೋಡಿ

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲ್ಪೆಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ:—8 ಔನ್ಸಿನ ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0.

ಭಗಿನಿಗಳೇ!

ಕೊರಗಿರುವ ಶಿಶುವಿನ ನೋಟವು
ಹೆತ್ತವರಿಗೆ ಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?

ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದವಾಖಾನೆಯ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,

22628 ನಂಬ್ರ 2. ಮಂಗಳೂರು ದ. ಕ.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಡಿಲ್ಲಾ:

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಡಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವುವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರಿಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಿಸರ್ಚ್‌ಗಾರ್ಡನ್ಸ್, ಕಾಪು ದ.ಕ. } C/o ಕೆ. ವಾಮನ ಶೆಣೈ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

131028

ರೂಪಾಯಿ 35 ಮತ್ತು ಅವಕ್ಕೆ ಮೀರಿದ ಎಸ್. ಬಿ. ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 33 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವೋಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನುಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು.

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,
331 ಅಬ್ದುಲ್ ರಹಿಮಾನ್‌ರಸ್ತೆ,
ಮುಂಬಾಯಿ 3.

ಅನುಕ್ರಮಣಿಕೆ.

ಅಗ್ರಲೇಖ,
ಬರ್ಡೋಲಿಯ ವಿಜಯ ೬
ಸ್ಫುಟವಿಚಾರಗಳು ೮
ನೋಟಿಗಳು "
ವರ್ತಮಾನ ಸಂಗ್ರಹಗಳು
ವಿದೇಶ, ಒಳದೇಶ ವರ್ತಮಾನ ೬ ೭
ದಕ್ಷಿಣ ಕನ್ನಡ — ಮಂಗಳೂರು, ಹೇರೂರು, ಕಲ್ಯಾಣಪುರ, ಅಜೆಕಾರು, ಕುಂಬಳೆ, ಕುಚ್ಚಿಪಳ್ಳ, ಹೊಸದುರ್ಗ "
ಬಾರ್ಡೋಲಿ ಸತ್ಯಾಗ್ರಹದ ಸಮಾಪ್ತಿ ೯
ವಿವಿಧ ಸಮಾಚಾರಗಳು ೯
ಗಾನವಿಶಾರದರಾದ ತ್ಯಾಗರಾಜಸ್ವಾಮಿಯವರ ಜೀವ ಚರಿತ್ರ ೧೨
ಚರಕದ ಮಹತ್ವ ೧೪
ಪತ್ರವ್ಯವಹಾರ, ೧, ೨. ೩

ಸ್ವದೇಶಾಭಿಮಾನಿ.

ತಾರೀಕು ೧೦ನೇ ಶುಕ್ರವಾರ ಆಗೋಸ್ತು ೧೯೨೮.

ಬರ್ಡೋಲಿಯ ವಿಜಯ.

ಬೊಂಬಾಯಿ ತಾ. ೨೩ರಲ್ಲು ಪೂನೆಯ ಕೌನ್ಸಿಲ್ ಮುಂದುಗಡೆ ನಿಂತು ಸರ್ ಲೆಸ್ಲಿವಿಲ್ಸನರು [illegible] ನಿಶ್ಚಿಸಿ [illegible] "ಅವು ರಾಜ ಪಂಚಾಂತಿಕರ ಆರಂಭದ ಶರ್ತಗಳಾಗಿ ಕೊಡಲ್ಪಟ್ಟವುಗಳಲ್ಲ; ಅವು ಸ್ಥಿರವಾದ ಮತ್ತು ಅಖೈರಿಯ ಸರಕಾರದ ನಿರ್ಧಾರವಾಗಿದೆ" [illegible] ವಾಗಿ ಹೇಳಿದ್ದಲ್ಲದೆ ಮುಂದೆ [illegible] ಧರ್ಮ ಕಮಿಟಿ (enquiry committee) [illegible] ವಾಗುವ ಮೊದಲು ಸೂರತಿನ ಕೌನ್ಸಿಲ ಸದಸ್ಯರು ಸರಕಾರವು ಹೊರಿಸಿರುವ ಶರ್ತಗಳು ಸ್ವೀಕರಿಸಲ್ಪಡುವುದೊ, ಇಲ್ಲವೆ ನಿರಾಕರಿಸಲ್ಪಡುವುದೊ ಎಂಬುದನ್ನು ಇಂದಿನಿಂದ ಹದಿನಾಲ್ಕು ದಿವಸಗಳೊಳಗೆ ತಿಳಿಸಬೇಕು. ಇಲ್ಲವೆ ಸರಕಾರವು ಯುಕ್ತ ತೋರಿದ ರೀತಿಯಲ್ಲಿ ತನ್ನ ಶಾಸನಾಧಿಕಾರವನ್ನು ಉಪಯೋಗಿಸಲು ಮುಂದರಿಯುವುದು" ಎಂದು ತಮ್ಮ ಅಖೈರಿಯ ಮಾತನ್ನು ಹೇಳಿಬಿಟ್ಟರು.

ಬರ್ಡೋಲಿ ಸತ್ಯಾಗ್ರಹವು ಆರಂಭವಾಗಬೇಕಾದರೆ ಸರಕಾರದೊಡನೆ ಪ್ರಜೆಗಳು ಎಷ್ಟೋ ಬಾರಿ ತಮ್ಮ ಮತವನ್ನು ನಿವೇದಿಸಿದುದು ಉಂಟು. ಸತ್ಯಾಗ್ರಹದ ಆರಂಭದ ನಂತರವೂ ಶ್ರೀಯುತ ವಲ್ಲಭಭಾಯಿ ಪಟೇಲರು ಸ್ವಲ್ಪ ಗೌರವಕ್ಕೆ ಕುಂದುಬರುವುದೊ ಇಲ್ಲವೊ ಎಂಬುದನ್ನು ಬಹಳವಾಗಿ ಆಲೋಚಿಸದೆ, ಬರ್ಡೋಲಿ ರೈತರ ಹಿತವನ್ನು ಮಾತ್ರವೇ ಉದ್ದೇಶಿಸಿ ಸರಕಾರದೊಡನೆ ಸ್ಥಿರವಾಗಿಯಾದರೂ ವಿನೀತಭಾವದಿಂದ ಬರ್ಡೋಲಿಯ ಸಮಸ್ಯೆಯ ತೀರ್ಮಾನಕ್ಕಾಗಿ ಪ್ರಯತ್ನಿಸಿದ್ದರು. ಆ ಮೇಲೆ ಬರ್ಡೋಲಿಯ ಪ್ರತಿ ಒಬ್ಬನೂ ಧೈರ್ಯದಿಂದಲೂ ತ್ಯಾಗದಿಂದಲೂ ಅಮಿತ ಸಹನೆಯನ್ನು ವಹಿಸಿ ಶಾಂತವಾಗಿ ಸತ್ಯಾಗ್ರಹದ ಧ್ವಜತಲದಲ್ಲಿ ವೀರಮುದ್ರೆಯಿಂದ ನಿಂತಾಗ, ಕೌನ್ಸಿಲಿನ ಪ್ರಜಾಪ್ರೇಮಿಗಳಾದ ಹಲವು ಮೆಂಬರರು ಸಹಾನುಭೂತಿಯನ್ನು ಪಟ್ಟು, ಅವರ ಬೇಡುವಿಕೆಯ ನ್ಯಾಯವನ್ನು ತಿಳಿದವರಾಗಿ ಸರಕಾರದೊಡನೆ ಅವರ ಪರವಾಗಿ ಬಹಳವಾಗಿ ವ್ಯವಹರಿಸಿ ಕೃತಕಾರ್ಯರಾಗದೆ ನಿಂದಕರಾಗಿ ಕೌನ್ಸಿಲ್ ಮೆಂಬರಿಕೆಗೆ ರಾಜೀಕೊಟ್ಟು ಪುನಃ ಚುನಾಯಿಸಲ್ಪಟ್ಟರು. ಆ ಮೇಲೆ ಗವರ್ನರರು ಸ್ವತಹಾ ಸಿಮ್ಲಕ್ಕೆ ಹೋಗಿ ವ್ಯಾಸರಾಯರ ಭೇಟಿಯನ್ನು ತೆಗೆದುಕೊಂಡು ಅನುಭವವನ್ನು ಅವರಿಂದ ಪಡೆದು ಹಿಂದಿರುಗಿ ಬಂದು ಸೂರತ್ತಿನಲ್ಲಿ ಆದು ಸತ್ಯಾಗ್ರಹೀ ಮುಂದಾಳುಗಳೊಡನೆ ಮಂತ್ರಾಲೋಚಿಸಿ ಅಲ್ಲಿಯೂ ತೀರ್ಮಾನವನ್ನು ಹೊಂದಲಾರದಾದರು.

ಆ ಮೇಲೆ ಪೂಣೆಯಲ್ಲಿಯ ಕೌನ್ಸಿಲ್ ಮೀಟಿಂಗಿನಲ್ಲಿ ನ್ಯಾಸ್‌ರಾಯರು ಹೊರಡಿಸಿದ ಅಖೈರಿಯ ಗರ್ಜನೆಯು ಇದು.

ಈ ಬೆದರಿಕೆಯು ಏನೂ ಪರಿಣಾಮಕಾರಿಯಾಗಲಿಲ್ಲ. ಬರ್ಡೋಲಿ ನಿರ್ಧಾರವು ಸಡಿಲಾಗಲಿಲ್ಲ. ವಲ್ಲಭ ಬಾಯಿಯವರ ಮನಸ್ಸು ಚಂಚಲವಾಗಲಿಲ್ಲ. ಎಂದಿನಿಂದಲೂ ಪ್ರಶಾಂತವಾಗಿದ್ದ ಅವರ ಮನಸ್ಸು ಈ ಬಾರಿಯೂ ವಿಚಲಿಸದೆ ತೀರ್ಮಾನದ ಹುಡುಕಾಟದಲ್ಲಿ ನಿರತವಾಗಿತ್ತು. ರಿಸ್ಪೋನ್ಸಿವಿಸ್ಟರಾದ ಕೇಳಕರರು ಸರಕಾರದ ವರ್ತನವನ್ನು ಖಂಡಿಸಿದರು; ಸೌಮ್ಯವರ್ತಿಗಳಾಗಿರುವ ಮಾಲವೀಯರು ತಾವೇ ಬರ್ಡೋಲಿಗೆ ಬರುವೆವೆಂದರು; ಲಿಬರಲರಾದ ತೇಜ ಬಹದ್ದೂರ ಸಪ್ರೂರವರು ಮುಂಬಾಯಿ ಸರಕಾರದ ತರ್ಕಹೀನತೆಯನ್ನು ತಿರಸ್ಕರಿಸಿದರು, ಇಂಡಿಪೆಂಡೆಂಟರಾದ ಲಾಲಾ ಲಜಪತರಾಯರು ಬರ್ಡೋಲಿಯನ್ನು ಅಭಿನಂದಿಸಿದರು. ಎಂಗ್ಲೊ ಇಂಡಿಯಾನ್ ಪತ್ರಿಕೆಗಳಾದ ಪಾಯೊನಿಯರ್, ಸ್ಟೇಟ್ಸ್‌ಮೆನ್ ಪತ್ರಿಕೆಗಳು ಬರ್ಡೋಲಿ ರೈತರ ಕೇಳುವಿಕೆಯ ನ್ಯಾಯವನ್ನೂ ಸರಕಾರದ ಮೌಢ್ಯವನ್ನೂ ತೋರಿಸಿದರು. ಹೀಗೆ ಎಲ್ಲಾ ಕಡೆಗಳಿಂದ ಬರ್ಡೋಲಿಗೆ ಸಿಕ್ಕುತ್ತಿದ್ದ ಪ್ರೋತ್ಸಾಹವನ್ನು ನೋಡಿ ಸಹಜವಾಗಿ ಗವರ್ನರರಿಗೆ ಏದೆ ಕುಗ್ಗಿರಬೇಕು.

ಆದರೂ ಗವರ್ನರರು ಸೋತೆವೆಂದು ತೋರಿಸಲು ತಯ್ಯಾರಿರಲಿಲ್ಲ. ಆಗೋಸ್ತು ತಾ ೩ರಲ್ಲಿ "ತೀರ್ಮಾನವಾಗುವುದೆಂದು ಆಶಿಸಲು ನನಗೆ ಯಾವ ಕಾರಣವೂ ತೋರುವುದಿಲ್ಲ" ಎಂದು ವಲ್ಲಭಬಾಯಿಯವರು ತಿಳಿಸಿದರು. ಆದರೆ ಅದಾಗಲೇ ಮಹಾತ್ಮಾಗಾಂಧಿಯವರು ಬರ್ಡೋಲಿಗೆ ಹೋಗಿದ್ದರು. ವಲ್ಲಭಬಾಯಿ ಪಟೇಲರಿಗೆ ಕೈದುಮಾಡಲ್ಪಡುವರೆಂಬ ಅನುಮಾನವಿತ್ತು. ಅವರ ಸ್ಥಾನಾಪತಿಯಾಗಿ, ಬರ್ಡೋಲಿ ಸತ್ಯಾಗ್ರಹಿಗಳಿಗೆ ಸರಿಯಾದ ಮಾರ್ಗದರ್ಶಕರ ಕೊರತೆ ಇರಲಿಲ್ಲ. ಈ ವರೆಗಿನ ಪ್ರ್ಯಾನ್ಸ ಆಫ್ ಇಂಡಿಯದ ವಾರ್ತಾವಾಹಕನು [illegible]

[illegible]

ಹೀಗೆ ಪ್ರಮುಖ ಶರ್ತವು ಇತ್ಯರ್ಥವಾಗುವಂತೆ ತೀರ್ಮಾನ ಹೊಂದಿದಾಗ ಬೇರೆ ವಿಷಯಗಳ ತೀರ್ಮಾನವನ್ನು ಮಾಡುವುದೇ ಉಳಿಯಿತು. ಸರಕಾರವು ಮೊದಲು ಮೊದಲು ಒಗ್ಗಲಿಕ್ಕೆ ತಯ್ಯಾರಿರಲಿಲ್ಲ. ಇಂಗ್ಲೆಂಡಿನಲ್ಲಿ ಅರ್ಲ ವಿಂಟರ್ಟನ್ನರೂ, ಪೂನೆಯಲ್ಲಿ ಸರ್ ಲೆಸ್ಲಿ ವಿಲ್ಸನರೂ ಗುಡುಗುತ್ತಿದ್ದರೇ ವಿನಹ ಸತ್ಯಾಗ್ರಹಿಗಳ ಸೈರ್ಯ [illegible] ಅವರಿಗೆ ಎಂದೂ ಮನಸೊಪ್ಪುತ್ತಿರಲಿಲ್ಲ. ಈ ಮಾನಸಿಕತೆಯ ಸಮಯದಲ್ಲಿಯೇ ಸೂರತ್ತಿನ ಕೌನ್ಸಿಲ್ ಮೆಂಬರರು ಅಪರ್ನಿಕ ತೀರ್ಮಾನಕ್ಕೆ ಪ್ರಯತ್ನಿಸಿ ವಿಫಲಮನೋರಥರಾಗುತ್ತಲೂ ಪುನಃ ಪುನಃ ಆಶಿಸುತ್ತಲೂ ಇದ್ದರು. ಆಗ ಬಾರ್ಡೋಲಿಗೆ ಮಹಾತ್ಮಾಜಿಯವರು ಹೋದರೆಂದೂ, ಅಖಿಲ ಹಿಂದೂಸ್ಥಾನದ ಸಹಾನುಭೂತಿಯೂ ಸಹಾಯವೂ ಬಾರ್ಡೋಲಿ ರೈತರ ಕಡೆಗೆ ಇದೆಯೆಂದೂ ಪ್ರಕಟವಾಯಿತು. ಮತ್ತೆ ವಿಲ್ಸನರಿಗೆ ಧೈರ್ಯವು ಸಾಕಾಗಲಿಲ್ಲ.

ಆಗೋಸ್ತು ತಾರೀಕು ೫ರಲ್ಲಿ ಬರ್ಡೋಲಿಯ ಬಯಕೆಯು ಕೈಗೂಡಿತು; ಸಹನೆಯು ಸಫಲವಾಯಿತು; ಸತ್ಯಾಗ್ರಹವು ಪರಿಣಾಮಕಾರಿಯಾಯಿತು. ಸರಕಾರದ (೧) ಬಾರ್ಡೋಲಿಯವರು ಮೊದಲಿನ ತೀರ್ವೆಯನ್ನು ತೆರಬೇಕು, (೨) ಶ್ರೀಯುತ ರಾಮಚಂದ್ರ ಭಟ್ಟರು ಹೆಚ್ಚಿಸಿದ ತೀರ್ವೆಯ ಅಂಶವನ್ನು ತೆರಬೇಕು, (೩) ಸತ್ಯಾಗ್ರಹ ಚಳವಳವನ್ನು ನಿಲ್ಲಿಸಬೇಕು, ಎಂಬ ಮೂರು ಶರ್ತಗಳೂ; ಸತ್ಯಾಗ್ರಹೀಗಳ (೧)ಕೈದಿಗಳನ್ನು ಬಿಡುಗಡೆಮಾಡಬೇಕು, ಸರಕಾರವು ಸ್ವಾಧೀನಮಾಡಿಕೊಂಡ ಆಸ್ತಿಗಳನ್ನು ಆಯಾ ಹಕ್ಕುದಾರರಿಗೆ ಬಿಟ್ಟುಕೊಡಬೇಕು, (೩)ಸರಕಾರದ ಅನ್ಯಾಯಕ್ಕೆ ಮತ್ತು ಅವರಿಂದ ನಷ್ಟಕ್ಕೊಳಗಾದವರಿಗೆ ಪರಿಹಾರ ದ್ರವ್ಯ ಕೊಡಬೇಕು, (೪) ಪಟೇಲ ಮತ್ತು ಉಗ್ರಾಣಿಗೆಳನ್ನು ಪುನಃ ನೇಮಕ ಮಾಡಬೇಕು, (೫) ವಿಚಾರಣಾ ಕಮಿಟಿಯನ್ನು ನೇಮಕಮಾಡಬೇಕು ಎಂಬ ಐದು ಶರ್ತಗಳೂ ಇಕ್ಕಡೆಗಳಿಂದಲೂ ಸ್ವೀಕರಿಸಲ್ಪಟ್ಟವು.

ಹೀಗೆ ಸತ್ಯಾಗ್ರಹೀಗಳಿಗೆ ಸಮಾಧಾನವಾಗುವ ರೀತಿಯಲ್ಲಿ ತೀರ್ಮಾನವು ಸಿಕ್ಕಿತು. ಯಾವ ಸ್ಥಳವು ಮಹಾತ್ಮಾಜೀಯವರಿಂದ ಸ್ವರಾಜ್ಯಸಾಧನೆಯ ಸಮರಭೂಮಿಯಾಗಿ ರಚಿಸಿ ಸಿದ್ಧಗೊಳಿಸಲ್ಪಟ್ಟಿದ್ದಿತೊ ಅಲ್ಲಿ ಸತ್ಯಾಗ್ರಹದ ವಿಜಯಧ್ವಜದ ಶಾಶ್ವತವಾದ ಕೀರ್ತಿಯು ಸ್ಥಿರವಾಗಿ ನೆಡಲ್ಪಟ್ಟಿತು. ಬರ್ಡೋಲಿಯ ಈ ಮಹಾನ್ ಆದರ್ಶದ ಅಡಿಯಲ್ಲಿ ಭಾರತಭೂಮಿಗೆ ಒಂದು ಸಂದೇಶವಿದೆ; ಅಲ್ಲಿ ಭಾರತಪುತ್ರರು ಕಲಿತುಕೊಳ್ಳಬೇಕಾದ ದೊಡ್ಡ ಪಾಠವಿದೆ. ಈ ಸಂದೇಶವು ಎಲ್ಲಿಯ ವರೆಗೆ ಪ್ರಸರಿತವಾಗುವದೆಂದೂ, ಈ ಪಾಠವು ಎಷ್ಟರ ವರೆಗೆ ಅನುಕರಿಸಲ್ಪಡುವುದೆಂದೂ ಮುಂದಿನ ಇತಿಹಾಸವೇ ತೋರಿಸಬೇಕು.

ವಿದೇಶ ವರ್ತಮಾನ.

— ರಗ್ಬಿಯ ಕೆಲವು ಶಾಲೆಗಳ ನಾಲ್ವತ್ತನಾಲ್ಕು ವಿದ್ಯಾರ್ಥಿಗಳು ಒಟ್ಟಾಗಿ ಕೆನಡಾ ಮತ್ತು ನ್ಯೂಫೌಂಡ್‌ಲೇಂಡನ್ನು ಸಂಚರಿಸಬರಬೇಕೆಂದು ಹೊರಟಿರುವರು. ಅವರ ಪ್ರಯಾಣವು ಸುಖಕರವಾಗಬೇಕೆಂದೂ, ಅಲ್ಲಿ ಅವರ ಸಂಚಾರವು ಒಳ್ಳೆಯದಾಗಬೇಕೆಂದೂ ನಮ್ಮ ಯುವರಾಜರು ಅವರಿಗೆ ಒಂದು ಪತ್ರವನ್ನು ಕಳುಹಿದ್ದರು. ಯುವರಾಜರು ಬರೆದುದೇನಂದರೆ 'ನೀವು ಕೆನಡಾದಲ್ಲಿ ನೋಡಿದುದೂ, ಅಲ್ಲಿ ಹಲವರೊಡನೆ ಗಳಿಸಿದ ಸ್ನೇಹವೂ ಸಾಯುವ ತನಕ ಸ್ಥಿರವಾಗಿರುವುದು, ಪ್ರತಿಯೊಬ್ಬನೂ ಹೀಗೆ ಮಾಡಲಪೇಕ್ಷಿಸಿದರೆ ಬ್ರಿಟಿಷ ರಾಜ್ಯಗಳೊಳಗೆ ಶಾಶ್ವತವಾದ ಐಕ್ಯವುಳಿಯುವುದು' ಎಂದು.

— ಫ್ರಾನ್ಸಿನಲ್ಲಿರಲು, ಬ್ರಿಟಿಷ ರಾಜಪ್ರತಿನಿಧಿಯಾಗಿ ಸರ್. ವಿಲ್ಲಿಯಮ್ ಟ್ರೈರಿಲ್ ಎಂಬವರು ನೇಮಿಸಲ್ಪಟ್ಟಿದ್ದರು. ಅವರನ್ನು ಫ್ರಾನ್ಸಿನಲ್ಲಿ ಬಹು ಸಂಭ್ರಮದಿಂದ ಎದುರುಗೊಂಡರು.

— ಕಳೆದ ತಿಂಗಳ ಕೊನೆಯ ವಾರದಲ್ಲಿ ಹಿಂದೂ ಧುರೀಣರಾದ ಮಿ. ಜಿನ್ನಾ ಮತ್ತು ಮಿ. ಷಣ್ಮುಖಮ್ ಚೆಟ್ಟಿ, ಇವರಿಬ್ಬರು ಆಯರ್ಲೇಂಡಿನ ಡಬ್ಲಿನ್ ಪಟ್ಟಣವನ್ನು ಸಂದರ್ಶಿಸಿದರು. ಪ್ರೆಸಿಡೆಂಟರಾದ ಕೊಸ್‌ಗ್ರೇವರ ಮತ್ತು ಮಂತ್ರಿಮಂಡಳದವರ ಭೇಟಿಯನ್ನವರು ಪಡೆದರು. ಇದೇ ತಿಂಗಳ ತಾರೀಕು ೧೦ಕ್ಕೆ ಅವರು ಹಿಂದೂಸ್ಥಾನಕ್ಕೆ ಹೊರಡುವರು.

— ಇಂಗ್ಲೆಂಡಿನ ಶಾಲೆಯ ಅಧಿಕಾರಿಗಳು ಹಿಂದೂ ವಿದ್ಯಾರ್ಥಿಗಳನ್ನು ಪಕ್ಷಪಾತದಿಂದ ಕಾಣುವರೆಂದೂ ಅವರು ಹಾಗೆ ಮಾಡುವದು ತಪ್ಪೆಂದೂ, ಲಂಡನಿನ ಇಂಡಿಯನ್ ಸೋಸಿಯಲ್ ಕ್ಲಬ್ಬಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸರ್. ಅಬ್ದಾಸ ಅಲಿ ಬೈಗರವರು ವ್ಯಕ್ತಪಡಿಸಿದರು. ಹಿಂದೂಸ್ಥಾನವು ತನ್ನವರ ವಿದ್ಯೆಗಿಂತಲೂ ಹೆಚ್ಚಿಗೆ ಹಣವನ್ನು ಇಂಗ್ಲೀಷ ಹುಡುಗರು ವಿದ್ಯಾರ್ಜನೆಮಾಡುವ ಸಲುವಾಗಿ ಖರ್ಚುಮಾಡುತ್ತದೆಂದೂ ಹೇಳಿದರು.

— ಬ್ರಿಟಿಷ ಕೌನ್ಸುಲೇಟನ್ನು ಮುತ್ತಿ ಚೀನದ ನೆನಕಿಂಗಿನವರು ಇಬ್ಬರುಮೂವರು ಬ್ರಿಟಿಷರನ್ನು ಕೊಂದಿದ್ದರಷ್ಟೆ. ಈಗ ಆ ಕುರಿತು ಬ್ರಿಟಿಷರೊಳಗೂ ನೆನಕಿಂಗಿನವರೊಳಗೂ ರಾಜಿಯಾಗುವ ಸಂಭವವಿದೆ. ಯುನೈಟೆಡ್ ಸ್ಟೇಟ್ಸ್ ಸರಕಾರದವರು ಒಪ್ಪಿದ ಶರ್ತಗಳಿಗೆ ಚೀನಾದವರು ಒಪ್ಪುವದಾದರೆ ಒಪ್ಪಂದವು ಬಹು ಸುಲಭವಿದೆ.

— ಲಂಡನಿನಲ್ಲಿರುವ ಹಿಂದೀ ರಾಷ್ಟ್ರೀಯ ಮಹಾಸಭೆಯ ಶಾಖೆಯವರು ಕಳೆದ ಜುಲಾಯಿ ತಿಂಗಳಲ್ಲಿ ಸಭೆಕೂಡಿ ಬಾರ್ಡೋಲಿಯವರ ವಿಷಯವಾಗಿ ತಾವು ಮಾಡಬೇಕಾದುದೇನೆಂಬುದನ್ನು ಚರ್ಚಿಸಿದರು. ಹಣವನ್ನು ಒಟ್ಟು ಕೂಡಿಸಬೇಕೆಂದು ನಿರ್ಣಯವಾಗಿ ಆಗ ತಾನೇ ೫೦ ಪವನುಗಳು ಸಂಗ್ರಹಿತವಾದವು. ಅವುಗಳಲ್ಲಿ ೪೦ ಪವನುಗಳನ್ನು ಬಾರ್ಡೋಲಿಗೆ ಕಳುಹಿಸಿಕೊಟ್ಟರು. ಬಾರ್ಡೋಲಿಯಲ್ಲಿ ಮಾತ್ರವಲ್ಲ ಹಿಂದೂಸ್ಥಾನದ ಹಲವು ಇತರ ರಾಜ್ಯಗಳಲ್ಲಿಯೂ ಇದೇ ರೀತಿ ಸತ್ಯಾಗ್ರಹವನ್ನು ಚರಿಸುವುದು ಬಹಳ ಉತ್ತಮವೆಂದು ಠರಾಯಿಸಿದರು. ಮತ್ತು ಲಂಡನಿನಲ್ಲಿರುವ ಎಲ್ಲಾ ಹಿಂದುಗಳನ್ನು ಈ ಸಭೆಯ ಸದಸ್ಯರಾಗಲು ಅದಕ್ಕೆ ಪ್ರಯತ್ನಿಸಬೇಕೆಂದು ನಿರ್ಣಯಿಸಿದರು.

— ರಸ್ಯಾದೇಶದಲ್ಲಿ ನೆರೆಬಂದ ಕಾರಣ ೭ ಹಳ್ಳಿಗಳು ಸಂಪೂರ್ಣ ನಾಶವಾಗಿವೆ. ಒಟ್ಟಾರೆ ಉಂಟಾದ ನಷ್ಟವು ೧೦ ಮಿಲಿಯ ರುಬುಲುಗಳಾಗಬಹುದೆಂದು ಅಂದಾಜು ಮಾಡಲಾಗಿಯದೆ.

ಒಳದೇಶ ವರ್ತಮಾನ.

— ಬುದ್ಧನು ೨೫೧೭ ವರುಷಗಳ ಮೊದಲು ತನ್ನ ಪ್ರಥಮ ಬೋಧನೆಯನ್ನು ಬನಾರಸಿನ ಸಮೀಪವಿರುವ ಸಾರ್ನಥವೆಂಬಲ್ಲಿ ಪ್ರಾರಂಭಿಸಿದನು. ಮೊನ್ನೆ ಶನಿವಾರ ಈ ಸ್ಥಳದಲ್ಲಿ ಅದರ ವಾರ್ಷಿಕ ವರ್ಧಂತಿ ಉತ್ಸವವು ಜರಗಿತು. ಮೆರವಣಿಗೆ, ಗಾಯನ, ಸಭೆ ಮುಂತಾದುವುಗಳು ನಡೆದುವು.

— ಬೆಂಗಳೂರಿನ ವಿದ್ಯಾರ್ಥಿಗಳ ಮುಷ್ಕರವು ಸಮಾಪ್ತವಾಗಿ ಎಲ್ಲೆಡೆಗಳಲ್ಲಿಯೂ ಈಗ ಶಾಂತಿಯು ನೆಲಸಿರುತ್ತದೆ.

— ಹಿಂದೂಸ್ಥಾನದ ಈಶಾನ್ಯ ಭಾಗದಲ್ಲಿಯೂ, ಬಂಗಾಳದ ನೈಋತ್ಯ ಭಾಗದಲ್ಲಿಯೂ ವಿಶೇಷ ತರದ ಮಳೆಬಂದು ಬಹಳ ನಷ್ಟ ಉಂಟಾಯಿತು.

— ಕಲಕತ್ತದಲ್ಲಿ ಕಳದ ೨ನೇ ತಾರೀಕಿನ ದಿನ ಆರು ತಾಸಿನೊಳಗೆ ಐದು ಇಂಚು ಮಳೆ ಬಿದ್ದಿತು. ಇಷ್ಟು ಮಳೆಯು ಈ ವರುಷ ಇದುವರೆಗೆ ಅಲ್ಲಿ ಬಂದುದಿಲ್ಲ. ಹಲವು ರಸ್ತೆಗಳಲ್ಲಿ ನೆರೆ ಬಂದಿದ್ದಿತು.

— ಸ್ಯಾಮನ್ ಕಮೀಶನಿನೊಂದಿಗೆ ಸಹಕರಿಸಲು ಬಂಗಾಳದಿಂದ ೭ ಜನರು ಆರಿಸಲ್ಪಟ್ಟಿರುವರು. ಅವರಲ್ಲಿ ಒಬ್ಬರು ಯುರೋಪಿಯನ್ ಇಬ್ಬರು ಹಿಂದುಗಳು, ಮತ್ತು ನಾಲ್ವರು ಮಹಮ್ಮದೀಯರು.

— ತಿನ್ನವೆಲ್ಲಿಯಲ್ಲಿ ಒಬ್ಬನು ಇನ್ನೊಬ್ಬನೊಡನೆ ವಿರೋಧದಿಂದ ಕಾದಾಡಿದನು. ಮರುದಿನ ಬೆಳಿಗ್ಗೆ ಎರಡನೆಯವನ ಮಗುವು ಮಾರ್ಗದಲ್ಲಿ ಆಡುತ್ತಿರುವಾಗ ಮೊದಲನೆಯವನು ತನ್ನ ಮನೆಗೆ ಕರೆದುಕೊಂಡು ಹೋಗಿ ಅದಕ್ಕೆ ಬೆಲ್ಲವನ್ನು ತಿನ್ನಿಸಿ, ಕಳುಹಿಕೊಟ್ಟನು. ಮಗುವು ತನ್ನ ಮನೆಗೆ ಬಂದು ಸ್ವಲ್ಪ ಸಮಯದೊಳಗಾಗಿ ವಾಂತಿಯನ್ನುಮಾಡಿ ಪ್ರಾಣವನ್ನು ವಿಸರ್ಜಿಸಿತು. ಒಡನೆ ಮೊದಲಿನವನ ಮನೆಗೆ ಹೋಗಿ ಶೋಧಿಸಲಾಗಿ ಅಲ್ಲಿ ವಿಷಮಿಶ್ರಿತ ಖಾದ್ಯ ವಸ್ತುಗಳಿದ್ದವು. ಆತನನ್ನು ಕೈದು ಮಾಡಿ ವಿಚಾರಿಸಿ, ತಪ್ಪುಗಾರನೆಂದು ರುಜುವಾದ ಕಾರಣ, ಜಡ್ಜರು ಆತನಿಗೆ ಜೀವ ಶಿಕ್ಷೆಯನ್ನು ವಿಧಿಸಿದರು.

— ಅಹಮದಾಬಾದಿನ ಗಿರಣಿ ಮಾಲಿಕರು ಹಿಂದೂಸ್ಥಾನದ ಒಂದು ದೊಡ್ಡ ಸಂಚಾರಕ್ಕಾಗಿ ಹೊರಡಲಿರುವರು. ಅವರು ಸಂಚರಿಸಬೇಕಾದ ಮೈಲುಗಳು ೪೬೦೦, ಇಷ್ಟನ್ನೂ ೪೦ ದಿವಸಗಳಲ್ಲಿ ಸಂಚರಿಸುವರು. ಅವರಿಗೆ ಸ್ಪೆಶಲ್ ಟ್ರೈನು ತಯಾರಿಯು ನಡಿಯುತ್ತಲಿದೆ. ಇವರಿಗೆ ಹೇಳಿದ ರೈಲ್ವೆ ಚಾರ್ಜ ಮೊದಲನೇ ತರಗತಿಗೆ ರೂಪಾಯಿ ೩೯೦-೫-೦ ಎರಡನೇ ತರಗತಿಗೆ ೧೯೫-೮-೦ ಇನ್ನು ಮೂರನೇ ತರಗತಿಗೆ ೮೦-೧೨-೦ ಇವರು ೧೩ನೇ ತಾರೀಕಿನ ದಿನ ಅಹಮದಾಬಾದಿನಿಂದ ಹೊರಡುವರು. ಇದರಿಂದ ವ್ಯಾಪಾರದ ಮಾಹಿತಿಯು ದೊರಕಿದಂತಾಯಿತು. ಸುಖವನ್ನು ಅನುಭವಿಸಿದಂತೆಯೂ ಆಯಿತು.

— ಸಂಯುಕ್ತ ಪ್ರಾಂತ್ಯಕ್ಕೆ ಸರ್ ಮೋಲ್ಕಮ್ ಹೈಲಿಯವರೂ ಪಂಜಾಬಕ್ಕೆ ಸರ್ ಜೋಫರಿ ಡಿ ಮೋಂಟ್‌ಮೋರೆನ್ಸಿಯವರೂ ಗವರ್ನರರುಗಳಾಗಿ ನೇಮಿಸಲ್ಪಟ್ಟಿರುವರು.

— ಕಾಶಿಯ ಬಾಗೀರಥಿ ನದಿಯಲ್ಲಿ ಒಂದು ದೋಣಿಯು ಕವಚಿ ಬಿದ್ದು ಒಬ್ಬನು ಮೃತಪಟ್ಟನು.

— ಬನಾರಸಿನಲ್ಲಿ ವಿಪರೀತವಾದ ಮಳೆ ಬಂದು ಒಂದು ದಿನದವರೆಗೆ ನೆರೆ ನಿಂತಿದ್ದಿತು.

— ಕಳೆದ ಶುಕ್ರವಾರ ಶ್ರೀ ವಿ ಜೆ ಪಟೇಲರು ರಂಗೂನನ್ನು ಸಂದರ್ಶಿಸಿದರು. ಅವರನ್ನು ಸತ್ಕರಿಸುವ ಸಂದರ್ಭದಲ್ಲಿ ಗವರ್ನರ ದೊರೆಗಳೂ ಬಂದಿದ್ದರು. ಇವರು ೧ನೇ ತಾರೀಕಿನ ದಿನ ರಂಗೂನಿನಿಂದ ಹೊರಟು ೧೪ನೇ ತಾರೀಕಿಗೆ ಕಲಕತ್ತಕ್ಕೆ ತಲುಪುವರು. ಅಂದೇ ನಾಗಪುರಕ್ಕೆ ಹೊರಟು ಅಲ್ಲಿ ಎರಡು ಅಥವಾ ಮೂರು ದಿನ ಉಳಿದು ರಾಂಚಿಗೆ ಹೋಗಿ ಅಲ್ಲಿಂದ ೨೭ನೇ ತಾರೀಕಿನ ದಿನ ಸಿಮ್ಲಕ್ಕೆ ತಲುಪುವರು.

— ಜಿ. ಐ. ಪಿ. ರೈಲುವೇ ಕೆಲಸಗಾರರ ಒಂದು ಡೆಪ್ಯುಟೇಶನು ಏಜಂಟರ ಭೇಟಿಯನ್ನು ಪಡೆದು ಅವರಲ್ಲಿ ಉಂಟಾಗಿದ್ದ ಕಲಹದ ವಿಚಾರಣೆಯಾಯಿತು.

— ದಿಲ್ಲಿಯಲ್ಲಿ ಸನ್ನಿಪಾತವು ಪ್ರಬಲವಾಗಿ ಬೆಳೆಯುತ್ತಿದೆಯಂತೆ. ಜುಲಾಯಿ ತಿಂಗಳಲ್ಲಿ, ಇದರಿಂದ ೮೫ ಜನರು ಮರಣಕ್ಕೆ ತುತ್ತಾದರು. ಹೆಚ್ಚಾಗಿ ಈ ರೋಗವು ಮಕ್ಕಳನ್ನು ಸೋಂಕುವುದು. ಮಳೆಬಾರದೆ ಇರುವುದೂ, ಕೊಳಕು ಪದಾರ್ಥಗಳ ಅಸ್ತಿತ್ವವೂ ಇದಕ್ಕೆ ಕಾರಣವೆನ್ನುವರು.

— ಬಂಗಾಳ ಕೌನ್ಸಿಲಿನ ಪ್ರೆಸಿಡೆಂಟರಾದ, ಸಾಂತೋಷದ ರಾಜರು, ಮಂತ್ರಿಮಂಡಲದವರಲ್ಲೊಬ್ಬರಾಗಬೇಕೆಂದೂ, ಪ್ರೆಸಿಡೆಂಟ ಪದಕ್ಕೆ ಸರ್ ಅಬ್ದುಲ್ ರಹೀಮರು ಯೋಗ್ಯರೆಂದೂ ಒಂದು ವರ್ತಮಾನವಿದೆ.

— 'ಅಮೋದಿಯಾ' ಎಂಬ ಹಡಗದ ನೌಕರರು ಅಧಿಕಾರಿಗಳನ್ನು ಹೊಡೆದುದಕ್ಕಾಗಿ ರಂಗೂನಿನ ಕೋರ್ಟಿನಲ್ಲಿ ಮೊಕದ್ದಮೆಯಾಗಿತ್ತು. ಮೂವರಿಗೆ ೧೨ ವಾರಗಳ ಕಠಿಣ ಶಿಕ್ಷೆಯೂ ಉಳಿದ ನಾಲ್ವರಿಗೆ ಎಂಟು ವಾರಗಳ ಶಿಕ್ಷೆಯೂ ವಿಧಿಸಲ್ಪಟ್ಟಿತು.

— ಕಟ್ಟಿಪಾಕಮ್ ಎಂಬಲ್ಲಿ ಆದ ರೈಲ್ವೆ ಅಪಘಾತದ ಕುರಿತಾಗಿ ಕಣ್ಣಮ್ ಎಂಬವನು ಬಂದು ಕಂಬಿಗಳ ಸಂದನ್ನು ಕಳಚಿದವನು ತಾನೆಂದು ಒಪ್ಪಿರುವನು. ಇದು ಮಾತ್ರವಲ್ಲದೆ, ಆತನು ಇನ್ನೂ ಹಲವೆಡೆಗಳಲ್ಲಿ ಹಲವು ರೀತಿಯಲ್ಲಿ ತೊಡಕ್ಕನ್ನುಂಟುಮಾಡಿದ್ದನೆಂದೂ, ಹೇಳಿದನು.

— ಸಂಯುಕ್ತ ಪ್ರಾಂತ್ಯದ ಸಕಲದಿಹಾ ಎಂಬಲ್ಲಿ ಒಂದು ಪ್ಯಾಸೆಂಜರ ಟ್ರೈನು ಗೂಡ್ಸ್ ಟ್ರೈನಿಗೆ ಡಿಕ್ಕಿಹೊಡೆದು ಅಸಿಸ್ಟಾಂಟ್ ಇಂಜಿನಿಯರರನೊಬ್ಬನು ಮೃತ ಪಟ್ಟನು. ೭ ಜನ ರೈಲುವೇ ಕೆಲಸಗಾರರಿಗೂ ಇತರರಿಗೂ ಜಖಮಾಗಿರುತ್ತದೆ.

— ರಾಮನಾಡದ ಅರಸರು ಮೃತಪಟ್ಟರು. ಅವರು ದೊಡ್ಡ ಜಮೀನುದಾರರಾಗಿದ್ದರು.

— ತಿರುವಲ್ಲೂರಿನಲ್ಲಿ ಮಂಗಗಳ ಕಾಟವು ಬಹಳವಾಗಿ ಬೆಳೆದಿದೆ. ಮನೆಯೊಳಗೆ ಪ್ರವೇಶಿಸಿ, ಸಿಕ್ಕಿದವುಗಳನ್ನು ತಿನ್ನುವುದು ಎದುರಿಸಿದವರನ್ನು ಕಚ್ಚುವುದು ಇವೇ ಮೊದಲಾದ ಉಪದ್ರಗಳು ಅಪರಿಮಿತವಾಗಿವೆ.

— ಪಂಡಿತ ಮಾಲವೀಯರವರು ಹಿಂದೂ ಮತದ ವಿಷಯವಾಗಿ ಬರೆದ ಪುಸ್ತಕವು ಪ್ರಕಟವಾಗಿರುತ್ತದೆಂದು ಕಾಶಿಯ ವರ್ತಮಾನ.

— ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯವರ ಸೂಚನೆಯಂತೆ ಕಮಿಟಿಯ ಸೆಕ್ರೆಟರಿಯವರು, ಪ್ರಾಂತ್ಯದಲ್ಲಿರುವ ರಾಜಕೀಯ ಕೈದಿಗಳ ಹೆಸರುಗಳುಳ್ಳ ಒಂದು ಪಟ್ಟಿಯನ್ನು ತಯಾರಿಸುತ್ತಿರುವರು.

ದಕ್ಷಿಣ ಕನ್ನಡ

ಮಂಗಳೂರು — ಇಲ್ಲಿಯ ತಾಲೂಕು ಬೋರ್ಡಿನ ಸದಸ್ಯರ ಬರುವ ಸಾಧಾರಣ ಸಭೆಯು ಮಂಗಳೂರಿನಲ್ಲಿರುವ ತಾಲೂಕು ಬೋರ್ಡ್ ಆಫೀಸಿನಲ್ಲಿ ಇದೇ ಬರುವ ೧೪ನೇ ತಾರೀಕಿನ ದಿನ ಮಂಗಳವಾರ ಮಧ್ಯಾಹ್ನ ಘಂಟೆ ೩ಕ್ಕೆ ಜರಗುವದು.

ತಾರೀಕು ೪—೮—೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೨ ಮರಣಗಳಾದವು ಈ ಪೈಕಿ ಟೈಫೈಡ್ ಜ್ವರದಿಂದ ೩, ಅತಿಸಾರದಿಂದ ೨, ಶ್ವಾಸಕೋಶದ ರೋಗದಿಂದ ೪, ಇತರ ಎಲ್ಲಾ ಕಾರಣಗಳಿಂದ ೧೩. ಶಿಶು ಮರಣ ೪, ಜನನ ಸಂಖ್ಯೆಯು ೪೧.

ಈ ದಿನ ಘಂಟೆ ೪ಕ್ಕೆ ಇಲ್ಲಿಯ ಕೊ-ಒಪರೇಟಿವ್ ಟೌನ್ ಬೇಂಕಿನ ಮುಂದಿರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಸ್ಸು ಮಾಲೀಕರ ಸಂಘದವರು ದಕ್ಷಿಣ ಕನ್ನಡ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರಾದ ರಾಜಶ್ರೀ ವಿ. ರಾಜಗೋಪಾಲ ಥಂಬಿಯರ ಗೌರವಾರ್ಥವಾಗಿ ಒಂದು ಟೀಪಾರ್ಟಿಯನ್ನು ನಡಿಸಿದರು.

ಮಂಗಳೂರಲ್ಲಿ ಇತ್ತಲಾಗೆ ಸ್ಥಾಪಿಸಲ್ಪಟ್ಟ ಮಣ್ಣಿರ ಶ್ರೀರಾಮ ಸೇವಾಸಮಿತಿಯ ವಾರ್ಷಿಕೋತ್ಸವದ ಮಹಾಸಭೆಯು ಮೊನ್ನೆ ೧೯೨೮ನೇ ಇಸವಿ ಜುಲಾಯಿ ತಿಂಗಳ ತಾ ೨೮ನೇ ಶನಿವಾರ ದಿವಸ ಇಲ್ಲಿಯ ಹಳೆ ಗಣಪತಿ ಶಾಲೆಯ ಕಟ್ಟೋಣದಲ್ಲಿ ಮ. ರಾ. ರಾ ಕೊಲನಾಡು ಟಿ. ರಾಮಪ್ಪ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಪ್ರಥಮದಲ್ಲಿ ದೇವಪ್ರಾರ್ಥನೆ ಆದ ಬಳಿಕ ವಾರ್ಷಿಕೋತ್ಸವದ ಕಾರ್ಯಕ್ರಮದಂತೆ ಕಾರ್ಯಕ್ರಮವು ಸಾಂಗವಾಗಿ ನಡೆಯಿತು. ಮೇಲೆ ಕಾಣಿಸಿದ ವಾರ್ಷಿಕೋತ್ಸವನ್ನು ನೆರವೇರಿಸಲು ಉದಾರ ಮನಸ್ಸಿನಿಂದ ಸಮಿತಿಗೆ ಸ್ಥಳವನ್ನು ದಯಪಾಲಿಸಿದ ಮಂಗಳೂರು ಮ. ರಾ ರಾ. ಮುನಿಸಿಪಲ್ ಕೌನ್ಸಿಲ್ ಚೆಯರ್ಮೆನರವರಿಗೂ ಅದಕ್ಕೆ ಸಹಾಯಮಾಡಿದ ಮ| ರಾ| ರಾ| ಕಾರ್ನಾಡು ಸದಾಶಿವರಾಯರಿಗೂ ಮತ್ತು ಆ ಶಾಲೆಯ ಉಪಾಧ್ಯಾಯರಾದ ಮ| ರಾ| ರಾ| ಅನಂತಯ್ಯನವರಿಗೂ ಧನ್ಯವಾದಗಳನ್ನು ಸಮಿತಿಯಿಂದ ಅರ್ಪಿಸಲಾಗಿರುವುದು. ಸಮಿತಿಯ ವಾರ್ಷಿಕೋತ್ಸವವನ್ನು ಪ್ರೋತ್ಸಾಹದಿಂದ ಜರಗಿಸುವರೆ ಸ್ವಜಾತಿಯ ಗೃಹಸ್ಥರು ಧನಸಹಾಯಮಾಡಿ ಸಹಕರಿಸಿರುವರು.

ಅಂದಿನ ದಿನದ ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಮ| ರಾ| ಟಿ ರಾಮಪ್ಪ ಶ್ಯಾನುಭಾಗರು ಸದ್ರಿ ಸಮಿತಿಗೆ ರೂಪಾಯಿ ೨೫—೦—೦ನ್ನು ಇದೇ ಆಗೋಸ್ತು ತಿಂಗಳಿಂದ ತಿಂಗಳು ಒಂದಕ್ಕೆ ರೂ. ೧೮ಂತೆ ಕೊಡುತ್ತೇನೆಂದು ವಾಗ್ದತ್ತ ಮಾಡಿರುತ್ತಾರೆ. ಸಮಿತಿಯ ವಾರ್ಷಿಕೋತ್ಸವವನ್ನು ಇನ್ನು ಮುಂದಕ್ಕೆ ರಾಮನವಮಿಗೆ ಜರಗಿಸುವಂತೆ ಸಭೆಯವರು ನೇಮಿಸಿದರು. ನಂತರ ಸಭಾ ಅಧ್ಯಕ್ಷರಿಗೆ ಸಮಿತಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿ, ಸಭೆಯವರೆಲ್ಲರಿಗೆ ಕಿಂಚಿತ್ತಾದ ಉಪಹಾರವನ್ನು ಮಾಡಿಸಿ ಸಭೆಯು ಮುಕ್ತಾಯವಾಯಿತು.

ಇಂಡಿಯನ್ ಸಿವಿಲ್ ಸರ್ವಿಸಿಗೆ ದಾಖಲು ಮಾಡುವರೆ ಒಂದು ಪರೀಕ್ಷೆಯು ದಿಲ್ಲಿಯಲ್ಲಿ ೧೯೨೯ನೇ ಇಸವಿಯ ಜನವರಿ ಮೂರನೇ ತಾರೀಕಿಗೆ ಪ್ರಾರಂಭವಾಗುವದು. ಈ ಪರೀಕ್ಷೆಯ ಕುರಿತು ಮಾಡಿದ ರೆಗ್ಯುಲೇಶನುಗಳನ್ನು ಜುಲಾಯಿ ೩೧ರ ಫೋರ್ಟ್ ಸೈಂಟ್ ಜೋರ್ಜ್ ಗಜೇಟಿನ ಮೊದಲನೇ ಭಾಗದ ೧೧೫೭-೧೧೬೪ನೇ ಪುಟಗಳಲ್ಲಿ ಪ್ರಕಟಿಸಲಾಗಿಯದೆ. ಪಾಠಪಟ್ಟಿಗಳ ಪ್ರತಿ, ರೆಗ್ಯುಲೇಶನಿನ ಪ್ರತಿ ದಾಖಲು ಫಾರ್ಮುಇವುಗಳಿಗಾಗಿ ಮಿಂಟ್‌ಬಿಲ್ಡಿಂಗ್ಸ್‌ನಲ್ಲಿರುವ ಗವರ್ನಮೆಂಟ್ ಪ್ರೆಸ್ಸಿನ ಸುಪರಿಂಟೆಂಡೆಂಟರಿಗೆ ಬರೆದಲ್ಲಿ ಕಳುಹಿಸೋಣಾಗುವವು, ಎಂದು ಮದರಾಸು ಸರಕಾರದವರು ತಿಳಿಸುತ್ತಾರೆ.

ಮಂಗಳೂರಿಗೆ ಬಂದಿರುವ ಮೇಲುಕೋಟೆಯ ಶ್ರೀ ಕೆ. ಯದುಗಿರಿಯಮ್ಮ ಎಂಬವರು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಇದೇ ತಾರೀಕು ೧೧ನೇ ಶನಿವಾರ ಘಂಟೆ ೫ಕ್ಕೆ ಗಿರಿಜಾ ಕಲ್ಯಾಣ ಎಂಬ ಹರಿಕಥೆಯನ್ನೂ ತಾರೀಕು ೧೨ನೇ ಆದಿತ್ಯವಾರ ಘಂಟೆ ೬ಕ್ಕೆ ಸರಿಯಾಗಿ ಸೀತಾ ಕಲ್ಯಾಣ ಎಂಬ ಹರಿಕಥೆಯನ್ನೂ, ಇಂಪಾದ ಸಂಗೀತದಿಂದಲೂ ವಿನೋದಕರವಾದ ಉಪಕಥೆಗಳಿಂದಲೂ ಮಾಡುವರು. ಇವೆರಡು ಮಂಗಳೂರಿನಲ್ಲಿ ಇವರ ಕೊನೆಯ ಹರಿಕಥೆಗಳು.

ಕೇಂದಿ ಗುತ್ತಿಗಳು ಈ ದಿನ ಏಲಂ ಮಾಡೋಣಾಗುವುವು

ಹೇರೂರು — ಉಡುಪಿ ತಾಲೂಕು ಬೋರ್ಡಿನವರು ಹೊಸದಾಗಿ ತೆರೆದಿರುವ ಶಾಲೆಗಳ ಪೈಕಿ ನಮ್ಮ ಹೇರೂರು ಬೋರ್ಡು ಎಲಿಮೆಂಟರಿ ಶಾಲೆಯು ಒಂದಾಗಿದೆ. ಈ ಶಾಲೆಯಲ್ಲಿ ಈಗ ಸುಮಾರು ೫೫ ಮಂದಿ ಮಕ್ಕಳು ಓದುತ್ತಿರುವರು. ಟ್ರೈನ್ಡ್ ಆದ ಇಬ್ಬರು ಉಪಾಧ್ಯಾಯರು ಇರುವರು, ಅಲ್ಲದೆ ಉಪಾಧ್ಯಾಯರು ಬಹಳ ಶ್ರಮಪಟ್ಟು ಮಕ್ಕಳಿಗೆ ಪಾಠಗಳನ್ನು ಕಲಿಸುವುದರಿಂದ ಶಾಲೆಯ ಸ್ಥಿತಿಯು ಚೆನ್ನಾಗಿದೆ. ಬರುವ ವರುಷ ಬೋರ್ಡಿನವರು ೫ನೇ ಕ್ಲಾಸನ್ನು ತೆರೆದರೆ ಬಡಮಕ್ಕಳು ದೂರದ ಶಾಲೆಗಳಿಗೆ ಹೋಗುವ ಪ್ರಯಾಸವು ನಿಲ್ಲುತ್ತಿತ್ತು. ಆದರೆ ಶಾಲೆಗೆ ಒಂದು ಯೋಗ್ಯ ಕಟ್ಟೋಣವು ಇಲ್ಲದಿರುವುದು ಬಹು ಶೋಚನೀಯ.

ಕಲ್ಯಾಣಪುರ — ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಒಂದು ಆಡಳಿತ ಕಮಿಟಿ ಈ ಮೊದಲೆ ಸ್ಥಾಪಿಸಲ್ಪಟ್ಟಿತ್ತು. ಅದರಂತೆ ತಿಂಗಳಿಗೊಮ್ಮೆ ಮೀಟಿಂಗು ಜರಗುವದು. ಹಾಗೂ ಮೊನ್ನೆ ತಾನೆ ಕೂಡಿ ಬಂದ ಸಭೆಯಲ್ಲಿ ಡ್ಯಾರೆಕ್ಟರರ ಪೈಕಿ ರಾ| ಕೆ. ರಾಮಕೃಷ್ಣ ಕಿಣಿಯವರು ತಂದ ಈ ಕೆಳಗಿನ ಮೂರು ಠರಾವುಗಳು ಸರ್ವಸಮ್ಮತದಿಂದ ಪಾಸಾದವು. (೧ ಪ್ರತಿ ಏಕಾದಶಿ ದಿವಸ ರಾತ್ರಿ ೧೨ ಘಂಟೆಯ ತನಕ ಶ್ರೀರಾಮ ಭಜನೆಯನ್ನು ನಡಿಸುವದು (೨ ದೇವಸ್ಥಾನದ ಸಮೀಪ ಒಂದು ದೀಪಸ್ತಂಭವನ್ನಿಟ್ಟು ದೀಪ ಉರಿಸುವುದು. (೩ ದೇವಸ್ಥಾನಕ್ಕೆ ಸಂಬಂಧಪಟ್ಟ ಸ್ಥಳದಲ್ಲಿರುವ ಸ್ಮಶಾನದಲ್ಲಿ ಕಟ್ಟಿಗೆಯನ್ನು ಇಡುವ ಬಗ್ಗೆ ಒಂದು ಕಟ್ಟೋಣವನ್ನು ಕಟ್ಟಿಸುವುದು. ಮೇಲಿನ ಠರಾವಿನಂತೆ ಪ್ರಾರಂಭದ ಭಜನೆಯು ಕಳೆದ ಅಧಿಕ ಶ್ರಾವಣ ಶುದ್ಧ ೧೧ಯ ದಿವಸ ಪ್ರಾರಂಭವಾಗಿ ಬಹಳ ವಿಜೃಂಭಣೆಯಿಂದ ನಡೆಯಿತು. ಸರ್ವಭಜಕರು ಆಬಾಲ ವೃದ್ಧರು ಕೂಡಿ ಅನೇಕರು ನೆರೆದಿದ್ದರು. ದೀಪಸ್ತಂಭವನ್ನು "ತೋನ್ಸೆ ಶೇಷಗಿರಿ ಪೈಗಳ ಸ್ಮಾರಕ"ವೆಂಬ ಹೆಸರಿನಿಂದ ಅವರ ಮಗ ರಾ| ಕೇಶವ ಪೈಗಳವರು ದೇವಸ್ಥಾನಕ್ಕೆ ಸದ್ಯದಲ್ಲೇ ಒಪ್ಪಿಸುತ್ತೇನಾಗಿ ವಾಗ್ದಾನ ಮಾಡಿರುವರು. ಸ್ಮಶಾನದ ಕಟ್ಟೋಣದ ಕೆಲಸವು ಸದ್ಯದಲ್ಲೇ ಪ್ರಾರಂಭವಾಗುವುದು. ಮೇಲಿನ ಠರಾವುಗಳನ್ನು ತರುವರೆ ಕಾರಣಭೂತರಾದ ಮ| ರಾ| ಸಾಹುಕಾರ ನಾಗಪ್ಪ ಮಧ್ವರಾಯ ಬಾಳಿಗರಿಗೆ ನಮ್ಮೆಲ್ಲರ ಧನ್ಯವಾದಗಳಿರಲಿ.

ಅಜೆಕಾರು — ಇಲ್ಲಿಯ ಶ್ರೀಮಂತರಾದ ರಾ| ಕಾಂತು ಅತಿಕಾರಿಗಳೆಂಬವರು ಒಂದು ಶಾಲಾ ಕಟ್ಟೋಣವನ್ನು ಕಟ್ಟಿಸಿ ಕಾರ್ಕಳ ತಾಲೂಕು ಬೋರ್ಡಿಗೆ ಈ ಮೊದಲೇ ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವ ವಾರ್ತೆಯು ಸುಪ್ರಕಟವೇ ಸರಿ. ಆದರೆ ನಾದುರುಸ್ತಿಯಲ್ಲಿದ್ದ ಈ ಕಟ್ಟೋಣವನ್ನು ತಾಲೂಕು ಬೋರ್ಡಿನವರು ಈ ವರೇಗೆ ಸರಿಪಡಿಸದಿರುವುದರಿಂದ ಹಂಚು ಛಾವಣಿಯ ಅದರ ಮಾಡು ಭೂಮಾತೆಗೆ ಸಾಷ್ಟಾಂಗ ನಮಸ್ಕಾರ ಈಗಲೇ ಮಾಡುವುದೋ ಎಂಬ ಸಂಶಯಾಸ್ಪದವಾಗಿ ನಿಂತಿರುವುದು ಶೋಚನೀಯವಲ್ಲವೆ? ಇನ್ನಾದರೂ ಇದನ್ನು ಶೀಘ್ರದಲ್ಲಿಯೇ ಜೀರ್ಣೋದ್ಧಾರ ಮಾಡಿ ಇದರಲ್ಲಿ ಅತ್ಯಗತ್ಯವಾದ ಒಂದು ಹಾಯರ್ ಎಲಿಮೆಂಟರಿ ಶಾಲೆಯಾಗಲೀ, ಯಾ ವಿಶ್ರಾಂತಿ ಭವನವಾಗಲಿ, (Recreation Club) ಅಥವಾ ಛತ್ರವನ್ನಾಗಲೀ ತೆರೆಯುವಂತೆ ಪ್ರೆಸಿಡೆಂಟ್ ಶ್ರೀ ಎಸ್. ಎನ್. ಸೆಟ್ಟಿರವರೂ ಈ ಸರ್ಕಲಿನ ಪರವಾಗಿ ಆರಿಸಲ್ಪಟ್ಟ ಬೋರ್ಡು ಮೆಂಬರರೂ ಸಹಾಯವಾಗುವರಾಗಿ ತುಂಬಾ ಭರವಸೆ ಇದೆ. ಆಗ ಮಾತ್ರವೇ ಉಚಿತವಾಗಿತ್ತ ಮಹನೀಯರಿಗೂ ಜನೋಪಕಾರ ಮಾಡಿ ಊರ ಏಳಿಗೆಯನ್ನು ಹಾರೈಸುವ ತಾಲೂಕು ಬೋರ್ಡಿಗೂ ನಮ್ಮ ಸದಾ ಕಾಲದ ಅಭಿನಂದನೆಗಳು!

ಸರಕಾರಿ ಹಣದ ದುರುಪಯೋಗ ಮಾಡಿದ ಆರೋಪದ ಮೇಲೆ ಹೆಬ್ರಿ ಬ್ರೇಂಚ್ ಪೋಸ್ಟು ಮಾಸ್ತರರನ್ನು ಕೆಲಸದಿಂದ ನಿವೃತ್ತಿಪಡಿಸಿರುವರೆಂದುವದಂತಿ ಇದೆ. ಇನ್ನು ಅವರ ಮೇಲೆ ಕ್ರಿಮಿನಲ್ ಪ್ರೋಸಿಕ್ಯೂಶನ್ ಆಗುವುದೋ ಏನೋ! ನೋಡಬೇಕು! ಆದರೆ ಇದೀಗ ತಕ್ಕ ಪ್ರತಿಫಲವಲ್ಲವೇ!

ಇಲ್ಲಿಂದ ೩ ಮೈಲು ದೂರವಾದ ಮುನಿಯಾಲಿನಲ್ಲಿ ಪರಿಕ್ಷಾರ್ಥಕವಾಗಿ ಒಂದು ಅಂಚೆಕಟ್ಟೆಯನ್ನು ಸದ್ಯದಲ್ಲಿ ತೆರೆಯುವರಾಗಿ ವದಂತಿ ಇದೆ. ಆದರೆ ಮುನಿಯಾಲಿನವರ ಪುಣ್ಯ ನೋಡಬೇಕು!

ಮಂಜೇಶ್ವರ — ಮಂಜೇಶ್ವರ ನಿವಾಸಿಕರ ದುಃಖ್ಖವ ಎಂಬ ಕಳೆದ ಸಂಚಿಕೆಯ ಪತ್ರವ್ಯವಹಾರದಲ್ಲಿ 'ಊರವರ ನೆಲೆ ಸಿಕ್ಕುವುದು' ಎಂಬದರ ಬದಲಿಗೆ "ಊರ ಕೆಲವರ ನೆಲೆಸಿಕ್ಕುವುದು" ಎಂತ ಓದುವುದು.

(ನಿಷ್ಪಕ್ಷಪಾತಿ).

ಕುಚ್ಚಿಪಳ್ಳ — ಇಲ್ಲಿಯ ಮುಷ್ಕರವು ಕೊನೆಗೊಂಡಿತು. ಎಲ್ಲವರೂ ಕೆಲಸಕ್ಕೆ ಹಾಜರಾಗಿರುವರಲ್ಲದೆ ಟಪ್ಪಾಲು ಈಗ ಕ್ರಮವಾಗಿ ಎಂದಿನಂತೆ ಬರುತ್ತದೆ.

ಉಪ್ಪಳ ಕಡವಿನವರು ಪ್ರಯಾಣಿಕರಿಗೆ ಹಲವು ವಿಧದಲ್ಲಿ ತೊಂದರೆಗೊಳಿಸಿ ೧ಕ್ಕೆ ೪ರಿಂದ ಆರ ವರೇಗಣ ಸುಂಕ ವಸೂಲು ಮಾಡುತ್ತಲಿದ್ದಾರೆ. ಮಾನ್ಯ ಡಿಸ್ಟ್ರಿಕ್ಟ ಬೋರ್ಡ್ ಪ್ರೆಸಿಡೆಂಟರವರು ಕ್ಷಿಪ್ರದಲ್ಲಿ ಇದರ ನಿವೃತ್ತಿಪಡಿಸುವದು ಅಗತ್ಯವಾಗಿದೆ.

ತೆಂಗಿನ ಮರಗಳಿಗೆ ಹಿಡಿಯುವ ಹುಳವು ಮಂಜೇಶ್ವರಕ್ಕೆ ಬಂತಂತೆ. ಅದು ಕರಾವಳಿಯ ಮಾರ್ಗವನ್ನೇ ಹಿಡಿದುದರಿಂದ ಇಲ್ಲಿಯವರು ಬಹಳ ಜಾಗ್ರತೆಯಲ್ಲಿದ್ದಾರೆ.

ಕುಂಬಳೆ — ಇಲ್ಲಿ ಸಹಾ ರೈಲ್ವೆ ಮುಷ್ಕರವು ನಿಂತಿತು. ಕೂಲಿಗಳು ಕೆಲಸಕ್ಕೆ ಹಾಜರಾಗಿರುವರು.

ಶಿರಿಯ ಹೊಳೆಗೆ ನೀರು ನೋಡಿ ಪ್ರಯಾಣಿಕರಿಂದ ಹಣ ವಸೂಲು ಮಾಡುತ್ತಲಿರುವರು. ಎಂತೂ ಮಾಮೂಲು ಅರ್ಧಾಣೆಗೆ ಕಡಿಮೆ ಇಲ್ಲವಿಲ್ಲಾ. ಮಳೆ ಬಂದರೆ ೧ ಅಣೆ, ಇದಕ್ಕೆ ಕೇಳುವವರೇ ಇಲ್ಲ.

ಹೊಸದುರ್ಗ — ಇಲ್ಲಿಯ ಮೆಜಿಸ್ಟ್ರೇಟರು ಮ| ರಾ| ಕೆ. ಕೃಷ್ಣಯ್ಯನವರಿಗೆ II ಕ್ಲಾಸ ಅಧಿಕಾರ ಬಂದಿರುತ್ತದೆ. ಈ ಕೋರ್ಟ ಸರಹದ್ದಿಗೆ ಒಳಪಟ್ಟ II ಕ್ಲಾಸ ಮೊಕದಮೆಗಳು ಕಾಸರಗೋಡಿನಿಂದ ಇಲ್ಲಿಗೆ ಪುನಹಾ ತನ್ನಿಗೆ ಬರುವದು.

ಇಲ್ಲಿ ಟೌನಿನಲ್ಲಿ ಮೋಟರ ಗಾಡಿಗಳು ಬಹಳ ಅಜಾಗ್ರತೆಯಿಂದ ಚಲಾವಣೆಯಾಗುತ್ತವೆ. ಒಂದಲ್ಲ ಎರಡಲ್ಲಾ ಮೂರು ನಾಯಿಗಳು ಮೋಟರ ಅಡಿಯಲ್ಲಿ ನಡುಹಗಲಲ್ಲಿ ಬಿದ್ದು ಮರಣಗಳಿಗೆ ತುತ್ತಾದವು. ಅಧಿಕಾರಸ್ಥರ ತಿಳುವಳಿಕೆಗೆ ಈ ಸಂಗತಿ ಬಾರದೆ ಇರುವರೆ ಕಾರಣವಿಲ್ಲ. ಬೀದಿಗಳಲ್ಲಿ ಶಾಲೆಗಳಿಗೆ ಹೋಗುವ ಹಸುಳೆಹುಡುಗರ ಸಂಖ್ಯೆಯು ಬಹಳವಿವೆ. ತಕ್ಕ ಬಂದೋಬಸ್ತಿಗೆ ಮೇಲಾಧಿಕಾರಿಗಳು ಗಮನಕೊಡಬೇಕಾದದ್ದು ಅತ್ಯಗತ್ಯ.

ರಸ್ತೆ ಮಾರ್ಜನಗಳು ಇತ್ತಲಾಗೆ ಲೋಕಲ ಬೋರ್ಡ ಆಡಳಿತಗೆ ಒಳಪಟ್ಟಿವೆ. ರೋಡ ಪುರಂಬೋಕುಗಳಲ್ಲಿರುವ ವೃಕ್ಷಗಳ ವ ಅಗ್ರಗಳ ವಿಚಾರ ಯಾವದೂ ಗಮನಕ್ಕೆ ತಾರದೆ ಡಿಸ್ಟ್ರಿಕ್ಟ ಬೋರ್ಡ ಲೋಕಲ್ ಬೋರ್ಡ ಅಕ್ಷನ್ನು ಯೇಕ್‌ದಮ್ ಜ್ಯಾರಿಗೆ ತರುವಲ್ಲಿಯೇ ಇರುತ್ತಾರೆ. ಸಂಗತಿಗಳಿಗನುಸಾರ ನಡಿಯುವರೆ ಸ್ವಲ್ಪವಾದರೂ ರಿಯ್ಯಾತಿ ಕೊಡದೆ ಇದ್ದರೆ ಬಡವರ ಗೋಳು ಕೇಳುವವರ್ಯಾರು? ಇಲ್ಲಿಯ ಪ್ರತಿನಿಧಿಗಳಾಗಿ ನೇಮಕಪಟ್ಟ ಮೆಂಬರ ಮಹಾನುಭಾವರು ಈ ಊರಿನಲ್ಲಿ ಈ ವರೆಗೂ ಯಾವ ಸುಧಾರಣೆಗೂ ಮನಕೊಟ್ಟದ್ದು ಕಂಡುಬರುವದಿಲ್ಲ. ಗರೀಬರಿಗೆ ನಷ್ಟ ಪಡಿಸಿ ಕೆಲವು ಆಕ್ರಮಣಗಳನ್ನು ತೆಗೆದುಹಾಕುವ ಶಿಫಾರಸ ಮಾಡಿದ ಸಂಗತಿ ಏವಂಚ ತೃಪ್ತಿಕರವೆಂತಲೆ ಹೇಳಬೇಕಲ್ಲದೆ ಮತ್ತೇನು?

ಇಲ್ಲಿಯ ಪಂಚ್ಯಾತ ಕೋರ್ಟಿನಲ್ಲಿ ಸಿವಿಲ್ ವ್ಯಾಜ್ಯಗಳು ಹೆಚ್ಚುತ್ತಾ ಇವೆ. ನೋಟೀಸು ಜ್ಯಾರಿ ಬಗ್ಗೆ ಒಂದು ಪ್ರತೇಕ ಪ್ರೊಸೆಸ್ ಸರ್ವರನನ್ನು ನೇಮಕ ಮಾಡುವರೆ ಅಧಿಕಾರಿಗಳು ಆಲೋಚಿಸಿದಾದರೆ ಉತ್ತಮವಾಗುತಿತ್ತು. ಶಿಬಂದಿಯು ಹ್ಯಾಗೂ ಹೆಚ್ಚಿ ಸೋಣಾಗಿಯದೆ.

ಮಣ್ಣಗುಡ್ಡೆ ಮಂಗಳೂರು,
ತಾ. ೧-೮-೧೯೨೮.

ಮಹರಾಜೇಶ್ರೀ ಮಂಗಳೂರು ಮುನಿಸಿಪಾಲಿಟಿಯ ಚೆಯರ್ಮೇನರ ಸನ್ನಿಧಾನಕ್ಕೆ — ಮಂಗಳೂರು ಶಹರು ಮಣ್ಣಗುಡ್ಡೆಯಲ್ಲಿರುವ ಅರೆಬೈಲು ಭೋಜರಾಯನು ಜಾಹೀರು ಮಾಡಿಕೊಳ್ಳುವದೇನಂದರೆ—

ಸ್ವಾಮಿ,

ಈಗತಾನೆ ಕಂಬಳದಿಂದ ಕುದ್ರೋಳಿಗೆ ಜೋಡಿಸುವ ಹೊಸ ಮಾರ್ಗಕ್ಕೋಸ್ಕರ ಎಕ್ವಾಯರ್ ಮಾಡಿದ ಸ್ಥಳದಲ್ಲಿ ಒಂದು ಭಾವಿಯು ಇದೆ. ಇದರ ಆವರಣ ಎಲ್ಲಾ ಕಿತ್ತು ಹಾಕಿ ಆಳವಾದ ಬಾವಿಯು ಮಾತ್ರ ಇದೆ. ಮಾರ್ಗವು ಗಾಡಿಹೋಗುವ ಬಗ್ಗೆ ತಯಾರಾಗದಿದ್ದರೂ ಜನರು ಹೋಗುವವಕ್ಕೆ ಸೌಕರ್ಯವಾಗಿದ್ದು ಅನೇಕರು ಆ ಕಡೆಯಿಂದ ಹೋಗುತ್ತಾರೆ. ಅನೇಕ ಸಣ್ಣ ಶಾಲಾ ಮಕ್ಕಳು ಕೂಡಾ ಹೋಗುತ್ತಾರೆ. ಈ ಬಾವಿಯು ಮಾರ್ಗದಲ್ಲಿಯ ಒಂದು ಬದಿಯಲ್ಲಿದ್ದು ಬಹಳ ಅಪಾಯಕರವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಸರಹದ್ದಿನವರು ಅಲ್ಲಿ ಕೆಲಸಮಾಡುವವಗೆ ತಿಳಿಸಿದರೂ ಅವರು ಗಮನಕೊಡಲಿಲ್ಲ ಎಂದು ತಿಳಿಯುತ್ತೇನೆ. ಆದ್ದರಿಂದ ಸದರಿ ಅಪಾಯವು ಸಂಭವಿಸದಂತೆ, ತಕ್ಕ ಆವರಣ ವಗೈರೆ ಪ್ರಥಮ ಹಾಕಿ ಅದನ್ನು ಕೂಡಲೇ ಸಿರಿಸುವ ಕೆಲಸವನ್ನು ಮಾಡಿಸುವುದು ಅತೀ ಅಗತ್ಯವೆಂತ ಭಾವಿಸುತ್ತೇನೆ. ಆದುದರಿಂದ ಸದರಿ ಸಂಗತಿಯನ್ನು ತಮ್ಮ ತಿಳಿವಳಿಕೆಗೆ ತಂದಿರುತ್ತೇನೆ. ತಾವು ಈ ವಿಷಯ ಯಾವ ಏರ್ಪಾಡು ಮಾಡಿದಿರಿ ಎಂದು ತಿಳಿಯುವರೆ ಬಹಳ ಆತುರವುಳ್ಳವನಾಗಿರುತ್ತೇನೆ.

ಅ. ಭೋಜರಾಯ.

Batliwalla's Preparations Cover All Your Needs.
A NAME THAT MERIT HAS MADE FAMOUS.
೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ಬಾಟ್ಲಿವಾಲರ ... — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ... — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೨.
ಬಾಟ್ಲಿವಾಲರ ... — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ... — ಇಂಫ್ಲುಯೆಂಝಾ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೨
ಬಾಟ್ಲಿವಾಲರ ... — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ... — ... ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ... ಔಷಧ. ರೂ. ೦—೬—೦
ಬಾಟ್ಲಿವಾಲರ ... ರೂ. ೦—೬—೦. LIBERAL DISCOUNT TO TRADE
ಕಾರಖಾನೆ:-CAWASHAPUR, BOMBAY.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕರ್ನಿಕ್ ಏಗ್ಯೂ ಮಿಕ್ಸ್ಚರ್.
[illegible]

ಕೇಸರಿಯವರ ಲೋಧ್ರ
ಗರ್ಭಾಶಯ ರೋಗನಿವಾರಿಣಿ.
[illegible]
ಕೇಸರೀ ಕುಟೀರಂ,
ಆಯುರ್ವೇದ ಔಷಧಶಾಲಾ, P. B. 752. ಎಗ್ಮೋರು, ಮದರಾಸು.
ಬ್ರಾಂಚ್:- 18 ಬಳೇಪೇಟೆ, ಬೆಂಗಳೂರು.
ವಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



ಮಿತವಾದ ಬೆಲೆಗೆ ...
[illegible]
ಎ. ಆರ್. ಖಲೀಲ್,
18-11-27 ನಗರತ್‌ಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'
ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ...
[illegible]
ಶಿವರಾಮ ಭಟ್ಟ ತೆಂಗಿನಮನೆ,

ಟೇಬಲ್ ಟೈಂಪೀಸ್ ಇನಾಮ್.

[illegible]
ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.
ಪೀಟರ್ ವಾಚ್ ಕಂಪೆನಿ,
ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್
(15 ಬಹುಮಾನಗಳ ಸಹಿತ ರೂ. 4—8—0)

[illegible]
THE ENGLISH EMPORIUM,
P. O. box ... MADRAS.

ಬಾರ್ಡೋಲಿ ಸತ್ಯಾಗ್ರಹದ ಸಮಾಪ್ತಿ.

ಮುಂಬ್ಯಾ ಸರಕಾರವು ಶರ್ತಗಳನ್ನು ಒಪ್ಪಿತು.

ಜೈಲಿನಲ್ಲಿರುವ ಸತ್ಯಾಗ್ರಹಿಗಳನ್ನು ಬಿಡುಗಡೆಮಾಡಿದರು.

ರಾಜಿಕೊಟ್ಟ ಪಟೇಲರನ್ನೂ ಉಗ್ರಾಣಿಗಳನ್ನೂ ಪುನಃ ಕೆಲಸಕ್ಕೆ ನೇಮಿಸುವರು.

ಬಾರ್ಡೋಲಿಯಲ್ಲಿ ಪೂರ್ಣ ಶಾಂತತೆ.

ಅಂತೂ ಇಂತೂ ಬಾರ್ಡೋಲಿಯ ಸತ್ಯಾಗ್ರಹವು ಸಮಾಪ್ತಿಯಾಗಿ ಸರಕಾರದವರಿಗೂ ರೈತರಿಗೂ ಒಪ್ಪಂದವಾದಹಾಗಾಯಿತು. ಸರಕಾರದ ಒಪ್ಪಂದದ ಶರ್ತಗಳು ಯಾವುವೆಂದರೆ, (೧) ಮೊದಲಿನ ದರದಲ್ಲಿ ತೆರಿಗೆಯನ್ನು ಕೊಡಬೇಕು. (೨) ಏರಿಸಿದ ತೆರಿಗೆಯನ್ನು ರಾ| ರಾಮಚಂದ್ರ ಭಟ್ಟರು ಕೊಡಲೊಪ್ಪಿದಂತೆ ಕೊಡಬೇಕು. (೩) ಬಾರ್ಡೋಲಿ ತಾಲೂಕಿನ ಸತ್ಯಾಗ್ರಹವನ್ನು ನಿಲ್ಲಿಸಬೇಕು ಎಂದು. ಇವುಗಳ ಬದಲಾಗಿ ವಲ್ಲಭ್ಭಾಯವರ ಕೆಳಗಿನ ಶರ್ತಗಳನ್ನು ಸರಕಾರದವರು ಪರಿಗ್ರಹಿಸಿದರು. (೧) ಸತ್ಯಾಗ್ರಹಿ ಕೈದಿಗಳ ಬಿಡುಗಡೆ, (೨) ಕಳಕೊಂಡ ಆಸ್ತಿಗಳನ್ನು ಹಿಂತಿರುಗಿ ಕೊಡುವಿಕೆ. (೩) ಕಷ್ಟಗಳನ್ನು ಕೊಟ್ಟದಕ್ಕೆ ಪರಿಹಾರ ದ್ರವ್ಯವನ್ನು ಕೊಡುವಿಕೆ. (೪) ಪಟೇಲ ಮೊದಲಾದವರಿಗೆ ಪುನಃ ಕೆಲಸ ಕೊಡುವದು. (೫) ರೆವೆನ್ಯು ಆಫೀಸರರ ಸಹಾಯದಿಂದ ಜುಡಿಶಿಯಲ್ ಆಫೀಸರ ಸೋರ್ವೆನು ವಿಚಾರಣೆಯನ್ನು ಮಾಡುವಿಕೆ. ರೈತರು ಕಳಕೊಂಡ ಆಸ್ತಿಯೆಲ್ಲವನ್ನೂ ಸದ್ದಾರಗರ್ಹಾ ಎಂಬವರು ಪಡಕೊಂಡಿದ್ದರು. ಅದನ್ನು ಅದೇ ಕ್ರಯಕ್ಕೆ ಮರಳಿ ಕೊಡಬೇಕೆಂದು ಎಮ್. ಎಲ್. ಸಿ.ಯವರು ಅವರನ್ನು ಒತ್ತಾಯಗೊಳಿಸಿದ ಕಾರಣ, ಅವರು ಹಾಗೆ ಕೊಡಲೊಪ್ಪಿದುದುಮಾತ್ರವಲ್ಲದೆ ಬೇಕಾದ ಕ್ರಯಚೀಟು ಮೊದಲಾದ ರಿಕಾರ್ಡುಗಳಿಗೂ ದಸ್ಕತು ಹಾಕಿರುವರು. ಕಳಕೊಂಡ ಆಸ್ತಿಗಳನ್ನು ಮರಳಿ ಕೊಡುವಂತೆ ಪಡಕೊಂಡವರೊಡನೆ ಕಲ್ಲೆಕ್ಟರರು ಕೇಳಿಕೊಳ್ಳುವರು.

ಮುಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರು ರೆವೆನ್ಯು ಮೆಂಬರರಿಗೆ ಒಂದು ಪತ್ರವನ್ನು ಬರೆದಿದ್ದರು. 'ಜುಲಾಯಿ ೨೩ನೇ ತಾರೀಕಿನ ದಿನ ಗವರ್ನರರು ಸೂಚಿಸಿದ ಶರ್ತಗಳಿಗೆ ನಾವು ಒಪ್ಪುವೆವು' ಎಂದು. ವಿಚಾರಣೆಯು ಈ ಕೆಳಗಿನವುಗಳ ವಿಷಯವಾಗಿ ನಡೆಯಬೇಕು ತೆರಿಗೆಯನ್ನು ಏರಿಸಿದುದು ಯಾವ ನ್ಯಾಯದಲ್ಲಿಯೂ ಇಲ್ಲವೆಂದು ಬಾರ್ಡೋಲಿ ಜನರನ್ನುವದು ನಿಜವೋ ಸುಳ್ಳೋ, ಜನರಿಗೆ ನ್ಯಾಯವು ದೊರಕುವ ಸಲುವಾಗಿ, ನಿಜವಾಗಿಯೂ ತೆರಿಗೆಯನ್ನು ಏರಿಸಬೇಕೋ ಯಾ ಇಳಿಸಬೇಕೋ ಎಂದು. ಮತ್ತು ಈ ವಿಚಾರಣೆಯು, ಸ್ವತಂತ್ರವೂ ಬಹಿರಂಗವೂ ಆದುದಾಗಿರಬೇಕು ಎಂದು.

ಬಾರ್ಡೋಲಿ ಸತ್ಯಾಗ್ರಹವು ನಿಜವಾಗಿಯೂ ಫಲಕಾರಿಯಾಯಿತು. ಮಿ. ಪಟೇಲರು ಬಯಸಿದ ಶರ್ತಗಳು ಪೂರಯಿಸಲ್ಪಟ್ಟವು. ವಿಚಾರಣೆಗೆ ಇನ್ನೂ ಆರು ತಿಂಗಳುಗಳು ತಗಲಬಹುದಾದುದರಿಂದ ಅದುವರೆಗೆ ಪಟೇಲರವರು ಬಾರ್ಡೋಲಿಯಲ್ಲಿಯೇ ಉಳಕೊಳ್ಳುವರು.

ಸುಮಾರು ೧೫ ಜನ ಸತ್ಯಾಗ್ರಹಿಗಳನ್ನು ಕಾರಾಗೃಹದಲ್ಲಿ ಬಂಧಿಸಿದವರನ್ನು ಬಿಡುಗಡೆಮಾಡಲು ಹುಕುಂ ಆಯಿತು. ಮಹಾತ್ಮಾಜಿಯವರೂ ಒಂದೆರಡು ದಿನಗಳೊಳಗೆ ಬಾರ್ಡೋಲಿಯನ್ನು ಬಿಟ್ಟು ಹೊರಡುವರು.

ಡಾಕ್ಟರ್ ಮುನ್ಶಿಯವರು ಹೇಳುವರೇನಂದರೆ—'ಗವರ್ನರರೂ ಪಟೇಲರರೂ ಈ ಕುರಿತಾಗಿ ನ್ಯಾಯಪೂರ್ವಕವಾಗಿ ವರ್ತಿಸಿರುವರು. ಅವಷ್ಟು ಬೇಗನೇ ರಾಜಿಯಾಗುವಂತೆ, ಚುನಿಲಾಲ ಮೇಥಾರವರ ಪ್ರಯತ್ನವು ಶ್ಲಾಘನೀಯವಾಗಿದೆ. ಪಟೇಲರು ಅಂದಿನಿಂದ ಇಂದಿನ ವರೆಗೂ ಏಕರೀತಿಯ ನಿಶ್ಚಯದಿಂದಿದ್ದು, ಅದು ಸಫಲವಾಗುವಂತೆ ಮಾಡಿದುದು ಬಹು ಅಭಿನಂದನೀಯವಿದೆ. ಅವರ ಸ್ಥಾನದಲ್ಲಿ ಇತರರಾರೂ ಇದ್ದುದಾದರೆ ನಿಜವಾಗಿಯೂ, ಈ ರೀತಿಯಲ್ಲಿ, ರಾಜಿಯಾಗುತ್ತಿರಲಿಲ್ಲ.'

ಒಟ್ಟಾರೆ ತನ್ನ ಮನೋನಿಶ್ಚಯವನ್ನು ಬದಲಾಯಿಸದೆ, ಏಕರೀತಿಯ ಪ್ರಯತ್ನವನ್ನು ಮಾಡಿದ, ಶ್ರೀಯುತ ಪಟೇಲರೂ, ಯಾವ ಕಷ್ಟಗಳಿಗೂ ಎದೆಗುಂದದೆ ಸತ್ಯಾಗ್ರಹವನ್ನು ಕೈಕೊಂಡ ಸತ್ಯಾಗ್ರಹಿಗಳೂ ತಕ್ಕ ಪ್ರತಿಫಲವನ್ನು ಹೊಂದಿದುದನ್ನು ಕಂಡರೆ, ನ್ಯಾಯಕ್ಕೆ ಜಯವಿದೆಯೆಂಬುದು ವಿಷದವಾಗುವುದು.

ಸಂ. ೧೯೨೮ನೆ ಇಸವಿ ಜುಲಾಯಿ ತಾರೀಕು ೨೭ರಲ್ಲು ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಕೂಡಿದ ಮಹಾಸಭೆಯ ಪ್ರೊಸಿಡಿಂಗ್ಸ್.

[illegible]

ವಿವಿಧ ಸಮಾಚಾರಗಳು.

ಬರ್ಲಿನಿನಲ್ಲಿ ಶ್ರೀ| ಶ್ರೀನಿವಾಸ ಅಯ್ಯಂಗಾರರು.

ಕಳೆದ ಜುಲಾಯಿ ತಿಂಗಳ ನಡುವಿನಲ್ಲಿ ಶ್ರೀ| ಎಸ್. ಶ್ರೀನಿವಾಸ ಅಯ್ಯಂಗಾರರು ಜರ್ಮನಿಯ ಬರ್ಲಿನ್ ನಗರವನ್ನು ಸಂದರ್ಶಿಸಿದರು. ಮತ್ತು ಸ್ವತಂತ್ರವಾಗಿ ಆಳ್ವಿಕೆಯನ್ನು ನಡೆಯಿಸಲು ಹಿಂದೂಸ್ಥಾನವು ಶಕ್ತವಾಗಿದೆಯೆಂದು ಹುರುಪಿನಿಂದ ಅಲ್ಲಿ ಭಾಷಣವನ್ನು ಕೊಟ್ಟರು. ಸ್ವರಾಜ ಧುರೀಣರನ್ನು ಹೊಗಳಿದುದು ಮಾತ್ರವಲ್ಲದೆ, ಅವರಲ್ಲಿ ಅಭಿಪ್ರಾಯ ಭೇದಗಳಿರುವುವಾದರೂ, ಹಿಂದೂ ಸ್ವಾತಂತ್ರ್ಯದ ವಿಷಯದಲ್ಲಿ ಅವರಲ್ಲಿ ಏಕರೀತಿಯ ಅಭಿಪ್ರಾಯವಿದೆಯೆಂದರು. ಹಿಂದೂಸ್ಥಾನಕ್ಕೆ ಬೇಕಾದುದೆಂದರೆ ಪೂರ್ಣಸ್ವಾತಂತ್ರ್ಯ ಇಂಗ್ಲಿಷರ ಅಧಿಕಾರದಿಂದ ತಪ್ಪಬೇಕೆಂಬುದೇ ಪ್ರತಿಯೊಬ್ಬ ಭಾರತೀಯನ ಬಯಕೆ. ಬ್ರಿಟಿಷ ಸರಕಾರದ ಕಡೆಯಿಂದ ಬರುವ ಸುಧಾರಣಾ ಕಮಿಟಿಯು ಹಿಂದೂಸ್ಥಾನಕ್ಕೆ ಬೇಕಾಗಿಲ್ಲ. ಸ್ಯಾಮನ್ ಕಮಿಶನು ಹಿಂದೂಸ್ಥಾನಕ್ಕೆ ಬಂದಾಗ, ಹಲವು ಧುರೀಣರು ಅವರೊಡನೆ ಸಹಕರಿಸಲೊಪ್ಪದ ಸಂಗತಿಯನ್ನೂ, ಅವರಿಗೆ ತೋರಿಸಿದ ಸ್ವಾಗತವನ್ನೂ, ಅಯ್ಯಂಗಾರರು ಚೆನ್ನಾಗಿ ವಿವರಿಸಿದರು. ಸ್ಯಾಮನ್ ಕಮಿಶನಿನ ಉದ್ದೇಶವೆಂದರೆ ಹಿಂದುಗಳು ಇಷ್ಟರೊಳಗೆ ಸಂಪಾದಿಸಿದ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದೇ. ಹಿಂದೂಸ್ಥಾನವು ಇಂಗ್ಲಿಷ ರಾಜ್ಯವಾಗಲು ಒಪ್ಪುವದಿಲ್ಲ. ಹಿಂದುಗಳು ಇಂಗ್ಲಿಷ ಮತ್ತು ಇತರ ಯುರೋಪಿನ ಭಾಷೆಗಳನ್ನು ಅಭ್ಯಾಸಿಸುವರಾದರೂ, ತಮ್ಮ ಭಾಷೆಗಳ ಮೇಲಿರಬೇಕಾದ ಅಭಿಮಾನವನ್ನು ಕಳೆದುಕೊಳ್ಳುವುದಿಲ್ಲ ಎಂದರು. ಹಿಂದೂಸ್ಥಾನದಲ್ಲಿ ಇಂಗ್ಲಿಷ ಭಾಷೆಯೇ ಸಾಮಾನ್ಯ ಭಾಷೆಯಾಗದಂತೆ ಮಾಡಲು ಈಗಲೇ ಸರ್ವರೂ ಹಿಂದೀಯನ್ನು ಕಲಿತು, ಹಿಂದೀ ಭಾಷಾಪ್ರಚಾರಕ್ಕಾಗಿ ಅವಿಶ್ರಾಂತವಾಗಿ ಶ್ರಮಪಡಬೇಕೆಂದರು.

ಬರ್ಲಿನ್ ನಗರವನ್ನು ಬಿಟ್ಟುಹೋಗಬೇಕಾದರೆ, ಅಲ್ಲಿಯ ಇಂಡಿಯನ್ ಎಸೋಸಿಯೇಶನಿನ ಸದಸ್ಯರನ್ನು ಕಂಡು, ಹಿಂದೂ ಸ್ವಾತಂತ್ರ್ಯದ ಸಲುವಾಗಿ ಅವರು ಅನವರತವೂ ಪ್ರಯತ್ನಿಸಬೇಕೆಂದು ಸೂಚಿಸಿದರು. ಇಂಡಿಯನ್ ಎಸೋಸಿಯೇಶನಿನವರು ಇವರನ್ನು ಸಂಭ್ರಮದಿಂದ ಸ್ವಾಗತೀಕರಿಸಿದರು. ಅವರು ಕೈಕೊಳ್ಳುವ ಕೆಲಸಗಳನ್ನು ನೋಡಿ ಶ್ರೀ| ಅಯ್ಯಂಗಾರರು ವಿಶೇಷ ತೃಪ್ತಿಯನ್ನು ತೋರ್ಪಡಿಸಿದರು.

ಮುಂಬಾಯಿ ಕೌನ್ಸಿಲಿನಲ್ಲಿ.

ಕಳೆದ ಶುಕ್ರವಾರ ದಿನ ಮುಂಬಾಯಿ ಕೌನ್ಸಿಲಿನಲ್ಲಿ ಸ್ಯಾಮನ್ ಕಮಿಟಿಯೊಡನೆ ಸಹಕರಿಸಲು ಒಂದು ಕಮಿಟಿಯನ್ನು ಆರಿಸಬೇಕೆಂದು ಕಾರ್ಯಕಲಾಪಗಳು ನಡೆಯುವಾಗ ಸ್ವರಾಜ್ಯಪಕ್ಷದವರು 'ವೋಕ್ ಔಟ್' ಮಾಡಿದರು. ಈ ಠರಾವನ್ನು ಎದುರು ತಂದವರು ಸರ್. ಚುನಿಲಾಲ್ ಮೇಥಾರವರು. ಸ್ಯಾಮನ್ ಕಮಿಶನಿನೊಂದಿಗೆ ಸಹಕರಿಸಲು ಈ ಕೆಳಗಿನವರ ಒಂದು ಕಮಿಟಿಯು ಆರಿಸಲ್ಪಟ್ಟಿತು. ಖಾನ್ ಬಹದೂರ್ ಬುಟ್ಟೊ, ಮಿ. ಅಬ್ದುಲ್ ಲತೀಫ್, ಮಿ. ಮಿರಾನ್ ಷಾಹಾ, ಮಿ. ಜಾಧವ, ಮಾಜಿ ಮಂತ್ರಿಗಳವರು, ಡಾಕ್ಟರ್ ಅಂಬೇಡಕರ, ಸರ್ದಾರ್ ಮುಜುಮ್‌ದಾರ್ ಮತ್ತು ಮಿಲ್ಲರ್ ಇವರು. ಇನ್ನು ಹಲವು ತರದ ಚರ್ಚೆಗಳಾಗಿ ಅಧಿವೇಶನವು ಕೊನೆಗಂಡಿತು.

ಬೆಂಗಳೂರು ವಿದ್ಯಾರ್ಥಿಗಳ ಮುಷ್ಕರ.

ಮುಷ್ಕರವು ಪ್ರಾರಂಭದಲ್ಲಿ ಪ್ರಬಲವಾಗಿತ್ತಾದರೂ ದಿನೇದಿನೇ ಕಡಿಮೆಯಾಗುತ್ತಾ ಬಂದಿತು. ಈ ಕುರಿತಾಗಿ 'ವಿಶ್ವಕರ್ನಾಟಕ' ಮೊದಲಾದ ಒಂದೆರಡು ಪತ್ರಿಕೆಗಳು ಪ್ರಕಟವಾಗಬಾರದಾಗಿ ಸರಕಾರದವರು ಆಜ್ಞೆಯನ್ನಿತ್ತರು. ಬೆಂಗಳೂರು ವಿದ್ಯಾರ್ಥಿಗಳೊಡನೆ ಸಹಾನುಭೂತಿಯನ್ನು ತೋರಿಸುವ ಸಲುವಾಗಿ ಮೈಸೂರಿನ ವಿದ್ಯಾರ್ಥಿಗಳು ಒಂದು ಸಭೆ ಕೂಡಿದರು. ಮಹಾರಾಜಾ ಕೊಲೆಜಿನ ಪ್ರಿನ್ಸಿಪಾಲರು ಸಭೆಗೆ ಹೋಗಬಾರದೆಂದು ವಿದ್ಯಾರ್ಥಿಗಳಿಗೆ ಗದರಿಸಿದ್ದರಾದರೂ, ಒಬ್ಬಿಬ್ಬರು ಮುಸಲ್ಮಾನ ...

[illegible]

ಸಂಯುಕ್ತ ಗೌಡಸಾರಸ್ವತ ಸಭಾ, ಮದರಾಸು.

[illegible]

ವಿಚಿತ್ರ ತರದ ವ್ಯವಹರಣೆ.

[illegible]

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ [illegible] ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] 11-[illegible], ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, [illegible] ಧರ್ಮಸ್ಥಳ ರೋಡಿಗೆ ದಿವಿ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ [illegible] ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, [illegible] ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು [illegible] 10-30ಕ್ಕೆ [illegible] 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ, 12-30ಕ್ಕೆ [illegible] ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ [illegible] 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ [illegible] ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು [illegible] ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ [illegible] 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್ ಗೋವಾ, [illegible] ವಗೈರೆ ಕಡೆಗಳಿಗೆ [illegible] ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ [illegible] ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ [illegible] 12 ಘಂಟೆಗೆ [illegible] ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ [illegible] ಹುಬ್ಬಳ್ಳಿ, ಪೂನಾ ವಗೈರೆ [illegible] ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, [illegible], ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟಿಕ್ಕಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಠಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., S. K. Mangalore.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳು

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೊ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ನೊ ಮಿಕ್ಚರ್, ಮುಲಾಮು, ಸರಬತ್ತು, ಬಾಮು ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ್, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, ಡ್ರಗ್ಸ್, ಕೆಮಿಕಲ್ಸ್, ಬಾಟಲಿಗಳು, ಬಣ್ಣಗಳು, ಪೆಪರಮಿಂಟ, ಕ್ರಿಸ್ಟಲ್ ಮತ್ತು ಹೀಲಿಯೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1—8—0. ಮೂದಲ ಪರಿಮಳದ ಗಾರ್ಡಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದ್ದಲ್ಲಿ ರವಾನಿಸಲಾದೀತು.

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,

15628 ಮಂಗಳದಾಸ ರೋಡ, ಮುಂಬಯಿ ನಂಬ್ರ ೨.

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಬಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.

ಈ ಇಮಿಟೇಷನ್ ರೇಷ್ಮೆ ಸೀರೆಗಳು ೧೮ ಮೊಳ ಉದ್ದವೂ 2½ ಮೊಳ ಅಗಲವೂ ಇರುವವು. ಉಡಲು ಧಡೂತಿಯಾಗಿಯೂ, ನಯವಾಗಿಯೂ, ಹೊಸನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನಕ್ಷದ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗರೀಬರಿಗೂ ಉಡಲು ಲಾಯಖಾದದ್ದು.

ಕ್ರಯ ರೂ. 4—12—0.

ವಿಳಾಸ:—ಕೆ. ಎನ್. ರಾಧಾಕೃಷ್ಣ ಬ್ರದರ್ಸ್,
109. ಜೈನಾ ಬಜಾರ್ ರೋಡ್, ಮದ್ರಾಸು.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿಸಿದರೆ ಚರ್ಮಕ್ಕೆ ಯಾವತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಒಂದೇ ಒಂದು ನಿಮಿಷದಲ್ಲಿ ಕೂದಲನ್ನು ಕಿತ್ತೆಗೆದು ಬಿಡುವುದು.

3 ಸೋಪುಗಳ ಪೆಟ್ಟಿಗೆ 1ಕ್ಕೆ ರೂ. 1—4—0.
2 ಪೆಟ್ಟಿಗೆಗಳಿಗೆ ರೂ. 2—4—0.

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಬತ್ತಿಯ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪು ಮಾಡಿದರೆ ಸಾಕು. ಇದರಲ್ಲಿ ಎಷ್ಟುಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. 1ಕ್ಕೆ ರೂ. 3—0—0.

ವಿಳಾಸ—ಲೀಗಲ್ ಟ್ರೇಡಿಂಗ್ ಕಂಪೆನಿ,
ಪೋ. ಬೋಕ್ಸ್ ನಂಬ್ರ 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೊರಳ್ಳಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡಿನಿಂದ ತಯಾರಿಸಿ ಸಾವರಿನ್ ಭಂಗಾರದ ಗಿಲೀಟು ಕೊಟ್ಟಿದೆ. ಬಣ್ಣ ಕೆಡದು. ಇದರ ಪದಕವು ಕೆಂಪು, ಬಿಳಿ ಮತ್ತು ಹಸರು ಕಲ್ಲುಗಳನ್ನು ಕಚ್ಚಿ ಕಟ್ಟಿದ ಕಟ್ಟು ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹಾ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಉಚಿತವಾದದ್ದು.

ಕ್ರಯ 1ಕ್ಕೆ ರೂ. 3—8—0.
ಕಿವಿಯಲ್ಲಿ ಹಾಕುವ 7 ಕಲ್ಲಿನ ಓಲೆ ಜೊತೆ 1ಕ್ಕೆ „ 2—8—0.
150 ಗೆಜ್ಜೆ ಕಟ್ಟಿದ ಡಾಬು „ „ 4—8—0.

THE LEGAL TRADING Co.,
P. B. 243 Madras.

ನೀರೋಗಿಯಾದ ತಾಯಿಯಿಂದ ಸಂಸಾರವೇ ಸುಖಮಯವಾಗುವದು

ನೀರೋಗಿಯಾದ ತಾಯಿಯ ಗಲ್ಲಗಳ ಮೇಲೆ ಸುಖಸೂಚಕವಾದ ಹೊಳವು ಕಣ್ಣುಗಳಲ್ಲಿ ಪ್ರಕಾಶ ಇದ್ದು ಪ್ರತಿ ಕೆಲಸದಲ್ಲಿಯೂ ಅವಳು ಚುರುಕಾಗಿರುವಳು ಅವಳ ಪ್ರತಿಯೊಂದು ಅಂಗವು ಕ್ರಮವಾಗಿ ಕೆಲಸಮಾಡಿ ಅವಳ ಆರೋಗ್ಯವನ್ನು ಹೆಚ್ಚಿಸುವದು. ಆಗಾಗೆ ಕಾಹಿಲೆಯಾಗುವದೆಂಬುದು ಅವಳ ಅನುಭವಕ್ಕೆ ಬಾರದೆ ಯಾವಾಗಲೂ ಸುಖಿಯಾಗಿಯೇ ಇರುವಳು. ಯಾವಾಗಲೂ ಸುಖಿಯಾಗಿರುವ ಕಾರಣ, ಸದಾ ಕರ್ತವ್ಯನಿರತಳಾಗಿ, ಬಳಲುವಿಕೆಯೆಂದರೇನೆಂದು ತಿಳಿಯದೆ ನಿರಂತರ ಸುಖವನ್ನನುಭವಿಸುವಳು.

ಆದರೆ ಹಲವು ಹೆಂಗಸರ ಜೀವನಕ್ರಮವೇ ಬೇರೆಯಾಗಿದೆ. ನಿತ್ಯದ ಕೆಲಸಕ್ಕೆ ತೊಡಗುವ ಮೊದಲು ಅದರ ಆಲೋಚನೆಯೇ ಅವರ ಧೈರ್ಯವನ್ನು ಅಪಹರಿಸುವದು. ಇದರಿಂದ ಸಂಸಾರವೇ ದುಃಖಮಯವಾಗಿ ಒಬ್ಬಳಿಂದ ಹಲವರು ವ್ಯಥೆಪಡಬೇಕಾಗುವದು; ಅದಕ್ಕೆ ತಕ್ಕಕಾಲದಲ್ಲಿ ಔಷಧಿಯನ್ನು ಸೇವಿಸದಿದ್ದರೆ ಅವರ ರೋಗವು ದಿನಹೋದಷ್ಟಕ್ಕೆ ಬೆಳೆಯುತ್ತಾ ಬರುವದು.

ಫೆಲೂನಾ ಮಾತ್ರೆಗಳು

ಹೆಂಗಸರಿಗೆ ಮಾತ್ರ

ಸ್ತ್ರೀಯರ ಅವ್ಯವಸ್ಥೆಗಳನ್ನು ಸರಿಪಡಿಸುವುದಕ್ಕಾಗಿಯೇ ನಿರ್ಮಿಸಲ್ಪಟ್ಟಿವೆ. ಯಾವ ಸಾಮಾನ್ಯ ಅರಿಷ್ಟವೂ ಅವುಗಳಂತೆ ಗುಣಕಾರಿಯಾಗದು. ಈ ಮಾತ್ರೆಗಳ ಉಪಯೋಗದಿಂದ ಗುಣ ಸಿಕ್ಕಿದುದಕ್ಕಾಗಿ ನಮಗೆ ಬಂದ ಹಲವು ಕೃತಜ್ಞತಾಪತ್ರಗಳೇ ಇದಕ್ಕೆ ಸಾಕ್ಷಿಯಾಗಿವೆ. "ತಾಯಿಯು ಸುಖಿಯಾದ ಕಾರಣ" ಸಂಸಾರವೇ ಸುಖಮಯವಾಗಿದೆ ಎಂದು ಮನೆಯ ಯಜಮಾನರುಗಳನೇಕರು ನಮಗೆ ಬರೆದಿರುವರು.

ಪರರ ಅನುಭವವು

ನಿಮಗೂ ನಿಜವೆನ್ನಿಸುವುದು

ಸ್ತ್ರೀಯರಿಗೆ ಸಾಮಾನ್ಯವಾಗಿ ಉಂಟಾಗತಕ್ಕ ನೋವು ಮೊದಲಾದವುಗಳನ್ನು ಹೋಗಲಾಡಿಸುವರೆ **ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ** ಖಂಡಿತವಾದ ಔಷಧಿಯಾಗಿದೆ. ಅಸೌಖ್ಯಕ್ಕೆ ಮೂಲವಾದ ಇಂದ್ರಿಯದ ಮೇಲೆ ಅವು ತಮ್ಮ ಶಕ್ತಿಯನ್ನು ಪ್ರಯೋಗಿಸಿ ಇಂದ್ರಿಯವನ್ನು ಶುಚಿಪಡಿಸಿ ಸರಿಗೊಳಿಸುವವು. ನವೀನವಾದ ಮತ್ತು ಸಾರಯುಕ್ತವಾದ ರಕ್ತವು ಬೇಗನೆ ಆರೋಗ್ಯದ ಹೊಳಪನ್ನು ಗಲ್ಲಗಳ ಮೇಲೆ ತರುವದು.

ಸಾವಿರಾರು ಹೆಂಗಸು ಮಕ್ಕಳು ಇದರ ಸೇವನೆಯಿಂದ ಸುಖವನ್ನು ಅನುಭವಿಸುತ್ತಿರುವಾಗ ನೀವು ಮಾತ್ರ ನರಳುತ್ತಿರುವಿರೇ ಹಾಗಾದರೆ ಇಂದೇ **ಫೆಲೂನಾ ಮಾತ್ರೆಗಳನ್ನು** ಸೇವಿಸತೊಡಗಿರಿ. ನಿಮ್ಮ ಭವಿಷ್ಯತ್ತು, ಪ್ರಕಾಶಮಯವೂ, ಸುಖಮಯವೂ, ಸಂತೋಷಮಯವೂ ಆಗುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಷ್ಟರಿಂದಲೂ ಸ್ಟೋರ್ಸ್‌ರಿಂದಲೂ ಮಾರಲ್ಪಡುವವು.

ಬಾಟಲಿಗೆ ರೂ. 2/4.

ಮುಖ್ಯ ಏಜಂಟರು—ಪಟೇಲ್ ಮತ್ತು ಧೊಂಡಿ ಪೋಸ್ಟ್ ಆಫೀಸು ಬೋಕ್ಸ 838, ಮುಂಬಾಯಿ.

ಮದರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೊ.,
260 ಚೈನಾ ಬಜಾರ್ ರೋಡ್, ಮದರಾಸು.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 86.

ಪುತ್ತೂರು ಡಿಸ್ಟ್ರಿಕ್ಟ್ ಮುನಿಸಿಫ್ ಕೋರ್ಟಿನಲ್ಲಿ.

O. P. No 90/1928.

ಸುಲೋಚನಾಬಾಯಿ ಜಿ. ಎನ್. ಹೆಮ್ಮಾಡಿರ ವಿಧವೆ ಮಂಗಳೂರು ಕಸಬಾ ಅರ್ಜಿದಾರಳು.

ಹೆಮ್ಮಾಡಿ ನಾರಾಯಣ ರಾವ್ ವೀರಪ್ಪಯ್ಯನವರ ಮಗ ಮಂಗಳೂರು ಕಸಬಾ ಪೈಕಿ ಹರಿದಾಸ ಶಿವಾನಂದ ಭಟ್ಟಜಿಯವರಲ್ಲಿರುತ್ತಾನೆ. ಎದ್ರಿ.

ಈ ವ್ಯವಹಂಚೆಯಲ್ಲಿ ತನ್ನ ಗಂಡನಿಗೆ ಬರತಕ್ಕ ಪ್ರೊವಿಡೆಂಟ್ ಫಂಡ ಹಣಕ್ಕೂ ಸಂಬಳದ ಹಣ ಕೂಡಾ ರೂ.1200ನ್ನು Lyod's Bank Cox and Kings Branch Bombayಯವರಿಂದ ವಸೂಲಿ ಬಗ್ಗೆ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಅರ್ಜಿಯು ಇದೇ ಆಗೋಸ್ತು ತಾ.31-8-28 ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆದುದರಿಂದ ಆಕ್ಷೇಪಯುಳ್ಳವರು ಆ ದಿವಸ 11ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಹರಿಸಬೇಕು.

ಪುತ್ತೂರು, ತಾ. 4-8-1928. **B. Mangesh Rao,** *Pleader for Petitioner.*

ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರು.

ನೋಟೀಸು.

ಕಾಸರಗೋಡು ತಾಲೂಕು ಪಿಲಿಕೋಡು ಪೋಸ್ಟು ಪಡನ್ನಾ ಗ್ರಾಮದಲ್ಲಿರುವ ಅಬ್ದುಲ್ಲಾ ಹಾಜಿ ಮಗ ಅಬ್ದುಲ್ಲಾ ಯೆಂಬವರು ಬ್ಯಾಂಕಿನಿಂದ ತಾರೀಕು 9—2—1927 ಚಿನ್ನಾಭರಣಗಳ ಈಡಿನ ಮೇಲೆ ಪಡೆದ ರೂಪ್ಯಾ 450 ವ ಅದರ ಬಡ್ಡಿಯನ್ನಾಗೀ ವಸೂಲು ಕೊಡದೆಯಿರುವ ಕಾರಣ ಸದರಿಯವರಿಗೆ ಬಿಟ್ಟ ಟಪ್ಪಾಲು ರಿಜಿಸ್ಟ್ರಿ ನೋಟೀಸು ಸದರಿಯವರು ಕಾಣಸಿಕ್ಕಲಿಲ್ಲವಾಗಿ ವಾಪಾಸು ಬಂದಿರುವದರಿಂದ ಸದರಿ ನಗಗಳನ್ನು ಇದೇ ತಿಂಗಳ ತಾ. 24ನೇ ಶುಕ್ರವಾರ ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವರು. ಏಲಂ ತಾರೀಕು ವರೆಗೆ ಬಡ್ಡಿ ರೂ. 30—0—1 ಆಗುತ್ತದಲ್ಲದೆ ಈ ನೋಟಿಸು ಖರ್ಚು ಕೂಡಾ ಬರಬೇಕಾಗುತ್ತದೆ.

The Canara Bank Ltd. Mangalore 3-8-'28. **K. Venkat Rao,** *Secretary.*

WANTED.

"CANARA BANK SHARES"

Intending sellers please communicate stating their lowest quotations to—

D. R. Rau,
Civil Surgeon, TRICHUR.

Morris Cowly four seater in good order for sale, owner purchasing bigger car. Any reasonable offer accepted.

D. R. RAU,
Civil Surgeon, TRICHUR.

ತಯಾರಾಗಿವೆ! ತಯಾರಾಗಿವೆ

ಐದನೇ ದರ್ಜೆಯ

ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

ಶಾಲಾ ಹುಡುಗರಿಗೆ ಬೇಕಾದ

ಗೆರೆಹಾಕಿದ ಮತ್ತು ಗೆರೆ ಹಾಕದ ಎಕ್ಸರ್‌ಸೈಜ್ ಪುಸ್ತಕಗಳೂ, ಡ್ರೊಯಿಂಗ್ ಪುಸ್ತಕಗಳೂ, ಮೇಪ್‌ಡ್ರೊಯಿಂಗ್ ಪುಸ್ತಕಗಳೂ, ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಶಾರದಾ ಛಾಪಖಾನೆ; SHARADA PRESS,
ರಥಬೀದಿ ಮಂಗಳೂರು. MANGALORE.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 13/26. R. I. A. 729/28.

ಕೊರಪಳು ಯಾನೆ ಮುತ್ತಕ್ಕ ಸೆಟ್ಟಿ ಕೂಡಾ 3 ಜನರು—ಅರ್ಜಿದಾರರು ಮತ್ತು
ಅಂತಮ್ಮ ಸೆಟ್ಟಿ ಕೂಡಾ ರೆಸ್ಪಾಂಡೆಂಟರು,

ಇವರೊಳಗೆ,

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದರೆ,

1ನೇ ಅರ್ಜಿದಾರಳ ಗಂಡ ವ 2—3ನೇ ಅರ್ಜಿದಾರರ ತಂದೆ ಮೃತ ಉಳಿಯಾರಗೋಳಿ ಅಣ್ಣಣ್ಣ ಸೆಟ್ಟಿಗೆ ಬರತಕ್ಕ ಸಾಲ ವಸೂಲಿಗೆ ಅರ್ಜಿದಾರರಿಗೆ ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟನ್ನು extend ಮಾಡತಕ್ಕ ಬಗ್ಗೆ ಅರ್ಜಿದಾರರು ದಾಖಲ್ಲು ಮಾಡಿದ ಸದರಿ R.I.A. ನಂ 729/28ನೇ ಅರ್ಜಿಯು ತಾ 18—9—28ಕ್ಕೆ ತನ್ಸಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ.

ಪ್ಲೀಡರ್ಸ್ ಆಫೀಸು, ತಾ. 8-8-'28. H. KESHAVA PAI, *Vakil for Petitioners.*

NOTICE.

In the Court of the District Munsif of Karkala

O. P. No. 55/1928.

1. Bhagerethi Amma. 2. Krishnaraya. 3. Sadashiva. Minors by next friend 1st. Petitioners.
Petitioner Bhagerethi Amma
1. Ramappaya. 2. Nagappaya. 3. Mariyappaya. Respondants.

Notice is hereby given that the said Application has been made by the Petitioners to the above court for a grant of Succecession certificate of the deceased I. P. Sheshappaya who died on or about 29—1—1928 in Inna village Mangalore Taluk and that the application has been posted for hearing on 22-8-1928 in this court.

Karkala Dated 4-8-1928 **I. N. Naik,** *Pleader for Petitioners.*

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 88/28.

1. ಉಬರಡ್ಕ ಮಿತ್ತೂರು ತಿಮ್ಮಪ್ಪಯ್ಯ ಭಟ್ಟ. 2. ಯೆಲಿಯಕ್ಕೆ ಹೆಂಗಸು. ಅರ್ಜಿದಾರರು.

ಮುತ್ತಯ್ಯ ಗೌಡ ಎದ್ರಿ.

2ನೇ ಅರ್ಜಿದಾರಳ ಗಂಡ ಹಾಲಿ ಮೃತಪಟ್ಟ ಕೈಕುಳಿ ರಾಮಣ್ಣ ಗೌಡನಿಗೆ ಕಲಿದಂಬ ಕೃಷ್ಣಯ್ಯನವರಿಂದ ಬರತಕ್ಕ ರಿಜಿಸ್ತ್ರಿ ದಿವಾಂಡ ನೋಟಿನ ಬಾಬ್ತು ಐವಜನ್ನು ವಸೂಲು ಮಾಡುವ ಹಕ್ಕು ಪಂಬಾರಿಗೆ ಹೊಂದಿದ ೧ನೇ ಅರ್ಜಿದಾರ ಉಬರಡ್ಕ ಮಿತ್ತೂರು ತಿಮ್ಮಪ್ಪಯ್ಯ ಭಟ್ಟಗೆ ಸದ್ರಿ ಐವಜು ವಸೂಲು ಕುರಿತು ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿ ಮಾಡಿರುವದರಿಂದ ಸದ್ರಿ ಅರ್ಜಿಯು ತನಿಕೆ ಬಗ್ಗೆ ತಾ. 14—8—1928ಕ್ಕೆ ಇಟ್ಟಿರುವದರಿಂದ ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಹಾಜರಾಗಿ ಆಕ್ಷೇಪಣೆಗಳನ್ನು ಜಾಹಿರು ಮಾಡಿಕೊಳ್ಳಬೇಕಾಗಿ ಈ ಮೂಲಕ ತಿಳಿಸೋಣಾಗಿಯದೆ.

ಪುತ್ತೂರು, ತಾ. 4-8-1928. **B. Achyutu Baliga,** *Pleader for Petitioners.*

ಮಹಾಜನರಲ್ಲಿ ವಿಜ್ಞಾಪನೆ.

೧ನೇ ತಾರೀಕಿನ ದಿನ ಸಾಯಂಕಾಲ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಬೆಂಗಳೂರಿನ ಈಗಿನ ಸ್ಥಿತಿಯಲ್ಲಿ ಈ ಪತ್ರಿಕಾ ಪ್ರಕಟನದಿಂದ ಪ್ರಜಾ ನೆಮ್ಮದಿಗೆ ಭಂಗವುಂಟಾಗಬಹುದೆಂದು ಹೇಳಿ 'ವಿಶ್ವಕರ್ಣಾಟಕ' ಪತ್ರಿಕೆಯನ್ನು ನಿಲ್ಲಿಸಿಬಿಡಬೇಕೆಂದು ಆಜ್ಞೆಯನ್ನು ಕಳುಹಿಸಿದರು. ಎಷ್ಟು ಕಾಲ ನಿಲ್ಲಿಸಬೇಕೆಂಬುದನ್ನು ತಿಳಿಸಲಿಲ್ಲ. ಸರಿಯಾದ ಕಾರಣ ತೋರಿಸದೆ ಪತ್ರಿಕೆಯನ್ನು ನಿಲ್ಲಿಸುವುದರ ನೀತಿಯಾಗಲಿ, ನ್ಯಾಯವಾಗಲಿ ನನಗೆ ಗೊತ್ತಾಗಿಲ್ಲ. ವಾಚಕ ಮಹಾಶಯರು ಅನ್ಯಥಾ ಭಾವಿಸಬಹುದೆಂದು ಈ ಮೂಲಕ ನಿಜ ಸ್ಥಿತಿಯನ್ನು ತಿಳಿಸಿರುತ್ತೇನೆ. ನನ್ನ ಬಾಂಧವರೆಲ್ಲರೂ ಬೇರೊಂದೆಣಿಸದೆ, ಸರಕಾರದವರು ದಬ್ಬಾಳಿಕೆಯಿಂದ ಮಾಡಿರುವ ಆಜ್ಞೆಯನ್ನು ತೆಗೆದು ಹಾಕಿಸಿ, ಎಂದಿನಂತೆ 'ವಿಶ್ವಕರ್ಣಾಟಕ' ಪತ್ರಿಕೆಯನ್ನು ಪ್ರಕಟಿಸಿ, ದೇವರ ಸೇವೆಯನ್ನೂ ಪ್ರಜಾ ಸೇವೆಯನ್ನೂ ನ್ಯಾಯವಾಗಿಯೂ ನಿರ್ಭಯವಾಗಿಯೂ ಮಾಡುವಂತೆ ನನಗೆ ಸಹಾಯಮಾಡುವರೆಂಬುದಾಗಿ ಪ್ರಾರ್ಥನೆ.

ಬೆಂಗಳೂರು ನಗರ, ೩—೮—೧೯೨೮. ತಿರುಮಲೆ ತಾತಾಚಾರ್ಯ ಶರ್ಮ, ಸಂಪಾದಕ, 'ವಿಶ್ವಕರ್ಣಾಟಕ'

ಗಾನವಿಶಾರದರಾದ
ತ್ಯಾಗರಾಜಸ್ವಾಮಿಯವರ ಜೀವ ಚರಿತ್ರೆ.

(ಲೇಖಕ:—ಎಸ್. ಗಣಪತಿರಾವ್, ಐಗಳ್.)

ತ್ಯಾಗರಾಜಸ್ವಾಮಿಯವರ ಶಿಷ್ಯರು ಅವರನ್ನು ವೈರಾಗ್ಯದಲ್ಲಿ ಶುಕನಂತೆಯೂ, ವಿದ್ಯೆಯಲ್ಲಿ ವ್ಯಾಸನಂತೆಯೂ, ಭಕ್ತಿಯಲ್ಲಿ ಪ್ರಹ್ಲಾದನಿಗೂ ಹೋಲಿಸಿರುವರು. ಕಳೆದ ಎರಡು ಶತಮಾನಗಳಲ್ಲಿ ಜೀವಿಸಿದ್ದ ಗಾನವಿಶಾರದರಲ್ಲಿ ದಕ್ಷಿಣಾದಿ ಗಾಯನ ಕ್ರಮದಲ್ಲಿ ತ್ಯಾಗರಾಜಸ್ವಾಮಿಯವರಿಗೆ ಸರಿಸಮಾನರಾದವರು ಯಾರೂ ಇರುವುದಿಲ್ಲ ಎಂಬುದಕ್ಕೆ ಸಂದೇಹವಿಲ್ಲ. ಗಾಯನ ವಿದ್ಯೆಯಲ್ಲಿ ಇವರು ರಾಜರೆಂದೇ ಗಾಯನ ವಿದ್ವಾಂಸರು ಹೇಳುತ್ತಿರುವರು. ದಕ್ಷಿಣಾದಿ ಗಾಯನದ ಶಾಸ್ತ್ರವನ್ನೂ, ಕ್ರಮಗಳನ್ನೂ ಇವರೇ ಕ್ರಮಪಡಿಸಿದರು ಎಂಬುದರಲ್ಲಿ ಅತಿಶಯೋಕ್ತಿಯಾಗಲಾರದು.

ತ್ಯಾಗರಾಜಸ್ವಾಮಿಯವರ ಮಾತೃಭೂಮಿಯು ಆಂಧ್ರದೇಶ. ಇವರ ಪೂರ್ವಜರು ಆಂಧ್ರದೇಶದವರು. ಇವರ [illegible] ಗಿರಿರಾಜ ಕವಿಯವರು. [illegible] ಆಂಧ್ರದೇಶವನ್ನು ಬಿಟ್ಟು [illegible] ನೆಲೆಗೊಂಡರು.

ಗಿರಿರಾಜ ಕವಿಗಳು [illegible]

ರಾಮಬ್ರಹ್ಮರು [illegible] ಇವರಲ್ಲಿ ಜ್ಯಪೇಶ ಅಥವಾ ಪಂಚಪಕೇಶಯ್ಯ, ರಾಮನಂದಯ್ಯ, ತ್ಯಾಗರಾಜಯ್ಯ ಎಂಬ ಮೂವರು ಗಂಡುಮಕ್ಕಳು ಹುಟ್ಟಿದರು. [illegible] ಮಾಡಿ ಹಣಸಂಪಾದಿಸುತ್ತಿದ್ದರು.

ತ್ಯಾಗರಾಜಸ್ವಾಮಿಯವರು ಕ್ರಿ. ಶ. [illegible] ತಿರುವಾರೂರಲ್ಲಿ ಹುಟ್ಟಿದರು. ಚಿಕ್ಕಂದಿನಿಂದಲೇ ಇವರ ಗುಣನಡತೆಯನ್ನು ನೋಡಿದವರೆಲ್ಲರೂ ಇವರೊಬ್ಬ ಮಹಾಪುರುಷರಾಗುವರೆಂದೇ ಹೇಳುತ್ತಿದ್ದರು. ಇವರು ಅಣ್ಣಂದಿಯರ ಹಾಗಿರದೆ. ತಂದೆಗೆ ದೇವರ ಪೂಜೆಗೆ ಹೂವು ಮುಂತಾದುವುಗಳನ್ನು ೪ ವರ್ಷ ಪ್ರಾಯದಲ್ಲಿಯೇ ಕೂಡಿಸಿ ಕೊಡುತ್ತಿದ್ದರು. ಮತ್ತು ರಾಮಭಜನೆಯನ್ನು ಮಾಡುತ್ತಿದ್ದರು. ೭ ವರ್ಷ ಪ್ರಾಯದಲ್ಲಿ ಉಪನಯನವಾಯಿತು. ದೇವರ ಮೇಲಿನ ಭಕ್ತಿಯು ಹೆಚ್ಚಾಗುತ್ತಾ ಬಂತು. ಒಂದೆರಡು ವರ್ಷಗಳು ಹೋಗಲು ರಾಮಭಜನೆಯಲ್ಲಿಯೇ ಮಗ್ನರಾದರು. ಆ ಸಮಯದಲ್ಲಿ "ಕೊಲುವಮರೆಗದಾ" "ಅರಗಿಂಪವೇ" ಮುಂತಾದ ಹಾಡುಗಳನ್ನು ಮಾಡಿ ಹಾಡಲಾರಂಭಿಸಿದರು. ಒಂದೊಂದು ದಿವಸ ಬೆಳಿಗ್ಗೆ ಯೋಗಸಾಧನೆಯಲ್ಲಿ ಕುಳಿತರೆ ರಾತ್ರಿಯಲ್ಲಿ ಏಳುತ್ತಿದ್ದರು. ಇತರ ದಿವಸಗಳಲ್ಲಿ ಶ್ರೀರಾಮ ಭಜನೆಮಾಡುತ್ತಾ ಶ್ರೀರಾಮನನ್ನು ಪೂಜಿಸುತ್ತಾ ಶ್ರೀರಾಮನ ವಿಷಯವಾಗಿ ಹಾಡುಗಳನ್ನು ಬರೆಯುತ್ತಾ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರು. ಉಳಿದ ಸ್ವಲ್ಪ ಸಮಯ ತನ್ನ ಶಿಷ್ಯರಿಗೆ ಗಾನವನ್ನು ಕಲಿಸುತ್ತಿದ್ದರು. ಶನಿವಾರ ಮತ್ತು ಏಕಾದಶೀ ದಿವಸಗಳಲ್ಲಿ ನಿರಾಹಾರ ಉಪವಾಸಮಾಡುತ್ತಿದ್ದರು. ಶ್ರೀರಾಮನ ಹೆಸರಲ್ಲಿ ಇತರರಿಗೆ [illegible] ಮಾಡಿಸುತ್ತಿದ್ದರು. ವಾರಕ್ಕೊಂದಾವರ್ತಿ ತನ್ನ ಶಿಷ್ಯರನ್ನು ಕರಕೊಂಡು ಕೈಯಲ್ಲಿ ತಂಬೂರಿಯನ್ನು ಹಿಡಿದುಕೊಂಡು ಮನೆಮನೆಗೆ ಬೇಡುವುದಕ್ಕೆ ಹೋಗುತ್ತಿದ್ದರು. ಅದರೆ ಇವರ ಊಟಉಪಚಾರಗಳಿಗೆ ಬೇಕಾದ ವಸ್ತುಗಳನ್ನು ಇವರ ಭಕ್ತಾದಿಗಳು ಒದಗಿಸುತ್ತಿದ್ದರು.

ತ್ಯಾಗಯ್ಯನವರು ಈ ರೀತಿ ವರ್ತಿಸುವುದನ್ನು ನೋಡಿ ಇವರ ಅಣ್ಣಂದಿಯರಿಬ್ಬರಿಗೆ ಬೇಸರ ಹುಟ್ಟಿತು. ರಾತ್ರಿ ಬೆಳಿಗ್ಗಿನ ವರೆಗೆ ರಾಮಮೂರ್ತಿಯನ್ನು ಇಟ್ಟು ಭಜನೆಯು ನಡಿಯುತ್ತಿತ್ತು. ಈ ಇಬ್ಬರು ಅಣ್ಣಂದಿಯರು ಹೇಗೋ ಆ ಶ್ರೀರಾಮನ ಪ್ರತಿಮೆಯನ್ನು ಅದು ಇದ್ದಲ್ಲಿಂದ ತಪ್ಪಿಸಿ ಅದನ್ನು ಕಾವೇರಿ ನದಿಯಲ್ಲಿ ಬಿಸಾಡಿದರು. ಇದನ್ನು ನೋಡಿ ತ್ಯಾಗಯ್ಯರವರು ಬಹಳ ಬೇಸರಪಟ್ಟು, ಹಲವು ದಿವಸ ಉಪವಾಸ ಮಾಡಿದರು. [illegible] ಆ ಸಮಯದಲ್ಲಿ ಇವರು "ಎಂದುದಾಗಿ ನಾಡೋ" [illegible] "ಎಂತರಾನಿ" "ಕಾಲಹರಣ" "ನಾಟಿಮಾಟ" ಮುಂತಾದ ಹಾಡುಗಳನ್ನು ಮಾಡಿ ಹಾಡುವರು. ತ್ಯಾಗಯ್ಯನವರು ಒಂದು [illegible] ವರೆಗೆ ಕಾವೇರಿ ಹೊಳೆಯಲ್ಲಿ ಹುಡುಕಿ ಆ ಪ್ರತಿಮೆಯನ್ನು ತಂದರು. ಆಗ ಇವರ ಸಂತೋಷಕ್ಕೆ ಪಾರವೇ ಇಲ್ಲ. ಆಗ "ಎಟ್ಲ ದೊರಕಿತಿವೋ" "ಚಲ್ಲರೇ" "ಅಲಕಲಲ್ಲ" ಎಂಬ ಹಾಡುಗಳನ್ನು ತಯಾರಿಸಿ ಹಾಡಿದರು. ತನ್ನ ಅಣ್ಣಂದಿರಿಗೆ ಇನ್ನಾದರೂ ಶ್ರೀರಾಮನ ಭಕ್ತಿಯುಂಟಾಗಲಿ ಎಂದು ಶ್ರೀರಾಮನನ್ನು ಬೇಡಿಕೊಳ್ಳುತ್ತಿದ್ದರು. ಸಹೋದರರಿಬ್ಬರೂ ಮನಸ್ಸು ಕರಗಿ ಇವರ ಶಿಷ್ಯರಾದರು.

ತಂಜಾವೂರಿನ ಶರಭೋಜಿ ಮಹಾರಾಜರು ಒಂದು ದಿವಸ ತಿರುವಯ್ಯಾರಿಗೆ ಯಾತ್ರೆಗೆ ಬಂದಿದ್ದರು. ಆಗ ಅವರು ತ್ಯಾಗಯ್ಯನ ಗಾನವಿಶಾರದತೆಯನ್ನು ಕೇಳಿ ರಾಜಧಾನಿಗೆ ಬೋಯಿ ಮೇಲೆ ಅವರನ್ನು ತಾನಿದ್ದಲ್ಲಿಗೆ ಬರಮಾಡಿದರು. ಶರಭೋಜಿಯವರು ತನ್ನನ್ನು ಹೊಗಳಿ ಒಂದು ಕಾವ್ಯವನ್ನು ಹಾಡಿದರೆ ೧೦,೦೦೦ ರೂಪಾಯಿಯನ್ನೂ "ಆಸ್ಥಾನ ವಿದ್ವಾನ್" ಎಂಬ ಬಿರುದನ್ನೂ ಕೊಡುತ್ತೇನೆಂದು ಹೇಳಿದರು. ತ್ಯಾಗಯ್ಯ ಸ್ವಾಮಿಯವರು ಇದನ್ನು [illegible] ಮನುಷ್ಯರನ್ನು ಹೊಗಳಿ [illegible] ಮಾಡಲಾರೆನೆಂದು ಹೇಳಿದರು. ಆ ಸಮಯದಲ್ಲಿ ಇವರು "ನಿಧಿಚಾಲ ಸುಖಮಾ" ಎಂಬ [illegible] ಹಾಡಿದರು.

[illegible]

[illegible] ಗ್ರಾಮಕ್ಕೆ ಹೋಗಿ ವಿಷ್ಣುವು ಶ್ರೇಷ್ಠನೋ ಶಿವನು ಶ್ರೇಷ್ಠನೋ ಎಂಬುದನ್ನು ವಿಚಾರಿಸುತ್ತಾ "ಎವರಿ ನಿರ್ಣಯಿಂಚೇರಿರಾ" "ರಾಮಬಾಣ" "ವ್ರತಮು ಸುಖಮಾ" ಎಂಬ ಹಾಡುಗಳನ್ನು ಹಾಡಿದರು.

ವಾಲ್ಮೀಕಿ ರಾಮಾಯಣದಲ್ಲಿ ೨೪,೦೦೦ ಶ್ಲೋಕಗಳಿವೆ. ತ್ಯಾಗರಾಜಸ್ವಾಮಿಯವರೂ ಒಂದೊಂದು ಶ್ಲೋಕಕ್ಕೆ ಒಂದೊಂದು ಕೃತಿಯನ್ನು ಮಾಡಬೇಕೆಂದು ಆಲೋಚಿಸಿದರು. ಈ ಕಾರ್ಯವು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಸುಮಾರು ಸಾವಿರ ಮಾತ್ರವೇ ರಚಿಸಿದಂತೆ ತೋರುತ್ತದೆ. ಇವುಗಳಲ್ಲಿ ೮೦೦ ಮಾತ್ರವೇ ಸಿಕ್ಕುವವು. ಇವರು "ಪ್ರಹ್ಲಾದ ಚರಿತ್ರ" ಎಂಬ ಎರಡು ಗ್ರಂಥಗಳನ್ನು ಬರೆದಿರುವರು.

ತ್ಯಾಗರಾಜಸ್ವಾಮಿಯವರು ಶ್ರೀರಾಮನನ್ನಲ್ಲದೆ ಇತರ ಯಾವ ದೇವರುಗಳನ್ನೂ ಕುರಿತು ಹಾಡುತ್ತಿರಲಿಲ್ಲ. "ರಾಮ ನೀ ಸಮಾನಮೆವ್ವರು" ಹೀಗೆಯೇ ಹಾಡುತ್ತಿದ್ದರು. ಶ್ರೀಕೃಷ್ಣನ ಹೆಸರನ್ನು ಸಹ ಎತ್ತಿ ಹಾಡುತ್ತಿರಲಿಲ್ಲ. "ಇತರ ದೈವಮುಲವಲ" "ಭಕ್ತಿಲೋ ಶ್ರೀರಾಮಭಕ್ತಿಮೇಲು" "ನೀವಂಟಿ ದೈವಮು" ಈ ಹಾಡುಗಳಿಂದ ತಿಳಿಯುತ್ತದೆ. ಇತರ ದೇವರುಗಳ ವಿಷಯ ಹಾಡಲು ಉಪಕ್ರಮಿಸಿದ ವಿಷಯ ಒಂದು ಕಥೆ ಇದೆ. ಅವರಿರುವ ಗ್ರಾಮದಲ್ಲಿ ಪಾರ್ವತಿ ದೇವಸ್ಥಾನದಲ್ಲಿ ವರ್ಷಾವಧಿ ಉತ್ಸವವಾಗುತ್ತಿತ್ತು. ಅಲ್ಲಿಯ ನಗಾರಿಯ ಶಬ್ದವು ಇವರಿಗೆ ಕೇಳಿತು. ಜನರೆಲ್ಲರೂ ಉತ್ಸವಕ್ಕೆ ಹೋಗುವುದನ್ನು ನೋಡಿದರು. ಆಗ ಇವರು ಜನರೆಲ್ಲರೂ ತಪ್ಪುದಾರಿಯಲ್ಲಿ ಯಾಕೆ ನಡಿಯುತ್ತಾರೆಂದು ಹೇಳಿ, "ತೆಲಿಯಲೇರು ರಾಮಭಕ್ತಿ ಮಾರ್ಗಮು" "ಚಿಕ್ಕ ನಿರಾಜ ಮಾರ್ಗಮು" ಹಾಡುಗಳನ್ನು ಆಡಲಾರಂಭಿಸಿದರು. ಇದಾದ ಕೆಲವು ದಿವಸಗಳಲ್ಲಿ ಇವರಿಗೆ ಅಸ್ವಸ್ಥವಾಯಿತು. ಈ ಅಸ್ವಸ್ಥವು ಪಾರ್ವತಿಯ ಸಿಟ್ಟಿನಿಂದ ಉಂಟಾಯಿತೆಂದು ಇವರಲ್ಲಿ ಭಾವನೆಯುಂಟಾಯಿತು. ಕೂಡಲೇ ಪಾರ್ವತಿಯನ್ನು ಹೊಗಳಿ "ಧರಣಿ ತೆಲಸು ಕೊಂಟಿ" ಎಂಬ ಹಾಡನ್ನು ಹಾಡಿದರು. ಅಸ್ವಸ್ಥವು ಗುಣವಾಯಿತು. ನಂತರ ಇವರು ಶಿವ, ಗಣಪತಿ ಮುಂತಾದ ದೇವರುಗಳನ್ನು ಹೊಗಳಿ "ಗಿರಿರಾಜ ಸುತಾ ತನಯಾ" "ಶಂಭೋ ಮಹಾದೇವ" "ದೇವಿ ಕುಲಶಮ್ಮ" ಮುಂತಾದ ಹಾಡುಗಳನ್ನು ಹಾಡಲಾರಂಭಿಸಿದರು. ಇವರು ರಾಮಭಕ್ತಿಯಲ್ಲಿಯೇ ನಿರತರಾಗಲಿಕ್ಕೆ ಕಾರಣವೇನೆಂಬುದನ್ನು "ಒಕಮಾಟ, ಒಕಬಾಣಮು, ಒಕ ಪತ್ನಿ ವ್ರತುಡು" ಎಂಬ ಹಾಡಿನಿಂದ ವ್ಯಕ್ತವಾಗುತ್ತದೆ. "ರಾಮಕಥಾ, ಸುಧಾರ ಸಪಾನವೋಕರಾಜ್ಯ ಮುಜೇಸುನೇ" ಎಂದು ಹಾಡಿದ ಯೋಗಿಯವರು ತ್ಯಾಗರಾಜರೇ ಅಲ್ಲದೆ ಮತ್ತೆ ಯಾರೂ ಅಲ್ಲ.

ಇವರು ದೀರ್ಘಕಾಯರಾಗಿದ್ದರು. ಸ್ಥೂಲಕಾಯರಲ್ಲ. ಕೆಂಪು ವರ್ಣದವರು. ಸಾಧಾರಣದ ಉಡುಪನ್ನು ಉಡುತ್ತಿದ್ದರು. ಮೈಮೇಲೆ ಒಂದೇ ಒಂದು ಆಭರಣವಾದರೂ ಇರಲಿಲ್ಲ. ಇವರ ಐಶ್ವರ್ಯ ಎಂಬುದು ಇವರ ಕೃತಿಗಳೇ ಆಗಿದ್ದುವು. ಇವರಿಗೆ ಹಲವು ಮಂದಿ ಶಿಷ್ಯರಿದ್ದರು. ಇವರಲ್ಲಿ ಪ್ರಮುಖರಾದವರು. ೧ ವೀಣ ಕುಪ್ಪೀರ್, ೨ ಅಯ್ಯಭಾಗವತರ್, ೩ ಉಮಯಪುರಂ ಕೃಷ್ಣಯ್ಯ, ೪ ವಾಲಾಜಪೇಟ್ ವೆಂಕಟರಮಣ ಭಾಗವತರ್, ೫ ರಾಮ ಅಯ್ಯಂಗಾರ್ ಮುಂತಾದವರು ತ್ಯಾಗರಾಜಸ್ವಾಮಿಯವರ ಶಿಷ್ಯರಾದ ಇವರಿಂದಲೇ ಅವರ ಕೃತಿಗಳು ಪ್ರಕಟಿಸಲ್ಪಟ್ಟವು. ತ್ಯಾಗರಾಜಸ್ವಾಮಿಯವರು ಇವುಗಳನ್ನು ಯಾವ ರೀತಿಯಲ್ಲಿ ಹಾಡುತ್ತಿದ್ದರೋ ಅದೇ ರೀತಿಯಲ್ಲಿ ಹಾಡಲು ದಾರಿಯನ್ನು ಗಾಯನಗಾರರಿಗೆ ಕಲಿಸಿದವರು. ಈ ಶಿಷ್ಯರೇ ಆಗಿರುತ್ತಾರೆ. ರಾಗಗಳ ಆರೋಹಣ ಮತ್ತು ಅವರೋಹಣ ಎಂಬ ಸಂಗತಿ ತಿಳಿದೊತನೆಯೇ ತ್ಯಾಗರಾಜ ಕೃತಿಗಳನ್ನು ಹಾಡಲು ಸಾಧ್ಯವಾಗುವುದಿಲ್ಲ.

ತ್ಯಾಗರಾಜಸ್ವಾಮಿಯವರು ಆಂಧ್ರದೇಶದವರಾಗಿದ್ದು ಇವರ ಕೃತಿಗಳಲ್ಲಿ ಹೆಚ್ಚಿನವು ತೆಲುಗುಭಾಷೆಗಳಲ್ಲಿರುವುವು. ಇವುಗಳನ್ನು ಹೆಚ್ಚಾಗಿ ಹಾಡುವವರು ತಮಿಳರೇ ಆಗಿರುತ್ತಾರೆ. ಸಂಸ್ಕೃತ ಭಾಷೆಯಲ್ಲಿಯೂ ಕೆಲವು ಕೃತಿಗಳನ್ನು ಮಾಡಿರುವರು. ಇವರ ಕೃತಿಗಳನ್ನು ಹರಿಕಥಾ ಭಾಗವತರೂ, ವೇಶ್ಯಾಸ್ತ್ರೀಯರೂ ಹಾಡುತ್ತಿರುವರು. ಕೆಲವು ಕೃತಿಗಳನ್ನು ತಮಿಳು ದೇಶದಲ್ಲಿ ಮಾತ್ರವೇ ಹಾಡುತ್ತಿರುವರು. ಕೆಲವನ್ನು ತೆಲುಗು ದೇಶದಲ್ಲಿ ಮಾತ್ರವೇ ಹಾಡುವರು. ಇವರು ಹೋದಲ್ಲೆಲ್ಲಾ ಕೃತಿಗಳನ್ನು ಉಂಟುಮಾಡಿ ಹಾಡುತ್ತಿದ್ದುದೇ ಇದಕ್ಕೆ ಕಾರಣ.

ತ್ಯಾಗರಾಜಸ್ವಾಮಿಯವರು ತಮ್ಮ ಕೀರ್ತನೆಗಳನ್ನು ಅನೇಕ ರಾಗಗಳಲ್ಲಿ ಹಾಡಿರುವರು. ಒಂದು ರಾಗದಲ್ಲಿ ಬರೆದ ಒಂದು ಕೃತಿಯನ್ನು ಇನ್ನೊಂದು ರಾಗದಲ್ಲಿ ಹಾಡುವುದು ಸುಲಭಸಾಧ್ಯವಲ್ಲ. ಆದರೆ ಇವರು ಮಾತ್ರ ಯಾವ ಕೃತಿಯನ್ನಾದರೂ ಯಾವ ರಾಗದಲ್ಲಿಯಾದರೂ ಹಾಡಲು ಶಕ್ತರಾಗಿದ್ದರು. "ತಪ್ಪಿ ಬ್ರದಿಕಿ ಪೋವತರಮಾ" "ಕಡತೇರ ರಾದಾಮನಸಾ" "ಕೊಲುವ ಮರೆಗದಾ" "ಎಂದೂ ಕುಡೆಯು ರಾದುರಾ" "ಅರಾಂಗಿಸವೇ" "ಎಂದುದಾಗಿ ನಾಡೋ" ಈ ಕೃತಿಗಳನ್ನು ತೋಡಿ ರಾಗದಲ್ಲಿ ರಚಿಸಿರುವರು.

ತ್ಯಾಗರಾಜ ಸ್ವಾಮಿಯ ಕೃತಿಗಳನ್ನು "ತಾರಕಸ್ಥಾಯಿ"ಯಲ್ಲಿಯೂ "ಮಂದರ" ಸ್ಥಾಯಿಯಲ್ಲಿಯೂ ಹಾಡಲು ಸಾಧ್ಯವಾಗುತ್ತದೆ. ಇದೇ ವಿಶೇಷವಾದುದು. ಈ ಕೃತಿಗಳಲ್ಲಿ ಕೆಲವನ್ನು ಬಾಯಿಯಿಂದ ಹಾಡಲು ಸಾಧ್ಯವಾಗುತ್ತವೆ. ಕೆಲವನ್ನು ವೀಣೆ, ಮುಂತಾದವುಗಳಲ್ಲಿ ಬಾರಿಸಲು ಸಾಧ್ಯವಾಗುತ್ತವೆ. "ಇಂಗ್ಲಿಷ ನೋಟ"ನಂತಿರುವ "ರಮಿಂಚುವಾರು ಎವರುರಾರಘೋತ್ತಮಾನಿನುವಿನಾ" ಎಂಬ ಕೃತಿಯನ್ನು ಕೊಳಲಿನಲ್ಲಿ ಬಾರಿಸಲು ಯೋಗ್ಯವಾಗಿದೆ. ಮೋಹನ ರಾಗದಲ್ಲಿರುವ "ಭವನುತ" ಎಂಬ ಕೃತಿಯನ್ನು ಜಲತರಂಗಿನಲ್ಲಿ ಬಾರಿಸಲು ಯೋಗ್ಯವಾಗಿದೆ. ಪಂಚರತ್ನಗಳಲ್ಲಿ ಒಂದಾದ ಮತ್ತು ಹೆಸರುವಾಸಿಯಾದ "ಎಂದರೋ ಮಹಾನುಭಾವುಲು" ಎಂಬ ಕೃತಿಯು ಬಾಯಿಂದ ಹಾಡಲು ಯೋಗ್ಯವಾಗಿದೆ. ತ್ಯಾಗರಾಜರಿಗೆ ವರ್ಣನಾ ಶಕ್ತಿಯು ಚೆನ್ನಾಗಿತ್ತು ಎಂಬುದು "ದೊರಕುನಾ ಇಟುವಂಟಿ" ಎಂಬ ಕೃತಿಯಿಂದ ತಿಳಿದುಬರುತ್ತದೆ.

ತ್ಯಾಗರಾಜರು ವೇದಗಳೂ ಉಪನಿಷದಗಳೂ ಭಗವದ್ಗೀತೆಯಲ್ಲಿಯೂ ಪಾರಂಗತರಾಗಿದ್ದರೆಂದು ಕೆಲವು ಕೃತಿಗಳಿಂದ ತಿಳಿಯಲು ಬಹುದು. ಋಗ್ವೇದದ "ಏಕಂಸದ್ವಿಪ್ರಾ ಬಹುಧಾ ವದಂತಿ" ಎಂಬ ವಿಚಾರವೂ, ಅಂಧಸ್ಯ ಪಾರೇ ಭುವನಸ್ಯ ಮಧ್ಯೇನಾಕಸ್ಯ ಪೃಷ್ಠೇ ಮಹತೋ ಮಹೀಯಾನ್" ಎಂಬ

ತೈತರೀಯ ಉಪನಿಷತಿನ ಅಂಶವೂ ಇವರ "ಉಂಡೇದಿ ರಾಮುದೊಕ್ಕಡು" ಎಂಬ ಕೃತಿಯಲ್ಲಿ ಕಂಡುಬರುತ್ತದೆ. ಭಗವದ್ಗೀತೆಯಲ್ಲಿಯ "ನಸ್ತ್ರೀ ನಷಂಡೋ ನಪುಮಾನ್ ನಜಂತುಃ" ಎಂಬ ವಿಷಯವು ಇವರ "ಏ ತಾವು ನರಾನಿಲಕಡನೀಕು" ಎಂಬ ಹಾಡಿನಲ್ಲಿಯೂ "ಅವನ್ಯಾಕ್ಷಿಂತಯಂತೋಮಾಂ" ಎಂಬ ವಿಷಯವು "ಸುಜನ ಜೀವನ" ಎಂಬ ಹಾಡಿನಲ್ಲಿಯೂ ಕಂಡುಬರುತ್ತದೆ.

ಇವರು ಗಾನವಿಶಾರದರೂ ಮಾತ್ರವಲ್ಲ ತತ್ವಜ್ಞಾನಿಗಳೂ ಆಗಿದ್ದರು. ಅದ್ವೈತಿಗಳು ಇವರು "ಶತರಾಗರತ್ನಮಾಲಿಕೆ" ಎಂಬ ಗ್ರಂಥವನ್ನು ಬರೆದಿರುವರು. "ಸೊಗಸುಗಾಮೃದಂಗ ತಾಳಮು ಜತಗೂರ್ಪಿ ಸೊಕ್ಕಜೇಯಟು" ಎಂಬುದೇ ಇವರ ಮುಖ್ಯ ಧ್ಯೇಯವಾಗಿತ್ತು. ಇವರಿಗೆ ಯಜ್ಞಗಳಲ್ಲಿಯೂ ಪಶುಹಿಂಸೆಯಲ್ಲಿಯೂ ಸಂತೋಷವಿರಲಿಲ್ಲ. ಈ ಸಂಗತಿಯು "ಯಜ್ಞಾದುಲು ಸುಖಮನುವಾರಿಗಿ ಸಮಮಜ್ಞಾನುಲು ಕಲರೇ" ಎಂಬ ಹಾಡಿನಿಂದ ತಿಳಿದುಬರುತ್ತದೆ.

ಇವರ ಸ್ವಭಾವದ ವಿಷಯ ಏನೊಂದೂ ತಿಳಿದುಬರುವುದಿಲ್ಲ. ಇವರಿಗೆ ಸಿಟ್ಟು ಸ್ವಲ್ಪ ಹೆಚ್ಚಾಗಿತ್ತು. ಈ ಗುಣವು ಇವರಿಗೆ ತಾಯಿಂದ ಬಂತೆಂದು ಹೇಳುತ್ತಾರೆ. ಆದರೆ ಇದನ್ನು ತಿಳಿದು ಸಿಟ್ಟು ಬಹಳ ಕೆಟ್ಟದು ಎಂಬುದನ್ನು ಕುರಿತು "ಶಾಂತಮೂಲೇಕ ಸೌಖ್ಯಮುಲೇದು" ಎಂಬ ಹಾಡನ್ನು ಹಾಡಿರುವರು. ಇವರು ಭಗವತ್ ಭಕ್ತರು ಮಾತ್ರವೇ ಆಗಿರಲಿಲ್ಲ. ದೇವಭಕ್ತರ ಮೇಲೆಯೂ ವಿದ್ವಾಂಸರ ಮೇಲೂ ಇವರಿಗೆ ಪ್ರೀತಿಯು ಇತ್ತು. ಈ ಸಂಗತಿಯು "ಎಂದರೊ ಮಹಾನುಭಾವುಲು"ವೆಂಬ ಹಾಡಿನಿಂದ ಕಂಡುಬರುತ್ತದೆ.

ಒಂದು ದಿನ ಶ್ರೀ ರಾಮನು ಇವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಸನ್ಯಾಸಾಶ್ರಮವನ್ನು ಪಡೆದು ಒನೇ ಪದದಲ್ಲಿ "ಸಾಮ್ರಾಜ್ಯ ಪದವಿಯನ್ನು ಪಡಿಯಬೇಕೆಂದು ಹೇಳಿದಂತಾಯಿತು. ವೈದಿಕೋಕ್ತಿಯಂತೆ ತ್ಯಾಗರಾಜರು ಸನ್ಯಾಸಿಗಳಾದರು. ಏಳನೇ ದಿನ ಇವರೂ ಇವರ ಶಿಷ್ಯರೂ ರಾಮ ಭಜನೆಯನ್ನು ಮಾಡುತ್ತಿರುವಾಗ (೧೮೪೭ನೇ ಇಸವಿ) ಪರಾಭವ ಸಂವತ್ಸರದ ಪುಷ್ಯ ಬಹುಳ ಪಂಚಮಿ ದಿವಸ ಸ್ವರ್ಗಸ್ಥರಾದರು. ಆಗ ಇವರಿಗೆ ೮೦ ವರುಷ ಪ್ರಾಯ.

ಚರಕದ ಮಹತ್ವ.

ಕೊಲಂಬಿಯ ಕೊಲೇಜಿನವರೊಬ್ಬರು ಹಿಂದೂ ಪತ್ರಿಕೆಯಲ್ಲಿ ಬರೆದುದರ ಸಾರಾಂಶ.

ಸುಮಾರು ಒಂಭತ್ತು ವರುಷಗಳ ಮೊದಲು ಹಿಂದುಸ್ಥಾನದ ದಾರಿದ್ರ್ಯ ನಿವಾರಣೆಗೆ ಚರಕವು ಒಂದು ಸಾಧನವಾಗಿದೆಯೆಂದು ಮಹಾತ್ಮಾಜಿಯವರೆಂದಾಗ, ಹಲವು ರಸಾಯನ ಶಾಸ್ತ್ರಜ್ಞರೂ, ರಾಷ್ಟ್ರೀಯ ಧುರೀಣರೂ ಅವರ ಮಾತಿಗೆ ಬೆಲೆ ಕೊಡಲಿಲ್ಲ. ಈಗ ಚರಕ ಪ್ರಚಾರಕ್ಕಾಗಿ ಶ್ರಮ ಪಡುವ ಸರ್ ಪಿ. ಸಿ. ರೇಯವರೂ ಕೂಡ ಅವರ ಮಾತನ್ನು ಲಕ್ಷಿಸದವರಲ್ಲಿ ಒಬ್ಬರಾಗಿದ್ದರು. ದೊಡ್ಡದೊಡ್ಡ ಮೆಶಿನುಗಳ ಎದುರು ನಿಲ್ಲಲು ಚರಕಕ್ಕೆ ಯಾವ ಶಕ್ತಿಯಿದೆಯೆಂಬುದೇ ಅವರ ಹೇಳಿಕೆಯ ಆಧಾರವಾಗಿದ್ದಿತು. ಇಂಥ ಸಣ್ಣ ಪುಟ್ಟ ಚರಕಗಳು ಬ್ರಿಟಿಷರ ಹತ್ತಿ ಕೈಗಾರಿಕೆಗೆ ಈಗಿನಷ್ಟು ಆಘಾತವನ್ನುಂಟುಮಾಡಬಹುದೆಂದು ಆಗ ಯಾರೂ ನೆನೆಸಿದ್ದಿಲ್ಲ. ಮಹಾತ್ಮಾಜಿಯವರಿಗೆ, ಚರಕದಲ್ಲಿ ನಂಬಿಗೆಯು ಬಹಳವಿದ್ದಿತು. ಅಂತೆಯೇ ಈಗ, ಕೆಲವು ವರುಷಗಳ ಅವಧಿಯೊಳಗೆ, ಚರಕವು ಮೆಶಿನುಗಳೊಡನೆ ಸ್ಪರ್ಧಿಸುವುದು ಮಾತ್ರವಲ್ಲದೆ, ಲೆಂಕೆಶಾಯರಿನ ಪ್ರಚಂಡ ಗಿರಣಿಗಳೊಡನೆಯೂ ಸ್ಪರ್ಧಿಸುವದೆನ್ನಬಹುದು. ಚರಕದ ಹಾದಿಯಲ್ಲಿ ಹಲವು ತೊಡಕುಗಳಿದ್ದರೂ, ಅವುಗಳಿಗದು ಹೆದರುವುದಿಲ್ಲ.

ಬ್ರಿಟಿಷರ ಹತ್ತಿಯ ಕೈಗಾರಿಕೆಯು ಪ್ರಬಲವಾಗುವುದರ ಮೊದಲು ಅಂದರೆ ಹದಿನೆಂಟನೆಯ ಶತಮಾನದ ಕೊನೆಯ ವರೆಗೂ ಯುರೋಪ ರಾಜಕ್ಕೆ ಬೇಕಾದ ಹತ್ತಿ ಸಾಮಾನುಗಳು ಹಿಂದುಸ್ಥಾನದಲ್ಲಿಯೇ ತಯಾರಿಸಲ್ಪಡುತ್ತಿದ್ದವು. ಆಗಿನ ಹಿಂದುಗಳ ಕೈಗಾರಿಕೆಯೇ ಮಾಯವಾದುದೇ, ಈಗಿನ ಹಿಂದೂ ಸಮಾಜದ ಆರ್ಥಿಕ ಅಭಿವೃದ್ಧಿಗೆ ತೊಡಕುಂಟಾಯಿತು. ಬ್ರಿಟಿಷ ಇಸ್ಟ್ ಇಂಡಿಯಾ ಕಂಪೆನಿಯವರು ಇಲ್ಲಿ ಕಾಲಿಟ್ಟುದೇ ಹಿಂದುಗಳ ಅವನತಿಗೆ ಪ್ರಾರಂಭವಾಯಿತು. ಹಿಂದುಗಳ ಕೈಗಾರಿಕೆಯ ಶಕ್ತಿಯೆಲ್ಲವನ್ನೂ ಅವರು ಕಸಕೊಂಡರು. ಹೆಚ್ಚೇಕೆ, ೧೮೧೩ನೇ ಇಸವಿಯಲ್ಲಿ ಕಲಕತ್ತದಿಂದ ಲಂಡನಿಗೆ ೨೦೦ ಸಾವಿರ ಪವನು ಬೆಲೆ ಬಾಳುವ ಹತ್ತಿ ಸಾಮಾನನ್ನು ಒಯ್ದಿದ್ದರು. ಆದರೆ ೧೮೩೦ನೇ ಇಸವಿಯಲ್ಲಿ ೨೦೦ ಸಾವಿರ ಪೌಂಡು ಬೆಲೆ ಬಾಳುವ ಹತ್ತಿ ಸಾಮಾನನ್ನು ಲಂಡನಿನಿಂದ ಕಲಕತ್ತಕ್ಕೆ ತರಿಸಬೇಕಾಯಿತು. ಅಸಂಖ್ಯಾತ ಹಿಂದೂ ಕೆಲಸಗಾರರು ಕೆಲಸವಿಲ್ಲದೆ ದಿದ್ದಿರಬೇಕಾಯಿತು. ಬಡತನದಿಂದ ನರಳಬೇಕಾಯಿತು. ಈಗ ಹಿಂದೂಸ್ಥಾನವು ಕೈಗಾರಿಕೆಗಳಿಗಾಗಿ ಪರರಾಜ್ಯದ ಮೇಲೆ ಅವಲಂಬಿಸಿರುವಷ್ಟು, ಇತರ ಯಾವ ರಾಜ್ಯವೂ ಇರುವುದಿಲ್ಲ, ಹಿಂದೂಸ್ಥಾನದಲ್ಲಿ ಬೆಳೆಯುವಷ್ಟು ಮೂಲ ಸಾಮಗ್ರಿಗಳು ಇನ್ನೆಲ್ಲಿಯೂ ಇರುವುದಿಲ್ಲ.

ಇಂಗ್ಲಿಷರು ಸೆಳಕೊಂಡಿರುವ ಈ ಮುಖ್ಯ ಕೈಗಾರಿಕೆಯನ್ನೇ ಪುನಃ ಪ್ರಾರಂಭಿಸಬೇಕೆಂದು ಮಹಾತ್ಮಾಜಿಯವರು ಪ್ರಯತ್ನಪಡುತ್ತಿರುವರು. ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಹಿಂದೂಸ್ಥಾನವು ಮೂರನೆಯದಾಗಿದೆ. ಆದ್ದರಿಂದ ಹತ್ತಿ ಕೈಗಾರಿಕೆಯು ನಮಗೆ ಸುಲಭವಾಗಿದೆ. ಎರಡನೆಯದಾಗಿ ಸರ್ವರಿಗೂ ಯೋಗ್ಯವೂ ಆದುದಾಗಿದೆ. ಪರದೇಶದಿಂದ ಹಿಂದೂಸ್ಥಾನಕ್ಕೆ ತರಿಸುವ ಸಾಮಾನುಗಳಲ್ಲಿ ಹತ್ತಿಯ ಸಾಮಾನೇ ವಿಶೇಷವಾಗಿದೆ. ಬ್ರಿಟಿಷರ ಹತ್ತಿ ಕೈಗಾರಿಕೆಯು ಇಷ್ಟು ಅಭಿವೃದ್ಧಿಗೆ ಬರಲು ಹಿಂದೂಸ್ಥಾನವೇ ಕಾರಣವು. ಬ್ರಿಟನಿನಲ್ಲಿ ತಯಾರಾಗುವ ಹತ್ತಿ ವಸ್ತ್ರಗಳಲ್ಲಿ ಶೇಕಡಾ ೮೦ರಷ್ಟು ಪೂರ್ವದೇಶಗಳಿಗೆ ಬರುವದು. ಅದರಲ್ಲಿ ಹೆಚ್ಚಿನದು ಹಿಂದೂದೇಶಕ್ಕೆ ಬರುವುದು. ೧೯೨೦—೨೧ನೇ ಇಸವಿಯಲ್ಲಿ ಹಿಂದೂಸ್ಥಾನಕ್ಕೆ ರೂಪಾಯಿ ೧,೫೪೦,೦೦೦,೦೦೦ ಹತ್ತಿ ವಸ್ತ್ರವು ಹೊರಗಿನಿಂದ ಬಂದಿತು. ಇಷ್ಟು ವಸ್ತ್ರವನ್ನಾದರೂ ಇಲ್ಲಿಯೇ ತಯಾರಿಸಬಹುದಾಗಿತ್ತು ಎಂದು ಮಹಾತ್ಮಾಜಿಯವರು ಹೇಳುವರು. ನಾವೇ ತಯಾರಿಸಬಹುದಾದ ಈ ವಸ್ತ್ರವನ್ನು ಪರದೇಶಗಳಿಂದ ತರಿಸುವ ಸಲುವಾಗಿ ನಮ್ಮ ದೇಶದಲ್ಲಿ ಬೆಳೆಯುವ ಹೇರಳ ಅಕ್ಕಿಯನ್ನು ಪರದೇಶಕ್ಕೆ ಕಳುಹಿ ನಮ್ಮ ಸಾವಿರಾರು ಕುಟುಂಬಗಳನ್ನು ಬಡತನಕ್ಕೀಡು ಮಾಡುವೆವು. ಇಷ್ಟು ಬೆಲೆಗೆ ಪರದೇಶಿ ವಸ್ತ್ರವನ್ನು ಕೊಂಡುಕೊಂಡು ನಮ್ಮ ನೇಕಾರರೂ ಕೂಡ ವಸ್ತ್ರ ನೇಯದಂತೆ ಮಾಡುವೆವು.

೧೯೨೫ನೇ ಇಸವಿಯಲ್ಲಿ ಯುನೈಟೆಡ್ ರಾಜ್ಯದಲ್ಲಿ ತಯಾರಾದ ಹತ್ತಿ ವಸ್ತ್ರದಲ್ಲಿ ಸುಮಾರು ಶೇಕಡಾ ೩೩ರಷ್ಟು ಹಿಂದೂಸ್ಥಾನಕ್ಕೆ ಹೋಯಿತು. ಹಿಂದೂಸ್ಥಾನಕ್ಕೆ ಬೇಕಾಗಿದ್ದ ಗಿರಣಿ ವಸ್ತ್ರದ ಶೇಕಡಾ ೪೫ರಷ್ಟು ಯುನೈಟೆಡ್ ರಾಜ್ಯಗಳಿಂದ ಬಂದಿತ್ತು. ಇದರಿಂದ ತಿಳಿಯಬಹುದೇನಂದರೆ, ಬ್ರಿಟಿಷ ಹತ್ತಿ ಕೈಗಾರಿಕೆಯನ್ನು ಮಾಡುವವರಲ್ಲಿ ಮೂರನೇ ಒಂದಂಶ ಜನ ಉದ್ಯೋಗಕ್ಕೆ ಹಿಂದೂಸ್ಥಾನದಲ್ಲಿ ಕೆಲಸವಿಲ್ಲದವರಲ್ಲಿ ಶೇಕಡಾ ೩೦ರಷ್ಟು ಜನರ ನಿರುದ್ಯೋಗವೇ ಕಾರಣವೆಂದು. ಅಂದರೆ, ೩೭,೦೦೦,೦೦೦ ಜನ ಹಿಂದೀಯರನ್ನು ನಿರುದ್ಯೋಗಿಗಳನ್ನಾಗಿ ಮಾಡಿ, ೧೦೪,೦೦೦ ಬ್ರಿಟಿಷರನ್ನು ಉದ್ಯೋಗಿಗಳನ್ನಾಗಿ ಮಾಡಿದ ಹಾಗಾಯಿತು. ಇಷ್ಟು ಜನ ನಿರುದ್ಯೋಗಿಗಳಾದ ಜನರಿಗೆ ಕೆಲಸವನ್ನೊದಗಿಸಿ, ಅವರು ದುಡಿಯುವುದು ದಿನಕ್ಕೆ ಮೂರಾಣೆಯೆಂದೇ ಲೆಕ್ಕಮಾಡಿದರೂ ಅವರು ಒಟ್ಟಾರೆ, ರೂಪಾಯಿ ೫,೪೦,೦೦೦,೦೦೦ನ್ನು ಆರ್ಜಿಸಿದಂತಾಗುವುದು. ಆದ್ದರಿಂದ ನಮ್ಮಲ್ಲಿ ವಸ್ತ್ರವನ್ನು ಮಾಡದೆ ಪರದೇಶದವರ ವಸ್ತ್ರವನ್ನು ಕೊಂಡುಕೊಳ್ಳುವದರಿಂದ ನಮ್ಮ ಜನರನ್ನು ನಿರುದ್ಯೋಗಿಗಳಾಗಿರಿಸುವುದು ಮಾತ್ರವಲ್ಲದೆ, ನಮ್ಮ ದೇಶವನ್ನು ಬಡತನದ ತವರು ಮನೆಯನ್ನಾಗಿ ಮಾಡಿದಂತಾಗುವುದು.

ಹಾಗಾದರೆ, ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿ, ದೇಶವು ಸಂಪನ್ನವಾಗುವ ಹಾಗೆ ಮಾಡುವುದೆಂತು? ವಸ್ತ್ರಕ್ಕಾಗಿ ನಾವು ಪರದೇಶಕ್ಕೆ ಕಳುಹಿಸುವ ಅಪಾರದ್ರವ್ಯವನ್ನು ಮತ್ತು ನಮ್ಮ ಜನರಿಗೆ ಬೇಕಾಗುವ ಅಕ್ಕಿ ಮತ್ತು ಗೋದಿಯನ್ನು ಪರದೇಶಕ್ಕೆ ಹೋಗದಂತೆ ತಡೆಯುವುದರಿಂದ ನೂಲುವ ಮತ್ತು ನೇಯುವ ಕೈಗಾರಿಕೆಯನ್ನು ನಮ್ಮ ಜನರಿಗೆ ಕಲಿಸಿ, ಪ್ರತಿಯೊಂದು ಮನೆಯಲ್ಲಿಯೂ ಆ ವೃತ್ತಿಯನ್ನು ಪ್ರಾರಂಭಿಸುವುದರಿಂದ ಇದು ಸಾಧ್ಯವಿದೆಯೆಂದೇ ಮಹಾತ್ಮಾಜಿಯವರು ಕಂಡುಕೊಂಡು, ೧೯೨೦ನೇ ಇಸವಿಯಲ್ಲಿ ಚರಕವನ್ನು ಪ್ರಚಾರಕ್ಕೆ ತಂದು ವಿದೇಶಿ ವಸ್ತ್ರ ಬಹಿಷ್ಕಾರವೆಂಬ ಚಳವಳವನ್ನು ಹೂಡಿದರು. ಪ್ರತಿಯೊಬ್ಬ ಸ್ವದೇಶಿ ಟೊಪ್ಪಿಯನ್ನು ಧರಿಸತೊಡಗಿದರು. ಈ ಚಳವಳವು ಬೇರೂರಿನಲ್ಲಿ ನಿಲ್ಲಬೇಕಾದರೆ ಮೂರು ವರುಷಗಳು ಕಳೆದುಹೋದುವು. ಆದರೂ ಇದರಿಂದ ಹಿಂದೂಸ್ಥಾನದ ಅಭಿವೃದ್ಧಿಯಾಗುವದೆಂದು ಯಾವನೊಬ್ಬನೂ ನೆನಸಲಿಲ್ಲ. ೧೯೨೩ನೇ ಇಸವಿಯ ವರೆಗೆ ಖಾದಿಯು ಅಷ್ಟೊಂದು ಉತ್ಪನ್ನವಾಗುತ್ತಿರಲಿಲ್ಲ. ಆದರೆ ಈಗ ಚರಕವು ಪ್ರತಿ ಮನೆಯಲ್ಲಿದೆ. ನೂಲುವ ಕೈಗಾರಿಕೆಯು ಪುನಃ ಮೊದಲಿನಂತೆಯೇ ಬೆಳೆಯಬಹುದೆಂದು ತೋರುತ್ತಿದೆ.

ಕಳೆದ ನಾಲ್ಕೈದು ವರುಷಗಳಿಂದ ಖಾದಿ ಉತ್ಪತ್ತಿಯಾಗುವ ಸುಮಾರು ೧೮೭ ಕೇಂದ್ರ ಸ್ಥಾನಗಳುಂಟಾಗಿವೆ. ಈ ಸ್ಥಳಗಳಲ್ಲಿ ಉತ್ಪನ್ನವಾಗುವ ಖಾದಿಯನ್ನು ಮಾರಲು ಮುನ್ನೂರಕ್ಕೆ ಮಿಕ್ಕಿದ ಖಾದಿ ಸಂಗ್ರಹಾಲಯಗಳಿವೆ. ಒಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನಿನವರ ಕೈಕೆಳಗೆ ಮಾತ್ರವೇ ೫೫೩ ಜನ ಕೂಲಿಯಾಳುಗಳೂ ೫೦,೬೯೯ ನೂಲುವವರೂ, ೧೧೦ ನೂಲು ವಿಂಗಡಿಸುವವರೂ ಮತ್ತು ೩೪೦೭ ನೇಕಾರರೂ ಇರುವರು. ನೂಲುವ ಕೈಗಾರಿಕೆಗೆ ಈಗ ಶಾಲೆಗಳಲ್ಲಿಯೂ ತುಂಬಾ ಪ್ರೋತ್ಸಾಹವು ದೊರಕುತ್ತಿದೆ. ಕಳೆದ ಎರಡು ವರುಷಗಳಿಂದ ನೂಲುವ ಕೈಗಾರಿಕೆಯನ್ನು ಸುಮಾರು ೭೪೦ ಶಾಲೆಗಳಲ್ಲಿ ಪ್ರಾರಂಭಿಸಿ, ಈಗ ನೂಲುವಂತಹ ೬೫೪೦ ಮಕ್ಕಳಿರುವರು. ಖಾದಿ ಚಳವಳವು ೧೯೨೭ರಲ್ಲಿ ೧೯೨೦ಕ್ಕಿಂತ ೨೦ ಪಾಲು ಅಧಿಕವಾಗಿದ್ದಿತು. ಇದರಿಂದ ಈಗ ೧೫೦೦ ಹಳ್ಳಿಗಳಲ್ಲಿ ಕೆಲಸವಿಲ್ಲದವರಿಗೆ ಕೆಲಸವು ಪ್ರಾರಂಭವಾಗಿದೆ.

ಇದುವರೆಗೆ ಎಷ್ಟು ಖಾದಿಯಾಯಿತು, ಎಷ್ಟು ಮಾರಿಹೋಯಿತು ಎಂದು ಮೇಲಿನ ಸಂಘದವರ ವರದಿಯಿಂದ ತಿಳಿದುಕೊಳ್ಳಬಹುದು. ಮೊದಲಿನ ಮೂರು ವರುಷಗಳಲ್ಲಿ ಹೆಚ್ಚು ಖಾದಿಯು ತಯಾರಿಸಲ್ಪಡಲಿಲ್ಲ. ೧೯೨೫ನೇ ಇಸವಿಯಲ್ಲಿ ೧೯,೩೪೮ ರೂಪಾಯಿಯ ಖಾದಿಯೂ ೧೯೨೬ನೇ ಇಸವಿಯಲ್ಲಿ ೨೬,೧೨,೫೧೦ ರೂಪಾಯಿಯ ಖಾದಿಯೂ ತಯಾರಿಸಲ್ಪಟ್ಟಿತು. ೧೯೨೬ರಲ್ಲಿ ರೂಪಾಯಿ ೨,೦೮೭,೦೧೩, ೧೯೨೭ನೇ ಇಸವಿಯಲ್ಲಿ ೨೩,೪೫,೭೧೪ ರೂಪಾಯಿಗಳ ಖಾದಿಯು ಉತ್ಪನ್ನವಾಯಿತು. ಒಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನಿನವರು ಮೊದಲಾಗಿ ಹಾಕಿದ ಭಂಡವಾಳವು ರೂಪಾಯಿ ೧೮,೦೦,೦೦೦.

ಚರಕದಿಂದ ಬ್ರಿಟಿಷರ ಹತ್ತಿ ಕೈಗಾರಿಕೆಗೆ ಎಷ್ಟು ಪೆಟ್ಟು ಇದೆಯೆಂದ ಈ ಕೆಳಗಿನ ಸಂಗತಿಯಿಂದ ತಿಳಿಯಬಹುದು. ೧೯೧೩ನೇ ಇಸವಿಯಲ್ಲಿ ಬ್ರಿಟನಿನಿಂದ ಹಿಂದೂಸ್ಥಾನಕ್ಕೆ ೧೮,೭೧೯ ಟನ್ ಹತ್ತಿ ನೂಲು ಬಂದಿತ್ತು. ೧೯೨೫ರಲ್ಲಿ ೭,೯೯೨ ಟನ್ ಮಾತ್ರವೇ ಬಂತು. ಹತ್ತಿ ಸಾಮಾನು ಇಲ್ಲಿಗೆ ಬಂದುದು ೧೯೧೩ನೇ ಇಸವಿಯಲ್ಲಿ ೨೫೩,೪೫೬ ಟನ್ ಆದರೂ ೧೯೨೫ನೇ ಇಸವಿಯಲ್ಲಿ ಬರೆ ೧೨೨,೨೧೩ ಟನ್‌ಗಳು. ೧೯೨೫ರಲ್ಲಿ ವಿಕ್ರಿತವಾದ ಖಾದಿಯ ಬೆಲೆಯು ರೂಪಾಯಿ ೪೧,೦೩,೮೪೨, ಇದರಿಂದಲೂ, ಹಿಂದೂಸ್ಥಾನದ ಗಿರಣಿಗಳಲ್ಲಿ ವಸ್ತ್ರವಾಗುತ್ತಿದ್ದುದರಿಂದಲೂ ಬ್ರಿಟಿಷರ ಕೈಗಾರಿಕೆಗೆ ಬಹಳ ತೊಡಕಾಯಿತು. ಲೀಡ್ಸಿನಲ್ಲಿ ಬ್ರಿಟಿಷ ಇಕೊನೊಮಿಸ್ಟರಾದ ಪ್ರೊಫೆಸರ್ ಜಿ. ಎಚ್. ಜೋನ್ಸರವರು.

"ಆಸ್ಯಾ ಖಂಡಕ್ಕೆ ನಮ್ಮ ದೇಶದಿಂದಲೂ, ಇತರ ದೇಶಗಳಿಂದಲೂ ತರಿಸುವ ಹತ್ತಿಯ ವಸ್ತ್ರದ ಪರಿಮಾಣವು ಕಡಿಮೆಯಾಗಿದೆ. ಇದರಲ್ಲೂ ಹಿಂದೂಸ್ಥಾನದಲ್ಲಿ ಅತೀ ಕಡಿಮೆಯಾಗಿದೆ" ಎಂದು ಒಪ್ಪಿರುವರು.

ಬ್ರಿಟನಿನಲ್ಲಿ ಹತ್ತಿಯ ಕೈಗಾರಿಕೆಯು ಬೆಳೆಯುವಷ್ಟಕ್ಕೆ ನಿರುದ್ಯೋಗಿ ಹಿಂದುಗಳ ಸಂಖ್ಯೆಯು ಬೆಳೆಯುವುದೆಂದು ಮೊದಲೇ ಹೇಳಿರುತ್ತದೆ. ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು ೧೯ನೇ ಶತಮಾನದ ಆದಿಯಲ್ಲಿ ಬ್ರಿಟನ್ನಿನಲ್ಲಿಯೂ ನಿರುದ್ಯೋಗವು ವಿಶೇಷವಾಗಿದ್ದಿತು. ಆದರೆ ಹಿಂದೂ ಹತ್ತಿ ಕೈಗಾರಿಕೆಯನ್ನು ನಾಶಮಾಡಿ ಅಲ್ಲಿ ಉದ್ಯೋಗವು ಪ್ರಾರಂಭವಾಯಿತು. ಇದರಿಂದ ಹಿಂದೂಸ್ಥಾನದವರಿಗೆ ಉಂಟಾದ ಅಪಾರ ನಷ್ಟವನ್ನು ವರ್ಣಿಸಿ ತೀರದು.

ಈಗ ಮಹಾತ್ಮಾಜಿಯವರು ಹೂಡಿದ ವಿದೇಶಿ ವಸ್ತ್ರ ಬಹಿಷ್ಕಾರ ಚಳವಳಿಂದಲೂ, ಇಲ್ಲಿ ಬಹಳ ಖಾದಿಯು ತಯಾರಾಗುತ್ತದಾದುದರಿಂದಲೂ, ಬ್ರಿಟನಿನಲ್ಲಿ ಈಗ ಮೊದಲು ಹಿಂದೂಸ್ಥಾನದಲ್ಲಿದ್ದಂತೆ ನಿರುದ್ಯೋಗವು ಬೆಳೆಯುತ್ತಾ ಬಂದಿರುತ್ತದೆ. ಅಲ್ಲಿರುವಷ್ಟು ನಿರುದ್ಯೋಗವು ಇತರ ಯಾವ ರಾಜ್ಯದಲ್ಲಿಯೂ ಇರುವುದಿಲ್ಲ. ಹತ್ತಿಯ ಕೈಗಾರಿಕೆಯು ಇಳಿದುದೇ ಈ ನಿರುದ್ಯೋಗಕ್ಕೆ ಕಾರಣವೆಂದು ಒಪ್ಪುವರು.

ಹೀಗೆ ಚರಕವು ತನ್ನ ಪಥದಲ್ಲಿದ್ದ ಹಲವು ತೊಡಕುಗಳನ್ನು ಭೇದಿಸಿ, ತನ್ನ ಕೆಲಸವನ್ನು ನಡೆಸುತ್ತಲೇ ಮುಂದರಿಯುತ್ತಿದೆ. ಇಷ್ಟು ಸಣ್ಣ ಅವಧಿಯೊಳಗೆ, ಬ್ರಿಟಿಷ ರಾಜ್ಯದಲ್ಲಿ ಅದು ವಿಶೇಷ ನಷ್ಟವನ್ನುಂಟುಮಾಡಿತು. ಮಿಲಿಯಗಟ್ಟಲೆ ಕೃಷಿಕರು ಕೆಲಸವಿಲ್ಲದಿರುವಾಗ ನೂಲುವ ಕೆಲಸವನ್ನು ಕೈಕೊಂಡರೆ, ಬಹಳ ಖಾದಿಯು ಉತ್ಪನ್ನವಾಗಬಹುದು. ಬರಬಿದ್ದು ಹೊಟ್ಟೆಗಿಲ್ಲದೆ ನರಳುವವರಿಗೆ ಚರಕವು ಅನ್ನಕೊಡುತ್ತದೆ. ಬರಬಿದ್ದು ದೇಶಗಳಲ್ಲಿ ನೆರೆಯಿಂದ ಪೀಡಿತವಾದ ರಾಜ್ಯಗಳಲ್ಲಿ, ಮುಷ್ಕರದಿಂದ ಹೊಟ್ಟೆಗಿಲ್ಲದೆ ಸಾಯುವ ಜನರಿರುವ ಹಳ್ಳಿಗಳಲ್ಲಿ, ಚರಕವು ಅತ್ಯಂತ ಸಹಾಯಕವಾಗಿದೆ. ನಿರುದ್ಯೋಗಿಗಳಿಗೆ ಕೆಲಸಕೊಡಲು ಇದು ಮೊದಲನೆಯ ಸಾಧನವು. ನೂಲುವುದರಿಂದ ಅದಕ್ಕೆ ಸಂಬಂಧಿಸಿದ ಹಲವು ಇತರ ಕೈಗಾರಿಕೆಗಳೂ ಪ್ರಾರಂಭವಾಗಿ, ಮಿಲಿಯಗಟ್ಟಲೆ ಜನರಿಗೆ ಹೊಟ್ಟೆಗೂ ಬಟ್ಟೆಗೂ, ಸಂಪಾದನೆಯಾಗುವುದು. ಈಗ ಆಗುತ್ತಿರುವ ಖಾದಿಯು ಹಿಂದೂಸ್ಥಾನಕ್ಕೆ ಬೇಕಾಗುವ ವಸ್ತ್ರದ ಅರೆವಾಸಿ ಇದೆ. ಖಾದಿ ಚಳವಳವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿದರೆ ಇನ್ನು ಕೆಲವು ವರುಷಗಳಲ್ಲೇ ನಮಗೆಲ್ಲರಿಗೂ ಬೇಕಾಗುವಷ್ಟು ಖಾದಿಯನ್ನು ತಯಾರಿಸಬಹುದು.

ಚರಕದ ಇಂತಹ ಪರಿಣಾಮದಿಂದ ದಿನೇ ದಿನೇ ಅದರ ಮೇಲೆ ಜನರ ನಂಬಿಗೆಯು ಬೆಳೆಯುತ್ತಲಿದೆ. ದೇಶ ಹಿತಾಕಾಂಕ್ಷಿಗಳು ಅದನ್ನು ಇನ್ನಷ್ಟು ಅಭಿವೃದಿಗೊಳಿಸಲು ಯತ್ನಿಸಬೇಕು. ನಾವು ಬ್ರಿಟಿಷ ವಸ್ತ್ರವನ್ನು ಬಹಿಷ್ಕರಿಸುತ್ತಿರುವೆವಾದರೂ ಈಗಿನ ಬಹಿಷ್ಕಾರವು ಸಾಲದು. ಅದನ್ನು ಇನ್ನಷ್ಟು ಹುರುಪಿನಿಂದ ಮಾಡಬೇಕು. ವಸ್ತ್ರ ಬಹಿಷ್ಕಾರವನ್ನು ಮಾತ್ರವಲ್ಲ, ಡಾಕ್ಟರ ಅನ್ಸಾರಿಯವರ ಅಭಿಪ್ರಾಯದಂತೆ ವಸ್ತು ಬಹಿಷ್ಕಾರವನ್ನೂ ಪ್ರಾರಂಭಿಸಬೇಕು. ನಮಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಇಲ್ಲಿಯೇ ತಯಾರಿಸುವಂತಾಗಬೇಕು. ಆಗ ಮಾತ್ರವೇ ಹಿಂದೂಸ್ಥಾನಕ್ಕೆ ಲಾಭವುಂಟಾಗುವುದು. ಚರಕವು ಸಾರುತ್ತಿದೆಯೇನಂದರೆ—"ಬ್ರಿಟಿಷ ವಸ್ತು ಬಹಿಷ್ಕಾರವನ್ನು ಇನ್ನಷ್ಟು ಚೆನ್ನಾಗಿ ಮಾಡಬೇಕು. ವಿದೇಶಿ ವಸ್ತು ಬಹಿಷ್ಕಾರವನ್ನೇ ಪ್ರಾರಂಭಿಸಬೇಕು. ಹಿಂದೂ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೀಯಬೇಕು." ದೇಶವಾತ್ಸಲ್ಯವುಳ್ಳ ಪ್ರತಿಯೊಬ್ಬ ಭಾರತೀಯನೂ ಇದನ್ನು ಮರೆಯದಿರಲಿ.

ಶುಕ್ರವಾರ ಆಗೋಸ್ತು ೧೯೨೮

ವಗೈರೆ ಬೇಟೆಯ ಹತ್ಯಾರುಗಳು.

ಮೇಲಣ ಸಾಮಾನುಗಳನ್ನು ಕೊಂಡು
ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ
ದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ
ಸಿಗುತ್ತವೆ!
ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾ

ಆಲ್ಲಿಭಾಯಿ ಎಂಡ್ ಸನ್ಸ್,
ನ್ನು ಧಾರಾಳವಾಗಿ ಆಮದು ಮಾಡುವವರು,
ಇವರಲ್ಲಿ ಅತಿ ಸುಲಭ ಬೆಲೆ.
, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ಖಾತ್ರಿಯಾಗುವದು!!
ಫಲತೃಪ್ತಿಕರ

ಅಮೃತೇಶ್ವರಿ ವೈದ್ಯಶಾಲಾ

ಕಾಂಞಂಗಾಡ (ದ. ಕ.)
ಕಾಂಞಂಗಾಡ (S.I.R.)
ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ
ಪಡೆದು ಪ್ರಸಿದ್ಧಿಪಟ್ಟ 'ಧನ್ವಂತರಿ ಶ್ರೀ ವೈದ್ಯ
ದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ
ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆ
ಬಾಧೆ ಕೊಡುವಂಥಾ ಸಕಲ ತರದ ರೋಗ
ಪಡಿಸಲ್ಪಡುತ್ತದೆ ಎಲ್ಲಾ ತರದ ಎಣ್ಣೆ
, ಚೂರ್ಣ, ಮಾತ್ರೆ, ಅರಿಷ್ಟಾಸವಗಳು
ಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ
ದ ದೂರ ದೇಶದ ರೋಗಿಗಳು ತಮ್ಮ
ಳು, ತೊಡಗಿದ ಕಾಲ, ಪ್ರಾಯ, ಪಿತ್ಥ ಆಹಾ
ಮೊದಲಾದ ಆಮಲು ಪದಾರ್ಥಗಳ ಅಭ್ಯಾಸ
ವ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು
ಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು,
ಪ್ರಸವ ನಡದದೆ ಎಂಬೀ ವಿವರಗಳು ಸಹಾ
ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ
ದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ
ನಿಗಾ ಕೊಡಲ್ಪಡುವದಲ್ಲದೆ ಅವಾಸು
ರ ಅಗತ್ಯದ ಮಟ್ಟಿನ ಮಾಹಿತಿಗಳನ್ನು
ದ ಮದ್ದು ವಿವರಿಸಿ ಅದನ್ನು ಸೇವಿಸುವ
ಯೂ ಸದರಿ ಈ ವೈದ್ಯಶಾಲೆಯು ಯಾವಾ
ಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸ
ಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ
ಬಹುದು.
ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲ

ಮೇನೇಜರ್,
ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.)

IN OUR WEELKY
Hearths & Homes
a's Masses
ly to:
e Manager,
ESHABHIMANI,
MANGALORE.

ವಜ್ರಗಳು Diamonds.

ESH Row & Co.,
GALORE.

importers of Superior
ds of Antwerp.
ಆಂಟವರ್ಪಿನಿಂದ ತರಿಸುವ ವಜ್ರಗಳು

ಕೋಳೆ ಮಂಗೇಶ ರಾವ್,
ಮಂಗಳೂರು

ALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0. Registered No. M. 3498. ಟಪಾಲು ಹಾಸಲು ಸೇರಿ ರೂಪಾಯಿ 2-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೭ನೇ ಶುಕ್ರವಾರ ಆಗೋಸ್ತು ೧೯೨೮. ಸಂಚಿಕೆ ೩೩.

THE CANARA BANKING CORPORATION,
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
„ Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

Notice

Is hereby given that the following rates of interesl on Fixed Deposits will come into force from 1—9—'28. For 3 months 5 % p. a. For 6 months 5½ % p. a. For 12 months 6¼ % p. a. For 24 months 6½ % p. a.

ನಿರಖು ಠೇವಣಾತಿಗಳ ಮೇಲೆ ತಾ. 1—9—'28ರಿಂದ ಈ ಕೆಳಗೆ ನಮೂದಿಸಿದ ಬಡ್ಡಿಯ ದರಗಳು ಜ್ಯಾರಿಗೆ ಬರುವವು.

3 ತಿಂಗಳ ವ್ಯಾಯಿದೆಗೆ ಸಾ. ಶೆ. 5
12 ತಿಂಗಳ ವಾಯಿದೆಗೆ ಸಾ. ಶೆ. 6¼
6 ತಿಂಗಳ ವ್ಯಾಯಿದೆಗೆ ಸಾ. ಶೆ. 5½
24 ತಿಂಗಳ ವಾಯಿದೆಗೆ ಸಾ. ಶೆ. ½

Office of the Corporation,
UDIPI, 13—8—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ ಕಜ್ಜಿ, ಕಜ್ಜಿಗಳು, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯದಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

249 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,
ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

[illegible]

ಹೊಸದುರ್ಗ ಟೌನ್ ವಾಚಕಾಲಯದಲ್ಲಿ ತಾ. 5-8-'28ರಲ್ಲು ಕೂಡಿದ ಮಹಾಸಭೆಯ ಪ್ರೊಸಿಡಿಂಗ್ಸು.

ಮಾ। ರಾ। ವಿದ್ವಾನ್ ಕೇಳುನಾಯರರು ಬಾರ್ಡೋಲಿಯ ಸತ್ಯಾಗ್ರಹದ ಪ್ರಕೃತ ಸ್ಥಿತಿಯನ್ನು ಚೆನ್ನಾಗಿ ವಿವರಿಸಿ ಕಾಲೋಚಿತ ಭಾಷಣಕೊಟ್ಟರು. ಸದರಿ ಭಾಷಣದಲ್ಲಿ ಜನರೊಳಗಿನ ಪರಸ್ಪರ ಅವಿಶ್ವಾಸವೂ, ಸಹೋದರ ಪ್ರೇಮವೂ ನಾಸ್ತಿಯಾದ ಕಾರಣ ಈ ತರದ ಹೀನ ಸ್ಥಿತಿ ತಲೆದೋರುವರೆ ಕಾರಣವೆಂತಲೂ ವಿದೇಶಿ ಭಾಷೆ ವ ವಿದ್ಯಾಸಮ್ಮಂಧ ಮಾತೃಭಾಷೆಯು ಅಸ್ಪೃಶ್ಯವಾಯಿತೆಂತಲೂ ಇಂಥಾ ಕೊರತೆಗಳನ್ನು ತ್ಯಾಗಮಾಡಿ ಯಾವ ತರದಿಂದ ವೃದ್ಧಿಗೆ ಬರಬೇಕೆಂಬ ವಿಷಯವನ್ನು ಸಭೆಯ ಮುಂದೆ ಸೂಚಿಸಿದಲ್ಲದೆ ಬಾರ್ಡೋಲಿಯ ನಿವಾಸಿಕರಿಗೆ ನಮ್ಮಿಂದ ಆಗುವ ತನುಮನಧನಗಳನ್ನು ಅರ್ಪಿಸಬೇಕಾಗಿ ಒತ್ತಿ ಹೇಳಿದ ಅಂಬೋಣವನ್ನು ಸರ್ವಮತದಿಂದ ಪುಷ್ಟೀಕರಿಸಲಾಯಿತು.

ಮಾ। ರಾ। ಎ. ಸಿ. ಕುಂಞಿಕಂಣ ನಾಯರರು ಕೊಂಗ್ರೆಸ್ ವಿಷಯ ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸವು ಈ ಊರಿನಲ್ಲಿ ಸಹಾ ಕೊಂಗ್ರೆಸ್ ಕಮಿಟಿ ಏರ್ಪಾಡು ಮಾಡುವರೆ ಕೊಡುವಷ್ಟು ಮೆಂಬರಿಕೆಗಳ ಉಮೇದ್ವಾರರನ್ನು ಸೇರಿಸಿಕೊಳ್ಳುವ ಮನಸ್ಸು ಕೂಡಿದ ಜನಸ್ತೋಮಕ್ಕೆ ಆಕರ್ಷಣೆ ಮಾಡುತಿತ್ತು.

ಮಾ। ರಾ। ಎಮ್. ವಿ. ಕಾಮತರು ಮೇಲಿನ ಭಾಷಣಗಳನ್ನು ಅನುಮೋದಿಸಿದಲ್ಲದೆ ಈಗಿನ ಹೀನಸ್ಥಿತಿಗೆ ಮುಖ್ಯ ಕಾರಣವು ಪ್ರತಿ ಒಬ್ಬನು ತನ್ನಷ್ಟಕ್ಕೆ ತಾನೆ ಯಜಮಾನನೆಂತಲೂ ಯಾವ ವಿದ್ಯೆಯಾದರೂ ಸಂಪೂರ್ಣವಿಲ್ಲದೆ ಅರ್ಧವೆ ಇದ್ದ ಸಮ್ಮಂಧ ಎಲ್ಲಾ ಸಂಗತಿಗಳು ಮಿಶ್ರಿತವಾಗಿ ಅರ್ಧದಲ್ಲಿಯೇ ಇದ್ದು ಸ್ವಾರ್ಥವೆಂಬ ರೋಗವು ಪೂರ್ತಿ ಮಾಡುವರೆ ಬಿಡುವದಿಲ್ಲವಾಗಿಯೂ ಅಂಥಾ ರೋಗಕ್ಕೆ ಚಿಕಿತ್ಸೆ ಮಾಡುವರೆ ಬುದ್ಧಿಯುಳ್ಳವನೇ ಹಿರಿಯ ಎಂಬ ನಾಣ್ಣುಡಿಗೆ ಅನುಸರಿಸಿ ಒಬ್ಬನನ್ನು ನಾಯಕನಾಗಿ ಆರಿಸಿ ತ್ಯಾಗಭೋಗಗಳನ್ನು ಆತನಿಗೆ ಅರ್ಪಿಸಿ ಅಂಥವರ ಕೈಕೆಳಗೆ ಸಹಾನುಭೂತಿಯಿಂದ ನಡಿಯುವರೆ ಪ್ರಯತ್ನಿಸಿದರೆ ಮಾತ್ರ ಯಾವ ಉದ್ದೇಶವನ್ನಾದರೂ ಜಯಪ್ರದಾಯಕವಾಗಿ ಕೊನೆಗಾಣಿಸಬಹುದಾಗಿ ವಿವರಿಸಿದರು. ನಡೆದ ಚರ್ಚೆಯಲ್ಲಿ ಹೊಸದುರ್ಗ ಕೊಂಗ್ರೆಸ ಕಮ್ಮಿಟಿಯು ಕೇರಳಕ್ಕೆ ಸೇರಿಸಿದ್ದಾಗಿ ತಿಳಿಯ ಬಂತು. ಕೊಂಗ್ರೆಸ್ ಮೆಂಬರರ ಅನುಮೋದನೆ ಇಲ್ಲದೆ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಈ ಊರಿನ ಕೊಂಗ್ರೆಸ ಕಮ್ಮಿಟಿ ಕೇರಳ ಜಿಲ್ಲೆಯ ಕೈಕೆಳಗೆ ನಡಿಯುವದು ಬಹಳ ಆಕ್ಷೇಪಕರವಾಗಿ ನೆರೆದ ಜನರ ವಾದ ನಡಿಯಿತು. ಮತ್ತು ವಿವಾದ ವಿಷಯ ವಿಮರ್ಶೆಗೆ ನಡಿಸಿ ನಮ್ಮ ಊರಿಗೆ ಅತ್ತ ಕೇರಳವೂ ಅಲ್ಲ, ಇತ್ತ ಕನ್ನಡ ಜಿಲ್ಲೆಯೂ ಅಲ್ಲಯೆಂಬ ತರದ ತ್ರಿಶಂಕು ಸ್ವರ್ಗದೋಪಾದಿ ಇರಗೊಡಿಸದಂತೆ ಪ್ರಯತ್ನವಿಟ್ಟು ಯೇಕಮತದಿಂದಲೂ ಪರಸ್ಪರ ಪ್ರೇಮದಿಂದಲೂ ಸಹೋದರ ಭಾವವನ್ನು ಪ್ರಚುರಪಡಿಸಿ ಹೀನ ಸ್ಥಿತಿಯನ್ನು ನಾಶಪಡಿಸಿ ಪ್ರಕಾಶಕ್ಕೆ ಬರುವಂತೆ ಭಗೀರಥ ಯತ್ನವಿಡಬೇಕಾಗಿ ನಿಶ್ಚಯಿಸಿ ಸಭೆ ಮುಕ್ತಾಯಪಡಿಸಲಾಯಿ.

ಮೇಲೆ ಕಾಣುವ ಪ್ರಸ್ತಾಪವು ಕೇವಲ ಅಗತ್ಯದ್ದು ಮತ್ತು ಸಹಾನುಭೂತಿಯನ್ನು ತೋರಿಸಬೇಕಾದದ್ದು ಸಹ ಆಗಿರುತ್ತದೆ. ಆದರೆ ಮಾಡುವದಕ್ಕಿಂತ ಮಾತನಾಡುವುದು ಸುಲಭವೆಂಬದನ್ನು ಇತರರು ಉದಾಹರಣೆ ಮೂಲಕ ತೋರಿಸಿಕೊಡದಂತೆ ಪ್ರಯತ್ನವಿಡಬೇಕಾಗಿಯದೆ. ಸದರಿ ಸಭೆಗೆ ರಾ। ಕುಡಾಳಿ ಕುಂಞಿರಾಮ ನಾಯರರನ್ನು ಅಧ್ಯಕ್ಷರಾಗಿ ಸರ್ವಸಮ್ಮತದಿಂದ ಚುನಾಯಿಸಲಾಗಿಯದೆ. ಇತ್ಯರ್ಥಿಸಿದ ಸಂಗತಿಗಳನ್ನು ಜ್ಯಾರಿಗೆ ತರುವರೆ ಅಧ್ಯಕ್ಷರು ಜ್ಞಾಪಕದಲ್ಲಿಡುವುದು ಅಗತ್ಯ. ಸಭೆಯಲ್ಲಿ ನಿಶ್ಚಯಿಸಿದ ಕಾರ್ಯಗಳನ್ನು ಬೇಗನೇ ನೆರವೇರುವಂತೆ ತ್ವರ್ಯ ನಿಗಾ ಕೊಡಬೇಕಾಗಿಯದೆ. ನಮ್ಮ ಮಂಗಳೂರು ಕೊಂಗ್ರೆಸ್ ಆಫೀಸಿನಲ್ಲಿ ನಮ್ಮ ಜನಪ್ರೀತರಾದ ಗೃಹಸ್ಥರು ಅನೇಕರಿರುವರು. ನಮ್ಮ ಪ್ರಾಂತ್ಯವನ್ನು ಅವರ ಸರಹದ್ದಿನಲ್ಲಿರಿಸುವಂತೆ ಮನಸ್ಸು ಕೊಡುವದು ಇವರನ್ನು ಕೂಡಿಯದೆ. ಮಾತ್ರವಲ್ಲ ನಮ್ಮನ್ನು ಅವರ ಪಂಗ್ತಿಯಲ್ಲಿ ಸೇರಿಸಿ ನಡಿಸುವರಾಗಿ ನಮಗೂ ತುಂಬಾ ಭರವಸೆ ಇದೆ.

ಪ್ರತ್ಯಕ್ಷದರ್ಶಿ.

Office Requisites.

BEST RENOWN PAPER FILES
RETAIL & WHOLE SALE
ARE READY FOR SALE

Prize 1—12—0 per Dozen

APPLY TO,

THE MANAGER,
The Mangalore Trading Association,
MANGALORE.

ಉತ್ತಮ ತರದ ರಿನೌನ್ ಫ್ಯಾಲುಗಳು
ಚಿಲ್ಲರೆಯಾಗಿಯೂ ರಖಮಾಗಿಯೂ
ಮಾರಾಟಕ್ಕೆ ಸಿದ್ಧವಿವೆ.

ಡಜನಿಗೆ ಬರೇ ರೂ. 1—12—0.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಚಿಕಿತ್ಸಕರುಗಳಿಗೆ "ಆರ್ಷಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರಣೆ ಸರಸದಲ್ಲಿಯೂ, ಸರಕಿನ ನಾಣಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಷರಾಫು ವ್ಯಾಪಾರ,
24-8-'28 ಶೆವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಇನಾಮು, ಇನಾಮು, ಇನಾಮು, ಇನಾಮು,

ಕಾಮಶಾಸ್ತ್ರವು.

ಆರೋಗ್ಯವು, ಧನವು, ಸುಖವು, ಮತ್ತು ಕುಟುಂಬಸಂರಕ್ಷಣೆ ಇವುಗಳನ್ನು ವಿವರವಾಗಿ ತಿಳಿಯಪಡಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ಕೇಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಹಾಸಲು ಇಲ್ಲದೇನೆ ಕಳುಹಿಸಲ್ಪಡುವದು:—

ಈ ದಿನವೇ ನಿಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ವರಿವಿಗೂ 14,27,000 ಪುಸ್ತಕಗಳನ್ನು 20 ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡುವದು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಪುಸ್ತಕ ರತ್ನಗಳಲ್ಲಿ ಇದು ಒಂದು ಪುಸ್ತಕವು:—

ಮಹಾತ್ಮರು,
ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.
ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0
Reserve and other sinking Funds „ 338,500—0—0
of which amount invested on G. P. Notes Rs. 228,898—2—0
Rates of interest on fixed deposits at Head Office 6½% for 2 Years
6% „ 1 Year
Season deposits of Rs. 1000/- & above terminable by the end of June are received at 6½% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½%, 1ವರುಷಕ್ಕೆ ಶೇ. 6.
ಜೂನ್ ಅಂತ್ಯದ ವಳಗೆ ಮ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Canara Bank Ltd.
Mangalore, 16th Feb. 1928.

K. Venkat Rao,
Secretary.

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬ್ಯೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪಾಯಿ 2,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-
ಆಪದ್ಧನ ಇತ್ಯಾದಿ ವಿತ್ತಗಳು ರೂ. 1,00,000/-
ಕಾಯಂ ಠೇವಣಾತಿಗಳು „ 7,38,880/-

ಹೊರಗೆ ಒಟ್ಟು ಸಾಲ ದೇಣಿ ರೂ. 10,77,615—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ। ಶೇ. 5½ರಂತೆಯೂ, 6 ಯಾ 9 ತಿಂಗಳುಗಳಿಗೆ 6 ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ 6½ರಂತೆಯೂ, ಮತ್ತು 24 ತಿಂಗಳುಗಳಿಗೆ 7ರಂತೆಯೂ, ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು.

ಮುಸುಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೇಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ವಂತ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಈಡಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟುಗಳು ಪಡಕೊಂಡು, ವಟ್ಟಾವು, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಂಮ್ಮಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಸುಲಭರೀತಿಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ, ತಾ. 18-2-'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆಯಿಂದ ೧—೪—೦, ೯೦ ಸೀಸೆಗೆ ೩—೭—೦, ೩೦೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಆಚಾರ್ಯವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟೌನ್‌ಹಾಲ್ ಹತ್ತಿರ.

ಸ್ತ್ರೀ ವಿಚಾರಗಳು.

[illegible]

ಉಪಯುಕ್ತ [illegible] ಸಾಧಿಸುವುದು [illegible] ವುದು ಅವಶ್ಯವಿದೆಯೆಂದು ಹೇಳಬೇಕಾಗುತ್ತದೆ.

ಭಕ್ತಿಯೋಗ.

[illegible] ಭಕ್ತಿ ಮಾರ್ಗವಾಗಿಯೇ [illegible] ಕೊಡಲ್ಪಟ್ಟಿದೆ. ಕಲಿಕಾಲಕ್ಕೆ ಭಕ್ತಿಯಲ್ಲದೆ ಉಳಿದ ಮಾರ್ಗಗಳೆಲ್ಲವೂ ಮುಚ್ಚಲ್ಪಟ್ಟಿವೆಯೆಂದೇ ಶಾಸ್ತ್ರಗಳ ಭಾವನೆ. ರಾತ್ರಿ, ದಿವಸಗಳ ಸಪ್ತಾಹ ಭಜನೆಗಳೂ, ಸ್ತೋತ್ರಗಳೂ ಮೇಲಿಂದ ಮೇಲೆ ಹೆಚ್ಚುತ್ತಾ ಬರುತ್ತಿವೆ. ಈ ತರದ ಭಕ್ತಿಯ ಪ್ರಚಂಡ ನೆರೆಯಿಂದ ವೈಕುಂಠವು ಎಷ್ಟು ತಗ್ಗುವುದೆಂದೂ, ಭಕ್ತ ಮಂಡಳಿಯು ಎಷ್ಟು ಮೇಲೇರುವುದೆಂದೂ ಹೇಳಲುಸಾಧ್ಯವಾದರೂ, ಈ ಭಕ್ತಿಯು ಮುಕ್ತಿಯನ್ನಲ್ಲದೆ ಇನ್ನಿತರ ಮಾರ್ಗಗಳ ಕಡೆಗೂ ವ್ಯಕ್ತಿಗಳನ್ನು ಕಣ್ಣು ಮುಚ್ಚಿಸಿ ನಡೆಯಿಸಬಲ್ಲದೆಂಬುದು ಅನುಭವದಿಂದ ತಿಳಿದುಕೊಂಡಿರುವೆವು. ಭಕ್ತಿಗೆ ಪುರುಷರು ಬಲಿಬೀಳುವರು; ಇದಕ್ಕೆ ಮಿತಿಯಿರುತ್ತದೆ. ಆದರೆ ಸ್ತ್ರೀಯರಲ್ಲಿ ಭಕ್ತಿಯ ಪರಿಣಾಮವಧಿಯನ್ನೈದಿತೆಂದರೆ ಮತ್ತೆ ಮುಕ್ತಿಯ ಎಲ್ಲಾ ಮಾರ್ಗಗಳ ಬಾಗಿಲುಗಳೂ ಮುಚ್ಚಿ ಭದ್ರವಾಗಿರಿಸಲ್ಪಟ್ಟಂತೆಯೇ. ನಮ್ಮ ಜಿಲ್ಲೆಯೊಳಗಿನ ಯೋಗಿಗಳ, ಸನ್ಯಾಸಿಗಳ, ಹರಿದಾಸರ ಕೆಲವು ಆಗಮನ ನಿರ್ಗಮನಗಳು ಈ ಭಕ್ತಿಯೋಗದ ಅಳಿಸಲಾಗದ ಚಿಹ್ನೆಗಳನ್ನು ಬಿಟ್ಟೇಹೋಗಿವೆ. ನಮ್ಮ ಜಿಲ್ಲೆ ಮಾತ್ರವೇ ಅಲ್ಲ, ಕಳೆದ ಜುಲೈ ತಿಂಗಳಲ್ಲಿ ಇದೇ ರೀತಿಯ ಒಬ್ಬ ಯೋಗಿಯು ಚಿಕ್ಕಮಗಳೂರಿಗೆ ಬಂದಿದ್ದನಂತೆ, ಬೆಂಗಳೂರಿನ "Evening Mail"ನಲ್ಲಿ ಈ ಯೋಗಿಯ ವಿಷಯ ಬಹಳ ಭಕ್ತಿಪೂರ್ವಕವಾದ ಬಾತ್ಮಿಗಳು ಬಂದಿದ್ದುವು. ಸಾವಿರಾರು

[illegible] Survival of the fittest ಯೋಗ್ಯರೇ ಬಾಳುವರು ಎಂಬ ತತ್ವವು [illegible] ನಿಜವಾಗಿದೆ. ಯೋಗ್ಯತೆಯಿಲ್ಲ ಮತ್ತು ಯೋಗ್ಯತೆಯನ್ನು ಕಳಕೊಂಡ ಎಷ್ಟೋ ಜನಪದವು ಇತರರ ಆಘಾತಕ್ಕೆ ಸಿಕ್ಕಿ ಲೋಕದಲ್ಲಿ ವಿಲುಪ್ತಪ್ರಾಯರಾಗಿರುವರೆಂಬುದನ್ನು ನಾವು ಮರೆಯಬಾರದು. ನ್ಯಾಯಾಮಪು ಅಗತ್ಯವಿರುವ ಅಂತಹ ಯೋಗ್ಯತೆಯನ್ನು ಸ್ಥಾಪಿಸುವ ಹಲವು ಕಾರಣಗಳಲ್ಲಿ ಒಂದಾಗಿದೆ, "ನಾಯಮಾತ್ಮಾ ಬಲಹೀನೇನ ಲಭ್ಯಃ" ಸ್ವರಾಜ್ಯವಾದರೂ ಬಲಹೀನರಿಂದ ಹೊಂದಿಕೊಳ್ಳಲಾಗುವಂತಹುದಲ್ಲ.

ನೋಟಗಳು.

NOTE...S.

ವಿದ್ಯಾರ್ಥಿಗಳಿಗೆ ಪೂಜೆಯ ಕ್ರಮವನ್ನು ಕಲಿಸಿಕೊಡುವವರು ಬೆಂಗಳೂರಿನ ಶಿಕ್ಷಣಾಧಿಕಾರಿಗಳು ಮಾತ್ರವಲ್ಲ. ಕಲ್ಕತ್ತದ ಸಿಟಿ ಕೊಲೇಜಿನ ಕಾಲಾಧಿಕಾರಿಗಳು ಈ ಪುಣ್ಯಕರ ಕೆಲಸವನ್ನು ಕೈಕೊಂಡರು.

• • • •

ರಾಜಾರಾಮಮೋಹನರಾಯರು ಬ್ರಹ್ಮ ಸಮಾಜ ಸ್ಥಾಪಕರು. ಈ ಸಿಟಿ ಕೊಲೇಜಿಗೆ ಅವರ ಹೆಸರಿನ ಹೊಸ್ಟೆಲೊಂದು ಇದೆ. ಅವರು ಮೂರ್ತಿ ಪೂಜೆಯ ವಿರೋಧಿಗಳೆಂದೂ, ಅವರ ಸ್ಮಾರಕದ ಹೊಸ್ಟೇಲಿನಲ್ಲಿ ಮೂರ್ತಿ ಪೂಜೆ ನಡಿಯಬಾರದೆಂದೂ ಭಕ್ತಿಯುಳ್ಳ ಕಾಲಾಧಿಕಾರಿಗಳ ವಕ್ತೃಯ.

• • • •

ಇಲ್ಲಿಯೂ ಸತ್ಯಾಗ್ರಹ. ವಿಘ್ನನಾಶಕನಿಗಾಗಿ ಮಾಡಿದ ಸತ್ಯಾಗ್ರಹದಂತೆ ಇದೂ ವಿಜಯಿಯಾಯಿತು. ಅವರವರ ಭಕ್ತಿಗೆ ಅನುಸಾರವಾಗಿ ಪೂಜಿಮಾಡಬಹುದೆಂದು ಈ ಕಾಲಾಧಿಕಾರಿಗಳು ಒಪ್ಪಿದರು.

• • • •

ಪರಭಾಷೆ ಆಗದ ಕನ್ನಡಿಗನಿಗೆಸಿಕ್ಕಿದರೊಬ್ಬರು Everyday wit ನಮ್ಮ ನೋಟುಸ್ಸುಗಳು ಒಂದು ಬಾರಿ ಕನ್ನಡಿಗನಿಗೆ ಹೊಳೆದುದರಲ್ಲಿ ಹೊಳೆಯದೆ ಹೋಗಿದ್ದರೂ, ಈ Everyday wit ಹೊಳೆಯಲು ಅವಕಾಶವಿದ್ದುದೇ ನೂತನ ಪರಿವರ್ತನ.

• • • •

ಆದರೆ ಈ ಎಟ್ಟರ ಎಟ್ಟಿನ ಪ್ರದರ್ಶನವೂ ಪ್ರದರ್ಶನವೇ, ಸರಿ. ಇವರ ಎಟ್ಟಿಗೆ ಪತ್ರಿಕಾಕರ್ತೃಗಳೂ ಕೂಡ ಗೌರವಾರ್ಹರಾಗಿ ಕಾಣಲಿಲ್ಲ.

• • • •

ಕನ್ನಡ ಪತ್ರಿಕಾ ವ್ಯವಸಾಯದಲ್ಲಿ, wit, honour, ಎಂದು ಇನ್ನೇನೆಲ್ಲಾ ಬರಲಿಕ್ಕಿದೆಯೊ!

• • • •

ಮದ್ರಾಸಿನ ಅಡಿಯಾರದಲ್ಲಿ ಒಂದು ಹಿಂದೂ ಮುಸಲ್ಮಾನ ಮದುವೆ ನಡೆದಿರುತ್ತದೆ. ಪೂನೆಯಲ್ಲಿ ನಡೆದ ದೃಷ್ಟಾಂತ ಮದರಾಸಿಗೂ ಗೊತ್ತಾಯಿತು.

• • • •

ಮದುಮಗ ಗುಂಟೂರಿನ ಫಾರೆಸ್ಟ ಆಫೀಸರ. ಹುಡುಗಿ ಮದರಾಸ್ ಮೆಡಿಕಲ್ ಕೊಲೇಜಿನ ವಿದ್ಯಾರ್ಥಿ. ಹುಡುಗಿಯ ತಂದೆ ಅಯ್ಯಂಗಾರರು.

• * * *

ಎಸ್. ಐ. ಆರ್. ರೈಲ್ವೆ ಮುಷ್ಕರದಲ್ಲಿ ಕೈದುಮಾಡಲ್ಪಟ್ಟ ಮುಖಂಡರ ಮೇಲೆ, ದಿನ ಹೋಗುತ್ತ ಬಂದೊದೇ. ಚಾರ್ಜ್ ಸೀಟ್ ಪೋಲೀಸರಿಂದ ಕೊಡಲಾಗುತ್ತೆ. ಮದರಾಸಿನಲ್ಲಿ ಇದೇ ಮುಖಂಡರು ಪೆಟ್ರೋಲ್ ಮತ್ತು ಇತರ ಮುಷ್ಕರವಿದ್ದಾಗ ಪವಿತ್ರ ಪಾರ್ಟನ್ನು ಧರಿಸಿ ಇದೇ ಗತಿಯಾಗಿ, ಹೇಗೂ ಕ್ಷಮಾಪಣೆ ಬೇಡಿ ಹೊರ ಬಂದಿದ್ದರು. ಈ ಮುಷ್ಕರದಲ್ಲಿ ಇವರ ಗತಿ ಇನ್ನು ಹೊರಬೀಳುವುದಿಲ್ಲ.

• • • •

ಕಲ್ಕತ್ತದ ಸಮೀಪ ಬೇಲೂರು ಎಂಬಲ್ಲಿ ಇ. ಐ. ಆರ್. ರೈಲ್ವೇ ಅಪಘಡದ ವಿಷಯ ಸುಳ್ಳು ಆರೋಪಣೆಯನ್ನು ಪ್ರಕಟಮಾಡಿದರೆಂದು ಕಲ್ಕತ್ತೆಯ ಫೊರ್‌ವರ್ಡ್ ಪತ್ರಿಕೆಯ ಮೇಲೆ ಒಟ್ಟು ೧೦ ಲಕ್ಷಕ್ಕೆ ದಾವೆ. ಇದೂ ಸಾಲದೆಂದು ಫೊರ್‌ವರ್ಡ್ ಪತ್ರಿಕೆಯ ಆಧಾರದ ಮೇಲೆ ಬರೆದ ಅಲ್ಲಹಾಬಾದಿನ ಪೊಯಿನಿರ್ ಪತ್ರಿಕೆಯ ಮೇಲೂ ೫ ಲಕ್ಷದ ದಾವೆ. ರೈಲ್ವೇ ಕಂಪೆನಿಗಳ ನಷ್ಟವು ದಾವೆಮಾಡಲ್ಪಟ್ಟ ಹಣದಲ್ಲಿಯೇ ಭರ್ತಿಯಾಗುವುದು.

• • • •

ಈ ವಾರದ ನ್ಯೂಸ್—ಈ ಬಾರಿಯ ಕಂಠೀರವ ಸಂಚಿಕೆಯಲ್ಲಿ ಐ. ಸಿ. (I. C.)ಯವರು ಕಾಣೆ.

• • • •

ಪಾಶ್ಚಾತ್ಯರು 'ಪರಸ್ಪರ ಸಹಾಯಕ' ಸಂಘಗಳನ್ನು ಸ್ಥಾಪಿಸಿ ತಮ್ಮೊಳಗೆ ಪರಸ್ಪರ ಸಹಾಯವಾಗುವಂತೆ ಮಾಡಿಕೊಂಡರು. ಇಂಥಾ ಸಹಾಯಕ ಸಂಘಗಳಿಂದ ದೇಶಕ್ಕೆ ಎಷ್ಟೋ ಪ್ರಯೋಜನ ಉಂಟಾಗುವುದು.

• • • •

ಪೌರ್ವಾತ್ಯರು ನಕಲಿ ಮಾಡುವುದರಲ್ಲಿ ಶ್ರೇಷ್ಠರು. ನಮ್ಮ ದೇಶಗಳಲ್ಲಿ 'ಪರಸ್ಪರ ಸಹಾಯಕ' ಸಂಘಗಳು ಸ್ಥಾಪಿಸಲ್ಪಟ್ಟವು. ಇಲ್ಲಿ ಇವುಗಳ ಪರಿಣಾಮವೇ ಬೇರೆಯಾಯಿತು. ಇವುಗಳು ಪರಸ್ಪರ ಸಹಾಯಕಗಳಾಗುವ ಬದಲು 'ಪರಸ್ಪರ ಸಾಯುವ ಸಂಘ'ಗಳಾದವು.

ಶಾಲಿವಾಹನಶಕ ೧೮೫೦ನೆಯ ವಿಭವಸಂ।ದ ನಿ. ಶ್ರಾವಣ ಶುಕ್ಲ ಶನಿವಾರದಿಂದ ವಿಭವ ಸಂ।ರದ ನಿ. ಶ್ರಾವಣ ಶು॥ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ಸಿಂಹ (ಸೋಣ)

ತಾರೀಕು	ವಾರ	ತಿ.	ಘ.	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ. ಉ	ಅಸ್ತ
18	ಶನಿ	೩	೩೪.೪೫	ಉತ್ತರಾ	೪೨.೩೩	೨	6.20	6.48
19	ರವಿ	೪	೩೬.೪೪	ಹಸ್ತಾ	೪೬.೧೪	೩	6 20	6 47
20	ಸೋಮ	೫	೪೦. ೨	ಚಿತ್ರಾ	೫೧.೧೪	೪	6.20	6 47
21	ಕುಜ	೬	೪೪.೧೪	ಸ್ವಾತೀ	೫೭. ೦	೫	6 20	6.46
22	ಬುಧ	೭	೪೮.೪೬	ವಿಶಾಖಾ	೬೦. ೦	೬	6.20	6.46
23	ಗುರು	೮	೫೩.೪೫	ವಿಶಾಖಾ	೩.೧೪	೭	6.20	6.45
24	ಶುಕ್ರ	೯	೫೮.೩೦	ಅನುರಾಧಾ	೯.೪೩	೮	6.20	6.45

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
10	86— 7	76— 3	0 —34	—
11	86— 0	74— 2	0 —34	—
12	81— 6	72— 9	1—85	—
13	82— 5	72— 7	1—31	—
14	85— 2	78— 9	0—75	—
15	83— 0	71— 8	2—58	—
16	81— 0	71— 1	2—90	—
				91—18

ಮಂಗಳೂರಿನ ಪೇಟೆ ಧಾರಣಿ.

ಜೇನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಸೂರಿ ...	7- 8	8— 6
ಹೊಸ ಗುಡ್ಡು ...	6—10	7— 8
ಸುಗ್ಗಿ ...	6— 6	7- 2
ಹೊಸ ರಾಶಿ ...	6— 6	6- 10
ಊರ ಅವ್ವಲ್ ಬೆಳ್ತಿಗೆ ...	7-- 8	8—12
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	12—12	12 - 14
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	7— 8	7—10
ಗೋದಿ ಗೋಣಿ ೧ಕ್ಕೆ ...	6— 8	19 0
ಹುರುಳಿ ಗೋಣಿ ೧ಕ್ಕೆ ...	8— 8	11 — 0
ಕಡಲೆ ಗೋಣಿ ೧ಕ್ಕೆ ...	13— 8	15— 0
ತೊಗರಿ ಗೋಣಿ ೧ಕ್ಕೆ ...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ ...	19— 0	27— 0
ಉದ್ದು ಗೋಣಿ ೧ಕ್ಕೆ ...	14— 8	14— 4
ಹೆಸರು ಗೋಣಿ ೧ಕ್ಕೆ ...	13— 0	14— 8
ಊರು ಬೆಲ್ಲ ಖಂಡಿ ೧ಕ್ಕೆ ...	65— 0	70 — 0
ಉಪ್ಪು ಗೋಣಿ ೧ಕ್ಕೆ ...	4— 8	5— 4
ಬೊಬ್ರಿ ಖಂಡಿ ೧ಕ್ಕೆ ...	130- 0	-
ಬೊಬ್ರಿ ಹಿಂಡಿ ಖಂಡಿ ೧ಕ್ಕೆ ...	43— 8	44— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 0
ಬೊಬ್ರಿ ಎಣ್ಣೆ ಮಣ ೧ಕ್ಕೆ ...	8— 8	9— 8
ಎಳ್ಳೆಣ್ಣೆ ಮಣ ೧ಕ್ಕೆ ...	8— 4	8— 6
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 2	8 - 0
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 0	4— 2
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	4— 0	6— 0
ಸಾಸಿವೆ ಮುಡಿ ೧ಕ್ಕೆ ...	8— 0	8— 4
ಕೊತ್ತಂಬರಿ ಮುಡಿ ೧ಕ್ಕೆ ...	6— 0	7— 8
ಕಾಫಿ ಖಂಡಿ ೧ಕ್ಕೆ ...	4 0— 0	410— 0
ಬಳೆಗೋಟು ಅಡಿಕೆ ಖಂಡಿ ೧ಕ್ಕೆ ...	170- 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	510- 0	520-
ಏಲಕ್ಕಿ ಮಣ ೧ಕ್ಕೆ ...	70— 0	80— 0
ಗೇರುಬೀಜ ಮುಡಿ ೧ಕ್ಕೆ ...	4— 2	4 — 4
ಕಬ್ಬಿಣ ಖಂಡಿ ೧ಕ್ಕೆ ...	37— 8	40— 0
ತಾಂಬ್ರ ತಗಡು ೧ಕ್ಕೆ ...	15- 0	16— 8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ ...	20— 0	21 -
ಬೇಹಿಚೆಳ್ಳಿ ಸೇರು ೧ಕ್ಕೆ ...	16— 0	—
ಹಿತ್ತಾಳೆ ತಗಡು ಮಣ ೧ಕ್ಕೆ ...	15— 0	16— 8
ಪವನು ೧ಕ್ಕೆ ...	13— 8	13— 9
ಹುಣಸೆ ಹುಳಿ ಖಂಡಿ ೧ಕ್ಕೆ ...	75— 0	95—

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ದಿ. ಊಲನ್‌ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವವು. ಬೆಳಗಾವಿನಲ್ಲಿ ನಡೆದ ೩೯ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉಚ್ಚತ್ವವನ್ನು ಹೊಗಳಿ ಭಂಗಾರದ ಪದಕವನ್ನು ಕೊಟ್ಟಿರುವರು. ಬೇರೆ ಕಡೆಗಳಲ್ಲಿ ಠಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ. ಕ್ರಯದ ಪಟ್ಟಿಯನ್ನು ಪುಕ್ಕಟೆಯಾಗಿ ಕಳಹಿಸುವೆವು.

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ.

ಶೋರೂಮ್ 99 ನಾಗಾದೇವಿ ರಸ್ತೆ. ಸ್ಥಾಪಿತವಾದದ್ದು 1909 ಟೆಲಿಫೋನ್ ನಂ. 23374

ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂಬ್ರ 288,

ಜಿ. ಪಿ. ಓ. ಬೊಂಬೈ—1.



ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!

ರೋಗವೆಂಬ ವಿಧಿಆಪತ್ತನ್ನು ಪರಿಹರಿಸಿಕೊಳ್ಳನೋಡಿ

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ:-8 ಔನ್ಸಿನ ಬಾಟ್ಲಿ 1ಕ್ಕೆ 1-8-0, ½ ಡಜನ್ ರೂ. 8-8-0; ಡಜನ್ 16-8-0.

ಭಗಿನಿಗಳೇ!

ಸೊರಗಿರುವ ಶಿಶುವಿನ ನೋಟವು ಹೆತ್ತವರಿಗೆಸ್ತ್ರಯಮಕೊಂಡಾ

ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು ಮಾತಾಪಿತರಿಗೆ ವೈಕುಂಠಾ.

ಬೇಬಿ ಟೋನ್

ಮುದ್ದು ಚಿರಂಜೀವಿಗಳು ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ?

ಹಾಗಾದರೆ ಒಡನೇ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿಯೂ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು.

ಕ್ರಯ 4 ಔನ್ಸಿನ ಬಾಟ್ಲಿ 1ಕ್ಕೆ 1-4-0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಣೆಗಳ ಬಗ್ಗೆ ದರ್ಮಾರ್ಥದ ದೊಡ್ಡ ಕೆಟಲಾಗಿಗೆ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,

22628 ನಂಬ್ರ 2. ಮಂಗಳೂರು ದ. ಕ.

ದಿ. ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಡಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಡಿಲ್ಲಾ, ಪೇರಳೆ, ಕಿತ್ತಳೆ, ದ್ರಾಕ್ಷೆ, ಅಂಜೂರ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವುವು, ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರಿಯಿರಿ. ಗಿಡಗಳು ಮಂಗಳೂರು ಕಾರ್‌ಸ್ಟ್ರೀಟ್ ಸೋಮ ಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಸರ್ಗಾರ್ಡನ್ಸ್, ಕಾಪು ದ.ಕ. 131028 } C/o ಕೆ. ವಾಮನ ಶೆಣೈ, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ದ. ಕ.

ರೂಪಾಯಿ 35ಕ್ಕೆ ಮತ್ತು ಅವಕ್ಕೆ ಮೀರಿದ ಎಸ್. ಬಿ. ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 33 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವೊಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನುಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು.

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,

331 ಅಬ್ದುಲ್ ರಹಿಮಾನ್ ರಸ್ತೆ,

ಮುಂಬಾಯಿ 3.

ಚಂಡಮಾರುತದಿಂದ ಐದಾರು ಹಳ್ಳಿಗಳು ನಾಶ ಮಾಡಲ್ಪಟ್ಟವು. ಸುಮಾರು ಒಂದು ಸಾವಿರ ಜನರು ಸತ್ತುಹೋದರು. ಜ್ವಾಲಾಮುಖಿಯಿಂದ ಹಾರುವ ಉರಿಯುವ ಕಲ್ಲುಮೊದಲಾದುವುಗಳಿಂದ ಸುಮಾರು ಆರು ನೂರು ಜನರಿಗೆ ಅಪಾಯ ಉಂಟಾಗಿರುತ್ತದೆ. ಭೂಕಂಪವುಂಟಾದುದರಿಂದಲೂ ಹೇರಳ ಪ್ರಾಣಿಗಳು ಮೃತ್ಯುವಿಗೆ ತುತ್ತಾಗಿರುವರು. ಈ ರಾಜ್ಯವು ಡಚ್ಚರ ಸ್ವಾಧೀನದಲ್ಲಿದ್ದಿತು.

— ನಮ್ಮ ಯುವರಾಜರು ಹಲವು ಯಾತ್ರಿಕರನ್ನು ಒಡಗೂಡಿ ಈಗ ಫ್ರಾನ್ಸಿಗೆ ಬಂದಿರುವರು. ಯುದ್ಧದ ಸಮಯದಲ್ಲಿ ಒಂದು ಹಳ್ಳಿಯಲ್ಲಿ ಉಳಕೊಂಡ ಒಬ್ಬ ರೈತನ ಮನೆಗೆ ಯುವರಾಜರು ಹೋಗಿ ಅಂದು ರೈತನು ಮಾಡಿದ ಉಪಕಾರವನ್ನು ನೆನಪಿಗೆ ತಂದು ಅವರಲ್ಲಿದ್ದು ಅವರನ್ನು ಆತ್ಮಾನಂದಗೊಳಿಸಿದರು.

— ಲಂಡನ್ ಪಾರ್ಲಿಮೆಂಟಿಗೆ ಚೆಲ್ಸನಹೇವಿನ ಪರವಾಗಿ ಮೆಂಬರರಾಗಿದ್ದ ಜೇಮ್ಸ್ ಗಾರ್ಡನರ್ ಎಂಬವರು ಮೊನ್ನೆ ಮಲಗಿದ್ದಲ್ಲಿಯೇ ಸತ್ತು ಹೋಗಿದ್ದರು. ಇವರಿಗೆ ೬೨ ವರುಷ ಪ್ರಾಯ.

— ಯುರೋಪಿಗೆ ಹೋದ ಶ್ರೀ ಶ್ರೀನಿವಾಸ ಅಯ್ಯಂಗಾರರೂ ಶ್ರೀ ಷಣ್ಮುಖಮ್ ಚೆಟ್ಟಿಯವರೂ ಮುಂಬಾಯಿಗೆ ಹೊರಟು ಬಂದರು. ಸರ್ ಮಹಮದ್ ಮತ್ತು ಲೇಡಿ ಶಾಪಿಯವರು ಮಾತ್ರ ಸ್ವಿಜರ್‌ಲೆಂಡಿಗೆ ಹೊರಟು ಹೋದರು. ಅಲ್ಲಿ ಎರಡು ವಾರಗಳ ವರೆಗೆ ಇದ್ದು ಮತ್ತೆ ಅವರು ಹಿಂದೂಸ್ಥಾನಕ್ಕೆ ಹಿಂತಿರುಗುವರು.

— ಆಫ್ರಿಕದಲ್ಲಿ ಒಂದು ವಾಯುವಿಮಾನವು ಕೆಳಗೆ ಬಿದ್ದು ಹಲವರೂ ಒಳಗಿದ್ದವರೂ ಮೃತಪಟ್ಟರು. ಮೂರು ನಾಲ್ಕು ಸಾವಿರ ಸ್ಟರ್ಲಿಂಗು ಕ್ರಯದ ನೋಟುಗಳು ವಿಮಾನವು ಬಿದ್ದ ಸ್ಥಳದಲ್ಲಿ ಚದರಿ ಹೋಗಿದ್ದವು. ವಿಮಾನವು ಒಬ್ಬ ವಜ್ರವ್ಯಾಪಾರಿಯದಾಗಿದ್ದಿತು.

— ಕಳೆದ ವಾರದಲ್ಲಿ ಲಂಡನಿನ ಲೆಂಕೆಸ್ಟರ್ ಮಾರ್ಗದಲ್ಲಿ ಭಯಂಕರವಾದ ಬೆಂಕಿಯು ಉಂಟಾಯಿತು. ಒಂದು ಮನೆಗೆ ಬೆಂಕಿತಾಗಿ ಮೇಲಿನ ಮಾಳಿಗೆಯಲ್ಲಿದ್ದ ಇಬ್ಬರು ಕೆಳಗೆ ಬರಲು ಆಗಲಿಲ್ಲ. ಒಬ್ಬನು ಕೆಳಕ್ಕೆ ಹಾರಿ ಪ್ರಾಣವನ್ನು ಕಳಕೊಂಡನು. ಒಬ್ಬ ಹೆಂಗಸು ಸುಟ್ಟು ಸತ್ತುಹೋದಳು. ಇನ್ನು ಹಲವು ಕಟ್ಟಡಗಳು ಬೂದಿಯಾದವು. ಹಲವರೂ ಸತ್ತು ಹೋದರು.

— ಲಂಡನಿನಲ್ಲಿ ಒಂದು ಬೇಂಕಿನ ಕೇಶಿಯರನನ್ನು ಕೊಂದ ತಪ್ಪಿಗಾಗಿ ನೋರ್ಮನ ಇಲಿಯಟನೆಂಬವನಿಗೆ ಫಾಶಿ ಶಿಕ್ಷೆಯನ್ನು ವಿಧಿಸಿದರು.

— ರೈಲುವೇ ಕೆಲಸಗಾರರ ಸಂಬಳವನ್ನು ಇಳಿಸಬಹುದೆಂದು ಬ್ರಿಟಿಸಿನ ರೈಲುವೇ ಕೆಲಸಗಾರರು ಒಪ್ಪಿಗೆಯನ್ನಿತ್ತಿರುವರು.

— ಜರ್ಮನಿಯಲ್ಲಿ ಒಂದು ಹೊಸ ಕ್ರೂಸರನ್ನು ತಯಾರಿಸುತ್ತಿರುವರು.

— ಬೆಲ್ಜಿಯಮಿನಲ್ಲಿ ಒಬ್ಬ ಧನಿಕನು ಇತ್ತೀಚೆಗೆ ಸತ್ತುಹೋದನು. ಆತನ ಐಶ್ವರ್ಯವು ಅಪರಿಮಿತ; ಆತನ ಕೂಡೆ ಸುಮಾರು ೫ ಮಿಲಿಯ ಸ್ಟರ್ಲಿಂಗುಗಳಿದ್ದುವಂತೆ. ಇದಕ್ಕಿಂತ ಹಲವು ವಾರಗಳ ಹಿಂದೆ ಅವನ ಕೂಡ ಹನ್ನೊಂದು ಮಿಲಿಯ ಸ್ಟರ್ಲಿಂಗುಗಳಿದ್ದುವಂತೆ.

— ಎಂಟವರ್ಪಿನಲ್ಲಿರುವ ಹಿಂದುಗಳು ಬಾರ್ಡೋಲಿ ರೈತರ ಸಹಾಯಾರ್ಥವಾಗಿ ೧೯೦ ಪವನುಗಳನ್ನು ಸಂಗ್ರಹಿಸಿದರು.

— ಸ್ಯಾಮನು ಕಮಿಶನು ಒಕ್ಟೋಬರ ೧೨ನೇ ತಾರೀಕಿಗೆ ಪೂನೆಗೆ ಬಂದು ತಲಪಿ ಮುಂಬಾಯಿ ಸಂಸ್ಥಾನಕ್ಕೆ ಸಂಬಂಧಿಸಿದ ಸಾಕ್ಷಿಗಳನ್ನು ವಿಚಾರಿಸಲು ತೊಡಗುವರು.

— ಪೂನೆಯ ಬಿಷಪರು ರೋಮಿಗೆ ಹೋಗಿ ಪೋಪಸಾಹೇಬರ ಭೇಟಿಯನ್ನು ಪಡೆದುಕೊಂಡರು. ಮತ್ತು ಅವರ ಡಾಯೊಸಿಸಿನ ಜನರ ವಿದ್ಯಾಭ್ಯಾಸದ ವಿಷಯವೂ, ಉಪಕಾರಿ ಸಂಸ್ಥೆಗಳ ವಿಷಯವೂ, ಬಿಷೋಪರೊಡನೆ ಪೋಪ ಧೊರೆಗಳು ವಿಚಾರಿಸಿದರು.

— ಕಿಂಗ್'ಸ್ಟನಿನಲ್ಲಿ ಉಂಟಾದ ಬೆಂಕಿಯು ವ್ಯಾಪಿಸಿ ಒಂದು ಮನೆ, ಥೇಮ್ಸ್ ನದಿಯಲ್ಲಿದ್ದ ಎಂಟು ದೋಣಿಗಳು, ಸಾವಿರಾರು ಟನ್ ಕಲ್ಲಿದ್ದಲು ಇವಿಷ್ಟು ಭಸ್ಮೀಭೂತವಾದವು. ಆದರೂ ಮನುಷ್ಯರಾರೂ ಸಾಯಲಿಲ್ಲ.

— ಇಜಿಪ್ತದಲ್ಲಿ, ಇನ್ನು ಐದು ವರುಷಗಳೊಳಗೆ, ೧,೫೦೦,೦೦೦ ಸ್ಟರ್ಲಿಂಗುಗಳನ್ನು ಖರ್ಚುಮಾಡಿ ನೂರು ಆಸ್ಪತ್ರೆಗಳನ್ನು ಅಲ್ಲಲ್ಲಿ ಕಟ್ಟಬೇಕೆಂದು ಮಂತ್ರಿಗಳವರು ಹುಕುಂ ಕೊಟ್ಟಿರುವರು. ಬಡವರಿಗೆ ಹಿತವಾದ ಹಾಗಾಯಿತು.

— ಹಿಂದೂ ಸೈನ್ಯದಲ್ಲಿ ಮೊದಲು ಕೆಪ್ಟನನಾಗಿದ್ದು ಪೆನ್‌ಶನ್ ಹೊಂದಿದ ರೊಬಿನ್‌ಸನ್ ಎಂಬವನೊಬ್ಬನು ಈಗ ಬೌದ್ಧ ಸನ್ಯಾಸಿಯಾಗಿರುವನು. ಕಾಲಿನ ವರೇಗೆ ಅಂಗಿಯನ್ನು ತೊಟ್ಟುಕೊಳ್ಳುವನು.

ಒಳದೇಶ ವರ್ತಮಾನ.

— ಕೋಕನಾಡದ ಸಮೀಪದ ಒಂದು ಹಳ್ಳಿಯಲ್ಲಿದ್ದ ಒಬ್ಬ ಜಮೀನುದಾರನಿಗೆ ಯಾರೋ ಅಪರಿಚಿತರು ಗುಂಡು ಹೊಡೆದು ಪಲಾಯನಮಾಡಿದರು. ಅದೃಷ್ಟವಶಾತ್ ಗುಂಡು ಜಮೀನುದಾರನ ಎಡಕೈಯನ್ನು ಗಾಯಗೊಳಿಸಿತಲ್ಲದೆ, ಆತನನ್ನು ಕೊಲ್ಲಲಿಲ್ಲ. ಆತನೊಳಗೂ, ಒಕ್ಕಲುಗಳೊಳಗೂ, ಏನೋ ವಿವಾದವಿದ್ದು, ಆ ಕುರಿತಾದ ಮೊಕದ್ದಮೆಯು ವಿಚಾರಣೆಗೆ ಬಾಕಿಯಿದ್ದಿತು. ಆತನ ಒಕ್ಕಲುಗಳಲೊಬ್ಬನು ಈ ಕ್ರೂರ ಕೃತ್ಯವನ್ನು ಮಾಡಿದನೆಂದು ತಿಳಿಯಬೇಕಾಗಿದೆ. ಜಮೀನುದಾರನು ಮರುದಿನ ಆಸ್ಪತ್ರೆಯಲ್ಲಿ ಸತ್ತೇ ಹೋದನು.

— ಡಿಲ್ಲಿಯ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಸ್ವಾಮಿ ಭಾವಾನಂದನೆಂಬವನ ವಿಚಾರಣೆಯಾಗುತ್ತ ಇದ್ದಿತು. ಆತನು ಯಾರನ್ನೋ ಹಿಂಸೆಪಡಿಸಿದ್ದನಂತೆ. ವಕೀಲರ ಸವಾಲುಗಳಿಗೆ ಆತನು ಸರಿಯಾಗಿ ಉತ್ತರಗಳನ್ನು ಕೊಡದೆ ಹುಚ್ಚನಂತೆ ಗಲಿಬಿಲಿ ಮಾಡುತ್ತಿದ್ದ ಕಾರಣ, ಮೆಜಿಸ್ಟ್ರೇಟರು ಆತನನ್ನು ಹಲವು ಸಲ ಗದರಿಸಿದರು. ಆದರೂ ಅಪಾದಿತನು ಅಧಿಕಪ್ರಸಂಗಿಯಂತೆ ವರ್ತಿಸಿ, ಮೆಜಿಸ್ಟ್ರೇಟರನ್ನು ಬೈದುದರಿಂದ ಆತನನ್ನು ಒಡನೆಯೇ ಕೈದು ಮಾಡಲು ಮೆಜಿಸ್ಟ್ರೇಟರು ಹುಕುಂ ಕೊಟ್ಟರು. ಪೋಲೀಸರು ಬಂದು ಆತನನ್ನು ಬಂಧಿಸುವಾಗ, ಆತನು ಮೆಜಿಸ್ಟ್ರೇಟರ ಮುಖದ ಮೇಲೆ ಉಗುಳಿ, ಪೋಲೀಸ್ ಇನ್ಸ್‌ಪೆಕ್ಟರನ ಕೆನ್ನೆಗೆ ಬಲವಾದ ಎರಡು ಪೆಟ್ಟುಗಳನ್ನು ಕೊಟ್ಟನು.

— ಸೈಮನ ಪ್ರತಿಮೆಯ ಸತ್ಯಾಗ್ರಹದ ಸಮ್ಬಂಧವಾಗಿ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದ್ದ ಶ್ರೀ ತಂಗವೇಲು ಪಿಳ್ಳೆ ಮತ್ತು ಶ್ರೀ ಹರಪಾಲ ಸಿಂಗರವರುಗಳನ್ನು ಬಿಡುಗಡೆ ಮಾಡಿದರು. ಎರಡನೆಯವರು ಪಂಜಾಬಿಗರಾದ ಕಾರಣ, ಅಮೃತಸಾರಿಗೆ ಹೊರಟುಹೋದರು.

— ಬನಾರಸ್ ಹಿಂದೂ ಯುನಿವರ್ಸಿಟಿಯ ಒಬ್ಬ ವಿಧ್ಯಾರ್ಥಿಯು ಕೆಟ್ಟವರೊಂದಿಗೆ ಕೂಡಿ ವರ್ತಿಸುತ್ತಿದ್ದ ಕಾರಣ, ಒಂದು ವರುಷದ ವರೆಗೆ ಸದಾಚಾರಿಯಾಗಿರುವೆನೆಂದು ಮೂರು ಸಾವಿರ ರೂಪಾಯಿಗಳ ಎರಡು ಪ್ರತಿಜ್ಞಾ ಪತ್ರಗಳಿಗೆ ಸಹಿಹಾಕಬೇಕೆಂದು ಮೆಜಿಸ್ಟ್ರೇಟರು ಹುಕುಂ ಕೊಟ್ಟಿದ್ದರು. ಅದಕ್ಕಾಗಿ ಆತನಿಗೆ ಇನ್ನೇಳು ದಿವಸಗಳ ಪುರಸತ್ತನ್ನು ಕೊಟ್ಟಿರುವರು.

— ಹಿಂದಿಯನ್ನು ಸಹಾಯಕ ಭಾಷೆಯಾಗಿ, ಒತ್ತಾಯ ಪೂರ್ವಕ ಕಲಿಸುವ ಠರಾವನ್ನು ಕೊಚ್ಚಿ ನ್ಯಾಯವಿಧಾಯಕ ಸಭೆಯಲ್ಲಿ ಬಹುಮತದಿಂದ ಮಂಜೂರು ಮಾಡಿದರು.

— ಬಳ್ಳಾರಿ ಮತ್ತು ಕಲಿಕೋಟೆಯಲ್ಲಿ ಔದ್ಯೋಗಿಕ ಶಾಲೆಗಳನ್ನೂ ಮಂಗಳೂರಿನಲ್ಲಿ ವ್ಯಾಪಾರ ವಹಿವಾಟು ಕಲಿಸುವ ಶಾಲೆಯನ್ನೂ ತೆರೆಯಬೇಕೆಂದು ಸರಕಾರದವರು ಸೆಂಕ್ಶನ್ ಮಾಡಿರುವರು. ಶಾಲೆಗಳನ್ನು ಕಟ್ಟಿಸಿ ಬರುವ ವರುಷದ ಪ್ರಾರಂಭದಿಂದ ಇವುಗಳಲ್ಲಿ ಕೆಲಸ ನಡೆಸಲು ಏರ್ಪಾಡು ಮಾಡಲಾಗುವುದಂತೆ.

— ಹಡಗಗಳ ಮೂಲಕ ಈ ವರುಷ ಮದರಾಸಿಗೆ ತರಿಸಿದ ಬ್ರಿಟಿಷ ಕಾರುಗಳ ಸಂಖ್ಯೆಯು ಕಳೆದ ವರುಷಕ್ಕಿಂತಲೂ ಶೇಕಡಾ ೩೪ರಷ್ಟು ಹೆಚ್ಚಾಗಿರುತ್ತದೆ. ಕೆಲವು ವರುಷಗಳ ಹಿಂದೆ ಮದರಾಸಿನಲ್ಲಿ ಪ್ರತಿಯೊಂದು ಅಮೇರಿಕನ್ ಕಾರಾಗಿದ್ದಿತು. ಈಗ ಅಲ್ಲಿರುವ ಕಾರುಗಳ ಅರೆವಾಸಿಯಷ್ಟು ಬ್ರಿಟಿಷ ಕಾರುಗಳಾಗಿವೆ. ಮೋಟಾರು ಸೈಕಲು ತರಿಸಿದ್ದು ಕಳೆದ ವರುಷಕ್ಕಿಂತಲೂ ೬ರಷ್ಟು ಹೆಚ್ಚಿದೆ. ಬ್ರಿಟಿಷ ಸ್ಯಾಕಲುಗಳ ಸಂಖ್ಯೆಯು ಶೇಕಡಾ ೨೭ರಷ್ಟು ಹೆಚ್ಚಿದೆ.

— ಸಂಯುಕ್ತ ಪ್ರಾಂತ್ಯದ ಕೌನ್ಸಿಲ್ ಅಧಿವೇಶನವು ಸಪ್ಟಂಬರ ೮ನೇ ತಾರೀಕಿಗೆ ಪ್ರಾರಂಭವಾಗಿ ಎಂಟು ದಿನಗಳ ವರೆಗೆ ನಡೆಯುವದು. ೪ ದಿವಸಗಳನ್ನು ಸ್ಯಾಮನ್ ಕಮಿಶನಿನೊಂದಿಗೆ ಸಹಕರಿಸುವ ಸಲುವಾಗಿ ಒಂದು ಕಮಿಟಿಯನ್ನು ಆರಿಸಲು ವಿನಿಯೋಗಿಸುವರು.

— ಶ್ರೀ ಶ್ರೀನಿವಾಸ ಅಯ್ಯಂಗಾರರು ತಾರೀಕು ೨೪ನೇ ದಿನ ಮುಂಬಾಯಿಗೆ ಬಂದು ತಲಪುವರೆಂದು ವಿಶೇಷ ತಂತಿಯೊಂದು ಬಂದಿರುತ್ತದೆ.

— ಕೋಲಾರದ ಚಿನ್ನದ ಗಣಿಗಳಲ್ಲಿ ಒಬ್ಬ ಕಂಟ್ರಾಕ್ಟರನಾಗಿದ್ದವನ ಚಿಕ್ಕ ಪ್ರಾಯದ ಹೆಂಡತಿಯು ಬಾವಿಗೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡಳು. ಶವವನ್ನು ಮೇಲಕ್ಕೆ ತೆಗೆದು ನೋಡಲಾಗಿ ಅವಳ ಮೈಮೇಲೆ ಅಸಂಖ್ಯಾತ ಚಿನ್ನದ ಆಭರಣಗಳಿದ್ದವು. ಆತ್ಮಹತ್ಯವನ್ನು ಮಾಡಿಕೊಳ್ಳಲು ಅವಳ ಉದ್ದೇಶವೇನಿದ್ದಿತೋ ತಿಳಿದು ಬಂದಿಲ್ಲ.

— ಪಾಯೋನಿಯರ್ ಪತ್ರಿಕೆಯ ಉಪಸಂಪಾದಕರನ್ನು ಅನ್ಯಾಯವಾಗಿ ಕೆಲಸದಿಂದ ಬಿಡುಗಡೆ ಮಾಡಿದ ಸಲುವಾಗಿ, ಪತ್ರಿಕೆಯ ಚಾಲಕರ ಮೇಲೆ ಅವರು ಅಲ್ಲಹಾಬಾದಿನ ಕೋರ್ಟಿನಲ್ಲಿ ಒಂದು ಲಕ್ಷ ರೂಪಾಯಿ ನಷ್ಟದ ವ್ಯಾಜ್ಯವನ್ನು ಹೂಡಿದರು. ಡಿಸ್‌ಮಿಸ್ಸಿನ ನೋಟೀಸನ್ನು ಕೊಟ್ಟುದರಿಂದ ತನಗೆ ಮಾನಸಿಕ ವ್ಯಥೆ, ಧನನಷ್ಟ ಮತ್ತು ಮಾನ ನಷ್ಟವಾಯಿತೆಂದು ವಾದಿಯ ಅಂಬೋಣ.

— ಕಲಕತ್ತಾ ಕೊಲೇಜಿನಲ್ಲಿ ನಡೆದ ಸತ್ಯಾಗ್ರಹವು ನಿಂತು ಶಾಂತಿಯು ಉಂಟಾಗಿದೆ. ಈ ಕುರಿತು ಆರು ಜನರನ್ನು ಕೈದು ಮಾಡಿರುವರು.

— ಕ್ವಿಲನಿನ ಒಬ್ಬ ಮರ್ಯಾದಸ್ಥ ಕಂಟ್ರಾಕ್ಟರನು, ಯಾವುದೋ ಕೆಲಸದ ಕಂಟ್ರಾಕ್ಟನ್ನು ಪಡಕೊಳ್ಳಲು ಸಮೀಪದ ಪಟಣಕ್ಕೆಂದು ಹೋಗಿರುವವನು ಕಾಣೆಯಾಗಿರುವನು. ಅದೇ ಪಟ್ಟಣದ ಬಾವಿಯಲ್ಲಿ ಒಂದು ಶವವು ಸಿಕ್ಕಿತು. ಅದು ಈ ಕಂಟ್ರಾಕ್ಟರನ ಶವವೆಂದು ತಿಳಿಯಲ್ಪಟ್ಟಿದೆಯಾದರೂ ಹೆಚ್ಚಿನ ತನಖಿಯು ನಡೆಯುತ್ತಲೇ ಇದೆ.

— ಲೋಕಮಾನ್ಯತಿಲಕರವರ ವಾರ್ಷಿಕ ಮಹೋತ್ಸವ ಸಮಾರಂಭವನ್ನು ಮದರಾಸಿನಲ್ಲಿ ಅತೀ ವಿಜೃಂಭಣೆಯಿಂದ ಜರಗಿಸಿದರು. ಸಭೆಗಳು, ಭಾಷಣಗಳು ಮೊದಲಾದವುಗಳು ನಡೆದವು.

— ಅಖಿಲ ಪಕ್ಷದ ಪರಿಷತ್ತಿನ ಸಲುವಾಗಿ ಮುಂದಾಗಿ ಒಂದು ಸಭೆಯನ್ನು ಡಿಲ್ಲಿಯಲ್ಲಿ ಮುಸಲ್ಮಾನರು ಜರಗಿಸಿದರು. ಮತ್ತು ಪರಿಷತ್ತಿನ ಸಮಯ ತಾವು ಮಾಡಬೇಕಾದುದೇನೆಂದು ಚರ್ಚಿಸಿ ಇದೇ ತರದ ಸಭೆಗಳನ್ನು ಪುನಃ ೨೫—೬ ಮತ್ತು ೨೭ನೇ ದಿನಗಳಲ್ಲಿ ಜರಗಿಸುವರು.

— ಪೊನ್ನಾನಿ ನದಿಯಲ್ಲಿ ಒಂದು ದೋಣಿಯು ಗಾಳಿಗೆ ಸಿಕ್ಕಿ ಸೀದಾ ಸಮುದ್ರಕ್ಕೆ ಕೊಂಡೊಯ್ಯಲ್ಪಟ್ಟು ಅಲ್ಲಿ ಕವಚಿಬಿದ್ದಿತು. ಅದರಲ್ಲಿದ್ದ ಐದು ಜನರು ನೀರಿಗೆ ಬಲಿಯಾದರು.

— ಗುಂಟೂರಿನಲ್ಲಿ ವಾಂತಿಭೇದಿ ರೋಗವು ತಲೆದೋರಿ ಪ್ರಬಲವಾಗಿ ಬೆಳೆಯುತ್ತಲಿದೆ.

— ಅಖಿಲ ಪಕ್ಷದ ಪರಿಷತ್ತು ಲಕ್ನೋವಿನಲ್ಲಿ ನಡೆಯುವುದರಿಂದ ಅಲ್ಲಿ ಪ್ರತ್ಯೇಕ ಪೊಲಿಟಿಕಲ್ ಕೊನ್ಫರೆನ್ಸು ನಡೆಯುವುದು ಅಗತ್ಯವೆಂದು ಶ್ರೀ ಸುಭಾಸ ಚಂದ್ರ ಬೋಸರ ಅಂಬೋಣ.

— ಬನಾರಸಿನಲ್ಲಿ ಪಂಡಿತ ಮದನಮೋಹನ ಮಾಲವೀಯರು ಒಂದು ಹೊಸ ಖಾದಿ ಭಂಡಾರವನ್ನು ತೆರೆದರು. ಖಾದಿಯ ಆವಶ್ಯಕತೆಯನ್ನು ಉದ್ದೇಶಿಸಿ ಹಲವರು ಭಾಷಣಗಳನ್ನು ಮಾಡಿದರು.

— ಕೊಪರೇಟಿವ್ ರಜಿಸ್ಟ್ರಾರರ ಒಂದು ಪರಿಷತ್ತು ಈ ತಿಂಗಳ ಕೊನೆಯ ವಾರದಲ್ಲಿ ಸಿಮ್ಲಾದಲ್ಲಿ ಜರಗುವದು. ನಮ್ಮ ಸಂಸ್ಥಾನದಿಂದಲೂ ಹಲವರು ಈ ಪರಿಷದಕ್ಕೆ ಹೋಗುವರು.

— ಎಲ್ಲಾ ಸರಕಾರಿ ಉದ್ಯೋಗಸ್ಥರ ಸಂಬಳವನ್ನು ಏರಿಸಿರುವ ಕಾರಣ ಚಪ್ಪರ ಸಂಬಳವನ್ನೂ ಏರಿಸಬೇಕೆಂಬ ಒಂದು ಠರಾವನ್ನು ಎಸೆಂಬ್ಲಿಯಲ್ಲಿ ಮಿ. ಎ ಎಚ್ ಗಜ್ನಾವಿಯವರು ತರಲಿರುವರು.

— ಮುಂಬಾಯಿಯ ಮುನಿಸಿಪಾಲಿಟಿ ತೋಟಿಗಳು ಮುಷ್ಕರವನ್ನು ಪ್ರಾರಂಭಿಸಿರುವರು. ಅವರ ಬಿಡಾರಗಳ ಸಮೀಪವಿರುವ ಸ್ಥಳವನ್ನು ರೈಲ್ವೆ ಕಂಪೆನಿಯವರಿಗೆ ಮಾರಿದ್ದರು, ಅಲ್ಲಿದ್ದ ಮಾರುತಿ ವಿಗ್ರಹವನ್ನು ತೆಗೆಯಬೇಕೆಂದು ಒಂದು ವರುಷದಿಂದ ತೋಟಿಗಳಿಗೆ ಮುನಿಸಿಪಾಲಿಟಿಯವರು ಹೇಳಿದರೂ, ಇವರು ಲಕ್ಷಿಸದಿದ್ದುದಕ್ಕಾಗಿ, ಮುನಿಸಿಪಾಲಿಟಿಯವರು ತಾವಾಗಿಯೇ ವಿಗ್ರಹವನ್ನು ತೆಗೆದರು. ಇದೇ ಅವರ ಮುಷ್ಕರಕ್ಕೆ ಕಾರಣ.

— ಫೋರವರ್ಡ ಪತ್ರಿಕೆಯ ಮೇಲೆ ಆದ ಮಾನನಷ್ಟದ ಮೊಕದ್ದಮೆಯು ತಾರೀಕು ೨೮ಕ್ಕೆ ತಪ್ಪಿಗೆ ಇಟ್ಟಿರುತ್ತದೆ.

— ಕಲಕತ್ತಾ ಕೊಂಗ್ರೆಸಿನ ಅಧ್ಯಕ್ಷರಾಗಲು ಪಂಡಿತ ಮೋತಿಲಾಲ ನೆಹರುಗೆಳೇ ಅರ್ಹರೆಂದು ಆಂಧ್ರಾ ಕಾಂಗ್ರೆಸ್ ಕಮಿಟಿಯವರ ಬಹು ಪಕ್ಷದ ಠರಾವು.

— ರಂಗೂನಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಬರ್ಮಾದ ಇಬ್ಬರು ವಿದ್ಯಾರ್ಥಿಗಳನ್ನು, ಫೋರ್ಜರಿ ಸರ್ಟಿಫಿಕೇಟ್‌ಗಳನ್ನು ಮಾಡಿ ಶಾಲೆಗೆ ಸೇರಿದ ಆರೋಪದ ಮೇಲೆ ೨ ವರುಷಗಳ ತನಕ ಒಳ್ಳೆ ನಡತೆಯಲ್ಲಿ ಇರುವಗೋಸ್ಕರ ಒಂದು ಬೋಂಡನ್ನು ಬರಕೊಡಬೇಕಾಗಿಹೇಳಿ ಫೋರ್ಜರಿ ಸರ್ಟಿಫಿಕೇಟನ್ನು ಬರಕೊಟ್ಟ ಪೋಲೀಸು ಕಮಿಶನರ 'ಕ್ಲಾರ್ಕ'ನೊಬ್ಬನಿಗೆ ೪ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ದಕ್ಷಿಣ ಕನ್ನಡ

ಸ್ವೀಕಾರ:—ಬಾಗಲ ಕೋಟೆಯ ಸ್ವಾಮಿ ರಾ| ಕೆರೂರರವರು ಪ್ರಕಟಿಸಿದ 'ಪತಿವಶೀಕರಣ' ಎಂಬ ನಾಟಕವೂ ವಿಶ್ವಕರ್ನಾಟಕ ಪುಸ್ತಕ ಪ್ರಕಟನಾಲಯದಲ್ಲಿ ಪ್ರಕಟವಾದ, 'ಗಾಂಧಿಜಿಯವರ ಆತ್ಮಕಥೆ ಅಥವಾ ಸತ್ಯ ಶೋಧನೆ' ಎಂಬ ಪುಸ್ತಕದ ಮೂರನೇ ಭಾಗವೂ, ಶ್ರೀ ಭಿ. ಜಿ, ಹುಲಿಕವಿಯವರಿಂದ ರಚಿತವಾದ ಪ್ರಭಾಸ ಅಥವಾ ಶ್ರೀ ಕೃಷ್ಣನಾಮಾಮೃತವೂ ನಮ್ಮ ಹಸ್ತಗತವಾಗಿವೆ. ಸ್ಥಳಾಭಾವದಿಂದ ವಿಮರ್ಶೆಯನ್ನು ಪ್ರಕಟಿಸದೆ ಬರುವ ಸಂಚಿಕೆಯಲ್ಲಿ ಕೊಡುವೆವು.

ಮಂಗಳೂರು:—ಮೊಡೆಲ್ ಶಾಲೆಯ ಒಬ್ಬ ವಿದ್ಯಾರ್ಥಿಯಾದ ಪುಂಡಲೀಕ ಶೆಣೈ ಎಂಬವನಿಗೆ ಕಳೆದ ಬುಧವಾರ ಇಲ್ಲಿಯ ಲೈನ್ ಮೈದಾನಿನಲ್ಲಿ ಒಂದು ಬಂಗಾರದ ಉಂಗುರವು ಸಿಕ್ಕಿರುತ್ತದೆಂದೂ, ಅದು ಈಗ ತನ್ನೊಡನಿರುವದೆಂದೂ, ಅದು ತನ್ನದೆಂದು ರುಜು ಪಡಿಸುವವನು ಬೆಳಿಗ್ಗೆ ೧೦ ಘಂಟೆಯ ಮೇಲೆ ೫ ಘಂಟೆಯ ಒಳಗೆ ತನ್ನಲ್ಲಿ ಬಂದು ರುಜು ಪಡಿಸಿದರೆ, ಉಂಗುರವನ್ನು ಕೊಡಬಹುದೆಂದೂ, ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೊನ್ನೆ ಮಂಗೇಶರಾಯರು ತಿಳಿಸುತ್ತಾರೆ.

ಇಲ್ಲಿಯ ಹೊಸ ಪೋಲೀಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟ ಶ್ರೀ ಕರುಣಾಕರನ್ ನಾಯರರವರು ಕಳೆದ ಮಂಗಳವಾರ ದಿನ ತನ್ನ ಚಾರ್ಜನ್ನು ಪಡಕೊಂಡರು. ವರ್ಗವಾಗಿದ್ದ ಇಲ್ಲಿಯ ಮೊದಲಿನ ಪೋಲೀಸ್ ಸುಪರಿಂಟೆಂಡೆಂಟರಾದ ವಿ. ರಾಜಗೋಪಾಲ ಥಂಬನರು ಕಳೆದ ಬುಧವಾರ ದಿನ ಹೊರಟು ಹೋದರು.

ಕಾರ್ಕಳದ ಡಿಸ್ಟ್ರಿಕ್ಟ್ ಮುನಿಸಿಫ್ ಶ್ರೀ ಬಿ. ಗೋಪಾಲಕೃಷ್ಣಯ್ಯನವರು ತಿರುಚಿನಾಪಳ್ಳಿಯ ಸಬ್‌ಕೋರ್ಟಿನ ಸಬ್ ಜಜ್ಜರಾಗಿ ವರ್ಗಾಯಿಸಲ್ಪಟ್ಟರು. ಕಾರ್ಕಳದ ಡಿಸ್ಟ್ರಿಕ್ಟ್ ಮುನಿಸಿಫರಾಗಿ, ಬಿ. ಎಲ್. ಎನ್. ರೈಯವರು ನೇಮಕ ಹೊಂದಿರುವರು.

ಮಂಗಳೂರು ಬ್ರಹ್ಮ ಸಮಾಜದವರ ಮಂದಿರದಲ್ಲಿ ಇದೇ ಬರುವ ೧೯ನೇ ತಾರೀಕಿನ ಆದಿತ್ಯವಾರ ಬೆಳಿಗ್ಗೆ ಘಂಟೆ ೭॥ಗೆ ಶ್ರೀಯುತ ಇ. ಸುಬ್ಬಕೃಷ್ಣಯ್ಯನವರು ಇಂಗ್ಲೀಷಿನಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಕಳೆದ ತಾರೀಕು ೧೧-೮-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩೩ ಮರಣಗಳೂ, ೪೫ ಜನನಗಳೂ ಆದವು. ಮರಣಗಳ ಪೈಕಿ ಟ್ಯಾಫ್ಯಾಡಿನಿಂದ ೧, ಅತಿಸಾರದಿಂದ ೪, ಇತರ ಎಲ್ಲಾ ಕಾರಣಗಳಿಂದ ೨೮; ಶಿಶು ಮರಣ ೧೧.

ಮಂಗಳೂರಿನಲ್ಲಿ ಮದರಾಸು ಸರಕಾರದವರು ಇನ್ನೊಂದು ವರುಷದೊಳಗೆ ಒಂದು ವಾಣಿಜ್ಯಶಾಲೆಯನ್ನು ಇಡುವರೆಂಬುದು ಸಂತೋಷದ ವಿಷಯವಾಗಿದೆ.

ಒಂದೆರಡು ದಿನಗಳಿಂದ ಬಹಳ ಮಳೆ ಬರಲು ಪ್ರಾರಂಭಿಸಿಯದೆ. ಇದು ವರೆಗೂ ಮಳೆಯು ಬಿಟ್ಟಿದ್ದಿಲ್ಲ. ಆದರೆ ಗಾಳಿ ಮಾತ್ರ ಅಷ್ಟೊಂದು ವಿಶೇಷವಾಗಿಲ್ಲ.

ಇಲ್ಲಿಯ ಬೋಳಾರದಲ್ಲಿ ಕಳೆದ ಆದಿತ್ಯವಾರ ಸರ್ಕಲ್ ಇನ್ಸ್‌ಪೆಕ್ಟರ್ ರಾ| ಚಮ್ನಾಡರವರು ಜುಗಾರಾಡುತ್ತಿದ್ದ ೧೪ ಜನರನ್ನು ಹಿಡಿದು ಕೈದು ಮಾಡಿದರು. ಈ ಹದಿನಾಲ್ಕು ಜನರಲ್ಲಿ, ಆಡುವ ಬಗ್ಗೆ ಮನೆ ಕೊಡುತ್ತಿದ್ದ ಮನೆಯ ಯಜಮಾನನೂ ಒಬ್ಬನಾಗಿರುವನು.

ಅದ್ವೈತಿಗಳ ಸಭೆಯೊಂದು ಕಳೆದ ಆದಿತ್ಯವಾರ ಸಂಜೆ, ಶ್ರೀ ಕೆ. ಅಡಿಗರ ಅಧ್ಯಕ್ಷತೆಯಲ್ಲಿ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಭವನದಲ್ಲಿ ನಡೆದು ಅದ್ವೈತ ತೃತೀಯ ಮಹಾಸಭೆಯ ಕಾರ್ಯ ಕಮಿಟಿಗಳ ನೇಮಕವಾಯಿತು.

ಇಲ್ಲಿಯ ಭಾರತ ಯುವಕ ಸಂಘದ ಶಾಖೆಯವರು ಕಳೆದ ಆದಿತ್ಯವಾರ ಶ್ರೀ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ, ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ ಗೋಪಾಲಕೃಷ್ಣ ಗೋಖಲೆಯವರ ವಿಭೂತಿ ಪುರುಷೋತ್ಸವವನ್ನು ಆಚರಿಸಿದರು. ಶ್ರೀ ಕಮಲಾ ದೇವಿ, ಶ್ರೀ ಎ. ಬಿ. ಸೆಟ್ಟಿ, ಶ್ರೀ ಕಾರ್ನಾಡು ಸದಾಶಿವರಾಯರು, ಮೊದಲಾದವರ ಕಾಲೋಚಿತ ಭಾಷಣಗಳಾದ ಮೇಲೆ ಅಧ್ಯಕ್ಷರ ಭಾಷಣವಾಯಿತು.

ಕಳೆದ ಶುಕ್ರವಾರ ಇಲ್ಲಿಯ ಬಸ್ ಮಾಲಿಕರು ಇಲ್ಲಿಂದ ವರ್ಗವಾಗಿ ಹೋದ ಪೋಲೀಸ್ ಸುಪರಿಂಟೆಂಡೆಂಟರಾದ ರಾ. ರಾಜಗೋಪಾಲ ಥಂಬನರಿಗೆ ಟೀಪಾರ್ಟಿ ಸತ್ಕಾರವನ್ನು ಇಲ್ಲಿಯ ರಥಬೀದಿಯ ಕೋ-ಒಪರೇಟಿವ್ ಟೌನ್ ಬೇಂಕಿನಲ್ಲಿ ನಡೆಸಿದರು, ಈ ಟೀಪಾರ್ಟಿ ಸತ್ಕಾರಕ್ಕೆ ಎಲ್ಲಾ ಬಸ್ಸ್ ಮಾಲಿಕರು ಸೇರಿ ಸತ್ಕಾರವನ್ನು ಅತಿ ಸಂಭ್ರಮದಲ್ಲಿ ನಡಿಸಬೇಕೆಂದು ಶಂಕರ್ ವಿಠ್ಠಲ್ ಮೋಟರ್ ಕಂಪೆನಿಯ ಮ[illegible]ರರಾದ ಗಣೇಶರಾಯರೂ ಮತ್ತು ಸಿ. ಪಿ. ಸಿ, ಕಂಪೆನಿಯ ಮೆನೆಜಿಂಗ್ ಡೈರೆಕ್ಟರರಾದ ವಿ. ಶ್ರೀನಿವಾಸ ಕಾಮ್ತಿಯವರೂ, ಪಿ, ವಿ. ಕಂಪೆನಿಯ ಪ್ರೊಪ್ರೈಟರರಾದ ಕೆ. ಪಿ. ಪಿಳ್ಳೆಯವರೂ, ಶಂಕರ ವಿಠ್ಠಲ ಕಂಪೆನಿಯಲ್ಲಿ ಸಭೆ ಕೂಡಿ, ಇದೇ ಟೀಪಾರ್ಟಿ ಸತ್ಕಾರಕ್ಕೆ ಇನ್ನೂ ಇತರ ಕಂಪೆನಿಯವರನ್ನು ಸೇರಿಸಿಕೊಳ್ಳಬೇಕಾಗಿ ನಿಶ್ಚಯಿಸಿ, ಉಡುಪಿಯಲ್ಲಿರುವ ಹನುಮಾನ್ ಕಂಪೆನಿಯ ಮಾಲಿಕರಿಗೂ ತಂತಿಯಮೂಲಕ ತಿಳಿಸಿದರು. ಮತ್ತು ಇಲ್ಲಿಯ ಪೊಪ್ಯುಲರ ಕಂಪೆನಿಯ ಮಾಲಿಕರಾದ ಬೊ. ವಿಟ್ಠಲರಾಯರಿಗೂ ತಿಳಿಸಿದರಂತೆ; ಬೊ. ವಿಟ್ಠಲರಾಯರೂ ಹನುಮಾನ ಕಂಪೆನಿಯ ಮಾಲಿಕರೂ ಈ ಟೀಪಾರ್ಟಿ ಸತ್ಕಾರಕ್ಕೆ ಕೂಡಲು ಸಮ್ಮತಿಸಲಿಲ್ಲವಾದುದರಿಂದ ಇತರ ಕಂಪೆನಿಯವರು ಮಾತ್ರ ಕೂಡಿ, ಟೀಪಾರ್ಟಿ ಸತ್ಕಾರವನ್ನು ನಡೆಸಿದರು. ಈ ಟೀಪಾರ್ಟಿ ಸತ್ಕಾರಕ್ಕೆ ಅನೇಕ ದೊಡ್ಡ ಮಹನೀಯರು ಬಂದಿದ್ದರು; ಹನುಮಾನ ಕಂಪೆನಿಯ ಮಾಲಿಕರೂ, ರಾ. ಬೊ. ವಿಟ್ಠಲರಾಯರೂ ಬಂದಿದ್ದರಂತೆ; ಈ ಟೀಪಾರ್ಟಿಯ ಪ್ರತಿಸ್ಪರ್ಧೆಯಿಂದ ರಾ. ಬೊ. ವಿಟ್ಠಲರಾಯರ ಮತ್ತು ಹನುಮಾನ ಕಂಪೆನಿಯವರ ಇನ್ನೊಂದು ಟೀಪಾರ್ಟಿಯ ಸತ್ಕಾರವು ಮೊನ್ನೆಯ ದಿವಸ ನಡಿಯಿತಂತೆ.

ಪಾಣೆಮಂಗಳೂರು — ಇಲ್ಲಿಯ ಒಬ್ಬ ಕೇಡಿಯಾದ ಸಣ್ಣ ಹಮ್ಮದೆಯನ್ನು ಬಂಟವಾಳ ಪೋಲೀಸಿನವರು ಕೆಲವು ದಿವಸಗಳ ಹಿಂದೆ ಹಿಡಿದು ಕೈದುಮಾಡಿದ್ದರು. ಹಿಡಿಯುವಾಗ ಅವನಿಗೆ ಮೂಗಿನಲ್ಲಿ ಒಂದು ಗಾಯವಾಗಿತ್ತು. ಅದಕ್ಕಾಗಿ ಚಿಕಿತ್ಸೆ ಬಗ್ಗೆ ಅವನನ್ನು ಬಂಟವಾಳ ಆಸ್ಪತ್ರೆಗೆ ಒಯ್ದು ಅಲ್ಲಿ ವೈದ್ಯೋಪಚಾರ ಮಾಡಿ ಒಂದು ಕೋಣೆಯಲ್ಲಿ ಇಟ್ಟಿದ್ದರು. ಪೋಲೀಸ ಪಹರೆಯು ರಾತ್ರೆಹಗಲು ನಡಿಯುತ್ತಿತ್ತು. ಆದರೆ ಇವನು ಆಸ್ಪತ್ರೆಯಿಂದ ರಾತ್ರೆ ತಪ್ಪಿಸಿಕೊಂಡು ಓಡಿಹೋಗಿರುವನು.

ಈ ಊರಿನಿಂದ ಕೊಡ್ಮಣ್ಣಗಾಗಿ ಆನೆಕಲ್ಲು ದಾರಿಯಾಗಿ ಮಂಜೇಶ್ವರಕ್ಕೆ ಹೋಗಲು ಒಂದು ರಸ್ತೆಯನ್ನು ಮಾಡಿಸಿ ಹಲವು ವರುಷಗಳಾದವು. ಈ ಮಾರ್ಗದಲ್ಲಿ ನಂದಾವರ ಒಂದು ತೋಡು ಮಾತ್ರವೆ ಇದೆ. ಈ ತೋಡಿಗೆ ಸೇತುವೆಯು ಇಲ್ಲದೆ ವ್ಯಾಪಾರಕ್ಕೂ ಮಳೆಗಾಲದಲ್ಲಿ ಆಚೆ ಈಚೆ ಹೋಗುವುದಕ್ಕೂ ಬಹಳ ಕಷ್ಟವಾಗುತ್ತದೆ. ಮಳೆಗಾಲದಲ್ಲಿ ತುಂಬಾ ಕೆಸರಿದೆ; ಪಾಣೆಮಂಗಳೂರಿನಿಂದ ನಂದಾವರಕ್ಕೆ ಹೋಗುವವರೂ ಬರುವವರೂ ಹಲವರಿರುವರು. ಶಾಲೆಗಳು, ಟಪ್ಪಾಲುಕಟ್ಟೆ, ವ್ಯಾಪಾರದ ಅಂಗಡಿ, ಭಂಡಸಾಲೆಗಳೂ, ಹುಡುಗಿಯರ ಶಾಲೆ, ಬಂಗ್ಲೆ, ಮಾರ್ಕೇಟು, ಗಾಡಿಚೌಕ, ದೇವಸ್ಥಾನ ಮುಂತಾದ ಸಂಸ್ಥೆಗಳು ಪಾಣೆ ಮಂಗಳೂರಿನಲ್ಲಿ ಇವೆ. ಅನೇಕರು ನಂದಾವರದಲ್ಲಿ ವಾಸಿಸುತ್ತಿರುವರು. ಈ ತೋಡನ್ನು ದಾಟುವಾಗ ಅನೇಕ ಮರಣಗಳೂ ಆಗುತ್ತವೆ; ಏಳೆಂಟು ದಿವಸಗಳ ಹಿಂದೆ ಒಬ್ಬ ದ್ರಾವಿಡ ಬ್ರಾಹ್ಮಣನು ಹೊಳೆಯನ್ನು ಈಜಾಡಿ ದಾಟುವಾಗ ಬಿದ್ದು ಮುಳುಗಿ ಮರಣ ಹೊಂದಿದನು. ಈ ತರದ ಕಷ್ಟಗಳು ಈ ಸಣ್ಣ ತೋಡಿನಿಂದ ಬರುವುದರಿಂದ ಇದಕ್ಕೆ ಒಂದು ಸಣ್ಣ ಸೇತುವೆಯನ್ನು ಮಂಗಳೂರು ತಾಲೂಕು ಬೋರ್ಡಿನವರು ಮಾಡಿಸುವುದು ಅಗತ್ಯವಾಗಿದೆ. ಈಗಿನ ಮಾನ್ಯ ಮಂಗಳೂರು ತಾಲೂಕು ಬೋರ್ಡಿನ ಪ್ರೆಸಿಡೆಂಟರಾದ ರಾ| ಸದಾಶಿವ ಅಡಿಗರವರು ಪಾಣೆಮಂಗಳೂರು ಸರ್ಕಲಿನಿಂದಲೇ ಚುನಾಯಿಸಲ್ಪಟ್ಟವರಾದುದರಿಂದ ಇವರು ಈ ಕಡೆ ನಿಗಾಕೊಟ್ಟು ಈ ವರುಷದ ಬಜೇಟಿನಲ್ಲಿಯೇ ಅದನ್ನು ಸೆಂಕ್ಷನ ಮಾಡಿದರೆ ಉತ್ತಮವಿತ್ತು.

ಇಲ್ಲಿಯ ಎಸ್. ವಿ. ಎಸ್. ಎಲಿಮೆಂಟರಿ ಶಾಲೆಯ ಮುಂದುಗಡೆಯಲ್ಲಿ ಒಣಮೀನಿನ ಅಂಗಡಿಗಳಿರುವುದರಿಂದ ಶಾಲಾಮಕ್ಕಳ ಆರೋಗ್ಯಕ್ಕೆ ಕೆಟ್ಟದಾಗಿದೆ. ಆದುದರಿಂದ ಸೆನಿಟರಿ ಇಲಾಖೆಯವರು ಈ ಅಂಗಡಿಗಳನ್ನು ಇಲ್ಲಿಂದ ತೆಗೆಯುವಂತೆ ಹುಕುಂ ಕೊಟ್ಟರೆ ಬಹಳ ಉಪಕಾರವಿತ್ತು. ಮೀನಿನ ಅಂಗಡಿಗಳು ಇದ್ದಲ್ಲಿಗೆ ಗಿರಾಯಿಕಿಗಳು ಬರುವುದರಲ್ಲಿ ಸಂದೇಹವಿಲ್ಲ. ಇಲ್ಲಿಂದ ಆ ಅಂಗಡಿಗಳನ್ನು ತೆಗೆದರೆ ಒಣಮೀನಿನ ವ್ಯಾಪಾರಕ್ಕೆ ನಷ್ಟವಾಗಲಾರದು.

ಮಂಜೇಶ್ವರ — ಇಲ್ಲಿಯ ಬರಹಾನ್ಸು ಕೆಲಸದ ನರಶಿಂಹ ಶ್ಯಾನಭಾಗರ ಮೇಲೆ ಸೆಶ್ಶನ್ ಕೋರ್ಟಿಗೆ ಕಮಿಟ್ ಆದ ಕ್ರಿಮಿನಾಲ್ ಮೊಕದ್ದಮೆಯು ಈಗ ತನಖಿಗೆ ತೆಗೆದಿರುತ್ತದೆ.

ಇಲ್ಲಿಯ ಸಬ್ ರಜಿಸ್ಟ್ರಾರು ಬಂಟವಾಳಕ್ಕೆ ವರ್ಗಾಯಿಸಲ್ಪಟ್ಟುದರಿಂದ ಇವರ ಬದಲಿಗೆ ಹೊಸಬರು ಬಂದು ಚಾರ್ಜ್ ವಹಿಸಿಕೊಂಡಿರುವರು.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆಯ ವರ್ಷಾವಧಿ ರಿಪೋರ್ಟ ಸ್ಕೀಂ ಜಾರಿಗೆ ಬಂದು ಹಲವು ವರ್ಷಗಳಾದರೂ ಶರ್ತದಂತೆ ಪ್ರಕಟಿಸಲ್ಪಡದೆ ಇದ್ದುದು ಕೇವಲ ಆಶ್ಚರ್ಯಕರವಾಗಿದೆ. ಈ ವರ್ಷ ಉಪಾಧ್ಯಾಯರಿಗೆ ಸಂಬಳ ಕಡಿಮೆಯಾಗಿಯದೆಂದೂ ಕ್ರಮವಾಗಿ ಬಟವಾಡೆ ಆಗುವುದಿಲ್ಲವೆಂದೂ ಒಂದು ದೂರು. ಸ್ಕೋಲರ್‌ಶಿಪ್ ಯಾನೆ ವಿದ್ಯಾರ್ಥಿವೇತನದ ಅರ್ಜಿಗಳು ಕೈಸೇರಿ ಒಂದು ತಿಂಗಳಾದರೂ ಹುಕುಂ ಕಾಣೆ. ವಿದ್ಯಾರ್ಥಿಗಳಿಗೆ ವೇತನವು ಸಿಕ್ಕುವುದು ಪರೀಕ್ಷೆಯ ನಂತರವೋ ಯಾ ಶಾಲೆಯಲ್ಲಿ ಕಲಿಯುವಾಗಲೋ ಎಂದು ಆಡಳಿತ ಕಮಿಟಿಯವರು ತಿಳಿಸಿದರೆ ಉತ್ತಮವಿತ್ತು.

ಕುಂಜತ್ತೂರು — ಇತ್ತೀಚೆಗೆ ಇಲ್ಲಿಯ ಪೋಸ್ಟಾಫೀಸಿನಿಂದ ೧೨ ಗಂಟೆ ಒಳಗೆನೇ ಟಪ್ಪಾಲು ಕಟ್ಟಿ ಮಂಜೇಶ್ವರಕ್ಕೆ ಸಾಗಿಸುವರು. ಟಪ್ಪಾಲಾಫೀಸಿನ ತೆರೆಯೋಣವು ಯಾವ ಕಾಲದಲ್ಲಿ ಎಂತ ಕಾಣಿಸುವ "Business Hours" ನೋಟೀಸು ಕಾಣುವದೇ ಇಲ್ಲಾ. ಒಮ್ಮೆ ಟಪ್ಪಾಲ ಅಧಿಕಾರಿಗಳು ಈ ಕಡೆ ನಿಗಾಕೊಡಬೇಕಾಗಿದೆ.

ಮೊನ್ನೆ ತಾನೆ ಒಂದು ಬಾಲಿಕಾ ಪಾಠಶಾಲೆಯು ತಾಲೂಕು ಬೋರ್ಡಿನವರಿಂದ ಮಂಗಲಪಾಡಿ ಗ್ರಾಮದಲ್ಲಿ ತೆರೆಯಲ್ಪಟ್ಟಿದೆ. ಚುನಾಯಿಸಿದ ಸ್ಥಳವು ಒಂದು ಮೂಲೆಯಾಗಿರುವುದರಿಂದ ವಿದ್ಯಾರ್ಥಿಗಳು ಸಿಕ್ಕುವುದು ದುರ್ಲಭ ಆ ಶಾಲೆಯನ್ನು ಅಂಬಾರ ಅಥವಾ ಕುಕ್ಕಾರಿನಲ್ಲಿ ಇರಗೊಡಿಸಬಾರದೇ? ಈಗಣ ಸಂಖ್ಯೆ ೫ ಅಂತೆ.

ಹಪ್ತೆಗೊಂದಾವರ್ತಿ ಜರಗುವ ಇಲ್ಲಿಯ ಪಂಚಾಯತ ಕೋರ್ಟಿಗೆ ತನ್ನ ಸಾರ್ವಜನಿಕ ಪ್ರಯೋಜನದ ಬಗ್ಗೆ ಕಟ್ಟಿಸಿದ ಬಂಗ್ಲೆಯನ್ನು ಕೊಡಬಹುದಾಗಿ ಇಲ್ಲಿಯ ಜಮೀನದಾರ ರಾ| ಮಂಜಣ ಆಳ್ವರು ಹೇಳಿದಂತೆ ಕೋರ್ಟ ಸರ್ವರಿಗೂ ಯೋಗ್ಯವೆನಿಸುವ ಆ ಬಂಗ್ಲೆಗೆ ಬಂದ ಒಂದು ವರ್ಷದೊಳಗೆ ಇಲ್ಲಿಂದ ಒಮ್ಮೆ ಜಾರಿಸಬೇಕಾಗಿ ಹುಕುಂ ಆಗಿಯದಂತೆ. ಕೋರ್ಟ ಇಲ್ಲಿ ಇದ್ದುದರಿಂದ ಅವರಿಗುಂಟಾದ ಉಪಕಾರಗಳನ್ನು ಗ್ರಹಿಸದೆ ಇಂಥಾ ಹುಕುಂ ಕೊಟ್ಟುದರಿಂದ ಈಗ ನಾಲ್ಕನೇ ಸ್ಥಾನಕ್ಕೆ ಒಯ್ಯಬೇಕಾಗಿದೆ. ಅವರು ತನ್ನ ಹುಕುಮನ್ನು ಒಮ್ಮೆ ಪುನರಾಲೋಚಿಸಿದರೆ ಕಕ್ಷಿಗಾರರಿಗೂ ಅವರಿಗೂ ಎಷ್ಟು ಮಟ್ಟಿನ ಗುಣ ಸಿಕ್ಕೀತೆಂದು ಅವರೆ ಭಾವಿಸಲಿ!

ಮೂಡಬಿದರೆ — ಇಲ್ಲಿಯ ಬೋರ್ಡು ಮಿಡ್ಲ್‌ಸ್ಕೂಲಿನಲ್ಲಿ ಕಲಿಯುವ ಹುಡುಗರು ಆ ಶಾಲೆಯನ್ನು ಬಿಟ್ಟು ಪರವೂರಿನ ಶಾಲೆಗಳಿಗೆ ಹೋಗುವದಾದರೆ ಅಂಥಾ ಮಕ್ಕಳ ಹೆತ್ತವರು ಅರ್ಜಿಮಾಡಿದರೂ ಟ್ರೆನ್ಸ್‌ಫರ ಸರ್ಟಿಫಿಕೇಟು ಕೊಡಲಿಕ್ಕೆ ನಿರಾಕರಿಸಿ ಬಹಳ ಬಾಧೆಕೊಡುತ್ತಿರುವರು. ಮದರಾಸು ಎಜ್ಯುಕೇಶನಲ್ ರೂಲ್ಸಿನಲ್ಲಿ ಟ್ರೆನ್ಸ್‌ಫರ್ ಸರ್ಟಿಫಿಕೇಟಿನ ವಿಷಯ ಏನಾದರೂ ಹೊಸ ಬದಲಾವಣೆಗಳು ಆದುದು ಕಂಡುಬರುವುದಿಲ್ಲ. ಆದುದರಿಂದ ಅನ್ನವಸ್ತ್ರ, ಸಂಬಳ, ಪುಸ್ತಕ ಮುಂತಾದ್ದನ್ನು ಕೊಟ್ಟು

Batliwalla's Preparations Cover All Your Needs.
A NAME THAT MERIT HAS MADE FAMOUS.
೬೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

... ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
... — ಮಲೇರಿಯಾ ಜ್ವರ ನಿವಾರಣ. ರೂ. ೧.
... — ... ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
... — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
... — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
... — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
... — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ರೂ. ೦—೬—೦
ರೂ. ೦—೬—೦. LIBERAL DISCOUNT TO TRADE
...:-CAWASHAPUR, BOMBAY.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

...ರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

... ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು ... ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ...' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

... ದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ...

... ಪ್ರದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣ ... ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ... ಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ... ವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

... ಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು

ಕೇಸರೀ ಕುಟೀರಂ,
... ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.
ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು.
... ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



... ಬ. ವರ್ಣ ... ವಿಶ ... ಇಲ್ಲ ... ಬರುವ ...
ಪ್ರಾ ... ವಸ್ತುಗಳ ಪಡೆಯುವ ಬಗೆ ...
ಎ. ಆರ್. ಬಿಲೀಲ
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು.
18-11-27) ನಗರ್ತಪೇಟೆ, ಬೆಂಗಳೂರು ...

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧರಿಸುವಿಕೆ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
೦—೯—೨೭ ಸಳ್ಳೆಬೈಲ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ,

... ಇನಾಂ.

... ಇದಕ್ಕೆ ... 14 ಕ್ಯಾರೆಟ್ಸ್ ಭಂಗಾರದಂತ ... ಇದ ... ಚೆನ್ನಾಗಿ ... ಈ ಪೇನಾವನ್ನು ... ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ... ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,
ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)
ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ.

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ ಮೂವಮೆಂಟ್ ಮಾಡಿರುವದು. ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ್ ಪೇನಾ 1, ಹೇರಾಯಿಲ್ ಬಾಟಲ್ 1, ವಜ್ರದ ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಣಿ 1, ಸುವಾಸನೆ ಸೋಪು 1, ಪೇನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ಖಾತ್ರಿಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.
THE ENGLISH EMPORIUM,
P. O. box 105 MADRAS.

ಸಾಕುವ ಮಕ್ಕಳ ಹೆತ್ತವರು ಬರಹ ಮೂಲಕ ಕೇಳಿದೊಡನೆಯೇ ಸರ್ಟಿಫಿಕೇಟನ್ನು ಕೊಡಬೇಕಾಗಿ ಈ ಶಾಲೆಯ ಹೆಡ್‌ಮಾಸ್ತರರಿಗೆ ಮೇಲಾಧಿಕಾರಿಗಳಾದ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರೂ ಜಿಲ್ಲಾ ಎಜ್ಯುಕೇಶನಲ್ ಆಫೀಸರರೂ ತಿಳಿಸುವುದು ಒಳ್ಳೇದೆಂದು ಕಾಣುತ್ತದೆ.

ಬಂಟವಾಳ— ಪೋಸ್ಟಲ್ ಸುಪ್ರಿಡೆಂಟರು ಬಂದು ಇಲ್ಲಿಯ ನೆರೆಕರೆಯ ಪೋಸ್ಟಾಫೀಸುಗಳನ್ನು ಸಂದರ್ಶಿಸುತ್ತಿರುವರು.

ಇಲ್ಲಿಯ ಮಾಪಿಳ್ಳಾ ಪೇಟೆಯ ಮಾರ್ಗವು ಬಂಗ್ಲೆ ಬಾಗಿಲಿನಿಂದ ಹೆಗಡೆಯರ ಭಂಡಸಾಲೆಯ ತನಕ ವರೆಗೆ ಬಹಳ ಇಕ್ಕಟ್ಟಾಗಿದೆ. ಮೋಟಾರ್ ಚಲಾವಣೆಯು ಬಂಟವಾಳದಲ್ಲಿ ಬಹಳ ಹೆಚ್ಚಾಗಿರುವುದರಿಂದ ಬಹಳ ಇಕ್ಕಟ್ಟಾದ ಮಾರ್ಗದಲ್ಲಿ ಮೋಟಾರ ಬಸ್ಸುಗಳು ಬರುವಾಗ ಗಾಡಿಗಳು ಬರಲಿಕ್ಕೂ ಮನುಷ್ಯರಿಗೆ ಹೋಗಲಿಕ್ಕೂ ಬಹಳ ಕಷ್ಟವಾಗುತ್ತದೆ. ಮಾರ್ಗದ ಎರಡೂ ಬದಿಗಳಲ್ಲಿ ಮನೆಗಳು ಇಲ್ಲದೆ ಇರುವುದರಿಂದ ಈ ಮಾರ್ಗವನ್ನು ಅಗಲ ಮಾಡಲಿಕ್ಕೆ ಬಹಳ ಕಡಿಮೆ ಖರ್ಚು ತಗಲುವುದು. ಆದುದರಿಂದ ಈ ವರುಷದ ಬಜೇಟಿನಲ್ಲಿ ಎಸ್ಟಿಮೇಟ ಕೂಡಿಸಿದರೆ ಗಾಡಿ ಜನಜಾನುವಾರುಗಳು ಬಚಾವಾಗುತ್ತಿದ್ದವು.

ಇಲ್ಲಿಯ ಸಬ್ ರಿಜಿಸ್ಟ್ರಾರರಿಗೆ ಮಂಜೇಶ್ವರಕ್ಕೂ, ಅಲ್ಲಿಯ ಸಬ್ ರಿಜಿಸ್ಟ್ರಾರರಿಗೆ ಇಲ್ಲಿಗೂ ವರ್ಗವಾಗಿದೆ.

ಹೊಸದುರ್ಗ— ಸಾಧು ನಿತ್ಯಾನಂದರು ಇಲ್ಲಿ ಬಡಬಗ್ಗರಿಗೆ ೧೦ ಮುಡಿ ಅಕ್ಕಿಯನ್ನು ಧರ್ಮವಾಗಿ ಹಂಚಿ ಜನರಿಗೆ ಆನಂದ ಮಾಡಿಟ್ಟಿರು.

ಕುಪ್ಪಿ ಗ್ರಾಮಗಳ ಸರ್ವೆಯು ಈ ತಾಲೂಕಿನಲ್ಲಿ ಪೂರ್ತಿ ಮಾಡಲಿಲ್ಲವಾಗಿತ್ತು. ಈಗಷ್ಟೇ ಈ ಡಿವಿಜನ್ ಕುಪ್ಪಿ ಗ್ರಾಮಗಳ ಸರ್ವೆ ಆರಂಭಿಸುತ್ತಾರೆ.

ಕೇಂದಿ ಗುತ್ತಿಗಳ ಏಲಂ ಈ ವರುಷ ಹೆಚ್ಚಿಗೆ ಮೊಬಲಗಿಗೆ ದರ್ಖಾಸ್ತಿಗೆ ಹೋಗಿರುತ್ತದೆ.

ಇಲ್ಲಿಯ ಪಂಚ್ಯಾತ ಕೋರ್ಟ ಮೆಂಬರ ಶ್ರೀಯುತ ಎಚ್. ಅಪ್ಪಯ್ಯ ಇವರ ಮೆಂಬರಿಕೆ ಅವಧಿಯು ತಾ. ೨೮-೮-೨೮ಕ್ಕೆ ಗತಿಸುವದರಿಂದ ಇವರ ಬದಲಿಗೆ ಬೇರೆ ಒಬ್ಬ ಮೆಂಬರರ ಚುನಾವಣೆಯು ತಾರೀಕು ೨೦ಕ್ಕೆ ಇಲ್ಲಿಯ ಪಂಚ್ಯಾತ ಕೋರ್ಟಿನಲ್ಲಿ ಮ। ರಾ। ಹೊಸದುರ್ಗ ಡಿಪ್ಯುಟಿ ತಹಶೀಲದಾರರ ಅಧ್ಯಕ್ಷತೆಯಲ್ಲಿ ನಡಿಯುವದು.

ಬೆಳ್ತಂಗಡಿ— ಇದೇ ತಾ. ೧ರಲ್ಲು ದಯಾಳು ಕಾರ್ಕಳ ತಾಲೂಕು ಬೋರ್ಡು ಆಡಳಿತಕ್ಕೆ ಒಳಪಟ್ಟ ಒಂದು ಬಾಲಿಕಾ ಪಾಠಶಾಲೆಯು ತೆರೆಯಲ್ಪಟ್ಟಿತು. ಪ್ರಕೃತ ಸಾಲೆಯು ಮ। ರಾ। ಬಿ. ಅಪ್ಪಯ್ಯನ ಮಂಜುನಾಥ ಪ್ರಭುಗಳು ಹಂಗಾಮಿಯಾಗಿ ಬಿಟ್ಟುಕೊಟ್ಟ ಕಟ್ಟೋಣದಲ್ಲಿ ನಡಿಸಲ್ಪಡುವದು.

ಇದೇ ಗ್ರಾಮದಲ್ಲಿ ಹುಟ್ಟಿಬೆಳೆದು ಇದೇ ಹಳ್ಳಿಯಲ್ಲಿ ಎಂಟನೇ ತರಗತಿಯ ವರೆಗೆ ಓದಿ, ತರಬೇತಿ ಹೊಂದಿದ ಮಿಸ್. ಬಿ. ರೋಮನ್ ಮಥಾಯಸ್ ಎಂಬ ಉಪಾಧ್ಯಾಯಿನಿಯರು ವಿದ್ಯಾದಾನವನ್ನು ಮಾಡುವರೆ ನೇಮಕಹೊಂದಿರುವರು.

ಸಾಲೆಯ ಪ್ರಾರಂಭ ಸಮಾರಂಭಕ್ಕೆ ಊರ ಮಹನೀಯರನೇಕರು ದಯಮಾಡಿಸಿದ್ದರಲ್ಲದೆ ಮಕ್ಕಳ ಸಂಖ್ಯೆಯೂ ಇಪ್ಪತ್ತೈದರವರೆಗಿತ್ತು.

ಮ। ರಾ। ಬಿ. ಮಂಜುನಾಥ ಪ್ರಭುಗಳು ಸಾಲೆಯ ಭಾವೀ ಅಭಿವೃದ್ಧಿಯನ್ನು ಹಾರೈಸಿ ಧನ್ಯವಾದಗಳನ್ನು ಅರ್ಪಿಸಿದ್ದಲ್ಲದೆ, ಪ್ರತಿಯೊಬ್ಬನೂ ತಮ್ಮ ಚಿಕ್ಕ ಬಾಲಿಕೆಯರನ್ನು ವಿದ್ಯಾವಂತರನ್ನಾಗಿಯೂ, ಜ್ಞಾನವಂತೆಯರನ್ನಾಗಿಯೂ ಮಾಡಲಿಕ್ಕೆ ಪ್ರಯತ್ನಿಸುವದಾದರೆ ಈ ಸುಸಂಧಿಯನ್ನು ಕಳೆದುಕೊಳ್ಳಬಾರದಾಗಿಯೂ, ಈಗಿನ ಹೆಣ್ಮಕ್ಕಳೇ ಮುಂದಿನ ಸಂಸಾರದ ಚಾಲಕರಾದ ಗೃಹಿಣಿಯರಾಗಿ ಯೋಗ್ಯಮಕ್ಕಳನ್ನು ಪಡೆದು, ಅಬಲೆಯರೆಂಬ ಕಳಂಕವನ್ನು ನಿವೃತ್ತಿಪಡಿಸಿ ಸಬಲೆಯರಾಗುವರೆಂದು ದೃಷ್ಟಾಂತ ಮೂಲಕ ವಿವರಿಸಿ, ಸಭಿಕರನ್ನೂ, ಮಕ್ಕಳನ್ನೂ ತಿಂಡಿ ತೀರ್ಥಗಳಿಂದ ತೃಪ್ತಿಪಡಿಸಿದರು.

ಈ ಗ್ರಾಮಕ್ಕೆ ಸಂಬಂಧಪಟ್ಟ ಎರಡು ಮೂರು ಬಾಲಿಕಾ ಪಾಠಶಾಲೆಗಳಿರುವದಾದರೂ ಹುಡುಗಿಯರಿಗೆ ಯೋಗ್ಯವಾದ ಕಸೂತಿ, ಗೃಹಕೃತ್ಯ ವಿಚಾರ ಮುಂತಾದ್ದನ್ನು ಕಲಿಯಲಿಕ್ಕೆ ಅನುಕೂಲವಾದ ಈ ಸಾಲೆಯ ಮುಂದಿನ ಏಳಿಗೆಗಾಗಿ ಪರಮಾತ್ಮನ ಅನುಗ್ರಹವಿರಲಿ!

ಮೂಲ್ಕಿ— ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಹೊಸ ವರುಷದ ಮೊದಲನೇ ಸಭೆಯು ಇದೇ ಕಳೆದ ತಾ. ೨೮-೭-೨೮ನೆ ಶನಿವಾರ ಅಪರಾಹ್ನ ಘಂಟೆ ೨ಕ್ಕೆ ಮೂಲ್ಕಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು. ಸದರಿ ಶಾಲಾ ಸಹಾಯಕ ರಾ। ಬಿ. ಭೋಜರಾಯರು ಅಂದಿನ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಸಂಘದ ಪ್ರಥಮ ವರ್ಧಂತಿಯನ್ನು ಇದೇ ಬರುವ ತಾ. ೨೫-೮-೨೮ನೆ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಮೂಲ್ಕಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟಡದಲ್ಲಿ ಜರಗಿಸಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು. ಆ ಬಗ್ಗೆ ೧೫ ಜನ ಮುಖ್ಯ ಉಪಾಧ್ಯಾಯರು ಮತ್ತು ಉಪಾಧ್ಯಾಯರಿಂದೊಡಗೂಡಿದ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ನಂತರ ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ ರಾ। ಬಿ. ಕಾಂತಪ್ಪನವರು (ಮೂಲ್ಕಿ ಹಾ. ಎ. ಶಾಲೆಯ ಸಹಾಯಕ) "ವಿಭೀಷಣ ನೀತಿ"ಯ ವಿಷಯ ಮೊದಲನೇ ಭಾಗವನ್ನು ಅರ್ಥಗರ್ಭಿತವಾಗಿ ಹಾಡಿ ವಿವರಿಸಿ ಹೇಳಿದರು. ಸಮಯ ಸಂಕೋಚದಿಂದ ಇತರ ವಿಷಯಗಳನ್ನು ಮುಂದಿನ ಸಭೆಗೆ ಮುಂದರಿಸಿ ಇಡಲಾಯಿತು. ಇದಾಗಲು ಸಭಾಧ್ಯಕ್ಷರು ತಮ್ಮ ಭಾಷಣವನ್ನು ಸ್ವಲ್ಪದರಲ್ಲಿಯೇ ಹೇಳಿ ಮುಗಿಸಲು ಉಪಕಾರ ಸ್ಮರಣೆ ಇತ್ಯಾದಿಗಳಿಂದ ಅಂದಿನ ಸಭೆಯು ಕೊನೆಗೊಂಡಿತು.

ಉಪ್ಪಿನಂಗಡಿ— ಇಲ್ಲಿಂದ ಸುಮಾರು ೩ ಮೈಲು ದೂರವಿರುವ ಮೈಪಳ ಎಂಬಲ್ಲಿ ಮೈರಳ ಸುಬ್ರಾಯ ಎಂಬವರು ತಾ. ೨ನೇ ಗುರುವಾರ ನದಿದಾಟಿ ಆಚೆದಡದಲ್ಲಿರುವ ತನ್ನ ಮಾವನ ಮನೆಗೆ ಹೋಗುವ ಸಮಯದಲ್ಲಿ ಮೇಲಿನಿಂದ ನೀರು ಬಂದು ಅವರನ್ನು ಸೆಳೆದುಕೊಂಡು ಹೋಯಿತು. ಇವರ ಶವವು ತಾ. ೬-೮-೨೮ರಲ್ಲಿ ಅಲ್ಲಿಂದ ಐವ್ಮೈಲು ದೂರವಿರುವ ಶಾಪಿ ಕಲ್ಲು ಎಂಬಲ್ಲಿ ಸಿಕ್ಕಿತು.

೧೯೨೮ನೇ ಇಸವಿಯ ಆಗೋಸ್ತು ೨ನೇ ತಾರೀಕಿಗೆ ಜರಗಿದ ಒಂದನೆಯ ಅಖಿಲ ಕರ್ಣಾಟಕ ವ್ಯಾಪಾರಸ್ಥ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ರಾ। ಬಾ। ಬಾಲಕೃಷ್ಣದಾಸ ವೆಂಕಟದಾಸ ಇವರ ಭಾಷಣದ ಸಾರಾಂಶವು.

ಪ್ರಿಯ ವ್ಯಾಪಾರಿ ಬಂಧುಗಳೇ! ನಿಮಗಾದ ಹಲವು ಕಷ್ಟನಷ್ಟಗಳನ್ನು ಲಕ್ಷಿಸದೆ, ಈ ಪರಿಷತ್ತಿಗೋಸುಗ ನೀವು ಇಲ್ಲಿ ಬಂದು ಸೇರಿ, ಪ್ರೋತ್ಸಾಹವನ್ನಿತ್ತುದು ನಮಗೆ ಬಹಳ ಆನಂದವನ್ನುಂಟುಮಾಡಿಯದೆ. ಜಗತ್ತಿನ ಅಭಿವೃದ್ಧಿಗೆ ವ್ಯಾಪಾರವೇ ಮೂಲ ಸಾಧನವು. ಆದರೆ ದುರ್ದೈವದಿಂದ ಕರ್ನಾಟಕದ ವ್ಯಾಪಾರಿಗಳಲ್ಲಿ ಒಕ್ಕಟ್ಟು ಇದ್ದಿಲ್ಲವಾದರೂ ಇನ್ನು ಮುಂದೆ, ಒಕ್ಕಟ್ಟು ಉಂಟಾಗುವದೆಂದು ಇಂದಿನ ಈ ಪ್ರಸಂಗದಿಂದ ತಿಳಿಯಬಹುದಾಗಿದೆ.

ಕರ್ನಾಟಕದಲ್ಲಿ ಮೊದಲು ನೆಲಸಿದ್ದ ಹಲವು ರಾಜ್ಯಗಳಲ್ಲಿ ವ್ಯಾಪಾರವು ಅತಿ ಉಚ್ಚಸ್ಥಿತಿಯಲ್ಲಿದ್ದಿತೆಂಬುದಕ್ಕೆ ಸಂಶಯವಿಲ್ಲ. ಕರ್ನಾಟಕವು ಸಾಮಾನ್ಯ ದೇಶವಲ್ಲ. ಪ್ರತಾಪಿಗಳಾದ ಅರಸರೂ, ಮತಸ್ಥಾಪಕರಾದ ಆಚಾರ್ಯರೂ ಇಲ್ಲಿ ಉದಯಿಸಿ, ಕೀರ್ತಿಪಡೆದರು, ಅದರಂತೆ ಹಲವು ವ್ಯಾಪಾರಿಗಳೂ ಇದ್ದರು. ಕರ್ನಾಟಕದಿಂದ ಪರದೇಶಗಳಿಗೂ, ಪರದೇಶಗಳಿಂದ ಕರ್ನಾಟಕಕ್ಕೂ ಸಾಮಾನು ಹೋಗುತ್ತಾ, ಬರುತ್ತಾ ಇದ್ದುವೆಂಬುವದಕ್ಕೆ ಬೈಬಲ್ ಮೊದಲಾದ ಗ್ರಂಥಗಳೇ ಸಾಕ್ಷಿಯಾಗಿವೆ.

ಪರರಾಷ್ಟ್ರದವರ ದಾಳಿಯಿಂದ ಕರ್ನಾಟಕದ ವ್ಯಾಪಾರವು ಅಳಿಯತೊಡಗಿತು. ಈ ದಾಳಿಯು ಈಗಲೂ ಇರುವುದರಿಂದ ನೀವೆಲ್ಲರೂ ಒಕ್ಕಟ್ಟಿನಿಂದ ಅದನ್ನು ಹೋಗಲಾಡಿಸುವ ಸುಲಭೋಪಾಯವನ್ನು ಕಂಡು ಹಿಡಿಯಬೇಕು.

ಕರ್ನಾಟಕವು ಕಣ್ಣು ತೆರೆಯುತ್ತಿದೆ; ವ್ಯಾಪಾರವು ಅಭಿವೃದ್ಧಿಯಾಗತೊಡಗಿದೆ. ವ್ಯಾಪಾರೀ ಸಂಘಗಳು ಸ್ಥಾಪಿಸಲ್ಪಡುತ್ತಿವೆ. ಇದೇ ಸ್ಥಿತಿಯು ಇನ್ನೂ ನಡೆದರೆ ವ್ಯಾಪಾರವು ಪುನಃ ಮೊದಲಿನಂತೆ ಮೆರೆಯಬಹುದು. ಇದಕ್ಕಾಗಿ ನೀವು ಮನವಮುಟ್ಟಿ ಪ್ರಯತ್ನಿಸಬೇಕೆಂಬುದೇ ನಮ್ಮ ಪ್ರಾರ್ಥನೆಯು. ನಿಮ್ಮೆಲ್ಲರ ಉಪಕಾರವನ್ನು ಪುನಃ ಸ್ಮರಿಸಿ ನಿಮ್ಮ ಅಪ್ಪಣೆಯನ್ನು ಪಡೆದುಕೊಳ್ಳುವೆನು.

ಅಧ್ಯಕ್ಷರಾದ ಶ್ರೀಮಂತ ನಾಗಪ ಅರಳೆಪ್ಪ ಅಬ್ಬುಲಪುರ ಇವರ ಭಾಷಣದ ಸಾರಾಂಶ.

ನನ್ನನ್ನು ಅಧ್ಯಕ್ಷನಾಗಿ ಆರಿಸಿದುದಕ್ಕಾಗಿ ತಮಗೆ ಕೃತಜ್ಞತೆಗಳು. ನಾನು ಕನ್ನಡನಾಡಿನವನಾದರೂ, ಮರಾಠಿಯ ಪರಿಚಯವೇ ಬಹಳವಾದುದರಿಂದ ಮರಾಠಿಯಿಂದಲೇ ಭಾಷಣ ಮಾಡಿದ್ದಕ್ಕಾಗಿ ಕ್ಷಮಿಸಲು ಕೇಳುವೆನು.

ಕರ್ನಾಟಕವು ಮೊದಲು ವೈಭವದ ತುಟ್ಟ ತುದಿಯನ್ನೇರಿ ಮೆರೆಯುತ್ತಿದ್ದಿತು. ಕರ್ನಾಟಕದ ವ್ಯಾಪಾರವಾದರೋ ಅದೇ ರೀತಿ ಉಚ್ಚಸ್ಥಿತಿಯಲ್ಲಿದ್ದಿತು. ಆದರೆ ಆ ವೈಭವವು ಅಳಿದಿದೆ. ಅದನ್ನು ಪುನಃ ತರಲು ಪ್ರಯತ್ನಿಸಬೇಕು. ಹೊಸ ಪದ್ಧತಿಯನ್ನನುಸರಿಸಿಯೇ ಉದ್ಯೋಗ, ಸಾಹಸ ಮತ್ತು ದೀರ್ಘ ಪ್ರಯತ್ನ ಮಾಡಿದ ಹೊರತು ನಾವು ಎಂದಿಗೂ ಮುಂದೆ ಬರಲಾರೆವು. ಹೊರಗಿನವರು ವ್ಯಾಪಾರದ ಉದ್ದೇಶದಿಂದಲೇ ಹಿಂದೂಸ್ಥಾನಕ್ಕೆ ಬಂದು ರಾಜ್ಯವನ್ನು ಸಂಪಾದಿಸಿದರು. ಇದರಿಂದ ವ್ಯಾಪಾರದ ಮಹತ್ವವು ವಿಶದವಾಗದಿರದು. ಬ್ರಿಟಿಷ ರಾಜ್ಯದ ಉನ್ನತಿಗೆ ವ್ಯಾಪಾರವೇ ಕಾರಣವು. ನಮ್ಮ ವ್ಯಾಪಾರವು ಅಳಿದ ಕಾರಣವೇ ನಾವು ಇಂಥಾ ಅಧೋಗತಿಯಲ್ಲಿರುವೆವು.

ವ್ಯಾಪಾರ ಪದ್ಧತಿಯಲ್ಲಿ ಸುಧಾರಣೆಯು ಅಗತ್ಯವಿದೆ. ಸಹಕಾರ ತತ್ವವನ್ನು ವ್ಯಾಪಾರಿಗಳು ಮರೆಯಬಾರದು. ವ್ಯಾಪಾರದ ಪ್ರಗತಿಗೆ ಸಂಘ ಶಕ್ತಿಯೇ ಮುಖ್ಯವಾದುದರಿಂದ ಅದನ್ನು ಬೆಳೆಯಿಸಬೇಕು. ಈ ಸಂಘ ಶಕ್ತಿಯಿಂದಲೇ ಪರರಾಷ್ಟ್ರಗಳು ಅಭಿವೃದ್ಧಿಗೆ ಬಂದುವು. ವೈಯಕ್ತಿಕ ವ್ಯಾಪಾರವು ಎಂದೂ ವಿಜಯಿಯಾಗದು. ಸಾಂಪತ್ತಿಕ ದೃಷ್ಟಿಯಿಂದ ಹಿಂದೂಸ್ಥಾನವು ಮುಂದೆ ಬರಬೇಕೆಂದಿದ್ದರೆ, ನಮ್ಮ ವ್ಯಾಪಾರ ವರ್ಗದವರಲ್ಲಿ ಸಂಘಶಕ್ತಿ, ಮನೋಧೈರ್ಯ, ಸಾಹಸ, ಪ್ರಮಾಣಿಕತನ ಇವುಗಳು ದೊಡ್ಡ ಪ್ರಮಾಣದಲ್ಲಿ ಹುಟ್ಟಲಿಕ್ಕೆ ಬೇಕು.

ವ್ಯಾಪಾರದ ಅಭಿವೃದ್ಧಿಯಾಗಬೇಕಾದರೆ ಒಕ್ಕಲತನದ ಸುಧಾರಣೆಯಾಗಬೇಕಾಗಿದೆ. ಇವೆರಡರೊಳಗೂ ನಿಕಟ ಸಂಬಂಧವಿದೆ. ರೈತರಿಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ಒಕ್ಕಲಿಗರ ಸಹಾಯಕ ಸಂಘವನ್ನು ಸ್ಥಾಪಿಸಿ ಅವರಿಗೆ ಸಹಾಯವನ್ನೊದಗಿಸಬೇಕು. ಕರ್ನಾಟಕದ ಗಣಿಗಳಲ್ಲಿರುವ ಖನಿಜ ಪದಾರ್ಥಗಳನ್ನು ಅಗೆದು ಪರದೇಶಕ್ಕೆ ಕಳುಹಿಸಿ ಲಾಭ ಹೊಂದಬೇಕು. ಇದರಿಂದ ಲಾಭವಿದೆಯೆಂಬುದಕ್ಕೆ ಟಾಟಾ ಕಂಪೆನಿಯೇ ಉದಾಹರಣೆಯು.

ಕರ್ನಾಟಕದಲ್ಲಿ ಒಂದು ವಾಣಿಜ್ಯ ಶಾಲೆಯನ್ನು ಸ್ಥಾಪಿಸಬೇಕು. ಕರ್ನಾಟಕಕ್ಕೆ ಒಂದು ಬಂದರವನ್ನೊದಗಿಸಬೇಕು. ಹೆಚ್ಚು ರೈಲ್ವೆ ಮಾರ್ಗಗಳನ್ನು ಹಾಕಿಸಬೇಕು. ಮುಖ್ಯವಾಗಿ ಕರ್ನಾಟಕದಲ್ಲಿ ಏಕೀಕರಣವಾಗಬೇಕು. ಏಕೀಕರಣವೇ ಯಶಸ್ಸಿಗೆ ಸಾಧನವು

ನಮ್ಮ ದೇಶದ ವ್ಯಾಪಾರಿಗಳಿಗೆ ಸರಕಾರದವರ ಸಹಾನುಭೂತಿಯು ದೊರಕುವದಿಲ್ಲ. ಸರಕಾರದವರು ರೈಲ್ವೆ, ತಾರ ಆಫೀಸು ಮೊದಲಾದವುಗಳನ್ನು ಕರ್ನಾಟಕದಲ್ಲಿ ಹೆಚ್ಚಿಸಿ, ವ್ಯಾಪಾರಕ್ಕೆ ಸಹಾಯಕರಾಗಬೇಕು. ಮುಖ್ಯ ಮುಖ್ಯ ಸ್ಥಳಗಳಲ್ಲಿ ವ್ಯಾಪಾರಸ್ಥರ ಬೇಂಕುಗಳಿರುವುದು ಅತ್ಯವಶ್ಯವು. ಪೋಸ್ಟಿನ ಅನುಕೂಲತೆ, ನೀರಿನ ಅನುಕೂಲತೆ ಮೊದಲಾದವುಗಳನ್ನು ಒದಗಿಸಿಕೊಡಬೇಕೆಂದು ಈ ಪರಿಷತ್ತು ಶಕ್ಯವಿದ್ದಷ್ಟು ಪ್ರಯತ್ನ ಮಾಡಬೇಕಾಗಿದೆ. ಮತ್ತೊಂದು ವ್ಯಾಪಾರಿ ಮಂಡಳ (Chamber of Commerce)ವನ್ನು ಸ್ಥಾಪಿಸಬೇಕು. ಈ ಮಂಡಳದ ಕಡೆಯಿಂದ ಮುನಿಸಿಪಾಲಿಟಿ ಬೋರ್ಡು ಮೊದಲಾದ ಸಂಸ್ಥೆಗಳಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಬೇಕು. ಇದರಿಂದ ಮಂಡಳಕ್ಕಿರುವ ಕೊರತೆಗಳನ್ನು ಸರಕಾರದವರಿಗೆ ತಿಳಿಸಲು ಸುಲಭವಾಗುವದು. ಇನ್ನೂ ಹಲವು ವಿಷಯಗಳನ್ನು ಚರ್ಚಿಸಲು ಸಮಯವಿಲ್ಲದುದರಿಂದ ಇಲ್ಲಿಗೇ ಮುಗಿಸುವೆನು.

ಬಾಗಲಕೋಟೆಯಲ್ಲಿ ನಡೆದ ಪರಿಷತ್ತುಗಳೂ ಪ್ರದರ್ಶನಗಳೂ.

ಕಳೆದ ತಿಂಗಳ ಕೊನೆಯ ವಾರದಲ್ಲಿ ಮತ್ತು ಇದೇ ತಿಂಗಳ ಮೊದಲನೆಯ ವಾರದಲ್ಲಿ ಬಾಗಲಕೋಟೆಯಲ್ಲಿ ಹಲವು ಪರಿಷತ್ತುಗಳೂ ಪ್ರದರ್ಶನಗಳೂ ಯಶಸ್ವಿಯಾಗಿ ನಡೆದವು. ಮೊದಲು ಅಂದರೆ ತಾ. ೩೧ರಲ್ಲಿ ಶ್ರೀ ಕೌಜಲಗಿ ಶ್ರೀನಿವಾಸರಾಯರು ರಾಷ್ಟ್ರೀಯ ಧ್ವಜಾರೋಹಣ ಸಮಾರಂಭವನ್ನು ಜರಗಿಸಿದರು. ಮತ್ತು ರಾಷ್ಟ್ರಧ್ವಜದ ಮಹಾತ್ಮ್ಯ ಮೊದಲಾದವುಗಳ ಕುರಿತು ಅವರು ಭಾಷಣ ಮಾಡಿದರು.

ಅದೇ ದಿನ ಸಾಯಂಕಾಲ ಖಾದೀ ಪ್ರದರ್ಶನವು ಜರಗಿತು. ಈ ಪ್ರದರ್ಶನಕ್ಕೆ ಹಲವು ವಿಧದ ಬಟ್ಟೆಗಳು ಬಂದಿದ್ದವು. ಅದರ ಜೊತೆಯಲ್ಲಿಯೇ ಸ್ವದೇಶೀ ವಸ್ತುಗಳ ಪ್ರದರ್ಶನವೂ ಜರಗಿತು. ಈ ಪ್ರದರ್ಶನವೂ ಕೂಡ ಬೋಧಪ್ರದವಾಗಿತ್ತು. ಮೂರ್ತಿಗಳೂ, ಪಟಗಳೂ ಹಲವು ಬಂದಿದ್ದವು.

ತಾ. ೩೧ನೇ ದಿನ ಬೆಳಿಗ್ಗೆ ಆಯುರ್ವೇದೀಯ ವನಸ್ಪತಿಗಳ ಪ್ರದರ್ಶನವು ತೆರೆಯಲ್ಪಟ್ಟಿತು. ಹಲವು ಕಡೆಗಳಿಂದ ಔಷಧಿಗಳು ಬಂದಿದ್ದವು; ತದನಂತರ ಪತ್ರಿಕೆಗಳ ಪ್ರದರ್ಶನವು ನಡೆಯಿತು; ಈ ಪ್ರದರ್ಶನಕ್ಕೆ ಹಲವು ಜೀವಂತ ಪತ್ರಿಕೆಗಳು ಬಂದಿದ್ದವು.

ಆ ಮೇಲೆ ಒಕ್ಕಲತನದ ಪ್ರದರ್ಶನವು ಜರಗಿತು; ಒಕ್ಕಲತನದ ಯಂತ್ರಗಳೂ, ಗಿಡಗಳೂ, ಹಲವು ಬಂದಿದ್ದವು; ಜೀಜಗಳೂ ಪ್ರದರ್ಶನಕ್ಕೆ ಬಂದಿದ್ದವು.

ತಾ. ೩೧ನೇ ದಿನ ಸಾಯಂಕಾಲ ಶ್ರೀ ಆಲೂರ ವೆಂಕಟರಾಯರಿಂದ ಕರ್ನಾಟಕ ಐತಿಹಾಸಿಕ ವಸ್ತುಪ್ರದರ್ಶನವು ತೆರೆಯಲ್ಪಟ್ಟಿತು. ಇಂಥ ಪರಿಷತುಗಳನ್ನು ಆಗಾಗ್ಗೆ ನಡಿಸುವದೊಳ್ಳೆಯದೆಂದು ಅವರು ಹೇಳಿದರು, ಶಾಸನಗಳೂ ನಾಣ್ಯಗಳೂ ಮೊದಲಾದವುಗಳು ಬಂದಿದ್ದವು. ಪುರಾತನದ ವೈಭವವನ್ನು ತೋರಿಸುವ ಕಟ್ಟೋಣಗಳ ಚಿತ್ರ ಮೊದಲಾದವುಗಳು ಪ್ರದರ್ಶನಕ್ಕೆ ಅಂದವನ್ನುಂಟುಮಾಡಿದುವು.

ತಾ. ೧ನೇ ಅಗಸ್ಟ ದಿನ ವ್ಯಾಯಾಮ ವಿದ್ಯಾಪೀಠದ ವಾಸ್ತು ಸಮಾರಂಭವು ಜರಗಿತು; ಈ ಸಮಯದಲ್ಲಿ ಶ್ರೀ ವಾಮನ ನಾಯಕರು ಸ್ವಾರಸ್ಯವಾಗಿ ಭಾಷಣ ಮಾಡಿದರು.

ರೈತರ ಪರಿಷತ್ತು.

ಈ ಪರಿಷತ್ತು ದೇಶಭಕ್ತ ಗಂಗಾಧರರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಜರಗಿತು; ರೈತರು ಕಿಕ್ಕಿರಿದು ಬಂದಿದ್ದರು; ಗಂಗಾಧರರಾಯರ ಭಾಷಣವು ಸ್ಫೂರ್ತಿದಾಯಕವಾಗಿದ್ದಿತು.

ಪತ್ರಿಕಾಕರ್ತರ ಪರಿಷತ್ತು.

ಈ ಪರಿಷತ್ತು ಬಾಗಲಕೋಟೆಯಲ್ಲಿ ಕಳೆದ ತಿಂಗಳ ಕೊನೆಯ ದಿನ ನೆರವೇರಿತು. ಹಲವು ಕರ್ನಾಟಕ ಪತ್ರಿಕೆಗಳ ಪ್ರತಿನಿಧಿಗಳು ಬಂದಿದ್ದರು. ಸ್ವಾಗತಾಧ್ಯಕ್ಷರಾದ ಧಾರವಾಡ ಯಲಗುರ್ದರಾಯರ ಭಾಷಣವು ಪ್ರಥಮದಲ್ಲಿ ನಡೆಯಿತು. ಈಗ ಉಂಟಾಗಿರುವ ಕರ್ನಾಟಕ ಪತ್ರಿಕೆಗಳ ಅವನತಿಯನ್ನೂ, ಪತ್ರಿಕೆಗಳಿಂದಾಗಬಹುದಾದ ಹಲವು ಲಾಭಗಳನ್ನೂ ವಿವರಿಸಿ ಅವರು ಭಾಷಣವನ್ನು ಮಾಡಿದರು. ಅಧ್ಯಕ್ಷರಾದ ಶ್ರೀ ಗುಂಡಪ್ಪನವರು ಬಹು ವಿಚಾರಮಾಡಿ ಒಂದು ಗಂಟೆಯ ವರೆಗೆ ಹಲವು ಉದಾಹರಣೆಗಳ ಸಮೇತ ಗಂಭೀರವಾದ ಭಾಷಣವನ್ನು ಮಾಡಿದರು. ಇವರ ಭಾಷಣವು ಮಾತ್ರ ಇದು ವರೆಗೂ ಪ್ರಕಟವಾಗದಿರುವ ಪ್ರಯುಕ್ತ, ಅದನ್ನು ವಾಚಕರಿಗೆ ಒದಗಿಸಲಾಗಲಿಲ್ಲ.

ಸ್ವಯಂಸೇವಕರ ಪರಿಷತ್ತು.

ತಾ. ೧ನೇ ದಿನ ಸಾಯಂಕಾಲ ಸ್ವಯಂಸೇವಕರ ಪರಿಷತ್ತು ಜರಗಿತು; ಇದಕ್ಕೆ ಅಧ್ಯಕ್ಷರಾದ ಮುಂಬಯಿಯ ಜೈಸುಖಲಾಲ ಮೆಹತಾರವರು ಚೆನ್ನಾಗಿ ಭಾಷಣವನ್ನು ಮಾಡಿದರು.

ವರ್ತಕರ ಪರಿಷತ್ತು.

ತಾರೀಕು ೨ನೇ ದಿನ ವರ್ತಕರ ಪರಿಷತ್ತು ನಡೆಯಿತು; ಈ ಪರಿಷತ್ತಿನ ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣದ ಸಾರಾಂಶವನ್ನು ಬೇರೆಡೆಯಲ್ಲಿ ಕೊಟ್ಟಿರುವೆವು.

ಗೋರಕ್ಷಣ ಪರಿಷತ್ತು.

ಅದೇ ದಿನ ಸಾಯಂಕಾಲ ಗೋರಕ್ಷಣ ಪರಿಷತ್ತು ವೇ. ಕೊಮಾರಾಚಾರ್ಯ ಗಲಗಲಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣವು ಬಹು ಜ್ಞಾನಪ್ರದವಾಗಿದ್ದಿತು.

ಈ ದಿನಗಳಲ್ಲಿ ಕಸರತ್ತುಗಳು ಆಟನೋಟಗಳು ಮೊದಲಾದವುಗಳು ನಡೆದುವು.

Calcutta Exhibition

1928

Organised by the 43rd Session of the
INDIAN NATIONAL CONGRESS.

UNIQUE OPPORTUNITY

For Manufacturers, Producers, Merchants. Dealers, Show-Men, concerned with Swadeshi goods and products, Artists Craftsmen etc. CALCUTTA EXHIBITION will remain open from the middle of December 1928 to the middle of January 1929.

Space will be allotted in the General Booths or for the erection of Exhibitor's own Pavilions in strict rotation. The site of the Exhibition will be PARK CIRCUS.

Apply for Particulars to

N. R. Sarkar,
Secretary,
3A. Hogg Street, CALCUTTA

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಕಡೂರು (M. S. M Railway) ಸ್ಟೇಶನಿನಿಂದ [illegible] ಮಾರ್ಗವಾಗಿ [illegible] ಪ್ರಧಾನ ಕಂಪೆನಿಯಾದ [illegible] ಉಪ್ಪಿನಂಗಡಿ [illegible] ಗುರುವಾಯನಕೆರೆ, ಮೂಡ [illegible] ಪುಂಜಾಲಕಟ್ಟೆ, ಬಂಟವಾಳ [illegible] ಏರ್ಪಡಿಸಿರುತ್ತೆ.

[illegible]

(2) [illegible] ವಿಶ್ರಾಂತಿಗೆ [illegible] 9 ಗಂಟೆಗೆ, [illegible] 12-30ಕ್ಕೆ [illegible] 1-30ಕ್ಕೆ [illegible] ಮಂಜೇಶ್ವರ, [illegible]

[illegible]

THE CANARA PUBLIC CONVEYANCE CO. LTD. MANGALORE.

(ESTABLISHED [illegible])

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ [illegible]

ಈ ಕಂಪೆನಿಯ ಬಸ್ಸುಗಳು [illegible] ಮತ್ತು ಉತ್ತರ [illegible]

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆನ್ನುವವರು ಪ್ರತಿದಿನವೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ರಚಿತವಾಗಿ, 37 ಫೀಟು [illegible]

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ [illegible] ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ [illegible] ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು, ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ [illegible] ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

PROPRIETOR:—D. G. GORE.

ಇತ್ತ ನೋಡಿರಿ! ಇತ್ತ ನೋಡಿರಿ!!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅಮೂಲ್ಯಸಂಧಿ.

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, ಅತ್ತರು, ಓಟೊ ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, ಕೋಲನ್‌ವಾಟರ, ಲವೆಂಡರವಾಟರ, ಅದರಂತೆಯೇ ಬಾಲಾಮೃತ, ಎಗ್ಸ್ ಮಿಕ್ಶ್ಚರ್, ಮುಲಾಮು, ಸರಬತ್ತು, ಬಾಮ ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ ವಿಲಾಯತಿ ಎಸೆನ್ಸ್, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, ಡ್ರಗ್ಸ್, ಕೆಮಿಕಲ್ಸ, ಬಾಟಲಿಗಳು, ಬಣ್ಣಗಳು, ಪೆಪರಮಿಂಟ, ಕ್ರಿಸ್ಟಲ್ ಮತ್ತು ಹೀಕೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ ಅಗ್ಗ ದರದಿಂದ ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ ದೊರೆಯುತ್ತವೆ.

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ ಇಪ್ಪತ್ತು ಕ್ರಮಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1-8-0. ಮಾದರಿ ಪರಿಮಳದ ಗಾರ್ಡ್‌ಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿದ್ದಲ್ಲಿ ರವಾನಿಸಲಾದೀತು.

ಟೀಪು—ಇಂಗ್ಲೀಷು, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,

15628 ಮಂಗಳದಾಸ ರೋಡ, ಮುಂಬಯಿ ನಂಬ್ರ ೨.

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!!

ಆಲ್ ರಬಿಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.

ಈ ಇಮಿಟೇಷನ್ ರೇಷ್ಮೆ ಸೀರೆಗಳು ೧೮ ಮೊಳ ಉದ್ದವೂ 2¼ ಮೊಳ ಅಗಲವೂ ಇರುವವು. ಉಡಲು ಧಡೂತಿಯಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನಕ್ಷತ್ರ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುವಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗರೀಬರಿಗೂ ಉಡಲು ಲಾಯಖಾದದ್ದು.

ಕ್ರಯ ರೂ. 4—12—0.

ವಿಳಾಸ:—ಕೆ. ಎನ್. ರಾಧಾಕೃಷ್ಣ ಬ್ರದರ್ಸ್, 109. ಜೈನಾ ಬಜಾರ್ ರೋಡ್, ಮದರಾಸು.

ಇಂಗ್ಲೀಷ್ ಹೇರ್ ಡಿಸ್ಪ್ಯಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿಸಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಒಂದೇ ಒಂದು ನಿಮಿಷದಲ್ಲಿ ಕೂದಲನ್ನು ತೆಗೆದುಬಿಡುವುದು.

3 ಸೋಪುಗಳ ಪೆಟ್ಟಿಗೆ 1ಕ್ಕೆ ರೂ. 1—4—0.
2 ಪೆಟ್ಟಿಗೆಗಳಿಗೆ ರೂ. 2—4—0.

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪು ಮಾಡಿದರೆ ಸಾಕು. ಇದರಲ್ಲಿ ಎಷ್ಟುಮಂದಿಗಾದರೂ ಅಡಿಗೆಯನ್ನು ಬಹ ಬೇಗನೆ ಮಾಡಬಹುದು. 1ಕ್ಕೆ ರೂ. 3—0—0.

ವಿಳಾಸ:—ಲೀಗಲ್ ಟ್ರೇಡಿಂಗ್ ಕಂಪೆನಿ, ಪೋ॥ ಬೋಕ್ಸ್ ನಂಬ್ರ 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೀಳಡ್ಡಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ ಸಾವರಿನ್ ಭಂಗಾರದ್ದಗಿಲೀಟು ಕೊಟ್ಟಿದೆ. ಬಣ್ಣ ಕೆಡದು. ಇದರ ಪದಕವು ಕೆಂಪು, ಬಿಳಿ ಮತ್ತು ಹಸರು ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟು ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಉಚಿತವಾದದ್ದು.

ಕ್ರಯ 1ಕ್ಕೆ ರೂ. 3—8—0.
ಕಿವಿಯಲ್ಲಿ ಹಾಕುವ 7 ಕಲ್ಲಿನ ಓಲೆ ಜೊತೆ 1ಕ್ಕೆ „ 2—8—0.
150 ಗೆಜ್ಜೆ ಕಟ್ಟಿದ ಡಾಬು „ „ 4—8—0.

THE LEGAL TRADING Co.,
P. B. 243 Madras.

ಆರೋಗ್ಯಶಾಲಿಯಾದ ಹುಡುಗಿಯು ಸುಖಿಯಾದ ತಾಯಿಯಾಗುವಳು.

ಇಂದಿನ ಹುಡುಗಿಯೇ ಮುಂದಿನ ತಾಯಿಯು. ಸಣ್ಣ ಹುಡುಗಿಯಾಗಿದ್ದು, ಹೆಂಗಸಾಗಲು ತೊಡಗುವಾಗಲೇ ಆರೋಗ್ಯ ಸೂತ್ರಗಳಿಗನುಸಾರವಾಗಿ ವರ್ತಿಸಿದರೆ ಮುಂದಕ್ಕೆ ಸುಖಿಯಾಗಿ ಬಾಳಬಹುದು. ತಾವು ಮದುವೆಯಾದೊಡನೆ ಸಣ್ಣವರಾಗಿರುವಾಗ "ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ" ದೊರೆಯಲಿಲ್ಲವೆಂದು ಪಶ್ಚಾತ್ತಾಪಪಟ್ಟು ಹಲವು ಸ್ತ್ರೀಯರು ನಮಗೆ ಪತ್ರಬರೆದಿರುವರು. ಈ ವಿಷಯವನ್ನು ಚೆನ್ನಾಗಿ ನೆನಪಿಗೆ ತಂದು ಹೆತ್ತವರು ತಮ್ಮ ಮಕ್ಕಳು ಚಿಕ್ಕವರಾಗಿರುವಾಗಲೇ ಜಾಗರೂಕರಾಗಿರಬೇಕು.

ಫೆಲೂನಾ ಮಾತ್ರೆಗಳು

ಹೆಂಗಸರಿಗೆ ಮಾತ್ರ. ಎಲ್ಲೆಡೆಯಲ್ಲಿಯೂ, ಹೆಂಗಸರ ನಂಬಿಗೆಯನ್ನು ಗಳಿಸಿದೆ. ಎಲ್ಲಾ ಪ್ರಾಯದ (ಚಿಕ್ಕವರು, ನಡುಪ್ರಾಯದವರು, ವೃದ್ಧರು) ಸ್ತ್ರೀಯರಿಂದ ಬರುವ ಅಸಂಖ್ಯಾತ ಕೃತಜ್ಞತಾ ಪತ್ರಗಳಿಂದ, ಅವುಗಳಿಂದಾಗುವ ಆಶ್ಚರ್ಯ ಪರಿಣಾಮವು ವಿಶದವಾಗುವದು. ಸೌಖ್ಯಕೋರುವ ಆಶೆಯನ್ನೇ ತೋರಿದಿರುವಾಗ ಈ ಮಾತ್ರೆಗಳು ಮಾಡಿದ ವಿಶೇಷ ಸೌಖ್ಯತೆಯನ್ನು ವಿವರಿಸಲು ಸಾಧ್ಯವಿಲ್ಲ.

ಸ್ತ್ರೀಯರ ಔಷಧಿಯು.

ಸ್ತ್ರೀಯರ ಕೋಮಲ ಇಂದ್ರಿಯಗಳನ್ನು ಸರಿಪಡಿಸಿ, ಬಲಪಡಿಸುವವು. ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ. ಹೆಂಗಸಿನ ಆ ಪ್ರಾಯ, ಈ ಪ್ರಾಯಕ್ಕೆಂದು ಮಾಡಲ್ಪಡದೆ ಚಿಕ್ಕಂದಿನಿಂದ ಕಡೆಯ ವರೆಗೂ ಸೇವಿಸಲು ಅನುಕೂಲವಾಗಿ ಮಾಡಲ್ಪಟ್ಟಿವೆ. ಅವು ಸಂಸಾರ ಜೀವನದಲ್ಲಿ ಹೆಂಗಸನ್ನು, ಸುಸಜ್ಜಿತಳನ್ನಾಗಿಯೂ ಸುಖಿಯಾಗಿಯೂ ಮಾಡುವವಲ್ಲದೆ ಭವಿಷ್ಯಜ್ಜೀವನದಲ್ಲಿ ಅವಳೊಂದಿಗೆ ಇದ್ದು ಉತ್ಸಾಹಿತ, ಸಂತೋಷಪೂರ್ಣ, ಮತ್ತು ಸ್ಥಿರವಾದ ಆರೋಗ್ಯವನ್ನು ಒದಗಿಸುವವು.

ಸ್ತ್ರೀ ಜಾತಿಗೆ ಸರ್ವಸಾಧಾರಣವಾಗಿ ಇದ್ದೇ ಇರುವ ಕಾಹಿಲೆಯಿಂದ ಪೀಡಿತರಾದ ಸ್ತ್ರೀ ವಾಚಕರು, ಇವುಗಳನ್ನು ಉಪಯೋಗಿಸುವುದರಿಂದ ತ್ವರಿತ ಗುಣವನ್ನು ಹೊಂದುವರು. ಫೆಲೂನಾ ಮಾತ್ರೆಗಳು ಹುಡುಗಿಯ ಗಲ್ಲಗಳ ಮೇಲೆ ಗುಲಾಬಿ ಬಣ್ಣವನ್ನು ತಂದು ತಾಯಿಯಾಗಬೇಕೆಂದು ಆತುರಳಾದ ಅವಳ ಮನೋರಥವನ್ನು ಪೂರಯಿಸಿ, ಪುಷ್ಟಳನ್ನಾಗಿ ಮಾಡಿ ಸಂತೋಷಮಯವಾದ ಆರೋಗ್ಯವನ್ನು ಕೊಟ್ಟು, ಸುಖಿಯನ್ನಾಗಿ ಮಾಡುವವು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಷ್ಟರಿಂದಲೂ ಸ್ಟೋರ್ಸ್‌ರಿಂದಲೂ ಮಾರಲ್ಪಡುವವು.

ಬಾಟಲಿಗೆ ರೂ. 2/4.

ಮುಖ್ಯ ಏಜಂಟರು—ಪಟೇಲ್ ಮತ್ತು ಧೊಂಡಿ ಪೋಸ್ಟ್ ಆಫೀಸು ಬೊಕ್ಸ 838, ಮುಂಬಾಯಿ.

ಮದರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೊ.,
260 ಚ್ಯಾನಾ ಬಜಾರ್ ರೋಡ್, ಮದರಾಸು.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 86.

ಆದರ್ಶ ಶಕ್ತಿವರ್ಧಕವು.

ತೊಂದರೆಗಳಿಂದಲೂ, ಸಂಸಾರ ತಾಪತ್ರಗಳಿಂದಲೂ, ಬಳಲಿರುವಿರಾದರೆ, "ಎಲಿಕ್ಸಿರ್ ನರ್ವಾನಾ" ಎಂಬುದು, ನೀವು ಕಳಕೊಂಡ ಶಕ್ತಿಯನ್ನು ಪುನಃ ತುಂಬಿಸಿ, ನಿಮ್ಮ ಜೀವನವನ್ನು ಸುಖಮಯವಾಗಿ ಮಾಡುವದು.

ಮೂರು ಬಾಟಲಿಗಳನ್ನು ಕ್ರಮವಾಗಿ ಸೇವಿಸುವುದರಿಂದ ನೀವು ಚಟುವಟಿಕೆಯನ್ನು ಹೊಂದಿ ಉತ್ಸಾಹ ಭರಿತರಾಗುವಿರಿ. ಬಾಟಲಿಗೆ ಕ್ರಯ ರೂಪಾಯಿ 5.

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ಡಿ. ವೋರಾ ಮತ್ತು ಕಂಪೆನಿ.
ಚಿಲ್ಲರೆ ಮತ್ತು ರಖಮು ಔಷಧಿ ವ್ಯಾಪಾರಿಗಳು.
P. O. ಬೋಕ್ಸ್ ನಂಬ್ರ 2003 ಬೊಂಬಾಯಿ ನಂ. 2.

NOTICE.

Is hereby given that Narsingrao Dasappa has in Bombay, by deposit of title deed, equitably mortgaged into the undersigned his right title & interest in the under mentioned property belonging to him the said Narasingrao Dasappa, to secure the repayment of the sum of Rs. 875 & Rs. 662 and interest thereon.

The public are hereby warned against purchasing on advancing money in the security of the said property except subject to the right of the undermentioned.

13-8-'28. M. K. Shanabag.
Katapady.

ನೋಟೀಸು.

ದ. ಕ. ಸಭೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ,

ಕ್ರಮನಂಬ್ರ 3/1928.

ಯಲ್. ರಾಮಣ್ಣ ಶೆಟ್ಟಿ—ವಾದಿ.

ಮತ್ತು

ದಿ. ಪ್ರೆಸಿಡೆಂಟ್, ತಾಲೂಕು ಬೋರ್ಡು ಉಡುಪಿ ಕೂಡಾ—ಪ್ರತಿವಾದಿರು.

ಸದರಿ ವ್ಯಾಜ್ಯದ ನಂಬ್ರ 100ನೇ ಪ್ರತಿವಾದಿಯಾದ ಕುಂದಾಪುರ ತಾಲೂಕು ಹೊಂಬಾಡಿ ಮಂಡಾಡಿಯಲ್ಲಿರುವ ಸುಬ್ರಾಯ ಶೆಟ್ಟಿ ಅಳಿಯ ನಂದಿಯಪ್ಪ ಶೆಟ್ಟಿಗೂ ಸಮ್ಮಂದಪಟ್ಟ ಇತರರಿಗೂ, ಸದರಿ ನಂಬ್ರವು ತನ್ನಿ ಬಗ್ಗೆ ತಾ. 21-8-'28ಕ್ಕೆ ಇಟ್ಟಿರುತ್ತದೆಂತ ಈ ಮೂಲಕ ತಿಳಿಸಿಯದೆ. ಸದರಿ ಪ್ರತಿವಾದಿಯ ಇತರರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ತಾರೀಕಿನಲ್ಲಿ ಸದರಿ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, 8-8-'28. K. R. KARANTH,
ವಾದಿ ಪರ ವಕೀಲ್.

ವಿವಿಧ ಸಮಾಚಾರಗಳು.

ಹಗಲು ದರೋಡೆ.

ನೋರ್ಥ್‌ವೆಸ್ಟರ್ನ್ ರೈಲುವೇಯ ಲಾಹೋರಿನ ಲೋಕೋ ಆಡಿಟ್ ಆಫೀಸಿನಲ್ಲಿ ಹೀರಾಲಾಲನೆಂಬವನು ಕೆಲಸಗಾರರಿಗೆ ಸಂಬಳವನ್ನು ಕೊಟ್ಟು ಉಳಿದ ೯೩,೦೦೦ ರೂಪಾಯಿಗಳುಳ್ಳ ಚೀಲವನ್ನು ಕೇಶಿಯರನ ವಶಕೊಡುವ ಸಲುವಾಗಿ ಹೋಗುತ್ತಿರುವಾಗ, ಯುರೋಪಿಯಾನನಂತೆ ತೋರುವವನೊಬ್ಬನು ಆ ಚೀಲವನ್ನು ಸೆಳೆದು, ಒಂದು ಮೋಟಾರುಕಾರಿನೊಳಗೆ ಹಾರಿ, ಜನರನ್ನು ದಿಗಿಲುಗೊಳಿಸಿ ಓಡಿಹೋದನು. ಸಂಬಳ ಕೊಡುವ ಕಾರಕೂನನು ಓಡಿಹೋಗಿ, ಮೋಟಾರಕಾರನ್ನು ಹಿಂದಿನಿಂದ ಹಿಡಿದುಕೊಂಡುದರಿಂದ ಕಾರು ಆತನನ್ನು ಎಳೆದುಕೊಂಡು ಹೋಯಿತು. ಸ್ವಲ್ಪ ದೂರ ಹೋಗುವುದರೊಳಗಾಗಿ ಕಾರಿನ ಒಳಗಿನವನು ಇವನನ್ನು ಕಂಡು ಒಂದು ತಟ್ಟೆಯಿಂದ ಈತನ ತಲೆಯ ಮೇಲೆ ಗುದ್ದಿದನು. ಆದರೂ ಕಾರಕೂನನು ಕದಲದಿದ್ದುದನ್ನು ನೋಡಿ ಆತನನ್ನು ಎಳೆದು ದೂರಕ್ಕೆ ಎಸೆದು ಬಿಸಾಡಿದರು. ತನಗಾದ ಪೆಟ್ಟುಗಳನ್ನು ಗಣಿಸದೆ, ಕಷ್ಟದಿಂದೆದ್ದು ದರೋಡೆಖೋರರೊಡನೆ ಕೈಗೆ ಕೈಹತ್ತಿ ಕಾದಾಡಿದರೂ ಪ್ರಯೋಜನವಾಗಲಿಲ್ಲ. ಹಣದ ಚೀಲವನ್ನು ಹಿಡಿದು ಅವರು ಓಡಿಯೇ ಹೋದರು. ಇತ್ತ ರೈಲುವೇ ಸ್ಟೇಶನಿನಿಂದ ಪ್ರತಿ ಪೋಲಿಸಸ್ಟೇಶನಿಗೆ ತಂತಿಯ ಮೂಲಕ ಈ ಸಂಗತಿಯನ್ನು ತಿಳಿಸಿ ಕಾರಿನ ಗುರುತೂ, ಅದರಲ್ಲಿದ್ದ ಜನರ ರೂಪು ಮೊದಲಾದವುಗಳನ್ನು ತಿಳಿಸಿದ್ದರು. ಪೋಲೀಸರು ಒಂದು ದಿನದ ಶೋಧನೆಯಿಂದ ಇಬ್ಬರನ್ನು ಕೈದುಮಾಡಿದರು. ಅಪರಾಧಿಗಳು ಮೊದಲು ಸ್ಟೇಶನ್ನಿನಲ್ಲಿ ಕೆಲಸಕ್ಕಿದ್ದರಂತೆ. ಅವರು ಸುಲಿದ ಹಣದ ಅರೆವಾಸಿ ನೋಟುಗಳು ಪೋಲೀಸರಿಗೆ ಸಿಕ್ಕಿರುತ್ತವೆ.

ಇಂಗ್ಲೆಂಡಿನ ಜನರ ಆರೋಗ್ಯ.

ಕಳೆದ ೧೦೦ ವರುಷಗಳಿಂದ ಇಂಗ್ಲಾಂಡಿನ ಜನರ ಆರೋಗ್ಯದಲ್ಲಿ ಆದ ಬದಲಾವಣೆಗಳನ್ನು ಕಂಡರೆ ಬಹಳ ಆಶ್ಚರ್ಯವಾಗದಿರದು. ಕಳೆದ ನೂರು ವರುಷಗಳಿಂದಿತ್ತೀಚೆಗೆ ಇಂಗ್ಲಾಂಡಿನ ಜನ ಸಂಖ್ಯೆಯು ಒಂದಕ್ಕೆ ದುಬಾರಿಯಾಗಿದ್ದರೂ, ಮರಣ ಸಂಖ್ಯೆಯು ಮಾತ್ರ ೧೮೩೮ರಲ್ಲಿ ಇದಕ್ಕಿಂತ ಈಗ ಕಡಿಮೆ ಇದೆ. ಶಿಶು ಮರಣವು ಮೊದಲಿನದಕ್ಕಿಂತ ಮೂರನೆ ಒಂದರಷ್ಟು ಕೂಡಾ ಇರುವುದಿಲ್ಲ. ೧೮೩೮ರಲ್ಲಿ ೫೦ ವರ್ಷ ಪ್ರಾಯಕ್ಕಿಂತ ಕೆಳಗೆ ಸಾಯುವವರ ಸಂಖ್ಯೆಯು ಶೇಕಡಾ ೬೧ರಷ್ಟು ಆಗಿತಾದರೂ ಈಗ ಬರೇ ೩೮ರಷ್ಟು ಮಾತ್ರ. ಇದರಿಂದ ತಿಳಿಯುವದೇನಂದರೆ ಇಂಗ್ಲಿಷರು ಆರೋಗ್ಯದ ವಿಷಯವಾಗಿ ತುಂಬಾ ಅಭಿವೃದ್ಧಿಯನ್ನು ಹೊಂದಿರುವರು. ಅವರು ಅನುಸರಿಸುವ ಕ್ರಮಗಳನ್ನು ಹಿಂದೂಗಳು ಅವಲಂಬಿಸಿದರೆ, ಉತ್ತಮ. ಹಿಂದೂಸ್ಥಾನದಲ್ಲಿ ನಡೆಯುವದು ಇಂಗ್ಲಾಂಡಿನಲ್ಲಿ ನಡೆಯುವದರ ತೀರ ವಿರೋಧವಾಗಿರುತ್ತದೆ. ಅಲ್ಲಿ ೫೦ ವರುಷಗಳ ಮೊದಲು ಸಾಯುವ ಜನರ ಸಂಖ್ಯೆಯು ಅತೀ ವಿರಳವಾಗಿದೆಯಾದರೆ ಇಲ್ಲಿ ೫೦ ವರುಷಗಳಿಗಿಂತ ಮೊದಲೇ ಸಾಯುವ ಜನರ ಸಂಖ್ಯೆಯೇ ಹೆಚ್ಚು. ಶಿಶು ಮರಣಗಳಿಗೆ ಲೆಕ್ಕವಿಲ್ಲ. ೬೦ ವರುಷ ಮೀರಿದವನು ಶೇಕಡಾ ಐದರಷ್ಟಿಲ್ಲ. ಅದು ಕಾರಣ ಹಿಂದುಗಳು ಮೇಲಿನವರ ಉದಾಹರಣೆಯನ್ನು ನೆನೆಪಿನಲ್ಲಿಡುವದು ಲೇಸು.

ಕಲಕತ್ತದಲ್ಲಿ ಕರ್ನಾಟಕ ಗಾಯನ ಶಾಲೆ.

ಮಿ. ದಿಲೀಪರಾಯಿಯವರು ಕರ್ನಾಟಕ ಗಾನವನ್ನು ಪ್ರಶಂಸಿಸಿದ ಮೇರೆಗೆ ಕಲಕತ್ತದಲ್ಲಿ ವಾಸಿಸುವ ಮದರಾಸು ಆತ್ತಕಡೆ ಜನರು ಕಳೆದ ಆದಿತ್ಯವಾರ ಕಲಕತ್ತದಲ್ಲಿ ಕೊಳಲು, ವೀಣಾ, ಪಿಟೀಲು ಇದಲಾದವುಗಳನ್ನು ಬಾರಿಸಿಯೂ, ಹಲವರು ಪದಗಳನ್ನು ಹಾಡಿಯೂ, ಕರ್ನಾಟಕ ಗಾನದ ಶ್ರೇಷ್ಠತ್ವವನ್ನು ಪ್ರದರ್ಶಿಸಿದರು. ಈ ಸಮಾರಂಭಕ್ಕೆ ಎಲ್ಲಾ ಜಾತಿಯ ಸ್ತ್ರೀಪುರುಷರು ಗುಂಪುಕೂಡಿ ಬಂದು ನೆರೆದಿದ್ದರು. ಕಲಕತ್ತದಲ್ಲಿ ಒಂದು ಕರ್ನಾಟಕ ಗಾಯನ ಶಾಲೆಯನ್ನು ತೆರೆದು ಪೋಸ್ಟಲ್ ಎಕೌಂಟ್ಸ್ ಆಫೀಸರರಾದ ಕೃಷ್ಣಸ್ವಾಮಿ ಅಯ್ಯಂಗಾರರು ಕರ್ನಾಟಕ ಗಾಯನವನ್ನು ಕಲಕತ್ತದ ಜನರಿಗೆ ತಿಳಿಸಬೇಕೆಂದು ರಾ। ಸುಬ್ರಹ್ಮಣ್ಯ ಅಯ್ಯರ್‌ರು ಸಭೆಯ ಮುಂದೆ ಸೂಚಿಸಿದರು. ಕಲಕತ್ತದ ಮೆಯೊರರೂ ಕೂಡ ಈ ಠರಾವನ್ನು ಸಮರ್ಥಿಸಿರುವರು. ಭವಾನಿಪುರ ಸಂಗೀತ ಸಮ್ಮೇಲನದ ಶ್ರೀ ಅತುಲ ಭೋಸರವರು ತಮ್ಮ ಹಿಂದೂಸ್ಥಾನಿ ಗಾನದೊಂದಿಗೆ ಕರ್ನಾಟಕ ಗಾನವನ್ನೂ ಅಭ್ಯಾಸಿಸಲು ತೊಡಗುವೆವೆಂದು ಹೇಳಿದರು.

ಸುರತಿನಲ್ಲಿ ಬಾರ್ಡೋಲಿ ವೀರರು.

ಕಳೆದ ೧೨ನೇ ತಾರೀಕಿನ ದಿನ ಮಹಾತ್ಮಾಜಿಯವರೂ, ವಲ್ಲಭಾಯಿಯವರೂ, ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳೂ, ಸ್ವಯಂಸೇವಕರೂ ಸುರತನ್ನು ಸಂದರ್ಶಿಸಬೇಕೆಂದು ಮೊದಲೇ ನಿಶ್ಚಯವಾಗಿದ್ದುದರಿಂದ ಸುರತಿನಲ್ಲಿ ಜನರು ಬಹು ಅಲಂಕಾರಗಳನ್ನು ಮಾಡಿ ಪಟ್ಟಣವನ್ನು ಶೃಂಗರಿಸಿದ್ದರು. ಸುಮಾರು ೭ ಘಂಟೆಯ ಸಮಯ ರೈಲಿನಲ್ಲಿ ಬಾರ್ಡೋಲಿಯವರು ಬಂದಿಳಿದೊಡನೆ ಮಹಾತ್ಮಾಜಿಯವರೇ ಮೊದಲಾದವರನ್ನು ಮೆರವಣಿಗೆಯಲ್ಲಿ ಕರೆದೊಯ್ದರು. ಮಹಾತ್ಮಾಜಿಯವರ ಸಂದರ್ಶನವನ್ನು ಪಡೆಯುವ ಸಲುವಾಗಿ ಜನರು ಮನೆಯ ಕಿಟಕಿಗಳಲ್ಲಿಯೂ, ಮರಗಳಲ್ಲಿಯೂ ಕಿಕ್ಕಿರಿದು ನೆರೆದಿದ್ದರು. ತಪತೀ ನದಿಯ ಬದಿಗೆ ಬಂದೊಡನೆ ವಲ್ಲಭಾಯಿಯವರಿಗೆ ಒಂದು ಮಾನಪತ್ರವು ಸಮರ್ಪಿಸಲಾಯಿತು. ಅಲ್ಲಿ ೪೦೦೦೦ ಜನರು ಕೂಡಿದ್ದರು.

ಕಳೆದ ೧೯೨೧ನೇ ಇಸವಿಯಲ್ಲಿ ಅದೇ ಸ್ಥಳದಲ್ಲಿ ನಿಂತು ಸತ್ಯಾಗ್ರಹವನ್ನು ಆಚರಿಸಬೇಕೆಂದು ತಾನು ಹೇಳಿದುದೂ, ಅದಕ್ಕೆ ಸರಿಯಾಗಿ ಬಾರ್ಡೋಲಿ ಜನರು ವರ್ತಿಸಿ ವಿಜಯಿಗಳಾದುದೂ ಚೆನ್ನಾಯಿತೆಂದು ಹೇಳಿ ಮಹಾತ್ಮಾಜಿಯವರು ಭಾಷಣವನ್ನು ಮಾಡಿದರು. ತದನಂತರ ವಲ್ಲಭಾಯಿಯವರ ಭಾಷಣವಾಯಿತು. ಮಳೆ ಬಂದರೂ ಕೂಡ ಜನರು ಕುಳಿತಲ್ಲಿಂದ ಕದಲಲಿಲ್ಲ. ಸಭೆಯು ರಾತ್ರಿ ಸುಮಾರು ೧೦ ಘಂಟೆಯ ಹೊತ್ತಿಗೆ ಪರಿಸಮಾಪ್ತಿಯಾಯಿತು. ಮಹಾತ್ಮಾಜಿಯವರೂ ಪತ್ನಿಯೊಂದಿಗೆ ಅಹಮದಾಬಾದಿಗೂ ವಲ್ಲಭಾಯವರು ಬಾರ್ಡೋಲಿಗೂ ಮರುದಿನ ಹೊರಟು ಹೋದರು.

ಮಂಗಳೂರಲ್ಲಿ ಸ್ಥಾಪಿಸಲ್ಪಡುವ ವಾಣಿಜ್ಯ ಶಾಲೆ.

(Trade School)

[illegible]

[illegible]

ಸುಂಕಕ್ಕಾಗಿ ಯುದ್ಧಗಳನ್ನೇ ಮಾಡುತ್ತಿರುವರು. ಬಲವಾದ ವ್ಯಾಪಾರ ಕರಾರುಗಳನ್ನು ಮಾಡುತ್ತಿರುವರು. ಇಂಥಾ ಮಾಲನ್ನು ಇಂಥವರೇ ಮಾರಬೇಕಲ್ಲದೆ ಇತರರು ಮಾರದ ಹಾಗೆ ಆ ಸರಕಾರಗಳೊಡನೆ ವ್ಯಾಪಾರದ ಕರಾರುಗಳನ್ನು ಮಾಡುತ್ತಿರುವರು.

ಬಂದರಗಳು:—ಯುರೋಪಿಯನ ಜನರು ಭೂಲೋಕದ ಎಲ್ಲಾ ಭಾಗಗಳಿಗೂ ಹೋಗಿ ಆ ದೇಶದ ಸರಕಾರದಿಂದ ಅಪ್ಪಣೆಪಡದು ಬಂದರುಗಳನ್ನು ಕಟ್ಟುತ್ತಿರುವರು. ಬಂದರಗಳಲ್ಲಿ ಸ್ವತಹ ಹಡಗಗಳನ್ನಿಟ್ಟು ವ್ಯಾಪಾರ ನಡಿಸುವರು.

ಮೇಲಿನ ಎಲ್ಲಾ ಸಂಗತಿಗಳನ್ನು ಈ ವಾಣಿಜ್ಯ ಶಾಲೆಗಳಲ್ಲಿ ಕಲಿಸುವರು. ಇದರಿಂದ ವ್ಯಾಪಾರಕ್ಕೆ ಹೆಚ್ಚು ಪ್ರಯೋಜನವಾಗಿ ಬಹಳ ಅಭಿವೃದ್ಧಿಯನ್ನು ಹೊಂದುವುದು.

ಆದುದರಿಂದ ಮದರಾಸು ಸರಕಾರದವರು ಈ ವ್ಯಾಪಾರ ಶಾಲೆಯನ್ನು ಎಲ್ಲಿಯೂ ಇಡದೆ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿಡಲು ಆಲೋಚಿಸುವುದರಿಂದ ದಕ್ಷಿಣ ಕನ್ನಡಕ್ಕೆ ಒಂದು ಸುಯೋಗವು ಬಂದೊದಗಿದಂತಾಯಿತು. ಇದರಿಂದ ದಕ್ಷಿಣ ಕನ್ನಡಿಗರು ಬಹಳ ಹೆಚ್ಚಳ ಪಡಬೇಕಾಗಿದೆ.

ಹಿಂದುಸ್ಥಾನದ ಪ್ರಾಮೆರಿ ಮತ್ತು ಸೆಕೆಂಡರಿ ಶಿಕ್ಷಣ.

ಬೋರ್ಡು ಶಾಲೆಗಳು.

ಹಲವು ಸಂಸ್ಥಾನಗಳಲ್ಲಿ ಏಡೆಡ್ ಶಾಲೆಗಳಿಗೆ ಅಷ್ಟು ಪ್ರೋತ್ಸಾಹವು ದೊರಕದೆ ಬೋರ್ಡುಗಳವರಿಂದ ಸ್ಥಾಪಿಸಲ್ಪಟ್ಟ ಬೋರ್ಡು ಶಾಲೆಗಳೇ ಮುಖ್ಯವೆಂದು ಪರಿಗಣಿಸಲ್ಪಡುತ್ತಿವೆ. ಆದರೆ ಬಂಗಾಳ ಮತ್ತು ಮದರಾಸು ಸಂಸ್ಥಾನಗಳಲ್ಲಿ ಟೀಚರ ಮೆನೇಜರರಿಂದ ನಡೆಸಲ್ಪಡುವ ಏಡೆಡ್ ಶಾಲೆಗಳ ಸಂಖ್ಯೆಯು ಹೆಚ್ಚು. ತರಬೇತಾದ ಉಪಾಧ್ಯಾಯರ ಸಂಖ್ಯೆಯು ಮೆಲ್ಲನೆ ಏರುತ್ತಾ ಬರುತ್ತಿದೆ. ಹಳ್ಳಿಯ ಶಾಲೆಗಳಲ್ಲಿ ಮಕ್ಕಳು ಸರಿಯಾಗಿ ಹಾಜರಿರುವುದಿಲ್ಲ. ಕ್ರಮಪ್ರಕಾರವಾಗಿ ಶಾಲೆಯು ನಡಿಯುವುದಿಲ್ಲ. ಪ್ರಾಯಮೆರಿ ಶಾಲೆಗೆ ಸೇರಬೇಕೆಂದು ಮನಸ್ಸಿರುವ ಕೆಲವೇ ವಿದ್ಯಾರ್ಥಿಗಳು ಹಳ್ಳಿ ಶಾಲೆಗಳಲ್ಲಿ ಸಾಧಾರಣವಾಗಿ ಶಿಕ್ಷಣೆಯನ್ನು ಪಡೆಯುವರು. ಸಾಧಾರಣವಾಗಿ ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಒಬ್ಬೊಬ್ಬನೇ ಉಪಾಧ್ಯಾಯನಿರುವ ವಾಡಿಕೆ ಇದೆ. ಈ ಉಪಾಧ್ಯಾಯನು ಚೆನ್ನಾಗಿ ಕಲಿಯುವ ವಿದ್ಯಾರ್ಥಿಗಳ ಕಡೆಗೆ ಮಾತ್ರವೇ ಲಕ್ಷ್ಯವನ್ನಿಟ್ಟು ಅವರನ್ನು ನಿಪುಣರನ್ನಾಗಿ ಮಾಡುವನಲ್ಲದೆ, ವಿದ್ಯೆಯಲ್ಲಿ ಹಿಂದುಳಿದವರ ವಿಷಯವಾಗಿ ಲಕ್ಷಿಸುವುದಿಲ್ಲ. ಆದುಕಾರಣ ಶಾಲೆಯ ಹೆಚ್ಚಿನ ವಿದ್ಯಾರ್ಥಿಗಳು, ಇಂಥಾ ಶಾಲೆಗೆ ಹೋಗುವುದರಿಂದ ಯಾವ ಪ್ರಯೋಜನವನ್ನೂ ಹೊಂದುವುದಿಲ್ಲ. ಹಳ್ಳಿ ಶಾಲೆಯ ಉಪಾಧ್ಯಾಯರಿಗೆ ಬೇಕಾದಷ್ಟು ಸಂಬಳವೂ ಸಿಕ್ಕುವುದಿಲ್ಲ. ಅವರಿಗೆ ಕೆಲಸಮಾಡಲು ಉತ್ಸಾಹವೂ ಇರುವುದಿಲ್ಲ. ಆದರೆ ಅವರಿಗೆ ಸಾಕಷ್ಟು ಸಂಬಳವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ, ಅವರು ತಮ್ಮ ಕೆಲಸವನ್ನು ಸರಿಯಾಗಿ ನೆರವೇರಿಸುವರು. ಹಳ್ಳಿಯ ಶಾಲೆಯಲ್ಲಿ ಉಪಾಧ್ಯಾಯರಾಗಲು ಪಟ್ಟಣವಾಸಿಯನ್ನು ನೇಮಿಸದೆ, ಹಳ್ಳಿಯ ಚುರುಕು ಯುವಕನನ್ನು ನೇಮಿಸಬೇಕು. ಹಳ್ಳಿಗಳ ಶಾಲೆಯನ್ನು ಸಾಧಾರಣ ಸ್ಥಿತಿಯಲ್ಲಿಯಾದರೂ ವೃದ್ಧಿಪಡಿಸಬೇಕೆಂದಾದರೆ, ಒಂದನೆಯದಾಗಿ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಬೇಕು. ಹಲವು ಕ್ಲಾಸುಗಳಿಗೆ ಒಬ್ಬನೇ ಉಪಾಧ್ಯಾಯನನ್ನು ನೇಮಿಸದೆ ಒಂದೊಂದು ಕ್ಲಾಸಿಗೆ ಒಬ್ಬೊಬ್ಬ ತರಬೇತಾದ ಉಪಾಧ್ಯಾಯನನ್ನು ನೇಮಿಸುವುದು, ಶಾಲೆಯ ಪಾಠಪಟ್ಟಿಯನ್ನು ಅತಿ ಸುಲಭವಾಗುವಂತೆ ಮಾಡಿಕೊಡುವುದು ಇವು ಅಗತ್ಯ.

ಹಳ್ಳಿಗಳಲ್ಲಿ ವಿದ್ಯಾಭ್ಯಾಸವನ್ನು ತಮ್ಮ ತಮ್ಮ ಸ್ವಂತ ಭಾಷೆಯಲ್ಲಿಯೇ ಕಲಿಸುವರು. ಆದರೆ ಪಟ್ಟಣಗಳಲ್ಲಿರುವ ಇಂಥಾ ಶಾಲೆಗಳಲ್ಲಿ ಅರ್ಧ ಇಂಗ್ಲಿಷು, ಅರ್ಧ ಸ್ವಂತ ಭಾಷೆ ಇವೆ. ಇಂಥಾ ಶಾಲೆಗಳಲ್ಲಿ ಕೃಷಿಯನ್ನು ಜಾರಿಗೆ ತರುವ ಕ್ರಮವನ್ನು ಪ್ರಾರಂಭಿಸುತ್ತಿರುವರು.

ಸೆಕೆಂಡರಿ ಶಾಲೆಗಳು.

ಸೆಕೆಂಡರಿ ಇಂಗ್ಲಿಷು ಶಾಲೆಗಳು ಬಹಳ ಹೆಚ್ಚಿವೆ. ೧೯೨೪ನೇ ಇಸವಿಯಲ್ಲಿ ಸುಮಾರು ೩೮೦೦ ಹ್ಯಾಸ್ಕೂಲುಗಳಿದ್ದು, ಸುಮಾರು ೭೦,೦೦೦ ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಕಲಿಯುತ್ತಿದ್ದರು. ಆದರೆ ಈ ಸಂಖ್ಯೆಯು ಈಗ ಬಹಳ ಹೆಚ್ಚಿದೆ. ಆದರೆ ಹೀಗೆ ಹೆಚ್ಚಿದ್ದುದು ಒಳ್ಳೆಯದಲ್ಲವೆಂದು ಆಫೀಸರರ ಸೂಚನೆ. ಸಂಘದ ಮೇಲೆ ಶಾಲೆಗಳನ್ನು ಹೆಚ್ಚಿಸಿ ಈಗ ಕೆಲವೆಡೆಗಳಲ್ಲಿ ಸರಿಯಾಗಿ ವಿದ್ಯೆಯನ್ನು ಕಲಿಸದೆ, ಉಪಾಧ್ಯಾಯರೊಳಗಣ ವಿರೋಧಭಾವದಿಂದ, ವಿದ್ಯಾರ್ಥಿಗಳೊಳಗೂ ಪರಸ್ಪರ ವಿರೋಧವುಂಟಾಗಲು ಅನುಕೂಲವಾಗುತ್ತದೆ. ಸೆಕೆಂಡರಿ ಶಾಲೆಯಲ್ಲಿ ತೇರ್ಗಡೆಹೊಂದಿ ಬರಬೇಕಾದರೆ ಒಬ್ಬ ಹುಡುಗನ ಸಲುವಾಗಿ ಮೊದಲು ಖರ್ಚಾಗುತ್ತಿದ್ದ ಹಣಕ್ಕಿಂತ ಈಗ ಖರ್ಚಾಗುವ ಹಣವು ಶೇಕಡಾ ೫೦ರಷ್ಟು ಹೆಚ್ಚಿರುತ್ತದೆ. ಏಡೆಡ್ ಶಾಲೆಯವರು ತಮಗೆ ಸಿಕ್ಕುವ ಗ್ರಾಂಟು ಕೂಡ

ಸಾಲದೆ ಸಂಬಳದ ದರವನ್ನು ಬಹಳವಾಗಿ ಏರಿಸಿರುವರು. ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸುವ ಸಲುವಾಗಿಯೇ ಗ್ರಾಂಟು ವಿನಿಯೋಗಿಸಲ್ಪಡುವುದು. ಗ್ರಾಂಟು ಎರಡು ವಿಧದಿಂದ ಕೊಡಲ್ಪಡುವುದು. (೧) ಶಾಲೆಯವರು ಖರ್ಚುಮಾಡಿದ ಹಣದ ದಾಮಾಶಿಯಲ್ಲಿ ಕೊಡುವ ಒಂದು ಗ್ರಾಂಟು. (೨) ಸೆಕೆಂಡರಿ ಶಾಲೆಗಳು ಎಷ್ಟು ಹಣ ಖರ್ಚುಮಾಡಬೇಕು ಎಂದು ಸರಕಾರದವರು ಮಾಡಿಟ್ಟ ಕಾನೂನಿಗೆ ಸರಿಯಾಗಿ ಆ ಖರ್ಚಿನ ದಾಮಾಶಿಯಲ್ಲಿ ಕೊಡುವ ಗ್ರೇಂಟು.

ಹ್ಯಾಸ್ಕೂಲುಗಳೂ ಪರೀಕ್ಷೆಗಳೂ.

ಹ್ಯಾಸೂಲುಗಳೆಲ್ಲವುಗಳಿಗೆ ಕೊನೆಯ ಪರೀಕ್ಷೆಯು ಒಂದೇಯಾದುದರಿಂದ ಇಂಥ ಶಾಲೆಗಳ ಶಿಕ್ಷಣವು ಸಾಧಾರಣ ತರದಲ್ಲಿ ಏಕ ರೀತಿಯಾಗಿರುತ್ತದೆ. ಒಂದೊಂದು ಶಾಲೆಯಲ್ಲಿ ಒಂದೊಂದು ತರದ ಶಿಕ್ಷಣಾ ಕ್ರಮವಿರಲು ಅಲ್ಲಿ ಅನುವಿರುವುದಿಲ್ಲ. ಒಪ್ಶನಲ್ ಪಾಠಗಳನ್ನು ಹೆಚ್ಚಿಸಬೇಕೆಂದು ಕೆಲವು ಸಮಯದ ಹಿಂದೆ ಉಪಾಧ್ಯಾಯರಿಗೆ ಬಹಳ ಮನಸ್ಸಿದ್ದಿತು. ಆದರೆ ಈಗ ಚಿತ್ರಬಿಡಿಸುವುದು, ಕೃಷಿ, ಲೆಕ್ಕಪತ್ರಗಳನ್ನು ಇಡುವ ಶಿಕ್ಷಣ, ಕೈಗಾರಿಕೆ ಇವುಗಳು ಮಾತ್ರ ಒಪ್ಶನಲ್ ಪಾಠಗಳಾಗಿವೆ.

ವೆರ್ನಾಕುಲರ್ ಭಾಷೆಯಲ್ಲಿ ಶಿಕ್ಷಣ

ಇಂಗ್ಲಿಷಿನ ಬದಲಿಗೆ ವೆರ್ನಾಕ್ಯುಲರಿನಲ್ಲಿಯೇ (ಸ್ವಂತ ಭಾಷೆಯಲ್ಲಿ) ಕಲಿಸುವ ಕ್ರಮವು ಈಗ ಜಾರಿಗೆ ಬರುತ್ತಲಿದೆ. ಇದನ್ನು ಸಂಯುಕ್ತ ಪ್ರಾಂತದವರು ಮೊದಲು ಪ್ರಾರಂಭಿಸಿದರು. ಇದನ್ನೇ ಪಂಜಾಬ, ಮುಂಬಾಯಿ, ಬಂಗಾಳ ಮತ್ತು ಮದರಾಸು ಸಂಸ್ಥಾನದವರು ಅವಲಂಬಿಸಿದರು. ಹೀಗೆ ವೆರ್ನಾಕ್ಯುಲರಿನಲ್ಲಿ ಪಾಠವನ್ನು ಕಲಿಸುವುದರಿಂದ ಇಂಗ್ಲಿಷಿನ ಅನುಭವವೇ ಹೋಗುವ ಕಾರಣ, ಹಾಗೆ ಮಾಡಲಾಗದೆಂದು ೧೯೧೭ರಲ್ಲಿ ನಡೆದ ಸಿಮ್ಲಾ ಪಂಚಾಯ್ತಿನಲ್ಲಿ ನಿಷೇಧವಿದ್ದಿತು. ಇಂಗ್ಲಿಷಿನಲ್ಲಿ ಪಾಠಗಳನ್ನು ಕಲಿಸುವಾಗ, ಇಂಗ್ಲಿಷು ಮತ್ತು ಕಲಿಸುವ ವಿಷಯ ಇವೆರಡೂ ತಿಳಿದಂತಾಗುವುದು. ವಿಜ್ಞಾನ ಶಾಸ್ತ್ರದಲ್ಲಿ ಕೆಲವು ಶಬ್ದಗಳಿಗೆ ಬೇಕಾಗುವ ಪ್ರತಿ ಶಬ್ದಗಳು ಸಿಕ್ಕುವುದಿಲ್ಲ ಎಂಬುದೇ ನಿಷೇಧದ ಆಧಾರವಾಗಿದ್ದಿತು. ಆದರೆ ತಕ್ಕ ಪ್ರತಿ ಶಬ್ದಗಳನ್ನು ಹುಡುಕಲು ಪಂಜಾಬ ಮತ್ತು ಮದರಾಸಿನಲ್ಲಿ ಕಮಿಟಿಗಳನ್ನು ಏರ್ಪಡಿಸಿರುವರು. ಈ ಕ್ರಮವು ಸಫಲವಾಗಲು ಹಲವು ವಿಘ್ನಗಳಿವೆ.

ಯುನಿವರ್ಸಿಟಿ ಶಿಕ್ಷಕರು ಇಂಗ್ಲಿಷಿನಲ್ಲಿಯೇ ಪಾಠ ಕಲಿಸುವುದರಿಂದ, ಇಂಗ್ಲಿಷು ಚೆನ್ನಾಗಿ ಗೊತ್ತಿದ್ದ ಹುಡುಗರನ್ನೆ ತಮ್ಮ ಶಾಲೆಗಳಿಗೆ ದಾಖಲುಮಾಡುವುದರಿಂದ, ಹ್ಯಾಸ್ಕೂಲುಗಳಲ್ಲಿ ವೆರ್ನಾಕ್ಯುಲರನ್ನೇ ಮುಖ್ಯ ಭಾಷೆಯನ್ನಾಗಿಡುವುದು ತೊಂದರೆ.

ತರಬೇತು ಹೊಂದಿದ ಉಪಾಧ್ಯಾಯರ ಸಂಖ್ಯೆಯನ್ನು ಏರಿಸಲು ಪ್ರಯತ್ನವು ನಡೆಯುತ್ತಿದೆ. ಮದರಾಸು ಸಂಸ್ಥಾನದಲ್ಲಿ ತರಬೇತು ಹೊಂದಿದ ಉಪಾಧ್ಯಾಯರ ಸಂಖ್ಯೆಯು ಬಹಳ ಹೆಚ್ಚು.

ಮನೆಯಲ್ಲಿ ಪ್ರತ್ಯೇಕವಾಗಿ ಉಪಾಧ್ಯಾಯರು ಮಕ್ಕಳಿಗೆ ಕಲಿಸುತ್ತಿರುವುದು ಹಿತಕರವಾಗಿದೆ. ಮಕ್ಕಳು ಖಾಸಗಿ ಪುಸ್ತಕಗಳನ್ನೋದುವುದು, ಆಟವಾಡುವುದು, ಸ್ಕೌಟದಳಕ್ಕೆ ಸೇರುವುದು ಇವೆಲ್ಲವುಗಳು ಅತ್ಯಂತ ಹಿತಕರವಾಗಿವೆ.

ಒರಿಸ್ಸಾದಲ್ಲಿ ಬೌದ್ಧ ಪ್ರತಿಮೆಗಳು.

ಒರಿಸ್ಸಾದ ಲಲಿತಗಿರಿ, ಉದಯಗಿರಿ ಮತ್ತು ರತ್ನಗಿರಿ ಎಂಬ ಮೂರು ಸಣ್ಣ ಪರ್ವತಗಳ ಮೇಲೆ ಈಗಲೂ ಬುದ್ಧನ ಕಾಲದ ಗೋರಿಗಳು, ಶಾಸನಗಳು, ದೇವಾಲಯಗಳು, ಪ್ರತಿಮೆಗಳು ಉಳಿದಿರುತ್ತವೆ. ಲಲಿತಗಿರಿಯಲ್ಲಿ ಬುದ್ಧನ ಒಂದು ಅತಿ ದೊಡ್ಡ ಪ್ರತಿಮೆ ಇದೆ. ಅಂತಹ ಪ್ರತಿಮೆಯನ್ನು ಈಗಿನ ಯಾವ ಶಿಲ್ಪಿಯೂ ಮಾಡಲಶಕ್ತನಾಗಿರುವನೆಂಬುದು ನಿರ್ವಿವಾದದ ಮಾತು. ಇಂಥದೇ ಇನ್ನೊಂದು ಪ್ರತಿಮೆಯು ಉದಯಗಿರಿಯಲ್ಲಿಯೂ ಇರುವುದು. ರತ್ನಗಿರಿಯಲ್ಲಿ ಸುಂದರ ಮುಖಮುದ್ರೆಯುಳ್ಳ ತಾರೆಯ ಪ್ರತಿಮೆಗಳಿವೆ. ಅದಲ್ಲದೆ, ಬುದ್ಧನ ಹಲವು ದೊಡ್ಡ ದೊಡ್ಡ ಪ್ರತಿಮೆಗಳೂ ಇವೆ.

ಲಲಿತಗಿರಿಯ ಜಮೀನುದಾರನೊಬ್ಬನು ಕಳೆದ ವರುಷ ಆ ದೊಡ್ಡ ಪ್ರತಿಮೆಯನ್ನು ಕೇವಲ ನೂರು ರೂಪಾಯಿಗಳಿಗೆ ಮಾರಿಬಿಟ್ಟನು. ಆದರೆ, ಅದನ್ನು ಕೊಂಡುಕೊಂಡವನು ಪ್ರತಿಮೆಯನ್ನು ಅಲ್ಲಿಂದ ಕದಲಿಸಲಾರನಾದ್ದರಿಂದ ಆತನು ಪ್ರತಿಮೆಗಾಗಿ ಕೊಟ್ಟ ರೂಪಾಯಿಗಳನ್ನು ಬಹು ಪ್ರಯಾಸದಿಂದ ಹಿಂದಕ್ಕೆ ಪಡೆದನು. ಈ ಸ್ಥಳಗಳನ್ನು ಸಂದರ್ಶಿಸುವ ಸಲುವಾಗಿ ಚರಿತ್ರೆಯಲ್ಲಿ ಅಭಿರುಚಿಯುಳ್ಳ ಪ್ರತಿಯೊಬ್ಬರೂ ಹೋಗುವರು.

ಈ ಪರ್ವತಗಳು ಕಲ್ಕತ್ತದಿಂದ ೩೩೩ ಮೈಲು ದೂರದಲ್ಲಿವೆ. ಕಟಕಿನಿಂದ ೨೫ ಮೈಲು ದೂರದಲ್ಲಿವೆ. ಬಂಗಾಳ ನಾಗಪುರ ರೈಲ್ವೆಯ ಮೂಲಕ ಧನಮಂಡಲದ ವರೆಗೆ ಹೋಗಿ, ಅಲ್ಲಿಂದ ಮುಂದೆ ನಡೆದುಕೊಂಡಾಗಲಿ, ಗಾಡಿ, ಪಾಲಕಿಗಳ ಮೂಲಕವಾಗಲಿ ಹೋಗಬೇಕಾಗುವುದು. ಧನಮಂಡಲದಿಂದ ೮ ಮೈಲು ಹೋದೊಡನೆ ಬಲಿಚಂದ್ರ ಪುರವು ತಗಲುವುದು. ಇಲ್ಲಿಂದ ಲಲಿತಗಿರಿಯು ಮೂರು ಮೈಲು ದಕ್ಷಿಣಕ್ಕೂ, ಉದಯಗಿರಿಯು ೪॥ ಮೈಲು ಪೂರ್ವಕ್ಕೂ ಇರುವವು. ಬಲಿಚಂದ್ರಪುರದಿಂದ ನಾಲ್ಕು ಮೈಲು ಹೋದೊಡನೆ ಗೋಪಾಲಪುರ ಅಥವಾ ಖಂಗಪುರವು ಸಿಕ್ಕುವುದು. ಅಲ್ಲಿಂದ ಉದಯಗಿರಿಯು ಅರ್ಧ ಮೈಲು ಉತ್ತರಕ್ಕೂ, ರತ್ನಗಿರಿಯು ಮೂರು ಮೈಲು ಪೂರ್ವಕ್ಕೂ ಇರುವವು. ಉದಯಗಿರಿಯು ಉಳಿದೆರಡು ಗಿರಿಗಳ ಮಧ್ಯದಲ್ಲಿದ್ದು ಉದಯಗಿರಿಯಲ್ಲಿ ನಿಂತವನಿಗೆ ಉಳಿದವೆರಡು ಸರಿಯಾಗಿ ಕಾಣುವವು.

ಉದಯಗಿರಿಯು ಪರ್ವತದ ಪೂರ್ವ ಮೂಲೆಯಾಗಿದೆ. ದೇವಾಲಯಗಳನ್ನು ಕಟ್ಟಿಸಲು ಇದು ಉತ್ತಮ ಸ್ಥಳವಾಗಿದೆ. ಮಧ್ಯದಲ್ಲಿ ಒಂದು ಶಿಖರವಿದ್ದು ಮೂರು ಬದಿಗಳಲ್ಲಿ ಇಳಿಜಾರು ಸ್ಥಳವಿರುವುದು. ಈ ಇಳಿಜಾರು ಸ್ಥಳದಲ್ಲಿ ೫೦ ವರುಷಗಳ ಹಿಂದೆ ನದಿಯಿದ್ದಿತಂತೆ.

ಗಿರಿಯ ಅಡಿಯಲ್ಲಿ ನಿಂತು ಮೇಲಕ್ಕೆ ಶಿಖರವನ್ನು ನಿರೀಕ್ಷಿಸುವಾಗ ಒಂದು ಮುರಕಲ್ಲಿನ ಮೇಲೆ ಕೆತ್ತಿದ ಪದ್ಮಪಾಣಿ ಬುದ್ಧನ ಪ್ರತಿಮೆಯು ಪಾವಟಿಗೆಗಳಿಂದ ಆವರಿಸಲ್ಪಟ್ಟದ್ದು ಕಾಣುವುದು. ಈ ಚಿತ್ರದ ಕೈ ಮತ್ತು ಮೂಗು ಈಗ ಹಾಳಾಗಿರುತ್ತವೆ. ಚಿತ್ರದ ತಲೆಯ ಬಲ ಬದಿಯಲ್ಲಿ "ಏ ಧರ್ಮ ಹೇತು ಪ್ರಭಾವಾ" ಎಂದು ಕೆತ್ತಿರುವರು. ಬಲಭುಜದ ಕೆಳಗೆ ಬರೆದ "ದೇಯ ಧರ್ಮೋಯಂ ಕೇಶವ ಗುಪ್ತಸ್ಯ" ಎಂಬುದನ್ನು ಕಂಡರೆ, ಇದು ಕೇಶವ ಗುಪ್ತನೆಂಬವನ ದಾನವೆಂದು ತಿಳಿಯುವುದು. ಇದೇ ಸ್ಥಳದಿಂದ ಕಲ್ಲಿನಲ್ಲಿ ಕೆತ್ತಿದ ಒಂದು ಹಾದಿ ಇದೆ. ಬದಿಗಳಲ್ಲಿ ಒಂದು ಕಟ್ಟೋಣದ ಸಲುವಾಗಿ ಮಾಡಿದ ಗುರುತು ಕಾಣುತ್ತದೆ. ಪೂರ್ವದ ಬೌದ್ಧ ಧರ್ಮಾವಲಂಬಿಗಳಿಗೆ ಸಂಬಂಧಿಸಿದ 'ಮಹಿಮಾನಿರಂಜನಿ' ಎಂಬವರು ಕಟ್ಟಿದ ಒಂದು ವಿಹಾರ ಗೃಹವೂ ಇದೆ. ಅಲ್ಲಿಯೇ ಒಂದು ಪ್ರಾಚೀನ ಬಾವಿಯಿದೆ. ಬಾವಿಯು ೨೩ ಅಡಿ ಚೌಕವಾಗಿದ್ದು ೩೮ ಅಡಿ ಆಳವಾಗಿದೆ. ಈ ಬಾವಿಯ ನೀರು ಕುಡಿಯಲು ಈಗಲೂ ಉತ್ತಮವಾಗಿದೆ. ಸಮೀಪದ ಗೋಡೆಯ ಮೇಲೆ "ರಾಣಕಾ ಶ್ರೀವಜ್ರನಾಗಸ್ಯ ವಾಪಿ" ಎಂದು ಕೆತ್ತಿರುವುದರಿಂದ ಇದನ್ನು ವಜ್ರನಾಗನೆಂಬವನು ಕಟ್ಟಿಸಿದನೆಂದೂ, ರಾಣಕಾ ಎಂಬ ಹೆಸರಿರುವುದರಿಂದ, ವಜ್ರನಾಗನು ಅಲ್ಲಿ ಒಬ್ಬ ಅಧಿಕಾರಸ್ಥನಾಗಿದ್ದನೆಂದೂ ತಿಳಿಯಬಹುದು.

ಅಲ್ಲಿಂದ ಪರ್ವತವನ್ನೇರಿ ಹೋಗುವಾಗ. ಬದಿಗಳಲ್ಲಿ, ಕೆತ್ತನೆಯ ಅನೇಕ ಕಲ್ಲುಗಳು ಬಿದ್ದಿರುವುವು. ಮೇಲೆ ಹಲವು ಸಣ್ಣ ಸಣ್ಣ ಪ್ರತಿಮೆಗಳಿದ್ದು ಅವುಗಳಿಗೆ ದಪ್ಪವಾಗಿ ಬಣ್ಣ ಬಳಿದಿರುವರು. ಈ ಬಣ್ಣವನ್ನು ಕೆರೆದು ತೆಗೆಯುವುದು ಪಾಪಕರವೆಂದು ಅಲ್ಲಿಯ ನಿವಾಸಿಕರು ಹೇಳುವರು.

ಇನ್ನು ಮುಂದಕ್ಕೆ ಹೋದರೆ ಒಂದು ಕಾಡು ಇದೆ. ಅಲ್ಲಿ ಒಂದು ದೇವಾಲಯವು. ದೇವಾಲಯದೊಳಗೆ ೯ ಅಡಿ ಚೌಕದ ಒಂದು ಕೋಣೆಯಲ್ಲಿ, ಎದೆಯ ವರೆಗೆ ಹುಗಿಯಲ್ಪಟ್ಟ ಬುದ್ಧನ ಒಂದು ಕಲ್ಲಿನ ಪ್ರತಿಮೆಯಿದೆ. ಈ ಪ್ರತಿಮೆಯ ಬಲ ಕೈಯ ಬೆರಳುಗಳು ಭೂಮಿಯನ್ನು ಸ್ಪರ್ಶಿಸುವವು. ಎಡ ಕೈಯ ಬೆರಳುಗಳು, ತೊಡೆಯ ಮೇಲಿರುವವು. ಪ್ರತಿಮೆಯ ಎತ್ತರವು ಆರು ಅಡಿ. ಮುಖವೇ ಒಂದುವರೆ ಅಡಿಯಿದೆ. ಇದು ಒಂದೇ ಕಲ್ಲಿನ ಪ್ರತಿಮೆಯಲ್ಲ; ಬೇರೆ ಬೇರೆ ತುಂಡುಗಳನ್ನು ಜೋಡಿಸಿದ್ದು. ಇನ್ನೂ ಮೇಲಕ್ಕೆ ಏರಿದರೆ ಅಲ್ಲಿ ಒಂದು ನಿಂತ ಪ್ರತಿಮೆಯಿದೆ. ಅದರ ಬೆನ್ನಿನ ಮೇಲೆ ೨೫ ಸಾಲುಗಳಾಗಿ ಬುದ್ಧನ ಉಪದೇಶವನ್ನು ಕೆತ್ತಿರುವರು.

ಸಮೀಪದಲ್ಲಿಯೇ ಒಂದು ಮಲಗಿರುವ ಪ್ರತಿಮೆಯೂ ಅದರ ಹತ್ತಿರ ಗಜಸಿಂಹದ ಪ್ರತಿಮೆಯೂ ಇವೆ. ಇನ್ನೊಂದು ಕಡೆಯಲ್ಲಿ ಧ್ಯಾನಿಬುದ್ಧನ ಒಂದು ಪ್ರತಿಮೆಯಿದೆ. ಹಲವು ಪ್ರತಿಮೆಗಳು ನೆಲದಡಿಯಲ್ಲಿ ಹುಗಿದು ಹೋಗಿವೆ. ದಟ್ಟವಾಗಿ ಬೆಳೆದಿರುವ ಕಾಡಿನೊಳಗೆ ಅನೇಕ ಪ್ರತಿಮೆಗಳಿರುವುವಾದರೂ ಕಾಡಿನಲ್ಲಿ ಕ್ರೂರಮೃಗಗಳಿರುವುದರಿಂದ ಹೋಗಲು ಯಾರಿಗೂ ಧೈರ್ಯವಿರುವುದಿಲ್ಲ.

ಇನ್ನೂ ಮೇಲಕ್ಕೆ ಹೋದರೆ ಪಶ್ಚಿಮಾಭಿಮುಖವಾಗಿ ನಿಲ್ಲಿಸಿದ ಐದು ಪ್ರತಿಮೆಗಳು ಕಾಣುವವು. ಎದುರಿನಲ್ಲಿಯೇ ಒಂದು ಗುಡಿಯಿರುವದು. ಅಲ್ಲಿರುವ ಇನ್ನೊಂದು ಬುದ್ಧನ ಪ್ರತಿಮೆಯು ಸಿಂಹಳನೆಂಬವನು ಮಾಡಿಸಿದುದೆಂದು ಬರೆದಿರುತ್ತದೆ. ಅದರ ಬದಿಯಲ್ಲಿ ೧೪ ಉಪದೇವತೆಗಳಿಂದ ಆವರಿಸಲ್ಪಟ್ಟ ಒಂದು ದೇವತೆಯ ಪ್ರತಿಮೆಯಿದೆ. ಈ ಪ್ರತಿಮೆಗಳಿಗೆ ಕೆಂಪು ಬಣ್ಣವನ್ನು ಬಳಿದು ಬಿಳಿನಾಮಗಳನ್ನು ಹೊಡೆದಿರುವರು. ಈ ಪ್ರತಿಮೆಗಳೆಲ್ಲವುಗಳಿಗೆ ಅಲ್ಲಿನವರು ಬೇರೆ ಬೇರೆ ಹೆಸರು ಕೊಟ್ಟಿರುವರು.

ಉದಯಗಿರಿಯಿಂದ ಏಳು ಮೈಲು ದೂರದಲ್ಲಿ ಲಲಿತಗಿರಿ ಇರುವುದು. ಇಲ್ಲಿಯೂ ಕೂಡ ಹಲವು ಬುದ್ಧನ ಪ್ರತಿಮೆಗಳೂ, ದೇವರ ಪ್ರತಿಮೆಗಳೂ ಇರುವವಾದರೂ ಮೊದಲು ಹೇಳಿದ ಬುದ್ಧನ ದೊಡ್ಡ ಪ್ರತಿಮೆಯೇ ಮುಖ್ಯವಾದುದಾಗಿದೆ. ಈ ಪ್ರತಿಮೆಯು ಕಟಿಯಿಂದ ತಲೆಯ ವರೆಗೆ ಆರು ಫೀಟು, ಮೂರು ಇಂಚು ಎತ್ತರ. ಎದೆಯ ಅಗಲವು ಮೂರು ಫೀಟು, ಮೂರು ಇಂಚು. ಮೊಣಕಾಲಿನಿಂದ ಮೊಣಕಾಲಿನ ವರೆಗೆ ಅಗಲವು ಐದು ಅಡಿ, ಐದುವರೆ ಇಂಚು. ತಲೆಯು ಎರಡು ಫೀಟು, ಎರಡು ಇಂಚು ಉದ್ದವಾಗಿದೆ. ಪ್ರತಿಮೆಯು ಇಷ್ಟು ದೊಡ್ಡದಾಗಿದ್ದರೂ ಕೈಕಾಲುಗಳು ಶರೀರದ ದಾಮಾಸೆಗೆ ಸರಿಯಾಗಿ ಇವೆ. ಮುಖದ ಮೇಲೆ ದಿವ್ಯ ತೇಜಸ್ಸಿದೆ. ಉದಯಗಿರಿಯ ಬುದ್ಧನ ಪ್ರತಿಮೆಯಂತೆ ಇದು ಕೂಡ ಭೂಮಿಸ್ಪರ್ಶ ಮುದ್ರೆಯ ಪ್ರತಿಮೆಯು. ಇಲ್ಲಿಯೂ ಕೂಡ ಮಹಿಮಾನಿರಂಜನಿ ಮತದವರು ದೇವಾಲಯವನ್ನು ಕಟ್ಟಿ ಅದಷ್ಟು ಪ್ರತಿಮೆಗಳನ್ನು ಕಾಪಾಡಿರುವರು. ಅವರು ಕಟ್ಟಿಸಿದ ದೇವಾಲಯವೂ ಅಂದವಾಗಿದ್ದು ಮನೋಹರವಾಗಿದೆ. ಇಲ್ಲಿಯ ಪ್ರತಿಮೆಗಳೆಲ್ಲವೂ ಸೌಮ್ಯ ಮುಖಮುದ್ರೆಯವುಗಳಾಗಿ ಇರುವುದರಿಂದ ಉದಯಗಿರಿಯ ಪ್ರತಿಮೆಗಳಿಂದ ವಿಂಗಡಿಸಲು ಸಾಧ್ಯವಿದೆ. ಸುವರ್ಣ ಕಲಶಗಳ ಮೇಲೆ ಕಾಲುಗಳನ್ನಿಟ್ಟು ಕುಳಿತ ಒಂದು ಕುಬೇರನ ಪ್ರತಿಮೆಯಿದೆ. ಇನ್ನೊಂದು ಕೆತ್ತನೆಯ ಪೀಠದ ಮೇಲೆ ಬುದ್ಧನ ಪ್ರತಿಮೆಯ ಪಾದಗಳು ಮಾತ್ರ ಉಳಿದಿವೆ. ಈ ಪೀಠದ ಮೇಲೆ ಗುಲಾಬಿ ಗೊಂಚಲನ್ನು ಅಂದವಾಗಿ ಕೆತ್ತಿರುವರು. ದೊಡ್ಡ ಬುದ್ಧನ ಪ್ರತಿಮೆಯಿರುವಲ್ಲಿ ಒಂದು ಭಾಸುಳಿ ದೇವಾಲಯವಿದೆ. ಹಳೆ ಕಟ್ಟೋಣವೊಂದನ್ನು ಕೆಡವಿ ಇದನ್ನು ಕಟ್ಟಿಸಿದ್ದೆಂದು ನೋಡಿದೊಡನೆ ತಿಳಿಯುವುದು. ಈ ದೇವಾಲಯದ ಸುತ್ತು ಮುತ್ತು ಹಲವು ವಿಗ್ರಹಗಳು ಚದರಿ ಬಿದ್ದಿವೆ. ಪರ್ವತದ ಕೆಳಗೆ ಒಂದು ಹಳ್ಳಿಯಲ್ಲಿ ಒಂದು ಶಿವಾಲಯದ ಅಂಗಣದಲ್ಲಿಯೂ ಹಲವು ವಿಗ್ರಹಗಳು ಇವೆ. ಉದಯಗಿರಿ ಪ್ರತಿಮೆಗಳ ಮೇಲೆ ಬರೆದಂತೆ ಇಲ್ಲಿಯ ವಿಗ್ರಹಗಳ ಮೇಲೂ ಶ್ಲೋಕಗಳನ್ನು ಬರೆದಿರುವರು.

ಲಲಿತಗಿರಿಯ ವಿಗ್ರಹಗಳೆಲ್ಲವೂ ಅಲ್ಲಿಯ ಕಲ್ಲುಗಳಿಂದಲೇ ಮಾಡಲ್ಪಟ್ಟವುಗಳು. ಈ ಪರ್ವತದ ದಕ್ಷಿಣ ಬದಿಯಲ್ಲಿರುವ ಹಳ್ಳಿಯಲ್ಲಿ ೫೦ ಕಲ್ಲುಕುಟ್ಟಿಗರ ಕುಟುಂಬಗಳು ವಾಸಿಸುತ್ತವೆ. ಅವರೊಡನೆ ಶಿಲ್ಪಶಾಸ್ತ್ರದ ಪುಸ್ತಕಗಳಿದ್ದು, ಅವರು ಶಿಲ್ಪಶಾಸ್ತ್ರದಲ್ಲಿ ಬಹಳ ನಿಪುಣರಾಗಿರುವರು. ಅವರಿಗೆ ಸಾಕಾದಷ್ಟು ಶಿಲ್ಪ ಕೆಲಸವು ಈಗಿಲ್ಲದುದರಿಂದ ಅವರು ಈಗ ಜಲ್ಲಿಕಲ್ಲನ್ನು ತಯಾರಿಸಿ ಮಾರ್ಗ ಕಟ್ಟುವ ಕೆಲಸಮಾಡುವರು. ಲಲಿತಗಿರಿಯಲ್ಲಿ ಒಂದು ಬಹು ಅಂದವಾದ ಕೆತ್ತನೆಯ ಕೆಲಸದ ಸ್ತಂಭವೂ, ರುಂಡವಿಲ್ಲದ ಒಂದು ಜಿನನ ಪ್ರತಿಮೆಯೂ ಇವೆ.

ಮೂರನೆಯದಾದ ರತ್ನಗಿರಿಯಲ್ಲಿ ತಾರಾದೇವತೆಯ ವಿಗ್ರಹಗಳೂ, ಬುದ್ಧನ ಪ್ರತಿಮೆಯ ಶಿರಗಳೂ ಹಲವು ಇವೆ. ಇಲ್ಲಿನಷ್ಟು ಸೊಬಗಿನ ವಿಗ್ರಹಗಳು ಉಳಿದೆರಡು ಪರ್ವತಗಳಲ್ಲಿರುವುದಿಲ್ಲ. ವಿಗ್ರಹದ ಶಿರಗಳಲ್ಲಿ ಒಂದು ಶಿರವು ೪ ಅಡಿ ಇದೆ. ಅದೇ ಶಿರದ ಸುತ್ತಳತೆಯು ೭೦ ಇಂಚುಗಳು. ತಲೆಯ ಹಿಂಭಾಗದಲ್ಲಿ ಮಾತ್ರ ಯಾವ ಕೆತ್ತನೆಯ ಕೆಲಸವನ್ನೂ ಮಾಡಿಲ್ಲ. ಮಹಾಕಲಾವೆಂಬ ಹೆಸರಿನಿಂದ ಕರೆಯಲ್ಪಡುವ ಒಂದು ದೇವತೆಯ ವಿಗ್ರಹವಿರುವ ಒಂದು ದೇವಾಲಯವು ಅಚ್ಚಳಿಯದೆ ಉಳಿದಿದೆ. ಈ ದೇವಾಲಯದ ಸುತ್ತಲೂ ಹಲವು ವಿಗ್ರಹದ ತಲೆಗಳು ಚದರಿಕೊಂಡಿವೆ. ಈ ಮಹಾಕಲಾದೇವತೆಯನ್ನು, ಬಂಗಾಳದಿಂದ ಬಂದು ಉಳಕೊಂಡ ಒಂದು ಬ್ರಾಹ್ಮಣ ವಂಶದವರು ಪೂಜಿಸುವರು.

ಈ ಗಿರಿಯಲ್ಲಿ ಇರುವವುಗಳಲ್ಲಿ ಮುಖ್ಯವೆಂದರೆ ತಾರಾದೇವತೆಯ ವಿಗ್ರಹವು. ಈ ದೇವತೆಯನ್ನು ಪೂಜಿಸದೆ ಇರುವವನಿಗೆ ಉಂಟಾಗುವ ಶಿಕ್ಷೆಯನ್ನು ಸೂಚಿಸುವ ಚಿತ್ರಗಳನ್ನು ಈ ವಿಗ್ರಹದ ಸುತ್ತಲೂ ಇರುವ ಕಲ್ಲಿನ ಹಲಿಗೆಗಳ ಮೇಲೆ ಕೆತ್ತಿರುವರು. ಇದಕ್ಕಿಂತಲೂ ಸ್ವಲ್ಪ ಸಣ್ಣದಾದ ಇನ್ನೊಂದು ತಾರೆಯ ವಿಗ್ರಹವಿದೆ. ಆದರೆ ಮೊದಲಿನಷ್ಟು ಪರಿಪೂರ್ಣ ಶಿಲ್ಪಕಲೆಯ ಪ್ರದರ್ಶನವು ಇದರಲ್ಲಿರುವುದಿಲ್ಲ. ಇಲ್ಲಿಯೂ ಬುದ್ಧನ ಪ್ರತಿಮೆಗಳಿವೆ. ಹಲವು ವಿಗ್ರಹಗಳು ಕೆಲವೇ ವರ್ಷಗಳೊಳಗೆ ಮಣ್ಣಿನಡಿಯಲ್ಲಿ ಹುಗಿಯಲ್ಪಡುವುದರಲ್ಲಿ ಸಂಶಯವಿರದು. ಒಂದು ತಾರಾದೇವತೆಯ ಪ್ರತಿಮೆಯ ತಲೆಯನ್ನು ಯಾರೋ ಇತ್ತೀಚೆಗೆ ತೆಗೆದುಬಿಟ್ಟಿರುವರು. ಕುಣಿಯುವ ಭೈರವನ ಪ್ರತಿಮೆಯೊಂದಿದೆ. ಕಿರೀಟವಿಟ್ಟ ಬುದ್ಧನ ಪ್ರತಿಮೆಯೊಂದಿದೆ. ಇನ್ನೂ ಹಲವು ಸಣ್ಣಸಣ್ಣ ಸ್ತೂಪಗಳಿರುವವುಗಳಲ್ಲಿ ತುಳಸಿಯನ್ನು ನೆಟ್ಟಿರುವರು. ಇನ್ನೂ ಹಲವು ಪ್ರತಿಮೆಗಳು ಸರಿಯಾಗಿಯೂ, ಹಲವು ತುಂಡಾಗಿಯೂ ಇವೆ. ಹಲವು ಪ್ರತಿಮೆಗಳನ್ನು ಅಲ್ಲಿಯ ಜಮೀನ್ದಾರರು ಮಾರಿರುವರು.

ಇನ್ನೂ ಹಲವು ಪ್ರತಿಮೆಗಳು ಮಣ್ಣನ್ನು ಅಗೆದು ನೋಡಿದರೆ ಸಿಕ್ಕುವುದರಲ್ಲಿ ಸಂಶಯವಿಲ್ಲ. ಅವುಗಳು ಮೇಲೆ ನೆಲಸಿರುವ ಪ್ರತಿಮೆಗಳಿಗಿಂತಲೂ ಅಂದವಾದವುಗಳಾಗಿರಬಹುದು. ಆದಕಾರಣ ಆರ್ಕೆಲೊಜಿಕಲ್ ಇಲಾಖೆಯವರು ಈ ಕುರಿತು ತಕ್ಕ ಜಾಗ್ರತೆಯನ್ನು ವಹಿಸುವುದು ಅಗತ್ಯವು.



'ಸೂರ್ಯ' ಗುರುತು

ರಿಜಿಸ್ಟರ್ಡ್

ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ

ತಯಾರಿಸಿದ್ದು.

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು. ಒಂದು ರಾತಲಿನ ಡಬ್ಬಿ ...

ಅತಿ ಕಡಿಮೆಯೆಂದರೆ ಒಂದು ಔನ್ಸ್ ಧಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪನಿ.

28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ಮನ್ನೆರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮುಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.

210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧೃಷ್ಟ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಳ್ಯಾಣ ಕಣ್ಣ ವೈದ್ಯರಿಂದ ತೆರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಸಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ತಪಶೀಲು, ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEELY

To Reach the Hearths & Homes of India's Masses

For Particulars Apply to:

The Manager,

SWADESHABHIMANI,

MANGALORE.

Diamonds. ವಜ್ರಗಳು Diamonds.

BOLA MANGESH ROW & CO.,

MANGALORE.

Agents & Direct importers of Superior Diamonds of Antwerp.

ಯೇಜಂಟ್ಸಾಗಿ, ಯಂಟವರ್ಪನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,

10-8-'28. ಮಂಗಳೂರು

Edited Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖

ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ‖

ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೨. ಮಂಗಳೂರು, ತಾ. ೨೪ನೇ ಶುಕ್ರವಾರ ಆಗೋಸ್ತು ೧೯೨೮. (24-8-28.) ಸಂಚಿಕೆ ೩೪

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Notice

Is hereby given that the following rates of interest on Fixed Deposits will come into force from 1—9—'28. For 3 months 5 % p. a. For 6 months 5¼ % p. a. For 12 months 6¼ % p. a. For 24 months 6½ % p. a.

ನಿರಖು ಠೇವಣಾತಿಗಳ ಮೇಲೆ ತಾ. 1—9—'28ರಿಂದ ಈ ಕೆಳಗೆ ನಮೂದಿಸಿದ ಬಡ್ಡಿಯ ದರಗಳು ಜ್ಯಾರಿಗೆ ಬರುವವು.

3 ತಿಂಗಳ ವ್ಯಾಯಿದೆಗೆ ಸಾ. ಶೆ. 5 — 6 ತಿಂಗಳ ವ್ಯಾಯಿದೆಗೆ ಸಾ. ಶೆ. 5¼

12 ತಿಂಗಳ ವಾಯಿದೆಗೆ ಸಾ. ಶೆ. 6 — 24 ತಿಂಗಳ ವಾಯಿದೆಗೆ ಸಾ. ಶೆ. 6½

Office of the Corporation,
UDIPI, 13-8-'28.

N. ANANDA RAO,
Secretary.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ.

ಗಿರಗಾಂವ, ಮುಂಬಾಯಿ.

ಏಜಂಟರು— ದಿ ಊಲನ್ ಮಾರ್ಟ್,

ಮಂಗಳೂರು.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ ಮುಲಾಮು.

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಠಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು—ಎಲ್ಲಾ ತರದ ಗಜಕರ್ಣ, ತುರ್ಿಕೆ, ಕಜ್ಜಿಗೂ, ನಂದಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ—ಈ ಉತ್ತಮವಾದ, ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲ ಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜಾರ್ಜ್ ಟೌನ್, ಮದ್ರಾಸು. — 249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

Ready for Sale.

THE

MADRAS HINDU RELIGIOUS ENDOWMENT ACT

No. II of 1927.

Price 8 annas.

Postage Extra.

For copies apply to—

The M. T. A. Sharada Press,
Car-street, MANGALORE.

No. 9

CONTD

FROM

1926

TO 17 AUGUST 1928

SWADESHABHIMANI
KANNADA WEEKLY
UBLISHED FROM
MANGALORE

FROM

1926

17 AUGUST 1928

DESHABHIMANI

ANNADA WEEKLY

SHED FROM

MANGALORE

MICROFILMED BY
MEMORIAL MUSEUM
ND LIBRARY
EEN MURTI HOUSE
NEW DELHI